ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೧೬


ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೨೨
ವಿಚಾರ ಸಾಹಿತ್ಯಮಾಲೆ - ೧೦

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೬

# ಸಂಪಾದನ ಸಮಿತಿ


| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೧೬)

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

**ಮತ್ತು**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 16** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; Revised First Edition : 2010; Third Edition : 2015; Pp. xxiv + 1006; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಪರಿಷ್ಕೃತ ಆವೃತ್ತಿಯ ಮೊದಲ ಮುದ್ರಣ : ೨೦೧೦
ಮೂರನೇ ಮುದ್ರಣ : ೨೦೧೫
ಪುಟಗಳು : xxiv + ೧೦೦೬
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

# ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶಿ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

**(ಸಿದ್ದರಾಮಯ್ಯ)**

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ
ಸಚಿವರು ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ
ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೩೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟುಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿ ನಿಲಯಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ
ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೯೬
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು
ದಿನಾಂಕ: ೦೪.೬.೨೦೧೫

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

Umashree

**(ಉಮಾಶ್ರೀ)**

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುವಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು–ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು. 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ

ಅಸಾಮಾನ್ಯ ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು ತಮ್ಮ ಅನುಯಾಯಿಗಳಿಗೆ "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize !! Agitate !!!) ಎಂಬ ತತ್ವಗಳನ್ನು ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಹದಿನಾಲ್ಕು ಸಂಪುಟಗಳಲ್ಲಿ ಹೊರತಂದಿತು. ಅನಂತರದಲ್ಲಿ ಹದಿನೈದನೆಯ ಇನ್ನೊಂದು ಸಂಪುಟವನ್ನೂ ಹೊರತರಲಾಗಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ

ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರನ್ನಾಗಿ ನಾಮಕರಣ ಮಾಡಲಾಯಿತು. (ಆದೇಶ ಸಂಖ್ಯೆ ಕ ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪-೩-೨೦೦೮.)

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨-೬-೨೦೦೮ ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಕೊನೆಗೆ ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದ ಈ ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಸಮಿತಿ ಕೃತಜ್ಞವಾಗಿದೆ.

ಮುಂದೆ ಸಂಪುಟದ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು ಹಾಗೂ ಈ ಕಾರ್ಯಕ್ಕೆ ಹಲವು ವಿದ್ವಾಂಸರ ಸೇವೆಯನ್ನು ಬಳಸಿಕೊಳ್ಳಬಹುದೆಂದೂ ನಿರ್ಧರಿಸಲಾಯಿತು. ೨, ೩ ಮತ್ತು ೪ನೆಯ ಸಂಪುಟಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಗೆ ಕಾಣಿಸಿರುವ ವಿದ್ವಾಂಸರು ಸಹಕರಿಸಿದ್ದಾರೆ.

೧. ಶ್ರೀ ಕೃಷ್ಣ: ೨ನೇ ಸಂಪುಟ (೨ ಭಾಗಗಳು)

೨. ಶ್ರೀ ಕೇಶವ ಮಳಗಿ: ೩ನೆಯ ಸಂಪುಟ

೩. ಶ್ರೀ ಜೆ.ಎನ್. ಶಾಮರಾವ್: ೪ನೆಯ ಸಂಪುಟ

ಈ ವಿದ್ವಾಂಸರುಗಳಲ್ಲಿ ಕೆಲವರ ಸೇವೆಯನ್ನು ಬಳಸಿಕೊಂಡು ಈ ಸಂಪುಟಗಳನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಪರಿಷ್ಕರಿಸಲಾಗಿದೆ. ಅವರ ಈ ಸಹಾಯ-ಸಹಕಾರಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಪ್ರಾಧಿಕಾರದ ಸ್ವರೂಪವನ್ನು ನೀಡಲಾಗಿರುವ ಕುವೆಂಪು ಭಾಷಾ ಭಾರತಿಯಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ವಿಲೀನಗೊಳಿಸಲಾಗಿರುವುದರಿಂದ, ಈ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿವೆ. ಕನ್ನಡ ನಾಡು-ನುಡಿಗಳ ಸರ್ವತೋಮುಖ ಪ್ರಗತಿಗೆ ಕಟಿಬದ್ಧರಾಗಿರುವ, ಕರ್ನಾಟಕ ಸಂಸ್ಕೃತಿಯ ಪ್ರತೀಕವೇ ಆಗಿರುವ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ವಿಷಯದಲ್ಲಿ ತೀವ್ರವಾದ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನೂ ನೀಡುತ್ತಿರುವುದು ವಿಶೇಷ ಸಂತೋಷದ ಸಂಗತಿಯಾಗಿದೆ. ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇವೆ.

ಹೊಸ ಆಕಾರದಲ್ಲಿ ಸುಂದರವಾಗಿ ಹೊರತರಬೇಕೆಂಬ ಸಮಿತಿಯ ನಿರ್ಧಾರದ ಮೇರೆಗೆ ಮೊದಲ ಸಂಪುಟವನ್ನು ಹೊರತರಲಾಯಿತು. ಕನ್ನಡ ಓದುಗರಿಗೆ ಆ ಸಂಪುಟ ಇಷ್ಟವಾದ್ದರಿಂದ, ಅದೇ ಮಾದರಿಯಲ್ಲಿ ಇತರ ಸಂಪುಟಗಳನ್ನೂ ಹೊರತರಲಾಗುತ್ತಿದೆ. ಇದಕ್ಕೆ ನೆರವಾಗಿರುವ ಹಾಗೂ ಸಲಹೆ-ಸೂಚನೆಗಳನ್ನು ನೀಡಿರುವ

ಅನುವಾದ ಸಂಪಾದನ ಸಮಿತಿಯ ಸದಸ್ಯರಿಗೆ, ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಮಾನ್ಯ ಕಾರ್ಯದರ್ಶಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ನಾವು ಕೃತಜ್ಞರಾಗಿದ್ದೇವೆ.

ಇದುವರೆಗೆ ಅನುವಾದವಾಗದೆ ಇದ್ದ ೧೫ನೆಯ ಸಂಪುಟದ ಅನುವಾದ ಹಾಗೂ ಸಂಪಾದನ ಮತ್ತು ಮುದ್ರಣ ಕಾರ್ಯವನ್ನು ವಿದ್ವಾಂಸರ ನೆರವಿನಿಂದ ಪೂರೈಸಲಾಗಿದೆ. ಇದಕ್ಕೆ ನೆರವಾಗಿರುವ ೧೨ಮಂದಿ ವಿದ್ವಾಂಸರ ಪಟ್ಟಿಯನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ಅವರೆಲ್ಲರಿಗೂ ಪ್ರಾಧಿಕಾರದ ಹೃತ್ಪೂರ್ವಕ ವಂದನೆಗಳು. ಪರಿಷ್ಕರಣ ಕಾರ್ಯದಲ್ಲಿ ಹಾಗೂ ಅಂತಿಮ ಕರಡುಗಳ ಪರಿಶೀಲನೆಯಲ್ಲಿ ನೆರವಾಗಿರುವ ಶ್ರೀಮತಿ ಆರತಿ ನಾಗೇಶ್ ಅವರಿಗೂ ನಮ್ಮ ವಿಶೇಷ ವಂದನೆಗಳು ಸಲ್ಲುತ್ತವೆ. ಕರಡು ಪರಿಶೀಲನೆಯ ಕಾರ್ಯದಲ್ಲಿ ನೆರವಾಗಿರುವ ಶ್ರೀಮತಿ ರಮಾಮಣಿ ಹಾಗೂ ಶ್ರೀ ಜೆ.ಎನ್. ಶಾಮರಾವ್ ಅವರಿಗೆ ಹಾಗೂ ಸುಂದರವಾದ ಮುಖಪುಟವನ್ನು ರಚಿಸಿಕೊಟ್ಟಿರುವ ಶ್ರೀ ವಿಶ್ವನಾಥ್ ಶೆಟ್ಟಿಗಾರ್ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ೨, ೩ ಮತ್ತು ೪ನೆಯ ಸಂಪುಟಗಳ ಪರಿಷ್ಕೃತ ಆವೃತ್ತಿಗಳ ಜೊತೆಗೇ ಇದನ್ನೂ ಹೊರತರಲಾಗುತ್ತಿದೆ.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ.ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್.ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

# ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ ೧೬

## ನಮ್ಮ ಅನುವಾದಕರು

೧) **ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ**
ವಕೀಲರು, 'ಸಿರಿ', ಬ್ರಾಹ್ಮಣರ ಕಣಿವೆ
ಮಡಿಕೇರಿ, ಕೊಡಗು ಜಿಲ್ಲೆ

೨) **ಶ್ರೀ ಎಸ್.ಆರ್.ಗೌತಮ್**
ನಂ.೫೨೭, ೧೭ನೇ ಕ್ರಾಸ್, ೧ನೇ ಬ್ಲಾಕ್
ಆರ್.ಟಿ.ನಗರ,
ಬೆಂಗಳೂರು-೫೬೦ ೦೩೭

೩) **ಶ್ರೀಮತಿ ಸತ್ಯವತಿ**
ನಿರ್ದೇಶಕರು
ಭಾಷಾಂತರ ನಿರ್ದೇಶನಾಲಯ, ಗೇಟ್-೧
೧೬ನೇ ಮಹಡಿ, ಎಂ.ಎಸ್.ಬಿಲ್ಡಿಂಗ್
ಬೆಂಗಳೂರು-೫೬೦ ೦೦೧

೪) **ಶ್ರೀಮತಿ ಶೋಭಾ ಎಂ.ಕಟ್ಟಿ**
ಸಹಾಯಕ ನಿರ್ದೇಶಕರು
ಭಾಷಾಂತರ ನಿರ್ದೇಶನಾಲಯ, ಗೇಟ್-೧
೬ನೇ ಮಹಡಿ, ಎಂ.ಎಸ್.ಬಿಲ್ಡಿಂಗ್
ಬೆಂಗಳೂರು-೫೬೦ ೦೦೧

೫) **ಡಾ.ಗೀತಾ ಕೃಷ್ಣಮೂರ್ತಿ**
'ಅಭಿಲಾಷ', ನಂ.೧೫೬,
೪ನೇ ಮೈನ್ ರೋಡ್
ಪದ್ಮನಾಭನಗರ,
ಬೆಂಗಳೂರು-೫೬೦೦೭೦

೬) **ಡಾ.ಲಕ್ಷ್ಮೀನಾರಾಯಣ ಅರೋರ**
ನಂ.೧೧೩೬, ಸಿ ಮತ್ತು ಡಿ ಬ್ಲಾಕ್
ಕುವೆಂಪುನಗರ,
ಮೈಸೂರು-೫೭೦೦೨೩

೭) **ಡಾ.ಮೂಡ್ನಾಕೂಡು ಚಿನ್ನಸ್ವಾಮಿ**
ಮುಖ್ಯಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು
ಬೆಂಗಳೂರು ಮಹಾನಗರ ಸಾರಿಗೆ ನಿಗಮ
ಕೇಂದ್ರ ಕಚೇರಿ, ಶಾಂತಿನಗರ
ಬೆಂಗಳೂರು - ೫೬೦೦೨೭

೮) **ಶ್ರೀ ಜಿ.ಎನ್.ರಂಗನಾಥರಾವ್**
ನಂ.೨೬೬, 'ಸ್ನೇಹ', ૩ನೇ ಮೈನ್
೮ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು - ೫೬೦ ೦೯೫

೯) **ಶ್ರೀಮತಿ ಸುಮನಾ ವಿಶ್ವನಾಥ್**
೧೫೧೬, 'ಶ್ರೀವತ್ಸ'. ૩ನೇ ಮುಖ್ಯರಸ್ತೆ
೬ನೇ ಕ್ರಾಸ್, ವಿಜಯನಗರ ೨ನೇ ಹಂತ
ಮೈಸೂರು - ೫೭೦ ೦೧೭

೧೦) **ಶ್ರೀ ಜವರಯ್ಯ**
ಸದಸ್ಯರು, ರಾಜಭಾಷಾ ಆಯೋಗ
ಕೊಠಡಿ ನಂ.೬೧೪, ೬ನೇ ಮಹಡಿ, ೧ನೇ ಗೇಟ್
ಬಹುಮಹಡಿ ಕಟ್ಟಡ ಡಾ.ಅಂಬೇಡ್ಕರ್ ರಸ್ತೆ
ಬೆಂಗಳೂರು - ೫೬೦ ೦೦೧

೧೧) **ಡಾ.ವೈ.ಎಸ್.ಜ್ಯೋತಿ ಶಶಿಕುಮಾರ್**
ನಂ.೧೧೫/೧೦, 'ಶರಧಿ'
೧೫ನೇ ಕ್ರಾಸ್, ವೈಯ್ಯಾಳಿಕಾವಲ್
ಬೆಂಗಳೂರು-೫೬೦ ೦೦೩

೧೨) **ಶ್ರೀ ಜೆ.ಎನ್. ಶಾಮರಾವ್**
'ಶಾದ್ವಲ', ನಂ.೧೧, ೧೩ನೇ ಅಡ್ಡರಸ್ತೆ
ಶ್ರೀನಿಧಿ ಬಡಾವಣೆ, ಕೋಣನಕುಂಟೆ
ಬೆಂಗಳೂರು - ೫೬೦ ೦೬೨

# ಪರಿವಿಡಿ

ಸಂದೇಶಗಳು v
ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ x
ಎರಡನೇ ಮುದ್ರಣಕ್ಕೆ ಮುನ್ನುಡಿ xiv
ಮೂರನೇ ಮುದ್ರಣಕ್ಕೆ ಮುನ್ನುಡಿ xv
ಸಂಪಾದಕೀಯ xvi

## ವಿಭಾಗ – ಒಂದು

೧. ವಿದೇಶಿ ವಿನಿಮಯ (ತಿದ್ದುಪಡಿ) ವಿಧೇಯಕ ೫
೨. ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯ ನೇಮಕಾತಿ ೭
೩. ಇಂಡಿಯನ್ ನರ್ಸಿಂಗ್ ಪರಿಷತ್ತು ವಿಧೇಯಕ ೧೫
೪. ಹೆಚ್ಚಿನ ಪ್ರಾಂತೀಯ ಅಧಿಕಾರ ವಿಧೇಯಕ ೧೬
೫. ಸಂಯುಕ್ತ ನ್ಯಾಯಾಲಯ (ಅಧಿಕಾರ ವ್ಯಾಪ್ತಿಯ ಹೆಚ್ಚಳ) ವಿಧೇಯಕ ೨೩
೬. ಪ್ರಾಂತೀಯ ದಿವಾಳಿತನ (ತಿದ್ದುಪಡಿ) ವಿಧೇಯಕ ೩೪
೭. ಅಂಗೀಕೃತವಾದ ಭಾರತ (ಕೇಂದ್ರ ಸರಕಾರ ಮತ್ತು ಸಂಸತ್ತು) ಕಾಯಿದೆ,
೧೯೪೬ರ ಕಲಮು ೨ ಮತ್ತು ೩ರಲ್ಲಿ ನಮೂದಿಸಿದ ಅವಧಿ ವಿಸ್ತರಣೆಯ ಬಗ್ಗೆ ನಿರ್ಣಯ. ೪೧

## ವಿಭಾಗ – ಎರಡು

೮. ದಿವಾಳಿ ಕಾಯಿದೆ (ತಿದ್ದುಪಡಿ) ಮಸೂದೆ ೪೯
೯. ದಂಡಪ್ರಕ್ರಿಯೆ ಕಾಯಿದೆ (ತಿದ್ದುಪಡಿ) ಮಸೂದೆ ೫೫
೧೦. ಬಂಧನದಿಂದ ಮೀರ್ ಲಾಯಿಕ್ ಆಲಿಯ ಪರಾರಿ ೫೮
೧೧. ಸಂಸತ್ (ಅನರ್ಹತೆ ತಡೆಗಟ್ಟುವಿಕೆ) ಮಸೂದೆ ೭೦

೧೨. ಮುಂದೂಡಿಕೆ ನಿಲುವಳಿ ಸೂಚನೆ ೮೬
೧೩. ಸಂಘಗಳ ನೋಂದಣಿ (ತಿದ್ದುಪಡಿ) ಮಸೂದೆ ೮೭
೧೪. ಸೇನಾ ಮಸೂದೆ ೮೯
೧೫. ಸಿ ದರ್ಜೆಯ ರಾಜ್ಯಗಳ (ಕಾಯಿದೆ) ಮಸೂದೆ ೯೬
೧೬. ಜನಪ್ರಾತಿನಿಧ್ಯ ಮಸೂದೆ ೧೦೬

## ವಿಭಾಗ – ಮೂರು

೧೭. ದಂತ ವೈದ್ಯರ (ತಿದ್ದುಪಡಿ) ಮಸೂದೆ ೧೪೯
೧೮. ರಾಜ್ಯಗಳ ಪಟ್ಟಿಯಲ್ಲಿರುವ ಕೆಲವು ವಿಷಯಗಳ ಮೇಲೆ ಒಂದು ವರ್ಷದ ಮಟ್ಟಿಗೆ ಶಾಸನಗಳನ್ನು ಪಾರ್ಲಿಮೆಂಟು ರಚಿಸುವ ಬಗ್ಗೆ ಠರಾವುಗಳನ್ನು ಕುರಿತು ೧೫೯
೧೯. ನಿರ್ವಾಸಿತರ ಆಸ್ತಿಯ ಆಡಳಿತ ನಿರ್ವಹಣೆ (ತಿದ್ದುಪಡಿ) ಮಸೂದೆ ೧೬೧
೨೦. ಪಾರ್ಲಿಮೆಂಟ್ ಮತ್ತು ರಾಜ್ಯಗಳ ವಿಧಾನ ಸಭೆಗಳಿಗೆ ಚುನಾಯಿತರಾಗಲು ಅರ್ಹತೆಗಳು ೧೬೫
೨೧. ಕೂಚ್–ಬಿಹಾರ್ (ಕಾನೂನುಗಳನ್ನು ಒಗ್ಗೂಡಿಸುವಿಕೆಯ) ಮಸೂದೆ ೧೭೦
೨೨. ಭಾರತ ಜಕಾತಿ (೪ನೇ ತಿದ್ದುಪಡಿ) ಮಸೂದೆ ೧೭೨
೨೩. ಸಂಘಗಳ ನೋಂದಣಿ (ತಿದ್ದುಪಡಿ) ಮಸೂದೆ ೧೭೮
೨೪. ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ ೧೮೧
೨೫. ಕಾನೂನು ಸಚಿವಾಲಯ – ಬೇಡಿಕೆ ಸಂ.೧೩ ೨೨೩

## ವಿಭಾಗ – ನಾಲ್ಕು

೨೬. ದಂತವೈದ್ಯರ (ತಿದ್ದುಪಡಿ) ವಿಧೇಯಕ ೨೨೯
೨೭. ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕ ೨೩೯
೨೮. ಭಾಗ ಬಿ ರಾಜ್ಯಗಳ (ಕಾನೂನುಗಳ) ವಿಧೇಯಕ ೨೫೧
೨೯. ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳ (ಉಚ್ಚ ನ್ಯಾಯಾಲಯಗಳಲ್ಲಿ ವಕೀಲಿ ವೃತ್ತಿ ನಡೆಸುವ) ವಿಧೇಯಕ ೨೬೯
೩೦. ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕ ೨೮೦

೩೧. ಸಿವಿಲ್ ಪ್ರಕ್ರಿಯಾ ಸಂಹಿತೆ (ಎರಡನೇ ತಿದ್ದುಪಡಿ) ವಿಧೇಯಕ ೨೮೬

೩೨. ಜಲಿಯಾನ್‌ವಾಲಾಬಾಗ್ ರಾಷ್ಟ್ರೀಯ ಸ್ಮಾರಕ ವಿಧೇಯಕ ೨೮೯

೩೩. ಸಂವಿಧಾನ (ಮೊದಲನೇ ತಿದ್ದುಪಡಿ) ವಿಧೇಯಕ ೨೯೭


## ವಿಭಾಗ – ಐದು


೩೪. ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ ೩೮೪


## ವಿಭಾಗ – ಆರು


೩೫. ಸಂಸತ್ತು – ಅನರ್ಹತೆ ನಿವಾರಣೆ ವಿಧೇಯಕ ೬೪೩

೩೬. ಅಸ್ಸಾಂ (ಗಡಿಗಳ ಮಾರ್ಪಾಟು) ವಿಧೇಯಕ ೬೭೦

೩೭. ನೋಟರಿಗಳ ವಿಧೇಯಕ ೬೮೬

೩೮. ಆಲ್ ಇಂಡಿಯಾ ಬಾರ್‌ನ ಆವಶ್ಯಕತೆ ಕುರಿತ ನಿರ್ಣಯ ೬೯೨

೩೯. ಸಂಸತ್ ಸದಸ್ಯರ ನಡತೆ ೬೯೬

೪೦. ಆಯ್ಕೆ ಸಮಿತಿ ಸಭೆಗಳು ೭೦೭

೪೧. ಮತಕ್ಷೇತ್ರಗಳ ಪುನರ್‌ವಿಂಗಡನೆ ಆದೇಶಗಳನ್ನು ಕುರಿತಂತೆ ಸೂಚನೆಗಳು ೭೧೦

೪೨. ಸದನ ಕಾರ್ಯಕಲಾಪ ೭೩೫

೪೩. ಡಾ. ಅಂಬೇಡ್ಕರ್‌ರ ರಾಜೀನಾಮೆ ಪತ್ರ ೭೪೦


## ವಿಭಾಗ – ಏಳು


೪೪. ಅಧ್ಯಕ್ಷರ ಭಾಷಣಕ್ಕೆ ವಂದನೆ ೭೫೫

೪೫. ಬಜೆಟ್ (ಸಾಮಾನ್ಯ) ೧೯೫೨–೫೩ ಸಾಮಾನ್ಯ ಚರ್ಚೆ ೭೬೦

೪೬. ೧೯೫೩ರ ಆಂಧ್ರ ರಾಜ್ಯ ವಿಧೇಯಕ ೭೬೯

೪೭. ೧೯೫೩ರ ಸಂಪದ ಸುಂಕ ವಿಧೇಯಕ ೭೮೧

೪೮. ಅಂತಾರಾರಾಷ್ಟ್ರೀಯ ಪರಿಸ್ಥಿತಿ ೭೯೦

೪೯. ಬ್ಯಾಂಕ್ ವಿವಾದಗಳ ಕುರಿತ ಸರ್ಕಾರಿ ಆದೇಶ ೮೦೨
೫೦. ೧೯೫೩ನೇ ವರ್ಷಕ್ಕೆ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಆಯುಕ್ತರ ವರದಿ ೮೧೧
೫೧. ೧೯೫೪ರ ಸಂವಿಧಾನ (ಮೂರನೆಯ ತಿದ್ದುಪಡಿ) ವಿಧೇಯಕ ೮೩೨
೫೨. ೧೯೫೪ರ ಅಸ್ಪೃಶ್ಯತಾ ಅಪರಾಧಗಳ ವಿಧೇಯಕ ೮೩೭
೫೩. ೧೯೫೪ರ ಸಂವಿಧಾನ (ನಾಲ್ಕನೆಯ ತಿದ್ದುಪಡಿ) ವಿಧೇಯಕ ೮೫೩
೫೪. ೧೯೫೬ರ ರಾಜ್ಯಗಳ ಪುನರ್ ವಿಂಗಡಣೆ ವಿಧೇಯಕ ೮೬೮
೫೫. ಡಾ. ಅಂಬೇಡ್ಕರ್ ನಿಧನ – ಶೋಕಾಚರಣೆ ೮೭೭

## ವಿಭಾಗ – ಎಂಟು
## ೧೮ ನವೆಂಬರ್ ೧೯೪೭ರಿಂದ ೨೮ ಸೆಪ್ಟೆಂಬರ್ ೧೯೫೧

೧. ಭಾರತದ ಉಚ್ಚ ನ್ಯಾಯಾಲಯಗಳಿಂದ ಅಪೀಲುಗಳು ೮೯೩
೨. ಬಾಕಿ ಅಪೀಲುಗಳನ್ನು ಇತ್ಯರ್ಥಗೊಳಿಸಲು ಪ್ರಿವಿ ಕೌನ್ಸಿಲ್‌ನ ನ್ಯಾಯಿಕ ಸಮಿತಿಯ ಅಧಿಕಾರ ೮೯೪
೩. ಫೆಡರಲ್ ನ್ಯಾಯಾಲಯ ಮತ್ತು ಪ್ರಿವಿ ಕೌನ್ಸಿಲ್ ವಿಚಾರಣೆ ನಡೆಸಿದ ಪ್ರಕರಣಗಳ ಸಂಖ್ಯೆ ೮೯೫
೪. ಫೆಡರಲ್ ನ್ಯಾಯಾಲಯದ ರಚನೆ ೮೯೬
೫. ಹಿಂದು ಕಾನೂನು ಕ್ರೋಢೀಕರಣ ಸಮಿತಿಯ ವರದಿ ೮೯೮
೬. ಹಿಂದೂ ಧರ್ಮದಾಯ ಮತ್ತು ಧಾರ್ಮಿಕ ಟ್ರಸ್ಟ್‌ಗಳ ಆದಾಯದ ದುರುಪಯೋಗ ೮೯೮
೭. ಗೃಹ ವ್ಯವಹಾರಗಳ ಮಂತ್ರಾಲಯವು ನೇಮಿಸಿದ ನ್ಯಾಯಮಂಡಲಿಗಳ ಸಂಖ್ಯೆ ಮತ್ತು ಹೆಸರು ೮೯೯
೮. ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳ ಪುನಾರಚನೆ ಅಥವಾ ಮಾರ್ಪಾಟಿನ ಪ್ರಸ್ತಾವನೆ ೯೦೧
೯. ಮಹಾಚುನಾವಣೆಗಳು ೯೦೨
೧೦. ಪರಿಶಿಷ್ಟ ಜಾತಿಗಳ ಪಟ್ಟಿ ೯೦೪
೧೧. ಮಹಾಚುನಾವಣೆಗಳು ೯೦೫
೧೨. ವರಮಾನ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳು ೯೦೮

೧೩. ಕಾನೂನು ಮಂತ್ರಾಲಯದಲ್ಲಿ ಪರಿಶಿಷ್ಟ ಜಾತಿ ಉದ್ಯೋಗಿಗಳು ೯೦೮
೧೪. ಹಿಂದೂ ಸಂಹಿತೆ ವಿಧೇಯಕದ ಮೇಲಿನ ಸಲಹಾ ಸಮಿತಿ ೯೦೯
೧೫. ಸಂಸತ್ತಿನ ಸದಸ್ಯರ ವೇತನ ಮತ್ತು ಭತ್ಯೆಗಳು ೯೧೧
೧೬. ಮಹಾಚುನಾವಣೆಗಳು ೯೧೧
೧೭. ಮಹಾಚುನಾವಣೆಗಳು ೯೧೩
೧೮. ಸರ್ವೋಚ್ಚ ನ್ಯಾಯಾಲಯದ ಸರ್ಕಾರಿ ಏಜೆಂಟರು ೯೧೭
೧೯. ಮುಸ್ಲಿಂ ವೈಯಕ್ತಿಕ ಕಾನೂನುಗಳು ೯೧೮
೨೦. ಒಕ್ಕೂಟದ ವಿರುದ್ಧದ ಪ್ರಕರಣಗಳಲ್ಲಿ ವಕೀಲರ ನಿಯೋಜನೆ ೯೨೦
೨೧. ಪರಿಶಿಷ್ಟ ಜಾತಿಯ ಪ್ರತಿನಿಧಿಗಳು ೯೨೧
೨೨. ಪುನರ್‌ವಿಂಗಡಣಾ ಸಮಿತಿಯ ವರದಿಗಳು ೯೨೨
೨೩. ಮಹಾಚುನಾವಣೆಗಳು ೯೨೩
೨೪. ದೆಹಲಿಯ ಗ್ರಾಮೀಣ ಪ್ರದೇಶಗಳ ಮತದಾರರ ಪಟ್ಟಿ ೯೨೪
೨೫. ಕೇಂದ್ರ ಮತ್ತು ರಾಜ್ಯ ಕಾನೂನು ಸಮೀಕ್ಷೆ ೯೨೬
೨೬. ಮತದಾರರ ಪಟ್ಟಿಗಳು ೯೨೭
೨೭. ಸರ್ವೋಚ್ಚ ನ್ಯಾಯಾಲಯಗಳಲ್ಲಿ ವಕೀಲರು ೯೨೮
೨೮. ಕೂಚ್ ಬಿಹರ್ (ಜನಸಂಖ್ಯೆ) ೯೩೧
೨೯. ಮತದಾರರ ಪಟ್ಟಿಗಳು ೯೩೨
೩೦. ಮತಪೆಟ್ಟಿಗೆಗಳ ತಯಾರಿಕೆ ೯೩೩
೩೧. ಸಂಸತ್ತಿನ ವಿಸರ್ಜನೆ ೯೩೪
೩೨. ಮತದಾರರ ಪಟ್ಟಿಗಳು ೯೩೫
೩೩. ಪಶ್ಚಿಮ ಬಂಗಾಳ ವಿಧಾನಮಂಡಲ (ಖಾಲಿ ಸ್ಥಾನಗಳು) ೯೩೫
೩೪. ಮದರಾಸಿನಲ್ಲಿ ಮಹಾ ಚುನಾವಣೆ ೯೩೭
೩೫. ಒರಿಸ್ಸಾದಲ್ಲಿ ಮಹಾ ಚುನಾವಣೆ ೯೩೮
೩೬. ಪ್ರಾದೇಶಿಕ ಆಯುಕ್ತರು ೯೩೯
೩೭. ಚುನಾವಣಾ ದಿನಾಂಕಗಳ ನಿಗದಿ ೯೩೯
೩೮. ರಾಜ್ಯಗಳಲ್ಲಿ ಮಹಾ ಚುನಾವಣೆಯ ದಿನಾಂಕಗಳು ೯೪೦
೩೯. ರಾಜಕೀಯ ಪಕ್ಷಗಳ ಚಿಹ್ನೆಗಳು ೯೪೩
೪೦. ಮಹಾ ಚುನಾವಣೆಗಳಿಗೆ ಮತದಾರರ ಪಟ್ಟಿ ೯೪೪

೪೧. ಮಹಿಳಾ ಮತದಾರರು ಮತ್ತು ಮತದಾರರ ಪಟ್ಟಿ ೯೪೫

೪೨. ಹಿಂದುಳಿದ ವರ್ಗಗಳಿಗೆ ಕೇಂದ್ರದ ಅನುದಾನ ೯೪೫

೪೩. ರಾಷ್ಟ್ರೀಯ ಭಾಷೆಯ ಅಭಿವೃದ್ಧಿಗೆ ಅನುದಾನ ೯೪೭

೪೪. ಮಹಾ ಚುನಾವಣೆಗಳಲ್ಲಿ ಮತದಾನದ ವಿಧಾನ ೯೫೦

೪೫. ಶಾಸನಬದ್ಧ ಮತ್ತು ಶಾಸನಬದ್ಧವಲ್ಲದ ಸಂಸ್ಥೆಗಳು ೯೫೦

೪೬. ಪಂಜಾಬಿನ ಹಿಮಾವೃತ ಪ್ರದೇಶಗಳಲ್ಲಿ ಚುನಾವಣೆಗಳು ೯೫೧

೪೭. ಮತಪೆಟ್ಟಿಗೆಗಳ ತಯಾರಿಕೆ ೯೫೨

೪೮. ಅಧಿನಿಯಮಗಳ ಹಿಂದೀ ಅನುವಾದ ೯೫೨

೪೯. ಅಣಕು ಚುನಾವಣೆಗಳು ೯೫೪

೫೦. ಮತದಾರರ ಪಟ್ಟಿಗೆ ಆಕ್ಷೇಪಣೆಗಳು ೯೫೯

೫೧. ರಾಜ್ಯಗಳಲ್ಲಿ ಚುನಾವಣಾ ಆಯುಕ್ತರು ೯೫೯

೫೨. ಮತದಾರರ ಪಟ್ಟಿಗಳು ೯೬೦

೫೩. ಅಣಕು ಚುನಾವಣೆಗಳು ೯೬೦

೫೪. ಸಂವಿಧಾನದ ಅನುಚ್ಛೇದ ೧೭೧ (ಬಿ) ೯೬೧

೫೫. ಮತಕ್ಷೇತ್ರಗಳ ನಕ್ಷೆಗಳು ೯೬೧

೫೬. ಬುಡಕಟ್ಟು ಕ್ರಿಶ್ಚಿಯನ್ನರು ಮತ್ತು ಮಹಾ ಚುನಾವಣೆಗಳು ೯೬೩

೫೭. ಕಾನೂನು ಮಂತ್ರಾಲಯದಲ್ಲಿ ಅಧಿಕಾರಿಗಳು ೯೬೪

೫೮. ಮತಕೇಂದ್ರಗಳ ಪಟ್ಟಿ ೯೬೪

೫೯. ಕುಷ್ಠರೋಗ ೯೬೬

೬೦. ಲೇಡಿ ಹಾರ್ಡಿಂಗ್ ವೈದ್ಯಕೀಯ ಕಾಲೇಜು ೯೬೭

೬೧. ಸೂಲಗಿತ್ತಿ ಮತ್ತು ದಾದಿಯರ ತರಬೇತಿ ೯೬೯

೬೨. ಎಮಿಟೈನ್ ೯೭೦

೬೩. ಆಯುರ್ವೇದ ಸಂಶೋಧನಾ ಸಂಸ್ಥೆ ೯೭೧

೬೪. ಗೃಹನಿರ್ಮಾಣ ನಿರ್ದೇಶನ ೯೭೧

೬೫. ಕುಷ್ಠರೋಗಿಗಳು ೯೭೨

೬೬. ನಿರಾಶ್ರಿತ ಶಿಬಿರವಾಸಿಗಳ ಹರತಾಳ ೯೭೪

೬೭. ರಾಜಸ್ಥಾನ ಮಹಿಳಾ ಮತದಾರರಿಗೆ ಸಂಬಂಧಪಟ್ಟಂತೆ ಮಹಿಳಾ ಸಮಿತಿ, ಜೈಪುರ, ಇವರ ಮನವಿ ೯೭೫

೬೮. ಹಿಂದೂ ವಿವಾಹ ವಿಚ್ಛೇದನ ೯೭೬
೬೯. ಹಿಂದೂ ದ್ವಿಪತ್ನಿತ್ವ ವಿವಾಹಗಳ ನಿವಾರಣೆ ಅಧಿನಿಯಮ ೯೭೭

ಅನುಬಂಧ ೯೭೮
ವಿಷಯಸೂಚಿ ೯೮೯

## ವಿಭಾಗ – ಒಂದು

## ೨೦ನೇ ನವೆಂಬರ್ ೧೯೪೭
## ರಿಂದ
## ೩೧ನೇ ಮಾರ್ಚ್ ೧೯೪೯

# ವಿಭಾಗ – ಒಂದು

## ಪರಿವಿಡಿ

೧. ವಿದೇಶಿ ವಿನಿಮಯ (ತಿದ್ದುಪಡಿ) ವಿಧೇಯಕ ೫

೨. ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯ ನೇಮಕಾತಿ ೭

೩. ಇಂಡಿಯನ್ ನರ್ಸಿಂಗ್ ಪರಿಷತ್ತು ವಿಧೇಯಕ ೧೫

೪. ಹೆಚ್ಚಿನ ಪ್ರಾಂತೀಯ ಅಧಿಕಾರ ವಿಧೇಯಕ ೧೬

೫. ಸಂಯುಕ್ತ ನ್ಯಾಯಾಲಯ (ಅಧಿಕಾರ ವ್ಯಾಪ್ತಿಯ ಹೆಚ್ಚಳ) ವಿಧೇಯಕ ೨೩

೬. ಪ್ರಾಂತೀಯ ದಿವಾಳಿತನ (ತಿದ್ದುಪಡಿ) ವಿಧೇಯಕ ೩೪

೭. ಅಂಗೀಕೃತವಾದ ಭಾರತ (ಕೇಂದ್ರ ಸರಕಾರ ಮತ್ತು ಸಂಸತ್ತು) ಕಾಯಿದೆ, ೧೯೪೬ರ ಕಲಮು ೨ ಮತ್ತು ೩ರಲ್ಲಿ ನಮೂದಿಸಿದ ಅವಧಿ ವಿಸ್ತರಣೆಯ ಬಗ್ಗೆ ನಿರ್ಣಯ. ೪೧

# ೧

## *ವಿದೇಶಿ ವಿನಿಮಯ (ತಿದ್ದುಪಡಿ) ವಿಧೇಯಕ

**ಸಭಾಧ್ಯಕ್ಷರು:** ವಿಧೇಯಕವನ್ನು ಮಂಡಿಸಲಾಗಿದೆ.

"ವಿದೇಶಿ ವಿನಿಮಯ ಕಾಯಿದೆ, ೧೯೪೭ನ್ನು ತಿದ್ದುಪಡಿಮಾಡುವ ವಿಧೇಯಕವನ್ನು ಪರಿಗಣಿಸಲಾಗುವುದು."

'ಬ್ರಿಟಿಷ್ ಇಂಡಿಯಾ' ಎಂಬ ಅಭಿವ್ಯಕ್ತಿಯ ಕುರಿತು ಕಾನೂನು ಸಚಿವರು ಏನು ಹೇಳುತ್ತಾರೆ?

**ಸನ್ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು)**:** ತಿದ್ದುಪಡಿಯನ್ನು ಮಂಡಿಸಿದ ನಂತರ ಉತ್ತರರೂಪವಾಗಿ ಮಾತನಾಡುತ್ತೇನೆಂದು ಯೋಚಿಸಿದ್ದೆ. ತಾವು ಹೀಗೆ ಬಯಸಿದಲ್ಲಿ, ನಾನು ವಸ್ತುಸ್ಥಿತಿಯನ್ನು ವಿವರಿಸುತ್ತೇನೆ.

**ಸಭಾಧ್ಯಕ್ಷರು:** ಒಳ್ಳೇದು, ಏಕೆಂದರೆ ಅದರಿಂದ ಸಮಯವು ಉಳಿಯುತ್ತದೆ.

**ಸನ್ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಮಾನ್ಯರೆ, ಅಸ್ತಿತ್ವದಲ್ಲಿರುವ ಕಾನೂನುಗಳ ಅಳವಡಿಕೆ ಆದೇಶವೆಂಬ ಹೆಸರಿನಲ್ಲಿ ಕೆಲವು ಪದಗಳನ್ನು ನಿರೂಪಿಸಿದ ವ್ಯವಸ್ಥೆಯೊಂದನ್ನು ನಾವು ಹೊಂದಿದ್ದೇವೆ. ಆ ಆದೇಶದಲ್ಲಿ 'ಬ್ರಿಟಿಷ್ ಇಂಡಿಯಾ' ಎಂಬ ಪದವನ್ನು ನಿರೂಪಿಸಲಾಗಿದೆ ಮತ್ತು ಅದು 'ಬ್ರಿಟಿಷ್ ಇಂಡಿಯಾದ ಎಲ್ಲಾ ಪ್ರಾಂತಗಳು' ಎಂದು ನಿರೂಪಿಸುತ್ತದೆ. ಆದ್ದರಿಂದ ಈ ನಿರ್ದಿಷ್ಟ ವಿಧೇಯಕದ ಈ ಎರಡು ವಾಕ್ಯಾಂಗಗಳಲ್ಲಿ ಒಂದನ್ನು ಬಳಸುವುದು ಈ ಸದನಕ್ಕೆ ಬಿಟ್ಟದ್ದು, ಏಕೆಂದರೆ ಅಳವಡಿಕೆಯ ಆದೇಶದಲ್ಲಿ ಇವೆರಡೂ ಒಂದೇ ಅರ್ಥವನ್ನು ಹೊಂದಿವೆ. ನಾವು 'ಬ್ರಿಟಿಷ್ ಇಂಡಿಯಾ' ಎಂಬ ಪದಗಳನ್ನು ಬಳಸಬಹುದು ಅಥವಾ 'ಇಂಡಿಯಾದ ಎಲ್ಲಾ ಪ್ರಾಂತಗಳು' ಎಂಬುದನ್ನೂ ಬಳಸಬಹುದು, ಏಕೆಂದರೆ ಅವೆರಡೂ ಒಂದೇ ಅರ್ಥವನ್ನು ಹೊಂದಿವೆ. ಇವೆರಡು ಪರ್ಯಾಯಗಳ ಮತ್ತು ಇವುಗಳಲ್ಲಿ ಯಾವುದನ್ನು ನಾವು ಸ್ವೀಕರಿಸಬೇಕೆಂಬ ಪ್ರಶ್ನೆಯನ್ನು ನಿಜಕ್ಕೂ ಮುಖ್ಯ ವಿಧೇಯಕದಲ್ಲಿ ಬಳಸಲಾದ ವಾಕ್ಯಾಂಗದಿಂದ ನಿರ್ಧರಿಸಬೇಕು ಏಕೆಂದರೆ ಇದು ಒಂದು ತಿದ್ದುಪಡಿಯಷ್ಟೇ ಆಗಿದೆ. ವಿದೇಶಿ ವಿನಿಮಯದ ಮೂಲ ವಿಧೇಯಕದಲ್ಲಿ, 'ಬ್ರಿಟಿಷ್ ಇಂಡಿಯಾ' ಎಂಬ ಪದವನ್ನು ಬಳಸಲಾಗಿದೆ, ಮತ್ತು ನನ್ನ ಅರಿಕೆಯೇನೆಂದರೆ ಈ ತಿದ್ದುಪಡಿಯು ಅರ್ಥವಾಗಬೇಕಾದರೆ ಇದು 'ಬ್ರಿಟಿಷ್ ಇಂಡಿಯಾ' ಎಂಬ ಸಾಮಾನ್ಯ ವಾಕ್ಯಾಂಗವನ್ನು ಬಳಸಬೇಕು. ಅದೇ ವಾಕ್ಯಾಂಗಗಳನ್ನು ಬಳಸುವುದರಿಂದ ಏನೂ ನಷ್ಟವಿಲ್ಲ, ಇದ್ದರೆ ಲಾಭವೇ. ಮಂಡಿಸಲ್ಪಟ್ಟ ತಿದ್ದುಪಡಿಯು ನನ್ನ ತೀರ್ಮಾನದಂತೆ ಬರೀ ಭಾವುಕವಾಗಿದೆ ಮತ್ತು ಕಾನೂನಿನ ಪಠ್ಯದಿಂದ 'ಬ್ರಿಟಿಷ್' ಎಂಬ ಪದವನ್ನು ತಪ್ಪಿಸಲುದ್ದೇಶಿಸಿದೆ.

**ಶ್ರೀ ಕೆ.ಸಂತಾನಂ** (ಮದ್ರಾಸು: ಸಾಮಾನ್ಯ)**:** ಅಲ್ಲವೇ ಅಲ್ಲ,

---

* Constituted Assembly (Debates) Vol. I, ದಿನಾಂಕ ೨೦ ನವೆಂಬರ್ ೧೯೪೭; ಪು. ೩೫೭. ಇನ್ನು ಮುಂದೆ ಇದನ್ನು C.A. (Leg.) D. ಎಂದು ಸೂಚಿಸಲಾಗುತ್ತದೆ.

**ಸನ್ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಮುಖ್ಯ ಕಾಯಿದೆ ಮತ್ತು ತಿದ್ದುಪಡಿಮಾಡುವ ಕಾಯಿದೆಯ ನಡುವೆ ಏಕರೂಪತೆಯ ಆವಶ್ಯಕತೆಯಿರುವುದರಿಂದ ನಾವು ಮುಖ್ಯ ಕಾಯಿದೆಯಲ್ಲಿ ಬಳಸಲಾದ ವಾಕ್ಯಾಂಗವನ್ನೇ ಸ್ವೀಕರಿಸಬೇಕೆಂಬುದು ನನ್ನ ಅರಿಕೆ.

**ಶ್ರೀ ಆರ್.ಕೆ.ಸಿಧ್ವ** (ಸಿ.ಪಿ. ಮತ್ತು ಬೇರಾರ್: ಸಾಮಾನ್ಯ)**: 'ಬ್ರಿಟಿಷ್'** ಎಂಬ ಪದವನ್ನು ಕೈಬಿಟ್ಟರೆ ಏನಾದರೂ ಕಾನೂನಿನ ತೊಡಕಿದೆಯೇ ಎಂದು ನಾನು ತಿಳಿಯಬಹುದೇ?

**ಸಭಾಧ್ಯಕ್ಷರು:** ಕಾನೂನು ಸದಸ್ಯರು ಸೂಚಿಸಿದ್ದು ಇದನ್ನೇ. ಪ್ರಕರಣದ ಯೋಗ್ಯತೆಯ ಕುರಿತು ಪ್ರವೇಶಿಸದೆ, ಮತ್ತು ಕಾನೂನು ಸದಸ್ಯರು ಹೇಳಿದ್ದನ್ನು ಮೇಲ್ನೋಟಕ್ಕೇ ಗಮನಿಸಿ, ನಾನು ಈ ತಿದ್ದುಪಡಿಗೆ ನನ್ನ ಅನುಮತಿಯನ್ನು ನಿರಾಕರಿಸುತ್ತೇನೆಂದು ಹೇಳುತ್ತಾ ಈ ಚರ್ಚೆಯನ್ನು ಇಲ್ಲಿಗೇ ನಿಲ್ಲಿಸುತ್ತೇನೆ.

◆

# ೨

## *ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯ ನೇಮಕಾತಿ

**ಸನ್ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು): ಅಧ್ಯಕ್ಷರೇ, ಮಂಡಿಸಿದವರ ಉದ್ದೇಶವು ಪ್ರಶಂಸಾರ್ಹವಾಗಿದೆಯೆಂದು ನಾನು ಥಟ್ಟನೇ ಹೇಳಬಲ್ಲೆ ಮತ್ತು ಅವರು ಮಂಡಿಸಿದ ಸೂಚನೆಯ ಕುರಿತು ನನಗೆ ಪೂರ್ಣ ಸಹಾನುಭೂತಿಯಿದೆ. ಮಾನ್ಯರೇ, ಆಧುನಿಕ ಸಮಾಜದಲ್ಲಿ ಕಾನೂನಿನ ನಿಯತಕಾಲಿಕ ಪುನರ್ವಿಮರ್ಶೆಯು ಅತೀ ಅಗತ್ಯವೆಂದಬುದರಲ್ಲಿ ಸಂಶಯವಿಲ್ಲ. ಒಂದು ಜನಪ್ರಿಯ ಶಾಸನಸಭೆಯು ಅದು ಆಳುವ ಸಮಾಜದ ಪ್ರತಿಯೊಂದು ವಿಚಾರದ ಕುರಿತಾದ ಶಾಸನರಚನೆಯ ಮಹತ್ಕಾರ್ಯದಲ್ಲಿ ತೊಡಗಿದಾಗ, ಕೆಲವು ಸಮಸ್ಯೆಗಳು ಸೃಷ್ಟಿಯಾಗುವುದು ಅನಿವಾರ್ಯ ಮತ್ತು ಅವನ್ನು ಒಂದು ಪರಿಣತ ಕಾನೂನು ನಿಕಾಯವು ಪರಿಶೀಲಿಸಿ ಸರಿಪಡಿಸಬೇಕಾದ್ದು ಅವಶ್ಯವಾಗಿದೆ. ಮೊಟ್ಟಮೊದಲನೆಯದಾಗಿ, ಕರಡುತಯಾರಕನು ಒಂದು ವಿಚಾರವನ್ನು ಕಾನೂನಿನ ರೂಪಕ್ಕೆ ತರುವಾಗ, ಅದು ಸರಿಯಾಗಿದೆಯೆಂಬುದಕ್ಕಾಗಿ, ಮತ್ತು ಶಾಸಕಾಂಗದ ಉದ್ದೇಶವನ್ನು ಪೂರ್ಣವಾಗಿ ಒಳಗೊಳ್ಳುತ್ತದೆಯೆಂಬುದಕ್ಕಾಗಿ, ನಿರ್ದಿಷ್ಟ ವಾಕ್ಯಾಂಗವನ್ನು ಸಲಹೆಮಾಡುತ್ತಾನೆ. ಕೆಲವು ಹಂತಗಳಲ್ಲಿ ನ್ಯಾಯಾಂಗವು ಮತ್ತು ವೃತ್ತಿಯ ಮಂದಿ ಈ ಕರಡು ತಯಾರಕನು ಬಳಸಿದ ವಾಕ್ಯಾಂಗವು ತಪ್ಪಾಗಿದೆಯೆಂದು ಮತ್ತು ಶಾಸಕಾಂಗವು ಹೊಂದಿದ್ದ ಉದ್ದೇಶವನ್ನು ಸರಿಯಾಗಿ ತಿಳಿಸುವುದಿಲ್ಲವೆಂಬುದನ್ನು ಮನಗಾಣುತ್ತಾರೆ. ಆದ್ದರಿಂದ ಆ ಸಮಸ್ಯೆಯು ಯಾರಾದರೂ ಗಮನಿಸಲೇಬೇಕಾದ ಮತ್ತು ಮೂಲೋದ್ದೇಶಗಳಿಗನುಗುಣವಾಗಿ ಸರಿಪಡಿಸಬೇಕಾದ ಸಮಸ್ಯೆಯಾಗುತ್ತದೆ. ಅನೇಕ ಬಾರಿ ಆಗುವುದೆಂದರೆ ಶಾಸಕಾಂಗವು ಬಹಳಷ್ಟು ಕಾಲ ಶಾಸನಪ್ರಕ್ರಿಯೆಯಲ್ಲಿ ನಿರತವಾದಾಗ ಅಪ್ರಜ್ಞಾಪೂರ್ವಕವಾಗಿ ಕೆಲವು ಅಸಂಗತಗಳು ಒಳಸುಳಿಯುತ್ತವೆ. ಕರಡುತಯಾರಕನಿಗಾಗಲೀ ಶಾಸಕಾಂಗಕ್ಕಾಗಲೀ ತಮ್ಮ ಮುಂದೆ ತರಲಾದ ಶಾಸನದ ಪ್ರತಿಯೊಂದು ಅಂಶವನ್ನು ಪರಿಶೀಲಿಸಿ ಶಾಸನದ ಆ ಅಂಶವು ಅದಕ್ಕೂ ಮುನ್ನ ಇದ್ದ ಇತರ ಶಾಸನಕ್ಕನುಗುಣವಾಗಿದೆಯೇ ಎಂದು ಕಂಡುಹಿಡಿಯಲು ಎಲ್ಲ ಸಂದರ್ಭಗಳಲ್ಲಿ ಸಾಧ್ಯವಾಗುವುದಿಲ್ಲ. ಆದ್ದರಿಂದ ಕಾಲಕ್ರಮೇಣ ಈ ಅಸಂಗತತೆಗಳು ಸಂಚಿತಗೊಳ್ಳುತ್ತವೆ. ಅವು ನ್ಯಾಯವಾದಿಗಳನ್ನು ನ್ಯಾಯಾಧೀಶರನ್ನು ಕಾಡುತ್ತವೆ, ಮತ್ತು ಕಕ್ಷಿದಾರ ಜನತೆಯನ್ನೂ ಕಾಡುತ್ತವೆ. ಆಧುನಿಕ ಕಾಲದಲ್ಲಿ ಏನಾಗುತ್ತದೆಂದರೆ ಒಂದು ಶಾಸಕಾಂಗವು ಎಷ್ಟು ಕಾರ್ಯನಿರತವಾಗಿವೆಂದರೆ ಅದಕ್ಕೆ ತನ್ನ ಪೂರ್ಣಾವಧಿಯನ್ನು ಆ ಕಾನೂನಿನ ಕ್ರೋಢೀಕರಣಕ್ಕಾಗಿ ನೀಡಲು ಅಸಾಧ್ಯವಾಗಿ ಅದು ತನ್ನ ಕರ್ತವ್ಯವನ್ನು ಭಾಗಶಃ ಶಾಸನವೆಂದು ನಾವು ಕರೆಯುವ ರೀತಿಯಲ್ಲಿ ನಿರ್ವಹಿಸಲು ಯತ್ನಿಸುತ್ತದೆ. ಭಾಗಶಃ ಶಾಸನದ ಸಂಚಿತತೆಯು ಕಾಲಕ್ರಮೇಣ ಒಂದು ಸಮಸ್ಯೆಯನ್ನು ಸೃಷ್ಟಿಸುತ್ತದೆ. ಕಾನೂನು ಎಂದರೇನೆಂಬುದನ್ನು ಜನತೆ ಅರ್ಥಮಾಡಿಕೊಳ್ಳಲಾರರು ಮತ್ತು ಪರಿಣಾಮವಾಗಿ ಕ್ರೋಢೀಕರಣಗಳ ಒಂದು ಸಮಸ್ಯೆಯು ಉದ್ಭವವಾಗುತ್ತದೆ. ಆದ್ದರಿಂದ ಒಂದು ಶಾಸನಬದ್ಧ ಕಾನೂನು

---

* C.A. (Leg.) D., Vol. II, ೨ ಡಿಸೆಂಬರ್ ೧೯೪೭, ಪು. ೧೧೦೩–೦೫.

ಪುನರ್ವಿಮರ್ಶಾ ಸಮಿತಿಯು ಅವಶ್ಯವೆಂದು ಸಲಹೆಮಾಡುವುದಕ್ಕಾಗಿ ವಿಶೇಷ ಬೇಡಿಕೆಯ ಅಗತ್ಯವಿಲ್ಲ. ಭಾರತ ಸರಕಾರವು ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯ ಅಗತ್ಯದ ಸ್ವೀಕಾರವನ್ನು ಬಹಳ ಹಿಂದೆಯೇ ಅಂಗೀಕರಿಸಿತ್ತೆಂದು ನಾನು ಭಾವಿಸುತ್ತೇನೆ. ವಾಸ್ತವವಾಗಿ ಮೋಂಟೆಗ್ಯು–ಚೆಲಮ್ಸ್‌ಫೋರ್ಡ್ ಸುಧಾರಣೆಗಳು ಅನುಷ್ಠಾನಕ್ಕೆ ಬಂದೊಡನೆಯೇ ಮತ್ತು ಅಲ್ಲೊಂದು ಶಾಸಕಾಂಗವಿದೆಯೆಂದೂ ಮತ್ತು ಆ ಜನಪ್ರಿಯ ಶಾಸಕಾಂಗವು ಹಿಂದಿನ ಶಾಸಕಾಂಗವು ಮಾಡಬಹುದಾದದ್ದಕ್ಕಿಂತ ಹೆಚ್ಚು ಸಾಮಾಜಿಕ ಸುಧಾರಣೆಯ ಶಾಸನವನ್ನು ಕೈಗೊಳ್ಳಬಹುದೆಂದು ಗೊತ್ತಾದಾಗ, ಭಾರತ ಸರಕಾರವು ಮೋಂಟೆಗ್ಯು–ಚೆಲಮ್ಸ್‌ಫೋರ್ಡ್ ಸುಧಾರಣೆಗಳು ಪ್ರಯೋಗವಾದ ಕಾಲದಲ್ಲಿಯೇ ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯೆಂದು ಕರೆಯಲಾದದ್ದನ್ನು ೧೯೨೧ರಲ್ಲಿ ಸ್ಥಾಪಿಸಿತು. ಆದ್ದರಿಂದ ನನ್ನ ಸನ್ಮಾನ್ಯ ಮಿತ್ರ ಸರ್ ಹರಿ ಸಿಂಗ್ ಗೌರ್ ಅವರ ಮನಸ್ಸಿನಲ್ಲಿರುವ, ಅಂದರೆ, ಒಂದು ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯು ಇರಬೇಕೆಂಬ ಮೂಲೋದ್ದೇಶವನ್ನು ಸ್ವೀಕರಿಸಲು ನನಗೇನೂ ಕಷ್ಟವಾಗುವುದಿಲ್ಲ. ಅವರ ಮತ್ತು ನನ್ನ ನಡುವೆಯಿರುವ ವ್ಯತ್ಯಾಸದ ಒಂದೇ ಅಂಶವೆಂದರೆ ನಾವು ತಕ್ಷಣದಲ್ಲೇ ಒಂದು ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯನ್ನು ಸ್ಥಾಪಿಸಬೇಕೇ ಅಥವಾ ಈ ವಿಚಾರವನ್ನು ನಮ್ಮಿಬ್ಬರ ಮನಸ್ಸಿನಲ್ಲಿರುವ ಉದ್ದೇಶಗಳನ್ನು ಪೂರೈಸಬಲ್ಲ ಅತ್ಯಂತ ಸೂಕ್ತ ವ್ಯವಸ್ಥೆಯನ್ನು ಅತ್ಯಂತ ಸೂಕ್ತ ಕಾಲದಲ್ಲಿ ಯೋಚಿಸಲು ಸರಕಾರಕ್ಕೆ ಬಿಡಬೇಕೇ ಎಂಬುದು.

೧೯೨೧ರಲ್ಲಿ ಸ್ಥಾಪಿತವಾದ ರೀತಿಯ ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯ ಕುರಿತು, ನಾನು ಈ ಸದನಕ್ಕೆ ಅದು ಮಾಡಿದ ಕಾರ್ಯ ಮತ್ತು ಅದಕ್ಕಿಂತ ಹೆಚ್ಚೇನಾದರೂ ಮಾಡಲು ಅದಕ್ಕೆ ಸಾಧ್ಯವಿರಲಿಲ್ಲವೇ ಎಂಬುದನ್ನು ತಿಳಿಸಲಿಚ್ಛಿಸುತ್ತೇನೆ. ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯನ್ನು ೧೯೨೧ರಲ್ಲಿ ಸ್ಥಾಪಿಸಲಾಯಿತು ಮತ್ತು ಅದು ೧೯೩೨ರ ವರೆಗಿತ್ತು. ೧೯೩೨ರ ನಂತರ ಅದು ನಿರ್ಜೀವವಾಯಿತು; ಅದು ಸಹಜ ಸಾವನ್ನಪ್ಪಿತೋ ಅಥವಾ ಅಸಹಜ ಸಾವನ್ನು ಪಡೆಯಿತೋ ಎಂಬುದು ನಾನು ವ್ಯಾಖ್ಯಾನಿಸಲು ಉದ್ದೇಶಿಸಿರುವ ವಿಷಯವಲ್ಲ. ಆದರೆ ಈ ಸದನಕ್ಕೆ ನಾನು ಹೇಳಲಿಚ್ಛಿಸುವುದೇನೆಂದರೆ ಆ ಸಮಿತಿಯು ಕಾಲಾನುಕಾಲಕ್ಕೆ ಸಭೆ ಸೇರುತ್ತಿದ್ದಾಗ, ಈ ಹನ್ನೊಂದು ವರ್ಷಗಳಲ್ಲಿ ಅದು ಮಾಡಿದ್ದೆಂದರೆ ವ್ಯಾಪಾರಿ ಹಡಗು ಕಾಯಿದೆ, ಕ್ರಿಮಿನಲ್ ಬುಡಕಟ್ಟುಗಳ ಕಾಯಿದೆ, ಇಂಡಿಯನ್ ವಾರಸುದಾರಿಕೆ ಕಾಯಿದೆ, ಅರಣ್ಯ ಕಾಯಿದೆ, ಮತ್ತು ದಾರಿಸುಂಕ ಕಾಯಿದೆಗಳ ಕ್ರೋಢೀಕರಣ. ಮಾನ್ಯರೇ, ಈ ಸಮಿತಿಯ ಕಾರ್ಯದ ಕುರಿತು ಯಾವುದೇ ಅಭಿಪ್ರಾಯವನ್ನು ಹೇರುವ ಉದ್ದೇಶವಿಲ್ಲದೆಯೂ, ನನಗನ್ನಿಸುವಂತೆ ಹನ್ನೊಂದು ವರ್ಷಗಳಲ್ಲಿ ಐದು ಕಾಯಿದೆಗಳನ್ನು ರಚಿಸುವುದು ಖಂಡಿತಾ ಈ ರೀತಿಯ ಸಮಿತಿಯಿಂದ ನಿರೀಕ್ಷಿಸುವ ಒಂದು ಮಹತ್ವದ ಕಾರ್ಯವೇನಲ್ಲವೆಂಬುದನ್ನು ಒಪ್ಪಬಹುದೆಂದು ತಿಳಿಯುತ್ತೇನೆ. ಇದರ ಬದಲು ಈ ಸಮಿತಿಯನ್ನು ವಿಸರ್ಜಿಸಿದಾಗ ಮತ್ತು ಈ ಸಮಿತಿಗೆ ವಹಿಸಿದ ಕೆಲಸದ ಜವಾಬ್ದಾರಿಯು ಭಾರತ ಸರಕಾರದ ಮೇಲೆ ಬಿದ್ದಾಗ – ನಾನು ಮತ್ತೆ ಸಮಿತಿಯ ಕಾರ್ಯಕ್ಷಮತೆಯ ಕುರಿತು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸದೆ ಅಥವಾ ಭಾರತ ಸರಕಾರದ ಸಂಸದೀಯ ಖಾತೆಯ ಹಿರಿಮೆಯನ್ನು ಹೊಗಳದೆ ಹೇಳುವುದಾದರೆ– ಆ ಸಮಿತಿಯ ನಂತರ ರಚನೆಗೊಂಡ ಕಾಯಿದೆಗಳೆಂದರೆ ೧೯೩೦ರ ಸರಕುಗಳ ಮಾರಾಟ ಕಾಯಿದೆ, ೧೯೩೨ರ ಪಾಲುದಾರಿಕೆ ಕಾಯಿದೆ, ೧೯೩೪ರ ಕಾರ್ಖಾನೆಗಳ ಕಾಯಿದೆ, ೧೯೩೪ರ ಸುಂಕ ಕಾಯಿದೆ, ೧೯೩೪ರ ಪೆಟ್ರೋಲಿಯಂ ಕಾಯಿದೆ, ೧೯೩೮ರ ವಿಮಾ ಕಾಯಿದೆ,

೧೯೩೮ರ ಮೋಟಾರು ವಾಹನ ಕಾಯಿದೆ ಮತ್ತು ೧೯೪೦ರ ಮಧ್ಯಸ್ಥಿಕೆ ಕಾಯಿದೆ. ಈ ಕಾಯಿದೆಗಳನ್ನು ಬಲ್ಲ ಯಾರೇ ಆಗಲಿ ಇವುಗಳಲ್ಲಿ ಪ್ರತಿಯೊಂದೂ ಶಾಸನದ ಒಂದು ಮಹತ್ವದ ಅಂಶವೆಂಬುದನ್ನು ಒಪ್ಪುತ್ತಾರೆ. ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯು ತಾನು ಪೂರೈಸಬೇಕಾಗಿದ್ದ ಭರವಸೆಗಳನ್ನು ಪೂರೈಸಲು ವಿಫಲವಾದದ್ದಕ್ಕೆ ಕಾರಣವೆಂದರೆ ಅದರ ರಚನೆ ಮತ್ತು ಸಂವಿಧಾನದಲ್ಲೇ ದೊಡ್ಡ ಕೊರತೆಯಿದ್ದದ್ದು. ಮೊದಲನೆಯದಾಗಿ, ಸಮಿತಿಯಲ್ಲಿ ಆರು ಸದಸ್ಯರಿದ್ದರು; ಬಹುತೇಕ ಶಾಸಕಾಂಗದ ಸದಸ್ಯರೇ ಅದನ್ನು ಆಯ್ಕೆಮಾಡುತ್ತಿದ್ದರು. ಆಯ್ಕೆಯಾದ ಸದಸ್ಯರು ನಿಸ್ಸಂಶಯವಾಗಿ ತಮ್ಮ ಕಾನೂನುಜ್ಞಾನ ಮತ್ತು ಕಾನೂನಿನ ಒಳನೋಟಗಳ ಆಧಾರದ ಮೇಲೆಯೇ ಆಯ್ಕೆಯಾಗಿದ್ದವರಾದರೂ, ನನ್ನ ಅಭಿಪ್ರಾಯದಲ್ಲಿ ಅದು ಒಂದು ಆಕಸ್ಮಿಕವಷ್ಟೇ ಆಗಿತ್ತು. ರಾಷ್ಟ್ರ ಪರಿಷತ್ತಿನ ಅಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿದ್ದರು. ಸಮಿತಿಯ ಅಧ್ಯಕ್ಷರಾಗಿ ರಾಷ್ಟ್ರಪರಿಷತ್ತಿನ ಅಧ್ಯಕ್ಷರನ್ನು ಆಯ್ಕೆಮಾಡುವುದರ ಮೌಲ್ಯವೇನೆಂಬುದು ನನಗೆ ಅರ್ಥವಾಗುವುದಿಲ್ಲ ಏಕೆಂದರೆ ಅದಕ್ಕೆ ವಿಶೇಷ ಕಾನೂನು ಅರಿವು ಬೇಕು.

ಸಮಿತಿಯ ಕುರಿತ ಎರಡನೆಯ ತೊಡಕೆಂದರೆ ಅದರ ಸದಸ್ಯರಿಗೆ ಸಂಭಾವನೆಯಿರಲಿಲ್ಲ. ಸಂಭಾವನೆ ಪಡೆಯದಿದ್ದರೆ ಸದಸ್ಯರು ಪ್ರಜ್ಞಾಪೂರ್ವಕವಾಗಿ ಜನರು ಮಾಡಬೇಕಾದ ಕರ್ತವ್ಯವನ್ನು ನಿರ್ವಹಿಸುವುದಿಲ್ಲವೆಂಬುದು ನನ್ನ ಸೂಚನೆಯಲ್ಲ. ಆದರೆ ವಾಸ್ತವವಾಗಿ ಆದದ್ದೇನೆಂದರೆ ಸಮಿತಿಯು ಅಪರೂಪಕ್ಕಷ್ಟೇ ಸಭೆ ಸೇರುತ್ತಿತ್ತು. ಸಮಿತಿಯ ಸದಸ್ಯರು ಶಾಸಕಾಂಗದಿಂದ ಬಂದವರಾದ್ದರಿಂದ ಅಧಿವೇಶನದ ಕಾಲದಲ್ಲಷ್ಟೇ ಸೇರುತ್ತಿದ್ದರು ಮತ್ತು ಅವರು ಆಗ ಹೇಗೂ ದೆಹಲಿಯಲ್ಲೇ ಇರುತ್ತಿದ್ದುದರಿಂದ ಅವರ ಸಮಯದ ಸ್ವಲ್ಪ ಭಾಗವನ್ನು ಶಾಸನಬದ್ಧ ಕಾನೂನು ಪುನರ್ವಿಮರ್ಶಾ ಸಮಿತಿಯ ಸದಸ್ಯರಾಗಿ ಮಾಡಬೇಕಾದ ಕಾರ್ಯವನ್ನು ನಿರ್ವಹಿಸಲು ಕೇಳಿಕೊಂಡಾಗ ಅವರೆಲ್ಲರೂ ಸಮಿತಿಯ ಕಾರ್ಯಕ್ಕಿಂತ ತಮ್ಮ ಶಾಸಕಾಂಗದ ಕಾರ್ಯವೇ ಹೆಚ್ಚೆಂದು ವಾದಿಸಿದರು. ಅಧಿವೇಶನಗಳ ಕೊನೆಯಲ್ಲಿ ಅವರೆಲ್ಲರೂ ಸಹಜವಾಗಿಯೇ ತಮ್ಮ ವೈಯಕ್ತಿಕ ಇಲ್ಲವೇ ವೃತ್ತಿಪರ ಕರ್ತವ್ಯಗಳನ್ನು ಮಾಡಲು ತಮ್ಮ ಮನೆಗಳಿಗೆ ತೆರಳಿದರು. ಫಲಿತಾಂಶವೆಂದರೆ ಸಮಿತಿಯು ನಿರೀಕ್ಷಿತ ಪ್ರಮಾಣದ ಸಮಯವನ್ನು ನೀಡಲು ಶಕ್ತವಾಗಲಿಲ್ಲ. ಆದ್ದರಿಂದ ತಾರ್ಕಿಕವಾಗಿಯೇ ನನ್ನ ಮಾನ್ಯ ಮಿತ್ರ ಸರ್ ಹರಿ ಸಿಂಗ್ ಗೌರ್ ಅವರ ಉದ್ದೇಶವು ಮುಂದುವರಿಯಬೇಕಾದರೆ ನಾವು ಪ್ರತ್ಯೇಕವಾದ ಒಂದು ಭಿನ್ನ ರೀತಿಯ ಸಮಿತಿಯನ್ನು ಹೊಂದಬೇಕಾಗುತ್ತದೆಂಬುದನ್ನು ಅವರು ಒಪ್ಪುತ್ತಾರೆಂದು ಭಾವಿಸುತ್ತೇನೆ. ನಾವು ಈ ಹಿಂದೆ ಹೊಂದಿದ್ದಂತಹ ಸಮಿತಿಯನ್ನು ಹೊಂದುವುದರಿಂದ ಯಾವ ಉಪಯೋಗವೂ ಇಲ್ಲ. ಏಕೆಂದರೆ ನಾನು ಈಗಾಗಲೇ ಪ್ರಸ್ತಾವಿಸಿದ ಕಾರಣಗಳಿಂದಾಗಿ ಅದು ತನಗೆ ವಹಿಸಿದ್ದಂತಹ ಕಾರ್ಯಗಳನ್ನು ಪೂರೈಸಲಿಲ್ಲ.

ಮಾನ್ಯರೇ, ಈ ಕೆಲಸಕ್ಕೆ ಎರಡು ದಾರಿಗಳಿವೆ. ಮೊದಲನೆಯದಾಗಿ ಕಾಯಿದೆಯನ್ನು ಕ್ರೋಢೀಕರಿಸಲು ಮತ್ತು ಪುನರ್ವಿಮರ್ಶಿಸುವ ಉದ್ದೇಶಕ್ಕೆ ಮಾತ್ರವೇ ಮೀಸಲಾದ ಒಂದು ಶಾಶ್ವತ ಆಯೋಗವನ್ನು ಹೊಂದುವುದು. ಎರಡನೆಯದಾಗಿ, ಅದು ಶಾಶ್ವತ ಅಸ್ತಿತ್ವದ್ದಾಗಿರಬೇಕಾದರೆ ಅದು ನಿಸ್ಸಂಶಯವಾಗಿಯೂ ತಮ್ಮ ಕಾರ್ಯವನ್ನು ಬಲ್ಲ ಒಂದು ತಜ್ಞರ ತಂಡವನ್ನು ಹೊಂದಿರಬೇಕು. ತಜ್ಞರನ್ನು ಅವರ ವೃತ್ತಿಯಿಂದ ಹೊರಗೆ ತರಬೇಕಾದರೆ ಅವರು ಸಮಿತಿಗೆ ಬಂದು ಕೆಲಸಮಾಡುವ ಅವಕಾಶಕ್ಕೆ ತಕ್ಕ ಬೆಲೆಯನ್ನು ನೀಡಬೇಕು. ಸಹಜವಾಗಿಯೇ ಅದು ವೆಚ್ಚದ ಹಾದಿ. ಆದ್ದರಿಂದ ಇಲ್ಲೇ ನಾನು ಅದರ ವೆಚ್ಚದ ಪ್ರಶ್ನೆಯನ್ನು ಪರಿಶೀಲಿಸದೆ ಸರಕಾರವು ಇಲ್ಲಿ ಮತ್ತು ಈಗ ನಾವು ಸರ್ ಹರಿ ಸಿಂಗ್ ಗೌರ್ ಅಥವಾ ಶಾಸಕಾಂಗದ ಇತರ ಯಾವುದೇ ಸದಸ್ಯನು ಸಲಹೆ ಮಾಡಬಹುದಾದ ರೀತಿಯಲ್ಲಿ ಯಾವುದೇ ರೀತಿಯ ಶಾಸನಬದ್ಧ

ಕಾನೂನು ಪುನರ್ವಿಮರ್ಶಾ ಸಮಿತಿಯನ್ನು ರಚಿಸಲು ಒಪ್ಪುತ್ತೇವೆಂದು ಹೇಳಲಾರೆ.

ಈ ಉದ್ದೇಶವನ್ನು ಕಾರ್ಯಗತಗೊಳಿಸಲು ಇನ್ನೂ ಒಂದು ದಾರಿಯಿದೆ. ಅದು ಪ್ರಾಯಃ ಭಾರತ ಸರಕಾರದ ಕಾನೂನು ಸಚಿವರು, ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರು, ಭಾರತದ ಅಡ್ವೋಕೇಟ್ ಜನರಲ್ ಅವರು, ಭಾರತದ ಉಚ್ಚ ನ್ಯಾಯಾಲಯದ ಒಬ್ಬಿಬ್ಬರು ನ್ಯಾಯಾಧೀಶರು, ಮತ್ತು ಇಬ್ಬರು ಅಥವಾ ಮೂವರು ಪ್ರಸಿದ್ಧ ನ್ಯಾಯವಾದಿಗಳು, ಇವರನ್ನೊಳಗೊಂಡ ಒಂದು ಸಣ್ಣ ಸ್ಥಾಯಿ ಸಮಿತಿಯನ್ನು ರಚಿಸುವುದು. ಈ ಸಮಿತಿಯನ್ನು ವರ್ಷದಲ್ಲಿ ಗೊತ್ತಾದ ಅವಧಿಯಲ್ಲಿ ಸೇರಲು ಕೋರಬಹುದು, ಮತ್ತು ಮಾಹಿತಿಯನ್ನು ಸಂಗ್ರಹಿಸಲು ಮತ್ತು ಸಮಿತಿಯು ಮುಂದಿನ ಕ್ರಮಕ್ಕಾಗಿ ಗಮನಿಸಲು ಅದನ್ನು ಸಮಿತಿಯ ಮುಂದೆ ಇಡಲು ಭಾರತ ಸರಕಾರದ ಕಾನೂನು ಖಾತೆಯ ಒಬ್ಬ ವ್ಯಕ್ತಿಯನ್ನು ಕಾರ್ಯದರ್ಶಿಯಾಗಿ ನಿಯೋಜಿಸಬಹುದು.

ನಾನು ಹೇಳುವಂತೆ ಈ ಉದ್ದೇಶವನ್ನು ಕಾರ್ಯಗತಗೊಳಿಸಲು ಹಲವಾರು ಹಾದಿಗಳಿವೆ. ಅವುಗಳಿಗೆ ನಾನು ಹೇಳಿದಂತೆ ಸಮಯ ಮತ್ತು ವ್ಯವಧಾನದ ಅಗತ್ಯವಿದೆ ಮತ್ತು ಸರ್ ಹರಿ ಸಿಂಗ್ ಗೌರ್ ಅವರು ಮಂಡಿಸಿದ ಮತ್ತು ನಾನು ಭಾವಿಸಿದಂತೆ ಅವರು ಅಪೇಕ್ಷಿಸಿದ ತುರ್ತಿನಲ್ಲಿ, ಅವರ ನಿರ್ಣಯವನ್ನು ತಕ್ಷಣ ಅಂಗೀಕರಿಸಿದರೆ ಎಲ್ಲ ಥರದ ಸಮಸ್ಯೆಗಳ ಅನಂತತೆಯ ಧಾಳಿಯಲ್ಲಿರುವ ಸರಕಾರಕ್ಕೆ ತಾನು ಮಾಡಬೇಕಾದ ಈ ಕೆಲಸಕ್ಕೆ ಸಮಯ ಸಿಕ್ಕಲಾರದು ಮತ್ತು ಅದನ್ನು ನಿರ್ವಹಿಸುವುದು ಸಾಧ್ಯವಾಗದು. ಆದ್ದರಿಂದ,ನಾನು ಸಲಹೆಮಾಡಲಿಷ್ಟಪಡುವುದು ಇದು: ಸರ್ ಹರಿಸಿಂಗ್ ಗೌರ್ ಅವರು ಅಂತಿಮ ಉದ್ದೇಶದ ಕುರಿತಂತೆ ಅವರ ಮತ್ತು ನನ್ನ ನಡುವೆ ಯಾವ ಅಭಿಪ್ರಾಯಭೇದವೂ ಇಲ್ಲವೆಂಬುದನ್ನು ಮನವರಿಕೆಮಾಡಿಕೊಳ್ಳಬೇಕು. ಭಾರತ ಸರಕಾರವು ಪರಿಗಣಿಸಬೇಕಾದ ವಿಚಾರ ಇದೆಂಬುದನ್ನು ನಾವಿಬ್ಬರೂ ಒಪ್ಪುತ್ತೇವೆ. ಇರುವ ಒಂದೇ ವ್ಯತ್ಯಾಸವೆಂದರೆ ಯಾವಾಗ ಮತ್ತು ಹೇಗೆ ಎಂಬುದು. ಅದು ಅವರು ತಕ್ಷಣದ ವಿವಾದಾಂಶವಾಗಿ ಸರಕಾರವನ್ನು ಒತ್ತಾಯ ಮಾಡುವ ಅಗತ್ಯವಿಲ್ಲದ ಒಂದು ವಿಚಾರ. ಆದ್ದರಿಂದ ನನ್ನ ಸಲಹೆಯೆಂದರೆ ಅವರು ತಳೆದ ನಿಲವು ಅರ್ಧಕ್ಕಿಂತಲೂ ಹೆಚ್ಚನ್ನು ನಾನು ನೀಡಿದ ಉತ್ತರವು ಒಪ್ಪುತ್ತದೆಯಾದ್ದರಿಂದ, ಅವರು ಅದನ್ನು ವಾಪಸುಪಡೆಯುವ ಔದಾರ್ಯವನ್ನು ತೋರುವುದು ಒಳ್ಳೆಯದೆಂದು ಹೇಳಿದರೆ, ಅವರು ಅದಕ್ಕೆ ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ.

***ಸಭಾಧ್ಯಕ್ಷರು:** (ಶ್ರೀ ನಾಜಿರುದ್ದಿನ್ ಅಹಮದ್ ಅವರಿಂದ) ತಿದ್ದುಪಡಿಯು ಮಂಡಿಸಲ್ಪಟ್ಟಿದೆ:

"ವಿಧೇಯಕದ ೨ನೇ ಖಂಡದಲ್ಲಿ, ಪ್ರಸ್ತಾವಿಸಿದ ಹೊಸ ಕಲಮು ೨೮೯ಬಿ–

(೧) '೫೭ & ೫೮ ವಿಕ್ಟ್, ಸಿ.೬೦' ಎಂಬ ಪದ, ಅಂಕಿ, ಅಕ್ಷರ ಮತ್ತು ಆವರಣಚಿಹ್ನೆಗಳನ್ನು ಬಿಡುವುದು; ಮತ್ತು

(೨) '(೫೭ & ೫೮ ವಿಕ್ಟ್, ಸಿ.೬೦)' ಎಂಬ ಪದ, ಅಂಕಿ, ಅಕ್ಷರ ಮತ್ತು ಆವರಣಚಿಹ್ನೆಗಳನ್ನು ಅಂಚಿನಲ್ಲಿ ಸೇರಿಸುವುದು."

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು)**:** ನಾನು ಪ್ರಕೃತ ಸ್ಥಿತಿಯನ್ನು ವಿವರಿಸಲು ಬಯಸುತ್ತೇನೆ. ಈ ತಿದ್ದುಪಡಿಯಲ್ಲಿ ಯಾವ ತಿರುಳೂ ಇಲ್ಲ. ಗುರುತಿಸುವ ಖಂಡವು ಅಂಚಿನಲ್ಲಿ

* ಪೂರ್ವೋಕ್ತ. ಪು. ೧೧೯೯–೧೨೦೦.

ಅಥವಾ ಕಲಮಿನ ಸಂದರ್ಭದಲ್ಲಿಯೇ ಇರಬಹುದು. ಅಗತ್ಯವುಳ್ಳದ್ದೆಂದರೆ ಅಲ್ಲೊಂದು ಗುರುತಿರಬೇಕು. ಮೂಲದಲ್ಲಿ ನಾವು ಸದನದಲ್ಲಿ ಮಂಡಿಸಿದ ಎಲ್ಲಾ ವಿಧೇಯಕಗಳಲ್ಲಿ ಅಂತಹ ಗುರುತಿನ ಉಲ್ಲೇಖಗಳು ಅಂಚಿನಲ್ಲಿದ್ದವು ಎಂಬುದು ಸತ್ಯ. ಆದರೆ ಇತ್ತೀಚೆಗೆ ಮುದ್ರಣಗಳು ಕಲಮಿನಲ್ಲೇ ಉಲ್ಲೇಖವನ್ನು ನೀಡುವ ವಿಧಾನವನ್ನು ಅನುಸರಿಸುತ್ತಿವೆ ಮತ್ತು ಅದರ ಉದ್ದೇಶವು ಕಾಗದದ ಉಳಿತಾಯವೇ ಆಗಿದೆ. ಉದಾಹರಣೆಗೆ, ಅಂಚಿನಲ್ಲಿ ಉಲ್ಲೇಖಗಳನ್ನು ಕೊಡುವಾಗ ನೀವು ಕಾಗದದ ದೊಡ್ಡ ತುಂಡನ್ನು ಉಪಯೋಗಿಸುತ್ತೀರಿ. ಯುದ್ಧ ಆರಂಭವಾದಾಗಿನಿಂದ ಕಾಗದವನ್ನು ಉಳಿಸುವ ದೃಷ್ಟಿಯಿಂದ ಈ ವಿಧಾನವನ್ನು ಅನುಸರಿಸಲಾಗಿದೆ. ಕರಡುತಯಾರಿಕೆಗೆ ಸಂಬಂಧಿಸಿದ ತತ್ವಗಳಲ್ಲಿ ಇಲ್ಲವೇ ಅಂಚಿನ ಟಿಪ್ಪಣಿಗಳಿಗೆ ಸಂಬಂಧಿಸಿದಂತೆ ಯಾವುದೇ ಕಾನೂನಿನ ಉಲ್ಲಂಘನೆಯಾಗಿದೆಯೆಂದು ನಾನು ಭಾವಿಸುವುದಿಲ್ಲ. ವಾಸ್ತವವಾಗಿ ಅಂಚಿನ ಟಿಪ್ಪಣಿಗಳು ಅನಗತ್ಯ ಹಾಗೂ ಮುದ್ರಣಗೊಳ್ಳುವ ಅಗತ್ಯವಿಲ್ಲ.

**ಶ್ರೀ ಸುರೇಶ ಚಂದ್ರ ಮಜುಮ್‌ದಾರ್** (ಪಶ್ಚಿಮ ಬಂಗಾಳ: ಸಾಮಾನ್ಯ) : **"**ಒಳ ಅಂಚು**"** ಟಿಪ್ಪಣಿ ಎಂಬ ಒಂದು ವಿಚಾರವಿದ್ದು ಅದು ಕಾಗದವನ್ನು ದುಂದುಮಾಡುವುದಿಲ್ಲ.

***ಮಾನ್ಯ ಸಭಾಧ್ಯಕ್ಷರು:** (ಶ್ರೀ ಅನಂತಶಯನಂ ಅಯ್ಯಂಗಾರ್ ಅವರಿಂದ) ತಿದ್ದುಪಡಿ ಮಂಡನೆ:

"ವಿಧೇಯಕದ ೨ನೇ ಖಂಡದ (ಸಿ) ಭಾಗದಲ್ಲಿ **'**ಪ್ರಾಂತ**'** ಎಂಬ ಪದದ ನಂತರ ಅದಿರುವಲ್ಲೆಲ್ಲ "ಅಥವಾ ರಾಜ್ಯ" ಎಂಬುದನ್ನು ಸೇರಿಸುವುದು."

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು)**:** ನನ್ನ ಮಿತ್ರ ಶ್ರೀ ಅನಂತಶಯನಂ ಅಯ್ಯಂಗಾರ್ ಅವರು ಮಂಡಿಸಿದ ತಿದ್ದುಪಡಿಯು ಒಂದು ಕಾನೂನಿನ ಪ್ರಶ್ನೆಯನ್ನೆತ್ತುತ್ತದೆಯಾದ್ದರಿಂದ ಅವರ ತಿದ್ದುಪಡಿಯಿಂದ ಉದ್ಭವಿಸುವ ಅಂಶವನ್ನು ಉತ್ತರಿಸುವ ಜವಾಬ್ದಾರಿಯನ್ನು ನಾನು ಹೊರಬೇಕಾದದ್ದು ನ್ಯಾಯ ಮತ್ತು ಯುಕ್ತವಾಗಿದೆ. ಶ್ರೀ ಅನಂತಶಯನಂ ಅಯ್ಯಂಗಾರ್ ಅವರ ತಿದ್ದುಪಡಿಯ ಮೂಲೋದ್ದೇಶವು ಪ್ರಶಂಸಾರ್ಹವೆಂಬುದನ್ನು ಯಾರೂ ನಿರಾಕರಿಸಲಾರರು. ದಾದಿವೃತ್ತಿಯೊಂದಿಗೆ ವ್ಯವಹರಿಸುವ ಮತ್ತು ಆ ವೃತ್ತಿಯನ್ನು ನಿಯಮಿಸುವ ಮತ್ತು ಆ ವೃತ್ತಿಯನ್ನು ಒಂದು ಧೃಢನೆಲೆಯಲ್ಲಿ ನಿಲ್ಲಿಸುವ ಮೂಲಕ ದಾದಿಯರ ಸೇವೆಯನ್ನು ಪಡೆಯುವ ಎಲ್ಲರಿಗೂ ಆತ್ಮವಿಶ್ವಾಸವನ್ನು ನೀಡುವ ಪ್ರಯತ್ನದ ಇಂತಹ ವಿಧೇಯಕವನ್ನು ಇಡೀ ಭಾರತಕ್ಕೆ ವಿಸ್ತರಿಸಬೇಕಾಗಿದೆ. ಎಂಬುದನ್ನು ಪ್ರಶಂಸಾರ್ಹವೆಂದು ಹೇಳುತ್ತೇನೆ. ಆದರೆ ದುರದೃಷ್ಟವೆಂದರೆ, ನಾವಿರುವ ಸ್ಥಿತಿಯಲ್ಲಿ, ಅಂಗೀಕೃತವಾದ ೧೯೩೫ರ ಭಾರತ ಸರಕಾರ ಕಾಯಿದೆಯ ವ್ಯಾಪ್ತಿಯಲ್ಲಿ ಬರುವ ನಾವು ಈ ತಿದ್ದುಪಡಿಯನ್ನು ಅಂಗೀಕರಿಸಲು ಸಾಧ್ಯವಿಲ್ಲವಾಗಿದೆ, ಏಕೆಂದರೆ ಅವರ ತಿದ್ದುಪಡಿಯ ವಿಧೇಯಕವು ಶಾಸಕಾಂಗಕ್ಕೆ ವ್ಯತಿರಿಕ್ತವಾಗುತ್ತದೆಯೆಂಬ ಬಗ್ಗೆ ನನಗೆ ಸಂಶಯವಿಲ್ಲ. ಮಾನ್ಯರೆ, ನನ್ನ ಈ ಅಂಶವನ್ನು ವಿವರಿಸಲು ಸದ್ಯಕ್ಕೆ ರಾಜ್ಯಗಳು ಭಾರತದ ಒಕ್ಕೂಟದೊಂದಿಗೆ ಎರಡು ಭಿನ್ನ ರೀತಿಗಳಲ್ಲಿ ಸಂಪರ್ಕವನ್ನಿಟ್ಟುಕೊಂಡಿವೆಯೆಂಬುದನ್ನು ನಾನು ಸದನಕ್ಕೆ ಹೇಳಬೇಕಾಗಿದೆ. ಅವುಗಳ ನಡುವಣ ಸಂಪರ್ಕದ ಒಂದು ರೀತಿಯೆಂದರೆ ಭಾರತದ ಒಕ್ಕೂಟ ಮತ್ತು ಭಾರತದ ರಾಜ್ಯಗಳ ನಡುವೆ ಆಗಿರುವ ಯಾವುದನ್ನು ನಾವು ಯಥಾಸ್ಥಿತಿ ಒಪ್ಪಂದವೆನ್ನುತ್ತೇವೆಯೋ ಅದು. ಯಾವುದರ ಮೂಲಕ ರಾಜ್ಯಗಳು ಭಾರತದ ಒಕ್ಕೂಟಕ್ಕೆ ಅಧೀನವಾಗಿವೆಯೋ ಆ ಎರಡನೆಯ ಸಂಪರ್ಕ ಸೇತುವೆಂದರೆ

* ಅದೇ, ೯ ಡಿಸೆಂಬರ್ ೧೯೪೭, ಪು. ೧೪೮೦–೮೨.

ಸೇರ್ಪಡೆಯ ಪತ್ರಗಳು. ಈಗ ಆ ಎರಡು ಸಂಪರ್ಕಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಯಥಾಸ್ಥಿತಿ ಒಪ್ಪಂದಗಳು ಶುದ್ಧ ಕರಾರಿನವು. ಅವರು ಅಂತಹ ಒಪ್ಪಂದಗಳನ್ನು ಹಳೆಯ ಭಾರತ ಸರಕಾರ ಮತ್ತು ಭಾರತದ ಅಧೀನ ರಾಜ್ಯಗಳ ನಡುವೆ ೧೯೪೭ರ ಅಗಸ್ಟ್ ೧೫ಕ್ಕೆ ಮೊದಲು ಇದ್ದಂತೆ ಉಳಿಸಿಕೊಂಡು ಹೋಗುತ್ತಾರೆ. ನಾನು ಹೇಳಿದಂತೆ ಅವು ಶುದ್ಧ ಕರಾರಿನವು. ಅವು ಭಾರತ ಸರಕಾರಕ್ಕೆ ಆ ವ್ಯವಸ್ಥೆಗಳನ್ನು ಬದಲಾಯಿಸುವ ಅಥವಾ ಭಾರತದ ರಾಜ್ಯಗಳನ್ನು ಒಳಪಡಿಸುವ ಯಾವುದೇ ಕಾನೂನಿನ ಬುನಾದಿಯಾಗಿಸುವ ಅಧಿಕಾರವನ್ನು ನೀಡುವುದಿಲ್ಲ. ಆದ್ದರಿಂದ, ನಾವು ತಿಳಿಯುವಂತೆ, ಭಾರತದ ರಾಜ್ಯಗಳಿಗೆ ಅನ್ವಯಿಸುವಂತೆ ಈ ಶಾಸಕಾಂಗದಿಂದ ಯಾವುದೇ ಕಾನೂನನ್ನು ಮಾಡುವ ವಿಚಾರದಲ್ಲಿ ನಾವು ಯಥಾಸ್ಥಿತಿ ಒಪ್ಪಂದಗಳ ಕುರಿತು ಯಾವುದೇ ನಿಲುವನ್ನು ತಾಳಲಾರೆವು ಎಂಬುದು ನನ್ನ ಮನಸ್ಸಿಗೆ ಸ್ಪಷ್ಟವಾಗಿದೆ. ಆದ್ದರಿಂದ, ಯಾವುದೇ ಕಾಯಿದೆಯನ್ನು ಮಾಡುವ ಕಾನೂನಿನ ಹಕ್ಕನ್ನು ನೀಡುವ ಬುನಾದಿಯಾಗಿ ನಾವು ಸೇರ್ಪಡೆಯ ಪತ್ರಗಳನ್ನು ಅವಲಂಬಿಸಬೇಕು. ನೀವು ಸೇರ್ಪಡೆಯ ಪತ್ರಗಳನ್ನು ತೆಗೆದುಕೊಂಡರೆ, ಸೇರ್ಪಡೆಯ ಪತ್ರಗಳು –'ಅವೀಗ ಇರುವಂತೆ' ಎಂಬುದನ್ನು ಈ ಸದನಕ್ಕೆ ವಿವರಿಸುತ್ತೇನೆ– ಈ ಸದನಕ್ಕೆ ಅಧಿಕಾರವಿಲ್ಲವೆಂದು ನಾನು ಅರಿಕೆ ಮಾಡುತ್ತೇನೆ. ಮೊದಲಲ್ಲಿ ಈ ಶಾಸನವು ಸಮವರ್ತಿ ಕ್ಷೇತ್ರದ ೧೬ನೇ ನಮೂದನೆಗೆ ಸಂಬಂಧಿಸಿದೆ. ಅದು ಈ ಶಾಸನದ ವಿಚಾರವು ಸಂಬಂಧಿಸಿದಂತೆ, ಸಂಯುಕ್ತ ಅಥವಾ ಪ್ರಾಂತೀಯ ಪಟ್ಟಿಯಲ್ಲಿಲ್ಲ. ಅದು ಸಮವರ್ತಿ ಪಟ್ಟಿಗೆ ಸಂಬಂಧಿಸಿದೆ. ಎಲ್ಲರಿಗೂ ತಿಳಿದಿರುವಂತೆ, ಈಗ, ಸೇರ್ಪಡೆಯ ಪತ್ರಗಳು ಕೇಂದ್ರ ಶಾಸಕಾಂಗಕ್ಕೆ ಶಾಸನರಚನೆಗೆ ಯಾವುದೇ ಹಕ್ಕನ್ನು ನೀಡಿದರೂ ಖಂಡಿತವಾಗಿಯೂ ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾದ ಎಲ್ಲಾ ವಿಚಾರಗಳನ್ನು ಹೊರತುಪಡಿಸಿವೆ. ಆ ಸಮವರ್ತಿ ಪಟ್ಟಿಗಳು ಸೇರ್ಪಡೆಯ ಪತ್ರಗಳ ವ್ಯಾಪ್ತಿಯಲ್ಲಿಲ್ಲವೆಂಬ ಪ್ರಮೇಯದಿಂದ, ಈ ಸದನದ ಅಧಿಕಾರವು ನಷ್ಟವಾಗಿದೆಯೆಂಬುದನ್ನು ನಾನು ಯೋಚಿಸಬೇಕಿತ್ತು. ನಾವೀಗ ಹುಡುಕಬೇಕಾದ ಒಂದೇ ವಿಚಾರವೆಂದರೆ ವಿವಿಧ ರಾಜ್ಯಗಳು ಭಾರತದ ಒಕ್ಕೂಟಕ್ಕೆ ಬರೆದುಕೊಟ್ಟು ಅಂಗೀಕರಿಸಿದ ಸೇರ್ಪಡೆಯ ಪತ್ರಗಳು ಸಮವರ್ತಿ ಪಟ್ಟಿಯ ನಮೂದನೆ ೧೬ರ ಸಮಾನವಿದೆಯೇ ಅಥವಾ ಸಂಬಂಧಿಸಿದೆಯೇ ಎಂಬುದು. ಮಾನ್ಯರೇ, ಆದ್ದರಿಂದ, ಈ ಸೇರ್ಪಡೆಯ ಪತ್ರಗಳು ಸದನಮಂಡಲದಲ್ಲಿ ಇಡಲ್ಪಟ್ಟಿವೆ, ಮತ್ತು ಅವನ್ನು ಪರಿಶೀಲಿಸಲು ಸಮಯಸಿಕ್ಕಿದ ಯಾರಿಗೇ ಆಗಲಿ ರಾಜ್ಯಗಳು ಮೂರು ವಿಚಾರಗಳ ಬಗ್ಗೆ ಮಾತ್ರ, ಒಪ್ಪಿವೆ, ಮತ್ತು ಯಾವ ವಿಚಾರಗಳನ್ನೂ ಸಮವರ್ತಿ ಪಟ್ಟಿಯ ೧೬ನೇ ನಮೂದನೆಗೆ ಸೇರಿಸುವಂತೆ ಅರ್ಥೈಸಲು ಸಾಧ್ಯವಿಲ್ಲವೆಂದು ಗೊತ್ತಾಗುತ್ತದೆ. ಆದ್ದರಿಂದ, ನನ್ನ ಅರಿಕೆಯೆಂದರೆ, ಸೇರ್ಪಡೆಯ ಪತ್ರಗಳನ್ನೇ ನಾವು ಅವಲಂಬಿಸಿದರೂ ಈ ಸದನವು ಆ ಸೇರ್ಪಡೆಯ ಪತ್ರಗಳ ಬಗೆಗೆ ಯಾವ ಅಧಿಕಾರವ್ಯಾಪ್ತಿಯನ್ನೂ ಪಡೆಯಲಾರದು. ನನ್ನ ಮಾನ್ಯ ಮಿತ್ರ ಶ್ರೀ ಅನಂತಶಯನಂ ಅಯ್ಯಂಗಾರ್ ಅವರು ನಿಜಕ್ಕೂ ಈ ಕಷ್ಟವನ್ನು ಅರಿತುಕೊಂಡು ಅವರು ಹೇಳಿದಂತೆ ಈ ಸದನವು ಅಂಗೀಕರಿಸಬಹುದಾದ ಮತ್ತು ಆ ಮೂಲಕ ಭಾರತದ ರಾಜ್ಯಗಳಿಗೆ ವಿಸ್ತರಿಸಬಹುದಾದ ಸೂತ್ರವನ್ನು ಮುಂದಿಟ್ಟಿದ್ದಾರೆ. ಇದು ಅವರ ಸೂತ್ರವಾಗಿತ್ತು. ಈ ಸದನವು ಅಂಗೀಕರಿಸಿದ ಅನೇಕ ಶಾಸನದ ತುಣುಕುಗಳು ಮೊದಲಿಗೆ ಒಂದು ಪ್ರಾಂತ ಅಥವಾ ಜಿಲ್ಲೆ ಅಥವಾ ಇನ್ನೂ ಚಿಕ್ಕ ಪ್ರದೇಶಗಳಿಗೆ ಮಿತಿಗೊಂಡು, ಮತ್ತು ಆ ವಿಧೇಯಕದಲ್ಲಿ ಕಾರ್ಯಾಂಗಕ್ಕೆ ಒಂದು ಅಧಿಸೂಚನೆಯ ಮೂಲಕ ಆ ನಿರ್ದಿಷ್ಟ ಶಾಸನವನ್ನು ವಿಧೇಯಕದಲ್ಲಿ ಮೊದಲಿಗೆ ಸೇರಿಸದಿದ್ದ ಪ್ರದೇಶಗಳಿಗೆ ವಿಸ್ತರಿಸುವ ಹಕ್ಕನ್ನು ನೀಡುವ ಖಂಡವನ್ನೊಳಗೊಂಡಿತ್ತು. ಆ ಸೂತ್ರವು ಬ್ರಿಟಿಷ್ ಭಾರತದ ಪ್ರಾಂತಗಳಿಗೆ ಸಂಬಂಧಿಸಿದಂತೆ, ಪರಿಪೂರ್ಣವಾಗಿ ಸಾಧುವಾಗಿದೆ. ಆದರೆ ಅವನ್ನು

ಭಾರತದ ರಾಜ್ಯಗಳಿಗೆ ಅನ್ವಯಿಸಬೇಕಾದರೆ, ಅದು ಅಸಾಧುವಾಗುತ್ತದೆ ಮತ್ತು ಆ ಹೋಲಿಕೆಯು ಪೂರ್ಣ ತಪ್ಪು ಮತ್ತು ಅಸತ್ಯ ಎಂಬ ಕಾರವೂ ಇದೆ. ಮಾನ್ಯರೇ, ನಾವೀಗ ಮೊದಲಿಗಿದ್ದ ವಿಧೇಯಕದಲ್ಲಿ ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಿತಿಗೊಂಡಿದ್ದ ಆ ಶಾಸನವನ್ನು ವಿಧೇಯಕದಲ್ಲಿ ಮೊದಲು ಅನ್ವಯಿಸದಿದ್ದ ಪ್ರದೇಶಗಳಿಗೆ ಅನ್ವಯಿಸುವಾಗ, ಸ್ಥಿತಿ ಹೇಗಿರುತ್ತದೆಂದರೆ, ಶಾಸನವನ್ನು ವಿಸ್ತರಿಸಿದ ಪ್ರದೇಶವು ಆ ಶಾಸನದ ವ್ಯಾಪ್ತಿಯಲ್ಲಿರುವುದಿಲ್ಲ. ಶಾಸಕಾಂಗವು ಆ ಕಾನೂನನ್ನು ಆ ಪ್ರದೇಶಕ್ಕೆ ಅನ್ವಯಿಸಬೇಕೆಂದು ಆರಂಭದಲ್ಲಿಯೇ ಇಚ್ಛಿಸಿದ್ದರೆ, ಈ ಸರಕಾರದ ಸಂವಿಧಾನ ಅಥವಾ ಶಾಸಕಾಂಗದ ಅಧಿಕಾರದ ಯಾವ ಅಂಶವೂ ಶಾಸಕಾಂಗವನ್ನು ಅಂತಹ ಕ್ರಿಯೆಯಲ್ಲಿ ತೊಡಗುವುದನ್ನು ತಡೆಯಲು ಸಾಧ್ಯವಿರಲಿಲ್ಲ. ರಾಜ್ಯಗಳಿಗೆ ಸಂಬಂಧಿಸಿದಂತೆ, ಅವರ ಪ್ರದೇಶಗಳ ಮೇಲೆ ಮೂರು ವಿಚಾರಗಳ ಮೇಲೆ ಮಾತ್ರ ನಮಗೆ ಅಧಿಕಾರವಿದೆ; ನಮಗೆ ಪೂರ್ಣ ಅಧಿಕಾರವಿಲ್ಲ. ಈ ಮೂರು ವಿಚಾರಗಳಿಗೆ ಸಂಬಂಧಿಸಿದಂತೆ ಶಾಸನರಚಿಸುವಾಗ ನಾವು ನಮ್ಮ ಹಕ್ಕನ್ನು ಮಿತಿಗೊಳಿಸುವುದಿಲ್ಲ; ವಾಸ್ತವವಾಗಿ ನಾವು ನಮ್ಮ ಶಾಸಕಾತ್ಮಕ ಹಕ್ಕನ್ನು ಪೂರ್ತಿಯಾಗಿ ವ್ಯಯಿಸುತ್ತೇವೆ. ಆದ್ದರಿಂದ ಈ ಹೋಲಿಕೆಯು ಸರಿಯಾದ ಹೋಲಿಕೆಯಲ್ಲ. ಪ್ರಾಂತಗಳಿಗೆ ಸಂಬಂಧಿಸಿದಂತೆ, ನಾವು ಕಾನೂನನ್ನು ರಚಿಸುವಾಗ, ನಮಗೆ ಇಷ್ಟವಿದ್ದರೆ, ಪ್ರಯೋಗಿಸಬಲ್ಲ ಅಧಿಕಾರವನ್ನು ಹೊಂದಿರುತ್ತೇವೆ. ಭಾರತದ ರಾಜ್ಯಗಳಿಗೆ ಸಂಬಂಧಿಸಿದಂತೆ ಇದು ಸರಿಯಾಗುವುದಿಲ್ಲ. ಒಂದು ಪೂರಕ ಸೇರ್ಪಡೆಯ ಪತ್ರವು ಅಂಗೀಕರಿಸಲ್ಪಟ್ಟಿದ್ದರೆ ನಾವು ಕಾನೂನನ್ನು ರಚಿಸಬಲ್ಲ ಅಗತ್ಯ ಅಧಿಕಾರವನ್ನು ಹೊಂದಬಹುದಿತ್ತು ಎನ್ನುವುದು ಸರಿ; ಆದರೆ ನನ್ನ ಮಿತ್ರ ಶ್ರೀ ಅನಂತಶಯನಂ ಅಯ್ಯಂಗಾರ್ ಅವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ಕಾನೂನು ಕಾಲ್ಪನಿಕವಾಗಿರಲು ಸಾಧ್ಯವಿಲ್ಲ ಮತ್ತು ಮುಂದೆ ಪಡೆಯಬಲ್ಲ ಅಧಿಕಾರವ್ಯಾಪ್ತಿಯ ನಿರೀಕ್ಷೆಯಲ್ಲಿ ಕಾನೂನನ್ನು ಎಂದೂ ಅಂಗೀಕರಿಸುವಂತಿಲ್ಲ. ಅದು ಶಾಸನರಚನೆಯ ಸಿದ್ಧಾಂತಗಳಿಗೆ ವಿರೋಧವಾದದ್ದು. ಕಾನೂನು ನಿರ್ದಿಷ್ಟವಾಗಿರತಕ್ಕದ್ದು, ಕಾನೂನು ಅದರ ಅನ್ವಯಿಕೆಯ ಮತ್ತು ಯಾವುದಕ್ಕೆ ಅನ್ವಯಿಸುದಿಲ್ಲವೆಂಬ ಕುರಿತು ಸುಸ್ಪಷ್ಟವಾಗಿರತಕ್ಕದ್ದು, ಆದ್ದರಿಂದ, ಈ ಶಾಸನವನ್ನು ರಾಜ್ಯಗಳಿಗೆ ವಿಸ್ತರಿಸುವ ಅಧಿಕಾರವನ್ನು ಕೇಂದ್ರ ಶಾಸಕಾಂಗಕ್ಕೆ ನೀಡುವ ಪೂರಕ ಸೇರ್ಪಡೆಯ ಪತ್ರವು ನಮ್ಮಲ್ಲಿರುವವರೆಗೆ ಗವರ್ನರ್ ಜನರಲ್ಲರು ಸ್ವೀಕರಿಸುವಂತಹ ಒಂದು ಸೇರ್ಪಡೆಯ ಪತ್ರವಿದ್ದೀತೆಂಬ, ಮತ್ತು ನಮಗೆ ಈ ಶಾಸನವನ್ನು ವಿಸ್ತರಿಸುವ ಅವಕಾಶವಿದ್ದೀತೆಂಬ ವಾತಾವರಣವನ್ನು ನಾವು ನಿರೀಕ್ಷಿಸಲಾಗದೆಂಬುದು ನನ್ನ ಖಚಿತ ಅಭಿಪ್ರಾಯ. ಇದು ಶಾಸನರಚನೆಯ ಸಿದ್ಧಾಂತಗಳಿಗೆ ವಿರೋಧವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಆದ್ದರಿಂದ, ಸದ್ಯಕ್ಕೆ ನಾವು ಆಶಿಸಬೇಕಾದ್ದೆಂದರೆ, ಈ ವಿಧೇಯಕವನ್ನು ಬ್ರಿಟಿಷ್ ಭಾರತದ ಪ್ರಾಂತಗಳಿಗೆ ಮಿತಿಗೊಳಿಸುವುದು, ಮತ್ತು ಇಂತಹ ಪೂರಕ ಸೇರ್ಪಡೆಯ ಪತ್ರಗಳು ಸಿಕ್ಕಬಹುದೆಂದು ಆಶಿಸುವುದು, ಮತ್ತು ಆಗ ನಾವು ಈ ಶಾಸನವನ್ನು ರಾಜ್ಯಗಳಿಗೆ ವಿಸ್ತರಿಸಬಹುದು, ಅಥವಾ ರಾಜ್ಯಗಳು ಇದೇ ರೀತಿ ತಮ್ಮ ರಾಜ್ಯಗಳಲ್ಲೂ ಇಂತಹ ಶಾಸನಗಳನ್ನು ಮಾಡಬಹುದು ಮತ್ತು ಈ ಶಾಸನವನ್ನು ತಮ್ಮ ರಾಜ್ಯಕ್ಕೂ ಅನ್ವಯಿಸಬಹುದು. ಮಾನ್ಯರೇ, ಆದ್ದರಿಂದ ನಾನು ಯೋಚಿಸುವುದೇನೆಂದರೆ ಈ ತಿದ್ದುಪಡಿಯು ವಿಧೇಯಕವನ್ನು ಅಧಿಕಾರಾತೀತವಾಗಿಸುತ್ತದೆ ಮತ್ತು ಈ ಕಾರಣಕ್ಕಾಗಿ ಸ್ವೀಕಾರಾರ್ಹವಲ್ಲ.

**ಸಭಾಧ್ಯಕ್ಷರು:** ವಿಚಾರವು ಸ್ಪಷ್ಟವಾಗಿದೆ. ಮಾನ್ಯ ಸದಸ್ಯರು ತಿದ್ದುಪಡಿಯನ್ನು ಈಗ ಒತ್ತಾಯಿಸುವರೇ?

**ಶ್ರೀ ಎಂ.ಅನಂತಶಯನಂ ಅಯ್ಯಂಗಾರ್:** ಇಲ್ಲ ಸ್ವಾಮೀ.

**ಸಭಾಧ್ಯಕ್ಷರು:** ಮಾನ್ಯ ಸದಸ್ಯರಿಗೆ ಈ ತಿದ್ದುಪಡಿಯನ್ನು ವಾಪಸುಪಡೆಯಲು ಸದನದ ಅನುಮತಿಯಿದೆಯೇ?

ತಿದ್ದುಪಡಿಯನ್ನು ಸದನದ ಅನುಮತಿಯೊಂದಿಗೆ ವಾಪಸುಪಡೆಯಲಾಯಿತು.

**ಸಭಾಧ್ಯಕ್ಷರು:** ಪ್ರಶ್ನೆ ಇಷ್ಟೇ:

"೨ನೇ ಖಂಡವು ವಿಧೇಯಕದ ಭಾಗವಾಗಿರುತ್ತದೆ."

ಸೂಚನೆಯು ಅಂಗೀಕರಿಸಲ್ಪಟ್ಟಿತು.

ವಿಧೇಯಕಕ್ಕೆ ೨ನೇ ಖಂಡವು ಸೇರಿಸಲ್ಪಟ್ಟಿತು.

◆

# ೩

# ಇಂಡಿಯನ್ ನರ್ಸಿಂಗ್ ಪರಿಷತ್ತು ವಿಧೇಯಕ

*ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ವಸ್ತುಸ್ಥಿತಿಯು, ಈ ಶಾಸನದ ಬಗ್ಗೆ ಕಳೆದ ಬಾರಿ ಹೇಳಿದಂತೆ ಸಮವರ್ತಿ ಶಾಸನ ಪಟ್ಟಿಯ ನಮೂದನೆ ೧೬ಕ್ಕೆ ಸಂಬಂಧಿಸಿದೆ. ಸಮವರ್ತಿ ಶಾಸನ ಪಟ್ಟಿಯಡಿ ರಚಿಸಿದ ಶಾಸನಗಳ ಮೇಲಣ ಕಾರ್ಯನಿರ್ವಾಹಕ ಹಕ್ಕು ಕೇಂದ್ರ ಸರಕಾರಕ್ಕೆ ಇಲ್ಲ. ನಿಯಮರಚನೆಯನ್ನು ಕಾರ್ಯನಿರ್ವಾಹಕ ಹಕ್ಕಿನ ಪ್ರಯೋಗವೆಂದು ವ್ಯಾಖ್ಯಾನಿಸಲಾಗಿದೆ ಮತ್ತು ಕೇಂದ್ರ ಸರಕಾರಕ್ಕೆ ಅಂತಹ ಕಾರ್ಯನಿರ್ವಾಹಕ ಹಕ್ಕು ಇಲ್ಲ ಮತ್ತು ಆದ್ದರಿಂದ, ಅದು ನಿಯಮಗಳನ್ನು ರೂಪಿಸಲಾರದು. ನಿಯಮಗಳನ್ನು ಬೇರೆ ಯಾರಾದರೂ ಮಾಡಬೇಕು. ನನ್ನ ಮಾನ್ಯ ಮಿತ್ರರು ಈ ನಿಯಮಗಳನ್ನು ಅಧ್ಯಕ್ಷರು ಮಾಡುವುದನ್ನು ಆಕ್ಷೇಪಿಸಿದರೆ, ನಿಯಮಗಳನ್ನು ಮಾಡುವ ಹಕ್ಕು ಅಥವಾ ಜವಾಬ್ದಾರಿಯನ್ನು ಕೇಂದ್ರ ಶಾಸಕಾಂಗಕ್ಕೆ ವಹಿಸುವ ತಿದ್ದುಪಡಿಯನ್ನು ಮಾಡಲಾರರಾದರೂ ಅವನ್ನು ರಚಿಸುವ ಬೇರೆ ವಿಧಾನವನ್ನು ಅವರು ಸಲಹೆ ಮಾಡಬಹುದು. ಗವರ್ನ್‌ಮೆಂಟ್ ಆಫ್ ಭಾರತ ಕಾಯಿದೆಯ ಕಲಮು ೮(೧) ಮತ್ತು ೧೯೩೫ರ ಗವರ್ನ್‌ಮೆಂಟ್ ಆಫ್ ಭಾರತ ಕಾಯಿದೆಗಳು ಈ ವಿಚಾರದ ಕುರಿತು ಸ್ಪಷ್ಟವಿವೆ.

**ಶ್ರೀ ಕೆ.ಸಂತಾನಂ :** ಇಲ್ಲೂ ಸಹಿತ, ಕೇಂದ್ರ ಸರಕಾರವು ನಿಯಮಗಳನ್ನು ಮಾಡಲಾರದೆಂದು ಕಾನೂನನ್ನು ವಿಚಿತ್ರವಾಗಿ ವ್ಯಾಖ್ಯಾನಿಸಲಾಗಿದೆಯೆಂದು ನನಗನ್ನಿಸುತ್ತದೆ. ಕೇಂದ್ರ ಸರಕಾರದ ಪ್ರತಿನಿಧಿಯೊಬ್ಬ ನಿಯಮಗಳನ್ನು ಮಾಡಬಹುದು ಆದರೆ ಕೇಂದ್ರ ಸರಕಾರವು ಮಾಡತಕ್ಕದ್ದಲ್ಲ. ಪ್ರಸ್ತುತ ಪ್ರಸ್ತಾವನೆಯು ಕೇಂದ್ರ ಸರಕಾರದಿಂದ ಒಬ್ಬ ಅಧ್ಯಕ್ಷನನ್ನು ನಾಮಕರಣ ಮಾಡಬಹುದು ಮತ್ತು ಆತನು ನಿಯಮಗಳನ್ನು ಮಾಡಬಹುದು. ಹೇಗಿದ್ದರೂ ಅದು ಇಡೀ ಭಾರತದ ಪರಿಷತ್ತು ಮತ್ತು ಭಾರತ ಸರಕಾರಕ್ಕೆ ನಿಯಮಗಳನ್ನು ಮಾಡುವ ಅಧಿಕಾರವು ಇರುವುದು ನನಗೆ ಕಾಣುತ್ತಿಲ್ಲ. ಪ್ರಾಂತೀಯ ಪರಿಷತ್ತುಗಳ ಕುರಿತಂತೆ ಮಾತ್ರ ನಿರ್ದೇಶನಗಳನ್ನು ನೀಡುವಂತಿಲ್ಲ. ಆದ್ದರಿಂದ ನಾನು ಯೋಚಿಸುವುದೇನೆಂದರೆ ವ್ಯಾಖ್ಯಾನಿಸಲಾದ ಕಾನೂನು ಒಟ್ಟಾರೆ ತಪ್ಪಾಗಿದೆ. ಕೇಂದ್ರ ಸರಕಾರವು ಅಧಿಕಾರವನ್ನು ಹೊಂದಿರಬೇಕು. ಆದ್ದರಿಂದ, ನಾನು, ಈ ತಿದ್ದುಪಡಿಯಯನ್ನು ಸ್ವೀಕರಿಸಬೇಕೆಂದು ಸಲಹೆಮಾಡುತ್ತೇನೆ.

---

* ಪೂರ್ವೋಕ್ತ, ೮ ಡಿಸೆಂಬರ್ ೧೯೪೭, ಪು. ೧೪೮೬.

# ೪

# *ಪ್ರಾಂತ್ಯಗಳಿಗೆ ಹೆಚ್ಚಿನ ಅಧಿಕಾರ ವ್ಯಾಪ್ತಿಯನ್ನು ನೀಡುವ ವಿಧೇಯಕ

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್** (ಕಾನೂನು ಸಚಿವರು): ಸಭಾಧ್ಯಕ್ಷರೆ, ಈ ತನಕದ ಚರ್ಚೆಯಲ್ಲಿ ಪಾಲ್ಗೊಂಡ ಸದನದ ಸದಸ್ಯರು ವ್ಯಕ್ತಪಡಿಸಿದ ಸಂಶಯ ಮತ್ತು ಸಂದೇಹಗಳನ್ನು ಪರಿಹರಿಸುವ ಕೆಲವು ಅಭಿಪ್ರಾಯಗಳನ್ನು ಹೇಳಲು ನಾನು ನಿಂತಿದ್ದೇನೆ.

ಮಾನ್ಯರೇ, ತಿದ್ದುಪಡಿಯನ್ನು ಸೂಚಿಸಿದ ಮಾನ್ಯ ಸದಸ್ಯರು ಮಾಡಿದ ಒಂದು ಅಂಶವು ಏನೆಂದರೆ ಇಂಡಿಯನ್ ಇಂಡಿಪೆಂಡೆನ್ಸ್ ಕಾಯಿದೆಯು ರದ್ದು ಮಾಡಿದ ಅತ್ಯುನ್ನತ ಅಧಿಕಾರ ವ್ಯಾಪ್ತಿಯನ್ನು ಈ ವಿಧೇಯಕವು ಪುನರ್ಜೀವಗೊಳಿಸುತ್ತದೆಯೆಂಬುದು. ಈಗ, ಭಾರತ ಸ್ವಾತಂತ್ರ್ಯ ಕಾಯಿದೆಯು ಸರ್ವೋಚ್ಚ ಅಧಿಕಾರದ ಕುರಿತು ಭಾರತದ ರಾಜ್ಯಗಳನ್ನು ಎಲ್ಲ ಬಾಧ್ಯತೆಗಳಿಂದ ಮುಕ್ತಗೊಳಿಸಿದೆಯೆಂಬುದು ಸತ್ಯ. ಆದರೆ, ನನಗನ್ನಿಸುವಂತೆ, ಅದರರ್ಥ ಇದು, ಅಂದರೆ, ಸಾಮಂತ ಸರಕಾರಗಳು ವಾರಸುದಾರಿಕೆ ರಾಜ್ಯಗಳ ರೀತಿಯಲ್ಲಿ ಉಗಮವಾದ ಅಧಿಕಾರ ವ್ಯಾಪ್ತಿಯ ವಾರಸುಪಡೆಯಲಾರವು ; ಅದರರ್ಥ ಯಾವುದೇ ಭಾರತದ ರಾಜ್ಯವು ಒಂದು ಒಪ್ಪಂದದ ಮೂಲಕ ಸಾಮಂತ ಸರಕಾರದ ಮೇಲೆ ಬ್ರಿಟಿಷ್ ಸರಕಾರವು ಆ ಇಂಡಿಯನ್ ರಾಜ್ಯದ ವಿರುದ್ಧ ಪ್ರಯೋಗಿಸಿದ ಹಕ್ಕು ಮತ್ತು ಅಧಿಕಾರ ವ್ಯಾಪ್ತಿಯನ್ನು ನೀಡಬಾರದೆಂದಲ್ಲ. ಈ ಅಂಶವು ನಮ್ಮ ದೃಷ್ಟಿಯಿಂದ ವಂಚಿತವಾಗಿದೆಯೆಂದು ನಾನಂದುಕೊಳ್ಳುತ್ತೇನೆ ಮತ್ತು ನಾನು ಪುನರಾವರ್ತಿಸಲು ಬಯಸುವುದೇನೆಂದರೆ ಸ್ವಾತಂತ್ರ್ಯ ಕಾಯಿದೆಯು ಹೇಳುವುದು ಇದನ್ನು: ಅಂದರೆ ಸರ್ವೋಚ್ಚತೆಯ ಕುರಿತಂತೆ ಸಾಮಂತ ಸರಕಾರವು ಬ್ರಿಟಿಷ್ ಸರಕಾರದ ವಾರಸುದಾರ ರಾಜ್ಯವೆಂದು ತಿಳಿಯಬಾರದು. ಇದರರ್ಥ ಒಂದು ಭಾರತದ ರಾಜ್ಯವು ಸಮರ್ಪಕವಾದ ಕಾರಣಗಳೆಂದು ಅದಕ್ಕನ್ನಿಸಿ ಸಾಮಂತ ಸರಕಾರಕ್ಕೆ ಸರ್ವೋಚ್ಚತೆಯನ್ನು ಹೋಲುವ ರೀತಿಯ ಅಧಿಕಾರವ್ಯಾಪ್ತಿಯನ್ನು ನೀಡಲು ಅಪೇಕ್ಷಿಸಿದರೆ, ಭಾರತ ಸರ್ಕಾರದ ಕಾಯಿದೆಯಲ್ಲಿ ಅಥವಾ ಭಾರತ ಸ್ವಾತಂತ್ರ್ಯ ಕಾಯಿದೆಯಲ್ಲಿ ಆ ಭಾರತದ ರಾಜ್ಯವನ್ನು ಹಾಗೆ ಮಾಡುವುದರಿಂದ ತಡೆಯಲು ಸಾಧ್ಯವಿಲ್ಲವೆಂದು ಅರ್ಥವಲ್ಲ. ಈ ಅಂಶವನ್ನು ನಾವು ಮನಸ್ಸಿನಲ್ಲಿರಿಸಿಕೊಳ್ಳಬೇಕೆಂದು ನಾನಂದುಕೊಳ್ಳುತ್ತೇನೆ. ಈ ನಿರ್ದಿಷ್ಟ ವಿಧೇಯಕ ಮತ್ತು ಅದರ ಉಪಬಂಧಗಳು ಭಾರತದ ಯಾವ ರಾಜ್ಯಗಳಿಗೆ ಅನ್ವಯಿಸುತ್ತವೆಯೆಂಬ ಪ್ರಶ್ನೆ ಎದ್ದಾಗ, ಆ ಪ್ರಶ್ನೆಯ ಉತ್ತರವು ಭಾರತದ ಸಾಮಂತ ಸರಕಾರಗಳ ಪರವಾಗಿ ಭಾರತದ ವಿವಿಧ ರಾಜ್ಯಗಳು ಅಂಗೀಕರಿಸಿದ ಸೇರ್ಪಡೆಯ ಪತ್ರಗಳಿಗೆ ಸಂಬಂಧಿಸಿದಂತೆ ಇರಬೇಕು. ಆದ್ದರಿಂದ, ಯಾವ ರಾಜ್ಯಗಳಿಗೆ ಈ ವಿಧೇಯಕವು ಅನ್ವಯಿಸುತ್ತದೆಯೆಂದು ಅರ್ಥಮಾಡಿಕೊಳ್ಳಬೇಕಾದರೆ, ನಾವು ಮಾಡಬೇಕಾದ್ದೆಂದರೆ ಸೇರ್ಪಡೆಯ ಪತ್ರಗಳ ಕಡೆಗೆ ಗಮನಹರಿಸಿ ಅಲ್ಲಿ ಏನಿದೆಯೆಂಬುದನ್ನು ಪರಿಶೀಲಿಸಬೇಕು. ಈ ಸದನಕ್ಕೆ ತಿಳಿದಿರುವಂತೆ, ಭಾರತದ ರಾಜ್ಯಗಳ ಸೇರ್ಪಡೆಯನ್ನು ಕುರಿತಂತೆ, ಅವು ಮೂರು ರೀತಿಯವಾಗಿ ವಿಭಜಿಸಲ್ಪಟ್ಟಿವೆ: (೧) ಪೂರ್ಣ

---

* ಪೂರ್ವೋಕ್ತ, ೯ ಡಿಸೆಂಬರ್ ೧೯೪೭, ಪು. ೧೫೫೫–೬೧.

ಅಧಿಕಾರ ವ್ಯಾಪ್ತಿಯ ರಾಜ್ಯಗಳು, (೨) ಅರೆ–ಅಧಿಕಾರ ವ್ಯಾಪ್ತಿಯ ರಾಜ್ಯಗಳು, ಮತ್ತು (೩) ಅಧಿಕಾರವ್ಯಾಪ್ತಿಯಿಲ್ಲದ ರಾಜ್ಯಗಳು. ಅಲ್ಲೋ ಇಲ್ಲೋ ಕೆಲವು ಅಪವಾದಗಳನ್ನು ಹೊರತುಪಡಿಸಿ ಈ ಎಲ್ಲಾ ಮೂರು ವರ್ಗದ ರಾಜ್ಯಗಳು ಭಾರತದ ಆಧಿಪತ್ಯಕ್ಕೆ ಸೇರ್ಪಡೆಯ ಪತ್ರಗಳನ್ನು ಅನುಮೋದಿಸಿವೆ. ಈಗ ಮಾನ್ಯ ಸದಸ್ಯರು (೨) ನೇ ವರ್ಗದ ರಾಜ್ಯಗಳಿಂದ ಭಾರತದ ಆಧಿಪತ್ಯಕ್ಕೆ ಅನುಮೋದಿಸಿ ನೀಡಿದ ಸೇರ್ಪಡೆಯ ಪತ್ರಗಳನ್ನು ಉಲ್ಲೇಖಿಸುವುದಾದರೆ, ಅವುಗಳ ಸೇರ್ಪಡೆಯ ಪತ್ರಗಳು ಈ ಮುಖ್ಯ ಖಂಡವನ್ನು ಹೊಂದಿವೆಯೆಂಬುದನ್ನು ಮನಗಾಣುತ್ತಾರೆ ಮತ್ತು ಎಲ್ಲಾ ಸಂಶಯ ಮತ್ತು ಸಂದೇಹಗಳನ್ನು ನಿವಾರಿಸುವುದಕ್ಕಾಗಿ, ತಮ್ಮ ಅನುಮತಿ ಮೇರೆಗೆ ಅದನ್ನೋದಬಯಸುತ್ತೇನೆ. ಇದು ೧ನೇ ಕಂಡಿಕೆ:

> "ಭಾರತದ ಆಧಿಪತ್ಯವು ಪ್ರತಿನಿಧಿ ಅಥವಾ ಪ್ರತಿನಿಧಿಗಳ ಮೂಲಕ ಮತ್ತು ತನಗೆ ಸರಿಕಂಡ ರೀತಿಯಲ್ಲಿ ಈ ರಾಜ್ಯದ ದಿವಾಣಿ ಮತ್ತು ದಂಡ ನ್ಯಾಯ ಪಾಲನೆ ಸಂಬಂಧ ಸಾಮ್ರಾಟರ ಪ್ರತಿನಿಧಿಯು ಸಾಮ್ರಾಟರ ಅಧಿಕಾರಗಳನ್ನು ಭಾರತದ ರಾಜ್ಯಗಳಲ್ಲಿ ನಿರ್ವಹಿಸುವ ರೀತಿಯಲ್ಲಿ ಸೂಕ್ತ ಅಧಿಕಾರ, ಹಕ್ಕು ಮತ್ತು ವ್ಯಾಪ್ತಿಯನ್ನು ಚಲಾಯಿಸಬಹುದು."

ಇದು ಅರೆ–ಅಧಿಕಾರ ವ್ಯಾಪ್ತಿಯ ರಾಜ್ಯಗಳಿಂದ ಅನುಮೋದಿಸಲ್ಪಟ್ಟ ಸೇರ್ಪಡೆಯ ಪತ್ರದ ಅತಿ ಮುಖ್ಯ ಖಂಡವೆಂದು ನಾನು ಅರಿಕೆಮಾಡುತ್ತೇನೆ. ನನ್ನ ಮಾನ್ಯ ಮಿತ್ರರು ಮೂರನೇ ವರ್ಗದ ರಾಜ್ಯಗಳನ್ನು ಗಮನಿಸಿಕೊಂಡು ಅವುಗಳಿಂದ ಅನುಮೋದಿಸಲ್ಪಟ್ಟ ಸೇರ್ಪಡೆಯ ಪತ್ರಗಳನ್ನು ಓದಿದರೆ, ಅದು ಈ ಕೆಳಗಿನಂತಿದೆ :

> " ಆದಾಗ್ಯೂ .. . . ಈ ರಾಜ್ಯ ಅಥವಾ ತಾಲೂಕುಗಳು ಇಚ್ಛಿಸುವುದೇನೆಂದರೆ, ಭಾರತದ ಆಧಿಪತ್ಯವು ಪ್ರತಿನಿಧಿ ಅಥವಾ ಪ್ರತಿನಿಧಿಗಳ ಮೂಲಕ ಮತ್ತು ತನಗೆ ಸರಿಕಂಡ ರೀತಿಯಲ್ಲಿ ಈ ರಾಜ್ಯದ ದಿವಾಣಿ ಮತ್ತು ದಂಡ ನ್ಯಾಯ ಪಾಲನೆ ಸಂಬಂಧ ಸಾಮ್ರಾಟರ ಪ್ರತಿನಿಧಿಯು ಸಾಮ್ರಾಟರ ಅಧಿಕಾರಗಳನ್ನು ಭಾರತದ ರಾಜ್ಯಗಳಲ್ಲಿ ನಿರ್ವಹಿಸುವ ರೀತಿಯಲ್ಲಿ ಸೂಕ್ತ ಅಧಿಕಾರ, ಹಕ್ಕು ಮತ್ತು ವ್ಯಾಪ್ತಿಯನ್ನು ಚಲಾಯಿಸಬಹುದು," ಇತ್ಯಾದಿ.

ಎರಡನೇ ಅಥವಾ ಮೂರನೇ ವರ್ಗದ ರಾಜ್ಯಗಳ ಸೇರ್ಪಡೆಯ ಪತ್ರಗಳಲ್ಲಿ ಅಡಕವಾಗಿರುವ ಖಂಡ ಇದು; ಮೊದಲನೇ ವರ್ಗದಲ್ಲಿ ಬರುವ ಪೂರ್ಣ ಅಧಿಕಾರ ವ್ಯಾಪ್ತಿಯ ರಾಜ್ಯಗಳು ಅನುಮೋದಿಸಿದ ಸೇರ್ಪಡೆಯ ಪತ್ರಗಳಲ್ಲಿ ಈ ಖಂಡವು ಕಾಣಬರುವುದಿಲ್ಲ. ಸಹಜವಾಗಿಯೇ ಎರಡು ವಿಚಾರಗಳು ಇದರಿಂದ ಹುಟ್ಟಿಕೊಳ್ಳುತ್ತವೆ. ಮೊದಲನೆಯದು ಏನೆಂದರೆ ಈ ವಿಧೇಯಕವು ಅಂತಹ ಖಂಡವನ್ನೊಳಗೊಳ್ಳದ ಸೇರ್ಪಡೆಯ ಪತ್ರಗಳ ರಾಜ್ಯಗಳಿಗೆ ಅನ್ವಯಿಸುವುದಿಲ್ಲ; ಎರಡನೆಯದಾಗಿ, ಇದು ಅಂತಹ ಖಂಡವನ್ನೊಳಗೊಂಡ ಸೇರ್ಪಡೆಯ ಪತ್ರಗಳನ್ನು ನೀಡಿದ, ಮತ್ತು ಆಧಿಪತ್ಯ ಸರಕಾರಕ್ಕೆ ಅವು ಒಪ್ಪಂದದ ಇಲ್ಲವೇ ಮೌನಸಮ್ಮತಿಯ ಇಲ್ಲವೇ ಬಳಕೆಯ ಮೂಲಕ ಸ್ವಯಿಚ್ಛೆಯಿಂದ ಅಂತಹ ಹಕ್ಕುಗಳನ್ನು ಬ್ರಿಟಿಷ್ ಸರಕಾರಕ್ಕೆ ನೀಡಿದ್ದ, ರಾಜ್ಯಗಳಿಗೆ ಮಾತ್ರ ಅನ್ವಯಿಸುತ್ತದೆ; ಅವುಗಳು ಅಂತಹ ಹಕ್ಕುಗಳನ್ನು ಭಾರತ ಆಧಿಪತ್ಯಕ್ಕೆ ಸ್ವಯಿಚ್ಛೆಯಿಂದ ವರ್ಗಾಯಿಸಿವೆ ಮತ್ತು ಮುಂದಕ್ಕೂ ಹಾಗೆ ಮಾಡಬಹುದು. ನಾವು ಗಮನಿಸಬೇಕಾದ ಅಂಶವೆಂದರೆ ಎಲ್ಲೆಲ್ಲಿ ಯಾವುದೇ ರಾಜ್ಯವು ಆಧಿಪತ್ಯಕ್ಕೆ ತನ್ನ ಸೇರ್ಪಡೆಯ ಪತ್ರದ ಮೂಲಕ ಅಂತಹ ಹಕ್ಕುಗಳನ್ನು ನೀಡಿವೆಯೋ, ಅಂತಹ ಕಡೆಯಲ್ಲಿ ಕೇಂದ್ರ ಸರಕಾರಕ್ಕೆ ಆ ಅಧಿಕಾರವನ್ನು

ಚಲಾಯಿಸುವ ಕಾನೂನುಬದ್ಧ ಹಕ್ಕು ಇರುತ್ತದೆಯೆಂಬುದನ್ನು ಈ ವಿಧೇಯಕವು ಪ್ರಸ್ತಾವಿಸುತ್ತದೆ. ಇಲ್ಲಿ ಅಧಿಕಾರ ಕಸಿದುಕೊಳ್ಳುವಿಕೆಯಿಲ್ಲ; ಅದು ಭಾರತದ ರಾಜ್ಯಗಳು ಭಾರತದ ಆಧಿಪತ್ಯಕ್ಕೆ ಸ್ವಯಿಚ್ಛೆಯಿಂದ ಹಕ್ಕು ಮತ್ತು ಅಧಿಕಾರ ವ್ಯಾಪ್ತಿಗಳನ್ನು ವಹಿಸುವುದು. ಆದ್ದರಿಂದ ನಾನು ಪ್ರಾಧಾನ್ಯ ನೀಡಬಯಸುವ ಮೊದಲ ವಿಚಾರವೆಂದರೆ ಈ ವಿಧೇಯಕದಲ್ಲಿ ಸ್ವಯಿಚ್ಛೆಯಿಂದ ಭಾರತದ ಆಧಿಪತ್ಯಕ್ಕೆ ತನ್ನ ಅಧಿಕಾರವನ್ನು ವರ್ಗಾಯಿಸದ ಯಾವುದೇ ರಾಜ್ಯದ ಹಕ್ಕನ್ನು ಕಸಿಯುವ ಇರಾದೆಯಿಲ್ಲ. ನನ್ನ ಈ ಹೇಳಿಕೆಯು ಈ ವಿಧೇಯಕದ ಕುರಿತು ಈ ಸದನವು ವ್ಯಕ್ತಪಡಿಸಿದ ಎಲ್ಲಾ ಸಂಶಯಗಳನ್ನೂ ಪರಿಹರಿಸುತ್ತದೆಂದು ಭಾವಿಸುತ್ತೇನೆ. ನಾನು ಹೇಳಿದ ಮಾತುಗಳನ್ನು ಮಾನ್ಯ ಸದಸ್ಯರು ಮನಗಂಡರೆ ದಾಖಲೆಗಳಲ್ಲಿ ಕಂಡುಬರುವ ಇಷ್ಟೊಂದು ತಿದ್ದುಪಡಿಗಳ ಅಗತ್ಯವಿರುವುದಿಲ್ಲವೆಂದು ಭಾವಿಸುತ್ತೇನೆ.

ನಾನು ಇದಕ್ಕಿಂತ ಹೆಚ್ಚೇನೂ ಹೇಳಬಯಸುವುದಿಲ್ಲ ಏಕೆಂದರೆ ಇದಿಷ್ಟೇ ನಾನು ಹೇಳಬಯಸಿದ್ದು. ಆದರೆ ನನ್ನ ಮಾನ್ಯ ಮಿತ್ರ ಶ್ರೀ ಸಂತಾನಂ ಅವರು ಈ ವಿಧೇಯಕದ ಕುರಿತು ನಾನು ನಿನ್ನೆ ವ್ಯಕ್ತಪಡಿಸಿದ ನಿಲುವಿಗೂ ಈ ವಿಧೇಯಕದಲ್ಲಿರುವ ನಿಲುವಿಗೂ ವೈರುಧ್ಯಗಳಿವೆಯೆಂದು ಹೇಳಿದರು. ನನ್ನ ಮಾನ್ಯ ಮಿತ್ರ ಸಂತಾನಂ ಅವರು ನಾನು ನಿನ್ನೆ ಹೇಳಿದ್ದನ್ನು ಪೂರ್ಣವಾಗಿ ತಪ್ಪಾಗಿ ಗ್ರಹಿಸಿದ್ದಾರೆಂದು ನನಗನ್ನಿಸುತ್ತದೆ. ನಾನು ಆಗ ಹೇಳಿದ್ದೇನೆಂದರೆ ನರ್ಸಿಂಗ್ ವಿಧೇಯಕವು ಸಮವರ್ತಿ ಪಟ್ಟಿಯ ೧೬ನೇ ನಮೂದನೆಯನ್ನು ಉಲ್ಲೇಖಿಸುವುದರಿಂದ ಆಧಿಪತ್ಯ ಸರಕಾರಕ್ಕೆ ಯಾವುದೇ ಅಧಿಕಾರವ್ಯಾಪ್ತಿಯನ್ನು ಗಳಿಸುವ ಸಾಧ್ಯತೆಯೂ ಇಲ್ಲ. ಏಕೆಂದರೆ ಸೇರ್ಪಡೆಯ ಪತ್ರಗಳು ಮತ್ತು ಭಾರತದ ರಾಜ್ಯಗಳು ತಾವು ಭಾರತದ ಒಕ್ಕೂಟವನ್ನು ಸೇರುವುದೇ ಆದರೆ ಸಂಯುಕ್ತ ಪಟ್ಟಿಯಾಗಿರುವ ೧ನೇ ಪಟ್ಟಿಯ ಮತ್ತು ಅದರಲ್ಲೂ ಕೆಲವು ವಿಷಯಗಳ ಕುರಿತಂತೆ ಮಾತ್ರ ಸೇರುತ್ತೇವೆಂದು ಸ್ಪಷ್ಟಪಡಿಸಿವೆ. ಆದ್ದರಿಂದ ಈ ಸಂದರ್ಭಗಳನ್ನು ಗಮನಿಸಿದಂತೆ, ಭಾರತದ ಆಧಿಪತ್ಯವು ಯಾವುದೇ ಅಧಿಕಾರವ್ಯಾಪ್ತಿಯನ್ನು ಪಡೆಯುವುದು ಕಷ್ಟಸಾಧ್ಯವೆಂದು ನಾನು ಪ್ರತಿಪಾದಿಸಿದ್ದೆ. ಆದ್ದರಿಂದ ೧ನೇ ಖಂಡಕ್ಕೆ ಅವರು ತಿದ್ದುಪಡಿಯ ಮೂಲಕ ಪರಿಚಯಿಸುವ ಯಾವುದೇ ಶಾಸನವೂ ಬರೀ ಊಹಾತ್ಮಕವಾಗಿರುತ್ತದೆ. ಆದ್ದರಿಂದ ಈ ವಿಧೇಯಕದ ಕುರಿತಾಗಿ ಹೇಳುವುದಾದರೆ, ಪ್ರಾಂತ್ಯೇತರ ಲಕ್ಷಣದ ಹೆಚ್ಚಿನ ಅಧಿಕಾರ ವ್ಯಾಪ್ತಿಯನ್ನು ಗಳಿಸಲು ಭಾರತದ ಆಧಿಪತ್ಯಕ್ಕೆ ಅಸಾಧ್ಯವಾದ್ದು ಇದರಲ್ಲಿಲ್ಲ, ಮತ್ತು ಆದ್ದರಿಂದ ನಿರೀಕ್ಷೆಯ ಆಧಾರದಲ್ಲಿ ಪ್ರಯೋಗಿಸುವುದನ್ನು ಮುಂಗಾಣುವ ಈ ಶಾಸನವು ಕೇವಲ ಊಹಾತ್ಮಕವಾಗಿರುವುದಿಲ್ಲ. ಏಕೆಂದರೆ ಅಲ್ಲಿ ಸಾಧ್ಯತೆಯು ಇದ್ದೇ ಇರುತ್ತದೆ. ಆದ್ದರಿಂದ ನಾನು ತಳೆದ ಎರಡು ನಿಲುವುಗಳಲ್ಲಿ ಯಾವ ವೈರುಧ್ಯಗಳೂ ಇಲ್ಲವೆಂದು ಅರಿಕೆ ಮಾಡುತ್ತೇನೆ.

*__ಸಭಾಧ್ಯಕ್ಷರು:__ ಮಾನ್ಯ ಸದಸ್ಯರು ತಿದ್ದುಪಡಿಯನ್ನು ಮಂಡಿಸಲು ಇಚ್ಛಿಸುತ್ತಾರೆಂದು ತಿಳಿಯುತ್ತೇನೆ.

**ಶ್ರೀ ಹಿಮ್ಮತ್ ಸಿಂಗ್ ಕೆ.ಮಹೇಶ್ವರಿ:** ಹೌದು, ಮತ್ತು ನಾನು ಎತ್ತಿದ ವಿಚಾರಕ್ಕೆ ಸಿಕ್ಕಿದ ಉತ್ತರಕ್ಕೆ ನಾನು ಋಣಿ. ಮಾನ್ಯರೆ, ನಾನು ತಿದ್ದುಪಡಿಯನ್ನು ಮಂಡಿಸುತ್ತೇನೆ:

> "ವಿಧೇಯಕದ ೨ನೇ ಖಂಡದ (ಎ) ಭಾಗದಲ್ಲಿ 'ಸಂಧಿ, ಮಂಜೂರು, ಬಳಕೆ, ಮೌನಸಮ್ಮತಿ ಅಥವಾ ಇತರ ಕಾನೂನು ರೀತ್ಯಾ' ಎಂಬ ಪದಗಳಿಗೆ ಬದಲಾಗಿ 'ಸಂಧಿ ಅಥವಾ ಒಪ್ಪಂದ' ಎಂಬ ಪದಗಳನ್ನು ಆದೇಶಿಸುವುದು."

---

* ಪೂರ್ವೋಕ್ತ, ೯ ಡಿಸೆಂಬರ್ ೧೯೪೭, ಪು. ೧೫೭೧–೭೨.

**ಸಭಾಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ:

"ವಿಧೇಯಕದ ೨ನೇ ಖಂಡದ (ಎ) ಭಾಗದಲ್ಲಿ 'ಸಂಧಿ, ಮಂಜೂರು, ಬಳಕೆ, ಮೌನಸಮ್ಮತಿ ಅಥವಾ ಇತರ ಕಾನೂನು ರೀತ್ಯಾ' ಎಂಬ ಪದಗಳಿಗೆ ಬದಲಾಗಿ 'ಸಂಧಿ ಅಥವಾ ಒಪ್ಪಂದ' ಎಂಬ ಪದಗಳನ್ನು ಆದೇಶಿಸುವುದು."

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ, ಈ ಎರಡು ತಿದ್ದುಪಡಿಗಳು ಭಿನ್ನ ಶೀರ್ಷಿಕೆಗಳಲ್ಲಿ ನಮೂದಾದರೂ ವಾಸ್ತವಿಕವಾಗಿ ಅವು ಒಂದೇ ಆಗಿವೆ. ೧೦ನೇ ಕ್ರಮಾಂಕದ ತಿದ್ದುಪಡಿಯನ್ನು ೯ನೇ ಕ್ರಮಾಂಕದ ತಿದ್ದುಪಡಿಯ ಪರಿಣಾಮವೆಂದು ಪರಿಗಣಿಸಬಹುದು ಮತ್ತು ಆ ದೃಷ್ಟಿಯಿಂದ ಅವೆರಡರ ನಡುವೆ ವ್ಯತ್ಯಾಸವಿಲ್ಲ. ಈ ತಿದ್ದುಪಡಿಯನ್ನು ಮಂಡಿಸಿದ ಇಬ್ಬರು ಮಾನ್ಯ ಸದಸ್ಯರ ಉದ್ದೇಶವೂ 'ಮಂಜೂರು, ಬಳಕೆ ಮತ್ತು ಮೌನಸಮ್ಮತಿ' ಈ ಪದಗಳನ್ನು ಲೋಪಗೊಳಿಸುವುದೇ ಆಗಿದೆ. ಅವರು ಅಪೇಕ್ಷಿಸುವುದು ಅದೇ ಆಗಿದೆಯೆಂದು ನಾನು ಭಾವಿಸುತ್ತೇನೆ ಮತ್ತು ಅವರ ಗುರಿಯನ್ನು ಪರಿಗಣಿಸಿದರೆ, ಎರಡು ತಿದ್ದುಪಡಿಗಳೂ ಒಂದೇ ಆಗಿವೆಯೆಂಬ ಬಗ್ಗೆ ನನಗೆ ಸಂಶಯವಿಲ್ಲ.

ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಅಂಗೀಕರಿಸಲಾರೆನೆಂದು ತಿಳಿಸಲು ಮತ್ತು ಈ ತಿದ್ದುಪಡಿಯು ತಪ್ಪುಕಲ್ಪನೆಯನ್ನು ಆಧರಿಸಿದೆಯೆಂದು ಹೇಳಲು ವಿಷಾದಿಸುತ್ತೇನೆ. ಮೊತ್ತಮೊದಲಾಗಿ, ಶ್ರೀ ನಾಸಿರುದ್ದಿನ್ ಅಹಮದ್ ಅವರು ಮಂಡಿಸಿದ ತಿದ್ದುಪಡಿಯ ಬಗ್ಗೆ ಹೇಳಬಯಸುವುದೇನೆಂದರೆ, ಅವರ ತಿದ್ದುಪಡಿಯ (೧೧೧)ನೇ ಕ್ರಮಾಂಕವು ಸುಸಂಗತವಲ್ಲ. ಬುಡಕಟ್ಟು ಪ್ರದೇಶಗಳು ಬ್ರಿಟಿಷ್ ಭಾರತದ ಅಥವಾ ಭಾರತ ಆಧಿಪತ್ಯದ ಭಾಗಗಳು. ಎರಡನೆಯದಾಗಿ ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ ಭಾರತದ ಆಧಿಪತ್ಯವು ಯಾವುದೇ ಹೆಚ್ಚುವರಿ ಪ್ರಾದೇಶಿಕ ವ್ಯಾಪ್ತಿಯನ್ನು ಗಳಿಸುವ ಪ್ರಶ್ನೆಯೇ ಇಲ್ಲ. ಮಾನ್ಯ ಸದಸ್ಯರು ಮಾಡಲು ಇಚ್ಛಿಸುವುದಾದರೂ ಏನನ್ನು? ನಾನು ಅರ್ಥಮಾಡಿದ್ದು ಸರಿಯಾಗಿದ್ದರೆ, ಮಾನ್ಯ ಸದಸ್ಯರು ಭಾರತದ ಆಧಿಪತ್ಯವು ಚಲಾಯಿಸಬಲ್ಲ ಹೆಚ್ಚುವರಿ ಪ್ರಾದೇಶಿಕ ವ್ಯಾಪ್ತಿಯು ಸೇರ್ಪಡೆಯ ಪತ್ರಕ್ಕೆ ಸಂಬಂಧಿಸಿದಂತಿರಬೇಕು. ಇದೇ ಅವರ ನಿಲುವಿನ ಸಾರ ಮತ್ತು ಯಥಾರ್ಥವೆಂದು ಮತ್ತು ಕೇಂದ್ರ ಸರಕಾರವು ಈ ಕಾಯಿದೆಯಡಿ ಬಳಸಬಹುದಾದ ಅಧಿಕಾರ ವ್ಯಾಪ್ತಿಯು ಸೇರ್ಪಡೆಯ ಪತ್ರಗಳಿಂದ ಅನುಮೋದಿಸಲ್ಪಟ್ಟಿರಬೇಕು ಎಂದು ಸ್ಪಷ್ಟೀಕರಿಸಲು ಅವರು ಬಯಸುತ್ತಾರೆಂದು ನಾನು ಭಾವಿಸುತ್ತೇನೆ.

**ಶ್ರೀ ನಾಸಿರುದ್ದಿನ್ ಅಹಮದ್:** ಸರಕಾರವೂ ಅದನ್ನು ಒಪ್ಪಿದೆ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಮಾನ್ಯರೆ, ಈ ಕಾಯಿದೆಯು ನನ್ನ ಮಾನ್ಯ ಮಿತ್ರರು ಈ ವಿಧೇಯಕದಿಂದ ಅಪೇಕ್ಷಿಸಿದ್ದಕ್ಕಿಂತ ಭಿನ್ನವಾದ್ದನ್ನೇನನ್ನಾದರೂ ಮಾಡುತ್ತದೆಯೇ? ನಾನು ಹೇಳಿದಂತೆ ಭಾರತದ ರಾಜ್ಯಗಳು ಅನುಮೋದಿಸಿದ ಸೇರ್ಪಡೆಯ ಪತ್ರಗಳು ಕೇಂದ್ರ ಸರಕಾರದಿಂದ ಸಾಧ್ಯವಾಗಿಸುವುದೆಂದರೆ ಬ್ರಿಟಿಷ್ ದೊರೆಯ ಪ್ರತಿನಿಧಿಯು ಸಾಮ್ರಾಜ್ಯದ ಕರ್ತವ್ಯಗಳಿಗಾಗಿ ಭಾರತದ ರಾಜ್ಯಗಳಲ್ಲಿ ಚಲಾಯಿಸಬಲ್ಲ ಎಲ್ಲಾ ಅಧಿಕಾರ, ಹಕ್ಕು ಮತ್ತು ವ್ಯಾಪ್ತಿಗಳನ್ನು ಬಳಸುವುದು. ಭಾರತದ ರಾಜ್ಯಗಳು ಅನುಮೋದಿಸಿದ ಸೇರ್ಪಡೆಯ ಪತ್ರಗಳು ಬ್ರಿಟಿಷ್ ದೊರೆಯ ಪ್ರತಿನಿಧಿಯು ಯಾವುದೇ ಕಾಲದಲ್ಲಿ ಚಲಾಯಿಸಬಲ್ಲ ಹಕ್ಕುಗಳು, ಅಧಿಕಾರ ಮತ್ತು ವ್ಯಾಪ್ತಿಯನ್ನು. ಕೇಂದ್ರ ಸರಕಾರಕ್ಕೆ ಸಾಧ್ಯವಾಗಿಸುತ್ತವೆ. ನಾವೀಗ ಮತ್ತೆ ಈ ಪ್ರಶ್ನೆಯ ಕಡೆಗೆ ಮರಳೋಣ. ಬ್ರಿಟಿಷ್ ಚಕ್ರವರ್ತಿಯ ಪ್ರತಿನಿಧಿಯು ಯಾವುದೇ ಕಾಲದಲ್ಲಿ ಭಾರತದ ರಾಜ್ಯಗಳಲ್ಲಿ ಚಲಾಯಿಸಬಲ್ಲ ಹಕ್ಕುಗಳು, ಅಧಿಕಾರ ಮತ್ತು ವ್ಯಾಪ್ತಿಗಳು ಯಾವುವೆಂದು ನೋಡೋಣ. ಭಾರತದ ಸಂಸತ್ತು ಅನುಮೋದಿಸಿದ ವಿದೇಶಿ ಅಧಿಕಾರ ವ್ಯಾಪ್ತಿ ಕಾಯಿದೆಯಲ್ಲಿ ಬ್ರಿಟಿಷ್

ಚಕ್ರವರ್ತಿಯ ಪ್ರತಿನಿಧಿಯು ಯಾವುದೇ ಕಾಲದಲ್ಲಿ ಭಾರತದ ರಾಜ್ಯಗಳಲ್ಲಿ ಚಲಾಯಿಸಬಲ್ಲ ಹಕ್ಕುಗಳು, ಅಧಿಕಾರ ಮತ್ತು ವ್ಯಾಪ್ತಿಗಳು ಸ್ಪಷ್ಟ ಮಾತುಗಳಲ್ಲಿ ಅಂದರೆ, ೨ನೇ ಖಂಡದ (ಎ) ಭಾಗದಲ್ಲಿ "ಸಂಧಿ, ಮಂಜೂರು, ಬಳಕೆ, ಮೌನಸಮ್ಮತಿ ಅಥವಾ ಇತರ ಕಾನೂನು ರೀತ್ಯಾ" ಎಂದು ವಿವರಿಸಲ್ಪಟ್ಟಿವೆ. ಭಾರತದ ವಿದೇಶಿ ಅಧಿಕಾರ ವ್ಯಾಪ್ತಿ ಕಾಯಿದೆಯಲ್ಲಿ ಬಳಸಲಾದ ಪದಗಳು ಖಂಡಿತಾ ಇವೇ ಆಗಿವೆ ಮತ್ತು ಅವೇ ಪದಗಳನ್ನು ನಾವು ನಮ್ಮ ಕಾಯಿದೆಯಲ್ಲಿ ಸ್ವೀಕರಿಸಿದ್ದೇವೆ. ಏಕೆಂದರೆ ಭಾರತದ ರಾಜ್ಯಗಳು ತಮ್ಮ ಸೇರ್ಪಡೆಯ ಪತ್ರದಲ್ಲಿ ಬ್ರಿಟಿಷ್ ದೊರೆಯ ಪ್ರತಿನಿಧಿಯು ಯಾವುದೇ ಕಾಲದಲ್ಲಿ ರಾಜ್ಯಗಳಿಗೆ ಮತ್ತು ಪರಮಾಧಿಕಾರಕ್ಕೆ ಸಂಬಂಧಪಟ್ಟಂತೆ ಚಲಾಯಿಸಬಲ್ಲ ಅಧಿಕಾರಗಳನ್ನು ನೀಡುತ್ತವೆ. ಆದ್ದರಿಂದ, ನಿಮಗೆ ನಿಮ್ಮ ಹಕ್ಕುಗಳು ಪರಮಾಧಿಕಾರವು ಲಭ್ಯವಾಗುವ ರೀತಿಗಳಾಗಿದ್ದ ಸೇರ್ಪಡೆಯ ಪತ್ರಗಳಿಂದ ಲಭಿಸುತ್ತವೆಯೇ ಅಥವಾ "ಸಂಧಿ, ಮಂಜೂರು, ಬಳಕೆ, ಮೌನಸಮ್ಮತಿ ಮತ್ತು ಇತರ" ಎಂಬುದರಿಂದಲೋ ಎಂದು ಹೇಳುವುದು ನನಗೆ ಶುದ್ಧ ಪುನರುಕ್ತಿಯಾಗಿ, ಯಾವ ವ್ಯತ್ಯಾಸವೂ ಇಲ್ಲದಂತೆ ಕಾಣುತ್ತಿದೆ. ಅದು ಒಂದೇ ಆಗಿದೆ ಮತ್ತು ಆದ್ದರಿಂದ, ನಾನು ಗುರುತಿಸಿದ 'ನೀವು ಬುಡಕಟ್ಟು ಪ್ರದೇಶಕ್ಕೆ ಸಂಬಂಧಿಸಿದ ತಿದ್ದುಪಡಿಯನ್ನು ಸ್ವೀಕರಿಸಲಾರಿರಿ' ಎಂಬ ತೊಡಕಲ್ಲದೆ, ಈ ತಿದ್ದುಪಡಿಯು ವಾಸ್ತವ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಗೊಂದಲವನ್ನು ಆರೋಪಿಸಿದಂತಿದೆ ಮತ್ತು ಪುನರುಕ್ತಿಯಾಗಿ ಕಾಣಿಸುತ್ತಿದೆ ಮತ್ತು ಈ ವಿಧೇಯಕದಲ್ಲಿ ಮಾಡಲಾದ್ದಕ್ಕಿಂತ ಹೆಚ್ಚೇನೂ ಇದರಲ್ಲಿ ಇಲ್ಲ.

**ಶ್ರೀ ಯಂ.ಅನಂತಶಯನಂ ಅಯ್ಯಂಗಾರ್** (ಮದ್ರಾಸ್: ಸಾಮಾನ್ಯ) : ನನ್ನ ಮಾನ್ಯ ಮಿತ್ರರಾದ ಕಾನೂನು ಸಚಿವರು ವಿದೇಶಿ ಅಧಿಕಾರ ವ್ಯಾಪ್ತಿ ಕಾಯಿದೆಯನ್ನು ಉಲ್ಲೇಖಿಸಿದರು. ನಾನು ಭಾರತದ ಸ್ವಾತಂತ್ರ್ಯ ಕಾಯಿದೆಯ ಬಹು ಸನಿಹಕ್ಕೆ ಬರುತ್ತೇನೆ. ಈ ತಿದ್ದುಪಡಿಯನ್ನು ಮಂಡಿಸಿದ ನನ್ನ ಮಾನ್ಯ ಮಿತ್ರರು ಉಲ್ಲೇಖಿಸಿದ ಭಾರತದ ಸ್ವಾತಂತ್ರ್ಯ ಕಾಯಿದೆಯ ೭ನೇ ಖಂಡದನ್ವಯ ಪರಮಾಧಿಕಾರವು ಅನೂರ್ಜಿತವಾಗುತ್ತದೆ. ಹಾಗಾದರೆ ಸೇರ್ಪಡೆಯ ಎರಡನೆಯ ಭಾಗದಲ್ಲಿ ಮಾನ್ಯ ಕಾನೂನು ಸಚಿವರು ಓದಿದ, ಪರಮಾಧಿಕಾರವನ್ನು ಹೇಗೆ ಚಲಾಯಿಸಬಹುದು? ನಾನು ಭಾರತದ ಸ್ವಾತಂತ್ರ್ಯ ಕಾಯಿದೆಯ ಸಂಬಂಧಪಟ್ಟ ಖಂಡವನ್ನು ಓದುತ್ತೇನೆ:

> " . . . . ಮತ್ತು ಬ್ರಿಟಿಷ್ ಚಕ್ರವರ್ತಿಯು ಆ ದಿನದಂದು ಭಾರತದ ರಾಜ್ಯಗಳಲ್ಲಿ ಇಲ್ಲವೇ ಅವಕ್ಕೆ ಸಂಬಂಧಿಸಿದಂತೆ ಸಂಧಿ, ಮಂಜೂರು, ಮೌನಸಮ್ಮತಿ ಅಥವಾ ಇವಿಲ್ಲದೆ ಚಲಾಯಿಸಬಲ್ಲ ಹಕ್ಕು, ಅಧಿಕಾರ ಮತ್ತು ವ್ಯಾಪ್ತಿಯನ್ನು."

ಈ ಪದಗಳಷ್ಟೇ ಪ್ರತಿಮಾಡಲ್ಪಟ್ಟಿವೆ.

**ಶ್ರೀ ನಾಸಿರುದ್ದಿನ್ ಅಹಮದ್:** ಇದು ಈಗ ಅನೂರ್ಜಿತವಾಗಿದೆ.

## *ಪ್ರಾಂತ್ಯಗಳಿಗೆ ಹೆಚ್ಚಿನ ಅಧಿಕಾರ ವ್ಯಾಪ್ತಿ ನೀಡುವ ವಿಧೇಯಕ — ಮುಂದುವರಿದುದು

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು) : ಈ ೬ನೇ ಖಂಡವನ್ನು ಅಸಹಜವೆಂದು ಒಬ್ಬ ನ್ಯಾಯವಾದಿಯಲ್ಲದ ಸಂಸತ್ ಸದಸ್ಯರು ವಿವರಿಸಿದ್ದರೆ ನನಗೆ ಯಾವುದೇ ಆಕ್ಷೇಪವಿರುತ್ತಿರಲಿಲ್ಲ;

---

* ಪೂರ್ವೋಕ್ತ, ೯ ಡಿಸೆಂಬರ್ ೧೯೪೭, ಪು. ೧೫೮೦–೮೨.

ಆದರೆ ಒಬ್ಬ ನ್ಯಾಯವಾದಿಯು ಎದ್ದುನಿಂತು ಈ ಖಂಡವು ಅಸಹಜ ಮತ್ತು ವಿಚಿತ್ರವೆಂದು ಹೇಳುವುದಿದೆಯಲ್ಲ, ಅದು ನ್ಯಾಯಾಂಗದ ಬುನಾದಿಗೇ ಕೊಡಲಿಯೇಟು ಬೀರುತ್ತದೆಯಾದ್ದರಿಂದ ನಾನು ನನ್ನ ಅಚ್ಚರಿಯನ್ನು ವ್ಯಕ್ತಪಡಿಸದೆ ವಿಧಿಯಿಲ್ಲ. ಮಾನ್ಯರೆ, ಪ್ರತಿಯೊಬ್ಬ ನ್ಯಾಯವಾದಿಗೂ ಗೊತ್ತಿರುವಂತೆ ಹಕ್ಕುಗಳನ್ನು ಕಾನೂನು ಎರಡು ರೀತಿಯವಾಗಿ ಗುರುತಿಸುತ್ತದೆ– ರಾಜಕೀಯ ಹಕ್ಕುಗಳು ಮತ್ತು ನ್ಯಾಯಾಲಯ ವಿಚಾರಣಾ ಯೋಗ್ಯ ಹಕ್ಕುಗಳು. ನ್ಯಾಯಾಲಯ ವಿಚಾರಣಾ ಯೋಗ್ಯ ಹಕ್ಕುಗಳನ್ನು ಯಾವಾಗಲೂ ನ್ಯಾಯಾಲಯದ ಮುಂದೆ ಮನವಿದಾರರು ಹಾಜರುಮಾಡಿದ ಸಾಕ್ಷ್ಯದ ಆಧಾರದಲ್ಲಿ ನೀಡಿದ ನ್ಯಾಯಿಕ ಡಿಕ್ರಿಯ ಮೂಲಕ ತೀರ್ಮಾನಿಸಬೇಕಾಗುತ್ತದೆ. ಆದರೆ ರಾಜಕೀಯ ಹಕ್ಕುಗಳನ್ನು ಪದದ ಸಾಮಾನ್ಯ ಅರ್ಥದಲ್ಲಿ ನ್ಯಾಯಾಲಯದ ವ್ಯಾಪ್ತಿಗೆ ಒಪ್ಪಿಸಲಾಗುವುದಿಲ್ಲ, ಮತ್ತು ರಾಜಕೀಯ ಹಕ್ಕುಗಳು ಎಂದರೇನೆಂದು ನಾನೀಗ ವಿವರಿಸುತ್ತೇನೆ. ಎರಡು ರಾಜ್ಯಗಳ ನಡುವಣ ಹಕ್ಕುಗಳು, ಅವು ಒಪ್ಪಂದಕ್ಕೆ ಅನುಗುಣವಾಗಿರಲಿ, ಇಲ್ಲದೇ ಇರಲಿ, ನ್ಯಾಯಾಲಯ ವಿಚಾರಣಾಯೋಗ್ಯ ಹಕ್ಕುಗಳು ಎನ್ನಿಸುವುದಿಲ್ಲ. ಅವು ಯಾವಾಗಲೂ ರಾಜಕೀಯ ಹಕ್ಕುಗಳೆಂದು ಪರಿಗಣಿಸಲ್ಪಡುತ್ತವೆ: ಮತ್ತು ಈ ವಿಧೇಯಕದಲ್ಲಿ ಈ ಖಂಡವನ್ನು ಸೇರಿಸಲು ಇದೂ ಒಂದು ಕಾರಣ. ಭಾರತದ ರಾಜ್ಯಗಳಿಂದ ಭಾರತದ ಆಧಿಪತ್ಯಕ್ಕೆ ವಹಿಸಲಾದ ಪ್ರಾಂತ್ಯೇತರ ಅಧಿಕಾರವ್ಯಾಪ್ತಿಯು ಎರಡು ರಾಜ್ಯಗಳ ನಡುವಣ ವಿಚಾರವೇ ಹೊರತು ಎರಡು ವ್ಯಕ್ತಿಗಳ ನಡುವಿನದ್ದಲ್ಲ; ಮತ್ತು ಎರಡು ರಾಜ್ಯಗಳ ನಡುವಣ ವಿಚಾರವಾದ್ದರಿಂದ, ಆ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲಾ ಹಕ್ಕುಗಳೂ ರಾಜಕೀಯ ಹಕ್ಕುಗಳಾಗುತ್ತವೆ, ಆದ್ದರಿಂದ ಅವನ್ನು ತೀರ್ಮಾನಕ್ಕಾಗಿ ನ್ಯಾಯಾಲಯಕ್ಕೆ ಒಪ್ಪಿಸಲಾಗದು. ಈ ಖಂಡವು, ನಾನು ಹೇಳಿದಂತೆ, ಯಾವುದೇ ಅರ್ಥದಲ್ಲೂ ಅಸಹಜವಾದ್ದಲ್ಲ, ಏಕೆಂದರೆ ನನ್ನ ಮಾನ್ಯ ಮಿತ್ರರು ಈ ಕಾಯಿದೆಗೆ ಆಕರವಾದ ಬ್ರಿಟಿಷ್ ಕಾಯಿದೆಯನ್ನು ಗಮನಿಸಿ ಖಂಡ ೪ನ್ನು ಉಲ್ಲೇಖಿಸುವುದಾದರೆ, ಖಂಡ ೬ರ ರಚನೆಯು ಖಂಡ ೪ರ ರಚನೆಯೇ ಆಗಿದೆ. ನನ್ನ ಮಾನ್ಯ ಮಿತ್ರರು ತಮಗೆ ಸಾಕ್ಷ್ಯ ಕಾಯಿದೆಯಲ್ಲಿ ಭಾರತ ಸರಕಾರದ ಒಂದು ಇಲಾಖೆಯ ಕಾರ್ಯದರ್ಶಿಯು ನೀಡಿದ ದೃಢೀಕರಣ ಪತ್ರವು ಆತನ ಯಥಾರ್ಥತೆಯ ಬಗ್ಗೆ ನಿರ್ಣಾಯಕ ಸಾಕ್ಷ್ಯವೆಂದು, ಆದರೆ ಅದು ಒಬ್ಬ ವ್ಯಕ್ತಿಯ ಸ್ಥಾನಮಾನವನ್ನು ನಿರ್ಧರಿಸಲು ಸ್ವೀಕಾರಾರ್ಹವಲ್ಲವೆಂದು ಹೇಳುವ ಕೆಲವು ಅಂಶಗಳು ತಿಳಿದಿವೆಯೆಂದೂ ಹೇಳಿದರು. ಅವರು ಸಿವಿಲ್ ಪ್ರಕ್ರಿಯಾ ಸಂಹಿತೆಯ ೮೬ನೇ ಕಲಮನ್ನು ಮರೆತಿದ್ದಾರೆಂದು ನನಗನ್ನಿಸುತ್ತದೆ. ಅವರು ಸಿವಿಲ್ ಪ್ರಕ್ರಿಯಾ ಸಂಹಿತೆಯ ೮೬ನೇ ಕಲಮನ್ನು ಗಮನಿಸಿದರೆ, ಈ ವಿಧೇಯಕದ ೬ನೇ ಖಂಡದ ಅಂಶಗಳನ್ನು ಬಹುಪಾಲು ಹೋಲುವ ಅಂಶಗಳನ್ನು ಕಾಣಬಹುದು. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಮು ೮೬ ಭಾರತದ ಅರಸು ಅಥವಾ ವಿದೇಶಿ ರಾಯಭಾರಿ ಅಥವಾ ಅನಿವಾಸಿ ಭಾರತೀಯ ಪ್ರಜೆಯ ಅಧಿಕಾರ ಅಥವಾ ಸ್ಥಾನಮಾನದ ವ್ಯಕ್ತಿಯ ವಿರುದ್ಧದ ದಾವೆಗೆ ಸಂಬಂಧಿಸಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಮು ೮೬ರಲ್ಲಿ ರಾಜ್ಯದ ಕಾರ್ಯದರ್ಶಿಯ ಒಪ್ಪಿಗೆಯಿಲ್ಲದೆ ಯಾವನೇ ಮನವಿದಾರನು ಭಾರತೀಯ ಅರಸನ ವಿರುದ್ಧ ದಾವೆಯನ್ನು ಹೂಡಲಾಗದೆಂದು ಹೇಳಿದೆ. ಕಲಮು ೮೬ರ ಉದ್ದೇಶವು ಭಾರತ ಸರಕಾರಕ್ಕೆ ದಾವೆ ಹೂಡಲ್ಪಟ್ಟ ಆ ಅರಸನಿಗೆ ಸಾರ್ವಭೌಮ ಅರಸನ ಸ್ಥಾನಮಾನಕ್ಕೆ ಅರ್ಹತೆಯಿದೆಯೇ ಎಂಬುದನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ಒಂದು ಅವಕಾಶವನ್ನು ಕಲ್ಪಿಸುವುದೇ ಆಗಿದೆ. ಆ ಅರಸು ಸಾರ್ವಭೌಮ ಅರಸನ ಸ್ಥಾನಮಾನಕ್ಕೆ ಅರ್ಹನೆಂದು ಅವರಿಗನ್ನಿಸಿದರೆ, ನಾವು ಆತನು ಸಾರ್ವಭೌಮ ಅರಸನೆಂದು ದೃಢೀಕರಣವನ್ನು ನೀಡುತ್ತೇವೆ, ಮತ್ತು ಆ ದೃಢೀಕರಣವನ್ನು ನೀಡಿದೊಡನೆಯೇ ಆ ವಿಚಾರವು ಒಂದು ರಾಜಕೀಯ ವಿಷಯವಾಗುತ್ತದೆ ಮತ್ತು ಸಾಮಾನ್ಯಾರ್ಥದಲ್ಲಿ

ನ್ಯಾಯಾಲಯ ವಿಚಾರಣಾ ಯೋಗ್ಯ ಹಕ್ಕುಗಳು ಎಂಬ ಸ್ಥಿತಿಯಿಂದ ಅದು ಮುಕ್ತವಾಗುತ್ತವೆ ಮತ್ತು ದಾವೆಯು ಬಿದ್ದು ಹೋಗುತ್ತದೆ. ಅದರಲ್ಲಿ ಅಸಹಜತೆಯೇನೂ ಇಲ್ಲ.

ನನ್ನ ಮಾನ್ಯ ಮಿತ್ರರು ಈ ದೇಶ ಮಾತ್ರವಲ್ಲ ಇತರ ಎಲ್ಲಾ ದೇಶಗಳಲ್ಲೂ ಕಾನೂನು ಮಾನ್ಯ ಮಾಡುವ ಈ ವಿರುದ್ಧ ಸ್ಥಿತಿಗೆ ಕಾರಣವನ್ನು ಅಪೇಕ್ಷಿಸಿದ್ದಾರೆ. ಅವರ ಮಾಹಿತಿಗಾಗಿ ನಾನು ಈ ವ್ಯತ್ಯಾಸವೇಕಾಗಿದೆಯೆಂದು ಹೇಳಬಲ್ಲೆ. ಮಾನ್ಯರೆ, ರಾಜ್ಯದ ಇಲಾಖೆಯು ಒಬ್ಬ ಅರಸು ಸಾರ್ವಭೌಮ ಅರಸೆಂಬ ಗ್ರಹಿಕೆಯ ಆಧಾರದಲ್ಲಿ ಆ ರೀತಿಯೇ ವ್ಯವಹರಿಸಿದಲ್ಲಿ, ಮತ್ತು ಆತನ ಸ್ಥಾನಮಾನವನ್ನು ತೀರ್ಮಾನಿಸಲು ಒಂದು ಸಾಮಾನ್ಯ ನ್ಯಾಯಾಲಯಕ್ಕೆ ಒಪ್ಪಿಸಿದಲ್ಲಿ, ಮತ್ತು ಆ ನ್ಯಾಯಾಲಯವು ಆತನು ಸಾರ್ವಭೌಮ ಅರಸು ಎಂಬ ಅರ್ಥದಲ್ಲಿ ಆಳುವ ಅರಸನಲ್ಲವೆಂದು ನಿರ್ಣಯಿಸಿದಲ್ಲಿ ಏನಾದೀತು? ಇಂತಹ ಸ್ಥಿತಿಯಲ್ಲಿ ನಮಗೆ ಎರಡು ವಿಭಿನ್ನ ತೀರ್ಮಾನಗಳು ಎದುರಾಗುತ್ತವೆ– ಒಂದು ನ್ಯಾಯಾಂಗ ನೀಡಿದ ತೀರ್ಮಾನ ಮತ್ತು ಇನ್ನೊಂದು ರಾಜ್ಯವು ನೀಡಿದ ತೀರ್ಮಾನ. ಇವೆರಡೂ ಪರಸ್ಪರ ವಿರುದ್ಧವಾದದ್ದಾಗಿವೆ. ಅಂತಹ ಸಂದರ್ಭದಲ್ಲಿ ಡಿಕ್ರಿಯ ಅನುಷ್ಠಾನವು ಅಸಾಧ್ಯವಾಗುತ್ತದೆ. ನನ್ನ ಮಾನ್ಯ ಮಿತ್ರರಿಗೆ ತಿಳಿದಿರುವಂತೆ, ಇಂಗ್ಲೆಂಡಿನಲ್ಲಿ ಸಾಕ್ಷ್ಯ ಕಾಯಿದೆಯೆಂಬುದಿಲ್ಲವಾದರೂ ರಾಜಕೀಯ ಖಾತೆಯೊಂದಿಗೆ ಸಂಘರ್ಷವಾಗಬಲ್ಲ ಪರಿಸ್ಥಿತಿ ಎದುರಾದರೆ, ಇಂತಹ ವಿಚಾರಗಳಲ್ಲಿ ಅವರು ಅಂತಹ ಅಹವಾಲನ್ನು ಸ್ವೀಕರಿಸಬಾರದೆಂದೂ, ತೀರ್ಪು ನೀಡಬಾರದೆಂದೂ ಬ್ರಿಟಿಷ್ ನ್ಯಾಯಾಂಗವು ಸ್ವೀಕರಿಸಿದ ಒಂದು ಸುಸ್ಥಾಪಿತ ನಿಯಮವಿದೆ. ಏಕೆಂದರೆ ಹೇಗಿದ್ದರೂ ನ್ಯಾಯಾಂಗದ ಡಿಕ್ರಿಯ ಅನುಷ್ಠಾನವು ರಾಜ್ಯದ ಇಲಾಖೆಯಿಂದಲೇ ಆಗಬೇಕಾಗಿದೆ ಮತ್ತು ಅವರು ರಾಜ್ಯದ ಇಲಾಖೆಯೊಂದಿಗೆ ಸಿಕ್ಕಿಬೀಳುವುದನ್ನು ಬಯಸುವುದಿಲ್ಲ. ನನಗನ್ನಿಸುವಂತೆ, ಅದು ನ್ಯಾಯಾಲಯಗಳು ರಾಜಕೀಯವಾಗಬಲ್ಲ ಯಾವುದೇ ವಿಚಾರದ ಬಗ್ಗೆ ಅಧಿಕಾರವ್ಯಾಪ್ತಿಯ ಹಕ್ಕನ್ನು ನಿರಾಕರಿಸಿರುವುದು ಒಂದು ಆರೋಗ್ಯಕರ ಕಾರಣವಾಗಿದೆ.

ಆದ್ದರಿಂದ, ಈ ಖಂಡವು, ಅಂದರೆ ೬ನೇ ಖಂಡವು, ಸರಿಯಾದ ಮತ್ತು ಸಮರ್ಪಕವಾದ ಖಂಡವಾಗಿದೆ, ಮತ್ತು ಈಗಿರುವಂತೆಯೇ ಈ ವಿಧೇಯಕದಲ್ಲಿ ಉಳಿಯಬೇಕು.

**ಸಭಾಧ್ಯಕ್ಷರು:** ವಿಷಯವೆಂದರೆ:

"೬ನೇ ಖಂಡವು ವಿಧೇಯಕದ ಭಾಗವಾಗಿರುತ್ತದೆ."

ನಿಲುವಳಿಯು ಅಂಗೀಕಾರವಾಯಿತು.

(೬ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.)

◆

## ೫

# ಸಂಯುಕ್ತ ನ್ಯಾಯಾಲಯ (ಅಧಿಕಾರ ವ್ಯಾಪ್ತಿಯ ಹೆಚ್ಚಳ) ವಿಧೇಯಕ

*ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು) : ಮಾನ್ಯರೆ, ದಿವಾಣಿ ವಿಚಾರಗಳಲ್ಲಿ ಸಂಯುಕ್ತ ನ್ಯಾಯಾಲಯದ ಮೇಲ್ಮನವಿ ಅಧಿಕಾರ ವ್ಯಾಪ್ತಿಯ ಹೆಚ್ಚಳಕ್ಕೆ ಅವಕಾಶ ಮಾಡಿಕೊಡುವ ಈ ವಿಧೇಯಕವನ್ನು ಮಂಡಿಸಲು ಅವಕಾಶ ಕೋರುತ್ತೇನೆ.

**ಸಭಾಧ್ಯಕ್ಷರು:** ವಿಷಯವೆಂದರೆ:

> "ಸಿವಿಲ್ ವಿಚಾರಗಳಲ್ಲಿ ಸಂಯುಕ್ತ ನ್ಯಾಯಾಲಯದ ಮೇಲ್ಮನವಿ ಅಧಿಕಾರ ವ್ಯಾಪ್ತಿಯ ಹೆಚ್ಚಳಕ್ಕೆ ಅವಕಾಶ ಮಾಡಿಕೊಡುವ ಈ ವಿಧೇಯಕವನ್ನು ಮಂಡಿಸಲು ಅವಕಾಶ ನೀಡಲು ಕೋರಿಕೆ."

ನಿಲುವಳಿಯು ಸ್ವೀಕೃತವಾಯಿತು.

**ಮಾನ್ಯ ಡಾ,ಬಿ.ಆರ್.ಅಂಬೇಡ್ಕರ್:** ಮಾನ್ಯರೆ, ನಾನು ಈ ವಿಧೇಯಕವನ್ನು ಮಂಡಿಸುತ್ತೇನೆ.

## **ಸಂಯುಕ್ತ ನ್ಯಾಯಾಲಯ (ಅಧಿಕಾರ ವ್ಯಾಪ್ತಿಯ ಹೆಚ್ಚಳ) ವಿಧೇಯಕ

**ಮಾನ್ಯ ಡಾ,ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು)**:** ಮಾನ್ಯರೆ, ನಾನು ಮಂಡಿಸುವುದೇನೆಂದರೆ–

> "ದಿವಾಣಿ ವಿಚಾರಗಳಲ್ಲಿ ಸಂಯುಕ್ತ ನ್ಯಾಯಾಲಯದ ಮೇಲ್ಮನವಿ ಅಧಿಕಾರ ವ್ಯಾಪ್ತಿಯ ಹೆಚ್ಚಳಕ್ಕೆ ಅವಕಾಶ ಮಾಡಿಕೊಡುವ ಈ ವಿಧೇಯಕವನ್ನು ಪರಿಗಣಿಸಬಹುದಾಗಿದೆ."

ಭಾರತ ಸರ್ಕಾರದ ಕಾಯಿದೆಯನ್ವಯ ಸ್ಥಾಪಿಸಲ್ಪಟ್ಟಿರುವ ಸಂಯುಕ್ತ ನ್ಯಾಯಾಲಯವು ಮೂರು ರೀತಿಯ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತದೆ:

(ಎ) ೨೦೪ನೇ ಕಲಮಿನನ್ವಯ ಮೂಲ ಅಧಿಕಾರವ್ಯಾಪ್ತಿ;

(ಬಿ) ೨೦೫ನೇ ಕಲಮಿನನ್ವಯ ಉಚ್ಚ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಮೇಲ್ಮನವಿಯ ಅಧಿಕಾರ ವ್ಯಾಪ್ತಿ; ಮತ್ತು

(ಸಿ) ೨೧೩ನೇ ಕಲಮಿನನ್ವಯ ಸಲಹಾ ಅಧಿಕಾರವ್ಯಾಪ್ತಿ.

ಈ ವಿಧೇಯಕವು ಸಂಯುಕ್ತ ನ್ಯಾಯಾಲಯದ ಮೇಲ್ಮನವಿ ಅಧಿಕಾರಕ್ಕೆ ಮಾತ್ರ ಸಂಬಂಧಿಸಿದ್ದಾಗಿದೆ.

---

* ಪೂರ್ವೋಕ್ತ, ಪು. ೧೫೪೬.

** ಪೂರ್ವೋಕ್ತ, ೧೧ ಡಿಸೆಂಬರ್ ೧೯೪೭; ಪು. ೧೭೦೮–೧೧.

ನಾನು ಹೇಳಿದಂತೆ, ಕಲಮು ೨೦೫ರನ್ವಯ ಸಂಯುಕ್ತ ನ್ಯಾಯಾಲಯದ ಮೇಲ್ಮನವಿ ಅಧಿಕಾರ ವ್ಯಾಪ್ತಿಯು ಸೀಮಿತ ವ್ಯಾಪ್ತಿಯನ್ನು ಹೊಂದಿದೆ. ಮೊದಲನೆಯದಾಗಿ ಅದು ಸಂವಿಧಾನದ ಅರ್ಥವಿವರಣೆಯನ್ನು ವಿವಾದಾಂಶವಾಗಿ ಒಳಗೊಂಡ ಪ್ರಕರಣಗಳಿಗೆ ಅಂದರೆ, ಭಾರತ ಸರ್ಕಾರದ ಕಾಯಿದೆ, ೧೯೩೫ರ ಅರ್ಥ ವಿವರಣೆಗೆ ಮಾತ್ರ ಸೀಮಿತಗೊಂಡಿದೆ.

ಎರಡನೆಯದಾಗಿ, ಈ ಸೀಮಿತ ಅಧಿಕಾರ ವ್ಯಾಪ್ತಿಯು ಸಂಯುಕ್ತ ನ್ಯಾಯಾಲಯಕ್ಕೆ ಲಭಿಸುವುದು ಉಚ್ಚ ನ್ಯಾಯಾಲಯವು ತನ್ನ ಮುಂದಿರುವ ಒಂದು ಪ್ರಕರಣವನ್ನು ತೀರ್ಮಾನಿಸಿದ ನಂತರ ಸಂವಿಧಾನದ ಅರ್ಥ ವಿವರಣೆಯ ಪ್ರಶ್ನೆಯು ಒಳಗೊಂಡಿದೆಯೆಂದು ದೃಢೀಕರಣವನ್ನು ನೀಡಿದಾಗ ಮಾತ್ರ.

ಈ ಎರಡು ನಿಬಂಧನೆಗಳು ಪೂರೈಸಿದಾಗಷ್ಟೇ, ಅಂದರೆ, ಸಂವಿಧಾನದ ಅರ್ಥ ವಿವರಣೆಯ ಪ್ರಶ್ನೆಯು ಒಳಗೊಂಡಾಗ; ಮತ್ತು ಎರಡನೆಯದಾಗಿ, ಉಚ್ಚ ನ್ಯಾಯಾಲಯವು ಸಂಯುಕ್ತ ನ್ಯಾಯಾಲಯಕ್ಕೆ ಕಲಮು ೨೦೫ರಡಿ ಮೇಲ್ಮನವಿ ಮಾಡಬಹುದೆಂಬ ದೃಢೀಕರಣವನ್ನು ನೀಡಿದಾಗ.

ಈ ಮಿತಿಯ ಪರಿಣಾಮವು ಇದು: ಸಂವಿಧಾನದ ಹೊರತಾಗಿ ಕಾನೂನುಗಳ ಅರ್ಥ ವಿವರಣೆಗಳ ಪ್ರಶ್ನೆಗಳುಳ್ಳ, ಅಥವಾ ಸಂವಿಧಾನದ ಅರ್ಥ ವಿವರಣೆಯನ್ನೊಳಗೊಂಡ, ಆದರೆ ಉಚ್ಚ ನ್ಯಾಯಾಲಯವು ದೃಢೀಕರಣವನ್ನು ನೀಡದ, ಉಳಿದೆಲ್ಲ ಮೇಲ್ಮನವಿಗಳು ಉಚ್ಚ ನ್ಯಾಯಾಲಯದಿಂದ ನೇರವಾಗಿ ಪ್ರೀವಿ ಕೌನ್ಸಿಲಿಗೆ ಹೋಗುತ್ತವೆ.

ಈ ವಿಧೇಯಕದ ಉದ್ದೇಶವು ಉಚ್ಚ ನ್ಯಾಯಾಲಯದಿಂದ ಪ್ರೀವಿ ಕೌನ್ಸಿಲಿಗೆ ಮೇಲ್ಮನವಿಗಳು ನೇರ ಹೋಗುವುದನ್ನು ತಡೆಯುವುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ವಿಧೇಯಕದ ಉದ್ದೇಶವು ಉಚ್ಚ ನ್ಯಾಯಾಲಯದ ತೀರ್ಪು ಇಲ್ಲವೇ ಡಿಕ್ರಿಯಿಂದ ಎಲ್ಲಾ ದಿವಾಣಿ ಮೇಲ್ಮನವಿಗಳು ಮೊದಲ ಹಂತದಲ್ಲಿ ಸಂಯುಕ್ತ ನ್ಯಾಯಾಲಯಕ್ಕೆ ಹೋಗುವುದನ್ನು ಕಡ್ಡಾಯಗೊಳಿಸುವುದು.

ಈ ಉದ್ದೇಶವನ್ನು ಸಾಧಿಸಲು ಈ ವಿಧೇಯಕವು ಅನುಸರಿಸಿದ ಪದ್ಧತಿಯು ಈ ಕೆಳಗಿನಂತಿದೆ:

ಈ ಉದ್ದೇಶಕ್ಕಾಗಿ ಈ ವಿಧೇಯಕವು ಒಂದು ದಿನವನ್ನು ಅಂದರೆ, ಫೆಬ್ರವರಿ ೧ನ್ನು ಗೊತ್ತುಪಡಿಸುತ್ತದೆ, ಮತ್ತು ಅದನ್ನು ಈ ವಿಧೇಯಕದಲ್ಲಿ 'ಗೊತ್ತುಪಡಿಸಲಾದ ದಿನ'ವೆಂದು ಕರೆಯಲಾಗಿದೆ. ಈ ವಿಧೇಯಕವು ಮಾಡುವ ಮುಂದಿನ ಕೆಲಸವೆಂದರೆ ಗೊತ್ತುಪಡಿಸಲಾದ ದಿನದ ನಂತರ ಯಾವ ಮೇಲ್ಮನವಿಗಳೂ, ಸದರಿ ಮೇಲ್ಮನವಿಯು 'ಇತ್ಯರ್ಥದಲ್ಲಿರುವ ಮೇಲ್ಮನವಿ' ಎಂಬ ವರ್ಗಕ್ಕೆ ಸೇರದ ಹೊರತು ಉಚ್ಚ ನ್ಯಾಯಾಲಯದಿಂದ ಪ್ರೀವಿ ಕೌನ್ಸಿಲಿಗೆ ನೇರ ಹೋಗತಕ್ಕದ್ದಲ್ಲ. ಫೆಬ್ರವರಿ ೧ರಂದು ಆ ಮೇಲ್ಮನವಿಯು ಈ ವಿಧೇಯಕದಲ್ಲಿ 'ಇತ್ಯರ್ಥದಲ್ಲಿರುವ ಮೇಲ್ಮನವಿ' ಎಂದು ವಿವರಿಸತಕ್ಕುದಾದರೆ, ಆಗ ಸದರಿ ಮೇಲ್ಮನವಿಯು ಪ್ರೀವಿ ಕೌನ್ಸಿಲಿನಿಂದ ಆಲಿಸಲ್ಪಟ್ಟು ತೀರ್ಮಾನಿಸಲ್ಪಡುತ್ತದೆ. ಆದರೆ ಆ ದಿನ ಸದರಿ ಮೇಲ್ಮನವಿಯು ಈ ವಿಧೇಯಕದ ನಿರೂಪಣೆಯೊಳಗೆ 'ಇತ್ಯರ್ಥದಲ್ಲಿರುವ ಮೇಲ್ಮನವಿ' ಯಲ್ಲದಿದ್ದರೆ, ಆಗ ಸದರಿ ಮೇಲ್ಮನವಿಯ ಮೇಲಣ ಅಧಿಕಾರ ವ್ಯಾಪ್ತಿಯು ಸಂಯುಕ್ತ ನ್ಯಾಯಾಲಯಕ್ಕೆ ವಿಸ್ತರಿಸುತ್ತದೆ. ಏಕೆಂದರೆ, ಸಂಯುಕ್ತ ನ್ಯಾಯಾಲಯವು ಅಂತಹ ಮೇಲ್ಮನವಿಯನ್ನು ಆಲಿಸಿ ತೀರ್ಮಾನಿಸುವ ಅಧಿಕಾರವನ್ನು ಪಡೆಯುತ್ತದೆ.

ಈ ವಿಧೇಯಕದ ೭ನೇ ಕಲಮು 'ಇತ್ಯರ್ಥದಲ್ಲಿರುವ ಮೇಲ್ಮನವಿ' ಎಂದರೇನೆಂಬುದನ್ನು ವಿವರಿಸುತ್ತದೆ. ಈಗ ಈ ಉದ್ದೇಶಕ್ಕಾಗಿ ಒಂದು ಕರಡು ಮತ್ತು ಸಿದ್ಧ ನಿಯಮವನ್ನು ಈ ವಿಧೇಯಕವು ಅಂಗೀಕರಿಸಿದೆ. ಆ ನಿಯಮವು ಹೀಗಿದೆ: ಮೇಲ್ಮನವಿಯ ಕಡತಗಳು ಉಚ್ಚ ನ್ಯಾಯಾಲಯದಿಂದ ಪ್ರೀವಿ ಕೌನ್ಸಿಲಿಗೆ

ಗೊತ್ತುಪಡಿಸಲಾದ ದಿನ ಅಥವಾ ಗೊತ್ತುಪಡಿಸಲಾದ ದಿನಕ್ಕಿಂತ ಮೊದಲೇ ರವಾನೆಯಾಗಿರದಿದ್ದರೆ, ಆಗ ಸದರಿ ಮೇಲ್ಮನವಿಯು ಇತ್ಯರ್ಥದಲ್ಲಿರುವ ಮೇಲ್ಮನವಿಯಾಗುತ್ತದೆ ಮತ್ತು ಪ್ರೀವಿ ಕೌನ್ಸಿಲ್ ಅದು ನೇರ ಮೇಲ್ಮನವಿಯಾಗಿದ್ದರೂ ಅಂತಹ ಮೇಲ್ಮನವಿಯನ್ನು ಆಲಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ.

ಇದಕ್ಕೆ ಬದಲಾಗಿ ಕಡತಗಳು ರವಾನೆಯಾಗದ ಸ್ಥಿತಿಯಲ್ಲಿ ಸದರಿ ಮೇಲ್ಮನವಿಯು ಇದ್ದರೆ, ಆಗ ಸದರಿ ಮೇಲ್ಮನವಿಯು ತನ್ನಷ್ಟಕ್ಕೆ ಸಂಯುಕ್ತ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಡುತ್ತದೆ ಮತ್ತು ಸಂಯುಕ್ತ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ಆಲಿಸುವ ಹಕ್ಕನ್ನು ಪಡೆಯುತ್ತದೆ.

ಮೇಲ್ಮನವಿಗಳು ಪ್ರೀವಿ ಕೌನ್ಸಿಲಿಗೆ ಎರಡು ರೀತಿಯಲ್ಲಿ ಸಲ್ಲಿಸಲ್ಪಡುತ್ತವೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಮು ೧೦೯ ಮತ್ತು ೧೧೦ರಡಿ ಸಲ್ಲಿಸಲ್ಪಡುತ್ತವೆ, ಅಂದರೆ ಅವನ್ನು ಅನುದಾನಿತ ಮೇಲ್ಮನವಿ ಅಥವಾ ಮನವಿದಾರನಿಗೆ ಮೇಲ್ಮನವಿಯ ಹಕ್ಕಿರುವ ಮೇಲ್ಮನವಿಗಳು ಎಂದು ಕರೆಯಲ್ಪಡುತ್ತವೆ. ಇದಕ್ಕೆ ಹೆಚ್ಚುವರಿಯಾಗಿ ಪ್ರೀವಿ ಕೌನ್ಸಿಲ್ ಕೂಡಾ ಮೇಲ್ಮನವಿಗೆ ವಿಶೇಷ ಅನುಮತಿಯನ್ನು ನೀಡುವ ಹಕ್ಕನ್ನು ಹೊಂದಿದೆ ಮತ್ತು ಆ ಮನವಿದಾರನು ಮೇಲ್ಮನವಿಯ ವಿಶೇಷ ಅನುಮತಿಯನ್ನು ಪಡೆದಾಗ ಅಂತಹ ಮೇಲ್ಮನವಿಗಳು ಕೂಡಾ ಪ್ರೀವಿ ಕೌನ್ಸಿಲಿಗೆ ಹೋಗುತ್ತವೆ. ಈ ವಿಧೇಯಕದ ೫ನೇ ಕಲಮಿನಲ್ಲಿ ಉಚ್ಚ ನ್ಯಾಯಾಲಯದಿಂದ ನೇರವಾಗಿ ಪ್ರೀವಿ ಕೌನ್ಸಿಲ್ ನೀಡಿದ ವಿಶೇಷ ಅನುಮತಿಯ ಮೇರೆ ಹೋಗುವ ಮೇಲ್ಮನವಿಗಳನ್ನೂ ಪರಿಗಣಿಸಲಾಗಿದೆ. ಅಲ್ಲಿ ಈ ಕೆಳಗಿನಂತೆ ಕಾಣಿಸಿದೆ:

> "ಈ ಕಾಯಿದೆಯು ಅನ್ವಯವಾಗುವ ತೀರ್ಪಿನಿಂದ ವಿಶೇಷ ಅನುಮತಿ ಕೋರಿ ಚಕ್ರವರ್ತಿಯ ಕೌನ್ಸಿಲಿಗೆ ಮಾಡುವ ಅರ್ಜಿಯು ಗೊತ್ತುಪಡಿಸಲಾದ ದಿನದ ನಿಕಟಪೂರ್ವದಲ್ಲಿ ವಿಲೆವಾರಿಯಾಗದೇ ಉಳಿದಿದ್ದಲ್ಲಿ ಅದು ಈ ಕಾಯಿದೆಯಿಂದಾಗಿ ಸಂಯುಕ್ತ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಡುತ್ತದೆ."

ಅದು ವಿಲೇವಾರಿಯಾಗಿದ್ದಲ್ಲಿ, ಅಂದರೆ, ಅದು ತಿರಸ್ಕರಿಲ್ಪಟ್ಟಿದ್ದರೆ, ಮುಂದಿನ ಪ್ರಶ್ನೆಯು ಉದ್ಭವಿಸುವುದಿಲ್ಲ. ಅದು ಸ್ವೀಕೃತವಾಗಿದ್ದಲ್ಲಿ ಆಗ ಪ್ರೀವಿ ಕೌನ್ಸಿಲ್ ಅದನ್ನು ಪರಿಗಣಿಸಲು ಶಕ್ತವಾಗುತ್ತದೆ. ಆದರೆ ಪ್ರೀವಿ ಕೌನ್ಸಿಲ್ ಯಾವುದೇ ಆದೇಶವನ್ನು ಮಾಡಿರದಿದ್ದಲ್ಲಿ, ಆಗ ಅಂತಹ ಮೇಲ್ಮನವಿಯು ಸಂಯುಕ್ತ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಟ್ಟಿದೆಯೆಂದು ತಿಳಿಯತಕ್ಕದ್ದು ಮತ್ತು ಸಂಯುಕ್ತ ನ್ಯಾಯಾಲಯವು ಆ ವಿಚಾರವನ್ನು ವಿಲೆವಾರಿಮಾಡಲು ಹಕ್ಕುಳ್ಳದ್ದಾಗಿರುತ್ತದೆ.

ಸದನಕ್ಕೆ ನಾನು ಈ ವಿಧೇಯಕವು ಮಾಡಬಯಸುವುದನ್ನು ಮತ್ತು ಮಾಡಬಯಸದ್ದನ್ನು ಖಚಿತವಾಗಿ ಹೇಳಲಿಚ್ಛಿಸುತ್ತೇನೆ. ಈ ವಿಧೇಯಕವು ಮಾಡುವುದನ್ನು ನಾನು ಹೇಳಿದ್ದೇನೆ. ಈ ವಿಧೇಯಕವು ಮಾಡದಿರುವುದನ್ನು ನಾನು ಸದನಕ್ಕೆ ಹೇಳಲಿದ್ದೇನೆ.

ಮೊದಲಾಗಿ, ಅದು ಕ್ರಿಮಿನಲ್ ವಿಚಾರಗಳಲ್ಲಿ ಪ್ರೀವಿ ಕೌನ್ಸಿಲಿಗೆ ಮೇಲ್ಮನವಿಗಳನ್ನು ರದ್ದುಗೊಳಿಸುವುದಿಲ್ಲ. ಉಚ್ಚ ನ್ಯಾಯಾಲಯದ ತೀರ್ಪುಗಳಿಂದ ಪ್ರೀವಿ ಕೌನ್ಸಿಲ್ ಕ್ರಿಮಿನಲ್ ಪ್ರಕರಣಗಳನ್ನು ಕೈಗೆತ್ತಿಕೊಳ್ಳಬಹುದಾಗಿದೆ. ಎರಡನೆಯದಾಗಿ, ಅದು ಉಚ್ಚನ್ಯಾಯಾಲಯಗಳಲ್ಲದ, ಅಂದರೆ, ಅಜ್ಮೀರ್–ಮೇವಾಡದ, ಅಥವಾ ಕೂರ್ಗ್‌ನ ನ್ಯಾಯಿಕ ಆಯುಕ್ತರ ನ್ಯಾಯಾಲಯಗಳಿಂದ ಬರುವ ಮೇಲ್ಮನವಿಗಳನ್ನು ರದ್ದುಪಡಿಸುವುದಿಲ್ಲ. ಮೂರನೆಯದಾಗಿ, ಸಂಯುಕ್ತ ನ್ಯಾಯಾಲಯದ ತೀರ್ಪುಗಳಿಂದ ಪ್ರೀವಿ ಕೌನ್ಸಿಲಿಗೆ ಇರುವ ಮೇಲ್ಮನವಿಗಳನ್ನು ರದ್ದುಗೊಳಿಸುವುದಿಲ್ಲ.

ಈ ಲೋಪಗಳನ್ನು ಏಕೆ ಈ ವಿಧೇಯಕದಲ್ಲಿ ಉಳಿಸಿಕೊಳ್ಳಲಾಗಿದೆ ಮತ್ತು ನಾವು ಈ ವಿಧೇಯಕದಲ್ಲಿ ಉಚ್ಚ ನ್ಯಾಯಾಲಯದಲ್ಲಿರುವ ಸಿವಿಲ್ ಅಥವಾ ಕ್ರಿಮಿನಲ್ ಪ್ರಕರಣಗಳನ್ನು ಉಚ್ಚ ನ್ಯಾಯಾಲಯದಿಂದ ಸಂಯುಕ್ತ ನ್ಯಾಯಾಲಯಕ್ಕೆ ಮತ್ತು ಸಂಯುಕ್ತ ನ್ಯಾಯಾಲಯದಿಂದ ಪ್ರೀವಿ ಕೌನ್ಸಿಲಿಗೆ ವರ್ಗಾಯಿಸುವ ಸ್ಥಿತಿಯಲ್ಲಿ ಏಕಿರುವುದಿಲ್ಲವೆಂದು ತಿಳಿಯಲು ಪ್ರಾಯಃ ಈ ಸದನವು ಇಚ್ಛಿಸುತ್ತದೆ. ಸದರಿ ಕಾರಣಗಳು ಆಧಿಪತ್ಯದ ಸಂಸತ್ತು ಅಂದರೆ, ಸಂವಿಧಾನ (ಶಾಸನ) ಸಭೆಯು ಒಳಗಾಗಿರುವ ಕೆಲವು ಮಿತಿಗಳಲ್ಲಿವೆ. ಸದನದ ಸದಸ್ಯರು ಮನಗಾಣುವಂತೆ ನಾವು ಸಂಯುಕ್ತ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ವಿಸ್ತರಿಸಲು ನಮಗೆ ಭಾರತ ಸರ್ಕಾರದ ಕಾಯಿದೆಯ ಕಲಮು ೨೦೬ರನ್ವಯ ದತ್ತವಾದ ಹಕ್ಕುಗಳನ್ನು ಬಳಸುತ್ತಿದ್ದೇವೆ. ಮಾನ್ಯ ಸದಸ್ಯರು ಕಲಮು ೨೦೬ನ್ನು ಗಮನಿಸಿದರೆ ಅದು ಈ ಸದನಕ್ಕೆ ಭಾರತ ಸರ್ಕಾರದ ಕಾಯಿದೆ, ೧೯೩೫ರ ಕಲಮು ೨೦೫ನ್ನು ತಿದ್ದುವ ಸಾಂವಿಧಾನಿಕ ಅಧಿಕಾರವನ್ನು ನೀಡಿದೆಯೆಂಬುದು ಕಂಡುಬರುತ್ತದೆ. ಕಲಮು ೨೦೬ ಹೀಗೆ ಹೇಳುತ್ತದೆ :

> "(೧) ಆಧಿಪತ್ಯ ಶಾಸನ ಸಭೆಯು ಕಾಯಿದೆಯ ಮುಖಾಂತರ ಕಾಯಿದೆಯಲ್ಲಿ ನಮೂದಿಸಿದ ಸಿವಿಲ್ ಪ್ರಕರಣಗಳಲ್ಲಿ ಮೇಲೆ ಹೇಳಿದ ಯಾವುದೇ ದೃಢೀಕರಣ ಪತ್ರವಿಲ್ಲದೆ ಉಚ್ಚ ನ್ಯಾಯಾಲಯದ ತೀರ್ಪು, ಡಿಕ್ರಿ ಅಥವ ಅಂತಿಮ ಆದೇಶದ ಮೇಲ್ಮನವಿಯು ಸಂಯುಕ್ತ ನ್ಯಾಯಾಲಯಕ್ಕೆ ಇರಬೇಕೆಂದು ಒದಗಿಸಬಹುದು.
> (೨) ಆಧಿಪತ್ಯ ಶಾಸನಸಭೆಯು ಈ ಹಿಂದಿನ ಉಪ–ಖಂಡದಲ್ಲಿ ಹೇಳಿದಂತಹ ಅವಕಾಶವನ್ನು ಒದಗಿಸಿದಲ್ಲಿ ಸದರಿ ಆಧಿಪತ್ಯ ಶಾಸನಸಭೆಯು ಕಾಯಿದೆಯ ಮುಖಾಂತರ ಸಿವಿಲ್ ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದಿಂದ ಚಕ್ರವರ್ತಿಯ ಕೌನ್ಸಿಲಿಗೆ ವಿಶೇಷ ಅನುಮತಿಯ ಮೂಲಕ ಇಲ್ಲವೇ ಅದಿಲ್ಲದೆ ನೇರ ಮೇಲ್ಮನವಿಯನ್ನು ಮಾಡಲು ಪೂರಕ ಅವಕಾಶವನ್ನು ಒದಗಿಸಬಹುದು."

(೩)ನೇ ಉಪಖಂಡವು ಗವರ್ನರ್ ಜನರಲ್ ಅವರ ಅನುಮತಿಯನ್ನು ಅವಶ್ಯವಾಗಿಸುತ್ತದೆ.

ಕಲಮು ೨೦೬ನ್ನು ಓದಿದ ಯಾರೇ ಆಗಲಿ ಈ ಶಾಸನಭೆಗೆ ತಿದ್ದುಪಡಿಯ ಮೂಲಕ ಸಂಯುಕ್ತ ನ್ಯಾಯಾಲಯದ ವ್ಯಾಪ್ತಿಯನ್ನು ವಿಸ್ತರಿಸಲು ಅಧಿಕಾರ ನೀಡಿದೆಯಾದರೂ ಅದು ಕೆಲವು ವಿವರಗಳಿಗಷ್ಟೇ ಸೀಮಿತವಾಗಿದೆ. ಅದು ಸಿವಿಲ್ ಪ್ರಕರಣಗಳಿಗಷ್ಟೇ ಸೀಮಿತವಾಗಿದೆ. ಆದ್ದರಿಂದ ಕ್ರಿಮಿನಲ್ ಪ್ರಕರಣಗಳಲ್ಲಿ ನೇರ ಮೇಲ್ಮನವಿಗಳನ್ನು ರದ್ದುಪಡಿಸಲು ಅವಕಾಶವನ್ನೊದಗಿಸಲು ಸಾಧ್ಯವಿಲ್ಲವಾಗಿದೆ. ಎರಡನೆಯದಾಗಿ, ಅದು ನೇರ ಮೇಲ್ಮನವಿಗಳಿಗೆ ಸಂಬಂಧಿಸಿದೆ, ಅಂದರೆ, ಉಚ್ಚ ನ್ಯಾಯಾಲಯಗಳಿಂದ ಪ್ರೀವಿ ಕೌನ್ಸಿಲಿಗೆ ಸಲ್ಲಿಸುವ ಮೇಲ್ಮನವಿಗಳಿಗೆ. ನಾವೇಕೆ ಸಂಯುಕ್ತ ನ್ಯಾಯಾಲಯದಿಂದ ಪ್ರೀವಿ ಕೌನ್ಸಿಲಿಗೆ ಇರುವ ಮೇಲ್ಮನವಿಗಳನ್ನು ರದ್ದುಪಡಿಸಲು ಅಶಕ್ತರೆಂದರೆ ಭಾರತ ಸರ್ಕಾರದ ಕಾಯಿದೆಯ ಕಲಮು ೨೦೮. ಕಲಮು ೨೦೮ ಹೀಗೆ ಹೇಳುತ್ತದೆ : (ಎ) ಚಕ್ರವರ್ತಿಯ ಕೌನ್ಸಿಲಿಗೆ ಸಂಯುಕ್ತ ನ್ಯಾಯಾಲಯದ ನಿರ್ಣಯದಿಂದ, ಮತ್ತು ಸಂಯುಕ್ತ ನ್ಯಾಯಾಲಯವು ತನ್ನ ಮೂಲ ಅಧಿಕಾರ ವ್ಯಾಪ್ತಿಯಲ್ಲಿ ಈ ಕಾಯಿದೆಯ ಅರ್ಥ ವಿವರಣೆಗೆ ಸಂಬಂಧಿಸಿದ ಯಾವುದೇ ವಿವಾದದ ತೀರ್ಪಿನಿಂದ ಮತ್ತು (ಬಿ) ಇತರ ಯಾವುದೇ ಪ್ರಕರಣದಲ್ಲಿ ಸಂಯುಕ್ತ ನ್ಯಾಯಾಲಯದ ಅಥವಾ ಚಕ್ರವರ್ತಿಯ ಕೌನ್ಸಿಲಿಗೆ ಅನುಮತಿಯ ಮೇರೆಗೆ. ನಾನು ಈ ಸದನಕ್ಕೆ ಹೇಳಲಿಚ್ಛಿಸುವುದೇನೆಂದರೆ ಪ್ರೀವಿ ಕೌನ್ಸಿಲಿಗೆ ಸಲ್ಲುವ ಎಲ್ಲಾ ಮೇಲ್ಮನವಿಗಳನ್ನು ರದ್ದುಗೊಳಿಸುವ ಇಚ್ಛೆಯಿದ್ದರೆ ಮತ್ತು ಸಂಯುಕ್ತ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ನಮಗೆ

ಇಷ್ಟವಿದ್ದಷ್ಟು ಪೂರ್ಣವಾಗಿ ವಿಸ್ತರಿಸುವುದಿದ್ದರೆ, ಅದಕ್ಕಾಗಿ ನಾವು ಸಂವಿಧಾನ ಸಭೆಯನ್ನು ವ್ಯವಸ್ಥೆಗೊಳಿಸಬೇಕಾಗಿತ್ತು ಮತ್ತು ಸಂವಿಧಾನ ಸಭೆಯನ್ನು ಒಂದು ವಿಧೇಯಕವನ್ನು ಅಂಗೀಕರಿಸಲು ಹೇಳುತ್ತಿದ್ದೆವು, ಮತ್ತು ೧೯೩೫ರ ಭಾರತ ಸರ್ಕಾರದ ಕಾಯಿದೆಯ ಮಿತಿಗಳ ಹೊರತಾಗಿಯೂ ಈ ಸಭೆಗೆ ಅದು ಸಾಧ್ಯವಿತ್ತು ಏಕೆಂದರೆ, ಸಂವಿಧಾನ ಸಭೆಯು ಒಂದು ಸಾರ್ವಭೌಮ ವ್ಯವಸ್ಥೆಯಾಗಿದ್ದು ಅದಕ್ಕೆ ೧೯೩೫ರ ಭಾರತ ಸರ್ಕಾರದ ಕಾಯಿದೆಯ ಮಿತಿಯ ಬಂಧನವಿಲ್ಲ. ಆಧಿಪತ್ಯದ ಶಾಸನಸಭೆಯೆಂದು ಕರೆಯಲ್ಪಡುವ ಈ ಶಾಸನ ಸಭೆಯ ಸ್ಥಿತಿಯೇ ಬೇರೆ. ಇದು ೧೯೩೫ರ ಭಾರತ ಸರ್ಕಾರದ ಕಾಯಿದೆಯ ಮಿತಿಯಲ್ಲೇ ಕಾರ್ಯನಿರ್ವಹಿಸುತ್ತದೆ ಮತ್ತು ಆದ್ದರಿಂದ ಅದು ಏನು ಮಾಡಿದರೂ ಅಂತಹ ಕಾಯಿದೆಗೆ ಅನುಮತಿ ನೀಡುವ ಆ ಕಾಯಿದೆಯ ಸಂಬಂಧಪಟ್ಟ ಅಂಶಗಳಿಗೆ ಪೂರಕವಾಗಿರಬೇಕು. ನಾನು ಹೇಳಿದಂತೆ, ಭಾರತ ಸರ್ಕಾರದ ಕಾಯಿದೆಯಲ್ಲಿ ಅನುಮತಿ ನೀಡುವ ಒಂದೇ ಕಲಮೆಂದರೆ ೨೦೬ನೆಯ ಕಲಮು ಮತ್ತು ನಾವು ಸಂಯುಕ್ತ ನ್ಯಾಯಾಲಯದ ವ್ಯಾಪ್ತಿಯನ್ನು ಎಷ್ಟು ಸಾಧ್ಯವೋ ಅಷ್ಟು ವಿಸ್ತರಿಸಲು ಈ ಕಲಮಿನ ಪೂರ್ಣ ಸ್ವಾತಂತ್ರ್ಯವನ್ನು ಬಳಸಿಕೊಂಡಿದ್ದೇವೆ. ಈ ವಿಧೇಯಕದ ದೋಷಗಳ ಬಗ್ಗೆ ಸದನದ ಯಾವ ಸದಸ್ಯರಿಗೂ ಚಿಂತೆಯಿರಬೇಕಾದ್ದಿಲ್ಲ ಏಕೆಂದರೆ ಈ ಕಾಯಿದೆಯು ಕೆಲವೇ ಸಮಯದವರೆಗೆ ಮಾತ್ರ ಊರ್ಜಿತದಲ್ಲಿರುತ್ತದೆ. ನಮ್ಮ ಸಂವಿಧಾನವು ರಚನೆಯಾಗಿ ಸಂವಿಧಾನ ಸಭೆಯಿಂದ ಅಂಗೀಕಾರವಾದೊಡನೆಯೇ ನಾವು ಸಂಯುಕ್ತ ನ್ಯಾಯಾಲಯದ ವ್ಯಾಪ್ತಿಗೆ ಬೇಕಾದಷ್ಟು ಅವಕಾಶಗಳನ್ನು ಒದಗಿಸಲು ಮತ್ತು ಪ್ರಿವಿ ಕೌನ್ಸಿಲಿಗೆ ಮೇಲ್ಮನವಿಯ ಅವಕಾಶಗಳನ್ನು ರದ್ದುಪಡಿಸಲು ಸಮರ್ಥರಾಗುತ್ತೇವೆ. ತತ್ಕಾಲಕ್ಕೆ ಈ ಸದನವು ಕಲಮು ೨೦೬ಕ್ಕೆ ಏನು ಮಾಡಲಾಗಿದೆಯೋ ಅದರಲ್ಲಿ ತೃಪ್ತರಾಗಬೇಕು. ಮಾನ್ಯರೆ, ನಾನು ಮಂಡಿಸುತ್ತಿದ್ದೇನೆ.

**ಸಭಾಧ್ಯಕ್ಷರು :** ನಿಲುವಳಿಯು ಮಂಡಿಸಲ್ಪಟ್ಟಿದೆ :

> "ಸಿವಿಲ್ ಪ್ರಕರಣಗಳಲ್ಲಿ ಸಂಯುಕ್ತ ನ್ಯಾಯಾಲಯದ ಮೇಲ್ಮನವಿ ವ್ಯಾಪ್ತಿಯನ್ನು ವಿಸ್ತರಿಸುವ ಅವಕಾಶವನ್ನು ನೀಡುವ ವಿಧೇಯಕವನ್ನು ಪರಿಗಣಿಸಬಹುದು."

*__ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್__ : ಮಾನ್ಯರೆ, ಈ ವಿಧೇಯಕಕ್ಕೆ ತಮ್ಮ ಸ್ಥೂಲವಾಗಿ ತೃಪ್ತಿಯನ್ನು ವ್ಯಕ್ತಪಡಿಸಿದ್ದಕ್ಕಾಗಿ ನಾನು ಈ ಸದನಕ್ಕೆ ಋಣಿಯಾಗಿದ್ದೇನೆ. ಆದ್ದರಿಂದ ನಾನು ಈ ಚರ್ಚೆಯಲ್ಲಿ ಭಾಗವಹಿಸಿದ ಕೆಲವು ಮಾನ್ಯ ಸದಸ್ಯರು ಎತ್ತಿದ ಆಕ್ಷೇಪಾಂಶಗಳನ್ನಷ್ಟೇ ಪರಿಗಣಿಸುತ್ತೇನೆ. ಟೀಕೆಯ ಮೊದಲ ಅಂಶವು ನಾನು ಪ್ರಿವಿ ಕೌನ್ಸಿಲಿಗಿದ್ದ ಎಲ್ಲಾ ಮೇಲ್ಮನವಿಗಳನ್ನು ರದ್ದುಪಡಿಸಿ ಸಂಯುಕ್ತ ನ್ಯಾಯಾಲಯಕ್ಕೆ ಪೂರ್ಣ ಅಧಿಕಾರವನ್ನು ನೀಡದ ಈ ಸ್ಥಿತಿಗೆ ಸಂಬಂಧಿಸದ್ದಾಗಿದೆ. ನಾನು ಈ ಶಾಸನಸಭೆ ಮತ್ತು ಸಂವಿಧಾನ ಸಭೆಗಳ ನಡುವೆ ಒಂದು ಕೃತಕ ವ್ಯತ್ಯಾಸವನ್ನು ಸೃಷ್ಟಿಸುತ್ತಿದ್ದೇನೆಂದು ಮತ್ತು ನಾನು ವಿನಾ ಕಾರಣ ಈ ಸದನದ ಅಧಿಕಾರಗಳನ್ನು ಮೊಟಕುಗೊಳಿಸುತ್ತಿದ್ದೇನೆಂದು ಹೇಳಲಾಯಿತು. ಈ ಟೀಕೆಯು ಸೌಜನ್ಯದಿಂದ ಹೇಳಲ್ಪಟ್ಟಿರುವುದಾದರೂ ಸತ್ಯದೂರಾಗಿದೆ. ಸಂವಿಧಾನ ಸಭೆಯಿಂದ ಪ್ರತ್ಯೇಕವಾದ ಈ ಸದನವು ಪೂರ್ಣ ಸ್ವತಂತ್ರವೆಂಬ ಅಥವಾ, ಸಂವಿಧಾನ ಸಭೆಯಷ್ಟು ಪೂರ್ಣವೆಂಬ ವಾದವನ್ನು

---

* ಪೂರ್ವೋಕ್ತ, ಸಂ. III; ೧೧ ಡಿಸೆಂಬರ್ ೧೯೪೭; ಪು. ೧೭೭೯–೨೨.

ನಾನು ಅಂಗೀಕರಿಸಲಾರೆನು.ಈ ಸದನದಲ್ಲಿ ಕುಳಿತಿರುವ ಸದಸ್ಯರೇ ಸಂವಿಧಾನ ಸಭೆಯಲ್ಲಿ ಕುಳಿತಿರುತ್ತಾರೆಂಬುದು ನಿಜವಾಗಿದ್ದು, ವ್ಯಕ್ತಿಶಃ ಅಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಆದರೆ ಈ ಎರಡೂ ಸಭೆಗಳ ಕರ್ತವ್ಯಗಳು ಭಿನ್ನವೆಂಬ ಬಗ್ಗೆ ನನಗೆ ಯಾವ ಸಂಶಯವೂ ಇಲ್ಲ. ಸಂವಿಧಾನ ಸಭೆಯ ಕರ್ತವ್ಯವು ಸಂವಿಧಾನವನ್ನು ರಚಿಸುವುದಾಗಿದೆ ಮತ್ತು ಸಂವಿಧಾನ ರಚನೆಯಲ್ಲಿ ತನ್ನ ಮತವಲ್ಲದೆ ಇನ್ನಾವುದಕ್ಕೂ ಅದು ಅಧೀನವಲ್ಲ. ಈ ಸದನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಇದು ೧೯೩೫ರ ಭಾರತ ಸರ್ಕಾರದ ಕಾಯಿದೆಗೆ ಅಧೀನವಾಗಿದೆ; ಅಂದರೆ ಈ ಸದನವು ಸಂವಿಧಾನಕ್ಕೆ ಅನುಸಾರವಾಗಿದೆ. ಎರಡೂ ರೀತಿಯ, ಅಂದರೆ ಸಾಮಾನ್ಯ ಶಾಸನಾತ್ಮಕ ಅಧಿಕಾರ ಮತ್ತು ಸಾಂವಿಧಾನಿಕ ಅಧಿಕಾರವನ್ನು ಒಳಗೊಂಡ ಬ್ರಿಟಿಷ್ ಸಂಸತ್ತನ್ನು ಹೊರತುಪಡಿಸಿದರೆ ಲಿಖಿತ ಸಂವಿಧಾನವಿದ್ದು ಒಂದು ಗೊತ್ತಾದ ಶಾಸನವನ್ನು ರಚಿಸಿದ ಸಂವಿಧಾನವನ್ನು ಮೀರಿ ಹೋಗತಕ್ಕ ಶಾಸನಸಭೆಯು ನನ್ನ ಅರಿವಿಗೆ ಬಂದಿಲ್ಲ. ಆದ್ದರಿಂದ ಈ ವಿಧೇಯಕದ ಉದ್ದೇಶಗಳನ್ನು ಪೂರೈಸುವ ಸಂದರ್ಭದಲ್ಲಿ ಈ ಶಾಸನಸಭೆಯ ಮೇಲೆ ನಾವೇ ಸ್ವೀಕರಿಸಿದಂತಹ ೧೯೩೫ರ ಭಾರತ ಸರ್ಕಾರದ ಕಾಯಿದೆ, ಮಿತಿಗಳಿಗೆ ನಾವು ಬದ್ಧರಾಗಿರಬೇಕು ಎಂದು ನಾನು ಹೇಳುವಾಗ ನಾನು ಒಂದು ಸಮರ್ಥ ಮತ್ತು ಸ್ಥಿರ ನೆಲೆಯಲ್ಲಿದ್ದೇನೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

ನಾನೀಗ ನನ್ನ ಮಾನ್ಯ ಮಿತ್ರ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ಟೀಕಾ ಅಭಿವ್ಯಕ್ತಿಗೆ ಗಮನಹರಿಸುತ್ತೇನೆ. ಅವರ ತಿದ್ದುಪಡಿಯ ಬಗ್ಗೆ ನಾನು ಒಪ್ಪಲು ಸಾಧ್ಯವಿಲ್ಲವೆಂದು ಹೇಳಲು ವಿಷಾದಿಸುತ್ತೇನೆಂದು ಹೇಳಲು ಬಯಸುವುದಿಲ್ಲ. ನಾನು ಹೇಳಲು ಇಷ್ಟಪಡುವುದೇನೆಂದರೆ ವಸ್ತುಸ್ಥಿತಿಯು ನಾನು ಓದಿದಂತೆ ಆ ತಿದ್ದುಪಡಿಯು ಪ್ರಾಯಃ ಅನಗತ್ಯ, ಮತ್ತು ನಾನು ಈ ನಿಲುವನ್ನೇಕೆ ತಳೆದಿದ್ದೇನೆಂದು ಅವರಿಗೆ ವಿವರಿಸುತ್ತೇನೆ. ತಿದ್ದುಪಡಿಯ ಪರವಾಗಿ ಅವರು ಮುಂದಿಟ್ಟ ಆಧಾರವೇನೆಂದರೆ ೧೯೪೦ರಲ್ಲಿ ಪ್ರೀವಿ ಕೌನ್ಸಿಲ್ ನಿರ್ಧರಿಸಿದ ಒಂದು ಪ್ರಕರಣದಲ್ಲಿ (ಪಂಜಾಬ್ ಕೋಓಪರೇಟಿವ್ ಬ್ಯಾಂಕ್ –ವರ್ಸಸ್ – ಕಮಿಶನರ್ ಆಫ್ ಇನಕಮ್‌ಟ್ಯಾಕ್ಸ್ ನಲ್ಲಿ ವರದಿಯಾದಂತೆ) ಅವರ ಪ್ರಕಾರ, ಪ್ರೀವಿಕೌನ್ಸಿಲ್ ಸಂವಿಧಾನದ ಪರಿಗಣನೆಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯವು ಯಾವುದೇ ಧೃಡೀಕರಣ ಪತ್ರವನ್ನು ನೀಡಿಲ್ಲದ್ದರಿಂದ ಮೇಲ್ಮನವಿಯನ್ನು ಅವರು ಪರಿಗಣಿಸುವಂತಿಲ್ಲ; ಆದ್ದರಿಂದ ಉಚ್ಚ ನ್ಯಾಯಾಲಯದ ದೃಢೀಕರಣ ಪತ್ರಕ್ಕಾಗಿ ತಾವು ಪ್ರಕರಣವನ್ನು ಹಿಂದಕ್ಕೆ ಕಳುಹಿಸುವುದಾಗಿ ಪ್ರೀವಿ ಕೌನ್ಸಿಲ್ ಹೇಳಿತು. ಅವರ ವಾದವೆಂದರೆ ಈ ಪ್ರಕರಣದ ಪ್ರೀವಿ ಕೌನ್ಸಿಲಿನ ತೀರ್ಪನ್ನು ಸಂಯುಕ್ತ ನ್ಯಾಯಾಲಯವು ತನಗೆ ಅನ್ವಯವಾಗುವುದೆಂದು ಸ್ವೀಕರಿಸಬೇಕು; ಮತ್ತು ಆದ್ದರಿಂದ ಎಲ್ಲಿ ದೃಢೀಕರಣ ಪತ್ರವಿಲ್ಲವೋ ಮತ್ತು ಪ್ರಕರಣವು ಪ್ರೀವಿ ಕೌನ್ಸಿಲಿನ ಮುಂದೆ ಬಂದಿತೋ– ಮತ್ತು ವಾಸ್ತವವಾಗಿ ಸಂವಿಧಾನಕ್ಕೆ ಸಂಬಂಧಿಸಿದ ಒಂದು ಪ್ರಶ್ನೆಯು ಉದ್ಭವವಾಯಿತೆಂದು ಕಂಡುಬಂದಾಗ– ಪ್ರೀವಿಕೌನ್ಸಿಲ್ ಆ ಮೇಲ್ಮನವಿಯನ್ನು ವಿಲೆ ಮಾಡಲು ತಾನು ಅಶಕ್ತವಾಗಿದ್ದೇನೆಂದು ಕಂಡುಕೊಳ್ಳುತ್ತದೆ. ಇದು ಅವರ ವಾದದ ಸಾರವೆಂದು ನಾನಂದುಕೊಂಡಿದ್ದೇನೆ. ಈಗ ನಾನು ಸೂಚಿಸಬಯಸುವುದೇನೆಂದರೆ ಪ್ರೀವಿ ಕೌನ್ಸಿಲಿನ ತೀರ್ಪನ್ನು ಅಯ್ಯರ್ ಅವರು ಅದು ಹೇಳುವುದಕ್ಕಿಂತ ಸ್ವಲ್ಪ ಹೆಚ್ಚೇ ಓದಿದರೆಂದು ನನಗನ್ನಿಸುತ್ತದೆ. ನಾನು ಆ ತೀರ್ಪಿನ ಕೆಲವು ಸಾಲುಗಳನ್ನು ಓದುತ್ತೇನೆ. ಕಲಮು ೨೦೫ರ ಪರಿಗಣನೆಯಲ್ಲಿ ಉದ್ಭವವಾಗುವುದೆಂದು ಅವರು ಹೇಳುವ ಮೂರು ಸಾಧ್ಯತೆಗಳನ್ನು ಅವರು ನೀಡಿದ್ದರೆ. ನಮ್ಮ ಉದ್ದೇಶಕ್ಕೆ ಎರಡನೆಯ ಸಾಧ್ಯತೆಯಷ್ಟೇ ಪ್ರಸ್ತುತವಾಗುತ್ತದೆ:

ಪ್ರಮಾಣಪತ್ರವು ಇಲ್ಲದಿರುವಾಗ, ಈ ಪ್ರಕರಣವು ಉಚ್ಚನ್ಯಾಯಾಲಯದ ವ್ಯಾಪ್ತಿಗೆ

> ಬರುತ್ತವೆಂದೂ, ಅಂತಹ ಪ್ರಮಾಣ ಪತ್ರವನ್ನು ಸದರಿ ಉಚ್ಚನ್ಯಾಯಾಲಯವು ನೀಡಬಹುದಾಗಿತ್ತು, ಅಥವಾ ನೀಡಲು ನಿರಾಕರಿಸಬಹುದಾಗಿತ್ತು ಎಂಬುದು ಮಂಡಲಿಗೆ ತೋರಿದರೆ, ಸದರಿ ಉಚ್ಚನ್ಯಾಯಾಲಯವು ಈ ಎರಡು ರೀತಿಗಳಲ್ಲಿ ಯಾವುದಾದರೂ ಒಂದನ್ನು ಅನುಸರಿಸುವವರೆಗೆ, ಮಂಡಲಿಯು ಪ್ರಕರಣದ ಬಗೆಗೆ ವಿಚಾರಿಸಲು ನಿರಾಕರಿಸಬಹುದು.

ಪ್ರೀವಿ ಕೌನ್ಸಿಲ್ ಹೇಳಿದ್ದು ಇದನ್ನು. ಆದ್ದರಿಂದ, ಈಗ ನನ್ನ ಅರಿಕೆಯೆಂದರೆ ಈ ವಿಚಾರವು ಈ ವಿಧೇಯಕದ ಕರಡನ್ನು ತಯಾರಿಸುವಾಗ ಇಲಾಖೆಯು ವಾಸ್ತವವಾಗಿ ವಿಚಾರಮಾಡಿದೆ, ಮತ್ತು ಇಂತಹ ಪ್ರಕರಣದಲ್ಲಿ ತನಗೆ ಅಧಿಕಾರವ್ಯಾಪ್ತಿಯಿಲ್ಲವೆಂದು ಅವರು ತಮ್ಮ ಅಭಿಪ್ರಾಯದಲ್ಲಿ ಹೇಳಿಲ್ಲವೆಂದು ಭಾವಿಸಲಾಯಿತು. ಅವರು ಮಾಡಿದ್ದೆಂದರೆ ದೃಢೀಕರಣಪತ್ರವಿಲ್ಲದೆ ಬಂದ ಪ್ರಕರಣದಲ್ಲಿ ತಾವು ನೇರ ವ್ಯವಹರಿಸುವುದಿಲ್ಲ ಮತ್ತು ಅದನ್ನು ಉಚ್ಚ ನ್ಯಾಯಾಲಯಕ್ಕೆ ಮರಳಿಸುವರು ಎಂಬ ವಿವೇಕ –ಇದರ ಹೊರತು ತಮಗೆ ಅಧಿಕಾರವಿಲ್ಲವೆಂದಲ್ಲ. ಆದ್ದರಿಂದ ನಮ್ಮ ವಿಧೇಯಕದಡಿ ಸಂಯುಕ್ತ ನ್ಯಾಯಾಲಯವು ಪ್ರೀವಿ ಕೌನ್ಸಿಲಿನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವಾಗ ಅದಕ್ಕೆ ಅಧಿಕಾರ ವ್ಯಾಪ್ತಿಯಿರುವುದಿಲ್ಲವೆಂದಲ್ಲ. ಏಕೆಂದರೆ, ಪ್ರೀವಿ ಕೌನ್ಸಿಲ್ ಅಂತಹ ನಿಯಮವನ್ನು ಮಾಡಿಯೇ ಇಲ್ಲ.

ನನ್ನ ಎರಡನೆಯ ಅರಿಕೆಯೆಂದರೆ ಪ್ರೀವಿ ಕೌನ್ಸಿಲಿನ ನಿಲುವು ಅಧಿಕಾರವ್ಯಾಪ್ತಿಯ ಮೂಲಕ್ಕೆ ಹೋಗುತ್ತದೆಯೆಂದು ಊಹಿಸಿದರೂ ಸಂಯುಕ್ತ ನ್ಯಾಯಾಲಯವು ನಾವು ಅದಕ್ಕೆ ನೀಡುವ ಈ ಹೊಸ ಅಧಿಕಾರ ವ್ಯಾಪ್ತಿಯಲ್ಲಿ ಪ್ರೀವಿ ಕೌನ್ಸಿಲಿನ ಅಭಿಪ್ರಾಯವನ್ನು ಸ್ವೀಕರಿಸುತ್ತದೆಂದು ಊಹಿಸುವ ಅಗತ್ಯವಿದೆಯೇ? ಸಂಯುಕ್ತ ನ್ಯಾಯಾಲಯಕ್ಕೆ ತನ್ನದೇ ಆದ ಅರ್ಥ ವಿವರಣೆಗಳನ್ನು ನೀಡುವ ಸ್ವಾತಂತ್ರ್ಯವಿದೆ. ದೃಢೀಕರಣಪತ್ರವಿಲ್ಲದಿದ್ದರೂ ತಾವು ಆ ಪ್ರಶ್ನೆಯನ್ನು ಪರಿಗಣಿಸಿ ನಿರ್ಧರಿಸುತ್ತೇವೆಂದು ಹೇಳಬಹುದು.

ಮೂರನೆಯದಾಗಿ, ಪ್ರೀವಿ ಕೌನ್ಸಿಲಿಗೆ ವಿಶೇಷ ಅನುಮತಿಯನ್ನು ನೀಡುವ ಅಧಿಕಾರವಿದೆ ಮತ್ತು ಅವರು ವಿಶೇಷ ಅನುಮತಿಯನ್ನು ನೀಡಿ ಈ ತೊಡಕನ್ನು ನಿವಾರಿಸಬಹುದು. ನಾನೀಗ ಮಾಡಲು ಪ್ರಯತ್ನಿಸುವುದೇನೆಂದರೆ ನನ್ನ ಮಾನ್ಯ ಮಿತ್ರ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ತಮ್ಮ ತಿದ್ದುಪಡಿಯ ಮೂಲಕ ಅಳವಡಿಸಲು ಪ್ರಸ್ತಾವಿಸಿದ ಅಂಶವನ್ನು ಅಳವಡಿಸಿಲ್ಲವೆಂಬುದನ್ನು ವಿವರಿಸುವುದು. ಆದರೆ ಈ ಸದನದ ಖ್ಯಾತ ನ್ಯಾಯವಾದಿಗಳು ಈ ಪ್ರಶ್ನೆಯನ್ನು ಸಂಶಯದಲ್ಲಿ ಬಿಡಬಾರದೆಂದು ಭಾವಿಸುವುದಾದರೆ, ಮತ್ತು ಅವರನ್ನು ನನ್ನ ಮಿತ್ರ ಬಕ್ಷಿ ತೇಕ್ ಚಂದ್ ಅವರು ಬೆಂಬಲಿಸುವುದಾದರೆ, ಅವರು ಈ ತಿದ್ದುಪಡಿಯು ವಿಧೇಯಕದಲ್ಲಿರಬೇಕೆಂದು ಒತ್ತಾಯಿಸಿದರೆ ನಾನು ಸ್ವತಃ ಆ ತಿದ್ದುಪಡಿಗೆ ಯಾವ ಆಕ್ಷೇಪವನ್ನೂ ಎತ್ತುವುದಿಲ್ಲ.

ನಂತರ ಅಜ್ಮೀರ್–ಮೇವಾರ ಮತ್ತು ಕೂರ್ಗ್‌ನ ನ್ಯಾಯಿಕ ಆಯುಕ್ತರ ನ್ಯಾಯಾಲಯದ ಕುರಿತು ಪ್ರಶ್ನೆಯೆದ್ದಿತು. ನಾವು ಉಚ್ಚನ್ಯಾಯಾಲಯದಿಂದ ಪ್ರೀವಿ ಕೌನ್ಸಿಲಿಗೆ ಇರುವ ನೇರ ಮೇಲ್ಮನವಿಗಳನ್ನು ರದ್ದುಪಡಿಸುವುದು ಮತ್ತು ನ್ಯಾಯಿಕ ಆಯುಕ್ತರಿಂದ ಮೇಲ್ಮನವಿಗಳನ್ನು ಸಂಯುಕ್ತ ನ್ಯಾಯಾಲಯದ ಹಸ್ತಕ್ಷೇಪವಿಲ್ಲದೆ ಪ್ರೀವಿ ಕೌನ್ಸಿಲಿಗೆ ಒದಗಿಸುವುದು ಒಂದು ವಿರೋಧಾಭಾಸವಾಗುವುದೆಂಬುದು ಸತ್ಯ. ಈ ವಿರೋಧಾಭಾಸವು ಪ್ರತ್ಯಕ್ಷವಾಗಿದ್ದು ಯಾರೂ ಅದನ್ನು ನಿರಾಕರಿಸುವಂತಿಲ್ಲ. ಆದರೆ ಪ್ರಶ್ನೆ ಇದು: ನಾವು ನ್ಯಾಯಿಕ ಆಯುಕ್ತರ ನ್ಯಾಯಾಲಯಗಳನ್ನು ಉಚ್ಚ ನ್ಯಾಯಾಲಯಗಳೆಂದು ಘೋಷಿಸುವವರೆಗೆ ಈ ವಿಧೇಯಕವನ್ನು ಅವರಿಗೆ ಅನ್ವಯಿಸಲು ಸಾಧ್ಯವಿಲ್ಲ. ಈಗ ನನಗೆ ಕೇಳಿಬಂದಂತೆ ನ್ಯಾಯಿಕ ಆಯುಕ್ತರ

ನ್ಯಾಯಾಲಯಗಳನ್ನು ಉಚ್ಚ ನ್ಯಾಯಾಲಯಗಳೆಂದು ಘೋಷಿಸುವ ಪ್ರಶ್ನೆಯು ಕೆಲವು ಆಡಳಿತಾತ್ಮಕ ಸಮಸ್ಯೆಗಳನ್ನೊಳಗೊಂಡಿದೆ. ಉದಾಹರಣೆಗೆ, ಉಚ್ಚ ನ್ಯಾಯಾಲಯಗಳಿಗೆ ಸಂಬಂಧಿಸಿದ ಭಾರತ ಸರ್ಕಾರದ ಕಾಯಿದೆಯ ಎಲ್ಲಾ ಅಂಶಗಳನ್ನು ನ್ಯಾಯಿಕ ಆಯುಕ್ತರಿಗೆ ಅವರ ನ್ಯಾಯಾಲಯಗಳು ಉಚ್ಚ ನ್ಯಾಯಾಲಯಗಳಾಗುವ ಮೊದಲು ಅನ್ವಯಿಸಬೇಕು. ಅದು ಕೆಲವು ಗೊಂದಲಗಳನ್ನು ಸೃಷ್ಟಿಸಬಹುದು ಎಂದು ನನಗನ್ನಿಸಿದೆ ಮತ್ತು ಈ ಕಾಯಿದೆಯ ಅಂಶಗಳನ್ನು ನ್ಯಾಯಿಕ ಆಯುಕ್ತರಿಗೆ ವಿಸ್ತರಿಸುವುದು ಸಾಧುವೆಂದು ನಾವು ಯೋಚಿಸದ್ದಕ್ಕೆ ಇದು ಮುಖ್ಯ ಕಾರಣವಾಗಿದೆ. ಹೇಗಿದ್ದರೂ, ನಾನು ಹೇಳಿದಂತೆ, ಈ ವಿಧೇಯಕವು ತತ್ಕಾಲಕ್ಕೆ ಮಾತ್ರ ಇರುವುದಾಗಿದೆ. ಇದು ಎರಡು ಅಥವಾ ಮೂರು ತಿಂಗಳುಗಳಿಗಿಂತ ಹೆಚ್ಚು ಕಾಲ ಊರ್ಜಿತವಿರಲಿಕ್ಕಿಲ್ಲ, ಮತ್ತು ಈ ಎರಡು ಅಥವಾ ಮೂರು ತಿಂಗಳುಗಳಲ್ಲಿ ನ್ಯಾಯಿಕ ಆಯುಕ್ತರ ನ್ಯಾಯಾಲಯಗಳಿಂದ ಪ್ರೀವಿ ಕೌನ್ಸಿಲಿಗೆ ಭಾರೀ ಪ್ರಮಾಣದ ಮೇಲ್ಮನವಿಗಳು ಸಲ್ಲಿಕೆಯಾಗಲಾರವು ಎಂದು ನಾನು ನಂಬುತ್ತೇನೆ.

ಆದ್ದರಿಂದ, ಆಡಳಿತಾತ್ಮಕ ಪರಿಗಣನೆಗಳ ಮೂಲಕ ಉದ್ಭವವಾಗುವ ತೊಡಕುಗಳನ್ನು ಎದುರಿಸುವ ಬದಲು, ಈ ವಿರೋಧಾಭಾಸಗಳನ್ನು ಒಳಗೊಂಡ ಈ ಸ್ಥಿತಿಯನ್ನು ಇರಗೊಡುವುದು ಈ ಸದನಕ್ಕೆ ಹಿತಕಾರಿಯಾದೀತೆಂದು ನಾನು ಅರಿಕೆ ಮಾಡುತ್ತೇನೆ.

ಕ್ರಿಮಿನಲ್ ಮೇಲ್ಮನವಿಗಳ ಪ್ರಶ್ನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಆ ವಿಚಾರವು ನನಗಿಂತ ಮೊದಲು ಮಾತನಾಡಿದ ನನ್ನ ಮಿತ್ರರಿಂದ ಸಾಕಷ್ಟು ವಿವೇಚಿಸಲ್ಪಟ್ಟಿದೆ ಮತ್ತು ಆದ್ದರಿಂದ ಆ ವಿಚಾರವನ್ನು ನಾನು ಮುಟ್ಟುವ ಅಗತ್ಯವಿದೆಯೆಂದು ಭಾವಿಸುವುದಿಲ್ಲ.

**ಸಭಾಧ್ಯಕ್ಷರು:** ನನಗೆ ಈ ತಿದ್ದುಪಡಿಯ ಕುರಿತು ಏನು ಅನ್ನಿಸುತ್ತಿತ್ತೆಂದು ನಾನು ಹೇಳಬಹುದು. ಮಾನ್ಯ ಕಾನೂನು ಮಂತ್ರಿಗಳು ಅದನ್ನು ಅಂಗೀಕರಿಸಲು ಮನಸ್ಸು ಮಾಡಿದರೆ, ಈ ತಿದ್ದುಪಡಿಯು "ಭಾರತ ಸರ್ಕಾರದ ಕಾಯಿದೆಯ ಕಲಮು ೨೦೫ರಲ್ಲಿರುವ ಯಾವತ್ತೂ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ" ಎಂಬ ಪದಗಳನ್ನು ಉಪಯೋಗಿಸುವುದರಿಂದ ಈ ಸದನದ ಅರ್ಹತೆಯನ್ನು ಕುರಿತು ಆಕ್ಷೇಪವು ಏಳಲಾರದೇ?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಅದೂ ಸರಿಯೆ.

**ಸಭಾಧ್ಯಕ್ಷರು :** ಹಾಗಾದರೆ ಅದನ್ನೂ ಪರಿಗಣಿಸಬೇಕು. ಸದನವು ಈಗ ವಿರಮಿಸುತ್ತದೆ ಮತ್ತು ವಿರಾಮದ ಅವಧಿಯಲ್ಲಿ ಕಾನೂನು ಸಚಿವರು ಈ ವಿಚಾರವನ್ನು ಪರಿಗಣಿಸಬಹುದು.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಸರಿ, ನಾನು ಅದನ್ನು ಗಮನಿಸುತ್ತೇನೆ.

*ಸದನವನ್ನು ಎರಡುವರೆಯವರೆಗೆ ಊಟಕ್ಕಾಗಿ ಮುಂದಕ್ಕೆ ಹಾಕಲಾಯಿತು.*

*ಸದನವು ಊಟದ ನಂತರ ಎರಡುವರೆ ಗಂಟೆಗೆ ಪುನಃ ಸೇರಿತು. ಸಭಾಧ್ಯಕ್ಷರು (ಮಾನ್ಯ ಜಿ.ವಿ.ಮಾವಲಂಕರ್) ಅಧ್ಯಕ್ಷಪೀಠದಲ್ಲಿದ್ದರು.*

**ಸಭಾಧ್ಯಕ್ಷರು:** ವಿಷಯವೆಂದರೆ :

> "ಸಿವಿಲ್ ಪ್ರಕರಣಗಳಲ್ಲಿ ಸಂಯುಕ್ತ ನ್ಯಾಯಾಲಯದ ಮೇಲ್ಮನವಿ ವ್ಯಾಪ್ತಿಯನ್ನು ವಿಸ್ತರಿಸುವ ಅವಕಾಶವನ್ನು ನೀಡುವ ವಿಧೇಯಕವನ್ನು ಪರಿಗಣಿಸಬಹುದು."

ನಿಲುವಳಿಯು ಅಂಗೀಕಾರವಾಯಿತು.

ವಿಧೇಯಕಕ್ಕೆ ೨ನೇ ಖಂಡವನ್ನು ಸೇರಿಸಲಾಯಿತು.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಮಾನ್ಯರೆ, ೩ನೇ ಖಂಡದ ಬಗ್ಗೆ ನಾನು ಒಂದು ತಿದ್ದುಪಡಿಯನ್ನು ಮಂಡಿಸಲು ಇಷ್ಟಪಡುತ್ತೇನೆ. ನಾನು ಮಂಡಿಸುವುದೇನೆಂದರೆ—

"ಖಂಡ ೩ರಲ್ಲಿ–

(೧) ಉಪಖಂಡ (ಎ) (೧೧)ರ ಅಂತ್ಯದಲ್ಲಿರುವ 'ಮತ್ತು' ಎಂಬ ಪದವನ್ನು ಕೈಬಿಡುವುದು;

(೨) ಉಪಖಂಡ (ಬಿ)ಯಾಗಿ ಈ ಕೆಳಗಿನವುಗಳನ್ನು ಸೇರಿಸುವುದು :

'(ಬಿ) ಸಂಯುಕ್ತ ನ್ಯಾಯಾಲಯಕ್ಕೆ ಮೇಲೆ ಹೇಳಿದ ಯಾವುದೇ ಮೇಲ್ಮನವಿಯಲ್ಲಿ, ೧೯೩೫ರ ಭಾರತ ಸರ್ಕಾರದ ಕಾಯಿದೆ, ಉಪ–ಕಲಮು (೧) ರಲ್ಲಿ ಕಾಣಿಸಲಾದ ರೀತಿಯ ಪ್ರಶ್ನೆಯನ್ನು ಪರಿಗಣಿಸುವ ಅರ್ಹತೆಯಿರತಕ್ಕದ್ದು; ಮತ್ತು

(೩) ಈಗಿರುವ ಉಪ–ಖಂಡ (ಬಿ)ಯನ್ನು ಉಪಖಂಡ (ಸಿ) ಯೆಂದು ಮರುಕ್ರಮಾಂಕದಲ್ಲಿಡುವುದು."

**ಸಭಾಧ್ಯಕ್ಷರು :** ಇದು ಒಪ್ಪಿದ ತಿದ್ದುಪಡಿಯೆಂದು ನಾನು ಭಾವಿಸುತ್ತೇನೆ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ :** ಹೌದು ಸ್ವಾಮಿ.

**ಸಭಾಧ್ಯಕ್ಷರು :** ತಿದ್ದುಪಡಿಯನ್ನು ಮಂಡಿಸಲಾಗಿದೆ.

" ಖಂಡ ೩ರಲ್ಲಿ–

(೪) ಉಪಖಂಡ (ಎ) (೧೧)ರ ಅಂತ್ಯದಲ್ಲಿರುವ 'ಮತ್ತು' ಎಂಬ ಪದವನ್ನು ಕೈಬಿಡುವುದು;

(೫) ಉಪಖಂಡ (ಬಿ)ಯಾಗಿ ಈ ಕೆಳಗಿನವುಗಳನ್ನು ಸೇರಿಸುವುದು :

'(ಬಿ) ಸಂಯುಕ್ತ ನ್ಯಾಯಾಲಯಕ್ಕೆ ಮೇಲೆ ಹೇಳಿದ ಯಾವುದೇ ಮೇಲ್ಮನವಿಯಲ್ಲಿ, ೧೯೩೫ರ ಭಾರತ ಸರ್ಕಾರದ ಕಾಯಿದೆಯ ಉಪ–ಕಲಮು (೧) ರಲ್ಲಿ ಕಾಣಿಸಲಾದ ರೀತಿಯ ಪ್ರಶ್ನೆಯನ್ನು ಪರಿಗಣಿಸುವ ಅರ್ಹತೆಯಿರತಕ್ಕದ್ದು; ಮತ್ತು

(೬) ಈಗಿರುವ ಉಪ–ಖಂಡ (ಬಿ)ಯನ್ನು ಉಪಖಂಡ (ಸಿ) ಯೆಂದು ಮರುಕ್ರಮಾಂಕದಲ್ಲಿಡುವುದು."

***ಸಭಾಧ್ಯಕ್ಷರು :** ತಿದ್ದುಪಡಿಯನ್ನು ಮಂಡಿಸಲಾಗಿದೆ :

"೫ನೇ ಖಂಡದ ನಂತರ, ಕೆಳಕಂಡ ಹೊಸ ಖಂಡವನ್ನು ಸೇರಿಸಲಾಗುವುದು,

---

* ಪೂರ್ವೋಕ್ತ, ಸಂ. II; ೧೧ ಡಿಸೆಂಬರ್ ೧೯೪೭; ಪು. ೧೭೨೫.
ಟಿ. ೪೧೯೩–೩ಎ.

ಅಂದರೆ,

'೫ಎ. ಗೊತ್ತುಪಡಿಸಲಾದ ದಿನದ ನಂತರ, ಬ್ರಿಟಿಷ್ ಸರಕಾರದ ಕೌನ್ಸಿಲಿನ ಮುಂದೆ ಇತ್ಯರ್ಥಕ್ಕೆ ಬಾಕಿಯಿರುವ ಮೇಲ್ಮನವಿಯ ಮನವಿದಾರನು ಆ ದಿನಕ್ಕೆ ಮೊದಲು, ಸಂಯುಕ್ತ ನ್ಯಾಯಾಲಯಕ್ಕೆ ಗೊತ್ತುಪಡಿಸಿದ ದಿನದ ನಂತರ ಸಂಯುಕ್ತ ನ್ಯಾಯಾಲಯಕ್ಕೆ ದಾಖಲು ಮಾಡಿದ್ದರೆ ಅದನ್ನು ಪರಿಗಣಿಸಲು ಈ ಕಾಯಿದೆಯನ್ವಯ ಅಧಿಕಾರವ್ಯಾಪ್ತಿಯಿದ್ದರೆ, ಮೇಲ್ಮನವಿಯನ್ನು ಅದರ ಕಡತಗಳನ್ನು ತರಿಸಿಕೊಳ್ಳಲು ಮನವಿ ಮಾಡಿಕೊಳ್ಳಬಹುದು; ಮತ್ತು ಸಂಯುಕ್ತ ನ್ಯಾಯಾಲಯವು ಮೇಲ್ಮನವಿಯ ಇನ್ನೊಂದು ಮನವಿದಾರನಿಗೆ ತಿಳಿವಳಿಕೆ ನೀಡಿದ ನಂತರ ಆ ಮೇಲ್ಮನವಿಯನ್ನು ತನಗೆ ಸರಿಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ತನ್ನ ಕಡತಗಳಿಗೆ ತರಿಸಿಕೊಳ್ಳಬಹುದು."

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲಾರೆ. ನನ್ನ ಮಾನ್ಯ ಮಿತ್ರರು ಇತ್ಯರ್ಥಕ್ಕೆ ಬಾಕಿಯಿರುವ ಮೇಲ್ಮನವಿಯನ್ನು ನಿರೂಪಿಸಿಲ್ಲ. ವಿಧೇಯಕವು ಇತ್ಯರ್ಥಕ್ಕೆ ಬಾಕಿಯಿರುವ ಮೇಲ್ಮನವಿಯನ್ನು ನಿರೂಪಿಸುತ್ತದೆ. ಯಾವ ಮೇಲ್ಮನವಿಯಲ್ಲಿ ಕಡತಗಳು ರವಾನೆಯಾಗಿವೆಯೋ ಅದು ವಿಧೇಯಕದಡಿ ಇತ್ಯರ್ಥಕ್ಕೆ ಬಾಕಿಯಿರುವ ಮೇಲ್ಮನವಿಯೆನ್ನಿಸಿಕೊಳ್ಳುತ್ತದೆ. ಕಡತಗಳು ರವಾನೆಯಾದ ಮೇಲೆ ಮರಳಿಸಿಕೊಳ್ಳುವುದಕ್ಕೆ ಈ ವಿಧೇಯಕದಲ್ಲಿ ಅವಕಾಶವಿಲ್ಲ ಏಕೆಂದರೆ ಕಡತಗಳು ಮತ್ತು ದಾಖಲೆಗಳು ರವಾನೆಯಾದಾಗ, ಆ ಮೇಲ್ಮನವಿಗೆ ಸಂಬಂಧಿಸಿದಂತೆ ಒಳಗೊಂಡ ಎಲ್ಲಾ ವೆಚ್ಚಗಳ ಪಾವತಿಯನ್ನು ಮಾಡಲು ಸಂಬಂಧಪಟ್ಟವರು ಬದ್ಧರಾಗಿರುತ್ತಾರೆ, ಮತ್ತು ಆದ್ದರಿಂದ ಪ್ರೀವಿ ಕೌನ್ಸಿಲಿನ ವೆಚ್ಚ ಮತ್ತು ಇಲ್ಲಿನ ದುಪ್ಪಟ್ಟು ವೆಚ್ಚಕ್ಕೆ ಒಳಗಾಗುವಂತೆ ಮೇಲ್ಮನವಿಯನ್ನು ಏಕೆ ಸಂಯುಕ್ತ ನ್ಯಾಯಾಲಯಕ್ಕೆ ವರ್ಗಾಯಿಸಬೇಕು: ಮತ್ತು ನಾವು ಇದನ್ನು ಕಕ್ಷಿದಾರನ ವೆಚ್ಚವನ್ನು ಗಮನದಲ್ಲಿಟ್ಟುಕೊಂಡೇ ನೋಡಬೇಕು. ಸಂಯುಕ್ತ ನ್ಯಾಯಾಲಯವು ಅಂತಹ ವರ್ಗಾವಣೆ ಮತ್ತು ಮರಳಿ ತರಿಸುವಿಕೆಯ ಷರತ್ತುಗಳನ್ನು ವಿಧಿಸಲು ಅವಕಾಶವಿದೆಯೆಂಬುದು ನಿಜ. ಆದರೆ ಇದು ಮನವಿದಾರರ ಮೇಲೆ ಅನಗತ್ಯ ಬದ್ಧತೆಯನ್ನು ಹೇರುತ್ತದೆ ಮತ್ತು ಅದನ್ನು ಮನವಿದಾರರು ಸ್ವಯಿಚ್ಛೆಯಿಂದ ಅಂಗೀಕರಿಸಲಾರರು ಮತ್ತು ಆದ್ದರಿಂದ ನಾನು ಈ ಹಂತದಲ್ಲಿ ಈ ವಿಧೇಯಕದಲ್ಲಿ ಇರುವ ಅವಕಾಶಗಳು ತೃಪ್ತಿಕರವಾಗಿವೆಯೆಂದು ಪರಿಗಣಿಸಬೇಕೆಂದು ತಿಳಿಯುತ್ತೇನೆ.

**ಶ್ರೀ ಯಂ.ಅನಂತಶಯನಂ ಅಯ್ಯಂಗಾರ್:** ನಾನು ನನ್ನ ತಿದ್ದುಪಡಿಯನ್ನು ಒತ್ತಾಯಿಸಲು ಬಯಸುವುದಿಲ್ಲ. ನಾನು ಈ ವಿಚಾರಕ್ಕಾಗಿ ಈ ಸದನವನ್ನು ವಿಭಜಿಸಲು ಇಚ್ಛಿಸುವುದಿಲ್ಲ. ನಾನು ಕಾನೂನು ಸಚಿವರೊಂದಿಗೆ ಸಮಾಲೋಚಿಸಿದ್ದೇನೆ ಮತ್ತು ಅವರು ಒಪ್ಪಿದ್ದರೆಂದು ನಾನು ತಿಳಿದಿದ್ದೆ.

**ಸಭಾಧ್ಯಕ್ಷರು:** ಇದಲ್ಲದೆ, ನಾನು ಇನ್ನೊಂದು ತೊಡಕನ್ನು ಅನುಭವಿಸಿದೆ. ಅದೆಂದರೆ, ಈಗಾಗಲೇ ಸಲ್ಲಿಸಿದ ಮೇಲ್ಮನವಿಯನ್ನು ಹಿಂದಕ್ಕೆ ಪಡೆಯುವ ಉದ್ದೇಶಕ್ಕಾಗಿ ಸಂಯುಕ್ತ ನ್ಯಾಯಾಲಯವನ್ನು ಪ್ರೀವಿ ಕೌನ್ಸಿಲಿಗಿಂತ ಮೇಲ್ಮಟ್ಟದ್ದೆಂದು ತಿಳಿಯಬೇಕಾದೀತೇ ಎಂದು. ತಿದ್ದುಪಡಿಯು ಕಕ್ಷಿದಾರನನ್ನು ಒತ್ತಾಯಪಡಿಸುವುದಿದ್ದರೆ ಅದು ಬೇರೆಯೇ ಮಾತು, ಆದರೆ ಅದು ಕಲಮಿನಲ್ಲಿ ಬಳಸುವ ಉಕ್ತಿಗಳ ಪ್ರಶ್ನೆ.

ಮಾನ್ಯ ಸದಸ್ಯರಿಗೆ ತನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ಈ ಸದನದ ಅನುಮತಿಯಿದೆಯೇ?

ಸದನದ ಅನುಮತಿ ಮೇರೆಗೆ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು.

೬ರಿಂದ ೮ರ ವರೆಗಿನ ಖಂಡಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಖಂಡ ೧ನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಶೀರ್ಷಿಕೆ ಮತ್ತು ಪ್ರಸ್ತಾವನೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್:** ಮಾನ್ಯರೆ, ನಾನು ಮಂಡಿಸುತ್ತೇನೆ:

"ತಿದ್ದುಪಡಿಯಾದಂತೆ ಈ ವಿಧೇಯಕವು ಅಂಗೀಕರಿಸಲ್ಪಡಲಿ."

**ಸಭಾಧ್ಯಕ್ಷರು:** ನಿಲುವು ಮಂಡನೆಯಾಗಿದೆ:

"ತಿದ್ದುಪಡಿಯಾದಂತೆ ಈ ವಿಧೇಯಕವು ಅಂಗೀಕರಿಸಲ್ಪಡಲಿ."

◆

## ೬

# *ಪ್ರಾಂತೀಯ ದಿವಾಳಿತನ (ತಿದ್ದುಪಡಿ) ವಿಧೇಯಕ

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್** (ಕಾನೂನು ಸಚಿವರು) : ಮಾನ್ಯರೆ, ನಾನು ಮಂಡಿಸುವುದೇನೆಂದರೆ:

> "ಪ್ರಾಂತೀಯ ದಿವಾಳಿತನ ಕಾಯಿದೆ, ೧೯೨೦ನ್ನು ತಿದ್ದುವ ವಿಧೇಯಕವನ್ನು ಮುಂದುವರಿಸಲಾಗುವುದು."

**ಸಭಾಧ್ಯಕ್ಷರು:** ನಿಲುವಳಿಯು ಮಂಡಿಸಲಾಯಿತು :

> "ಪ್ರಾಂತೀಯ ದಿವಾಳಿತನ ಕಾಯಿದೆ, ೧೯೨೦ನ್ನು ತಿದ್ದುವ ವಿಧೇಯಕವನ್ನು ಮುಂದುವರಿಸಲಾಗುವುದು."

**ಶ್ರೀ ರಾಜ ಕೃಷ್ಣ ಬೋಸ್** (ಒರಿಸ್ಸಾ : ಸಾಮಾನ್ಯ) : ಈ ವಿಧೇಯಕವನ್ನು ಕೂಡಾ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿದೆಯೋ?

**ಸಭಾಧ್ಯಕ್ಷರು:** ಅದನ್ನು ಮಂಡಿಸಲಾಯಿತಷ್ಟೇ.

**ಶ್ರೀ ಕೆ.ಸಂತಾನಂ** (ಮದ್ರಾಸ್: ಸಾಮಾನ್ಯ) : ಇದನ್ನು ಹೊಸತಾಗಿ ಮಂಡಿಸಬಹುದು. 'ಮುಂದುವರಿಸುವುದು' ಎಂದರೆ ಏನು? ಅದು ಚರ್ಚೆಯ ಇತರ ಹಂತಗಳನ್ನು ಅಥವಾ ಪರಿಶೀಲನಾ ಸಮಿತಿಯನ್ನು ದಾಟಿದ್ದರೆ ಮಾತ್ರ ಅದರ ಮುಂದುವರಿಕೆಗೆ ಮಸೂದೆಯನ್ನು ಮಂಡಿಸುವುದರಲ್ಲಿ ಅರ್ಥವಿದೆ. ಅದನ್ನು ಹೊಸದಾಗಿ ಮಂಡಿಸಬಹುದು.

**ಸಭಾಧ್ಯಕ್ಷರು:** ನಾನು ಮಾನ್ಯ ಸದಸ್ಯರ ಗಮನವನ್ನು ಅಂಗೀಕರಿಸಲಾದ ೧೯೩೫ರ ಭಾರತ ಸರ್ಕಾರದ ಕಾಯಿದೆಯ ಕಲಮ್ ೩೦ರ ಉಪ-ಖಂಡ (೨)ರತ್ತ ಸೆಳೆಯುತ್ತೇನೆ :

> "ಆಧಿಪತ್ಯದ ಸ್ಥಾಪನೆಗೆ ನಿಕಟಪೂರ್ವವಾಗಿ ಭಾರತದ ಶಾಸಕಾಂಗದ ಶಾಸನ ಸಭೆಯಲ್ಲಿ ಇತ್ಯರ್ಥಕ್ಕೆ ಬಾಕಿಯಿದ್ದ ವಿಧೇಯಕವು ಆಧಿಪತ್ಯದ ಶಾಸಕಾಂಗದಲ್ಲಿ ಈ ಕಾಯಿದೆಯ ಕಲಮ್ ೩೮ರ ಅಡಿ ಆಧಿಪತ್ಯದ ಶಾಸಕಾಂಗದಿಂದ ರಚನೆಯಾದ ನಿಯಮಗಳಲ್ಲಿ ಸೇರಿಸಬಹುದಾದ ಯಾವುದೇ ವಿರೋಧಾಂಶಕ್ಕೆ ಬದ್ಧವಾಗಿ ಆ ಶಾಸನ ಸಭೆಯಲ್ಲಿನ ವಿಧೇಯಕವು ಆಧಿಪತ್ಯದ ಶಾಸಕಾಂಗದಲ್ಲಿ ನಡೆದಂತೆ ಮುಂದುವರಿಯುವುದು."

ಹಾಗಾದರೆ ಹಿಂದಿನ ಹಂತಗಳಲ್ಲಿ – ಪ್ರಕಟಣೆ ಇತ್ಯಾದಿಗಳಲ್ಲಿ – ವಿನಿಯೋಗವಾದ ಸಮಯ ಮತ್ತು ವೆಚ್ಚಗಳನ್ನು ಈಗ ಬಿಟ್ಟುಬಿಡಲಾಗಿದೆ. ಈ ವಿಧೇಯಕವನ್ನು ಮುಂದುವರಿಸುವುದರ ವಿಚಾರ ಇದು.

**ಶ್ರೀ ಎಂ.ಎಸ್.ಆನೆ** (ದಖ್ಖಣ ಮತ್ತು ಮದ್ರಾಸ್ ರಾಜ್ಯಗಳ ಗುಂಪು) : ಈಗ ತಾನೇ ಓದಿದ ಆ

---

* ಪೂರ್ವೋಕ್ತ, ಸಂ. I, ೧೭ ನವೆಂಬರ್ ೧೯೪೭, ಪು. ೪೦–೪೧.

ನಿರ್ದಿಷ್ಟ ಖಂಡದ ಪದಬಳಕೆಯಿಂದಾಗಿ ಮುಂದುವರಿಕೆಯ ಮಸೂದೆಯನ್ನು ಮಂಡಿಸಬೇಕೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ? ಈ ನಿಯಮವು ಸರಕಾರವನ್ನು ವಿಧೇಯಕವನ್ನು ಮುಂದುವರಿಸುವುದಕ್ಕೂ ಮತ್ತು ಇಷ್ಟವಾದಲ್ಲಿ ಮುಂದಿನ ಹಂತಗಳನ್ನು ಹಾದುಹೋಗುವುದಕ್ಕೂ ಅವಕಾಶ ನೀಡುತ್ತದೆ. ಆದ್ದರಿಂದ ಅದರ ಮುಂದುವರಿಕೆಗೆ ಪ್ರತ್ಯೇಕವಾದ ಮಸೂದೆಯ ಅಗತ್ಯವಿದೆಯೇ?

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ಮುಂದುವರಿಕೆಗೆ ಮಸೂದೆಯಿಲ್ಲದಿದ್ದರೆ ವಿಧೇಯಕವು ಗತಿಸುತ್ತದೆ. ಅಂದರೆ ಎಲ್ಲಾ ಹಂತಗಳನ್ನೂ ಮತ್ತೆ ಆರಂಭಿಸಬೇಕಾಗುತ್ತದೆ.

**ಶ್ರೀ ನಾಸಿರುದ್ದಿನ್ ಅಹಮದ್** (ಪಶ್ಚಿಮ ಬಂಗಾಳ: ಮುಸ್ಲಿಮ್) **:** ಮಾನ್ಯರೆ, ಈ ನಿಲುವಳಿ ಗೊತ್ತುವಳಿಯ ಮೇಲೆ ತಾವು ಓದಿದ ಕಲಮ್ ಶಾಸನ ಸಭೆಯಲ್ಲಿ ಬಾಕಿಯಿದ್ದ ವಿಧೇಯಕವನ್ನು **'**ಮುಂದುವರಿಸಬಹುದು' ಎಂದು ಹೇಳುತ್ತದೆ. ಆದ್ದರಿಂದ ಈ ಸದನಕ್ಕೆ ಅದನ್ನು ಮುಂದುವರಿಸುವ ಅಥವಾ ಮುಂದುವರಿಸದಿರುವ ಸ್ವಾತಂತ್ರ್ಯವಿದೆ. ಆದ್ದರಿಂದ ಸದನದ ನಿರ್ಣಯವು ಅಗತ್ಯವಿದೆ.

**ಸಭಾಧ್ಯಕ್ಷರು :** ಅದಕ್ಕಾಗಿಯೇ ಈ ಮಸೂದೆಯನ್ನು ತರಲಾಗಿದೆ. ವಿಷಯವು ಇದು :

> "ಪ್ರಾಂತೀಯ ದಿವಾಳಿತನ ಕಾಯಿದೆ, ೧೯೨೦ನ್ನು ತಿದ್ದುವ ವಿಧೇಯಕವನ್ನು ಮುಂದುವರಿಸಲಾಗುವುದು."

ಮಸೂದೆಯು ಅಂಗೀಕಾರವಾಯಿತು.

***ಮಾನ್ಯ ಡಾ. ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು)**:** ಮಾನ್ಯ ಸಭಾಧ್ಯಕ್ಷರೆ, ನಾನು ವಿಧೇಯಕವನ್ನು ಮಂಡಿಸುತ್ತೇನೆ:

> "ಪ್ರಾಂತೀಯ ದಿವಾಳಿ ಕಾಯಿದೆ, ೧೯೨೦ನ್ನು ತಿದ್ದುಪಡಿ ಮಾಡುವ ವಿಧೇಯಕವನ್ನು ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ. ಬಕ್ಷಿ ತೇಕ್ ಚಂದ್, ಶ್ರೀಮತಿ ಜಿ.ದುರ್ಗಾಬಾಯಿ, ಡಾ.ಪಿ.ಎಸ್.ದೇಶಮುಖ್, ಶ್ರೀ ಎಂ.ಅನಂತಶಯನಂ ಅಯ್ಯಂಗಾರ್, ಪಂಡಿತ್ ಠಾಕುರ್ ದಾಸ್ ಭಾರ್ಗವ, ಶ್ರೀ ನಾಸಿರುದ್ದಿನ್ ಅಹಮದ್, ಮತ್ತು ಈ ಮಸೂದೆಯನ್ನು ಮಂಡಿಸಿದವರು, ಇವರನ್ನೊಳಗೊಂಡ ಪರಿಶೀಲನಾ ಸಮಿತಿಗೆ ವಹಿಸುವುದು, ಮತ್ತು ೧೬ ಮಾರ್ಚ್೧೯೪೮ರ ಮೊದಲು ವರದಿ ನೀಡಲು ಸೂಚಿಸುವುದು, ಮತ್ತು ಸಮಿತಿಯ ಸಭೆಗೆ ಅಗತ್ಯವಿರುವ ಸದಸ್ಯರ ಸಂಖ್ಯೆಯು ಐದೆಂದು ನಿಗದಿಪಡಿಸುವುದು."

ಮಾನ್ಯರೆ, ಈ ಕ್ರಮವನ್ನು ತೆಗೆದುಕೊಳ್ಳಲು ಸರಕಾರಕ್ಕೆ ಅಗತ್ಯವಾದ ವಿಚಾರಗಳನ್ನು ಈ ಸದನಕ್ಕೆ ತಿಳಿಸಲು ನಾನು ಈ ನಿರ್ಣಯಕ್ಕೆ ಅಗತ್ಯವಾದ ಕೆಲವು ತೀರ್ಮಾನಗಳ ಕುರಿತು ಕೆಲವು ಆರಂಭಿಕ ಅಭಿಪ್ರಾಯಗಳನ್ನು ಹೇಳಲಿದ್ದೇನೆ. ೧೯೨೪ರಲ್ಲಿ ಪ್ರೀವಿ ಕೌನ್ಸಿಲಿಗೆ ಹೋಗಿ ಸತ್ಯ ನಾರಾಯಣ್ ವರ್ಸಸ್ ಬಿಹಾರಿ ಲಾಲ್ ಎಂದು ಪ್ರಸಿದ್ಧವಾದ ಒಂದು ಪ್ರಕರಣದಿಂದ ಆರಂಭಿಸಿದರೆ ಸಾಕೆಂದು ನನಗೆ ತೋರುತ್ತದೆ. ಆ ಪ್ರಕರಣದ ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಒಬ್ಬ ಹಿಂದೂ ತಂದೆಯು ದಿವಾಳಿಯೆಂದು

---

* ಪೂರ್ವೋಕ್ತ, ಸಂ. II, ೨೫ ಫೆಬ್ರುವರಿ ೧೯೪೮, ಪು. ೧೨೨೦–೨೧.

ಘೋಷಿಸಲ್ಪಟ್ಟನು. ಈಗ ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಕಾಯಿದೆಯಡಿ ದಿವಾಳಿಯ ಆಸ್ತಿಯು ಇತ್ಯರ್ಥದ ದಿನದಿಂದ ಅಧಿಕೃತ ಹಸ್ತಾಂತರಧಾರಕನಲ್ಲಿ ನಿಹಿತವಾಗುತ್ತದೆ. ಹಿಂದೂ ತಂದೆಯ ಆಸ್ತಿಯು ಎರಡು ವಿಚಾರಗಳನ್ನೊಳಗೊಂಡಿರುತ್ತದೆ : (೧) ಜಂಟಿ ಕುಟುಂಬದ ಆಸ್ತಿಯಲ್ಲಿ ಆತನ ಪಾಲು, ಮತ್ತು (೨) ಅನೈತಿಕವಲ್ಲದ ಉದ್ದೇಶಗಳಿಗೆ ಮಾಡಿದ ಸಾಲಗಳಾದ ಆತನ ವೈಯಕ್ತಿಕ ಸಾಲಗಳಿಗೆ ಜಂಟಿ ಕುಟುಂಬದ ತನ್ನ ಮಕ್ಕಳ ಆಸ್ತಿಗಳನ್ನು ಮಾರಲು ಇರುವ ಆತನ ಹಕ್ಕು. ಆ ಪ್ರಕರಣದಲ್ಲಿ ಪ್ರೀವಿ ಕೌನ್ಸಿಲಿನ ಎದುರು ಉದ್ಭವವಾದ ಪ್ರಶ್ನೆಯೆಂದರೆ ಮಗನ ಆಸ್ತಿಯನ್ನು ಮಾರುವ ತಂದೆಯ ಹಕ್ಕು ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಕಾಯಿದೆಯ ಕಲಮ್ ೨(ಇ)ಯ ಅಡಿ ಆಸ್ತಿಯೆನ್ನಿಸಿಕೊಳ್ಳುತ್ತದೆಯೇ ಎಂಬುದು. ಕಲಮ್ ೨(ಇ) ಯನ್ನು ಆಸ್ತಿಯ ಮೇಲೆ ಇರುವ ಪೂರ್ಣ ಹಕ್ಕು ಮಾತ್ರ ಆಸ್ತಿಯೆನಿಸಿಕೊಳ್ಳುತ್ತದೆ ಮತ್ತು ಅಪೂರ್ಣ ಹಕ್ಕು ಆಸ್ತಿಯೆನಿಸಿಕೊಳ್ಳುವುದಿಲ್ಲವೆಂಬ ಆಧಾರದ ಅರ್ಥವಿಸುವಿಕೆಯ ಮೇಲೆ ಆ ವಿವಾದಾಂಶದ ಮೇಲೆ ಪ್ರೀವಿ ಕೌನ್ಸಿಲ್ ಕಲಮ್ ೨ (ಇ)ಯ ಅನ್ವಯ ಹಿಂದೂ ತಂದೆಗೆ ತನ್ನ ಮಗನ ಆಸ್ತಿಯನ್ನು ಮಾರಲಿರುವ ಹಕ್ಕು ಆಸ್ತಿಯೆನಿಸಿಕೊಳ್ಳುವುದಿಲ್ಲವೆಂದು ತೀರ್ಮಾನಿಸಿತು. ಪ್ರೀವಿ ಕೌನ್ಸಿಲಿನ ಪ್ರಕಾರ ಮಕ್ಕಳ ಆಸ್ತಿಯನ್ನು ಮಾರುವ ತಂದೆಯ ಹಕ್ಕು ಪೂರ್ಣವಲ್ಲ ಏಕೆಂದರೆ ಅದು ವಿಲೆ ಮಾಡಬೇಕಾದ ಆಸ್ತಿಯ ಸಾಲಗಳು ಅನೈತಿಕ ಉದ್ದೇಶಗಳದ್ದಾಗಬಾರದು ಎಂಬ ಷರತ್ತಿಗೊಳಪಟ್ಟಿದೆ. ಆ ಆಧಾರದ ಮೇಲೆ ಅವರು ಮಕ್ಕಳಿಗೆ ಸೇರಿದ ಆಸ್ತಿಗಳು ೧೭ನೇ ಕಲಮಿನಡಿ ಅಧಿಕೃತ ಹಸ್ತಾಂತರಧಾರಕನಲ್ಲಿ ತಾವಾಗಿ ನಿಹಿತವಾಗುತ್ತವೆಂಬುದನ್ನು ಅವರು ಒಪ್ಪಲಿಲ್ಲ. ಆ ನಿಟ್ಟಿನಲ್ಲಿ ಪ್ರೀವಿ ಕೌನ್ಸಿಲಿನ ಆ ತೀರ್ಪು ಸಾಲನೀಡಿದವರಿಗೆ ತುಂಬಾ ತೊಂದರೆ ನೀಡಿಲ್ಲ ಏಕೆಂದರೆ ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಕಾಯಿದೆಯು ಕಲಮ್ ೫೨ ಎಂಬ ಪ್ರತ್ಯೇಕ ಕಲಮನ್ನು ಹೊಂದಿದೆ ಮತ್ತು ಅದು ಅಧಿಕೃತ ಹಸ್ತಾಂತರಧಾರಕ ಮತ್ತು ಸಾಲನೀಡಿದವರಿಗೆ ಸೂಕ್ತ ಆಸ್ತಿ ಅಥವಾ ಇನ್ನೊಬ್ಬ ವ್ಯಕ್ತಿಯ ಆಸ್ತಿಗಳನ್ನು ಹುಡುಕಿಕೊಂಡು ಹೋಗಲು ಅನುಮತಿ ನೀಡುತ್ತದೆ. ಆದ್ದರಿಂದ ಆ ನಿರ್ದಿಷ್ಟ ಪ್ರಕರಣದಲ್ಲಿ ಆಸ್ತಿಯು ತಾನಾಗಿ ಅಧಿಕೃತ ಹಸ್ತಾಂತರಧಾರಕನಲ್ಲಿ ನಿಹಿತವಾಗದಿದ್ದರೂ, ಅಧಿಕೃತ ಹಸ್ತಾಂತರಧಾರಕನು ಪ್ರತ್ಯೇಕ ನಡವಳಿಕೆಗಳ ಮೂಲಕ ಆ ಸಾಲಗಾರವ್ಯಕ್ತಿಯ ಮಗನ ವಿರುದ್ಧ ಆತನ ಪವಿತ್ರ ಕರ್ತವ್ಯದ ಆಧಾರದಲ್ಲಿರುವ ಬದ್ಧತೆಯಲ್ಲಿ ಸಾಲ ತೀರಿಸುವಂತೆ ಒತ್ತಾಯಿಸಲು ಕ್ರಮ ಕೈಗೊಳ್ಳಬಹುದು; ಮತ್ತು ಆತನು ಹಾಗೆ ಮಾಡಿದ್ದಾನೆಂದು ನಂಬುತ್ತೇನೆ.

ನಂತರ ಆದದ್ದು ಇದು. ಪ್ರೀವಿ ಕೌನ್ಸಿಲಿನ ಆ ತೀರ್ಪಿನ ನಂತರ ಇಂಡಿಯಾದ ನ್ಯಾಯಾಲಯಗಳಿಗೆ ಪ್ರಾಂತೀಯ ದಿವಾಳಿ ಕಾಯಿದೆಯೆಂಬ ಇನ್ನೊಂದು ಕಾಯಿದೆಯನ್ನು ಅರ್ಥವಿಸಲು ಅವಕಾಶಗಳಿದ್ದವು. ಈ ಸದನದ ನ್ಯಾಯವಾದಿ ಸದಸ್ಯರಿಗೆ ನೆನಪಿರಬಹುದಾದಂತೆ, ದಿವಾಳಿ ಸಂಬಂಧಿತ ಎರಡು ಪ್ರತ್ಯೇಕ ಶಾಸನಗಳಿವೆ, – ಒಂದು ಪಟ್ಟಣಗಳೊಳಗೆ ನಡೆಯುವ ದಿವಾಳಿಗಳು, ಮತ್ತು ಇನ್ನೊಂದು ಗ್ರಾಮಗಳಲ್ಲಿನದ್ದು. ದುರದೃಷ್ಟಕ್ಕೆ ಪ್ರಾಂತೀಯ ದಿವಾಳಿ ಕಾಯಿದೆಯು ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಕಾಯಿದೆಯಲ್ಲಿರುವ ಕಲಮ್ ೫೨ರಂತಹ ಕಾನೂನನ್ನು ಒಳಗೊಂಡಿಲ್ಲ. ಪರಿಣಾಮವಾಗಿ, ನ್ಯಾಯಾಲಯಗಳಲ್ಲಿ ಅಂತಹ ಅಂದರೆ, ಒಬ್ಬ ಹಿಂದೂ ತಂದೆಯು ತನ್ನ ಸ್ವಂತ ಸಾಲಗಳಿಗೆ ತನ್ನ ಮಕ್ಕಳ ಹಕ್ಕುಗಳನ್ನು ಮಾರುವ ಹಕ್ಕು ಅಥವಾ ಅಧಿಕಾರವನ್ನು ಆತನ ಆಸ್ತಿಯೆಂದು ಕೇಳಬಹುದೇ ಎಂಬ ಪ್ರಶ್ನೆಯು ಉದ್ಭವವಾದಾಗ, ಕಲಮ್ ೨(ಎ)ಯನ್ವಯ ಆಸ್ತಿಯೆಂದು ಪರಿಗಣಿತವಾಗಿರುವುದು ಮಾತ್ರ ಆಸ್ತಿಯೆಂದು ಪರಿಗಣಿಸಬಹುದು ಮತ್ತು ಅದು ಅಧಿಕೃತ ಹಸ್ತಾಂತರಧಾರಕನಲ್ಲಿ ನಿಹಿತವಾಗುತ್ತದೆ. ದುರದೃಷ್ಟಕ್ಕೆ ಆದದ್ದೇನೆಂದರೆ ವಿವಿಧ ನ್ಯಾಯಾಲಯಗಳು ಕಲಮ್ ೨(ಇ)ಯನ್ನು ಭಿನ್ನ ರೀತಿಯಲ್ಲಿ ಅರ್ಥೈಸಿವೆ. ಬಾಂಬೇ ಉಚ್ಚ ನ್ಯಾಯಾಲಯವು

ಆಸ್ತಿಯು ನಿಹಿತವಾಗದಿದ್ದರೂ ಹಕ್ಕು ಆಸ್ತಿಯೆನಿಸಿಕೊಳ್ಳುವುದಿಲ್ಲವಾದ್ದರಿಂದ ಅದು ನಿಹಿತವಾಗುತ್ತದೆಯೆಂದು ಹೇಳಿತು; ಪಾಟ್ನಾ ಉಚ್ಚ ನ್ಯಾಯಾಲಯವು ಬಾಂಬೇ ಉಚ್ಚನ್ಯಾಯಾಲಯವನ್ನನುಸರಿಸಿತು, ಮತ್ತು ಅಲ್ಲಹಾಬಾದ್ ಮತ್ತು ನಾಗಪುರ ಉಚ್ಚ ನ್ಯಾಯಾಲಯಗಳೂ ಇದನ್ನೇ ಅನುಸರಿಸಿದವು. ಆದರೆ ಇದರ ಬದಲಿಗೆ ನೀವು ಮದರಾಸನ್ನು ಗಮನಿಸಿದರೆ, ಮದರಾಸು ಉಚ್ಚ ನ್ಯಾಯಾಲಯದ ಒಂದು ಪೀಠವು ಆ ಆಸ್ತಿಯು ನಿಹಿತವಾಗುತ್ತದೆಂದು ಹೇಳಿದರೆ, ಇನ್ನೊಂದು ಪೀಠವು ನಿಹಿತವಾಗುವುದಿಲ್ಲವೆಂದು ಹೇಳಿದೆ. ಕಲ್ಕತ್ತದಲ್ಲೂ ಇದೇ ರೀತಿ ಆಗಿದೆ, ಒಂದು ಪೀಠವು ಆಸ್ತಿಯು ನಿಹಿತವಾಗುತ್ತದೆಂದು ಹೇಳಿದರೆ ಇನ್ನೊಂದು ಪೀಠವು ನಿಹಿತವಾಗುವುದಿಲ್ಲವೆಂದು ಹೇಳಿದೆ.

ಈಗ ಈ ವಿಚಾರವನ್ನು ಸರಿಪಡಿಸಬೇಕೆಂದು ನನಗೆ ಅನ್ನಿಸಿದೆ. ಮದರಾಸು ಉಚ್ಚ ನ್ಯಾಯಾಲಯವು ತನ್ನ ತೀರ್ಪುಗಳಲ್ಲೊಂದರಲ್ಲಿ ವಿವಿಧ ಉಚ್ಚ ನ್ಯಾಯಾಲಯಗಳ ತೀರ್ಪುಗಳ ಈ ವ್ಯತ್ಯಾಸಗಳನ್ನು ಹೋಗಲಾಡಿಸಲು ಭಾರತ ಸರಕಾರವು ಒಂದು ಶಾಸನವನ್ನು ತರುವುದಕ್ಕೆ ಇದು ಸೂಕ್ತ ಸಮಯವೆಂದು ಸೂಚಿಸಿತು. ದುರದೃಷ್ಟಕ್ಕೆ ಯುದ್ಧದ ಸಂದರ್ಭದಲ್ಲಿ ಸಮಯಾಭಾವದಿಂದಾಗಿ ಅಂತಹ ಶಾಸನವನ್ನು ತರಲು ಸಾಧ್ಯವಾಗಲಿಲ್ಲ. ಆದ್ದರಿಂದ, ಈ ವ್ಯತ್ಯಾಸವನ್ನು ಮತ್ತು ಅಭಿಪ್ರಾಯಭೇದವನ್ನು ಹೋಗಲಾಡಿಸಲು ಈ ಕ್ರಮವನ್ನು ಕೈಗೊಳ್ಳಲಾಗಿದೆ. ಈ ಕ್ರಮವು ಮಾಡುವುದೆಂದರೆ ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಕಾಯಿದೆಯ ಕಲಮ್ ೫೨ನ್ನು ಪುನರುಚ್ಚರಿಸುವುದು ಮತ್ತು ಅದನ್ನು ಪ್ರಾಂತೀಯ ಪಟ್ಟಣ ದಿವಾಳಿ ಕಾಯಿದೆಯಲ್ಲಿ ಕಲಮ್ ೫೦–ಎ ಎಂದು ಕಾಯಿದೆಯ ಭಾಗವನ್ನಾಗಿ ಮಾಡುವುದು. ಇದಕ್ಕಿಂತ ಹೆಚ್ಚೇನೂ ಈ ವಿಧೇಯಕವು ಮಾಡಲೆತ್ನಿಸುವುದಿಲ್ಲ.

ಈ ಸದನಕ್ಕೆ ತಿಳಿದಿರುವಂತೆ, ಇಂತಹದೇ ಉದ್ದೇಶದ ಕ್ರಮವೊಂದು ಶ್ರೀಮತಿ ದುರ್ಗಾಬಾಯಿಯವರ ಹೆಸರಿನಲ್ಲೂ ಇದೆ. ಸರಕಾರದ ಕ್ರಮದಿಂದ ಅವರ ಕ್ರಮವು ಎರಡು ಪ್ರತ್ಯೇಕ ವಿಚಾರಗಳಲ್ಲಿ ಭಿನ್ನವಾಗಿದೆ. ಅವರು ಈ ಕ್ರಮಕ್ಕೆ ಪೂರ್ವಾನ್ವಯತೆಯನ್ನು ನೀಡಬಯಸಿದ್ದಾರೆ; ಸರಕಾರೀ ಕ್ರಮವು ಹಾಗೆ ಮಾಡಲುದ್ದೇಶಿಸಿಲ್ಲ. ಶ್ರೀಮತಿ ದುರ್ಗಾಬಾಯಿಯವರ ವಿಧೇಯಕದಲ್ಲಿರುವ ಇನೊಂದು ಅಂಶವೆಂದರೆ ಕಾನೂನು ಹಿಂದೂ ತಂದೆಗೆ ಹಿಂದೂ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ತನ್ನ ಮಗನ ಹಿತಾಸಕ್ತಿಯ ಮೇಲಿರುವ ಅಧಿಕಾರವನ್ನು ಸಾಲ ನೀಡಿದವರ ನಡುವೆ ಹಂಚುವಿಕೆಗೆ ಬದ್ಧವಾಗಿದೆಯೆಂಬುದನ್ನು ಸ್ಪಷ್ಟವಾಗಿ ಘೋಷಿಸಬೇಕು ಮಾತ್ರವಲ್ಲ, ಯಜಮಾನನಿಗೆ ವಿಲೆ ಮಾಡುವ ಹಕ್ಕನ್ನೂ ಸ್ಪಷ್ಟವಾಗಿ ನಿರೂಪಿಸಬೇಕು ಎಂಬುದಾಗಿದೆ. ಆ ಅಂಶದ ಮೇಲೆ ನಾನು ಹೇಳಬಯಸುವುದೇನೆಂದರೆ ನಾನು ಖಾಲಿ ಮನಸ್ಸುಳ್ಳವನಲ್ಲ, ಬದಲಾಗಿ ತೆರೆದ ಮನಸ್ಸುಳ್ಳವನು; ಮತ್ತು ನಾನು ಈ ವಿಚಾರವನ್ನು ಪರಿಶೀಲನಾ ಸಮಿತಿಯ ನಿರ್ಣಯಕ್ಕೆ ಬಿಡಲು ತಯಾರಿದ್ದೇನೆ. ವಾಸ್ತವವಾಗಿ ಪರಿಶೀಲನಾ ಸಮಿತಿಗೆ ವಹಿಸುವುದರ ಉದ್ದೇಶ ಅಥವಾ ಕಾರಣವೆಂದರೆ ಈ ವಿಚಾರಗಳನ್ನು ಪರಿಶೀಲನಾ ಸಮಿತಿಯು ಚರ್ಚಿಸುವುದು.

ಈ ವಿಧೇಯಕದ ಅಂಶಗಳ ವಿವರಣೆಗಾಗಿ ನಾನು ಹೆಚ್ಚೇನೂ ಹೇಳಲಿದೆಯೆಂದು ಭಾವಿಸುವುದಿಲ್ಲ. ಮಾನ್ಯರೆ, ನಾನು ಇದನ್ನು ಮಂಡಿಸುತ್ತಿದ್ದೇನೆ.

ಸಭಾಧ್ಯಕ್ಷರು: ಮಸೂದೆಯು ಮಂಡಿಸಲ್ಪಟ್ಟಿದೆ.

*ಪ್ರೊ.ಎನ್.ಜಿ.ರಂಗ: ಯಜಮಾನನ ಪ್ರಶ್ನೆ ಇಲ್ಲಿದೆ. ನನ್ನ ಮಾನ್ಯ ಮಿತ್ರರು ಈ ಅಧಿಕಾರವನ್ನು

---

* ಪೂರ್ವೋಕ್ತ, ಸಂ. II, ೨೫ ಫೆಬ್ರುವರಿ ೧೯೪೮, ಪು. ೧೨೨೪.

ಯಜಮಾನನಿಗೂ ವಿಸ್ತರಿಸಲು ಬಯಸುತ್ತಾರೆ. ಖಚಿತವಾಗಿಯೂ ಆಕೆಯ ದೃಷ್ಟಿಯಲ್ಲಿ ತಮ್ಮ ಆಸ್ತಿಗಳನ್ನು ವ್ಯವಸ್ಥಾಪಕರಿಂದ ಉಸ್ತುವಾರಿ ಮಾಡಿಸುವ ದೊಡ್ಡ ಜಮೀನುದಾರರಿದ್ದಾರೆ.

**ಮಾನ್ಯ ಡಾ.ಬಿ. ಆರ್. ಅಂಬೇಡ್ಕರ್:** ಅವರನ್ನು 'ಕರ್ತ' ಎಂದು ಕರೆಯುತ್ತಾರೆ.

**ಪ್ರೊ.ಎನ್.ಜಿ.ರಂಗ:** ತಂದೆಗೆ ಈ ಅಧಿಕಾರವನ್ನು ವಹಿಸುವುದೇ ಸಾಕಷ್ಟು ಕೆಟ್ಟದ್ದು ಹಾಗಿರುವಾಗ ಇತರ ಪ್ರತಿನಿಧಿಗಳಲ್ಲಿ ಅದನ್ನು ವಹಿಸುವುದು ಇನ್ನೂ ಕೆಟ್ಟದ್ದು.

**ಮಾನ್ಯ ಡಾ.ಬಿ. ಆರ್.ಅಂಬೇಡ್ಕರ್:** ಅಲ್ಲ, ಅಲ್ಲ. ಅದು ತಪ್ಪಾಗುತ್ತದೆ.

**ಪ್ರೊ.ಎನ್.ಜಿ.ರಂಗ :** ಇದು ವಕೀಲರು ನೀಡುವ ಉತ್ತರವಾಗುತ್ತದೆ. ನಾನು ಅದನ್ನು ಸಾಲಗಾರರ ದೃಷ್ಟಿಯಿಂದ ನೋಡುತ್ತಿದ್ದೇನೆ. ಅವರಿಗೂ ತಮ್ಮನ್ನು ರಕ್ಷಿಸಿಕೊಳ್ಳಲು ಸಾಲ ನೀಡಿದವರಷ್ಟೇ ಹಕ್ಕು ಇದೆ. ಸಾಲ ನೀಡುವವರು ಈ ವಕೀಲರನ್ನು ನೇಮಿಸಿಕೊಳ್ಳುವಷ್ಟು ಮತ್ತು ತಮಗೆ ಬೇಕಾದಂತೆ ಕೆಲಸಮಾಡಿಕೊಳ್ಳುವಷ್ಟು ಸಂಪದ್ಭರಿತರು. ಈ ಕಾಯಿದೆಯ ನೆರವು ಅಂತಹ ವ್ಯವಸ್ಥಾಪಕರಿಗೆ ಸಿಗಕೂಡದು ಮತ್ತು ಅದು ಪೂರ್ವಾನ್ವಯವಾಗಕೂಡದು. ಈ ತಿದ್ದುಪಡಿಯನ್ನು ಅಂಗೀಕರಿಸಬಹುದು ಆದರೆ ಕಾನೂನು ಸಚಿವರು ಸದ್ಯವೇ ಒಂದು ಸೂಕ್ತ ತಿದ್ದುಪಡಿಯನ್ನು ತಂದು ಮಕ್ಕಳಿಗೆ ತಮ್ಮ ತಂದೆಯರ ವೈಪರೀತ್ಯದ ವಿರುದ್ಧ ರಕ್ಷಣೆ ಸಿಗುವ ಅನುಕೂಲ ಮಾಡಿಕೊಡುವಂತೆ ನಾವೆಲ್ಲ ನೋಡಿಕೊಳ್ಳಬೇಕು.

***ಶ್ರೀ ಬಿಶ್ವನಾಥ ದಾಸ್:** ನನಗೆ ಈ ಪ್ರಸ್ತುತ ಮಸೂದೆಯ ಬಗ್ಗೆ ಹೇಳಲೇನೂ ಇಲ್ಲ. ವಾಸ್ತವವಾಗಿ ಸದನವು ದಿವಾಳಿ ಕಾಯಿದೆಯು ಈಗಿರುವಂತೆ ಊರ್ಜಿತವಾಗಬೇಕೆಂದು ನಿರ್ಧರಿಸಿದರೆ ಈ ಮಸೂದೆಯು ಅದರ ಸಹಜ ಫಲಶ್ರುತಿಯಾಗಿದೆಯೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ವಿಚಾರವನ್ನು ನಿರಾಕರಿಸುವಂತಿಲ್ಲ. ಆದ್ದರಿಂದ ನಾನು ಈ ವಿಚಾರದ ಬಗ್ಗೆ ಹೇಳುವುದಕ್ಕೇನೂ ಇಲ್ಲ.

**ಮಾನ್ಯ ಡಾ.ಬಿ. ಆರ್. ಅಂಬೇಡ್ಕರ್:** ಮಾನ್ಯ ಸಭಾಧ್ಯಕ್ಷರೆ, ಕೊನೆಯಲ್ಲಿ ಮಾತನಾಡಿದ ನನ್ನ ಮಿತ್ರರ ವಿಚಾರಕ್ಕೆ ಉತ್ತರಿಸುವುದರಿಂದ ನಾನು ಆರಂಭಿಸುತ್ತೇನೆ. ನಾನು ಅರ್ಥೈಸಿಸಿದ್ದು ಸರಿಯಾಗಿದ್ದರೆ ಅವರು ಎರಡು ವಿಚಾರಗಳನ್ನು ಮಂಡಿಸಿದರು. ಒಂದೆಂದರೆ ಇದು ನಿಚ್ಚಳವಾಗಿಯೂ ಒಂದು ಪ್ರಾಂತೀಯ ವಿಚಾರ. ಆದ್ದರಿಂದ ಪ್ರಾಂತೀಯ ಶಾಸನಸಭೆಗಳಿಗೆ ಅದನ್ನು ಬಿಟ್ಟುಕೊಡಬೇಕು.

**ಶ್ರೀ ಬಿಶ್ವನಾಥ ದಾಸ್:** ನಾನು ನನ್ನ ಮಿತ್ರರ ಮಾತಿನ ಮಧ್ಯ ಪ್ರವೇಶಿಸಲೆ? ನಾನು ಸ್ಪಷ್ಟವಾಗಿ ಹೇಳಿದ್ದೇನೆಂದರೆ ಅದು ಸಮವರ್ತಿ ಪಟ್ಟಿಯಲ್ಲಿದೆ ಮತ್ತು ಆದ್ದರಿಂದ ಕೇಂದ್ರ ಸರಕಾರವು ಅದನ್ನು ಪ್ರಾಂತೀಯ ಸರಕಾರಕ್ಕೆ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಬಿಡಬೇಕಾಗಿತ್ತು ಎಂದು. ಅದು ಸಮವರ್ತಿ ಪಟ್ಟಿಯಲ್ಲಿದೆಯೆಂದು ನನಗೆ ತಿಳಿದಿದೆ.

**ಮಾನ್ಯ ಡಾ.ಬಿ.ಆರ್. ಅಂಬೇಡ್ಕರ್:** ನಾನು ಅದನ್ನೇ ಹೇಳುವುದರಲ್ಲಿದ್ದೆ. ಅದನ್ನು ಸಮವರ್ತಿ ಪಟ್ಟಿಯಲ್ಲಿಡಲು ಕಾರಣವೆಂದರೆ ನಿಸ್ಸಂಶಯವಾಗಿಯೂ– ಮತ್ತು ಬೇರೆ ಯಾವ ಕಾರಣವೂ ಇದೆಯೆಂದು ನನಗನ್ನಿಸುವುದಿಲ್ಲ– ಈ ರೀತಿಯ ವಿಚಾರದಲ್ಲಿ ಕೇಂದ್ರ ಸರಕಾರವು ಏಕರೂಪತೆಯಿರಬೇಕೆಂದು ನಿರ್ಧರಿಸಿದರೆ ಅಲ್ಲಿ ಏಕರೂಪತೆಯಿರಬೇಕಾಗುತ್ತದೆ. ಆದ್ದರಿಂದ ಈ ವಿಚಾರದ ಬಗ್ಗೆ ಶಾಸನ ಮಾಡಲು ಕೇಂದ್ರ ಶಾಸನಸಭೆಗೆ ಹಕ್ಕಿದೆ.

---

* ಪೂರ್ವೋಕ್ತ, ಸಂ. II, ೨೫ ಫೆಬ್ರುವರಿ ೧೯೪೮, ಪು. ೧೨೨೭–೨೮.

ಒಂದು ದಿವಾಳಿ ಕಾಯಿದೆಯು ಇರಬೇಕೇ ಬೇಡವೇ ಎಂಬ ಪ್ರಶ್ನೆಗೆ ಇಂತಹ ವಿಚಾರದಲ್ಲಿ ಅದೊಂದು ವಿವಾದಾಂಶವೇ ಅಲ್ಲವೆಂದು ನಾನು ಭಾವಿಸುತ್ತೇನೆ. ನನ್ನ ಮಾನ್ಯ ಮಿತ್ರರು ದಿವಾಳಿ ಶಾಸನವು ಇರಲೇಬಾರದೆಂದು ಬಯಸಿದರೆ ಅವರಿಗಿರುವ ದಾರಿಯೆಂದರೆ ಸದನದ ಮುಂದೆ ಒಂದು ನಿರ್ಣಯವನ್ನು ತಂದು ದಿವಾಳಿತನಕ್ಕೆ ಸಂಬಂಧಿಸಿದ ಎಲ್ಲಾ ಕಾನೂನುಗಳೂ ರದ್ದಾಗಬೇಕೆಂದು ಹೇಳುವುದು.

**ಶ್ರೀ ಬಿಶ್ವನಾಥ ದಾಸ್:** ನಾನು ದಿವಾಳಿ ಕಾನೂನು ಅನಗತ್ಯವೆಂದು ಹೇಳಿರಲೇ ಇಲ್ಲ. ಈ ಕಾನೂನು ಅನಗತ್ಯ, ಅನಪೇಕ್ಷಿತ ಮತ್ತು ಸಮಾಜದಲ್ಲಿ ಅನೈತಿಕತೆಯನ್ನು ವೃದ್ಧಿಸುತ್ತದೆಯೆಂದಷ್ಟೇ ನಾನು ಹೇಳಿದ್ದು.

**ಮಾನ್ಯ ಡಾ.ಬಿ. ಆರ್.ಅಂಬೇಡ್ಕರ್:** ಹೌದು, ಅದ್ದರಿಂದ ಅದು ಅನಗತ್ಯ. ಆದರೂ ಡಾ.ಪಂಜಾಬ್‌ರಾವ್ ದೇಶಮುಖ್ ಅವರ ಸೂಚನೆಯ ಕುರಿತು — ಅವರು ಇಲ್ಲಿಲ್ಲ– ಈ ಮಸೂದೆಯನ್ನು ಎಲ್ಲರಿಗೂ ತಿಳಿಸಬೇಕಾಗಿತ್ತೆಂದು ಅವರು ಹೇಳಿದ್ದರ ಬಗ್ಗೆ ನನಗೆ ತುಸು ಅಚ್ಚರಿಯಾಗಿದೆ. ಪರಿಶೀಲನಾ ಸಮಿತಿಯಲ್ಲಿ ಸ್ಥಾನವನ್ನು ಅವರು ಸ್ವೀಕರಿಸಿದ್ದಾರೆ ಮತ್ತು ಈ ಎರಡು ಸ್ಥಾನಗಳು ಪರಸ್ಪರ ವಿರೋಧವಾಗಿವೆಯೆಂದು ನನಗೆ ಮನವರಿಕೆಯಾಗಿದೆ. ಅವರು ಹೇಳಿದ್ದರ ಬಗ್ಗೆ ಇದಕ್ಕಿಂತ ಹೆಚ್ಚೇನೂ ನಾನು ಹೇಳಬಯಸುವುದಿಲ್ಲ.

ಈ ವಿಧೇಯಕವು ಪೂರ್ವಾನ್ವಯವಾಗಿ ಅನ್ವಯವಾಗಬೇಕೆಂದು ಶ್ರೀಮತಿ ದುರ್ಗಾಬಾಯಿಯವರು ಹೇಳಿದ ಅಂಶದ ಕುರಿತು, ನಾನು ಒಂದು ಉಲ್ಲೇಖವನ್ನು ಮಾಡಲೇಬೇಕಿತ್ತು ಏಕೆಂದರೆ ನನ್ನ ಮಸೂದೆಯನ್ನು ತರುವ ಹೊತ್ತಿಗೆ ಅವರ ಮಸೂದೆಯ ಕುರಿತು ಕೂಡಾ ಹೇಳುತ್ತೇನೆಂಬ ಭರವಸೆಯ ಮೇಲೆ ಅವರ ಮಸೂದೆಯನ್ನು ಹಿಂದಕ್ಕೆ ಪಡೆಯಲು ಪ್ರೇರಣೆ ಮಾಡಿದ್ದೆನು. ಆದರೆ ಅದರ ವಿಚಾರದ ಕುರಿತು, ನಾನು ಹೇಳಿದಂತೆ ನನಗೆ ಸ್ವಲ್ಪ ಸಂಶಯ ಮತ್ತು ತೊಡಕುಗಳಿವೆಯೆಂದು ಭಾವಿಸಿದ್ದೇನೆ, ಮತ್ತು ನಾನು ಈ ಮಸೂದೆಯು ಪೂರ್ವಾನ್ವಯವಾಗಬೇಕೆಂಬ ಸಿದ್ಧಾಂತವನ್ನು ಸ್ವೀಕರಿಸುತ್ತೇನೆಂದು ಈ ಸದನದಲ್ಲಿ ತಕ್ಷಣಕ್ಕೆ ಹೇಳಲಾರೆ. ವಾಸ್ತವವಾಗಿ ಅಲ್ಲಿ ಕುಳಿತಿರುವ ನನ್ನ ಮಿತ್ರರೊಬ್ಬರು ಹೇಳಿದ ವಿಚಾರವು ಅರ್ಥಪೂರ್ಣವಾಗಿದೆ ಮತ್ತು ಇಂತಹ ಹೆಜ್ಜೆಗಳಲ್ಲಿ ಪೂರ್ವಾನ್ವಯಗೊಳಿಸುವುದರ ಕುರಿತು ನಾವು ತುಂಬಾ ಜಾಗರೂಕರಾಗಿರಬೇಕು.

ಪ್ರೊಫೆಸರ್ ರಂಗ ಅವರು ಎತ್ತಿದ ಅಂಶದ ಕುರಿತು– ಅವರದಲ್ಲವೆಂದು ಅವರು ನಿಸ್ಸಂಶಯವಾಗಿ ಒಪ್ಪಿಕೊಳ್ಳುವ ವಿಚಾರಗಳಲ್ಲಿ ಹಾಯುವ ಅಭ್ಯಾಸ ಅವರಿಗಿದೆ– ನಾನು ಅವರ ವಾದವನ್ನು ಸ್ವಲ್ಪ ತಿದ್ದಿಕೊಂಡು ಅದು ಗೌರವಯುತವೆಂದು ಕಾಣುವಂತಹ ರೂಪವನ್ನು ಅದಕ್ಕೆ ಕೊಡಲು ತಯಾರಿದ್ದೇನೆ. ನನಗೆ ಅರ್ಥವಾದ್ದು ಸರಿಯಿದ್ದರೆ, ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಕಾಯಿದೆ ಮತ್ತು ಪ್ರಾಂತೀಯ ದಿವಾಳಿ ಕಾಯಿದೆಗಳ ನಡುವೆ ವ್ಯತ್ಯಾಸವಿತ್ತು. ಅದೆಂದರೆ ಒಂದರಲ್ಲಿ ೬ ಮತ್ತು ೫೨ರಂತಹ ಕೆಲವು ನಿಬಂಧನೆ ಅಥವಾ ಉಪಬಂಧಗಳಿವೆಯಾದರೆ ಇನ್ನೊಂದರಲ್ಲಿಲ್ಲ.

ಅವರು ಹೇಳಿದ್ದರಲ್ಲಿ ನಾವು ಗಮನಿಸಬಹುದಾದ್ದೆಂದರೆ ಆರಂಭದಿಂದಲೇ ಶಾಸನಸಭೆಯು ಈ ಕಾನೂನನ್ನು ಅಂಗೀಕರಿಸುವಾಗ ಭಿನ್ನ ಉದ್ದೇಶಗಳನ್ನು ಹೊಂದಿತ್ತು ಅಂದರೆ ತಂದೆಯು ದಿವಾಳಿಯಾದಾಗ ಆ ಹಕ್ಕು ಕಲಮು ೫೨ರನ್ವಯ ಅಧಿಕೃತ ದಿವಾಳಿ ಆಸ್ತಿಯು ಅಧಿಕಾರಿಗೆ ವರ್ಗವಾಗಬೇಕೆಂಬ ಉದ್ದೇಶ ಅವರಿಗಿದ್ದರೂ, ಪ್ರಾಂತೀಯ ದಿವಾಳಿ ಕಾಯಿದೆಯನ್ನು ಅಂಗೀಕರಿಸುವಾಗ ಶಾಸನಸಭೆಗೆ ಅಂತಹ ಉದ್ದೇಶವಿರಲಿಲ್ಲ. ನನ್ನ ಮಿತ್ರ ಪ್ರೊಫೆಸರ್ ರಂಗ ಅವರು ವಕೀಲರಲ್ಲದ್ದರಿಂದ, ಈ ಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲವೆಂದು ನನಗನ್ನಿಸುತ್ತದೆ. ನಾನು ಉಲ್ಲೇಖಿಸಿದ 'ಆಸ್ತಿ' ಎಂಬ ಪದದ ನಿರೂಪಣೆಯನ್ನು

ಅವರು ಗಮನಿಸಿದರೆ, ಪ್ರಾಂತೀಯ ಮತ್ತು ಪ್ರೆಸಿಡೆನ್ಸಿ ಪಟ್ಟಣಗಳ ಎರಡೂ ಕಾಯಿದೆಗಳಲ್ಲಿ, 'ಆಸ್ತಿ' ಯ ನಿರೂಪಣೆಯು ಒಂದೇ ಆಗಿದೆಯೆಂಬುದನ್ನು ಅವರು ಕಾಣಬಹುದು. ಅಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಎರಡೂ ಸಂದರ್ಭಗಳಲ್ಲಿ ಆಸ್ತಿ ಅಥವಾ ಅಧಿಕಾರ ಎಂಬ ಪದಬಳಕೆಯಿದೆ. ವ್ಯತ್ಯಾಸವೆಂದರೆ ೫೨ನೇ ಕಲಮಿನಡಿ, ಅಧಿಕೃತ ದಿವಾಳಿ ಆಸ್ತಿಯ ಅಧಿಕಾರಿಯು ಆಸ್ತಿಯನ್ನು ಶೋಧಿಸಬಹುದಿತ್ತು, ಆದರೆ ಅದು ಹೇಗೋ ಪ್ರಾಂತೀಯ ದಿವಾಳಿ ಕಾಯಿದೆಯಲ್ಲಿ ಒಂದು ಲೋಪವಿದ್ದು ಆತನಿಗೆ ಆ ಆಸ್ತಿಯನ್ನು ಶೋಧಿಸಲು ಹಕ್ಕಿಲ್ಲದಾಗಿದೆ. ಆದ್ದರಿಂದ, ಅದೊಂದು ಅನುದ್ದೇಶಿತ ಲೋಪವೆಂಬುದರ ಬಗ್ಗೆ ಯಾವ ಸಂಶಯವೂ ಇಲ್ಲ. ಪ್ರಾಂತೀಯ ದಿವಾಳಿ ಕಾಯಿದೆಯಡಿ ತನ್ನ ಮಗನ ಆಸ್ತಿಯ ವಿಲೆವಾರಿಗೆ ತಂದೆಗಿರುವ ಹಕ್ಕು ಅಧಿಕೃತ ದಿವಾಳಿ ಆಸ್ತಿ ಅಧಿಕಾರಿಗೆ ಪ್ರಾಪ್ತವಾಗಬಾರದೆಂದು ಶಾಸನದ ಉದ್ದೇಶವಿದ್ದಿದ್ದರೆ ಪ್ರಾಂತೀಯ ದಿವಾಳಿ ಕಾಯಿದೆಯಡಿ 'ಆಸ್ತಿ' ಯೆಂಬ ಪದದ ನಿರೂಪಣೆಯು ಈಗಿರುವುದಕ್ಕಿಂತ ಬೇರೆಯಾಗಿರುತ್ತಿತ್ತು, ಮತ್ತು ಆದ್ದರಿಂದ, ನಾನು ಬಿನ್ನವಿಸಿಕೊಳ್ಳುವುದೇನಂದರೆ ನನ್ನ ಮಿತ್ರರ ಸೂಚನೆಯು ಸತ್ವಹೀನವಾಗಿದೆ. ಮಾನ್ಯರೆ, ನಾನೀಗ ಮಂಡಿಸುತ್ತೇನೆ:

**ಸಭಾಧ್ಯಕ್ಷರು :** ಪ್ರಶ್ನೆಯೆಂದರೆ:

> "೧೯೨೦ರ ಪ್ರಾಂತೀಯ ದಿವಾಳಿ ಕಾಯಿದೆಯನ್ನು ತಿದ್ದುಪಡಿ ಮಾಡುವ ವಿಧೇಯಕವನ್ನು ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ.ಬಕ್ಷಿ ತೇಕ್ ಚಂದ್, ಶ್ರೀಮತಿ ಜಿ.ದುರ್ಗಾಬಾಯಿ, ಡಾ.ಪಿ.ಎಸ್.ದೇಶಮುಖ್, ಶ್ರೀ ಎಂ.ಅನಂತಶಯನಂ ಅಯ್ಯಂಗಾರ್, ಪಂಡಿತ್ ಠಾಕುರ್ ದಾಸ್ ಭಾರ್ಗವ, ಶ್ರೀ ನಾಸಿರುದ್ದಿನ್ ಅಹಮದ್, ಮತ್ತು ಈ ಮಸೂದೆಯನ್ನು ಮಂಡಿಸಿದವರು, ಇವರನ್ನೊಳಗೊಂಡ ಪರಿಶೀಲನಾ ಸಮಿತಿಗೆ ವಹಿಸುವುದು, ಮತ್ತು ೧೬ ಮಾರ್ಚ್೧೯೪೮ರ ಮೊದಲು ವರದಿ ನೀಡಲು ಸೂಚಿಸುವುದು, ಮತ್ತು ಸಮಿತಿಯ ಸಭೆಗೆ ಅಗತ್ಯವಿರುವ ಸದಸ್ಯರ ಕನಿಷ್ಠ ಸಂಖ್ಯೆಯು ಐದೆಂದು ನಿಗದಿಪಡಿಸುವುದು."

ಈ ಮಸೂದೆಯು ಅಂಗೀಕರಿಸಲ್ಪಟ್ಟಿತು.

◆

# ೭

# *೧೯೪೬ರ ಅಂಗೀಕೃತವಾದ ಭಾರತ (ಕೇಂದ್ರ ಸರಕಾರ ಮತ್ತು ಸಂಸತ್ತು) ಕಾಯಿದೆಯ ಕಲಮು ೨ ಮತ್ತು ೩ರಲ್ಲಿ ನಮೂದಿಸಿದ ಅವಧಿ ವಿಸ್ತರಣೆಯ ಬಗ್ಗೆ ನಿರ್ಣಯ.

**ಮಾನ್ಯ ಡಾ.ಬಿ.ಆರ್.ಅಂಬೇಡ್ಕರ್** (ಕಾನೂನು ಸಚಿವರು) : ನಾನು ಮಂಡಿಸುವುದೇನೆಂದರೆ:

> ೧೯೪೭ರ "ಭಾರತ (ತಾತ್ಕಾಲಿಕ ಸಂವಿಧಾನ) ಅದೇಶದಂತೆ ಸ್ವೀಕೃತವಾದ ೧೯೪೬ರ ಭಾರತ (ಕೇಂದ್ರ ಸರಕಾರ ಮತ್ತು ಸಂಸತ್ತು) ಕಾಯಿದೆಯ ಕಲಮು ೪ ರ ವಿವರಣೆಗನುಗುಣವಾಗಿ ಈ ಶಾಸನಸಭೆಯು ಸದರಿ ಕಾಯಿದೆಯ ಕಲಮು ೨ ಮತ್ತು ೩ರಲ್ಲಿ ನಮೂದಿಸಿದ ಅವಧಿಯನ್ನು ಎಪ್ರಿಲ್ ಮೊದಲ ದಿನಾಂಕ, ೧೯೪೮ರಿಂದ ಅನ್ವಯವಾಗುವಂತೆ ಹನ್ನೆರಡು ತಿಂಗಳ ಕಾಲ ವಿಸ್ತರಿಸುವುದಕ್ಕೆ ಅನುಮೋದನೆ ನೀಡುತ್ತದೆ."

ಮಾನ್ಯರೆ ಈಗ ಈ ನಿರ್ಣಯದ ಪರವಾಗಿ ಬಹಳ ದೀರ್ಘವಾದ ಚರ್ಚೆಯಲ್ಲಿ ಒಳಗೊಳ್ಳುವ ಅಗತ್ಯ ನನಗಿಲ್ಲ. ಕೇಂದ್ರ ಸಂಸತ್ತು ಪ್ರಾಂತೀಯ ಪಟ್ಟಿಯಲ್ಲಿ ಮಾತ್ರ ಬರುವ ವಿಚಾರಗಳಾದ ಸರಕುಗಳ ಮೇಲೆ ನಿಯಂತ್ರಣಗಳ ವಿಧಿಸುವಿಕೆ, ಭೂಮಿಗಳ ಕಡ್ಡಾಯ ಕೋರಿಕೆ, ಮತ್ತು ಇತರ ವಿಚಾರಗಳ ವಿವಿಧ ಶಾಸನಗಳನ್ನು ಅಂಗೀಕರಿಸಿದೆಯೆಂದು ನಾನು ಈ ಸದನಕ್ಕೆ ಹೇಳಿದರೆ ಸಾಕೆಂದು ಕಾಣುತ್ತದೆ. ಯುದ್ಧವು ಆರಂಭವಾದಾಗ ಗವರ್ನರ್ ಜನರಲ್‌ರು ನೀಡಿದ ತುರ್ತುಸ್ಥಿತಿಯ ಘೋಷಣೆಯಿಂದಾಗಿ ಈ ಅಧಿಕಾರವನ್ನು ಕೇಂದ್ರವು ಬಳಸಲು ಸಾಧ್ಯವಾಯಿತು : ಮತ್ತು ಈ ಸದನಕ್ಕೆ ತಿಳಿದಿರುವಂತೆ, ಈ ಘೋಷಣೆಯನ್ನು ಗವರ್ನರ್ ಜನರಲ್ಲರು ನೀಡಿದ್ದರಿಂದ ಯಾವುದೇ ವಿಚಾರವು ಪ್ರಾಂತೀಯ ಶಾಸನಪಟ್ಟಿಯಲ್ಲಿದ್ದರೂ ಅದರ ಕುರಿತ ಕಾಯಿದೆ ಅಥವಾ ಆದೇಶವನ್ನು ಮಾಡುವ ಅಧಿಕಾರವನ್ನು ಕೇಂದ್ರ ಸಂಸತ್ತು ಪಡೆಯಿತು. ಗವರ್ನಮೆಂಟ್ ಆಫ್ ಇಂಡಿಯಾ ಕಾಯಿದೆಯಲ್ಲಿ ಪ್ರಾಂತೀಯ ವಿಚಾರಗಳ ಕುರಿತು ಶಾಸನ ರಚಿಸುವ ಈ ಅಧಿಕಾರವು ತುರ್ತುಸ್ಥಿತಿಯ ಘೋಷಣೆಯು ಸರಿದ ಆರು ತಿಂಗಳಲ್ಲಿ ಇಲ್ಲದಾಗುತ್ತದೆಯೆಂದು ಕಾಣಿಸಲಾಗಿದೆ. ಈ ಅಧಿಕಾರವು ೧೯೪೬ನೇ ಇಸವಿಯಲ್ಲಿ ರದ್ದಾಗಿದೆ. ತಾಂತ್ರಿಕವಾಗಿ ತುರ್ತುಸ್ಥಿತಿಯು ಇಲ್ಲದಿದ್ದರೂ ವಾಸ್ತವವಾಗಿ ಕೇಂದ್ರ ಶಾಸಕಾಂಗವು ಹೇರಿದ ನಿಯಂತ್ರಣಗಳು ಮುಂದುವರಿಯಬೇಕಾದ ತುರ್ತು ಇದೆಯೆಂದು ಆಗಿನ ಸರಕಾರಕ್ಕೆ ಅನ್ನಿಸಿತ್ತು. ತುರ್ತುಸ್ಥಿತಿಯು ಮುಗಿದ ನಂತರ ಕೇಂದ್ರವು ಈ ನಿಯಂತ್ರಣಗಳನ್ನು ಜೀವಂತವಾಗಿಡುವ ಅಧಿಕಾರವನ್ನು ಪಡೆಯಬಲ್ಲ ಯಾವುದೇ ದಾರಿಯಿರಲಿಲ್ಲವಾದ್ದರಿಂದ, ಕೇಂದ್ರ ಸಂಸತ್ತು ತನಗೆ ಅಂತಹ ಅಧಿಕಾರವನ್ನು ನೀಡಬಲ್ಲ ಪ್ರಾಧಿಕಾರವಾಗಿದ್ದ ಬ್ರಿಟಿಷ್ ಸಂಸತ್ತನ್ನು ಈ ವಿಚಾರದಲ್ಲಿ ಸೂಕ್ತ ಅವಕಾಶವನ್ನು ಮಾಡಲು ಕೋರಿತು, ಮತ್ತು ಈ ಸದನಕ್ಕೆ

---

* ಪೂರ್ವೋಕ್ತ, ಸಂ. II, ೨೫ ಫೆಬ್ರುವರಿ ೧೯೪೮, ಪು. ೧೨೨೮-೨೯.

ನೆನಪಿರುವಂತೆ ಸಂಸತ್ತು, ೧೯೪೬ರ ಭಾರತ (ಕೇಂದ್ರ ಸರಕಾರ ಮತ್ತು ಸಂಸತ್ತು) ಕಾಯಿದೆ, ಎಂಬ ಕಾಯಿದೆಯನ್ನು ೧೯೪೬ರಲ್ಲಿ ಅಂಗೀಕರಿಸಿತು. ಸದರಿ ಸಂಸದೀಯ ಶಾಸನದ ಕಲಮು ೨ ಆಧಿಪತ್ಯದ ಶಾಸನಸಭೆಗೆ ತುರ್ತುಸ್ಥಿತಿಯಲ್ಲಿ ಮಾಡಿದ ವಿಚಾರಗಳ ಕುರಿತು ಕಾಯಿದೆಗಳನ್ನು ರೂಪಿಸಲು ಅವಕಾಶ ಮಾಡಿಕೊಟ್ಟಿತು. ಆದರೆ ಸದರಿ ಸಂಸದೀಯ ಕಾಯಿದೆಯು ಮೊದಲ ಹಂತದಲ್ಲಿ ಒಂದು ವರ್ಷದ ಕಾಲ ಮಾತ್ರ ಕೇಂದ್ರ ಶಾಸಕಾಂಗಕ್ಕೆ ಈ ಅಧಿಕಾರವನ್ನು ನೀಡಿತು.

ಆ ಕಾಯಿದೆಯ ಅಂಶಗಳಡಿ, ಕೇಂದ್ರ ಶಾಸಕಾಂಗವು ೧೯೪೬ರ ಅಗತ್ಯ ಪೂರೈಕೆ (ತಾತ್ಕಾಲಿಕ ಅಧಿಕಾರಗಳು) ಕಾಯಿದೆ, ಮತ್ತು ೧೯೪೭ರ ಭೂಮಿಯ ಕಡ್ಡಾಯ ಕೋರಿಕೆ (ಅಧಿಕಾರ ಮುಂದುವರಿಕೆ) ಕಾಯಿದೆಯನ್ನು ಅಂಗೀಕರಿಸಿತು. ಆ ಕಾಯಿದೆಯು ೧೯೪೬ರಲ್ಲಿ ಅಂಗೀಕೃತವಾಯಿತು. ಸಂಸದೀಯ ಶಾಸನದಡಿ ಅದು ಮತ್ತೊಂದು ವರ್ಷಕ್ಕೆ, ಅಂದರೆ ೧೯೪೭ರ ವರೆಗೆ ತನ್ನ ಅಸ್ತಿತ್ವವನ್ನು ಮುಂದುವರಿಸಿತು;

ಈಗ, ಸಂಸದೀಯ ಶಾಸನದ ಕಲಮು ೪ರ ಅಡಿ ನಾನು ಹೇಳಿದಂತೆ ಕೇಂದ್ರವು ಈ ಅಧಿಕಾರಗಳನ್ನು ಒಂದು ವರ್ಷದ ಕಾಲ ಬಳಸಬಹುದು. ಗವರ್ನರ್ ಜನರಲ್ಲರು ದೃಢೀಕರಿಸಿದರೆ ಈ ಅಧಿಕಾರವನ್ನು ಮತ್ತೊಂದು ವರ್ಷಕ್ಕೆ ವಿಸ್ತರಿಸಲು ಅವಕಾಶ ಕಲ್ಪಿಸಿತು. ಪರಿಣಾಮವಾಗಿ ನಾನು ಉಲ್ಲೇಖಿಸಿದ ಆ ಎರಡು ಕಾಯಿದೆಗಳು ಗವರ್ನರ್ ಜನರಲ್ಲರ ಆದೇಶದಂತೆ ಮತ್ತೊಂದು ವರ್ಷಕ್ಕೆ ಮುಂದುವರಿದವು. ಈಗ, ಗವರ್ನರ್ ಜನರಲ್ಲರ ಆದೇಶದನ್ವಯ ಇವು ೩೧ ಮಾರ್ಚಿ ೧೯೪೮ರ ವರೆಗೆ ಮುಂದುವರಿಯುತ್ತವೆ. ೩೧ ಮಾರ್ಚಿ ೧೯೪೮ರ ನಂತರ ಈ ನಿಯಂತ್ರಣಗಳಿಲ್ಲದೆ ಕಾರ್ಯ ನಿರ್ವಹಿಸಲು ಸಾಧ್ಯವೇ ಎಂದು ಭಾರತ ಸರಕಾರದ ವಿವಿಧ ಇಲಾಖೆಗಳೊಂದಿಗೆ ಚರ್ಚಿಸಲಾಗಿದೆ. ಆಡಳಿತ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿರುವ ಬಹುತೇಕ ಎಲ್ಲ ಇಲಾಖೆಗಳು ಈ ನಿಯಂತ್ರಣಗಳು ಕನಿಷ್ಠ ಪಕ್ಷ ಇನ್ನೂ ಒಂದು ವರ್ಷ ಮುಂದುವರಿಯುವ ಅಗತ್ಯವಿದೆಯೆಂಬ ಅಭಿಪ್ರಾಯವನ್ನು ಹೊಂದಿವೆ.

ನಾನು ಹೇಳಿದಂತೆ, ಸಂಸದೀಯ ಶಾಸನದ ಕಲಮು ೪ ಮೊದಲ ಹಂತದಲ್ಲಿ ಒಂದು ವರ್ಷಕ್ಕೆ ಈ ಅಧಿಕಾರವನ್ನು ನೀಡಿತು, ಎರಡನೆಯ ಹಂತದಲ್ಲಿ ಗವರ್ನರ್ ಜನರಲ್ಲರ ಆದೇಶದಂತೆ ಮತ್ತೊಂದು ವರ್ಷ, ಮತ್ತು ತದನಂತರ ಈ ಸದನದ ಒಂದು ನಿರ್ಣಯದಿಂದ ಮತ್ತೂ ಒಂದು ವರ್ಷ ಅಧಿಕಾರವನ್ನು ಪಡೆಯಿತು. ಆದ್ದರಿಂದ ವಸ್ತುಸ್ಥಿತಿಯು ಹೀಗಿದೆ, ಅಂದರೆ, ಈ ಸದನವು ಆ ಅಧಿಕಾರವನ್ನು ವಿಸ್ತರಿಸುವ ಒಂದು ನಿರ್ಣಯವನ್ನು ಅಂಗೀಕರಿಸದಿದ್ದರೆ ಈ ಅಧಿಕಾರಗಳು ೩೧ ಮಾರ್ಚಿ ೧೯೪೮ರಂದು ಕೊನೆಗೊಳ್ಳುತ್ತವೆ. ಈ ಸದನಕ್ಕೆ ನೆನಪಿರುವಂತೆ, ನಾನು ಒಬ್ಬ ಕಾನೂನು ಸಚಿವ ಮಾತ್ರ, ನನಗೆ ಭಾರತ ಸರಕಾರದ ವ್ಯವಹಾರಗಳ ಆಡಳಿತ ಜವಾಬ್ದಾರಿಗಳಿಲ್ಲ, ಮತ್ತು ಆದ್ದರಿಂದ ವಾಸ್ತವವಾಗಿ ಈ ವಿಸ್ತರಣೆ ಅಗತ್ಯವಿದೆಯೇ ಎಂದು ಕೇಳಿದರೆ ನಾನು ಉತ್ತರಿಸುವ ಸ್ಥಿತಿಯಲ್ಲಿಲ್ಲ, ಆದರೆ ಎಲ್ಲ ಇಲಾಖೆಗಳೂ ಈ ವಿಸ್ತರಣೆ ಅಗತ್ಯವಿದೆಯೆಂದು ಒಪ್ಪಿಕೊಂಡಿವೆಯೆಂದು ನಾನು ಈ ಸದನಕ್ಕೆ ಹೇಳಬಲ್ಲೆ ಮತ್ತು ಈ ಸದನವು ಭಾರತ ಸರಕಾರದ ಇಲಾಖೆಗಳ ನಿಲುವನ್ನು ಸ್ವೀಕರಿಸುತ್ತದೆಯೆಂದು ಮತ್ತು ಈ ನಿರ್ಣಯವನ್ನು ಅಂಗೀಕರಿಸುತ್ತದೆಯೆಂದು ಆಶಿಸುತ್ತೇನೆ. ಇಂತಹ ಒಂದು ವಿಚಾರದ ಕುರಿತ ವಿವರಗಳನ್ನು ಅಪೇಕ್ಷಿಸುವ ಯಾವುದಾದರೂ ಪ್ರಶ್ನೆಗಳನ್ನು ಉತ್ತರಿಸಲು ನನ್ನ ಮಿತ್ರ ಡಾ.ಶ್ಯಾಮಪ್ರಸಾದ ಮುಖರ್ಜಿಯವರನ್ನು ನನ್ನ ಬೆಂಬಲಕ್ಕೆ ಕರೆಯುವ ಜಾಗ್ರತೆಯನ್ನು ನಾನು ವಹಿಸಿದ್ದೇನೆ. ಮಾನ್ಯರೆ ನಾನು ಈ ಮಸೂದೆಯನ್ನು ಮಂಡಿಸಲಿದ್ದೇನೆ.

**ಸಭಾಧ್ಯಕ್ಷರು:** ಮಸೂದೆಯು ಮಂಡಿಸಲ್ಪಟ್ಟಿದೆ:

"೧೯೪೭ರ ಭಾರತ (ತಾತ್ಕಾಲಿಕ ಸಂವಿಧಾನ) ಅದೇಶದಂತೆ ಸ್ವೀಕೃತವಾದ ೧೯೪೬ರ ಭಾರತ (ಕೇಂದ್ರ ಸರಕಾರ ಮತ್ತು ಸಂಸತ್ತು) ಕಾಯಿದೆ, ೧೯೪೬ರ ಕಲಮು ೪ ರ ವಿವರಣೆಗನುಗುಣವಾಗಿ ಈ ಶಾಸನಸಭೆಯು ಸದರಿ ಕಾಯಿದೆಯ ಕಲಮು ೨ ಮತ್ತು ೩ರಲ್ಲಿ ನಮೂದಿಸಿದ ಅವಧಿಯನ್ನು ಎಪ್ರಿಲ್ ಮೊದಲ ದಿನಾಂಕ, ೧೯೪೮ರಿಂದ ಅನ್ವಯವಾಗುವಂತೆ ಹನ್ನೆರಡು ತಿಂಗಳ ಕಾಲ ವಿಸ್ತರಿಸುವುದಕ್ಕೆ ಅನುಮೋದನೆ ನೀಡುತ್ತದೆ."

◆

## ವಿಭಾಗ – ಎರಡು

# ೩ನೇ ಫೆಬ್ರವರಿ ೧೯೫೦
# ರಿಂದ
# ೨೦ ಎಪ್ರಿಲ್ ೧೯೫೦ರ ವರೆಗೆ

# ವಿಭಾಗ – ಎರಡು

## ಪರಿವಿಡಿ


೮. ದಿವಾಳಿ ಕಾಯಿದೆ (ತಿದ್ದುಪಡಿ) ಮಸೂದೆ ೪೯

೯. ದಂಡಪ್ರಕ್ರಿಯೆ ಕಾಯಿದೆ (ತಿದ್ದುಪಡಿ) ಮಸೂದೆ ೫೫

೧೦. ಬಂಧನದಿಂದ ಮೀರ್ ಲಾಯಿಕ್ ಆಲಿಯ ಪರಾರಿ ೫೮

೧೧. ಸಂಸತ್ (ಅನರ್ಹತೆ ತಡೆಗಟ್ಟುವಿಕೆ) ಮಸೂದೆ ೭೦

೧೨. ಮುಂದೂಡಿಕೆ ನಿಲುವಳಿ ಸೂಚನೆ ೮೬

೧೩. ಸಂಘಗಳ ನೋಂದಣಿ (ತಿದ್ದುಪಡಿ) ಮಸೂದೆ ೮೭

೧೪. ಸೇನಾ ಮಸೂದೆ ೮೯

೧೫. ಸಿ ದರ್ಜೆಯ ರಾಜ್ಯಗಳ (ಕಾಯಿದೆ) ಮಸೂದೆ ೯೬

೧೬. ಜನಪ್ರಾತಿನಿಧ್ಯ ಮಸೂದೆ ೧೦೬

# ೮

## *ದಿವಾಳಿ ಕಾಯಿದೆ (ತಿದ್ದುಪಡಿ) ಮಸೂದೆ

**ಕಾನೂನು ಸಚಿವರು (ಡಾ.ಅಂಬೇಡ್ಕರ್):** ಮಾನ್ಯರೆ, ನಾನು ಈ ಮಸೂದೆಯನ್ನು ಮಂಡಿಸುತ್ತೇನೆ:

"ದಿವಾಳಿಗೆ ಸಂಬಂಧಿಸಿದ ಕಾಯಿದೆಯನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಗಣಿಸಬೇಕು."

ಮಾನ್ಯರೆ, ಈ ಮಸೂದೆಯು ವಸ್ತುಶಃ ಏನು ಮಾಡಲು ಉದ್ದೇಶಿಸಿದೆಯೆಂಬುದನ್ನು ಈ ಸದನವು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಒಂದು ಸಂಕ್ಷಿಪ್ತ ಹೇಳಿಕೆಯನ್ನು ನೀಡಲು ಇಚ್ಛಿಸಿದ್ದೇನೆ. ಭಾರತದಲ್ಲಿ ದಿವಾಳಿ ಕಾಯಿದೆಯು ಎರಡು ಪ್ರತ್ಯೇಕ ಕಾಯಿದೆಗಳನ್ನೊಳಗೊಂಡಿದೆ: ಒಂದು, ಪ್ರಾಂತೀಯ ದಿವಾಳಿ ಕಾಯಿದೆ ಮತ್ತು ಇನ್ನೊಂದು ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಕಾಯಿದೆ. ಪ್ರಸ್ತುತ ಈ ಮಸೂದೆಯು ಸಂಕ್ಷಿಪ್ತ ಶೀರ್ಷಿಕೆಯಲ್ಲದೆ ಈಗಿರುವ ದಿವಾಳಿ ಕಾನೂನಿನಲ್ಲಿ ತಿದ್ದುಪಡಿಮಾಡುವ ಆರು ಉಪಬಂಧಗಳನ್ನೊಳಗೊಂಡಿದೆ. ಈ ಮಸೂದೆಯಲ್ಲಿ ತಿದ್ದುಪಡಿಮಾಡುವ ಉಪಬಂಧಗಳು ಎರಡು ವಿಭಾಗಗಳಿಗೊಳಪಡುತ್ತವೆ: ಕೆಲವು ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಕಾಯಿದೆಯಲ್ಲಿ ಬದಲಾವಣೆಮಾಡುತ್ತವೆ ಮತ್ತು ಉಳಿದವುಗಳು ಪ್ರಾಂತೀಯ ದಿವಾಳಿ ಕಾಯಿದೆಯಲ್ಲಿ ಬದಲಾವಣೆಯನ್ನು ಸೂಚಿಸುತ್ತವೆ. ಪ್ರಾಂತೀಯ ದಿವಾಳಿ ಕಾಯಿದೆಯಲ್ಲಿ ಬದಲಾವಣೆಯನ್ನು ಮಾಡುವವು ನಾಲ್ಕು ರೀತಿಯವು; ಅವು ಉಪಬಂಧ ೩ರಿಂದ ೬ರವರೆಗೆ ಇವೆ ಮತ್ತು ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಕಾಯಿದೆಗೆ ಸಂಬಂಧಿಸಿದವು ಎರಡಿವೆ.

ಉಪಬಂಧ ೨ ನ್ನು ಪರಿಗಣಿಸುವುದಾದರೆ, ಅದು ಮಾಡುವುದೆಂದರೆ ದೀರ್ಘಾವಧಿಯಿಂದ ಯೋಚಿಸಿದ್ದ ಒಂದು ತೊಡಕನ್ನು ನಿವಾರಿಸುವುದು. ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಕಾಯಿದೆಯ ಕಲಮು ೧೨ರಲ್ಲಿ ಹೇಳಿರುವಂತೆ ಈಗಿರುವ ಕಾನೂನಿನಲ್ಲಿ, ಅರ್ಜಿ ಹಾಕಲು ಸಮರ್ಥನೀಯವಾದ ಕಾರಣವೆಂದು ಗುರುತಿಸಬಲ್ಲ ಸಂಗತಿಯು ನಡೆದಾದ ಮೂರು ತಿಂಗಳೊಳಗೆ ದಿವಾಳಿ ಅರ್ಜಿಯನ್ನು ಸಲ್ಲಿಸಬೇಕೆಂದು ಹೇಳಿದೆ. ಅನೇಕ ಬಾರಿ ಈ ಮೂರು ತಿಂಗಳ ಅವಧಿಯು ನ್ಯಾಯಾಲಯಗಳು ಮುಚ್ಚಿರುವಾಗ ಕೊನೆಗೊಳ್ಳುತ್ತದೆ. ಈಗಿರುವ ಕಾನೂನಿನಂತೆ, ನ್ಯಾಯಾಲಯಗಳು ಪುನರಾರಂಭಗೊಂಡಾಗ ಅರ್ಜಿಗೆ ಕಾರಣವಾದ ಸಂಗತಿಯು ನಡೆದು ಮೂರು ತಿಂಗಳುಗಳು ದಾಟಿರುವ ಒಂದೇ ಕಾರಣದಿಂದ ಸಾಲ ನೀಡಿದವನು ಅರ್ಜಿಸಲ್ಲಿಸುವ ಅವಕಾಶವನ್ನು ಕಳೆದುಕೊಳ್ಳುತ್ತಾನೆ. ನ್ಯಾಯಾಲಯಗಳು ಈ ವಿಚಾರವಾಗಿ ಸಹಜವಾಗಿಯೇ ಭಿನ್ನ ನಿಲುವುಗಳನ್ನು ತಳೆದಿವೆ. ಮದ್ರಾಸು ಮತ್ತು ಕಲ್ಕತ್ತ ಉಚ್ಚ ನ್ಯಾಯಾಲಯಗಳು ಈ ಅವಧಿಯನ್ನು ವಿಸ್ತರಿಸಲಾಗದೆಂದು ಹೇಳಿವೆ. ಅಲಹಾಬಾದ್ ಉಚ್ಚ ನ್ಯಾಯಾಲಯವು ಈ ಅವಧಿಯನ್ನು ವಿಸ್ತರಿಸಬಹುದೆಂದು ಹೇಳಿದೆ. ಆದ್ದರಿಂದ ಅನ್ಯಾಯವೆಂದು ಕರೆಯಬಹುದಾದದ್ದನ್ನು ನಿವಾರಿಸುವ–

---

* Parliamentary Debates, Vol. I, ಭಾಗ II, ೩ ಫೆಬ್ರುವರಿ ೧೯೫೦, ಪು. ೧೮೪೫–೯೩. (ಇನ್ನು ಮುಂದೆ ಇದನ್ನು P.D. ಎಂದು ಸೂಚಿಸಲಾಗುತ್ತದೆ.

ಏಕೆಂದರೆ ನ್ಯಾಯಾಲಯಗಳು ಮುಚ್ಚಿರುವಕಾರಣ ಅರ್ಜಿಯನ್ನು ಸಲ್ಲಿಸಲಾಗದ ಅಂಶವು ಸಾಲ ನೀಡಿದವನ ತಪ್ಪಲ್ಲವಾದ್ದರಿಂದ, ಮತ್ತು ಎರಡನೆಯದಾಗಿ ಭಿನ್ನ ತೀರ್ಪುಗಳನ್ನು ಹೋಗಲಾಡಿಸುವ ಉದ್ದೇಶದಿಂದ, ಹೀಗೆ ಈ ಎರಡೂ ಕಾರಣಗಳಿಗಾಗಿ ಯಾವುದೇ ಸಂದರ್ಭದಲ್ಲಿ ಈ ಅವಧಿಯು ನ್ಯಾಯಾಲಯವು ಮುಚ್ಚಿದ ದಿನದಂದು ಮುಕ್ತಾಯವಾದರೆ ಆ ಅರ್ಜಿಯನ್ನು ನ್ಯಾಯಾಲಯವು ಪುನರಾರಂಭವಾಗುವ ದಿನದಂದು ಸಲ್ಲಿಸುವುದು ಕಾನೂನಿನನ್ವಯ ಊರ್ಜಿತವಾಗುತ್ತದೆಯೆಂಬುದನ್ನು ಈ ತಿದ್ದುಪಡಿಯು ಪ್ರಸ್ತಾವಿಸುತ್ತದೆ.

ಉಪಬಂಧ ೩ರ ಕುರಿತು ಹೇಳುವುದಾದರೆ, ಅದು ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಕಾಯಿದೆಯ ೨೧ನೇ ಕಲಮನ್ನು ತಿದ್ದುಪಡಿಮಾಡುತ್ತದೆ. ಕಲಮು ೨೧ ತೀರ್ಪುಗಳ ರದ್ದತಿಯನ್ನೊಳಗೊಂಡಿದೆ. ಕಲಮು ೨೧ರಡಿ, ರದ್ದತಿಯ ಅಧಿಕಾರವನ್ನು ನ್ಯಾಯಾಲಯಕ್ಕೆ ನೀಡಿದ್ದರೂ ಆ ವಿಚಾರವನ್ನು ನ್ಯಾಯಾಲಯದ ವಿವೇಚನೆಗೆ ಬಿಡಲಾಗಿದೆ. ಅಲ್ಲಿರುವ ಪದಗಳು "ನ್ಯಾಯಾಲಯವು ಮಾಡಬಹುದು" ಎಂದಿವೆ. ಹಾಗಿದ್ದರೆ, ಕಲಮು ೨೧ ಪ್ರಾಂತೀಯ ದಿವಾಳಿ ಕಾಯಿದೆಯ ೩೫ನೇ ಕಲಮಿಗೆ ವಿರೋಧವಾಗಿದೆ: ಏಕೆಂದರೆ, ಪ್ರಾಂತೀಯ ದಿವಾಳಿ ಕಾಯಿದೆಯ ಕಲಮು ೩೫ರಡಿ ಈ ಅಧಿಕಾರವನ್ನು ಪ್ರಯೋಗಿಸತಕ್ಕದ್ದು ಎಂದಿದೆ ಮತ್ತು ಅಲ್ಲಿರುವ ಪದಗಳು "ನ್ಯಾಯಾಲಯವು ಮಾಡತಕ್ಕದ್ದು" ಎಂದಿವೆ. ಅದೇ ರೀತಿ ಈಗಿರುವ ಕಲಮು ೨೧ರಡಿ ಅದರದ್ದೇ ಕಲಮು ೧೩ ಉಪಬಂಧ ೪ಕ್ಕೆ ವಿರೋಧವಾದ ಅಂಶಗಳಿವೆ. ಏಕೆಂದರೆ, ಅಲ್ಲಿ ಹೇಳಿರುವುದೇನೆಂದರೆ ಒಂದು ಅರ್ಜಿಯನ್ನು ವಜಾ ಮಾಡುವ ಅಂಶಗಳಿವೆಯಾದರೆ ನ್ಯಾಯಾಲಯವು ಅದನ್ನು ವಜಾ ಮಾಡತಕ್ಕದ್ದು. ರದ್ದತಿಯ ಅಧಿಕಾರವು ವಿವೇಚನೆಗೆ ಬಿಟ್ಟದ್ದಾದರೆ ವಜಾಗೊಳಿಸುವ ಅಧಿಕಾರವು ಕಡ್ಡಾಯವಾಗಿರಬೇಕೆಂಬುದು ಸಕಾರಣವಾಗುವುದಿಲ್ಲ. ಆದ್ದರಿಂದ ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಕಾಯಿದೆಯನ್ನು ಪ್ರಾಂತೀಯ ದಿವಾಳಿ ಕಾಯಿದೆಗೆ ಹೊಂದುವ ರೀತಿಯಲ್ಲಿ ಬದಲಾಯಿಸುವುದು ಉಚಿತವೆಂದು ಭಾವಿಸಲಾಗಿದೆ ಮತ್ತು "ಮಾಡಬಹುದು" ಎಂಬ ಪದಕ್ಕೆ ಬದಲಾಗಿ "ಮಾಡತಕ್ಕದ್ದು" ಎಂಬ ಪದವನ್ನು ಬಳಸಲುದ್ದೇಶಿಸಲಾಗಿದೆ.

ನಂತರ ಉಪಬಂಧ ೪ನ್ನು ಪರಿಗಣಿಸಬಯಸುತ್ತೇನೆ. ಉಪಬಂಧ ೪ ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಕಾಯಿದೆಯ ಕಲಮು ೫೩ನ್ನು ತಿದ್ದುಪಡಿಮಾಡುತ್ತದೆ. ಕಲಮು ೫೩ ದಿವಾಳಿಯೆಂದು ತೀರ್ಪಾಗುವ ಮುನ್ನವೇ ದಿವಾಳಿಹೊಂದಿದವನ ಆಸ್ತಿಯ ವಿರುದ್ಧ ಡಿಕ್ರಿ ಪಡೆದುಕೊಂಡ ಸಾಲನೀಡಿದವನ ಹಕ್ಕುಗಳನ್ನೊಳಗೊಂಡಿದೆ. ಪ್ರಶ್ನೆಯೆಂದರೆ ಸಾಲನೀಡಿದವನ ಅಮಲ್ ಜ್ಯಾರಿಯ ಹಕ್ಕುಗಳ ಕೊನೆಯಾವುದೆಂಬುದು: ಅರ್ಜಿಯ ಸಲ್ಲಿಕೆ ಮತ್ತು ಅಂಗೀಕಾರವು ಕೊನೆಯೆಂದು ತಿಳಿಯಬೇಕೇ ಅಥವಾ ತೀರ್ಪು ಕೊನೆಯೆಂದು ತಿಳಿಯಬೇಕೇ ಎಂಬುದು. ಸರಿಯಾದ ಕೊನೆಯು, ನ್ಯಾಯಬದ್ಧ ಕೊನೆಯು ಅರ್ಜಿಯ ಸ್ವೀಕೃತಿಯೆಂದು ಭಾವಿಸಲಾಗಿದೆ; ಏಕೆಂದರೆ, ಅರ್ಜಿಯ ಅಂಗೀಕಾರವೆಂದರೆ ಸಾಲಗಾರನ ಆಸ್ತಿಯಲ್ಲಿ ಪಾಲಿನ ಹಕ್ಕು ಇರುವವರೆಂದು ತಿಳಿಯಬೇಕಾದ ಇತರ ಸಾಲನೀಡಿದವರು ಇದ್ದಾರೆಂದು ಅರ್ಥ. ಆದ್ದರಿಂದ ಪ್ರಕರಣವು ಇತ್ಯರ್ಥವಾಗುವ ಮುನ್ನ ಮೊದಲ ಅಮಲ್ಜಾರಿದಾರರಿಗೆ ಆಸ್ತಿಯನ್ನು ವಿನಿಯೋಗಿಸಲು ಅವಕಾಶ ನೀಡುವುದು ಅನುಚಿತವಾಗುತ್ತದೆ. ದಿವಾಳಿ ಅರ್ಜಿಯ ಅಂಗೀಕಾರ ಮತ್ತು ನ್ಯಾಯಾಲಯದಿಂದ ಪ್ರಕರಣದ ವಾಸ್ತವ ಇತ್ಯರ್ಥ– ಇವುಗಳ ನಡುವೆ ಸಾಕಷ್ಟು ಅವಧಿಯಿರಬಹುದು. ಆದ್ದರಿಂದ, ಈ ಕಲಮು 'ಇತ್ಯರ್ಥ' ಎಂಬ ಪದಕ್ಕೆ ಬದಲಾಗಿ 'ಅಂಗೀಕಾರ' ಎಂಬ ಪದವನ್ನು ಬಳಸುತ್ತದೆ.

ನಾನೀಗ ೫ನೇ ಉಪಬಂಧವನ್ನು ಪರಿಗಣಿಸುತ್ತೇನೆ. ೫ನೇ ಉಪಬಂಧವು ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಕಾಯಿದೆ ಯಲ್ಲಿ ಕಲಂ ೧೦೧ಎ ಎಂಬ ಹೊಸ ಕಲಮನ್ನು ಸೇರಿಸುತ್ತದೆ. ಈ ಹೊಸ ಕಲಮಿನ ಸೇರ್ಪಡೆಯ ಅಗತ್ಯವು ಇದು: ನಾನೀಗಷ್ಟೇ ಹೇಳಿದಂತೆ, ತೀರ್ಪಿನ ರದ್ದತಿಗೆ ಒಂದು ಅವಕಾಶವಿದೆ. ತೀರ್ಪಿನ ರದ್ದತಿಯ ಪರಿಣಾಮವೆಂದರೆ ಇತ್ಯರ್ಥದಿಂದಾಗಿ ಮುಗಿದ ಇಲ್ಲವೇ ಹೂಡಲಾಗದ ನಡವಳಿಕೆಗಳು ಮುಕ್ತವಾಗುತ್ತವೆ. ಈ ಕಲಮು ನೀಡುವ ಅವಕಾಶವೆಂದರೆ ಅಂತಹ ರದ್ದತಿಯ ನಂತರ ಸಾಲಗಾರನ ವಿರುದ್ಧ ವ್ಯಾಜ್ಯ ಹೂಡುವ ಇಲ್ಲವೇ ಕ್ರಮಕೈಗೊಳ್ಳುವ ಹಕ್ಕಿರುವ ಇತರರು ಹಾಗೆ ಮಾಡಲು ಸ್ವತಂತ್ರರಿರುತ್ತಾರೆ. ಆದರೆ ಅವಧಿಬಾಧಕ ಕಾನೂನು ಅವರಿಗೆ ಅಡ್ಡಿಯಾಗುತ್ತದೆ. ಈ ಸದನದ ವಕೀಲ ಸದಸ್ಯರಿಗೆ ಗೊತ್ತಿರುವಂತೆ, ಅವಧಿಬಾಧಕ ಕಾನೂನಿನ ಒಂದು ತತ್ವವೆಂದರೆ ಒಮ್ಮೆ ಅವಧಿಬಾಧಕತ್ವವು ಆರಂಭವಾದರೆ ಅದು ನಿಲ್ಲುವುದಿಲ್ಲ. ಯಾರೂ ಅವಧಿಬಾಧಕತ್ವವನ್ನು ಅಮಾನತ್ತಿನಲ್ಲಿಡಲು ಶಕ್ತರಲ್ಲ. ಆದ್ದರಿಂದ ಆಗುವುದೇನೆಂದರೆ ..........

**ಶ್ರೀ ತ್ಯಾಗಿ** (ಉತ್ತರ ಪ್ರದೇಶ) : ನನಗೆ ಅರ್ಥವಾಗಿಲ್ಲ.

**ಡಾ.ಅಂಬೇಡ್ಕರ್:** ನಾನೀಗ ಪಾಠ ಹೇಳಲು ಸಾಧ್ಯವಿಲ್ಲ.

ಪ್ರಸ್ತುತ ವಿಷಯವೇನೆಂದರೆ ರದ್ದತಿಗೆ ಬಹು ಮೊದಲೇ ವ್ಯಾಜ್ಯದ ಹಕ್ಕು ಆರಂಭವಾಗುವುದರಿಂದ, ರದ್ದತಿಯ ಆದೇಶವು ಬರುವ ಹೊತ್ತಿಗೆ, ದಾವೆ ಅಥವಾ ನಡವಳಿಕೆಗಳು ಅವಧಿಬಾಧಕವಾಗಿರುತ್ತವೆ. ಹೀಗೆ ಮಾಡುವುದು ಸರಿಯೇ ಎಂಬ ಪ್ರಶ್ನೆಯನ್ನು ಎತ್ತಲಾಗಿದೆ, ಏಕೆಂದರೆ ನಡವಳಿಕೆಗಳು ಅಥವಾ ವ್ಯಾಜ್ಯದ ಹಕ್ಕುಗಳನ್ನು ಅಮಾನತ್ತಿನಲ್ಲಿಟ್ಟರೆ, ಅದು ಅಮಾನತ್ತಾಗಿರುವುದು ವ್ಯಾಜ್ಯದ ಹಕ್ಕುಳ್ಳವನ ತಪ್ಪಿಗಾಗಿ ಅಲ್ಲ, ಬದಲಾಗಿ ಇತ್ಯರ್ಥವನ್ನು ಮಾಡಿದಾಗ ಎಲ್ಲಾ ನಡವಳಿಕೆಗಳು ಅಮಾನತ್ತಾಗುತ್ತವೆಯೆಂಬ ಕಾನೂನಿನ ಹೇಳಿಕೆಯಿಂದಾಗಿ. ಪರಿಣಾಮವಾಗಿ, ಈ ಅಸಮತೋಲವನ್ನು ಹೋಗಲಾಡಿಸುವುದಕ್ಕಾಗಿ, ಈಗ ಪ್ರಸ್ತಾವಿಸಿರುವುದು ಹೀಗೆ: ಈ ಹೊಸ ಕಲಮು ೧೦೧ಎ ಯ ಮೂಲಕ, ನ್ಯಾಯಾಲಯಕ್ಕೂ ಕಕ್ಷಿದಾರನಿಗೂ ತೀರ್ಪು ಮತ್ತು ರದ್ದತಿಯ ನಡುವೆ ಸಂದ ಅವಧಿಯನ್ನು ಕಾನೂನಿನಡಿ ಅವಧಿಬಾಧಕತ್ವವನ್ನು ಲೆಕ್ಕಹಾಕುವಾಗ ವಜಾಗೊಳಿಸಬಹುದು, ಮತ್ತು ಇದರಿಂದಾಗಿ ರದ್ದತಿಯು ಉಂಟಾದಾಗ ವ್ಯಾಜ್ಯದ ಹಕ್ಕು ಆರಂಭವಾಗುತ್ತದೆಯೆಂದಾಗುತ್ತದೆ. ಹೇಗಿದ್ದರೂ ಈ ಅವಧಿಯು ವ್ಯಾಜ್ಯದ ಹಕ್ಕುಳ್ಳವನ ಪಾಲಿನ ಯಾವುದೇ ವಿಳಂಬ ಇಲ್ಲವೇ ಲೋಪಕ್ಕೆ ಹೆಚ್ಚಿನದ್ದಾದ ಅಡ್ಡಿಯಾಗಿ ಪರಿಣಮಿಸುವುದಿಲ್ಲ.

ಈಗ, ೬ನೇ ಉಪಬಂಧವು ಮಸೂದೆಯ ೨ನೇ ಉಪಬಂಧವೇ ಆಗಿದೆ. ಅದು ಮಾಡುವುದೆಂದರೆ, ಅದು ಪ್ರಾಂತೀಯ ದಿವಾಳಿ ಕಾಯಿದೆಯಲ್ಲಿ ಇದೇ ಪರಂತುಕವನ್ನು ಸೇರಿಸುತ್ತದೆ, ಮತ್ತು ಅದರಿಂದಾಗಿ ಪ್ರಾಂತೀಯ ದಿವಾಳಿ ಕಾಯಿದೆಯಡಿ ಕೂಡಾ ಅರ್ಜಿಯನ್ನು ದಾಖಲಿಸುವ ಮೂರು ತಿಂಗಳ ಅವಧಿಯು ನ್ಯಾಯಾಲಯವು ಮುಚ್ಚಿದ ದಿನ ಮುಗಿದಿದ್ದರೆ, ನ್ಯಾಯಾಲಯವು ಪುನರಾರಂಭವಾಗುವ ದಿನ ಅದನ್ನು ದಾಖಲಿಸಲು ಮನವಿದಾರನು ಸ್ವತಂತ್ರನಾಗಿರುತ್ತಾನೆ.

ಕೊನೆಯ ಉಪಬಂಧವು ಕೂಡಾ ಪ್ರಾಂತೀಯ ದಿವಾಳಿ ಕಾಯಿದೆಯನ್ನು ತಿದ್ದುಪಡಿಮಾಡುತ್ತದೆ. ಈಗಿರುವ ಕಾನೂನಿನಂತೆ, ಇತ್ಯರ್ಥದ ಆದೇಶದೊಂದಿಗೆ, ನ್ಯಾಯಾಲಯವು ಅರ್ಜಿದಾರನ ವಿಮೋಚನೆಗೆಂದು ಒಂದು ದಿನಾಂಕವನ್ನು ಗೊತ್ತುಪಡಿಸುತ್ತದೆ ಮತ್ತು ಅರ್ಜಿದಾರನು ಆತನ ವಿಮೋಚನೆಗಾಗಿ ಗೊತ್ತುಪಡಿಸಿದ ದಿನಾಂಕದಂದು ಹಾಜರಾಗಬೇಕಾಗುತ್ತದೆ. ಈಗ, "ಆತನು ಹಾಜರಾಗತಕ್ಕದ್ದು ಮತ್ತು ನ್ಯಾಯಾಲಯವು, ಆತನು ಹಾಜರಾಗದಿದ್ದರೆ, ಹಾಜರು ಮಾಡತಕ್ಕದ್ದು' ಎಂಬ ಪದಗಳು ಅಲ್ಲಿ ಹೇಳಲಾದ

ಒಂದು ಗೊತ್ತಾದ ಕ್ರಮವನ್ನು ಸೂಚಿಸುತ್ತವೆ.ಈ ಕಲಮು ತನ್ನ ಪದಸಾಧ್ಯತೆಗಳಿಂದಾಗಿ ಕ್ರಮವನ್ನು ಒತ್ತಾಯಿಸುತ್ತದೆ, ಆದರೆ ಅಚ್ಚರಿಯ ಅಂಶವೆಂದರೆ ನ್ಯಾಯಾಲಯಗಳು 'ಮಾಡತಕ್ಕದ್ದು' ಎಂಬುದನ್ನು 'ಮಾಡಬಹುದು' ಎಂದು ಅರ್ಥೈಸಿ ಅವನ್ನು ವಿವೇಚಕವಾಗಿಸಿವೆ. ಪ್ರಾಯಃ 'ಮಾಡತಕ್ಕದ್ದು' ಎಂಬುದನ್ನು 'ಮಾಡಬಹುದು' ಎಂದು ಅರ್ಥೈಸುವ ಮೂಲಕ ಶಾಸನದ ಉದ್ದೇಶವನ್ನು ನ್ಯಾಯಾಲಯಗಳು ನಿಜವಾಗಿ ಈಡೇರಿಸಿವೆಯೆಂದು ತಿಳಿಯಬಹುದು. ಹಾಗೆಯೇ, ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಕಾಯಿದೆಯಲ್ಲೂ 'ಮಾಡಬಹುದು' ಎಂಬ ಪದವಿದೆಯೇ ಹೊರತು 'ಮಾಡತಕ್ಕದ್ದು' ಎಂಬ ಪದವಿಲ್ಲ. ಆದ್ದರಿಂದ, ಈ ತಿದ್ದುಪಡಿಯು ನ್ಯಾಯಾಲಯದ ತೀರ್ಪನ್ನು ಅಥವಾ ಅರ್ಥೈಸುವಿಕೆಯನ್ನು ಅಂಗೀಕರಿಸಿ 'ಮಾಡತಕ್ಕದ್ದು' ಎಂಬುದನ್ನು 'ಮಾಡಬಹುದು' ಎಂಬ ಪದಕ್ಕೆ ಬದಲಾಯಿಸಲು ಪ್ರಸ್ತಾವಿಸಿದೆ. ಇವಿಷ್ಟೇ ಈ ಮಸೂದೆಯ ಉಪಬಂಧಗಳು.

ಈ ತಿದ್ದುಪಡಿಗಳು ಯಾವಾಗಲೋ ಆಗಬೇಕಾಗಿದ್ದವೆಂದು ನಾನು ಹೇಳಬಯಸುತ್ತೇನೆ. ತುಂಬ ಹಿಂದೆಯೇ, ಅಂದರೆ ಯುದ್ಧಕ್ಕೆ ಮೊದಲೇ, ಈ ತಿದ್ದುಪಡಿಗಳನ್ನು ಸಲಹೆಮಾಡಲಾಗಿತ್ತಾದರೂ, ಆದರೆ ಯುದ್ಧವಿದ್ದಾಗ ಯಾವುದೇ ಶಾಸನವನ್ನೂ ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಪರಿಣಾಮವಾಗಿ ವಿಳಂಬವಾಗಿದೆ. ಈ ತಿದ್ದುಪಡಿಗಳನ್ನು ಪ್ರಾಂತೀಯ ಸರಕಾರಗಳು ಅಂಗೀಕರಿಸಿವೆಯೆಂದಬುದನ್ನು ನಾನು ಈ ಸದನಕ್ಕೆ ಹೇಳಬಹುದು, ಮತ್ತು ದಿವಾಳಿತನದ ವಿಚಾರವು ಸಮವರ್ತಿ ಪಟ್ಟಿಯಲ್ಲಿರುವುದಾದರೂ ದೇಶದುದ್ದಕ್ಕೂ ಏಕರೂಪತೆಯನ್ನು ಪಡೆಯುವುದಕ್ಕಾಗಿ ಈ ತಿದ್ದುಪಡಿಗಳನ್ನು ಸಂಸತ್ತಿನ ಕಾನೂನಿನ ಮೂಲಕ ಮಾಡುವುದು ಒಳ್ಳೆಯದೆಂದು ಪ್ರಾಂತೀಯ ಸರಕಾರಗಳು ಹೇಳಿವೆ. ಈ ಕಾರಣಕ್ಕಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

**ಸಭಾಪತಿ :** ವಿಧೇಯಕವನ್ನು ಮಂಡಿಸಲಾಗಿದೆ :

"ದಿವಾಳಿಗೆ ಸಂಬಂಧಿಸಿದ ಕಾಯಿದೆಯನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಗಣಿಸಬೇಕು."

***ಡಾ.ಅಂಬೇಡ್ಕರ್:** ನನ್ನ ಸ್ನೇಹಿತ ಶ್ರೀ ಬಿಶ್ವನಾಥ ದಾಸ್ ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ ಅಂಶಗಳನ್ನು ಎತ್ತಿದ್ದು ನನಗೆ ಸಂತೋಷವನ್ನುಂಟುಮಾಡಿದೆ. ಈ ವಿಧೇಯಕವನ್ನು ಮಂಡಿಸುವ ಮೊದಲು ಈ ಎರಡೂ ಕಾಯಿದೆಗಳನ್ನು ಒಂದೇ ಕಾಯಿದೆಯಾಗಿ ವಿಲೀನಗೊಳಿಸುವ ಸಮಯ ಬಂದಿದೆಯೆಂದು ನಾನೇ ಅಭಿಪ್ರಾಯಪಟ್ಟಿದ್ದೆ. ನಮ್ಮ ದಿವಾಳಿ ಕಾಯಿದೆಗಳಲ್ಲಿರುವ ಪ್ರೆಸಿಡೆನ್ಸಿ ಪಟ್ಟಣಗಳ ಮತ್ತು ಇತರ ಪ್ರದೇಶಗಳ ನಡುವಣ ವ್ಯತ್ಯಾಸವು ಸಮರ್ಥನೀಯವೆಂದು ನನಗನ್ನಿಸುವುದಿಲ್ಲ. ಆದರೆ ಈ ಎರಡು ಕಾಯಿದೆಗಳನ್ನು ಒಂದೇ ಕಾಯಿದೆಯಾಗಿ ಸೇರಿಸುವುದಕ್ಕೆ ಸಮಯ ಬೇಕು ಮತ್ತು ಈ ಕಲಮುಗಳನ್ನು ವಿಲೀನಗೊಳಿಸಲು ಒಂದು ಕಾನೂನು ಇಲಾಖೆಯಲ್ಲಿ ವಿಶೇಷ ಪ್ರಾಧಿಕಾರವು ಬೇಕಾಗುತ್ತದೆಯೆಂದು ನನಗೆ ಕಂಡುಬಂದಿದೆ. ಆದರೂ ಹಣಕಾಸಿನ ಅನಿವಾರ್ಯತೆಯಿಂದಾಗಿ ನಾವು ಮುಂದುವರಿಯಬೇಕಾದ ವೇಗದಲ್ಲಿ ಈ ಕಾರ್ಯವನ್ನು ಪೂರೈಸಲು ಬೇಕಾದ ಪರಿಕರಗಳನ್ನು ಪಡೆಯಲು ನನಗೆ ಸಾಧ್ಯವಾಗಲಿಲ್ಲ. ನಾನು ಒಂದೇ ಕಾಯಿದೆಯನ್ನು ಮಂಡಿಸುವ ನನ್ನ ಮೂಲ ಯೋಜನೆಯನ್ನು ತಡೆಹಿಡಿಯಲು ಇದು ಕಾರಣವಾಗಿತ್ತು. ಆದರೂ ನಾನು ಆ ಯೋಜನೆಯನ್ನು ಕೈಬಿಟ್ಟಿಲ್ಲ ಮತ್ತು ಆ ಉದ್ದೇಶಕ್ಕೆ ಸೂಕ್ತ ಸಂದರ್ಭ ಸಿಕ್ಕಿದಾಗ ನಾನು ಸಂಸತ್ತಿನ ಮುಂದೆ ಒಂದೇ ಕಾಯಿದೆಯನ್ನು ಮಂಡಿಸುವವನಿದ್ದೇನೆ.

---

* ಪೂರ್ವೋಕ್ತ, ಸಂ. I, ಭಾಗ II, ೩ ಫೆಬ್ರುವರಿ ೧೯೫೦; ಪು. ೧೯೧–೯೩.

ಅವರು ಎತ್ತಿದ ಇನ್ನೊಂದು ಪ್ರಶ್ನೆಯು ಅಂದರೆ, ದಿವಾಳಿಯ ಕುರಿತ ಅಧಿಕಾರ ವ್ಯಾಪ್ತಿಯು ಜಿಲ್ಲಾ ನ್ಯಾಯಾಲಯಕ್ಕೆ ಅಥವಾ ಕಿರಿಯ ಅಧಿಕಾರ ವ್ಯಾಪ್ತಿಯ ನ್ಯಾಯಾಲಯಗಳಿಗೆ ಇರಬೇಕೇ ಮತ್ತು ದಿವಾಳಿದಾರನಿಂದ ದುರುಪಯೋಗವಾಗಬಲ್ಲ ಕಲಮುಗಳೆಂದು ಅವರು ಉಲ್ಲೇಖಿಸಿದ ಇತರ ಕಲಮುಗಳ ಕುರಿತು, ಅವು ಈ ಸಂದರ್ಭದಲ್ಲಿ ಚರ್ಚಿಸಬಲ್ಲ ವಿಚಾರಗಳೆಂದು ನಾನು ಭಾವಿಸುವುದಿಲ್ಲ. ಎಲ್ಲರು ತಿಳಿದಿರುವಂತೆ ದಿವಾಳಿ ಕಾಯಿದೆಯು ದುರ್ವಿಧಿ ಅಥವ ದುರಂತದ ಎದುರು ನೀಡಬಲ್ಲ ಕಾನೂನಿನ ಪರಿಹಾರ. ಈ ಕಾನೂನಿನ ಪರಿಹಾರವನ್ನು ಪಡೆಯಬೇಕಾಗಿರುವ ಜನರು ಇದನ್ನು ಪಡೆಯದಿರುವ ಸಾಧ್ಯತೆಯಿದೆಯಾದರೂ ಅದು ದಿವಾಳಿ ಕಾಯಿದೆಯ ವಿರುದ್ಧ ಮಾತ್ರ ಮಾಡಬಲ್ಲ ದೂರಲ್ಲ– ಅದನ್ನು ಬಹುತೇಕ ಎಲ್ಲ ಕಾಯಿದೆಗಳ ವಿರುದ್ಧ ಮಾಡಬಹುದು. ಪೂರ್ಣವಾಗಿ ನಿರ್ದೋಷವಾಗಿರುವ ಮತ್ತು ಕಳಂಕರಹಿತವಾಗಿರುವ ಕಾನೂನಿನ ರಚನಾ ಕ್ರಮವನ್ನು ಕೈಗೊಳ್ಳಲು ಯಾವುದೇ ಶಾಸನಸಭೆಗೆ ಸಾಧ್ಯವೇ ಇಲ್ಲ. ಕಾನೂನಿನ ದುರುಪಯೋಗಮಾಡಬಲ್ಲ ಎಳೆಗಳನ್ನು ಹುಡುಕಬಲ್ಲ ಕೇಡಿಗರು ಯಾವಾಗಲೂ ಇರುತ್ತಾರೆ. ಆದರೂ, ಈ ರೀತಿಯ ಕಾಯಿದೆಯಲ್ಲಿ ಕಾನೂನು ದುರದೃಷ್ಟಶಾಲಿಗಳಿಗಷ್ಟೇ ನೀಡಬೇಕೆಂದಿರುವ ಪರಿಹಾರವನ್ನು ಅಪಾತ್ರರು ಪಡೆಯಲು ನೆರವಾಗುವ ಯಾವುದೇ ಲೋಪಗಳಿರಬಾರದೆಂಬ ನನ್ನ ಮಿತ್ರ ಶ್ರೀ ದಾಸ್ ಅವರ ಉದ್ದೇಶವು ಸ್ತುತ್ಯರ್ಹವೆಂಬ ಬಗ್ಗೆ ನನಗೆ ಯಾವುದೇ ಸಂಶಯವಿಲ್ಲ ಮತ್ತು ಭವಿಷ್ಯದ ಕಾಯಿದೆಯಲ್ಲಿ ಅದನ್ನು ಮನಸ್ಸಿನಲ್ಲಿರಿಸಿಕೊಳ್ಳಲಾಗುತ್ತದೆ.

ನನ್ನ ಮಿತ್ರ ಶ್ರೀ ಕರುಣಾಕರ ಮೆನನ್ ಅವರು ಎತ್ತಿದ ಅಂಶಗಳ ಕುರಿತು ಹೇಳುವುದಾದರೆ ನಾನು ನನ್ನ ಮೊದಲ ಮಾತುಗಳಲ್ಲಿ ಹೇಳಿದ್ದನ್ನು ಅವರು ಗ್ರಹಿಸಲಿಲ್ಲವೆಂದು ನನಗನ್ನಿಸಿದೆ. ನಾವು ನಿಜಕ್ಕೂ ಪ್ರಯತ್ನಿಸುವುದು ಪ್ರಾಂತೀಯ ಕಾಯಿದೆಯನ್ನು ಪ್ರೆಸಿಡೆನ್ಸಿ ಕಾಯಿದೆಗನುಸಾರವಾಗಿ ರಚಿಸುವುದು ಅಥವಾ ಪ್ರೆಸಿಡೆನ್ಸಿ ಕಾಯಿದೆಯನ್ನು ಪ್ರಾಂತೀಯ ಕಾಯಿದೆಗನುಸಾರವಾಗಿ ರಚಿಸುವುದು ಎಂಬುದನ್ನು ಅವರು ಮರೆತಿದ್ದಾರೆ. ಈ ಎರಡೂ ಕಾಯಿದೆಗಳಲ್ಲಿ ಇಲ್ಲದಿರುವ ಯಾವುದೇ ಹೊಸ ಶೋಧನೆಯನ್ನು ನಾವು ಮಾಡುತ್ತಿಲ್ಲ. ಪ್ರಾಂತೀಯ ಕಾಯಿದೆಯ ಕೆಲವು ಕಲಮುಗಳಲ್ಲಿರುವ "ಮಾಡತಕ್ಕದ್ದು" ಎಂಬ ಪದವನ್ನು ಅವರು ಇಷ್ಟಪಡದಿದ್ದರೆ ಮತ್ತು "ಮಾಡಬಹುದು" ಎಂಬ ಪದವನ್ನು ಇಚ್ಛಿಸಿದರೆ ಆಗ ಅವರು "ಮಾಡತಕ್ಕದ್ದು" ಎಂಬ ಪದವು ಏಕೆ ಪ್ರಾಂತೀಯ ಶಾಸನದಲ್ಲಿ ಮುಂದುವರಿಯಬೇಕೆಂಬ ಬಗ್ಗೆ ಸಮರ್ಥನೆ ನೀಡಬೇಕಾಗಿದೆ. ನಾನು ಮಾಡಿರುವುದೇನೆಂದರೆ ಇವೆರಡನ್ನೂ ಪರಸ್ಪರ ಪೂರಕಗೊಳಿಸಿದ್ದು ಮತ್ತು ಆ ಮೂಲಕ ಈ ರೀತಿಯ ಕಾಯಿದೆಗಳಲ್ಲಿ ಪರಿಹಾರ್ಯ ವೈರುದ್ಧ್ಯಗಳು ಇಲ್ಲದಂತಾಗುವುದು. ನಾನು ಹೇಳಿದಂತೆ ಅವರಿಗೆ ಇನ್ನೂ ಇಂತಹ ಅಂಶಗಳಿದ್ದರೆ ಅವನ್ನು ಸದನದಲ್ಲಿ ಇವೆಲ್ಲವುಗಳನ್ನೊಳಗೊಂಡ ಒಂದು ವಿಧೇಯಕವನ್ನು ಮಂಡಿಸಿದಾಗ ಎತ್ತಬಹುದು. ತತ್ಕಾಲಕ್ಕೆ ಪ್ರಾಂತೀಯ ಸರಕಾರಗಳು ಮತ್ತು ಹಾಗೆ ನಾನು ಹೇಳಬಹುದಾದರೆ, ಎಲ್ಲಾ ಉಚ್ಚ ನ್ಯಾಯಾಲಯಗಳು ಅಂಗೀಕರಿಸಿದ ಈ ತಿದ್ದುಪಡಿಗಳಷ್ಟೇ ಅಗತ್ಯವಾಗಿವೆ.

**ಸಭಾಪತಿಗಳು:** ವಿಷಯವೆಂದರೆ :

"ದಿವಾಳಿಗೆ ಸಂಬಂಧಿಸಿದ ಕಾಯಿದೆಯನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಗಣಿಸಬೇಕು."

ಮಸೂದೆಯು ಸ್ವೀಕೃತವಾಯಿತು.

**ಸಭಾಪತಿಗಳು:** ವಿಷಯವೆಂದರೆ:

"೨೦ರಿಂದ ೭೭ರ ವರೆಗಿನ ಉಪಬಂಧಗಳು ವಿಧೇಯಕದ ಭಾಗಗಳಾಗುತ್ತವೆ."

ಮಸೂದೆಯು ಸ್ವೀಕೃತವಾಯಿತು.

೨೦ರಿಂದ ೭೭ರ ವರೆಗಿನ ಉಪಬಂಧಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಡಾ.ಅಂಬೇಡ್ಕರ್** : ನಾನು ಮಂಡಿಸಲಿಚ್ಛಿಸುವುದೇನೆಂದರೆ–

"ಇದೇ ಉಪಬಂಧದಲ್ಲಿ, '೧೯೪೯' ಎಂಬ ಅಂಕಿಗಳ ಬದಲಾಗಿ '೧೯೫೦' ಎಂಬ ಅಂಕಿಗಳನ್ನು ಬಳಸತಕ್ಕದ್ದು."

ಮಸೂದೆಯು ಸ್ವೀಕೃತವಾಯಿತು.

ತಿದ್ದುಪಡಿಯಾದಂತೆ ೧ನೇ ಉಪಬಂಧವು ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

**ಸಭಾಪತಿಗಳು** : ವಿಷಯವೆಂದರೆ–

"ಪ್ರಸ್ತಾವನೆಯು ವಿಧೇಯಕದ ಭಾಗವಾಗತಕ್ಕದ್ದು."

ಮಸೂದೆಯು ತಿರಸ್ಕೃತವಾಯಿತು.

**ಡಾ.ಅಂಬೇಡ್ಕರ್** : ನಾನು ಮಂಡಿಸಲಿಚ್ಛಿಸುವುದೇನೆಂದರೆ–

"ಈಗಿರುವ ಕಾಯಿದೆಯ ಸೂತ್ರದ ಬದಲಿಗೆ ಈ ಕೆಳಗಿನಂತೆ ಅಳವಡಿಸತಕ್ಕದ್ದು :–

'ಸಂಸತ್ತು ಈ ಕೆಳಗಿನಂತೆ ಅಧಿನಿಯಮಿಸಲಿ:–'."

**ಸಭಾಪತಿಗಳು** : ವಿಷಯವೆಂದರೆ :

"ಈಗಿರುವ ಅಧಿನಿಯಮಿಸುವ ಸೂತ್ರದ ಬದಲಿಗೆ ಈಗ ಮಾಡಿರುವ ತಿದ್ದುಪಡಿಗಳನ್ನು ಅಳವಡಿಸತಕ್ಕದ್ದು :–

ಮಸೂದೆಯು ಸ್ವೀಕೃತವಾಯಿತು.

ಅಧಿನಿಯಮಿಸುವ ಸೂತ್ರವು ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ವಿಧೇಯಕಕ್ಕೆ ಶೀರ್ಷಿಕೆಯನ್ನು ಸೇರಿಸಲಾಯಿತು.

ಡಾ.ಅಂಬೇಡ್ಕರ್ :ನಾನು ಮಂಡಿಸಲಿಚ್ಛಿಸುವುದೇನೆಂದರೆ :

"ವಿಧೇಯಕವು, ತಿದ್ದುಪಡಿಯಾದಂತೆ ಅಂಗೀಕರಿಸಲ್ಪಡತಕ್ಕದ್ದು."

ವಿಧೇಯಕವು ಸ್ವೀಕೃತವಾಯಿತು.

◆

# ೯

## *ದಂಡಪ್ರಕ್ರಿಯೆ ಕಾಯಿದೆ (ತಿದ್ದುಪಡಿ) ಮಸೂದೆ

**ಕಾನೂನು ಸಚಿವರು (ಡಾ.ಅಂಬೇಡ್ಕರ್) :** ನಾನು ೧೯೪೪ರ ದಂಡ ಪ್ರಕ್ರಿಯಾ ಕಾಯಿದೆ ತಿದ್ದುಪಡಿ ಅಧ್ಯಾದೇಶವನ್ನು ಮಂಡಿಸಲು ಇಚ್ಛಿಸುತ್ತೇನೆ.

**ಉಪಸಭಾಪತಿಗಳು :** ವಿಷಯವೆಂದರೆ :

"೧೯೪೪ರ ದಂಡ ಪ್ರಕ್ರಿಯಾ ಕಾಯಿದೆ ಅಧ್ಯಾದೇಶವನ್ನು ತಿದ್ದುಪಡಿ ಮಾಡುವ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡತಕ್ಕದ್ದು."

ವಿಧೇಯಕವು ಸ್ವೀಕೃತವಾಯಿತು.

**ಡಾ.ಅಂಬೇಡ್ಕರ್ :** ನಾನು ಈ ವಿಧೇಯಕವನ್ನು ಮಂಡಿಸುತ್ತೇನೆ.

## **ದಂಡಪ್ರಕ್ರಿಯೆ ಕಾಯಿದೆ (ತಿದ್ದುಪಡಿ) ಮಸೂದೆ

**ಕಾನೂನು ಸಚಿವರು (ಡಾ.ಅಂಬೇಡ್ಕರ್) :** ನಾನು ಮಂಡಿಸಲು ಇಚ್ಛಿಸುವುದೇನೆಂದರೆ :

"೧೯೪೪ರ ದಂಡ ಪ್ರಕ್ರಿಯಾ ಕಾಯಿದೆ ಅಧ್ಯಾದೇಶವನ್ನು ತಿದ್ದುಪಡಿಮಾಡುವ ವಿಧೇಯಕವನ್ನು ಪರಿಗಣಿಸತಕ್ಕದ್ದು."

(ಶ್ರೀಮತಿ ದುರ್ಗಾಬಾಯಿಯವರು ಸಭಾಪತಿಸ್ಥಾನದಲ್ಲಿ)

ಈ ಕ್ರಮದ ಉದ್ದೇಶವು ದಂಡ ಪ್ರಕ್ರಿಯಾ ತಿದ್ದುಪಡಿ ಅಧ್ಯಾದೇಶ ೧೯೫೦ ಎಂದು ಕರೆಯಲ್ಪಡುವ ೧೯೫೦ರ ಸುಗ್ರೀವಾಜ್ಞೆ ಸಂಖ್ಯೆ. III ನ್ನು ಪ್ರತಿಸ್ಥಾಪಿಸುತ್ತದೆ. ೧೯೫೦ರ ಅಧ್ಯಾದೇಶ ಸಂಖ್ಯೆ. III ನ್ನು ೧೯೪೪ರ ಮೂಲ ಅಧ್ಯಾದೇಶ ಸಂಖ್ಯೆ XXXVIII ಕ್ಕೆ ಒಂದು ಹೊಸ ಕಲಮು ೯ಎಯನ್ನು ಸೇರಿಸಲು ಅಂಗೀಕರಿಸಲಾಗಿತ್ತು. ೧೯೪೪ರ ಅಧ್ಯಾದೇಶ ಸಂಖ್ಯೆ XXXVIIIರ ಚರಿತ್ರೆಯು ೧೯೫೦ರ ಸುಗ್ರೀವಾಜ್ಞೆ ಸಂಖ್ಯೆ. III ನ್ನು ಏಕೆ ರಚಿಸಲಾಯಿತೆಂಬುದನ್ನು ತಿಳಿಯಲು ಗೌರವಾನ್ವಿತ ಸದಸ್ಯರಿಗೆ ನೆರವಾಗಬಹುದು.

ಮಹಾಯುದ್ಧದ ಸಮಯದಲ್ಲಿ ಭಾರತ ಮತ್ತು ವಿವಿಧ ಪ್ರಾಂತಗಳ ಸರಕಾರಗಳು ಸಾರ್ವಜನಿಕ ಆಸ್ತಿ ಮತ್ತು ಸಾರ್ವಜನಿಕ ನಿಧಿಯನ್ನು ಗುತ್ತಿಗೆದಾರರು ಮತ್ತು ಸರಕಾರಿ ಅಧಿಕಾರಿಗಳ ಕೈಗೆ ವಹಿಸಿದ್ದವು. ಹೀಗೆ ಸರಕಾರಿ ಆಸ್ತಿ ಮತ್ತು ನಿಧಿಗಳನ್ನು ವಹಿಸಲಾಗಿದ್ದ ಜನರ ಪೈಕಿ ಕೆಲವರು ಕೆಲವು ದುರುಪಯೋಗಗಳನ್ನು ಮಾಡಿದ್ದರು ಮತ್ತು ಪರಿಣಾಮವಾಗಿ ೧೯೪೪ರ ಅಪರಾಧಿ ಅಧ್ಯಾದೇಶ XXXVIII ಯನ್ನು

---

* ಪೂರ್ವೋಕ್ತ, ಸಂ. ೨; ಭಾಗ II, ೧೪ ಫೆಬ್ರುವರಿ ೧೯೫೦, ಪು. ೫೩೮.

** ಅದೇ, ೨೮ ಫೆಬ್ರುವರಿ ೧೯೫೦; ಪು. ೯೮೩–೮೪

ಅಂಗೀಕರಿಸಲಾಯಿತು, ಮತ್ತು ಈ ಅಪರಾಧಿಗಳನ್ನು ವಿಚಾರಿಸಲು ವಿಶೇಷ ನ್ಯಾಯಮಂಡಳಿಗಳನ್ನು ರಚಿಸಲಾಯಿತು. ಈ ನ್ಯಾಯಮಂಡಳಿಗಳು ಭಾರತದಾದ್ಯಂತ ವಿಭಜನೆಗೆ ಮೊದಲಿನ ಏಕಸ್ಥ ಭಾರತದ ವಿವಿಧ ಪ್ರಾಂತಗಳಲ್ಲಿ ಹಂಚಿಹೋಗಿದ್ದವು. ಈ ನ್ಯಾಯಮಂಡಳಿಗಳಿಗೆ ಜಪ್ತಿ ಆದೇಶಗಳನ್ನು ನೀಡಿ ಅಪರಾಧಿಯ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ನೀಡಲಾಗಿತ್ತು ಮತ್ತು ಹಾಗೆ ಅಧಿಕಾರ ಹೊಂದಿದ ನ್ಯಾಯಾಲಯಗಳು ಅಪರಾಧಿಗಳು ವಾಸಿಸುತ್ತಿದ್ದ ಇಲ್ಲವೇ ವ್ಯವಹಾರವನ್ನು ಮಾಡುತ್ತಿದ್ದ ಪ್ರದೇಶಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿದವಾಗಿದ್ದವು.

ವಿಭಜನೆಯ ನಂತರ ಒಂದು ವಿಚಿತ್ರ ಪರಿಸ್ಥಿತಿಯು ನಿರ್ಮಾಣವಾಯಿತು, ಅಂದರೆ ಅಪರಾಧಿಗಳ ಆಸ್ತಿಗಳನ್ನು ಜಪ್ತಿಮಾಡಲು ಆದೇಶ ಮಾಡಿದ ನ್ಯಾಯಾಲಯಗಳು ಪಾಕಿಸ್ತಾನದ ಭಾಗವಾದವು, ಆದರೆ ಅಪರಾಧಿಗಳ ಆಸ್ತಿಯು ಮಾತ್ರ ಇಂಡಿಯಾದಲ್ಲೇ ಉಳಿಯಿತು. ಈ ತೊಡಕು ಬಹುಪಾಲು ಈ ವಿಚಾರಣೆಗಳ ಕಾರ್ಯವನ್ನು ಸ್ಥಗಿತಗೊಳಿಸಿತು. ಆದ್ದರಿಂದ ಈಗಾಗಲೇ ನ್ಯಾಯಾಲಯಗಳು ಜಪ್ತಿಮಾಡಿದ (ದುರದೃಷ್ಟದಿಂದ ಈಗ ಪಾಕಿಸ್ತಾನದಲ್ಲಿರುವ) ಆಸ್ತಿಗೆ ಸಂಬಂಧಿಸಿದ ಮುಂದಿನ ಆದೇಶಗಳನ್ನು ಮಾಡುವ ಅಧಿಕಾರವನ್ನು ಭಾರತ ಗಣರಾಜ್ಯದಲ್ಲಿರುವ ನ್ಯಾಯಾಲಯಗಳಿಗೆ ವರ್ಗಾಯಿಸಬೇಕೆಂದು ಈಗ ಪ್ರಸ್ತಾವಿಸಲಾಗಿದೆ. ಪರಿಣಾಮವಾಗಿ ಈಗ ತಮ್ಮ ವ್ಯಾಪ್ತಿಯಲ್ಲಿ ನಡೆದ ಅಪರಾಧಗಳನ್ನು ವಿಚಾರಣೆ ನಡೆಸುವ ನ್ಯಾಯಾಲಯಗಳಿಗೆ ಈ ಅಪರಾಧಿಗಳು ಹೊಂದಿದ ಆಸ್ತಿಯ ಕುರಿತು ಆದೇಶಗಳನ್ನು ನೀಡುವ ಅಧಿಕಾರ ವಹಿಸುವ ಈ ಕಲಮು ೯ಎಯನ್ನು ಸೇರಿಸಲು ಇಚ್ಛಿಸಿದೆ.

ಈ ವಿಚಾರವು ಅತೀ ತುರ್ತು ಆಗಿದೆಯೆಂದು ಭಾವಿಸಿದ್ದರಿಂದ ಈ ಸುಗ್ರೀವಾಜ್ಞೆಯನ್ನು ಹೊರಡಿಸಲಾಯಿತು. ಅಧ್ಯಾದೇಶವನ್ನು ವಿಸ್ತರಿಸುವ ಅಧಿಕಾರವು ಸೀಮಿತ ಅವಧಿಗೆ ಮಾತ್ರವಿರುವುದರಿಂದ ಈ ಅವಧಿಯು ಮುಗಿಯುವ ಮುನ್ನ ಅಧ್ಯಾದೇಶವನ್ನು ಈ ಕ್ರಮದ ಮೂಲಕ ಪುನರ್ವಿಮರ್ಶಿಸುವುದು ಅಗತ್ಯವಾಗಿದೆ.

**ಸಭಾಪತಿಗಳು:** ಮಸೂದೆಯನ್ನು ಮಂಡಿಸಲಾಗಿದೆ :

"ದಂಡ ಪ್ರಕ್ರಿಯಾ ಕಾಯಿದೆ ಅಧ್ಯಾದೇಶ ೧೯೪೪ನ್ನು ತಿದ್ದುಪಡಿಮಾಡುವ ವಿಧೇಯಕವನ್ನು ಪರಿಗಣಿಸಬಹುದು."

**ಶ್ರೀ ಹಿಮತ್‌ಸಿಂಗ್ಕ** (ಪಶ್ಚಿಮ ಬಂಗಾಳ): ಮಾಹಿತಿಯ ಅಂಶವಾಗಿ, ನ್ಯಾಯಾಲಯದ ಆದೇಶದಿಂದ ಜಪ್ತಿಯಾದ ಆಸ್ತಿಯು ಈಗ ಪಾಕಿಸ್ತಾನದಲ್ಲಿದ್ದರೆ ಏನಾಗುತ್ತದೆಂಬುದನ್ನು ತಿಳಿಯಬಹುದೇ? ಆ ಆಸ್ತಿಯು ಅಲ್ಲೇ ಮುಂದುವರಿದರೆ . . .

**ಡಾ.ಅಂಬೇಡ್ಕರ್ :** ಈ ಆಸ್ತಿಯು ಇಲ್ಲೇ ಇದೆ.

**ಸಭಾಪತಿಗಳು :** ವಿಷಯವೆಂದರೆ :

"೧೯೪೪ರ ದಂಡ ಪ್ರಕ್ರಿಯಾ ಕಾಯಿದೆ ಅಧ್ಯಾದೇಶವನ್ನು ತಿದ್ದುಪಡಿಮಾಡುವ ವಿಧೇಯಕವನ್ನು ಪರಿಗಣಿಸಬಹುದು."

**ಸಭಾಪತಿಗಳು :** ವಿಷಯವೆಂದರೆ :

**ಸಭಾಪತಿಗಳು:** ಇದಕ್ಕೆ ತಿದ್ದುಪಡಿಗಳಿಲ್ಲ. ನಾನು ಉಪಬಂಧಗಳನ್ನು ಅಳವಡಿಸುತ್ತೇನೆ. ವಿಷಯವೆಂದರೆ :

" ೨ ಮತ್ತು ೩ನೇ ಉಪಬಂಧಗಳು ವಿಧೇಯಕದ ಭಾಗಗಳಾಗುತ್ತವೆ."

ಮಸೂದೆಯು ಅಂಗೀಕೃತವಾಯಿತು.
ಉಪಬಂಧ ೨ ಮತ್ತು ೩ನ್ನು ವಿಧೇಯಕಕ್ಕೆ ಸೇರಿಸಲಾಯಿತು.
ಉಪಬಂಧ ೧ನ್ನು ವಿಧೇಯಕಕ್ಕೆ ಸೇರಿಸಲಾಯಿತು.
ಶೀರ್ಷಿಕೆ ಮತ್ತು ಅಧಿಸೂಚನೆಯ ಸೂತ್ರವನ್ನು ವಿಧೇಯಕಕ್ಕೆ ಸೇರಿಸಲಾಯಿತು.
**ಡಾ.ಅಂಬೇಡ್ಕರ್ :** ನಾನು ಮಂಡಿಸಲಿಚ್ಛಿಸುವುದೇನೆಂದರೆ :

"ಈ ವಿಧೇಯಕವನ್ನು ಅಂಗೀಕರಿಸಬಹುದು."

**ಸಭಾಪತಿಗಳು:** ವಿಷಯವೆಂದರೆ :

"ಈ ವಿಧೇಯಕವನ್ನು ಅಂಗೀಕರಿಸಬಹುದು."

ಮಸೂದೆಯನ್ನು ಅಂಗೀಕರಿಸಲಾಯಿತು.

◆

# ೧೦

# ನಿಲುವಳಿ ಸೂಚನೆ
# ಬಂಧನದಿಂದ ಹೈದರಾಬಾದಿನ ಮೀರ್ ಲಾಯಿಕ್ ಆಲಿಯ ಪರಾರಿ

****ಸಭಾಪತಿಗಳು:** ಮೀರ್ ಲಾಯಿಕ್ ಆಲಿ ಮತ್ತಿತರರ ಅಭಿಯೋಜನೆಗೆ ಸಂಬಂಧಿಸಿದಂತೆ ನಿಯಂತ್ರಣಾಧಿಕಾರಿ ಅಥವಾ ನಿರ್ದೇಶನಾಧಿಕಾರಿ ಯಾರು ಎಂದು ನಾನು ಕೇಳಬಹುದೇ?

**ಸರ್ದಾರ್ ಪಟೇಲ್:** ಅಂತಿಮ ಅಭಿಯೋಜನೆಯ ಅನುಮತಿಯು ನಿಜಾಮರಿಂದ.

**ಕಾನೂನು ಸಚಿವರು (ಡಾ.ಅಂಬೇಡ್ಕರ್):** ನನಗೆ ಗೊತ್ತಿಲ್ಲವಾದರೂ ಈ ವಿಚಾರವಾಗಿ ನನಗಿರುವ ಮೊದಲ ಅಭಿಪ್ರಾಯವೆಂದರೆ ಹೈದರಾಬಾದ್ ಬೇರೆ ಯಾವುದೇ ರಾಜ್ಯದಂತಿರಬೇಕು. ಸಂವಿಧಾನದಡಿ ಹೈದರಾಬಾದ್ ರಾಜ್ಯಕ್ಕೆ ಕೇಂದ್ರದೊಂದಿಗಿನ ಸಂಬಂಧದಲ್ಲಿ ವ್ಯತ್ಯಾಸವಿಲ್ಲ, ಉದಾಹರಣೆಗೆ ಬಾಂಬೆಗೆ ಕೇಂದ್ರದೊಂದಿಗಿರುವ ಸಂಬಂಧ, ಅಂದರೆ IIನೇ ಪಟ್ಟಿಯಲ್ಲಿ ನಮೂದಿಸಿದ ವಿಚಾರಗಳಿಗೆ ರಾಜ್ಯಗಳೇ ಪೂರ್ಣ ಜವಾಬ್ದಾರರು, ಆದರೆ Iನೇ ಪಟ್ಟಿಯಲ್ಲಿ ನಮೂದಿಸಲಾದ ವಿಚಾರಗಳು ಕೇಂದ್ರದ ಜವಾಬ್ದಾರಿಗೆ ಸೇರುತ್ತವೆ. ಇದೇ ನಿಯಮವು ಹೈದರಾಬಾದಿಗೂ ಅನ್ವಯಿಸುತ್ತದೆ. ಅಂದರೆ ಲಾಯಿಕ್ ಆಲಿಯ ಬಂಧನಕ್ಕೆ ಸಂಬಂಧಿಸಿದ ವಿಚಾರದ ಕುರಿತು ಹೇಳುವುದಾದರೆ, ಅದು ಕಾನೂನು ಮತ್ತು ಶಿಸ್ತಿನ ವಿಚಾರವಾಗಿದ್ದು ಸಂವಿಧಾನದಡಿ ಸ್ಥಳೀಯ ಆಡಳಿತಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಆ ದಿಸೆಯಲ್ಲಿ, ನಾನು ಅರಿಕೆ ಮಾಡುವುದೇನೆಂದರೆ ಇದು ಸಂವಿಧಾನಿಕವಾಗಿ ಕೇಂದ್ರ ಸರಕಾರದ ನಿಯಂತ್ರಣದಲ್ಲಿರುವ ವಿಚಾರವೆನ್ನಲಾಗದು, ಆದರೆ ನಾನು ಇನ್ನೂ ಒಂದು ಅಭಿಪ್ರಾಯವನ್ನು ಹೇಳಲು ಇಚ್ಛಿಸುತ್ತೇನೆ, ಅದೆಂದರೆ ಸ್ಥಳೀಯ ಸಚಿವಸಂಪುಟವು ಹೊಣೆಯಾಗಬಲ್ಲ ಸ್ಥಳೀಯ ಶಾಸನಸಭೆಯು ಇಲ್ಲದಿರುವುದರಿಂದ, – ನಾನು ಹೇಳುವುದು ತಪ್ಪಿರಲಿಕ್ಕೂ ಸಾಕು– ಸ್ಥಳೀಯ ಆಡಳಿತವು ಕೈಗೊಳ್ಳುವ ಕ್ರಮವು ಪ್ರಾಯ: ಕೆಲವು ರಾಜ್ಯಗಳ ಮೇಲೆ ನಿರ್ದೇಶನ ಮತ್ತು ನಿಯಂತ್ರಣವನ್ನು ಹೊಂದಲು ಸಂವಿಧಾನವು ಕೇಂದ್ರ ಸರಕಾರಕ್ಕೆ ಕೊಟ್ಟ ಅಧಿಕಾರದ ಮೂಲಕವಿರಲಿಕ್ಕೂ ಸಾಕು. ಸಂವಿಧಾನದ ಈ ಭಾಗದಲ್ಲಿ ರುವ ವಸ್ತುಸ್ಥಿತಿಯೇನೆಂದು ನನಗೆ ಗೊತ್ತಿಲ್ಲ. ಆದರೆ ಸಂವಿಧಾನಕ್ಕೆ ಸಂಬಂಧಿಸಿದಂತೆ ಮತ್ತು ಕೇಂದ್ರದೊಂದಿಗೆ ಹೈದರಾಬಾದ್ ರಾಜ್ಯದ ಸಂಬಂಧದ ಕುರಿತು ಹೇಳುವುದಾದರೆ, ಇದು ಕಾನೂನು ಮತ್ತು ಶಿಸ್ತಿನಡಿ ಬರುವ ವಿಚಾರವಾಗಿದ್ದು ಅದು ರಾಜ್ಯದ ವಿಷಯವಾಗಿದೆಯೆಂದು ನಾನು ಬಿನ್ನವಿಸುತ್ತೇನೆ.

**ಕಾನೂನು ಸಚಿವರು (ಡಾ.ಅಂಬೇಡ್ಕರ್) : ಮಾನ್ಯರೆ, ನಿನ್ನೆ ನಿಲುವಳಿ ಸೂಚನೆ ಕುರಿತ ನಡೆದ ಚರ್ಚೆಯಲ್ಲಿ ನಾನು ಮತ್ತು ಈ ಸದನದ ಇತರ ಸದಸ್ಯರು ಹೇಳಿದ ಅಂಶಗಳ ಕುರಿತಾಗಿ ಸ್ಪಷ್ಟೀಕರಿಸಲು ಮತ್ತು ವಿವರಿಸಲು ನನಗೆ ತಾವು ನೀಡಿದ ಈ ಎರಡನೆಯ ಅವಕಾಶಕ್ಕೆ ನಾನು ಋಣಿಯಾಗಿದ್ದೇನೆ.

---

* P.D., ಸಂ–೨, ಭಾಗ II, ೭ ಮಾರ್ಚ್ ೧೯೫೦, ಪು. ೧೧೭೯–೮೦.

** P.D., ಸಂ–೨, ಭಾಗ II, ೮ ಮಾರ್ಚ್ ೧೯೫೦, ಪು. ೧೨೩೬–೪೪.

ನಾನು ನನ್ನ ಅಭಿಪ್ರಾಯವನ್ನು ಆರಂಭಿಸುವ ಮೊದಲು ತಾವು ತಮಗನ್ನಿಸಿದ ತೊಡಕುಗಳನ್ನು ಸೂಚಿಸುವ ಕೃಪೆ ತೋರಿದ್ದರಿಂದ ನಾನು ತಾವು ನಮೂದಿಸಿದ ಅಂಶಗಳನ್ನನುಸರಿಸುತ್ತೇನೆ : ಮೊದಲಾಗಿ ನಾನು ಒಂದೆಡೆ ರಾಜ್ಯಗಳ ಮತ್ತು ಇನ್ನೊಂದೆಡೆ ಕೇಂದ್ರದ ಸಾಂವಿಧಾನಿಕ ಸ್ಥಿತಿಯನ್ನು ಮತ್ತು ರಾಜ್ಯಗಳು ಕೇಂದ್ರದಿಂದ ಯಾವ ಹಂತದವರೆಗೆ ಸ್ವತಂತ್ರರು ಮತ್ತು ಯಾವ ಹಂತದವರೆಗೆ ಕೇಂದ್ರದ ಕೈಕೆಳಗೆ ಅಥವಾ ಕಣ್ಗಾವಲಿಗೆ ಅಥವಾ ನಿಯಂತ್ರಣಕ್ಕೆ ಒಳಗಾಗಿದ್ದಾರೆಂಬ ಬಗ್ಗೆ ವಿವರಿಸಲು ಯತ್ನಿಸುತ್ತೇನೆ.

ನಾನು ಈ ಸದನದ ಗಮನವನ್ನು ಸೆಳಯಲಿರುವ ಮೊದಲ ಅಂಶವೆಂದರೆ ಕೇಂದ್ರ ಸರಕಾರ ಮತ್ತು ರಾಜ್ಯಗಳ ಸಾಂವಿಧಾನಿಕ ಚೌಕಟ್ಟಿನಲ್ಲಿ ಸ್ವಲ್ಪ ಮಟ್ಟಿನ ಸಮಾನಾಂತರವಿದೆಯೆಂಬುದನ್ನು. ಉದಾಹರಣೆಗೆ, ಕೇಂದ್ರ ಸರಕಾರಕ್ಕೆ ಸಂಬಂಧಿಸಿದಂತೆ ೫೩ನೇ ವಿಧಿಯಿದ್ದು ಅದು ಹೇಳುವಂತೆ ಒಕ್ಕೂಟದ ಕಾರ್ಯಾಂಗ ಅಧಿಕಾರವು ರಾಷ್ಟ್ರಪತಿಗಳಲ್ಲಿ ವಹಿಯಾಗತಕ್ಕದ್ದು. ಆ ವಿಧಿಗೆ ಅನುಗುಣವಾಗಿ, ೧೫೪ನೇ ವಿಧಿಯಿದ್ದು ರಾಜ್ಯಗಳ ಕಾರ್ಯಾಂಗ ಅಧಿಕಾರವು ರಾಜ್ಯಪಾಲ ಅಥವಾ ರಾಜಪ್ರಮುಖರಲ್ಲಿ ಯಥಾವತ್ತು ವಹಿಯಾಗತಕ್ಕದ್ದು. ವಾಸ್ತವ ಆಡಳಿತದ ಪ್ರಶ್ನೆಗೆ ಬರುವುದಾದರೆ, ರಾಷ್ಟ್ರಪತಿಯವರಿಗೆ ಸಂವಿಧಾನವು ನೀಡಿದ ಆಡಳಿತಾತ್ಮಕ ಅಧಿಕಾರದ ಬಳಕೆಯ ವಿಚಾರಕ್ಕೆ ಸಂಬಂಧಿಸಿದ ಸಹಕಾರ ಮತ್ತು ಸಲಹೆ ನೀಡಲು ಒಂದು ಸಚಿವ ಸಂಪುಟಕ್ಕೆ ವಿಧಿ ೭೪ ಅವಕಾಶಮಾಡಿಕೊಡುತ್ತದೆ. ಆ ವಿಧಿಗನುಗುಣವಾಗಿ, ರಾಜ್ಯಕ್ಕೆ ಸಂಬಂಧಿಸಿದಂತೆ ವಿಧಿ ೧೬೩ ಇದೆ. ಅದನ್ನೂ ವಿಧಿ ೭೪ರ ಪದಗಳಲ್ಲಿಯೇ ರಚಿಸಲಾಗಿದೆ. ಅದು ಕೂಡಾ ರಾಜ್ಯಪಾಲ ಅಥವಾ ರಾಜಪ್ರಮುಖರಿಗೆ ಕಾರ್ಯಾಂಗದಲ್ಲಿ ವಹಿಯಾಗಿರತಕ್ಕ ಅಧಿಕಾರವನ್ನು ಬಳಸಲು ಸಹಕಾರ ಮತ್ತು ಸಲಹೆ ನೀಡಲು ಒಂದು ಸಚಿವ ಸಂಪುಟವಿರಬೇಕೆಂದು ಹೇಳುತ್ತದೆ. ನಂತರ ನಾವು ಇನ್ನೊಂದು ಅಂದರೆ ೭೯ನೇ ವಿಧಿಯನ್ನು ಹೊಂದಿದ್ದು, ಅದು ಕೇಂದ್ರದ ಶಾಸನಾತ್ಮಕ ಅಧಿಕಾರವನ್ನು ಉಭಯ ಸದನಗಳಿರುವ ಸಂಸತ್ತಿಗೆ ವಹಿಸಿದೆ. ಇದಕ್ಕೆ ಅನುರೂಪವಾಗಿ ನಾವು ರಾಜ್ಯಗಳ ಶಾಸನಸಭೆಯ ರಚನೆಗೆ ಅವಕಾಶ ಮಾಡಿಕೊಡುವ ಅಂತಹದೇ ೧೬೮ನೇ ವಿಧಿಯನ್ನು ಹೊಂದಿದ್ದೇವೆ. ವ್ಯತ್ಯಾಸವೆಂದರೆ ಕೆಲವು ಕಡೆಗಳಲ್ಲಿ ಎರಡು ಸದನಗಳಿವೆ ಮತ್ತು ಇತರೆಡೆಗಳಲ್ಲಿ ಒಂದೇ ಸದನವಿದೆ. ಇನ್ನೂ ಒಂದು ವಿಧಿಯಿದೆ, ಸಂವಿಧಾನವು ಜಾರಿಗೆ ಬರುವ ಸಂದರ್ಭದಲ್ಲಿ ಆ ರಾಜ್ಯದ ರಾಜಪ್ರಮುಖರೇ ಆ ರಾಜ್ಯದ ಶಾಸನಸಭೆಯೆಂದು ಕಾನೂನುರೀತ್ಯಾ ಪರಿಗಣಿಸತಕ್ಕದ್ದೆಂದು ಅದು ಹೇಳುತ್ತದೆ. ಆಡಳಿತದ ವಿವರಗಳು ಸಂವಿಧಾನಕ್ಕನುಗುಣವಾಗಿ ಎರಡೂ ಸಂದರ್ಭಗಳಲ್ಲಿ ಸಮಾನಾಂತರವಾಗಿದೆಯೆಂದು ಕಂಡುಬರುತ್ತದೆ. ಸಂಸತ್ತಿನ ಶಾಸನಾತ್ಮಕ ಅಧಿಕಾರವು ಮುಖ್ಯವಾಗಿ Iನೇ ಪಟ್ಟಿಯಲ್ಲಿ ನಮೂದಿಸಲಾದ ವಿಚಾರಗಳಿಗೆ ಸೀಮಿತವಾಗಿದೆ ಮತ್ತು ರಾಜ್ಯಗಳ ಶಾಸನಾತ್ಮಕ ಅಧಿಕಾರವು IIನೇ ಪಟ್ಟಿಯಲ್ಲಿ ನಮೂದಿಸಲಾದ ವಿಚಾರಗಳಿಗೆ ಸೀಮಿತವಾಗಿದೆಯೆಂದು ನಾನು ನಿನ್ನೆ ಹೇಳಿದ್ದಕ್ಕೆ ಪೂರಕವಾಗಿ ಹೇಳುವುದಾದರೆ–ಅಂದರೆ ಇದನ್ನು ಸೈದ್ಧಾಂತಿಕವಾಗಿ ಹೇಳುವುದಾದರೆ– ಇದಕ್ಕೆ ಯಾವ ಆಕ್ಷೇಪವೂ ಇರದು. ಏಕೆಂದರೆ, ಅದು ಸುಸ್ಥಾಪಿತ ನ್ಯಾಯಯುತ ಸಿದ್ಧಾಂತವಾಗಿದೆ– ಶಾಸನಾತ್ಮಕ ಅಧಿಕಾರವು ಕಾರ್ಯಾಂಗ ಅಧಿಕಾರದೊಂದಿಗೆ ಸಮಾನ ಅಸ್ತಿತ್ವವನ್ನು ಹೊಂದಿರುತ್ತದೆ, ಮತ್ತು ಇದನ್ನು ಅನುಸರಿಸಿ ಹೇಳುವುದಾದರೆ ರಾಜ್ಯಗಳಿಗೆ ಸಂಬಂಧಿಸಿ ಹೇಳುವುದಾದರೆ ಮುಖ್ಯವಾಗಿ ಮತ್ತು ಮೂಲಭೂತವಾಗಿ ಅವು ಸಂವಿಧಾನದಲ್ಲಿ ಒಂದು ಸ್ವತಂತ್ರ ಸ್ಥಾನವನ್ನು ಹೊಂದಿವೆ. ಹಾಗಾಗಿ, ಸಾಮರಸ್ಯನಿಯಮಕ್ಕನುಸಾರವಾಗಿ ಮತ್ತು ಆಡಳಿತದ ಹೊಣೆಯ ನಿಯಮಕ್ಕನುಗುಣವಾಗಿ, IIನೇ ಪಟ್ಟಿಯಲ್ಲಿ ನಮೂದಿಸಲಾದ ವಿಚಾರಗಳಿಗೆ ಸಂಬಂಧಿಸಿ ರಾಜ್ಯವು

ಕೈಗೊಂಡ ಕ್ರಮಗಳ ಕುರಿತು ಶಾಸನದ ರೂಪದಲ್ಲಿ ಅಥವಾ ಕಾರ್ಯಾಂಗ ಕ್ರಮದ ರೂಪದಲ್ಲಿ ಅದನ್ನು ಚರ್ಚಿಸಲು ಈ ಸದನಕ್ಕೆ ಸಾಧ್ಯವಾಗುವುದಿಲ್ಲ. ನಾನು ನಿನ್ನೆ ಹೇಳಿದಂತೆ, ನನಗೆ ಅರ್ಥವಾದ ವ್ಯಾಪ್ತಿಯಲ್ಲಿ ನಿಲುವಳಿ ಸೂಚನೆಯು ಮುಖ್ಯವಾಗಿ ಕಾನೂನು ಮತ್ತು ಶಿಸ್ತಿಗೆ ಸಂಬಂಧಿಸಿದ್ದಾಗಿದೆ. ಕಾನೂನು ಮತ್ತು ಶಿಸ್ತು IIನೇ ಪಟ್ಟಿಯಲ್ಲಿ ಸೇರಿಸಲಾದ ವಿಚಾರವಾಗಿದೆ ಮತ್ತು ಆದ್ದರಿಂದ ಸಾಂವಿಧಾನಿಕ ನಿಯಮಕ್ಕನುಸಾರವಾಗಿ ಕ್ರಮಕೈಗೊಳ್ಳಬಲ್ಲ ಅಧಿಕಾರವನ್ನು ಹೊಂದಿದ ಒಂದು ಪ್ರಶ್ನೆಯನ್ನು ಈ ಸದನದಲ್ಲಿ ಚರ್ಚಿಸಲಾಗದು. ಇದು ನನ್ನ ಅಭಿಪ್ರಾಯದಲ್ಲಿ ಎಲ್ಲರೂ ಸ್ವೀಕರಿಸಬೇಕಾದ ಸಾಮಾನ್ಯ ಸಿದ್ಧಾಂತವಾಗಿದೆ.

ಮಾನ್ಯ ಸದಸ್ಯರು ಈ ವಿಚಾರವನ್ನು ಇನ್ನಷ್ಟು ಸ್ಪಷ್ಟವಾಗಿ ಕಾಣಲಿಚ್ಛಿಸಿದರೆ, ನಾನು ಅವರನ್ನು ವಿಧಿ ೨೩೯ನ್ನು ನಾನೀಗ ರಾಜ್ಯಗಳಿಗೆ ಸಂಬಂಧಿಸಿ ಉಲ್ಲೇಖಿಸಿದ ವಿಧಿಯ ವಿಚಾರದೊಂದಿಗೆ ಹೋಲಿಸಲು ಬಿನ್ನವಿಸುತ್ತೇನೆ. ೨೩೯ನೇ ವಿಧಿಯು ಸಿ ಭಾಗದ ರಾಜ್ಯಗಳಿಗೆ ಅನ್ವಯಿಸುತ್ತದೆ; ಅವು "ಕೇಂದ್ರಾಡಳಿತ ಪ್ರದೇಶಗಳು" ಎಂದು ಕರೆಯಲ್ಪಡುವವು. ೨೩೯ನೇ ವಿಧಿಯ ಪದಬಳಕೆಯು ೧೫೪ನೇ ವಿಧಿಗಿಂತ ಪೂರ್ಣವಾಗಿ ಭಿನ್ನವಾಗಿದೆ. ೧೫೪ನೇ ವಿಧಿಯ ಭಾಷೆಯು ಕಾರ್ಯಾಂಗ ಅಧಿಕಾರವು, ಆಡಳಿತವೂ ಸೇರಿದಂತೆ, ರಾಜ್ಯಪಾಲರಲ್ಲಿ ನಿಹಿತವಾಗುತ್ತದೆ, ಮತ್ತು ೨೩೯ನೇ ವಿಧಿಯು ಸಿ ಭಾಗದ ರಾಜ್ಯಗಳು ರಾಷ್ಟ್ರಪತಿಗಳಿಂದ ಆಳಲ್ಪಡುತ್ತದೆಂದು ಹೇಳುವ ಮೂಲಕ ಆರಂಭವಾಗುತ್ತದೆ, ಅರ್ಥಾತ್, "ಸಚಿವ ಸಂಪುಟದ ಸಲಹೆ ಮೇರೆಗೆ ರಾಷ್ಟ್ರಪತಿಗಳಿಂದ", ಎಂದರೆ, ಸಿ ಭಾಗದ ರಾಜ್ಯಗಳ ಆಡಳಿತದ ವಿಚಾರದ ಹೊಣೆಯು ನೇರವಾಗಿ ಸಂಸತ್ತಿನ ಮತ್ತು ಕೇಂದ್ರ ಸರಕಾರದ ಮೇಲೆ ಬೀಳುತ್ತದೆ. ಆದ್ದರಿಂದ ಯಾವುದೇ ಸದಸ್ಯರು ಸಿ ಭಾಗದ ರಾಜ್ಯಗಳಿಗೆ ಸಂಬಂಧಿಸಿದಂತೆ ಈ ಸದನದಲ್ಲಿ ಚರ್ಚಿಸಬಹುದು, ಆದರೆ ಈ ಅವಕಾಶವು ಇತರ ರಾಜ್ಯಗಳಿಗೆ ಸಂಬಂಧಿಸಿದಂತೆ ಇರುವುದಿಲ್ಲ.

ರಾಜ್ಯಗಳಿಗೆ ಸಂಬಂಧಿಸಿ ನಾನು ಗಮನಸೆಳೆಯುಲು ಇಷ್ಟಪಡುವ ಇನ್ನೊಂದು ಅಂಶವೆಂದರೆ ಕೆಲವು ಉದ್ದೇಶಗಳಿಗಾಗಿ ನಮ್ಮ ಸಂವಿಧಾನವು ರಾಜ್ಯಗಳನ್ನು ಎ ಭಾಗ ಮತ್ತು ಬಿ ಭಾಗವೆಂದು ಅಂದರೆ, ಸಂವಿಧಾನದ ಚೌಕಟ್ಟಿಗೆ, ಕಾರ್ಯಾಂಗದ ಅಧಿಕಾರದ ನಿಹಿತಕ್ಕೆ, ಕಾನೂನು ರಚನೆಯ ಅಧಿಕಾರಕ್ಕೆ, ವಿಭಜಿಸುತ್ತದಾದರೂ, ಇವೆಲ್ಲ ಒಂದು ಸಮಾನಾಂತರ ಹಾದಿಯಲ್ಲಿದ್ದು ಪೂರ್ಣ ಅನುರೂಪತೆಗೊಳಗಾಗಿವೆ. ಸಂವಿಧಾನದಲ್ಲಿ ೨೩೮ನೇ ವಿಧಿಯಿದ್ದು, ಅದು ಕೆಲವು ಮಾರ್ಪಾಡುಗಳೊಂದಿಗೆ ಎ ಭಾಗದ ರಾಜ್ಯಗಳಿಗೆ ಅನ್ವಯವಾಗುವಂತೆಯೇ ಬಿ ಭಾಗದ ರಾಜ್ಯಗಳಿಗೂ ಅನ್ವಯವಾಗುತ್ತದೆಂಬುದು ನಿಜವಿದೆ. ೨೩೮ನೇ ವಿಧಿಯ ವಿವರಗಳನ್ನು ಪರಿಶೀಲಿಸುವ ಆಸಕ್ತಿಯಿರುವ ಯಾರೇ ಆಗಲಿ ಎ ವಿಭಾಗದ ರಾಜ್ಯಗಳಿಗೆ ಅನ್ವಯಿಸುವ ವಿಧಿಗಳು ಬಿ ವಿಭಾಗದ ರಾಜ್ಯಗಳಿಗೆ ಅನ್ವಯಿಸುವಾಗ ಬಹು ಚಿಕ್ಕ ಬದಲಾವಣೆಯನ್ನು ಅಂದರೆ 'ರಾಜ್ಯಪಾಲ' ಎಂಬ ಪದಕ್ಕೆ 'ರಾಜಪ್ರಮುಖ' ಇತ್ಯಾದಿ ಪದಪ್ರಯೋಗಗಳ ವ್ಯತ್ಯಾಸವನ್ನು ಮಾತ್ರ ಹೊಂದಿವೆ. ಇದರಿಂದಾಚೆಗೆ ಯಾವ ವ್ಯತ್ಯಾಸವೂ ಇಲ್ಲ. ಆದ್ದರಿಂದ ಈ ದೃಷ್ಟಿಯಲ್ಲಿ ನೋಡಿದರೆ ಎ ವಿಭಾಗದ ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಬರುವ ವಿಚಾರಗಳನ್ನು ಚರ್ಚಿಸಲು ಈ ಸದನಕ್ಕೆ ಹೇಗೆ ಅಧಿಕಾರವಿಲ್ಲವೋ ಹಾಗೆಯೇ ಬಿ ವಿಭಾಗದ ರಾಜ್ಯಗಳಿಗೆ ಸಂಬಂಧೀಸಿದ ಯಾವುದೇ ವಿಚಾರಗಳನ್ನು ಚರ್ಚಿಸುವುದು ಕೂಡಾ ಈ ಸದನದ ವ್ಯಾಪಿಗೆ ಬರುವುದಿಲ್ಲ, ಏಕೆಂದರೆ ನಾನು ಹೇಳಿದಂತೆ ಅವು ಸಂವಿಧಾನದಲ್ಲಿ ಒಂದೇ ರೀತಿಯಲ್ಲಿ ರಚಿಸಲ್ಪಟ್ಟಿವೆ.

ಈ ಹಂತದಲ್ಲಿ ನಾನು ಮಾನ್ಯ ಗೃಹಸಚಿವರು ಈಗಷ್ಟೇ ಹೇಳಿದ್ದನ್ನು ಅನುಮೋದಿಸಲು ಇಚ್ಛಿಸುತ್ತೇನೆ. ನಿಜಾಮ್ ಅವರು ರಾಜ ಪ್ರಮುಖರಾದ ಮಾತ್ರಕ್ಕೆ, ಅಲ್ಲಿ ಶಾಸನ ಸಭೆ ಇಲ್ಲವೆಂಬ ಮಾತ್ರಕ್ಕೆ,

ಗೃಹಸಚಿವಾಲಯದಿಂದ ನಿಜ಼ಾಮರಿಗೆ ರಾಜ್ಯದ ಆಡಳಿತವನ್ನು ನಡೆಸಲು ಕೆಲವು ಅಧಿಕಾರಗಳನ್ನು ನೀಡಲಾಗಿದೆ ಎಂಬ ಮಾತ್ರಕ್ಕೆ ಹೈದರಾಬಾದ್ ರಾಜ್ಯವು ಬಿ ವಿಭಾಗದ ಇತರ ರಾಜ್ಯಗಳ ರೀತಿಯಲ್ಲಿ ಇರುವ ಲಕ್ಷಣವು ಬದಲಾಗದು. ಏಕೆಂದರೆ ಅದು ಎ ವಿಭಾಗದ ರಾಜ್ಯಗಳ ರೀತಿಯಲ್ಲೇ ಇರುತ್ತದೆ. ಕೆಲವೇ ಕ್ಷಣಗಳಲ್ಲಿ ನಾನು ಒಂದು ಚಿಕ್ಕ ಅಪವಾದವಾಗಿ ಕೆಲವು ವಿಚಾರಗಳನ್ನು ಹೇಳಲಿದ್ದೇನೆ. ಆದರೆ ಅಧಿಕಾರಗಳನ್ನು ನೀಡಲಾಗಿದೆ ಎಂಬ ಸಂಗತಿಯು ಸಂವಿಧಾನ ವ್ಯಾಪ್ತಿಯಲ್ಲಿ ಹೈದರಾಬಾದ್ ರಾಜ್ಯದ ಸ್ಥಾನ ಮತ್ತು ಲಕ್ಷಣ ಅಥವಾ ಸ್ಥಿತಿಗತಿಗಳನ್ನು ಬದಲಾಯಿಸಲಾಗದು.

ಈಗ ಇದೊಂದು ಸಾಮಾನ್ಯ ಸೂತ್ರ ಅಂದರೆ ಎ ವಿಭಾಗದ ರಾಜ್ಯಗಳು ಮತ್ತು ಹಾಗೆಯೇ ಬಿ ವಿಭಾಗದ ರಾಜ್ಯಗಳು ತಮ್ಮ ಕಾರ್ಯಾಂಗದ ಅಧಿಕಾರದಲ್ಲಿ ಶಾಸಕಾಂಗದ ಅಧಿಕಾರದಲ್ಲಿ ಮತ್ತು ಅವರು ಹೊಂದಿದ ಕಾರ್ಯಾಂಗ ಮತ್ತು ಶಾಸಕಾಂಗದ ಅಧಿಕಾರವನ್ನು ನಿರ್ವಹಿಸುವ ಆಡಳಿತದ ರೀತಿಯಲ್ಲಿ ಮುಕ್ತ ಹಾಗೂ ಸ್ವತಂತ್ರವಾಗಿವೆ. ಇದು ಸಾಮಾನ್ಯ ಸೂತ್ರ. ನಾವು ಪರಿಗಣಿಸಬೇಕಾದ ಪ್ರಶ್ನೆ ಎಂದರೆ ೩೭೧ನೇ ವಿಧಿಯ ವಿಚಾರಗಳು, ಮತ್ತು ಪ್ರಶ್ನೆಯೆಂದರೆ ೩೭೧ನೇ ವಿಧಿಯು ಬಿ ವಿಭಾಗದ ರಾಜ್ಯಗಳ ಸ್ಥಾನವನ್ನು ಬದಲಾಯಿಸುತ್ತದೆಯೇ? ಏಕೆಂದರೆ ಎಲ್ಲರಿಗೂ ತಿಳಿರುವಂತೆ ೩೭೧ ನೇ ವಿಧಿಯು ಬಿ ವಿಭಾಗದ ರಾಜ್ಯಗಳಿಗೆ ಮಾತ್ರ ಅನ್ವಯಿಸುತ್ತದೆ ಮತ್ತು ಎ ವಿಭಾಗದ ರಾಜ್ಯಗಳಿಗೆ ಅನ್ವಯಿಸುವುದಿಲ್ಲ. ನಿನ್ನೆಯ ಚರ್ಚೆಯ ಸಮಯದಲ್ಲಿ ಒಬ್ಬ ಮಾನ್ಯ ಸದಸ್ಯರು ತುರ್ತು ಕಾನೂನಿನಡಿಯ ಹೊರತಾಗಿ ಕೇಂದ್ರ ಸರಕಾರವು ರಾಜ್ಯಗಳಿಗೆ ಯಾವುದೇ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನು ಹೊಂದಿಲ್ಲ ಎಂದು ಹೇಳಿದ್ದನ್ನು ಗಮನಿಸಿದೆ ಮತ್ತು ನನಗೆ ಏನನಿಸಿತ್ತು ಎಂದರೆ ಅವರ ದೃಷ್ಟಿಯಲ್ಲಿ ರಾಜ್ಯಗಳ ಸಚಿವಾಲಯ ಅಥವಾ ಕೇಂದ್ರ ಸರಕಾರಕ್ಕೆ ಬಿ ವಿಭಾಗದ ರಾಜ್ಯಗಳಿಗೆ ನಿರ್ದೇಶನಗಳನ್ನು ನೀಡಲು ೩೭೧ನೇ ವಿಧಿಯು ಆಧಾರವಾಗಲಾರದು. ಎಲ್ಲಾ ಗೌರವಗಳೊಂದಿಗೆ ನಾನು ಬಿನ್ನವಿಸುವುದೇನೆಂದರೆ ಈ ನಿಲುವನ್ನು ನಾನು ಒಪ್ಪಲಾರೆ. ಈ ವಿಚಾರವನ್ನು ಪೂರ್ಣವಾಗಿ ವಿವರಿಸುವುದಾದರೆ ಕೇಂದ್ರಕ್ಕೆ ನಾಲ್ಕು ವಿವಿಧ ವಿಧಿಗಳಡಿ ವಿವಿಧ ರಾಜ್ಯಗಳಿಗೆ ಸಂವಿಧಾನದಡಿ ೩೫೨ ನಿರ್ದೇಶನಗಳನ್ನು ನೀಡುವ ಅಧಿಕಾರವಿದೆ. ಮೊದಲನೆಯದು ತುರ್ತು ಪರಿಸ್ಥಿತಿ ವಿಧಿಯೆಂದು ಕರೆಯುವ ವಿಧಿಯಾಗಿದ್ದು ಅದು ಯುದ್ಧ ಅಥವಾ ಆಂತರಿಕ ದಾಳಿ ಮತ್ತು ಆ ರೀತಿಯ ವಿಚಾರಗಳಿಗೆ ಸಂಬಂಧಿಸಿದೆ. ಎರಡನೇ ವಿಧಿಯು ಆರ್ಥಿಕ ತುರ್ತು ಪರಿಸ್ಥಿತಿಯ ಬಗ್ಗೆ ಇರುವ ೩೬೦ನೇ ವಿಧಿಯಲ್ಲಿ ರಾಜ್ಯಗಳಿಗೆ ನಿರ್ದೇಶನಗಳನ್ನು ನೀಡಲು ಅನುಮತಿ ಕೊಡುವುದಾಗಿದೆ; ರಾಷ್ಟ್ರಪತಿಗಳಿಗೆ ಯಾವುದೇ ರಾಜ್ಯದ ಆರ್ಥಿಕ ಸ್ಥಿತಿ ಸಂಕಷ್ಟದಲ್ಲಿದೆ ಎಂದು ಮನವರಿಕೆಯಾದಾಗ ಅವರು ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದು ಮತ್ತು ಅದರಡಿ ರಾಜ್ಯಗಳಿಗೆ ಕೆಲವು ನಿರ್ದೇಶನಗಳನ್ನು ನೀಡಬಹುದು. ಮೂರನೇ ವಿಧಿಯು ೩೫೬ ನೇ ವಿಧಿಯಾಗಿದ್ದು ಅದನ್ನು ಸಂವಿಧಾನಾತ್ಮಕ ವ್ಯವಸ್ಥಾವೈಫಲ್ಯದ ವಿಧಿಯೆಂದು ಕರೆಯಬಹುದು. ರಾಷ್ಟ್ರಪತಿಗಳಿಗೆ ಯಾವುದೇ ರಾಜ್ಯದಲ್ಲಿ ಸಂವಿಧಾನವು ಸರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲವೆಂದು ಮನವರಿಕೆಯಾದಾಗ ಅವರು ಸಂವಿಧಾನವು ಕ್ರಮಬದ್ಧವಾಗಿ ನಡೆಯಲು ಕೆಲವು ನಿರ್ದೇಶನಗಳನ್ನು ನೀಡಬಹುದು.

ನಂತರ ಬರುವ ಕೊನೆಯ ವಿಧಿಯೆಂದರೆ ವಿಧಿ ೩೭೧ ಮತ್ತು ಅದು ಮೇಲ್ವಿಚಾರಣಾ ವಿಧಿಯಾಗಿದೆ. ೩೫೨, ೩೬೦ ಮತ್ತು ೩೫೬ನೇ ವಿಧಿಗಳು ಸಾಮಾನ್ಯ ಅರ್ಥದಲ್ಲಿ ತುರ್ತು ಸ್ಥಿತಿಯ ವಿಧಿಗಳು ಎಂದು ತಿಳಿಯಬೇಕು, ಅಂದರೆ ಅವುಗಳನ್ನು ವಿಶೇಷ ಸಂದರ್ಭಗಳು ಉದ್ಭವಿಸಿದಾಗ ಮತ್ತು ಅಂತಹ ಸಂದರ್ಭಗಳು

ಉದ್ಭವಿಸಿದೆ ಎಂದು ರಾಷ್ಟ್ರಪತಿಗಳಿಗೆ ಮನವರಿಕೆಯಾದಾಗ ಮಾತ್ರ ನಿರ್ದೇಶನಗಳನ್ನು ನೀಡುವುದಕ್ಕಾಗಿ ಬಳಸಬಹುದು.

**ಪಂಡಿತ್ ಕುಂಜ್ರು** (ಉತ್ತರ ಪ್ರದೇಶ): ಮಾನ್ಯ ಕಾನೂನು ಸಚಿವರಲ್ಲಿ ಅವರು ಈ ಅಭಿಪ್ರಾಯವನ್ನು ೩೭೧ನೇ ವಿಧಿಯನ್ನು ಉಲ್ಲೇಖಿಸಿಯೂ ಹೇಳಿದ್ದಾರೆಯೇ ಎಂದು ನಾನು ಕೇಳಬಹುದೇ?

**ಡಾ. ಅಂಬೇಡ್ಕರ್:** ಇಲ್ಲ, ನಾನು ಅದನ್ನು ಪ್ರತ್ಯೇಕವಾಗಿ ಚರ್ಚಿಸುತ್ತೇನೆ. ನಾನು ಒಂದೆಡೆ ವಿಧಿ ೩೭೧ನೇ ಮತ್ತು ಇನ್ನೊಂದೆಡೆ ೩೫೨, ೩೬೦, ಮತ್ತು ೩೫೬ನೇ ವಿಧಿಗಳನ್ನು ಇಟ್ಟುಕೊಂಡು ಅವುಗಳ ನಡುವಣ ವ್ಯತ್ಯಾಸವನ್ನು ಗುರುತಿಸಲು ಪ್ರಯತ್ನಿಸುತ್ತಿಸುತ್ತಿದ್ದೇನೆ. ನಾನು ಮೇಲೆ ಹೇಳಿದ ಕಡೆಯ ವಿಧಿಗಳು ತುರ್ತುಸ್ಥಿತಿಯ ವಿಧಿಗಳು. ಅವು ಮಾಮೂಲು ಪರಿಸ್ಥಿತಿಯಲ್ಲಿ ಸಾಮಾನ್ಯ ಆಡಳಿತಕ್ಕೆ ಸಂಬಂಧಿಸಿದ ವಿಧಿಗಳಲ್ಲ. ಅವುಗಳ ಜಾರಿಗೆ ಸಮರ್ಥನೀಯ ಸಂದರ್ಭಗಳಿರಬೇಕು. ಅವುಗಳ ಕುರಿತ ಎರಡನೇ ಸಂಗತಿ ಎಂದರೆ ಅವು ತುರ್ತು ಸ್ಥಿತಿ ಉದ್ಭವಿಸಿದ ಸಂದರ್ಭದಲ್ಲಿ ಎ ವಿಭಾಗದ ರಾಜ್ಯಗಳಿಗೆ ಅನ್ವಯವಾಗುವಷ್ಟೇ ತೀವ್ರತೆಯಲ್ಲಿ ಅದೇ ಮಟ್ಟಿಗೆ ಬಿ ವಿಭಾಗದ ರಾಜ್ಯಗಳಿಗೂ ಅನ್ವಯಿಸುತ್ತವೆ.

೩೭೧ನೇ ವಿಧಿಯು ಬೇರೆ ರೀತಿಯದ್ದಾಗಿದೆ. ಅದಕ್ಕೆ ತುರ್ತು ಸ್ಥಿತಿಯ ಅಗತ್ಯವಿಲ್ಲ. ಅದನ್ನು ಸಾಮಾನ್ಯ ಸಮಯದಲ್ಲಿ ಬಳಸಬಹುದು. ಇದೊಂದು ವ್ಯತ್ಯಾಸದ ಒಂದು ಮುಖ. ವ್ಯತ್ಯಾಸದ ಇನ್ನೊಂದು ಮುಖವೆಂದರೆ ಅದು ಬಿ ವಿಭಾಗದ ರಾಜ್ಯಗಳಿಗಷ್ಟೇ ಅನ್ವಯಿಸುತ್ತದೆ. ಅದು ಎ ವಿಭಾಗದ ರಾಜ್ಯಗಳಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ನನ್ನ ಪ್ರಕಾರ ಕೇಂದ್ರ ಸರಕಾರವು ಬಿ ವಿಬಾಗದ ರಾಜ್ಯಗಳಿಗೆ ನಿರ್ದೇಶನ ನೀಡುವಾಗ ಒಂದೋ ತುರ್ತು ಸ್ಥಿತಿಯ ವಿಧಿಯಾದ ೩೫೨ನೇ ವಿಧಿಯನ್ನು ಬಳಸಬೇಕು ಇಲ್ಲವೇ ೩೫೬ ಮತ್ತು ೩೬೦ನೇ ವಿಧಿಗಳನ್ನು ಬಳಸಬೇಕು ಎಂಬುವುದು ಸರಿಯಲ್ಲ. (ಪಂಡಿತ್ ಕುಂಜ್ರು : ಕೇಳಿ, ಕೇಳಿ) ಈ ವಿಧಿಗಳ ಹೊರತಾಗಿಯೂ ಬಿ ವಿಭಾಗದ ರಾಜ್ಯಗಳಿಗೆ ವಿಧಿ ೩೭೧ರ ಅನ್ವಯ ನಿರ್ದೇಶನಗಳನ್ನು ನೀಡಲು ಕೇಂದ್ರಕ್ಕೆ ಅಧಿಕಾರವಿದೆ.

**ಪಂಡಿತ್ ಬಾಲಕೃಷ್ಣ ಶರ್ಮ** ಉತ್ತರ ಪ್ರದೇಶ: ಮತ್ತು ಅದು ಸಂಕ್ರಮಣ ಸ್ಥಿತಿ ಮಾತ್ರ.

**ಡಾ ಅಂಬೇಡ್ಕರ್:** ಅದು ಪ್ರತ್ಯೇಕ ವಿಚಾರ. ಸಂಕ್ರಮಣ ಸ್ಥಿತಿ ಮುಗಿದಿಲ್ಲ. ಈ ವಿಧಿಯು ಊರ್ಜಿತದಲ್ಲಿದೆ. ಮತ್ತು ನಾವು ಅದನ್ನು ಇರುವಂತೆಯೇ ಸ್ವೀಕರಿಸಬೇಕು. ಆದ್ದರಿಂದ ನನ್ನ ತೀರ್ಮಾನದಲ್ಲಿ, ತುರ್ತುಸ್ಥಿತಿಯಿಲ್ಲದಿದ್ದಾಗಲೂ ಬಿ ಭಾಗದ ರಾಜ್ಯಗಳಿಗೆ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನು ಕೇಂದ್ರಕ್ಕೆ ೩೭೧ನೇ ವಿಧಿಯು ನೀಡುತ್ತದೆ. ಅದು ಸಾಮಾನ್ಯ ಸಂದರ್ಭಗಳಲ್ಲಿ ಬಳಸಬೇಕಾದ ವಿಧಿ.

ಮಾನ್ಯರೆ, ಈಗ ನೀವು ಕೃಪೆಯಿಟ್ಟು ಎತ್ತಿದ ಪ್ರಶ್ನೆಯನ್ನು, ನೀವು ಅನುಮತಿ ನೀಡಿದರೆ ನಾನು ಕೊನೆಯಲ್ಲಿ ಪ್ರಸ್ತಾವಿಸುತ್ತೇನೆ. ೩೭೧ನೇ ವಿಧಿಯ ಕುರಿತು ಮತ್ತು ಒಂದು ನಿರ್ದೇಶನವನ್ನು ನೀಡಿದ ಕುರಿತು ಹೇಳುವುದಾದರೆ–ನಾನು ನನ್ನ ಭಾಷೆಯನ್ನು ಉದ್ದೇಶಪೂರ್ವಕವಾಗಿಯೇ ಬಳಸುತ್ತಿದ್ದೇನೆ– ೩೭೧ನೇ ವಿಧಿಯ ಕುರಿತು ಮತ್ತು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡುವ ಕುರಿತು ಅದನ್ನು ಬಳಸುವ ಕುರಿತು ಹೇಳುವುದಾದರೆ ಈ ಸದನದಲ್ಲಿ ಆ ವಿಚಾರದ ಕುರಿತು ಚರ್ಚಿಸುವುದಕ್ಕೆ ಒಂದು ಸಾಧ್ಯತೆಯ ಆಧಾರವಿದೆ. ಈ ವಿಚಾರದ ಕುರಿತು ಇದು ನನ್ನ ಅಭಿಪ್ರಾಯ.

ನಾನು ಈಗ ಪರಿಗಣಿಸಲು ಇಚ್ಛಿಸುವುದೇನೆಂದರೆ. . . . .

**ಸಭಾಪತಿಗಳು:** ನಾನು ಈ ಹಂತದಲ್ಲಿ ಒಂದು ಅಂಶದ ಕುರಿತು ಸ್ಪಷ್ಟೀಕರಣವನ್ನು ಕೇಳಬಹುದೇ? ನಿರ್ದೇಶನವನ್ನು ನೀಡಲು ವಿಫಲವಾದರೆ. . . .

**ಡಾ ಅಂಬೇಡ್ಕರ್:** ನಾನು ಆ ಕುರಿತು ಹೇಳುವವನಿದ್ದೆ. ಅದೇ ಅಂಶದ ಕುರಿತು ನಾನು ಚರ್ಚಿಸಲು ಇಚ್ಛಿಸುತ್ತೇನೆ, ಏಕೆಂದರೆ ಅದು ಬಹಳ ಮುಖ್ಯವಾದುದು ಮತ್ತು ಆ ನಾವು ಕುರಿತು ಸ್ಪಷ್ಟವಾಗಿರಬೇಕು.

**ಪಂಡಿತ್ ಬಾಲಕೃಷ್ಣ ಶರ್ಮ:** ೩೭೧ನೇ ವಿಧಿಯಡಿ ಯಾವ ನಿರ್ದೇಶನ ನೀಡಿದೆ ಎಂದು ತಿಳಿಯ ಬಹುದೇ?

**ಡಾ ಅಂಬೇಡ್ಕರ್:** ನಾನು ಆ ಕುರಿತು ಹೇಳುವವನಿದ್ದೇನೆ. ನಾನು ವಸ್ತುಸ್ಥಿತಿಯನ್ನು ಸಾಮಾನ್ಯ ಅರ್ಥದಲ್ಲಿ ಹೇಳುತ್ತಿದ್ದೇನೆ. ನನ್ನ ಮಾನ್ಯ ಸಹೋದ್ಯೋಗಿ ಗೃಹ ಸಚಿವರು ತಾವು ಯಾವ ನಿರ್ದೇಶನವನ್ನು ನೀಡಿದ್ದಾರೆಂದು ಹೇಳುತ್ತಾರೆ. ನಾನು ಆಡಳಿತದ ಹೊಣೆಯಲ್ಲಿಲ್ಲ ಮತ್ತು ಕಾನೂನು ಸ್ಥಿತಿಯನ್ನು ವಿವರಿಸುವುದಕ್ಕೆ ಮಾತ್ರ ನನಗೆ ಸೂಚಿಸಲಾಗಿದೆ.

ಮಾನ್ಯರೇ, ಈಗ ನಾನು ಸದನದ ಮುಂದಿರುವ ವಿಚಾರದ ಕುರಿತು ಯಾವುದಾದರು ನಿರ್ದಿಷ್ಟ ಅಭಿಪ್ರಾಯಕ್ಕೆ ಬರಲು ಮಾದರಿಯಾಗಬಲ್ಲ ನಮ್ಮ ಸದನದ ಹಳೆಯ ಪ್ರಕ್ರಿಯೆಗಳು ಇವೆಯೇ ಎಂದು ಹುಡುಕಲು ಪ್ರಯತ್ನಿಸುತ್ತಿದ್ದೆ. ಯಾವುದಾದರೂ ರೀತಿಯ ಮಾದರಿಯನ್ನು ಒದಗಿಸಬಲ್ಲ ಯಾವುದಾದರೂ ತೀರ್ಪು ಇದೆಯೇ ಎಂದು ಹುಡುಕಲು ನಾನು ೧೯೧೯ರ ಭಾರತ ಸರ್ಕಾರದ ಕಾಯಿದೆಯ ಅಂಶಗಳನ್ನು ಪರಿಶೀಲಿಸಿದ್ದೇನೆ. ಈ ಸದನಕ್ಕೆ ನೆನಪಿರುವಂತೆ ೧೯೧೯ರ ಭಾರತ ಸರ್ಕಾರದ ಕಾಯ್ದೆಯ ಯೋಜನೆಯು ಪ್ರಾಂತಗಳಿಗೆ ಸಂಬಂಧಪಟ್ಟಂತೆ ಅಧಿಕಾರ ಕ್ಷೇತ್ರಗಳನ್ನು ಎರಡು ವಿಭಾಗವಾಗಿ ವಿಭಜಿಸುವುದಾಗಿತ್ತು: ವರ್ಗಾವಣೆಗೊಂಡ ಭಾಗ ಮತ್ತು ಮೀಸಲಾಗಿರಿಸಿದ ಭಾಗ. ಹಳೆಯ ಭಾರತ ಸರಕಾರದ ಕಾಯ್ದೆಯಡಿ ಭಾರತ ಸರಕಾರದ ದಿವಾಣಿ ಮತ್ತು ಸೇನಾ ನಿಯಂತ್ರಣವು ಮತ್ತು ಮೇಲ್ವಿಚಾರಣೆಯು ಪರಿಷತ್ತಿನ ರಾಜ್ಯ ಕಾರ್ಯದರ್ಶಿಯಲ್ಲಿ ನಿಹಿತವಾಗಿತು ಎಂಬುದನ್ನು ಈ ಸದನವು ನೆನಪಿಸಬಹುದು. ಕೌನ್ಸಿಲ್‌ನ ಗವರ್ನರ್ ಜನರಲ್ ಮತ್ತು ಗವರ್ನರ್‌ಗಳು ಈ ದೇಶವನ್ನು ಆಳುವ ಆಯಾಯ ಕರ್ತವ್ಯಗಳನ್ನು ರಾಜ್ಯ ಕಾರ್ಯದರ್ಶಿಗಳ ಉಸ್ತುವಾರಿ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸುತ್ತಿದ್ದರು, ಆಡಳಿತದ ಕ್ಷೇತ್ರವು ೧೯೧೯ರಲ್ಲಿ ಮೀಸಲಾಗಿಸಿದ ಮತ್ತು ವರ್ಗಾವಣೆಗೊಂಡ ಭಾಗಗಳಾಗಿ ವಿಭಜನೆಯಾದಾಗ ವರ್ಗಾವಣೆಗೊಂಡ ವಿಚಾರಗಳೆಂದು ವರ್ಗೀಕರಿಸಲಾದ ವಿಚಾರಗಳು ರಾಜ್ಯದ ಕಾರ್ಯದರ್ಶಿಯವರ ಅಥವಾ ಗವರ್ನರ್ ಜನರಲ್ ಅಥವಾ ಗವರ್ನರ್‌ರವರ ಮೇಲ್ವಿಚಾರಣಾ ನಿಯಂತ್ರಣದಲ್ಲಿ ಇರಲಿಲ್ಲ, ಏಕೆಂದರೆ ಅವುಗಳನ್ನು ಶಾಸನ ಸಭೆಗೆ ಉತ್ತರದಾಯಿತ್ವವನ್ನು ಹೊಂದಿದ ಮಂತ್ರಿಗಳಿಂದ ನಡೆಸಲಾಗುತ್ತಿತ್ತು. ಈಗ ೧೯೧೯ನೇ ಕಾಯ್ದೆಯ ಅಂಶಗಳಡಿ ಎದ್ದಿರುವ ಪ್ರಶ್ನೆ ಎಂದರೆ, ಕೇಂದ್ರ ಸಂಸತ್ತಿಗೆ ಪ್ರಾಂತಗಳ ಆಡಳಿತದ ಕುರಿತು ಪ್ರಶ್ನಿಸಲು ಸಾಧ್ಯವೇ ಎಂಬುದು. ನಾನು ಮಾಡಿದ ಸಂಶೋಧನೆಗಳು– ಮತ್ತು ನಾನು ಸಭಾಪತಿಗಳ ಕಾರ್ಯಾಲಯವು ನನಗೆ ಈ ಸಂಬಂಧ ನೀಡಿದ ಸಹಾಯಕ್ಕಾಗಿ ಋಣಿಯಾಗಿದ್ದೇನೆ– ಆಗಿನ ಶಾಸನ ಸಭೆಯ ಸಭಾಪತಿಗಳು ಅಂತಹ ಪ್ರಶ್ನೆ ವರ್ಗಾವಣೆಗೊಂಡ ವಿಚಾರಗಳ ಕುರಿತಾಗಿದ್ದರೆ ಅವರು ಅನುಮತಿಯನ್ನು ನೀಡುತ್ತಿರಲಿಲ್ಲವಾದರೂ ಅವು ಮೀಸಲಾಗಿರಿಸಿದ ವಿಚಾರಗಳ ಕುರಿತಾದರೆ ಅವರು ಗವರ್ನರ್ ಜನರಲರ ಮಂಜೂರಿಗೆ ಒಳಪಟ್ಟು ಅನುಮತಿ ನೀಡುತ್ತಿದ್ದರು. ಅಂತಹ ಅನುಮೋದನೆಯು ಅಗತ್ಯವಿತ್ತೆಂದು ನೀವು ನೆನಪಿಸಿಕೊಳ್ಳುವಿರಿ, ಏಕೆಂದರೆ ಶಾಸನ ಸಭೆಯು ನಿಯಮಗಳು ಮತ್ತು ಸ್ಥಾಯಿ ಆದೇಶಗಳನ್ವಯ ಕೆಲಸ ಮಾಡುತ್ತದೆ. ನಿಯಮಗಳನ್ನು ಗವರ್ನರ್ ಜನರಲ್ ಅವರು ಮಾಡುತ್ತಿದ್ದು ಅವು ಕೆಲವು ಬಾರಿ ಸ್ಥಾಯಿ ಆದೇಶಗಳ ವ್ಯಾಪ್ತಿಯನ್ನು ನಿಯಂತ್ರಿಸುತ್ತಿದ್ದವು. ಆದ್ದರಿಂದ ಅವರ ಅನುಮತಿಯು ಅಗತ್ಯವಿತ್ತು. ಆದರೆ ಆಡಳಿತವು ಗವರ್ನರ್ ಅವರ, ಗವರ್ನರ್ ಜನರಲ್‌ರವರ

ಮತ್ತು ಅಂತಿಮವಾಗಿ ರಾಜ್ಯ ಕಾರ್ಯದರ್ಶಿಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದನ್ವಯ ಮುಂದುವರಿಯುವವರೆಗೆ ಅಂತಹ ವಿಚಾರಗಳ ಕುರಿತು ಪ್ರಶ್ನೆ ಕೇಳಲು ಕೇಂದ್ರ ಸಂಸತ್ತಿನ ಸದಸ್ಯರಿಗೆ ಸಾಧ್ಯವಿದೆಯೆಂಬ ಈ ತತ್ವವನ್ನು ಒಪ್ಪಲಾಗಿತ್ತು ಮತ್ತು ಇತರ ನಿಯಮಗಳ ಪೂರೈಕೆಗೆ ಒಳಪಟ್ಟು ಸಭಾಪತಿಗಳು ಅಂತಹ ಪ್ರಶ್ನೆಗಳನ್ನು ಸ್ವೀಕರಿಸುತ್ತಿದ್ದರು. ಇದು ಒಂದು ಮಾದರಿ. ಹೇಗಿದ್ದರೂ ಅದನ್ನು ಅದರ ವ್ಯಾಪ್ತಿಗೆ ಮೀರಿದ ಕ್ಷೇತ್ರಕ್ಕೆ ವಿಸ್ತರಿಸಲಾಗದು. ನಾನು ಹೇಳಿದಂತೆ ಅದು ಪ್ರಶ್ನೆಗಳಿಗೆ ವಿಸ್ತರಿಸುತ್ತಿತ್ತೆ ಹೊರತು ಇತರ ವಿಚಾರಗಳಿಗಲ್ಲ.

ಈಗ ನಾನು ೧೯೩೫ರ ಭಾರತ ಸರಕ್ಕಾರದ ಕಾಯ್ದೆಯ ಕುರಿತು ಹೇಳುತ್ತೇನೆ. ಪ್ರಾಯಃ ಈ ಸದನದ ಕೆಲವು ಸದಸ್ಯರಿಗೆ ನೆನಪಿರುವಂತೆ ೧೯೩೫ರ ಭಾರತ ಸರಕಾರದ ಕಾಯ್ದೆಯು ಅಂಗೀಕೃತವಾದೊಡನೆಯೇ ಹೌಸ್ ಆಫ್ ಕಾಮನ್ಸ್‌ನ ಕೆಲವು ಸದಸ್ಯರು ಸಂಸತ್ತಿನೊಳಗೆ ರಾಜ್ಯ ಕಾರ್ಯದರ್ಶಿಗಳಲ್ಲಿ ಭಾರತದ ಆಡಳಿತದ ಕುರಿತು ಪ್ರಶ್ನಿಸಲು ತಮಗಿರುವ ಹಕ್ಕಿನ ಬಗ್ಗೆ ಪ್ರಕ್ಷುಬ್ಧರಾಗಿದ್ದರು ಮತ್ತು ೧೯೩೭ ರಲ್ಲಿ ಆಗಿನ ಪ್ರಧಾನ ಮಂತ್ರಿ ಶ್ರೀ ಚೆಂಬರ್‌ಲಿನ್ ಅವರಿಗೆ ಒಂದು ಪ್ರಶ್ನೆಯನ್ನು ಹಾಕಲಾಗಿತ್ತು. ಶ್ರೀ ಚೆಂಬರ್‌ಲಿನ್‌ರವರು ಉತ್ತರಿಸಿದ್ದೇನೆಂದರೆ ದೇಶದ ಆಡಳಿತವನ್ನು ಭಾರತದಲ್ಲಿರುವ ಪ್ರತಿನಿಧಿಗಳಿಗೆ ವರ್ಗಾಯಿಸಿದ್ದರಿಂದ ಆ ಮಟ್ಟಿಗೆ ವಾಸ್ತವ ಆಡಳಿತದ ಮೇಲೆ ರಾಜ್ಯ ಕಾರ್ಯದರ್ಶಿಯು ಯಾವುದೇ ರೀತಿಯ ಯಾವುದೇ ಜವಾಬ್ದಾರಿಯನ್ನು ಹೊರುವುದು ನಿಂತಿದ್ದು ಸಂಸತ್ತಿನ ಸದಸ್ಯರು ರಾಜ್ಯಕಾರ್ಯದರ್ಶಿಗೆ ಆ ವಿಚಾರದ ಕುರಿತು ಯಾವುದೇ ಪ್ರಶ್ನೆಗಳನ್ನು ಕೇಳುವುದಕ್ಕೆ ಸಾಧ್ಯವಿಲ್ಲ ಮತ್ತು ಅನುಮತಿಯೂ ಇರುವುದಿಲ್ಲ. ಆ ವಿಚಾರವು ಹೌಸ್ ಆಫ್ ಕಾಮನ್ಸ್‌ನಲ್ಲಿ ಗಲಭೆಯೆಬ್ಬಿಸಿದ ತಕ್ಷಣದಲ್ಲಿ ಈ ಸದನದಲ್ಲಿ ಕೈಗೆತ್ತಿಕ್ಕೊಳ್ಳಲಾಯಿತು ಮತ್ತು ನಮ್ಮ ಹಳೆಯ ಗೆಳೆಯ ಮತ್ತು ಈ ಸದನದ ಜನಪ್ರಿಯ ಸದಸ್ಯರಾದ ಶ್ರೀ ಪಾಂಡೆಯವರು ಆಗಿನ ಕಾನೂನು ಸದಸ್ಯರಾದ ಸರ್ ನೃಪೇಂದ್ರ ಸರಕಾರ್ ಅವರಿಗೆ ಒಂದು ಪ್ರಶ್ನೆಯನ್ನು ಹಾಕಿದರು. ಆಗ ಸರ್ ನೃಪೇಂದ್ರ ಸರಕಾರ್ ಅವರು ನೀಡಿದ ಉತ್ತರವನ್ನು ಓದಲು ಇಚ್ಛಿಸುತ್ತೇನೆ, ಏಕೆಂದರೆ ಅದು ಬಹಳ ಪ್ರಖರವಾದ ಉತ್ತರವಾಗಿದೆ ಮತ್ತು ನನ್ನ ನಿಲುವನ್ನು ಹಾಗೂ ನಾನೀಗ ಹೇಳಿದ ಅಭಿಪ್ರಾಯವನ್ನು ಸಮರ್ಥಿಸುತ್ತದೆ.

ಸರ್ ನೃಪೇಂದ್ರ ಸರಕಾರ್ ಅವರ ಉತ್ತರ ಇದು:

> "(ಎ) ಸಾಮಾನ್ಯ ಸ್ಥಿತಿಯೆಂದರೆ ಎಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗದ ಅಧಿಕಾರವು ಕಾನೂನಿನಡಿ ಪ್ರಾಂತಗಳಲ್ಲಿ ನಿಹಿತವಾಗಿದೆಯೋ, ಅಲ್ಲಿ ಆ ವಿಚಾರಗಳನ್ನು ಕೇಂದ್ರ ಸಂಸತ್ತು ಚರ್ಚಿಸುವುದು ಸರಿಯಾಗದು. ಆದರೆ ಕೇಂದ್ರ ಸಂಸತ್ತು ಆಸಕ್ತವಾಗಿರುವ ವಿಚಾರಗಳು ಇರಬಹುದು [ಉದಾಹರಣೆಗೆ ಭಾರತ ಸರಕಾರದ ಕಾಯ್ದೆಯಕಲಂ ೧೨೬ ರ ಉಪಕಲಂ (೧) ಮತ್ತು (೨) ರ ಅನ್ವಯ ಒಂದು ನಿರ್ದೇಶನ] ಮತ್ತು ಹೀಗೆ ಪ್ರಾಂತೀಯ ಕ್ಷೇತ್ರದ ಮೇಲೆ ಆಗುವ ಯಾವುದೇ ಅತಿಕ್ರಮಣದ ತಡೆಯುವಿಕೆಯು ಭಾರತದ ಶಾಸಕಾಂಗ ನಿಯಮ ೭ರ ಅಡಿ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷರಲ್ಲಿ ಮತ್ತು ನಿಯಮ ೨೨ರಂತೆ ನಿರ್ಣಯಗಳಿಗೆ ಸಂಬಂಧಿಸಿದಂತೆ ಗವರ್ನರ್ ಜನರಲ್‌ರಲ್ಲಿ ನಿಹಿತವಾದ ಅಧಿಕಾರದ ನಿಯಂತ್ರಣಕ್ಕೆ ಬಿಡಬಹುದು."

ನನ್ನ ಮನವಿ ಇದು: ೩೭೧ ನೇ ವಿಧಿಯಲ್ಲಿ ಇರುವ ಅಂಶಗಳು ಹೆಚ್ಚು ಕಡಿಮೆ ಹೀಗೆಯೇ ಇವೆ. ಅವು ಭಾರತ ಸರ್ಕಾರ ಕಾಯ್ದೆಯ ೧೨೬ ನೇ ಕಲಂನಲ್ಲಿ ಅಡಕವಾದ ಅಂಶಗಳ ತದ್ರೂಪು ಎಂದು

ನಾನು ಹೇಳುವುದಿಲ್ಲ. ೧೯೩೫ ನೇ ಕಾಯ್ದೆಯು ಅಧಿಕಾರವನ್ನು ಗವರ್ನರ್ ಜನರಲ್‌ರವರಲ್ಲಿ ನಿಹಿತಗೊಳಿಸಿತ್ತು. ಅದು ಹೇಳುತ್ತದೆ:

> "ಒಕ್ಕೂಟದ ಕಾರ್ಯಾಂಗದ ಅಧಿಕಾರವನ್ನು ಸಂಯುಕ್ತ ಸರಕಾರವು ಆ ಉದ್ದೇಶಕ್ಕಾಗಿ ಅಗತ್ಯವೆಂದು ಮನಗಂಡ ರೀತಿಯಲ್ಲಿ ಒಂದು ಪ್ರಾಂತಕ್ಕೆ ನಿರ್ದೇಶನಗಳನ್ನು ನೀಡುವುದಕ್ಕಾಗಿ ವಿಸ್ತರಿಸಬಹುದು".

ನಾನು ಹೇಳಿದಂತೆ ೧೨೬ ನೇ ಕಲಂ ಪ್ರಾಂತಗಳಿಗೆ ನಿರ್ದೇಶನಗಳನ್ನು ನೀಡುವ ಅಧಿಕಾರದ ಕುರಿತಾಗಿದೆ. ಅದೇ ರೀತಿ ೩೭೧ ನೇ ವಿಧಿಯು ಕೂಡ ನಿರ್ದೇಶನಗಳನ್ನು ನೀಡಲು ಕೇಂದ್ರ ಸರರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. ನನ್ನ ಪೂರ್ವಪದಾಧಿಕಾರಿಯಾಗಿದ್ದ ಸರ್ ನೃಪೇಂದ್ರ ಸರ್ಕಾರ್ ಅವರು ಅರ್ಥೈಸಿದಂತೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಆ ಹಿಂದೆ ನಡೆದ ಚರ್ಚೆ ಮತ್ತು ಸ್ಪಷ್ಟೀಕರಣದ ಆಧಾರದಲ್ಲಿ ಅವರು ೧೨೬ ನೇ ಕಲಂಮಿನ ವ್ಯಾಪ್ತಿಯೊಳಗೆ ಬರುವಂತಹ ವಿಚಾರವನ್ನು ಈ ಸದನದಲ್ಲಿ ಚರ್ಚಿಸಬಹುದೆಂಬ ತೀರ್ಮಾನಕ್ಕೆ ಬಂದರು. ಆದ್ದರಿಂದ ನನ್ನ ಬಿನ್ನಹವೆಂದರೆ ಅವರ ಆ ಅಭಿಪ್ರಾಯವು ಸಾಧುವಾಗಿದೆ.

ಶ್ರೀ ಟಿ.ಟಿ.ಕೃಷ್ಣಮಾಚಾರಿ (ಮದ್ರಾಸ್): ಮಾನ್ಯರೇ ಸಂವಿಧಾನದ ವಿಧಿ ೨೫೭(೧) ಮತ್ತು ೭೩(೧) ಪರಂತುಕ ಇವುಗಳಿಗೆ ಮುಖಾಮುಖಿಯಾಗಿ ಭಾರತ ಸರ್ಕಾರದ ಕಾಯ್ದೆಯ ಕಲಂ ೧೨೬ ಕುರಿತಂತೆ ಮಾನ್ಯ ಕಾನೂನು ಸಚಿವರು ತಮ್ಮ ಅಭಿಪ್ರಾಯವನ್ನು ನೀಡಲು ನಾನು ಸಲಹೆ ಮಾಡಬಹುದೇ.

**ಡಾ. ಅಂಬೇಡ್ಕರ್:** ನಾನು ಆ ಕಲಂಗಳನ್ನು ಗಮನಿಸಿಲ್ಲ. ಬೇರೊಂದು ಸಮಯದಲ್ಲಿ ಈ ಅಂಶವನ್ನು ಎತ್ತಿದರೆ ನಾನು ಅದನ್ನು ಸ್ಪಷ್ಟಪಡಿಸಲು ತಯಾರಿರುತ್ತೇನೆ. ಸದ್ಯಕ್ಕೆ ನಾವು ಚರ್ಚಿಸುವ ವಿಷಯಕ್ಕೆ ಅದು ಸುಸಂಗತವೆಂದು ಅನಿಸುವುದಿಲ್ಲ.

**ಪಂಡಿತ್ ಕುಂಜ್ರು:** ಮಾನ್ಯ ಕಾನೂನು ಸಚಿವರು ೩೭೧ ನೇ ವಿಧಿಯನ್ನು ಓದುವರೇ ಮತ್ತು ಅದರಡಿ ಭಾರತ ಸರಕಾರವು ರಾಜ್ಯಗಳ ಸರಕಾರಗಳಿಗೆ ಕೇಂದ್ರ (ಸಂಯುಕ್ತ) ವಿಚಾರಗಳ ಕುರಿತು ಮಾತ್ರ ಅಥವಾ ರಾಜ್ಯಗಳ ಪಟ್ಟಿಯಲ್ಲಿ ಸೇರಿಕೊಂಡ ವಿಚಾರಗಳ ಕುರಿತೂ ಆದೇಶಗಳನ್ನು ನೀಡಬಹುದೇ?

**ಡಾ ಅಂಬೇಡ್ಕರ್:** ೩೭೧ನೇ ವಿಧಿಯು ರಾಜ್ಯ ಶಾಸಕಾಂಗ ಮತ್ತು ರಾಜ್ಯ ಕಾರ್ಯಾಂಗದ ವ್ಯಾಪ್ತಿಯೊಳಗಿನ ವಿಚಾರಗಳ ಕುರಿತು ನಿರ್ದೇಶನಗಳನ್ನೂ ನೀಡಬಹುದೆಂದು ಹೇಳುತ್ತದೆಂಬುವುದು ಸ್ಪಷ್ಟವಿದೆ. ನಿಜಕ್ಕೂ ೩೭೧ ನೇ ವಿಧಿಯನ್ನು ರಾಜ್ಯದ ಆಡಳಿತಗಳಿಗೆ ಸಂಬಂಧಿಸಿದಂತೆ ರಚಿಸಲಾಗಿದೆ. ನನ್ನ ಮನಸ್ಸಿನಲ್ಲಿ ಈ ಅಂಶದ ಕುರಿತು ಯಾವ ಸಂಶಯವೂ ಇಲ್ಲ. ಈಗ ಮಾನ್ಯರೇ. . . .

**ಪಂಡಿತ್ ಕುಂಜ್ರು:** ಮಾನ್ಯ ಕಾನೂನು ಸಚಿವರು ಹೇಗೆ ವಿಧಿ ೩೭೧ ನ್ನು ಭಾರತ ಸರಕಾರದ ಕಾರ್ಯಾಂಗ ಅಧಿಕಾರವು ಸಂಯುಕ್ತ ಪಟ್ಟಿಯ ವಿಚಾರಗಳಿಗೆ ಸೀಮಿತಗೊಳಿಸಿದ ಭಾರತ ಸರಕಾರದ ಕಾಯ್ದೆಯ ಕಲಂ ೧೨೬ಕ್ಕೆ ಸರಿಸಮವಾಗಿದೆ ಎಂದು ಹೇಳುತ್ತಾರೆಯೇ?

**ಡಾ ಅಂಬೇಡ್ಕರ್:** ನನ್ನ ಮಾನ್ಯ ಸ್ನೇಹಿತರು ನನ್ನನ್ನು ಅರ್ಥಮಾಡಿಕೊಂಡಿದ್ದಾರೆ ಎಂದು ನನಗನ್ನಿಸುವುದಿಲ್ಲ. ಮುಖ್ಯ ಅಂಶ ಇಷ್ಟೆ. ನಾನು ಇದನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಹೇಳುತ್ತೇನೆ. ಒಂದು ಸರರ್ಕಾರವು ಇನ್ನೊಂದಕ್ಕೆ ನಿರ್ದೇಶನಗಳನ್ನು ನೀಡಲು ಹಕ್ಕನ್ನು ಹೊಂದಿದಾಗ ಅಂತಹ ನಿರ್ದೇಶನಗಳು ಆ ನಿರ್ದಿಷ್ಟ ಸರಕಾರವು ಜವಾಬ್ದಾರಿಯಾಗಿರುವ ಶಾಸನ ಸಭೆಯಲ್ಲಿ ಅಂತಹ ನಿರ್ದೇಶನಗಳು ಚರ್ಚಿತವಾಗಬಹುದೇ ಎಂಬುದು ಪ್ರಶ್ನೆ. ನಾನು ೧೨೬ನೇ ಕಲಂನ್ನು ದೊಡ್ಡ

ವಿವಾದಾಂಶಕ್ಕಾಗಿ ಬಳಸುತ್ತಿಲ್ಲ. ನಾನು ಅದನ್ನು ಸೀಮಿತ ವಿವಾದಾಂಶವಾಗಿ ಬಳಸುತ್ತೇನೆ. ಅಂದರೆ ಎಲ್ಲಿ ನಿರ್ದೇಶನವನ್ನು ಕೊಡಲು ಹಕ್ಕು ಇದೆಯೋ ಆ ಹಕ್ಕು ಜವಾಬ್ದಾರಿಯನ್ನು ಪರೋಕ್ಷವಾಗಿ ಹೇಳುತ್ತದೆ. ಮತ್ತು ಎಲ್ಲಿ ಜವಾಬ್ದಾರಿ ಇರುತ್ತದೆಯೋ ಅಲ್ಲಿ ಚರ್ಚೆ ಇರಬೇಕಾಗುತ್ತದೆ. ಅದು ನನ್ನ ವಿಚಾರ.

ಮಾನ್ಯರೇ, ಈಗ ನೀವು ನನ್ನಲ್ಲಿ 'ಸಾಮಾನ್ಯ ನಿಯಂತ್ರಣ' ಎಂದರೆ ಏನು ಎಂದು ವಿವರಿಸಲು ಹೇಳುತ್ತೀರಿ. ಈಗ ನನಗೆ ಅನಿಸುವಂತೆ 'ಸಾಮಾನ್ಯ ನಿಯಂತ್ರಣ' ಎಂಬ ಪದಗಳು ಆ ನಿರ್ದಿಷ್ಟ ರಾಜ್ಯದಲ್ಲಿ ಉದ್ಭವಿಸುವ ಎಲ್ಲಾ ವಿಚಾರಗಳನ್ನು ಒಳಗೊಳ್ಳವುದಕ್ಕಾಗಿ ಬಳಸಲಾಗುತ್ತವೆ. ಈ ನಿರ್ದೇಶನವು ಯಾವುದೇ ನಿರ್ದಿಷ್ಟ ವಿಚಾರಕ್ಕೆ ಸೀಮಿತವಾಗಿರಬೇಕಾಗಿಲ್ಲ. ಇಂದು ನಿರ್ದೇಶನವನ್ನು ಪೋಲಿಸ್ ಆಡಳಿತದ ಕುರಿತು ನೀಡಬಹುದು; ನಾಳೆ ಅದನ್ನು ಕಂದಾಯ ಆಡಳಿತದ ಕುರಿತು ನೀಡಬಹುದು; ಇನ್ನೊಂದು ಹಂತದಲ್ಲಿ ಅಂತಹುದೇ ನಿರ್ದೇಶನವನ್ನು ಹಣಕಾಸಿನ ಕುರಿತು ನೀಡುವ ಅಗತ್ಯ ಕಾಣಬಹುದು. 'ಸಾಮಾನ್ಯ ನಿಯಂತ್ರಣ' ಅಂದರೆ ಆಡಳಿತದ ಎಲ್ಲಾ ಕ್ಷೇತ್ರಗಳ ಮೇಲೆ ವಿಸ್ತರಿಸುವ ನಿಯಂತ್ರಣ. ನಾನು 'ಸಾಮಾನ್ಯ ನಿಯಂತ್ರಣ' ಎಂಬ ಪದವನ್ನು ಈ ರೀತಿಯಲ್ಲಿ ಉಪಯೋಗಿಸಿದ್ದೇನೆ.

ಈ ವಿಧಿಯು ಹೇಗೆ ರಚನೆಯಾಯಿತೆಂಬ ಚರಿತ್ರೆಯನ್ನು ನೀಡಲು ನನಗೆ ಅವಕಾಶವಿಲ್ಲ ಎಂದು ಭಾವಿಸುತ್ತೇನೆ. ನಾನು ಈ ಬಗ್ಗೆ ನಿಮ್ಮ ಅನುಮತಿಯನ್ನು ಕೇಳುವುದೂ ಇಲ್ಲ. ಆದರೆ ಈ ವಿಧಿಯು ಏನನ್ನು ಒಳಗೊಳ್ಳುವ ಉದ್ದೇಶವನ್ನು ಹೊಂದಿದೆ ಎಂಬ ಬಗ್ಗೆ ನನ್ನ ಮನಸ್ಸಿನಲ್ಲಿ ಸ್ಪಷ್ಟ ಚಿತ್ರಣವಿದೆ. ಈ ವಿಧಿಗಳಡಿ ಅಂದರೆ ೧೫೪, ೧೬೨, ೧೬೩ ಮತ್ತು ೧೬೮ರ ಅಡಿ ರಾಜ್ಯಕ್ಕೆ ನೀಡಲಾದ ಕಾರ್ಯಾಂಗದ ಅಧಿಕಾರ, ಆಡಳಿತ ಮತ್ತು ಶಾಸಕಾಂಗದ ಅಧಿಕಾರ ಇವುಗಳನ್ನು ಕಸಿದುಕೊಳ್ಳುವುದಿಲ್ಲ. ಆದರೆ ಆಡಳಿತದ ಮಟ್ಟಗಳು ಕುಸಿದು ಬೀಳಬಾರದು ಎಂಬ ಉದ್ದೇಶದಿಂದ, ಒಳ್ಳೆಯ ಸರಕಾರದ ಹಿತ ದೃಷ್ಟಿಯಿಂದ, ಅದು ಕೇಂದ್ರಕ್ಕೆ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನು ಹೇರಿದೆ. ಮಾನ್ಯರೇ ಇದು ೩೭೧ನೇ ವಿಧಿಯ ಇಂಗಿತ.

**ಡಾ ಆರ್.ಯು. ಸಿಂಗ್** (ಉತ್ತರ ಪ್ರದೇಶ): ಮಾನ್ಯರೇ ನಾನು ಒಂದು ಪ್ರಶ್ನೆಯನ್ನು ಕೇಳಬಹುದೇ? ನಿಯಂತ್ರಣವನ್ನು ಬಳಸಿದಾಗ ಅಥವಾ ಬಳಸುತ್ತಿರುವಾಗ ಮತ್ತು ನಿರ್ದೇಶನಗಳನ್ನು ನೀಡಿದಾಗ ಸಂಸತ್ತು ಆ ವಿಚಾರವನ್ನು ಚರ್ಚಿಸಲು ಅಸಮರ್ಥವೆಂದು ವಾದಿಸಲಾಗಿದೆಯೇ?

**ಸಭಾಪತಿಗಳು:** ಅವರು ಇದಕ್ಕೆ ವಿರುದ್ಧವಾದುದನ್ನು ವಾದಿಸುತ್ತಿದ್ದಾರೆ.

**ಡಾ ಅಂಬೇಡ್ಕರ್:** ಮಾನ್ಯರೇ ಒಂದು ಅಭಿಪ್ರಾಯಕ್ಕೆ ಬರಬೇಕಾದರೆ ಶಾಸನ ಸಭೆ ಇದೆಯೋ ಅಥವಾ ಇಲ್ಲವೋ ಎಂಬ ವಿಚಾರವನ್ನು ಪರಿಗಣಿಸಬಹುದೆಂಬ ಪ್ರಶ್ನೆಯನ್ನು ನೀವು ಉಲ್ಲೇಖಿಸಿದ್ದೀರಿ. ತಾತ್ತ್ವಿಕವಾಗಿ ಶಾಸನ ಸಭೆಯ ಅಸ್ತಿತ್ವ ಅಥವಾ ಅಸ್ತಿತ್ವರಾಹಿತ್ಯದ ಕುರಿತು ಯಾವ ಪರಿಗಣನೆಯನ್ನು ಮಾಡಲಾಗದು. ಏಕೆಂದರೆ ೩೮೫ ನೇ ವಿಧಿಯಲ್ಲಿ ಎಲ್ಲಿ ಶಾಸನ ಸಭೆ ಇಲ್ಲವೋ ಅಲ್ಲಿ ರಾಜಪ್ರಮುಖರು ಶಾಸನ ಸಭೆ ಎಂದು ಪರಿಗಣಿತವಾಗತಕ್ಕದ್ದು ಎಂದು ಸಂವಿಧಾನವು ಸ್ಪಷ್ಟವಾಗಿ ಹೇಳಿದೆ. ಆದರೆ ಹಾಗೆ ಹೇಳಿದರೂ ಸ್ಥಳೀಯ ಶಾಸನ ಸಭೆ ಇದೆಯೇ ಎಂಬ ಅಂಶವನ್ನು ಚರ್ಚಿಸಬಹುದೇ ಇಲ್ಲವೇ ಎಂಬುದನ್ನು ಕಳೆದ ಯುದ್ಧದ ಸಂದರ್ಭದಲ್ಲಿ ಪ್ರಶ್ನೆಗಳನ್ನು ಪರಿಗಣಿಸುವಾಗ ನಿಮ್ಮ ಪೂರ್ವಪದಾಧಿಕಾರಿಗಳು ಪರಿಗಣಿಸಿದ್ದಾರೆ. ತಮಗೆ ನೆನಪಿರುವಂತೆ ೧೯೩೯ರಲ್ಲಿ ಯುದ್ಧವು ಘೋಷಣೆಯಾದಾಗ ವಿವಿಧ ಪ್ರಾಂತಗಳಲ್ಲಿ ಆಳುವ ಪಕ್ಷವಾಗಿದ್ದ ಕಾಂಗ್ರೆಸ್ ಪಕ್ಷವು ಪಕ್ಷ ಮತ್ತು ಸರಕಾರದ ನಡುವಣ ಕೆಲವು ವ್ಯತ್ಯಾಸಗಳಿಂದಾಗಿ ರಾಜಿನಾಮೆ ನೀಡಿತ್ತು ಮತ್ತು ಪರಿಣಾಮವಾಗಿ ೯೩ ನೇ ಕಲಂನ್ನು ಅನ್ವಯಿಸಲಾಯಿತು. ಇಲ್ಲಿ ಕೆಲವು

ಸದಸ್ಯರು ಗವರ್ನರ್ ಮತ್ತು ಅವರ ಸಲಹೆಗಾರರು ಪ್ರಾಂತಗಳಲ್ಲಿ ನಡೆಸಿದಂತಹ ಆಡಳಿತದ ಕುರಿತು ಕೆಲವು ಪ್ರಶ್ನೆಗಳನ್ನು ಕೇಳಿದರು. ಆಗ ಪ್ರಾಂತಗಳಲ್ಲಿ ಶಾಸನ ಸಭೆಗಳು ಕೆಲಸ ಮಾಡದೆ ಇದ್ದಾಗ ಪ್ರಾಂತಗಳ ಆಡಳಿತದ ಕುರಿತು ಮಾಹಿತಿಗಾಗಿ ಕೇಂದ್ರ ಶಾಸನ ಸಭೆಯ ಸದಸ್ಯರು ಪ್ರಶ್ನೆಗಳನ್ನು ಕೇಳಬಹುದು ಮತ್ತು ಅದು ಕಾನೂನುಬದ್ಧವಾಗಿದೆ ಎಂದು ತಿಳಿಯಲಾಯಿತು. ನಾನು ಆ ನಡವಳಿಕೆಗಳನ್ನು ಓದಿದಂತೆ ನೆನಪಿದೆ ಮತ್ತು ವಿಷಯದ ಕುರಿತು ಹೆಚ್ಚು ಒತ್ತನ್ನು ನೀಡಲಾಗಿದೆ–ಕಾನೂನಿನ ವಿಷಯದ ಮೇಲಲ್ಲ, ಆದರೆ ವಾಸ್ತವ ಸ್ಥಿತಿಯಾಗಿ–ಅಂದರೆ ಎಲ್ಲಿ ಜನರಿಗೆ ಕ್ರಮಬದ್ಧವಾಗಿ ರಚನೆಗೊಂಡ ಶಾಸನ ಸಭೆಯ ಮುಂದೆ ತಮ್ಮ ದೂರುಗಳನ್ನು ಹೇಳಿಕೊಳ್ಳಲು ಅವಕಾಶವಿಲ್ಲದಿರುವಾಗ ಅದೇ ಕೇಂದ್ರ ಶಾಸನ ಸಭೆಯಲ್ಲಿ ಪ್ರಾಂತೀಯ ಆಡಳಿತಗಳ ಕುರಿತು ಪ್ರಶ್ನೆಗಳನ್ನು ಕೇಳುವುದಕ್ಕೆ ಒಂದು ಹೆಚ್ಚಿನ ಕಾರಣವಾಗುತ್ತದೆ. ಆದ್ದರಿಂದ ತಾಂತ್ರಿಕವಾಗಿ ಇದನ್ನು ಪರಿಗಣಿಸುವುದು ಸರಿಯಾಗುವುದಿಲ್ಲ. ಏಕೆಂದರೆ ರಾಜಪ್ರಮುಖರೇ ಶಾಸನ ಸಭೆಯಾಗಿದ್ದಾರೆ. ಆದರೆ ನಾನು ಹೇಳುವುದೇನೆಂದರೆ ಅನೇಕ ಮಾನ್ಯ ಸದಸ್ಯರು ಇಚ್ಛಿಸುವಂತೆ, ಮತ್ತು ಈ ರೀತಿಯ ವಿಚಾರದಲ್ಲಿ, ತಾಂತ್ರಿಕತೆಗಳು ಅಡ್ಡ ಬರಬಾರದು.

**ಸಭಾಪತಿಗಳು:** ಈ ಹಂತದಲ್ಲಿ ಅವರು ಚರ್ಚೆಗೆ ಕೇಳಿದ ರೀತಿಯಲ್ಲಿಯೇ ಮಾಹಿತಿಗಾಗಿಯೂ ಪ್ರಶ್ನೆಯನ್ನು ಹಾಕುತ್ತಾರೆಂದು ನಾನು ಕೇಳಬಹುದೇ?

**ಡಾ ಅಂಬೇಡ್ಕರ್:** ನಾನು ಹೇಳಿದಂತೆ, ನಾನು ಸಂಗ್ರಹಿಸಿದ ಮಾದರಿಗಳು ಪ್ರಶ್ನೆಗಳನ್ನು ಮಾತ್ರ ಉಲ್ಲೇಖಿಸುತ್ತದೆ. ನಾನು ಅವಲಂಬಿಸಿದ ಆಕರವಾದ ಸರ್ ಎನ್.ಎನ್. ಸರ್ಕಾರ್ ಅವರ ಪ್ರಕಾರ ಈ ವಿಚಾರವನ್ನು ಅಂದರೆ ಒಂದು ನಿರ್ದೇಶನದ ಸಾಧುತ್ವ ಅಥವಾ ಅಸಾಧುತ್ವವನ್ನು ಚರ್ಚಿಸಬಹುದು. ಅವರು "ಚರ್ಚೆ" ಎಂಬ ಪದವನ್ನು ಬಳಸಿದ್ದರಿಂದ ಅದು ನಿಲುವಳಿ ಸೂಚನೆಯನ್ನು ಒಳಗೊಳ್ಳುವಷ್ಟು ವಿಶಾಲವಾಗಿದೆ ಎಂದು ನಾನು ಭಾವಿಸುತ್ತೇನೆ.

ಮಾನ್ಯರೆ ಈಗ ನಾನು ನೀವು ಮಾಡಿ ಕೇಳುವ ಕೃಪೆ ಮಾಡಿದ "೩೭೧ ನೇ ವಿಧಿಯ ವ್ಯಾಪ್ತಿಯೇನು?" ಎಂಬ ಪ್ರಶ್ನೆಯ ಕುರಿತು ಹೇಳುತ್ತೇನೆ. ಮಾನ್ಯರೇ ೩೭೧ ನೇ ವಿಧಿಯನ್ನು ಓದಿದ ಮೇಲೆ ನಾನು ಒಂದು ಮುಖ್ಯ ವಿಚಾರವನ್ನು ಸೂಚಿಸಬಯಸುತ್ತೇನೆ. ಅದೇಂದರೆ ಆ ವಿಧಿಯು ಭಾರತ ಸರ್ಕಾರದ ಮೇಲೆ ಸಾಮಾನ್ಯ ನಿಯಂತ್ರಣದ ಕರ್ತವ್ಯವನ್ನು ಹೇಳುವುದಿಲ್ಲ. ಅದು ಕರ್ತವ್ಯವನ್ನು ಹೇರುವ ವಿಧಿಯಲ್ಲ. ಅದು ಭಾರತ ಸರಕಾರಕ್ಕೆ ನಿರ್ದೇಶನಗಳನ್ನು ನೀಡಲು ಅನುಮತಿ ಕೊಡುವ ವಿಧಿಯಾಗಿದೆ. ಮಾನ್ಯರೇ ಈಗ ನಾನು ಹೇಳುವ ಈ ವ್ಯತ್ಯಾಸವು ಬಹು ಮುಖ್ಯವಾದ ವ್ಯತ್ಯಾಸವಾಗಿದೆ ಮತ್ತು ಅದನ್ನು ಸ್ಪಷ್ಟವಾಗಿ ಮನದಟ್ಟು ಮಾಡಬೇಕಾಗಿದೆ.

**ಶ್ರೀ ಕಾಮತ್** (ಮಧ್ಯಪ್ರದೇಶ)**:** ೩೭೧ ನೇ ವಿಧಿಯಲ್ಲಿ ಬಳಸಲಾದ ಭಾಷೆಯನ್ನು ನಾನು ಹೀಗೆ ಗುರುತಿಸಬಹುದು—

> "ಪ್ರತೀ ರಾಜ್ಯದ ಸರಕಾರವು. . . . . ಸಾಮಾನ್ಯ ನಿಯಂತ್ರಣದಡಿ ಇರತಕ್ಕದ್ದು .
> . . . ಇತ್ಯಾದಿ, ಇತ್ಯಾದಿ".

**ಡಾ ಅಂಬೇಡ್ಕರ್:** "ಇರತಕ್ಕದ್ದು" ಎಂದರೇನು? ರಾಜ್ಯಕ್ಕೆ ಅಂತಹ ಕರ್ತವ್ಯವಿದೆ. ಕೇಂದ್ರ ಸರಕಾರಕ್ಕೆ ಅಂತಹ ಕರ್ತವ್ಯವಿಲ್ಲ.

**ಶ್ರಿ ಕಾಮತ್:** ಅಲ್ಲಿ ಪರಸ್ಪರತೆ ಇದೆ.

**ಡಾ ಅಂಬೇಡ್ಕರ್:** ಇಲ್ಲ, ಪರಸ್ಪರತೆ ಇಲ್ಲವೇ ಇಲ್ಲ.

ಈಗ ವಸ್ತುಸ್ಥಿತಿ ಹೀಗಿದೆ. ಆ ವ್ಯತ್ಯಾಸವು ಈ ದೃಷ್ಟಿಕೋನದಿಂದ ಬಹಳ ಮುಖ್ಯವಾಗುತ್ತದೆ. ಒಂದು ವಿಚಾರದ ಕುರಿತು ಕರ್ತವ್ಯವಿದ್ದರೆ ಆ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದರೆ ಅಥವಾ ಮಾಡಲು ವಿಫಲವಾದರೆ ಛೀಮಾರಿಯ ನಿರ್ಣಯವನ್ನು ಅಂಗೀಕರಿಸಬಹುದು. ಆದರೆ ಈ ವಿಧಿಯು ಇಂಡಿಯಾ ಸರಕಾರಕ್ಕೆ ಉತ್ತಮ ಆಡಳಿತದ ಹಿತದೃಷ್ಟಿಯಿಂದ ಪ್ರಾಂತೀಯ ಸರಕಾರಕ್ಕೆ ಕೆಲವು ಸಂದರ್ಭದಲ್ಲಿ ಅಥವಾ ಪರಿಸ್ಥಿತಿಯಲ್ಲಿ ಅವರು ಮಾಡಬಹುದು ಅಥವಾ ಮಾಡಬಾರದು ಎಂಬ ನಿರ್ದೇಶನಗಳನ್ನು ನೀಡಲು ಅವಕಾಶವನ್ನು ಕಲ್ಪಿಸುತ್ತದೆಯಾದರೆ ಆಗ ನನಗೆ ಖಚಿತವಾಗುವುದೆಂದರೆ ಯಾವ ನಿರ್ದೇಶನವನ್ನು ನೀಡಲಾಯಿತು ಮತ್ತು ಆ ನಿರ್ದೇಶನ ಸರಿಯಾಗಿತ್ತೇ ಮತ್ತು ನಿರ್ದೇಶನಗಳ ಪಾಲನೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಯಿತು ಎಂಬ ಪ್ರಶ್ನೆಗಳು ಮಾತ್ರ ಪರಿಗಣನೆಗೆ ಉದ್ಭವಿಸುತ್ತವೆ. ಕೇಂದ್ರ ಸರಕಾರವು ತನ್ನ ಪರಿಗಣನೆಯಲ್ಲಿ ಅಥವಾ ವಿವೇಚನೆಯಲ್ಲಿ ಆದೇಶವನ್ನು ನೀಡುವಂತಹ ಪರಿಸ್ಥಿತಿಯ ಅಂಶಗಳು ಇದ್ದರೂ ಅಲ್ಲಿ ನಿರ್ದೇಶನವನ್ನು ನೀಡುವುದು ಅಗತ್ಯವೆಂದು ಭಾವಿಸಿದ್ದರೆ ಆಗ ಕೇಂದ್ರ ಸರಕಾರವನ್ನು ವೈಫಲ್ಯಕ್ಕೆ ವಿವರಣೆ ನೀಡಿರೆಂದು ಹೇಳಲಾಗುವುದಿಲ್ಲ. ಇದು ಮನದಟ್ಟು ಮಾಡಿಕೊಳ್ಳಬೇಕಾದ ವ್ಯತ್ಯಾಸವೆಂದು ನಾನು ಬಿನ್ನವಿಸುತ್ತೇನೆ.

**ಪಂಡಿತ್ ಕುಂಜ್ರು:** ನನ್ನ ಸ್ನೇಹಿತರು ಆ ತೀರ್ಮಾನಕ್ಕೆ ಹೇಗೆ ಬರುತ್ತಾರೆ?

**ಡಾ ಅಂಬೇಡ್ಕರ್:** ನಾನು ಅದನ್ನು ಓದುವ ರೀತಿ ಹೀಗಿದೆ. ನನ್ನ ಮಿತ್ರರು, ನಾನು ಹೇಳಿದಂತೆ, ಬೇರೆ ರೀತಿಯಲ್ಲಿ ಓದಬಹುದು; ಜಾಗ್ರತೆಗಿಂತ ಹೆಚ್ಚು ಉತ್ಸಾಹವಿರುವ ವ್ಯಕ್ತಿಗಳು ಈ ವಿಧಿಗೆ ಇನ್ನೂ ಹೆಚ್ಚು ವ್ಯಾಪ್ತಿಯ ಅರ್ಥವನ್ನು ನೀಡಲು ಇಚ್ಛಿಸಬಹುದೆಂದು ನನಗೆ ಗೊತ್ತಿದೆ. ಆದರೆ ಈ ದೃಷ್ಟಿಕೋನದಿಂದ ನೋಡಿದರೆ ಸಂವಿಧಾನವು ರಾಜ್ಯಗಳಿಗೆ ಅವುಗಳ ವ್ಯವಹಾರಗಳನ್ನು ನೋಡಿಕೊಳ್ಳಲು ನೀಡಿದ ಹಕ್ಕಿನ ವಿಚಾರದಿಂದ, ಮತ್ತು ಕೆಲವು ಸಂದರ್ಭದಲ್ಲಿ ಮತ್ತು ಕೆಲವು ವಿಚಾರಗಳಲ್ಲಿ ಬಿ ವಿಭಾಗದ ರಾಜ್ಯಗಳ ಸಂದರ್ಭದಲ್ಲಿ ನೀಡಿದ ಉಳಿಕೆ ಹಕ್ಕುಗಳನ್ನು ಬಳಸಲಾಗುವ ೩೭೧ನೇ ವಿಧಿಯಡಿಯ ಈ ಅಧಿಕಾರವು ನಾನು ಹೇಳಿದಂತೆ ಸೀಮಿತ ಅರ್ಥವನ್ನು ಹೊಂದಿದೆ. ಆದ್ದರಿಂದ ನಾನು ೩೭೧ನೇ ವಿಧಿಯನ್ನು ಓದುತ್ತಿದ್ದಂತೆ ಬಿ ವಿಭಾಗದ ರಾಜ್ಯಗಳ ಆಡಳಿತದ ವಿಚಾರದ ಕುರಿತು ಚರ್ಚಿಸುವ ಸಾಧ್ಯತೆಯನ್ನು ಅದು ಒಪ್ಪುತ್ತದೆಂಬ ಅಭಿಪ್ರಾಯವನ್ನು ಸ್ವೀಕರಿಸದೆ ಇರಲಾಗುವುದಿಲ್ಲ. ಆದರೂ ಅದು ಬಹು ಸೀಮಿತ ಅವಕಾಶದ್ದು. ನಾನು ಇಷ್ಟೇ ಹೇಳಲಿರುವುದು.

**ಸಾರಿಗೆ ಮತ್ತು ರೈಲ್ವೆ ಮಂತ್ರಿಗಳು ( ಶ್ರೀ ಗೋಪಾಲ ಸ್ವಾಮಿ):** ನಾನು ಒಂದು ನಿರ್ದಿಷ್ಟ ಅಂಶದ ಕುರಿತು ಮಾತ್ರ ಉಲ್ಲೇಖಿಸಲು ಇಚ್ಛಿಸುತ್ತೇನೆ. ನೀವು ೩೭೧ನೇ ವಿಧಿಯ ಆಧಾರದಲ್ಲಿ, ಅದರ ಅನ್ವಯ ಸಾಧ್ಯತೆ, ಅರ್ಥವಿವರಣೆ ಮತ್ತು ನಿಲುವಳಿ ಸೂಚನೆಯ ಸ್ವೀಕಾರಾರ್ಹತೆಯ ಬಗ್ಗೆ ಒಂದು ಸಾಮಾನ್ಯ ಆದೇಶವನ್ನು ನೀಡುವಿರಾದರೆ, ನನ್ನಂತಹ ಇತರ ಸದಸ್ಯರು ಕೆಲವು ಅಂಶಗಳನ್ನು ನಿಮ್ಮ ಮುಂದೆ ಮಂಡಿಸುವವರೆಗೆ ಮುಂದೂಡಬೇಕಾಗಿ ಅಪೇಕ್ಷಿಸುತ್ತೇನೆ. ಆದರೆ ಮಾನ್ಯ ಕಾನೂನು ಮಂತ್ರಿಗಳು ಅವರ ಭಾಷಣವನ್ನು ಮುಗಿಸಿದ ಚಿಕ್ಕ ಕಾರಣದ ಮೇಲೆ ಈ ಸೂಚನೆಯನ್ನು ತಾವು ತಿರಸ್ಕರಿಸುವುದಾದರೆ ನಾನು ಈ ಅಂಶಗಳನ್ನು ತಮ್ಮ ಮುಂದೆ ಮಂಡಿಸಿ ಸದನದ ಸಮಯವನ್ನು ಹಾಳುಮಾಡುವ ಅಗತ್ಯವಿಲ್ಲ.

**ಸಭಾಪತಿಗಳು:** ನಾನು ನನ್ನ ಮನಸ್ಸಿನಲ್ಲಿ ಯಾವ ಯೋಚನೆಯಿದೆಯೆಂದು ಅವರಿಗೆ ಹೇಳುತ್ತೇನೆ. ನಾನು ಅವಸರವಾಗಿ ಯಾವುದೇ ತೀರ್ಮಾನಕ್ಕೆ ಬರಲು ಇಚ್ಛಿಸುವುದಿಲ್ಲ. ನಾನು ಮಾನ್ಯ ಕಾನೂನು ಸಚಿವರನ್ನು ಆಲಿಸಿದ್ದೇನೆ, ಅವರ ನಿಲುವನ್ನು ಆಲಿಸಿದ್ದೇನೆ, ಮತ್ತು ಇತರ ಸದಸ್ಯರು ಅದರ ಯೋಗ್ಯತೆಯ

ಕುರಿತು ಹೋಗದೆ ಸಾಂವಿಧಾನಾತ್ಮಕ ವಿಚಾರದ ಕುರಿತು ಮಾತ್ರ ಹೇಳಲು ಆಸಕ್ತರಾದರೆ ನಾನು ಅವರನ್ನು ಆಲಿಸಲು ಸಿದ್ಧನಿದ್ದೇನೆ. ಆದರೆ ಆ ಚರ್ಚೆಯು ಬಹು ಸಣ್ಣ ಅವಧಿಯದ್ದಾಗಿರಬೇಕು. ನಾನಿನ್ನೂ ನಿರ್ಧಾರ ತಾಳಿಲ್ಲ . . .

**ಡಾ ತೇಕ್ ಚಂದ್ (ಪಂಜಾಬ್):** ನಾವು ಅದನ್ನು ಇಂದೇ ಅಥವಾ ಬೇರೆ ಯಾವುದಾದರು ದಿವಸ ಮಾಡೋಣವೇ? ಈ ಪ್ರಶ್ನೆಯು ಎತ್ತಿರುವುದು ತುಂಬಾ ಮುಖ್ಯವಾದ . . . .

**ಸಭಾಪತಿಗಳು:** ನಾನಿನ್ನೂ ಮುಗಿಸಿಲ್ಲ. ಮಾನ್ಯ ಸದಸ್ಯರು ನನ್ನ ಮಾತನ್ನು ಮುಗಿಸಲು ದಯಮಾಡಿ ಅವಕಾಶ ಕೊಡಬೇಕು ಮತ್ತು ನಂತರ ಅವರನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆಂಬುದನ್ನು ಅವರು ಕಾಣಬಹುದು ಮತ್ತು ಅವರ ಆಶಯದಂತೆಯೇ ನಾನು ಮಾಡಲಿದ್ದೇನೆ. ನಾನು ಹೇಳುತ್ತಿದ್ದ ಅಂಶ ಇದು. ನಾನು ಈ ಪ್ರಕರಣದ ವಿಚಾರಗಳಿಗಷ್ಟೇ ಮಿತಿಗೊಳಿಸುತ್ತೇನೆ ಮತ್ತು ನಾನು ಮಾನ್ಯ ಕಾನೂನು ಸಚಿವರನ್ನು ಸರಿಯಾಗಿ ಅರ್ಥೈಸಿಕೊಂಡಿದ್ದೇನೆಯೇ ಎಂದು ತಿಳಿಯಲು ಇಚ್ಛಿಸುತ್ತೇನೆ. ಅವರು ಈ ವಿಶಾಲ ಅಂಶಗಳ, ಮತ್ತು ಕೇಂದ್ರವು ಈ ಅಧಿಕಾರವನ್ನು ಉಪಯೋಗಿಸಬಹುದಾದ ವ್ಯಾಪ್ತಿಯ ಮತ್ತು ಸಂದರ್ಭಗಳ ಕುರಿತು ತನ್ನ ಅಭಿಪ್ರಾಯಗಳನ್ನು ಹೇಳಿದ್ದಾರೆ; ಆದರೆ ಕೇಂದ್ರದಿಂದ ಯಾವುದೇ ನಿರ್ದೇಶನಗಳು ನೀಡಿಲ್ಲವಾದರೆ ಅಥವಾ ಯಾವುದೇ ನಿಯಂತ್ರಣವನ್ನು ಪ್ರಯೋಗಿಸದಿದ್ದರೆ ಈ ಸೂಚನೆಯು ನಿಯಮಬದ್ಧವಾಗುವುದಿಲ್ಲ ಎಂದು ಅರ್ಥ ಮಾಡಿಕೊಂಡದ್ದು ಸರಿಯಿದೆಯೇ. ಅದು ಅವರ ತೀರ್ಮಾನವೇ?

**ಡಾ ಅಂಬೇಡ್ಕರ್:** ಅದು ನನ್ನ ನಿಲುವು.

**ಸಭಾಪತಿಗಳು:** ನನಗೆ ಸ್ಪಷ್ಟವಾಗಬೇಕಾದ ಇನ್ನೊಂದು ಅಂಶವೆಂದರೆ 'ಸಾಮಾನ್ಯ ನಿಯಂತ್ರಣ' ಎಂಬ ಪದಗಳು. 'ಸಾಮಾನ್ಯ" ಎಂದರೆ ಇಡೀ ಆಡಳಿತದ ನಿಯಂತ್ರಣ ಎಂದು ಅವರು ಹೇಳಿದರು.

**ಡಾ ಅಂಬೇಡ್ಕರ್:** ವಿವರವಾದ ನಿಯಂತ್ರಣವಲ್ಲ, ದೈನಂದಿನ ಆಡಳಿತದ ಮೇಲೆ ಅಲ್ಲ.

**ಸಭಾಪತಿಗಳು:** ನನಗೆ ಸ್ಪಷ್ಟವಾಗಬೇಕಾದದ್ದು ಅದು. ಕೇಂದ್ರದ ಸಾಮಾನ್ಯ ಧೋರಣೆಗೆ ಒಳಪಟ್ಟ ರಾಜ್ಯಗಳು ಪೂರ್ಣ ಸ್ವಾಯತ್ತತೆಯನ್ನು ಹೊಂದಿರುತ್ತವೆ.

**ಡಾ ಅಂಬೇಡ್ಕರ್ :** ಆದರೆ ಭಾರತ ಸರಕಾರಕ್ಕೆ ತನ್ನ ನಿರ್ದೇಶನಗಳು ಸರಿಯಾಗಿ ಪಾಲನೆಯಾಗಿಲ್ಲವೆಂದು ಮನಗಂಡರೆ ಉಳಿದ ಅಂಶಗಳು ಕಾರ್ಯರೂಪಕ್ಕೆ ಬರುತ್ತವೆ.

**ಸಭಾಪತಿಗಳು:** ಅದು ಬೇರೆ ವಿಚಾರ, ಆದರೆ ಕೇಂದ್ರವು ೩೭೧ ನೇ ವಿಧಿಯಲ್ಲಿ ಅಧಿಕಾರವನ್ನು ಪ್ರಯೋಗಿಸದಿದ್ದರೆ ಈ ಸದನದಲ್ಲಿ ಯಾವ ಪ್ರಶ್ನೆಯೂ ಚರ್ಚೆಗೆ ಉದ್ಭವಿಸುವುದಿಲ್ಲ.

◆

# ೧೧

## ಸಂಸತ್ (ಅನರ್ಹತೆ ತಡೆಗಟ್ಟುವಿಕೆ) ಮಸೂದೆ

*__ಕಾನೂನು ಸಚಿವರು (ಡಾ.ಅಂಬೇಡ್ಕರ್):__ ನಾನು ಮಸೂದೆಯನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ :

> "ಸಂವಿಧಾನದ ೧೦೨ನೇ ವಿಧಿಯಡಿ ಕೆಲವು ಲಾಭದಾಯಕ ಹುದ್ದೆಗಳ ಕುರಿತ ವ್ಯವಸ್ಥೆಯನ್ನು ಮಾಡುವ ವಿಧೇಯಕವನ್ನು ಪರಿಗಣಿಸಬಹುದು".

ಈ ವಿಧೇಯಕದ ವಿವರಗಳನ್ನು ಮಾನ್ಯ ಸದಸ್ಯರಿಗೆ ಅರ್ಥಮಾಡಲು ಸಾಧ್ಯವಾಗುವಂತೆ ಯಾವುದೇ ದೀರ್ಘ ಹೇಳಿಕೆಯನ್ನು ಮಾಡುವ ಅಗತ್ಯವಿದೆಯೆಂದು ನನಗನ್ನಿಸುವುದಿಲ್ಲ. ಇದು ತೀರ ಚಿಕ್ಕದು. ಇದರಲ್ಲಿ ಒಂದೇ ಒಂದು ಉಪಬಂಧವಿದ್ದು ಮಾನ್ಯ ಸದಸ್ಯರಿಗೆ ಯಥಾರ್ಥ ಸ್ಥಿತಿಯನ್ನು ತಿಳಿಸುವುದಕ್ಕಾಗಿ ನಾನು ಹೇಳಲಿಚ್ಛಿಸುವುದೇನೆಂದರೆ ಸಂವಿಧಾನದ ೧೦೨ನೇ ವಿಧಿಯು ಕೆಲವು ವ್ಯಕ್ತಿಗಳು ಸಂಸತ್ತಿನ ಸದಸ್ಯತ್ವದಿಂದ ಅನರ್ಹರಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಅನರ್ಹತೆಗಳ ಪೈಕಿ ಒಂದು ಸರಕಾರದಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದುವುದಕ್ಕೆ ಸಂಬಂಧಿಸಿದ್ದಾಗಿದೆ. ಮಂತ್ರಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಅವರು ಸಂವಿಧಾನದ ೧೦೨ನೇ ವಿಧಿಯಿಂದ ಅದೇ ವಿಧಿಯ (೨)ನೇ ಉಪಬಂಧದ ಮೂಲಕ ವಿನಾಯಿತಿ ಪಡೆದಿದ್ದಾರೆ. ಆದರೆ ನಾವು ಭಾರತ ಸರಕಾರದಲ್ಲಿ ಮಂತ್ರಿಗಳಲ್ಲದೆ ಇತರ ವರ್ಗದ ಮಂತ್ರಿಗಳು ಅಂದರೆ ಉಪ ಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳೂ ಸಹ ಇದ್ದಾರೆ. ಈ ಹುದ್ದೆಗಳು ಸಂವಿಧಾನವು ಜಾರಿಗೆ ಬರುವ ಮೊದಲೇ ರಚನೆಯಾದವುಗಳು. ಅವುಗಳನ್ನು ಹೊಂದಿದವರು ಅದೇ ಕಾಲಕ್ಕೆ ಸಂಸತ್ತಿನ ಸದಸ್ಯರಾಗಿ ಹುದ್ದೆಯನ್ನು ಹೊಂದಲು ಅರ್ಹರಾಗಿದ್ದರು ಏಕೆಂದರೆ ೧೫ ಅಗಸ್ಟ್ ೧೯೪೭ ಮತ್ತು ೨೬ ಜನವರಿ ೧೯೫೦ರ ನಡುವೆ ಅಂಗೀಕರಿಸಲಾದ ೧೯೩೫ರ ಭಾರತ ಸರ್ಕಾರದ ಕಾಯಿದೆಯು ನಾನು ಉಲ್ಲೇಖಿಸಿದ ಅಂದರೆ, ಲಾಭದಾಯಕ ಹುದ್ದೆಯನ್ನು ಒಂದು ಅನರ್ಹತೆಯಾಗಿಸುವ, ಉಪಬಂಧವನ್ನು ಒಳಗೊಂಡಿರಲಿಲ್ಲ. ಹಾಗಿದ್ದರೂ ಈ ಪರಿಸ್ಥಿತಿಯು ೧೦೨ನೇ ವಿಧಿಯ ಮೂಲಕ ಬದಲಾಗಿದೆ ಮತ್ತು ೨೬ ಜನವರಿ ೧೯೫೦ರಿಂದ ರಾಜ್ಯ ಮಂತ್ರಿಗಳು ಮತ್ತು ಉಪಮಂತ್ರಿಗಳು ಸಂಸತ್ತಿನಲ್ಲಿ ಕುಳಿತಿರುವುದಕ್ಕೆ ಅನರ್ಹರಾಗುವರು. ಈ ತೊಡಕನ್ನು ನಿವಾರಿಸುವುದಕ್ಕಾಗಿ ಸರಕಾರವು ಅವರಿಗೆ ಸಂಸತ್ತಿನಲ್ಲಿ ಕುಳಿತಿರುವುದಕ್ಕೆ ಅನುಮತಿ ನೀಡುವ ಮತ್ತು ಅವರು ಬಾಧ್ಯರಾಗಬೇಕಾದ ಅನರ್ಹತೆಯನ್ನು ನಿವಾರಿಸುವ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿತು. ಮಾನ್ಯ ಸದಸ್ಯರು ತಿಳಿದಿರುವಂತೆ, ಹೊಸ ಸಂವಿಧಾನದಲ್ಲಿ, ಸುಗ್ರೀವಾಜ್ಞೆಯ ಜೀವಿತಾವಧಿಯು ಬಹು ಕಿರಿದು, ಅಂದರೆ, ಸಂಸತ್ತಿನ ಪುನರಾರಂಭದಿಂದ ಆರು ವಾರಗಳ ವರೆಗೆ ಮಾತ್ರ. ಈ ನಿರ್ದಿಷ್ಟ ಪ್ರಸಂಗದಲ್ಲಿ ಸಂಸತ್ತು ೨೮ ಜನವರಿಯಂದು ಸೇರಿತು ಮತ್ತು ಈ ಅಧ್ಯಾದೇಶವು ಈ ತಿಂಗಳ ೧೨ರಂದು ತೀರಲಿದೆ. ಅಧ್ಯಾದೇಶ

---

* P.D., ಸಂ.೨, ಭಾಗ II, ೯ ಮಾರ್ಚ್ ೧೯೫೦, ಪು. ೧೩೩೦.

ಕಾನೂನಿನ ಪರಿಣಾಮವು ಮುಗಿಯುವ ಮೊದಲೇ ಈ ವಿಧೇಯಕವನ್ನು ಅಂಗೀಕರಿಸಬೇಕಾದ ಅಗತ್ಯವಿದೆ. ಈ ವಿಧೇಯಕವು ನಾನು ಹೇಳಬಹುದಾದಂತೆ ಉಪಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳನ್ನು ಉಲ್ಲೇಖಿಸುವ ಅಧ್ಯಾದೇಶದ ೨ನೇ ಕಲಮಿನ ಕಂಡಿಕೆ (ಎ)ಯನ್ನು ಸೇರಿಸಲು ಉದ್ದೇಶಿಸಿದೆ. ಈ ವಿಧೇಯಕವು ಮೂಲ ಅಧ್ಯಾದೇಶದ ೨ನೇ ಕಲಮಿನ ಕಂಡಿಕೆ (ಬಿ)ಯಲ್ಲಿ ಸೇರಿಸಲುದ್ದೇಶಿಸಿದ ಅರೆಕಾಲಿಕ ಹುದ್ದೆಗಳಿಗೆ ಅನ್ವಯಿಸಲು ಉದ್ದೇಶಿಸಿಲ್ಲ. ಅದಕ್ಕೆ ಬದಲಾಗಿ, ಈ ವಿಧೇಯಕವು ಇನ್ನೂ ಎರಡು ಹುದ್ದೆಗಳನ್ನು ಅಂದರೆ ಸಂಸತ್ತಿನ ಕಾರ್ಯದರ್ಶಿಗಳನ್ನು ಮತ್ತು ಸಂಸತ್ತಿನ ಅಧೀನ ಕಾರ್ಯದರ್ಶಿಗಳನ್ನು ಸೇರಿಸಲು ಉದ್ದೇಶಿಸಿದೆ. ಈ ಹುದ್ದೆಗಳು ಈಗ ಅಸ್ತಿತ್ವದಲ್ಲಿಲ್ಲದಿದ್ದರೂ ಮತ್ತು ರಚನೆಗೊಳ್ಳದಿದ್ದರೂ ಭಾರತ ಸರಕಾರವು ಅವುಗಳನ್ನು ಸೃಷ್ಟಿಸುವ ಅಗತ್ಯವನ್ನು ಕಾಣಬಹುದು. ಆದ್ದರಿಂದ ಈ ಹುದ್ದೆಗಳನ್ನು ಸೇರಿಸುವ ರೀತಿಯಲ್ಲಿ ಈ ವಿಧೇಯಕದ ವ್ಯಾಪ್ತಿಯನ್ನು ಹಿಗ್ಗಿಸುವುದು ಒಳ್ಳೆಯದೆಂದು ಭಾವಿಸಲಾಗಿದೆ. ಈ ವಿಧೇಯಕವನ್ನು ಬೆಂಬಲಿಸಲು ಇನ್ನು ಯಾವ ವಾದವೂ ಬೇಕಾಗಿದೆಯೆಂದು ನನಗೆ ಅನ್ನಿಸುವುದಿಲ್ಲ ಮತ್ತು ಈ ಸದನವು ಅದನ್ನು ಅಂಗೀಕರಿಸುತ್ತದೆಂದು ನಾನು ಆಶಿಸುತ್ತೇನೆ.

**ಉಪಸಭಾಪತಿಗಳು:** ಮಸೂದೆಯು ಮಂಡಿಸಲ್ಪಟ್ಟಿದೆ.

***ಡಾ.ಅಂಬೇಡ್ಕರ್ :** ಈ ಎರಡು ಹುದ್ದೆಗಳನ್ನು ಸೃಷ್ಟಿಸಬೇಕು ಮತ್ತು ಸೃಷ್ಟಿಸಿದ ನಂತರ, ಅವುಗಳನ್ನು ಸಂವಿಧಾನದ ೧೦೨ನೇ ವಿಧಿಯಿಂದ ವಿನಾಯಿತಿ ನೀಡಬೇಕು ಎಂಬ ಪ್ರಸ್ತಾವನೆಯ ಕುರಿತು ನನ್ನ ಮಾನ್ಯ ಮಿತ್ರರು ಸಮ್ಮತಿಸುತ್ತಾರೆಯೇ ಎಂದು ನನಗೆ ತಿಳಿಯಬೇಕಾಗಿದೆ. ನಾವಿದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ನನ್ನ ಮಾನ್ಯ ಮಿತ್ರರು ಅರ್ಧ ಗಂಟೆ ಪೂರ್ತಿ ಸಮಯವನ್ನು ಬಳಸಿಕೊಳ್ಳುತ್ತಾರೆಂದಾದರೆ ಮುಂದುವರಿಯುವುದರಲ್ಲಿ ಯಾವ ಉಪಯೋಗವೂ ಇಲ್ಲ.

**ಶ್ರೀ ತ್ಯಾಗಿ:** ಅವರು ಬಳಲಿದ್ದಾರಾದರೆ, ಮನೆಗೆ ತೆರಳಬಹುದು.

**ಉಪಸಭಾಪತಿ :** ಎಷ್ಟು ದೀರ್ಘಾವಧಿಯನ್ನಾದರೂ ತೆಗೆದುಕೊಳ್ಳಬಹುದೆಂಬುದನ್ನು ನಾನು ಒಪ್ಪುತ್ತೇನೆ ಆದರೆ ಈ ವಿಧೇಯಕಕ್ಕೆ ಸಂಬಂಧಿಸಿ ಹೇಳುವುದಾದರೆ, ಅದೊಂದು ಪುಟ್ಟ ಅಂಶ.

****ಡಾ.ಅಂಬೇಡ್ಕರ್ :** ನನ್ನ ಮಾನ್ಯ ಮಿತ್ರರು ಹೇಳಬೇಕೆಂದಿರುವ ಅಂಶವೇನೆಂದು ಮಾತ್ರ ನನಗೆ ತಿಳಿಯಬೇಕಾಗಿತ್ತು, ಮತ್ತು ಅವರು ಅರ್ಧ ಗಂಟೆ ಪೂರ್ತಿ ಸಮಯವನ್ನು ಬಳಸಿಕೊಳ್ಳುತ್ತಾರೆಂದಾದರೆ ಅದನ್ನು ನಾಳೆ ಆರಂಭಿಸುವುದು ಮತ್ತು ಮುಗಿಸುವುದು ಒಳ್ಳೆಯದು.

**ಶ್ರೀ ತ್ಯಾಗಿ :** ಜನರು ತ್ವರಿತವಾಗಿ ಅರ್ಥಮಾಡಿಕೊಳ್ಳದಿದ್ದರೆ, ನಾನು ಅವರಿಗೆ ಅರ್ಥಮಾಡಿಕೊಡುವುದಕ್ಕಾಗಿ ಸಮಯವನ್ನು ತೆಗೆದುಕೊಳ್ಳುತ್ತೇನೆ.

**ಪಂಡಿತ್ ಕುಂಜ್ರು** (ಉತ್ತರ ಪ್ರದೇಶ)**:** ಈ ವಿಧೇಯಕವನ್ನು ಇಂದೇ ಅಂಗೀಕರಿಸಬೇಕೆಂದು ಸರಕಾರವು ಒತ್ತಾಯಿಸುತ್ತಿದೆಯೇ?

**ಡಾ.ಅಂಬೇಡ್ಕರ್:** ನಾನು ಹಾಗೆ ಹೇಳುತ್ತಿಲ್ಲ. **"**ನಾವು ಅರ್ಧ ಗಂಟೆ ಕುಳಿತುಕೊಳ್ಳೋಣ**"** ಎಂದು ಹೇಳಿದ್ದು ಮಾನ್ಯ ಉಪಸಭಾಪತಿಯವರು ಮಾತ್ರ.

* ಪೂರ್ವೋಕ್ತ, ಸಂ. ೨, ಭಾಗ II, ೯ ಮಾರ್ಚ್ ೧೯೫೦, ಪು. ೧೩೩೪.

** ಅದೇ, ಪು. ೧೩೩೪.

**ಪಂಡಿತ್ ಕುಂಜ್ರು :** ಇದೊಂದು ನಿಷ್ಫಲ ಚರ್ಚೆಯೆಂದು ನಾನು ಭಾವಿಸುತ್ತೇನೆ ಮತ್ತು ನಾಳೆಗೆ ಮುಂದೂಡಿದರೆ ಬೇಗ ಮುಗಿಯಬಹುದೆಂದು ಯೋಚಿಸುತ್ತಿದ್ದೇನೆ.

***ಡಾ.ಅಂಬೇಡ್ಕರ್:** ಈ ಕ್ರಮವನ್ನು ಕೈಗೊಳ್ಳುವ ಅಗತ್ಯವಿದೆಯೇ ಎಂದು ನನ್ನ ಮಿತ್ರ ಶ್ರೀ ತ್ಯಾಗಿಯವರು ಎತ್ತಿದ ಮೊದಲ ಅಂಶದ ಕುರಿತು ನನಗನ್ನಿಸುವುದು ಪ್ರಧಾನಮಂತ್ರಿಗಳು ಹೇಳಿದ್ದು ಸಾಕಾಗುತ್ತದೆ, ಮತ್ತು ಸ್ಪಷ್ಟೀಕರಣದ ದೃಷ್ಟಿಯಿಂದ ನಾನು ಇಷ್ಟನ್ನು ಸೇರಿಸಲು ಇಷ್ಟಪಡುತ್ತೇನೆ: ನಮ್ಮ ನೈಜ ತೊಡಕು ಉದ್ಭವವಾಗಿರುವುದು 'ಮಂತ್ರಿ' ಎಂಬ ಪದವನ್ನು ನಿರೂಪಣಾ ವಿಧಿಯಾದ ೩೬೬ನೇ ವಿಧಿಯು ಅರ್ಥೈಸದೆ ಇರುವುದು. ಆದ್ದರಿಂದ 'ಮಂತ್ರಿ' ಎಂಬ ಪದವು ಎರಡು ರೀತಿಯ ಅರ್ಥೈಸುವಿಕೆಗೆ ಬಿಡಲ್ಪಟ್ಟಿದೆ, ಒಂದೋ ವಿಶಾಲ ಅರ್ಥದಲ್ಲಿ ಮಂತ್ರಿಗಳಾಗಿರುವ ಸದಸ್ಯರನ್ನು ಮಾತ್ರವಲ್ಲ, ಉಪಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳನ್ನು ಕೂಡಾ ಒಳಗೊಳ್ಳುತ್ತದೆ. ಜನಪ್ರಿಯ ಅರ್ಥದಲ್ಲಿ ಅದು ಸಂಸದೀಯ ಕಾರ್ಯದರ್ಶಿಗಳನ್ನು ಮಾತ್ರವಲ್ಲ ಸಂಸದೀಯ ಅಧೀನ ಕಾರ್ಯದರ್ಶಿಗಳನ್ನೂ ಒಳಗೊಳ್ಳುತ್ತದೆ. ಅದು ವಿಶಾಲ ವ್ಯಾಪ್ತಿಯಿರುವ ಒಂದು ಅರ್ಥವಾದರೆ, ಇನ್ನೊಂದು ಸಂಕುಚಿತ ಅರ್ಥವನ್ನು ನೀಡಿ ಮಂತ್ರಿಗಳು ಅಂದರೆ ಸಂಪುಟದ ಮಂತ್ರಿಗಳು ಮಾತ್ರವೇ ಹೊರತು ಉಪಮಂತ್ರಿಗಳನ್ನು, ರಾಜ್ಯ ಮಂತ್ರಿಗಳನ್ನು, ಸಂಸದೀಯ ಕಾರ್ಯದರ್ಶಿಗಳನ್ನು ಅಥವಾ ಸಂಸದೀಯ ಅಧೀನ ಕಾರ್ಯದರ್ಶಿಗಳನ್ನು ಒಳಗೊಳ್ಳುವುದಿಲ್ಲವೆನ್ನಬಹುದು. ಈ ಸದನಕ್ಕೆ 'ಸಾಂಪ್ರದಾಯಿಕವಾಗಿ' – ನಾನು ಉದ್ದೇಶಪೂರ್ವಕವಾಗಿ 'ಸಾಂಪ್ರದಾಯಿಕವಾಗಿ' ಎಂಬ ·ಪದವನ್ನು ಬಳಸುತ್ತಿದ್ದೇನೆ– ಸಂಪುಟದ ಸದಸ್ಯರಾಗಿರುವ ಮಂತ್ರಿಗಳು ಮತ್ತು ಸಂಪುಟದ ಸದಸ್ಯರಲ್ಲದಿರುವ ಮಂತ್ರಿಗಳು ಎಂಬ ವ್ಯತ್ಯಾಸವಿರುವುದು ತಿಳಿದಿರುವಂತೆ ಮತ್ತು ಯಾರಿಗೂ, ನ್ಯಾಯಾಲಯಕ್ಕೂ, ಈ ಸಂಕುಚಿತ ಅರ್ಥವನ್ನು ನೀಡಿ "ಮಂತ್ರಿಗಳು" ಎಂಬ ಪದದ ಕಾನೂನುಬದ್ಧ ಅರ್ಥವನ್ನು ಸಂಪುಟದ ಸದಸ್ಯರಿಗೆ ಮಾತ್ರ ನೀಡಿ, ಅಂತಹ ಪ್ರಸಂಗಗಳಲ್ಲಿ ನಿಸ್ಸಂದೇಹವಾಗಿಯೂ . . .

**ಪಂಡಿತ್ ಕುಂಜ್ರು:** ನನ್ನ ಮಿತ್ರರು ಯಾವ ನ್ಯಾಯಾಲಯವನ್ನು ಉಲ್ಲೇಖಿಸುತ್ತಿದ್ದಾರೆ?

**ಡಾ.ಅಂಬೇಡ್ಕರ್:** ಯಾವುದೇ ನ್ಯಾಯಾಲಯ. ನಾನು ಆ ಬಗ್ಗೆಯೂ ಮಾತನಾಡುವವನಿದ್ದೆ. ನಾನು ಸ್ಥೂಲವಾಗಿ ಹೇಳುತ್ತಿದ್ದೆ. ಈ ಅರ್ಥೈಸುವಿಕೆಯನ್ನು ಯಾರೂ ಪ್ರಶ್ನಿಸಬಹುದು. ಆ ಅರ್ಥೈಸುವಿಕೆಯನ್ನು ಪ್ರಶ್ನಿಸಿದರೆ, ಸಹಜವಾಗಿಯೇ ಅಲ್ಲಿ ತೊಡಕುಗಳಿರಬಹುದು. ಆದ್ದರಿಂದ, ಜಾಗ್ರತೆಗಾಗಿ, ಈ ವಿಧೇಯಕದ ಕುರಿತಾದ ಯಾವುದೇ ಸಂಶಯ ಅಥವಾ ತೊಡಕುಗಳನ್ನು ನಿವಾರಿಸುವುದರ ಮೂಲಕ, ಮತ್ತು ನಾನು ಹೇಳಿದಂತೆ, ಅಂತಹ ಪ್ರಶ್ನೆಯು ಸಂಭವನೀಯವಾದ ಸಂದರ್ಭದಲ್ಲಿ ನನ್ನ ಮಿತ್ರ ಶ್ರೀ ತ್ಯಾಗಿಯವರು ನೀಡಿದ ಅರ್ಥವನ್ನು ಎತ್ತಿಹಿಡಿದರೆ, ಆಗ ಈ ವಿಧೇಯಕವು ಅನಗತ್ಯವೆಂದು ಕಂಡುಬಂದರೆ ಯಾರು ವಿಷಾದಿಸುವುದಿಲ್ಲ, ಆದರೆ ದುರದೃಷ್ಟವಶಾತ್ ಈ ಮಹಾನ್ ವಾದದ, ದೀರ್ಘವಾದದ, ನನ್ನ ಮಿತ್ರ ಶ್ರೀ ತ್ಯಾಗಿಯವರ ಮೂಲವಾದದ ಹೊರತಾಗಿಯೂ, ಆ ಅರ್ಥೈಸುವಿಕೆ ಸರಿಯಾದ ಅರ್ಥೈಸುವಿಕೆಯಲ್ಲವೆಂದು ಕಂಡುಬಂದರೆ, ಆಗ ಈ ವಿಧೇಯಕವನ್ನು ಅಂಗೀಕರಿಸಿದ್ದು ಒಳ್ಳೆಯದಾಯಿತು ಎನ್ನುವುದು ಅನಿವಾರ್ಯ. ಆದ್ದರಿಂದ ಈ ವಿಧೇಯಕದ ನಿಕರ ಅಂಶಗಳಿಗೆ ಸಂಬಂಧಿಸಿದಂತೆ, ಜಾಗೃತ ಸದನವು ಅವುಗಳನ್ನು ಬೆಂಬಲಿಸಬೇಕಾಗುತ್ತದೆ. ಈ ಅಂಶದ ಬಗ್ಗೆ ನಾನು ಇನ್ನು ಹೆಚ್ಚೇನೂ ಹೇಳುವುದಿಲ್ಲ.

* ಪೂರ್ವೋಕ್ತ, ಸಂ. ೨, ಭಾಗ II, ೧೦ ಮಾರ್ಚ್ ೧೯೫೦, ಪು. ೧೩೪೪–೪೮

ಸದಸ್ಯರು ಮಂತ್ರಿಹುದ್ದೆಗಳಿಗೆ ಹೊರತಾದ ಹುದ್ದೆಯನ್ನು ಹೊಂದಿದ್ದಾರೆಂಬ ಕಾರಣಕ್ಕೆ ಅನರ್ಹತೆಯನ್ನು ಹೊಂದುವುದರ ಕುರಿತ ಇನ್ನೊಂದು ಪ್ರಶ್ನೆಯ ಬಗ್ಗೆ . . .

**ಶ್ರೀ ಸಿಧ್ವ :** ನಾನು ಸಮಿತಿಗಳನ್ನು ಪ್ರಸ್ತಾಪಿಸಿದ್ದೆ.

**ಡಾ ಅಂಬೇಡ್ಕರ್:** ಆದ್ದರಿಂದಲೇ ನಾನು ಸಚಿವೇತರ ಹುದ್ದೆಗಳು ಎಂದು ಹೇಳಿದ್ದು. ನಾನು ನಿಕರವಾದ ಕಾನೂನು ಪದವನ್ನು ಬಳಸುತ್ತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಆ ಪ್ರಶ್ನೆಯನ್ನು ಪುನರ್ವಿಮರ್ಶಿಸಬೇಕಾಗಿದೆ. ಆ ಪ್ರಶ್ನೆಯನ್ನು ನಿನ್ನೆ ಸಂಸತ್ತು ಎದ್ದ ನಂತರ ಕೇಳಲಾಯಿತು, ಆದರೆ ದುರದೃಷ್ಟವಶಾತ್ ನಾನು ನನ್ನ ಕೊಠಡಿಗೆ ಹೋದಾಗ ಎಲ್ಲಾ ಗ್ರಂಥಾಲಯಗಳು ಮುಚ್ಚಿರುವುದನ್ನು ಕಂಡೆ ಮತ್ತು ನಾನು ಸಮಾಲೋಚನೆಗಾಗಿ ಅಪೇಕ್ಷಿಸಿದ್ದ ಅಗತ್ಯ ಆಕರ ಗ್ರಂಥಗಳನ್ನು ಪಡೆಯದಾದೆ, ಏಕೆಂದರೆ ನನಗೆ ಈ ವಿಚಾರವನ್ನು ಸದನದಲ್ಲಿ ಎತ್ತಲಾಗುತ್ತದೆಂದು ತಿಳಿದಿತ್ತು. ಮತ್ತು ನಾನು ಸಂದರ್ಭೋಚಿತವಾಗಿ ಅದಕ್ಕೆ ಉತ್ತರಿಸಲು ತಯಾರಿರಬೇಕೆಂದು ಭಾವಿಸಿದ್ದೆ. ನಾನು ಈ ವಿಚಾರಕ್ಕೆ ಗಮನ ಹಚ್ಚಿದ್ದೇನೆ ಮತ್ತು ನಾನು ಹೇಳಬಹುದಾದ್ದೆಂದರೆ ನಾನು ಈ ಸದನದ ಮುಂದೆ ನೀಡಬೇಕಾದ ಒಂದು ಅಂದಾಜು ತೀರ್ಮಾನವನ್ನು ಕೈಗೊಂಡಿದ್ದೇನೆ.

ಮೊದನೆಯದಾಗಿ ನನ್ನ ಮಿತ್ರ ಶ್ರೀ ಸಿಧ್ವ ಅವರು ತಮ್ಮ ಯಾವುದೇ ಎದುರಾಳಿ ತೊಂದರೆ ನೀಡಬಹುದೆಂದು ಭಾವಿಸಿದ ಆತಂಕವನ್ನು ನಿವಾರಿಸಲು ಬಯಸಿದ್ದೇನೆ. ಅವರಿಗೆ ವೈರಿಗಳಿಲ್ಲವೆಂದು ಆಶಿಸುತ್ತೇನೆ. ಅಜಾತಶತ್ರುವೆಂದು ಸಮರ್ಪಕವಾಗಿ ವಿವರಿಸಬಹುದಾದ ವ್ಯಕ್ತಿ ಅವರೆಂದು ನಾನು ಭಾವಿಸಿದ್ದೇನೆ. ಹೇಗಿದ್ದರೂ ಅನರ್ಹತೆಗೆ ಸಂಬಂಧಪಟ್ಟ ಈ ರೀತಿಯ ವಿಚಾರಗಳು ನ್ಯಾಯಾಲಯಕ್ಕೆ ಹೋಗಬಾರದೆಂದು ನಮ್ಮ ಸಂವಿಧಾನವು ಸಾಕಷ್ಟು ಅಂಶಗಳನ್ನು ಅಳವಡಿಸಿದೆ. ೧೦೩ನೇ ವಿಧಿಯಂತೆ ಯಾವನೇ ನಿರ್ದಿಷ್ಟ ಸಂಸತ್ ಸದಸ್ಯನು ರಾಷ್ಟ್ರಪತಿಗಳಿಂದ ಯಾವುದೇ ಲಾಭದಾಯಕ ಹುದ್ದೆಗಳನ್ನು ಸ್ವೀಕರಿಸುವ ಮೂಲಕ ಅನರ್ಹತೆಯನ್ನು ಹೊಂದಿದ್ದಾನೆಯೇ ಇಲ್ಲವೇ ಎಂಬುವುದನ್ನು ತೀರ್ಮಾನಿಸಲು ನಮಗೆ ಅಧಿಕಾರವಿದೆ. ರಾಷ್ಟ್ರಪತಿಯವರೇ ಅಂತಿಮ ಪ್ರಾಧಿಕಾರವಾಗಿರುತ್ತಾರೆ. ಸಚಿವ ಸಂಪುಟವು ರಾಷ್ಟ್ರಪತಿಯವರಿಗೆ ಪಟ್ಟಭದ್ರ ಸಲಹೆಯನ್ನು ನೀಡಬಾರದೆಂಬ ಆಶಯದಿಂದ ೧೦೩ನೇ ವಿಧಿಯಲ್ಲಿ ರಾಷ್ಟ್ರಪತಿಗಳು ಸಚಿವ ಸಂಪುಟದ ಸಲಹೆಯ ಪ್ರಕಾರ ಕ್ರಮ ಕೈಗೊಳ್ಳುವುದನ್ನು ಉದ್ದೇಶಪೂರ್ವಕವಾಗಿ ಮತ್ತು ಜಾಣ್ಮೆಯಿಂದ ಕೈಬಿಡಲಾಗಿದೆ. ಆದ್ದರಿಂದ ಈ ಲಾಭದಾಯಕ ಹುದ್ದೆಯನ್ನು ಹೊಂದುವುದರಿಂದ ಉದ್ಭವವಾಗುವ ಅನರ್ಹತೆಗೆ ಸಂಬಂಧಪಟ್ಟ ಈ ನಿರ್ದಿಷ್ಟ ಪ್ರಕರಣದಲ್ಲಿ ರಾಷ್ಟ್ರಪತಿಯವರು ಚುನಾವಣಾ ಆಯುಕ್ತರ ಸಲಹೆಯಂತೆ ಕ್ರಮಕೈಗೊಳ್ಳಬೇಕಾಗಿದೆ.

**ಶ್ರೀ ಕಾಮತ್:** ೧೦೩ನೇ ವಿಧಿಯ (೨)ನೇ ಖಂಡದ ವಿಚಾರವೇನು?

**ಡಾ ಅಂಬೇಡ್ಕರ್:** ನಾನು ಆ ಕುರಿತು ಹೇಳುವವನಿದ್ದೇನೆ. ಹಾಗೆ ಹೇಳುವುದಾದರೆ ೧೦೩ನೇ ವಿಧಿಯು ೭೪ನೇ ವಿಧಿಗೆ ಅಪವಾದವಾಗಿದೆ. ೭೪ನೇ ವಿಧಿಯನ್ವಯ ಶಾಸನ ಮತ್ತು ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳಲ್ಲಿ ರಾಷ್ಟ್ರಪತಿಗಳು ಸಚಿವ ಸಂಪುಟದ ಸಲಹೆಯನ್ನು ಸ್ವೀಕರಿಸಬೇಕು. ಈ ಕುರಿತಂತೆ ಒಂದು ಅಪವಾದವನ್ನು ಮಾಡಲಾಗಿದೆ ಮತ್ತು ನಾನು ಹೇಳಿದಂತೆ ರಾಷ್ಟ್ರಪತಿಯವರು ನಿರ್ಧರಿಸಿದ ಪ್ರಶ್ನೆಯ ಮೇಲೆ ಯಾವುದೇ ರಾಜಕೀಯ ಪ್ರಭಾವ ಬಾರದಂತೆ ಒಂದು ಉದ್ದೇಶಪೂರ್ವಕ ಅಪವಾದವನ್ನು ಮಾಡಲಾಗಿದೆ.

**ಶ್ರೀ ಕಾಮತ್:** ಚುನಾವಣಾ ಆಯುಕ್ತರ ಪರವಾಗಿ ಕಾರ್ಯನಿರ್ವಹಿಸುವ ಸಂಸ್ಥೆ ಯಾವುದು?

**ಡಾ ಅಂಬೇಡ್ಕರ್:** ನಾವು ತಕ್ಷಣದಲೇ ಚುನಾವಣಾ ಆಯುಕ್ತರ ಹುದ್ದೆಯನ್ನು ರಚಿಸುವುದರಲ್ಲಿ ಇದ್ದೇವೆ. ಮತ್ತು ರಾಷ್ಟ್ರಪತಿಯವರಿಗೆ ಯಾವುದೇ ಪ್ರಶ್ನೆಯನ್ನು ಸಲ್ಲಿಸುವ ಮೊದಲು ಈ ವಿಚಾರದ ಕುರಿತು ಚುನಾವಣಾ ಆಯುಕ್ತರು ವ್ಯವಹರಿಸುತ್ತಾರೆ ಎಂಬುದಕ್ಕೆ ನನಗೆ ಯಾವ ಸಂಶಯವೂ ಇಲ್ಲ.

**ಶ್ರೀ ಕಾಮತ್:** ಪಾಲಿಸಲೇಬೇಕಾದ ೧೦೩ನೇ ವಿಧಿಯ (೨)ನೇ ಖಂಡವನ್ನು ಈ ನಿರ್ದಿಷ್ಟ ಪ್ರಕರಣದಲ್ಲಿ ಪಾಲಿಸಿಲ್ಲ.

(೨)ನೇ ಖಂಡ ಹೀಗೆ ಹೇಳುತ್ತದೆ.

> "ಯಾವುದೇ ಪ್ರಶ್ನೆಯ ಕುರಿತು ತೀರ್ಮಾನವನ್ನು ನೀಡುವ ಮೊದಲು ರಾಷ್ಟ್ರಪತಿಯವರು ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆಯಬೇಕು ಮತ್ತು ಅಂತಹ ಅಭಿಪ್ರಾಯದ ಪ್ರಕಾರ ನಡೆದುಕೊಳ್ಳಬೇಕು."

**ಉಪಸಭಾಪತಿ:** ಅಂತಹ ಯಾವುದೇ ಪ್ರಶ್ನೆಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಿಲ್ಲ.

**ಶ್ರೀ ತ್ಯಾಗಿ:** ಎದ್ದರು–

**ಡಾ ಅಂಬೇಡ್ಕರ್:** ಮಾನ್ಯರೇ ಈಗಿರುವ ಪ್ರಶ್ನೆಗೆ ಸಂಬಂಧಿಸಿದ ಈ ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರಿಸಲಾರೆ ಯಾರು ಬೇಕಾದರೂ ಉಚ್ಚನ್ಯಾಯಾಲಯ ಅಥವಾ ಸರ್ವೋಚ್ಚನ್ಯಾಯಾಲಯಗಳಿಗೆ ಹೋಗಬಹುದು ಮತ್ತು ತೀರ್ಮಾನವನ್ನು ಪಡೆಯಬಹುದು ಎಂದು ನನ್ನ ಮಿತ್ರ ಶ್ರೀ ಸಿಧ್ವ ಅವರು ಸಲಹೆ ನೀಡಿದ್ದರು. ಆ ಪ್ರಕ್ರಿಯೆಯು ಸಂವಿಧಾನದಲ್ಲಿ ನಿಷಿದ್ಧವಾಗಿದೆ. ಆ ವಿಚಾರವು ಪೂರ್ಣವಾಗಿ ರಾಷ್ಟ್ರಪತಿಯವರ ಅಧಿಕಾರ ವ್ಯಾಪ್ತಿಯದು.

ಈಗ ನಾನು ಸಿದ್ವರವರು ಕೇಳಿದ ಇನ್ನೊಂದು ಪ್ರಶ್ನೆಗೆ ಅಂದರೆ ವಿವಿಧ ಸಮಿತಿಗಳಿಗೆ ನೇಮಕಗೊಂಡ ಸಂಸತ್ ಸದಸ್ಯರ ಮೇಲೆ ಏನು ಪರಿಣಾಮವಾಗುತ್ತದೆ ಎಂಬ ಬಗ್ಗೆ ಗಮನ ಹರಿಸುತ್ತೇನೆ. ಅವರು ಅನರ್ಹತೆಗೆ ಒಳಗಾಗುತ್ತಾರೆಯೇ ಅಥವಾ ಅನರ್ಹರಾಗುವುದಿಲ್ಲವೇ? ಈಗ ನನ್ನ ಮುಂದೆ ಸದಸ್ಯರು ಸೇವೆ ಸಲ್ಲಿಸುವುದಕ್ಕೆ ಕೋರಿಕೆ ಬರಬಹುದಾದ ಮತ್ತು ಅವರು ಸ್ವಲ್ಪ ಸಂಭಾವನೆ ಅಥವಾ ಶುಲ್ಕ ಅಥವಾ ಇನೇನನ್ನಾದರೂ ಪಡೆಯ ಬಹುದಾದ ವಿವಿಧ ರೀತಿಯ ಸಮಿತಿಗಳ ವಿಶ್ಲೇಷಣೆ ಇದೆ. ಮೊದಲನೆಯದು ಇದು: ಸಂಸತ್ತುಗಳ ನಿರ್ಣಯಗಳ ಮೂಲಕ ಅಥವಾ ನಿಯಮಗಳಡಿ ರಚಿಸಲಾದ ಸಮಿತಿಗಳು ಮತ್ತು ಆಯೋಗಗಳು, ಉದಾಹರಣೆಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ, ಅಂದಾಜು ಸಮಿತಿ, ವಿವಿಧ ಸಚಿವಾಲಯಗಳಿಗೆ ಹೊಂದಿಕೊಂಡಂತೆ ಇರುವ ಸ್ಥಾಯಿ ಸಮಿತಿಗಳು ಇತ್ಯಾದಿ. ಬೇರೆ ಇತರ ಸಮಿತಿಗಳು ಇರಬಹುದು. ಆದರೆ ಮುಖ್ಯ ವಿಚಾರವೆಂದರೆ ಈ ಸಮಿತಿಗಳು ಸಂಸತ್ತಿನ ನಿರ್ಣಯ ಅಥವಾ ಸಂಸತ್ತಿನ ನಿಯಮಗಳ ಪ್ರಕಾರ ನೇಮಕಗೊಂಡಿವೆ. ನಾನು ಯಾವುದೇ ರೀತಿಯ ಸಿದ್ಧಾಂತದ ಆಧಾರದಲ್ಲಿ ಮಾತನಾಡುತ್ತಿಲ್ಲ. ಆದರೆ ಅಂತಹ ಯಾವುದೇ ಸಮಿತಿಯ ಸದಸ್ಯತನವು ಅನರ್ಹತೆಗಳೊಳಗಾಗುವುದಿಲ್ಲ ಎಂಬ ಬಗ್ಗೆ ನನಗೆ ಯಾವ ಸಂಶಯವೂ ಇಲ್ಲ. ಏಕೆಂದರೆ ಅಂತಹ ನೇಮಕಾತಿಯು ಯಾವುದೇ ನಿರ್ದಿಷ್ಟ ಸಮಿತಿಯ ನಿಯಮಾನುಸಾರ ಮಾಡಲ್ಪಡುತ್ತದೆ ಅಥವಾ ಸಾಮಾನ್ಯವಾಗಿ ಸಮಿತಿಯ ನಿಯಮಗಳ ಮೂಲಕ ಮಾಡಲಾಗುತ್ತದೆ.

ಎರಡನೆಯ ಸದಸ್ಯತ್ವದ ವರ್ಗವು ಸಂವಿಧಾನದ ಕ್ರಮದ ಮುಖಾಂತರ ರಚಿಸಲ್ಪಟ್ಟ ಎಲ್ಲಾ ಸಾಂಸ್ಥಿಕ ಅಂಗಗಳಿಗೆ ಸಂಬಂಧಿಸಿದೆ. ಅಂದರೆ ಉದಾಹರಣೆಗೆ ಒಂದು ಕಾಯಿದೆಯು ತನ್ನ ಸದಸ್ಯರ

ಆಯ್ಕೆಗೆ ಸಂಸತ್ತಿನ ಮೂಲಕ ತನ್ನ ಸದಸ್ಯರೊಳಗಿಂದ ಅಥವಾ ಹೊರಗಿನವರಿಂದ ಉದಾಹರಣೆಗೆ ಭಾರತೀಯ ಎಣ್ಣೆ ಬೀಜ ಸಮಿತಿ, ಭಾರತೀಯ ಶುಶ್ರೂಶಾ ಪರಿಷತ್ತು, ನೌಕರ ರಾಜ್ಯ ವಿಮಾ ನಿಗಮ ಅಥವಾ ಕೇಂದ್ರ ರೇಷ್ಮೆ ಮಂಡಳಿಗಳಿಗೆ, ಅವಕಾಶ ಮಾಡಿಕೊಟ್ಟಾಗ. ಅದೇ ವರ್ಗದಲ್ಲಿ ಅಂತಹ ಸದಸ್ಯರನ್ನು ಕೇಂದ್ರ ಸರಕಾರದಿಂದ ನೇಮಕ ಮಾಡಿದ ಪ್ರಕರಣಗಳೂ ಬರುತ್ತವೆ. ಅಂದರೆ ಉದಾಹರಣೆಗೆ ಕಲ್ಲಿದ್ದಲು ಗಣಿ (ತುಂಬುವ) ಮಂಡಳಿ, ಡೆಲ್ಲಿ ಸಾರಿಗೆ ಪ್ರಾಧಿಕಾರ ಮತ್ತು ಇಂಥವು. ನಾನು ನನ್ನ ಸ್ಥೂಲ ನಿರ್ಣಯಗಳನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಮತ್ತು ನನಗನ್ನಿಸಿದಂತೆ ಸರಕಾರದ ಹುದ್ದೆಯೆಂದು ಪರಿಗಣಿಸಲಾಗದ ಕೆಲವು ಶಾಸನಾತ್ಮಕ ಅಂಗಗಳ ಆಯ್ಕೆಗೆ ಸಂಸತ್ತು ಅವಕಾಶ ಮಾಡಿಕೊಡುವ ಮೊದಲನೆ ವರ್ಗವು ಮತ್ತು ಅಂತಹ ಸದಸ್ಯರ ಸದಸ್ಯತ್ವವು ನನ್ನ ಅಭಿಪ್ರಾಯದಲ್ಲಿ ಯಾವುದೇ ಅನರ್ಹತೆಗಳಿಗೆ ಒಳಗಾಗುವುದಿಲ್ಲ. ಆದರೆ ಅಂತಹ ಸದಸ್ಯರು ಕೇಂದ್ರ ಸರಕಾರದಿಂದ ನೇಮಕಗೊಂಡಿರುವ ಎರಡನೇ ವರ್ಗಕ್ಕೆ ಸಂಬಂಧಿಸಿದಂತೆ ನನಗೆ ಸ್ವಲ್ಪ ಮಟ್ಟಿನ ಸಂಶಯವಿದೆ. ಅದು ಅನರ್ಹತೆಯನ್ನು ಒಳಗೊಳ್ಳಬಹುದು ಎಂದು ನನಗನ್ನಿಸುತ್ತದೆ. ಏಕೆಂದರೆ ಸಂಸತ್ತು ರಚಿಸಿದ ಕಾನೂನಿನ ಕೂಸುಗಳಾದ ಶಾಸನಾತ್ಮಕ ಸಂಸ್ಥೆಗಳಿಗೆ ಈ ನೇಮಕಾತಿಗಳು ಆಗಿದ್ದರೂ ಆ ನೇಮಕಾತಿಯನ್ನು ಮಾಡಿರುವುದೂ ಸರಕಾರ, ಮಾಡುವುದೂ ಸರಕಾರ. ಆದ್ದರಿಂದ ಸಾಧ್ಯವಿರುವ ಪರಿಣಾಮವು ಅನರ್ಹತೆಯದಲ್ಲವೇ ಎಂದು ತೀರ್ಮಾನಿಸಲು ಆ ಒಂದು ಅಂಶವನ್ನು ಪರಿಗಣಿಸಬೇಕಾಗಿದೆ. ಇನ್ನು ಒಂದು ವ್ಯತ್ಯಾಸವನ್ನು ಮಾಡಲು ಸಾಧ್ಯವಿದೆ. ಅಂದರೆ, ಕಲ್ಲಿದ್ದಲು ಗಣಿ ರಕ್ಷಣಾ (ತುಂಬುವ) ಕಾಯಿದೆ ಅಥವಾ ಡೆಲ್ಲಿ ಸಾರಿಗೆ ಪ್ರಾಧಿಕಾರದಂತಹ ಶಾಸನಾತ್ಮಕ ಸಂಸ್ಥೆಗೆ ಸರಕಾರದಿಂದ ನೇಮಕಗೊಂಡ ಸಂಸತ್ ಸದಸ್ಯನು ತನ್ನ ಸಂಭಾವನೆಯನ್ನು ಸರಕಾರದ ನಿಧಿಗೆ ಬದಲಾಗಿ ಆ ಸಂಸ್ಥೆಯ ನಿಧಿಯಿಂದಲೇ ಪಡೆದುಕೊಳ್ಳಬಹುದು. ಇದು ವ್ಯತ್ಯಾಸಕ್ಕೆ ಸಾಧ್ಯವಿರುವ ಆಧಾರವೇ ಎಂಬ ಬಗ್ಗೆ ನನಗೆ ಸಂಶಯಗಳಿವೆ. ನಾನು ವೈಯಕ್ತಿಕವಾಗಿ ಭಾವಿಸುವುದೇನೆಂದರೆ ಅದು ಅನರ್ಹತೆಗೆ ಒಳಗಾಗುತ್ತದೆ. ಏಕೆಂದರೆ ಅದು ಶಾಸನದ ಮೇಲೆ ಮಾಡುವ ಮೋಸವಾಗುತ್ತದೆ. ಅಂದರೆ ಸಂಸತ್ತು ಸದಸ್ಯನನ್ನು ನೇಮಕ ಮಾಡಿದರೂ ಆತನ ಸಂಭಾವನೆಯನ್ನು ಬೇರೊಬ್ಬನು ಕೊಡುವುದು. ಅಂತಹ ಪ್ರಕರಣವನ್ನು ಹೊರತು ಪಡಿಸಬೇಕೆಂದು ನಾನು ಭಾವಿಸುತ್ತೇನೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ** (ಮದ್ರಾಸ್)**:** ಅದನ್ನು ಆ ವರ್ಗಕ್ಕೆ ಸೇರುತ್ತದೆ ಎಂದು ಪರಿಗಣಿಸಿಲ್ಲ.

**ಡಾ ಅಂಬೇಡ್ಕರ್:** ನನಗೆ ಗೊತ್ತಿಲ್ಲ. ನಾನು ಕಳೆದ ರಾತ್ರಿಯಿಡಿ ನಿದ್ರಿಸಿಲ್ಲವೆಂದು ಹೇಳಲು ನನ್ನ ಮಿತ್ರ ಟಿ.ಟಿ.ಕೃಷ್ಣಮಾಚಾರಿಯವರು ಅನುಮತಿ ನೀಡಬಹುದು. ಈ ವಿಚಾರವು ಬಹಳ ಸಂಕೀರ್ಣವಾಗಿರುವುದರಿಂದ ನಾನು ಹಾಲ್ಸ್‌ಬರಿ ಮತ್ತಿತರ ಅನೇಕ ಪುಸ್ತಕಗಳನ್ನು ಓದುತ್ತಿದ್ದೇನೆ. ಆನ್‌ಸನ್‌ರವರ ಪುಸ್ತಕವು ನನಗೆ ಸ್ವಲ್ಪ ಮಾಗದರ್ಶನ ನೀಡಿದ್ದು ಅದನ್ನು ನಾನು ಅವರಿಗೆ ನೀಡುತ್ತೇನೆ. ಅದನ್ನು ೧೯೨೦ರಲ್ಲಿ ಪ್ರಕಟಿಸಲಾಯಿತು. ಅದು ಈ ವಿಚಾರದಲ್ಲಿ ಅತ್ಯತ್ತಮ ನೆರವನ್ನು ನೀಡಬಲ್ಲುದು. ನನ್ನ ಮಾನ್ಯ ಮಿತ್ರರಿಗೆ ಮಾತನಾಡಲು ಹಕ್ಕಿದೆ. ಮತ್ತು ನಾನು ನನ್ನ ಅಂದಾಜು ನಿರ್ಣಯವನ್ನಷ್ಟೇ ವ್ಯಕ್ತಪಡಿಸುತ್ತಿದ್ದೇನೆ.

**ಶ್ರೀ ಕಾಮತ್:** ಮಾನ್ಯ ಮಂತ್ರಿಗಳಿಗೆ ಇಂದು ರಾತ್ರಿ ಚೆನ್ನಾಗಿ ನಿದ್ರೆ ಬಂದೀತು.

**ಶ್ರೀಮತಿ ದುರ್ಗಾಬಾಯಿ** (ಮದ್ರಾಸ್)**:** ಸಂಸತ್ತಿನ ಕ್ರಮದನ್ವಯ ರಚಿತವಾದ ಅಖಿಲ ಭಾರತ ಶುಶ್ರೂಷಾ ಪರಿಷತ್ತಿಗೆ ಸಂಬಂಧಿಸಿದ್ದಂತೆ ವಾಸ್ತವ ಸ್ಥಿತಿಯೇನು?

**ಡಾ ಅಂಬೇಡ್ಕರ್:** ಪ್ರಾಯಃ ಅದು ಯಾವುದೇ ಅನರ್ಹತೆಗೆ ಒಳಗಾಗುವುದಿಲ್ಲ. ನಾನೀಗ ಸಂಸತ್ತಿನ ಕ್ರಮದನ್ವಯ ರಚನೆಗೊಂಡ ಸಲಹಾಪರಿಷತ್ತುಗಳು ಅಥವಾ ಸಮಿತಿಗಳು ಅಥವಾ ಶಾಸನಾತ್ಮಕ ನಿಗಮಗಳಿಂದ

ನೇಮಕವಾದ ಸದಸ್ಯತನದ ಕುರಿತು ಹೇಳುತ್ತೇನೆ. ಉದಾಹರಣೆಗೆ ದಾಮೋದರ ಕಣಿವೆ ನಿಗಮ. ನಾನು ಹೇಳಿದಂತೆ ಇದರ ಬಗೆಯೂ ನನಗೆ ಖಚಿತತೆ ಇಲ್ಲ. (ಅಡ್ಡಿಪಡಿಸಲಾಯಿತು.) ನಾನು ಯಾವುದೇ ನಿರ್ದುಷ್ಟ ಗ್ರಾಹಕನಿಗೆ ಉಪದೇಶ ಮಾಡುತ್ತಿಲ್ಲ. ಒಂದು ಸಾಮಾನ್ಯ ಹೇಳಿಕೆಯನ್ನು ಮಾಡಲು ನಾನು ವಿಷಾದಿಸುತ್ತೇನೆ. ಮಾನ್ಯ ಮಹಿಳೆಯರು ಶುಶ್ರೂಷಾ ಪರಿಷತ್ತಿನಲ್ಲಿ ಆಸಕ್ತರಾಗಿದ್ದರೆ ಅವರು ಒಬ್ಬ ವಕೀಲರಲ್ಲಿಗೆ ಹೋಗಿ ಅವರ ಸಲಹೆಯನ್ನು ಪಡೆಯುವುದು ಒಳ್ಳೆಯದು.

**ಶ್ರೀ ಸಿಧ್ವ:** ಹಾಗೆ ಹೇಳುವುದು ಸರಿಯಲ್ಲ.

**ಶ್ರೀಮತಿ ದುರ್ಗಾಬಾಯಿ:** ಕಲ್ಲಿದ್ದಲು ಗಣಿ ಭದ್ರತೆ (ತುಂಬುವ) ಕಾಯಿದೆ ಅನರ್ಹತೆಗೆ ಒಳಗಾಗುವುದಿಲ್ಲವೆಂದು ನೀವು ಹೇಳಿದಿರಿ. . . .

**ಡಾ. ಅಂಬೇಡ್ಕರ್:** ನಾನು ರಾತ್ರಿಯ ನಂತರ ನೋಡಿದೆ ಮತ್ತು ಅದರ ಅಂಶಗಳೇನೆಂದು ಶೋಧಿಸಿದೆ. ಅನಂತರ ನಾನು ಸಮಿತಿಗಳ, ಆಯೋಗಗಳ ಅಥವಾ ಪರಿಷತ್ತುಗಳ ಅಥವಾ ಸರಕಾರವು ನಿರ್ದುಷ್ಟ ಉದ್ದೇಶಗಳಿಗಾಗಿ ಕೈಗೊಂಡ ನಿರ್ಣಯ ಅಥವಾ ಆದೇಶಗಳ, ಉದಾಹರಣೆಗೆ ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಆಡಳಿತ ಮಂಡಳಿ, ಹಣಕಾಸು ಆಯೋಗದ ಸದಸ್ಯತ್ವ, ಸರಕಾರದ ವ್ಯಾಪಾರದ ವಿಚಾರಣಾ ಸಮಿತಿಯ ಸದಸ್ಯತ್ವದಂತಹ ಇತರ ಸಂಸ್ಥೆಗಳು (ಅಡ್ಡಪಡಿಸಲಾಯಿತು) ನಾನು ಯಾವುದನ್ನೂ ಮುಚ್ಚಿಡಲು ಇಚ್ಛಿಸುವುದಿಲ್ಲ – ವಿಶೇಷ ನೌಕರಿ ಭರ್ತಿ ಮಂಡಳಿ, ವಿಶ್ವ ಸಂಸ್ಥೆ ಅಥವಾ ಯಾವುದೇ ಅಂತಾರಾಷ್ಟ್ರೀಯ ಸಮ್ಮೇಳನ ಅಥವಾ ಸಂಘಕ್ಕೆ ಪ್ರತಿನಿಧಿ ಅಥವಾ ಏಜಂಟರು,. ಸರಕಾರವು ನಿರ್ದುಷ್ಟ ಉದ್ದೇಶಕ್ಕಾಗಿ ನಿರ್ಣಯ ಅಥವಾ ಆದೇಶದ ಮೂಲಕ ರಚಿಸಿದ ಸಮಿತಿಗಳು, ಆಯೋಗಗಳು ಅಥವಾ ಪರಿಷತ್ತುಗಳ ಅಥವಾ ಅಂತಹ ಇತರ ಸಂಸ್ಥೆಗಳ ಸದಸ್ಯತ್ವದ ಕುರಿತು ನಾನು ಸಂಶಯಿತನಾಗಿದ್ದೇನೆ. ನಾನು ಈಗಾಗಲೇ ಹೇಳಿದಂತೆ ನನ್ನ ದೃಷ್ಟಿಯಲ್ಲಿ ಕೆಲವು ಪ್ರಸಂಗಗಳಲ್ಲಿ ಸಂಸತ್ ಸದಸ್ಯರ ಮೇಲೆ ಯಾವುದೇ ಪರಿಣಾಮವಿಲ್ಲ. ಕೆಲವು ಪ್ರಸಂಗಗಳಲ್ಲಿ ಅವರ ಮೇಲೆ ಪರಿಣಾಮವಾಗಬಹುದು. ನನ್ನ ಮಿತ್ರ ಪ್ರೊ. ರಂಗ ಹೇಳಿದಂತೆ– ಮತ್ತು ನಾನು ಅದನ್ನು ಹೃತ್ಪೂರ್ವಕವಾಗಿ ಒಪ್ಪುತ್ತೇನೆ– ಲಾಭದಾಯಕ ಹುದ್ದೆಯನ್ನು ಹೊಂದಿರುವುದರಿಂದ ಅನರ್ಹರಾಗುವ ಪ್ರಶ್ನೆಯು ಬಹಳ ಮುಖ್ಯ ವಿಚಾರಗಳಲ್ಲೊಂದಾಗಿದೆ. ಅದು ಭ್ರಷ್ಟಾಚಾರದ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿದೆ ಮತ್ತು ಬೀರಬಹುದು ಮತ್ತು ಆದ್ದರಿಂದ ನಾವು ಈ ವಿಚಾರದಲ್ಲಿ ಜಾಗ್ರತೆಯಿಂದ ಮುಂದುವರಿಯಬೇಕು. ಇಂಗ್ಲೆಂಡ್‌ನಲ್ಲಿ ಅವರು ಏನು ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಅವರು ಅಂತಹ ಯಾವುದೇ ಸಾಮಾನ್ಯ ಕಾನೂನನ್ನು ಹೊಂದಿಲ್ಲ ಎಂಬುದನ್ನು ಗಮನಿಸಿದ್ದೇನೆ. ಯಾವುದೇ ಹುದ್ದೆಯನ್ನು ನಿರ್ಮಾಣ ಮಾಡುವಂತಹ ಕಾನೂನನ್ನು ಅವರು ಮಾಡಿದಾಗ ಆ ನಿರ್ದುಷ್ಟ ಕಾನೂನಿನಲ್ಲೇ ಆ ಹುದ್ದೆಯನ್ನು ಹೊಂದಿದವರು ಸಂಸತ್ ಸದಸ್ಯತನದಿಂದ ಅನರ್ಹತೆಗೆ ಒಳಗಾಗುತ್ತಾರೆಂದು ಭಾವಿಸಬಹುದೇ ಎಂದು ಅವರು ನಮೂದಿಸುತ್ತಾರೆ. ಆದ್ದರಿಂದ ಅಲ್ಲಿ ಸಾಮಾನ್ಯ ಸಿದ್ಧಾಂತವಿಲ್ಲ. ಪ್ರತೀ ಪ್ರಕರಣವನ್ನು ನಿರ್ದುಷ್ಟವಾಗಿ ವಿಚಾರ ಮಾಡಲಾಗುತ್ತದೆ. ಮತ್ತು ಆನ್‌ಸನ್‌ನ ಒಂದನೇ ಸಂಪುಟ ಒಂದು ದೀರ್ಘಪಟ್ಟಿಯನ್ನು ನೀಡುತ್ತದೆ ಮತ್ತು ಅದರಲ್ಲಿ ಪ್ರತಿ ಕಾಯಿದೆಯನ್ನು ಮತ್ತು ಅದು ರಚಿಸಿದ ಮತ್ತು ಆ ನಿರ್ದಿಷ್ಟ ಕಾಯಿದೆಯಡಿ ಹುದ್ದೆಯನ್ನು ಹೊಂದಿದವರು ಸಂಸತ್ ಸದಸ್ಯರಾಗಿ ಮುಂದುವರಿಯುತ್ತಾರೆಯೇ ಇಲ್ಲವೇ ಎಂಬುವುದನ್ನು ನಮೂದಿಸಲಾಗಿದೆ. ಆದ್ದರಿಂದ ನಾವು ಬಹಳ ಜಾಗ್ರತೆಯಿಂದಿರಬೇಕು.

ನಾನು ಒಪ್ಪಲು ತಯಾರಿರುವ ಒಂದು ವಿಚಾರವೆಂದರೆ ಈಗಾಗಲೇ ಅನರ್ಹತೆಗೆ ದಾರಿ

ಮಾಡಿಕೊಡುವ ಹುದ್ದೆಯನ್ನು ಹೊಂದಿದ ಸದಸ್ಯರು ತಮ್ಮ ಹುದ್ದೆಗಳನ್ನು ತಕ್ಷಣದಲ್ಲಿ ತೆರವು ಮಾಡದಿದ್ದರೆ ಅನರ್ಹತೆಯನ್ನು ಎದುರಿಸಬೇಕಾದೀತು ಮತ್ತು ಆಡಳಿತಾತ್ಮಕ ತೊಡಕುಗಳು ಸೃಷ್ಟಿಯಾಗಬಹುದು. ಕೆಲಸ ಕೂಡ ನಿಂತುಹೋಗಬಹುದು. ಮತ್ತು ಈಗಿರುವ ಹುದ್ದೆಯನ್ನು ಹೊಂದಿದವರು ಅನರ್ಹರಾಗುವುದನ್ನು ತಪ್ಪಿಸುವ ಸಣ್ಣಕ್ರಮವನ್ನು ಸಾಧ್ಯವಾಗಿಸಬಹುದು ಇಲ್ಲವೆ ಬಯಸಬಹುದು. ಮತ್ತು ಇದರಿಂದಾಗಿ ಯಾವ ಸಾಮಾನ್ಯ ತತ್ವಗಳನ್ನು ನಾವು ಸ್ವೀಕರಿಸಬಹುದೆಂದು ಪರಿಗಣಿಸಲು ಮುಂದಕ್ಕೆ ನಮಗೆ ಸಾಕಷ್ಟು ಸಮಯ ಸಿಗಬಹುದು.

ನಾನು ಮಾಡಿದ ಸಲಹೆಯನ್ನು ಪೂರೈಸಲು ಸ್ವಲ್ಪ ತಡವಾದರೆ, ನಾವದನ್ನು ಒಂದು ನಷ್ಟಪರಿಹಾರ ಕಾಯಿದೆಯನ್ನು ಅಂಗೀಕರಿಸಿ ಅದನ್ನು ಪೂರ್ವಾನ್ವಯಗೊಳಿಸುವುದರ ಮೂಲಕ ಸರಿಪಡಿಸಬಹುದು. ಈಗ ಹುದ್ದೆಗಳಲ್ಲಿರುವವರು ಅಂತಹ ಅನರ್ಹತೆಗೆ ಒಳಪಡುವ ಅಪಾಯದಲ್ಲಿರಬೇಕಾಗಿಲ್ಲ. ನಾವು ನಿಜಕ್ಕೂ ಈ ವಿಚಾರದಲ್ಲಿ ಅವಸರಮಾಡುವುದಾಗಲೀ ಮತ್ತು ಸರಿಯಾದ ಪರಿಶೀಲನೆ ಅಥವಾ ಪರಿಶೋಧನೆಯಿಲ್ಲದೆ ಯಾರನ್ನೂ ಮತ್ತು ಎಲ್ಲರನ್ನೂ ವಿನಾಯಿತಿಗೊಳಪಡಿಸುವುದಾಗಲೀ ಸರಿಯಲ್ಲವೆಂದು ನನಗನ್ನಿಸಿದೆ. ವಿವಿಧ ಸಮಿತಿಗಳಲ್ಲಿ ಕೆಲಸಮಾಡುವ ಸದಸ್ಯರಿಗೆ ಯಾವುದೇ ಅರ್ಹತೆಯಿಲ್ಲದೆ ಅನರ್ಹತೆಯನ್ನು ಅನ್ವಯಿಸುವುದರಿಂದ ಕೆಲವು ತೊಡಕುಗಳು ಸೃಷ್ಟಿಯಾಗಬಹುದೆಂದು ನಾನು ಒಪ್ಪುತ್ತೇನೆ. ಈ ಸದನವು ಹಾಗೆ ಇಚ್ಛಿಸಿದಲ್ಲಿ ನಾನು ಒಂದು ಖಂಡದ ಕ್ರಮವನ್ನು ಪರಿಗಣಿಸಲು ತಯಾರಿದ್ದೇನೆ ಮತ್ತು ಅದನ್ನು ಸದನದ ಮುಂದಿಟ್ಟು ಪೂರ್ವಾನ್ವಯಗೊಳಿಸಲು ಮತ್ತು ಅದಕ್ಕೆ ಒಂದು ನಷ್ಟಪರಿಹಾರ ಖಂಡವನ್ನು ಸೇರಿಸಿ ಆ ಮೂಲಕ ಕಾನೂನಿನ ಸ್ಥಿತಿಯಲ್ಲಿ ಯಾವುದೇ ಲೋಪವಿದ್ದರೆ ಒಬ್ಬ ಸದಸ್ಯನು ತನ್ನ ಸ್ಥಾನವನ್ನು ತೆರವುಗೊಳಿಸಿದನೆಂದು ತಿಳಿಯಬೇಕಾಗಿಲ್ಲವೆಂದು ಮಾಡಬಹುದು. ಇದಕ್ಕಿಂತ ಹೆಚ್ಚಾಗಿ ಈ ಹಂತದಲ್ಲಿ ನಾನು ಏನನ್ನು ಮಾಡಲೂ ಸಾಧ್ಯವಿಲ್ಲ.

ವಿಧೇಯಕದಲ್ಲಿ ಅರೆ–ಕಾಲಿಕ ಹುದ್ದೆಗಳನ್ನು ಕೈಬಿಟ್ಟಿರುವ ಕುರಿತು ನಾನು ನೀಡಿದ ಉತ್ತರವು, ಅಂದರೆ, ಹುದ್ದೆಗಳಲ್ಲಿರುವವರ ಕುರಿತು ವಿನಾಯಿತಿ ನೀಡುವ ಕುರಿತು ನೀವು ಜಾಗ್ರತೆವಹಿಸಬೇಕೆಂದು ಹೇಳಿದ್ದು ಅವರಿಗೂ ಅನ್ವಯಿಸುತ್ತದೆ. ಅಧ್ಯಾದೇಶದ ಮೂಲ ಖಂಡಗಳು ಯುದ್ಧಕಾಲೀನ ಅಧ್ಯಾದೇಶವಾದ ೧೯೪೨ರ ೪೨ನೇ ಅಧ್ಯಾದೇಶದಿಂದ ಪಡೆದುಕೊಂಡದ್ದಾಗಿದೆ. ನನ್ನ ಮಿತ್ರ ಶ್ರೀ ಕಾಮತ್ ಅವರು ತುರ್ತುಸ್ಥಿತಿಯಲ್ಲಿ ಅನೇಕ ಹುದ್ದೆಗಳನ್ನು ತುಂಬಿಸಬೇಕಾಗಿರುವುದರಿಂದ ಮತ್ತು ಲಭ್ಯವಿರುವ ವ್ಯಕ್ತಿಗಳು ಕಡಿಮೆಯಿರುವುದರಿಂದ ನಾವು ಅನಿವಾರ್ಯವಾಗಿ ಸಂಸತ್ತನ್ನು ಸಂಪರ್ಕಿಸಿ ಅಲ್ಲಿನ ವ್ಯಕ್ತಿಗಳನ್ನು ಆ ಸಂದರ್ಭಗಳಲ್ಲಿ ಕೆಲಸಮಾಡಲು ನಿಯೋಜಿಸಬೇಕಾಗುವುದರಿಂದ ಯಾವುದೇ ತತ್ವವನ್ನು ವಿಸ್ತರಿಸುವುದು ಕಾನೂನುಬದ್ಧವಾಗುತ್ತದೆಂದು ಅರ್ಥಮಾಡಿಕೊಳ್ಳುತ್ತಾರೆ. ಆದರೆ ಯುದ್ಧಕಾಲದಲ್ಲಿ ಮತ್ತು ತುರ್ತುಸ್ಥಿತಿಯಲ್ಲಿ ಅಗತ್ಯವಾಗಿರುವುದನ್ನು ಮಾಮೂಲು ಕಾಲದಲ್ಲಿ ಅನ್ವಯಿಸಬಾರದು. ಈ ಅಧ್ಯಾದೇಶದಲ್ಲಿ ಮೊದಲಿಗೆ ಇದ್ದ ಖಂಡವನ್ನು ಕೈಬಿಡುವಾಗ ನನ್ನ ಮನಸ್ಸಿನಲ್ಲಿದ್ದದ್ದು ಅದು.

**ಶ್ರೀ ಕಾಮತ್:**ಕಾನೂನು ಸಚಿವಾಲಯವಲ್ಲವೇ ಮೊದಲು ಈ ಅಧ್ಯಾದೇಶದ ಕರಡನ್ನು ತಯಾರಿಸಿದ್ದು?

**ಡಾ.ಅಂಬೇಡ್ಕರ್ :** ಕಾನೂನು ಸಚಿವಾಲಯವನ್ನು ಮರೆಯಬಹುದು ಮತ್ತು ಕ್ಷಮಿಸಬಹುದು. ಕಾನೂನು ಸಚಿವರು ಸರ್ವಜ್ಞರಲ್ಲ. ನಾನು ಕಲಿಯುವುದಕ್ಕಾಗಿಯೇ ಬದುಕುತ್ತೇನೆ ಮತ್ತು ನಾನು ಶ್ರೀ ಕಾಮತ್‌ರಿಂದ ಕಲಿಯಬಹುದಾದರೆ ಇನ್ನೂ ಋಣಿಯಾಗಿರುತ್ತೇನೆ. ನಾನು ಹೇಳಲಿರುವುದು ಇಷ್ಟೇ.

**ಶ್ರೀ ಕಾಮತ್ :** ಎದ್ದರು —

**ಉಪಸಭಾಪತಿ :** ನಾವು ಊಟದ ವಿರಾಮಕ್ಕೆ ಮುಂದೂಡಲು ಮೂರು ನಿಮಿಷಗಳು ಮಾತ್ರ ಇವೆ. ಮಾನ್ಯ ಸದಸ್ಯರು ಮೂರು ನಿಮಷಗಳಿಗಿಂತ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲವೆಂದು ಆಶಿಸುತ್ತೇನೆ.

**ಶ್ರೀ ಕಾಮತ್ :** ನನಗೆ ಕೆಲವು ಕಾನೂನಿನ ಮತ್ತು ಸಂವಿಧಾನದ ಅಂಶಗಳನ್ನು ಹೇಳುವುದಿದೆ ಮತ್ತು ನಾನು ಮೂರು ನಿಮಿಷಗಳಿಗಿಂತ ಹೆಚ್ಚು ತೆಗೆದುಕೊಳ್ಳುತ್ತೇನೆ.

ಮೊದಲಿಗೆ ನಾನು ಸ್ಪಷ್ಟಪಡಿಸುವುದೇನೆಂದರೆ ನನ್ನ ತೀರ್ಮಾನದಲ್ಲಿ– ನಾನು ಡಾ. ಅಂಬೇಡ್ಕರ್ ಅವರಿಂದ ಸಂವಿಧಾನ ರಚನೆಯ ಸಂದರ್ಭದಲ್ಲಿ ತುಂಬಾ ಕಲಿತಿದ್ದೇನೆ ಮತ್ತು ನಾನು ಅವರಿಂದ ಕಲಿಯುವುದು ಇನ್ನೂ ಇದೆ; ನಾನು ಅವರೊಂದಿಗೆ ಅಭಿನಂದನೆಗಳನ್ನು ವಿನಿಮಯಿಸುವುದಕ್ಕೆ ಬಯಸುತ್ತೇನೆ– ಈ ವಿಧೇಯಕವನ್ನು ಅವಸರಪಡುವ ಅಥವಾ ತಳ್ಳುವ ಅಗತ್ಯವಿಲ್ಲ, ಏಕೆಂದರೆ ಈ ವಿಧೇಯಕವನ್ನು ಈ ದಿನದ ಮಧ್ಯರಾತ್ರಿಯ ಮೊದಲೇ ಅಂದರೆ ೧೦ರಂದು, ಅಂಗೀಕರಿಸಿದರೂ ಅದು ಸಂವಿಧಾನಾತ್ಮಕವಾಗಿ ಉಪ ಮಂತ್ರಿಗಳ ಮತ್ತು ರಾಜ್ಯ ಮಂತ್ರಿಗಳ ಸದಸ್ಯತ್ವವನ್ನು ಊರ್ಜಿತಗೊಳಿಸುವುದಿಲ್ಲ; ಅದು ಈಗಾಗಲೇ ಅನುಭವಿಸಿದ ಅನರ್ಹತೆಯನ್ನು ನಿವಾರಿಸುವುದಿಲ್ಲ.

**ಡಾ.ಅಂಬೇಡ್ಕರ್ :** ಮಾನ್ಯರೆ, ತಮ್ಮ ಅನುಮತಿಯೊಂದಿಗೆ ನಾನು ಹೇಳಲು ಇಚ್ಛಿಸುವುದೇನೆಂದರೆ, ಈ ಅಂಶದಲ್ಲಿ ಸ್ವಂತದ್ದೇನೂ ಇಲ್ಲ. ಅದು ಪಾಟ್ನಾ ಉಚ್ಚ ನ್ಯಾಯಾಲಯದಿಂದ ಕಡತಂದ ದೃಷ್ಟಿಕೋನವಾಗಿದೆ. ಆದರೆ ನನ್ನ ಮಿತ್ರರಾದ ಶ್ರೀ ತ್ಯಾಗಿ ಮತ್ತು ಶ್ರೀ ಕಾಮತ್ ಇಬ್ಬರೂ ಈ ಅಂಶವನ್ನು ಹೇಳುತ್ತಿದ್ದಾರೆ. ರಾಷ್ಟ್ರಪತಿಗಳು ನ್ಯಾಯಾಲಯವಲ್ಲ; ಅವರು ನ್ಯಾಯಾಲಯಕ್ಕಿಂತ ಭಿನ್ನವಾದ ನಿಲುವನ್ನು ತಾಳಬಹುದು.

***ಶ್ರೀ ಕಾಮತ್:** ಸಂವಿಧಾನವು ಇದನ್ನು ಸ್ಪಷ್ಟಗೊಳಿಸುವುದೇ ಇಲ್ಲ. ಅದು ಡಾ. ಅಂಬೇಡ್ಕರ್ ಹೇಳಿದಂತೆ, ಸಂಪುಟ ಸಚಿವರನ್ನು ಮಾತ್ರ ಉಲ್ಲೇಖಿಸುತ್ತದೆ, ಮತ್ತು ಆದ್ದರಿಂದಲೇ ರಾಷ್ಟ್ರಪತಿಗಳು ಈ ಅಧ್ಯಾದೇಶವನ್ನು ಹೊರಡಿಸಿದರು.

ಮಾನ್ಯರೆ, ಮುಂದಿನ ಅಂಶವು ಇದು.

**ಕೆಲವು ಮಾನ್ಯ ಸದಸ್ಯರು:** ಸದನವು ಏಳುವ ಹೊತ್ತಾಯಿತು.

**ಉಪಸಭಾಪತಿ:** ಮಾನ್ಯ ಸದಸ್ಯರು ಅವರಿಗೆ ಸ್ವಲ್ಪ ಹೆಚ್ಚು ಸಮಯವನ್ನು ಕೊಡುತ್ತಾರೆಯೇ?

**ಶ್ರೀ ಕಾಮತ್ :** ನನ್ನ ಮಾನ್ಯ ಮಿತ್ರ ಡಾ. ಅಂಬೇಡ್ಕರ್ ಅವರು ಆಸಕ್ತರಾಗಿರುವ ಕೆಲವು ಕಾನೂನಿನ ಅಂಶಗಳಿಂದಾಗಿ . . .

**ಡಾ.ಅಂಬೇಡ್ಕರ್:** ನಾನು ಈ ವಿಧೇಯಕವನ್ನು ಅಂಗೀಕರಿಸುವುದಕ್ಕೆ ಮಾತ್ರ ಆಸಕ್ತನಾಗಿದ್ದೇನೆ.

**ಉಪಸಭಾಪತಿ:** ಸದನವು ಏಳುವುದಕ್ಕೆ ಆಸಕ್ತವಾಗಿದೆಯೆಂದು ಕಂಡುಬಂದಿದೆ. ೨–೩೦ರ ವರೆಗೆ ಸದನವನ್ನು ಮುಂದೂಡಲಾಗಿದೆ.

ಸದನವನ್ನು ೨–೩೦ರ ವರಗೆ ಊಟಕ್ಕಾಗಿ ಮುಂದೂಡಲಾಯಿತು.

ಊಟದ ನಂತರ ೨–೩೦ಕ್ಕೆ ಸದನವು ಮತ್ತೆ ಸೇರಿತು.

(ಉಪಸಭಾಪತಿಯವರು ಅಧ್ಯಕ್ಷಸ್ಥಾನದಲ್ಲಿ)

---

* ಪೂರ್ವೋಕ್ತ, ಸಂ. ೨, ಭಾಗ II, ೧೦ ಮಾರ್ಚ್ ೧೯೫೦, ಪು. ೧೩೪೯–೫೦

**ಶ್ರೀ ಕಾಮತ್:** ಮಾನ್ಯರೆ, ಕಾನೂನು ಸಚಿವರು ಇಲ್ಲಿಲ್ಲ.

**ಶ್ರೀ ಸಿಧ್ವ :** ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರು ಇದ್ದಾರೆ.

**ಉಪಸಭಾಪತಿ :** ಹೌದು.

**ಶ್ರೀ ಕಾಮತ್:** ಓಹ್, ಕಾನೂನು ಸಚಿವರು ಬಂದಿದ್ದಾರೆ.

ನನ್ನ ಮಾನ್ಯ ಮಿತ್ರರು ಸಮಯಕ್ಕೆ ಸರಿಯಾಗಿ ಬಂದರೆಂದು ನನಗೆ ಸಂತೋಷವಾಗಿದೆ. ಪೂರ್ವಾಹ್ನ ಅವರು –ಹಗುರಾಗಿಯಾದರೂ– ಈ ವಿಚಾರದಲ್ಲಿ ತಾಂತ್ರಿಕವಾದರೂ ಸಾಂವಿಧಾನಿಕ ತಪ್ಪಾಗಿದೆಯೆಂದು ಒಪ್ಪಿದ್ದು ನನಗೆ ಸಂತೋಷ ನೀಡಿದೆ.

**ಡಾ.ಅಂಬೇಡ್ಕರ್:** ನಾನು ಅಂತಹ ಯಾವ ಸಂಗತಿಯನ್ನೂ ಒಪ್ಪಿಲ್ಲ.

**ಶ್ರೀ ಕಾಮತ್ :** ಅವರು ಪಾಟ್ನಾ ಉಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿದರು ಮತ್ತು ಶ್ರೀ ತ್ಯಾಗಿ ಮತ್ತು ನಾನು ಆ ತೀರ್ಪಿನ ಆಧಾರದಲ್ಲಿ ನಿಲುವನ್ನು ತಳೆದಿದ್ದೇವೆಂದು ಮತ್ತು ನಾವು ಈ ವಿಚಾರದ ಆ ಅಂಶದ ಬಗ್ಗೆ ಆಳವಾಗಿ ಹೋಗಬೇಕಾಗಿಲ್ಲವೆಂದು ಹೇಳಿದರು. ಅವರು ಮುಂದುವರಿದು ತನಗೆ ಕಾನೂನಿನ ಅಂಶಗಳಲ್ಲಾಗಲೀ ಕಾನೂನಿನ ವಿಚಾರಗಳಲ್ಲಾಗಲೀ ಆಸಕ್ತಿಯಿಲ್ಲವೆಂದು ಹೇಳಿದರು– ಅವರಿಗೆ ಈ ವಿಧೇಯಕವನ್ನು ಅಂಗೀಕರಿಸುವುದರಲ್ಲಿ ಅಥವಾ ಮಂಜೂರುಗೊಳಿಸುವುದರಲ್ಲಿ ಮಾತ್ರ ಆಸಕ್ತಿಯೆಂದು ಹೇಳಿದರು. ಮಾನ್ಯರೆ, ಕಾನೂನು ಸಚಿವರಿಗೆ ಕಾನೂನಿನ ಅಂಶಗಳಲ್ಲಿ ಆಸಕ್ತಿಯಿಲ್ಲದಿದ್ದರೆ ಇನ್ನು ಯಾರಿಗೆ ಕಾನೂನಿನ ಅಂಶಗಳಲ್ಲಿ ಆಸಕ್ತಿ ಬಂದೀತು ಎಂದು ನಾನು ನಿಮ್ಮನ್ನು ಮತ್ತು ಈ ಸದನವನ್ನು ಪ್ರಶ್ನಿಸಬಹುದೇ?

**ಉಪಸಭಾಪತಿ :** ಅದನ್ನು ಬಿಟ್ಟುಬಿಡಿ.

**ಶ್ರೀ ಕಾಮತ್ :** ಮಾನ್ಯರೆ, ಅದು ಈ ಸದನದ ಸದಸ್ಯರ ಹಕ್ಕಿಗೆ ಸಂಬಂಧಿಸಿದೆ. ಕಾನೂನು ಸಚಿವರು ಇಲ್ಲಿದ್ದಾರೆ ಮತ್ತು ಅವರಿಗೆ ಕಾನೂನಿನ ಅಂಶಗಳಲ್ಲಿ ಆಸಕ್ತಿಯಿಲ್ಲವೆಂದು ಹೇಳುತ್ತಾರೆ.

**ಡಾ.ಅಂಬೇಡ್ಕರ್ :** ನಾನು ಪ್ರಕರಣದ ಯೋಗ್ಯತೆಯಲ್ಲಿ ಆಸಕ್ತನಾಗಿದ್ದೇನೆ.

**ಶ್ರೀ ಕಾಮತ್ :** ಮಾನ್ಯರೆ, ಕಾನೂನು ಸಚಿವರು ಸತ್ಯ, ವಿಚಾರ ಮತ್ತು ಪ್ರಾಮಾಣಿಕವಾಗಿ ಆ ಸ್ಥಾನವನ್ನು ನಂಬುವುದಾದರೆ,– ಕಾನೂನಿನ ಅಂಶಗಳು ಯೋಗ್ಯತೆಯಷ್ಟೇ ಹಿರಿದಾಗಿರಬೇಕು.

**ಉಪಸಭಾಪತಿ :** ಮಾನ್ಯ ಕಾನೂನು ಸಚಿವರನ್ನು ತಪ್ಪು ತಿಳಿಯುವುದರ ಔಚಿತ್ಯವಾದರೂ ಏನು? ಅವರು ಹೇಳುವುದು "ಕಾನೂನಿಗೆ ಸಂಬಂಧಿಸಿದಂತೆ, ನನಗೆ ಬಿಟ್ಟುಬಿಡಿ. ವಿಷಯಗಳೇನಾದರೂ ಇದ್ದರೆ ದಯವಿಟ್ಟು ಹೇಳಿ." ಎಂದು.

**ಶ್ರೀ ಕಾಮತ್ :** ಈ ಸದನದ ಸದಸ್ಯನಾಗಿ ನಾನು ಹಕ್ಕಿನ ವಿಚಾರವಾಗಿ ಒಬ್ಬ ಮಂತ್ರಿಯು ಒಂದು ನಿರ್ದುಷ್ಟ ನಿಲುವನ್ನು ತಳೆದರೆ, ಒಬ್ಬ ಸದಸ್ಯನು ಹಕ್ಕು ಚ್ಯುತಿಯ ವಿಚಾರವನ್ನು ಎತ್ತಬಾರದೇ? ಅವರ ಭವಿಷ್ಯವೇನೆಂದು ನನಗೆ ಗೊತ್ತಿಲ್ಲ; ಅವರು ಬೇರೆ ಯಾವುದೋ ಖಾತೆಯ ಕುರಿತು ಯೋಚಿಸುತ್ತಿದ್ದಾರೆ. ಖಾತೆಗಳ ಮರುವಿಂಗಡನೆಯ ಬಗ್ಗೆ ನನಗೇನೂ ಗೊತ್ತಿಲ್ಲವಾದರೂ ಆ ಬಗ್ಗೆ ಪತ್ರಿಕೆಗಳಲ್ಲಿ ವಿಪುಲ ವರದಿಗಳಿವೆ. ಆದರೆ ಕಾನೂನು ಸಚಿವರು ಕಾನೂನಿನ ಅಂಶಗಳಲ್ಲಿ ಆಸಕ್ತರಾಗಿಲ್ಲವೆಂದು ಸದನದಲ್ಲಿ ಹೇಳಬಾರದಿತ್ತು ಎಂದು ನಗನ್ನಿಸುತ್ತದೆ.

**ಡಾ.ಅಂಬೇಡ್ಕರ್ :** ಸಂಸತ್ತು ನ್ಯಾಯಾಲಯವಲ್ಲ.

# ಸಂಸತ್ತು (ಅನರ್ಹತೆಯ ತಡೆಯುವಿಕೆ) ಮಸೂದೆ

*ಉಪಸಭಾಪತಿ : ಡಾ.ಅಂಬೇಡ್ಕರ್.

**ಡಾ.ಅಂಬೇಡ್ಕರ್ :** ಈ ವಿಧೇಯಕದಲ್ಲಿ ಇರುವ ಮುಖ್ಯ ಸಿದ್ಧಾಂತದಿಂದ ಸದಸ್ಯರು ಬಹುದೂರ ಸರಿದಿದ್ದಾರೆಂದು ನನಗೆ ಕಾಣುತ್ತದೆ. ಈ ಸಂಶಯವು ಹೇಗೆ ಉದ್ಭವಿಸಿತು ಎಂದು ವಿವರಿಸಲು ನನ್ನನ್ನು ಕೇಳಲಾಗಿದೆ. ಯಾರ ಮನಸ್ಸಿನಲ್ಲಿ ಮೊದಲಿಗೆ ಇದು ಉದ್ಭವಿಸಿತು? ಆಸ್ಟ್ರೇಲಿಯಾ ಅಥವಾ ಕೆನಡಾದಂತಹ ಇನ್ಯಾವುದೇ ದೇಶದಲ್ಲಿ ಇಂತಹ ಶಾಸನವು ಅಗತ್ಯವೆಂದು ಕಂಡು ಬಾರದಿರುವುದು ಹೇಗೆಂದು ನಾನು ವಿವರಿಸಬೇಕೆಂದು ಕೇಳಲಾಗಿದೆ.

ಮೊದಲ ಅಂಶದ ಬಗ್ಗೆ ನನಗೇ ಸಂಶಯಗಳಿವೆ ಎಂದು ಹೇಳಲು ನಾನು ಅಳುಕುವುದಿಲ್ಲ. ಅದನ್ನು ನಾನು ಒಪ್ಪುತ್ತೇನೆ ಏಕೆಂದರೆ ನನ್ನ ಮೇಲೆ ಮಾಡಲಾದ ಅನೇಕ ಆಪಾದನೆಗಳ ಹೊರತಾಗಿಯೂ ನಾನು ಸಂವಿಧಾನ ರಚನೆಗೆ ಸ್ವಲ್ಪ ಮಟ್ಟಿಗೆ ಜವಬ್ದಾರನಾಗಿದ್ದೆನು. ಸಂಶಯ ಅಥವಾ ತಪ್ಪು ಕಲ್ಪನೆಗೆ ಎಡೆ ಕೊಡದಿರುವ ಸಂವಿಧಾನವು ಜಗತ್ತಿನಲ್ಲಿ ಇದೆ ಎಂಬುವುದು ನನಗೆ ಗೊತ್ತಿಲ್ಲವೆಂದು ಹೇಳಲು ನನಗೆ ಅಳುಕಿಲ್ಲ. ಅಲ್ಲದೇ ಹೋಗಿದ್ದರೆ ಪ್ರತಿ ಸಂವಿಧಾನವು ಸಂಶಯ ಮುಕ್ತರಾಗಿದರೆ ವಿವಿಧ ದೇಶಗಳಲ್ಲಿ ವಿವಿಧ ಸರ್ವೋಚ್ಚ ನ್ಯಾಯಾಲಯಗಳಲ್ಲಿ ಇಷ್ಟೊಂದು ಬಾರಿ ಪ್ರಮಾಣದ ತೀರ್ಪುಗಳು ಇರುತ್ತಿರಲಿಲ್ಲ. ಆದ್ದರಿಂದ ಕರಡು ಸಮಿತಿಯ ಅಧ್ಯಕ್ಷನಾಗಿ ಈ ವಿಚಾರದಲ್ಲಿ ಸಂಶಯವಿದೆ ಎಂದು ನನಗನ್ನಿಸಿದರೆ, ನಾನು ಅದನ್ನು ಒಪ್ಪಿಕೊಳ್ಳುವುದಕ್ಕೆ ನಾಚುವುದಿಲ್ಲ. ಮತ್ತು ಈ ವಿಚಾರದಲ್ಲಿ ಸಂಶಯವಿದೆ ಎಂದು ಹೇಳುವಾಗ ನನ್ನ ವರ್ತನೆಯಲ್ಲಿ ಯಾವುದೇ ಶೌರ್ಯ ಪ್ರದರ್ಶನವಿಲ್ಲ.

ಸಂಶಯವಿದೆ ಎಂದು ನನಗೆ ಅನ್ನಿಸುವುದಕ್ಕೆ ನಾನು ಕಾರಣವನ್ನು ಹೇಳುತ್ತೇನೆ. ನನ್ನ ಮಿತ್ರ ಶ್ರೀ ಕೃಷ್ಣಮಾಚಾರಿಯವರು 'ಸಚಿವ ಸಂಪುಟ' ಎಂಬ ಪದವನ್ನು ನಿಜಕ್ಕೂ ೧೯೩೫ರ ಭಾರತ ಸರ್ಕಾರದ ಕಾಯಿದೆಯಿಂದ ತೆಗೆದುಕೊಂಡದ್ದು ಅಲ್ಲೂ 'ಸಚಿವ ಸಂಪುಟ' ಪದವನ್ನು ಬಳಸಲಾಗಿತ್ತು. ಮತ್ತು ೧೯೩೫ರ ಕಾಯಿದೆಯ ಕರಡು ತಯಾರಕರು ಅದನ್ನು 'ಕಾರ್ಯನಿರ್ವಾಹಕ ಪರಿಷತ್ತು' ಎಂಬ ಹಳೆಯ ಕಾಯಿದೆಯ ಪದದಿಂದ ತೆಗೆದುಕೊಂಡಿದ್ದಾರೆಂದು ಗೊತ್ತಾಗುತ್ತದೆ. 'ಸಚಿವ ಸಂಪುಟ' ಎಂಬ ಪದವನ್ನು ಯಾರಾದರು ವಿವರಿಸಬೇಕಾದರೆ ಅವರು ನಿಸ್ಸಂಶಯವಾಗಿಯೂ 'ಕಾರ್ಯನಿರ್ವಾಹಕ ಪರಿಷತ್ತು' ಎಂಬ ಪದವನ್ನು ಯಾವ ಸಂದರ್ಭದಲ್ಲಿ ಬಳಸಲಾಗಿದೆ ಎಂಬುವುದನ್ನು ಪರಿಗಣಿಸಿದನ್ನು ಸಮರ್ಥಿಸಬಹುದು ಮತ್ತು 'ನಿರ್ವಾಹಕ ಪರಿಷತ್ತು' ಎಂಬ ಪದವನ್ನು ಉಲ್ಲೇಖಿಸಿ 'ಸಚಿವ ಸಂಪುಟ' ಎಂಬ ಪದದ ಉದ್ದೇಶವನ್ನು ವಿವರಿಸುವುದನ್ನು ಸಮರ್ಥಿಸಬಹುದೆಂದುಕೊಂಡಿದ್ದೇನೆ. ಈಗ 'ನಿರ್ವಾಹಕ ಪರಿಷತ್ತು' ಎಂದರೆ ಸಚಿವರ ಮಟ್ಟದ ನಿರ್ವಾಹಕ ಪರಿಷತ್ತಿನ ಸದಸ್ಯರು ಎಂದೇ ಅರ್ಥೈಸಬೇಕು, ಏಕೆಂದರೆ ಆ ಸಮಯದಲ್ಲಿ ನಾವೀಗ ಕರೆಯುವಂತಹ ಉಪಮುಖ್ಯಮಂತ್ರಿ ಅಥವಾ ರಾಜ್ಯ ಸಚಿವರು ಅಥವಾ ಸಂಸದೀಯ ಕಾರ್ಯದರ್ಶಿ ಅಥವಾ ಸಂಸದೀಯ ಅಧೀನಕಾರ್ಯದರ್ಶಿ ಮುಂತಾದ ವರ್ಗಗಳಿರಲಿಲ್ಲ. ಇವೆಲ್ಲಾ ಹುದ್ದೆಗಳು ೧೯೩೫ರ ಭಾರತ ಸರ್ಕಾರದ ಕಾಯಿದೆಯು ತನ್ನ ಮೂಲ ಸ್ವರೂಪದ ಅಸ್ತಿತ್ವವನ್ನು ಕಳೆದುಕೊಂಡ ಬಹು ಸಮಯದ ನಂತರ ಸೃಷ್ಟಿಸಲ್ಪಟ್ಟವು. ಆದ್ದರಿಂದ ನಾವು ನಿರೂಪಣೆಗೆ ಸಂಬಂಧಪಟ್ಟ ವಿಧಿಯಲ್ಲಿ 'ಸಚಿವ' ಅಥವಾ "ಸಚಿವ ಸಂಪುಟ' ಎಂಬ ಪದವನ್ನು ಪ್ರತ್ಯೇಕವಾಗಿ ನಿರೂಪಿಸಿಲ್ಲ. ಆದ್ದರಿಂದ

---

* ಪೂರ್ವೋಕ್ತ, ಸಂ. ೨, ಭಾಗ II, ೧೦ ಮಾರ್ಚ್ ೧೯೫೦, ಪು. ೧೩೬೦–೬೪.

ಯಾರಿಗಾದರು 'ಸಚಿವ ಸಂಪುಟ' ಎಂಬ ಪದವನ್ನು ನಿರ್ವಾಹಕ ಪರಿಷತ್ತು ಎಂಬ ಪದದಂತೆಯೇ ಉಪಯೋಗಿಸಬಹುದೆಂದು ಸಲಹೆ ನೀಡಲು ಸ್ವಾತಂತ್ರ್ಯವಿದೆ ಮತ್ತು ಆದ್ದರಿಂದ ಯಾರಿಗಾದರು ಈ ಹುದ್ದೆಗಳನ್ನು ಸೇರಿಸುವ ಉದ್ದೇಶವಿರಲಿಲ್ಲವೆಂದು ಹೇಳುವ ಸ್ವಾತಂತ್ರ್ಯವಿದೆ ಎಂದು ನಾನು ಭಾವಿಸುತ್ತೇನೆ.

ನನಗೆ ಸಂಶಯ ಬಂದದ್ದರ ಆಧಾರ ಅದು, ಮತ್ತು ಈ ವಿಚಾರವನ್ನು ಸಂಶಯಾತೀತವಾಗಿಸುವ ಒಂದು ಕಾನೂನನ್ನು ಅಂಗೀಕರಿಸಲು ಸಂಸತ್ತಿಗೆ ಯಾಕೆ ಕರೆಕೊಡಬಾರದೆಂಬುವುದಕ್ಕೆ ಕಾರಣ ನನಗೆ ಕಾಣುವುದಿಲ್ಲ. ಆದ್ದರಿಂದ ಸರಕಾರಕ್ಕೆ ಸಂಶಯ ಪರಿಹಾರವನ್ನು ಉದ್ದೇಶವಾಗಿ ಇಟ್ಟುಕೊಂಡು ಒಂದು ವಿಧೇಯಕವನ್ನು ಅಂಗೀಕರಿಸಬೇಕೆಂದು ಸಂಸತ್ತನ್ನು ಒತ್ತಾಯಿಸಲು ಯಾವುದೇ ಅನಗತ್ಯ ಪ್ರಯತ್ನವಿದೆ ಎಂದು ನನಗನ್ನಿಸುವುದಿಲ್ಲ. ಸಂಶಯಗಳ ನಿವಾರಣೆಗಾಗಿ ಸಂಸತ್ತುಗಳು ಕಾಯಿದೆಯನ್ನು ಜಾರಿ ಮಾಡಿದ ಅನೇಕ ಪ್ರಕರಣಗಳನ್ನು ನಾನು ಗುರುತಿಸಬಲ್ಲೆ, ಮತ್ತು ನಾನು ಈ ವಿಧೇಯಕದ ಸಂಬಂಧ ಸಂಸತ್ತನ್ನು ಯಾವುದೇ ಅಸಾಮಾನ್ಯ ಕ್ರಮವನ್ನು ಕೈಗೊಳ್ಳಲು ಹೇಳುತ್ತಿದ್ದೇನೆಂದು ಅನ್ನಿಸುವುದಿಲ್ಲ.

ನನ್ನ ಮಿತ್ರ ಪಂಡಿತ್ ಕುಂಜ್ರು ಅವರು ಎತ್ತಿದ ವಿಚಾರದ ಬಗ್ಗೆ ಅಂದರೆ ಈಗ ಪ್ರಸ್ತಾವಿಸಲ್ಪಟ್ಟಂತಹ ಶಾಸನದ ಹೊರತಾಗಿಯೂ ಕೆನಡ ಅಥವಾ ಆಸ್ಟ್ರೇಲಿಯಾ ಅಥವಾ ಇತರ ಆಧಿಪತ್ಯಗಳ ಸರಕಾರಗಳು ಹೇಗೆ ತಮ್ಮ ವ್ಯವಹಾರಗಳನ್ನು ನಡೆಸುತ್ತವೆ ಎಂದು ಕೇಳಿದ ವಿಚಾರದ ಕುರಿತು ನನಗೆ ನಿಜಕ್ಕೂ ಅವರಿಂದ ತಿಳಿಯಬೇಕಾಗಿರುವುದು ಲಾಭದಾಯಕ ಹುದ್ದೆ ಕಾರಣವಾಗಿ ಅನರ್ಹತೆಗಳನ್ನು ವಿಧಿಸುವ ೧೦೨ನೇ ವಿಧಿಯಂತಹ ಅವಕಾಶಗಳು ಆಸ್ಟ್ರೇಲಿಯಾ ಅಥವಾ ಕೆನಡದ ಸಂವಿಧಾನದಲ್ಲಿ ಇಲ್ಲವೆಂದು ಅವರು ಯೋಚಿಸುತ್ತಾರೆಯೆ ಎಂಬುವುದು. ನನಗೆ ಆಸ್ಟ್ರೇಲಿಯಾದ ಸಂವಿಧಾನವನ್ನು ಉಲ್ಲೇಖಿಸಲು ಅವಕಾಶವಿತ್ತು. ಮತ್ತು ಅಲ್ಲಿ ದೊರೆಯ ಅಡಿಯಲ್ಲಿ ಒಂದು ಲಾಭದಾಯಕ ಹುದ್ದೆಯನ್ನು ಹೊಂದಿರುವ ವ್ಯಕ್ತಿಗೆ ಸಂಸತ್ತಿನ ಸದಸ್ಯನಾಗಿರಲು ಅರ್ಹತೆ ಇಲ್ಲವೆಂಬ ಒಂದು ಸ್ಪಷ್ಟ ಕಲಮು ಇದೆ.

**ಪಂಡಿತ್ ಕುಂಜ್ರು:** ಅದು ಸರಿ.

**ಡಾ ಅಂಬೇಡ್ಕರ್:** ಆಸ್ಟ್ರೇಲಿಯಾದ ಸಂವಿಧಾನದ ಆ ನಿರ್ದಿಷ್ಟ ಕಲಮಿನ ಕಾರಣವಾಗಿ ನಿಸ್ಸಂದೇಹವಾಗಿ ಉದ್ಭವವಾಗುವ ತೊಡಕುಗಳನ್ನು ನಿವಾರಿಸಲು ಆಸ್ಟ್ರೇಲಿಯಾದ ಸಂಸತ್ತು ಯಾವ ಕಾನೂನನ್ನು ಮಾಡಿದೆ ಎಂದು ಪರೀಕ್ಷಿಸಲು ಅವರಿಗೆ ಸಮಯವಿತ್ತೆ ಎಂದು ನನಗೆ ಗೊತ್ತಿಲ್ಲ. ನಾನು ಅದನ್ನು ಪರಿಶೀಲಿಸಲು ಸಮಯವಿರಲಿಲ್ಲ. ಆದರೆ ಆಸ್ಟ್ರೇಲಿಯಾದ ಸಂಸತ್ತು ತನ್ನ ಸದಸ್ಯರಿಗೆ ಲಾಭದಾಯಕ ಹುದ್ದೆಗಳನ್ನು ಹೊಂದಿರುತ್ತಾ ಅದೇ ಸಮಯದಲ್ಲಿ ಸಂಸತ್ತಿನಲ್ಲಿ ಕುಳ್ಳಿರಲು ಮತ್ತು ಸದಸ್ಯರಾಗಿರಲು ಯಾವುದಾದರು ಶಾಸನವಿಲ್ಲದೆ ಅನುಮತಿ ನೀಡಲು ಹೇಗೆ ಸಾಧ್ಯ ಎಂದು ನನಗೆ ಅರ್ಥವಾಗುವುದಿಲ್ಲ. ನಾನು ಹೇಳಿದಂತೆ ಇದನ್ನು ಅಧ್ಯಯನ ಮಾಡಲು ನನಗೆ ಸಮಯವಿರಲಿಲ್ಲ, ಆದರೆ ನನಗೆ ಮೇಲುನೋಟಕ್ಕೆ ಕಾಣುವುದೆಂದರೆ ಆಸ್ಟ್ರೇಲಿಯಾದ ಸಂಸತ್ತು ತನ್ನ ಸದಸ್ಯರನ್ನು ಸಂಸತ್ತಿನಲ್ಲಿ ಕುಳ್ಳಿರಲು ಮತ ನೀಡಲು ಮತ್ತು ಕಲಾಪಗಳಲ್ಲಿ ಭಾಗವಹಿಸಲು ಮತ್ತು ಅದೇ ಸಮಯಕ್ಕೆ ಲಾಭದಾಯಕ ಹುದ್ದೆಗಳನ್ನು ಹೊಂದಲು ಇಲ್ಲಿ ಪ್ರಸ್ತಾವಿಸಿದಂತಹ ಕಾಯಿದೆ ಇಲ್ಲದೆ ಅಸಾಧ್ಯವೆಂದು ನನಗನ್ನಿಸುತ್ತದೆ. ನಾನು ಈಗ ಇನ್ನೊಂದು ಅಂಶದ ಕುರಿತು ಹೇಳುತ್ತೇನೆ ಮತ್ತು ಅದು ಹೀಗಿದೆ. ನನ್ನ ಸ್ನೇಹಿತರಾದ ಶ್ರೀ ಕಾಮತ್ ಅವರು ಹೇಳುತ್ತಿದ್ದ ಅನೇಕ ವಿಚಾರಗಳನ್ನು ನಾನು ನನ್ನ ಸೀಮಿತ ತಿಳುವಳಿಕೆಯಿಂದಾಗಿ ದುರದೃಷ್ಟವಶಾತ್ ಅರ್ಥಮಾಡಿಕೊಳ್ಳಲಾಗಲಿಲ್ಲ. ಆದರೆ ನಾನು ಅರ್ಥಮಾಡಿಕೊಂಡ ಒಂದು ಅಂಶದ ಬಗ್ಗೆ ಸ್ವಲ್ಪ ವಿವರಣೆಯನ್ನು ನೀಡಬೇಕಾಗಿದೆ. ಅವರು ಹೇಳಿದಂತೆ ಈ ವಿಧೇಯಕದ ಕರಡು ಯಾವುದೇ ರಾಜ್ಯ ಸರಕಾರದ ಸದಸ್ಯನನ್ನೂ

ಒಳಗೊಳ್ಳುತ್ತದೆ. ಮತ್ತು ಆ ಕರಡು ತುಂಬ ಒರಟಾಗಿದೆ ಎಂಬುದು ಅವರ ವಾದ. ಅವರು ಆ ಖಂಡವನ್ನು ಜಾಗ್ರತೆಯಿಂದ ಓದಿದರೆ ಮತ್ತು ೧೦೨ರ ವಿಧಿಯ ಒಂದನೇ ಖಂಡವನ್ನು ಗಮನಿಸಿದರೆ ಅಲ್ಲಿ ಇರುವ ಭಾಷೆ ಅಗತ್ಯ ಮಾತ್ರವಲ್ಲ ಪೂರ್ಣ ಸಮರ್ಥನೀಯವೆಂದು ಕಾಣಬಹುದೆಂದು ನಾನು ಭಾವಿಸುತ್ತೇನೆ. ವಿಧೇಯಕದ ಎರಡನೇ ಖಂಡವು ಎರಡು ಪ್ರಸಂಗಗಳಿಗೆ ಸಂಬಂಧಿಸಿದೆ, ಒಂದು ಸದಸ್ಯನಾಗಿ ಆಯ್ಕೆಯಾಗುವುದು ಮತ್ತು ಇನ್ನೊಂದು, ಸದಸ್ಯನಾಗಿರುವುದು. ಈಗ ಪ್ರಸ್ತಾವಿಸಿದುದೆಂದರೆ ಭಾರತ ಸರಕಾರದಡಿ ಲಾಭದಾಯಕ ಹುದ್ದೆ ಹೊಂದಿರುವ ಒಬ್ಬ ವ್ಯಕ್ತಿ ಮಾತ್ರವಲ್ಲ ಅದೇ ರೀತಿ ಒಬ್ಬ ರಾಜ್ಯ ಸಚಿವ ಅಥವಾ ಉಪಸಚಿವ ಅಥವಾ ಸಂಸದೀಯ ಕಾರ್ಯದರ್ಶಿ ಅಥವಾ ಸಂಸದೀಯ ಅಧೀನಕಾರ್ಯದರ್ಶಿ. ಸಂಸತ್ ಸದಸ್ಯನಾಗಲು ಸಾಮಾನ್ಯ ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸಿದಲ್ಲಿ ಆತನು ಸರಕಾರದ ಹುದ್ದೆಯಲ್ಲಿ ಇದ್ದಾನೆ ಎಂಬ ಕಾರಣಕ್ಕೆ ಅನರ್ಹನಾಗಬಾರದು. ಈ ಕಾರಣಕ್ಕಾಗಿ ರಾಜ್ಯದಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದುವುದನ್ನು ಕೂಡ ಇದರಲ್ಲಿ ಒಳಗೊಂಡಿದೆ. ಏಕೆಂದರೆ, ಈ ವಿಧೇಯಕದ ಉದ್ದೇಶವು ಎರಡು ವರ್ಗದ ಜನರನ್ನು – ರಾಜ್ಯ ಸಚಿವರು ಅಥವಾ ಉಪಸಚಿವರು ಅಥವಾ ಸಂಸದೀಯ ಕಾರ್ಯದರ್ಶಿಗಳು ಅಥವಾ ಸಂಸದೀಯ ಅಧೀನಕಾರ್ಯದರ್ಶಿಗಳು, ಅವರು ಕೇಂದ್ರದಲ್ಲಿರಲಿ ರಾಜ್ಯದಲ್ಲಿರಲಿ ಈ ತೊಡಕಿನಿಂದ ಮುಕ್ತರಾಗುವುದು, ಅದಕ್ಕಾಗಿಯೇ "ಭಾರತ ಸರಕಾರದ ಅಥವಾ ಯಾವುದೇ ರಾಜ್ಯ ಸರಕಾರದ ಅಡಿಯಲ್ಲಿ" ಎಂಬ ಪದಗಳನ್ನು ಬಳಸಲಾಗಿದೆ.

**ಶ್ರೀ ಕಾಮತ್:** ನಾನು ಹೇಳಿದ ವಿಚಾರವೇನಾಯಿತು?

**ಡಾ ಅಂಬೇಡ್ಕರ್:** ನಾನು ಆ ವಿಷಯಕ್ಕೆ ಬರುತ್ತಿದ್ದೇನೆ.

ನೀವು ಎರಡನೇ ಖಂಡದಲ್ಲಿ ನಮೂದಿಸಿದ ಹುದ್ದೆಯನ್ನು ಹೊಂದಿದವರನ್ನು ಅಂದರೆ ಒಂದು ರಾಜ್ಯದಲ್ಲಿ ಸಂಸತ್ತಿನ ಚುನಾವಣೆಗೆ ಸ್ಪರ್ಧಿಸಲು ಅನುಮತಿ ನೀಡಿದಲ್ಲಿ ಆತನು ಆಯ್ಕೆಯಾದ ನಂತರ ಸಂಸತ್ ಸದಸ್ಯನಾಗಿ ಮುಂದುವರಿಯಲು ಅರ್ಹನಾಗುತ್ತಾನೆ. ಏಕೆಂದರೆ ಅಲ್ಲಿ ಇರುವ ಪದಗಳು "ಆಯ್ಕೆಯಾಗಲು ಮತ್ತು ಇರಲು". ೧೦೧ನೇ ವಿಧಿಯಲ್ಲಿ ಇರುವ ಸಂವಿಧಾನಾತ್ಮಕ ಅಂಶದಿಂದಾಗಿ ಆ ತೊಂದರೆಯು ತನ್ನಿಂದ ತಾನೇ ಪೂರ್ಣವಾಗಿ ನಿವಾರಣೆಯಾಗುತ್ತದೆ. ಎಂದು ನನ್ನ ಸ್ನೇಹಿತರು ಗಮನಿಸಬಹುದು. ಏಕೆಂದರೆ, ಯಾವುದೇ ರಾಜ್ಯದ ರಾಜ್ಯ ಸಚಿವರು ಅಥವಾ ಉಪಸಚಿವರು ಅಥವಾ ಸಂಸದೀಯ ಕಾರ್ಯದರ್ಶಿಗಳು ಅಥವಾ ಅಧೀನ ಕಾರ್ಯದರ್ಶಿಗಳು ಸಂಸತ್ತಿಗೆ ಆಯ್ಕೆಯಾದರೆ ಆತನಿಗೆ ಸಂಸತ್ತಿನ ಸದಸ್ಯನಾಗಿ ಮುಂದುವರಿಯಬೇಕೆ ಅಥವಾ ರಾಜ್ಯ ಶಾಸನ ಸಭೆಯ ಸದಸ್ಯನಾಗಿ ಮುಂದುವರಿಯಬೇಕೆ ಎಂದು ಆಯ್ಕೆ ಮಾಡಬೇಕಾಗಿದೆ. ಪರಿಣಾಮವಾಗಿ ಈ ಅಂಶವನ್ನು ಈ ರೀತಿಯಲ್ಲಿ ಪ್ರಯೋಗಿಸಿದರೂ ಅವರು ಯೋಚಿಸದಂತಹ ಯಾವುದೇ ತೊಡಕನ್ನು ಅದನ್ನು ಸೃಷ್ಟಿಸಲಾರದು.

**ಶ್ರೀ ಕಾಮತ್:** ಸಂವಿಧಾನದ ಅಡಿಯಲ್ಲಿ ರಾಜ್ಯಗಳಿಗೆ ಅಥವಾ ಕೇಂದ್ರಕ್ಕೆ ಶಾಸನಸಭಾ ಸದಸ್ಯ ಅಲ್ಲದವರನ್ನು ರಾಜ್ಯ ಸಚಿವರಾಗಿ ಅಥವಾ ಉಪಸಚಿವರಾಗಿ ಇರಗೊಡುವುದು ಸಾಧ್ಯವೇ? ಒಬ್ಬ ಸಚಿವರು ಶಾಸನ ಸಭೆಯ ಸದಸ್ಯರಾಗದೆ ಸಚಿವನಾಗಿರಬಹುದು. ಆದರೆ ಸಂವಿಧಾನವನ್ನು ನಾನು ಅರ್ಥಮಾಡಿಕೊಂಡಂತೆ ಒಬ್ಬ ರಾಜ್ಯ ಸಚಿವರು ಅಥವಾ ಉಪಸಚಿವರು ಶಾಸನ ಸಭೆಯ ಸದಸ್ಯರಾಗದೆ ಸಚಿವ ಹುದ್ದೆಯಲ್ಲಿ ಇರಲಾಗುವುದಿಲ್ಲ.

**ಡಾ ಅಂಬೇಡ್ಕರ್:** ಆರು ತಿಂಗಳ ಮಟ್ಟಿಗೆ ಅವರಿಗೆ ಸಾಧ್ಯವಿದೆ. ಕರಡು ತಯಾರಿಯ ವಿಚಾರದ ಕುರಿತು ನಾನು ವಿಷಯವನ್ನು ಸ್ಪಷ್ಟಪಡಿಸಿದ್ದೇನೆಂದು ಭಾವಿಸುತ್ತೇನೆ.

ನನ್ನ ಸ್ನೇಹಿತ ಶ್ರೀ ಕೃಷ್ಣಮಾಚಾರಿಯವರು ನಾನು ಕಳೆದ ರಾತ್ರಿ ಈ ವಿಚಾರದ ಕುರಿತು ಅಧ್ಯಾಯನಕ್ಕಾಗಿ ಬಹಳಷ್ಟು ಸಮಯವನ್ನು ವ್ಯಯಿಸಿದ್ದೇನೆಂಬುವುದನ್ನು ಟೀಕಿಸಿದರು. ಅವರು ಈಗತಾನೆ ಉಲ್ಲೇಖಿಸಿದ ಸಂಸದೀಯ ಕಡತವು ನನಗೆ ಸಿಕ್ಕಿದರೆ ನನ್ನ ಶ್ರಮವು ಸಾಕಷ್ಟು ಕಡಿಮೆಯಾಗುತ್ತಿದೆಂದು ನನಗನ್ನಿಸುತ್ತದೆ. ನಾನು ಹೇಳಿದಂತೆ ನಾನು ಹೋದಾಗ ಗ್ರಂಥಾಲಯವು ಮುಚ್ಚಿತ್ತು. ಒಂದೋ ಗ್ರಂಥಾಲಯವು ಮುಚ್ಚಿತ್ತು ಅಥವಾ ನನ್ನ ಸ್ನೇಹಿತರು ಆ ಕಡತದೊಂದಿಗೆ ಪರಾರಿಯಾದರು ಮತ್ತು ನನಗೆ ಅದನ್ನು ಅಧ್ಯಯನ ಮಾಡುವ ಅವಕಾಶ ನೀಡಲಿಲ್ಲ.

ನನ್ನ ಮಿತ್ರ ಶ್ರೀ ಕಾಮತ್ ಅವರು ಈ ವಿಧೇಯಕದ ಕೆಲವು ಅಂಶ ಅಂದರೆ ಸಂಸದೀಯ ಕಾರ್ಯದರ್ಶಿಗೆ ಮತ್ತು ಇತರರಿಗೆ ಸಂಬಂಧಿಸಿದಂತೆ ಹೊಸ ಸಂಗತಿಯಲ್ಲ. ಮತ್ತು ಮೂಲ ಅಧ್ಯಾದೇಶದಲ್ಲಿ ಇರಲಿಲ್ಲ ಎಂದು ಹೇಳುವಾಗ ನಾನು ತಪ್ಪು ಮಾಡಿದೆನೆಂದು ಟೀಕಿಸಿದರ ಬಗ್ಗೆ ನಾನು ಹೇಳುವುದೇನೆಂದರೆ ಅವರಿಗೆ ಈ ರೀತಿ ಆಪಾದಿಸುವುದಕ್ಕೆ ಯಾವ ಆಧಾರವೂ ಇಲ್ಲ ಅಥವಾ ಕ್ಷಮೆ ಕೇಳುವ ಅಗತ್ಯವೂ ಇಲ್ಲ. ಯಾವ ಸದಸ್ಯರಾದರು ತಪ್ಪಿದರೆ, ತಪ್ಪು ವಿಚಾರಗಳನ್ನು ಹೇಳಿದರೆ ಮತ್ತು ಈ ವಿಚಾರಗಳು ಸದನವನ್ನು ದಿಕ್ಕು ತಪ್ಪಿಸಲು ಅಥವಾ ತಪ್ಪುದಾರಿಗೆ ಎಳೆಯುವ ಪರಿಣಾಮವನ್ನು ಹೊಂದಿದರೆ ಹಾಗೆ ಮಾಡುವುದಕ್ಕೆ ಆಧಾರವಿದೆ. ಆದರೆ ಇದು ಒಂದು ಸಣ್ಣ ಪ್ರಮಾದ ಅಷ್ಟೆ. ಇದು ಎಲ್ಲರಿಗೂ ಗೊತ್ತಿದೆ, ಮತ್ತು ನಾನು ಇದು ದೂರಿಗೆ ಮತ್ತು ಟೀಕೆಗೆ ಅರ್ಹವೆಂದು ಭಾವಿಸುವುದಿಲ್ಲ. ಶ್ರೀ ಕಾಮತ್ ಅವರಿಗೆ ಇರುವಷ್ಟು ಪರಿಪೂರ್ಣ ನೆನಪಿನ ಶಕ್ತಿ ನನಗೆ ಇಲ್ಲವೆಂದು ಹೇಳಬಲ್ಲೆ. ನಾನು ಉತ್ತರಿಸದೇ ಇರುವ ಯಾವ ಅಂಶವಾದರು ಇದೆ ಎಂದು ನಾನು ಭಾವಿಸುವುದಿಲ್ಲ.

**ಪಂಡಿತ್ ಕುಂಜ್ರು:** ರಾಜ್ಯ ಸಚಿವರು ಸಚಿವ ಸಂಪುಟಕ್ಕೆ ಸೇರುತ್ತಾರೆಯೇ ಅಥವಾ ಇಲ್ಲವೇ ಮತ್ತು ಅವರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆಯೇ ಎಂದು ಮಾನ್ಯ ಸಚಿವರು ನಮಗೆ ಹೇಳುತ್ತಾರೆಯೇ?

**ಡಾ.ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರು ಈ ಪ್ರಶ್ನೆಯನ್ನು ಮೊದಲು ಕೇಳಿದ್ದಾರೆ. ಸಂಪುಟದ ಒಳಗಿನ ಸ್ಥಿತಿಯು ಕಾನೂನಿನಿಂದ ನಿಯಂತ್ರಿತವಾಗಿಲ್ಲವೆಂದು ಅವರಿಗೆ ಚೆನ್ನಾಗಿ ಗೊತ್ತಿದೆ ಎಂದು ನಾನು ತಿಳಿಯುತ್ತೇನೆ. ಅದು ಯಾವಾಗಲು ಸಂಪ್ರದಾಯದಿಂದ ನಿಯಂತ್ರಿತವಾಗುತ್ತದೆ. ಯಾವುದೇ ವ್ಯಕ್ತಿಯು ವಿಶೇಷವಾಗಿ ಸಚಿವನೆಂದು ನಾಮಕರಣಗೊಳ್ಳದಿದ್ದರು ಆತನನ್ನು ಸಂಪುಟದ ಸದಸ್ಯನ್ನನ್ನಾಗಿ ಮಾಡುವುದು ಪ್ರಧಾನ ಮಂತ್ರಿಗಳ ವಿಶೇಷ ಅಧಿಕಾರ. "ನನ್ನ ಸಂಪುಟದಲ್ಲಿ ನಾನು ಕೆಲವು ಸಚಿವರನ್ನು ಮಾತ್ರ ಸೇರಿಸಿಕೊಳ್ಳುತ್ತೇನೆ. ಇತರರನ್ನು ಸೇರಿಸಿಕೊಳ್ಳುವುದಿಲ್ಲ. ಆದರೆ ಒಬ್ಬ ರಾಜ್ಯ ಕಾರ್ಯದರ್ಶಿಯನ್ನು ಅಥವಾ ರಾಜ್ಯ ಸಚಿವರನ್ನು ಸೇರಿಸಿಕೊಳ್ಳುತ್ತೇನೆ". ಎಂದು ಅವರಿಗೆ ಹೇಳುವ ಪರಿಪೂರ್ಣ ಸ್ವಾತಂತ್ರ್ಯವಿದೆ. ಸಂಪುಟದ ಒಳಗಿನ ವ್ಯವಸ್ಥೆಯು ಯಾವಾಗಲೂ ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಒಂದು ಸಂಪ್ರದಾಯದ ವಿಚಾರ. ಅವರು ಇಚ್ಛಿಸಿದಲ್ಲಿ ಈಗಿರುವ ಸ್ಥಿತಿಯನ್ನು ನಾನು ಹೇಳಬಲ್ಲೆ. ಆದರೆ ಅದು ಈಗಿನದು ಎಂದು ಮಾತ್ರ ಎಂದು ಅರ್ಥಮಾಡಿಕೊಳ್ಳಬೇಕು. ಈಗಿನ ಪ್ರಧಾನಮಂತ್ರಿಗಳು ಸಂಪುಟದ ಕೆಲಸ ಕಾರ್ಯಗಳ ರೀತಿಯ ನಂತರ ಅಥವಾ ಒಬ್ಬ ಉತ್ತರಾಧಿಕಾರಿ ಬಂದನೆಂದರೆ ಆತನು ಕೂಡ ಒಂದು ಭಿನ್ನ ವ್ಯವಸ್ಥೆಯನ್ನು ಅಂಗೀಕರಿಸಬಹುದು. ಆದ್ದರಿಂದ ಅಲ್ಲಿ ಪ್ರಯೋಜನ ಕಾಣುವುದಿಲ್ಲ. . . .

**ಪಂಡಿತ್ ಕುಂಜ್ರು:** ನಾನು ನನ್ನ ಮಾನ್ಯ ಮಿತ್ರರನ್ನು ಅಡ್ಡಿಪಡಿಸಬಹುದೇ? ಅವರು 'ಸಚಿವ ಸಂಪುಟ' ಎಂಬುವುದನ್ನು ಸಂಪುಟವೆಂದು ತಿಳಿಯುತ್ತಾರೆಯೇ?

**ಡಾ ಅಂಬೇಡ್ಕರ್:** ಇಲ್ಲ ನಾನು ಈ ದಿನ ಬೆಳಗಿನ ಮೊದಲ ಮಾತುಗಳಲ್ಲಿ ಹೇಳಿದಂತೆ ಇದು

ಎರಡು ಅರ್ಥದ ಸಾಧ್ಯತೆ ಇರುವ ಪದ ನಾನು ಸಂವಿಧಾನ ಕಾನೂನಿನ ಲೇಖಕರ ಹೇಳಿಕೆಯನ್ನು ನೋಡಿದ್ದೇನೆ ಮತ್ತು ಅವರು ಸಚಿವ ಎಂಬ ಪದದಲ್ಲಿ ಸಂಸದೀಯ ಕಾರ್ಯದರ್ಶಿಗಳು ಮತ್ತು ಸಂಸದೀಯ ಅಧೀನ ಕಾರ್ಯದರ್ಶಿಗಳು ಸೇರುತ್ತಾರೆಂದು ಹೇಳಿದ್ದಾರೆ. 'ಸಚಿವ' ಎಂಬ ಪದವನ್ನು ಸಂಕುಚಿತ ಅರ್ಥದಲ್ಲಿ ಪ್ರಯೋಗಿಸಿದ ಇತರ ಲೇಖಕರೂ ಇದ್ದಾರೆ. ಆದ್ದರಿಂದ ನಾನು ಹೇಳಿದಂತೆ ಎಲ್ಲರನ್ನು ತೃಪ್ತಿಪಡಿಸುವುದಾಗಲಿ ಅಥವಾ ಸರಿಯಾದ ಉತ್ತರ ನೀಡುವುದಾಗಲಿ ಬಹಳ ಕಷ್ಟ. ಇದೊಂದು ಸಲೀಲ ಪರಿಸ್ಥಿತಿ ಮತ್ತು ಸಲೀಲವಾಗಿಯೇ ಉಳಿಯಬೇಕು: ಅದು ಮುಖ್ಯ ಅಂಶ. ಸಚಿವರು ಮತ್ತು ಸಂಸದೀಯ ಕಾರ್ಯದರ್ಶಿಗಳು ಒಟ್ಟಾಗಿ ಅಥವಾ ಪರಸ್ಪರ ಮುಖಾಮುಖಿಯಾಗಿ ಹೇಗೆ ಇರುತ್ತಾರೆಂಬ ಸ್ಪಷ್ಟ ಚಿತ್ರಣವನ್ನು ನನ್ನ ಮಿತ್ರರಿಗೆ ನೀಡುವುದಕ್ಕಾಗಿ ನನ್ನ ಮೇಲೆ ಒತ್ತಡ ಏರುವುದರಿಂದ ಉಪಯೋಗವಿಲ್ಲ.

**ಪಂಡಿತ್ ಕುಂಜ್ರು:** ಅರ್ಥಮಾಡಿಕೊಳ್ಳುವುದರಲ್ಲಿ ನಾನು ವಿಫಲನಾಗಿದ್ದೇನೆಂದು ಹೇಳಲು ವಿಷಾದಿಸುತ್ತೇನೆ ನಾನು ನನ್ನ ಮಾನ್ಯ ಮಿತ್ರರನ್ನು ಟೀಕಿಸುತ್ತಿಲ್ಲ. ನಾನು ತಿಳಿಯಬಯಸಿದ್ದು ಇಷ್ಟೆ. ಸಚಿವ ಸಂಪುಟ ಎಂದರೆ ಸಂಪುಟ ಮಾತ್ರ ಎಂಬ ಅರ್ಥವಲ್ಲದಿದ್ದರೆ ಸಹಜವಾಗಿಯೇ ಅದು ಸಂಪುಟಕ್ಕಿಂತ ದೊಡ್ಡ ಅಂಗವಾಗಬಹುದು. . . .

**ಡಾ ಅಂಬೇಡ್ಕರ್:** ಹೌದು.

**ಪಂಡಿತ್ ಕುಂಜ್ರು:** . . . . ಮತ್ತು ರಾಜ್ಯ ಸಚಿವರು ಹಾಗು ಉಪಸಚಿವರು ಅದರಲ್ಲಿರಬಹುದು. ಆದ್ದರಿಂದ ಅವರು ಸ್ಥಾನದ ಬಗ್ಗೆ ಪ್ರಶ್ನೆ ಉದ್ಭವಿಸುವುದಿಲ್ಲ.

**ಡಾ ಅಂಬೇಡ್ಕರ್:** ನಾನು ಈ ಬಗ್ಗೆ ವಿಸ್ತರಿಸಬೇಕಾಗಿಲ್ಲ ಮಾನ್ಯ ಪ್ರಧಾನ ಸಚಿವರು ಅತ್ಯಂತ ಅಧಿಕಾರ ವಾಣಿಯಿಂದ ತನ್ನ ಅಭಿಪ್ರಾಯದಂತೆ ಸಚಿವ ಸಂಪುಟವು ಎಲ್ಲರನ್ನು ಒಳಗೊಂಡಿದೆ ಎಂದು ಹೇಳಿದರು.

**ಶ್ರೀ ಟಿ.ಹುಸೇನ್:** (ಬಿಹಾರ್): ನಾನು ಒಂದು ಪ್ರಶ್ನೆಯನ್ನು ಕೇಳಲು ಇಚ್ಛಿಸುತ್ತೇನೆ. ಸಂವಿಧಾನದಲ್ಲಿ ಒಬ್ಬ ಸಚಿವನು ಸಂಸತ್ ಸದಸ್ಯನಾಗದೆ ಆರು ತಿಂಗಳವರೆಗೆ ಸಚಿವನಾಗಿರಬಹುದೆಂದು ಸ್ಪಷ್ಟವಿದೆ. ಅದು ಸಂವಿಧಾನದಲ್ಲೇ ನಮೂದಿಸಲ್ಪಟ್ಟಿದೆ. ಅಲ್ಲಿ ರಾಜ್ಯ ಸಚಿವರ ಅಥವಾ ಉಪಸಚಿವರ ಅಥವಾ ಸಂಸದೀಯ ಕಾರ್ಯದರ್ಶಿ ಅಥವಾ ಅಧೀನ ಕಾರ್ಯದರ್ಶಿಯ ಉಲ್ಲೇಖವಿಲ್ಲ. ಮಾನ್ಯ ಕಾನೂನು ಸಚಿವರು ಈಗ ತಾನೆ ವಿಧೇಯಕವನ್ನು ಅವರು ಓದಿದಂತೆ ಒಬ್ಬ ರಾಜ್ಯ ಸಚಿವ, ಒಬ್ಬ ಉಪ ಸಚಿವ, ಸಂಸದೀಯ ಕಾರ್ಯದರ್ಶಿ ಅಥವಾ ಸಂಸದೀಯ ಅಧೀನಕಾರ್ಯದರ್ಶಿ, ಸಂಸತ್ ಸದಸ್ಯನಾಗದೆ ಆರು ತಿಂಗಳವರೆಗೆ ಹುದ್ದೆಯನ್ನು ಹೊಂದಬಹುದೆಂದು ತಿಳಿಸಿದರು ನಾನು ಈ ವಿಧೇಯಕವನ್ನು ಮತ್ತೆ ಓದಿದ್ದೇನೆ. ಮತ್ತು ಮಾನ್ಯ ಸಚಿವರು ಈ ತೀರ್ಮಾನಕ್ಕೆ ಹೇಗೆ ಬಂದರು ಎಂದು ನನಗೆ ಅರ್ಥವಾಗುವುದಿಲ್ಲ. ಅವರು ವಿವರಿಸಬಹುದೇ.

**ಸಭಾಪತಿಗಳು:** ಅದು ಖಂಡಿತವಾಗಿ ಈ ವಿಧೇಯಕಕ್ಕೆ ಸಂಬಂಧಪಟ್ಟದಲ್ಲ. ಮಾನ್ಯ ಸದಸ್ಯರು ವಿರಾಮದಲ್ಲಿ ಈ ವಿಚಾರವನ್ನು ಗಮನಿಸಬಹುದು.

**ಡಾ ದೇಶ್‌ಮುಖ್:** ಮಾನ್ಯರೇ ವಿಚಾರಕ್ಕೆ ಸಂಬಂಧಿಸಿದಂತೆ ಒಂದು ಅಂಶವನ್ನು ಸ್ಪಷ್ಟೀಕರಿಸಬಹುದು ಏನೆಂದರೆ ಉಪಸಚಿವರನ್ನು ರಾಷ್ಟ್ರಪತಿಗಳು ನೇಮಿಸುತ್ತಾರೆಯೇ ಎಂಬುವುದು, ಇದು ನೇರ ವಿಷಯದ ವಿಚಾರ ಮತ್ತು ಪ್ರಾಯಃ ಮಾನ್ಯ ಸಚಿವರು ಉತ್ತರಿಸಲು ಸಮರ್ಥರಾಗಿರಬಹುದು.

**ಉಪಸಭಾಪತಿ:** ಈ ಸಂಬಂಧ ಅದು ಹೇಗೆ ಅಗತ್ಯ?

**ಡಾ ಅಂಬೇಡ್ಕರ್:** ಖಂಡಿತವಾಗಿಯೂ ಅವರು ರಾಷ್ಟ್ರಪತಿಗಳಿಂದಲೇ ನೇಮಕಗೊಳ್ಳುತ್ತಾರೆ: ಬೇರೆ ಯಾರು ನೇಮಕ ಮಾಡಬಹುದು?

**ಉಪಸಭಾಪತಿ:** ವಿಷಯವೆಂದರೆ:

> **"**ಸಂವಿಧಾನದ ೧೦೨ನೇ ವಿಧಿಯನ್ವಯ ಕೆಲವು ಲಾಭದಾಯಕ ಹುದ್ದೆಗಳಿಗೆ ಸಂಬಂಧಿಸಿದಂತೆ ಅವಕಾಶ ಮಾಡಿಕೊಡುವ ವಿಧೇಯಕವನ್ನು ಗಣನೆಗೆ ತೆಗೆದುಕೊಳ್ಳಬಹುದು**"**. . . .

ಮಸೂದೆಯನ್ನು ಅಂಗೀಕರಿಸಲಾಯಿತು.

***ಶ್ರೀ ತ್ಯಾಗಿ:** ನಾನು ಮಂಡಿಸುವುದೇನೆಂದರೆ: **"**ಒಂದನೇ ಖಂಡದ ಶೀರ್ಷಿಕೆಯಲ್ಲಿ **'**ಕಿರು ಶೀರ್ಷಿಕೆ **'**ಎಂಬ ಪದಗಳ ನಂತರ **'**ಮತ್ತು ಆರಂಭ**'** ಎಂಬ ಪದಗಳನ್ನು ಸೇರಿಸತಕ್ಕದ್ದು.**"**

ಅದು ತುಂಬ ಸರಳ ತಿದ್ದುಪಡಿ ಮತ್ತು ಡಾಕ್ಟರ್ ಅವರು ಅದನ್ನು ಅಂಗೀಕರಿಸುತ್ತಾರೆಂದು ಆಶಿಸುತ್ತಿದ್ದೇನೆ.

**ಡಾ ಅಂಬೇಡ್ಕರ್:** ಪ್ರಾಯಃ ನನ್ನ ಮಿತ್ರ ಶ್ರೀ ತ್ಯಾಗಿಯವರು ಆರಂಭವನ್ನು ಹೇಳುವ ಖಂಡವಿಲ್ಲವೆಂಬುವುದನ್ನು ಗಮನಿಸಿದ್ದಾರೆ. ಸಾಮಾನ್ಯವಾಗಿ ಒಂದು ವಿಧೇಯಕದಲ್ಲಿ ಆ ವಿಧೇಯಕವು ಇಂತಹ ದಿನಾಂಕದಿಂದ ಜಾರಿಗೆ ಬರುತ್ತದೆ ಎಂದು ಹೇಳುವ ಒಂದು ಖಂಡವಿರುತ್ತದೆ. ಈ ಖಂಡವು ಇಲ್ಲಿ ಮತ್ತು ಇದೊಂದು ಭರ್ತಿ ಮಾಡಬೇಕಾದ ಲೋಪವೆಂದು ಭಾವಿಸಿದ್ದಾರೆ. ಆದರೆ ಸಾಮಾನ್ಯ ಖಂಡಗಳ ಕಾಯಿದೆಯಂತೆ ಯಾವುದೇ ವಿಧೇಯಕವು ಅಂತಹ ಖಂಡವನ್ನು ಹೊಂದಿರದಿದ್ದರೆ ಅದು ರಾಷ್ಟ್ರಪತಿಗಳ ಸಹಿಯಾದ ತಕ್ಷಣ ಜಾರಿಗೆ ಬರುತ್ತದೆಂದು ತಿಳಿಯಬೇಕು ಎಂದು ನಾನು ಬಿನ್ನವಿಸುತ್ತೇನೆ.

**ಉಪಸಭಾಪತಿ:** ಅವರು ಈ ದಿನಾಂಕವನ್ನು ೨೬/೦೧/೧೯೫೦ಕ್ಕೆ ಹಿಂದೂಡಲು ಇಚ್ಚಿಸುತ್ತಾರೆ.

**ಡಾ ಅಂಬೇಡ್ಕರ್:** ಅಧ್ಯಾದೇಶವಿರುವವರೆಗೆ ಅದು ಅನಗತ್ಯ..

◆

* ಪೂರ್ವೋಕ್ತ, ಸಂ. ೨, ಭಾಗ II, ೧೦ ಮಾರ್ಚ್ ೧೯೫೦, ಪು. ೧೩೬೫.

# ೧೨

## ನಿಲುವಳಿ ಸೂಚನೆ

*__ಶ್ರೀ ಗೋಪಾಲಸ್ವಾಮಿ :__ ಶ್ರೀ ಚೆಂಬರ್‌ಲಿನ್‌ರವರು ಉತ್ತರಿಸಿದ್ದು ಚರ್ಚೆಯ ನಿಲುವಳಿ ಸೂಚನೆಯ ಕುರಿತೊ ಅಥವಾ ಪ್ರಶ್ನೆಯ ನಿಲುವಳಿ ಸೂಚನೆಯ ಕುರಿತೊ ಎಂದು ಸೂಚಿಸಬಹುದೇ?

**ಪಂಡಿತ್ ಕುಂಜ್ರು :** ನನಗನಿಸುವಂತೆ ಡಾ ಅಂಬೇಡ್ಕರ್ ಅವರು ಶ್ರೀ ಚೆಂಬರ್‌ಲಿನ್ ಅವರ ಉತ್ತರವನ್ನು ಆಧರಿಸಿದ ಸರ್. ಎನ್.ಎನ್.ಸರಕಾರ್‌ರವರ ಉತ್ತರವನ್ನು ಆಧರಿಸಿ ಇಂತಹ ವಿಚಾರದಲ್ಲಿ ಮಾಹಿತಿಯ ಬೇಡಿಕೆಗೂ ಚರ್ಚೆಯ ಬೇಡಿಕೆಗೂ ಅಂತಹ ವ್ಯತ್ಯಾಸವೇನು ಇಲ್ಲವೆಂಬ ನಿರ್ಣಯಕ್ಕೆ ಬಂದರು. ಸರ್. ಎನ್.ಎನ್.ಸರಕಾರ್‌ರವರು ತಮ್ಮ ಉತ್ತರದಲ್ಲಿ **'ಚರ್ಚೆ'** ಎಂಬ ಪದವನ್ನು ಬಳಸಿದ್ದರು. ಮತ್ತು ಅದೇ ಪದವನ್ನು ನನ್ನ ಮಾನ್ಯ ಮಿತ್ರ ಡಾ ಅಂಬೇಡ್ಕರ್ ಆಧರಿಸಿದ್ದಾರೆ.

**ಕಾನೂನು ಸಚಿವರು (ಡಾ ಅಂಬೇಡ್ಕರ್):** ನನ್ನ ಮಾನ್ಯ ಮಿತ್ರರು ಚೆಂಬರ್‌ಲಿನ್‌ರವರು ನೀಡಿದ ಉತ್ತರದ ಮೇಲೆ ಮತ್ತು ಆ ಪ್ರಶ್ನೆಯನ್ನು ಹಾಕಿದಾಗ ಇದ್ದ ಸ್ಥಿತಿ ಮತ್ತು ಸಂವಿಧಾನದ ೩೭೧ ನೇ ವಿಧಿಯಡಿ ಉದ್ಭವಿಸುವ ಸ್ಥಿತಿ ಇವುಗಳ ನಡುವೆ ಒಂದು ಸಾಮ್ಯತೆಯನ್ನು ಸ್ಥಾಪಿಸುವ ಅವರ ಪ್ರಯತ್ನದ ಕುರಿತು ಒಂದೇ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಈಗಿರುವ ನಮ್ಮ ಸಂವಿಧಾನದ ಮತ್ತು ಗವರ್‌ನಮೆಂಟ್ ಆಫ್ ಇಂಡಿಯಾ ಕಾಯ್ದೆ ೧೯೩೦ ರ ನಡುವೆ ಇರುವ ಅಗತ್ಯ ವ್ಯತ್ಯಾಸವನ್ನು ಅವರು ಮನಗಾಣಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಆ ವ್ಯತ್ಯಾಸವೆಂದರೆ ಸಂಸತ್ತು ೧೯೩೫ರ ಕಾಯ್ದೆಯನ್ನು ಜಾರಿ ಮಾಡಿತ್ತು. ಮತ್ತು ಕೆಲವು ಜವಬ್ದಾರಿಗಳನ್ನು ಭಾರತದ ಜನರಿಗೆ ವರ್ಗಾಯಿಸಿತು ಆದರೂ ಅವರು ಕಾಲಾನುಕಾಲಕ್ಕೆ ಭಾರತದ ಒಳ್ಳೆಯ ಆಡಳಿತದ ಜವಬ್ದಾರಿಯು ಸಂಸತ್ತಿನಲ್ಲಿ ಇರಬೇಕು ಮತ್ತು ಆದ್ದರಿಂದ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನು ಉಳಿಸಿಕೊಳ್ಳುವ ಮಟ್ಟಿಗೆ ಅದು ನಿಜಕ್ಕೂ ಒಳ್ಳೆಯ ಸರಕಾರದ ಪಾಲನೆಗೆ ಜವಬ್ದಾರಿಯೆಂದು ಹೇಳಲು ತಪ್ಪಿಲಿಲ್ಲ; ನಮ್ಮ ಸಂವಿಧಾನದಡಿ ಒಳ್ಳೆಯ ಸರರ್ಕಾರವನ್ನು ಪಾಲಿಸಲು ಬೇಕಾದ ಅಧಿಕಾರವನ್ನು ನಾವು ರಾಜ್ಯಗಳಿಗೆ ನೀಡಿದ್ದೇವೆ. ಮತ್ತು ಕೆಲವು ಸಂದರ್ಭಗಳಲ್ಲಿ ಮಾತ್ರ ನಾವು ನಿರ್ದೇಶನ ನೀಡುವ ಕೆಲವು ಅಧಿಕಾರಗಳನ್ನು ಕೇಂದ್ರಕ್ಕೆ ಉಳಿಸಿಕೊಂಡಿದ್ದೇವೆ. ಈ ವ್ಯತ್ಯಾಸವನ್ನು ಮನಗಾಣಬೇಕು.

**ಪಂಡಿತ್ ಕುಂಜ್ರು :** ನಾನು ನನ್ನ ಮಾನ್ಯ ಮಿತ್ರ ಡಾ ಅಂಬೇಡ್ಕರ್ ಅವರು ಹೇಳಿದ್ದನ್ನು ಸುತಾರಾಮ್ ಒಪ್ಪುವುದಿಲ್ಲ. ಅಂದರೆ ಅವರು ಎತ್ತಿದ ಸಾಮಾನ್ಯ ಅಂಶದ ಕುರಿತಲ್ಲ, ಆದರೆ ಅವರು ೩೭೧ ನೇ ವಿಧಿಯ ರಚನೆಯ ಕುರಿತು ಹೇಳಿದ್ದರ ಬಗ್ಗೆ. ನನ್ನ ಮಾನ್ಯ ಮಿತ್ರರು ಬೇರೊಂದು ದಿವಸ ಹೇಳಿದಂತೆ ಈ ೩೭೧ ನೇ ವಿಧಿಯು ಎ ವರ್ಗದ ರಾಜ್ಯಗಳಿಗೆ ಅನ್ವಯಿಸುವುದಿಲ್ಲ. ಅದು ಬಿ ವರ್ಗದ ರಾಜ್ಯಗಳಿಗೆ ಮಾತ್ರ ಅನ್ವಯಿಸುತ್ತದೆ, ಏಕೆ? ಈ ೩೭೧ ನೇ ವಿಧಿಯನ್ನು ಸಂವಿಧಾನದಲ್ಲಿ ಬಿ ವರ್ಗದ ರಾಜ್ಯಗಳನ್ನು ಮಾತ್ರ ಉಲ್ಲೇಖಿಸಿ ಏಕೆ ಸೇರಿಸಿದರು? ಅದು ಅಲ್ಲಿ ಒಳ್ಳೆಯ ಸರಕಾರ ಇರಲಿ ಎಂಬ ಕಾರಣಕ್ಕಾಗಿ ಸೇರಿಸಲಾಯಿತು.

---

* ಪೂರ್ವೋಕ್ತ, ಸಂ. ೨, ಭಾಗ, ೧೪ ಮಾರ್ಚ್ ೧೯೫೦, ಪು. ೧೫೧೨–೧೩.

ಟಿ. ೪೧೯೩–೭ಎ.

## ೧೩

# ಸಂಘಗಳ ನೊಂದಣಿ (ತಿದ್ದುಪಡಿ) ವಿಧೇಯಕ

*ಶ್ರೀ ಸಿದ್ವ (ಮಧ್ಯಪ್ರದೇಶ): ಈ ವಿಧೇಯಕವು ನಾನು ಕಳೆದ ಅಧಿವೇಶನದಲ್ಲಿ ಮಂಡಿಸಿದ್ದು ಆಗಿದೆ. ಮಾನ್ಯ ಕಾನೂನು ಸಚಿವರಾದ (ಡಾ. ಅಂಬೇಡ್ಕರ್) ಇತರ ರಾಜ್ಯಗಳ ಅಭಿಪ್ರಾಯಗಳನ್ನು ಪಡೆಯಲು ಅವರು ಇಚ್ಛಿಸುವುದಾಗಿ ನನಗೆ ಹೇಳಿದರು. ಆದ್ದರಿಂದ ನಾನು ಈ ವಿಧೇಯಕವನ್ನು ಔಪಚಾರಿಕವಾಗಿ ಮಂಡಿಸುವ ಮೊದಲು ಪ್ರಾಂತಗಳ ಅಭಿಪ್ರಾಯಗಳನ್ನು ಪಡೆಯಲಾಗಿದೆಯೇ ಎಂಬುದನ್ನು ತಿಳಿಯಲು ಇಚ್ಛಿಸುತ್ತೇನೆ.

**ಕಾನೂನು ಸಚಿವರು (ಡಾ ಅಂಬೇಡ್ಕರ್):** ಮಾನ್ಯರೇ ನನ್ನ ಮಿತ್ರ ಶ್ರೀ ಸಿದ್ವ ಅವರ ವಿಧೇಯಕವನ್ನು ಮಂಡಿಸಿದಾಗ ನೀಡಿದ ಭರವಸೆಯಂತೆ ಮತ್ತು ಈ ವಿಚಾರವು ಸಮವರ್ತಿ ಪಟ್ಟಿಯಲ್ಲಿ ಇದ್ದು ಭಾರತ ಸರಕಾರದ ಸ್ಥಾಯಿ ಆದೇಶಗಳ ಪ್ರಕಾರ ಶಾಸನ ರಚನೆಯ ಮೊದಲು ರಾಜ್ಯಗಳ ಜೊತೆಗೆ ಚರ್ಚಿಸುವುದು ಅಗತ್ಯವಾಗಿರುವುದರಿಂದ, ನನ್ನ ಸಚಿವಾಲಯವು ವಿವಿಧ ಪ್ರಾಂತಗಳಿಗೆ ನನ್ನ ಸ್ನೇಹಿತ ಶ್ರೀ ಸಿದ್ವರವರು ಪ್ರಸ್ತಾಪಿಸಿದ್ದ ಕಾನೂನು ಜಾರಿಗೆ ಸಂಬಂಧಿಸಿದಂತೆ ಅವರ ಅಭಿಪ್ರಾಯಗಳನ್ನು ತಿಳಿಸಲು ಒಂದು ಪತ್ರವನ್ನು ಬರೆದಿತ್ತು. ವಿವಿಧ ರಾಜ್ಯಗಳ ಅನ್ಯ ಕಾರ್ಯನಿಮಿತ್ತ ಅವರೆಲ್ಲರ ಉತ್ತರಗಳು ಇನ್ನೂ ಸಿಕ್ಕಿಲ್ಲವೆನ್ನುವುದಕ್ಕೆ ನಾನು ವಿಷಾಧಿಸುತ್ತೇನೆ. ಆದರೂ ನಾನು ಎ ವಿಭಾಗದ ಎರಡು ರಾಜ್ಯಗಳಿಂದ ಮತ್ತು ಸಿ ವರ್ಗದ ಕೆಲವು ರಾಜ್ಯಗಳಿಂದ ಉತ್ತರಗಳನ್ನು ಪಡೆದಿದ್ದೇನೆ.

ಎ ವಿಭಾಗದ ರಾಜ್ಯಗಳಿಗೆ ಸಂಬಂಧಿಸಿದಂತೆ ನಾನು ಮದ್ರಾಸು ಮತ್ತು ಪಂಜಾಬ್‌ಗಳಿಂದ ಮಾತ್ರ ಉತ್ತರಗಳನ್ನು ಪಡೆದಿದ್ದು ಅವೆರಡೂ ಕೇಂದ್ರವು ಅಂತಹ ಶಾಸನವನ್ನು ತರುವುದನ್ನು ವಿರೋಧಿಸುತ್ತವೆ ಎಂದು ತಿಳಿಸಲು ವಿಷಾದಿಸುತ್ತೇನೆ. ಮದ್ರಾಸ್ ಸರಕಾರವು ಈ ವಿಧೇಯಕದಲ್ಲಿ ಎತ್ತಲಾದ ಅಂಶದ ಕುರಿತು ಒಂದು ವಿವರವಾದ ಮತ್ತು ಸಮಗ್ರವಾದ ಶಾಸನವನ್ನು ತರುವುದರತ್ತ ಗಮನ ಹರಿಸಿದ್ದೇವೆ ಎಂದು ತಿಳಿಸಿತು. ಪಂಜಾಬ್ ಸರಕಾರವು ಶ್ರೀ ಸಿದ್ವರವರು ಪ್ರಸ್ತಾಪಿಸಿದ ಒಂದು ದಂಡನಾ ಉಪಬಂಧವನ್ನು ಹೊಂದುವ ಅಗತ್ಯವನ್ನು ಮನಗಂಡಿದ್ದೇವೆ ಎಂದು ಹೇಳಿತಾದರೂ ಅದೇ ಇತ್ತೀಚೆಗೆ ಅಂತಹ ದಂಡವನ್ನು ವಿಧಿಸುವ ಒಂದು ಕಾನೂನನ್ನು ಮಾಡಿದ್ದೇವೆ ಎಂದು ಮತ್ತು ಆ ನಿರ್ದಿಷ್ಟ ಪ್ರಾಂತಕ್ಕೆ ಅನ್ವಯಿಸಿ ಹೇಳುವುದಾದರೆ ಅಂತಹ ಶಾಸನವು ಅಗತ್ಯವಿರುವುದಿಲ್ಲವೆಂದು ಹೇಳಿದ್ದಾರೆ.

ಸಿ ವಿಭಾಗದ ರಾಜ್ಯಗಳ ಕುರಿತು ಹೇಳುವುದಾದರೆ ಸದ್ಯಕ್ಕೆ ಅವರಿಗೆ ಅಂತಹ ಸಮಸ್ಯೆಗಳೇನು ಇಲ್ಲ. ಅವರಲ್ಲಿ ಕೆಲವರು ತಮ್ಮ ವ್ಯಾಪ್ತಿಯಲ್ಲಿ ಅಂತಹ ಸಂಘಗಳು ಇಲ್ಲವೆಂದು ಹೇಳಿದ್ದಾರೆ. ಉಳಿದವರು ನನ್ನ ಸ್ನೇಹಿತರಾದ ಶ್ರೀ ಸಿದ್ವರವರು ತಿದ್ದುಪಡಿ ಮಾಡಲು ಬಯಸಿದ ಕಾಯ್ದೆಯನ್ನು ಇತ್ತೀಚೆಗಷ್ಟೇ

---

* P.D., ಸಂ. ೩, ಭಾಗ II, ೨೫ ಮಾರ್ಚ್ ೧೯೫೦, ಪು. ೨೧೧೫–೧೬.

೧೯೪೯ ಇಸವಿಯಲ್ಲಿ ಅವರ ಪ್ರದೇಶದಲ್ಲಿ ಜಾರಿಮಾಡಿದ್ದಾರೆ. ಅಲ್ಲಿ ಯಾವ ಸಂಘಗಳೂ ಇಲ್ಲ ಮತ್ತು ಈ ವಿಧೇಯಕದ ಅಂಶಗಳನ್ನು ಯಾವುದಾದರು ಸಂಘಗಳು ಉಲ್ಲಂಘಿಸಿವೆ ಎಂದು ಹೇಳಲು ಯಾವ ಅನುಭವವೂ ಇಲ್ಲ. ಇದು ನಮ್ಮಿಂದ ಕಳುಹಿಸಲಾದ ಪತ್ರಕ್ಕೆ ವಿವಿಧ ರಾಜ್ಯಗಳಿಂದ ಬಂದ ಉತ್ತರಗಳು ತೋರಿದ ಸ್ಥಿತಿ. ಇತರ ಕೆಲವು ಮುಖ್ಯ ರಾಜ್ಯಗಳು ಅಂದರೆ ಉದಾಹರಣೆಗೆ ಬಾಂಬೆ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶಗಳು ಉತ್ತರಿಸಿಲ್ಲ. ಈ ವಿಷಯವು ಸಮರ್ವತಿ ಪಟ್ಟಿಯಲ್ಲಿ ಇರುತ್ತವೆ. ಮತ್ತು ನಮಗೆ ಅವುಗಳಲ್ಲಿನ ಹೆಚ್ಚಿನವುಗಳ ಪ್ರತಿಕ್ರಿಯೆ ಬೇಕಾಗುತ್ತದೆ. ಅಥವಾ ಎ ವಿಭಾಗದ ರಾಜ್ಯಗಳ ಪೈಕಿ ಬಹುಪಾಲು ರಾಜ್ಯಗಳ ಪ್ರತಿಕ್ರಿಯೆಯು ಈ ಶಾಸನವನ್ನು ಜಾರಿಗೆ ತರುವ ಮೊದಲು ಬೇಕಾಗುತ್ತದೆ. ನಾನು ಕಳೆದ ಬಾರಿ ಹೇಳಿದಂತೆ ನನ್ನ ಸ್ನೇಹಿತ ಶ್ರೀ ಸಿಧ್ವರವರು ತಾಳಿದ ನಿಲುವನ್ನು ಅಂದರೆ ಈ ವಿಧೇಯಕದ ಅಂಶಗಳು ಕಾರ್ಯ ರೂಪಕ್ಕೆ ಬರಬೇಕಾದರೆ ಅಂತಹ ಯಾವುದಾದರೂ ದಂಡನಾ ಉಪಬಂಧದ ಅಗತ್ಯವಿದೆ ಎಂಬುವುದನ್ನು ನಿರಾಕರಿಸುವರು ಎಂದು ನನಗನಿಸುವುದಿಲ್ಲ. ನಾನು ಅವರೊಂದಿಗೆ ಸಹಮತದಲ್ಲಿದ್ದೇನೆ. ಆದರೆ ನನ್ನ ವಿಚಾರ ಎಂದರೆ ಇಂತಹ ಶಾಸನದಲ್ಲಿ ಬಹುಪಾಲು ರಾಜ್ಯಗಳನ್ನು ನಮ್ಮೊಂದಿಗೆ ಒಯ್ಯುವುದು ಸೂಕ್ತ. ಮತ್ತು ಅವರು ಇನ್ನೂ ಉತ್ತರಿಸದೆ ಇರುವುದರಿಂದ ಈ ವಿಧೇಯಕವನ್ನು ಹಿಂದಕ್ಕೆ ಪಡೆಯುವುದು ಮತ್ತು ಸಂದರ್ಭ ಮತ್ತು ಕಾಲವು ಅನುಮತಿಕೊಟ್ಟಾಗ ಕೇಂದ್ರವು ಪರಿಸ್ಥಿತಿಯನ್ನು ನಿಭಾಯಿಸುತ್ತದೆ ಎಂಬ ಭರವಸೆಯನ್ನು ಇಟ್ಟುಕೊಳ್ಳುವುದು ಉಚಿತವೆಂದು ನನಗೆ ವೈಯುಕ್ತಿಕವಾಗಿ ಅನಿಸುತ್ತದೆ.

**ಶ್ರೀ ಸಿಧ್ವ:** ಮಾನ್ಯರೇ ನನ್ನ ಮಾನ್ಯ ಮಿತ್ರ ಡಾ ಅಂಬೇಡ್ಕರ್ ಅವರು ವೈಯಕ್ತಿಕವಾಗಿ ಈ ವಿಧೇಯಕದ ಪರವಾಗಿದ್ದಾರೆ. ಮತ್ತು ಈ ವಿಚಾರವು ಸಮವರ್ತಿ ಪಟ್ಟಿಯಲ್ಲಿರುವುದರಿಂದ ಅವರು ಎಲ್ಲಾ ಮುಖ್ಯ ರಾಜ್ಯಗಳ ಅಭಿಪ್ರಾಯವನ್ನು ಪಡೆಯಲು ಇಚ್ಛಿಸಿದ್ದಾರೆ. ಎಂದು ಹೇಳಿದ್ದರಿಂದ ನಾನು ಈ ವಿಧೇಯಕವನ್ನು ಕಾಯ್ದಿರಿಸಲು ಬಯಸುತ್ತೇನೆ. ನಾನು ಯಾವುದೇ ಸಂದರ್ಭದಲ್ಲಿ ಈ ವಿಧೇಯಕವನ್ನು ಹಿಂದಕ್ಕೆ ಪಡೆಯಲಾರೆ. ಇದು ಒಂದು ಮುಖ್ಯವಾದ ವಿಧೇಯಕ. ವಿವಿಧ ಸಂಘಗಳಲ್ಲಿ ಏನಾಗುತ್ತಿದೆ ಎಂದು ನನಗೆ ಗೊತ್ತಿದೆ. ಆದ್ದರಿಂದ ನಾನು ಈ ವಿಧೇಯಕವನ್ನು ಉಳಿಸಿಕೊಳ್ಳಲು ನನಗೆ ಅನುಮತಿ ನೀಡಬೇಕಾಗಿ ನಾನು ಕೋರುತ್ತೇನೆ. ನಾನು ಅದನ್ನು ಈಗ ಮಂಡಿಸುವುದಿಲ್ಲ.

**ಸಭಾಪತಿಗಳು:** ಈ ಬಾರಿ ಯಾವುದೇ ಮಂಡನೆಯನ್ನು ಮಾಡದಿದ್ದರೆ ನಿಯಮಾನುಸಾರ ಅದು ತನ್ನಿಂದ ತಾನೆ ಉಳಿಯುತ್ತದೆ.

◆

# ೧೪

# ಸೇನಾ ಮಸೂದೆ

**ರಕ್ಷಣಾ ಸಚಿವರು** (ಸರ್‌ದಾರ್ ಬಲದೇವ್ ಸಿಂಗ್) : ನಾನು ಮಂಡಿಸುವುದೇನೆಂದರೆ:

> "ಪರಿಶೀಲನಾ ಸಮಿತಿಯು ವರದಿ ಮಾಡಿದಂತೆ ಸಕ್ರಮ ಸೇನೆಯ ಆಡಳಿತಕ್ಕೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವುದು ಮತ್ತು ಸ್ವೀಕರಿಸುವುದು."

*ಸಭಾಪತಿಗಳು: ಮಾನ್ಯ ಡಾ ಅಂಬೇಡ್ಕರ್.

**ಕಾನೂನು ಸಚಿವರು:** ನಾನು ಅವರಿಗೆ ಆದ್ಯತೆಯನ್ನು ನೀಡುತ್ತೇನೆ.

**ಡಾ ಅಂಬೇಡ್ಕರ್:** ನನ್ನ ಮಾನ್ಯ ಮಿತ್ರ ಪಂಡಿತ್ ಕುಂಜ್ರು ಅವರು ತಮ್ಮ ನಿಲುವಳಿಯ ಕುರಿತ ತಮ್ಮ ಭಾಷಣದಲ್ಲಿ ಎರಡು ಅಂಶಗಳನ್ನು ಪ್ರಸ್ತಾವಿಸಿದರು ಅವು ವಿಷಯದ ಸಂವಿಧಾನಾತ್ಮಕ ಅಂಶವನ್ನು ಪ್ರಸ್ತಾವಿಸುವುದರಿಂದ ಅವನ್ನು ನನ್ನ ಮಾನ್ಯ ಸಹೋದ್ಯೋಗಿಗಳು ವಿಚಾರಿಸಲೆಂದು ಬಿಟ್ಟುಬಿಡುವುದಕ್ಕೆ ಬದಲಾಗಿ ನಾನೇ ಅವನ್ನು ಪರಿಗಣಿಸುವುದು ಉಚಿತವೆಂದು ಭಾವಿಸಿದ್ದೆ.

ಮೊದಲ ಅಂಶವೆಂದರೆ ವಿಧೇಯಕದ ನಾಲ್ಕು ಮತ್ತು ಐದನೇ ಉಪಬಂಧಗಳು ಅನುಚಿತವಾಗಿವೆ. ಏಕೆಂದರೆ, ಅವು ಬಿ ವಿಭಾಗಗಳ ರಾಜ್ಯಗಳ ಸೇನಾ ಪಡೆಗಳ ಕುರಿತು ಪ್ರತ್ಯೇಕ ಉಲ್ಲೇಖವನ್ನು ಮಾಡಿವೆ. ನಾನು ಈ ಎರಡು ಕಲಂಗಳನ್ನು ಪ್ರತ್ಯೇಕವಾಗಿ ಪರಿಗಣಿಸುತ್ತೇನೆ.

ನಾಲ್ಕನೇ ಕಲಮಿನ ಕುರಿತು ಹೇಳುವುದಾದರೆ ಈ ಕಾಯ್ದೆಯ ಯೋಜನೆಯಡಿ ಸಕ್ರಮ ಸೇನೆ ಎಂದು ಕರೆಯಲ್ಪಡುವುದರ ಮತ್ತು ಸೇನೆಯ ಭಾಗವಾಗದ ಸೇನಾ ಪಡೆಗಳ ನಡುವೆ ಒಂದು ವ್ಯತ್ಯಾಸವನ್ನು ಮಾಡಬೇಕಾಗುತ್ತದೆ.

ನಿರೂಪಣೆಗಳಿಗೆ ಸಂಬಂಧಪಟ್ಟ ಮೂರನೇ ಕಲಮಿನ ೨೧ ನೇ ಕ್ರಮಾಂಕದಲ್ಲಿ ಸಕ್ರಮ ಸೇನೆಯನ್ನು ನಿರೂಪಿಸಲಾಗಿದೆ ಎಂದು ನನ್ನ ಸ್ನೇಹಿತರು ಕಾಣುವರು. ಉದಾಹರಣೆಗೆ ಅಸ್ಸಾಂ ರೈಫಲ್ಸ್, ಬಿಲ್‌ಕೋರ್ ಮತ್ತು ಇತರ ಅನೇಕ ಪಡೆಗಳನ್ನು ಸೇನೆಯ ಭಾಗಗಳಲ್ಲಿರುವ ಪಡೆಯಾಗಿ ಉದಾಹರಿಸಬಹುದು. ಈ ಕಾಯ್ದೆಯು ಮುಖ್ಯವಾಗಿ ಪಡೆಗೆ ಅನ್ವಯವಾಗುವುದರಿಂದ ಸಕ್ರಮ ಪಡೆಯ ಭಾಗವಾಗದ ಪಡೆಗಳಿಗೆ ಈ ಕಾಯ್ದೆಯ ಅಂಶಗಳನ್ನು ವಿಸ್ತರಿಸಲು ಮತ್ತು ಅನ್ವಯಿಸಲು ಇರುವ ಸಂದರ್ಭಕ್ಕೆ ಅವಕಾಶ ನೀಡುವ ಅಗತ್ಯವಿದೆ. ಅದು ೪ನೇ ಕಲಮಿನ ಉದ್ದೇಶ. ನಾಲ್ಕನೇ ಕಲಂ ಹೇಳುವುದೇನೆಂದರೆ. .

**ಪಂಡಿತ್ ಕುಂಜ್ರು :** ಈ ಪಡೆಗಳು ಬಿ ವಿಭಾಗದ ರಾಜ್ಯಗಳ ಪಡೆಗಳೇ. . . .

**ಡಾ ಅಂಬೇಡ್ಕರ್:** ಬಿ ವಿಭಾಗದ ರಾಜ್ಯಗಳ ಕುರಿತು ನಾನು ಪ್ರತ್ಯೇಕವಾಗಿ ಹೇಳುತ್ತೇನೆ. ಈ

---

* P.D., ಸಂ. ೪, ಭಾಗ II, ೬ ಏಪ್ರಿಲ್ ೧೯೫೦, ಪು. ೨೬೦೧–೫.

ಕಾಯ್ದೆಯ ಅಂಶಗಳನ್ನು ಬಿ ವಿಭಾಗವು ಉಲ್ಲೇಖಿಸುವ ರಾಜ್ಯಗಳಿಗೆ ಹೊರತಾದ ಪಡೆಗಳಿಗೆ ಕಲಂ ನಾಲ್ಕರ ಮುಖಾಂತರ ಅನ್ವಯಿಸುವ ದೃಷ್ಟಿಯಿಂದ ಆ ನಿರ್ದುಷ್ಟ ಕಲಂಮಿನಲ್ಲಿ ಒಳಗೊಂಡ ಅಂಶಗಳ ಕುರಿತು ಯಾವುದೇ ಆಕ್ಷೇಪವಿರುವುದನ್ನು ನಾನು ಊಹಿಸುವುದಿಲ್ಲ.

ಬಿ ವಿಭಾಗದ ರಾಜ್ಯಗಳಿಗೆ ಸಂಬಂಧಿಸಿದಂತೆ ಇರುವ ೫ನೇ ಕಲಂ ಮತ್ತು ಬಿ ವಿಭಾಗದ ರಾಜ್ಯಗಳ ಕುರಿತು ನಮೂದಿಸಿರುವ ೪ನೇ ಕಲಂಮಿನ ಕೊನೆಯ ಭಾಗ, ಇವು ನನ್ನ ಮಾನ್ಯ ಮಿತ್ರರ ವಾದದಂತೆ ಬೇಕಾದ ರೀತಿಯಲ್ಲಿ ಇಲ್ಲ. ಆ ಪ್ರಶ್ನೆಗೆ ನನ್ನ ಉತ್ತರ ಹೀಗಿದೆ. ನನ್ನ ಮಾನ್ಯ ಮಿತ್ರರಿಗೆ ನೆನಪಿರುವಂತೆ ಸಂವಿಧಾನ ಸಭೆಯ ಮೊದಲ ಭಾಗದಲ್ಲಿ ಸಮ್ಮತಿಸಿದ ರಾಜ್ಯಗಳೆಂದು ಆಗ ಕರೆಯಲ್ಪಡುತ್ತಿದ್ದ ಬಿ ವಿಭಾಗದ ರಾಜ್ಯವಾಗಲು ತಮ್ಮದೇ ಆದ ಸ್ವತಂತ್ರ ಪಡೆಗಳನ್ನು ರಚಿಸುವ ಮತ್ತು ಪಾಲಿಸುವ ಹಕ್ಕನ್ನು ಪಡೆದಿದ್ದವು. ಅವರಲ್ಲಿ ಸಂವಿಧಾನದ ಮೂಲ ಕರಡಿನ ಪ್ರತಿ ಇದ್ದರೆ ಪುಟ ೧೯೮ರ ನಾಲ್ಕನೇ ಕ್ರಮಾಂಕವನ್ನು ಕಾಣಬಹುದು. ಮತ್ತು ಆ ಅಂಶದ ಕುರಿತು ನಾನು ಆಕ್ಷೇಪವನ್ನೆತ್ತಿದ್ದೇನೆಂಬುದನ್ನು ಅವರು ಗಮನಿಸಬಹುದು. ಒಕ್ಕೂಟದ ಯಾವುದೇ ಅಂಗವು ಪ್ರತ್ಯೇಕ ಪಡೆಗಳನ್ನು ರಚಿಸುವ ಮತ್ತು ಪಾಲಿಸುವ ಹಕ್ಕು ಪಡೆಯುವುದನ್ನು ನಾನು ಇಚ್ಛಿಸಿರಲಿಲ್ಲ. ನನ್ನ ವಾದವು ಸ್ವೀಕೃತವಾಯಿತು. ಮತ್ತು ಆ ಕ್ರಮಾಂಕದ ಆ ಭಾಗವನ್ನು ತೆಗೆದುಹಾಕಲಾಯಿತು. ಎಂದು ನನಗೆ ಸಂತೋಷವಾಯಿತು. ಅದರಿಂದಾಗಿ ಸಂವಿಧಾನದಡಿಯಲ್ಲಿ ಪಡೆಗಳನ್ನು ರಚಿಸುವ ಮತ್ತು ಪಾಲಿಸುವ ಹಕ್ಕು ಪೂರ್ಣವಾಗಿ ಒಕ್ಕೂಟದ್ದಾಯಿತು ಈ ಸ್ಥಿತಿಯನ್ನು ಒಪ್ಪಲಾಯಿತಾದರೂ ಅದು ತೊಡಕನ್ನು ಪೂರ್ಣವಾಗಿ ನಿವಾರಿಸಲಿಲ್ಲ.

ನನ್ನ ಮಾನ್ಯ ಮಿತ್ರರಿಗೆ ಗೊತ್ತಿರುವಂತೆ ಭಾರತ ಸರಕಾರ ಮತ್ತು ಬಿ ವಿಭಾಗದಲ್ಲಿ ನಮೂದಿಸಿದ ಭಾರತದ ವಿವಿಧ ರಾಜ್ಯಗಳ ನಡುವೆ ಕೆಲವು ಒಪ್ಪಂದಗಳಾದವು. ಒಪ್ಪಂದದ ಅಂಶಗಳಲ್ಲಿ ಒಂದೆಂದರೆ ಅವುಗಳು ರಚಿಸಿದ ಮತ್ತು ಪಾಲಿಸಿದ ಕೆಲವು ಪಡೆಗಳನ್ನು ಅವರೇ ಮುಂದುವರಿಸಿಕೊಂಡು ಹೋಗಬೇಕು ಮತ್ತು ತಡೆಯಬೇಕಾದದ್ದು ಹೊಸ ಪಡೆಯ ರಚನೆಯನ್ನು, ಆಗ ಇದ್ದ ಅಂಗಗಳನ್ನು ಮುಂದುವರಿಸಲಾಯಿತು. ಹಾಗಾದರೆ ಅಸ್ತಿತ್ವದಲ್ಲಿದ್ದ ಅಂಗಗಳು ಏನಾಗುತ್ತವೆ ಎಂಬ ಪ್ರಶ್ನೆ ಎದ್ದಿತ್ತು: ಅವು ಸ್ವತಂತ್ರವಾಗಿರಬೇಕೇ ಅಥವಾ ಭಾರತ ಸರಕಾರದ ಸೇನಾ ಅಧಿಕಾರಿಗಳ ಆಡಳಿತಕ್ಕೆ ಒಳಪಡಬೇಕೇ? ಅವರು ಉಲ್ಲೇಖಿಸಿದ ೨೫೯ನೇ ವಿಧಿಯಲ್ಲಿ ಒಂದು ರಾಜಿಯನ್ನು ಮಾಡಲಾಯಿತು. ಅದರಂತೆ ಆಗಲೇ ರಚಿಸಲ್ಪಟ್ಟ ಪಡೆಗಳು ಮುಂದುವರಿಯುವದಾದರೂ ಅವು ಸಂಸತ್ತು ಮಾಡಬಹುದಾದ ಯಾವುದೇ ಕಾನೂನಿಗೆ ಒಳಪಡಬೇಕಾಗಿತ್ತು. ಈಗಾಗಲೇ ಬಿ ವಿಭಾಗದ ರಾಜ್ಯಗಳು ರಚಿಸಿದ ಪಡೆಗಳು ಎಲ್ಲಾ ಉದ್ದೇಶಗಳಿಗಾಗಿ ಭಾರತದ ಸಕ್ರಮ ಸೇನೆಯ ಭಾಗಗಳೆಂದು ಘೋಷಿಸುವ ಕಾನೂನನ್ನು ಮಾಡಲು ಸಂಸತ್ತಿಗೆ ಸಾಧ್ಯವಾಯಿತು. ಅದು ಈ ಪ್ರಕ್ರಿಯೆಯ ಉದ್ದೇಶವಾಗಿದೆ. ಆದರೆ, ನಾನು ಹೇಳಿದಂತೆ ಈ ವಿಚಾರಗಳು ಒಪ್ಪಂದಕ್ಕೆ ಒಳಪಟ್ಟಿದ್ದವು. ಬಿ ವಿಭಾಗದ ರಾಜ್ಯಗಳನ್ನು ಪ್ರತಿನಿಧಿಸುವ ರಾಜ ಪ್ರಮುಖರು ೨೫೯ನೇ ವಿಧಿಯ ಅಂಶಗಳನ್ನು ಅಂದರೆ ಅಂತಹ ಕಾನೂನನ್ನು ಮಾಡುವ ಅಧಿಕಾರವನ್ನು ಸಂಸತ್ತಿಗೆ ನೀಡುವುದನ್ನು ಸ್ವೀಕರಿಸಲು ತಯಾರಿದ್ದರೂ ಅವರು ಈ ಪಡೆಗಳ ಮುಖ್ಯ ದಂಡನಾಯಕರಾಗಿ ಮುಂದುವರಿಯಬೇಕು ಮತ್ತು ಅವರ ಸ್ಥಾನದ ರಕ್ಷಣೆಯಾಗಬೇಕೆಂದು ಬಯಸಿದರು. ನಾನು ಹೇಳಿದಂತೆ ಆಗಲೇ ಮಾಡಿಕೊಂಡ ಮತ್ತು ಯಾವುದರ ಆಧಾರದಿಂದಲೇ ಸೇರ್ಪಡೆಯನ್ನು ಮಾಡಲಾಯಿತೋ ಅಂತಹ ಒಪ್ಪಂದಗಳಿಂದ ಉದ್ಭವವಾಗಿರುವುದರಿಂದ ಅದು ಗೌರವಿಸಲ್ಪಡಬೇಕಾಗಿದೆ. ಈ ರಾಜ್ಯಗಳು ಸ್ವತಂತ್ರವಾಗಿಯೇ ಸಂಸತ್ತು ಪೂರ್ಣ ಅಧಿಕಾರ ವ್ಯಾಪ್ತಿಯನ್ನು ಪ್ರಯೋಗಿಸಲು ಒಪ್ಪುತ್ತವೆ ಮತ್ತು ಆ ಮೂಲಕ ಭಾರತದ ಸಕ್ರಮ

ಸೇನೆ ಮತ್ತು ಅವರು ರಚಿಸಿದ ಪಡೆಗಳ ನಡುವೆ ಒಂದು ಸಾದೃಶ್ಯವನ್ನು ಉಂಟುಮಾಡುವ ಸಮಯ ಬರುತ್ತದೆ ಎಂದು ನಾನು ಆಶಿಸುತ್ತೇನೆ. ಮತ್ತು ನಂಬುತ್ತೇನೆ. ಆದ್ದರಿಂದ ನಾವು ಇಂದು ಮಾಡಬೇಕಾದುದೇನೆಂದರೆ ಒಂದು ರಾಜಿಯನ್ನು ಮಾಡಿಕೊಳ್ಳುವುದು. ನಾಲ್ಕು ಮತ್ತು ಐದನೇ ಕಲಂಗಳು ನಾವು ಮಾಡಬಹುದಾದ ಅತ್ಯುತ್ತಮ ರಾಜಿಯನ್ನು ಪ್ರತಿನಿಧಿಸುತ್ತವೆ.

**ಪಂಡಿತ್ ಕುಂಜ್ರು :** ನನ್ನ ಮಾನ್ಯ ಮಿತ್ರರನ್ನು ನಾನು ಹಸ್ತಕ್ಷೇಪ ಮಾಡಬಹುದಾದರೆ, ಅವರು ಬಹು ವಿಶಾಲ ಪ್ರಶ್ನೆಯನ್ನು ಎತ್ತಿದ್ದಾರೆ. ನನ್ನ ಟೀಕೆಯು ಒಂದು ಅಂಶಕ್ಕೆ ಮಾತ್ರ ಸೀಮಿತವಾಗಿದೆ. ಸಂವಿಧಾನದ ೨೫೦ನೇ ವಿಧಿಯ ಮೂಲಕ ಸಂಸತ್ತಿನಲ್ಲಿ ನಿಹಿತವಾದ ಅಧಿಕಾರವನ್ನು ಬಿ ವಿಭಾಗದ ರಾಜ್ಯಗಳ ಪಡೆಗಳಿಗೆ ಸೇನಾ ಕಾಯ್ದೆಯ ವಿಭಾಗದ ರಾಜ್ಯಗಳ ಪಡೆಗಳಿಗೆ ಸೇನಾ ಕಾಯ್ದೆಯನ್ನು ವಿಸ್ತರಿಸಲು ಏಕೆ ಬಳಸಿಕೊಳ್ಳಲಿಲ್ಲ?

**ಡಾ ಅಂಬೇಡ್ಕರ್:** ನಾನು ಈಗ ಹೇಳುತ್ತಿರುವುದು ಅದನ್ನೇ.

**ಪಂಡಿತ್ ಕುಂಜ್ರು :** ನಾನು ಈವರೆಗೆ ವಿವರಿಸಿದ ಸಮಸ್ಯೆಯ ವಿಶಾಲ ಅಂಶಗಳ ಬಗ್ಗೆ ನನ್ನ ಮಿತ್ರರು ಪರಿಗಣಿಸಿಲ್ಲ.

**ಡಾ ಅಂಬೇಡ್ಕರ್:** ಆದರೆ ಈ ವಿಶಾಲ ಅಂಶವೇ ನಿಜವಾದ ಅಂಶ ಒಡಂಬಡಿಕೆ ಇರಲಿ ಇಲ್ಲದಿರಲಿ, ಒಪ್ಪಂದವಿರಲಿ ಇಲ್ಲದಿರಲಿ, ಸಾಮರಸ್ಯವಿರಲಿ ಇಲ್ಲದಿರಲಿ ಸಂಸತ್ತಿಗೆ ಹಕ್ಕಿದ್ದರೆ ಸಂಸತ್ತು ಅದನ್ನು ಪ್ರಯೋಗಿಸಬೇಕು ಎಂದು ನನ್ನ ಮಾನ್ಯ ಮಿತ್ರರ ವಾದ. ಅಲ್ಲದೇ ಇದ್ದರೆ ಇಡೀ ಪ್ರಶ್ನೆಯು ಸಂವಿಧಾನ ರಚಿಸುವ ಮೊದಲೇ ಮಾಡಿಕೊಳ್ಳಲಾದ ಒಡಂಬಡಿಕೆಗೆ ಒಳಪಡುತ್ತದೆ. ಆಗ ಅದು ಪ್ರತ್ಯೇಕ ಸಂಗತಿಯಾಗುತ್ತದೆ.

**ಪಂಡಿತ್ ಕುಂಜ್ರು :** ಜನವರಿ ೨೪ ರಂದು ರಾಜ್ಯಗಳ ಒಕ್ಕೂಟಗಳು ಮತ್ತು ಮೈಸೂರು ರಾಜ್ಯವು ಸಂವಿಧಾನವನ್ನು ಸ್ವೀಕರಿಸುವ ಮತ್ತು ಸಂವಿಧಾನದ ಅಂಶಗಳಿಗೆ ವಿರೋಧವಾಗಿರುವ ಒಪ್ಪಂದಗಳನ್ನು ಅನೂರ್ಜಿತವೆಂದು ಘೋಷಿಸುವ ಒಂದು ಆದೇಶವನ್ನು ನೀಡಿವೆ ಎಂಬುದು ನನ್ನ ಸ್ನೇಹಿತರಿಗೆ ಖಂಡಿತವಾಗಿ ಗೊತ್ತಿದೆ.

**ಡಾ ಅಂಬೇಡ್ಕರ್:** ಹೌದು. ಅದು ಹಾಗಿರಬಹುದು. ನಾನು ಹೇಳಿದಂತೆ ನಾವು ನಿಜಕ್ಕೂ ಒಂದು ಹೊಂದಾಣಿಕೆಯನ್ನು ಅನುಸರಿಸುತ್ತೇವೆ. ನಾನು ಅದರ ಕಡೆಗೆ ಹೋಗುವ ಮೊದಲು ಅವರು ಎರಡನೇ ಉಪಬಂಧದ ಒಂದು ಮುಖ್ಯ ಅಂಶವನ್ನು ಅಂದರೆ ಎರಡನೇ ಉಪಬಂಧದ (ಬಿ) ವಿಭಾಗವನ್ನು ಗಮನಿಸಿಲ್ಲವೆಂಬ ಅಂಶದ ಕುರಿತು ಅವರ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ಅದು ಹೀಗೆ ಹೇಳುತ್ತದೆ.

> "ಬಿ ವಿಭಾಗದ ರಾಜ್ಯಗಳ ಭೂ ಸೇನೆಗಳಿಗೆ ಸೇರಿದ ವ್ಯಕ್ತಿಗಳು ಯಾವುದೇ ಸೇನೆಯ ಅಂಗಗಳಿಗೆ ಸೇವೆಗಾಗಿ ಸೇರಲ್ಪಟ್ಟಾಗ ಅಥವಾ ಆ ಪಡೆಗಳು ಅಥವಾ ಅವುಗಳ ಯಾವುದೆ ಅಂಗವು ಸಕ್ರಮ ಸೇನೆಯ ಅಂಗದೊಂದಿಗೆ ಕಾರ್ಯ ನಿರ್ವಹಿಸುವಾಗ ಅಥವಾ ಐದನೇ ಕಲಮಿನಡಿ ಅಧಿಸೂಚನೆಯಂತೆ ಕೇಂದ್ರ ಸರಕಾರದ ವಿವೇಚನೆಗೆ ವಹಿಸಿದಾಗ;"

ಆದ್ದರಿಂದ ಬಿ ವಿಭಾಗದ ರಾಜ್ಯಗಳ ಪಡೆಗಳನ್ನು ಈ ಕಾನೂನು ಪ್ರತ್ಯೇಕ ಬಿಗಿಬಂಧದಲ್ಲಿ ಇಟ್ಟಿದೆ ಎಂದು ಅರ್ಥವಲ್ಲ. ಐದನೇ ಉಪಬಂಧದಡಿ ಕೇಂದ್ರ ಸರಕಾರವು ಒಂದು ಅಧಿಸೂಚನೆಯನ್ನು ನೀಡಿದಾಗ, ಅಧಿಸೂಚನೆಯನ್ನು ನೀಡಲ್ಪಟ್ಟ ತಕ್ಷಣ ಈ ಕಾಯ್ದೆಯು ಬಿ ರಾಜ್ಯಗಳಲ್ಲಿನ ಸೇನೆಯ ಆ ಅಂಗಗಳಿಗೆ ತನ್ನಷ್ಟಕ್ಕೇ ಅನ್ವಯವಾಗುತ್ತದೆ. ಐದನೇ ಉಪಬಂಧದಡಿ ಬಿ ವಿಭಾಗದ ಪಡೆಗಳು ಯಾವುದೇ ನಿರ್ದಿಷ್ಟ

ಅಂಗವನ್ನು ಈ ಕಾಯ್ದೆಯ ಉದ್ದೇಶಕ್ಕಾಗಿ ಸೇನೆಗೆ ಸೇರಿದೆಂದು ತಿಳಿಯಲು ಕೇಂದ್ರ ಸರಕಾರಕ್ಕೆ ಐದನೇ ಉಪಬಂಧದಡಿ ಅಧಿಕಾರ ನೀಡಲಾಗಿದೆ ಎಂಬುವುದನ್ನು ಅವರು ಗಮನಿಸಬಹುದು. ಕೆಲವು ಪಡೆಗಳ ಸೇರಿಸುವಿಕೆಗೆ ಅನ್ವಯಿಸಿ ಹೇಳುವುದಾದರೆ ಇದು ಹಸ್ತಕ್ಷೇಪದ ನೇರ ಅಧಿಕಾರವಾಗಿದೆ.

ನಾವೇಕೆ ನೇರ ಕ್ರಮ ಕೈಗೊಳ್ಳಲಿಲ್ಲವೆಂದು ನನ್ನ ಮಿತ್ರರು ಕೇಳಬಹುದು. ಉತ್ತರವು ನನಗನಿಸುವಂತೆ ಸಹಜವಾಗಿದೆ. ಬಿ ವಿಭಾಗದ ರಾಜ್ಯಗಳಲ್ಲಿನ ಪಡೆಗಳನ್ನು ಅವರ ಸ್ವಂತ ವೈಯುಕ್ತಿಕ ಕಾನೂನಿನಡಿ ರಚಿಸಲಾಗಿದೆ. ಮತ್ತು ಕೇಂದ್ರ ಸರಕಾರದ ಯಾವುದೇ ಕಾಯ್ದೆಯಡಿ ರಚಿಸಲಾಗಿಲ್ಲ ಎಂಬುವುದನ್ನು ಅವರು ಮನವರಿಕೆ ಮಾಡಿಕೊಳ್ಳವರು. ಬಿ ವಿಭಾಗದ ರಾಜ್ಯಗಳಲ್ಲಿ ದಾಖಲಾತಿಯಾಗುವ ನಿಯಮವು ಭಾರತದ ಸಕ್ರಮ ಸೇನೆಯ ಉದ್ಯೋಗಿಗಳ ದಾಖಲಾತಿಯ ಕುರಿತ ನಿಯಮಗಳು ಮತ್ತು ಷರತ್ತುಗಳಿಗಿಂತ ಭಿನ್ನವಾಗಿದೆ. ಒಂದು ಮುಖ್ಯ ವ್ಯತ್ಯಾಸವೆಂದರೆ ಭಾರತದ ಸಕ್ರಮ ಸೇನೆಯಲ್ಲಿ ದಾಖಲಾದ ವ್ಯಕ್ತಿಯು ಎಲ್ಲಾದರೂ ಸೇವೆಮಾಡಲು ಬದ್ಧನಾಗಿದ್ದನು. ಆದರೆ ಬಿ ವಿಭಾಗದ ರಾಜ್ಯಗಳ ಪಡೆಗಳಲ್ಲಿ ದಾಖಲಾದ ವ್ಯಕ್ತಿಗೆ ಅಂತಹ ಷರತ್ತು ಇರಲಿಲ್ಲ ಅವರ ಸೇವಾ ನಿಯಮಗಳು ಅವರ ರಾಜ್ಯಗಳಿಗೆ ಸೀಮಿತವಾಗಿತ್ತು. ಮತ್ತು ಅವರ ಸೇವೆಯ ಅತ್ಯಧಿಕ ವ್ಯಾಪ್ತಿಯೆಂದರೆ ಭಾರತ ಎಂದು ಎಲ್ಲರಿಗೂ ತಿಳಿದಿದೆ ಎಂದು ನಾನು ಭಾವಿಸುತ್ತೇನೆ. ಯುದ್ಧದ ಸಮಯದಲ್ಲಿ ಒಂದು ವಿಶೇಷ ಅಂಶವನ್ನು ಸೇರಿಸಿ ಈ ಪಡೆಗಳು ಭಾರತ ಸರಕಾರದ ನಿಯಂತ್ರಣಕ್ಕೆ ಬಂದಾಗ ಅವರನ್ನು ಎಲ್ಲಿ ಬೇಕಾದರೂ ಬಳಸಬಹುದು ಎಂದು ರೂಪಿಸಲಾಯಿತು. ಭಾರತ ಸರಕಾರವೇ ಅವರ ಖರ್ಚನ್ನು ವಹಿಸಿ ಅವರನ್ನು ಭಾರತದ ಹೊರಗಿನ ಯುದ್ಧ ಭೂಮಿಗೆ ಕಳುಹಿಸುತಿತ್ತು. ಸ್ಥಿತಿ ಹೀಗಿರುವುದರಿಂದ ಭಿನ್ನ ಸಂದರ್ಭಗಳಲ್ಲಿ ದಾಖಲಾದ ವ್ಯಕ್ತಿಯನ್ನು ಒಂದು ಸಕ್ರಮ ಸೇನೆಯ ಭಾಗವಾಗಬೇಕೆಂದು ಒತ್ತಾಯ ಮಾಡುವುದು ಕಷ್ಟ, ಕ್ರೂರ ಮತ್ತು ಕಾನೂನಿಗೆ ವಿರುದ್ಧವೆಂದು ಕಾಣಿಸುತ್ತದೆ. ಪರಿಣಾಮವಾಗಿ ಒಂದು ಸುವರ್ಣ ಮಾಧ್ಯಮವೆಂದು ಕರೆಯಬಹುದಾದ ಸ್ಥಿತಿಯ ಒಪ್ಪಂದದ ಒಡಂಬಡಿಕೆಯನ್ನು ಈ ರಾಜ್ಯಗಳ ಪಡೆಗಳೊಂದಿಗೆ ನಾವು ಮಾಡಿಕೊಂಡಿದ್ದೇವೆ. ಮತ್ತು ಯಾವುದೇ ದೃಷ್ಟಿಕೋನದಲ್ಲಿ ನಾಲ್ಕು ಮತ್ತು ಐದನೇ ಉಪಬಂಧಗಳಲ್ಲಿರುವ ಅಂಶಗಳ ಕುರಿತು ಆಕ್ಷೇಪವನ್ನು ಎತ್ತಬಹುದೆಂದು ನನಗನಿಸುವುದಿಲ್ಲ. ನಾನೀಗ ಅವರು ಎತ್ತಿದ ಇನ್ನೊಂದು ಅಂಶ ಎಂದರೆ ದಿವಾಣಿ ಅಪರಾಧಗಳೆಂದು ಕರೆಯಲ್ಪಡುವ ಸಂಗತಿಗಳನ್ನು ಸೇನಾ ನ್ಯಾಯಾಲಯಗಳ ಮೂಲಕ ಅಧಿಕಾರ ವಹಿಸುವ ೭೦ನೇ ಉಪಬಂಧದ ಬಗ್ಗೆ ಹೇಳುತ್ತೇನೆ.

ನಾಗರಿಕರ ವಿರುದ್ಧದ ಅಪರಾಧಗಳು ದಿವಾಣಿ ನ್ಯಾಯಾಲಯಗಳಲ್ಲಿ ವಿಚಾರಣೆಯಾಗಬೇಕೇ ಹೊರತು ಸೇನಾ ನ್ಯಾಯಾಲಯಗಳಲ್ಲಿ ಅಲ್ಲ ಎಂಬುವುದು ಸರಿಯಾದರೂ ಈ ವಿಧೇಯಕದಲ್ಲಿ ಕಾಣಿಸಬಹುದಾದ ಅಂಶಗಳನ್ನು ಬೆಂಬಲಿಸುವ ಮತ್ತು ಈ ವಾದದ ಇನ್ನೊಂದು ಮುಖವನ್ನು ಸಮರ್ಥಿಸಬಲ್ಲ ಅಂಶಗಳಿವೆ. ಇಂತಹ ಅಂಶಗಳನ್ನು ತೀರ್ಮಾನಿಸುವಾಗ ಎದುರಿಸಬೇಕಾದ ಕೆಲವು ತೊಡಕುಗಳನ್ನು ನಾನು ಮೊದಲಿಗೆ ಹೇಳುತ್ತೇನೆ. ಒಂದು ವೇಳೆ ಒಬ್ಬ ಸೈನಿಕನು ತನ್ನ ಸೈನ್ಯವು, ಬೀಡುಬಿಟ್ಟ ಸೇನಾ ಶಿಬಿರದ ಒಳಗೆ ಯಾವುದು ವೇದಿಕೆಯಾಗಬೇಕು, ಸೇನಾ ನ್ಯಾಯಾಲಯವೇ ಅಥವಾ ಸಾಮಾನ್ಯ ದಂಡಾಧಿಕಾರಿಯ ನ್ಯಾಯಾಲಯವೇ? ನಾನು ಇನ್ನೊಂದು ತೊಡಕನ್ನು ಗುರುತಿಸುತ್ತೇನೆ. ಅದು ಹೀಗಿದೆ. ಒಬ್ಬ ನಾಗರೀಕನ ಮೇಲೆ ಒಂದು ಅಪರಾಧವಾಗಿದೆ ಆದರೆ ಆ ಅಪರಾಧವು ಎಂತಹದ್ದು ಎಂದರೆ ಅದು ಸಾಮಾನ್ಯ ಕ್ರಿಮಿನಲ್ ಕಾನೂನನ್ನು ಉಲ್ಲಂಘಿಸುತ್ತದೆ. ಮತ್ತು ಅದೇ ಕಾಲಕ್ಕೆ ಅದು ಪ್ರತಿಯೊಬ್ಬ ಸೈನಿಕನೂ ಅನುಸರಿಸಲೇ ಬೇಕಾದ ಶಿಸ್ತಿನ ನಿಯಮಗಳನ್ನು ಉಲ್ಲಂಘಿಸುತ್ತದೆ. ಎಲ್ಲಿ ಒಬ್ಬ ಸೈನಿಕನು

ಮಾಡಿದಂತಹ ಕ್ರಿಯೆಯು ಸಾಮಾನ್ಯ ದಂಡ ಕಾಯ್ದೆ ಮತ್ತು ಸೇನಾ ನಿಯಮಗಳ ಶಿಸ್ತಿನ ಉಲ್ಲಂಘನೆಯಾದಾಗ ವಿಚಾರಣೆಗೆ ಸರಿಯಾದ ವೇದಿಕೆ ಯಾವುದು ಆಗಬೇಕು? ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಒಂದು ವೇಳೆ ಸೇನೆಯು ಒಂದು ಜಾಗದಿಂದ ಇನ್ನೊಂದಕ್ಕೆ ಚಲಿಸುತ್ತದೆ ಎಂದುಕೊಳ್ಳಿ: ಆ ಸೇನೆಗೆ ಸೇರಿದ ಪ್ರತಿಯೊಬ್ಬ ಸೈನಿಕನು ಅಲ್ಲಿಗೆ ಹೋಗಬೇಕು. ಒಂದು ವೇಳೆ ನಾವು ಸೈನಿಕನು ಮಾಡಿದ ಪ್ರತಿಯೊಂದು ಆರೋಪವನ್ನು ನಾಗರಿಕ ನ್ಯಾಯಾಯಾಲಯವು ವಿಚಾರಿಸಬೇಕು ಎಂಬ ಕಾನೂನನ್ನು ತಂದದ್ದೇ ಆದರೆ, ಒಬ್ಬ ಸೈನಿಕನು ಸೇನೆಯೊಂದಿಗೆ ಇನ್ನೊಂದು ಠಾಣಕ್ಕೆ ಹೋಗಲು ಇಷ್ಟವಿಲ್ಲದವನು ಬೇಕೆಂದೇ ಆ ಜಾಗದಲ್ಲಿ ಉಳಿಯಲು ಒಂದು ಅಪರಾಧವನ್ನೆಸಗಬಹುದು. ಮತ್ತು ಅಲ್ಲೇ ಆತನ ವಿಚಾರಣೆಯಾಗಬೇಕಾಗಬಹುದು ಅದನ್ನು ಒಪ್ಪಬೇಕೆ? ನನ್ನ ಸ್ನೇಹಿತರು ಸ್ವತಃ ಈ ವಿಚಾರದ ಬಗ್ಗೆ ಯೋಚಿಸಿದರೆ ಒಬ್ಬ ನಾಗರಿಕನ ವಿರುದ್ಧ ಒಬ್ಬ ಸೈನಿಕನು ಮಾಡಿದ ಅಪರಾಧವನ್ನು ಒಂದು ನಿಯಮವಾಗಿ ನಾಗರಿಕ ನ್ಯಾಯಾಲಯವು ವಿಚಾರಿಸಬೇಕೆಂಬ ಹಠಮಾರಿ ನಿರ್ಣಯಕ್ಕೆ ಬಂದರೆ ಅವರು ಎದುರಿಸಬೇಕಾದ ಅನೇಕ ತೊಡಕುಗಳನ್ನು ಮನಗಾಣಬಹುದು.

**ಪಂಡಿತ್ ಕುಂಜ್ರು:** ಅದು ನನ್ನ ವಾದವಲ್ಲ.

**ಡಾ ಅಂಬೇಡ್ಕರ್:** ಆದ್ದರಿಂದಲೇ ಈ ಪ್ರಶ್ನೆಯ ಬಗ್ಗೆ ಯಾವುದೇ ಹಠಮಾರಿ ಅಭಿಪ್ರಾಯವನ್ನು ಇಟ್ಟುಕೊಳ್ಳುವ ಪ್ರಶ್ನೆಯೇ ಇಲ್ಲ. ಯಾರು ಕೂಡ ಅಂತಹ ಅಪರಾಧವನ್ನು ಸೇನಾ ನ್ಯಾಯಾಲಯವೇ ವಿಚಾರಿಸಬೇಕೆಂದು ಹೇಳಲಾರರು ಮತ್ತು ಯಾರೂ ಕೂಡ ಅಂತಹ ಅಪರಾಧವನ್ನು ನಾಗರಿಕ ನ್ಯಾಯಾಲಯವು ವಿಚಾರಿಸಲಾರದು ಎಂದು ಹೇಳಲಾರರು. ಪರಿಣಾಮವಾಗಿ ಈ ವಿಧೇಯಕವು ಪ್ರಕರಣದ ಅಗತ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ರಿಯಾಯಿತಿಗಳನ್ನು ಮಾಡುತ್ತವೆ.

ಸೈನಿಕನು ಎಸಗಿದ ಅಪರಾಧಗಳನ್ನು ಸೇನಾ ನ್ಯಾಯಾಲಯದಲ್ಲಿ ವಿಚಾರಿಸಬೇಕಾದ ಪ್ರಸಂಗಗಳು ಬಹು ಸೀಮಿತ ಸಂಖ್ಯೆಯಲ್ಲಿವೆ. ಅವು ಕೊಲೆ, ಅಪರಾಧಿಕ ನರಹತ್ಯೆ ಇತ್ಯಾದಿಗಳು.

**ಪಂಡಿತ್ ಕುಂಜ್ರು :** ಸೇನಾ ನ್ಯಾಯಾಲಯವೇ, ಅಥವಾ ಕ್ರಿಮಿನಲ್ ನ್ಯಾಯಾಲಯವೇ?

**ಡಾ ಅಂಬೇಡ್ಕರ್:** ಕ್ರಿಮಿನಲ್ ನ್ಯಾಯಾಲಯದಿಂದ ವಿಚಾರಿಸಬಹುದಾದುದನ್ನು ಬಿಟ್ಟು ಉಳಿದವನ್ನು ಸೇನಾ ನ್ಯಾಯಾಲಯದಿಂದ ವಿಚಾರಿಸಬಹುದು.

ಎಲ್ಲಾ ಅಪರಾಧಗಳನ್ನು ವಿಚಾರಣೆಗೊಳಪಡಿಸಲು ಸಿವಿಲ್ ನ್ಯಾಯಾಲಯಗಳಿಗೆ ಅವಕಾಶ ನೀಡುವುದರ ತೊಡಕುಗಳನ್ನು ಮತ್ತು ೧೨೫ ಮತ್ತು ೧೨೭ನೇ ಖಂಡದಲ್ಲಿರುವ ಅಂಶಗಳನ್ನು ಪರಿಗಣಿಸಿದರೆ, ನ್ಯಾಯ ವೈಫಲ್ಯವಾಗಬಲ್ಲ ಅನೇಕ ಪ್ರಕರಣಗಳಿವೆಯೆಂದು ನನಗನ್ನಿಸುವುದಿಲ್ಲ. ಅಂತಹ ಸಂಭಾವ್ಯಗಳನ್ನು ತಡೆಯಲು ಬೇಕಾದ ಜಾಗ್ರತೆಗಳನ್ನು ತೆಗೆದುಕೊಂಡಿದ್ದೇನೆಂದು ನನಗನ್ನಿಸುತ್ತದೆ. ಆದ್ದರಿಂದ ಈ ಅಂಶಗಳನ್ನು ಮತ್ತು ಕಲಂ ೭೦ನ್ನು ಪರಿಗಣಿಸಿದ ಮೇಲೆ ವಿಧೇಯಕದ ಈ ಅಂಶದ ಬಗ್ಗೆ ಆಕ್ಷೇಪವಾಗಿರಲಾರದು.

ಈ ವಿಧೇಯಕದ ೭೦ನೇ ಕಲಂ ಬ್ರಿಟಿಷ್ ಸೇನಾ ಕಾಯಿದೆಯ ೪೧ನೇ ಕಲಮಿನ ನೇರ ಪುನರುಕ್ತಿಯಾಗಿದೆಯೆಂದು ನಾನು ಇಲ್ಲಿ ಹೇಳಬಹುದು ಮತ್ತು ಯಾರೋ ಒಬ್ಬರು ಈ ಕುರಿತು ಉಲ್ಲೇಖಿಸಿದರೆಂದು ಭಾವಿಸಿದ್ದೇನೆ. ಅಲ್ಲೂ ಅವರು ಇಂತಹ ಅಂಶಗಳನ್ನು ಹೊಂದಿದ್ದಾರೆ. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಈ ಅಂಶಗಳು ಹೆಚ್ಚು ವಿವರವಾಗಿವೆ. ಏನೇ ಆದರೂ ನಾವು ಈ ವಿಚಾರವನ್ನು ಅಪರಾಧಿಯ ದೃಷ್ಟಿಕೋನದಿಂದ ನೋಡಬೇಕೇ ಹೊರತು ಫಿರ್ಯಾದುದಾರನ ದೃಷ್ಟಿಕೋನದಿಂದಲ್ಲ. ಈ ಎಲ್ಲ ಪ್ರಕರಣಗಳಲ್ಲಿ ಅಪರಾಧದ ಆರೋಪಿಯಾಗಿರುವ ಸೈನಿಕನು, ಸೈನಿಕನಲ್ಲದೆ ಹೋಗಿದ್ದರೆ

ಸಿವಿಲ್ ಇದಕ್ಕೆ ಸಂಬಂಧಿಸಿ ಈ ವಿಧೇಯಕದಲ್ಲಿ ಇತರ ಅಂಶಗಳೂ ಇದ್ದರೆ ಅವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅವೆಂದರೆ ೧೨೫, ೧೨೬ ಮತ್ತು ೧೨೭ನೇ ಖಂಡಗಳು. ವಿಚಾರಣೆ ಮಾಡಲು ಸೇನಾ ನ್ಯಾಯಾಲಯಗಳಿಗಿರುವ ವಿವೇಚನೆ ಅಥವಾ ಅಧಿಕಾರ ವ್ಯಾಪ್ತಿಯು ಸ್ವತಂತ್ರವಲ್ಲ. ಬದಲಿಗೆ ಅದು ನಾನು ಈಗ ಉಲ್ಲೇಖಿಸಿದ ಅಂಶಗಳಿಗೆ ಅಧೀನವಾಗಿದೆ. ಅಂದರೆ, ಸೇನಾ ನ್ಯಾಯಾಲಯವು ೧೨೫ನೇ ಖಂಡದ ಸಂಬಂಧಿತ ಅಪರಾಧದ ಕುರಿತು ತಾನು ವಿಚಾರಣೆ ಮಾಡಬೇಕೇ ಎಂಬ ಬಗ್ಗೆ ನಿಶ್ಚಯಿಸಬಹುದು. ಸಿವಿಲ್ ನ್ಯಾಯಾಲಯಗಳು ಸಂಬಂಧಿತ ಅಪರಾಧಗಳನ್ನು ವಿಚಾರಿಸಬಹುದೆಂದು ಯೋಚಿಸಿದರೆ ಅವು ೧೨೬ನೇ ಖಂಡದ ಪ್ರಕಾರ ಭಾರತ ಸರಕಾರದ ಅನುಮತಿಯನ್ನು ಪಡೆಯಬೇಕು ಮತ್ತು ಅನುಮತಿಯು ಸಿಕ್ಕಿದರೆ ಅವು ಅಪರಾಧದ ವಿಚಾರಣೆಯನ್ನು ಮುಂದುವರಿಸಬಹುದು. ಅಸಾಮಾನ್ಯ ಸಂಗತಿಯೆಂಬಂತಹ ಇನ್ನೂ ಒಂದು ಅಂಶವಿದೆ, ಅಂದರೆ, 'ಒಂದಾದ ಮೇಲೊಂದರಂತೆ ವಿಚಾರಣೆ'. ಅಪರಾಧವು ತೀವ್ರ ಅಥವಾ ಗಂಭೀರವಾಗಿದೆಯೆಂದು ಕಂಡು ಬಂದರೆ, ಮತ್ತು ಅಪರಾಧವನ್ನು ವಿಚಾರಿಸಲು ಅನುಮತಿಗೊಳಪಟ್ಟು, ಆ ಮನುಷ್ಯನನ್ನು ಎರಡು ಬಾರಿ ವಿಚಾರಣೆಗೊಳಪಡಿಸಬಹುದು.ನ್ಯಾಯಾಲಯದಲ್ಲಿ ವಿಚಾರಣೆಗೊಳಪಡುತ್ತಾನೆಯೇ, ಮತ್ತು ಸೇನಾ ನ್ಯಾಯಾಲಯದಲ್ಲಿ ನ್ಯಾಯದಿಂದ ವಂಚಿತನಾಗುತ್ತಾನೆಯೆ ಎಂಬುದೇ ಪ್ರಶ್ನೆ.

ಸೇನಾ ನ್ಯಾಯಾಲಯದಲ್ಲಿ ಕುಳಿತಿರುವ ಮಂದಿ ತರಬೇತಿಹೊಂದಿದ ನ್ಯಾಯವಾದಿಗಳಲ್ಲವೆಂದು ನನ್ನ ಮಿತ್ರರು ಹೇಳಿದರು. ನನಗೆ ಆ ಬಗ್ಗೆ ಗೊತ್ತಿಲ್ಲವಾದರೂ ನನ್ನ ಅನುಭವದಿಂದ ನಾನು ಹೇಳುವುದಾದರೆ ನಾನು ಕೆಲವು ನ್ಯಾಯಾಧೀಶ — ಅಡ್ವೊಕೇಟ್ ಜನರಲ್‌ರನ್ನು ಸಂಧಿಸಿದ್ದೇನೆ ಮತ್ತು ಅವರು ಹೆಚ್ಚಿಲ್ಲದಿದ್ದರೂ ನಾವು ನ್ಯಾಯಾಲಯಗಳಲ್ಲಿ ಸಂಧಿಸುವ ನ್ಯಾಯವಾದಿಗಳಷ್ಟೇ ಉತ್ತಮವಾಗಿದ್ದಾರೆ. ಏನೇ ಆದರೂ, ಒಬ್ಬ ಸೈನಿಕನು ಸೇನಾ ಅಪರಾಧವನ್ನು ಮಾಡಿದಾಗ ಪಡೆಯುವುದಕ್ಕಿಂತ ಹೆಚ್ಚು ನ್ಯಾಯವನ್ನು ಸಿವಿಲ್ ಅಪರಾಧಗಳನ್ನು ಮಾಡಿದಾಗ ನಿರೀಕ್ಷಿಸಲಾಗದು. ಸಿವಿಲ್ ನ್ಯಾಯಾಲಯಗಳಲ್ಲಿ ಪಡೆಯುವಷ್ಟೇ ನ್ಯಾಯವನ್ನು ಆತನು ಪಡೆದರೆ ಆತನಿಗೆ ದೂರುವುದಕ್ಕೆ ಯಾವ ಕಾರಣವೂ ಇರಲಾರದು. ನನ್ನ ಮಿತ್ರರಿಗೆ ಈ ಬಗ್ಗೆ ಗೊಂದಲವಾಗಬೇಕಾಗಿಲ್ಲ. ಅವರ ಟೀಕೆಯೂ ಸಮರ್ಥನೀಯವಲ್ಲವೆಂದು ನಾನು ಭಾವಿಸುತ್ತೇನೆ.

**ಶ್ರೀ ಎಸ್.ಎನ್.ಸಿನ್ಹಾ:** ಕ್ರಿಮಿನಲ್ ನ್ಯಾಯಾಲಗಳು ಮತ್ತು ಸೇನಾ ನ್ಯಾಯಾಲಯಗಳು ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಹೊಂದಿದ ಪ್ರಕರಣಗಳು ಯಾವುವು? ೧೨೫ನೇ ಖಂಡದಡಿ ಆಯ್ಕೆಯನ್ನು ಬಳಸಬೇಕು.

**ಡಾ ಅಂಬೇಡ್ಕರ್:** ನಾನು ಹೇಳಲಾರೆ. ಅದಕ್ಕೆ ಸ್ವಲ್ಪ ವಿವರವಾದ ಸಂಕಲನ ಬೇಕಾಗುತ್ತದೆ. ಆದರೂ ಸೇನಾ ಹಾಗೂ ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಅಪರಾಧಗಳಿವೆ. ಶ್ರೀ ಎಸ್.ಎನ್.ಸಿನ್ಹಾ: ನನ್ನ ವಾದವೆಂದರೆ ಈ ವಿಧೇಯಕದ ೭೦ನೇ ಖಂಡವು ಮಾತ್ರವೇ ನಿರ್ದಿಷ್ಟ ಪ್ರಕರಣಗಳಲ್ಲಿ ಸಾಮಾನ್ಯ ಕ್ರಿಮಿನಲ್ ನ್ಯಾಯಾಲಯಗಳಿಗೆ ಅಧಿಕಾರ ವ್ಯಾಪ್ತಿಯನ್ನು ನೀಡುತ್ತದೆ.

**ಪಂಡಿತ್ ಕುಂಜ್ರು:** ಈ ಸಂಶಯವು ಅನೇಕ ಮಾನ್ಯ ಸದಸ್ಯರ ಮನಸ್ಸುಗಳಲ್ಲಿದೆ. ನನ್ನ ಮಾನ್ಯ ಮಿತ್ರ ಡಾ ಅಂಬೇಡ್ಕರ್ ಅವರು ೧೨೫ನೇ ಖಂಡಕ್ಕೆ ಗಮನ ಹರಿಸಿದರೆ ಅಲ್ಲಿನ ಮೊದಲ ಪದಗಳು ಹೀಗಿವೆಯೆಂದು ಅವರಿಗೆ ಗೊತ್ತಾಗಬಹುದು: "ಅಧಿಕಾರ ವ್ಯಾಪ್ತಿಯುಳ್ಳ ಕ್ರಿಮಿನಲ್ ನ್ಯಾಯಾಲಯವು ಅಭಿಪ್ರಾಯಪಟ್ಟರೆ. . . ." ಪ್ರಶ್ನೆಯೆಂದರೆ "ಅಧಿಕಾರವ್ಯಾಪ್ತಿಯುಳ್ಳ" ಎಂಬ ಪದಗಳ ಅರ್ಥವೇನೆಂಬುದು ಹಾಗೆಂದರೆ ಈ ನೆಲದ ಸಾಮಾನ್ಯ ಕ್ರಿಮಿನಲ್ ಕಾನೂನಿನಡಿ ಇರುವ ಅಧಿಕಾರವ್ಯಾಪ್ತಿಯೇ ಅಥವಾ ಈ

ವಿಧೇಯಕದಡಿ ಇರುವ ಅಧಿಕಾರ ವ್ಯಾಪ್ತಿಯೇ? ಅನೇಕ ಮಾನ್ಯ ಸದಸ್ಯರನ್ನು ಕಾಡುವ ಪ್ರಶ್ನೆಯಿದು. ಈ ವಿಧೇಯಕದಡಿ ಅಧಿಕಾರ ವ್ಯಾಪ್ತಿಯಿದೆಯೆಂದು ಅವು ಅರ್ಥೈಸುವುದಾದರೆ. . . .

**ಡಾ ಅಂಬೇಡ್ಕರ್:** ಸಾಮಾನ್ಯ ಕಾನೂನಿನಡಿ.

**ಪಂಡಿತ್ ಕುಂಜ್ರು:** ಹಾಗಾದರೆ ಸಹಜವಾಗಿಯೇ ೯೯ನೇ ಖಂಡದಡಿ ಸಾಮಾನ್ಯ ಕ್ರಿಮಿನಲ್ ನ್ಯಾಯಾಲಯಗಳಿವೆ. ಕಲಂ ೭೦ರಡಿ ಬರುವುದರ ಹೊರತಾಗಿ ಯಾವುದೇ ಕ್ರಿಮಿನಲ್ ಪ್ರಕರಣಗಳನ್ನು ವ್ಯವಹರಿಸುವ ಅಧಿಕಾರವಿರುವುದಿಲ್ಲ.

**ಡಾ ಅಂಬೇಡ್ಕರ್:** "ಸಿವಿಲ್ ಅಪರಾಧ" ವನ್ನು ಈ ವಿಧೇಯಕ ಪುಟ ೨ರಲ್ಲಿ ಸೇನಾ ನ್ಯಾಯಾಲಯಕ್ಕಿಂತ ಭಿನ್ನವಾದ "ಕ್ರಿಮಿನಲ್ ನ್ಯಾಯಾಲಯವು ವಿಚಾರಣೆಗೊಳಪಡಿಸಬಲ್ಲ ಒಂದು ಅಪರಾಧ" ವೆಂದು ನಿರೂಪಿಸಿದೆ.

◆

..

# ೧೫

# ಸಿ ಭಾಗದ ರಾಜ್ಯಗಳ (ಕಾಯಿದೆ) ಮಸೂದೆ

*[*]**ಕಾನೂನು ಸಚಿವರು (ಡಾ.ಅಂಬೇಡ್ಕರ್) :** ನಾನು ಕೆಲವು ಸಿ ಭಾಗದ ರಾಜ್ಯಗಳಿಗೆ ಕಾಯಿದೆಗಳನ್ನು ವಿಸ್ತರಿಸುವ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.*

**ಸಭಾಪತಿ :** ವಿಷಯವೆಂದರೆ :

> "ಕೆಲವು ಸಿ ಭಾಗದ ರಾಜ್ಯಗಳಿಗೆ ಕಾಯಿದೆಗಳನ್ನು ವಿಸ್ತರಿಸುವ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡತಕ್ಕದ್ದು."

ಮಸೂದೆಯನ್ನು ಅಂಗೀಕರಿಸಲಾಯಿತು.

**ಡಾ.ಅಂಬೇಡ್ಕರ್ :** ನಾನು ವಿಧೇಯಕವನ್ನು ಮಂಡಿಸುತ್ತೇನೆ.

[**]**ಕಾನೂನು ಸಚಿವರು (ಡಾ.ಅಂಬೇಡ್ಕರ್) :** ನಾನು ಮಂಡಿಸಲು ಕೋರುವುದೇನೆಂದರೆ:

> "ಕೆಲವು ಸಿ ಭಾಗದ ರಾಜ್ಯಗಳಿಗೆ ಕಾಯಿದೆಗಳನ್ನು ವಿಸ್ತರಿಸುವ ವಿಧೇಯಕವನ್ನು ಪರಿಗಣಿಸಲು ಸ್ವೀಕರಿಸತಕ್ಕದ್ದು."

ಏಕೆ ಈ ವಿಧೇಯಕವನ್ನು ಕೆಲವು ಸಿ ಭಾಗದ ರಾಜ್ಯಗಳಿಗೆ ಸೀಮಿತಗೊಳಿಸಲಾಗಿದೆಯೆಂಬ ಬಗ್ಗೆ ನಾನು ಈ ಸದನಕ್ಕೆ ಸ್ವಲ್ಪ ವಿವರಣೆಯನ್ನು ನೀಡಬೇಕಾದ್ದು ಅಗತ್ಯವಾಗಬಹುದು. ಸ್ಥಿತಿ ಹೇಗಿದೆಯೆಂದರೆ, ಸಂವಿಧಾನದ 1ನೇ ಅನುಸೂಚಿಯಲ್ಲಿ ನಮೂದಿಸಿದ ಒಟ್ಟಾರೆ ೧೦ ಸಿ ಭಾಗದ ರಾಜ್ಯಗಳು ಇವೆ, ಆ ಹತ್ತು ರಾಜ್ಯಗಳು ಮೂರು ಗುಂಪುಗಳಲ್ಲಿವೆ. ಇಲ್ಲಿ, ಸಂವಿಧಾನಕ್ಕಿಂತ ಬಹಳ ಹಿಂದೆಯೇ ಚಾಲ್ತಿಗೆ ಬಂದ, ಮುಖ್ಯ ಆಯುಕ್ತರ ಪ್ರಾಂತಗಳಾದ ಮತ್ತು ಈಗ ಸಿ ಭಾಗದ ರಾಜ್ಯಗಳೆಂದು ನಾಮಕರಣವಾಗಿರುವ ಕೂರ್ಗ್, ಅಜ್ಮೀರ್ ಮತ್ತು ಡೆಲ್ಲಿ. ಪರಿಣಾಮವಾಗಿ, ಈ ಮೂರು ರಾಜ್ಯಗಳಿಗೆ ಸಂಬಂಧಿಸಿದಂತೆ, ಕೇಂದ್ರದ ಕಾಯಿದೆಗಳನ್ನು ವಿಸ್ತರಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ ಏಕೆಂದರೆ ಅವನ್ನು ಅವು ರಚನೆಯಾಗುವಾಗಲೇ ಅನ್ವಯಿಸಲಾಗಿತ್ತು.

ಇದಲ್ಲದೆ ಎರಡನೆಯ ಗುಂಪಿನ ಸಿ ಭಾಗದ ರಾಜ್ಯಗಳಿವೆ, ಅವೆಂದರೆ, ಬಿಲಾಸ್‌ಪುರ, ಹಿಮಾಚಲ ಪ್ರದೇಶ, ಭೋಪಾಲ, ಮತ್ತು ಕಚ್. ಇವುಗಳ ಕುರಿತು, ಕಳೆದ ವರ್ಷವಷ್ಟೇ ಈ ಶಾಸನಸಭೆಯು ಕೇಂದ್ರ ಕಾಯಿದೆಗಳನ್ನು ಅವುಗಳಿಗೆ ವಿಸ್ತರಿಸುವ ಕಾನೂನನ್ನು ತಂದಿತು. ಈ ವಿಧೇಯಕವು ಭಾಗ ಸಿಯ ಮೂರು ರಾಜ್ಯಗಳಿಗೆ ಸೀಮಿತವಾಗಿದೆ, ಅಂದರೆ, ವಿಂಧ್ಯ ಪ್ರದೇಶ, ತ್ರಿಪುರ ಮತ್ತು ಮಣಿಪುರ. ಅವನ್ನು ಪ್ರತ್ಯೇಕವಾಗಿ ಪರಿಗಣಿಸಬೇಕಾಗಿದೆ. ಏಕೆಂದರೆ, ಅವುಗಳು ೧೯೪೯ರ ಕಾಯಿದೆಯು ಜಾರಿಗೆ ಬಂದ

---

* P.D., ಸಂ. ೪, ಭಾಗ II, ೫ ಏಪ್ರಿಲ್ ೧೯೫೦, ಪು. ೨೫೫೧.

** ಅದೇ, ೧೧ ಏಪ್ರಿಲ್ ೧೯೫೦, ಪು. ೨೭೭೭–೭೪.

ನಂತರ ಅಸ್ತಿತ್ವಕ್ಕೆ ಬಂದಿವೆ. ಪರಿಣಾಮವಾಗಿ, ಈ ಕ್ರಮವು ಈ ಮೂರು ಭಾಗ ಸಿ ರಾಜ್ಯಗಳಿಗೆ ಸೀಮಿತಗೊಂಡಿದೆ. ೧೯೫೧ನೇ ಕಾಯಿದೆಯನ್ವಯ ಭಾಗ ಸಿ ರಾಜ್ಯಗಳಿಗೆ ವಿಸ್ತರಿಸಿದ ಎಲ್ಲಾ ಕಾನೂನುಗಳನ್ನು ವಿಂಧ್ಯಪ್ರದೇಶ ಮತ್ತು ತ್ರಿಪುರಗಳಿಗೆ ವಿಸ್ತರಿಸಲಾಗಿತ್ತಾದರೂ ಮಣಿಪುರ ರಾಜ್ಯಕ್ಕೆ ಸಂಬಂಧಿಸಿದಂತೆ ಕೆಲವು ಅಪವಾದಗಳನ್ನು ಮಾಡಲಾಗಿತ್ತು.

ಈ ಹಿಂದೆ ಅನ್ವಯಿಸಿದ ಮತ್ತು ಈ ಕ್ರಮದ ಮೂಲಕ ವಿಂಧ್ಯಪ್ರದೇಶ ಅಥವಾ ತ್ರಿಪುರಕ್ಕೆ ಅನ್ವಯಿಸಿದ ಎಲ್ಲಾ ಕಾನೂನುಗಳು ***ಅದೇ ವೇಗದಲ್ಲಿ*** ಮಣಿಪುರಕ್ಕೆ ಅನ್ವಯಿಸಿಲ್ಲ. ಮಣಿಪುರವು ಬುಡಕಟ್ಟು ಜನರೆಂದು ಕರೆಸಿಕೊಳ್ಳುವ ಮತ್ತು 'ಕಂದಾಯನಿರ್ಧಾರಿತ ಪ್ರದೇಶ'ವೆಂದು ಕರೆಸಿಕೊಳ್ಳುವ ಪ್ರದೇಶದಲ್ಲಿರುವ ಜನರಿಗಿಂತ ಭಿನ್ನವಾದ ಸಂಸ್ಕೃತಿ ಮತ್ತು ವರ್ತನೆ ಮತ್ತು ಜೀವನವಿಧಾನವನ್ನು ಹೊಂದಿದ ಜನರಿಂದ ನೆಲೆಗೊಂಡಿದೆಯೆಂದು ಹೇಳಲಾಗಿದೆ. ಪರಿಣಾಮವಾಗಿ ಎಲ್ಲಾ ಕಾಯಿದೆಗಳನ್ನು ಮಣಿಪುರಕ್ಕೆ ಅನ್ವಯಿಸಿದರೆ ಭಾರೀ ಪ್ರಕ್ಷುಬ್ಧತೆಯು ಸೃಷ್ಟಿಯಾಗಬಹುದು. ಆದ್ದರಿಂದ ಮಣಿಪುರಕ್ಕೆ ಯಾವ ಕಾಯಿದೆಗಳು ಅನ್ವಯವಾಗುವುದಿಲ್ಲ ಎಂಬುದನ್ನೂ ಕುರಿತು ಒಂದು ಅನುಸೂಚಿಯನ್ನು ಸೇರಿಸಲಾಗಿದೆ. ಅದೇ ರೀತಿ ಭಾರತೀಯ ದಂಡ ಸಂಹಿತೆಯನ್ನು ಮಣಿಪುರಕ್ಕೆ ಅನ್ವಯಿಸಿದರೂ ಅದರ ಎರಡು ಕಲಮುಗಳನ್ನು ಸ್ವಲ್ಪ ಮಾರ್ಪಾಡುಗಳೊಂದಿಗೆ ಅನ್ವಯಿಸಲು ಉದ್ದೇಶಿಸಲಾಗಿದೆ.

ಈ ಕ್ರಮದಲ್ಲಿ ಯಾವುದೇ ಕ್ಲಿಷ್ಟತೆಯಿಲ್ಲವೆಂದು ಈ ಸದನವು ಮನಗಂಡು ಅಂಗೀಕರಿಸುತ್ತದೆಯೆಂದು ನಾನು ಆಶಿಸುತ್ತೇನೆ.

**ಉಪಸಭಾಪತಿ :** ಮಸೂದೆ ಮಂಡಿಸಲ್ಪಟ್ಟಿದೆ :

"ಕೆಲವು ಸಿ ಭಾಗದ ರಾಜ್ಯಗಳಿಗೆ ಕಾಯಿದೆಗಳನ್ನು ವಿಸ್ತರಿಸುವ ವಿಧೇಯಕವನ್ನು ಪರಿಗಣಿಸಲು ಸ್ವೀಕರಿಸತಕ್ಕದ್ದು."

**ಪಂಡಿತ್ ಯಂ.ಬಿ.ಭಾರ್ಗವ (ಅಜ್ಮೀರ್) :** ಈ ವಿಧೇಯಕದ ಕುರಿತಂತೆ ನಾನು ಕೆಲವು ಅಭಿಪ್ರಾಯಗಳನ್ನು ಹೇಳಲಿಚ್ಛಿಸುತ್ತೇನೆ.

ಮಾನ್ಯ ಕಾನೂನು ಸಚಿವರು ಉಲ್ಲೇಖಿಸಿದ ರಾಜ್ಯಗಳಿಗೆ, ಕೇಂದ್ರ ಕಾಯಿದೆಗಳನ್ನು ವಿಸ್ತರಿಸುವ ಕುರಿತಂತೆ ನಾನು ಹೇಳಲು ಏನೂ ಇರುವುದಿಲ್ಲ. ಆದರೆ ಒಂದು ಖಂಡ ಅಂದರೆ ಎರಡನೇ ಖಂಡವು ಈ ವಿಧೇಯಕದಲ್ಲಿದ್ದು ಅದು ಹೇಳುವಂತೆ ಕೇಂದ್ರ ಸರಕಾರವು ಅಧಿಕೃತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾವುದೇ ಪ್ರಾಂತೀಯ ಕಾಯಿದೆಯನ್ನು ಅಧಿಸೂಚನೆಯಲ್ಲಿ ಕಾಣಿಸಿದಂತಹ..... ಸೂಕ್ತ ಮಾರ್ಪಾಡು ಮತ್ತು ನಿಯಂತ್ರಣಗಳೊಂದಿಗೆ ವಿಸ್ತರಿಸುವ ಅವಕಾಶವಿದೆ. ಈ ಎಲ್ಲಾ ವಿಸ್ತರಿಸಲ್ಪಟ್ಟ ಕಾಯಿದೆಗಳನ್ನು ಸೂಕ್ತ ಕಾನೂನು ಪ್ರಾಧಿಕಾರದ ಮುಂದೆ ಪ್ರಶ್ನಿಸಿದರೆ ಈ ಶಾಸನವು ಕಾನೂನಿನ ಪರೀಕ್ಷೆಯಲ್ಲಿ ಯಶಸ್ವಿಯಾಗಲಾರದು ಮತ್ತು ಅನೂರ್ಜಿತ ಮತ್ತು ಪರಿಣಾಮಶೂನ್ಯ ಎಂದು ಘೋಷಿಸಲ್ಪಡುವುದು, ಆದ್ದರಿಂದ ಈ ಶಾಸನದ ವಿಚಾರದಲ್ಲಿ ಮುಂದುವರಿಯುವುದಕ್ಕೆ ಮೊದಲು ಇದರ ಕಾನೂನು ಸ್ಥಿತಿಯನ್ನು ಪರಿಗಣಿಸಬೇಕೆಂದು ನಾನು ಕಾನೂನು ಸಚಿವರನ್ನು ಗೌರವಪೂರ್ವಕವಾಗಿ ವಿನಂತಿಸುತ್ತೇನೆ.

**ಡಾ ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರು ಈ ಪ್ರಶ್ನೆಯನ್ನು ಕೇಳಿದ್ದು ನನಗೆ ಸಂತೋಷವಾಗಿದೆ. ನಾನು ಈ ವಿಚಾರಕ್ಕೆ ಹೆಚ್ಚು ಗಮನಕೊಟ್ಟಿರಲಿಲ್ಲ. ಏಕೆಂದರೆ ಈ ಕಲಮು ತುಂಬ ಸರಳವಾಗಿದ್ದು ಅದಕ್ಕೆ ಯಾವುದೇ ವಿವರಣೆ ಬೇಡವೆಂದು ನಾನು ಯೋಚಿಸಿದೆ. ಆದರೆ ಈಗ ಈ ಪ್ರಶ್ನೆ ಉದ್ಭವಿಸಿದ್ದರಿಂದ

ನಾನು ಇದರ ಸ್ಥಿತಿಯನ್ನು ವಿವರಿಸುವುದು ಒಳ್ಳೆಯದೆಂದು ಯೋಚಿಸಿದ್ದೇನೆ. ಈ ನಿರ್ದಿಷ್ಟ ಖಂಡದ ಯೋಗ್ಯತೆಯನ್ನು ವಿವೇಚಿಸುವಾಗ ಪರಿಗಣಿಸಬೇಕಾದ ಈ ಪ್ರಕರಣದ ಕೆಲವು ವಿಚಾರಗಳಿವೆ. ಮೊದಲನೆಯದು, ಕೂರ್ಗನ್ನು ಹೊರತು ಪಡಿಸಿ ಬಹುತೇಕ ರಾಜ್ಯಗಳಲ್ಲಿ ಸ್ಥಳೀಯ ಕಾನೂನುಗಳನ್ನು ಅಂಗೀಕರಿಸುವ ಕರ್ತವ್ಯವನ್ನು ವಹಿಸಲು ಸ್ಥಳೀಯ ಶಾಸನ ಸಭೆಯಿಲ್ಲ. ಇದಕ್ಕೆ ಪರ್ಯಾಯವಾದ ಒಂದೇ ದಾರಿಯೆಂದರೆ ಸಂಸತ್ತು ಇಲ್ಲಿ ಕುಳಿತು ಈ ಸಿ ವರ್ಗದ ರಾಜ್ಯಗಳ ಸ್ಥಳೀಯ ಆಡಳಿತಕ್ಕೆ ವಿವರವಾದ ಕಾಯಿದೆಯನ್ನು ಮಾಡುವುದು ಮತ್ತು ಪರಿಗಣಿಸಬೇಕಾದ ಪ್ರಶ್ನೆ ಎಂದರೆ ಅನುಕೂಲವಾಗಿರುವ ಸಮಯದ ದೃಷ್ಟಿಯಿಂದ ಮತ್ತು ಕೇಂದ್ರ ಆಡಳಿತದ ಪ್ರಕ್ರಿಯೆಗಳಿಗೆ ಅಗತ್ಯವಾದ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಈ ಸಂಸತ್ತಿಗೆ ಎಷ್ಟು ಕಷ್ಟವಿದೆ ಎಂಬುದು ಎಲ್ಲರಿಗೂ ಗೊತ್ತಿದೆ– ಮತ್ತು ಸ್ಥಳೀಯ ಶಾಸನದ ಹೆಸರುಗಳನ್ನು ನಿಖರವಾಗಿ ಪರಿಗಣಿಸಲು ಬೇಕಾದ ಸಮಯವನ್ನು ನೀಡುವುದು ಎಷ್ಟು ಕಷ್ಟ ಎಂದು ನನ್ನ ಮಾನ್ಯ ಮಿತ್ರರು ಒಪ್ಪಿದ್ದಾರೆ.

ಆದ್ದರಿಂದ ನಾವು ಎರಡು ತೊಡಕುಗಳ ನಡುವೆ ಇದ್ದೇವೆ; ಒಂದನೆಯದು, ಅಲ್ಲಿ ಸ್ಥಳೀಯ ಶಾಸನ ಸಭೆಯಲ್ಲಿ ಮತ್ತು ಇನ್ನೊಂದು, ಸಂಸತ್ತು ಸಿ ಭಾಗದ ರಾಜ್ಯಗಳಿಗೆ ಸ್ಥಳೀಯ ಕಾಯಿದೆಯನ್ನು ಮಂಜೂರು ಮಾಡಲು ತೊಡಗುವ ಸ್ಥಿತಿಯಲ್ಲಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಾಡಬೇಕಾದದ್ದೇನು? ಮಾಡಬಹುದಾದ ಒಂದೇ ಸಂಗತಿಯೆಂದರೆ ಭಾರತ ಸರಕಾರಕ್ಕೆ ಎ ಭಾಗದ ರಾಜ್ಯಗಳಲ್ಲಿ ಅಥವಾ ಇತರ ಸಿ ಭಾಗದ ರಾಜ್ಯಗಳಲ್ಲಿ ಜಾರಿಗೆ ತಂದ ಕಾಯಿದೆಗಳನ್ನು ಸ್ಥಳೀಯ ಸಂದರ್ಭಗಳಿಗೆ ಮತ್ತು ಸ್ಥಳೀಯ ಸವಾಲುಗಳಿಗೆ ಅಗತ್ಯವಿರುವ ಮಾರ್ಪಾಡುಗಳೊಂದಿಗೆ ಸಿ ಭಾಗದ ರಾಜ್ಯಗಳಿಗೂ ಅನ್ವಯಿಸುವುದು. ಸಿ ಭಾಗದ ರಾಜ್ಯಗಳಲ್ಲಿ ಸ್ಥಳೀಯ ಶಾಸನಗಳನ್ನು ಒದಗಿಸಲು ಇನ್ನಾವುದೇ ಹಾದಿಯಿರುವುದು ನನಗೆ ಕಾಣುತ್ತಿಲ್ಲ. ಒಂದು ವೇಳೆ, ಯಾವುದೋ ಹಂತದಲ್ಲಿ ಸಿ ಭಾಗದ ರಾಜ್ಯಗಳಿಗೆ ಸ್ಥಳೀಯ ಶಾಸನ ಪರಿಷತ್ತುಗಳನ್ನು ರಚಿಸಿ ಅವುಗಳಿಗೆ ಸ್ಥಳೀಯ ಕಾಯಿದೆಗಳನ್ನು ರಚಿಸುವ ಅಧಿಕಾರವನ್ನು ಕೊಡುವುದು ಸಂಸತ್ತಿಗೆ ಸಾಧ್ಯವಾಗಬಹುದಾದರೂ ಸಂಸತ್ತು ಇದನ್ನು ಮಾಡದೇ ಇರುವವರೆಗೆ, ಈ ನಿರ್ದಿಷ್ಟ ವಿಧೇಯಕದಲ್ಲಿ ಪ್ರಸ್ತಾವಿಸಲಾದ್ದಕ್ಕಿಂತ ಬೇರೆಯಾದ ಒಂದು ಮಧ್ಯ ಸ್ಥಿತಿಯು ನನಗೆ ಕಾಣಿಸುವುದಿಲ್ಲ, ಮತ್ತು ಆದ್ದರಿಂದ, ಸಿ ಭಾಗದ ರಾಜ್ಯಗಳಿಗೆ ಅಧಿಕಾರವಿರುವಾಗ ಶಾಸನ ವ್ಯವಹಾರವನ್ನು ಈ ರೀತಿ ಮಾಡುವುದು ಸರಿಯೇ ಎಂಬುವುದನ್ನು ಬಿಟ್ಟರೆ, ಪ್ರಾಯೋಗಿಕ ದೃಷ್ಟಿಕೋನದಿಂದ ನೋಡುವುದಾದರೆ, ಬೇರೆ ಯಾವ ಹಾದಿಯೂ ನನಗೆ ಕಾಣುವುದಿಲ್ಲ.

ಸಿ ಭಾಗದ ರಾಜ್ಯಗಳಲ್ಲಿರುವ ಸ್ಥಳೀಯ ಸಲಹಾ ಸಂಸ್ಥೆಗಳೊಂದಿಗೆ ಚರ್ಚೆಯನ್ನು ಮಾಡದೆ ಕೇಂದ್ರವು ಈ ಅಧಿಕಾರವನ್ನು ಚಲಾಯಿಸುತ್ತಿದೆಯೆಂಬ ಟೀಕೆಯ ಅಂಶವನ್ನು ನನ್ನ ಮಿತ್ರರು ಮಂಡಿಸಿದರು. ಈ ವಿಚಾರದ, ಸದರಿ ಅಂಶದ ಬಗ್ಗೆ ನನಗೆ ಹೆಚ್ಚೇನೂ ಗೊತ್ತಿಲ್ಲ. ಏಕೆಂದರೆ ನನ್ನ ಮಿತ್ರರಿಗೆ ಗೊತ್ತಿರುವಂತೆ ಈ ನಿರ್ದಿಷ್ಟ ವಿಚಾರದ ಆಡಳಿತವು ಗೃಹಸಚಿವಾಲಯದಲ್ಲಿ ನಿಹಿತವಾಗಿದೆ ಮತ್ತು ಗೃಹ ಸಚಿವಾಲಯವು ಈ ಸಂಸ್ಥೆಗಳೊಂದಿಗೆ ಚರ್ಚಿಸುತ್ತದೆಯೆಂಬ ಬಗ್ಗೆ ನನಗೆ ಸಂಶಯವಿಲ್ಲ. ಅವರು ಹಾಗೆ ಮಾಡದಿದ್ದಲ್ಲಿ, ನನ್ನ ಮಿತ್ರರು ಮಾಡಿದ ಸಲಹೆಯನ್ನು ಅವರು ಸ್ವೀಕರಿಸುತ್ತಾರೆಂಬ ಬಗ್ಗೆ ನನಗೆ ವಿಶ್ವಾಸವಿದೆ.

ಈಗ ನಾನು ನನ್ನ ಮಿತ್ರರು ಎತ್ತಿದ ಸಂವಿಧಾನಾತ್ಮಕ ಅಂದರೆ, ಇದು ಪ್ರತ್ಯಾಯೋಜಿತ ಶಾಸನವಾಗುತ್ತದೆಂಬ, ಪ್ರಶ್ನೆಯನ್ನು ಪರಿಗಣಿಸುತ್ತೇನೆ. ಎ ಭಾಗ, ಅಥವಾ ಬಿ ಭಾಗ ಅಥವಾ ಸಿ ಭಾಗದ ರಾಜ್ಯಗಳು ಮಾಡಿದ ಯಾವುದೇ ಕಾಯಿದೆಯನ್ನು ಸಿ ಭಾಗದ ರಾಜ್ಯಗಳಿಗೆ ವಿಸ್ತರಿಸುವುದು ಒಂದು

ಪ್ರತ್ಯಾಯೋಜಿತ ಶಾಸನ, ಅಂದರೆ ಆ ಶಾಸನವನ್ನು ಸಂಸತ್ತು ಕಾರ್ಯಾಂಗಕ್ಕೆ ಪ್ರತ್ಯಾಯೋಜಿಸುವುದು. ನನ್ನ ಮಾನ್ಯ ಮಿತ್ರರು ಸಂಯುಕ್ತ ನ್ಯಾಯಾಲಯವನ್ನು ಉಲ್ಲೇಖಿಸಿದರು. ಸಂಯುಕ್ತ ನ್ಯಾಯಾಲಯದ ತೀರ್ಪಿದೆಯೆಂಬ ಬಗ್ಗೆ ಸಂಶಯವಿಲ್ಲ. ಆದರೆ ನಾನು ಹೇಳಲಿಷ್ಟಪಡುವುದು ಇಷ್ಟು, ಅಂದರೆ ನಾನಿನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪಡೆದಿಲ್ಲ; ನಾವು ಅದಕ್ಕಾಗಿ ಕಾಯುತ್ತಿದ್ದೇವೆ, ಏಕೆಂದರೆ, ಸಂಯುಕ್ತ ನ್ಯಾಯಾಲಯವನ್ನು ಗೌರವದಿಂದ ಕಾಣುತ್ತಲೇ ಭಾರತ ಸರಕಾರವು ಆ ತೀರ್ಪನ್ನು ಸರಿಯಾದ ತೀರ್ಪೆಂದು ಭಾವಿಸುತ್ತಿಲ್ಲ, ಮತ್ತು ಸಂಯುಕ್ತ ಪ್ರಾಧಿಕಾರದ ಬಗ್ಗೆ ಕೂಡ ಎಲ್ಲಾ ಗೌರವದೊಂದಿಗೆ ಅದೇ ನಿಲುವನ್ನು ಇನ್ನೂ ಹೊಂದಿದ್ದೇವೆ. ಪ್ರತ್ಯಾಯೋಜಿತ ಅಧಿಕಾವೆಂದು ಕರೆಯಲ್ಪಡುವ, ಭಾರತ ಸರಕಾರವು ಶಾಸನ ರಚನೆಗೆ ಉದ್ಯೋಗಿಸುವ ಈ ಚಟುವಟಿಕೆಯು ಹೊಸದಲ್ಲವೆಂದು ನನ್ನ ಮಿತ್ರರಿಗೆ ನಾನು ಸೂಚಿಸಬಹುದು. ಅದು ಕಾರ್ಯತಃ ೧೯೧೨ರಿಂದ ಅಸ್ತಿತ್ವದಲ್ಲಿದೆ ಮತ್ತು ಅವರಿಗೆ ತಿಳಿದಿರುವಂತೆ ಭಾರತದ ಯಾವುದೇ ಭಾಗದಲ್ಲಿ ಮಾಡಿದ ಕಾನೂನನ್ನು ಕೇಂದ್ರ ಸರಕಾರವು ಸೂಕ್ತ ಮಾರ್ಪಾಡುಗಳೊಂದಿಗೆ ಡೆಲ್ಲಿ ಪ್ರಾಂತಕ್ಕೆ ಅನ್ವಯಿಸಬಹುದು. ೧೯೧೨ರಿಂದ ಸಂಯುಕ್ತ ನ್ಯಾಯಾಲಯದ ತೀರ್ಪಿನ ದಿನಾಂಕದವರೆಗೆ, ಭಾರತ ಸರಕಾರವು ಕೈಗೊಂಡ ಆ ಕ್ರಮದ ಕಾನೂನು ಬದ್ಧತೆಯನ್ನು ಪ್ರಶ್ನಿಸಿದ ತೀರ್ಪು ಭಾರತದ ಯಾವುದೇ ನ್ಯಾಯಾಲಯದಲ್ಲಿರಲಿಲ್ಲ. ಈ ದೇಶದಿಂದ ಅನೇಕ ಪ್ರಕರಣಗಳು ಪ್ರಿವಿಕೌನ್ಸಿಲಿಗೆ ಹೋಗಿವೆ ಮತ್ತು ಪ್ರಿವಿಕೌನ್ಸಿಲ್ ಕೂಡ ಇದರ ಊರ್ಜಿತತೆಯನ್ನು ಪ್ರಶ್ನಿಸಿಲ್ಲವೆಂದು ನಾನು ನನ್ನ ಮಿತ್ರರಿಗೆ ಹೇಳಬಹುದು. ಆದ್ದರಿಂದ, ಸೂಕ್ತ ಸಂದರ್ಭದಲ್ಲಿ ಈ ವಿಚಾರವು ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಾಗ, ಸರ್ವೋಚ್ಚ ನ್ಯಾಯಾಲಯವು ವಸ್ತುಸ್ಥಿತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸುತ್ತದೆ, ಮತ್ತು ನನ್ನ ದೃಷ್ಟಿಯಲ್ಲಿ ಸಂಯುಕ್ತ ನ್ಯಾಯಾಲಯದ ಅನೇಕ ಅಧಿಕಾರಿಗಳು ಸರ್ವೋಚ್ಚ ನ್ಯಾಯಾಲಯದ ಅಧಿಕಾರಿಗಳಂತೆಯೇ ಇದ್ದರೂ, ಸರ್ವೋಚ್ಚ ನ್ಯಾಯಾಲಯವು ಒಂದು ಪ್ರತ್ಯೇಕ ನ್ಯಾಯಾಲಯವಾಗಿರುವುದರಿಂದ, ಸರ್ವೋಚ್ಚ ನ್ಯಾಯಾಲಯವು ಸಂಯುಕ್ತ ನ್ಯಾಯಾಲಯದ ತೀರ್ಪಿಗೆ ತಾನು ಬದ್ಧವೆಂದು ಭಾವಿಸಲಾರದೆಂದು ನಾನು ಆಶಿಸುತ್ತೇನೆ. ಆದ್ದರಿಂದ, ನನ್ನ ಸ್ನೇಹಿತರು ಮೆಚ್ಚುವುದಾದರೆ, ನಾವೊಂದು ಸಾಹಸಕ್ಕಿಳಿದಿದ್ದೇವೆಂದು ಹೇಳಲು ಹಿಂಜರಿಯುವುದಿಲ್ಲ. ನಾವು ತೆಗೆದುಕೊಳ್ಳುವ ನಿಲುವು ಮತ್ತು ಈ ತನಕ ನಾವು ತೆಗೆದುಕೊಂಡ ಮತ್ತು ಕಳೆದ ೨೫ ವರ್ಷಗಳಲ್ಲಿ ಯಾವ ನ್ಯಾಯಾಲಯವೂ ಪ್ರಶ್ನಿಸದ ಈ ನಿಲುವು ಸರಿಯಾದ ನಿಲುವೆಂದು ನಾವು ಆಶಿಸುತ್ತೇವೆ. ಒಂದು ವೇಳೆ ಸರ್ವೋಚ್ಚ ನ್ಯಾಯಾಲಯವು ಈ ಪ್ರಶ್ನೆಯನ್ನು ಪರಿಗಣಿಸುವ ಸಂದರ್ಭದಲ್ಲಿ ನಮ್ಮ ದೃಷ್ಟಿಕೋನಕ್ಕೆ ವ್ಯತಿರಿಕ್ತವಾದ ತೀರ್ಮಾನಕ್ಕೆ ಬಂದಲ್ಲಿ ಆಗ ನಾವು ಈ ವಿಚಾರವನ್ನು ಪರಿಗಣಿಸುತ್ತೇವೆ. ತತ್ಕಾಲಕ್ಕೆ ಪ್ರತ್ಯಾಯೋಜಿತ ಶಾಸನಕ್ಕೆ ಯಾವುದೇ ಆಕ್ಷೇಪವಿಲ್ಲವೆಂಬುವುದು ನಮ್ಮ ನಿಲುವು. ಸಂಸತ್ತು ತಾನೇ ಶಾಸನ ಮಾಡುವುದಕ್ಕೆ ಅಥವಾ ಇನ್ಯಾವುದೇ ಏಜಂಟರನ್ನು ಅಂತಹ ಶಾಸನಾಧಿಕಾರವನ್ನು ಪ್ರಯೋಗಿಸುವುದಕ್ಕೆ ಹೇಳಲು ಸರ್ವೋಚ್ಚ ಸಂಸ್ಥೆಯಾಗಿದೆ. ಈ ವಿಚಾರವನ್ನು ಪ್ರಶ್ನಿಸಬಹುದೆಂದು ನನಗನ್ನಿಸುವುದಿಲ್ಲ. ನಾನು ಪರಿಗಣಿಸಿದ ಇನ್ಯಾವ ವಿಚಾರವನ್ನೂ ನನ್ನ ಮಿತ್ರರು ಎತ್ತಿದ್ದಾರೆಂದು ನಾನು ಭಾವಿಸುವುದಿಲ್ಲ.

**ಉಪಸಭಾಪತಿ:** ಸರಕಾರವು ಅಗತ್ಯವೆಂದು ಭಾವಿಸುವ ಕಾನೂನುಗಳನ್ನು ಅಂಗೀಕರಿಸಬಹುದೆಂದು ಸಂಸತ್ತು ಹೇಳಲು ಸ್ವತಂತ್ರವೇ?

**ಡಾ ಅಂಬೇಡ್ಕರ್:** ನಿಯಮಗಳನ್ನು ರಚಿಸಲು ಸರಕಾರವು ಅಧಿಕಾರವನ್ನು ಹೊಂದಿದೆಯೆಂದು ಸಂಸತ್ತು ಹೇಳಬಹುದು.

**ಉಪಸಭಾಪತಿ:** ಪಟ್ಟಿಯಲ್ಲಿ ಉಲ್ಲೇಖಿಸಿದ ಎಲ್ಲಾ ವಿಚಾರಗಳ ಕುರಿತು ಒಂದು ಖಾಲಿ ಚೆಕ್ಕನ್ನು ಅವರು ನೀಡಬಹುದೇ?

**ಡಾ ಅಂಬೇಡ್ಕರ್:** ಸೂಕ್ತ ಭದ್ರತೆಗಳೊಂದಿಗೆ ಅವರು ಹಾಗೂ ಮಾಡಬಹುದು. ಯಾವ ಸಂಸತ್ತೂ ಕಾರ್ಯಾಂಗಕ್ಕೆ ಖಾಲಿ ಚೆಕ್ಕನ್ನು ನೀಡಲಾರದು: ಅದು ಖಂಡಿತವಾಗಿಯೂ ಕಾರ್ಯಾಂಗಕ್ಕೆ ಖಾಲಿ ಜಾಗಗಳನ್ನು ತುಂಬಲು ಹೇಳಬಹುದು ಮತ್ತು ಆ ಕುರಿತು ಏನಾದರೂ ತೊಡಕಿದೆಯೆಂದು ನನಗನ್ನಿಸುವುದಿಲ್ಲ.

**ಶ್ರೀ ಟಿ.ಟಿ.ಕೃಷ್ಣಮಾಚಾರಿ (ಮದ್ರಾಸ್):** ಸಂವಿಧಾನದ ಬಗ್ಗೆ ಹೇಳುವುದಾದರೆ ಅನ್ವಯಿಸುವ ವಿಧಿಗಳು ೨೪೦ ಮತ್ತು ೨೪೨ ಮಾತ್ರ. ನಾವು ಕೂರ್ಗಿಗೆ ಸಂಬಂಧಪಟ್ಟಂತೆ ವಿಶೇಷ ಅಂಶಗಳನ್ನು ರಚಿಸಿದ್ದೇವೆ. ಮಾನ್ಯರೆ, ನಿಮಗೆ ತಿಳಿದಿರುವಂತೆ, ಈ ಸದನದ ಮುಂದೆ ಇರುವ ವಿಧೇಯಕದ ವ್ಯಾಪ್ತಿಯಿಂದ ಕೂರ್ಗನ್ನು ಕೈಬಿಡಲಾಗಿದೆ. ಸಂವಿಧಾನದ ಬಗ್ಗೆ ಹೇಳುವುದಾದರೆ ಈ ವಿಚಾರದ ಕುರಿತು ನಿರ್ದಿಷ್ಟ ನಿರ್ದೇಶನಗಳಿಲ್ಲ. ಆದ್ದರಿಂದ ಅದನ್ನು ಕಾರ್ಯತಃ ಸಂಸತ್ತಿನ ಇಚ್ಛೆ ಹಾಗೂ ಇಷ್ಟಕ್ಕೆ ಬಿಡಲಾಗಿದೆ. ಅನುಸರಿಸಬೇಕಾದ ಕಾರ್ಯರೀತಿಯೊಂದೇ ವಿವಾದಕ್ಕೊಳಪಡುಬಹುದು, ಅಂದರೆ ಈ ಎಲ್ಲ ಕಾಯಿದೆಗಳೂ ಈ ವಿಧೇಯಕಕ್ಕೆ ಲಗತ್ತಿಸಿದ ಅನುಸೂಚಿಯ ಭಾಗವಾಗಬೇಕೇ, ಮತ್ತು ನಾವು ಪ್ರತ್ಯಾಯೋಜಿತ ಶಾಸನವೆಂದು ಕರೆಯಲ್ಪಡುವ ನಿಯಮಗಳನ್ನು ಮಾಡುವ ಮತ್ತಿತರ ಪ್ರಕ್ರಿಯೆ ಮೂಲಕ ಕಾರ್ಯಾಂಗಕ್ಕೆ ಸಾಮಾನ್ಯವಾಗಿ ನೀಡುವ ಅಧಿಕಾರದೊಂದಿಗೆ, ಅಥವಾ ಈಗ ಅನುಸರಿಸುತ್ತಿರುವ ಪ್ರಕ್ರಿಯೆಯೇ ಎಂಬುದು. ಕಾನೂನು ಸಚಿವರು ತಿಳಿಸಿದಂತೆ, ಈ ಪ್ರಕ್ರಿಯೆಯನ್ನು ಅನೇಕ ವರ್ಷಗಳ ಕಾಲ ಅನುಸರಿಸಲಾಗಿದೆ ಮತ್ತು ಸಂವಿಧಾನದಲ್ಲಿ ಆ ಬಗ್ಗೆ ಭಿನ್ನ ಸೂಚನೆಯು ಇಲ್ಲದಿರುವುದರಿಂದ, ಇದನ್ನು ಅನೂರ್ಜಿತಗೊಳಿಸಲು ಯಾವುದೇ ನ್ಯಾಯಾಲಯಕ್ಕೆ ಹೇಗೆ ಸಾಧ್ಯ? ಪ್ರತ್ಯಾಯೋಜಿತ ಶಾಸನಕ್ಕೆ ಸಂಬಂಧಿಸಿದಂತೆ, ಪ್ರತ್ಯಾಯೋಜನೆಯ ನಿಖರ ಗಾತ್ರ, ಪ್ರಕೃತಿ ಮತ್ತು ವ್ಯಾಪ್ತಿ ಇವನ್ನು ವಿಶ್ವದ ಯಾವ ಶಾಸನವೂ ನಿರೂಪಿಸಿಲ್ಲ. ಅದು ಕಾಲಾನುಕಾಲಕ್ಕೆ ಭಿನ್ನವಾಗಿರುತ್ತದೆ. ಸಿ ಭಾಗದ ರಾಜ್ಯಗಳಿಗೆ ಸಂಬಂಧಿಸಿದಂತೆ, ಸಂಸತ್ತು ಇಚ್ಛಿಸುವಂತಹ ಮತ್ತು ಅದು ತಾನು ಇಚ್ಛಿಸಿದಂತೆ ಪ್ರತ್ಯಾಯೋಜಿಸಲು ಕೇಂದ್ರ ಸರಕಾರಕ್ಕೆ ಅಧಿಕಾರವನ್ನು ನೀಡಲು ಯಾವುದೇ ಕಾಯಿದೆಯನ್ನು ರಚಿಸುವುದನ್ನು ನಿಷೇಧಿಸುವ ಕಾನೂನು ಇಲ್ಲದಿರುವಾಗ, ಈ ಹಂತದಲ್ಲಿ ಈ ವಿಧೇಯಕವನ್ನು ಈ ಸದನವು ಅಂಗೀಕರಿಸಲಾರದು.

**ಉಪಸಭಾಪತಿ:** ಸಾಮಾನ್ಯ ಕಾಯಿದೆಗಳನ್ನು ಒಂದು ವಿಧೇಯಕದಲ್ಲಿ ಜಾರಿ ಮಾಡಲಾಗುತ್ತಿದೆ. ಮತ್ತು ಸರಕಾರಕ್ಕೆ ವಿವರಗಳನ್ನು ತುಂಬಲು ಮತ್ತು ನಿಯಮಗಳನ್ನು ರಚಿಸಲು ಅಧಿಕಾರವನ್ನು ನೀಡಲಾಗುತ್ತದೆ.

**ಡಾ ಅಂಬೇಡ್ಕರ್:** ಈ ವಿಧೇಯಕದ ಅಂಶವೆಂದರೆ ಯಾವುದೇ ವಿಚಾರದ ಕುರಿತು ಕಾಯಿದೆಗಳು ಈಗಾಗಲೇ ಅಸ್ತಿತ್ವದಲ್ಲಿವೆ.

**ಉಪಸಭಾಪತಿ:** ಯಾವ ಕಾಯಿದೆಯನ್ನು ಅನ್ವಯಿಸಬೇಕು ಎಂಬುವುದನ್ನು ಸಂಸತ್ತು ಆಯ್ಕೆ ಮಾಡಬೇಕಲ್ಲವೇ?

**ಡಾ ಅಂಬೇಡ್ಕರ್:** ಸಂಸತ್ತು ಹಾಗೆ ಬಯಸಿದರೆ ಅದು ಮಾಡಬಹುದು, ಆದರೆ ಸಂಸತ್ತು ಈ ಅಧಿಕಾರವನ್ನು ಕಾರ್ಯಾಂಗಕ್ಕೆ ವಹಿಸಿದರೆ, ಅದು ಅಸ್ತಿತ್ವದಲ್ಲಿರುವ ಕಾಯಿದೆಗಳಿಂದ ಆಯ್ಕೆಮಾಡಬೇಕು.

**ಶ್ರೀ ಟಿ.ಟಿ.ಕೃಷ್ಣಮಾಚಾರಿ:** ಮೂವತ್ತರ ದಶಕದಲ್ಲಿ ಸ್ಟಾರ್ ಚೇಂಬರ್ ಶಾಸನವೆಂದು ಕರೆಯಲ್ಪಟ್ಟ, ಈ ಸಂಕೀರ್ಣ ಪ್ರಶ್ನೆಯನ್ನು ಪರಿಶೀಲಿಸಲು ಹೌಸ್ ಆಫ್ ಕಾಮನ್ಸ್ ರಚಿಸಿದ, ಸಚಿವರ ಅಧಿಕಾರಕ್ಕೆ ಸಂಬಂಧಿಸಿದ ಸಮಿತಿಯು ಆ ಕಾಲದ ಸರಕಾರವು ಪ್ರತ್ಯಾಯೋಜಿತ ಅಧಿಕಾರವನ್ನು ಎಷ್ಟರ ಮಟ್ಟಿಗೆ

ಬಳಸಬಹುದು ಎಂಬ ಹೊರಮಿತಿಯನ್ನು ನೀಡುವುದು ಉಚಿತವೆಂದು ಸೂಚಿಸಿತು. ಆದ್ದರಿಂದ ನಾವು ಸಾಮಾನ್ಯ ಶಾಸನಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಅಧಿಕಾರಗಳ ಸಾಮಾನ್ಯತೆಗೆ ಬಾಧಕಬಾರದಂತೆ ಇಂತಿಂತಹವು ಸರಕಾರದ ನಿಯಮ ರಚನಾ ಅಧಿಕಾರಗಳೆಂದು ಹೇಳುವ ಸಂಪ್ರದಾಯವನ್ನು ಅನುಸರಿಸುತ್ತಿದ್ದೇನೆ. ಆದ್ದರಿಂದ, ವಿಶ್ವದಲ್ಲಿ ಬೆಳಕಿಗೆ ಬಂದಿರುವ ಯಾವುದೇ ಶಾಸನ ಸಭೆಯಲ್ಲೂ ಪ್ರತ್ಯಾಯೋಜಿತ ಶಾಸನ ಮತ್ತು ವ್ಯಾಪ್ತಿಗೆ ಯಾವ ಅಭಿವ್ಯಕ್ತ ಮಿತಿಯನ್ನೂ ಹಾಕಿಲ್ಲ.

**ಉಪಸಭಾಪತಿ:** ಅವರು ವಿಷಯಗಳನ್ನು ಇಲ್ಲಿ ಸೂಚಿಸಿಲ್ಲ.

**ಪಂಡಿತ್ ಎಂ.ಬಿ.ಭಾರ್ಗವ:** ಕಾನೂನು ಸಚಿವರು ಸಂಯುಕ್ತ ನ್ಯಾಯಾಲಯದ ತೀರ್ಪಿಗಿಂತ ಮೊದಲು, ಈಗಿರುವ ಸಂಪ್ರದಾಯಕ್ಕೆ ಭಿನ್ನವಾದ್ದನ್ನು ಪ್ರತಿಪಾದಿಸುವ ಯಾವ ತೀರ್ಪೂ ಇರಲಿಲ್ಲವೆಂದು ಹೇಳಿದರು. ಸಂಯುಕ್ತ ನ್ಯಾಯಾಲಯದ ನ್ಯಾಯಮೂರ್ತಿಗಳ ತೀರ್ಪು ೧೯೪೩ರ ಫೆಡರಲ್ ಲಾ ಜರ್ನಲ್ ನ ಪುಟ ೧ ರಲ್ಲಿ ವರದಿಯಾದ ಪ್ರಿವಿಕೌನ್ಸಿಲಿನ ತೀರ್ಪನ್ನು ಆಧರಿಸಿದೆ. ಆ ತೀರ್ಪಿನ ಆಧಾರದಲ್ಲಿ ಸಂಯುಕ್ತ ನ್ಯಾಯಾಲಯವು ತನ್ನ ಸಿದ್ಧಾಂತವನ್ನು ಪ್ರತಿಪಾದಿಸಿದೆ.

ಈ ವಿಚಾರವು ಸರ್ವೋಚ್ಚ ನ್ಯಾಯಾಲಯದ ಮುಂದಿದೆಯೋ ಮತ್ತು ಸರ್ವೋಚ್ಚ ನ್ಯಾಯಾಲಯದಿಂದ ರದ್ದಾಗುವ ಅಥವಾ ಅಧಿಕ್ರಮಿಸುವವರೆಗೆ ಸಂಯುಕ್ತ ನ್ಯಾಯಾಲಯದ ತೀರ್ಪಿಗೆ ಈ ಸರಕಾರ ಬದ್ಧವಲ್ಲವೇ ಎಂದು ತಿಳಿಯಲು ನಾನು ಇಚ್ಛಿಸುತ್ತೇನೆ.

**ಉಪಸಭಾಪತಿ:** ಸಂಯುಕ್ತ ನ್ಯಾಯಾಲಯದಿಂದ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯಿದೆಯೇ?

**ಡಾ ಅಂಬೇಡ್ಕರ್:** ಇಲ್ಲ ಸಂಯುಕ್ತ ನ್ಯಾಯಾಲಯವು ಅಸ್ತಿತ್ವದಲ್ಲಿಲ್ಲ.

**ಬಾಬು ರಾಮ್‌ನಾರಾಯಣ ಸಿಂಗ್ (ಬಿಹಾರ):** ಮಾನ್ಯ ಸಚಿವರು ಈ ಸಂಬಂಧದ ಸಂವಿಧಾನದ ವಿಧಿಯನ್ನು ಉಲ್ಲೇಖಿಸಬಹುದೇ?

**ಡಾ ಅಂಬೇಡ್ಕರ್:** ಸಂಸತ್ತಿಗೆ ಸಂಪೂರ್ಣ ಅಧಿಕಾರಗಳಿವೆ. ಅದು ತಾನು ಹೊಂದಿರುವ ಶಾಸನಾಧಿಕಾರದಿಂದ ಏನನ್ನೂ ಮಾಡಬಹುದು. ಅದು ಈ ಅಧಿಕಾರಗಳನ್ನು ತಾನೇ ಬಳಸಿಕೊಳ್ಳಬಹುದು ಅಥವಾ ಕೆಲವು ಸಂದರ್ಭಗಳಲ್ಲಿ ತನ್ನ ಪರವಾಗಿ ಅವುಗಳನ್ನು ಉಪಯೋಗಿಸಲು ನಿರ್ದೇಶನವನ್ನು ನೀಡಬಹುದು. ಅದರ ಮೇಲೆ ಯಾವ ನಿಷೇಧವೂ ಇಲ್ಲ.

**ಶ್ರೀ ಹುಸೇನ್ ಇಮಾಮ್ (ಬಿಹಾರ್):** ಇದೊಂದು ಈಗ ತಾನೇ ಉದ್ಭವಿಸಿದ ವಿಚಿತ್ರ ಸಂದರ್ಭವಲ್ಲವೆಂದು ಭಾವಿಸಿ ಇನ್ನಷ್ಟು ಮಾಹಿತಿಯನ್ನು ನಾನು ಪಡೆಯಲಿಚ್ಛಿಸುತ್ತೇನೆ. ಮುಖ್ಯ ಆಯುಕ್ತರ ಪ್ರಾಂತಗಳು ಕೇಂದ್ರದಿಂದ ಆಡಳಿತ ನಡೆಸಲ್ಪಡುತ್ತವೆ. ನಾವು ಮುಖ್ಯ ಆಯುಕ್ತರ ಅಧಿಕಾರವನ್ನು ಈ ಹಿಂದೆ ಮಾಡಿದಂತೆ ಅಧಿಸೂಚನೆಯಿಂದ ಅಥವಾ ಈಗ ಮಾಡಬಹುದಾದಂತೆ ಶಾಸನದ ಮೂಲಕ ವಿಸ್ತರಿಸಬಹುದು. ಆದರೆ ಪ್ರಶ್ನೆಯೆಂದರೆ ಯಾರನ್ನು ಹೇಗೆ ಸಬಲಗೊಳಿಸಬೇಕು? ನಾವು ಕಾರ್ಯಾಂಗ, ನ್ಯಾಯಾಂಗ ಅಥವಾ ಕೇಂದ್ರ ಸರಕಾರವನ್ನು ಹೇಗೆ ಸಶಕ್ತಗೊಳಿಸುತ್ತವೆಯೇ? ಅಧಿಕಾರವು ಈ ಮೂರರಲ್ಲೂ ಹಂಚಿಹೋಗಬಾರದು. ಮೂರನೇ ಖಂಡದ ಉಪಖಂಡ (೩) ಹೀಗೆ ಹೇಳುತ್ತದೆ:

> "ಈ ರಾಜ್ಯಗಳಲ್ಲಿ ಮೇಲೆ ಹೇಳಿದಂತೆ ಯಾವುದೇ ಕಾಯಿದೆ ಅಥವಾ ಅಧ್ಯಾದೇಶದ ಅನ್ವಯವನ್ನು ಸುಸೂತ್ರಗೊಳಿಸಲು, ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಆ ಕಾಯಿದೆ ಅಥವಾ ಅಧ್ಯಾದೇಶವನ್ನು ಅದರ ಮೂಲ ಉದ್ದೇಶದ

ಮೇಲೆ ಪರಿಣಾಮ ಬೀರದಂತೆ ಸೂಕ್ತ ಕಂಡ ರೀತಿಯಲ್ಲಿ ವಿಚಾರದ ಅನ್ವಯಿಕೆಗೆ ಅಗತ್ಯ ಅಥವಾ ಸರಿಕಾಣುವ ಅಗತ್ಯಗಳಿಗೊಳಪಟ್ಟು ಆ ನ್ಯಾಯಾಲಯ ಇಲ್ಲವೇ ಇತರ ಪ್ರಾಧಿಕಾರದ ಮುಂದಿರುವ ವಿಚಾರಕ್ಕೆ ಹೊಂದುವ ರೀತಿಯಲ್ಲಿ ಅರ್ಥೈಸಬಹುದು."

ಈ ಅಧಿಕಾರವನ್ನು ಯಾರಲ್ಲಿ ನಿಹಿತಗೊಳಿಸಬೇಕೆಂಬ ಬಗ್ಗೆ ಇದು ನಿರ್ಧರಿಸಿಲ್ಲವೆಂದು ತೋರಿಸುತ್ತದೆ. ಮಧ್ಯಂತರ ಸಂದರ್ಭದಲ್ಲಿ ಕೇಂದ್ರ ಸರಕಾರವನ್ನು ಸಶಕ್ತಗೊಳಿಸುವುದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಯಾರು ಈ ಪ್ರಾಧಿಕಾರ. . . .

**ಡಾ ಅಂಬೇಡ್ಕರ್:** ಯಾವುದೇ ಪ್ರಾಧಿಕಾರ. ಅದೊಂದು ಅಳವಡಿಕೆ: ಅದು ಸ್ವೀಕರಿಸುವಿಕೆಯಲ್ಲ. ನಾವು ಈ ಸದನದಲ್ಲಿ ಅಂತಹ ಅನೇಕ ಅಳವಡಿಕಾ ಕಾಯಿದೆಗಳನ್ನು ಮಂಜೂರು ಮಾಡಿದ್ದೇವೆ.

**ಶ್ರೀ ಹುಸೇನ್ ಇಮಾಮ್:** ಈ ಅಳವಡಿಕೆಯನ್ನು ಕೇಂದ್ರ ಪ್ರಾಧಿಕಾರ ಅಥವಾ ಶಾಸನದಿಂದ ಮಾಡಲಾಗಿದೆ. ಇಲ್ಲಿ ಅಳವಡಿಕೆಯನ್ನು ಅನಿರ್ದುಷ್ಟ ಸಂಖ್ಯೆಯ ಜನರಿಗೆ ಬಿಟ್ಟು ಬಿಡಲಾಗಿದೆ. ಈ ಶಾಸನದಲ್ಲಿ ಪ್ರಾಧಿಕಾರವನ್ನು ಎಲ್ಲೂ ನಿರೂಪಿಸಿಲ್ಲ– ಅದು ಮುಖ್ಯ ಆಯುಕ್ತರ ಅಥವಾ ಮುಖ್ಯ ಕಾರ್ಯದರ್ಶಿ. . .

**ಡಾ ಅಂಬೇಡ್ಕರ್:** ಕಾನೂನನ್ನು ಯಾರು ಜಾರಿಗೆ ತರಬೇಕೋ ಅವರು ಅದನ್ನು ಅಳವಡಿಸಬೇಕು.

**ಶ್ರೀ ಹುಸೇನ್ ಇಮಾಮ್:** ನಾವು ಸರಿಯಾಗಿ ಗಮನ ನೀಡದ ಕಾರ್ಯವನ್ನು ಮಾಡುತ್ತಿದೇವೆ. ಈ ವಿಧೇಯಕವನ್ನು ಈ ಅಧಿವೇಶನದಲ್ಲಿ ತಡವಾಗಿ ಮಂಡಿಸಲಾಗಿದೆ. ಸರಕಾರಕ್ಕೆ ಈ ರೀತಿಯದ್ದೇನಾದರೂ ಬೇಕಿದ್ದರೆ, ಈಗ ಈ ವಿಧೇಯಕವನ್ನು ಹಿಂದಕ್ಕೆ ಪಡೆದು, ಅಧಿವೇಶನವು ಮುಗಿದ ನಂತರ ಒಂದು ಅಧ್ಯಾದೇಶವನ್ನು ಹೊರಡಿಸುವುದು ತುಂಬ ಒಳ್ಳೆಯದು. ಅಲ್ಲದೇ ಹೋದರೆ ಎಲ್ಲಾ ರೀತಿಯ ಅಧಿಕಾರವನ್ನು ನೀಡುವ, ಸರಿಯಾಗಿ ಪರಿಶೀಲಿಸಲ್ಪಟ್ಟ ಒಂದು ಕಾಯಿದೆಯನ್ನು ತರಬೇಕು. ಈ ರೀತಿಯ, ಸಡಿಲ ಗೊತ್ತುಗುರಿಗಳನ್ನು ಹೊಂದಿರುವ ವಿಧೇಯಕಕ್ಕಿಂತ, ಒಂದು ಅಧ್ಯಾದೇಶವಿರುವುದು ಒಳ್ಳೆಯದು. ಆದ್ದರಿಂದ, ನಾನು ಮಾನ್ಯ ಮಂತ್ರಿಗಳಲ್ಲಿ ಈ ವಿಚಾರವನ್ನು ಮರು ಪರಿಶೀಲಿಸಲು ವಿನಂತಿಸುತ್ತೇನೆ.

**ಡಾ ಅಂಬೇಡ್ಕರ್:** ನನ್ನ ಮಿತ್ರರು ಈ ರೀತಿಯ ಕ್ರಮವನ್ನು ಅಧ್ಯಾದೇಶದ ಮೂಲಕ ಜಾರಿ ಮಾಡಲು ಸರಕಾರಕ್ಕೆ ಅನುಮತಿ ನೀಡಲು ತಯಾರಿರುವುದರಿಂದ,

ಸಹಜವಾಗಿಯೇ ಈ ವಿಚಾರದ ಯೋಗ್ಯತೆಯ ಬಗ್ಗೆ ಅವರಿಗೆ ಹೆಚ್ಚು ಆಕ್ಷೇಪಗಳಿರಲು ಸಾಧ್ಯವಿಲ್ಲ. ಅಲ್ಲವಾದರೆ, ಈ ಕ್ರಮಕ್ಕೆ ಅವರು ಯಾವ ಆಕ್ಷೇಪವನ್ನು ಹೊಂದಿದ್ದಾರೆಂಬುವುದನ್ನು ನಾನು ಕಾಣಲಾರೆ.

**ಶ್ರೀ ಹುಸೇನ್ ಇಮಾಮ್:** ನಾನು ಸಲಹೆ ನೀಡುತ್ತಿದ್ದೆನಷ್ಟೇ. ಈ ಅಧ್ಯಾದೇಶವು ಆರು ವಾರಗಳವರೆಗೆ ಮುಂದುವರಿಯಬಹುದು. . . .

**ಡಾ. ಅಂಬೇಡ್ಕರ್**: ಸಂಸತ್ ಆರಂಭವಾದಲ್ಲಿಂದ.

**ಶ್ರೀ ಕಾಮತ್ (ಮಧ್ಯಪ್ರದೇಶ):** ಸಂಸತ್ತಿನ ಮುಂದಿನ ಅಧಿವೇಶನವು ಆರಂಭವಾದ ನಂತರ ಆರು ವಾರಗಳು.

**ಡಾ. ಅಂಬೇಡ್ಕರ್:** ಏನಾಗುತ್ತದೆಂದು ನನಗೆ ಗೊತ್ತಿಲ್ಲ. ಸಂಸತ್ತನ್ನು ಯಾವಾಗ ಕರೆಯಲಾಗುವುದೆಂದು ನಾನು ಹೇಳಲಾರೆ. ನಾವು ಅಧ್ಯಾದೇಶವನ್ನು ಹೊರಡಿಸಿ ನಡು ನೀರಿನಲ್ಲಿ ಬಿಟ್ಟು ಹೋದಂತಾಗಬಾರದು.

**ಶ್ರೀ ಕಾಮತ್:** ಅದು ಹೇಗೆ ಹಾಗಾಗುತ್ತದೆ?

**ಡಾ. ಅಂಬೇಡ್ಕರ್:** ಈ ಸಲಹೆಯು ಅಪ್ರಾಯೋಗಿಕವಾದ ಸಲಹೆ. ಅಲ್ಲದೆ, ಈ ವಿಚಾರಕ್ಕೆ ಸಂಬಂಧಿಸಿದಂತೆ, ನಾನೀಗಾಗಲೇ ಹೇಳಿದಂತೆ, ನಮಗೆ ಪೂರ್ವ ನಿರ್ದೇಶನವಿದೆ. ನಾವು ದಿಲ್ಲಿಗೆ ಸಂಬಂಧಿಸಿದಂತೆ ಇಂತಹ ಕಾಯಿದೆಯನ್ನು ಹೊಂದಿದ್ದೇನೆ. ನಾವು ಇಂತಹದೇ ಕಾಯಿದೆಯನ್ನು ಅಜ್ಮೀರ್–ಮೇವಾರಕ್ಕೆ ೧೯೪೭ರ ಅಜ್ಮೀರ್–ಮೇವಾರ್ ವಿಸ್ತರಣಾ ಕಾಯಿದೆ, ಎಂಬ ರೂಪದಲ್ಲಿ ಹೊಂದಿದ್ದೇವೆ. ಇವು ನನ್ನ ಮಿತ್ರರು ಚಿತ್ರಿಸುವಷ್ಟು ಕೆಟ್ಟವುಗಳಲ್ಲದಿದ್ದರೆ, ಈ ಕ್ರಮಕ್ಕೆ ಆಕ್ಷೇಪಗಳೇಕಿರಬೇಕು ಎಂಬುವುದು ನನಗೆ ಅರ್ಥವಾಗುವುದಿಲ್ಲ. ಸಮಯವಿದ್ದಿದ್ದರೆ, ನಾನು ಈ ಸದನಕ್ಕೆ ಇತ್ತೀಚೆಗೆ ಹೌಸ್ ಆಫ್ ಕಾಮನ್ಸ್ ಸ್ವೀಕರಿಸಿದ ಒಂದು ಪ್ರಕ್ರಿಯೆಯನ್ನು ನಿಧಾನವಾಗಿಯಾದರೂ ಪರಿಗಣಿಸಲು ಸಲಹೆ ನೀಡುತ್ತಿದ್ದೆ; ಅದರಲ್ಲಿ ಸದನದ ಸ್ಥಾಯೀ ಸಮಿತಿಯಿದ್ದು ಅದು ಅಂತಹ ಪ್ರತ್ಯಾಯೋಜಿತ ಶಾಸನವು ಸಂಸತ್ತಿನ ಮೂಲ ಉದ್ದೇಶವನ್ನು ಮೀರಿದೆಯೇ ಅಥವಾ ಹಾದಿ ತಪ್ಪಿದೆಯೇ ಅಥವಾ ಯಾವುದಾದರೂ ಮೂಲತತ್ವವನ್ನು ಉಲ್ಲಂಘಿಸಿದೆಯೇ ಎಂಬುದನ್ನು ಸಂಸತ್ತಿನ ಗಮನಕ್ಕೆ ತರುತ್ತದೆ. ಇದು ನಾವು ಸ್ವತಂತ್ರವಾಗಿ ಗಮನಿಸಬಲ್ಲ ಒಂದು ವಿಚಾರ. ಪ್ರತ್ಯಾಯೋಜಿತ ಶಾಸನವೆಂದು ಕರೆಯಲ್ಪಡುವ ಈ ಕ್ರಮವನ್ನು ಇಷ್ಟು ದೀರ್ಘ ಪರಿಶೀಲನೆಯ ನಂತರ ಯಾರಾದರೂ ಹೇಗೆ ಆಕ್ಷೇಪಿಸಬಹುದೆಂದು ನನಗೆ ಅರ್ಥವಾಗುವುದಿಲ್ಲ.

**ಉಪಸಭಾಪತಿ:** ವಿಷಯವೆಂದರೆ:

"ಕೆಲವು ಸಿ ಭಾಗದ ರಾಜ್ಯಗಳಿಗೆ ಕಾನೂನನ್ನು ವಿಸ್ತರಿಸುವ ವಿಧೇಯಕವನ್ನು ಪರಿಗಣಿಸತಕ್ಕದ್ದು."

ಮಸೂದೆಯು ಸ್ವೀಕೃತವಾಯಿತು.

**ಶ್ರೀ ಹುಸೇನ್ ಇಮಾಮ್:** ಮಾನ್ಯ ಮಂತ್ರಿಗಳು–ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿ ವಿವರಿಸದಿದ್ದ ಸಮ್ಮತಿಯ ವಯಸ್ಸನ್ನು ಯಾಕೆ ಕಡಿಮೆಗೊಳಿಸಿದ್ದಾರೆಂದು ವಿವರಿಸಬೇಕೆಂದು ನಾನು ಕೇಳಬಹುದೇ?

**ಉಪಸಭಾಪತಿ:** ಅವರು ಈಗಾಗಲೇ ಹೇಳಿದ್ದಾರೆ.

**ಡಾ. ಅಂಬೇಡ್ಕರ್:** ಗೃಹ ಇಲಾಖೆಯ ಪ್ರತಿನಿಧಿಗಳು ಮತ್ತು ಮಣಿಪುರದ ಮುಖ್ಯ ಆಯುಕ್ತರ ನಡುವೆ ಮಣಿಪುರದಲ್ಲಿ ನಡೆದ ಸಮ್ಮೇಳನದ ಫಲಶ್ರುತಿಯಾಗಿ ಮಣಿಪುರಕ್ಕೆ ಸಂಬಂಧಿಸಿದ ಬದಲಾವಣೆಗಳನ್ನು ಮಾಡಲಾಗಿದೆ. ಕೇಂದ್ರ ಶಾಸನವನ್ನು ವಿಸ್ತರಿಸಬೇಕಾದರೆ ಈ ಬದಲಾವಣೆಗಳನ್ನು ಮಾಡಲೇಬೇಕೆಂದು ಸಲಹೆ ನೀಡಿದವರು ಅವರು.

**ಉಪಸಭಾಪತಿ:** ಈ ಪ್ರದೇಶಗಳಿಗೆ ಈ ಕಲಮನ್ನು ಅನ್ವಯಿಸುವುದಕ್ಕೆ ಇದು ಸಕಾಲವಲ್ಲ.

**ಶ್ರೀ ಹುಸೇನ್ ಇಮಾಮ್:** ಸಮ್ಮತಿಯ ವಯಸ್ಸನ್ನು ಕಡಿಮೆಮಾಡಲಾಗಿದೆ.

**ಉಪಸಭಾಪತಿ:** ಪ್ರಾಯಃ ಅದು ಹಳೆಯ ಕಾಯಿದೆಯ ಸಮ್ಮತಿ ವಯಸ್ಸಿಗೆ ಹಿಂದಿರುಗುತ್ತದೆ, ಮತ್ತು ಈ ಎಲ್ಲ ಸುಧಾರಣೆಗಳನ್ನು ಆ ಪ್ರದೇಶಕ್ಕೆ ವಿಸ್ತರಿಸುವ ಬೇಡಿಕೆಯಿಲ್ಲ.

ಒಂದರಿಂದ ನಾಲ್ಕನೇ ಖಂಡಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಅನುಸೂಚಿಯನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಶೀರ್ಷಿಕೆ ಮತ್ತು ಕಾಯಿದೆ ಮಾಡುವ ಸೂತ್ರವನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:** ನಾನು ಮಂಡಿಸುವುದೇನೆಂದರೆ:

"ಈ ವಿಧೇಯಕವನ್ನು ಅಂಗೀಕರಿಸಬಹುದು."

**ಉಪಸಭಾಪತಿ:** ಮಸೂದೆ ಮಂಡಿಸಲ್ಪಟ್ಟಿದೆ.

ಈ ವಿಧೇಯಕವನ್ನು ಅಂಗೀಕರಿಸಬಹುದು.

**ಪ್ರೊ. ರಂಗಾ (ಮದ್ರಾಸ್):** ಮಾನ್ಯ ಮಂತ್ರಿಗಳು ಸಂಸತ್ತಿನಲ್ಲಿ ಈ ಸಂಗತಿಗಳು ಎದುರಾದಾಗ ಅಧ್ಯಯನ ಮಾಡಿ ಸಂಸತ್ತಿಗೆ ಸಲಹೆ ನೀಡುವ ಒಂದು ಕಾವಲು ಸ್ಥಾಯೀ ಸಮಿತಿಯನ್ನು ಸ್ಥಾಪಿಸಲು ಯೋಚಿಸಿದ್ದಾರೆಂದು ನಮಗೆ ತಿಳಿಸಿದ್ದು ನನಗೆ ಸಂತಸ ತಂದಿದೆ. ದುರದೃಷ್ಟವಶಾತ್ ಮಾನ್ಯ ಮಂತ್ರಿಗಳು ಅಂತಹ ಪ್ರಯತ್ನಗಳನ್ನು ಈ ಸದನದಲ್ಲೂ ಮಾಡುವ ಭರವಸೆಯನ್ನು ನೀಡಿಲ್ಲ. ನಮ್ಮ ಸರಕಾರದಿಂದಲೂ ಈ ಸ್ಥಾಯೀ ಸಮಿತಿಯು ಸ್ಥಾಪಿತವಾಗುವಂತೆ ವಿಳಂಬವಿಲ್ಲದೆ ಕ್ರಮಕೈಗೊಳ್ಳಬೇಕೆಂದು ಅವರನ್ನು ವಿನಂತಿಸುತ್ತೇನೆ.

**ಡಾ. ಅಂಬೇಡ್ಕರ್:** ನಾನದನ್ನು ಮನಸ್ಸಿನಲ್ಲಿಟ್ಟುಕೊಳ್ಳುತ್ತೇನೆ.

**ಉಪಸಭಾಪತಿ:** ವಿಷಯವೆಂದರೆ:

"ಈ ವಿಧೇಯಕವನ್ನು ಅಂಗೀಕರಿಸುವುದು."

ಮಸೂದೆಯನ್ನು ಅಂಗೀಕರಿಸಲಾಯಿತು.

ನಂತರ ಸದನವನ್ನು ಬುಧವಾರ, ೧೨–೦೪–೧೯೫೦ರ ೧೦.೪೫ರ ವರೆಗೆ ಮುಂದೂಡಲಾಯಿತು.

## ನಿರಸನಗೊಳಿಸುವ ಮತ್ತು ತಿದ್ದುಪಡಿಮಾಡುವ ವಿಧೇಯಕ

*__ಕಾನೂನು ಸಚಿವರು (ಡಾ ಅಂಬೇಡ್ಕರ್):__ ಮಾನ್ಯರೆ, ನನ್ನ ವಿಧೇಯಕವನ್ನು ಸರದಿ ತಪ್ಪಿಸಿ ತೆಗೆದುಕೊಳ್ಳಲು ತಮ್ಮ ಅನುಮತಿಯನ್ನು ಹೊಂದಲೇ?

**ಉಪಸಭಾಪತಿ:** ಸರಿ.

**ಡಾ ಅಂಬೇಡ್ಕರ್:** ನಾನು ಮಂಡಿಸಲು ಕೋರುವುದೇನೆಂದರೆ:

"ಕೆಲವು ತಿದ್ದುಪಡಿಗಳನ್ನು ನಿರಸನಗೊಳಿಸುವ ಮತ್ತು ಕೆಲವು ಕಾಯಿದೆಗಳನ್ನು ತಿದ್ದುಪಡಿಮಾಡುವ ವಿಧೇಯಕವನ್ನು ಪರಿಗಣಿಸಬಹುದು."

ಕಾಯಿದೆ– ಪುಸ್ತಕದಿಂದ ನಿರ್ಜೀವ ಅಂಶಗಳನ್ನು ಕಿತ್ತು ಹಾಕುವ ಉದ್ದೇಶಕ್ಕಾಗಿ ವಾರ್ಷಿಕವಾಗಿ ತರುವ ಮತ್ತು ಕೆಲವು ಕಾಯಿದೆಗಳಲ್ಲಿ ಕಂಡು ಬಂದ ತಪ್ಪುಗಳನ್ನು ತಿದ್ದುಪಡಿಮಾಡುವ ಅಥವಾ ಸರಿಪಡಿಸುವ ಉದ್ದೇಶ ಈ ವಿಧೇಯಕದ್ದು. ನಾನು ಮಾಡುವ ನಿಲುವಳಿಯ ಸಮರ್ಥನೆಗಾಗಿ ಇದಕ್ಕಿಂತ ಹೆಚ್ಚು ಹೇಳುವ ಅಗತ್ಯವಿದೆಯೆಂದು ನಾನು ಭಾವಿಸುವುದಿಲ್ಲ.

**ಉಪಸಭಾಪತಿ:** ನಿಲುವಳಿ ಮಂಡಿಸಲಾಗಿದೆ.

"ಕೆಲವು ತಿದ್ದುಪಡಿಗಳನ್ನು ನಿರಸನಗೊಳಿಸುವ ಮತ್ತು ಕೆಲವು ಕಾಯಿದೆಗಳನ್ನು ತಿದ್ದುಪಡಿಮಾಡುವ ವಿಧೇಯಕವನ್ನು ಪರಿಗಣಿಸತಕ್ಕದದ್ದು."

**ಶ್ರೀ ಹಿಮ್ಮತ್ ಸಿಂಗಾ (ಪಶ್ಚಿಮ ಬಂಗಾಳ):** ನಾನು ಮಾನ್ಯ ಕಾನೂನು ಸಚಿವರಿಗೆ ಸಲಹೆ ನೀಡುತ್ತಿರುವುದು ಇದನ್ನು. ಅವರು ಈಗ ಊರ್ಜಿತದಲ್ಲಿರುವ ಎಲ್ಲಾ ಕಾಯಿದೆಗಳನ್ನು ಪುಸ್ತಕ ರೂಪದಲ್ಲಿ ತರುವುದರ ಮೂಲಕ ಯಾವ ಕಾಯಿದೆಗಳು ಅಸ್ತಿತ್ವದಲ್ಲಿವೆ ಮತ್ತು ಯಾವುದಿಲ್ಲವೆಂದು ಗಮನಿಸುವುದಕ್ಕೆ

* P.D., ಸಂ. ೪, ಭಾಗ II, ೧೧ ಏಪ್ರಿಲ್ ೧೯೫೦, ಪು. ೨೭೭೬.

ಅನುವುಮಾಡುವ ಕ್ರಮ ಕೈಗೊಳ್ಳಬಹುದೇ? ಈಗ ಅದು ಬಹಳ ಕಷ್ಟವಾಗಿದೆ. ನಾವು ದಿನನಿತ್ಯ ಎಷ್ಟೋ ಕಾಯಿದೆಗಳನ್ನು ಅಂಗೀಕರಿಸುತ್ತೇವಾದ್ದರಿಂದ ಅದು ಯಾವ ಕಾಯಿದೆಯೆಂದು ತಿಳಿಯಲು ಅಥವಾ ಕಂಡುಹಿಡಿಯಲು ಬಹಳ ಕಷ್ಟವಿದೆ. ಆದ್ದರಿಂದ, ಅವರು ನನ್ನ ಸಲಹೆಯನ್ನು ಪರಿಗಣನೆಗೆ ಸ್ವೀಕರಿಸುವರೇ ಮತ್ತು ೧೯೪೯ರ ವರೆಗಿನ ಕಾಯಿದೆಗಳನ್ನು ಮುದ್ರಿಸುವರೇ?

**ಡಾ ಅಂಬೇಡ್ಕರ್:** ಅದು ನಡೆಯುತ್ತಲಿದೆ.

**ಉಪಸಭಾಪತಿ:** ವಿಷಯವೆಂದರೆ.

"ಕೆಲವು ತಿದ್ದುಪಡಿಗಳನ್ನು ನಿರಸನಗೊಳಿಸುವ ಮತ್ತು ಕೆಲವು ಕಾಯಿದೆಗಳನ್ನು ತಿದ್ದುಪಡಿಮಾಡುವ ವಿಧೇಯಕವನ್ನು ಪರಿಗಣಿಸತಕ್ಕದ್ದು."

ನಿಲುವಳಿಗಳನ್ನು ಅಂಗೀಕರಿಸಲಾಯಿತು.

ವಿಧೇಯಕಕ್ಕೆ ಒಂದರಿಂದ ನಾಲ್ಕನೇ ಖಂಡವನ್ನು ಸೇರಿಸಲಾಯಿತು.

ವಿಧೇಯಕಕ್ಕೆ ಒಂದು ಮತ್ತು ಎರಡನೇ ಅನುಸೂಚಿಗಳನ್ನು ಸೇರಿಸಲಾಯಿತು.

ಶೀರ್ಷಿಕೆ ಮತ್ತು ಕಾಯಿದೆ ಸೂತ್ರವನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಡಾ ಅಂಬೇಡ್ಕರ್:** ನಾನು ಮಂಡಿಸಲು ಕೋರುವುದೇನೆಂದರೆ;

" ಈ ವಿಧೇಯಕವನ್ನು ಅಂಗೀಕರಿಸತಕ್ಕದ್ದು."

ಉಪಸಭಾಪತಿ: ವಿಷಯವೆಂದರೆ:

"ಈ ವಿಧೇಯಕವನ್ನು ಅಂಗೀಕರಿಸತಕ್ಕದ್ದು".

ನಿಲುವಳಿಗಳನ್ನು ಅಂಗೀಕರಿಸಲಾಯಿತು.

◆

# ೧೬

## ಜನತಾ ಪ್ರಾತಿನಿಧ್ಯ ವಿಧೇಯಕ
## (ಸಭಾಪತಿಗಳ ಅಧ್ಯಕ್ಷತೆಯಲ್ಲಿ)

***ಕಾನೂನು ಸಚಿವರು (ಡಾ. ಅಂಬೇಡ್ಕರ್):** ಮಾನ್ಯರೆ, ಇಂದಿನ ಕಲಾಪಗಳಲ್ಲಿ ಸರದಿಯಲ್ಲಿ ನನ್ನ ಹೆಸರಿನಲ್ಲಿರುವ ವಿಧೇಯಕವನ್ನು ತಮ್ಮ ಅನುಮತಿಯೊಂದಿಗೆ ಮಂಡಿಸಲೇ? ಇದನ್ನು ಈ ಪೂರ್ವಾಹ್ನ ಮಾಡಲಾಗಲಿಲ್ಲ ಏಕೆಂದರೆ ಬೆಳಿಗ್ಗೆ ಈ ವಿಧೇಯಕದ ಮುದ್ರಿತ ಪ್ರತಿಗಳು ಲಭ್ಯವಿರಲಿಲ್ಲ. ವಿಧೇಯಕದ ಪ್ರತಿಗಳಿಲ್ಲದೆ ಅದರ ಮಂಡನೆಗೆ ಸದನವು ಆಕ್ಷೇಪವೆತ್ತಿದ್ದರಿಂದ ನಾನು ಕಾಯಬೇಕೆಂದು ಯೋಚಿಸಿದೆ.

**ಸಭಾಪತಿಗಳು:** ಸರಿ; ಅವರು ನಿಲುವಳಿಯನ್ನು ಮಂಡಿಸಬಹುದು. ಈ ವಿಚಾರವನ್ನು ತೆಗೆದು ಕೊಳ್ಳುವುದಿಲ್ಲವೆಂದು ನನಗೆ ತಿಳಿಸಲಾಯಿತು. ಆದ್ದರಿಂದ ನಾನು ಅದನ್ನು ದಾಟಿ ಮುಂದೆ ಹೋದೆ.

**ಡಾ ಅಂಬೇಡ್ಕರ್:** ಅದಕ್ಕೆ ಕಾರಣ, ನಾನು ಹೇಳಿದಂತೆ, ಮುದ್ರಿತ ಪ್ರತಿಗಳು ಲಭ್ಯವಿರಲಿಲ್ಲ.

"ಲೋಕಸಭೆ ಹಾಗೂ ರಾಜ್ಯಗಳ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಗಳ ಉದ್ದೇಶಕ್ಕಾಗಿ ಸ್ಥಾನಗಳನ್ನು ಕಾದಿರಿಸುವಿಕೆ, ಮತ್ತು ಕ್ಷೇತ್ರಗಳ ಪುನರ್ವಿಂಗಡನೆ; ಮತ್ತು ಅಂತಹ ಚುನಾವಣೆಗಳಲ್ಲಿ ಮತದಾರರ ಅರ್ಹತೆ, ಮತದಾರರ ಪಟ್ಟಿಯ ತಯಾರಿ ಮತ್ತು ಸಂಬಂಧಿತ ವಿಚಾರಗಳಿಗೆ ಅವಕಾಶ ಮಾಡಿಕೊಡುವ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ."

**ಸಭಾಪತಿ:** ವಿಷಯವೆಂದರೆ:

> "ಲೋಕಸಭೆ ಹಾಗೂ ರಾಜ್ಯಗಳ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಗಳ ಉದ್ದೇಶಕ್ಕಾಗಿ ಸ್ಥಾನಗಳನ್ನು ಕಾದಿರಿಸುವಿಕೆ, ಮತ್ತು ಕ್ಷೇತ್ರಗಳ ಪುನರ್ವಿಂಗಡನೆ; ಮತ್ತು ಅಂತಹ ಚುನಾವಣೆಗಳಲ್ಲಿ ಮತದಾರರ ಅರ್ಹತೆ, ಮತದಾರರ ಪಟ್ಟಿಯ ತಯಾರಿ ಮತ್ತು ಸಂಬಂಧಿತ ವಿಚಾರಗಳಿಗೆ ಅವಕಾಶ ಮಾಡಿಕೊಡುವ ವಿಧೇಯಕವನ್ನು ಮಂಡಿಸಲು ಅನುಮತಿ ಕೋರಲಾಗಿದೆ."

**ಡಾ ಅಂಬೇಡ್ಕರ್:** ನಾನು ವಿಧೇಯಕವನ್ನು ಮಂಡಿಸುತ್ತೇನೆ.

## ಜನತಾ ಪ್ರಾತಿನಿಧ್ಯ ವಿಧೇಯಕ– ಮುಂದುವರಿದದ್ದು.

****ಸಾರಿಗೆ ಮತ್ತು ರೈಲ್ವೆ ಖಾತೆಯ ರಾಜ್ಯ ಸಚಿವರು (ಶ್ರಿ ಸಂತಾನಂ):** ನಾನು ಮಂಡಿಸಲು ಕೋರುವುದೆನೆಂದರೆ:

---

* P.D., ಸಂ. ೪, ಭಾಗ II, ೧೭ ಏಪ್ರಿಲ್ ೧೯೫೦, ಪು. ೨೭೯೭–೯೮.

** P.D., ಸಂ. ೪, ಭಾಗ II, ೧೮ ಏಪ್ರಿಲ್ ೧೯೫೦, ಪು. ೩೦೦೦–೬.

"ಲೋಕಸಭೆ ಹಾಗೂ ರಾಜ್ಯಗಳ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಗಳ ಉದ್ದೇಶಕ್ಕಾಗಿ ಸ್ಥಾನಗಳನ್ನು ಕಾದಿರಿಸುವಿಕೆ, ಮತ್ತು ಕ್ಷೇತ್ರಗಳ ಪುನರ್ವಿಂಗಡನೆ; ಮತ್ತು ಅಂತಹ ಚುನಾವಣೆಗಳಲ್ಲಿ ಮತದಾರರ ಅರ್ಹತೆ, ಮತದಾರರ ಪಟ್ಟಿಯ ತಯಾರಿ ಮತ್ತು ಸಂಬಂಧಿತ ವಿಚಾರಗಳಿಗೆ ಅವಕಾಶ ಮಾಡಿಕೊಡುವ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಪರಿಗಣಿಸತಕ್ಕದ್ದು."

ನಾನು ಈ ಹಂತದಲ್ಲಿ ಮಾತನಾಡಲು ಇಚ್ಛಿಸುವುದಿಲ್ಲ.

ಚರ್ಚೆಯ ಅಂತ್ಯಕ್ಕೆ ಪ್ರಭಾರ ಸಚಿವರು ಹಾಜರಿರುತ್ತಾರೆ ಮತ್ತು ಅವರು ಉತ್ತರಿಸುತ್ತಾರೆ. ಅವರು ಹಾಜರಿಲ್ಲದಿದ್ದರೆ ನಾನು ಚರ್ಚೆಗೆ ಉತ್ತರಿಸುತ್ತೇನೆ.

**ಉಪಸಭಾಪತಿ:** ನಿಲುವಳಿ ಮಂಡನೆಯಾಗಿದೆ.

**ಶ್ರೀ ಭಾರತಿ (ಮದ್ರಾಸ್):** ಇದು ಬಹಳ ಮುಖ್ಯವಾದ ವಿಧೇಯಕ ಮತ್ತು ಈ ವಿಧೇಯಕದ ಪ್ರಭಾರ ಮಾನ್ಯ ಸಚಿವರು ಅತ್ಯಗತ್ಯವಾಗಿರುವ ಕೆಲವು ಅಂಶಗಳನ್ನು ವಿವರಿಸಿದರೆ ಅದು ಚರ್ಚೆಗೆ ಬಹಳ ಸಹಾಯವಾಗುತ್ತದೆ, ಹಾಗೂ ನಾವೂ ಅನಗತ್ಯವಾಗಿ ಚರ್ಚೆಯನ್ನು ಬೆಳೆಸಬೇಕೆಂದಿಲ್ಲ. ಮಾನ್ಯ ಸಚಿವರಾದ ಡಾ ಅಂಬೇಡ್ಕರ್ ಅವರು ಈಗ ತಾನೇ ಸದನಕ್ಕೆ ಬಂದಿದ್ದಾರೆ. ಅವರು ಇಲ್ಲದಿದ್ದರಿಂದ ಶ್ರೀ ಸತಾನಂ ಅವರು ಔಪಚಾರಿಕ ನಿಲುವಳಿಯನ್ನು ಮಂಡಿಸಿದರು. ಡಾ ಅಂಬೇಡ್ಕರ್ ಅವರು ಇಲ್ಲಿದ್ದಿದ್ದರೆ ಅವರು ಖಂಡಿತವಾಗಿಯೂ ಒಂದು ಉಪಯುಕ್ತ ಭಾಷಣವನ್ನು ಮಾಡುತ್ತಿದ್ದರು. ನಾನು ಡಾ ಅಂಬೇಡ್ಕರವರು ಮಾತನಾಡಿದ ನಂತರ ಮಾತನಾಡಲು ತಯಾರಿದ್ದೇನೆ. ಹೇಗಿದ್ದರೂ, ನಾನು ಅದನ್ನು ಸದನಕ್ಕೆ ಬಿಟ್ಟು ಬಿಡುತ್ತಿದ್ದೇನೆ.

**ಕಾನೂನು ಸಚಿವರು (ಡಾ ಅಂಬೇಡ್ಕರ್):** ಮಾನ್ಯರೆ, ಮೊದಲನೆಯದಾಗಿ ನಾನು ಸದನಕ್ಕೆ ತಡವಾಗಿ ಬಂದದ್ದಕ್ಕಾಗಿ ಈ ಸದನದ ಕ್ಷಮೆಯನ್ನು ಯಾಚಿಸಬೇಕು. ವಿಮಾ ವಿಧೇಯಕವು ಅಪರಾಹ್ನ ೪.೩೦ರೊಳಗೆ ಮುಗಿಯಲಾರದೆಂದೂ, ಒಂದು ಸಂದೇಶವನ್ನು ನನ್ನ ಕೊಠಡಿಗೆ ರವಾನಿಸಲಾಗುವುದೆಂದೂ ನನಗೆ ಹೇಳಲಾಯಿತು. . . . .

**ಶ್ರೀ ಕಾಮತ್ (ಮಧ್ಯಪ್ರದೇಶ):** ಬದುಕಿನಲ್ಲಿ ಯಾವಾಗಲೂ ಅಚ್ಚರಿಗಳಿರುತ್ತವೆ.

**ಡಾ ಅಂಬೇಡ್ಕರ್:** ವಿಧೇಯಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಸಹಜವಾಗಿಯೇ ಈ ವಿಧೇಯಕವು ನಾಲ್ಕು ಪ್ರಶ್ನೆಗಳನ್ನು ಚರ್ಚಿಸುತ್ತದೆ. ಮೊದಲನೆಯದಾಗಿ, ಅದು ವಿವಿಧ ರಾಜ್ಯಗಳ ಲೋಕಸಭೆಯ ಸ್ಥಾನಗಳ ಹಂಚಿಕೆಯನ್ನು ಚರ್ಚಿಸುತ್ತದೆ. ಎರಡನೆಯದಾಗಿ, ಅದು ರಾಜ್ಯ ಸಭೆಯ ಒಟ್ಟು ಸ್ಥಾನಗಳನ್ನು ನಿರ್ಧರಿಸುವ ಬಗ್ಗೆ ಚರ್ಚಿಸುತ್ತದೆ. ಮೂರನೆಯದಾಗಿ, ಅದು ಸಂಸತ್ತು ಹಾಗೂ ರಾಜ್ಯ ಶಾಸನಸಭೆಗಳ ಮತದಾದರ ನೊಂದಣಿಗೆ ಸಂಬಂಧಿಸಿದ ಪ್ರಶ್ನೆಗಳ ಕುರಿತು ಚರ್ಚಿಸುತ್ತದೆ. ಮತ್ತು ನಾಲ್ಕನೆಯದಾಗಿ ಈ ವಿಧೇಯಕವು ರಾಜ್ಯಗಳ ಶಾಸನ ಪರಿಷತ್ತುಗಳ ರಚನೆಯ ನಿರ್ಧಾರ ಮತ್ತು ಪರಿಷತ್ತುಗಳ ಮತದಾರರ ನೊಂದಣಿಯ ಕುರಿತು ಪ್ರಸ್ತಾವಿಸುತ್ತದೆ. ನಾನು ಈ ಅಂಶಗಳಲ್ಲಿ ಪ್ರತಿಯೊಂದನ್ನೂ ಪ್ರಸ್ತಾವಿಸುತ್ತೇನೆ ಮತ್ತು ಈ ವಿಧೇಯಕವು ನಿಜಕ್ಕೂ ಏನು ಮಾಡುತ್ತದೆಂಬುದನ್ನು ಈ ಸದನಕ್ಕೆ ವಿವರಿಸುತ್ತೇನೆ.

ಮೊದಲಿಗೆ ನಾನು ವಿವಿಧ ರಾಜ್ಯಗಳ ಲೋಕಸಭಾ ಸ್ಥಾನಗಳ ಹಂಚಿಕೆಯನ್ನು ವಿವರಿಸಲು ಬಯಸುತ್ತೇನೆ. ಈ ವಿಧೇಯಕವು ಪ್ರಸ್ತಾವಿಸಿದ ಹಂಚಿಕೆಯನ್ನು ಒಂದನೇ ಅನುಸೂಚಿಯಲ್ಲಿ ಕಾಣಿಸಲಾಗಿದೆ. ಸಂವಿಧಾನವು ೮೧ನೇ ವಿಧಿಯಡಿ ವಿವಿಧ ರಾಜ್ಯಗಳಿಗೆ ಸಂಸತ್ತಿನ ಸ್ಥಾನಗಳನ್ನು ಹಂಚುವ ಕುರಿತು

ಅನುಸರಿಸಬೇಕಾದ ನಿಯಮಗಳನ್ನು ಹೇಳುತ್ತದೆ. ನಾನು ಉಲ್ಲೇಖಿಸಿದ ನಿಯಮಗಳು ೮೧(೧) (ಬಿ) ಮತ್ತು ೮೧ (೧) (ಸಿ) ಯಲ್ಲಿ ಹೇಳಲಾಗಿದೆ. ಈ ವಿಧಿಯು ಹೇಳುವ ಮೊದಲ ನಿಯಮವೆಂದರೆ ಪ್ರತೀ ಕ್ಷೇತ್ರವು ಹೇಗೆ ನಿರ್ಧಾರಿತವಾಗಬೇಕೆಂದರೆ ೭೫೦,೦೦೦ ಜನ ಸಂಖ್ಯೆಯಲ್ಲಿ ಒಬ್ಬರಿಗಿಂತ ಹೆಚ್ಚು ಸದಸ್ಯರಿರಬಾರದು ಮತ್ತು ೫೦೦,೦೦೦ ಜನ ಸಂಖ್ಯೆಯಲ್ಲಿ ಒಬ್ಬರಿಗಿಂತ ಕಡಿಮೆ ಸದಸ್ಯರಿರಬಾರದು. ಈ ವಿಧಿಯು ಹೇಳುವ ಎರಡನೇ ನಿಯಮವೆಂದರೆ ಈ ಎರಡು ಗರಿಷ್ಠ ಮತ್ತು ಕನಿಷ್ಠ ಸಂಖ್ಯೆಗಳ ನಡುವೆ ನಿರ್ಧಾರವಾದ ಒಂದು ನಿಗದಿತ ಸಂಖ್ಯೆಯು ಎ ಮತ್ತು ಬಿ ಭಾಗದ ರಾಜ್ಯಗಳಿಗೆ ಸಂಬಂಧಿಸಿದಂತೆ ಭಾರತ ಪ್ರದೇಶದುದ್ದಗಲಕ್ಕೂ ಏಕರೂಪವಾಗಿರಬೇಕು. ಅದು ಸಂವಿಧಾನವು ನೀಡಿದಂತಹ ಸಾಮಾನ್ಯ ನಿರ್ದೇಶನವಾಗಿದ್ದು ಈ ವಿಧೇಯಕವು ಅದಕ್ಕೆ ಅನುಗುಣವಾಗಿರಬೇಕಾಗಿದೆ.

ಈ ವಿಧೇಯಕದಲ್ಲಿ ಸ್ಥಾನ ಹಂಚಿಕೆಯ ಉದ್ದೇಶಕ್ಕಾಗಿ ಸ್ವೀಕರಿಸಿದ ನಿಗದಿತ ಸಂಖ್ಯೆಯು ಪ್ರತೀ ೭೨೦,೦೦೦ ಜನಸಂಖ್ಯೆಗೆ ಒಬ್ಬ ಸದಸ್ಯನೆಂದಿದೆ. ಈ ಸಂಖ್ಯೆಯು ೭೫೦,೦೦೦ ಮತ್ತು ೫೦೦,೦೦೦ರ ನಡುವಿದೆ. ವಿವಿಧ ರಾಜ್ಯಗಳ ಸ್ಥಾನಗಳನ್ನು ಆಯಾ ರಾಜ್ಯದ ಒಟ್ಟು ಜನಸಂಖ್ಯೆಯನ್ನು ಈ ನಿಗದಿತ ಸಂಖ್ಯೆಯಾದ ೭೨೦,೦೦೦ ದಿಂದ ವಿಭಜಿಸಿ ಪಡೆಯಲಾಗಿದೆ ಮತ್ತು ಈ ವಿಧೇಯಕದ ಒಂದನೇ ಅನುಸೂಚಿಯಲ್ಲಿ ಪ್ರತೀ ರಾಜ್ಯದ ಒಟ್ಟು ಸ್ಥಾನಗಳ ಸಂಖ್ಯೆಯನ್ನು ಪಡೆಯುತ್ತೀರಿ. ಸಂವಿಧಾನದ ಸೂಕ್ತ ವಿಧಿಯಡಿ ರಾಷ್ಟ್ರಪತಿಗಳು ನೀಡಿದ ಆದೇಶದನ್ವಯ ಒಟ್ಟು ಜನಸಂಖ್ಯೆಯನ್ನು ೧೯೫೦ರ ಮಾರ್ಚಿ ೧ ರ ಅಂದಾಜಿನಲ್ಲಿ ನಿರ್ಣಯಿಸಲಾಗಿದೆ. ಅದು ವಿಧಿ ೩೪೭ ಎಂದು ನಾನು ಭಾವಿಸಿದ್ದೇನೆ.

**ಶ್ರೀ ಭಾರತಿ:** ವಿಧಿ ೩೮೭.

**ಡಾ ಆಂಬೇಡ್ಕರ್:** ವಿವಿಧ ರಾಜ್ಯಗಳ ಜನಸಂಖ್ಯೆಯ ಅಂದಾಜನ್ನು ತೋರಿಸಿದ ರಾಷ್ಟ್ರಪತಿಗಳ ಅಧಿಸೂಚನೆಯನ್ನು ಸದಸ್ಯರು ಹೊಂದಿದ್ದಾರೆಂದು ನಾನು ನಂಬುತ್ತೇನೆ. . . .

**ಶ್ರೀ ಭಾರತಿ:** ನಮ್ಮಲ್ಲಿ ಅದರ ಪ್ರತಿ ಇಲ್ಲ. ಅದನ್ನು ಯಾವಾಗ ಹೊರಡಿಸಲಾಯಿತು?

**ಡಾ ಅಂಬೇಡ್ಕರ್:** ಅದನ್ನು ೧೭ ಏಪ್ರಿಲ್ ೧೯೫೦ ರಂದು ಹೊರಡಿಸಲಾಯಿತು.

**ಶ್ರೀ ಭಾರತಿ:** ಅಂದರೆ ನಿನ್ನೆ ನಮಗೆ ಅದರ ಪ್ರತಿಗಳನ್ನು ಪೂರೈಸಿಲ್ಲ.

**ಡಾ ಅಂಬೇಡ್ಕರ್:** ನಾನು ತುಂಬಾ ವಿಷಾದಿಸುತ್ತೇನೆ. ಅದು ರಾಜ್ಯಪತ್ರದಲ್ಲಿದೆ. ನಾವು ಎಷ್ಟು ಅವಸರದಲ್ಲಿದ್ದೇವೆಂದರೆ ದೀರ್ಘ ವಿಳಂಬಕ್ಕೆ ಅವಕಾಶ ಇಲ್ಲ.

**ಡಾ ದೇಶ್‌ಮುಖ್ (ಮಧ್ಯಪ್ರದೇಶ):** ಮಾನ್ಯರೆ, ಜನಸಂಖ್ಯೆಯ ಅಂಕೆಸಂಖ್ಯೆಗಳು ಚರ್ಚೆಗೆ ಅಗತ್ಯ.

**ಡಾ ಅಂಬೇಡ್ಕರ್:** ಅವನ್ನು ಹಂಚಲಾಗುತ್ತದೆ ಎಂದು ಯೋಚಿಸಿದ್ದೇನೆ. ಆದರೂ ಅವನ್ನು ನಾನು ಓದಿದ್ದೇನೆ.

## ಎ ರಾಜ್ಯದ ಭಾಗಗಳು

| | | | | |
|---|---|---|---|---|
| ಅಸ್ಸಾಂ | ... | ... | ೮.೫೧ | ಮಿಲಿಯನ್ |
| ಬಿಹಾರ್ | ... | ... | ೩೯.೪೨ | ಮಿಲಿಯನ್ |
| ಬಾಂಬೆ | ... | ... | ೩೨.೬೮ | ಮಿಲಿಯನ್ |
| ಮಧ್ಯಪ್ರದೇಶ | ... | ... | ೨೦.೯೨ | ಮಿಲಿಯನ್ |
| ಮದ್ರಾಸ್ | ... | ... | ೫೪.೨೯ | ಮಿಲಿಯನ್ |
| ಒರಿಸ್ಸಾ | ... | ... | ೧೪.೪೧ | ಮಿಲಿಯನ್ |

| | | | | |
|---|---|---|---|---|
| ಪಂಜಾಬ್ | ... | ... | ೧೨.೬೧ | ಮಿಲಿಯನ್ |
| ಉ.ಪ್ರ | ... | ... | ೬೧.೬೨ | ಮಿಲಿಯನ್ |
| ಪಶ್ಚಿಮ ಬಂಗಾಳ | ... | ... | ೨೪.೩೨ | ಮಿಲಿಯನ್ |

ಬಿ ಭಾಗದ ಮತ್ತು ಸಿ ಭಾಗದ ರಾಜ್ಯಗಳ ಜನಸಂಖ್ಯೆಯ ಅಂಕೆ ಸಂಖ್ಯೆಗಳೊಂದಿಗೆ ನಾನು ಸದನಕ್ಕೆ ತೊಂದರೆ ನೀಡಬೇಕೆಂದು ನಾನು ತಿಳಿಯುವುದಿಲ್ಲ.

**ಶ್ರೀ ರಾಜ್ ಬಹದ್ದೂರ್** (ರಾಜಸ್ತಾನ್)**:** ನಮಗೆ ಅವು ಬೇಕು.

**ಡಾ: ಅಂಬೇಡ್ಕರ್** :

## ಬಿ ರಾಜ್ಯದ ಭಾಗಗಳು

| | | | | |
|---|---|---|---|---|
| ಹೈದರಬಾದ್ | ... | ... | ೧೭.೬೯ | ಮಿಲಿಯನ್ |
| ಜಮ್ಮು ಮತ್ತು ಕಾಶ್ಮೀರ | ... | ... | ೪.೩೭ | ಮಿಲಿಯನ್ |
| ಮಧ್ಯ ಭಾರತ | ... | ... | ೭.೮೭ | ಮಿಲಿಯನ್ |
| ಮೈಸೂರು | ... | ... | ೮.೦೬ | ಮಿಲಿಯನ್ |
| ಪಟಿಯಾಲ ಮತ್ತು ಪೂರ್ವ ಪಂಜಾಬ್ ರಾಜ್ಯಗಳ ಒಕ್ಕೂಟ | ... | ... | ೩.೩೨ | ಮಿಲಿಯನ್ |
| ರಾಜಸ್ಥಾನ್ | ... | ... | ೧೪.೬೯ | ಮಿಲಿಯನ್ |
| ಸೌರಾಷ್ಟ್ರ | ... | ... | ೩.೯೬ | ಮಿಲಿಯನ್ |
| ಟ್ರಾವಂಕೋರ್–ಕೊಚ್ಚಿನ್ | ... | ... | ೮.೫೮ | ಮಿಲಿಯನ್ |

## ಸಿ ರಾಜ್ಯದ ಭಾಗಗಳು

| | | | | |
|---|---|---|---|---|
| ಅಜ್‌ಮೀರ್ | ... | ... | ೦.೭೩ | ಮಿಲಿಯನ್ |
| ಭೂಪಾಲ್ | ... | ... | ೦.೮೫ | ಮಿಲಿಯನ್ |
| ಬಿಲಾಸ್‌ಪುರ | ... | ... | ೦.೧೩ | ಮಿಲಿಯನ್ |
| ಕೂರ್ಗ್ | ... | ... | ೦.೧೭ | ಮಿಲಿಯನ್ |
| ಡೆಲ್ಲಿ | ... | ... | ೧.೫೧ | ಮಿಲಿಯನ್ |
| ಹಿಮಾಚಲ ಪ್ರದೇಶ | ... | ... | ೧.೦೮ | ಮಿಲಿಯನ್ |
| ಕಚ್ | ... | ... | ೦.೫೫ | ಮಿಲಿಯನ್ |
| ಮಣಿಪುರ | ... | ... | ೦.೫೪ | ಮಿಲಿಯನ್ |
| ತ್ರಿಪುರ | ... | ... | ೦.೫೮ | ಮಿಲಿಯನ್ |
| ವಿಂಧ್ಯ ಪ್ರದೇಶ | ... | ... | ೩.೮೮ | ಮಿಲಿಯನ್ |

ಅದು ೧೯೫೦ ರ ಮಾರ್ಚ್ ೧ ರಂದು ಲೆಕ್ಕ ಹಾಕಿದ ಜನಸಂಖ್ಯೆ .

**ಶ್ರೀ ಕಾಮತ್:** ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ವಿಚಾರವೇನು?

**ಡಾ ಅಂಬೇಡ್ಕರ್:** ನಾನು ಇಲ್ಲಿ ಅವುಗಳ ಅಂಕೆಸಂಖ್ಯೆಗಳನ್ನು ಹೊಂದಿಲ್ಲ, ಮತ್ತು ಅವು ಈ ಯೋಜನೆಯ ಭಾಗವಾಗಿಲ್ಲ.

**ಶ್ರೀ ಭಾರತಿ:** ಅನುಸೂಚಿಯಲ್ಲಿ ಅಂಡಮಾನ್ಸ್‌ಗೆ ಸದಸ್ಯರನ್ನು ನೀಡಲಾಗಿದೆಯೇ?

**ಡಾ ಅಂಬೇಡ್ಕರ್:** ಹೌದು, ಆದರೆ ಅದು ಪ್ರತ್ಯೇಕ ವಿಚಾರವಾಗಿದೆ. ನಾನು ಆ ಕುರಿತು ಹೇಳುತ್ತೇನೆ. ನಾನು ಸದನಕ್ಕೆ ಎ ಭಾಗ, ಬಿ ಭಾಗ ಮತ್ತು ಸಿ ಭಾಗದ ಜನಸಂಖ್ಯೆಯನ್ನೂ ನೀಡಿದ್ದೇನೆ.

**ಡಾ ತೇಕ್ ಚಂದ್ (ಪಂಜಾಬ್):** ಇವು ೧೯೪೧ ರ ಜನಗಣತಿಯನ್ನು ಆಧರಿಸಿದ್ದೇ?

**ಡಾ ಅಂಬೇಡ್ಕರ್:** ಇವನ್ನು ಈ ಅನುಸೂಚಿಗಾಗಿ ಈ ವಿಚಾರದಲ್ಲಿ ಅಂತಿಮ ಪ್ರಾಧಿಕಾರವೆಂದು ತಿಳಿಯಬೇಕಾದ ಜನಗಣತಿ ಆಯುಕ್ತರಿಂದ ಈ ಅನುಸೂಚಿಯ ಉದ್ದೇಶಕ್ಕಾಗಿ ಲೆಕ್ಕ ಹಾಕಲಾಗಿದೆ; ಅವರು ಚುನಾವಣಾ ಆಯುಕ್ತರಿಗೆ ಆಧಾರವಾಗಿ ತೆಗೆದುಕೊಳ್ಳಬಹುದಾದ ನಿಗದಿತ ಅಂಕೆಸಂಖ್ಯೆಗಳು ಇವೆಂದು ಸಲಹೆ ನೀಡಿದ್ದಾರೆ.

**ಡಾ ತೇಕ್ ಚಂದ್:** ಅವನ್ನು ಹೇಗೆ ಲೆಕ್ಕ ಹಾಕಲಾಗಿದೆ?

**ಡಾ ಅಂಬೇಡ್ಕರ್:** ಅದನ್ನು ಈಗ ಹೇಳುವುದು ತುಂಬಾ ಕಷ್ಟ. ಅವನ್ನು ಸಂವಿಧಾನ (ಜನಸಂಖ್ಯಾ ನಿರ್ಣಯ) ಆದೇಶ ೧೯೫೦ರಲ್ಲಿ ವಿಧಿಸಿದ ರೀತಿಯಲ್ಲಿ ಲೆಕ್ಕ ಹಾಕಲಾಗಿದೆ, ಮತ್ತು ರಾಷ್ಟ್ರಪತಿಗಳು ಅವನ್ನು ಅಂಗೀಕರಿಸಿದ್ದಾರೆ.

ನಾನು ಹೇಳಿದಂತೆ ಒಂದನೇ ಅನುಸೂಚಿಯು ಲೋಕಸಭೆಗೆ ಸಂಬಂಧಿಸಿದೆ. ಭಾಗ ಎ ಮತ್ತು ಬಿ ರಾಜ್ಯದ ಸ್ಥಾನಗಳನ್ನು ಪ್ರತಿ ೭೨೦,೦೦೦ ಜನಸಂಖ್ಯೆಗೆ ಒಬ್ಬ ಸದಸ್ಯರ ಆಧಾರದಲ್ಲಿ ಲೆಕ್ಕ ಹಾಕಲಾಗಿದೆ. ಸಿ ಭಾಗಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ನೆನಪಿಡಬೇಕಾದುದೇನೆಂದರೆ ಸಿ ಭಾಗದ ರಾಜ್ಯಗಳ ಸ್ಥಾನಗಳ ನಿರ್ಣಯವನ್ನು ೮೨ನೇ ವಿಧಿಯಲ್ಲಿ ಮಾಡಲಾಗಿದೆ. ೮೨ನೇ ವಿಧಿಯ ೮೧ನೇ ವಿಧಿಯಲ್ಲಿ ನಿಗದಿ ಮಾಡಿದ ಎರಡು ನಿಯಮಗಳ ಬಂಧನವಿಲ್ಲದೆ ಅತ್ಯುತ್ತಮ ರೀತಿಯಲ್ಲಿ ತೀರ್ಮಾನ ಮಾಡುವುದನ್ನು ಕಾರ್ಯತಃ ಸಂಸತ್ತಿಗೆ ಬಿಟ್ಟಿದೆ. ಪರಿಣಾಮವಾಗಿ, ನಿಜ ಹೇಳಬೇಕೆಂದರೆ ಈ ನಿಗದಿತ ಅಂಕೆಸಂಖ್ಯೆಯಾದ ೭೨೦,೦೦೦ ಸಿ ಭಾಗದ ರಾಜ್ಯಗಳ ಸ್ಥಾನ ಹಂಚಿಕೆಗೆ ಆಧಾರವಾಗಿ ಮಾಡುವಂತಿಲ್ಲ ಏಕೆಂದರೆ ಆ ಆಧಾರದಲ್ಲಿ ಬಹುಪಾಲು ಆ ರಾಜ್ಯಗಳು ಸಂಸತ್ತಿನಲ್ಲಿ ಒಂದೂ ಸ್ಥಾನವನ್ನು ಪಡೆಯವು. ಪರಿಣಾಮವಾಗಿ ಏನು ಮಾಡಲಾಗಿದೆ ಎಂದರೆ ಅವರಿಗೆ ಎ ಭಾಗ ಮತ್ತು ಬಿ ಭಾಗದ ರಾಜ್ಯಗಳಗೆ ವಿಧಿಸಿದ ಯಾವುದೇ ನಿಯಮಗಳ ಬಂಧನವಿಲ್ಲದೆ ಸಂಸತ್ತಿನಲ್ಲಿ ಅವರ ಪ್ರಾತಿನಿಧ್ಯವಿರುವಂತೆ ಒಂದು ಸ್ಥಾನವನ್ನು ನೀಡಲಾಗಿದೆ.

**ಶ್ಯಾಮನಂದನ್ ಸಹಾಯ** (ಬಿಹಾರ್)**:** ಆದರೆ ಒಂದಕ್ಕಿಂತ ಹೆಚ್ಚು ಸ್ಥಾನಗಳಿರುವ ಪ್ರಕರಣಗಳಿಲ್ಲ?

**ಡಾ ಅಂಬೇಡ್ಕರ್:** ನಾನು ಆ ಕುರಿತು ಹೇಳುವವನಿದ್ದೆ.

ಡೆಲ್ಲಿಯ ಮಟ್ಟಿಗೆ ಒಂದು ವಿನಾಯಿತಿಯನ್ನು ಮಾಡಲಾಗಿದೆ. ಏಕೆಂದರೆ ಡೆಲ್ಲಿಗೆ ಮೂರು ಸ್ಥಾನಗಳನ್ನು ನೀಡಲಾಗಿದೆ.

**ಶ್ರೀ ರಾಜ್ ಬಹದ್ದೂರ್:** ಈ ವಿನಾಯಿತಿಯನ್ನು ಯಾಕೆ ಮಾಡಲಾಯಿತು?

**ಶ್ರೀ ಭಾರತಿ:** ಅದು ರಾಜಧಾನಿಯಾಗಿರುವುದರಿಂದ.

**ಡಾ ಅಂಬೇಡ್ಕರ್:** ಒಂದು ಕಾರಣವೆಂದರೆ ಸಿ ಭಾಗದ ಪಟ್ಟಿಯಲ್ಲಿರುವ ಇತರ ರಾಜ್ಯಗಳಿಗೆ ಹೋಲಿಸಿದರೆ ಡೆಲ್ಲಿಯು ಬಹುದೊಡ್ಡ ಜನಸಂಖ್ಯೆಯನ್ನು ಹೊಂದಿದೆ. ಡೆಲ್ಲಿಯ ಮಟ್ಟಿಗೆ ನಾನು ತೆಗೆದುಕೊಂಡ ಆಧಾರವೆಂದರೆ ೫೦೦,೦೦೦ ಜನಸಂಖ್ಯೆಗೆ ಒಂದು ಸ್ಥಾನ ಮತ್ತು ಆದ್ದರಿಂದ ಡೆಲ್ಲಿಯು ಮೂರು

ಸ್ಥಾನಗಳನ್ನು ಹೊಂದುತ್ತದೆ.

**ಕ್ಯಾಪ್ಟನ್ ಎ.ಪಿ.ಸಿಂಗ್ (ವಿಂಧ್ಯ ಪ್ರದೇಶ):** ಈ ೫೦೦,೦೦೦ ನಿಗದಿತ ಪ್ರಮಾಣವನ್ನು ವಿಂಧ್ಯ ಪ್ರದೇಶದ ಸಂದರ್ಭದಲ್ಲಿ ಆಧಾರವಾಗಿ ಏಕೆ ತೆಗೆದುಕೊಂಡಿಲ್ಲ? ವಿಂಧ್ಯ ಪ್ರದೇಶಕ್ಕೆ ೫ ಸ್ಥಾನಗಳನ್ನು ಮಾತ್ರ ನೀಡಲಾಗಿದೆ.

**ಡಾ ಅಂಬೇಡ್ಕರ್:** ವಿಂಧ್ಯ ಪ್ರದೇಶವು ಭಾರೀ ಜನಸಂಖ್ಯೆಯನ್ನು ಹೊಂದಿದೆ. ನಾನು ಹೇಳುವುದು ಏನು ಅಂದರೆ, ನಾವು ಎಲ್ಲಿ ಮೇಲ್‌ದರ್ಜೆಗೆ ಏರಿಸುವುದು ಅಗತ್ಯವೋ ಅಲ್ಲಿ ಮೇಲ್ದರ್ಜೆಗೆ ಏರಿಸಲು ಪ್ರಯತ್ನಿಸುತ್ತೇವೆ; ಎಲ್ಲಿ ಜನಸಂಖ್ಯೆ ಆಧಾರದಲ್ಲಿ ರಾಜ್ಯಕ್ಕೆ ಪ್ರಾತಿನಿಧ್ಯ ಸಿಗುತ್ತವೆಯೋ ಅಲ್ಲಿ ನಾವು ಮೇಲದರ್ಜೆಗೆ ಏರಿಸಲು ಪ್ರಯತ್ನಿಸುವುದಿಲ್ಲ; ಮತ್ತು ಎಲ್ಲಿ ಒಂದು ರಾಜ್ಯ ಯಾವುದೇ ಪ್ರಾತಿನಿಧ್ಯವನ್ನು ಪಡೆಯುವುದಿಲ್ಲವೋ ಅಲ್ಲಿ ಬಹು ಮಟ್ಟಿಗೆ ಮೇಲ್‌ದರ್ಜೆಗೆ ಏರಿಸುತ್ತೇವೆ. ಅದನ್ನು ನ್ಯಾಯಯುತ ಪರಿಗಣನೆಯಿಂದ ಮಾಡಬೇಕೇ ಹೊರತು ತರ್ಕದಿಂದಲ್ಲ. ಮತ್ತು ಅಗತ್ಯವಾಗಿ ಜನಸಂಖ್ಯೆಯಿಂದಲ್ಲ.

ಈಗ ನಾನು ಕಾಶ್ಮೀರದ ಬಗ್ಗೆ ಹೇಳುತ್ತೇನೆ. ಈ ಸದನ ಕಾಣಬಹುದಾದಂತೆ ಕಾಶ್ಮೀರದ ಮಟ್ಟಿಗೆ ಒಂದು ವಿಶೇಷ ಅಂಶವಿದ್ದು ಆ ಅಂಶವು ಬಹು ಮುಖ್ಯ ವಿಚಾರದಲ್ಲಿ ಭಿನ್ನವಾಗಿದೆ. ಮತ್ತು ಅದೆಂದರೆ ಕಾಶ್ಮೀರದ ಪ್ರತಿನಿಧಿಗಳು ಜನರಿಂದ ಆಯ್ಕೆಯಾಗುವುದಿಲ್ಲ. ಈಗ ಕಾಶ್ಮೀರದ ಮಟ್ಟಿಗೆ ಒಂದು ವಿನಾಯಿತಿಯನ್ನು ಮಾಡಲು ಕಾರಣ ಇದು. ಹಾಗೆ ಹೇಳುವುದಾದರೆ ಕಾಶ್ಮೀರವು ಒಂದು ಕ್ಷೀಣ ರೀತಿಯಲ್ಲಿ ಭಾರತದ ಭಾಗವಾಗಿದೆ. ಕಾಶ್ಮೀರಕ್ಕೆ ಸಂಬಂಧಿಸಿದ ವಿಧಿಯು ಹೇಳುವಂತೆ, ೧ನೇ ವಿಧಿಯು ಮಾತ್ರ ಅದಕ್ಕೆ ಅನ್ವಯಿಸುತ್ತದೆ, ಅಂದರೆ ಕಾಶ್ಮೀರವು ಭಾರತದ ಪ್ರದೇಶಗಳ ಭಾಗ. ಆ ವಿಧಿಯು ಹೇಳುವಂತೆ ಸಂವಿಧಾನದ ಇತರ ಅಂಶಗಳ ಅನ್ವಯವು ರಾಷ್ಟ್ರಪತಿಯವರನ್ನು ಅವಲಂಬಿಸಿದೆ. ಮತ್ತು ಅವರು ಕಾಶ್ಮೀರದ ರಾಜ್ಯದೊಂದಿಗೆ ಚರ್ಚಿಸಿ ಉಳಿದ ವಿಧಿಗಳನ್ನು ಸೂಕ್ತ ಮಾರ್ಪಾಡು ಮತ್ತು ಬದಲಾವಣೆಗಳೊಂದಿಗೆ ಅನ್ವಯಿಸಬಹುದು. ಮಾನ್ಯ ಸದನಕ್ಕೆ ಗೊತ್ತಿರುವಂತೆ ಈಗಾಗಲೇ ಕಾಶ್ಮೀರಕ್ಕೆ ಸಂಬಂಧಿಸಿದ ಒಂದು ಆದೇಶವಿದ್ದು ಅದರಲ್ಲಿ ರಾಷ್ಟ್ರಪತಿಗಳು ಕಾಶ್ಮೀರ ಸರಕಾರದೊಂದಿಗೆ ಚರ್ಚಿಸಿ ಕಾಶ್ಮೀರದ ಪ್ರತಿನಿಧಿಗಳನ್ನು ಆಯ್ಕೆ ಮಾಡತ್ತೇನೆಂದು ಹೇಳಿದರು. ಅದನ್ನು ಜನವರಿ ೨೬ ರಂದು ಹೊರಡಿಸಲಾಯಿತು ಎಂದು ನಾನು ಭಾವಿಸಿದ್ದೇನೆ. ಅದು ಹಾಗೆ ಇರುವುದರಿಂದ ವಿಧೇಯಕದಲ್ಲಿ ಕಾಣಿಸಿದ್ದಕ್ಕಿಂತ ಭಿನ್ನವಾಗಿ ಸಂಸತ್ತಿನಲ್ಲಿ ಕಾಶ್ಮೀರದ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಅಂಶವನ್ನು ರಚಿಸಲು ಈ ಸಂಸತ್ತಿನಲ್ಲಿ ಅವಕಾಶವಿಲ್ಲ. ಒಂದನ್ನೇ ಅನುಸೂಚಿಯು ಹೇಗೆ ಬಂತೆಂದು ತಿಳಿಯುವುದಕ್ಕೆ ಇದಕ್ಕಿಂತ ಹೆಚ್ಚಿನದ್ದೇನೂ ಬೇಡವೆಂದು ನಾನು ಭಾವಿಸುತ್ತೇನೆ.

ನಾನೀಗ ಎರಡನೇ ಅನುಸೂಚಿಯಲ್ಲಿ ತೋರಿಸಿದಂತಹ ರಾಜ್ಯ ಶಾಸನ ಸಭೆಗಳ ಒಟ್ಟು ಸ್ಥಾನಗಳನ್ನು ನಿರ್ಣಯಿಸುವ ಕುರಿತು ಹೇಳುತ್ತೇನೆ. ಈ ವಿಚಾರಕ್ಕೆ ಸಂಬಂಧಿಸಿದಂತೆಯೂ ನಾವು ೧೭೦ ನೇ ವಿಧಿಯ ಅಂಶಗಳನ್ನು ಸಮರಸಗೊಳಿಸಬೇಕಾಗುತ್ತದೆ. ಆ ವಿಧಿಯು ಎರಡು ನಿಯಮಗಳನ್ನು ಸಾರುತ್ತದೆ. ಒಂದು ನಿಯಮವೆಂದರೆ ಪ್ರತಿ ೭೫,೦೦೦ ಜನಸಂಖ್ಯೆಗೆ ಒಂದಕ್ಕಿಂತ ಹೆಚ್ಚು ಸ್ಥಾನವಿರಬಾರದು. ಎರಡನೇ ನಿಯಮವೆಂದರೆ ರಾಜ್ಯ ಶಾಸನ ಸಭೆಯ ಒಟ್ಟು ಸ್ಥಾನಗಳ ಸಂಖ್ಯೆಯು ಗರಿಷ್ಠ ೫೦೦ ಆಗಿರತಕ್ಕದ್ದು ಮತ್ತು ಕನಿಷ್ಠ ೬೦ ಇರತಕ್ಕದ್ದು. ಎರಡನೇ ಅನುಸೂಚಿಯನ್ನು ರಚಿಸುವಾಗ ಈ ಕೆಳಕಂಡ ಅಂಶಗಳನ್ನು ತೆಗೆದುಕೊಳ್ಳಲಾಗಿದೆ. ಮೊದಲನೆಯ ಪರಿಗಣನೆ ಎಂದರೆ ಯಾವುದೇ ಶಾಸನ ಸಭೆಯ ಒಟ್ಟು ಸ್ಥಾನಗಳ ಸಂಖ್ಯೆಯು ಅನಗತ್ಯವಾಗಿ ದೊಡ್ಡದಿರಬಾರದು ಎರಡನೇ ಪರಿಗಣನೆಯೆಂದರೆ ಪ್ರತಿ ರಾಜ್ಯ ಶಾಸನ

ಸಭೆಗೆ ನಿರ್ಣಯಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು ಸಂಸತ್ತಿನಲ್ಲಿ ರಾಜ್ಯದ ಪಾಲಿನ ಒಂದು ಸಾಮಾನ್ಯ ಅಪವರ್ತನವಾಗಿರಬೇಕು. ಈ ಎರಡನೇ ನಿಯಮವನ್ನು ಸ್ವೀಕರಿಸದಿರುವುದಕ್ಕೆ ಕಾರಣವೆಂದರೆ ಒಂದು ಇನ್ನೊಂದರ ಅಪವರ್ತನವಾಗಿರಬೇಕು. ಏಕೆಂದರೆ ಹೇಗೆ ಮಾಡುವುದರಿಂದ ೫೫ನೇ ವಿಧಿಯ ಅಂಶಗಳನ್ನು ಲೆಕ್ಕ ಹಾಕಲು ಸುಲಭವಾಗುತ್ತದೆ. ಮಾನ್ಯ ಸದಸ್ಯರು ಒಪ್ಪುವಂತೆ ೫೫ ನೇ ವಿಧಿಯು ವಿವಿಧ ರಾಜ್ಯಗಳಲ್ಲಿನ ಶಾಸನ ಸಭೆಗಳ ಒಟ್ಟು ಸದಸ್ಯತ್ವ ಭಿನ್ನವಾಗಿದ್ದರೂ ರಾಷ್ಟ್ರಪತಿಗಳ ಚುನಾವಣೆಯಲ್ಲಿ ಬಿದ್ದ ಮತಗಳು ಸಮಾನ ಮೌಲ್ಯವನ್ನು ಹೊಂದಿರಬೇಕೆಂದು ಹೇಳುತ್ತದೆ. ಈಗ ಈ ಸಮಾನ ಮೌಲ್ಯವು ಯಾವುದೇ ರಾಜ್ಯಗಳ ಶಾಸನ ಸಭೆಯ ಒಟ್ಟು ಸ್ಥಾನಗಳು ಆ ರಾಜ್ಯವು ಸಂಸತ್ತಿನಲ್ಲಿ ಹೊಂದಿದ ಸ್ಥಾನಗಳ ಸಂಖ್ಯೆಯ ಸಾಮಾನ್ಯ ಅಪವರ್ತನವಾಗಿದ್ದಲ್ಲಿ ಸರಳವಾಗಿಯೇ ಲೆಕ್ಕಹಾಕಲು ಸುಲಭವಿರುತ್ತದೆ ಎಂಬುದು ಕಂಡುಬರುತ್ತದೆ. ಇದಕ್ಕಾಗಿಯೇ ಸ್ಥಾನಗಳನ್ನು ಸೂಕ್ತವಾಗಿ ಹಂಚಲಾಗಿದೆ. ಹಾಗಾದರೂ ನೆನಪಿಡಬೇಕಾದುದೇನೆಂದರೆ ಎಲ್ಲಾ ಪ್ರಸಂಗಗಳಲ್ಲಿ ಈ ಅಪವರ್ತನವು ಒಂದೇ ಆಗಿರುವುದಿಲ್ಲ ಆದರೆ ಅಪವರ್ತನವು ಇದ್ದೇ ಇದೆ. ಎರಡನೇ ಅನುಸೂಚಿಯ ಸ್ಥಾನಗಳನ್ನು ಈ ರೀತಿಯಲ್ಲಿ ಲೆಕ್ಕ ಹಾಕಲಾಗಿದೆ.

**ಶ್ರೀ ಶ್ಯಾಮನಂದನ್ ಸಹಾಯ :** ಆದ್ದರಿಂದ ವಿವಿಧ ರಾಜ್ಯಗಳಲ್ಲಿ ರಾಜ್ಯ ಶಾಸನ ಸಭೆಗಳು ವಿವಿಧ ಸಂಖ್ಯೆಗಳನ್ನು ಹೊಂದಿರುತ್ತವೆ. ಇದು ನಿಗದಿತ ಸಂಖ್ಯೆಯಿರುವ ಸಂಸತ್ತಿಗಿಂತ ಭಿನ್ನವಾಗಿದೆ.

**ಡಾ ಅಂಬೇಡ್ಕರ್:** ಹೌದು ಗರಿಷ್ಠ ೫೦೦ ಮತ್ತು ಕನಿಷ್ಠ ೬೦, ಆದರೆ ವಿವಿಧ ರಾಜ್ಯಗಳಿಗೆ ವಿವಿಧ ಸಂಖ್ಯೆಯನ್ನು ನಿಗದಿ ಪಡಿಸಬಹುದು. ಸಂವಿಧಾನದಲ್ಲಿ ಯಾವುದೇ ಏಕರೂಪತೆಯನ್ನು ನಿಗದಿಪಡಿಸಿಲ್ಲ. ನಮಗೆ ವಿಶಾಲ ಮಿತಿಯಿದ್ದು ಅದರೊಳಗೆ ನಾವು ವಿವಿಧ ರಾಜ್ಯಗಳಿಗೆ ವಿವಿಧ ಸಂಖ್ಯೆಗಳನ್ನು ನಿಗದಿಪಡಿಸಬಹುದು.

**ಶ್ರೀ ಶ್ಯಾಮನಂದನ್ ಸಹಾಯ :** ವಿವಿಧ ರಾಜ್ಯಗಳಲ್ಲಿ ಯಾವ ಆಧಾರವನ್ನು ಇಟ್ಟುಕೊಂಡಿದ್ದೀವೆಂದು ನಾವು ತಿಳಿಯಬಹುದೇ? ಉದಾಹರಣೆಗೆ ಅಸ್ಸಾಮಿನಲ್ಲಿ ಪ್ರತಿ ಸ್ಥಾನಕ್ಕೆ ೧೦೦,೦೦೦ ಮತದಾರರು; ಬಿಹಾರದಲ್ಲಿ ೧೧೦,೦೦೦; ಉ.ಪ್ರ.ದಲ್ಲಿ ೧೨೦,೦೦೦ ಮತ್ತು ಹಾಗೆಯೇ?

**ಡಾ. ಅಂಬೇಡ್ಕರ್:** ನಾನು ನನ್ನ ಭಾಷಣವನ್ನು ಮುಗಿಸಿದ ನಂತರ ನೀವು ಆ ಪ್ರಶ್ನೆಯನ್ನು ನನಗೆ ಕೇಳಿದರೆ ನನಗೆ ವಿವರಿಸಲು ಸಾಧ್ಯವಾಗುತ್ತದೆ. ಇದಿಷ್ಟು ಸಂಸತ್ತಿನ ಮತ್ತು ವಿವಿಧ ರಾಜ್ಯಗಳ ಶಾಸನ ಸಭೆಗಳ ಸ್ಥಾನಗಳನ್ನು ನಿಗದಿ ಪಡಿಸುವುದಕ್ಕೆ.

ನಾನೀಗ ಮತದಾರರ ನೊಂದಣಿಯ ಕುರಿತು ಹೇಳುತ್ತೇನೆ. ಸಂಸತ್ತಿನ ಕ್ಷೇತ್ರಗಳ ಮತದಾರರ ನೊಂದಣಿಗೆ ಮತ್ತು ರಾಜ್ಯ ಶಾಸನ ಸಭೆ ಕ್ಷೇತ್ರಗಳಿಗೆ ಮತದಾರರ ನೊಂದಣಿಗಾಗಿ ಸ್ವೀಕರಿಸಲಾದ ತತ್ವಗಳು ಒಂದೇ ಆಗಿವೆ. ಅಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಪರಿಣಾಮವಾಗಿ ಸಂಸದೀಯ ಕ್ಷೇತ್ರಗಳ ಮತದಾರರ ನೋಂದಣಿಗೆ ಸಂಬಂಧಿಸಿದ ಅಂಶಗಳನ್ನು ನಾನು ವಿವರಿಸಿದರೆ ಸಾಕೆಂದು ನಾನು ಭಾವಿಸುತ್ತೇನೆ. ಮೊದಲ ತತ್ವವು ಪ್ರತಿ ಕ್ಷೇತ್ರವೂ ಚುನಾವಣೆ ನಡೆಸಲು ಆಧಾರವಾಗಿರತಕ್ಕ ಒಂದು ಮತದಾರರ ಯಾದಿಯನ್ನು ಹೊಂದಿರಬೇಕೆಂಬುದು ಈ ವಿಧೇಯಕದ ಹದಿನೈದನೇ ಖಂಡದಲ್ಲಿ ಹೇಳಲಾದ ತತ್ವವಾಗಿದೆ. ಆದ್ದರಿಂದ ಮತದಾರರ ಯಾದಿಯ ತಯಾರಿಯು ಒಂದು ಮಾಡಲೇಬೇಕಾದ ಸಂಗತಿ ಮತ್ತು ಚುನಾವಣೆಗೆ ಒಂದು ಪೂರ್ವಷರತ್ತು. ಎರಡನೇ ನಿಯಮವೆಂದರೆ ಮತದಾರರ ಯಾದಿಯಲ್ಲಿ ನೋಂದಣಿಯಾಗಬೇಕಾದರೆ ಒಬ್ಬ ವ್ಯಕ್ತಿಯು ಹದಿನಾರನೇ ಖಂಡದಲ್ಲಿ

ನಮೂದಿಸಿದ ಅನರ್ಹತೆಗಳಿಂದ ಬಾಧಿತನಾಗಿರಬಾರದು. ಆತನು ಭಾರತದ ನಾಗರಿಕನಲ್ಲದ ವ್ಯಕ್ತಿಯಾಗಿರಬಾರದು; ಅಥವಾ ಅಸ್ವಸ್ಥ ಮನಸ್ಸಿನ ಮನುಷ್ಯ ಅಥವಾ ಭ್ರಷ್ಟಾಚಾರ ಮತ್ತು ಚುನಾವಣಾ ಅಪರಾಧಗಳಲ್ಲಿ ತೊಡಗಿದವನಾಗಿರಬಾರದು, ಆಗ ಆತನು ಆ ಕ್ಷೇತ್ರದಲ್ಲಿ ದಾಖಲಿಸಿಕೊಳ್ಳಲು ಅಥವಾ ನೊಂದಣಿಯಾಗಲು ಅರ್ಹನಾಗುತ್ತಾನೆ. ನಂತರದ ನಿಯಮವೆಂದರೆ ಒಬ್ಬ ಮತದಾರನು ಒಂದು ಮತ್ತು ಒಂದು ಕ್ಷೇತ್ರದಲ್ಲಿ ಮಾತ್ರ ನೊಂದಣಿಯಾಗಬಹುದು. ಒಂದು ಕ್ಷೇತ್ರದಲ್ಲಾದರೂ ಆತ ಒಮ್ಮೆ ಮಾತ್ರ ನೊಂದಣಿಯಾಗಬಹುದು. ನಂತರ ನಾವು "ನೊಂದಣಿಯ ಷರತ್ತುಗಳು" ಎಂದು ಕರೆಯಲ್ಪಡುವ, ಹತ್ತೊಂಬತ್ತನೇ ಖಂಡದಲ್ಲಿ ನಮೂದಿಸಿದವುಗಳನ್ನು ತಿಳಿಸುತ್ತೇನೆ. ಅವುಗಳಲ್ಲಿ ಒಂದೆಂದರೆ ಆತನು 'ಅರ್ಹತೆಯ ಅವಧಿ'ಯೆಂದು ಕರೆಯಲ್ಪಡುವ ೧೮೦ ದಿವಸಗಳಿಗೆ ಕಡಿಮೆಯಿರದಂತೆ ಸಾಮಾನ್ಯ ನಿವಾಸಿಯಾಗಿರತಕ್ಕದ್ದು. ಎರಡನೆಯದು, ಅರ್ಹತೆಯಾಗುವ ದಿನಾಂಕದಂದು ಆತನು ಇಪ್ಪತ್ತೊಂದು ವರ್ಷ ವಯಸ್ಸಿಗೆ ಕಡಿಮೆಯವನಾಗಿರಬಾರದು.

ಈಗ, ಅರ್ಹತಾ ದಿನಾಂಕ ಮತ್ತು ಅರ್ಹತಾ ಅವಧಿಗೆ ಸಂಬಂಧಿಸಿದಂತೆ ವಸ್ತುಸ್ಥಿತಿಯನ್ನು ಸ್ವಲ್ಪ ಸ್ಪಷ್ಟಪಡಿಸಬೇಕಾದ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ. ವಿಧೇಯಕವನ್ನು ಓದಿದಾಗ ಈ ಸದನವು ಅರ್ಹತಾ ಅವಧಿ ಮತ್ತು ದಿನಾಂಕದ ಬಗ್ಗೆ ನಿಜಕ್ಕೂ ಎರಡು ವಿಭಿನ್ನ ಅಂಶಗಳಿವೆಯೆಂದು ಅರ್ಥ ಮಾಡಿಕೊಳ್ಳಬಹುದು. ಮೊದಲ ಮತದಾರರ ಯಾದಿಗೆ ಒಂದು ನಿಗದಿತ ಅವಧಿ ಮತ್ತು ಒಂದು ಅರ್ಹತಾ ದಿನಾಂಕವಿದೆ, ಮತ್ತು ನಂತರದ ಮತದಾರರ ಯಾದಿಯ ಅರ್ಹತಾ ಅವಧಿ ಮತ್ತು ದಿನಾಂಕಕ್ಕೆ ಇನ್ನೊಂದು ಅಂಶವಿದೆ.

ಈಗ, ಮೊದಲ ಮತದಾರರ ಯಾದಿಗೆ ಅರ್ಹತಾ ಅವಧಿಯ ೧೯೪೭ರ ಏಪ್ರಿಲ್ ೧ ರಿಂದ ೧೯೪೮ರ ಮಾರ್ಚ್ ೩೧ರ ವರೆಗೆ ಇದೆ. ಮೊದಲ ಮತದಾರರ ಯಾದಿಗೆ ಅರ್ಹತಾ ದಿನಾಂಕವು ೧೯೪೯ರ ಜನವರಿ ಒಂದನೇ ದಿನ ಈಗ ಮೊದಲ ಮತದಾರ ಯಾದಿಗೆ ಸಂಬಂಧಿಸಿದ ನಿಗದಿತ ಅವಧಿ ಹಾಗೂ ನಿಗದಿತ ದಿನಾಂಕದ ಬಗ್ಗೆ ನಾನು ಉಲ್ಲೇಖಿಸಿದ ಈ ಅಂಶಗಳು ನಿಜಕ್ಕೂ, ಹಾಗೆ ಹೇಳುವುದಾದರೆ, ಈಗ ನಮ್ಮ ನಿಯಂತ್ರಣದಲಿಲ್ಲ, ಏಕೆಂದರೆ ಅವನ್ನು ಸಂವಿಧಾನ ಸಭೆಯು ೧೯೫೦ರಲ್ಲಿ ಒಂದು ಗೊತ್ತಾದ ದಿನದಂದು ಚುನಾವಣೆ ನಡೆಯಬೇಕೆಂದು ಮತ್ತಿತರ ಠರಾವನ್ನು ಅಂಗೀಕರಿಸಿದ ಸಂದರ್ಭದಲ್ಲಿ ನಿರ್ಣಯಿಸಿದ್ದು ಮತ್ತು ಅದೇ ರೀತಿ ಮತದಾರರ ನೋಂದಣಿಗೆ ಹಾಗೂ ಮತದಾರರ ಯಾದಿಯ ತಯಾರಿಗೆ ಸಿದ್ಧತೆಯನ್ನು ಮಾಡಬೇಕಾಗಿದೆ. ಈಗ ಸಂವಿಧಾನ ಸಭೆಯು ಅಂಗೀಕರಿಸಿದ ನಿರ್ಣಯದ ಅಧಿಕಾರದನ್ವಯ ಎಷ್ಟು ಕಾರ್ಯ ನಡೆದಿದೆಯೆಂದರೆ ನಮಗೀಗ ಸಂವಿಧಾನ ಸಭೆಯು ಹಾಕಿಕೊಟ್ಟ ತಳಹದಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಸಾಧ್ಯವಿಲ್ಲ. ಆದರೆ ನಂತರದ ಮತದಾರರ ಯಾದಿಯ ಕುರಿತು ನಾವು ಅರ್ಹತಾ ಅವಧಿಯು ಪ್ರತೀ ವರ್ಷದ ಮಾರ್ಚ್ ಒಂದರ ಹಿಂದಿನ ಕ್ಯಾಲೆಂಡರ್ ವರ್ಷ ಮತ್ತು ಅರ್ಹತಾ ದಿನಾಂಕವು ಪ್ರತೀ ವರ್ಷದ ಮಾರ್ಚ್ ೧ ಎಂದು ಹೇಳಿದ್ದೇವೆ.

ಈಗ ವಾಸಸ್ಥಳದ ಅರ್ಹತೆಯ ಬಗ್ಗೆ, ಸದಸ್ಯರ ಮನಸ್ಸುಗಳಲ್ಲಿ ಬಹಳ ಗೊಂದಲಗಳಿವೆಯೆಂದು ನನಗೆ ಗೊತ್ತಿದೆ, ಮತ್ತು ಸದನದ ಗಮನವನ್ನು 'ಸಾಮಾನ್ಯವಾಗಿ ವಾಸಿಸುವ' ಎಂಬುವುದನ್ನು ನಿರೂಪಿಸುವ ಈ ವಿಧೇಯಕದ ಇಪ್ಪತ್ತನೇ ಖಂಡದತ್ತ ಸೆಳೆಯಲಿಚ್ಛಿಸುತ್ತೇನೆ. ನಾನು ಈ ವಿಚಾರದಲ್ಲಿ ಈ ಹಂತದಲ್ಲಿ ಯಾವುದೇ ಹೆಚ್ಚಿನ ಚರ್ಚೆಗಿಳಿಯುವುದಿಲ್ಲವಾದರೂ ಯಾವುದಾದರೂ ಅಂಶವನ್ನು ಎತ್ತಿದಲ್ಲಿ ನಾನು

ಮುಂದಿನ ವಿವರಣೆಯನ್ನು ನೀಡಲು ಸಂತೋಷಪಡುತ್ತೇನೆ. ಈ ಖಂಡದಲ್ಲೇ ಸೇನಾಪಡೆಗಳಲ್ಲಿ ಕೆಲಸಮಾಡುವ ಒಬ್ಬ ನಿರ್ದಿಷ್ಟ ವ್ಯಕ್ತಿಯ ಕ್ಷೇತ್ರ ಯಾವುದಿರಬೇಕೆಂದು ನಿರೂಪಿಸುವ ಅಥವಾ ಸೂಚಿಸುವ ಅಂಶವನ್ನು ಅಳವಡಿಸಲಾಗಿದೆ.

ಒಂದು ರಾಜ್ಯದಲ್ಲಿ ಕೆಲಸಮಾಡುತ್ತಿದ್ದಾರೆಂಬ ಮತ್ತು ಆ ರಾಜ್ಯವು ಅವರನ್ನು ಶಾಶ್ವತವಾಗಿ ಒಂದು ಕ್ಷೇತ್ರದಿಂದ ಇನ್ನೊಂದಕ್ಕೆ ವರ್ಗಾಯಿಸುತ್ತದೆ ಅಥವಾ ದೇಶದಿಂದ ಹೊರಗೆ ಕಳಿಸುತ್ತದೆಂಬ ವಿಷಯದ ಕಾರಣಕ್ಕೆ ವಾಸಸ್ಥಳವನ್ನು ಬದಲಾಯಿಸಬೇಕಾದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಯಾವ ಅಂಶವನ್ನೂ ಮಾಡಿಲ್ಲವೆಂಬ ವಿಚಾರದ ಬಗ್ಗೆ ಗಮನವನ್ನು ಸೆಳೆಯಲಾಯಿತು. ಈ ರೀತಿಯ ಪ್ರಸಂಗಗಳನ್ನು ನೋಡಿಕೊಳ್ಳಲು ಒಂದು ಅಂಶವನ್ನು ಸೇರಿಸುವುದು ಅಗತ್ಯವಾಗಬಹುದು ಮತ್ತು ನಾನು ಇಂತಹ ಪ್ರಸಂಗಗಳನ್ನು ನೋಡಿಕೊಳ್ಳಲು ಇಪ್ಪತ್ತನೇ ಖಂಡಕ್ಕೆ ಒಂದು ಉಪಖಂಡವನ್ನು ಸೇರಿಸಲು ಒಂದು ತಿದ್ದುಪಡಿಯನ್ನು ಮಂಡಿಸಲು ಪ್ರಸ್ತಾವಿಸುತ್ತೇನೆ.

ಈಗ ಮತದಾರರ ಯಾದಿಯ ತಯಾರಿಯ ಸಂಬಂಧ ಇನ್ನೊಂದು ಅಂಶದ ಕುರಿತು ಮಾನ್ಯ ಸದಸ್ಯರ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ಮೊದಲನೆಯದು ಇದು: ಈಗ ತಯಾರಿಸುವ ಪ್ರಸಕ್ತ ಯಾದಿಯು ೧೯೫೨ರ ಸೆಪ್ಟೆಂಬರ ೩೦ರವರೆಗೆ ಊರ್ಜಿತದಲ್ಲಿರುತ್ತದೆ. ಅಂದರೆ, ೧೯೫೨ರ ಸೆಪ್ಟೆಂಬರ ೩೦ರವರೆಗೆ ಯಾವುದಾದರೂ ಚುನಾವಣೆಯು ನಡೆದರೆ ಈಗ ತಯಾರಿಸಲಾಗುವ ಮತದಾರರ ಯಾದಿಯನ್ನು ಅದು ಹಳೆಯದಾಗಿದ್ದರೂ ಊರ್ಜಿತವೆಂದು ತಿಳಿಯಲಾಗುವುದಿಲ್ಲ, ಆದರೆ ಅದನ್ನು ತಪ್ಪಿಸುವಂತಿಲ್ಲ. ನಂತರದ ಮತದಾರ ಯಾದಿಗಳನ್ನು ಹೇಗಿದ್ದರೂ ಪ್ರತೀ ವರ್ಷ ತಯಾರಿಸಲಾಗುವುದು ಮತ್ತು ಅದು ೨೩ ಮತ್ತು ೨೪ನೇ ಖಂಡಗಳಿಂದ ಕಂಡುಬರುತ್ತದೆ. ಈ ಅಂಶವು ಮುಖ್ಯವಾಗಿದೆ ಏಕೆಂದರೆ ಒಂದು ಮತದಾರರ ಚುನಾವಣೆ ನಡೆಯುವ ದಿನಾಂಕದಿಂದ ಉದಾಹರಣೆಗೆ ಆರು ತಿಂಗಳು, ಅಥವಾ ಮೂರು ತಿಂಗಳಿಗಿಂತ ಹಳೆಯದಾಗಿರಬಾರದೆಂದು ಸಾಮಾನ್ಯವಾಗಿ ಒಪ್ಪಲಾಗಿದೆ. ಹಳೆಯ ಇಂಗ್ಲಿಶ್ ಕಾನೂನಿನಂತೆ ಪ್ರತೀ ಆರು ತಿಂಗಳಿಗೊಮ್ಮೆ ಮತದಾರರ ಯಾದಿಯನ್ನು ತಯಾರಿಸಲು ಅವಕಾಶವಿತ್ತು.

ಆದರೆ ಅವರಿಗೇ ಈ ಅಂಶವು ತುಂಬಾ ವೆಚ್ಚದ್ದೆಂದು ಅನ್ನಿಸಿ ಅವರೀಗ ಅದನ್ನು ಹನ್ನೆರಡು ತಿಂಗಳಿಗೆ ವಿಸ್ತರಿಸಿದ್ದಾರೆ. ಭಾರತ ಸರ್ಕಾರವು ವಯಸ್ಕರ ಮತದಾನ ಪದ್ಧತಿಯಡಿ ನಾವು ಹೊಂದುವ ಮಹಾನ್ ಮತದಾರ ಸಂಖ್ಯೆಯಲ್ಲಿ, ಒಂದು ವರ್ಷಕ್ಕೆ ಎರಡು ಬಾರಿ ಪುನರ್ವಿಮರ್ಶಿಸುದರ ವೆಚ್ಚ ಭಾರೀಯಾಗಿದೆಯೆಂದು ಭಾವಿಸಿದೆ ಮತ್ತು ಪರಿಣಾಮವಾಗಿ ನಾವು ಮತದಾರರ ಯಾದಿಯನ್ನು ವಾರ್ಷಿಕವಾಗಿ ಪುನರ್ವಿಮರ್ಶಿಸುವ ಸರಳ ವಿಧಾನವನ್ನು ಸ್ವೀಕರಿಸಿದ್ದೇನೆ. ನಾನು ಹೇಳಿದಂತೆ, ಈ ನಿಯಮಗಳು ಸಂಸತ್ ಕ್ಷೇತ್ರಗಳಿಗೆ ಅನ್ವಯಿಸುವಂತೆಯೇ ರಾಜ್ಯ ಶಾಸನ ಸಭೆಗಳ ಮತ್ತು ರಾಜ್ಯ ಪರಿಷತ್ತುಗಳ ಮತದಾರರ ಯಾದಿಯ ತಯಾರಿಕೆಗೂ ಅನ್ವಯಿಸಲಾಗಿದೆ ಮತ್ತು ಆದ್ದರಿಂದ, ನಾನು ಇಲ್ಲಿ ಅವನ್ನು ಉಲ್ಲೇಖಿಸುವ ಅಗತ್ಯವಿಲ್ಲ.

ನಂತರ ನಾನು ಪ್ರಾಂತಗಳ ಮೇಲ್ಮನೆಗಳ ರಚನೆಯನ್ನು ನೋಡಿಕೊಳ್ಳುವ ಈ ವಿಧೇಯಕದ ಕೊನೆಯ ಭಾಗಕ್ಕೆ ಬರುತ್ತೇನೆ. ಪ್ರಾಂತಗಳಲ್ಲಿ ಎರಡನೇ ಸದನವಿರಬೇಕೇ ಬೇಡವೇ ಎಂಬ ಬಗ್ಗೆ ಬಹಳ ಅಭಿಪ್ರಾಯ ಭೇಧವಿದೆಯೆಂಬುದನ್ನು ಮಾನ್ಯ ಸದಸ್ಯರು ನೆನಪಿನಲ್ಲಿಡಬಹುದು. ಸಂವಿಧಾನ ಸಭೆಯು ಈ ವಿಚಾರವನ್ನು ಸಂವಿಧಾನ ಸಭೆಯಲ್ಲಿದ್ದ ವಿವಿಧ ಪ್ರಾಂತೀಯ ಸಭೆಗಳ ಪ್ರತಿನಿಧಿಗಳ ಆಯ್ಕೆಗೆ

ಅವರೇ ತಮಗೆ ಎರಡನೇ ಸದನ ಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲು ಬಿಟ್ಟಿತು. ಕೆಲವು ಸದಸ್ಯರು ಅವರ ಪ್ರಾಂತಗಳಿಗೆ ಮೇಲ್ಮನೆಯಿರಬೇಕೆಂದು ತೀರ್ಮಾನಿಸಿದರು ಮತ್ತು ಇತರರು ತದ್ವಿರುದ್ಧವಾಗಿ ತೀರ್ಮಾನಿಸಿದರು. ಪರಿಣಾಮವಾಗಿ, ಸಂವಿಧಾನವು ಯಾವ ಪ್ರಾಂತಗಳ ಅಥವಾ ಯಾವ ರಾಜ್ಯಗಳ ಪ್ರತಿನಿಧಿಗಳು ಮೇಲ್ಮನೆಯನ್ನು ಹೊಂದಲು ಇಚ್ಛಿಸಿದ್ದಾರೊ ಆ ಪ್ರಾಂತಗಳಿಗೆ ಅಥವಾ ರಾಜ್ಯಗಳಿಗೆ ಮೇಲ್ಮನೆಯ ಅವಕಾಶವನ್ನು ಮಾಡಿಕೊಟ್ಟಿದೆ. ಈಗ ಸಂವಿಧಾನವು ಮೇಲ್ಮನೆಯು ಹೇಗೆ ರಚನೆಯಾಗಬೇಕೆಂಬುದನ್ನು ನಮೂದಿಸಿದೆ — ಅದು ೧೭೧ನೇ ವಿಧಿಯಲ್ಲಿ ಕಾಣಿಸುತ್ತದೆ. ಅಲ್ಲೂ ಕೂಡ, ಮೇಲ್ಮನೆಯ ರಚನೆಯ ಬಹುಪಾಲು ಸಂವಿಧಾನದಿಂದಲೇ ನಮೂದಿಸಲ್ಪಟ್ಟಿದೆ. ಒಟ್ಟು ಸದಸ್ಯತ್ವವು ಕೆಳಮನೆಯ ನಾಲ್ಕನೇ ಒಂದಕ್ಕಿಂತ ಹೆಚ್ಚಿರಬಾರದೆಂದೂ ಮತ್ತು ಕನಿಷ್ಠ ಸಂಖ್ಯೆಯು ನಾಲ್ವತ್ತಕ್ಕೆ ಕಡಿಮೆಯಿರಬಾರದೆಂದೂ ಅದು ಹೇಳುತ್ತದೆ.

ಇದು ೧೭೧ನೇ ವಿಧಿಯು ಹಾಕಿಕೊಟ್ಟ ಒಂದು ಸಿದ್ಧಾಂತ. ಹಾಕಿಕೊಟ್ಟ ಇನ್ನೊಂದು ಸಿದ್ಧಾಂತವು ವಿವಿಧ ಸಂವಿಧಾನಾತ್ಮಕ ಕ್ಷೇತ್ರಗಳಿಂದ ಮೇಲ್ಮನೆಗೆ ಆಯ್ಕೆಯಾಗಬೇಕಾದ ಒಟ್ಟು ಸ್ಥಾನಗಗಳನ್ನು ಹಂಚುವುದು. ಉದಾಹರಣೆಗೆ ಸಂವಿಧಾನವು ಕಾನೂನು ರೀತ್ಯಾ ನಿಗದಿ ಪಡಿಸಿದಂತೆ, ಮೂರನೇ ಒಂದು ಭಾಗ ಪುರಸಭೆಗಳು, ಜಿಲ್ಲಾ ಮಂಡಳಿಗಳು ಮತ್ತು ರಾಜ್ಯದ ಇತರ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗ ಬೇಕಾಗಿದೆ. ಮುಂದಕ್ಕೆ, ಹನ್ನೆರಡನೆಯ ಒಂದಂಶವು ಕನಿಷ್ಠ ಮೂರು ವರ್ಷಗಳಿಂದ ಪದವೀಧರರಾಗಿದ್ದು ಆ ರಾಜ್ಯದಲ್ಲಿ ವಾಸವಿರುವ ಜನರಿಂದ ಆಯ್ಕೆಯಾಗಬೇಕಾಗಿದೆ: ನಂತರ ಹನ್ನೆರಡನೆಯ ಒಂದಂಶ ರಾಜ್ಯದಿಂದ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿರುವ ಶಿಕ್ಷಕರಿಂದ ಆಯ್ಕೆಯಾಗಬೇಕಾಗಿದೆ; ಮೂರನೇ ಒಂದಂಶ ಶಾಸನ ಸಭೆಯಿಂದಲೇ; ಮತ್ತು ಉಳಿದವರನ್ನು ೧೭೧ನೇ ವಿಧಿಯ (೫)ನೇ ಖಂಡದಲ್ಲಿ ನಮೂದಿಸಿದ ವರ್ಗದ ಜನರಿಂದ ರಾಜ್ಯಪಾಲರು ನೇಮಕ ಮಾಡಬೇಕಾಗಿದೆ. ಪರಿಣಾಮವಾಗಿ ಸಂಸತ್ತಿಗೆ ಮಾಡಲು ನಿಜಕ್ಕೂ ಬಹಳ ಸ್ವಲ್ಪವಷ್ಟೇ ಉಳಿದಿದೆ. ವಸ್ತುಸ್ಥಿತಿಯಂತೆ, ಸಂಸತ್ತಿಗೆ ಮಾಡಲು ಉಳಿದಿರುವುದೆಂದರೆ, ಮೇಲ್ಮನೆಗೆ ಸದಸ್ಯರನ್ನು ಕಳುಹಿಸಲು ಕ್ಷೇತ್ರಗಳ ಉದ್ದೇಶಕ್ಕಾಗಿ ಆಯ್ಕೆಮಾಡಬೇಕಾದ ಇತರ ಸ್ಥಳೀಯ ಸಂಸ್ಥೆಗಳು ಯಾವುವು ಎಂದು ನಿರೂಪಿಸುವುದು. ನಿರೂಪಿಸಲು ಬಿಟ್ಟು ಹೋದ ಎರಡನೆಯ ವಿಚಾರವೆಂದರೆ ಪದವೀಧರನಿಗೆ ಸಮಾನವೇನೆಂಬುವುದನ್ನು ಒಬ್ಬಾತನು ವಿಶ್ವ ವಿದ್ಯಾಲಯದ ಪದವೀಧರನಾಗಿದ್ದಾಗ ಯಾವ ಪ್ರಶ್ನೆಯೂ ಉದ್ಭವಿಸುವುದಿಲ್ಲ; ಆದರೆ ವಿಶ್ವವಿದ್ಯಾಯಲಯಗಳಿಗೆ ಹೋಗದವರು ಮತ್ತು ಸಮಾನ ಅರ್ಹತೆಗಳನ್ನು ಹೊಂದಿದ ಇತರಿರಬಹುದು. ಆ ಸಮಾನವಾದ್ದು ಏನೆಂಬುದನ್ನು ತೀರ್ಮಾನಿಸುವುದು ಬಾಕಿಯಿದೆ. ಮೂರನೆಯದಾಗಿ, ಮತದಾರನೆಂದು ಅರ್ಹತೆ ಪಡೆಯಬೇಕಾದ ಅಧ್ಯಾಪಕರಿಗಾಗಿ ಶಿಕ್ಷಣ ಸಂಸ್ಥೆಯೆಂದರೇನೆಂದು ನಾವು ನಿರೂಪಿಸಬೇಕಾಗಿದೆ. ಮತ್ತು ಮತದಾರರ ನೋಂದಣಿಯನ್ನೂ ನಿಗದಿಪಡಿಸಬೇಕಾಗಿದೆ.

ನಾಲ್ಕನೆಯ ಅನುಸೂಚಿಯಲ್ಲಿ ಚುನಾವಣೆಗಳಲ್ಲಿ ಭಾಗವಹಿಸಬೇಕಾದ, ಪುರಸಭೆ ಮತ್ತು ಮಂಡಳಿಗಳಲ್ಲದ, ಸ್ಥಳೀಯ ಸಂಸ್ಥೆಗಳು ಯಾವುವೆಂದು ಕಾಣಿಸಲಾಗಿದೆ ಮತ್ತು ಇದನ್ನು ಮಾನ್ಯ ಸದಸ್ಯರು ೧೦ನೇ ಪುಟದಲ್ಲಿ ಕಾಣಬಹುದು. ಈ ಅನುಸೂಚಿಯನ್ನು ವಿವಿಧ ರಾಜ್ಯ ಸರಕಾರಗಳೊಂದಿಗೆ ಸಮಾಲೋಚಿಸಿ ತಯಾರಿಸಲಾಗಿದೆ. ಮಾನ್ಯ ಸದಸ್ಯರು ಕಾಣಬಹುದಾದಂತೆ ಎಲ್ಲಾ ಪ್ರಸಂಗಗಳಲ್ಲೂ ಪುರಸಭೆಗಳು ಮತ್ತು ಜಿಲ್ಲಾ ಮಂಡಳಿಗಳನ್ನು ನಿಗದಿಪಡಿಸಲಾಗಿದೆ.

ವಾಸ್ತವವಾಗಿ, ನಾವು ಸಂವಿಧಾನದಲ್ಲಿರುವ ಈ ಅಂಶಕ್ಕೆ ವಿರೋಧವಾಗಿ ಹೋಗುವಂತಿಲ್ಲ. ಅಲ್ಲಿ

ಕಾಣಿಸಲಾದ ಪ್ರತೀ ರಾಜ್ಯದಡಿಯಿರುವ ಇತರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾತ್ರ ಆ ನಿರ್ದುಷ್ಟ ಸಂಸ್ಥೆಯ 'ಸ್ಥಳೀಯ ಪ್ರಾಧಿಕಾರ'ವೆಂಬ ನಮೂದಿನಡಿ ಸೇರಿಸಬೇಕೇ ಬೇಡವೇ ಎಂಬ ಪ್ರಶ್ನೆ ಅಥವಾ ವಾದವು ಉದ್ಭವಾಗಬಹುದು.

ಪದವೀಧರನೆಂಬುದಕ್ಕೆ ಸಮಾನವಾದ್ದನ್ನು ಹುಡುಕುವಲ್ಲಿ ಮತ್ತು ಮತಹಾಕಲು ಒಬ್ಬ ಅಧ್ಯಾಪಕನಿಗೆ ಅರ್ಹತೆ ನೀಡುವ ಶಿಕ್ಷಣ ಸಂಸ್ಥೆಯನ್ನು ನಿರೂಪಿಸುವಲ್ಲಿ, ಈ ವಿಚಾರವನ್ನು ರಾಜ್ಯ ಸರಕಾರವೇ ಚುನಾವಣಾ ಆಯೋಗದ ಅನುಮೋದನೆಯೊಂದಿಗೆ ತೀರ್ಮಾನಿಸಲು ಬಿಡುವುದು ಅತ್ಯುತ್ತಮವೆಂದು ಭಾವಿಸಲಾಗಿದೆ. ಈಗ ನಮಗೆ ಅಥವಾ ಕೇಂದ್ರಕ್ಕೆ ಪ್ರತೀ ನಿರ್ದುಷ್ಟ ರಾಜ್ಯದಲ್ಲಿ ವಾಸ್ತವವಾಗಿ ತಾಂತ್ರಿಕ ಪದಗಳಲ್ಲಿ ಪದವೀಧರನಲ್ಲದಿದ್ದರೆ ಯಾರನ್ನು ಪದವೀಧರನೆಂದು ಪರಿಗಣಿಸಬೇಕು ಎಂದು ನಿರೂಪಿಸುವುದು ಸಾಧ್ಯವೆಂದು ನನಗನ್ನಿಸುವುದಿಲ್ಲ.

**ಶ್ರೀ ಎ.ಪಿ.ಜೈನ್ (ಉತ್ತರ ಪ್ರದೇಶ):** ನಾನೊಂದು ಪ್ರಶ್ನೆ ಕೇಳಲೇ? ರಾಜ್ಯ ಲೋಕಸೇವಾ ಆಯೋಗ ಕೇಂದ್ರ ಲೋಕ ಸೇವಾ ಆಯೋಗವು ಪದವೀಧರನೆಂದು ಮಾನ್ಯ ನೀಡಿದ ವ್ಯಕ್ತಿಯನ್ನು ಈ ಕಾನೂನಿನಡಿ ಪದವೀಧರನೆಂದು ನೀವು ನೀಡುವಿರಾ?

**ಡಾ. ಅಂಬೇಡ್ಕರ್:** ವಿಷಯವೇನೆಂದರೆ ಸಂವಿಧಾನದಡಿ ಎಲ್ಲಾ ಚುನಾವಣಾ ವಿಚಾರಗಳು ನಿಜಕ್ಕೂ ಚುನಾವಣಾ ಆಯೋಗಕ್ಕೆ ಸಂಬಂಧಪಟ್ಟವು ಮತ್ತು ಚುನಾವಣಾ ಆಯೋಗವು ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಾಗಿ ಲೋಕಸೇವಾ ಆಯೋಗ ಅಥವಾ ಇನ್ಯಾವುದೇ ಸಂಸ್ಥೆಯ ಸಲಹೆಯನ್ನು ಕೇಳಬೇಕೆಂದರೆ ಅದನ್ನು ಯಾರಿಗೂ ತಡೆಯಲು ಸಾಧ್ಯವಿಲ್ಲ. ಆದರೆ ಅಂತಿಮ ಅಧಿಕಾರವು ಚುನಾವಣಾ ಆಯೋಗದ ಅನುಮೋದನೆಗೆ ಒಳಪಟ್ಟು ರಾಜ್ಯ ಸರಕಾರದ್ದೇ ಆಗಿರುತ್ತದೆ.

ವಿವರಣೆ ಬೇಕಾದ ಇನ್ಯಾವುದೇ ಅಂಶವಿದೆಯೆಂದು ನನಗನ್ನಿಸುವುದಿಲ್ಲ. ಇವು ವಿಧೇಯಕದ ಮುಖ್ಯ ಅಂಶಗಳು ಮತ್ತು ಈ ಸಂದರ್ಭಗಳಲ್ಲಿ ಅವು ಅತೀ ಸೂಕ್ತವೆಂದು ಈ ಸದನವು ಕಂಡುಕೊಳ್ಳುತ್ತದೆಂದು ನಾನು ಆಶಿಸುತ್ತೇನೆ.

**ಶ್ರೀ ಆರ್.ಕೆ. ಚೌಧುರಿ (ಅಸ್ಸಾಮ್):** ಈಗ ಭಾರತಕ್ಕೆ ಬಂದ ನಿರಾಶ್ರಿತ ಜನರ ವಿಚಾರವೇನು?

**ಡಾ. ಅಂಬೇಡ್ಕರ್:** ನೀವು ಆ ವಿಚಾರವನ್ನು ಎತ್ತಿರುವುದರಿಂದ ನಾನು ಅದನ್ನು ಈಗ ವಿವರಿಸುತ್ತೇನೆ. ಖಂಡ ೨೦(೬)ರಲ್ಲಿ ನೀವು ಕಾಣುವಂತೆ ಯಾರೇ ಆಗಲಿ ೧೯೪೯ರ ಜುಲೈ ೨೫ರ ಮೊದಲು ಭಾರತಕ್ಕೆ ಬಂದಿದ್ದರೆ ಅಂತಹವನು ಆ ದಿನಾಂಕಕ್ಕೆ ವಾಸ ಮಾಡುತ್ತಿದ್ದ ಕ್ಷೇತ್ರದಲ್ಲಿ ಅಥವಾ ಆತನು ತನ್ನ ಕ್ಷೇತ್ರವೆಂದು ಸೂಚಿಸುವ ಇನ್ಯಾವುದೇ ಕ್ಷೇತ್ರದಲ್ಲಿ ಮತದಾರನೆಂದು ನೋಂದಣಿಯಾಗಲು ಅರ್ಹನಾಗುತ್ತಾನೆಂಬ ಅಂಶವನ್ನು ಸೇರಿಸಿದ್ದೇವೆ.

**ಶ್ರೀ ತ್ಯಾಗಿ (ಉತ್ತರ ಪ್ರದೇಶ):** ಈಗ, ೧೯೫೦ರಲ್ಲಿ ಬರುತ್ತಿರುವವರ ಪಾಡೇನು?

**ಡಾ. ಅಂಬೇಡ್ಕರ್:** ಅದನ್ನು ನಾವು ಮಾಡಲಾರೆವು, ಏಕೆಂದರೆ ನಮ್ಮ ಸಂವಿಧಾನದಲ್ಲಿ ಒಬ್ಬ ಮತದಾರನು ಪ್ರಜೆಯಾಗಿರತಕ್ಕದ್ದು. ಮತ್ತು ನಮ್ಮ ನಾಗರಿಕತ್ವದ ಖಂಡವು ನಾಗರಿಕತ್ವವನ್ನು ಆರಂಭದಿಂದ ಎಂದು ನಿರೂಪಿಸುತ್ತದೆ. ಆ ದಿನಾಂಕದ ನಂತರ ಬಂದವರ ಸ್ಥಿತಿಯನ್ನು ನಿಯಂತ್ರಿಸುವ ಒಂದು ಹೊಸ ನಾಗರಿಕತ್ವ ಕಾನೂನನ್ನು ನಾವು ಹೊಂದದಿದ್ದರೆ ಅವರು ಮತದಾನದ ಹಕ್ಕಿಲ್ಲದೆ ಹೋಗಬಹುದೆಂದು ನಾನು ಹೇಳುತ್ತೇನೆ. ಅವರಿಗೆ ಯಾವ ಸಹಾಯವೂ ದೊರಕದು.

*ಶ್ರೀ ಎಂ.ಎ.ಅಯ್ಯಂಗಾರ್:** . . . ಆದ್ದರಿಂದ, ನಾನು ಸಲಹೆ ಮಾಡುವುದೇನೆಂದರೆ, ಪರಿಶೀಲನಾ ಸಮಿತಿಯ ವ್ಯಾಪ್ತಿಗೆ ಯಾವುದೇ ನಿಲುವಳಿಯನ್ನು ಔಪಚಾರಿಕವಾಗಿ ಮಂಡಿಸದಿದ್ದರೂ, ನಾವು ದುಂಡುಮೇಜಿನ ಸುತ್ತ ಕುಳಿತು ಈಗ ಸಲಹೆ ಮಾಡಿದ ತಿದ್ದುಪಡಿಗಳನ್ನು ಅವುಗಳ ಯೋಗ್ಯತಾನುಸಾರ ಪರಿಗಣಿಸಿ ಅಗತ್ಯವಿದ್ದಲ್ಲಿ ಅಳವಡಿಸಿಕೊಳ್ಳಬಹುದು. ನಾವು ಈಗ ಈ ನಡವಳಿಕೆಗಳನ್ನು ಮುಂದೂಡಿ ನಾಳೆ ಮುಂದುವರಿಸಬಹುದು.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಮಾನ್ಯರೆ, ನಾನು ಕೆಲವು ಸಂಗತಿಗಳನ್ನು ವಿವರಿಸಲೇ? ಪರಿಶೀಲನಾ ಸಮಿತಿಯ ಕುರಿತ ಈ ಅಂಶವನ್ನು ಚರ್ಚಿಸುವುದಕ್ಕಾಗಿ ನಾನು ಈ ಚರ್ಚೆಯಲ್ಲಿ ಪ್ರವೇಶಿಸಲೇ?

**ಸಭಾಪತಿ:** ಸರಿ. ನಾನು ಸಭಾಧ್ಯಕ್ಷ ಸ್ಥಾನದಲ್ಲಿಲ್ಲದಿದ್ದಾಗ ಏನು ನಡೆಯಿತ್ತೆಂಬ ಬಗ್ಗೆ ನಮಗೆ ಮಾಹಿತಿಯಿಲ್ಲವಾದರೂ ಉಪ ಸಭಾಪತಿಯವರು ಹೇಳಿದ ಆಧಾರದಿಂದ ಮತ್ತು ಈಗ ತಾನೇ ಅವರು ಹೇಳಿದ್ದನ್ನು ಕೇಳಿದ ನಂತರ ನನಗೆ ಸಾಕಷ್ಟು ಕಲ್ಪನೆಯಿದೆ.

ಆದ್ದರಿಂದ, ಪರಿಶೀಲನಾ ಸಮಿತಿಗಾಗಿ ಮಾಡಿರುವ ಬೇಡಿಕೆಯು ಎಲ್ಲಾ ವಿವಿಧ ಅಂಶಗಳ ಸರಿಯಾದ ಪರಿಗಣನೆಯಾಗಿರುವುದರಿಂದ ಆ ಬೇಡಿಕೆಯನ್ನು ಮೆಚ್ಚಬಹುದು. ಅದು ನಿಜಕ್ಕೂ ಅಲ್ಲಿಗೆ ಬರುತ್ತದೆ.

**ಡಾ. ಅಂಬೇಡ್ಕರ್:** ಪರಿಶೀಲನಾ ಸಮಿತಿಗಾಗಿ ಯಾವ ನಿಲುವಳಿಯೂ ಇಲ್ಲ.

****ಶ್ರೀ ಸಂತಾನಮ್:** ಪರಿಶೀಲನಾ ಸಮಿತಿಯು ಮೂವತ್ತು ಅಥವಾ ನಾಲ್ವತ್ತರಷ್ಟು ದೊಡ್ಡ ಸಂಖ್ಯೆಯ, ತೀವ್ರ ಆಸಕ್ತಿಯುಳ್ಳ ಮತ್ತು ಕೆಲವು ತಿದ್ದುಪಡಿಗಳನ್ನು ಒತ್ತಾಯಿಸುವ ಮಂದಿಯದ್ದಾಗಿರಬೇಕು. ನಾಳೆ ನಾವು ಪರಿಶೀಲನಾ ಸಮಿತಿ ಪ್ರಸ್ತಾವವನ್ನು ಚರ್ಚಿಸಬಹುದು.

**ಸಭಾಪತಿ:** ಅದು ಔಪಚಾರಿಕ, ತಾಂತ್ರಿಕ ಪರಿಶೀಲನಾ ಸಮಿತಿಯೇ, ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಲಿಚ್ಛಿಸುವ ಮೂವತ್ತು, ನಲ್ವತ್ತು ಅಥವಾ ಐವತ್ತು ಸದಸ್ಯರ ಅನೌಪಚಾರಿಕ ಸಭೆಯೇ, ನನಗೆ ಆಸಕ್ತಿಯಿರುವುದು ಸಾಧ್ಯವಾದ ಮಟ್ಟಿಗೆ ಎಲ್ಲರಿಗೂ ತಮ್ಮ ನಿಲುವನ್ನು ಮತ್ತು ತಾವು ಅನುಭವಿಸುವ ತೊಡಕುಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡಬೇಕು. ಅದನ್ನು ಮಾಡಿದರೆ ನಮ್ಮ ಉದ್ದೇಶವು ಈಡೇರುವುದೆಂದು ನಾನು ತಿಳಿಯುತ್ತೇನೆ. ನಾವೀಗ ಸಭೆಯನ್ನು ಮುಂದೂಡಿ ನಾಳೆ ಮಧ್ಯಾಹ್ನ ೨.೩೦ ಕ್ಕೆ ಸೇರೋಣವೆಂದು ನಾನು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್:** ಮಾನ್ಯರೆ ಪರಿಶೀಲನಾ ಸಮಿತಿಯು ಏನು ಮಾಡಬಹುದು ಮತ್ತು ಅದು ಮಾಡಲು ಸಾಧ್ಯವಿಲ್ಲದ್ದೇನು ಎಂಬುದನ್ನು ನಿಖರವಾಗಿ ಈ ಸದನಕ್ಕೆ ನಾನು ಹೇಳುವುದು ಉಚಿತವೆಂದು ತಿಳಿಯುತ್ತೇನೆ. ಪರಿಶೀಲಾನಾ ಸಮಿತಿ ಏನನ್ನು ಮಾಡಬಹುದು ಮತ್ತು ಏನನ್ನು ಮಾಡಲಾರದು ಎಂಬುದರ ಬಗ್ಗೆ ಸದನವನ್ನು ಕತ್ತಲಲ್ಲಿಟ್ಟು ಅಂತಹ ಯಾವುದೇ ನಿಲುವಳಿಗೆ ಒಪ್ಪುವುದು ನನ್ನ ಪಾಲಿನ ತಪ್ಪಾಗುತ್ತದೆಯೆಂದು ನಾನು ಭಾವಿಸುತ್ತೇನೆ. ನನ್ನ ಮಾತುಗಳು ಸದನಕ್ಕೆ ಚರ್ಚೆಗೆ ಉಳಿದಿರುವ ಅಂಶಗಳ ದೃಷ್ಟಿಯಿಂದ ಪರಿಶೀಲನಾ ಸಮಿತಿಯಿರುವುದು ಉಚಿತವೇ ಎಂದು ನಿರ್ಧರಿಸಲು ಸಾಧ್ಯವಾಗುತ್ತದೆಯೆಂದು ನಾನು ಭಾವಿಸುತ್ತೇನೆ.

---

* P.D., ಸಂ. ೪, ಭಾಗ II, ೧೯ ಏಪ್ರಿಲ್ ೧೯೫೦, ಪು. ೩೦೫೧.

** P.D., ಸಂ. ೪, ಭಾಗ II, ೧೯ ಏಪ್ರಿಲ್ ೧೯೫೦, ಪು. ೩೦೫೨–೫೪.

ನನಗೆ ಖಚಿತವಾಗಿರುವ ಮೊದಲ ಸಂಗತಿಯೆಂದರೆ ಪರಿಶೀಲನಾ ಸಮಿತಿಯು ಅರ್ಹತಾ ಅವಧಿ ಮತ್ತು ಅರ್ಹತಾ ದಿನಾಂಕಕ್ಕೆ ಸಂಬಂಧಿಸಿದ ಅಂಶಗಳನ್ನು ಬದಲಾಯಿಸಲು ಶಕ್ತವಾಗುವುದಿಲ್ಲ. ಎಷ್ಟೇ ಇಚ್ಛೆಯಿದ್ದರೂ, ಅದು ಸಾಧ್ಯವಾಗಲಾರದು ಎಂದು ನಾನು ಭಾವಿಸುತ್ತೇನೆ ಏಕೆಂದರೆ, ಈ ಸದನದ ಪ್ರತೀ ಸದಸ್ಯರಿಗೂ ನೆನಪಿರುವಂತೆ ನಾವು ಗೊತ್ತಾದ ಸಮಯದಲ್ಲಿ ಚುನಾವಣೆಗಳು ನಡೆಯಬೇಕೆಂದು ಸಂವಿಧಾನ ಸಭೆಯಲ್ಲಿ ನಿರ್ಣಯವನ್ನು ಕೈಗೊಂಡಿದ್ದೆವು ಮತ್ತು ಆ ನಿರ್ಣಯದಡಿ ವಿವಿಧ ರಾಜ್ಯಗಳಿಗೆ ಅವುಗಳ ಮತದಾರರ ಯಾದಿಯನ್ನು ಸಿದ್ಧಪಡಿಸಲು ನಿರ್ದೇಶನಗಳನ್ನು ನೀಡಲಾಗಿದೆ. ಸದನದ ಬಹುತೇಕ ಸದಸ್ಯರು ಇತ್ತೀಚೆಗೆ ಸ್ಟೇಟ್ಸ್‌ಮನ್ ಅಥವಾ ಹಿಂದೂಸ್ಥಾನ್ ಟೈಮ್ಸ್‌ನಲ್ಲಿ ಮತದಾರರ ಯಾದಿಗಳ ತಯಾರಿಯಲ್ಲಿ ವಿವಿಧ ರಾಜ್ಯಗಳು ಮಾಡಿದ ಸಾಧನೆಯ ಕುರಿತ ಹೇಳಿಕೆಗಳನ್ನು ಗಮನಿಸಿರಬಹುದು. ಈಗ, ಆ ಮತದಾರರ ಯಾದಿಗಳನ್ನು ವಿವಿಧ ರಾಜ್ಯಗಳಿಂದ ಬಂದ ಅರ್ಹತಾ ಅವಧಿ ಮತ್ತು ಅರ್ಹತಾ ದಿನಾಂಕದ ಆಧಾರದಲ್ಲಿ ಮಾಡಲಾಗಿದೆ.

ಸಹಜವಾಗಿಯೇ, ವಿವಿಧ ರಾಜ್ಯಗಳು ಮತದಾರರ ಯಾದಿಯ ತಯಾರಿಯಲ್ಲಿ ಮಾಡಿದ ಶ್ರಮವನ್ನು ತಿರಸ್ಕರಿಸಬಹುದೆಂದು (ಶ್ರೀ ಸೋಂಧಿ: ಹಾಗೆ ಯಾರು ಹೇಳುತ್ತಾರೆ?) ಮತ್ತು ನಾವು ಈ ವಿಧೇಯಕದಲ್ಲಿ ಈಗಿರುವುದಕ್ಕಿಂತ ಸಮೀಪದ ಅರ್ಹತಾ ದಿನಾಂಕ ಮತ್ತು ಅರ್ಹತಾ ಅವಧಿಯನ್ನು ನಿಗದಿಪಡಿಸಬೇಕೆಂದು ನಿರ್ಣಯಿಸಿದ ಹೊರತು, ಪರಿಶೀಲನಾ ಸಮಿತಿ ಅಥವಾ ನನಗೆ ಹೊಸ ಅರ್ಹತಾ ದಿನಾಂಕ ಮತ್ತು ಹೊಸ ಅರ್ಹತಾ ಅವಧಿಯನ್ನು ಸ್ವೀಕರಿಸಲು ಸಾಧ್ಯವಾಗದೆಂದು ನಾನು ಖಚಿತವಾಗಿ ಭಾವಿಸುತ್ತೇನೆ.

**ಶ್ರೀ ಸೋಂಧಿ:** ನಾವು ಪೂರಕ ಪಟ್ಟಿಗಳನ್ನು ಮಾಡಬಾರದೇ?

**ಡಾ. ಅಂಬೇಡ್ಕರ್:** ಈ ಪ್ರಶ್ನೆಯನ್ನು ನನಗೆ ಪೂರ್ವಾಹ್ನ ಕೇಳಲಾಯಿತು. ಈಗಿನ ಅರ್ಹತಾ ದಿನಾಂಕದ ನಂತರ ವಯಸ್ಸಿಗೆ ಬರುವವರ ಅಂದರೆ ಇಪ್ಪತ್ತೊಂದು ಆಗುವವರ ವಿಚಾರವೇನೆಂದು ಕೇಳಲಾಯಿತು.

**ಶ್ರೀ ಸೋಂಧಿ:** ಬಿಟ್ಟು ಹೋದವರ ಕತೆಯೇನು?

**ಡಾ. ಅಂಬೇಡ್ಕರ್:** ನಾನು ಹೇಳುತ್ತಿರುವುದೆಲ್ಲದರ ಅರಿವು ನನಗಿದೆ. ದಯವಿಟ್ಟು ನನ್ನನ್ನು ಮಾತನಾಡಲು ಬಿಡಿ.

ನಾನು ಈ ವಿಚಾರವನ್ನು ಚುನಾವಣಾ ಆಯುಕ್ತರಿಂದ ಮತ್ತು ನನ್ನ ಸಚಿವಾಲಯದಿಂದ ಪರೀಕ್ಷಿಸಿದ್ದೇನೆ. ಪ್ರಶ್ನೆಯಿರುವುದು ನಾವು ನಿಶ್ಚಯಿಸಿದ ಅರ್ಹತಾ ದಿನಾಂಕದ ನಂತರ ವಯಸ್ಸಿಗೆ ಬಂದ ವ್ಯಕ್ತಿಗಳ ಹೆಸರನ್ನು ಒಳಗೊಂಡ ಒಂದು ಪೂರಕ ಮತದಾರರ ಯಾದಿಯನ್ನು ತಯಾರಿಸುವುದಕ್ಕೆ ಎಷ್ಟು ಶ್ರಮತಗುಲುತ್ತದೆಂಬುದು. ಈ ಸಂಖ್ಯೆ ಅಪಾರವಾಗಿದೆಯೆಂದು ನನಗೆ ಹೇಳಲಾಯಿತು. ಅದು ಹೊಸ ಕೆಲಸವನ್ನೊಳಗೊಳ್ಳುತ್ತದೆ. ಈಗಾಗಲೇ ತಯಾರಿಸಿದ ಯಾದಿಗಳನ್ನು ಪುನರ್ವಿಮರ್ಶಿಸಲು ಈಗಿರುವುದಕ್ಕಿಂತ ಹೆಚ್ಚಾಗಿ ಹೊಸ ವ್ಯವಸ್ಥೆಯನ್ನು ಹೊಂದಬೇಕಾಗುತ್ತದೆ. ಈ ಹೆಚ್ಚಿನ ಹೊರೆಯು ನಾವು ಈಗಾಗಲೇ ವಿವಿಧ ಹಂತಗಳಿಗೆ ನಿಶ್ಚಿಯಿಸಿದ ಅಂತಿಮ ದಿನಾಂಕಗಳನ್ನು ಮುಂದೂಡುವ ಪರಿಣಾಮವನ್ನು ಖಂಡಿತಾ ಬೀರುತ್ತದೆ. ಆದ್ದರಿಂದ, ಪ್ರಧಾನಮಂತ್ರಿಗಳು ನಮೂದಿಸಿದ ದಿನಾಂಕವನ್ನು ರದ್ದು ಪಡಿಸುವ ಅಗತ್ಯವೆಂದು ತತ್ವವನ್ನು ಸ್ವೀಕರಿಸಲು ಈ ಸದನವು ಸಿದ್ಧವಿದ್ದಲ್ಲಿ ನನಗೆ ಈ ಪಾಲಿನ ಕೆಲಸವನ್ನು ನಡೆಸಲು ಸಾಧ್ಯವಾಗದು. ನಾನು ಈ ಅಂಶವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಪರಿಶೀಲನಾ ಸಮಿತಿಯು ಸರಕಾರಕ್ಕೆ ಈಗಾಗಲೇ ಆದ ಕೆಲಸಗಳನ್ನು ಮೇಲೆ ಗುಂಪುಮಾಡಬೇಕೆಂದು ಮತ್ತು ಅದಕ್ಕೆ ಯಾವ

ಕಿಮ್ಮತ್ತೂ ಇಲ್ಲವೆಂದೂ ಮತ್ತು ವೆಚ್ಚ ಹಾಗೂ ಹೆಚ್ಚುವರಿ ಸಾಮಗ್ರಿಗಳನ್ನು ನೀಡುವ ಅಸಾಧ್ಯತೆಯ ಹೊರತಾಗಿಯೂ ಹೆಚ್ಚುವರಿ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ಶಿಫಾರಸು ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು ತಯಾರಿರದಿದ್ದಲ್ಲಿ, ನನ್ನ ಮನವಿಯೆಂದರೆ ಪರಿಶೀಲನಾ ಸಮಿತಿಯು ಈ ಅಂಶಗಳನ್ನು ಬದಲಾಯಿಸಲು ಶಕ್ತವಾಗಲಾರದು.

ಈ ವಿಧೇಯಕದ ಇತರ ಅಂಶಗಳು ಯಾವುವು? ಇತರ ಅಂಶಗಳು ಎರಡು ಮಾತ್ರ. ಅವು ತುರ್ತು ವಿಚಾರಗಳು ಮತ್ತು ಯಾವ ಮಾನ್ಯ ಸದಸ್ಯರೂ ಅವುಗಳ ಕುರಿತು ಯಾವ ರೀತಿಯ ಉಲ್ಲೇಖವನ್ನು ಮಾಡುವುದನ್ನು ನಾನು ಕಾಣಲಿಲ್ಲ. ಒಂದು ಮುಖ್ಯ ಖಂಡವೆಂದರೆ ಮತ್ತು ಯಾವುದರ ಕುರಿತು ನಾನೇ ಈ ವಿಧೇಯಕವು ಹೆಚ್ಚಿನದ್ದೇನನ್ನಾದರೂ ಮಾಡಬಹುದೆಂದು ಭಾವಿಸುತ್ತಿರುವ ಕ್ಷೇತ್ರಗಳ ಪುನರ್ವಿಂಗಡಣೆ. ಒಬ್ಬ ಮಾನ್ಯ ಸದಸ್ಯರ ಹೊರತಾಗಿ ಯಾರೂ ಅರ್ಥಮಾಡಿಕೊಳ್ಳಲಿಲ್ಲ. . . . .

**ಕೆಲವು ಮಾನ್ಯ ಸದಸ್ಯರು:** ನಾವಿನ್ನೂ ಮಾತನಾಡಿಲ್ಲ.

**ಡಾ. ಅಂಬೇಡ್ಕರ್:** ಅಷ್ಟೊಂದು ಬಿಸಿ ಮತ್ತು ಅಷ್ಟೊಂದು ತೀವ್ರತೆಯನ್ನು ಈ ಚರ್ಚೆಗೆ ಹಾಕಿದ ಹೊರತಾಗಿಯೂ. . . . .

**ಶ್ರೀ ಸೋಂಧಿ:** ನೀವದನ್ನು ಇನ್ನೂ ಹೆಚ್ಚು ನೋಡುವಿರಿ.

**ಶ್ರೀ ಕಾಮತ್:** ನೀವದಕ್ಕೆ ಸೇರಿಸುತಿದ್ದೀರಿ.

**ಸಭಾಪತಿ:** ಶಿಸ್ತು, ಶಿಸ್ತು. ಅವರು ಮುಂದುವರೆಸಲಿ.

**ಡಾ ಅಂಬೇಡ್ಕರ್:** ಪುನರ್ವಿಂಗಡಣೆಯನ್ನು ಸಂಸತ್ತು ಮಾಡಬೇಕೆಂದು ಸಂವಿಧಾನದಲ್ಲಿ ಒಂದು ಅಂಶವಿದೆ. ಅದು ಇದೆ. ಈ ವಿಧೇಯಕದಲ್ಲಿ, ನಾವು ಪ್ರಸ್ತಾವಿಸಿದ್ದೇನೆಂದರೆ ಸಂಸತ್ತಿನ ಈ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ಪ್ರತ್ಯಾಯೋಜಿಸಬಹುದು ಮತ್ತು ರಾಷ್ಟ್ರಪತಿಗಳು ಆದೇಶದ ಮೂಲಕ, ಕ್ಷೇತ್ರಗಳು ಯಾವುದಾಗಬೇಕೆಂದು ನಿಗದಿಪಡಿಸಬಹುದು. ಈ ವಿಚಾರವನ್ನು ರಾಷ್ಟ್ರಪತಿಗಳಿಗೆ ಬಿಟ್ಟುಬಿಡಬಾರದೆಂದೂ ಸಂಸತ್ತಿನ ಮತ್ತು ರಾಜ್ಯ ಶಾಸನ ಸಭೆಗಳ ಎರಡೂ ಚುನಾವಣೆಗಳ ಉದ್ದೇಶಕ್ಕಾಗಿ ರಚನೆಯಾಗುವ ಪ್ರತೀ ಕ್ಷೇತ್ರವನ್ನು ಪರಿಗಣಿಸಲು ಈ ಸಂಸತ್ತು ತಾನೇ ತೊಡಗಬೇಕೆಂದು ವಾದಿಸಲಾಗಿದೆ– ಅದು ಸರಿಯಾಗಿಯೂ ಇದೆ. ನಾನು ಆ ಹಕ್ಕನ್ನು ನಿರಾಕರಿಸುವುದಿಲ್ಲ, ಆದರೆ ಪ್ರಶ್ನೆಯೆಂದರೆ ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳ ಪ್ರತೀ ಕ್ಷೇತ್ರವನ್ನು ಅವಲೋಕಿಸಲು ಬೇಕಾದ ಭಾರೀ ಸಮಯವನ್ನು ಸಂಸತ್ತು ಹೊಂದಿದೆಯೇ ಮತ್ತು ಹಾಗೆ ಮಾಡುವುದು ಸಾಧ್ಯವಿದೆಯೇ ಎಂಬುದು.

**ಡಾ. ದೇಶ್‌ಮುಖ್:** ಅದೊಂದು ಹಾದಿಯಲ್ಲ.

**ಡಾ. ಅಂಬೇಡ್ಕರ್:** ದಯವಿಟ್ಟು ನನ್ನನ್ನು ಮುಂದುವರಿಸಲು ಬಿಡಿ.

ಆದ್ದರಿಂದ, ನಿರ್ದಿಷ್ಟವಾದ ೧೩ನೇ ಖಂಡದಲ್ಲಿ ರಾಷ್ಟ್ರಪತಿಗಳು ಆದೇಶದ ಮೂಲಕ ಕ್ಷೇತ್ರಗಳನ್ನು ನಿಗದಿ ಮತ್ತು ಪುನರ್ವಿಂಗಡಣೆಯನ್ನು ಮಾಡಬಹುದಾದರೂ ಅವರು ಪುನರ್ವಿಂಗಡನೆಯ ಆದೇಶವನ್ನು ಸದನದ ಮುಂದೆ ಇಡತಕ್ಕದ್ದೆಂಬ ಅಂಶವಿದೆ. ನಾನು ಪ್ರಾಮಾಣಿಕವಾಗಿ ಹೇಳುವುದೇನೆಂದರೆ ನನ್ನನ್ನೂ ಪರಿಗಣಿಸಬೇಕೆಂದು ಅಪೇಕ್ಷಿಸುತ್ತೇನೆ. ಆದರೆ ಯಾರೂ ಇದನ್ನು ಸಲಹೆ ಮಾಡಿಲ್ಲ. (ಅಡ್ಡಿಪಡಿಸಲಾಯಿತು) ಪರಿಶೀಲನಾ ಸಮಿತಿಯು ಗಮನಿಸಬಹುದಾದ ಅಂಶಗಳಲ್ಲಿ ಇದೊಂದು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ರೀತಿಯ ಸಂಗತಿಗೆ ಪರಿಶೀಲನಾ ಸಮಿತಿಯನ್ನು ಏಕೆ ಆಶ್ರಯಿಸಬೇಕು? ನನ್ನಲ್ಲೊಂದು ಪರಿಹಾರವಿದೆ. ನಾನು ಎರಡು ಆಯ್ಕೆಗಳನ್ನು ಹೊಂದಿದ್ದೇನೆ. ಒಂದನೆಯದೆಂದರೆ ೧೨ನೇ ಖಂಡವನ್ನು

ಸೂಕ್ತ ತಿದ್ದುಪಡಿ ಮಾಡಿ ನಾವು ರಾಷ್ಟ್ರಪತಿಗಳು ಮಾಡಿದ ಪುನರ್ವಿಂಗಡಣೆಯ ಆದೇಶವನ್ನು ಸಂಸತ್ತಿನ ಮುಂದೆ ಇಡಬೇಕೆಂದು ಮತ್ತು ಸಂಸತ್ತು ಅದಕ್ಕೆ ಯಾವ ತಿದ್ದುಪಡಿಯನ್ನೂ ಮಾಡದಿದ್ದಲ್ಲಿ, ಒಂದು ನಿಗದಿತ ಅವಧಿಯೊಳಗೆ ಅದು ಅಂತಿಮವಾಗಬೇಕೆಂದೂ ಸೇರಿಸಬಹುದು. ಇದು ಒಂದು ಆಯ್ಕೆ. ನಾನು ಇನ್ನೊಂದು ಆಯ್ಕೆಯೆಂದರೆ ಪುನರ್ವಿಂಗಡನೆಯನ್ನು ಕೈಗೊಂಡಾಗ, ಯಾರು ಆ ಪುನರ್ವಿಂಗಡಣೆಯನ್ನು ಅಥವಾ ಆ ನಿರ್ದುಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಸ್ಥಳೀಯ ರಾಜ್ಯ ಶಾಸನ ಸಭೆಯ ಸದಸ್ಯರನ್ನೊಳಗೊಂಡ ಒಂದು ಸಮಿತಿಯು ಕಾರ್ಯ ನಿರ್ವಹಿಸತಕ್ಕದ್ದು, ಮತ್ತು ಆ ಮೂಲಕ ಅವರು ತಮ್ಮ ಸಲಹೆ ಮತ್ತು ತಿರ್ಮಾನವನ್ನು ಪುನರ್ವಿಂಗಡಣೆಯನ್ನು ಮಾಡುವ ಅಧಿಕಾರಿಗೆ ನೀಡುವ ಸ್ಥಾನದಲ್ಲಿರಬಹುದು.

**ಶ್ರೀ ತ್ಯಾಗಿ :** ಅದು ಒಳ್ಳೆಯ ಯೋಚನೆ. ಈ ಸದನವು ಅದಕ್ಕೊಪ್ಪಿದರೆ ಈ ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಒಪ್ಪಿಸುವ ಅಗತ್ಯವೇ ಇಲ್ಲ.

ಮಾನ್ಯರೆ, ನಂತರ ಈ ವಿಧೇಯಕದಲ್ಲಿ ಉಳಿಯುವ ಅಂಶವೆಂದರೆ ಇದು. ನಾನು ಮಾಡುವುದನ್ನು ಹೇಳುವ ಮುಖಾಂತರ ಯಾರನ್ನೂ ಅರೋಪಿಸುತ್ತೇನೆಂದು ಭಾವಿಸುವುದಿಲ್ಲ, ಅಂದರೆ ಹೆಚ್ಚಿನ ಸಂಖ್ಯೆಯ ಮಾನ್ಯ ಸದಸ್ಯರು ಬಹಳಷ್ಟು ಬಿಸಿ ಮತ್ತು ತೀವ್ರತೆ ಹಾಗೂ ಸಾಮಾನ್ಯ ಊಹೆಯ ವಾದಗಳ ಮೂಲಕ ತೀರಾ ಚಿಕ್ಕ ವಿಚಾರವನ್ನು ಅಂದರೆ ರಾಜ್ಯ ಶಾಸನ ಸಭೆಗಳ ಸ್ಥಾನಗಳನ್ನು ಹೆಚ್ಚಿಸುವುದರಲ್ಲಿ ಆಸಕ್ತರಾಗಿದ್ದಾರೆ, ಎಂಬುದಕ್ಕೆ ಸಂಬಂಧಿಸಿದೆ. ಆದರೆ ಒಬ್ಬಿಬ್ಬರನ್ನು ಹೊರತುಪಡಿಸಿ ಉಳಿದವರಿಗೆ ಹಾಗೆ ಹೇಳುವ ಧೈರ್ಯವಿಲ್ಲ. ಮಾನ್ಯ ಸದಸ್ಯರು ಈ ಚಿಕ್ಕ ಅಂಶ ಅಂದರೆ ಉ.ಪ್ರ.ದ ಸಂಖ್ಯೆಯು ಹದಿನೈದು ಸ್ಥಾನಗಳಷ್ಟು ಹೆಚ್ಚಿಸಬೇಕು. ಅಥವಾ ಮೈಸೂರಿನ ಸ್ಥಾನಗಳು ಒಂದಾದರೂ ಹೆಚ್ಚಾಗಬೇಕು. ಅಥವಾ ಡೆಲ್ಲಿಯ ಸ್ಥಾನಗಳು ಎರಡಾದರೂ ಹೆಚ್ಚಾಗಬೇಕು ಎಂಬ ಚಿಕ್ಕ ಅಂಶದಲ್ಲಿ ಆಸಕ್ತರಾಗಿದ್ದರೆ ನಾನು ಹೇಳಲು ಇಚ್ಛಿಸುವುದೇನೆಂದರೆ ಅದು ನಾವು ಈ ಸದನದಲ್ಲಿ ವಿಚಾರಿಸಬಲ್ಲ ವಿಷಯವಲ್ಲವೇ? ಪರಿಶೀಲನಾ ಸಮಿತಿಗೆ ಯಾಕೆ ಹೋಗಬೇಕು?

**ಶ್ರೀ ಭಟ್:** ನೀವು ಎಲ್ಲಾ ವಿವರಗಳನ್ನು ಚರ್ಚಿಸಲಿಕ್ಕಾಗುವುದಿಲ್ಲ.

**ಡಾ. ಅಂಬೇಡ್ಕರ್:** ಅದರಲ್ಲಿ ವಿವರಗಳಿಲ್ಲ, ನಾನೇ ವಿವಿಧ ರಾಜ್ಯಗಳ ಪ್ರಾತಿನಿಧ್ಯದ ಸಂಖ್ಯೆಗಳನ್ನು ಬದಲಾಯಿಸುವ ತಿದ್ದುಪಡಿಯನ್ನು ಮಂಡಿಸುತ್ತಿದೇನೆ. ನನ್ನ ಮಾನ್ಯ ಸ್ನೇಹಿತರು ನಾನು ಬಹಳ ಜಿಪುಣನೆಂದು ಮತ್ತು ಅಲ್ಪನೆಂದು ಮತ್ತು ನಾನು ಅವರ ಬೇಡಿಕೆಗಳನ್ನು ಈಡೇರಿಸುತ್ತಿಲ್ಲವೆಂದು ಭಾವಿಸಿದರೆ, ಒಳ್ಳೆಯದು, ಅವರು ತಮ್ಮ ತಿದ್ದುಪಡಿಗಳನ್ನು ಇಲ್ಲೇ ಮಂಡಿಸಬಹುದು ಮತ್ತು ಸದನವು ನಾನು ಸಲಹೆ ನೀಡಿದ ಸಂಖ್ಯೆಯು ಸರಿಯಾದ ಸಂಖ್ಯೆಯೇ ಅಥವಾ ಅವರು ಸಲಹೆ ನೀಡಿದ ಸಂಖ್ಯೆಯು ಸರಿಯಾದ ಸಂಖ್ಯೆಯೇ ಎಂಬುವುದನ್ನು ನಿರ್ಧರಿಸಬಹುದು. ಅದನ್ನು ಪರಿಶೀಲನಾ ಸಮಿತಿಗೆ ಏಕೆ ಕಳುಹಿಸಬೇಕು? ಪರಿಶೀಲನಾ ಸಮಿತಿಯು ಪರಿಗಣಿಸಬೇಕಾದ ಇನ್ಯಾವುದಾದರು ವಿಚಾರವು ಈ ವಿಧೇಯಕದಲ್ಲಿದೆಯೇ ಎಂದು ನಾನು ತಿಳಿಯಲು ಆಸಕ್ತನಾಗಿದ್ದೇನೆ. ಇದು ಒಂದು ಮಾಮೂಲು ವಿಧೇಯಕ.

ನನ್ನ ಮಾನ್ಯ ಮಿತ್ರ ಶ್ರೀ ಹುಸೇನ್ ಇಮಾಮ್ ಅವರು ಈ ವಿಧೇಯಕದಲ್ಲಿ ಸೇರಿಸದೆ ಇದ್ದ ಕೆಲವು ವಿಚಾರಗಳಿವೆ ಎಂದು ಹೇಳಿದರು. ನಾನು ಈ ವಿಧೇಯಕವನ್ನು ಪ್ರಸ್ತಾವಿಸುವಾಗ ಮೂಡಿದ ಅಭಿಪ್ರಾಯದ ಸಮಯದಲ್ಲಿ ನಾನು ಹೇಳಿದ್ದನ್ನು ಅವರು ಮರೆತಿದ್ದಾರೆಂದು ತಿಳಿಯುತ್ತೇನೆ. ಈ ವಿಧೇಯಕವು ಚುನಾವಣೆಯ ಒಂದು ಅಂಶದ ಬಗ್ಗೆ ಚರ್ಚಿಸುತ್ತದೆ ಎಂದು ನಾನು ಹೇಳಿದ್ದೆ. ಚುನಾವಣೆಯ ನಡವಳಿಕೆಗಳು ಪೂರ್ತಿಯಾಗಿ ಬೇರೆ ವಿಚಾರ ಮತ್ತು ಬೇರೊಂದು ವಿಧೇಯಕದ ಮೂಲಕ ಚರ್ಚಿಸಬಹುದು. ಪರಿಣಾಮವಾಗಿ ಇಲ್ಲಿ ಇಲ್ಲವೆಂದು ಭಾವಿಸಲಾದ ವಿಚಾರಗಳು ಇಲ್ಲದೆ ಉಳಿಯುವುದಿಲ್ಲ. ಏಕೆಂದರೆ ಈ

ಶಾಸನದ ಪೂರಕ ಭಾಗವು ಅಂಗೀಕಾರವಾದ ಹೊರತು ಚುನಾವಣೆಗಳನ್ನು ಪೂರೈಸಲು ಸಾಧ್ಯವಿಲ್ಲ. ಆದ್ದರಿಂದ ನನ್ನ ಮನವಿ ಏನೆಂದರೆ ಯಾವುದೇ ನಿಲುವಳಿಯಿಲ್ಲದಿದ್ದರೂ–ನಿಲುವಳಿ ಬೇಕಾದಲ್ಲಿ ಅದನ್ನು ಸಿದ್ಧಗೊಳಿಸಬಹುದೆಂದು ನೀವು ಹೇಳಿದಿರಿ; – ಅದು ಸತ್ಯವೂ ಹೌದು —ಆದರೆ ಅದರ ಅಗತ್ಯವಿದೆಯೇ? ಈ ಅಂಶವನ್ನು ಈ ಸದನವು ಪರಿಗಣಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ಇವು ಮೂರು ಅಂಶಗಳು ಮತ್ತು ನಾನು ಈ ತಿದ್ದುಪಡಿಗಳನ್ನು ನನ್ನಲ್ಲಿ ಸಿದ್ಧವಾಗಿಟ್ಟಿದ್ದೇನೆ.

## ಜನತಾ ಪ್ರಾತಿನಿಧ್ಯ ವಿಧೇಯಕ– ಮುಂದುವರಿದದ್ದು.

***ಸಭಾಪತಿ:** ಸದನವು ನಿನ್ನೆ ಈ ಕೆಳಕಂಡ ನಿಲುವಳಿಯ ಪರಿಗಣನೆಯನ್ನು ಚರ್ಚಿಸುತ್ತಿತ್ತು :

> "ಲೋಕಸಭೆ ಹಾಗೂ ರಾಜ್ಯಗಳ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಗಳ ಉದ್ದೇಶಕ್ಕಾಗಿ ಸ್ಥಾನಗಳನ್ನು ಕಾದಿರಿಸುವಿಕೆ, ಮತ್ತು ಕ್ಷೇತ್ರಗಳ ಪುನರ್ವಿಂಗಡನೆ; ಮತ್ತು ಅಂತಹಚುನಾವಣೆಗಳಲ್ಲಿ ಮತದಾರರ ಅರ್ಹತೆ, ಮತದಾರರ ಪಟ್ಟಿಯ ತಯಾರಿ ಮತ್ತು ಸಂಬಂಧಿತ ವಿಚಾರಗಳಿಗೆ ಅವಕಾಶ ಮಾಡಿಕೊಡುವ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಪರಿಗಣಿಸತಕ್ಕದ್ದು."

**ಶ್ರೀ ಶ್ಯಾಮನಂದನ್ ಸಹಾಯ:** . . . . ಈಗ ಕಾನೂನು ಸಚಿವರು ಇಲ್ಲಿ ಇರುವುದರಿಂದ ಅವರು ನಿಮ್ಮ ಮುಂದೆ ಈ ಬೆಳಗ್ಗೆ ನಡೆದ ಘಟನೆಗಳನ್ನು ಇಡುತ್ತಾರೆಂದು ಮತ್ತು ಆಗ ನಾವು ಈ ವಿಧೇಯಕವನ್ನು ಖಂಡ ಖಂಡವಾಗಿ ಪರಿಗಣಿಸಲು ಕ್ರಮಕೈಗೊಳ್ಳಬಹುದು ಎಂದು ಭಾವಿಸುತ್ತೇನೆ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಮಾನ್ಯರೆ, ನಾನು ತಡವಾದುದಕ್ಕೆ ವಿಷಾದಿಸುತ್ತೇನೆ. ತಮ್ಮ ಸಲಹೆಯಂತೆ ಉಪ ಸಭಾಪತಿಗಳ ಅಧ್ಯಕ್ಷತೆಯಲ್ಲಿ ಈ ವಿಧೇಯಕದಲ್ಲಿ ಆಸಕ್ತರಾಗಿದ್ದ ಸದನ ಸದಸ್ಯರ ಸಭೆಯು ನಡೆಯಿತು ಮತ್ತು ಈಗ ನಿಮ್ಮ ಮುಂದೆ ಮಂಡಿಸುವ ತಿದ್ದುಪಡಿಗಳನ್ನು ನಾವು ಅವಿರೋಧವಾಗಿ ಅಂಗೀಕರಿಸಿದ್ದೇವೆ ಎಂದು ಹೇಳಲು ಸಂತೋಷಪಡುತ್ತೇನೆ. ಈ ವಿಚಾರದ ಬಗ್ಗೆ ಮುಂದಿನ ವಿವಾದವಾಗಲಿ ಚರ್ಚೆಯಾಗಲಿ ಇರುವುದಿಲ್ಲವೆಂದು ಆಶಿಸುತ್ತೇನೆ.

**ಶ್ರೀ ತ್ಯಾಗಿ (ಉತ್ತರ ಪ್ರದೇಶ) :** ನನಗೆ ಅವಕಾಶ ಸಿಕ್ಕಿಲ್ಲ. ಈ ತಿದ್ದುಪಡಿಗಳನ್ನು ನಾನು ಒಪ್ಪುತ್ತೇನೆ, ಆದರೆ ನನ್ನ ವಿಚಾರಗಳಿಗೆ ಅವಕಾಶ ನೀಡಿಲ್ಲ ಮತ್ತು ನನ್ನ ತಿದ್ದುಪಡಿಯನ್ನು ಅಂಗೀಕರಿಸಿಲ್ಲ ಆದ್ದರಿಂದ ಅದು 'ಅವಿರೋಧ' ಅಲ್ಲ.

**ಸಭಾಪತಿ:** ಕಾರಣಗಳೇನೇ ಇರಲಿ ತೀರ್ಮಾನವು ಅವಿರೋಧವೆಂದು ಅನ್ನಿಸುತ್ತದೆ. ನಾನು ಪರಿಗಣನೆಯ ಸೂಚನೆಯನ್ನು ಸದನದಲ್ಲಿಡುತ್ತೇನೆ. ಮತ್ತು ನಾವು ಈ ವಿಧೇಯಕವನ್ನು ಖಂಡ ಖಂಡವಾಗಿ ಕೈಗೆತ್ತಿಕೊಳ್ಳಬಹುದು. ಈ ವಿಚಾರವು ಸುಖಾಂತ್ಯದಲ್ಲಿ ಕೊನೆಗೊಂಡುದಕ್ಕೆ ನಾನು ಸದಸ್ಯರನ್ನು ಅಭಿನಂದಿಸುತ್ತೇನೆ. ವಿಷಯವೆಂದರೆ:

> "ಲೋಕಸಭೆ ಹಾಗೂ ರಾಜ್ಯಗಳ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಗಳ ಉದ್ದೇಶಕ್ಕಾಗಿ ಸ್ಥಾನಗಳನ್ನು ಕಾದಿರಿಸುವಿಕೆ, ಮತ್ತು ಕ್ಷೇತ್ರಗಳ ಪುನರ್ವಿಂಗಡನೆ;

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ३೦೫೭–೫೮.

> ಮತ್ತು ಅಂತಹ ಚುನಾವಣೆಗಳಲ್ಲಿ ಮತದಾರರ ಅರ್ಹತೆ, ಮತದಾರರ ಪಟ್ಟಿಯ ತಯಾರಿ ಮತ್ತು ಸಂಬಂಧಿತ ವಿಚಾರಗಳಿಗೆ ಅವಕಾಶ ಮಾಡಿಕೊಡುವ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಪರಿಗಣಿಸತಕ್ಕದ್ದು."

ನಿಲುವಳಿಯು ಸ್ವೀಕೃತವಾಯಿತು.

**ಸಭಾಪತಿ:** ನಾವೀಗ ವಿಧೇಯಕವನ್ನು ಖಂಡಖಂಡವಾಗಿ ಪರಿಗಣಿಸೋಣ.

**ಡಾ. ಅಂಬೇಡ್ಕರ್:** ೧೩ನೇ ಖಂಡಕ್ಕೆ ಒಂದು ತಿದ್ದುಪಡಿ ಇದೆ. ಮತ್ತು ಆ ತಿದ್ದುಪಡಿಯನ್ನು ಈಗ ಬೆರಳಚ್ಚು ಮಾಡುತ್ತಿರುವುದರಿಂದ ಅದನ್ನು ಕೈಗೆತ್ತಿಕೊಳ್ಳುವುದನ್ನೂ ಮುಂದೂಡಬಹುದು.

**ಸಭಾಪತಿ:** ಸರಿ, ಮಾನ್ಯ ಸದಸ್ಯರು ಮಂಡಿಸಿದ ಈ ಹಿಂದಿನ ಎಲ್ಲಾ ತಿದ್ದುಪಡಿಗಳು ನಿಷ್ಪ್ರಯೋಜಕವಾಗಿವೆ.

*__ಡಾ. ತೇಕ್ ಚಂದ್ (ಪಂಜಾಬ್):__ ದುರದೃಷ್ಟವಶಾತ್ ನಾವು ಈ ಬೆಳಿಗ್ಗೆ ನಿಶ್ಚಯಿಸಿದ ತಿದ್ದುಪಡಿಗಳಲ್ಲಿನ ಶಬ್ದ ರಚನೆಯನ್ನು ನೋಡಿಲ್ಲ. ಅಲ್ಲಿ ಕೆಲವು ಖಂಡಗಳಿಗೆ ಸಂಬಂಧಿಸಿದಂತೆ, ಒಂದು ಸ್ಥೂಲ ಮಾತುಕತೆ ಮಾತ್ರ ಇತ್ತು; ಉದಾಹರಣೆಗೆ ಆರನೇ ಖಂಡಕ್ಕೆ ಸಂಬಂಧಿಸಿದಂತೆ ಇನ್ನೂ ಭಾರೀ ವಿವಾದವಿದೆ ಮತ್ತು ಸರ್ವ ಸಮ್ಮತಿ ಇಲ್ಲ.

**ಡಾ. ಅಂಬೇಡ್ಕರ್:** ವಿವಾದವೇನೂ ಇಲ್ಲ.

**ಸಭಾಪತಿ:** ಈಗ ಮಂಡಿಸಿದ ತಿದ್ದುಪಡಿಯಲ್ಲಿ ಯಾವುದನ್ನೂ ಕೈಬಿಡಲು ನಾನು ಆಪೇಕ್ಷಿಸುವುದಿಲ್ಲ ನಾನು ವಸ್ತುಸ್ಥಿತಿಯನ್ನು ಸ್ಪಷ್ಟೀಕರಿಸಲು ಪ್ರಯತ್ನಿಸುತ್ತಿದ್ದೆ ಮತ್ತು ಆ ಮೂಲಕ ತಿದ್ದುಪಡಿ ಇಲ್ಲದ ಖಂಡಗಳನ್ನು ನಾನು ಒಟ್ಟಾಗಿ ಪರಿಗಣಿಸಬೇಕೆಂದಿದ್ದೇನೆ.

**ಡಾ. ತೇಕ್ ಚಂದ್:** ಹೊಸ ತಿದ್ದುಪಡಿಗಳು ಯಾವುವು? ಅವನ್ನು ನಾವು ನೋಡೋಣ. ಅವನ್ನು ಯಾರೂ ನೋಡಿಲ್ಲ. ಅವನ್ನು ನೋಡದೆ ಹೇಗೆ ನಾವು ಅಂಗೀಕರಿಸಬೇಕು?

**ಡಾ. ಅಂಬೇಡ್ಕರ್:** ನಾನು ಅವನ್ನು ಓದುತ್ತೇನೆ.

**ಸಭಾಪತಿಗಳು:** ಮಾನ್ಯ ಸದಸ್ಯರಾದ ತೇಕ್ ಚಂದ್ ಅವರು ಯಾವುದಾದರು ತಿದ್ದುಪಡಿಯನ್ನು ಸೂಚಿಸುತ್ತಾರೆಯೇ?

**ತೇಕ್ ಚಂದ್:** ನಾವು ಆರನೇ ಖಂಡಕ್ಕೆ ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇವೆ.

**ಖಂಡ ಎರಡರಿಂದ ಐದು.**

**ಸಭಾಪತಿ:** ಎರಡರಿಂದ ಐದನೇ ಖಂಡಕ್ಕೆ ತಿದ್ದುಪಡಿಯನ್ನು ಮಂಡಿಸಲು ಯಾರಾದರು ಮಾನ್ಯ ಸದಸ್ಯರು ಇಚ್ಛಿಸುತ್ತಾರೆಯೇ?

**ಕೆಲವು ಮಾನ್ಯ ಸದಸ್ಯರು:** ಇಲ್ಲ.

ಎರಡರಿಂದ ಐದನೇ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು.

*__ಶ್ರೀ ಬೋರಾಗೋ ಹೈನ್ (ಅಸ್ಸಾಮ್):__ ಮಾನ್ಯ ಮಂತ್ರಿಗಳು ಉತ್ತರಿಸುವ ಮೊದಲು ನಾನು ಒಂದು ವಿಷಯಕ್ಕೆ ಬಿನ್ನವಿಸಲೆ....

**ಡಾ. ಅಂಬೇಡ್ಕರ್:** ನನಗೆ ಯಾವ ಸಲಹೆಗಳೂ ಬೇಡ.

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೫೪.

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೬೨.

**ಸಭಾಪತಿ:** ಕಾನೂನು ಸಚಿವರ ಪ್ರಕ್ರಿಯೆಗಳನ್ನು ತಿಳಿಯುವುದು ಇದಕ್ಕಿಂತ ಒಳ್ಳೆಯ ಹಾದಿ.

**ಶ್ರೀ ಬೋರಾಗೋ ಹೈನ್:** ಮಾನ್ಯರೆ, ಅಸ್ಸಾಮಿನ ಬುಡಕಟ್ಟುಗಳ ಪ್ರಕರಣವು ಒಂದು ವಿಭಿನ್ನ ಹಾದಿಯಲ್ಲಿದೆ. ನಾನು . . . .

**ಸಭಾಪತಿ:** ಮೊದಲಿಗೆ ಮಾನ್ಯ ಮಂತ್ರಿಗಳು ಹೇಳುವುದನ್ನು ಕೇಳುವುದು ಉತ್ತಮ. ಮಾನ್ಯ ಸದಸ್ಯರು ಈ ತಿದ್ದುಪಡಿಯನ್ನು ನಾನು ಈ ಹಂತದಲ್ಲಿ ಮಂಡಿಸಬೇಕೆಂದು ಬಯಸುತ್ತಾರೆಯೇ ಅಥವಾ ನಾನು ಅದನ್ನು ನಂತರದಲ್ಲಿ ಮಂಡಿಸಲೇ, ಹೇಗೆ ಸರಿಯಾದರೂ ನಾನು ಅದನ್ನು ಮತ್ತೆ ಮಂಡಿಸುತ್ತೇನೆ.

**ಡಾ. ಅಂಬೇಡ್ಕರ್:** ನಾನು ಶ್ರೀ ಜೈನ್ ಅಥವಾ ಶ್ರೀ ಜೆ.ಆರ್.ಕಪೂರ್ ಇವರು ಮಂಡಿಸಿದ ತಿದ್ದುಪಡಿಗಳಲ್ಲಿ ಯಾವುದನ್ನೂ ಸ್ವೀಕರಿಸದಿರಲು ತುಂಬಾ ವಿಷಾದಿಸುತ್ತೇನೆ. ಆದರೆ ನಾನು ಶ್ರೀ ಜೈನ್ ಅಥವಾ ಶ್ರೀ ಕಪೂರ್ ಅಥವಾ ಸಂಸತ್ತಿನ ಯಾವುದೇ ಸದಸ್ಯನ ಮನಸ್ಸಿನಲ್ಲಿ ಇರಬಹುದಾದ ಸಂಶಯವನ್ನು ನಿವಾರಿಸಲು ಬಯಸುತ್ತೇನೆ. ಅವರು ಆರನೇ ಖಂಡದ ಮುಖಾಂತರ ಕ್ಷೇತ್ರದ ಲಕ್ಷಣವು ಯಾವುದಿರಬೇಕೆಂದು ತೀರ್ಮಾನಿಸುವ ಹಕ್ಕಿನಿಂದ ಸಂಸತ್ತು ಪೂರ್ಣವಾಗಿ ವಂಚಿತವಾಗುತ್ತದೆ ಎಂಬ ತಪ್ಪು ತಿಳುವಳಿಕೆಯಲ್ಲಿ ಇದ್ದಾರೆಂದು ಕಾಣುತ್ತದೆ: ಅದು ಏಕ ಸದಸ್ಯ ಕ್ಷೇತ್ರವಾಗಿರಬೇಕು; ಮತದಾನದ ರೀತಿ ಏನಿರಬೇಕು ಮತ್ತು ಅದು ಹಂಚಿಕೆಯ ಮತದಾನವಾಗಬೇಕೇ ಅಥವಾ ಒಬ್ಬರಿಗೆ ಒಂದು ಮತವೇ ಅಥವಾ ಸಂಚಯಿತ ಮತವೇ ಅಥವಾ ಇನ್ಯಾವುದೇ ವಿಧದ ಮತವೇ ಆ ವಿಚಾರದ ಬಗ್ಗೆ ತೀರ್ಮಾನಿಸುವ ಸಂಸತ್ತಿನ ಹಕ್ಕನ್ನು ಕಿತ್ತುಹಾಕಲು ನನಗೆ ಒಂದಿಷ್ಟೂ ಉದ್ದೇಶವಿಲ್ಲ. ವಾಸ್ತವವಾಗಿ ನಾನು ನಿನ್ನೆ ನನ್ನ ಮೊದಲ ಮಾತುಗಳಲ್ಲಿ ಹೇಳಿದಂತೆ ಮತ್ತು ಈ ವಿಧೇಯಕವು ಸ್ವಯಂಪೂರ್ಣ ವಿಧೇಯಕವಲ್ಲ.

ಈ ವಿಧೇಯಕದ ನಂತರ ಚುನಾವಣೆಗಳನ್ನು ನಡೆಸುವ ಕ್ರಮದ ವಿಧೇಯಕ ಅಥವಾ ಚುನಾವಣಾ ವಿಧೇಯಕವೆಂದು ಕರೆಯುವ ಒಂದು ವಿಧೇಯಕವು ಬರಲಿದೆ. ಆ ವಿಧೇಯಕದಲ್ಲಿ ಕ್ಷೇತ್ರಗಳಿಗೆ ಸಂಬಂಧಿಸಿದ ವಿಚಾರಗಳು, ಉಮೇದುವಾರರ ಅರ್ಹತೆಗಳು ಮತ್ತು ಅನರ್ಹತೆಗಳು ಮತ್ತು ಮತದಾನದ ವ್ಯವಸ್ಥೆಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸಲಾಗುವುದು ಮತ್ತು ಅದು ನಿಸ್ಸಂದೇಹವಾಗಿ ಯಾವಾಗ ಆ ವಿಧೇಯಕವನ್ನು ಸದನದ ಮುಂದಿಡಲಾಗುವುದು, ಯಾವ ರೀತಿಯ ಕ್ಷೇತ್ರ ವ್ಯವಸ್ಥೆ ಮತ್ತು ಮತದಾನವನ್ನು ಅವರು ಅನುಮೋದಿಸುವರು ಎಂಬ ತೀರ್ಮಾನವನ್ನು ಬರುವುದು ಸಂಸತ್ತಿನ ಸಕ್ಷಮತೆಯೊಳಗಿರುವುದು. ಆದ್ದರಿಂದ, ಸಂಸತ್ತಿನ ಅಧಿಕಾರ ವ್ಯಾಪ್ತಿಯನ್ನು ಹೊರಗಿಡುವ ಯಾವ ಇಚ್ಛೆಯೂ ಇಲ್ಲ. ಬದಲಾಗಿ, ನನ್ನ ಮಾನ್ಯ ಮಿತ್ರರು ನೆನಪಿಸಿದ್ದಂತೆ, ನಾನೇ ಕ್ಷೇತ್ರಗಳ ಸೀಮಾನಿರ್ಣಯದ ಪ್ರತೀ ಹಂತದಲ್ಲಿ ಸಂಸತ್ತನ್ನು ಭಾಗಿಯಾಗಿಸಬೇಕೆಂದು ಉತ್ಸುಕನಾಗಿದ್ದೇನೆ. ಅವರಿಗೆ ತಿಳಿದಿರುವಂತೆ, ನಾನು ೧೩ನೇ ಖಂಡದಲ್ಲಿ ಒಂದು ಅಂಶವನ್ನು ಮಾಡಿ ಅದು ಸೀಮಾನಿರ್ಣಯದ ಆದೇಶವನ್ನು ಸಂಸತ್ತಿನ ಮುಂದೆ ಮಾಹಿತಿಯಾಗಿ ಇಡಲಾಗುವುದು ಮಾತ್ರವಲ್ಲ, ಸಂಸತ್ತು ತನಗಿಷ್ಟಬಂದ ರೀತಿಯಲ್ಲಿ ಸಲಹೆಯನ್ನು ಮತ್ತು ಮಾರ್ಪಾಡುಗಳನ್ನು ಒಂದು ಗೊತ್ತಾದ, ಅಂದರೆ ಹತ್ತು ದಿನಗಳು ಅಥವಾ ಅಂತಹ ಅವಧಿಯೊಳಗೆ ಮಾಡುವುದು ಸಾಧ್ಯವಾದರೆ, ಅಂತಹ ಅಧಿಕಾರವನ್ನು ಹೊಂದಬೇಕೆಂಬ ತಿದ್ದುಪಡಿಯನ್ನು ನಾನು ಮಂಡಿಸಲಿದ್ದೇನೆ. ಇದಕ್ಕೂ ಹೆಚ್ಚಾಗಿ, ಕ್ಷೇತ್ರ ಸೀಮಾನಿರ್ಣಯದ ಕೆಲಸದಲ್ಲಿ ಭಾಗಿಯಾಗಲು, ಆ ನಿರ್ದಿಷ್ಟ ಪ್ರದೇಶದಿಂದ ಆರಿಸಿದ ಸದಸ್ಯರನ್ನೊಳಗೊಂಡ ಸದನ ಸಮಿತಿಗಳನ್ನು ನೇಮಕಮಾಡಲು ಸಭಾಪತಿಗಳಿಗೆ ಅಧಿಕಾರವನ್ನು ಕೊಡುವ ತಿದ್ದುಪಡಿಯೂ ಇರುತ್ತದೆ. ಸಂಸತ್ತಿನ ಅಧಿಕಾರವ್ಯಾಪ್ತಿಯನ್ನು ಕಡಿತಗೊಳಿಸುವ ಯಾವ ಇಚ್ಛೆಯೂ ನನಗಿಲ್ಲವೆಂದು ನಾನು ನೀಡಿದ ಹೇಳಿಕೆಗಿಂತ ಸ್ಪಷ್ಟವಾಗುತ್ತದೆಂದು ನಾನು ಭಾವಿಸುತ್ತೇನೆ. ಸೀಮಾನಿರ್ಣಯದ

ಆದೇಶವನ್ನು ಸದನದ ಪೀಠದ ಮೇಲಿಡಲು, ಸದನಕ್ಕೆ ಅವರಿಷ್ಟದಂತೆ ಬದಲಾವಣೆಗಳನ್ನು ಮಾಡಲು ಮತ್ತು ಇನ್ನೂ ಹೆಚ್ಚಾಗಿ ಮತ್ತೊಂದು ಅಂಶದ ಮೂಲಕ ಸಭಾಪತಿಗಳು ಸೀಮಾನಿರ್ಣಯದ ಕೆಲಸದಲ್ಲಿ ಭಾಗಿಯಾಗಲು ಸಮಿತಿಗಳನ್ನು ರಚಿಸುವ ಹಕ್ಕನ್ನು ಹೊಂದಲು ಅವಕಾಶವನ್ನು ಮಾಡುತ್ತಿದ್ದೇನೆ. ಈ ವಿಚಾರದ ಬಗ್ಗೆ ಸಂಸತ್ತಿನ ತೀರ್ಮಾನವನ್ನು ಪಡೆಯಲು ನನಗೆ ಪೂರ್ಣ ಇಚ್ಛೆಯಿದೆಯೆಂಬ ಬಗ್ಗೆ ಯಾವ ಸದಸ್ಯನಿಗೂ ಯಾವ ಸಂಶಯವೂ ಇದ್ದೀತೆಂದು ನನಗನ್ನಿಸುವುದಿಲ್ಲ. ಒಂದೇ ಸಂಗತಿಯೆಂದರೆ, ಈ ವಿಧೇಯಕವು ಮೊದಲು ಬರುತ್ತದೆ, ಆದರೆ ವಾಸ್ತವಿಕವಾಗಿ ಆ ವಿಧೇಯಕವು ಮೊದಲು ಬರಬಹುದಿತ್ತು. ವಿಷಯವೇನೆಂದರೆ, ಸೀಮಾನಿರ್ಣಯವನ್ನು ನಮೂದಿಸುವ ಈ ವಿಧೇಯಕದ ಆರನೇ ಖಂಡವು ಆ ವಿಧೇಯಕವು ಅಂಗೀಕಾರವಾಗುವವರೆಗೆ ಖಂಡಿತಾ ಜಾರಿಗೆ ಬರುವುದಿಲ್ಲ. ಅದು ಸಹಜವಾಗಿಯೇ ಹಾಗಾಗುತ್ತದೆ, ಏಕೆಂದರೆ, ನಿಮಗೆ ತಿಳಿದಿರುವಂತೆ, ನಾವು ಈಗ ೨೧ನೇ ಕಲಮನ್ನು ತಿದ್ದುತ್ತಿದ್ದೇವೆ, ಅದು ಒಂದು ಪೂರಕ ಮತದಾರರ ಯಾದಿಯನ್ನೊದಗಿಸುವುದಕ್ಕೆ ಅವಕಾಶಮಾಡಿಕೊಡುತ್ತದೆ ಮತ್ತು ಅದೇ ತುಂಬಾ ಸಮಯವನ್ನು ತೆಗೆದುಕೊಳ್ಳುತ್ತದೆ ಮತ್ತು ಸಂಸತ್ತಿನ ಮುಂದೆ ಆ ವಿಧೇಯಕವನ್ನಿಡಲು ಸಾಕಷ್ಟು ಅವಕಾಶವನ್ನು ನೀಡುತ್ತದೆ.

**ಶ್ರೀ ಸೋಂಧಿ:** ಅದು ಜಾರಿಗೆ ಬರುವುದಿಲ್ಲವಾದರೆ ಆ ಖಂಡವನ್ನು ಏಕೆ ಕೈಬಿಡಬಾರದು?

**ಡಾ. ಅಂಬೇಡ್ಕರ್:** ಅದನ್ನು ಕೈ ಬಿಡಬಾರದು.

---

***ಶ್ರೀ ಕೇಶವರಾವ್ (ಮದ್ರಾಸ್):** ನನಗೆ ಉಪ–ಖಂಡ (ಬಿ) ಯ ಕುರಿತು ಸ್ವಲ್ಪ ಸಂಶಯವಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು ರಾಷ್ಟ್ರಪತಿಗಳು ಚುನಾವಣಾ ಆಯೋಗದೊಂದಿಗೆ ಸಮಾಲೋಚನೆಯ ನಂತರ ತೀರ್ಮಾನಿಸುತ್ತಾರೆಂದು ನಾನು ತಿಳಿಯುತ್ತೇನೆ. ಒಟ್ಟು ಮೀಸಲಾಗಿರಿಸಿದ ಸಂಖ್ಯೆಯನ್ನು ಎಲ್ಲೂ ಕಾಣಿಸಿಲ್ಲವೆಂದು ನನಗೆ ಸಂಶಯವಿದೆ. ಸಂಸತ್ತಿನಲ್ಲಿ ಮತ್ತು ಸಂವಿಧಾನ ಸಭೆಯಲ್ಲಿ ಈ ಸಂಖ್ಯೆಯನ್ನು ನಿಗದಿಪಡಿಸಬೇಕೆಂದು ಅನೇಕ ಬಾರಿ ಹೇಳಲಾಗಿದೆ.

**ಡಾ. ಅಂಬೇಡ್ಕರ್:** ಸಂವಿಧಾನದಲ್ಲಿ ಅದು ಜನಸಂಖ್ಯೆಗೆ ಅನುಗುಣವಾಗಿರಬೇಕೆಂದು ಇದೆ. ಅಗತ್ಯವಾದ್ದೆಂದರೆ ಜನಸಂಖ್ಯೆಯನ್ನು ತಿಳಿಯುವುದು. ಸೀಮಾನಿರ್ಣಯದ ಬಗ್ಗೆ ನನಗೆ ನನ್ನದೇ ಆದ ಸಂಶಯಗಳಿವೆ....

**ಸಭಾಪತಿ:** ಮಾನ್ಯ ಸದಸ್ಯರು ಆಡಳಿತಾತ್ಮಕ ವಿವರಗಳಿಗೆ ಹೋಗಬೇಕಾದ್ದಿಲ್ಲ. ಈ ಸದನವು ಮಾಡಬಹುದಾದ್ದೆಂದರೆ ತತ್ವಗಳನ್ನು ನಿರ್ಣಯಿಸುವುದು, ಮತ್ತು ಅವುಗಳನ್ನು ಪ್ರಯೋಗದಲ್ಲಿ ಕಾರ್ಯಗತಗೊಳಿಸುವುದನ್ನು ಸಂಬಂಧಿಸಿದ ಪ್ರಾಧಿಕಾರಗಳಿಗೆ ಬಿಡುವುದು ಆದರೆ, ಶ್ರೀ ಎ.ಪಿ, ಜೈನ್‌ರ ತಿದ್ದುಪಡಿಯ ಬಗ್ಗೆ ಮತ್ತು ಪಂಡಿತ್ ಠಾಕೂರ್ ದಾಸ್ ಭಾರ್ಗವರು ಹೇಳಿದ ಬಗ್ಗೆ ನನಗೇ ಒಂದು ಸಂಶಯದ ಭಾವನೆಯುಂಟಾಯಿತು. ನಾನು ಸಂವಿಧಾನ ಸಭೆಯಲ್ಲಿ ನಡೆದ ಅನೌಪಚಾರಿಕ ಸಭೆಯ ಬಗ್ಗೆ ಹೆಚ್ಚು ಪರಿಣತನಲ್ಲ. ನಾನದನ್ನು ಅರ್ಥಮಾಡಿಕೊಂಡಂತೆ, ಸದಸ್ಯರು ಕುತೂಹಲಿಗಳಾಗಿದ್ದದ್ದು,

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೬೪–೬೫.

ಯಾವುದೇ ಕ್ಷೇತ್ರಗಳು ನಿಗದಿಯಾದರೆ ಅಥವಾ ಸೀಮಾನಿರ್ಣಯವು ಜಾರಿಯಾದರೆ, ಈ ಸದನವು ಅದನ್ನು ಪರಿಶೀಲಿಸಲು ಮತ್ತು ಅದರ ಬಗ್ಗೆ ತನ್ನ ನಿಲುವುಗಳನ್ನು ಅಭಿವ್ಯಕ್ತಿಸಲು ಒಂದು ಅವಕಾಶವನ್ನು ಹೊಂದಿರಬೇಕು ಎಂಬ ಬಗ್ಗೆ ಮಾತ್ರ. ಏಕೆಂದರೆ ಈ ಎಲ್ಲಾ ಕ್ಷೇತ್ರಗಳನ್ನು ಸದನವು ಅಂಗೀಕರಿಸಬಹುದಾದ ಒಂದು ಕಾಯಿದೆಯ ಪರಿಶಿಷ್ಟ ಅಥವಾ ಅನುಸೂಚಿಯಾಗಿ ನಮೂದಿಸಲು ಸಾಧ್ಯವಿಲ್ಲ. ಶ್ರೀ ಕೃಷ್ಣಾಮಾಚಾರಿಯವರು ಸರಿಯಾಗಿಯೇ ಗುರುತಿಸಿದಂತೆ, ಕಾನೂನಿನಿಂದ ನಿರೀಕ್ಷಿಸಲಾಗುವುದು ಇಂತಹ ಮತ್ತು ಅಂತಹ ಸಂಗತಿಗಳಿಗೆ ಒಂದು 'ಅವಕಾಶ'ವನ್ನು ಮಾಡಿಕೊಡುವುದು ಮಾತ್ರ. ಅದರರ್ಥ ಎಲ್ಲಾ ವಿಚಾರಗಳನ್ನು ಈ ಸದನದಲ್ಲಿ ಮಾಡಬೇಕೆಂದಲ್ಲ. ಸದನವು ಒಂದು ನಿಶ್ಚಿತ ಸಂಗತಿಯನ್ನು ಮಾಡುವ ಕಾನೂನು ವ್ಯವಸ್ಥೆಯನ್ನು ನಿಗದಿಪಡಿಸಬಹುದು. ನನ್ನ ಕಷ್ಟವೆಂದರೆ, ಆಕ್ಷೇಪಿಸುವವರ ದೃಷ್ಟಿಕೋನವನ್ನು ನಾನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸದನದ ಉದ್ದೇಶವು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ಹೊಂದುವುದು. ಹೇಗಿದ್ದರೂ, ಮಾನ್ಯ ಸದಸ್ಯರು ಸಲಹೆ ನೀಡಿದಂತೆಯೇ ಈ ಸದನದ ಮುಂದೆ ಬರುವ ಯಾವುದೇ ವಿಧೇಯಕವೂ ಕಾರ್ಯಾಂಗದಿಂದ ತಯಾರಾಗಿ ಒಂದು ಸಿದ್ಧ ಒಣರೂಪದಲ್ಲಿ ಬರುತ್ತದೆ. ಡಾ ಅಂಬೇಡ್ಕರ್ ಅವರು ೧೩ನೇ ಖಂಡಕ್ಕೆ ಒಂದು ತಿದ್ದುಪಡಿಯನ್ನು ಸೂಚಿಸಲು ಪ್ರಸ್ತಾವಿಸಿದ್ದಾರೆ, ಮತ್ತು ಆ ತಿದ್ದುಪಡಿಯಂತೆ, ರಾಷ್ಟ್ರಪತಿಗಳು ಏನೇ ಮಾಡಿದರೂ ಅದು ಸಂಸತ್ತು ಮಾಡಬಹುದಾದ ಮಾರ್ಪಾಡುಗಳಿಗೆ ಒಳಪಡುತ್ತದೆಂಬುದನ್ನು ಸದಸ್ಯರು ಕಾಣುತ್ತಾರೆಂದು ನಾನು ಗಮನಿಸಿದ್ದೇನೆ. ಆದ್ದರಿಂದ ಸ್ಪಷ್ಟವಾಗುವುದೇನೆಂದರೆ ಯಾವುದೇ ಆದೇಶಗಳು ಮಾಡಲ್ಪಡಲಿ, ಅವು ಈ ಸದನದ ಮುಂದೆ ಪರಿಶೀಲನೆಗೆ ಬರುತ್ತವೆ ಮತ್ತು ಸಂಸತ್ತು ಮಾರ್ಪಾಡುಗಳನ್ನು ಸಲಹೆ ಮಾಡಲು ಒಂದು ಶಾಸನಾತ್ಮಕ ಹಕ್ಕನ್ನು ಹೊಂದುತ್ತದೆ. ಸರಕಾರವು ತಮ್ಮಿಚ್ಛೆಗನುಗುಣವಾಗಿ ಸಮಯ ಸಿಗುತ್ತದೆ ಅಥವಾ ಇಲ್ಲ ಎಂಬುವುದಕ್ಕೆ ಸಂಬಂಧಿಸಿದ ವಿಚಾರ ಇದಲ್ಲ. ಯಾವುದೇ ಸದಸ್ಯನು ಯಾವುದೇ ಮಾರ್ಪಾಡನ್ನು ಸಲಹೆ ಮಾಡಿದಲ್ಲಿ, ಆ ಮಾರ್ಪಾಡು ಈ ಸದನದ ಮುಂದೆ ಬರತಕ್ಕದ್ದು ಮತ್ತು ಸರಕಾರವು ಅದಕ್ಕೆ ಸಮಯ ನೀಡತಕ್ಕದ್ದು.

**ಡಾ. ಅಂಬೇಡ್ಕರ್:** ಮಾನ್ಯರೆ, ನೀವು ಅನುಮತಿ ನೀಡಿದ್ದಾದರೆ, ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ಸಂಸತ್ತಿನ ಕೆಲಸ ಬರೀ ಮರಣೋತ್ತರ ಪರೀಕ್ಷೆಯನ್ನು ಮಾಡವುದಲ್ಲ, ಅಂದರೆ ಕೊನೆಯ ಕ್ಷಣದಲ್ಲಿ, ಆದರೆ ನಾನು ಹೇಳುತ್ತಿರುವುದೇನೆಂದರೆ ನಾನು ತರುವ ವಿಧೇಯಕದಲ್ಲಿ ಈ ಎಲ್ಲಾ ವಿಚಾರಗಳನ್ನು ಕಾನೂನಿನಿಂದ ವ್ಯವಹರಿಸಲಾಗುವುದು ಮತ್ತು ಸಂಸತ್ತು ಅದರ ಬಗ್ಗೆ ತನ್ನ ಅಭಿಪ್ರಾಯವನ್ನು ನೀಡುವ ಅವಕಾಶವನ್ನು ಪಡೆಯುವುದು. ನಾನು ಪ್ರಸ್ತಾವಿಸುತ್ತಿರುವುದು ತುಂಬಾ ದೊಡ್ಡ ವಿಚಾರ. ಈ ವಿಚಾರವನ್ನು ಸರಿಯಾಗಿ ಮತ್ತು ವಿಸ್ತಾರವಾಗಿ ಪರಿಗಣಿಸದೇ ನಾನು ಈ ರೀತಿ ಅಥವಾ ಆ ರೀತಿಯೆಂದು ಬದ್ಧನಾಗಲು ಸಾಧ್ಯವಿಲ್ಲ. ಆದರೆ ಮತದಾರರ ವ್ಯವಸ್ಥೆಯು ಏನೇ ಇರಲಿ, ಮತದಾನದ ಆಧಾರವೇನೇ ಇರಲಿ, ಉಮೇದುವಾರ ಅರ್ಹತೆಗಳು ಅಥವಾ ಅನರ್ಹತೆಗಳೇನೇ ಇರಲಿ, ಆ ಎಲ್ಲಾ ವಿಚಾರಗಳೂ ೫ ಮತ್ತು ೬ನೇ ಖಂಡಗಳು ಜಾರಿಗೆ ಬರುವುದಕ್ಕೆ ಮೊದಲು ಸರಕಾರವು ತರುವ ವಿಧೇಯಕದಲ್ಲಿ ವ್ಯವಹರಿಸಲ್ಪಡುತ್ತದೆ....

**ಸಭಾಪತಿಗಳು:** ಅದಲ್ಲದೆ ನಾನು ಸೂಚಿಸುತ್ತಿರುವುದೇನೆಂದರೆ ಸದನವು ಈ ಹಕ್ಕನ್ನು ಹೊಂದಿದ ಬಳಿಕ....

**ಡಾ. ಅಂಬೇಡ್ಕರ್:** ಅದು ಈ ಸದನವು ಮಾಡುವುದಕ್ಕೆ ಹೆಚ್ಚಿನದ್ದು. ನಾನು ಅದಕ್ಕೂ ಹೆಚ್ಚಿನದ್ದನ್ನು ಮಾಡುತ್ತಿದ್ದೇನೆ. ನಾನೀಗ ನಿಮಗೆ ಕ್ಷೇತ್ರಗಳನ್ನು ನಿಗದಿಪಡಿಸುವ ವಿಚಾರದಲ್ಲಿ ಚುನಾವಣಾ ಆಯಕ್ತರೊಂದಿಗೆ

ಕೆಲಸ ಮಾಡಲು ಅನುಕೂಲವಾಗುವಂತೆ ಸಮಿತಿಗಳನ್ನು ರಚಿಸುವ ಹಕ್ಕನ್ನು ನೀಡುವ ಒಂದು ತಿದ್ದುಪಡಿಯನ್ನು ೧೩ನೇ ಖಂಡಕ್ಕೆ ಮಂಡಿಸಿತ್ತಿದ್ದೇನೆ. ನಾನು ಮಾಡುವ ಮುಂದಿನ ಅಂಶವೆಂದರೆ ಇದು: ಆದೇಶದಲ್ಲಿ ನಮೂದಿಸಲಾಗುವ ಕ್ಷೇತ್ರಗಳು ಆ ಸಮಿತಿಯ ಶಿಫಾರಸಿನಂತೆಯೇ ಹೊರತು ಚುನಾವಣಾ ಆಯೋಗದಿಂದಲ್ಲ. ಒಂದು ತಿದ್ದುಪಡಿಯಿಂದ ನಾನು ಚುನಾವಣಾ ಆಯೋಗವನ್ನು ಕುಂಠಿತಗೊಳಿಸುತ್ತಿದ್ದೇನೆ. ನಾನು ಈ ಸಮಿತಿಗೆ ಅದನ್ನು ಮಾಡಲು ನೇರ ಅಧಿಕಾರವನ್ನು ನೀಡುತ್ತಿದ್ದೇನೆ.

**ಶ್ರೀ ಕಾಮತ್ (ಮಧ್ಯ ಪ್ರದೇಶ):** ಈ ಸಮಿತಿಯು ನೇಮಕಗೊಳ್ಳುತ್ತದೆಯೇ ಅಥವಾ ಆರಿಸಲ್ಪಡುತ್ತದೆಯೇ?

**ಡಾ. ಅಂಬೇಡ್ಕರ್:** ಸಭಾಪತಿಗಳು ತೀರ್ಮಾನಿಸಿದ ರೀತಿಯಲ್ಲಿ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಸಮಿತಿ ಮತ್ತು ಚುನಾವಣಾ ಆಯೋಗವು ಪ್ರತೀ ರಾಜ್ಯಕ್ಕೂ ವಿಭಿನ್ನವಾಗಿ ತೀರ್ಮಾನಿಸಬಹುದು ಮತ್ತು ಒಂದು ಸಾಮಾನ್ಯ ಮಾಪನವನ್ನು ತೀರ್ಮಾನಿಸುವುದು.

**ಡಾ. ಅಂಬೇಡ್ಕರ್:** ನಾನು ಈಗ ತಾನೆ ಹೇಳಿದಂತೆ, ನಾನು ಈ ವಿಚಾರವನ್ನು ತೀರ್ಮಾನಿಸಲು ಒಂದು ವಿಧೇಯಕವನ್ನು ತರುತ್ತೇನೆ ಮತ್ತು ಈ ವಿಧೇಯಕವು ಅಂಗೀಕಾರವಾದಾಗ, ಮಾಡಿದ ಯಾವುದೇ ಕಾನೂನು ಅಥವಾ ಯಾವುದೇ ಅಂಶವು ಭಾರತದೆಲ್ಲೆಡೆ ಏಕ ರೂಪವಾಗಿ ಅಥವಾ ಸಂಸತ್ತು ನಿಶ್ಚಯಿಸಿದಂತೆ ವಿವಿಧ ರಾಜ್ಯಗಳಲ್ಲಿ ವಿವಿಧ ರೀತಿಯಲ್ಲಿ ಅನ್ವಯವಾಗಬಹುದು.

*__ಡಾ. ಅಂಬೇಡ್ಕರ್:__ ಇಂದು ವಿಧೇಯಕವಿರುತ್ತದೆಂದು ನೀಡಿದ ಆಶ್ವಾಸನೆಗೆ ನಾನು ಬದ್ಧನಾಗಿದ್ದೇನೆ. ಅದು ಎರಡೂ ವಿಚಾರಗಳಲ್ಲಿ ವ್ಯವಹರಿಸುತ್ತದೆ: (೧) ಕ್ಷೇತ್ರಗಳ ಲಕ್ಷಣ–ಅವು ಏಕ ಸದಸ್ಯರದ್ದೇ ಅಥವಾ ಬಹು ಸದಸ್ಯರದ್ದೇ; ಮತ್ತು (೨) ಮತದಾನದ ಪದ್ಧತಿ ಯಾವುದಿರಬೇಕು. ನಾನು ಹೇಳಿದಂತೆ, ನಾವು ಅಭ್ಯರ್ಥಿ, ಆತನ ಅರ್ಹತೆಗಳು ಮತ್ತು ಅನರ್ಹತೆಗಳ ಬಗ್ಗೆಯೂ ವ್ಯವಹರಿಸೋಣ. ನನಗೆ ಸಂಸತ್ತಿನ ಅಧಿಕಾರವನ್ನು ಕೈ ಬಿಡುವ ಯಾವ ಇಚ್ಛೆಯೂ ಇಲ್ಲ ಮತ್ತು ನಾನು ಎಲ್ಲಾ ಗೌರವಗಳೊಂದಿಗೆ ಹೇಳಬಹುದಾದರೆ, ಚುನಾವಣಾ ಆಯೋಗಕ್ಕೆ ಪೂರ್ಣವಾಗಿ ಬಿಡಬೇಕಾದ ಅಂಶವೆಂದು ನನ್ನ ಮಾನ್ಯ ಮಿತ್ರ ಶ್ರೀ ಸಂತಾನಂ ಅವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಚುನಾವಣಾ ಆಯೋಗವು ಚುನಾವಣೆಗಳನ್ನು ನಿಯಂತ್ರಿಸಲು ಮತ್ತು ಮೇಲುಸ್ತುವಾರಿ ಮಾಡಲು ಇದೆಯಾದರೆ, ಕ್ಷೇತ್ರಗಳ ಸೀಮಾನಿರ್ಣಯವು ಸಂಸತ್ತಿನ ವಿಚಾರವಾಗಿದೆ.

**ಸಭಾಪತಿಗಳು:** ಶ್ರೀ ಜೈನ್ ಅವರು ನಾನು ಅವರ ತಿದ್ದುಪಡಿಗಳನ್ನು ಸದನದಲ್ಲಿಡಲು ಬಯಸುತ್ತಾರೆಯೇ?

**ಶ್ರೀ ಎ.ಪಿ.ಜೈನ್:** ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

**ಸಭಾಪತಿ:** ನಾವು ಸಾಕಷ್ಟು ಚರ್ಚೆಯನ್ನು ಮಾಡಿದೆವೆಂದು ಭಾವಿಸುತ್ತೇನೆ. ನಾನು ಒಬ್ಬ ವ್ಯಕ್ತಿಗೆ ಒಂದೇ ತಿದ್ದುಪಡಿಯನ್ನು ನಾನು ಸದನದ ಮುಂದಿಡಲು ಬಯಸಿದರೆ, ನಾನು ಹಾಗೆ ಮಾಡುತ್ತೇನೆ.

**ಶ್ರೀ ಎ.ಪಿ.ಜೈನ್:** ಮಾನ್ಯರೆ, ಬೇಡ. ನಾನದನ್ನು ಸದನದಲ್ಲಿ ಮತಕ್ಕೆ ಹಾಕಲು ಬಯಸುವುದಿಲ್ಲ.

**ಶ್ರೀ ಜೆ.ಆರ್.ಕಪೂರ್:** ಕಾನೂನು ಸಚಿವರು ಕೊಟ್ಟ ಭರವಸೆಯಿಂದಾಗಿ, ನಾನು ಕೂಡ ನನ್ನ ತಿದ್ದುಪಡಿಯನ್ನು ಸದನದ ಮುಂದಿಡಲು ಬಯಸುವುದಿಲ್ಲ.

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೬೮–೭೧.

**ಡಾ ಅಂಬೇಡ್ಕರ್:** ಮಾನ್ಯರೆ, ೬ನೇ ಖಂಡಕ್ಕೆ ನನ್ನದೊಂದು ತಿದ್ದುಪಡಿಯಿದೆ. ನಾನು ಮಂಡಿಸುವುದೇನೆಂದರೆ:

"(೨) ನೇ ಉಪಖಂಡದಲ್ಲಿ 'ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ' ಎಂಬುವುದನ್ನು ಕೈಬಿಡಲಾಗಿದೆ"

ಅದರ ಮಹತ್ವವನ್ನು ಸದನವು ಅರ್ಥಮಾಡಿಕೊಳ್ಳಲೆಂದು ನಾನು ೧೩ನೇ ಖಂಡವನ್ನು ಓದುತೇನೆ, ನಾನು ೧೩ನೇ ಖಂಡಕ್ಕೆ ಒಂದು ತಿದ್ದುಪಡಿಯನ್ನು ಪ್ರಸ್ತಾವಿಸುತ್ತೇನೆ, ಮತ್ತು ಅದು ಹೀಗಿದೆ:

ಈಗಿರುವ ಖಂಡಕ್ಕೆ ಪರ್ಯಾಯವಾಗಿ:

"೧೩ ಕಲಮು ೬, ೯ ಮತ್ತು ೧೧ರಡಿ ಆದೇಶಗಳನ್ನು ಮಾಡುವ ಕ್ರಮ:

(೧) ಈ ಕಾಯಿದೆಯು ಜಾರಿಗೆ ಬಂದ ಕೂಡಲೇ, ಸಭಾಪತಿಗಳು ರಚಿಸಬೇಕಾದ್ದೆಂದರೆ–

(ಎ) ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿದಂತೆ ಪ್ರತೀ ಎ ಭಾಗದ ರಾಜ್ಯ ಮತ್ತು ಬಿ ಭಾಗದ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯವನ್ನು ಪ್ರತಿನಿಧಿಸುವ, ಮೂರಕ್ಕೆ ಕಡಿಮೆಯಾಗದ ಮತ್ತು ಏಳಕ್ಕೆ ಮೀರದ ಸಂಸತ್ ಸದಸ್ಯರನ್ನೊಳಗೊಂಡ ಸಲಹಾ ಸಮಿತಿ; ಮತ್ತು

(ಬಿ) ಬಿಲಾಸ್‌ಪುರ, ಕೂರ್ಗ್ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಹೊರತುಪಡಿಸಿ, ಪ್ರತೀ ಸಿ ಭಾಗದ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯವನ್ನು ಪ್ರತಿನಿಧಿಸುವ ಸಂಸತ್ ಸದಸ್ಯ ಅಥವಾ ಸದಸ್ಯರನ್ನೊಳಗೊಂಡ ಒಂದು ಸಲಹಾ ಸಮಿತಿ.

(೨) ಚುನಾವಣಾ ಆಯೋಗವು, ಆಯಾ ರಾಜ್ಯಕ್ಕೆ ಸಂಬಂಧಿಸಿದಂತೆ ರಚಿಸಲಾದ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ, ಕಲಮ್ ೬,೯ ಮತ್ತು ೧೧ ಅಥವಾ ಅನ್ವಯವಾಗುವ ಇತರ ಕಲಮುಗಳಡಿ ಕ್ಷೇತ್ರಗಳನ್ನು ರಚಿಸತಕ್ಕದ್ದು ಮತ್ತು ಆ ಕಲಮುಗಳಡಿ ಆದೇಶಗಳನ್ನು ಮಾಡಲು ಪ್ರಸ್ತಾವಗಳನ್ನು ರಾಷ್ಟ್ರಪತಿಗಳ ಮುಂದಿಡತಕ್ಕದ್ದು.

(೩) ಕಲಮು ೬, ಕಲಮು ೯, ಕಲಮು ೧೧ ಅಥವಾ ಕಲಮು ೧೨ರನ್ವಯ ಮಾಡಲಾದ ಪ್ರತೀ ಆದೇಶವನ್ನು ಅದನ್ನು ಮಾಡಲಾದ ತರುವಾಯ, ಸಂಸತ್ತಿನ ಮುಂದಿಡತಕ್ಕದ್ದು ಮತ್ತು ಸಂಸತ್ತು ಆ ಆದೇಶವನ್ನು ತನ್ನ ಮುಂದೆ ಇಡಲ್ಪಟ್ಟ ದಿನಾಂಕದಿಂದ ಇಪ್ಪತ್ತು ದಿನಗಳೊಳಗಾಗಿ ತಾನು ಮಾಡಬಹುದಾದ ಮಾರ್ಪಾಡುಗಳಿಗೊಳಗಾಗಿರತಕ್ಕದ್ದು.

ಈಗ, ಕ್ಷೇತ್ರಗಳನ್ನು ಅಂತಿಮವಾಗಿ ತೀರ್ಮಾನಿಸುವ ಜವಾಬ್ದಾರಿಯು ಈ ಸಮಿತಿಗಳ ಮೇಲೆ ಹೇರಲಾಗಿದೆ ಮತ್ತು ಪರಿಣಾಮವಾಗಿ ಈ ಸಮಿತಿಗಳ ಶಿಫಾರಸ್ಸೇ ಜಾರಿಯಾಗುತ್ತದೆ. ಹಾಗಾದ ಮೇಲೆ, ಚುನಾವಣಾ ಆಯೋಗದೊಂದಿಗೆ ಸಮಾಲೋಚನೆಯನ್ನು ವಿಧಿಸಿದ ಹಳೆಯ ಸಂಶಯವು ಅನಗತ್ಯವಾಗಿದೆ. ಆದ್ದರಿಂದ ನಾನು ಆ ಖಂಡಗಳನ್ನು ಕೈಬಿಡುತ್ತಿದ್ದೇನೆ.

**ಸಭಾಪತಿ:** ತಿದ್ದುಪಡಿಗಳನ್ನು ಮಂಡಿಸಲಾಗಿದೆ.

"(೨) ನೇ ಉಪ–ಖಂಡದಲ್ಲಿ 'ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ ಎಂಬುದನ್ನು ಕೈಬಿಡಲಾಗಿದೆ".

**ಪಂಡಿತ್ ಬಾಲಕೃಷ್ಣ ಶರ್ಮ (ಉತ್ತರ ಪ್ರದೇಶ):** ಒಂದು ಸ್ಪಷ್ಟೀಕರಣದ ಅಂಶವಾಗಿ, ಮಾನ್ಯರೆ, ನನ್ನ ಮಾನ್ಯ ಮಿತ್ರ ಪಂಡಿತ್ ಠಾಕೂರ್ ದಾಸ್ ಭಾರ್ಗವರು ವ್ಯಕ್ತಪಡಿಸಿದ ಸಂಶಯಗಳು ಅಂದರೆ ಮಾನ್ಯ ಸಭಾಪತಿಗಳು ನೇಮಿಸಬಹುದಾದ ಮೂರರಿಂದ ಏಳು ಸದಸ್ಯರ ವಿವಿಧ ಸಮಿತಿಗಳು ವಿವಿಧ ರಾಜ್ಯಗಳಿಗೆ ಸಂಬಂಧಿಸಿದಂತೆ ವಿವಿಧ ಶಿಫಾರಸ್ಸುಗಳನ್ನು ಮಾಡಬಹುದು ಮತ್ತು ಆದ್ದರಿಂದ ಅಲ್ಲಿ ಏಕರೂಪತೆಯಿರಲಿಕ್ಕಿಲ್ಲವೆಂಬುದನ್ನು ಉತ್ತರಿಸಿಲ್ಲ. ಆ ಸಾಧ್ಯತೆಯನ್ನು ಹೇಗೆ ನಿವಾರಿಸಲಾಗಿದೆ?

**ಡಾ. ಅಂಬೇಡ್ಕರ್:** ಉತ್ತರವು ಬಹಳ ಸರಳವಾಗಿದೆ. ಸಂಸತ್ತಿನ ಕ್ಷೇತ್ರಗಳಿಗೆ ಮತ್ತು ರಾಜ್ಯ ಶಾಸನಸಭೆಗಳ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಮಿತಿಗಳ ಕೆಲಸವು ಸಂಸತ್ತು ಇನ್ನು ಮುಂದೆ ಮಾಡಲಿರುವ ಕಾನೂನಿಗೆ ಒಳಪಡುತ್ತದೆ. ಆದ್ದರಿಂದ ಅವು ಸ್ವತಂತ್ರವಾಗಿ ಕೆಲಸ ಮಾಡುವುದಿಲ್ಲ.

**ಡಾ. ದೇಶ್‌ಮುಖ್ (ಮಧ್ಯ ಪ್ರದೇಶ):** ಮಾನ್ಯರೆ, ಮಾನ್ಯ ಕಾನೂನು ಸಚಿವರು 'ಚುನಾವಣಾ ಆಯೋಗ' ಎಂಬ ಪದಗಳನ್ನು ಕೈಬಿಡಲು ಮುಂದಾದಾಗ ನಾನು ತುಂಬಾ ಸಂತೋಷಪಟ್ಟೆ, ಆದರೆ ದುರದೃಷ್ಟವಶಾತ್ ಅವು ಮತ್ತೆ ೧೩ನೇ ಖಂಡದ ತಿದ್ದುಪಡಿಯ ಮೂಲಕ ಬರುತ್ತವೆ. ನಾನು ಇಂದು ಬಹಳ ಸಹಕಾರೀ ಮನಸ್ಥಿತಿಯಲ್ಲಿದ್ದೇನೆ ಮತ್ತು ಇಡೀ ಪರಿಸ್ಥಿಯನ್ನು ಬಹಳ ಸಹಾನೂಭೂತಿಯ ದೃಷ್ಟಿಯಿಂದ ಸ್ವೀಕರಿಸಲು ಸಿದ್ಧನಿದ್ದೇನೆ, ಆದರೆ ಕ್ಷೇತ್ರಗಳ ಸೀಮಾನಿರ್ಣಯದ ಕೆಲಸದಿಂದ ಚುನಾವಣಾ ಆಯೋಗವನ್ನು ಪೂರ್ಣವಾಗಿ ಹೊರಗಿಡಬೇಕೆಂದು ನಾನು ಒತ್ತಾಯಿಸುತ್ತೇನೆ. ಇದು ಸಂವಿಧಾನದ ಫಲ ಶ್ರುತಿಯಾಗಿ ಅಸ್ತಿತ್ವಕ್ಕೆ ಬಂದ ಅಂಗವಾಗಿದ್ದು ಅದರ ಕರ್ತವ್ಯಗಳು ಸಂವಿಧಾನದ ೩೨೪ನೇ ವಿಧಿಯನ್ವಯ ನಿರ್ಣಯಿಸಲ್ಪಟ್ಟಿವೆ. ಆದ್ದರಿಂದ, ಕ್ಷೇತ್ರಗಳ ಸೀಮಾನಿರ್ಣಯಗಳಿಗಾಗಿ ಅಗತ್ಯವಿರುವ ಸೂಕ್ತ ಅಂಗಗಳನ್ನು ರಾಷ್ಟ್ರಪತಿಗಳು ರಚಿಸಲು ಅನುವಾಗುವ ಒಂದು ತಿದ್ದುಪಡಿಯಿರಬೇಕು. ಮುಖ್ಯ ಚಿಂತನೆಯೆಂದರೆ ಕ್ಷೇತ್ರ ಸೀಮಾನಿರ್ಣಯದ ಕುರಿತು ನೇರವಾಗಿ ಏನನ್ನಾದರೂ ಮಾಡುವಲ್ಲಿ ಚುನಾವಣಾ ಆಯೋಗವು ಕೊನೆಯ ಅಂಗವಾಗಿರಬೇಕು.

**ಶ್ರೀ ಕಾಮತ್:** ಈ ವಿಧೇಯಕದಲ್ಲಿ ಯೋಚಿಸಲಾದ ಕಾರ್ಯವನ್ನು ಬಹುತೇಕ ತತ್‌ಕ್ಷಣದಲ್ಲೇ ಕೈಗೊಳ್ಳಬೇಕಾಗುವುದರಿಂದ, ಈ ತಿದ್ದುಪಡಿಯ ಗುರಿಯು ಈ ಸಲಹಾ ಸಮಿತಿಗಳು ಅಥವಾ ಇತರ ಸಮಿತಿಗಳು ತತ್‌ಕ್ಷಣದಲ್ಲೇ ರಚನೆಗೊಳ್ಳುವಂತಿದೆಯೇ?

**ಡಾ. ಅಂಬೇಡ್ಕರ್:** ಇಲ್ಲಿನ ಕಾರ್ಯವು ಸಿದ್ಧವಾದೊಡನೇ ಅವನ್ನು ರಚಿಸಲಾಗುವುದು.

**ಸಭಾಪತಿ:** ಪ್ರಸ್ತಾವಗಳನ್ನು ಮಾಡಲು ಆಡಳಿತಯಂತ್ರವಿರಬೇಕು ಮತ್ತು ನಾನು ನೋಡುವಂತೆ, ಆ ಆಡಳಿತಾತ್ಮಕ ಯಂತ್ರವು ಚುನಾವಣಾ ಆಯೋಗ ಎಂಬುದನ್ನು ಮಾನ್ಯ ಸದಸ್ಯರು ಮನಗಾಣಬಹುದು.

**ಡಾ. ಅಂಬೇಡ್ಕರ್:** ಅಲ್ಲದೇ ಹೋದರೆ ಸದಸ್ಯರು ಒಂದು ಕ್ಷೇತ್ರದ ಸೀಮಾನಿರ್ಣಯವನ್ನು ಹೇಗೆ ನಿರ್ಧರಿಸುತ್ತಾರೆ?

**ಸಭಾಪತಿ:** ನಾನು ಸದನದ ಗಮನವನ್ನು ಇನ್ನೂ ಒಂದು ಸಂಗತಿಯತ್ತ ಸೆಳೆಯುತ್ತೇನೆ ಮತ್ತು ಅದೇಂದರೆ– ಈ ಸಮಿತಿಗಳು ಸಲಹಾತ್ಮಕವಾಗಿದ್ದರೂ ತಿದ್ದುಪಡಿಯು "ಚುನಾವಣಾ ಆಯೋಗವು ಸಲಹಾ ಸಮಿತಿಗಳೊಂದಿಗೆ ಸಮಾಲೋಚಿಸುತ್ತ" ಎಂದಿದೆಯೇ ಹೊರತು ಸಮಾಲೋಚನೆಯ ನಂತರ ಎಂದಿಲ್ಲ. ಅದು ಬಹುದೊಡ್ಡ ಬದಲಾವಣೆ. ಅದೇನಿದ್ದರೂ ನಾನು ಈ ತಿದ್ದುಪಡಿಯನ್ನು ಸದನದ

ಮುಂದಿಡುತ್ತೇನೆ. ಅದನ್ನು ಸಾಕಷ್ಟು ಚರ್ಚಿಸಲಾಗಿದೆ.

**ಶ್ರೀ ಶ್ಯಾಮನಂದನ್ ಸಹಾಯ್:** ಮಾನ್ಯರೆ, ರಾಷ್ಟ್ರಪತಿಗಳು ತೀರ್ಮಾನಿಸಿದ ನಂತರ ಸಂಸತ್ತು ಅದನ್ನು ಬದಲಾಯಿಸಬೇಕೆಂಬ ಆಶಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

**ಡಾ ಅಂಬೇಡ್ಕರ್:** ರಾಷ್ಟ್ರಪತಿಗಳು ಈಗ ರಚನೆಗೊಳ್ಳುವ ಕಾನೂನು ರೀತ್ಯಾ ಹೊರತು ಇನ್ನೇನೂ ಮಾಡುವುದಿಲ್ಲವೆಂಬುವುದನ್ನು ನಾನು ಅನೇಕ ಬಾರಿ ಹೇಳಿದ್ದೇನೆ. ನಾನು ಎಷ್ಟು ಬಾರಿ ಅದನ್ನು ಪುನರಾವರ್ತಿಸಲಿ?

**ಸಭಾಪತಿಗಳು:** ಪ್ರಶ್ನೆಯೆಂದರೆ:

"(೨) ನೇ ಉಪಖಂಡದಲ್ಲಿ 'ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ನಂತರ' ಎಂಬುವುದನ್ನು ಕೈಬಿಡಲಾಗಿದೆ,"

ನಿಳುವಳಿಗಳನ್ನು ಸ್ವೀಕರಿಸಲಾಯಿತು.

(ತಿದ್ದುಪಡಿ ಮಾಡಿದ ೬ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು. –ಸಂ.)

## *೭ ಮತ್ತು ೮ನೇ ಖಂಡ

೭ ಮತ್ತು ೮ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

## ೯ನೇ ಖಂಡ

(ಶಾಸನಸಭಾ ಕ್ಷೇತ್ರಗಳ ಸೀಮಾನಿರ್ಣಯ)

ತಿದ್ದುಪಡಿಮಾಡಲಾಯಿತು:

" 'ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ನಂತರ' ಎಂಬುವುದನ್ನು ಕೈಬಿಡಲಾಗಿದೆ."

—[ಡಾ ಅಂಬೇಡ್ಕರ್]

**ಶ್ರೀ ತ್ಯಾಗಿ:** ನಾನು ಮಂಡಿಸುವುದೇನೆಂದರೆ:

ಈ ಕೆಳಕಂಡ ಪರಂತುಕವನ್ನು ಸೇರಿಸಬೇಕು:

"ಉಪಬಂಧಿಸಿದಂತೆ ಪುರಸಭಾ ಮಂಡಳಿ ಅಥವಾ ಪುರಸಭಾ ನಿಗಮದಲ್ಲಿ ಬರುವ ಕ್ಷೇತ್ರಗಳನ್ನು ಗ್ರಾಮೀಣ ಪ್ರದೇಶಗಳನ್ನೊಳಗೊಳ್ಳುವ ಕ್ಷೇತ್ರಗಳಲ್ಲಿ ಸೇರಿಸತಕ್ಕದ್ದಲ್ಲ."

ಮಾನ್ಯರೆ, ಈ ವಿಧೇಯಕವು ಸದನದ ಮುಂದೆ ಬಂದ ಸಮಯದಿಂದ ನಾನು ಗ್ರಾಮೀಣ ಪ್ರದೇಶಗಳು ಈ ತನಕ ಅನುಭವಿಸಿಕೊಂಡು ಬಂದ ಹಕ್ಕುಗಳು ಮತ್ತು ಸವಲತ್ತುಗಳನ್ನು ಅವರಿಂದ ಕಿತ್ತುಕೊಳ್ಳಬಾರದೆಂಬುದಕ್ಕಾಗಿ ತೀವ್ರ ಪ್ರಯತ್ನವನ್ನು ಮಾಡುತ್ತಿದ್ದೇನೆ. ಕಳೆದ ಮೂವತ್ತು ವರ್ಷಗಳಲ್ಲಿ ಅಥವಾ ಇನ್ನೂ ಹೆಚ್ಚು ಅವಧಿಯಲ್ಲಿ ವಿವಿಧ ರಾಜ್ಯಗಳ ಶಾಸನಸಭೆಗಳಲ್ಲಿ ಗ್ರಾಮೀಣ ಪ್ರದೇಶಗಳು ಪ್ರತ್ಯೇಕ ಕ್ಷೇತ್ರಗಳನ್ನು ಹೊಂದಿದ್ದವು.

**ಡಾ ಅಂಬೇಡ್ಕರ್:** ಮಾನ್ಯರೆ, ಚರ್ಚೆಯನ್ನು ಕಡಿಮೆ ಮಾಡಲು ಈ ವಿಚಾರವನ್ನು ಹೆಚ್ಚು ಸೂಕ್ತವಾಗಿ

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೭೧.

ಸದನದ ಮುಂದೆ ಬರಲಿರುವ ವಿಧೇಯಕದಲ್ಲಿ ವ್ಯವಹರಿಸಬಹುದೆಂದು ನಾನು ಸೂಚಿಸಲೇ? ಈ ನಿರ್ದಿಷ್ಟ ವಿಧೇಯಕಕ್ಕೆ ಸಂಬಂಧವಿರುವ ವಿಚಾರವು ಇದು ಎಂದು ನನಗನ್ನಿಸುವುದಿಲ್ಲ.

**ಶ್ರೀ ತ್ಯಾಗಿ:** ಆದರೆ ಮತದಾರರ ಯಾದಿಯು ಸಿದ್ಧವಾದ ನಂತರ ಇದನ್ನು ಮಂಡಿಸುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಆಗ ಗ್ರಾಮೀಣ ಪ್ರದೇಶಗಳು ಪಟ್ಟಣ ಪ್ರದೇಶಗಳೊಂದಿಗೆ ಮಿಶ್ರವಾಗಿರುತ್ತವೆ.

ಮಾನ್ಯ ಸದಸ್ಯರ ಇತರ ತಿದ್ದುಪಡಿಗಳ ಸಂದರ್ಭದಲ್ಲಿ ಮಾನ್ಯ ಡಾ ಅಂಬೇಡ್ಕರ್‌ರವರು ಅವನ್ನು ಪರಿಗಣಿಸುವುದಾಗಿ ಸ್ವಲ್ಪ ಆಶ್ವಾಸನೆಯನ್ನು ನೀಡಿದ್ದಾರೆ– ಆದರೆ ನನ್ನ ಬಗ್ಗೆ ಉದ್ದಕ್ಕೂ ವಿರೋಧಿಸುತ್ತಲೇ ಬಂದಿದ್ದಾರೆ. ಕಳೆದ ಎರಡು ದಿನಗಳ ಕಾಲ ನಾನು ನನ್ನ ನಿಲುವನ್ನು ಅವರಿಗೆ ಒಪ್ಪಿಸಲು ಸರ್ವ ಪ್ರಯತ್ನ ಮಾಡುತ್ತಿದ್ದೇನೆ– ಆದರೆ ಅವರು ನನ್ನನ್ನು ಸಹಾನುಭೂತಿಯಿಂದ ಆಲಿಸುತ್ತಿಲ್ಲ.

**ಸಭಾಪತಿಗಳು:** ಆದರೆ ಈ ಬಾರಿ ಅವರು ಈ ವಿಚಾರವನ್ನು ಮುಂದಿನ ವಿಧೇಯಕವನ್ನು ಕೈಗೆತ್ತಿಕೊಳ್ಳುವಾಗ ಚರ್ಚಿಸುವ ಮುಖಾಂತರ ಸಾಕಷ್ಟು ಸಹಾನುಭೂತಿಯನ್ನು ತೋರಿಸಿದ್ದಾರೆ.

## *೧೦ನೇ ಖಂಡ

೧೦ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

## ೧೧ನೇ ಖಂಡ

(ಪರಿಷತ್ತಿನ ಕ್ಷೇತ್ರಗಳ ಸೀಮಾನಿರ್ಣಯ.)

ತಿದ್ದುಪಡಿ ಮಾಡಲಾಯಿತು.

> "'ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ನಂತರ' ಎಂಬುವುದನ್ನು ಕೈಬಿಡತಕ್ಕದ್ದು".
>
> —[ಡಾ ಅಂಬೇಡ್ಕರ್]

ತಿದ್ದುಪಡಿಮಾಡಿದ ಖಂಡಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.

## ೧೨ನೇ ಖಂಡ

(ಆದೇಶಗಳನ್ನು ಬದಲಾಯಿಸುವ ಅಥವಾ ತಿದ್ದುವ ಅಧಿಕಾರ)

**ಶ್ರೀ ಶ್ಯಾಮನಂದನ್ ಸಹಾಯ:** ಈ ಖಂಡದ ಅಗತ್ಯವೇನೆಂದು ನನಗೆ ಅರ್ಥವಾಗುವುದಿಲ್ಲ. ಏಕೆಂದರೆ ಈ ಸಲಹಾ ಸಮಿತಿಗಳ ಮೇಲೆ ಇದು ರಾಷ್ಟ್ರಪತಿಗಳಿಗೆ ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ನಂತರ ಇಡೀ ವಿಷಯವನ್ನು ಬದಲಾಯಿಸುವ ಹಕ್ಕನ್ನು ನೀಡುತ್ತದೆ ನಾನು ಈ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಇಚ್ಛಿಸುತ್ತೇನೆ. ಅದು ನಾವು ಒಪ್ಪಿದುದಕ್ಕೆ ವಿರುದ್ಧವಾಗಿವೆ.

**ಸಭಾಪತಿ:** ಪ್ರಾಯಃ ಉದ್ದೇಶವೆಂದರೆ ರಾಷ್ಟಪತಿಗಳಿಗೆ ಕಾಲಾನುಕಾಲಕ್ಕೆ ತಮ್ಮದೇ ಆದೇಶಗಳನ್ನು ಪುನರ್ವಿಮರ್ಶಿಸಲು ಹಕ್ಕನ್ನು ನೀಡುವುದು.

**ಡಾ. ಅಂಬೇಡ್ಕರ್:** ಒಮ್ಮೆ ಈ ಆದೇಶಗಳು ಸಂಸತ್ತಿನಿಂದ ಅಂತಿಮಗೊಳಿಸಲ್ಪಟ್ಟರೆ ಅವನ್ನು

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೭೨–೭೪.

ತಿದ್ದುಪಡಿ ಮಾಡುವ ಹಕ್ಕು ಇರುವುದಿಲ್ಲ.

**ಸಭಾಪತಿ:** ಆದರೆ **"**ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ನಂತರ**"** ಎಂಬ ಪದಗಳು ಅಗತ್ಯವೇ?

**ಡಾ. ಅಂಬೇಡ್ಕರ್:** ಅದು ಅವನ್ನು ಸಂಸತ್ತು ಅಂತಿಮಗೊಳಿಸುವ ಮೊದಲು.

**ಶ್ರೀ ಶ್ಯಾಮನಂದನ್ ಸಹಾಯ:** ಅಲ್ಲಿ ಈ ಸಲಹಾ ಸಮಿತಿ ಇದೆ. ಸಲಹಾ ಸಮಿತಿ ಮತ್ತು ಚುನಾವಣಾ ಆಯೋಗವು ಜಂಟಿಯಾಗಿ ಒಂದು ನಿರ್ದಿಷ್ಟ ಪ್ರಸ್ತಾವನೆಯನ್ನು ಅಧ್ಯಕ್ಷರಿಗೆ ಕಳುಹಿಸುವರು ಅಧ್ಯಕ್ಷರು ಅದನ್ನು ಸ್ವೀಕರಿಸುವರು ಮತ್ತು ೬, ೯ ಮತ್ತು ೧೧ನೇ ಖಂಡದಡಿ ಆದೇಶಗಳನ್ನು ಮಾಡುವರು. ನಂತರ ಚುನಾವಣೆ ನಡೆಯುವುದು.

**ಡಾ. ಅಂಬೇಡ್ಕರ್:** ಆ ನಂತರ ಆದೇಶವನ್ನು ಸಂಸತ್ತಿನ ಮುಂದೆ ಇಡಲಾಗುವುದು. ರಾಷ್ಟ್ರಪತಿಗಳಿಗೆ ಸಲಹಾ ಸಮಿತಿಯಿಂದ ಶಿಫಾರಸ್ಸು ಮಾಡಲಾಗುವುದು. ಅಧ್ಯಕ್ಷರು ಆದೇಶವನ್ನು ಮಾಡಬಹುದು. ಆನಂತರ ಆದೇಶವನ್ನು ಸಂಸತ್ತಿನ ಮುಂದೆ ಇಡಲಾಗುವುದು. ಅಲ್ಲಿ ಒಂದು ಮಧ್ಯಂತರವಿದೆ. ಈ ಅವಧಿಯಲ್ಲಿ ರಾಷ್ಟ್ರಪತಿಗಳು ತಾನು ತಪ್ಪುಮಾಡಿರಬಹುದೆಂದು ಭಾವಿಸಿದರೆ ಅವರು ಆದೇಶವನ್ನು ಬದಲಾಯಿಸುವ ಅಥವಾ ತಿದ್ದುಪಡಿ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

**ಸಭಾಪತಿ:** ಹಾಗಾದರೆ ಈ ಅಧಿಕಾರವು ಸದನವು ಅನುಮೋದಿಸಿದ ನಂತರದ ಬದಲಾಯಿಸುವಿಕೆಗೆ ಅನ್ವಯಿಸದು. ಆಗ ಅದೇ ಅಂತಿಮ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

## ೧೩ನೇ ಖಂಡ

### (ಸಂಸತ್ತಿನ ಮುಂದೆ ಆದೇಶಗಳನ್ನು ಇಡತಕ್ಕದ್ದು.)

**ಡಾ. ಅಂಬೇಡ್ಕರ್:** ನಾನು ಮಂಡಿಸುವುದೇನೆಂದರೆ

ಈಗಿರುವ ಖಂಡಕ್ಕೆ ಪರ್ಯಾಯವಾಗಿ:

"೧೩. ಕಲಮು ೬, ೯ ಮತ್ತು ೧೧ರಡಿ ಆದೇಶಗಳನ್ನು ಮಾಡುವ ಕ್ರಮ:

(೪) ಈ ಕಾಯಿದೆಯು ಜಾರಿಗೆ ಬಂದ ಕೂಡಲೇ, ಸಭಾಪತಿಗಳು ರಚಿಸಬೇಕಾದ್ದೆಂದರೆ–

(ಎ) ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿದಂತೆ ಪ್ರತೀ ಎ ಭಾಗದ ರಾಜ್ಯ ಮತ್ತು ಬಿ ಭಾಗದ ರಾಜ್ಯಕ್ಕೆ ಸಂಬಂಧಿಸಿದ್ಯಂತೆ ಆ ರಾಜ್ಯವನ್ನು ಪ್ರತಿನಿಧಿಸುವ, ಮೂರಕ್ಕೆ ಕಡಿಮೆಯಾಗದ ಮತ್ತು ಏಳಕ್ಕೆ ಮೀರದ ಸಂಸತ್ ಸದಸ್ಯರನ್ನೊಳಗೊಂಡ ಸಲಹಾ ಸಮಿತಿ; ಮತ್ತು

(ಬಿ) ಬಿಲಾಸ್‌ಪುರ, ಕೂರ್ಗ್ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಹೊರತುಪಡಿಸಿ, ಪ್ರತೀ ಸಿ ಭಾಗದ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯವನ್ನು ಪ್ರತಿನಿಧಿಸುವ ಸಂಸತ್ ಸದಸ್ಯ ಅಥವಾ ಸದಸ್ಯರನ್ನೊಳಗೊಂಡ ಒಂದು ಸಲಹಾ ಸಮಿತಿ.

(೫) ಚುನಾವಣಾ ಆಯೋಗವು, ಆಯಾ ರಾಜ್ಯಕ್ಕೆ ಸಂಬಂಧಿಸಿದಂತೆ ರಚಿಸಲಾದ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ, ಕಲಮು ೬, ೯ ಮತ್ತು ೧೧ ಅಥವಾ

ಅನ್ವಯವಾಗುವ ಇತರ ಕಲಮುಗಳಡಿ ಕ್ಷೇತ್ರಗಳನ್ನು ರಚಿಸತಕ್ಕದ್ದು ಮತ್ತು ಆ ಕಲಮುಗಳಡಿ ಆದೇಶಗಳನ್ನು ಮಾಡಲು ರಾಷ್ಟ್ರಪತಿಗಳಿಗೆ ಪ್ರಸ್ತಾವಗಳನ್ನು ಮುಂದಿಡತಕ್ಕದ್ದು.

(೬) ಕಲಮು ೬, ಕಲಮು ೯, ಕಲಮು ೧೧ ಅಥವಾ ಕಲಮು ೧೨ರನ್ವಯ ಮಾಡಲಾದ ಪ್ರತೀ ಆದೇಶವನ್ನು ಅದನ್ನು ಮಾಡಲಾದ ತರುವಾಯ, ಸಂಸತ್ತಿನ ಮುಂದಿಡತಕ್ಕದ್ದು ಮತ್ತು ಸಂಸತ್ತು ಆ ಆದೇಶವು ಇಡಲ್ಪಟ್ಟ ದಿನಾಂಕದಿಂದ ಇಪ್ಪತ್ತು ದಿನಗಳೊಳಗಾಗಿ ಸಂಸತ್ತು ಮಾಡಬಹುದಾದ ಮಾರ್ಪಾಡುಗಳಿಗೊಳಗಾಗಿರತಕ್ಕದ್ದು.

**ಸಭಾಪತಿ:** ಇನೇ ಉಪಖಂಡದಲ್ಲಿ ನನಗೆ ಒಂದೇ ಸಂಶಯವಿದೆ. ಅಲ್ಲಿರುವ ಪದಗಳು "ಸಂಸತ್ತು ಆ ಆದೇಶವು ಮಂಡಿಸಲ್ಪಟ್ಟ ತಾರೀಕಿನಿಂದ ಇಪ್ಪತ್ತು ದಿವಸಗಳೊಳಗಾಗಿ ಮಾಡಬಹುದಾದ ಮಾರ್ಪಾಡುಗಳಿಗೆ ಒಳಪಟ್ಟು" ಎಂದಿವೆ. ನಿಜವಾದ ಉದ್ದೇಶವಿದ್ದದ್ದು ನನ್ನ ಪ್ರಕಾರ ತಿದ್ದುಪಡಿಗಳ ನಿಲುವಳಿಯು ಇಪ್ಪತ್ತು ದಿವಸಗಳೊಳಗಾಗಿ ಆರಂಭವಾಗಬೇಕು.

**ಡಾ. ಅಂಬೇಡ್ಕರ್:** ಅದನ್ನು ಬಹಳ ಮೊದಲೇ ಆರಂಭಿಸಲಾಗುತ್ತದೆ. ಮತ್ತು ಸಂಸತ್ತಿನ ಅಂತಿಮ ಆದೇಶವು ಇಪ್ಪತ್ತು ದಿವಸಗಳ ನಂತರ ಮಾಡುವಂತದ್ದಲ್ಲ; ಇಪ್ಪತ್ತು ದಿನಗಳ ಅವಧಿಯನ್ನು ನೀಡಲಾಗಿದೆ. ಸರಕಾರವು ನಿಸ್ಸಂದೇಹವಾಗಿ ಅಗತ್ಯವಿರುವ ಬದಲಾವಣೆಗಳನ್ನು ಆರಂಭಿಸಲಿದೆ.

**ಸಭಾಪತಿ:** ನನಗೆ ಗೊತ್ತಿಲ್ಲ. ನಾನು ಸ್ವಲ್ಪ ಕಷ್ಟದ ವಿಚಾರವೆಂದು ಭಾವಿಸಿದ್ದೆನು. ಸದನವು ಮುಖ್ಯ ವ್ಯವಹಾರದಲ್ಲಿ ಮಗ್ನವಾಗಬಹುದು ಮತ್ತು ಅದು ಇಪ್ಪತ್ತು ದಿವಸಗಳೊಳಗಾಗಿ ಅಗತ್ಯ ಆದೇಶವನ್ನು ಮಾಡದಿರಬಹುದು.

**ಡಾ. ಅಂಬೇಡ್ಕರ್:** ಆಗ ಸದನವು ಇದಕ್ಕೆ ಆದ್ಯತೆಯನ್ನು ನೀಡಬೇಕಾಗುತ್ತದೆ.

**ಸಭಾಪತಿ:** ನಾವು "ಸಂಸತ್ತು ಆದೇಶವು ಮಂಡಿಸಲ್ಪಟ್ಟ ತಾರೀಕಿನಿಂದ ಇಪ್ಪತ್ತು ದಿವಸಗಳೊಳಗಾಗಿ ಒಂದು ನಿಲುವಳಿಯನ್ನು ತಂದು ಮಾಡಬಹುದಾದ ಮಾರ್ಪಾಡುಗಳಿಗೆ ಒಳಪಟ್ಟು" ಎಂದು ಹೇಳಬಹುದು ನಾನು ಹೇಳಬಹುದೆಂದು ಯೋಚಿಸಿದ್ದೆ.

**ಡಾ. ಅಂಬೇಡ್ಕರ್:** ನಾನು ಅದನ್ನು ಸ್ವೀಕರಿಸಲು ಸಿದ್ಧನಿದ್ದೇನೆ.

**ಇನ್ನೊಬ್ಬರು ಮಾನ್ಯ ಸದಸ್ಯರು:** ಸಂಸತ್ತು ಅಧಿವೇಶನದಲ್ಲಿ ಇಲ್ಲದೇ ಇರಬಹುದು.

**ಸಭಾಪತಿ:** ಆದ್ದರಿಂದ ನಾನು ಕಾನೂನು ಸಚಿವರಿಗೆ ಸಲಹೆ ಮಾಡುತ್ತಿದ್ದದ್ದು ಏನೆಂದರೆ ಇಪ್ಪತ್ತು ದಿನಗಳನ್ನು ಸದನವು ಅಧಿವೇಶನದಲ್ಲಿ ಇರುವಾಗ ಮಂಡನೆಯಾದ ದಿನದಿಂದ ಲೆಕ್ಕ ಹಾಕಬೇಕು ಮತ್ತು ಒಂದೇ ಷರತ್ತೆಂದರೆ ನಿಲುವಳಿಯನ್ನು ಇಪ್ಪತ್ತು ದಿವಸಗಳೊಳಗಾಗಿ ಮಂಡಿಸಬೇಕು.

*__ಶ್ರೀ ರಾಮಲಿಂಗಮ್ ಚೆಟ್ಟಿಯಾರ್ (ಮದ್ರಾಸ್):__ ಖಂಡ ೧೧ ಮತ್ತು ೧೩ರ ನಡುವೆ ನನಗೆ ಸ್ವಲ್ಪ ಸಂಶಯವಿದೆ. ೧೨ನೇ ಖಂಡವು ರಾಷ್ಟ್ರಪತಿಗಳು ಈಗಾಗಲೇ ಮಾಡಿದ ಆದೇಶವನ್ನು ಬದಲಾಯಿಸಬಹುದೆಂದು ಹೇಳುತ್ತದೆ. ೧೩ನೇ ಖಂಡವು ಸಂಸತ್ತಿನಿಂದ ಮಾರ್ಪಾಡಾಗಬಹುದೆಂದು ಹೇಳುತ್ತದೆ. ಮಧ್ಯಂತರದಲ್ಲಿ ಏನಾಗುತ್ತದೆ. ರಾಷ್ಟ್ರಪತಿಗಳು ಮಾಡಿದ ಆದೇಶವು ಜಾರಿಗೆ ಬರುತ್ತದೆಯೇ ಅಥವಾ ಅದು ತಾತ್ಕಾಲಿಕ ಮಾತ್ರವೇ.

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೭೪–೭೫.

**ಡಾ. ಅಂಬೇಡ್ಕರ್:** ಅದು ತಾತ್ಕಾಲಿಕ ಏಕೆಂದರೆ ಅಂತಿಮ ಅಧಿಕಾರ ಸಂಸತ್ತಿಗಿದೆ.

**ಶ್ರೀ ರಾಮಲಿಂಗಮ್ ಚೆಟ್ಟಿಯಾರ್:** ನೀವು ಹಾಗೆ ಹೇಳುವುದಿಲ್ಲ. ಆ ಕಲಮು ಈಗ ಇರುವಂತೆ ಅದು ಮಾರ್ಪಾಡುಗಳಿಗೆ ಒಳಪಟ್ಟ ಅಂತಿಮ ಆದೇಶ ಎಂದು ಹೇಳುತ್ತದೆಯೇ ಹೊರತು ಅದು ತಾತ್ಕಾಲಿಕ ಆದೇಶವೆಂದಲ್ಲ. ಆದೇಶವು ಅದನ್ನು ಮಾಡಿದ ತಕ್ಷಣ ಜಾರಿಗೆ ಬರುತ್ತದೆ. ಅದನ್ನು ಸಂಸತ್ತು ನಂತರ ಮಾರ್ಪಾಡು ಮಾಡಬಹುದು.

**ಡಾ. ಅಂಬೇಡ್ಕರ್:** ಅದು ಒಂದರ್ಥದಲ್ಲಿ ತಾತ್ಕಾಲಿಕ ಆದೇಶ ಅಂದರೆ ಸಂಸತ್ತು ಅದನ್ನು ನಂತರ ಮಾರ್ಪಾಡು ಮಾಡದಿದ್ದರೆ ಅದು ಜಾರಿಗೆ ಬರುತ್ತದೆ. ಆದರೆ ಕಾಯಿದೆಯ ಅಂತಿಮ ಅಧಿಕಾರವನ್ನು, ಸಂಸತ್ತಿಗೆ ನೀಡಲಾಗಿದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನನ್ನ ಮಾನ್ಯ ಮಿತ್ರ ಶ್ರೀ ಕಾಮತ್ ಅವರು ಎತ್ತಿದ ಅಂಶವೆಂದರೆ ವಸ್ತುಶಃ ಸಂವಿಧಾನಕ್ಕನುಗುಣವಾಗಿ ಚುನಾವಣಾ ಆಯುಕ್ತರಿಗೆ ಕೆಲವು ಅಧಿಕಾರಗಳು ಪ್ರಾಪ್ತವಾಗಿರುತ್ತವೆ. ಮತ್ತು ಈ ಅಧಿಕಾರಗಳು ಕ್ಷೇತ್ರಗಳ ಸೀಮಾನಿರ್ಣಯವನ್ನು ಕುರಿತು ಇರುವುದಿಲ್ಲ. ಕ್ಷೇತ್ರಗಳ ಸೀಮಾನಿರ್ಣಯವು ಸಂಸತ್ತಿನ ವಿಶೇಷಾಧಿಕಾರ. ಈಗ ಚುನಾವಣಾ ಆಯುಕ್ತರು ಸಮಿತಿಗಿಂತಲೂ ಉತ್ತಮ ಸ್ಥಿತಿಯಲ್ಲಿದ್ದಾರೆ. ಅವರು ಸಮಾಲೋಚಿಸುತ್ತಾರೆ ಮಾತ್ರ ಮತ್ತು ಪ್ರಸ್ತಾವಗಳನ್ನು ರೂಪುಗೊಳಿಸುತ್ತಾರೆ.

**ಸಭಾಪತಿ:** ಇದು ಈ ಹಿಂದೆ ಎತ್ತಿದ ಸಂಗತಿಯೇ ಆಗಿದೆ. ನಾವು ಆರನೇ ಖಂಡವನ್ನು ಚರ್ಚೆಮಾಡುವಾಗ ಇದೇ ಅಂಶವನ್ನು ಎತ್ತಲಾಯಿತು. ಮತ್ತು ಇದರ ಸ್ಥಿತಿಯನ್ನು ಮಾನ್ಯ ಕಾನೂನು ಸಚಿವರು ಸ್ಪಷ್ಟಪಡಿಸಿದರು. ಕೊನೆಗೂ ಈ ಅಧಿಕಾರವನ್ನು ಪ್ರಯೋಗಿಸುವುದು ಸಂಸತ್ತೇ ಸರಿ.

**ಡಾ ಅಂಬೇಡ್ಕರ್:** ಇವೆಲ್ಲ ಮೊದಲ ಹಂತಗಳು. ರಾಷ್ಟ್ರಪತಿಗಳ ಆದೇಶವೂ ಮೊದಲ ಹಂತದಲ್ಲಿಯೇ ಬರುತ್ತದೆ.

**ಸಭಾಪತಿ:** ಮಾನ್ಯ ಸದಸ್ಯರು ತಿದ್ದುಪಡಿಯಲ್ಲಿ "ಕ್ಷೇತ್ರಗಳ ಸೀಮಾನಿರ್ಣಯದ ಬಗ್ಗೆ ಪ್ರಸ್ತಾವಗಳನ್ನು ರೂಪುಗೊಳಿಸುವ" ಎಂಬ ಪದಗಳಿವೆ ಎಂಬುವುದನ್ನು ಕಾಣಬಹುದು, ಅವರಿಗೆ ತೀರ್ಮಾನಿಸುವ ಹಕ್ಕನ್ನು ಕೊಟ್ಟಿಲ್ಲ. ನೆನಪಿಡಬೇಕಾದ ಅಂಶವೆಂದರೆ ಈ ಕುರಿತು ಸಂಸತ್ತೇ ಪ್ರಸ್ತಾವಗಳನ್ನು ಚರ್ಚಿಸುತ್ತದೆ ಮತ್ತು ಪರೀಕ್ಷಿಸುತ್ತದೆ.

*__ಡಾ ದೇಶ್‌ಮುಖ್:__ . . . . ನೀವು ಸಮಿತಿಗಳು ಆಯ್ಕೆಯಾಗುವಂತಹ ಯಾವುದೇ ಪ್ರಕ್ರಿಯೆಯನ್ನು ಹಾಕಿಕೊಡಬಹುದು. ಆದರೆ ಈ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ರೂಪದ ಚುನಾವಣೆಯು ಇರಬೇಕು. ಕ್ಷೇತ್ರಗಳನ್ನು ತೀರ್ಮಾನಿಸುವ ಅಂಗವನ್ನು ಸೃಷ್ಟಿಸುವ ಜವಬ್ದಾರಿಗೆ ಸಭಾಪೀಠವು ಬಲಿಯಾಗಬಾರದು.

**ಸಭಾಪತಿ:** ನಾನು ಮಾನ್ಯ ಕಾನೂನು ಸಚಿವರ ಪ್ರತಿಕ್ರಿಯೆಗಳನ್ನು ತಿಳಿಯಬಹುದೇ?

**ಡಾ. ಅಂಬೇಡ್ಕರ್:** ನಾನು ಈ ಯಾವ ತಿದ್ದುಪಡಿಯನ್ನೂ ಸ್ವೀಕರಿಸಲಾರೆ.

**ಸರ್‌ದಾರ್ ಬಿ.ಎಸ್.ಮಾನ್:** ಮಾನ್ಯರೆ, ನನ್ನ ತಿದ್ದುಪಡಿಗಳು ಏನಾದವು? ಮಾನ್ಯ ಸಚಿವರ ಪ್ರತಿಕ್ರಿಯೆ ಏನು?

**ಡಾ. ಅಂಬೇಡ್ಕರ್:** ನಾನು ಅದನ್ನು ಸ್ವೀಕರಿಸಲಾರೆ.

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೭೬–೭೭.

**ಸರ್‌ದಾರ್.ಬಿ.ಎಸ್.ಮಾನ್ :** ಹಾಗಾದರೆ ನಾನು ಅದನ್ನು ಮಂಡಿಸುವುದಿಲ್ಲ.

## ೨೦ನೇ ಖಂಡ

('ಸಾಮಾನ್ಯ ನಿವಾಸಿ' ಎಂಬುವುದರ ಅರ್ಥ)

**ಡಾ ಅಂಬೇಡ್ಕರ್:** ನಾನು ಮಂಡಿಸುವುದೇನೆಂದರೆ

ಮೂರನೇ ಉಪಖಂಡದ ನಂತರ ಸೇರಿಸಿ:

"(೪) ಯಾವನೇ ವ್ಯಕ್ತಿಯು ರಾಷ್ಟ್ರಪತಿಗಳು ಚುನಾವಣಾ ಆಯೋಗದೊಂದಿಗಿನ ಸಮಾಲೋಚನೆಯೊಂದಿಗೆ ಈ ಉಪಖಂಡವು ಅನ್ವಯವಾಗುವ ಹುದ್ದೆಯೆಂದು ಘೋಷಿಸಿದ ಹುದ್ದೆಯನ್ನು ಭಾರತದಲ್ಲಿ ಹೊಂದಿದವನು, ಅಥವಾ ಭಾರತ ಸರಕಾರದಿಂದ ಭಾರತದ ಹೊರಗೆ ಒಂದು ಹುದ್ದೆಯಲ್ಲಿ ನೇಮಕವಾದವನು, ಯಾವುದೇ ಅವಧಿ ಅಥವಾ ಯಾವುದೇ ದಿನಾಂಕದಂದು ಒಂದು ಕ್ಷೇತ್ರದಲ್ಲಿ, ಅಂತಹ ಹುದ್ದೆ ಅಥವಾ ಉದ್ಯೋಗದ ಹೊರತಾಗಿ ಆ ಅವಧಿಯಲ್ಲಿ ಅಥವಾ ಆ ದಿನಾಂಕದಂದು ಸಾಮಾನ್ಯವಾಗಿ ವಾಸಿಸುತ್ತಿದ್ದರೆ, ಆತನು ಸಾಮಾನ್ಯ ನಿವಾಸಿಯೆಂದು ಪರಿಗಣಿಸತಕ್ಕದ್ದು."

ಮತ್ತು ನಂತರದ ಉಪ–ಖಂಡಗಳ ಸಂಖ್ಯೆಗಳನ್ನು ಕ್ರಮಗೊಳಿಸುವುದು ಉಪ–ಖಂಡವೆಂದು ಹೊಸ (೪)ನೇ ಉಪಖಂಡದಲ್ಲಿ,–

(i) ೩ನೇ ಉಪ–ಖಂಡದ ನಂತರ, "ಅಥವಾ (೪)ನೇ ಉಪ–ಖಂಡ" ಎಂಬುದನ್ನು ಸೇರಿಸಿ; ಮತ್ತು

(ii) "ಸೇನಾಪಡೆಗಳು" ಎಂಬುವುದರ ನಂತರ "ಅಥವಾ (೪)ನೇ ಉಪಖಂಡದಲ್ಲಿ ಉಲ್ಲೇಖಿಸಿದಂತಹ ಹುದ್ದೆ ಅಥವಾ ಸ್ಥಾನದಲ್ಲಿ ನೇಮಕಗೊಂಡಿರುವುದರ ಹೊರತಾಗಿ" ಎಂಬುವುದನ್ನು ಸೇರಿಸಿ:

(೬)ನೇ ಹೊಸ (೫)ನೇ ಉಪಖಂಡದಲ್ಲಿ,–

(i) "(೩)ನೇ ಉಪಖಂಡ" ದ ನಂತರ "ಅಥವಾ (೪)ನೇ ಉಪ–ಖಂಡ" ಎಂಬುದನ್ನು ಸೇರಿಸಿ; ಮತ್ತು

(ii) "(೪)ನೇ ಉಪಖಂಡ" ಎಂಬುದಕ್ಕೆ "(೫)ನೇ ಉಪಖಂಡ" ಎಂಬುದನ್ನು ಬದಲಾಯಿಸಿ;

ತಾತ್ಕಾಲಿಕವಾಗಿ ತಮ್ಮ ಸಾಮಾನ್ಯ ನಿವಾಸವನ್ನು ಬಿಟ್ಟು ಬೇರೆಕಡೆಗೆ ವಾಸಕ್ಕೆ ಹೋದ ಕೆಲವು ಜನರ ಬಗ್ಗೆ ಅನ್ವಯವಾಗುವ:

೨೦ನೇ ಖಂಡದಲ್ಲಿ ಬರುವ "ಸಾಮಾನ್ಯ ನಿವಾಸಿ" ಎಂಬ ಪದದ ಅನ್ವಯದ ಕುರಿತು ವ್ಯಕ್ತಪಡಿಸಿದ ಕೆಲವು ಸಂಶಯಗಳನ್ನು ನಿವಾರಿಸುವುದಕ್ಕಾಗಿ ಈ ತಿದ್ದುಪಡಿಯನ್ನು ಮಾಡಲಾಗಿದೆ, ಅಂತಹ ಒಂದು ಉಪಬಂಧವನ್ನು ಈ ಖಂಡದಲ್ಲಿ ಸೇರಿಸಬೇಕಾಗಿತ್ತೆಂಬ ಅಗತ್ಯವನ್ನು ಮನಗಾಣಲಾಗಿದೆ. ಇದು

** P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೮೧–೮೨.

ತಾತ್ಕಾಲಿಕವಾಗಿ ಅಧಿಕೃತ ಕರ್ತವ್ಯದಲ್ಲಿ ಭಾರತದಿಂದ ಹೊರಗೆ ಕಳುಹಿಸಲ್ಪಟ್ಟ ಮತ್ತು ಯಾರ ಪ್ರಸಂಗದಲ್ಲಿ ಅವರು ತಮ್ಮ ಮಾಮೂಲು ವಾಸಸ್ಥಾನದಲ್ಲಿ ವಾಸಮಾಡುವುದನ್ನು ನಿಲ್ಲಿಸಿದ್ದಾರೆಂದು ಊಹಿಸಬಹುದೋ ಅಂಥವರಿಗೆ ಅನ್ವಯಿಸುತ್ತದೆ. ಅಂಥವರ ಪ್ರಸಂಗಗಳಲ್ಲಿ ಆ ರೀತಿಯ ಪೂರ್ವಭಾವನೆಯನ್ನು ತಡೆಯುವುದಕ್ಕಾಗಿ ಮತ್ತು ಅವರು ಸಾಮಾನ್ಯವಾಗಿ ವಾಸಿಸುತ್ತಿದ್ದ ಕ್ಷೇತ್ರದಲ್ಲಿ ನೊಂದಾಯಿಸಿಕೊಳ್ಳುವ ಅವರ ಹಕ್ಕನ್ನು ಉಳಿಸುವುದಕ್ಕಾಗಿ ಈ ಉಪಬಂಧವನ್ನು ಮಾಡಲಾಗಿದೆ.

ಅದೇ ರೀತಿ, ಈ ಉಪಬಂಧವನ್ನು ಸಚಿವರ ಸಂದರ್ಭದಲ್ಲೂ ಅನ್ವಯಿಸಲು ಉದ್ದೇಶಿಸಿದೆ, ಉದಾಹರಣೆಗೆ, ಕೇಂದ್ರದಲ್ಲಿ ಯಾರು ರಾಜ್ಯದಡಿ ಕೆಲವು ಹುದ್ದೆಗಳನ್ನು ಸ್ವೀಕರಿಸಿದ್ದಾರೆಂಬ ಕಾರಣಕ್ಕೆ, ಅವರ ಹುದ್ದೆಯ ಅವಧಿಯಲ್ಲಿ ಉಳಿಯಲು ಉದ್ದೇಶಿಸಿ ಅದು ಸಂಸತ್ತಿನ ಅವಧಿಯಷ್ಟು ಅಂದರೆ ಐದು ವರ್ಷಗಳಷ್ಟು ಅವಧಿಯದ್ದಾಗಬಹುದು. ಅಲ್ಲಿ ಕೂಡಾ ಅವರು ಮಾಮೂಲಾಗಿ ವಾಸಮಾಡುತ್ತಿದ್ದ ಸ್ಥಳದಲ್ಲಿ ವಾಸವಾಡುವುದನ್ನು ನಿಲ್ಲಿಸಿದ್ದಾರೆಂದು ಊಹಿಸಬಹುದು. ಆ ಪ್ರಸಂಗವನ್ನು ಒಳಗೊಳ್ಳುವುದಕ್ಕಾಗಿಯೂ ಅಂತಹ ಉಪಬಂಧವು ಅಗತ್ಯವೆಂದು ಭಾವಿಸಲಾಗಿದೆ.

ಹುದ್ದೆಯನ್ನು ಹೊಂದದವರಿಂದ ಅಂದರೆ ಸಚಿವರು ಮತ್ತಿತರರಿಂದ ಭಿನ್ನವಾಗಿ ಸಂಸತ್ ಸದಸ್ಯರು ಆ ಇನ್ನೊಂದು ಪೂರ್ವಭಾವನೆಗೆ ಒಳಗಾಗಬಹುದು, ಅಂದರೆ, ಅವರು ಇಲ್ಲಿ ಅನೇಕ ಬಾರಿ ಬರುವುದರಿಂದ ಅವರು ಕೂಡಾ ಸಾಮಾನ್ಯವಾಗಿ ವಾಸಿಸುವ ಸ್ಥಳದಲ್ಲಿ ವಾಸಮಾಡುವಂತ್ತಿಲ್ಲವೆಂದು ಪರಿಗಣಿಸಬಹುದು. ಆದರೆ ಸಲಹೆಯ ನಂತರ ನನಗನ್ನಿಸುವಂತೆ ಆ ಪೂರ್ವಭಾವನೆಯನ್ನು ಅವರಿಗೆ ಅನ್ವಯಿಸಲಾಗದು ಏಕೆಂದರೆ ಒಬ್ಬ ಮನುಷ್ಯನು ತಾತ್ಕಾಲಿಕವಾಗಿ ಕೆಲವು ವಿಶಿಷ್ಟ ಕಾರಣಕ್ಕಾಗಿ ಆತನ ಸಾಮಾನ್ಯ ವಾಸಸ್ಥಳವನ್ನು ಬಿಟ್ಟು ಬೇರೆಕಡೆಗೆ ಹೋದಾಗ, ಕಾನೂನಿನಲ್ಲಿ ಆತನು ಮರಳಿ ತನ್ನ ಮೂಲ ವಾಸಸ್ಥಳಕ್ಕೆ ಬರುವ ಉದ್ದೇಶವನ್ನು ಕೈಬಿಟ್ಟಿದ್ದಾನೆಂದು ತಿಳಿಯಲಾಗದು. ಪರಿಣಾಮವಾಗಿ, ಸಂಸತ್ ಸದಸ್ಯರ ಸಂದರ್ಭದಲ್ಲಿ ಆ ಉಪಬಂಧವು ಅಗತ್ಯವೆಂದು ನನಗನ್ನಿಸುವುದಿಲ್ಲ. ಇತರ ಎರಡು ಸಂದರ್ಭಗಳಲ್ಲಿ ಅದು ಅಗತ್ಯವಾಗಬಹುದು ಮತ್ತು ಜಾಗ್ರತೆಯ ಕ್ರಮವಾಗಿ ನಾನು ಈ ತಿದ್ದುಪಡಿಯನ್ನು ಮಂಡಿಸಲು ಪ್ರಸ್ತಾವಿಸಿದ್ದೇನೆ.

ನಿಲುವಳಿಯು ಸ್ವೀಕೃತವಾಯಿತು:

ತಿದ್ದುಪಡಿಯಾದಂತೆ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

## ೨೧ನೇ ಖಂಡ

(*'ಅರ್ಹತಾ ದಿನಾಂಕ'* ಮತ್ತು *'ಅರ್ಹತಾ ಅವಧಿ'* – ಇವುಗಳ ಅರ್ಥ.)

***ಡಾ ಅಂಬೇಡ್ಕರ್:** ನಾನು ಮಂಡಿಸಲು ಕೋರುವುದೇನೆಂದರೆ:

ಉಪಬಂಧ (ಎ)ಯ ಬದಲಿಗೆ:

"(ಎ) ಈ ಕಾಯಿದೆಯಡಿ ಮೊದಲು ತಯಾರಿಸಿದ ಮತದಾರರ ಯಾದಿಯ ಸಂದರ್ಭದಲ್ಲಿ ಕ್ರಮಾಗತವಾಗಿ ೧೯೫೦ರ ಮಾರ್ಚ ಒಂದು, ಮತ್ತು ೧೯೪೭ರ ಏಪ್ರಿಲ್ ಒಂದರಂದು ಆರಂಭವಾಗಿ ೧೯೪೯ರ ಡಿಸೆಂಬರ್ ಮೂವತ್ತ–ಒಂದರಂದು ಮುಗಿಯುವ; ಮತ್ತು"

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೮೨.

** ಅದೇ ಪು. ೩೦೮೪–೮೭.

ಎಂಬುದನ್ನು ಸೇರಿಸಬೇಕು. ಮತದಾರರ ಯಾದಿಯ ತಯಾರಿ ಮತ್ತು ಅರ್ಹತಾ ಅವಧಿಯ ಸಂಬಂಧ ಈ ಬೆಳಗ್ಗೆ ಮಾಡಲಾದ ಒಪ್ಪಂದ ಫಲಶ್ರುತಿ ಇದು.

## ೨೭ನೇ ಖಂಡ

**ಡಾ ಅಂಬೇಡ್ಕರ್:** ಮಾನ್ಯರೆ, ಈ ಚರ್ಚೆಯನ್ನು ಆರಂಭಿಸಿದ ಮಾನ್ಯ ಸದಸ್ಯರಿಗೆ ೧೭ನೇ ಖಂಡವನ್ನು ಯಾಕೆ ಅನ್ವಯಿಸಿಲ್ಲವೆಂಬುದನ್ನು ನಾನು ಈ ಬೆಳಿಗ್ಗೆ ವಿವರಿಸಿದ್ದೇನೆಂದು ಭಾವಿಸುತ್ತೇನೆ, ಆದರೆ ಸಹಜವಾಗಿಯೇ ಅವರಿಗೆ ಅವರ ಆಕ್ಷೇಪಗಳನ್ನು ಇಡೀ ಸದನ ಕೇಳಬೇಕೆಂಬ ಉತ್ಸುಕತೆಯಿದೆ. ನಾನು ಅವರಿಗೆ ಆ ವಿಶೇಷಾಧಿಕಾರವನ್ನು ನಿರಾಕರಿಸುವುದಿಲ್ಲ.

**ಶ್ರೀ ಎತಿರಾಜುಲು ನಾಯ್ಡು:** ಮಾನ್ಯರೆ, ಕ್ರಿಯಾಲೋಪವಾಗಿ ಹೇಳುವುದೇನೆಂದರೆ, ಬೆಳಗಿನ ಸಭೆಯಲ್ಲಿ ನಡೆದದ್ದನ್ನು ಉಲ್ಲೇಖಿಸುವುದು ಕ್ರಮಬದ್ಧವೇ?

**ಡಾ. ಅಂಬೇಡ್ಕರ್:** ಖಂಡಿತಾ. ಅದರಲ್ಲಿ ರಹಸ್ಯವೇನಿಲ್ಲ. ಆ ಸಮಿತಿಯು ಸಭಾಪತಿಗಳಿಂದಲೇ ರಚನೆಯಾದದ್ದು.

**ಉಪಸಭಾಪತಿ:** ಅದರಲ್ಲಿ ರಹಸ್ಯವೇನಿಲ್ಲ. ಅದು ಕ್ರಮಬದ್ಧವಾಗಿದೆ.

**ಡಾ. ಅಂಬೇಡ್ಕರ್:** ಮಾನ್ಯರೆ, ಈಗ ವಿಚಾರ ಇದು. ವಿಧೇಯಕದ ೧೭ನೇ ಖಂಡದಲ್ಲಿ ನಾವು ಒಂದು ಬಹುಮುಖ್ಯ ತತ್ವವನ್ನು ಹುಟ್ಟುಹಾಕಿದ್ದೇವೆ, ಅಂದರೆ, ಒಬ್ಬ ಮನುಷ್ಯನು ಒಂದು ಕ್ಷೇತ್ರದಲ್ಲಿ ನೋಂದಣಿಯಾಗತಕ್ಕದ್ದು ಮತ್ತು ಆತನಿಗೆ ಒಂದು ಮತವಿರತಕ್ಕದ್ದು. ಆದರೆ ಈ ತತ್ವವನ್ನು ಒಂದೇ ವರ್ಗದ ಕ್ಷೇತ್ರಗಳಿಗೆ ಮಾತ್ರ ಅನ್ವಯಿಸತಕ್ಕದ್ದು ಅಂದರೆ ಪ್ರಾದೇಶಿಕ ಕ್ಷೇತ್ರಗಳಿಗೆ ಎಂದು ಅರ್ಥಮಾಡಿಕೊಳ್ಳತಕ್ಕದ್ದು. ಈಗ, ಈ ವಿಧೇಯಕದ ೨೭ನೇ ಖಂಡದಡಿ ನಾವು ರಚಿಸಲು ಪ್ರಸ್ತಾವಿಸಿರುವ ಕ್ಷೇತ್ರಗಳು ವಿವಿಧ ವರ್ಗಗಳ ಕ್ಷೇತ್ರಗಳು. ಅವು ಒಂದೇ ವರ್ಗದ ಕ್ಷೇತ್ರಗಳಲ್ಲ. ಪದವೀಧರ ಕ್ಷೇತ್ರವು ಒಂದು ಭಿನ್ನ ವರ್ಗ ಅಧ್ಯಾಪಕರ ಕ್ಷೇತ್ರವು ಒಂದು ಭಿನ್ನವರ್ಗ. ಅದೇ ರೀತಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರವು ಒಂದು ಭಿನ್ನ ವರ್ಗದ ಕ್ಷೇತ್ರ. ಪರಿಣಾಮವಾಗಿ, ಒಬ್ಬ ಮನುಷ್ಯನ ಹೆಸರು ವಿವಿಧ ವರ್ಗಗಳ ಕ್ಷೇತ್ರಗಳಲ್ಲಿ ಸೇರಿಸಿದರೆ ದೊಡ್ಡ ವ್ಯತಿಕ್ರಮವಿದೆಯೆಂದು ಕಾಣುವುದಿಲ್ಲ. ಅಲ್ಲದೆ, ನಾನು ಇದನ್ನು ಹೇಳಲೇಬೇಕು: ಸಂಸತ್ ಸದಸ್ಯರು ಮೇಲ್ಮನೆಯ ರಚನೆಯ ಬಗ್ಗೆ ಏಕೆ ಇಷ್ಟೊಂದು ಉತ್ಸಾಹಿಗಳಾಗಿದ್ದಾರೆಂದು ನನಗೆ ಅರ್ಥವಾಗುವುದಿಲ್ಲ.

ಅದು ಒಂದು ಆಗುಮಾಡಿದ ಅಂಗ– ಆಲಂಕಾರಿಕವೂ ಅಲ್ಲ. ಅದಕ್ಕೆ ಹಕ್ಕೇನೂ ಇಲ್ಲ– ಪುನರ್ವಿಮರ್ಶೆಯ ಹಕ್ಕು ಕೂಡಾ ಇಲ್ಲ. ಅದು ಕೆಳಮನೆಯೊಂದಿಗೆ ಸಮಾನ ಅಧಿಕಾರವಿರುವ ಅಂಗವಲ್ಲ. ಕೆಲವು ಪ್ರಾಂತಗಳು ಅದನ್ನು ಹೊಂದಬೇಕೆಂದು ಇಚ್ಛಿಸಿದವು. ಅವರು ಪ್ರಾಯಃ ಅವರ ಎರಡನೆಯ ಸದನವು ಇಲ್ಲಿನ ಸದನದ ಅಪರಾಹ್ನ ಮಾದರಿಯ ಅಂದರೆ ಆರ್ಥಿಕ ಶಾಸನವಲ್ಲದಿದ್ದರೂ ಕನಿಷ್ಠ ಪಕ್ಷ ಸಾಮಾನ್ಯ ಶಾಸನ ತಡೆ ಹಿಡಿಯುವ ಅಧಿಕಾರವನ್ನು ಹೊಂದಿದ ಎರಡನೆಯ ಸದನವೆಂದು ನಂಬಿದ್ದಾರೆ. ಆದರೆ ಆ ಹಕ್ಕೂ ಅಲ್ಲಿಲ್ಲ ಮತ್ತು ಸಂಸತ್ ಸದಸ್ಯರು ಕೆಲವು ತಾತ್ವಿಕ ಸಿದ್ಧಾಂತಗಳ ಪಾಲನೆಗಾಗಿ ಬೆಲೆಯಿಲ್ಲದ ಮತ್ತು ಪರಿಣಾಮ ಬೀರದ ಒಂದು ಸಂವಿಧಾನಾತ್ಮಕ ಅಂಗಕ್ಕಾಗಿ ತಮ್ಮ ತಲೆಯನ್ನು ಚಿಂತೆಗೊಳಪಡಿಸುತ್ತಾರೆಂಬುದು ನನಗೆ ಅರ್ಥವಾಗುವುದಿಲ್ಲ.

೨೭ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

## ೨೮ ಮತ್ತು ೨೯ನೇ ಖಂಡ

**ಡಾ. ಅಂಬೇಡ್ಕರ್:** ನಾನು ನನ್ನ ಮಿತ್ರ ಪಂಡಿತ್ ಠಾಕೂರ್ ದಾಸ್ ಭಾರ್ಗವ ಅವರಿಗೆ ಅವರು ಆಸಕ್ತರಾಗಿರುವ ಅಂಶದ ಕುರಿತು ಒಂದು ಹೇಳಿಕೆಯನ್ನು ನೀಡುತ್ತೇನೆಂದು ಭರವಸೆ ನೀಡಿದ್ದೆನು ಮತ್ತು ನಾನೀಗ ಪ್ರಸ್ತುತ ಅಸ್ತಿತ್ವದಲ್ಲಿರುವ ಮತದಾರರ ಯಾದಿಗಳನ್ನು ಪುನರ್ವಿಮರ್ಶಿಸುವುದಾಗಿ ಮತ್ತು ಅಗತ್ಯವಿರುವ ಲೋಪ ಮತ್ತು ಸೇರ್ಪಡೆಯನ್ನು ಮಾಡುವುದಾಗಿ ಪ್ರತಿಯೊಂದು ಜಾಗ್ರತೆಯನ್ನೂ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

೨೮ ಮತ್ತು ೨೯ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

## ಹೊಸ ೩೦ನೇ ಖಂಡ

**ಡಾ. ಅಂಬೇಡ್ಕರ್:** ನಾನು ಮಂಡಿಸಲು ಕೋರುವುದೇನೆಂದರೆ;

೨೯ನೇ ಖಂಡದ ನಂತರ ಈ ಖಂಡವನ್ನು ಸೇರಿಸಿ:

> "೩೦. ದಿವಾಣಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ನಿಷೇಧಿಸುವುದು.– ಯಾವ ದಿವಾಣಿ ನ್ಯಾಯಾಲಯವೂ ತನ್ನ ಅಧಿಕಾರ ವ್ಯಾಪ್ತಿಯನ್ನು ಈ ಕೆಳಕಂಡ ಪ್ರಸಂಗಗಳಲ್ಲಿ ಬಳಸುವಂತಿಲ್ಲ;
>
> (ಎ) ಯಾವನೇ ವ್ಯಕ್ತಿ ಒಂದು ಕ್ಷೇತ್ರದ ಮತದಾರರ ಯಾದಿಯಲ್ಲಿ ನೋಂದಾಯಿಸಲು ಅರ್ಹನೇ ಅಲ್ಲವೇ ಎಂಬ ಪ್ರಶ್ನೆಯನ್ನು ಸ್ವೀಕರಿಸಲು ಅಥವಾ ತೀರ್ಮಾನಿಸಲು; ಅಥವಾ
>
> (ಬಿ) ಒಬ್ಬ ಚುನಾವಣಾ ನೋಂದಾವಣಾಧಿಕಾರಿಯು ಅಥವಾ ಆತನ ಅಧಿಕಾರದಡಿ, ಕೈಗೊಂಡ ಕ್ರಮದ ಕಾನೂನುಬದ್ಧತೆಯನ್ನು, ಅಥವಾ ಅಂತಹ ಯಾವುದೇ ಯಾದಿಯ ಪುನರ್ವಿಮರ್ಶೆಗಾಗಿ ಈ ಕಾಯಿದೆಯಲ್ಲಿ ನೇಮಕವಾದ ಯಾವುದೇ ಪ್ರಾಧಿಕಾರವು ನೀಡಿದ ತೀರ್ಮಾನವನ್ನು ಪ್ರಶ್ನಿಸಲು,

ಇದೊಂದು ಮಾಮೂಲು ಖಂಡ ಮತ್ತು ಕೈತಪ್ಪಿನಿಂದ ಬಿಟ್ಟುಹೋಗಿವೆ.

ಹೊಸ ೩೦ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

## ಅನುಸೂಚಿಗಳು.

**ಡಾ. ಅಂಬೇಡ್ಕರ್:** ನಾನು ಮಂಡಿಸಲು ಕೋರುವುದೇನೆಂದರೆ;

(i) ಮೊದಲ ಅನುಸೂಚಿಯಲ್ಲಿ–

(ಎ) "ಸಿ ಭಾಗದ ರಾಜ್ಯಗಳು" ಎಂಬ ಶೀರ್ಷಿಕೆಯಡಿ ಇರುವ ನಮೂದುಗಳಿಗೆ ಬದಲಾಗಿ ಸೇರಿಸಿ:

| | | |
|---|---|---|
| "ಅಜ್ಮೀರ್ | ... | ೨ |
| ಭೂಪಾಲ್ | ... | ೨ |
| ಬಿಲಾಸ್‌ಪುರ | ... | ೧ |
| ಕೂರ್ಗ್ | ... | ೧ |

| | | |
|---|---|---|
| ಡೆಲ್ಲಿ | ... | ೪ |
| ಹಿಮಾಚಲ ಪ್ರದೇಶ | ... | ೩ |
| ಕಚ್ | ... | ೨ |
| ಮಣಿಪುರ | ... | ೨ |
| ತ್ರಿಪುರ | ... | ೨ |
| ವಿಂಧ್ಯಪ್ರದೇಶ | ... | ೬ |
| ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | ... | ೧” |

(ಬಿ) “ಒಟ್ಟು” ಎಂಬುದರ ಎದುರು”೪೮೮” ಎಂಬುದಕ್ಕೆ ಬದಲಾಗಿ “೪೯೬” ಎಂದು ನಮೂದಿಸಿ

(ii) ಎರಡನೇ ಅನುಸೂಚಿಯಲ್ಲಿ, ೨ನೇ ಅಂಕಣದಲ್ಲಿ ಈಗಿರುವ ನಮೂದುಗಳಿಗೆ ಬದಲಾಗಿ ಬಳಸಿ:

“೧೦೮
೩೩೯
೩೧೫
೨೩೨
೩೭೫
೧೪೦
೧೨೬
೪೩೦
೨೩೮
೧೭೫
೯೯
೯೯
೬೦
೧೬೦
೬೦
೧೦೮”

(iii)ಮೂರನೇ ಅನುಸೂಚಿಯಲ್ಲಿ, ೨ರಿಂದ ೭ನೇ ಅಂಕಣದಲ್ಲಿ ‘ಬಿಹಾರ್’, ‘ಬಾಂಬೆ’, ‘ಮದ್ರಾಸ್’ ಮತ್ತು ‘ಉತ್ತರ ಪ್ರದೇಶ’ಗಳೆದುರು ಈಗಿರುವ ನಮೂದುಗಳಿಗೆ ಬದಲಾಗಿ ಬಳಸಿ:

“೭೨
೨೪
೬
೨೪
೧೨”

(iv) ನಾಲ್ಕನೇ ಅನುಸೂಚಿಗೆ ಬದಲಾಗಿ ಬಳಸಿ:

## ನಾಲ್ಕನೇ ಅನುಸೂಚಿ

[೨೭(೨)ನೇ ಕಲಮು ನೋಡಿ]

ಶಾಸನ ಪರಿಷತ್ತುಗಳ ಚುನಾವಣಾ ಉದ್ದೇಶಗಳಿಗಾಗಿ ಸ್ಥಳೀಯ ಸಂಸ್ಥೆಗಳು

### ಬಿಹಾರ್

೧. ನಗರಸಭೆಗಳು
೨. ಜಿಲ್ಲಾ ಮಂಡಳಿಗಳು
೩. ದಂಡು ಪ್ರದೇಶದ ಮಂಡಳಿಗಳು
೪. ಅಧಿಸೂಚಿತ ಪ್ರದೇಶ ಸಮಿತಿಗಳು
೫. ಪಾಟ್ನಾ ಆಡಳಿತ ಸಮಿತಿಗಳು

### ಬಾಂಬೆ

೧. ನಗರಸಭೆಗಳು
೨. ಜಿಲ್ಲೆಯ ಸ್ಥಳೀಯ ಮಂಡಳಿಗಳು
೩. ದಂಡು ಪ್ರದೇಶದ ಮಂಡಳಿಗಳು

### ಮದ್ರಾಸ್

೧. ನಗರಸಭೆಗಳು
೨. ಜಿಲ್ಲಾ ಮಂಡಳಿಗಳು
೪. ದಂಡು ಪ್ರದೇಶದ ಮಂಡಳಿಗಳು

೪. ಮುಖ್ಯ ಪಂಚಾಯತಿಗಳು, ಅಂದರೆ, ರಾಜ್ಯಸರಕಾರವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ, ಅಧಿಸೂಚನೆಯ ಹಿಂದಿನ ಆರ್ಥಿಕ ವರ್ಷದಲ್ಲಿ ಐದು ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಜನಸಂಖ್ಯೆಯನ್ನು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದಾಯವನ್ನು ಹೊಂದಿದ ಪಂಚಾಯತಿಗಳು.

### ಪಂಜಾಬ್

೧. ನಗರಸಭೆಗಳು
೨. ಜಿಲ್ಲಾ ಮಂಡಳಿಗಳು
೩. ದಂಡು ಪ್ರದೇಶದ ಮಂಡಳಿಗಳು
೪. ಪಟ್ಟಣ ಪ್ರದೇಶ ಸಮಿತಿ
೫. ಅಧಿಸೂಚಿತ ಪ್ರದೇಶ ಸಮಿತಿಗಳು

## ಉತ್ತರ ಪ್ರದೇಶ

೧. ನಗರಸಭೆಗಳು
೨. ಜಿಲ್ಲಾ ಮಂಡಳಿಗಳು
೩. ದಂಡು ಪ್ರದೇಶದ ಮಂಡಳಿಗಳು
೪. ಸಣ್ಣ ಪಟ್ಟಣ ಸಮಿತಿಗಳು
೫. ಅಧಿಸೂಚಿತ ಪ್ರದೇಶ ಸಮಿತಿಗಳು

## ಪಶ್ಚಿಮ ಬಂಗಾಳ

೧. ನಗರಸಭೆಗಳು
೨. ಜಿಲ್ಲಾ ಮಂಡಳಿಗಳು
೩. ದಂಡು ಪ್ರದೇಶದ ಮಂಡಳಿಗಳು
೪. ಸ್ಥಳೀಯ ಮಂಡಳಿಗಳು

## ಮೈಸೂರು

೧. ನಗರಸಭೆಗಳು
೨. ಜಿಲ್ಲಾ ಮಂಡಳಿಗಳು

**ಉಪಸಭಾಪತಿ:** ತಿದ್ದುಪಡಿಗಳನ್ನು ಮಂಡಿಸಲಾಗಿದೆ.

***ಉಪಸಭಾಪತಿ:** ನಾನೊಂದು ದಾರಿಯನ್ನು ಸಲಹೆ ಮಾಡಲೇ? ಹಂಚಿಕೆಯಾದ ಸ್ಥಾನಗಳ ಸಂಖ್ಯೆಯಿಂದ ಸಮಾಧಾನಪಟ್ಟವರು ಮಾತನಾಡುವ ಅಗತ್ಯವಿಲ್ಲ. ನಮಗೆ ಇನ್ನೊಂದು ವಿಧೇಯಕವಿದೆ ಇತರ ಮಾನ್ಯ ಸದಸ್ಯರು ಹೇಳುವುದಕ್ಕೇನಾದರೂ ಇದ್ದರೆ ಅವರ ವಿಚಾರಗಳನ್ನು ಹೇಳಬಹುದು.

**ಶ್ರೀ ದೇಶಬಂಧು ಗುಪ್ತ:** ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

**ಡಾ. ಅಂಬೇಡ್ಕರ್:** ನಿಮಗೆ ನಾಲ್ಕು ಸ್ಥಾನಗಳು ಸಿಕ್ಕಿವೆ, ಸರಿಯಲ್ಲವೇ?

**ಶ್ರೀ ಗೌತಮ್ (ಉತ್ತರ ಪ್ರದೇಶ):** ನಾನು ಸದನದ ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ. ನಾನು ಶ್ರೀ ಜಸಪತ್ ರಾಯ್ ಕಪೂರ್ ಅವರು ಮಂಡಿಸಿದ ತಿದ್ದುಪಡಿಯನ್ನು ವಿರೋಧಿಸಲು ನಿಂತಿದ್ದೇನೆ. ನಾನು ಹೇಳಲು ಇಚ್ಛಿಸುವುದೇನೆಂದರೆ ನಾವು ಉ.ಪ್ರ.ದ ಜನರು ಮತ್ತು ಉ.ಪ್ರ .ದ ಸರಕಾರವು ಮೇಲ್ಮನೆಗೆ ಸಂಬಂಧಿಸಿದಂತೆ ೭೨ ಸಂಖ್ಯೆಯಿಂದ ಸಮಾಧಾನ ಪಟ್ಟಿದ್ದೇವೆ. ನಮಗೆ ಅದಕ್ಕಿಂತ ಹೆಚ್ಚೇನೂ ಬೇಡ ಮತ್ತು —

**ಶ್ರೀ ಜೆ.ಆರ್.ಕಪೂರ್:** ಮಾನ್ಯ ಸದಸ್ಯರು ಉ.ಪ್ರ.ಸರಕಾರ ಮತ್ತು ಜನರ ಏಕೈಕ ಪ್ರತಿನಿಧಿಯೆಂದು ಕೊಳ್ಳುತ್ತಾರೆಯೇ?

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ೩೦೯೨–೯೩.

**ಶ್ರೀ ಗೌತಮ್:** ನನಗೆ ಸರಕಾರದ ಆಂತರ್ಯವು ತಿಳಿದಿದೆ ಮತ್ತು ಜನರ ಮನಸ್ಸು ನನಗೆ ತಿಳಿದಿದೆಯೆಂದು ಹೇಳುವ ಸ್ಥಿತಿಯಲ್ಲಿದ್ದೇನೆ. ಕಾಂಗ್ರೆಸ್ ಸಂಸ್ಥೆಯನ್ನು ಪ್ರಧಾನ ಕಾರ್ಯದರ್ಶಿಯಾಗಿ ಪ್ರತಿನಿಧಿಸುತ್ತೇನೆ ಮತ್ತು ನಾನು ಕೆಲವು ಜನರನ್ನು, ಕನಿಷ್ಠ, ಅವರನ್ನು, ಪ್ರತಿನಿಧಿಸುತ್ತೇನೆಂದು ಹೇಳಬಲ್ಲೆ.

**ಶ್ರೀ ಶ್ಯಾಮನಂದನ್ ಸಹಾಯ:** ಅಂದರೆ ಜಸಪತ್ ರಾಯ್ ಕಪೂರ್?

**ಶ್ರೀ ಗೌತಮ್:** ಅವರು ಕಾಂಗ್ರೆಸಿಗರಾಗಿದ್ದರೆ.

**ಶ್ರೀ ತ್ಯಾಗಿ:** ನಾನೊಬ್ಬ ಮಾಜಿ ಪ್ರಧಾನ ಕಾರ್ಯದರ್ಶಿ.

**ಶ್ರೀ ಗೌತಮ್:** ಡಾ ಅಂಬೇಡ್ಕರ್ ಅವರಿಗೆ ಸ್ವಂತ ಹಿತಾಸಕ್ತಿಗಳೇನೂ ಇಲ್ಲ. ಅವರಿಗೆ ಉ.ಪ್ರ.ದಲ್ಲಿ ಆಸಕ್ತಿಯಿಲ್ಲ. ನಮ್ಮ ಕೆಲವರ ಮನವಿ ಮೇರೆಗೆ ಅವರು ಈ ಸಂಖ್ಯೆಯನ್ನು ಇಳಿಸಿದರು. ಅವರು ೭೨ರಲ್ಲಾಗಲೀ ೮೬ರಲ್ಲಾಗಲೀ ಆಸಕ್ತರಲ್ಲ. ನಾವೇ ಅವರನ್ನು ಕೋರಿಕೊಂಡೆವು ಮತ್ತು ಅವರು ನಮ್ಮ ಮನವಿಯನ್ನು ಅಂಗೀಕರಿಸಿದರು. ನಾವು ಅದಕ್ಕಾಗಿ ಅವರಿಗೆ **ಕೃತಜ್ಞ**ರಾಗಿದ್ದೇವೆ. ಆದ್ದರಿಂದ ನಾನು ಶ್ರೀ ಜಸಪತ್ ರಾಯ್ ಕಪೂರ್ ಅವರ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

***ಡಾ. ಅಂಬೇಡ್ಕರ್:** ಮಾನ್ಯರೆ, ನಾನು ಈ ತಡ ಹಂತದಲ್ಲಿ ಇಲ್ಲಿ ಎತ್ತಲಾದ, ಸಂವಿಧಾನಾತ್ಮಕ ಅಥವಾ ಇತರ ವಿವಿಧ ವಿಚಾರಗಳ ಕುರಿತು ವಿಸ್ತೃತ ವಾದಕ್ಕಿಳಿಯುತ್ತೇನೆಂದು ಭಾವಿಸುವುದಿಲ್ಲ. ನನ್ನ ಮಿತ್ರ ಶ್ರೀ ಟಿ.ಟಿ.ಕೃಷ್ಣಾಮಾಚಾರಿಯವರು ಭಾವಿಸಿದಂತೆ ಮೊದಲನೆ ಅನುಸೂಚಿಯಲ್ಲಿ ಹಂಚಲಾದ ಸ್ಥಾನಗಳನ್ನು ಸಿ ಭಾಗದ ರಾಜ್ಯಗಳಿಗೆ ನೀಡುವ ಮೂಲಕ ಸಂವಿಧಾನವನ್ನು ಉಲಂಘಿಸಿದ್ದೇವೆಂದು ನಾನು ತಿಳಿಯುವುದಿಲ್ಲ. ನಾವು ಈ ಅನುಸೂಚಿಯಲ್ಲಿ ಸ್ಥಾನಗಳನ್ನು ಹಂಚುವಲ್ಲಿ ನಮ್ಮ ಸಂವಿಧಾನಾತ್ಮಕ ಹಕ್ಕುಗಳೊಂದಿಗೆ ಸರಿಯಾಗಿಯೇ ಇದ್ದೇವೆ. ಮೂರನೇ ಅನುಸೂಚಿಯ ತಿದ್ದುಪಡಿಯ ಕುರಿತು ನನ್ನ ಮಿತ್ರ ಪಂಡಿತ್ ಕುಂಝ್ರು ಅವರು ಗಮನಿಸುವಂತೆ ವಸ್ತುಶಃ ಒಂದು ಪ್ರಸಂಗದಲ್ಲಿ ಮಾತ್ರ ಒಟ್ಟು ಸ್ಥಾನಗಳನ್ನು ಕಡಿತಗೊಳಿಸಲಾಗಿದೆ ಮತ್ತು ಅದು ಉತ್ತರ ಪ್ರದೇಶಕ್ಕೆ ಸಂಬಂಧಿಸಿದಂತೆ.

**ಉಪಸಭಾಪತಿ:** ಮದ್ರಾಸು ಕೂಡಾ.

**ಡಾ. ಅಂಬೇಡ್ಕರ್:** ನಾನು ಆ ಬಗ್ಗೆ ಹೇಳುವವನಿದ್ದೆ. ನಾನು ಉತ್ತರ ಪ್ರದೇಶವನ್ನು ನನ್ನ ಪರಿಶೀಲನೆಗೆ ತೆಗೆದುಕೊಂಡಿದ್ದೇನೆ. ಅಲ್ಲಿ ರಾಜ್ಯ ಸರಕಾರವು ಮೇಲ್ಮನೆಯ ಗಾತ್ರವನ್ನು ಹೆಚ್ಚಿಸಲು ಅನಾಸಕ್ತವಾಗಿದೆ, ಮತ್ತು ನಾವು ಡೆಲ್ಲಿಯಲ್ಲಿರುವುದರಿಂದ, ಅವರ ಮೇಲ್ಮನೆಗೆ ಯಾವುದು ಸೂಕ್ತ ಸಂಖ್ಯೆಯೆಂಬ ಬಗ್ಗೆ ರಾಜ್ಯ ಸರಕಾರದ ತೀರ್ಮಾನದ ಮೇಲೆ ತೀರ್ಪುಕೊಡಲು ನಾನು ಸಿದ್ಧನಿಲ್ಲ, ಮತ್ತು ಆ ಆಧಾರದ ಮೇಲೆ ನಾನು ೮೬ರಿಂದ ೭೨ಕ್ಕೆ ಇಳಿಸಿದ್ದೇನೆ. ಬಿಹಾರ, ಬಾಂಬೆ ಮತ್ತು ಮದ್ರಾಸ್‌ಗಳ ಒಟ್ಟು ಸಂಖ್ಯೆಯಲ್ಲಿ ಮಾಡಲಾದ ಬದಲಾವಣೆಗಳ ಬಗ್ಗೆ, ನಾನು ಹೇಳಬಹದಾದ್ದೆಂದರೆ, ಇಂದಿನ ಅನೌಪಚಾರಿಕ ಸಿದ್ಧಾಂತವೆಂದರೆ ಒಟ್ಟು ಸಂಖ್ಯೆಯು ೧೨ರಿಂದ ಭಾಗಿಸಿದಾಗ ನಿಶ್ಶೇಷವಾಗಿರಬೇಕೆಂಬುದು ಮತ್ತು ಅದು ನನಗೆ ಒಪ್ಪಿಗೆಯಾಯಿತು ಹಾಗೂ ಆ ಕಾರಣಕ್ಕೆ ನಾನು ಬಿಹಾರ, ಬಾಂಬೆ ಮತ್ತು ಮದ್ರಾಸುಗಳ ಸಂದರ್ಭದಲ್ಲಿ ೭೨ನ್ನು ನಿಗದಿಪಡಿಸಿದೆ. ನನ್ನ ತಿದ್ದುಪಡಿಯು ವಸ್ತುಶಃ ಮದ್ರಾಸಿನ ಒಟ್ಟು ಸಂಖ್ಯೆಯಲ್ಲಿ ೩ರಷ್ಟನ್ನು ಇಳಿಸುತ್ತದೆಯಾದರೆ, ಬಿಹಾರ ಮತ್ತು ಬಾಂಬೆಯ ದೇಯಾಂಶವನ್ನು ಹೆಚ್ಚಿಸುತ್ತದೆ. ಆದ್ದರಿಂದ ಆ

---

* P.D., ಸಂ. ೪, ಭಾಗ II, ೨೦ ಏಪ್ರಿಲ್ ೧೯೫೦, ಪು. ३೧೯೫–೯೬.
ಟಿ. ४೧೯३–೯ಎ.

ಲೆಕ್ಕದಲ್ಲಿ ಯಾವ ದೂರೂ ಇರಲಾರದು. ನಾನು ಇದೇ ತತ್ವವನ್ನು ಪಂಜಾಬಿಗೆ ಅದು ಕನಿಷ್ಠ ಸ್ಥಾನಗಳನ್ನು ಹೊಂದಿದೆಯಾದ್ದರಿಂದ ಅನ್ವಯಿಸಲಾಗದ್ದಕ್ಕೆ ನನಗೆ ವಿಷಾದವಿದೆ.

ಬಂಗಾಳಕ್ಕೆ ಸಂಬಂಧಿಸಿದಂತೆ, ಈ ತತ್ವವನ್ನು ಅಳವಡಿಸಿದರೆ ಅಂದರೆ ೧೨ ರಿಂದ ಭಾಗಿಸಿಹೋದರೆ, ಆ ಸಂಖ್ಯೆಯು ೫೧ರಿಂದ ೪೮ಕ್ಕಿಳಿಯುತ್ತದೆಯೆಂದು ಅನ್ನಿಸಿತು ಮತ್ತು ಬಂಗಾಳವು ಕನಿಷ್ಠ ೫೧ ನ್ನು ಹೊಂದುವಷ್ಟು ದೊಡ್ಡ ರಾಜ್ಯವಾಗಿದೆ ಮತ್ತು ಆದ್ದರಿಂದ ನಾನು ಈ ಎರಡು ರಾಜ್ಯಗಳ ಸಂಖ್ಯೆಯನ್ನು ವ್ಯತ್ಯಾಸಮಾಡಲಿಲ್ಲ. ಇನ್ನುಳಿದ ಪ್ರಸಂಗಗಳಲ್ಲಿ ನಾನು ನಿಜಕ್ಕೂ ಅವರ ಸಿದ್ಧಾಂತಕ್ಕೆ ಬದ್ಧನಾಗಿದ್ದೆನೆಂದು ಶ್ರೀ ತ್ಯಾಗಿಯವರಿಗೆ ಕಂಡುಬರಬಹುದು.

ನಾಲ್ಕನೇ ಅನುಸೂಚಿಯನ್ನು ಗ್ರಾಮ ಪಂಚಾಯತಿಗಳಿಗೆ ಅಥವಾ ಪಂಚಾಯತಿಯ ಮುಖ್ಯಸ್ಥರಿಗೆ ವಿಸ್ತರಿಸುವ ಬಗ್ಗೆ ನಾನು ಸಲಹೆಯನ್ನು ಸ್ವೀಕರಿಸಲು ಸಿದ್ಧನಿಲ್ಲವೆಂದು ಹೇಳಲು ವಿಷಾದಿಸುತ್ತೇನೆ. ಏಕೆಂದರೆ ಈ ಸದನದ ಬಹು ಸದಸ್ಯರಲ್ಲಿ, ಗ್ರಾಮ ಪಂಚಾಯತಿಗಳನ್ನು ಅವರ ಪ್ರತಿನಿಧಿಗಳನ್ನು ಕಳುಹಿಸುವ ಹಕ್ಕಗಳಿರುವ ಸಂಸ್ಥೆಗಳಾಗಿ ಸೇರಿಸುವುದು ಒಂದೇ ಮತದಾರರ ಪುನರಾವರ್ತನೆಯಾಗುತ್ತದೆ ಎಂಬ ಭಾವನೆ ಇದೆ. ಏಕೆಂದರೆ, ನಾವು ವಯಸ್ಕ ಮತದಾನ ಪದ್ಧತಿಯನ್ನು ಹೊಂದಲಿದ್ದೇವೆ. ಮತ್ತು ಕಾರ್ಯತಃ ಗ್ರಾಮ ಪಂಚಾಯತಿಯ ಪ್ರತೀ ಸದಸ್ಯನೂ ಆ ರಾಜ್ಯದ ಕೆಳಮನೆಯ ಚುನಾವಣೆಯಲ್ಲಿ ಮತವನ್ನು ಹೊಂದಿದ್ದಾನೆ ಮತ್ತು ಆದ್ದರಿಂದ ಅದೊಂದು ಅನಗತ್ಯ ಪುನರಾವರ್ತನೆ ಮತ್ತು ಆದ್ದರಿಂದ ನಾನು ಅವರ ಸಲಹೆಯನ್ನು ಸ್ವೀಕರಿಸಲು ಸಿದ್ದನಿಲ್ಲ.

**ಶ್ರೀ ಬರ್ಮನ್ (ಪಶ್ಚಿಮ ಬಂಗಾಳ):** ಪುರಸಭೆಯ ಮತ್ತು ಜಿಲ್ಲಾ ಮಂಡಳಿಗಳ ಸದಸ್ಯರ ಕುರಿತೇನು?

**ಡಾ. ಅಂಬೇಡ್ಕರ್:** ಅವರಿರಬಹುದು, ನಾನೇನೂ ಮಾಡುವಹಾಗಿಲ್ಲ, ಆದರೆ ಅದನ್ನು ಪಂಚಾಯತಿಗಳಿಗೆ ವಿಸ್ತರಿಸುವುದು ಮತಗಳ ಪುನರಾವರ್ತನೆ– ಎರಡು ಮತದಾನದ ರೀತಿ– ಮತ್ತು ನಾನು ಅದನ್ನು ಸ್ವೀಕರಿಸಲು ಸಿದ್ಧನಿಲ್ಲ. ಇನ್ನು ಬೇರೆ ವಿಚಾರಗಳಿವೆಯೇ ಎಂದು ನನಗೆ ಗೊತ್ತಿಲ್ಲ. ಮದ್ರಾಸಿಗೆ ಕಡಿತ ೩ ಸಂಖ್ಯೆ ಮಾತ್ರ..

ಡೆಲ್ಲಿಗೆ ಸಂಬಂಧಿಸಿದಂತೆ, ನನ್ನ ಸ್ನೇಹಿತರೇನೇ ಹೇಳಲಿ, ಈ ಸದನವು ಭಾರೀ ಧಾರಾಳಿಯಾಗಿತ್ತೆಂಬ ಬಗ್ಗೆ ನನಗೆ ಸಂಶಯವಿಲ್ಲ.

**ಶ್ರೀ ಶ್ಯಾಮನಂದನ್ ಸಹಾಯ:** ಅವರು ಅತೀ ಸಂತಸದಲ್ಲಿದ್ದಾರೆ.

**ಡಾ. ಅಂಬೇಡ್ಕರ್:** ಅದು ಸರಿ ಮಾತ್ರವಲ್ಲ, ವಿವೇಚನಾತ್ಮಕ.

**ಸೈಯ್ಯದ್ ನೌಶರಾಲಿ:** ಸಂಯುಕ್ತ ಮಂಡಳಿಗಳ ಕುರಿತೇನು?

**ಡಾ. ಅಂಬೇಡ್ಕರ್:** ಬಂಗಾಳ ಸರಕಾರದ ಅಭಿಪ್ರಾಯ ಮತ್ತು ನನ್ನಿಬ್ಬರು ಮಾನ್ಯ ಸದಸ್ಯರು ವ್ಯಕ್ತಪಡಿಸಿದ ನಿಲುವು ವಿಭಿನ್ನವಾಗಿದೆಯೆಂದು ಕಾಣುತ್ತದೆ. ಕೆಲವರು ಪಶ್ಚಿಮ ಬಂಗಾಳ ಸರಕಾರವು ಸಲಹೆಮಾಡಿದ ಸ್ಥಳೀಯ ಮಂಡಳಿಯ ನಮೂದು ಇಳಿಯಬೇಕೆನ್ನುತ್ತಾರೆ ಮತ್ತು ನನ್ನ ಇಬ್ಬರು ಗೆಳೆಯರು ಅದನ್ನು ಕೈಬಿಡಬೇಕೆಂದು ಮತ್ತು ಸಂಯುಕ್ತ ಮಂಡಳಿಗಳ ನಮೂದು ಇರಬೇಕೆಂದು ಹೇಳುತ್ತಾರೆ.

**ಸೈಯ್ಯದ್ ನೌಶರಾಲಿ:** ಎರಡೂ ಇರಲಿ.

**ಡಾ. ಅಂಬೇಡ್ಕರ್:** ನಾನು ಈ ವಿಚಾರವಾಗಿ ಕೆಲವು ವಿಚಾರಣೆಗಳನ್ನು ಮಾಡಬೇಕಾಗುತ್ತದೆ. ತಿದ್ದುವುದು ಅಗತ್ಯವೆಂದು ನನಗೆ ಕಂಡು ಬಂದರೆ ಅಂತಹ ಬದಲಾವಣೆಗೆ ಒಂದು ಚಿಕ್ಕ ತಿದ್ದುಪಡಿಯನ್ನು ತರುವುದು ಕಷ್ಟವಲ್ಲ. ಸದ್ಯಕ್ಕೆ ನಾನು ಅರ್ಹವಾದ ಸಲಹೆಯಂತೆ ಕಾರ್ಯನಿರ್ವಹಿಸುತ್ತೇನೆ.

**ಶ್ರೀ ಜೆ.ಆರ್.ಕಪೂರ್:** ನಂತರದ ೧೨ರಿಂದ ವಿಭಜಿಸಬಲ್ಲ ಸಂಖ್ಯೆ ೬೦ ಇದ್ದಾಗ ಬಾಂಬೆ ರಾಜ್ಯದ ಸ್ಥಾನಗಳ ಸಂಖ್ಯೆಯನ್ನು ೬೬ರಿಂದ ೭೨ಕ್ಕೆ ಹೆಚ್ಚಿಸಲು ವಿಶೇಷ ಕಾರಣಗಳೇನು?

**ಡಾ. ಅಂಬೇಡ್ಕರ್:** ಅದು ದೊಡ್ಡ ವ್ಯತ್ಯಾಸವೇನಲ್ಲ. ಒಂದು ಸಂಖ್ಯೆ ಅಥವಾ ಇನ್ನೊಂದರಲ್ಲಿ ಪವಿತ್ರವೆಂದೇನೂ ಇಲ್ಲ. ನಾನು ಅಪೇಕ್ಷಿಸಿದ್ದು ೧೨ರಿಂದ ವಿಭಜಿಸಬಹುದಾದ್ದನ್ನಷ್ಟೇ.

**ಉಪಸಭಾಪತಿ:** ಬಾಂಬೆಯು ಗುಜರಾತಿಗಳು, ಮರಾಠಿಗಳು ಮತ್ತು ಕರ್ನಾಟಕದವರು ಸೇರಿದ ಒಂದು ಸಂಕೀರ್ಣ ಪ್ರಾಂತ.

(ಒಂದು, ಎರಡು, ಮೂರು ಮತ್ತು ನಾಲ್ಕನೇ ಅನುಸೂಚಿಗಳು ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟವು.)

೧ ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

(ಡಾ. ಅಂಬೇಡ್ಕರ್ ಅವರು ಮಂಡಿಸಿದ ನಿಲುವಳಿಯು ಅಂಗೀಕಾರವಾಯಿತು.)

◆

# ವಿಭಾಗ – ಮೂರು

# ೧ನೇ ಆಗಸ್ಟ್ ೧೯೫೦
# ರಿಂದ
# ೨೨ನೇ ಡಿಸೆಂಬರ್ ೧೯೫೦

# ವಿಭಾಗ – ಮೂರು

## ಪರಿವಿಡಿ


೧೭. ದಂತ ವೈದ್ಯರ (ತಿದ್ದುಪಡಿ) ಮಸೂದೆ ೧೪೯

೧೮. ರಾಜ್ಯಗಳ ಪಟ್ಟಿಯಲ್ಲಿರುವ ಕೆಲವು ವಿಷಯಗಳ ಮೇಲೆ ಒಂದು ವರ್ಷದ ಮಟ್ಟಿಗೆ ಶಾಸನಗಳನ್ನು ಪಾರ್ಲಿಮೆಂಟು ರಚಿಸುವ ಬಗ್ಗೆ ಠರಾವುಗಳನ್ನು ಕುರಿತು ೧೫೫

೧೯. ನಿರ್ವಾಸಿತರ ಆಸ್ತಿಯ ಆಡಳಿತ ನಿರ್ವಹಣೆ (ತಿದ್ದುಪಡಿ) ಮಸೂದೆ ೧೬೧

೨೦. ಪಾರ್ಲಿಮೆಂಟ್ ಮತ್ತು ರಾಜ್ಯಗಳ ವಿಧಾನ ಸಭೆಗಳಿಗೆ ಚುನಾಯಿತರಾಗಲು ಅರ್ಹತೆಗಳು ೧೬೫

೨೧. ಕೂಚ್–ಬಿಹಾರ್ (ಕಾನೂನುಗಳನ್ನು ಒಗ್ಗೂಡಿಸುವಿಕೆಯ) ಮಸೂದೆ ೧೭೦

೨೨. ಭಾರತ ಜಕಾತಿ (೪ನೇ ತಿದ್ದುಪಡಿ) ಮಸೂದೆ ೧೭೨

೨೩. ಸಂಘಗಳ ನೋಂದಣಿ (ತಿದ್ದುಪಡಿ) ಮಸೂದೆ ೧೭೮

೨೪. ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ ೧೮೧

೨೫. ಕಾನೂನು ಸಚಿವಾಲಯ – ಬೇಡಿಕೆ ಸಂ.೧೩ ೨೨೩

# ೧೭

# ದಂತ ವೈದ್ಯರ (ತಿದ್ದುಪಡಿ) ಮಸೂದೆ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಆರೋಗ್ಯ ಸಚಿವರು ಅಸ್ವಸ್ಥರಾಗಿದ್ದಾಗ, ಈ ಮಸೂದೆಯನ್ನು ನಾನು ವಹಿಸಿಕೊಳ್ಳಬೇಕೆಂದು ಕೋರಲಾಗಿದ್ದು, ಆದ್ದರಿಂದ ನಾನು ಮಂಡಿಸಲು ಬೇಡುವುದೇನೆಂದರೆ:

'ದಂತ ವೈದ್ಯರ ಕಾಯಿದೆ, ೧೯೪೮ ಅನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳಬಹುದಾಗಿದೆ'

ಈ ಮಸೂದೆಯು ಬಹಳ ಹ್ರಸ್ವವಾಗಿದ್ದು, ಅದರಲ್ಲಿ ಯಾವುದೇ ವಿವಾದಾತ್ಮಕ ಅಭಿಪ್ರಾಯಗಳನ್ನು ಒಳಗೊಂಡ ವಿಷಯಗಳಿರುವುದಿಲ್ಲ. ೧೯೪೮ ದಂತ ವೈದ್ಯರ ಅಧಿನಿಯಮ, ಜಾರಿಗೆ ಬಂದ ತಾರೀಖು ೨೯–೩–೧೯೪೮. ಅದನ್ನು ಪಾರ್ಟ್ 'ಎ', ಪಾರ್ಟ್ 'ಸಿ' ಮತ್ತು ಪಾರ್ಟ್ 'ಡಿ' ರಾಜ್ಯಗಳಿಗೆ ಅನ್ವಯಿಸಲಾಗಿದೆ. ಆ ಅಧಿನಿಯಮದ ಕಲಮು ೪೯ರ ಕೆಳಗೆ, ಯಾವ ವ್ಯಕ್ತಿಯೇ ಆಗಲೀ ೨೮–೩–೧೯೫೦ರ ನಂತರ ಅವನ ಹೆಸರು ದಂತ ವೈದ್ಯರುಗಳ ರಿಜಿಸ್ಟರಿನಲ್ಲಿ ನೋಂದಾಯಿಸಿದ ಹೊರತು ಪ್ರಾಕ್ಟೀಸ್ ಮಾಡುವ ಹಾಗಿಲ್ಲ. ಆ ಅಧಿನಿಯಮದ ಚಾಲನೆ ನೀಡುವ ಭಾಗಗಳನ್ನು ೨೮–೩–೧೯೫೦ರಿಂದ ಜಾರಿಗೆ ಬರುವ ಹಾಗೆ ವಿಧಿಸಲಾಗಿತ್ತು. ದುರಾದೃಷ್ಟವಶಾತ್ ಈ ಆಶಾಭಾವನೆ ಫಲಿಸಲಿಲ್ಲ. ೨೮–೩–೧೯೫೦ರ ಹೊತ್ತಿಗೆ ಈ ರಿಜಿಸ್ಟರು ಸಿದ್ಧವಾಗುವುದಿಲ್ಲವೆಂದು ಅನೇಕ ರಾಜ್ಯಗಳು ವರದಿ ಮಾಡಿದ್ದವು. ಪರಿಣಾಮವಾಗಿ, ಸಂಬಂಧಿಸಿದ ರಾಜ್ಯಗಳು ಈ ರಿಜಿಸ್ಟರನ್ನು ಸಿದ್ಧಪಡಿಸಲು ಒಂದು ವರ್ಷದವರೆಗೆ ಅವಧಿಯನ್ನು ವಿಸ್ತರಿಸಬೇಕಾಯಿತು. ಆಗ ಪಾರ್ಲಿಮೆಂಟಿನ ಅಧಿವೇಶನ ನಡೆಯುತ್ತಿರಲಿಲ್ಲವಾದ್ದರಿಂದ ಅಗತ್ಯವಾದ ಅವಕಾಶವನ್ನು ಕಲ್ಪಿಸಿ, ಅವಧಿಯನ್ನು ೨೮–೩–೧೯೫೧ರವರೆಗೆ ವಿಸ್ತರಿಸಲು ಸರ್ಕಾರ ಒಂದು ಅಧ್ಯಾದೇಶವನ್ನು ಹೊರಡಿಸಿತು. ಈ ಮಸೂದೆಯ ಉದ್ದೇಶ ಅಧ್ಯಾದೇಶವನ್ನು ಕಾನೂನನ್ನಾಗಿ ಪರಿವರ್ತಿಸುವುದೇ ಆಗಿದೆ. ಆದ ಕಾರಣ ರಿಜಿಸ್ಟರನ್ನು ಸಿದ್ಧಪಡಿಸುವುದಕ್ಕೋಸ್ಕರ ಅವಧಿಯನ್ನು ವಿಸ್ತರಿಸುವುದೇ (ಮಸೂದೆಯ) ಮುಖ್ಯ ಉಪಬಂಧವಾಗಿದೆ.

ಮೂಲ ಕಾಯಿದೆಯನ್ನು ಜಾರಿಗೊಳಿಸುವಲ್ಲಿ ಕಂಡು ಬಂದ ಕೆಲವು ತೊಡಕುಗಳನ್ನು ನಿವಾರಿಸುವುದಕ್ಕೂ ಈ ಪ್ರಸ್ತುತ ಸಂದರ್ಭವನ್ನು ಬಳಸಿಕೊಳ್ಳಲಾಗಿದೆ. ಮೊದಲನೆಯದಾಗಿ, ಮೂಲ ಕಾಯಿದೆಯಲ್ಲಿ ಎರಡು ಉಪಬಂಧಗಳಿದ್ದವು. ಯಾವುದೇ ವ್ಯಕ್ತಿಯ ಹೆಸರು ರಿಜಿಸ್ಟರಿನಲ್ಲಿ ಸೇರಿಸಲ್ಪಡದೇ ಇದ್ದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಅನುಮತಿ ಇರಲಿಲ್ಲವೆಂಬುದು ಒಂದು ಉಪಬಂಧ. ಕಂಡ ಹಾಗೇ, ಈ ರಿಜಿಸ್ಟರು ಸಿದ್ಧವಾದ ಮೇಲೆ ಈ ಉಪಬಂಧವನ್ನು ಕಾರ್ಯಗತಗೊಳಿಸಬಹುದೆಂದು ನಿರೀಕ್ಷಿಸಲಾಗಿತ್ತು. ರಿಜಿಸ್ಟರುಗಳು ಸಿದ್ಧವಾಗಿರಲಿಲ್ಲವಾದ್ದರಿಂದ ರಿಜಿಸ್ಟರಿನಲ್ಲಿ ಸೇರಿಸಲ್ಪಡದ ವ್ಯಕ್ತಿಗಳು – ಅವರಿಗೆ ಅರ್ಹತೆ ಇರಲಿಲ್ಲ ಎಂಬ ಕಾರಣಕ್ಕೆ ಅಲ್ಲ, ಆದರೆ ರಿಜಿಸ್ಟರು

---

* P.D., ಸಂ. ೪, ಭಾಗ II, ೧೧ ಆಗಸ್ಟ್ ೧೯೫೦, ಪು. ೮೪೧–೪೩.

ಸಿದ್ಧವಾಗಿರಲಿಲ್ಲ ಎಂಬ ಕಾರಣಕ್ಕೆ – ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವುದೇ ಹುದ್ದೆಯನ್ನು ಪಡೆಯಲು ಅನರ್ಹರಾಗುತ್ತಿದ್ದರು. ಆದ್ದರಿಂದ ಇಂಥ ವ್ಯಕ್ತಿಗಳು – ಅವರ ಹೆಸರು ರಿಜಿಸ್ಟರಿನಲ್ಲಿ ಸೇರ್ಪಡೆಯಾಗದಿದ್ದರೂ ಸಹ – ಹುದ್ದೆಯನ್ನು ಪಡೆದುಕೊಳ್ಳಲು ಅನುಮತಿಯನ್ನು ಕೊಡುವುದಕ್ಕೋಸ್ಕರ ಅವಧಿಯನ್ನು ವಿಸ್ತರಿಸಬೇಕಾದ ಆವಶ್ಯಕತೆ ಉಂಟಾಯಿತು.

ಎರಡನೆಯದಾಗಿ, ದಂತವೈದ್ಯಕೀಯದಲ್ಲಿ ಡಿಪ್ಲೊಮಾಗಳನ್ನು ಕೊಡುವ ಒಂದು ದಂತ ವೈದ್ಯಶಾಲೆ ಬಂಗಾಳದಲ್ಲಿ ಇದೆ. ಈ ಕಾಯಿದೆಯನ್ನು ಅನುಮೋದಿಸಿದ ಸಮಯದಲ್ಲಿ, ಒಂದು ವಿವಾದ ಸೃಷ್ಟಿಯಾಯಿತು. ಅದೇನೆಂದರೆ, ಈ ಬಂಗಾಳದ ದಂತವೈದ್ಯಶಾಲೆಗಳು ಕೊಡಮಾಡಿದ ಡಿಪ್ಲೊಮಾಗಳು, ಅವುಗಳನ್ನು ಪಡೆದುಕೊಂಡ ವ್ಯಕ್ತಿಗಳ ಹೆಸರುಗಳನ್ನು ರಿಜಿಸ್ಟರಿನಲ್ಲಿ ಸೇರಿಸಬೇಕಾದರೆ, ಅವರಿಗೆ ಸಾಕಷ್ಟು ಅರ್ಹತೆ ಇದೆಯೆ ಇಲ್ಲವೇ ಎಂಬುದೇ ಆಗ ಉಂಟಾದ ವಿವಾದ. ಆ ದಂತವೈದ್ಯಶಾಲೆ ಕೊಡಮಾಡಿದ ಡಿಪ್ಲೋಮಗಳನ್ನು ಪಡೆದುಕೊಂಡ ವ್ಯಕ್ತಿಗಳು ಈ ಅನರ್ಹತೆಯನ್ನು ತೆಗೆದುಹಾಕಬೇಕೆಂದು ಗಣನೀಯವಾದ ಚಳುವಳಿಯನ್ನು ಮಾಡಿದ್ದಾರೆ. ಇದನ್ನು ಕುರಿತ ಪಶ್ಚಿಮ ಬಂಗಾಳ ಸರ್ಕಾರ ಒಂದು ರಾಜೀ ಸೂತ್ರವನ್ನು ಸೂಚಿಸಿದೆ. ಅದೇನೆಂದರೆ, ೧೯೪೦ನೇ ಇಸವಿಗೆ ಮುಂಚೆ ಡಿಪ್ಲೊಮಾ ಪಡೆದುಕೊಂಡ ವ್ಯಕ್ತಿಗಳು ಕೆಲವು ನಿಬಂಧನೆಗಳಿಗೆ ಒಳಪಟ್ಟು ರಿಜಿಸ್ಟರಿನಲ್ಲಿ ಸೇರಿಸುವುದಕ್ಕೆ ಅರ್ಹತೆ ಪಡೆದಿದ್ದಾರೆ ಎಂಬುದು ಆ ಸಲಹೆ. ಈ ಮಸೂದೆಯಲ್ಲಿ ಆ ರಾಜೀ ಸೂತ್ರಕ್ಕೂ ಅವಕಾಶ ಮಾಡಿಕೊಡಲಾಗಿದೆ.

## ಖಂಡ (೨)

*__ಡಾ. ಅಂಬೇಡ್ಕರ್:__ ನನ್ನ ಸನ್ಮಾನ್ಯ ಮಿತ್ರರಾದ ಶ್ರೀ ಸಿಧ್ವ ಮತ್ತು ಪಂಡಿತ್ ಠಾಕೂರ್‌ದಾಸ್ ಅವರು ಎತ್ತಿದ ಪ್ರಶ್ನೆಗಳನ್ನು (ವಿಷಯಗಳನ್ನು) ಅವರ ತಿದ್ದುಪಡಿಗಳನ್ನು (ಚರ್ಚೆಗೆ) ತೆಗೆದುಕೊಂಡ ಸಮಯಕ್ಕೆ ಕಾದಿರಿಸಿಕೊಂಡಿರಬಹುದಾಗಿತ್ತೆಂದು ನಾನು ಆಶಿಸಿದ್ದೆ. ಅವರ ತಿದ್ದುಪಡಿಗಳನ್ನು ಮಂಡಿಸಿದಾಗ ಈ ವಿಷಯಗಳನ್ನು ನಿಸ್ಸಂದೇಹವಾಗಿ ಮತ್ತೆ ಎತ್ತಿಕೊಳ್ಳುವುದರಿಂದ ಅವುಗಳಿಗೆ ಉತ್ತರಿಸುವುದು ಸ್ವಲ್ಪ ಮುಜುಗರವಾಗುತ್ತದೆ. ಆದರೆ ಅವರು ಎತ್ತಿದ ವಿಷಯಗಳಿಗೆ ಈಗಲೇ ಉತ್ತರಿಸುವುದು ಅನಿವಾರ್ಯವಾಗಿದೆ. ಅದನ್ನು ನಾನು ಸಂಕ್ಷಿಪ್ತವಾಗಿ ಮಾಡುತ್ತೇನೆ. ಕಾರಣವೇನೆಂದರೆ, ನಾನು ಹೇಳಲೇಬೇಕಾದುದು ನನಗೆ ಗೊತ್ತು............

**ಮಾನ್ಯ ಸಭಾಪತಿಗಳು:** ಈ ತಿದ್ದುಪಡಿಗಳ ಮೇಲೆ ಯಾವುದೇ ವಾದಗಳನ್ನು ಮಂಡಿಸಲು ನಾನು ಅವಕಾಶ ಕೊಡುವುದಿಲ್ಲ.

**ಪಂಡಿತ್ ಥಾಕೂರ್ ದಾಸ್ ಭಾರ್ಗವ:** ನನ್ನ ಮಾನ್ಯ ಸ್ನೇಹಿತರು ಒಪ್ಪಿಕೊಳ್ಳದಿದ್ದರೆ ನನ್ನ ತಿದ್ದುಪಡಿಯನ್ನು ನಾನು ಮಂಡಿಸುವುದಿಲ್ಲ.

**ಡಾ. ಅಂಬೇಡ್ಕರ್:** ಮಿ. ಸಿಧ್ವ ಅವರು ಒಂದೆರಡು ಪ್ರಶ್ನೆಗಳನ್ನು ಎತ್ತಿದ್ದಾರೆ. ಸದನವು ಅಧಿವೇಶನದಲ್ಲಿದ್ದಾಗ ಅಧ್ಯಾದೇಶವನ್ನು ಏಕೆ ಹೊರಡಿಸಲಾಯಿತು ಎಂಬುದೇ ಕಡೆಯ ಪ್ರಶ್ನೆ. ಅದಕ್ಕೆ ಉತ್ತರ ಎರಡು. ಮೊದಲನೆಯದು ಹೀಗಿದೆ: ಭಾರತ ಸರ್ಕಾರಕ್ಕೆ ರಿಜಿಸ್ಟರ್ ಸಿದ್ಧಪಡಿಸುವುದಕ್ಕೆ ಸಮಯವನ್ನು

---

* P.D., ಸಂ. ೪, ಭಾಗ II, ೧೧ ಆಗಸ್ಟ್ ೧೯೫೦, ಪು. ೮೫೬–೬೨.

ವಿಸ್ತರಿಸಬೇಕೆಂಬ ಪ್ರಾರ್ಥನೆ ಮೊದಲು ಬಂದಿದ್ದು ಮದರಾಸು ಸರ್ಕಾರದಿಂದ. ಅದೂ ೧೯೫೦ರ ಮಾರ್ಚ್ ೧೫ರ ಸುಮಾರಿಗೆ. ಅಂದರೆ, ಆ ಹೊತ್ತಿಗೆ ರಿಜಿಸ್ಟರನ್ನು ಸಿದ್ಧಪಡಿಸಲು ಕೇವಲ ೧೩ ದಿನಗಳು ಮಾತ್ರ ಉಳಿದಿದ್ದಾಗ. ಅದು ಒಂದು ಕಾರಣ. ಎರಡನೆಯ ಕಾರಣವೆಂದರೆ, ರಿಜಿಸ್ಟರನ್ನು ಪೂರ್ಣಗೊಳಿಸಲು ತಮಗೆ ಸಾಧ್ಯವಾಗುತ್ತಿಲ್ಲವೆಂದು ಭಾರತ ಸರ್ಕಾರಕ್ಕೆ ಮದರಾಸು ಸರ್ಕಾರದ ಪತ್ರ ಬಂದಾಗ, ಬೇರೆ ರಾಜ್ಯಗಳಿಂದ ಅವರಿಗೆ ಅವರ ಪಟ್ಟಿಯನ್ನು ನಿಗದಿತ ತಾರೀಖಿನೊಳಗೆ ಸಿದ್ಧಪಡಿಸುವ ಸ್ಥಿತಿಯಲ್ಲಿ ಇದ್ದಾರೆಯೇ ಇಲ್ಲವೇ, ಅವರಿಗೂ ವಿಸ್ತರಣೆಯು ಬೇಕಾಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದು ಭಾರತ ಸರ್ಕಾರಕ್ಕೆ ಬೇಕಾಗಿತ್ತು. ಸ್ವಾಭಾವಿಕವಾಗಿ, ಭಾರತ ಸರ್ಕಾರ ಮತ್ತು ಇತರ ರಾಜ್ಯಗಳ ಮಧ್ಯೆ ಪತ್ರ ವ್ಯವಹಾರ ಅಂಕುರವಾಯಿತು. ನಿಸ್ಸಂದೇಹವಾಗಿ ಇದು ಸಮಯ ತೆಗೆದುಕೊಂಡಿತು. ಸಮಯ ತೆಗೆದುಕೊಳ್ಳಲೇಬೇಕಾಗಿತ್ತು. ಪರಿಣಾಮವಾಗಿ, ಭಾರತ ಸರ್ಕಾರಕ್ಕೆ ಉತ್ತರಗಳು ಬಂದು ಸೇರುವ ಹೊತ್ತಿಗೆ ಮತ್ತು ಮದರಾಸು ಸರ್ಕಾರ ಪ್ರಸ್ತಾವಿಸಿದ ತಿದ್ದುಪಡಿಗಳು ಆವಶ್ಯಕವೇ ಅಲ್ಲವೇ ಎಂಬುದನ್ನು ನಿರ್ಣಯಿಸುವ ಹೊತ್ತಿಗೆ, ಪಾರ್ಲಿಮೆಂಟನ್ನು ಮುಕ್ತಾಯಗೊಳಿಸಲಾಗಿತ್ತು. ಈ ಕಾರಣಕ್ಕಾಗಿಯೇ ಮುಕ್ತಾಯದ ಬಿಡುವಿಗೆ ಮುನ್ನ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಲಿಲ್ಲ.

ಮಿ. ಸಿಧ್ವ ಅವರು ಎತ್ತಿದ ಎರಡನೇ ಪ್ರಶ್ನೆಯೆಂದರೆ, ಬಂಗಾಳದ ದಂತವೈದ್ಯಪಾಠಶಾಲೆಯ ಕೆಲವು ನಿರ್ದಿಷ್ಟ ವಿದ್ಯಾರ್ಹತೆಗಳನ್ನು ಮಾನ್ಯಮಾಡುವುದಕ್ಕೆ ನಾವೇಕೆ ಶಾಸನವನ್ನು ರಚಿಸಬೇಕು ಎಂಬುದೇ ಆಗಿದೆ. ಅವರ ಪ್ರಕಾರ, ಇದು ಕಾನೂನಿನನ್ವಯ ದಂತವೈದ್ಯ ಪರಿಷತ್ತಿಗೆ ಬಿಟ್ಟ ವಿಷಯ. ನನ್ನ ಸ್ನೇಹಿತ ಮಿ. ಸಿಧ್ವ ಅವರು ಒಂದು ಮುಖ್ಯ ವಿಷಯವನ್ನು ಗಮನಿಸಿಲ್ಲ. ಅದೇನೆಂದರೆ, ಪರಿಷತ್ತಿನಲ್ಲಿ ನಿಹಿತವಾಗಿರುವ ಮಾನ್ಯತೆ, ಪದವಿಗಳು ಇವುಗಳಿಗೆ ಸಂಬಂಧಿಸಿದ್ದಾಗಿದೆ. ಆದರೆ ನಾವು ಇಲ್ಲಿ ವ್ಯವಹರಿಸುತ್ತಿರುವುದು, ಮುಚ್ಚಿಹೋಗಿರುವ ಒಂದು ಸಂಸ್ಥೆ ಕೊಡಮಾಡಿರುವ ಪದವಿಗಳು ಮತ್ತು ಡಿಪ್ಲೊಮಾಗಳನ್ನು ಕುರಿತದ್ದಾಗಿದೆ. ಪರಿಣಾಮವಾಗಿ ದಂತವೈದ್ಯಶಾಸ್ತ್ರದಲ್ಲಿ ಬೋಧನೆ ಮಾಡಿದ ಒಂದು ಶಾಲೆಯು ಕೊಡಮಾಡಿದ ಪದವಿಗಳು ಮಾನ್ಯತೆ ಪಡೆದುಕೊಳ್ಳಲು ಯೋಗ್ಯವೇ ಎಂಬುದನ್ನು ಇಂದಿನ ಸರ್ಕಾರ ತೀರ್ಮಾನ ಮಾಡಬೇಕಾಗಿದೆ. ವಿನಾ, ಇದು ಕಲಮು ೧೦, ಉಪಖಂಡ (೨)ರ ಕೆಳಗೆ ಬಂಗಾಳದ ಪರಿಷತ್ತಿಗೆ ಬಿಡುವ ವಿಷಯವಲ್ಲ. ಇಲ್ಲಿ ಬಳಸಿರುವ ಪದ 'ಗ್ರಾಂಟ್ಸ್' (ಕೊಡಮಾಡು), ಅಂದರೆ ವರ್ತಮಾನದಲ್ಲಿ ಕೊಡಮಾಡುತ್ತಿರುವುದು ಎಂದು, ಅಲ್ಲದೆ ಈಗಾಗಲೇ ಕೊಡಮಾಡಲ್ಪಟ್ಟ 'ಡಿಪ್ಲೊಮಾಗಳು' ಎಂದಲ್ಲ.

ಅದು ಹಾಗಿದ್ದು, ಪರಿಷತ್ತನ್ನು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ವ್ಯವಹರಿಸುವುದಕ್ಕೆ ಸುಲಭವಾಗಿ ಬಿಟ್ಟುಬಿಡತಕ್ಕ ವಿಷಯವಲ್ಲ. ನಾವು ಅನುಸೂಚಿಯನ್ನು ತಿದ್ದುಪಡಿಮಾಡುವುದೇ ಆದರೆ, ಅದನ್ನು ಕಾನೂನು ತಾನೇ ಮಾಡಬೇಕಾದ ವಿಷಯ. ಅದಕ್ಕಾಗಿಯೇ ಈ ನಿರ್ದಿಷ್ಟವಾದ ವಿಷಯವನ್ನು ಒಳಗೊಂಡಂತೆ ಒಂದು ಕಾನೂನು ಸಮ್ಮತ ಉಪಬಂಧವನ್ನು ಈ ಮಸೂದೆಯಲ್ಲಿ ಸೇರಿಸಲಾಗಿದೆ.

ಬಂಗಾಳದ ದಂತ ವೈದ್ಯಶಾಲೆಯನ್ನು ಕುರಿತು ನಾನು ಹೇಳಿದ್ದು, ಇದೇ ಪ್ರಶ್ನೆಯ ಮೇಲೆ ನನ್ನ ಸ್ನೇಹಿತ ಪಂಡಿತ ಠಾಕೂರ್ ದಾಸ್ ಭಾರ್ಗವ ಕೇಳಿದುದಕ್ಕೂ ಅನ್ವಯಿಸುತ್ತದೆ.

ಈಗ ಮಿ. ಕಾಮತ್ ಅವರು ಎತ್ತಿದ ವಿಷಯಗಳಿಗೆ ನಾನು ಬರುತ್ತೇನೆ. ಅವರು ಎತ್ತಿದ ಮೊದಲನೆಯ ಪ್ರಶ್ನೆ ಹೆಚ್ಚು–ಕಡಿಮೆ ತಾಂತ್ರಿಕ ಸ್ವಭಾವದ್ದಾಗಿದೆ. ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆ ಎಂದಾಗಿದ್ದರೆ, ಕಾನೂನಿನನ್ವಯ ರಿಜಿಸ್ಟರು ೨೮–೩–೧೯೫೦ರಂದು ಸಿದ್ಧವಾಗಿರಬೇಕಾಗಿತ್ತು. ಮತ್ತು ಒಬ್ಬ ವ್ಯಕ್ತಿ ರಿಜಿಸ್ಟರಿನಲ್ಲಿಲ್ಲದಿದ್ದರೆ ೪೭ ಮತ್ತು ೪೯ನೇ ಕಲಮುಗಳ ಉಪಬಂಧಗಳ ಕೆಳಗೆ ಅವನು

ನಿರ್ದಿಷ್ಟ ದಂಡಗಳಿಗೆ ಗುರಿಯಾಗುತ್ತಾನೆ. ಆದರೆ, ೨೯–೫–೧೯೫೦ರಂದು ಜಾರಿಗೆ ಬಂದ ಈ ದಂಡಗಳಿಂದ ಅವನಿಗೆ ಈ ಅಧ್ಯಾದೇಶವು ವಿನಾಯಿತಿಯನ್ನು ನೀಡುತ್ತದೆ. ಆದ್ದರಿಂದ, ಒಬ್ಬ ವ್ಯಕ್ತಿ, ಎರಡು ತಿಂಗಳುಗಳ ಅವಧಿಯಲ್ಲಿ ಅವನ ಹೆಸರು ರಿಜಿಸ್ಟರಿನಲ್ಲಿ ಇಲ್ಲದೇ ಇದ್ದರೂ ಪ್ರಾಕ್ಟೀಸನ್ನು ಮುಂದುವರಿಸುತ್ತಿದ್ದರೆ, ಅಥವ ಹುದ್ದೆಯಲ್ಲಿ ಮುಂದುವರಿದಿದ್ದರೆ ಅವನು ಕೆಲವು ದಂಡಗಳಿಗೆ ಒಳಪಡುತ್ತಾನೆ. ಇಂಥ ವ್ಯಕ್ತಿಗಳ ಪರಿಸ್ಥಿತಿ ಏನು? ನನಗೆ ಅನಿಸುವುದೇನೆಂದರೆ ನನ್ನ ಸ್ನೇಹಿತ ಮಿ. ಕಾಮತ್ ಅವರು ಮಸೂದೆಯಲ್ಲಿಯೇ ಪ್ರಸ್ತಾವಿಸಲ್ಪಟ್ಟ ತಿದ್ದುಪಡಿಗಳನ್ನು ಕೂಲಂಕಷವಾಗಿ ಮನನ ಮಾಡಿಕೊಂಡಿದ್ದರೆ,

> "ಕಲಮು ೪೬ರ ಉಪಖಂಡ(೩) ಮತ್ತು ಕಲಮು ೪೭ರ ಉಪಖಂಡ (೧)ರಲ್ಲಿ 'ಎರಡು ವರ್ಷಗಳು' ಎಂಬ ಪದಗಳಿಗೆ ಬದಲಾಗಿ 'ಮೂರು ವರ್ಷಗಳು' ಎಂಬುದಾಗಿ ಪ್ರತಿಯೋಜಿಸಲಾಗಿದೆ ಮತ್ತು ಸದಾ ಕಾಲಕ್ಕೂ ಪ್ರತಿಯೋಜಿಸಲಾಗಿದೆಯೆಂದೇ ಭಾವಿಸಲಾಗಿದೆ ಎಂದೇ ತಿಳಿಯಬೇಕು, ಎಂದು ಉಪಬಂಧಗಳಲ್ಲಿ ಹೇಳಿರುವುದನ್ನು ಗಮನಿಸಿರುತ್ತಿದ್ದರು."

ಆದ್ದರಿಂದ ಆ ವಿಷಯವನ್ನು ಸಾಕಷ್ಟು ಮಟ್ಟಿಗೆ ನೋಡಿಕೊಂಡಿದ್ದೇವೆ ಎಂಬುದು ವಿಶದವಾಗುತ್ತದೆ.

**ಶ್ರೀ ಕಾಮತ್:** ನಾನು ಎತ್ತಿದ ಪ್ರಶ್ನೆಯೇನೆಂದರೆ, ಆ ಎರಡು ತಿಂಗಳ ಅವಧಿಯಲ್ಲಿ ಅಂದರೆ ೨೯ನೇ ಮೇ ವರೆಗೆ ಒಬ್ಬ ದಂತ ವೈದ್ಯ ನೋಂದಾಯಿಸದೇ ಹೋಗಿದ್ದರೆ, ಆಗ ಕಾನೂನಿನನ್ವಯ ಮತ್ತು ಅಧ್ಯಾದೇಶ ಜಾರಿಗೆ ಬಂದಿಲ್ಲದೇ ಇದ್ದುದರಿಂದ ಸರ್ಕಾರದ ಆಡಳಿತಾತ್ಮಕ ನಿರ್ದೇಶನಗಳು ಆ ವೈದ್ಯನನ್ನು ಪ್ರಾಸಿಕ್ಯೂಷನ್ನಿಗೆ ಗುರಿಪಡಿಸುವುದನ್ನಾಗಲೀ ಅಥವ ದಂಡ ವಿಧಿಸುವುದನ್ನಾಗಲೀ ತಪ್ಪಿಸಲು ಹೇಗೆ ಸಾಧ್ಯವಾಗುತ್ತಿತ್ತು ಎಂಬುದಾಗಿದೆ.

**ಡಾ. ಅಂಬೇಡ್ಕರ್:** ನಾನು ಒಪ್ಪಿಕೊಳ್ಳುತ್ತೇನೆ. ಆಗ ಪ್ರಾಸಿಕ್ಯೂಷನ್‌ನಿಂದ ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ಆದರೆ ಅದೃಷ್ಟವಶಾತ್ ಅಂಥ ಯಾವ ಪ್ರಕರಣಗಳೂ ಸಂಭವಿಸಲಿಲ್ಲ. ಈಗ ಅದು ಆಗಲು ಸಾಧ್ಯವಿಲ್ಲ. ಏಕೆಂದರೆ ಆ ಅವಧಿಯನ್ನು ಮೂಲ ಕಾಯಿದೆಗೇ ಸೇರಿಸಲಾಗಿದೆ.

**ಶ್ರೀ ಕಾಮತ್:** ಆದರೆ, ಸ್ವಾಮಿ...........

**ಮಾನ್ಯ ಸಭಾಪತಿಗಳು:** ಆರ್ಡರ್, ಆರ್ಡರ್ ವಿಷಯ ಸ್ಪಷ್ಟವಾಗಿದೆ.

**ಡಾ. ಅಂಬೇಡ್ಕರ್:** ನನ್ನ ಮಿತ್ರ ಕಾಮತ್ ಅವರು, ಈ ಮಸೂದೆಯನ್ನು ತಂದಿರುವ ಕಾರಣಗಳನ್ನು ಕುರಿತು ವ್ಯವಹರಿಸುವಾಗ – ನಾನು ಹಾಗೆ ಹೇಳಬಹುದಾದರೆ – ಕೆಲವು ಗಂಭೀರವಾದ ಆಪಾದನೆಗಳನ್ನು ಮಾಡಿದ್ದಾರೆ. ಸರ್ಕಾರದ ಪರವಾದ ನಿಲುವೇನೆಂದರೆ ಉಪಬಂಧಗಳ ಅನುಸಾರ ಪಟ್ಟಿಯನ್ನು ಸಿದ್ಧಪಡಿಸಲು ಕೆಲವು ರಾಜ್ಯಗಳಿಗೆ ಸಾಧ್ಯವಾಗದೇ ಹೋಗಿದ್ದರಿಂದ, ಈ ಮಸೂದೆಯನ್ನು ತರಬೇಕಾಯಿತು. ಇನ್ನೂ ಒಂದು ಕಾರಣ ಇದೆ ಎಂದು ನನ್ನ ಮಿತ್ರರು ಸೂಚಿಸುತ್ತಿದ್ದಾರೆ. ಆ ಕಾರಣವೆಂದರೆ: ಈ ದೇಶದಲ್ಲಿ ಕೆಲವು ಬ್ರಿಟಿಷ್ ದಂತವೈದ್ಯರು ಕೆಲಸ ಮಾಡುತ್ತಿದ್ದು, ಅವರಿಗೆ ಈ ದೇಶದ ಪೌರರಾಗಿ ನೊಂದಾಯಿಸಿಕೊಳ್ಳಲು ಇಷ್ಟವಿಲ್ಲ. ಹಾಗಾಗಿ, ಅವರಿಗೆ ಅನುಕೂಲಮಾಡಿಕೊಡುವುದೇ ಈ ಮಸೂದೆಯ ಉದ್ದೇಶ:

ಈಗ ಮೊದಲನೆಯದಾಗಿ ನನಗೆ ಅರ್ಥವಾಗದೆ ಇರುವುದು ಏನೆಂದರೆ, ಇಲ್ಲಿ ಕೆಲಸಮಾಡುತ್ತಿರುವ ಮತ್ತು ಇಲ್ಲಿನ ಪೌರನಾಗಲು ಇಚ್ಛಿಸದ ಒಬ್ಬ ಬ್ರಿಟಿಷ್ ವೈದ್ಯನಿಗೆ ಈ ಒಂದು ವರ್ಷದ ವಿಸ್ತರಣೆಯು ಹೇಗೆ ಅನುಕೂಲಕರವಾಗುತ್ತದೆ ಎಂಬುದು. ನನಗೆ ಅದು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೆ ನನ್ನ ಮಿತ್ರರು ಈ ಸೂಚನೆಯನ್ನು ಮಾಡಲೇಬೇಕೆಂದು ಹಠ ಮಾಡುವುದಾದರೆ, ಇದು ಸರ್ಕಾರದ

ಒಬ್ಬ ಗೌರವಾನ್ವಿತ ಸದಸ್ಯರ ವಿರುದ್ಧ ಮಾಡಿದ ಗಂಭೀರವಾದ ಆಪಾದನೆಯಾಗಿದ್ದು. ಆ ಸದಸ್ಯರು ಹಿಂದಿರುಗಿದ ನಂತರ ನಿರ್ದಿಷ್ಟವಾಗಿ ಈ ಪ್ರಶ್ನೆಯನ್ನು ಅವರಿಗೆ ಕೇಳಿ, ಈ ಮಸೂದೆಯನ್ನು ತರುವುದರ ನಿಜವಾದ ಉದ್ದೇಶ ಇದೇ ಏನು ಎಂಬುದಕ್ಕೆ ಉತ್ತರಿಸಿ ಎಂದು ಕೇಳುವುದು ಅವರ ಕರ್ತವ್ಯವಾಗಿದೆ. ನನಗೆ ಯಾವುದೇ ಖಡಾಖಂಡಿತವಾದ ಉತ್ತರ ಕೊಡಲು ಸಾಧ್ಯವಾಗುತ್ತಿಲ್ಲ. ಆದರೆ ಸರ್ಕಾರದ ಒಬ್ಬ ಗೌರವಾನ್ವಿತ ಸದಸ್ಯರು, ಒಂದಿಬ್ಬರು ಐರೋಪ್ಯ ದಂತವೈದ್ಯರಿಗೆ ಅನುಕೂಲಮಾಡಿಕೊಡುವ ತೀರ ಅಲ್ಪ ಉದ್ದೇಶಕ್ಕಾಗಿ ಇಂಥದೊಂದು ಮಸೂದೆಯನ್ನು ಮಂಡಿಸುವ ಸಾಹಸವನ್ನು ಮಾಡುತ್ತಾರೆ ಎಂಬುದನ್ನು ನಂಬಲು ತೀರಾ ಕಷ್ಟವಾಗುತ್ತದೆ, ಇದು ತೀರಾ ಉತ್ಪ್ರೇಕ್ಷೆಯಿಂದ ಕೂಡಿದ ಆಪಾದನೆಯೆಂದು ನನಗೆ ಅನ್ನಿಸುತ್ತಿದೆ.

**ಶ್ರೀ ಕಾಮತ್:** ಇದು ಒಂದೇ ಉದ್ದೇಶ ಎಂದು ನಾನು ಹೇಳಲಿಲ್ಲ. ಇದು ಉದ್ದೇಶಗಳಲ್ಲಿ ಒಂದಾಗಿರಬಹುದು.

**ಮಾನ್ಯ ಸಭಾಪತಿಗಳು:** ಆದರೂ ಆ ಸೂಚನೆ ತೀರಾ ಅಧಾರ್ಮಿಕ ಸೂಚನೆಯಾಗಿದೆ.

**ಡಾ. ಅಂಬೇಡ್ಕರ್:** ಆ ವಿಷಯದ ಮೇಲೂ ಸಹ ನಾನು ಅವರಿಗೆ ತೋರಿಸಲು ಬಯಸುವುದೇನೆಂದರೆ, ಅವರು ಕೇಳಿದ ಪ್ರಶ್ನೆಗೆ ಉತ್ತರವಾಗಿ, ಅಂದರೆ ಈಗಿನ ಪರಿಸ್ಥಿತಿ ಏನು ಎಂದು ತಿಳಿಸಬೇಕು ಎನ್ನುವುದಕ್ಕೆ ಉತ್ತರವಾಗಿ, ನಾವು ಪತ್ರ ಬರೆದು ರಿಜಿಸ್ಟರನ್ನು ಸಿದ್ಧಪಡಿಸಲು ನಿಮಗೆ ಎಷ್ಟು ಸಮಯ ಬೇಕು ಎಂದು ಕೇಳಿದ ಎಲ್ಲಾ ರಾಜ್ಯಗಳು, ಒಂದು ವರ್ಷಕ್ಕೆ ಕಮ್ಮಿ ಇಲ್ಲದಷ್ಟು ಸಮಯ ಬೇಕೆಂದು ಉತ್ತರಿಸಿದ್ದಾರೆ. ಇತರ ಎಲ್ಲ ರಾಜ್ಯಗಳಿಗಿಂತ ಹೆಚ್ಚು ಸಮರ್ಥವಾದ ಆಡಳಿತ ವ್ಯವಸ್ಥೆ ಇದೆಯೆಂದು ಹೇಳಬಹುದಾದ ಬೊಂಬಾಯಿ ಸರ್ಕಾರ ತಮಗೆ ಎರಡು ವರ್ಷಗಳು ಬೇಕೆಂದು ಒತ್ತಾಯಿಸಿದ್ದಾರೆ. ಈ ಮಸೂದೆಯ ಉದ್ದೇಶ ಈ ದೇಶದಲ್ಲಿರುವ ಕೆಲವು ಬ್ರಿಟಿಷ್ ವೈದ್ಯರನ್ನು ಕಾಪಾಡಲು ತರಲಾಗಿದೆಯೆಂದು ನನ್ನ ಮಿತ್ರರಾದ ಮಿ. ಕಾಮತ್ ಅವರು ಮಾಡಿದ ಸೂಚನೆಯನ್ನು ತಿರಸ್ಕರಿಸಲು ಇಷ್ಟೇ ಸಾಕು ಎಂದು ನನಗೆ ಅನಿಸುತ್ತದೆ. ಕೇಳಲಾದ ಪ್ರಶ್ನೆಗಳಲ್ಲಿ ಯಾವುದೇ ಒಂದಕ್ಕೂ ನನ್ನ ಉತ್ತರದಲ್ಲಿ ನಾನು ಗಮನ ಹರಿಸಿಲ್ಲದೇ ಇಲ್ಲ...

ಈ ಮಸೂದೆಯು, ಅದು ಈಗಿರುವ ಹಾಗೆ, ಬಹು ಸರಳವಾದ, ವಿವಾದಾತ್ಮಕವಲ್ಲದ ಮಸೂದೆಯಾಗಿರುತ್ತದೆ. ಇದು ಕೇಂದ್ರ ಸರ್ಕಾರದ ಯಾವುದೇ ತಪ್ಪಿನಿಂದ ಉದ್ಭವವಾದ ಮಸೂದೆಯಲ್ಲ. ಆದರೆ ಅದಕ್ಕೆ ಕಾರಣ, ಇತರ ಕರ್ತವ್ಯ ಭಾರಗಳನ್ನು ನಿಭಾಯಿಸಬೇಕಾದ ಪ್ರಾಂತೀಯ ಸರ್ಕಾರಗಳಿಗೆ ಈ ಕಾಯಿದೆಯ ಉಪಬಂಧವೊಂದನ್ನು ಜಾರಿಗೆ ತರಲು ಸಮಯಾಭಾವವಾಗಿದ್ದದ್ದೇ ಕಾರಣವಾಗಿದೆ. ಪ್ರಾಂತೀಯ ಸರ್ಕಾರಗಳ ನೆರವಿಗೆ ಬಂದು, ಈ ಕಾನೂನನ್ನು ಜಾರಿಗೆ ಕೊಡುವುದರ ಮೂಲಕ ದಂತವೈದ್ಯರ ಕಾಯಿದೆಯನ್ನು ಸಾಧ್ಯವಾದಷ್ಟು ಬೇಗ ಜಾರಿಗೊಳಿಸಬೇಕಾಗಿದೆ. ಇದಕ್ಕಿಂತ ಇನ್ನೇನು ಮಾಡಬೇಕೆಂದು ನನಗೆ ಗೊತ್ತಾಗುತ್ತಿಲ್ಲ.

**ಮಾನ್ಯ ಸಭಾಪತಿಗಳು:** ಪ್ರಶ್ನೆ ಏನೆಂದರೆ:

> "೧೯೪೮ರ ದಂತವೈದ್ಯರ ಕಾಯಿದೆಯನ್ನು ತಿದ್ದುಪಡಿಮಾಡುವ ಮಸೂದೆಯನ್ನು
> ಪರಿಗಣನೆಗೆ ತೆಗೆದುಕೊಳ್ಳಬೇಕು."

ಟಿ ೪೧೯೩-೧೨.

ಪ್ರಸ್ತಾವವನ್ನು ಅನುಮೋದಿಸಲಾಗಿದೆ

೨ನೇ ಖಂಡವನ್ನು ಮಸೂದೆಗೆ ಸೇರಿಸಲಾಯಿತು.

ಖಂಡ ೩ (ಕಲಮು ೪೬ ಮತ್ತು ಕಲಮು ೪೯ನ್ನು (ಕಾಯಿದೆ ೧೬, ೧೯೪೮)) ತಿದ್ದುಪಡಿಮಾಡುವುದು

**ಶ್ರೀ ಕಾಮತ್:** ನಾನು ಮಂಡಿಸಲು ಪ್ರಾರ್ಥಿಸುವುದು ಏನೆಂದರೆ:

> "ಖಂಡ ೩ ರಲ್ಲಿ, ಕಲಮು ೪೬ರ ಉಪಖಂಡ (೩) ಮತ್ತು ಕಲಮು ೪೯ರ ಉಪಖಂಡ (೧), ೧೯೪೮ರ ದಂತ ವೈದ್ಯರ ಕಾಯಿದೆ, ಪ್ರಸ್ತಾವಿತ ತಿದ್ದುಪಡಿಯಾದ 'ಮೂರು ವರ್ಷಗಳಿಗೆ ಬದಲಾಗಿ' ೨ ವರ್ಷ ೬ ತಿಂಗಳು ಎಂಬುದನ್ನು ಪ್ರತಿಯೋಜಿಸಬೇಕು."

ಈಗಿರುವ ಖಂಡವನ್ನು, ರಾಜ್ಯ ಸರ್ಕಾರಗಳು, ಕಾಯಿದೆಯ ೪೬ ಮತ್ತು ೪೯ನೇ ಕಲಮುಗಳ ಕೆಳಗೆ, ತಮ್ಮ ರಿಜಿಸ್ಟರುಗಳನ್ನು ಪೂರ್ಣಗೊಳಿಸಲು ಅನುವುಮಾಡಿಕೊಡಲು ಸೇರಿಸಲಾಗಿದೆ. ಇದು ಒಂದು ಪೂರ್ವಾನ್ವಯವಾಗುವ ಶಾಸನವಾಗಿದೆ. ಖಂಡದಲ್ಲಿ ಉಪಯೋಗಿಸಲಾದ ಪದಗಳು 'ಮತ್ತು ಸದಾಕಾಲಕ್ಕೂ ಪ್ರತಿಯೋಜಿಸಲಾಗಿದೆಯೆಂದೇ ಭಾವಿಸತಕ್ಕದ್ದು.'

ಕೆಲವು ನೂರು ದಂತ ವೈದ್ಯರು ನೋಂದಾಯಿಸಲು ಇಷ್ಟು ದೀರ್ಘಕಾಲದ ಆವಶ್ಯಕತೆ ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಎಲ್ಲಾ ರಾಜ್ಯಗಳಲ್ಲಿ ಎಷ್ಟು ಮಂದಿ ದಂತ ವೈದ್ಯರು ಇದ್ದಾರೆ ಎಂದು ನನಗೆ ಗೊತ್ತಿಲ್ಲ.

**ಡಾ. ಅಂಬೇಡ್ಕರ್:** ಇದು ಒಬ್ಬರ ಅಭಿಪ್ರಾಯಕ್ಕೆ ಸಂಬಂಧಪಟ್ಟಿದ್ದಾಗಿದೆ. ನನ್ನ ಮಿತ್ರ ಮಿ. ಕಾಮತ್ ಅವರಿಗೆ ವಿಪುಲವಾದ ಶಕ್ತಿ ಮತ್ತು ಆಡಳಿತಾತ್ಮಕವಾದ ಅನುಭವವಿದೆ. ಆದಕಾರಣ, ರಿಜಿಸ್ಟರ್ ಅನ್ನು ಪೂರ್ಣಗೊಳಿಸಲು ಆರು ತಿಂಗಳು ಬೇಕಾದಷ್ಟು ಎಂದು ಅವರು ತಿಳಿದಿದ್ದಾರೆ. ನಾನು ಈಗ ತಾನೇ ಸದನಕ್ಕೆ ತಿಳಿಸಿದಂತೆ ಸಮರ್ಥವಾದ ಬೊಂಬಾಯಿ ಸರ್ಕಾರವೇ ಎರಡು ವರ್ಷಗಳು ಬೇಕೆಂದು ಕೇಳಿದ್ದಾರೆ. ವೈಯುಕ್ತಿಕವಾಗಿ ನನ್ನ ಅನಿಸಿಕೆ ಏನೆಂದರೆ ರಿಜಿಸ್ಟರುಗಳನ್ನು ಸಿದ್ಧಪಡಿಸುವುದು ಪ್ರಾಂತೀಯ ಸರ್ಕಾರಗಳ ಹೊಣೆಗಾರಿಕೆಯಾದುದರಿಂದ, ಈ ಸದನವು ಈ ವಿಷಯದಲ್ಲಿ ಪ್ರಾಂತೀಯ ಸರ್ಕಾರಗಳು ಕಾರ್ಯಸಾಧುವಾದುದೆಂದು ತಿಳಿದಿರುವುದನ್ನೇ ಅನುಸರಿಸುವುದು ಅಪೇಕ್ಷಣೀಯವಾಗಿದೆ. ವಾಸ್ತವವಾಗಿ ಬೊಂಬಾಯಿ ಸರ್ಕಾರ ಕೇಳಿದ ಎರಡು ವರ್ಷಗಳನ್ನು ನಾವು ಒಂದು ವರ್ಷಕ್ಕೆ ಇಳಿಸಿದ್ದೇವೆ. ಮದರಾಸು ಸರ್ಕಾರದ ಮೊದಲ ಪ್ರಸ್ತಾವನೆಯಾದ ಒಂದು ವರ್ಷಕ್ಕೆ ನಾವು ಅಂಟಿಕೊಂಡಿದ್ದೇವೆ. ಮಸೂದೆಯಲ್ಲಿ ಅಳವಡಿಸಿರುವ ಅವಧಿಯನ್ನು ಮೊಟಕುಗೊಳಿಸುವುದು ಕ್ಷೇಮವಲ್ಲ ಎಂದು ನನ್ನ ಅನಿಸಿಕೆ.

**ಶ್ರೀ ಕಾಮತ್:** ಮಾನ್ಯ ಸಚಿವರ ಹತ್ತಿರ ಅಂಕಿ ಅಂಶಗಳಿಲ್ಲವೆಂದು ನಾನು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್:** ಅಂಕಿ ಅಂಶಗಳಿಲ್ಲ.

**ಮಾನ್ಯ ಸಭಾಪತಿಗಳು:** ರಿಜಿಸ್ಟರುಗಳು ಪೂರ್ಣವಾಗಿಲ್ಲದಿದ್ದರೆ ಅವರಿಗೆ ಸರಿಯಾದ ಅಂಕಿ ಅಂಶಗಳನ್ನು ಕೊಡಲು ಹೇಗೆ ಸಾಧ್ಯ.

**ಡಾ. ಅಂಬೇಡ್ಕರ್:** ರಿಜಿಸ್ಟರ್ ಇಲ್ಲ. ಯಾರು ದಂತ ವೈದ್ಯ, ಯಾರು ಅಲ್ಲ ಎಂದು ಯಾರಿಗೆ ಗೊತ್ತು.

**ಮಾನ್ಯ ಸಭಾಪತಿಗಳು:** ವಿಷಯವೇನೆಂದರೆ:

"ಖಂಡ (೩)ರಲ್ಲಿ, ದಂತವೈದ್ಯರ ಕಾಯಿದೆ, ೧೯೪೮ರಲ್ಲಿನ ಕಲಮು ೪೬ರ ಉಪ ಕಲಮು (೩) ಮತ್ತು ಕಲಮು ೪೯ರ ಉಪಕಲಮು (೧) ಇವುಗಳಿಗೆ ಸೂಚಿಸಿದ ತಿದ್ದುಪಡಿಯಲ್ಲಿ 'ಮೂರು ವರ್ಷಗಳಿಗೆ' ಬದಲಾಗಿ 'ಎರಡು ವರ್ಷ ಆರು ತಿಂಗಳು' ಎಂಬುದನ್ನು ಪ್ರತಿಯೋಜಿಸಬೇಕು."

ಮಂಡನೆಯನ್ನು ತಿರಸ್ಕರಿಸಲಾಯಿತು.

*ಡಾ. ಅಂಬೇಡ್ಕರ್:** ನನ್ನ ಮಿತ್ರ ಮಿ. ಸಿದ್ವರವರು ಹೇಳಿದ ಹಾಗೆ, ಈ ಖಂಡದ ಉಪಬಂಧಗಳ ಆಧಾರವಾಗಿರುವ ಮುಖ್ಯವಾದ ನೀತಿಯನ್ನು ಈ ತಿದ್ದುಪಡಿಯು ಬಾಧಿಸುತ್ತದೆ. ಅದೆಂದರೆ, ಈ ರಿಜಿಸ್ಟರುಗಳು ಭಾರತದ ಉದ್ದಕ್ಕೂ ಒಂದೇ ಬಾರಿಗೆ ಜಾರಿಗೊಳ್ಳಬೇಕು. ಇದು ಕೇವಲ ವಿದ್ಯಾವಿಷಯಕ (ಅಕಾಡೆಮಿಕ್) ಆಸಕ್ತಿಯ ವಿಷಯವಲ್ಲ.

**ಶ್ರೀ ಸಿದ್ವ:** ಅದನ್ನು ಕಾಯಿದೆಯಲ್ಲಿ ವಿಧಿಸಲಾಗಿದೆಯೇ?

**ಡಾ. ಅಂಬೇಡ್ಕರ್:** ಇದೇ ಕಾರಣಕ್ಕೆ ನಾವು ಉದ್ದಕ್ಕೂ ಎರಡು ಅಥವ ಮೂರು ವರ್ಷಗಳೆಂದು ಹೇಳಿದ್ದೇವೆ. ಇಲ್ಲದೇ ಹೋದರೆ, ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ತಾರೀಖುಗಳನ್ನು ನಿಗದಿಪಡಿಸುತ್ತಿದ್ದೆವು. ಏಕರೂಪದ ತತ್ತ್ವವನ್ನು ಉಳಿಸಿಕೊಳ್ಳುವುದು ಅವಶ್ಯವೂ ಮತ್ತು ಅಪೇಕ್ಷಣೀಯವೂ ಆಗಿದೆ. ಸದನವು ಗಮನಿಸಬೇಕಾದುದು ಏನೆಂದರೆ, ಇದು ಹುದ್ದೆಗಳನ್ನು ಪಡೆಯಲು ಇರುವ ಅರ್ಹತೆ (ಎಲಿಜಿಬಿಲಿಟಿ)ಯನ್ನು ಬಾಧಿಸುತ್ತದೆ. ಒಂದು ಗೊತ್ತಾದ ರಾಜ್ಯದಲ್ಲಿ ವ್ಯಕ್ತಿಯೊಬ್ಬನಿಗೆ ಒಂದು ಹುದ್ದೆಯನ್ನು ಪಡೆಯಲು ಅರ್ಹತೆ ಇದ್ದು, ಇನ್ನೊಂದು ರಾಜ್ಯದಲ್ಲಿ, ಆ ರಾಜ್ಯ ಕೇವಲ ರಿಜಿಸ್ಟರನ್ನು ಸಿದ್ಧಪಡಿಸುವ ಸ್ಥಿತಿಯಲ್ಲಿ ಇಲ್ಲವೆಂದಾಕ್ಷಣ, ಅವನಿಗೆ ಅರ್ಹತೆಯಿಲ್ಲ ಎಂದು ಹೇಳಲಾಗುವುದಿಲ್ಲ. ಆದ್ದರಿಂದ,ಈ ತತ್ವವನ್ನು ಉಳಿಸಿಕೊಳ್ಳುವುದು ಅಪೇಕ್ಷಣೀಯವಾದ್ದರಿಂದ, ಮಿ. ಸಿದ್ವ ಅವರ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಾಗುವುದಿಲ್ಲ. ಅಷ್ಟಕ್ಕೂ ವ್ಯತ್ಯಾಸ ಇರುವುದು ಕೇವಲ ಆರು ತಿಂಗಳು ಮಾತ್ರ.

**ಶ್ರೀ ಸಿದ್ವ:** ನನ್ನ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಬೇಡುತ್ತೇನೆ.

**ಮಾನ್ಯ ಸಭಾಪತಿಗಳು:** ವಿಷಯ:

"೩ನೆಯ ಖಂಡ ಮಸೂದೆಯ ಅಂಗವಾಗಿ ನಿಲ್ಲುತ್ತದೆ."

ಮಂಡನೆಯನ್ನು ಅನುಮೋದಿಸಲಾಯಿತು.

***ಖಂಡ–೪.**— (ಕಾಯಿದೆ ೧೬, ೧೯೪೮–ಅನುಸೂಚಿಗೆ ತಿದ್ದುಪಡಿ)

**(ಉಪಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ)**

**ಶ್ರೀ ತ್ಯಾಗಿ (ಉತ್ತರ ಪ್ರದೇಶ):** ನನ್ನ ತಿದ್ದುಪಡಿಯು ಈ ಕೆಳಗಿನಂತೆ ಇದೆ.

೪ನೇ ಖಂಡದಲ್ಲಿ, ದಂತವೈದ್ಯರ ಕಾಯಿದೆ, ೧೯೪೮ರ ಅನುಸೂಚಿಯ ೧ನೆ ಭಾಗದ ಪ್ರಸ್ತಾವಿತ ಐಟಂ ೨–ಎ ಬದಲಿಗೆ ಪ್ರತಿಯೋಜಿಸಬೇಕಾಗಿರುವುದು:

---

* P.D., ಸಂ. ೪, ಭಾಗ II, ೧೧ ಆಗಸ್ಟ್ ೧೯೫೦, ಪು. ೮೬೩–೬೪.

* P.D., ಸಂ. ೪, ಭಾಗ II, ೧೧ ಆಗಸ್ಟ್ ೧೯೫೦, ಪು. ೮೬೪–೬೫.

"೨–ಎ ಕೇಂದ್ರ ಸರ್ಕಾರ ಕೇಂದ್ರೀಯ ದಂತವೈದ್ಯರ ಪರಿಷತ್ತಿನೊಂದಿಗೆ ಸಮಾಲೋಚಿಸಿ, ಸರ್ಕಾರಕ್ಕೆ ಸೂಕ್ತ ಕಂಡ ರೀತಿಯಲ್ಲಿ ನಿಗದಿಪಡಿಸುವ ಯಾವುದೇ ನಿಬಂಧನೆಗಳಿಗೊಳಪಟ್ಟು, ಈ ಉದ್ದೇಶಕ್ಕಾಗಿ ಮಾನ್ಯತೆ ನೀಡುವ, ದಂತವೈದ್ಯ ಶಾಸ್ತ್ರದಲ್ಲಿ ವಿದ್ಯಾಭ್ಯಾಸ ಕೊಡುವ ಅಥವ ಪ್ರಾಯೋಗಿಕ ತರಬೇತಿಯನ್ನು ನೀಡುವ ಇತರ ಯಾವುದೇ ವಿದ್ಯಾ ಸಂಸ್ಥೆ."

ಡಾ. ಅಂಬೇಡ್ಕರ್ ಅವರು ಕಬ್ಬಿಣದ ಕಡಲೆಯೆಂದು ನಾನು ಒಪ್ಪಿಕೊಳ್ಳಬಯಸುತ್ತೇನೆ. ಆ ಸಂಸ್ಥೆಯ ಮೇಲೆ ಯಾವುದೇ ದೋಷಾರೋಪವನ್ನು ಮಾಡಲು ನಾನು ಬಯಸುವುದಿಲ್ಲ. ಅದರ ದರ್ಜೆ ಏನೆಂದು ನನಗೆ ಗೊತ್ತಿಲ್ಲ. ಅದರ ಬಗ್ಗೆ ವೈಯಕ್ತಿಕವಾಗಿ ನನಗೆ ಏನೂ ಮಾಹಿತಿಯಿಲ್ಲ. (ತಿಳುವಳಿಕೆಯಿಲ್ಲ.) ಆದ್ದರಿಂದ ಆ ವಿದ್ಯಾಸಂಸ್ಥೆಯ ಒಳ್ಳೆಯ ಹೆಸರನ್ನು ಕೆಡಿಸಲು ನಾನು ಬಯಸುವುದಿಲ್ಲ. ಆದರೆ ಒಂದು ವಿಚಾರಣೆ ನಡೆಯುತ್ತಾ ಇದೆ. ಪೂರಾ ಪಾರ್ಲಿಮೆಂಟ್ ಆ ಸಂಸ್ಥೆಗೆ ಮಾನ್ಯತೆ ಕೊಡುವ ಹಾಗೆ ಕಟ್ಟಿಹಾಕುವ ಬದಲು, ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸರ್ಕಾರ ಹಕ್ಕನ್ನು ಕಾದಿರಿಸಿಕೊಳ್ಳುವುದು ಒಳ್ಳೆಯದೆಂದು ನನ್ನ ಆಲೋಚನೆಯಾಗಿದೆ.

**ಡಾ. ಅಂಬೇಡ್ಕರ್:** ನಾವು ಯಾವುದೇ ರೀತಿಯಲ್ಲಿ ಆ ಸಂಸ್ಥೆಯ ತಂಟೆಗೆ ಹೋಗುತ್ತಿಲ್ಲ. ಎಂಟು ವರ್ಷಗಳ ಒಳಗೆ ಆ ವಿದ್ಯಾಸಂಸ್ಥೆ ಕೊಡಮಾಡಿದ ಪದವಿಗಳ ಬಗ್ಗೆ ವ್ಯವಹರಿಸುತ್ತಿದ್ದೇವೆ.

**ಶ್ರೀ ತ್ಯಾಗಿ:** ಸಂಸ್ಥೆಗೇ ಮಾನ್ಯತೆ ಇಲ್ಲದಿರುವಾಗ ಅದರ ಪದವಿಗಳನ್ನು ಮಾನ್ಯಮಾಡಬಹುದೆಂದು ನಾನು ನಂಬಬೇಕೆಂದು ಅಂಬೇಡ್ಕರ್ ಅವರು ನಿರೀಕ್ಷಿಸುತ್ತಿದ್ದಾರೆ. ಕಲ್ಕತ್ತ ವಿಶ್ವವಿದ್ಯಾನಿಲಯ ಇಂತಿಂಥ ವರ್ಷದಲ್ಲಿ ಕೊಡಮಾಡಿದ ಪದವಿಗಳನ್ನು ಐ.ಸಿ.ಎಸ್. ಅಥವ ಐ.ಎ.ಎಸ್.ಗಳ ಉದ್ದೇಶಕ್ಕಾಗಿ ಮಾನ್ಯತೆ ನೀಡಬಹುದೇ ವಿನಾ, ಹಾಗೆಂದ ಮಾತ್ರಕ್ಕೆ ಕಲ್ಕತ್ತ ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ಕೊಡಲಾಗಿದೆಯೆಂದು ಅರ್ಥೈಸಿಕೊಳ್ಳಲಾಗುವುದಿಲ್ಲ. ಸರ್ಕಾರಕ್ಕೆ ಯಾವುದೇ ಸಂಸ್ಥೆಗೆ ಮಾನ್ಯತೆ ಕೊಡುವ ಅಧಿಕಾರ ಇರಬೇಕೆಂದು ನಾನು ಬಯಸುತ್ತೇನೆ.

**ಡಾ. ಅಂಬೇಡ್ಕರ್:** ಸರ್ಕಾರಕ್ಕೆ ಆ ಅಧಿಕಾರ ನೀಡುವ ಕಲಮು ೧೦(೨)ರಲ್ಲಿ ಅಸ್ತಿತ್ವದಲ್ಲಿದೆ.

****ಮಾನ್ಯ ಉಪಸಭಾಪತಿಗಳು:** ಈ ತಿದ್ದುಪಡಿಗೆ ಮಾನ್ಯ ಸಚಿವರ ಪ್ರತಿಕ್ರಿಯೆ ಏನೆಂದು ನಾನು ತಿಳಿಯಬಹುದೆ?

**ಡಾ. ಅಂಬೇಡ್ಕರ್:** ಪಶ್ಚಿಮ ಬಂಗಾಳ ಸರ್ಕಾರ ಕೊಟ್ಟ ಸಲಹೆಯನ್ನು ಈ ಖಂಡ ನಿಜಕ್ಕೂ ಪರಿಣಾಮಕಾರಿಯಾಗಿ ಮಾಡುತ್ತದೆ. ವೈಯಕ್ತಿಕವಾಗಿ ನನ್ನ ಅನಿಸಿಕೆ ಏನೆಂದರೆ ನನ್ನ ಮಿತ್ರ ಮಿ. ಭಾರ್ಗವ ಅವರ ಬಗ್ಗೆ ನನಗೆ ಎಷ್ಟೇ ಅನುಕಂಪವಿರಲಿ, ಇದು ಒಳಗೊಂಡಿರುವ ಪ್ರಶ್ನೆ, ಒಬ್ಬ ದಂತ ವೈದ್ಯನ ವಿದ್ಯಾರ್ಹತೆಗಳನ್ನು ದಂತಗಳನ್ನು ಮಾಡುವ ಒಬ್ಬ ವ್ಯಕ್ತಿಯ (ಟೆಕ್ನೀಷಿಯನ್) ಅರ್ಹತೆಯೊಡನೆ ತುಲನೆ ಮಾಡುವುದೇ ಆಗಿದೆ. ದಂತಗಳನ್ನು ಮಾಡುವವನನ್ನು ಕುರಿತು ಅವರು ಹೊಗಳಿಕೆಯ ಮಾತುಗಳನ್ನು ಆಡಿದ್ದಾರೆಂದು ನನಗೆ ಅನಿಸಿತು. ದಂತ ವೈದ್ಯನಾಗಿರದೆ ಒಬ್ಬ ವ್ಯಕ್ತಿ ದಂತಗಳನ್ನು ಮಾಡಬಹುದು.

---

** P.D., ಸಂ. ೪, ಭಾಗ II, ೧೧ ಆಗಸ್ಟ್ ೧೯೫೦, ಪು. ೮೬೭–೬೮.

ನಾವು ಮಾತನಾಡುತ್ತಿರುವುದು ಒಬ್ಬ ದಂತವೈದ್ಯನ ಬಗ್ಗೆ.

**ಪಂಡಿತ್ ಥಾಕೂರ್ ದಾಸ್ ಭಾರ್ಗವ:** ಆದರೆ ಅವನಿಗೆ ಎಲ್.ಡಿ.ಎಸ್.ಸಿ. ಪದವಿ ಇದೆ.

**ಡಾ. ಅಂಬೇಡ್ಕರ್:** ವಿಷಯ ಇಷ್ಟು. ಕಾಯಿದೆಯ ಅನುಮೋದನೆಯ ಸಮಯದಲ್ಲಿ, ಆ ಸಂಸ್ಥೆಗೆ ಮಾನ್ಯತೆ ದೊರಕಬಹುದಾದ ಯೋಗ್ಯತೆ ಇರಲಿಲ್ಲವೆಂದು ಭಾವಿಸಲಾಗಿತ್ತು. ತದನಂತರ, ಗಣನೀಯ ಪ್ರಮಾಣದಲ್ಲಿ ಚಳುವಳಿಯಾಗಿದ್ದು, ಪಶ್ಚಿಮ ಬಂಗಾಳ ಸರ್ಕಾರ ಈ ವ್ಯಕ್ತಿಗಳು ಆ ಕಾಲೇಜಿನ ಬೋಧನೆಯಿಂದ ಅರ್ಹತೆ ಮತ್ತು ಮಾನ್ಯತೆ ಪಡೆಯಲು ಯೋಗ್ಯರಾಗಿದ್ದಾರೆಯೇ ಎಂಬುದನ್ನು ಪರೀಕ್ಷಿಸಲು ನಿರ್ಧರಿಸಿತು. ೧೯೪೦ಕ್ಕೆ ಮುಂಚೆ ಆ ಸಂಸ್ಥೆ ಪಾಲಿಸುತ್ತಿದ್ದ ಸ್ಟಾಂಡರ್ಡ್ (ದರ್ಜೆ) ಅನ್ನು ಗಮನದಲ್ಲಿಟ್ಟುಕೊಂಡು ಮಾನ್ಯತೆಯನ್ನು ನೀಡುವ ಉದ್ದೇಶವನ್ನು ಪರಿಗಣಿಸಬಹುದಾಗಿತ್ತೆಂಬ ತೀರ್ಮಾನಕ್ಕೆ ಅವರು ಬಂದರು. ಆದರೂ, ಅಲ್ಲೂ ಸಹ ಒಂದು ಮಟ್ಟವನ್ನು ಕಾಪಾಡಿಕೊಂಡು ಬಂದಿದ್ದರೂ, ಅನೇಕ ಹುಡುಗರು ಕೇವಲ ಹಾಜರಿ ಹಾಕಿ ಟರ್ಮುಗಳನ್ನು ಭರ್ತಿ ಮಾಡುತ್ತಿದ್ದರಲ್ಲದೆ ಏನನ್ನೂ ಕಲಿಯುತ್ತಿರಲಿಲ್ಲ. ಆದ್ದರಿಂದ ಎರಡು ಹೆಚ್ಚುವರಿ ಅರ್ಹತೆಗಳನ್ನು ನಿಗದಿಪಡಿಸಲಾಯಿತು. ಒಂದು, ಅವನು ೧೯೪೦ಕ್ಕೆ ಮುಂಚೆ ಡಿಪ್ಲೊಮವನ್ನು ಪಡೆದಿರಬೇಕಾಗಿತ್ತು. ಎರಡನೆಯದು, ಅವನು ಆ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿರುವಾಗ ಕೆಲವು ಟರ್ಮುಗಳನ್ನು ಭರ್ತಿ ಮಾಡಿರಲೇಬೇಕಾಗಿತ್ತು. ಇದನ್ನು ಅರ್ಹತೆಯನ್ನಾಗಿ ಮಾಡಲು ಮತ್ತು ಮಾನ್ಯತೆಯನ್ನು ನೀಡಲು ನಿರ್ಬಂಧಗಳನ್ನು ಸೇರಿಸಲಾಯಿತು. ನನಗೆ ದಂತವೈದ್ಯರ ಮೇಲೆ ಎಷ್ಟೇ ಅನುಕಂಪವಿದ್ದರೂ ನನ್ನ ತೀರ್ಮಾನವನ್ನು ಅವರ ಮೇಲೆ ಹೇರುವುದಕ್ಕಿಂತ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಈ ವಿಷಯ ಚೆನ್ನಾಗಿ ಗೊತ್ತಿರುವುದರಿಂದ ನಾನು ಅವರೊಡನೆ ಕೈ ಜೋಡಿಸಲು ಸಿದ್ಧನಿದ್ದೇನೆ.

**ಮಾನ್ಯ ಸಭಾಪತಿಗಳು:** ಮಾನ್ಯ ಸದಸ್ಯರು ಅವರ ತಿದ್ದುಪಡಿಯನ್ನು ಸದನದ ಮುಂದಿಡಲು ಅಪೇಕ್ಷಿಸುತ್ತಾರೆಯೆ?

**ಪಂಡಿತ್ ಥಾಕೂರ್ ದಾಸ್ ಭಾರ್ಗವ:** ಹೌದು ಸ್ವಾಮಿ, ಅದನ್ನು ಸದನದ ಮುಂದೆ ಇಡಬಹುದು.

**ಮಾನ್ಯ ಉಪ ಸಭಾಪತಿಗಳು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

*** **ಡಾ. ಅಂಬೇಡ್ಕರ್:** ಕೆಲವು ಸಮಯದ ಹಿಂದೆ ನಾನು ವಸ್ತುಸ್ಥಿತಿಯನ್ನು ವಿವರಿಸಿದ್ದೇನೆ. ಕಲಮು ೧೦(೨)ರಲ್ಲಿನ ಉಪಬಂಧ ಹೇಳುವುದೇನೆಂದರೆ, 'ಎಲ್ಲಿ ಸಂಸ್ಥೆಯು ಅರ್ಹತೆಗಳನ್ನು ಕೊಡಮಾಡುತ್ತದೆಯೋ' ಎಂದು. ಆದರೆ ಇಲ್ಲಿ ನಾವು ವ್ಯವಹರಿಸುತ್ತಿರುವುದು ಈಗಲೇ ಕೊಡಮಾಡಲ್ಪಟ್ಟ ಅರ್ಹತೆಗಳನ್ನು. ಅಲ್ಲಿರುವ ಪದ "ಗ್ರಾಂಟ್" ಆದರೆ ಇಲ್ಲಿ ಅದು ವಿಭಿನ್ನವಾಗಿದೆ. ಆದ್ದರಿಂದ ಇದನ್ನು ಶಾಸನವೇ ನೋಡಿಕೊಳ್ಳಬೇಕಾಗಿದೆ.

**ಮಾನ್ಯ ಉಪ ಸಭಾಪತಿಗಳು:** ಈಗ ನಾನು ತಿದ್ದುಪಡಿಯನ್ನು ಮತ ಚಲಾವಣೆಗೆ ಇಡುತ್ತೇನೆ. ವಿಷಯವೇನೆಂದರೆ:

> ೪ನೇ ಖಂಡದಲ್ಲಿ ೧೯೪೮ರ ದಂತವೈದ್ಯರ ಕಾಯಿದೆಯಲ್ಲಿನ ಅನುಸೂಚಿಯ ಭಾಗ-೧ರಲ್ಲಿನ ಪ್ರಸ್ತಾವಿತ ಐಟಂ ೨(ಎ), ಮಾರ್ಚಿ ೧೯೪೦ ಈ ಪದಗಳನಂತರ ಬರುವ ಎಲ್ಲಾ ಪದಗಳನ್ನು ಬಿಟ್ಟು ಬಿಡಬೇಕು.

---

* P.D., ಸಂ. ೪, ಭಾಗ II, ೧೧ ಆಗಸ್ಟ್ ೧೯೫೦, ಪು. ೮೭೧.

**ಮಾನ್ಯ ಉಪ ಸಭಾಪತಿಗಳು:** ಖಂಡ ೪, ಮಸೂದೆಯ ಅಂಗವಾಗಿ ಉಳಿಯುತ್ತದೆ.

ಮಂಡನೆಯನ್ನು ಅನುಮೋದಿಸಲಾಯಿತು.

೪ನೇ ಖಂಡವನ್ನು ಮಸೂದೆಗೆ ಸೇರಿಸಲಾಯಿತು.

೫ರಿಂದ ೭ನೇ ಖಂಡಗಳನ್ನು ಮಸೂದೆಗೆ ಸೇರಿಸಲಾಯಿತು.

ಶಿರೋನಾಮೆ ಮತ್ತು ಅಧಿನಿಯಮಿಸುವ ಸೂತ್ರವನ್ನು ಮಸೂದೆಗೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:** ಮಸೂದೆಯನ್ನು ಅನುಮೋದಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ.

**ಮಾನ್ಯ ಉಪ ಸಭಾಪತಿಗಳು:** ವಿಷಯವೇನೆಂದರೆ:

ಮಸೂದೆಯನ್ನು ಅನುಮೋದಿಸಬೇಕು.

ಮಸೂದೆಯನ್ನು ಅನುಮೋದಿಸಲಾಯಿತು.

◆

# ೧೮

# ರಾಜ್ಯಗಳ ಪಟ್ಟಿಯಲ್ಲಿರುವ ಕೆಲವು ವಿಷಯಗಳ ಮೇಲೆ ಒಂದು ವರ್ಷದ ಮಟ್ಟಿಗೆ ಶಾಸನಗಳನ್ನು ಪಾರ್ಲಿಮೆಂಟು ರಚಿಸುವ ಬಗ್ಗೆ ಠರಾವುಗಳನ್ನು ಕುರಿತು:

****ಮಾನ್ಯ ಸಭಾಪತಿಗಳು:** ನಾನು ಅರ್ಥೈಸಿಕೊಂಡಿರುವ ಹಾಗೆ, ವಿಷಯ ಏನೆಂದರೆ: "ನಿರ್ದಿಷ್ಟವಾಗಿ" ಎಂಬ ಪದವಲ್ಲದೆ, ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಉಪಬಂಧಗಳಿಗೆ ಸಂಬಂಧಿಸಿದ, ಅಳವಡಿಕೆ ಮಾಡಿಕೊಳ್ಳುವ ಅಧಿಕಾರ ಮಾತ್ರ ರಾಷ್ಟ್ರಪತಿಯವರಿಗೆ ಇದೆ ಎಂದು ತೋರುತ್ತದೆ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಆ ಅನುಚ್ಛೇದದಲ್ಲಿರುವ ಪದಗಳೆಂದರೆ "ಯಾವುದೇ ಕ್ಲಿಷ್ಟತೆಗಳನ್ನು ನಿವಾರಿಸುವ ಉದ್ದೇಶಕ್ಕೋಸ್ಕರ, ರಾಷ್ಟ್ರಪತಿಯವರು, ನಿರ್ದಿಷ್ಟವಾಗಿ........ಇತ್ಯಾದಿ". "ನಿರ್ದಿಷ್ಟವಾಗಿ" ಎಂದ ಮಾತ್ರಕ್ಕೆ ಅವರಿಗೆ ಸರ್ವತ್ರ ಅಧಿಕಾರವಿಲ್ಲ ಎಂದು ಅರ್ಥವಲ್ಲ.

**ಮಾನ್ಯ ಸಭಾಪತಿಗಳು:** ಮಾನ್ಯ ಸದಸ್ಯರು ಎತ್ತಿದ ಕ್ರಿಯಾಲೋಪವನ್ನು ನಾನು ಅರ್ಥಮಾಡಿಕೊಂಡಹಾಗೆ "ಯಾವುದೇ ತೊಡಕುಗಳು" (ಕ್ಲಿಷ್ಟತೆಗಳು) ಮತ್ತು "ನಿರ್ದಿಷ್ಟವಾಗಿ" ಎನ್ನುವ ಪದಗಳಲ್ಲದೆ ಅವರು ಅನುಚ್ಛೇದ ೩೯೨ನ್ನು ಹೇಗೆ ಅರ್ಥಮಾಡಿಕೊಂಡಿದ್ದಾರೆ ಅಂದರೆ, ಭಾರತ ಸರ್ಕಾರದ ಅಧಿನಿಯಮದ ಉಪಬಂಧಗಳಿಂದ, ರಾಜ್ಯಾಂಗದ ಉಪಬಂಧಗಳಿಗೆ ಪರಿವರ್ತನೆ ಮಾಡಿಕೊಳ್ಳುವ ಉದ್ದೇಶಕ್ಕಷ್ಟೆ ರಾಷ್ಟ್ರಪತಿಯವರು ಅಳವಡಿಕೆಗಳನ್ನು ಮಾಡಿಕೊಳ್ಳಬಹುದು ಎಂದು. ಇದೇ, ಸಾರಭೂತವಾದ ವಿಷಯ.

**ಡಾ. ಅಂಬೇಡ್ಕರ್:** ಅದು ಹಾಗಾಗಲಾರದು. ಕಾರಣ, ಅದು ತಪ್ಪಾದ (ವಾಕ್ಯ) ರಚನೆ. ನನ್ನ ಸನ್ಮಾನ್ಯ ಮಿತ್ರರು ಎತ್ತಿರುವ ವಿಷಯವೆಂದರೆ ಅನುಚ್ಛೇದ ೩೯೨ರ ಕೆಳಗೆ ರಾಷ್ಟ್ರಪತಿಯವರಿಗೆ ಇರುವ ಒಂದೇ ಅಧಿಕಾರವೆಂದರೆ, ಭಾರತ ಸರ್ಕಾರದ ಅಧಿನಿಯಮದ ಯಾವುದೇ ಕಲಮನ್ನು ಅಳವಡಿಸಿಕೊಂಡು ಅದನ್ನು ರಾಜ್ಯಾಂಗದ ಉಪಬಂಧಗಳಿಗೆ ಹೊಂದಾಣಿಕೆ ಆಗುವಂತೆ ಮಾಡುವುದೇ ಆಗಿದೆ. ಅದು ಸರಿಯಲ್ಲ ಎಂಬುದೇ ನನ್ನ ನಿವೇದನೆ. ಕಾರಣ, ಅನುಚ್ಛೇದ ೩೯೨ರ ಪ್ರಕಾರ ಪ್ರಾರಂಭಿಕ ಪದಗಳು ತೀರಾ ಸಾಮಾನ್ಯವಾದ ಪದಗಳು. ಅಂದರೆ, "ರಾಷ್ಟ್ರಪತಿಯವರು ಯಾವುದೇ ಕ್ಲಿಷ್ಟತೆಗಳನ್ನು ನಿವಾರಿಸುವ ಸಲುವಾಗಿ" ಮತ್ತು "ನಿರ್ದಿಷ್ಟವಾಗಿ ಇತ್ಯಾದಿ" ನಂತರ ಬರುತ್ತವೆ. ಒಂದು ವೇಳೆ ನೀವು ಈ ಪದಗಳನ್ನು, ಅಂದರೆ "೧೯೩೫ರ ಭಾರತ ಸರ್ಕಾರದ ಅಧಿನಿಯಮದ ಉಪಬಂಧಗಳಿಂದ ರಾಜ್ಯಾಂಗದ ಉಪಬಂಧಗಳಿಗೆ" ಎನ್ನುವುದನ್ನು ಕೈ ಬಿಟ್ಟರೆ, ಆಗ ಒಕ್ಕಣೆ "ರಾಷ್ಟ್ರಪತಿಯವರು ಯಾವುದೇ ಕ್ಲಿಷ್ಟತೆಯನ್ನು ನಿವಾರಿಸುವ ಸಲುವಾಗಿ, ಆದೇಶದ ಮೂಲಕ ನಿರ್ದೇಶನ......ಇತ್ಯಾದಿ" ಎಂದಾಗುತ್ತದೆ.

**ಶ್ರೀ ಮೀರನ್ (ಮದರಾಸು):** ಈ ವಿಷಯವನ್ನು ಕುರಿತು ನಾನು ಮಾತನಾಡಬಹುದೆ? ನೀವು

---

* P.D., ಸಂ. ೫, ಭಾಗ II, ೧೨ ಆಗಸ್ಟ್ ೧೯೫೦, ಪು. ೬೩೫–೩೮.

"ನಿರ್ದಿಷ್ಟವಾಗಿ ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಉಪಬಂಧಗಳಿಂದ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ" ಎನ್ನುವ ಪದಗಳನ್ನು ತೆಗೆದು ಹಾಕಿದರೆ, ಆಗ ರಾಷ್ಟ್ರಪತಿಯವರು ಈ ರಾಜ್ಯಾಂಗದ ಉಪಬಂಧಗಳಿಗೆ ಯಾವುದೇ ಕ್ಲಿಷ್ಟತೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಆದೇಶವನ್ನು ಮಾಡಿ ನಿರ್ದೇಶಿಸಬಹುದು" ಎಂದಾಗುತ್ತದೆ. "ನಿರ್ದಿಷ್ಟವಾಗಿ" ಎನ್ನುವುದು ಒಂದು ನಿದರ್ಶನದಂತೆ. ಅದೊಂದು ಕಿರಿಯ ಉಪಬಂಧವಷ್ಟೆ. ವಿಸ್ತಾರವಾದ ಉಪಬಂಧವೆಂದರೆ, ರಾಜ್ಯಾಂಗದ ಉಪಬಂಧಗಳಿಗೆ ಯಾವುದೇ ಕ್ಲಿಷ್ಟತೆಗಳನ್ನು ನಿವಾರಿಸುವ ಅಧಿಕಾರವನ್ನು ಕೊಡುವುದೇ ಆಗಿದೆ.

**ಮಾನ್ಯ ಸಭಾಪತಿಗಳು:** ನನಗೆ ಒಂದೆರಡು ವಿಷಯಗಳ ಮೇಲೆ ವಿಶದೀಕರಣ ಬೇಕಾಗಿದೆ. ಇದು, ಅರ್ಥವಿವರಣೆಯ ನಾಜೂಕು ಇಲ್ಲ, ವಿಷಯವನ್ನೇ ಇತ್ಯರ್ಥ ಮಾಡಿಬಿಡಬಹುದು. ಭಾರತ ಸರ್ಕಾರದ ಅಧಿನಿಯಮವನ್ನು ಅಳವಡಿಕೆ ಮಾಡಿಕೊಂಡಿದ್ದರ ಫಲಶ್ರುತಿಯಾಗಿ ಭಾರತ ಸಂವಿಧಾನ ಸಭೆಯು (ಶಾಸನಾತ್ಮಕ) ಕಾರ್ಯ ನಿರ್ವಹಿಸುತ್ತಿತ್ತು ಎಂಬ ನನ್ನ ಅರ್ಥ ವಿವರಣೆ ಸರಿಯಾಗಿದೆಯೆ?

**ಡಾ. ಅಂಬೇಡ್ಕರ್:** ಹೌದು, ಸ್ವಾತಂತ್ರ್ಯ ಅಧಿನಿಯಮವು ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಒಂದು ತಿದ್ದುಪಡಿಯಾಗಿತ್ತು.

◆

# ೧೯

## *ನಿರ್ವಾಸಿತರ ಆಸ್ತಿಯ ಆಡಳಿತ ನಿರ್ವಹಣೆ (ತಿದ್ದುಪಡಿ) ಮಸೂದೆ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಪ್ರಾರಂಭದಲ್ಲಿಯೇ ನಾನು ಹೇಳಬಯಸುವುದೇನೆಂದರೆ, ಸಮವರ್ತಿ ಪಟ್ಟಿಯಲ್ಲಿರುವ ರಾಜ್ಯವೊಂದರ ಕಾನೂನನ್ನು ಪಾರ್ಲಿಮೆಂಟ್ (ತನ್ನ) ಶಾಸನದ ಮೂಲಕ ರದ್ದುಗೊಳಿಸಬಹುದೆ ಎಂದು ಎತ್ತಿದ ಪ್ರಶ್ನೆಯನ್ನು ಬಹಳ ತಡವಾಗಿ ಎತ್ತಲಾಗಿದೆ ಎಂದು ನನಗೆ ತೋರುತ್ತದೆ. ಪಾರ್ಲಿಮೆಂಟು ಅನುಮೋದಿಸಿದ ಬಹಳಷ್ಟು ಕಾನೂನುಗಳಲ್ಲಿರುವ ಉಪಬಂಧಗಳನ್ನು ಬಳಸಿಕೊಂಡು ಯಾವುದೇ ಸಮವರ್ತಿ ಪಟ್ಟಿಯಲ್ಲಿರುವ ರಾಜ್ಯವೊಂದರ ಕಾನೂನನ್ನು ರದ್ದುಗೊಳಿಸಲಾಗಿದೆ ಎಂದು ಖಂಡಿತವಾಗಿ ನನಗೆ ಗೊತ್ತು. ಅವುಗಳಲ್ಲಿ ಒಂದನ್ನು ನನ್ನ ಮಿತ್ರ ಮಿ. ಜೈನ್ ಅವರು ಉದಾಹರಿಸಿದರು. ಅದು ಪಾರ್ಲಿಮೆಂಟ್ ಅನುಮೋದಿಸಿದ ಕಡೆಯ ಕಾನೂನು. ಅಂದರೆ 'ವಿಲೀನಗೊಳಿಸಿದ ರಾಜ್ಯಗಳ ಅಧಿನಿಯಮ (೧೯೪೯ರ ಅಧಿನಿಯಮ (೫೧) ಈ ವಿಷಯದಲ್ಲಿ ಆಸಕ್ತಿಯುಳ್ಳ ನನ್ನ ಮಿತ್ರರುಗಳು, ಈ ನಿರ್ದಿಷ್ಟವಾದ ಅಧಿನಿಯಮವನ್ನು ಪರಾಮರ್ಶೆ ಮಾಡಿದರೆ, ಸಮವರ್ತಿ ಕ್ಷೇತ್ರದಲ್ಲಿ ಬರುವ ಅನೇಕ ಕಾನೂನುಗಳು ಅವರಿಗೆ ಕಾಣಸಿಗುತ್ತವೆ. ಇವುಗಳನ್ನು ರಾಜ್ಯ ಸರ್ಕಾರಗಳು ಅಧಿನಿಯಮಗೊಳಿಸಿದ್ದು, ಸಂಸತ್ತಿನ ಈ ನಿರ್ದಿಷ್ಟ ಅಧಿನಿಯಮದ ದ್ವಾರಾ ಅವುಗಳನ್ನು ರದ್ದುಗೊಳಿಸಲಾಗಿದೆ. ಆದುದರಿಂದ, ಅನುಸರಿಸುತ್ತಿರುವ ಪದ್ಧತಿಯ ಮಟ್ಟಿಗೆ ಹೇಳಬಹುದಾದರೆ, ಈ ಮಸೂದೆಯಲ್ಲಿ ಸೇರಿಸಿರುವ ಪ್ರಸ್ತಾವನೆಯಲ್ಲಿ ವಿಶೇಷವಾದುದು ಏನೂ ಇಲ್ಲ. ಹೌದು, ಈ ಪದ್ಧತಿಯು ರಾಜ್ಯಾಂಗದಲ್ಲಿ ಅಳವಡಿಸಿರುವ ಉಪಬಂಧಗಳಿಗೆ ಸರಿಹೋಗುತ್ತಿಲ್ಲವೆಂದು ವಾದಿಸಬಹುದು. ಮತ್ತು ಇದಕ್ಕೆ ರಾಜ್ಯಾಂಗದಲ್ಲಿ ಎಲ್ಲೂ ಸಮರ್ಥನೆ ಇಲ್ಲವೆಂದೂ ಹೇಳಬಹುದು. ಈ ಪದ್ಧತಿಯು ರಾಜ್ಯಾಂಗಕ್ಕೆ ಪರಿಪೂರ್ಣವಾಗಿ ಸಾಂಗತ್ಯ ಉಳ್ಳದ್ದೆಂದು ನಾನು ಅಂದುಕೊಳ್ಳುತ್ತೇನೆ.

ನನ್ನ ಮಾನ್ಯ ಮಿತ್ರ ಮಿ. ಅನಂತಶಯನಂ ಐಯ್ಯಂಗಾರ್ ಅವರು ಉಪಖಂಡ (೨)ರ ಪರಂತುಕವನ್ನು ಉಲ್ಲೇಖಿಸಿರುವುದು ಸರಿಯಾಗಿದೆ. ನನ್ನ ವಿವೇಚನೆಯಲ್ಲಿ, ಈ ಪರಂತುಕದ ಪ್ರಾಮುಖ್ಯ ಇರುವುದು ಪಾರ್ಲಿಮೆಂಟಿಗೆ ಇರುವ ಸಕ್ಷಮತೆ. ಅದೇಂದರೆ, ಸಮವರ್ತಿ ಕ್ಷೇತ್ರದಲ್ಲಿ ರಾಜ್ಯವು ಮಾಡಿದ ಯಾವುದೇ ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ, ಬದಲಾಯಿಸುವುದಕ್ಕೆ, ಹೆಚ್ಚಿನದನ್ನು ಸೇರಿಸುವುದಕ್ಕೆ ಪಾರ್ಲಿಮೆಂಟಿಗೆ ಇರುವ ಸಾಧ್ಯತೆ ಮತ್ತು ಅಧಿಕಾರ. ಅಲ್ಲದೆ ಅದಕ್ಕೆ ಆ ಕಾನೂನನ್ನು ರದ್ದುಗೊಳಿಸಲು ಇರುವ ಅಧಿಕಾರ ಸಹ. ಈ ಪರಂತುಕದ ಮಟ್ಟಿಗೆ ಸಂಬಂಧಿಸಿರುವುದೆಂದರೆ, ಈ ಅಧಿಕಾರ ನಿರ್ದಿಷ್ಟವಾಗಿದ್ದು ಪಾರ್ಲಿಮೆಂಟು ರಾಜ್ಯ ಮಾಡಿದ ಯಾವುದೇ ಕಾನೂನನ್ನು ರದ್ದುಗೊಳಿಸಲು ಇರುವ ಸಾಧ್ಯತೆ. ಆದರೆ ನನ್ನ ಮಾನ್ಯ

---

* P.D., ಸಂ. ೫, ಭಾಗ II, ೨೧ ನವೆಂಬರ್ ೧೯೫೦, ಪು. ೩೩೯–೪೧.

ಮಿತ್ರ ಮಿ. ಅನಂತಶಯನಂ ಅಯ್ಯಂಗಾರ್ ಅವರ ಪ್ರಶ್ನೆಯೆಂದರೆ, ಈ ಪರಂತುಕವು ಉಪಖಂಡ (೨)ಕ್ಕೆ ಮಾತ್ರ ಸಂಬಂಧಿಸಿದೆ ಎಂಬುದು. ಈಗ ನನಗೆ ತೋಚುವುದೇನೆಂದರೆ ಅವರು ಉಪಖಂಡ (೨)ರಲ್ಲಿ ಕಾಣಿಸಿರುವ ಆವಶ್ಯಕತೆಗಳನ್ನು ಮನಗಂಡರೆ, ಈ ಪರಂತುಕವನ್ನು ಉಪಖಂಡ (೨)ಕ್ಕೆ ಮಾತ್ರ ಸೇರಿಸಿರುವುದು ಸಾಕು ಎಂದು ರಾಜ್ಯಾಂಗವು ಏಕೆ ಚಿಂತಿಸಿತು ಎಂಬುದು ಅವರಿಗೆ ಅರಿವಾಗುತ್ತದೆ. ಅಲ್ಲದೆ ಅದನ್ನು ಉಪಖಂಡ (೧)ಕ್ಕೆ ವಿಸ್ತರಿಸುವ ಅಗತ್ಯವಿಲ್ಲ ಎಂಬುದು ಗೋಚರಿಸುತ್ತದೆ. ನನ್ನ ಸ್ನೇಹಿತರಿಗೆ ಕಂಡುಬರುವಂತೆ, ಅನುಚ್ಛೇದ ೨೫೪ರ ಉಪಖಂಡ (೨) ಕಾನೂನೊಂದನ್ನು ಉಲ್ಲೇಖ ಮಾಡುತ್ತದೆ. ಅದೆಂದರೆ – ನನ್ನ ಸ್ನೇಹಿತರು ನನಗೆ ಅನುಮತಿ ಕೊಡುವುದಾದರೆ – ಅದನ್ನು "ರಕ್ಷಿಸಲ್ಪಟ್ಟ ಕಾನೂನು" ಎಂದು ಕರೆಯಲಿಚ್ಛಿಸುತ್ತೇನೆ. ಅದರರ್ಥ ರಾಜ್ಯದ ವಿಧಾನಸಭೆಯಿಂದ ಅನುಮೋದಿಸಲ್ಪಟ್ಟ ಕಾನೂನು ಮಾತ್ರವಲ್ಲ, ಆ ಕಾನೂನನ್ನು ರಾಷ್ಟ್ರಪತಿಯವರ ಒಪ್ಪಿಗೆಗಾಗಿ ಕಾದಿರಿಸಲ್ಪಟ್ಟಿದ್ದು, ಅಡಕ್ಕೆ ರಾಷ್ಟ್ರಪತಿಯವರು ತಮ್ಮ ಒಪ್ಪಿಗೆಯನ್ನು ಕೊಟ್ಟಿರುತ್ತಾರೆ. ಉಪಖಂಡ (೨)ರಲ್ಲಿ ಉಲ್ಲೇಖಿಸಿರುವುದು ಈ ಕಾನೂನನ್ನೇ. ನಾವು ಅಂದುಕೊಂಡುದು ಏನೆಂದರೆ, ಯಾವುದೇ ಕಾನೂನಿನ ವಿಷಯದಲ್ಲಿ, ಅದನ್ನು ಸಮವರ್ತಿ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೆ ಒಂದು ರಾಜ್ಯದ ವಿಧಾನಸಭೆಯು ಅನುಮೋದನೆ ಮಾಡಿದ್ದರೂ ಸಹ, ಅದನ್ನು ರಾಷ್ಟ್ರಪತಿಯವರ ಅಂಕಿತಕ್ಕೆ ಕಾದಿರಿಸಿಟ್ಟಿದ್ದು, ಅದಕ್ಕೆ ರಾಷ್ಟ್ರಪತಿಯವರು ತಮ್ಮ ಒಪ್ಪಿಗೆಯನ್ನು ಕೇಂದ್ರ ಸರ್ಕಾರದ ಸಲಹೆಯ ಮೇಲೆ ಕೊಟ್ಟಿದ್ದರೂ – ಇದು ಪಾರ್ಲಿಮೆಂಟಿನ ಆಶಯವನ್ನು ಪ್ರತಿನಿಧಿಸುತ್ತಿದ್ದರೂ – ಆ ನಿರ್ದಿಷ್ಟ ಅಧಿನಿಯಮವನ್ನು ತಿದ್ದುಪಡಿಯ ಮೂಲಕವೋ ಅಥವಾ ಬೇರೆ ರೀತಿಯಲ್ಲೋ ಘಾಸಿಮಾಡುವ ಮುಂದಿನ ಯಾವುದೇ ಕ್ರಮವನ್ನು ಮಾಡದ ಹಾಗೆ ಕೇಂದ್ರ ಸರ್ಕಾರ ಪ್ರತಿಬಂಧಿಸಿದೆ (ಎಸ್ಟಾಪ್) ಎಂಬ ವಾದವನ್ನು (ಯಾರಾದರೂ) ಮಂಡಿಸಬಹುದು. ಇಂಥ ಒಂದು ವಾದವನ್ನು, ಅಂದರೆ ಕಾನೂನೊಂದಕ್ಕೆ ಕೇಂದ್ರ ಸರ್ಕಾರದ ರಕ್ಷಣೆ ದೊರೆತಿದ್ದು – ಸಾಕ್ಷ್ಯ ಅಧಿನಿಯಮದ ಒಂದು ಪದವನ್ನು ಉಪಯೋಗಿಸುವುದಾದರೆ – ಯಾವುದೇ ಕ್ರಮವನ್ನು ಕೈಗೊಳ್ಳದ ಹಾಗೆ ಕೇಂದ್ರಸರ್ಕಾರ ಪ್ರತಿಬಂಧಿಸಿದೆ ಎಂಬ ಇಂಥ ವಾದವನ್ನು ತೊಡೆದುಹಾಕುವುದಕ್ಕಾಗಿಯೇ ಈ ಪರಂತುಕವನ್ನು ಸೇರಿಸಲಾಯಿತು. ಈ ಪರಂತುಕವನ್ನು ಉಪಖಂಡ (೧) ಕ್ಕೂ ವಿಸ್ತರಿಸುವುದು ಅಗತ್ಯವಿಲ್ಲವೆಂದು ಮನಗಾಣಲಾಯಿತು. ಕಾರಣವೇನೆಂದರೆ, "ಕಾನೂನನ್ನು ರಚಿಸುವುದು" ಎಂಬ ವಾಕ್ಯ ಭಾಗ ಎಷ್ಟು ವಿಸ್ತಾರವಾಗಿದೆಯೆಂದರೆ ಅದು ಕಾನೂನನ್ನು ರದ್ದುಗೊಳಿಸುವ ಅರ್ಥವನ್ನು ಸಹ ಒಳಗೊಂಡಿದೆ.

ಹೀಗಾಗಿ ಕಾನೂನೊಂದನ್ನು ರಚಿಸುವುದು ಎಂದರೆ, ಅಸ್ತಿತ್ವದಲ್ಲಿರುವ ಅಧಿನಿಯಮವೊಂದನ್ನು ರದ್ದುಗೊಳಿಸಿ, ಇನ್ನೊಂದು ಅಧಿನಿಯಮವನ್ನು ಸೃಷ್ಟಿಸುವುದು ಎಂಬ ಅರ್ಥ ಬರುವುದರಿಂದ, ಅನುಚ್ಛೇದ ೨೫೪ರ ಉಪಖಂಡ (೧)ನ್ನು ಕುರಿತು, ಪರಂತುಕದಲ್ಲಿನ ಉಪಬಂಧವನ್ನು ಅನಾವಶ್ಯಕವೆಂದು ಭಾವಿಸಲಾಯಿತು. ಆದ್ದರಿಂದ 'ಕಾನೂನನ್ನು ರಚಿಸುವುದು' ಎಂಬ ಪದಪುಂಜಕ್ಕೆ ಕಾನೂನನ್ನು ರದ್ದುಗೊಳಿಸುವುದು ಎಂಬ ಅರ್ಥವನ್ನು ಕೊಡುವುದರಿಂದ ಅನುಚ್ಛೇದ ೨೫೪ರಲ್ಲಿ ಆ ಪದಪುಂಜದಲ್ಲಿರುವ ಸಾಮಾನ್ಯ ಇಂಗಿತವನ್ನು ಒಳಗೊಂಡಿದೆ. ಅನುಚ್ಛೇದ ೨೫೪ರ ಉಪಖಂಡ (೨)ರಲ್ಲಿ ಆ ಇಂಗಿತವಿಲ್ಲವೆಂದು ತೋರಿದ್ದರಿಂದ – ಕಾರಣವೆಂದರೆ ಅದರ ರಕ್ಷಿಸಲ್ಪಟ್ಟಿರುವುದರಿಂದ – ಅದಕ್ಕೆ ಪರಂತುಕವನ್ನು ಸೇರಿಸಲಾಯಿತು. ಆದ್ದರಿಂದ, ನನ್ನ ನಿವೇದನೆ ಏನೆಂದರೆ ಒಂದು ರಾಜ್ಯ ರಚಿಸಿದ ಕಾನೂನನ್ನು ಪಾರ್ಲಿಮೆಂಟಿನ ಕಾನೂನು ರದ್ದುಗೊಳಿಸುವುದರಲ್ಲಿ ಅಸಾಂವಿಧಾನಿಕತೆ ಏನೂ ಇಲ್ಲ. ಇನ್ನೊಂದು ಪ್ರಶ್ನೆಗೆ ಸಂಬಂಧಿಸಿದಂತೆ, ಸರ್ವತ್ರ ಬಹು ವಿಷಯಕ ಕಾನೂನಿನಿಂದ ನಾವು ಮಾಡುತ್ತಿರುವುದಾದರೂ

ಏನು? (ಹಾಗಿಲ್ಲದಿದ್ದರೆ) ನಾವು ಏನು ಮಾಡಬಹುದಾಗಿತ್ತೆಂದರೆ, ನೂರಾರು ಇಂಥ ಕಾನೂನುಗಳನ್ನು ರಚಿಸುವುದು, ಪ್ರತಿಯೊಂದು ನಿರ್ದಿಷ್ಟ ಕಾಯಿದೆಗೆ ಸಂಬಂಧಿಸಿದಂತೆ ಈ ಕಾಯಿದೆಯನ್ನು ರದ್ದುಪಡಿಸಿದ್ದೇನೆ ಎನ್ನುವುದು; ಇನ್ನೊಂದು ಕಾಯಿದೆ, ಅದನ್ನು ರದ್ದು ಪಡಿಸಿದ್ದೇವೆ ಎನ್ನುವುದು; ಹೀಗೇ ಮೂರನೆಯದು. ಇಂಥದನ್ನು ಮಾಡುವುದರ ಬದಲು, ನಾವು ಎಲ್ಲಾ ಕಾನೂನುಗಳನ್ನೂ ಸೇರಿಸಿ ಅದನ್ನೇ ಮಾಡಿದ್ದೇವೆ.

**ಶ್ರೀ ಎಂ.ಎ. ಅಯ್ಯಂಗಾರ್:** ಇಲ್ಲಿ ನೀವು ಅನುಸೂಚಿಯೊಂದನ್ನು ಸೇರಿಸಬಹುದಾಗಿತ್ತು.

**ಡಾ. ಅಂಬೇಡ್ಕರ್:** ಅದನ್ನು ಕೂಡ ಮಾಡಬಹುದಾಗಿತ್ತು. ಅದನ್ನು ಮಾಡಲು ಅನೇಕ ಮಾರ್ಗಗಳಿವೆ. ಕೆಲವು ಮಾರ್ಗಗಳು, ಕೆಲವು ಸಂದರ್ಭದಲ್ಲಿ ಬೇರೆಯವುಗಳಿಗಿಂತ ಉತ್ತಮವಾಗಿರಬಹುದೆಂಬುದನ್ನು ಅಲ್ಲಗಳೆಯುತ್ತಿಲ್ಲ. ಆದರೆ ಮಸೂದೆಯಲ್ಲಿ ಒಳಗೊಂಡಿರುವ ಸಾಮಾನ್ಯ ನಿಯಮದ ಮಟ್ಟಿಗೆ ಹೇಳುವುದಾದರೆ, ಕರಡು ಬರೆಯುವವನು ಅನುಸರಿಸುವ ರೂಢಿಯಲ್ಲಿ ವಿರೋಧವಾಗುವಂಥದಾಗಲೀ ಅಸಾಂವಿಧಾನಿಕವಾದುದಾಗಲೀ ಇಲ್ಲವೆಂದು ನನಗೆ ಅನಿಸುತ್ತದೆ. ನನ್ನ ಸ್ನೇಹಿತರೇ ಕಂಡಿರುವ ಹಾಗೆ, ಉದಾಹರಣೆಗೆ, ನಾನು ಪಾರ್ಟ್ 'ಬಿ' ರಾಜ್ಯಗಳ ಮಸೂದೆಯೆಂದು ಕರೆಯಲಾಗಿರುವ ಮಸೂದೆಯೊಂದನ್ನು ಮಂಡಿಸಿದ್ದೇನೆ. (ಈ ಅಧಿವೇಶನದಲ್ಲಿಯೇ) ಅದಕ್ಕೊಂದು ಅನುಸೂಚಿ ಲಗತ್ತಾಗಿದೆ. ಪ್ರತಿಯೊಂದು ಅಧಿನಿಯಮವನ್ನು ಅಲ್ಲಿ ಉಲ್ಲೇಖ ಮಾಡಲಾಗಿದೆ. ಕಾರಣ ಇಷ್ಟೇ. (ಇದನ್ನು ನಾನು ಆ ಮಸೂದೆ ಚರ್ಚೆಗೆ ಬಂದಾಗ ವಿವರವಾಗಿ ಹೇಳುತ್ತೇನೆ). ಕೆಲವು ಕಾನೂನುಗಳನ್ನು ಕೆಲವು ಅಳವಡಿಕೆಗಳನ್ನು ಮಾಡದೆ ಕಾರ್ಯಗತ ಮಾಡಲಾಗುವುದಿಲ್ಲ. ಆದ್ದರಿಂದ ಇಂಥ ಕಾನೂನು ಈ ಅಳವಡಿಕೆಗೆ ಒಳಪಟ್ಟು ಚಾಲನೆಗೊಳ್ಳುತ್ತದೆಂದು ಅನುಸೂಚಿಯೊಂದನ್ನು ಸೇರಿಸಲೇಬೇಕಾಯಿತು. ಕೂಚ್ – ಬಿಹಾರ್ ನಂಥ ಇನ್ನೂ ಕೆಲವು ಕಾನೂನುಗಳು ಇವೆ. ಇಲ್ಲಿ ಯಾವ ಅನುಸೂಚಿಯೂ ಅಸ್ತಿತ್ವದಲ್ಲಿ ಇಲ್ಲ. ಕಾರಣ ಅಳವಡಿಕೆಯ ಆವಶ್ಯಕತೆ ಇಲ್ಲ. ಅದು (ಆ ಮಸೂದೆ) ನಾಳೆ ನಾಡಿದ್ದರಲ್ಲಿ ಬರಬಹುದು. ಆದ್ದರಿಂದ ನಾವು (ಎಲ್ಲದಕ್ಕೂ ಸಲ್ಲುವ) ಒಂದು ಸಾಮಾನ್ಯ ಖಂಡವನ್ನು ಇಟ್ಟುಕೊಂಡಿದ್ದೇವೆ. ನನ್ನ ಮಾನ್ಯ ಸ್ನೇಹಿತರ ಮಸೂದೆಯ ಉಪಕಲಮುಗಳಲ್ಲಿ ಯಾವುದೇ ಅಸಾಂವಿಧಾನಿಕತೆಯಾಗಲೀ ಇಲ್ಲವೇ ಅನುಚಿತವಾದುದಾಗಲೀ ಇಲ್ಲ.

***ಮಾನ್ಯ ಸಭಾಪತಿಗಳು:** ನಾನು ಹೇಳಿದ ಹಾಗೆ, ನಿನ್ನೆಯ ದಿವಸ ನಾನು ಸದನದಲ್ಲಿ ಹಾಜರಿರಲಿಲ್ಲ. ಆದರೆ ನಡವಳಿಕೆಗಳನ್ನು ಓದಿದ್ದೇನೆ. ಮಾನ್ಯ ಕಾನೂನು ಸಚಿವರಿಗೆ ಮುಂದಕ್ಕೆ ಇನ್ನೇನಾದರೂ ಹೇಳುವುದಕ್ಕೆ ಇದೆಯೆ? ಈಗ ಅದರ ಅವಶ್ಯಕತೆ ಇಲ್ಲ ಎಂದು ನನಗೆ ಅನಿಸುತ್ತಿದೆ.

**ಡಾ. ಅಂಬೇಡ್ಕರ್:** ನಾನು ಆಗಲೇ ನಮ್ಮ ನಿಲುವನ್ನು ವಿಶದೀಕರಿಸಿದ್ದೇನೆ, ಸ್ವಾಮಿ.

**ಮಾನ್ಯ ಸಭಾಪತಿಗಳು:** ಹಾಗಾದರೆ ನಾನು ತಿದ್ದುಪಡಿಯನ್ನು ಸದನದ ಮುಂದೆ ಇಡುತ್ತೇನೆ.

'ಪ್ರಶ್ನೆ ಏನೆಂದರೆ:

> "ನಿರ್ವಾಸಿತರ ಆಸ್ತಿಯ ಆಡಳಿತ ನಿರ್ವಹಣೆ ಅಧಿನಿಯಮ, ೧೯೫೦ರಲ್ಲಿನ, ಪ್ರಸ್ತಾವಿತ ಕಲಮು ೫೮ರ ಉಪ ಕಲಮು (೨)ರಲ್ಲಿ, ೨ನೇ ಖಂಡದಲ್ಲಿ, "ಅಧಿನಿಯಮಕ್ಕೆ ಹೊಂದಿಕೆಯಾಗುವ" ಎಂಬ ಪದಗಳಿಗೆ ಬದಲಾಗಿ, ಪದಗಳು, ಬ್ರಾಕೆಟ್ಟುಗಳು

---

* P.D., ಸಂ. ೫, ಭಾಗ II, ೨೧ ನವೆಂಬರ್ ೧೯೫೦, ಪು. ೩೪೨–೪೩.

ಮತ್ತು ಅಂಕಿಗಳು "ಈ ಅಧಿನಿಯಮಕ್ಕೆ ಹೊಂದಿಕೆಯಾಗುವ ಮತ್ತು ಉಪ ಕಲಮು (೧) ರಿಂದ ರದ್ದುಗೊಳಿಸಲ್ಪಡದೇ ಇರುವ" ಎಂಬುದನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವವನ್ನು ಅಂಗೀಕರಿಸಲಾಗಿದೆ

◆

# ೨೦

# *ಪಾರ್ಲಿಮೆಂಟ್ ಮತ್ತು ರಾಜ್ಯಗಳ ವಿಧಾನ ಸಭೆಗಳಿಗೆ ಚುನಾಯಿತರಾಗಲು ಅರ್ಹತೆಗಳು

**ಶ್ರೀ ಸರ್ವಾಟೆ (ಮಧ್ಯ ಭಾರತ):** ತಿದ್ದುಪಡಿಗಳ ವಿಷಯದಲ್ಲಿ, ಇನ್ನು ಮುಂದೆ ಹೋಗುವುದಕ್ಕೆ ಮುಂಚೆ, ಪ್ರೊ. ಕೆ.ಟಿ.ಷಾ ಅವರು ಕೊಟ್ಟಿರುವ ಸಲಹೆಗಳ ಮೇಲೆ ಏನಾದರೂ ಹೇಳಿಕೆಗಳನ್ನು ಮಾಡುವುದಕ್ಕಿದೆಯೇ ಎಂದು ಡಾ. ಅಂಬೇಡ್ಕರ್ ಅವರನ್ನು ಕರೆದು ಕೇಳಬೇಕೆಂದು ನಿಮಗೆ ಅನಿಸುವುದಿಲ್ಲವೇ ಸ್ವಾಮಿ?

**ಮಾನ್ಯ ಸಭಾಪತಿಗಳು:** ಅವರನ್ನು ಕರೆಯಬೇಕಾದ ಆವಶ್ಯಕತೆ ಇದೆಯೆಂದು ನನಗೆ ಅನಿಸಲಿಲ್ಲ. ಅವರು ನನ್ನ ಕಣ್ಣಿಗೆ ಬೀಳಲು ಪ್ರಯತ್ನಿಸಿದ್ದರೆ, ಖಂಡಿತವಾಗಿಯೂ ನಾನು ಅವರನ್ನು ಕರೆಯುತ್ತಿದ್ದೆ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ನನ್ನ ಸ್ನೇಹಿತರಾದ ಪ್ರೊ. ಕೆ.ಟಿ.ಷಾ ಅವರು, ನಾನು ಅವರ ಪ್ರಸ್ತಾವದ ಮೇಲೆ ಮಾತನಾಡದೆ ಇದ್ದುದರಿಂದ, ಅವರ ಬಗ್ಗೆ ನನಗೆ ಸಾಕಷ್ಟು ಗೌರವವಿಲ್ಲ ಎಂದು ಭಾವಿಸುವುದು ನನಗೆ ಇಷ್ಟವಿಲ್ಲ. ಮತ್ತು ಸ್ವಾಮಿ, ನೀವು ಒಪ್ಪುವುದಾದರೆ, ಈ ಹಂತದಲ್ಲಿ ಕೆಲವೊಂದು ಮಾತುಗಳನ್ನಾಡಲು ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೇ, ಪ್ರೊ. ಷಾ ಅವರು ಮಂಡಿಸಿದ ಠರಾವಿನ ಪಾಠ ನನ್ನ ಕೈ ಸೇರಿದಾಗ ನನಗೆ ಬಹಳಷ್ಟು ಬೇಸರವಾಯಿತು. ಕಾರಣವಿಷ್ಟೆ: ಇಂಥ ಬಗೆಯ ಠರಾವಿನಲ್ಲಿ ನಿರ್ದಿಷ್ಟವಾದ ಅನುಚ್ಛೇದವೊಂದು ರಾಜ್ಯಾಂಗದಲ್ಲಿ ಇದೆಯೆಂದೂ, ಅಂಥ ಅನುಚ್ಛೇದವು, ಅದರ ಮೇಲೆ ಶಾಸನ ರಚಿಸಲು ಅವಕಾಶ ಕೊಟ್ಟಿದೆಯೆಂದೂ, ಸರ್ಕಾರಕ್ಕೆ ಸೂಚನೆ ಕೊಡುವ ಬರಿಯ ಮಾತುಗಳಲ್ಲಿ ಮಾತ್ರ ಇರಬಾರದು. ಅದರ ಬದಲು, ಅದರಲ್ಲಿ ಸರ್ಕಾರ ಈ ತೆರನಾದ ಶಾಸನದಲ್ಲಿ ಏನು ಮಾಡಬೇಕಾಗಿದೆಯೆಂಬ ನಿರ್ದಿಷ್ಟ ಸಲಹೆಗಳನ್ನು ಒಳಗೊಂಡಿರಬೇಕಾಗಿತ್ತು. ನಾನು ಹೇಳಿದ ಹಾಗೆ, ನನಗೆ ಬಹಳಷ್ಟು ಸೋಜಿಗವಾಯಿತು.

ಹಾಗಾಗಿ, ಈ ಠರಾವಿನ ಬಗ್ಗೆ ನಾನು ಯಾವ ಧೋರಣೆಯನ್ನು ತಾಳಬೇಕೆಂದು ಒಂದು ನಿಖರವಾದ ತೀರ್ಮಾನಕ್ಕೆ ಬರಲು ಬಹಳ ಕಷ್ಟವಾಯಿತು. ಈ ಠರಾವನ್ನು ರೂಪಿಸುವಲ್ಲಿ ಅವರು ಬಳಸಿರುವ ಪದಗಳನ್ನು ನೋಡಿದರೆ ಅವರ ಉದ್ದೇಶ ನಿಜವಾಗಿಯೂ ಬೇಕೆಂದೇ ಮಾಡಿದ್ದು ಎಂದು ನನಗೆ ಅರ್ಥವಾಗುತ್ತಿದೆ. ರಾಜ್ಯಾಂಗದಲ್ಲಿನ ಪ್ರಸ್ತುತವಾದ ಅನುಚ್ಛೇದದ ಉಪಖಂಡ (ಸಿ)ಯ ಕೆಳಗೆ ಏನನ್ನು ಸೇರಿಸಬೇಕಾಗಿತ್ತು ಎಂದು ಅವರಿಗೆ ಒಂದು ಕಲ್ಪನೆಯನ್ನು ಸದನವು ಕೊಡಬೇಕೆಂದು ಅವರ ಅಭಿಲಾಷೆ. ಈ ತೆರನಾದ ಪ್ರಕ್ರಿಯೆಗೆ ನನಗೆ ಯಾವ ಆಕ್ಷೇಪಣೆಯೂ ಇಲ್ಲ. ಆದರೆ, ಈ ರೀತಿಯ

---

* P.D., ಸಂ. ೫, ಭಾಗ II, ೨೩ ನವೆಂಬರ್ ೧೯೫೦, ಪು. ೫೩೭–೪೧.

ಶಾಸನದ ಬಗೆಗೆ ಪ್ರೊ.ಷಾ ಅವರು, ಕಂಡ ಹಾಗೆ ಇಷ್ಟು ಉತ್ಸುಕರಾಗಿದ್ದಾರೆ, ತಮ್ಮ ಸ್ವಂತದ್ದೇ ಆದ ಯಾವುದೇ ಸಲಹೆ ಇಲ್ಲದ ಖಾಲಿ ಮನಸ್ಸನ್ನು ಇಟ್ಟುಕೊಳ್ಳಬಾರದಾಗಿತ್ತು. ಹೇಗಾದರೂ, ಅವರ ಠರಾವನ್ನು ಬೆಂಬಲಿಸಿದವರೆಲ್ಲಾ ಅವರ ಮನಸ್ಸನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆಂದು ನಾನು ಊಹಿಸುತ್ತೇನೆ. ಪ್ರೊ.ಷಾ ಅವರ ಠರಾವನ್ನು ಬೆಂಬಲಿಸಿ ಮಾಡಿದ ಅನೇಕ ಭಾಷಣಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ನನಗೆ ತೋರುವುದೇನೆಂದರೆ, ರಾಜ್ಯಾಂಗದಲ್ಲಿ ಹೇಳಿರುವ ಅರ್ಹತೆಗಳಲ್ಲದ ಇನ್ನೂ ಕೆಲವು ಅರ್ಹತೆಗಳನ್ನು ಸೇರಿಸಬೇಕೆಂದು ಅನೇಕ ಸದಸ್ಯರು ಉತ್ಸುಕರಾಗಿದ್ದಾರೆ. ಅವರ ಮನಸ್ಸಿನಲ್ಲಿ ಒಂದು ಬಗೆಯ ವಿದ್ಯಾರ್ಹತೆ ಬೇಕು ಎಂದು ಇದ್ದರೂ ಇರಬಹುದು. ಆದರೆ ಯಾರೂ ನಿಕರವಾಗಿಲ್ಲ. ಒಬ್ಬ ಅಭ್ಯರ್ಥಿ ಕಾನೂನಿನನ್ವಯ ಚುನಾವಣೆಗೆ ನಿಲ್ಲಬೇಕೆಂದರೆ, ಯಾವ ದರ್ಜೆಯ ವಿದ್ಯಾರ್ಹತೆ ಅವರ ಮನಸ್ಸಿನಲ್ಲಿದೆ ಎಂದು ತಿಳಿಯುತ್ತಿಲ್ಲ.

ಈ ಸದನದ ಸದಸ್ಯತ್ವವನ್ನು ಪಡೆಯಲು ವಿದ್ಯೆಯೊಂದೇ ಅರ್ಹತೆಯಾಗಲಾರದು. ಬುದ್ಧನ ಮಾತುಗಳಲ್ಲಿ ಹೇಳುವುದಾದರೆ, ಮನುಷ್ಯನಿಗೆ ಎರಡು ವಸ್ತುಗಳ ಆವಶ್ಯಕತೆಯಿದೆ. ಮೊದಲನೆಯದು ಜ್ಞಾನ. ಇನ್ನೊಂದು ಶೀಲ. ಶೀಲವಿಲ್ಲದ ಜ್ಞಾನ ಬಹಳ ಅಪಾಯಕಾರಿ. ಅದು ಶೀಲದ ಜೊತೆಗೇ ಇರಬೇಕು. ಶೀಲವೆಂದರೆ, ನಡತೆ, ನೈತಿಕ ಸ್ಥೈರ್ಯ, ಯಾವುದೇ ರೀತಿಯ ಪ್ರಲೋಭನೆಯಿಂದ ದೂರವಿರುವ ಸಾಮರ್ಥ್ಯ, ತನ್ನ ಆದರ್ಶಗಳಿಗೆ ನಿಷ್ಠೆಯಿಂದ ಇರುವುದು. ಪ್ರೊ. ಷಾ ಅವರನ್ನು ಬೆಂಬಲಿಸಿ ಮಾಡಿದ ಭಾಷಣಗಳಲ್ಲಿ ಈ ಎರಡನೆಯ ಅರ್ಹತೆಯ ಬಗ್ಗೆ ಯಾವುದೇ ಉಲ್ಲೇಖವನ್ನು ನಾನು ಕೇಳಲಿಲ್ಲ. ನಾನೂ ಸಹ ಶೀಲವಿಲ್ಲದ ಯಾವ ಸದಸ್ಯನೂ ಈ ಘನತೆ ಹೊಂದಿದ ಸದನದಲ್ಲಿ ಪ್ರವೇಶ ಪಡೆಯಬಾರದೆಂದು ಉತ್ಸುಕನಾಗಿದ್ದರೂ, ಈ ರೀತಿಯ ಅರ್ಹತೆಯಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ಯಾವುದೇ ಮಾರ್ಗೋಪಾಯವನ್ನಾಗಲೀ, ವಿಧಾನವನ್ನಾಗಲೀ ಕಾಣುವುದು ನನಗೆ ವಿಪರೀತ ಕಷ್ಟವಾಗಿದೆ. ವಿದ್ಯೆಯ ಪ್ರಶ್ನೆ ಬಂದಾಗ, ಅಜ್ಞಾನವೇ ಒಂದು ಸದ್ಗುಣವೆಂದು ನಾನು ತಿಳಿದುಕೊಂಡಿದ್ದೇನೆಂದು ಯಾರೂ ಅರ್ಥ ಮಾಡುವುದು ಬೇಡ. ಅದು ಸ್ಪಷ್ಟವಾಗಿರಲಿ. ಒಬ್ಬನ ಕರ್ತವ್ಯವನ್ನು ನಿಭಾಯಿಸಲು ಬೇಕಾಗುವ ಸಕ್ಷಮತೆಯ ಮಟ್ಟವನ್ನು ಮುಟ್ಟಲು ವಿದ್ಯಾಭ್ಯಾಸ ಅತ್ಯವಶ್ಯವೆಂದು ನಾನು ತಿಳಿದಿದ್ದೇನೆ. ಈ ಸದನದಲ್ಲಿ ಕೆಲವು ಜನರಿದ್ದಾರೆ. ಅವರು ವಿದ್ಯಾವಂತರಲ್ಲದಿದ್ದರೂ ತಾವು ಪ್ರತಿನಿಧಿಸುವ ವರ್ಗಗಳ ಜನರ ಕುಂದು ಕೊರತೆಗಳನ್ನು ಧ್ವನಿಸಲು ಬಹಳ ಸಮರ್ಥರಾಗಿದ್ದಾರೆ. ನನಗೆ ಇದು ಖಂಡಿತಾ ತಿಳಿದಿದೆ. ಹೆಚ್ಚು ವಿದ್ಯಾವಂತನಾದ ಮಾತ್ರಕ್ಕೆ ಒಬ್ಬ ವ್ಯಕ್ತಿಯು ಈ ಪಾತ್ರವನ್ನು ನಿರ್ವಹಿಸಲಾರ. ಏಕೆಂದರೆ ಅವನಿಗೆ ಆ ಅನುಭವದ ಜ್ಞಾನವೂ ಇಲ್ಲ, ಅನುಭವ ಮೊದಲೇ ಇಲ್ಲ. ಆದರೆ ಈ ವರ್ಗಗಳಿಂದ ಬಂದ ನನ್ನ ಸ್ನೇಹಿತರು, ಅವರ ಬಗ್ಗೆ ನನಗೆ ಬಹಳ ಅನುಕಂಪವಿದೆ, ಅವರು ಪ್ರತಿನಿಧಿಸುವ ವರ್ಗದ ಜನರಿಗೆ ಪರಿಹಾರವನ್ನು ತಂದು ಕೊಡಲು ಈ ಸದನದಲ್ಲಿ ಬರಿಯ ಭಾಷಣ ಮಾಡುವುದಕ್ಕಿಂತ ಅವರ ಕುಂದು ಕೊರತೆಗಳನ್ನು ನಿವಾರಿಸಲು ಪರಿಹಾರೋಪಾಯವನ್ನು ಸೂಚಿಸಿ ಸಲಹೆಯನ್ನು ಕೊಡುವುದು ಹೆಚ್ಚು ಆವಶ್ಯಕ. ಭಾಷಣಗಳನ್ನು ಮಾಡುವುದು ಮತ್ತು ಕೊರತೆಗಳನ್ನು ಉಸಿರುವುದು ಬಹಳ ಸುಲಭವಾದ ಸಂಗತಿ. ಆದರೆ ಪರಿಹಾರಗಳನ್ನು ರೂಪಿಸುವುದು ಬಹಳ ಕಷ್ಟಕರವಾದದ್ದು. ಅದಕ್ಕೆ ಬೇಕಾದದ್ದು ವಿದ್ಯಾಭ್ಯಾಸ. ಹಿಂದುಳಿದ ವರ್ಗದವರು, ಅನುಸೂಚಿತ ವರ್ಗಕ್ಕೆ ಸೇರಿದವರು, ಬುಡಕಟ್ಟು ಜನಾಂಗದವರು ಇವರ ದೃಷ್ಟಿಯಿಂದ ವಿದ್ಯಾಭ್ಯಾಸ ಒಂದು ಅತ್ಯವಶ್ಯವಾದ ಕಚ್ಚಾ ವಸ್ತು. ಆದರೆ ನಾವು ಅದನ್ನು ಖಾತರಿಪಡಿಸಿಕೊಳ್ಳುವುದಾದರೂ ಹೇಗೆ? ಏನೋ ಒಂದು ರೀತಿಯ ವಿದ್ಯಾರ್ಹತೆ ಇರಲೇಬೇಕೆಂಬ ಸಲಹೆಯನ್ನು ಪರೀಕ್ಷಿಸಿದಾಗ, ನಾನು ಕಂಡುಕೊಂಡದ್ದು ಏನೆಂದರೆ, ಪ್ರಸ್ತಾಪವೊಂದು ತಾತ್ತ್ವಿಕವಾಗಿ

ಅಥವ ವಿದ್ಯಾವಿಷಯಕವಾಗಿ ಬಹಳ ಸೊಗಸಾಗಿದ್ದರೂ, ಇತರ ಕೆಡಕುಗಳನ್ನು ಉಂಟುಮಾಡದಂತೆ ಅದನ್ನು ಅನುಷ್ಠಾನಗೊಳಿಸಲಾಗುವುದಿಲ್ಲ. ಅದೇ ನನ್ನ ಕಷ್ಟ. ನೀವು ದರ್ಜೆಯನ್ನು ಎಲ್ಲಿ, ಹೇಗೆ ಗುರುತಿಸುತ್ತೀರಿ? ಈ ಸದನದ ಸದಸ್ಯರಾಗಲು ಬಿ.ಎ. ಮಾಡಿದವರಿಗೆ ಮಾತ್ರ ಅರ್ಹತೆಯಿದೆಯೆಂದು ಹೇಳುತ್ತೀರೇನು? ಹಾಗೆ ನೀವು ಹೇಳುವುದಾದರೆ ಫಲಿತಾಂಶವೇನು? ಸದಸ್ಯರಿಗೆ ಬಹುಶಃ ಗೊತ್ತಿರಬೇಕು– ಯಾವುದೇ ಪದವೀಧರನಿಗಿಂತ, ಶೈಕ್ಷಣಿಕವಾಗಿ, ಬೌದ್ಧಿಕವಾಗಿ ಬಹಳಷ್ಟು ಹೆಚ್ಚಾಗಿ ಸಕ್ಷಮತೆಯುಳ್ಳ ಬಹು ಮಂದಿ ಇದ್ದಾರೆ ಎಂಬುದು. ಇವರು ಯಾವ ಕಾಲೇಜಿನ ಅಥವ ಯಾವುದೇ ವಿಶ್ವವಿದ್ಯಾನಿಲಯದ ಒಳಹೊಕ್ಕಿಲ್ಲ. ಅಂಥವರು ಬಹಳ ಮಂದಿ ಇದ್ದಾರೆ. ಅವರು ಸ್ವಂತವಾಗಿ ವಿದ್ಯೆ ಕಲಿತಿದ್ದಾರೆ. ಅವರು ಬಿ.ಎ., ಎಂ.ಎ., ಪಾಸು ಮಾಡಿದವರಷ್ಟೇ ಅಲ್ಲದೆ ಅವರನ್ನು ಮೀರಿಸುವಷ್ಟು ಸಕ್ಷಮತೆಯನ್ನು ಉಳ್ಳವರಾಗಿದ್ದಾರೆ. ಇಂಥವರನ್ನು ಅವರ ಬಳಿ ವಿಶ್ವ ವಿದ್ಯಾನಿಲಯದ ಸರ್ಟಿಫಿಕೇಟ್ ಒಂದು ಇಲ್ಲವೆಂಬ ಕಾರಣಕ್ಕೆ ಹೊರಗಡೆ ಬಿಟ್ಟು ಬಿಡುತ್ತೀರೇನು? ಹಾಗೇನಾದರೂ ಆದರೆ ಅದು ಬಹಳ ದುರದೃಷ್ಟಕರ ಫಲಿತಾಂಶದಲ್ಲಿ ಪರ್ಯವಸಾನವಾಗುತ್ತದೆ.

ಇನ್ನೊಂದು ಪರಿಣಾಮವನ್ನು ನೋಡಿ. ಈ ದೇಶದಲ್ಲಿ ವಿದ್ಯಾಭ್ಯಾಸ ಬಹಳ ಕೆಳಮಟ್ಟದಲ್ಲಿ ಇದೆ. ಅಷ್ಟೂ ಸಾಲದೆ ನಮಗೆಲ್ಲಾ ಗೊತ್ತಿರುವಂತೆ, ಈ ದೇಶದ ಎಲ್ಲಾ ಜಾತಿಗಳಲ್ಲಿ ವಿದ್ಯಾಭ್ಯಾಸವು ಏಕ ರೂಪವಾಗಿ ಹರಡಿಲ್ಲ. ಕೆಲವು ಜಾತಿಗಳಲ್ಲಿ ವಿದ್ಯಾಭ್ಯಾಸ ಬಹಳ ಕೆಳಮಟ್ಟದಲ್ಲಿ ಇದೆ. ಒಂದು ವೇಳೆ, ಬಿ.ಎ. ಅನ್ನೋ ಅಥವಾ ಮೆಟ್ರಿಕ್ಯುಲೇಷನ್ ಅನ್ನು ಒಂದು ಪ್ರಮಾಣವನ್ನಾಗಿ ಇಟ್ಟುಕೊಂಡರೆ, ಈ ಸದನದ ಸದಸ್ಯತ್ವವನ್ನು ಕೆಲವೇ ಕೆಲವರ ಏಕ ಸ್ವಾಮ್ಯವನ್ನಾಗಿ ನೀವು ಮಾಡುವುದಿಲ್ಲವೇ? ಪರಿಣಾಮ ಹಾಗೇ ಆಗುತ್ತದೆ ಎಂಬುದು ನನ್ನ ಭಯ. ಒಂದು ವೇಳೆ ಸ್ಟಾಂಡರ್ಡ್ (ದರ್ಜೆ) ಅನ್ನೇ ಕೆಳಗಿಳಿಸಿದರೆ ಅಂದರೆ, ೪ನೇ ಸ್ಟಾಂಡರ್ಡಿಗೆ ಅಥವಾ ಬಾಯಿಪಾಠ, ಕಾಗುಣಿತ, ಲೆಕ್ಕವನ್ನು ಕಲಿತದ್ದು ಸಾಕೆಂದರೆ, ಅಥವ ಅಕ್ಷರ ಜ್ಞಾನ ಮಾತ್ರ ಸಾಕೆಂದರೆ, ಆಗ ಯಾವ ಜಾತಿಯೂ ತನ್ನವರನ್ನು ಈ ಸದನದ ಸದಸ್ಯರನ್ನಾಗಿ ಕಳುಹಿಸುವ ಅವಕಾಶದಿಂದ ಹೊರಗುಳಿಯುವುದಿಲ್ಲ. ಆ ಅರ್ಹತೆಯೇನಾದರೂ ಒಳಿತು ಮಾಡುತ್ತದೆಯೇ? ಅದಕ್ಕೆ ಏನೇನು ಬೆಲೆಯೇ ಇಲ್ಲ.

ಆದ್ದರಿಂದ, ಅದು ಒಳ್ಳೆಯದೆಂದೇ ನನ್ನ ನಿವೇದನೆ. ಈ ಸದನದಲ್ಲಿ ತಮ್ಮ ತಮ್ಮ ವಿವಿಧ ಚುನಾವಣಾ ಕ್ಷೇತ್ರಗಳನ್ನು ಪ್ರತಿನಿಧಿಸುವ ಸದಸ್ಯರಿಗೆ ಅಷ್ಟಿಷ್ಟು ವಿದ್ಯಾಭ್ಯಾಸ ಇರಲೇಬೇಕೆಂಬ ಭಾವನೆಗೆ ನಾನು ಹುಯಿಲೆಬ್ಬಿಸುವುದಿಲ್ಲ. ಆದರೆ ಅದಕ್ಕೆ ನೀವು ಕಾನೂನಿನ ಹೊದಿಕೆಯನ್ನು ಹೇಗೆ ಕೊಡುತ್ತೀರಿ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಹಾಗಾಗಿ ಈ ವಿಷಯವನ್ನು ಜನಗಳಿಗೇ ಬಿಟ್ಟುಬಿಡಬೇಕೆಂಬುದೇ ನನ್ನ ಸಲಹೆ; ಇಲ್ಲದೆ ಹೋದರೆ, ಸರ್ಕಾರವನ್ನು ನಡೆಸುವ ರಾಜಕೀಯ ಪಕ್ಷಗಳಿಗೆ ಬಿಟ್ಟು ಬಿಡಬೇಕೆಂದು ನನ್ನ ಸಲಹೆ. ರಾಜಕೀಯ ಪಕ್ಷಗಳು ತಮ್ಮದೇ ಆದ ಉದ್ದೇಶಗಳಿಗೋಸ್ಕರ ಈ ವಿಷಯಕ್ಕೆ ಗಮನವನ್ನು ಕೊಡದೇ ಹೋದರೆ, ಕಾಲಾನುಕ್ರಮದಲ್ಲಿ ಜನಗಳೇ ಅದಕ್ಕೆ ಗಮನ ಕೊಡುತ್ತಾರೆ. ಈ ಸದನದಲ್ಲಿ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿಭಾಯಿಸದ ವ್ಯಕ್ತಿಗಳನ್ನು ಚುನಾಯಿತರಾಗುವುದಕ್ಕೆ ಜನಗಳು ಎಂದೆಂದಿಗೂ ಬಿಡುವುದಿಲ್ಲ. ಅವರಿಗೆ ಫಲಿತಾಂಶ ಬೇಕು. ಈ ಉದ್ದೇಶವನ್ನು ಪೂರೈಸಿಕೊಳ್ಳುವುದರಲ್ಲಿ ಇರುವ ಒಂದೇ ಒಂದು ಸಾಧನ ಸಲಕರಣೆಯೆಂದರೆ ಸದನಕ್ಕೆ ಒಳ್ಳೆಯ ಜನಗಳನ್ನು ಕಳುಹಿಸುವುದು. ಹಾಗಾಗಿ, ಈ ವಿಷಯವನ್ನು ಜನಗಳಿಗೇ ಬಿಟ್ಟು ಬಿಡುವುದು ಒಂದೇ ಮಾರ್ಗ.

ಸ್ವಾಮಿ, ಈಗ ನನ್ನ ಮಿತ್ರ ಪ್ರೊ. ಕೆ.ಟಿ.ಷಾ ಅವರು ಒಂದು ತರಹ ಹತಾಶ ಭಾವನೆಯಿಂದ, ತಮ್ಮ ಠರಾವಿಗೆ ಒದಗುವ ಗತಿಯೇನೆಂದು ನನಗೆ ಗೊತ್ತಿದೆ ಎಂದು ಹೇಳಿದರು. ಅವರಂದುಕೊಂಡಂತೆ ಅದಕ್ಕೆ ಕಾರಣ ಠರಾವು ಕೆಟ್ಟದಾಗಿದೆ ಎಂದು ಅಲ್ಲ. ಆದರೆ ಠರಾವನ್ನು ಮಂಡಿಸಿದವರು ಯಾರು ಎಂಬುದು. ನನ್ನ ಮಿತ್ರ ಪ್ರೊ. ಕೆ.ಟಿ.ಷಾ ಅವರಿಗೆ ನನ್ನ ಭರವಸೆ ಏನೆಂದರೆ, ಅವರ ವಿರುದ್ಧ ನನಗೆ ಯಾವ ಪೂರ್ವಗ್ರಹವೂ ಇಲ್ಲ ಎಂದು. ಠರಾವು ಮಂಡಿಸಿದ ವ್ಯಕ್ತಿಯ ಬಗ್ಗೆ ನನಗೆ ಭಿನ್ನಾಭಿಪ್ರಾಯವಿದೆ ಎಂದೋ ಅಥವ ಅವರನ್ನು ನಾನು ಇಷ್ಟಪಡುವುದಿಲ್ಲವೆಂಬ ಕಾರಣಕ್ಕೋ, ಅದನ್ನು ತಿರಸ್ಕರಿಸುವಂಥ ಮನುಷ್ಯ ನಾನಲ್ಲ. ಈ ಸದನದಲ್ಲಿ ವೈಯಕ್ತಿಕವಾಗಿ ತಮ್ಮೊಳಗೆ ಪೂರ್ವಗ್ರಹವಿರುವ ಅನೇಕ ಮಂದಿ ಇದ್ದಾರೆ. ಬಹುಶಃ ಅವರೊಳಗೆ ವೈಯಕ್ತಿಕ ದ್ವೇಷ ಇದ್ದರೂ ಇರಬಹುದು. ಸದನದ ಕೆಲಸದಲ್ಲಿ ಯಾವ ಸದಸ್ಯನೂ ಪೂರ್ವಗ್ರಹಪೀಡಿತನಾಗಿ ಅಡ್ಡಗಾಲು ಹಾಕುವುದಿಲ್ಲವೆಂದು ನನಗೆ ಭರವಸೆ ಇದೆ. ಆದ್ದರಿಂದ ನಾನು ಈ ಠರಾವನ್ನು ವಿರೋಧಿಸಿದರೆ, ಇಂಥ ಅಭಿಪ್ರಾಯವನ್ನು ಅವರು ಇಟ್ಟುಕೊಳ್ಳುವುದಿಲ್ಲವೆಂದು ನಾನು ಆಶಿಸುತ್ತೇನೆ.

ಸ್ವಾಮಿ, ಒಂದು ಸಮಿತಿಯನ್ನು ರಚಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕಾರಣ, ಈ ಚರ್ಚೆಯಿಂದ ಕಾರ್ಯಸಾಧುವಾದುದು ಯಾವುದೂ ಹೊರಬಂದಿಲ್ಲ. ಚರ್ಚೆಯಿಂದ ಯಾವುದಾದರೂ ಘನೀಕೃತವಾದ ಸಲಹೆಗಳೇನಾದರೂ ಹೊರಬಿದ್ದಿದ್ದನ್ನು ನಾನು ಕಂಡಿದ್ದರೆ, ಅಂಥ ಸಲಹೆಯನ್ನು ಕಾನೂನಿನ ಚೌಕಟ್ಟಿನಲ್ಲಿ ಪರಿಣಾಮಕಾರಿಯಾಗಿ ಮಾಡುವುದು ಸಾಧ್ಯವಾಗಿದ್ದರೆ, ಅಂಥ ಶಿಫಾರಸನ್ನು ಒಪ್ಪಿಕೊಳ್ಳುವುದಿಕ್ಕೆ ನಾನು ಹಿಂದೆಮುಂದೆ ನೋಡುತ್ತಿರಲಿಲ್ಲ. ನನ್ನ ಮಿತ್ರ ಪ್ರೊ. ಕೆ.ಟಿ.ಷಾ ಅವರು ಹೇಳಿದ್ದೇನೆಂದರೆ, ಈ ಹಂತದಲ್ಲಿ ಸೂತ್ರವೊಂದನ್ನು ಕಂಡುಹಿಡಿಯುವುದಕ್ಕೆ ಮತ್ತು ಅದಕ್ಕೆ ಕಾನೂನಿನನ್ವಯ ಪರಿಣಾಮಕಾರಿಯಾಗಿ ಮಾಡುವುದಕ್ಕೆ ಅವರು ಹತಾಶೆಗೊಂಡಿಲ್ಲ. ಅವರಿಂದ ಯಾವುದಾದರೂ ಗಟ್ಟಿ ಸಲಹೆ ಬರಬಹುದೆಂದು ಮತ್ತು ಯಾವ ವಿಧಾನದಲ್ಲಿ ಅದಕ್ಕೊಂದು ಕಾನೂನಿನ ರೂಪ ಕೊಡಬಹುದೆಂದು ನಾನು ಕಾಯುತ್ತಾ ಕುಳಿತಿದ್ದೆ. ಆದರೆ, ಈ ವಿಷಯವನ್ನು ಹೇಗೆ ಸೆಣಸಬೇಕೆಂಬುದರ ಮೇಲೆ ಯಾವುದೇ ಬೆಳಕನ್ನು ಚೆಲ್ಲದೆ ತಮಗೆ ಹತಾಶೆಯಾಗಿಲ್ಲವೆಂದು ಮಾತ್ರ ಹೇಳುತ್ತಾ ಅವರು ತಮ್ಮ ಮಾತನ್ನು ಮುಗಿಸಿಬಿಟ್ಟರು. ಹೌದು, ಈ ಮಸೂದೆಯನ್ನು ಮಂಡನೆ ಮಾಡುವಾಗ ಈ ವಿಷಯ ಚರ್ಚೆಯಾಗುತ್ತದೆಂದು ನನಗೆ ಗೊತ್ತಿದೆ. ಪ್ರಜಾ ಪ್ರತಿನಿಧಿ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳಲು ಈ ಅಧಿವೇಶನದಲ್ಲಿಯೇ ಸಾಧ್ಯವಾಗಬಹುದು ಎಂದು ನಾನು ಆಶಿಸುತ್ತೇನೆ. ಏಕೆಂದರೆ, ಈ ವಿಷಯವನ್ನು (ನಿರ್ದಿಷ್ಟವಾದ ಅರ್ಹತೆಗಳು ಮತ್ತು ಅರ್ಹತೆಗಳು ಯಾವುವು) ಸದನದ ಮುಂದೆ ಇಡಲಾಗುತ್ತಿದೆ. ಡಾ. ಪಂಜಾಬ್ ರಾವ್ ದೇಶ್‌ಮುಖ್ ಅವರ ಆಕಾಂಕ್ಷೆಗಳೇನೇ ಇರಲಿ, ಈ ಮಸೂದೆಯನ್ನು ಕೈಗೆತ್ತಿಕೊಂಡಾಗ ತಿದ್ದುಪಡಿಯ ರೂಪದಲ್ಲಿ ಪುನಃ ಕೆದಕುವುದಕ್ಕೆ ಈ ಸದನಕ್ಕಿರುವ ಸ್ವಾತಂತ್ರ್ಯವನ್ನು (ಯಾವುದು?) ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಈ ಕ್ಷಣದಲ್ಲಿ ಈ ಠರಾವನ್ನು ಒಪ್ಪಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ.

**ಮಾನ್ಯ ಸಭಾಪತಿಗಳು:** ಆ ತಿದ್ದುಪಡಿಯನ್ನು ನಾನು ಸದನದ ಮುಂದೆ ಇಡುತ್ತಿದ್ದೇನಷ್ಟೆ.

**ಶ್ರೀ ಕಾಮತ್ (ಮಧ್ಯಪ್ರದೇಶ):** ಈ ಅಧಿವೇಶನದಲ್ಲಿಯೇ ಸ್ವಲ್ಪ ಸಮಯದ ನಂತರ ಈ ಪ್ರಶ್ನೆ ಬರುತ್ತಿರುವುದರಿಂದ ನನ್ನ ತಿದ್ದುಪಡಿಯನ್ನು ವಾಪಸ್ ಪಡೆಯಲು ಬೇಡುತ್ತೇನೆ.

ತಿದ್ದುಪಡಿಯನ್ನು ಅನುಮತಿಯಿಂದ ಹಿಂದಕ್ಕೆ ಪಡೆಯಲಾಯಿತು.

**ಮಾನ್ಯ ಸಭಾಪತಿಗಳು:** ಮತ್ತೆ ಶ್ರೀ ಮಿಶ್ರ ಅವರು ಮಂಡಿಸಿದ ತಿದ್ದುಪಡಿಯೊಂದಿದೆ.

ವಿಷಯವೇನೆಂದರೆ:

‘ಅರ್ಹತೆಗಳು’ ಅನ್ನುವ ಪದಕ್ಕೆ ಮುಂಚೆ ‘ಕನಿಷ್ಠ ಶೈಕ್ಷಣಿಕ’ ಎಂಬ ಪದಗಳನ್ನು ಸೇರಿಸಬೇಕು.

ಮಂಡನೆಯನ್ನು ತಿರಸ್ಕರಿಸಲಾಯಿತು.

**ಮಾನ್ಯ ಸಭಾಪತಿಗಳು:** ಠರಾವನ್ನು ಕುರಿತು: ವಿಷಯವೇನೆಂದರೆ:

""ಈ ಸದನದ ಅಭಿಪ್ರಾಯದಲ್ಲಿ ಭಾರತ ಒಕ್ಕೂಟದಲ್ಲಿ ಸಂಸತ್ತು ಮತ್ತು ರಾಜ್ಯಗಳ ಶಾಸನ ಸಭೆಗಳ ಸದಸ್ಯತ್ವ ಪಡೆಯುವುದಕ್ಕೆ ಅರ್ಹತೆಗಳನ್ನು ನಿಗದಿಪಡಿಸಬೇಕು; ಅಲ್ಲದೆ ಅವುಗಳನ್ನು ಕಾರ್ಯಗತಗೊಳಿಸುವುದಕ್ಕೆ, ಈ ಕೂಡಲೇ ಆವಶ್ಯಕವಾದ ಕ್ರಮಗಳನ್ನು ಮುಂದಿನ ಚುನಾವಣೆಗೆ ಮುಂಚೆ ತೆಗೆದುಕೊಳ್ಳಬೇಕು.”

ಮಂಡನೆಯನ್ನು ತಿರಸ್ಕರಿಸಲಾಯಿತು.

◆

# ೨೧

## *ಕೂಚ್–ಬಿಹಾರ್ (ಕಾನೂನುಗಳನ್ನು ಒಗ್ಗೂಡಿಸುವಿಕೆಯ) ಮಸೂದೆ

**ಕಾನೂನು ಮಂತ್ರಿಯವರು (ಡಾ. ಅಂಬೇಡ್ಕರ್):** ಕೂಚ್ – ಬಿಹಾರ್‌ನಲ್ಲಿ ಜಾರಿಯಲ್ಲಿರುವ ಕೆಲವು ಕಾನೂನುಗಳನ್ನು ಪಶ್ಚಿಮ ಬಂಗಾಳದ ಇತರ ಕಡೆಗಳಲ್ಲಿ ಜಾರಿಯಲ್ಲಿರುವ ಕಾನೂನುಗಳೊಂದಿಗೆ ಒಗ್ಗೂಡಿಸುವುದಕ್ಕೆ ಒಂದು ಮಸೂದೆಯನ್ನು ಮಂಡಿಸಲು ಅನುಮತಿಯನ್ನು ಬೇಡುತ್ತೇನೆ.

**ಮಾನ್ಯ ಸಭಾಪತಿಗಳು:** ವಿಷಯವೇನೆಂದರೆ:

> "ಕೂಚ್ – ಬಿಹಾರ್‌ನಲ್ಲಿ ಜಾರಿಯಲ್ಲಿರುವ ಕೆಲವು ಕಾನೂನುಗಳನ್ನು ಪಶ್ಚಿಮ ಬಂಗಾಳದ ಇತರ ಕಡೆಗಳಲ್ಲಿ ಜಾರಿಯಲ್ಲಿರುವ ಕಾನೂನುಗಳೊಂದಿಗೆ ಒಗ್ಗೂಡಿಸುವುದಕ್ಕೆ ಮಸೂದೆಯನ್ನು ಮಂಡಿಸಲು ಅನುಮತಿಯನ್ನು ಕೊಡಬೇಕು."

ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

**ಡಾ. ಅಂಬೇಡ್ಕರ್:** ನಾನು ಮಸೂದೆಯನ್ನು ಮಂಡಿಸುತ್ತಿದ್ದೇನೆ.

****ಕಾನೂನು ಸಚಿವರು (ಡಾ. ಅಂಬೇಡ್ಕರ್):** ಕೂಚ್ – ಬಿಹಾರಿನಲ್ಲಿ ಜಾರಿಯಲ್ಲಿರುವ ಕೆಲವು ಕಾನೂನುಗಳನ್ನು ಪಶ್ಚಿಮ ಬಂಗಾಳದ ಇತರ ಕಡೆಗಳಲ್ಲಿ ಜಾರಿಯಲ್ಲಿರುವ ಕಾನೂನುಗಳೊಂದಿಗೆ ಒಗ್ಗೂಡಿಸಲು ಮಂಡಿಸಿರುವ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

ಇದು ಒಂದು ಸರಳವಾದ ಹಾಗೂ ಹ್ರಸ್ವವಾದ ಮಸೂದೆ. ಆದರೆ ಕಳೆದ ವಾರವಿಡೀ ನಮಗುಂಟಾದ ಅನುಭವವನ್ನು ಗಮನದಲ್ಲಿಟ್ಟುಕೊಂಡು, ನಾನು ಆಶಿಸುವುದೇನೆಂದರೆ, ಈ ಸದನದಲ್ಲಿ ಈ ಸಾಯಂಕಾಲ ಏಳುವ ಮೊದಲು ಈ ಮಸೂದೆಗೆ ಅನುಮೋದನೆ ಪಡೆಯುವ ಅದೃಷ್ಟವಿದೆಯೆಂದು ಆಶಿಸುತ್ತೇನೆ. ಸ್ವಾಮಿ, ಪಟ್ಟಿ–೧ ಮತ್ತು ಪಟ್ಟಿ–೨ರಲ್ಲಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ಕೆಲವು ಕೇಂದ್ರ ಶಾಸನಗಳನ್ನು ಕೂಚ್–ಬಿಹಾರ್‌ಗೆ ವಿಸ್ತರಿಸುವುದು ಈ ಮಸೂದೆಯ ಉದ್ದೇಶ. ಈ ಕಾನೂನುಗಳು ಯಾವಾಗ ಚಾಲನೆಗೆ ಬರಬೇಕೆಂದು ಒಂದು ದಿನವನ್ನು ಗೊತ್ತುಪಡಿಸಿ, ಅದನ್ನು ಗೆಜೆಟ್ಟಿನಲ್ಲಿ ಪ್ರಸಿದ್ಧಿಸಿ, ಕೇಂದ್ರ ಸರ್ಕಾರಕ್ಕೆ ಅಧಿಕಾರವನ್ನು ಕೊಡುವುದನ್ನು ಈ ಮಸೂದೆಯು ಪ್ರಸ್ತಾವಿಸುತ್ತದೆ. ಈ ಕಾನೂನುಗಳಿಗೆ ಒಂದು ವಿನಾಯಿತಿ ಇದೆ. ಅದೆಂದರೆ, ಮುಸ್ಲಿಂ ಷರಿಯತ್ ಕಾನೂನು. ಅದಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಒಂದು ದಿನವನ್ನು ನಿಗದಿ ಮಾಡಲು ಅಧಿಕಾರವನ್ನು ಕೊಟ್ಟಿದೆ. ಆ ಸರ್ಕಾರ ನಿಗದಿ ಮಾಡಿದ

---

* P.D., ಸಂ. ೫, ಭಾಗ II, ೪ ಆಗಸ್ಟ್ ೧೯೫೦, ಪು. ೨೯೧–೨೯೨.

** P.D., ಸಂ. ೬, ಭಾಗ II, ೧ ಡಿಸೆಂಬರ್ ೧೯೫೦, ಪು. ೧೧೪೭.

ತಾರೀಖಿನಿಂದ ಮುಸ್ಲಿಂ ಷರಿಯತ್ ಕಾನೂನು ಜಾರಿಯಾಗುತ್ತದೆ. ಕೂಚ್–ಬಿಹಾರ್ ರಾಜ್ಯವು, ೧೯೪೯ಕ್ಕೆ ಮುಂಚೆ ವಿಲೀನವಾಗಿದ್ದ ರಾಜ್ಯವಾಗಿದ್ದರೆ, ಈ ಮಸೂದೆಯು ಅನಾವಶ್ಯಕವಾಗುತ್ತಿತ್ತು. ಆದರೆ, ಈ ಸದನಕ್ಕೆ ನೆನಪಿರುವ ಹಾಗೆ, ಎಲ್ಲಾ ವಿಲೀನಗೊಂಡ ರಾಜ್ಯಗಳಿಗೆ ಕೇಂದ್ರದ ಅಷ್ಟೂ ಕಾನೂನುಗಳನ್ನು ಅನ್ವಯವಾಗುವಂತೆ ೧೯೪೯ರ ೫೯ನೇ ಅಧಿನಿಯಮದಂತೆ ಅನುಮೋದಿಸಲಾಯಿತು. ಈ ಅಧಿನಿಯಮ ನಾನು ಅಂದುಕೊಂಡಂತೆ ಅಸೆಂಬ್ಲಿಯಲ್ಲಿ (ಭಾರತ ಸಂವಿಧಾನ ಸಭೆ) ಅದರ ಡಿಸೆಂಬರ್ ಅಧಿವೇಶನದಲ್ಲಿ ಅನುಮೋದನೆಯಾಯಿತು.

ಆದರೆ ದುರದೃಷ್ಟವಶಾತ್, ಆಗ ಕೂಚ್–ಬಿಹಾರ್ ರಾಜ್ಯವನ್ನು ಪಶ್ಚಿಮ ಬಂಗಾಳದಲ್ಲಿ ವಿಲೀನಗೊಳಿಸುವ ಆದೇಶವನ್ನು ರಾಷ್ಟ್ರಪತಿಯವರು ೧೯೫೦ರಲ್ಲಿ ಹೊರಡಿಸಿದರು. ಫಲಶ್ರುತಿಯಾಗಿ ಈ ಹೆಚ್ಚುವರಿ ಮಸೂದೆ ಅವಶ್ಯವಾಯಿತು. ಇದಕ್ಕಿಂತ ಹೆಚ್ಚಿನ ವಿವರಣೆಯನ್ನು ಕೊಡಬೇಕಾಗಿರುವ ಯಾವುದೇ ಖಂಡವು ಮಸೂದೆಯಲ್ಲಿ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ.

ಡಾ. ಅಂಬೇಡ್ಕರ್ ಅವರ ಮಂಡನೆಯನ್ನು ಅನುಮೋದಿಸಲಾಯಿತು.

೧ರಿಂದ ೪ನೇ ಖಂಡಗಳನ್ನು ಮಸೂದೆಗೆ ಸೇರಿಸಲಾಯಿತು. ಶಿರೋನಾಮೆ ಮತ್ತು ಅಧಿನಿಯಮಿಸುವ ಸೂತ್ರವನ್ನು ಮಸೂದೆಗೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:** ಸ್ವಾಮಿ, ನಾನು ಮಂಡಿಸುವುದು ಏನೆಂದರೆ:

"ಮಸೂದೆಯು ಅನುಮೋದನೆಯಾಗಲಿ."

**ಮಾನ್ಯ ಸಭಾಪತಿಯವರು:** ವಿಷಯವೇನೆಂದರೆ:

"ಮಸೂದೆಯು ಅನುಮೋದನೆಯಾಗಲಿ."

ಮಸೂದೆಯನ್ನು ಅಳವಡಿಸಿಕೊಳ್ಳಲಾಯಿತು.

◆

# ೨೨

## *ಭಾರತ ಜಕಾತಿ (೪ನೇ ತಿದ್ದುಪಡಿ) ಮಸೂದೆ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ನನ್ನ ಮಿತ್ರ ಮಿ. ತ್ಯಾಗಿ ಅವರು ಇಂಥದೊಂದು ವಿಷಯವನ್ನು ಎತ್ತಿರುವುದು ನನಗೆ ಬಹಳ ಆಶ್ಚರ್ಯವಾಗಿದೆ. ಇದೇ ತ್ಯಾಗಿ ಅವರು ತಾನು ಈ ದೇಶದ ಅತ್ಯಂತ ತಿಳುವಳಿಕೆಯಿಲ್ಲದ ಜನಗಳನ್ನು ಪ್ರತಿನಿಧಿಸುತ್ತಿದ್ದೇನೆಂದು ಸದಾ ಹೇಳುತ್ತಿದ್ದರು. ಈ ವಿಷಯ ಅನೇಕ ವಕೀಲರನ್ನು ಗೊಂದಲಕ್ಕೀಡುಮಾಡಿತ್ತು. ನನ್ನ ಸ್ನೇಹಿತರು ಈ ವಿಷಯವನ್ನು ಬೇರೆಯವರಿಗೆ ಬಿಟ್ಟಿದ್ದರೆ ಪ್ರಯೋಜನವಾಗುತ್ತಿತ್ತೆಂದು ನನಗೆ ತೋಚುತ್ತದೆ. ಈಗ ವಿಷಯವನ್ನು ಎತ್ತಿರುವುದರಿಂದ ಮತ್ತು ಈ ವಿಷಯ ಬಹಳ ಮುಖ್ಯವಾದುದೆಂದೂ, ಅದು ತೀರ್ಮಾನವಾಗಲೇಬೇಕೆಂದು ನಿಮ್ಮ ಅಭಿಪ್ರಾಯವನ್ನು ನೀವು ವ್ಯಕ್ತಪಡಿಸಿರುವುದರಿಂದ, ಆ ವಿಷಯದ ಮೇಲೆ ಕೆಲವು ಟೀಕೆಗಳನ್ನು ಮಾಡಲು ನಾನು ಬಯಸುತ್ತೇನೆ. ನಾನು ಮಿ. ತ್ಯಾಗಿಯವರ ಟೀಕೆಗಳನ್ನು ಕೇಳುತ್ತಿದ್ದಾಗ, ಬೇರೆ ಬೇರೆಯಾಗಿ ಇಡಬೇಕಾದ ಎರಡು ವಿವಾದಾಂಶಗಳ ಬಗ್ಗೆ ಅವರು ಗೊಂದಲಕ್ಕೀಡಾಗಿದ್ದಾರೆಂದು ನನಗೆ ಅನಿಸಿತು. ಮೊದಲನೆಯದು, ಅದು (ಪಾರ್ಲಿಮೆಂಟು) ತನ್ನ ಅಧಿಕಾರವನ್ನು ನಿಯೋಜಿಸಬಹುದೆ ಎಂಬುದು. ಎರಡನೆಯದು, ಪಾರ್ಲಿಮೆಂಟು ನಿಯೋಜಿಸಲೇ ಬೇಕೆ ಎಂಬುದು. ನನ್ನ ವಿವೇಚನದಲ್ಲಿ ಇವೆರಡೂ ತೀರಾ ಭಿನ್ನವಾದ ಪ್ರಶ್ನೆಗಳು. ಯಾವುದೇ ಒಂದರ ಮೇಲೆ ತೀರ್ಮಾನಕ್ಕೆ ಬರಬೇಕಾದರೆ, ನಾವು ಬಹಳಷ್ಟು ಭಿನ್ನವಾಗಿ ಪರಿಗಣನೆ ಮಾಡಬೇಕು. ಪಾರ್ಲಿಮೆಂಟು ನಿಯೋಜನೆ ಮಾಡಬಹುದೆ ಎಂಬ ಮೊದಲನೆಯ ಪ್ರಶ್ನೆಯನ್ನು ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ಅದು ಒಂದೇ ಪ್ರಶ್ನೆ.

**ಶ್ರೀ ತ್ಯಾಗಿ:** ಇಲ್ಲ.

**ಡಾ. ಅಂಬೇಡ್ಕರ್:** ಆ ವಿಷಯದ ಮೇಲೆ ನನ್ನ ಮಟ್ಟಿಗೆ ಹೇಳುವುದಾದರೆ, ಪಾರ್ಲಿಮೆಂಟು ತನ್ನ ಅಧಿಕಾರವನ್ನು ಇತರ ಏಜನ್ಸಿಗಳಿಗೆ ನಿಯೋಜಿಸಬಲ್ಲದೆಂಬುದರಲ್ಲಿ ನನಗೆ ಅನುಮಾನವಿಲ್ಲ. ಆದರೆ, ಇದು ಒಂದು ನಿಬಂಧನೆಗೆ ಒಳಪಡುತ್ತದೆ. ಹೀಗೆ ನಿಯೋಜನೆ ಮಾಡುವುದರಿಂದ ಸಂಸತ್ತು ತಾನು ಯಾವ ಅಧಿಕಾರವನ್ನು ನಿಯೋಜಿಸಿತೋ, ಆ ಅಧಿಕಾರವನ್ನು ಕಳೆದುಕೊಳ್ಳುವುದಿಲ್ಲ. ಆ ಅಧಿಕಾರವನ್ನು ಹಿಂದಕ್ಕೆ ಪಡೆಯಬಹುದು. ಒಂದು ಉದ್ದೇಶಕ್ಕಾಗಿ ನಿಯೋಜನೆ ಮಾಡಬಹುದು. ಕೆಲ ಸಮಯದವರೆಗೆ ನಿಯೋಜನೆ ಮಾಡಬಹುದು. ತಾನು ನಿಯೋಜಿಸಿದ ಅಧಿಕಾರವನ್ನು ಹಿಂದಕ್ಕೆ ಪಡೆಯಬಲ್ಲಂಥ ನಿಯೋಜನೆ ವಾಸ್ತವವಾಗಿ ನಿಯೋಜನೆಯೇ ಅಲ್ಲ. ಈ ನಿರ್ದಿಷ್ಟ ಪರೀಕ್ಷೆಗೆ ಸರಿಹೋಲುವ ಕಾನೂನು ಕ್ರಮವನ್ನು ಅಧಿನಿಯಮಿಸಲು ಪಾರ್ಲಿಮೆಂಟಿಗೆ ಸಕ್ಷಮತೆ ಇದೆ. ಈ ವಿಷಯವನ್ನು ಕುರಿತು ವ್ಯವಹರಿಸಿರುವ

---

* P.D., ಸಂ. ೬, ಭಾಗ II, ೪ ಡಿಸೆಂಬರ್ ೧೯೫೦, ಪು. ೧೧೭೧–೭೬.

ಆಸ್ಟ್ರೇಲಿಯಾದ ಉಚ್ಚ ನ್ಯಾಯಾಲಯ ನೀಡಿರುವ ಒಂದು ತೀರ್ಮಾನವನ್ನು ಓದುವುದಕ್ಕಿಂತ ಹೆಚ್ಚಾಗಿ ಇನ್ನೇನನ್ನೂ ನಾನು ಮಾಡಬೇಕಾಗಿಲ್ಲ. ಈ ಮಸೂದೆಯು ಎತ್ತಿರುವ ಇದೇ ವಿಷಯದ ಮೇಲೆ, ಇನ್ನೊಂದು ಪ್ರಕರಣದ ತೀರ್ಪನ್ನು ಉದ್ಧರಿಸುತ್ತೇನೆ. ಆ ಪ್ರಕರಣದಲ್ಲಿ (ವೀಕ್ಸ್ ವಿ; ಡಿಗ್‌ನ್ಯಾನ್, ೪೬, ಕಾಮನ್ ವೆಲ್ತ್ ಕಾನೂನು ವರದಿಗಳು, ಪುಟ ೧೧೭), ಮಿ. ಜಸ್ಟಿಸ್ ಎವಾಟ್ ಹೀಗೆ ಹೇಳುತ್ತಾರೆ:

> "ಆಸ್ಟ್ರೇಲಿಯದ ಸಂವಿಧಾನವನ್ನು ರೂಪಿಸಿದ ರಾಜ್ಯತಂತ್ರಜ್ಞರು, ಹಾಗೂ ವಕೀಲರುಗಳು ಸ್ವಯಮಾಡಳಿತ ವಸಾಹತುಗಳಿಗೆ ಸಂಬಂಧಿಸಿದ ಹಾಗೆ ಶಾಸನ ರೂಪಿಸುವ ಅಧಿಕಾರವನ್ನು ಚರ್ಚಿಸುವಾಗ ಕೆಲವು ಸೀಮಿತ ಕ್ಷೇತ್ರ ಅಥವ ವಿಷಯಗಳ ಮೇಲೆ ತಮ್ಮ ಗಮನದಲ್ಲಿಟ್ಟುಕೊಂಡಿದ್ದ ಅಧಿಕಾರ, ಬ್ರಿಟಿಷ್ ಪಾರ್ಲಿಮೆಂಟಿಗೆ ಇದ್ದ ಅಧಿಕಾರವನ್ನು ಹೋಲುತ್ತಿತ್ತು. ಪಾರ್ಲಿಮೆಂಟು ಹೊರಡಿಸಬಹುದಾದ ಕಟ್ಟುಪಾಡಿನ ಆದೇಶಗಳನ್ನು ಮೀರಿ ಸಹ ಇಂಥ ಅಧಿಕಾರವೂ ಯಾವಾಗಲೂ ವಿಸ್ತರಿಸುತ್ತಿತ್ತು. ತಾನು ಆರಿಸಿದ ಯಾವುದೇ ವ್ಯಕ್ತಿ ಅಥವ ಪ್ರಾಧಿಕಾರಕ್ಕೆ ಇಂಥ ಆಜ್ಞೆಗಳನ್ನು ಹೊರಡಿಸುವುದಕ್ಕೆ ಸ್ವತಃ ಪಾರ್ಲಿಮೆಂಟು ಅಧಿಕಾರವನ್ನು ಕೊಡಬಹುದಾಗಿತ್ತು. ಶಾಸನಾಧಿಕಾರವೆಂದರೆ ಶಾಸನ ಮಾಡುವ ಅಧಿಕಾರವನ್ನು ಬೇರೆಯವರಿಗೆ ನಿಯೋಜಿಸುವುದು, ಅಥವ ಬೇರೆಯವರಲ್ಲಿ ಇಟ್ಟು ಬಿಡುವುದು (ಡಿಪಾಸಿಟ್) ಎಂದೂ ಕೂಡ ವಿಶೇಷಾರ್ಥವಿತ್ತು. ಏಕೆಂದರೆ, ಇದು (ನಿಯೋಜಿಸುವ ಅಧಿಕಾರ) ಪಾರ್ಲಿಮೆಂಟಿನ ಸಾರ್ವಭೌಮತ್ವದ ಕಲ್ಪನೆಯಲ್ಲಿ ಹುದುಗಿತ್ತು. ಆದರೆ, ಈ ನಿಯೋಜಿತ ಅಧಿಕಾರ ಅಥವ ನಿಧಿಯಲ್ಲಿಡುವ ಅಧಿಕಾರವನ್ನು ಪಾರ್ಲಿಮೆಂಟು ಯಾವತ್ತೂ ಹಿಂದೆ ಪಡೆಯಬಹುದಾಗಿತ್ತು. ಈ ಅರ್ಥದಲ್ಲಿ ಪಾರ್ಲಿಮೆಂಟು ತನ್ನ ಸ್ವಾಮ್ಯವನ್ನು ಕುಂದು ಬಾರದಂತೆ ಸಂರಕ್ಷಿಸಿಕೊಳ್ಳಲೇಬೇಕಾಗಿತ್ತು."

ನಾನು ಇನ್ನೂ ಅನೇಕ ಉದ್ಧೃತ ಭಾಗಗಳನ್ನು ಓದಬಲ್ಲೆ. ಆದರೆ ಈ ಸದನಕ್ಕೆ ತೊಂದರೆ ಕೊಡಲು ನನಗೆ ಇಷ್ಟವಿಲ್ಲ. ಪಾರ್ಲಿಮೆಂಟು ಕಾನೂನು ಬದ್ಧವಾಗಿ ನಿಯೋಜನೆ ಮಾಡಬಲ್ಲುದೆ ಎಂಬ ಪ್ರಶ್ನೆಯನ್ನು ತೀರ್ಮಾನಿಸುವಲ್ಲಿ ನಾವು ಪರೀಕ್ಷೆ ಮಾಡಬೇಕಾದುದು ಇದು. ತಾನು ಬೇರೊಬ್ಬರಿಗೆ ನಿಯೋಜಿಸಿದ ಅಧಿಕಾರವನ್ನು ಹಿಂದಕ್ಕೆ ಪಡೆಯುವ ಸಾಮರ್ಥ್ಯವನ್ನು ಉಳಿಸಿಕೊಂಡಿದೆಯೇ ಇಲ್ಲವೆ ಎಂಬುದನ್ನು ನೋಡಬೇಕು. ಆದ್ದರಿಂದ ಪಾರ್ಲಿಮೆಂಟು ನಿಯೋಜಿಸಬಲ್ಲುದೆ ಎಂಬ ಮೊದಲನೆಯ ಪ್ರಶ್ನೆಗೆ ಉತ್ತರಿಸಬೇಕಾದರೆ ನಾವು ಪರೀಕ್ಷಿಸಬೇಕಾಗಿರುವುದು ನಿಯೋಜನೆ ಮಾಡಬೇಕಾದ ಕಾರಣಗಳನ್ನು. ಹಾಗೆ ಮಾಡಿದರೆ, ನಿಗದಿಪಡಿಸಿದ ಪರೀಕ್ಷೆಯನ್ನು ಈಡೇರಿಸಲಾಗಿದೆಯೆ ಇಲ್ಲವೆ, ಅಥವ ಆ ಮಸೂದೆಯಲ್ಲಿರುವ ಯಾವುದಾದರೂ ಒಂದು ಸಂಗತಿ ಹಿಂದಕ್ಕೆ ಪಡೆಯದ ಹಾಗೆ ಸಂಸತ್ತನ್ನು ಪ್ರತಿಬಂಧಿಸುತ್ತದೆಯೆ ಎಂಬುದು ಗೊತ್ತಾಗುತ್ತದೆ. ಅದು ಮೊದಲನೆಯ ವಿಷಯ. ಈಗ ಇದೇ ಪ್ರಶ್ನೆಯ ಮೇಲೆ ಹೌಸ್ ಆಫ್ ಲಾರ್ಡ್ಸ್ ನ ಪ್ರೀವಿ ಕೌನ್ಸಿಲ್ ಕೊಟ್ಟಿರುವ ಒಂದು ನಿರ್ವಚನ ಇದೆಯೆಂದು ತಿಳಿಸಲು ಸಂತೋಷಿಸುತ್ತೇನೆ. (ಅಪೀಲು ಪ್ರಕರಣಗಳು, ಸಂಪುಟ ೧೦, ೨೮೨ನೇ ಪುಟ) ಆ ಪ್ರಕರಣಕ್ಕೂ ನಮ್ಮ ಮುಂದಿರುವ ಪ್ರಕರಣಕ್ಕೂ ಪೂರಾ ಹೋಲಿಕೆ ಇದೆ. ಅಲ್ಲಿ ನಡೆದಿದ್ದೇನೆಂದರೆ, ಕಾಮನ್‌ವೆಲ್ತ್ ದೇಶಗಳಲ್ಲಿ ಒಂದರ ಶಾಸನ ಸಭೆಯು ಅದರ ರಾಜ್ಯಪಾಲರಿಗೆ (ಗವರ್ನರ್) ಅಧಿಕಾರ ಕೊಡುವ ಒಂದು ಕಾನೂನನ್ನು ಅನುಮೋದಿಸಿತು. ಇಲ್ಲಿ 'ಗವರ್ನರ್' ಅಂದರೆ ಕಾರ್ಯಾಂಗ ಎಂದು ಅರ್ಥ

ಮಾಡಿಕೊಳ್ಳಬೇಕು. ಆ ಕಾನೂನಿನ ಪ್ರಕಾರ ಸೀಮಾ ಸುಂಕ ಅಧಿನಿಯಮದ ಅನುಸೂಚಿಯಲ್ಲಿ ಇಲ್ಲದ ಕೆಲವು ವಸ್ತುಗಳ ಮೇಲೆ (ಯಾವುದೋ ಹೊಸ ವಸ್ತು ಇಲ್ಲವೇ ಅದೇ ರೀತಿಯ ವಸ್ತು) ಸೀಮಾ ಸುಂಕವನ್ನು ವಿಧಿಸುವುದಕ್ಕೆ ಅಧಿಕಾರವನ್ನು ಕೊಟ್ಟಿತು.

**ಶ್ರೀ ಸೋಂಧಿ:** ಅದು ಸ್ಥಿರವಾದ ದರವೋ ಇಲ್ಲವೋ ಬದಲಾವಣೆಯಾಗುವ ದರವೋ? ಅದೊಂದೇ ವಿಷಯ.

**ಮಾನ್ಯ ಸಭಾಪತಿಗಳು:** ಅವರನ್ನು ಮುಂದುವರಿಯುವುದಕ್ಕೆ ಬಿಡಿ.

**ಡಾ. ಅಂಬೇಡ್ಕರ್:** ವಿಷಯ ಅದಲ್ಲ. ಇಲ್ಲಿ, ಈ ಕಾನೂನಿನಿಂದ ಕಾರ್ಯಾಂಗಕ್ಕೆ ಒಂದು ವಸ್ತುವಿನ ಮೇಲೆ ಸೀಮಾ ಸುಂಕವನ್ನು ವಿಧಿಸಲು ನಾವು ಅಧಿಕಾರವನ್ನು ಕೊಡುತ್ತಿದ್ದೇವೆ. ಆ ಸುಂಕ ಎಷ್ಟು, ಅದನ್ನು ಹೆಚ್ಚು ಕಡಿಮೆ ಮಾಡಬಹುದೆ ಎಂಬುದು ನನಗೆ ಬೇಕಿಲ್ಲ – ಆ ವಸ್ತು ಅನುಸೂಚಿಯಲ್ಲಿ ಇಲ್ಲದ ವಸ್ತು. ಅದು ವಿಷಯ. ಇಲ್ಲಿನ ಸಂದರ್ಭ ಆ ಸಂದರ್ಭಕ್ಕೆ ಎಲ್ಲಾ ರೀತಿಯಲ್ಲೂ ಹೋಲುತ್ತದೆ. ಆ ದೇಶದ ಸರ್ವೋಚ್ಚ ನ್ಯಾಯಾಲಯ ಆ ಕಾನೂನನ್ನು ಅದು ನಿಯೋಜನೆಯಾದ್ದರಿಂದ ಅಧಿಕಾರಾತೀತ ಎಂದು ನಿರ್ಧರಿಸಿತು. ಆದರೆ ಪ್ರೀವಿ ಕೌನ್ಸಿಲ್ ಆ ತೀರ್ಮಾನವನ್ನು ತಳ್ಳಿ ಹಾಕಿತು. ಪ್ರೀವಿ ಕೌನ್ಸಿಲ್‌ನ ತೀರ್ಪಿನ ಒಂದು ಸಣ್ಣ ಭಾಗವನ್ನು ಓದುತ್ತೇನೆ. ಪ್ರೀವಿ ಕೌನ್ಸಿಲ್ ಹೇಳಿರುವುದು ಇಷ್ಟು:

> ""ಪ್ರಶ್ನಿತ ತೆರಿಗೆಯನ್ನು ಶಾಸಕಾಂಗ ಸಭೆಯಲ್ಲದೆ ಗವರ್ನರ್ ಅವರು ವಿಧಿಸಿದ್ದಾರೆ. ಅಧಿಕಾರವಿರುವುದು ಶಾಸಕಾಂಗಕ್ಕೆ ಮಾತ್ರ. ಆದರೆ ಈ ತೆರಿಗೆಗಳನ್ನು ಪರಿಷತ್ತಿನ ಆದೇಶದಂತೆ ವಿಧಿಸಲಾಗಿದೆ. ಅಧಿನಿಯಮದಿಂದ ದತ್ತವಾದ ಅಧಿಕಾರದಿಂದ ಈ ಆದೇಶವನ್ನು ಹೊರಡಿಸಲಾಯಿತು. ಶಾಸನ ಸಭೆಯು ರಾಜ್ಯಪಾಲರ ಮೇಲೆ ತನಗಿರುವ ಪರಿಪೂರ್ಣ ಹತೋಟಿಯನ್ನು ಬಿಟ್ಟುಕೊಟ್ಟಿಲ್ಲ. ಅವರಿಗೆ ಕೊಟ್ಟ ಅಧಿಕಾರವನ್ನು ಯಾವ ಕ್ಷಣದಲ್ಲಿಯಾದರೂ......... ಬದಲಾಯಿಸುವ ಅಥವ ಹಿಂದಕ್ಕೆ ಪಡೆಯುವ ಅಧಿಕಾರ ಇದ್ದೇ ಇದೆ. ಈ ಸಂದರ್ಭದಲ್ಲಿ (ಪ್ರೀವಿ ಕೌನ್‌ಸಿಲ್‌ನ) ನ್ಯಾಯಮೂರ್ತಿಗಳು ಅಭಿಪ್ರಾಯಪಡುವುದೇನೆಂದರೆ "೧೮೭೯ರ ಸೀಮಾ ಸುಂಕ ನಿಯಂತ್ರಣ ಅಧಿನಿಯಮದ ೧೩೩ನೇ ಕಲಮನ್ನು ಶಾಸನ ಸಭೆಗಿರುವ ಅಧಿಕಾರಕ್ಕೆ ಅತೀತವಾದದ್ದು ಎನ್ನುವ ಸರ್ವೋಚ್ಚ ನ್ಯಾಯಾಲಯದ ಘೋಷಣೆ ತಪ್ಪಾಗಿದೆ"

**ಪಂಡಿತ್ ಬಾಲಕೃಷ್ಣ ಶರ್ಮ:** ನಾನು ನಿವೇದನೆ ಮಾಡಬಹುದೆ, ಸ್ವಾಮಿ........

**ಮಾನ್ಯ ಸಭಾಪತಿಗಳು:** ಅವರು ಹೇಳುತ್ತಿರುವುದನ್ನು ತಾಳ್ಮೆಯಿಂದ ಕೇಳೋಣ. ಏನಾದರೂ ಹೇಳುವುದಿದ್ದರೆ ಮಾನ್ಯ ಸದಸ್ಯರನ್ನು (ನಾನೇ) ಕೇಳುತ್ತೇನೆ.

**ಡಾ. ಎಸ್.ಪಿ. ಮುಖರ್ಜಿ (ಪಶ್ಚಿಮ ಬಂಗಾಳ):** ಅದು ಯಾವ ದೇಶ?

**ಡಾ. ಅಂಬೇಡ್ಕರ್:** ಆಸ್ಟ್ರೇಲಿಯಾದಲ್ಲಿನ ಯಾವುದೋ ಒಂದು ವಸಾಹತು. ಮಾನ್ಯ ಸ್ನೇಹಿತರಿಗೆ ಕುತೂಹಲವಿದ್ದರೆ ಹೇಳುತ್ತೇನೆ.

**ಶ್ರೀ ತ್ಯಾಗಿ:** ಅದು ಒಂದು ಸಣ್ಣದೇಶವಾಗಿರಬಹುದು.

**ಡಾ. ಅಂಬೇಡ್ಕರ್:** ಕಾನೂನು ಸಣ್ಣದೂ ಅಲ್ಲ. ದೊಡ್ಡದೂ ಅಲ್ಲ. ಕಾನೂನು ಕಾನೂನೇ. ಅದು ನ್ಯೂ ಸೌತ್ ವೇಲ್ಸ್. ಹೀಗೆ, ಸಂಸತ್ತು ನಿಯೋಜಿಸಬಹುದೆ ಎಂಬ ಮೊದಲನೇ ಪ್ರಶ್ನೆಗೆ ನನ್ನ ನಿವೇದನೆ ಇದು. ನಾವು ಈ ನಿಬಂಧನೆಯನ್ನು ಆಚರಣೆಯಲ್ಲಿ ಇಟ್ಟಿರುವವರೆಗೂ, ಅಂಥ ಯಾವುದೇ

ನಿಯೋಜನೆಯನ್ನು ಹಿಂದಕ್ಕೆ ಪಡೆಯುವ ಅಧಿಕಾರವನ್ನು ಸಂಸತ್ತು ತನ್ನ ಕೈಯಲ್ಲಿ ಇಟ್ಟುಕೊಂಡಿರುವವರೆಗೂ, ಯಾವುದೇ ಕಾನೂನು ಸಮ್ಮತ ಆಕ್ಷೇಪಣೆ ಇರಲಾರದು. ನಾನು ಮುಂದುವರಿಯುವ ಮುಂಚೆ, ಈ ಪ್ರಶ್ನೆಯನ್ನು ತೀರ್ಮಾನಿಸಲು ಈ ಸದನಕ್ಕೆ ಸಕ್ಷಮತೆಯಿಲ್ಲ ಎಂದು ಹೇಳಬಯಸುತ್ತೇನೆ. ಖಂಡಿತವಾಗಿಯೂ ಇದೊಂದು ಕ್ರಿಯಾಲೋಪವಲ್ಲ. ಕ್ರಿಯಾಲೋಪವು ಈ ಸದನದ ನಡವಳಿಕೆಗಳ ನಿಯಮಗಳಿಗೆ ಸಂಬಂಧಿಸಿದ್ದು. ನಾವು ಇಲ್ಲಿ ವ್ಯವಹರಿಸುತ್ತಿರುವುದು ಈ ಸದನದ ಸಕ್ಷಮತೆಯನ್ನು ಕುರಿತದ್ದಾಗಿದೆ. ಸ್ವಾಮಿ, ಈ ಸದನ ಅಥವ ನೀವು ಇದನ್ನು ಅಧಿಕಾರಾತೀತವೆಂದು ತೀರ್ಮಾನಿಸಿದರೆ, ಹಾಗಿದ್ದರೂ ಕೂಡ ಸಂಸತ್ತು ಕಾನೂನು ರಚಿಸುವುದನ್ನು ಮುಂದುವರಿಸಿದರೆ, ಆಮೇಲೆ ವಿಷಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋದರೆ, ಸರ್ವೋಚ್ಚನ್ಯಾಯಾಲಯ ಇದೇನೂ ಅಧಿಕಾರಾತೀತವಲ್ಲವೆಂದು ತೀರ್ಮಾನಿಸಿದರೆ (ಇಂಟ್ರವೈರ್ಸ್–ಅಧಿಕಾರಕ್ಕೆ ಒಳಪಟ್ಟಿರುವ) ಆಗ ಸಂಧಿಗ್ಧ ಪರಿಸ್ಥಿತಿ ಉದ್ಭವವಾಗುತ್ತದೆ. ಅಥವ ಅಧಿಕಾರಕ್ಕೆ ಒಳಪಡುವುದೆಂಬ ನಂಬಿಕೆಯ ಮೇಲೆ, ನಾವು ಮುಂದುವರಿದಿದ್ದೇ ಆದರೆ, ಆಗ ವಿಷಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ, ಸರ್ವೋಚ್ಚ ನ್ಯಾಯಾಲಯ ಅದನ್ನು ಅಧಿಕಾರಾತೀತವೆಂದು ನಿರ್ಧರಿಸಿದರೆ ನಾವೇ ಒಂದು ದೊಡ್ಡ ಕಷ್ಟಕ್ಕೆ ಸಿಲುಕಿ ಹಾಕಿಕೊಳ್ಳುತ್ತೇವೆ. ನಾನು ಹೇಳಬಯಸುವುದು ಇಷ್ಟೆ. (ಸಂಸತ್ತಿನ) ಸಕ್ಷಮತೆಯನ್ನು ಕುರಿತಾದ ಪ್ರಶ್ನೆಗಳನ್ನು ಎತ್ತುವ ಈ ಎಲ್ಲ ಪ್ರಯತ್ನಗಳು, ನಿಜವಾಗಿಯೂ ಪಾರ್ಲಿಮೆಂಟನ್ನು ಒಂದು ನ್ಯಾಯಾಲಯವನ್ನಾಗಿ ಪರಿವರ್ತಿಸುವ ಒಂದು ಪ್ರಯತ್ನವಾಗಿದೆ. ಇದು ನ್ಯಾಯಾಲಯವಲ್ಲ. ನ್ಯಾಯಿಕ ವಿಷಯವನ್ನು ತೀರ್ಮಾನಿಸಲು ಸರ್ವೋಚ್ಚನ್ಯಾಯಾಲಯಕ್ಕೆ ಬಿಟ್ಟುಬಿಡುವುದು ಅತ್ಯುತ್ತಮವಾದದ್ದು. ನಾವು ಏನು ಮಾಡಿದರೂ ಪಾರ್ಲಿಮೆಂಟಿನ ಸಕ್ಷಮತೆಗೆ ಒಳಪಟ್ಟಿರುವುದೆಂಬ ತಿಳುವಳಿಕೆಯ ಮೇಲೆ ಮುಂದುವರಿಯುವುದು ಒಳ್ಳೆಯದು. ಆದ್ದರಿಂದ ನನ್ನ ನಿವೇದನೆ ಏನೆಂದರೆ, ಇದು ಕ್ರಿಯಾಲೋಪವಲ್ಲ ಮತ್ತು ಇದನ್ನು ಕ್ರಿಯಾಲೋಪದ ಹಾಗೆ ವ್ಯವಹರಿಸಬಾರದು. ಸಂಸತ್ತು ನಿಯೋಜಿಸಲೇಬೇಕೆಂಬ ಇನ್ನೊಂದು ಪ್ರಶ್ನೆಗೆ ಬರುತ್ತೇನೆ. ಈ ವಿಷಯ ಸಂಪೂರ್ಣವಾಗಿ ಸಂಸತ್ತಿನ ಸಕ್ಷಮತೆಯೊಳಗೆ ಬರುತ್ತದೆ. "ಪರಿಪೂರ್ಣವಾಗಿ" ಎನ್ನುವಾಗ ನಾನು ಯಾವ ಮಿತಿಯೂ ಇಟ್ಟುಕೊಳ್ಳದೆ ಮುಕ್ತವಾಗಿ ಹೇಳುತ್ತಿದ್ದೇನೆ. ಕೆಲವು ಸಂದರ್ಭಗಳಲ್ಲಿ ಸಂಸತ್ತು ತಾನು ನಿಯೋಜಿಸಕೂಡದು ಎಂದು ಅಂದುಕೊಂಡರೆ, ಒಳ್ಳೆಯದು, ಸಂಸತ್ತು ತಾನು ನಿಯೋಜಿಸುವುದಿಲ್ಲವೆಂದು ಒತ್ತಾಯ ಮಾಡಬೇಕು. ಮತ್ತೆ ಆ ವಿಷಯದಲ್ಲಿ ಸಂಸತ್ತು ತಾನೇ ವ್ಯವಹರಿಸಬೇಕು. ಕೆಲವು ಸಂದರ್ಭಗಳಲ್ಲಿ, ಅಂದರೆ ತುರ್ತುಪರಿಸ್ಥಿತಿ ಇತ್ಯಾದಿಗಳಲ್ಲಿ, ಸಂಸತ್ತು ಸೇರುವುದಕ್ಕೆ ಆಗದಿದ್ದರೆ ಮತ್ತು ಕಾರ್ಯಾಂಗ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕಾಗಿ ಬಂದಲ್ಲಿ 'ನಿಸ್ಸಂದೇಹವಾಗಿ ಅಂಥ ಸಂದರ್ಭಗಳನ್ನು ಪಾರ್ಲಿಮೆಂಟ್ ಗಣನೆಗೆ ತೆಗೆದುಕೊಳ್ಳುತ್ತದೆ. ಸಂದರ್ಭಗಳೂ ಸಹ ಸ್ವಲ್ಪಮಟ್ಟಿಗೆ ನಿಯೋಜನೆಗೆ ಅನುಮತಿ ಕೊಡುವಂಥದಾಗಿರುತ್ತವೆ. ಆದ್ದರಿಂದ, ಈ ಮಸೂದೆಯನ್ನು ಈ ದೃಷ್ಟಿಕೋನದಿಂದ ನೋಡಲೇಬೇಕಾಗಿದೆ. ಎರಡನೇ ಪ್ರಶ್ನೆ ನಾವು ನಿಯೋಜಿಸಲೇ ಬೇಕೆ ಅಥವ ಬೇಡವೆ ಎಂದು. ನನ್ನ ಸ್ನೇಹಿತ ಮಿ. ತ್ಯಾಗಿ ಅವರು ಕ್ಯಾಂಪಿಯನ್ ಅವರ ಹೆಸರನ್ನು ಉಲ್ಲೇಖ ಮಾಡಿ ತೆರಿಗೆಯ ಬಗ್ಗೆ ಅವರು ಕೊಟ್ಟಿರುವ ಅಭಿಪ್ರಾಯವನ್ನು ಉಲ್ಲೇಖ ಮಾಡಿದರು. ತೆರಿಗೆಗಳನ್ನು ಕುರಿತಾದ ವಿಷಯದಲ್ಲಿ ಸಂಸತ್ತು ಅಳವಡಿಸಿಕೊಳ್ಳುವುದಕ್ಕೆ ಇದೇ ಸರಿಯಾದ ನಿಲುವು. ಇದರ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವ ಸಂದೇಹವೂ ಇಲ್ಲ. ತೆರಿಗೆ ವಿಧಿಸುವ ಅಧಿಕಾರ ಬಹುಮುಖ್ಯವಾದ ಅಧಿಕಾರ. ಸರ್ಕಾರವನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಮತ್ತು ಸರ್ಕಾರಕ್ಕೆ ಆದೇಶ ಕೊಡುವುದಕ್ಕೆ ಪಾರ್ಲಿಮೆಂಟಿಗೆ ಇರುವುದು ನಿಜವಾಗಿಯೂ ಇದು ಒಂದೇ ಅಧಿಕಾರ,

ಕಂದಾಯವನ್ನು ಎತ್ತುವುದಕ್ಕೆ ತನಗಿರುವ ಶಾಶ್ವತ ಅಧಿಕಾರವನ್ನು ಕಾರ್ಯಾಂಗಕ್ಕೆ ಕೊಟ್ಟುಬಿಡುವುದಾದರೆ, ಕಾರ್ಯಾಂಗವು ಸಂಸತ್ತನ್ನು ಲೆಕ್ಕಿಸುವುದಿಲ್ಲ. ಆದ್ದರಿಂದ ಈ ಅಧಿಕಾರವನ್ನು ಸಂಸತ್ತು ತನ್ನ ಕೈಯಲ್ಲಿಯೇ ಇಟ್ಟುಕೊಳ್ಳುವುದು ಬಹಳ ಅಪೇಕ್ಷಣೀಯವಾದುದು. ಬ್ರಿಟಿಷ್ ಸಂಸತ್ತು ಕಾರ್ಯಾಂಗವನ್ನು ನನಗೆ ಗೊತ್ತಿರುವ ಹಾಗೆ ಎರಡು ರೀತಿಯಲ್ಲಿ ಹತೋಟಿಯಲ್ಲಿಟ್ಟುಕೊಂಡಿದೆ. ಅವರಿಗೆ ಕೆಲವು ಮುಖ್ಯವಾದ ಅಧಿನಿಯಮಗಳಿವೆ. ಅವು ವಾರ್ಷಿಕ ಅಧಿನಿಯಮಗಳು. ಇವು ಯಾವತ್ತಿಗೂ ಶಾಶ್ವತವಾದ ಅಧಿನಿಯಮಗಳಲ್ಲ. ಉದಾಹರಣೆಗೆ ಇಂಗ್ಲೆಂಡಿನ ಸೇನಾ ಅಧಿನಿಯಮ. ಇದು ಒಂದು ವಾರ್ಷಿಕ ಅಧಿನಿಯಮ. ಪ್ರತಿವರ್ಷವೂ ಈ ಅಧಿನಿಯಮವನ್ನು ನವೀಕರಿಸಿಕೊಳ್ಳುವುದಕ್ಕೆ ಕಾರ್ಯಾಂಗವು ಪಾರ್ಲಿಮೆಂಟಿನ ಮುಂದೆ ಬರಲೇಬೇಕು. ಅವರು ಅದನ್ನು ನವೀಕರಿಸಿಕೊಳ್ಳದಿದ್ದರೆ, ಸೇನೆಯನ್ನೆಲ್ಲಾ ಬರಖಾಸ್ತುಗೊಳಿಸಬೇಕಾಗುತ್ತದೆ. ಕಾರಣ, ಅದನ್ನು ನಿರ್ವಹಿಸುವ ಯಾವುದೇ ಕಾನೂನು ಇರುವುದಿಲ್ಲ. ಬ್ರಿಟಿಷ್ ಪಾರ್ಲಿಮೆಂಟ್ ಕಾರ್ಯಾಂಗವನ್ನು ಹತೋಟಿಯಲ್ಲಿಟ್ಟುಕೊಳ್ಳುವ ಇನ್ನೊಂದು ರೀತಿಯೆಂದರೆ ಕರ(ತೆರಿಗೆ)ವನ್ನು ವಿಧಿಸುವ ಕ್ರಮ. ಕೆಲವು ತೆರಿಗೆಗಳನ್ನು ಉದಾಹರಣೆಗೆ ಆದಾಯ ತೆರಿಗೆಯನ್ನು ವಾರ್ಷಿಕ ತೆರಿಗೆಯನ್ನಾಗಿ ಮೀಸಲಿಡುವುದು. ಬ್ರಿಟಿಷ್ ಸರ್ಕಾರದ ಸಂಪನ್ಮೂಲಗಳಲ್ಲಿ ವರಮಾನ ತೆರಿಗೆಯ ಪಾತ್ರ ಬಹಳ ದೊಡ್ಡದು. (ನಮ್ಮ ಸರ್ಕಾರದ್ದು ಕೂಡ ಹೀಗೆಯೇ). ಆದ್ದರಿಂದ ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ಕಾರ್ಯಾಂಗಕ್ಕೆ ವಹಿಸಿಕೊಡುವುದರಲ್ಲಿ ಸಂಸತ್ತು ಬಹಳ ಹಿಂಜರಿಕೆಯಿಂದ, ನಿಧಾನಗತಿಯಿಂದ ಇರಲೇಬೇಕೆಂಬ ವಿಷಯದಲ್ಲಿ ಯಾವ ವಿವಾದವೂ ಇರಲು ಸಾಧ್ಯವಿಲ್ಲ. ಈ ವಿಷಯದಲ್ಲಿ ನಿಯೋಜಿಸುವುದನ್ನು ಬೇಡವೆನ್ನುವುದಕ್ಕಾಗಲೀ, ಇತರ ಅಭಿಪ್ರಾಯಗಳನ್ನು ಇಟ್ಟುಕೊಳ್ಳುವುದಕ್ಕಾಗಲೀ, ತಮ್ಮ ನಿಲುವನ್ನು ಸದನದ ಮುಂದಿಡಲು ಮಿ. ತ್ಯಾಗಿಯವರಿಗೆ ಮುಕ್ತ ಅವಕಾಶವಿದೆ. ಆದರೆ ಸಕ್ಷಮತೆಗೆ ಸಂಬಂಧಿಸಿದ ಹಾಗೆ ಅವರ ವಾದ ಬಿದ್ದುಹೋಗುತ್ತದೆ ಎಂಬುದು ನನ್ನ ದಿಗಿಲು. ಈ ವಿಷಯ ನಮ್ಮ ಗಮನಕ್ಕೆ ಬಂದಾಗ, ಆರ್ಥಿಕ ಔಚಿತ್ಯದ ದೃಷ್ಟಿಯಲ್ಲಿ, ಹಾಗೂ ಪಾರ್ಲಿಮೆಂಟಿನ ಔನ್ನತ್ಯವನ್ನು ಕಾಪಾಡಿಕೊಂಡು ಬರುವ ಸಲುವಾಗಿ, ಮೂಲ ಮಸೂದೆಯಲ್ಲಿನ ಕೆಲವು ಖಂಡಗಳಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡುವುದು ಅಪೇಕ್ಷಣೀಯವೆಂದು ನಾನು ಕೂಡ ತೀರ್ಮಾನಕ್ಕೆ ಬಂದಿದ್ದೇನೆ. ನನ್ನ ಹತ್ತಿರ ಈಗ ಅದು ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಹೊಸತಿದ್ದುಪಡಿಗಳಲ್ಲಿ ಎರಡು ಹೊಸ ಉಪಬಂಧಗಳಿವೆಯೆಂದು ನನಗೆ ಮನವರಿಕೆಯಾಗಿದೆ. ಅದರಲ್ಲಿ ಒಂದು – ನಿರ್ದಿಷ್ಟಪಡಿಸದ ವಸ್ತುಗಳ ಮೇಲೆ, ಕೆಲಸಮಯದವರೆಗೆ ಮಾತ್ರ, ಅಂದರೆ ಬಜೆಟ್ ಅಧಿವೇಶನದವರೆಗೆ, ಅನಿರ್ದಿಷ್ಟವಾಗಿ ಅಲ್ಲ, ಎಲ್ಲ ಕಾಲಕ್ಕೂ ಅಲ್ಲ, ಸೀಮಾ ಸುಂಕವನ್ನು ವಿಧಿಸುವ ಅಧಿಕಾರ. ಬಜೆಟ್ ಅಧಿವೇಶನ ಬಂದಾಗ, ಈ ಮಸೂದೆಯ ಕೆಳಗೆ ಕಾರ್ಯಾಂಗ ವಿಧಿಸಿದ ಸೀಮಾ ಸುಂಕ ತಂತಾನೆ ಕೊನೆಗೊಂಡು, ನಂತರ ಆ ವಿಷಯವನ್ನು ಸಂಸತ್ತು ಇತರ ಎಲ್ಲಾ ಆರ್ಥಿಕ ಕ್ರಮಗಳನ್ನು ವ್ಯವಹರಿಸುವ ಹಾಗೆ ವ್ಯವಹರಿಸುತ್ತದೆ. ಈ ಮಸೂದೆ ಅದು ಈಗಿರುವ ಹಾಗೆ ಬಹಳಷ್ಟು ಉತ್ತಮಗೊಂಡಿದೆ. ಇಂಥದೊಂದು ಶಾಸನವನ್ನು ಪ್ರಸ್ತಾವಿಸುವಲ್ಲಿ ಸಂಸತ್ತಿಗೆ ಯಾವ ವಿವಾದವೂ ಬರಬಾರದೆಂದು ನಾನು ಭಾವಿಸಿದ್ದೇನೆ.

*[*]* **ಪಂಡಿತ್ ಠಾಕೂರ್ ದಾಸ್ ಭಾರ್ಗವ:** ........ಇಷ್ಟೆಲ್ಲಾ ಆದಮೇಲೆ ಈ ವಿಷಯವನ್ನು ತೀರ್ಮಾನಿಸುವುದಕ್ಕೆ ನಾವು ನಮ್ಮ ಸಂವಿಧಾನಕ್ಕೆ ಹಿಂದಿರುಗಬೇಕು. ಸಚಿವರುಗಳಿಗೆ ಇಂಥ ಯಾವುದೇ

---

* P.D., ಸಂ. ೬, ಭಾಗ II, ೪ ಡಿಸೆಂಬರ್ ೧೯೫೦, ಪು. ೧೧೭೮.

ಅಧಿಕಾರವನ್ನು ನಿಯೋಜಿಸುವುದಕ್ಕೆ ನಮ್ಮ ಸಂವಿಧಾನದ ಮಟ್ಟಿಗೆ, ಈ ಸದನಕ್ಕೆ ಯಾವ ಸಕ್ಷಮತೆಯೂ ಇಲ್ಲ.

**ಡಾ. ಅಂಬೇಡ್ಕರ್:** ಯಾವ ನಿಷೇಧವೂ ಇಲ್ಲ. ನಮಗೆ ಪರಮಾಧಿಕಾರವಿದೆ.

**ಶ್ರೀ ಸಂತಾನಮ್:** ಮಾನ್ಯ ಸದಸ್ಯರು ಅನುಚ್ಛೇದ ೨೮೬ನ್ನು ಓದುತ್ತಾರೆಯೇ?

**ಮಾನ್ಯ ಸಭಾಪತಿಗಳು:** ಮಾನ್ಯ ಸದಸ್ಯರನ್ನು ಅವರದೇ ರೀತಿಯಲ್ಲಿ ತಮ್ಮ ವಾದವನ್ನು ಮುಂದುವರಿಸುವುದಕ್ಕೆ ಬಿಟ್ಟರೆ ವಿಷಯಗಳು ಹ್ರಸ್ವವಾಗುತ್ತವೆ. ಮೊದಲು ಅವರು ಏನು ಹೇಳುತ್ತಾರೋ ಕೇಳೋಣ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನಾವು ಈ ಕ್ಷಣದಲ್ಲಿ ಯಾವುದೇ ತತ್ವಕ್ಕೆ ಗಂಟು ಹಾಕಿಕೊಳ್ಳುವುದು ಬೇಡ. ನಾನು ಯಾವ ತತ್ವಕ್ಕೂ ಅಂಟುಕೊಂಡಿಲ್ಲ. ನಿಮ್ಮ ಗಮನಕ್ಕೆ ಈ ಸಂಗತಿಗಳನ್ನು ತರುತ್ತಿರುವ ಉದ್ದೇಶ, ನೀವು ಅಂತಿಮ ತೀರ್ಮಾನಕ್ಕೆ ಬರುವ ಮೊದಲು ಅವುಗಳನ್ನು ಪರಿಗಣಿಸಬಹುದೇನೊ ಎಂಬುದು.

◆

# ೨೩

# ಸಂಘಗಳ ನೋಂದಣಿ (ತಿದ್ದುಪಡಿ) ಮಸೂದೆ

*__ಶ್ರೀ ಸಿದ್ವ (ಮಧ್ಯಪ್ರದೇಶ):__ ನನ್ನ ಮಸೂದೆಯು ೧೮೬೦ರ ಸಂಘಗಳ ನೋಂದಣಿ ಕಾಯಿದೆಯ ತಿದ್ದುಪಡಿಗೆ ಸಂಬಂಧಿಸಿದ್ದಾಗಿದೆ. ಇದು ಒಂದು ಬಹಳ ಸರಳವಾದ ಮಸೂದೆ.

**ಕಾನೂನು ಸಚಿವರು ಡಾ. ಅಂಬೇಡ್ಕರ್:** ನಿಮ್ಮ ಅನುಮತಿಯಿದ್ದರೆ, ನಾನು ಆ ಮಸೂದೆಯ ಮೇಲೆ ಒಂದು ಹೇಳಿಕೆಯನ್ನು ಕೊಡಬಹುದು. ಆಗ ನನ್ನ ಸ್ನೇಹಿತರಿಗೆ ತಾವು ಯಾವ ಮಾರ್ಗವನ್ನು ಆರಿಸಿಕೊಳ್ಳಬೇಕೆಂದು ನಿರ್ಧರಿಸಲು ಸಾಧ್ಯವಾಗುತ್ತದೆ.

ಹೋದ ಸಲ, ಈ ಮಸೂದೆಯನ್ನು ಸದನದ ಮುಂದೆ ಮಂಡಿಸಿದಾಗ, ಮಿ. ಸಿದ್ವ ಅವರ ಕ್ರಮದ ಬಗ್ಗೆ ಬೇರೆ ಬೇರೆ ರಾಜ್ಯಗಳ ಅಭಿಪ್ರಾಯವನ್ನು ಕೇಳಿ, ಅವರ ಅಭಿಪ್ರಾಯವನ್ನು ಮಿ. ಸಿದ್ವ ಅವರಿಗೂ ಹಾಗೂ ಈ ಸದನಕ್ಕೂ ತಿಳಿಸುತ್ತೇನೆಂದು ಭರವಸೆಯನ್ನು ಕೊಟ್ಟಿದ್ದೆ. ಈಗಿನ ಪರಿಸ್ಥಿತಿ ಈ ರೀತಿ ಇದೆ. ಪಾರ್ಟ್ "ಎ" ರಾಜ್ಯಗಳಿಗೆ ಸಂಬಂಧಿಸಿದ ಹಾಗೆ, ಅವರು ಹೇಳುವುದು ಏನೆಂದರೆ, ಸಿದ್ವ ಅವರು ಕೊಟ್ಟ ಸಲಹೆಗಳು ಉತ್ತಮವಾಗಿವೆ. ಅನುಷ್ಠಾನ ಮಾಡಲೇಬೇಕಾದ ಸಲಹೆಗಳಾಗಿವೆ. ಆದರೆ ಅಭ್ಯಂತರವೇನೆಂದರೆ ತಾವೇ ಈ ಶಾಸನವನ್ನು ಜಾರಿಗೆ ತರುತ್ತೇವೆ ಎಂದು ತಿಳಿಸಿದ್ದಾರೆ. ಪಾರ್ಟ್ "ಎ" ರಾಜ್ಯಗಳು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು, ಭಾರತ ಸರ್ಕಾರ ತಾವೇ ಭಾರತಕ್ಕೆಲ್ಲಾ ಅನ್ವಯವಾಗುವ ಶಾಸನವನ್ನು ಮಾಡುವುದು ಬೇಡ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಅವರ ದೃಷ್ಟಿಯಲ್ಲಿ ಇದು ಭಾರತದುದ್ದಕ್ಕೂ ಬೇಕಾಗುವ ಏಕರೂಪವಾದ ಶಾಸನ ತರಬೇಕಾದಂತಹ ಗಹನವಾದ ವಿಷಯವಲ್ಲ. ಆದ್ದರಿಂದ ಅವರು (ಭಾರತ ಸರ್ಕಾರ) ಈ ವಿಷಯವನ್ನು ಆಯಾ ರಾಜ್ಯಗಳಿಗೇ ಬಿಟ್ಟು ಬಿಡಲು ಸಿದ್ಧರಿದ್ದಾರೆ. ಹೀಗಾಗಿ ಪಾರ್ಟ್ "ಎ" ರಾಜ್ಯಗಳನ್ನು ಈ ಮಸೂದೆಯಿಂದ ಹೊರಗಿಡಬೇಕು. ಪಾರ್ಟ್ "ಬಿ" ರಾಜ್ಯಗಳಿಗೆ ಸಂಬಂಧಿಸಿದಂತೆ, ಈ ರಾಜ್ಯಗಳಲ್ಲಿ ಇಂಥದೊಂದು ಕಾನೂನು ಜಾರಿಯಲ್ಲಿಲ್ಲ. ಆದಕಾರಣ ಭಾರತ ಸರ್ಕಾರ ಅವರ ಸಲಹೆಯನ್ನು ಕೇಳಲಿಲ್ಲ. ಸಮವರ್ತಿ ಪಟ್ಟಿಯಲ್ಲಿ ಬರುವ ಶಾಸನಗಳನ್ನು ಪ್ರಾರಂಭಗೊಳಿಸುವ ವಿಷಯದಲ್ಲಿ ಭಾರತ ಸರ್ಕಾರ ಅನುಸರಿಸುತ್ತಿರುವ ಸ್ಥಾಯೀ ನಿಯಮವು ಬಹಳ ದೀರ್ಘಕಾಲದಿಂದ ಆಚರಣೆಯಲ್ಲಿದ್ದು, ಆ ರಾಜ್ಯಗಳ ಅನುಮತಿಯಿಲ್ಲದೆ ಶಾಸನವನ್ನು ಕೈಗೆತ್ತಿಕೊಳ್ಳುವುದಿಲ್ಲ. ಈಗ ನಮಗೆ ಉಳಿದಿರುವುದು "ಪಾರ್ಟ್" "ಸಿ" ರಾಜ್ಯಗಳು ಮಾತ್ರ. ಮಿ. ಸಿದ್ವ ಅವರು ತಮ್ಮ ಮಸೂದೆಯನ್ನು ಮುಂದುವರಿಸಬೇಕಾದರೆ, ಅದನ್ನು ಪಾರ್ಟ್ "ಸಿ" ರಾಜ್ಯಗಳಿಗೆ ಮಾತ್ರ ಸೀಮಿತಗೊಳಿಸಬೇಕು. ನಾವು ಈ ಪರಿಮಿತಿಯನ್ನು ಒತ್ತಾಯಿಸಲೇಬೇಕಾಗಿದೆ. ಇನ್ನೊಂದು ವಿಷಯವನ್ನು ನಾನು ಗಮನಿಸಿದ್ದೆಂದರೆ, ಅವರ ಮಸೂದೆಗೆ ಬಹಳಷ್ಟು ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಹೋದ ಸಲವೇ ಹೇಳಿದ ಹಾಗೆ ನಾನು ಈ ಶಾಸನದ ಪರ ಇದ್ದೇನೆ. ಅದಕ್ಕೆ ಯಾವ ರೀತಿಯಲ್ಲೂ ಅಡ್ಡಿಯನ್ನುಂಟು

---

* P.D., ಸಂ. ೭, ಭಾಗ II, ೧೨ ಡಿಸೆಂಬರ್ ೧೯೫೦, ಪು. ೧೫೬೦–೬೫.

ಮಾಡಲು ನಾನು ಇಷ್ಟಪಡುವುದಿಲ್ಲ. ವಾಸ್ತವವಾಗಿ ಈಗ ನನ್ನೆದುರಿಗೆ, ನಾನು ಅವಶ್ಯಕವೆಂದು ಅಂದುಕೊಂಡ ತಿದ್ದುಪಡಿಗಳ ಕರಡು, ಇದೆ. ಈ ಮಸೂದೆಗೆ ಈ ತಿದ್ದುಪಡಿಗಳು ಬೇಕೇ ಬೇಕಾಗಿವೆ. ಈ ತಿದ್ದುಪಡಿಗಳನ್ನು ಮಿ. ಸಿಧ್ವ ಅವರಿಗೆ ಕೊಡಲು ನಾನು ಸಿದ್ಧನಿದ್ದೇನೆ. ಮಿ. ಸಿಧ್ವರವರು ತಾವೇ ಈ ತಿದ್ದುಪಡಿಗಳನ್ನು ಮಂಡಿಸಿ, ಶಾಸನವನ್ನು ಆರಂಭಿಸಿದ್ದಕ್ಕೆ ತಾವೇ ಶಾಭಾಸ್‌ಗಿರಿಯನ್ನು ಪಡೆದುಕೊಳ್ಳಬಹುದು. ಆದ್ದರಿಂದ ಮಿ. ಸಿಧ್ವ ಅವರಿಗೆ ನನ್ನ ಸಲಹೆ ಏನೆಂದರೆ ಈ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಿ, ಈಗ ಮುಂದೂಡಿಕೆಯ ಪ್ರಸ್ತಾವವನ್ನು ಸಭೆಯ ಮುಂದಿಡಿ; ನನ್ನಿಂದ ಕರಡು ತಿದ್ದುಪಡಿಗಳನ್ನು ಪಡೆದುಕೊಂಡು, ತಿದ್ದುಪಡಿ ಮಾಡುವುದಕ್ಕೆ ನೋಟೀಸ್ ಕೊಟ್ಟು, ಮುಂದಿನ ಸಲ ಈ ಮಸೂದೆ ಬಂದಾಗ, ತಿದ್ದುಪಡಿಗಳನ್ನು ಮಂಡಿಸಬಹುದು. ಈ ದಾರಿ ಅವರಿಗೆ ಒಪ್ಪಿಗೆಯಾಗುವುದಾದರೆ, ನಾನೇ ಸಲಹೆ ಮಾಡಿದ ಈ ತಿದ್ದುಪಡಿಗಳನ್ನು ನಾನು ಒಪ್ಪಿಕೊಳ್ಳುವುದಾಗಿ ಭರವಸೆ ಕೊಡುತ್ತೇನೆ.

**ಶ್ರೀ ತ್ಯಾಗಿ (ಉತ್ತರ ಪ್ರದೇಶ):** ಇದೇನೂ ಅಂಥ ದೊಡ್ಡ ಭರವಸೆಯಲ್ಲ.

**ಡಾ. ಅಂಬೇಡ್ಕರ್:** ನಾನು ಈ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಬದ್ಧನಾಗಿದ್ದೇನೆ. ಆಗ ಮಸೂದೆಯ ತುಂಬ ಎದ್ದು ಕಾಣುತ್ತಿರುವ ನ್ಯೂನತೆಗಳು ಇರುವುದಿಲ್ಲ. ಯಾವ ಮಾರ್ಗದಲ್ಲಿ ಕ್ರಮಿಸಬೇಕು ಎನ್ನುವುದು ಮಿ. ಸಿಧ್ವ ಅವರಿಗೆ ಬಿಟ್ಟ ವಿಷಯ. ಈ ಹೇಳಿಕೆಯಿಂದ ನಾನು ಅವರಿಗೆ ಸಹಾಯಮಾಡಬಹುದು ಎಂದು ಅಂದುಕೊಂಡಿದ್ದೆ.

**ಶ್ರೀ ಸಿಧ್ವ:** ಮಾನ್ಯ ಕಾನೂನುಮಂತ್ರಿಯವರು ಕೊಟ್ಟ ಹೇಳಿಕೆಯನ್ನು ಕೇಳಿ ನನಗೆ ಸಂತೋಷವಾಗಿದೆ. ನಾನು ಸಲಹೆ ಮಾಡುತ್ತಿದ್ದುದು ಏನೆಂದರೆ ನನ್ನ ಮಸೂದೆ ಬಹಳ ಸರಳವಾದ ಮಸೂದೆ. ಅಂದರೆ ಸಂಘಗಳ ನೋಂದಣಿ ಕಾಯಿದೆಯ ೪ನೇ ಕಲಮಿಗೆ ಒಂದು ಸೇರ್ಪಡೆ ಮಾಡುವುದಷ್ಟೆ. ಕಾನೂನು ಸಚಿವರು ಸರಿಯಾಗಿ ಹೇಳಿದಂತೆ ಪಾರ್ಟ್ "ಎ" ರಾಜ್ಯಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸಿ ನನ್ನ ಮಸೂದೆಯನ್ನು ಒಪ್ಪಿಕೊಳ್ಳಲು ಒಲವನ್ನು ತೋರಿಸಿದ್ದಾರೆ. ಅವರೇ ಈ ಶಾಸನವನ್ನು ತಾವೇ ಆರಂಭಿಸಲು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ನನ್ನ ಸಲಹೆಯನ್ನು ಒಪ್ಪಿಕೊಳ್ಳುವ ಸಹೃದಯತೆಯನ್ನು ಡಾ. ಅಂಬೇಡ್ಕರ್ ಅವರು ತೋರಿಸುತ್ತಾರೆಂದು ನಾನು ನಂಬಿದ್ದೇನೆ. ನಾವು ಇನ್ನೂ ಹೆಚ್ಚು ಕಾಲ ಕಾಯುವುದು ಬೇಡ. ಅನೇಕ ಸಂಘಗಳು ತಾವು ತೊಡಗಿಸಿಕೊಂಡಿರುವ ವಂಚನೆಯ ಪ್ರಕ್ರಿಯೆಯನ್ನು ಇನ್ನೂ ಮುಂದುವರಿಸಿಕೊಂಡು ಹೋಗುವುದು ಬೇಡ. ಆದ್ದರಿಂದ ನಾನು ಮಂಡಿಸುವುದಕ್ಕೆ ಪ್ರಾರ್ಥಿಸುವುದೇನೆಂದರೆ:

> "ಸಂಘಗಳ ನೋಂದಣಿ ಕಾಯಿದೆ, ೧೮೬೦ನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು."

**ಡಾ. ಅಂಬೇಡ್ಕರ್:** ನನಗೆ ವ್ಯಸನವಾಗಿದೆ. ನನ್ನ ಮಾನ್ಯ ಮಿತ್ರ ಮಿ. ಸಿಧ್ವ ಅವರು ನನ್ನನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆಂದು ನನಗೆ ಅನಿಸುತ್ತಿದೆ. ಆ ಮಸೂದೆಯನ್ನು ಅದು ಈಗಿರುವ ಹಾಗೆ ಒಪ್ಪಿಕೊಳ್ಳುವಾಗ ಮೂಲ ಅಧಿನಿಯಮದ ಇತರ ಕೆಲವು ಉಪಬಂಧಗಳನ್ನು ನಾನು ತಿದ್ದುಪಡಿ ಮಾಡಬೇಕೆಂದಿದ್ದೇನೆ ಎಂದು ಬಹುಶಃ ಅವರು ಅಭಿಪ್ರಾಯ ತಾಳಿರಬಹುದು. ಅದು ಹಾಗಲ್ಲ. ನಾನು ತಿದ್ದುಪಡಿಮಾಡ ಬಯಸುತ್ತಿರುವುದು ಅವರ ತಿದ್ದುಪಡಿಗಳನ್ನು. ಅವರ ಕರಡು ಮಸೂದೆಯನ್ನು ನಾನು ಸೂಚಿಸುತ್ತಿರುವ ತಿದ್ದುಪಡಿಗಳನ್ನು ಮಾಡದೆ ಒಪ್ಪಿಕೊಳ್ಳುವುದು ಅಸಾಧ್ಯ. ಆದ್ದರಿಂದ ನಾನು ಹೇಳಿದ

ಹಾಗೆ, ನಾನು ಸೂಚಿಸಿದ ತಿದ್ದುಪಡಿಗಳನ್ನು ಮಿ. ಸಿಧ್ವ ಅವರು ತಮ್ಮ ಮಸೂದೆಯಲ್ಲಿ ಮಾಡಿದರೆ, ಅದು ಮುಂದೆ ಸಾಗಲು ನನಗೆ ಕನಿಷ್ಠ ಅಭ್ಯಂತರವೂ ಇರುವುದಿಲ್ಲ. ನಾನು ಸಿದ್ಧಪಡಿಸಿದ ತಿದ್ದುಪಡಿಗಳು ಇಲ್ಲಿವೆ. ಆ ಕಾಗದಗಳನ್ನು ಮಿ. ಸಿಧ್ವ ಅವರಿಗೆ ಹಸ್ತಾಂತರಿಸಲು ನಾನು ಸಿದ್ಧನಿದ್ದೇನೆ. ಆದರೆ ಈ ತಿದ್ದುಪಡಿಗಳಿಗೆ ನೋಟೀಸ್ ಕೊಟ್ಟಿಲ್ಲವಾದ್ದರಿಂದ, ಈ ಸದನ ಯಾವ ಅಭಿಪ್ರಾಯ ತೆಗೆದುಕೊಳ್ಳುತ್ತದೆಯೋ ನನಗೆ ಗೊತ್ತಿಲ್ಲ. ಆದರೆ ನಾನು ಹೇಳಿದಂತೆ, ಅವರು ತಿದ್ದುಪಡಿಗಳನ್ನು ತೆಗೆದುಕೊಂಡು, ನೋಟೀಸ್ ಕೊಟ್ಟ ವಿಷಯವನ್ನು ಚರ್ಚಿಸುವುದಕ್ಕೆ ಸದನದ ಮುಂದಿಡಬಹುದು.

**ಮಾನ್ಯ ಸಭಾಪತಿಗಳು:** ನಾನು ಹಾಗೇ ಯೋಚಿಸುತ್ತಿದ್ದೆ. ನನಗಿನ್ನೂ ವಿಶದವಾಗಿಲ್ಲ. ಮಸೂದೆಯನ್ನು ಪರಿಗಣನೆಗೆ ಮಂಡನೆ ಮಾಡಿ, ಮುಂದಿನ ಪರಿಗಣನೆಯನ್ನು ಮುಂದಕ್ಕೆ ಹಾಕಬಹುದು ಎಂಬ ಊಹೆಯ ಮೇಲೆ, ಅದಕ್ಕೆ ಆದ್ಯತೆ ಸಿಗಬಹುದೆ ಎಂದು ನಾನು ಯೋಚಿಸುತ್ತಿದ್ದೇನೆ.

**ಡಾ. ಅಂಬೇಡ್ಕರ್:** ಅದನ್ನು ಮಾಡಬಹುದು.

**ಮಾನ್ಯ ಸಭಾಪತಿಗಳು:** ಬಹುಶಃ ಅವರ ಮಸೂದೆ ಬ್ಯಾಲಟ್‌ನಲ್ಲಿ ಬರಬಹುದು. ಕಷ್ಟವಾಗುವ ಸಂಭವ ಎಂದರೆ ಅವರು ತಮ್ಮ ಆದ್ಯತೆಯನ್ನು ಕಳೆದುಕೊಳ್ಳುತ್ತಾರೆ.

**ಡಾ. ಅಂಬೇಡ್ಕರ್:** ಹೇಳಬೇಕೆಂದರೆ, ಮಸೂದೆ ಬಹಳ ಚಿಕ್ಕದಾಗಿದೆ. ನಾನು ಸರ್ಕಾರದ ಅಥಾರಿಟಿ ಇಲ್ಲದೆ ಮಾತನಾಡುತ್ತಿದ್ದೇನೆ. ಆದರೆ ಸರ್ಕಾರದ ಮನಸ್ಸನ್ನು ಒಪ್ಪಿಸಲು ನನಗೆ ಕಷ್ಟವಾಗಲಾರದು. ಉದಾಹರಣೆಗೆ, ಮುಂದಿನ ಬಜೆಟ್ ಅಧಿವೇಶನದಲ್ಲಿ ಸರ್ಕಾರಿ ದಿನಗಳಲ್ಲಿ ಒಂದು ದಿನವನ್ನು ಅವರಿಗೆ ಕೊಡಬಹುದು.

**ಮಾನ್ಯ ಸಭಾಪತಿಗಳು:** ಇನ್ನೊಂದು ಬದಲಿ ಆಯ್ಕೆ ಸಹ ಇದೆ. ಈ ಮಸೂದೆಯನ್ನು ಈಗ ಎತ್ತಿಕೊಳ್ಳುವುದಕ್ಕೆ ಬದಲಾಗಿ ಅದನ್ನು (ಈ ದಿನ) ೫ ಘಂಟೆಗೆ ೫ ನಿಮಿಷ ಇರುವ ಸಮಯಕ್ಕೆ ಮುಂದೂಡಿ, ಅದರ ಮೇಲೆ ಚರ್ಚೆಯನ್ನು ಭಾಗಶಃ ಕೇಳಲಾಗಿದೆ ಎಂದರೆ, ಆಮೇಲೆ ಅದು ತನಗೆ ತಾನೇ ನೋಡಿಕೊಳ್ಳುತ್ತದೆ.

**ಒಬ್ಬ ಮಾನ್ಯ ಸದಸ್ಯರು:** ಒಂದು ಸರ್ಕಾರಿ ದಿನದಂದು, ಡಾ. ಅಂಬೇಡ್ಕರ್ ಮಿ. ಸಿಧ್ವ ಅವರಿಗೆ ಅವಕಾಶ ಮಾಡಿಕೊಡುತ್ತಾರೆ.

**ಡಾ. ಅಂಬೇಡ್ಕರ್:** ಅದಕ್ಕೆ ನಾನು ವ್ಯವಸ್ಥೆ ಮಾಡಬಲ್ಲೆ.

◆

# ೨೪

## **ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ

*ಕಾನೂನು ಸಚಿವರು(ಡಾ. ಅಂಬೇಡ್ಕರ್):** ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮಸೂದೆಯನ್ನು (ಸದನದ) ಮುಂದಿಡಲು ಅನುಮತಿಯನ್ನು ಬೇಡುತ್ತೇನೆ.

**ಮಾನ್ಯ ಸಭಾಪತಿಗಳು:** ವಿಷಯವೇನೆಂದರೆ:

> " ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮ, ತಿದ್ದುಪಡಿ ಮಾಡುವ ಮಸೂದೆಯನ್ನು (ಸದನದ) ಮುಂದಿಡಲು ಅನುಮತಿ ನೀಡಬೇಕು."

ಮಸೂದೆಯನ್ನು ಮಂಡಿಸಲಾಯಿತು.

*ಕಾನೂನು ಸಚಿವರು (ಡಾ. ಅಂಬೇಡ್ಕರ್):** ನಾನು ಮಂಡನೆ ಮಾಡಲು ಪ್ರಾರ್ಥಿಸುತ್ತೇನೆ.

> "೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯುಮವನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ."

ಈ ಮಸೂದೆಗೆ ಎರಡು ಉದ್ದೇಶಗಳಿವೆ. ಒಂದು ರಾಜ್ಯಗಳ ಪರಿಷತ್ತಿನಲ್ಲಿ ಪಾರ್ಟ್ "ಸಿ" ರಾಜ್ಯಗಳಿಗೆ ಪ್ರಾತಿನಿಧ್ಯವನ್ನು ಒದಗಿಸಿಕೊಡುವುದು. ಎರಡನೆಯದು ಅಂದರೆ, ೧೯೫೦ರ ಪ್ರಜಾ ಪ್ರಾತಿನಿಧ್ಯ (ತಿದ್ದುಪಡಿ) ಅಧ್ಯಾದೇಶಕ್ಕೆ, ೧೯೫೦ಕ್ಕೆ ಮಾಡಿರುವ ಉಪಬಂಧಗಳನ್ನು ಅಧಿನಿಯಮಗೊಳಿಸುವುದು.

ಮೊದಲಿಗೆ ನಾನು ಪ್ರಸ್ತಾವಿಸುವುದು, ಮಸೂದೆಯ ಉದ್ದೇಶವನ್ನು ಕುರಿತು, ಅಂದರೆ ಪಾರ್ಟ್ "ಸಿ" ರಾಜ್ಯಗಳಿಗೆ ಪ್ರಾತಿನಿಧ್ಯವನ್ನು ದೊರಕಿಸುವುದು. ಮಾನ್ಯ ಸದಸ್ಯರುಗಳಿಗೆ ನೆನಪಿರುವ ಹಾಗೆ, ಅನುಚ್ಛೇದ ೮೦, ಖಂಡ(೫)ರ ಕೆಳಗೆ ಈ ವಿಷಯವನ್ನು ಕಾನೂನಿನ ದ್ವಾರಾ ಇತ್ಯರ್ಥ ಮಾಡಲು ಪಾರ್ಲಿಮೆಂಟಿಗೆ ಬಿಡಲಾಗಿದೆ. ರಾಜ್ಯಾಂಗದಲ್ಲಿ ಪಾರ್ಟ್ "ಸಿ" ರಾಜ್ಯಗಳಿಗೆ ಮೇಲ್ಮನೆಯಲ್ಲಿ ಪ್ರಾತಿನಿಧ್ಯ ಕೊಡಬೇಕೆಂಬುದರ ಬಗ್ಗೆ ಅವಕಾಶವಿಲ್ಲ. ನಾನು ಹೇಳಿದ ಹಾಗೆ ಪಾರ್ಲಿಮೆಂಟಿಗೆ ಸೂಕ್ತ ತೋರಿದಂತೆ, ಕಾನೂನು ಪ್ರಕಾರ ಇತ್ಯರ್ಥಗೊಳಿಸುವದನ್ನು ಅದರ ವಿವೇಚನೆಗೆ ಬಿಡಲಾಗಿದೆ. ಪಾರ್ಲಿಮೆಂಟಿನ ಮೇಲೆ ಬಿದ್ದಿರುವ ಈ ಅವಶ್ಯ ಕರ್ತವ್ಯದ ಹೊಣೆಯಿಂದಾಗಿ, ಈ ಮಸೂದೆಯನ್ನು ತರಲಾಗಿದೆ. ಈ ನಿರ್ದಿಷ್ಟ ವಿಷಯವನ್ನು ಕುರಿತು ವ್ಯವಹರಿಸುವಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ. ಮೊದಲನೆಯದು ಮತದಾರರ ಮಂಡಲಿಯ ಸ್ವಭಾವ. ಪಾರ್ಟ್ "ಸಿ" ರಾಜ್ಯಗಳನ್ನು ಕೇಂದ್ರದಲ್ಲಿ ಪ್ರತಿನಿಧಿಸಬೇಕಾಗುವ ಪ್ರತಿನಿಧಿಗಳನ್ನು ಚುನಾಯಿಸುವ ಮತದಾರರ ಮಂಡಲಿ ಯಾವುದು ಮತ್ತು ಎರಡನೆಯದು, ೪ನೇ ಅನುಸೂಚಿಯಲ್ಲಿ ಪಾರ್ಟ್ "ಸಿ" ರಾಜ್ಯಗಳಿಗೆ ಗೊತ್ತುಪಡಿಸಿರುವ ಸ್ಥಾನಗಳ ಹಂಚಿಕೆ. ಮೂರನೆಯದಾಗಿ, ಪ್ರತಿನಿಧಿಸುವ ವಿಧಾನವನ್ನು ಪರ್ಯಾಲೋಚಿಸಬೇಕು. ಅಂದರೆ ಅವರುಗಳನ್ನು ಚುನಾಯಿಸಬೇಕೆ, ನಾಮನಿರ್ದೇಶನ

---

* P.D., ಸಂ. ೬, ಭಾಗ II, ೨೧ ನವೆಂಬರ್ ೧೯೫೦, ಪು. ೨೬೭.

** P.D., ಸಂ. ೭, ಭಾಗ II, ೧೨ ಡಿಸೆಂಬರ್ ೧೯೫೦, ಪು. ೧೬೭೮–೮೩.

ಮಾಡಬೇಕೇ ಅಥವಾ ಬೇರೆ ಯಾವುದಾದರೂ ವಿಧಾನವನ್ನು ಅನುಸರಿಸಬೇಕೆ? ಈಗ, ಮೊದಲನೆ ಪ್ರಶ್ನೆ ಅಂದರೆ, ಮತದಾರರ ಮಂಡಲಿಯ ವಿಷಯವನ್ನು ಮಸೂದೆಯ ೯ನೇ ಖಂಡದಲ್ಲಿ ವಿವರಿಸಲಾಗಿದೆ. ನಾನು ಈಗ ಆ ಖಂಡವನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತೇನೆ. ಈ ಪ್ರಶ್ನೆಯನ್ನು, ಅಂದರೆ ಮತದಾರರ ಮಂಡಲಿಯ ಪ್ರಶ್ನೆಯನ್ನು, ಪರ್ಯಾಲೋಚಿಸುವಾಗ, ಮೇಲ್ಮನೆಯ ರಚನೆಯನ್ನು ಮಾಡುವುದಕ್ಕಿರುವ ಸಾಮಾನ್ಯ ನಿಯಮಗಳನ್ನು ಸಂವಿಧಾನವು ನಿಗದಿ ಪಡಿಸಿದೆಯೆಂದು ಈ ಸದನವು ನೆನಪಿಸಿಕೊಳ್ಳಬೇಕು. ಆ ನಿಯಮಗಳನ್ನು ಅನುಚ್ಛೇದ ೮೦, ಖಂಡ ೪ರಲ್ಲಿ ಕಾಣಬಹುದು. ಆ ಖಂಡ ಪಾರ್ಟ್ "ಎ" ಮತ್ತು ಪಾರ್ಟ್ "ಬಿ" ರಾಜ್ಯಗಳಿಗೆ ಸೀಮಿತವಾಗಿದ್ದರೂ, ಮೇಲ್ಮನೆಯ ಪ್ರಾತಿನಿಧ್ಯವನ್ನು ಪಾರ್ಟ್ "ಎ" ಮತ್ತು ಪಾರ್ಟ್ "ಬಿ" ರಾಜ್ಯಗಳ ಶಾಸನ ಸಭೆಯ ಸದಸ್ಯರುಗಳು ಪರೋಕ್ಷ ಚುನಾವಣೆಯಿಂದ ಮಾಡುತ್ತಾರೆ. ಅದು ಹೀಗಿರುವಾಗ, ಮೇಲ್ಮನೆಗೆ ಪಾರ್ಟ್ "ಸಿ" ರಾಜ್ಯಗಳಿಗೆ ಇಂಥ ಶಾಸನ ಸಭೆಗಳು ಇಲ್ಲ. ಈ ರಾಜ್ಯಗಳ ಆಡಳಿತವನ್ನು ನಡೆಸುವುದಕ್ಕೆ ಇನ್ನೂ ಹೆಚ್ಚಿನ ಜನಪ್ರಿಯ ವಿಧಾನವನ್ನು ಕೊಡಲು ಪಾರ್ಲಿಮೆಂಟು ಯಾವಾಗ ಶಾಸನವನ್ನು ರೂಪಿಸುತ್ತದೆಯೋ ಯಾರಿಗೂ ಗೊತ್ತಿಲ್ಲ. ಪರಿಣಾಮ ನಾವು ಒಂದು ಊಹಾಸಂಭವದ ಮೇಲೆ ಮುಂದುವರೆಯಬೇಕು. ಆ ಕಲ್ಪನೆ ಏನೆಂದರೆ, ಈಗ ಪಾರ್ಟ್ "ಸಿ" ರಾಜ್ಯಗಳಲ್ಲಿ ಯಾವ ಶಾಸನ ಸ್ಥಾಪಿತ ನಿಕಾಯಗಳು ಇಲ್ಲವೆಂದೂ ಅಥವ ಚುನಾವಣೆ ನಡೆಯುವ ಹೊತ್ತಿಗೆ ಅವು ಅಸ್ತಿತ್ವಕ್ಕೆ ಬರುವ ಸಂಭವ ಇಲ್ಲವೆನ್ನುವುದೇ ಆ ಕಲ್ಪನೆ. ಹಾಗಾದರೆ ಮತದಾರರ ಮಂಡಲಿಯ ಸ್ವಭಾವ ಎಂಥದ್ದಿರಬೇಕು ಎನ್ನುವುದೇ ಪ್ರಶ್ನೆ. ಕಂಡ ಹಾಗೆ ನಮ್ಮ ಮನಸ್ಸಿಗೆ ಹೊಳೆದ ಒಂದೇ ಒಂದು ಬೇರೆಯ ವಿಧಾನವೆಂದರೆ, ಪಾರ್ಟ್ "ಸಿ" ರಾಜ್ಯಗಳಲ್ಲಿರುವ ಎಲ್ಲಾ ಸ್ಥಳೀಯ ಸಂಸ್ಥೆಗಳು ಅಂದರೆ, ಪೌರ ಸಮಿತಿಗಳು, ನಗರ ಸಮಿತಿಗಳು, ಗ್ರಾಮಪಂಚಾಯಿತಿಗಳು, ಇತ್ಯಾದಿ, ಇತ್ಯಾದಿ. ಇವುಗಳನ್ನು ಸಂಪರ್ಕಿಸಿ, ಇವುಗಳ ಸದಸ್ಯರುಗಳನ್ನು ಮತದಾರರು ಎಂದು ನೋಂದಾಯಿಸಿಕೊಳ್ಳಲು ಅನುಮತಿ ಕೊಡುವುದು. ಆ ನಂತರ ತಿಳಿದು ಬಂದುದು ಏನೆಂದರೆ ಈ ವಿಧಾನದ ಚುನಾವಣೆಗೆ ಸಾಕಷ್ಟು ವಿಸ್ತಾರವಾದ ಚುನಾವಣಾ ಕ್ಷೇತ್ರ ದೊರೆಯದೆ ಇರುವ ಸಂಭವ. ವಿವಿಧ ಪಾರ್ಟ್ "ಸಿ" ರಾಜ್ಯಗಳಲ್ಲಿ ಎಷ್ಟು ಸಂಖ್ಯೆಯ ಪೌರಸಮಿತಿಗಳು, ನಗರ ಸಮಿತಿಗಳು, ಗ್ರಾಮ ಪಂಚಾಯ್ತಿಗಳು ಅಸ್ತಿತ್ವದಲ್ಲಿ ಇರಬಹುದೆಂದು ನಮಗೆ ಕಲ್ಪನೆಯೇ ಇಲ್ಲ. ಕೆಲವು ಪಾರ್ಟ್ "ಸಿ" ರಾಜ್ಯಗಳಲ್ಲಿ ಇವು ಅತ್ಯಧಿಕ ಸಂಖ್ಯೆಗಳಲ್ಲಿ ಇರಬಹುದು. ಮತ್ತೆ ಇನ್ನೂ ಕೆಲವು ರಾಜ್ಯಗಳಲ್ಲಿ ಬೆರಳೆಣಿಕೆಯಷ್ಟು ಅಥವ ಏನೂ ಇಲ್ಲದೆ ಇರಬಹುದು. ಪರಿಣಾಮವಾಗಿ ಒಂದು ಸದೃಢವಾದ ಮತದಾರರ ಮಂಡಲಿಯನ್ನು ರಚನೆ ಮಾಡಬೇಕಾರೆ, ಸ್ಥಳೀಯ ಸಂಸ್ಥೆಗಳ ಸದಸ್ಯತ್ವ ಅಲ್ಲದೆ ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಬರೆದವರಿಗೆ ಮತ ಚಲಾವಣೆಯ ಹಕ್ಕನ್ನು ವಿಸ್ತರಿಸುವುದು ಅಪೇಕ್ಷಣೀಯವಾದುದೆಂದು ಭಾವಿಸಲಾಯಿತು. ಆದ್ದರಿಂದ, ಸ್ಥಳೀಯ ಸಂಸ್ಥೆಗಳ ಸದಸ್ಯತ್ವದ ಜೊತೆಗೆ ಮೆಟ್ರಿಕ್ಯುಲೇಟ್ ಆದವರನ್ನು ಅಥವ ಅದಕ್ಕೆ ಸಮವಾದ ಇತರ ಅರ್ಹತೆಗಳನ್ನು ಪಡೆದ ವ್ಯಕ್ತಿಗಳನ್ನು ಮತದಾರರನ್ನಾಗಿ ನೋಂದಾಯಿಸಿಕೊಳ್ಳಲು ಅನುಮತಿ ಕೊಡಬೇಕು. ಆದರೆ ಅರ್ಹತೆಯ ತಾರೀಖಿನ ಹೊತ್ತಿಗೆ ಅವರು ಅವಶ್ಯಕವಾದ ವಿದ್ಯಾರ್ಹತೆಯನ್ನು ಪಡೆದುಕೊಂಡಿರಬೇಕು, ಜೊತೆಗೆ ಅರ್ಹತೆಯನ್ನು ಪಡೆಯುತ್ತಿರುವ ಅವಧಿಯಲ್ಲಿ ಅಲ್ಲಿ ವಾಸಮಾಡುತ್ತಿದ್ದಿರಬೇಕು. ಖಂಡ ೯ರಲ್ಲಿ ಇರುವ ಸಾಮಾನ್ಯ ಉಪಬಂಧ ಇದು. ಈ ಉಪಬಂಧ ಮೂಲ ಅಧಿನಿಯಮದ ೨೫ನೇ ಕಲಮಿನ ನಂತರ ೨೫–A, ೨೫–B, ೨೫–C ಮತ್ತು ೨೫–D ಎಂಬ ಹೊಸ ಕಲಮುಗಳನ್ನು ಸೇರಿಸುತ್ತದೆ. ಪಾರ್ಟ್ "ಸಿ" ರಾಜ್ಯಗಳಲ್ಲಿ ಮೇಲ್ಮನೆಗೆ ಪ್ರತಿನಿಧಿಗಳನ್ನು ಚುನಾಯಿಸುವ ಮತದಾರರ ಮಂಡಲಿಯನ್ನು ಅಸ್ತಿತ್ವಕ್ಕೆ ತರುವುದನ್ನು

ಈ ಮಸೂದೆಯು ಪ್ರಸ್ತಾವಿಸುತ್ತದೆ.

ನಾನು ಇತರ ಎರಡು ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತೇನೆ. ಇವುಗಳನ್ನು ಅವಶ್ಯವಾಗಿ ಪರ್ಯಾಲೋಚಿಸಬೇಕು. ನಾಮನಿರ್ದೇಶನವೋ ಇಲ್ಲ ಚುನಾವಣೆಯೋ ಎಂಬುದು ಎರಡನೆಯ ಪ್ರಶ್ನೆ. ಈ ವಿಷಯವನ್ನು ಮಸೂದೆಯ ೪ನೇ ಖಂಡದಲ್ಲಿ ವ್ಯವಹರಿಸಲಾಗಿದೆ. ಈ ನಿಟ್ಟಿನಲ್ಲಿ ಮಣಿಪುರ ಮತ್ತು ತ್ರಿಪುರಾ ರಾಜ್ಯಗಳಿಗೆ ಸಂಬಂಧಿಸಿದ ಹಾಗೆ, ಅಲ್ಲಿ ಚುನಾವಣೆ ನಡೆಸುವುದು ಅಸಾಧ್ಯ. ಸರಳವಾದ ಕಾರಣವಿಷ್ಟೆ, ಆ ರಾಜ್ಯಗಳಲ್ಲಿ ಯಾವ ಸ್ಥಳೀಯ ಪ್ರಾಧಿಕಾರಗಳೂ ಅಸ್ತಿತ್ವದಲ್ಲಿ ಇಲ್ಲ. ಆದ್ದರಿಂದ ಈ ಎರಡು ರಾಜ್ಯಗಳ ಮಟ್ಟಿಗೆ ಖಂಡ ೯ರಲ್ಲಿ ನಮೂದಿಸಿರುವ ಸಾಮಾನ್ಯ ಪ್ರಸ್ತಾವದ ಮೂಲಾಧಾರವು ಅಸ್ತಿತ್ವದಲ್ಲೇ ಇಲ್ಲ. ತ್ರಿಪುರಾ ನಿಜವಾಗಿಯೂ ಒಂದು ಬುಡಕಟ್ಟು ಜನಾಂಗದ ಪ್ರದೇಶ. ಮಣಿಪುರ ಬಹಳ ಹಿಂದುಳಿದ ಪ್ರದೇಶ. ಸ್ಥಳೀಯ ನಿಕಾಯಗಳಾಗಲೀ ಸಂಘಟನೆಗಳಾಗಲೀ ಅಲ್ಲಿ ಏನೇನೂ ಇಲ್ಲ. ಎರಡೂ ರಾಜ್ಯಗಳಲ್ಲಿ ಶೈಕ್ಷಣಿಕ ಅಂತಸ್ತು ಬಹಳ ಕೆಳಮಟ್ಟದಲ್ಲಿ ಇದೆ. ಪರಿಣಾಮವಾಗಿ ಶೈಕ್ಷಣಿಕ ಅರ್ಹತೆಗಳನ್ನು ನಿಗದಿಪಡಿಸಿದರೂ ಸಾಕಷ್ಟು ವಿಸ್ತಾರವಾದ ಮತದಾರರ ಮಂಡಲವು ದೊರೆಯುತ್ತದೆಂದೂ ಈ ಎರಡೂ ರಾಜ್ಯಗಳಲ್ಲಿ ಚುನಾವಣೆಗಳನ್ನು ನಡೆಸಬಹುದೆಂದೂ ಆಶಾಭಾವನೆಯನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಹಾಗಾಗಿ ಎರಡೂ ರಾಜ್ಯಗಳ ಪ್ರಾತಿನಿಧ್ಯವನ್ನು ಸಾಧಿಸಿಕೊಳ್ಳುವುದಕ್ಕೆ ಉಳಿದಿರುವ ಒಂದೇ ಮಾರ್ಗ ಎಂದರೆ, ರಾಷ್ಟ್ರಪತಿಯವರು ನಾಮನಿರ್ದೇಶನ ಮಾಡುವುದು. ಈ ನಾಮನಿರ್ದೇಶನವನ್ನು ಸರದಿಯ ಮೇಲೆ ಒಂದೊಂದು ರಾಜ್ಯಕ್ಕೆ ಎರಡು ವರ್ಷಗಳ ಅವಧಿಗೆ ಮಾಡುವುದು ಎಂದೂ ಪ್ರಸ್ತಾವಿಸಲಾಗಿದೆ. ಒಂದು ಸಾರಿ ಮಣಿಪುರದ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡಿದರೆ, ಇನ್ನೊಂದು ಸಾರಿ, ಎರಡು ವರ್ಷದ ಅವಧಿಗೆ ತ್ರಿಪುರಾದ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡಲಾಗುತ್ತದೆ. ಉಳಿದ ಪಾರ್ಟ್ "ಸಿ" ರಾಜ್ಯಗಳಲ್ಲಿ ಚುನಾವಣೆ ಮೂಲಕ ಪ್ರತಿನಿಧಿಗಳನ್ನು ಆರಿಸಲಾಗುತ್ತದೆ.

ಮುಂದಿನ ಪ್ರಶ್ನೆಯೆಂದರೆ, ಸೀಟುಗಳ ಹಂಚಿಕೆ, ಸದನಕ್ಕೆ ನೆನಪಿರುವ ಹಾಗೆ, ಅಥವ IVನೇ ಅನುಸೂಚಿಯನ್ನು ಪರಾಮರ್ಶಿಸಿದರೆ, ಮೂರು ಸಂದರ್ಭಗಳಲ್ಲಿ ಎರಡು ರಾಜ್ಯಗಳಿಂದ ಒಂದು ಸೀಟನ್ನು ಕೊಡಲಾಗಿದೆ. ಆ ಮೂರು ಸಂದರ್ಭಗಳೆಂದರೆ, ಮಣಿಪುರ ಮತ್ತು ತ್ರಿಪುರ, ಹಿಮಾಚಲ ಪ್ರದೇಶ ಮತ್ತು ಬಿಲಾಸ್‌ಪುರ, ಹಾಗೂ ಅಜ್ಮೀರ ಮತ್ತು ಕೊಡಗು ಎರಡೂ ರಾಜ್ಯಗಳಿಗೆ ಜಂಟಿಯಾಗಿ ಒಂದೇ ಸ್ಥಾನವಿರುವಾಗ ಪ್ರಾತಿನಿಧ್ಯವನ್ನು ನಿಯಂತ್ರಿಸುವುದಕ್ಕೆ ಎರಡು ವಿಧಾನಗಳಿವೆ. ಒಂದು ವಿಧಾನವೆಂದರೆ, ಎರಡೂ ರಾಜ್ಯಗಳನ್ನು ಒಂದೇ ಚುನಾವಣಾಕ್ಷೇತ್ರವೆಂದು ಮಾಡುವುದು. ಎರಡನೆಯ ವಿಧಾನವೆಂದರೆ ಅವುಗಳನ್ನು ಬೇರೆ ಬೇರೆ ಚುನಾವಣಾಕ್ಷೇತ್ರವೆಂದು ನಿಗದಿ ಮಾಡಿ, ಸರದಿಯ ಮೇರೆಗೆ ಒಬ್ಬರಾದ ಮೇಲೆ ಒಬ್ಬರಿಗೆ ಪ್ರಾತಿನಿಧ್ಯವನ್ನು ಕೊಡುವುದು. ಮಣಿಪುರ ಮತ್ತು ತ್ರಿಪುರಾದ ಪ್ರಕರಣವನ್ನು ಆಗಲೇ ಇತ್ಯರ್ಥ ಮಾಡಲಾಗಿದೆ. ಚುನಾವಣೆಯ ಪ್ರಶ್ನೆಯೇ ಅಲ್ಲಿ ಏಳುವುದಿಲ್ಲ. ಅಲ್ಲಿ ನಾಮನಿರ್ದೇಶನದ ವ್ಯವಸ್ಥೆ ಮಾಡಲಾಗಿದೆ. ಅಜ್ಮೀರ ಮತ್ತು ಕೊಡಗು ರಾಜ್ಯಗಳಿಗೆ ಅವುಗಳಿಗೆ ಪ್ರತ್ಯೇಕವಾಗಿ, ಆದರೆ ಸರದಿಯ ಪ್ರಕಾರ, ಚುನಾವಣೆ ಮೂಲಕ ಪ್ರಾತಿನಿಧ್ಯ ಕೊಡಬೇಕೆಂದು ಪ್ರಸ್ತಾವಿಸಲಾಗಿದೆ. ಒಂದು ಸಾರಿ ಅಜ್ಮೀರದಲ್ಲಿ ಚುನಾವಣೆ, ಎರಡನೆಯ ಸಾರಿ ಕೊಡಗಿನಲ್ಲಿ, ಹಿಮಾಚಲ ಪ್ರದೇಶ ಮತ್ತು ಬಿಲಾಸ್‌ಪುರಕ್ಕೆ ಸಂಬಂಧಿಸಿದ ಹಾಗೆ, ಎರಡೂ ರಾಜ್ಯಗಳನ್ನೂ ಒಂದೇ ಚುನಾವಣಾ ಕ್ಷೇತ್ರವೆಂದು ಮಾಡಿ, ಜಂಟೀ ಚುನಾವಣೆಯಲ್ಲಿ ಒಬ್ಬ ಪ್ರತಿನಿಧಿಯನ್ನು ಚುನಾಯಿಸುವುದು ಎಂದು ಪ್ರಸ್ತಾವಿಸಲಾಗಿದೆ. ನಾವು ಅಜ್ಮೀರ ಮತ್ತು ಕೊಡಗಿಗೆ ಒಂದು ರೀತಿಯ ವರ್ತನೆ, ಹಿಮಾಚಲ ಪ್ರದೇಶ ಮತ್ತು ಬಿಲಾಸ್‌ಪುರಕ್ಕೆ ಬೇರೆ ರೀತಿಯ ವರ್ತನೆ ತೋರಿಸಿದ್ದೇವೆ ಎಂದು

ಈ ಸದನ ಅನುಮಾನವಿಲ್ಲದೆ ಹೇಳಬಹುದು. ಮೇಲುನೋಟಕ್ಕೆ ಈ ವಾದ ಸರಿಯಾಗಿ ಎಂದು ಅನ್ನಿಸಬಹುದು. ಆದರೆ ಈ ಎರಡು ರಾಜ್ಯಗಳ ಎರಡು ಜೋಡಿಯನ್ನು ಒಂದೇ ಆಧಾರವನ್ನಿಟ್ಟುಕೊಂಡು ಹೇಗೆ ನಿಭಾಯಿಸುವುದು ಎಂದು ನನಗೆ ಅರ್ಥವಾಗುತ್ತಿಲ್ಲ. ಅಜ್ಮೀರ ಮತ್ತು ಕೊಡಗು ಒಂದಕ್ಕೊಂದು ಹೊಂದಿಕೊಂಡಿರುವ ಅಕ್ಕಪಕ್ಕದ ರಾಜ್ಯಗಳಲ್ಲ ಎಂಬುದನ್ನು ಮನಗಾಣಬೇಕು. ಅವುಗಳ ಸಾಂಸ್ಕೃತಿಕ ದೃಷ್ಟಿ, ಅವರ ಜೀವನಶೈಲಿ, ಜೀವನಕ್ರಮ, ಅವರ ಆರ್ಥಿಕ ಸಮಸ್ಯೆಗಳು ತೀರಾ ವಿಭಿನ್ನವಾದವುಗಳು, ಏಕರೂಪವಲ್ಲದವುಗಳು. ಅಜ್ಮೀರದಿಂದ ಚುನಾಯಿತನಾದ ಪ್ರತಿನಿಧಿಯೊಬ್ಬ ಕೊಡಗಿನ ಜನರ ಸಮಸ್ಯೆಗಳನ್ನು ಹಾಗೂ ಕಷ್ಟಗಳನ್ನು ಸಮರ್ಪಕವಾಗಿ ಪ್ರತಿಬಿಂಬಿಸಬಲ್ಲನೆ? ಹಾಗೆಯೇ ಕೊಡಗಿನಿಂದ ಚುನಾಯಿತನಾದ ಪ್ರತಿನಿಧಿಯೂ ಕೂಡ. ಆದರೆ, ಹಿಮಾಚಲಪ್ರದೇಶ ಮತ್ತು ಬಿಲಾಸ್‌ಪುರ ಹಾಗಲ್ಲ. ಅವುಗಳು ಅಕ್ಕಪಕ್ಕದ ರಾಜ್ಯಗಳು. ವಾಸ್ತವವಾಗಿ, ರಾಜ್ಯ ಸಚಿವಾಲಯ ಇವೆರಡೂ ರಾಜ್ಯಗಳನ್ನು ಎರಡು ಭಿನ್ನವಾದ, ಪರಸ್ಪರ ಸಂಬಂಧವಿಲ್ಲದ ರಾಜ್ಯಗಳಂತೆ ಇಡಬೇಕೆಂದು ಆಕಸ್ಮಿಕವಾಗಿ ನಿರ್ಧಾರವನ್ನು ತೆಗೆದುಕೊಂಡಿತು. ಈ ಆಕಸ್ಮಿಕ ಏನು ಎಂಬುದನ್ನು ಸದ್ಯದಲ್ಲಿ ನಾನು ಅರ್ಥಮಾಡಿಕೊಳ್ಳುವುದಕ್ಕಾಗಲೀ ಅಥವ ವಿವರಣೆ ಕೊಡುವುದಕ್ಕಾಗಲೀ ಸಾಧ್ಯವಾಗುತ್ತಿಲ್ಲ. ಎರಡೂ ರಾಜ್ಯಗಳು ಒಂದರಲ್ಲಿ ಒಂದು ಮಿಳಿತವಾಗಬಹುದಿತ್ತು. ಇದು ಆಗಿಯೇ ಆಗುತ್ತದೆ ಎಂಬುದರಲ್ಲಿ ನನಗೆ ಸಂದೇಹವಿಲ್ಲ. ಬಹುಶಃ ಚುನಾವಣೆ ನಡೆಯುವುದಕ್ಕೆ ಬಹಳ ಮುಂಚೆಯೇ ಹಾಗೆ ಆಗಬಹುದು. ವಿಭಜಿತ ಚುನಾವಣಾ ಕ್ಷೇತ್ರದ ನೀತಿಯನ್ನು, ನಾನು ಆಗಲೇ ತಿಳಿಸಿದ ಸಂದರ್ಭಗಳಲ್ಲಿ ಅಜ್ಮೀರ್ ಮತ್ತು ಕೊಡಗು ರಾಜ್ಯಗಳಿಗೆ ಬೇರೆ ಬೇರೆಯಾಗಿ ಮತಕ್ಷೇತ್ರಗಳನ್ನು ಅಳವಡಿಸಿಕೊಂಡ ಹಾಗೆ, ಅತ್ಯವಶ್ಯಕವಾಗಿ, ತಾರ್ಕಿಕವಾಗಿ, ಮುಚ್ಚುಮರೆಯಿಲ್ಲದೆ ಮಾಡಲೇ ತೀರ ಬೇಕಾದ ವಿಷಯವಾಗಿ ಹಿಮಾಚಲ ಮತ್ತು ಬಿಲಾಸ್‌ಪುರಕ್ಕೆ ಅನ್ವಯಿಸಬೇಕೆಂಬುದರಲ್ಲಿ ನಾನು ಯಾವುದೇ ಸಮರ್ಥನೆಯನ್ನು ಕಾಣುತ್ತಿಲ್ಲ.

ಆದ್ದರಿಂದ ಮಣಿಪುರ ಮತ್ತು ತ್ರಿಪುರಾಗಳಿಗೆ ಪ್ರತ್ಯೇಕವಾದ ಮತದಾರ ಮಂಡಲವಿರಬೇಕು. ಆದರೆ, ಎರಡು ವರ್ಷಗಳಿಗೊಮ್ಮೆ ಸರದಿಯ ಮೇರೆಗೆ ರಾಷ್ಟ್ರಪತಿಯವರು ಒಬ್ಬ ಪ್ರತಿನಿಧಿಯನ್ನು ನಾಮ ನಿರ್ದೇಶನ ಮಾಡಬೇಕು ಎಂದು ಪ್ರಸ್ತಾವನೆ ಮಾಡಲಾಗಿದೆ. ಹಿಮಾಚಲ ಪ್ರದೇಶ ಮತ್ತು ಬಿಲಾಸ್‌ಪುರ ಇವುಗಳಿಗೆ ಒಂದೇ ಚುನಾವಣಾ ಕ್ಷೇತ್ರ ಇರಬೇಕು ಮತ್ತು ಜಂಟೀ ಚುನಾವಣೆಯ ಮೂಲಕ ಒಬ್ಬ ಪ್ರತಿನಿಧಿಯನ್ನು ಚುನಾಯಿಸಬೇಕು. ಅಜ್ಮೀರ್ ಮತ್ತು ಕೊಡಗು ರಾಜ್ಯಗಳಿಗೆ ಸಂಬಂಧಿಸಿದ ಹಾಗೆ ಅಜ್ಮೀರ, ಎರಡು ರಾಜ್ಯಕ್ಕೂ ಕಾಯ್ದಿರಿಸಿದ ಒಂದು ಸ್ಥಾನವನ್ನು ಎರಡು ವರ್ಷದವರೆಗೆ ಅನುಭವಿಸಿ, ಆಮೇಲೆ ಸರದಿಯ ಮೇರೆಗೆ ಕೊಡಗು ರಾಜ್ಯ ಎರಡು ವರ್ಷಗಳವರೆಗೆ ಅನುಭವಿಸುತ್ತದೆ.

ಪಾರ್ಟ್ "ಸಿ" ರಾಜ್ಯಗಳ ಪ್ರಾತಿನಿಧ್ಯ ಕುರಿತಾಗಿ ಮಸೂದೆಯಲ್ಲಿ ನಾವು ಮಾಡಿರುವ ಉಪಬಂಧಗಳು ಇವೇನೆ. ನಾನು ಮೊದಲೇ ಹೇಳಿದ ಹಾಗೆ ಮಸೂದೆಗೆ ಎರಡುಪಟ್ಟು ಉದ್ದೇಶ ಇದೆ. ಮೊದಲನೆಯದು ಮೇಲ್ಮನೆಯಲ್ಲಿ ಪಾರ್ಟ್ "ಸಿ" ರಾಜ್ಯಗಳ ಪ್ರಾತಿನಿಧ್ಯಕ್ಕೆ ಅವಕಾಶ ಮಾಡುವುದು. ಎರಡನೆಯದು ಅಧ್ಯಾದೇಶದಲ್ಲಿ ಒಳಗೊಂಡ ಉಪಬಂಧಗಳಿಗೆ ಕಾನೂನಿನ ಹೊದಿಕೆಯನ್ನು ಕೊಡುವುದು.

ಈ ಅಧ್ಯಾದೇಶವನ್ನು ಹೊರಡಿಸುವುದಕ್ಕೆ ಸರ್ಕಾರಕ್ಕೆ ಏಕೆ ಆವಶ್ಯಕತೆ ಉಂಟಾಯಿತು ಎಂಬುದಕ್ಕೆ ಸಂಕ್ಷಿಪ್ತವಾಗಿ ವಿವರಣೆಯನ್ನು ಕೊಡುತ್ತೇನೆ. ಸದನಕ್ಕೆ ನೆನಪಿರುವ ಹಾಗೆ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಚುನಾವಣೆಗಳನ್ನು ನಡಸಬಹುದೆಂದು ಸರ್ಕಾರ ಭಾವಿಸಿತ್ತು. ಅದರ ಬಗ್ಗೆ ಅದು ಬಹಳ ಉತ್ಸುಕತೆಯಿಂದ ಇತ್ತು. ಆ ಉದ್ದೇಶವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾದುದೆಲ್ಲವನ್ನೂ ಮಾಡಲು ಸಿದ್ಧರಿದ್ದರು. ನಾನು

ಆಗಲೇ ಹೇಳಿದ ಹಾಗೆ, ಪರಿಸ್ಥಿತಿಯನ್ನು ಅವಲೋಕಿಸಿದಾಗ, ಕೆಲವು ಕ್ಷೇತ್ರಗಳಲ್ಲಿ ಮತದಾರರ ಪಟ್ಟಿ ಸಿದ್ಧವಾಗಿರಲಿಲ್ಲವೆಂದೂ, ಇನ್ನು ಕೆಲವು ಕ್ಷೇತ್ರಗಳಲ್ಲಿ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯವಾಗಿರಲಿಲ್ಲವೆಂದೂ ಗೊತ್ತಾಯಿತು. ನಾವೇನಾದರೂ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದಲ್ಲಿದ್ದ ಉಪಬಂಧಗಳನ್ನೇ ಅನುಸರಿಸಿದ್ದರೆ, ಪರಿಸ್ಥಿತಿ ಏನಾಗುತ್ತಿತ್ತು? ಮೂಲ ಅಧಿನಿಯಮದ ಕೆಳಗೆ ಚುನಾವಣಾ ಆಯುಕ್ತರು ಪ್ರಾಥಮಿಕ ಮತದಾರರ ಪಟ್ಟಿಗಳನ್ನು ಪ್ರಸಿದ್ಧಿಸಲೇ ಬೇಕಾಗಿತ್ತು. ನಾನು "ಪ್ರಾಥಮಿಕ ಮತದಾರರ ಪಟ್ಟಿಗಳನ್ನು" ಎಂದು ಹೇಳುತ್ತಿರುವುದು ಒಂದೊಂದು ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಗಳು ಎಂಬ ಅರ್ಥದಲ್ಲಿ. ಚುನಾವಣಾ ಕಾರ್ಯಗತಿಯಲ್ಲಿ ಅದೇ ಮೊದಲ ಮೆಟ್ಟಿಲು. ಅದಾದ ನಂತರ ಇನ್ನು ಎರಡು ಮೂರು ಪ್ರಕ್ರಿಯೆಗಳನ್ನು ಮುಗಿಸಬೇಕಾಗಿತ್ತು. ಮೊದಲನೆಯದು, ಕ್ಲೇಮುಗಳನ್ನೂ, ತಕರಾರುಗಳನ್ನೂ ಕರೆಯುವುದು, ಎರಡನೆಯದು, ಕ್ಲೇಮುಗಳನ್ನೂ, ಮನವಿಗಳನ್ನು ಯಾವುದೇ ನ್ಯಾಯಿಕ ಪ್ರಾಧಿಕಾರವೋ ಅಥವ ಬೇರೆ ರೀತಿಯಲ್ಲಿ ವಿಚಾರಣೆ ಮಾಡುವುದು ಮತ್ತು ಅವುಗಳನ್ನು ವಿಲೇ ಮಾಡುವುದು. ಮೂರನೆಯದಾಗಿ ಪರಿಶೀಲನೆ ಮಾಡಿದ ಪ್ರಾಧಿಕಾರದ/ಅಧಿಕಾರಿಯ ತೀರ್ಮಾನದಂತೆ, ಎಲ್ಲಾ ತಿದ್ದುಪಡಿಗಳನ್ನೂ ಮತದಾರರ ಪಟ್ಟಿಗಳಲ್ಲಿ ಸೇರಿಸುವುದು, ಕಡೆಯದಾಗಿ ಅದನ್ನು ಪ್ರಸಿದ್ಧಿಸುವುದು.

ಈ ಪ್ರಕ್ರಿಯೆಗಳನ್ನು ಮುಗಿಸುವುದಕ್ಕೆ ತೆಗೆದುಕೊಳ್ಳುವ ಸಮಯವನ್ನು ಗಣನೆಗೆ ತೆಗೆದುಕೊಳ್ಳುತ್ತಾ, ಈ ಕ್ಷಣದಲ್ಲಿ ಹೇಳುವುದಾದರೆ ಪರಿಸ್ಥಿತಿಯು ಹೀಗಾಗುತ್ತಿತ್ತು. ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯವಾದ ನಂತರ, ತಮ್ಮ ಕ್ಲೇಮುಗಳನ್ನು/ತಕರಾರುಗಳನ್ನು ಸಲ್ಲಿಸಲು ಮೂರು ವಾರಗಳು ಅಥವ ಒಂದು ತಿಂಗಳ ಕಾಲಾವಕಾಶವನ್ನು ಕೊಡಲೇಬೇಕಾಗುತ್ತದೆ. ನ್ಯಾಯವಾಗಿ, ಅದಕ್ಕಿಂತ ಕಡಿಮೆ ಸಮಯವನ್ನು ಕೊಡಲಾಗುವುದಿಲ್ಲ. ತದನಂತರ, ಪರಾಮರ್ಶೆ ಮಾಡುವ ಪ್ರಾಧಿಕಾರಕ್ಕೆ ಕಡೆಯ ಪಕ್ಷ ಎರಡು ತಿಂಗಳುಗಳಾದರೂ ಬೇಕಾಗುತ್ತದೆ. (ನಾನು ತೀರಾ ಕಟ್ಟುನಿಟ್ಟಿನ ಅಂದಾಜನ್ನು ಮಾಡುತ್ತಿದ್ದೇನೆ). ಅಲ್ಲಿಗೆ ಮೂರು ತಿಂಗಳುಗಳಾಗುತ್ತವೆ. ಪರಾಮರ್ಶೆ ಮಾಡುವ ಪ್ರಾಧಿಕಾರದ ತೀರ್ಮಾನದ ಆಧಾರದ ಮೇಲೆ ಮತದಾರರ ಪಟ್ಟಿಗಳನ್ನು ಪರಾಮರ್ಶೆ ಮಾಡುವುದಕ್ಕೆ ಇನ್ನೊಂದು ತಿಂಗಳು ಸೇರಿಸಿ. ಅಲ್ಲಿಗೆ ಒಟ್ಟು ನಾಲ್ಕು ತಿಂಗಳುಗಳಾದವು. ಈ ತಿಂಗಳ ಕೊನೆಗೆ ಪ್ರಾಥಮಿಕ ಮತದಾರರ ಪಟ್ಟಿ ಸಿದ್ಧವಾಗುತ್ತದೆ ಎಂದು ಇಟ್ಟುಕೊಂಡರೆ –ಇದು ಬಹಳ ಉತ್ಸಾಹಭರಿತ ಆಶಾಭಾವನೆ–ಆಗ ಸ್ವಯಂವೇದ್ಯವಾಗುವುದೆಂದರೆ ಮೂಲ ಪ್ರಜಾಪ್ರಾತಿನಿಧ್ಯ ಅಧಿನಿಯಮದಲ್ಲಿ ಸೇರಿಸಿರುವ ನೀತಿಗಳನ್ನು ಅನುಸರಿಸಿದರೆ, ಅಂತಿಮ ಮತದಾರರ ಪಟ್ಟಿಗಳನ್ನು ಏಪ್ರಿಲ್ ಅಥವ ಮೇ ತಿಂಗಳ ಕೊನೆಯಲ್ಲೂ ಸಹ ಪ್ರಸಿದ್ಧಿಸಲಾಗುವುದಿಲ್ಲ. ಹಾಗಾಗಿ ನಾವು ಮೂಲ ಅಧಿನಿಯಮದಲ್ಲಿರುವ ಉಪಬಂಧಗಳನ್ನು ಅಕ್ಷರಶಃ ಪಾಲಿಸಿದರೆ ಚುನಾವಣೆಗಳನ್ನು ಏಪ್ರಿಲ್ ಅಥವ ಮೇ ತಿಂಗಳ ಕೊನೆಯಲ್ಲೂ ನಡೆಸಲಾಗುವುದಿಲ್ಲ. ಏಪ್ರಿಲ್, ಮೇ ತಿಂಗಳುಗಳಲ್ಲಿ ಚುನಾವಣೆಗಳನ್ನು ನಡೆಸಲು ಸರ್ಕಾರ ಬಹಳ ಉತ್ಸಾಹದಿಂದ ಇರುವುದರಿಂದ, ಸರ್ಕಾರಕ್ಕೆ ಅನಿಸಿದ್ದೇನೆಂದರೆ, ಈ ಪ್ರಕ್ರಿಯೆಯನ್ನೇ ತಿರುಗು ಮುರುಗು ಮಾಡಿದರೆ, ಇದು ಸಾಧ್ಯವಾಗಬಹುದು ಎಂದು. ಘಟಕಗಳಿಗೆ ಅಥವ ಕ್ಷೇತ್ರಗಳಿಗೆ ಸಿದ್ಧಪಡಿಸಿದ ಮತದಾರರ ಪಟ್ಟಿಗಳ ಆಧಾರದ ಮೇಲೆ, ಕ್ಲೇಮುಗಳನ್ನು ಮತ್ತು ತಕರಾರುಗಳನ್ನು ಕರೆದರೆ, ಅವುಗಳನ್ನು ವಿಲೇ ಮಾಡಿದ ನಂತರ ಮತದಾರರ ಪಟ್ಟಿಗಳನ್ನು ಚುನಾವಣಾ ಕ್ಷೇತ್ರದ ಆಧಾರದ ಮೇಲೆ ತಯಾರು ಮಾಡಿದ ಮೇಲೆ ಉಪಯೋಗಿಸಬಹುದಾದ ಸಮಯವನ್ನು ಪ್ರಾರಂಭದಲ್ಲಿಯೇ ಉಪಯೋಗಿಸಿದರೆ, ಆಗ ಕ್ಲೇಮುಗಳ, ತಕರಾರುಗಳ ಮತ್ತು ಪರಾಮರ್ಶೆಗಳ ಪ್ರಕ್ರಿಯೆಯನ್ನು ತೊಡೆದು

ಹಾಕಿದರೆ, ಚುನಾವಣೆಗಳನ್ನು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ನಡೆಸಬಹುದಾಗಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರಕ್ಕೆ ಅನಿಸಿದ್ದು ಏನೆಂದರೆ, ಈ ಪ್ರಕ್ರಿಯೆಯನ್ನು ತಿರುಗು ಮುರುಗು ಮಾಡಿದರೆ, ಅಂದರೆ ಕ್ಲೇಮುಗಳನ್ನು ಮತ್ತು ಆಕ್ಷೇಪಣೆಗಳನ್ನು ಚುನಾವಣಾ ಕ್ಷೇತ್ರಗಳ ಆಧಾರದ ಮೇಲೆ ಅಲ್ಲದೆ, ಕ್ಷೇತ್ರ (ಏರಿಯ)ಗಳ ಆಧಾರದ ಮೇಲೆ ತಯಾರಿಸಿದ ಪ್ರಾಥಮಿಕ ಮತದಾರರಪಟ್ಟಿಗಳ ಮೇಲೆ ಕರೆಯಬಹುದು ಎಂದು.

ಅಧ್ಯಾದೇಶ ಮಾಡಿದ್ದೇ ಅದನ್ನು. ಚುನಾವಣಾ ತಾರೀಖನ್ನು ಮುಂದೂಡಿರುವುದರ ಕಾರಣ, ಅಧ್ಯಾದೇಶವನ್ನು ಆಚರಣೆಗೆ ತರುವುದು ಅಪೇಕ್ಷಣೀಯವೇ ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರ ಬಹಳ ಸರಳ. ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವ ವಿಷಯದಲ್ಲಿ ಚುನಾವಣಾ ಆಯುಕ್ತರು ಮಾಡಬೇಕಾದ ಕೆಲಸದ ಬಹುಪಾಲು ಈಗಾಗಲೇ ಮುಗಿಸಲಾಗಿದ್ದು ಅಧ್ಯಾದೇಶವು ಕಾನೂನಾಗದಿದ್ದರೆ ಅಷ್ಟೂ ಕೆಲಸವನ್ನು ಸಮುದ್ರಕ್ಕೆ ಬಿಸಾಡಬೇಕಾಗುತ್ತದೆ. ಅಲ್ಲದೆ ಚುನಾವಣಾ ಆಯುಕ್ತರು ತಮ್ಮ ಕೆಲಸವನ್ನು ಮೊದಲಿನಿಂದ ಪ್ರಾರಂಭಿಸಬೇಕಾಗುತ್ತದೆ. (ಒಬ್ಬ ಮಾನ್ಯ ಸದಸ್ಯರು: ರಿವರ್ಸ್‌ಗೇರ್). ನನ್ನ ಸ್ನೇಹಿತರು ಹೇಳುತ್ತಾರೆ ರಿವರ್ಸ್‌ಗೇರ್ ಎಂದು. ಇಂಥದೊಂದು ಸಂಭವಿಸುವದನ್ನು ಈ ಸದನವು ಅಪೇಕ್ಷಿಸುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ನಾನು ಕೇವಲ ಸಮಯದ ಪ್ರಶ್ನೆಯನ್ನು ಗಮನದಲ್ಲಿಟ್ಟುಕೊಂಡಿಲ್ಲ. ಇದರ ಮೇಲೆ ಸರ್ಕಾರ ಈಗಾಗಲೇ ಮಾಡಿ ಮುಗಿಸಿರುವ ಕೆಲಸದ ಮೇಲೆ ಖರ್ಚು ಮಾಡಿರುವ ಹಣದ ಬಗ್ಗೆಯೂ ಯೋಚಿಸುತ್ತಿದ್ದೇನೆ. ಅಧ್ಯಾದೇಶದಲ್ಲಿನ ಉಪಬಂಧಗಳು ಮೊದಲನೆಯ ಚುನಾವಣೆಗೆ ಮಾತ್ರ ಅನ್ವಯಿಸುತ್ತವೆ. ಇದಕ್ಕೋಸ್ಕರ ನಾವು ಮಸೂದೆಯಲ್ಲಿ ಸಾಕಷ್ಟು ಎಚ್ಚರ ವಹಿಸಿದ್ದೇವೆ. ಈ ಚುನಾವಣೆಯ ನಂತರದ ಚುನಾವಣೆಗಳಲ್ಲಿ ಮುಖ್ಯ ಅಧಿನಿಯಮದ ಉಪಬಂಧಗಳು ಅನ್ವಯವಾಗುತ್ತವೆ. (ಚುನಾವಣೆಗಳನ್ನು ನಡೆಸುವುದಕ್ಕೂ ಮತ್ತು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದಕ್ಕೂ) ಆದ ಕಾರಣ, ನಾವು ಅಧ್ಯಾದೇಶವನ್ನು ಆಚರಣೆಗೆ ತರುವುದಕ್ಕಾಗಿ ಈ ಸದನದ ಅನುಮತಿಯನ್ನು ಬೇಡುತ್ತಿದ್ದೇವೆ.

ಮಸೂದೆಯಲ್ಲಿರುವ ಇತರ ಉಪಬಂಧಗಳು ಶುದ್ಧಾಂಗವಾಗಿ ಮುಖ್ಯ ಉಪಬಂಧಗಳಿಗೆ ಪೂರವಾಗಿ ಇರುವಂಥ ಉಪಬಂಧಗಳು–ಅರ್ಹತಾ ದಿನಾಂಕವನ್ನು ಬದಲಾಯಿಸುವುದು. ಅರ್ಹತಾ ಗಡುವನ್ನು ಬದಲಾಯಿಸುವುದು, ಇತ್ಯಾದಿ, ಇತ್ಯಾದಿ. ಈ ಸದನವನ್ನು ಅವುಗಳಿಗೋಸ್ಕರ ಹಿಡಿದು ನಿಲ್ಲಿಸುವ ಆವಶ್ಯಕತೆ ಇಲ್ಲವೆಂದು ನಾನು ಅಂದುಕೊಳ್ಳುತ್ತೇನೆ. ಆ ತಿದ್ದುಪಡಿಗಳು ಯಾವುವು ಎಂದು ಸದನವೇ ಕಂಡುಕೊಳ್ಳಬಲ್ಲುದು.

**ಮಾನ್ಯ ಸಭಾಪತಿಗಳು:** ಪ್ರಸ್ತಾವವನ್ನು ಮಂಡಿಸಲಾಯಿತು.

> "೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರ್ಯಾಲೋಚನೆಗಾಗಿ ತೆಗೆದುಕೊಳ್ಳಬೇಕು."

---

**ಶ್ರೀ ಸರ್ವಾಟೆ (ಮಧ್ಯಭಾರತ):** ಈ ಸಂಬಂಧವಾಗಿ ನಾನು ಸಂವಿಧಾನದ ಅನುಚ್ಛೇದ ೨೪೦ನ್ನು ಉಲ್ಲೇಖಿಸಬಹುದೆ? ಅದು ಹೇಳುವುದೇನೆಂದರೆ: "ಸಾಧ್ಯವಾದಷ್ಟು ಬೇಗ.....

* P.D., ಸಂ. ೭, ಭಾಗ II, ೧೩ ಡಿಸೆಂಬರ್ ೧೯೫೦, ಪು. ೧೭೧೧.

**ಡಾ. ಅಂಬೇಡ್ಕರ್:** ಸಾಧ್ಯವಾದಷ್ಟು ಬೇಗ ಅಂತ ಎಲ್ಲಿದೆ?

**ಶ್ರೀ ಸರ್ವಾಟೆ (ಮಧ್ಯಭಾರತ):** ಆ ಅನುಚ್ಛೇದವನ್ನು ರೂಪಿಸಿದಾಗ ಆ ಅರ್ಥವನ್ನು ಕೊಟ್ಟಿತ್ತು.

****ಶ್ರೀ ಕಾಮತ್:** ಪ್ರಸ್ತುತ ಮಸೂದೆಗೆ ಸಂಬಂಧಿಸಿದ ಹಾಗೆ ಮತ್ತು ರಾಜ್ಯಗಳ ಪರಿಷತ್ತಿನಲ್ಲಿ ಮಣಿಪುರ ಮತ್ತು ತ್ರಿಪುರಾದ ಸದಸ್ಯನಿಗೆ ಸಂಬಂಧಿಸಿದ ಹಾಗೆ, ರಾಷ್ಟ್ರಪತಿಯವರಿಂದ ನಾಮ ನಿರ್ದೇಶನಗೊಳ್ಳುವ ಸದಸ್ಯನಿಗೆ ಈ ವಿಷಯದಲ್ಲಿ ಅನುಭವ ಇರುತ್ತದೆಯೋ ಅಥವ ಈ ವಿಷಯದಲ್ಲಿ ವಿಶೇಷ ಜ್ಞಾನವಿರುತ್ತದೆಯೋ ಎಂಬುದನ್ನು ಕುರಿತು ಮಸೂದೆ ಮೌನ ತಾಳಿದೆ. ಡಾ. ಅಂಬೇಡ್ಕರ್ ಅವರು ಈ ವಿಷಯದ ಮೇಲೆ ಬೆಳಕನ್ನು ಚೆಲ್ಲಲಿ ಎಂದು ನಾನು ಇಚ್ಛಿಸುತ್ತೇನೆ. ನಾಮ ನಿರ್ದೇಶಿತನಾದ ಸದಸ್ಯ, ಸಂವಿಧಾನದ ಅನುಚ್ಛೇದ ೮೦ರ ಖಂಡ (೧) (ಎ)ನಲ್ಲಿ ಉಲ್ಲೇಖಿಸಿರುವ ೧೨ರ ಜೊತೆಗೆ ಎಂದು ನಾನು ತಿಳಿದುಕೊಂಡಿದ್ದೇನೆ.

**ಡಾ. ಅಂಬೇಡ್ಕರ್:** ಅವನು ೨೩೮ರಲ್ಲಿ ಒಬ್ಬರಾಗುತ್ತಾನೆ.

**ಶ್ರೀ ಕಾಮತ್:** ಡಾ. ಅಂಬೇಡ್ಕರ್ ಅವರು ಆ ಅನುಚ್ಛೇದದ ಸರಿಯಾದ ವ್ಯಾಖ್ಯಾನವನ್ನು ಕೊಟ್ಟಿದ್ದಕ್ಕೆ ನನಗೆ ಸಂತೋಷವಾಗಿದೆ. ಆದ್ದರಿಂದ ಅದು ೧೩ ಆಗುತ್ತದೆ. ಅದೊಂದು ಅಶುಭ ಸಂಖ್ಯೆಯೊಂದು ಮಿ. ತ್ಯಾಗಿ ಹೇಳುತ್ತಾರೆ. ಅದು ನಿಜವಾಗಿಯೂ ಕೆಟ್ಟದ್ದೆ ಎಂಬುದು ನನಗೆ ಗೊತ್ತಿಲ್ಲ.

*****ಮಾನ್ಯ ಸಭಾಪತಿಗಳು:** ನಾನು ಉಲ್ಲೇಖ ಮಾಡುತ್ತಿದ್ದುದು ಪಾರ್ಟ್ (ಎ) ಪಾರ್ಟ್ (ಬಿ) ಮತ್ತು ಪಾರ್ಟ್ (ಸಿ) ರಾಜ್ಯಗಳ ಎಲ್ಲ ಸದಸ್ಯರನ್ನೂ ಕುರಿತು. ಏಕೆಂದರೆ ಅವರೆಲ್ಲರೂ ಒಂದು ಯೋಗ್ಯ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಆಸಕ್ತಿರಾಗಿದ್ದಾರೆ. ನಾನು ನಿರ್ದಿಷ್ಟವಾಗಿ ಹೇಳಿದ್ದು ಪಾರ್ಟ್ (ಸಿ) ರಾಜ್ಯದಿಂದ ಬಂದವರನ್ನು ಕುರಿತು. ಏಕೆಂದರೆ ಈ ಮಸೂದೆಯಿಂದ ಹೆಚ್ಚಾಗಿ ಬಾಧೆಯಾಗುವುದು ಅವರಿಗೆ. ಅದರಿಂದಲೆ, ಅವರಿಗೆ ಇನ್ನೂ ಹೆಚ್ಚಿನ ಅವಕಾಶವನ್ನು ಕೊಡಬೇಕೆಂದು ನಾನು ಸಲಹೆ ಮಾಡಿದ್ದು. ಅದೇ ವಿಷಯ. ಆದರೆ ನಾವೆಲ್ಲರೂ ಒಟ್ಟಾಗಬೇಕು. ಇದು ಎಲ್ಲರಿಗೂ ಒಪ್ಪಿಗೆಯಾಗುವುದಾದರೆ, ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಿ, ಮುಂದಿನ ವಿಷಯಕ್ಕೆ ಹೋಗಬಹುದು. ಒಪ್ಪಿಗೆಯಿದೆಯೆ?

**ಕಾನೂನು ಸಚಿವರು(ಡಾ. ಅಂಬೇಡ್ಕರ್):** ಆ ಸಲಹೆಯನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿದ್ದೇನೆ.

**ಶ್ರೀ ಜೆ.ಆರ್. ಕಪೂರ್:** ನಾನು ಹೇಳಬೇಕೆಂದಿದ್ದುದನ್ನು ನಾನು ಮುಗಿಸಲೆ?

**ಮಾನ್ಯ ಸಭಾಪತಿಗಳು:** ಆರ್ಡರ್, ಆರ್ಡರ್, ಮಾತನಾಡುವುದಕ್ಕೆ ಅವರಿಗೆ ಬೇಕಾದಷ್ಟು ಅವಕಾಶ ಸಿಗುತ್ತದೆ. ಅನೌಪಚಾರಿಕ ಸಮ್ಮೇಳನದಲ್ಲಿ ಇನ್ನೂ ಹೆಚ್ಚಾಗಿ ಸಿಗುತ್ತದೆ. ಮಾನ್ಯ ಕಾನೂನು ಸಚಿವರು ಅವರಿಗೆ ಈಗ ಸಾಧ್ಯವಾಗುವುದಕ್ಕಿಂತ, ಆಗ ಇನ್ನೂ ಹೆಚ್ಚಿಗೆ ಕೇಳುತ್ತಾರೆ. ಆದ್ದರಿಂದ ಈ ವಿಷಯವನ್ನು ಮುಂದೂಡಬಹುದು. ಆದರೆ ಅದನ್ನು ಮತ್ತೆ ಯಾವಾಗ ತೆಗೆದುಕೊಳ್ಳೋಣ. ಇದೊಂದು ಮುಖ್ಯವಾದ ವಿಷಯ.

**ಒಬ್ಬ ಮಾನ್ಯ ಸದಸ್ಯರು:** ನಾಳಿದ್ದು.

**ಮಾನ್ಯ ಸಭಾಪತಿಗಳು:** ಮಾನ್ಯ ಕಾನೂನು ಸಚಿವರು ಅದನ್ನು ನಾವು ಯಾವಾಗ ತೆಗೆದುಕೊಳ್ಳಬಹುದೆಂದು ಹೇಳಬೇಕು. ಮಾನ್ಯ ಕಾನೂನು ಸದಸ್ಯರಿಗೆ ಗೊತ್ತಿರುವ ಹಾಗೆ ಈ ಅಧಿವೇಶನವನ್ನು ೨೦ನೇ ತಾರೀಖಿನಂದು ಮುಕ್ತಾಯಗೊಳಿಸಲು ಇಚ್ಛಿಸಿದ್ದೇವೆ.

---

** ಅದೇ, ಪು. ೧೭೧೬.

*** ಅದೇ, ೧೪ ಡಿಸೆಂಬರ್ ೧೯೫೦, ಪು. ೧೭೭೯–೮೦.

## ಪ್ರಜಾಪ್ರಾತಿನಿಧ್ಯ (ನಂ.೨) ಮಸೂದೆ

*__ಕಾನೂನು ಸಚಿವರು (ಡಾ. ಅಂಬೇಡ್ಕರ್):__ ಪಾರ್ಲಿಮೆಂಟಿನ ಸದನಗಳಿಗೆ ಹಾಗೂ ಪ್ರತಿ ರಾಜ್ಯದ ಶಾಸನ ಸಭೆಯ ಸದನ ಅಥವ ಸದನಗಳಿಗೆ ಚುನಾವಣೆಗಳನ್ನು ನಡೆಸಲು ಅವಕಾಶ ಕಲ್ಪಿಸಲು, ಆ ಸದನಗಳ ಸದಸ್ಯತ್ವ ಕುರಿತಾದ ಅರ್ಹತೆಗಳು, ಅನರ್ಹತೆಗಳು, ಭ್ರಷ್ಟ ಮತ್ತು ಕಾನೂನುಬಾಹಿರ ಆಚರಣೆಗಳು, ಮತ್ತು ಈ ಚುನಾವಣೆಗಳ ಸಂಬಂಧ ಇತರ ಅಪರಾಧಗಳು ಹಾಗೂ ಚುನಾವಣೆಗಳ ಸಂಬಂಧವಾಗಿ ಅಥವ ಸಂಬಂಧದಿಂದ ಉದ್ಭವಿಸುವ ಅನುಮಾನಗಳು ಮತ್ತು ವ್ಯಾಜ್ಯಗಳ ಮೇಲಿನ ತೀರ್ಮಾನಗಳು. (ಇವುಗಳನ್ನು ಒಳಗೊಂಡ) ಮಸೂದೆಯನ್ನು ಸದನದ ಮುಂದೆ ಇಡಲು ಅನುಮತಿಯನ್ನು ಕೊಡಬೇಕು.

**ಮಾನ್ಯಸಭಾಪತಿಗಳು:** ವಿಷಯವೇನೆಂದರೆ:

> "ಪಾರ್ಲಿಮೆಂಟಿನ ಸದನಗಳಿಗೆ ಹಾಗೂ ಪ್ರತಿರಾಜ್ಯದ ಶಾಸನಸಭೆಯ ಸದನ ಅಥವಾ ಸದನಗಳಿಗೆ ಚುನಾವಣೆಗಳನ್ನು ನಡೆಸಲು ಅವಕಾಶ ಕಲ್ಪಿಸಲು, ಆ ಸದನಗಳ ಸದಸ್ಯತ್ವ ಕುರಿತಾದ ಅರ್ಹತೆಗಳು, ಅನರ್ಹತೆಗಳು ಭ್ರಷ್ಟ ಮತ್ತು ಕಾನೂನು ಬಾಹಿರ ಆಚರಣೆಗಳು ಮತ್ತು ಈ ಚುನಾವಣೆ ಸಂಬಂಧಪಟ್ಟ ಇತರ ಅಪರಾಧಗಳು ಹಾಗೂ ಚುನಾವಣೆಗಳ ಸಂಬಂಧವಾಗಿ ಅಥವಾ ಸಂಬಂಧದಿಂದ ಉದ್ಭವಿಸುವ ಅನುಮಾನಗಳು ಮತ್ತು ವ್ಯಾಜ್ಯಗಳ ಮೇಲಿನ ತೀರ್ಮಾನಗಳು. (ಇವುಗಳನ್ನು ಒಳಗೊಂಡ) ಮಸೂದೆಯನ್ನು ಸದನದ ಮುಂದೆ ಇಡಲು ಅನುಮತಿಯನ್ನು ಬೇಡಲಾಗಿದೆ."

ಮಸೂದೆಯನ್ನು ಮಂಡಿಸಲಾಯಿತು.

**ಡಾ. ಅಂಬೇಡ್ಕರ್:** ನಾನು ಮಸೂದೆಯನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

## ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ

**__ಮಾನ್ಯ ಉಪಸಭಾಪತಿಗಳು:__ ಮಾಲೀಕರ ಹೊಣೆಗಾರಿಕೆ ಮಸೂದೆಯನ್ನು ತೆಗೆದುಕೊಳ್ಳಲೋ ಅಥವಾ ಪ್ರಜಾಪ್ರಾತಿನಿಧ್ಯ ಮಸೂದೆಯನ್ನು ತೆಗೆದುಕೊಳ್ಳಲೋ?

**ಪ್ರಧಾನಮಂತ್ರಿಗಳು ಮತ್ತು ವಿದೇಶಾಂಗ ವ್ಯವಹಾರಗಳ ಸಚಿವರು (ಶ್ರೀ ಜವಾಹರ್‌ಲಾಲ್ ನೆಹರು):** ಪ್ರಜಾಪ್ರಾತಿನಿಧ್ಯ ಮಸೂದೆಯು ಭಾಗಶಃ ಚರ್ಚಿಸಿದ ಮಸೂದೆ. ಅದನ್ನು ಈಗ ತೆಗೆದುಕೊಳ್ಳೋಣ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಸ್ವಾಮಿ, ತಮಗೆ ನೆನಪಿರಬಹುದು, ಹೋದ ಸಮಯ ಮಸೂದೆಯನ್ನು ಪರ್ಯಾಲೋಚಿಸುವ ಪ್ರಸ್ತಾವದ ಮೇಲೆ ಚರ್ಚೆ ನಡೆಯುತ್ತಿದ್ದಾಗ ಮಾನ್ಯಸಭಾಪತಿಗಳು ನಾನು ಮತ್ತು ಪಾರ್ಟ್ "ಸಿ" ರಾಜ್ಯಗಳಲ್ಲಿ ಆಸಕ್ತಿ ಇರುವ ಸದಸ್ಯರು ಒಟ್ಟಾಗಿ ಸೇರಿ ನನ್ನ ಮತ್ತು ಅವರ ಮಧ್ಯೆ ಒಪ್ಪಿಗೆಯಾಗುವಂಥ ಒಂದು ಬಗೆಯ ಸ್ಕೀಮನ್ನು ರೂಪಿಸಲು ಅವಕಾಶವಾಗುವಂತೆ ಚರ್ಚೆಯನ್ನು ಮುಂದಕ್ಕೆ ಹಾಕಬಹುದೆಂಬ ಸಲಹೆಯನ್ನು ಕೊಟ್ಟಿದ್ದೆವು.

---

* P.D., ಸಂ. ೭, ಭಾಗ II, ೧೮ ಡಿಸೆಂಬರ್ ೧೯೫೦, ಪು. ೧೮೩೪–೩೫.

** P.D., ಸಂ. ೭, ಭಾಗ II, ೨೧ ಡಿಸೆಂಬರ್ ೧೯೫೦, ಪು. ೨೨೦೯–೧೦.

**(ಮಾನ್ಯಸಭಾಪತಿಗಳ ಅಧ್ಯಕ್ಷತೆಯಲ್ಲಿ)**

ನಾನು ಆ ಸಲಹೆಯನ್ನು ಒಪ್ಪಿಕೊಂಡೆ. ಆನಂತರ ಪಾರ್ಟ್ "ಸಿ" ರಾಜ್ಯಗಳ ಸದಸ್ಯರು ಮತ್ತು ಈ ಮಸೂದೆಯಲ್ಲಿ ಸ್ವಲ್ಪ ಆಸಕ್ತಿಯಿದ್ದ ಈ ಸದನದ ಸದಸ್ಯರು ಇವರ ಜೊತೆ ಒಂದೆರಡು ಮೀಟಿಂಗುಗಳನ್ನು ಮಾಡಿದೆ. ನಿಮಗೆ ನೆನಪಿರುವ ಹಾಗೆ ಚರ್ಚೆಯು ಮುಂದುವರೆಯುತ್ತಿದ್ದಾಗ ನನ್ನ ಮತ್ತು ಪಾರ್ಟ್ "ಸಿ" ರಾಜ್ಯಗಳ ಪರ ಮಾತನಾಡಿದ ಸದಸ್ಯರ ಮಧ್ಯೆ ಮೂರು ವಿಷಯಗಳ ಮೇಲೆ ಭಿನ್ನಾಭಿಪ್ರಾಯವಿತ್ತು. ಅವು ಎಂದರೆ:

೧. ಪರೋಕ್ಷ ವ್ಯವಸ್ಥೆಯ ಚುನಾವಣೆ

೨. ಮಣಿಪುರ ಮತ್ತು ತ್ರಿಪುರಾಕ್ಕೆ ನಾಮ ನಿರ್ದೇಶನ

ಮತ್ತು

೩. ಸರದಿಯ ಮೇಲೆ ಪ್ರಾತಿನಿಧ್ಯ

ಅಭಿಪ್ರಾಯಗಳ ವಿನಿಮಯದಿಂದ ಪರಸ್ಪರರಿಗೆ ಒಪ್ಪಿಗೆಯಾದ ಒಂದು ಸೂತ್ರವನ್ನು ರೂಪಿಸಿದ್ದೇವೆ ಎಂದು ನಿವೇದಿಸಲು ಸಂತಸವಾಗುತ್ತದೆ. ಇದರಿಂದಾಗಿ ಪೌರಸಭೆಗಳಿಂದ, ಸ್ಥಳೀಯ ಸಂಸ್ಥೆಗಳಿಂದ, ಗ್ರಾಮಪಂಚಾಯಿತಿ, ಇತ್ಯಾದಿಗಳಿಂದ ಪರೋಕ್ಷ ವ್ಯವಸ್ಥೆಯ ಚುನಾವಣೆಗೆ ಸಂಬಂಧಿಸಿದ ಉಪಬಂಧಗಳನ್ನು ಮಸೂದೆಯಿಂದ ತೊಡೆದು ಹಾಕಲು ಸಾಧ್ಯವಾಗಿದೆ. ಅಲ್ಲದೆ, ಮಣಿಪುರ ಮತ್ತು ತ್ರಿಪುರಾಗಳಿಗೆ ನಾಮನಿರ್ದೇಶನದ ಮೂಲಕ ಪ್ರಾತಿನಿಧ್ಯವನ್ನು ಕಲ್ಪಿಸುವ ಉಪಬಂಧವನ್ನು ಸಹ ತೊಡೆದು ಹಾಕಲು ಸಾಧ್ಯವಾಗಿದೆ. ಮೂರನೆಯ ವಿಷಯಕ್ಕೆ ಅಂದರೆ ಸರದಿಯ ಮೇಲೆ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಸಂಬಂಧಿಸಿದ ಹಾಗೆ, ಒಂದು ಮಾರ್ಗವನ್ನು ಕಂಡು ಹಿಡಿಯಲು ಸಾಧ್ಯವಾಗಿಲ್ಲ. ಹಾಗಾಗಿ ಅದು ಈಗ ಮೂಲ ಮಸೂದೆಯ ಭಾಗವಾಗಿ ಉಳಿಯುತ್ತದೆ. ಈಗ ಈ ಒಪ್ಪಂದದ ಅನುಸಾರ ಕೆಲವೊಂದು ತಿದ್ದುಪಡಿಗಳನ್ನು ಮಾಡಿದ್ದು, ಆಗಲೇ ಅದರ ಬಗ್ಗೆ ನೋಟೀಸನ್ನು ಕೊಟ್ಟಿದ್ದೇನೆ. ಆ ತಿದ್ದುಪಡಿಗಳು ಸದಸ್ಯರ ಕೈ ಸೇರಿವೆ. ಪರೋಕ್ಷ ವ್ಯವಸ್ಥೆಯ ಚುನಾವಣೆಗೆ ಬದಲು, ವಯಸ್ಕ ಮತದಾನದ ಮೂಲಕ ಒಂದು ಮತದಾರರ ಮಂಡಲವನ್ನು ರಚಿಸುವಲ್ಲಿ ಸಹಾಯ ಮಾಡುವಂತೆ ನಾನೀಗ ಈ ಸದನವನ್ನು ಕೇಳಿಕೊಳ್ಳುವ ಪ್ರಸ್ತಾವವನ್ನು ಇಡುತ್ತಿದ್ದೇನೆ. ಸಂವಿಧಾನದ ೪ನೇ ಷೆಡ್ಯೂಲಿನಲ್ಲಿ ಅವರಿಗೆ ಹಂಚಿಕೆಯಾಗಿರುವ ಸ್ಥಾನಗಳಿಗೆ ಪ್ರತಿನಿಧಿಗಳನ್ನು ಈ ಮತದಾರರ ಮಂಡಲವು ಚುನಾಯಿಸುತ್ತದೆ. ಮತದಾರರ ಮಂಡಲವನ್ನು ರಚಿಸಿ, ಚುನಾವಣೆಯ ಮೂಲಕ ಮೇಲ್ಮನೆಗೆ ಪ್ರತಿನಿಧಿಗಳನ್ನು ಚುನಾಯಿಸುವ ಈ ವ್ಯವಸ್ಥೆಯನ್ನು ಮಣಿಪುರ ಮತ್ತು ತ್ರಿಪುರಾಗಳಿಗೂ ವಿಸ್ತರಿಸಲಾಗಿದೆ.

ಮಸೂದೆಯ ಇನ್ನೊಂದು ಭಾಗಕ್ಕೆ ಸಂಬಂಧಿಸಿದಂತೆ, ಅಂದರೆ ಅಧ್ಯಾದೇಶವನ್ನು ಕುರಿತು ವ್ಯವಹರಿಸುವ ಭಾಗ, ಹೌದು. ಅದು ಹಾಗೆಯೇ ಉಳಿಯುತ್ತದೆ. ಮತ್ತೆ ಆ ದಿನ ಮಸೂದೆಯ ಉಪಬಂಧಗಳ ಮೇಲೆ ನಡೆದ ಚರ್ಚೆಗೆ ಸಂಬಂಧಿಸಿದಂತೆ, ಮಸೂದೆಯ ಆ ಭಾಗಕ್ಕೆ ಸದನದಿಂದ ಯಾವುದೇ ರೀತಿಯ ವಿರೋಧ ವ್ಯಕ್ತವಾಯಿತೆಂದು ನನಗೆ ಅನಿಸಿಲ್ಲ. ಆದುದರಿಂದ ಈ ಪರಿಸ್ಥಿತಿಯಲ್ಲಿ ಮಿ. ಕಾಮತ್ ಅವರಿಗೆ ಮಸೂದೆಯನ್ನು ಪರಿಶೀಲನಾಸಮಿತಿಗೆ (ಸೆಲೆಕ್ಟ್‌ಕಮಿಟಿ) ಕಳುಹಿಸಬೇಕೆಂಬ ಅವರ ತಿದ್ದುಪಡಿಯನ್ನು ಒತ್ತಾಯ ಮಾಡುವ ಅವಶ್ಯಕತೆ ಇದೆಯೆಂದು ನನಗೆ ಅನಿಸುತ್ತಿಲ್ಲ. ಅವರು ತಮ್ಮ ತಿದ್ದುಪಡಿಯಲ್ಲಿ ಗೊತ್ತುಪಡಿಸಿದ ಸಮಯ ಮತ್ತು ತಾರೀಖು ಆಗಲೇ ಜಾರಿ ಹೋಗಿರುವುದು ಈಗ ವಿಶದವಾಗಿದ್ದು, ಪರಿಣಾಮವಾಗಿ ಅವರು ತಿದ್ದುಪಡಿಗೆ ಕೊಟ್ಟ ಕಾರಣಗಳು ಈಗಾಗಲೇ

ಸೇರ್ಪಡೆಯಾಗಿದೆ. ಆದರೆ, ಅದೂ ಅಲ್ಲದೆ, ಅವರ ತಿದ್ದುಪಡಿಯ ಮೇಲೆ ಮಾತನಾಡಬೇಕೆಂದು ನನ್ನನ್ನು ಕೇಳಿದ್ದರೆ ನಾನು ಈ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ನಿಸ್ಸಂದೇಹವಾಗಿ ಸಾಧ್ಯವಿಲ್ಲವೆಂದು ಹೇಳುತ್ತಿದ್ದೆ. ಕಾರಣ, ಅಧ್ಯಾದೇಶಕ್ಕೆ ಸಂಬಂಧಿಸಿದ ಆ ಮಸೂದೆಯಲ್ಲಿನ ಉಪಬಂಧಗಳು ಎಷ್ಟು ನಿರ್ಣಾಯಕವಾಗಿದ್ದವೆಂದರೆ ಸಂವಿಧಾನದ ಪ್ರಕಾರ ಅವುಗಳಿಗೆ ಕಾನೂನಿನ ಹೊದಿಕೆಯನ್ನು ಸಾವಕಾಶವಿಲ್ಲದೆಯೇ ಕೊಡಬೇಕಾಗಿತ್ತು. ಆದುದರಿಂದ, ಮಸೂದೆಯನ್ನು ಪರಿಶೀಲನಾಸಮಿತಿಗೆ ಕಳುಹಿಸದೆ ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದೆಂದು ನಾವು ವಿನಂತಿಸುತ್ತೇನೆ. ಇದಲ್ಲದೆ ಪರಿಷ್ಕೃತ ಕ್ರೋಢೀಕರಿಸಿದ ಪಟ್ಟಿಗೆ ಹೆಚ್ಚಿಗೆ ಸೇರಿಸಿರುವ ೬ನೇ ನಂಬರ್ ಪಟ್ಟಿಯಲ್ಲಿ ನಾನು ಪ್ರಸ್ತಾವಿಸಿರುವ ತಿದ್ದುಪಡಿಗಳನ್ನೂ ಸಹ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

**ಮಾನ್ಯಸಭಾಪತಿಗಳು:** ನಾನು ಪ್ರಸ್ತಾಪವನ್ನು ಸದನದ ಮುಂದೆ ಇಡುತ್ತೇನೆ. ದೀರ್ಘಕಾಲದ ಚರ್ಚೆಯನಂತರ, ಈ ಮಸೂದೆಯ ಮೇಲೆ ಇನ್ನು ಹೆಚ್ಚಿನ ಚರ್ಚೆಯ ಆವಶ್ಯಕತೆ ಇಲ್ಲ ಎಂದು ನನಗೆ ಅನಿಸುತ್ತಿದೆ. ನಾನು ಒಂದೊಂದೇ ಖಂಡವನ್ನು ಇಡುತ್ತೇನೆ. ಸಾಮಾನ್ಯ ಚರ್ಚೆಯ ಬದಲಾಗಿ ಮಾನ್ಯ ಸದಸ್ಯರಿಗೆ, ಪ್ರತಿಯೊಂದು ಖಂಡದ ಮೇಲೂ ಅದು ಸದನದ ಮುಂದೆ ಚರ್ಚೆಗೆ ಬಂದಾಗ ತಮಗೆ ಅನಿಸಿದ್ದನ್ನು ಹೇಳಬಹುದು. ಸದಸ್ಯರಿಗೆ ಆಕ್ಷೇಪಣೆಗಾಗಿ ಇನ್ನುಳಿದ ಖಂಡಗಳನ್ನೂ ನಿರ್ದಿಷ್ಟವಾಗಿ ನೋಡೋಣ.

*__ಮಾನ್ಯಸಭಾಪತಿಗಳು:__ ವಿವಿಧ ಖಂಡಗಳಲ್ಲಿ ಪ್ರಸ್ತಾವಿತ ಬದಲಾವಣೆಗಳಿರುವುದರಿಂದ, ನಾನು ಯಾವುದೇ ತಿದ್ದುಪಡಿಯನ್ನು ಬಿಡದ ಹಾಗೆ, ಮಾನ್ಯಸದಸ್ಯರುಗಳು ಕಣ್ಣಿನ್ನಿಟ್ಟಿರಿ.

**ಖಂಡ–೨.**— (ದೀರ್ಘ ಶಿರೊನಾಮೆಯ ತಿದ್ದುಪಡಿ)

ಮಾಡಿದ ತಿದ್ದುಪಡಿ:

ಖಂಡ ೨ಕ್ಕೆ ಬದಲಾಗಿ, ಮುಂದಿನದನ್ನು ಪ್ರತಿಯೋಜಿಸಿ

> "೨ ದೀರ್ಘ ಶಿರೋನಾಮೆಯ ತಿದ್ದುಪಡಿ, ಅಧಿನಿಯಮ XLIII, ೧೯೫೦–೧೯೫೦ರ ಪ್ರಜಾಪ್ರತಿನಿಧಿತ್ವ ಕಾಯಿದೆಯ ದೀರ್ಘ ಶಿರೋನಾಮೆಯಲ್ಲಿ (ಇನ್ನು ಮುಂದೆ ಮೇಲ್ಕಂಡ ಅಧಿನಿಯಮ ಎಂದು ಹೆಸರಿಸಲ್ಪಡುವ) "ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದು" ಎಂಬ ಪದಗಳಿಗೆ ಬದಲಾಗಿ, ಪದಗಳು ಮತ್ತು ಅಕ್ಷರ "ರಾಜ್ಯಗಳ ಪರಿಷತ್ತಿನಲ್ಲಿ, ಸ್ಥಾನಗಳನ್ನು ತುಂಬಬೇಕಾದ ರೀತಿ, ಪಾರ್ಟ್ "ಸಿ" ರಾಜ್ಯಗಳ ಪ್ರತಿನಿಧಿಗಳಿಂದ ತುಂಬಬೇಕು" ಎಂದು ಪ್ರತಿಯೋಜಿಸಬೇಕು."
>
> ಡಾ. ಅಂಬೇಡ್ಕರ್

**ಡಾ. ಅಂಬೇಡ್ಕರ್:** ಪ್ರಸ್ತುತ ಮಸೂದೆಯ ಉದ್ದೇಶಕ್ಕನುಗುಣವಾಗಿ ಪ್ರಸ್ತಾವನೆಯನ್ನು ತರುವುದಕ್ಕೆ ಮಾತ್ರ (ಈ ತಿದ್ದುಪಡಿ).

**ಮಾನ್ಯಸಭಾಪತಿಗಳು:** ಪ್ರಶ್ನೆಯೇನೆಂದರೆ:

> "ಖಂಡ ೨, ತಿದ್ದುಪಡಿ ಮಾಡಿದ ನಂತರ, ಮಸೂದೆಯ ಭಾಗವಾಗಿ ನಿಲ್ಲುತ್ತದೆ."

ಪ್ರಸ್ತಾವವನ್ನು ಅಳವಡಿಸಿಕೊಳ್ಳಲಾಯಿತು. ತಿದ್ದುಪಡಿ ಮಾಡಿದ ೨ನೇಖಂಡ, ಮಸೂದೆಗೆ ಸೇರಿಸಲ್ಪಟ್ಟಿತು.

---

* P.D., ಸಂ. ೭, ಭಾಗ II, ೨೧ ಡಿಸೆಂಬರ್ ೧೯೫೦, ಪು. ೨೨೧೨.

**ಖಂಡ–೩.**— (೨ನೇ ಕಲಮಿನ ತಿದ್ದುಪಡಿ)

ಮಾಡಿದ ತಿದ್ದುಪಡಿ:

ಖಂಡ ೩ರಲ್ಲಿ, ೧೯೫೦ರ ಪ್ರಜಾಪ್ರಾತಿನಿಧ್ಯಕಾಯಿದೆಯ ೨ನೆ ಕಲಮಿನ ಪ್ರಸ್ತಾವಿತ ಹೊಸ ಖಂಡ (ಸಿಸಿ)ಗೆ ಬದಲಾಗಿ ಈ ಕೆಳಗಿನದನ್ನು ಪ್ರತಿಯೋಜಿಸಿ:

> "(ಸಿಸಿ)" ರಾಜ್ಯಗಳ ಪರಿಷತ್ತಿನ ಮತಕ್ಷೇತ್ರ, ಎಂದರೆ ಕಲಮು ೨೭–ಸಿ ಕೆಳಗೆ ಉಲ್ಲೇಖಿಸಿದ ಯಾವುದೇ ಪಾರ್ಟ್ "ಸಿ" ರಾಜ್ಯ ಅಥವಾ ಇಂಥ ರಾಜ್ಯಗಳ ಗುಂಪಿನ ಮತದಾರರ ಗಣಕ್ಕೆ ಸದಸ್ಯರನ್ನು ಚುನಾಯಿಸುವ ಉದ್ದೇಶಕ್ಕೋಸ್ಕರ, ಕಲಮು ೨೭–ಸಿ ಕೆಳಗೆ ರಚಿಸಿದ ಮತಕ್ಷೇತ್ರ ಎಂದು ಅರ್ಥಮಾಡಿಕೊಳ್ಳಬೇಕು."
>
> –ಡಾ. ಅಂಬೇಡ್ಕರ್

**ಡಾ. ಅಂಬೇಡ್ಕರ್:** ಸ್ವಾಮಿ, ಮತದಾರರ ಮಂಡಲಗಳ ಮೂಲಕ ಚುನಾವಣೆಗಳನ್ನು ನಡೆಸುವ ಹೊಸ ಸ್ಕೀಮಿಗೆ ಹೊಂದಾಣಿಕೆಯಾಗುವಂತೆ ಮಾತ್ರ ತಂದಿರುವ ತಿದ್ದುಪಡಿ.

**ಮಾನ್ಯಸಭಾಪತಿಗಳು:** ಸಮಗ್ರ ಮಸೂದೆಯನ್ನೇ (ಸದನದ) ಮುಂದೆ ಇಡಲಾಗಿರುವುದರಿಂದ ಪ್ರತಿಯೊಂದು ಖಂಡವೂ ಸದನದ ಮುಂದೆ ಇದೆ. ಮಾನ್ಯ ಸದಸ್ಯರು ಯಾರೇ ಆಗಲಿ ಈ ಖಂಡಕ್ಕೆ ತಿದ್ದುಪಡಿಯನ್ನು ಪ್ರಸ್ತಾವಿಸುವುದಕ್ಕೆ ಉತ್ಸುಕರಾಗಿದ್ದರೆ, ಆ ಖಂಡವನ್ನು ಸಭಾಧ್ಯಕ್ಷರು ಸದನದ ಮುಂದೆ ಇಡಲೇ ಬೇಕಾಗಿದೆ.

**ಶ್ರೀ ಎಮ್.ವಿ. ಅಯ್ಯಂಗಾರ್:** ಪ್ರಸ್ತಾವನೆಯನ್ನು ಮಾಡಿದವರು ಅದನ್ನು ಹಿಂದಕ್ಕೆ ಪಡೆಯದ ಹೊರತು.

**ಮಾನ್ಯಸಭಾಪತಿಗಳು:** ಸಮಗ್ರ ಮಸೂದೆಯನ್ನೇ ಒಂದು ಬಾರಿ ಸದನದ ಮುಂದೆ ಇಟ್ಟಮೇಲೆ, ಆ ರೀತಿ ಅವರು ಹಿಂದಕ್ಕೆ ಪಡೆಯಲಾಗುವುದಿಲ್ಲ. ಸದನವು ಆ ಖಂಡವನ್ನು ತಿರಸ್ಕರಿಸಬೇಕು. ಆದರೆ ನಾನು ಆಗ ಚರ್ಚೆಯನ್ನು ಸಂಕ್ಷಿಪ್ತಗೊಳಿಸುವ ಸಲುವಾಗಿ ಈ ಅನೌಪಚಾರಿಕ ಪ್ರಕ್ರಿಯೆಯನ್ನು ಅನುಸರಿಸುತ್ತಿದ್ದೆ. ಅಷ್ಟೇ ಮಿ. ಕಾಮತ್ ಅವರು ತಮ್ಮ ತಿದ್ದುಪಡಿಯನ್ನು ಪ್ರಸ್ತಾವಿಸುವುದಿಲ್ಲವೆಂದು ಅಂದುಕೊಂಡಿದ್ದೇನೆ.

**ಶ್ರೀ ಕಾಮತ್:** ಸ್ವಾಮಿ, ನೀವು ಹೇಳುವುದು ಸರಿ.

**ಮಾನ್ಯಸಭಾಪತಿಗಳು:** ಹಾಗಾದರೆ, ಯಾವುದೇ ತಿದ್ದುಪಡಿಗಳನ್ನು ಪ್ರಸ್ತಾವಿಸುತ್ತಿಲ್ಲ. ವಿಷಯ:

"೪ನೇ ಖಂಡವು, ಮಸೂದೆಯ ಭಾಗವಾಗಿ ನಿಲ್ಲುತ್ತದೆ."

ಪ್ರಸ್ತಾವವನ್ನು ತಿರಸ್ಕರಿಸಲಾಯಿತು.

**ಮಾನ್ಯಸಭಾಪತಿಗಳು:** ವಿಷಯ:

"೫ ಮತ್ತು ೬ನೇ ಖಂಡಗಳು, ಮಸೂದೆಯ ಭಾಗವಾಗಿ ನಿಲ್ಲುತ್ತದೆ."

ಪ್ರಸ್ತಾವವನ್ನು ತಿರಸ್ಕರಿಸಲಾಯಿತು.

**ಮಾನ್ಯಸಭಾಪತಿಗಳು:** ವಿಷಯ:

"೯ನೇ ಖಂಡವು, ಮಸೂದೆಯ ಭಾಗವಾಗಿ ನಿಲ್ಲುತ್ತದೆ."

ಪ್ರಸ್ತಾವವನ್ನು ತಿರಸ್ಕರಿಸಲಾಯಿತು.

---

* P.D., ಸಂ. ೭, ಭಾಗ II, ೨೧ ಡಿಸೆಂಬರ್ ೧೯೫೦, ಪು. ೨೨೧೫–೨೦.

ಖಂಡ–೧೦ನ್ನು ಮಸೂದೆಗೆ ಸೇರಿಸಲಾಯಿತು.

**ಖಂಡ–೧೦ಎ ಮತ್ತು ೧೦ಬಿ**

***ಡಾ. ಅಂಬೇಡ್ಕರ್:** ಸ್ವಾಮಿ, ನಾನು ಪ್ರಸ್ತಾವಿಸುವುದೇನೆಂದರೆ

ಖಂಡ ೧೦ರ ನಂತರ ಕೆಳಗೆ ಕಾಣಿಸಿದ ಹೊಸಖಂಡಗಳನ್ನು ಸೇರ್ಪಡೆ ಮಾಡಿ:

"೧೦–ಎ, ಅಧಿನಿಯಮ, XLIII, ೧೯೫೦ರ ಕಲಮು–೨೭ಕ್ಕೆ ತಿದ್ದುಪಡಿ: ಮೇಲೆ ಹೇಳಿದ ಅಧಿನಿಯಮದ ೨೭ನೇ ಕಲಮಿನ ೪ನೇ ಉಪಕಲಮಿನಲ್ಲಿ, ಸಂಖ್ಯೆ ೨೩, ಬ್ರಾಕೆಟ್ಟುಗಳು ಮತ್ತು ಪದಗಳು ಆದಮೇಲೆ "(ಪರಂತುಕವನ್ನು ಹೊರತುಪಡಿಸಿ)" ಎಂದು ಸೇರಿಸಬೇಕು."

೧೦–ಬಿ, ೧೯೫೦ರ ಅಧಿನಿಯಮದಲ್ಲಿ ಹೊಸ ಭಾಗ–ಎ ಅನ್ನು ಸೇರಿಸಿ – ಅಧಿನಿಯಮದ ಭಾಗ ಆದಮೇಲೆ ಕೆಳಗೆ ಕಾಣಿಸಿದ ಭಾಗವನ್ನು ಸೇರಿಸಬೇಕು, ಅಂದರೆ:

**ಭಾಗ–IVಎ**

ರಾಜ್ಯಗಳ ಪರಿಷತ್ತಿನಲ್ಲಿ, ಪಾರ್ಟ್ "ಸಿ" ರಾಜ್ಯಗಳಿಂದ ಬರುವ ಪ್ರತಿನಿಧಿಗಳ ಸ್ಥಾನವನ್ನು ಭರ್ತಿ ಮಾಡುವ ವಿಧಾನ

**೨೭ಎ. ಪಾರ್ಟ್ "ಸಿ" ರಾಜ್ಯಗಳಿಗೆ ಹಂಚಿಕೆಯಾದ ಸ್ಥಾನಗಳನ್ನು ಭರ್ತಿಮಾಡಲು ಮತದಾರರ ಮಂಡಲಿಗಳ ರಚನೆ:**

(೧) ಸಂವಿಧಾನದ ನಾಲ್ಕನೇ ಅನುಸೂಚಿಯಲ್ಲಿರುವ ಪಾರ್ಟ್ "ಸಿ' ' ರಾಜ್ಯಗಳಿಗೆ ಅಥವಾ ಇಂಥ ರಾಜ್ಯಗಳ ಗುಂಪಿಗೆ ಹಂಚಿಕೆಯಾದ ಸ್ಥಾನಗಳನ್ನು ಭರ್ತಿಮಾಡುವ ಉದ್ದೇಶಕ್ಕೆ, ಪ್ರತಿರಾಜ್ಯಕ್ಕೂ ಅಥವ ಇಂಥ ರಾಜ್ಯಗಳ ಗುಂಪಿಗೂ, ಒಂದು ಮತದಾರರ ಮಂಡಲವಿರಬೇಕು,

ಪರಂತು, ಅಜ್ಮೀರ ಮತ್ತು ಕೊಡಗು ರಾಜ್ಯಗಳಿಗೆ ಹಂಚಿಕೆಯಾದ ಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕೆ ಅಜ್ಮೀರ ರಾಜ್ಯಕ್ಕೆ ಮಾತ್ರ ಮತದಾರರ ಮಂಡಲವು ಇರತಕ್ಕದ್ದು.

ಮತ್ತೂ ಪರಂತು, ತ್ರಿಪುರ ಮತ್ತು ಮಣಿಪುರ ರಾಜ್ಯಗಳಿಗೆ ಹಂಚಿಕೆಯಾದ ಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕೆ ಎರಡೂ ರಾಜ್ಯಗಳಿಗೂ ಒಂದೊಂದು ಮತದಾರರ ಮಂಡಲ ಇರತಕ್ಕದ್ದು.

(೨) ಐದನೇ ಅನುಸೂಚಿಯ ಮೊದಲನೆ ಅಂಕಣದಲ್ಲಿ ನಮೂದಿಸಿರುವ ಪ್ರತಿಯೊಂದು ರಾಜ್ಯಕ್ಕೂ ಅಥವ ರಾಜ್ಯಗಳ ಗುಂಪಿಗೂ ಇರುವ ಮತದಾರರ ಮಂಡಲದಲ್ಲಿ, ಎರಡನೇ ಅಂಕಣದಲ್ಲಿ ಆ ರಾಜ್ಯದ ಅಥವಾ ರಾಜ್ಯಗಳ ಗುಂಪಿಗೆ ಎದುರಾಗಿ ನಮೂದಿಸಿರುವ ಸಂಖ್ಯೆಯ ಸದಸ್ಯರುಗಳಿದ್ದು, ಈ ಸದಸ್ಯರು ನೇರವಾದ ಚುನಾವಣೆಯಲ್ಲಿ ಚುನಾಯಿತರಾಗಿರಬೇಕು.

(೩) ಯಾವುದೇ ರಾಜ್ಯ ಅಥವ ರಾಜ್ಯಗಳ ಗುಂಪಿನಿಂದ ಲೋಕಸಭೆಗೆ ಸದಸ್ಯರನ್ನು ಚುನಾಯಿಸುವ ಉದ್ದೇಶದಿಂದ ಸಾರ್ವತ್ರಿಕ ಚುನಾವಣೆ ನಡೆದಾಗ, ಆ ರಾಜ್ಯ

ಅಥವಾ ರಾಜ್ಯಗಳ ಗುಂಪಿಗೆ ಈ ಅಧಿನಿಯಮದ ಕೆಳಗೆ ಮೊದಲಬಾರಿಗೆ ರಚನೆಯಾದ ಮತದಾರರ ಮಂಡಲವು ಪುನಾರಚನೆಯಾಗಲೇ ಬೇಕು. ಈ ರೀತಿ ಪುನಾರಚನೆಯಾಗುವ ಮುಂಚೆ ಕಾರ್ಯ ನಿರ್ವಹಿಸುತ್ತಿದ್ದ ಆ ರಾಜ್ಯದ ಅಥವ ರಾಜ್ಯಗಳ ಗುಂಪಿನ ಮತದಾರರ ಮಂಡಲವು ವಿಸರ್ಜನೆಯಾಗಿದೆಯೆಂದೇ ಭಾವಿಸಬೇಕು ಮತ್ತು ಹಾಗೆ ಪುನಾರಚಿತವಾದ ಮತದಾರರ ಮಂಡಲವು ಆ ರಾಜ್ಯ ಅಥವಾ ರಾಜ್ಯಗಳ ಗುಂಪಿಗೆ ಈ ಅಧಿನಿಯುವುದ ಉದ್ದೇಶಕ್ಕಾಗಿ ಮತದಾರರ ಮಂಡಲವಾಗುತ್ತದೆ.

(೪) ಮತದಾರರ ಮಂಡಲಿಯ ಸದಸ್ಯನ ಸ್ಥಾನವೊಂದು ಸಾಂದರ್ಭಿಕವಾಗಿ ಖಾಲಿ ಬಿದ್ದರೆ, ಆ ಸದಸ್ಯನು ಯಾವರೀತಿಯಲ್ಲಿ ಆ ಸ್ಥಾನವನ್ನು ಚುನಾವಣೆಯಲ್ಲಿ ಪಡೆದುಕೊಂಡಿದ್ದನೋ ಅದೇ ರೀತಿ ಆ ಮತದಾರಕ್ಷೇತ್ರದಲ್ಲಿ ಚುನಾವಣೆ ಮಾಡಿ ಭರ್ತಿ ಮಾಡಬೇಕು.

**೨೭-ಬಿ. ರಾಜ್ಯಗಳ ಪರಿಷತ್ತಿನ ಮತಕ್ಷೇತ್ರಗಳು:** ಯಾವುದೇ ರಾಜ್ಯ ಅಥವಾ ರಾಜ್ಯಗಳ ಗುಂಪಿಗೆ ಮತದಾರರ ಮಂಡಲದ ಸದಸ್ಯರನ್ನು ಚುನಾವಣೆ ಮಾಡುವ ಉದ್ದೇಶಕ್ಕಾಗಿ ಕಲಮು ೨೭-ಸಿಯ ಕೆಳಗೆ, ಆದೇಶ ಮಾಡಿ ರಚಿಸಿದ ಕ್ಷೇತ್ರಗಳು ಮಾತ್ರ ಇರಬೇಕೇ ಹೊರತು ಬೇರೆ ಯಾವುದೇ ಮತಕ್ಷೇತ್ರಗಳು ಇರುವ ಹಾಗಿಲ್ಲ.

**೨೭-ಸಿ: ರಾಜ್ಯಗಳ ಪರಿಷತ್ತಿನ ಮತಕ್ಷೇತ್ರಗಳ ಸೀಮಾನಿರ್ಣಯ**

ಈ ಅಧಿನಿಯಮವು ಜಾರಿಗೆ ಬಂದ ನಂತರ, ಸಾಧ್ಯವಾದಷ್ಟು ಬೇಗ, ರಾಷ್ಟ್ರಪತಿಯವರು ಆದೇಶ ಮಾಡಿ ಗೊತ್ತುಪಡಿಸುವುದೇನೆಂದರೆ:

(ಎ) ಯಾವುದೇ ರಾಜ್ಯದ ಅಥವಾ ರಾಜ್ಯಗಳ ಗುಂಪಿಗೆ ಮತದಾರರ ಮಂಡಲದ ಸದಸ್ಯರನ್ನು ಚುನಾಯಿಸುವ ಉದ್ದೇಶದಿಂದ, ೫ನೇ ಷೆಡ್ಯೂಲಿನ ಮೊದಲನೆ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಇಂಥ ರಾಜ್ಯದ ಅಥವಾ ರಾಜ್ಯಗಳ ಗುಂಪಿನ ಮತದಾರರ ಕ್ಷೇತ್ರಗಳನ್ನಾಗಿ ವಿಂಗಡಿಸಬೇಕು.

(ಬಿ) ಈ ಮತದಾರರ ಕ್ಷೇತ್ರದ ವಿಸ್ತೀರ್ಣ.

(ಸಿ) ಪ್ರತಿ ಮತದಾರರ ಕ್ಷೇತ್ರಕ್ಕೂ ಹಂಚಿಕೆಯಾಗಿರುವ ಸ್ಥಾನಗಳ ಸಂಖ್ಯೆ.

**೨೭-ಡಿ. ಆದೇಶಗಳನ್ನು ತಿದ್ದುಪಡಿಮಾಡುವ ಅಥವಾ ಬದಲಾಯಿಸುವ ಅಧಿಕಾರ**

ರಾಷ್ಟ್ರಪತಿಯವರು, ಕಾಲಾನುಕಾಲಕ್ಕೆ, ಚುನಾವಣಾ ಆಯೋಗದ ಸಲಹೆಯನ್ನು ತೆಗೆದುಕೊಂಡು, ಆದೇಶ ಹೊರಡಿಸಿ ತಾವು ಕಲಮು ೨೭-ಸಿ ಕೆಳಗೆ ಹೊರಡಿಸಿದ ಯಾವುದೇ ಆದೇಶವನ್ನು ಬದಲಾಯಿಸಬಹುದು ಅಥವಾ ತಿದ್ದುಪಡಿ ಮಾಡಬಹುದು.

**೨೭-ಇ: ಮತಕ್ಷೇತ್ರಗಳ ಸೀಮಾನಿರ್ಣಯವನ್ನು ಮಾಡುವ ಆದೇಶಗಳ ಪ್ರಕ್ರಿಯೆ**

(೧) ಚುನಾವಣಾ ಆಯೋಗವು ಮಾಡಬೇಕಾದದ್ದು:

(ಎ) ಬಿಲಾಸ್‌ಪುರ ಮತ್ತು ಹಿಮಾಚಲ ಪ್ರದೇಶವನ್ನು ಬಿಟ್ಟು, ೫ನೇ ಷೆಡ್ಯೂಲಿನ ಮೊದಲನೆ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಪ್ರತಿಯೊಂದು ಪಾರ್ಟ್ "ಸಿ' ' ರಾಜ್ಯಗಳನ್ನು ಕುರಿತು, ಕಲಮು ೧೩ ಉಪಕಲಮು (೧)ರ ಕೆಳಗೆ ಸ್ಥಾಪಿಸಿರುವ

ಸಲಹಾ ಸಮಿತಿಯ ಸಲಹೆಯನ್ನು ಪಡೆದುಕೊಂಡು ಕಲಮು ೨೭–ಸಿ ಕೆಳಗೆ ಆ ರಾಜ್ಯದಲ್ಲಿ ಸೀಮಾನಿರ್ಣಯದ ಪ್ರಸ್ತಾವನೆಗಳನ್ನು ರೂಪಿಸಬೇಕು.

ಮತ್ತು

(ಬಿ) ಅದೇ ಉಪಕಲಮಿನ ಕೆಳಗೆ ನಿಯುಕ್ತವಾದ ಸಲಹಾ ಸಮಿತಿಯ ಸಲಹೆಯನ್ನು ಪಡೆದುಕೊಂಡು ಕಲಮು ೨೭–ಸಿ ಕೆಳಗೆ ಬಿಲಾಸ್‌ಪುರ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ಸೀಮಾ ನಿರ್ಣಯವನ್ನು ಮಾಡುವ ಪ್ರಸ್ತಾವನೆಯನ್ನು ರೂಪಿಸಬೇಕು. ಮತ್ತು ಪ್ರಸ್ತಾವನೆಗಳನ್ನು ರಾಷ್ಟ್ರಪತಿಯವರಿಗೆ ಕಲಮು ೨೭–ಸಿ ಕೆಳಗೆ ಆದೇಶ ಮಾಡುವುದಕ್ಕಾಗಿ ಒಪ್ಪಿಸಬೇಕು.

(೨) ಕಲಮು ೨೭–ಸಿ ಕೆಳಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಆದೇಶವನ್ನು ಹೊರಡಿಸಿದ ಮೇಲೆ ಸಾಧ್ಯವಾದಷ್ಟು ಬೇಗ ಪಾರ್ಲಿಮೆಂಟಿನ ಮುಂದೆ ಇಡಬೇಕು; ಇಂಥ ಆದೇಶವು ಅದನ್ನು ಪಾರ್ಲಿಮೆಂಟಿನ ಮುಂದೆ ಇಟ್ಟ ಇಪ್ಪತ್ತು ದಿನಗಳ ಒಳಗಾಗಿ ಮಾಡಿದ ಪ್ರಸ್ತಾವನೆಯ ಮೇಲೆ ಮಾಡುವ ಮಾರ್ಪಾಟುಗಳಿಗೆ ಒಳಪಟ್ಟಿದೆ.

**೨೭–ಎಫ್. ರಾಜ್ಯಗಳ ಪರಿಷತ್ತಿನ ಮತಕ್ಷೇತ್ರಗಳಿಗೆ ಮತದಾರರ ಪಟ್ಟಿಗಳು**

(೧) ಯಾವುದೇ ರಾಜ್ಯ ಅಥವಾ ರಾಜ್ಯಗಳ ಗುಂಪಿನ ಮತದಾರರ ಮಂಡಲಕ್ಕೆ ಸದಸ್ಯರನ್ನು ಚುನಾಯಿಸುವ ಉದ್ದೇಶಕ್ಕೆ, ಆ ರಾಜ್ಯದ ಅಥವಾ ರಾಜ್ಯಗಳ ಗುಂಪಿನಲ್ಲಿರುವ ರಾಜ್ಯಗಳ ಪರಿಷತ್ತಿನ ಮತಕ್ಷೇತ್ರಕ್ಕೆ ಒಂದು ಮತದಾರರ ಪಟ್ಟಿ ಇರಲೇಬೇಕು.

(೨) ಯಾವುದೇ ಪಾರ್ಲಿಮೆಂಟರಿ ಮತಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿ ಭಾಗ IIIರ ಕೆಳಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಮತದಾರರ ಪಟ್ಟಿ ಅಥವ ಪಟ್ಟಿಗಳು, ಯಾವುದೇ ರಾಜ್ಯ ಅಥವ ರಾಜ್ಯಗಳ ಗುಂಪಿನ ಮತಕ್ಷೇತ್ರಗಳ ಪ್ರದೇಶಕ್ಕೆಸಂಬಂಧಿಸಿದ ಹಾಗೆ, ಆ ರಾಜ್ಯಗಳ ಪರಿಷತ್ತಿನ ಮತಕ್ಷೇತ್ರದ ಮತದಾರರ ಪಟ್ಟಿಯೆಂದು ಭಾವಿಸಬೇಕು.

**೨೭–ಜಿ: ಕೆಲವು ಅನರ್ಹತೆಗಳಿಂದಾಗಿ ಮತದಾರರ ಮಂಡಲದ ಸದಸ್ಯತ್ವವನ್ನು ಕೊನೆಗಾಣಿಸುವುದು**

ಮತದಾರರ ಮಂಡಲದ ಸದಸ್ಯನಾಗಿರುವ ಯಾವುದೇ ವ್ಯಕ್ತಿ, ಪಾರ್ಲಿಮೆಂಟಿನ ಚುನಾವಣೆಗೆ ಸಂಬಂಧಿಸಿದಂತೆ, ಭ್ರಷ್ಟಾಚಾರ ಮತ್ತು ಕಾನೂನು ಬಾಹಿರ ಆಚರಣೆಗಳು ಹಾಗೂ ಇತರ ಅಪರಾಧಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಉಪಬಂಧ ಕೆಳಗೆ ಯಾವುದೇ ಅನರ್ಹತೆಗೆ ಒಳಪಡುತ್ತಾನೋ, ಅಂಥ ಮತದಾರರ ಮಂಡಲದ ಅವನ ಸದಸ್ಯತ್ವವೂ ಕೊನೆಗಾಣುತ್ತದೆ.

**ಪಾರ್ಟ್"ಸಿ" ರಾಜ್ಯಗಳಿಗೆ ಸ್ಥಾನಗಳು ಹಂಚಿಕೆಯಾಗುವ ರೀತಿ**

ಕಲಮು ೨೭–ಐನಲ್ಲಿ ಉಪಬಂಧಿಸಿರುವುದನ್ನು ಬಿಟ್ಟು, ಸಂವಿಧಾನದ ನಾಲ್ಕನೇ ಅನುಸೂಚಿಯಲ್ಲಿ ಕಾಣಿಸಿದ ಪಾರ್ಟ್ "ಸಿ" ರಾಜ್ಯ ಅಥವಾ ರಾಜ್ಯಗಳ ಗುಂಪಿಗೆ ಹಂಚಿಕೆಯಾದ ಸ್ಥಾನ ಅಥವಾ ಸ್ಥಾನಗಳನ್ನು ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ವ್ಯವಸ್ಥೆಯಂತೆ, ಇಂಥ ರಾಜ್ಯ ಅಥವ

ರಾಜ್ಯಗಳ ಗುಂಪಿನ ಮತದಾರರ ಮಂಡಲದ ಸದಸ್ಯರಿಂದ ಚುನಾಯಿಸಲ್ಪಟ್ಟ ವ್ಯಕ್ತಿ ಅಥವ ವ್ಯಕ್ತಿಗಳಿಂದ ಭರ್ತಿಮಾಡಬೇಕು.

**೨೭–ಐ– ಅಜ್ಮೀರ ಮತ್ತು ಕೊಡಗು ರಾಜ್ಯಗಳು ಹಾಗೂ ತ್ರಿಪುರ ಮತ್ತು ಮಣಿಪುರ ರಾಜ್ಯಗಳಿಗೆ ರಾಜ್ಯಗಳ ಪರಿಷತ್ತಿನಲ್ಲಿ ಸ್ಥಾನಗಳನ್ನು ಭರ್ತಿಮಾಡುವುದಕ್ಕೆ ವಿಶೇಷ ಉಪಬಂಧಗಳು**

(೧) ಸಂವಿಧಾನದ ನಾಲ್ಕನೇ ಅನುಸೂಚಿಯಲ್ಲಿರುವ ಅಜ್ಮೀರ ಮತ್ತು ಕೊಡಗು ರಾಜ್ಯಗಳಿಗೆ ರಾಜ್ಯಗಳ ಪರಿಷತ್ತಿನಲ್ಲಿ ಹಂಚಿಕೆಯಾದ ಸ್ಥಾನವನ್ನು, ಸರದಿಯ ಮೇರೆಗೆ ಅಜ್ಮೀರ ರಾಜ್ಯದ ಮತದಾರರ ಮಂಡಲದಿಂದ ಹಾಗೂ ಕೊಡಗು ಶಾಸಕಾಂಗ ಪರಿಷತ್ತಿನ ಚುನಾಯಿತ ಸದಸ್ಯರಿಂದ, ಚುನಾಯಿತನಾದ ವ್ಯಕ್ತಿಯಿಂದ ಭರ್ತಿ ಮಾಡಬೇಕು; ಅಂದರೆ, ಮೊದಲನೆ ಸಾರ್ವತ್ರಿಕ ಚುನಾವಣೆ ಮತ್ತು ನಂತರ ಪ್ರತಿ ಎರಡನೆ ದ್ವೈವಾರ್ಷಿಕ ಚುನಾವಣೆಯಲ್ಲಿ ಮೇಲ್ಕಂಡ ಸ್ಥಾನವನ್ನು ಅಜ್ಮೀರ ರಾಜ್ಯದ ಮತದಾರರ ಮಂಡಲದ ಸದಸ್ಯರಿಂದ ಚುನಾಯಿತನಾದ ವ್ಯಕ್ತಿಯಿಂದ ಭರ್ತಿಮಾಡಬೇಕು, ಹಾಗೂ ಮೊದಲನೆ ದ್ವೈವಾರ್ಷಿಕ ಚುನಾವಣೆಯಲ್ಲಿ ಮತ್ತು ಮುಂದಿನ ಪ್ರತಿ ಮೂರನೆಯ ದ್ವೈವಾರ್ಷಿಕ ಚುನಾವಣೆಯಲ್ಲಿ ಈ ಸ್ಥಾನವನ್ನು ಕೊಡಗು ಶಾಸಕಾಂಗ ಪರಿಷತ್ತಿನ ಚುನಾಯಿತ ಸದಸ್ಯರಿಂದ ಚುನಾಯಿತನಾದ ವ್ಯಕ್ತಿಯಿಂದ ಭರ್ತಿಮಾಡಬೇಕು.

(೨) ಅದೇ ಅನುಸೂಚಿಯಲ್ಲಿರುವ ತ್ರಿಪುರಾ ಮತ್ತು ಮಣಿಪುರ ರಾಜ್ಯಗಳಿಗೆ ರಾಜ್ಯಗಳ ಪರಿಷತ್ತಿನಲ್ಲಿ ಹಂಚಿಕೆಯಾದ ಸ್ಥಾನವನ್ನು, ಸರದಿಯ ಮೇರೆಗೆ ತ್ರಿಪುರಾ ರಾಜ್ಯದ ಮತದಾರರ ಮಂಡಲದ ಸದಸ್ಯರಿಂದ ಮತ್ತು ಮಣಿಪುರ ರಾಜ್ಯದ ಮತದಾರರ ಮಂಡಲದ ಸದಸ್ಯರಿಂದ ಚುನಾಯಿತನಾದ ವ್ಯಕ್ತಿಯಿಂದ ಭರ್ತಿ ಮಾಡಬೇಕು; ಅಂದರೆ, ಮೊದಲನೆ ಸಾರ್ವತ್ರಿಕ ಚುನಾವಣೆ ಮತ್ತು ಮುಂದಿನ ಪ್ರತಿ ದ್ವೈವಾರ್ಷಿಕ ಚುನಾವಣೆಗಳಲ್ಲಿ, ಆ ಸ್ಥಾನವನ್ನು ತ್ರಿಪುರಾ ರಾಜ್ಯದ ಮತದಾರರ ಮಂಡಲದ ಸದಸ್ಯರಿಂದ ಚುನಾಯಿತನಾದ ವ್ಯಕ್ತಿಯಿಂದ ಭರ್ತಿ ಮಾಡಬೇಕು. ಹಾಗೂ ಮೊದಲನೆ ದ್ವೈವಾರ್ಷಿಕ ಚುನಾವಣೆ ಮತ್ತು ಪ್ರತಿ ಮೂರನೆ ದ್ವೈವಾರ್ಷಿಕ ಚುನಾವಣೆಯಲ್ಲಿ ಸದರಿ ಸ್ಥಾನವನ್ನು ಮಣಿಪುರ ರಾಜ್ಯದ ಮತದಾರರ ಮಂಡಲದ ಸದಸ್ಯರಿಂದ ಚುನಾಯಿತನಾದ ವ್ಯಕ್ತಿಯಿಂದ ಭರ್ತಿಮಾಡಬೇಕು.

(೩) ಅಜ್ಮೀರ ಮತ್ತು ಕೊಡಗು ರಾಜ್ಯಗಳಿಗೆ ಅಥವಾ ತ್ರಿಪುರ ಮತ್ತು ಮಣಿಪುರ ರಾಜ್ಯಗಳಿಗೆ ಹಂಚಿಕೆಯಾದ ಸ್ಥಾನದಲ್ಲಿ ಸಾಂದರ್ಭಿಕವಾಗಿ ತೆರವಾದ ಸ್ಥಾನವನ್ನು ಯಾವ ರಾಜ್ಯದಲ್ಲಿ ಆ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಚುನಾವಣೆಯನ್ನು ಕಡೆಯದಾಗಿ ಹಿಂದಿನ ಸಾರ್ವತ್ರಿಕ ಚುನಾವಣೆ ಅಥವಾ ವಾರ್ಷಿಕ ಚುನಾವಣೆಯನ್ನು ನಡೆಸಲಾಯಿತೋ ಆ ರಾಜ್ಯದಲ್ಲಿ ಚುನಾವಣೆಯ ಮೂಲಕ ಭರ್ತಿ ಮಾಡಬೇಕು.

(೪) ಉಪಕಲಮು (೧), ಉಪಕಲಮು (೨) ಅಥವಾ ಉಪಕಲಮು (೩)ರಲ್ಲಿ ನಡೆಸುವ ಪ್ರತಿ ಚುನಾವಣೆಯನ್ನು ಏಕ ವರ್ಗಾವಣೆಯ ಮತದ ಮೂಲ

ಪ್ರಮಾಣಾನುಸಾರ ಪ್ರಾತಿನಿಧ್ಯ ವ್ಯವಸ್ಥೆಗೆ ಅನುಸಾರವಾಗಿ ನಡೆಸಬೇಕು.

**೨೭–ಜೆ: ಮತದಾರರ ಮಂಡಲಗಳನ್ನು ಅನುಚ್ಛೇದ ೨೪೦ರ ಕೆಳಗೆ ರಚಿಸಿದ ನಿಕಾಯಗಳಿಂದ, ಅವು ಶಾಸನಸಭೆಗಳಂತೆ ಕಾರ್ಯನಿರ್ವಹಣೆ ಮಾಡಲು ಪ್ರತಿಸ್ಥಾಪನೆ ಮಾಡುವುದು**

(ಎ) ಈ ಭಾಗದಲ್ಲಿ ಇದಕ್ಕೆ ಮುಂಚೆ ಇರುವ ಉಪಬಂಧಗಳಲ್ಲಿ ಏನೇ ಹೇಳಿರಲಿ: ಬಿಲಾಸ್‌ಪುರ ಮತ್ತು ಹಿಮಾಚಲ ಪ್ರದೇಶಗಳ ಹೊರತಾಗಿ ಸಂವಿಧಾನದ ಐದನೇ ಅನುಸೂಚಿಯ ಮೊದಲನೆ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರಾಜ್ಯಗಳಿಗೆ, ಅನುಚ್ಛೇದ ೨೪೦ರ ಕೆಳಗೆ ಒಂದು ನಿಕಾಯವನ್ನು, ಅದು ಆ ರಾಜ್ಯದ ಶಾಸನಸಭೆಯ ಹಾಗೆ ಕಾರ್ಯ ನಿರ್ವಹಣೆ ಮಾಡಲು, ಪಾರ್ಲಿಮೆಂಟ್ ಶಾಸನದ್ವಾರಾ ರಚಿಸಿದರೆ, ಆಗ ಇಂಥ ನಿಕಾಯವನ್ನು ರಚಿಸಿದ ಮೇಲೆ ಆ ರಾಜ್ಯಕ್ಕೆ ಮತದಾರರ ಮಂಡಲವನ್ನು ರಚಿಸುವುದಕ್ಕೆ ಅಥವಾ ಪುನಾರಚಿಸುವುದಕ್ಕೆ ಆವಶ್ಯಕತೆ ಇರುವುದಿಲ್ಲ ಮತ್ತು ಇಂಥ ನಿಕಾಯದ ರಚನೆಯಾದ ಮೇಲೆ, ಆ ರಾಜ್ಯದ ಯಾವುದೇ ಮತದಾರರ ಮಂಡಲವು ತತ್ಕಾಲದಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿದ್ದರೆ, ಅದನ್ನು ವಿಸರ್ಜಿಸಲಾಗಿದೆಯೆಂದೇ ಭಾವಿಸಬೇಕು ಮತ್ತು ಆ ರಾಜ್ಯದ ಮತದಾರರ ಮಂಡಲಿಗೆ ಕಲಮು ೨೭ ಹೆಚ್ ಅಥವಾ ಕಲಮು ೨೭–ಐಗಳಲ್ಲಿ ಸಂದರ್ಭಾನುಸಾರ ಯಾವುದೇ ಉಲ್ಲೇಖವಿದ್ದರೆ, ಆ ರಾಜ್ಯಕ್ಕೆ ಹಾಗೆ ರಚಿಸಿದ ನಿಕಾಯಕ್ಕೇ ಉಲ್ಲೇಖಮಾಡಲಾಗಿದೆ ಎಂದು ಪ್ರತಿಯೋಜಿಸಲಾಗಿದೆ ಎನ್ನುವ ಹಾಗೆ, ಪರಿಣಾಮ ಇರುತ್ತದೆ.

(ಬಿ) ಬಿಲಾಸ್‌ಪುರ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಿಗೆ ಮುಂಚೆ ಹೇಳಿದ ಯಾವುದೇ ನಿಕಾಯವನ್ನು ರಚಿಸಲಾಗಿದ್ದರೆ, ಆಗ ಇಂಥ ಎರಡೂ ನಿಕಾಯಗಳನ್ನು ರಚಿಸಿದ ಮೇಲೆ ಆ ರಾಜ್ಯಗಳಿಗೆ ಯಾವುದೇ ಮತದಾರರ ಮಂಡಲವನ್ನು ರಚಿಸುವ ಅಥವಾ ಪುನಾರಚಿಸುವ ಆವಶ್ಯಕತೆ ಇರುವುದಿಲ್ಲ ಮತ್ತು ಇಂಥ ಎರಡೂ ನಿಕಾಯಗಳ ರಚನೆಯಾದ ಮೇಲೆ ಆ ರಾಜ್ಯದ ಯಾವುದೇ ಮತದಾರರ ಮಂಡಲವು ತತ್ಕಾಲದಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿದ್ದರೆ, ಅದನ್ನು ವಿಸರ್ಜಿಸಲಾಗಿದೆಯೆಂದೇ ಭಾವಿಸಬೇಕು ಮತ್ತು ಆ ಗುಂಪಿನ ರಾಜ್ಯಗಳಿಗೆ ಕಲಮು ೨೭–ಹೆಚ್ ಆ ರಾಜ್ಯಗಳ ಗುಂಪಿಗೆ ಅನ್ವಾಯವಾಗುವಲ್ಲಿ, ಆ ರಾಜ್ಯಗಳ ಗುಂಪಿನ ಮತದಾರರ ಮಂಡಲಕ್ಕೆ ಆ ಕಲಮಿನಲ್ಲಿ ಉಲ್ಲೇಖಮಾಡಲಾಗಿದ್ದರೆ, ಆ ರಾಜ್ಯಗಳಿಗೆ ಹಾಗೆ ರಚಿಸಿದ ನಿಕಾಯಗಳನ್ನೇ ಉಲ್ಲೇಖ ಮಾಡಲಾಗಿದೆ ಎಂದು ಪ್ರತಿಯೋಜಿಸಲಾಗಿದೆ ಎನ್ನುವ ಹಾಗೆ ಪರಿಣಾಮ ಇರುತ್ತದೆ.

(ಸಿ) ಮೇಲೆ ಹೇಳಿ ಹಾಗೆ ಇಂಥ ನಿಕಾಯವನ್ನು ಕೊಡಗು ರಾಜ್ಯಕ್ಕಾಗಿ ರಚಿಸಿದರೆ, ಇಂಥ ನಿಕಾಯವನ್ನು ರಚಿಸಿದ ಮೇಲೆ, ಆ ರಾಜ್ಯಕ್ಕೆ ಅನ್ವಯವಾಗುವ ಹಾಗೆ ಕಲಮು ೨೭–ಐನಲ್ಲಿ ಕೊಡಗು ಶಾಸಕಾಂಗ ಪರಿಷತ್ತಿಗೆ ಏನಾದರೂ ಉಲ್ಲೇಖವಿದ್ದರೆ, ಆ ರಾಜ್ಯಕ್ಕೆ ಹಾಗೆ ರಚಿಸಿದ ನಿಕಾಯಕ್ಕೇ ಆ ಕಲಮಿನಲ್ಲಿ ಉಲ್ಲೇಖ ಮಾಡಲಾಗಿದೆ ಎಂದು ಪ್ರತಿಯೋಜಿಸಲಾಗಿದೆ ಎನ್ನುವ ಪರಿಣಾಮ ಇರುತ್ತದೆ.

*ಮಾನ್ಯಸಭಾಪತಿಗಳು: ಶ್ರೀದೇಶಬಂಧುಗುಪ್ತ ಅವರ ತಿದ್ದುಪಡಿಯನ್ನು ಮಂಡಿಸಲಾಗಿದೆ.

ಡಾ. ಅಂಬೇಡ್ಕರ್ ಅವರ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸಖಂಡ ೧೦-ಬಿನಲ್ಲಿ, ಈಗ ಇರುವ, ಪ್ರಜಾಪ್ರಾತಿನಿಧ್ಯ ಅಧಿನಿಯಮ, ೧೯೫೦ರ ಪ್ರಸ್ತಾವಿತ ಹೊಸಕಲಮು ೨೭-ಎಯ ಉಪಕಲಮು(ಐ)ನ, ಈಗ ಇರುವ ಪ್ರಸ್ತಾವಿತ ಮೊದಲನೇ ಪರಂತುಕದ ಬದಲಾಗಿ, ಕೆಳಗೆ ಕಂಡ ಹೊಸ ಪರಂತುಕವನ್ನು ಸೇರಿಸಿ.

> "ಪರಂತು, ದೆಹಲಿ ರಾಜ್ಯಕ್ಕೆ ಹಂಚಿಕೆಯಾದ ಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕಾಗಿ, ಎಲ್ಲಾ ಸ್ಥಳೀಯ ಸಂಸ್ಥೆಗಳ, ಅಂದರೆ, ಮುನಿಸಿಪಲ್ (ಪೌರ) ಸಮಿತಿಗಳು, ಜಿಲ್ಲಾ ಮಂಡಲಿ ಹಾಗೂ ಅಧಿಸೂಚಿತ ಪ್ರದೇಶ ಸಮಿತಿಗಳು, ಮುಖ್ಯ ಆಯುಕ್ತರ ಸಲಹಾಪರಿಷತ್ತಿಗೆ ಆಯ್ಕೆಯಾದ ಸದಸ್ಯರುಗಳು ಮತ್ತು ಲೋಕಸಭೆಗೆ ಆಯ್ಕೆಯಾದ ಸದಸ್ಯರು, ಮತದಾರರ ಮಂಡಲಿಯಲ್ಲಿ ಇರುತ್ತಾರೆ."

**ಡಾ. ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರಾದ ಶ್ರೀ ದೇಶಬಂಧುಗುಪ್ತ ಅವರು ಮಂಡಿಸಿದ ತಿದ್ದುಪಡಿಗಳ ಬಗ್ಗೆ ನಾನು ಉಲ್ಲೇಖಮಾಡಬೇಕೆಂದಿರುವ ಒಂದೆರಡು ವಿಷಯಗಳು ಇವೆ. ಒಂದು ರೀತಿಯಲ್ಲಿ, ಮೇಲ್ಮನೆಗೆ ಪಾರ್ಟ್ "ಸಿ" ರಾಜ್ಯಗಳಿಗೆ ಚುನಾಯಿತ ಪ್ರತಿನಿಧಿಗಳಿಗೆ ಅವಕಾಶ ಕೊಡುವ ಉದ್ದೇಶಕ್ಕಾಗಿ ಈ ಸದನವು ಅನುಮೋದಿಸಿರುವ ಇತರ ಉಪಬಂಧಗಳೊಡನೆ, ಈ ತಿದ್ದುಪಡಿಯನ್ನು ಓದಿದರೆ, ಒಂದು ತೆರನಾದ ಅಸಂಗತವಾಗಿ ಕಂಡು ಬರುತ್ತದೆ. ಅಲ್ಲಿ ನಾವು, ವಯಸ್ಕರ ಮತದಾನ ಪದ್ಧತಿಯಲ್ಲಿ ಚುನಾಯಿಸಲ್ಪಟ್ಟ ಮತದಾರರ ಮಂಡಲವನ್ನು ರಚಿಸುತ್ತಿದ್ದೇವೆ. ಇಲ್ಲಿ, ನಾವು ಮಸೂದೆಯಲ್ಲಿದ್ದ ಮೂಲ ಸ್ಕೀಮನ್ನು ಉಳಿಸಿಕೊಳ್ಳುತ್ತಿದ್ದೇವೆ, ಅಂದರೆ ಪ್ರಾತಿನಿಧ್ಯವು ಪರೋಕ್ಷವಾಗಿ ಸ್ಥಳೀಯ ಪ್ರಾಧಿಕಾರಗಳ ಮೂಲಕವೇ ಆಗಬೇಕು ಎಂದು. ಆದರೆ ಈ ಪ್ರಸ್ತಾವವನ್ನು ಒಪ್ಪಿಕೊಳ್ಳುವುದಕ್ಕೆ ಅದೇನೂ ಗಂಭೀರವಾದ ಆಕ್ಷೇಪಣೆಯಾಗಲಾರದು; ಕಾರಣ, ಈ ಎಲ್ಲಾ ನಿಕಾಯಗಳು ಸ್ವಲ್ಪ ಸಮಯದಲ್ಲಿಯೇ ಪ್ರಜಾಯುಕ್ತಗೊಳಿಸಲ್ಪಡಲಿವೆಯೆಂದೂ, ಮತ್ತು ವಯಸ್ಕ ಮತದಾನ ಪದ್ಧತಿಯಲ್ಲಿ ಚುನಾವಣೆಯಾಗಬಹುದೆಂಬ ಸಂಭವವಿದೆಯೆಂದೂ, ಈ ದಿನ ಬೆಳಿಗ್ಗೆ ಶ್ರೀ ದೇಶ ಬಂಧುಗುಪ್ತ ಅವರು ನಮಗೆ ಹೇಳಿದರು. ಅದನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ನೀವು ಮುನಿಸಿಪಾಲಿಟಿ ಅಥವಾ ಸ್ಥಳೀಯ ಮಂಡಲಿಗಳನ್ನು ಚುನಾವಣೆಯ ಆಧಾರವಾಗಿಟ್ಟುಕೊಳ್ಳುತ್ತೀರೋ ಅಥವಾ ಇನ್ನೂ ಕೆಳಕ್ಕೆ ಹೋಗಿ ನೀರು ಬೆರೆಸಿ ತೆಳುವು ಮಾಡಿ ಅದನ್ನೇ ಚುನಾವಣೆಯ ಆಧಾರವಾಗಿಟ್ಟುಕೊಳ್ಳುತ್ತೀರೋ ಎಂಬುದು ನನಗೆ ತೋರುವ ಹಾಗೆ ಕೇವಲ ಕಲ್ಪನಾ ವಿಲಾಸವಾಗುತ್ತದೆ. ಆದುದರಿಂದ, ಮೂಲಭೂತವಾಗಿ ಅವರ ಪ್ರಸ್ತಾವಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ.

ನಾನು ಉಲ್ಲೇಖ ಮಾಡಬಯಸುವ ಇನ್ನೂ ಒಂದೆರಡು ವಿಷಯಗಳು ಇವೆ. ಅವರು ಸ್ಥಳೀಯ ಪ್ರಾಧಿಕಾರಗಳನ್ನು ಚುನಾವಣೆಯ ಸಾಧನವಾಗಿ ಮಾಡುತ್ತಿರುವುದರಿಂದ, ತೋರಿ ಬರುತ್ತಿರುವುದೇನೆಂದರೆ ದೆಹಲಿ ಪ್ರಾಂತ್ಯದಲ್ಲಿ ಕೆಲವು ನಿರ್ದಿಷ್ಟ ಸ್ಥಳೀಯ ಪ್ರಾಧಿಕಾರಗಳು ಇವೆ. ಅಲ್ಲಿ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗುತ್ತಿದೆ, ಚುನಾವಣೆಯಿಂದ ಅಲ್ಲ. ನನಗೆ ತಿಳಿದಿರುವಹಾಗೆ, ಅಲ್ಲಿ ಒಂದು ಬಹು ದೊಡ್ಡ ನಾಮ ನಿರ್ದೇಶನದ ಪಟಿಕಾಂಶ ಇದೆ ಎಂದು. ನನ್ನ ಮಾನ್ಯಮಿತ್ರ ದೇಶಬಂಧುಗುಪ್ತ ಅವರು,

* P.D., ಸಂ. ೭, ಭಾಗ II, ೨೧ ಡಿಸೆಂಬರ್ ೧೯೫೦, ಪು. ೨೨೩೧-೩೩.

ದೆಹಲಿ ಮುನಿಸಿಪಾಲಿಟಿಗೆ ನಾಮ ನಿರ್ದೇಶನಗೊಂಡ ವ್ಯಕ್ತಿಗಳು, ಅವರು ವಯಸ್ಕ ಮತದಾನ ಪದ್ಧತಿಯಲ್ಲಿ ಚುನಾಯಿತರಾಗದಿದ್ದಾಗ್ಯೂ, ಬುದ್ಧಿಮತ್ತೆಯ ದೃಷ್ಟಿಯಿಂದ, ಪೌರಪ್ರಜ್ಞೆಯ ಕೋನದಿಂದ ಇತರ ಮುನಿಸಿಪಾಲಿಟಿಗಳಿಂದ ಚುನಾಯಿತರಾದ ವ್ಯಕ್ತಿಗಳಿಗಿಂತ ಕಳಪೆಯಾಗಿದ್ದಾರೆಂದು ಒತ್ತಾಯಿಸುವುದಿಲ್ಲವೆಂದು ನಾನು ಊಹಿಸುತ್ತೇನೆ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಾನು ಸರ್ವಥಾ ಸಿದ್ಧನಿದ್ದೇನೆ, ಪರಂತು ಅವರು ಅವರ ಖಂಡದಿಂದ 'ಚುನಾಯಿತರಾದ' ಎಂಬ ಪದವನ್ನು ತೊಡೆದು ಹಾಕಲು ಒಪ್ಪಿಕೊಂಡಾಗ ಮಾತ್ರ.

ಎರಡನೆಯದಾಗಿ, ನಾನು ಅವರಿಗೆ ಸಲಹೆ ಮಾಡಬಯಸುವುದೇನೆಂದರೆ, ಅದು ಕೇವಲ ಕರಡು ತಯಾರಿಸುವಲ್ಲಿನ ರಸಾಭಿಜ್ಞಾನವಲ್ಲ. ಅವರ ಪ್ರಸ್ತಾವನೆಯನ್ನೂ ಪರಂತುಕವಾಗಿ ಮಾಡುವುದಕ್ಕಿಂತ ಕಲಮು ೨೭–ಎ ಯ ಉಪಖಂಡ (೫) ಎಂದು ಮಾಡಿದರೆ ಉತ್ತಮವಾಗಿರುತ್ತದೆ. ನಾನು ಅದಷ್ಟನ್ನೂ ಓದಿದ್ದೇನೆ. ಇದನ್ನು ಉಪಖಂಡ (೫) ಎಂದು ಹಾಕಿದರೆ ಇನ್ನೂ ಹೆಚ್ಚು ಅಂದವಾಗಿರುತ್ತದೆಂದು ನನಗೆ ತೋರುತ್ತದೆ. ಇದಕ್ಕೆ ಒಳಪಟ್ಟು ಅದನ್ನು ಒಪ್ಪಿಕೊಳ್ಳಲು ನನಗೇನೂ ತಕರಾರು ಇಲ್ಲ.

**ಶ್ರೀ ದೇಶಬಂಧುಗುಪ್ತ:** ಮಾನ್ಯ ಸಚಿವರಿಂದ ನನಗೆ ಒಂದು ವಿಶದೀಕರಣಬೇಕಾಗಿದೆ ಎಂದು ನಾನು ತೋರಿಸಬಹುದೇ, ಸ್ವಾಮಿ? "ಚುನಾಯಿಸಲಾದ" ಎಂಬ ಪದವನ್ನು ಅಳಿಸಿ ಹಾಕುವುದಕ್ಕೆ ನಾನು ಒಪ್ಪಬೇಕೆಂದು ಅವರು ಹೇಳುವಾಗ, ಅವರಿಗೆ ಇತರ ಸ್ಥಳೀಯ ನಿಕಾಯಗಳಲ್ಲಿ ಸಹ ಒಂದು ದೊಡ್ಡ ನಾಮನಿರ್ದೇಶನದ ಘಟಕವಿದೆಯೆಂದು, ಮನವರಿಕೆಯಾಗಿದೆಯೆ? ನವದೆಹಲಿಗೆ ಮಾತ್ರ ಪ್ರಾತಿನಿಧ್ಯ ಸಾಕೆನ್ನುವುದು ಆಲೋಚನೆಯಾದರೆ–ಅದು ಸಂಪೂರ್ಣವಾಗಿ ನಾಮನಿರ್ದೇಶಿತಗೊಂಡ ನಿಕಾಯ–ಆಗ ನವದೆಹಲಿಯ ಪೌರ ಸಮಿತಿಯ ಅಧಿಕಾರೇತರ ಸದಸ್ಯರನ್ನು ತೆಗೆದುಕೊಂಡರೆ ಉದ್ದೇಶವು ಉತ್ತಮವಾಗಿ ನೆರವೇರುತ್ತದೆ. ಅಲ್ಲಿ ೭ ರಿಂದ ೮ ಸದಸ್ಯರುಗಳಿದ್ದಾರೆ. ಹಳೆಯ ದೆಹಲಿಯಲ್ಲಿ ೫೦ ಚುನಾಯಿತ ಮತ್ತು ೧೦ ನಾಮನಿರ್ದೇಶಗೊಂಡ ಸದಸ್ಯರಿದ್ದಾರೆ. ಶಹಧಾರಾದಲ್ಲಿ, ೧೦ ಚುನಾಯಿತ ಮತ್ತು ೫ ನಾಮ ನಿರ್ದೇಶನಗೊಂಡ ಸದಸ್ಯರುಗಳಿದ್ದಾರೆ. ಈ ಎಲ್ಲಾ ನಾಮನಿರ್ದೇಶಿತ ಸದಸ್ಯರುಗಳಿಗೆ ಮತ ಚಲಾಯಿಸುವ ಹಕ್ಕನ್ನು ಕೊಡಲೇಬೇಕೆಂದು ಅವರು ಅಪೇಕ್ಷಿಸುತ್ತಾರೆಯೇ?

**ಡಾ. ಅಂಬೇಡ್ಕರ್:** ತಾರತಮ್ಯ ಮಾಡುವುದಕ್ಕೆ ನನಗೆ ಯಾವ ಕಾರಣವೂ ಸಿಗುತ್ತಿಲ್ಲ.

**ಶ್ರೀ ದೇಶಬಂಧುಗುಪ್ತ:** ನಾನು "ಚುನಾಯಿತನಾದ" ಎಂಬ ಪದಕ್ಕೇ ಅಂಟಿಕೊಳ್ಳುತ್ತೇನೆ. ಆದರೆ ನವದೆಹಲಿ ಮುನಿಸಿಪಾಲಿಟಿಯ ಅಧಿಕಾರೇತರ ಸದಸ್ಯರನ್ನು ಸೇರಿಸಿಕೊಳ್ಳಲು ತಯಾರಿದ್ದೇನೆ.

**ಡಾ. ಅಂಬೇಡ್ಕರ್:** ಸರಿ.

*__ಮಾನ್ಯಸಭಾಪತಿಗಳು:__ ಹಾಗಾದರೆ, ಚರ್ಚೆ ಸಾಗುತ್ತಿರುವ ದಿಕ್ಕನ್ನು ನೋಡಿದರೆ, ಮಿ. ದೇಶಬಂಧುಗುಪ್ತ ಅವರ ತಿದ್ದುಪಡಿಯನ್ನು ಸದನದ ಮುಂದೆ ಇಡಲೇಬೇಕಾಗಿದೆ.

**ಡಾ. ಆರ್.ಯು. ಸಿಂಗ್:** ಆದರೆ, ಸ್ವಾಮಿ, ನನ್ನ ಪ್ರಶ್ನೆಗಳನ್ನು ಉತ್ತರಿಸಲಾಗಿಲ್ಲ. ನನಗೆ ಎರಡು ವಿಷಯಗಳು ಗೊತ್ತಾಗಬೇಕಿದೆ. ಯಾವ ಆಧಾರದ ಮೇಲೆ ಶಾಸಕಾಂಗ ಪರಿಷತ್ತುಗಳನ್ನು ಚುನಾಯಿಸಲಾಗುತ್ತದೆ? ಏಕೆಂದರೆ, ಸದಸ್ಯರನ್ನು ಚುನಾಯಿಸುವ ಜನಸಂಖ್ಯೆಯೂ ಬಹಳ ಕಮ್ಮಿಯಾಗಿದೆ. ಮತ್ತು ಎರಡನೆಯದಾಗಿ, ನಾನು ಒತ್ತಾಯ ಮಾಡಿರುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಮಾನ್ಯ

* P.D., ಸಂ. ೭, ಭಾಗ II, ೨೧ ಡಿಸೆಂಬರ್ ೧೯೫೦, ಪು. ೨೨೩೬–೪೪.

ಕಾನೂನು ಸಚಿವರು ತಮ್ಮ ನಿಲುವನ್ನು ಪುನರ್ ಪರಿಶೀಲಿಸುತ್ತಾರೆಯೆ? ನಾನು ಹೇಳಿದ ಹಾಗೆ ಅದು ವಾಸ್ತವವಾಗಿ ತಪ್ಪು. ಇದೊಂದು ಕಲಬೆರಕೆ ವ್ಯವಸ್ಥೆ. ಇದಕ್ಕೆ ಯಾವ ಸಮಜಾಯಿಷಿಯೂ ಇಲ್ಲ. ಡಾ. ಅಂಬೇಡ್ಕರ್ ಏನು ಹೇಳುತ್ತಾರೆಂಬುದನ್ನು ನಾನು ಕೇಳ ಬಯಸುತ್ತೇನೆ.

**ಮಾನ್ಯ ಸಭಾಪತಿಗಳು:** ಮಾನ್ಯ ಸದಸ್ಯರು ಎತ್ತಿರುವ ವಿಷಯವನ್ನು ಮಾನ್ಯ ಕಾನೂನು ಸಚಿವರು ಮನನ ಮಾಡಿಕೊಂಡಿದ್ದಾರೆಯೇ

**ಡಾ. ಅಂಬೇಡ್ಕರ್:** ಮಂತ್ರಿಮಂಡಲದಲ್ಲಿ ನಾನು ಒಬ್ಬ ಕಬ್ಬಿಣದ ಕಡಲೆಯೆಂದು ಕೆಲವು ಮಾನ್ಯ ಸದಸ್ಯರು ಅಂದುಕೊಂಡಿದ್ದಾರೆ. ಕಬ್ಬಿಣದ ಕಡಲೆಯಾಗಿರುವುದರ ಅನುಕೂಲವೇನೆಂದು ನನಗೀಗ ಗೊತ್ತಾಗುತ್ತಿದೆ. ಎಲ್ಲ ಜನರಿಗೂ, ಸಿಕ್ಕಿದವರೆಲ್ಲರಿಗೂ, ಬಗ್ಗುವುದು ಎಂದರೆ ನಾನೀಗ ಇರುವ ಕಷ್ಟದಲ್ಲಿ ಯಾರನ್ನೇ ಆಗಲಿ ಸಿಕ್ಕಿಸುತ್ತದೆ. ನಾನು ನನ್ನ ಮೊದಲಿನ ನಿಲುವಿಗೇ ಅಂಟಿಕೊಂಡಿದ್ದರೆ, ಬಹುಶಃ ನಾನೀಗ ಇರುವ ಕಷ್ಟದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿರಲಿಲ್ಲವೇನೊ, ಆದರೆ, ಈ ಮುನಿಸಿಪಲ್ ನಿಕಾಯಗಳಿಗೆ ನಡೆಸುವ ಚುನಾವಣೆಯನ್ನು ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ಇರುತ್ತದೆಂಬ ಭರವಸೆಯ ಮೇಲೆ ಆ ನಿಲುವನ್ನು ಒಪ್ಪಿಕೊಂಡದ್ದರಲ್ಲಿ, ಯಾವುದೇ ಒಂದು ಮಹಾನ್ ನೀತಿಯು ಒಳಗೊಂಡಿತ್ತೆಂದೂ, ಅದಕ್ಕಾಗಿ ಮಿ. ದೇಶಬಂಧುಗುಪ್ತ ಅವರು ಕೊಟ್ಟ ಸಲಹೆಯನ್ನು ಒಪ್ಪಿಕೊಂಡಿದ್ದೇನೆಂದು ನನಗೆ ಅನಿಸುವುದಿಲ್ಲ.

ಎರಡನೆಯದಾಗಿ, ಮಾನ್ಯ ಸದಸ್ಯರಿಗೆ ಗೊತ್ತಾಗುವ ಹಾಗೆ, ಈ ಸ್ಕೀಮು ಚಾಲನೆಗೆ ಸಹ ಬಾರದಿರಬಹುದು. ಏಕೆಂದರೆ, ನಾನು ಮಂಡಿಸಿರುವ ತಿದ್ದುಪಡಿಯಲ್ಲಿ, ಇತರ ಪಾರ್ಟ್ "ಬಿ" ಮತ್ತು ಪಾರ್ಟ್ "ಎ" ರಾಜ್ಯಗಳಿಗೆ ಮಾಡಿರುವ ಹಾಗೆ, ಪಾರ್ಲಿಮೆಂಟು ಶಾಸಕಾಂಗ ನಿಕಾಯಗಳನ್ನು ಕಾನೂನಿನ್ವಯ ರಚಿಸುವುದಕ್ಕೆ, ನಾನು ಏರ್ಪಾಟು ಮಾಡಿದ್ದೇನೆ. ಆಗ ಚುನಾವಣೆಗಳು ಹೊಸದಾಗಿ ರಚಿಸಿದ ನಿಕಾಯಗಳ ಆಧಾರದ ಮೇಲೆ ನಡೆಸಲ್ಪಡುತ್ತವೆ. ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು, ಆ ತೀರ್ಮಾನಕ್ಕೆ– ಅದು ಹೇಗಾದರೂ ಆಗಲಿ–ನಾನು ಹೆಚ್ಚಿನ ಪ್ರಾಮುಖ್ಯವನ್ನು ಕೊಡುವುದಕ್ಕೆ ಒಲವು ತೋರಿಸಿಲ್ಲ. ಏಕೆಂದರೆ, ಸಾಕಷ್ಟು ಒತ್ತಡವಿದ್ದರೆ, ಸಾಕಷ್ಟು ಸಮಯವಿದ್ದರೆ, ಚುನಾವಣೆಗಳು ಬರುವುದಕ್ಕೆ ಮುಂಚೆ, ಅನುಚ್ಛೇದ ೨೪೦ನ್ನು ಪರಿಣಾಮಕಾರಿಯನ್ನಾಗಿಸುವುದಕ್ಕೆ, ಶಾಸಕಾಂಗಗಳನ್ನು ರಚಿಸುವ ಜವಾಬ್ದಾರಿಯನ್ನು ತಾನೇ ನಿಭಾಯಿಸುವ ಹಾಗೆ ಪಾರ್ಲಿಮೆಂಟನ್ನು ಪ್ರೇರೇಪಿಸಬಹುದು. ಆದ್ದರಿಂದ, ಸದ್ಯಕ್ಕೆ ನಾನು "ಚುನಾಯಿತನಾದ" ಎಂಬ ಪದವನ್ನು ತೆಗೆದು ಹಾಕಲು ಒತ್ತಾಯಿಸುತ್ತೇನೆ. ಮತ್ತೆ, ಬಹುಶಃ ನವದೆಹಲಿಯನ್ನು ಕುರಿತಾಗಿ ಹೇಳುವುದಾದರೆ, ಅಲ್ಲಿ ಬಹು ದೊಡ್ಡದಾದ ನಾಮ ನಿರ್ದೇಶನದ ಘಟಕಾಂಶ ಇದೆಯೆಂದು ನನಗೆ ಗೊತ್ತಾಗಿರುವುದರಿಂದ, ನಾನು ದೆಹಲಿಯ ಪ್ರಾತಿನಿಧ್ಯವನ್ನು ಅಧಿಕಾರೇತರ ಸದಸ್ಯರಿಗಷ್ಟೆ ಮಿತಗೊಳಿಸುತ್ತೇನೆ. ಸದ್ಯಕ್ಕೆ, ಸದನವು ಇಷ್ಟಕ್ಕೇ ತೃಪ್ತಿಪಟ್ಟುಕೊಳ್ಳಬೇಕೆಂದು ನನಗನಿಸುತ್ತದೆ.

**ಶ್ರೀ ಸೋಂಧಿ:** ಇತರ ನಿಕಾಯಗಳ ಅಧಿಕಾರೇತರ ಸದಸ್ಯರುಗಳ ಬಗ್ಗೆ ಏನನ್ನುತ್ತೀರಿ. ನಾವು ಒಂದು ನಿಕಾಯ ಮತ್ತು ಇನ್ನೊಂದರ ಮಧ್ಯೆ ತಾರತಮ್ಯ ಮಾಡಬಾರದು.

**ಡಾ. ಅಂಬೇಡ್ಕರ್:** ಪಾರ್ಟ್ "ಸಿ" ರಾಜ್ಯಗಳ ನಿಕಾಯಗಳ ಮಟ್ಟಿಗೆ ಹೇಳುವುದಾದರೆ, ನಾವು ಈಗ ಅದರಲ್ಲಿ ಹೆಚ್ಚಾಗಿ ಒಳಹೋಗುವ ಆವಶ್ಯಕತೆಯಿಲ್ಲ, ಕಾರಣವೆಂದರೆ ನಾವೀಗ ಮತದಾರರ ಮಂಡಲವನ್ನು ರಚಿಸುತ್ತಿದ್ದೇವೆ. ಅದಕ್ಕೆ ಆಧಾರವೆಂದರೆ..........

**ಶ್ರೀ ಸೋಂಧಿ:** ಇತರ ನಿಕಾಯಗಳಿಗೆ ನಾಮನಿರ್ದೇಶನಗೊಳಿಸಲ್ಪಟ್ಟ ಅಧಿಕಾರೇತರ ಸದಸ್ಯರುಗಳನ್ನು

ಕುರಿತು ನಾನು ಉಲ್ಲೇಖಿಸುತ್ತಿದ್ದೆ. ಮಾನ್ಯ ಸದಸ್ಯರು ದೆಹಲಿಯಲ್ಲಿರುವ ನಾಮನಿರ್ದೇಶಿತ ಸದಸ್ಯರುಗಳನ್ನು ಕುರಿತು ಉಲ್ಲೇಖ ಮಾಡುತ್ತಿದ್ದರು.

**ಡಾ. ಅಂಬೇಡ್ಕರ್:** ಹೊಸ ಸ್ಕೀಮಿನ ಕೆಳಗೆ, ಬಹುಶಃ ಅಧಿಕಾರೇತರ ಘಟಕಾಂಶಗಳು ಮಾಯವಾಗಿ ಬಿಡುತ್ತಾರೆ.

**ಮಾನ್ಯ ಸಭಾಪತಿಗಳು:** ಈ ಚರ್ಚೆಯನ್ನು ನಾವು ಇನ್ನು ಮುಂದುವರೆಸುವುದು ಬೇಡ.

**ಶ್ರೀ ದೇಶಬಂಧು ಗುಪ್ತ:** ಮಾನ್ಯ ಕಾನೂನು ಸಚಿವರು "ಚುನಾಯಿತನಾದ" ಎಂಬ ಪದ ಹೋಗಬೇಕು ಮತ್ತು ಅದರ ಜಾಗದಲ್ಲಿ ದೆಹಲಿ ಮತ್ತು ಹೊಸದೆಹಲಿಗೆ "ಅಧಿಕಾರೇತರ ನಿಕಾಯ" ಬರಬೇಕೆಂದು ಹೇಳಿದರು. ಇದೇ ಅವರ ಅಪೇಕ್ಷೆಯೇನು?

**ಡಾ. ಅಂಬೇಡ್ಕರ್:** ಹೌದು, ಅದು ವಿಷಯಗಳನ್ನು ಸರಳಗೊಳಿಸುತ್ತದೆ.

**ಶ್ರೀ ತ್ಯಾಗಿ:** ಹೊಸ ಚುನಾವಣೆಗಳನ್ನು ಸಕಾಲದಲ್ಲಿ ವಯಸ್ಕರ ಮತದಾನ ಪದ್ಧತಿಯ ಆಧಾರದ ಮೇಲೆ ನಡೆಸಲಾಗುತ್ತದೆ ಎಂಬ ಆಸೆ ಮತ್ತು ಆ ಷರತ್ತಿಗೆ ಒಳಪಟ್ಟು ಮಾನ್ಯ ಕಾನೂನು ಸಚಿವರು ಇದನ್ನು ಒಪ್ಪಿಕೊಂಡಿರುತ್ತಾರೆಂದು ವಿಷದೀಕರಿಸಲೇ ಬೇಕಾಗುತ್ತದೆ. ಈ ಹಳೆಯ ಮಂಡಲಿಗಳಲ್ಲಿ ಬಹುಪಾಲು ಹೊಸ ಜನತೆಗೆ ಪ್ರಾತಿನಿಧ್ಯವೇ ಇಲ್ಲ, ಅಥವಾ ಅವರನ್ನು ಪ್ರತಿಬಿಂಬಿಸಿಯೇ ಇಲ್ಲ. ಅವರಿಗೆ ಪ್ರಾತಿನಿಧ್ಯ ಕೊಡದೇ ಇರುವುದು ಬಹಳ ತಪ್ಪಾಗುತ್ತದೆ.

**ಶ್ರೀ ಕಾಮತ್:** ಸ್ವಾಮಿ, ಸ್ವಲ್ಪ ಸಮಯಕ್ಕೆ ಮುಂಚೆ ಮಾನ್ಯ ಸದಸ್ಯರನ್ನು "ಸಿಕ್ಕಿದವರೆಲ್ಲರೂ" (ಆಲ್ ಅಂಡ್ ಸಂಡ್ರಿ) ಎಂದು ಡಾ. ಅಂಬೇಡ್ಕರ್ ಉಲ್ಲೇಖಿಸಿದ್ದಾರೆ. ಅದು ಯೋಗ್ಯವಾದುದೇ ಎಂದು ನನಗೆ ಗೊತ್ತಿಲ್ಲ. ಅದು ಅಸಂಸದೀಯವಾಗಿಲ್ಲದಿರಬಹುದು. ಆದರೆ ಅದು ಗೌರವಯುತವಾದುದಲ್ಲ ಎಂದು ನನಗೆ ಅನಿಸುತ್ತದೆ. ತಾವು ಈ ವಿಷಯದ ಮೇಲೆ ತಮ್ಮ ನಿರ್ಣಯವನ್ನಲ್ಲದಿದ್ದರೂ ತಮ್ಮ ಅಭಿಪ್ರಾಯವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

**ಮಾನ್ಯ ಸಭಾಪತಿಗಳು:** ಆ "ಮಾತಿ"ಗೆ ನಾನು ಯಾವುದೇ ಅಸಭ್ಯ ಅರ್ಥವನ್ನು ಕೊಡುವುದಿಲ್ಲ. ಸಚಿವರ ಮುಂದೆ ಬಹುಮಂದಿ ಜನರು ಅದಕ್ಕೆ ಇದಕ್ಕೇ ಎಂದು ಬರುತ್ತಾರೆ. ಹಾಗಾಗಿ "ಸಿಕ್ಕಿದವರೆಲ್ಲರೂ" ಅನ್ನುವ ಪದ ಪಾರ್ಲಿಮೆಂಟ್ ಸದಸ್ಯರಿಗೆ ಮಾತ್ರ ಅನ್ವಯವಾಗುವುದಿಲ್ಲ. ಹೇಗೇ ಆದರೂ ಮಾನ್ಯ ಸದಸ್ಯರು ಆ ಟೋಪಿ ತಮಗೆ ಸರಿಹೊಂದುತ್ತದೆ ಎಂದು ತಿಳಿದುಕೊಳ್ಳುವ ಆವಶ್ಯಕತೆ ಇಲ್ಲ.

**ಶ್ರೀ ಬಿ.ದಾಸ್:** ಸ್ವಾಮಿ, ದೆಹಲಿ ಮುನಿಸಿಪಲ್ ನಿಕಾಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಮಾನ್ಯ ಆರೋಗ್ಯ ಮಂತ್ರಿಗಳು ನಮಗೆ ನೆರವಾಗಲು ಇಲ್ಲಿಲ್ಲ. ಈ ಪ್ರಶ್ನೆಯನ್ನು ಆಕೆಯ ನೆರವನ್ನು ಪಡೆದುಕೊಂಡು ಆಮೇಲೆ ಇತ್ಯರ್ಥಗೊಳಿಸಲಾಗುವುದಿಲ್ಲವೇ?

**ಮಾನ್ಯ ಸಭಾಪತಿಗಳು:** ಅನೌಪಚಾರಿಕ ಸಭೆಗಳಾದ ಮೇಲೆ, ಆ ಸಭೆಯನ್ನು ನಡೆಸುವ ಉದ್ದೇಶದಿಂದ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ ಮೇಲೂ ಈ ಪ್ರಶ್ನೆಯನ್ನು ಪುನಃ ಚರ್ಚಿಸಲಾಗುತ್ತದೆ ಎಂದು ಭಾವಿಸಿರಲಿಲ್ಲ.ನಾನು ಒಂದು ಕೊಡು–ಕೊಳು ಮನೋಭಾವವನ್ನು ಅಷ್ಟೊ, ಇಷ್ಟೋ, ಇಲ್ಲಿ, ಅಲ್ಲಿ ಕೊಡುವುದನ್ನು ನಿರೀಕ್ಷಿಸುತ್ತಿದ್ದೆ. ಹೇಗೇ ಆದರೂ, ಎಲ್ಲರಿಗೂ ನ್ಯಾಯ ದೊರಕಿಸುವುದು ಮನುಷ್ಯ ರೀತಿಯಲ್ಲಿ ಅಸಾಧ್ಯವಾದದ್ದು ನಾವು ಎಷ್ಟರ ಮಟ್ಟಿಗೆ ನ್ಯಾಯವನ್ನು ದೊರಕಿಸಬಲ್ಲವೋ ಅಷ್ಟನ್ನೂ ಮಾಡೋಣ. ಹೀಗಾಗಿ ನಾನು ಮುಂದುವರೆಯುತ್ತೇನೆ. ಈಗ, ಪರಿಸ್ಥಿತಿ ಹೇಗಿದೆ? ನಾನು ಸದನದ ಮುಂದೆ ತಿದ್ದುಪಡಿಯನ್ನು ಇಡಲೆ?

**ಡಾ. ಅಂಬೇಡ್ಕರ್:** "ಚುನಾಯಿಸಲಾದ" ಎಂಬ ಪದಕ್ಕೆ ಬದಲಾಗಿ, "ಅಧಿಕಾರೇತರ ಸದಸ್ಯರನ್ನು" ಎಂಬ ಪದಗಳನ್ನು ಇಟ್ಟುಕೊಳ್ಳಬಹುದೆಂದು ಸೂಚಿಸಲಾಗಿದೆ.

**ಶ್ರೀ ದೇಶಬಂಧುಗುಪ್ತ:** ಈ ಬದಲಾವಣೆಯನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಮಾನ್ಯಸಭಾಪತಿಗಳು:** ಇನ್ನೂ ಹೆಚ್ಚಿನ ಚರ್ಚೆ ಬೇಕಿಲ್ಲ. ಮಸೂದೆಯನ್ನು ಮುಂದುವರೆಸೋಣ. ಇಲ್ಲದಿದ್ದರೆ, ನಾಳೆಯ ದಿವಸ ಮಾನ್ಯ ಸದಸ್ಯರುಗಳಿಗೆ ಇತರ ಮಸೂದೆಗಳಿಗೆ ಸಾಕಷ್ಟು ಸಮಯ ದೊರಕುವುದಿಲ್ಲ. ನನ್ನ ಕಷ್ಟ ಈಗ ಬರುತ್ತದೆ. ನಾನು ತಿದ್ದುಪಡಿಯನ್ನು ಹೇಗೆ ಮುಂದಿಡಲಿ?

ಆರ್ಡರ್, ಆರ್ಡರ್, ಸದನದಲ್ಲಿ ಗದ್ದಲ ಕಡಿಮೆಯಾಗಲಿ.

**ಸಾರಿಗೆ ಮತ್ತು ರೇಲ್ವೇ ಸಚಿವರು (ಶ್ರೀ ಗೋಪಾಲಸ್ವಾಮಿ):** ಕಾನೂನು ಸಚಿವರಿಗೆ ನನ್ನ ಸಲಹೆ ಏನೆಂದರೆ, "ಅಂಥ" (ಸಚ್‌ಆ್ಯಸ್) ಅನ್ನುವ ಪದಗಳನ್ನು ಬಿಟ್ಟುಬಿಡುವುದು ಅಪೇಕ್ಷಣೀಯವಾದುದು. "ಮುನಿಸಿಪಲ್ ಸಮಿತಿಗಳ ಸದಸ್ಯರುಗಳು ಮತ್ತು ಅಧಿಸೂಚಿತ ಪ್ರದೇಶದ ಸಮಿತಿಗಳು" ಎಂದು ನಾವು ಹೇಳಬೇಕು. ನಾವು "ಅಂಥ" (ಸಚ್ ಆ್ಯಸ್) ಎನ್ನುವ ಪದಗಳನ್ನು ಹಾಕಿದರೆ, ಅಲ್ಲಿ ಬೇರೆ ಇತರ ವರ್ಗಗಳ ಸ್ಥಳೀಯ ನಿಕಾಯಗಳೂ ಇವೆಯೆಂದೂ ಮತ್ತು ಅವನ್ನು ನೀವು ಉಲ್ಲೇಖ ಮಾಡಲು ಬಯಸುತ್ತಿದ್ದೀರೆಂದು ಅರ್ಥ ಬರುತ್ತದೆ.

**ಶ್ರೀ ದೇಶ ಬಂಧು ಗುಪ್ತ:** ಆ ಪದಗಳನ್ನು ಉಳಿಸಿಕೊಂಡಿರುವುದಕ್ಕೆ ಕಾರಣವೆಂದರೆ, ಅಲ್ಲಿ ದೆಹಲಿ ಅಭಿವೃದ್ಧಿ ಟ್ರಸ್ಟ್ ಇದೆ.

**ಡಾ. ಅಂಬೇಡ್ಕರ್:** ನನ್ನ ಪ್ರತಿಯಲ್ಲಿ ಆ ಪದಗಳು ಇಲ್ಲ.

**ಮಾನ್ಯ ಸಭಾಪತಿಗಳು:** ಮಿ. ದೇಶಬಂಧು ಗುಪ್ತ ಅವರ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಬಹುದು ಮತ್ತು ಮಾನ್ಯ ಸಚಿವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

**ಡಾ. ಅಂಬೇಡ್ಕರ್:** ನಾನು ಅದನ್ನು ಕೆಲವು ಮಾರ್ಪಾಟುಗಳೊಂದಿಗೆ ಒಪ್ಪಿಕೊಳ್ಳುತ್ತಿದ್ದೇನೆ. ಮತ್ತು ಅದನ್ನು ಅನುಚ್ಛೇದ ೨೭–ಐನ ಉಪಖಂಡ (೫) ಎಂದು ಹಾಕುತ್ತಿದ್ದೇನೆ.

**ಮಾನ್ಯಸಭಾಪತಿಗಳು:** ಮಾನ್ಯ ಸದಸ್ಯ ದೇಶಬಂಧುಗುಪ್ತ ಅವರಿಗೆ ಇದು ಒಪ್ಪಿಗೆಯೆ?

**ಶ್ರೀ ದೇಶ ಬಂಧು ಗುಪ್ತ:** ಹೌದು.

ಅನುಮತಿಯೊಡನೆ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲಾಯಿತು.

**ಡಾ. ಆರ್.ಯು.ಸಿಂಗ್:** ನಾನು ಕೊಡಗಿನ ಪ್ರಶ್ನೆಯನ್ನು ಎತ್ತಿದ್ದೆ. ಅದನ್ನು ಉತ್ತರಿಸಿಲ್ಲ.

**ಮಾನ್ಯಸಭಾಪತಿಗಳು:** ಯಾವುದೇ ಸದಸ್ಯರು ಯಾವುದೇ ಪ್ರಶ್ನೆಯನ್ನು ಕೇಳಬಹುದು. ಆದರೆ ಪ್ರತಿಯೊಂದು ಪ್ರಶ್ನೆಗೂ ಸಚಿವರು ಉತ್ತರ ಕೊಡಲೇ ಬೇಕೆಂದಿಲ್ಲ. ಈಗ ನಾವು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ, ವಿವೇಚನೆಯಿಂದ ಕಲಾಪವನ್ನು ಮುಂದುವರೆಸಬೇಕು. ಸಚಿವರು ತಿದ್ದುಪಡಿಯನ್ನು ಬಹುತೇಕ ಒಪ್ಪಿಕೊಂಡಿದ್ದಾರೆ.

**ಡಾ. ಅಂಬೇಡ್ಕರ್:** ನಾನು ಈಗ ತಾನೇ ನೋಟೀಸ್ ಕೊಟ್ಟಿರುವ ತಿದ್ದುಪಡಿಯನ್ನು ಪ್ರಸ್ತಾವಿಸುತ್ತಿದ್ದೇನೆ. ಅದು ಶುದ್ಧಾಂಗವಾಗಿ ನಾಮಮಾತ್ರ ಮತ್ತು ಅನುಷಂಗಿಕವಾದದ್ದು. ನನ್ನ ತಿದ್ದುಪಡಿಯಲ್ಲಿ ದೇಶಬಂಧುಗುಪ್ತ ಅವರ ತಿದ್ದುಪಡಿಯನ್ನು ಸೇರಿಸಲು ಪ್ರಸ್ತಾವಿಸುತ್ತಿದ್ದೇನೆ.

**ಮಾನ್ಯಸಭಾಪತಿಗಳು:** ಈ ತಿದ್ದುಪಡಿಗಳ ವಿಚಾರದಲ್ಲಿ, ನಾವು ಅವುಗಳನ್ನು ಓದುವುದೇ ಉತ್ತಮ. ಮಾನ್ಯ ಸದಸ್ಯರುಗಳಿಗೆ ಇವುಗಳನ್ನು ಕಳುಹಿಸಿಕೊಟ್ಟಿಲ್ಲ. ಆದ್ದರಿಂದ ಈಗ ನಮಗೆ ಇರುವ

ಪರ್ಯಾಯಮಾರ್ಗಗಳೆಂದರೆ, ತಿದ್ದುಪಡಿಗಳನ್ನು ಸದನದಲ್ಲಿ ಓದುವುದು, ಅಥವಾ ಈ ಖಂಡವನ್ನು ಮುಂದಕ್ಕೆ ಹಾಕುವುದು, ಮುಂದಿನ ಖಂಡವನ್ನು ತೆಗೆದುಕೊಂಡು ಇದನ್ನು ಬಾಕಿ ಇಟ್ಟಿರುವುದು. ಆಗ ಒಂದು ಖಂಡ ಮಾತ್ರ ಉಳಿದುಕೊಳ್ಳುತ್ತದೆ.–ಖಂಡ ೧೧. ಅಲ್ಲದೆ ಅನುಸೂಚಿಯ ಕುರಿತಾಗಿ ಡಾ. ಅಂಬೇಡ್ಕರ್ ಅವರ ಇನ್ನೊಂದು ತಿದ್ದುಪಡಿ ಇದೆ. ಅದನ್ನು ವಿಲೇ ಮಾಡಬಹುದು.

**ಶ್ರೀ ಜವಾಹರ್‌ಲಾಲ್ ನೆಹರು:** ಈ ತಿದ್ದುಪಡಿಗಳನ್ನು ಓದಿಬಿಡಬಾರದೇಕೆ?

**ಮಾನ್ಯಸಭಾಪತಿಗಳು:** ೧೧ನೇ ಖಂಡವನ್ನು ವಿಲೇ ಮಾಡಿದ ಮೇಲೆ ಆಮೇಲೆ ಡಾ. ಅಂಬೇಡ್ಕರ್ ಅವರ ತಿದ್ದುಪಡಿ ಹೊಸ ಖಂಡವಾಗಿ ಮಾಡಿ ವಿಲೇ ಮಾಡಿದ ಮೇಲೆ, ಮುಂದಿನ ಕ್ಷೇತ್ರವೆಲ್ಲಾ ಸ್ಪಷ್ಟವಾಗಿ ಬಿಡುತ್ತದೆ. ಆಮೇಲೆ ಅಲ್ಲಿ ಉಳಿಯುವುದು ತಿದ್ದುಪಡಿಗಳನ್ನು ಬಿಟ್ಟರೆ ಇನ್ನೇನೂ ಇಲ್ಲ. ಈ ಹಂತದಲ್ಲಿ ಒಂದೆರಡು ನಿಮಿಷ ಈ ವಿಷಯವನ್ನು ಪಕ್ಕಕ್ಕಿಡೋಣ– ನಾಳೆಯವರೆಗೇನೂ ಅಲ್ಲ. ನಾನೀಗ ೧೧ನೇ ಖಂಡಕ್ಕೆ ಹೋಗುತ್ತೇನೆ.

**ಶ್ರೀ ದ್ವಿವೇದಿ (ವಿಂಧ್ಯಪ್ರದೇಶ):** ಖಂಡ ೧೧–ಎಗೆ ಕೇಂದ್ರ ತಿದ್ದುಪಡಿಗಳು ಇವೆ.

**ಮಾನ್ಯ ಸಭಾಪತಿಗಳು:** ನಾನೀಗ ಪಕ್ಕಕ್ಕಿಡುತ್ತಿದ್ದೇನೆ. ದುರದೃಷ್ಟವೆಂದರೆ ಮಾನ್ಯ ಸದಸ್ಯರುಗಳು ಮಾತನಾಡುವುದರಲ್ಲಿ ನಿರತರಾಗಿದ್ದಾರೆಯೇ ಹೊರತು ನಡವಳಿಕೆಗಳನ್ನು ಗಮನಿಸುತ್ತಿಲ್ಲ.

ವಿಷಯವೆಂದರೆ:

ಖಂಡ ೧೧ ಮಸೂದೆಯ ಭಾಗವಾಗಿ ನಿಲ್ಲುತ್ತದೆ.

ಪ್ರಸ್ತಾವವನ್ನು ಅಳವಡಿಸಿಕೊಳ್ಳಲಾಯಿತು.

೧೧ನೇ ಖಂಡವನ್ನು ಮಸೂದೆಗೆ ಸೇರಿಸಲಾಯಿತು.

## ಹೊಸಖಂಡ ೧೧–ಎ

**ಡಾ. ಅಂಬೇಡ್ಕರ್:** ನಾನು ಮಂಡಿಸಬಯಸುವುದೇನೆಂದರೆ:

ಖಂಡ ೧೧ರ ನಂತರ, ಈ ಕೆಳಗಿನ ಹೊಸಖಂಡವನ್ನು ಸೇರಿಸಿ,

೧೧–ಎ: ಹೆಚ್ಚುವರಿ ಐದನೇ ಅನುಸೂಚಿಯನ್ನು ೧೯೫೦ರ ಅಧಿನಿಯಮXLIIIಕ್ಕೆ ಸೇರಿಸುವುದು. ಸದರಿ ಅಧಿನಿಯಮದ ನಾಲ್ಕನೇ ಅನುಸೂಚಿಯ ನಂತರ ಈ ಕೆಳಗಿನ ಅನುಸೂಚಿಯನ್ನು ಸೇರಿಸುವುದು.

## "ಐದನೇ ಅನುಸೂಚಿ"

(ಕಲಮುಗಳು ೨೭ ಎ(೨) ೨೭(ಬಿ) ೨೭ಇ(೧) ಮತ್ತು ೨೭ ಜೆ (ಎ)ನ್ನು ನೋಡಿ:
ಮತದಾರರ ಮಂಡಲದ ಸದಸ್ಯರ ಸಂಖ್ಯೆ

| ರಾಜ್ಯದ ಹೆಸರು<br>೧ | | ಸದಸ್ಯರ ಹೆಸರು<br>೨ |
|---|---|---|
| ೧. | ಅಜ್ಮೀರ | ೨೦ |
| ೨. | ಭೋಪಾಲ | ೨೦ |
| ೩. | ಬಿಲಾಸ್‌ಪುರ ಮತ್ತು ಹಿಮಾಚಲಪ್ರದೇಶ | ೨೫ |
| ೪. | ಕಚ್ | ೨೦ |
| ೫. | ಮಣಿಪುರ | ೨೦ |
| ೬. | ತ್ರಿಪುರಾ | ೨೦ |
| ೭. | ವಿಂಧ್ಯಪ್ರದೇಶ | ೫೦ |

**ಮಾನ್ಯ ಸಭಾಪತಿಗಳು:** ತಿದ್ದುಪಡಿಯನ್ನು ಮಂಡಿಸಲಾಗಿದೆ.
ಮೇಲೆ ಇರುವುದರ ಹಾಗೆ
**ಶ್ರೀ ದ್ವಿವೇದಿ:** ನಾನು ಮಂಡಿಸುವುದಕ್ಕೆ ಪ್ರಾರ್ಥಿಸುತ್ತೇನೆ.

ಪ್ರಸ್ತಾವಿಸಲಾಗಿರುವ ೧೯೫೦ರ ಜನತಾಪ್ರಾತಿನಿಧ್ಯ ಕಾಯ್ದೆಯ ಐದನೆಯ ಅನುಸೂಚಿ (ಪ್ರಸ್ತಾವಿಸಲಾಗಿರುವ) ಹೊಸ ಖಂಡ '೧೧ಎ'ನಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿರುವ ತಿದ್ದುಪಡಿಯಲ್ಲಿ, ಇದನ್ನು ಇರಿಸಿಕೊಳ್ಳಿ.

(ಕಲಮುಗಳು ೨೭–ಎ(೨), ೨೭–ಸಿ(ಎ) ೨೭–ಇ(೧) ಮತ್ತು ೨೭ಜೆ(ಎ))
ಮತದಾರರ ಮಂಡಲಿಯ ಸದಸ್ಯರ ಸಂಖ್ಯೆ.

| ರಾಜ್ಯದ ಹೆಸರು<br>೧ | | ಸದಸ್ಯರ ಹೆಸರು<br>೨ |
|---|---|---|
| ೧. | ಅಜ್ಮೀರ | ೩೦ |
| ೨. | ಭೋಪಾಲ | ೩೦ |
| ೩. | ಬಿಲಾಸ್‌ಪುರ ಮತ್ತು ಹಿಮಾಚಲಪ್ರದೇಶ | ೪೨ |
| ೪. | ಕಚ್ | ೩೦ |
| ೫. | ಮಣಿಪುರ | ೩೦ |
| ೬. | ತ್ರಿಪುರಾ | ೩೦ |
| ೭. | ವಿಂಧ್ಯಪ್ರದೇಶ | ೬೦ |

ಈ ದಿನ ಬೆಳಿಗ್ಗೆ ನಾನು ಮತ್ತು ಪಾರ್ಟ್ "ಸಿ" ರಾಜ್ಯಗಳ ಇತರ ಕೆಲವು ಸದಸ್ಯರುಗಳು ಡಾ. ಅಂಬೇಡ್ಕರ್ ಅವರ ಸಂಗಡ ಮಾತನಾಡಿದೆವು. ನಾವು ಅವರಿಗೆ ಸಲಹೆ ಮಾಡಿದುದೇನೆಂದರೆ ಮತದಾರರ ಮಂಡಲವು ಸಣ್ಣದಾಗಿದ್ದರೆ, ಕಷ್ಟಗಳು ಉದ್ಭವಿಸುತ್ತವೆ. ಅಲ್ಲದೆ ಅದು ಸಣ್ಣದಾಗಿದ್ದಷ್ಟೂ ಸ್ವಲ್ಪ ಭ್ರಷ್ಟಾಚಾರಕ್ಕೆ ಎಡೆಕೊಡುವ ಸಂಭವ ಇರುತ್ತದೆ. ಆದುದರಿಂದ ದೊಡ್ಡದಾದ ಮತದಾರರ ಮಂಡಲವು ಇರಲಿ ಎಂದು ಸಲಹೆ ಮಾಡಲಾಯಿತು. ಡಾ. ಅಂಬೇಡ್ಕರ್ ಅವರು ಈ ಸಲಹೆಯನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ತಿದ್ದುಪಡಿಯನ್ನು ನಾನು ಮತ್ತು ಇತರರು ಪ್ರಸ್ತಾವಿಸುತ್ತಿದ್ದೇವೆ. ಸ್ವಾಮಿ, ಮಂಡಿಸುತ್ತಿದ್ದೇನೆ.

**ಮಾನ್ಯ ಸಭಾಪತಿಗಳು:** ಮೇಲೆ ಕಾಣಿಸಿದಂತೆ ಶ್ರೀ ದ್ವಿವೇದಿ ಅವರ ತಿದ್ದುಪಡಿಯನ್ನು ಮಂಡಿಸಲಾಗಿದೆ

**ಡಾ. ಅಂಬೇಡ್ಕರ್:** ನಾನು ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

**ಮಾನ್ಯಸಭಾಪತಿಗಳು:** ನಿರ್ದಿಷ್ಟವಾಗಿ ಈ ಖಂಡಕ್ಕೆ ಬೇರೆ ಏನಾದರೂ ತಿದ್ದುಪಡಿಗಳು ಇವೆಯೆ?

**ಡಾ. ಅಂಬೇಡ್ಕರ್:** ಹೌದು, ಅವು ಔಪಚಾರಿಕವಾದವುಗಳು. ಹೊಸದಾಗಿ ಸಂಖ್ಯೆಗಳನ್ನು, ಅಕ್ಷರಗಳನ್ನು ಬರೆಯುವುದು.

**ಮಾನ್ಯಸಭಾಪತಿಗಳು:** ಅದನ್ನು ಆಮೇಲೆ ತೆಗೆದುಕೊಳ್ಳೋಣ. ಈ ತಿದ್ದುಪಡಿಗೆ ಒಪ್ಪಿಗೆ ಸಿಕ್ಕರೆ, ತಿದ್ದುಪಡಿಮಾಡಿದ ಖಂಡವನ್ನು ಸಭೆಯ ಮುಂದೆ ಇಡುತ್ತೇನೆ.

**ಶ್ರೀ ಕಾಮತ್:** ೧೯೫೦ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಮೊದಲನೆ ಅನುಸೂಚಿಯಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಪಾರ್ಟ್ "ಸಿ" ರಾಜ್ಯಗಳೊಂದಿಗೆ ಪಟ್ಟಿ ಮಾಡಲಾಗಿದೆ. ಈಗ ಅದರ ಪರಿಸ್ಥಿತಿ ಏನಿದೆಯೋ ಗೊತ್ತಾಗುತ್ತಿಲ್ಲ.

**ಮಾನ್ಯಸಭಾಪತಿಗಳು:** ಪ್ರಾರಂಭಿಕ ಭಾಷಣದಲ್ಲಿಯೇ ಅಲ್ಲಿ ಏನೂ ಇಲ್ಲವೆಂದು ವಿಶದೀಕರಿಸಲಾಗಿದೆ. ಅದೊಂದು ಶಿಕ್ಷೆಗೊಳಗಾದವರ ವಸಾಹತು, ಅಷ್ಟೆ. ನಾನೀಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ವಿಷಯವೇನೆಂದರೆ:

ಶ್ರೀ ದ್ವಿವೇದಿ ಅವರ ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

**ಮಾನ್ಯಸಭಾಪತಿಗಳು:** ವಿಷಯವೇನೆಂದರೆ:

ಖಂಡ ೧೧ರ ನಂತರ ಈ ಕೆಳಗಿನ ಹೊಸ ಖಂಡವನ್ನು ಸೇರಿಸಿ

೧೧–ಎ: ೧೯೫೦ರ ಅಧಿನಿಯಮ XLIIIಕ್ಕೆ ಹೊಸ ಐದನೇ ಅನುಸೂಚಿಯನ್ನು ಹೆಚ್ಚಿಗೆ ಸೇರಿಸಿ. ಅನುಸೂಚಿ ಮೇಲಿನಂತೆ ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

**ಮಾನ್ಯಸಭಾಪತಿಗಳು:** ೧೦–ಬಿ ಖಂಡವನ್ನು ಬಿಟ್ಟರೆ, ತೆಗೆದುಕೊಳ್ಳುವುದಕ್ಕೆ ಬೇರೆ ಇನ್ನು ಯಾವ ಖಂಡವೂ ಇಲ್ಲ.

**ಒಬ್ಬ ಮಾನ್ಯ ಸದಸ್ಯರು:** ಔಪಾಚಾರಿಕ ತಿದ್ದುಪಡಿಗಳು ಇವೆ.

**ಮಾನ್ಯಸಭಾಪತಿಗಳು:** ಹೊಸದಾಗಿ ಸಂಖ್ಯೆಗಳನ್ನು ಅಕ್ಷರಗಳನ್ನು ಬರೆಯುವ ತಿದ್ದುಪಡಿಗಳು. ಇಂಥ ತಿದ್ದುಪಡಿಗಳನ್ನು ಕೊನೆಯಲ್ಲಿ ತೆಗೆದುಕೊಳ್ಳಲಾಗುತ್ತದೆ.

**ಡಾ. ಅಂಬೇಡ್ಕರ್:** ೧೨ನೇ ಖಂಡವನ್ನು ಇನ್ನೂ ಸದನದ ಮುಂದೆ ಇಟ್ಟಿಲ್ಲ.

---

* P.D., ಸಂ. ೭, ಭಾಗ II, ೧೮ ಡಿಸೆಂಬರ್ ೧೯೫೦, ಪು. ೨೨೫೨–೫೫.

**ಮಾನ್ಯಸಭಾಪತಿಗಳು:** ಹೌದು, ೧೨ನೇ ಖಂಡ ಉಳಿದುಕೊಂಡಿದೆ.

೧೨ನೇ ಖಂಡವನ್ನು ಮಸೂದೆಗೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:** ಸ್ವಾಮಿ, ಹೊಸಖಂಡ ೨೭–ಜೆಯನ್ನು ಹೆಚ್ಚುವರಿಯಾಗಿ ಸೇರಿಸುವ ಕುರಿತಾಗಿ ಅನುಬಂಧದ ಪಟ್ಟಿ ನಂ.೭ರಲ್ಲಿ ನನ್ನ ೨ನೇ ತಿದ್ದುಪಡಿಯನ್ನು ಸದನದ ಮುಂದೆ ಇಟ್ಟಿದ್ದೀರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅದನ್ನು ಮಂಡಿಸಲಾಗಿದೆಯೆಂದು ತೆರೆದುಕೊಂಡಿದೆಯಾದರೂ, ಅದು ಇನ್ನೂ ಸದನದ ಮುಂದೆ ಇಟ್ಟು ಒಪ್ಪಿಗೆ ಪಡೆದುಕೊಂಡಿಲ್ಲ.

**ಮಾನ್ಯಸಭಾಪತಿಗಳು:** ಅದನ್ನು ಸದನದ ಮುಂದೆ ಇಡಬೇಕು. ಅದು ಖಂಡ ೧೦–ಬಿಯ ಭಾಗವಾಗಿರುತ್ತದೆ.

**ಡಾ. ಅಂಬೇಡ್ಕರ್:** ಹೌದು, ಅದು ಒಂದು ಪ್ರತ್ಯೇಕವಾದ ಪಟ್ಟಿಯಲ್ಲಿದೆ. ಹಾಗಾಗಿ ನನಗೆ ಸೋಜಿಗವಾಗಿದ್ದೇನೆಂದರೆ.........,

**ಮಾನ್ಯಸಭಾಪತಿಗಳು:** ಖಂಡ ೧೦–ಬಿ ಅನ್ನು ಮುಂದಕ್ಕೆ ಹಾಕಲಾಯಿತು. ಇತರ ತಿದ್ದುಪಡಿಗಳನ್ನು ವಿಲೇ ಮಾಡಿದ ಮೇಲೆ ಅದನ್ನು ಸಮಯಾನುಸಾರ ಸಭೆಯ ಮುಂದೆ ಇಡುತ್ತೇನೆ. ಆದರೆ, ನಾನು ಮರೆತು ಹೋಗುವ ಸಾಧ್ಯಯೂ ಇದೆ. ಹಾಗಾದಲ್ಲಿ ಮಾನ್ಯ ಸದಸ್ಯರು ಅದನ್ನು ನನ್ನ ಗಮನಕ್ಕೆ ತನ್ನಿ.

ಈಗ ನಾವು ಖಂಡ ೧೦–ಬಿಗೆ ಹೋಗೋಣವೆ?

**ಕೆಲವು ಮಾನ್ಯ ಸದಸ್ಯರುಗಳು:** ಅದನ್ನು ಮುಗಿಸಿಬಿಡೋಣ.

**ಮಾನ್ಯಸಭಾಪತಿಗಳು:** ನನಗೇ ಅದರ ಬಗ್ಗೆ ಕೊಂಚ ಹಿಂಜರಿಕೆ ಇದೆ. ತಿದ್ದುಪಡಿಯು ಔಪಚಾರಿಕವಾದುದಾದರೂ, ಅದೊಂದು ಬಹಳ ದೀರ್ಘವಾದ ತಿದ್ದುಪಡಿ. ಮಾನ್ಯ ಸದಸ್ಯರುಗಳಿಗೆ ಅದನ್ನು ನೋಡುವ ಮತ್ತು ಅಭ್ಯಸಿಸುವ ಅವಕಾಶ ಸಿಗಲೇಬೇಕು. ಆದ್ದರಿಂದ ಈಗ ನಾವು ಮುಂದಕ್ಕೆ ಹಾಕಿ ನಾಳೆಯ ಅಪರಾಹ್ನ ಎರಡು ಘಂಟೆಗೆ ತೆಗೆದುಕೊಳ್ಳೋಣ. ಇದನ್ನು ನಾವು ಹೆಚ್ಚು ಹೊತ್ತು ಚರ್ಚಿಸಿದಷ್ಟೂ, ಇನ್ನೊಂದು ಮಸೂದೆಗೆ ಕಡಿಮೆ ಸಮಯ ಸಿಗುತ್ತದೆ. ಕಾರಣ, ಆ ಮಸೂದೆಗೆ ಸಾಯಂಕಾಲ ೬ ಘಂಟೆಗೆ ಗಿಲೋಟಿನ್‌ಪ್ರಯೋಗಿಸುತ್ತೇವೆ. (ಗಿಲೋಟಿನ್ ಅಂದರೆ ಶಾಸನಸಭೆಗಳಲ್ಲಿ ಯಾವುದೇ ಮಸೂದೆಯ ಭಾಗಗಳ ಮೇಲಾಗಲೀ, ಇತರ ವಿಷಯಗಳ ಮೇಲಾಗಲೀ ಚರ್ಚೆಯಿಂದ ಕಾಲವಿಳಂಬವಾಗದಂತೆ ಕತ್ತರಿ ಹಾಕುವ ವಿಧಾನ). ನಾವು ನಾಳಿದ್ದು ಸಭೆ ಸೇರುತ್ತಿಲ್ಲ.

ಆನಂತರ ಸದನವು ೨೨ ಡಿಸೆಂಬರ್ ೧೯೫೦, ಶುಕ್ರವಾರ ೨ ಘಂಟೆಯ ತನಕ ಮುಂದೂಡಲ್ಪಟ್ಟಿತು.

ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ

(ಮುಂದುವರೆದುದು)

**ಹೊಸ ಖಂಡಗಳು ೧೦–ಎ ಮತ್ತು ೧೦–ಬಿ**

***ಮಾನ್ಯಸಭಾಪತಿಗಳು:** ನಾವೀಗ ಪ್ರಜಾಪ್ರಾತಿನಿಧ್ಯ ಅಧಿನಿಯಮದ ತಿದ್ದುಪಡಿ ಮಸೂದೆಯ ಮುಂದುವರೆದ ಪರಿಗಣನೆಯನ್ನು ತೆಗೆದುಕೊಳ್ಳೋಣ. ನಾವು ನಿನ್ನೆಯ ದಿವಸ ಖಂಡಗಳು ೧೦–ಎ ಮತ್ತು ೧೦–ಬಿಯನ್ನೂ ಮತ್ತು ಮಾನ್ಯ ಸದಸ್ಯರುಗಳು ಮಂಡಿಸಿದ ಕೆಲವು ತಿದ್ದುಪಡಿಗಳನ್ನು ಚರ್ಚಿಸುತ್ತಿದ್ದೆವು.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಸ್ವಾಮಿ, ನನ್ನ ಹೆಸರಿನಲ್ಲಿ ನಿಂತಿರುವ ತಿದ್ದುಪಡಿಯೊಂದಕ್ಕೆ ತಮ್ಮ ಗಮನವನ್ನು ಸೆಳೆದೆ. ಅದು ಅನುಬಂಧ ಪಟ್ಟಿ ನಂ.೭ರಲ್ಲಿನ ೨ನೇ ತಿದ್ದುಪಡಿ. ಈ ಹಂತದಲ್ಲಿ ನಾನು ಅದನ್ನು ಮಂಡಿಸಬಯಸುತ್ತೇನೆ. ಮೊದಲನೆಯ ತಿದ್ದುಪಡಿಯನ್ನು ನನ್ನ ಸ್ನೇಹಿತ ಮಿ. ಗುಪ್ತ ಅವರು ಮಂಡಿಸಿದರು. ಎರಡನೆಯ ತಿದ್ದುಪಡಿ ವಿಲೇ ಆಗದೆ ಉಳಿದುಕೊಂಡಿದೆ. ನಾನು ಅದನ್ನು ಮಂಡಿಸಬಹುದೆ?

**ಮಾನ್ಯಸಭಾಪತಿಗಳು:** ಆಗಲಿ. ಇನ್ನೊಂದು ತಿದ್ದುಪಡಿಯನ್ನು ಸಹ ಮಂಡಿಸುತ್ತಾರೆಯೆ?

**ಡಾ. ಅಂಬೇಡ್ಕರ್:** ಇದೊಂದು ಸ್ವತಂತ್ರವಾದ ತಿದ್ದುಪಡಿ–ಖಂಡವೊಂದನ್ನು ಸೇರ್ಪಡೆ ಮಾಡುವುದು. ನನ್ನ ಇನ್ನೊಂದು ತಿದ್ದುಪಡಿ ಮಿ. ಗುಪ್ತ ಅವರ ತಿದ್ದುಪಡಿಯನ್ನು ಒಳಗೊಂಡಿದೆ.

**ಸಾರಿಗೆ ಮತ್ತು ರೈಲ್ವೆಗಳ ರಾಜ್ಯಸಚಿವರು (ಶ್ರೀ ಸಂತಾನಮ್):** ಎಲ್ಲಾ ತಿದ್ದುಪಡಿಗಳನ್ನು ಸದನದ ಮುಂದೆ ಇಡಲಾಗಿದೆಯೆಂದು ನನಗೆ ಅನಿಸುತ್ತದೆ. ಇದನ್ನು ಅಳವಡಿಸಿಕೊಳ್ಳಬೇಕಾಗಿದೆಯಷ್ಟೆ.

**ಮಾನ್ಯಸಭಾಪತಿಗಳು:** ಆನಂತರ ಬಂದವುಗಳನ್ನು ನಾನು ಸದನದ ಮುಂದೆ ಇಟ್ಟಿಲ್ಲ.

**ಡಾ. ಅಂಬೇಡ್ಕರ್:** ನಾನೀಗ ತಿದ್ದುಪಡಿಯನ್ನು ಔಪಚಾರಿಕವಾಗಿ ಮಂಡಿಸುವುದಕ್ಕೆ ಅನುಮತಿ ಬೇಡುತ್ತೇನೆ.

> ನಾನು ಪ್ರಸ್ತಾವಿಸಿದ ತಿದ್ದುಪಡಿಯಲ್ಲಿರುವ ಪ್ರಸ್ತಾವಿತ ಹೊಸಖಂಡ ೧೦–ಬಿಯಲ್ಲಿ, ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಹೊಸ ಕಲಮು ೨೭–ಐ. ನಂತರ ಈ ಕೆಳಗಿನ ಹೊಸ ಕಲಮು ೨೭–ಜೆ ಅನ್ನು ಸೇರಿಸಿ ಹಾಗೂ ಮುಂದಿನ ಕಲಮನ್ನು ೨೭–ಕೆ ಎಂದು ಹೊಸದಾಗಿ ನಂಬರು ಮಾಡಿ.
>
> **"೨೭–ಜೆ: ಖಾಲಿಸ್ಥಾನಗಳಿದ್ದರೂ ಸಹ, ಚುನಾವಣೆ ಮಾಡುವುದಕ್ಕೆ ಮತದಾರರ ಮಂಡಳಿಗಳಿಗೆ ಅಥವ ಕೊಡಗು ಶಾಸಕಾಂಗ ಪರಿಷತ್ತಿಗೆ ಇರುವ ಅಧಿಕಾರ:** ಒಂದು ಮತದಾರರ ಮಂಡಲಗಳ ಸದಸ್ಯರುಗಳೇ ಆಗಲೀ, ಅಥವ–ಈ ಅಧಿನಿಯಮದ ಕೆಳಗೆ ಬರುವ ಕೊಡಗು ಶಾಸಕಾಂಗ ಪರಿಷತ್ತಿನ ಚುನಾಯಿತ ಸದಸ್ಯರುಗಳೇ ಆಗಲೀ, ಇಂಥ ಮಂಡಲ ಅಥವ ಪರಿಷತ್ತಿನ (ಸಂದರ್ಭಾನುಸಾರವಾಗಿ) ಸದಸ್ಯತ್ವದಲ್ಲಿ ಯಾವುದೇ ಖಾಲಿಸ್ಥಾನ ಇತ್ತು ಎಂಬ ಕಾರಣ ಮಾತ್ರಕ್ಕೆ ಅವರು ಮಾಡಿದ ಚುನಾವಣೆಯನ್ನು ಪ್ರಶ್ನಿಸಲಾರದು.

ಯಾವುದೇ ಕಷ್ಟ ಅಥವ ಅನುಮಾನವನ್ನು ಪರಿಹಾರ ಮಾಡುವುದಕ್ಕಾಗಿ ಈ ತಿದ್ದುಪಡಿಯನ್ನು ತರಲಾಗಿದೆ.

---

* P.D., ಸಂ. ೭, ಭಾಗ II, ೧೨ ಡಿಸೆಂಬರ್ ೧೯೫೦, ಪು. ೨೨೫೨–೫೫.

**ಮಾನ್ಯಸಭಾಪತಿಗಳು:** ತಿದ್ದುಪಡಿಯನ್ನು ಮಂಡಿಸಲಾಗಿದೆ (ಮೇಲಿನಂತೆ) ಇನ್ನೂ ಇತರ ತಿದ್ದುಪಡಿಗಳೂ ಸಹ ಇವೆ.

**ಡಾ. ಅಂಬೇಡ್ಕರ್:** ಹೌದು. ಅನುಬಂಧದ ಪಟ್ಟಿ ನಂ. ೮ರಲ್ಲಿ ಇದೆ. ಇದನ್ನು ವಿಲೇ ಮಾಡಿದರೆ, ಇತರ ತಿದ್ದುಪಡಿಗಳನ್ನು ಮಂಡಿಸಬಹುದು ಎಂದುಕೊಂಡಿದ್ದೆ.

**ಮಾನ್ಯಸಭಾಪತಿಗಳು:** ಇದೊಂದು ಸರ್ವಸಮ್ಮತವಾದ ತಿದ್ದುಪಡಿಯೆಂದು ಭಾವಿಸಿದ್ದೇನೆ; ಇದನ್ನು ಸದನದ ಮುಂದೆ ಇಡಲೆ.

**ಸಾರಿಗೆ ಮತ್ತು ರೇಲ್ವೆಗಳ ಸಚಿವರು (ಶ್ರೀ ಗೋಪಾಲಸ್ವಾಮಿ):** ಒಂದು ಅಂಶದ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ನೀವು ದೆಹಲಿಯನ್ನು ಕುರಿತು ಪ್ರಸ್ತಾವಿಸಿದ ಮತದಾರರ ಮಂಡಲದ ರೀತಿಯನ್ನು ಒಪ್ಪಿಕೊಳ್ಳುತ್ತಿದ್ದೀರಾದರೆ, ಆ ತಿದ್ದುಪಡಿಗೆ ಕೆಲವು ಮಾರ್ಪಾಡುಗಳ ಆವಶ್ಯಕತೆ ಇರುವುದಿಲ್ಲವೆ?

**ಡಾ. ಅಂಬೇಡ್ಕರ್:** ಅದನ್ನೂ ಕೂಡ ಮತದಾರರ ಮಂಡಲವೆಂದು ವಿವರಿಸಲಾಗಿದೆ.

**ಶ್ರೀ ಗೋಪಾಲಸ್ವಾಮಿ:** ಹೌದೇನು?

**ಡಾ. ಅಂಬೇಡ್ಕರ್:** ಹೌದು.

**ಮಾನ್ಯಸಭಾಪತಿಗಳು:** ಪ್ರಶ್ನೆಯೇನೆಂದರೆ:

ಡಾ. ಅಂಬೇಡ್ಕರ್ ಅವರು ತಿದ್ದುಪಡಿಯಲ್ಲಿರುವ ಹೊಸ ಖಂಡ ೧೦–ಬಿಯಲ್ಲಿ, ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಹೊಸ ಪ್ರಸ್ತಾವಿತ ಹೊಸ ಕಲಮು ೨೭–ಐ ನಂತರ, ಈ ಕೆಳಗಿನ ಹೊಸ ಕಲಮು ೨೭–ಜೆ ಅನ್ನು ಸೇರಿಸಿ ಹಾಗೂ ಮುಂದಿನ ಕಲಮನ್ನು ೨೭–ಕೆ ಎಂದು ಹೊಸದಾಗಿ ನಂಬರು ಮಾಡಿ:

**೨೭–ಜೆ: ಖಾಲಿಸ್ಥಾನಗಳಿದ್ದರೂ ಸಹ, ಚುನಾವಣೆ ಮಾಡುವುದಕ್ಕೆ ಮತದಾರರ ಮಂಡಳಿಗಳಿಗೆ ಅಥವ ಕೊಡಗು ಶಾಸಕಾಂಗ ಪರಿಷತ್ತಿಗೆ ಇರುವ ಅಧಿಕಾರ:**

> "ಒಂದು ಮತದಾರರ ಮಂಡಲಗಳ ಸದಸ್ಯರುಗಳೇ ಆಗಲೀ ಅಥವ ಈ ಅಧಿನಿಯಮದ ಕೆಳಗೆ ಬರುವ ಕೊಡಗು ಶಾಸಕಾಂಗ ಪರಿಷತ್ತಿನ ಚುನಾಯಿತ ಸದಸ್ಯರುಗಳೇ ಆಗಲೀ, ಇಂಥ ಮಂಡಲ ಅಥವಾ ಪರಿಷತ್ತಿನ (ಸಂದರ್ಭಾನುಸಾರವಾಗಿ) ಸದಸ್ಯತ್ವದಲ್ಲಿ ಯಾವುದೇ ಖಾಲಿಸ್ಥಾನ ಇತ್ತು ಎಂಬ ಕಾರಣ ಮಾತ್ರಕ್ಕೆ, ಅವರು ಮಾಡಿದ ಚುನಾವಣೆಯನ್ನು ಪ್ರಶ್ನಿಸಲಾರದು."

ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

**ಮಾನ್ಯಸಭಾಪತಿಗಳು:** ಹೊಸ ಕಲಮುಗಳು ೨೭–ಎ ಯಿಂದ ೨೭–ಜೆ ವರೆಗೆ ಸೇರಿಸುವ ತಿದ್ದುಪಡಿಗಳನ್ನು ಈಗಾಗಲೇ ಮಂಡಿಸಲಾಗಿದೆ ಎಂದುಕೊಂಡಿದ್ದೇನೆ. ಈಗ ನಾನು ಹೆಚ್ಚುವರಿ ಪಟ್ಟಿ ನಂ. ೮ರಲ್ಲಿ ಇರುವ ತಿದ್ದುಪಡಿಗಳನ್ನು ತೆಗೆದುಕೊಳ್ಳುತ್ತೇನೆ.

**ಡಾ. ಅಂಬೇಡ್ಕರ್:** ಅವುಗಳನ್ನು ನಾನು ಅನುಕ್ರಮವಾಗಿ ಮಂಡಿಸಿದರೆ ಉತ್ತಮ ಎಂದು ನನಗೆ ಅನಿಸುತ್ತದೆ.

**ಮಾನ್ಯಸಭಾಪತಿಗಳು:** ಹೆಚ್ಚುವರಿ ಪಟ್ಟಿ ನಂ. ೮ರಲ್ಲಿ ಇರುವ ತಿದ್ದುಪಡಿಗಳನ್ನು, ಅವು ಆ ತಿದ್ದುಪಡಿಗೆ ತಿದ್ದುಪಡಿಗಳಾಗಿರುವುದರಿಂದ, ಮಂಡಿಸಬೇಕಾಗಿದೆ. ಎಲ್ಲಾ ತಿದ್ದುಪಡಿಗಳನ್ನು ಒಮ್ಮೆಗೇ ಸದನದ ಮುಂದೆ ಇಟ್ಟು, ಆಮೇಲೆ ಚರ್ಚೆ ಮತ್ತು ವೋಟಿಗಾಗಿ ಇಡೀ ಖಂಡವನ್ನು ಒಮ್ಮೆಗೇ

ತೆಗೆದುಕೊಳ್ಳುವುದರ ಬದಲು, ಒಂದೊಂದಾಗಿ ಮುಂದುವರೆಯುವುದು ಎಂಬುದು ನನ್ನ ಮನೋಗತ.

**ಡಾ. ಅಂಬೇಡ್ಕರ್:** ನಾನು ಮಂಡನೆ ಮಾಡುವುದಕ್ಕೆ ಬೇಡುವುದೇನೆಂದರೆ:

(i) ನಾನು ಪ್ರಸ್ತಾವಿಸಿದ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸ ಖಂಡ ೧೦–ಬಿಯಲ್ಲಿ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಹೊಸ ಕಲಮು ೨೭–ಎನ ಉಪಕಲಮು (೩)ರಲ್ಲಿ, ೨ನೇ ಸಾಲಿನಲ್ಲಿ ಬರುವ "ಯಾವುದೇ ರಾಜ್ಯ ಅಥವ ರಾಜ್ಯಗಳ ಗುಂಪು" ಎಂಬ ಪದಗಳಿಗೆ ಬದಲಾಗಿ, "ಹಾಗೆ ನಿರ್ದಿಷ್ಟಪಡಿಸಿದ" ಎಂಬ ಪದಗಳನ್ನು ಸೇರಿಸಿ.

(ii) ನಾನು ಪ್ರಸ್ತಾವಿಸಿದ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸ ಖಂಡ ೧೦–ಬಿಯಲ್ಲಿ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಹೊಸ ಕಲಮು ೨೭–ಎನ, ಉಪಕಲಮು (೪)ರಲ್ಲಿ, "ಮತದಾರರ ಮಂಡಲಿ" ಎಂಬ ಪದಗಳಾದ ಮೇಲೆ ಉಪಕಲಮು (೨)ರಲ್ಲಿ ಉಲ್ಲೇಖಿಸಿದ "ಯಾವುದೇ ಇಂಥ ರಾಜ್ಯ ಅಥವ ರಾಜ್ಯಗಳ ಗುಂಪು" ಎಂಬ ಪದಗಳು, ಬ್ರಾಕೆಟ್ಟುಗಳು ಮತ್ತು ಸಂಖ್ಯೆಯನ್ನು ಸೇರಿಸಿ.

(iii) ನಾನು ಪ್ರಸ್ತಾವಿಸಿದ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸ ಖಂಡ ೧೦–ಬಿಯಲ್ಲಿ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಹೊಸ ಕಲಮು ೨೭–ಎಯ, ಉಪಕಲಮು (೩)ರಲ್ಲಿ, ೨ನೇ ಸಾಲಿನಲ್ಲಿ ಬರುವ "ಯಾವುದೇ ರಾಜ್ಯ ಅಥವ ರಾಜ್ಯಗಳ ಗುಂಪು" ಎಂಬ ಪದಗಳಿಗೆ ಬದಲಾಗಿ "ಹಾಗೆ ನಿರ್ದಿಷ್ಟ ಪಡಿಸಿದ" ಎಂಬ ಪದಗಳನ್ನು ಸೇರಿಸಿ, (ii) ನಾನು ಪ್ರಸ್ತಾವಿಸಿದ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸಖಂಡ ೧೦–ಬಿಯಲ್ಲಿ ಪ್ರಜಾಪ್ರಾತಿನಿಧ್ಯ ಅಧಿನಿಯಮ ೧೯೫೦ರ, ಪ್ರಸ್ತಾವಿತ ಹೊಸ ಕಲಮು ೨೭–ಐನ, ಉಪಕಲಮು (೪)ರಲ್ಲಿ "ಮತದಾರರ ಮಂಡಲಿ" ಎಂಬ ಪದಗಳಾದ ಮೇಲೆ "ಉಪಕಲಮು (೨)ರಲ್ಲಿ ಉಲ್ಲೇಖಿಸಿದ "ಯಾವುದೇ ಇಂಥ ರಾಜ್ಯ ಅಥವಾ ರಾಜ್ಯಗಳ ಗುಂಪು" ಎಂಬ ಪದಗಳು ಬ್ರಾಕೆಟ್ಟುಗಳು ಮತ್ತು ಸಂಖ್ಯೆಯನ್ನು ಸೇರಿಸಿ. (iii) ನಾನು ಪ್ರಸ್ತಾವಿಸಿದ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸ ಖಂಡ ೧೦–ಬಿಯಲ್ಲಿ, ಪ್ರಜಾಪ್ರಾತಿನಿಧ್ಯ ಅಧಿನಿಯಮ ೧೯೫೦ರ, ಹೊಸಕಲಮು ೨೭–ಎಯ ಉಪಕಲಮು (೪)ರ ನಂತರ–ಈ ಕೆಳಗಿನ ಹೊಸ ಉಪಕಲಮನ್ನು ಸೇರಿಸಿ:

(೫) ದೆಹಲಿ ರಾಜ್ಯದ ಮತದಾರರ ಮಂಡಲದಲ್ಲಿ, ಈ ಕೆಳಗಿನವುಗಳು ಒಳಗೊಂಡಿರುತ್ತವೆ.

(ಎ) ಆ ರಾಜ್ಯವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರುಗಳು.

(ಬಿ) ದೆಹಲಿಯ ಮುಖ್ಯ ಆಯುಕ್ತರ ಸಲಹಾ ಸಮಿತಿಯ ಅಧಿಕಾರೇತರ ಸದಸ್ಯರು.

ಮತ್ತು

(ಸಿ) ಆ ರಾಜ್ಯದೊಳಗಿನ, ಪ್ರತಿಯೊಂದು ದಂಡು ಪ್ರದೇಶದ ಮಂಡಲಿಯ, ಜಿಲ್ಲಾ ಮಂಡಲಿಯ, ಪೌರ ಸಮಿತಿಯ ಹಾಗೂ

ಅಧಿಸೂಚಿತ ಪ್ರದೇಶದ ಅಧಿಕಾರೇತರ ಸದಸ್ಯರು.

(iv) ನಾನು ಪ್ರಸ್ತಾವಿಸಿದ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸ ಖಂಡ ೧೦–ಬಿ ಯಲ್ಲಿ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಹೊಸ ಕಲಮು ೨೭–ಬಿನಲ್ಲಿ, "ಯಾವುದೇ ರಾಜ್ಯ ಅಥವ ರಾಜ್ಯಗಳ ಗುಂಪು" ಎಂಬ ಪದಗಳ ನಂತರ "ಐದನೇ ಅನುಸೂಚಿಯ ಮೊದಲನೇ ಅಂಕಣದಲ್ಲಿ ನಮೂದಿಸಿದ" ಎಂಬ ಪದಗಳನ್ನು ಜೋಡಿಸಿ.

(v) ನಾನು ಪ್ರಸ್ತಾವಿಸಿದ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸ ಖಂಡ ೧೦–ಬಿ ಯಲ್ಲಿ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಹೊಸ ಕಲಮು ೨೭–ಎಫ್‌ನ, ಉಪಕಲಮು (೧)ರಲ್ಲಿ, "ಯಾವುದೇ ರಾಜ್ಯ ಅಥವ ರಾಜ್ಯಗಳ ಗುಂಪು" ಎಂಬ ಪದಗಳಾದ ಮೇಲೆ "ಐದನೇ ಅನುಸೂಚಿಯ ಮೊದಲನೇ ಅಂಕಣದಲ್ಲಿ ನಮೂದಿಸಿದ" ಎಂಬ ಪದಗಳನ್ನು ಜೋಡಿಸಿ.

(vi) ಮಸೂದೆಯಲ್ಲಿನ ಖಂಡಗಳಿಗೆ, ಹಾಗೂ ಅದರಲ್ಲಿ ಹೊಸದಾಗಿ ಜೋಡಿಸಿದ ಕಲಮುಗಳಿಗೆ ಸಂಖ್ಯೆಗಳನ್ನು ಮತ್ತು ಅಕ್ಷರಗಳನ್ನು ಸೇರಿಸಲು ಮಾಡಬೇಕಾದ ಆವಶ್ಯಕ ತಿದ್ದುಪಡಿಗಳನ್ನು ಮತ್ತು ಅದರೊಟ್ಟಿಗೆ ಆ ಸಂಬಂಧ ಮಾಡಬೇಕಾದ ಎದುರು ಉಲ್ಲೇಖಗಳ ತಿದ್ದುಪಡಿ–ಇವುಗಳನ್ನು ಅಳವಡಿಸಬೇಕು.

***ಮಾನ್ಯಸಭಾಪತಿಗಳು:** (ಮೇಲಿನಂತೆ) ತಿದ್ದುಪಡಿಯನ್ನು ಮಂಡಿಸಲಾಯಿತು.

ಡಾ. ಅಂಬೇಡ್ಕರ್ ಅವರ ತಿದ್ದುಪಡಿಯಲ್ಲಿ, ಪ್ರಸ್ತಾವಿತ ಹೊಸ ಖಂಡ ೧೦–ಬಿಯಲ್ಲಿ, ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಹೊಸ ಕಲಮು ೨೭–ಜೆಯ ಖಂಡ (ಬಿ)ಯಲ್ಲಿ

(i) ಮೊದಲನೆ ಸಾಲಿನಲ್ಲಿ ಬರುವ "ಹಾಗೆ ರಚಿಸಿದ" ಎಂಬ ಪದಗಳ ನಂತರ, "ಜಂಟಿಯಾಗಿ ಅಥವ" ಎಂಬ ಪದಗಳನ್ನು ಜೋಡಿಸಿ,

(ii) ಮೂರನೇ ಸಾಲಿನಲ್ಲಿ ಬರುವ "ತದನಂತರ" ಎಂಬ ಪದಗಳ ನಂತರ, "ಇಂಥ ನಿಕಾಯ ಹೊಂದಿದೆ, ಅಥವ" ಎಂಬ ಪದಗಳನ್ನು ಜೋಡಿಸಿ

ಮತ್ತು

ಆರನೇ ಸಾಲಿನಲ್ಲಿ ಬರುವ

(iii) ಆರನೆಯ ಸಾಲಿನಲ್ಲಿ ಬಂದಿರುವ " ಬಳಿಕ "ಅಂಥ ನಿಕಾಯ ಅಥವಾ" ಎಂಬ ಮಾತುಗಳನ್ನು ಸೇರಿಸಿಕೊಳ್ಳಿ.

ಮಾನ್ಯ ಕಾನೂನು ಸಚಿವರು ಈ ವಿಷಯವನ್ನು ಕುರಿತಾಗಿ ವಿಷದೀಕರಿಸಬೇಕೆಂದು ಅಪೇಕ್ಷಿಸುತ್ತೇನೆ.

**ಡಾ. ಅಂಬೇಡ್ಕರ್:** ಈ ತಿದ್ದುಪಡಿಗೆ ಎರಡು ಆಕ್ಷೇಪಣೆಗಳು ಇವೆ. ಮೊದಲನೆಯದು ಸಂವಿಧಾನಾತ್ಮಕವಾದ ಆಕ್ಷೇಪಣೆ. ಇದು ಸಂವಿಧಾನದ ಅನುಚ್ಛೇದ ೨೪೦ರಲ್ಲಿ ಒಳಗೊಂಡಿರುವ ಉಪಬಂಧಗಳಿಂದ ಉದ್ಭವಿಸುತ್ತದೆ. ಡಾ. ಪರಮಾರ್ ಅವರ ತಿದ್ದುಪಡಿಯಿಂದ ಸ್ಪಷ್ಟವಾಗಿ

---

* P.D., ಸಂ. ೭, ಭಾಗ II, ೧೨ ಡಿಸೆಂಬರ್ ೧೯೫೦, ಪು. ೨೨೫೨–೫೫.

ಗೋಚರಿಸುವುದೇನೆಂದರೆ, ಅವರು ಎರಡೂ ಪ್ರದೇಶಗಳಿಗೆ, ಅಂದರೆ ಹಿಮಾಚಲ ಪ್ರದೇಶ ಮತ್ತು ಬಿಲಾಸ್‌ಪುರಗಳಿಗೆ, ಒಂದೇ ಶಾಸನಸಭೆಯನ್ನು ರಚಿಸುವುದಕ್ಕೆ ಸಾಧ್ಯವೆಂದು ಅವರು ಮುಂಭಾವಿಸಿಕೊಂಡಿದ್ದಾರೆ ಎಂದು ನನಗೆ ಅನಿಸುತ್ತದೆ. ಇಂಥದನ್ನು ಮಾಡಲಿಕ್ಕೆ ಪಾರ್ಲಿಮೆಂಟಿಗೆ ಸಾಧ್ಯವಾಗುವುದಿಲ್ಲ. ಕಾರಣವೆಂದರೆ ಅನುಚ್ಛೇದ ೨೪೦ ಹೀಗೆ ಹೇಳುತ್ತದೆ:

> "ಮೊದಲನೆ ಅನುಸೂಚಿಯಲ್ಲಿ ನಮೂದಿಸಿರುವ ಯಾವುದೇ ಪಾರ್ಟ್ "ಸಿ"
> ರಾಜ್ಯಕ್ಕೆ, ಪಾರ್ಲಿಮೆಂಟ್ ಅಥವಾ ಮುಂದುವರಿಸಬಹುದು......"

ಇದರ ಅರ್ಥವೆಂದರೆ, ಪಾರ್ಟ್ "ಸಿ"ನಲ್ಲಿ ಕಾಣಿಸಿರುವ ಯಾವುದೇ ರಾಜ್ಯಗಳಿಗೆ ಪಾರ್ಲಿಮೆಂಟ್ ವಿಧಾಯೀ ನಿಕಾಯಗಳನ್ನು ರಚಿಸಬಯಸುವುದಾದರೆ, ಅದು ಪ್ರತಿ ಪಾರ್ಟ್ "ಸಿ" ರಾಜ್ಯಕ್ಕೂ ಪ್ರತ್ಯೇಕವಾದ ವಿಧಾಯೀ ನಿಕಾಯವನ್ನು ರಚಿಸಲೇಬೇಕು. ಜಂಟೀ ಶಾಸನ ಸಭೆಯನ್ನು ರಚಿಸಲು ಅನುಚ್ಛೇದ ೨೪೦ರ ಪ್ರಕಾರ ಯಾವ ಅಧಿಕಾರವೂ ಇಲ್ಲ. ಆ ಕಾರಣದಿಂದ ಈ ತಿದ್ದುಪಡಿಯು ಕ್ರಮಬದ್ಧವಾಗಿಲ್ಲ. ನನ್ನ ಎರಡನೆಯ ನಿವೇದನೆ ಇದು. ಬಿಲಾಸ್‌ಪುರವನ್ನು ಹಿಮಾಚಲಪ್ರದೇಶದಲ್ಲಿ ವಿಲೀನಗೊಳಿಸುವುದು ಸಾಧ್ಯವಾಗಬಹುದೆಂದೂ, ಹಾಗಾದಲ್ಲಿ ಅದು ಒಂದೇ ರಾಜ್ಯವಾಗುತ್ತದೆಂದೂ ನನ್ನ ಮಾನ್ಯ ಸ್ನೇಹಿತರು ಸಲಹೆ ಮಾಡಿದ್ದಾರೆಂದು ನನ್ನ ನಂಬಿಕೆ. ಆ ಸಾಧ್ಯತೆಯನ್ನು ನಿರಾಕರಿಸುತ್ತಿಲ್ಲ. ಆದರೆ ಅದರ ಪರಿಣಾಮವೇನೆಂದರೆ ನಾವು ಈ ಮಸೂದೆಯನ್ನೇ ತಿದ್ದುಪಡಿ ಮಾಡಿ ಬಿಲಾಸ್‌ಪುರವನ್ನು ಒಂದು ವಿಲೀನಗೊಂಡ ರಾಜ್ಯವನ್ನಾಗಿ ಮಾಡಬೇಕು. ಇದು ಒಂದು ತೀರಾ ಭಿನ್ನವಾದ ನಿಲುವಾಗಿದ್ದು, ಪಾರ್ಲಿಮೆಂಟಿನ ಮುಂದೆ ಇಟ್ಟಿರುವ ಮಸೂದೆಯ ಚೌಕಟ್ಟಿನಲ್ಲಿ ಬರುವುದಿಲ್ಲ.

ಆದ್ದರಿಂದ, ನಾನು ಹೇಳಿರುವ ಆಕ್ಷೇಪಣೆಗಳನ್ನು ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ನನ್ನ ನಿವೇದನೆ.

**ಶ್ರೀ ಜೆ.ಎನ್. ಹಜ಼ಾರಿಕ(ಅಸ್ಸಾಂ):** ಈಗ '೨೭ಕೆ' ಎಂಬುದಾಗಿ ಮರು ಸಂಖ್ಯೀಕೃತವಾಗಿರುವ '೨೭ಜೆ' ಪ್ರಕರಣ ಸಂಪೂರ್ಣವಾಗಿ ಅನಗತ್ಯವಾಗಿದೆ. ಏಕೆಂದರೆ ಈ ಖಂಡ......ಸೃಷ್ಟಿಸುವ ಸಂಭವ ಇದೆ.

**ಮಾನ್ಯಸಭಾಪತಿಗಳು:** ಮಾನ್ಯ ಸದಸ್ಯರು ಉಲ್ಲೇಖ–ಮಾಡುತ್ತಿರುವುದಾದರೂ ಯಾವ ಖಂಡವನ್ನು?

**ಶ್ರೀ ಜೆ.ಎನ್. ಹಜ಼ಾರಿಕ(ಅಸ್ಸಾಂ):** ಕಲಮು ೨೭–ಜೆ, ಅದು ಪಾರ್ಟ್ "ಸಿ" ರಾಜ್ಯಗಳಲ್ಲಿರುವ ಜನಗಳ ಮನಸ್ಸಿನಲ್ಲಿ ಏನೋ ಭ್ರಮೆಯನ್ನು ಹುಟ್ಟಿಸುವ ಸಂಭವ ಇದೆ.

**ಮಾನ್ಯಸಭಾಪತಿಗಳು:** ಕಲಮು ೨೭–ಜೆಯನ್ನು ಈಗ ತಾನೆ ಬದಲಾಯಿಸಲಾಗಿದೆ. ಈ ತಿದ್ದುಪಡಿಯನ್ನು ಈ ಸದನ ಅನುಮೋದಿಸಿದೆ. ಈ ಸದನ ಈಗಷ್ಟೇ ಅಳವಡಿಸಿಕೊಂಡ ಹೊಸ ಕಲಮು ೨೭–ಜೆಯನ್ನು ಉಲ್ಲೇಖ ಮಾಡುತ್ತಿದ್ದೀರೇನು?

**ಶ್ರೀ ಜೆ.ಎನ್. ಹಜ಼ಾರಿಕ(ಅಸ್ಸಾಂ):** ಈಗ ಅದು ೨೭–ಕೆ ಆಗಿದೆ.

**ಡಾ. ಅಂಬೇಡ್ಕರ್:** ನನ್ನ ತಿದ್ದುಪಡಿಯ ನಂತರ ಕಲಮು ೨೭–ಜೆ, ೨೭–ಕೆ ಆಗುತ್ತದೆ.

***ಮಾನ್ಯಸಭಾಪತಿಗಳು:** ನಾವೀಗ ಡಾ. ಅಂಬೇಡ್ಕರ್ ಅವರ ಅವರದೇ ಆದ ತಿದ್ದುಪಡಿಗೆ ಮೊದಲನೆ ತಿದ್ದುಪಡಿಗೆ ಬರುತ್ತಿದ್ದೇವೆ. ಅದನ್ನು ವಿಲೇ ಮಾಡಿದ ಮೇಲೆ ಮುಖ್ಯ ತಿದ್ದುಪಡಿಗೆ ಬರೋಣ.

---

* P.D., ಸಂ. ೭, ಭಾಗ II, ೨೨ ಡಿಸೆಂಬರ್ ೧೯೫೦, ಪು. ೨೨೬೩–೬೪.

ತಮ್ಮದೇ ಆದ ತಿದ್ದುಪಡಿಗೆ ಡಾ. ಅಂಬೇಡ್ಕರ್ ಅವರು ಮಂಡಿಸಿದ ಮೊದಲನೆ ತಿದ್ದುಪಡಿ ಹೆಚ್ಚುವರಿ ಪಟ್ಟಿ ನಂ. ೮ರಲ್ಲಿ ಇದೆ.

**ಡಾ. ಅಂಬೇಡ್ಕರ್:** ಅದೆಂದರೆ "ಹಾಗೆ ನಮೂದಿಸಿದ" ಎಂಬ ಪದಗಳನ್ನು ಹೆಚ್ಚಿಗೆ ಸೇರಿಸುವುದು.

**ಮಾನ್ಯಸಭಾಪತಿಗಳು:** ಆ ತಿದ್ದುಪಡಿಯು, ಹೆಚ್ಚು ಕಡಿಮೆ ಔಪಚಾರಿಕವಾದದ್ದು.

ಈಗ ವಿಷಯವೇನೆಂದರೆ:

> "ಡಾ. ಅಂಬೇಡ್ಕರ್ ಅವರ ತಿದ್ದುಪಡಿಯಲ್ಲಿ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಹೊಸ ಕಲಮು ೨೭–ಎ ಯ, ಉಪಕಲಮು (೩)ರಲ್ಲಿ, ಎರಡನೇ ಸಾಲಿನಲ್ಲಿರುವ ಯಾವುದೇ ರಾಜ್ಯ ಅಥವ ರಾಜ್ಯಗಳ ಗುಂಪು" ಎಂಬ ಪದಗಳಾದ ಮೇಲೆ, "ಹಾಗೆ ನಿಗದಿಪಡಿಸಿದ" ಎಂಬ ಪದಗಳನ್ನು ಜೋಡಿಸಿ.

ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

**ಮಾನ್ಯಸಭಾಪತಿಗಳು:** ನಾವೀಗ ಎರಡನೆ ತಿದ್ದುಪಡಿಗೆ ಬರೋಣ. ಅದೂ ಸಹ, ಹೆಚ್ಚು ಕಡಿಮೆ, ಒಂದು ಔಪಚಾರಿಕವಾದ ತಿದ್ದುಪಡಿ.

ವಿಷಯವೆಂದರೆ :

> "ಡಾ. ಅಂಬೇಡ್ಕರ್ ಅವರ ತಿದ್ದುಪಡಿಯಲ್ಲಿ, ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಹೊಸ ಕಲಮು ೨೭–ಎಯ ಉಪಕಲಮು (೪)ರಲ್ಲಿ "ಮತದಾರರ ಮಂಡಲ" ಎಂಬ ಪದಗಳಾದ ಮೇಲೆ "ಉಪಕಲಮು (೨)ರಲ್ಲಿ ಉಲ್ಲೇಖಿಸಿದ ಯಾವುದೇ ಇಂಥ ರಾಜ್ಯ ಅಥವ ರಾಜ್ಯಗಳ ಗುಂಪು" ಎಂಬ ಪದಗಳು, ಬ್ರಾಕೆಟ್ಟುಗಳು ಮತ್ತು ಸಂಖ್ಯೆ ಇವುಗಳನ್ನು ಜೋಡಿಸಿ."

ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

**ಮಾನ್ಯಸಭಾಪತಿಗಳು:** ನಾವೀಗ ದೆಹಲಿ ರಾಜ್ಯದ ಮತದಾರರ ಮಂಡಲಕ್ಕೆ ಸಂಬಂಧಿಸಿದ ತಿದ್ದುಪಡಿಗೆ ಬರುತ್ತೇವೆ; ಇದನ್ನು ಕಲಮು ೨೭–ಎಯ ಉಪಕಲಮು (೫) ಎಂದು ಸೇರಿಸಬೇಕೆಂದು ಪ್ರಸ್ತಾವಿಸಲಾಗಿದೆ. ಮಿ. ತ್ಯಾಗಿ ಅವರು ಏನನ್ನು ಹೇಳಲು ಬಯಸುತ್ತಾರೆ?

**ಶ್ರೀ ತ್ಯಾಗಿ:** ಸ್ವಾಮಿ, "ಅಧಿಕಾರೇತರ" ಎಂಬ ಪದದ ಅರ್ಥವು ಏನಾಗುತ್ತದೆ ಎಂಬುದನ್ನು ವಿಚಾರಿಸ ಬಯಸುತ್ತೇನೆ.

**ಡಾ. ಅಂಬೇಡ್ಕರ್:** ಅಧಿಕಾರವಿರುವವರನ್ನು ಬಿಟ್ಟು, ಅಷ್ಟೇ.

*__ಶ್ರೀ ತ್ಯಾಗಿ:__ ಸ್ವಾಮಿ, ನನ್ನ ಹಾಗೆ ಯಾರಿಗೆ ಅಧಿಕಾರವಿಲ್ಲವೋ ಅವರು ಅಧಿಕಾರವಿಲ್ಲದವರು ಎಂದಾಗುತ್ತದೆ. ಆದರೆ ಶ್ರೀ ಜವಾಹರ್‌ಲಾಲ್ ನೆಹರೂ ಮತ್ತು ಡಾ. ಅಂಬೇಡ್ಕರ್ ಅಂಥ ವ್ಯಕ್ತಿಗಳಿಗೆ ಅಧಿಕಾರ ಇದೆ. ಅವರು ಅಧಿಕಾರವಿಲ್ಲದವರು ಎಂದಾಗುವುದಿಲ್ಲ. ನನಗೆ ಅಧಿಕಾರವಿಲ್ಲ, ಆದ್ದರಿಂದ ನಾನು ಅಧಿಕಾರವಿಲ್ಲದವನು. ಆದ್ದರಿಂದ "ಅಧಿಕಾರವಿಲ್ಲದವರು" ಎಂಬ ಪದದ ಸ್ಪಷ್ಟ ವಿವರಣೆಯನ್ನು ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ. ಇದರ ಅರ್ಥವನ್ನು ಬೇರೆ ಯಾವುದಾದರೊಂದು ಅಧಿನಿಯಮದಲ್ಲಿ

---

* P.D., ಸಂ. ೭, ಭಾಗ II, ೨೨ ಡಿಸೆಂಬರ್ ೧೯೫೦, ಪು. ೨೨೬೪–೬೫.

ಕೊಟ್ಟಿದ್ದರೆ ಸರಿ. ಇಲ್ಲದೇ ಹೋದರೆ ಇದು ಜಟಿಲತೆಗಳಿಗೆ ಎಡೆಮಾಡಿಕೊಡುತ್ತದೆ.

**ಡಾ. ಅಂಬೇಡ್ಕರ್:** "ಅಧಿಕಾರವಿಲ್ಲದ" ಎಂಬ ಪದ ತೀರಾ ಪ್ರಾಥಮಿಕವಾದದ್ದು. ಅದಕ್ಕಿಂತ ಸರಳವಾದ ಪದಗಳನ್ನು ಹುಡುಕುವುದು ತೀರಾ, ತೀರಾ ಕಷ್ಟವಾದದ್ದೆಂದು ನನಗೆ ಅನಿಸುತ್ತದೆ. ನನ್ನ ಸ್ನೇಹಿತ ಮಿ. ತ್ಯಾಗಿ ಅವರು ಈ ಪದವನ್ನು ಕುರಿತು ಯಾವುದೇ ಕಾನೂನು ವ್ಯಾಜ್ಯದಲ್ಲಿ ಸಿಕ್ಕಿಹಾಕಿಕೊಂಡಿದ್ದರೆ, ನನ್ನ ಸಲಹೆ ಏನೆಂದರೆ ಅವರು ಕನಿಷ್ಠ ಮೂರನೇ ದರ್ಜೆ ವಕೀಲರನ್ನು ನೇಮಿಸಿಕೊಂಡರೆ ಅವರಿಗೆ ಸಾಕಷ್ಟು ಸಲಹೆ ಸಿಗುತ್ತದೆ ಎಂದು.

***ಶ್ರೀ ದೇಶ ಬಂಧು ಗುಪ್ತ:** ಸಲಹಾಪರಿಷತ್ತಿನಲ್ಲಿ ಯಾವುದೇ ಅಧಿಕಾರಿ ಸದಸ್ಯ ಇಲ್ಲ ಎಂಬುದನ್ನು ನಾನು ತೋರಿಸಬಯಸುತ್ತೇನೆ. ಇಲ್ಲಿ (ಬಿ)ನಲ್ಲಿ "ಮುಖ್ಯ ಆಯುಕ್ತರ ಸಲಹಾ ಪರಿಷತ್ತಿನ ಅಧಿಕಾರೇತರ ಸದಸ್ಯರು, ಇತ್ಯಾದಿ; ಇತ್ಯಾದಿ ಎಂದು ಹೇಳಲಾಗಿದೆ. ಅಲ್ಲಿ ಯಾವ ಅಧಿಕಾರಿಯೂ ಇಲ್ಲ. ಆದ್ದರಿಂದ ಆವಶ್ಯಕತೆ ಇಲ್ಲದಿದ್ದರೆ, "ಅಧಿಕಾರವಿಲ್ಲದ" ಎಂಬ ಪದವನ್ನು ಕೈ ಬಿಡಬಹುದು. ನಾನು ಇದನ್ನು ಮಂಡನೆ ಮಾಡಿದವರಿಗೆ ಸಲಹೆ ಕೊಡುತ್ತಿದ್ದೇನೆ.

**ಡಾ. ಅಂಬೇಡ್ಕರ್:** ಅದು ಯಾವ ಕೆಡುಕನ್ನು ಮಾಡುವುದಿಲ್ಲ.

**ಶ್ರೀ ಎಮ್.ಎ. ಅಯ್ಯಂಗಾರ್:** ಕಲಮು ೧೩೪ರ ಕೆಳಗೆ ನಿಯಮಗಳನ್ನು ರೂಪಿಸಲಾಯಿತು. "ಭಾರತ ಸರ್ಕಾರದ ಅಧಿನಿಯಮವನ್ನು ನಿರಸನ (ರದ್ದು) ಗೊಳಿಸಿದಾಗ, ಯಾರು ಅಧಿಕಾರಿಗಳು, ಯಾರು ಅಧಿಕಾರಿಗಳಲ್ಲ ಎಂಬ ವಿವರಣೆಯನ್ನು ಕೊಡುವ ಅಧ್ಯಾದೇಶವನ್ನು ಹೊರಡಿಸಲಾಯಿತು. ಈಗ ಆ ಅಧ್ಯಾದೇಶದ ಅವಧಿ ಮುಗಿದು ರದ್ದಾಗಿದೆ. ಈಗ ಪರಿಸ್ಥಿತಿ ಏನು? ೧೯೧೯ರಲ್ಲಿ ಅರ್ಥ ವಿವರಣೆ ಕೊಟ್ಟು, ಆ ನಂತರ ಅರ್ಥ ವಿವರಣೆಯನ್ನು ಕೊಡುವ ಆವಶ್ಯಕತೆಯಿದೆ ಎಂದು ಅಧ್ಯಾದೇಶದಲ್ಲಿ ಕಂಡಮೇಲೆ, ಇಲ್ಲಿ ಕೂಡ, ಏಕೆ ಅರ್ಥವಿವರಣೆ ಕೊಡಬಾರದು? ಆ ಲೋಪವನ್ನು ಇಲ್ಲಿ ಸರಿಪಡಿಸಬೇಕು. ಇದು ನಿಘಂಟಿನಲ್ಲಿ ಕಂಡುಕೊಳ್ಳಬಹುದಾದಂಥ ಸರಳವಾದ ಪದವೇನಲ್ಲ. ಅದರ ಮೇಲೆ ಮಾಡುವ ವ್ಯಾಖ್ಯಾನದ ಮೇಲೆ ಅದು ಅವಲಂಬಿಸಿದೆ. ಇದೊಂದು ಸಿಂಧುವಾದ ಆಕ್ಷೇಪಣೆ.

**ಡಾ. ಅಂಬೇಡ್ಕರ್:** ಆ ವಿಷಯವನ್ನು ಸೇರಿಸಿಕೊಳ್ಳಲಾಗಿದೆಯೆಂದು ನನಗೆ ಖಾತರಿ ಇದೆ. ಅದನ್ನು ಸೇರಿಸಿಕೊಳ್ಳದಿದ್ದ ಪಕ್ಷದಲ್ಲಿ ಸೇರಿಸಿಕೊಳ್ಳುವುದು ಕಷ್ಟವೇನಲ್ಲ.

****ಮಾನ್ಯಸಭಾಪತಿಗಳು:** ಆಮೇಲೆ ಬರುವುದು ––ನೇ ಭಾಗದ ಸೇರ್ಪಡೆ. ಕಲಮು ೨೭–ಎ ಅನ್ನು ಸೇರಿಸುವುದಕ್ಕೆ ಪ್ರಸ್ತಾವಿಸಲಾಗಿದೆ.

**ಡಾ. ಅಂಬೇಡ್ಕರ್:** ಮಸೂದೆಯ ಪ್ರಸ್ತಾವಿತ ಹೊಸ ಕಲಂ ೧೦–ಬಿನಲ್ಲಿ,

> ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಸ್ತಾವಿತ ಕಲಮು ೨೭–ಎನಲ್ಲಿ, "ತ್ರಿಪುರ ಮತ್ತು ಮಣಿಪುರ" ಎಂಬ ಪದಗಳಿಗೆ ಬದಲಾಗಿ "ಮಣಿಪುರ ಮತ್ತು ತ್ರಿಪುರ" ಎಂಬ ಪದಗಳನ್ನು ಪ್ರತಿಯೋಜಿಸಿ.

---

* ಅದೇ, ಪು. ೨೨೯೬.

** P.D., ಸಂ. ೭, ಭಾಗ II, ೨೨ ಡಿಸೆಂಬರ್ ೧೯೫೦, ಪು. ೨೨೭೧.

ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

**ಮಾನ್ಯಸಭಾಪತಿಗಳು:** ಮಾನ್ಯ ಸದಸ್ಯರುಗಳಿಗೆ ನೆನಪಿರುವ ಹಾಗೆ ಈ ಬೆಳಿಗ್ಗೆ ಡಾ. ಅಂಬೇಡ್ಕರ್ ಅವರು ಮಂಡಿಸಿದ ಐದು ತಿದ್ದುಪಡಿಗಳಲ್ಲಿ ಮೂರು ಕಲಮು "೨೭–ಎ" ಗೆ ಸಂಬಂಧಿಸಿದೆ, ಇವುಗಳನ್ನು ಸದನವು ಅನುಮೋದಿಸಿದೆ. ಯಾರೂ ಯಾವುದೇ ತಿದ್ದುಪಡಿಗಳನ್ನು ಮಂಡಿಸುವುದಕ್ಕಾಗಲೀ ಅಥವ ಮುಂದಕ್ಕೆ ಮಾತನಾಡಬಯಸುವುದಕ್ಕೆ ಆಗಲೀ ಇಚ್ಛಿಸುತ್ತಿಲ್ಲ. ಹಾಗಾಗಿ, ನಾನು ಎಲ್ಲಾ ಖಂಡಗಳನ್ನೂ ಒಟ್ಟಿಗೆ ತೆಗೆದುಕೊಳ್ಳುತ್ತೇನೆ; ಕಾರಣ, ಎಲ್ಲಾ ತಿದ್ದುಪಡಿಗಳೂ ಮೌಖಿಕವಾಗಿವೆ.

ಯಾವುದೇ ಮಾನ್ಯಸದಸ್ಯರು, ಯಾವುದೇ ಒಂದು ಖಂಡದ ಬಗ್ಗೆ ಮಾತನಾಡಲು ಬಯಸುತ್ತಾರೆಯೆ? ಇಲ್ಲ. ಹಾಗಾದರೆ ನಾನು ಎಲ್ಲಾ ಖಂಡಗಳನ್ನು, – ೨೭–'ಡಿ', 'ಇ', 'ಎಫ್', 'ಜಿ', 'ಹೆಚ್' ಐ.................

**ಡಾ. ಅಂಬೇಡ್ಕರ್:** ಸ್ವಾಮಿ, "೨೭–ಐ" ಗೆ ಸಂಬಂಧಿಸಿದ ಹಾಗೆ, ತಮ್ಮ ಅನುಮತಿಯಿದ್ದರೆ, ನಾನೊಂದು ಸಣ್ಣ ತಿದ್ದುಪಡಿಯನ್ನು ಮಂಡಿಸಲು ಬಯಸುತ್ತೇನೆ; ಮುಂಚೆ ಮಂಡಿಸಿದ ಹಾಗೆಯೇ; ಅಂದರೆ, "ತ್ರಿಪುರಾ ಮತ್ತು ಮಣಿಪುರದ" ಬದಲು, ಅದು "ಮಣಿಪುರ ಮತ್ತು ತ್ರಿಪುರಾ" ಎಂದಾಗಬೇಕು.

****ಮಾನ್ಯಸಭಾಪತಿಗಳು:** ಆಮೇಲೆ, ಡಾ. ಅಂಬೇಡ್ಕರ್ ಅವರು ಪ್ರಸ್ತಾವಿಸಿದ ಇನ್ನೂ ಒಂದು ತಿದ್ದುಪಡಿ ಇದೆ.

ವಿಷಯವೆಂದರೆ :

> "ಮಸೂದೆಯಲ್ಲಿನ ಖಂಡಗಳಿಗೆ ಹಾಗೂ ಅದರಲ್ಲಿ ಹೊಸದಾಗಿ ಜೋಡಿಸಿದ ಕಲಮುಗಳಿಗೆ ಸಂಖ್ಯೆಗಳನ್ನು ಮತ್ತು ಅಕ್ಷರಗಳನ್ನು ಸೇರಿಸಲು ಮಾಡಬೇಕಾದ ಆವಶ್ಯಕ ತಿದ್ದುಪಡಿಗಳನ್ನು ಮತ್ತು ಅದರೊಟ್ಟಿಗೆ ಆ ಸಂಬಂಧಮಾಡಬೇಕಾದ ಎದುರು ಉಲ್ಲೇಖಗಳ ತಿದ್ದುಪಡಿ ಇವುಗಳನ್ನು ಅಳವಡಿಸಿಕೊಳ್ಳಬೇಕು."

ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

ಖಂಡ–೧ನ್ನು ಮಸೂದೆಗೆ ಸೇರಿಸಲಾಯಿತು.

ಶಿರೋನಾಮೆ ಮತ್ತು ಅಧಿನಿಯಮಗೊಳಿಸುವ ಸೂತ್ರವನ್ನು ಮಸೂದೆಗೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:** ಮಂಡನೆ ಮಾಡಲು ಕೇಳಿಕೊಳ್ಳುತ್ತೇನೆ.

> "ತಿದ್ದುಪಡಿ ಮಾಡಿದ ಮಸೂದೆಯನ್ನು ಅನುಮೋದಿಸಬಹುದು."

ಮಂಡನೆಯನ್ನು ಅಳವಡಿಸಿಕೊಳ್ಳಲಾಯಿತು.

---

* P.D., ಸಂ. ೭, ಭಾಗ II, ೧೮ ಡಿಸೆಂಬರ್ ೧೯೫೦, ಪು. ೧೮೩೪.

# ಪ್ರಜಾಪ್ರಾತಿನಿಧ್ಯ (ನಂ.೨) ಮಸೂದೆ

*ಕಾನೂನು ಸಚಿವರು (ಡಾ. ಅಂಬೇಡ್ಕರ್):** ಪಾರ್ಲಿಮೆಂಟಿನ ಸದನಗಳಿಗೆ ಹಾಗೂ ಪ್ರತಿ ರಾಜ್ಯದ ಶಾಸನಸಭೆಯ ಸದನ ಅಥವ ಸದನಗಳಿಗೆ ಚುನಾವಣೆಗಳನ್ನು ನಡೆಸಲು ಅವಕಾಶ ಕಲ್ಪಿಸಲು, ಆ ಸದನಗಳ ಸದಸ್ಯತ್ವ ಕುರಿತಾದ ಅರ್ಹತೆಗಳು, ಅನರ್ಹತೆಗಳು, ಭ್ರಷ್ಟ ಮತ್ತು ಕಾನೂನುಬಾಹಿರ ಆಚರಣೆಗಳು ಮತ್ತು ಈ ಚುನಾವಣೆಗಳ ಸಂಬಂಧ ಇತರ ಅಪರಾಧಗಳು, ಹಾಗೂ ಚುನಾವಣೆಗಳ ಸಂಬಂಧವಾಗಿ ಅಥವ ಸಂಬಂಧದಿಂದ ಉದ್ಭವಿಸುವ ಅನುಮಾನಗಳು ಮತ್ತು ವ್ಯಾಜ್ಯಗಳ ಮೇಲಿನ ತೀರ್ಮಾನಗಳು. ಇವುಗಳನ್ನು ಒಳಗೊಂಡ ಮಸೂದೆಯನ್ನು ಒಂದು ಪರಿಶೀಲನಾ ಸಮಿತಿಗೆ ಪರಾಮರ್ಶೆಗೆ ನೀಡಬೇಕು. ಆ ಸಮಿತಿಯ ಸದಸ್ಯರೆಂದರೆ, ಶ್ರೀ ಅನಂತಶಯನಮ್ ಅಯ್ಯಂಗಾರ್, ಪಂಡಿತ್ ಥಾಕೂರ್ ದಾಸ್ ಭಾರ್ಗವ, ಶ್ರೀ ಫ್ರಾಂಕ್ ಆಂಥೋಣಿ, ಪಂಡಿತ್ ಹೃದಯನಾಥ್ ಕುಂಜ್ರು, ಶ್ರೀ ಎಮ್.ಎ. ಹಕ್, ಶ್ರೀ ಮಹಾವೀರ್ ತ್ಯಾಗಿ, ಶ್ರೀ ಬಿಸ್ವನಾಥ್ ದಾಸ್, ಶ್ರೀ ಸಾರಂಗಧರ್ ದಾಸ್, ಸರ್ದಾರ್ ಭೂಪಿಂದರ್‌ಸಿಂಗ್ ಮಾನ್, ಶ್ರೀಯುತ ರೋಹಿಣಿ ಕುಮಾರ್ ಚೌಧುರಿ, ಶ್ರೀ ಗಿರಿಜಾ ಶಂಕರ್ ಗುಹ, ಶ್ರೀ ಖಂಡೂ ಭಾಯಿ ಕೆ ದೇಸಾಯಿ, ಶ್ರೀ ಎಸ್. ಶಿವನ್ ಪಿಳ್ಳೆ, ಶ್ರೀ ಚಂದ್ರಿಕಾ ರಾಮ್, ಶ್ರೀ ಟಿ.ಆರ್. ದೇವ್‌ಗಿರಿಕರ್, ಶ್ರೀ ಪಿ. ಬಾಸಿರೆಡ್ಡಿ, ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ, ಶ್ರೀ ಹುಸೇನ್ ಇಮಾಮ್, ಶ್ರೀ ಎಮ್.ವಿ. ರಾಮರಾವ್, ಶ್ರೀ ಗೋಕುಲ್ ಭಾಯಿ ದೌಲತ್ ರಾಮ್ ಭಟ್, ಶ್ರೀ ರಾಜ್ ಬಹಾದ್ದೂರ್, ಕುಮಾರಿ ಪದ್ಮಜಾ ನಾಯ್ಡು, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ರಾಮನಾಥ್ ಗೋಯೆಂಕಾ, ಶ್ರೀ ಹರಿ ವಿಷ್ಣು ಕಾಮತ್, ಶ್ರೀ ಎಸ್.ಎನ್. ಮಿಶ್ರಾ, ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ, ಶ್ರೀ ಸುರೇಂದ್ರ ಮೋಹನ್ ಘೋಶ್, ಶ್ರೀ ಕೃಷ್ಣಕಾಂತ್ ವ್ಯಾಸ್, ಶ್ರೀ ಎಮ್.ಎಲ್. ದ್ವಿವೇದಿ, ಮತ್ತು ಈ ಮಸೂದೆಯನ್ನು ಮಂಡಿಸಿದವರು.

ಪಾರ್ಲಿಮೆಂಟಿನ ಮುಂದಿನ ಅಧಿವೇಶನ ಪ್ರಾರಂಭವಾದ ನಂತರದ ಮೂರು ವಾರಗಳ ಕೊನೆಯಲ್ಲಿ ವರದಿ ಮಾಡಬೇಕೆಂಬ ಸೂಚನೆಗಳೊಂದಿಗೆ.

**ಪಂಡಿತ್ ಮೈತ್ರ (ಪಶ್ಚಿಮ ಬಂಗಾಳ):** ಕೋರಂ ಏನು?

**ಡಾ. ಅಂಬೇಡ್ಕರ್:** ನನಗೆ ತಿಳಿದ ಹಾಗೆ, ನಿಯಮಗಳ ಪ್ರಕಾರ ಕೋರಂ ಮೂರನೇ ಒಂದು ($^{೧}/_{೩}$) ಆಗಿರುತ್ತದೆ.

ಸ್ವಾಮಿ, ಸದಸ್ಯರುಗಳು ಗಮನಿಸಿರಲೇಬೇಕಾದ ಹಾಗೆ, ಈ ಮಸೂದೆಯು ಬಹಳ ದೀರ್ಘವಾದ ಮಸೂದೆ. ಅದರಲ್ಲಿ ೧೬೩ ಖಂಡಗಳಿವೆ. ನಾನೇನಾದರೂ, ಈ ೧೬೩ ಖಂಡಗಳಲ್ಲಿರುವ ವಿವಿಧ ಉಪಬಂಧಗಳ ಸಂಪೂರ್ಣ ವಿವರಣೆಯನ್ನು ಕೊಡಬೇಕೆಂದು ಹೊರಟಿದೆ, ಈ ಪ್ರಸ್ತಾವನೆಯನ್ನು ಪರಿಗಣನೆಗೆ ತೆಗೆದುಕೊಳ್ಳಲು, ಈಗ ದೊರಕಬಹುದಾದ ಸಮಯಕ್ಕಿಂತ ಬಹಳ ಹೆಚ್ಚಿಗೆ ಸಮಯವನ್ನು ನಾನು ತೆಗೆದುಕೊಳ್ಳಬೇಕಾಗುತ್ತದೆ. ಈ ಮಸೂದೆಯು ಕಡೆಯ ಪಕ್ಷ ಮೂರು ನಾಲ್ಕು ದಿವಸಗಳಿಂದ ಪಾರ್ಲಿಮೆಂಟಿನ ಸದಸ್ಯರುಗಳ ಕೈಗಳಲ್ಲಿ ಇದೆ. ಮತ್ತೆ ನನಗೆ ಖಾತರಿಯಾಗಿರುವಂತೆ, ಅವರುಗಳಿಗೆ ಈ ಮಸೂದೆಯ ಖಂಡಗಳನ್ನು ಪರಿಶೀಲಿಸುವುದಕ್ಕೆ ಸಮಯ ಸಿಕ್ಕಿರಲೇ ಬೇಕು. ಹಾಗೂ, ಅದರೊಳಗೆ ಅಳವಡಿಸಿದ ಖಂಡಗಳ ಮುಖ್ಯ ಇಂಗಿತವನ್ನು ಅರ್ಥಮಾಡಿಕೊಂಡಿರಬೇಕು. ಆದುದರಿಂದ ಈ ಮಸೂದೆಯಲ್ಲಿ

* P.D., ಸಂ. ೭, ಭಾಗ II, ೨೨ ಡಿಸೆಂಬರ್ ೧೯೫೦, ಪು. ೨೨೮೩–೯೧.

ಒಳಗೊಂಡಿರುವ ಈ ವಿಷಯಗಳ ಬಗ್ಗೆ ಬಹುವಿಸ್ತಾರವಾದ ವಿವರಣೆಯನ್ನು ನಾನು ಕೊಡಬೇಕಾಗಿದೆಯೆಂದು ನನಗೆ ಅನಿಸುತ್ತಿಲ್ಲ. ಆದ್ದರಿಂದ ನಾನು ಬಹಳ ಸಂಕ್ಷಿಪ್ತವಾಗಿ ಹೇಳುತ್ತೇನೆ.

ಇದಕ್ಕೆ ಮುಂಚಿನ ಪಾರ್ಲಿಮೆಂಟಿನ ಅಧಿವೇಶನದಲ್ಲಿ, ೧೯೫೦ರ ಪ್ರಜಾ ಪ್ರಾತಿನಿಧ್ಯ ಅಧಿನಿಯಮದ ಮಸೂದೆಯನ್ನು ಈ ಸದನವು ಅನುಮೋದಿಸಿತ್ತು. ಆ ಮಸೂದೆಯು ಕೆಳಕಂಡ ವಿಷಯಗಳ ಬಗ್ಗೆ ವ್ಯವಹರಿಸಿತ್ತು. (೧) ವಿವಿಧ ರಾಜ್ಯಗಳಿಗೆ ಮೇಲ್ಮನೆ ಮತ್ತು ಕೆಳಗಿನ ಮನೆಯಲ್ಲಿ ಅವರ ಪ್ರಾತಿನಿಧ್ಯಕ್ಕೋಸ್ಕರ ಹಂಚಿಕೆ ಮಾಡಬೇಕಾದ ಸ್ಥಾನಗಳು. (೨) ಲೋಕಸಭೆ ಮತ್ತು ವಿವಿಧರಾಜ್ಯಗಳ ಶಾಸನಸಭೆಗಳಿಗೆ ಚುನಾವಣೆ ನಡೆಸುವುದಕ್ಕಾಗಿ ಮತಕ್ಷೇತ್ರಗಳ ಸೀಮಾ ನಿರ್ಣಯವನ್ನು ಮಾಡುವುದು. (೩) ಇಂಥ ಚುನಾವಣೆಗಳಿಗೆ ಮತದಾರರಿಗೆ ಇರಬೇಕಾದ ಅರ್ಹತೆಗಳು. (೪) ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ಹಾಗೂ ಮತಕ್ಷೇತ್ರಗಳು. (೫) ಚುನಾವಣಾ ವ್ಯಾಜ್ಯಗಳ ತೀರ್ಮಾನ ಮಾಡುವ ಉದ್ದೇಶಕ್ಕಾಗಿ ಚುನಾವಣಾ ಮಂಡಳಿಯ ರಚನೆ.

ಕಳೆದ ಮಸೂದೆಯಲ್ಲಿದ್ದ ಉಪಬಂಧಗಳನ್ನು ಮತ್ತು ಈ ಮಸೂದೆಯಲ್ಲಿರುವ ಉಪಬಂಧಗಳನ್ನು ಒಂದೇ ಶಾಸನದಲ್ಲಿ ಅಳವಡಿಸಿದ್ದರೆ ನನಗೆ ವೈಯಕ್ತಿಕವಾಗಿ ಬಹಳ ಸಂತಸವಾಗುತ್ತಿತ್ತು. ಕಾರಣ, ರಾಜ್ಯದ ಶಾಸನಸಭೆಗಳಲ್ಲದೆ, ಕೇಂದ್ರ ಶಾಸನಸಭೆಯಲ್ಲಿ ಕೂಡ ಜನಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಹಾಗೆ. ಎಲ್ಲಾ ವಿಷಯಗಳೂ ಒಂದೇ ಶಾಸನದಲ್ಲಿ ಇರುವ ಅನುಕೂಲಗಳನ್ನು ಮಾನ್ಯ ಸದಸ್ಯರುಗಳು ಪಡೆಯುತ್ತಿದ್ದರು. ಆದರೆ ದುರಾದೃಷ್ಟವಶಾತ್ ಹಾಗೆ ಆಗಲು ಸಾಧ್ಯವಾಗಲಿಲ್ಲ. ಏಕೆಂದರೆ ಅದು ಬಹಳ ದೀರ್ಘಕಾಲವನ್ನು ತೆಗೆದುಕೊಳ್ಳುತ್ತಿತ್ತು. ಹಾಗಾಗಿ ಆ ವಿಷಯವನ್ನು ಎರಡು ಭಾಗಗಳಾಗಿ ಬೇರ್ಪಡಿಸುವುದು ಉತ್ತಮವಾದುದೆಂದು ಭಾವಿಸಲಾಯಿತು. ಅಂದರೆ, ಮುಂಚಿನ ಮಸೂದೆಯಲ್ಲಿ, ಮತಕ್ಷೇತ್ರಗಳು, ಮತದಾರರಿಗೆ ಇರಬೇಕಾದ ಅರ್ಹತೆಗಳು, ಇತ್ಯಾದಿ, ಇತ್ಯಾದಿ – ಇವುಗಳಿಗೆ ಉಪಲಬ್ಧತೆಯನ್ನು ಕಲ್ಪಿಸುವುದು. ಹೀಗೆ ಮಾಡಿದಾಗ, ಏಪ್ರಿಲ್ ಅಥವ ಮೇ ತಿಂಗಳಿನಲ್ಲಿ ಚುನಾವಣೆಗಳನ್ನು ನಡೆಸಲು, ಅನುಕೂಲವಾಗುವ ಹಾಗೆ ಕೆಲಸವನ್ನು ಪ್ರಾರಂಭಿಸುವ ಸ್ಥಿತಿಯಲ್ಲಿ ಚುನಾವಣಾ ಆಯೋಗ ಇರುತ್ತಿತ್ತು. ಈ ಕಾರಣಕ್ಕಾಗಿಯೇ ಈ ಮಸೂದೆಯಲ್ಲಿ ಸಮಗ್ರತೆಯನ್ನು ಕೊಡುವ ಒಂದು ನಿರ್ದಿಷ್ಟ ಭಾಗವನ್ನು ಬೇರ್ಪಡಿಸಿ ಶಾಸನಕ್ಕೆ ಸೇರಿಸಲಾಯಿತು.

ಸ್ವಾಮಿ, ಈಗ ನಾನು ಹೇಳಿದ ಹಾಗೆ, ಪ್ರಸ್ತುತ ಮಸೂದೆಯು, ಐದು ವಿಷಯಗಳನ್ನು ಕುರಿತು ವ್ಯವಹರಿಸುತ್ತದೆ. ಈ ಐದು ಭಾಗಗಳ ಪ್ರತಿಯೊಂದಕ್ಕೂ ಸಂಬಂಧಿಸಿದ ಹಾಗೆ ಎಲ್ಲಾ ಉಪಬಂಧಗಳನ್ನು ನಾನು ಓದುವ ಅವಶ್ಯಕತೆಯಿದೆಯೆಂದು ಈ ಸದನವು ನಿರೀಕ್ಷಿಸುವುದಿಲ್ಲವೆಂದು ನನಗೆ ಖಂಡಿತವಾಗಿದೆ. ನಾನು ಕೆಲವು ಮುಖ್ಯವಾದ ನಿರ್ದಿಷ್ಟ ಉಪಬಂಧಗಳನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ಈ ಹಂತದಲ್ಲಿ ಅವು ಯಾವುದೆಂಬುದನ್ನು ತಿಳಿದುಕೊಳ್ಳಲು ಈ ಸದನಕ್ಕೆ ಆಸಕ್ತಿ ಇದೆಯೆಂಬ ಭರವಸೆ ನನಗೆ ಇದೆ.

ಈಗ ಮೊಟ್ಟ ಮೊದಲನೆಯದಾಗಿ ನಾನು ಅಭ್ಯರ್ಥಿಗಳ ಅರ್ಹತೆಗಳು ಮತ್ತು ಅನರ್ಹತೆಗಳ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಅಭ್ಯರ್ಥಿಗಳಿಗೆ ಸಂಬಂಧಿಸಿದ ಹಾಗೆ ಚುನಾವಣೆಗೆ ನಿಲ್ಲಲು ನಾವು ಯಾವುದೇ ಹೆಚ್ಚಿನ ಅರ್ಹತೆಯನ್ನು ಹೇರುವುದಿಲ್ಲ. ಆದರೆ ಅವನು ಮತದಾರನಾಗಿರಬೇಕು, ಅಂದರೆ ಈ ದೇಶದ ಪೌರನಾಗಿರಬೇಕು; ಅವನಿಗೆ ಇಪ್ಪತ್ತೊಂದು ವರ್ಷ ವಯಸ್ಸಾಗಿರಬೇಕು. ಹಾಗೂ ಆ ಅರ್ಹತೆ ಪಡೆದುಕೊಳ್ಳುವ ಅವಧಿಯಲ್ಲಿ ಆ ನಿರ್ದಿಷ್ಟ ಸ್ಥಳದಲ್ಲಿ ವಾಸವಾಗಿದ್ದಿರಬೇಕು. ಇಷ್ಟು ವಿನಾ ಯಾವುದೇ ಹೆಚ್ಚಿನ ಅರ್ಹತೆ ಪೂರೈಸುವ ಆವಶ್ಯಕತೆ ಇಲ್ಲದೇ, ಪ್ರತಿಯೊಬ್ಬ ಮತದಾರನೂ ಕೂಡ

ಅಭ್ಯರ್ಥಿಯಾಗಿ ನಿಲ್ಲಲು ಹಕ್ಕುಳ್ಳವನಾಗಿರುತ್ತಾನೆ. ಈ ಸಂಬಂಧವಾಗಿ ಇನ್ನೊಂದು ವಿಷಯದ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಅದೇಂದರೆ, ಪ್ರಸ್ತುತ ಮಸೂದೆಯಲ್ಲಿ ವಾಸಸ್ಥಾನದ ಅರ್ಹತೆಗಳನ್ನು ನಾವು ಪೂರಾ ತೆಗೆದು ಹಾಕಿ ಬಿಟ್ಟಿದ್ದೇವೆ. ಮಾನ್ಯ ಸದಸ್ಯರಿಗೆ ನೆನಪಿರುವ ಹಾಗೆ, ಒಂದು ಕಾಲದಲ್ಲಿ ಒಬ್ಬ ಅಭ್ಯರ್ಥಿಯು ಮತದಾರನಾಗಿರುವುದರ ಜೊತೆಗೆ, ಆ ನಿರ್ದಿಷ್ಟ ಮತಕ್ಷೇತ್ರದಲ್ಲಿ ವಾಸಿಸುತ್ತಿದ್ದವನಾಗಿಯೂ ಇರಬೇಕಾಗಿತ್ತು. ಹಾಗಿಲ್ಲವಾದರೆ, ಅವನು (ಚುನಾವಣೆಗೆ) ನಿಲ್ಲುವ ಹಾಗೆ ಇರಲಿಲ್ಲ. ಈಗ ನಾವೆಲ್ಲರೂ ಒಂದು ಸಂವಿಧಾನದ ಕೆಳಗೆ ಒಟ್ಟಾಗಿರುವ ಪ್ರಜೆಗಳಾಗಿರುವುದನ್ನು ಗಮನದಲ್ಲಿಟ್ಟುಕೊಂಡು, ಜಾತಿ, ಉಪಜಾತಿ, ಮತ ಇವುಗಳನ್ನು ಗುರುತಿಸಬೇಕಾಗಿಲ್ಲವೆಂದು ಹಾಗು ಪ್ರಾಂತ್ಯಗಳ ನಡುವಿನ ತಡೆಗೋಡೆಗಳನ್ನು ಗಮನಿಸಬೇಕಾಗಿಲ್ಲವೆನ್ನುವುದು ಅಪೇಕ್ಷಣೀಯವಾದುದೆಂದೂ ಹಾಗೂ ಯಾವೊಬ್ಬ ವ್ಯಕ್ತಿಯು ಅಭ್ಯರ್ಥಿಯಾಗಿ ನಿಲ್ಲಲು ಹಕ್ಕುಳ್ಳವನಾಗಿದ್ದರೆ, ಅವನು ಆ ಪ್ರಾಂತ್ಯದ ಅಥವ ಆ ಮತಕ್ಷೇತ್ರಕ್ಕೆ ಸೇರಿದವನಾಗಿಲ್ಲದಿದ್ದರೂ ಸಹ, ಭಾರತದಲ್ಲಿ ಎಲ್ಲಿ ಬೇಕಾದರೂ ಚುನಾವಣೆಗೆ ನಿಲ್ಲಬಹುದು ಎಂಬುದನ್ನು ತಿಳಿದುಕೊಳ್ಳಲಾಯಿತು.

### ಉಪಸಭಾಪತಿಗಳ ಅಧ್ಯಕ್ಷತೆಯಲ್ಲಿ

ಹೀಗಾಗಿ, ಈ ಮಸೂದೆಯ ಉಪಬಂಧಗಳ ಕೆಳಗೆ ಯಾವುದೇ ವ್ಯಕ್ತಿ ಅಭ್ಯರ್ಥಿಯಾಗಿ ತನ್ನದೇ ಮತಕ್ಷೇತ್ರದಲ್ಲಿ ನಿಲ್ಲಬಹುದಲ್ಲದೇ, ಅವನು ಅವನ ರಾಜ್ಯದಲ್ಲಿ ಆಗಲಿ, ಅಥವ ಅವನು ವಾಸಿಸುತ್ತಿಲ್ಲವಾದ ಬೇರೆ ಯಾವ ರಾಜ್ಯದಲ್ಲಿ ಅಭ್ಯರ್ಥಿಯಾಗಿ ನಿಲ್ಲಬಹುದು. ಆದರೆ ಅವನು ಯಾವುದಾದರೊಂದು ನಿರ್ದಿಷ್ಟ ಮತಕ್ಷೇತ್ರದಲ್ಲಿ ಅರ್ಹತೆಯುಳ್ಳ ಮತದಾರನಾಗಿರಬೇಕು. (ಇದಿಷ್ಟು ಅರ್ಹತೆಗೆ ಸಂಬಂಧಿಸಿದ ವಿಷಯ).

ಅನರ್ಹತೆಗಳಿಗೆ ಸಂಬಂಧಿಸಿದ ಹಾಗೆ ನಾವು ಮಾಡಿರುವುದು ಇಷ್ಟೆ. ಇಲ್ಲಿಯವರೆಗೂ ಅನರ್ಹತೆಗಳಿಗೆ ಸಂಬಂಧಿಸಿದ ಕಾನೂನು ಬೇರೆ ಬೇರೆ ಶಾಸನಗಳಲ್ಲಿ ಚದುರಿಹೋಗಿದ್ದವು. ಅದರಲ್ಲಿ ಕೊಂಚಭಾಗ, ೧೯೩೫ರ ಭಾರತ ಸರ್ಕಾರದ ಅಧಿನಿಯಮ ಇದು ಶಾಸನವಾದ ಮೇಲೆ, ರಾಜ್ಯಕಾರ್ಯದರ್ಶಿಯವರು ಹೊರಡಿಸಿದ "೧೯೩೬ರ ಭಾರತ ಸರ್ಕಾರದ (ಪ್ರಾಂತೀಯ ಚುನಾವಣೆಗಳು, ಭ್ರಷ್ಟಾಚಾರದ ಆಚರಣೆಗಳು ಮತ್ತು ಚುನಾವಣಾ ಅರ್ಜಿಗಳು) ಆದೇಶ, ಇದರಲ್ಲಿ ವಿಧಿಸಲಾಗಿದೆ. ಇತರ ಉಪಬಂಧಗಳನ್ನು ೧೯೨೦ರ ಭಾರತ ಚುನಾವಣೆ ಅಪರಾಧಗಳ ವಿಚಾರಣಾ ಅಧಿನಿಯಮದಲ್ಲಿ ಇದರಲ್ಲಿ ಕಾಣಬಹುದಾಗಿದೆ. ಈ ಕಾಯಿದೆಯಲ್ಲಿಯೇ, ಅನರ್ಹತೆಗಳ ಕ್ರೋಢೀಕೃತ ಪಟ್ಟಿಯನ್ನು ಸೇರಿಸುವುದು ಉತ್ತಮವಾದುದೆಂದು ಮನಗಾಣಲಾಯಿತು. ಈಗ ಮಾಡಿರುವುದೂ ಅದನ್ನೇ. ನಾನು ಇಲ್ಲಿ ಸೂಚಿಸಬಹುದಾದರೆ, ಸರ್ಕಾರದಿಂದ ಯಾವುದೇ ಕಾಂಟ್ರಾಕ್ಟ್ ಅನ್ನು ಪಡೆದುಕೊಂಡಿರುವುದೂ ಸಹ ಒಂದು ಅನರ್ಹತೆಯ ವಿಷಯವಾಗಿರಲೇ ಬೇಕೆಂಬುದು ನನ್ನ ಪ್ರಸ್ತಾವನೆ ಆಗಿತ್ತು. ಇಂಥ ಒಂದು ಉಪಬಂಧವು ಯುನೈಟೆಡ್ ಕಿಂಗ್‌ಡಮ್‌ನ ಅಧಿನಿಯಮದಲ್ಲಿಯೂ ಇದೆ. ಈ ನಿರ್ದಿಷ್ಟವಾದ ಉಪಬಂಧವು ಉಮೇದುವಾರನಾಗಿ ನಿಲ್ಲುವುದಕ್ಕೆ ಅನರ್ಹತೆಯಾಗಿರಬೇಕೋ ಅಥವ ಸಂಸತ್ತಿನ ಸದಸ್ಯನಾಗಿ ಮುಂದುವರೆಯುವುದಕ್ಕೆ ಸೀಮಿತವಾಗಿರಬೇಕೋ ಎಂಬುದರ ಬಗ್ಗೆ ಸೆಲೆಕ್ಟ್ ಕಮಿಟಿಯ ಸಲಹೆಯನ್ನು ಪಡೆಯುವುದು ಉತ್ತಮವಾದುದೆಂದು ನಾನು ಆಲೋಚಿಸಿದ್ದೆ. ಯಾವ ಮಾರ್ಗವನ್ನು ಅಳವಡಿಸಿಕೊಳ್ಳಬೇಕೆಂಬುದರ ಬಗ್ಗೆ ನನಗೆ ಖಾತರಿಯಾಗಿರಲಿಲ್ಲವಾದ ಕಾರಣ ಆ ಪ್ರಶ್ನೆಯನ್ನು ಸೆಲೆಕ್ಟ್ ಕಮಿಟಿಯೇ (ಸಲಹಾ ಸಮಿತಿಯೇ) ತೀರ್ಮಾನ ಮಾಡಬೇಕೆಂದು ತೆರವಾಗಿ ಇಟ್ಟಿದ್ದೇನೆ.

ನಾನು ಈಗ ಚುನಾವಣೆಗಳನ್ನು ನಡೆಸುವ ವಿಷಯಕ್ಕೆ ಬರುತ್ತೇನೆ. ಈ ಸಂದರ್ಭದಲ್ಲಿ ನಾನು ಸದನದ ಗಮನವನ್ನು ಸೆಳೆಯುವುದಕ್ಕೆ ಬಯಸುವುದೇನೆಂದರೆ, ನಾಮ ನಿರ್ದೇಶನವನ್ನು ಕುರಿತಾಗಿ ಈ ಮಸೂದೆಯಲ್ಲಿ ಕೆಲವು ಹೊಸ ವಿಷಯಗಳಿವೆ. ಸದನಕ್ಕೆ ನೆನಪಿರುವ ಹಾಗೆ, ಈಗ ಇರುವ ಕಾನೂನಿನ ಕೆಳಗೆ, ಒಬ್ಬ ಅಭ್ಯರ್ಥಿಯ ನಾಮ ನಿರ್ದೇಶನದ ಸಿಂಧುತ್ವವನ್ನು ಒಂದು ಚುನಾವಣಾ ಅರ್ಜಿಯಲ್ಲಿ ಎತ್ತಬಹುದು, ಚರ್ಚೆ ಮಾಡಬಹುದು ಮತ್ತು ತೀರ್ಮಾನಿಸಲೂಬಹುದು. ನನಗೆ ಯಾವಾಗಲೂ ಅನ್ನಿಸಿರುವ ಹಾಗೆ ಇದು ಒಂದು ಬಹಳ ಕಟುವಾದ ಪ್ರಕ್ರಿಯೆ. ಹೇಳಬೇಕೆಂದರೆ, ನಾಮನಿರ್ದೇಶನದ ಪ್ರಶ್ನೆ ಒಂದು ತೀರ ಪ್ರಾಥಮಿಕ ವಿಷಯ. ಈ ಪ್ರಾಥಮಿಕ ವಿಷಯವನ್ನು ಅನಿಶ್ಚಿತತೆಯಲ್ಲಿ ಇಟ್ಟಿರಬೇಕೆಂಬುದಕ್ಕೆ ಯಾವುದೇ ಕಾರಣವಿಲ್ಲ. ಇಡೀ ಚುನಾವಣಾ ಕ್ರಿಯೆಯನ್ನು ಮುಗಿಯಲು ಬಿಟ್ಟು, ಚುನಾವಣೆಯಲ್ಲಿ ಸ್ಪರ್ಧಿಸಲು ಜನಗಳಿಗೆ ತಮ್ಮ ಸಮಯ ಮತ್ತು ಶಕ್ತಿಯನ್ನು ಕಡ್ಡಾಯವಾಗಿ ವ್ಯಯಿಸುವ ಹಾಗೆ ಮಾಡಿ, ತದನಂತರ ಯಾರೋ ಒಬ್ಬ ಬಂದು ಚುನಾಯಿತ ಅಭ್ಯರ್ಥಿಯ ನಾಮನಿರ್ದೇಶನ ಕ್ರಮಬದ್ಧವಾಗಿಲ್ಲವೆಂದು ಹೇಳುವುದು. ಹಾಗಾಗಿ, ಚುನಾವಣೆಯ ಗುಣ-ದೋಷಗಳ ಬಗ್ಗೆ ಒಳಹೊಕ್ಕು ನೋಡದೆ, ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆ; ಮತ್ತು ಇಡೀ ಪ್ರಕರಣವನ್ನು ಪ್ರಾಥಮಿಕ ವಿವಾದಾಂಶದ ಮೇಲೆ ಇತ್ಯರ್ಥಗೊಳಿಸಲಾಗುತ್ತಿದೆ. ಚುನಾವಣಾ ಅರ್ಜಿಗಳ ವಿಷಯದಲ್ಲಿ, ಪ್ರಾಥಮಿಕ ವಿವಾದಾಂಶವನ್ನು, ಚುನಾವಣೆಯು ಇತರ ಆಧಾರಗಳ ಮೇಲೆ ಸಿಂಧುವೇ ಅಥವ ಅಲ್ಲವೇ ಎಂಬ ವಿವಾದಾಂಶದಿಂದ ಬೇರ್ಪಡಿಸುವುದು ಅಪೇಕ್ಷಣೀಯವೆಂದು ನನಗೆ ಸರಿಕಾಣುತ್ತದೆ. ಆದುದರಿಂದ ಈ ಮಸೂದೆಯಲ್ಲಿ ನಾನು ಪ್ರಸ್ತಾವಿಸಿರುವುದು ಏನೆಂದರೆ, ಈ ವಿವಾದಾಂಶವನ್ನು ಪ್ರಾಥಮಿಕ ವಿವಾದಾಂಶವೆಂದು ಪರಿಗಣಿಸಿ, ಚುನಾವಣಾ ಆಯೋಗವು ಒಂದು ನ್ಯಾಯಾಧಿಕರಣವನ್ನು ರಚಿಸುವುದಕ್ಕೆ ಒಂದು ಉಪಬಂಧವನ್ನು ಮಾಡಿ, ಆ ನ್ಯಾಯಾಧಿಕರಣಕ್ಕೆ ನಾಮನಿರ್ದೇಶನ ಕುರಿತ ಯಾವುದೇ ವ್ಯಾಜ್ಯವನ್ನು ಪರಾಮರ್ಶೆಗೆ ಒಪ್ಪಿಸಿ, ಅದನ್ನು ಅಂತಿಮವಾಗಿ ತೀರ್ಮಾನ ಮಾಡಬಹುದಾಗಿದೆ. ಹಾಗಾಗಿ, ಚುನಾವಣೆ ನಡೆದಾಗ ಇಂಥ ಯಾವುದೇ ವಿಷಯವನ್ನು ನ್ಯಾಯಾಧಿಕರಣದ ಮುಂದೆ ಎತ್ತಲು ಆಗುವುದಿಲ್ಲ. ಹೀಗಾಗಿ ಇದೊಂದು ಬಹಳ ಆರೋಗ್ಯಕರವಾದ ಉಪಬಂಧವೆಂದು ನನಗೆ ಖಂಡಿತವಾಗಿದೆ. ಮೊದಲನೆಯ ಚುನಾವಣಾ ಸಮಯದಲ್ಲಿ, ಈ ಉಪಬಂಧವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಚುನಾವಣಾ ಆಯುಕ್ತರ ಸಲಹೆ ಮೇಲೆ ಹೇಳುವುದಕ್ಕೆ ನನಗೆ ಬಹಳ ವಿಷಾದವಾಗುತ್ತದೆ. ಏಕೆಂದರೆ ಅಭ್ಯರ್ಥಿಗಳಿಗೆ ಪರಿಹಾರವನ್ನು ಒದಗಿಸಿಕೊಡುವುದಕ್ಕೆಂದು ಒಂದು ತತ್ಪೂರ್ತಿ ನ್ಯಾಯಾಧಿಕರಣವನ್ನು ರಚಿಸುವುದಕ್ಕೆ ತಮಗೆ ಸಾಕಷ್ಟು ಸಮಯವಿಲ್ಲವೆಂದು ಅವರು ಹೇಳುತ್ತಾರೆ. ಆದರೆ, ನಾನು ಹೇಳುವ ಹಾಗೆ, ಒಂದು ವೇಳೆ ಪರಿಶೀಲನಾ ಸಮಿತಿಯು (ಸೆಲೆಕ್ಟ್ ಕಮಿಟಿ) ಇದನ್ನೂ ಕೂಡ ಸೇರಿಸಲೇಬೇಕೆಂದು ಹೇಳುವುದಾದರೆ, ಆಗ ನನ್ನದೇನೂ ಅಭ್ಯಂತರವಿಲ್ಲ. ಚುನಾವಣೆಗಳನ್ನು ನಡೆಸುವುದರ ವಿಷಯದ ಕೆಳಗೆ ನಾನು ಇನ್ನೊಂದು ಮುಖ್ಯವಾದ ವಿಷಯಕ್ಕೆ (ನಿಮ್ಮ) ಗಮನವನ್ನು ಸೆಳೆಯಬಯಸುತ್ತೇನೆ. ಅದೇನೆಂದರೆ, ಮತ ಚಲಾಯಿಸುವ ವಿಧಾನ. ಕೆಲವು ಚುನಾವಣಾ ಕ್ಷೇತ್ರಗಳು ದ್ವಿ-ಸದಸ್ಯ ಚುನಾವಣಾ ಕ್ಷೇತ್ರಗಳಾಗಿರಬೇಕೆಂದು ಈ ಮಸೂದೆಯು ಉಪಬಂಧಿಸುತ್ತದೆ. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ಸ್ಥಾನಗಳನ್ನು ಮೀಸಲಾತಿ ಇರಿಸುವುದಕ್ಕೆ ಉಪಬಂಧಿಸಿರುವುದನ್ನು ಗಮನದಲ್ಲಿಟ್ಟುಕೊಂಡರೆ, ಅದು ಅನಿವಾರ್ಯವೆಂದು ಗೊತ್ತಾಗುತ್ತದೆ. ಈ ಮೀಸಲು ಚುನಾವಣಾಕ್ಷೇತ್ರಗಳು ಇರುವುದೆಂದರೆ, ಕಡೆಯ ಪಕ್ಷ ದ್ವಿ-ಸದಸ್ಯ ಚುನಾವಣಾ ಕ್ಷೇತ್ರಗಳು ಇದ್ದೇ ಇರಬೇಕೆಂದು ಆಗುತ್ತದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ (ಪಂಜಾಬ್):** ಏಕೆ? ಅದೇನೂ ಅನಿವಾರ್ಯವಾದುದಲ್ಲ.

**ಡಾ. ಅಂಬೇಡ್ಕರ್:** ಇದು ನೀವು ಚರ್ಚೆಗೆ ಎಳೆಯಬಹುದಾದ ವಿಷಯವಾದರೂ, ಈ ಮಸೂದೆಯು ಮುಂದುವರಿಯುವುದು ಹಾಗೇನೆ. ಆದುದರಿಂದ ಅಲ್ಲಿ ಕೆಲವು ದ್ವಿ–ಸದಸ್ಯ ಚುನಾವಣಾ ಕ್ಷೇತ್ರಗಳು ಇರುತ್ತವೆ. ಇತರ ಚುನಾವಣಾ ಕ್ಷೇತ್ರಗಳು ಏಕ ಸದಸ್ಯ ಚುನಾವಣಾ ಕ್ಷೇತ್ರಗಳಾಗಿರುತ್ತವೆ. ದ್ವಿ–ಸದಸ್ಯ ಚುನಾವಣಾ ಕ್ಷೇತ್ರಗಳಲ್ಲಿ ಮತದಾನವು ಹಂಚಿಕೆಯಾಗುವ ಮತದಿಂದ ಆಗುತ್ತದೆ.

ನಾನೀಗ ಚುನಾವಣಾ ನ್ಯಾಯಾಧಿಕರಣಕ್ಕೆ ಬರುತ್ತೇನೆ.

**ಪಂಡಿತ್‌ಮೈತ್ರ:** ಯಾವ ಸಂದರ್ಭದಲ್ಲೂ ತ್ರಿ–ಸದಸ್ಯ ಚುನಾವಣಾ ಕ್ಷೇತ್ರಗಳು ಇರುವುದಿಲ್ಲವೇ ಎಂಬುದನ್ನು ತಿಳಿಯಬಯಸುತ್ತೇನೆ.

**ಡಾ. ಅಂಬೇಡ್ಕರ್:** ಅಂತಿಮವಾಗಿ ನಾನು ಹೇಳುವುದೇನೆಂದರೆ ಈ ಯಾವುದೇ ವಿಷಯಗಳನ್ನು ಮುಕ್ತಾಯವಾಗಿವೆ ಎಂದು ತೆಗೆದುಕೊಳ್ಳಲಾಗುವುದಿಲ್ಲ.

ಚುನಾವಣಾ ನ್ಯಾಯಾಧಿಕರಣದ ವಿಷಯಕ್ಕೆ ಸಂಬಂಧಿಸಿದ ಹಾಗೆ, ವಸ್ತು ಸ್ಥಿತಿಯು ಹೀಗಿದೆ: ಒಂದು ಚುನಾವಣಾ ನ್ಯಾಯಾಧಿಕರಣವನ್ನು ರಚಿಸುವುದಕ್ಕೆ ಹಲವಾರು ಮಾರ್ಗಗಳು ಇರುತ್ತವೆ. ಬೇಕಾದರೆ ನೀವು ಅದರ ಅಧಿಕಾರವೇ ಅಂತಿಮವಾಗಿರುವ ಒಂದು ನ್ಯಾಯಾಧಿಕರಣವನ್ನು ರಚಿಸಬಹುದು; ಅದರ ತೀರ್ಮಾನದ ಮೇಲೆ ಮೇಲ್ಮನವಿ ಇರುವುದಿಲ್ಲ. ಅಥವ ಮೇಲ್ಮನವಿಗೆ ಅವಕಾಶವಿರುವ ಒಂದು ನ್ಯಾಯಾಧಿಕರಣವನ್ನು ರಚಿಸಬಹುದು. ನಾನು ಹೇಳಿದ ಹಾಗೆ ಯಾವುದೇ ಒಂದು ಕಟ್ಟುನಿಟ್ಟಾದ ಸಿದ್ಧಾಂತ ಇರಬೇಕಾಗಿಲ್ಲ. ಸಾರ್ವಜನಿಕರ ಅಭಿಪ್ರಾಯದ ಬೆಳಕಿನಲ್ಲಿ ನಾವು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಉಚ್ಚನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಯಾವುದೋ ಒಂದು ತೆರನಾದ ಹಕ್ಕು ಇರಲೇಬೇಕೆಂಬ ಒಂದು ಊಹೆಯ ಮೇಲೆ ಈ ಮಸೂದೆ ಮುಂದುವರಿಯುತ್ತದೆ. ಚುನಾವಣಾ ವ್ಯಾಜ್ಯಗಳನ್ನು ವಿಲೇ ಮಾಡುವದನ್ನು ಕುರಿತು ಸಾರ್ವಜನಿಕರಿಗೆ ಅಧಿಕಾರ ಯಂತ್ರದಲ್ಲಿ ಹೆಚ್ಚಿನ ನಂಬಿಕೆ ಇರುತ್ತದೆಂದು ಇಲ್ಲಿ ಊಹಿಸಿಕೊಳ್ಳಲಾಗಿದೆ. ಅಧಿಕಾರಿಗಳಲ್ಲದವರಿಗೆ ಸಾಮಾನ್ಯವಾಗಿ ಪಕ್ಷಪಾತ ಮಾಡುವ ಬುದ್ಧಿ ಇರಬಹುದು; ಹಾಗಾಗಿ ಒಂದು ಚುನಾವಣಾ ವ್ಯಾಜ್ಯವನ್ನು ಕಟ್ಟಕಡೆಯದಾಗಿ ತೀರ್ಮಾನಿಸುವಲ್ಲಿ ಅವರು ಪೂರ್ವಾಗ್ರಹಕ್ಕೆ ಒಳಗಾಗಬಹುದು. ಪರಿಣಾಮವಾಗಿ, ದ್ವಿ–ಸದಸ್ಯ ನ್ಯಾಯಾಧಿಕರಣ ಇರಬೇಕೆಂದು ಮಸೂದೆಯು ಪ್ರಸ್ತಾವಿಸುತ್ತದೆ. ಅದರ ಅಧ್ಯಕ್ಷರು ಜಿಲ್ಲಾ ನ್ಯಾಯಾಧೀಶರಾಗಿರುತ್ತಾರೆ. ಇನ್ನೊಬ್ಬ ಸದಸ್ಯರು ನ್ಯಾಯಿಕ ಅಧಿಕಾರಿಯಾಗಿರುತ್ತಾರೆ; ಅವರು ಜಿಲ್ಲಾ ನ್ಯಾಯಾಧೀಶರೇ ಆಗಿರಬೇಕೆಂದಿಲ್ಲ. ಅವರು ಯಾವುದೇ ಇತರ ನ್ಯಾಯಿಕ ಅಧಿಕಾರಿಯಾಗಿರಬಹುದು; ಒಟ್ಟಿನಲ್ಲಿ ಅಧಿಕಾರಿಯಾಗಿರಬೇಕು. ಈ ಹಂತದಲ್ಲಿ ಚುನಾವಣಾ ತಕರಾರು ಅರ್ಜಿಗಳು ಎಷ್ಟು ಬೀಳಬಹುದು ಎಂಬುದನ್ನು ಊಹಿಸಿಕೊಳ್ಳಲಿಕ್ಕೆ ಕಷ್ಟವಾಗುತ್ತದೆ. ಈ ದೇಶದ ಜನರು ರಾಜಕೀಯದಲ್ಲಿ ಬಹಳ ಮೋಹಿತರಾಗಿದ್ದಾರೆ; ಎಷ್ಟೆಂದರೆ ರಾಜಕೀಯವೆಂದರೆ ಭಾವೋದ್ರೇಕಗೊಳ್ಳುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡರೆ, ಬಹು ದೊಡ್ಡ ಪ್ರಮಾಣದಲ್ಲಿ ತಕರಾರು ಅರ್ಜಿಗಳು ಬೀಳಬಹುದು. ಹಾಗೇನಾದರೂ ಆದರೆ, ಮೇಲ್ಮನವಿಯನ್ನು ತೀರ್ಮಾನಿಸುವ ಯಂತ್ರವು ಅಧಿಕೃತವಾಗಿರಬೇಕೆಂಬುದು ನಿಮ್ಮ ಅಪೇಕ್ಷೆಯಾದರೆ, ಈ ದಿನದಲ್ಲಿ, ಈ ಕೆಲಸವನ್ನು ನಿಭಾಯಿಸುವುದಕ್ಕೆ ದೊರಕಬಹುದಾದ ಜಿಲ್ಲಾ ನ್ಯಾಯಾಧೀಶರುಗಳ ಸಂಖ್ಯೆಯಲ್ಲಿ ಗಣನೀಯವಾಗಿ ಕೊರತೆ ಇದೆ ಎಂಬುದು ಗೊತ್ತಾಗುತ್ತದೆ. ಆ ಕಾರಣದಿಂದಲೇ, ಎರಡನೇ ಸದಸ್ಯನನ್ನು ನ್ಯಾಯಿಕ ಅಧಿಕಾರಿ ಎಂದು ವಿವರಿಸಲಾಗಿದೆ. ಅವನು ಜಿಲ್ಲಾ ನ್ಯಾಯಾಧೀಶನ ದರ್ಜೆಯುಳ್ಳವನಾಗಿರಬೇಕೆಂದಿಲ್ಲ.

ಇದರ ಜೊತೆಗೆ ಬೇರೆ ಬೇರೆ ರಾಜ್ಯಗಳಲ್ಲಿ, ಉಚ್ಚ ನ್ಯಾಯಾಲಯಗಳು ವಕೀಲರುಗಳ ಒಂದು ಪಟ್ಟಿಯನ್ನು ತಯಾರಿಸಲು ಅವಕಾಶಮಾಡಿಕೊಡಲಾಗಿದೆ. ಆಯಾ ಉಚ್ಚನ್ಯಾಯಾಲಯದ ಅಭಿಪ್ರಾಯದಲ್ಲಿ, ಈ ವಕೀಲರುಗಳನ್ನು ನ್ಯಾಯಾಧಿಕರಣದ ಸದಸ್ಯರನ್ನಾಗಿ ನೇಮಕ ಮಾಡುವುದಕ್ಕೆ ಅವರಿಗೆ ಸಾಕಷ್ಟು ಅರ್ಹತೆ ಇರುವವರು ಹಾಗೂ ನಂಬಿಕಸ್ತರು ಎಂಬ ಎರಡು ವಿಭಾಗಗಳನ್ನು ಭಾವಿಸಲಾಗಿದೆ. ಮತ್ತೆ ಕೂಡ, ತಕರಾರು ಅರ್ಜಿಗಳು ಬಹಳಷ್ಟು ಅಗಾಧವಾಗಿದ್ದು, ನ್ಯಾಯಿಕ ಅಧಿಕಾರಿಗಳೂ ಸಹಾ ಸಾಕಾಗುವುದಿಲ್ಲವೆಂಬ ಊಹೆಯ ಮೇಲೆ ಇವನ್ನು ಸೂಚಿಸಲಾಗಿದೆ. (ಸದನದಲ್ಲಿ ಅಡಚಣೆ) ವಕೀಲರುಗಳಿಗೆ ಏನಾದರೊಂದು ಉದ್ಯೋಗವನ್ನು ಕಲ್ಪಿಸಿಕೊಡುವುದು ಒಳ್ಳೆಯದೆಂದು ನನಗೆ ಅನಿಸುತ್ತದೆ. ವಕೀಲರುಗಳ ಬಗ್ಗೆ ನಾನು ಬಹಳಷ್ಟು ಟೀಕೆಗಳನ್ನು ಕೇಳಿದ್ದರೂ ಸಹ, ಅವರುಗಳಿಗೆ ಏನಾದರೊಂದು ಉದ್ಯೋಗವನ್ನು ಕೊಡಬೇಕೆಂದು ನನಗೆ ಅನಿಸುತ್ತದೆ. ವಕೀಲರುಗಳು ಇಲ್ಲದೇ ನಾಗರಿಕತೆಯು ಅಸ್ತಿತ್ವದಲ್ಲಿರಲಾರದೆಂಬುದು ನನ್ನ ಖಚಿತವಾದ ಅಭಿಪ್ರಾಯ. ನಾಗರಿಕತೆಯ ಬುನಾದಿಯೇ ಕಾನೂನು. ನಾನು ಹೇಳಿದ ಹಾಗೆ, ನ್ಯಾಯಾಧಿಕರಣದ ಸದಸ್ಯರಲ್ಲಿ, ಏನಾದರೂ ಅಭಿಪ್ರಾಯಬೇಧ ಉಂಟಾದರೆ, ಉಚ್ಚ ನ್ಯಾಯಾಲಯಕ್ಕೆ ಪರಾಮರ್ಶೆ ಮಾಡಬಹುದೆಂದು ಮಸೂದೆಯು ಉಪಬಂಧಿಸುತ್ತದೆ. ನನಗೆ ಅನಿಸುವ ಹಾಗೆ ಮಸೂದೆಯ ಅತಿಮುಖ್ಯವಾದ ವೈಶಿಷ್ಟ್ಯವೆಂದರೆ, ಇದೇ. ಚುನಾವಣಾ ಅರ್ಜಿಗಳಿಗೆ ಸಂಬಂಧಿಸಿದ ಕಾನೂನಿನ ಬಗ್ಗೆ ನನಗೆ ಹೆಚ್ಚು ತಿಳುವಳಿಕೆ ಇಲ್ಲ. ಅವುಗಳನ್ನು ಒಂದು ದೊಡ್ಡ ಪ್ರಮಾಣದಲ್ಲಿ ನಾನು ವ್ಯವಹರಿಸಿಲ್ಲ. ನನಗಿರುವ ಅಲ್ಪಸ್ವಲ್ಪ ಅನುಭವದಿಂದ ಹೇಳಬೇಕಾದರೆ, ಈ ಕಾನೂನು ಒಂದು ಅತ್ಯಂತ ಅನಿರ್ದಿಷ್ಟವಾದ ಕಾನೂನೆಂದು ನಾನು ತೀರ್ಮಾನಕ್ಕೆ ಬಂದಿದ್ದೇನೆ. ಒಂದು ಚುನಾವಣಾ ಅರ್ಜಿಯನ್ನು ಯಾವ ಯಾವ ರೀತಿಗಳಲ್ಲಿ ವಿಲೇ ಮಾಡಬಹುದೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಒಟ್ಟಾರೆ, ಒಂದು ಚುನಾವಣೆಯನ್ನು ಯಾವ ಆಧಾರದ ಮೇಲೆ ಅಸಿಂಧುವಾದುದೆಂದು ಘೋಷಣೆ ಮಾಡಬಹುದೆಂದು ಖಂಡಿತವಾಗಿ ಹೇಳಲಾಗುವುದಿಲ್ಲ. ಯಾವೊಬ್ಬ ಅಭ್ಯರ್ಥಿಯ ಚುನಾವಣೆಯನ್ನು ಯಾವ ಆಧಾರದ ಮೇಲೆ ಘೋಷಿಸಬಹುದೆಂದು ಖಾತರಿಯಾಗಿ ಹೇಳಲಾಗುವುದಿಲ್ಲ. ಯಾವ ಪ್ರಕರಣಗಳಲ್ಲಿ, ಈಗ ಅಸ್ತಿತ್ವದಲ್ಲಿರುವ ಕಾನೂನಿನ ಕೆಳಗೆ ನ್ಯಾಯಾಲಯಗಳು, ಒಂದು ಪ್ರತ್ಯಾರೋಪದ ಮನವಿಯನ್ನು ಸ್ವೀಕರಿಸಬಹುದೆಂದು ನಿಮಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಆದುದರಿಂದ, ಈ ಒಂದು ನಿಲುವನ್ನು ವಿಷದೀಕರಿಸುವುದಕ್ಕಾಗಿ, ಬಹಳಷ್ಟು ಸಮಯ ಹಾಗೂ ಗಮನವನ್ನು ೯೩, ೯೫ ಹಾಗೂ ೯೭ನೇ ಖಂಡಗಳ ಕಡೆಗೆ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಖಂಡಗಳಲ್ಲಿ ಈ ವಿಷಯವನ್ನು ಯಾರೇ ಆಗಲಿ ಎಷ್ಟು ಸಾಧ್ಯವಾಗಿ ವಿವರಿಸಬಹುದೋ ಅಷ್ಟು ಸಾಧ್ಯವಾಗಿ ವಿವರಿಸಲಾಗಿದೆಯೆಂಬುದನ್ನು ಕಾಣಬಹುದಾಗಿದೆ. ಇದು ಚುನಾವಣಾ ನ್ಯಾಯಾಧಿಕರಣಗಳಿಗಲ್ಲದೆ, ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೂ ಸಹ ಬಹಳಷ್ಟು ಅನುಕೂಲಕರವಾಗುತ್ತದೆಂದು ನಾನು ಆಶಿಸುತ್ತೇನೆ.

ನಾನೀಗ ಭ್ರಷ್ಟ ಮತ್ತು ಕಾನೂನು ಬಾಹಿರ ಆಚರಣೆಗಳ ಕಾನೂನಿಗೆ ಬರುತ್ತೇನೆ. ಇಲ್ಲಿ ಕೂಡ ಕಾನೂನು ಬೇರೆ ಬೇರೆ ಜಾಗಗಳಲ್ಲಿ ಚದುರಿಹೋಗಿದೆ. ಭ್ರಷ್ಟ ಮತ್ತು ಕಾನೂನುಬಾಹಿರ ಆಚರಣೆಗಳಿಗೆ ಸಂಬಂಧಿಸಿದ ಹಾಗೆ ಇರುವ ಉಪಬಂಧಗಳನ್ನು ಈ ಒಂದೇ ಮಸೂದೆಯ ಕೆಳಗೆ ತರಲು ಶ್ರಮಿಸಿದ್ದೇನೆ. ನೀವು ಅವುಗಳನ್ನು ೧೨೨ನೇ ಕಲಮು ಮತ್ತು ಅದರ ಮುಂದಿನ ಕಲಮುಗಳಲ್ಲಿ ಕ್ರೋಢೀಕರಿಸಿರುವುದನ್ನು ಕಾಣಬಹುದಾಗಿದೆ. ಭ್ರಷ್ಟಾಚಾರದ ಉದ್ದೇಶಕ್ಕೆ ಸಂಬಂಧಿಸಿದ ಹಾಗೆ, ಒಂದು ಅರ್ಥದಲ್ಲಿ ನಮ್ಮ ಕಾನೂನು ದೋಷಪೂರಿತವಾಗಿತ್ತು. ಒಂದು ಭ್ರಷ್ಟ ಆಚರಣೆಯ ಪ್ರಕರಣದಲ್ಲಿ, ಅತಿ ಮುಖ್ಯವಾದುದು ಭ್ರಷ್ಟ ಎಂದು

ಘೋಷಿಸುವ ಆಚರಣೆಯಲ್ಲ, ಆದರೆ ಭ್ರಷ್ಟ ಉದ್ದೇಶವನ್ನು ನಮ್ಮ ಕಾನೂನು ವಿಷದೀಕರಿಸಲಿಲ್ಲ. ಭ್ರಷ್ಟ ಆಚರಣೆಗೆ ಸಂಬಂಧಿಸಿದ ಹಾಗೆ ಭ್ರಷ್ಟ ಉದ್ದೇಶದ ಪ್ರಶ್ನೆಯೇ ಏಳುವುದಿಲ್ಲ; ಆಚರಣೆಯು ಕೆಟ್ಟದ್ದಾಗಿದೆ ಎಂದು ಘೋಷಿಸಲಾಗಿದೆ, ಆದರೆ ಭ್ರಷ್ಟ ಆಚರಣೆಗೆ ಸಂಬಂಧಿಸಿದ ಹಾಗೆ, ತಪ್ಪಿತಸ್ಥ ಎಂದು ತೀರ್ಮಾನ ಕೊಡುವ ಸಲುವಾಗಿ, ಉದ್ದೇಶವು ಭ್ರಷ್ಟವಾಗಿತ್ತೆಂದು ತೀರ್ಮಾನವನ್ನು ಕೊಡಬೇಕಾದ ಆವಶ್ಯಕತೆ ಇದೆ. ಚುನಾವಣೆ ನಡೆಯುತ್ತಿರುವ ಸಮಯದಲ್ಲಿ, ನೀವು ನಿಮ್ಮ ಸ್ನೇಹಿತನನ್ನು ಊಟಕ್ಕೋ, ತಿಂಡಿಗೋ ಕರೆಯಬಹುದು. ನಿಮ್ಮ ಎದುರಾಳಿಯು ನೀವು ಅವನನ್ನು (ಸ್ನೇಹಿತನನ್ನು) ಭ್ರಷ್ಟಗೊಳಿಸಿದ್ದೀರೆಂದು ಹೇಳಬಹುದು. ಇಂಥ ಒಂದು ಮನವಿಯನ್ನು ಎತ್ತಿ ಹಿಡಿಯಬಹುದೆ ಎಂದು ನನಗೆ ಗೊತ್ತಿಲ್ಲ. ಆದರೆ ಈಗ ಅಸ್ತಿತ್ವದಲ್ಲಿರುವ ಕಾನೂನಿನ ಕೆಳಗೆ ಇಂಥದೊಂದು ಉಪಬಂಧವಿರಲಿಲ್ಲ. ನಾನು ಇದನ್ನು ಮುಚ್ಚಟೆ ಮಾಡಲು ಪ್ರಯತ್ನಿಸಿದ್ದೇನೆ. ಏಕೆಂದರೆ ಇಂಗ್ಲಿಷ್ ಕಾನೂನಿನಲ್ಲಿ ಸಹ ಒಂದು ಭ್ರಷ್ಟ ಆಚರಣೆಯ ಹಿಂದೆ ಭ್ರಷ್ಟ ಉದ್ದೇಶವು ಇರಲೇಬೇಕೆಂದು ಉಪಬಂಧವಿದೆ.

ಈ ಮಸೂದೆಯಲ್ಲಿ ಒಂದು ಮುಕ್ತವಾದ ಹಾಗೂ ನ್ಯಾಯವಾದ ಚುನಾವಣೆಯನ್ನು ನಡೆಸುವುದಕ್ಕೆ ಯಾವ ಯಾವ ಉಪಬಂಧಗಳನ್ನು ಒದಗಿಸಲಾಗಿದೆ ಎಂಬುದನ್ನು ತಿಳಿಯಲು ಈ ಸದನವು ಹೆಚ್ಚು ಉತ್ಸುಕವಾಗಿದೆಯೆಂದು ನನಗೆ ಗೊತ್ತು. ನನಗೆ ಅನಿಸಿದ ಹಾಗೆ ಅದು ಎಲ್ಲರ ಅಭಿಲಾಷೆಯೂ ಆಗಿದೆ. ಆದ್ದರಿಂದ, ಒಂದು ಮುಕ್ತವಾದ ಮತ್ತು ನ್ಯಾಯವಾದ ಚುನಾವಣೆಯನ್ನು ನಡೆಸಲು ಉದ್ದೇಶಿಸಲಾಗಿರುವ ಸಂಬಂಧಪಟ್ಟ ಉಪಬಂಧಗಳನ್ನು ನಾನೀಗ ಸದನಕ್ಕೆ ಕೊಡುತ್ತಿದ್ದೇನೆ.

೧. ಚುನಾವಣೆಯ ದಿನ ಮತ್ತು ಚುನಾವಣೆಯ ಮುನ್ನಾ ದಿನ ಎಲ್ಲಾ ಚುನಾವಣಾ ಸಭೆಗಳನ್ನು ನಿಷೇಧಿಸಲಾಗಿದೆ. ಮತದಾರರಿಗಲ್ಲದೆ ಅಭ್ಯರ್ಥಿಗಳಿಗೂ ಕೂಡ ಅವರು ಮತಗಟ್ಟೆಗಳಿಗೆ ಹೋಗುವ ಮುಂಚೆ ಎರಡು ಶಾಂತಿಯುತ ರಾತ್ರಿಗಳು ಇರುವುದು ಅಪೇಕ್ಷಣೀಯವೆಂಬುದು ನಮ್ಮ ಚಿಂತನೆಯಾಗಿದೆ.

೨. ಚುನಾವಣಾ ಸಭೆಗಳಲ್ಲಿ ಗಲಭೆಗೊಂದಲಗಳನ್ನು ಮಾಡಿದವರಿಗೆ ದಂಡ ವಿಧಿಸಬೇಕೆಂಬುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದು ಬಹಳ ಅಪೇಕ್ಷಣೀಯವೆಂದು ನನಗೆ ಅನಿಸುತ್ತದೆ.

೩. ಯಾವುದೇ ಒಂದು ಚುನಾವಣೆಯ ಸಂದರ್ಭದಲ್ಲಿ ಕರ್ತವ್ಯವನ್ನು ನಿಭಾಯಿಸುತ್ತಿರುವ ಅಧಿಕಾರಿಯಾಗಿರಲಿ ಅಥವ ಪೊಲೀಸ್ ಅಧಿಕಾರಿಯಾಗಿರಲಿ, ಮತದಾರರ ಮೇಲೆ ಪ್ರಭಾವ ಬೀರುವುದಾಗಲೀ, ಅಥವ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡುವುದನ್ನಾಗಲೀ ನಿಷೇಧಿಸಲಾಗಿದೆ. ಇದನ್ನು ೧೨೪ನೇ ಖಂಡದಲ್ಲಿ ಕಾಣಬಹುದಾಗಿದೆ.

೪. ಮತಗಟ್ಟೆಗಳ ಹತ್ತಿರ ಅಥವ ಮತಗಟ್ಟೆಗಳಲ್ಲಿ ಪ್ರಚಾರ ಮಾಡುವುದನ್ನು ನಿಷೇಧಿಸಲಾಗಿದೆ.

೫. ಮತಗಟ್ಟೆಗಳ ಹತ್ತಿರ ಅಥವ ಮತಗಟ್ಟೆಗಳಲ್ಲಿ ಗಲಭೆಗಳನ್ನು ಮಾಡಿದರೆ ದಂಡ ವಿಧಿಸುವುದಕ್ಕೆ ಅವಕಾಶ ಇದೆ. ಗಲಾಟೆ ಎಂದರೆ ಮೆಗಾಫೋನ್ ಆಗಲೀ ಅಥವ ಧ್ವನಿವರ್ಧಕಗಳನ್ನಾಗಲೀ ಉಪಯೋಗಿಸುವುದು, ಇಲ್ಲವೇ ಮತಗಟ್ಟೆಗಳಲ್ಲಿ ಕಿರಿಚಾಡುವುದು.

೬. ಇದೊಂದು ಮುಖ್ಯವಾದ ವಿಷಯ. ಮತದಾರರುಗಳನ್ನು ಮತಗಟ್ಟೆಗಳಿಗೆ ಕರೆದುಕೊಂಡು ಬರುವುದಕ್ಕೆ ಅಥವ ಅಲ್ಲಿಂದ ಕರೆದುಕೊಂಡು ಹೋಗುವುದಕ್ಕೆ ವಾಹನಗಳನ್ನು ಬಾಡಿಗೆಗೆ ಪಡೆಯುವುದು ಅಥವ ಒದಗಿಸುವುದನ್ನು ಶಿಕ್ಷಾರ್ಹವನ್ನಾಗಿ ಮಾಡಲಾಗಿದೆ.

೭. ಚುನಾವಣೆಗಳಿಗೆ ಸಂಬಂಧಿಸಿದ ಹಾಗೆ ಸರ್ಕಾರಿ ಕರ್ತವ್ಯವನ್ನು ಮಾಡುವುದರಲ್ಲಿ ತಪ್ಪಿದ್ದೇ

ಆದರೆ, ಅದನ್ನು ಶಿಕ್ಷಾರ್ಹವನ್ನಾಗಿ ಮಾಡಲಾಗಿದೆ.

೮. ಮತಗಟ್ಟೆಗಳಿಂದ ಮತಚೀಟಿಗಳನ್ನು ತೆಗೆದುಕೊಂಡು ಹೋಗುವುದನ್ನು ಅಪರಾಧವೆಂದು ಪರಿಗಣಿಸಲಾಗಿದೆ.

೯. ಭಾರತದಾದ್ಯಂತ ಬೇರೆಯವರ ಹೆಸರಿನಲ್ಲಿ ಮತದಾನ ಮಾಡುವುದನ್ನು ಶಿಕ್ಷಾರ್ಹ ಅಪರಾಧವೆಂದು ಮಾಡಲಾಗಿದೆ. ಮತ್ತೂ, ನೀವು ಮುಂದೆ ನೋಡುವ ಹಾಗೆ, ಮಸೂದೆಯಲ್ಲಿ ಇತರ ಉಪಬಂಧಗಳೂ ಇವೆ. ಪ್ರತಿಯೊಬ್ಬ ಮತದಾರನೂ ಅಳಿಸಿಹೋಗಲಾಗದ ಮಸಿಯಲ್ಲಿ ತನ್ನ ಹೆಬ್ಬೆರಳಿನ ಗುರುತನ್ನು ಕೊಡಬೇಕೆಂದು ಹೇಳುವ ಒಂದು ಉಪಬಂಧವಿದೆ.

ಮಸಿಯು ಅಳಿಸಲಾಗದ್ದು ಎಂದು ನಾನು ಆಶಿಸುತ್ತೇನೆ; ಆಗ ಇನ್ನೊಬ್ಬನ ಹೆಸರಿನಲ್ಲಿ ಎರಡನೇ ಮತವನ್ನು ಹಾಕುವ ಪ್ರಕರಣವಿರುವುದಿಲ್ಲ. ನಮಗೆ ಒಂದು ಅಗಾಧವಾದ ಒಂದು ಮತದಾರ ಮಂಡಲವಿದೆ; ಹಾಗಾಗಿ, ಬೇರೆಯವರ ಹೆಸರಿನಲ್ಲಿ ಮತದಾನ ಮಾಡಲಾಗಿಲ್ಲವೆಂಬುದನ್ನು ಕಂಡುಹಿಡಿಯಲು ಬಹಳ ಕಷ್ಟವಾಗುತ್ತದೆ. ಅದನ್ನು ತಡೆಗಟ್ಟಲು ಒಂದೇ ಉಪಾಯವೆಂದರೆ, ಒಬ್ಬ ಮತದಾರನು ಮತ ಚಲಾವಣೆಗೆಂದು ಬಂದಾಗ ಯಾವುದಾದರೊಂದು ಬಗೆಯ ಗುರುತನ್ನು ಮಾಡಿದರೆ, ಅವನು ಆಗಲೇ ಮತ ಚಲಾಯಿಸಿದ್ದಾನೆಂದು ದೃಢಪಡಿಸಿಕೊಳ್ಳುವುದಕ್ಕೆ ಮತಗಟ್ಟೆಯ ಅಧಿಕಾರಿಗಳಿಗೆ ಸಾಧ್ಯವಾಗುತ್ತದೆ.

ಈ ಮಸೂದೆಯು ಒಳಗೊಂಡಿರುವ ಸಾಮಾನ್ಯ ಉಪಬಂಧಗಳು ಇವು: ಸ್ವಾಮಿ, ದೀರ್ಘವಾದ ಈ ಮಸೂದೆಯನ್ನು ಗಮನದಲ್ಲಿಟ್ಟುಕೊಂಡರೆ, ಸದನಕ್ಕೆ ಉಳಿದಿರುವುದು ಬಹಳ ಅಲ್ಪವಾದ ಸಮಯ. ಆದರೆ, ನಮಗೊಂದು ಬಹು ದೊಡ್ಡದಾದ ಸಲಹಾ ಸಮಿತಿ ಇತ್ತು ಎಂಬುದಕ್ಕಾಗಿ ಸದನವು ನಿರಾಳವಾಗಿರಬಹುದೆಂದು ನನಗೆ ಅನಿಸುತ್ತದೆ. ಯಾವುದೇ ಮಸೂದೆಗೂ ಇಂಥದೊಂದು ದೊಡ್ಡ ಸಲಹಾಸಮಿತಿ ಇರಲಿಲ್ಲವೆಂದು ಕಾಣುತ್ತದೆ.

**ಒಬ್ಬ ಮಾನ್ಯ ಸದಸ್ಯರು:** ಹಿಂದೂ "ಸಂಹಿತೆ"ಯನ್ನು ಬಿಟ್ಟು.

**ಡಾ. ಅಂಬೇಡ್ಕರ್:** ಅದೂ ಸಹ ಒಂದು ಬಳಹ ಸಣ್ಣದಾದ ಸಮಿತಿಯಾಗಿತ್ತು; ನನಗೆ ನೆನಪಿರುವ ಹಾಗೆ, ೩೧ ಸದಸ್ಯರುಗಳಿದ್ದರು.

**ಒಬ್ಬ ಮಾನ್ಯ ಸದಸ್ಯರು:** ವಯಸ್ಕರ ಮತದಾನ?

**ಡಾ. ಅಂಬೇಡ್ಕರ್:** ಬಹುಮಟ್ಟಿಗೆ ವಯಸ್ಕರ ಮತದಾನವನ್ನು ಕೊಟ್ಟಿದ್ದೇನೆ. ಎರಡನೆಯದಾಗಿ, ನಾನು ಹೇಳಿದ ಹಾಗೆ ಇದು ಯಾವುದೇ ರಾಜನೀತಿಯ ಪ್ರಶ್ನೆಯನ್ನು ಒಳಗೊಂಡಿಲ್ಲ. ಇವುಗಳು ಚುನಾವಣೆಯಲ್ಲಿ ನ್ಯಾಯಯುತವಾದ ನಡೆಯನ್ನು ತರುವುದಕ್ಕಾಗಿರುವ ಕೇವಲ ವಿಧಾನಗಳ ಪ್ರಶ್ನೆಗಳು ಮಾತ್ರ; ಪರಿಣಾಮವಾಗಿ, ಸಲಹಾಸಮಿತಿಯು ಸೇರಿದಾಗ, ಬರಬಹುದಾದ ಯಾವುದೇ ಸಲಹೆಗಳಿಗೆ ಯಾವುದೇ ರೀತಿಯ ತಕರಾರನ್ನು ಎತ್ತುವುದನ್ನು ನಾನು ಪ್ರಸ್ತಾವಿಸುತ್ತಿಲ್ಲ; ಅದೊಂದು ಮುಕ್ತವಾದ ಸಭೆಯಾಗಿರುತ್ತದೆ. ಯಾವುದೇ ಸದಸ್ಯರು, ಅವರಿಗೆ ಸಲಹಾ ಸಮಿತಿಯಲ್ಲಿ ಸೇರ್ಪಡೆಯಾಗಿರುವ ಅದೃಷ್ಟವಿಲ್ಲದಿದ್ದರೆ, ತಮ್ಮ ಯಾವುದೇ ಸಲಹೆಗಳನ್ನು ನನಗೆ ವೈಯುಕ್ತಿಕವಾಗಿಯಾಗಲೀ, ಅಥವ ಸಲಹಾ ಸಮಿತಿಗಾಗಲೀ ಕಳುಹಿಸಬಹುದು. ನಾನು ಅದನ್ನು ಸಲಹಾ ಸಮಿತಿಯ ಮುಂದೆ ಇಟ್ಟು ಅವುಗಳಿಗೆ ಸೂಕ್ತವಾದ ಗಮನ ಸಿಗುವ ಹಾಗೆ ನೋಡಿಕೊಳ್ಳುತ್ತೇನೆ.

ಸ್ವಾಮಿ, ನಾನೀಗ ಮಸೂದೆಯನ್ನು ಮಂಡಿಸುತ್ತಿದ್ದೇನೆ.

*__ಪ್ರೊ. ರಂಗಾ:__ ಸ್ವಾಮಿ, ನನಗೆ ಅನಿಸುವುದೇನೆಂದರೆ, ಒಬ್ಬ ಸದಸ್ಯನು ತಾನು ಯಾವ ಸ್ಥಾನವನ್ನು ಇಟ್ಟುಕೊಳ್ಳಬಯಸುತ್ತಾನೆ ಎಂದು ಹೇಳುವುದಕ್ಕೆ ಅವನಿಗೆ ಅವಕಾಶ ಕೊಡಬೇಕು. ಅವನು ಹಾಗೆ ಡಿಕ್ಲೇರ್ ಮಾಡಿಕೊಳ್ಳದಿದ್ದರೂ, ಮೊದಲು ಘೋಷಣೆಮಾಡಿದ ಚುನಾವಣೆಯ ಫಲಿತಾಂಶದಂತೆ, ಅವನನ್ನು ಆ ಸ್ಥಾನಕ್ಕೇ–ಚುನಾಯಿತನಾಗಿದ್ದಾನೆಂದು ಪರಿಗಣಿಸಬೇಕು.

**ಡಾ. ಅಂಬೇಡ್ಕರ್:** ಅದು ಅಲ್ಲಿಯೇ ಇದೆ. ಅವನು ನಿಗದಿತ ಅವಧಿಯಲ್ಲಿ ರಾಜೀನಾಮೆ ಕೊಟ್ಟರೆ ಸಾಕು.

◆

* P.D., ಸಂ. ೭, ಭಾಗ II, ೨೨ ಡಿಸೆಂಬರ್ ೧೯೫೦, ಪು. ೨೨೯೫.

# ೨೫

## *ಕಾನೂನು ಸಚಿವಾಲಯ – ಬೇಡಿಕೆ ಸಂ.೧೩

**ಮಾನ್ಯ ಉಪಸಭಾಪತಿಗಳು:** ಮಸೂದೆಯ ವಿಷಯ:

ಕಾನೂನು ಸಚಿವಾಲಯಕ್ಕೆ ಸಂಬಂಧಿಸಿದ ಹಾಗೆ, ೩೧ನೇ ಮಾರ್ಚ ೧೯೫೧ಕ್ಕೆ ಕೊನೆಯಾಗುವ ವರ್ಷದ ಅವಧಿಯಲ್ಲಿ ಮಾಡಬೇಕಾದ ಸಂದಾಯಗಳಿಗಾಗಿ, ರುಸುಮುಗಳನ್ನು ಪಾವತಿ ಮಾಡುವ ಸಲುವಾಗಿ, ರಾಷ್ಟ್ರಪತಿಯವರಿಗೆ ರೂ. ೧೫,೯೩,೦೦೦/–ಗಳಿಗೆ ಹೆಚ್ಚಿಗೆ ಇಲ್ಲದಂತೆ ಹೆಚ್ಚುವರಿ ಮೊತ್ತದ ಅನುದಾನವನ್ನು ಕೊಡಬೇಕು.

**ಶ್ರೀ ಕಾಮತ್:** ಈ ಹೆಚ್ಚುವರಿ ಬೇಡಿಕೆಯ ವಿಷಯದಲ್ಲಿ ಕಳೆದ ಅಧಿವೇಶನದಲ್ಲಿ, ಇದರ ಕುರಿತ ಚರ್ಚೆಯ ಮಧ್ಯದಲ್ಲಿ, ಪಾರ್ಲಿಮೆಂಟಿನ ಅಂದಿನ ಕಲಾಪ ಮುಗಿದಾಗ, ಡಾ. ಅಂಬೇಡ್ಕರ್ ಅವರು ಆಗ ಸದನದ ಮುಂದೆ ಇದ್ದ ಈ ನಿರ್ದಿಷ್ಟ ಬೇಡಿಕೆಯ ಬಗ್ಗೆ ಉತ್ತರಿಸಬೇಕಾಗಿತ್ತು. ಈ ಮೊತ್ತವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪರವಾಗಿ ಸರ್ವೋಚ್ಚನ್ಯಾಯಾಲಯದಲ್ಲಿ ಪ್ರಕರಣಗಳನ್ನು ನಡೆಸುವ ಸಲುವಾಗಿ, ಕಾನೂನು ಸಚಿವಾಲಯದಲ್ಲಿ ಒಂದು ಕೇಂದ್ರ ಏಜೆನ್ಸಿಯನ್ನು ಬಜೆಟ್ ಅಧಿವೇಶನದ ನಂತರ ರಚಿಸುವ ಸಲುವಾಗಿ, ಬೇಕಾದ ಹೆಚ್ಚುವರಿ ಎಂದು ಅಡಿಟಿಪ್ಪಣಿ ಹೇಳುತ್ತದೆ. ಈ ವೆಚ್ಚವನ್ನು ಭಾರತ ಸರ್ಕಾರ ಮತ್ತು ಭಾಗವಹಿಸುವ ರಾಜ್ಯಗಳು ಹಂಚಿಕೊಂಡು ಭರಿಸಬೇಕು. ಡಾ. ಅಂಬೇಡ್ಕರ್ ಅವರಿಗೆ ನೆನಪಿರುವ ಹಾಗೆ, ಈ ನಿರ್ದಿಷ್ಟ ವಿಷಯದ ಮೇಲೆ ಅವರು ಆಗ ಉತ್ತರಿಸಬೇಕಾಗಿದ್ದು, ಆದರೆ ಆ ದಿನದ ಸಂಸತ್ತಿನ ಕಲಾಪ ಮುಗಿದು ಸದನ ಮುಕ್ತಾಯವಾಗಿತ್ತು; ಈ ಬೇಡಿಕೆಯು ತದನಂತರ ಸಭೆಯ ಮುಂದೆ ಬರಲಿಲ್ಲ. ಬಜೆಟ್ ನಂತರ ರಚಿಸಲಾದ ಈ ಏಜನ್ಸಿಯ ಕುರಿತು, ಅದರಲ್ಲಿ ನಿರ್ದಿಷ್ಟವಾಗಿ ಇತರ ಸರ್ಕಾರಗಳಿಂದ ಬರಬೇಕಾದ ವಸೂಲಿಗಳ ಬಗ್ಗೆ, ಡಾ. ಅಂಬೇಡ್ಕರ್ ಸ್ವಲ್ಪ ಬೆಳಕನ್ನು ಚೆಲ್ಲಿದರೆ, ನಾನು ಆಭಾರಿಯಾಗಿರುತ್ತೇನೆ. ಎಷ್ಟು ರಾಜ್ಯಸರ್ಕಾರಗಳು, ಈ ಏಜೆನ್ಸಿಗೆ ಎಷ್ಟು ಮೊತ್ತವನ್ನು ತಮ್ಮ ಪಾಲೆಂದು ಯಾವ ಪ್ರಮಾಣದಲ್ಲಿ ಕೊಡುತ್ತಿವೆ. ಅಲ್ಲದೆ, ಈ ರೀತಿ ರಚಿಸಲಾದ ಈ ಕೇಂದ್ರ ಏಜೆನ್ಸಿಯು ನಿರ್ವಹಿಸುತ್ತಿರುವ ಕೆಲಸವಾದರೂ ಏನು?

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಮಾನ್ಯ ಉಪಸಭಾಪತಿಗಳವರೆ, ನನ್ನ ನಂಬಿಕೆ ಏನೆಂದರೆ, ಏಕೆ, ನನಗೆ ಖಂಡಿತವಾಗಿ ಗೊತ್ತಿದೆ. ಅದು ಏನೆಂದರೆ ನನಗೆ ಈ ಅಧಿವೇಶನದಲ್ಲೇ ಎರಡು ಪ್ರಶ್ನೆಗಳನ್ನು ಕೇಳಲಾಯಿತು. ಒಂದನ್ನು ಕೇಳಿದವರು ಮಿ. ರಾಜ್ ಬಹಾದ್ದೂರ್. ಇನ್ನೊಂದನ್ನು ಮಿ. ಕಜ್ಮಿಯವರು ಕೇಳಿದರು. ಆ ಎರಡು ಪ್ರಶ್ನೆಗಳಿಗೆ ಉತ್ತರವಾಗಿ ಈ ವಿಷಯದ ಮೇಲೆ ಅತ್ಯಂತ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ನನ್ನ ಮಾನ್ಯ ಸ್ನೇಹಿತರು ನನ್ನ ಉತ್ತರಗಳಿಗೆ ಗಮನಹರಿಸುವ ತೊಂದರೆಯನ್ನು

---

* P.D., ಸಂ. ೭, ಭಾಗ II, ೨೧ ಡಿಸೆಂಬರ್ ೧೯೫೦, ಪು. ೨೧೭೮–೭೯.

ತೆಗೆದುಕೊಂಡರೆ, ಅವರಿಗೆ ಬೇಕಾದ ಎಲ್ಲ ಮಾಹಿತಿಗಳೂ ಅವರಿಗೆ ಸಿಗುತ್ತದೆ.

**ಶ್ರೀ ಹುಸೇನ್ ಇಮಾಮ್:** ಉತ್ತರಗಳು ಬರವಣಿಗೆಯಲ್ಲಿ ಇದ್ದವೋ ಅಥವ ಮೌಖಿಕವೋ?

**ಡಾ. ಅಂಬೇಡ್ಕರ್:** ಅವು ಮೌಖಿಕ ಉತ್ತರಗಳು. ಆದರೆ ಅವು ನಡವಳಿಯಲ್ಲಿ ದಾಖಲಾಗಿರುತ್ತವೆ. ಬೇಕಾದರೆ ಅವರಿಗೆ ನನ್ನ ಕಾಪಿಯನ್ನು ಕೊಡುತ್ತೇನೆ.

**ಮಿ. ಉಪಸಭಾಪತಿಗಳು:** ಅದು ಇಲ್ಲಿ ನಡವಳಿಯಲ್ಲಿ ಇದೆ.

◆

## ವಿಭಾಗ – ನಾಲ್ಕು

# ೯ನೇ ಫೆಬ್ರವರಿ ೧೯೫೧
# ರಿಂದ
# ೨೧ನೇ ಏಪ್ರಿಲ್ ೧೯೫೧

# ವಿಭಾಗ – ನಾಲ್ಕು

## ಪರಿವಿಡಿ


೨೬. ದಂತವೈದ್ಯರ (ತಿದ್ದುಪಡಿ) ವಿಧೇಯಕ ೨೨೯

೨೭. ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕ ೨೩೯

೨೮. ಭಾಗ ಬಿ ರಾಜ್ಯಗಳ (ಕಾನೂನುಗಳ) ವಿಧೇಯಕ ೨೫೧

೨೯. ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳ (ಉಚ್ಚ ನ್ಯಾಯಾಲಯಗಳಲ್ಲಿ ವಕೀಲಿ ವೃತ್ತಿ ನಡೆಸುವ) ವಿಧೇಯಕ ೨೬೯

೩೦. ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕ ೨೮೦

೩೧. ಸಿವಿಲ್ ಪ್ರಕ್ರಿಯಾ ಸಂಹಿತೆ (ಎರಡನೇ ತಿದ್ದುಪಡಿ) ವಿಧೇಯಕ ೨೮೬

೩೨. ಜಲಿಯಾನ್‌ವಾಲಾಬಾಗ್ ರಾಷ್ಟ್ರೀಯ ಸ್ಮಾರಕ ವಿಧೇಯಕ ೨೮೯

೩೩. ಸಂವಿಧಾನ (ಮೊದಲನೇ ತಿದ್ದುಪಡಿ) ವಿಧೇಯಕ ೨೯೭

# ೨೬
# *ದಂತವೈದ್ಯರ (ತಿದ್ದುಪಡಿ) ವಿಧೇಯಕ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಮಾನ್ಯ ಆರೋಗ್ಯ ಸಚಿವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಈ ವಿಧೇಯಕದ ಜವಾಬ್ದಾರಿ ವಹಿಸಿಕೊಳ್ಳುವಂತೆ ನನ್ನನ್ನು ಕೋರಲಾಯಿತು.

ಆದ್ದರಿಂದ ನಾನು "೧೯೪೮ರ ದಂತವೈದ್ಯರ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು" ಪ್ರಸ್ತಾವಿಸುತ್ತೇನೆ.

ವಿಧೇಯಕವು ಬಹಳ ಚಿಕ್ಕದು. ಇದು ಯಾವುದೇ ವಿವಾದಾತ್ಮಕ ವಿಷಯಗಳನ್ನು ಒಳಗೊಂಡಿಲ್ಲ. ೧೯೪೮ರ ದಂತವೈದ್ಯರ ಅಧಿನಿಯಮವು ೧೯೪೮ರ ಮಾರ್ಚ್ ೨೯ರಂದು ಜಾರಿಗೆ ಬಂದಿತು. ಅದನ್ನು ಭಾಗ 'ಎ', ಭಾಗ 'ಸಿ' ಮತ್ತು ಭಾಗ 'ಡಿ' ರಾಜ್ಯಗಳಿಗೆ ಅನ್ವಯಿಸಲಾಯಿತು. ಆ ಅಧಿನಿಯಮದ ೪೯ನೇ ಪ್ರಕರಣದ ಅಡಿಯಲ್ಲಿ, ಯಾವೊಬ್ಬ ವ್ಯಕ್ತಿಯೂ ೧೯೫೦ರ ಮಾರ್ಚ್ ೨೮ರ ತರುವಾಯ, ಅಧಿನಿಯಮವು ಅಗತ್ಯಪಡಿಸಿದಂತೆ ಅದರಲ್ಲಿರುವ ನಿಯಮಗಳ ಅನುಸಾರವಾಗಿ ಸಿದ್ಧಪಡಿಸಬೇಕಾದ ದಂತವೈದ್ಯರ ರಿಜಿಸ್ಟರಿನಲ್ಲಿ ತನ್ನ ಹೆಸರು ಕಂಡುಬಂದ ಹೊರತು ದಂತವೈದ್ಯ ವೃತ್ತಿಯನ್ನು ನಡೆಸಲು ಅರ್ಹನಾಗಿರತಕ್ಕದ್ದಲ್ಲ. ರಿಜಿಸ್ಟರು ೧೯೫೦ರ ಮಾರ್ಚ್ ೨೮ರ ವೇಳೆಗೆ ಸಿದ್ಧವಾಗಿರುವುದೆಂದು ನಿರೀಕ್ಷಿಸಲಾಗಿತ್ತು. ಪರಿಣಾಮವಾಗಿ ಈ ಅಧಿನಿಯಮದ ಜಾರಿಗೊಳ್ಳಬೇಕಾದ ಭಾಗವನ್ನು ೧೯೫೦ರ ಮಾರ್ಚ್ ೨೮ರಂದು ಜಾರಿಗೆ ಬರುವಂತೆ ರಚಿಸಲಾಯಿತು. ಆದರೆ ಈ ನಿರೀಕ್ಷೆ ಫಲಿಸಲಿಲ್ಲ. ರಿಜಿಸ್ಟರು ೧೯೫೦ರ ಮಾರ್ಚ್ ೨೮ರ ವೇಳೆಗೆ ಸಿದ್ಧವಾಗುವುದಿಲ್ಲವೆಂದು ವಿವಿಧ ರಾಜ್ಯಗಳಿಂದ ವರದಿ ಬಂದಿತು. ಪರಿಣಾಮವಾಗಿ, ರಾಜ್ಯಗಳು ರಿಜಿಸ್ಟರನ್ನು ಸಿದ್ಧಪಡಿಸುವುದು ಸಾಧ್ಯವಾಗುವಂತೆ ಅವಧಿಯನ್ನು ಒಂದು ವರ್ಷ ವಿಸ್ತರಿಸುವುದು ಅಗತ್ಯವಾಯಿತು. ಸಂಸತ್ತಿನ ಅಧಿವೇಶನ ಇಲ್ಲದೆ ಇದ್ದುದರಿಂದ, ಅವಧಿಯನ್ನು ೧೯೫೧ರ ಮಾರ್ಚ್ ೨೮ರ ವರೆಗೆ ವಿಸ್ತರಿಸಿ ಅಗತ್ಯ ಉಪಬಂಧವನ್ನು ಅನುಷ್ಠಾನಕ್ಕೆ ತರುವ ಅಧ್ಯಾದೇಶವನ್ನು ಸರ್ಕಾರವು ಹೊರಡಿಸಿತು. ಅಧ್ಯಾದೇಶವನ್ನು ಕಾನೂನಾಗಿ ಪರಿವರ್ತಿಸಲು ಈ ವಿಧೇಯಕದಲ್ಲಿ ಉದ್ದೇಶಿಸಲಾಗಿದೆ. ಆದ್ದರಿಂದ ರಿಜಿಸ್ಟರನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ಅವಧಿಯನ್ನು ವಿಸ್ತರಿಸುವುದು ಮುಖ್ಯ ಉಪಬಂಧವಾಗಿದೆ.

ಮೂಲ ಅಧಿನಿಯಮವನ್ನು ಅನುಷ್ಠಾನಕ್ಕೆ ತರುವಲ್ಲಿ ಕಂಡುಬಂದಿರುವ ಕೆಲವು ಅಡ್ಡಿಗಳನ್ನು ನಿವಾರಿಸುವ ಸಲುವಾಗಿ ಕಾನೂನನ್ನು ತಿದ್ದುಪಡಿಮಾಡಲು ಪ್ರಸಕ್ತ ಸಂದರ್ಭದ ಪ್ರಯೋಜನ ಪಡೆಯಲಾಗಿದೆ. ಮೊದಲನೆಯದಾಗಿ ಮೂಲ ಅಧಿನಿಯಮವು ಎರಡು ಉಪಬಂಧಗಳನ್ನು ಹೊಂದಿತ್ತು. ರಿಜಿಸ್ಟರಿನಲ್ಲಿ ಹೆಸರು ಇಲ್ಲದ ಯಾರೇ ವ್ಯಕ್ತಿಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ನೇಮಿಸಿಕೊಳ್ಳಲು ಅವಕಾಶ ನೀಡದೆ ಇರುವುದು ಒಂದು ಉಪಬಂಧ. ರಿಜಿಸ್ಟರುಗಳು ಸಿದ್ಧವಾದ ತರುವಾಯ ಈ ಉಪಬಂಧ ಜಾರಿಗೊಳ್ಳುವುದೆಂದು ನಿರೀಕ್ಷಿಸಲಾಗಿತ್ತು. ರಿಜಿಸ್ಟರುಗಳು ಸಿದ್ಧವಾಗದೆ ಇರುವುದರಿಂದ ಅವರು ಅರ್ಹತೆಯಿದ್ದರೂ, ರಿಜಿಸ್ಟರು ಸಿದ್ಧವಿರದ ಕಾರಣಕ್ಕಾಗಿ ರಿಜಿಸ್ಟರಿನಲ್ಲಿ ಹೆಸರಿಲ್ಲದ ವ್ಯಕ್ತಿಗಳು ಸರ್ಕಾರಿ

---

* ಪಿ.ಡಿ. Vol. 4, ಭಾಗ ೨, ೧೧ ಆಗಸ್ಟ್ ೧೯೫೦, ಪು. ೮೪೧.

ಆಸ್ಪತ್ರೆಗಳಲ್ಲಿ ಯಾವುದೇ ಹುದ್ದೆಯನ್ನು ಹೊಂದಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವಧಿಯನ್ನು ವಿಸ್ತರಿಸುವುದು ಮತ್ತು ಅವರ ಹೆಸರುಗಳು ರಿಜಿಸ್ಟರಿನಲ್ಲಿಲ್ಲದಿದ್ದರೂ ಅಂಥ ವ್ಯಕ್ತಿಗಳು ಹುದ್ದೆಯನ್ನು ಹೊಂದಲು ಅವಕಾಶ ನೀಡುವುದು ಅಗತ್ಯವಾಗಿದೆ.

ಎರಡನೆಯದಾಗಿ, ದಂತವೈದ್ಯಶಾಸ್ತ್ರದಲ್ಲಿ ಡಿಪ್ಲೊಮಾ ಪದವಿ ನೀಡುತ್ತಿದ್ದ ದಂತವೈದ್ಯಶಾಲೆಯೊಂದು ಬಂಗಾಳದಲ್ಲಿದೆ. ಅಧಿನಿಯಮವನ್ನು ಹೊರಡಿಸಿದ ಸಮಯದಲ್ಲಿ ಬಂಗಾಳ ದಂತವೈದ್ಯಶಾಲೆಯು ನೀಡಿದ ಡಿಪ್ಲೊಮಾಗಳಿಗೆ, ರಿಜಿಸ್ಟರಿನಲ್ಲಿ ಡಿಪ್ಲೊಮಾ ಪಡೆದವರ ಹೆಸರನ್ನು ಸೇರಿಸುವುದಕ್ಕಾಗಿ ಮನ್ನಣೆ ನೀಡಬೇಕೆ ಎಂಬ ವಿಷಯದ ಬಗ್ಗೆ ವಿವಾದವಿತ್ತು. ಬಂಗಾಳದ ದಂತವೈದ್ಯಶಾಲೆ ನೀಡುವ ಡಿಪ್ಲೊಮಾ ಪಡೆದವರ ಹೆಸರುಗಳನ್ನು ರಿಜಿಸ್ಟರಿನಲ್ಲಿ ಸೇರಿಸಲು ಆಗದು (ಅಗತ್ಯವಾದ ಅರ್ಹತೆ ಆ ಡಿಪ್ಲೋಮಾಕ್ಕೆ ಇಲ್ಲ) ಎಂದು ಭಾವಿಸಲಾಗಿತ್ತು. ಬಂಗಾಳದ ದಂತ ವೈದ್ಯಶಾಲೆಯಿಂದ ಡಿಪ್ಲೊಮಾ ಪಡೆದ ವ್ಯಕ್ತಿಗಳು ಈ ಅನರ್ಹತೆಯನ್ನು ಹೋಗಲಾಡಿಸಬೇಕೆಂದು ಸಾಕಷ್ಟು ಚಳುವಳಿ ನಡೆಸಿದ್ದಾರೆ. ಪಶ್ಚಿಮ ಬಂಗಾಳ ಸರ್ಕಾರವು ಒಂದು ಹೊಂದಾಣಿಕೆಯನ್ನು ಸೂಚಿಸಿದೆ; ಅದರ ಪ್ರಕಾರ ೧೯೪೦ಕ್ಕೆ ಮೊದಲು ಡಿಪ್ಲೊಮಾ ಪಡೆದ ವ್ಯಕ್ತಿಗಳನ್ನು, ಕೆಲವು ಷರತ್ತುಗಳಿಗೆ ಒಳಪಟ್ಟು, ರಿಜಿಸ್ಟರಿನಲ್ಲಿ ನಮೂದಿಸಲು ಅರ್ಹತೆಯುಳ್ಳ ವ್ಯಕ್ತಿಗಳೆಂದು ಪರಿಗಣಿಸಬಹುದು. ಆ ಹೊಂದಾಣಿಕೆಯನ್ನು ಸಹ ಈ ವಿಧೇಯಕದಲ್ಲಿ ಕೊಡಲಾಗಿದೆ: ಆದ್ದರಿಂದ ಈ ವಿಧೇಯಕವು ಮೂರು ಉಪಬಂಧಗಳನ್ನು ಹೊಂದಿದೆ.

(೧) ಅವಧಿಯನ್ನು ವಿಸ್ತರಿಸುವುದು

(೨) ಬಂಗಾಳ ದಂತವೈದ್ಯ ಶಾಲೆಯ ಡಿಪ್ಲೊಮಾ ಪಡೆದ ವ್ಯಕ್ತಿಗಳ ಹೆಸರುಗಳನ್ನು ಕೆಲವು ಸಂದರ್ಭಗಳಲ್ಲಿ ರಿಜಿಸ್ಟರಿನಲ್ಲಿ ಸೇರಿಸಲು ಅನುಮತಿಸುವುದು.

(೩) ರಿಜಿಸ್ಟರನ್ನು ಸಿದ್ಧಪಡಿಸುವವರೆಗೆ ನೋಂದಾಯಿತರಲ್ಲದ ದಂತವೈದ್ಯರ ನೌಕರಿಯನ್ನು ೧೯೫೧ರ ವರೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಮುಂದುವರಿಸುವುದು.

ಇದಿಷ್ಟು ವಿಧೇಯಕದಲ್ಲಿದೆ. ವಿಧೇಯಕಕ್ಕೆ ಸಮ್ಮತಿ ನೀಡಲು ಸದನಕ್ಕೆ ಯಾವುದೇ ತೊಂದರೆಯಿಲ್ಲವೆಂದು ಭಾವಿಸುತ್ತೇನೆ.

ಗೊತ್ತುವಳಿಯನ್ನು ಪ್ರಸ್ತಾವಿಸಲಾಗಿದೆ:

**ಮಾನ್ಯ ಸಭಾಧ್ಯಕ್ಷರು:**

"೧೯೪೮ರ ದಂತವೈದ್ಯರ ಅಧಿನಿಯಮವನ್ನು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕಾಗಿದೆ."

**ಶ್ರೀ ಸಿಧ್ವ (ಮಧ್ಯಪ್ರದೇಶ):** ಮಾರ್ಚ್ ತಿಂಗಳಲ್ಲಿ ಸದನದ ಅಧಿವೇಶನವಿದ್ದಾಗ, ಒಂದು ಅಧ್ಯಾದೇಶವನ್ನು ಹೊರಡಿಸಿದುದನ್ನು ಮೊಟ್ಟ ಮೊದಲನೆಯದಾಗಿ ನಾನು ತೀವ್ರವಾಗಿ ವಿರೋಧಿಸುತ್ತೇನೆ.

**ಡಾ. ಅಂಬೇಡ್ಕರ್:** ಅಧ್ಯಾದೇಶವನ್ನು ಮೇ ತಿಂಗಳಿನಲ್ಲಿ ಹೊರಡಿಸಲಾಯಿತು. ನನ್ನ ಸ್ನೇಹಿತರಾದ ಮಾನ್ಯ ಶ್ರೀ ಸಿಧ್ವ ಮತ್ತು ಪಂಡಿತ್ ಠಾಕೂರ್ ದಾಸ್ ಭಾರ್ಗವರವರು ಎತ್ತಿದ ಪ್ರಶ್ನೆಯನ್ನು ಅವರ ತಿದ್ದುಪಡಿಗಳನ್ನು ತೆಗೆದುಕೊಳ್ಳುವ ಸಮಯಕ್ಕೆ ಇಟ್ಟುಕೊಂಡಿದ್ದರೆ ಚೆನ್ನಾಗಿತ್ತು ಎಂದೆನಿಸುತ್ತದೆ. ಅವರ ತಿದ್ದುಪಡಿಗಳನ್ನು ಪ್ರಸ್ತಾವಿಸುವಾಗ ಪುನಃ ಎತ್ತಲಾಗುವ ವಿಷಯಗಳಿಗೆ ಉತ್ತರಿಸುವುದು ನಿಸ್ಸಂಶಯವಾಗಿಯೂ ಸಂದಿಗ್ಧವೆನಿಸುತ್ತದೆ. ಆದರೆ ಅವರು ಎತ್ತಿರುವ ಅಂಶಗಳಿಗೆ ಉತ್ತರಿಸದೆ ಬೇರೆ ದಾರಿಯಿಲ್ಲ. ನಾನು ಸಂಕ್ಷಿಪ್ತವಾಗಿ ಅದಕ್ಕೆ ಉತ್ತರಿಸುತ್ತೇನೆ, ಏಕೆಂದರೆ ನಾನು.....

**ಮಾನ್ಯಸಭಾಧ್ಯಕ್ಷರು:** ತಿದ್ದುಪಡಿಗಳ ಬಗ್ಗೆ ಯಾವುದೇ ವಾದಗಳನ್ನು ನಾನು ಅನುಮತಿಸುವುದಿಲ್ಲ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನನ್ನ ಸ್ನೇಹಿತರು ಅದನ್ನು ಒಪ್ಪಿಕೊಳ್ಳದೆ ಇದ್ದರೆ ನಾನು ಯಾವುದೇ ತಿದ್ದುಪಡಿಯನ್ನು ಪ್ರಸ್ತಾಪಿಸುವುದಿಲ್ಲ.

**ಡಾ. ಅಂಬೇಡ್ಕರ್:** ಶ್ರೀ ಸಿದ್ವ ಅವರು ಒಂದೆರಡು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಸದನವು ಅಧಿವೇಶನದಲ್ಲಿದ್ದಾಗ ಅಧ್ಯಾದೇಶವನ್ನು ಏಕೆ ಹೊರಡಿಸಲಾಯಿತು ಎಂಬುದು ಮೊದಲನೇ ಅಂಶ. ಅದಕ್ಕೆ ಎರಡು ರೀತಿಯ ಕಾರಣವಿದೆ. ಮೊದಲನೆಯ ಉತ್ತರ ಇದು: ರಿಜಿಸ್ಟರಿನ ಸಿದ್ಧತೆಗೆ ಸಮಯವನ್ನು ವಿಸ್ತರಿಸುವ ವಿಷಯದಲ್ಲಿ ಭಾರತ ಸರ್ಕಾರವನ್ನು ಮೊದಲು ಪ್ರಶ್ನಿಸಿದ್ದು ಮದ್ರಾಸ್ ಸರ್ಕಾರ, ಅದು ಸುಮಾರು ೧೯೫೦ರ ಮಾರ್ಚ್ ೧೫ರ ವೇಳೆಗೆ, ಎಂದರೆ ಪಟ್ಟಿಯ ಸಿದ್ಧತೆಗೆ ಇದ್ದ ಅವಧಿ ಮುಗಿಯುವುದಕ್ಕೆ ಕೇವಲ ೧೩ ದಿನಗಳು ಮಾತ್ರ ಇತ್ತು. ಇದು ಒಂದು ಕಾರಣ, ಎರಡನೆಯ ಕಾರಣವೆಂದರೆ, ರಿಜಿಸ್ಟರನ್ನು ಪೂರ್ಣಗೊಳಿಸುವುದು ತಮಗೆ ಸಾಧ್ಯವಾಗುವುದಿಲ್ಲವೆಂದು ಭಾರತ ಸರ್ಕಾರಕ್ಕೆ ತಿಳಿಸುವ ಮದ್ರಾಸ್ ಸರ್ಕಾರದ ಈ ಪತ್ರವನ್ನು ಸ್ವೀಕರಿಸಿದ ತರುವಾಯ, ವಾಸ್ತವವಾಗಿ ನಿಗದಿತ ದಿನಾಂಕದೊಂದಿಗೆ ತಮ್ಮ ಪಟ್ಟಿಯನ್ನು ಸಿದ್ಧಪಡಿಸುವ ಸ್ಥಿತಿಯಲ್ಲಿ ರಾಜ್ಯಗಳು ಇವೆಯೇ ಅಥವಾ ಅವುಗಳಿಗೂ ಅವಧಿ ವಿಸ್ತರಣೆ ಅಗತ್ಯವಿದೆಯೇ ಎಂಬುದನ್ನು ಇತರ ರಾಜ್ಯಗಳಿಂದ ತಿಳಿದುಕೊಳ್ಳುವುದು ಭಾರತ ಸರ್ಕಾರಕ್ಕೆ ಅಗತ್ಯವಾಗಿತ್ತು. ಸಹಜವಾಗಿ, ಭಾರತ ಸರ್ಕಾರ ಮತ್ತು ವಿವಿಧ ಇತರ ರಾಜ್ಯಗಳ ನಡುವೆ ಪತ್ರವ್ಯವಹಾರ ನಡೆಯಿತು.

ಇದು ನಿಸ್ಸಂದೇಹವಾಗಿ ಕಾಲಾವಕಾಶ ತೆಗೆದುಕೊಂಡಿತು ಮತ್ತು ತೆಗೆದುಕೊಳ್ಳಲೇಬೇಕು, ಇದರಿಂದಾಗಿ, ಭಾರತ ಸರ್ಕಾರ ಉತ್ತರಗಳನ್ನು ಸ್ವೀಕರಿಸಿ ಮದ್ರಾಸ್ ಸರ್ಕಾರವು ಪ್ರಸ್ತಾವಿಸಿದ ರೂಪದಲ್ಲಿ ತಿದ್ದುಪಡಿ ಅಗತ್ಯವಿದೆಯೇ ಎಂಬುದನ್ನು ನಿರ್ಧರಿಸಲು ಸಾಧ್ಯವಾಗುವ ವೇಳೆಗೆ ಸಂಸತ್ತನ್ನು ಮುಂದೂಡಲಾಗಿತ್ತು. ಸಂಸತ್ತನ್ನು ತಾತ್ಕಾಲಿಕವಾಗಿ ಮುಂದೂಡುವುದಕ್ಕೆ ಮೊದಲು ಈ ಕ್ರಮವನ್ನು ಕೈಗೊಳ್ಳಲಾಗದುದಕ್ಕೆ ಇದೇ ಕಾರಣ.

ಬಂಗಾಳ ವೈದ್ಯಕೀಯ ಶಾಲೆಯು ನೀಡಿದ ಕೆಲವು ವಿದ್ಯಾರ್ಹತೆಗಳ ಮಾನ್ಯತೆಗಾಗಿ ಶಾಸನಬದ್ಧ ಉಪಬಂಧವನ್ನು ಏಕೆ ಕಲ್ಪಿಸಬೇಕೆಂಬುದು ನನ್ನ ಸ್ನೇಹಿತ ಶ್ರೀ ಸಿದ್ವರವರು ಎತ್ತಿದ ಎರಡನೇ ಪ್ರಶ್ನೆ. ಅವರ ಪ್ರಕಾರ ಅಧಿನಿಯಮದ ಉಪಬಂಧವು ದಂತ ವೈದ್ಯಕೀಯ ಪರಿಷತ್ತಿಗೆ ಬಿಟ್ಟ ವಿಚಾರ. ಇಲ್ಲಿ ನನ್ನ ಸ್ನೇಹಿತ ಶ್ರೀ ಸಿದ್ವ ಅವರು ಒಂದು ಪ್ರಮುಖ ಅಂಶವನ್ನು ಮರೆತಿದ್ದಾರೆ. ಅದೇನೆಂದರೆ, ಪರಿಷತ್ತಿನಲ್ಲಿ ನಿಹಿತವಾಗಿರುವ ಮಾನ್ಯತೆ ನೀಡುವ ಅಧಿಕಾರ ವೈದ್ಯಕೀಯ ಶಾಲೆಗಳು ತಮ್ಮ ಅಸ್ತಿತ್ವಕ್ಕಾಗಿ ನೀಡುವ ವಿದ್ಯಾರ್ಹತೆಗಳು ಅಥವಾ ಪದವಿಗೆ ಸಂಬಂಧಪಟ್ಟಿದ್ದು; ಆದರೆ ಅಸ್ತಿತ್ವದಲ್ಲಿಲ್ಲದ ಒಂದು ಸಂಸ್ಥೆಯು ಪದವಿ ಅಥವಾ ಡಿಪ್ಲೊಮಾಗಳನ್ನು ನೀಡಿರುವ ವಿಷಯ ಕುರಿತು ನಾವು ವ್ಯವಹರಿಸುತ್ತಿದ್ದೇವೆ. ಪರಿಣಾಮವಾಗಿ ದಂತವೈದ್ಯಕೀಯದಲ್ಲಿ ಪಾಠ ಹೇಳಿಕೊಡುವ ಒಂದು ಸಂಸ್ಥೆ ನೀಡಿರುವ ಪದವಿ, ಮಾನ್ಯತೆಗೆ ಅರ್ಹವೇ ಅಲ್ಲವೇ ಎಂದು ನಿರ್ಣಯಿಸಬೇಕಾದದ್ದು ಇಂದಿನ ಸರ್ಕಾರ. ಇದು ೧೦ನೇ ಪ್ರಕರಣದ (೨)ನೇ ಉಪಖಂಡದಡಿ ಬಂಗಾಳ ಪರಿಷತ್ತಿಗೆ ಬಿಡಬೇಕಾದ ವಿಷಯವಲ್ಲ. ಇಲ್ಲಿನ ಪದ "ನೀಡುತ್ತದೆ", ಎಂದರೆ "ಪ್ರಸ್ತುತ ನೀಡುತ್ತಿರುವುದು", ಮೊದಲು ನೀಡಲಾಗಿರುವ ಡಿಪ್ಲೊಮಾಗಳಲ್ಲ. ಹೀಗಿರುವಾಗ, ದಂತವೈದ್ಯಕೀಯ ಪರಿಷತ್ತು ಸುಲಭವಾಗಿ ತನ್ನ ಅಧಿಕಾರದಡಿ ವ್ಯವಹರಿಸಲು ಬಿಟ್ಟುಬಿಡಬಹುದಾದ ವಿಷಯ ಇದಲ್ಲ. ಅನುಸೂಚಿಯನ್ನು ತಿದ್ದುಪಡಿಮಾಡುವುದಾದರೆ, ಅದನ್ನು ಕಾನೂನಿನ ಮೂಲಕವೇ ಮಾಡಬೇಕಾಗುತ್ತದೆ. ಆದ್ದರಿಂದಲೇ ಆ ನಿರ್ದಿಷ್ಟ ವಿಷಯವನ್ನು ಒಳಗೊಳ್ಳುವಂತೆ ವಿಧೇಯಕದಲ್ಲಿ ಒಂದು ಉಪಬಂಧವನ್ನು ಮಾಡಲಾಗಿದೆ.

ಬಂಗಾಳ ವೈದ್ಯಕೀಯ ಸಂಸ್ಥೆಯ ಸಂಬಂಧದಲ್ಲಿ ನಾನು ಹೇಳಿದ್ದು, ಇದೇ ಪ್ರಶ್ನೆಗೆ ಸಂಬಂಧಿಸಿದಂತೆ ನನ್ನ ಸ್ನೇಹಿತ ಪಂಡಿತ ಠಾಕೂರ್‌ದಾಸ್ ಭಾರ್ಗವ ಅವರು ಹೇಳಿದ್ದಕ್ಕೂ ಅನ್ವಯಿಸುತ್ತದೆ.

ಶ್ರೀ ಕಾಮತ್ ಅವರು ಎತ್ತಿದಂಥ ಅಂಶಗಳಿಗೆ ನಾನು ಈಗ ಬರುತ್ತೇನೆ. ಅವರು ಎತ್ತಿದ ಮೊದಲ ಪ್ರಶ್ನೆ ಹೆಚ್ಚು ಕಡಿಮೆ ತಾಂತ್ರಿಕ ಸ್ವರೂಪದ್ದು. ಅವರನ್ನು ಸರಿಯಾಗಿ ನಾನು ಅರ್ಥಮಾಡಿಕೊಂಡಿರುವುದಾದರೆ, ರಿಜಿಸ್ಟರು ೧೯೫೦ರ ಮಾರ್ಚ್ ೮ರ ವೇಳೆಗೆ ಸಿದ್ಧವಾಗಿರಬೇಕೆಂದು ಕಾನೂನು ಅಗತ್ಯಪಡಿಸುತ್ತದೆ ಮತ್ತು ಒಬ್ಬ ವ್ಯಕ್ತಿಯ ಹೆಸರು ರಿಜಿಸ್ಟರಿನಲ್ಲಿಲ್ಲದಿದ್ದರೆ, ೪೬ ಮತ್ತು ೪೯ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಅವನು ಕೆಲವು ದಂಡಗಳಿಗೆ ಒಳಗಾಗಬೇಕಾಗುತ್ತದೆ. ಆದರೆ ಈ ದಂಡಗಳಿಂದ ವ್ಯಕ್ತಿಗೆ ವಿನಾಯಿತಿ ನೀಡುವ ಅಧ್ಯಾದೇಶ ೧೯೫೦ರ ಮೇ ೨೯ ರಿಂದ ಚಾಲ್ತಿಗೆ ಬಂದಿದೆ ಎಂದು ಅವರು ಹೇಳಿದರು. ಆದ್ದರಿಂದ ರಿಜಿಸ್ಟರಿನಲ್ಲಿ ಹೆಸರಿಲ್ಲದ ಆದರೆ ವೃತ್ತಿಯನ್ನು ಮುಂದುವರಿಸುವ ಅಥವಾ ಹುದ್ದೆಯನ್ನು ಹೊಂದಿರುವ ವ್ಯಕ್ತಿಗೆ ಕೆಲವು ದಂಡಗಳಿಗೆ ಬದ್ಧನಾಗಲು ಎರಡು ತಿಂಗಳ ಕಾಲಾವಕಾಶವಿದೆ. ಈ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಯಾವ ಸ್ಥಿತಿ ಇದೆ ? ಶ್ರೀ ಕಾಮತ್ ಅವರು ವಿಧೇಯಕದಲ್ಲಿ ಪ್ರಸ್ತಾವಿಸಿದ ತಿದ್ದುಪಡಿಯ ಷರತ್ತುಗಳನ್ನು ಸ್ಪಷ್ಟವಾಗಿ ಓದಿದ್ದರೆ, ಉಪಬಂಧಗಳು ಈ ಮುಂದಿನಂತೆ ಹೇಳುತ್ತದೆ ಎಂಬುದು ಅವರಿಗೆ ತಿಳಿದುಬರುತ್ತಿತ್ತು:

> "ಸದರಿ ಅಧಿನಿಯಮದ ೪೬ನೇ ಪ್ರಕರಣದ (೩)ನೇ ಉಪ–ಪ್ರಕರಣದಲ್ಲಿ ಮತ್ತು ೪೯ನೇ ಪ್ರಕರಣದ (೧)ನೇ ಉಪ–ಪ್ರಕರಣದಲ್ಲಿ, "ಎರಡು ವರ್ಷಗಳು" ಎಂಬ ಪದಗಳಿಗೆ "ಮೂರು ವರ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು."

ಆದ್ದರಿಂದ ಪ್ರಸ್ತುತ ಖಂಡವು ಸಮರ್ಪಕವಾಗಿ ಈ ಅಂಶವನ್ನು ಒಳಗೊಂಡಿದೆ ಎಂದು ಸ್ಪಷ್ಟವಾಗುತ್ತದೆ.

**ಶ್ರೀ ಕಾಮತ್:** ಮಾರ್ಚ್ ೨೯ ರಿಂದ ಮೇ ೨೯ರವರೆಗಿನ ಈ ಎರಡು ತಿಂಗಳ ಅವಧಿಯಲ್ಲಿ ಒಬ್ಬ ದಂತವೈದ್ಯನು ನೋಂದಣಿ ಮಾಡಿಸಿರದಿದ್ದರೆ, ಆಗ ಅಧಿನಿಯಮದ ಅಡಿಯಲ್ಲಿ ಮತ್ತು ಅಧ್ಯಾದೇಶವು ಜಾರಿಗೆ ಬಂದಿಲ್ಲದೆ ಇದ್ದುದರಿಂದ, ಕೇವಲ ಸರ್ಕಾರದ ಕಾರ್ಯನಿರ್ವಹಣಾ ಆದೇಶವು ಆ ದಂತವೈದ್ಯನ, ಮೇಲೆ ಆಗುವ ಕಾನೂನು ವ್ಯವಹರಣೆಯನ್ನು ಅಥವಾ ಇತರ ಯಾವುದೇ ಜುಲ್ಮಾನೆಯನ್ನು ಹೇಗೆ ತಡೆಯಬಲ್ಲದು?

**ಡಾ. ಅಂಬೇಡ್ಕರ್:** ಅದು ಕಾನೂನು ವ್ಯವಹರಣೆಯನ್ನು ತಡೆಯಲಾಗುತ್ತಿರಲಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದೃಷ್ಟವಶಾತ್ ಅಂಥ ಯಾವುದೇ ಪ್ರಸಂಗ ನಡೆದಿಲ್ಲ ಮತ್ತು ಅವಧಿಯನ್ನು ಮೂಲ ಅಧಿನಿಯಮದಲ್ಲಿರುವಂತೆ ಮಾಡಿರುವುದರಿಂದ ಅದು ಈಗ ನಡೆಯುವಂತೆಯೂ ಇಲ್ಲ.

**ಶ್ರೀ ಕಾಮತ್:** ಆದರೆ, ಮಾನ್ಯರೆ......

**ಮಾನ್ಯಸಭಾಧ್ಯಕ್ಷರು:** ಸದ್ದು, ಸದ್ದು. ವಿಷಯ ತುಂಬಾ ಸ್ಪಷ್ಟವಾಗಿದೆ. ಡಾ. ಅಂಬೇಡ್ಕರ್ ಈ ವಿಧೇಯಕವನ್ನು ಮಂಡಿಸಿದ್ದಕ್ಕೆ ಕಾರಣಗಳನ್ನು ಕುರಿತು ಮಾತನಾಡುವಾಗ ನನ್ನ ಸ್ನೇಹಿತರಾದ ಶ್ರೀ ಕಾಮತ್ ಅವರು, ಕೆಲವು ಗಂಭೀರ ಸ್ವರೂಪದ ಆಪಾದನೆಗಳನ್ನು ಮಾಡಿದ್ದಾರೆ. ಪಟ್ಟಿಯನ್ನು ಸಿದ್ಧಪಡಿಸಲು ಅಗತ್ಯಪಡಿಸುವ ಉಪಬಂಧಗಳನ್ನು ಪಾಲಿಸಬೇಕಾದ ರಾಜ್ಯಗಳು ಹಾಗೆ ಮಾಡಲು ಸಾಧ್ಯವಾಗಲಿಲ್ಲ ಎಂಬ ಅಂಶದಿಂದಾಗಿ ಈ ವಿಧೇಯಕವು ಅಗತ್ಯವಾಗಿದೆ ಎಂಬುದು ಸರ್ಕಾರದ ಪರವಾದ ವಾದ. ನನ್ನ ಸ್ನೇಹಿತರು ಇನ್ನೊಂದು ಕಾರಣ ಇದೆ ಎಂದು ಸೂಚಿಸುತ್ತಾರೆ. ಆ ಕಾರಣವೆಂದರೆ,

ಈ ದೇಶದಲ್ಲಿ ನಾಗರಿಕತ್ವ ಮತ್ತು ನೋಂದಣಿ ಉದ್ದೇಶವಿಲ್ಲದ ಕೆಲವು ಬ್ರಿಟಿಷ್ ದಂತವೈದ್ಯರು ವೃತ್ತಿ ನಡೆಸುತ್ತಿದ್ದು ಅವರಿಗೆ ಪ್ರಯೋಜನ ನೀಡುವ ಉದ್ದೇಶದಿಂದ ಈ ವಿಧೇಯಕವನ್ನು ರಚಿಸಲಾಗಿದೆ ಎಂಬುದು. ಮೊಟ್ಟಮೊದಲನೆಯದಾಗಿ, ಈ ದೇಶದ ನಿವಾಸಿಯಾಗಲು ಉದ್ದೇಶಿಸದ ಇಲ್ಲಿ ವೃತ್ತಿ ನಡೆಸುತ್ತಿರುವ ಒಬ್ಬ ಬ್ರಿಟಿಷ್ ದಂತ ವೈದ್ಯನಿಗೆ ಒಂದು ವರ್ಷದ ಅವಧಿ ವಿಸ್ತರಣೆಯು ಹೇಗೆ ಪ್ರಯೋಜನ ಉಂಟು ಮಾಡುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನನಗೆ ಅದನ್ನು ಅರ್ಥಮಾಡಿಕೊಳ್ಳಲೂ ಆಗುವುದಿಲ್ಲ. ಆದರೆ ನನ್ನ ಸ್ನೇಹಿತರು ಅಂಥ ಸಲಹೆಯನ್ನು ನೀಡಲು ಉದ್ದೇಶಿಸಿದರೆ, ಅದು ಸರ್ಕಾರದ ಒಬ್ಬ ಮಾನ್ಯ ಸದಸ್ಯರ ವಿರುದ್ಧ ಮಾಡುವ ಗಂಭೀರ ಸ್ವರೂಪದ ಆಪಾದನೆಯಾಗುತ್ತದೆ, ಹಾಗಿದ್ದರೆ ಆ ಸದಸ್ಯರು ಬಂದಾಗ, ನಿರ್ದಿಷ್ಟವಾಗಿ ಅವರಿಗೇ ಈ ಪ್ರಶ್ನೆಯನ್ನು ಹಾಕಿ ಈ ನಿರ್ದಿಷ್ಟ ವಿಧೇಯಕವನ್ನು ಮಂಡಿಸುವುದಕ್ಕೆ ಇದೇ ನಿಜವಾದ ಉದ್ದೇಶವಾಗಿತ್ತೆ ಎಂಬುದಕ್ಕೆ ಅವರಿಂದ ನನ್ನ ಸ್ನೇಹಿತರೇ ಉತ್ತರ ಪಡೆಯಬೇಕು. ಸ್ಪಷ್ಟ ಉತ್ತರ ನೀಡುವುದು ನನಗೆ ಸಾಧ್ಯವಿಲ್ಲ. ಆದರೆ ಸರ್ಕಾರದ ಒಬ್ಬ ಮಾನ್ಯ ಸದಸ್ಯರು ಬೇರಾವುದೇ ಕಾರಣವಿಲ್ಲದೆ ಕೇವಲ ಈಗ ಈ ದೇಶದಲ್ಲಿರುವ ಒಬ್ಬ ಯೂರೋಪಿಯನ್ ದಂತವೈದ್ಯರಿಗೆ ಪ್ರಯೋಜನವುಂಟುಮಾಡುವ ಅಲ್ಪ ಉದ್ದೇಶಕ್ಕಾಗಿ ಇಂಥ ವಿಧೇಯಕವನ್ನು ತರಲು ಸಾಹಸ ಪಡುತ್ತಿದ್ದಾರೆಂದು ನಂಬುವುದಕ್ಕೆ ನನಗೆ ಬಹಳ ಕಷ್ಟವಾಗುತ್ತಿದೆ. ಇದೊಂದು ಬಹು ಮಿತಿಮೀರಿದ ಆಪಾದನೆಯೆಂದು ನನಗನಿಸುತ್ತದೆ.

**ಶ್ರೀ ಕಾಮತ್:** ಇದೊಂದೇ ಕಾರಣ ಎಂದು ನಾನು ಹೇಳಲಿಲ್ಲ. ಅನೇಕ ಉದ್ದೇಶಗಳ ಪೈಕಿ ಅದೂ ಒಂದಾಗಿರಬಹುದು.

**ಮಾನ್ಯಸಭಾಧ್ಯಕ್ಷರು:** ಆದರೂ ಈ ಪ್ರಶ್ನೆ ಅನುಚಿತವಾದದ್ದು.

**ಡಾ. ಅಂಬೇಡ್ಕರ್:** ಪ್ರಸ್ತುತ ಪರಿಸ್ಥಿತಿಯನ್ನು ತಿಳಿಸಿ ಎಂದು ಅವರು ಕೇಳಿದ ಇನ್ನೊಂದು ಪ್ರಶ್ನೆಗೆ ನಾನು ಅವರಿಗೆ ಹೇಳಬಯಸುವುದೇನೆಂದರೆ, ರಿಜಿಸ್ಟರನ್ನು ಸಿದ್ಧಪಡಿಸಲು ಅವರಿಗೆ ಎಷ್ಟು ಸಮಯದ ಅಗತ್ಯವಿದೆಯೆಂದು ತಿಳಿದುಕೊಳ್ಳಲು ಪತ್ರ ಬರೆದುದಕ್ಕೆ ಎಲ್ಲ ರಾಜ್ಯಗಳು ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ ಅವಧಿ ಅಗತ್ಯವಿದೆ ಎಂದು ಉತ್ತರಿಸಿದ್ದಾರೆ. ಇತರ ಸರ್ಕಾರಗಳಿಗಿಂತ ಹೆಚ್ಚು ಸಮರ್ಥ ಆಡಳಿತ ಯಂತ್ರವನ್ನು ಹೊಂದಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೊಂಬಾಯಿ ಸರ್ಕಾರವು ಎರಡು ವರ್ಷಗಳ ಅವಧಿ ಬೇಕೆಂದು ಒತ್ತಾಯಿಸಿದೆ. ನನ್ನ ಸ್ನೇಹಿತ ಶ್ರೀ ಕಾಮತ್‌ರವರು ಈ ವಿಧೇಯಕವನ್ನು ಈ ದೇಶದಲ್ಲಿರುವ ಕೆಲವು ಬ್ರಿಟಿಷರನ್ನು ರಕ್ಷಿಸುವ ಉದ್ದೇಶದಿಂದ ಮಾಡಲಾಗಿದೆ ಎಂಬ ಹೇಳಿದ ಮಾತನ್ನು ತೆಗೆದುಹಾಕಲು ಇಷ್ಟೇ ಸಾಕು ಎಂದು ನಾನು ಭಾವಿಸುತ್ತೇನೆ.

ನಾನು ಉತ್ತರ ನೀಡುವ ಸಮಯದಲ್ಲಿ ಎತ್ತಲಾದ ಯಾವುದೇ ಪ್ರಶ್ನೆಗೆ ನಾನು ಲಕ್ಷ್ಯ ಕೊಡದೆ ಇಲ್ಲ ಎಂದು ಭಾವಿಸಿದ್ದೇನೆ. ಈ ವಿಧೇಯಕ ಬಹಳ ಸರಳವಾದದ್ದು, ವಿವಾದಾಸ್ಪದವಲ್ಲದ್ದು. ಇದು ಕೇಂದ್ರ ಸರ್ಕಾರದ ತಪ್ಪಿನಿಂದಾಗಿ ಆದದ್ದಲ್ಲ, ಪ್ರಾಂತೀಯ ಸರ್ಕಾರ ನಿರ್ವಹಿಸುತ್ತಿದ್ದ ಇತರ ಹೊಣೆಗಾರಿಕೆಗಳ ಕಾರಣದಿಂದಾಗಿ, ಅಧಿನಿಯಮದ ಒಂದು ನಿರ್ದಿಷ್ಟ ಉಪಬಂಧವನ್ನು ಜಾರಿಗೊಳಿಸಲು ಅವರಿಗೆ ಅವಕಾಶ ಸಿಗಲಿಲ್ಲ. ಈ ಶಾಸನದ ಭಾಗವನ್ನು ಜಾರಿಗೊಳಿಸಲು ಮತ್ತು ಸಾಧ್ಯವಾದಷ್ಟು ಬೇಗ ದಂತವೈದ್ಯರ ಅಧಿನಿಯಮವನ್ನು ಕಾರ್ಯರೂಪಕ್ಕೆ ತರಲು ಪ್ರಾಂತೀಯ ಸರ್ಕಾರಗಳಿಗೆ ಸಹಾಯ ಮಾಡುವುದನ್ನು ಬಿಟ್ಟು ಬೇರೇನನ್ನಾದರೂ ಮಾಡಬಹುದೇ ಎಂಬುದು ನನಗೆ ತಿಳಿದಿಲ್ಲ.

**ಮಾನ್ಯಸಭಾಧ್ಯಕ್ಷರು:** ವಿಷಯ ಏನೆಂದರೆ:

"೧೯೪೮ ದಂತವೈದ್ಯರ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು."

ಗೊತ್ತುವಳಿಯನ್ನು ಅಳವಡಿಸಲಾಯಿತು.

೨ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಖಂಡ ೩ (೧೯೪೮ರ ಅಧಿನಿಯಮ XVIರ ೪೬ ಮತ್ತು ೪೯ನೇ ಪ್ರಕರಣದ ತಿದ್ದುಪಡಿ).

**ಶ್ರೀ ಕಾಮತ್:** ನಾನು ಇದನ್ನು ಮಂಡಿಸಬಯಸುತ್ತೇನೆ:

"೩ನೇ ಖಂಡದಲ್ಲಿ, ೧೯೪೮ರ ದಂತವೈದ್ಯ ಅಧಿನಿಯಮದ ೪೬ನೇ ಪ್ರಕರಣದ (೩)ನೇ ಉಪಖಂಡ ಮತ್ತು ೪೯ನೇ ಪ್ರಕರಣದ (೧)ನೇ ಉಪ–ಪ್ರಕರಣಕ್ಕೆ ಪ್ರಸ್ತಾವಿಸಲಾದ ತಿದ್ದುಪಡಿಯಲ್ಲಿ "ಮೂರುವರ್ಷಗಳು" ಎಂಬ ಪದಗಳಿಗೆ "ಎರಡು ವರ್ಷ ಮತ್ತು ಆರು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸುವುದು."

ರಾಜ್ಯ ಸರ್ಕಾರಗಳಿಗೆ ಅಧಿನಿಯಮದ ೪೬ ಮತ್ತು ೪೯ನೇ ಪ್ರಕರಣದ ಅಡಿಯಲ್ಲಿ ದಂತವೈದ್ಯರ ರಿಜಿಸ್ಟರನ್ನು ಪೂರ್ಣಗೊಳಿಸಲು ಸಾಧ್ಯವಾಗುವಂತೆ ಪ್ರಸಕ್ತ ಖಂಡವನ್ನು ಸೇರಿಸಲಾಗಿದೆ. ಖಂಡದಲ್ಲಿ "ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು" ಎಂದು ಬಳಸಿರುವ ಪದಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಇದು ಒಂದು ಶಾಸನದ ಭಾಗವಾಗಿದೆ. ಏಕೆಂದರೆ ಕೆಲವು ನೂರು ದಂತವೈದ್ಯರು ನೋಂದಣಿ ಮಾಡಿಸುವುದಕ್ಕೆ ಇಷ್ಟು ದೀರ್ಘ ಅವಧಿ ಏಕೆ ಅಗತ್ಯ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ೧೯೫೦ರ ಮಾರ್ಚ್ ೨೯ರ ವೇಳೆಗೆ ಇನ್ನೂ ಎಷ್ಟು ಜನ ದಂತವೈದ್ಯರು ನೋಂದಣಿ ಮಾಡಿಸಬೇಕಾಗಿದೆ ಮತ್ತು ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬುದನ್ನು ಸದನಕ್ಕೆ ತಿಳಿಸಬೇಕೆಂದು ನಾನು ಸಚಿವರನ್ನು ಪುನಃ ಕೋರುತ್ತೇನೆ. ಸಂಪೂರ್ಣ ನೋಂದಣಿಗೆ ಎಷ್ಟು ಸಮಯ ಅಗತ್ಯವಿದೆ ಮತ್ತು ಒಂದು ವರ್ಷದಮಟ್ಟಿಗೆ ಈ ಅವಧಿ ವಿಸ್ತರಣೆ ಅಗತ್ಯವೆಂಬುದನ್ನು ತಿಳಿಯಲು ನಮಗೆ ಇದರಿಂದ ಪ್ರಯೋಜನವಾಗುತ್ತದೆ. ಆ ಅಂಕಿ ಅಂಶಗಳು ನಮಗೆ ದೊರೆತಲ್ಲಿ, ನೋಂದಣಿ ಕೆಲಸ ಪೂರೈಸಲು ಎಷ್ಟು ಸಮಯ ಅಗತ್ಯವಾಗುತ್ತದೆ ಎಂಬುದನ್ನು ನಾವು ನಿರ್ಣಯಿಸುವುದು ಸಾಧ್ಯವಾಗುತ್ತದೆ. ಅದಿಲ್ಲದಿದ್ದರೆ ನೋಂದಣಿಗೆ ಅಗತ್ಯವಿರುವ ಸಮಯದ ಬಗ್ಗೆ ಒಂದು ನಿರ್ಧಾರಕ್ಕೆ ಬರುವುದು ಕಷ್ಟವಾಗುತ್ತದೆ.

**ಡಾ. ಅಂಬೇಡ್ಕರ್:** ಇದು ಅಭಿಪ್ರಾಯದ ವಿಷಯ. ಅವರಲ್ಲಿರುವ ಅಪಾರ ಉತ್ಸಾಹ ಮತ್ತು ಆಡಳಿತಾತ್ಮಕ ಅನುಭವದಿಂದಾಗಿ ನನ್ನ ಸ್ನೇಹಿತ ಶ್ರೀ ಕಾಮತ್‌ರವರು ರಿಜಿಸ್ಟರನ್ನು ಪೂರೈಸಲು ಆರು ತಿಂಗಳ ಅವಧಿ ಅಗತ್ಯಕ್ಕಿಂತ ಹೆಚ್ಚು ಎಂದು ಭಾವಿಸುತ್ತಾರೆ. ನಾನು ಸದನಕ್ಕೆ ಈಗ ತಾನೇ ಹೇಳಿದಂತೆ ಬಾಂಬೆ ಸರ್ಕಾರದಂಥ ಅತ್ಯಂತ ಸಮರ್ಥ ಸರ್ಕಾರ ಕೂಡ ಎರಡು ವರ್ಷಗಳನ್ನು ಕೇಳಿಕೊಂಡಿತು. ರಿಜಿಸ್ಟರನ್ನು ಸಿದ್ಧಪಡಿಸುವ ಹೊಣೆ ಪ್ರಾಂತೀಯ ಸರ್ಕಾರಗಳ ಮೇಲಿದೆ ಎಂಬ ಅಂಶದ ಹಿನ್ನೆಲೆಯಲ್ಲಿ, ಪ್ರಾಂತೀಯ ಸರ್ಕಾರಗಳು ಈ ವಿಷಯದಲ್ಲಿ ಯಾವುದು ಕಾರ್ಯಸಾಧ್ಯ ಎಂದು ಭಾವಿಸುವುದೋ ಅದನ್ನು ಈ ಸದನ ಅನುಸರಿಸುವುದು ಅಪೇಕ್ಷಣೀಯ ಎಂದು ವೈಯಕ್ತಿಕವಾಗಿ ನಾನು ಭಾವಿಸುತ್ತೇನೆ. ಬಾಂಬೆ ಸರ್ಕಾರ ಕೋರಿದ ಎರಡು ವರ್ಷಗಳನ್ನು ನಾವು ಒಂದು ವರ್ಷಕ್ಕೆ ಇಳಿಸಿದ್ದೇವೆ. ಮದ್ರಾಸು ಸರ್ಕಾರದ ಮೂಲ ಪ್ರಸ್ತಾವ ಇದ್ದಂತೆ ನಾವು ಒಂದು ವರ್ಷಕ್ಕೆ ಸೀಮಿತಗೊಳಿಸಬೇಕಾಗುತ್ತದೆ. ಈ ವಿಧೇಯಕದಲ್ಲಿ ಕಲ್ಪಿಸಿರುವ ಅವಧಿಯನ್ನು ಕಡಿಮೆಗೊಳಿಸುವುದು ಸಾಧ್ಯವಿಲ್ಲವೆಂದು ನಾನು ಭಾವಿಸುತ್ತೇನೆ.

**ಶ್ರೀ ಕಾಮತ್:** ಮಾನ್ಯ ಸಚಿವರ ಬಳಿ ಅಂಕಿ ಅಂಶಗಳಿಲ್ಲ.

**ಡಾ. ಅಂಬೇಡ್ಕರ್:** ಅಂಕಿ ಅಂಶಗಳಿಲ್ಲ.

**ಮಾನ್ಯಸಭಾಧ್ಯಕ್ಷರು:** ರಿಜಿಸ್ಟರುಗಳು ಅಪೂರ್ಣವಾಗಿದ್ದರೆ ಸರಿಯಾದ ಅಂಕಿಅಂಶಗಳನ್ನು ಹೇಗೆ ನೀಡುತ್ತಾರೆ?

**ಡಾ. ಅಂಬೇಡ್ಕರ್:** ರಿಜಿಸ್ಟರು ಇಲ್ಲ. ಯಾರು ದಂತವೈದ್ಯರು, ಯಾರು ಅಲ್ಲ ಎಂದು ಹೇಗೆ ತಿಳಿಯುತ್ತದೆ?

ಶ್ರೀ ಕಾಮತ್ ಅವರ ಗೊತ್ತುವಳಿಯನ್ನು ನಿರಾಕರಿಸಲಾಯಿತು.

**ಶ್ರೀ ಸಿಧ್ವ:** ನಾನು ಇದನ್ನು ಮಂಡಿಸಬಯಸುತ್ತೇನೆ.

೩ನೇ ಖಂಡವನ್ನು ೩ನೇ ಖಂಡದ ಉಪಖಂಡ (೧) ಎಂದು ಮರುಸಂಖ್ಯೆ ನೀಡಿ ಈ ಮುಂದಿನ ಹೊಸ (೨)ನೇ ಉಪಖಂಡವನ್ನು ಸೇರಿಸತಕ್ಕದ್ದು.

> "(೨) ಸದರಿ ಅಧಿನಿಯಮದ ೪೯ನೇ ಪ್ರಕರಣದ (೧)ನೇ ಉಪ–ಪ್ರಕರಣದಲ್ಲಿ, "ಮೂರು ವರ್ಷಗಳು" ಎಂಬ ಪದಗಳ ಬದಲು "ಈ ಅಧಿನಿಯಮವು ಪ್ರಾರಂಭವಾದಂದಿನಿಂದ ಮೂರುವರ್ಷಗಳು ಅಥವಾ ೩೨ನೇ ಪ್ರಕರಣದ ಮೇರೆಗಿನ ವಿಧಿವಿಧಾನಗಳು ಪೂರ್ಣಗೊಂಡಾಗ, ಇವೆರಡರಲ್ಲಿ ಯಾವುದು ಮೊದಲೋ ಅದು" ಎಂಬ ಪದಗಳನ್ನು ಸೇರಿಸತಕ್ಕದ್ದು."

**ಡಾ. ಅಂಬೇಡ್ಕರ್:** ನನ್ನ ಸ್ನೇಹಿತ ಸಿಧ್ವ ಅವರು ಹೇಳಿದಂತೆ ಈ ತಿದ್ದುಪಡಿಯು, ಈ ಖಂಡದ ಉಪಬಂಧಗಳಲ್ಲಿ ಅಡಕವಾಗಿರುವ ಪ್ರಮುಖ ತತ್ವಕ್ಕೆ ಎಂದರೆ ರಿಜಿಸ್ಟರುಗಳು ಭಾರತದಾದ್ಯಂತ ಒಂದೇ ದಿನಾಂಕದಂದು ಜಾರಿಯಾಗತಕ್ಕದ್ದು ಎಂಬ ತತ್ವಕ್ಕೆ ಬಾಧಕವಾಗುತ್ತದೆ. ಇದು ಕೇವಲ ಶೈಕ್ಷಣಿಕ ಆಸಕ್ತಿಯ ವಿಷಯವಲ್ಲ.............

**ಶ್ರೀ ಸಿಧ್ವ:** ಅಧಿನಿಯಮದಲ್ಲಿ ಇದನ್ನು ಹೇಳಲಾಗಿದೆಯೇ?

**ಡಾ. ಅಂಬೇಡ್ಕರ್:** ಆದ್ದರಿಂದಲೇ ಉದ್ದಕ್ಕೂ ನಾವು ಮೂರು ಅಥವಾ ಎರಡು ವರ್ಷ ಎಂದು ಹೇಳಿದ್ದೇವೆ. ಇಲ್ಲದಿದ್ದರೆ ನಾವು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸುತ್ತಿದ್ದೆವು. ಏಕರೂಪತೆಯ ತತ್ವವನ್ನು ಕಾಯ್ದುಕೊಳ್ಳುವುದು ಅಗತ್ಯ ಮತ್ತು ಅಪೇಕ್ಷಣೀಯ. ಹುದ್ದೆಗಳನ್ನು ಹೊಂದುವುದಕ್ಕೆ ಇರುವ ಅರ್ಹತೆಗೆ ಅದು ಬಾಧಕವಾಗುತ್ತದೆ ಎಂದು ಸದನ ಭಾವಿಸುತ್ತದೆ. ಒಂದು ರಾಜ್ಯ ರಿಜಿಸ್ಟರನ್ನು ಸಿದ್ಧಪಡಿಸುವ ಸ್ಥಿತಿಯಲ್ಲಿಲ್ಲ ಎಂಬ ಕಾರಣಕ್ಕೆ ಒಂದು ನಿರ್ದಿಷ್ಟ ರಾಜ್ಯದಲ್ಲಿ ಒಂದು ಹುದ್ದೆಯನ್ನು ಹೊಂದಲು ಒಬ್ಬ ವ್ಯಕ್ತಿ ಅರ್ಹ ಮತ್ತು ಇನ್ನೊಂದು ರಾಜ್ಯದಲ್ಲಿ ಅರ್ಹನಲ್ಲ ಎಂದು ಹೇಳಲಾಗದು. ಆದ್ದರಿಂದ ತತ್ವವನ್ನು ರಕ್ಷಿಸುವುದು ಅಪೇಕ್ಷಣೀಯವಾದ್ದರಿಂದ ಶ್ರೀ ಸಿಧ್ವ ಅವರ ತಿದ್ದುಪಡಿಯನ್ನು ಒಪ್ಪಲಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಏನೇ ಆದರೂ ವ್ಯತ್ಯಾಸ ಕೇವಲ ಆರು ತಿಂಗಳು ಮಾತ್ರ.

**ಶ್ರೀ ಸಿಧ್ವ:** ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ನಾನು ಅನುಮತಿ ಕೋರುತ್ತೇನೆ.

ತಿದ್ದುಪಡಿಯನ್ನು ಅನುಮತಿಯೊಂದಿಗೆ ಹಿಂತೆಗೆದುಕೊಳ್ಳಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಪ್ರಶ್ನೆಯೇನೆಂದರೆ:

> "೩ನೇ ಖಂಡವು ವಿಧೇಯಕದ ಒಂದು ಭಾಗವಾಗಿರುತ್ತದೆ."

ಗೊತ್ತುವಳಿಯನ್ನು ಅಳವಡಿಸಿಕೊಳ್ಳಲಾಯಿತು.

೩ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

**(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನ ವಹಿಸಿದ್ದಾರೆ.)**

**ಖಂಡ ೪ (೧೯೪೮ರ ಅಧಿನಿಯಮ IVರ ಅನುಸೂಚಿಗೆ ತಿದ್ದುಪಡಿ)**

**ಶ್ರೀ ತ್ಯಾಗಿ (ಉತ್ತರ ಪ್ರದೇಶ):** ನನ್ನ ತಿದ್ದುಪಡಿ ಈ ಮುಂದಿನಂತಿದೆ:

೪ನೇ ಖಂಡದಲ್ಲಿ ೧೯೪೮ರ ದಂತವೈದ್ಯರ ಅಧಿನಿಯಮದ ಅನುಸೂಚಿಯ ಭಾಗ Iರ ಪ್ರಾಸ್ತಾವಿಕ ೨ (ಎ) ಬಾಬಿಗೆ, ಇದನ್ನು ಪ್ರತಿಯೋಜಿಸುವುದು:

> "(೨ಎ) ಕೇಂದ್ರ ಸರ್ಕಾರವು, ದಂತವೈದ್ಯರ ಕೇಂದ್ರೀಯ ಪರಿಷತ್ತಿನೊಂದಿಗೆ ಸಮಾಲೋಚಿಸಿ ಈ ಉದ್ದೇಶಕ್ಕಾಗಿ ಮತ್ತು ಸರ್ಕಾರವು ಅದಕ್ಕೆ ನಿಗದಿಪಡಿಸಲು ಅರ್ಹವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ಮಾನ್ಯತೆ ನೀಡುವ, ದಂತ ವೈದ್ಯಕೀಯ ಶಾಸ್ತ್ರದಲ್ಲಿ ಶಿಕ್ಷಣ ನೀಡುವ ಅಥವಾ ಪ್ರಾಯೋಗಿಕ ತರಬೇತಿ ನೀಡುವ ಯಾವುದೇ ಇತರ ಸಂಸ್ಥೆ."

ಡಾ. ಅಂಬೇಡ್ಕರ್ ಅವರು ಅಭೇದ್ಯರು. ಈ ಉಪಖಂಡದಲ್ಲಿ ಹೇಳಲಾದ ಸಂಸ್ಥೆಯು ಕಾರ್ಯನಿರ್ವಹಿಸುತ್ತಿಲ್ಲವೆಂದು ತಮ್ಮ ಭಾಷಣದಲ್ಲಿ ಅವರು ಈಗಾಗಲೇ ಹೇಳಿದ್ದಾರೆ. ಆದರೆ ದಂತವೈದ್ಯರ ಪರಿಷತ್ತಿನ ಒಬ್ಬ ಸದಸ್ಯರು, ಈ ಸಂಸ್ಥೆಯ ಷರತ್ತುಗಳ ಬಗ್ಗೆ ತನಿಖೆ ನಡೆಸಲು ಈಗಾಗಲೇ ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತೆಂದೂ ಮತ್ತು ಸಮಿತಿಯು ಆಗಲೇ ಅದರ ಬಗ್ಗೆ ಕೆಲಸ ಮಾಡುತ್ತಿತ್ತೆಂದೂ ನನಗೆ ತಿಳಿಸಿದರು. ಸಂಸ್ಥೆಯ ಬಗ್ಗೆ ಯಾವುದೇ ದೂಷಣೆ ಮಾಡುವುದು ನನಗೆ ಬೇಕಿಲ್ಲ. ಅದರ ಗುಣಮಟ್ಟ ಏನೆಂದು ನನಗೆ ಗೊತ್ತಿಲ್ಲ, ಅದರ ಬಗ್ಗೆ ವೈಯಕ್ತಿಕ ಅರಿವು ನನಗಿಲ್ಲ, ಆದ್ದರಿಂದ ಸಂಸ್ಥೆಯ ಗೌರವವನ್ನು ಹಾಳು ಮಾಡುವುದು ನನಗೆ ಬೇಕಿಲ್ಲ. ಆದರೆ ವಿಚಾರಣೆಯು ನಡೆಯುತ್ತಿರುವುದರಿಂದ ಸಂಸ್ಥೆಗೆ ಮಾನ್ಯತೆ ನೀಡುವ ಬಗ್ಗೆ ಇಡೀ ಸಂಸತ್ತನ್ನು ಬಾಧ್ಯವನ್ನಾಗಿ ಮಾಡಿಸುವ ಬದಲು ಸರ್ಕಾರವು ನಿರ್ಣಯಿಸುವ ಹಕ್ಕನ್ನು ತನ್ನ ಕೈಯಲ್ಲೇ ಇಟ್ಟುಕೊಂಡಿದ್ದರೆ ಉತ್ತಮವಾಗುತ್ತಿತ್ತು.

**ಡಾ. ಅಂಬೇಡ್ಕರ್:** ನಾವು ಸಂಸ್ಥೆಗೆ ಯಾವುದೇ ರೀತಿ ತೊಂದರೆ ಮಾಡುತ್ತಿಲ್ಲ. ಎಂಟು ವರ್ಷಗಳ ಹಿಂದೆ ೧೯೪೦ರಲ್ಲಿ ಆ ಸಂಸ್ಥೆ ನೀಡಿದ ಪದವಿಗಳ ಬಗ್ಗೆ ವ್ಯವಹರಿಸುತ್ತಿದ್ದೇವೆ.

**ಶ್ರೀ ತ್ಯಾಗಿ:** ಸಂಸ್ಥೆಗೆ ಮಾನ್ಯತೆ ನೀಡದೆ ಸಂಸ್ಥೆಯ ಪದವಿಗಳನ್ನು ಮಾನ್ಯ ಮಾಡಬಹುದು ಎಂದು ನಾನು ನಂಬಬೇಕೆಂದು ಡಾ. ಅಂಬೇಡ್ಕರ್ ನಿರೀಕ್ಷಿಸುತ್ತಾರೆ. ಆ ಸಂಸ್ಥೆಗೆ ಸಹ ಅವರು ಮಾನ್ಯತೆ ನೀಡಬಹುದೆಂದು ನಾನು ಸೂಚಿಸುತ್ತಿದ್ದೇನೆ. ಯಾವುದೇ ಸಂಸ್ಥೆಗೆ ಮಾನ್ಯತೆ ನೀಡಲು ಸರ್ಕಾರಕ್ಕೆ ಅಧಿಕಾರವಿರಬೇಕು.

**ಡಾ. ಅಂಬೇಡ್ಕರ್:** ಆ ಅಧಿಕಾರ ಪ್ರಕರಣ ೧೦(೨)ರಲ್ಲಿದೆ.

**ಶ್ರೀ ತ್ಯಾಗಿ:** ನಾನು ನನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ನಾನು ಇದನ್ನು ಮಂಡಿಸುತ್ತೇನೆ.

> "೪ನೇ ಖಂಡದಲ್ಲಿ, ೧೯೪೮ರ ದಂತವೈದ್ಯರ ಅಧಿನಿಯಮದ ಅನುಸೂಚಿಯ ಭಾಗ Iರ ಉದ್ದೇಶಿತ ೨(ಎ) ಬಾಬಿನಲ್ಲಿ, '೧೯೪೦ರ ಮಾರ್ಚ್' ಪದದ ನಂತರ ಬರುವ ಎಲ್ಲ ಪದಗಳನ್ನು ಬಿಟ್ಟುಬಿಡುವುದು."

ವೃತ್ತಿಯ ಆಧಾರದ ಮೇಲೆ ಎಲ್ಲ ಇತರರಿಗೆ ಮಾನ್ಯತೆ ನೀಡಿರುವುದರಿಂದ ವೃತ್ತಿಯ ತತ್ವವು ಈ ಎಂಟು ಅಥವಾ ಹತ್ತು ಜನರಿಗೂ ಸಹ ಅನ್ವಯಿಸತಕ್ಕದ್ದು. ಆದ್ದರಿಂದ ಈ ತಿದ್ದುಪಡಿಯನ್ನು

ಒಪ್ಪಿಕೊಳ್ಳಬಹುದೆಂದು ಕೋರುತ್ತೇನೆ.

**ಉಪ ಸಭಾಧ್ಯಕ್ಷರು:** ಈ ತಿದ್ದುಪಡಿ ಮಂಡಿಸಲು ಮಾನ್ಯ ಸಚಿವರಿಗಿರುವ ಕಾರಣ ತಿಳಿಯಬಹುದೇ?

**ಡಾ. ಅಂಬೇಡ್ಕರ್:** ಈ ಖಂಡ ಪಶ್ಚಿಮ ಬಂಗಾಳ ಸರ್ಕಾರ ಮಾಡಿದ ಸಲಹೆಗೆ ನಿಜವಾಗಿ ಪರಿಣಾಮ ನೀಡುವಂಥ ಖಂಡ. ನನ್ನ ಸ್ನೇಹಿತ ಶ್ರೀ ಭಾರ್ಗವ ಅವರೊಂದಿಗೆ ನನಗೆ ಎಷ್ಟೇ ಅನುಕಂಪ ಇರಬಹುದಾದರೂ, ಡೆಂಚರ್ ಮಾಡುವ ವ್ಯಕ್ತಿಗಿಂತ ಭಿನ್ನವಾದ ದಂತವೈದ್ಯನ ವಿದ್ಯಾರ್ಹತೆಯ ನಿರ್ಧಾರಣೆಯ ಪ್ರಶ್ನೆಯನ್ನು ಅದು ಒಳಗೊಳ್ಳುತ್ತದೆ. ಡೆಂಚರ್ ಮಾಡುವವನ ಕುರಿತಂತೆ ಅವರ ಮಾತು ಬಲವಾಗಿತ್ತು ಎನಿಸುತ್ತದೆ. ಆದರೆ ದಂತವೈದ್ಯನಲ್ಲದೆಯೂ ಒಬ್ಬ ವ್ಯಕ್ತಿ ಡೆಂಚರ್ ಹಾಕಬಹುದು. ವಿಶಿಷ್ಟ ವೃತ್ತಿ ನಡೆಸುವ ಒಬ್ಬ ದಂತವೈದ್ಯನ ಬಗ್ಗೆ ನಾವು ಮಾತನಾಡುತ್ತಿದ್ದೇವೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಆದರೆ ಅವರು ಎಲ್.ಡಿ. ಎಸ್‌ಸಿ. ಪದವಿ ಹೊಂದಿದ್ದಾರೆ.

**ಡಾ. ಅಂಬೇಡ್ಕರ್:** ವಿಷಯ ಇದೇ. ಅಧಿನಿಯಮವನ್ನು ಹೊರಡಿಸಿದಾಗ ಈ ಸಂಸ್ಥೆ ಮಾನ್ಯತೆಗೆ ಅರ್ಹವೆಂದು ಪರಿಗಣಿತವಾಗಿರಲಿಲ್ಲ. ತರುವಾಯ ಸಾಕಷ್ಟು ಪ್ರಮಾಣದಲ್ಲಿ ಚಳುವಳಿ ನಡೆದಿದ್ದು ಪಶ್ಚಿಮ ಬಂಗಾಳ ಸರ್ಕಾರವು, ಈ ಕಾಲೇಜಿನಲ್ಲಿ ಶಿಕ್ಷಣ ಪಡೆದ ವ್ಯಕ್ತಿಗಳು ಮಾನ್ಯತೆಗೆ ಅರ್ಹರೇ ಎಂಬುದನ್ನು ಪರೀಕ್ಷಿಸಲು ನಿರ್ಧರಿಸಿತು. ೧೯೪೦ಕ್ಕೆ ಮುಂಚೆ ಈ ಸಂಸ್ಥೆ ಅನುಸರಿಸುತ್ತಿದ್ದ ಗುಣಮಟ್ಟವು, ಮಾನ್ಯತೆಯ ಉದ್ದೇಶಕ್ಕೆ ಪರಿಗಣಿಸಬಹುದಾದ ಅಂಶವಾಗಿತ್ತೆಂಬ ನಿರ್ಣಯಕ್ಕೆ ಆ ಸರ್ಕಾರ ಬಂದಿತು. ಒಂದು ಗುಣಮಟ್ಟವನ್ನು ಅಲ್ಲಿ ಕಾಯ್ದುಕೊಂಡು ಬಂದಿದ್ದರೂ, ಕೆಲವು ಹುಡುಗರು ಕೇವಲ ಹಾಜರಾಗಿ ಏನನ್ನೂ ಕಲಿಯದೆ ಕೇವಲ ಶೈಕ್ಷಣಿಕ ಅವಧಿಗಳನ್ನು ಮಾತ್ರ ಪೂರೈಸುತ್ತಿದ್ದರೆಂದು ತಿಳಿದುಬಂದಿರುವುದಾಗಿ ಸಹ ಹೇಳಿದರು. ಆದ್ದರಿಂದ ೧೯೪೦ಕ್ಕೆ ಮುಂಚೆ ಅವನು ಡಿಪ್ಲೊಮಾ ಪಡೆದಿರಬೇಕಲ್ಲದೆ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಕೆಲವು ಶೈಕ್ಷಣಿಕ ಅವಧಿಗಳನ್ನು ಪೂರೈಸಿರಬೇಕೆಂದು ಎರಡು ಹೆಚ್ಚಿನ ನಿರ್ಬಂಧಗಳನ್ನು ನಿಗದಿಪಡಿಸಲಾಯಿತು. ಅರ್ಹತೆಯನ್ನು ಮಾನ್ಯತೆಗೆ ಯೋಗ್ಯವಾಗುವಂತೆ ಮಾಡಲು ಈ ಮಿತಿಗಳನ್ನು ಹೇರಲಾಯಿತು. ನನಗೆ ದಂತವೈದ್ಯರ ಬಗ್ಗೆ ಎಷ್ಟೇ ಅನುಕಂಪವಿದ್ದರೂ, ನನ್ನ ಸ್ವಂತ ತೀರ್ಪನ್ನು ನೀಡುವ ಬದಲು ವಿಷಯವನ್ನು ಚೆನ್ನಾಗಿ ಅರಿತಿರುವ ಪಶ್ಚಿಮ ಬಂಗಾಳದ ಸರ್ಕಾರದ ನಿಲುವಿಗೆ ಬದ್ಧನಾಗಿರಲು ಸಿದ್ಧನಾಗಿದ್ದೇನೆ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಅನುಚ್ಛೇದದಲ್ಲಿರುವ "ಅಧ್ಯಕ್ಷರು, ಯಾವುದೇ ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ, ವಿಶೇಷವಾಗಿ............ಇತ್ಯಾದಿ" ಎಂಬ ಪದಗಳಲ್ಲಿ "ವಿಶೇಷವಾಗಿ" ಎಂಬ ಪದ ಅವರಿಗೆ ಸಾಮಾನ್ಯ ಅಧಿಕಾರವಿಲ್ಲ ಎಂಬ ಅರ್ಥ ನೀಡುವುದಿಲ್ಲ.

**ಮಾನ್ಯಸಭಾಧ್ಯಕ್ಷರು:** ಮಾನ್ಯ ಸದಸ್ಯರು ಹೇಳಿದ "ಯಾವುದೇ ತೊಂದರೆಗಳು" ಮತ್ತು "ವಿಶೇಷವಾಗಿ" ಎಂಬ ಪದಗಳಲ್ಲದೇ ಅವರ ಕ್ರಿಯಾರೋಪವನ್ನು ನಾನು ಅರ್ಥಮಾಡಿಕೊಂಡಿರುವಂತೆ ಭಾರತ ಸರ್ಕಾರದ ಅಧಿನಿಯಮದ ಉಪಬಂಧಗಳಿಂದ ಸಂವಿಧಾನದ ಉಪಬಂಧಗಳವರೆಗಿನ ಸಂಕ್ರಮಣ ಸ್ಥಿತಿಯಲ್ಲಿ ಹೊಂದಾಣಿಕೆಗಳನ್ನು ಮಾಡಲು ರಾಷ್ಟ್ರಪತಿಗೆ ಅಧಿಕಾರ ನೀಡುವುದಕ್ಕೆ ಸಂಬಂಧಿಸಿದಂತೆ ೩೯೨ನೇ ಅನುಚ್ಛೇದವನ್ನು ಅನ್ವಯಿಸಿದಂತೆ ತೋರುತ್ತದೆ. ಇಲ್ಲಿರುವ ಅಂಶ ಅದೇ.

**ಡಾ. ಅಂಬೇಡ್ಕರ್:** ಅದು ಹಾಗಲ್ಲ. ಏಕೆಂದರೆ ಅದು ತಪ್ಪು ರಚನೆ. ನನ್ನ ಮಾನ್ಯ ಸ್ನೇಹಿತರು

---

* ಪಿ.ಡಿ. Vol. 8, ಭಾಗ ೨, ೯ ಫೆಬ್ರವರಿ ೧೯೫೧, ಪು. ೨೬೨೭-೩೨.

ಎತ್ತಿರುವ ಅಂಶವೆಂದರೆ, ಅನುಚ್ಛೇದ ೩೯೨ರ ಅಡಿಯಲ್ಲಿ ರಾಷ್ಟ್ರಪತಿಗಳು ಹೊಂದಿರುವ ಒಂದೇ ಅಧಿಕಾರವು ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಯಾವುದೇ ಪ್ರಕರಣವನ್ನು ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿ ಅಳವಡಿಸಿಕೊಳ್ಳುವುದಕ್ಕೆ ಸೀಮಿತವಾಗಿದೆ ಎಂಬುದು. ನನ್ನ ಅಭಿಪ್ರಾಯದಲ್ಲಿ ಇದು ಸರಿಯಲ್ಲ. ಏಕೆಂದರೆ ೩೯೨ನೇ ಅನುಚ್ಛೇದದಲ್ಲಿನ ಪ್ರಾರಂಭಿಕ ಪದಗಳು ಸಾಮಾನ್ಯವಾದ ಪದಗಳಾಗಿವೆ, ಎಂದರೆ, "ರಾಷ್ಟ್ರಪತಿಗಳು, ಯಾವುದೇ ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ" ಎಂದು, ತರುವಾಯ "ವಿಶೇಷವಾಗಿ ಮುಂತಾದ" ಎಂಬ ಪದಗಳು ಬರುತ್ತದೆ. ಭಾರತ ಸರ್ಕಾರದ ಅಧಿನಿಯಮ, ೧೯೩೫ರ ಉಪಬಂಧಗಳಿಂದ ಈ ಸಂವಿಧಾನದ ಉಪಬಂಧಗಳವರೆಗಿನ ಸಂಕ್ರಮಣಕ್ಕೆ ಸಂಬಂಧಪಟ್ಟಂತೆ" ಎಂಬ ಪದಗಳನ್ನು ಬಿಡಬೇಕಾಗಿ ಬಂದರೆ, "ರಾಷ್ಟ್ರಪತಿಗಳು, ಯಾವುದೇ ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ, ಆದೇಶದ ಮೂಲಕ....ನಿರ್ದೇಶಿಸಬಹುದು....ಇತ್ಯಾದಿ" ಎಂದು ಇರಬೇಕಾಗುತ್ತದೆ.

# ೨೭

## *ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ನಾನು ಈ ಮುಂದಿನದನ್ನು ಮಂಡಿಸಬಯಸುತ್ತೇನೆ:

"೧೯೦೮ರ ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕಾಗಿದೆ."

ಈ ವಿಧೇಯಕದ ಉದ್ದೇಶ ಮೂರು ರೀತಿಯದ್ದಾಗಿದೆ. ಮೊದಲನೆಯದು ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ವಿಧೇಯಕದ ೨ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಕೆಲವು ಪ್ರದೇಶಗಳನ್ನು ಹೊರತುಪಡಿಸಿ ಭಾರತದಾದ್ಯಂತ ಅನ್ವಯಿಸುವಂತೆ ಮಾಡುವುದು. ಸದನಕ್ಕೆ ನೆನಪಿರುವಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯು ಭಾಗ ಎ ರಾಜ್ಯಗಳು ಎಂದು ಕರೆಯಲಾಗುವ ರಾಜ್ಯಗಳಿಗೆ ಅನ್ವಯಿಸುತ್ತದೆ, ಅದು ಭಾಗ ಬಿ ರಾಜ್ಯಗಳಿಗೆ ಅನ್ವಯಿಸುವುದಿಲ್ಲ. ಭಾಗ ಬಿ ರಾಜ್ಯಗಳ ಪೈಕಿ ಪ್ರತಿಯೊಂದೂ, ಭಾಗ ಎ ರಾಜ್ಯಗಳಲ್ಲಿ ಜಾರಿಯಲ್ಲಿರುವ ಸಿವಿಲ್ ಪ್ರಕ್ರಿಯಾ ಸಂಹಿತೆಯಂತೆಯೇ ಇರುವ ತಮ್ಮ ಸ್ವಂತ ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಹೊಂದಿದ್ದರೂ ಅದು ಪ್ರತ್ಯೇಕ ಅಧಿಕಾರವ್ಯಾಪ್ತಿಯುಳ್ಳದ್ದಾಗಿರುತ್ತದೆ. ಇದರ ಫಲಿತಾಂಶವೆಂದರೆ, ಭಾಗ 'ಬಿ' ರಾಜ್ಯಗಳ ನ್ಯಾಯಾಲಯಗಳ ವ್ಯಾಪ್ತಿಯ ಪ್ರದೇಶದೊಳಗೆ ಭಾಗ ಎ ರಾಜ್ಯಗಳಲ್ಲಿನ ನ್ಯಾಯಾಲಯಗಳು ಹೊರಡಿಸುವ ಸಮನ್ಸುಗಳ ಜಾರಿಗೆ ಮತ್ತು ಡಿಕ್ರಿಗಳ ಅಮಲ್ದಾರಿಗೆ ಬಹಳ ತೊಡಕುಂಟಾಗುತ್ತದೆ. ನಮ್ಮ ಸಂವಿಧಾನದ ಉಪ–ಬಂಧಗಳ ಅಡಿಯಲ್ಲಿ ಭಾರತ ಒಂದಾಗಿರುವುದರಿಂದ ದಾವೆಗಳು ಮತ್ತು ಕಾರ್ಯವಾಹಿಗಳು ಮತ್ತು ಡಿಕ್ರಿಗಳ ಅಮಲ್ಜಾರಿಯ ವಿಷಯದಲ್ಲಿ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಸ್ಥಾಪಿಸುವ ದೃಷ್ಟಿಯಿಂದ ಒಂದು ಏಕ ಸಿವಿಲ್ ಪ್ರಕ್ರಿಯಾ ಸಂಹಿತೆ ಇರುವುದು ಅಪೇಕ್ಷಣೀಯ. ಆ ಉದ್ದೇಶವನ್ನು ಖಂಡ ೩ರಿಂದ ಸಾಧಿಸಲಾಗುತ್ತದೆ.

ವಿಧೇಯಕದ ಎರಡನೆ ಉದ್ದೇಶವೆಂದರೆ ಪ್ರಸ್ತುತ ಸಿವಿಲ್ ಪ್ರಕ್ರಿಯಾ ಸಂಹಿತೆಯು ಭಾಗ ಎ ರಾಜ್ಯಗಳಲ್ಲಿ ಜಾರಿಯಲ್ಲಿದ್ದರೂ, ಅದರ ವ್ಯಾಪ್ತಿಗೆ ಒಳಪಡದ ಕೆಲವು ವಿಷಯಗಳಿದ್ದವು. ಉದಾಹರಣೆಗೆ, ವಿದೇಶಿ ನ್ಯಾಯಾಲಯಗಳ ವಿದೇಶಿ ಸಮನ್ಸುಗಳ ಜಾರಿಗೆ ಉಪಬಂಧ ಕಲ್ಪಿಸಿರಲಿಲ್ಲ. ಹಾಗೆಯೇ ಈ ಸಂಹಿತೆಯು ಅನ್ವಯವಾಗದ ಸ್ಥಳಗಳಲ್ಲಿ ಸಿವಿಲ್ ನ್ಯಾಯಾಲಯಗಳು ಹೊರಡಿಸಿದ ಡಿಕ್ರಿಗಳ ಅಮಲ್ಜಾರಿಗೆ ಉಪಬಂಧ ಕಲ್ಪಿಸಿರಲಿಲ್ಲ. ಹಾಗೆಯೇ, ಈ ಸಂಹಿತೆಯು ಅನ್ವಯವಾಗದ ಸ್ಥಳಗಳಲ್ಲಿ ರೆವಿನ್ಯೂ ನ್ಯಾಯಾಲಯಗಳು ಹೊರಡಿಸಿದ ಡಿಕ್ರಿಗಳ ಅಮಲ್ಜಾರಿಯ ವಿಷಯವೂ ಸೇರಿರಲಿಲ್ಲ. ಅದೇ ರೀತಿ, ವಿದೇಶಿ ನ್ಯಾಯಾಲಯಗಳು ಹೊರಡಿಸಿದ ಕಮೀಷನ್ನುಗಳ ಜಾರಿಗೆ ಉಪಬಂಧವನ್ನು ಪ್ರಸ್ತುತ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲ್ಪಿಸಿಲ್ಲ. ಈ ವಿಷಯಗಳಿಗೆ ಉಪಬಂಧ ಕಲ್ಪಿಸುವ ಸಲುವಾಗಿ ಆ ವಿಷಯಗಳ ಬಗ್ಗೆ ವ್ಯವಹರಿಸುವ ಈ ತಿದ್ದುಪಡಿ ವಿಧೇಯಕದ ಖಂಡ ೬,೮,೯ ಮತ್ತು ೧೧ರಲ್ಲಿ ಅವುಗಳನ್ನು ಸೇರಿಸಲಾಗಿದೆ. ಅವು ಸ್ವಯಂ ವಿವರಣಾತ್ಮಕವಾಗಿರುವುದರಿಂದ ಈ ಹೊಸ ಖಂಡಗಳ ಉದ್ದೇಶಗಳನ್ನು ಸದಸ್ಯರಿಗೆ ತಿಳಿಯಪಡಿಸಲು ನನ್ನ ಅಭಿಪ್ರಾಯಗಳ ಅಗತ್ಯವಿದೆ ಎಂದು ನಾನು ಭಾವಿಸುವುದಿಲ್ಲ.

ಬಹಳ ಮುಖ್ಯವಾದ ಖಂಡವೆಂದರೆ ಖಂಡ ೧೨ ಮತ್ತು ಅದಕ್ಕೆ ಸಂಬಂಧಪಟ್ಟಂತೆ ನಾನು ಕೆಲವು ಅಭಿಪ್ರಾಯಗಳನ್ನು ನೀಡಲು ಬಯಸುತ್ತೇನೆ. ೮೩, ೮೫, ೮೬, ೮೭ ಮತ್ತು ೮೭ ಬಿ ಪ್ರಕರಣಗಳಿಗೆ ಬದಲು ಖಂಡ ೧೨ನ್ನು ಪ್ರತಿಯೋಜಿಸಲಾಗುತ್ತದೆ. ಈ ಪ್ರಕರಣಗಳು ಅನ್ಯದೇಶೀಯರ ದಾವೆಗಳು, ವಿದೇಶೀ ಆಡಳಿತಗಾರರು, ರಾಯಭಾರಿಗಳು, ರಾಜದೂತರಿಂದ ಅಥವಾ ಅವರ ವಿರುದ್ಧದ ದಾವೆಗಳೊಂದಿಗೆ ವ್ಯವಹರಿಸುತ್ತದೆ. ೮೬ ಮತ್ತು ೮೭ ಬಿ ಪ್ರಕರಣಗಳಲ್ಲಿ ಮಾತ್ರ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ೮೬ನೇ ಪ್ರಕರಣಕ್ಕೆ ಸಂಬಂಧಿಸುವಷ್ಟರಮಟ್ಟಿಗೆ, ಕೆಲವು ಸಣ್ಣ ಬದಲಾವಣೆಗಳೊಂದಿಗೆ ಅದು ಹಳೆಯ ೮೬ನೇ ಪ್ರಕರಣವೇ ಆಗಿರುತ್ತದೆ. ಪ್ರಕರಣ ೮೬ರಲ್ಲಿ ಮಾಡಲು ಉದ್ದೇಶಿಸಿರುವ ಒಂದು ಬದಲಾವಣೆಯನ್ನು (೨) (ಡಿ) ಉಪ–ಖಂಡದಲ್ಲಿ ಮಾಡಬೇಕಾಗಿದೆ. ಅದು, ವಿದೇಶಿ ಆಡಳಿತಗಾರರ ಮೇಲೆ ಕೇವಲ ಕೆಲವು ಷರತ್ತುಗಳ ಅಡಿಯಲ್ಲಿ ಮಾತ್ರ ಮತ್ತು ಕೆಲವು ಪ್ರಕ್ರಿಯಾತ್ಮಕ ನಿಯಮಗಳ ಪೂರೈಕೆಗೆ ಒಳಪಟ್ಟು ದಾವೆ ಹೂಡಬೇಕೆಂದು ಅವರಿಗೆ ಕೊಟ್ಟಿರುವ ವಿಶೇಷ ಹಕ್ಕನ್ನು ಮನ್ನಾ ಮಾಡುವ ಬಗ್ಗೆ ವ್ಯವಹರಿಸುತ್ತದೆ. ೮೬ನೇ ಪ್ರಕರಣದ ಉಪಬಂಧಗಳಿಗೆ ಒಳಪಡುವ ಯಾವುದೇ ವ್ಯಕ್ತಿಯು ಈ ವಿಶೇಷ ಹಕ್ಕನ್ನು ಮನ್ನಾ ಮಾಡಬಹುದೇ ಅಥವಾ ಅಂಥ ವಿಶೇಷಹಕ್ಕನ್ನು ಮನ್ನಾ ಮಾಡಲು ಅವನು ಸಿದ್ಧನಿದ್ದರೂ ಶಾಸನಬದ್ಧ ಉಪಬಂಧವನ್ನು ಅನುಸರಿಸಬೇಕೇ ಎಂಬುದು ಎತ್ತಲಾಗಿರುವ ಪ್ರಶ್ನೆ. ಇಂದು ಪ್ರಕ್ರಿಯಾತ್ಮಕ ಸ್ವರೂಪದ ಶಾಸನಬದ್ಧ ವಿಶೇಷ ಹಕ್ಕಾಗಿರುವುದರಿಂದ ಅದನ್ನು ಮನ್ನಾ ಮಾಡಲು ಪಕ್ಷಕ್ಕೆ ಸ್ವಾತಂತ್ರ್ಯವಿಲ್ಲ ಮತ್ತು ದಾವೆ ಹೂಡಲು ಬಯಸುವ ಒಬ್ಬ ವ್ಯಕ್ತಿಯು ನಿರ್ದಿಷ್ಟ ಪ್ರಕ್ರಿಯೆಯನ್ನು ಅನುಸರಿಸಬೇಕು ಎಂದು ಭಾರತದಲ್ಲಿನ ಕೆಲವು ನ್ಯಾಯಾಲಯಗಳು ತೀರ್ಪು ಕೊಟ್ಟಿವೆ. ಈಗ ಒಬ್ಬ ವ್ಯಕ್ತಿಯು ಆ ವಿಶೇಷ ಹಕ್ಕಿನ ಪ್ರಯೋಜನದ ಅಗತ್ಯವಿಲ್ಲವೆಂದು ಅಥವಾ ಅದು ಬೇಕಿಲ್ಲವೆಂದು ಭಾವಿಸಿದರೆ, ಆ ವಿಶೇಷ ಹಕ್ಕನ್ನು ಹೊಂದಿರುವ ವ್ಯಕ್ತಿಯನ್ನು, ಪ್ರಯೋಜನ ಪಡೆದುಕೊಳ್ಳುವುದರಿಂದ ತಡೆಯುವುದು ಸರಿಯೆಂದು ಅಥವಾ ಸೂಕ್ತವೆಂದು ತೋರುವುದಿಲ್ಲ. ಈ ವಿಷಯವನ್ನು ಸರಿಪಡಿಸುವ ದೃಷ್ಟಿಯಿಂದ ಈ ವಿಶೇಷ ಹಕ್ಕನ್ನು ಹೊಂದಿರುವ ಒಬ್ಬ ವ್ಯಕ್ತಿಯು ತಾನು ಬಯಸಿದರೆ, ಅದನ್ನು ಮನ್ನಾ ಮಾಡಬಹುದೆಂದು ಸ್ಪಷ್ಟವಾಗಿ ಹೇಳಲಾಗುವ ಈ ಉಪಬಂಧವನ್ನು ಸೇರಿಸಲಾಗಿದೆ. ೮೬ನೇ ಪ್ರಕರಣದಲ್ಲಿ ಬದಲಾವಣೆ ಮಾಡಲಾಗುವ ಮತ್ತೊಂದು ಖಂಡ ಮತ್ತು ನಾನು ಸದನದ ಗಮನ ಸೆಳೆಯಬೇಕೆಂದಿರುವುದು ಉಪಖಂಡ (೪) (ಬಿ). ವಿಶೇಷ ಹಕ್ಕಿನ ವ್ಯಕ್ತಿಗಳ ಹಳೆಯ ಪ್ರವರ್ಗಗಳಿಗೆ ಇನ್ನೂ ಒಂದು ಹೆಚ್ಚಿನ ಪ್ರವರ್ಗವನ್ನು, ಎಂದರೆ ಭಾರತದಲ್ಲಿ ಇರುವ ಹೈ ಕಮೀಷನರ್ ಪ್ರವರ್ಗವನ್ನು ಸೇರಿಸಿದ್ದೇವೆ. ಇದುವರೆಗೆ ಹೈಕಮೀಷನರ ಸ್ಥಾನಮಾನ ಒಂದು ರೀತಿಯ ಕ್ರಮಬದ್ಧವಲ್ಲದ ಸ್ವರೂಪದ್ದಾಗಿತ್ತು. ಅವರು ಒಬ್ಬ ರಾಯಭಾರಿಯೇ? ಏನಾಗಿದ್ದಾರೆ? ಯಾರನ್ನು ಪ್ರತಿನಿಧಿಸುತ್ತಾರೆ? ಒಬ್ಬ ವಿದೇಶಿ ಆಡಳಿತಗಾರನ ಪ್ರತಿನಿಧಿಗೆ ಇರುವಂಥ ವಿಶೇಷ ಹಕ್ಕುಗಳು ಅವನಿಗಿರುವುದೆ? ಈ ಸಂದಿಗ್ಧತೆಯನ್ನು ನಿವಾರಿಸುವ ಸಲುವಾಗಿ ರಾಯಭಾರಿಯನ್ನು ವಿಶೇಷ ಹಕ್ಕಿರುವ ವ್ಯಕ್ತಿಗಳ ಪ್ರವರ್ಗದಲ್ಲಿ ಸೇರಿಸುವುದು ಅಪೇಕ್ಷಣೀಯವೆಂದು ಭಾವಿಸಲಾಗಿದೆ. ಉದಾಹರಣೆಗೆ ನಮ್ಮ ಪ್ರಾದೇಶಿಕ ಮಿತಿಯೊಳಗೆ ಹೈ ಕಮೀಷನರ್ ಎಂದು ಕರೆಯಲಾಗುವ ಮತ್ತು ರಾಜತಾಂತ್ರಿಕತೆಯ ದೃಷ್ಟಿಯಿಂದ ರಾಯಭಾರಿಗಳ ಸ್ಥಾನವನ್ನು ಪಡೆದುಕೊಳ್ಳುವ ಕಾಮನ್‌ವೆಲ್ತ್‌ನ ಪ್ರತಿನಿಧಿಗಳು ಇದ್ದಾರೆ. ತತ್ಪರಿಣಾಮವಾಗಿ, ಅವರ ಪದನಾಮದಲ್ಲಿ ವ್ಯತ್ಯಾಸ ಮಾಡುವುದಕ್ಕೆ ಏನೇ ಕಾರಣವಿರಲಿ, ವಾಸ್ತವವಾಗಿ ಅವರು ತಮ್ಮ ಸರ್ಕಾರದ ಮುಖ್ಯಸ್ಥರನ್ನು ಪ್ರತಿನಿಧಿಸುತ್ತಾರೆ, ಆದ್ದರಿಂದ ಒಬ್ಬ ರಾಯಭಾರಿ ಪಡೆಯುವಂಥ ಅದೇ ಮನ್ನಣೆಯನ್ನು ಅವರೂ ಪಡೆಯಬೇಕು.

ಹಳೆಯ ೮೬ನೇ ಪ್ರಕರಣದಲ್ಲಿ ಬದಲಾವಣೆ ಮಾಡುವ ಇನ್ನೊಂದು ಖಂಡವೆಂದರೆ ಖಂಡ ೮೬, ಉಪಖಂಡ (೪), ಉಪಖಂಡ (ಸಿ). ವಿದೇಶಿ ಸರ್ಕಾರದ ಮುಖ್ಯಸ್ಥರಿಗೆ ಅಥವಾ ಅವರ ರಾಯಭಾರಿಗಳಿಗೆ ಮತ್ತು ಹೈಕಮೀಷನರಿಗೆ ನೀಡಲಾಗುವ ವಿಶೇಷ ಹಕ್ಕುಗಳನ್ನು ಸಾರ್ವಜನಿಕ ಅಧಿಸೂಚನೆ ಮೂಲಕ ಭಾರತ ಸರ್ಕಾರ ಅಧಿಸೂಚಿಸಬಹುದಾದಂತೆ ಅವರ ಸೇವಕವರ್ಗದ ಅಂಥ ಸದಸ್ಯರಿಗೆ ಮತ್ತು ಸಿಬ್ಬಂದಿವರ್ಗದವರಿಗೆ ಸಹ ನೀಡಬಹುದು ಎಂದು ಅದು ಹೇಳುತ್ತದೆ. ಇಲ್ಲಿ, ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಿಂದ, ಯಾವುದೇ ಒಮ್ಮತ ಇದೆಯೆಂದು ಕಂಡುಬರುವುದಿಲ್ಲ. ಒಂದು ಬಾರಿ ರಾಯಭಾರಿಗೆ ವಿದೇಶಿ ರಾಜ್ಯದ ಪ್ರತಿನಿಧಿಯೆಂಬುದಾಗಿ ವಿನಾಯಿತಿ ಅಥವಾ ವಿಶೇಷ ಹಕ್ಕನ್ನು ನೀಡಿದರೆ ಮತ್ತು ಅವನ ದೇಶದ ಒಂದು ಭಾಗವಾಗಿ ಅವನ ಕಾಲೋನಿ ಇಲ್ಲಿ ಸ್ಥಾಪಿತವಾಗಿದೆ ಎಂಬ ಕಾರಣಕ್ಕಾಗಿ ಹಾಗೆ ಮಾಡಿದರೆ, ಕಾನೂನುಬದ್ಧವಾಗಿ ಹೇಳುವುದಾದರೆ, ಸ್ವತಃ ಆ ಮನುಷ್ಯ ಮತ್ತು ಯಾರ ಮೂಲಕ ಅವನು ಈ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಾನೋ ಆ ಏಜೆಂಟರ ನಡುವೆ ಯಾವುದೇ ವ್ಯತ್ಯಾಸ ಮಾಡಲಾಗದು ಎಂದು ಅಂತಾರಾಷ್ಟ್ರೀಯ ವಕೀಲರ ಒಂದು ತಂಡ ಹೇಳಿದೆ. ಇಂಥ ವಿಶೇಷ ಹಕ್ಕುಗಳನ್ನು ಪ್ರತಿಯೊಬ್ಬರಿಗೂ ವಿಸ್ತರಿಸಬಾರದು, ಆದರೆ ಈ ವಿಶೇಷ ಹಕ್ಕುಗಳನ್ನು ಯಾರಿಗೆ ನೀಡಬೇಕೋ ಅವರನ್ನು ಆಯ್ದುಕೊಳ್ಳಲು ದೇಶಕ್ಕೆ ಸ್ವಾತಂತ್ರ್ಯವಿದೆ ಎಂದು ಇನ್ನು ಹಲವು ಅಂತಾರಾಷ್ಟ್ರೀಯ ವಕೀಲರು ಹೇಳಿದ್ದಾರೆ. ಈಗ ಈ ವಿಷಯವನ್ನು ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಿಂದ ಇತ್ಯರ್ಥಪಡಿಸದೆ ಇರುವುದರಿಂದ, ಈ ವಿಶೇಷ ಹಕ್ಕನ್ನು ಯಾರಿಗೆ ವಿಸ್ತರಿಸಬೇಕು ಎಂಬುದನ್ನು ಅಧಿಸೂಚಿಸಲು ಕೇಂದ್ರಸರ್ಕಾರಕ್ಕೆ ಕಾನೂನು ಅಧಿಕಾರ ನೀಡುವುದು ಉತ್ತಮ ಮಾರ್ಗ ಎಂದು ಭಾವಿಸಲಾಗಿದೆ. ಭಾರತ ಸರ್ಕಾರದ ವಿದೇಶೀ ಇಲಾಖೆಗೆ ಈ ಖಂಡದ ಅಡಿಯಲ್ಲಿ ಈ ಕುರಿತಂತೆ ಇತರ ದೇಶಗಳಲ್ಲಿರುವ ಪದ್ಧತಿಯ ಬಗ್ಗೆ ವಿಚಾರಣೆ ಮಾಡಲು ಮತ್ತು ಈ ದೇಶದಲ್ಲಿನ ಬಹುದೊಡ್ಡ ರಾಜಕೀಯ ಅಂತಾರಾಷ್ಟ್ರೀಯ ಅಭಿಪ್ರಾಯಕ್ಕೆ ಅನುಗುಣವಾಗಿರುವಂತೆ ಸೂಕ್ತ ಅಧಿಸೂಚನೆಗಳನ್ನು ಮಾಡಲು ಸಾಧ್ಯವಾಗುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಹಳೆಯ ೮೬ನೇ ಪ್ರಕರಣದಲ್ಲಿ ಬದಲಾವಣೆ ಮೂಲಕ ಇವುಗಳನ್ನು ಮಾಡಲು ನಾವು ಪ್ರಸ್ತಾವಿಸಿದ್ದೇವೆ.

**ಮಧ್ಯಾಹ್ನ ೧೨ ಗಂಟೆ**

ಈಗ, ಬಹುತೇಕ ಸದಸ್ಯರು ತೀವ್ರ ಆಸಕ್ತಿ ಹೊಂದಿರುವರೆಂದು ನಾನು ತಿಳಿದಿರುವ ೮೭ ಬಿ ಪ್ರಕರಣಕ್ಕೆ ಬರುತ್ತೇನೆ. ೮೭ನೇ ಪ್ರಕರಣ ಹಿಂದಿನ ಭಾರತೀಯ ರಾಜ್ಯಗಳ ರಾಜರೊಂದಿಗೆ ವ್ಯವಹರಿಸುತ್ತದೆ. ಆಗಿನ ಸಿವಿಲ್ ಪ್ರಕ್ರಿಯಾ ಸಂಹಿತೆಯ ಅಡಿ ಅವರಿಗಿದ್ದಂಥ ಯಾವುದೇ ವಿಶೇಷ ಹಕ್ಕುಗಳನ್ನು ಸಹ ಅವರಿಗೆ ಕೊಡಬೇಕೇ ಎಂಬುದು ಪ್ರಶ್ನೆ. ರಾಜಕೀಯ ಮತ್ತು ಕಾನೂನು ದೃಷ್ಟಿಯಿಂದ ಅವರು ರಾಜರಾಗಿರುವುದು ರದ್ದಾಗಿರುವುದರಿಂದ, ಅವರು ರಾಜ್ಯದ ಉಳಿದ ಜನತೆಗೆ ಅನ್ವಯವಾಗುವ ಕಾನೂನಿಗಿಂತ ವಿಭಿನ್ನವಾಗಿ ಯಾವುದೇ ರಿಯಾಯತಿಯನ್ನು ಕ್ಲೇಮು ಮಾಡುವುದು ಸಾಧ್ಯವಿಲ್ಲ. ಆದರೆ ಸಂವಿಧಾನ ತಮ್ಮ ಮುಂದಿದ್ದಾಗ ಭಾರತ ಸರ್ಕಾರ ಮತ್ತು ಸಂವಿಧಾನ ಮಂಡಲಿ ಎರಡೂ ಕೆಲವು ಅಂಶಗಳ ಬಗ್ಗೆ ಬದ್ಧತೆ ಮಾಡಿಕೊಂಡಿದ್ದವು ಎಂಬುದು ಸದನಕ್ಕೆ ತಿಳಿಯುತ್ತದೆ ಮತ್ತು ಈಗಾಗಲೇ ಮಾಡಿರುವುದಕ್ಕೆ ನಾವು ಮನ್ನಣೆ ನೀಡಬೇಕಾದುದು ಅಗತ್ಯ. ಆದ್ದರಿಂದ ಹೊಸ ಪ್ರಕರಣದ ಮೂಲಕ ಮಾಡಲು ಪ್ರಸ್ತಾವಿಸಿರುವುದೇನೆಂದರೆ ಪ್ರಕರಣ ೮೫ನ್ನು ಮತ್ತು ಪ್ರಕರಣ ೮೬ (೧) ಮತ್ತು (೩)ನೇ ಉಪ–ಪ್ರಕರಣಗಳನ್ನು ಹಿಂದಿನ ಭಾರತೀಯ ರಾಜ್ಯಗಳ ರಾಜರಿಗೆ ಅನ್ವಯವಾಗುವಂತೆ ಮಾಡುವುದು. ಈ

ತಿದ್ದುಪಡಿ ವಿಧೇಯಕದಲ್ಲಿ ಹೇಳಿರುವ ಪ್ರಕರಣ ೮೫ನ್ನು ಮಾನ್ಯ ಸದಸ್ಯರು ಗಮನಿಸಿದರೆ, ಅದು, ಒಬ್ಬ ವಿದೇಶೀ ರಾಜ ದಾವೆ ಹೂಡಲ್ಪಟ್ಟರೆ, ಯಾವೊಬ್ಬ ನಿರ್ದಿಷ್ಟ ವ್ಯಕ್ತಿಯನ್ನು ನೇಮಿಸಿಕೊಳ್ಳಲು ಅವನಿಗೆ ಅನುಮತಿಸಬಹುದು ಮತ್ತು ಅವನ ಪರವಾಗಿ ವಾದಿಯಾಗಿ ಅಥವಾ ಪ್ರತಿವಾದಿಯಾಗಿ ವ್ಯಾಜ್ಯವನ್ನು ನಡೆಸಲು ಭಾರತ ಸರ್ಕಾರ ಅವನಿಗೆ ಅನುಮತಿಸಬಹುದು ಎಂದು ಮಾತ್ರ ಹೇಳುತ್ತದೆ ಎಂಬುದು ಅವರಿಗೆ ಕಂಡುಬರುತ್ತದೆ.

ಇದನ್ನು ನೀಡುವಲ್ಲಿ ಯಾವುದೇ ತಪ್ಪಿಲ್ಲ. ೮೫ನೇ ಪ್ರಕರಣದ ಅಡಿಯಲ್ಲಿ ಹಿಂದಿನ ಭಾರತೀಯ ರಾಜ್ಯದ ಒಬ್ಬ ರಾಜನಿಗೆ ಸಿಗುವ ಏಕಮಾತ್ರ ವಿಶೇಷ ಹಕ್ಕೆಂದರೆ, ದಾವೆಯು ಅವನ ವಿರುದ್ಧ ಮುಂದುವರೆಯುತ್ತಿದ್ದರೆ ಅವನು ವೈಯಕ್ತಿಕವಾಗಿ ಹಾಜರಾಗುವುದು ಅಗತ್ಯವಾಗದಿರಬಹುದು. ಅವನು ತನ್ನ ಪರ ವಕಾಲತ್ತಿಗೆ ಯಾರನ್ನಾದರೂ ನಿಯೋಜಿಸಬಹುದು. ಸಿವಿಲ್ ಸ್ವರೂಪದ ಯಾವುದೇ ವ್ಯವಹರಣೆಗಳನ್ನು ಹಿಂದಿನ ಭಾರತೀಯ ರಾಜ್ಯದ ರಾಜನ ವಿರುದ್ಧ ಪ್ರಾರಂಭಿಸುವುದಕ್ಕೆ ಮೊದಲು ಭಾರತ ಸರ್ಕಾರದ ಸಹಮತಿ ಅಗತ್ಯವಾಗಬಹುದು ಎಂದು ೮೬(೧)ನೇ ಪ್ರಕರಣದಲ್ಲಿ ಹೇಳಲಾಗಿದೆ. ಈ ವಿಷಯವನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯನ್ನು ತಿದ್ದುಪಡಿ ಮಾಡಲು ನಾವು ವ್ಯವಹರಿಸುತ್ತಿದ್ದಾಗ ನಿನ್ನೆ ಪುನಃ ಚರ್ಚಿಸಲಾಯಿತು. ಪ್ರಸ್ತುತ ಸಂದರ್ಭಗಳಲ್ಲಿ ಭಾರತದ ರಾಜ್ಯಗಳಲ್ಲಿ ವಾಸಿಸುವ ವ್ಯಕ್ತಿಗಳು ಒಬ್ಬ ರಾಜನ ಬಗೆಗಿನ ದ್ವೇಷಕ್ಕೆ, ಶತ್ರುತ್ವಕ್ಕೆ ಅಥವಾ ಹಗೆತನಕ್ಕೆ ಅಭಿವ್ಯಕ್ತಿ ನೀಡಲು ಅನೇಕ ಕಾರಣಗಳನ್ನು ಹೊಂದಿರಬಹುದು ಎಂಬುದು ಅಂಶವಾಗಿತ್ತು – ಮತ್ತು ಅವರು ಯಾವುದೇ ಪ್ರಾಮಾಣಿಕ ಕಾರಣವಿಲ್ಲದೆ ಯಾವುದೇ ನ್ಯಾಯಾಲಯದ ಕಟ್ಟೆ ಹತ್ತಿಸಿ ಕಿರುಕುಳ ನೀಡಬಹುದು. ರಾಜನ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ಪ್ರತಿಪಕ್ಷದವರಿಗೆ ಸಾಕಷ್ಟು ಕಾರಣವಿರುವದಿಂದ ವ್ಯಾಜ್ಯದಿಂದ ರಾಜನನ್ನು ರಕ್ಷಿಸಲು ಭಾರತ ಸರ್ಕಾರಕ್ಕೆ ಸಂಪೂರ್ಣ ಅಧಿಕಾರವಿರಬೇಕು ಎಂಬುದರಿಂದ ಭಾರತ ಸರ್ಕಾರದ ಸಹಮತಿ ಅಗತ್ಯ ಎಂದು ಹೇಳಿಲ್ಲ. ಅವನ ವಿರುದ್ಧದ ಕ್ಲೇಮು ಪ್ರಾಮಾಣಿಕ ಸ್ವರೂಪದ್ದಾಗಿದೆ ಎಂಬುದನ್ನು ತಿಳಿದುಕೊಳ್ಳಲು ಈ ಸಹಮತಿಯನ್ನು ಅಗತ್ಯಪಡಿಸಲಾಗಿದೆ. ಇದಲ್ಲದೇ ಬೇರಾವ ಉದ್ದೇಶವೂ ಇಲ್ಲ.

ಉಪಖಂಡ (೩)ಕ್ಕೆ ಸಂಬಂಧಪಟ್ಟಂತೆ, ಅದು ಭಾರತ ಸರ್ಕಾರದ ಸಹಮತಿಯಿಂದ ಅವನನ್ನು ದಸ್ತಗಿರಿ ಮತ್ತು ಅವನ ಸ್ವತ್ತಿನ ವಿರುದ್ಧದ ಡಿಕ್ರಿ ಜಾರಿಯಿಂದ ಹೊರತುಪಡಿಸುತ್ತದೆ. ನಾನು ಹೇಳಿರುವಂತೆ ಇವು ಭಾರತೀಯ ರಾಜರುಗಳ ಘನತೆಯನ್ನು ಕಾಪಾಡಲು ನಾವು ಹಾಕಿಕೊಂಡಿರುವ ಕೆಲವು ನಿರ್ಬಂಧಗಳ ಪೂರೈಕೆಗಾಗಿ ಮಾತ್ರ. ಅದನ್ನು ಮೀರಿ ಇನ್ನೇನೂ ಇಲ್ಲ.

ನಾನು ಪ್ರಕರಣ ೮೭ ಬಿ (೨) (ಬಿ)ಯಲ್ಲಿ ನೀಡಿರುವ "ರಾಜ" ಪದದ ಅರ್ಥವಿವರಣೆಯ ಬಗ್ಗೆ ಸದನದ ಗಮನ ಸೆಳೆಯಬಹುದು. ಆ ಅರ್ಥವಿವರಣೆ ಪ್ರಮುಖವಾದುದು ಎಂದು ಭಾವಿಸುತ್ತೇನೆ. ಹಿಂದಿನ ಭಾರತೀಯ ರಾಜ್ಯದ ಪ್ರತಿಯೊಬ್ಬ ರಾಜನಿಗೆ ಪ್ರಕರಣ ೮೭ ಬಿಯಲ್ಲಿರುವ ಉಪಬಂಧಗಳ ಸೌಲಭ್ಯ ದೊರೆಯುವುದಿಲ್ಲ. ಅರ್ಥವಿವರಣೆಯು ನಿರ್ಬಂಧಿತ ರೀತಿಯದ್ದು, ಎಂದರೆ, ರಾಜನನ್ನು ರಾಷ್ಟ್ರಾಧ್ಯಕ್ಷರು ಈ ವಿಶೇಷಹಕ್ಕುಗಳಿಗೆ ಹಕ್ಕುಳ್ಳವನೆಂದು ಗುರುತಿಸಬೇಕು ಎಂದು. ರಾಷ್ಟ್ರಪತಿಯಿಂದ ಮಾನ್ಯತೆ ಸಿಗದ ರೀತಿಯ ವರ್ತನೆಯನ್ನು ಒಬ್ಬ ರಾಜಕುಮಾರ ತೋರಿಸಿದರೆ ರಾಷ್ಟ್ರಪತಿಯು ಅವನ ಹೆಸರನ್ನು ಯಾವುದೇ ಅಧಿಸೂಚನೆಯಿಂದ ತೆಗೆದುಹಾಕುವ ಸಾಧ್ಯತೆಯಿರುತ್ತದೆ. ಇದರಿಂದ ಅವನ ಸ್ಥಾನಮಾನ ಒಬ್ಬ ಸಾಧಾರಣ ನಾಗರಿಕನ ಸ್ಥಾನಮಾನಕ್ಕೆ ಕುಗ್ಗಿ ಅವನು ಸಾಮಾನ್ಯ ನಾಗರಿಕನಂತೆ ದೇಶದಲ್ಲಿ ಸಿವಿಲ್ ಪ್ರಕ್ರಿಯಾಸಂಹಿತೆಯ ಅಡಿಯಲ್ಲಿನ ಸಾಮಾನ್ಯ ಪ್ರಕ್ರಿಯೆಗೆ ಬದ್ಧನಾಗುತ್ತಾನೆ.

ಇತರ ಖಂಡಗಳು ಯಾವುದೇ ಸಂದಿಗ್ಧತೆ, ತೊಂದರೆ ಇತ್ಯಾದಿಗಳನ್ನು ನಿವಾರಿಸಲು ಇರುತ್ತವೆ. ಬಹುಮುಖ್ಯ ಖಂಡವೆಂದರೆ ಖಂಡ 12 ಮತ್ತು ಈ ವಿಧೇಯಕದ ಮೂಲಕ ಮಂಡಿಸಲಾಗಿರುವ ತಿದ್ದುಪಡಿಗಳ ಮೂಲಾಧಾರದ ಬಗ್ಗೆ ಸದನಕ್ಕೆ ಸಾಕಷ್ಟು ವಿವರಣೆ ನೀಡಿದ್ದೇನೆ ಎಂದು ಭಾವಿಸಿದ್ದೇನೆ.

**ಮಾನ್ಯಸಭಾಧ್ಯಕ್ಷರು:** ಮುಂದಿನಂತೆ ನಿಲುವಳಿಯನ್ನು ಮಂಡಿಸಲಾಗಿದೆ:

"1908ರ ಸಿವಿಲ್ ಪ್ರಕ್ರಿಯಾ ಸಂಹಿತೆಗೆ ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುತ್ತದೆ."

***ಡಾ॥ ಅಂಬೇಡ್ಕರ್:** ಉತ್ತರ ನೀಡುವಂತಹದ್ದು ಹೆಚ್ಚಾಗಿಲ್ಲ. ಆದರೆ, ಕೆಲವು ಅಂಶಗಳ ಬಗ್ಗೆ ನನ್ನ ನಿಲುವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ.

ಈ ಚರ್ಚೆಯಲ್ಲಿ ಭಾಗವಹಿಸಿದ ಮೊದಲ ಸಭಾಧ್ಯಕ್ಷರು, ರಾಯಭಾರಿಯ ಪರಿವಾರಕ್ಕೆ ನೀಡುವ ವಿನಾಯಿತಿಗಳ ವಿಧೇಯಕದ ಉಪಬಂಧವು ಅಂತಾರಾಷ್ಟ್ರೀಯ ಅಭಿಪ್ರಾಯಕ್ಕನುಗುಣವಾಗಿ ಇಲ್ಲ ಎಂದು ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ಕಾನೂನು ವಿಷಯದಲ್ಲಿ ವ್ಯವಹರಿಸುವ ಬರಹಗಾರರಲ್ಲಿಯೂ ಸಹ ರಾಯಭಾರಿ ಜೊತೆಗೆ ಅವರ ಪರಿವಾರದವರಿಗೂ ವಿಶೇಷಾಧಿಕಾರವನ್ನು (ಸ್ಥಾನ-ಮಾನ) ನೀಡುವ ಬಗ್ಗೆ ಒಮ್ಮತವಿದೆ. ನನ್ನನ್ನು ಕ್ಷಮಿಸಿ. ಅವರಿಗಿಂತ ಭಿನ್ನ ಅಭಿಪ್ರಾಯ ನನ್ನದು. ಅಂತಾರಾಷ್ಟ್ರೀಯ ಕಾನೂನುಗಳ ಕುರಿತ ಪ್ರಕರಣ ಗ್ರಂಥಗಳ ಉದ್ಧೃತ ಭಾಗಗಳು ನನ್ನ ಮುಂದಿದೆ. ಅವುಗಳನ್ನು ಓದಿ ಸದನಕ್ಕೆ ಬೇಸರವುಂಟು ಮಾಡಲು ನನಗೆ ಇಷ್ಟವಿಲ್ಲ. ಆದರೆ ನನ್ನ ಮುಂದಿರುವ ಉದ್ಧೃತ ಭಾಗಗಳಲ್ಲಿ ಒಮ್ಮತವಿಲ್ಲ ಎನ್ನುವುದನ್ನು ಸದನಕ್ಕೆ ನಾನು ಸ್ಪಷ್ಟಪಡಿಸಬಲ್ಲೆ. ಆ ಕಾರಣದಿಂದಲೇ ಪ್ರಕರಣದಲ್ಲಿ ಯಾವ ಪದಗಳನ್ನು ಬಳಸಲಾಗಿದೆಯೋ, ಅದೇ ಪದಗಳನ್ನು ಪ್ರಯೋಗಿಸಲಾಗಿದೆ. ಸ್ಥಾನಮಾನಗಳನ್ನು ಪರಿಭಾಷಿಸುವ ವಿಧಾನ ಬೇರೆಯಾದರೂ, ಅಥವಾ ಈಗಿರುವಂತೆಯೇ ಖಂಡವನ್ನು ಉಳಿಸಿಕೊಳ್ಳಲು ಅನುಮತಿಸುವುದರಿಂದ ಉಂಟಾಗುವ ಪರಿಣಾಮದಲ್ಲಿ ಯಾವುದೇ ರೀತಿಯ ವ್ಯತ್ಯಾಸವಾಗುವುದಿಲ್ಲ ಎಂಬ ಅಂಶವನ್ನು ನನ್ನ ಮಿತ್ರರು ತಿಳಿಯಬಲ್ಲರೆಂದು ಭಾವಿಸುತ್ತೇನೆ. ಏಕೆಂದರೆ ವಿನಾಯಿತಿಯನ್ನು ಪ್ರಕರಣದಲ್ಲಿ ನೀಡಿದರೂ ಅಥವಾ ಪ್ರಕರಣದಲ್ಲಿ ಒಂದು ಅಧಿಸೂಚನೆ ಹೊರಡಿಸುವ ಮೂಲಕ ನೀಡಿದರೂ, ಉಂಟಾಗುವ ಪರಿಣಾಮದಲ್ಲಿ ಹೆಚ್ಚು ವ್ಯತ್ಯಾಸವಾಗುವುದಿಲ್ಲ.

"ರಾಜ" ಎಂಬ ಪದವನ್ನು ನಾವು ಸಮಂಜಸವಾಗಿ ಬಳಸಿಲ್ಲವೆಂಬುಂದು ಅವರ ಎರಡನೇ ಅಂಶ. ಆದರೆ ಪ್ರಸ್ತುತ ಈಗಿರುವ ರಾಜ್ಯಗಳ ರಾಜ್ಯಾಧಿಪತಿಗಳನ್ನು "ರಾಜ"ನೆಂದು ಎಲ್ಲೂ ಹೇಳಿಲ್ಲ. ಆದರೆ ಈ ಖಂಡದ ಕರಡನ್ನು ಸಿದ್ಧಪಡಿಸುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿರುವ ಭಾಷೆಯನ್ನೇ ವಾಸ್ತವಿಕವಾಗಿ ಬಳಸಿಕೊಂಡಿದ್ದೇವೆ ಎಂಬುದನ್ನು ಅವರ ಗಮನಕ್ಕೆ ತರಲು ಇಚ್ಛಿಸುತ್ತೇನೆ ಹಾಗೆಯೇ ಸಿವಿಲ್ ಪ್ರಕ್ರಿಯಾ ಸಂಹಿತೆಯ ಪ್ರಕರಣ-83ರ ಶೀರ್ಷಿಕೆ, ಪ್ರಕರಣ-84 ಮತ್ತು 83ರ ಉಪಖಂಡ (1) ಮತ್ತು (2) ಕಡೆಗೆ ಅವರ ಗಮನವನ್ನು ಸೆಳೆಯಲು ಬಯಸುತ್ತೇನೆ. ಏಕೆಂದರೆ ಅಲ್ಲಿ ಬಳಸಿರುವ ಪದಗಳನ್ನೇ ನಾವು ಇಲ್ಲಿ ಬಳಸಿದ್ದೇವೆ. ಪ್ರಸ್ತುತ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿರುವ ಭಾಷೆಗಿಂತ ಭಿನ್ನವಾದ ಭಾಷೆಯನ್ನು ನಾವು ಬಳಸಿಲ್ಲ ಆದರೆ ಪ್ರಸ್ತಾವಿತ ವಿಧೇಯಕದ ಪ್ರಕರಣ-87ಎ ರಲ್ಲಿರುವ "ರಾಜ" ಎಂಬ ಪದಕ್ಕೆ ನಾವು ನೀಡಿರುವ ಪರಿಭಾಷೆಯಲ್ಲಿ "ರಾಜ" ಎಂದರೆ 'ಹೊರ ರಾಜ್ಯಕ್ಕೆ

---

* ಪಿ.ಡಿ. Vol. 8, ಭಾಗ 2, 9 ಫೆಬ್ರವರಿ 1941, ಪು. 265-62.

ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ತತ್ಕಾಲಕ್ಕೆ ಮನ್ನಣೆ ಪಡೆದ ವ್ಯಕ್ತಿ, ರಾಜ್ಯದ ಮುಖ್ಯಸ್ಥ ಎಂದು ಪರಿಭಾಷಿಸಲಾಗಿದೆ.

ಅದರಿಂದ, ಯಾವುದೇ ಒಂದು ರಾಜ್ಯದಲ್ಲಿ ರಾಜನು ಆಡಳಿತಾಧಿಕಾರಿಯಾಗಿರುವ ಸರ್ಕಾರವೇ ಇರಲಿ ಅಥವಾ ರಾಷ್ಟ್ರಪತಿ ಅಥವಾ ಇನ್ನಾವುದೇ ಗೌರವಾಧಿಕಾರಿಯವರು ದೇಶದ ಮುಖ್ಯಸ್ಥನಾಗಿರುವ ಗಣರಾಜ್ಯ ಸರ್ಕಾರವೇ ಇರಲಿ, ನಮ್ಮ ಪರಿಭಾಷೆಯು ಯಾರನ್ನು ರಾಜ್ಯದ ಮುಖ್ಯಸ್ಥನೆಂದು ಪರಿಗಣಿಸಬೇಕೆಂಬ ವಿಷಯವನ್ನು ರಾಜ್ಯಸರ್ಕಾರಕ್ಕಿಂತ ಕೇಂದ್ರ ಸರ್ಕಾರದ ವಿವೇಚನೆಗೆ ಬಿಡುವಲ್ಲಿ ಚ್ಯುತಿಯುಂಟು ಮಾಡುವುದಿಲ್ಲ.

ಭಾರತದ ರಾಜರುಗಳ ವಿಷಯಕ್ಕೆ ಬಂದರೆ ಒಂದು ಅಥವಾ ಎರಡು ವಿಷಯಗಳನ್ನು ಸ್ಪಷ್ಟಪಡಿಸಬೇಕೆಂದು ನನ್ನನ್ನು ಕೇಳಿದ್ದಾರೆ. ಮೊದಲನೆಯದಾಗಿ ಈ ವಿಶೇಷಾಧಿಕಾರಗಳು ಯಾವಾಗ ಕೊನೆಗೊಳ್ಳುತ್ತದೆ. ಎರಡನೆಯದಾಗಿ ಪ್ರಸ್ತುತ ಈಗಿರುವ ರಾಜರಿಗೆ ನೀಡಿರುವ ವೈಯಕ್ತಿಕ ವಿಶೇಷಾಧಿಕಾರಗಳ ಬಗ್ಗೆ ಸ್ಪಷ್ಟಪಡಿಸುವಂತೆ ಕೋರಿರುತ್ತಾರೆ ಮತ್ತು ಅವುಗಳು ಆನುವಂಶಿಕ ಸ್ವರೂಪದ್ದಾಗಿದ್ದು ತಂದೆಯಿಂದ ಮಗನಿಗೆ ಬರುವ ವಿಶೇಷಾಧಿಕಾರಗಳೋ ಎಂದು ಸ್ಪಷ್ಟಪಡಿಸುವಂತೆ ಕೋರಿರುತ್ತಾರೆ. ವಕೀಲರ ಮುಂದೆ ಒಂದು ಸಮಸ್ಯೆಯನ್ನು ಇಡುವತನಕ ಅವನು ಅದನ್ನು ಬಗೆಹರಿಸುವುದಿಲ್ಲವೆಂಬ ಅಂಶವನ್ನು ನನ್ನ ವಕೀಲ ಸ್ನೇಹಿತರು ತಿಳಿದುಕೊಳ್ಳಬಲ್ಲರು ಎಂದು ಭಾವಿಸುತ್ತೇನೆ. ಆ ರೀತಿಯ ಯಾವ ಸಮಸ್ಯೆಯನ್ನು ನನ್ನ ಮುಂದಿಡದ ಕಾರಣ ನಾನು ಒಂದು ನಿರ್ದಿಷ್ಟ ಅರ್ಥ ವಿವರಣೆಯನ್ನು ನೀಡುವ ಹಾಗೂ ಬದ್ಧನಾಗಿರುವ ಸ್ಥಿತಿಯಲ್ಲಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು:** ತತ್ಕಾಲಕ್ಕೆ ರಾಜ ಎಂಬುದು ಇದೆ.

**ಡಾ॥ ಅಂಬೇಡ್ಕರ್:** ಹೌದು ತತ್ಕಾಲಕ್ಕೆ ಎಂಬುದು ಇದೆ. ಅದರಿಂದಲೇ ಪರಿಗಣಿಸಲು ಮತ್ತು ಪುನಃ ಈಕ್ಷಿಸಲು ಈ ವಿಷಯವು ಎಲ್ಲಾ ಕಾಲದಲ್ಲೂ ಮುಕ್ತವಾಗಿದೆ ಎಂದು ನಾನು ಹೇಳುತ್ತಿರುವುದು. ಸಂಸತ್ತಿನ ಅಥವಾ ಸರ್ಕಾರದ ವ್ಯಾಪ್ತಿಗೆ ಬರದಿರುವ ವಿಷಯವೆಂದು ಹೇಳಲಾಗುವುದಿಲ್ಲ. ಸಂಸತ್ತು ಇಷ್ಟಪಟ್ಟರೆ ನೀಡುತ್ತಿರುವ ವಿಶೇಷಾಧಿಕಾರಗಳನ್ನು ಮತ್ತು ವಿನಾಯಿತಿಗಳನ್ನು ನಿಲ್ಲಿಸಬಹುದು. ಈಗಾಗಲೇ ನಮಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ ಮತ್ತು ಭಾರತ ದೇಶದ ರಾಜಕುಮಾರರ ಶತ್ರುಗಳು ಸತ್ತು ಹೋಗಿದ್ದಾರೆ. ತಮ್ಮ ಸಂತತಿಯನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಬಾರದೆಂದು ಕಣ್ಮರೆಯಾಗಿದಾರೆಂದು ಭಾವಿಸಿ ಅಥವಾ ಪ್ರಸ್ತುತ ಅಧಿಕಾರದಲ್ಲಿರುವವರಿಗೆ ಅವರ ಜೀವನಪರ್ಯಂತ ಈ ವಿಶೇಷಾಧಿಕಾರಗಳನ್ನು ನೀಡಬಹುದೆಂಬ ನಿರ್ಧಾರವನ್ನು ತೆಗೆದುಕೊಳ್ಳಬಹುದು. ಅದರಿಂದಲೇ ಈ ವಿಷಯವು ಮುಗಿದು ಹೋದ ಪ್ರಕರಣದಲ್ಲಿ ಇನ್ನೂ ಮುಕ್ತವಾಗಿದೆ ಎಂದು ಹೇಳಿದ್ದು ಸಮ್ಮತಿ ನೀಡುವ ಅಥವಾ ನಿರಾಕರಿಸುವ ಅಧಿಕಾರವನ್ನು ಸರ್ಕಾರವು ಯಾವ ರೀತಿ ಉಪಯೋಗಿಸಿಕೊಳ್ಳಲು ಪ್ರಸ್ತಾವಿಸಿದೆ ಎಂಬ ವಿಷಯದ ಬಗ್ಗೆ ಸರ್ಕಾರದ ಪರವಾಗಿ ಭರವಸೆಗಳನ್ನು ನೀಡುವಂತೆ ನನ್ನನ್ನು ಕೋರಿದ್ದರು. ಈ ಬಗ್ಗೆ ನಾನು ಹೇಳುವುದೇನೆಂದರೆ ಕ್ಲೇಮು ವಾಸ್ತವಿಕವಾಗಿರುವ ವಿಷಯದಲ್ಲಿ ಆ ವಿಷಯವನ್ನು ವ್ಯವಹರಿಸುವ ಸರ್ಕಾರವಾಗಲಿ ಅಥವಾ ಸರ್ಕಾರದ ಸದಸ್ಯನಾಗಲಿ ಸಮ್ಮತಿಯನ್ನು ನೀಡದಿರುವುದು ಸೂಕ್ತ ಎಂದು ಭಾವಿಸುವುದು ಸರಿಯಲ್ಲ ಎಂಬುದರ ಬಗ್ಗೆ ನನ್ನ ಮನಸ್ಸಿನಲ್ಲಿ ಎಳ್ಳಷ್ಟೂ ಅನುಮಾನವಿಲ್ಲ ಏಕೆಂದರೆ ಅಂತಹ ವಿಷಯಗಳನ್ನು ವ್ಯವಹರಿಸುವ ಸದಸ್ಯನು ಸದನಕ್ಕೆ ಉತ್ತರಿಸಬೇಕಾಗುತ್ತದೆ.

**ಪಂಡಿತ ಕುನ್‌ಜ್ರು:** (ಉತ್ತರ ಪ್ರದೇಶ) ಮಾನ್ಯರೇ, ಈಗಾಗಲೇ ಒಂದು ಗಂಟೆಯಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು:** ಸಾಧ್ಯವಾದಲ್ಲಿ ಈಗ ಮೊದಲ ಪಠನವನ್ನು ಮುಗಿಸೋಣ.

**ಪಂಡಿತ ಕುನ್‌ಜ್ರು:** ಮಾನ್ಯ ಮಂತ್ರಿಗಳು ೧/೨ ಗಂಟೆ ಕಾಲಾವಕಾಶವನ್ನು ತೆಗೆದುಕೊಳ್ಳಬಹುದು.

**ಮಾನ್ಯ ಉಪಸಭಾಧ್ಯಕ್ಷರು:** ಮಾನ್ಯ ಮಂತ್ರಿಗಳೇ ಎಷ್ಟು ಸಮಯ ಬೇಕಾಗುತ್ತದೆ.

**ಡಾ. ಅಂಬೇಡ್ಕರ್:** ಮಾನ್ಯರೇ, ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಭಾರತ ದೇಶದ ಹಿಂದಿನ ರಾಜರಿಗೆ ನೀಡಿರುವ ವಿಶೇಷಾಧಿಕಾರಗಳ ಬಗ್ಗೆ ಸರ್ಕಾರವನ್ನು ಟೀಕಿಸುವ ಕಾತುರದಲ್ಲಿ, ನನ್ನ ಸ್ನೇಹಿತರಾದ ಮಾನ್ಯ ಸರ್‌ವಾಟೇಯವರು ಭಾರತದ ರಾಜಕುಮಾರರಿಗೆ ಪ್ರಕರಣ–೮೬ರ ಉಪಪ್ರಕರಣ ೨೧ನ್ನು ಏಕೆ ಅನ್ವಯಮಾಡುತ್ತಿಲ್ಲ ಎಂದು ಕೇಳಿದರು. ಅದನ್ನು ಅನ್ವಯಮಾಡದೆ ನಾವು ಒಳ್ಳೆಯ ಕೆಲಸ ಮಾಡಿದ್ದೇವೆ ಎಂದು ನನ್ನ ಸ್ನೇಹಿತರಾದ ಸರ್ ವಾಟೆಯವರು ತಿಳಿದುಕೊಳ್ಳುತ್ತಾರೆಂದು ನನ್ನ ನಂಬಿಕೆ. ಏಕೆಂದರೆ ಅದನ್ನು ಅನ್ವಯ ಮಾಡಿದ್ದಿದ್ದರೆ ಉಪಪ್ರಕರಣ (೨)ರಲ್ಲಿನ ೪ ಷರತ್ತುಗಳನ್ನು ಪೂರೈಸದಿದ್ದಲ್ಲಿ, ರಾಜಕುಮಾರರ ವಿರುದ್ಧದ ದಾವೆಗೇ ಸರ್ಕಾರವು ಅನುಮತಿಯನ್ನು ನೀಡುವುದನ್ನು ನಿಷೇಧಿಸಬೇಕಾಗುತ್ತಿತ್ತು. ಪ್ರಕರಣ ೮೬ರ ಉಪ–ಪ್ರಕರಣ (೨) ಒಳಗೊಂಡಿರುವ ಖಂಡ (ಅ), (ಆ), (ಇ) ಮತ್ತು (ಈ)ಗಳು ಅಂತರಾಷ್ಟ್ರೀಯ ಕಾನೂನಿನ ಸಂಬಂಧಪಟ್ಟ ನಿಯಮಗಳು. ಅದರ ಬಗ್ಗೆ ಯಾವುದೇ ವಿವಾದವಿಲ್ಲ ಹಾಗೂ ಭಾರತದ ರಾಜಕುಮಾರರನ್ನು ರಾಯಭಾರಿಗಳಂತೆ ಅಥವಾ ರಾಜ್ಯದ ಮುಖ್ಯಸ್ಥರಂತೆ ಅಥವಾ ವಿದೇಶದ ರಾಜರಂತೆ ನಡೆಸಿಕೊಳ್ಳಲಾಗುವುದಿಲ್ಲ. ನಾವು ನೀಡಿರುವ ವಿನಾಯಿತಿಗಳು ಬಹಳ ಕಡಿಮೆ. ಒಂದುವೇಳೆ ಉಪ–ಪ್ರಕರಣ (೨)ನ್ನು ಅನ್ವಯಮಾಡಿದ್ದರೆ ವಿಷಯ ಇನ್ನೂ ಹದಗೆಡುತಿತ್ತು.

ಅದರಿಂದ ಈ ವಿಧೇಯಕದ ವಿರುದ್ಧ ಗಂಭೀರ ಆಕ್ಷೇಪಣೆಗಳನ್ನು ಮಾಡುತ್ತಾರೆ ಎಂದು ನಾನು ಭಾವಿಸುವುದಿಲ್ಲ.

**ಮಾನ್ಯ ಉಪ ಸಭಾಧ್ಯಕ್ಷರು:**

"೧೯೦೮ರ ಸಿವಿಲ್ ಪ್ರಕ್ರಿಯಾ ಸಂಹಿತೆಗೆ ತಿದ್ದುಪಡಿ ಮಾಡುವ ವಿಧೇಯಕವನ್ನು
ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಈಗಿನ ವಿಷಯ."

ಸೂಚನೆಯನ್ನು ಅಂಗೀಕರಿಸಲಾಗಿದೆ.

**ಮಾನ್ಯ ಉಪ ಸಭಾಧ್ಯಕ್ಷರು:** ಮಧ್ಯಾಹ್ನ ೨–೩೦ರ ತನಕ ಸದನವನ್ನು ಮುಂದೂಡಲಾಗಿದೆ.

ಊಟಕ್ಕಾಗಿ ಮಧ್ಯಾಹ್ನ ೨–೩೦ರ ತನಕ ಸದನವು ಮುಂದೂಡಲ್ಪಟ್ಟಿತು.

ಊಟದ ನಂತರ ೨–೩೫ ಗಂಟೆಗೆ ಸದನವು ಮತ್ತೆ ಸಭೆ ಸೇರಿತು.

**(ಮಾನ್ಯ ಉಪ–ಸಭಾಧ್ಯಕ್ಷರು ಪೀಠಾಸೀನರಾಗಿದ್ದಾರೆ)**

## (೨) ಮತ್ತು (೩)ನೇ ಖಂಡಗಳು

ವಿಧೇಯಕಕ್ಕೆ (೨) ಮತ್ತು (೩)ನೇ ಖಂಡಗಳನ್ನು ಸೇರಿಸಲಾಯಿತು.

## ೪ ರಿಂದ ೧೧ನೇ ಖಂಡಗಳು

**ಶ್ರೀ ರಾಜ್ ಬಹದ್ದೂರ್ (ರಾಜಸ್ಥಾನ):** ೪ನೇ ಖಂಡಕ್ಕೆ ಒಂದು ತಿದ್ದುಪಡಿ ಇದೆ. ಅದನ್ನು ಔಪಚಾರಿಕವಾಗಿ ಮಾಡಲು ಇಚ್ಛಿಸುವುದಿಲ್ಲ. ಒಂದು ವಿಷಯವನ್ನು ಹೇಳಬೇಕಾಗಿದೆ. ಸಂವಿಧಾನದಲ್ಲಿ

ಎಲ್ಲೂ ನ್ಯಾಯಾಲಯವನ್ನು ರಚಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರವನ್ನು ನೀಡಿಲ್ಲ. ಈ ದಿಸೆಯಲ್ಲಿ ನೀಡಿರುವ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯದ ಸಂದರ್ಭದಲ್ಲಿ ರಾಷ್ಟ್ರಪತಿಯವರು ರಾಜ್ಯಗಳ ನ್ಯಾಯಾಲಯದ ಸಂದರ್ಭದಲ್ಲಿ ರಾಜ್ಯಪಾಲರು ಚಲಾಯಿಸುತ್ತಾರೆ. ಈ ಅಂಶದ ಬಗ್ಗೆಯೇ ನನ್ನ ಆಕ್ಷೇಪಣೆ ಇರುವುದು. "ಕೇಂದ್ರ ಸರ್ಕಾರಿ" ಎಂಬ ಪದಗಳ ಬದಲಾಗಿ "ಸಂವಿಧಾನದ ಅಧಿಕಾರದಡಿಯಲ್ಲಿ" ಎಂಬ ಪದಗಳನ್ನು ಪ್ರತ್ಯಾಯೋಜಿಸಿದರೆ ಒಳ್ಳೆಯದು ಎಂದು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್:** ಈ ಸಲಹೆಯನ್ನು ನಾನು ಒಪ್ಪುವುದಿಲ್ಲ. ಸಂವಿಧಾನವು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯಗಳನ್ನು ಸ್ಥಾಪಿಸಿದೆ. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಅಧಿಕಾರವನ್ನು ಸಂಸತ್ತಿಗೆ ನೀಡಿದೆ ಮತ್ತು ಸಂವಿಧಾನವು ನೀಡಿರುವ ಅಧಿಕಾದ ಮೇರೆಗೆ ಕೇಂದ್ರ ಸರ್ಕಾರ ಕಾರ್ಯನಿರ್ವಹಿಸುತ್ತದೆ. ಅದರಿಂದ ಭಾರತ ಸಂವಿಧಾನ ಎಂಬ ಪದಗಳನ್ನು ಉಪಯೋಗಿಸುವುದು ಸರಿಯಲ್ಲ. ಅಲ್ಲದೆ "ಕೇಂದ್ರ ಸರ್ಕಾರ" ಎಂದು ಎಲ್ಲಾ ಅಳವಡಿಕೆ ಆದೇಶಗಳಾದ್ಯಂತ ಬಳಸಲಾಗಿದೆ ಮತ್ತು ಈ ವಿಧೇಯದ ಪರಿಭಾಷೆಯ ವಿಷಯದಲ್ಲಿ ಬದಲಾವಣೆ ಮಾಡುವುದು ಸಹ ದುರದೃಷ್ಟ ಸಂಗತಿ.

**ಮಾನ್ಯ ಉಪ ಸಭಾಧ್ಯಕ್ಷರು:** ಮಾನ್ಯ ಮಂತ್ರಿಗಳ ಪ್ರಶ್ನೆಗೆ ಉತ್ತರಿಸಿದ್ದಾರೆ. ೪ ರಿಂದ ೧೧ನೇ ಖಂಡಗಳಿಗೆ ಯಾವುದೇ ತಿದ್ದುಪಡಿಗಳು ಇರದ ಕಾರಣ ಎರಡನ್ನು ಒಟ್ಟುಗೂಡಿಸುತ್ತೇವೆ.

ಪ್ರಶ್ನೆ ಏನೆಂದರೆ :

ಳ ರಿಂದ ೧೧ನೇ ಖಂಡಗಳು ಈ ವಿಧೇಯಕದ ಭಾಗವಾಗಿರುತ್ತದೆ.

ಸೂಚನೆಯನ್ನು ಅಂಗೀಕರಿಸಿದೆ.

೪ ರಿಂದ ೧೧ನೇ ಖಂಡಗಳನ್ನು ವಿಧೇಯಕಕ್ಕೆ ಸೇರಿಸಲಾಗಿದೆ.

**ಮಾನ್ಯ ಉಪ ಸಭಾಧ್ಯಕ್ಷರು:** ಮಾಹಿತಿ ಆಧಾರದ ಮೇಲೆ ಕೇಳುತ್ತಿದ್ದೇನೆ. ಖಂಡ ೯ರಲ್ಲಿ "ಯಾವುದೇ ರಾಜ್ಯದಲ್ಲಿ ಇನ್ಯಾವುದೇ ಬೇರೆ ರಾಜ್ಯದಲ್ಲಿ ರೆವಿನ್ಯೂ ನ್ಯಾಯಾಲಯದ ಪ್ರಕ್ರಿಯ ಅಮಲ್ದಾರಿ" ಎಂದು ಸುತ್ತಿಬಳಿಸಿ ಹೇಳುವುದರ ಬದಲಾಗಿ "ಆ ರಾಜ್ಯದಲ್ಲಿನ ರೆವಿನ್ಯೂ ನ್ಯಾಯಾಲಯ"ವೆಂದು ಬಳಸಬಹುದಾಗಿತ್ತಲ್ಲ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಿ.

**ಡಾ. ಅಂಬೇಡ್ಕರ್:** ಅನುಕೂಲ ಮಾಡಿಕೊಡುವುದಕ್ಕಾಗಿಯೇ ವಿಸ್ತಾರವಾಗಿ ಹೇಳಲಾಗಿದೆ.

**ಡಾ. ಆರ್.ಯು. ಸಿಂಗ್ :** ಸೂಚನೆಯನ್ನು ಪರಿಗಣಿಸುವ ಬಗ್ಗೆ ಸಾಮಾನ್ಯ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರಿಸುತ್ತಾ ಮಾನ್ಯ ಮಂತ್ರಿಗಳು ಚರ್ಚೆಯಲ್ಲಿರುವ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕೆಲವು ಪ್ರಕರಣಗಳಲ್ಲ "ರಾಜ" ಎಂಬ ಪದವನ್ನು ಬಳಸಲಾಗಿದೆ ಎಂದು ಹೇಳಿದರು. ತಿದ್ದುಪಡಿ ಮಾಡುತ್ತಿರುವ ವಿಧೇಯಕದ ಖಂಡ (೧೨) ಅಡಿಯಲ್ಲಿ ಚರ್ಚೆ ಮಾಡುತ್ತಿರುವ ಸಿವಿಲ್ ಪ್ರಕ್ರಿಯಾ ಸಂಹಿತೆಯ ಅನೇಕ ಪ್ರಕರಣಗಳನ್ನು ನೋಡಿದ್ದೇನೆ. ಅದರಲ್ಲಿ ಎಲ್ಲೂ 'ರಾಜ' ಎಂಬ ಪದ ಬಳಸಿಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆ. ನಾನು ಈ ಹಿಂದೆಯೇ ಹೇಳಿದಂತೆ ಉಪಶೀರ್ಷಿಕೆಯಲ್ಲಿ ಮಾತ್ರ ವಿದೇಶಿ ರಾಜ ಎಂಬ ಪದವನ್ನು ಬಳಸಲಾಗಿದೆ. ಪ್ರಕರಣಗಳಲ್ಲಿ ರಾಜ ಎಂಬ ಪದವನ್ನು ಬಳಸಿಲ್ಲ, ಆಳುತ್ತಿರುವ ಮುಖ್ಯಸ್ಥ ಎಂಬ ಪದವನ್ನು ಬಳಸಿರಬಹುದು ಏನೆಂದರೆ "ಈ ದೇಶದಲ್ಲಿ ಈ ಪದವು ಬಳಕೆಯಲ್ಲಿತ್ತು ಆದರೆ ಮಾನ್ಯರೇ, ರಾಜ ಎಂಬ ಪದವನ್ನು ಬಳಸಿಲ್ಲ ಎಂದು ಧೈರ್ಯವಾಗಿ ಹೇಳುತ್ತೇನೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳಲ್ಲಿ ರಾಜ ಎಂಬ ಪದವನ್ನು ಪರಿಭಾಷಿಸುವ ಆವಶ್ಯಕತೆ. ಇದನ್ನು ಅನಾವಶ್ಯಕವಾಗಿ ಮಾಡಿದ್ದಾರೆ ಎಂಬುದು ನನ್ನ ವಾದ. ಅಂತಾರಾಷ್ಟ್ರೀಯ ಕಾನೂನಿನ

ವಿಷಯದ ಬಗ್ಗೆ ವ್ಯವಹರಿಸುವಾಗ ಅಂತರಾಷ್ಟ್ರೀಯ ಕಾನೂನಿಗೆ ಪರಿಚಯವಿರುವ ಪದಗಳನ್ನು ಬಳಸಬೇಕು ಎಂದು ಹೇಳುತ್ತಾ ನನ್ನ ವಾದವನ್ನು ಪುಷ್ಟೀಕರಿಸುತ್ತೇವೆ. 'ರಾಜ' ಎಂಬ ಪದವನ್ನು ಬಳಸಿಲ್ಲವೆಂಬುದನ್ನು ನಾನು ಗಮನಿಸಿದ್ದೇನೆ. ಸಾಮಾನ್ಯವಾಗಿ "ರಾಜ್ಯದ ಮುಖ್ಯಸ್ಥ" ಅಥವಾ "ಸಾರ್ವಭೌಮ" "ವಿದೇಶಿ ರಾಜ್ಯ" ಅಥವಾ "ವಿದೇಶಿ ಸಾರ್ವಭೌಮ" ಎಂಬ ಪದಗಳನ್ನು ಬಳಸಲಾಗಿದೆ ರಾಜ ಎಂಬ ಪದವನ್ನು ತೋರಿಸುವುದಿಲ್ಲ. ಸರ್ಕಾರವು ಅನಾವಶ್ಯಕವಾಗಿ ಶ್ರಮತೆಗೆದುಕೊಂಡಿದೆ ಎಂದು ನನಗನಿಸುತ್ತದೆ. "ಮುಖ್ಯಸ್ಥ" ಎಂಬ ಒಂದು ಪದವನ್ನು ಪ್ರತ್ಯಾಯೋಜಿಸುವುದರಿಂದ ಅವರು ಪ್ರಕರಣವನ್ನು ಮರು ವ್ಯವಸ್ಥೆಗೊಳಿಸಿ ವಿಷಯವನ್ನು ಹೇಗೆ ರಚಿಸಿದ್ದಾರೆಂದರೆ ಕೆಲವು ಖಂಡಗಳು ಹಾಳಾಗುತ್ತವೆ. ಕೆಲವು ಕಡೆ ಬರೀ ಮುಖ್ಯಸ್ಥ ಎನ್ನುವ ಪದ ಸಾಕು. ಅದರಿಂದ ನನ್ನ ಮೂಲ ಅಭಿಮತಕ್ಕೆ ಅಂಟಿಕೊಂಡು ನಾನು ಹೇಳಬಯಸುವುದೇನೆಂದರೆ 'ರಾಜ' ಎಂಬ ಪದದ ಬಳಕೆ ಮಾಡಿರುವುದು ದುಃಖದ ಸಂಗತಿ.

ತಿದ್ದುಪಡಿ ಮಾಡಲಾಗುತ್ತಿರುವ ವಿಧೇಯಕದಲ್ಲಿ ಬಳಸಿರುವ ಅಂದಗೆಟ್ಟ ಪದಪುಂಜ ಬಳಕೆಯ ಶೈಲಿ ಉಳಿಯಲು ಅವಕಾಶ ಕಲ್ಪಿಸಬಹುದು ಅಥವಾ ಅದು ಅಲ್ಲಿ ಉಳಿಯುವುದು ಬೇಡವೆನ್ನುವುದಾದರೆ ಆಗ ಕೆಲವು ಸ್ಥಳಗಳಲ್ಲಿ "ಮುಖ್ಯಸ್ಥ" ಎಂಬ ಪದವನ್ನು ಬಳಸಬೇಕಾಗುತ್ತದೆ. ಮತ್ತೊಂದೆಡೆ "ವಿದೇಶೀ ರಾಷ್ಟ್ರದ ಮುಖ್ಯಸ್ಥ" ಎಂಬುದನ್ನು ಬಳಸಬೇಕಾಗುತ್ತದೆ. ಏಕೆಂದರೆ ಪ್ರಾರಂಭನಾಕಾರರ ಒಂದು ವಿಧದಲ್ಲೂ ಈ ಸ್ಥಿತಿಯಿಂದ ಪಲಾಯನಗೊಳ್ಳದ ರೀತಿಯಲ್ಲಿ ಖಂಡಗಳನ್ನು ಮರು ವ್ಯವಸ್ಥೆಗೊಳಪಟ್ಟಿದ್ದಾರೆಂಬುದು ನನ್ನ ಅಭಿಪ್ರಾಯ.

**ಡಾ. ಅಂಬೇಡ್ಕರ್:** ನನ್ನ ಗೌರವಾನ್ವಿತ ಸ್ನೇಹಿತರು ಈ ವಿಧೇಯಕದಲ್ಲಿ ಬಳಸಿರುವ ಪದಪುಂಜದ ಬಗ್ಗೆ ಏಕೆ ಅಸಂತೋಷಗೊಂಡಿದ್ದಾರೆಂಬುದನ್ನು ಅರ್ಥ ಮಾಡಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ರಾಜ್ ಬಹದ್ದೂರ್‌ರವರು ವಿದೇಶಿ ಅಡಳಿತಗಾರರಿಗೆ ಅನ್ಯ ಹೆಸರನ್ನು ಕೊಡುವ ಮೂಲಕ ಅವರನ್ನು ಭಾರತೀಯ ಆಡಳಿತಗಾರರಿಂದ ವಿಭಿನ್ನವಾಗಿ ಗುರುತಿಸುವುದು ಒಳಿತೆಂದು ಹೇಳುತ್ತಾರೆ. ಒಂದು ವೇಳೆ ಅದು ನಿಜವೇ ಆಗಿದ್ದರೆ, ಪುನಃ "ದೇಶದ ಮುಖ್ಯಸ್ಥ" ಎಂಬುದನ್ನು ಅರ್ಥೈಸಬೇಕಾದ ಅಗತ್ಯವಿರುವುದಿಲ್ಲವೆ?

**ಶ್ರೀ ರಾಜ್ ಬಹದ್ದೂರ್:** ಇಲ್ಲ, ಇಲ್ಲ ......................

**ಡಾ. ಅಂಬೇಡ್ಕರ್:** ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ದೇಶ ಪ್ರತಿನಿಧಿಸಲು ಅಧ್ಯಕ್ಷರಿದ್ದಾರೆ; ಗ್ರೇಟ್ ಬ್ರಿಟನ್ನಲ್ಲಿ ದೊರೆಯಿದ್ದಾರೆ; ಸ್ವಿಜರ್‌ಲ್ಯಾಂಡ್‌ನಲ್ಲಿ ಮತ್ತೊಬ್ಬ ಆಡಳಿತ ಪ್ರತಿನಿಧಿಯಿದ್ದಾರೆ. ವಾಸ್ತವಾಂಶಗಳು ಹಲವು ಬಗೆಯಿದ್ದರೆ, ನೀವು "ದೇಶದ ಮುಖ್ಯಸ್ಥ" ಎಂಬುದರ ಪರಿಭಾಷೆ ಹೊಂದಿರಬೇಕಾಗುತ್ತದೆ.

ಮತ್ತೊಬ್ಬ ಮುಖ್ಯ ಸದಸ್ಯರು ತಾವು ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಬೆಳಗಿನ ಜಾವ ಪರಾಮರ್ಶಿಸಿ ಅದರ ಉಪಬಂಧಗಳನ್ನು ಪರಿಶೀಲಿಸಿರುವುದಾಗಿ ತಿಳಿಸುತ್ತಾರೆ. ನಾವು ಈ ತಿದ್ದುಪಡಿ ವಿಧೇಯಕದಲ್ಲಿ ಬಳಸಿರುವ ಪದಗಳು ಅದರಲ್ಲಿ ಕಂಡುಬರುವುದಿಲ್ಲವೆಂಬುದು ಅವರ ಅನಿಸಿಕೆಯಾಗಿದೆ. ಅವರು ತಮ್ಮ ಎದುರಿನಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ ಒಂದು ಪ್ರತಿಯನ್ನು ಇಟ್ಟು ಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ.

**ಡಾ. ಆರ್.ಯು. ಸಿಂಗ್:** ಹೌದು, ಅದು ನನ್ನ ಬಳಿ ಇಲ್ಲಿದೆ.

**ಡಾ. ಅಂಬೇಡ್ಕರ್:** ದಯಮಾಡಿ ಪ್ರಕರಣ ೮೩ರ ಶೀರ್ಷಿಕೆಯನ್ನು ನೋಡಿ.

**ಡಾ. ಆರ್.ಯು. ಸಿಂಗ್:** ಅದನ್ನು ನಾನು ಮೊದಲೇ ಹೇಳಿದೆನಲ್ಲ.

**ಡಾ. ಅಂಬೇಡ್ಕರ್:** ಶೀರ್ಷಿಕೆ "ಪರದೇಶೀಯರಿಂದ ಮತ್ತು ವಿದೇಶಿ ಆಡಳಿತಗಾರ ಮತ್ತು ಭಾರತೀಯ ರಾಜ್ಯಗಳ ಆಡಳಿತಗಾರರಿಂದ ಅಥವಾ ಅವರ ವಿರುದ್ಧ ದಾವೆಗಳು" ಎಂಬುದಾಗಿದೆ. ಈ ತಿದ್ದುಪಡಿಯನ್ನು ಭಾರತೀಯ ಕಾನೂನುಗಳ ಆದೇಶಗಳನ್ನು ಅಳವಡಿಸಿಕೊಳ್ಳುವ ಮೂಲಕ ೧೯೩೭ರಲ್ಲಿ ಮಾಡಲಾಗಿತ್ತೆಂಬ ಅಂಶದ ಕಡೆ ಕೂಡ ಅವರ ಗಮನ ಸೆಳೆಯಲು ನಾನು ಇಚ್ಛಿಸುತ್ತೇನೆ. ಅಂತಾರಾಷ್ಟ್ರೀಯ ಕಾನೂನಿನ ಮತ್ತು ಅವರು ಬಳಸುವ ಪದಪುಂಜಗಳ ವಿಷಯದಲ್ಲಿ ಇಂದಿನವರೆಗಿನ ಜ್ಞಾನ ನನಗಿದೆಯೆಂದು ನಾನು ಹೇಳಲಾರೆ. ಆದರೆ ಹೀಗೆ ಅಳವಡಿಸಿಕೊಳ್ಳುವ ಕೆಲಸ ಮಾಡಿದ ಯಾವುದೇ ವ್ಯಕ್ತಿಗೆ ಮತ್ತು ಆ ವ್ಯಕ್ತಿಯು ಈ ಅಳವಡಿಕೆ ಕೆಲಸವನ್ನು ಭಾರತೀಯ ಕಛೇರಿ ಮಾಡಿದೆ ಎಂಬುದನ್ನು ಹೇಳಲು ನನಗೆ ಅನುಮತಿಸುತ್ತಾರೆ ಎಂದು ಭಾವಿಸಿದ್ದೇನೆ. 'ವಿದೇಶಿ ಆಡಳಿತಗಾರರು' ಎಂಬ ಪದಪುಂಜ ಬಳಸುವಲ್ಲಿ ಅಷ್ಟೇನು ತಪ್ಪು ಮಾಡಿರಲಿಕ್ಕೆ ಸಾಧ್ಯವಿಲ್ಲದ ಒಬ್ಬ ಸಂಸದ್ ವಕೀಲರು ಸಲಹೆ ನೀಡಿರಲೇಬೇಕು ಎಂದು ಹೇಳುವುದರಲ್ಲಿ ನನಗೆ ತೃಪ್ತಿಯಿದೆ.

ತರುವಾಯ ಅವರು 'ಒಂದು ಭಾರತ ರಾಜ್ಯದ' ಎಂಬ ಪದಬಂಧವನ್ನು ಪ್ರಕರಣ ೮೩ ರಿಂದಾಚೆಗೆ ಬಳಸಿಯೇ ಇಲ್ಲ ಎಂದು ತಿಳಿಸುತ್ತಾರೆ. ವಿವಿಧ ಬಗೆಯ ಪದನಾಮಗಳನ್ನು ಬಳಸಲಾಗಿದೆ ಎಂಬುದರ ಬಗ್ಗೆ ನಾನು ಖಂಡಿತ ಒಪ್ಪಿಕೊಳ್ಳುತ್ತೇನೆ. ಭಾರತವನ್ನು ಆಳಿದವರನ್ನು ರಾಜಕುಮಾರರು, ದೊರೆಗಳು ರಾಜರು/ಮುಖ್ಯಸ್ಥರು ಮುಂತಾಗಿ ಕರೆಯಲಾಗಿದೆ. ಆದರೆ ನಾನು ಅರಿಕೆ ಮಾಡಿಕೊಳ್ಳಬೇಕಾಗಿರುವುದು ಇಷ್ಟೆ. ಹಲವಾರು ಅನುಚ್ಛೇದಗಳ ಮೂಲಕ ಸಂವಿಧಾನವು ಅವುಗಳಿಗೆ ಒಂದು ನಿರ್ದಿಷ್ಟ ವಿವರಣೆಯನ್ನು ಉದಾರಹಣೆಗೆ 'ಭಾರತೀಯ ರಾಜ್ಯಗಳ ಆಡಳಿತಗಾರರು' ಕೊಟ್ಟಿರುವಾಗ ಪ್ರರೂಪಣಕಾರರು ಸಂವಿಧಾನವು ಬಳಸಿರುವ ಭಾಷೆಯ ಹೊರತಾದ ಒಂದು ಭಾಷೆಯನ್ನು ಬಳಸಲು ಅವಕಾಶವಿದೆಯೇ? "ಹಿಂದಿನ ಭಾರತೀಯ ರಾಜ್ಯಗಳ ಆಡಳಿತಗಾರರು" ಎಂಬ ಪದಗಳನ್ನು ಬಳಸುವುದಕ್ಕೆ ಸಮರ್ಥನೆಯೆಂದರೆ ಇದು ಸಂವಿಧಾನದಲ್ಲಿ ಬಳಸಿರುವಂಥ ಭಾಷೆಯಾಗಿದೆ ಎಂಬುದಾಗಿದೆ. ನಾವು, ನಮ್ಮ ಮುಖ್ಯ ಸ್ನೇಹಿತರಾದ ಶ್ರೀ ನಸೀರುದ್ದಿನ್ ಅಹಮದ್‌ರಂಥ ಯಾವುದೇ ಒಬ್ಬ ವ್ಯಕ್ತಿಯು ಒಂದು "ಈ ಉಪಬಂಧವು ಯಾವ ಜನರಿಗೆ ಅನ್ವಯವಾಗಬೇಕೆಂಬ ಉದ್ದೇಶವಿದೆಯೋ ಆ ಜನರಿಗೆ ಅನ್ವಯವಾಗುವುದಿಲ್ಲ" ಎಂದು ಬಹಿರಂಗವಾಗಿ ಹೇಳಲು ಅವಕಾಶ ಮಾಡಿಕೊಡುವಂಥ ರೀತಿಯಲ್ಲಿ ಸಂವಿಧಾನದಲ್ಲಿ ಬಳಸಿರುವ ಭಾಷೆಯಿಂದ ದೂರ ಸರಿಯಲು ಇಚ್ಛಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ವಿಷಯ ಈ ರೀತಿ ಇದೆ.

> ೧೯೦೮ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಪ್ರಸ್ತಾವಿತ ಹೊಸ ಪ್ರಕರಣ ೮೪ರ ಪರಂತುಕದ ಖಂಡ ೧೨ರಲ್ಲಿ "ಆಡಳಿತಗಾರ" ಎಂಬ ಪದಕ್ಕೆ "ಮುಖ್ಯಸ್ಥ" ಎಂಬುದನ್ನು ಪ್ರತ್ಯಾಯೋಜಿಸಿ.
>
> ಪ್ರಸ್ತಾವ/ಸೂಚನೆ ತಿರಸ್ಕೃತವಾಯಿತು.

ಇಂತಹುದೇ ೩ ಇತರೆ ಸೂಚನೆಗಳು ತಿರಸ್ಕೃತಗೊಂಡವು.

***ಡಾ. ಆರ್.ಯು. ಸಿಂಗ್:** ................ಭಾರತ ರಾಜ್ಯಗಳ ಆಡಳಿತಗಾರರ ಉನ್ಮುಕ್ತಿಗೆ ಸಂಬಂಧಿಸುವ ಮಟ್ಟಿಗೆ, ತಮ್ಮ ವೈಯಕ್ತಿಕ ಸಾಮರ್ಥ್ಯದಲ್ಲಿಯೇ ಮಾಡಿದಂಥ ಕಾರ್ಯಗಳ ಕುರಿತಂತೆ ಕಾನೂನು

---

* ಪಿ.ಡಿ. Vol. 8, ಭಾಗ ೮, ೯ ಫೆಬ್ರವರಿ ೧೯೫೧, ಪು. ೨೬೬೪–೬೫.

ಮಂತ್ರಿಯಿಂದ ಯಾವುದೇ ಆಶ್ವಾಸನೆ ಹೊಂದಿಲ್ಲ. ಆ ಪ್ರಶ್ನೆಯ ಸಂಗತಿಯ ಬಗ್ಗೆ ನಮಗೆ ಆತಂಕವಿದೆ. ಕೆಲವು ಮಟ್ಟಿನ ನೋಟೀಸು ಅಥವಾ ಅಂಥ ಯಾವುದೇ ವಿಚಾರ ಸಾಕಾಗುತ್ತದೆ ಎಂಬುದಾಗಿ ಹೇಳಿಲ್ಲ. ಅವರಲ್ಲಿ ನಿಹಿತಗೊಳಿಸಲು ಕೋರಿರುವ ಉನ್ಮುಕ್ತಿಯು ಭಾರತೀಯ ಗಣತಂತ್ರದ ಮುಖ್ಯಸ್ಥರಲ್ಲಿ ಹಾಗೆಯೇ ಒಕ್ಕೂಟದ ವಿವಿಧ ರಾಜ್ಯಗಳ ಮುಖ್ಯಸ್ಥರಲ್ಲಿ ನಿಹಿತಗೊಳಿಸಿರುವ ಉನ್ಮುಕ್ತಿಗಿಂತಲೂ ಹೆಚ್ಚಿನ ಪ್ರಮಾಣದ್ದಾಗಿದೆ. ಈ ವಿಚಾರದಲ್ಲಿ ಉನ್ಮುಕ್ತಿಯ ಅವಧಿ ಮತ್ತು ಆ ಉನ್ಮುಕ್ತಿಯ ವ್ಯಾಪ್ತಿ ಕುರಿತಂತೆ ಸರ್ಕಾರದವರು ತಮ್ಮ ಮನೋಭಿಲಾಷೆ ತಿಳಿಸಿದರೆ ಅದು ಅತಿ ವ್ಯಾಪಕವಾಗಿರಬೇಕಿಲ್ಲವೆಂದು ನಾನು ನಿರ್ಭೀತಿಯಿಂದ ಹೇಳಬಲ್ಲೆ ನಿಜಕ್ಕೂ ಅದು ತುಂಬ ಸೊಗಸಾಗಿರುತ್ತದೆ.

**ಡಾ. ಅಂಬೇಡ್ಕರ್:** ವಿರಾಮಕ್ಕೆ ಮೊದಲು, ನನ್ನನ್ನು ನನ್ನ ಸ್ನೇಹಿತರು ಕೇಳಿರುವ ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಸಹ ಕೇಳಿಕೊಳ್ಳಲಾಯಿತು. ಯಾವುದೇ ಒಬ್ಬ ವ್ಯಕ್ತಿ ಸುಲಭವಾಗಿ ಉತ್ತರ ನೀಡಬಹುದಾದ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆಂದು ಭಾವಿಸುತ್ತೇನೆ. ನಾನು ಈಗಾಗಲೇ ಹೇಳಿರುವುದಕ್ಕೆ ಮತ್ತಷ್ಟು ಸೇರಿಸಬೇಕೇ ಎಂಬುದು ತಿಳಿದಿಲ್ಲ. ನಾನು ಈಗ ತಿಳಿಸಬಯಸುವುದು ಇಷ್ಟೇ. ನನ್ನ ಮಾನ್ಯ ಸ್ನೇಹಿತರಿಗೆ ನಾನು ಹಾಗೇ ಹೇಳುವುದನ್ನು ಅವರು ಮನ್ನಿಸುವುದಾದರೆ, ಸಾಕಷ್ಟು ಕಲ್ಪನೆಯ ಕೊರತೆ ಇರುವಂತೆ ತೋರುತ್ತದೆ.

**ಶ್ರೀ ಆರ್.ಯು. ಸಿಂಗ್:** ಎಲ್ಲ ವಕೀಲರಿಗೂ ಅದರ ಬಗ್ಗೆ ಹೆಚ್ಚು ಅರಿವಿರುವುದಿಲ್ಲ.

**ಡಾ. ಅಂಬೇಡ್ಕರ್:** ವಕೀಲರಿಗೆ ಕೆಲವೊಮ್ಮೆ ಸುದೀರ್ಘ ಕಲ್ಪನೆಯಿರುತ್ತದೆ. ಅವರಿಗೆ ಸಾಕಷ್ಟು ಕಲ್ಪನೆಯಿದ್ದಿದ್ದರೆ ಒಂದು ನಿರ್ದಿಷ್ಟ ದಿನಾಂಕಕ್ಕೆ ಮೊದಲು ಮಾಡಿಕೊಳ್ಳಲಾದ ಒಡಂಬಡಿಕೆ ಏನು ಏನೆಲ್ಲ ಸೇರಿಸಲಾಗಿತ್ತು, ಅದರಲ್ಲಿ ಒಳಗೊಂಡಿದ್ದ ವಿಚಾರ ಮತ್ತು ಅದು ನ್ಯಾಯಾಲಯದ ವಿಚಾರಣೆ ಯೋಗ್ಯವಾಗಿತ್ತು ಎಂಬುದನ್ನು ಸಂವಿಧಾನ ಸಭೆಯು ಅತ್ಯಂತ ಖಚಿತವಾಗಿ ಮತ್ತು ಹೆಚ್ಚು ಸರಿಯಾಗಿ ಹೇಳಿದೆ ಎಂಬ ಅಂಶವನ್ನು ಮನವರಿಕೆ ಮಾಡಿಕೊಳ್ಳುತ್ತಿದ್ದರು. ಈಗ ಅದೊಂದು ಮಹತ್ತರ ರಕ್ಷಣೆಯಾಗಿತ್ತು ಮತ್ತು ಅತೀ ಮುಖ್ಯವಾದ ಅಂಶವಾಗಿತ್ತು ಎಂದು ನಾನು ಭಾವಿಸುತ್ತೇನೆ. ಅದರರ್ಥ ಒಡಂಬಡಿಕೆಯನ್ನು ವಿಚಾರಗಳನ್ನು ಹೇಳಿದ್ದಾಗ್ಯೂ ಸಹ ಸಂಸತ್ತು ಅಥವಾ ಸರ್ಕಾರವು ತಾನು ಇಚ್ಛಿಸುವ ಯಾವುದೇ ಬದಲಾವಣೆ ಮಾಡುವ ಸ್ವಾತಂತ್ರ್ಯ ಹೊಂದಿದೆ. ವಿಚಾರ ಹಾಗಿರುವಾಗ ಏನೇ ಆದರೂ ಸದನವು ಭವಿಷ್ಯದ ಬಾಗಿಲು ಮುಚ್ಚಿಲ್ಲ ಅಥವಾ ಭವಿಷ್ಯ ಅಂಧಕಾರಮಯವಾಗಿಲ್ಲ ಎಂಬುದರ ಬಗ್ಗೆ ತೃಪ್ತವಾಗಬೇಕೆಂಬುದು ನನ್ನ ಅನಿಸಿಕೆ. ಯಾವುದೇ ವ್ಯಕ್ತಿಯು ನಾನು ಇದಕ್ಕಿಂತಲೂ ಹೆಚ್ಚಾಗಿ ಹೇಳಬೇಕೆಂದು ನಿರೀಕ್ಷಿಸುತ್ತಾರೆಂದು ನನಗನಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ವಿಷಯ ಏನೆಂದರೆ

ಖಂಡ ೧೨ರಲ್ಲಿ ಪ್ರಸ್ತಾವಿತ ಪ್ರಕರಣ ೮೭ 'ಬಿ'ಯನ್ನು ಬಿಟ್ಟು ಬಿಡಿ.

ಈ ಸೂಚನೆ ತಿರಸ್ಕರಿಸಲಾಯಿತು.

**ಮಾನ್ಯ ಅಧ್ಯಕ್ಷರು:** ವಿಷಯ ಏನೆಂದರೆ

"ಖಂಡ ೧೨ ವಿಧೇಯಕದ ಭಾಗವಾಗಿ ಇರುತ್ತದೆ".

ಸೂಚನೆಯನ್ನು ಅಂಗೀಕರಿಸಲಾಯಿತು.

ಖಂಡ ೧೨ ನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಖಂಡ ೧೩ ರಿಂದ ೧೮ ನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಖಂಡ–೧೯.**— (ವಿಶೇಷ ಉಪಬಂಧಗಳು ಇತ್ಯಾದಿ)

ತಿದ್ದುಪಡಿ ಮಾಡಲಾಯಿತು.

ಖಂಡ ೧೯ರಲ್ಲಿ ೨ನೇ ಸಾಲಿನಲ್ಲಿ ಕಂಡು ಬರುವ "........ನ ಸಂಹಿತೆ"ಯನ್ನು ಬಿಟ್ಟು ಬಿಡಿ.

(ಡಾ. ಅಂಬೇಡ್ಕರ್)

ಖಂಡ ೧೯ನ್ನು ತಿದ್ದುಪಡಿ ಮಾಡಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.

ಖಂಡ ೨೦ ನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಖಂಡ–೧.—** (ಸಂಕ್ಷಿಪ್ತ ಹೆಸರು ಇತ್ಯಾದಿ)

ಮಾಡಲಾದ ತಿದ್ದುಪಡಿ

ಖಂಡ ೧ರ ಉಪ ಖಂಡ (೧)ರಲ್ಲಿ "೧೯೫೦"ಕ್ಕೆ "೧೯೫೧"ನ್ನು ಪ್ರತಿ ಯೋಜಿಸಿ.

(ಡಾ. ಅಂಬೇಡ್ಕರ್)

ಖಂಡ ೧ನ್ನು ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:**

"ಈ ಬಿಲ್ಲನ್ನು ತಿದ್ದುಪಡಿಯಾದಂತೆ ಅಂಗೀಕರಿಸತಕ್ಕದು" ಎಂದು ಸೂಚಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ವಿಷಯವೇನೆಂದರೆ

"ಈ ಬಿಲ್ಲನ್ನು ತಿದ್ದುಪಡಿಯಾದಂತೆ ಅಂಗೀಕರಿಸಬೇಕು"

ಸೂಚನೆಯನ್ನು ಅಂಗೀಕರಿಸಲಾಯಿತು.

# ೨೮

## *ಭಾಗ ಬಿ ರಾಜ್ಯಗಳ (ಕಾನೂನುಗಳ) ವಿಧೇಯಕ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಸ್ವಾಮಿ, ಭಾಗ ಬಿ ರಾಜ್ಯಗಳಿಗೆ ಕೆಲವು ಕಾನೂನುಗಳ ವಿಸ್ತರಣೆಗಾಗಿ ಉಪಬಂಧ ಕಲ್ಪಿಸಲು ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ವಿಷಯ:

"ಭಾಗ ಬಿ ರಾಜ್ಯಗಳಿಗೆ ಕೆಲವು ಕಾನೂನುಗಳನ್ನು ವಿಸ್ತರಿಸಲು ಉಪಬಂಧ ಕಲ್ಪಿಸುವ ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕು" ಎಂಬುದು.

ಸೂಚನೆಯನ್ನು ಅಂಗೀಕರಿಸಲಾಯಿತು.

**ಡಾ. ಅಂಬೇಡ್ಕರ್ :** ಮಾನ್ಯರೇ, ನಾನು ವಿಧೇಯಕವನ್ನು ಮಂಡಿಸುತ್ತೇನೆ.

---

## **ಭಾಗ ಬಿ ರಾಜ್ಯಗಳ (ಕಾನೂನುಗಳ) ವಿಧೇಯಕ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಪ್ರಶ್ನೆ

"ಭಾಗ ಬಿ ರಾಜ್ಯಗಳಿಗೆ ಕೆಲವು ಕಾನೂನುಗಳ ವಿಸ್ತರಣೆಗಾಗಿ ಉಪಬಂಧ ಕಲ್ಪಿಸುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು" ಎಂಬುದಾಗಿದೆ.

ಈ ವಿಧೇಯಕವು ತುಂಬ ಸಾಧಾರಣವಾದುದಾಗಿದೆ......................

**ಒಬ್ಬ ಗೌರವಾನ್ವಿತ ಸದಸ್ಯರು :** ಉಳಿದೆಲ್ಲ ವಿಧೇಯಕಗಳಿದ್ದಂತೆ.

**ಡಾ. ಅಂಬೇಡ್ಕರ್:** ಇತರೆ ವಿಧೇಯಕಗಳಿಗಿಂತಲೂ ಸಾಧಾರಣವಾದುದಾಗಿದೆ. ಈ ವಿಧೇಯಕದ ಉದ್ದೇಶ ಈ ಮುಂದಿನದಾಗಿದೆ. ಕೇಂದ್ರ ಶಾಸನ ಸಭೆಯಿಂದ ಅಂಗೀಕೃತವಾದ ಕೆಲವು ಅಧಿನಿಯಮಗಳಿದ್ದೂ ಅವುಗಳು ಹಿಂದೆ ಕೇಂದ್ರ ಸರ್ಕಾರ ಚಲಾಯಿಸುತ್ತಿದ್ದ ಅಧಿಕಾರವ್ಯಾಪ್ತಿಯ ಕಾರಣದಿಂದಾಗಿ ಅವುಗಳ ಪ್ರವರ್ತನೆಯಲ್ಲಿ ಭಾಗ ಎ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದವು ಸಾರ್ವಭೌಮ ಮತ್ತು ಸ್ವತಂತ್ರವಾಗಿದ್ದ ಭಾಗ ಬಿ ರಾಜ್ಯಗಳು (ಹಿಂದೆ ಭಾರತೀಯ ರಾಜ್ಯಗಳೆಂದು ಕರೆಯಲಾಗುತ್ತಿತ್ತು) ಪಟ್ಟಿಗಳು ೧ ಮತ್ತು ೧೧೧ರ ಅಡಿಯಲ್ಲಿ ಕೇಂದ್ರ ಶಾಸನ ಸಭೆಯಿಂದ ಅಂಗೀಕೃತವಾದ ಕಾನೂನುಗಳಿಗೆ ಹೋಲಿಸಬಹುದಾಗಿದ್ದ ತಮ್ಮದೇ ಕಾನೂನುಗಳನ್ನು ಹೊಂದಿದ್ದವು. ಈಗ ಈ ಸಂಸತ್ತು ಪಟ್ಟಿಗಳು ೧ ಮತ್ತು ೧೧೧ ಸಂಬಂಧಿಸುವಷ್ಟರ ಮಟ್ಟಿಗೆ ಭಾಗ ಬಿ ರಾಜ್ಯಗಳಿಗೆ ಒಳಪಡುವ ಪ್ರದೇಶಗಳ ಮೇಲೆ ಅಧಿಕಾರ ವ್ಯಾಪ್ತಿಪಡೆದುಕೊಂಡಿದೆ. ಪಟ್ಟಿಗಳು ೧ ಮತ್ತು ೧೧೧ರ ಕ್ಷೇತ್ರಗಳಿಗೆ ಅನ್ವಯವಾಗುವ ಕೇಂದ್ರ ಶಾಸನ ಸಭೆಯು ಅಂಗೀಕರಿಸಿರುವ

---

ಪಿ.ಡಿ. ಸಂಪುಟ ೬ ಭಾಗ ೧೧ ೨೦ನೇ ನವೆಂಬರ್ ೧೯೫೧ ಪುಟ ೧೮೩

ಪಿ.ಡಿ. ಸಂಪುಟ ೮ ಭಾಗ ೧೧ ೯ನೇ ಫೆಬ್ರವರಿ ೧೯೫೧ ಪುಟಗಳು ೯೬೬೫–೬೬

ಹೆಚ್ಚಿನ ಸಂಖ್ಯೆಯ ಅಧಿನಿಯಮಗಳು ಅಸ್ತಿತ್ವದಲ್ಲಿದ್ದು ಅವುಗಳು ತಮ್ಮ ಪ್ರಾದೇಶಿಕ ಪರಿಮಿತಿಯ ಕಾರಣದಿಂದಾಗಿ ಭಾಗ ಬಿ ರಾಜ್ಯಗಳಿಗೆ ಅನ್ವಯವಾಗಲಿಲ್ಲ. ಈ ಉದ್ದೇಶಕ್ಕಾಗಿಯೇ ಈ ವಿಧೇಯಕವನ್ನು ಮುಂದಿಡಲಾಗಿದೆ.

ಮಾನ್ಯ ಸದಸ್ಯರು ಈ ವಿಧೇಯಕಕ್ಕೆ ಭಾಗ ಬಿ ರಾಜ್ಯಗಳಿಗೆ ವಿಸ್ತರಿಸಲು ಈ ವಿಧೇಯಕದ ಮೂಲಕ ಕೊಡಲಾದ ಅಧಿಕಾರಗಳ ಅಡಿಯಲ್ಲಿ ವಿಸ್ತರಿಸಲು ಪ್ರಸ್ತಾವಿತವಾಗಿರುವ ಅಧಿನಿಯಮಗಳ ಪಟ್ಟಿಯನ್ನು ಕೊಡುವ ಒಂದು ಅನುಸೂಚಿಯನ್ನು ಸೇರಿಸು (ಸೇರುವಂತೆ ಮಾಡು)ತ್ತಾರೆ. ನಾನು ಲೆಕ್ಕ ಮಾಡಿರುವ ಮಟ್ಟಿಗೆ ಭಾಗ ಬಿ ರಾಜ್ಯಗಳಿಗೆ ವಿಸ್ತರಿಸಲು ಕೋರಿರುವ ಒಟ್ಟು ೧೩೫ ಅಧಿನಿಯಮಗಳಿವೆ.

ಕೇಂದ್ರ ಅಧಿನಿಯಮಗಳನ್ನು ಭಾಗ ಬಿ ರಾಜ್ಯಗಳಿಗೆ ವಿಸ್ತರಿಸಲು ಕೋರುತ್ತಾ ಇದೇ ಅಧಿನಿಯಮಗಳಿಗೆ ಈ ಅಧಿನಿಯಮಗಳ ಅಡಿಯಲ್ಲಿ ಕೆಲಸ ಮಾಡುತ್ತಿರುವ ಭಾರತ ಸರ್ಕಾರದ ವಿವಿಧ ಆಡಳಿತ ಇಲಾಖೆಗಳ ಅಭಿಪ್ರಾಯಗಳ ಅನುಸಾರವಾಗಿ ಕೆಲವು ಸಣ್ಣ ಪುಟ್ಟ ತಿದ್ದುಪಡಿ ಅಗತ್ಯವಿದೆಯೆಂದು ಭಾವಿಸಲಾಗಿದೆ.

ತತ್ಪರಿಣಾಮವಾಗಿ ಈ ೧೩೫ ಅಧಿನಿಯಮಗಳನ್ನು ವಿಸ್ತರಿಸುವ ಉದ್ದೇಶಕ್ಕಾಗಿ ಈಗ ಇರುವ ಪರಿಸ್ಥಿತಿಯನ್ನು ಈ ಕೇಂದ್ರ ಅಧಿನಿಯಮಗಳ ವಿಧೇಯಕವನ್ನು ಅಂಗೀಕರಿಸಿದಾಗ ಈ ಅಧಿನಿಯಮಗಳು ಭಾಗ ಬಿ ರಾಜ್ಯಗಳಲ್ಲಿ ಪ್ರವರ್ತನೆಗೆ ಬರುವುದಷ್ಟೇ ಅಲ್ಲದೆ ಅನುಸೂಚಿಯಲ್ಲಿ ತಿಳಿಸಿರುವಂತೆ ಅದರಲ್ಲಿನ ವಿವಿಧ ಅಧಿನಿಯಮಗಳಲ್ಲಿ ಒಳಗೊಂಡಿರುವ ಉಪಬಂಧಗಳ ಮೂಲಕ ಪರಿವರ್ತನೆ ಮಾಡಿರುವ ರೂಪದಲ್ಲಿ ಸಹಾ ಪ್ರವರ್ತನೆಗೆ ಬರುವಂತೆ ಮಾಡುವ ಸಲುವಾಗಿ, ಅವುಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವ ಸಲುವಾಗಿ, ಅವುಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುವುದು. ಈ ವಿಧೇಯಕದ ತತ್ವದ ಬಗ್ಗೆ ಯಾವುದೇ ವಾಗ್ವಾದ ಉಂಟಾಗುತ್ತದೆಂದು ನನಗನಿಸುವುದಿಲ್ಲ. ಆ ತರುವಾಯ ನಮಗೆ ಅದರಲ್ಲಿ ಒಂದೆರಡು ಲೋಪಗಳು ಇರುವುದು ಕಂಡು ಬಂದಿದೆ ಮತ್ತು ಅವುಗಳನ್ನು ಈ ಅನುಸೂಚಿ ಅಡಿಯಲ್ಲಿ ತರುವ ದೃಷ್ಟಿಯಿಂದ ತಿದ್ದುಪಡಿಗಳನ್ನು ಸೂಚಿಸಲು ಪ್ರಸ್ತಾವಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:**

> "ಕೆಲವು ಕಾನೂನುಗಳನ್ನು ಭಾಗ ಬಿ ರಾಜ್ಯಗಳಿಗೆ ವಿಸ್ತರಿಸಲು ಉಪಬಂಧ ಕಲ್ಪಿಸುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಅಂಗೀಕರಿಸಲಾಯಿತು."

***ಡಾ. ಅಂಬೇಡ್ಕರ್:** ತಿರುವಾಂಕೂರ್ ಕೊಚಿನ್‌ನ ನಮ್ಮ ಸ್ನೇಹಿತರಾದ ಶ್ರೀ ಸಿ.ಎನ್. ಪಿಳ್ಳೈರವರು ತಿಳಿಸಿದ ವಿಚಾರ ಕುರಿತಂತೆ ನಾನು ತಿಳಿದ ಮಟ್ಟಿಗೆ ಸ್ಥಿತಿ ಈ ತುಂಬ ಸುಲಭವಾಗಿದೆ. ಈ ವಿಧೇಯಕದ ಮೂಲಕ ವಿಸ್ತರಿಸಲು ಕೋರಲಾಗಿರುವ ಕೆಲವು ಕಾನೂನುಗಳಿದ್ದು ಅವುಗಳು ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ. ತತ್ಪರಿಣಾಮವಾಗಿ ಭಾರತದಲ್ಲಿನ ಯಾವುದೇ ರಾಜ್ಯವು ತಾನು ಇಚ್ಛಿಸುವ ರೀತಿಯಲ್ಲಿ ಈ ಕಾನೂನುಗಳನ್ನು ತಿದ್ದುಪಡಿ ಮಾಡಲು ಮುಕ್ತವಾಗಿರುತ್ತದೆ. ಅವರ ಉದಾಹರಣೆಯನ್ನು ಎಂದರೆ ಭಾರತೀಯ ದಂಡ ಸಂಹಿತೆಯನ್ನು ತೆಗೆದುಕೊಂಡರೆ ಸದರಿ ಭಾರತೀಯ ದಂಡ ಸಂಹಿತೆಯು ಮರಣವನ್ನು ದಂಡನೆಗಳಲ್ಲಿ ಒಂದಾಗಿ ವಿಧಿಸುತ್ತದೆ ಎಂಬುದು ಶತಃಸತ್ಯ.

ದಂಡ ಸಂಹಿತೆಯು ಈಗ ಟ್ರಾವಂಕೂರಿನಲ್ಲಿ ಜಾರಿಯಲ್ಲಿರುವಂತೆ ಅದು ಆ ದಂಡವನ್ನು ರದ್ದು

* ಪಿ.ಡಿ. ಸಂಪುಟ ೮ ಭಾಗ ೧೧ ೯ನೇ ಫೆಬ್ರವರಿ ೧೯೫೧ ಪುಟಗಳು ೨೬೭೭–೭೭

ಪಡಿಸುತ್ತದೆಂಬುದು ಅವರು ಹೇಳಿದಂತೆ ಅಷ್ಟೇ ಸತ್ಯವಾದುದು. ಸರಿ, ಭಾರತೀಯ ದಂಡ ಸಂಹಿತೆಯನ್ನು ಈ ಅಧಿನಿಯಮದ ಮೇರೆಗೆ ಅನ್ವಯಮಾಡಿದ ನಂತರ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ಹಾಗೂ ಅವರು ಅಪೇಕ್ಷಿಸಿದ ರೀತಿಯಲ್ಲಿ ಭಾರತೀಯ ದಂಡ ಸಂಹಿತೆಯನ್ನು ತಿದ್ದುಪಡಿ ಮಾಡಲು ಟ್ರಾವಂಕೂರ್–ಕೊಚಿನ್ ವಿಧಾನ ಮಂಡಲಕ್ಕೆ ಬಹುಮಟ್ಟಿಗೆ ಸಾಧ್ಯವಾಗುತ್ತದೆ. ತತ್ಪರಿಣಾಮವಾಗಿ ಸಮವರ್ತಿ ಪಟ್ಟಿಯಡಿ ಬರುವಂತಹ ಕಾನೂನುಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಕಾನೂನುಗಳನ್ನು ಮಾಡುವ ಅಧಿಕಾರವನ್ನು ಹೊಂದಿರುವ ಭಾರತದ ಎಲ್ಲಾ ರಾಜ್ಯಗಳು ಖಂಡಿತವಾಗಿ ತಮ್ಮ ಸಂದರ್ಭಗಳಿಗೆ ತಕ್ಕ ಕಾನೂನುಗಳನ್ನು ಮಾಡುತ್ತವೆ.

ನನ್ನ ಇನ್ನೊಬ್ಬ ಮಾನ್ಯ ಸ್ನೇಹಿತರು ಉಲ್ಲೇಖ ಮಾಡಿದ ಅಂಶದ ಬಗ್ಗೆ ಹೇಳುವುದಾದರೆ ಅವರು ಈ ಮಸೂದೆಯ ಖಂಡ ೩ರ ಉಪಬಂಧಗಳನ್ನು ಸರಿಯಾಗಿ ಓದಿರುವುದಿಲ್ಲವೆಂದು ನನಗೆ ತೋರುತ್ತದೆ. ಅದು ಈ ಮುಂದಿನಂತಿದೆ.

> "ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಗಳು ಮತ್ತು ಅಧ್ಯಾದೇಶಗಳನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಮತ್ತು ನಿರ್ದಿಷ್ಟಪಡಿಸಿದ ಮಟ್ಟಿಗೆ ತಿದ್ದುಪಡಿಮಾಡತಕ್ಕದ್ದು".

ಆದ್ದರಿಂದ, ಈ ಮಸೂದೆ ತಿದ್ದುಪಡಿ ಮಾಡುವ ಹಾಗೂ ವಿಸ್ತರಿಸುವ ಎರಡೂ ರೀತಿಯ ಒಂದು ಮಸೂದೆ ಆಗಿದೆ. ಸಹಜವಾಗಿ, ಅವರು ಇದೊಂದು ಶಾಸನ ರಚನೆಯ ಅತ್ಯಂತ ನಾಜೂಕಲ್ಲದ ವಿಧಾನವೆಂದು ನಿರೋಧಿಸಬಹುದು. ಆದರೆ ನಿರೋಧಿಸುವ ಅವರ ಯೋಜನೆಯನ್ನು ಪರಿಗಣಿಸಲು ಅವರಿಗೆ ಅವಕಾಶ ಕೊಡಿ. ನಾವು ಇಲ್ಲಿದ್ದು ಮೊದಲನೆಯದಾಗಿ ತಿದ್ದುಪಡಿ ಆನಂತರ ವಿಸ್ತರಿಸುವ ೧೩೫ ವಿವಿಧ ಕಾನೂನುಗಳನ್ನು ಅಂಗೀಕರಿಸಬೇಕಾಗಿದೆ. ಇದು ತೀರಾ ನೇರ ಅಥವಾ ನಾಜೂಕಾಗಿಲ್ಲದಿರಬಹುದಾಗಿದ್ದರೂ ಈ ಮಸೂದೆಯಲ್ಲಿ ಎಂದರೆ ತಿದ್ದುಪಡಿ ಮತ್ತು ವಿಸ್ತರಣೆ ಎರಡನ್ನೂ ಮಾಡುವ ಈ ಮಸೂದೆಯಲ್ಲಿ ಸಂಕ್ಷಿಪ್ತ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳುವುದು ಅಪೇಕ್ಷಣೀಯವಾದುದೆಂಬುದು ನನ್ನ ಭಾವನೆ. ನನ್ನ ಗೌರವಾನ್ವಿತ ಸ್ನೇಹಿತರು ಈ ವಿವರಣೆಯ ನಂತರ ಯಾವುದೇ ಜಗಳ ತೆಗೆಯುತ್ತಾರೆಂದು ನಾನು ಭಾವಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :**

> "ಭಾಗ–ಬಿ ರಾಜ್ಯಗಳಿಗೆ ಕೆಲವು ಕಾನೂನುಗಳನ್ನು ವಿಸ್ತರಣೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೇ" ಎಂಬುದು ಪ್ರಶ್ನೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ೨ ರಿಂದ ೬ ರವರೆಗಿನ ಖಂಡಗಳು

೨ ರಿಂದ ೬ ರವರೆಗಿನ ಖಂಡಗಳನ್ನು ಮಸೂದೆಗೆ ಸೇರಿಸಲಾಯಿತು.

**ಖಂಡ–೭.**— (ಕಷ್ಟಗಳನ್ನು ನಿವಾರಿಸುವ ಅಧಿಕಾರ) ಮಾಡಲಾದ ತಿದ್ದುಪಡಿ

> (ಸಿ) ಸದರಿ ಪ್ರಕರಣದ ಮೂಲಕ ನಿರಸನಗೊಳಿಸಲಾದ ಯಾವುದೇ ಕಾನೂನಿನ ಮೇರೆಗೆ ಮಾಡಲಾದ ಯಾವುದೇ ಕಾರ್ಯವನ್ನು ಅಥವಾ ತೆಗೆದುಕೊಳ್ಳಲಾದ

ಯಾವುದೇ ಕ್ರಮವನ್ನು (ಪ್ರಕರಣ ೬ರ ಎರಡನೆಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಗಳೂ ಸೇರಿದಂತೆ) ಈಗ ವಿಸ್ತರಿಸಲಾದಂತೆ ಅಧಿನಿಯಮದ ಅಥವಾ ಅಧ್ಯಾದೇಶದ ಸಂವಾದಿ ಉಪಬಂಧದ ಮೇರೆಗೆ ಯಾವ ಪ್ರದೇಶಗಳು ಅಥವಾ ಸನ್ನಿವೇಶಗಳಲ್ಲಿ ಅಥವಾ ಯಾವ ವ್ಯಾಪ್ತಿಗೆ ಅಥವಾ ಯಾವ ಷರತ್ತುಗಳಿಗೆ ಒಳಪಟ್ಟು ಮಾನ್ಯ ಮಾಡಬೇಕಾಗಿದೆಯೋ ಅಥವಾ ಜಾರಿಗೊಳಿಸಬೇಕಾಗಿದೆಯೋ ಅಂತಹ ಪ್ರದೇಶಗಳು ಅಥವಾ ಸನ್ನಿವೇಶಗಳು ಅಥವಾ ವ್ಯಾಪ್ತಿ ಅಥವಾ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು".

**(ಡಾ॥ ಅಂಬೇಡ್ಕರ್)**

ಖಂಡ ೭ ತಿದ್ದುಪಡಿ ಮಾಡಿರುವಂತೆಯೇ ಮಸೂದೆಗೆ ಸೇರಿಸಲಾಯಿತು.

## ಅನುಸೂಚಿ

**ಡಾ. ಅಂಬೇಡ್ಕರ್**: ನನ್ನ ಹೆಸರಿನಲ್ಲಿ ಮಾಡಿಸಲಾಗಿರುವ ಅನುಸೂಚಿಗೆ ಎಲ್ಲಾ ತಿದ್ದುಪಡಿಗಳನ್ನು ಮಂಡಿಸಿದ ರೂಪದಲ್ಲೇ ಕೈಗೊಳ್ಳಬಹುದೇ ಎಂಬುದನ್ನು ತಿಳಿಯಲು ನಾನು ಕುತೂಹಲಭರಿತನಾಗಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಸದನವು ಈ ಕ್ರಮಕ್ಕೆ ಸಹಮತ ಸೂಚಿಸುವುದೇ?

**ಮಾನ್ಯ ಸದಸ್ಯರು:** ಹೌದು, ಮಾನ್ಯರೇ.

**ಶ್ರೀ ಶಿವಚರಣ್ ಲಾಲ್:** ತಾವು ಈ ತಿದ್ದುಪಡಿಗಳನ್ನು ಮತಕ್ಕೆ ಹಾಕುವುದಕ್ಕೆ ಮೊದಲು ನಾನು ಒಂದು ವಿಚಾರದ ಬಗ್ಗೆ ಸ್ಪಷ್ಟತೆ ಹೊಂದಬಯಸಿದ್ದೇನೆ. ಸರ್ಕಾರಿ ಉಳಿತಾಯ ಬ್ಯಾಂಕುಗಳ ಅಧಿನಿಯಮ ೧೮೭೩ರ ಮೇರೆಗಿನ ಅನುಸೂಚಿಯ ೪ನೇ ಪುಟದಲ್ಲಿ ಸದರಿ ಅಧಿನಿಯಮವು ಟ್ರಾವಂಕೂರ್–ಕೊಚ್ಚಿನ್ ರಾಜ್ಯದ ಆಂಚಲ್ ಉಳಿತಾಯ ಬ್ಯಾಂಕಿನಲ್ಲಿ ಮಾಡಿರುವ ಯಾವುದೇ ಠೇವಣಿಗಳಿಗೆ ಅನ್ವಯವಾಗುವುದಿಲ್ಲವೆಂದು ಹೇಳಿದೆ. ಅಧಿನಿಯಮವು ಈ ಬ್ಯಾಂಕಿಗೆ ಏಕೆ ಅನ್ವಯವಾಗುವುದಿಲ್ಲ ಎಂಬುದು ನನಗೆ ಸ್ಪಷ್ಟವಾಗಿಲ್ಲ.

**ಡಾ. ಅಂಬೇಡ್ಕರ್:** ವಿವಿಧ ಪ್ರಶ್ನೆಗಳಿಗೆ ಉತ್ತರಿಸಲು ನನಗೆ ತೀರಾ ಕಷ್ಟವೆಂದು ಹೇಳಲು ನಾನು ವಿಷಾದಿಸುತ್ತೇನೆ. ಆದ್ದರಿಂದ ನಾನು ನನ್ನ ಸ್ಥಿತಿಯನ್ನು ವಿವರಿಸಲಿಚ್ಛಿಸುತ್ತೇನೆ. ಬೇರೆಬೇರೆ ಅಂದಾಜುಗಳನ್ನು ಸಮರ್ಥಿಸುವ ವಾಸ್ತವಿಕ ಹೊಣೆಗಾರಿಕೆಯು ಅವುಗಳಿಗೆ ಜವಾಬ್ದಾರರಾಗಿರುವ ಬೇರೆಬೇರೆ ಸಚಿವರ ಮೇಲಿದ್ದಾಗ್ಯೂ ಹಣಕಾಸು ಸಚಿವರು ಸದನದ ಮುಂದೆ ಮಂಡಿಸುವ ಒಂದು ಪೂರಕ ಅಂದಾಜಿನ ತರಹ ಈ ಮಸೂದೆ. ನಾನು ಕೇವಲ ಬೇರೆ ಇಲಾಖೆಗಳು ಏನನ್ನು ಅಪೇಕ್ಷಿಸಿದ್ದಾವೆಯೋ ಅದನ್ನು ಮಾಡಬೇಕೆಂದು ಪ್ರಾಯೋಜಿಸುತ್ತಿದ್ದೇನೆ ಅಷ್ಟೇ. ಹಣಕಾಸು ಸಚಿವರು ಸದನದಲ್ಲಿ ಇಲ್ಲದಿರುವುದಕ್ಕೆ ನಾನು ಕ್ಷಮೆ ಕೋರುತ್ತೇನೆ. ಹಣಕಾಸು ಸಚಿವರು ಇದ್ದಿದ್ದರೆ ಅವರು ತಾವು ಈ ನಿರ್ದಿಷ್ಟ ತಿದ್ದುಪಡಿಯನ್ನು ಏಕೆ ಮಾಡಬಯಸಿದ್ದರೆಂಬುದನ್ನು ನಿಖರವಾಗಿ ನನ್ನ ಸ್ನೇಹಿತರಿಗೆ ವಿವರಿಸಿ ಹೇಳುತ್ತಿದ್ದರು. ಎಲ್ಲಾ ಒಂದೇ. ಇದನ್ನು ತುಂಬಾ ಚರ್ಚಿಸಿ ಪರಿಪೂರ್ಣವಾದ ಪರಿಗಣನೆ ಮಾಡಿದ ನಂತರ ಮಾಡಬೇಕಾಗುತ್ತದೆ ಎಂಬುದನ್ನು ನನ್ನ ಸ್ನೇಹಿತರು ಒಪ್ಪುವರೆಂಬುದು ನನ್ನ ಭಾವನೆ.

**ಮಾನ್ಯ ಸಭಾಧ್ಯಕ್ಷರು:** ಸದನವು ಮಾಡದಿದ್ದಲ್ಲಿ ನಾನು ಯಾವುದೇ ಆಕ್ಷೇಪಣೆಯನ್ನು ಎತ್ತಲಿಚ್ಛಿಸುವುದಿಲ್ಲ. ಆದರೆ ಇದು ತೃಪ್ತಿಕರವಾದ ಕಾರ್ಯವಿಧಾನವಲ್ಲ. ಯಾರೇ ಗೌರವಾನ್ವಿತ ಸದಸ್ಯರು ಆತನು ಮತ ಚಲಾಯಿಸುವುದಕ್ಕೂ ಮುಂಚೆ ತನ್ನನ್ನು ಯಾವ ವಿಚಾರವಾಗಿ ಮತ ಚಲಾಯಿಸುವಂತೆ ಕೋರಲಾಗಿದೆ

ಮತ್ತು ಏಕೆ ಎಂಬುದನ್ನು ತಿಳಿಯುವ ಹಕ್ಕನ್ನು ಹೊಂದಿರುತ್ತಾನೆ. ಪೂರಕ ಅಂದಾಜನ್ನು ಮಂಡಿಸಲು ಇಚ್ಛಿಸಿದರೂ ಕೂಡ ಕೆಲ ಪ್ರಸ್ತಾಪಗಳಿಗೆ ಮಾನ್ಯ ಸದಸ್ಯರನ್ನು ಮತ ನೀಡುವಂತೆ ಏಕೆ ಕೋರಲಾಗಿದೆ ಎಂಬುದಕ್ಕೆ ಕಾರಣಗಳನ್ನು ವಿವರಿಸಿ ಮಾನ್ಯ ಸದಸ್ಯರ ಪ್ರಯೋಜನಕ್ಕಾಗಿ ಕೆಲ ಬಗೆಯ ಟಿಪ್ಪಣಿಗಳನ್ನು ಸೇರಿಸುವುದು ಪದ್ಧತಿಯಾಗಿರಬೇಕು.

**ಡಾ. ಅಂಬೇಡ್ಕರ್:** ಇದೊಂದು ಅತ್ಯಂತ ಅಮೂಲ್ಯವಾದ ಸಲಹೆ. ನಾವು ಆ ಬಗ್ಗೆ ಪ್ರಯತ್ನಿಸಬೇಕು ಮತ್ತು ಅದನ್ನು ಪಾಲಿಸಬೇಕು.

**ಮಾನ್ಯ ಸಭಾಧ್ಯಕ್ಷರು:** ಶ್ರೀ ಶಿವಚರಣ್ ಲಾಲ್ ಅವರ ಪ್ರಸ್ತುತ ನಿಲುವೇನು? ಕಾರಣಗಳನ್ನು ತಿಳಿಯದೇ ಅವರು ಅದಕ್ಕೆ ಮತ ನೀಡಲು ಒಪ್ಪುವರೇ?

**ಡಾ. ಅಂಬೇಡ್ಕರ್:** ಅವರು ಮತನೀಡುವ ಮನಸ್ಸು ಹೊಂದಿದ್ದಲ್ಲಿ ನಾವು ಯಾವುದೇ ಅಪಾಯದ ಬಗ್ಗೆ ಭರವಸೆ ನೀಡುತ್ತೇವೆ.

**ಮಾನ್ಯ ಸಭಾಧ್ಯಕ್ಷರು:** ಅವರು ಪ್ರಸ್ತಾವದ ಔಚಿತ್ಯದ ಬಗ್ಗೆ ಅಥವಾ ವಿಶ್ವಸನೀಯತೆಯ ಬಗ್ಗೆ ಅನುಮಾನ ಪಡುತ್ತಿದ್ದಾರೆಂಬುದು ಇದರ ಅರ್ಥವಲ್ಲ, ಆದರೆ ಒಬ್ಬ ಸದಸ್ಯರಾಗಿ ಈಗಲೂ ಅವರು ಕಾರಣವನ್ನು ತಿಳಿಯುವ ಹಕ್ಕನ್ನು ಹೊಂದಿದ್ದಾರೆ.

**ಶ್ರೀ ಎಸ್.ವಿ. ನಾಯ್ಕ (ಹೈದರಾಬಾದ್):** ಅನುಸೂಚಿಗೆ ತಿದ್ದುಪಡಿಗಳ ಪಟ್ಟಿಯ ೫ನೇ ಪುಟದಲ್ಲಿ "ಕರೆನ್ಸಿ ಅಧ್ಯಾದೇಶ, ೧೯೪೦"ರ ಶೀರ್ಷಿಕೆ ಮೇರೆಗಿನ ಪ್ರಕರಣ ೨ರ ನಂತರ ಹೈದರಾಬಾದ್ ಒಂದು ರೂಪಾಯಿ ನೋಟುಗಳಿಗೆ ಸಂಬಂಧಿಸಿದಂತೆ ಕೆಲವು ತಾತ್ಕಾಲಿಕ ಉಪಬಂಧಗಳನ್ನು ಮಾಡಿದೆ. ಹೈದರಾಬಾದ್ ರಾಜ್ಯದಲ್ಲಿ ಚಲಾವಣೆಯಲ್ಲಿರುವಂಥ ಇತರ ನಾಣ್ಯಗಳಿಗೆ (ಕರೆನ್ಸಿಗಳಿಗೆ) ಸಂಬಂಧಿಸಿದಂತೆ ಸರಕಾರದ ನಿಲುವೇನು ಎಂಬುದನ್ನು ತಿಳಿಯಲು ನಾನು ಬಯಸಿದ್ದೇನೆ.

**ಡಾ. ಅಂಬೇಡ್ಕರ್:** ನಾನು ಈ ಮೊದಲು ಉತ್ತರ ನೀಡಿ ರೀತಿಯಲ್ಲೇ ಉತ್ತರಿಸಬೇಕಾಗುತ್ತದೆ. ನಾನು ಮಾನ್ಯ ಹಣಕಾಸು ಸಚಿವರಿಗೆ ತಿಳಿಸಬಲ್ಲೆ ಮತ್ತು ಅವರು ತಮ್ಮ ಉತ್ತರ ಏನೆಂಬುದನ್ನು ಮಾನ್ಯ ಸದಸ್ಯರಿಗೆ ಪ್ರಾಯಶಃ ಹೇಳಬಹುದು.

**ಸಂಜೆ ೪ ಗಂಟೆ :** ನಾನು ಅನುಸೂಚಿಗೆ ಮತ್ತೊಂದು ತಿದ್ದುಪಡಿಯನ್ನು ಹೊಂದಿದ್ದೇನೆ. ಅದನ್ನು ಸಹ ಮಂಡಿಸಿದಂತೆ ಕೈಗೊಳ್ಳಬೇಕೆಂದು ನಾನು ಕೋರುತ್ತೇನೆ.

**ಮಾಡಲಾದ ತಿದ್ದುಪಡಿಗಳು :**

೧. ಅನುಸೂಚಿಯಲ್ಲಿ "ಭಾರತೀಯ ಪ್ರಮಾಣ ವಚನ ಅಧಿನಿಯಮ, ೧೮೭೩" ಶೀರ್ಷಿಕೆ ಮೇರೆಗಿನ ಪ್ರಕರಣ ೧ಕ್ಕೆ ಸಂಬಂಧಿಸಿದ ಬಾಬಿಗೆ ಬದಲಿಯಾಗಿ ಈ ಮುಂದಿನದನ್ನು ಸೇರಿಸುವುದು.

"ಪ್ರಕರಣ ೧ – "ಭಾಗ–ಬಿ ರಾಜ್ಯಗಳನ್ನು ಹೊರತುಪಡಿಸಿ" ಬದಲಿಗೆ ""ಮಣಿಪುರ, ಜಮ್ಮು ಮತ್ತು ಕಾಶ್ಮೀರ ರಾಜ್ಯಗಳನ್ನು ಹೊರತುಪಡಿಸಿ" ಎಂಬುದಾಗಿ ಸೇರಿಸತಕ್ಕದ್ದು.

೨. ಅನುಸೂಚಿಯಲ್ಲಿ "ವಿಭಜನೆ ಅಧಿನಿಯಮ, ೧೮೯೩"ಕ್ಕೆ ಸಂಬಂಧಿಸಿದ ನಮೂದಿನ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.

"ಜಾನುವಾರುಗಳ ಆಮದು ಅಧಿನಿಯಮ ೧೮೯೮ (೧೮೯೮)

ಪ್ರಕರಣ ೧– ಉಪ ಪ್ರಕರಣ (೨)ಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

(೨) ಇದು ಎಲ್ಲಾ ಭಾಗ–ಎ ರಾಜ್ಯಗಳು, ಭಾಗ–ಸಿ ರಾಜ್ಯಗಳು ಹಾಗೂ ಸೌರಾಷ್ಟ್ರ ಮತ್ತು

ಟ್ರಾವಂಕೂರ್–ಕೊಚ್ಚಿನ್ ರಾಜ್ಯಗಳಿಗೆ ವಿಸ್ತರಿಸುತ್ತದೆ".

೩. ಅನುಸೂಚಿಯಲ್ಲಿ ""ಭಾರತೀಯ ನಾಣ್ಯ ಪದ್ಧತಿ ಅಧಿನಿಯಮ, ೧೯೦೬" ಶೀರ್ಷಿಕೆ ಮೇರೆಗಿನ ಕೊನೆಯ ಬಾಬಿಗೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

"ಪ್ರಕರಣ ೨೩ ರ ನಂತರ ಈ ಮುಂದಿನವದನ್ನು ಸೇರಿಸತಕ್ಕದ್ದು ಎಂದರೆ:

೨೪ ಭಾಗ–ಬಿ ರಾಜ್ಯಗಳ ನಾಣ್ಯಗಳಿಗೆ ಸಂಬಂಧಿಸಿದ ತಾತ್ಕಾಲಿಕ ಉಪಬಂಧಗಳು ಭಾಗ–ಬಿ ರಾಜ್ಯಗಳ (ಕಾನೂನುಗಳು) ಅಧಿನಿಯಮ, ೧೯೫೧ರ ೬ನೇ ಪ್ರಕರಣದಲ್ಲಿ ಏನೇ ಇದ್ದರೂ, ಸದರಿ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ಭಾಗ–ಬಿ ರಾಜ್ಯದಲ್ಲಿ ಕಾನೂನು ಮಾನ್ಯ ಚಾಲ್ತಿಹಣವಾಗಿ ಚಲಾವಣೆಯಲ್ಲಿದ್ದಂತಹ ವಿವರಣೆಯ ನಾಣ್ಯಗಳು, ಕೇಂದ್ರ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ಧರಿಸಬಹುದಾದಂಥ ಪ್ರಾರಂಭದಿಂದ ಎರಡು ವರ್ಷಗಳನ್ನು ಮೀರದಿರುವ ಅವಧಿಗಾಗಿ ಸದರಿ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿದ್ದ ವ್ಯಾಪ್ತಿಗೆ ಮತ್ತು ಅದೇ ಷರತ್ತುಗಳಿಗೆ ಒಳಪಟ್ಟು ಆ ರಾಜ್ಯದಲ್ಲಿ ಕಾನೂನುಮಾನ್ಯವಾಗಿರುವ ಚಾಲ್ತಿ ಹಣವಾಗಿ ಮುಂದುವರಿಯತಕ್ಕದ್ದು."

೪. ಅನುಸೂಚಿಯಲ್ಲಿ, "೧೯೧೩ರ ಭಾರತೀಯ ಕಂಪನಿಗಳ ಅಧಿನಿಯಮದ" ಶೀರ್ಷಿಕೆ ಮೇರೆಗಿನ ಹೊಸ ಪ್ರಕರಣ ೨ಬಿ ಗೆ ಸಂಬಂಧಿಸಿದ ಬಾಬಿನ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.

"ಪ್ರಕರಣ ೧೪೪– ಉಪ ಪ್ರಕರಣ (೧) ರ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು".

(೨) ಉಪ ಪ್ರಕರಣ (೧) ರಲ್ಲಿ ಒಳಗೊಂಡಿರುವುದು ಏನೇ ಇದ್ದರೂ ಉಪಪ್ರಕರಣ (೨ಎ) ಮೇರೆಗೆ ಮಾಡಲಾದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಭಾಗ,ಬಿ ರಾಜ್ಯಗಳ (ಕಾನೂನುಗಳು) ಅಧಿನಿಯಮ, ೧೯೫೧ರ ಪ್ರಾರಂಭದ ನಿಕಟಪೂರ್ವದಲ್ಲಿ ಒಂದು ಇಡೀ ಭಾಗ–ಬಿ ರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಆ ರಾಜ್ಯದಲ್ಲಿನ ಅಥವಾ ಅದರ ಯಾವುದೇ ಭಾಗದಲ್ಲಿನ ಕಂಪನಿಗಳ ಲೆಕ್ಕಪರಿಶೋಧಕನಾಗಿ ಕಾರ್ಯನಿರ್ವಹಿಸಲು ಯಾವ ವ್ಯಕ್ತಿಗೆ ಅಧಿಕಾರನೀಡಿ ಪ್ರಮಾಣಪತ್ರ ಮಂಜೂರು ಮಾಡಲಾಗಿದೆಯೋ ಅಂತಹ ಪ್ರಮಾಣಪತ್ರಧಾರಕನು ಆ ರಾಜ್ಯದ ಯಾವುದೇ ಭಾಗದಲ್ಲಿ ನೋಂದಾಯಿಸಲ್ಪಟ್ಟ ಕಂಪನಿಗಳ ಲೆಕ್ಕಪರಿಶೋಧಕನಾಗಿ ಕಾರ್ಯನಿರ್ವಹಿಸಲು ನೇಮಕಗೊಳ್ಳುವ ಹಕ್ಕುಳ್ಳವನಾಗಿರತಕ್ಕದ್ದು.

(೨ಎ) ಕೇಂದ್ರ ಸರ್ಕಾರ, ಅಧಿಕೃತ ರಾಜ್ಯಪತ್ರದಲ್ಲಿ ಅಧಸೂಚನೆಯ ಮೂಲಕ, ಉಪ ಪ್ರಕರಣ(೨)ರ ಉದ್ದೇಶಕ್ಕಾಗಿ ಭಾಗ–ಬಿ ರಾಜ್ಯಗಳಲ್ಲಿನ ವ್ಯಕ್ತಿಗಳಿಗೆ ಲೆಕ್ಕಪರಿಶೋಧಕರ ಪ್ರಮಾಣ ಪತ್ರಗಳನ್ನು ನೀಡುವುದು, ನವೀಕರಿಸುವುದು ಅಮಾನತ್ತುಗೊಳಿಸುವುದು ಅಥವಾ ರದ್ದುಪಡಿಸುವುದಕ್ಕಾಗಿ ಉಪಬಂಧ ಕಲ್ಪಿಸಿ ಮತ್ತು ಅಂತಹ ನೀಡಿಕೆ ನವೀಕರಣ ಅಮಾನತು ಅಥವಾ ರದ್ದಿಯಾತಿಗಾಗಿ ಷರತ್ತುಗಳು ಮತ್ತು ನಿಬಂಧನೆಗಳನ್ನು ನಿರ್ದಿಷ್ಟಪಡಿಸಿ ನಿಯಮಗಳನ್ನು ಮಾಡಬಹುದು."

೫. ಅನುಸೂಚಿಯಲ್ಲಿ "ಭಾರತೀಯ ಕೃತಿ ಸ್ವಾಮ್ಯ ಅಧಿನಿಯಮ, ೧೯೧೪ಕ್ಕೆ ಸಂಬಂಧಿಸಿದ ನಮೂದಿನ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.

"೧೯೧೮ರ ಚಲನಚಿತ್ರ ಅಧಿನಿಯಮ, ಪ್ರಕರಣ ೧– ಉಪ ಪ್ರಕರಣ (೨)ರಲ್ಲಿ,

"ಹೈದರಾಬಾದ್ ಮತ್ತು" ಎಂಬುದನ್ನು ಬಿಟ್ಟುಬಿಡತಕ್ಕದ್ದು.

೬. ಅನುಸೂಚಿಯಲ್ಲಿ "ಭಾರತೀಯ ಬಾರ್ ಕೌನ್ಸಿಲ್ (ವಕೀಲ ಪರಿಷತ್ತು) ಅಧಿನಿಯಮ, ೧೯೨೬"ಕ್ಕೆ ಸಂಬಂಧಿಸಿದ ನಮೂದಿನ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.

"೧೯೨೯ರ ಬಾಲ್ಯ ವಿವಾಹ ಪ್ರತಿಬಂಧಕ ಅಧಿನಿಯಮ.

೭. ಅನುಸೂಚಿಯಲ್ಲಿ "ಪೆಟ್ರೋಲಿಯಂ ಅಧಿನಿಯಮ ೧೯೩೪" ಶೀರ್ಷಿಕೆ ಮೇರೆಗಿನ ಪ್ರಕರಣ ೧ಕ್ಕೆ ಸಂಬಂಧಿಸಿದ ಬಾಬಿನಲ್ಲಿ "ಕ್ಕಾಗಿ" ಬದಲಿಗೆ "ಉಪ ಪ್ರಕರಣ (೨)ರಲ್ಲಿ ಕ್ಕಾಗಿ" ಎಂದು ಸೇರಿಸತಕ್ಕದ್ದು.

೮. ಅನುಸೂಚಿಯಲ್ಲಿ, "ಮಕ್ಕಳ ನಿಯೋಜನೆ ಅಧಿನಿಯಮ, ೧೯೩೮"ಕ್ಕೆ ಸಂಬಂಧಿಸಿದ ನಮೂದಿನ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು. "೧೯೩೯ರ ಮೋಟಾರು ವಾಹನಗಳ ಅಧಿನಿಯಮ.

ಅಧಿನಿಯಮದ ಉದ್ದಕ್ಕೂ, ಅನ್ಯಥಾ ವ್ಯಕ್ತವಾಗಿ ಉಪಬಂಧಿಸದ ಹೊರತು, ರಾಜ್ಯಗಳಿಗೆ ಬದಲಾಗಿ ಭಾರತ ಎಂದು ಸೇರಿಸತಕ್ಕದ್ದು.

ಪ್ರಕರಣ ೧ – (ಎ) ಉಪ ಪ್ರಕರಣ (೨)ರಲ್ಲಿ 'ಭಾಗ–ಬಿ ರಾಜ್ಯಗಳನ್ನು ಹೊರತುಪಡಿಸಿ 'ಗೆ ಬದಲಾಗಿ' 'ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ' ಎಂದು ಸೇರಿಸತಕ್ಕದ್ದು.

(ಬಿ) ಉಪ ಪ್ರಕರಣ (೩)ಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

(೩) ಅಧ್ಯಾಯ VIII, ಕೇಂದ್ರ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೇ ನಿರ್ದೇಶಿಸುವವರೆಗೆ ಈ ಅಧಿನಿಯಮ ಯಾವ ರಾಜ್ಯಕ್ಕೆ ಅನ್ವಯವಾಗುವುದೋ ಆ ಯಾವುದೇ ಭಾಗ–ಬಿ ರಾಜ್ಯದಲ್ಲಿ ಜಾರಿಗೆ ಬರತಕ್ಕದ್ದಲ್ಲ ಮತ್ತು ಭಾಗ–ಬಿ ೧೯೫೧ರ ರಾಜ್ಯಗಳ (ಕಾನೂನುಗಳು) ಅಧಿನಿಯಮ, ೬ನೇ ಪ್ರಕರಣದ ಮೂಲಕ ನಿರಸನ, ೧೯೩೯ರ ಮೋಟಾರು ವಾಹನಗಳ ಅಧಿನಿಯಮಕ್ಕೆ ಸಂವಾದಿಯಾಗಿ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ನಿರಸನ ಏನೇ ಇದ್ದರೂ, ಸಂವಾದಿ ಕಾನೂನು, ಅದು ಮೂರನೇ ಪಕ್ಷಕಾರರ ಅಪಾಯಗಳಿಗೆ ವಿರುದ್ಧವಾಗಿ ಮೋಟಾರು ವಾಹನಗಳ ವಿಮೆಗೆ ಅಗತ್ಯಪಡುವಷ್ಟರ ಮಟ್ಟಿಗೆ ಅಥವಾ ಸಂಬಂಧಪಡುವಷ್ಟರ ಮಟ್ಟಿಗೆ, ಅಧ್ಯಾಯ VIII ಆ ರಾಜ್ಯದಲ್ಲಿ ಜಾರಿಗೆ ಬರುವವರೆಗೆ, ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದಿದ್ದರೆ ಹೇಗೋ ಹಾಗೇ ಜಾರಿಗೆ ಬರತಕ್ಕದ್ದು.

ಪ್ರಕರಣ ೨–(ಎ) ಖಂಡ ೯ರ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.

'(೯ಎ) ಭಾರತ ಎಂದರೆ ಈ ಅಧಿನಿಯಮವು ಯಾವ ಪ್ರದೇಶಗಳಿಗೆ ಅನ್ವಯಿಸುವುದೋ ಆ ಪ್ರದೇಶಗಳು : (ಬಿ) 'ಖಂಡ (೨೯ಎ)' ಅನ್ನು ಬಿಟ್ಟುಬಿಡತಕ್ಕದ್ದು.

ಪ್ರಕರಣ ೯–(ಎ) ಉಪ ಪ್ರಕರಣ (೨)ರಲ್ಲಿ 'ಯಾವುದೇ ಭಾಗ–ಬಿ ರಾಜ್ಯದಲ್ಲಿ ಬದಲಿಗೆ 'ಜಮ್ಮು ಮತ್ತು ಕಾಶ್ಮೀರ ಅಥವಾ ಯಾವುದೇ ರಾಜ್ಯ' ಎಂದು ಸೇರಿತಕ್ಕದ್ದು.

(ಬಿ) ಉಪ ಪ್ರಕರಣ (೪)ರಲ್ಲಿ.

(೧) 'ಯಾವುದೇ ಭಾಗ–ಬಿ ರಾಜ್ಯ ಅಥವಾ ಬದಲಿಗೆ 'ಜಮ್ಮು ಮತ್ತು ಕಾಶ್ಮೀರ ಅಥವ ಯಾವುದೇ ರಾಜ್ಯ' ಎಂದು ಸೇರಿತಕ್ಕದ್ದು ಮತ್ತು

(೨) 'ಯಾವುದೇ ರಾಜ್ಯದಲ್ಲಿ' ಮತ್ತು 'ಯಾವುದೇ ಅಂತಹ ರಾಜ್ಯದಲ್ಲಿ' ಬದಲಿಗೆ 'ರಾಜ್ಯದಲ್ಲಿ' ಎಂದು ಇರತಕ್ಕದ್ದು.

ಪ್ರಕರಣ ೨೮–(ಎ) ಉಪ ಪ್ರಕರಣ (೨)ರಲ್ಲಿ 'ಯಾವುದೇ ಭಾಗ–ಬಿ ರಾಜ್ಯ'ಕ್ಕೆ ಬದಲಾಗಿ 'ಜಮ್ಮು ಮತ್ತು ಕಾಶ್ಮೀರ ರಾಜ್ಯ' ಎಂದು ಸೇರಿಸತಕ್ಕದ್ದು.

(ಬಿ) ಉಪ ಪ್ರಕರಣ (೫)ರಲ್ಲಿ

(೧) 'ಯಾವುದೇ ಭಾಗ–ಬಿ ರಾಜ್ಯ ಅಥವಾ' ಬದಲಿಗೆ 'ಜಮ್ಮು ಮತ್ತು ಕಾಶ್ಮೀರ ಅಥವಾ ಯಾವುದೇ ರಾಜ್ಯ' ಎಂದು ಸೇರಿಸತಕ್ಕದ್ದು.

(೨) 'ಅಂಥ ರಾಜ್ಯದಲ್ಲಿ ನೋಂದಣಿ' ಮತ್ತು 'ಯಾವುದೇ ರಾಜ್ಯದಲ್ಲಿ ನೋಂದಣಿ' ಎಂದು ಸೇರಿಸತಕ್ಕದ್ದು; ಮತ್ತು

(೩) 'ಯಾವುದೇ ಅಂಥ ರಾಜ್ಯದಲ್ಲಿ ನೀಡಿದ' ಬದಲಿಗೆ 'ರಾಜ್ಯದಲ್ಲಿ ನೀಡಿದ' ಎಂದು ಸೇರಿಸತಕ್ಕದ್ದು.

ಪ್ರಕರಣ ೪೨ – ಉಪ ಪ್ರಕರಣ (೩)ರಲ್ಲಿ –

(೧) ಖಂಡ (ಎ)ನಲ್ಲಿ, 'ಭಾಗ–ಎ ರಾಜ್ಯದ ಸರ್ಕಾರ' ಬದಲಿಗೆ 'ರಾಜ್ಯ ಸರ್ಕಾರ' ಎಂದು ಸೇರಿಸತಕ್ಕದ್ದು.

(೨) ಖಂಡ (ಹೆಚ್)ನಲ್ಲಿ 'ಯಾವುದೇ ಭಾಗ–ಬಿ ರಾಜ್ಯ ಅಥವಾ' ಬದಲಿಗೆ 'ಜಮ್ಮು ಮತ್ತು ಕಾಶ್ಮೀರ ಅಥವಾ ಯಾವುದೇ ರಾಜ್ಯ' ಎಂದು ಸೇರಿಸತಕ್ಕದ್ದು.

ಪ್ರಕರಣ ೧೩೩ – 'ಭಾಗ–ಎ ರಾಜ್ಯದ ವಿಧಾನಮಂಡಲ ಬದಲಿಗೆ 'ರಾಜ್ಯ ವಿಧಾನಮಂಡಲ' ಎಂದು ಸೇರಿಸತಕ್ಕದ್ದು.

ಆರನೇ ಅನುಸೂಚಿ – ಕೋಷ್ಟಕಕ್ಕೆ ಈ ಮುಂದಿನದನ್ನು ಬದಲಿಯಾಗಿ ಸೇರಿಸತಕ್ಕದ್ದು.

| | |
|---|---|
| 'ಅಸ್ಸಾಂ | ಎಎಸ್ |
| ಬಿಹಾರ | ಬಿಆರ್ |
| ಬಾಂಬೆ | ಬಿಎಂ, ಬಿವೈ |
| ಮಧ್ಯಪ್ರದೇಶ | ಸಿಪಿ, ಎಂಡಿ |
| ಮದ್ರಾಸ್ | ಎಂಡಿ, ಎಂಎಸ್ |
| ಒರಿಸ್ಸಾ | ಒಆರ್ |
| ಪಂಜಾಬ್ | ಪಿಎನ್ |
| ಉತ್ತರ ಪ್ರದೇಶ | ಯುಪಿ, ಯುಎಸ್ |
| ಪಶ್ಚಿಮ ಬಂಗಾಳ | ಡಬ್ಲ್ಯುಬಿ, ಡಬ್ಲ್ಯುಜಿ |
| ಹೈದರಾಬಾದ್ | ಹೆಚ್‌ಟಿ, ಹೆಚ್‌ವೈ |
| ಮಧ್ಯಭಾರತ | ಎಂಬಿ |
| ಮೈಸೂರು | ಎಂವೈ |
| ಪಾಟಿಯಾಲ ಮತ್ತು ಪೂರ್ವ ಪಂಜಾಬ್ | ಪಿಯು |

| | |
|---|---|
| ರಾಜ್ಯಗಳ ಒಕ್ಕೂಟ | |
| ರಾಜಸ್ತಾನ್ | ಆರ್ ಜೆ |
| ಸೌರಾಷ್ಟ್ರ | ಎಸ್ ಎಸ್ |
| ಟ್ರಾವಂಕೂರ್ ಕೊಚ್ಚಿನ್ | ಟಿಸಿ |
| ಅಜ್ಮೀರ್ | ಎಜೆ |
| ಭೂಪಾಲ್ | ಬಿಎಸ್ |
| ಬಿಲಾಸ್ ಪುರ | ಬಿಎಲ್ |
| ಕೊಡಗು | ಸಿಜಿ |
| ದೆಹಲಿ | ಡಿಎಲ್ |
| ಹಿಮಾಚಲ ಪ್ರದೇಶ | ಹೆಚ್ಐ |
| ಕುಚ್ | ಕೆಹೆಚ್ |
| ಮಣಿಪುರ | ಎಂಎನ್ |
| ತ್ರಿಪುರ | ಟಿಆರ್ |
| ವಿಂಧ್ಯಪ್ರದೇಶ | ವಿಪಿ |
| ಅಂಡಮಾನ್ ಮತ್ತು | |
| ನಿಕೋಬರ್ ದ್ವೀಪಗಳು | ಎಎನ್” |

೯. ಅನುಸೂಚಿಯಲ್ಲಿ “ಸಂರಕ್ಷಕ ಸುಂಕಗಳ ಅಧಿನಿಯಮ, ೧೯೪೬” ಶೀರ್ಷಿಕೆ ಮೇರೆಗಿನ ಪ್ರಕರಣ ೨ಕ್ಕೆ ಸಂಬಂಧಿಸಿದ ಕೊನೆಯ ಬಾಬನ್ನು ಬಿಟ್ಟುಬಿಡತಕ್ಕದ್ದು.

೧೦. ಅನುಸೂಚಿಯಲ್ಲಿ ನೌಕರರ ರಾಜ್ಯ ವಿಮಾ ಅಧಿನಿಯಮ, ೧೯೪೮ (೧೯೪೮ರ XXXIV (೩೪) ಕ್ಕೆ ಸಂಬಂಧಿಸಿದ ನಮೂದನ್ನು ಬಿಟ್ಟು ಬಿಡತಕ್ಕದ್ದು.

೧೧. ಅನುಸೂಚಿಯಲ್ಲಿ “ಬಂಧನದಲ್ಲಿಟ್ಟಿರುವ ವ್ಯಕ್ತಿಯ ವರ್ಗಾವಣೆ ಅಧಿನಿಯಮ, ೧೯೪೯ (೧೯೪೯ರ XLX)”ಕ್ಕೆ ಸಂಬಂಧಿಸಿದ ನಮೂದನ್ನು ಬಿಟ್ಟುಬಿಡತಕ್ಕದ್ದು.

೧೨. ಅನುಸೂಚಿಯಲ್ಲಿ “ನಾಣ್ಯ (ಕರೆನ್ಸಿ) ಅಧ್ಯಾದೇಶ ೧೯೪೦” ಶೀರ್ಷಿಕೆ ಮೇರೆಗಿನ ಪ್ರಕರಣ ೨ಕ್ಕೆ ಸಂಬಂಧಿಸಿದ ಬಾಬಿನ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.

ಪ್ರಕರಣ ೨ರ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ

“೨ಎ ಹೈದರಾಬಾದ್ ಒಂದು ರೂಪಾಯಿ ನೋಟುಗಳಿಗೆ ಸಂಬಂಧಿಸಿದ ತಾತ್ಕಾಲಿಕ ಉಪಬಂಧಗಳು ಭಾಗ–ಬಿ ರಾಜ್ಯಗಳ (ಕಾನೂನುಗಳು) ಅಧಿನಿಯಮ, ೧೯೫೧ರ ೬ನೇ ಪ್ರಕರಣದಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಸದರಿ ಅಧಿನಿಯಮದ ಪ್ರಾರಂಭದಲ್ಲಿ ಹೈದರಾಬಾದ್ ರಾಜ್ಯದಲ್ಲಿ ಕಾನೂನು ಮಾನ್ಯ ಚಾಲ್ತಿಹಣವಾಗಿ ಚಲಾವಣೆಯಲ್ಲಿದ್ದಂತಹ ಒಂದು ರೂಪಾಯಿಯ ವರ್ಗೀಯ ಮೌಲ್ಯದ ನೋಟುಗಳು ಕೇಂದ್ರ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ಧರಿಸಬಹುದಾದಂಥ ಪ್ರಾರಂಭದಿಂದ ಎರಡು ವರ್ಷಗಳನ್ನು ಮೀರದಿರುವ ಅವಧಿಗಾಗಿ ಸದರಿ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿದ್ದ ವ್ಯಾಪ್ತಿಗೆ

ಮತ್ತು ಅದೇ ಷರತ್ತುಗಳಿಗೆ ಒಳಪಟ್ಟು ಆ ರಾಜ್ಯದಲ್ಲಿ ಕಾನೂನು ಮಾನ್ಯವಾಗಿರುವ ಚಾಲ್ತಿ ಹಣವಾಗಿ ಮುಂದುವರಿಯತಕ್ಕದ್ದು".

೧೩. ಅನುಸೂಚಿಯಲ್ಲಿ ಈ ಮುಂದಿನದನ್ನು ಮೊದಲ ನಮೂದಿನಂತೆ ಸೇರಿಸುವುದು.

"ಜಾತಿ ಸಮರ್ಥನೆ ನಿವಾರಣಾ ಅಧಿನಿಯಮ, ೧೮೫೦ (೧೮೫೦ XXI)

ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆ : 'ಈಸ್ಟ್ ಇಂಡಿಯಾ ಕಂಪನಿಯ ಆಡಳಿತಕ್ಕೆ ಒಳಪಟ್ಟ ಪ್ರದೇಶ' ಎಂಬುದಕ್ಕೆ ಬದಲಾಗಿ 'ಭಾರತ' ಎಂದು ಸೇರಿಸುವುದು.

ಪ್ರಕರಣ ೧– (೧) "ಈಸ್ಟ್ ಇಂಡಿಯಾ ಕಂಪನಿಯ ಆಡಳಿತಕ್ಕೆ ಒಳಪಟ್ಟು ಪ್ರದೇಶಗಳು" ಎಂಬುದಕ್ಕೆ ಬದಲಾಗಿ 'ಭಾರತ' ಎಂದೂ ಮತ್ತು 'ಈಸ್ಟ್ ಇಂಡಿಯಾ ಕಂಪನಿಯ ನ್ಯಾಯಾಲಯಗಳಲ್ಲಿ ಮತ್ತು ಸದರಿ ಪ್ರದೇಶಗಳೊಳಗೆ ಚಾರ್ಟರ್‌ನಿಂದ ಸ್ಥಾಪಿಸಲ್ಪಟ್ಟ ನ್ಯಾಯಾಲಯಗಳಲ್ಲಿ' ಎಂಬ ಪದಗಳಿಗೆ ಬದಲಾಗಿ 'ಯಾವುದೇ ನ್ಯಾಯಾಲಯ' ಎಂಬ ಪದಗಳನ್ನು ಸೇರಿಸುವುದು.

ಪ್ರಕರಣ ೧ರ ನಂತರ, ಮುಂದಿನ ಪ್ರಕರಣವನ್ನು ಸೇರಿಸುವುದು, ಎಂದರೆ :

(೨) **ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ :** ಈ ಅಧಿನಿಯಮವನ್ನು ೧೮೫೦ರ ಜಾತಿ ಅಶಕ್ತತಾ ನಿರ್ಮೂಲನಾ ಅಧಿನಿಯಮ ಎಂದು ಕರೆಯತಕ್ಕದ್ದು.

(೨) ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಹೊರತುಪಡಿಸಿ ಇಡೀ ಭಾರತಕ್ಕೆ ಅನ್ವಯವಾಗುತ್ತದೆ.

(ಡಾ. ಅಂಬೇಡ್ಕರ್)

ಅನುಸೂಚಿಯನ್ನು ತಿದ್ದುಪಡಿ ಮಾಡಲಾದಂತೆ ವಿಧೇಯಕಕ್ಕೆ ಸೇರಿಸಲಾಯಿತು.

**ಖಂಡ–೧.**— (ಸಂಕ್ಷಿಪ್ತ ಹೆಸರು ಇತ್ಯಾದಿ)

ಮಾಡಲಾದ ತಿದ್ದುಪಡಿ :

ಖಂಡ ೧ರ ಉಪ–ಖಂಡ (೧)ರಲ್ಲಿ ಮತ್ತು ಎಲ್ಲಿ ೧೯೫೦ರ 'ಬಿ' ವರ್ಗದ ರಾಜ್ಯಗಳ (ಕಾನೂನುಗಳು) ಅಧಿನಿಯಮದ ಉಲ್ಲೇಖವನ್ನು ಮಾಡಲಾಗುತ್ತದೋ ಆ ವಿಧೇಯಕದಲ್ಲಿ ಬರುವ '೧೯೫೦'ಕ್ಕೆ ಬದಲಾಗಿ '೧೯೫೧' ಎಂಬುದನ್ನು ಸೇರಿಸಬೇಕು.

(ಡಾ. ಅಂಬೇಡ್ಕರ್)

ಖಂಡ ೧ನ್ನು ತಿದ್ದುಪಡಿ ಮಾಡಲಾದಂತೆ ವಿಧೇಯಕಕ್ಕೆ ಸೇರಿಸಲಾಗಿದೆ.

ಶೀರ್ಷಿಕೆ ಮತ್ತು ಅಧಿನಿಯಮಿಸಲಾಗುತ್ತಿರುವ ಸೂತ್ರವನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್**: ಇದನ್ನು ಮಂಡಿಸಲು ಬಯಸುತ್ತೇನೆ. "ತಿದ್ದುಪಡಿ ಮಾಡಲಾದ ವಿಧೇಯಕವನ್ನು ಅಂಗೀಕರಿಸಬೇಕು".

**ಮಾನ್ಯ ಸಭಾಧ್ಯಕ್ಷರು** : ಸೂಚನೆಯನ್ನು ಮಂಡಿಸಲಾಗಿದೆ.

"ತಿದ್ದುಪಡಿ ಮಾಡಲಾದ ವಿಧೇಯಕವನ್ನು ಅಂಗೀಕರಿಸಬೇಕು"

**ಕ್ಯಾಪ್ಟನ್ ಎ.ಪಿ. ಸಿಂಗ್ (ವಿಂಧ್ಯಪ್ರದೇಶ)**: ಸ್ವಾಮಿ ನಾನು ಒಂದು ಅಂಶದ ಬಗ್ಗೆ ತಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ. "ಆಡಳಿತವನ್ನು ಸುಧಾರಿಸುವ

ಉದ್ದೇಶಕ್ಕಾಗಿ ಎಂದು ಹೇಳಲಾಗಿದ್ದು ಇದನ್ನು ನಾನು ವಿರೋಧಿಸುತ್ತೇನೆ. ಅಲ್ಲದೆ, ಇದು ಇದರ ಭಾಗವಲ್ಲ. ಹಾಗಾಗಿ ಈ ಸಂಬಂಧದಲ್ಲಿ ಯಾವುದೇ ತಿದ್ದುಪಡಿಯನ್ನು ಮಾಡಲಾಗುತ್ತಿಲ್ಲ."

**ಮಾನ್ಯ ಸಭಾಧ್ಯಕ್ಷರು**: ಆರ್ಡರ್, ಆರ್ಡರ್, ಮಾನ್ಯ ಸದಸ್ಯರು ತುಂಬಾ ತಡವಾಗಿ ಈ ವಿಷಯವನ್ನು ಮಾತನಾಡುತ್ತಿದ್ದಾರೆ. ಆದಾಗ್ಯೂ ಈ ಹಿಂದೆ ಇದೇ ಸದನದ ಮತ್ತೊಬ್ಬ ಸದಸ್ಯರು ಸದರಿ ಅಂಶವನ್ನೇ ಪ್ರಸ್ತಾಪಿಸಿ ವಿರೋಧ ವ್ಯಕ್ತಪಡಿಸಿದ್ದರೆಂದು ತಿಳಿಸಲು ಇಚ್ಛಿಸುತ್ತೇನೆ.

**ಡಾ. ಅಂಬೇಡ್ಕರ್**: ಸ್ವಾಮಿ, ನಾನು ಕ್ಷಮೆಯಾಚಿಸುತ್ತೇನೆ.

**ಮಾನ್ಯ**: ಪ್ರಶ್ನೆ ಎಂದರೆ

> "ತಿದ್ದುಪಡಿ ಮಾಡಲಾದ ಬಿಲ್ಲನ್ನು ಅಂಗೀಕರಿಸಬೇಕು" ಸೂಚನೆಯನ್ನು ಅಳವಡಿಸಲಾಯಿತು.

## ಪ್ರತಿಬಂಧಕ ಸ್ಥಾನಬದ್ಧತಾ (ತಿದ್ದುಪಡಿ) ವಿಧೇಯಕ

***ಗೃಹಮಂತ್ರಿ (ಶ್ರೀ ರಾಜಗೋಪಾಲಾಚಾರಿ)**: ................. ನಿನ್ನೆ ಸಂಜೆ ಈ ಸದನದಲ್ಲಿ ಡಾ॥ ಅಂಬೇಡ್ಕರವರು ನಾನು ನಿರೀಕ್ಷಿಸದೆ ಇದ್ದ ಎರಡು ಪ್ರತಿಷ್ಠಿತ ವಿಧೇಯಕಗಳಿಗೂ ಅಂಗೀಕಾರವನ್ನು ಪಡೆದರೆಂಬುದನ್ನು ಕೇಳಿ ನಾನು ಆತುರವಾಗಿ ಬಂದಿರುತ್ತೇನೆ. ಇದರಿಂದ ಜನರು ಡಾ. ಅಂಬೇಡ್ಕರ್‌ರವರಿಗಿಂತ ನನ್ನನ್ನು ಹೆಚ್ಚು ಕಡಗಣಿಸುತ್ತಿದ್ದಾರೆಂದು ನನಗನ್ನಿಸುತ್ತಿದೆ.

**ಕಾನೂನು ಮಂತ್ರಿ (ಡಾ. ಅಂಬೇಡ್ಕರ್)**: ನಾನು ಹರಿಜನಕ್ಕೆ ಸೇರಿದ ವ್ಯಕ್ತಿ, ನೀವಲ್ಲ.

## ಸದನದ ಮುಂದೆ ಅಳವಡಿಸುವ ಆದೇಶವನ್ನು ಮಂಡಿಸುವುದು

****ಮಾನ್ಯ ಸಭಾಧ್ಯಕ್ಷರು**: ಡಾ. ಅಂಬೇಡ್ಕರ್

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್)** : ಮಾನ್ಯ ಉಪ ಸಭಾಧ್ಯಕ್ಷರೇ, .................

**ಶ್ರೀ ಶ್ಯಾಮ್‌ನಂದನ್ ಸಹಾಯ (ಬಿಹಾರ)**: ಕಾನೂನು ಮಂತ್ರಿಗಳು ಮಾತನ್ನು ಪ್ರಾರಂಭಿಸುವುದಕ್ಕೆ ಮೊದಲು, ನಾನೊಂದು ಅರಿಕೆ ಮಾಡಿಕೊಳ್ಳಬಹುದೇ? ೧೬ನೇ ತಾರೀಖಿನವರೆಗೂ ಸಂಸತ್ತು ಮಾಡಬೇಕಾದ ಕೆಲಸದ ಬಗ್ಗೆ ಒಂದು ತಿಳಿವಳಿಕೆಯನ್ನು ನಾವು ಈಗ ಪಡೆದುಕೊಂಡಿದ್ದೇವೆ. ಆದರೆ ಈ ತಿಂಗಳ ೧೭ರಂದು ಯಾವ ವಿಧೇಯಕ ಅಥವಾ ಇತರೆ ಶಾಸನಾತ್ಮಕ ಕ್ರಮಗಳು ಅಥವಾ ಇತರೆ ಕೆಲಸವನ್ನು ಕೈಗೊಳ್ಳಬೇಕೆಂಬುದು ಈ ವರೆಗೂ ನಮಗೆ ತಿಳಿದುಬಂದಿಲ್ಲ ಮತ್ತು ...................

**ಶ್ರೀ ಸಿಧ್ವಾ (ಮಧ್ಯಪ್ರದೇಶ)**: ೧೯ರ ವರೆಗಿನ ಕಾರ್ಯಸೂಚಿಯಿದೆ.

**ಶ್ರೀ ಶಾಮನಂದನ ಸಹಾಯ:** ಆದರೆ ಇದು, ವ್ಯವಹಾರವು ಅಧಿಕೃತವೋ ಅಥವಾ ಅನಧಿಕೃತವೋ ಎಂಬುದನ್ನು ಮಾತ್ರ ಹೇಳುತ್ತದೆ.

**ಶ್ರೀ ಸಿದ್ವಾ:** ಇಲ್ಲ. ಅವೆಲ್ಲವೂ ಅಧಿಕೃತ ವಿಧೇಯಕಗಳೇ. ನಾವು ಈ ದಿನ ಅವುಗಳನ್ನು ಪಡೆದಿದ್ದೇವೆ.

---

* P.D. ಸಂ. ೮, ಭಾಗ ೨, ೬ ಫೆಬ್ರುವರಿ ೧೯೫೧, ಪು. ೨೬೭೯.

** P.D. ಸಂ. ೧೦, ಭಾಗ ೨, ೧೨ ಏಪ್ರಿಲ್ ೧೯೫೧, ಪು. ೬೬೫೯.

**ಡಾ. ಅಂಬೇಡ್ಕರ್:** ಮಾನ್ಯ ಉಪ ಸಭಾಧ್ಯಕ್ಷರೆ, ನಿನ್ನೆ, ನನ್ನ ಸ್ನೇಹಿತರಾದ ಶ್ರೀಯುತ ಹುಸೇನ್ ಇಮಾಮ್‌ರವರು, ರಾಷ್ಟ್ರಪತಿಗಳು ಹೊರಡಿಸಿದ ಅಳವಡಿಕೆ ಆದೇಶಕ್ಕೆ ಸಂಬಂಧಿಸಿದಂತೆ ಪಂಡಿತ್ ಭಾರ್ಗವ್‌ವರು ಕೇಳಿದ ಪ್ರಶ್ನೆಗೆ ನಾನು ನೀಡಿದಂಥ ಉತ್ತರಕ್ಕೆ ಸಂಬಂಧಿಸಿದಂತೆ. ಒಂದು ಪ್ರಶ್ನೆಯನ್ನು ಕೇಳಿರುತ್ತಾರೆ. ದುರದೃಷ್ಟವಶಾತ್ ನಾನು ನಿನ್ನೆ ಸದನಕ್ಕೆ ಹಾಜರಾಗಿರಲಿಲ್ಲ. ಅವರು ಈ ವಿಷಯವನ್ನು ಪ್ರಸ್ತಾಪಿಸುತ್ತೇನೆಂದು ನನಗೆ ಮೊದಲೇ ತಿಳಿಸಿದ್ದರೆ, ನಾನು ಖಂಡಿತ ಅವರಿಗೆ ಉತ್ತರ ನೀಡಲು ಸದನಕ್ಕೆ ಹಾಜರಾಗುತ್ತಿದ್ದೆ. ನಿನ್ನೆ ಸಂಜೆ ನನಗೆ ನೀಡಿದ ನಡಾವಳಿಗಳು ಉದ್ಧೃತಗಳಿಂದ ಅವರು ಎರಡು ಪ್ರಶ್ನೆಗಳನ್ನು ಎತ್ತಿದ್ದಾರೆಂಬುದನ್ನು ನಾನು ಕಂಡುಕೊಂಡಿದ್ದೇನೆ. ಅಳವಡಿಸುವ ಆದೇಶದ ಒಂದು ಪ್ರತಿಗಾಗಿ ಇವರು ಪ್ರಯತ್ನಪಟ್ಟಿದ್ದಾಗ್ಯೂ ತಮಗೆ ಅದನ್ನು ಪಡಯಲು ಸಾಧ್ಯವಾಗಲಿಲ್ಲವೆಂಬುದು ಇವರು ಎತ್ತಿರುವ ಪ್ರಶ್ನೆಯಾಗಿರುತ್ತದೆ. ಆ ವಿಷಯಕ್ಕೆ ಸಂಬಂಧಿಸಿದಂತೆ ನಾನು ಈ ಅಂಶಗಳನ್ನು ಖಚಿತಪಡಿಸುತ್ತೇನೆ. ಅಳವಡಿಕೆಯ ಆದೇಶವು ವಿಶೇಷ ರಾಜ್ಯಪತ್ರದಲ್ಲಿ ದಿನಾಂಕ ೪ ರಂದೇ ಪ್ರಕಟವಾಗಿದೆ. ನಾನು ೭ನೇ ತಾರೀಖಿನಂದು ಉತ್ತರವನ್ನು ನೀಡಿರುತ್ತೇನೆ.

ಅವರು ಅಳವಡಿಕೆಯ ಆದೇಶದ ಪ್ರತಿಗಳು ಏನಾದವೆಂದು ವಿಚಾರಿಸಿ, ಸಂವಿಧಾನದ ಶಾಖೆಗೆ ದೂರವಾಣಿಯನ್ನು ಮಾಡಿದ ೧೦ನೇ ತಾರೀಖಿನಂದೇ ಸಂವಿಧಾನಶಾಖೆಯಲ್ಲಿ ಅಳವಡಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇವರು ಸಂಪರ್ಕಿಸಿದ ಸೂಪರಿಂಟೆಂಡೆಂಟನು ವಿಶೇಷ ರಾಜ್ಯಪತ್ರಗಳ ಪ್ರತಿಗಳನ್ನು ಈಗಷ್ಟೇ ಸ್ವೀಕರಿಸಿದೆನೆಂದೂ ಮತ್ತು ಇದರಲ್ಲಿ ಯಾವುದಾದರೂ ಲಿಪಿಕ ಅಥವಾ ಮುದ್ರಣ ದೋಷಗಳಿವೆಯೆ ಎಂಬುದನ್ನು ತಾನು ಪರೀಕ್ಷಿಸುತ್ತಿದ್ದೇನೆ ಎಂದು ಹೇಳಿರುವುದು ನಾನು ತಿಳಿಸಬೇಕಾದ ಮಾಹಿತಿಯಾಗಿದೆ. ನನ್ನ ಪ್ರಿಯ ಸ್ನೇಹಿತರು ನಿರ್ದಿಷ್ಟವಾಗಿ ಆ ಪ್ರತಿಯನ್ನು ಕೇಳಿಲ್ಲವೆಂಬುದು ನನಗೆ ತಿಳಿದುಬಂದಿದೆ. ಇದನ್ನು ಖಚಿತಪಡಿಸುವ ಉತ್ತಮ ಸ್ಥಿತಿಯಲ್ಲಿ ಇವರು ಇದ್ದಾರೋ ಅಥವಾ ಇಲ್ಲವೋ ನನಗೆ ತಿಳಿಯುತ್ತಿಲ್ಲ.

**ಶ್ರೀ ಹುಸೇನ್ ಇಮಾಮ್ (ಬಿಹಾರ್)**: ನಾನು ಸೂಚನಾ ಕಛೇರಿಯಲ್ಲಿ ಮತ್ತು ಗ್ರಂಥಾಲಯದಲ್ಲಿ ಕೇಳಿದೆನು.

**ಡಾ. ಅಂಬೇಡ್ಕರ್:** ಸೂಪರಿನ್‌ಟೆಂಡೆಂಟ್ ಶಾಖೆಯಲ್ಲಿ ಏನಾಯಿತು ಎಂದು ನಾನು ಹೇಳುತ್ತಿದ್ದೇನೆ. ಹಾಗಿರುವಾಗ, ಸಂವಿಧಾನಶಾಖೆಯಿಂದ ಮಾನ್ಯ ಸದಸ್ಯರಿಗೆ ಯಾವುದೇ ಪ್ರತಿಗಳನ್ನು ನೇರವಾಗಿ ಪೂರೈಸಿಲ್ಲ. ೧೦ನೇ ತಾರೀಖಿನಂದು ಸೂಪರಿಂಟೆಂಡೆಂಟರು ಪ್ರತಿಗಳನ್ನು ಸ್ವೀಕರಿಸಿದಲ್ಲಿ ಸಂಸತ್ ಸದಸ್ಯರಿಗೆ ವಿತರಿಸಲು ಸೂಚನಾ ಕಛೇರಿಗೆ ಪ್ರತಿಗಳನ್ನು ಪೂರೈಕೆ ಮಾಡುವುದು ಅವರಿಗೆ ಸಾಧ್ಯವಾಗುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಮೊದಲನೆ ದೂರಿಗೆ ಸಂಬಂಧಪಟ್ಟಂತೆ ಇದು ವಾಸ್ತವಾಂಶವಾಗಿರುತ್ತದೆ.

ನನಗೆ ಕಳುಹಿಸಿರುವ ನಡಾವಳಿಗಳು ಉದ್ಧೃತಗಳಿಂದ ವಿಶೇಷ ಸ್ಥಾನಮಾನಗಳ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿರುವುದು ನನಗೆ ಕಂಡು ಬಂದಿರುತ್ತದೆ. ರಾಷ್ಟ್ರಪತಿಗಳು ಅಳವಡಿಕೆಯ ಆದೇಶವನ್ನು ಹೊರಡಿಸಿದ ನಂತರ ಸಾಧ್ಯವಾದಷ್ಟು ಬೇಗನೆ ಅದನ್ನು ಸದನದ ಮುಂದೆ ಮಂಡಿಸಲೇಬೇಕೆಂದು ಅವರಿಗೆ ನಾನು ಅರ್ಥ ಮಾಡಿಸಬಯಸುತ್ತೇನೆ. ಸ್ವಾಮಿ ಈಗ ನಾನು ಆ ಅಂಶಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ನನ್ನ ಅಭಿಪ್ರಾಯವನ್ನು ನಿವೇದಿಸುತ್ತೇನೆ. ಈ ಸದನವು ಯಾವ ವಿಶೇಷಾಧಿಕಾರಗಳನ್ನು ಹೊಂದಿದೆಯೆಂದು ಹೇಳುವ ಸಂವಿಧಾನದ ಅನುಚ್ಛೇದ ೧೦೫ ಹೌಸ್ ಆಫ್ ಕಾಮನ್ಸ್ ಹೊಂದಿರುವ ಎಲ್ಲಾ ವಿಶೇಷಾಧಿಕಾರಗಳನ್ನು ಸಂಸತ್ತು ಹೊಂದಿರತಕ್ಕದ್ದೆಂದು ನಿಯಮಿಸುತ್ತದೆ. ವಿಷಯವನ್ನು ಸದನದ

ಮುಂದೆ ಇಡುವಾಗ ವಿಷಯವು ಯಾವಾಗ ವಿಶೇಷಾಧಿಕಾರಗಳನ್ನು ಹೊಂದಿರುತ್ತದೆ ಅಥವಾ ಯಾವಾಗ ವಿಶೇಷಾಧಿಕಾರಗಳನ್ನು ಹೊಂದಿರುವುದಿಲ್ಲ ಎಂಬುದರ ಬಗ್ಗೆ ವಿಚಾರಣೆ ನಡೆಸಬೇಕಾಗಿದೆ. ಮೇ* ತಿಂಗಳನ್ನು ಉದಾಹರಿಸುವುದಾದರೆ ಒಂದು ಅಂಶ ಸ್ಪಷ್ಟವಾಗುತ್ತದೆ..........

**ಮಾನ್ಯ ಉಪ ಸಭಾಧ್ಯಕ್ಷರು**: ಮಧ್ಯೆ ಪ್ರವೇಶಿಸುತ್ತಿರುವುದಕ್ಕೆ ಮಾನ್ಯ ಮಂತ್ರಿಗಳು ಕ್ಷಮಿಸಬೇಕು. ಮೊಟ್ಟಮೊದಲನೆಯದಾಗಿ ವಿಶೇಷಾಧಿಕಾರದ ಪ್ರಶ್ನೆ ಬಂದಾಗ ಸಭಾಧ್ಯಕ್ಷರೇ ಆ ವಿಷಯವನ್ನು ನೋಡಿಕೊಳ್ಳುತ್ತಾರೆ. ನಿಯಮ ಮತ್ತು ನಿಂಬಂಧನೆಗಳ ಮೂಲಕ ಸದನದ ಅಭಿಪ್ರಾಯಕ್ಕೆ ಸಮ್ಮತಿಸುತ್ತಾರೆ. ಇವರು ವಿಶೇಷಾಧಿಕಾರದ ವಿಷಯವನ್ನು ಒಳಗೊಂಡಿದೆಯೆಂಬ ತೀರ್ಮಾನಕ್ಕೆ ಬಂದರೆ ನಂತರ ಇವರು ಇದನ್ನು ವಿಶೇಷಾಧಿಕಾರಕ್ಕೆ ಸಮಿತಿಗೆ ಕಳುಹಿಸುತ್ತಾರೆ. ಮಾನ್ಯಸದಸ್ಯರು ವಿಶೇಷಾಧಿಕಾರದ ಪ್ರಶ್ನೆಯನ್ನು ತುಂಬಾ ಗಂಭೀರವಾಗಿ ಪ್ರಸ್ತಾಪಿಸಿದ್ದಾರೆಂದು ನನಗನ್ನಿಸುತ್ತಿಲ್ಲ. ಪ್ರಶ್ನೆಯೆಂದರೆ ಅಳವಡಿಕೆ ಆದೇಶವನ್ನು ಲಭ್ಯವಾಗುವಂತೆ ಮಾಡಲೇಬೇಕಾಗಿತ್ತು. ಇವರು ಸೂಚನಾ ಕಛೇರಿ ಅಲ್ಲದೆ ಗ್ರಂಥಾಲಯಕ್ಕೂ ಹೋಗಿರುತ್ತಾರೆ. ಏಪ್ರಿಲ್ ೪ನೇ ತಾರೀಖಿನಂದೇ ಅಳವಡಿಕೆಯ ಆದೇಶವನ್ನು ಮಾಡಲಾಯಿತೆಂದು ಇವರು ಹೇಳಿದರು. ಹಾಗಾಗಿ ಸಹಜವಾಗಿಯೇ ಒಂದು ಅಥವಾ ಎರಡು ದಿನಗಳಲ್ಲಿ ಗ್ರಂಥಾಲಯದಲ್ಲಿ ಈ ಪ್ರತಿಗಳನ್ನು ಇಡಬೇಕೆಂದು ನಿರೀಕ್ಷಿಸಿರುತ್ತಾರೆ. ಈಗ ವಿಷಯವನ್ನು ಕಾನೂನುಮಂತ್ರಿಗಳು ಸ್ಪಷ್ಟಪಡಿಸಿರುವುದರಿಂದ ನಾವು ವಿಶೇಷಾಧಿಕಾರದ ಪ್ರಶ್ನೆಗೆ ಮತ್ತೆ ಪ್ರವೇಶಿಸಬೇಕಾಗಿಲ್ಲ.

**ಡಾ. ಅಂಬೇಡ್ಕರ್**: ಅದು ನಿಮ್ಮ ನಿರ್ಣಯವಾದಲ್ಲಿ ನಾನು ವಿಷಯವನ್ನು ಲಂಭಿಸಲು ಇಚ್ಛಿಸುವುದಿಲ್ಲ. ಆದರೆ ಸಾಮಾನ್ಯ ಹಿತಾಸಕ್ತಿಯೆಂದು ನಾನು ಭಾವಿಸುವ ಒಂದು ಅಂಶವನ್ನು ತಿಳಿಸಲು ಬಯಸುತ್ತೇನೆ ಮತ್ತು ಇದನ್ನು ಸದನವು ಅರಿತಿರಬೇಕು. ಸದನದ ಮುಂದೆ ವಿಷಯವನ್ನು ಮಂಡಿಸಬೇಕಾದಲ್ಲಿ ಸರ್ಕಾರದ ಮೇಲೆ ಶಾಸನವು ನಿರ್ಬಂಧಕವಾದವನ್ನು ಮಾಡಿದಾಗ ಮಾತ್ರ ವಿಶೇಷ ಸ್ಥಾವ-ಮಾನದ ವಿಷಯ ಉದ್ಭವಿಸುತ್ತದೆ. ಈಗ ಅಳವಡಿಕೆಯ ಆದೇಶಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಯಾವುದೇ ಅಂಥ ನಿಬಂಧನೆಗಳು ಇಲ್ಲ. ಸಂಕ್ರಮಣಾವಧಿಯಲ್ಲಿ ಸಂವಿಧಾನದಲ್ಲಿ ಅಡೆತಡೆಗಳನ್ನು ನಿವಾರಿಸಲು ರಾಷ್ಟ್ರಪತಿಗಳಿಂದ ಮಾಡಿದ ಆದೇಶದೊಂದಿಗೆ ವ್ಯವಹರಿಸುವಂಥ ಅನುಚ್ಛೇದ ೩೭೨ನ್ನು ಮಾನ್ಯ ಸದಸ್ಯರು ತುಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅನುಚ್ಛೇದ ೩೯೨ರ ಮಟ್ಟಿಗೆ, ಅಡೆತಡೆಗಳನ್ನು ನಿವಾರಿಸುವುದಕ್ಕಾಗಿ ರಾಷ್ಟ್ರಪತಿಗಳು ಮಾಡಲಾದ ಯಾವುದೇ ಆದೇಶವನ್ನು ಸದನದ ಮುಂದೆ ಮಂಡಿಸತಕ್ಕದೆಂದು ಹೇಳುವಂಥ ನಿರ್ದಿಷ್ಟ ಉಪ-ಖಂಡವೊಂದಿದೆ ಎಂಬುದು ಕಂಡುಬರುತ್ತದೆ.

೩೭೨ನೇ ಅನುಚ್ಛೇದಕ್ಕೆ ಸಂಬಂಧಪಟ್ಟಂತೆ ಅಂಥ ಯಾವುದೇ ಪರಂತುಕವು ಇರುವುದಿಲ್ಲ. ಆದ್ದರಿಂದ ನಿಜವಾಗಿಯೂ ಯಾವುದೇ ವಿಶೇಷ ಹಕ್ಕು ಒಳಗೊಂಡಿಲ್ಲವೆಂಬುದು ಮತ್ತು ಇದರಿಂದಾಗಿ ವಿಶೇಷ ಹಕ್ಕಿನ ಉಲ್ಲಂಘನೆಯ ಪ್ರಶ್ನೆಯು ಉದ್ಭವಿಸುವುದಿಲ್ಲವೆಂಬುದು ನನ್ನ ನಿವೇದನೆಯಾಗಿದೆ.

**ಪಂಡಿತ್ ಮೈತ್ರಾ (ಪಶ್ಚಿಮ ಬಂಗಾಲ)**: ಮಾನ್ಯರೇ, ಈ ಪ್ರಶ್ನೆಯು ವಿಶೇಷ ಹಕ್ಕಿಗೆ ಒಳಪಡುತ್ತದೆಯೆ ಅಥವಾ ಇಲ್ಲವೇ? ಎಂಬುದರ ಬಗ್ಗೆ ಸಾಮಾನ್ಯ ಚರ್ಚೆಗೆ ತಾವು ಅವಕಾಶ ನೀಡಬೇಕು.

---

* ಮೇ ಅವರ *Parliamentary Practice*–ಸಂಪಾದಿತ.

ಟಿ ೪೧೯೩-೧೯೬

**ಶ್ರೀ ಭಾರತಿ (ಮದ್ರಾಸ್)**: ಯಾವುದೇ ವಿಶೇಷ ಹಕ್ಕಿನ ಪ್ರಶ್ನೆಯು ಇರುವುದಿಲ್ಲವೆಂದು ಈಗಾಗಲೇ ಮಾನ್ಯ ಅಧ್ಯಕ್ಷರು ತಳ್ಳಿ ಹಾಕಿದ್ದಾರೆ.

**ಮಾನ್ಯ ಉಪ ಸಭಾಧ್ಯಕ್ಷರು**: ನಾನು ಯಾವುದೇ ವಿಶೇಷ ಹಕ್ಕಿನ ಪ್ರಶ್ನೆಯನ್ನು ತೀರ್ಮಾನಿಸುವುದಿಲ್ಲ. ವಿಶೇಷ ಹಕ್ಕು ಪದಕ್ಕೆ ಶ್ರೀ ಹುಸೇನ್ ಇಮಾಂ ಅವರಿಂದ ಸಾಕಷ್ಟು ಉಲ್ಲೇಖ ಒದಗಿಸಿರುದರಿಂದ, ಮಾನ್ಯ ಕಾನೂನು ಮಂತ್ರಿಗಳು ಇತರೆ ವಿಷಯಗಳಿಗೂ ಸಹ ತಾವು ಉತ್ತರಿಸಬೇಕೆಂದು ಯೋಚಿಸಿದ್ದರು. ಅವರು ಈಗ ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟಿರುತ್ತಾರೆ. ಆ ಪ್ರಶ್ನೆಯು ಈಗ ಉದ್ಭವಿಸುವುದಿಲ್ಲ. ಆದ್ದರಿಂದ ನಾನು ಆ ಬಗ್ಗೆ ಮುಂದುವರಿಯುವುದಿಲ್ಲ.

## (ಪೀಠದಲ್ಲಿ ಮಾನ್ಯ ಉಪಾಧ್ಯಕ್ಷರು)

***ಮಾನ್ಯ ಉಪ–ಸಭಾಧ್ಯಕ್ಷರು:** ನಾವು ಮಾನ್ಯ ಕಾನೂನು ಮಂತ್ರಿಗಳ ಮಾತುಗಳನ್ನು ಕೇಳಿದ ತರುವಾಯ ಮಾನ್ಯ ಸದಸ್ಯರು ಪುನಃ ಪ್ರಾರಂಭಿಸಬಹುದು.

**ಡಾ. ಅಂಬೇಡ್ಕರ್**: ಮಾನ್ಯರೇ, ನೀವು ನಮಗೆ ತಿಳಿಸಿದ ಉತ್ತಮ ಅಂಶಗಳ ಬಗ್ಗೆ ನನ್ನ ಅಭಿಪ್ರಾಯವನ್ನು ತಿಳಿಸಲು ಇಚ್ಛಿಸುತ್ತೇನೆ.

ಸದನವು ಪರ್ಯಾಲೋಚಿಸಬೇಕಾದ ನಿಜವಾದ ಪ್ರಶ್ನೆ ಎಂದರೆ ಈ ವಿಧೇಯಕವು ಅನುಚ್ಛೇದ ೧೧೭ರ ವಿರುದ್ಧ ಪರಿಣಾಮವನ್ನುಂಟು ಮಾಡುತ್ತಿದೆಯೇ ಅದು ಆ ಅನುಚ್ಛೇದದ (೧)ನೇ ಖಂಡ ಅಥವಾ ಆ ಅನುಚ್ಛೇದದ (೩)ನೇ ಖಂಡವಾಗಿರಲಿ. ಅವುಗಳು ಪರ್ಯಾಲೋಚಿಸಬೇಕಾದ ಪ್ರಮುಖ ಅಂಶಗಳಾಗಿವೆ ಮತ್ತು ೧೧೭ನೇ ಅನುಚ್ಛೇದದಲ್ಲಿ ಪರ್ಯಾಲೋಚಿಸಬೇಕಾಗಿರುವ ಆವಶ್ಯಕವಾದ ಖಂಡಗಳೆಂದರೆ ವಿಧೇಯಕದ (೪), (೫) ಮತ್ತು (೬)ನೇ ಖಂಡಗಳು.

ನಾನು (೫) ಮತ್ತು (೬)ನೇ ಖಂಡಗಳನ್ನು ಒಟ್ಟಿಗೆ ತೆಗೆದುಕೊಳ್ಳುತ್ತೇನೆ. ಈಗ ಆ ಖಂಡಗಳು ೧೧೭ನೇ ಅನುಚ್ಛೇದದ (೧)ನೇ ಖಂಡದ ವಿರುದ್ಧ ಪರಿಣಾಮವನ್ನುಂಟು ಮಾಡುವಂಥ ಖಂಡಗಳೆಂದು ವಾದಿಸಲಾಯಿತು. ಆ ವಿವಾದದ ಸಿಂಧುತ್ವವು ಅದು "ಧನವಿಧೇಯಕ" ಎಂದರೇನೆಂಬುದನ್ನು ಪರಿಭಾಷಿಸಿದ ೧೧೦ನೇ ಅನುಚ್ಛೇದದ (೧)ನೇ ಖಂಡದ (ಡಿ) ಉಪಖಂಡದಲ್ಲಿ ಕಂಡುಬರುವ "ವಿನಿಯೋಗ" ಪದಕ್ಕೆ ಸೇರಿಸಲಾಗುವ ಅರ್ಥ ವ್ಯಾಪ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಈಗ (ಡಿ) ಉಪಖಂಡದಲ್ಲಿ ಬಳಸಲಾದ "ವಿನಿಯೋಗ" ಪದವು ನನ್ನ ಗಮನದಲ್ಲಿದೆ ಎಂಬುದು ನಿಶ್ಚಿತ ಮತ್ತು ನಾನು ಸ್ವತಃ ಮೇಯಾಸ್ ಅವರು "ಸಂಸದೀಯ ಪದ್ಧತಿ"ಗೆ ಮಾಡಿರುವ ಉಲ್ಲೇಖದ ಮೂಲಕ ಪರಿಶೀಲಿಸಿದ್ದೇನೆ. ಅಲ್ಲಿ ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸಲಾಗಿದೆ. ಅದು ಸೇವೆಗೆ ಸಂಬಂಧಪಟ್ಟದ್ದಾಗಿದೆ ಮತ್ತು ಎರಡು ವಿಷಯಗಳನ್ನು ಒಳಗೊಂಡಿದೆ. ಮೊದಲನೆಯದು ಸೇವೆಯ ಹೆಸರಿನ ನಿರ್ದಿಷ್ಟ ಸೇವೆ ಕುರಿತಂತೆ ಮತ್ತು ಎರಡನೆಯದಾಗಿ ಆ ನಿರ್ದಿಷ್ಟ ಸೇವೆಯ ಮೇಲೆ ವೆಚ್ಚ ಮಾಡಲು ಹಣದ ನಿಖರ ಹಂಚಿಕೆಕುರಿತಂತೆ. ಈ ಎರಡೂ ವಿಷಯಗಳು ನಾವು ಈಗ ತಿಳಿಯಬೇಕಾದ ವಿನಿಯೋಗ ಎಂದರೇನೆಂಬುದನ್ನು ಕುರಿತವುಗಳಾಗಿವೆ ಮತ್ತು ಆ ಅರ್ಥದಲ್ಲಿ ಸಂವಿಧಾನದ ಅನುಚ್ಛೇದ ೧೧೪ ಮತ್ತು ಅನುಚ್ಛೇದ ೨೬೬ರಲ್ಲಿ ಪದವನ್ನು ಬಳಸಲಾಗಿದೆ.

---

* P.D. ಸಂ. ೧೦, ಭಾಗ ೨, ೧೨ ಏಪ್ರಿಲ್ ೧೯೫೧, ಪು. ೬೭೨೫–೨೭.

ವಿಧೇಯಕದಲ್ಲಿನ ೫ ಮತ್ತು ೬ನೇ ಖಂಡಗಳೆರಡನ್ನು ಓದಲಾಗಿ, ಈಗ ನಾವು "ವಿನಿಯೋಗ" ಎಂಬ ಪದದ ಮೂಲಕ ತಿಳಿದಿರುವಂತೆ ಅಂಥ ಯಾವುದೇ ವಿಷಯವು ಆ ಎರಡೂ ಖಂಡಗಳಲ್ಲಿ ಧ್ವನಿತವಾಗಲು ಸಾಧ್ಯವೆಂಬುದಾಗಿ ನನಗೆ ಅನಿಸುತ್ತಿಲ್ಲ. ಅವುಗಳು ನನ್ನ ತೀರ್ಮಾನದಲ್ಲಿದೆ. ಇದು ಸೇವೆಯ ಕುರಿತಿದ್ದಾಗಿದ್ದು ಅದರ ಮೇಲೆ ಹಣವ್ಯಯಿಸಬಹುದು, ಯಾವ ಖರ್ಚು ಮಾಡಬೇಕು, ಯಾವ ಖರ್ಚು ಮಾಡಬಾರದು ಎಂಬುದನ್ನು ಸರ್ಕಾರಕ್ಕೆ ಕೇವಲ ನಿರ್ದೇಶಿಸುವುದಿಲ್ಲ. ಆದ್ದರಿಂದ ೧೧೭ನೇ ಅನುಚ್ಛೇದಕ್ಕೆ ಒಳಪಡುವಷ್ಟರ ಮಟ್ಟಿಗೆ (೧)ನೇ ಖಂಡವು ಸಂಬಂಧಪಡುತ್ತದೆ. ವಿಧೇಯಕವು ಸ್ಪಷ್ಟವಾಗಿ ಸುಗಮವಾಗಿ ಮುಂದುವರೆಯುತ್ತದೆ ಎಂದು ಹೇಳಬಹುದು ಮತ್ತು ಆ ಕಾರಣದಿಂದಾಗಿ ಯಾವುದೇ ತೊಂದರೆಯೂ ಉದ್ಭವಿಸುವುದಿಲ್ಲ.

ಈಗ, ನಾನು ವಿಧೇಯಕದ ೪ನೇ ಖಂಡಕ್ಕೆ ಬರುತ್ತೇನೆ. ಅಲ್ಲಿ ಆ ಖಂಡವು ಅನುಚ್ಛೇದ ೧೧೭ರ (೩)ನೇ ಖಂಡದ ವಿರುದ್ಧ ಪರಿಣಾಮವನ್ನುಂಟುಮಾಡುತ್ತಿದೆಯೋ ಎಂಬುದನ್ನು ಪರ್ಯಾಲೋಚಿಸಬೇಕಾಗಿದೆ. ಅದು ಪರಿಣಾಮವನ್ನುಂಟುಮಾಡುತ್ತಿದೆ. ಕಾರಣ ವಿಧೇಯಕದ ೪ನೇ ಖಂಡವು, ಈ ಸದನವು ವಿಧೇಯಕವನ್ನು ಅಂಗೀಕರಿಸಿದಲ್ಲಿ, ಅನುಮಾನಕ್ಕೆ ಆಸ್ಪದವಿಲ್ಲದಂತೆ ಅದು ಸಂಚಿತ ನಿಧಿಯಿಂದ ವೆಚ್ಚವಾಗುವುದರಿಂದ ಸೇವೆಯನ್ನು ಕೈಗೊಳ್ಳಲು ಸರ್ಕಾರದ ಮೇಲೆ ಹೊಣೆಗಾರಿಕೆ ಬೀಳುತ್ತದೆಂಬುದು ನನ್ನ ನಿರ್ಣಯವಾಗಿದೆ. ಆದ್ದರಿಂದ ೧೧೭ನೇ ಅನುಚ್ಛೇದದ (೩)ನೇ ಖಂಡದ ಉಪಬಂಧಗಳ ಅಡಿಯಲ್ಲಿ ರಾಷ್ಟ್ರಪತಿಯವರ ಶಿಫಾರಸ್ಸಿನ ಅಗತ್ಯವು ಅನಿವಾರ್ಯವಾಗುತ್ತದೆ.

ಪರ್ಯಾಲೋಚನೆಗಾಗಿ ಉಳಿದ ಪ್ರಶ್ನೆ ಎಂದರೆ, ಯಾವ ಹಂತದಲ್ಲಿ ರಾಷ್ಟ್ರಪತಿಯವರ ಶಿಫಾರಸ್ಸು ಮುಂದೆ ಬೇಕಾಗುತ್ತದೆ. ಅಲ್ಲಿ ಬಳಸಲಾದ ಪದವೆಂದರೆ "ಪರ್ಯಾಲೋಚಿಸು" "ಪರ್ಯಾಲೋಚನೆ" ಎಂದರೆ ವಿಧೇಯಕದ ಪ್ರಾರಂಭಿಕವೆಂದು ವಾದ ಮಾಡಲಾಗುತ್ತದೆ. ಖಂಡಿತವಾಗಿಯೂ ಅದು ತಪ್ಪು ಎಂದು ನನಗೆ ಅನ್ನಿಸುತ್ತದೆ. ನಾನು ಆ ವಾದವನ್ನು ಒಪ್ಪುವುದಿಲ್ಲ. ಒಂದು ವಿಧೇಯಕವು ಎರಡು ಹಂತಗಳನ್ನು ಹೊಂದಿರುತ್ತಿದೆ. ಮೊದಲನೇ ಹಂತವು ನಮ್ಮ ಮಾತಿನ ರೀತಿಯಲ್ಲಿ "ಪೀಠಿಕೆ" ಎಂದು ಹೇಳಲಾಗುತ್ತದೆ. ಅದು "ಪರ್ಯಾಲೋಚನೆ" ಪದದಿಂದ ಬೇರೆಯದೇ ಆಗಿರುತ್ತದೆ. ವಿಧೇಯಕವನ್ನು ಮಂಡಿಸಿದ ತರುವಾಯ, ಪರ್ಯಾಲೋಚನೆಯ ಹಂತವು ಪ್ರಾರಂಭವಾಗುತ್ತದೆ ಮತ್ತು ಪೀಠಿಕೆಯ ಹಂತದ ತರುವಾಯ ಸದನವು ವಿಧೇಯಕವನ್ನು ಕೈಗೆತ್ತಿಕೊಂಡಾಗ ಆ ಹಂತದಿಂದಲೇ ಪರ್ಯಾಲೋಚನೆಯ ಹಂತವು ಪ್ರಾರಂಭವಾಗಿ ಅದು ಅಂಗೀಕಾರವಾಗುವವರೆಗೂ ಮುಂದುವರಿಯುತ್ತದೆ. ಆ ಮಧ್ಯಾಂತರದಲ್ಲಿ ವ್ಯವಹರಣೆಗಳು ವಿಧೇಯಕದ ಪರ್ಯಾಲೋಚನೆಗೆ ಸಂಬಂಧಪಟ್ಟ ವ್ಯವಹರಣೆಗಳಾಗಿರುತ್ತವೆ. ಆದ್ದರಿಂದ ನನ್ನ ನಮ್ರ ಅಭಿಪ್ರಾಯದಲ್ಲಿ ಅಂಗೀಕರಿಸುವುದಕ್ಕಾಗಿ ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಮೊದಲು ಶಿಫಾರಸ್ಸನ್ನು ಪಡೆಯಬೇಕಾಗುತ್ತದೆ. ಅದು ೧೧೭ನೇ ಅನುಚ್ಛೇದದ (೩)ನೇ ಖಂಡದ ಆವಶ್ಯಕತೆಗಳನ್ನು ಪೂರೈಸುತ್ತದೆ. ಆದರೆ ಹಾಗಾದಲ್ಲಿ ಒಂದು ಪ್ರಾಯೋಗಿಕ ಅಂಶವನ್ನು ಖಂಡಿತಕ್ಕೂ ಪರ್ಯಾಲೋಚಿಸಬೇಕಾಗುತ್ತದೆಂಬುದು ನನ್ನ ಅನಿಸಿಕೆ. ಸದನವು ಅದು ಕೇಳಿದಾಗಲೆಲ್ಲಾ ರಾಷ್ಟ್ರಪತಿಯವರು ತಮ್ಮ ಒಪ್ಪಿಗೆ ಅಥವಾ ಶಿಫಾರಸ್ಸನ್ನು ನೀಡುವರೆಂದು ಭಾವಿಸಬೇಕಾಗಿಲ್ಲ. ಹಣಕಾಸಿನ ಹೊಣೆಗಾರಿಕೆಯು ಒಳಗೊಂಡಿದಲ್ಲಿ ರಾಷ್ಟ್ರಪತಿಯವರು ವಿಷಯವನ್ನು ವಿವರವಾಗಿ ಪರ್ಯಾಲೋಚಿಸಬೇಕಾಗುತ್ತದೆ ಮತ್ತು ಹೆಚ್ಚಿನ ಹಣಕಾಸು ಹೊಣೆಗಾರಿಕೆಯನ್ನು ಕೈಗೊಳ್ಳಲು ಒಪ್ಪಿಗೆ ನೀಡಿದಲ್ಲಿ ದೇಶದ ಹಣಕಾಸಿನ ಪರಿಸ್ಥಿತಿಯ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗುತ್ತದೆ ಎಂಬುದನ್ನು ತಿಳಿಯಬೇಕಾಗುತ್ತದೆ. ರಾಷ್ಟ್ರಪತಿಯವರು

ತಮ್ಮ ಶಿಫಾರಸ್ಸನ್ನು ತಿರಸ್ಕರಿಸಬಹುದಾದ ಸಾಧ್ಯತೆಗಳೂ ಇವೆ. ಅಂಥ ಸಂದರ್ಭದಲ್ಲಿ ಸದನವು ಮಾಡಿದ ಶ್ರಮವೆಲ್ಲಾ ವ್ಯರ್ಥವಾಗುತ್ತದೆ. ಆದ್ದರಿಂದ ಒಂದು ವಿಧೇಯಕವು ಅದು ಸಂಚಿತ ನಿಧಿಯಿಂದ ವೆಚ್ಚವನ್ನು ಒಳಗೊಂಡಿದ್ದಲ್ಲಿ ಅಥವಾ ಒಳಗೊಂಡಿರಬಹುದಾದಲ್ಲಿ ಸದನದ ಮುಂದೆ ಯಾವುದೇ ವಿಧೇಯಕವನ್ನು ಅಂಗೀಕರಿಸುವಲ್ಲಿ ಅಥವಾ ಸೂಚನೆ ನೀಡುವಲ್ಲಿ ಯಾವುದೇ ತೊಂದರೆ ಇರುವುದಿಲ್ಲ. ಆಗ ಸದನವು ಅದನ್ನು ಕೂಡಲೇ ಒತ್ತಾಯಪಡಿಸತಕ್ಕದ್ದು. ಪರ್ಯಾಲೋಚನೆಯ ಹಂತವು ಪ್ರಾರಂಭವಾಗುವುದಕ್ಕೆ ಮೊದಲು ಪ್ರಭಾರೀ ಸದಸ್ಯನು ರಾಷ್ಟ್ರಪತಿಯವರಿಂದ ಶಿಫಾರಸ್ಸನ್ನು ಹಾಜರುಪಡಿಸತಕ್ಕದ್ದು. ಇದರಿಂದಾಗಿ ಸದನವು ಕಾರ್ಯನಿರತವಾಗಬಹುದು, ಅಂತಿಮವಾಗಿ ಪ್ರತಿಫಲವಿಲ್ಲದೇ ತಳ್ಳಿಹಾಕಲಾಗುವುದಿಲ್ಲ.

**ಮಾನ್ಯ ಉಪ–ಸಭಾಧ್ಯಕ್ಷರು:** ನಾವು ಈ ವಿಷಯವನ್ನು ಸವಿಸ್ತಾರವಾಗಿ ಆಲಿಸಿದವು. ೧೧೦ನೇ ಅನುಚ್ಛೇದದಲ್ಲಿ ಬಳಸಲಾದಂತೆ "ವಿನಿಯೋಗ"ವು ಮುಕ್ತಾಯಕ್ಕೆ ಬರುವಲ್ಲಿ ನಾನು, ಮಾನ್ಯ ಕಾನೂನು ಮಂತ್ರಿಗಳೊಂದಿಗೆ ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಉಪಖಂಡ (೧) (ಡಿ)ಯು ಕೇವಲ ಕಲೆಯ ಸಂಬಂಧಮಾತ್ರವಾಗಿದ್ದು ಅದು ೧೧೪ನೇ ಅನುಚ್ಛೇದಕ್ಕೆ ಉಲ್ಲೇಖಿಸಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ. ಆದ್ದರಿಂದ, ಉಪಬಂಧಗಳು ಅನುಚ್ಛೇದ ೧೧೭(೧)ರ ಉಪಬಂಧಗಳ ವಿರುದ್ಧ ಘರ್ಷಣೆ ಹೊಂದುವುದಿಲ್ಲ. ಆದರೆ ಅದು, ಸಂಚಿತ ನಿಧಿಯಿಂದ ವೆಚ್ಚವನ್ನು ಒಳಗೊಳ್ಳುತ್ತದೆ ಹಾಗೂ ಅದರಿಂದಾಗಿ ಅನುಚ್ಛೇದ ೧೧೭ರ (೩)ನೇ ಉಪ–ಖಂಡದ ವ್ಯಾಪ್ತಿಯೊಳಗೆ ಬರುತ್ತದೆ.

***ಮಾನ್ಯ ಅಧ್ಯಕ್ಷರು:** "ಮೆಕ್ಯಾನಿಕಲ್" (ಯಾಂತ್ರಿಕ) ಎಂಬ ಪದದ ಮಟ್ಟಿಗೆ ಹೇಳುವುದಾದರೆ ಇಲ್ಲಿರುವ ದೋಷವು 'ಮೆಕ್ಯಾನಿಕಲ್' ಎಂಬ ಪದಕ್ಕೆ ಸಂಬಂಧಪಟ್ಟಂತೆ ಇರಲೇಬೇಕೆಂದು ತೋರುತ್ತಿದೆ. ಶ್ರೀ ಸಿಧ್ವಾ ಬಳಸಿದ "ನಿರ್ಮಾಣ" ಎಂಬ ಪದದ ಮಟ್ಟಿಗೆ ಹೇಳುವುದಾದರೆ ಅದು ಸಂಪೂರ್ಣ ವಿರುದ್ಧವಾಗಿರುವಂತೆ ಕಾಣುವುದಿಲ್ಲ. 'ರಚನೆ' ಎಂಬ ಪದವು ಅರ್ಥವನ್ನು ಉತ್ತಮವಾಗಿ ವಿವರಿಸುತ್ತಿದೆ. ಅದೇ ಸಮಯದಲ್ಲಿ ಎರಡೂ ಪದಗಳನ್ನು ತೆಗೆದುಹಾಕಿದಲ್ಲಿ ಒಕ್ಕಣೆಯು ಕೇವಲ ದೋಷಪೂರ್ಣವಾಗಿ ಅದು ಬಹುಶಃ ಈಗಿರುವುದಕ್ಕಿಂತ ಹೆಚ್ಚು ಅಸ್ಪಷ್ಟವಾಗುತ್ತದೆ. ೧೯ನೇ ಖಂಡದಲ್ಲಿ ನೀಡಿದ ಅಧಿಕಾರಗಳಿಗೆ ಸಂಬಂಧಪಟ್ಟಂತೆ ಒಕ್ಕಣೆಯು "ನೋಂದಣಿ ಪ್ರಾಧಿಕಾರದ ಅಧಿಕಾರ, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಮತ್ತು ಅದರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯನ್ನು ಗೊತ್ತುಪಡಿಸುತ್ತದೆ. ನೌಕೆಯ ರಚನೆಯನ್ನು ನೋಡಿಕೊಳ್ಳುವುದು ನೋಂದಣಿ ಪ್ರಾಧಿಕಾರದ ಕರ್ತವ್ಯವೆಂದು ನಿಯಮವನ್ನು ಮಾಡಿದಲ್ಲಿ ಆಗ ಈ ಲೋಪವು ಇರಬಹುದೆಂದು ಅನಿಸುತ್ತದೆ. ಆದರೆ ನಾನು ಅದನ್ನು ಸದನದ ತೀರ್ಮಾನಕ್ಕೆ ಬಿಟ್ಟಿದ್ದೇನೆ. ಮಾನ್ಯ ಮಂತ್ರಿಯವರು ಪದಗಳನ್ನು ಬದಲಿಸಲು ಬಯಸುತ್ತಾರೆ. ಈ ಹಂತದಲ್ಲಿ ನಾನು ಖಂಡಿತವಾಗಿಯೂ ತಿದ್ದುಪಡಿಗೆ ಅನುಮತಿಸುತ್ತೇನೆ.

**ಶ್ರೀ ಎಸ್.ಸಿ. ಸಮಂತ (ಪಶ್ಚಿಮ ಬಂಗಾಳ):** ನಾವು "ಮೆಕ್ಯಾನಿಕಲ್" ಅಥವಾ ""ಅನ್ಯಥಾ ದೋಷಪೂರಿತವಾಗಿ" ಹೇಳಬಹುದೆಂದು ಸೂಚಿಸಬಹುದೆ?

**ಶ್ರೀ ಸಂತಾನಂ:** ನೀವು ಇದನ್ನು ಬಹಳ ಅಸ್ಪಷ್ಟವನ್ನಾಗಿಸುತ್ತಿದ್ದೀರಿ.

**ಪಂಡಿತ್ ಮುನೀಶ್ವರದತ್ ಉಪಧ್ಯಾಯರು (ಉತ್ತರ ಪ್ರದೇಶ):** "ಮೆಕ್ಯಾನಿಕಲ್" ಎಂಬ ಪದವನ್ನು ಬಿಟ್ಟು ಬಿಟ್ಟಲ್ಲಿ ಮತ್ತು "ದೋಷಪೂರಿತ" ಎಂಬ ಪದವನ್ನು ಉಳಿಸಿಕೊಂಡಲ್ಲಿ ಆಗ ಎಲ್ಲ ಬಗೆಯ

---

* P.D. ಸಂ. ೧೦, ಭಾಗ ೨, ೧೮ ಏಪ್ರಿಲ್ ೧೯೫೧, ಪು. ೭೦೦೬–೮.

ಲೋಪಗಳನ್ನು ನಿಯಮಗಳ ಮೂಲಕ ಮುಚ್ಚಿಹಾಕಬಹುದು.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್)** : ನನಗೆ ಹೊಳೆದ ಒಂದು ಪದವನ್ನು ಹೇಳಲೇ? ನಾನು ವಿಧೇಯಕವನ್ನು ನೋಡಿಲ್ಲ ಮತ್ತು ಅದರಿಂದಾಗಿ ನಾನು ನನ್ನ ಕಲ್ಪನೆಯಿಂದ ಮಾತನಾಡುತ್ತಿದ್ದೇನೆ. ವಿಧೇಯಕದ ಮುಖ್ಯ ಉದ್ದೇಶವೆಂದರೆ ರಕ್ಷಣೆ ಪಡೆಯುವುದು. ಈಗ ರಕ್ಷಣೆಯು ಬೇರೆಬೇರೆ ಸ್ವರೂಪದಲ್ಲಿ ಆಧಾರವಾಗಿರುತ್ತದೆ. ನನಗೆ ತಿಳಿದಿರುವಷ್ಟರ ಮಟ್ಟಿಗೆ 'ನೌಕೆ'ಯ ಯಾಂತ್ರಿಕ ರಚನೆಯ ಮೇಲೆ ಅವಲಂಬಿಸುತ್ತದೆಯೇ ಹೊರತು ಅದರ ವಿನ್ಯಾಸ ಅಥವಾ ಅಳತೆಯ ರಚನೆಯ ಮೇಲಲ್ಲ. ಆದ್ದರಿಂದ ಒಂದು ವೈಶಿಷ್ಟ್ಯವನ್ನು ಎರಡರ ನಡುವೆ ಮಾಡುವ ಅಗತ್ಯವಿದೆ ಎಂದು ನನಗೆ ಅನಿಸುತ್ತದೆ. ರಚನೆಯಲ್ಲಿನ ದೋಷವು ನೌಕೆಗೆ ಯಾವ ಬಗೆಯಲ್ಲಿಯೂ ತೊಂದರೆಯಾಗದು ಮತ್ತು ಯಾಂತ್ರಿಕ ದೋಷವು ಹೆಚ್ಚಿನದಾಗಿ ನೌಕೆಯ ರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ವಿಧೇಯಕದ ಉದ್ದೇಶವೆಂದರೆ ರಕ್ಷಣೆಯನ್ನು ಪಡೆಯುವುದು ಮತ್ತು ಅದರಿಂದಾಗಿ ನೌಕೆಯ ಯಾಂತ್ರಿಕತೆಯ ಮೇಲೆ ಆವಶ್ಯಕವಾಗಿ ಇರುತ್ತದೆ ಮತ್ತು ರಚನೆಯ ಭಾಗದ ಮೇಲಲ್ಲ ಎಂದು ಒತ್ತಿ ಹೇಳುತ್ತೇನೆ. ಉದಾಹರಣೆಗೆ ಒಬ್ಬ ಮನುಷ್ಯನು ಒಂದು ದೀರ್ಘಾಕಾರದ ನೌಕೆ ಹೊಂದಿದ್ದು, ಅದರ ತಳಭಾಗವು ಇತರವುಗಳಿಗಿಂತ ಬಹಳ ಪ್ರತ್ಯೇಕವೆಂಬಂತೆ ಕಂಡು ಬರುತ್ತದೆ.

**ಶ್ರೀ ಸಿದ್ವಾ:** ಅದು ಒಂದು ದೋಷ

**ಡಾ. ಅಂಬೇಡ್ಕರ್**: ನಾನು ತಿಳಿಯಬೇಕಾಗಿರುವುದೇನೆಂದರೆ, ರಚನೆಯಲ್ಲಿನ ದೋಷ ಎಂದರೇನು? "ನನ್ನ ದೃಷ್ಟಿಯಲ್ಲಿ ಇದು ರಚನೆಯಲ್ಲಿನ ದೋಷವೆಂದು ಒಬ್ಬ ಮನುಷ್ಯ ಹೇಳಬಹುದು, ಅದು ಇನ್ನೊಂದು ರೂಪದಲ್ಲಿರಬೇಕಾಗಿತ್ತೆಂದು" ಬೇರೊಬ್ಬ ವ್ಯಕ್ತಿಯು ಹೇಳಬಹುದು. ನಾನು ಮಾಡಿಕೊಳ್ಳುವ ನಿವೇದನೆ ಎಂದರೆ ವಿಧೇಯಕವು ಪ್ರಯಾಣಿಕರ ಸುರಕ್ಷತೆಯನ್ನು ಕುರಿತಾಗಿರುವುದು. ಪ್ರಯಾಣಿಕರ ಸುರಕ್ಷತೆಯು ಆವಶ್ಯಕವಾಗಿ, ಮುಖ್ಯವಾಗಿ, ಮೂಲಭೂತವಾಗಿ ನೌಕೆಯ ಯಾಂತ್ರಿಕತೆಯ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ಸರ್ವೇಕ್ಷಣೆದಾರನಿಂದ ಈ ವಿಷಯದಲ್ಲಿ ಆವಶ್ಯಕವಾಗಿ ನೀಡಬೇಕಾದ ಪ್ರಮಾಣ ಪತ್ರವೆಂದರೆ ಅವನು ಯಾವುದಾದರೂ ಯಾಂತ್ರಿಕ ದೋಷವಿದೆಯೇ ಎಂಬುದನ್ನು ಪರಿಶೀಲಿಸುವುದು (ಕಂಡು ಹಿಡಿಯುವುದು) ಇದು ನನ್ನ ನಿವೇದನೆ.

**ಶ್ರೀ ವೆಂಕಟರಾಮನ್**: ನಾನು ಕಾನೂನು ಮಂತ್ರಿಗಳನ್ನು .......ಕೇಳಬಹುದೆ?

**ಡಾ. ಅಂಬೇಡ್ಕರ್**: ಇದು ಕಾನೂನಿನ ಪ್ರಶ್ನೆ ಅಲ್ಲ. ನಾನು ಕೇವಲ ಸದನದ ಒಬ್ಬ ಸದಸ್ಯನಾಗಿ ಮಾತನಾಡುತ್ತಿದ್ದೇನೆ.

**ಶ್ರೀ ಹುಸೇನ್ ಇಮಾಂ**: ಕೆಲವು ಸಂದರ್ಭಗಳಲ್ಲಿ ರಚನಾ ದೋಷವು ಪ್ರಯಾಣಿಕರ ಸುರಕ್ಷತೆಗೆ ಅಪಾಯವನ್ನುಂಟು ಮಾಡುತ್ತದೆ. ಉದಾಹರಣೆಗೆ ಡೆಕ್‌ನ ಮೇಲಿರುವ ಸರಳಿನಕಂಬಿಗಳು (ರೇಲಿಂಗ್‌ಗಳು) ಬಹಳಷ್ಟು ಕೆಳಗಿರಬಹುದು, ಆಗ ಪ್ರಯಾಣಿಕರು ನೀರಲ್ಲಿ ಬೀಳಬಹುದು. ಅದೂ ಅಲ್ಲದೇ ಬ್ಲೇಡ್‌ಗಳನ್ನು ಸೂಕ್ತವಾಗಿ ಮರೆಮಾಡದಿದ್ದಲ್ಲಿ ಪ್ರಯಾಣಿಕರು ಅವುಗಳ ಮೇಲೆ ಬೀಳಬಹುದು ಮತ್ತು ಅವುಗಳು ತಾಕಿ ಗಾಯಗಳಾಗಬಹುದು. ಅದೇರೀತಿ, ಎಂಜಿನ್ ಇರುವ ಕೊಠಡಿಯನ್ನು ಸೂಕ್ತವಾಗಿ ಸಂರಕ್ಷಿಸದಿದ್ದಲ್ಲಿ ವಿನ್ಯಾಸದಲ್ಲಿ ಯಾವುದೇ ದೋಷವು ಅನ್ವಯವಾಗುವುದಿಲ್ಲ. ಆದರೆ ಕಾನೂನು ಮಂತ್ರಿಯವರು ಆಗ್ರಹಪಡಿಸಿದ್ದರ ಮೇಲೆ ಅದೇ ಉದ್ದೇಶಕ್ಕಾಗಿ ಒಳಗೊಳ್ಳತಕ್ಕದ್ದು ಎಂದರೆ, ನಾವು ನೋಡಬೇಕಾಗಿರುವುದು ಪ್ರಯಾಣಿಕರ ಸುರಕ್ಷತೆಯಾಗಿದೆ ಈ ಶಾಸನವನ್ನು ಅಪ್ರವರ್ತನೀಯವನ್ನಾಗಿ ಮಾಡದ ಹಾಗೆ ಅರ್ಥೈಸಲು

ನಾವು ನಮ್ಮ ಪ್ರಾಧಿಕಾರದ ಮೇಲೆ ನಂಬಿಕೆ ಇಡಬೇಕಾಗುತ್ತದೆ. ಈ ಶಾಸನವನ್ನು ಅಪ್ರವರ್ತನೀಯವನ್ನಾಗಿ ಮಾಡದಂತೆ ಹಾಗೆ ಅರ್ಥೈಸಲು 'ರಚನೆ'ಯು ಬಹು ಆವಶ್ಯಕವೆಂದು ನಾನು ಪರಿಗಣಿಸುತ್ತೇನೆ.

**ಶ್ರೀ ಸಿಧ್ವಾ:** ನನ್ನ ಮಾತುಗಳು ಇದೇ ಉದ್ದೇಶಗಳನ್ನು ಒಳಗೊಂಡಿದ್ದರೂ ಅದರಲ್ಲಿ ಅಸ್ಪಷ್ಟತೆ ಕಂಡು ಬರುತ್ತದೆ ಎಂದು ನನ್ನ ಸ್ನೇಹಿತರಾದ ಶ್ರೀ ಸಂತಾನಂ ಅವರು ಹೇಳಿದರು ಮತ್ತು ನನ್ನ ಸನ್ಮಾನ್ಯ ಸ್ನೇಹಿತರಾದ ಡಾ॥ ಅಂಬೇಡ್ಕರ್ ಅವರು ತಮ್ಮ ಉದ್ದೇಶಿತ ಗುರಿ ಎಂದರೆ ಪ್ರಯಾಣಿಕರ ಸುರಕ್ಷತೆ ಎಂಬುದಾಗಿ ತಿಳಿಸಿದರು. ನಾನು ಸಹ ಸುರಕ್ಷತೆಯ ಪರವಾಗಿದ್ದೇನೆ. ಆದರೆ ಅವರು ಸುರಕ್ಷತೆಯೊಂದಿಗೆ ವಿನ್ಯಾಸವನ್ನು ಸೇರಿಸಿದರು. ನನ್ನ ಸನ್ಮಾನ್ಯ ಸ್ನೇಹಿತರಾದ ಶ್ರೀ ಹುಸೇನ್ ಇಮಾಂ ಅವರು ಸರಿಯಾದ ಉದಾಹರಣೆಗಳನ್ನೇ ನೀಡಿರುತ್ತಾರೆ. ನಾನು ಶ್ರೀ ಸಂತಾನಂ ಅವರಿಗೆ ಹೇಳುವುದೇನೆಂದರೆ ಕೆಲವು ನೌಕೆಗಳ ಮಾಲೀಕರು ಉದ್ದೇಶಪೂರ್ವಕವಾಗಿಯೇ ರೇಲಿಂಗ್‌ಗಳನ್ನು ಬಹಳ ಕೆಳ ಹಂತದಲ್ಲಿ ಇಟ್ಟಿರುತ್ತಾರೆ ಮತ್ತು ಅದರ ಪರಿಣಾಮದಿಂದಾಗಿ ಬಹಳಷ್ಟು ಅಪಘಾತಗಳು ಸಂಭವಿಸುತ್ತದೆ.

**ಒಬ್ಬ ಸನ್ಮಾನ್ಯ ಸದಸ್ಯ:** ರೇಲಿಂಗ್‌ಗಳನ್ನು ಏಕೆ ಉದ್ದೇಶಪೂರ್ವಕವಾಗಿ ಕೆಳಗೆ ಮಾಡಿಸಿರುತ್ತಾರೆ?

**ಶ್ರೀ ಸಿಧ್ವಾ:** ಏಕೆಂದರೆ ಅದು ವೆಚ್ಚವನ್ನು ಕಡಿಮೆ ಮಾಡುತ್ತದೆ. ಡೆಕ್ ಪ್ರಯಾಣಿಕರ ಸಮಿತಿಯು ನೌಕೆಯ ರಚನೆಯನ್ನು ವ್ಯವಹಾರವನ್ನಾಗಿಸಿಕೊಂಡಿದ್ದಾರೆ. ಇನ್ನೂ ಅನೇಕ ರಚನಾ ವಿಷಯಗಳು ಸಹ ಅಲ್ಲಿ ಕಂಡು ಬರುತ್ತವೆ. ಉದಾಹರಣೆಗೆ ನಿರ್ಮಾಣ ಕಾರ್ಯದಲ್ಲಿ ಉತ್ತಮ ಗುಣಮಟ್ಟವಲ್ಲದ ಮರದ ಸಾಮಾನುಗಳನ್ನು ಬಳಸುವುದು ಈ ಕ್ಷೇತ್ರದಲ್ಲಿ ಅನುಭವ ಹೊಂದಿದವರು ನನ್ನ ಹೇಳಿಕೆಯ ಪರವಾಗಿ ಮಾತನಾಡಿದರು. ದುರದೃಷ್ಟವಶಾತ್ ನನ್ನ ಸ್ನೇಹಿತ ಡಾ. ಅಂಬೇಡ್ಕರ್ ಅವರು .............

**ಡಾ. ಅಂಬೇಡ್ಕರ್:** ನಾನು ಬಹಳಷ್ಟು ಪ್ರಯಾಣಿಸಿದ್ದೇನೆ........................................

◆

# ೨೯

# ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳ (ಉಚ್ಚ ನ್ಯಾಯಾಲಯಗಳಲ್ಲಿ ವಕೀಲಿ ವೃತ್ತಿ ನಡೆಸುವ) ವಿಧೇಯಕ

*ಕಾನೂನು ಸಚಿವರು (ಡಾ. ಅಂಬೇಡ್ಕರ್):** "ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳು ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಹಕ್ಕು ಎಂಬಂತೆ ವಕೀಲಿ ವೃತ್ತಿ ಕೈಗೊಳ್ಳಲು ಅಧಿಕಾರ ನೀಡುವ ವಿಧೇಯಕದ ಪ್ರಸ್ತಾವನೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು" ಕೋರುತ್ತೇನೆ.

ಈ ವಿಧೇಯಕ ಬಹಳ ಸರಳವಾಗಿದೆ. ಭಾರತದಲ್ಲಿ ಎರಡು ಬೇರೆ ಬೇರೆ ನ್ಯಾಯಾಲಯಗಳು ಎಂದರೆ ಉಚ್ಚ ನ್ಯಾಯಾಲಯಗಳು ಹಾಗೂ ಸರ್ವೋಚ್ಚ ನ್ಯಾಯಾಲಯ ಇರುವ ಅಂಶ ಸದನಕ್ಕೆ ತಿಳಿದಿರುವ ಅಂಶ. ಆ ನ್ಯಾಯಾಲಯಗಳಲ್ಲಿ ಹಕ್ಕು ಎಂಬಂತೆ ವಕೀಲಿ ವೃತ್ತಿ ನಡೆಸುವವರ ನೋಂದಣಿ ವಿಷಯದಲ್ಲಿ ಉಚ್ಚ ನ್ಯಾಯಾಲಯಗಳು ಹಾಗೂ ಸರ್ವೋಚ್ಚ ನ್ಯಾಯಾಲಯಕ್ಕೆ ಸ್ವತಂತ್ರ ಅಧಿಕಾರ ವ್ಯಾಪ್ತಿಯಿದೆ. ತಮ್ಮ ನ್ಯಾಯಾಲಯಗಳಲ್ಲಿ ಹಾಜರಾಗುವ ವ್ಯಕ್ತಿಗಳ ನೋಂದಣಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯಗಳಿಗೆ ಅವುಗಳದೇ ಆದ ನಿಯಮಗಳಿವೆ. ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ತನ್ನ ನಿಯಮಗಳನ್ನು ರಚಿಸಿದ್ದು, ಅವುಗಳನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಅದರ ಮೇರೆಗೆ ಒಬ್ಬ ವ್ಯಕ್ತಿಯು

(೧) (ಎ) ಒಂದು ಭಾರತೀಯ ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿ ಪಡೆದಿರದಿದ್ದರೆ, ಅಥವಾ

(ಬಿ) ಇಂಗ್ಲಿಷ್ ಬಾರ್‌ನ ಸದಸ್ಯತ್ವ ಹೊಂದಿರದಿದ್ದರೆ

(೨) ಭಾರತದ ಪ್ರದೇಶದೊಳಗೆ ಯಾವುದೊಂದು ಉಚ್ಚ ನ್ಯಾಯಾಲಯದಲ್ಲಿ ಅಥವಾ ಜ್ಯೂಡಿಷಿಯಲ್ ಕಮೀಷನರ್ ನ್ಯಾಯಾಲಯದಲ್ಲಿ ಹಿರಿಯ ನ್ಯಾಯವಾದಿಯಾಗಿದ್ದಲ್ಲಿ ೧೦ ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ, ಬೇರೆ ನ್ಯಾಯವಾದಿಯಾಗಿದ್ದರೆ ೭ ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನ್ಯಾಯವಾದಿಯಾಗಿ ನೋಂದಣಿಗೊಂಡಿರದಿದ್ದರೆ, ನ್ಯಾಯವಾದಿಯಾಗಿ ನೋಂದಣಿ ಮಾಡಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದ್ದರಿಂದ ಇಂದು ನಮ್ಮ ಮುಂದೆ ನ್ಯಾಯವಾದಿಗಳ ಎರಡು ಬೇರೆ ಬೇರೆ ಗುಂಪುಗಳಿವೆ. ಸರ್ವೋಚ್ಚ ನ್ಯಾಯಾಲಯದ ಪಟ್ಟಿಗೆ ನೋಂದಣಿ ಮಾಡಿಸಿದವರ ತಂಡ ಹಾಗೂ ಉಚ್ಚ ನ್ಯಾಯಾಲಯಗಳಲ್ಲಿ ನೋಂದಣಿ ಮಾಡಿಸಿದವರ ಇನ್ನೊಂದು ತಂಡ. ಆದರೆ ಇನ್ನೊಂದು ಅಡ್ಡಿ ಏನೆಂದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿದ್ದು, ವಿವಿಧ ಉಚ್ಚ ನ್ಯಾಯಾಲಯಗಳಲ್ಲಿ ನೋಂದಣಿ ಮಾಡಿಸದಿದ್ದರೆ ಉಚ್ಚ ನ್ಯಾಯಾಲಯಗಳಲ್ಲಿ ವಕೀಲಿ ವೃತ್ತಿ ನಡೆಸುವ ಹಕ್ಕು ಹೊಂದಿರುವುದಿಲ್ಲ. ಪಕ್ಷಕಾರರ ದೃಷ್ಟಿಯಿಂದ ಇದು ಬಹಳ ತೊಂದರೆದಾಯಕವೆನಿಸುತ್ತದೆ. ಒಂದು ಸರಳ ಉದಾಹರಣೆಯ

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೨೦–೨೫.

ಮೂಲಕ ಈ ತೊಂದರೆಯನ್ನು ವಿವರಿಸುತ್ತೇನೆ. ಮದ್ರಾಸ್ ಉಚ್ಚ ನ್ಯಾಯಾಲಯದಿಂದ ಸರ್ವೋಚ್ಚ ನ್ಯಾಯಾಲಯಕ್ಕೆ ಒಂದು ಮೇಲ್ಮನವಿ ಸಲ್ಲಿಸಲಾಗಿದೆ ಎಂದು ಭಾವಿಸೋಣ. ಪಕ್ಷಕಾರನ ಮದ್ರಾಸಿನ ನ್ಯಾಯವಾದಿಯನ್ನು ನಿಯೋಜಿಸಿಕೊಳ್ಳುವ ಬದಲು ಉತ್ತರ ಪ್ರದೇಶದ ನ್ಯಾಯವಾದಿಯನ್ನು ತಮ್ಮ ಪರ ವಾದಿಸಲು ನಿಯೋಜಿಸಿಕೊಳ್ಳಲು ಬಯಸುತ್ತಾರೆ. ಅದಕ್ಕೆ ಆತನಿಗೆ ಹಕ್ಕಿದೆ. ಆದರೆ ಉತ್ತರ ಪ್ರದೇಶದ ನ್ಯಾಯವಾದಿಯು ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿರಬೇಕು. ತರುವಾಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಷಯ ಅಂತಿಮವಾಗಿ ಇತ್ಯರ್ಥವಾಗದೇ ಇರಬಹುದು. ಅದು ಹೆಚ್ಚಿನ ಸಾಕ್ಷ್ಯಕ್ಕಾಗಿ ಅಥವಾ ಕೆಲವು ಅಂಶಗಳ ವಿಚಾರಣೆಗಾಗಿ ಅಥವಾ ಸಾಕ್ಷ್ಯವನ್ನು ಪಡೆಯಲು ಅಥವಾ ಇತರ ಯಾವುದೇ ಕಾರಣಕ್ಕಾಗಿ ಪ್ರಕರಣವನ್ನು ಅದು ಬಂದಿದ್ದ ರಾಜ್ಯದ ಮೂಲ ಉಚ್ಚ ನ್ಯಾಯಾಲಯಕ್ಕೆ ಹಿಂದಕ್ಕೆ ಕಳುಹಿಸುತ್ತದೆ. ಈಗಿನ ಸಮಸ್ಯೆ ಎಂದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ಹಾಜರಾಗಲು ಪ್ರಕರಣವನ್ನು ನಡೆಸಲು, ವಾದಿಸಲು ನಿಯೋಜಿತನಾದ ಉತ್ತರ ಪ್ರದೇಶದ ನ್ಯಾಯವಾದಿಯನ್ನು, ಪ್ರಕರಣವನ್ನು ಮದ್ರಾಸ್ ಉಚ್ಚ ನ್ಯಾಯಾಲಯಕ್ಕೆ ಹಿಂದಕ್ಕೆ ಕಳುಹಿಸಿದ ಕಾರಣಕ್ಕಾಗಿ ಆ ಪ್ರಕರಣದ ಸಂಬಂಧದಲ್ಲಿ ಮದ್ರಾಸು ಉಚ್ಚ ನ್ಯಾಯಾಲಯದಲ್ಲಿ ನಿಯೋಜಿಸುವಂತಿಲ್ಲ. ಏಕೆಂದರೆ ಆತ ಮದ್ರಾಸಿನ ನ್ಯಾಯವಾದಿಯಲ್ಲ. ಉತ್ತರ ಪ್ರದೇಶದ ನ್ಯಾಯವಾದಿ. ಆದರೆ ಇಲ್ಲಿರುವ ಸಮಸ್ಯೆ ನಿವಾರಣೆಯಾಗಬೇಕು. ಪಕ್ಷಕಾರನ ಹಿತದೃಷ್ಟಿಯಿಂದ ಮಾತ್ರವಲ್ಲದೆ ನ್ಯಾಯದ ದೃಷ್ಟಿಯಿಂದ ಎಂದರೆ ನ್ಯಾಯವಾದಿಯು ಪ್ರಕರಣವನ್ನು ಅಧ್ಯಯನ ಮಾಡುವಲ್ಲಿ ಅದನ್ನು ಅರ್ಥಮಾಡಿಕೊಳ್ಳುವಲ್ಲಿ ತನ್ನ ಸಮಯ ಹಾಗೂ ಶಕ್ತಿಯನ್ನು ವ್ಯಯಿಸಿರುವುದರಿಂದ ಪ್ರಕರಣವನ್ನು ಮೂಲ ನ್ಯಾಯಾಲಯಕ್ಕೆ ಹಿಂದಿರುಗಿಸಿರುವಾಗ ಆತ ಅಲ್ಲಿ ಅದನ್ನು ನಡೆಸುವಂತಿರಬೇಕು.

ಈ ಸಮಸ್ಯೆಯನ್ನು ಎರಡು ಬೇರೆ ಬೇರೆ ರೀತಿಗಳಲ್ಲಿ ಪರಿಹರಿಸಬಹುದಾಗಿದೆ. ಒಂದು ದಾರಿಯೆಂದರೆ ಒಂದು ನಿರ್ದಿಷ್ಟ ಪ್ರಕರಣದಲ್ಲಿ ನಿಯೋಜಿತನಾದ ನ್ಯಾಯವಾದಿಯು, ಪ್ರಕರಣವು ಹಿಂದಕ್ಕೆ ಹೋದಾಗ ಆ ಪ್ರಕರಣದ ಸಂಬಂಧದಲ್ಲಿ ಹಾಜರಾಗಲು ಹೋಗುವ ಹಕ್ಕು ಹೊಂದಿರಬೇಕು. ಇನ್ನೊಂದು ಮಾರ್ಗವೆಂದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿದ ಎಲ್ಲಾ ವಕೀಲರು ಹಾಗೂ ನ್ಯಾಯವಾದಿಗಳು ಯಾವುದೇ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಕೈಗೊಳ್ಳುವ ಹಕ್ಕು ಹೊಂದಿರಬೇಕು ಎಂಬ ಸಾಮಾನ್ಯ ನಿಯಮವನ್ನು ಮಾಡಬೇಕು. ನಾವು ಚರ್ಚಿಸುತ್ತಿದ್ದ ಮೂಲ ವಿಚಾರ ಸೀಮಿತವಾಗಿತ್ತು. ತರುವಾಯದ ವಿವರ ಪರಿಶೀಲನೆಯಿಂದ ಗೋಚರಿಸಿದ ಅಂಶವೆಂದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿದ ಎಲ್ಲ ನ್ಯಾಯವಾದಿಗಳು ಇತರ ಯಾವುದೇ ಹಕ್ಕು ಎಂಬಂತೆ ಕಾರ್ಯವಿಧಾನವಿಲ್ಲದೇ ಯಾವುದೇ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಕೈಗೊಳ್ಳುವ ಸಾಮಾನ್ಯ ನಿಯಮವನ್ನು ಮಾಡುವುದು ಅಪೇಕ್ಷಣೀಯ. ಇದನ್ನೇ ಈ ವಿಧೇಯಕದಲ್ಲಿ ಪ್ರಸ್ತಾವಿಸಲಾಗಿದೆ. ಇದು ಈ ವಿಧೇಯಕದಲ್ಲಿಯ ಸಾಮಾನ್ಯ ತತ್ತ್ವ. ಈ ವಿಧೇಯಕದಲ್ಲಿ ಈ ತತ್ತ್ವಕ್ಕೆ ಎರಡು ಅಪವಾದಗಳನ್ನು ತಿಳಿಸಲಾಗಿದೆ. ಒಂದು, ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿದ ಒಬ್ಬ ವಕೀಲನು ಒಂದು ಉಚ್ಚ ನ್ಯಾಯಾಲಯದಲ್ಲಿ ತನ್ನಿಂದ ತಾನೇ ಮೂಲ ಪಕ್ಷದ ಪರವಾಗಿ ವಕೀಲಿ ವೃತ್ತಿ ನಡೆಸುವ ಹಕ್ಕು ಹೊಂದಿರತಕ್ಕದ್ದಲ್ಲ. ಆದರೆ, ಯಾವುದೇ ಹೆಚ್ಚಿನ ನೋಂದಣಿ ಇಲ್ಲದೆ ಅಪೀಲು ಪಕ್ಷದ ಪರವಾಗಿ ವಕೀಲಿ ವೃತ್ತಿ ನಡೆಸಬಹುದೇ ಹೊರತು ಮೂಲ ಪಕ್ಷದ ಪರವಾಗಿ ಅಲ್ಲ. ಪ್ರಸ್ತಾವಿಸಲಾದ ಎರಡನೇ ಅಪವಾದವೆಂದರೆ ಹಿಂದೆ ನ್ಯಾಯಾಧೀಶರಾಗಿದ್ದು ಈಗ ನೋಂದಣಿ ಮಾಡಿಸಿರುವ ವಕೀಲರಿಗೆ ಸಂಬಂಧಿಸಿದ್ದು. ಏಕೆಂದರೆ ಸಂವಿಧಾನವು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ, ನ್ಯಾಯಾಧೀಶರು ನಿವೃತ್ತಿಯ ತರುವಾಯ ವಕೀಲಿ ವೃತ್ತಿ

ಕೈಗೊಳ್ಳಬಾರದೆಂಬ ಯಾವುದೇ ನಿಯಮವಿರಲಿಲ್ಲ. ಅವರು ವಕೀಲಿ ವೃತ್ತಿ ಕೈಗೊಳ್ಳಲು ಸ್ವತಂತ್ರರಾಗಿದ್ದರು. ಅಂತಹ ನಿವೃತ್ತ ನ್ಯಾಯಾಧೀಶರು ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿ ವಕೀಲಿ ವೃತ್ತಿ ನಡೆಸಲು ಅವಕಾಶ ಪಡೆದ ಸಾಕಷ್ಟು ನಿದರ್ಶನಗಳಿವೆ. ಆದರೆ, ಇನ್ನು ಕೆಲವು ಪ್ರಕರಣಗಳಲ್ಲಿ ಸಂವಿಧಾನ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಉಚ್ಚ ನ್ಯಾಯಾಲಯದಲ್ಲಿ ನೇಮಕಗೊಂಡಿದ್ದ, ಕೆಲವರು ಅದೇ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಮಾಡುವುದಿಲ್ಲವೆಂದು ಮುಚ್ಚಳಿಕೆ ಪತ್ರ ಬರೆದುಕೊಡಬೇಕಿತ್ತು. ನಾವು ತಿಳಿಸುವ ಅಪವಾದವು ಹೇಳುವುದೇನೆಂದರೆ ಒಂದು ಉಚ್ಚ ನ್ಯಾಯಾಲಯದಲ್ಲಿ ಹಿಂದೆ ನ್ಯಾಯಾಧೀಶರಾಗಿದ್ದ ವ್ಯಕ್ತಿ ಪ್ರಸ್ತುತ ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿದ್ದರೆ, ಹಾಗೂ ಒಂದು ನಿರ್ದಿಷ್ಟ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ನಡೆಸುವುದಿಲ್ಲವೆಂದು ಮುಚ್ಚಳಿಕೆ ನೀಡಿದ್ದರೆ (ಅವರ ಪ್ರಾಂತ್ಯದ ಉಚ್ಚ ನ್ಯಾಯಾಲಯ) ಈ ವಿಧೇಯಕದ ಉಪಬಂಧದಲ್ಲಿ ಏನೇ ಇದ್ದರೂ ಆತ ಅಲ್ಲಿ ವಕೀಲಿ ವೃತ್ತಿ ನಡೆಸತಕ್ಕದ್ದಲ್ಲ. ಇವು ಈ ವಿಧೇಯಕದ ಸರಳ ಉಪಬಂಧಗಳು.

**ಶ್ರೀ ಸಿ. ಸುಬ್ರಮಣ್ಯಂ (ಮದ್ರಾಸ್):** ಮೊದಲನೆ ಅಪವಾದಕ್ಕೆ ಕಾರಣವೇನು?

**ಡಾ.ಅಂಬೇಡ್ಕರ್:** ಕಾರಣ ಇಷ್ಟೇ. ಬಾರ್ ಕೌನ್ಸಿಲ್ ಅಧಿನಿಯಮದಲ್ಲಿ ಒಂದು ವಿಶೇಷ ಉಪಬಂಧವಿದೆ. ನನಗೆ ತಿಳಿದಿರುವಂತೆ ಈಗ ೩ನೇ ನ್ಯಾಯಾಲಯಗಳು ಮಾತ್ರ ಮೂಲ ಅಧಿಕಾರ ವ್ಯಾಪ್ತಿ ಹೊಂದಿವೆ. ಉಳಿದ ಉಚ್ಚ ನ್ಯಾಯಾಲಯಗಳು ಅಪೀಲು ಉಚ್ಚ ನ್ಯಾಯಾಲಯಗಳು ಹಾಗೂ ಅವುಗಳಿಗೆ ಮೂಲ ಅಧಿಕಾರ ವ್ಯಾಪ್ತಿ ಇಲ್ಲ. ಆದರೆ, ಮೂಲ ಪಕ್ಷದ ಪರವಾಗಿ ವ್ಯಕ್ತಿಗಳನ್ನು ನೋಂದಣಿ ಮಾಡಿಕೊಳ್ಳುವ ಕುರಿತು ನಿಯಮಗಳನ್ನು ರಚಿಸಲು ಅವುಗಳಿಗೆ ವಿಶೇಷ ಅಧಿಕಾರಗಳನ್ನು ನೀಡಲಾಗಿದೆ. ಬಾರ್ ಕೌನ್ಸಿಲ್‌ಗಳ ಅಧಿನಿಯಮವನ್ನು ತಿದ್ದುಪಡಿ ಮಾಡುವ ಪ್ರಸ್ತಾವವಿಲ್ಲದಿರುವುದರಿಂದ ಆ ಉಪಬಂಧವನ್ನು ಹಾಗೆಯೇ ಬಿಡುವುದು ಒಳಿತು. ಅದರಿಂದ ಹೆಚ್ಚಿನ ತೊಂದರೆ ಇಲ್ಲ. ಏಕೆಂದರೆ ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯಕ್ಕೆ ಒಂದು ವಿಷಯವನ್ನು ಹಿಂದಕ್ಕೆ ಕಳುಹಿಸಿದಾಗ ಬಹುತೇಕ ಪ್ರಕರಣಗಳಲ್ಲಿ ಅದನ್ನು ಉಚ್ಚ ನ್ಯಾಯಾಲಯದ ಅಪೀಲು ಪಕ್ಷದ ಪರವಾಗಿ ಹಾಜರಾಗುವಲ್ಲಿಯೇ ನಿರ್ವಹಿಸುವ ಸಾಧ್ಯತೆ ಹೆಚ್ಚು.

**ಶ್ರೀ ಎಸ್.ಎನ್. ಸಿನ್ಹಾ (ಬಿಹಾರ):** ಪ್ರೊಬೇಟ್ ಹಾಗೂ ಕಂಪನಿ ಕಾನೂನುಗಳ ಪ್ರಕರಣಗಳಲ್ಲಿ ಕೆಲವು ಉಚ್ಚ ನ್ಯಾಯಾಲಯಗಳಿಗೆ ಮೂಲ ಅಧಿಕಾರ ವ್ಯಾಪ್ತಿ ಇದೆ. ಇಂಥ ಪ್ರಕರಣಗಳಲ್ಲಿಯೂ ನೀವು ನಿಷೇಧ ವಿಧಿಸುತ್ತೀರಾ?

**ಡಾ.ಅಂಬೇಡ್ಕರ್:** ಕೆಲವು ಸಂಗತಿಗಳನ್ನು ನ್ಯಾಯವಾದಿಗಳಿಗೆ ಬಿಡೋಣ.

**ಅಧ್ಯಕ್ಷರು:** ಈ ಮುಂದಿನ ಎಂದರೆ:

> "ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳು ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಹಕ್ಕು ಎಂಬಂತೆ ವಕೀಲಿ ವೃತ್ತಿ ಕೈಗೊಳ್ಳಲು ಅವರಿಗೆ ಅಧಿಕಾರ ನೀಡುವ ವಿಧೇಯಕವನ್ನು ತೆಗೆದುಕೊಳ್ಳಬೇಕು"
>
> ಎಂಬ ಪ್ರಸ್ತಾವವನ್ನು ಮಂಡಿಸಲಾಯಿತು."

**ಶ್ರೀ ವೆಂಕಟರಾಮನ್ (ಮದ್ರಾಸ್):** ಈ ದೇಶದ ನ್ಯಾಯವಾದಿಗಳ ಬಾರನ್ನು ಒಗ್ಗೂಡಿಸಲು ಪ್ರಯತ್ನಿಸುತ್ತಿರುವ ಮಟ್ಟಿಗೆ ಈ ವಿಧೇಯಕ ಅತ್ಯಂತ ಸ್ವಾಗತಾರ್ಹವಾಗಿದೆ. ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆಯಾದ ತರುವಾಯ ಮಾತ್ರವಲ್ಲದೆ ಅದಕ್ಕೂ ಮೊದಲೇ ಫೆಡರಲ್ ನ್ಯಾಯಾಲಯದ ಸ್ಥಾಪನೆಯಾದ

ತಕ್ಷಣವೇ ಮದ್ರಾಸಿನಲ್ಲಿ ನಡೆದ ವಕೀಲರ ಸಮ್ಮೇಳನದಲ್ಲಿ ಪ್ರತಿ ವರ್ಷವೂ ಗೊತ್ತುವಳಿಗಳನ್ನು ಅಂಗೀಕರಿಸಿ, ಭಾರತದಲ್ಲಿಯ (ನ್ಯಾಯವಾದಿಗಳ) ಬಾರನ್ನು ಒಗ್ಗೂಡಿಸಿ ಒಂದೇ "ಅಖಿಲ ಭಾರತ ಬಾರ್ ಕೌನ್ಸಿಲ್' ಇರಬೇಕೆಂದು ಹಾಗೂ ಎಲ್ಲಾ ನ್ಯಾಯವಾದಿಗಳ ನೋಂದಣಿ ಹಾಗೂ ಶಿಸ್ತು ಕ್ರಮದ ಅಧಿಕಾರ ವ್ಯಾಪ್ತಿ ಹೊಂದಿರುವ ಅಖಿಲ ಭಾರತ ಬಾರ್ ಕೌನ್ಸಿಲ್ ಎಂಬ ಒಂದು ಕೇಂದ್ರೀಕೃತ ಸಂಘಟನೆಯ ನಿಯಂತ್ರಣದಡಿ ತರಬೇಕೆಂದು ಸೂಚಿಸಲಾಗಿತ್ತು. ಈ ವಿಧೇಯಕ ಆ ಮಟ್ಟಕ್ಕೆ ಹೋಗಿರದಿದ್ದರೂ, ಅದಕ್ಕೆ ನಾಂದಿ ಹಾಡಲಾಗಿದೆ ಹಾಗೂ ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿಯಾದ ನ್ಯಾಯವಾದಿಗಳು ಯಾವುದೊಂದು ಉಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿರದಿದ್ದರೂ ಆ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ನಡೆಸುವ ಹಕ್ಕು ಹೊಂದಿರಬೇಕೆಂದು ತಿಳಿಸಲಾಗಿದೆ. ಆದರೆ, ಸಚಿವರು ಇರಿಸಿಕೊಂಡ ಆದರ್ಶಕ್ಕೆ ಅವರಷ್ಟೇ ಕೊರತೆಯಿರುವುದು ದುರದೃಷ್ಟಕರ. ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿ ನೋಂದಣಿಗೊಂಡಿರದಿದ್ದರೂ ಪ್ರಕರಣವು ಯಾವ ಪ್ರಾಂತದಲ್ಲಿ ದಾಖಲಾಯಿತೋ ಅಲ್ಲಿಗೆ ಹೋಗಿ ಪ್ರಕರಣವನ್ನು ನಿರ್ವಹಿಸಲು ಸಾಧ್ಯವಾಗಬೇಕೆಂದು ತಿಳಿಸಿದ್ದಾರೆ. ಉದಾಹರಣೆಗೆ ಸಚಿವರು ತಿಳಿಸಿದ 'ಮದ್ರಾಸ್' ಎಂಬುದಕ್ಕೆ ಬದಲಾಗಿ 'ಬಾಂಬೆ' ಎಂಬ ಪದವನ್ನು ಪ್ರತಿಯೋಜಿಸಿ, ಅವರು ತಿಳಿಸಿದ ಪ್ರಕ್ರಿಯೆಯನ್ನು ಹಂತ ಹಂತವಾಗಿ ಅನ್ವಯಿಸಿದರೆ ಈ ವಿಧೇಯಕದಲ್ಲಿ ಇದೆಯೆಂದು ಅವರು ತಿಳಿಸಿದ ಉದ್ದೇಶ ಈಡೇರಿಲ್ಲವೆಂಬುದು ನಿಮ್ಮ ಅರಿವಿಗೆ ಬರುತ್ತದೆ. ನಾನು ಉದಾಹರಣೆಯನ್ನು ಮತ್ತೊಮ್ಮೆ ಹೇಳುತ್ತೇನೆ.

ಉದಾಹರಣೆಗೆ, ಮುಂಬಯಿಯಲ್ಲಿ ದಾಖಲಾಗಿದ್ದ ಒಂದು ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿ ಮದ್ರಾಸಿನ ಒಬ್ಬ ನ್ಯಾಯವಾದಿ ಅಪೀಲು ಪಕ್ಷದ ಪರವಾಗಿ ಹಾಜರಾಗಲು ನಿಯೋಜಿತನಾಗುತ್ತಾನೆ. ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯಕ್ಕೆ ಅಪೀಲು ಪಕ್ಷದ ಪರವಾಗಿ ಅಲ್ಲದೆ ನ್ಯಾಯಾಲಯದಲ್ಲಿನ ಮೂಲ ಪಕ್ಷದ ಅಭಿಪ್ರಾಯಕ್ಕಾಗಿ ಆ ಉಚ್ಚ ನ್ಯಾಯಾಲಯಕ್ಕೆ ಕಳುಹಿಸಬಹುದಾಗಿದೆ. ಇಂತಹ ಪ್ರಕರಣದಲ್ಲಿ ನ್ಯಾಯವಾದಿಯು ಪ್ರಕರಣದ ಅಧ್ಯಯನ ಹಾಗೂ ಸಿದ್ಧತೆಗಾಗಿ ಸಾಕಷ್ಟು ಸಮಯವನ್ನು ಕಳೆದಿರುತ್ತಾರೆ. ಪಕ್ಷಕಾರರು ಸಾಕಷ್ಟು ಹಣ ಖರ್ಚು ಮಾಡಿರಬಹುದು ಹಾಗೂ ಸಚಿವರು ಹೇಳಿದಂತೆ ಆ ನ್ಯಾಯವಾದಿಗೆ ವಿಷಯವನ್ನು ಕುರಿತು ತಿಳಿಸುವ ಪಾತ್ರವನ್ನು ವಹಿಸಿರಬಹುದು. ಆದರೆ, ವಿಧೇಯಕದಲ್ಲಿ ಅಪವಾದವನ್ನು ಸೇರಿಸಿರುವುದರ ಕಾರಣದಿಂದಾಗಿ ಆತ ಪ್ರಕರಣದ ಮೂಲಪಕ್ಷದ ಪರವಾಗಿ ಹಾಜರಾಗುವಂತಿಲ್ಲ. ಈ ಅಪವಾದವನ್ನು ಸೇರಿಸಿರುವುದರ ಹಿಂದಿನ ತಾರ್ಕಿಕತೆಯನ್ನು ನೋಡೋಣ.

**ಡಾ.ಅಂಬೇಡ್ಕರ್:** ಅದರಲ್ಲಿ ಯಾವುದೇ ತರ್ಕ ಇಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ವೆಂಕಟರಾಮನ್:** ನಾನು ಹೇಳಬೇಕಾಗಿದ್ದ ಮಾತನ್ನು ಅವರು ಹೇಳಿದ್ದಾರೆ.

**ಡಾ.ಅಂಬೇಡ್ಕರ್:** ನಾನು, ಅದನ್ನು ತರ್ಕ ಎನ್ನವುದಿಲ್ಲ. ಅದರ ಯುಕ್ತತೆಯನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ವೆಂಕಟರಾಮನ್:** ಹಾಗಾದರೆ ಅದರಲ್ಲಿ ತರ್ಕ ಇಲ್ಲ ಎಂಬುದನ್ನು ಆಧರಿಸಿ ನನ್ನ ವಾದವನ್ನು ಮುಂದುವರಿಸುತ್ತೇನೆ.

**ಶ್ರೀ ಅಧ್ಯಕ್ಷರು:** ೨೨ನೇ ಅನುಚ್ಛೇದದಡಿ ಮೂಲಭೂತ ಹಕ್ಕುಗಳ ಪ್ರಶ್ನೆ ಉದ್ಭವಿಸುವುದಿಲ್ಲವೇ ಎಂದು ನಾನು ಮಾನ್ಯ ಸಚಿವರನ್ನು ಪ್ರಶ್ನಿಸಬಹುದೇ?

**ಡಾ.ಅಂಬೇಡ್ಕರ್:** ನ್ಯಾಯಾಧೀಶರು ವರ್ಗೀಕರಣವನ್ನು ಮಾಡಲು ಸಿದ್ಧರಿರುವರೆಂಬುದನ್ನು ಹಲವಾರು ನ್ಯಾಯಾಧೀಶರಿಂದಲೇ ಈಗ ತಾನೆ ಕೇಳಿದ್ದೇವೆ.

**ಶ್ರೀ ವೆಂಕಟರಾಮನ್:** ವಕೀಲಿ ವೃತ್ತಿ ನಿರತರು ಎಲ್ಲಾ ನ್ಯಾಯಾಲಯಗಳಲ್ಲಿ ಹಾಜರಾಗಬಹುದೆಂಬ ಹಕ್ಕನ್ನು ಸಂವಿಧಾನದ ೨೨ನೇ ಅನುಚ್ಛೇದದಲ್ಲಿ ನೀಡಲಾಗಿದೆ. ಉತ್ಸಾಹಿ ನ್ಯಾಯವಾದಿಯೊಬ್ಬ ಈ ಅಧಿನಿಯಮವನ್ನು ಒಂದಿಲ್ಲೊಂದು ದಿನ ಖಂಡಿತವಾಗಿ ಪ್ರಶ್ನಿಸುತ್ತಾನೆ ಎಂಬುದರಲ್ಲಿ ಸಂಶಯವೇ ಇಲ್ಲ.

ಇದಲ್ಲದೆ (೨)ನೇ ಖಂಡದ ಪರಂತುಕದ (ಎ) ಭಾಗವನ್ನು ಬಿಟ್ಟುಬಿಡುವುದರಿಂದ ಸಚಿವರು ಏನನ್ನೂ ಕಳೆದುಕೊಂಡಂತಾಗುವುದಿಲ್ಲವೆಂಬ ಅಂಶವನ್ನು ನಾನು ಅವರ ಗಮನಕ್ಕೆ ತರಬಯಸುತ್ತೇನೆ. ಬಾಂಬೆಯಲ್ಲಿಯೂ ಸಹ ಮೂಲ ಪಕ್ಷದ ಪರ ಹಾಗೂ ಮೇಲ್ಮನವಿ ಪಕ್ಷದ ಪರ ವಕೀಲರ ನಡುವಣ ವ್ಯತ್ಯಾಸವನ್ನು ತೆಗೆದುಹಾಕಿದ್ದಾರೆ.

**ಡಾ.ಅಂಬೇಡ್ಕರ್:** ನ್ಯಾಯವಾದಿಗಳು ಕೆಲಸಮಯದ ತರುವಾಯ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗಲು ಅನುಮತಿ ನೀಡಲಾಗುತ್ತದೆ.

**ಶ್ರೀ ವೆಂಕಟರಾಮನ್:** ಮೇಲ್ಮನವಿ ಪಕ್ಷದ ವಕೀಲಿ ವೃತ್ತಿನಿರತರು ಮೂಲ ಪಕ್ಷದ ಪರವಾಗಿ ಹಾಜರಾಗುವ ಹಕ್ಕು ಹೊಂದಿರುವುದಿಲ್ಲ ಎಂದು ಈವರೆಗೆ ಇದ್ದ ಪದ್ಧತಿ ಈಗ ಇಲ್ಲ. ಅಪೀಲು ಪಕ್ಷದ ವಕೀಲರು ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿರುವಂತೆ ಮೂಲ ಪಕ್ಷದ ಪರವಾಗಿಯೂ ಹಾಜರಾಗಬಹುದಾಗಿದೆ. ಮದ್ರಾಸ್ ಉಚ್ಚ ನ್ಯಾಯಾಲಯದ ಸಂಬಂಧದಲ್ಲಿ ಅಪೀಲು ಪಕ್ಷ ಹಾಗೂ ಮೂಲಪಕ್ಷದ ವಕೀಲರ ನಡುವೆ ಯಾವುದೇ ಅಂತರವಿಲ್ಲ. ಮದ್ರಾಸ್ ಉಚ್ಚ ನ್ಯಾಯಾಲಯದ ನ್ಯಾಯವಾದಿಯು ಮೂಲ ಹಾಗೂ ಅಪೀಲು ಪಕ್ಷಗಳೆರಡಕ್ಕೂ ಹಾಜರಾಗಬಹುದಾಗಿದೆ.

**ಡಾ.ಅಂಬೇಡ್ಕರ್:** ಅವರು (ಪಾದರಕ್ಷೆಗಳಿಲ್ಲದೆಯೂ ಹೋಗುತ್ತಾರೆ) ಯೋಚಿಸದೇ ಮಾಡುತ್ತಾರೆ.

**ಶ್ರೀ ವೆಂಕಟರಾಮನ್:** ಕೆಲವು ಪದ್ಧತಿಗಳಿವೆ. ನಮ್ಮ ದೇಶದವರಿಗೆ ಗಾಬರಿ ಹುಟ್ಟಿಸುವ ಕೆಲವರನ್ನು ನಾನು ನೋಡಿದ್ದೇನೆ. ಪಾದರಕ್ಷೆಗಳ ವಿಷಯ ಇಲ್ಲಿ ಅಪ್ರಸ್ತುತ. ನಮಗೆ ಬೇಕಾಗಿರುವುದು ವಕೀಲಿ ವೃತ್ತಿ ನಿರತರ ಹಕ್ಕುಗಳು. ಬಾಂಬೆ ಉಚ್ಚ ನ್ಯಾಯಾಲಯದ ವೃತ್ತಿನಿರತನ ಸ್ಥಿತಿಯು ಅದೇ ಆಗಿದೆ. ಬಾಂಬೆ ಮತ್ತು ಮದ್ರಾಸ್ ಉಚ್ಚ ನ್ಯಾಯಾಲಯಗಳ ನಡುವಿನ ಅಂತರ ಮುಂದಿನ ಅಂಶದಲ್ಲಿದೆ: ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ದ್ವಿವಿಧ ವ್ಯವಸ್ಥೆ ಇಲ್ಲ. ಒಬ್ಬ ಅಟಾರ್ನಿ ಅಥವಾ ಸಾಲಿಸಿಟರು ಒಬ್ಬ ನ್ಯಾಯವಾದಿಗೆ ಮೂಲ ಪಕ್ಷದ ಪರವಾಗಿ ಹಾಜರಾಗುವಂತೆ ಸೂಚಿಸಬೇಕಾದ ಅಗತ್ಯವಿಲ್ಲ. ಆದರೆ, ಅಪೀಲು ಪಕ್ಷದ ಪರ ಸಂಬಂಧಿಸಿದಂತೆ ಮೂಲ ಪಕ್ಷದ ವಕೀಲನಿಗೆ ಒಬ್ಬ ಸಾಲಿಸಿಟರ್ ಅಥವಾ ಅಟಾರ್ನಿ ಸೂಚನೆ ನೀಡಬೇಕಾದ ವ್ಯವಸ್ಥೆ ಅಲ್ಲಿದೆ. ಸಾಲಿಸಿಟರ್ ಹಾಗೂ ಅಟಾರ್ನಿಗಳು ತಮ್ಮ ವಿಶೇಷ ಅಧಿಕಾರಗಳನ್ನು ಉಳಿಸಿಕೊಳ್ಳಲು ಪ್ರಾಶಸ್ತ್ಯ ನೀಡುವರೆಂದು ನನ್ನ ಅನಿಸಿಕೆ. ಅವರ ಹಕ್ಕುಗಳ ಮಟ್ಟಿಗೆ ಹೇಳುವುದಾದರೆ ಅದನ್ನು ಕಾಪಾಡಬೇಕು. ಯಾವುದೇ ವೃತ್ತಿನಿರತ ಹಾಜರಾಗಲಿ ಆದರೆ ಆತನಿಗೆ ಅಟಾರ್ನಿ ಅಥವಾ ಸಾಲಿಸಿಟರು ಸೂಚನೆ ನೀಡಬೇಕು. ಉದ್ದೇಶ ಇದೇ ಆಗಿದ್ದರೆ, "ವಾದಿಸಲು" ಎಂಬ ಪದಗಳನ್ನು ಕೈಬಿಟ್ಟು ಈ ವ್ಯವಸ್ಥೆಯನ್ನು ಸಾಧಿಸಬಹುದು ಹಾಗೂ ಕಾಪಾಡಬಹುದು. ಸರ್ವೋಚ್ಚ ನ್ಯಾಯಾಲಯದ ಯಾರೇ ವಕೀಲನು ಮುಂಬಯಿ ಅಥವಾ ಇತರೆ ಯಾವುದೇ ಉಚ್ಚ ನ್ಯಾಯಾಲಯದ ಯಾರೇ ವಕೀಲನು ಮುಂಬಯಿ ಅಥವಾ ಇತರೆ ಯಾವುದೇ ಉಚ್ಚ ನ್ಯಾಯಾಲಯಕ್ಕೆ ಮೂಲ ಪಕ್ಷದ ಪರವಾಗಿ ವಾದಿಸಲು ಹೋಗುವುದನ್ನು ತಡೆಹಿಡಿಯಬಹುದಾಗಿದೆ. ಒಂದು ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾದಾಗ ಒಬ್ಬ ನ್ಯಾಯವಾದಿಯು ಅದರಲ್ಲಿ ಹಾಜರಾಗಿದ್ದರೂ ಹಾಗೂ ಆ ಪ್ರಕರಣವನ್ನು

ನ್ಯಾಯಾಲಯದ ಮೂಲ ಪಕ್ಷದ ಸಂಬಂಧದಲ್ಲಿ ಹಿಂದಕ್ಕೆ ಕಳುಹಿಸಿದ್ದರೂ, ಈ ವಿಧೇಯಕದ ಪರಂತುಕದ (ಎ) ಭಾಗದಿಂದಾಗಿ ಸರ್ವೋಚ್ಚ ನ್ಯಾಯಾಲಯದ ಆ ವಕೀಲನು ಪ್ರಕರಣದ ಮೂಲ ಪಕ್ಷದ ಪರವಾಗಿ ಹಾಜರಾಗುವುದು ಅಸಾಧ್ಯವಾಗುತ್ತದೆ.

**ಒಬ್ಬ ಮಾನ್ಯ ಸದಸ್ಯ:** ಈಗಾಗಲೇ ಐದು ಗಂಟೆ, ಅವರು ನಾಳೆ ಮುಂದುವರೆಸಲಿ.

*ಸದನವನ್ನು ೨೦–೪–೧೯೫೧ರ ಶುಕ್ರವಾರ ಹತ್ತು ಮುಕ್ಕಾಲು ಗಂಟೆಯವರೆಗೆ ಮುಂದೂಡಲಾಯಿತು.*

## *ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳ (ಉಚ್ಚ ನ್ಯಾಯಾಲಯಗಳಲ್ಲಿ ವೃತ್ತಿ ಕೈಗೊಳ್ಳುವ) ವಿಧೇಯಕ– ಮುಕ್ತಾಯ

**ಸಭಾಧ್ಯಕ್ಷರು:** ಶಾಸನ ವ್ಯವಹಾರಗಳನ್ನು ಮುಂದುವರಿಸಿ, ಡಾ.ಅಂಬೇಡ್ಕರ್‌ರವರು ನಿನ್ನೆ ಮಂಡಿಸಿದ ಪ್ರಸ್ತಾವವನ್ನು ಮತ್ತಷ್ಟು ಪರಿಶೀಲಿಸೋಣ:

ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳು ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಹಕ್ಕು ಎಂಬಂತೆ ವಕೀಲಿ ವೃತ್ತಿ ಕೈಗೊಳ್ಳಲು ಅಧಿಕಾರ ನೀಡುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು"

**ಶ್ರೀ ವೆಂಕಟರಾಮನ್ (ಮದ್ರಾಸ್):** ನಿನ್ನೆ ನಾನು, ಈ ವಿಧೇಯಕ ಒಂದು ಸ್ವಾಗತಾರ್ಹ ಕ್ರಮ ಎಂದು ನಿವೇದಿಸಿದ್ದೆ. ಆದರೆ, ಪರಂತುಕವು ಈ ವಿಧೇಯಕದ ಉದ್ದೇಶಕ್ಕೆ ವಿರುದ್ಧವಾಗಿದೆ, ಅದು ಹೇಗೆ ಎಂಬುದನ್ನು ನಾನು ತಿಳಿಸಲು ಪ್ರಯತ್ನಿಸುತ್ತಿದ್ದೆ.

**ಕಾನೂನು ಸಚಿವರು (ಡಾ.ಅಂಬೇಡ್ಕರ್):** ಕಾರ್ಯವಿಧಾನವನ್ನು ಸಂಕ್ಷಿಪ್ತಗೊಳಿಸಲು, ಬೇರೆ ಷರತ್ತುಗಳಿಗೆ ಒಳಪಟ್ಟು ನಾನು ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಿದ್ಧನಿರುವೆನೆಂದು ಹೇಳುತ್ತೇನೆ.

**ಶ್ರೀ ವೆಂಕಟರಾಮನ್:–** ಮಾನ್ಯ ಕಾನೂನು ಸಚಿವರು ಸೂಚನೆಯನ್ನು ಸ್ವೀಕರಿಸಿದ್ದಕ್ಕಾಗಿ ನಾನು ಅವರಿಗೆ ಅಭಾರಿಯಾಗಿದ್ದೇನೆ. ಆದ್ದರಿಂದ ನಾನು ಪರಂತುಕದಲ್ಲಿಯ (ಎ) ವಿರೋಧವಿಲ್ಲದೆ ವಿಧೇಯಕವನ್ನು ಮನಃಪೂರ್ವಕವಾಗಿ ಬೆಂಬಲಿಸುತ್ತೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ (ಪಂಜಾಬ್):–** ನಾನು ವಿಧೇಯಕವನ್ನು ಬೆಂಬಲಿಸುತ್ತೇನೆ. (ಬಿ) ಪರಂತುಕದ ವಿಷಯದಲ್ಲಿ ನನ್ನ ಕೋರಿಕೆ ಇದೆ.

> "(ಬಿ) ತಾವು ಯಾವುದೇ ಕಾಲದಲ್ಲಿ ನ್ಯಾಯಮೂರ್ತಿಗಳಾಗಿದ್ದಂಥ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಮಾಡಬೇಕಾದರೆ, ಅಂಥ ನ್ಯಾಯಮೂರ್ತಿಗಳಾಗಿ ಅಧಿಕಾರ ಸ್ಥಾನದಿಂದ ನಿವೃತ್ತರಾದ ಬಳಿಕ, ವಕೀಲಿ ವೃತ್ತಿಯನ್ನು ಮಾಡುವುದಿಲ್ಲವೆಂದು ಅವರು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದರೆ."

ಒಂದು ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ವ್ಯಕ್ತಿ ಅದೇ ಉಚ್ಚ ನ್ಯಾಯಾಲಯದಲ್ಲಿ ವೃತ್ತಿಯನ್ನು ಕೈಗೊಳ್ಳಲು ನಿಷೇಧ ವಿಧಿಸುವುದು ಯಾವುದೇ ಮುಚ್ಚಳಿಕೆ ಪತ್ರವನ್ನು ಅವಲಂಬಿಸಿರಬಾರದು. ಒಂದು ನ್ಯಾಯಾಲಯದ ಮಾಜಿ ನ್ಯಾಯಾಧೀಶರು ಅದೇ ನ್ಯಾಯಾಲಯದಲ್ಲಿ ವೃತ್ತಿಯನ್ನು ಕೈಗೊಳ್ಳಬಾರದೆಂಬುದು ಒಂದು ಸಾರ್ವಜನಿಕ ಕಾರ್ಯನೀತಿ. ಆದರೆ, ಈ ಪರಂತುಕವು ಮುಚ್ಚಳಿಕೆ ಪತ್ರದ ಷರತ್ತನ್ನು ವಿಧಿಸುತ್ತದೆ. ಹಲವಾರು ಉಚ್ಚ ನ್ಯಾಯಾಲಯಗಳಲ್ಲಿ ಇಂಥ ಮುಚ್ಚಳಿಕೆ

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೨೯–೩೪.

ಪತ್ರಗಳನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಮಾಜಿ ನ್ಯಾಯಾಧೀಶರನ್ನು, ಒಂದು ನ್ಯಾಯಾಲಯದಲ್ಲಿ ವೃತ್ತಿ ಕೈಗೊಳ್ಳುವುದರಿಂದ ನಿಷೇಧಿಸಬೇಕಾದರೆ ಅದು ಯಾವುದೇ ಮುಚ್ಚಳಿಕೆಪತ್ರದ ಮೇಲೆ ಅವಲಂಬಿತವಾಗಬೇಕಿಲ್ಲ. ಸಂವಿಧಾನದ ಒಂದು ಅನುಚ್ಛೇದದಲ್ಲಿ, ಮಾಜಿ ನ್ಯಾಯಾಧೀಶರು ಯಾವುದೇ ನ್ಯಾಯಾಲಯದಲ್ಲಿ, ನ್ಯಾಯಾಧೀಶರಾಗಿದ್ದರೂ ಅದೂ ಒಳಗೊಂಡಂತೆ ಇತರೆ ನ್ಯಾಯಾಲಯಗಳಲ್ಲಿಯೂ ವೃತ್ತಿ ಮಾಡುವುದನ್ನು ನಿಷೇಧಿಸುವಂತಹ ಅನುಚ್ಛೇದ ಸಂವಿಧಾನದಲ್ಲಿದೆ. (ಬಿ) ಪರಂತುಕವು ಇದಕ್ಕೆ ವಿರುದ್ಧವಾಗಿದೆ ಎಂಬುದು ನನ್ನ ವಿನಂತಿ. ಅಂಥ ನ್ಯಾಯಾಧೀಶರು ಮುಚ್ಚಳಿಕೆ ಪತ್ರವನ್ನು ನೀಡದೆ ಇದ್ದರೆ ಉಚ್ಚ ನ್ಯಾಯಾಲಯದಲ್ಲಿ ವೃತ್ತಿ ಕೈಗೊಳ್ಳಲು ಈ ಪರಂತುಕವು ಅನುಮತಿಸುತ್ತದೆ. ಆದರೆ, ಮಾಜೀ ನ್ಯಾಯಾಧೀಶರು ಯಾವುದೇ ಉಚ್ಚ ನ್ಯಾಯಾಲಯದಲ್ಲಿ ವೃತ್ತಿ ಕೈಗೊಳ್ಳುವುದನ್ನು ಸಂವಿಧಾನದಲ್ಲಿ ನಿಷೇಧಿಸಲಾಗಿದೆ.

**ಡಾ.ಟೇಕ್ ಚಂದ್ (ಪಂಜಾಬ್):** ಸಂವಿಧಾನವು ಜಾರಿಯಲ್ಲಿ ಬಂದ ನಂತರ ನೇಮಕಗೊಂಡ ನ್ಯಾಯಾಧೀಶರು.

**ಡಾ.ಅಂಬೇಡ್ಕರ್:** ಹೌದು ನಿಯಮ ಅದೇ ಆಗಿದೆ.

***ಅಧ್ಯಕ್ಷರು:** ತಿದ್ದುಪಡಿಗಳ ಪ್ರಶ್ನೆ ತರುವಾಯ ಬರುತ್ತದೆ. ಮಾನ್ಯ ಕಾನೂನು ಸಚಿವರು ಉತ್ತರ ನೀಡಿದ ತರುವಾಯ ಮಾನ್ಯ ಸದಸ್ಯರ ಬಹುಪಾಲು ಸಂಶಯಗಳು ನಿವಾರಣೆಯಾಗಿರಬಹುದು. ಇನ್ನು ನಾವು ತಿದ್ದುಪಡಿಗಳನ್ನು ಕುರಿತು ಯೋಚಿಸಬಹುದು.

**ಡಾ.ಅಂಬೇಡ್ಕರ್:** ಮಾನ್ಯ ಸದಸ್ಯರುಗಳು ತಮ್ಮ ಭಾಷಣದಲ್ಲಿ ಎತ್ತಿದ ಬಹುಪಾಲು ಪ್ರಶ್ನೆಗಳು ವಿಧೇಯಕದ ಗುಣಾತ್ಮಕ ಅಂಶಗಳನ್ನು ಕುರಿತವುಗಳಾಗಿಲ್ಲ. ಬಾರ್‌ನ ಒಗ್ಗೂಡಿಸುವಿಕೆಗೆ ಸಂಬಂಧಿಸಿದ ವಾದ ವಿಷಯ ನಿರೂಪಿತವಾಗಿದೆ. ನಿನ್ನೆ ನಾನು ತಿಳಿಸಿದಂತೆ ಮೂಲಭೂತವಾಗಿ ಬಾರಿನ ಒಗ್ಗೂಡಿಸುವಿಕೆಯ ವಿಷಯ ಈ ವಿಧೇಯಕದ ಗುರಿಯ ವಿಧೇಯಕದ ಗುರಿ ಅತ್ಯಂತ ಸೀಮಿತವಾಗಿದ್ದು, ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳು ತಮ್ಮ ಸ್ವತಂತ್ರ ಅಧಿಕಾರ ವ್ಯಾಪ್ತಿಯಲ್ಲಿ ನ್ಯಾಯವಾದಿಗಳನ್ನು ನೋಂದಣಿ ಮಾಡುವುದರಿಂದ ಉಂಟಾಗುವ ತೊಂದರೆಗಳನ್ನು ನಿವಾರಿಸುವ ಉದ್ದೇಶ ವಿಧೇಯಕಕ್ಕಿದೆ. ಒಂದು ವಿಷಯವನ್ನು ಸರ್ವೋಚ್ಚ ನ್ಯಾಯಾಲಯದಿಂದ ಉಚ್ಚ ನ್ಯಾಯಾಲಯಕ್ಕೆ ಹಿಂದಕ್ಕೆ ಕಳುಹಿಸಿದಾಗ ಪಕ್ಷಕಾರರು ಸರ್ವೋಚ್ಚ ನ್ಯಾಯಾಲಯದಲ್ಲಿ ಹಾಜರಾಗಲು ನಿಯೋಜಿಸಿಕೊಂಡ ವಕೀಲರಿಗೆ ಉಚ್ಚ ನ್ಯಾಯಾಲಯದಲ್ಲಿ ಹಾಜರಾಗಲು ಅವರಿಗೆ ಇಲ್ಲದಿರುವುದರಿಂದ ಪಕ್ಷಕಾರರು ತೊಂದರೆಗೊಳಗಾಗುತ್ತಾರೆ. ಇದು ಈ ವಿಧೇಯಕದ ಸೀಮಿತ ಉದ್ದೇಶ. ಒಂದು ಸಾಮಾನ್ಯ ಅಪೇಕ್ಷೆಯನುಸಾರ ಈ ಸೀಮಿತ ಉದ್ದೇಶವನ್ನು ಸಾಧಿಸುವಾಗ ಬಾರನ್ನು ಒಗ್ಗೂಡಿಸುವ ದಿಸೆಯಲ್ಲಿ ಏನನ್ನಾದರೂ ಮಾಡಬಹುದು. ವಿಧೇಯಕದ ಪ್ರಸಕ್ತ ಉದ್ದೇಶದಾಚೆಗಿರುವ ಎರಡು ಪ್ರಸ್ತಾವಗಳನ್ನು ನಾನು ಸ್ವೀಕರಿಸಿದ್ದೇನೆ.

ಮೊದಲನೆಯ ಪ್ರಸ್ತಾವವೆಂದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿದ ಎಲ್ಲ ವಕೀಲರು ಎಲ್ಲಾ ಉಚ್ಚ ನ್ಯಾಯಾಲಯಗಳಲ್ಲಿ ವೃತ್ತಿ ಕೈಗೊಳ್ಳಲು ಅನುಮತಿಸುವುದು, ಎಂದರೆ ಬೇರೆ ಬೇರೆ ಉಚ್ಚ ನ್ಯಾಯಾಲಯಗಳ ಅಧೀನ ನ್ಯಾಯಾಲಯಗಳಲ್ಲಿ ವೃತ್ತಿ ಕೈಗೊಳ್ಳುವ ಹಕ್ಕು.

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೪೦–೪೨.

ನಾನು ಒಪ್ಪಿರುವ ಎರಡನೇ ಅಂಶವೆಂದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಿದ ವಕೀಲರು ವೃತ್ತಿ ನಡೆಸಲು ಈ ವಿಧೇಯಕದಿಂದ ನೀಡಲಾದ ಹಕ್ಕನ್ನು ಮೇಲ್ಮನವಿ ಪಕ್ಷಕ್ಕೆ ಸೀಮಿತಗೊಳಿಸುವಂತೆ ಮೂಲದಲ್ಲಿ ವಿಧಿಸಲಾದ ನಿರ್ಬಂಧಗಳನ್ನು ತೆಗೆದುಹಾಕುವುದು. ಈ ಖಂಡವನ್ನು ತೆಗೆದುಹಾಕಲಾಗುತ್ತಿದೆ.

ನಾನು ವಿವಿಧ ಭಾಷಣಗಳನ್ನು ಕೇಳಿದ್ದೇನೆ. ನಾನು ಹೇಳುವುದಿಷ್ಟೇ, ನನಗೆ ತೊಂದರೆಗಳು ಅರಿವಿಗೆ ಬಂದಿವೆ. ಬೇರೆ ಬೇರೆ ಸದಸ್ಯರು ವ್ಯಕ್ತಪಡಿಸಿದ ದೃಷ್ಟಿಕೋನದ ಬಗ್ಗೆ ನನಗೆ ಕಳಕಳಿಯಿದೆ. ಅವಕಾಶ ಹಾಗೂ ಸಮಯವಿದ್ದಾಗ ಭಾರತ ಸರ್ಕಾರವು ಈ ವಿಷಯವನ್ನು ಪರಿಗಣಿಸಿ ಎಲ್ಲ ಸದಸ್ಯರ ಮನದಿಂಗಿತದಂತೆ ಭಾರತದಲ್ಲಿ ಬಾರನ್ನು ಒಗ್ಗೂಡಿಸಲು ಒಂದು ಸಮಗ್ರ ಕ್ರಮವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಈಗ ನಾನು ಪ್ರಶ್ನೆಯ ಈ ಅಂಶದ ಬಗ್ಗೆ ಹೆಚ್ಚು ವಿವರಿಸುವುದಿಲ್ಲ.

ನನ್ನ ಸ್ನೇಹಿತ ಪಂಡಿತ್ ಠಾಕೂರ್ ದಾಸ್ ಭಾರ್ಗವ್ ಎತ್ತಿದ ಒಂದು ಪ್ರಶ್ನೆ ಮಾತ್ರ ಬಾಕಿ ಇದೆ. ಅದು ವಿಧೇಯಕದ ಗುಣಾತ್ಮಕ ಅಂಶಗಳ ಪರಿಧಿಯ ಆಚೆಗಿನದು. ನಾವು ಸಂಸತ್ತಿನಲ್ಲಿ ಏನೆ ಮಾಡಿದರೂ ಅದು ಯಾವಾಗಲೂ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟಿರಬೇಕು. ಒಬ್ಬ ಆರೋಪಿಯು ತನ್ನ ಪರವಾಗಿ ವಾದಿಸಲು ಒಬ್ಬ ಕಾನೂನು ವೃತ್ತಿನಿರತನನ್ನು ನಿಯೋಜಿಸಿಕೊಳ್ಳಲು ಸಂವಿಧಾನದ ೨೨ನೇ ಅನುಚ್ಛೇದ ಅನುಮತಿಸಿದರೆ, ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದಿಂದ ಜಾರಿಯಾದ ನೋಂದಣಿ ನಿಯಮದ ಮೇರೆಗೆ ಒಬ್ಬನು ಸಂವಿಧಾನದ ಅರ್ಥವ್ಯಾಪ್ತಿಯಲ್ಲಿ ಕಾನೂನು ವೃತ್ತಿನಿರತನಾಗಿರದಿದ್ದರೆ, ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದಿಂದ ಮಾಡಿದ ನಿಯಮಗಳಿಗೆ ಸಂವಿಧಾನದ ಅನುಚ್ಛೇದಕ್ಕೂ ವ್ಯತ್ಯಾಸ ಉಂಟಾಗುತ್ತದೆ. ಅಂತಿಮವಾಗಿ ಸಂವಿಧಾನದ ವ್ಯಾಪ್ತಿ ಉಳಿಯುತ್ತದೆ. ಈ ಕ್ಷಣದಲ್ಲಿ ಕಾನೂನು ವೃತ್ತಿನಿರತ ಎಂಬುದನ್ನು ಸಂವಿಧಾನದಲ್ಲಿ ಯಾವ ಅರ್ಥದಲ್ಲಿ ಬಳಸಲಾಗಿದೆ ಎಂಬುದು ನನಗೆ ಸ್ಪಷ್ಟವಾಗಿಲ್ಲ ಎಂದು ಹೇಳಬಯಸುತ್ತೇನೆ. ನ್ಯಾಯಾಲಯಕ್ಕೆ ಹೋಗಿ ಯಾವುದೇ ವಿಷಯದ ಬಗ್ಗೆ ನ್ಯಾಯಾಲಯದ ಮುಂದೆ ಹಾಜರಾಗುವವನು ಕಾನೂನು ವೃತ್ತಿನಿರತ ಎಂಬ ಅರ್ಥದಲ್ಲಿ ಬಳಕೆಯಾಗಿದೆಯೋ ಅಥವಾ ಸಂವಿಧಾನದಲ್ಲಿ ಇದನ್ನು ಪಾರಿಭಾಷಿಕದ ಅರ್ಥದಲ್ಲಿ ಬಳಸಿದ್ದು ಕಾನೂನು ವೃತ್ತಿನಿರತ ಎಂದರೆ ಕಾನೂನು ವೃತ್ತಿನಿರತರ ಅಧಿನಿಯಮ ಅಥವಾ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದಿಂದ ಮಾಡಲಾದ ನಿಯಮಗಳ ಮೇರೆಗಿನ ಕಾನೂನು ವೃತ್ತಿನಿರತನೋ ಎಂಬುದರ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ತಿಳಿಸುವುದು ನನ್ನ ಅಧಿನಿಯಮದಡಿ ಸಾಮಾನ್ಯ ಹಕ್ಕು ದೊರೆತಿಲ್ಲ ಎಂಬುದನ್ನು ನನ್ನ ಸ್ನೇಹಿತ ಪಂಡಿತ್ ಠಾಕೂರ್‌ದಾಸ್ ಕೂಡ ಅರಿತಿದ್ದಾರೆ. ಕೆಲವರಿಗಾಗಿ ಎಂದೇ ಗುರುತಿಸಲಾದ ಹಾಗೂ ಸೀಮಿತವಾದ ಕೆಲವು ಕ್ಷೇತ್ರಗಳಿವೆ. ಉದಾಹರಣೆಗೆ ಪ್ಲೀಡರರು ಹಾಗೂ ಮುಖ್ತಿಯಾರ್‌ರು ಅಧಿನಿಯಮದ ಅರ್ಥವ್ಯಾಪ್ತಿಯಲ್ಲಿ ಕಾನೂನು ವೃತ್ತಿನಿರತರೆ. ಆದರೆ, ಠಾಕೂರ್ ದಾಸ್ ತಿಳಿದಿರುವಂತೆ ಅವರಿಗೆ ವೃತ್ತಿ ಕೈಗೊಳ್ಳುವ ಸಾಮಾನ್ಯ ಹಕ್ಕು ಇಲ್ಲ. ಹಾಗೂ, ಶಾಶ್ವತವಾಗಿ ವಕೀಲಿ ವೃತ್ತಿ ಕೈಗೊಳ್ಳುವ ಹಕ್ಕು ಅವರಿಗಿಲ್ಲ. ಅವರ ಪ್ರಮಾಣ ಪತ್ರಗಳು ವಾರ್ಷಿಕವಾಗಿದ್ದು ಅವುಗಳ ಅವಧಿ ಮುಗಿದೊಡನೆಯೇ ಅವರು ಕಾನೂನು ವೃತ್ತಿನಿರತರಾಗಿರುವುದು ನಿಂತುಹೋಗುತ್ತದೆ. ಈ ವಿಧೇಯಕದ ಉದ್ದೇಶದ ಮಟ್ಟಿಗೆ ಇದೆಲ್ಲ ಅಪ್ರಸ್ತುತ. ಹಾಗೂ ನ್ಯಾಯಾಲಯದ ಮುಂದೆ ಈ ವಿಷಯವನ್ನು ಎತ್ತಿದಾಗ ಅವೆಲ್ಲ ಅಂಶಗಳು ಅವುಗಳ ಮಟ್ಟಿಗೆ ಉಳಿಯುತ್ತವೆ. ನಾನು ವಿವರಿಸಬೇಕಾದ ಇತರೆ ಯಾವುದೇ ವಿಷಯ ಇರುವಂತೆ ತೋರುವುದಿಲ್ಲ.

**ಅಧ್ಯಕ್ಷರು:** ವಿಷಯ:

"ಯಾವುದೇ ಉಚ್ಚ ನ್ಯಾಯಾಲಯದಲ್ಲಿ, ಹಕ್ಕು ಎಂಬಂತೆ, ವೃತ್ತಿಯನ್ನು ಮುಂದುವರಿಸಲು ಸರ್ವೋಚ್ಚ ನ್ಯಾಯಾಲಯದ ವಕೀಲರಿಗೆ ಅಧಿಕಾರ ನೀಡುವ ಈ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳೋಣವಾಗಲಿ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಖಂಡ ೨.**— (ಯಾವುದೇ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಕೈಗೊಳ್ಳುವ ಹಕ್ಕು).

**ಅಧ್ಯಕ್ಷರು:** ಮಾನ್ಯ ಸಚಿವರು ಯಾವುದೇ ತಿದ್ದುಪಡಿಗಳನ್ನು ಒಪ್ಪುತ್ತಾರೆಯೇ?

**ಡಾ.ಅಂಬೇಡ್ಕರ್:** ಪರಂತುಕದ (ಎ) ಭಾಗವನ್ನು ಬಿಟ್ಟುಬಿಡಲು ಶ್ರೀ ಅಹಮದ್ ಮಿರಾನ್ ಮಾಡಿದ ೭ನೇ ತಿದ್ದುಪಡಿಯ ಹೊರತಾಗಿ ನಾನು ಯಾವ ತಿದ್ದುಪಡಿಯನ್ನು ಒಪ್ಪುವುದಿಲ್ಲ. (ಎ)ಯನ್ನು ಬಿಟ್ಟುಬಿಡುವುದರಿಂದ (ಬಿ)ಗೆ ಮರು ಸಂಖ್ಯೆ ನೀಡಬೇಕಾಗುವುದರಿಂದ ಅಗತ್ಯವಾಗಿರುತ್ತದೆಂಬುದು ತುಸು ಮರು ಪ್ರರೂಪಣೆಯು ನನ್ನ ಮಿತ್ರರಿಗೆ ತಿಳಿದಿದೆ.

*ಅಧ್ಯಕ್ಷರು: ಪ್ರಶ್ನೆಯ ಈ ಭಾಗದ ಕುರಿತಾಗಿ ಮಾನ್ಯ ಸಚಿವರು ಉತ್ತರಿಸುತ್ತಾರೆಂದು ನನ್ನ ಭಾವನೆ.

**ಡಾ.ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರು ಈಗಾಗಲೇ ಸ್ಥಿತಿಯನ್ನು ವಿವರಿಸಿರುವುದರಿಂದ ನಾನು ಹೆಚ್ಚಿನದೇನನ್ನೂ ಹೇಳಬೇಕಾಗುವುದಿಲ್ಲವೆಂದು ನನ್ನ ಭಾವನೆ. ಆದರೆ, ಅವರು ಹೇಳಿದುದರ ಸರಳ ರೂಪ ಹೀಗಿದೆ: ಸಂವಿಧಾನವು ಪ್ರಾರಂಭವಾದ ತರುವಾಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಅಧಿಕಾರ ವಹಿಸಿಕೊಂಡ ಮುಂದಿನ ನ್ಯಾಯಾಧೀಶರಿಗೆ ಸಂವಿಧಾನದ ೨೨೦ನೇ ಅನುಚ್ಛೇದವು ಅನ್ವಯವಾಗುತ್ತವೆ. ಅವರು ಸರ್ವೋಚ್ಚ ನ್ಯಾಯಾಲಯ ಅಥವಾ ಯಾವುದೇ ನ್ಯಾಯಾಲಯ ಎಂದರೆ ಉಚ್ಚ ನ್ಯಾಯಾಲಯ ಅಥವಾ ಅಧೀನ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಡಾ.ಟೇಕ್ ಚಂದ್:** ಭಾರತದಲ್ಲಿ.

**ಡಾ.ಅಂಬೇಡ್ಕರ್:** ಹೌದು, ಭಾರತದಲ್ಲಿ ಏಕೆಂದರೆ ೨೨೦ನೇ ಅನುಚ್ಛೇದದಲ್ಲಿ ಅದನ್ನು ನಿರ್ದಿಷ್ಟವಾಗಿ ತಿಳಿಸಲಾಗಿದೆ. ಸಂವಿಧಾನವು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ನ್ಯಾಯಾಧೀಶರಾಗಿದ್ದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ನಾವು ಪ್ರಸ್ತಾಪಿಸಿದ್ದೆವು. ನನ್ನ ಮಾನ್ಯ ಮಿತ್ರರು ತಿಳಿಸಿದಂತೆ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂದೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದವರನ್ನು ವಾದದ ಉದ್ದೇಶಕ್ಕಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದಾಗಿದೆ. ಒಂದು ವರ್ಗ ತಮ್ಮ ನ್ಯಾಯಾಲಯದಲ್ಲಿ ವೃತ್ತಿ ನಡೆಸುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟವರು. ಎರಡನೆ ವರ್ಗ ಆ ರೀತಿ ಯಾವುದೇ ಮುಚ್ಚಳಿಕೆ ನೀಡದೆ ಇರುವವರು. ಈ ಪರಂತುಕದಲ್ಲಿ, ಹಾಗೆ ಮುಚ್ಚಳಿಕೆ ಬರೆದುಕೊಟ್ಟ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ನಿರ್ಬಂಧ ವಿಧಿಸಲಾಗಿದೆ. ಇದು ಸರಳ ಸ್ಥಿತಿ. ಈ ಸದನವು ಪರಂತುಕದ ವ್ಯಾಪ್ತಿಯಲ್ಲಿ ವಿಸ್ತರಿಸಿ ಹಾಗೆ ಮುಚ್ಚಳಿಕೆ ಬರೆದುಕೊಡದಿರುವ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೂ ವೃತ್ತಿ ನಡೆಸಲು ಅನುಮತಿ ನೀಡದಿರುವುದು ಸಾಧ್ಯವಿದೆ. ಅದು, ವಿಧಾನಮಂಡಲದ ಅಧಿಕಾರಗಳಿಗೆ ಸಂಬಂಧಿಸಿದ ಅಂಶ. ಆದರೆ, ಈಗಿನ ಅಂಶವೆಂದರೆ ತಮ್ಮ ನಿವೃತ್ತಿಯ ತರುವಾಯ ವೃತ್ತಿ ನಡೆಸಲು ತಮಗೆ

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೪೭–೪೯.

ಅನುಮತಿ ಸಿಗುವುದೆಂಬ ನಿಶ್ಚಿತ ಷರತ್ತಿನ ಮೇಲೆ ಅವರು ಹುದ್ದೆಯನ್ನು ಒಪ್ಪಿಕೊಂಡಿದ್ದರು. ಆದರೆ ಈಗ ಶಾಸನವನ್ನು ಪೂರ್ವಾನ್ವಯಗೊಳಿಸುವಂತೆ ಮಾಡುವುದು ತಪ್ಪು ಹಾಗೂ ಅನುಚಿತ ಹಾಗೂ ಅವರು ಮುಚ್ಚಳಿಕೆ ನೀಡದೆ ಇದ್ದರೂ ಅವರು ವೃತ್ತಿ ನಡೆಸಬಾರದೆಂಬ ಹೊಸ ನಿಯಮದ ನಿರ್ಬಂಧಕ್ಕೆ ಒಳಪಡುತ್ತಾರೆಂದು ಹೇಳುವುದು ತಪ್ಪು. ಆದ್ದರಿಂದ (ಬಿ) ಉಪಖಂಡವನ್ನು ಸೀಮಿತಗೊಳಿಸಿ, ಮುಚ್ಚಳಿಕೆ ನೀಡಿರುವವರಿಗೆ ಮಾತ್ರ ಅದು ಅನ್ವಯವಾಗುವಂತೆ ಮಾಡಿರುವುದು. ಇದರಿಂದ ಯಾವುದೇ ಅನ್ಯಾಯ ಮಾಡಿದಂತಾಗುವುದಿಲ್ಲ.

**ಶ್ರೀ ನಾಜಿರುದ್ದೀನ್ ಅಹಮದ್:** (ಬಿ) ಪರಂತುಕವು, ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ನ್ಯಾಯಾಧೀಶರಾಗಿದ್ದವರಿಗೆ ಮಾತ್ರ ಸೀಮಿತವಾಗಿಲ್ಲ ಎಂಬ ಅಂಶವನ್ನು ಹೇಳಬಯಸುತ್ತೇನೆ. "ಆತನು ಯಾವುದೇ ಸಮಯದಲ್ಲಿ ನ್ಯಾಯಾಧೀಶನಾಗಿದ್ದರೂ ಉಚ್ಚ ನ್ಯಾಯಾಲಯದಲ್ಲಿ ವೃತ್ತಿ ನಡೆಸಲು" ಎಂದು ಪರಂತುಕದಲ್ಲಿ ಹೇಳಲಾಗಿದೆಯೇ ಹೊರತು ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಎಂದು ಹೇಳಿಲ್ಲ.

**ಡಾ.ಅಂಬೇಡ್ಕರ್**: ಇಲ್ಲಿನ ಅಂಶವೆಂದರೆ ಆ ಎರಡನೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಅದನ್ನು ಸಂಪೂರ್ಣವಾಗಿ ಸಂವಿಧಾನದಲ್ಲಿಯೇ ವಿವರಿಸಲಾಗಿದೆ.

**ನಾಸಿರುದ್ದೀನ್ ಅಹಮದ್:** ನಾನು ಹೇಳಿದ ಅಂಶದ ಪ್ರಸಕ್ತಿ ಇದ್ದರೆ.

**ಡಾ.ಅಂಬೇಡ್ಕರ್**: ಸಂವಿಧಾನವು ಮಾಡಿರುವುದನ್ನು ನೀವೇಕೆ ಮಾಡಲು ಬಯಸುತ್ತೀರಿ? ಮುಚ್ಚಳಿಕೆಯ ಪ್ರಶ್ನೆ ಇಲ್ಲ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರುಗಳ ಸಂಬಂಧದಲ್ಲಿ ಸಂವಿಧಾನದಲ್ಲಿಯೇ ಅಂತಿಮವಾಗಿ ಇತ್ಯರ್ಥಗೊಳಿಸಲಾಗಿದೆ. ಕಾನೂನಿನ ವ್ಯಾಪ್ತಿಯಲ್ಲಿ ಒಳಗೊಳ್ಳದ ಆದರೆ ಕೇವಲ ಭರವಸೆಗಳು, ತಿಳಿವಳಿಕೆಗಳು ಹಾಗೂ ಮುಚ್ಚಳಿಕೆಗಳ ಮೂಲಕ ನಿಯಂತ್ರಿಸಲಾಗುತ್ತಿದ್ದ ಇಕ್ಕಟ್ಟಿನ ಸ್ಥಿತಿ ಕುರಿತು ನಾವು ವ್ಯವಹರಿಸುತ್ತಿದ್ದೇವೆ.

**ಅಧ್ಯಕ್ಷರು**: ಮಾನ್ಯ ಸಚಿವರು ಇನ್ನೊಂದು ಅಂಶವನ್ನು ಸ್ಪಷ್ಟಪಡಿಸುತ್ತಾರೆಯೇ? ಸಂವಿಧಾನವು ಜಾರಿಯಾದ ನಂತರ, ವೃತ್ತಿ ನಡೆಸುವ ತಮ್ಮ ಹಕ್ಕನ್ನು ಹಿಂಪಡೆಯಬಯಸಿದ್ದ ನ್ಯಾಯಾಧೀಶರಿಗೆ, ರಾಜೀನಾಮೆ ನೀಡಿ ನ್ಯಾಯಾಧೀಶರಾಗಿ ಮುಂದುವರಿಯುವುದನ್ನು ನಿಲ್ಲಿಸುವ ಆಯ್ಕೆಯನ್ನು ನೀಡಲಾಗಿತ್ತೇ?

**ಡಾ.ಅಂಬೇಡ್ಕರ್**: ಅವರಿಗೆ ಪರಿಸ್ಥಿತಿಯ ಅರಿವಿತ್ತು. ಸಂವಿಧಾನ ಅಡಿಗಲ್ಲಾಗಿತ್ತು. ಅವರ ಪೈಕಿ ಕೆಲವರು ನನಗೆ ತಿಳಿದ ಒಂದಿಬ್ಬರು ರಾಜೀನಾಮೆ ನೀಡಿದರು. ಏಕೆಂದರೆ ಅವರು ಆ ಸ್ಥಿತಿಯನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಇದು ಪ್ರತಿಯೊಬ್ಬರಿಗೂ ಗೊತ್ತಿದೆ.

**ಶ್ರೀ ಜೆ.ಆರ್. ಕಪೂರ್:** ನ್ಯಾಯಾಧೀಶರಿಗೆ ರಾಜೀನಾಮೆ ನೀಡುವ ಆಯ್ಕೆಯನ್ನು ಕೊಡಲಾಗಿತ್ತೆಂದು ಹಾಗೂ ರಾಜೀನಾಮೆಯ ಕೆಲವು ಪ್ರಸಂಗಗಳು ಆದವೆಂಬ ಅಂಶದ ಬಗ್ಗೆ ನಾನು ಸದನಕ್ಕೆ ಮಾಹಿತಿ ನೀಡಬಯಸುತ್ತೇನೆ. ಇಂತಹ ಪ್ರಕರಣ ಅಲಹಾಬಾದಿನಲ್ಲಿ ಆಯಿತು. ಈ ಹೊಸ ಅನುಚ್ಛೇದದ ಕಾರಣದಿಂದಾಗಿಯೇ ಅಲಹಾಬಾದ್ ಉಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರು ರಾಜೀನಾಮೆ ನೀಡಿದರು.

**ಅಧ್ಯಕ್ಷರು:** ಕಲ್ಕತ್ತಾ ಉಚ್ಚ ನ್ಯಾಯಾಲಯದಲ್ಲಿಯೂ ಇಂತಹದೊಂದು ಪ್ರಕರಣ ಆಯಿತು.

**ಡಾ.ಅಂಬೇಡ್ಕರ್**: ಸದನಕ್ಕೆ ಮಾಹಿತಿ ನೀಡುವುದಾದರೆ ಉಚ್ಚ ನ್ಯಾಯಾಲಯದ ಪ್ರತಿಯೊಬ್ಬ ನ್ಯಾಯಾಧೀಶರು ಈಗ ನಿವೃತ್ತರಾಗಿದ್ದರೂ ವೃತ್ತಿ ನಡೆಸದಿರುವಂತೆ ಮುಚ್ಚಳಿಕೆ ನೀಡಿದ್ದಾರೆ. ಮುಚ್ಚಳಿಕೆ

ನೀಡದಿರುವವರು ಇಬ್ಬರು ಮಾತ್ರ. ಅವರು ಇನ್ನೂ ಬದುಕಿದ್ದಾರೆ (ಒಬ್ಬ ಸದಸ್ಯರು: ಒಬ್ಬರು ಇಲ್ಲಿದ್ದಾರೆ). ತೊಂದರೆ ಎಂದು ಹೇಳುವುದರ ವ್ಯಾಪ್ತಿ ಇಷ್ಟು ಸೀಮಿತವಾಗಿದೆ.

**ಅಧ್ಯಕ್ಷರು :** ಶ್ರೀ ಮಿರಾನ್ ಅವರು ತಿದ್ದುಪಡಿಯನ್ನು ಮಂಡಿಸಲಿ.

**ಡಾ.ಅಂಬೇಡ್ಕರ್** : ಅದನ್ನು ಈಗಾಗಲೇ ಮಂಡಿಸಲಾಗಿದೆ.

**ಶ್ರೀ ವೆಂಕಟರಾಮನ್ :** ಆ ಕುರಿತು ನಾನು ಸಾಮಾನ್ಯ ಚರ್ಚೆಯಲ್ಲಿ ಮಾತನಾಡಿದೆ.

**ಅಧ್ಯಕ್ಷರು:**ಸನ್ಮಾನ್ಯ ಸದಸ್ಯರು ಈ ವಿಧೇಯಕವನ್ನು ಐದು ನಿಮಿಷಗಳಲ್ಲಿ ಅಂಗೀಕರಿಸಲು ಒಪ್ಪಬಹುದೇ?

**ಹಲವಾರು ಸದಸ್ಯರು :** ಹೌದು.

**ಶ್ರೀ ಜೆ.ಆರ್. ಕಪೂರ್:** ೧ನೇ ಖಂಡವನ್ನು ಚರ್ಚೆಗೆ ಎತ್ತಿಕೊಂಡಾಗ ನನಗೆ ಸ್ವಲ್ಪ ಸಮಯದ ಅವಕಾಶ ನೀಡಬೇಕು. ಆ ವಿಷಯ ಕುರಿತು ನನಗೆ ತೀವ್ರ ಭಾವನೆಗಳಿವೆ.

**ಅಧ್ಯಕ್ಷರು:** ಸದನವನ್ನು ೨–೩೫ರವರೆಗೆ ಮುಂದೂಡಲಾಗಿದೆ.

*ಸದನವನ್ನು ಭೋಜನ ವಿರಾಮಕ್ಕಾಗಿ ೨–೩೫ರವರೆಗೆ ಮುಂದೂಡಲಾಯಿತು.*

*ಭೋಜನ ವಿರಾಮದ ತರುವಾಯ ಸದನವು ೨–೩೫ಕ್ಕೆ ಮತ್ತೆ ಸೇರಿತು.*

(ಪಂಡಿತ್ ಠಾಕೂರ್ ದಾಸ್ ಭಾರ್ಗವ್ ಅಧ್ಯಕ್ಷರು)

***ಅಧ್ಯಕ್ಷರು:** ಎರಡು ತಿದ್ದುಪಡಿಗಳನ್ನು ಮಾತ್ರ ಮಂಡಿಸಲಾಗಿದೆ. ಈಗ ನಾನು ಅವುಗಳನ್ನು ಮತಕ್ಕೆ ಹಾಕುತ್ತೇನೆ.

**ಶ್ರೀ ಮಿರಾನ್:** ಸಂ. ೭ ನ್ನು ೬ಕ್ಕೆ ಮುಂಚೆ ಮಂಡಿಸಬೇಕು.

**ಶ್ರೀ ಕಪೂರ್:** ನಿಮ್ಮ ಅನುಮತಿಯಿಂದ ಹಾಗೂ ಕಾನೂನು ಸಚಿವರು ಒಪ್ಪಿದರೆ "ವಿವರಣೆ" ಯನ್ನು ಬಿಟ್ಟುಬಿಡಬೇಕೆಂದು ಸೂಚಿಸುತ್ತೇನೆ.

**ಡಾ.ಅಂಬೇಡ್ಕರ್**: ಇಲ್ಲ, ವಿವರಣೆ ಅಗತ್ಯ. ಅದು ಏಕೆ ಅಗತ್ಯ ಎಂಬುದನ್ನು ನಾನು ಶ್ರೀ ಕಪೂರ್‌ರವರು ಮತ್ತೊಂದು ವಿಧೇಯಕಕ್ಕೆ ತಮ್ಮ ತಿದ್ದುಪಡಿಯನ್ನು ಮಂಡಿಸುವಾಗ ವಿವರಿಸುತ್ತೇನೆ.

ಖಂಡ ೨ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರ್ಪಡೆಯಾಯಿತು.

****ಅಧ್ಯಕ್ಷರು:** ಮಾನ್ಯ ಸಚಿವರು ಉತ್ತರಿಸಲು ಬಯಸುವರೇ?

**ಡಾ.ಅಂಬೇಡ್ಕರ್**: ಉತ್ತರದ ಅಗತ್ಯವಿಲ್ಲ.

**ಅಧ್ಯಕ್ಷರು:** ವಿಷಯ:

"ಖಂಡ ೧ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಖಂಡ ೧ ವಿಧೇಯಕಕ್ಕೆ ಸೇರ್ಪಡೆಯಾಯಿತು.

ಶೀರ್ಷಿಕೆ ಹಾಗೂ ಅಧಿನಿಯಮಿಸಬೇಕಾದ ಭಾಗ ವಿಧೇಯಕಕ್ಕೆ ಸೇರ್ಪಡೆಯಾದವು.

**ಡಾ.ಅಂಬೇಡ್ಕರ್**: ತಿದ್ದುಪಡಿಯಾದಂತೆ ವಿಧೇಯಕವು ಅಂಗೀಕೃತವಾಗಬೇಕೆಂದು ನಾನು ಕೋರುತ್ತೇನೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

---

** ಪಿ.ಡಿ. Vol. 10, ಭಾಗ ೨, ೦ ಏಪ್ರಿಲ್ ೧೯೫೧, ಪು. ೭೧೫೦

# ೩೦

## *ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕ

**ಕಾನೂನು ಸಚಿವರು (ಡಾ.ಅಂಬೇಡ್ಕರ್):** ಸಿವಿಲ್ ಪ್ರಕ್ರಿಯಾ ಸಂಹಿತೆ ೧೯೦೮ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

**ಅಧ್ಯಕ್ಷರು:** ಪ್ರಶ್ನೆ:

> "ಸಿವಿಲ್ ಪ್ರಕ್ರಿಯಾ ಸಂಹಿತೆ ೧೯೦೮ನ್ನು ಮತ್ತಷ್ಟು ತಿದ್ದುಪಡಿ ಮಾಡಲು ವಿಧೇಯಕವನ್ನು ಮಂಡಿಸಲು ಅನುಮತಿ ಕೋರಲಾಗಿದೆ."

ಪ್ರಸ್ತಾವವನ್ನು ಅಳವಡಿಸಲಾಯಿತು.

**ಡಾ.ಅಂಬೇಡ್ಕರ್:** ನಾನು ವಿಧೇಯಕವನ್ನು ಮಂಡಿಸುತ್ತೇನೆ.

## **ಸಿವಿಲ್ ಮತ್ತು ದಂಡಪ್ರಕ್ರಿಯಾ ಸಂಹಿತೆಗಳ (ತಿದ್ದುಪಡಿ) ವಿಧೇಯಕ

***ಕಾನೂನು ಸಚಿವರು (ಡಾ.ಅಂಬೇಡ್ಕರ್): ೧೯೦೩ರ ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ಹಾಗೂ ೧೮೯೮ರ ದಂಡಪ್ರಕ್ರಿಯಾ ಸಂಹಿತೆಗೆ ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಅಧೀನ ನ್ಯಾಯಾಂಗದ ಅಧಿಕಾರ ವ್ಯಾಪ್ತಿಯನ್ನು ಬದಲಿಸಲು ಈ ವಿಧೇಯಕದಲ್ಲಿ ಕೋರಲಾಗಿದೆ. ಕೇಂದ್ರ ಅಥವಾ ಪ್ರಾಂತೀಯ ವಿಧಾನ ಮಂಡಲದಿಂದ ಮಾಡಲಾದ ಯಾವುದೇ ಕಾನೂನು ಆ ವಿಧಾನಮಂಡಲದ ಅಧಿಕಾರದೊಳಗಿನದೇ ಅಥವಾ ಮೀರಿದುದೇ ಎಂಬುದನ್ನು ಘೋಷಿಸಲು ಸಂವಿಧಾನವು ನ್ಯಾಯಾಲಯಗಳಿಗೆ ಹಕ್ಕು ನೀಡುತ್ತದೆ. ಎಲ್ಲ ಅಧೀನ ನ್ಯಾಯಾಧೀಶರು ಈ ಅಧಿಕಾರವನ್ನು ಚಲಾಯಿಸುತ್ತಿರುವುದು ಹಾಗೂ ಕೆಲವು ಕಾನೂನುಗಳು ಅಧಿಕಾರ ಮೀರಿದ್ದು ಎಂದು ಅಭಿಪ್ರಾಯಪಟ್ಟ ವಿವಿಧ ಅಧೀನ ನ್ಯಾಯಾಲಯಗಳು ನೀಡಿರುವ ಕೆಲವು ತೀರ್ಪುಗಳು ಕುತೂಹಲವಾಗಿರುವ ವಿಷಯ ಸಂಸತ್ ಸದಸ್ಯರಿಗೆ ತಿಳಿದಿರಬಹುದು. ರಾಜ್ಯಗಳು ಮಾಡಿದ ಕಾನೂನುಗಳು ರಾಜ್ಯದ ಅಧಿಕಾರದೊಳಗಿನವೇ ಅಥವಾ ಮೀರಿದವುಗಳೇ ಎಂಬ ಬಗ್ಗೆ ಘೋಷಿಸಲು ಅಧಿಕಾರವನ್ನು ಅಧೀನ ನ್ಯಾಯಾಂಗಕ್ಕೆ ಬಿಟ್ಟುಕೊಡುವುದು ಸರಿಯಲ್ಲವೆಂದು ಭಾವಿಸಲಾಗಿದೆ.

ಮೊದಲನೆಯದಾಗಿ, ಒಂದು ಕಾನೂನಿನ ಅಧಿಕಾರದೊಳಗಿನ ಅಥವಾ ಆಚೆಗಿನ ಸಮಸ್ಯೆಗಳನ್ನು ನಿರ್ವಹಿಸಲು ಅಧೀನ ನ್ಯಾಯಾಂಗವು ಅರ್ಹತೆ ಹೊಂದಿರುವುದಿಲ್ಲ. ಅಧೀನ ನ್ಯಾಯಾಲಯಗಳ

---

* ಪಿ.ಡಿ. Vol. 7, ಭಾಗ ೨, ೧೮ನೇ ಡಿಸೆಂಬರ್ ೧೯೫೦, ಪು. ೧೮೩೪–೩೫.

** ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೫೩–೭೬.

*** ಅದೇ., ಪು. ೭೧೫೩–೫೪.

ಮುಂದೆ ಹಾಜರಾಗುವ ಬಾರ್, ನ್ಯಾಯಾಲಯಗಳಿಗೆ ಅಂಥ ಅಂಶಗಳ ಕುರಿತು ಸರಿಯಾದ ತೀರ್ಪು ನೀಡಲು ಸಹಾಯ ಮಾಡಲು ಸಕ್ಷಮವೆಂದು ಹೇಳಲಾಗದು, ಸಂವಿಧಾನಾತ್ಮಕ ಮಹತ್ವ ಪಡೆದ ಪ್ರಶ್ನೆಗಳ ಕುರಿತಂತೆ ತೀರ್ಪಿನಲ್ಲಿ ಏಕರೂಪತೆ ಇರಬೇಕಾದ ಕಾರಣದಿಂದ ಯಾವುದೇ ಕಾನೂನು ಅಧಿಕಾರದಾಚೆಗಿನದು ಎಂದು ಘೋಷಿಸುವ ಅಧಿಕಾರವನ್ನು ಅಧೀನ ನ್ಯಾಯಾಂಗದಿಂದ ಹಿಂತೆಗೆದುಕೊಳ್ಳುವುದು ಸರಿಯಾದ ಕ್ರಮ. ಅಮೇರಿಕಾದ ಕೆಲವು ರಾಜ್ಯಗಳಲ್ಲಿ ಜಾರಿಯಲ್ಲಿರುವ ವಿಧಾನವನ್ನು ಈ ವಿಧೇಯಕದಲ್ಲಿ ಅನುಸರಿಸಲಾಗಿದೆ. ಅಮೇರಿಕೆಯಲ್ಲಿಯೂ ಸಂವಿಧಾನಾತ್ಮಕ ಮಹತ್ವ ಪಡೆದ ವಿಷಯಗಳ ಬಗ್ಗೆ ತೀರ್ಪು ನೀಡದಂತೆ ಅಧೀನ ನ್ಯಾಯಾಂಗವನ್ನು ನಿರ್ಬಂಧಗೊಳಿಸಲಾಗಿದೆ.

ಇದರ ಹೊರತು ಈ ವಿಧೇಯಕದಲ್ಲಿ ವಿಶೇಷವಾದುದೇನೂ ಇಲ್ಲ. ಯಾರೇ ಅಧೀನ ನ್ಯಾಯಾಧೀಶರು ಯಾವುದೇ ಕಾನೂನು ಅಧಿಕಾರದಾಚೆಗಿನದು ಎಂಬ ಅಭಿಪ್ರಾಯಹೊಂದಿದ್ದರೆ, ಆ ವಿಷಯದಲ್ಲಿ ಉಚ್ಚ ನ್ಯಾಯಾಲಯಕ್ಕೆ ಕಳಿಸಿ ಅದರ ನಿರ್ಧಾರಕ್ಕಾಗಿ ಕಾದುನೋಡಬೇಕೆಂಬ ಪರಂತುಕವನ್ನು ಸೇರಿಸುವ ಮೂಲಕ ಸಿವಿಲ್ ಪ್ರಕ್ರಿಯಾ ಸಂಹಿತೆಯ ೧೧೩ನೇ ಪ್ರಕರಣವನ್ನು ಈ ವಿಧೇಯಕದ ಮೂಲಕ ತಿದ್ದುಪಡಿ ಮಾಡಲು ನಾವು ಉದ್ದೇಶಿಸಿದ್ದೇವೆ. ಅಧಿನಿಯಮವು ಅಧಿಕಾರದಾಚೆಗಿನದು ಎಂದು ಯಾವುದೇ ದಂಡಾಧಿಕಾರಿಗೆ ತೋರಿದರೆ ಅದಕ್ಕಾಗಿ ಪ್ರಕರಣವನ್ನು ಉಚ್ಚ ನ್ಯಾಯಾಲಯಕ್ಕೆ ಕಳಿಸಬೇಕೆಂದು ದಂಡಾಧಿಕಾರಿಯನ್ನು ಅಗತ್ಯಪಡಿಸುವುದಕ್ಕಾಗಿ ದಂಡಪ್ರಕ್ರಿಯಾ ಸಂಹಿತೆಯ ೪೩೨ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಈ ವಿಧೇಯಕದಲ್ಲಿ ಇರುವ ಈ ವಿಷಯವನ್ನು ಸದನಕ್ಕೆ ತಿಳಿಸಬಯಸುತ್ತೇನೆ.

**ಅಧ್ಯಕ್ಷರು:** ೧೯೦೮ರ ಸಿವಿಲ್ ಪ್ರಕ್ರಿಯಾ ಸಂಹಿತೆ ಮತ್ತು ೧೮೯೮ರ ದಂಡ ಪ್ರಕ್ರಿಯಾ ಸಂಹಿತೆಗಳಿಗೆ ಮತ್ತಷ್ಟು ತಿದ್ದುಪಡಿ ಮಾಡಲು ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂಬ ಪ್ರಸ್ತಾವವನ್ನು ಮಂಡಿಸಲಾಗಿದೆ.

*ಡಾ.ಟೇಕ್ ಚಂದ್: ಈ ವಿಧೇಯಕವು ಸತ್ವಯುತ ತತ್ತ್ವಗಳನ್ನು ಆಧರಿಸಿದ್ದು ಇನ್ನೂ ಹೆಚ್ಚಿನ ಚರ್ಚೆಯಿಲ್ಲದೆ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ಕೋರುತ್ತೇನೆ.

ನನ್ನ ಸನ್ಮಾನ್ಯ ಮಿತ್ರರಾದ ಶ್ರೀ ಶಿವಚರಣ್ ಲಾಲ್ ಅವರ ಅಭಿಪ್ರಾಯ ಕುರಿತಂತೆ ಒಂದು ಮಾತು ಹೇಳಲು ಬಯಸುತ್ತೇನೆ. ಈಗಾಗಲೇ ವಿಧೇಯಕದಲ್ಲಿರುವ "ಅಧಿನಿಯಮ, ಅಧ್ಯಾದೇಶ ಹಾಗೂ ವಿನಿಯಮಗಳು" ಎಂಬ ಪದಗಳ ತರುವಾಯ "ನಿಯಮಗಳು ಅಥವಾ ಆದೇಶಗಳು" ಎಂಬ ಪದಗಳನ್ನು ಸೇರಿಸಬೇಕೆಂದು ತಿಳಿಸಿರುತ್ತಾರೆ. ಎಂದರೆ ಒಂದು ಅಧಿನಿಯಮ. ಅಧ್ಯಾದೇಶ ಅಥವಾ ವಿನಿಯಮದ ಅಡಿ ಅಂಗೀಕೃತವಾದ ಒಂದು ನಿರ್ದಿಷ್ಟ ನಿಯಮ ಅಥವಾ ಆದೇಶದ ಸಿಂಧುತ್ವಕ್ಕೆ ಸಂಬಂಧಪಟ್ಟ ಪ್ರಶ್ನೆ ಉದ್ಭವಿಸಿದರೆ ಅದನ್ನು ಒಂದು ಅಧಿನಿಯಮ, ಅಧ್ಯಾದೇಶ ಅಥವಾ ವಿನಿಯಮದ ಸಿಂಧುತ್ವಕ್ಕೆ ಸಂಬಂಧಪಟ್ಟ ಅಂಶಗಳಿಗೆ ವಿಧೇಯಕದಲ್ಲಿ ಉಪಬಂಧ ಕಲ್ಪಿಸಿರುವ ರೀತಿಯಲ್ಲಿಯೇ ನ್ಯಾಯಾಲಯಕ್ಕೆ ಕಳುಹಿಸಬೇಕು. ನಾನು ಹೇಳುವುದೇನೆಂದರೆ ಒಂದು ನಿಯಮವನ್ನು ರಚಿಸಲು ಅಥವಾ ಆದೇಶವನ್ನು ಮಾಡಲು ಅಧಿಕಾರವನ್ನು ಪಡೆದ ಒಬ್ಬ ಕಲೆಕ್ಟರ್ ಅಥವಾ ಇತರ ಅಧಿಕಾರಿಯು ಮಾಡಿದ ಯಾವುದೇ ಆದೇಶದ

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೭೨–೭೬.

ಸಿಂಧುತ್ವಕ್ಕೆ ಸಂಬಂಧಪಟ್ಟ ಪ್ರತಿಯೊಂದು ಚಿಕ್ಕ ಪ್ರಕರಣವನ್ನು ಉಚ್ಚ ನ್ಯಾಯಾಲಯಕ್ಕೆ ಕಳುಹಿಸುವ ಅಗತ್ಯವಿರುವುದಿಲ್ಲ ಹಾಗೂ ಅದು ಅಪೇಕ್ಷಣೀಯವೂ ಅಲ್ಲ. ಇದರಿಂದ ಉಚ್ಚ ನ್ಯಾಯಾಲಯಕ್ಕೆ ಕಳುಹಿಸುವ ಪ್ರಕರಣಗಳ ಸಂಖ್ಯೆ ಅನಗತ್ಯವಾಗಿ ಹೆಚ್ಚಾಗುತ್ತವೆ. ವಿಧೇಯಕದಲ್ಲಿ ತಿಳಿಸಲಾಗಿರುವಂತೆ ಮೂರು ಸಂದರ್ಭಗಳು ಅತ್ಯಂತ ಪ್ರಮುಖವಾಗಿರುತ್ತದೆ. (i) ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮ (ii) ಅಧಿನಿಯಮದಷ್ಟೇ ಮಹತ್ವ ಪಡೆದ ಅಧ್ಯಾದೇಶಗಳು (iii) ವಿನಿಯಮಗಳು. ವಿನಿಯಮವನ್ನು ಕೂಡ ಪ್ರತಿಯೊಂದನ್ನು ಕಳುಹಿಸದೇ ಕೇವಲ ಬಂಗಾಲ್, ಬಾಂಬೆ ಹಾಗೂ ಮದ್ರಾಸ್‌ಗಳಲ್ಲಿ ಅಥವಾ ಸಾಮಾನ್ಯ ಖಂಡಗಳ ಅಧಿನಿಯಮ ೧೮೯೭ರಲ್ಲಿ ಪರಿಭಾಷಿಸಲಾದ ವಿನಿಯಮಗಳನ್ನು ಮಾತ್ರ ಕಳುಹಿಸಬಹುದಾಗಿದೆ. ಏಕೆಂದರೆ ಇವು ವಿಧಾನಮಂಡಲಗಳು ಸ್ಥಾಪನೆಗೊಳ್ಳುವುದಕ್ಕೆ ಮುಂಚೆ ಪ್ರಖ್ಯಾತಗೊಂಡ ಪ್ರಾಚೀನ ನಿಯಮಗಳು ಎಂಬ ಕಾರಣಕ್ಕಾಗಿ ಅಲ್ಲದೆ ಇವು ಶಾಸನ ಪುಸ್ತಕದಲ್ಲಿ ಇರುವವುಗಳಾಗಿದ್ದು ಅವು ಅಧಿನಿಯಮ ಹಾಗೂ ಅಧ್ಯಾದೇಶಗಳಷ್ಟೇ ಮಹತ್ವ ಹಾಗೂ ಬಲವನ್ನು ಪಡೆದಿವೆ. ಉದಾಹರಣೆಗೆ ೧೮೧೮ರ ನಿಮಯ III. ಆದ್ದರಿಂದ ಒಂದು ರಾಜ್ಯ ಅಧಿನಿಯಮದ ಸಿಂಧುತ್ವಕ್ಕೆ ಸಂಬಂಧಪಟ್ಟ ಪ್ರಕರಣಗಳಿಗೆ ಮಾತ್ರವೇ ವಿಧೇಯಕವು ಅನ್ವಯವಾಗುತ್ತಿದ್ದು, ಒಬ್ಬ ಕಲೆಕ್ಟರ್ ಅಥವಾ ಸರ್ಕಾರದಿಂದ ಅಧಿಕಾರ ಪಡೆದ ಸರ್ಕಾರದ ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಮಾಡಿದ ಆದೇಶದ ಸಿಂಧುತ್ವಕ್ಕೆ ವಿಧೇಯಕವು ಅನ್ವಯಿಸುವುದಿಲ್ಲ. ಇವು ವಿಧೇಯಕದ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಮಾನ್ಯರೆ, ಇದು ಉತ್ತಮ ಉಪಬಂಧವಾಗಿದ್ದ ವಿಧೇಯಕವನ್ನು ಅದಿರುವಂತೆಯೇ ಅಂಗೀಕರಿಸಬೇಕೆಂದು ನನ್ನ ಭಾವನೆ.

**ಡಾ.ಅಂಬೇಡ್ಕರ್**: ಸಮಯಾವಕಾಶ ಬಹಳ ಕಡಿಮೆ ಇರುವುದರಿಂದ ಹಾಗೂ ಈಗಾಗಲೇ ನನ್ನ ಮಿತ್ರರು ಹೇಳಿರುವುದಕ್ಕಿಂತ ಹೆಚ್ಚಾಗಿ ಹೇಳಬೇಕಾದ ವಿಷಯ ಏನೂ ಇಲ್ಲದಿರುವುದರಿಂದ ನನ್ನ ಸನ್ಮಾನ್ಯ ಮಿತ್ರ ಡಾ. ಟೇಕ್‌ಚಂದ್ ಅಭಿಪ್ರಾಯಗಳನ್ನು ಅಳವಡಿಸಿಕೊಳ್ಳಲು ಅನುಮತಿ ಕೋರುತ್ತೇನೆ. ಈಗಾಗಲೇ ನಾವು ಈ ಪ್ರಶ್ನೆಗಳನ್ನು ಚರ್ಚಿಸಿದ್ದು ನನಗೆ ಅವಕಾಶ ಸಿಕ್ಕದಿದ್ದರೆ ನಾನು ಹೇಳಬಹುದಾಗಿದ್ದ ಅಂಶಗಳನ್ನೇ ಅವರು ವ್ಯಕ್ತಪಡಿಸಿದ್ದಾರೆ. ಅದು ಸಮರ್ಪಕವಾಗಿದೆ ಎಂದು ನನ್ನ ಅಭಿಪ್ರಾಯ. ಯಾವುದೇ ತಿದ್ದುಪಡಿಯಿಂದ ಉದ್ಭವಿಸುವ ಇತರೆ ಯಾವುದೇ ಅಂಶ ಅಥವಾ ವಿಷಯ ಇದ್ದರೆ ಖಂಡಿತವಾಗಿಯೂ ನಾನು ಆ ಬಗ್ಗೆ ವ್ಯವಹರಿಸುತ್ತೇನೆ.

**ಅಧ್ಯಕ್ಷರು:** ವಿಷಯ:

> "೧೯೦೮ರ ಸಿವಿಲ್ ಪ್ರಕ್ರಿಯಾ ಸಂಹಿತೆಗೆ ಮತ್ತು ೧೮೯೮ರ ದಂಡ ಪ್ರಕ್ರಿಯಾ ಸಂಹಿತೆಗೆ ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು"

ಪ್ರಸ್ತಾವವನ್ನು ಅಳವಡಿಸಲಾಯಿತು.

**ಖಂಡ ೨.**— (೧೯೦೮ರ ಅಧಿನಿಯಮ ೫ಕ್ಕೆ ತಿದ್ದುಪಡಿ)

**ಶ್ರೀ ಶಿವಚರಣ್ ಲಾಲ್:** ಮಾನ್ಯ ಕಾನೂನು ಸಚಿವರು ಅಂಗೀಕರಿಸಲು ಒಪ್ಪಿದರೆ ಈ ಖಂಡಕ್ಕೆ ನಾನು ಒಂದು ತಿದ್ದುಪಡಿ ಮಂಡಿಸಬೇಕು. ಇಲ್ಲವಾದರೆ ನಾನು ಅದನ್ನು ಮಂಡಿಸುವುದಿಲ್ಲ.

**ಡಾ.ಅಂಬೇಡ್ಕರ್**: ಇಲ್ಲ ಇದು ಸ್ವೀಕರಿಸುವ ಇಚ್ಛೆ ಇಲ್ಲ.

**ಶ್ರೀ ಕೆ. ವೈದ್ಯ:** ಆದೇಶ XLVI ರ ನಿಯಮ ೨ ಹಾಗೂ ಅದೇ ಆದೇಶದ ನಿಯಮ ೫

ಅಸಂಗತವಾಗಿದ್ದು ಆ ಬಗ್ಗೆ ಮಾನ್ಯ ಕಾನೂನು ಸಚಿವರು ಸ್ಪಷ್ಟೀಕರಣ ನೀಡಬೇಕೆಂದು ಕೋರುತ್ತೇನೆ. ಪಟ್ಟಿ ೩ರ, ನಾನು ಸೂಚಿಸಿದ ೨ ಹಾಗೂ ೩ನೇ ತಿದ್ದುಪಡಿಗಳನ್ನು ನಾನು ಉಲ್ಲೇಖಿಸುತ್ತಿದ್ದೇನೆ. ನಾನು ೧ನೇ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ನಾನು ಈಗಾಗಲೇ ಈ ಅಂಶವನ್ನು ಎತ್ತಿದ್ದು ಈ ಬಗ್ಗೆ ಕಾನೂನು ಸಚಿವರು ಏನು ಹೇಳುತ್ತಾರೆಂಬುದನ್ನು ಕೇಳಬಯಸುತ್ತೇನೆ.

**ಡಾ.ಅಂಬೇಡ್ಕರ್**: ನನ್ನ ಮಿತ್ರರು ಪ್ರಸ್ತಾವಿಸಿದ ತಿದ್ದುಪಡಿಗಳನ್ನು ಸ್ವೀಕರಿಸಲು ನಾನು ಸಿದ್ಧನಿಲ್ಲ. ಏಕೆಂದರೆ ಒಂದು ಪ್ರಕರಣದಲ್ಲಿ ಎಲ್ಲ ವ್ಯವಹಾರಗಳನ್ನು ತಡೆಹಿಡಿಯುವುದು ಸರಿಯಲ್ಲ ಹಾಗೂ ಸೂಕ್ತವಲ್ಲ ಎಂದು ನನ್ನ ಭಾವನೆ.

**ಅಧ್ಯಕ್ಷರು:** ಶ್ರೀ ವೈದ್ಯ ಅವರು ಅದಕ್ಕಾಗಿಯೇ ತಮ್ಮ ತಿದ್ದುಪಡಿ ಸಂಖ್ಯೆ ೧ನ್ನು ಮಂಡಿಸುತ್ತಿಲ್ಲ.

**ಡಾ.ಅಂಬೇಡ್ಕರ್**: ಹೌದು ಸ್ವಾಮಿ, ಆದರೆ, ಇತರ ತಿದ್ದುಪಡಿಗಳ ಮೇಲೆ ಅವರ ತಿದ್ದುಪಡಿ ಸಂಖ್ಯೆ ೧ರ ಪರಿಣಾಮವಿರುತ್ತದೆ. ಅದನ್ನು ಮಂಡಿಸದಿದ್ದರೆ ಇತರ ತಿದ್ದುಪಡಿಗಳಿಗೆ ಅರ್ಥವಿರುವುದಿಲ್ಲ.

**ಶ್ರೀ ಕೆ. ವೈದ್ಯ:** ಆ ತಿದ್ದುಪಡಿಗಳು ಪರಿಣಾಮ ಬೀರುವುದಿಲ್ಲ ಏಕೆಂದರೆ--------

**ಅಧ್ಯಕ್ಷರು:** ಅವರು ಮೊದಲು ಪರಿಸ್ಥಿತಿಯನ್ನು ವಿವರಿಸಲಿ.

**ಡಾ.ಅಂಬೇಡ್ಕರ್**: ನನಗೆ ತಿಳಿದಿರುವಂತೆ ಪರಿಸ್ಥಿತಿ ಇದು. ಒಂದು ಪ್ರಕರಣದ ಸಂಬಂಧದಲ್ಲಿ ಅಧೀನ ನ್ಯಾಯಾಲಯವು ಉಚ್ಚ ನ್ಯಾಯಾಲಯಕ್ಕೆ ವಿಷಯವನ್ನು ಕಳುಹಿಸುವಾಗ ಆ ವಿಷಯಕ್ಕೆ ಸಂಬಂಧಿಸಿದ ಮುಂದಿನ ಎಲ್ಲ ವ್ಯವಹಾರಗಳನ್ನು ತಡೆಹಿಡಿಯಬೇಕಾಗುತ್ತದೆ. ಇದು ಸನ್ಮಾನ್ಯ ಸದಸ್ಯರ ಮಾತಿನ ಮೂಲಭೂತ ಅಂಶ. ಉಚ್ಚ ನ್ಯಾಯಾಲಯವು ತನ್ನ ದಾಖಲೆಗಳನ್ನು ವಿವರಣೆಯೊಂದಿಗೆ ಹಿಂದಿರುಗಿಸುವವರೆಗೆ ಏನನ್ನೂ ಮಾಡಕೂಡದು. ಸಂವಿಧಾನಾತ್ಮಕ ಸ್ವರೂಪದ ಅಂಶವನ್ನೊಳಗೊಂಡಿರುವ ಒಂದು ಪ್ರಕರಣದ ಇತರ ಅಂಶಗಳಲ್ಲಿ ಸಂವಿಧಾನದ ಸಂಬಂಧವಿಲ್ಲದಿರುವ ಕಾರಣಕ್ಕಾಗಿ ನಾನು ಪೂರ್ಣವಾಗಿ ಇದಕ್ಕೆ ನನ್ನ ಅಸಮ್ಮತಿ ತಿಳಿಸುತ್ತಿದ್ದೇನೆ. ಒಂದು ಪ್ರಕರಣದಲ್ಲಿ ಒಳಗೊಂಡಿರು ಹಲವು ಅಂಶಗಳಲ್ಲಿ ಒಂದು ಅಂಶವನ್ನು ಮ್ಯಾಜಿಸ್ಟ್ರೇಟ್ ಅವರು ಈ ವಿಧೇಯಕದ ಅಡಿಯಲ್ಲಿ ಉಚ್ಛನ್ಯಾಯಾಲಯಕ್ಕೆ ಪರಿಗಣನೆಗೆ ಕಳುಹಿಸಿದರೆ, ಆ ಪ್ರಕರಣದ ಇತರ ಅಂಶಗಳ ವಿಚಾರಣೆಯನ್ನು ನಡೆಸುವುದರಿಂದ ಅವರನ್ನು ಏಕೆ ಹಿಂತೆಗೆದುಕೊಳ್ಳಬೇಕು ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ. ಆದ್ದರಿಂದ ನಾನು

"ಸಿವಿಲ್ ಪ್ರಕ್ರಿಯಾ ಸಂಹಿತೆ ೧೯೦೮ರ ೧೧೩ನೇ ಪ್ರಕರಣದ ಉದ್ದೇಶಿತ ಪರಂತುಕದಲ್ಲಿ ೨ನೇ ಖಂಡದಲ್ಲಿ ಭಾಗ (i)ರಲ್ಲಿ ಪ್ರಕರಣದಲ್ಲಿ ಮುಂದಿನ ವ್ಯವಹರಣೆಯನ್ನು ತಡೆಹಿಡಿಯತಕ್ಕದ್ದು ಎಂಬುದನ್ನು ಕೊನೆಯಲ್ಲಿ ಸೇರಿಸಬೇಕು" ಎಂಬ ಅವರ ಮೊದಲನೆಯ ತಿದ್ದುಪಡಿಯನ್ನು ಒಪ್ಪಲು ಸಿದ್ಧನಿಲ್ಲ.

ಉಳಿದವುಗಳು ಪರಿಣಾಮಾತ್ಮಕ ಸಂಬಂಧ ಹೊಂದಿವೆ.

**ಶ್ರೀ ಕೆ. ವೈದ್ಯ:** ಅವು ಪರಿಣಾಮಾತ್ಮಕ ಸಂಬಂಧ ಹೊಂದಿಲ್ಲ. ಏಕೆಂದರೆ ತೀರ್ಪು ನೀಡಲಾದ ಪ್ರಕರಣಗಳ ಸಂಬಂಧದಲ್ಲಿ ಮಾತ್ರ XLVI ಆದೇಶದ ನಿಯಮ ೨ ಹಾಗೂ ನಿಯಮ ೫ ಪರಿಣಾಮಾತ್ಮಕವಾಗಿವೆ. ವಿವಾದಾಂಶವನ್ನು ಉಚ್ಚ ನ್ಯಾಯಾಲಯಕ್ಕೆ ತಿಳಿಸಲಾದ ಪ್ರಕರಣಗಳಲ್ಲಿ ತೀರ್ಪು ಆಗಿರುವುದೇ ಇಲ್ಲ. XX ಆದೇಶದ ೪ನೇ ನಿಯಮದಡಿ, ಮೊದಲು ವಿವಾದಾಂಶ ಇತ್ಯರ್ಥವಾಗಬೇಕು, ನಂತರ ಮಾತ್ರ ತೀರ್ಪು ನೀಡಲಾಗುತ್ತದೆ. XLVI ಆದೇಶದ ೨ನೇ ನಿಯಮವು ತೀರ್ಪನ್ನು ನೀಡಲಾದ ಪ್ರಕರಣಗಳಿಗೆ ಸಂಬಂಧಿಸಿದೆ. ೫ನೇ ನಿಯಮವು ತೀರ್ಪನ್ನು ನೀಡಲಾದ ಪ್ರಕರಣಗಳಿಗೆ ಸಂಬಂಧಿಸಿದೆ. ಆದ್ದರಿಂದ ಈ ಎರಡು ನಿಯಮಗಳು ಅಸಂಗತವಾಗಿವೆ ಅಥವಾ ಈ ವಿಧೇಯಕಕ್ಕೆ ಅನ್ವಯಿಸುವುದಿಲ್ಲ.

**ಡಾ.ಅಂಬೇಡ್ಕರ್**: ಅದು ಅಧೀನ ನ್ಯಾಯಾಧೀಶರ ವಿವೇಚನೆಗೆ ಬಿಟ್ಟ ಅಂಶ. ಅವರು ವ್ಯವಹರಣೆಯನ್ನು ತಡೆಹಿಡಿಯುವ ಆದೇಶ ಮಾಡಬಹುದು ಅಥವಾ ಇಲ್ಲ. ಅಧೀನ ನ್ಯಾಯಾಧೀಶರ ಇಂತಹ ವಿವೇಚನಾಧಿಕಾರವನ್ನು ಕಿತ್ತುಕೊಳ್ಳಬೇಕೆಂದು ಹಾಗೂ ಅವರು ಎಲ್ಲ ಪ್ರಕರಣಗಳಲ್ಲಿ ವ್ಯವಹರಣೆಯನ್ನು ತಡೆಹಿಡಿಯುವ ಆದೇಶ ಮಾಡಬೇಕೆಂದು ನನ್ನ ಮಿತ್ರರು ಬಯಸುತ್ತಾರೆ. ಆದ್ದರಿಂದ ನಾನು ಅವರು ಹೇಳುವ ತಿದ್ದುಪಡಿಯನ್ನು ಒಪ್ಪುವುದಿಲ್ಲ.

**ಅಧ್ಯಕ್ಷರು:** ಸದಸ್ಯರು ತಮ್ಮ ತಿದ್ದುಪಡಿಯನ್ನು ಮಂಡಿಸಲು ಉತ್ಸುಕರಾಗಿದ್ದಾರೆಯೇ?

**ಶ್ರೀ. ಕೆ. ವೈದ್ಯ:** ಸ್ವಾಮಿ ಇಲ್ಲ.

**ಅಧ್ಯಕ್ಷರು:** ಹಾಗಾದರೆ ನಾನು ೨ನೇ ಖಂಡವನ್ನು ಮತಕ್ಕೆ ಹಾಕುತ್ತೇನೆ.

ವಿಷಯ: ೨ನೇ ಖಂಡವು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಳವಡಿಸಲಾಯಿತು.

೨ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಖಂಡ ೩.—** *ಹೊಸ ಪ್ರಕರಣದ ಪ್ರತಿಯೋಜನೆ:* ಮಾಡಲಾದ ತಿದ್ದುಪಡಿ

ಖಂಡ ೩ರಲ್ಲಿ "ಸದರೀ ಸಂಹಿತೆ" ಎಂಬ ಪದಗಳಿಗೆ "೧೮೯೮ರ ದಂಡ ಪ್ರಕ್ರಿಯಾ ಸಂಹಿತೆ, ೧೮೯೮" ಎಂಬ ಪದ ಹಾಗೂ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

–[ಡಾ.ಅಂಬೇಡ್ಕರ್]

**ಶ್ರೀ ಶಿವ ಚರಣ್ ಲಾಲ್:** ಸಿವಿಲ್ ಪ್ರಕ್ರಿಯಾ ಸಂಹಿತೆಗೆ ಸಂಬಂಧಿಸಿದಂತೆ ಆದೇಶಕ್ಕೆ ಹೆಚ್ಚಿನ ಮಹತ್ವವಿಲ್ಲ. ಆದರೆ, ದಂಡ ಪ್ರಕ್ರಿಯಾ ಸಂಹಿತೆಗೆ ಸಂಬಂಧಿಸಿದಂತೆ ಆದೇಶಗಳು ಅಧಿನಿಯಮದಷ್ಟೇ ಮಹತ್ವಪೂರ್ಣವಾಗಿರುತ್ತವೆ. ಭಾರತದ ರಕ್ಷಣಾ ಅಧಿನಿಯಮದಡಿ ಬೇರೆ ಬೇರೆ ರಾಜ್ಯಸರ್ಕಾರಗಳು ಹಲವು ಆದೇಶಗಳನ್ನು ಹೊರಡಿಸಿದ್ದು ಇವೆಲ್ಲವೂ ಕಾನೂನಿನಷ್ಟೇ ಪ್ರಾಮುಖ್ಯವನ್ನು ಪಡೆದಿದ್ದವು. ನೀವು "ಅಧಿನಿಯಮ, ಅಧ್ಯಾದೇಶ ಹಾಗೂ ನಿಯಮಗಳು" ಎಂಬ ಪದಗಳನ್ನು ಹಾಕುವುದಾದರೆ, "ಆದೇಶ" ಎಂಬ ಪದವು ಇರಲೇಬೇಕು. ಏಕೆಂದರೆ ಕ್ರಿಮಿನಲ್ ನ್ಯಾಯಾಲಯದಲ್ಲಿ ಆದೇಶಗಳಿಗೆ ಕಾನೂನಿನಷ್ಟೇ ಮಹತ್ವವಿರುತ್ತವೆ. ಆದೇಶಗಳೆಂದರೆ ಸಾಮಾನ್ಯ ಆದೇಶಗಳಲ್ಲ, ನೂಲಿನ ಎಳೆ ಮತ್ತು ಬಟ್ಟೆಯ ನಿಯಂತ್ರಣ ಆದೇಶ, ಸಕ್ಕರೆ ನಿಯಂತ್ರಣ ಆದೇಶ ಹಾಗೂ ಕಾನೂನಿನಷ್ಟೇ ಶಕ್ತವಾದ ಅಂಥ ಇತರ ಆದೇಶಗಳು. ಅಂಥ ಆದೇಶಗಳು ಸಿಂಧುವಾಗಿರಲಿ ಅಥವಾ ಇಲ್ಲದಿರಲಿ ನ್ಯಾಯಾಲಯಗಳಲ್ಲಿ ಅವುಗಳನ್ನು ಪ್ರಶ್ನಿಸಲಾಗುತ್ತದೆ. ಕೇವಲ "ಅಧಿನಿಯಮ" ಎಂಬ ಪದವನ್ನು ಬಳಸಿದರೆ ಸಾಲದು.

ನಾನು ಸೂಚಿಸುವ ಇನ್ನೊಂದು ತಿದ್ದುಪಡಿ ಎಂದರೆ ೪೩೨ನೇ ಪ್ರಕರಣದ ೨ನೇ ಉಪಖಂಡದಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಎಂಬ ಪದದೊಂದಿಗೆ ಸೆಷನ್ಸ್ ಜಡ್ಜ್ ಎಂಬ ಪದವನ್ನು ಸೇರಿಸಿದರೆ ವಿಷಯವನ್ನು ಉಚ್ಚ ನ್ಯಾಯಾಲಯಕ್ಕೆ ಕಳುಹಿಸುವ ವಿಷಯದಲ್ಲಿ ಸೆಷನ್ಸ್ ನ್ಯಾಯಾಧೀಶರಿಗೆ ಹೆಚ್ಚಿನ ವ್ಯಾಪ್ತಿ ಇರುತ್ತವೆ. ಸಚಿವರು ಒಪ್ಪುವುದಾದರೆ ತಿದ್ದುಪಡಿಯನ್ನು ಮಂಡಿಸುತ್ತೇನೆ. ಇಲ್ಲವಾದರೆ ಇಲ್ಲ.

**ಡಾ.ಅಂಬೇಡ್ಕರ್**: (೩)ನೇ ಖಂಡಕ್ಕೆ ಸಂಬಂಧಿಸಿದಂತೆ "ಅಥವಾ ಆದೇಶ ಎಂಬ ಪದಗಳನ್ನು ಮಂಡಿಸುವ ಒಂದನೇ ತಿದ್ದುಪಡಿಯ ಕುರಿತು ಹೇಳುವುದಾದರೆ, ವಿಧಾನಮಂಡಲವು ಮಾಡುವ ಒಂದು ಕಾನೂನಿನಡಿ ಸಾಮಾನ್ಯವಾಗಿ ಆದೇಶವನ್ನು ಹೊರಡಿಸಲಾಗುತ್ತದೆ. ಯಾವ ಕಾನೂನಿನಡಿ ಆದೇಶವನ್ನು ಹೊರಡಿಸಲಾಗಿದೆಯೋ, ಅದು ಅಧಿಕಾರ ಮೀರಿದ್ದು ಎಂದು ಒಂದು ಪಕ್ಷವು ಆಕ್ಷೇಪಿಸಿದರೆ ಹಾಗೂ ಆ

ಆಕ್ಷೇಪಣೆ ನ್ಯಾಯಧೀಶರಿಗೆ ಮನದಟ್ಟಾದರೆ ಅವರು ವಿಷಯವನ್ನು ಉಚ್ಚ ನ್ಯಾಯಾಲಯಕ್ಕೆ ಕಳುಹಿಸಬೇಕಾಗುತ್ತದೆ. "ಕಾನೂನು ಸಿಂಧುವಾಗಿದ್ದು ಆದೇಶವು ಅಸಿಂಧು' ಎಂದು ಪಕ್ಷವು ಆಕ್ಷೇಪಿಸಿದರೆ ಈ ವಿಧೇಯಕದ ಸ್ಪಷ್ಟ ಉದ್ದೇಶವೇನೆಂದರೆ ಅಧೀನ ನ್ಯಾಯಾಲಯದ ನ್ಯಾಯಾಧೀಶರು ಅಂಥ ಸಂದರ್ಭದಲ್ಲಿ ನಿರ್ಧರಿಸಬಹುದಾದ ವ್ಯಾಜ್ಯಗಳನ್ನು ಕಳುಹಿಸಿ ಉಚ್ಚ ನ್ಯಾಯಾಲಯಕ್ಕೆ ಹೆಚ್ಚು ಭಾರವನ್ನುಂಟುಮಾಡದೇ ಅಧೀನ ನ್ಯಾಯಾಧೀಶರು ಅಥವಾ ಮ್ಯಾಜಿಸ್ಟ್ರೇಟ್‌ರು ತಾವೇ ವಿಷಯವನ್ನು ನಿರ್ಧರಿಸಬೇಕು. ಏಕೆಂದರೆ ಅಂಥ ಶಾಸನದಿಂದ ಸಾರ್ವಜನಿಕರ ಮೇಲೆ ಪರಿಣಾಮವಾಗದೇ ಒಬ್ಬ ವ್ಯಕ್ತಿಯ ಮೇಲೆ ಪರಿಣಾಮವಾಗುವುದು.

ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಿಗೆ ಕೊಟ್ಟಿರುವ ವಿಶೇಷ ಅಧಿಕಾರ ಅಥವಾ ಅವಕಾಶಗಳನ್ನು ಸೆಷನ್ಸ್ ನ್ಯಾಯಾಧೀಶರಿಗೂ ನೀಡುವ ಕುರಿತ ಕೊನೆಯ ತಿದ್ದುಪಡಿ. ಅವರು ದಂ.ಪ್ರ.ಸಂ.ಯ ೪೩೬, ೪೩೭ ಹಾಗೂ ೪೩೮ನೇ ಪ್ರಕರಣಗಳನ್ನು ನೋಡಿದರೆ ಈ ವಿಧದ ಲೋಪಗಳನ್ನು ತಿದ್ದಲು ಮ್ಯಾಜಿಸ್ಟ್ರೇಟರು ಹಾಗೂ ಸೆಷನ್ಸ್ ನ್ಯಾಯಾಧೀಶರಿಗೆ ಸಾಕಷ್ಟು ಅಧಿಕಾರ ನೀಡಲಾಗಿದೆ. ಅಥವಾ ತಪ್ಪನ್ನು ಸರಿಪಡಿಸಲು ವಿಷಯವನ್ನು ಉಚ್ಚ ನ್ಯಾಯಾಲಯಕ್ಕೆ ಕಳುಹಿಸಬಹುದಾಗಿದೆ. ಈಗಾಗಲೇ ಸಾಕಷ್ಟು ಅವಕಾಶ ಕಲ್ಪಿಸಲಾಗಿದೆ.

**ಅಧ್ಯಕ್ಷರು:** ವಿಷಯ:

"ಖಂಡ ೩ ತಿದ್ದುಪಡಿಯಾದಂತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಳವಡಿಸಲಾಗಿದೆ.

ಖಂಡ ೩ನ್ನು ತಿದ್ದುಪಡಿಯಾದಂತೆ ವಿಧೇಯಕದಲ್ಲಿ ಸೇರಿಸಲಾಯಿತು.

ಖಂಡ ೧ ವಿಧೇಯಕಕ್ಕೆ ಸೇರ್ಪಡೆಯಾಯಿತು.

ಶೀರ್ಷಿಕೆ ಹಾಗೂ ಅಧಿನಿಯಮದ ಭಾಗಗಳು ವಿಧೇಯಕಕ್ಕೆ ಸೇರ್ಪಡೆಯಾದವು.

**ಡಾ.ಅಂಬೇಡ್ಕರ್**: ತಿದ್ದುಪಡಿಯಾದಂತೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು:** ವಿಷಯ:

ತಿದ್ದುಪಡಿಯಾದಂತೆ ವಿಧೇಯಕವನ್ನು ಅಂಗೀಕರಿಸಬೇಕು.

ಪ್ರಸ್ತಾವನೆಯನ್ನು ಅಳವಡಿಸಲಾಯಿತು.

◆

# ೩೧

## *ಸಿವಿಲ್ ಪ್ರಕ್ರಿಯಾ ಸಂಹಿತೆ (ಎರಡನೇ ತಿದ್ದುಪಡಿ) ವಿಧೇಯಕ

**ಕಾನೂನು ಸಚಿವರು (ಡಾ॥ಅಂಬೇಡ್ಕರ್):** ಸಿವಿಲ್ ಪ್ರಕ್ರಿಯಾ ಸಂಹಿತೆ ೧೯೦೮ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಇದೊಂದು ಸರಳವಾದ ಕ್ರಮ. ಪಾಕಿಸ್ತಾನದಲ್ಲಿ ವಾಸಿಸುವ ವ್ಯಕ್ತಿಗಳಿಗೆ ಭಾರತದಲ್ಲಿ ನ್ಯಾಯಾಲಯಗಳು ಹಾಗೂ ಭಾರತದಲ್ಲಿ ವಾಸಿಸುವವರಿಗೆ ಪಾಕಿಸ್ತಾನದ ನ್ಯಾಯಾಲಯಗಳು ಸಮನ್ಸ್ ಮತ್ತು ಆದೇಶಿಕೆಗಳನ್ನು ಕಳುಹಿಸುವ ವಿಷಯದಲ್ಲಿ ಭಾರತದ ವಿಭಜನೆಯ ನಂತರ ಕೆಲವು ಸಮಸ್ಯೆಗಳು ಉದ್ಭವಿಸಿದ್ದನ್ನು ಮಾನ್ಯ ಸದಸ್ಯರು ಸ್ಮರಿಸಬಹುದಾಗಿದೆ.

(ಪಂಡಿತ ಠಾಕೂರ್ ದಾಸ್ ಭಾರ್ಗವ್ ಅವರ ಅಧ್ಯಕ್ಷತೆ)

ಇವು, ಎರಡು ಬೇರೆ ಬೇರೆ ದೇಶಗಳಾಗಿದ್ದು ಈವರೆಗೆ ಈ ವಿಷಯದ ಬಗ್ಗೆ ಯಾವುದೇ ಒಡಂಬಡಿಕೆಯಾಗಿಲ್ಲ. ಹೀಗಾಗಿ ಯಾವುದೇ ನಿರ್ದಿಷ್ಟ ಸಂಪರ್ಕ ವಿಧಾನವನ್ನು ಅವಲಂಬಿಸದ ಅಂಚೆ ಕಚೇರಿಯ ಮೂಲಕ ಎಲ್ಲ ಆದೇಶಿಕೆಗಳನ್ನು ಕಳುಹಿಸಬೇಕಾಗುತ್ತದೆ. ಇತ್ತೀಚೆಗೆ ಭಾರತ ಹಾಗೂ ಪಾಕಿಸ್ತಾನಗಳ ಮಧ್ಯೆ ಒಂದು ಒಪ್ಪಂದವಾಗಿದ್ದು ಆ ಮೇರೆಗೆ ಎರಡೂ ರಾಷ್ಟ್ರಗಳು ಪರಸ್ಪರ ಒಪ್ಪಿಕೊಂಡಿರುವ ಮೇರೆಗೆ ಒಂದು ದೇಶದ ನ್ಯಾಯಾಲಯಗಳು ಹೊರಡಿಸಿದ ಆದೇಶಿಕೆ ಕುರಿತು ಇನ್ನೊಂದು ದೇಶದ ನ್ಯಾಯಾಲಯಕ್ಕೂ ಮಾಹಿತಿ ಕಳುಹಿಸಬೇಕು ಹಾಗೂ ಅವು ಅಲ್ಲಿ ವಾಸಿಸುವ ವ್ಯಕ್ತಿಗಳಿಗೆ ಸಮನ್ಸ್ ಅಥವಾ ಆದೇಶಿಕೆ ನೀಡಬೇಕು. ಈ ಒಪ್ಪಂದಕ್ಕೆ ಪರಿಣಾಮ ನೀಡುವುದು ಈ ವಿಧೇಯಕದ ಉದ್ದೇಶ. ಪಾಕಿಸ್ತಾನವು ಈ ಬಗ್ಗೆ ಕ್ರಮಕೈಗೊಂಡಿದ್ದು ಈ ಕುರಿತು ಅಲ್ಲಿ ಕಾನೂನಿದೆ ಎಂದು ನಾನು ಹೇಳಬಲ್ಲೆ. ಸದನವು ಈ ವಿಧೇಯಕವನ್ನು ಒಪ್ಪುತ್ತದೆ ಎಂದು ಭಾವಿಸುತ್ತೇನೆ.

**ಅಧ್ಯಕ್ಷರು:** ಪ್ರಸ್ತಾವವನ್ನು ಮಂಡಿಸಲಾಗಿದೆ.

> "ಸಿವಿಲ್ ಪ್ರಕ್ರಿಯಾ ಸಂಹಿತೆ ೧೯೦೮ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು."

**ಶ್ರೀ ಸಿಧ್ವಾ (ಮಧ್ಯಪ್ರದೇಶ):** ಇದೊಂದು ಸ್ವಾಗತಾರ್ಹ ಕ್ರಮ. ಸ್ಥಳಾಂತರಗೊಂಡ ಹಲವು ವ್ಯಕ್ತಿಗಳು ಇಲ್ಲಿಗೆ ಬಂದಿದ್ದು, ಅವರಿಗೆ ಪಾಕಿಸ್ತಾನದಲ್ಲಿರುವ ವ್ಯಕ್ತಿಗಳ ವಿರುದ್ಧ ಕ್ಲೇಮುಗಳಿದ್ದು ಅವರು ದಾವೆಗಳ ಮೇಲಿನ ಡಿಕ್ರಿಗಳ ಪ್ರಕಾರ ಹಣವನ್ನು ವಸೂಲಿ ಮಾಡುವಲ್ಲಿ ಅಸಮರ್ಥರಾಗಿದ್ದಾರೆ. ಭಾರತ ಹಾಗೂ ಪಾಕಿಸ್ತಾನಗಳ ಮಧ್ಯೆ ಒಪ್ಪಂದವಾಗಿದ್ದು ಇಂತಹುದೇ ಕಾನೂನನ್ನು ಪಾಕಿಸ್ತಾನದಲ್ಲಿ ಮಾಡಲಾಗಿದೆ ಎಂಬುದು ಸಂತೋಷದ ವಿಷಯ. ಮತ್ತೊಂದು ಪಕ್ಷದ ಮೇಲೆ ಸಮನ್ಸ್ ಕಳುಹಿಸುವ ಪ್ರಶ್ನೆ

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೭೬–೭೮.

ನಿವಾರಣೆಯಾದಂತಾಗಿದೆ. ಪಾಕಿಸ್ತಾನದಲ್ಲಿ ಇರುವ ಒಬ್ಬ ವ್ಯಕ್ತಿಯ ವಿರುದ್ಧ ಇಲ್ಲಿ ಡಿಕ್ರಿ ಮಾಡಿದರೆ ಅದನ್ನು ಜಾರಿಗೊಳಿಸಿ ಹಣವನ್ನು ವಸೂಲಿ ಮಾಡಿ ಭಾರತದಲ್ಲಿರುವ ಫಿರ್ಯಾದುದಾರರಿಗೆ ಕಳುಹಿಸುವ ಬಗ್ಗೆ ಯಾವುದಾದರೂ ಒಪ್ಪಂದವಾಗಿದೆಯೇ ಎಂದು ನಾನು ಸಚಿವರನ್ನು ಕೇಳಬಯಸುತ್ತೇನೆ. ಈ ಪ್ರಶ್ನೆಯಲ್ಲಿ ಅಡಗಿರುವ ಮುಖ್ಯ ಅಂಶ ಇದು. ಕೇವಲ ಸಮನ್ಸ್ ಕಳುಹಿಸುವುದರಿಂದ ಯಾವ ಪ್ರಯೋಜನವಿಲ್ಲ. ಪ್ರತಿವಾದಿಯು ನಿರ್ಲಿಪ್ತನಾಗಿದ್ದು ಏಕಪಕ್ಷೀಯ ಡಿಕ್ರಿ ಆಗಬಹುದು. ಒಂದು ಡಿಕ್ರಿಯ ಜಾರಿಯ ಬಗ್ಗೆ ಕಾನೂನು ಇಲ್ಲದಿರುವವರೆಗೆ ಪ್ರತಿವಾದಿಯು ವಕೀಲರನ್ನು ಇಟ್ಟುಕೊಳ್ಳಲು ಏಕೆ ಹಣ ಖರ್ಚು ಮಾಡಬೇಕು. ಈ ಕುರಿತಂತೆ ಏನನ್ನೂ ಹೇಳಲಾಗಿಲ್ಲ. ಪಾಕಿಸ್ತಾನದೊಂದಿಗೆ ಚರ್ಚಿಸುವಾಗ ಈ ಪ್ರಶ್ನೆಯನ್ನು ಪರಿಗಣಿಸಲಾಯಿತೇ ಎಂಬ ಬಗ್ಗೆ ನಮಗೆ ಮಾಹಿತಿ ನೀಡಲು ಸಚಿವರನ್ನು ಕೇಳುತ್ತೇನೆ. ಅದಿಲ್ಲವಾದರೆ ಪಾಕಿಸ್ತಾನದಲ್ಲಿರುವ ಒಬ್ಬ ಪ್ರತಿವಾದಿಯ ವಿರುದ್ಧ ಮಾಡಿದ ಭಾರತದ ನ್ಯಾಯಾಲಯದ ತೀರ್ಪಿಗೆ ಯಾವ ಪರಿಣಾಮವಿರುತ್ತದೆ? ಈ ಉಪಬಂಧವಿಲ್ಲದೇ ವಿಧೇಯಕಕ್ಕೆ ಅರ್ಥವೇ ಇಲ್ಲ.

**ಡಾ.ಅಂಬೇಡ್ಕರ್**: ರಾಷ್ಟ್ರಗಳ ಸೌಹಾರ್ದದ ಭಾಗವಾಗಿ ಪ್ರತಿಯೊಂದು ದೇಶವು ಬೇರೆ ದೇಶಗಳಲ್ಲಿಯ ನ್ಯಾಯಾಲಯಗಳ ತೀರ್ಪುಗಳನ್ನು ಜಾರಿಗೊಳಿಸಲು ಸಮ್ಮತಿಸುತ್ತದೆ. ಬೇರೆ ಬೇರೆ ದೇಶಗಳಿಗೆ ಕಾರ್ಯವಿಧಾನದ ನಿಯಮಗಳು ಬೇರೆ ಬೇರೆ ಇದ್ದರೂ ತೀರ್ಪುಗಳ ಜಾರಿ ಕುರಿತಂತೆ ಯಾವುದೇ ತೊಂದರೆ ಇಲ್ಲ. ತೀರ್ಪು ನಿಜವೆಂಬ ಬಗ್ಗೆ ಕೆಲವು ಸಾಕ್ಷ್ಯಗಳು ಬೇಕಾಗುತ್ತವೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ೧೩ನೇ ಪ್ರಕರಣವು ಇದನ್ನು ನಿಯಂತ್ರಿಸುತ್ತವೆ.

**ಶ್ರೀ ನಾಸಿರುದೀನ್ ಅಹಮದ್ (ಪಶ್ಚಿಮ ಬಂಗಾಳ):** ಬೇರೆ ದೇಶದ ತೀರ್ಪನ್ನು ಯಾವುದೇ ದೇಶದಲ್ಲಿ ಜಾರಿಮಾಡಲಾಗದು. ಈ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಉಪಬಂಧ ಕಲ್ಪಿಸಲಾಗಿಲ್ಲ. ಒಂದು ವಿದೇಶೀಯ ತೀರ್ಪು ದಾವೆ ಹೂಡಲು ಮಾತ್ರ ಹಕ್ಕು ನೀಡುತ್ತದೆ ಹಾಗು ಹೊಸ ದಾವೆಯನ್ನು ಹೂಡಿ ಹೊಸ ಡಿಕ್ರಿಯನ್ನು ಪಡೆಯಬೇಕಾಗುತ್ತವೆ.

**ಡಾ.ಅಂಬೇಡ್ಕರ್**: ಅದು ಪ್ರಕ್ರಿಯೆಯ ವಿಷಯ ಮಾತ್ರ.

**ಶ್ರೀ ನಾಸಿರುದ್ದೀನ್ ಅಹಮದ್:** ಪ್ರಕರಣ ಕುರಿತಂತೆ ಮತ್ತೆ ಹೊಸದಾಗಿ ಹೋರಾಡಬೇಕಾಗುತ್ತದೆ. ಒಂದು ವಿದೇಶಿ ಡಿಕ್ರಿಯನ್ನು ಜಾರಿಗೊಳಿಸಲಾಗದು ಎಂಬ ಅಂಶವನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಸಿಧ್ವಾ:** ನನಗೆ ನಿಮ್ಮ ಮಾರ್ಗದರ್ಶನ ಬೇಕು. ಇಂಗ್ಲೆಂಡಿನ ಒಬ್ಬ ಪ್ರತಿವಾದಿಯ ವಿರುದ್ಧ ಭಾರತದಲ್ಲಿ ಪ್ರಕರಣವನ್ನು ದಾಖಲೆ ಮಾಡಲಾಯಿತು. ಡಿಕ್ರಿ ಇಲ್ಲಿ ನೀಡಲಾಯಿತು. ಆದರೆ ಇಂಗ್ಲೆಂಡಿನಲ್ಲಿ ಅದನ್ನು ಜಾರಿ ಮಾಡಲಾಗಲಿಲ್ಲ. ಲಂಡನ್ನಿನಲ್ಲಿ ಹೊಸ ದಾವೆಯನ್ನು ಹೂಡಲಾಯಿತು. ಆದ್ದರಿಂದ ಅಂತಹ ಯಾವುದೇ ಒಪ್ಪಂದವಿಲ್ಲದೆ ಒಂದು ಡಿಕ್ರಿಗೆ ಬೆಲೆ ಇರುತ್ತದೆಯೇ ಎಂಬುದು ನನ್ನ ಸಂದೇಹ.

**ಡಾ.ಅಂಬೇಡ್ಕರ್**: ಸಿವಿಲ್ ಪ್ರಕ್ರಿಯಾ ಸಂಹಿತೆಯ ೧೩ನೇ ಪ್ರಕರಣದಲ್ಲಿ ಈ ವಿಷಯದ ಕುರಿತು ಪ್ರಸ್ತಾಪಿಸಲಾಗಿದೆ. ಒಂದು ವಿದೇಶಿ ಡಿಕ್ರಿಯ ಜಾರಿಯ ಕುರಿತಾದ ಪ್ರಶ್ನೆಯಲ್ಲ. ಪ್ರತಿಯೊಂದು ದೇಶವು ಅಳವಡಿಸಿಕೊಳ್ಳಬೇಕಾದ ಪ್ರಕ್ರಿಯೆಯ ಕುರಿತಾದ ಪ್ರಶ್ನೆ ಇಲ್ಲಿದೆ.

**ಶ್ರೀ ಸಿಧ್ವಾ:** ಅದಕ್ಕೆ ಅರ್ಥವಿಲ್ಲ.

**ಡಾ.ಅಂಬೇಡ್ಕರ್**: ಯಾವುದಕ್ಕೆ ಅರ್ಥವಿಲ್ಲ? ಒಂದು ಐತೀರ್ಪಿನ ಸಂಬಂಧದಲ್ಲಿ ನೀವು ಒಂದು ಅರ್ಜಿಯನ್ನು ದಾಖಲಿಸಬೇಕಾಗುತ್ತದೆ. ಆಗ ಮಾತ್ರ ಅದನ್ನು ಜಾರಿಗೊಳಿಸಬಹುದಾಗಿದೆ. ಅಂತೆಯೇ ಸಿವಿಲ್ ಪ್ರಕ್ರಿಯಾ ಸಂಹಿತೆಯ ೧೩ನೇ ಪ್ರಕರಣದಲ್ಲಿ ಈ ಮುಂದಿನಂತೆ ಹೇಳಲಾಗಿದೆ:

> "**೧೩. ವಿದೇಶೀ ತೀರ್ಪು ಯಾವಾಗ ನಿರ್ಣಾಯಕವಲ್ಲ:** ಅದೇ ಸ್ವಾಮ್ಯದ ಆಧಾರದ ಮೇಲೆ ವ್ಯಾಜ್ಯ ನಡೆಸುತ್ತಿರುವ ಅದೇ ಪಕ್ಷಕಾರರ ನಡುವೆ ಅಥವಾ ಯಾವ ಪಕ್ಷಕಾರರ ಅಧೀನದಲ್ಲಿ ಅವರು ಅಥವಾ ಅವರ ಪೈಕಿ ಯಾರಾದರೂ ಕ್ಲೇಮು ಮಾಡುತ್ತಿರುವರೋ ಅವರ ನಡುವೆ ನೇರವಾಗಿ ನ್ಯಾಯ ನಿರ್ಣಯಿಸಲಾದ ಯಾವುದೇ (ಕ) ಸಕ್ಷಮ ಅಧಿಕಾರ ವ್ಯಾಪ್ತಿಯಿರುವ ನ್ಯಾಯಾಲಯವು ಆ ತೀರ್ಪನ್ನು ಉಚ್ಚರಿಸಿರದಿದ್ದಲ್ಲಿ– ವಿದೇಶೀ ತೀರ್ಪು ನಿರ್ಣಾಯಕವಾಗಿರತಕ್ಕದ್ದು".

ಅಧಿಕಾರ ವ್ಯಾಪ್ತಿಯ ಪ್ರಶ್ನೆ ಯಾವಾಗಲೂ ಮೂಲಭೂತವಾದುದು. ಅದನ್ನು ತಡೆಯಲು ಸಾಧ್ಯವಿಲ್ಲ. ಡಿಕ್ರಿಯನ್ನು ನೀಡಿದ ನ್ಯಾಯಾಲಯಕ್ಕೆ ಡಿಕ್ರಿ ಮಾಡಲು ಅಧಿಕಾರ ವ್ಯಾಪ್ತಿ ಇತ್ತು ಎಂಬುದು ರುಜುವಾತಾಗಬೇಕು.

**ಶ್ರೀ ಸಿಧ್ವಾ:** ಅದು ಸರಿ

**ಡಾ.ಅಂಬೇಡ್ಕರ್**: ಯಾವುದು ಸರಿ? ನೀವು ಒಂದು ಅಧೀನ ನ್ಯಾಯಾಲಯಕ್ಕೆ ಹೋಗಿ ಅದರ ಅಧಿಕಾರ ವ್ಯಾಪ್ತಿ ಮೀರಿ ಡಿಕ್ರಿ ಪಡೆದರೆ, ಅದು ಸಿಂಧುವಲ್ಲವಾದುದರಿಂದ ಯಾರೂ ಅದನ್ನು ಜಾರಿಗೊಳಿಸಲಾಗದು.

**ಅಧ್ಯಕ್ಷರು:** ವಿಷಯ:

"ಸಿವಿಲ್ ಪ್ರಕ್ರಿಯಾ ಸಂಹಿತೆ ೧೯೦೮ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಗಣಿಸಬೇಕು".

ಪ್ರಸ್ತಾವವನ್ನು ಅಳವಡಿಸಲಾಯಿತು.

ಖಂಡ ೨ನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಖಂಡ ೧ನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಶೀರ್ಷಿಕೆ ಹಾಗೂ ಅಧಿನಿಯಮದ ಭಾಗಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಡಾ.ಅಂಬೇಡ್ಕರ್**: ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು:** ವಿಷಯ:

> "ವಿಧೇಯಕವನ್ನು ಅಂಗೀಕರಿಸಬೇಕು."

ಪ್ರಸ್ತಾವವನ್ನು ಅಳವಡಿಸಲಾಯಿತು.

◆

# ೩೨

## *ಜಲಿಯಾನ್‌ವಾಲಾಬಾಗ್ ರಾಷ್ಟ್ರೀಯ ಸ್ಮಾರಕ ವಿಧೇಯಕ

**ಕಾನೂನು ಸಚಿವರು (ಡಾ.ಅಂಬೇಡ್ಕರ್):**

> ""೧೯೧೯ರ ಏಪ್ರಿಲ್ ೧೩ನೇ ದಿನಾಂಕದಂದು ಜಲಿಯಾನ್‌ವಾಲಾಬಾಗ್‌ನಲ್ಲಿ ಮೃತರಾದವರ ಅಥವಾ ಗಾಯಗೊಂಡವರ ಸ್ಮರಣಾರ್ಥವಾಗಿ ಒಂದು ರಾಷ್ಟ್ರೀಯ ಸ್ಮಾರಕವನ್ನು ನಿರ್ಮಿಸಿ ವ್ಯವಸ್ಥೆಗೊಳಿಸುವುದಕ್ಕೆ ಅವಕಾಶ ಕಲ್ಪಿಸುವ ವಿಧೇಯಕವನ್ನು ಪರಿಗಣಿಸಬೇಕೆಂದು ಕೋರುತ್ತೇನೆ."

ಜಾಲಿಯನ್‌ವಾಲಾಬಾಗ್ ಘಟನೆ ಎಂದು ಪ್ರಸಿದ್ಧವಾದ ಘಟನೆ ಪ್ರತಿಯೊಬ್ಬ ಭಾರತೀಯನಿಗೂ ಸುಪರಿಚಿತವಾಗಿದ್ದು ಈ ಬಗ್ಗೆ ಏನಾದರೂ ಹೇಳುವುದು ಅಗತ್ಯವೆಂದು ನನಗೆ ತೋರುವುದಿಲ್ಲ. ಈ ವಿಧೇಯಕದ ಉದ್ದೇಶಕ್ಕಾಗಿ ಪ್ರಸ್ತುತವಿರುವುದೆಂದರೆ ಈ ಘಟನೆಯ ತರುವಾಯ ಭಾರತದ ಕೆಲವು ಖ್ಯಾತ ಮಹನೀಯರು ಆ ನಿರ್ದಿಷ್ಟ ದಿನದಂದು ಮೃತರಾದವರ ಮತ್ತು ಗಾಯಗೊಂಡವರ ಸ್ಮರಣೆಯನ್ನು ಅಮರಗೊಳಿಸಲು ನಿರ್ಧರಿಸಿದರು.

**ಡಾ.ಟೇಕ್ ಚಂದ್ (ಪಂಜಾಬ್):** ಅಮೃತಸರದಲ್ಲಿ ಮೋತಿಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಈ ಬಗ್ಗೆ ತೀರ್ಮಾನಿಸಲಾಯಿತು.

**ಡಾ.ಅಂಬೇಡ್ಕರ್:** ಹೌದು, ನನಗೆ ತಿಳಿದಂತೆ ಅವರು ಸುಮಾರು ೧೦ ಲಕ್ಷ ರೂ. ಹಣವನ್ನು ಸಂಗ್ರಹಿಸಿದರು.

**ಡಾ.ಟೇಕ್ ಚಂದ್:** ಹೌದು ೧೦ ಲಕ್ಷ ರೂ.

**ಡಾ.ಅಂಬೇಡ್ಕರ್:** ಆ ಪೈಕಿ ಅವರು ಅನುಸೂಚಿಯಲ್ಲಿ ತಿಳಿಸಲಾಗಿರುವ, ಟ್ರಸ್ಟಿನ ಭಾಗವಾಗಿರುವ ೨ ಅಥವಾ ೩ ತುಂಡು ಭೂಮಿಯನ್ನು ಖರೀದಿಸಿದರು. ಈಗಾಗಲೇ ಅನೌಪಚಾರಿಕ ಸ್ವರೂಪದ ಒಂದು ಟ್ರಸ್ಟ್ ಹಾಗೂ ಅದರ ಟ್ರಸ್ಟಿಗಳಿದ್ದಾರೆ. ಈಗ ಆ ಟ್ರಸ್ಟಿಗೆ ಶಾಸನ ರೀತ್ಯಾ ಸ್ವರೂಪ ನೀಡಲು ಉದ್ದೇಶಿಸಲಾಗಿದ್ದು, ಇದರ ಮೇರೆಗೆ ಟ್ರಸ್ಟಿಗಳನ್ನು ಬೇರೆ ಬೇರೆ ವರ್ಗಗಳಾಗಿ ವಿಂಗಡಿಸಲಾಗುತ್ತದೆ. ಟ್ರಸ್ಟಿಗಳ ಪೈಕಿ ಕೆಲವರು ಆಜೀವ ಟ್ರಸ್ಟಿಗಳು, ಕೆಲವರು ಪದನಿಮಿತ್ತ ಟ್ರಸ್ಟಿಗಳು, ಉಳಿದ ಮೂವರನ್ನು ಕೇಂದ್ರ ಸರ್ಕಾರವು ನಾಮನಿರ್ದೇಶಿಸುತ್ತದೆ. ಅನುಸೂಚಿಯ ಮೊದಲ ಭಾಗದಲ್ಲಿ ತಿಳಿಸಲಾಗಿರುವ ಭೂಮಿ ಹಾಗೂ ಸ್ವತ್ತನ್ನು ಅವರು ಹೊಂದಿರುತ್ತಾರೆ. ನಗದು ಹಾಗೂ ಚರ ಆಸ್ತಿಯ ಮೌಲ್ಯ ನನ್ನ ಲೆಕ್ಕಾಚಾರದಂತೆ ೩,೧೩,೭೫೭–೧–೦ ರೂ.ಗಳಾಗಿರುತ್ತದೆ. ಸ್ಮಾರಕವನ್ನು ನಿರ್ವಹಿಸಿ ಅದನ್ನು ಸರಿಯಾಗಿ ನೋಡಿಕೊಳ್ಳುವುದೇ ಟ್ರಸ್ಟಿನ ಉದ್ದೇಶ.

ಪರಿಗಣನೆಯ ಅಗತ್ಯವಿರುವ ಒಂದೇ ಒಂದು ಅಂಶವೆಂದರೆ ವಿಧೇಯಕದಲ್ಲಿ ತಿಳಿಸಲಾದ

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೭೯–೮೧.

ಮೂಲಟ್ರಸ್ಟಿಯಾದ ಸರ್ದಾರ್ ವಲ್ಲಭಬಾಯಿ ಪಟೇಲರು ಈಗಿಲ್ಲ. ಹಾಗಾಗಿ ಅವರ ಬದಲಾಗಿ ಬೇರೊಬ್ಬರನ್ನು ಸದನವು ಗುರುತಿಸಬೇಕಾಗುತ್ತದೆ. ಉಳಿದಂತೆ ವಿಧೇಯಕವು ಮೂಲಟ್ರಸ್ಟಿಗಳು ಪ್ರಸ್ತಾವಿಸಿದ್ದ ಸ್ವರೂಪದಲ್ಲಿಯೇ ಇದ್ದು ಈ ಉದ್ದೇಶಗಳಿಗೆ ಅವರೇ ಟ್ರಸ್ಟಿಗಳಾಗಿರುತ್ತಾರೆ.

**ಅಧ್ಯಕ್ಷರು:** ೧೯೧೯ರ ಏಪ್ರಿಲ್ ೧೩ನೇ ದಿನಾಂಕದಂದು ಜಲಿಯಾನ್‌ವಾಲಾಬಾಗ್‌ನಲ್ಲಿ ಮೃತರಾದವರ ಅಥವಾ ಗಾಯಗೊಂಡವರ ಸ್ಮರಣಾರ್ಥವಾಗಿ ಒಂದು ರಾಷ್ಟ್ರೀಯ ಸ್ಮಾರಕವನ್ನು ನಿರ್ಮಿಸಿ ವ್ಯವಸ್ಥೆಗೊಳಿಸುವುದಕ್ಕೆ ಅವಕಾಶ ಕಲ್ಪಿಸುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂಬ ಪ್ರಸ್ತಾವವನ್ನು ಮಂಡಿಸಲಾಯಿತು.

**ಶ್ರೀ ಕಾಮತ್:** ಈ ಸ್ವರೂಪದ ಒಂದು ವಿಧೇಯಕವನ್ನು ಸದನದ ಮುಂದೆ ತಂದಿರುವುದು ಸೂಕ್ತವಾಗಿದೆ. ೩೦ ವರ್ಷಗಳ ಹಿಂದೆ ಈ ಹತ್ಯಾಖಾಂಡ ನಡೆದು ನಮ್ಮ ದೇಶದ ನೂರಾರು ಸ್ತ್ರೀ, ಪುರುಷರು ಹತರಾದರು ಅಲ್ಲವೆ......

**ಡಾ.ಟೇಕ್ ಚಂದ್:** ನೂರಾರು ಅಲ್ಲ, ಎರಡು ಸಾವಿರ.

**ಶ್ರೀ ಕಾಮತ್:** ಮೃತರಾದವರೆ?

**ಡಾ.ಟೇಕ್ ಚಂದ್:** ಹೌದು ೨೦೦೦ ಜನ ಮೃತರಾದರು.

**ಶ್ರೀ ಕಾಮತ್:** ಸಾವಿರಗಟ್ಟಲೆ ಜನ ಹತರಾದರು ಅಥವಾ ಗಾಯಗೊಂಡವರು. ಉದ್ದೇಶಗಳು ಹಾಗೂ ಕಾರಣಗಳ ಹೇಳಿಕೆಯಲ್ಲಿ ತಿಳಿಸಲಾದಂತೆ ಕಾಂಗ್ರೆಸ್ ಪಕ್ಷವು, ಜಾಲಿಯಾನ್ ವಾಲಾಬಾಗಿನ ಹುತಾತ್ಮರ ನೆನಪಿನಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಪ್ರಸ್ತಾವಿಸಿ ೧೯೧೯ರಲ್ಲಿ ಒಂದು ಗೊತ್ತುವಳಿಯನ್ನು ಅಂಗೀಕರಿಸಿತು. ವಿಧೇಯಕವನ್ನು ಮಂಡಿಸಿದವರಾರು. ಈ ಉದ್ದೇಶಕ್ಕಾಗಿ ಸಂಗ್ರಹವಾದ ಮೊತ್ತ ಎಷ್ಟು ಎಂಬ ಬಗ್ಗೆ ಕಾನೂನು ಸಚಿವರು ನಮಗೆ ತಿಳಿಸಲಿಲ್ಲ. ಅವರು "ಸುಮಾರು ೧೦ ಲಕ್ಷ ರೂ." ಎಂದರು. ಅವರ ಬಳಿ ಖಚಿತ ಅಂಕಿ ಅಂಶಗಳಿಲ್ಲ.

**ಡಾ.ಅಂಬೇಡ್ಕರ್**: ನಾನೂ "ಸುಮಾರು ೧೦ ಲಕ್ಷ ರೂ." ಎಂದು ಹೇಳಿದೆ. ಮುಂದೆ ಖಚಿತ ಅಂಕಿ ಅಂಶಗಳನ್ನು ನೀಡುತ್ತೇನೆ.

**ಶ್ರೀ ಕಾಮತ್:** ಸ್ಮಾರಕವನ್ನು ನಿರ್ಮಿಸಲು ಉದ್ದೇಶಿಸಲಾದ ನಿವೇಶನವನ್ನು ಖರೀದಿಸಲು ಎಷ್ಟು ಹಣವನ್ನು ಬಳಸಲಾಗಿದೆ. ಸ್ವತಂತ್ರ ಭಾರತದ ಮೊದಲನೆಯ ಪೂರ್ಣ ಸರ್ಕಾರವು, ಹಲವು ವರ್ಷಗಳ ಹಿಂದೆ ಕಾಂಗ್ರೆಸ್ ಪಕ್ಷವು ಅಂಗೀಕರಿಸಿದ ಗೊತ್ತುವಳಿಯನ್ನು ಗಮನಿಸಿ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು. ಆದರೆ ಸ್ವಾಮಿ, ಇದರೊಂದಿಗೆ ಇನ್ನಿತರ ಪ್ರಶ್ನೆಗಳು ಏಳುತ್ತವೆ. ಈಗಾಗಲೇ ನಾನು ಹೇಳಿದಂತೆ ವಿಧೇಯಕದಲ್ಲಿ ಜಾಲಿಯಾನ್‌ವಾಲಾಬಾಗಿನ ಹುತಾತ್ಮರ ನೆನಪನ್ನು ಶಾಶ್ವತಗೊಳಿಸಲು ಹಾಗೂ ೧೯೧೯ರ ಡಿಸೆಂಬರ್‌ನಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮಂಡಿಸಿರುವ ಗೊತ್ತುವಳಿಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಇದು ನಮ್ಮ ರಾಜಕೀಯದಲ್ಲಿ ಗಾಂಧೀಯುಗದ ಪ್ರಾರಂಭದ ಘಟ್ಟವಾಗಿದ್ದು ಆ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವು ಬೇರೆ ಬೇರೆ ಪ್ರಕಾರದ ಹಲವಾರು ನಿಧಿಗಳನ್ನು ಸಂಗ್ರಹಿಸಿತು ಅಥವಾ ಸಂಗ್ರಹಿಸಿದೆ. ಆದ್ದರಿಂದ ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಕಾನೂನು ಸಚಿವರು ಮಂಡಿಸಿದ ವಿಧೇಯಕದಲ್ಲಿ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಕಾಂಗ್ರೆಸ್ ಪಕ್ಷವು ಸಂಗ್ರಹಿಸಿದ ನಿಧಿಗಳ ಪರಿಗಣನೆಯನ್ನು ಸರ್ಕಾರ ಎಷ್ಟರ ಮಟ್ಟಿಗೆ ಗಮನಕ್ಕೆ ತೆಗೆದುಕೊಂಡಿದೆ?

**ಶ್ರೀ ಭಾರತಿ (ಮದ್ರಾಸ್):** ಸ್ವಾಮಿ, ಕ್ರಿಯಾ ಲೋಪವಿದೆ. ನಮ್ಮ ಮುಂದಿರುವ ವಿಧೇಯಕಕ್ಕೆ ಈ

ಪ್ರಶ್ನೆ ಎಷ್ಟರ ಮಟ್ಟಿಗೆ ಪ್ರಸ್ತುತವಾಗಿದೆ? ಮಾನ್ಯ ಸದಸ್ಯರು ಇತರ ಉದ್ದೇಶಗಳಿಗಾಗಿ ಕಾಂಗ್ರೆಸ್ ಸಂಗ್ರಹಿಸಿದ ನಿಧಿಗಳ ಬಗ್ಗೆ ಹೇಳುತ್ತಿದ್ದಾರೆ. ಆ ಬಗ್ಗೆ ಈ ವಿಧೇಯಕದಲ್ಲಿ ತಿಳಿಸಬೇಕೆ?

**ಶ್ರೀ ಕಾಮತ್:** ಕಾಂಗ್ರೆಸ್ ಈ ವಿಷಯದಲ್ಲಿ ಗೊತ್ತುವಳಿಯನ್ನು ಅಂಗೀಕರಿಸಿದ ಅಂಶವೇ ಈ ವಿಧೇಯಕದ ಮೂಲ ಅಂಶ.

**ಅಧ್ಯಕ್ಷರು:** ಇಲ್ಲಿ ಕ್ರಿಯಾಲೋಪವಿಲ್ಲ. ಮಾನ್ಯ ಸದಸ್ಯರು ತಮ್ಮ ವಾದವನ್ನು ಮುಂದುವರಿಸಬಹುದು.

***ಕಾನೂನು ಸಚಿವರು (ಡಾ.ಅಂಬೇಡ್ಕರ್):** ನನ್ನ ಮಾನ್ಯ ಮಿತ್ರರಾದ ಡಾ.ಭಕ್ಷಿ ಟೇಕ್ ಚಂದ್, ಪ್ರಧಾನ ಮಂತ್ರಿ ಹಾಗೂ ಠಾಕೂರ್ ದಾಸ್ ಭಾರ್ಗವ್ ಅವರು ಮಾಡಿದ ಭಾಷಣಗಳ ತರುವಾಯ ನಾನು ಉತ್ತರಿಸಬೇಕಾದ ಅಗತ್ಯವಿರುವ ಯಾವುದೇ ಅಂಶ ಉಳಿದಿಲ್ಲವೆಂದು ನನ್ನ ಭಾವನೆ. ಈ ಚರ್ಚೆಯ ಕಾಲದಲ್ಲಿ ಹಲವು ಭಾಷಣಕಾರರು ಎತ್ತಿದ ಪ್ರಶ್ನೆಗಳಿಗೆ ಈ ಟ್ರಸ್ಟಿನ ಹಿತಾಸಕ್ತಿ ಕುರಿತಂತೆ ಅವರು ಉತ್ತರಿಸಿದ್ದಾರೆ. ಆ ಪ್ರಶ್ನೆಗಳಿಗೆ ಪರಿಣಾಮಕಾರಿ ಉತ್ತರ ದೊರಕಿದೆ ಎಂದು ನನ್ನ ಭಾವನೆ ಹಾಗೂ ನಾನು ಹೆಚ್ಚಿಗೆ ಏನನ್ನೂ ಹೇಳಬಯಸುವುದಿಲ್ಲ.

**ಅಧ್ಯಕ್ಷರು:** ವಿಷಯ:

> "೧೯೧೯ರ ಏಪ್ರಿಲ್ ೧೩ನೇ ದಿನಾಂಕದಂದು ಜಲಿಯಾನ್‌ವಾಲಾಬಾಗ್‌ನಲ್ಲಿ ಮೃತರಾದವರ ಅಥವಾ ಗಾಯಗೊಂಡವರ ಸ್ಮರಣಾರ್ಥವಾಗಿ ಒಂದು ರಾಷ್ಟ್ರೀಯ ಸ್ಮಾರಕವನ್ನು ನಿರ್ಮಿಸಿ ವ್ಯವಸ್ಥೆಗೊಳಿಸುವುದಕ್ಕೆ ಅವಕಾಶ ಕಲ್ಪಿಸುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು".

ಪ್ರಸ್ತಾವವನ್ನು ಅಳವಡಿಸಲಾಗಿದೆ.

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ):** (ಹಿಂದಿ ಭಾಷಣದ ಇಂಗ್ಲಿಷ್ ಅನುವಾದ)

> ಖಂಡ ೨ರಲ್ಲಿ "ನ್ಯಾಷನಲ್ ಮೆಮೋರಿಯಲ್" ಎಂಬ ಪದಗಳಿಗೆ ಬದಲಾಗಿ "ರಾಷ್ಟ್ರೀಯ ಸ್ಮಾರಕ" ಎಂಬ ಪದಗಳನ್ನು ಪ್ರತಿಯೋಜಿಸಬೇಕು.

ಈ ರಾಷ್ಟ್ರೀಯ ಸ್ಮಾರಕದ ಹೆಸರು ದೇಶಭಾಷೆಯಲ್ಲಿದ್ದರೆ ಸೂಕ್ತ ಎಂದು ನನ್ನ ವಿನಂತಿ. ಒಂದು ವಿಷಯಕ್ಕೆ ನಾವು ಸರಿಯಾದ ಹೆಸರನ್ನು ನೀಡಬೇಕು ಹಾಗೂ ನಾವು ನಿರ್ಮಿಸಲಿರುವ ರಾಷ್ಟ್ರೀಯ ಸ್ಮಾರಕದ ಹೆಸರು ದೇಶದ ಪ್ರತಿಯೊಬ್ಬರಿಗೂ ಸುಲಭವಾಗಿ ಅರ್ಥವಾಗುವಂತಿರಬೇಕು. ಅದಕ್ಕೆ ಇಂಗ್ಲಿಷ್ ಹೆಸರು ನೀಡುವುದರಿಂದ ಅದರ ಮಹತ್ವವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲ ಬಹುಸಂಖ್ಯಾತ ಜನರನ್ನು ವಂಚಿಸಿದಂತಾಗುತ್ತದೆ. ಆದ್ದರಿಂದ ಅದಕ್ಕೆ ಜಾಲಿಯಾನ್ ವಾಲಾಬಾಗ್ ರಾಷ್ಟ್ರೀಯ ಸ್ಮಾರಕ ಎಂದು ಹೆಸರಿಡಬೇಕೆಂಬುದು ನನ್ನ ವಿನಂತಿ. ಈ ತಿದ್ದುಪಡಿಯನ್ನು ಒಪ್ಪುವ ಮೂಲಕ ಮಾನ್ಯ ಕಾನೂನು ಸಚಿವರು ನನ್ನ ಸವಿನಯ ವಿನಂತಿಯನ್ನು ಒಪ್ಪುತ್ತಾರೆಂದು ನಾನು ಆಶಿಸುತ್ತೇನೆ. ಈ ಬಗ್ಗೆ ಹೆಚ್ಚಿನದೇನನ್ನೂ ಹೇಳುವ ಇಚ್ಛೆ ಇಲ್ಲ.

**ಡಾ.ಅಂಬೇಡ್ಕರ್:** ಈ ತಿದ್ದುಪಡಿ ನನಗೆ ಸಮ್ಮತವಿಲ್ಲವೆಂದು ನನ್ನ ಭಾವನೆ.

**ಶ್ರೀ ಜೆ.ಆರ್. ಕಪೂರ್:** ಈ ಬಗ್ಗೆ ನಾನು ಹೆಚ್ಚು ಒತ್ತಾಯಿಸುವುದಿಲ್ಲ. ಮಾನ್ಯ ಕಾನೂನು ಸಚಿವರು ಇದನ್ನು ಒಪ್ಪದಿದ್ದರೆ, ನಮ್ಮ ದೇಶದ ಭಾರತ ಎಂಬ ಹೆಸರನ್ನು ಆವರಣದಲ್ಲಿ ಬರೆಯುವಂತೆ ಈ ಹೆಸರನ್ನೂ ಆವರಣದಲ್ಲಿರಿಸಿ ಹಾಕಬಹುದು.

**ಡಾ.ಅಂಬೇಡ್ಕರ್:** ಈ ತಿದ್ದುಪಡಿ ನನಗೆ ಸಮ್ಮತವಿಲ್ಲವೆಂದು ನನ್ನ ಭಾವನೆ.

**ಶ್ರೀ ಜೆ.ಆರ್. ಕಪೂರ್:** ನಾನು ಈ ಬಗ್ಗೆ ಹೆಚ್ಚು ಒತ್ತಾಯಿಸುವುದಿಲ್ಲ.

**ಅಧ್ಯಕ್ಷರು:** ವಿಷಯ :

"೨ನೇ ಖಂಡವು ವಿಧೇಯಕದ ಭಾಗವಾಗಬೇಕು."

ಪ್ರಸ್ತಾವವನ್ನು ಅಳವಡಿಸಲಾಯಿತು.

ಖಂಡ ೨ ವಿಧೇಯಕಕ್ಕೆ ಸೇರ್ಪಡೆಯಾಯಿತು.

**ಖಂಡ ೩.—** (ಟ್ರಸ್ಟಿನ ಉದ್ದೇಶಗಳು)

**ಶ್ರೀ ಕಾಮತ್ (ಮಧ್ಯಪ್ರದೇಶ):**

"ಖಂಡ ೩ರ (ಸಿ) ಭಾಗದ "ಸಂಗ್ರಹಿಸಿ ಸ್ವೀಕರಿಸು' ಎಂಬ ಪದಗಳಿಗೆ ಬದಲಾಗಿ 'ಸಂಗ್ರಹಿಸಿ ಸ್ವೀಕರಿಸಿ ನಿರ್ವಹಿಸುವ' ಎಂಬ ಪದಗಳನ್ನು ಪ್ರತಿಯೋಜಿಸಬೇಕೆಂದು ಕೋರುತ್ತೇನೆ."

ಉಪ–ಖಂಡದಲ್ಲಿ ಅದು ಮುಂದಿನಂತಿದೆ:

"ಟ್ರಸ್ಟಿನ ಉದ್ದೇಶಗಳೆಂದರೆ";

.....(ಸಿ) ಸ್ಮಾರಕದ ಉದ್ದೇಶಕ್ಕಾಗಿ ನಿಧಿಯನ್ನು ಸಂಗ್ರಹಿಸಿ ಸ್ವೀಕರಿಸುವುದು.

ಎಂದರೆ, ನಿಧಿಯನ್ನು ಸಂಗ್ರಹಿಸಿ ಸ್ವೀಕರಿಸುವ ಉದ್ದೇಶಕ್ಕಾಗಿ ಟ್ರಸ್ಟನ್ನು ರಚಿಸುವುದಲ್ಲದೆ ಆ ನಿಧಿಯ ನಿರ್ವಹಣೆಯ ಉದ್ದೇಶಕ್ಕಾಗಿಯೂ ಅದನ್ನು ರಚಿಸಬೇಕು. ಇಲ್ಲವಾದರೆ ಅದರ ಕರ್ತವ್ಯಗಳು ಹಾಗೂ ಪ್ರಕಾರ್ಯಗಳು ಅಪೂರ್ಣವೆನಿಸುತ್ತವೆ. ಆದ್ದರಿಂದ ನಾನು ಈ ತಿದ್ದುಪಡಿಯನ್ನು ಮಂಡಿಸಿ ಸದನ ಅಂಗೀಕರಿಸಬೇಕೆಂದು ಶಿಫಾರಸು ಮಾಡುತ್ತೇನೆ.

**ಅಧ್ಯಕ್ಷರು:** ಇನ್ನಾವುದೇ ತಿದ್ದುಪಡಿಯನ್ನು ಮಂಡಿಸುವುದಿದೆಯೇ ಎಂಬುದನ್ನು ತಿಳಿದುಕೊಳ್ಳಲು ಬಯಸುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ೩ನೇ ಖಂಡದ (ಸಿ) ಭಾಗದ ತರುವಾಯ ಮುಂದಿನ ಹೊಸ ಭಾಗವನ್ನು ಸೇರಿಸಬೇಕೆಂದು ಕೋರುತ್ತೇನೆ.

"(ಡಿ) ಟ್ರಸ್ಟಿನ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಇನ್ನಾವುದೇ ಕೆಲಸವನ್ನು ಮಾಡುವುದು".

ಹೀಗಾದಾಗ, ಟ್ರಸ್ಟಿನ ಉದ್ದೇಶಗಳಿಗೆ ಯಾವುದೇ ನಿರ್ದಿಷ್ಟ ಸ್ವರೂಪದ್ದಲ್ಲದ ಯಾವುದೇ ಸಾಮಾನ್ಯ ಸ್ವರೂಪದ ಉದ್ದೇಶವು ಸೇರುವುದರಿಂದ ಟ್ರಸ್ಟು ತಾನು ಮಾಡಬೇಕೆಂದ ಯಾವುದನ್ನೇ ಮಾಡಲು ಆಗುವುದಿಲ್ಲವೆಂದು ಅಸಹಾಯಕತೆಯನ್ನು ಅನುಭವಿಸಬಾರದೆಂಬುದು ಇದರ ಉದ್ದೇಶ. ವಿಧೇಯಕದ ಪ್ರಭಾರದಲ್ಲಿರುವ ಸಚಿವರಿಗೆ ಇದು ತಕ್ಷಣ ಒಪ್ಪಿಗೆಯಾಗುತ್ತದೆಂದು ನನಗೆ ಖಾತರಿ ಇದೆ. ಏಕೆಂದರೆ ಇಂತಹುದೇ ಬೇರೆ ಅಧಿನಿಯಮಗಳಲ್ಲಿ ಇಂಥ ಖಂಡ ಇದ್ದೇ ಇರುತ್ತದೆ.

**ಅಧ್ಯಕ್ಷರು:** ತಿದ್ದುಪಡಿಯಲ್ಲಿ ವಿಷಯವು ಸ್ವಯಂ ವಿವರಣಾತ್ಮಕವಿರುವುದರಿಂದ ಈ ಕುರಿತ ಹೆಚ್ಚಿನ ಮಾತು ಅಗತ್ಯವಿಲ್ಲವೆಂದು ನನ್ನ ಭಾವನೆ.

**ಸರ್ದಾರ್ ಬಿ.ಎಸ್. ಮಾನ್:** "೩ನೇ ಖಂಡದ (ಎ) ಭಾಗದ ತರುವಾಯ ಹೊಸ ಭಾಗವನ್ನು ಹಾಗೂ ತರುವಾಯದ ಭಾಗಗಳಿಗೆ ಹೊಸ ಸಂಖ್ಯೆಯನ್ನು ಸೇರಿಸಬೇಕು ಎಂದು ಕೋರುತ್ತೇನೆ. ಎಂದರೆ;

"(ಬಿ) ೧೯೧೯ರ ಏಪ್ರಿಲ್ ೧೩ನೇ ದಿನಾಂಕದಂದು ಆ ಸ್ಥಳದಲ್ಲಿ ಮೃತರಾದ ಅಥವಾ ಗಾಯಗೊಂಡವರಿಗೆ ಅಥವಾ ಅವರ ಅವಲಂಬಿತರಿಗೆ ಅಥವಾ ಸಾಮಾನ್ಯ ಜನರಿಗೆ ಅಥವಾ ರಾಷ್ಟ್ರಕ್ಕಾಗಿ ದುಡಿದ, ಮೃತರಾದ ಅಥವಾ ಶಾಶ್ವತವಾಗಿ ಅಂಗವಿಕಲರಾದವರ ಪ್ರಯೋಜನಕ್ಕಾಗಿ ಶೈಕ್ಷಣಿಕ, ಸಾಮಾಜಿಕ ಅಥವಾ ಇತರ ಸಾರ್ವಜನಿಕ ಸಂಸ್ಥೆಗಳನ್ನು ಪ್ರಾರಂಭಿಸುವುದು ಅಥವಾ ನಿಧಿಗಳನ್ನು ಅಥವಾ ವಿದ್ಯಾರ್ಥಿ ವೇತನಗಳನ್ನು ಸೃಜಿಸುವುದು".

ವಿಧೇಯಕದಲ್ಲಿ ತಿಳಿಸಿರುವಂತೆ ಟ್ರಸ್ಟಿನ ಉದ್ದೇಶಗಳು "ಅಮೃತಸರ ನಗರದಲ್ಲಿ ಜಾಲಿಯಾನ್‌ವಾಲಾಬಾಗ್ ಸ್ಥಳದಲ್ಲಿ ಅಥವಾ ಸಮೀಪ ಸೂಕ್ತ ಕಟ್ಟಡಗಳು, ನಿರ್ಮಿತಿಗಳು ಮತ್ತು ಉದ್ಯಾನಗಳನ್ನು ನಿರ್ಮಿಸಿ ನಿರ್ವಹಿಸುವುದು ಇತ್ಯಾದಿ" ಎಂದಿದೆ. ಈ ತಿದ್ದುಪಡಿಯನ್ನು ಅಂಗೀಕರಿಸುವುದರಿಂದ ನಮ್ಮನ್ನಗಲಿದ ನಾಯಕರ ಸ್ಮರಣಾರ್ಥವಾಗಿ ಜೀವಂತ ಸ್ಮಾರಕವೊಂದನ್ನು ನಿರ್ಮಿಸಿ ಅದರ ವ್ಯಾಪ್ತಿಯನ್ನು ಹೆಚ್ಚಿಸಿದಂತಾಗುತ್ತದೆ ಎಂದು ನನ್ನ ಭಾವನೆ.

**ಅಧ್ಯಕ್ಷರು:** ಈ ಪೈಕಿ ಯಾವುದೇ ತಿದ್ದುಪಡಿಗಳು ಮಾನ್ಯ ಸಚಿವರಿಗೆ ಒಪ್ಪಿಗೆಯೇ?

**ಡಾ.ಬಿ.ಆರ್. ಅಂಬೇಡ್ಕರ್:** ಯಾವುವೂ ನನಗೆ ಒಪ್ಪಿಗೆಯಿಲ್ಲವೆಂದು ನನ್ನ ಅನಿಸಿಕೆ. ಅದಕ್ಕೆ ಕಾರಣವನ್ನು ನಾನು ಹೇಳುವುದು ಅಗತ್ಯವಾಗುತ್ತದೆ.

ಶ್ರೀ ಕಾಮತ್‌ರವರು ತಿದ್ದುಪಡಿಯಲ್ಲಿ "ನಿರ್ವಹಿಸಲು" ಎಂದು ಹೇಳಿದ ಪದ ಅನಗತ್ಯವೆನಿಸುತ್ತದೆ. ಏಕೆಂದರೆ ಟ್ರಸ್ಟಿಗಳು ತಾವು ಸ್ವೀಕರಿಸಿ ಸಂಗ್ರಹಿಸಿದ ಪ್ರತಿಯೊಂದನ್ನು ನಿರ್ವಹಿಸುವ ಅಧಿಕಾರವನ್ನು ಟ್ರಸ್ಟು ಹೊಂದಿರುತ್ತದೆ.

ಶ್ರೀ ಕಪೂರ್‌ರವರ ತಿದ್ದುಪಡಿ "ಟ್ರಸ್ಟಿನ ಉದ್ದೇಶಗಳ ಈಡೇರಿಕೆಗಾಗಿ ಇತರ ಯಾವುದನ್ನೇ ಮಾಡುವುದು" ಇದು ಕೂಡ ಅನಗತ್ಯ. ಉದ್ದೇಶಗಳನ್ನು ತಿಳಿಸಿದಾಗ ಆ ಉದ್ದೇಶಗಳ ಈಡೇರಿಕೆಗಾಗಿ ಯಾವುದನ್ನೇ ಮಾಡುವ ಸೂಚಿತ ಅಧಿಕಾರವು ಅದರಲ್ಲಿ ಸೇರಿರುತ್ತದೆ.

ಸರ್ದಾರ್ ಮಾನ್ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ ಈ ಟ್ರಸ್ಟಿಗಳ ತಂಡವು ತಮ್ಮನ್ನು ಒಂದು ಸಾಮಾಜಿಕ ಸೇವಾ ಸಂಸ್ಥೆಯಾಗಿ ಪರಿವರ್ತಿಸಬಾರದೆಂಬುದು ಒಪ್ಪಿಕೊಂಡಿರುವ ಅಂಶ. ಅವರ ಉದ್ದೇಶವು ಈ ರಾಷ್ಟ್ರೀಯ ಸ್ಮಾರಕವನ್ನು ನಿರ್ವಹಿಸುವುದಕ್ಕೆ ಮಾತ್ರ ಸೀಮಿತವಾಗಿರಬೇಕು.

**ಶ್ರೀ ಕಾಮತ್:** "ಸ್ವೀಕರಿಸು" ಎಂಬ ಪದವು ಅನಗತ್ಯ ಎಂದು ನಾನು ಹೇಳಬಹುದೇ. ಏಕೆಂದರೆ ಸಂಗ್ರಹಿಸಿದ ಪ್ರತಿಯೊಂದನ್ನು ಟ್ರಸ್ಟು ಸ್ವೀಕರಿಸಬೇಕಾಗುತ್ತದೆ. ಆದ್ದರಿಂದ "ಸ್ವೀಕರಿಸು" ಎಂಬುದನ್ನು ಬಿಟ್ಟುಬಿಡಬಹುದು.

**ಡಾ.ಅಂಬೇಡ್ಕರ್:** ಅದು ಇರಬಹುದು, ಆದರೆ "ನಿರ್ವಹಿಸು" ಎಂಬುದು ಅನಗತ್ಯ ಎಂದು ನನ್ನ ಭಾವನೆ.

**ಅಧ್ಯಕ್ಷರು:** ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಗಳ ಬಗ್ಗೆ ಒತ್ತಾಯಿಸುತ್ತಾರೆಯೇ?

**ಸರ್ದಾರ್ ಬಿ.ಎಸ್. ಮಾನ್:** ನಾನು ನನ್ನ ತಿದ್ದುಪಡಿಯ ಬಗ್ಗೆ ಒತ್ತಾಯಿಸುವುದಿಲ್ಲ.

**ಶ್ರೀ ಜೆ.ಆರ್. ಕಪೂರ್:** ಇಲ್ಲ.

**ಶ್ರೀ ಕಾಮತ್:** ಆಯಿತು, ಹೋಗಲಿ.

**ಅಧ್ಯಕ್ಷರು:** ಅದನ್ನು ಇರಿಸಬೇಕೇ ಅಥವಾ ಬೇಡವೋ?

**ಶ್ರೀ ಕಾಮತ್:** ಇರಿಸಬೇಕಾದ ಅಗತ್ಯವಿಲ್ಲ.

**ಅಧ್ಯಕ್ಷರು:** ಖಂಡ ೩ ವಿಧೇಯಕದ ಭಾಗವಾಗಬೇಕು.

ಪ್ರಸ್ತಾವವನ್ನು ಅಳವಡಿಸಲಾಯಿತು.

ಖಂಡ ೩ ವಿಧೇಯಕಕ್ಕೆ ಸೇರ್ಪಡೆಯಾಯಿತು.

**ಖಂಡ–೪.—** (ಟ್ರಸ್ಟಿಗಳು ಇತ್ಯಾದಿ)

**ಶ್ರೀ ಸಿಧ್ವಾ (ಮಧ್ಯಪ್ರದೇಶ):** ನನ್ನದೊಂದು ತಿದ್ದುಪಡಿ ಇದೆ.

**ಅಧ್ಯಕ್ಷರು:** ಅಂಬೇಡ್ಕರ್‌ರವರು ಯಾವುದೇ ತಿದ್ದುಪಡಿಯನ್ನು ಮಂಡಿಸುತ್ತಾರೆಯೇ?

**ಡಾ. ಅಂಬೇಡ್ಕರ್:** ಶ್ರೀ ಸಿಧ್ವಾ ಮಂಡಿಸುತ್ತಾರೆ.

**ಶ್ರೀ ಸಿಧ್ವಾ:** ಖಂಡ ೪ರ (೧)ನೇ ಉಪ ಖಂಡದ (ಬಿ) ಭಾಗದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ ಹೆಸರಿನ ಬದಲಾಗಿ ಡಾ. ಸೈಫುದ್ದೀನ್ ಕಿಚ್ಲು ಅವರ ಹೆಸರನ್ನು ಪ್ರತಿಯೋಜಿಸಬೇಕು.

ಇದು. ಮಾನ್ಯ ಸಚಿವರಿಗೆ ಒಪ್ಪಿಗೆಯೇ?

**ಡಾ.ಅಂಬೇಡ್ಕರ್**: ನಾನು ತಿದ್ದುಪಡಿಯನ್ನು ಒಪ್ಪುತ್ತೇನೆ.

*__ಗ್ಯಾನಿ ಜಿ.ಎಸ್. ಮುಸಾಫಿರ್:__ (ಉರ್ದು ಭಾಷಣದ ಇಂಗ್ಲಿಷ್ ಅನುವಾದ)

> ೪ನೇ ಖಂಡದ (೧)ನೇ ಉಪಖಂಡದ (ಇ) ಭಾಗದ ತರುವಾಯ ಹೊಸ ಭಾಗವನ್ನು ಸೇರಿಸಿ ಮತ್ತು ತರುವಾಯದ ಭಾಗಗಳಿಗೆ ತದನುಸಾರವಾಗಿ ತದನಂತರದ ಅಕ್ಷರ ನೀಡಬೇಕು.

"(ಎಫ್) ಪಂಜಾಬ್ ರಾಜ್ಯ ಕಾಂಗ್ರೆಸ್ಸಿನ ಅಧ್ಯಕ್ಷರು"

ಈ ವಿಷಯ ಕುರಿತು ನಾನು ಈಗಾಗಲೇ ಸಾಕಷ್ಟು ಹೇಳಿದ್ದೇನೆ. ದುರ್ದೈವದಿಂದ ಪ್ರಧಾನಮಂತ್ರಿಯವರು ಈ ವಿಷಯದಲ್ಲಿ ನನ್ನ ಮಾತನ್ನು ಒಪ್ಪುವುದಿಲ್ಲ. ಇನ್ನಷ್ಟು ದುರದೃಷ್ಟದ ಅಂಶವೆಂದರೆ ಪ್ರಧಾನಮಂತ್ರಿಯವರು ಈಗಾಗಲೇ ಭಾಷಣ ಮಾಡಿರುವುದರಿಂದ ನನ್ನನ್ನು ಬೆಂಬಲಿಸುವುದಾಗಿ ಹೇಳಿದ ಸದಸ್ಯರು ಈಗ ನಿಶ್ಯಬ್ದವಾಗಿದ್ದಾರೆ. ಹೀಗಾಗಿ ನನ್ನ ಅಭಿಪ್ರಾಯವನ್ನು ಇನ್ನಷ್ಟು ಒತ್ತಿ ಹೇಳುವುದರಿಂದ ಪ್ರಯೋಜನವಿಲ್ಲ. ಆದ್ದರಿಂದ ನಾನು ಅದನ್ನು ಮಂಡಿಸುವುದಿಲ್ಲ. ಆದರೂ, ಪಂಜಾಬ್ ಕಾಂಗ್ರೆಸಿನ ಅಧ್ಯಕ್ಷರನ್ನು ಸೇರಿಸುವುದರಿಂದ ಇದು ಪಕ್ಷದ ಟ್ರಸ್ಟಾಗುತ್ತದೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ.

**ಅಧ್ಯಕ್ಷರು:** ಮಾನ್ಯ ಸಚಿವರು ಈ ಯಾವುದೇ ತಿದ್ದುಪಡಿಗಳನ್ನು ಒಪ್ಪುತ್ತಾರೆಯೇ?

**ಡಾ.ಅಂಬೇಡ್ಕರ್**: ನಾನು ಯಾವ ತಿದ್ದುಪಡಿಗಳನ್ನು ಒಪ್ಪುವುದಿಲ್ಲ.

**ಶ್ರೀ ಕಾಮತ್:** ನಾನು ಎಲ್ಲ ತಿದ್ದುಪಡಿಗಳ ಬಗ್ಗೆ ಒತ್ತಿ ಹೇಳಲು ಬಯಸುತ್ತೇನೆ.

**ಅಧ್ಯಕ್ಷರು:** ಈ ಎಲ್ಲ ತಿದ್ದುಪಡಿಗಳನ್ನು ನಾನು ಸದನದ ಮುಂದೆ ಮತಕ್ಕೆ ಹಾಕುತ್ತೇನೆ.

**ಶ್ರೀ ಕಾಮತ್:** ಒಂದರ ನಂತರ ಇನ್ನೊಂದು.

**ಅಧ್ಯಕ್ಷರು:** ವಿಷಯ:

೪ನೇ ಖಂಡದ (೧)ನೇ ಉಪ ಖಂಡದ (ಬಿ) ಭಾಗದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೧೨೦–೨೫.

ಹೆಸರಿನ ಬದಲು ಕುಮಾರಿ ಮಣಿಬೆನ್‌ಪಟೇಲ್ ಅವರ ಹೆಸರನ್ನು ಪ್ರತಿಯೋಜಿಸಬೇಕು.

ಪ್ರಸ್ತಾವವನ್ನು ನಿರಾಕರಿಸಲಾಯಿತು.

*ಡಾ.ಅಂಬೇಡ್ಕರ್: ನಾನು ಒಪ್ಪಬಹುದಾದ ಒಂದೇ ತಿದ್ದುಪಡಿಯೆಂದರೆ (೨)ನೇ ಉಪಖಂಡದ (ಎಫ್) ಭಾಗದಲ್ಲಿ 'ಫಾರ್' ಎಂಬ ಪದವನ್ನು ಬಿಟ್ಟುಬಿಡುವ ೭೯ನೇ ತಿದ್ದುಪಡಿ.

**ಅಧ್ಯಕ್ಷರು:** ಶ್ರೀ ಕಾಮತ್ ಅವರು ಇತರ ತಿದ್ದುಪಡಿಗಳು ಬಗ್ಗೆ ಒತ್ತಾಯಿಸುತ್ತಾರೆಯೇ?

**ಶ್ರೀ ಕಾಮತ್:** ಜುಲ್ಮಾನೆಯ ಬಗ್ಗೆ ಇರುವ ೮೨ನೇ ತಿದ್ದುಪಡಿಯ ಬಗ್ಗೆ ನಾನು ಒತ್ತಾಯಿಸುತ್ತೇನೆ.

**ಅಧ್ಯಕ್ಷರು:** ಪ್ರಶ್ನೆ

(i) ೯ನೇ ಖಂಡದ (೨) ನೇ ಉಪ ಖಂಡದಲ್ಲಿ (ಎಫ್) ಭಾಗದಲ್ಲಿ 'ಗಾಯ' ಎಂಬ ಪದಕ್ಕೆ "ನಷ್ಟ" ಎಂಬುದನ್ನು ಪ್ರತಿಯೋಜಿಸಬೇಕು.

ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಶ್ರೀ ಕಾಮತ್:** ನನ್ನ ೨ನೇ ತಿದ್ದುಪಡಿಯ ಬಗ್ಗೆ ಒತ್ತಾಯಿಸುವುದಿಲ್ಲ.

**ಅಧ್ಯಕ್ಷರು:** ಪ್ರಶ್ನೆ

(ii) ೯ನೇ ಖಂಡದ ೨ನೇ ಉಪಖಂಡದ 'ಎಫ್' ಭಾಗದಲ್ಲಿ 'ಫಾರ್' ಎಂಬುದನ್ನು ಬಿಟ್ಟುಬಿಡಬೇಕು.

ಪ್ರಸ್ತಾವವನ್ನು ಅಳವಡಿಸಲಾಯಿತು.

**ಅಧ್ಯಕ್ಷರು:** ವಿಷಯ:

(iv) ೯ನೇ ಖಂಡದ (೩)ನೇ ಉಪಖಂಡದಲ್ಲಿ "೧೦೦ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ" ಎಂಬ ಪದಗಳಿಗೆ "ಆರು ತಿಂಗಳನ್ನು ಮೀರದ ಅವಧಿಯ ಕಾರಾವಾಸ ಅಥವಾ ೧೦೦ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಇವೆರಡೂ ಎಂಬುದನ್ನು ಪ್ರತಿಯೋಜಿಸಬೇಕು."

ಪ್ರಸ್ತಾವವನ್ನು ತಿರಸ್ಕರಿಸಲಾಯಿತು.

**ಅಧ್ಯಕ್ಷರು:** ವಿಷಯ:

೯ನೇ ಖಂಡವು ತಿದ್ದುಪಡಿಯಾದಂತೆ ವಿಧೇಯಕದ ಭಾಗವಾಗುತ್ತದೆ.

ಪ್ರಸ್ತಾವವನ್ನು ಅಳವಡಿಸಲಾಯಿತು.

೯ನೇ ಖಂಡವನ್ನು ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲಾಯಿತು.

೧೦ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಅನುಸೂಚಿಯನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಖಂಡ ೧.—** (ಸಂಕ್ಷಿಪ್ತ ಹೆಸರು)

ತಿದ್ದುಪಡಿಯನ್ನು ಮಂಡಿಸಲಾಯಿತು.

---

* ಪಿ.ಡಿ. Vol. 10, ಭಾಗ ೨, ೨೦ ಏಪ್ರಿಲ್ ೧೯೫೧, ಪು. ೭೨೪೧–೪೨.

೧ನೇ ಖಂಡದಲ್ಲಿ ೧೯೫೦ ಎಂಬುದಕ್ಕೆ ಬದಲಾಗಿ ೧೯೫೧ನ್ನು ಪ್ರತಿಯೋಜಿಸಬೇಕು.

(ಡಾ.ಅಂಬೇಡ್ಕರ್)

**ಅಧ್ಯಕ್ಷರು:** ಪ್ರಶ್ನೆ

೧ ನೇ ಖಂಡವು ತಿದ್ದುಪಡಿಯಾದಂತೆ ವಿಧೇಯಕದ ಭಾಗವಾಗುತ್ತದೆ.

ಪ್ರಸ್ತಾವವನ್ನು ಅಳವಡಿಸಲಾಯಿತು.

೧ನೇ ಖಂಡವು ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರ್ಪಡೆಯಾಯಿತು.

ಶೀರ್ಷಿಕೆ ಹಾಗು ಅಧಿನಿಯಮದ ಭಾಗಗಳು ವಿಧೇಯಕಕ್ಕೆ ಸೇರ್ಪಡೆಯಾದವು.

**ಡಾ.ಅಂಬೇಡ್ಕರ್:** ವಿಧೇಯಕವು ತಿದ್ದುಪಡಿಯಾದಂತೆ ಅಂಗೀಕೃತವಾಗಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು:** ಪ್ರಶ್ನೆ

"ವಿಧೇಯಕವು ತಿದ್ದುಪಡಿಯಾದಂತೆ ಅಂಗೀಕೃತವಾಗಬೇಕು."

ಪ್ರಸ್ತಾವವನ್ನು ಅಳವಡಿಸಲಾಯಿತು.

ಸದನವನ್ನು ಭೋಜನ ವಿರಾಮಕ್ಕಾಗಿ ಮೂರುಗಂಟೆಯವರೆಗೆ ಮುಂದೂಡಲಾಯಿತು.

◆

## ೩೩

### ಭೋಜನ ವಿರಾಮದ ನಂತರ ಸದನವು ಮೂರು ಗಂಟೆಗೆ ಮತ್ತೆ ಸೇರಿತು.
### (ಅಧ್ಯಕ್ಷತೆ: ಪಂಡಿತ್ ಥಾಕುರ್ ದಾಸ್ ಭಾರ್ಗವ್)

# *ಸಂವಿಧಾನ (ಮೊದಲನೇ ತಿದ್ದುಪಡಿ) ವಿಧೇಯಕ

**ಪ್ರಧಾನಮಂತ್ರಿ ಹಾಗೂ ವಿದೇಶಾಂಗ ಸಚಿವರು (ಶ್ರೀ ಜವಾಹರ್ ಲಾಲ್ ನೆಹರು):**

""ಭಾರತ ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧೇಯಕವನ್ನು ಪ್ರೊಫೆಸರ್ ಕೆ.ಟಿ.ಶಹಾ, ಸರ್ದಾರ್ ಹುಕುಂ ಸಿಂಗ್, ಪಂಡಿತ್ ಹೃದಯ್‌ನಾಥ್ ಕುಂಜ್ರು, ಡಾ. ಶ್ಯಾಂ ಪ್ರಸಾದ್ ಮುಖರ್ಜಿ, ಶ್ರೀ ನಾಸಿರುದ್ದೀನ್ ಅಹಮದ್, ಶ್ರೀ ರಾಜಗೋಪಾಲಾಚಾರಿ, ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ, ಶ್ರೀ ಅವಧೇಶ್ವರ್ ಪ್ರಸಾದ್ ಸಿನ್ಹಾ, ಶ್ರೀ ಟಿ.ಆರ್. ದೇವಗಿರಿಕರ್, ಡಾ.ಅಂಬೇಡ್ಕರ್, ಶ್ರೀ ವಿ.ಎಸ್. ಸರ್ವದೇ, ಶ್ರೀ ಮೋಹನ್ ಲಾಲ್ ಗೌತಂ, ಶ್ರೀ ಆರ್.ಕೆ. ಸಿಧ್ವ, ಶ್ರೀ ಖಂಡೂಬಾಯಿ ಕೆ. ದೇಸಾಯಿ, ಶ್ರೀ ಕೆ. ಹನುಮಂತಯ್ಯ, ಶ್ರೀ ರಾಜಬಹದ್ದೂರ್, ಶ್ರೀಮತಿ ಜಿ. ದುರ್ಗಾಬಾಯಿ, ಶ್ರೀ ಮಣಿಲಾಲ್ ಚತುರ್ಬಾಯಿ ಷಹ, ಶ್ರೀ ದೇವಕಾಂತ್ ಬರುವ, ಶ್ರೀ ಸತ್ಯನಾರಾಯಣ್ ಸಿನ್ಹಾ ಹಾಗೂ ವಿಧೇಯಕದ ಮಂಡನಕಾರರು ಇವರನ್ನೊಳಗೊಂಡ ಆಯ್ಕೆ ಸಮಿತಿಗೆ ಕಳುಹಿಸಬೇಕೆಂದು ಹಾಗೂ ಇವರೆಲ್ಲ ೧೯೫೧ರ ಮೇ ೨೧ರಂದು ಸೋಮವಾರ ಹಾಜರಾಗಬೇಕೆಂದು ಕೋರುತ್ತೇನೆ."

ಈ ವಿಧೇಯಕವು ಸಂಕೀರ್ಣವಾದುದಲ್ಲ ಹಾಗೂ ದೊಡ್ಡದಲ್ಲ. ಅಲ್ಲದೆ, ಇದು ಬಹಳ ಮಹತ್ವವನ್ನು ಹೊಂದಿದೆ ಎಂಬ ಅಂಶವನ್ನು ಹೇಳಬಯಸುತ್ತೇನೆ. ಸಂವಿಧಾನಕ್ಕೆ ಸಂಬಂಧಿಸಿದ ಹಾಗೂ ಅದನ್ನು ಬದಲಾಯಿಸುವುದಕ್ಕೆ ಮಾಡುವ ಯಾವುದೇ ಆದರೂ ಮಹತ್ವಪೂರ್ಣವಾಗಿರುತ್ತದೆ. ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಅಂಶಕ್ಕೆ ಹೆಚ್ಚಿನ ಮಹತ್ವವಿದೆ. ಆದ್ದರಿಂದ ಈ ವಿಧೇಯಕವನ್ನು ಮಂಡಿಸುವಲ್ಲಿ ನನಗಾಗಲೀ ಸರ್ಕಾರಕ್ಕಾಗಲೀ ಲಘು ಭಾವನೆಯಾಗಲಿ, ಆತುರವಾಗಲೀ ಇಲ್ಲ. ಅಲ್ಲದೆ ಈ ಸಮಸ್ಯೆ ಕುರಿತು ಅತ್ಯಂತ ಎಚ್ಚರವಹಿಸಿ ಯೋಚಿಸಿ, ಪರಿಶೀಲಿಸಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ನಾನು ಜನತೆ, ರಾಜ್ಯ ಸರ್ಕಾರಗಳು, ಪ್ರಾಂತೀಯ ಸರ್ಕಾರಗಳ ಸಚಿವರೊಂದಿಗೆ ಸಮಾಲೋಚಿಸಿ, ಹಲವಾರು ತಿಂಗಳುಗಳವರೆಗೆ ಯೋಚಿಸಿದ್ದೇವೆ. ಈ ವಿಷಯವನ್ನು ಹಲವಾರು ಸಮಿತಿಗಳಿಗೆ ಕಳುಹಿಸಲಾಗಿದೆ, ಸಾಧ್ಯವಿರುವಷ್ಟು ಸಕ್ಷಮ ಕಾನೂನು ತಜ್ಞರಿಂದ ಸಲಹೆ ಪಡೆದಿದ್ದೇವೆ. ಹೀಗಾಗಿ ಗರಿಷ್ಠ ಪ್ರಮಾಣದ ಎಚ್ಚರಿಕೆ ವಹಿಸಿ ಈ ವಿಷಯದಲ್ಲಿ ಮುಂದುವರೆದಿದ್ದೇವೆ. ಸಾಧ್ಯವಿರುವಷ್ಟು ಅತ್ಯುತ್ತಮ ರೂಪದಲ್ಲಿ

---

* ಪಿ.ಡಿ. Vol. 12, ಭಾಗ ೨, ೧೬ ಮೇ ೧೯೫೧, ಪು. ೮೮೧೪–೧೫.

ಅತ್ಯಂತ ಕಾಳಜಿಯಿಂದ ಇದನ್ನು ಮಂಡಿಸಲಾಗಿದೆ. ಏಕೆಂದರೆ ಈ ವಿಧೇಯಕದಲ್ಲಿ ತಿಳಿಸಲಾದ ತಿದ್ದುಪಡಿಗಳು ಅಗತ್ಯವಷ್ಟೇ ಅಲ್ಲ, ಅಪೇಕ್ಷಣೀಯವೂ ಆಗಿವೆ. ಏಕೆಂದರೆ ಈ ಬದಲಾವಣೆಗಳಾಗದಿದ್ದರೆ ದೊಡ್ಡ ತೊಂದರೆಗಳು ಉಂಟಾಗಬಹುದು. ಅಲ್ಲದೆ ಸಂವಿಧಾನದ ಮುಖ್ಯ ಉದ್ದೇಶಗಳು ವಿಫಲವಾಗಬಹುದು ಅಥವಾ ವಿಳಂಬವಾಗಬಹುದು. ಒಂದು ರೀತಿಯಲ್ಲಿ ಈ ವಿಷಯವನ್ನು ಕೆಲ ದಿನ ಜನತೆಯ ಮುಂದೆ ಅಸ್ಪಷ್ಟವಾಗಿ ಇಡಲಾಯಿತು. ಆದರೆ, ಕೆಲ ದಿನಗಳ ಹಿಂದೆ ನಾನು ಸದನದಲ್ಲಿ ಈ ವಿಧೇಯಕವನ್ನು ಮಂಡಿಸಿದಾಗ ಅದಕ್ಕೆ ನಿಶ್ಚಿತ ಸ್ವರೂಪ ಬಂದಿತು.

*__ಪಂಡಿತ್ ಕುಂಜ್ರು (ಉತ್ತರ ಪ್ರದೇಶ):__ ನಮ್ಮ ಮುಂದೆ ಇರಿಸಲಾಗಿರುವ ಈ ವಿಧೇಯಕವು ಸರಳವಾದರೂ ದೀರ್ಘಾವಧಿ ಪರಿಣಾಮ ಬೀರುವಂತಹುದು ಎಂದು ತೋರುತ್ತದೆ. ಇದು ಸಂವಿಧಾನದ ಮೇಲಷ್ಟೇ ಅಲ್ಲ. ಅದನ್ನು ನಿರ್ವಹಿಸಬೇಕಾದ ರೀತಿಯ ಮೇಲೂ ಪರಿಣಾಮ ಬೀರುತ್ತದೆ. ಇಂತಹ ಮಹತ್ವಪೂರ್ಣ ಕ್ರಮವನ್ನು ಕಾಳಜಿಯಿಂದ ಪರಿಶೀಲಿಸಬೇಕು. ಮೊದಲಿನ ಭಾಷಣಕಾರರಿಂದ ಇದು ಪರೀಕ್ಷೆಗೆ ಒಳಗಾಗಿರುವುದನ್ನು ನಾವೆಲ್ಲ ಸ್ವಾಗತಿಸಬೇಕು. ಸಂವಿಧಾನದಲ್ಲಿ ಆಗಬೇಕಾದ ಬದಲಾವಣೆಗಳನ್ನು ಸಮರ್ಥಿಸಲು ಸರ್ಕಾರವು ನಮಗೆ ಪ್ರತಿಯೊಂದು ತಿದ್ದುಪಡಿಯು ಏಕೆ ಬೇಕಾಯಿತು ಎಂಬ ಬಗ್ಗೆ ಪೂರ್ಣ ಮಾಹಿತಿ ನೀಡಬೇಕಿತ್ತು. ಪ್ರಧಾನ ಮಂತ್ರಿಯವರು ದೀರ್ಘವಾಗಿ ಮಾತನಾಡಿ ತತ್ವಗಳ ಬಗ್ಗೆ ಹೇಳಿದರು. ನಿರ್ದಿಷ್ಟ ವಿಷಯಗಳ ಬಗ್ಗೆ ಮಾತನಾಡಿದರೂ ಅದು ಸ್ಪಷ್ಟವಿರಲಿಲ್ಲ. ಸರ್ಕಾರವು ನಮ್ಮ ಮುಂದಿರಿಸಿರುವ ನಿರ್ದಿಷ್ಟ ಕ್ರಮದ ಮೇಲೆ ಹೆಚ್ಚಿನ ಬೆಳಕು ಬೀರಲಿಲ್ಲ. ಈ ದೃಷ್ಟಿಯಿಂದ ಸರ್ಕಾರದ ಇತರ ಬೇರೆ ಸದಸ್ಯರೊಬ್ಬರು ನಮಗೆ ಪೂರ್ಣ ಮಾಹಿತಿ ನೀಡಬೇಕಿತ್ತು. ಬಹುಶಃ ವಿಧೇಯಕದ ಉಪಬಂಧಗಳ ಬಗ್ಗೆ ಅದರಲ್ಲೂ ವಿಶೇಷವಾಗಿ ೧೯ನೇ ಅನುಚ್ಛೇದದ ತಿದ್ದುಪಡಿ ಹಾಗೂ ೩೧ಎ ಹಾಗೂ ೩೧ಬಿ ಹೊಸ ಅನುಚ್ಛೇದಗಳ ಸೇರ್ಪಡೆ ಕುರಿತಂತೆ ವಿವರಿಸಲು ಡಾ.ಅಂಬೇಡ್ಕರ್ ಸೂಕ್ತ ವ್ಯಕ್ತಿ. ಅವರು ವಿವರಿಸಬಹುದಿತ್ತು. ಅವರು ಚರ್ಚೆಯಲ್ಲಿ ಖಂಡಿತವಾಗಿ ಭಾಗವಹಿಸುತ್ತಾರೆ ಹಾಗೂ ವಿಷಯದ ಬಗ್ಗೆ ಕೊನೆಯಲ್ಲಿ ನಿರ್ಣಾಯಕವಾಗಿ ಹೇಳುತ್ತಾರೆ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಇಲ್ಲ ಇಲ್ಲ.

**ಪಂಡಿತ್ ಕುಂಜ್ರು:** ಅದು ಅವರಿಗೆ ತಕ್ಕುದೇ, ಏಕೆಂದರೆ ಅವರು ಸರ್ಕಾರದ ಒಬ್ಬ ಮಹತ್ವದ ಸಚಿವ. ಸದನವು ಹಾಗೆ ಮಾಡದಿದ್ದುದು ಅನುಚಿತ.

**ಶ್ರೀ ಸಿಧ್ವಾ (ಮಧ್ಯ ಪ್ರದೇಶ):** ಯಾವುದು ಅನುಚಿತ?

**ಪಂಡಿತ್ ಕುಂಜ್ರು:** ಸಿಧ್ವಾ ಅವರಿಗೆ ಸ್ವಲ್ಪ ತಾಳ್ಮೆ ಇದ್ದರೆ ಅವರಂತೆಯೇ ಇತರೆ ಯಾರಿಗೂ ಮಾಹಿತಿ ಇಲ್ಲವೆಂಬುದು ಹಾಗೂ ಎಲ್ಲರಿಗೂ ಹೆಚ್ಚಿನ ಮಾಹಿತಿ ಬೇಕು ಎಂಬುದು ಅವರಿಗೆ ತಿಳಿಯುತ್ತದೆ.

**__ಕಾನೂನು ಸಚಿವರು (ಡಾ. ಅಂಬೇಡ್ಕರ್):__ ನಿನ್ನೆ ಚರ್ಚೆಯ ಸಮಯದಲ್ಲಿ ನನ್ನ ಮಿತ್ರ ಪಂಡಿತ್ ಹೃದಯ್ ನಾಥ್ ಕುಂಜ್ರು ಅವರು ಈ ವಿಧೇಯಕದ ವಿವಿಧ ಖಂಡಗಳ ಉದ್ದೇಶಗಳು ಹಾಗೂ ಅಗತ್ಯದ ಬಗ್ಗೆ ವಿವರಿಸದೇ ಸರ್ಕಾರ ಅನ್ಯಾಯ ಮಾಡಿದೆ ಎಂದು ತಿಳಿಸಿದರು ಹಾಗೂ ಸರ್ಕಾರದ ಕಡೆಯಿಂದ ಎಂದರೆ ವಿಶೇಷವಾಗಿ ನನ್ನ ಬಗ್ಗೆ ಉಲ್ಲೇಖಿಸಿ ನಾನು ಸದನಕ್ಕೆ ಆ ಕರ್ತವ್ಯವನ್ನು ಸಲ್ಲಿಸಬೇಕಿತ್ತೆಂದು

---

* ಪಿ.ಡಿ. Vol. 12, ಭಾಗ ೨, ೧೭ ಮೇ ೧೯೫೧, ಪು. ೮೯೯೬.

** ಪಿ.ಡಿ. Vol. 12, ಭಾಗ ೨, ೧೮ ಮೇ ೧೯೫೧, ಪು. ೯೦೦೪–೩೨.

ತಿಳಿಸಿದರು. ಕುಂಜ್ರು ಅಂತಹ ಜಾಣ ವ್ಯಕ್ತಿ, ಈ ವಿಧೇಯಕದ ಬಗ್ಗೆ ವಿವರಣೆ ಬಯಸುತ್ತಾರೆಂದರೆ ಯಾವ ಸದಸ್ಯರಾದರೂ ನಂಬುತ್ತಾರೆಯೇ? ನನ್ನ ಮತ್ತೊಬ್ಬ ಮಿತ್ರ ಡಾ.ಶ್ಯಾಂ ಪ್ರಸಾದ್ ಮುಖರ್ಜಿ ಅವರಿಗೂ ಈ ವಿಧೇಯಕದ ಬಗ್ಗೆ ಯಾವುದೇ ವಿವರಣೆಯ ಅಗತ್ಯವಿಲ್ಲ. ಏಕೆಂದರೆ ಪ್ರಧಾನಮಂತ್ರಿಗಳು ಭಾಷಣವನ್ನು ಮುಗಿಸುತ್ತಿದ್ದಂತೆಯೇ ಅವರು ಪ್ರತಿಕ್ರಿಯಿಸಲು ಎದ್ದುನಿಂತರು. ಕುಂಜ್ರು ಅವರು ಜಾಣ್ಮೆಯಲ್ಲಿ ಮುಖರ್ಜಿ ಅವರಿಗಿಂತ ಎಳ್ಳಷ್ಟು ಕಡಿಮೆ ಇಲ್ಲ ಎಂದು ನನ್ನ ಭಾವನೆ. ಆದರೆ ಕುಂಜ್ರು ಅವರು ಸದನದ ಸದಸ್ಯರ ಅಭಿಪ್ರಾಯವೆಂದು ತಿಳಿಸಿರುವ ಮೇರೆಗೆ ಈ ಚರ್ಚೆಯಲ್ಲಿ ಭಾಗವಹಿಸುವುದು ಹಾಗೂ ಚರ್ಚೆಯಲ್ಲಿ ಉದ್ಭವಿಸಿದ ಎರಡು ವಾದಗಳನ್ನು ಮುಕ್ತಾಯಗೊಳಿಸುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ಏಕೆಂದರೆ ಸಂವಿಧಾನಕ್ಕೆ ತಿದ್ದುಪಡಿಯ ಅಗತ್ಯವಿರಲಿಲ್ಲವೆಂದು ಹಾಗೂ ಸರ್ಕಾರವು ಆತುರಪಡದೇ ಜನತೆಗೆ ಇನ್ನಷ್ಟು ಕಾಲಾವಕಾಶ ನೀಡಿ, ನಂತರ ಈ ಕ್ರಮ ಕೈಗೊಳ್ಳಬೇಕಿತ್ತೆಂದು ಮತ್ತೊಂದು ವಾದವಿದೆ. ನನ್ನ ಅಭಿಪ್ರಾಯವೆಂದರೆ ನಾನು ವಿಧೇಯಕವನ್ನು ಖಂಡ ಖಂಡವಾಗಿ ಎತ್ತಿಕೊಂಡು ಈ ವಿಧೇಯಕದಲ್ಲಿ ಮಾಡಲು ಉದ್ದೇಶಿಸಿರುವ ಬದಲಾವಣೆಗಳ ಅಗತ್ಯವನ್ನು ವಿವರಿಸಲು ಯತ್ನಿಸುತ್ತೇನೆ.

ಮೊದಲು ವಿಧೇಯಕದ ೨ನೇ ಖಂಡದಿಂದ ಪ್ರಾರಂಭಿಸುತ್ತೇನೆ. ೨ನೇ ಖಂಡದಲ್ಲಿ ೧೫ನೇ ಅನುಚ್ಛೇದವನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ. ಮದ್ರಾಸ್ ರಾಜ್ಯದಲ್ಲಿನ ಎರಡು ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ನೀಡಿದ ಎರಡು ತೀರ್ಪುಗಳ ಕಾರಣದಿಂದಾಗಿ ೧೫ನೇ ಅನುಚ್ಛೇದದ ತಿದ್ದುಪಡಿ ಅಗತ್ಯವಾಗಿದೆ. ಆ ಪೈಕಿ ಒಂದು 'ಮದ್ರಾಸ್ – ವಿರುದ್ಧ –ಶ್ರೀಮತಿ ಚಂಪಕಂ ದೊರೈರಾಜನ' ಇನ್ನೊಂದು 'ವೆಂಕಟರಾಮನ್ –ವಿರುದ್ಧ – ಮದ್ರಾಸ್ ರಾಜ್ಯ'. ವೆಂಕಟರಾಮನ್ ಪ್ರಕರಣದಲ್ಲಿ ೧೬ನೇ ಅನುಚ್ಛೇದ, ೪ನೇ ಖಂಡದ ಪ್ರಸ್ತಾವವಿವೆ. ಚಂಪಕಂ ಪ್ರಕರಣದಲ್ಲಿ ೨೯ನೇ ಅನುಚ್ಛೇದ ೨ನೇ ಖಂಡದ ಪ್ರಸ್ತಾಪವಿದೆ. ಒಂದು ಪ್ರಕರಣದಲ್ಲಿ ಸಾರ್ವಜನಿಕ ಸೇವೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕುರಿತ ಪ್ರಶ್ನೆ ಇದ್ದರೆ, ಇನ್ನೊಂದರಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಕುರಿತ ಪ್ರಶ್ನೆ ಇದೆ. ಮದ್ರಾಸ್ ಪ್ರಾಂತ ಹಾಗೂ ಇತರೆ ಕಡೆಗಳಲ್ಲಿ ಇದು ಕೋಮುವಾದಿ ಸರ್ಕಾರಿ ಆದೇಶ ಎಂದು ಪ್ರಚಲಿತವಿದೆ. ಮದ್ರಾಸ್ ರಾಜ್ಯದ ಕೋಮುವಾದಿ ಸರ್ಕಾರಿ ಆದೇಶವನ್ನು ಅಸಿಂಧು ಹಾಗೂ ಅನೂರ್ಜಿತ ಎನ್ನಲಾಗಿದೆ. ಏಕೆಂದರೆ ಸರ್ವೋಚ್ಚ ನ್ಯಾಯಾಲಯವು ಅನುಚ್ಛೇದ ೨೯, ಖಂಡ ೨ರಲ್ಲಿ ೧೬ನೇ ಅನುಚ್ಛೇದಕ್ಕೆ ಲಗತ್ತಾದ ೪ನೇ ಖಂಡದಂತೆ ಉಳಿಸುವಿಕೆ ಖಂಡವಿಲ್ಲ ಎಂದು ತಿಳಿಸಿದೆ. ಏಕೆಂದರೆ ೧೬ನೇ ಅನುಚ್ಛೇಧದ (೪)ನೇ ಖಂಡದಲ್ಲಿ ವಿಶೇಷ ಉಪಬಂಧವನ್ನು ಕಲ್ಪಿಸಲಾಗಿದ್ದು, ಆ ಮೇರೆಗೆ ಹಿಂದುಳಿದ ವರ್ಗಗಳಿಗೆ ಸೇವೆಯಲ್ಲಿ ಪ್ರಾತಿನಿಧ್ಯ ಕಲ್ಪಿಸಲು ವಿಶೇಷ ಉಪಬಂಧವನ್ನು ಮಾಡಲು ಸರ್ಕಾರಕ್ಕೆ ೧೬ನೇ ಅನುಚ್ಛೇದ ಅಡ್ಡಿಪಡಿಸುವಂತಿಲ್ಲ. ಇಂತಹ ಉಪಬಂಧ ೨೯ನೇ ಅನುಚ್ಛೇದದಲ್ಲಿ ಇಲ್ಲ. ೧೬ನೇ ಅನುಚ್ಛೇದ (೪) ನೇ ಖಂಡಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು, ಅಲ್ಲಿ ಜಾತಿ ಆಧಾರದ ಮೇಲೆ ತಾರತಮ್ಯ ಮಾಡಲಾಗಿದ್ದು ಅದು ಅಸಿಂಧುವೆಂದು ನಿರ್ಧರಿಸಿತು. ನಾನು ಸರ್ವೋಚ್ಚ ನ್ಯಾಯಾಲಯದ ಎರಡೂ ತೀರ್ಪುಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದ್ದು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ಸೂಕ್ತ ಗೌರವ ತೋರುತ್ತ, ಅವರು ನೀಡಿರುವ ತೀರ್ಪು ಅಸಮರ್ಪಕವಾಗಿದೆ ಎಂದು ಹೇಳಲೇಬೇಕು.

**ಶ್ರೀ ನಾಸಿರುದ್ದೀನ್ ಅಹಮದ್ (ಪಶ್ಚಿಮ ಬಂಗಾಳ):** ಸ್ವಾಮಿ ಇಲ್ಲಿ ಕ್ರಿಯಾಲೋಪವಿದೆ. ಯಾವುದೇ ಸದಸ್ಯರು ದೇಶದ ಅತ್ಯುನ್ನತ ನ್ಯಾಯಾಲಯಕ್ಕೆ ಅಗೌರವ ಸಲ್ಲಿಸಬಹುದೆ? ನ್ಯಾಯಾಲಯಗಳ ಬಗ್ಗೆ

ಅಗೌರವವುಂಟು ಮಾಡುವ ರೀತಿಯಲ್ಲಿ ಮಾಡನಾಡಬಾರದೆಂಬ ಪದ್ಧತಿ ಸಂಸತ್ತಿನಲ್ಲಿದೆ.

**ಡಾ.ಅಂಬೇಡ್ಕರ್:** ಇಲ್ಲಿ ಮಾನ್ಯ ನ್ಯಾಯಾಧೀಶರ ಕುರಿತ ಅವಹೇಳನೆ ಇಲ್ಲವೇ ಇಲ್ಲ.

**ಅಧ್ಯಕ್ಷರು:** ಆ ಶಬ್ದವನ್ನು ಬಳಸಬಾರದಾಗಿತ್ತೆಂದು ನನ್ನ ಭಾವನೆಯೂ ಹೌದು. ಆದರೆ, ಸರ್ಕಾರದ ಉದ್ದೇಶದ ದೃಷ್ಟಿಯಿಂದ ತೀರ್ಪು ಅಸಮಂಜಸವೆಂದು ಕಾನೂನು ಸಚಿವರ ಮಾತಿನ ಅರ್ಥ.

**ಡಾ.ಅಂಬೇಡ್ಕರ್:** ತೀರ್ಪು, ಸಂವಿಧಾನದ ಅನುಚ್ಛೇದಗಳಿಗೆ ಅನುಸಾರವಾಗಿರುವಂತೆ ತೋರುವುದಿಲ್ಲ. ಇದು ನನ್ನ ಅಭಿಪ್ರಾಯ.

**ಅಧ್ಯಕ್ಷರು:** ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಸಚಿವರು ಯಾವುದೇ ಆಕ್ಷೇಪಣೆ ಜಾರಿ ಮಾಡಲಾಗದು ಎಂದು ನನ್ನ ಅಭಿಪ್ರಾಯ.

**ಡಾ.ಅಂಬೇಡ್ಕರ್:** ಕ್ಷಮಿಸಬೇಕು.

**ಅಧ್ಯಕ್ಷರು:** ಸರ್ಕಾರದ ಉದ್ದೇಶದ ದೃಷ್ಟಿಯಿಂದ ತೀರ್ಪು ಅಸಮರ್ಪಕವಾಗಿದೆ ಎಂಬುದಕ್ಕಿಂತ ಬೇರೇನನ್ನೂ ಸೂಚಿಸುವ ಉದ್ದೇಶ ಸಚಿವರಿಗಿರಲಿಲ್ಲ ಎಂಬುದು ನನ್ನ ಯೋಚನೆ.

**ಗೃಹ ಸಚಿವರು (ರಾಜ್ ಗೋಪಾಲಾಚಾರಿ):** ನನ್ನ ಮಧ್ಯಪ್ರವೇಶವನ್ನು ಅಧ್ಯಕ್ಷರು ಮನ್ನಿಸಬೇಕು. ತೀರ್ಪಿನಿಂದಾಗಿ ಒಂದು ಸಂಶಯ ಉಂಟಾಗಿದೆ ಎಂದು ಕಾನೂನು ಸಚಿವರ ಅಭಿಪ್ರಾಯ ಎಂದು ನನ್ನ ಭಾವನೆ.

**ಅಧ್ಯಕ್ಷರು:** ಈಗ ಮುಂದುವರಿಸೋಣ

**ಡಾ.ಅಂಬೇಡ್ಕರ್:** ೨೯ನೇ ಅನುಚ್ಛೇದ ೨ನೇ ಖಂಡದಲ್ಲಿ 'ಓನ್ಲಿ' ಎಂಬುದು ಮಹತ್ವದ ಪದ. ಕೇವಲ ಜನಾಂಗ, ಧರ್ಮ ಅಥವಾ ಲಿಂಗ ತಾರತಮ್ಯದ ಮೇಲೆ ಮಾಡತಕ್ಕದ್ದಲ್ಲ. ಇಲ್ಲಿ 'ಓನ್ಲಿ' ಎಂಬುದು ಅತ್ಯಂತ ಮಹತ್ವಪೂರ್ಣ. ಈ ಅನುಚ್ಛೇದದಲ್ಲಿ ಸೂಚಿಸಿದವುಗಳಿಗಿಂತ ಬೇರೆಯಾದ ಅಂಶಗಳ ಆಧಾರದ ಮೇಲೆ ಮಾಡುವ ಯಾವುದೇ ತಾರತಮ್ಯವನ್ನು ಈ ಅನುಚ್ಛೇದವು ಹೊರತುಪಡಿಸುವುದಿಲ್ಲ. ಇಲ್ಲಿ "ಓನ್ಲಿ' ಎಂಬುದು ಅದಕ್ಕೆ ಬೇಕಾಗಿದ್ದ ಪರಿಗಣನೆಯನ್ನು ಪಡೆಯಲಿಲ್ಲ ಎಂದು ನಾನು ವಿನಂತಿಸುತ್ತೇನೆ.

೧೬ನೇ ಅನುಚ್ಛೇದದ (೪)ನೇ ಖಂಡದ ಸಂಬಂಧದಲ್ಲಿ ನನ್ನ ಮನವಿ ಏನೆಂದರೆ ಯಾವುದೇ ಜಾತಿಗೆ ಸೇರಿದವನು ಎಂಬ ಕಾರಣದಿಂದ ಹೊರತುಪಡಿಸುವ ಯಾವುದೇ ಮೀಸಲಾತಿ ನೀಡುವುದು ಅಸಾಧ್ಯ. ಮುಲ್ಲಾ ಅವರ ಕೃತಿಯ ಕೊನೆಯ ಮುದ್ರಣದಲ್ಲಿ ಮೊದಲ ಪುಟದಲ್ಲಿಯೇ "ಜಾತಿ ಇಲ್ಲದ ಯಾವ ಹಿಂದುವೂ ಇಲ್ಲ" ಎಂಬುದು ಮೂಲಭೂತ ತತ್ವ ಎಂಬುದನ್ನು ಪ್ರತಿಯೊಬ್ಬರು ಗಮನಿಸಬೇಕು. ಪ್ರತಿಯೊಬ್ಬ ಹಿಂದುವಿಗೆ ಒಂದು ಜಾತಿ ಇದೆ. ಆತ ಬ್ರಾಹ್ಮಣ ಅಥವಾ ಮರಾಠಿ ಅಥವಾ ಕುಣುಬಿ ಅಥವಾ ಕುಂಬಾರ ಅಥವಾ ಮರಗೆಲಸದವನು ಆಗಿರುತ್ತಾನೆ. ಜಾತಿಯಿಲ್ಲದೆ ಯಾವ ಹಿಂದುವೂ ಇಲ್ಲ ಎಂಬುದು ಮೂಲಭೂತ ತತ್ತ್ವ. ಹಿಂದುಳಿದ ವರ್ಗಗಳು ಎಂಬ ಕಾರಣಕ್ಕಾಗಿ ನೀವು ಯಾವುದೇ ಮೀಸಲಾತಿಯನ್ನು ಮಾಡಿದರೆ ಅದು ಕೆಲವು ಜಾತಿಗಳಿಗೆ ಸೇರಿದ ಕೆಲವರನ್ನು ಹೊರತುಪಡಿಸಿ, ಕೆಲವು ಜಾತಿಗಳನ್ನು ಒಗ್ಗೂಡಿಸುವುದು ಎಂದು ಅರ್ಥ. ಆದ್ದರಿಂದ ಈ ದೇಶದ ಪರಿಸ್ಥಿತಿಯಲ್ಲಿ ಕೆಲವರು ಒಂದು ಜಾತಿಯನ್ನು ಹೊಂದಿದ್ದಾರೆಂದು ಅವರನ್ನು ಹೊರತುಪಡಿಸದೆ ಮೀಸಲಾತಿ ಮಾಡುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಇದು ಒಂದು ಅತೃಪ್ತಿಕರ ತೀರ್ಪು. ಈ ಸಂಬಂಧದಲ್ಲಿ ಸದನ ಹಾಗೂ ಕೆಲ ಸದಸ್ಯರು ಏನೇ ಹೇಳಿದರೂ ನಾನು ಪೀಠಾಸೀನ ನ್ಯಾಯಾಧೀಶರ ತೀರ್ಪಿಗೆ ಬದ್ಧನಾಗಿದ್ದೇನೆ. ಆದರೆ, ನಾನು ಅದನ್ನು ಗೌರವಿಸಲು ಬದ್ಧನಾಗಿಲ್ಲ. ಇದು ಪ್ರತಿಯೊಬ್ಬ ನ್ಯಾಯವಾದಿಗಿರುವ ಸ್ವಾತಂತ್ರ್ಯ.

ನ್ಯಾಯಾಧೀಶರು ತೀರ್ಪು ಹೇಳುವುದರಲ್ಲಿ ತಪ್ಪಿದ್ದಾರೆಂದು ಹೇಳುವ ಸ್ವಾತಂತ್ರ್ಯ ಪ್ರತಿಯೊಬ್ಬ ನ್ಯಾಯವಾದಿಗಿದೆ. ಹಾಗೂ ನಾನು ಆ ಸ್ವಾತಂತ್ರ್ಯವನ್ನು ಬಿಟ್ಟುಕೊಡಲು ಸಿದ್ಧನಿಲ್ಲ. ನಾನು ವೃತ್ತಿ ನಡೆಸಿದ ನ್ಯಾಯಾಧೀಶರ ಮುಂದೆ, ವಿಷಯದ ಕುರಿತಾದ ನನ್ನ ಅಭಿಪ್ರಾಯ ಇದು ಎಂದು ಯಾವಾಗಲೂ ಹೇಳಿದ್ದೇನೆ. ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಹಾಗೂ ಪ್ರಸ್ತುತದಲ್ಲಿ ತಮ್ಮ ಕಾಲ ಮೇಲೆ ತಾವು ನಿಲ್ಲಲಾರದ ಹಿಂದುಳಿದ ವರ್ಗಗಳು ಹಾಗೂ ಅಂತಹ ಇತರ ವರ್ಗಗಳು ಮತ್ತು ಜನತೆಯಲ್ಲಿಯ ದುರ್ಬಲ ವರ್ಗಗಳೆಂದು ಕರೆಯಲಾಗುವವರ ಒಳಿತು ಹಾಗೂ ಹಿತಾಸಕ್ತಿಗಾಗಿ ಸಾಧ್ಯವಿರುವುದನ್ನೆಲ್ಲ ಮಾಡಬೇಕೆಂದು ನಿರ್ದೇಶಕ ತತ್ವಗಳ ೪೬ನೇ ಅನುಚ್ಛೇದದಲ್ಲಿ ಸರ್ಕಾರಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು. ಇದು ಕೇವಲ ಸರ್ಕಾರದ ಬದ್ಧತೆಯಷ್ಟೇ ಅಲ್ಲ. ಸಂಸತ್ತು ೪೬ನೇ ಅನುಚ್ಛೇದದ ಉಪಬಂಧವನ್ನು ನೆರವೇರಿಸಲು ಬದ್ಧವಾಗಿದೆ. ಇದನ್ನು ಸಾಧಿಸಬೇಕಾದರೆ ೨೯ನೇ ಅನುಚ್ಛೇದದ (೨)ನೇ ಖಂಡ ಹಾಗೂ ೧೬ನೇ ಅನುಚ್ಛೇದದ (೪)ನೇ ಖಂಡಗಳನ್ನು ಈಗ ಅರ್ಥೈಸಿದಂತೆ ಅರ್ಥೈಸದೇ ತಿದ್ದುಪಡಿಗಳನ್ನು ಹೇಗೆ ಕೈಬಿಡಬಹುದಾಗಿದೆ ಹಾಗೂ ದುರ್ಬಲ ವರ್ಗಗಳ ಪ್ರಗತಿಯನ್ನು ಅಡ್ಡಿಪಡಿಸಲಾಗುತ್ತಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಆದ್ದರಿಂದ ೧೫ನೇ ಅನುಚ್ಛೇದವನ್ನು ತಿದ್ದುಪಡಿ ಮಾಡುವ ಅಗತ್ಯವಿದೆ.

೧೯ನೇ ಅನುಚ್ಛೇದದ ಉಪಬಂಧಗಳಿಗೆ ಬರುತ್ತಿದ್ದೇನೆ. ಇದರಿಂದ ಸದನದ ಸದಸ್ಯರಿಗೆ ಭಾರೀ ಉದ್ವೇಗ ಉಂಟಾಗಿತ್ತು. ೧೯ನೇ ಅನುಚ್ಛೇದದ ಮೂಲ (೭)ನೇ ಖಂಡವನ್ನು ತಿದ್ದುಪಡಿ ಮಾಡುವ ವಿಧೇಯಕದ (೩) (೧) (ಎ) ಖಂಡವನ್ನು ಎತ್ತಿಕೊಳ್ಳುತ್ತೇನೆ. ಈ ಉಪಖಂಡವು ೩ ಶೀರ್ಷಿಕೆಗಳನ್ನು ಹೊಂದಿದೆ.

೧. ವಿದೇಶಗಳೊಡನೆ ಸಂಬಂಧ
೨. ಸಾಮಾಜಿಕ ವ್ಯವಸ್ಥೆ
೩. ಅಪರಾಧಗಳಿಗೆ ಪ್ರಚೋದನೆ.

ಮೂರು ಹೊಸ ಶೀರ್ಷಿಕೆಗಳನ್ನು ಮಂಡಿಸಲು ಅಗತ್ಯವೇನಿತ್ತು ಎಂದು ಪ್ರಶ್ನಿಸಲಾಗಿತ್ತು. ಸರ್ವೋಚ್ಚ ನ್ಯಾಯಾಲಯ ಹಾಗೂ ಪ್ರಾಂತೀಯ ಉಚ್ಚ ನ್ಯಾಯಾಲಯಗಳೂ ನೀಡಿದ ಕೆಲವು ತೀರ್ಪುಗಳಿಂದಾಗಿ ಈ ಅಗತ್ಯ ಒದಗಿತು. ರಮೇಶ್ ಥಾಪರ್ ಪ್ರಕರಣ ಹಾಗೂ ಬ್ರಿಜ್ ಭೂಷಣ್ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪುಗಳ ಬಗ್ಗೆ ತಿಳಿಸುತ್ತೇನೆ. ಇವೆರಡು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು, ತರುವಾಯ ರಾಜ್ಯ ಉಚ್ಚ ನ್ಯಾಯಾಲಯಗಳ ತೀರ್ಪುಗಳನ್ನು ಎತ್ತಿಕೊಳ್ಳುತ್ತೇನೆ.

ಪಂಜಾಬ್ ಉಚ್ಚ ನ್ಯಾಯಾಲಯದ ಈ ಮುಂದಿನ ತೀರ್ಪುಗಳನ್ನು ಪರಿಶೀಲಿಸಬಹುದು.

೧. ಮಾಸ್ಟರ್ ತಾರಾಸಿಂಗ್ ಪ್ರಕರಣ
೨. ಅಮರ್ ನಾಥ್ ಬಾಲಿ ವಿರುದ್ಧ ಪಂಜಾಬ್ ರಾಜ್ಯ.

ಪಾಟ್ನಾ ಹಾಗೂ ಮದ್ರಾಸ್ ಉಚ್ಚ ನ್ಯಾಯಾಲಯಗಳ ಎರಡು ತೀರ್ಪುಗಳಿವೆ.

೧. ಶೈಲಬಾಲಾದೇವಿ ವಿರುದ್ಧ ಬಿಹಾರದ ಮುಖ್ಯ ಕಾರ್ಯದರ್ಶಿ.
೨. ಬೈನ್ಸ್ ವಿರುದ್ಧ ಮದ್ರಾಸ್ ರಾಜ್ಯ.

ರಮೇಶ್ ಥಾಪರ್ ಪ್ರಕರಣದಲ್ಲಿ ಮದ್ರಾಸ್ ಸಾಮಾಜಿಕ ಸುವ್ಯವಸ್ಥೆಯ ನಿರ್ವಹಣೆ. ೧೯೪೯ರ ಸಿಂಧುತ್ವದ ಪ್ರಶ್ನೆ ಹುದುಗಿತ್ತು. ಬ್ರಿಜ್ ಭೂಷಣ್ ಪ್ರಕರಣದಲ್ಲಿ ಪೂರ್ವ ಪಂಜಾಬ್ ಸಾರ್ವಜನಿಕ ರಕ್ಷಣಾ ಅಧಿನಿಯಮ ೧೯೪೯ರ ಪಾತ್ರವಿತ್ತು. ಮಾಸ್ಟರ್ ತಾರಾ ಸಿಂಗ್ ಪ್ರಕರಣದಲ್ಲಿ ಭಾರತ ದಂಡ

ಸಂಹಿತೆಯ ೧೨೪(ಎ) ಹಾಗೂ ೧೫೩ (ಎ) ಪ್ರಕರಣಗಳ ಸಿಂಧುತ್ವದ ಅಂಶವಿತ್ತು. ಅಮರ್ ನಾಥ್ ಬಾಲಿ ಪ್ರಕರಣದಲ್ಲಿ ಭಾರತ ಪತ್ರಿಕೋದ್ಯಮ (ತುರ್ತು ಅಧಿಕಾರಗಳು) ಅಧಿನಿಯಮ, ೧೯೩೧ರ ೪ನೇ ಪ್ರಕರಣದ ಸಿಂಧುತ್ವದ ಅಂಶವಿತ್ತು. ಶೈಲಾಬಾಲಾ ಪ್ರಕರಣದಲ್ಲಿಯೂ ಹಾಗೂ ಬೈನ್ಸ್–ವಿರುದ್ಧ–ಮದ್ರಾಸ್ ರಾಜ್ಯ ಪ್ರಕರಣದಲ್ಲಿಯೂ ಪತ್ರಿಕೋದ್ಯಮ ಅಧಿನಿಯಮದ ೪ನೇ ಪ್ರಕರಣದ ಸಿಂಧುತ್ವದ ಅಂಶವಿತ್ತು.

ಈ ಎಲ್ಲ ಪ್ರಕರಣಗಳಲ್ಲಿ ಅವು ಶೂನ್ಯ ಕಾನೂನುಗಳೆಂದರೆ, ೧೯ನೇ ಅನುಚ್ಛೇದದ (೨)ನೇ ಖಂಡದ ಉಪಬಂಧಗಳ ಮೇರೆಗೆ ಈ ಅಧಿನಿಯಮಗಳ ಸಂವಿಧಾನವು ಅಸ್ತಿತ್ವದಲ್ಲಿ ಬರುವುದಕ್ಕೆ ಮುಂಚೆ ಸಿಂಧುವಾಗಿದ್ದರೂ ಈಗ ಮೂಲಭೂತ ಹಕ್ಕುಗಳಿಗೆ ಅಸಂಗತವಾಗಿರುವುದರಿಂದ ಶೂನ್ಯ ಕಾನೂನುಗಳೆಂದು ತೀರ್ಮಾನಿಸಲಾಗಿದೆ.

ಸರ್ವೋಚ್ಚ ನ್ಯಾಯಾಲಯದ ಹಾಗೂ ವಿವಿಧ ರಾಜ್ಯಗಳ ಉಚ್ಚ ನ್ಯಾಯಾಲಯಗಳ ತೀರ್ಪಿನ ಪರಿಣಾಮವೇನು? ಸದನದ ಸದಸ್ಯರಿಗೆ ಸ್ಪಷ್ಟ ಅಭಿಪ್ರಾಯ ನೀಡಲು ನಾನು ಶೂನ್ಯ ಹಾಗೂ ಅಸಿಂಧುವೆಂದು ಘೋಷಿತವಾದ ಪ್ರಕರಣಗಳನ್ನು ಓದಬಲ್ಲೆ. ಆದರೆ ಸಮಯಾಭಾವದ ಕಾರಣದಿಂದ ಪತ್ರಿಕಾ ಅಧಿನಿಯಮದ ೪ನೇ ಪ್ರಕರಣವನ್ನು ಮಾತ್ರ ಉಲ್ಲೇಖಿಸುತ್ತೇನೆ.

> (ಎ) ಹಿಂಸೆಯನ್ನೊಳಗೊಂಡ ಯಾವುದೇ ಕೊಲೆಯ ಅಪರಾಧ ಅಥವಾ ಯಾವುದೇ ಶಿಕ್ಷಾರ್ಹ ಅಪರಾಧವೆಸಗಲು ಪ್ರಚೋದನೆ ಅಥವಾ ಉತ್ತೇಜನ ನೀಡಲು ಅಥವಾ ಪ್ರಚೋದನೆ ಅಥವಾ ಉತ್ತೇಜನ ನೀಡಲು ಮುಂದಾಗಲು ಅಥವಾ
>
> (ಬಿ) ಅಂಥ ಅಪರಾಧ ಎಸಗಿರುವ ಅಥವಾ ಎಸಗಿರುವನೆಂದು ಆಪಾದಿಸಲಾದ ಅಥವಾ ಎಸಗಿರುವನೆಂದು ಸೂಚಿತವಾದ ಯಾವೊಬ್ಬ ವಾಸ್ತವಿಕ ಅಥವಾ ಕಾಲ್ಪನಿಕ ವ್ಯಕ್ತಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಒಪ್ಪಿಗೆ ಅಥವಾ ಪ್ರಶಂಸೆ ಸೂಚಿಸುವ
>
> (ಸಿ) ಯಾವುದೇ ಅಧಿಕಾರಿ ಅಥವಾ ಸೈನಿಕ ಇತ್ಯಾದಿ ಪ್ರೇರೇಪಿಸುವ ಯಾವುದೇ ಪದಗಳು, ಸಂಕೇತಗಳು ಹಾಗೂ ವ್ಯಕ್ತಮನವಿಗಳಿಂದ ಯಾವುದೇ ಪತ್ರಿಕೆ, ಪುಸ್ತಕ ಅಥವಾ ದಾಖಲೆಯನ್ನು ಮುದ್ರಿಸುವ ಅಥವಾ ಪ್ರಕಟಿಸುವ ಉದ್ದೇಶಕ್ಕಾಗಿ ೩ನೇ ಪ್ರಕರಣದ ಯಾವುದೇ ಭದ್ರತೆಯನ್ನು ಠೇವಣಿ ಇಡಬೇಕೆಂದು ಯಾವುದೇ ಮುದ್ರಣಾಯಲಯಕ್ಕೆ ಆದೇಶಿಸಲಾಗಿದೆ ಎಂದು ಪ್ರಾಂತೀಯ ಸರ್ಕಾರಕ್ಕೆ ಕಂಡು ಬಂದರೆ.

–ಇಲ್ಲಿ ಖಂಡಗಳನ್ನು ಎಚ್ಚರಿಕೆಯಿಂದ ಗುರುತು ಮಾಡಬೇಕೆಂದು ಸದನವನ್ನು ಕೇಳುತ್ತೇನೆ.

> "ಸದನದ ಗಮನವನ್ನು ನಾನು ಸೆಳೆಯಬಯಸುವ ಮಹತ್ವದ ಅಂಶವೆಂದರೆ,
>
> (ಎ) ಯಾವುದೇ ಕೊಲೆಯ ಅಪರಾಧ ಕೃತ್ಯ ಅಥವಾ ಹಿಂಸೆಯನ್ನು ಒಳಗೊಂಡಿರುವ ಯಾವುದೇ ಶಿಕ್ಷಾರ್ಹ ಅಪರಾಧವನ್ನು ಎಸಗಲು ಪ್ರೇರೇಪಿಸುವುದು ಅಥವಾ ಉತ್ತೇಜಿಸುವುದು ಅಥವಾ ಪ್ರೇರೇಪಿಸಲು ಅಥವಾ ಉತ್ತೇಜಿಸಲು ಪ್ರವೃತ್ತನಾಗುವುದು"
>
> ಎಂದರೆ ನಾನು ಉಲ್ಲೇಖಿಸಿದ ಪ್ರಾಂತೀಯ ಉಚ್ಚ ನ್ಯಾಯಾಲಯಗಳ ತೀರ್ಮಾನಗಳ ಮೇರೆಗೆ, ಯಾವುದೇ ಕೊಲೆಯ ಅಪರಾಧ ಕೃತ್ಯ ಅಥವಾ ಹಿಂಸೆಯನ್ನೊಳಗೊಂಡಿರುವ ಶಿಕ್ಷಾರ್ಹ ಅಪರಾಧಕ್ಕೆ ಪ್ರೇರೇಪಿಸಲು, ಉತ್ತೇಜಿಸಲು

ಅಥವಾ ಪ್ರೇರೇಪಿಸಲು ಅಥವಾ ಉತ್ತೇಜಿಸಲು ಪ್ರವೃತ್ತನಾಗಲು ಯಾವುದೇ ವ್ಯಕ್ತಿ, ಸ್ವತಂತ್ರನಾಗಿರುತ್ತಾನೆ."

ಸದನವು ಪರಿಶೀಲಿಸಬೇಕಾದ ಪ್ರಶ್ನೆ ಇದು. ಯಾವುದೇ ಕೊಲೆಯ ಅಪರಾಧ ಕೃತ್ಯಕ್ಕೆ ಅಥವಾ ಹಿಂಸೆಯನ್ನೊಳಗೊಂಡ ಶಿಕ್ಷಾರ್ಹ ಅಪರಾಧಕ್ಕೆ ಪ್ರೋತ್ಸಾಹಿಸಲು ಅಥವಾ ಪ್ರೇರೇಪಿಸಲು ಯಾವುದೇ ವ್ಯಕ್ತಿ ಸ್ವತಂತ್ರ್ಯನಾಗಿರುತ್ತಾನೆಂಬುದು ಸಮರ್ಪಕ ಸ್ಥಿತಿಯೇ? ಸದನವು ನಿಷ್ಪಕ್ಷಪಾತವಾಗಿ ವಿಷಯವನ್ನು ಪರಿಶೀಲಿಸಬೇಕು. (ಹಲವಾರು ಸದಸ್ಯರು! ಇಲ್ಲ ಇಲ್ಲ). ೧೯ನೇ ಅನುಚ್ಛೇದದ (೧) ನೇ ಖಂಡದಿಂದ ನಮಗೆ ಕೊಡಮಾಡಲಾದ ವಾಕ್ ಸ್ವಾತಂತ್ರ್ಯವನ್ನು ನಿಯಂತ್ರಿಸಲಾರದ ಅತಂತ್ರ ಸ್ಥಿತಿಯಲ್ಲಿ ಸಂವಿಧಾನ ನಮ್ಮನ್ನಿರಿಸುವ ಯಾರೇ ವ್ಯಕ್ತಿ ಕೊಲೆ ಅಥವಾ ಯಾವುದೇ ಶಿಕ್ಷಾರ್ಹ ಅಪರಾಧವನ್ನು ಎಸಗುವ ಬಗ್ಗೆ ಹೇಳಿಕೊಡಲು ಸ್ವತಂತ್ರನಿರುವಷ್ಟು ಪರಿಸ್ಥಿತಿ ಕೈ ಮೀರುವ ಈ ಸ್ಥಿತಿ ಅಪೇಕ್ಷಣೀಯವೇ? ನಾನು ವಿಷಯವನ್ನು ಸಂಕ್ಷಿಪ್ತವಾಗಿ ತಿಳಿಸಲು ಪ್ರಯತ್ನಿಸಿದ್ದೇನೆ.

ಪರಿಸ್ಥಿತಿ ಹೀಗಿದೆ, ಸಾರ್ವಜನಿಕ ಸುರಕ್ಷತಾ ಕಾನೂನುಗಳು ಅಥವಾ ಸಾರ್ವಜನಿಕ ಸುವ್ಯವಸ್ಥೆಯ ನಿರ್ವಹಣೆಗಾಗಿ ವಿವಿಧ ರಾಜ್ಯಗಳು ಮಾಡಿದ ಕಾನೂನುಗಳ ವಿಷಯದಲ್ಲಿಯೂ ಇದೇ ಆಗಿದೆ. ಏಕೆಂದರೆ ಸಂವಿಧಾನದ ಮೇರೆಗೆ ಅವುಗಳ ಮೇಲೆ ಯಾವುದೇ ಮಿತಿ ವಿಧಿಸಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಸರ್ವೋಚ್ಚ ನ್ಯಾಯಾಲಯವು ರಾಜ್ಯದ ಸುರಕ್ಷಿತತೆ ಹಾಗೂ ಸಾರ್ವಜನಿಕ ಸುವ್ಯವಸ್ಥೆ ನಿರ್ವಹಣೆಯ ನಡುವೆ ಅಂತರ ಕಲ್ಪಿಸಿದೆ. ಸಂಪತ್ತು ರಾಜ್ಯದ ಸುರಕ್ಷತೆಗಾಗಿ ಕಾನೂನು ಮಾಡಲು ಸ್ವತಂತ್ರವಾಗಿದೆಯೇ ಹೊರತು ಸಾರ್ವಜನಿಕ ಸುವ್ಯವಸ್ಥೆ ನಿರ್ವಹಣೆಯ ಬಗ್ಗೆ ಕಾನೂನು ಮಾಡಲು ಸ್ವತಂತ್ರವಾಗಿಲ್ಲ ಎನ್ನುತ್ತಾರೆ. ಈ ವಿಷಯವನ್ನು ಸದನವು ಗಂಭೀರವಾಗಿ ಪರಿಗಣಿಸಬೇಕೆಂದು ಕೇಳುತ್ತೇನೆ. ಸಾರ್ವಜನಿಕ ಅವ್ಯವಸ್ಥೆಯುಂಟುಮಾಡುವ ರೀತಿಯಲ್ಲಿ ಯಾವುದೇ ವ್ಯಕ್ತಿ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ನಿರಾತಂಕವಾಗಿ, ನಿರ್ಬಾಧಿತವಾಗಿ ಬಳಸಿ ಶಿಕ್ಷೆಗೊಳಪಡದೇ ಇರುವುದಕ್ಕೆ ಸದನವು ಸಿದ್ಧವಿದೆಯೇ? ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳ ತೀರ್ಪುಗಳು ಈಗಿರುವಂತೇ ಇದ್ದರೆ, ಅದರ ಪರಿಣಾಮವೆಂದರೆ, ಸಾರ್ವಜನಿಕ ಸುವ್ಯವಸ್ಥೆಯ ದೃಷ್ಟಿಯಿಂದ ವಾಕ್ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಯಾವುದೇ ಕಾನೂನನ್ನು ಮಾಡಲು ನಮಗೆ ಸಾಧ್ಯವಾಗುವುದೇ ಇಲ್ಲ ಹಾಗೂ ಹಿಂಸೆಗೆ ಪ್ರಚೋದನೆ ನೀಡುವುದನ್ನು ಪ್ರತಿಬಂಧಿಸುವ ಯಾವ ಕಾನೂನನ್ನು ನಾವು ಮಾಡಲಾಗುವುದಿಲ್ಲ. ಮುಂಬರುವ ಘಟನೆಗಳು ಸೂಚಿಸುವಂತೆ, ಪ್ರತಿಪಕ್ಷದ ನಾಯಕನಾಗಿ ಪಕ್ಷದ ದೃಷ್ಟಿಯಿಂದ ಪ್ರತಿಯೊಂದನ್ನು ವಿರೋಧಿಸುವುದನ್ನೇ ವ್ಯವಹಾರವಾಗಿಸಿಕೊಂಡಿರುವ ನನ್ನ ಮಿತ್ರ ಡಾ.ಮುಖರ್ಜಿ ದೃಷ್ಟಿಯಿಂದ, ಸರ್ವೋಚ್ಚ ನ್ಯಾಯಾಲಯ ಹಾಗೂ ಪ್ರಾಂತೀಯ ಉಚ್ಚ ನ್ಯಾಯಾಲಯಗಳ ತೀರ್ಪಿನಿಂದ ನಮ್ಮ ಶಾಸನದಲ್ಲಿ ಉಂಟಾದ ಶೂನ್ಯ ವಾಕ್ ಸ್ವಾತಂತ್ರ್ಯದ ಹೆಸರಿನಲ್ಲಿ ಹಾಗೇ ಉಳಿಯಬೇಕೇ ಎಂಬುದನ್ನು ಪರಿಶೀಲಿಸಲಿ. ಇದು ಸರಳ ಪ್ರಶ್ನೆ. ನನ್ನ ಮಿತ್ರ ಡಾ.ಮುಖರ್ಜಿ ಸರ್ವೋಚ್ಚ ನ್ಯಾಯಾಲಯದ ಹಾಗೂ ಪ್ರಾಂತೀಯ ಉಚ್ಚ ನ್ಯಾಯಾಲಯಗಳ ಬೇರೆ ಬೇರೆ ತೀರ್ಪುಗಳನ್ನು ನನ್ನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದರೆ, ಈ ಸ್ಥಿತಿ ಮುಂದುವರಿಯದಂತೆ ಬಗೆಹರಿಸಬೇಕೆಂಬ ತೀರ್ಮಾನಕ್ಕೆ ಖಂಡಿತ ಬರುತ್ತಾರೆ ಎಂದು ನನ್ನ ಅನಿಸಿಕೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ್ (ಪಂಜಾಬ್):** ಈ ಉದ್ದೇಶಕ್ಕಾಗಿ ಬಂಧನ ಕಾನೂನುಗಳನ್ನು ಬಳಸಬೇಕೆಂಬುದು ಅವರ ಆಶಯ.

**ಡಾ.ಅಂಬೇಡ್ಕರ್:** ಬಂಧನ ಕಾನೂನುಗಳು ಸಂಪೂರ್ಣ ಬೇರೆ. ಸಂಕ್ಷಿಪ್ತವಾಗಿ ಹೇಳುವುದಾದರೆ (ಶ್ರೀ ಕಾಮತ್: ಏನದು ಸಂಕ್ಷಿಪ್ತ) ಸಂವಿಧಾನದ ೧೯ನೇ ಅನುಚ್ಛೇದದ ತಿದ್ದುಪಡಿ ಸಂದರ್ಭ. ಸರ್ವೋಚ್ಚ ನ್ಯಾಯಾಲಯ ಹಾಗೂ ವಿವಿಧ ರಾಜ್ಯ ಉಚ್ಚ ನ್ಯಾಯಾಲಯಗಳು ಈ ನಿರ್ಧಾರಕ್ಕೆ ಏಕೆ ಬಂದಿವೆ ಎಂಬುದು ಇನ್ನೊಂದು ಮಹತ್ವದ ಅಂಶ. ಸಾರ್ವಜನಿಕ ಸುವ್ಯವಸ್ಥೆ ದೃಷ್ಟಿಯಿಂದ ಅಥವಾ ಅಪರಾಧಗಳಿಗೆ ಪ್ರಚೋದಿಸುವುದನ್ನು ತಡೆಯುವ ದೃಷ್ಟಿಯಿಂದ ಕಾನೂನು ಮಾಡಲು ಸಂಸತ್ತು ಹಕ್ಕು ಹೊಂದಿಲ್ಲ ಎಂದು ಅವರು ಹೇಳಲು ಕಾರಣವೇನು? ಇದು ಅತ್ಯಂತ ಮಹತ್ವದ ಹಾಗೂ ನನ್ನನ್ನು ವೈಯಕ್ತಿಕವಾಗಿ ಕಂಗೆಡಿಸಿರುವ ಪ್ರಶ್ನೆ. ಇದಕ್ಕಾಗಿ ನಾನು ಸರ್ವೋಚ್ಚ ನ್ಯಾಯಾಲಯ ಹಾಗೂ ವಿವಿಧ ರಾಜ್ಯ ಉಚ್ಚ ನ್ಯಾಯಾಲಯಗಳು ಅಳವಡಿಸಿಕೊಂಡಿರುವ ಅರ್ಥಾನ್ವಯ ನಿಯಮಗಳ ಬಗ್ಗೆ ತಿಳಿಸಬೇಕು. ಆದರೆ ಅದಕ್ಕಿಂತ ಮುಂಚೆ ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯವು ಅಳವಡಿಸಿಕೊಂಡಿರುವ ಅರ್ಥಾನ್ವಯ ನಿಯಮಗಳ ಬಗ್ಗೆ ತಿಳಿಸಬೇಕು. ಮೂಲಭೂತ ಹಕ್ಕುಗಳನ್ನು ಹೊಂದಿರುವ ಯಾವುದಾದರೂ ಸಂವಿಧಾನ ಪ್ರಪಂಚದಲ್ಲಿ ಇದ್ದರೆ, ಅದು ಅಮೇರಿಕೆಯ ಸಂವಿಧಾನ ಹಾಗೂ ನಮ್ಮ ಸಂವಿಧಾನವನ್ನು ರಚಿಸುವ ಕೆಲಸದ ಹೊಣೆ ಹೊತ್ತಿರುವವರಲ್ಲಿ ಒಬ್ಬನಾದ ನಾನು ನಮ್ಮ ಮೂಲಭೂತ ಹಕ್ಕುಗಳನ್ನು ರಚಿಸಲು ಅಮೇರಿಕೆಯ ಸಂವಿಧಾನವನ್ನು ಆಕರವಾಗಿ ಬಳಸಬೇಕಾಯಿತು. ಹಲವಾರು ಸದಸ್ಯರಿಗೆ ಅಮೇರಿಕೆಯ ಸಂವಿಧಾನದ ಪರಿಚಯವಿದೆ. ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಅಮೇರಿಕಾ ಸಂವಿಧಾನ ಹಾಗೂ ಭಾರತದ ಸಂವಿಧಾನದ ನಡುವೆ ಒಂದು ಸ್ಪಷ್ಟ ವ್ಯತ್ಯಾಸವಿದೆ. ಅಮೇರಿಕೆಯ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಿರುಪಾಧಿಕವಾಗಿ ಹೇಳಲಾಗಿದೆ. ಮೂಲಭೂತ ಹಕ್ಕುಗಳ ಮೇಲೆ ಯಾವುದೇ ಮಿತಿ ವಿಧಿಸಿಲ್ಲ. ನಮ್ಮ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನೀಡಲಾಗಿದ್ದರೂ ಅವುಗಳಿಗೆ ಮಿತಿ ವಿಧಿಸಲಾಗಿದೆ. ಇದರ ಪರಿಣಾಮವೇನು ಎಂಬುದು ಮಹತ್ವದ ಪ್ರಶ್ನೆ. ಅಮೇರಿಕಾ ಸಂವಿಧಾನ ಗ್ರಂಥದಲ್ಲಿ ಮೂಲಭೂತ ಹಕ್ಕುಗಳು ನಿರುಪಾಧಿಕವೆಂದು ಕಂಡುಬಂದರೂ ನ್ಯಾಯಿಕ ಅರ್ಥವಿವರಣೆಗೆ ಸಂಬಂಧಿಸಿದಂತೆ ಅವು ಒಂದಿಲ್ಲೊಂದು ಮಿತಿಯೊಂದಿಗೆ ತಳಕು ಹಾಕಿಕೊಂಡಿವೆ. ಅಮೇರಿಕೆಯಲ್ಲಿ ಯಾರೊಬ್ಬನೂ ತನ್ನ ಮೂಲಭೂತ ಹಕ್ಕುಗಳು ನಿರುಪಾಧಿಕವೆಂದು ಹೇಳುವಂತಿಲ್ಲ. ಅವುಗಳನ್ನು ಮಿತಿಗೊಳಿಸುವ ಅಥವಾ ನಿಯಂತ್ರಿಸುವ ಅಧಿಕಾರ ಕಾಂಗ್ರೆಸ್‌ಗಿಲ್ಲ. ಆದರೆ ನಮ್ಮ ದೇಶದಲ್ಲಿ ಇದಕ್ಕೆ ವ್ಯತಿರಿಕ್ತ ಸ್ಥಿತಿ ಇದೆ. ನಮಗೆ ಮೂಲಭೂತ ಹಕ್ಕುಗಳಿವೆ. ಅವುಗಳಿಗೆ ಮಿತಿ ವಿಧಿಸಲಾಗಿದೆ. ಆದರೆ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳು "ನೀವು ಮೂಲಭೂತ ಹಕ್ಕುಗಳ ಮೇಲೆ ಇನ್ನಾವ ಮಿತಿಗಳನ್ನು ವಿಧಿಸತಕ್ಕದ್ದಲ್ಲ" ಎಂದು ಹೇಳುತ್ತವೆ.

ಇಂಥ ಪರಿಣಾಮ ಹೇಗಾಗಿದೆ ಎಂಬುದು ಈಗಿನ ಪ್ರಶ್ನೆ. ಈಗ ನಾನು ಅಮೇರಿಕಾದಲ್ಲಿ ಅಳವಡಿಸಿಕೊಂಡಿರುವ ಅರ್ಥವಿವರಣೆ ಸೂತ್ರಗಳು ಹಾಗೂ ನಮ್ಮ ದೇಶದಲ್ಲಿ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳು ಅಳವಡಿಸಿಕೊಂಡಿರುವ ಅರ್ಥವಿವರಣಾ ಸೂತ್ರಗಳ ವಿಷಯವನ್ನೆತ್ತಿಕೊಳ್ಳುತ್ತೇನೆ. ಅಮೇರಿಕೆಯ ಸಂವಿಧಾನದ ಬೆಳವಣಿಗೆಯ ಪರಿಚಯವಿರುವ ಸದಸ್ಯರಿಗೆ ತಿಳಿದಿರುವಂತೆ, ಅಮೇರಿಕೆಯ ಸಂವಿಧಾನ ಒಂದು ಮೂಳೆಗಳ ಬಂಧವಿದ್ದಂತೆ; ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯ ಅದಕ್ಕೆ ಮಾಂಸ–ಮಜ್ಜೆ ತುಂಬಿ ಒಂದು ಮಾನವ ಶರೀರ ದೃಢಗೊಳ್ಳಲು ಬೇಕಾದ ಬಲ ತುಂಬಿದೆ. ಇದು ಹೇಗಾಯಿತು? ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯವು ಅಮೇರಿಕೆಯ ನಾಗರಿಕರ ಮೂಲಭೂತ ಹಕ್ಕುಗಳನ್ನು ಆ ದೇಶದ ಹಿತಾಸಕ್ತಿಯೊಂದಿಗೆ ಹಾಸುಹೊಕ್ಕಾಗಿಸಿದೆ. ಪ್ರಪಂಚದ ಮೊದಲ

ನ್ಯಾಯಾಲಯವಾದರೂ ಅದು ಸಾಕಷ್ಟು ಪರಿಶ್ರಮ ವಹಿಸಿ ಸಂವಿಧಾನದ ಎರಡು ನಿಗದಿತ ತತ್ವಗಳನ್ನು ಗುರುತಿಸಿದೆ. ಮೊದಲನೇ ತತ್ವವೆಂದರೆ ಪ್ರತಿಯೊಂದು ಸಂಸ್ಥಾನವು ಪೊಲೀಸ್ ಶಕ್ತಿಯನ್ನು ಹೊಂದಿರುತ್ತದೆ. ಸಂವಿಧಾನವು ಆ ಹಕ್ಕನ್ನು ವ್ಯಕ್ತವಾಗಿ ಕೊಟ್ಟಿರಲಿ ಅಥವಾ ಇಲ್ಲದಿರಲಿ, ಪ್ರತಿಯೊಂದು ಸಂಸ್ಥಾನವು ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತದೆ. ಈ ಸ್ವಯಂರಕ್ಷಣಾಧಿಕಾರ ಎಂಬುದು ಕೆಲವು ಸಂದರ್ಭಗಳಲ್ಲಿ ನ್ಯಾಯ ನೀಡಿಕೆಯಲ್ಲಿ ನಮ್ಮ ನ್ಯಾಯಾಲಯಗಳಿಗಿರುವಂಥ ಅಂತರ್ಗತ ಅಧಿಕಾರ. ಈ ಸ್ವಯಂರಕ್ಷಣಾಧಿಕಾರದ ತತ್ವದ ಪರಿಣಾಮವಾಗಿಯೇ ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯವು ಅಮೇರಿಕೆಯ ಜನತೆಯ ಮೂಲಭೂತ ಹಕ್ಕುಗಳ ಮೇಲೆ ಕೆಲ ಮಿತಿಗಳನ್ನು ವಿಧಿಸುವುದು ಸಾಧ್ಯವಾಗಿದೆ. ಎರಡನೆಯದು "ಇಂಗಿತ ಅಧಿಕಾರ" ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯವು ಈ ತತ್ವವನ್ನು, ಸಂವಿಧಾನದ ಅರ್ಥವಿವರಣೆಯ ಉದ್ದೇಶಕ್ಕೆ ಅನ್ವಯಿಸುತ್ತದೆ. ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯದ ನಿರ್ಧಾರಗಳ ಮೇರೆಗೆ ಯಾವುದೊಂದು ನಿರ್ದಿಷ್ಟ ಪ್ರಾಧಿಕಾರಕ್ಕೆ ಯಾವುದೇ ಅಧಿಕಾರ ನೀಡಲಾಗಿದ್ದರೆ, ಅದರ ಈಡೇರಿಕೆಗೆ ಅದಕ್ಕೆ ಬೇರೆ ಅಧಿಕಾರಗಳನ್ನು ನೀಡಲಾಗಿದೆ ಎಂದು ಪರಿಭಾವಿಸಬೇಕು. ಆ ಅಧಿಕಾರಗಳನ್ನು ವ್ಯಕ್ತವಾಗಿ ನೀಡಿರದಿದ್ದರೆ, ಅವು ಸಂವಿಧಾನದಲ್ಲಿ ಸೂಚಿತವಾಗಿವೆ ಎಂದು ಪರಿಭಾವಿಸಲು ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯ ಸಿದ್ಧವಿರುತ್ತದೆ.

ನಮ್ಮ ಸಂವಿಧಾನವನ್ನು ಅರ್ಥೈಸಲು ನಮ್ಮ ದೇಶದಲ್ಲಿ ಸರ್ವೋಚ್ಚ ನ್ಯಾಯಾಲಯವು ತಳೆದಿರುವ ನಿಲುವೇನು ? ಅಮೇರಿಕೆಯಲ್ಲಿ ಪ್ರಚಲಿತವಿರುವ 'ಪೊಲೀಸ್ ಪವರ್' ತತ್ವವನ್ನು ಮಾನ್ಯ ಮಾಡುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯ ತಿಳಿಸಿದೆ. ನಾನು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಓದಿ ತೋರಿಸುವುದಕ್ಕಾಗಿ ಸದನದ ಸಮಯವನ್ನು ಬಳಸಿಕೊಳ್ಳುವುದಿಲ್ಲ. ಆಸಕ್ತರು 'ಚಿರಂಜಿತ್‌ಲಾಲ್ ಚೌಧರಿ–ವಿರುದ್ಧ–ಭಾರತ ಸರ್ಕಾರ' ಅಥವಾ 'ಕೋಲಾಪುರ್ ಮಿಲ್ ಪ್ರಕರಣ' ಎಂದು ಪ್ರಚಲಿತವಿರುವ ಪ್ರಕರಣದಲ್ಲಿ ಈ ವಿಷಯ ಪ್ರಸ್ತಾಪಿತವಾಗಿರುವುದನ್ನು ಗಮನಿಸಬಹುದಾಗಿದೆ. ತೀರ್ಪಿನಲ್ಲಿ ೧೫ನೇ ಪುಟದಲ್ಲಿ ಇರುವ ಈ ತತ್ವವನ್ನು ನ್ಯಾಯಮೂರ್ತಿ ಮುಖರ್ಜಿಯವರು ತಮ್ಮ ತೀರ್ಪಿನಲ್ಲಿ ತಿರಸ್ಕರಿಸಿರುವುದನ್ನು ಕಾಣಬಹುದಾಗಿದೆ. ಅವರು ಈ ತತ್ವವನ್ನು ಅನ್ವಯಿಸುವುದಿಲ್ಲವೆಂದು ತಿಳಿಸಿದ್ದಾರೆ. ನನಗೆ ತಿಳಿದಿರುವ ಮಟ್ಟಿಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು 'ಪೊಲೀಸ್ ಪವರ್' ತತ್ವವನ್ನು ಅಳವಡಿಸದಿರುವುದಕ್ಕೆ ಕಾರಣವೇನೆಂದರೆ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಮೂಲಭೂತ ಹಕ್ಕುಗಳ ಮೇಲೆ ಸಂಸತ್ತು ನಿರ್ಬಂಧ ವಿಧಿಸಬಹುದಾದ ಶೀರ್ಷಿಕೆಗಳ ಬಗ್ಗೆ ಸಂವಿಧಾನವು (೨)ನೇ ಖಂಡದಲ್ಲಿ ತಿಳಿಸಿದ್ದರೂ (೨)ನೇ ಖಂಡದಲ್ಲಿ ತಿಳಿಸಿರುವ ಶೀರ್ಷಿಕೆಗಳ ಈ ನಿರ್ಬಂಧಗಳು ಸೇರ್ಪಡೆಯಾಗಿಲ್ಲ. ಇದರ ಒಪ್ಪಂದದ ರಚನೆಯನ್ನು ನ್ಯಾಯಮೂರ್ತಿ ಪತಂಜಲಿ ಶಾಸ್ತ್ರಿಯವರು ನೀಡಿದ ಥಾಪರ್ ತೀರ್ಪಿನ ಪ್ರಕರಣದಲ್ಲಿ ಕಾಣಬಹುದಾಗಿದೆ. ಸಾರ್ವಜನಿಕ ಸುವ್ಯವಸ್ಥೆಯ ಉದ್ದೇಶಕ್ಕಾಗಿ ಒಂದು ಕಾನೂನನ್ನು ಮಾಡುವ ಅಧಿಕಾರವನ್ನು ಸಂವಿಧಾನವು ಸಂಸತ್ತಿಗೆ ನೀಡುವುದಿಲ್ಲ. ಅದರ ಮೇರೆಗೆ ಸಂಸತ್ತಿಗೆ ಅಂಥ ಅಧಿಕಾರ ಸಾಮರ್ಥ್ಯವನ್ನು ನೀಡಲಾಗದು. ಪತ್ರಿಕಾ ತುರ್ತು ಕಾನೂನುಗಳ ಸಂಬಂಧದಲ್ಲಿಯೂ, ಒಂದು ಅಪರಾಧಕ್ಕೆ ಪ್ರೇರೇಪಣೆ ನೀಡುವುದನ್ನು ಪಡೆಯುವುದಕ್ಕಾಗಿ ಯಾವುದೇ ಮಿತಿ ವಿಧಿಸಲು ಸಂವಿಧಾನಕ್ಕೆ ಅನುಮತಿ ನೀಡುವ ಶೀರ್ಷಿಕೆ ಖಂಡ (೨)ರಲ್ಲಿ ಸೇರ್ಪಡೆಯಾಗಿಲ್ಲ ಎಂದು ತಿಳಿಸಿದ್ದಾರೆ. ಪತ್ರಿಕಾ (ತುರ್ತು ಅಧಿಕಾರಿಗಳು) ಅಧಿನಿಯಮ ೪ನೇ ಪ್ರಕರಣದಲ್ಲಿ, ಒಂದು ಅಪರಾಧವನ್ನೆಸಗಲು ದುಷ್ಪ್ರೇರಿಸುವುದಕ್ಕೆ ದಂಡನೆ ವಿಧಿಸುವ ಬಗ್ಗೆ ಉಪಬಂಧ ಕಲ್ಪಿಸಲಾಗಿದೆ. ಆದರೆ ಅದನ್ನು ಮಾಡಲು ಸಂಸತ್ತಿಗೆ ಅಧಿಕಾರವಿಲ್ಲ.

ಸಂವಿಧಾನವನ್ನು ಅರ್ಥೈಸುವಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಬಳಸುವ ವಾದಸರಣಿ ಇದು.

ಇಂಗಿತ ಅಧಿಕಾರಗಳು ತತ್ವದ ಸಂಬಂಧದಲ್ಲಿಯೂ ಇದೇ ನಿಲುವನ್ನು ತಳೆದಿದ್ದಾರೆ. ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ ಇಂಗಿತ ಅಧಿಕಾರಗಳ ತತ್ವವನ್ನು ಮಾನ್ಯ ಮಾಡಲು ಸಾಕಷ್ಟು ಅವಕಾಶವಿದೆ. ನಿರ್ದೇಶಕ ತತ್ವಗಳಲ್ಲಿಯೂ ಇಂಗಿತ ಅಧಿಕಾರಗಳ ತತ್ವವನ್ನೊಳಗೊಂಡಿರುವ ಉಪಬಂಧಗಳ ಸರಣಿಯೇ ಇದೆ. ಆದರೆ ನ್ಯಾಯಾಧೀಶರು ಹಾಗೂ ವಕೀಲರ ಕೈಯಲ್ಲಿ ನಿರ್ದೇಶಕ ತತ್ವಗಳು ಹಾಸ್ಯದ ವಿಷಯವಾಗಿ ಪರಿಣಮಿಸಿವೆ. ನಿರ್ದೇಶಕ ತತ್ವಗಳ ೩೭ನೇ ಅನುಚ್ಛೇದ ಲೇವಡಿಗೆ ಗುರಿಯಾಗಿದೆ. ಸ್ಪೆಸಿಫಿಕ್ ಪರ್‌ಫಾರ್ಮೆನ್ಸ್ (ನಿರ್ದಿಷ್ಟ ಪಾಲನೆ)ಗಾಗಿ ಸರ್ಕಾರದ ವಿರುದ್ಧ ದಾವೆ ಹೂಡಲು ಹಕ್ಕಿಲ್ಲವೆಂದು ತಿಳಿಸುವ ೩೪ನೇ ಅನುಚ್ಛೇದ ನ್ಯಾಯೋಚಿತವಲ್ಲವೆನ್ನಲಾಗಿದೆ. ನಾನೂ ಅದು ಹೌದು ಎನ್ನುತ್ತೇನೆ. ಆದರೆ ನಿರ್ದೇಶಕ ತತ್ವಗಳನ್ನು ತಳ್ಳಿ ಹಾಕುವುದು ಆ ರೀತಿಯಲ್ಲಿ ಅಲ್ಲ ಎಂಬುದನ್ನು ನಾನು ತಿಳಿಸಬಯಸುತ್ತೇನೆ. ನಿರ್ದೇಶಕ ತತ್ವಗಳು ಎಂದರೇನು? ಈ ದೇಶದಲ್ಲಿ ಸಂವಿಧಾನವು ವಿವಿಧ ಸರ್ಕಾರಗಳ ಮೇಲೆ ಅವು ಮಾಡತಕ್ಕ ಕೆಲವು ಸಂಗತಿಗಳನ್ನು ವಿಧಿಸಿದ್ದು ಅವು ನಿರ್ದೇಶಕ ತತ್ವಗಳಲ್ಲಿ ಅಡಕವಾಗಿವೆ. ಆದರೂ ಆ ಸರ್ಕಾರಗಳು ಅವುಗಳನ್ನು ನಿರ್ವಹಿಸಲು ವಿಫಲವಾದರೂ ನಿರ್ದಿಷ್ಟ ಪಾಲನೆಗಾಗಿ ಕೇಳುವ ಹಕ್ಕು ಯಾರಿಗೂ ಇಲ್ಲ ಎಂದು ಅದರಲ್ಲಿ ತಿಳಿಸಲಾಗಿದೆ. ಸರ್ಕಾರಕ್ಕೆ ಕರ್ತವ್ಯಗಳಿವೆ ಎಂಬುದು ನಿಸ್ಸಂದೇಹ. ರಾಜ್ಯಕ್ಕೆ ಕರ್ತವ್ಯಗಳಿವೆ ಎಂದಾದರೆ, ರಾಜ್ಯವು ಶಾಸನಗಳನ್ನು ಮಾಡದೇ ಅವುಗಳನ್ನು ನಿರ್ವಹಿಸುವುದು ಹೇಗೆ? ಕರ್ತವ್ಯಗಳ ಹೇಳಿಕೆಯಲ್ಲಿ ಕಾನೂನುಗಳ ಅಧಿನಿಯಮದ ಹಾಗೂ ವಿಧಿಸುವಿಕೆ ಅಗತ್ಯವೆಂದು ತಿಳಿಸಲಾಗಿದ್ದರೆ, ನಿರ್ದೇಶಕ ಕಾರ್ಯನೀತಿಯ ಮೂಲಭೂತ ತತ್ವಗಳು, ಅವುಗಳಲ್ಲಿ ತಿಳಿಸಿರುವ ವಿಷಯಗಳ ಬಗ್ಗೆ ಕಾನೂನು ಮಾಡಲು ರಾಜ್ಯಕ್ಕೆ ಇಂಗಿತ ಅಧಿಕಾರವಿದೆ ಎಂಬುದನ್ನು ಸೂಚಿಸುವುದಂತೂ ಸ್ಪಷ್ಟವಾಗಿದೆ. ಇಂಗಿತ ಅಧಿಕಾರಗಳ ತತ್ವ ಕುರಿತಂತೆ ಮೂಲಭೂತ ಹಕ್ಕುಗಳ ಭಾಗದಲ್ಲಿ ಇರುವ ಉಪಬಂಧಗಳಲ್ಲಿ ಸೇರದಿದ್ದರು ಸಂಸತ್ತಿಗೆ ಅನುಮತಿ ನೀಡಲು ಸಂವಿಧಾನದಲ್ಲೇ ವಿಪುಲ ಅಧಿಕಾರ ಕಲ್ಪಿಸಲಾಗಿದೆ.

**ಡಾ. ಎಸ್.ಪಿ. ಮುಖರ್ಜಿ (ಪಶ್ಚಿಮ ಬಂಗಾಲ):** ಅವು ಸಂವಿಧಾನದ ಉಪಬಂಧಗಳಿಗೆ ಅಸಂಗತವಾಗಿದ್ದರೆ?

**ಡಾ.ಅಂಬೇಡ್ಕರ್:** ಅದು ಬೇರೆ ವಿಷಯ.

**ಶ್ರೀ ಕಾಮತ್:** ಅದು ಪ್ರಮುಖ ವಿಷಯ.

**ಡಾ.ಅಂಬೇಡ್ಕರ್:** ನಾನು ಹೇಳುವುದಿಷ್ಟೇ–ವಿವಿಧ ಮೂಲಭೂತ ಅನುಚ್ಛೇದಗಳಿಗೆ ಲಗತ್ತಾದ ವಿವಿಧ ಪರಂತುಕಗಳನ್ನು ಬೇರಾವುದಕ್ಕು ಅನುಮತಿಯೇ ಇಲ್ಲ ಎಂಬಂತೆ ಅರ್ಥೈಸಬಾರದು.

**ಶ್ರೀ ಕಾಮತ್:** ನೀವೇ ಅದನ್ನು ಮಾಡಿದರಿ.

**ಡಾ.ಅಂಬೇಡ್ಕರ್:** ಕೆಲವು ಶೀರ್ಷಿಕೆಗಳ ಸಂಬಂಧದಲ್ಲಿ ಕಾನೂನು ರಚಿಸುವ ಸಾಮರ್ಥ್ಯವನ್ನು ಸಂಸತ್ತು ಹೊಂದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯವು ಘೋಷಿಸಿರುವುದರಿಂದ ಸದನದ ಮುಂದಿರುವ ಪ್ರಶ್ನೆ ಇದು. ತೀರ್ಪುಗಳಿಂದಾಗಿ ಉದ್ಭವಿಸಿರುವ ಸ್ಥಿತಿಯನ್ನು ಹಾಗೆ ಉಳಿಸಬೇಕೇ? ಅಥವಾ ಸಂಸತ್ತಿಗೆ ಕಾನೂನು ರಚಿಸುವ ಅಧಿಕಾರ ನೀಡಬೇಕೇ? ಈ ಹಂತದಲ್ಲಿ ನಾನು ಒಂದು ವ್ಯತ್ಯಾಸವನ್ನು ಒಂದು ವಿಶೇಷ ಕಾರಣಕ್ಕಾಗಿ ಮಾಡಬಯಸುತ್ತೇನೆ. ಜನರಿಂದ ಅವರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತಿದ್ದೇವೆ ಎಂದು ಡಾ.ಮುಖರ್ಜಿ ಹೇಳಿದರು. ಆದರೆ ಒಂದು ಕಾನೂನು ರಚಿಸುವ ಸಾಮರ್ಥ್ಯ ಹಾಗೂ ಒಂದು

ಕಾನೂನನ್ನು ಅಧಿನಿಯಮಿಸುವ ಸಾಮರ್ಥ್ಯದ ಮಧ್ಯೆ ಅಂತರ ಕಲ್ಪಿಸಬೇಕಾದ ಅಗತ್ಯವಿದೆ. ಏಕೆಂದರೆ ಒಂದು ಕಾನೂನು ಜನರ ಸ್ವಾತಂತ್ರ್ಯವನ್ನು ಅತಿಕ್ರಮಿಸುವುದೇ ಎಂಬುದನ್ನು ಕಾನೂನು ರಚಿಸುವಾಗ ಚರ್ಚಿಸಬೇಕಾಗುತ್ತದೆ. ಇಂದು ನಾವು ಕಾನೂನಿನ ಬಗ್ಗೆ ವ್ಯವಹರಿಸುತ್ತಿಲ್ಲ. ಕಾನೂನನ್ನು ರಚಿಸಲು ಸಂಸತ್ತಿಗಿರುವ ಅಧಿಕಾರವನ್ನು ಕುರಿತು ಮಾತನಾಡುತ್ತಿದ್ದೇನೆ.

**ಡಾ.ಎಸ್.ಪಿ. ಮುಖರ್ಜಿ:** ಶಾಸನವನ್ನು ಮಾಡುವ ಅಧಿಕಾರ ನೀಡುವಂತೆ ಸಂಸತ್ತನ್ನು ಕೇಳುತ್ತಿರುವಿರಾ? ಈಗ ಪ್ರಸ್ತಾವಿಸಲಾಗಿರುವ ಬದಲಾವಣೆಗಳ ಪ್ರಕಾರ ಅಸಿಂಧುವಾಗಿದ್ದ ಶಾಸನಗಳಲ್ಲಿ ಪೂರ್ವಾನ್ವಯವಾಗಿ ಸಿಂಧುವಾಗುತ್ತವೆ.

**ಡಾ.ಅಂಬೇಡ್ಕರ್:** ನನ್ನ ಮಿತ್ರ ಪಂಡಿತ ಭಾರ್ಗವರು ಈ ಅಂಶಕ್ಕೆ ಹೆಚ್ಚು ಒತ್ತು ನೀಡಿದರು. ನಾನು ಅದನ್ನು ವಿವರಿಸದಿದ್ದರೆ ತಪ್ಪಾಗುತ್ತದೆ.

**ಡಾ.ಎಸ್.ಪಿ. ಮುಖರ್ಜಿ:** ಅಸಹನೀಯವಾದ ತುರ್ತು ಕಾನೂನುಗಳು ಉತ್ತಮ ಕಾನೂನುಗಳಾಗುತ್ತವೆ.

**ಡಾ.ಅಂಬೇಡ್ಕರ್:** ಅದು ಹಾಗಲ್ಲ.

**ಶ್ರೀ ಕಾಮತ್:** ಬಹುಪಾಲು ಹಾಗೇ.

**ಡಾ.ಅಂಬೇಡ್ಕರ್:** ಈವರೆಗೆ ನಾನು ಎರಡು ಶೀರ್ಷಿಕೆಗಳ ಬಗ್ಗೆ ಎಂದರೆ ಸಾರ್ವಜನಿಕ ವ್ಯವಸ್ಥೆ ಹಾಗೂ ಅಪರಾಧಕ್ಕೆ ಪ್ರಚೋದಿಸುವುದರ ಬಗ್ಗೆ ತಿಳಿಸಿದ್ದೇನೆ. ಇನ್ನೊಂದು ಮೂರನೇ ಪ್ರವರ್ಗ ಎಂದರೆ "ಸ್ನೇಹ ಸಂಬಂಧ" ಪ್ರವರ್ಗವೊಂದಿದೆ. ವಿದೇಶಗಳ ಬಗೆಗಿನ ಸ್ನೇಹಸಂಬಂಧದ ಬಗ್ಗೆ ೧೯೩೨ರಲ್ಲಿ ಅಧಿನಿಯಮಿಸಿದ ಒಂದು ಕಾನೂನು ನಮ್ಮ ಶಾಸನಗಳ ಪುಸ್ತಕದಲ್ಲಿದೆ. ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದ ಮುಂದೆ ಆ ಕಾನೂನು ಯಾವುದೇ ನ್ಯಾಯನಿರ್ಣಯಕ್ಕಾಗಿ ಬಂದಿಲ್ಲವೆಂಬುದು ನಿಜ. ಅದು ಅಧಿಕಾರಕ್ಕೆ ಮೀರಿದುದೆಂದೂ ಈವರೆಗೂ ಘೋಷಿತವಾಗಿಲ್ಲ. ಸರ್ವೋಚ್ಚ ನ್ಯಾಯಾಲಯವು ಅಳವಡಿಸಿಕೊಂಡ ಅರ್ಥವಿವರಣೆಯ ನಿಯಮಗಳ ದೃಷ್ಟಿಯಿಂದ (೨)ನೇ ಖಂಡದಲ್ಲಿ ಆ ನಿರ್ದಿಷ್ಟ ಶಾಸನದ ಶೀರ್ಷಿಕೆಯನ್ನು ತಿಳಿಸಿದ್ದ ಹೊರತು ಯಾವುದೂ ಸಂಸತ್ತಿನ ವ್ಯಾಪ್ತಿಯೊಳಗಿನದಲ್ಲ ಹಾಗೂ (೨)ನೇ ಖಂಡದಲ್ಲಿ "ವಿದೇಶಗಳೊಂದಿಗೆ ಸ್ನೇಹ ಸಂಬಂಧ" ಎಂಬುದನ್ನು ತಿಳಿಸಿಲ್ಲವಾದುದರಿಂದ, ಅದು ನ್ಯಾಯಾಂಗದ ಮುಂದೆ ಬಂದಾಗ ಅವರು ಅದೇ ಅರ್ಥವಿವರಣೆಯ ರೀತಿಯನ್ನು ಪಾಲಿಸುತ್ತಾರೆಂಬುದನ್ನು ತಿಳಿಸಲು ಯಾವ ಜ್ಯೋತಿಷಿಯೂ ಬೇಕಿಲ್ಲ.

**ಶ್ರೀ ಕಾಮತ್:** ಈ ಉದ್ದೇಶಕ್ಕೆ ಡಾ. ಅಂಬೇಡ್ಕರ್ ಸಾಕು.

**ಡಾ.ಅಂಬೇಡ್ಕರ್:** ಅದಕ್ಕೆಂದೇ ನಾವು "ವಿದೇಶಗಳೊಂದಿಗೆ ಸ್ನೇಹ ಸಂಬಂಧ'ದ ಈ ಶೀರ್ಷಿಕೆಯನ್ನು ಹೊಸ ಶೀರ್ಷಿಕೆಗಳಲ್ಲಿ ಸೇರಿಸುವುದು ಅಗತ್ಯವೆಂದು ಯೋಚಿಸಿದೆವು.

ನನ್ನ ಮಿತ್ರ ಡಾ.ಎಸ್.ಪಿ. ಮುಖರ್ಜಿಯವರು "ಇಂಥ ಕಾನೂನು ಯಾವುದಾದರೂ ದೇಶದಲ್ಲಿದೆಯೇ' ಎಂದು ಕೇಳಿದರು. ನಾನು ಪೂರ್ವ ನಿದರ್ಶನವನ್ನು ಹುಡುಕಿದೆ. ಅಂಥ ಕಾನೂನು ಇಲ್ಲದ ದೇಶವಿಲ್ಲ ಎಂದು ಹೇಳಬಲ್ಲೆ. ಇಂಗ್ಲೆಂಡಿನಲ್ಲಿ ಈ ನಿಯಮ ಸಾಮಾನ್ಯ ಕಾನೂನು. ಅದಕ್ಕೆ ಶಾಸನ ಪ್ರದತ್ತ ಕಾನೂನು ಅಗತ್ಯವಿಲ್ಲ. ಸಾಮಾನ್ಯ ಕಾನೂನು ಇಂಗ್ಲೆಂಡಿನಲ್ಲಿ ಮಾತ್ರವಲ್ಲ ಎಲ್ಲ ಪ್ರಾಂತಗಳಲ್ಲಿ ಜಾರಿಯಲ್ಲಿದೆ. ಆದ್ದರಿಂದಲೇ ಆ ನಿಯಮ ಅಲ್ಲಿದೆ. ಕೆನಡಾದಲ್ಲಿ ಸಾಮಾನ್ಯ ಕಾನೂನು ನಿಯಮವನ್ನು ತಿದ್ದುಪಡಿಮಾಡಿ ಶಾಸನ ಪ್ರದತ್ತ ಉಪಬಂಧದ ಮೂಲಕ ಹೆಚ್ಚು ಕಟ್ಟುನಿಟ್ಟಾಗಿ ಮಾಡಲಾಗಿದೆ.

**ಪಂಡಿತ್ ಕುಂಜ್ರು (ಉತ್ತರ ಪ್ರದೇಶ):** ಇಂಗ್ಲೆಂಡಿನಲ್ಲಿರುವ ಸ್ಥಿತಿಯನ್ನು ನನ್ನ ಮಾನ್ಯ ಮಿತ್ರರು

ಇನ್ನಷ್ಟು ವಿವರಿಸುವರೇ?

**ಡಾ.ಅಂಬೇಡ್ಕರ್:** ಆಗಲಿ, ಆದರೆ ನಾನು ಪ್ರಧಾನಮಂತ್ರಿಯವರಿಗೂ ತುಸು ಸಮಯ ನೀಡಬೇಕಾಗುತ್ತದೇನೋ?

**ಮಾನ್ಯ ಸದಸ್ಯರು:** ನೀವು ಸಾಕಷ್ಟು ಸಮಯ ಬಳಸಿಕೊಳ್ಳಿ.

**ಡಾ.ಅಂಬೇಡ್ಕರ್:** ಇಲ್ಲಿ ತುಸು ಗೊಂದಲವಿದೆ. ಜನರ ಮನಸ್ಸಿನಲ್ಲಿ.............

**ಡಾ.ಎಸ್.ಪಿ. ಮುಖರ್ಜಿ:** ವಿಧೇಯಕವನ್ನು ರಚಿಸಿದವರ.................

**ಡಾ.ಅಂಬೇಡ್ಕರ್:** ಇಲ್ಲ ನನಗೆ ಹಾಗೆನ್ನಿಸುವುದಿಲ್ಲ. ನಮಗೆ ಅಂಥ ಗೊಂದಲವಿಲ್ಲವೆಂಬುದನ್ನು ನೀವು ಈಗ ನೋಡುವಿರಿ. ನನ್ನ ಮನಸ್ಸಿನಲ್ಲಿ ಆ ಬಗ್ಗೆ ಸ್ಪಷ್ಟತೆಯಿದೆ.

**ಶ್ರೀ ಕಾಮತ್:** ನೀವಲ್ಲ, ಇಡೀ ಸರ್ಕಾರ.

**ಡಾ.ಅಂಬೇಡ್ಕರ್:** ಸ್ನೇಹ ಸಂಬಂಧವನ್ನು ಕಾಪಾಡುವುದು ಎಂಬುದು ಏನನ್ನು ಸೂಚಿಸುತ್ತದೆ? ಈ ಪ್ರವರ್ಗವನ್ನು ಸೇರಿಸಿದ್ದರೆ ಸರ್ಕಾರದ ವಿದೇಶಿ ನೀತಿಯನ್ನು ತಾವು ಟೀಕಿಸುವ ಸ್ಥಿತಿ ಒದಗುತ್ತಿರಲಿಲ್ಲ ಎಂಬ ಭಾವನೆ ಬಹುಪಾಲು ಸದಸ್ಯರಲ್ಲಿದೆ. ಆದರೆ ಇದು ತಪ್ಪು ತಿಳವಳಿಕೆ ಹಾಗೂ ತಪ್ಪುಗ್ರಹಿಕೆ ಎಂದು ನಾನು ತಿಳಿಸಬಯಸುತ್ತೇನೆ.

**ಶ್ರೀ ಕಾಮತ್:** ಅದು ನಿಮ್ಮ ಅಭಿಪ್ರಾಯ.

**ಡಾ.ಅಂಬೇಡ್ಕರ್:** ಒಂದು ರಾಜ್ಯದೊಂದಿಗಿನ ಸ್ನೇಹ ಸಂಬಂಧವನ್ನು ಕಾಪಾಡುವ ಹಿಂದಿರುವ ತತ್ವವೆಂದರೆ ಅಪಮಾನಕರ ಹೇಳಿಕೆ. ನಿಂದನೆಯ ತತ್ವದ ವಿಸ್ತೃತಿಯಲ್ಲದೇ ಬೇರೇನೂ ಅಲ್ಲ. ಒಂದು ವಿದೇಶವನ್ನು ಕುರಿತ ಕಳಂಕದ ನುಡಿಗಳಿರುವ ಯಾವ ವದಂತಿಯನ್ನು ನೀವು ನುಡಿಯುವುದಿಲ್ಲ, ಹರಡುವುದಿಲ್ಲ. ಇದನ್ನು ಮೀರಿ ಈ ವರ್ಗದಲ್ಲಿ ಬೇರೇನೂ ಇಲ್ಲ. ಇಂಗ್ಲೀಷ್ ಸಾಮಾನ್ಯ ಕಾನೂನು ಇದೇ ತತ್ವವನ್ನಾಧರಿಸಿದೆ. ಎಂದರೆ ಈ ದೇಶದೊಂದಿಗೆ ಸ್ನೇಹ ಸಂಬಂಧ ಹೊಂದಿರುವ ಒಂದು ವಿದೇಶವನ್ನು ನಿಂದಿಸುವಂತಿಲ್ಲ ಎಂಬುದು ನಿಂದನಾ ಕಾನೂನಿನ ಭಾಗ. ಮಿತ್ರ ರಾಷ್ಟ್ರವನ್ನು ನಿಂದಿಸಬಾರದೆಂಬುದು ವಾಕ್‌ಸ್ವಾತಂತ್ರ್ಯಕ್ಕೆ ಅಡ್ಡಿಯುಂಟುಮಾಡುವಂಥದಾಗಿದ್ದು ಅದನ್ನು ಖಂಡಿಸಬೇಕೆಂದು ಶ್ಯಾಮ್‌ಪ್ರಸಾದ್ ಮುಖರ್ಜಿಯವರ ಹಾಗೂ ಇತರ ಸದಸ್ಯರ ಅಭಿಪ್ರಾಯವೇ ಎಂದು ನಾನು ಕೇಳಬಯಸುತ್ತೇನೆ.

**ಡಾ.ಎಸ್.ಪಿ. ಮುಖರ್ಜಿ:** ಅದನ್ನು ನಿರ್ದಿಷ್ಟವಾಗಿ ಏಕೆ ಹೇಳುವುದಿಲ್ಲ?

**ಡಾ.ಅಂಬೇಡ್ಕರ್:** ಅದು ಹೀಗೆ ಎಂಬುದು ಗೊತ್ತಿದೆ. ನನ್ನ ಮಿತ್ರರು ಆಳ ಅಧ್ಯಯನಶೀಲರು ಎಂಬುದು ನನಗೆ ಗೊತ್ತು.

ಈ ಕಾನೂನನ್ನು ಮಾಡಿದಾಗ ೧೯೩೨ರಲ್ಲಿ ಈ ಸದನದಲ್ಲಿ ನಡೆದ ಚರ್ಚೆಗಳನ್ನು ಓದಿದ್ದರೆ. ನಾನು ಓದಿದ ಉದ್ದೇಶಗಳು ಹಾಗೂ ಕಾರಣಗಳ ಹೇಳಿಕೆ ಓದಿದರೆ ಹಾಗೂ ಆ ವಿಧೇಯಕ ಕುರಿತಂತೆ ಆಯ್ಕೆ ಸಮಿತಿಯ ವರದಿ ಓದಿದರೆ ನಾನು ಹೇಳಿದುದಕ್ಕಿಂತ ಹೆಚ್ಚಿನದೇನೂ ಈ ಕಾನೂನಿನಲ್ಲಿ ಇಲ್ಲ ಎಂಬುದು ಅವರಿಗೆ ತಿಳಿಯುತ್ತದೆ.

**ಶ್ರೀ ಕಾಮತ್:** ಪೇಕಿಂಗ್ ಸರ್ಕಾರವು ಬಳಸಿದ "ಓಡುತ್ತಿರುವ ನಾಯಿ" ಎಂಬ ಪ್ರಯೋಗ ಅವಹೇಳನಕಾರಿ ಅಥವಾ ಮಿಥ್ಯಾಪವಾದವಲ್ಲವೇ?

**ಡಾ.ಅಂಬೇಡ್ಕರ್:** ಈ ಬಗ್ಗೆ ಪೇಕಿಂಗ್ ಸರ್ಕಾರ ಒಂದು ಕಾನೂನು ಮಾಡಬೇಕು.

**ಶ್ರೀ ಕಾಮತ್:** ಇಲ್ಲಿ ಯಾರಾದರೂ ಪ್ರತಿಕಾರ ತೋರಿಸಿದರೆ?

**ಡಾ.ಅಂಬೇಡ್ಕರ್:** ಮುಯ್ಯಿಗೆ ಮುಯ್ಯಿಯ ನೀತಿ ದೇಶಕ್ಕೆ ಒಳ್ಳೆಯದಲ್ಲ.

**ಶ್ರೀ ಕಾಮತ್:** ಪರಸ್ಪರ ಕೊಟ್ಟು ಪಡೆಯುವುದಕ್ಕೆ ಏನೆನ್ನುತ್ತೀರಿ?

**ಡಾ.ಅಂಬೇಡ್ಕರ್:** ಅದರಿಂದ ನಮಗೆ ಹೆಚ್ಚು ತೊಂದರೆಯಾಗಬಹುದು. ನಮ್ಮ ಜನತೆ ನಮ್ಮ ಮಿತ್ರ ನೆರೆರಾಷ್ಟ್ರವನ್ನು ಅವಮಾನಿಸಬಾರದೆಂಬ ಹೊಣೆ ಅರಿತಿರುವಂತೆ, ಚೀನಾ ಸರ್ಕಾರ ಸಹ ನನ್ನ ಜನತೆ ಭಾರತವನ್ನು ಅವಮಾನಗೊಳಿಸದಿರುವಂತೆ ನೋಡಿಕೊಳ್ಳಬೇಕು. ತನ್ನ ಕಾರ್ಯಾಂಗದ ಅಧಿಕಾರಕ್ಕನುಸಾರವಾಗಿ ಪ್ರತಿಯೊಂದು ಸರ್ಕಾರ ಕ್ರಮಕೈಗೊಳ್ಳಬೇಕು.

**ಪ್ರೊ. ರಂಗ (ಮದ್ರಾಸ್):** ಮತ್ತು ಗೌರವದ ಅರಿವು.

**ಡಾ.ಅಂಬೇಡ್ಕರ್:** ಹೌದು ಗೌರವದ ಅರಿವು.

**ಶ್ರೀ ನಾಸಿರುದ್ದೀನ್ ಅಹಮದ್:** ಆದರೆ ಈಗಿರುವ ಮಾನಹಾನಿ ಕಾನೂನು ವಿದೇಶಗಳನ್ನು ರಕ್ಷಿಸುತ್ತದೆ.

**ಡಾ.ಅಂಬೇಡ್ಕರ್:** ನಾನು ಮಾಡಲು ಬಯಸದಿದ್ದುದನ್ನು ಮಾಡಲು ನನ್ನ ಮಿತ್ರರು ನನ್ನನ್ನು ಪ್ರಚೋದಿಸಿದರೆ, ಅವರಿಗಾಗಿ ಒಂದು ಮಹತ್ವದ ಮಾತನ್ನು ಓದುತ್ತಾನೆ– ಅಮೇರಿಕೆಯ ಕಾನೂನು. "ಇಂಥ ಕಾನೂನು ಇರುವ ದೇಶ ಯಾವುದಾದರೂ ಇದೆಯೇ?' ಎಂದು ತೀಕ್ಷ್ಣವಾಗಿ ಕೇಳಿದ ನನ್ನ ಮಿತ್ರ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿಯವರಿಗೆ ನೆನಪಿಸುತ್ತಿದ್ದೇನೆ. ಇದು ಅಮೆರಿಕಾ ಸಂಯುಕ್ತ ಸಂಸ್ಥಾನದ ವಿಷಯ. "ಫಾರಿನ್ ರಿಲೇಷನ್ಸ್ ಅಂಡ್ ಇಂಟರ್‌ಕೋರ್ಸ್' ಎಂಬ ಉದ್ಗ್ರಂಥ ಇದು.

**ಶ್ರೀ ಫ್ರಾಂಕ್ ಆಂಟನಿ (ಮಧ್ಯ ಪ್ರದೇಶ):** ಇದು ಹಕ್ಕು ವಿಧೇಯಕದ ಭಾಗವೇ?

**ಡಾ.ಅಂಬೇಡ್ಕರ್:** ಇಲ್ಲಿ ಹೀಗೆ ಹೇಳಲಾಗಿದೆ. ಇದು ಮಹತ್ವದ ಅಂಶ "ನಿರ್ದಿಷ್ಟ ವಿಷಯದ ಬಗ್ಗೆ ಕಾನೂನು ಮಾಡಲು ಅಮೇರಿಕಾ ಕಾಂಗ್ರೆಸ್‌ಗೆ ಅನುಮತಿಸದಿದ್ದರು, ಪ್ರತಿ ರಾಜ್ಯದಲ್ಲಿ ಸ್ವರಕ್ಷಣೆಗೆ ಪೊಲೀಸ್ ಶಕ್ತಿ ಇರುವುದನ್ನರಿತು ಸರ್ವೋಚ್ಚ ನ್ಯಾಯಾಲಯವು ಶಾಸನ ಗ್ರಂಥದಲ್ಲಿ ಅಂಥದೊಂದು ಶಾಸನವಿರಲು ಅನುಮತಿಸಿದೆ".

**ಶ್ರೀ ಆರ್.ಕೆ. ಚೌಧರಿ (ಅಸ್ಸಾಂ):** ಸಂವಿಧಾನದಲ್ಲಿ ಅಲ್ಲ.

**ಡಾ.ಅಂಬೇಡ್ಕರ್:** "ಕಾನೂನು ಏನಿದೆ" ಎಂದು ಕೇಳಿದ ನನ್ನ ಮಿತ್ರ ನಾಸಿರುದ್ದೀನ್ ಇದನ್ನು ಓದಬಹುದು. ಇದು ನಮ್ಮ ಭಾರತೀಯ ಕಾನೂನನ್ನು ಮೀರಿ ಹೋಗುತ್ತದೆ.

"೧ನೇ ಖಂಡದಲ್ಲಿ" ಉದ್ದೇಶಪೂರ್ವಕವಾಗಿ ಹಾಗೂ ಅರಿತಿದ್ದು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಯಾರೇ ವ್ಯಕ್ತಿಯ ವಿರುದ್ಧ ಸುಳ್ಳು ಹೇಳಿಕೆ ನೀಡುವ ವ್ಯಕ್ತಿಗೆ ೧೦ ವರ್ಷ ಮೀರದ ಕಾರಾಗೃಹವಾಸ ಹಾಗೂ ನ್ಯಾಯಾಲಯದ ವಿವೇಚನಾನುಸಾರ ೫ ಸಾವಿರ ಡಾಲರ್ ಮೀರದ ದಂಡ ಎರಡನ್ನೂ ವಿಧಿಸಬಹುದು. ಈ ಕಾನೂನಿಗೆ ದಂಡನಾ ಖಂಡದೊಂದಿಗೆ ನಮ್ಮ ಕಾನೂನಿನ ಶಿಕ್ಷೆಯ ಖಂಡವನ್ನು ಅವರು ಹೋಲಿಸಬೇಕು.

**ಶ್ರೀ ನಾಸಿರುದ್ದೀನ್ ಅಹಮದ್:** ನಾನು ಬೇರೆ ಪ್ರಶ್ನೆ ಎತ್ತಿದೆ.

**ಡಾ.ಅಂಬೇಡ್ಕರ್:** ಮತ್ತೊಮ್ಮೆ ಓದುತ್ತೇನೆ.

**ಅಧ್ಯಕ್ಷರು:** ಸದ್ದು, ಹೆಚ್ಚಿನ ಅಡೆತಡೆಗಳಿಂದ ಚರ್ಚೆಗೆ ಯಾವ ರೀತಿಯಲ್ಲೂ ಸಹಾಯವಾಗದು.

**ಡಾ.ಅಂಬೇಡ್ಕರ್:** ಅವರು ಏನು ಕೇಳುವರೆಂಬುದು ಅರ್ಥವಾದರೆ ಉತ್ತರಿಸಲು ನನ್ನ ಅಭ್ಯಂತರವಿಲ್ಲ.

**ಶ್ರೀ ನಾಸಿರುದ್ದೀನ್ ಅಹಮದ್:** ನನ್ನ ಪ್ರಶ್ನೆ ಸಂಪೂರ್ಣ ವಿಭಿನ್ನ. ನಮ್ಮ ಮಾನಹಾನಿ ಕಾನೂನು

ವಿದೇಶಗಳನ್ನು ರಕ್ಷಿಸುವುದಿಲ್ಲವೇ? ಎಂಬುದು ನನ್ನ ಪ್ರಶ್ನೆ.

**ಡಾ.ಅಂಬೇಡ್ಕರ್:** ಇಲ್ಲ.

**ಶ್ರೀ ನಾಸಿರುದ್ದೀನ್ ಅಹಮದ್:** ಅದು ರಕ್ಷಿಸುವುದೆಂದು ನನ್ನ ಭಾವನೆ.

**ಡಾ.ಅಂಬೇಡ್ಕರ್:** ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಅವಮಾನಿಸಿದಾಗ ಇದು ಅನ್ವಯವಾಗುತ್ತದೆ. ಇದು ಇಲ್ಲಿಯ ಅಂಶ. ಈ ಕಾನೂನಿನ ೨ನೇ ಖಂಡವೆಂದರೆ "ರಾಯಭಾರಿ ಅಥವಾ ಕೌನ್ಸಲಿನ ಅಧಿಕಾರಿಯನ್ನು ತಪ್ಪಾಗಿ ಭಾವಿಸುವುದು ವಿದೇಶೀ ಸಂಬಂಧಗಳ ಕುರಿತ ಕಾನೂನಿನಡಿ, ಅದನ್ನು ಶಿಕ್ಷಾರ್ಹವೆಂದು ಪರಿಗಣಿಸಲಾಗಿದೆ. ಇನ್ನೊಂದು ಮಹತ್ವದ ಖಂಡವೆಂದರೆ, ಒಂದು ವಿದೇಶಿ ಸರ್ಕಾರದ ಸ್ವತ್ತನ್ನು ನಷ್ಟಗೊಳಿಸಲು ಸಂಚು. ಇದಕ್ಕಿರುವ ದಂಡನೆ ಎಂದರೆ ಮೂರು ವರ್ಷಗಳಿಗೆ ಮೀರದ ಶಿಕ್ಷೆ ಅಥವಾ ಐದು ಸಾವಿರ ಡಾಲರ್ ಮೀರದ ಜುಲ್ಮಾನೆ ಅಥವಾ ಇವೆರಡೂ. ಆದ್ದರಿಂದ ನಮ್ಮ ಕಾನೂನು ತುಂಬಾ ಮೃದುವಾಗಿದೆ.

**ಶ್ರೀ ಕಾಮತ್:** ಎಲ್ಲಾ ಸುಳ್ಳು ಹೇಳಿಕೆಗಳನ್ನು ನಿಷಿದ್ಧವೆಂದು ಬಹಿಷ್ಕರಿಸಿದರೆ ಅಲ್ಲಿಗೆ ರಾಯಭಾರವೇ ಪರಿಸಮಾಪ್ತಿಯಾಗುತ್ತದೆ.

**ಡಾ.ಅಂಬೇಡ್ಕರ್:** ವಿದೇಶಿ ಸರ್ಕಾರ ತೊಂದರೆಯುಂಟು ಮಾಡುವ ನಾಗರಿಕನ ಕುರಿತು ನಾವು ಮಾತನಾಡುತ್ತಿದ್ದೇವೆ.

**ಶ್ರೀ ಕಾಮತ್:** ಒಂದು ಸರ್ಕಾರದಿಂದ ಇನ್ನೊಂದು ಸರ್ಕಾರಕ್ಕೆ ಆಗುವ ತೊಂದರೆ ಕುರಿತಲ್ಲ.

**ಡಾ.ಅಂಬೇಡ್ಕರ್:** ಈವರೆಗೆ ನಾನು ನೀಡಿದ ವಿವರಣೆಯಿಂದ, ಸದನದ ಸದಸ್ಯರು, ವಿಧೇಯಕದ ೩ನೇ ಖಂಡದ (೧)ನೇ ಉಪಖಂಡದಲ್ಲಿ ಉಪಬಂಧಿಸಲಾದಂತೆ ೧೯ನೇ ಅನುಚ್ಛೇದವನ್ನು ತಿದ್ದುಪಡಿ ಮಾಡುವ ಅಗತ್ಯವಿದೆಯೆಂಬುದನ್ನು ಒಪ್ಪುತ್ತಾರೆಂದು ನನ್ನ ಭಾವನೆ.

**ಕೆಲ ಸದಸ್ಯರು:** ಇಲ್ಲ

**ಡಾ.ಎಸ್.ಪಿ. ಮುಖರ್ಜಿ:** ಅದು ಮಾನಹಾನಿಯ ವಿರುದ್ಧದ ರಕ್ಷಣೆಗಾಗಿಯಾದರೆ ನೀವೇಕೆ ಅದನ್ನು ಪ್ರತ್ಯೇಕಿಸುತ್ತೀರಿ?

**ಡಾ.ಅಂಬೇಡ್ಕರ್:** ಕೆಲವು ಬಾರಿ ಅದನ್ನು ಹಾಗೆ ಪ್ರತ್ಯೇಕಿಸುವುದು ಉತ್ತಮ.

**ಶ್ರೀ ಕಾಮತ್:** ಯುಕ್ತತೆ.

**ಡಾ.ಮುಖರ್ಜಿ:** ಜಗತ್ತಿನ ಇನ್ನಾವ ಸಂವಿಧಾನದಲ್ಲಿ ಹೀಗೆ ಪ್ರತ್ಯೇಕ ಉಪಬಂಧ ಮಾಡಲಾಗಿದೆ? ನಿಮ್ಮಲ್ಲಿ ನನಗೂ ವಿರೋಧಾಭಿಪ್ರಾಯವಿದೆ.

**ಡಾ.ಅಂಬೇಡ್ಕರ್:** ಬ್ರಿಟಿಷ್ ಸಂವಿಧಾನ ಅಲಿಖಿತವಾಗಿದ್ದು, ಯಾವುದೂ ಅಗತ್ಯವಿಲ್ಲ. ಸಂಸತ್ತೇ ಪರಮೋಚ್ಚ.

**ಡಾ.ಎಸ್.ಪಿ. ಮುಖರ್ಜಿ:** ಅಮೇರಿಕಾ ಸಂವಿಧಾನ ಹೇಗಿದೆ?

**ಡಾ.ಅಂಬೇಡ್ಕರ್:** ಬ್ರಿಟಿಷ್ ಸಂಯುಕ್ತ ಸಂಸ್ಥಾನದಲ್ಲಿ ಮೂಲಭೂತ ಹಕ್ಕುಗಳಿಲ್ಲ. ಅದೇ ತೊಂದರೆ.

**ಡಾ.ಎಸ್.ಪಿ. ಮುಖರ್ಜಿ:** ಯಾವುದೇ ಲಿಖಿತ ಸಂವಿಧಾನದಲ್ಲಿ ಇಂಥದೇ ಉಪಬಂಧವಿದೆಯೇ?

**ಡಾ.ಅಂಬೇಡ್ಕರ್:** ಇಲ್ಲ, ಆದರೆ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಳವಡಿಸಿಕೊಂಡ ಅರ್ಥ ವಿವರಣೆ ಸೂತ್ರಗಳ ಪ್ರಕಾರ ಅಂಥ ಕಾನೂನು ಸಾಧ್ಯವಿದೆ.

**ಡಾ.ಎಸ್.ಪಿ. ಮುಖರ್ಜಿ:** ಅದು ಬೇರೆ ವಿಷಯ.

**ಡಾ.ಅಂಬೇಡ್ಕರ್:** ಬೇರೆ ಅಲ್ಲವೇ ಅಲ್ಲ. ಈಗ ನಾನು ೩ನೇ ಖಂಡದ (೧) (ಬಿ) ಉಪ–ಖಂಡಕ್ಕೆ ಬರುತ್ತೇನೆ. ವ್ಯಾಪಾರ, ವೃತ್ತಿ ಮುಂತಾದವುಗಳ ಕುರಿತ ೧೯ನೇ ಅನುಚ್ಛೇದದ (೬)ನೇ ಖಂಡದ ತಿದ್ದುಪಡಿಗೆ ಈ ಖಂಡದಲ್ಲಿ ಉದ್ದೇಶಿಸಲಾಗಿದೆ.

**ಶ್ರೀ ದೇಶಬಂಧು ಗುಪ್ತಾ (ದೆಹಲಿ):** ಮಾನ್ಯ ಸಚಿವರು ೩(೧) (ಬಿ) ಖಂಡಕ್ಕೆ ಹೋಗುವುದಕ್ಕೆ ಮುಂಚೆ, ಅವರಿಗೆ ನನ್ನದೊಂದು ಪ್ರಶ್ನೆ "ಮಾನಹಾನಿ ಅಥವಾ ಅಪರಾಧಕ್ಕೆ ಪ್ರಚೋದನೆ" ಎಂಬ ಪದಗಳು ಮತ್ತು ಈಗಿರುವ ಎಲ್ಲ ಕಾನೂನುಗಳು...............

**ಡಾ.ಅಂಬೇಡ್ಕರ್:** ನಾನು ಆ ಅಂಶಕ್ಕೆ ಬಂದಿಲ್ಲ.

**ಶ್ರೀ ದೇಶಬಂಧು ಗುಪ್ತಾ:** ನೀವು ಅದಕ್ಕೆ ಉತ್ತರಿಸಬೇಕು.

**ಡಾ.ಅಂಬೇಡ್ಕರ್:** ಅದಕ್ಕೆ ನಾನು ಈಗ ಉತ್ತರಿಸುವುದಿಲ್ಲ. ತಕ್ಕ ಸಮಯದಲ್ಲಿ ಉತ್ತರಿಸುತ್ತೇನೆ. ನಾನು ಅದನ್ನು ದಾಖಲಿಸಿಕೊಂಡಿದ್ದು, ಅದೊಂದು ಉತ್ತರಿಸಬೇಕಾದ ಪ್ರಶ್ನೆ. ಉತ್ತರಿಸುವುದನ್ನು ತಪ್ಪಿಸಿಕೊಳ್ಳಲು ಕಾರಣವಿಲ್ಲ. ನನ್ನ ವಿವರಣೆಯನ್ನು ಸದನ ಒಪ್ಪದಿರಬಹುದು. ಆದರೆ, ವಿವರಣೆಗೆ ವಿಷಯವಿಲ್ಲ ಎಂಬ ಭಾವನೆ ನನಗೆ ಬರಬಾರದು.

ಈ ಖಂಡಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ (೬)ನೇ ಖಂಡವನ್ನು ೨ ಭಾಗಗಳಾಗಿ ಪ್ರತ್ಯೇಕಿಸಲಾಗಿದೆ. ಒಂದು ಭಾಗವನ್ನು ಯಾವುದೇ ವ್ಯಕ್ತಿಯನ್ನು ಕೈಗೊಳ್ಳಲು ಇರಬೇಕಾದ ಅರ್ಹತೆ ಬಗ್ಗೆ. ಇನ್ನೊಂದು ಭಾಗದಲ್ಲಿ ವಾಸ್ತವಿಕವಾಗಿ ಕೈಗೊಂಡಿರುವ ವೃತ್ತಿಯ ಬಗ್ಗೆ ತಿಳಿಸಲಾಗಿದೆ. ಒಂದೇ ವ್ಯವಹಾರವನ್ನು ನಡೆಸುತ್ತಿರುವ ಖಾಸಗೀ ವ್ಯಕ್ತಿಗಳು ಹಾಗೂ ಸರಕಾರಗಳನ್ನು ಪ್ರತ್ಯೇಕಿಸಿ ವರ್ಗೀಕರಣವನ್ನು ಮಾಡುವುದಕ್ಕೆ ಇಲ್ಲಿನ ಎರಡನೆಯ ಭಾಗವು ಅನುಮತಿಯನ್ನು ನೀಡುತ್ತದೆ ಎಂಬುದು ಮುಖ್ಯ ಅಂಶ. ಈ ಖಂಡ ಹಾಗೂ ಅದನ್ನು ಮಂಡಿಸುವ ಅಗತ್ಯ ಉಂಟಾದುದಕ್ಕೆ ಕಾರಣ "ಮೋತಿಲಾಲ್–ವಿರುದ್ದ ಉತ್ತರ ಪ್ರದೇಶ ಸರ್ಕಾರ' ಎಂದು ಹೆಸರಾದ ಪ್ರಕರಣದಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯವು ನೀಡಿದ ತೀರ್ಪು. ಇದು ೧೯೫೧ ಎಐಆರ್ (ಅಲಹಾಬಾದ್) ೨೫೭, ಪೂರ್ಣಪೀಠ– ರಲ್ಲಿ ವರದಿಯಾಗಿದೆ. ಮೋಟಾರು ಸಾರಿಗೆಯ ರಾಷ್ಟ್ರೀಕರಣ ಯೋಜನೆಯನ್ನು ಉತ್ತರ ಪ್ರದೇಶ ಸರ್ಕಾರ ಮಂಡಿಸಿರುವ ವಿಷಯ ಸದಸ್ಯರಿಗೆ ತಿಳಿದಿದೆ. ಅದು ತನ್ನ ಯೋಜನೆಯನ್ನು ಭಾಗಭಾಗವಾಗಿ, ಪ್ರದೇಶದಿಂದ ಪ್ರದೇಶಕ್ಕೆ ವಿಸ್ತರಿಸುತ್ತ ಹಾಗೂ ನಿರ್ದಿಷ್ಟ ಪ್ರದೇಶವು ತಮ್ಮ ಏಕಾಧಿಪತ್ಯಕ್ಕೆ ಸೇರಿರುತ್ತದೆಂದು ಹಾಗೂ ಅದರೊಳಗೆ ಯಾವ ಖಾಸಗಿ ವ್ಯಕ್ತಿಗೂ ತನ್ನ ಬಸ್ ಓಡಿಸಲು ಅನುಮತಿ ಇರುವುದಿಲ್ಲವೆಂದು ತಿಳಿಸಿತ್ತು. ಪ್ರಾರಂಭದಲ್ಲಿ ತಾನು ನಿರ್ವಹಿಸಲು ಆಗದು ಎನಿಸಿದ ಪ್ರದೇಶವನ್ನು ಖಾಸಗಿ ಬಸ್ ಮಾಲೀಕರಿಗೆ ಬಿಟ್ಟುಕೊಟ್ಟಿತು. ಹಾಗೆ ಮಾಡಿ ತನಗಾಗಿ ಗುರುತಿಸಿದ ಪ್ರದೇಶದಲ್ಲಿ ಬಸ್ ಓಡಿಸಲು ರಾಜ್ಯವು ಲೈಸೆನ್ಸ್ ಪಡೆಯುವ ಅಗತ್ಯವಿಲ್ಲವೆಂದು ತಿಳಿಸಿತು. ಆದರೆ ಖಾಸಗಿ ಮಾಲೀಕರು ರಾಜ್ಯದಿಂದ ಲೈಸೆನ್ಸ್ ಪಡೆಯಬೇಕೆಂದು ಕಡ್ಡಾಯಪಡಿಸಿತು. ಇದರಲ್ಲಿ ತಾರತಮ್ಯವಿದೆಯೆಂಬ ಕಾರಣಕ್ಕಾಗಿ ಅಲಹಾಬಾದ್ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ರಾಷ್ಟ್ರೀಕರಣ ಅಪೇಕ್ಷಣೀಯ. ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎನ್ನುವುದಾದರೆ ಅದನ್ನು ಒಂದೇ ಬಾರಿಗೆ ದೇಶಾದ್ಯಂತ ಮಾಡಲು ಸಾಧ್ಯವಾಗದು ಎಂಬುದನ್ನು ಒಪ್ಪಲೇಬೇಕು. ಇದರಲ್ಲಿ ಆಡಳಿತಾತ್ಮಕ ಸಮಸ್ಯೆಗಳಿವೆ, ಇನ್ನಿತರ ಸಮಸ್ಯೆಗಳಿವೆ. ಯೋಜನೆಯನ್ನು ಪೂರ್ಣವಾಗಿ ಕೈಗೊಳ್ಳಲು ಹಾಗೂ ಸಂಯೋಜಿಸಲು, ರಾಜ್ಯವು ಪ್ರದೇಶ ಎಂಬುದನ್ನು ಪರಿಭಾಷಿಸಿ, ತತ್ಕಾಲಕ್ಕೆ ಅದನ್ನು ನಡೆಸಿಕೊಂಡು ಹೋಗಲು ಬೇರೆಯವರಿಗೆ ಬಿಡಬೇಕು. ತಾರತಮ್ಯರಹಿತ ಎಂಬ ತತ್ವದಿಂದ ಆ ಪ್ರಕ್ರಿಯೆಗೆ

ಅಡ್ಡಿಯುಂಟಾಗಬಾರದು. ರಾಷ್ಟ್ರೀಕರಣದ ಸಂಬಂಧದಲ್ಲಿ ತಾರತಮ್ಯರಹಿತವೆಂಬ ತತ್ವವನ್ನು ಕೈಬಿಡಬೇಕು. ಆದ್ದರಿಂದ ಈ ತಿದ್ದುಪಡಿಯನ್ನು ಮಂಡಿಸಿದ್ದು, ಹೀಗೆ ಮಾಡಿದ ಬಗ್ಗೆ ಸದನ ತೀವ್ರ ಆಕ್ಷೇಪಣೆ ಇರಲಾರದೆಂದು ಭಾವಿಸುತ್ತೇನೆ.

**ಒಬ್ಬ ಸದಸ್ಯರು:** ಅದೇ ರೀತಿ ಉಚ್ಚ ನ್ಯಾಯಾಲಯದಿಂದ

**ಡಾ.ಅಂಬೇಡ್ಕರ್:** ನಾನು ಈಗ ೩ನೇ ಖಂಡದ (೨)ನೇ ಉಪ–ಖಂಡಕ್ಕೆ ಬರುತ್ತೇನೆ.

**ಡಾ. ಎಸ್.ಪಿ. ಮುಖರ್ಜಿ:** ಈಗಿರುವ ಖಂಡದಿಂದ 'ಯುಕ್ತ' ಎಂಬ ಪದವನ್ನು ಏಕೆ ಬಿಟ್ಟಿದ್ದೀರಿ?

**ಡಾ.ಅಂಬೇಡ್ಕರ್:** 'ಯುಕ್ತ' ಎಂಬ ಪದ ಇರಲಿಲ್ಲ.

ಸದನದಲ್ಲಿ ಎಲ್ಲೆಡೆ (ಒಬ್ಬ ಸದಸ್ಯ : ಆಯ್ಕೆ ಸಮಿತಿಯಲ್ಲಿ) ಚರ್ಚಿಸಬೇಕಾದ ವಿಷಯ.

ನಾನು ಈಗ ೨ನೇ ಖಂಡದ (೨)ನೇ ಉಪ–ಖಂಡಕ್ಕೆ ಬರುತ್ತೇನೆ. ಈ ತಿದ್ದುಪಡಿಯ ಉದ್ದೇಶವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದರೆ ೧೩ನೇ ಅನುಚ್ಛೇದಕ್ಕೆ ಹೋಗಬೇಕಾದುದು ಅಗತ್ಯವಾಗುತ್ತದೆ. ೧೩ನೇ ಅನುಚ್ಛೇದದ ಹಿನ್ನೆಲೆಯಲ್ಲಿ ಈ ೩೧ನೇ ಉಪ ಖಂಡದ ಬಗ್ಗೆ ಸ್ಪಷ್ಟತೆ ಮೂಡುತ್ತದೆ. ಮೂಲಭೂತ ಹಕ್ಕುಗಳಿಗೆ ಅಸಂಗತವಾದ ಯಾವುದೇ ಕಾನೂನನ್ನು ಶೂನ್ಯ ಹಾಗೂ ನಿಷ್ಕ್ರಿಯವೆಂದು ೧೩ನೇ ಅನುಚ್ಛೇದ ಘೋಷಿಸುತ್ತದೆ ಎಂಬ ಅಂಶ ಎಲ್ಲ ಸದಸ್ಯರಿಗೂ ತಿಳಿಸಿದೆ. ಭಾರತ ದಂಡಸಂಹಿತೆಯ ೧೫೩ಎ ಹಾಗೂ ೧೨೪ಎ ಕೆಲವು ಪತ್ರಿಕಾ (ತುರ್ತು ಅಧಿಕಾರಿಗಳು) ಅಧಿನಿಯಮ ಹಾಗೂ ಸಾರ್ವಜನಿಕ ಸುರಕ್ಷತಾ ಅಧಿನಿಯಮದ ಕೆಲವು ಉಪಬಂಧಗಳನ್ನು ಸರ್ವೋಚ್ಚ ನ್ಯಾಯಾಲಯ ಹಾಗೂ ವಿವಿಧ ಉಚ್ಚ ನ್ಯಾಯಾಲಯಗಳು ಅನೂರ್ಜಿತವೆಂದು ಘೋಷಿಸಿವೆ. ಈ ದೃಷ್ಟಿಯಿಂದ ನಾವೇನು ಮಾಡಬೇಕು? ನನಗೆ ತಿಳಿದಂತೆ ನಾವು ಅನುಸರಿಸಬಹುದಾದ ೩ ಪರ್ಯಾಯ ಮಾರ್ಗಗಳಿವೆ. ಮೊದಲನೆಯದೆಂದರೆ ಸಂವಿಧಾನವನ್ನು ತಿದ್ದುಪಡಿ ಮಾಡದಿದ್ದರೆ ಅನೂರ್ಜಿತ ಉಪಬಂಧ ಹಾಗೆ ಉಳಿದಿರುತ್ತದೆ. ಬಹುಶಃ ಈ ಪರ್ಯಾಯ ಮಾರ್ಗವನ್ನು ಯಾವ ಸದಸ್ಯರು ಒಪ್ಪುವುದಿಲ್ಲ (ಒಬ್ಬ ಸದಸ್ಯ: ವಿನಾಶಕಾರಿ), ಎರಡನೇ ಪರ್ಯಾಯ ಮಾರ್ಗವೆಂದರೆ ಸಂವಿಧಾನದ ತಿದ್ದುಪಡಿ, ಇದಕ್ಕೆ ಎರಡು ದಾರಿಗಳಿವೆ. ಆ ಪೈಕಿ ಒಂದೆಂದರೆ, ತಿದ್ದುಪಡಿಯಾದ ಅನುಚ್ಛೇದಕ್ಕನುಸಾರವಾಗಿ ಈ ಕಾನೂನನ್ನು ಮರು ಅಧಿನಿಯಮಿಸುವುದು, ಅದೊಂದು ದಾರಿ. ಸಂಸತ್ತು ಹಾಗೂ ವಿವಿಧ ರಾಜ್ಯ ವಿಧಾನಮಂಡಲಗಳು ತಮ್ಮ ಅಧಿವೇಶನಗಳನ್ನು ಕರೆದು, ಮತ್ತೊಮ್ಮೆ ಈ ಶಾಸನಗಳ್ನು ಪರಿಶೀಲಿಸಬೇಕು. ಎರಡನೇ ದಾರಿಯೆಂದರೆ ಈ ಕಾನೂನುಗಳ ಪುನಶ್ಚೇತನ. ಈ ಕಾನೂನು ಪುನಶ್ಚೇತನ ಪ್ರಕ್ರಿಯೆಯು ತಿದ್ದುಪಡಿಯಾದ ಸಂವಿಧಾನದ ಉಪಬಂಧನಗಳಿಗೊಳಪಟ್ಟಿರಬೇಕು. ಇದಕ್ಕಿಂತ ಬೇರೆ ಮಾರ್ಗ ಕಾಣದು. ವಿಧೇಯಕವು ಎರಡನೇ ಮಾರ್ಗವನ್ನು ಅಳವಡಿಸಿಕೊಂಡಿದೆ. ವಿಧೇಯಕದಲ್ಲಿ ಹೇಳಿರುವುದೇನೆಂದರೆ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳು ಅನೂರ್ಜಿತ ಹಾಗೂ ಪರಿಣಾಮಶೂನ್ಯವೆಂದು ಘೋಷಿಸಿದ ಕಾನೂನುಗಳನ್ನು ಒಂದು ಪರಂತುಕಕ್ಕೆ ಒಳಪಟ್ಟು ಜೀವಂತವೆಂದು ಭಾವಿಸಬೇಕು. ಆ ಪರಂತುಕವೆಂದರೆ ಅವು ತಮ್ಮ ಮೂಲರೂಪದಲ್ಲಲ್ಲದೇ ತಿದ್ದುಪಡಿಯಾದ ೧೯ನೇ ಅನುಚ್ಛೇದಕ್ಕೆ ಸಂಗತವಾಗುವಷ್ಟು ಹಾಗೂ ಆ ರೀತಿಯಲ್ಲಿ ಜೀವಂತವಾಗಿರಬೇಕು. ಇದು ಸ್ಥಿತಿ. ಈ ಸಂಪತ್ತು ಅಥವಾ ಪ್ರಾಂತಗಳ ವಿಧಾನಸಭೆಗಳು ಮತ್ತೆ ಸೇರಿ, ಈ ಕಾನೂನುಗಳನ್ನು ಮರು ಅಧಿನಿಯಮಿಸುವ ಸಾಧ್ಯತೆಗಳ ಬಗ್ಗೆ ಗಂಭೀರವಾಗಿ ಆಲೋಚಿಸಬಹುದೇ ಎಂದು ನಾನು ಸದನವನ್ನು ಕೋರುತ್ತೇನೆ.

**ಡಾ.ಎಸ್.ಪಿ. ಮುಖರ್ಜಿ:** ಏಕೆ ಬೇಡ?

**ಡಾ.ಅಂಬೇಡ್ಕರ್:** ಅದಕ್ಕೆ ಸಮಯವಿದೆಯೇ?

**ಡಾ.ಎಸ್.ಪಿ. ಮುಖರ್ಜಿ:** ಈಗ ಏನಾಗುತ್ತಿದೆ?

**ಡಾ.ಅಂಬೇಡ್ಕರ್:** ಅದಕ್ಕೆ ಬೇಕಾಗುವ ಸಮಯ ಎಷ್ಟು ಎಂದು ನನಗೆ ಗೊತ್ತಿಲ್ಲ. ನನ್ನ ಸನ್ಮಿತ್ರರಾದ ಡಾ.ಮುಖರ್ಜಿಯವರು ಬಂಗಾಲ ವಿಧಾನ ಸಭೆಯ ಸದಸ್ಯರಾದರೆ ಕನಿಷ್ಠ ೬ ತಿಂಗಳ ಕಾಲ. ಅಂಥ ಕಾನೂನು ಅಂಗೀಕೃತವಾಗದಂತೆ ತಡೆಯುತ್ತಾರೆ. ಅವರ ವಾದ, ವಾಕ್ಪ್ರವಾಹ, ಈ ಕಾನೂನುಗಳ ಮರು ಅಧಿನಿಯಮಿತಿಗೆ ಚೀನಾ ಗೋಡೆಯಂತೆ ಅಡ್ಡವಾಗಿ ನಿಲ್ಲುತ್ತಾರೆ. ಆದ್ದರಿಂದ ಸಂಸತ್ತು ಹಾಗೂ ಸ್ಥಳೀಯ ವಿಧಾನಸಭೆಗಳು ಈಗಿರುವ ಸ್ಥಿತಿಯಲ್ಲಿ ಅವುಗಳಿಗೆ ಈ ಕಾನೂನುಗಳ ಮರುಅಧಿನಿಯಮನ ಮಾಡುವುದಕ್ಕೆ ತಕ್ಷಣ ವೇಳೆ ಒದಗುತ್ತದೆ ಎಂದು ನಾನು ಭಾವಿಸಲಾರೆ. ನಮಗೆ ಶಾಸನ ಕೆಲಸ ಸಾಕಷ್ಟಿದೆ.

**ಶ್ರೀ ಸಾರಂಗಧರ ದಾಸ್:** ಹೊಸ ಸಂಸತ್ತು ಏಕೆ ಬೇಡ?

**ಡಾ.ಅಂಬೇಡ್ಕರ್:** ಹೊಸ ಸಂಸತ್ತಾದರೆ ಒಂದು ವರ್ಷದಲ್ಲಿ ೬–೭–೮ ತಿಂಗಳ ಕಾಲ ಸಾರ್ವಜನಿಕ ಸುವ್ಯವಸ್ಥೆಗೆ ಕಾನೂನು ಇರುವುದಿಲ್ಲ. ಅಪರಾಧ ಪ್ರಚೋದನೆಗೆ ಕಾನೂನು ಇರುವುದಿಲ್ಲ. ವಿದೇಶಗಳೊಂದಿಗಿನ ಸ್ನೇಹಸಂಬಂಧ ಕುರಿತ ಕಾನೂನುಗಳಿರುವುದಿಲ್ಲ. ಸಂಸತ್ ಸದಸ್ಯರಿಗೆ ಬೇರೆ ದಾರಿ ತಿಳಿಸಿದ್ದರೆ ಹೇಳಬಹುದು.

**ರಣಬೀರ್ ಸಿಂಗ್ (ಪಂಜಾಬ್):** ಹೊಸ ಸಂಸತ್ತು ಬಯಸಿದರೆ. ಈ ಕಾನೂನುಗಳನ್ನು ಅನೂರ್ಜಿತಗೊಳಿಸಬಹುದು.

**ಡಾ.ಅಂಬೇಡ್ಕರ್:** ನಾನು ೧೯ನೇ ಅನುಚ್ಛೇದದ ಬಗ್ಗೆ ಹೇಳಿದ್ದೇನೆ.

**ಡಾ.ಎಸ್.ಪಿ. ಮುಖರ್ಜಿ:** ನೀವೇಕೆ ಪೂರ್ವಾನ್ವಯದ ಪರಿಣಾಮ ನೀಡುತ್ತೀರಿ?

**ಡಾ.ಅಂಬೇಡ್ಕರ್:** ಪೂರ್ವಾನ್ವಯ ಪರಿಣಾಮ ನೀಡದಿದ್ದರೆ ಈ ಕಾನೂನುಗಳ ಪುನಶ್ಚೇತನವಾಗುವುದಿಲ್ಲ.

**ಶ್ರೀ ಶಿವಚರಣ್ ಲಾಲ್ (ಉತ್ತರ ಪ್ರದೇಶ):** ಅದು ಕಾನೂನು ಸಮ್ಮತವೇ?

**ಡಾ.ಅಂಬೇಡ್ಕರ್:** ಯಾಕಿಲ್ಲ? ಈ ಕಾನೂನುಗಳು ಜಾರಿಯಲ್ಲಿದ್ದರೆ. ಈ ಕಾನೂನು ಅಸ್ತಿತ್ವಕ್ಕೆ ಬಂದ ದಿನದಂದೂ ಅವು ಜಾರಿಯಲ್ಲಿರುತ್ತವೆ. ನೀವು ಮರು ಅಧಿನಿಯಮಿಸುತ್ತೀರಿ ಎಂಬುದು ನನಗೆ ಗೊತ್ತಿಲ್ಲ !

**ಶ್ರೀ ದೇಶಬಂಧು ಗುಪ್ತ:** ಮಾನ್ಯ ಕಾನೂನು ಸಚಿವರು ಬೇರೆ ಅನುಚ್ಛೇದವನ್ನು ಕೈಗೆತ್ತಿಕೊಳ್ಳಲಿರುವುದರಿಂದ ಈ ಅನುಚ್ಛೇದಕ್ಕೆ ಸಂಬಂಧಿಸಿದಂತೆ ನಾನೊಂದು ಪ್ರಶ್ನೆ ಕೇಳಬಹುದೇ? ಪ್ರದಾನ ಮಾಡಬೇಕೆಂದು ಕೋರಲಾದ ಅಧಿಕಾರವು ಅಪರಾಧದ ಪ್ರಚೋದನೆಗೆ ಸಂಬಂಧಿಸಿದೆ. ಮಾನ್ಯ ಕಾನೂನು ಸಚಿವರು ಉಲ್ಲೇಖಿಸಿದ ಪತ್ರಿಕಾ (ತುರ್ತು ಅಧಿಕಾರಗಳು) ಅಧಿನಿಯಮದ ೪ನೇ ಪ್ರಕರಣವು ಕೊಲೆಗೆ ಅಥವಾ ಹಿಂಸೆಯನ್ನೊಳಗೊಂಡ ಅಪರಾಧಕ್ಕೆ ಪ್ರಚೋದನೆ ನೀಡುವುದಕ್ಕೆ ಸಂಬಂಧಿಸಿದೆ. ನಾನು ತಿಳಿದುಕೊಳ್ಳಬೇಕಾದುದೆಂದರೆ............

**ಡಾ.ಅಂಬೇಡ್ಕರ್:** ನೀವು ಅದರ ಪರ ವಕಾಲತ್ತು ವಹಿಸುತ್ತೀರಾ?

**ಶ್ರೀ ದೇಶಬಂಧು ಗುಪ್ತಾ:** ಇಲ್ಲ ಕೋರಲಾದ ವಿಸ್ತೃತ ಅಧಿಕಾರಗಳಡಿ ಬೇರೆ ಅಧಿನಿಯಮಗಳಡಿ ಅಪರಾಧವೆನಿಸುವ, ಜನರ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಯಾವುದೇ ಆದೇಶದ ಅಹಿಂಸಾತ್ಮಕ ಅಸಹಕಾರದ ಪರ ವಕಾಲತ್ತು ವಹಿಸುವುದು ಸಾಧ್ಯವಿಲ್ಲವೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ನನಗೆ ಒಂದು ವಿವರಣೆ ಬೇಕು. ಉದಾಹರಣೆಗೆ, ಕಾನೂನುಬಾಹಿರ ಉದ್ದೇಶಗಳಿಗೆ ಸಭೆ ನಡೆಸುವುದನ್ನು

೧೪೪ನೇ ಪ್ರಕರಣ ತಡೆಯುತ್ತದೆ. ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟ್ ಒಂದು ಆದೇಶ ಹೊರಡಿಸುತ್ತಾರೆ. ಈ ಆದೇಶ ಅಸಹನೀಯವಾಗಿದ್ದು, ಅದಕ್ಕೆ ಸಹಕರಿಸಬಾರದೆಂದು ಒಂದು ಪತ್ರಿಕೆ ಜನರಿಗೆ ಸಲಹೆ ನೀಡುತ್ತದೆ. ಇದು ಹಿಂಸಾ ಪ್ರಚೋದಕವು, ಕೊಲೆ ಪ್ರಚೋದಕವು ಅಲ್ಲದಿದ್ದರೂ ಒಂದು ಅಪರಾಧವೆನಿಸುತ್ತದೆಯೇ, ಇಲ್ಲವೇ?

**ಶ್ರೀ ರಾಜಾಜಿ:** ಇಂದು ಸುದೀರ್ಘ ಚರ್ಚೆಯನ್ನು ಆಯ್ಕೆ ಸಮಿತಿಗೆ ವಹಿಸಬಹುದು. ತತ್ವಗಳನ್ನು ವಿವರಿಸಲಾಗಿದೆ. ಇಲ್ಲವಾದರೆ ನಮಗೆ ಸಮಯಾವಕಾಶ ಇಲ್ಲದಂತಾಗುತ್ತದೆ.

**ಶ್ರೀ ದೇಶಬಂಧು ಗುಪ್ತಾ:** ಅದನ್ನು ಮಾರ್ಪಡಿಸಲಾಗುವುದೆಂದು ಮಾನ್ಯ ಸಚಿವರು ಭರವಸೆ ನೀಡಿದರೆ ಸಾಕು.

**ಅಧ್ಯಕ್ಷರು:** ಅದೇನೇ ಇರಲಿ, ಮೇಲಿಂದ ಮೇಲೆ ಅಡ್ಡಿಪಡಿಸುವ ಸದಸ್ಯರು ತಾವು ಹೇಳಬೇಕಾದುದನ್ನು ಹೇಳಿದ್ದಾರೆ, ಅವರ ಅಭಿಪ್ರಾಯಗಳನ್ನು ಗಮನಿಸಲಾಗಿದೆ. ಈಗ ಮಾತನಾಡುತ್ತಿರುವ ಕಾನೂನು ಸಚಿವರು ತಮ್ಮ ಅಭಿಪ್ರಾಯ ತಿಳಿಸಲಿ.

**ಶ್ರೀ ಕಾಮತ್:** ಎಂದರೆ. ತಮ್ಮ ಅಭಿಪ್ರಾಯ ತಿಳಿಸದ ಸದಸ್ಯರು ಅಡ್ಡಿಪಡಿಸಬಹುದು ಎಂದರ್ಥವೇ?

**ಅಧ್ಯಕ್ಷರು:** ಹಾಗಲ್ಲ ಬಹುಪಾಲು ಸದಸ್ಯರು ಇದನ್ನು ಗಮನಿಸಬಲ್ಲರು.

**ಶ್ರೀ ಶಿವಚರಣ್‌ಲಾಲ್:** ಒಂದೇ ಒಂದು ಪ್ರಶ್ನೆ. ಪೂರ್ವಾನ್ವಯ ಪರಿಣಾಮ ನೀಡುವುದು ಕಾನೂನು ಸಮ್ಮತವೇ?

**ಡಾ.ಅಂಬೇಡ್ಕರ್:** ಹೌದು, ನಿಸ್ಸಂಶಯವಾಗಿ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ್:** ಒಂದು ನೇರ ಪ್ರಶ್ನೆ ಕೇಳಲೇ? ಮಾನ್ಯ ಕಾನೂನು ಸಚಿವರು ತಿದ್ದುಪಡಿಮಾಡಲು ಬಯಸುವ ೧೯(೨)ನೇ ಅನುಚ್ಛೇದದ ನಿಬಂಧನೆಗಳು ಸಮರ್ಪಕವೆನಿಸಿವೆಯೇ?

**ಡಾ.ಅಂಬೇಡ್ಕರ್:** ನಾನು ತತ್ವವನ್ನು ವಿವರಿಸಿದ್ದೇನೆ. ತತ್ವಕ್ಕೆ ಪರಿಣಾಮ ನೀಡಲು ಭಾಷೆಯನ್ನು ಮಾರ್ಪಡಿಸಬೇಕಾದಲ್ಲಿ ಆಕ್ಷೇಪಣೆ ಇಲ್ಲ. ಆದರೆ ತತ್ವವೆಂದರೆ ಅವುಗಳನ್ನು ಪುನಶ್ಚೇತನಗೊಳಿಸಬೇಕು.

**ಶ್ರೀ ದೇಶಬಂಧು ಗುಪ್ತಾ:** "ಯುಕ್ತ' ಪದವನ್ನು ತೆಗೆಯುವುದರ ಮೇಲೆ ಸಚಿವರು ಬೆಳಕು ಚೆಲ್ಲಲಿಲ್ಲ.

**ಡಾ.ಅಂಬೇಡ್ಕರ್:** ಅದನ್ನು ತೆಗೆದಿಲ್ಲ. ಅದು ಇರಲಿಲ್ಲ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ್:** ಆದರೆ ಬೇರೆ ವಿಷಯಗಳಿದ್ದವು. ನೀವು ಈ ಎಲ್ಲಾ ಸುರಕ್ಷತಾ ಕ್ರಮಗಳನ್ನು ಹಿಂತೆಗೆದುಕೊಂಡಿದ್ದೀರಿ.

**ಡಾ.ಅಂಬೇಡ್ಕರ್:** ಅದು ಬೇರೆ ವಿಷಯ. ಅದನ್ನು ಆಯ್ಕೆ ಸಮಿತಿ ಪರಿಶೀಲಿಸುತ್ತದೆ.

ನಾನು ಈಗ ವಿಧೇಯಕದ ೪ನೇ ಖಂಡಕ್ಕೆ ಬರುತ್ತೇನೆ. ಈ ಖಂಡದಲ್ಲಿ ಹೊಸ ೩೧ನೇ ಅನುಚ್ಛೇದದಲ್ಲಿ ಏನು ಹೇಳಲಾಗಿದೆ ಎಂಬುದು ನಮಗೆ ಮೊದಲು ತಿಳಿಯಬೇಕು. ಎಸ್ಟೇಟ್ ಆರ್ಜನೆಗೆ ರಾಜ್ಯಗಳಿಗೆ ಈ ಅನುಚ್ಛೇದದ ಮೂಲಕ ಅನುಮತಿಸಲಾಗುತ್ತದೆ. ಎರಡನೆಯದಾಗಿ ಎಸ್ಟೇಟ್ ಅರ್ಜನೆಗೆ ಯಾವುದೇ ಶಾಸನ ಮಾಡಿದರೆ ಮೂಲಭೂತ ಹಕ್ಕುಗಳಲ್ಲಿರುವುದಾವುದೂ ಆ ಶಾಸನಕ್ಕೆ ಪರಿಣಾಮ ನೀಡಲಾಗದು. ಈ ಅನುಚ್ಛೇದದಲ್ಲಿ ಕ್ರಾಂತಿಕಾರಿಯಾದುದು ಏನಾದರೂ ಇದೆಯೇ ಎಂಬ ಪ್ರಶ್ನೆಯ ಹಿನ್ನೆಲೆಯಲ್ಲಿ ಈ ಅನುಚ್ಛೇದದ ಗುಣಾತ್ಮಕ ಅಂಶಗಳನ್ನು ನಿರ್ಧರಿಸಬೇಕು.

**ಶ್ರೀ ಫ್ರಾಂಕ್ ಆಂಟೋನಿ:** ಇದು ಪ್ರತಿಕ್ರಿಯಾತ್ಮಕವಾದುದು.

**ಡಾ.ಅಂಬೇಡ್ಕರ್:** ೩೧ನೇ ಅನುಚ್ಛೇದದಲ್ಲಿಲ್ಲದಿರುವುದೇನಾದರೂ ಈ ಅನುಚ್ಛೇದದಲ್ಲಿದೆಯೇ ಎಂಬ ದೃಷ್ಟಿಯಿಂದ ಸದನವು ಈ ಪ್ರಶ್ನೆಯನ್ನು ಪರಿಶೀಲಿಸಬೇಕು. ರಾಷ್ಟ್ರಾಧ್ಯಕ್ಷರು ಪ್ರಮಾಣಪತ್ರ ನೀಡಿದರೆ, ಅಂಗೀಕೃತವಾಗದ ಕೆಲವು ಕಾನೂನುಗಳನ್ನು ಪ್ರಶ್ನಿಸುವಂತಿಲ್ಲವೆಂದು ೩೧ನೇ ಅನುಚ್ಛೇದದ ತರುವಾಯದ ಖಂಡಗಳಲ್ಲಿ ಉಪಬಂಧಿಸಲಾಗಿತ್ತು. ಇದು ೩೧ನೇ ಅನುಚ್ಛೇದದ ಆ ಖಂಡಗಳ ಸಾರಾಂಶ. ೩೧ನೇ ಅನುಚ್ಛೇದದ ಹೊಸ ತಿದ್ದುಪಡಿಯು ಪರಿಹಾರಕ್ಕೆ ಸಂಬಂಧಿಸಿದ ಉಪಬಂಧ ಜಾರಿಯಾಗುವುದನ್ನು ಹಾಗೂ ತಾರತಮ್ಯಕ್ಕೆ ಸಂಬಂಧಿಸಿದ ಅನುಚ್ಛೇದದ ಜಾರಿಯನ್ನು ತೆಗೆದುಹಾಕುತ್ತದೆ. ಈ ತಿದ್ದುಪಡಿಯಲ್ಲಿ ನಾನು 'ಎಸ್ಟೇಟ್' ಎಂಬ ಪದದ ಮೇಲೆ ಒತ್ತು ನೀಡಲು ಬಯಸುತ್ತೇನೆ. ಹೊಸ ಅನುಚ್ಛೇದ ತುಂಬಾ ಸೀಮಿತವಾಗಿದೆ. ಅದು ಭೂ ಆರ್ಜನೆಗೆ ಅನ್ವಯವಾಗುವುದಿಲ್ಲ. ಭೂಮಿಯಲ್ಲಿನ ಎಸ್ಟೇಟ್ ಆರ್ಜನೆಗೆ ಅನ್ವಯವಾಗುತ್ತಿದ್ದು, ಇದು ಬಹಳ ವಿಭಿನ್ನವಾದ ವಿಷಯ. ಈ ಅನುಚ್ಛೇದದಲ್ಲಿ ಎಸ್ಟೇಟ್ ಎಂಬುದನ್ನು ಪರಿಭಾಷಿಸಲಾಗಿದೆ. ಎಸ್ಟೇಟ್ ಎಂದರೆ ಪ್ರೋಪ್ರೈಟರ್‌ನ, ಸಬ್–ಪ್ರೋಪ್ರೈಟರ್‌ನ, ಹಿಡುವಳಿದಾರನ ಅಥವಾ ಮಧ್ಯವರ್ತಿಯ ಹಕ್ಕು, ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಪದ ಪ್ರಯೋಗವಿದೆ. ಆದರೆ ಇದು ಭೂ ಆರ್ಜನೆಗೆ ಅನ್ವಯವಾಗುವುದಿಲ್ಲ. ಇದು ಗಮನಿಸಬೇಕಾದ ಅಂಶ. ೩೧ಎ ಅನುಚ್ಛೇದ ಮಾಡುವುದಿಷ್ಟು, ಸ್ವತ್ತಿನ ಆರ್ಜನೆ ಕುರಿತಂತೆ ಯಾವುದೇ ಕಾನೂನನ್ನು ಕೈಗೆತ್ತಿಕೊಂಡರೆ ಅಲ್ಲಿ ಹುಟ್ಟುವ ಪ್ರಶ್ನೆಗಳು ಎರಡು. ಮೊದಲನೆಯದಾಗಿ, ಪರಿಹಾರದ ಮೊಬಲಗು, ಎರಡನೆಯದಾಗಿ, ಪರಿಹಾರದ ಮೊಬಲಗಿಗೆ ಸಂಬಂಧಿಸಿದಂತೆ ಒಡೆಯರ ನಡುವಣ ತಾರತಮ್ಯ. ಈ ಎರಡು ಪ್ರಶ್ನೆಗಳೂ ಉದ್ಭವಿಸುವ ಸಾಧ್ಯತೆ ಇದ್ದು, ಅವೇ ವ್ಯಾಜ್ಯಕ್ಕೂ ಕಾರಣವಾಗುತ್ತವೆ. ಪರಿಹಾರ ಕುರಿತಂತೆ ಹೇಳುವುದಾದರೆ ನಾವು ಮೂಲ ೩೧ನೇ ಅನುಚ್ಛೇದದ ಮೂಲಕ ಒಡೆತನದ ಅಥವಾ ಜಮೀನ್ದಾರಿ ಹಿತಾಸಕ್ತಿಯ ಆರ್ಜನೆಯನ್ನು ಹೊರತುಪಡಿಸಿದ್ದೇವೆ. ಈ ಅನುಚ್ಛೇದದ ಮೂಲಕ ತಾರತಮ್ಯದ ಉಪಬಂಧ ಜಾರಿಯನ್ನು ಕೈಬಿಡುತ್ತೇವೆ. ನಾವು ಈ ಅನುಚ್ಛೇದದ ಮೂಲಕ ಮಾಡುತ್ತಿರುವುದು ಇಷ್ಟನ್ನೇ.

ಭೂಮಿಯ ಪ್ರಶ್ನೆ ಕುರಿತಂತೆ ಪರಿಹಾರ ಹಾಗೂ ತಾರತಮ್ಯಕ್ಕೆ ಸಂಬಂಧಿಸಿದ ಮೂಲಭೂತ ಹಕ್ಕುಗಳ ಎರಡು ಅನುಚ್ಛೇದಗಳನ್ನು ಅಳವಡಿಸಿಕೊಳ್ಳಲಾಗದೆಂದು ನನ್ನ ಭಾವನೆ. ಈ ವಿಷಯಕ್ಕೆ ನಾನು ಆದ್ಯ ಗಮನ ನೀಡಿದ್ದೇನೆ. ನಮ್ಮ ದೇಶವನ್ನು ಬಹುಮಟ್ಟಿಗೆ ಹೋಲುವ ಐರ್ಲೆಂಡಿನ ಸ್ಥಿತಿಯನ್ನು ನಾನು ಗಮನವಿಟ್ಟು ಅಧ್ಯಯನ ಮಾಡಿದ್ದೇನೆ. ಐರ್ಲೆಂಡ್‌ನಲ್ಲಿ ರೈತಾಪಿ ವರ್ಗಕ್ಕೆ ಭೂಮಿಯ ಕೊರತೆ. ಭೂಮಿಯ ವಿತರಣೆ ಸರಿಸಮನಾಗಿಲ್ಲ. ಕೆಲವರಿಗೆ ಅತ್ಯಂತ ದೊಡ್ಡ, ಕೆಲವರಿಗೆ ತೀರ ಚಿಕ್ಕ ಎಸ್ಟೇಟುಗಳು. ಕೆಲವರು ಭೂರಹಿತರು. ಐರ್ಲೆಂಡ್ ಸಂವಿಧಾನ ಇದಕ್ಕಾಗಿ, ಏನು ಮಾಡಿದೆ? ಭೂಹಿತಾಸಕ್ತಿಯನ್ನು ಪ್ರತಿನಿಧಿಸುವ ಸದಸ್ಯರು ಈ ಪ್ರಕರಣವನ್ನು ತುಲನಾತ್ಮಕವಾಗಿ ನೋಡಬೇಕು. ಐರಿಷ್ ಸಂವಿಧಾನದ ಮಟ್ಟಿಗೆ ಹೇಳುವುದಾದರೆ ಭೂ ಸ್ವತ್ತು ಮೂಲಭೂತ ಹಕ್ಕಲ್ಲ. ಐರಿಷ್ ಸಂವಿಧಾನದ ೪೩ನೇ ಅನುಚ್ಛೇದದ (೨)ನೇ ಖಂಡದಲ್ಲಿ, ಭೂಮಿಯ ಮೇಲಿನ ಹಕ್ಕನ್ನು ಚಲಾಯಿಸುವುದನ್ನು ಸಾಮಾಜಿಕ ನ್ಯಾಯದ ತತ್ವಗಳ ರೀತ್ಯಾ ನಿಯಂತ್ರಿಸಬೇಕೆಂದು ಹೇಳಲಾಗಿದೆ. ಪೂರ್ಣ ಪರಿಹಾರವಿಲ್ಲದೇ ಅಥವಾ ಭೂ ಒಡೆಯರ ನಡುವೆ ತಾರತಮ್ಯವಿಲ್ಲದೇ ಭೂಮಿಯನ್ನು ತೆಗೆದುಕೊಳ್ಳಬೇಕೆಂದು ಅಲ್ಲಿ ಹೇಳಿಲ್ಲ. ಐರಿಷ್ ಕಾನೂನಿನ ಮೇರೆಗೆ "ಕಂಜೆಸ್ಟೆಡ್ ಬೋರ್ಡ್" ಅಥವಾ "ಕಂಜೆಸ್ಟೆಡ್ ಏರಿಯಾಸ್ ಬೋರ್ಡ್" ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಭೂ ಆರ್ಜನೆಯ, ವಿಭಜನೆಯ, ಸಮಾನೀಕರಣದ, ಲಾಭಕರವಲ್ಲದ ಜಮೀನುಗಳ ಪಕ್ಕದ

ಒಡೆಯನಿಂದ ಭೂಮಿಯನ್ನು ತೆಗೆದುಕೊಂಡು ಲಾಭದಾಯಕ ಜಮೀನುಗಳನ್ನಾಗಿ ಮಾಡುವ ಅಧಿಕಾರವನ್ನು ನೀಡಲಾಗಿದೆ. ಪರಿಹಾರವನ್ನು ನಿಗದಿಪಡಿಸುವ ಅಧಿಕಾರವನ್ನು ಈ ಮಂಡಳಿಗೆ ನೀಡಲಾಗಿದೆ. ಈ ಮಂಡಲಿಯ ಕ್ರಮಗಳನ್ನು ಅರ್ಥೈಸಲು ಯಾವುದೇ ನ್ಯಾಯಿಕ ಪ್ರಾಧಿಕಾರವಿಲ್ಲ.

**ಒಬ್ಬ ಸದಸ್ಯ:** ಅಪೀಲಿಗೂ ಅವಕಾಶವಿಲ್ಲವೇ?

**ಡಾ.ಅಂಬೇಡ್ಕರ್:** ಇಲ್ಲ, ಕೆಲವರು ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದರೂ, ಹಾಗೆ ಸಲ್ಲಿಸಲು ಅವಕಾಶವಿಲ್ಲವೆಂದು ನ್ಯಾಯಾಲಯಗಳು ತಿಳಿಸಿವೆ.

ಭೂಮಿಯನ್ನು ವಶಕ್ಕೆ ಪಡೆದುಕೊಂಡಿರುವ ರಾಜ್ಯಗಳು ಪ್ರಾರೂಪಿಸಿದ ಹೊಸ ಯೋಜನೆಗಳು ನನಗೆ ಮೆಚ್ಚುಗೆಯಾಗಿಲ್ಲ ಎಂದು ತಿಳಿಸಲು ನಾನು ಹಿಂದೇಟು ಹಾಕುವುದಿಲ್ಲ. ಈ ದೇಶದಲ್ಲಿ ಕೃಷಿಕ ಒಡೆಯರನ್ನು ಸೃಷ್ಟಿಸುವುದು ಒಳ್ಳೆಯ ವಿಚಾರವಲ್ಲವೆಂದು ನನ್ನ ಅಭಿಪ್ರಾಯ. ಹಣ, ಸರಿಯಾದ ಅಳತೆ, ಹಸು, ಎತ್ತು, ಕೃಷಿ ಸಲಕರಣೆ, ಬಿತ್ತನೆ ಬೀಜ, ನೀರಿನ ವ್ಯವಸ್ಥೆ ಯಾವುದೂ ಇಲ್ಲದೇ, ಅರ್ಧ, ಒಂದು, ಎರಡು ಎಕರೆ ಭೂಮಿಯನ್ನಿಟ್ಟುಕೊಂಡಿರುವ ಚಿಕ್ಕ ಹಿಡುವಳಿದಾರರಿರುವುದೇ ನಮ್ಮ ದೇಶದಲ್ಲಿರುವ ಸಮಸ್ಯೆ. ಆದರೂ ಅವರೇ ಭೂ ಒಡೆಯರು, ಭೂ ಹಿಡುವಳಿದಾರರು. ಇದೇ ರೀತಿ ಕೃಷಿ ವ್ಯವಸ್ಥೆ ಮುಂದುವರಿದರೆ, ದೇಶದ ಆಹಾರ ಉತ್ಪಾದನೆಯ ಗತಿ ಏನು? ದೇಶದ ಸ್ಥಿತಿ ಏನಾಗುತ್ತದೆ ಎಂದು ಭವಿಷ್ಯದ ಬಗ್ಗೆ ಗಾಬರಿ ಮೂಡುತ್ತದೆ. ದೇಶವು ಈ ಎಲ್ಲ ಸ್ವತ್ತನ್ನು ತನ್ನ ವಶಕ್ಕೆ ತೆಗೆದುಕೊಂಡು, ಎಲ್ಲವೂ ದೇಶದ ಸ್ವತ್ತು ಎಂದಿಟ್ಟುಕೊಂಡು, ರೈತರಿಗೆ ಖಾಯಂ ಗೇಣಿ ನೀಡುವ ವ್ಯವಸ್ಥೆ ಮಾಡಿ, ಸಾಮಗ್ರಿಗಳನ್ನು ಒದಗಿಸುವ ಮೂಲಕ ಸಾಮುದಾಯಿಕ ಅಥವಾ ಸಹಕಾರಿ ಕೃಷಿ ಮಾಡುವ ಹಕ್ಕು ಹೊಂದಿದ್ದರೆ ಒಳಿತಾಗುತ್ತಿತ್ತು. ಆದರೆ, ನಮ್ಮ ದೇಶದಲ್ಲಿ ಭೂರಹಿತ ಕಾರ್ಮಿಕರ ಸಂಖ್ಯೆಯೇ ಹೆಚ್ಚು, ಅದು ೫ ಕೋಟಿಯನ್ನೂ ಮೀರಬಹುದು. ನೀವು ಈ ಕಾನೂನು ಮಾಡಿ ಭೂಮಿಯನ್ನು ಉಳುವವನನ್ನು ಅದರ ಒಡೆಯನನ್ನಾಗಿ ಮಾಡಿ ಈ ಭೂರಹಿತ ಕಾರ್ಮಿಕರ ಒಳಿತಿಗೆ ಏನು ಏರ್ಪಾಡು ಮಾಡುವಿರಿ? ಜಮೀನ್ದಾರರ ರದ್ದಿಯಾತಿಯಾದರೂ ಅವರು ಮಾತ್ರ ಹಾಗೆ ಇರುತ್ತಾರೆ. ಆದ್ದರಿಂದ ಈಗ ಮಾಡುತ್ತಿರುವುದರ ಬಗ್ಗೆ ನನಗೆ ಸಮಾಧಾನವಿಲ್ಲ. ಅದು ಬೇರೆಯೇ ಪ್ರಶ್ನೆ. ಆದರೆ ಈಗ ನಮ್ಮ ಮುಂದಿರುವ ಪ್ರಶ್ನೆ–ಮಧ್ಯವರ್ತಿಗಳನ್ನು ಹಾಗೆ ಮುಂದುವರಿಯಲು ಬಿಡಬೇಕೆ? ಸರಿಯಾದ ಪರಿಹಾರವನ್ನು ನೀಡಿಲ್ಲ, ಅಥವಾ ತಾರತಮ್ಯವನ್ನು ಮಾಡಲಾಗಿದೆಯೆಂಬ ಕಾರಣವನ್ನು ತೋರಿಸಿ, ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದಾರೆಂದು ಮಾಡುವ ಮೂಲ ಅಹವಾಲಿಗೆ ಕಿವಿಗೊಡದೆ ಮಧ್ಯವರ್ತಿಗಳನ್ನು ವ್ಯವಸ್ಥೆಯಿಂದ ತೆಗೆದುಹಾಕಬೇಕೆಂಬುದರ ಬಗೆಗೆ ಯಾವುದೇ ವಿವಾದವೂ ಇಲ್ಲವೆಂದು ನಾನು ಭಾವಿಸುತ್ತೇನೆ. ಪಶ್ಚಿಮ ಬಂಗಾಳ ಸರ್ಕಾರದಿಂದ ದೊರೆತ ಒಂದು ಸ್ವಾರಸ್ಯ ಪೂರ್ಣಪತ್ರ ನನ್ನ ಬಳಿ ಇದೆ. ಬಂಗಾಲದ ಜಮೀನ್ದಾರಿಯ ಸಮಾಪನಕ್ಕಾಗಿ ಫ್ಲೌಡ್ ಆಯೋಗ ರಚನೆಯಾದದ್ದು ಮಾನ್ಯ ಸದಸ್ಯರಿಗೆ ನೆನಪಿರಬಹುದು. ಆ ಆಯೋಗದ ವರದಿಯನ್ನಾಧರಿಸಿ ಬಂಗಾಲ ಸರ್ಕಾರವು ಫ್ಲೌಡ್ ಆಯೋಗದ ಶಿಫಾರಸುಗಳ ಜಾರಿಗೆ ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಿತು. ಆತ ನೀಡಿದ ವರದಿಯ ಪ್ರತಿ ನನಗೆ ದೊರೆತಿದೆ. ಅದನ್ನು ಪೂರ್ತಿಯಾಗಿ ಓದಲು ಈಗ ಕಾಲ ಕೂಡಿಬಂದಿದೆ. ಆತ ಹೇಳಿರುವಂತೆ ಸಮಾನ ಪರಿಹಾರ ಎಂಬುದು ತಪ್ಪು. ಅದು ಆಡಳಿತಾತ್ಮವಾಗಿ ಸುಗಮವಾದರೂ ನ್ಯಾಯೋಚಿತವಲ್ಲ. ಆತ ಗುರುತಿಸಿರುವ ಪರಿಹಾರ ಯೋಜನೆ ಸ್ವಾರಸ್ಯಪೂರ್ಣವಾಗಿದೆ. ಇದು ಶ್ರೇಣಿಕೃತ ಪರಿಹಾರ ೨೦೦೦ ರೂ. ವರೆಗಿನ ಲಾಭವಾದಲ್ಲಿ, ನಿವ್ವಳ ಲಾಭದ ೧೫ ಪಟ್ಟು ಪರಿಹಾರವಿರಬೇಕು. ೨೦೦೦ ರೂ.ಗಳಿಂದ ೫೦೦೦ರೂ.ಗಳವರೆಗೆ ೧೨ ಪಟ್ಟು

ಆದರೆ ಗರಿಷ್ಠ ಮೊತ್ತವು ಹಿಂದಿನ ಶ್ರೇಣಿಗೆ ನೀಡುವುದಕ್ಕಿಂತ ಕಡಿಮೆ ಇರಬಾರದು. ೫೦೦೦ ರೂ.ಗಳಿಂದ ೧೦,೦೦೦ ರೂ.ಗಳವರೆಗೆ, ಪರಿಹಾರವು ೧೦ ಪಟ್ಟು ಇದ್ದು, ೨೦೦೦ ರೂ.ಗಳಿಂದ ೫೦೦೦ ರೂ. ಗಳವರೆಗಿನ ಪ್ರವರ್ಗದ ಗರಿಷ್ಠ ಮೊತ್ತಕ್ಕಿಂತ ಕಡಿಮೆ ಇರಬಾರದು. ೧೦,೦೦೦ರೂ. ಲಾಭಕ್ಕೆ ೮ ಪಟ್ಟು ಪರಿಹಾರವಿದ್ದು, ಅದು ಕೊನೆಯಲ್ಲಿ ತಿಳಿಸಿದ ಪ್ರವರ್ಗದ ಗರಿಷ್ಠ ಮೊತ್ತಕ್ಕಿಂತ ಕಡಿಮೆ ಇರಬಾರದು. ಇದೆಲ್ಲ ಶ್ರೇಣೀಕೃತ ವ್ಯವಸ್ಥೆ. ಆದರೆ ಇದರಿಂದ ನಾವು ಗೊಂದಲಕ್ಕೊಳಗಾಗಬಾರದು. ಕೃಷಿಯಲ್ಲಿ ಅಭಿವೃದ್ಧಿಯಾಗಬೇಕಾದರೆ ಮಧ್ಯವರ್ತಿಗಳ ವ್ಯವಸ್ಥೆ ಮುಕ್ತಾಯವಾಗಬೇಕು. ಜಮೀನ್ದಾರಿ ಹಕ್ಕುಗಳ ಅರ್ಜನೆಗೆ ಪರಿಹಾರ ನೀಡುವುದಕ್ಕೆ ಮೂಲ ಅನುಚ್ಛೇದ ವಿನಾಯತಿ ನೀಡಿತ್ತು. ತಾರತಮ್ಯದಿಂದ ವಿನಾಯತಿ ನೀಡುವ ಬಗ್ಗೆ ಈಗ ನೋಡೋಣ. ಎಸ್ಟೇಟ್‌ಗಳ ವಶಕ್ಕೆ ಹೊಸ ಕಾನೂನು ಇರುವಾಗ ೩೧ನೇ ಅನುಚ್ಛೇದ ಏಕೆ ಕಾರ್ಯಾಚರಣೆಯಲ್ಲಿರಬೇಕು?

**ಶ್ರೀ ಶಿವಚರಣ ಲಾಲ್:** ತಾರತಮ್ಯ ಕುರಿತ ೧೪ನೇ ಅನುಚ್ಛೇದದ ಕುರಿತು ಏನು ಹೇಳುತ್ತೀರಿ?

**ಡಾ.ಅಂಬೇಡ್ಕರ್:** ಇಡೀ ಅಧ್ಯಾಯವನ್ನು ಕಾರ್ಯಾಚರಣೆಯಿಂದ ತೆಗೆದುಹಾಕಲಾಗಿದೆ.

**ಶ್ರೀಮತಿ ರೇಣುಕಾ ರೇ (ಪಶ್ಚಿಮ ಬಂಗಾಲ):** ಮಾನ್ಯ ಸಚಿವರು ಅಷ್ಟು ದೂರ ಹೋಗಲು ಸಿದ್ಧರಿರುವುದಾದರೆ ಇನ್ನಷ್ಟು ಏಕೆ ಹೋಗಬಾರದು?

**ಡಾ.ಅಂಬೇಡ್ಕರ್:** ನಾನು ಅಷ್ಟೊಂದು ಕ್ರಾಂತಿಕಾರಿ ಅಲ್ಲ.

**ಶ್ರೀಮತಿ ರೇಣುಕಾ ರೇ:** ರಾಜ್ಯವು ಭೂಮಿಯನ್ನು ತನ್ನ ವಶಕ್ಕೆ ಪಡೆದುಕೊಳ್ಳಬೇಕೆಂದು ನೀವೇ ಸೂಚಿಸಿದಿರಲ್ಲವೇ?

**ಡಾ.ಅಂಬೇಡ್ಕರ್:** ಹೌದು ನಾನು ಪ್ರಗತಿಪರ.

ಈಗ ನಾನು ೩೧ಬಿ ಅನುಚ್ಛೇದವನ್ನು ಕೈಗೆತ್ತಿಕೊಳ್ಳುತ್ತೇನೆ. ಈ ಅನುಚ್ಛೇದವು ೯ನೇ ಅನುಸೂಚಿಯಲ್ಲಿನ, ಕೆಲ ಅಂಗೀಕೃತ ಕಾನೂನುಗಳ ಬಗ್ಗೆ ತಿಳಿಸುತ್ತದೆ. ಇದು ಅಸಾಮಾನ್ಯ ಕ್ರಮವೆಂದು ಆಕ್ಷೇಪಿಸಲಾಗಿದೆ. ಮೇಲ್ನೋಟಕ್ಕೆ ಇದು ಅಸಾಮಾನ್ಯ ಕ್ರಮ. ಆದರೆ ಇದನ್ನು ಮತ್ತೊಂದು ದೃಷ್ಟಿಯಿಂದ ನೋಡೋಣ. ಈ ಕಾನೂನುಗಳು ಏನು? ೯ನೇ ಅನುಸೂಚಿಯಿಂದ ರಕ್ಷಿತವಾಗುವ ಈ ಕಾನೂನುಗಳನ್ನು ಯಾವ ತತ್ವಗಳ ಮೇಲೆ ಮಾಡಲಾಗಿದೆ? ಈ ಅನುಸೂಚಿಯ ಮೂಲಕ ರಕ್ಷಿತವಾದ ಕಾನೂನುಗಳು ೩೧ಎ ಅನುಚ್ಛೇದದಡಿ ಬರುತ್ತವೆ. ಎಂದರೆ ಇವುಗಳ ಉದ್ದೇಶ ಎಸ್ಟೇಟ್‌ಗಳ ವಶ. ಒಂದು ಎಸ್ಟೇಟ್‌ನ್ನು ವಶಕ್ಕೆ ತೆಗೆದುಕೊಳ್ಳಲು ಒಂದು ಕಾನೂನು ಮಾಡಿದಾಗ ಪರಿಹಾರದ ತತ್ವವಾಗಲೀ. ತಾರತಮ್ಯದ ತತ್ವವಾಗಲೀ ಅದರ ಊರ್ಜಿತತೆಗೆ ಅಡ್ಡಿಯಾಗಬಾರದು. ಭಾವನಾತ್ಮಕವಾಗಿ ಆಕ್ಷೇಪಣೆ ಇರಬಹುದು. ಆದರೆ, ಪ್ರಾಯೋಗಿಕ ದೃಷ್ಟಿಯಿಂದ ನಾವೇಕೆ ಅವುಗಳನ್ನು ಊರ್ಜಿತ ಶಾಸನಗಳ ಭಾಗಗಳೆಂದು ಘೋಷಿಸಬಾರದು?

**ಶ್ರೀ ನಾಸಿರುದ್ದೀನ್ ಅಹಮದ್:** ಅವು ನಿರುಪಯುಕ್ತ ಕಾನೂನುಗಳು, ಅವುಗಳನ್ನು ಸಿಂಧುವೆಂದು ಘೋಷಿಸಬೇಕೇ?

**ಶ್ರೀ ಶ್ಯಾಮಾನಂದನ ಸಹಾಯ್ (ಬಿಹಾರ್):** ಈಗ ಊರ್ಜಿತತೆ ಪಡೆಯಬೇಕಾದ ಕಾನೂನುಗಳಲ್ಲಿ ಭೂ ಸುಧಾರಣಾ ಕಾನೂನುಗಳು ಮಾತ್ರ ಸೇರುತ್ತವೆಯೇ? ಅಥವಾ ಸ್ವತ್ತು ವರ್ಗಾವಣೆ ಅಧಿನಿಯಮ ಮತ್ತು ಇತರ ಅಧಿನಿಯಮದಂಥ ಕಾನೂನುಗಳ ಹಸ್ತಕ್ಷೇಪವಿರುವುದೇ? ಸರ್ಕಾರ ಈ ಬಗ್ಗೆ ತನಿಖೆ ಮಾಡಿದೆಯೇ?

**ಡಾ.ಅಂಬೇಡ್ಕರ್:** ಈ ಬಗ್ಗೆ ನಾನು ಬಿಚ್ಚು ಮನಸ್ಸಿನಿಂದ ಹೇಳುತ್ತೇನೆ. ಈ ಕಾನೂನುಗಳ ಪರಿಷ್ಕರಣೆಗೆ

ಹಾಗೂ ಮರು ರಚನೆಗೆ ಹಾಗೂ ೩೧ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಇರುವಂತೆ ಮಾಡುವುದಕ್ಕೆ ರಾಷ್ಟ್ರಾಧ್ಯಕ್ಷರಿಗೆ ಪೂರ್ಣ ಅಧಿಕಾರ ನೀಡುವುದು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ್:** ಕೆಲವು ಕಾನೂನುಗಳನ್ನು ರಾಷ್ಟ್ರಾಧ್ಯಕ್ಷರು ದೃಢೀಕರಿಸಿದರೆ ಅವು ಊರ್ಜಿತವಾಗುವವೆಂದು ೩೧ನೇ ಅನುಚ್ಛೇದದಡಿ ನಿರ್ಧರಿಸಿದ್ದೆವು. ಈ ಭದ್ರತೆಯನ್ನು ತೆಗೆದುಹಾಕಲಾಗಿದೆ.

**ಡಾ.ಅಂಬೇಡ್ಕರ್:** ಅದಕ್ಕೆ ಕಾರಣ ಇದು. ಈ ಎಲ್ಲಾ ಅಧಿನಿಯಮಗಳ ಪ್ರತಿ ಪ್ರಕರಣವನ್ನೂ ನಾವು ಇಲ್ಲಿ ಕುಳಿತು ಪರೀಕ್ಷಿಸಿ, ಅವುಗಳು ತಮ್ಮ ಮೂಲ ಉದ್ದೇಶದಿಂದ ದೂರಸರಿದಿಲ್ಲವೆಂಬ ಬಗ್ಗೆ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದರೆ ಇದರಿಂದ ಕಾನೂನು, ಆಹಾರ ಮತ್ತು ಕೃಷಿ ಹಾಗೂ ಇತರ ಮಂತ್ರಾಲಯಗಳ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ. ಇದು ಅಸಾಧ್ಯ.

**ಶ್ರೀ ಕಾಮತ್:** ಇದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿ.

**ಡಾ.ಅಂಬೇಡ್ಕರ್:** ಅದರಿಂದ ವಿಧೇಯಕವನ್ನು ಮುಂದೂಡಬೇಕಾಗುತ್ತದೆ.

೮೫ನೇ ಅನುಚ್ಛೇದದ ತಿದ್ದುಪಡಿ ಕೋರುವ ೬ನೇ ಖಂಡಕ್ಕೆ ಬರುತ್ತೇನೆ. ೮೫ನೇ ಅನುಚ್ಛೇದದಲ್ಲಿ "ಸಮನ್" ಎಂಬ ಪದವನ್ನು ಬಳಸಲಾಗಿದೆ. ಇದರಿಂದ ತುಸು ತೊಂದರೆ ಉಂಟಾಗಿದೆ. ಏಕೆಂದರೆ ಸಮನ್ ಎಂಬುದಕ್ಕೆ ತಾಂತ್ರಿಕ ಅರ್ಥವಿದೆ. ಎಂದರೆ ಸಂಸತ್ತನ್ನು ಮುಂದೂಡಿದ ಅಥವಾ ವಿಸರ್ಜಿಸಲಾದ ತರುವಾಯ ಅದು ಮತ್ತೆ ಸೇರುವ ಪ್ರಕ್ರಿಯೆ. ಅಲ್ಪ ಕಾಲಕ್ಕೆ ಮುಂದೂಡಿದ ನಂತರ ಸಂಸತ್ತು ಸೇರುವ ಸಂದರ್ಭ ಇದರಲ್ಲಿ ಸೇರುವುದಿಲ್ಲ. ಎಂದರೆ ಕಾಲಕಾಲಕ್ಕೆ ಮುಂದೂಡಿದ ತರುವಾಯ ಸಂಸತ್ತು ಇಡೀ ವರ್ಷ ಸೇರಿದ್ದರೂ, ಒಮ್ಮೆ ಮಾತ್ರ "ಸಮನ್" ಎನ್ನಬಹುದೇ ಹೊರತು ಎರಡು ಬಾರಿ ಅಲ್ಲ. ಹೊಸ ಅಧಿವೇಶನದ ಕಾರಣಕ್ಕಾಗಿ ಸಮಾಪ್ತಗೊಂಡಿರಬಹುದು. ಈ ತೊಂದರೆಯನ್ನು ನಿವಾರಿಸಬೇಕೆಂದು ಮನಗಂಡು, ಅದರ ಮೊದಲ ಭಾಗವನ್ನು ತೆಗೆದುಹಾಕಲಾಗಿದೆ. ಸಂಸತ್ತಿನ ಪ್ರಸಕ್ತ ಅಧಿವೇಶನವು ಮುಕ್ತಾಯವಾದಾಗ ಹೊಸ ಅಧಿವೇಶನವು ಆರು ತಿಂಗಳೊಳಗಾಗಿ ಸೇರಬೇಕೆಂಬ ಉಪಬಂಧವನ್ನು ಉಳಿಸಿಕೊಳ್ಳಲಾಗಿದೆ. ಹೊಸ ಹಾಗೂ ಹಳೆ ಅನುಚ್ಛೇದಗಳಲ್ಲಿನ ವ್ಯತ್ಯಾಸವೇನೆಂದರೆ "ಸಮನಿಂಗ್" ಎಂಬುದನ್ನು ಪರ್ಯಾಯಗೊಳಿಸಿ, ಸಂಸತ್ತನ್ನು ಒಂದು ಬಾರಿ ಸಮನ್ ಮಾಡಿದರೆ, ಕಾಲಕಾಲಕ್ಕೆ ಅಲ್ಪಕಾಲದವರೆಗೆ ಮುಂದೂಡಿ ಮತ್ತೆ ಮುಂದುವರಿಸಬಹುದಾಗಿದೆ.

(೨)ನೇ ಖಂಡದ ತೊಂದರೆ ಏನೆಂದರೆ, ಎರಡೂ ಸದನಗಳನ್ನು ಏಕಕಾಲಕ್ಕೆ ಸಮಾಪ್ತಿಗೊಳಿಸಬೇಕೆಂಬುದು ಕೆಲವರ ಕೇಳಿಕೆಯಾಗಿತ್ತು. ಆದರೆ ಅದು ಸಂವಿಧಾನದ ಇಂಗಿತವಾಗಿರಲಿಲ್ಲ. ಎರಡೂ ಸದನಗಳು ಬೇರೆ ಬೇರೆ ಕಾಲದಲ್ಲಿ ಸೇರಿ ಬೇರೆ ಬೇರೆ ಕಾಲದಲ್ಲಿ ಮುಕ್ತಾಯಗೊಳ್ಳಬಹುದಾಗಿದೆ. ಇದನ್ನು ಸಾಧ್ಯಗೊಳಿಸಲು (೨)ನೇ ಖಂಡವನ್ನು ತಿದ್ದುಪಡಿಮಾಡಲಾಗಿದೆ.

೮೭ನೇ ಅನುಚ್ಛೇದದಲ್ಲಿ ೭ನೇ ಖಂಡದ ತಿದ್ದುಪಡಿಯನ್ನು ಪ್ರಸ್ತಾವಿಸಲಾಗಿದೆ. ಈ ಹಳೆಯ ಅನುಚ್ಛೇದದಲ್ಲಿ ಸಂಸತ್ತನ್ನು ಕರೆದಾಗಲೆಲ್ಲ ರಾಷ್ಟ್ರಾಧ್ಯಕ್ಷರು ಸಂಸತ್ತನ್ನು ಉದ್ದೇಶಿಸಿ ಮಾತನಾಡುವ ಉಪಬಂಧವಿತ್ತು. ಈಗ ಸಂಸತ್ತನ್ನು ಒಂದು ಬಾರಿ ಮಾತ್ರ ಸಮನ್ ಮಾಡಿ, ಅದು ಸಮಾಪನ ಅಥವಾ ಮುಂದೂಡುವಿಕೆಯ ಮೂಲಕ ಮುಂದುವರಿಯುವುದರಿಂದ ಈ ಉಪಬಂಧವನ್ನುಳಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಅಂತೆಯೇ..............

**ಶ್ರೀ ಕಾಮತ್:** ಸಮಾಪ್ತಿಯ ನಂತರ ಹೇಗೆ ಮುಂದುವರಿಯುತ್ತದೆ?

**ಡಾ.ಅಂಬೇಡ್ಕರ್:** ಅದು ಸಮಾಪನಗೊಂಡರೆ ಸಮನ್ ಮಾಡಬೇಕಾಗುತ್ತದೆ. ಎರಡು ಬಾರಿ ಸಮನ್ ಮಾಡಿದರೆ ಒಮ್ಮೆ ಮಾತ್ರ ರಾಷ್ಟ್ರಾಧ್ಯಕ್ಷರು ಸಂಸತ್ತನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ಚರ್ಚೆ ಕುರಿತಂತೆ ಹೇಳುವುದಾದರೆ ಚರ್ಚೆಗೆ ಕಾಲಾವಕಾಶ ನೀಡಬಾರದೆಂಬುದಿಲ್ಲ. ಆದರೆ ತುರ್ತು ವ್ಯವಹಾರಗಳ ಕಾರಣದಿಂದಾಗಿ ಅದನ್ನು ಬಿಡಲಾಗಿದೆ.

**ಶ್ರೀ ಶ್ಯಾಂನಂದನ ಸಹಾಯ್:** ರಾಷ್ಟ್ರಾಧ್ಯಕ್ಷರು ಸದನವನ್ನುದ್ದೇಶಿಸಿ ಮಾತನಾಡಬಯಸಿದರೆ ಅವರಿಗೆ ತಡೆ ವಿಧಿಸಿದಂತಾಗುವುದಿಲ್ಲವೆ?

**ಡಾ.ಅಂಬೇಡ್ಕರ್:** ಈಗ ನಾನು ೩೪೧ ಹಾಗೂ ೩೪೨ನೇ ಅನುಚ್ಛೇದಗಳಿಗೆ ಬರುತ್ತೇನೆ. ಭಾಗ ಎ ಮತ್ತು ಭಾಗ–ಬಿ ರಾಜ್ಯಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆದೇಶಗಳನ್ನು ಹೊರಡಿಸುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗಷ್ಟೇ ಇರುತ್ತದೆ. ಭಾಗ–ಸಿಯ ರಾಜ್ಯಗಳ ಸಂಬಂಧದಲ್ಲಿ ಅಂಥ ಆದೇಶಗಳನ್ನು ಹೊರಡಿಸುವ ಅಧಿಕಾರ ಸಂಸತ್ತಿಗಿರುತ್ತದೆ. ಈಗ ಈ ಸ್ಥಿತಿಯನ್ನು ಬದಲಿಸಿ ಭಾಗ–ಸಿಯ ಸಂಬಂಧದಲ್ಲಿ ಅಂಥ ಆದೇಶಗಳನ್ನು ಹೊರಡಿಸುವ ಅಧಿಕಾರವನ್ನು ರಾಷ್ಟ್ರಾಧ್ಯಕ್ಷರಿಗೇ ನೀಡಲಾಗಿದೆ.

ಸಂವಿಧಾನದ ಉಪಬಂಧಗಳಿಗನುಸಾರವಾಗಿರುವಂತೆ ಈಗಿರುವ ಕಾನೂನುಗಳಲ್ಲಿ ಸೇರ್ಪಡೆಗಳನ್ನು ಮಾಡುವ ಅಧಿಕಾರವನ್ನು ಅನುಚ್ಛೇದ ೩೭೨ ರಾಷ್ಟ್ರಾಧ್ಯಕ್ಷರಿಗೆ ನೀಡುತ್ತದೆ. ಈ ಅಧಿಕಾರ ೨ ವರ್ಷಗಳವರೆಗೆ ಮಾತ್ರವಿರುತ್ತದೆ. ಇತರ ಕಾರ್ಯಕಲಾಪಗಳ ಒತ್ತಡದಿಂದಾಗಿ ಈಗಿರುವ ಎಷ್ಟು ಕಾನೂನುಗಳು ಸಂವಿಧಾನದ ಉಪಬಂಧಗಳಿಗೆ ಅಸಂಗತವಾಗಿವೆಯೇ ಎಂಬುದನ್ನು ಪರೀಕ್ಷಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಈಗಿರುವ ಕಾನೂನುಗಳು ಸಂವಿಧಾನಕ್ಕನುಸಾರವಾಗಿರುವಂತೆ ಅಳವಡಿಕೆಗಳನ್ನು ಮಾಡಲು ರಾಷ್ಟ್ರಾಧ್ಯಕ್ಷರಿಗಿರುವ ಅಧಿಕಾರವನ್ನು ಇನ್ನೊಂದು ವರ್ಷಕ್ಕೆ ವಿಸ್ತರಿಸಿದರೆ ಅಸಂಗತವಿರುವ ಕಾನೂನುಗಳನ್ನು ಹುಡುಕಿ ಅಳವಡಿಕೆಗಳನ್ನು ಮಾಡಿ ತರುವಾಯದಲ್ಲಿ ಒಂದು ಸಂಚಿತ ಆದೇಶವನ್ನು ಹೊರಡಿಸಬಹುದು.

**ಶ್ರೀ ಕಾಮತ್:** ಹೊಸ ಸಂವಿಧಾನದ ಅಡಿ ಸಂಸತ್ತು ಚುನಾಯಿತವಾದ ತರುವಾಯ ರಾಷ್ಟ್ರಾಧ್ಯಕ್ಷರು ಈ ಅಧಿಕಾರವನ್ನು ಚಲಾಯಿಸುವಂತಿಲ್ಲವೆಂದು ಅನುಚ್ಛೇದದಲ್ಲಿ ಉಪಬಂಧಿಸಲಾಗಿದೆ.

**ಡಾ.ಅಂಬೇಡ್ಕರ್:** ಈ ಅನುಚ್ಛೇದ ಆ ಅಧಿಕಾರವನ್ನು ಕೊಟ್ಟರೆ, ಅದಕ್ಕೆ ಹೆಚ್ಚಿನ ಅಧಿಕಾರವಿರುತ್ತದೆ.

**ಶ್ರೀ ಕಾಮತ್:** ಅದು ಹೇಗೆ?

**ಡಾ.ಅಂಬೇಡ್ಕರ್:** ನಾನು ಈಗ ೩೭೬ನೇ ಅನುಚ್ಛೇದದ ೧೩ನೇ ಖಂಡಕ್ಕೆ ಬರುತ್ತೇನೆ. ಈ ಖಂಡದ ಕುರಿತು ಬಹಳ ಆಕ್ಷೇಪಣೆಯಿತ್ತು. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ನ್ಯಾಯಾಧೀಶ ಹುದ್ದೆಗೆ ಭಾರತದ ಪ್ರಜೆಯಲ್ಲದ ವ್ಯಕ್ತಿ ನೇಮಕಗೊಳ್ಳುವುದಕ್ಕೆ ಈ ಖಂಡ ಸಂಬಂಧಿಸಿದೆ. ವಿಷಯ ಹೀಗಿದೆ: ೨೧೭ನೇ ಅನುಚ್ಛೇದದ (೨)ನೇ ಖಂಡದ ಮೇರೆಗೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಭಾರತದ ಪ್ರಜೆಯಾಗಿರಬೇಕು. ೩೭೬ನೇ ಅನುಚ್ಛೇದದಲ್ಲಿ ಉಪಬಂಧಿಸಲಾಗಿರುವಂತೆ ಸಂವಿಧಾನವು ಜಾರಿಗೊಂಡ ದಿನದಂದು ಭಾರತದ ಪ್ರಜೆಯಾಗಿರದ ನ್ಯಾಯಾಧೀಶರು ಸೇರಿದಂತೆ ಈಗಿರುವ ನ್ಯಾಯಾಧೀಶರು ಬಯಸಿದರೆ ನ್ಯಾಯಾಧೀಶರಾಗಿ ಮುಂದುವರಿಯಬಹುದು. ಸಂವಿಧಾನವು ಜಾರಿಗೊಂಡ ದಿನಾಂಕದಂದು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ನಾಲ್ವರು ಭಾರತದ ಪ್ರಜೆಗಳಲ್ಲ. ಅವರು ತಮ್ಮ ಹುದ್ದೆಗಳಲ್ಲಿ ಇರಬಯಸಿದರು, ನಿವೃತ್ತರಾಗಲಿಲ್ಲ. ಆದ್ದರಿಂದ ಅವರನ್ನು ೩೭೬ನೇ ಅನುಚ್ಛೇದದಡಿ ಇರಿಸುವುದು ನಮ್ಮ ಬದ್ಧತೆಯಾಯಿತು. ಆದರೆ ಪ್ರಶ್ನೆ ಏನೆಂದರೆ ಅಂಥ ವ್ಯಕ್ತಿಯನ್ನು ಆತ ಕೆಲಸ

ಮಾಡುತ್ತಿರುವ ಅಥವಾ ಬೇರೆ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಿ ನೇಮಿಸಬಹುದು? ಎರಡನೆಯದಾಗಿ ಅಂಥ ನ್ಯಾಯಾಧೀಶನನ್ನು ಬೇರೆ ನ್ಯಾಯಾಲಯಕ್ಕೆ ವರ್ಗಾಯಿಸಬಹುದೇ? ನ್ಯಾಯಮೂರ್ತಿಯಾಗಿ ನೇಮಿಸುವುದು ಅಥವಾ ಒಂದು ಉಚ್ಚ ನ್ಯಾಯಾಲಯದಿಂದ ಇನ್ನೊಂದು ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸುವುದು ಹೊಸ ನೇಮಕಾತಿಯೇ? ಹಾಗೆ ಹೊಸ ನೇಮಕಾತಿ ಎಂದಾದರೆ ೨೧೭ (೨)ನೇ ಅನುಚ್ಛೇದದ ಉಪಬಂಧಗಳು ಅನ್ವಯವಾಗುತ್ತದೆ. ಇದೊಂದು ದೊಡ್ಡ ಅಡ್ಡಿಯಾಯಿತು. ಏಕೆಂದರೆ ಸಂಸತ್ತು ಅವರ ಭವಿತವ್ಯಕ್ಕೆ ತಡೆಯೊಡ್ಡಿ ಕೇವಲ ಮುಂದುವರಿಸಲು ಬಯಸಿತು ಎಂದು ಭಾವಿಸಲಾಗದು. ತತ್ಪರಿಣಾಮವಾಗಿ ರಾಷ್ಟ್ರಾಧ್ಯಕ್ಷರು ತೊಂದರೆ ನಿವಾರಣೆಗಾಗಿ ೩೯೨ (೧)ನೇ ಅನುಚ್ಛೇದದಡಿ ತಮ್ಮಲ್ಲಿ ನಿಹಿತವಾದ ಅಧಿಕಾರದ ಮೇರೆಗೆ ಸ್ಥಾನಮಾನವನ್ನು ಸಕ್ರಮಗೊಳಿಸಿ ಆದೇಶ ಹೊರಡಿಸಿದರು. ಕೆಲವು ಕಡೆ ಅದನ್ನು ರಾಷ್ಟ್ರಾಧ್ಯಕ್ಷರ ಅಧಿಕಾರ ಮೀರಿದ್ದು ಅದರಲ್ಲೇನೂ ತೊಂದರೆಯಿಲ್ಲ ಎಂದು ಅದರ ವಿರುದ್ಧ ಪ್ರಶ್ನಿಸಲಾಯಿತು. ಈ ಎಲ್ಲ ಸಂದೇಹಗಳ ನಿವಾರಣೆಗಾಗಿ ಸಂವಿಧಾನದಲ್ಲಿ ಒಂದು ಉಪಬಂಧವನ್ನು ಕಲ್ಪಿಸುವುದು ಒಳಿತೆಂದೂ ಭಾವಿಸಿ ೧೩ನೇ ಖಂಡವನ್ನು ವಿಧೇಯಕದಲ್ಲಿ ಸೇರಿಸಲಾಗಿದೆ.

**ಅಧ್ಯಕ್ಷರು:** ವರ್ಗಾವಣೆಯ ವಿಷಯ ಮೂಲದಲ್ಲಿ ಇರಲಿಲ್ಲವೇ? ಈ ಖಂಡದಿಂದ ಹೊಸ ಸ್ಥಿತಿ ನಿರ್ಮಾಣವಾಯಿತೇ? ಮಾನ್ಯ ಸಚಿವರು, ವಿವರಿಸುವರೇ?

**ಡಾ.ಅಂಬೇಡ್ಕರ್:** ೩೭೬ನೇ ಅನುಚ್ಛೇದದ ಉದ್ದೇಶ ಅದೇ ಎಂಬುದನ್ನೇ ನಾನು ಹೇಳುತ್ತಿದ್ದೇನೆ. ಒಂದು ಬಾರಿ ಅದನ್ನು ಅನುಸರಿಸಿದರೆ, ಎಂದರೆ ವರ್ಗಾವಣೆ ಅಥವಾ ಬಡ್ತಿ ಎಲ್ಲ ಉದ್ದೇಶಗಳಿಗೂ ಅದನ್ನು ಬಳಸಿಕೊಳ್ಳಲಾಯಿತು.

ಆದರೆ ಕೆಲವರಿಗೆ ಇದರಲ್ಲಿ ತೊಂದರೆ ಗೋಚರಿಸಿದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಇದರ ಹಿಂದಿನ ವಿಚಾರವೆಂದರೆ ಭಾರತೀಯನಲ್ಲದವನು ಮುಖ್ಯ ನ್ಯಾಯಮೂರ್ತಿಯಾಗಬಾರದು.

**ಡಾ.ಅಂಬೇಡ್ಕರ್:** ಕಾರಣ ಸ್ಪಷ್ಟವಾಗಿದೆ. ಒಬ್ಬ ವ್ಯಕ್ತಿಯನ್ನು ನ್ಯಾಯಾಧೀಶರೆಂದು ಒಪ್ಪಿಕೊಂಡರೆ ಅದು ನಿಮ್ಮ ಅನುಕೂಲದ ದೃಷ್ಟಿಯಿಂದ ಮತ್ತು ಅವರನ್ನು ಬೇರೆ ನ್ಯಾಯಾಲಯಕ್ಕೆ ವರ್ಗಾಯಿಸುವಂತಿರಬೇಕು. ಆದರೆ ಆತನನ್ನು ಬಡ್ತಿಯಿಂದ ವಂಚಿತಗೊಳಿಸಬಾರದು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ್:** ಭಾರತದ ಪ್ರಧಾನಮಂತ್ರಿ ಭಾರತದ ಪ್ರಜೆಯಾಗದಿದ್ದರೆ ಏನೆನಿಸುತ್ತದೆ?

**ಡಾ.ಅಂಬೇಡ್ಕರ್:** ನಾವು ಈ ನಾಲ್ಕು ಅಪರೂಪದ ಪ್ರಕರಣಗಳನ್ನು ನೋಡುತ್ತಿದ್ದೇವೆ. ಉಪಬಂಧ ಸ್ಪಷ್ಟವಿದ್ದು, ಈ ಬಗ್ಗೆ ಯಾರೂ ಜಗಳವಾಡುವುದಿಲ್ಲವೆಂಬ ನಂಬಿಕೆ ನನ್ನದು.

ಚರ್ಚೆಯ ಸಂದರ್ಭದಲ್ಲಿ ಎತ್ತಿದ ಎಲ್ಲ ಅಂಶಗಳಿಗೂ ಉತ್ತರಿಸಿದ್ದೇನೆ. ಏನಾದರೂ ಉಳಿದಿದ್ದರೆ, ವಿಧೇಯಕವನ್ನು ಖಂಡ ಖಂಡವಾಗಿ ಪರಿಶೀಲನೆಗೆ ಎತ್ತಿಕೊಂಡಾಗ, ಅದರ ಕುರಿತು ಹೇಳಲು ನಾನು ಸಿದ್ಧ.

# ಸಂವಿಧಾನ (ಮೊದಲನೇ ತಿದ್ದುಪಡಿ) ವಿಧೇಯಕ ೧೯೫೧

*ಶ್ರೀ ಜವಹರಲಾಲ್ ನೆಹರೂ:**......ಈಗ ಇದು ಸಂಪ್ರದಾಯವಾಗಿದೆ – ಶಾಸನಗಳ ಸಹವರ್ತಿ ಪಟ್ಟಿಯಲ್ಲಿ ಬರುವ ಯಾವುದೇ ಆದರೂ, ರಾಜ್ಯ ವಿಧಾನಮಂಡಲ ಅಂಗೀಕರಿಸಿದ ಯಾವುದೇ ಕಾನೂನು ರಾಷ್ಟ್ರಪತಿಯವರ ಪರಿಶೀಲನೆ ಮತ್ತು ಅನುಮೋದನೆಗಾಗಿ ಇಲ್ಲಿಗೆ ಬರಲೇಬೇಕು ಎಂಬ ವಿಷಯ ಈಗ ಸದ್ಯದಲ್ಲಿ ಇದು ಅದನ್ನು ಮೀರಿದುದೋ ಅಥವಾ ಸಂವಿಧಾನದಲ್ಲಿಯೇ ಅದಕ್ಕೆ ಅವಕಾಶವಿದೆಯೋ ಕೂಡಲೇ ನಾನು ಹೇಳಲಾರೆ   ಸರಿಯಲ್ಲವೇ?

**ಸನ್ಮಾನ್ಯ ಸದಸ್ಯರೊಬ್ಬರು** : ಈ ಸದನ ಕಾನೂನನ್ನು ಅಂಗೀಕರಿಸುವವರೆಗೆ ಹಾಗೆ ಬರುವುದಿಲ್ಲ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಅದು ಅಸಂಗತವಾಗಿದ್ದರೆ.

**ಸನ್ಮಾನ್ಯ ಸದಸ್ಯರು:** ಈ ಸದನ ಆ ಕಾನೂನನ್ನು ಅಂಗೀಕರಿಸುವವರೆಗೆ ಅಲ್ಲ.

**ಶ್ರೀ ಜವಹರಲಾಲ್ ನೆಹರೂ:** ನಾನು ಹೇಳಿದುದರ ಅರ್ಥವೆಂದರೆ, ಮೇಲ್ನೋಟಕ್ಕೆ ವೈರುಧ್ಯವಿದ್ದರೆ, ಆ ಕಾನೂನು ಜಾರಿಗೆ ಬರುವುದಿಲ್ಲ ಎಂಬುದು ವಿದಿತ. ಇದು ಸ್ಪಷ್ಟ. ಆದರೆ ವೈರುಧ್ಯವಿಲ್ಲ ಎಂಬುದನ್ನು ಪರಿಶೀಲಿಸಬೇಕಾದರೆ ಮತ್ತು ಶಾಸನಗಳ ಪಟ್ಟಿಗಳು ಇದನ್ನೇ ಅರ್ಥೈಸಿದೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾದರೆ, ಅದು ರಾಷ್ಟ್ರಪತಿಯವರ ಸಮ್ಮತಿಗಾಗಿ ಇಲ್ಲಿಗೆ ಬರುತ್ತದೆ. ಎಂದರೆ ಒಟ್ಟಾರೆಯಾಗಿ . . . .

**ಶ್ರೀ ಭಾರತಿ (ಮದರಾಸು):** ಬರಲೇಬೇಕೆಂದಿಲ್ಲ.

**ಶ್ರೀ ಜವಹರಲಾಲ್ ನೆಹರೂ**: ನಾನು ಬರಲೇಬೇಕೆಂದು ಹೇಳಲಿಲ್ಲ. ಎಂದರೆ ಕಾನೂನು ಜಾರಿಗೆ ಬರುವುದಿಲ್ಲ ಎಂಬರ್ಥದಲ್ಲಿ ಹೇಳಲಿಲ್ಲ. ಆದರೆ, ಇಂಥ ಪದ್ಧತಿ ಇದೆ ಮತ್ತು ಅದು ತಾನಾಗಿ ಬರುತ್ತದೆ ಎಂದು ನನಗೆ ತಿಳಿಸಲಾಗಿದೆ. ಮತ್ತು ಅಂಥ ಪ್ರತಿಯೊಂದು ಕಾನೂನೂ ಇಲ್ಲಿಗೆ ಬರಲೇಬೇಕಾಗುತ್ತದೆ. ಎಂದರೆ ಪ್ರತಿ ನಿತ್ಯವೂ ಅದು ಇಲ್ಲಿ ಮಂಡನೆಯಾಗುತ್ತದೆ. ಮೊದಲನೆಯದಾಗಿ ಪರಿಶೀಲನೆಗಾಗಿ ಗೃಹ ಮಂತ್ರಾಲಯಕ್ಕೆ ಮತ್ತು ಕಾನೂನು ಮಂತ್ರಾಲಯಕ್ಕೆ ಅಲ್ಲಿಯೂ ಪರಿಶೀಲನೆಗಾಗಿ ಕಳುಹಿಸಲಾಗುತ್ತದೆ ಮತ್ತು ನಂತರ ಅದನ್ನು ರಾಷ್ಟ್ರಪತಿಯವರಿಗೆ, ಅವರು ಅದಕ್ಕೆ ಅನುಮೋದನೆ ನೀಡುತ್ತಾರೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಕಳುಹಿಸಲಾಗುತ್ತದೆ. ಆದ್ದರಿಂದ, ವಿಶೇಷವಾಗಿ ಇಂಥ ವಿಷಯಗಳಿಗೆ ಸಂಬಂಧಪಟ್ಟಂತೆ ಅದು ಅನಿವಾರ್ಯವಾಗಿ ಇಲ್ಲಿಗೆ ಬರಲೇಬೇಕು. ಅಷ್ಟೇ ವಿಷಯಗಳಿಗೆ ಸಂಬಂಧಪಟ್ಟಂತೆ ಅದು ಅನಿವಾರ್ಯವಾಗಿ ಇಲ್ಲಿಗೆ ಬರಲೇಬೇಕು. ಅಷ್ಟೇ ಅಲ್ಲದೆ, ಸದನ ಇಚ್ಛಿಸಿದಲ್ಲಿ ರಾಷ್ಟ್ರಪತಿಯವರ ಸಮ್ಮತಿಯ ಬಗ್ಗೆ ಒಂದು ಖಂಡವನ್ನು ಅನುಚ್ಛೇದ ೧೯ ಕ್ಕೆ ಸೇರಿಸಲು ನನ್ನ ಸಂಪೂರ್ಣ ಸಮ್ಮತಿಯಿದೆ. ಈ ಬಗ್ಗೆ ಸದನ ನಿರ್ಧಾರ ಕೈಗೊಳ್ಳಬೇಕಾಗಿದೆ.

**ಡಾ. ಎಸ್.ಪಿ. ಮುಖರ್ಜಿ:. . . . ನಾನು ನನ್ನ ಆಸನವನ್ನು ಅಲಂಕರಿಸುವುದಕ್ಕೆ ಮುಂಚೆ,

---

* ಸಂ.ಚ. ಸಂಪುಟ ೧೨ ಭಾಗ II ೧೯೫೧ರ ಮೇ ೩೧ ಪುಟ ೯೬೧೦

** ಸಂ.ಚ. ಸಂಪುಟ ೧೨ ಭಾಗ ೨ ೧೯೫೧ರ ಜೂನ್ ೧ ಪುಟ ೯೮೬೦–೬೯

'ರಾಜ್ಯ' ಎಂಬ ಸ್ಥಳದಲ್ಲಿ 'ಸಂಸತ್ತು' ಎಂಬ ಪದವನ್ನು, ಪ್ರತಿಯೋಜಿಸುವ ಬಗ್ಗೆ ನಾನು ಮಂಡಿಸಿದ ಎರಡು ತಿದ್ದುಪಡಿಗಳ ಮುಖ್ಯ ಉದ್ದೇಶವನ್ನು ಅಥವಾ ಅದು ಸಾಧ್ಯವಿಲ್ಲದಿದ್ದರೆ ಈ ಸಂಬಂಧದಲ್ಲಿ ರಾಜ್ಯಗಳು ಅಂಗೀಕರಿಸುವ ಕಾನೂನುಗಳನ್ನು ರಾಷ್ಟ್ರಪತಿಯವರ ಸಮ್ಮತಿಗೆ ಒಳಪಡಿಸಬೇಕು ಎಂದಾದರೂ ಉಪಬಂಧ ಕಲ್ಪಿಸುವ ಬಗ್ಗೆ ಪರಿಗಣಿಸುವಂತೆ ಪ್ರಧಾನಮಂತ್ರಿಯವರನ್ನು ನಾನು ಮತ್ತೊಮ್ಮೆ ಕೋರುತ್ತೇನೆ. ಹಾಗೆ ಮಾಡಿದಲ್ಲಿ ನಮ್ಮ ದಾರಿಗೆ ಅಡ್ಡವಾಗಿರುವ ತೊಂದರೆಗಳನ್ನು ಸಾಕಷ್ಟು ಮಟ್ಟಿಗೆ ಅದು ನಿವಾರಿಸುತ್ತದೆ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಈ ಚರ್ಚೆಯಲ್ಲಿ ನಾನು ಮಧ್ಯ ಪ್ರವೇಶಿಸುತ್ತಿರುವುದಕ್ಕೆ ಕೊಡುವ ಒಂದೇ ಕಾರಣವೆಂದರೆ, ಇಲ್ಲಿ ಮಂಡಿಸಲಾದ ತಿದ್ದುಪಡಿಗಳಲ್ಲಿ ಅಗತ್ಯವಾಗಿ ಒಳಗೊಂಡಿರುವ ಸಾಂವಿಧಾನಿಕ ಉಪಬಂಧಗಳಿಗೆ ಸಂಬಂಧಿಸಿದ ಕೆಲವು ಅಂಶಗಳ ಬಗ್ಗೆ ಸ್ಪಷ್ಟೀಕರಣ ನೀಡುವುದು. ಮೊದಲನೆಯದಾಗಿ, ನಾನು ಎರಡು ತಿದ್ದುಪಡಿಗಳ ಬಗ್ಗೆ ಒಟ್ಟಿಗೆ ನನ್ನ ಮಾತುಗಳನ್ನು ಹೇಳುತ್ತೇನೆ: ಮೊದಲನೆಯ ತಿದ್ದುಪಡಿಯೆಂದರೆ, ಪ್ರಸ್ತಾವಿತ ಅನುಚ್ಛೇದ ೧೯ರ (ಎರಡನೇ) ಖಂಡದಲ್ಲಿ ಈಗ ಮಂಡಿಸುತ್ತಿರುವ ಉಪಬಂಧಗಳ ಅಡಿಯಲ್ಲಿ ಕಾನೂನುಗಳನ್ನು ರಚಿಸಲು ಸಂಸತ್ತು ಪರಮಾಧಿಕಾರವನ್ನು ಹೊಂದಿರಬೇಕು ಎಂಬುದು ಮತ್ತು ಎರಡನೆಯದು ಅದು ಸಾಧ್ಯವಿಲ್ಲದಿದ್ದರೆ ಪ್ರಸ್ತಾವಿತ ಹೊಸ ಖಂಡದ ಅಡಿಯಲ್ಲಿ ಮಾಡಿದ ಯಾವುದೇ ಕಾನೂನಿಗೆ ತಮ್ಮ ಸಮ್ಮತಿಯನ್ನು ನೀಡುವ ಅಧಿಕಾರ ರಾಷ್ಟ್ರಪತಿಯವರಿಗೆ ಇರಬೇಕು ಮತ್ತು ಹಾಗೆ ಸಮ್ಮತಿ ನೀಡಿದ ಹೊರತು ಕಾನೂನು ಸಿಂಧುವೆಂದು ಪರಿಗಣಿಸತಕ್ಕುದಲ್ಲ ಎಂಬುದು.

ಸಂಸತ್ತಿನ ಅಧಿಕಾರಕ್ಕೆ ಒಳಪಡಿಸಬೇಕೆಂಬ ಪ್ರಶ್ನೆಗೆ ಸಂಬಂಧಿಸಿದಂತೆ ಎರಡು ಅಂಶಗಳನ್ನು ಎಚ್ಚರಿಕೆಯಿಂದ ಗಮನಿಸುವುದು ಅಪೇಕ್ಷಣೀಯವೆಂದು ನಾನು ಭಾವಿಸುತ್ತೇನೆ. ಮೊದಲನೆಯದು: ಹೊಸ ಎರಡನೇ ಖಂಡದ ವ್ಯಾಪ್ತಿಗೆ ಬರುವ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾನೂನನ್ನು ರಚಿಸಲು ಸಂಸತ್ತಿಗೆ ಅನನ್ಯ ಅಧಿಕಾರವನ್ನು ಕೊಡುವುದು ಸಾಧ್ಯವೇ? ಈ ವಿಷಯಕ್ಕೆ ಸಂಬಂಧಿಸಿದಂತೆ, ಸಂವಿಧಾನಕ್ಕೆ ತಿದ್ದುಪಡಿ ಮಾಡುವುದಕ್ಕೆ ಸಂಬಂಧಿಸಿದ ಅನುಚ್ಛೇದ ೩೬೮ರ ಬಗ್ಗೆ ಸದನ ಗಮನ ಸೆಳೆಯಲು ನಾನು ಇಚ್ಛಿಸುತ್ತೇನೆ. ಈ ಅನುಚ್ಛೇದವು, ಸಂವಿಧಾನದ ಅನುಚ್ಛೇದಗಳಿಗೆ ಮಾಡುವ ತಿದ್ದುಪಡಿಗಳ ಕೆಲವು ವರ್ಗಗಳನ್ನು ಕಾನೂನು ಸಮ್ಮತವಾಗಿ ಅಂಗೀಕರಿಸಲಾಗಿದೆ ಎಂದು ಭಾವಿಸುವುದಕ್ಕೆ ಮುಂಚೆ ರಾಜ್ಯಗಳು ಆ ತಿದ್ದುಪಡಿಗಳನ್ನು ಅನುಮೋದಿಸುವುದು ಅಗತ್ಯವಾಗುತ್ತದೆ ಎಂದು ನಿರ್ದಿಷ್ಟಪಡಿಸುತ್ತದೆ. ನಾನು ಇಲ್ಲಿ ಅನುಚ್ಛೇದ ೩೬೮ರಲ್ಲಿ ನಿರೂಪಿಸಲಾಗಿರುವ ಎಲ್ಲ ವಿವಿಧ ಪ್ರವರ್ಗಗಳ ಬಗ್ಗೆ ವಿವರಿಸಲು ಉದ್ದೇಶಿಸುವುದಿಲ್ಲ. ನಾನು ನನ್ನ ವಾದವನ್ನು ಸೀಮಿತಗೊಳಿಸುತ್ತೇನೆ. ಭಾಗ ೧ ರ ಒಂದನೇ ಅಧ್ಯಾಯಕ್ಕೆ ಸೀಮಿತಗೊಳಿಸುತ್ತೇನೆ. ಭಾಗ ೧ ರ ಒಂದನೇ ಅಧ್ಯಾಯದ ಭಾಗವಾಗಿರುವ ಯಾವುದೇ ಅನುಚ್ಛೇದವನ್ನು ತಿದ್ದುಪಡಿ ಮಾಡಿದರೆ ಆಗ ಅಂಥ ತಿದ್ದುಪಡಿಗೆ ರಾಜ್ಯದ ಅನುಮೋದನೆ ಅಗತ್ಯವಾಗುತ್ತದೆ ಎಂದು ಅನುಚ್ಛೇದ ೩೬೮ ವಿಧಿಸುತ್ತದೆ. ಅನುಚ್ಛೇದ ೨೪೬ ರ ಖಂಡ (೩) ಭಾಗ ೧ ರ ೧ ನೇ ಅಧ್ಯಾಯದಲ್ಲಿ ಬರುತ್ತದೆ ಎಂಬುದನ್ನು ಗಮನಿಸಬೇಕು. ಆ ಅನುಚ್ಛೇದವು, ಪಟ್ಟಿ ೨ ರಲ್ಲಿನ ಯಾವುದೇ ನಮೂದಿಗೆ ಸಂಬಂಧಿಸಿದಂತೆ ಕಾನೂನನ್ನು ಮಾಡುವ ಅನನ್ಯ ಅಧಿಕಾರವನ್ನು ರಾಜ್ಯಗಳು ಹೊಂದಿರತಕ್ಕುದು ಎಂದು ನಿರೂಪಿಸುತ್ತದೆ. ಅದರ ಅರ್ಥ ಪಟ್ಟಿ ೨ ರಲ್ಲಿನ ಯಾವುದೇ ನಮೂದಿಗೆ ಸಂಬಂಧಿಸಿದಂತೆ ಯಾವುದೇ ಕಾನೂನುಗಳನ್ನು ಮಾಡಲು ಸಂಸತ್ತು ಅಧಿಕಾರ ಹೊಂದಿರತಕ್ಕುದಲ್ಲ ಎಂಬುದು. ಈ ಸದನದ ಸದಸ್ಯರು ಪಟ್ಟಿ ೨ ನ್ನು ನೋಡಿದರೆ, ಆ ಪಟ್ಟಿಯಲ್ಲಿನ ಒಂದನೇ ನಮೂದು ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದುದು

ಎಂಬುದನ್ನು ಗಮನಿಸಬಹುದು. ಅನುಚ್ಛೇದ ೧೯ ರ ೧ ನೇ ಖಂಡದಲ್ಲಿ ಮೊತ್ತ ಮೊದಲ ಬಾರಿಗೆ ಈ ತಿದ್ದುಪಡಿ ವಿಧೇಯಕದಿಂದ ನಾವು ಸೇರ್ಪಡೆ ಮಾಡುತ್ತಿರುವ ಶಾಸನಗಳ ಶೀರ್ಷಿಕೆಗಳಲ್ಲಿ ಸಾರ್ವಜನಿಕ ಸುವ್ಯವಸ್ಥೆಯೂ ಒಂದು. ಆದ್ದರಿಂದ, ಪಟ್ಟಿ ೨ ರಲ್ಲಿ ಸೇರಿರುವ ಸಾರ್ವಜನಿಕ ಸುವ್ಯವಸ್ಥೆಯ ಸಂಬಂಧದಲ್ಲಿ ಕಾನೂನನ್ನು ರಚಿಸಲು ಸಂಸತ್ತಿಗೆ ಅಧಿಕಾರವನ್ನು ನೀವು ಕೊಡುವುದಾದರೆ ಮತ್ತು ಅನುಚ್ಛೇದ ೨೪೬ (೩) ರಾಜ್ಯಗಳಿಗೆ ಶಾಸನ ರಚನೆಯ ಪರಮಾಧಿಕಾರ ವ್ಯಾಪ್ತಿಯನ್ನು ಪ್ರದಾನ ಮಾಡುವುದರಿಂದ, ಅಂಥ ತಿದ್ದುಪಡಿಯನ್ನು ರಾಜ್ಯಗಳು ಅನುಮೋದಿಸುವುದು ಅಗತ್ಯವಿದೆ ಎಂಬುದು ವಿದಿತವಾಗುತ್ತದೆ. ಈಗ ಈ ಅಂಶದ ಬಗ್ಗೆ ಸರ್ಕಾರದ ಹಾಗೂ ಈ ಸದನದ ಆಶಯ ಏನೆಂಬುದು ಸ್ಪಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ ಎಂದರೆ ರಾಜ್ಯಗಳ ಸಮ್ಮತಿ ಅಥವಾ ಅನುಮೋದನೆ ಅಗತ್ಯವಾಗುವಂಥ ಯಾವುದೇ ತಿದ್ದುಪಡಿಯನ್ನು ಯಾವುದೇ ಖಂಡಕ್ಕೆ ಮಾಡಲು ನಾವು ಪ್ರಸ್ತಾವಿಸುವುದಿಲ್ಲ. ಆ ಅಂಶದ ದೃಷ್ಟಿಯಿಂದ, ಈ ತಿದ್ದುಪಡಿಯನ್ನು ಮಂಡಿಸಿದವರೆಲ್ಲರೂ, ಈ ವಿಧೇಯಕವನ್ನು ಒಳಗೊಂಡಲ್ಲದೆ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ ಎಂಬುದನ್ನು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಏಕೆಂದರೆ ಈ ಕ್ರಮವನ್ನು ಕೈಗೊಳ್ಳಲು ನಾವು ಉದ್ದೇಶಿಸಿದ ಸಮಯದೊಳಗೆ ಈ ಸದನ ಈ ಅಂಶವನ್ನು ಪರಿಹರಿಸುವುದು ಸಾಧ್ಯವಿಲ್ಲ.

ಪ್ರಧಾನಮಂತ್ರಿಯವರು ಇಂದು ಹೇಳಿದಂತೆ, ಸಾಧ್ಯವಿದ್ದರೆ ಶಾಸನ ರಚನೆಯ ಅಧಿಕಾರವನ್ನು ಸಂಸತ್ತಿಗೆ ನೀಡಬೇಕು ಎಂಬ ಪ್ರಸ್ತಾವದ ಬಗ್ಗೆ ನಮ್ಮೆಲ್ಲರಿಗೂ ಕಾಳಜಿಯಿದೆ. ಅಲ್ಲದೆ, ವಿಧೇಯಕವು ಕಾನೂನು ಆಗುವುದಕ್ಕೆ ಮುಂಚೆ ರಾಷ್ಟ್ರಪತಿಯವರು ತಮ್ಮ ಸಮ್ಮತಿಯನ್ನು ನೀಡುವ ಹಕ್ಕನ್ನು ಹೊಂದಿರಬೇಕು ಎಂಬ ಸಲಹೆಯ ಬಗ್ಗೆಯೂ ನಮಗೆ ಕಾಳಜಿಯಿದೆ. ಆದರೆ, ಇಲ್ಲಿ ಪರಿಗಣಿಸಬೇಕಾದ ಅಂಶವೆಂದರೆ ಅಂಥ ಕ್ರಮ ಅಗತ್ಯವೇ ಎಂಬುದು. ಇದಕ್ಕೆ ಅವಕಾಶ ಸಂವಿಧಾನದ ಉಪಬಂಧಗಳಲ್ಲಿಯೇ ಇಲ್ಲವೇ? ಈಗ, ಪ್ರಸಕ್ತ ಖಂಡದಲ್ಲಿ ನಾವು ಮಂಡಿಸುತ್ತಿರುವ ಶಾಸನಗಳ ಶೀರ್ಷಿಕೆಗಳ ಬಗ್ಗೆ ಮತ್ತು ೭ ನೇ ಅನುಸೂಚಿಯಲ್ಲಿನ ವಿವಿಧ ನಮೂದುಗಳಲ್ಲಿ ಅವುಗಳಿರುವ ಸ್ಥಾನದ ಬಗ್ಗೆ ಸನ್ಮಾನ್ಯ ಸದಸ್ಯರ ಗಮನ ಸೆಳೆಯುತ್ತೇನೆ.

ರಾಜ್ಯದ ಭದ್ರತೆಯನ್ನು ಗಮನಿಸೋಣ. 'ರಾಜ್ಯದ ಭದ್ರತೆ' ಎಂಬುದರ ಬಗೆಗೆ ಯಾವುದೇ ನಿರ್ದಿಷ್ಟವಾದ ನಮೂದು ಇಲ್ಲ. ಇದಕ್ಕೆ ಸರಳವಾದ ಕಾರಣವೆಂದರೆ, ರಾಜ್ಯದ ಭದ್ರತೆಯನ್ನು ಅನೇಕ ಬಗೆಯ ನಮೂದುಗಳ ಮೂಲಕ ಸಾಧಿಸಬಹುದಾಗಿದೆ ಮತ್ತು ಸಹಜವಾಗಿಯೇ ಅಂಥ ಅಧಿಕಾರ ಬೇರೆ ಬೇರೆ ಶೀರ್ಷಿಕೆಗಳ ಅಡಿಯಲ್ಲಿ ಹಂಚಿಕೆಯಾಗಿದೆ. ಅಲ್ಲದೆ ಪಟ್ಟಿ–೧ ರಲ್ಲಿನ ಮೊದಲನೇ ನಮೂದು ರಾಜ್ಯದ ಭದ್ರತೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಕಾಳಜಿ ಹೊಂದಿದೆ ಎಂಬುದನ್ನು ಸದಸ್ಯರು ಗಮನಿಸಬಹುದು. ೨ ನೇ ಶೀರ್ಷಿಕೆಯನ್ನು ಗಮನಿಸಿ–ವಿದೇಶಗಳೊಂದಿಗೆ ಸೌಹಾರ್ದಯುತ ಸಂಬಂಧಗಳು. ಈ ವಿಷಯವು ಪಟ್ಟಿ ೧ ರ ೯, ೧೦ ಮತ್ತು ೧೪ ನೇ ನಮೂದುಗಳಲ್ಲಿ ಸೇರ್ಪಡೆಯಾಗಿದೆ. ೩ ನೇ ಶೀರ್ಷಿಕೆಯನ್ನು ಗಮನಿಸಿ–ಸಾರ್ವಜನಿಕ ಸುವ್ಯವಸ್ಥೆ, ಸಭ್ಯತೆ ಮತ್ತು ನೈತಿಕತೆ ಇದು ಪಟ್ಟಿ ೨ ರ ೧ ನೇ ನಮೂದಿನಲ್ಲಿದೆ.

**ಡಾ. ಎಸ್.ಪಿ. ಮುಖರ್ಜಿ**: ಯಾವ ನಮೂದು?

**ಡಾ. ಅಂಬೇಡ್ಕರ್**: ಸ್ವಲ್ಪ ಮಟ್ಟಿಗೆ ಪಟ್ಟಿ ೨ ರಲ್ಲಿರುವ ನಮೂದು ಇದಕ್ಕೆ ಸಂಬಂಧಿಸುತ್ತದೆ. ವೃತ್ತ ಪತ್ರಿಕೆಗಳು, ಪುಸ್ತಕಗಳು ಇತ್ಯಾದಿಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅದು ಪಟ್ಟಿ ೩ ರಲ್ಲಿನ ೩೯ನೇ

ನಮೂದಿಗೂ ಸಂಬಂಧಪಡುತ್ತದೆ. ನ್ಯಾಯಾಂಗ ನಿಂದನೆಯನ್ನು ಪಟ್ಟಿ ೧ ರ ೯೫ ನೇ ನಮೂದಿನಲ್ಲಿಯೂ ತೋರಿಸಲಾಗಿದೆ ಮತ್ತು ಪಟ್ಟಿ ೩ ರ ೧೪ ನೇ ನಮೂದಿನಲ್ಲಿಯೂ ತೋರಿಸಲಾಗಿದೆ. ಮಾನನಷ್ಟವನ್ನು ಪಟ್ಟಿ ೩ ರ ೧ ನೇ ನಮೂದಿನಲ್ಲಿ, ಅಪರಾಧದ ಪ್ರಚೋದನೆಯನ್ನು ಪಟ್ಟಿ ೩ ರ ೧ ನೇ ನಮೂದಿನಲ್ಲಿ ತೋರಿಸಲಾಗಿದೆ.

ಸದನದ ಮುಂದಿರುವ ಮಾಹಿತಿಯಿಂದ, ಬಹುಪಾಲು ಪ್ರಕರಣಗಳು ಪಟ್ಟಿ ೧ ರ ಅಥವಾ ಪಟ್ಟಿ ೩ ರ ನಮೂದಿನಲ್ಲಿ ಸೇರಿಸಲಾಗಿರುವುದರಿಂದ ಕೆಲವೊಂದು ಪ್ರಕರಣದಲ್ಲಿ ಸಂಸತ್ತಿಗೆ ಕಾನೂನನ್ನು ರಚಿಸುವ ಪರಮಾಧಿಕಾರ ಮತ್ತು ಕೆಲವೊಂದು ಪ್ರಕರಣಗಳಲ್ಲಿ ಕಾನೂನು ರಚಿಸುವ ಸಮವರ್ತಿ ಅಧಿಕಾರ ಇರುವುದು ಸದನದ ತಿಳುವಳಿಕೆಗೆ ಬಂದಿದೆಯೆಂದು ನಾನು ಭಾವಿಸುತ್ತೇನೆ.

**ಡಾ. ಎಸ್.ಪಿ. ಮುಖರ್ಜಿ**: ಮಾನ್ಯ ಸಚಿವರು ಇನ್ನಷ್ಟು ನಿರ್ದಿಷ್ಟವಾಗಿರಬಹುದೆ? ಸಾರ್ವಜನಿಕ ಸುವ್ಯವಸ್ಥೆಯ ಬಗ್ಗೆ ಕಾನೂನನ್ನು ಅಂಗೀಕರಿಸಲು ಸಮವರ್ತೀ ಅಧಿಕಾರ ಎಲ್ಲಿದೆ?

**ಡಾ. ಅಂಬೇಡ್ಕರ್**: ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದಂತೆ, ಪಟ್ಟಿ ೩ ರ ೩೯ ರಲ್ಲಿ ಮತ್ತೊಂದು ನಮೂದು ಇದೆ– ಇದು ಪುಸ್ತಕಗಳು ಮತ್ತು ವೃತ್ತಪತ್ರಿಕೆಗಳ ಬಗ್ಗೆ ತಿಳಿಸುತ್ತದೆ. ವೃತ್ತ ಪತ್ರಿಕೆಗಳು ಇದಕ್ಕೆ ಸಂಬಂಧಿಸಿದುದಾಗಿವೆ.

**ಡಾ. ಎಸ್.ಪಿ. ಮುಖರ್ಜಿ**: ಸನ್ಮಾನ್ಯ ಸಚಿವರು ಕೆಲವೊಂದು ವಿಷಯಗಳಿಗೆ ಸಂಬಂಧಿಸಿದಂತೆ ಎಂದರೆ, ಸಂಪತ್ತು ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಇಲ್ಲವೇ ಪರಮಾಧಿಕಾರ ವ್ಯಾಪ್ತಿಯನ್ನು ಹೊಂದಿರುವ ಎಲ್ಲ ವಿಷಯಗಳ ಬಗ್ಗೆ ವಾದ ಮಾಡುತ್ತಿದ್ದಾರೆ. ಅವರು ಇನ್ನೂ ಹೆಚ್ಚು ನಿರ್ದಿಷ್ಟಪಡಿಸಬೇಕೆಂದು ಕೋರುತ್ತೇನೆ.

**ಡಾ. ಅಂಬೇಡ್ಕರ್**: ನಮೂದುಗಳು ಯಾವುವು ಎಂಬುದನ್ನು ನಾನು ತಿಳಿಸುತ್ತಿದ್ದೇನೆ.

**ಡಾ. ಎಸ್.ಪಿ. ಮುಖರ್ಜಿ**: ಸಾರ್ವಜನಿಕ ಸುವ್ಯವಸ್ಥೆ?

**ಡಾ. ಅಂಬೇಡ್ಕರ್**: ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ಮುಖ್ಯ ಶೀರ್ಷಿಕೆ ಪಟ್ಟಿ ೨ ರ ನಮೂದು ೧ ರಲ್ಲಿದೆ. ವೃತ್ತ ಪತ್ರಿಕೆಗಳು ಸಹ ಸಾರ್ವಜನಿಕ ಸುವ್ಯವಸ್ಥೆಯ ಅಡಿಯಲ್ಲಿ ಬರಬಹುದು.

**ಡಾ. ಎಸ್.ಪಿ. ಮುಖರ್ಜಿ**: ಇಲ್ಲ ಹಾಗೆ ಬರುವುದಿಲ್ಲ.

ಡಾ. ಅಂಬೇಡ್ಕರ್: ಈ ಬಗ್ಗೆ ಇರುವ ಅಂಶವೆಂದರೆ, ಯಾವುದೇ ಒಂದು ಕಾನೂನನ್ನು ಯಾವುದಾದರೂ ಒಂದು ನಮೂದಿಗೆ ಸಂಬಂಧಪಡುವಂತೆ ಮಾಡಬೇಕು. ಇಲ್ಲದಿದ್ದರೆ, ಕಾನೂನು ರಚಿಸಲು ಸಂಸತ್ತಿಗೆ ಅಧಿಕಾರವಿದೆಯೇ ಅಥವಾ ರಾಜ್ಯಕ್ಕೆ ಅಧಿಕಾರವಿದೆಯೇ ಎಂಬುದನ್ನು ನಿರ್ಧರಿಸುವುದು ಹೇಗೆ?

**ಡಾ. ಎಸ್.ಪಿ. ಮುಖರ್ಜಿ:** ಸನ್ಮಾನ್ಯ ಸಚಿವರು, ವೃತ್ತ ಪತ್ರಿಕೆಗಳನ್ನು ಹೊರತುಪಡಿಸಿದರೆ, ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಪಟ್ಟ ಕಾನೂನುಗಳ ಸಂಬಂಧದಲ್ಲಿ ಸಂಸತ್ತಿಗೆ ಸಮವರ್ತಿ ಅಧಿಕಾರವಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಾರೆಯೇ? ಅದನ್ನು ನಾವು ಸ್ಪಷ್ಟವಾಗಿ ತಿಳಿಯಬೇಕು.

**ಡಾ. ಅಂಬೇಡ್ಕರ್**: ಒಪ್ಪುತ್ತೇನೆ.

**ಮಾನ್ಯ ಉಪ ಸಭಾಧ್ಯಕ್ಷರು:** ಸನ್ಮಾನ್ಯ ಸಚಿವರು ಪ್ರತಿಯೊಂದು ಬಾಬು ಸಹ ಸಮವರ್ತಿ ಪಟ್ಟಿಯಲ್ಲಿದೆ ಎಂದು ಹೇಳುತ್ತಿಲ್ಲ.

**ಡಾ. ಅಂಬೇಡ್ಕರ್:** ಬಹುಪಾಲು ಬಾಬುಗಳು ಸಂಸತ್ತಿನ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೆ.

ಕೆಲವು ಸಮವರ್ತಿ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೆ. ಆದ್ದರಿಂದ, ಸದನದ ಮುಂದೆ ನಾನು ಮಂಡಿಸುವ ಅಭಿಪ್ರಾಯವೆಂದರೆ–ಇಲ್ಲಿ ತಿಳಿಸಲಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕಾನೂನನ್ನು ರಚಿಸಲು ಸಂಸತ್ತಿಗೆ ಅನನ್ಯ ವಿಧಾಯಿ ಹಕ್ಕು ಕೊಡುವ ಉದ್ದೇಶಕ್ಕಾಗಿ ಏನನ್ನೂ ಮಾಡುವುದು ಅಗತ್ಯವಿಲ್ಲ. ಸಂಸತ್ತು ಕೆಲವು ಪ್ರಕರಣಗಳಲ್ಲಿ ಸಮವರ್ತಿ ಅಧಿಕಾರವನ್ನು ಹೊಂದಿರುವುದರಿಂದ, ಅದು ಈಗ ನಾವು ಪ್ರಾಂತೀಯ ವಿಧಾನಮಂಡಲಗಳಿಗೆ ಪ್ರದಾನ ಮಾಡಲಿರುವ ಅಧಿಕಾರವನ್ನು ಆ ಪ್ರಾಂತೀಯ ವಿಧಾನಮಂಡಲಗಳು ದುರುಪಯೋಗಪಡಿಸಿಕೊಂಡಲ್ಲಿ ಅಂಥ ದುರುಪಯೋಗವನ್ನು ತಡೆಯುವುದು ಸಾಧ್ಯವಿದೆ.

**ಡಾ. ಎಸ್.ಪಿ. ಮುಖರ್ಜಿ:** ಅಪರಾಧ ಪ್ರಚೋದನೆಗೆ ಸಂಬಂಧಪಟ್ಟಂತೆ ಸಮವರ್ತಿ ಪಟ್ಟಿಯಲ್ಲಿರುವ ಅಧಿಕಾರ ಯಾವುದು?

**ಡಾ. ಅಂಬೇಡ್ಕರ್:** ಅದು ದಂಡ ಸಂಹಿತೆಯಲ್ಲಿ ಬರುತ್ತದೆ. ದಂಡ ಸಂಹಿತೆಯಲ್ಲಿ ಅಪರಾಧಕ್ಕೆ ಪ್ರಚೋದನೆಯೆಂಬುದು ಒಂದು ನಿರ್ದಿಷ್ಟ ಅಪರಾಧ.

**ಡಾ. ಎಸ್.ಪಿ. ಮುಖರ್ಜಿ:** ಸನ್ಮಾನ್ಯ ಸಚಿವರು .............ಯ ಒಂದನೇ ನಮೂದನ್ನು ಸದನದ ಮುಂದೆ ಓದಬೇಕು.

**ಡಾ. ಅಂಬೇಡ್ಕರ್:** ಅವರು ಗೃಹ ಸಚಿವರ ಮಾತನ್ನು ಹೇಗೆ ಒಪ್ಪಲಿಲ್ಲವೋ ಹಾಗೆಯೇ ನಾನೂ ಇವರ ಮಾತಿಗೆ ಒಪ್ಪುವುದಿಲ್ಲ. ಇದು ಉಪನ್ಯಾಸ ನೀಡುವ ಕೋಣೆಯೂ ಅಲ್ಲ. ಅಲ್ಲದೆ ವಿದ್ಯಾರ್ಥಿಗಳಿಗೆ ನಾನು ಪಾಠವನ್ನೂ ಹೇಳುತ್ತಿಲ್ಲ. ನಾನು ನನ್ನ ಅಭಿಪ್ರಾಯವನ್ನು ತಿಳಿಸುತ್ತಿದ್ದೇನೆ. ನನ್ನ ಮಾನ್ಯ ಗೆಳೆಯರಿಗೆ ಆ ಬಗ್ಗೆ ವಿವರಣೆ ಬೇಕಿದ್ದಲ್ಲಿ ಸಂವಿಧಾನದ ಕ್ಲಬ್‌ನಲ್ಲಿ ಎಲ್ಲಾದರೂ ನಾವು ಭೇಟಿ ಮಾಡಬಹುದು. ....... ಅಲ್ಲಿ ಅವರಿಗೆ ನಾನು ಉಪನ್ಯಾಸ ಕೊಡಲು ಸಿದ್ಧನಿದ್ದೇನೆ.

**ಮಾನ್ಯ ಉಪಸಭಾಧ್ಯಕ್ಷರು:** ನಾನು ಹೇಳುವುದಿಷ್ಟೇ. ಮಾನ್ಯ ಸದಸ್ಯರ ವಾದವೆಂದರೆ ಪಟ್ಟಿ ೨ ರಲ್ಲಿಯ ಒಂದನೇ ನಮೂದು–ರಾಜ್ಯ ಪಟ್ಟಿ–ಸಾರ್ವಜನಿಕ ಸುವ್ಯವಸ್ಥೆಗೆ ಮಾತ್ರ ಸಂಬಂಧಪಟ್ಟಿರುವುದಾಗಿದೆ ಮತ್ತು ಇದು ಇದರಲ್ಲಿ ಸೇರಿಲ್ಲ. 'ಅಪರಾಧಕ್ಕೆ ಪ್ರಚೋದನೆ' ಭಾರತ ದಂಡ ಸಂಹಿತೆಯಲ್ಲಿ ಸೇರಿದೆ. ಅವರಿಗೆ ಸಮಾಧಾನವಾಗದಿದ್ದರೆ, ಅವರು ತಮ್ಮದೇ ಆದ ಅಭಿಪ್ರಾಯಕ್ಕೆ ಬರಬಹುದು.

**ಡಾ. ಅಂಬೇಡ್ಕರ್:** ಇದು ಸಾರ್ವಜನಿಕ ಸುವ್ಯವಸ್ಥೆಯನ್ನು ಒಳಗೊಳ್ಳುವುದಿಲ್ಲ ಎಂದು ಹೇಳಲು ನೀವು ಸ್ವತಂತ್ರರಿದ್ದೀರಿ.

**ಮಾನ್ಯ ಉಪಸಭಾಧ್ಯಕ್ಷರು:** ಮಾನ್ಯ ಸದಸ್ಯರು, ಬಹುತೇಕ ಅಪರಾಧಗಳಿಗೆ ಸಂಬಂಧಪಟ್ಟ ನಮೂದುಗಳು ಕೇಂದ್ರ ಪಟ್ಟಿಯಲ್ಲಿವೆ ಇಲ್ಲವೆ ಸಮವರ್ತಿ ಪಟ್ಟಿಯಲ್ಲಿವೆ ಎಂಬುದನ್ನಷ್ಟೇ ತೋರಿಸಲು ಪ್ರಯತ್ನಿಸುತ್ತಿದ್ದಾರೆ. ಬಹುಪಾಲಿಗಿಂತ ಅಲ್ಪಸಂಖ್ಯೆಯಲ್ಲಿರುವುದೇ ಹೆಚ್ಚು ಮುಖ್ಯವಾಗಿರಲೂ ಬಹುದು.

**ಡಾ. ಎಸ್.ಪಿ. ಮುಖರ್ಜಿ:** ಸನ್ಮಾನ್ಯ ಸಚಿವರು, "ಅಪರಾಧಕ್ಕೆ ಪ್ರಚೋದನೆ' ಎಂಬುದು ಸಮವರ್ತಿ ಪಟ್ಟಿಯ ಒಂದನೇ ನಮೂದಿನ ಅಡಿಯಲ್ಲಿ ಬರುತ್ತದೆ ಎಂದು ತಿಳಿಸಿದರು. ಆದರೆ ಅದು ಹೀಗಿದೆ:

> ""ಈ ಸಂವಿಧಾನದ ಪ್ರಾರಂಭದಲ್ಲಿ, ಭಾರತ ದಂಡಸಂಹಿತೆಯಲ್ಲಿ ಸೇರಿರುವ ಎಲ್ಲ ವಿಷಯಗಳನ್ನೂ ಒಳಗೊಂಡ, ಆದರೆ, ಒಂದನೆಯ ಪಟ್ಟಿಯಲ್ಲಿ ಅಥವಾ ಎರಡನೆಯ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಬಗೆಗಿನ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳನ್ನು ಹೊರತುಪಡಿಸಿ ಮತ್ತು ಸಿವಿಲ್ ಅಧಿಕಾರ ವರ್ಗದ ಸಹಾಯಕ್ಕಾಗಿ ಒಕ್ಕೂಟದ ನೌಕಾ, ಭೂ ಮತ್ತು ವಾಯು ದಳಗಳ ಅಥವಾ ಇತರ

ಯಾವುದೇ ಸಶಸ್ತ್ರ ದಳಗಳ ಉಪಯೋಗಗಳನ್ನು ಹೊರತುಪಡಿಸಿ, ಕ್ರಿಮಿನಲ್ ಕಾನೂನು".

**ಡಾ. ಅಂಬೇಡ್ಕರ್:** ನಾನು ಒಪ್ಪುವುದಿಲ್ಲ. ನಾನು ನನ್ನ ಮಾತನ್ನು ಒಂದು ಘಂಟೆಯ ಒಳಗೆ ಮುಗಿಸುತ್ತೇನೆ. . . . . .

**ಡಾ. ಎಸ್.ಪಿ. ಮುಖರ್ಜಿ:** ಹಾಗಾದರೆ ಅದರರ್ಥ ೨ ನೇ ಪಟ್ಟಿಯಲ್ಲಿ ಸಾರ್ವಜನಿಕ ಸುವ್ಯವಸ್ಥೆಯ ಅಡಿಯಲ್ಲಿ ಬರುವ ಯಾವುದೇ ಅಪರಾಧಕ್ಕೆ ಪ್ರಚೋದನೆ ಇರುವುದಿಲ್ಲ. . . . .

**ಡಾ. ಅಂಬೇಡ್ಕರ್:** ನಾನು ಆ ಅಂಶದಿಂದ ದೂರ ಹೋಗುತ್ತಿಲ್ಲ. ಆ ಬಗ್ಗೆ ನನಗೂ ಆಸಕ್ತಿಯಿದೆ.

**ಡಾ. ಎಸ್.ಪಿ. ಮುಖರ್ಜಿ:** ನಿಮಗೆ ಆಸಕ್ತಿ ಇದೆಯೆಂದು ನನಗೆ ಗೊತ್ತು.

**ಡಾ. ಅಂಬೇಡ್ಕರ್:** ಹೌದು ನನಗೆ ಆಸಕ್ತಿಯಿದೆ.

ಈಗ ನಾನು ರಾಷ್ಟ್ರಪತಿಯವರ ಸಮ್ಮತಿಯ ಬಗ್ಗೆ ಹೇಳುತ್ತೇನೆ. ಸಂವಿಧಾನದ ೨೦೦ ನೇ ಅನುಚ್ಛೇದದ ಪ್ರಕಾರ ವಿವಿಧ ರಾಜ್ಯಗಳ ರಾಜ್ಯಪಾಲರು ಅಥವಾ ರಾಜಪ್ರಮುಖರು ಯಾವುದೇ ಒಂದು ನಿರ್ದಿಷ್ಟ ವಿಧೇಯಕಕ್ಕೆ ತಾವು ಒಪ್ಪಿಗೆ ನೀಡದೆ ಇರುವ ಮತ್ತು ಅದನ್ನು ರಾಷ್ಟ್ರಪತಿಯವರಿಗೆ ಕಳುಹಿಸುವ ಅಧಿಕಾರವನ್ನು ಹೊಂದಿದ್ದಾರೆ. ಆ ಉಪಬಂಧ ಈಗಾಗಲೇ ಚಾಲ್ತಿಯಲ್ಲಿದೆ. ಸಹಜವಾಗಿಯೇ ರಾಜ್ಯಪಾಲರು ಅವರ ಸಚಿವರ ಸಲಹೆಯಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ ಮತ್ತು ಅಂಥ ಕ್ರಮವನ್ನು ರಾಷ್ಟ್ರಪತಿಯವರ ಪರಿಗಣನೆಗೆ ತರಬೇಕೆಂದು ಅವರು ಭಾವಿಸಿದರೆ ಅವರಿಗೆ ಆ ಅಧಿಕಾರ ಈಗಾಗಲೇ ಇದೆ. ಹೊಸದಾಗಿ ಅಧಿಕಾರ ನೀಡುವ ಅಗತ್ಯವಿಲ್ಲ. ಆದರೆ ಇದು ನಿಷ್ಪ್ರಯೋಜಕವಾದುದು ಎಂದು ವಾದಿಸಬಹುದು. ಏಕೆಂದರೆ ಇದು ಅವರಿಗೆ ಮಂತ್ರಿಮಂಡಲ ನೀಡುವ ಸಲಹೆಯನ್ನು ಅವಲಂಬಿಸಿರುತ್ತದೆ ಮತ್ತು ಆ ಕ್ರಮವನ್ನು ಕೈಗೊಳ್ಳಲು ಸೂಚಿಸಿದ ಮಂತ್ರಿಮಂಡಲವೇ ಅದನ್ನು ರಾಷ್ಟ್ರಪತಿಯವರಿಗೆ ಕಳುಹಿಸುವಂತೆ ರಾಜ್ಯಪಾಲರಿಗೆ ಸಲಹೆ ನೀಡುತ್ತಾರೆಂದು ನಿರೀಕ್ಷಿಸಲಾಗದು.

ಇದಲ್ಲದೆ ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳ ಬಗೆಗಿನ ಕಾನೂನುಗಳ ಬಗ್ಗೆ ಅನುಚ್ಛೇದ ೨೫೪ ರಲ್ಲಿಯೂ ಪ್ರಸ್ತಾಪವಿದೆ ಮತ್ತು ಆ ಅನುಚ್ಛೇದ, ಸಂಸತ್ತು ರಚಿಸಿದ ಕಾನೂನು ಮತ್ತು ಅದೇ ವಿಷಯದ ಬಗ್ಗೆ ರಾಜ್ಯ ವಿಧಾನಮಂಡಲ ರಚಿಸಿದ ಸದೃಶ ಕಾನೂನಿನ ಬಗ್ಗೆ ಯಾವುದೇ ಅಸಾಂಗತ್ಯವಿದ್ದರೆ, ಆಗ ರಾಜ್ಯದ ಕಾನೂನಿನಲ್ಲಿರುವ ವೈರುಧ್ಯ ಮತ್ತು ಅಸಾಂಗತ್ಯದ ಮಟ್ಟಿಗೆ ಆ ಕಾನೂನು ಅನೂರ್ಜಿತವಾಗತಕ್ಕುದು ಎಂದು ವಿಧಿಸುತ್ತದೆ. ಇದರ ಜೊತೆಗೆ, ಆ ಅನುಚ್ಛೇದದ ೨ ನೇ ಖಂಡದಲ್ಲಿ ಮತ್ತೊಂದು ಉಪಬಂಧವಿದೆ. ಅದು, ಆ ವಿಷಯದ ಬಗ್ಗೆ ಸಂಸತ್ತು ರಚಿಸಿದ ಕಾನೂನಿಗೆ ಅಂಥ ಕಾನೂನು ಅಸಂಗತವಾಗಿದ್ದರೆ, ಅದನ್ನು ರಾಷ್ಟ್ರಪತಿಯವರ ಸಮ್ಮತಿಗಾಗಿ ಕಾಯ್ದಿರಿಸಲಾಗುತ್ತದೆ ಮತ್ತು ರಾಷ್ಟ್ರಪತಿಯವರು ಅದಕ್ಕೆ ಸಮ್ಮತಿ ನೀಡಿದರೆ, ವೈರುಧ್ಯವಿದ್ದರೂ ಕಾನೂನು ಆ ರಾಜ್ಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಮಾತ್ರ ಅನೂರ್ಜಿತಗೊಳ್ಳುತ್ತದೆ. ಕಾನೂನು ಮಂತ್ರಾಲಯದಲ್ಲಿ ನಾವು ಗಳಿಸಿರುವ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ, ಬಹುಪಾಲು ಪ್ರತಿಯೊಂದು ರಾಜ್ಯಕ್ಕೂ ತಮ್ಮ ಕಾನೂನನ್ನು ಅಸಂಗತವೆಂದು ಘೋಷಿಸಲ್ಪಡಬಹುದು ಮತ್ತು ಅದು ಅನೂರ್ಜಿತಗೊಳ್ಳಬಹುದು ಎಂಬ ಭಯ ಇರುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ, ರಾಜ್ಯಗಳು ಅನುಸರಿಸುವ ಸುರಕ್ಷಿತ ಕ್ರಮವೆಂದರೆ, ಈ ಎಲ್ಲ ಕ್ರಮಗಳನ್ನು ರಾಷ್ಟ್ರಪತಿಯವರ ಪರಿಗಣನೆ ಮತ್ತು ಸಮ್ಮತಿಗಾಗಿ ಕಳುಹಿಸುವುದು ಮತ್ತು ಸಾಮಾನ್ಯವಾಗಿ ಅದಕ್ಕೆ ಅವರ ಸಮ್ಮತಿಯನ್ನು ವಿಧೇಯಕ ಇರುವ ರೂಪದಲ್ಲಿಯೇ ಅಥವಾ ಕೆಲವೊಂದು ಮಾರ್ಪಾಡುಗಳೊಂದಿಗೆ ನೀಡಲಾಗುತ್ತದೆ.

ಆದ್ದರಿಂದ ಸಂವಿಧಾನಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಅನುಚ್ಛೇದ ೨೦೦ ಮತ್ತು ೨೫೪ (೨) ಇವುಗಳು ಅಂಥ ಕ್ರಮಗಳು ರಾಷ್ಟ್ರಪತಿಯವರಿಗೆ ಕಳುಹಿಸುವಂತೆ ಮಾಡುವ ಮತ್ತು ಅವರ ಪರಿಗಣನೆ ಮತ್ತು ಸಮ್ಮತಿಯನ್ನು ಪಡೆದುಕೊಳ್ಳುವಂತೆ ಮಾಡುವ ಸಾಕಷ್ಟು ಸುರಕ್ಷಿತ ಕ್ರಮಗಳನ್ನು ಹೊಂದಿದೆ ಎಂಬುದು ನನ್ನ ಅಭಿಪ್ರಾಯ.

**ಶ್ರೀಮತಿ ದುರ್ಗಾಬಾಯಿ:** ಯಾವ ಪ್ರಕ್ರಿಯೆಯ ಅಡಿಯಲ್ಲಿ?

**ಡಾ. ಅಂಬೇಡ್ಕರ್:** ನಾನು ಅದನ್ನೇ ಹೇಳುವವನಿದ್ದೆ. ಅನುಚ್ಛೇದ ೨೫೪ (೨) ರ ಅಡಿಯಲ್ಲಿ.

**ಶ್ರೀಮತಿ ದುರ್ಗಾಬಾಯಿ:** ಹೇಗೆ?

**ಡಾ. ಅಂಬೇಡ್ಕರ್:** ಇದು ಕೆಲವರಿಗೆ ಅಸಹನೆಯನ್ನುಂಟುಮಾಡುತ್ತಿದೆ ಎಂಬುದು ನನಗೆ ತಿಳಿದಿದೆ. ಈ ಎಲ್ಲ ಮೂರು ವಿಷಯಗಳ ಬಗ್ಗೆ ಈ ತಿದ್ದುಪಡಿಗಳು ಅನಗತ್ಯವೆಂದು ನಾನು ಭಾವಿಸುತ್ತೇನೆ.

ನನ್ನ ಗೆಳೆಯರಾದ ಪಂಡಿತ್ ಕುಂಜ್ರೂ ಅವರು ಎತ್ತಿದ ಕೆಲವೊಂದು ಅಂಶಗಳನ್ನು ಇಲ್ಲಿ ಚರ್ಚಿಸಲು ಪ್ರಸ್ತಾವಿಸುತ್ತೇನೆ. ಪದಗಳನ್ನು ಬದಲಾಯಿಸುವುದಕ್ಕೆ ಸಂಬಂಧಪಟ್ಟಂತೆ ಅವರು ಮಂಡಿಸಿದ ತಿದ್ದುಪಡಿಯ ಮಟ್ಟಿಗೆ, ಅವರ ಪದಗಳು ಕೇವಲ ಆಲಂಕಾರಿಕ ಬದಲಾವಣೆಗಳಾಗಿ ನನಗೆ ಕಾಣುತ್ತದೆ ಮತ್ತು ಅದನ್ನು ಸೌಹಾರ್ದಯುತ ಸಂಬಂಧಗಳು ಎಂಬ ಪದಗಳಿಂದಾಗಲಿ ಅಥವಾ ಇತರ ಪದಗಳಿಂದಾಗಲಿ ಕರೆದರೂ, ಅದರಲ್ಲಿ ಯಾವುದೇ ಹುರುಳು ಇದೆಯೆಂದು ನಾನು ಭಾವಿಸುವುದಿಲ್ಲ; ಶಾಸನದ ವಸ್ತು, ವಿಷಯ ಮತ್ತು ಶೀರ್ಷಿಕೆ ಅದೇ ಉಳಿಯುತ್ತದೆ. ಆದ್ದರಿಂದ ನಾನು ಅವುಗಳ ಬಗ್ಗೆ ಮಾತನಾಡುತ್ತ ಕಾಲವ್ಯಯ ಮಾಡಲು ಸಿದ್ಧನಿಲ್ಲ.

ಆದರೆ ಅವರು ಅಮೆರಿಕಾದ ನಿಯರ್ –ವಿ– ಮಿನೆಸೋಟ ಪ್ರಕರಣವನ್ನು ಮರೆಯದೆ, ಅದನ್ನೆ ಬಂಡವಾಳವನ್ನಾಗಿಟ್ಟುಕೊಂಡು ವಾದಿಸುತ್ತಿದ್ದಾರೆ. ಅಮೆರಿಕಾದ ಸರ್ವೋಚ್ಚ ನ್ಯಾಯಾಲಯ, ಪೂರ್ವ ನಿರ್ಬಂಧವನ್ನು ಮಾಡಿದ್ದ ಒಂದು ಕಾನೂನನ್ನು ಅಸಾಂವಿಧಾನಿಕವೆಂದು ಅನೂರ್ಜಿತಗೊಳಿಸಿತ್ತು ಎಂಬುದು ನಿಜ. ಈ ಪ್ರಕರಣದಲ್ಲಿ ಕೊಡಲಾದ ತೀರ್ಪಿನ ಮೂಲಕ ನಮ್ಮ ಶೀರ್ಷಿಕೆಯನ್ನಾಗಲೀ, ಮಾನದಂಡವನ್ನಾಗಲೀ ನಿಗದಿ ಪಡಿಸುವುದು ಅಪೇಕ್ಷಣೀಯವಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಆ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೆಲವೊಂದು ಘಟನೆಗಳ ಬಗ್ಗೆ ನನ್ನ ಬಹುಶ್ರುತ ಗೆಳೆಯರ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ನನ್ನ ಬಳಿ ಒಂದು ಪುಸ್ತಕವಿದೆ. ಅದರ ಹೆಸರನ್ನು ಹೇಳುತ್ತೇನೆ. ಡಾ. ಮುಖರ್ಜಿಯವರು ಈ ವಿಷಯವನ್ನು ಮುಂದುವರಿಸುವ ಬಗ್ಗೆ ಬಹು ಎಚ್ಚರಿಕೆ ವಹಿಸುತ್ತಾರೆಂದು ನನಗೆ ತಿಳಿದಿದೆ. ಆ ಪುಸ್ತಕದ ಹೆಸರು "ಫ್ರೀ ಸ್ಪೀಚ್ ಇನ್ ದಿ ಯುನೈಟೆಡ್ ಸ್ಟೇಟ್ಸ್". ಅವರಿಗೆ ತಿಳಿದಿರುವ ಇನ್ನೂ ಅನೇಕ ಪುಸ್ತಕಗಳಿವೆ. ಈ ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ, ಅಮೆರಿಕಾದ ಬರಹಗಾರರು ತಾವೇ ಗಮನಿಸಿರುವಂಥ ಮೊದಲನೆಯ ಅಂಶವೆಂದರೆ, ಈ ಪ್ರಕರಣವು ಕೇವಲ ಒಂದು ಹೆಚ್ಚುವರಿ ಮತದಿಂದ ನಿರ್ಣಯಿಸಲ್ಪಟಿತು, ಎಂದರೆ ೪ಕ್ಕೆ ಪ್ರತಿಯಾಗಿ ಐವರು ನ್ಯಾಯಾಧೀಶರು ನೀಡಿದ ತೀರ್ಪು. ಎರಡನೆಯ ಅಂಶವೆಂದರೆ, ೩೮೦ ನೇ ಪುಟದಲ್ಲಿ ಲೇಖಕ ತಾನೇ, ಈ ತೀರ ಅತ್ಯಲ್ಪ ಬಹುಮತದಿಂದಾಗಿ –

> "ನಿಯರ್ ಪ್ರಕರಣವು ಮಿನೆಸೋಟ ಶಾಸನವನ್ನು ಅನೂರ್ಜಿತಗೊಳಿಸುವುದಕ್ಕಿಂತ ಹೆಚ್ಚಿನ ತತ್‌ಕ್ಷಣದ ಯಾವುದೇ ಪರಿಣಾಮವನ್ನು ಹೊಂದಿಲ್ಲ. ಇದು ಕ್ಷುಲ್ಲಕ ಸ್ಥಳೀಯ ಸಂದರ್ಭದಿಂದಾಗಿ ಉಂಟಾದುದೆಂದು ಹೇಳಲಾಗಿದೆ" ಎಂದಿದ್ದಾರೆ.

ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಾಧೀಶರ ಮುಖ್ಯಸ್ಥರು ನೀಡಿದ ತೀರ್ಪಿನ ಒಂದು ಭಾಗವನ್ನು

ಅವರಿಗೆ ಓದಿ ತೋರಿಸಲು ನಾನು ಇಚ್ಛಿಸುತ್ತೇನೆ. ಅದು ಉದ್ಧರಿಸಲು ಯೋಗ್ಯವಾದುದೆಂದು ನಾನು ಭಾವಿಸುತ್ತೇನೆ. ಅಲ್ಪಸಂಖ್ಯಾತರ ನೇತೃತ್ವ ವಹಿಸಿದ ನ್ಯಾಯಾಧೀಶ ಬಟ್ಲರ್ ಅವರು ಹೀಗೆ ಹೇಳಿದ್ದಾರೆ:

> "ಈ ಪ್ರಕರಣದಲ್ಲಿ ಕಂಡು ಬರುವ ರೀತಿಯ ವ್ಯಾಪಾರ ಮತ್ತು ಪ್ರಕಟಣೆಗಳಿಂದ ಉಂಟಾಗುವ ಪಿಡುಗುಗಳನ್ನು ಪರಿಣಾಮಕಾರಿಯಾಗಿ ದಮನ ಮಾಡಲು ಈಗಿರುವ ಮಾನನಷ್ಟಕರ ಲೇಖನಗಳಿಗೆ ಸಂಬಂಧಿಸಿದ ಕಾನೂನುಗಳು ಸಾಲದು. . . . ಎಂಬುದು ಚೆನ್ನಾಗಿ ತಿಳಿದಿರುವ ಅಂಶ. ನಮ್ಮ ಮುಂದಿರುವ ಪೂರ್ವ ನಿರ್ಬಂಧಗಳು. . . ಎಂಬಂಥ ಕ್ರಮಗಳ ಸಿದ್ಧಾಂತ ಪರಿಣಾಮರಹಿತವಾದವುಗಳು. ಶೋಷಣೆ ಮಾಡಲು ಬೆದರಿಸಿ ದುಡ್ಡು ಕೀಳಲು ಅಥವಾ ಸುಲಿಗೆಯನ್ನು ಮಾಡಲು ಒಂದು ಯೋಜನೆ ಅಥವಾ ಕಾರ್ಯಕ್ರಮ ರೂಪಿಸುವ ಉದ್ದೇಶವನ್ನು ಹೊಂದಿರುವ ಮತ್ತು ಅದನ್ನು ಕಾರ್ಯರೂಪಕ್ಕೆ ಇಳಿಸುವ ಸಾಮರ್ಥ್ಯವಿರುವ ದಿವಾಳಿಯಾದ ಯಾವುದೇ ಪ್ರಕಾಶಕನ ಸುಳ್ಳು ಹಾಗೂ ದುರುದ್ದೇಶಪೂರಿತ ಆಕ್ರಮಣಗಳಿಗೆ ಪ್ರತಿಯೊಂದು ಸಮುದಾಯದ ಶಾಂತಿ ಮತ್ತು ಉತ್ತಮ ವ್ಯವಸ್ಥೆ ಮತ್ತು ಪ್ರತಿಯೊಬ್ಬ ವ್ಯಕ್ತಿಯ ವ್ಯಾಪಾರ ಮತ್ತು ಖಾಸಗಿ ವ್ಯವಹಾರಗಳು ನಿರಂತರವಾಗಿ ಹಾಗೂ ದೀರ್ಘಕಾಲ ತುತ್ತಾಗುತ್ತದೆ."

ನನ್ನ ಗೆಳೆಯರು ಇಲ್ಲಿಯವರೆಗೂ ಪದೇ ಪದೇ ಎತ್ತುತ್ತಿರುವ ಅಂಶ ಎಂದರೆ ವಾಕ್ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ವ್ಯವಹರಿಸುವಾಗ ನ್ಯಾಯಾಧೀಶ ಹೋಮ್ಸ್ ಉಪಯೋಗಿಸಿರುವ ನುಡಿಗಟ್ಟು – "ಸ್ಪಷ್ಟ ಹಾಗೂ ಪ್ರಸ್ತುತ ಅಪಾಯ". ನಾವು ಇಲ್ಲಿಯವರೆಗೂ ಚರ್ಚಿಸಿರುವ ಸಿದ್ಧಾಂತಕ್ಕಿಂತ ಇದು ಹೊಸದಾಗಿದೆಯೇ ಎಂಬುದನ್ನು ತಿಳಿಯಲು ನಾನು ಪ್ರಯತ್ನಿಸುತ್ತಲೇ ಇದ್ದೇನೆ. ನಾನು ತಿಳಿದಿರುವಂತೆ ನಮ್ಮ ನ್ಯಾಯಾಧೀಶರುಗಳು ಸಹ ಇದೇ ಸಿದ್ಧಾಂತವನ್ನು ಅನುಸರಿಸುತ್ತಾರೆಂದು ನಾನು ಭಾವಿಸುತ್ತೇನೆ. ಉದಾಹರಣೆಗೆ, ಒಬ್ಬ ಪ್ರೊಫೆಸರ್ ಡೆಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಒಂದು ಉಪನ್ಯಾಸವನ್ನು ನೀಡುತ್ತಾರೆ ಎಂದು ಇಟ್ಟುಕೊಳ್ಳಿ. ಕಮ್ಯುನಿಷ್ಟರು ತಮ್ಮ ಉದ್ದೇಶವನ್ನು ಸಾಧಿಸಲು ಅಳವಡಿಸಿಕೊಳ್ಳುವ ಹಿಂಸಾತ್ಮಕ ವಿಧಾನಗಳನ್ನು ಅವರು ತಮ್ಮ ಉಪನ್ಯಾಸದಲ್ಲಿ ಉಲ್ಲೇಖಿಸಿದರೂ ಸಹ ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ಅಂಥ ಉಪನ್ಯಾಸವನ್ನು ನೀಡಿದರು ಎಂಬ ಕಾರಣ ಮಾತ್ರದಿಂದಲೇ ಅವರನ್ನು ಯಾವುದೇ ಅಪರಾಧದ ದೋಷಿಯನ್ನಾಗಿಸುವ ಹಾಗಿಲ್ಲ. ಅಲ್ಲಿ ಯಾವುದೇ "ಸ್ಪಷ್ಟ ಮತ್ತು ಪ್ರಸ್ತುತ ಅಪಾಯ"ವಿಲ್ಲ ಮತ್ತು ನಮ್ಮ ನ್ಯಾಯಾಧೀಶರುಗಳು ಸಹ ಇಂಥದೇ ಬಗೆಯ ವಿವೇಚನೆಯನ್ನು ಎತ್ತಿ ಹಿಡಿಯುತ್ತಾರೆ ಎಂಬುದರ ಬಗ್ಗೆ ನನಗೆ ಅನುಮಾನವಿಲ್ಲ. ಆದ್ದರಿಂದ, ನಾನು ಹೇಳಿದಂತೆ, ನಮ್ಮ ಗೆಳೆಯರು ಅಮೇರಿಕಾದ ನ್ಯಾಯಾಲಯಗಳ ತೀರ್ಪುಗಳಲ್ಲಿ ಬಳಸಿರುವಂಥ ಕೆಲವೊಂದು ಥಟ್ಟನೆ ಗಮನ ಸೆಳೆಯುವ ನುಡಿಗಟ್ಟುಗಳನ್ನು ಮತ್ತು ಕೆಲವು ತೀರ್ಪುಗಳನ್ನು ಏಕೆ ಅಷ್ಟೊಂದು ಪಾಲಿಸುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುವುದಿಲ್ಲ.

ಈಗ ನಾನು ಹಿಂಸಾಚಾರದಲ್ಲಿ "ಪ್ರಚೋದನೆ" ಎಂಬುದಕ್ಕೆ ಮಾತ್ರ ನನ್ನ ಮಾತನ್ನು ಸೀಮಿತಗೊಳಿಸುತ್ತೇನೆ. ನನ್ನ ಗೆಳೆಯರಾದ ಡಾ. ಶಾಂಪ್ರಸಾದ್ ಮುಖರ್ಜಿ ಮತ್ತು ಪಂಡಿತ್ ಕುಂಜ್ರು ಅವರು ಸಹ ನಾನು ಈಗ ಹೇಳುವುದಕ್ಕೆ ಸ್ವಲ್ಪ ಗಮನ ಕೊಡಬೇಕೆಂದು ಬಯಸುತ್ತೇನೆ. ಇದನ್ನು ಕೆಲವು ನಿರ್ದಿಷ್ಟ ಪ್ರಕರಣಗಳನ್ನು ಹೇಳುವ ಮೂಲಕ ತಿಳಿಸುತ್ತೇನೆ. ಮೊದಲನೆಯದಾಗಿ, ಅವರು "ಹಿಂಸೆ"

ಎಂಬ ಪದಕ್ಕೆ ನಿಖರವಾದ ಪರಿಭಾಷೆಯನ್ನು ಕೊಡುವ ಪರಿಸ್ಥಿತಿಯಲ್ಲಿ ಇದ್ದಾರೆಯೇ ಎಂಬುದನ್ನು ನಾನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ. "ಹಿಂಸೆ" ಎಂದರೇನು? ಅದನ್ನು ಕೇವಲ ದೈಹಿಕ ಹಿಂಸೆಗೆ ಸೀಮಿತಗೊಳಿಸಬೇಕೇ?

**ಡಾ. ಎಸ್.ಪಿ. ಮುಖರ್ಜಿ:** ಹಿಂಸಾತ್ಮಕ ಪದಗಳನ್ನು ಬಿಟ್ಟುಬಿಡಲಾಗಿದೆ.

**ಡಾ. ಅಂಬೇಡ್ಕರ್:** ನಾನು ಹಿಂಸೆಯನ್ನು ಸೂಚಿಸುವ ಪದಗಳ ಬಗ್ಗೆ ಮಾತನಾಡುತ್ತಿಲ್ಲ. ಶಾಸನಸಭೆ ಮತ್ತು ನ್ಯಾಯಾಲಯಕ್ಕೆ ಹಿಂಸೆ ಯಾವುದು ಮತ್ತು ಯಾವುದು ಹಿಂಸೆ ಅಲ್ಲ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುವಂತೆ ನಿಖರವಾದ ಪರಿಭಾಷೆಯನ್ನು ಕೊಡುವುದು ಅವರಿಗೆ ಸಾಧ್ಯವಿದೆಯೇ. ನನಗೆ ಅಂಥ ಪರಿಭಾಷೆ ಯಾವುದು ತಿಳಿದಿಲ್ಲ.

**ಶ್ರೀ ಕಾಮತ್:** "ಕಾನೂನಿನಲ್ಲಿ ಪರಿಭಾಷಿಸಿದಂತೆ" ಎಂದು ಹಾಕಿಬಿಡಿ.

**ಡಾ. ಅಂಬೇಡ್ಕರ್:** ಇದು ಸಮಸ್ಯೆಯನ್ನು ಮುಂದಕ್ಕೆ ಹಾಕಿದಂತೆ ಅಷ್ಟೇ. ಮುಂದೊಂದು ದಿನ ಕಾನೂನನ್ನು ಮಾಡುವಾಗ ನಾವು "ಹಿಂಸೆ" ಎಂಬುದಕ್ಕೆ ಪರಿಭಾಷೆಯನ್ನು ಕೊಡಲೇಬೇಕಾಗುತ್ತದೆ.

ಈಗ ನಾನು ನಿರ್ದಿಷ್ಟ ಪ್ರಕರಣಗಳ ಬಗ್ಗೆ ತಿಳಿಸುತ್ತೇನೆ. ಉದಾಹರಣೆಗೆ ಗಲಭೆ ಇದೆ ಎಂದು ಭಾವಿಸೋಣ–ನಾನು ವಾಸ್ತವವಾಗಿ ನಡೆದ ಘಟನೆಗಳ ಬಗ್ಗೆ ಮಾತನಾಡುತ್ತಿದ್ದೇನೆ–ಒಂದು ನಿರ್ದಿಷ್ಟ ಗ್ರಾಮದಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಹಿಂದೂ ಮೇಲ್ಜಾತಿಯವರ ನಡುವೆ ಗಲಭೆಯುಂಟಾದಲ್ಲಿ ಮತ್ತು ಮೇಲ್ವರ್ಗದವರೆಲ್ಲ ಸೇರಿ ಪರಿಶಿಷ್ಟ ಜಾತಿಯವರಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ನಿರ್ಣಯಕ್ಕೆ ಬಂದರೆ, ಅವರಿಗೆ ಯಾವುದೇ ಸಾಮಗ್ರಿಗಳು ದೊರೆಯದಂತೆ ಮಾಡುವುದು, ಜಮೀನುಗಳಿಗೆ ಹೋಗದಂತೆ ಅವರನ್ನು ತಡೆಯುವುದು, ಉರುವಲನ್ನು ಸಂಗ್ರಹಿಸಲು ಕಾಡಿನೊಳಕ್ಕೆ ಹೋಗದಂತೆ ಅವರನ್ನು ತಡೆಯುವುದು, ಇವನ್ನು ಶಾಂ ಪ್ರಸಾದ್ ಮುಖರ್ಜಿಯವರು ಮತ್ತು ಪಂಡಿತ್ ಕುಂಜ್ರು ಅವರು ಅಪರಾಧವೆಂದು ಸರಕಾರ ಪರಿಗಣಿಸಬೇಕೆಂದು ಹೇಳುತ್ತಾರೆಯೇ ಅಥವಾ ಪರಿಗಣಿಸಬಾರದೆಂದು ಹೇಳುತ್ತಾರೆಯೇ ಎಂಬುದನ್ನು ನಾನು ತಿಳಿಯಬೇಕಾಗಿದೆ.

**ಶ್ರೀ ನಾಜಿರುದ್ದೀನ್ ಅಹಮದ್:** ಈ ಸಂಬಂಧವಾಗಿ ಡಾಕ್ಟರುಗಳು ಭಿನ್ನಾಭಿಪ್ರಾಯ ಹೊಂದಿದ್ದಾರೆ.

**ಡಾ. ಅಂಬೇಡ್ಕರ್:** ನಾನು, ಮುಂಬಯಿಯಲ್ಲಿ ಇತ್ತೀಚೆಗೆ ನಡೆದ ಒಂದು ಉದಾಹರಣೆಯನ್ನು ಹೇಳುತ್ತೇನೆ. ಥಾಣಾ ಬಳಿಯ ಒಂದು ಸ್ಥಳದಲ್ಲಿ ಮೇಲ್ವರ್ಗದವರು ಮತ್ತು ಪರಿಶಿಷ್ಟ ಜಾತಿಯವರ ನಡುವೆ ಒಂದು ಬಾವಿಯಿಂದ ನೀರು ತೆಗೆದುಕೊಳ್ಳುವ ಬಗ್ಗೆ ಗಲಭೆ ಉಂಟಾಗಿತ್ತು. ಪೋಲೀಸಿನವರ ಸಹಾಯದೊಂದಿಗೆ, ಅಲ್ಲಿಯ ಪರಿಶಿಷ್ಟ ಜಾತಿಯವರು ಬಾವಿಯಿಂದ ನೀರನ್ನು ಮೇಲ್ವರ್ಗದವರ ಜೊತೆಯಲ್ಲಿ ತೆಗೆದುಕೊಳ್ಳುವ ಅವರ ಹಕ್ಕನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಮೇಲ್ವರ್ಗದವರಿಗೆ ಈ ವಿಷಯ ಇಷ್ಟವಾಗಲಿಲ್ಲ. ಬಾವಿಯನ್ನು ತಾವು ಮಾತ್ರವೇ ಬಳಸಬೇಕೆಂದು ಅವರು ಬಯಸಿದರು. ಎರಡು ದಿನಗಳ ಹಿಂದೆ ಮುಂಬಯಿಯ ಮಾಧ್ಯಮದಲ್ಲಿ ಒಂದು ವಿಷಯ ವರದಿಯಾಯಿತು. ಅದರಲ್ಲಿ ಮೇಲ್ವರ್ಗದವರೇ ಬಾವಿಯೊಳಗೆ ಕೆಲವು ವಿಷಕಾರಿ ಕಳೆಗಳನ್ನು ಎಸೆಯುವಂತೆ ತಮ್ಮವರಿಗೆ ತಿಳಿಸಿದ್ದಾರೆ ಎಂಬುದು ವರದಿಯಾಗಿತ್ತು. ಪರಿಣಾಮವಾಗಿ ಇಡೀ ನೀರು ವಿಷಮಯವಾಗಿ ಅದನ್ನು ಕುಡಿದ ಪರಿಶಿಷ್ಟ ಜಾತಿಗೆ ಸೇರಿದ ಕೆಲವರು ವಿಷದ ಪರಿಣಾಮದಿಂದಾಗಿ ನರಳಬೇಕಾಯಿತು. ತಾವು ನೀಡುವ ಪ್ರಚೋದನೆಯ ಪರಿಭಾಷೆಯನ್ನು ಹಿಂಸೆಗೆ ಸೀಮಿತಗೊಳಿಸುತ್ತಾರೆಯೇ ಅಥವಾ ಅವರು ತಮ್ಮ ಪರಿಭಾಷೆಯನ್ನು, ಒಂದು ಸಮುದಾಯ ಇನ್ನೊಂದು ಸಮುದಾಯಕ್ಕೆ ತೊಂದರೆಯುಂಟು ಮಾಡುವ ಮತ್ತು ಅದನ್ನು ಹಾನಿಗೊಳಿಸಲು

ಮಾಡುವ ಯಾವುದೇ ಕೃತ್ಯಕ್ಕೆ ವಿಸ್ತರಿಸುತ್ತಿದ್ದಾರೆಯೇ ಎಂಬ ಪ್ರಶ್ನೆಯನ್ನು ಅವರಿಬ್ಬರಿಗೆ ಕೇಳಬೇಕಾಗಿದೆ.

**ಡಾ. ಎಸ್.ಪಿ. ಮುಖರ್ಜಿ:** ಅಂಥ ಸಂದರ್ಭದಲ್ಲಿ ನಾನು ಮತ್ತು ನೀವು ಅಲ್ಲಿಗೆ ಹೋಗಿ ಅದನ್ನು ತಡೆಗಟ್ಟೋಣ.

**ಡಾ. ಅಂಬೇಡ್ಕರ್**: ನೀವು ಮತ್ತು ನಾನು ಎಲ್ಲೆಡೆಗೂ ಹೋಗಲಾಗುವುದಿಲ್ಲ. ನೀವು ಚುನಾವಣೆಗಳನ್ನು ಎದುರಿಸುವುದರಲ್ಲಿ ನಿರತರಾಗಿರುತ್ತೀರಿ ಮತ್ತು ನಾನು ಮತ್ತೇನನ್ನೋ ಮಾಡುತ್ತಿರಬಹುದು. ಆ ಜನರನ್ನು ರಕ್ಷಿಸಲು ಅಲ್ಲಿಗೆ ಹೋಗಲು ನಮಗೆ ಸಮಯವೂ ಇರುವುದಿಲ್ಲ. ಜವಾಬ್ದಾರಿಯನ್ನು ನಮ್ಮ ಹೆಗಲಿಗೇರಿಸಿಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ. ಅದಕ್ಕಾಗಿ ಕಾನೂನಿನಲ್ಲಿ ಆ ಬಗ್ಗೆ ಉಪಬಂಧ ಕಲ್ಪಿಸುವುದು ಉತ್ತಮ.

ನಿರ್ದಿಷ್ಟ ಕಾನೂನುಗಳಿಗೆ ಸಂಬಂಧಪಟ್ಟಂತೆ, ನಾನು ಮತ್ತು ನನ್ನ ಸಹೋದ್ಯೋಗಿಗಳು ಅಥವಾ ಟ್ರೆಜರಿ ಬೆಂಚುಗಳು ಪದೇಪದೇ ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ವಾದಿಸುತ್ತಿರುವುದೆಂದರೆ ಕೆಲವೊಂದು ಉದ್ದೇಶಗಳಿಗಾಗಿ ಕಾನೂನನ್ನು ರಚಿಸಲು ಸಂಸತ್ತಿಗೆ ಸಾಮರ್ಥ್ಯವನ್ನು ನೀಡುವ ಕಾರಣಕ್ಕಾಗಿ ಮಾತ್ರ. ನಾವು ಯಾವುದೇ ಕಾನೂನುಗಳನ್ನು ಸಹ ಹೊರಡಿಸುತ್ತಿಲ್ಲ. ಅಲ್ಲದೆ ಕಾನೂನುಗಳನ್ನು ಈಗಿರುವ ರೂಪದಲ್ಲಿಯೇ ಸಂರಕ್ಷಿಸುತ್ತಲೂ ಇಲ್ಲ. ಆದರೆ ಏಕೋ ಗೊತ್ತಿಲ್ಲ ಕೆಲವು ಸದಸ್ಯರು ವಿರೋಧಿಸಲೇಬೇಕೆಂದು ನಿರ್ಧರಿಸಿದಂತಿದೆ. ವಿರೋಧಿ ದೃಷ್ಟಿಕೋನವನ್ನು ತೆಗೆದುಕೊಳ್ಳಲು ನಿರ್ಧರಿಸಿದ ಸದಸ್ಯರು – ಅವರು ನನ್ನನ್ನು ಕ್ಷಮಿಸಬೇಕು – ಶಾಸನ ರಚನೆಯ ಅಧಿಕಾರ ಮತ್ತು ನಿರ್ದಿಷ್ಟ ಶಾಸನ ರಚನೆ ಇವೆರಡರ ನಡುವೆ ತಮ್ಮ ಹಠದಿಂದಾಗಿ ವ್ಯತ್ಯಾಸವನ್ನು ಕಾಣುತ್ತಿಲ್ಲ.

**ಡಾ. ಎಸ್.ಪಿ. ಮುಖರ್ಜಿ:** ನಿಮ್ಮ ಹಠಮಾರಿತನ ನಮಗೆ ಅರ್ಥವಾಗುತ್ತಿಲ್ಲ.

*ಸದನವನ್ನು ಮೂರುವರೆ ಗಂಟೆಯವರೆಗೆ ಮುಂದೂಡಲಾಯಿತು.*

ಸದನವು ಮೂರುವರೆ ಗಂಟೆಗೆ ಮತ್ತೆ ಸಮಾವೇಶಗೊಂಡಿತು.

(ಪಂಡಿತ್ ಠಾಕುರ್ ದಾಸ್ ಭಾರ್ಗವ ಇವರ ಅಧ್ಯಕ್ಷತೆಯಲ್ಲಿ)

***ಶ್ರೀ ಹುಸೇನ್ ಇಮಾಮ್**: ಸರಿಯಾದ ರೀತಿಯಲ್ಲಿ ಯೋಚಿಸಬಲ್ಲ ಯಾವುದೇ ಜಮೀನ್ದಾರನೂ ಸಂವಿಧಾನದ ಅಥವಾ ಸನ್ಮಾನ್ಯ ಪ್ರಧಾನಮಂತ್ರಿಯವರು ವಿಧಿಸಿರುವ ಕಾನೂನನ್ನು ಆಕ್ಷೇಪಿಸುವುದಿಲ್ಲ ಎಂಬುದರ ಬಗೆಗೆ ಸದನದ ಗಮನ ಸೆಳೆಯಲು ನಾನು ಇಚ್ಛಿಸುತ್ತೇನೆ. ಇಡೀ ವಾಗ್ವಿವಾದ ಇರುವುದು. ಸಂವಿಧಾನದ ಆಶಯವನ್ನು ನೆರವೇರಿಸಲಾಗುತ್ತಿದೆಯೇ ಅಥವಾ ಸಂವಿಧಾನವು ಅಥವಾ ಅದರ ನಿಯಮಗಳು ಒಳಗೊಂಡಿಲ್ಲದಿರುವುದನ್ನು ಸಂವಿಧಾನದ ಹೆಸರಿನಲ್ಲಿ ನಮ್ಮ ಮೇಲೆ ಹೊರಿಸಲಾಗುತ್ತಿದೆಯೇ ಎಂಬ ಬಗ್ಗೆ ಮತ್ತು ಎರಡನೆಯದಾಗಿ..........

**ಮಾನ್ಯ ಸದಸ್ಯರು:** ನಾವು ಸಂವಿಧಾನವನ್ನು ತಿದ್ದುಪಡಿ ಮಾಡುತ್ತಿದ್ದೇವೆ.

**ಶ್ರೀ ಹುಸೇನ್ ಇಮಾಮ್:** ಇಲ್ಲ. ನಾವು ಮಾಡುತ್ತಿರುವುದೆಂದರೆ, ಪ್ರಧಾನಮಂತ್ರಿಯವರ ಪ್ರಕಾರ, ನಾವು ಬಳಸಿರುವ ಪದಗಳು ಮಾಡದೆ ಉಳಿದಿರುವ ಸಂವಿಧಾನದ ಆಶಯವನ್ನು ನೆರವೇರಿಸುವುದು. ಆ ವಿಷಯದಲ್ಲಿ ನನಗೆ ಅವರೊಂದಿಗೆ ಸಹಮತವಿದೆ. ಸಂವಿಧಾನ ಸಭೆಯ ಸದಸ್ಯನಾಗಿ, ಆವತ್ತು

---

* ಸಂ.ಚ. ಸಂಪುಟ ೧೨ ಭಾಗ ೨ ೧೯೫೧ ರ ಜೂನ್ ೧ ಪಿ.ಪಿ ೯೯೦೬–೦೭

ನಾನೂ ಹಾಜರಿಲ್ಲದಿದ್ದರೂ ನಾನು ಇದಕ್ಕೆ ಒಬ್ಬ ಪಕ್ಷಕಾರನಾಗಿದ್ದೇನೆ. ಅಲ್ಲಿ ಸಂವಿಧಾನದ ಎರಡು ಮುಖ್ಯ ತತ್ವಗಳಿದ್ದವು–ಮೊದಲನೆಯದಾಗಿ, ಸಂವಿಧಾನ ಜಾರಿಗೆ ಬಂದ ನಂತರ ಅಂಗೀಕೃತಗೊಂಡ ಅಧಿನಿಯಮಗಳು ಮತ್ತು ಸಂವಿಧಾನವನ್ನು ಜಾರಿಗೆ ತರುವುದಕ್ಕೆ ಮುಂಚೆ ಹದಿನೆಂಟು ತಿಂಗಳ ಅವಧಿಯಲ್ಲಿ ಅಂಗೀಕೃತಗೊಂಡ ಅಧಿನಿಯಮಗಳು. ಈಗ ನಾನು, ಈ ಹನ್ನೊಂದು ಅಧಿನಿಯಮಗಳು ಈ ಎರಡು ಗುಂಪಿಗೆ ಸೇರುತ್ತವೆಯೇ ಎಂದು ಪ್ರಮಾಣೀಕರಿಸಬೇಕೆಂದು ಸದನವನ್ನು ಮತ್ತು ಕಾನೂನು ಸಚಿವರನ್ನು ಕೇಳುತ್ತೇನೆ. ಸಂವಿಧಾನ ಜಾರಿಗೆ ಬಂದ ನಂತರ ಅಂಗೀಕೃತಗೊಂಡ ಅಧಿನಿಯಮಗಳ ಪಟ್ಟಿಗೆ ಕೇವಲ ನಾಲ್ಕು ಅಧಿನಿಯಮಗಳು ಸೇರುತ್ತವೆ ಮತ್ತು ಅವು ರಾಷ್ಟ್ರಪತಿಯವರ ಸಮ್ಮತಿಯನ್ನು ಪಡೆದಿವೆ. ೭ ಅಧಿನಿಯಮಗಳು ಇದರ ವ್ಯಾಪ್ತಿಗೆ ಬರುವುದಿಲ್ಲ.

**ಡಾ. ಅಂಬೇಡ್ಕರ್**: ಹೌದು, ಅದಕ್ಕೆ ಸಮ್ಮತಿ ದೊರೆತಿದೆ. ನನಗೆ ತಿಳಿದಿದೆ.

**ಶ್ರೀ ಹುಸೇನ್ ಇಮಾಮ್**: ನಾಲ್ಕನ್ನು ಉಳಿದು ಮಿಕ್ಕ ಅಧಿನಿಯಮಗಳಿಗೆ ದೊರೆತಿಲ್ಲ. ಅವೆಂದರೆ ಬಿಹಾರ್ ಅಧಿನಿಯಮ, ಯುಪಿ ಅಧಿನಿಯಮ, ಮಧ್ಯಪ್ರದೇಶ ಅಧಿನಿಯಮ ಮತ್ತು ಇತರ ಒಂದು ಅಧಿನಿಯಮ, ಮಿಕ್ಕ ಯಾವುದೇ ಅಧಿನಿಯಮಕ್ಕೆ ಸಮ್ಮತಿ ದೊರೆತಿಲ್ಲ.

**ಶ್ರೀ ಭಾರತಿ (ಮದ್ರಾಸು):** ಮದ್ರಾಸು ಅಧಿನಿಯಮಕ್ಕೆ ಸಮ್ಮತಿ ದೊರೆತಿಲ್ಲ.

**ಶ್ರೀ ಹುಸೇನ್ ಇಮಾಮ್**: ಮದ್ರಾಸು ಅಧಿನಿಯಮ ೧೯೫೧ರ ೧ಕ್ಕೆ ಸಮ್ಮತಿ ದೊರೆದಿದೆ. ೧೯೪೮ ರ ಅಧಿನಿಯಮಕ್ಕೆ ಅಲ್ಲ. ಈ ವಿಷಯವನ್ನು ನಾನು ಏಕೆ ಉಲ್ಲೇಖಿಸುತ್ತೇನೆ ಎಂದರೆ, ಪ್ರಾರಂಭದಲ್ಲಿ ನಾನು ಈ ವಿಷಯದ ಬಗ್ಗೆ ಮಾತನಾಡಿದ್ದೆ ಮತ್ತು ಇವುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಲು ಸದನಕ್ಕೆ ಮತ್ತು ಆಯ್ಕೆ ಸಮಿತಿಗೆ ಸಾಕಷ್ಟು ಸಮಯವನ್ನು ಕೊಡಬೇಕೆಂದು ಸಲಹೆ ನೀಡಿದ್ದೆ. . . ನಾನು ಗಮನ ಸೆಳೆಯಲಿರುವ ಮತ್ತೊಂದು ವಿಷಯವೆಂದರೆ ಸನ್ಮಾನ್ಯ ಪ್ರಧಾನಮಂತ್ರಿಯವರು ನೀಡಿದ ಹೇಳಿಕೆಯಂತೆ ನಾವು ನ್ಯಾಯಸಮ್ಮತವಾದ ಮತ್ತು ಪರ್ಯಾಪ್ತ ನಷ್ಟ ಪರಿಹಾರವನ್ನು ಸಂದಾಯ ಮಾಡಬೇಕೇ ಹೊರತು ಅತಿ ಹೆಚ್ಚಿಗೆ ಅಲ್ಲ ಮತ್ತು ನಾನು ಅದನ್ನು ಒಪ್ಪುತ್ತೇನೆ. ಆದರೆ ಈಗಿರುವಂತೆ ಅವನ್ನು ಪರಿಶೀಲಿಸಿ ಜಮೀನ್ದಾರಿ ಪದ್ಧತಿಯನ್ನು ನಿಷೇಧಿಸುವ ಸರ್ಕಾರದ ನಿರ್ಧಾರವನ್ನು ನಾನು ಬೆಂಬಲಿಸುತ್ತೇನೆ. ಆದರೆ ಅದು ಸರಿಯಾದ ಷರತ್ತುಗಳಿಗೊಳಪಟ್ಟಿರಬೇಕು.

**ಡಾ. ಅಂಬೇಡ್ಕರ್:** "ನ್ಯಾಯಯುತ ನಷ್ಟ ಪರಿಹಾರ" ಎಂಬ ಪದಗಳು ಅನುಚ್ಛೇದ ೩೧ ರಲ್ಲಿ ಇಲ್ಲ.

**ಶ್ರೀ ಹುಸೇನ್ ಇಮಾಮ್:** ಆ ಪದಗಳು ಮಾನ್ಯ ಪ್ರಧಾನಮಂತ್ರಿಯವರು ಸೂಚಿಸಿದ ಪದಗಳು. ಅನುಚ್ಛೇದ ೩೧ ರ ಮಟ್ಟಿಗೆ ಹೇಳುವುದಾದರೆ, ನಮ್ಮ ಮೇಲೆ ಹೇರುತ್ತಿರುವ ಈ ಏಳು ಅಧಿನಿಯಮಗಳು ಅನುಚ್ಛೇದ ೩೧ ರ ಮೂಲ ಉಪಬಂಧಗಳಲ್ಲಿ ಸೇರಿಲ್ಲ ಎಂಬುದು ನನ್ನ ಆರೋಪ.

**ಡಾ. ಅಂಬೇಡ್ಕರ್:** ಅನುಚ್ಛೇದ ೩೧–ಎ ಅವುಗಳಿಗೆ ಅನ್ವಯಿಸುತ್ತದೆ.

**ಶ್ರೀ ಹುಸೇನ್ ಇಮಾಮ್**: ನಾನು ಹೇಳುತ್ತಿದ್ದುದು ನಾವು ವಾಸ್ತವವನ್ನು ಎದುರಿಸಬೇಕು ಎಂದು. ಸಮಾಜವಾದಿ ಪಕ್ಷದವರು ಹೇಳುತ್ತಾರೆ ಕಾಂಗ್ರೆಸ್ ಸರ್ಕಾರ ನಿಗದಿಪಡಿಸುವ ಕಂತುಗಳನ್ನು ನಾವು ಒಪ್ಪುವುದಿಲ್ಲ ಎಂದು. ಕಮ್ಯುನಿಷ್ಟರು, ತಾವು ಅದಕ್ಕೆ ಮಾನ್ಯತೆ ಕೊಡುವುದಿಲ್ಲ ಎಂದು ತಮ್ಮ ಮನೆಯ ಮಳಿಗೆಗಳ ಮೇಲೆ ನಿಂತು ಘೋಷಿಸುತ್ತಾರೆ. ಹಾಗಿದ್ದಾಗ್ಯೂ ಭ್ರಮೆಯಲ್ಲಿ ಇರುವುದು ಏಕೆ ಮತ್ತು ಅದನ್ನು ೪೦ ವರ್ಷಗಳಲ್ಲಿ ಸಂದಾಯ ಮಾಡಲಾಗುತ್ತದೆ ಎಂದು ನಂಬುವುದು ಹೇಗೆ? ಏನೂ

ಇಲ್ಲದಿರುವುದಕ್ಕಿಂತ ಅರ್ಧ ಲೋಫು (ಸ್ವಲ್ಪ ಆಹಾರ) ಉತ್ತಮ ಮತ್ತು ನೀವು ಕೊಡುವುದಾದರೆ ಈಗಲೇ ಕೊಡಬೇಕು. ಜಮೀನ್ದಾರರ ೫೦೦ ಅಥವಾ ೬೦೦ ಅಥವಾ ೧೦೦೦ ರೂಗಳಷ್ಟು ಆದಾಯವಿರುವ ಸಣ್ಣ ಹಿಡುವಳಿ ಪರಿಸ್ಥಿತಿಯನ್ನು ನೀವು ಅರ್ಥಮಾಡಿಕೊಳ್ಳಬೇಕು. ಅವನು ಶ್ರೀಮಂತ ಬಂಡವಾಳದಾರನಲ್ಲ. ಕಡೆಯ ಪಕ್ಷ ಕಡಿಮೆ ಆದಾಯದ ಗುಂಪಿಗಾದರೂ ಪರಿಹಾರ ಧನವನ್ನು ಇಡುಗಂಟಾಗಿ ಕೊಡಬೇಕು. ಅದರಿಂದ ಅವರು ಯಾವುದಾದರೂ ವ್ಯಾಪಾರವನ್ನು ಪ್ರಾರಂಭಿಸಬಹುದು.

*ಡಾ. ಅಂಬೇಡ್ಕರ್:** ನಾನು ಮಂಡಿಸಿದ ತಿದ್ದುಪಡಿಗೆ ಸಂಬಂಧಪಟ್ಟಂತೆ, ಅದನ್ನು ಬೆಂಬಲಿಸುವ ಸಲುವಾಗಿ ಯಾವುದೇ ವಾದ ಅಗತ್ಯವಿದೆ ಎಂದು ನಾನು ಭಾವಿಸುವುದಿಲ್ಲ. ನಾನು ಮಂಡಿಸಿದ ತಿದ್ದುಪಡಿ "ಸಂಪತ್ತು" ಎಂಬ ಪದದ ಅರ್ಥವನ್ನು ವಿಸ್ತರಿಸುವುದಷ್ಟೆ. "ಸಂಪತ್ತು" ಎಂಬ ಪದದ ಪರಿಭಾಷೆಗೆ ಸಂಬಂಧಿಸಿದಂತೆ ಭಾಗ–ಎ ರಾಜ್ಯಗಳಲ್ಲಿ ಪ್ರಚಲಿತವಿರುವ ಕಾನೂನುಗಳನ್ನು ನಾವು ಪರಿಶೀಲನೆಗೆ ಕೈಗೆತ್ತಿಕೊಂಡಾಗ, ಕೆಲವರು, ಭಾಗ–ಬಿ ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ "ಸಂಪತ್ತು" ಎಂಬ ಪದದ ಪರಿಭಾಷೆಯ ಕಡೆಗೆ ಸಾಕಷ್ಟು ಗಮನ ನೀಡಿಲ್ಲ ಎಂದು ಭಾವಿಸಿದ್ದರು. ಆ ಸಂದೇಹವನ್ನು ನಿವಾರಿಸುವ ಸಲುವಾಗಿ, ಅದನ್ನು ಗಮನಿಸುವುದು ಮತ್ತು "ಸಂಪತ್ತು" ಪದದ ಪರಿಭಾಷೆಯನ್ನು ವಿಸ್ತರಿಸುವುದು ಅಗತ್ಯ ಎಂದು ನಾನು ಭಾವಿಸಿದೆ. ಆದ್ದರಿಂದ ಅದನ್ನು ತಿದ್ದುಪಡಿಯ ಮೂಲಕ ಮಾಡಲು ನಾನು ಪ್ರಸ್ತಾವಿಸುತ್ತೇನೆ.

ನಾನು ಚರ್ಚೆಯಲ್ಲಿ ಭಾಗವಹಿಸಲು ಎದ್ದು ನಿಂತಿದುದಕ್ಕೆ ಇರುವ ಮುಖ್ಯ ಕಾರಣ ಎಂದರೆ ನನ್ನ ಗೆಳೆಯರಾದ ಮಾನ್ಯ ರಣಬೀರ್ ಸಿಂಗ್ ಅವರು ಎತ್ತಿದ ಅಂಶದ ಬಗ್ಗೆ ಮಾತನಾಡಲು. ಅವರ ವಾದವೆಂದರೆ, ನಾನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ, ಭಾರತದಲ್ಲಿನ ಕೆಲವು ರಾಜ್ಯಗಳಲ್ಲಿ "ಸಂಪತ್ತು" ಎಂಬ ಪದವನ್ನು ನಾವು ಮಧ್ಯವರ್ತಿ ಎಂದು ಕರೆಯಲಾಗುವುದನ್ನು ಮಾತ್ರ ಒಳಗೊಳ್ಳುವ ರೀತಿಯಲ್ಲಿ ಸೀಮಿತ ಅರ್ಥದಲ್ಲಿ ಬಳಸಲಾಗುತ್ತದೆ. ಆದರೆ ರೈತವಾರಿ "ಸಂಪತ್ತು" ಎಂದು ನಾವು ಕರೆಯುವುದನ್ನು ಎಂದರೆ, ಜನತೆ ತಮ್ಮ ಮತ್ತು ರಾಜ್ಯದ ನಡುವೆ ಯಾರೇ ಮಧ್ಯವರ್ತಿಗಳಿಲ್ಲದೆ ತಮ್ಮ ಸ್ವಂತ ಹಕ್ಕಿನಲ್ಲಿ ಧಾರಣ ಮಾಡಿರುವ ಸಂಪದವನ್ನು ಒಳಗೊಳ್ಳುವುದಿಲ್ಲ. ಕೆಲವೊಂದು ರಾಜ್ಯಗಳಲ್ಲಿ "ಸಂಪತ್ತು" ಎಂಬ ಪದದ ಪರಿಭಾಷೆ ವಿಸ್ತೃತವಾಗಿದೆ ಮತ್ತು ರೈತವಾರಿ ಅಡಿಯಲ್ಲಿನ ಹಿಡುವಳಿದಾರರನ್ನು ಅಥವಾ ಮುಂಬಯಿ ಭೂ ಕಂದಾಯ ಸಂಹಿತೆಯ ಅಡಿಯಲ್ಲಿನ ಅನುಭೋಗದಾರರನ್ನು ಅಥವಾ ಭಾರತದ ಇತರ ಭಾಗಗಳಲ್ಲಿನ ರೈತರನ್ನು ಒಳಗೊಂಡಿರಬಹುದು ಎಂಬುದು ನಿಜ. ಒಂದು ಕಾಲದಲ್ಲಿ ನಾನು "ಎಸ್ಟೇಟ್" ಎಂಬ ಪದಕ್ಕೆ ವಿವರಣೆಯನ್ನು ಸೇರ್ಪಡೆ ಮಾಡುವ ಮೂಲಕ, ಸೀಮಿತ ಅರ್ಥಕೊಡುವ ಸಾಧ್ಯತೆಯ ಬಗ್ಗೆ ಯೋಚಿಸಿದ್ದೆ. ಆದರೆ ಆ ಬಗ್ಗೆ ಮತ್ತಷ್ಟು ಯೋಚನೆ ಮಾಡಿದ ನಂತರ, ನಾನು ತಿಳಿಸುವ ಅಂಶವನ್ನು ಒಳಗೊಳ್ಳುವಂಥ ವಿವರಣೆಯನ್ನು ಕೊಡುವುದು ಬಹುಮಟ್ಟಿಗೆ ಅಸಾಧ್ಯವೆಂಬುದು ನನಗೆ ತಿಳಿದು ಬಂತು. ಆದರೆ, ರೈತವಾರಿ ಗೇಣಿದಾರರನ್ನು ಒಕ್ಕಲೆಬ್ಬಿಸುವ ಉದ್ದೇಶಕ್ಕೆ ಅನುಚ್ಛೇದ–೩೧(ಎ) ರಲ್ಲಿ ಒಳಗೊಂಡ ಉಪಬಂಧಗಳನ್ನು ಬಳಸಿಕೊಳ್ಳುವ ಆಶಯ ಸರ್ಕಾರಕ್ಕೆ ಇಲ್ಲ ಎಂಬುದನ್ನು ನಾನು ಹೇಳಲಿಚ್ಛಿಸುತ್ತೇನೆ.

**ಶ್ರೀ ಹುಸೇನ್ ಇಮಾಮ್:** ಅವು ಎಷ್ಟೇ ದೊಡ್ಡದಾಗಿದ್ದರೂ?

---

* ಸಂ.ಚ. ಸಂಪುಟ ೧೨ ಭಾಗ ೨ ೧೯೫೧ ರ ಜೂನ್ ೧ ಪಿಪಿ ೯೯೧೨–೧೫

**ಡಾ. ಅಂಬೇಡ್ಕರ್:** ಅದು ಬೇರೆಯದೇ ವಿಷಯವಾಗುತ್ತದೆ. ನಾವು ಇಲ್ಲಿ ಮಧ್ಯವರ್ತಿಗಳು ಮತ್ತು ರೈತವಾರಿ ಹಿಡುವಳಿದಾರರ ಮಧ್ಯೆ ವ್ಯತ್ಯಾಸವನ್ನು ಮಾಡುತ್ತಿದ್ದೇವೆ.

ಈಗ ಖಂಡಿತವಾಗಿಯೂ ಸರ್ಕಾರದ ಉದ್ದೇಶ ಅದಲ್ಲ. ನನಗೆ ಗೊತ್ತು, ಈ ವಿಷಯದಲ್ಲಿ ಆಸಕ್ತಿಯುಳ್ಳ ನನ್ನ ಗೆಳೆಯರು ಸರ್ಕಾರ ವ್ಯಕ್ತಪಡಿಸುವ ಯಾವುದೇ ಆಶಯದ ಬಗ್ಗೆ ಸಮಾಧಾನ ಹೊಂದುವುದಿಲ್ಲ ಎಂಬುದು. ಆದರೆ ವಿಧೇಯಕದಲ್ಲಿರುವ ಆಶಯಕ್ಕಿಂತಲೂ ಹೆಚ್ಚಿನ ಆಶಯ ಇದೆ ಎಂದು ನಾನು ಭಾವಿಸುತ್ತೇನೆ. ನನ್ನ ಗೆಳೆಯರಾದ ರಣಬೀರ್ ಸಿಂಗ್ ಅವರು ಅನುಚ್ಛೇದ ೩೧(ಎ) ಗೆ ಸೇರಿಸಿರುವ ಪರಂತುಕವನ್ನು ಓದಿದರೆ, ಅಂಥ ಪ್ರತಿಯೊಂದು ವಿಧೇಯಕವನ್ನು ರಾಷ್ಟ್ರಪತಿಯವರ ಪರಿಗಣನೆಗಾಗಿ ಕಾದಿರಿಸತಕ್ಕುದಾಗಿರುತ್ತದೆ. ಅದು ಸಾಕಷ್ಟು ಮಟ್ಟಿಗಿನ ಸುರಕ್ಷಾ ಕ್ರಮಗಳನ್ನು ಒಳಗೊಂಡಿದೆ ಎಂಬುದನ್ನು ತಿಳಿಯಬಹುದು ಮತ್ತು ಈ ಚರ್ಚೆಯ ಬಗ್ಗೆ ಪ್ರಧಾನಮಂತ್ರಿಯವರು ಉತ್ತರ ಕೊಡುವ ತಮ್ಮ ಭಾಷಣದಲ್ಲಿ ಸರ್ಕಾರಕ್ಕೆ ಯಾವುದೇ ಅಂಥ ಆಶಯವಿಲ್ಲವೆಂದು ಸ್ಪಷ್ಟಪಡಿಸುತ್ತಾರೆ. ರಾಷ್ಟ್ರಪತಿಯವರ ಪರಿಗಣನೆಗಾಗಿ ಅವರ ಮುಂದಿಡುವ ಯಾವುದೇ ಅಂಥ ಕ್ರಮಕ್ಕೆ ಈ ಸದನದಲ್ಲಿ ಕೈಗೊಂಡ ತೀರ್ಮಾನಕ್ಕೆ, ಅಂಥ ಯಾವುದೇ ಕ್ರಮಕ್ಕೆ ಸಂಬಂಧಪಟ್ಟಂತೆ, ರಾಷ್ಟ್ರಪತಿಯವರು ಅನುಮತಿ ನೀಡುವುದಕ್ಕೆ ಬದ್ಧರಾಗಿರುತ್ತಾರೆ. ಆದ್ದರಿಂದ, ಅಂಥ ಯಾವುದೇ ಘಟನೆ ಸಂಭವಿಸುತ್ತದೆಂದು ಭಯಪಡುವ ಕಾರಣವಿಲ್ಲವೆಂದು ನಾನು ತಿಳಿಸಬಯಸುತ್ತೇನೆ. ಮತ್ತು ರೈತವಾರಿ ಗೇಣಿದಾರರನ್ನು ಒಳಗೊಂಡಂತೆ ಪ್ರತಿಯೊಬ್ಬರ ಸ್ವತ್ತು ಹಕ್ಕಿನ ಹರಣ ಮಾಡಲು ಈ ವಿಧೇಯಕ ಸರ್ಕಾರಕ್ಕೆ ಅಧಿಕಾರ ನೀಡಲು ಉದ್ದೇಶಿಸಿದೆ ಎಂಬ ಆಸಕ್ತ ಪಕ್ಷಕಾರರ ಪ್ರಚಾರಕ್ಕೆ ಯಾವುದೇ ಸಮರ್ಥನೆಯಿಲ್ಲ ಎಂದು ನಾನು ಭಾವಿಸುತ್ತೇನೆ. ನನ್ನ ಈ ವಿವರಣೆ ನನ್ನ ಗೆಳೆಯರಾದ ರಣಬೀರ್ ಸಿಂಗ್ ಅವರಿಗೆ ಸಮಾಧಾನಕರ ಉತ್ತರ ನೀಡಿದೆ ಎಂದು ನಾನು ಭಾವಿಸುತ್ತೇನೆ.

ದುರ್ಗಾಬಾಯಿಯವರು ನನಗೆ ಹಾಕಿದ ಪ್ರಶ್ನೆಗೆ ಸಂಬಂಧಿಸಿದಂತೆ. . . .

**ಶ್ರೀ ಆರ್.ಕೆ. ಚೌಧರಿ (ಅಸ್ಸಾಂ):** ಶ್ರೀಮತಿ ದುರ್ಗಾಬಾಯಿ

**ಡಾ. ಅಂಬೇಡ್ಕರ್:** ಈ ರೀತಿಯ ಸಂಬೋಧನೆಗಳು ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ. ನನಗೆ ಯಾರಾದರೂ ಶ್ರೀ ಎಂದು ಸೇರಿಸಿದಾಗ ನನಗೆ ತುಂಬಾ ಮುಜುಗರವಾಗುತ್ತದೆ. ಶ್ರೀ ಎಂದರೆ ಸಂಪತ್ತು–ನನ್ನ ಬಳಿ ಯಾವುದೂ ಇಲ್ಲ.

**ಶ್ರೀ ಆರ್.ಕೆ. ಚೌಧರಿ:** ನನ್ನ ಗೆಳೆಯರಾದ ಡಾ. ಅಂಬೇಡ್ಕರ್ ನನ್ನನ್ನು ಒಂದು ದಿನ ನನ್ನ ಸಂಕ್ಷಿಪ್ತ ಹೆಸರಿನಿಂದ ಕರೆದು ನನಗೆ ಸಾಕಷ್ಟು ಮುಜುಗರವುಂಟು ಮಾಡಿದ್ದರಲ್ಲವೇ?

**ಡಾ. ಅಂಬೇಡ್ಕರ್:** ನೀವು ಅದಕ್ಕೆ ಒಪ್ಪಿದ್ದಿರಿ. ಅಂಥ ಸಂಬೋಧನೆ ಸ್ತ್ರೀಸೂಚಕ ಸಂಬೋಧನೆ ಆಗಿರಲಿಲ್ಲ ಅಲ್ಲವೇ?

**ಶ್ರೀ ಆರ್.ಕೆ. ಚೌಧರಿ:** ಅದಕ್ಕಾಗಿಯೇ ಸದನದ ಕೆಲವು ವರ್ಗಗಳ ಮನಸ್ಸಿನಲ್ಲಿ ಅಸೂಯೆ ಉಂಟಾಗಿದ್ದಿದ್ದು.

**ಶ್ರೀಮತಿ ದುರ್ಗಾಬಾಯಿ:** ನನ್ನ ಮನಸ್ಸಿನಲ್ಲಂತೂ ಉಂಟಾಗಿರಲಿಲ್ಲ.

**ಡಾ. ಅಂಬೇಡ್ಕರ್:** ಈಗ ವಿಷಯಕ್ಕೆ ಬಂದರೆ, ಮದ್ರಾಸ್ ಅಧಿನಿಯಮದಲ್ಲಿ ಇದಕ್ಕೆ ಸಂಬಂಧಪಟ್ಟ ಉಪಬಂಧವೆಂದರೆ ೪೫ ನೇ ಪ್ರಕರಣ. ೪೫ನೇ ಪ್ರಕರಣ ವಿಭಜಿಸಲಾಗದ ಸಂಪತ್ತಿಗೆ ಸಂಬಂಧಪಟ್ಟಿದೆ. ಅದು ಸಾಮಾನ್ಯ ಸಂಪತ್ತಿಗೆ ಸಂಬಂಧಿಸಿದುದಲ್ಲ. ನಾನು ಅರ್ಥ ಮಾಡಿಕೊಂಡಿರುವ ಮಟ್ಟಿಗೆ ಈ ಉಪಬಂಧ ಪರಿಹಾರಧನವನ್ನು ವಿತರಿಸಬೇಕೇ ಬೇಡವೇ ಮತ್ತು ಹೇಗೆ ಎಂಬುದನ್ನು ತೀರ್ಮಾನ

ಮಾಡುವ ವಿಷಯವನ್ನು ನ್ಯಾಯಮಂಡಲಿಗೆ ಬಿಡಲಾಗಿದೆ. ಈ ವಿಧೇಯಕ ನ್ಯಾಯ ಮಂಡಲಿಗೆ ಹೆಚ್ಚಿನ ಅಧಿಕಾರಗಳನ್ನೇನೂ ಕೊಡುವುದಿಲ್ಲ. ಮತ್ತು ನ್ಯಾಯಮಂಡಲಿಗೆ ಆ ನಿರ್ದಿಷ್ಟ ಅಧಿನಿಯಮ ಕೊಟ್ಟಿರುವ ಯಾವುದೇ ಅಧಿಕಾರಗಳನ್ನು ಹಿಂದಕ್ಕೆ ಪಡೆಯುವುದಿಲ್ಲ. ಈ ಪರಿಧಿಯೊಳಗೆ ಮದ್ರಾಸು ಅಧಿನಿಯಮ ತೀರ್ಮಾನ ಮಾಡಿರುವ ರೀತಿಯಲ್ಲಿ ವಿಷಯಗಳು ಮುಂದುವರೆಯುತ್ತವೆ.

**ಡಾ. ದೇಶ್‌ಮುಖ್:** ಕಾನೂನು ಸಚಿವರನ್ನು ನಾನು ಒಂದು ಸ್ಪಷ್ಟೀಕರಣ ಕೇಳಬಹುದೇ? ಸನ್ಮಾನ್ಯ ಡಾಕ್ಟರು, ರೈತವಾರಿ ಗೇಣಿದಾರರನ್ನು ಒಕ್ಕಲೆಬ್ಬಿಸುವ ಅಥವಾ ಅವರ ಗೇಣಿಗಳನ್ನು ಪರಿಮಿತಗೊಳಿಸುವ ಉದ್ದೇಶವಿಲ್ಲವೆಂದು ಹೇಳಿದರು. ಅನುಸೂಚಿಯಲ್ಲಿ ಮುಂಬಯಿಯ ೬ ಅಧಿನಿಯಮಗಳ ಉಲ್ಲೇಖವಿದೆ. ಈ ಅಧಿನಿಯಮಗಳ ಪೈಕಿ ಯಾವುದೇ ಅಧಿನಿಯಮ ರೈತವಾರಿ ಗೇಣಿಯನ್ನು ಪರಿಮಿತಗೊಳಿಸುವುದಾದರೆ ಅವನ್ನು ಅನುಸೂಚಿಯಲ್ಲಿ ಸೇರಿಸುವುದು ಎಷ್ಟರಮಟ್ಟಿಗೆ ಸೂಕ್ತ ಮತ್ತು ಅಧಿನಿಯಮದ ಪರಿಧಿಗೆ ರೈತವಾರಿ ಗೇಣಿಯನ್ನು ಒಳಪಡಿಸಬಾರದೆಂಬ ಅಥವಾ ಅವುಗಳ ವಿಸ್ತೀರ್ಣವನ್ನು ಪರಿಮಿತಗೊಳಿಸಬಾರದೆಂಬ ಸರ್ಕಾರದ ಆಶಯವನ್ನು ಈ ತಿದ್ದುಪಡಿ ಒಳಗೊಂಡಿದೆಯೇ?

**ಡಾ. ಅಂಬೇಡ್ಕರ್:** ನಾನು ಮುಂಬಯಿಯಿಂದ ಬಂದಿರುವುದರಿಂದ ಮತ್ತು ಉಚ್ಚ ನ್ಯಾಯಾಲಯದಲ್ಲಿ ವೃತ್ತಿಯನ್ನು ನಡೆಸಿರುವುದರಿಂದ ನನಗೆ ಈ ಅಧಿನಿಯಮಗಳ ಬಗ್ಗೆ ಸ್ವಲ್ಪ ತಿಳಿದಿದೆ. ಅನೇಕ ಪ್ರಕರಣಗಳನ್ನು ನಾನು ನಡೆಸಿರುವುದರಿಂದ, ನನ್ನ ಗೆಳೆಯರು ಉಲ್ಲೇಖಿಸಿದ ಕೋಟಿ ನಿಷೇಧ ಅಥವಾ ಇತರ ಅಧಿನಿಯಮಗಳು ನಾವು ಕೇವಲ ಮಧ್ಯಸ್ಥಿಕೆಗಳೆಂದು ಕರೆಯುವವುಗಳಿಗೆ ಮಾತ್ರ ಸಂಬಂಧಪಟ್ಟಿದೆ ಎಂಬುದರಲ್ಲಿ ನನಗೆ ಸಂದೇಹವಿಲ್ಲ.

**ಶ್ರೀ ಜವಹರಲಾಲ್ ನೆಹರೂ:** ನನ್ನ ಸಹೋದ್ಯೋಗಿ ಕಾನೂನು ಸಚಿವರು ಇವತ್ತು ಎತ್ತಲಾದ ಅನೇಕ ಅಂಶಗಳಿಗೆ ಉತ್ತರ ನೀಡಿದ್ದಾರೆ.

*__ಕಾನೂನು ಸಚಿವರು (ಡಾ. ಅಂಬೇಡ್ಕರ್):__ ಚರ್ಚೆಯನ್ನು ಕೇಳಿದ ನಂತರ, ರಾಷ್ಟ್ರಪತಿಯವರಲ್ಲಿ ನಿಹಿತವಾದ ಅಧಿಕಾರಗಳು ಮುಂದೆಯೂ ಅವರಲ್ಲಿ ನಿಹಿತಗೊಳ್ಳಬೇಕೆಂದು ಸದನ ಆಶಿಸುತ್ತದೆ ಮತ್ತು ಅದು ಈಗಾಗಲೇ ಜಾರಿಗೊಳಿಸಿರುವ ಕಾನೂನುಗಳನ್ನು ಸಂವಿಧಾನದ ಉಪಬಂಧಗಳೊಂದಿಗೆ ಸುಸಂಗತಗೊಳಿಸುವ ಉದ್ದೇಶಕ್ಕಾಗಿ ಸಂವಿಧಾನ ವಿಧಿಸಿರುವಂಥ ಒಂದು ಅತ್ಯುಪಯುಕ್ತ ಉಪಬಂಧವೆಂದು ನಾನು ನಂಬುತ್ತೇನೆ. ಈ ವಿಷಯದಲ್ಲಿ ಯಾವುದೇ ರೀತಿಯ ಅಭಿಪ್ರಾಯ ಭೇದವಿರುವುದನ್ನು ನಾನು ಕಾಣುವುದಿಲ್ಲ. ಈ ಬಗ್ಗೆ ಎತ್ತಲಾದ ಒಂದೇ ಪ್ರಶ್ನೆ ಎಂದರೆ: ಈಗ ಮತ್ತು ಸಂವಿಧಾನವನ್ನು ಜಾರಿಗೊಳಿಸಿದ ನಡುವಿನ ಅವಧಿಯಲ್ಲಿ ಸಂವಿಧಾನದ ಉಪಬಂಧಗಳಿಗೆ ಅಸಂಗತವೆಂದು ಕಂಡು ಬರುವ ಕಾನೂನುಗಳನ್ನು ಮಾರ್ಪಾಟು ಮಾಡಲು ರಾಷ್ಟ್ರಪತಿಯವರಿಗೆ ಏಕೆ ಸಾಧ್ಯವಾಗಲಿಲ್ಲ ಮತ್ತು ಇನ್ನೂ ಹೆಚ್ಚಿನ ಸಮಯ ಏಕೆ ಬೇಕಾಗಿದೆ ಎಂಬುದು. ಈ ಒಂದು ಅಂಶದ ಬಗ್ಗೆ ಮತ್ತೂ ಸ್ಪಷ್ಟೀಕರಣ ನೀಡಬೇಕಾಗಿದೆ ಎಂದು ಕಾಣುತ್ತದೆ.

ಕಾನೂನು ಇಲಾಖೆಯು ತುಂಬಾ ಉದಾಸೀನ ಮಾಡಿದೆ ಎಂದು ಹೇಳಲಾಗಿದೆ. ಕೆಲವು ಗೆಳೆಯರು ಅದು ನಿದ್ದೆ ಮಾಡುತ್ತಿದೆ ಎಂದು ಹೇಳಿದ್ದಾರೆ.

**ಬಾಬು ರಾಂನಾರಾಯಣ್ ಸಿಂಗ್ (ಬಿಹಾರ್):** ಸರಿಯಾಗಿದೆ.

---

* ಸಂ.ಚ. ಸಂಪುಟ ೧೨, ಭಾಗ–೨, ೧೯೫೧ ರ ಜೂನ್ ೨, ಪಿಪಿ ೧೦೦೦೭–೧೩

**ಶ್ರೀ ಹುಸೇನ್ ಇಮಾಮ್ (ಬಿಹಾರ್):** ತೂಕಡಿಸುತ್ತಿದೆ.

**ಡಾ. ಅಂಬೇಡ್ಕರ್:** ಅಂಥ ಹೇಳಿಕೆಗಳು ಬರಿ ಕಲ್ಪನೆಯೇ ಅಥವಾ ಅದರಲ್ಲಿ ಏನಾದರೂ ಹುರುಳಿದೆಯೇ? ನನಗೆ ತಿಳಿದಿಲ್ಲ. ಭಾರತ ಸರ್ಕಾರದಲ್ಲಿ ಕಾನೂನು ಇಲಾಖೆ ಅತ್ಯಂತ ಸಣ್ಣ ಇಲಾಖೆಯೆಂಬುದು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ತಿಳಿದಿದ್ದೇನೆ.

**ಬಾಬು ರಾಂನಾರಾಯಣ್ ಸಿಂಗ್:** ಏಕೆ?

**ಶ್ರೀ ಟಿ. ಹುಸೇನ್ (ಬಿಹಾರ್):** ಸಂಸದೀಯ ವ್ಯವಹಾರಗಳ ಇಲಾಖೆ ಇದೆಯಲ್ಲ.

**ಡಾ. ಅಂಬೇಡ್ಕರ್:** ಸಂಸದೀಯ ವ್ಯವಹಾರಗಳ ಇಲಾಖೆಗೂ ಕಾನೂನು ಮಂತ್ರಾಲಯಕ್ಕೂ ಯಾವುದೇ ಸಂಬಂಧವಿಲ್ಲ. ಅದು ಇದರಿಂದ ಪೂರ್ಣವಾಗಿ ಪ್ರತ್ಯೇಕವಾದುದು.

ಕಾನೂನು ಮಂತ್ರಾಲಯದಲ್ಲಿ ಕೇವಲ ಮೂವರು ಕರಡು ತಯಾರಕರಿದ್ದಾರೆಂದು ತಿಳಿಸಲು ಬಯಸುತ್ತೇನೆ. ಕರಡು ತಯಾರಕರ ಸಂಖ್ಯೆಯನ್ನು ಹೆಚ್ಚಿಸುವುದು ಅಗತ್ಯವಿದೆಯೆಂದು ಅನೇಕ ಬಾರಿ ಹಣಕಾಸು ಮಂತ್ರಾಲಯವನ್ನು ಒತ್ತಾಯ ಮಾಡಿದ್ದೇನೆ. ಆದರೆ ನಾನು ವಿಫಲನಾಗಿದ್ದೇನೆ.

**ಶ್ರೀ ಕಾಮತ್:** ಉಪಸಚಿವರಾಗಿಯೂ?

**ಡಾ. ಅಂಬೇಡ್ಕರ್:** ಉಪಸಚಿವರೂ ಈ ವಿಷಯದಲ್ಲಿ ಏನೂ ಮಾಡಲಾರರು. ಏಕೆಂದರೆ ಯಾವ ಸಚಿವರೂ ಕರಡನ್ನು ತಯಾರು ಮಾಡಲಾಗುವುದಿಲ್ಲ.

ಸಂವಿಧಾನ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಸದನದ ಮುಂದೆ ಮಂಡಿಸಲಾದ ಶಾಸನಗಳ ಪ್ರಮಾಣವನ್ನು ಸದನ ನೆನಪಿಸಿಕೊಳ್ಳಬೇಕು. ನನ್ನ ನೆನಪಿನ ಶಕ್ತಿಯಿಂದ ಹೇಳುವುದಾದರೆ, ಪ್ರತಿ ಅಧಿವೇಶನದಲ್ಲಿಯೂ ಸುಮಾರು ೩೦ ರಿಂದ ೪೦ ವಿಧೇಯಕಗಳು ಮಂಡನೆ ಆಗಿವೆ. ಅವುಗಳಲ್ಲಿ ಕೆಲವನ್ನು ಅಂಗೀಕರಿಸಲಾಗಿದೆ ಮತ್ತೆ ಕೆಲವನ್ನು ಬಿಡಲಾಗಿದೆ. ಹಾಗೆ ಅಂಗೀಕರಿಸದವುಗಳ ಪೈಕಿ ಕೆಲವನ್ನು ಅಧ್ಯಾದೇಶಗಳನ್ನಾಗಿ ಪರಿವರ್ತಿಸಲಾಗಿದೆ ಮತ್ತು ಈ ಅಧ್ಯಾದೇಶಗಳನ್ನು ಕಾನೂನುಗಳನ್ನಾಗಿ ಪರಿವರ್ತಿಸಲು ಸದನ ಮತ್ತೆ ಸೇರುತ್ತದೆ. ಈಗ, ಮೂವರು ಕರಡು ತಯಾರಕರು ಪ್ರತಿ ಅಧಿವೇಶನಕ್ಕೆ ೪೦ ಅಥವಾ ೫೦ ವಿಧೇಯಕಗಳ ಕರಡನ್ನು ತಯಾರಿಸುವುದು ಸಾಧ್ಯವೇ ಮತ್ತು ಮತ್ತೇನನ್ನಾದರೂ ಮಾಡಲು ಬಿಡುವಿನ ವೇಳೆಯನ್ನು ಹೊಂದಿರಲು ಸಾಧ್ಯವೇ ಎಂದು ಯೋಚಿಸಬೇಕು. ಆದ್ದರಿಂದ ಕೆಲಸದ ಮೌಲ್ಯೀಕರಣ ಮಾಡುವಾಗ ಈ ಅಂಶವನ್ನು ಸದನ ಗಮನಿಸಬೇಕು.

**ಶ್ರೀ ಪಿ.ವೈ. ದೇಶಪಾಂಡೆ (ಮಧ್ಯಪ್ರದೇಶ):** ಕೇವಲ ಮೂವರು ಕರಡು ತಯಾರಕರು ಇರುವುದಕ್ಕೆ ಯಾರು ಜವಾಬ್ದಾರರು?

**ಶ್ರೀಮತಿ ದುರ್ಗಾಬಾಯಿ:** ನಾನು ಒಂದು ಪ್ರಶ್ನೆ ಕೇಳಬಹುದೇ? ಈ ಕೆಲಸ ಬರೀ ಕರಡು ತಯಾರಿಕೆಗೆ ಸಂಬಂಧಿಸಿದುದೇ ಅಥವಾ ಕಾನೂನಿನ ವಸ್ತು ವಿಷಯವನ್ನು ಬದಲಾಯಿಸುವುದಕ್ಕೆ ಸಂಬಂಧಿಸಿದುದೇ?

**ಡಾ. ಅಂಬೇಡ್ಕರ್:** ನಾನೂ ಅದೇ ವಿಷಯವನ್ನು ಪ್ರಸ್ತಾಪಿಸಲಿದ್ದೇನೆ. ದಯವಿಟ್ಟು ಅವಸರಿಸಬೇಡಿ.

ಆದ್ದರಿಂದ ಕಾನೂನು ಮಂತ್ರಾಲಯದ ಮೇಲಿರುವ ಒತ್ತಡ ಅತ್ಯಧಿಕವಾಗಿದ್ದು ಅದನ್ನು ನಿಭಾಯಿಸುವುದು ಕಷ್ಟವಾಗುತ್ತಿದೆ. ಅಳವಡಿಕೆಯ ಕೆಲಸ ಅತ್ಯಧಿಕವಾಗಿದ್ದು ಅದು ಕಾನೂನು ಮಂತ್ರಾಲಯದ ಮೇಲೆ ಹೊರಿಸಿರುವ ಹೊಸ ಕೆಲಸವಾಗಿದೆ. ಈ ಕೆಲಸವನ್ನು ನಿಭಾಯಿಸಲು ಸಿಬ್ಬಂದಿ ಸಂಖ್ಯೆಯನ್ನು ವಿಸ್ತರಿಸಿಲ್ಲ. ಅಳವಡಿಕೆಯ ಕೆಲಸವನ್ನು ಸಂಪೂರ್ಣಗೊಳಿಸಿಲ್ಲವೆಂದು ಕಾನೂನು ಮಂತ್ರಾಲಯವನ್ನು

ಟೀಕಿಸುವುದಕ್ಕೆ ಮುನ್ನ ಸದನವು ಈ ಅಂಶವನ್ನು ನೆನಪಿಟ್ಟುಕೊಳ್ಳುತ್ತದೆಂದು ಭಾವಿಸುತ್ತೇನೆ.

ಅಳವಡಿಕೆಯ ಕಾರ್ಯ ಎರಡು ಬಗೆಯ ಕಾರ್ಯಗಳನ್ನು ಒಳಗೊಳ್ಳುತ್ತದೆ. ಔಪಚಾರಿಕ ಸ್ವರೂಪದ ಅಳವಡಿಕೆಯ ಕಾರ್ಯ ಒಂದು ಬಗೆಯದು. ಉದಾಹರಣೆಗೆ ಚಾಲ್ತಿಯಲ್ಲಿರುವ ಕಾನೂನುಗಳಲ್ಲಿ, "ಪ್ರಾಂತೀಯ ಸರ್ಕಾರ" ಎಂಬ ಅಭಿವ್ಯಕ್ತಿಯನ್ನು ಬಳಸಲಾಗಿದೆ ಎಂದಿಟ್ಟುಕೊಳ್ಳಿ. ಇಂದು ಅದೇ ಬಗೆಯ ಉದ್ದೇಶಕ್ಕಾಗಿ ಬಳಸಲಾಗುತ್ತಿರುವ ಅಭಿವ್ಯಕ್ತಿ ಎಂದರೆ "ರಾಜ್ಯ ಸರ್ಕಾರ". ಇವು ಔಪಚಾರಿಕ ತಿದ್ದುಪಡಿಗಳು. ಇಂಥ ತಿದ್ದುಪಡಿಗಳನ್ನು ಈಗಾಗಲೇ ಮಾಡಲಾಗಿದೆ ಮತ್ತು ಆ ಬಗೆಯ ಕೆಲಸ ಬಾಕಿ ಇದೆ ಎಂದು ನಾನು ತಿಳಿದಿದಲ್ಲ. ಇನ್ನೊಂದು ಬಗೆಯ ಅಳವಡಿಕೆಯ ಕಾರ್ಯ ಎಂದರೆ, ಈಗಾಗಲೇ ಜಾರಿಯಲ್ಲಿರುವ ಕಾನೂನುಗಳನ್ನು ಸಂವಿಧಾನದ ಉಪಬಂಧಗಳಿಗೆ ಅನುರೂಪವಾಗುವಂತೆ ಮಾಡಲು ಸಾಕಷ್ಟು ಬದಲಾವಣೆಗಳನ್ನು ಮಾಡುವ ಕಾರ್ಯ. ನಾನು ಮೇಲೆ ಹೇಳಿದ ಔಪಚಾರಿಕ ಸ್ವರೂಪದ ಅಳವಡಿಕೆಯ ಕಾರ್ಯಕ್ಕಿಂತ ಇದು ಸಂಪೂರ್ಣವಾಗಿ ಭಿನ್ನವಾದ ಕಾರ್ಯ.

ರಾಷ್ಟ್ರದಲ್ಲಿ ಈಗ ಜಾರಿಯಲ್ಲಿರುವ ಕಾನೂನುಗಳು ಸಂವಿಧಾನದ ಉಪಬಂಧಗಳೊಡನೆ ಅನುರೂಪವಾಗಿರುವಂತೆ ಮಾಡುವುದಕ್ಕಾಗಿ ಅವುಗಳಲ್ಲಿ ಗಣನೀಯ ಸ್ವರೂಪದ ಮಾರ್ಪಾಡುಗಳನ್ನು ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ವ್ಯವಸ್ಥಿತವಾಗಿ ಪರಿಗಣಿಸೋಣ. ಸಹಜವಾಗಿಯೇ ಕೇಂದ್ರದಲ್ಲಿ ಒಬ್ಬರು ಅಧಿಕಾರಿಯಿದ್ದು ಅವರು ವಿವಿಧ ರಾಜ್ಯಗಳಲ್ಲಿ ಮಾಡಿದ ಅಧಿನಿಯಮಗಳನ್ನು ಮತ್ತು ಕೇಂದ್ರವು ಮಾಡಿದ ಅಧಿನಿಯಮಗಳ ಮೇಲೆ, ಅವುಗಳನ್ನು–ಕೇಂದ್ರ ಜಾರಿಗೆ ತಂದಿರಲಿ ಅಥವಾ ಪ್ರಾಂತ್ಯಗಳು ಜಾರಿಗೆ ತಂದಿರಲಿ, ಅಳವಡಿಕೆಯ ದೃಷ್ಟಿಯಿಂದ ಅವುಗಳನ್ನು ಪರಿಶೀಲಿಸುವುದು ಪ್ರಾಥಮಿಕವಾಗಿ ಅಗತ್ಯವೇ ಎಂಬ ಬಗ್ಗೆ ತಾನು ಭಾವಿಸುವ ಟಿಪ್ಪಣಿಯನ್ನು ಮಾಡುವುದು ಅವರ ಕರ್ತವ್ಯವಾಗಿರುತ್ತದೆ. ಈ ಕೆಲಸವನ್ನು ಮಾಡಿದ ನಂತರ ಅಂಥ ನಿರ್ದಿಷ್ಟ ಅಧಿಕಾರಿ ಮಾಡಿದ ಟಿಪ್ಪಣಿಯಲ್ಲಿ ಯಾವುದೇ ಹುರುಳಿದೆಯೇ ಎಂಬ ಬಗ್ಗೆ ಪರಿಶೀಲನೆಗಾಗಿ ಅದು ಕಾನೂನು ಮಂತ್ರಾಲಯದ ಮರುಪರಿಶೀಲನೆಗೆ ಒಳಪಡಬೇಕಾಗುತ್ತದೆ. ಅಲ್ಲಿಗೆ ಆ ಕೆಲಸ ಕೊನೆಗೊಳ್ಳುವುದಿಲ್ಲ. ಮತ್ತೆ ಕಾನೂನು ಮಂತ್ರಾಲಯ ಮತ್ತು ರಾಜ್ಯದ ಕಾನೂನು ಅಧಿಕಾರಿಗಳ ನಡುವೆ, ಸಂವಿಧಾನದ ಉಪಬಂಧಗಳಿಗೆ ಅವರ ಕಾನೂನುಗಳು ಅಸಂಗತವಾಗಿದೆ ಎಂಬ ದೃಷ್ಟಿಯನ್ನು ಅವರು ಒಪ್ಪುತ್ತಾರೆಯೇ ಎಂಬುದನ್ನು ತಿಳಿದುಕೊಳ್ಳಲು ಹೆಚ್ಚಿನ ಪತ್ರ ವ್ಯವಹಾರ ನಡೆಸಬೇಕಾಗುತ್ತದೆ. ಅವರು ಒಪ್ಪಿದರೆ ಒಳ್ಳೆಯದು, ಆ ಬಗ್ಗೆ ಕ್ರಮ ಕೈಗೊಳ್ಳಬಹುದು. ಹಾಗೆ ಒಪ್ಪದಿದ್ದರೆ, ಅನಂತರ ರಾಜ್ಯದ ಅಡ್ವೊಕೇಟ್ ಜನರಲ್ ಅವರಿಗೆ ಮತ್ತು ಭಾರತ ಸರ್ಕಾರದ ಅಟಾರ್ನಿ ಜನರಲ್‌ರಿಗೆ ಆ ವಿಷಯವನ್ನು ಕಳುಹಿಸಬೇಕಾಗುತ್ತದೆ. ಏಕೆಂದರೆ ಅವರು ಸರ್ಕಾರಕ್ಕೆ ಅಂತಿಮವಾಗಿ ಸಲಹೆ ನೀಡುವ ವ್ಯಕ್ತಿಗಳು ಮತ್ತು ಅವರ ಸಲಹೆಯ ಮೇರೆಗೆ ಮಾತ್ರವೇ ಸರ್ಕಾರ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಪ್ರಾಂತ್ಯಗಳಲ್ಲಿ ಅಧಿನಿಯಮಗಳ ಸಂಖ್ಯೆ ಕಡಿಮೆ ಇದ್ದರೆ ರಾಜ್ಯಗಳು ಮಾಡುವ ಅಧಿನಿಯಮಗಳ ಸಂಖ್ಯೆ ಅಷ್ಟೇ ಜಾಸ್ತಿ ಇರುತ್ತದೆ. ಕೇಂದ್ರ ಸರ್ಕಾರವು ಒಂದು ನಿರ್ದಿಷ್ಟ ಕಾನೂನನ್ನು ಅನೂರ್ಜಿತ ಮತ್ತು ಪರಿಣಾಮ ಶೂನ್ಯ ಎಂದು ಘೋಷಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವುದಕ್ಕೆ ಮುಂಚೆ ಅಥವಾ ಅವುಗಳ ಕೆಲವು ಭಾಗಗಳನ್ನು, ಅವುಗಳನ್ನು ಸಂವಿಧಾನಕ್ಕೆ ಅನುರೂಪವಾಗಿರುವಂತೆ ಮಾಡಬೇಕೆಂದು ತೀರ್ಮಾನಿಸುವುದಕ್ಕೆ ಮುಂಚೆ ಮತ್ತು ತದನುಸಾರವಾಗಿ ರಾಷ್ಟ್ರಪತಿಯವರು ಆದೇಶವನ್ನು ಹೊರಡಿಸಲು ನಾನು ವಿವರಿಸಿರುವ ಪ್ರಕ್ರಿಯೆಯನ್ನು ಹಾದು ಹೋಗಲು ಎಷ್ಟು ಕಾಲ ಅಗತ್ಯವಾಗುತ್ತದೆ ಎಂಬುದನ್ನು ಯಾರೂ ಊಹಿಸಬಹುದು. ಆದ್ದರಿಂದ ಇದು ಸದನದಲ್ಲಿರುವ ಕೆಲವರು ತಿಳಿದಂತೆ

ತುಂಬಾ ಸುಲಭವಾದ ಕೆಲಸವಲ್ಲ. ಇದು ಅತ್ಯಂತ ಸುದೀರ್ಘವಾದ ಮತ್ತು ಶ್ರಮದಾಯಕವಾದ ಪ್ರಕ್ರಿಯೆ.

ಈ ವಿಷಯದಲ್ಲಿ ರಾಷ್ಟ್ರಪತಿಯವರ ಪಾತ್ರ ಏನು? ರಾಷ್ಟ್ರಪತಿಯವರು ಕಾನೂನು ರಚನಾ ಪ್ರಾಧಿಕಾರ. ಅವರ ಅಧಿಕಾರ ವಾಸ್ತವವಾಗಿ ಸಂಸತ್ತಿನ ಅಧಿಕಾರದೊಂದಿಗೆ ಒಟ್ಟಿಗೆ ಇರುವಂಥದ್ದು. ಆದರೆ, ಅದನ್ನು ವೇಗವಾಗಿ ಮಾಡಬೇಕೆಂಬ ದೃಷ್ಟಿಯಿಂದ, ಈ ನಿರ್ದಿಷ್ಟ ಅಧಿಕಾರವನ್ನು ನಾವು ರಾಷ್ಟ್ರಪತಿಯವರಲ್ಲಿ ನಿಹಿತಗೊಳಿಸಿದ್ದೇವೆ. ಕಾನೂನು ರಚನೆಯಂಥ ಮಹತ್ವದ ಮತ್ತು ಸೂಕ್ಷ್ಮವಾದ ಅಧಿಕಾರವನ್ನು ಆತುರ ಆತುರವಾಗಿ ಚಲಾಯಿಸುವುದು ಸಾಧ್ಯವಾಗುವುದಿಲ್ಲ ಮತ್ತು ಹಾಗೆ ಯಾವುದೇ ರೀತಿಯ ಬದಲಾವಣೆ ಮಾಡುವುದು ಸೂಕ್ತವೂ ಆಗುವುದಿಲ್ಲ ಮತ್ತು ಸಮರ್ಥನೀಯವೂ ಆಗುವುದಿಲ್ಲ. ಈ ಕಾರಣಗಳಿಂದಾಗಿಯೇ ಕಾನೂನು ಮಂತ್ರಾಲಯ ತನ್ನ ಕೆಲಸವನ್ನು ಸಂಪೂರ್ಣಗೊಳಿಸಲು ಸಾಧ್ಯವಾಗಿಲ್ಲ ಮತ್ತು ಈ ಕೆಲಸಕ್ಕೆ ಮತ್ತೊಂದು ವರ್ಷ ಬೇಕಾಗುತ್ತದೆಂದು ಭಾವಿಸಿರುವುದು. ಈ ಸಂಬಂಧವಾಗಿ, ಕಾನೂನು ಮಂತ್ರಾಲಯವು ಕಳೆದ ಮೂರು ತಿಂಗಳುಗಳಿಂದ ಚುನಾವಣೆಯ ಕೆಲಸದಲ್ಲಿ, ಎರಡು ಜನತಾ ಪ್ರಾತಿನಿಧ್ಯ ವಿಧೇಯಕಗಳನ್ನು ಸಿದ್ಧಪಡಿಸುವಲ್ಲಿ, ಚುನಾವಣಾ ಕ್ಷೇತ್ರಗಳ ಮರುವಿಂಗಡಣೆಯಲ್ಲಿ, ಚುನಾವಣಾ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡುವ ರಾಷ್ಟ್ರಪತಿಯವರ ಆದೇಶಕ್ಕೆ ಬರುತ್ತಿರುವ ತಿದ್ದುಪಡಿಗಳ ಪರಿಶೀಲನೆಯಲ್ಲಿ ನಿರತವಾಗಿದೆ. ಅಲ್ಲದೆ ಅದು ನಿಯಮಗಳ ರಚನೆಯಲ್ಲಿ ಮತ್ತು ಚುನಾವಣೆಗೆ ಸಂಬಂಧಪಟ್ಟ ಎಲ್ಲ ಬಗೆಯ ಕೆಲಸಗಳಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿದೆ. ಈ ವಿಷಯಗಳು ಕಾನೂನು ಮಂತ್ರಾಲಯದ ಮುಂದೆ ಬಾಕಿ ಇವೆ ಮತ್ತು ವಿಶೇಷವಾಗಿ ಕಾನೂನು ಮಂತ್ರಾಲಯದಲ್ಲಿರುವ ಸೀಮಿತ ಸಿಬ್ಬಂದಿಯ ದೃಷ್ಟಿಯಿಂದ ಅನುಚ್ಛೇದ ೩೭೨ ರಲ್ಲಿ ವಿಧಿಸಿರುವ ಉದ್ದೇಶವನ್ನು ನೆರವೇರಿಸುವ ಉದ್ದೇಶಗಳಿಗಾಗಿ ಸಿಬ್ಬಂದಿಯನ್ನು ಕೊಡುವುದು ಅಥವಾ ಇದಕ್ಕಾಗಿಯೇ ತಮ್ಮ ಸಮಯವನ್ನು ಮೀಸಲಿಡುವುದು ಹೇಗೆ ಎಂದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ, ಹೆಚ್ಚಿನ ಸಮಯ ಅಗತ್ಯವಾಗಿದೆ. ಆದ್ದರಿಂದಲೇ ಈ ತಿದ್ದುಪಡಿಯನ್ನು ಮಂಡಿಸಿರುವುದು.

ನನ್ನ ಗೆಳೆಯರಾದ ಶ್ರೀ ರಣಬೀರ್ ಸಿಂಗ್ ಅವರು ಹೇಳಿರುವ ಪಂಜಾಬ್ ಭೂ ಪರಭಾರೆ ಅಧಿನಿಯಮವು ಅನೂರ್ಜಿತವಾಗಿದೆ ಮತ್ತು ಸಂವಿಧಾನದ ಉಪಬಂಧಗಳಿಗೆ ಅಸಂಗತವಾಗಿದೆ ಎಂಬ ಹೇಳಿಕೆಗೆ ಸಂಬಂಧಿಸಿದಂತೆ ನಾನು ಈ ಮುಂದಿನ ಅಂಶಗಳನ್ನು ಹೇಳಬಯಸುತ್ತೇನೆ. ಅಲ್ಲಿ ಚಾಲ್ತಿಯಲ್ಲಿರುವ ಶಾಸನವನ್ನು ಇಡಿಯಾಗಿ ರದ್ದುಗೊಳಿಸಿರುವುದು ಸರ್ಕಾರದ ಸರಿಯಾದ ಕ್ರಮವಲ್ಲ ಎಂಬ ಅಂಶವನ್ನು ಅವರು ಪ್ರಸ್ತಾಪಿಸಿದರು. ಈ ಅಂಶವನ್ನು ಎಂದರೆ ಆ ಅಧಿನಿಯಮದ ಕೆಲವೊಂದು ಉಪಬಂಧಗಳನ್ನು ಮಾರ್ಪಾಟು ಮಾಡಿ ಮಿಕ್ಕ ಉಪಬಂಧಗಳನ್ನು ಹಾಗೆಯೇ ಉಳಿಸಿಕೊಳ್ಳುವ ಬಗ್ಗೆ ಕಾನೂನು ಮಂತ್ರಾಲಯದಲ್ಲಿಯೂ ಪರಿಗಣಿಸಲಾಯಿತು. ಆದರೆ ಅಧಿನಿಯಮಕ್ಕೆ ಸಂಬಂಧಿಸಿದಂತೆ ಅಟಾರ್ನಿ ಜನರಲ್ ಅವರು ಮತ್ತು ಪಂಜಾಬ್ ಸರ್ಕಾರದ ಕಾನೂನು ಅಧಿಕಾರಿಗಳು, ಆ ಅಧಿನಿಯಮದ ಪ್ರತಿಯೊಂದು ಉಪಬಂಧವು ಸಂವಿಧಾನಕ್ಕೆ ಅಸಂಗತವಾಗಿದೆ ಎಂದು ಒಪ್ಪಿಕೊಂಡರು. ಹಾಗಾಗಿ ಇಡೀ ಅಧಿನಿಯಮವನ್ನು ಅನೂರ್ಜಿತವೆಂದು ಘೋಷಿಸುವುದರ ಹೊರತು ನನಗೆ ಬೇರೆ ಯಾವುದೇ ಮಾರ್ಗವಿರಲಿಲ್ಲ.

ಈಗ ನಾನು, ಈ ತಿದ್ದುಪಡಿ ಏಕೆ ಅಗತ್ಯವಾಯಿತು ಎಂಬ ಬಗ್ಗೆ ಸದನಕ್ಕೆ ಸಮರ್ಥನೆಯನ್ನು ನೀಡಿದ್ದೇನೆ ಮತ್ತು ನಾನು ಕೊಟ್ಟ ಸ್ಪಷ್ಟೀಕರಣದಿಂದ ಸದನಕ್ಕೆ ಸಮಾಧಾನವಾಗಿದೆ ಎಂದು ಭಾವಿಸುತ್ತೇನೆ.

**ಶ್ರೀ ಕಾಮತ್:** ಕಾನೂನು ಮಂತ್ರಾಲಯಕ್ಕೆ ಸಹಾಯ ಮಾಡಲು ಈ ಸದನದ ಸಮಿತಿಯನ್ನು ಹೊಂದಲು ನೀಡಿದ ಸಲಹೆಯ ಬಗ್ಗೆ ಏನು ಮಾಡಿದಿರಿ?

**ಡಾ. ಅಂಬೇಡ್ಕರ್:** ಅದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಸದನದ ಸಮಿತಿಯಿಂದ ಮುಂದಿನ ಹಂತದಲ್ಲಿ ಸಹಾಯವಾಗಬಹುದು. ಆದರೆ ಬೇರೆಯವರಿಂದ ಈಗಾಗಲೇ ಪರಿಶೀಲನೆಗೆ ಒಳಪಟ್ಟ ವಸ್ತು ವಿಷಯವನ್ನು ಈ ಸದನದ ಸಮಿತಿಯ ಮುಂದಿಡುವ ಪರಿಸ್ಥಿತಿಯಲ್ಲಿ ನಾನಿದ್ದ ಹೊರತು, ಸಮಿತಿಯು ಯಾವುದೇ ನಿರ್ಣಯಕ್ಕೆ ಬರುವುದು ಸಾಧ್ಯವಿಲ್ಲ ಎಂದು ನನ್ನ ಅನಿಸಿಕೆ. ಪ್ರಾಥಮಿಕ ಪರಿಶೀಲನೆ ಅಗತ್ಯವಾಗುತ್ತದೆ. ಮತ್ತು ನನ್ನ ಅಭಿಪ್ರಾಯದಲ್ಲಿ, ವಿಷಯವನ್ನು ಪರಿಶೀಲಿಸಿ ಅನುಚ್ಛೇದ ೩೭೨ ರ ದೃಷ್ಟಿಯಿಂದ ಯಾವ ಯಾವ ಕಾನೂನುಗಳನ್ನು ಪರಿಶೀಲಿಸಬೇಕಾಗಿದೆ ಎಂಬ ಬಗ್ಗೆ ನಮಗೆ ವರದಿ ಮಾಡುವಂಥ ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಒಳಗೊಂಡ ಒಂದು ಸಣ್ಣ ಸಮಿತಿಯನ್ನು ನೇಮಕ ಮಾಡುವುದು ಅಪೇಕ್ಷಣೀಯ.

**ಶ್ರೀ ಕಾಮತ್:** ಸದನದ ಸದಸ್ಯರಾದರೆ?

**ಡಾ. ಅಂಬೇಡ್ಕರ್:** ನನ್ನ ಗೆಳೆಯರು ವಕೀಲ ಸದಸ್ಯರನ್ನು ಉಲ್ಲೇಖಿಸುತ್ತಿದ್ದಾರೆ ಎಂದು ಭಾವಿಸುತ್ತೇನೆ. ಅವರಾದರೆ, ಅವರನ್ನು ಸಹ ಆಯ್ಕೆ ಮಾಡಿಕೊಳ್ಳಬಹುದು. ವರದಿಯನ್ನು ಸ್ವೀಕರಿಸಿದ ನಂತರ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಿಷಯದ ಬಗ್ಗೆ ನಿರ್ಣಯ ಕೈಗೊಳ್ಳಬಹುದು.

**ಶ್ರೀಮತಿ ದುರ್ಗಾಬಾಯಿ:** ನಾನು ಒಂದು ಅಂಶದ ಬಗ್ಗೆ ಕಾನೂನು ಸಚಿವರಿಂದ ಸ್ಪಷ್ಟೀಕರಣ ಕೇಳುತ್ತೇನೆ. ಯಾವುದೇ ರಾಜ್ಯ ವಿಧಾನಮಂಡಲ ಸಮವರ್ತಿ ಪಟ್ಟಿಯಲ್ಲಿರುವ ಯಾವುದೇ ಬಾಬಿನ ಬಗ್ಗೆ ಯಾವುದೇ ಸಮಯದಲ್ಲಿ ಕಾನೂನನ್ನು ರಚಿಸಿದರೂ, ಅದು ಸಹಜವಾಗಿಯೇ ಸಮಾಲೋಚನೆ ಸಲಹೆ ಇತ್ಯಾದಿಗಳಿಗಾಗಿ ಕೇಂದ್ರಕ್ಕೆ ಬರುತ್ತದೆ ಎಂದು ನಾನು ಕೇಳಿದ್ದೇನೆ. ಅಂಥ ಒಂದು ಪ್ರಸ್ತಾವಿತ ಶಾಸನವನ್ನು ಕೇಂದ್ರಕ್ಕೆ ಕಳುಹಿಸಿದಾಗ ಆ ಕಾನೂನು ಅಸಂಗತವಾಗಿದೆಯೇ ಇಲ್ಲವೇ ಎಂದು ನಿರ್ಧರಿಸುವುದನ್ನು ಕರಡು ರಚಿಸುವವರಿಗೆ ಬಿಟ್ಟು ಬಿಡಲಾಗುತ್ತದೆಯೇ? ಈ ಬಗೆಗಿನ ಕಾರ್ಯವಿಧಾನ ಏನು? ಈ ಬಗ್ಗೆ ನಾನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ.

**ಡಾ. ಅಂಬೇಡ್ಕರ್:** ಇವರು ಸಂಪೂರ್ಣವಾಗಿ ಗೊಂದಲಕ್ಕೊಳಗಾಗಿದ್ದಾರೆ. ಈ ರೀತಿ ಹೇಳುತ್ತಿರುವುದಕ್ಕಾಗಿ ಕ್ಷಮಿಸಿ.

**ಶ್ರೀಮತಿ ದುರ್ಗಾಬಾಯಿ:** ಹಾಗೆ ಹೇಳಿದರೆ ಅಡ್ಡಿಯಿಲ್ಲ. ಆದರೆ ನನ್ನ ಗೊಂದಲವನ್ನು ಕಾನೂನು ಸಚಿವರು ಪರಿಹರಿಸಲಿ.

**ಡಾ. ಅಂಬೇಡ್ಕರ್:** ಅಳವಡಿಕೆ ಪ್ರಕ್ರಿಯೆ ಜಾರಿಯಲ್ಲಿರುವ ಕಾನೂನುಗಳಿಗೆ ಅನ್ವಯಿಸುತ್ತದೆ. ಮುಂದೆ ಮಾಡುವ ಕಾನೂನುಗಳಿಗೆ ಅದು ಅನ್ವಯಿಸುವುದಿಲ್ಲ. ನಮಗೆ ಸಮಾಲೋಚನೆಗೆ ಬರುವ ಎಲ್ಲ ಕಾನೂನುಗಳು ಮುಂದೆ ಮಾಡಲಿರುವ ಕಾನೂನುಗಳು. ಭಾರತ ಸರಕಾರದ ಅಧಿನಿಯಮದಲ್ಲಿ ಎಲ್ಲಿಯೂ ಮೂಲಭೂತ ಹಕ್ಕುಗಳ ಪ್ರಸ್ತಾಪವೇ ಇರದಿದ್ದ ಸಮಯದಲ್ಲಿ ಜಾರಿಯಲ್ಲಿದ್ದ ಕಾನೂನುಗಳಿಗೆ ಈ ಅನುಚ್ಛೇದವು ಸಂಬಂಧಪಟ್ಟುದಾಗಿತ್ತು. ಈಗ, ಆ ಕಾನೂನುಗಳೆಲ್ಲವೂ ಮೂಲಭೂತ ಹಕ್ಕುಗಳ ವ್ಯಾಪ್ತಿಯಲ್ಲಿ ಬರುತ್ತಿರುವುದರಿಂದ ಈ ಅನುಚ್ಛೇದವು ಅಸಂಗತವಾಗಿದೆ. ಆದಕಾರಣ, ಈ ಅಸಂಗತೆಯನ್ನು ನಿವಾರಿಸಬೇಕಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು:** ಈಗ ಪ್ರಸ್ತಾಪಿಸಿರುವ ಅಂಶ ಈಗ ಮಾಡುತ್ತಿರುವ ಕಾನೂನಿಗೆ

ಸಂಬಂಧಪಟ್ಟಿದುದು. ಆ ವಿಷಯ ಸಮವರ್ತಿಪಟ್ಟಿಯಲ್ಲಿದ್ದರೆ ಅದನ್ನು ರಾಷ್ಟ್ರಪತಿಯವರ ಸಮ್ಮತಿಗಾಗಿ ಕಾಯ್ದಿರಿಸಲಾಗುತ್ತದೆ. ಅಂಥ ಕಾನೂನು ಬಂದಾಗ ಅದು ಅಸಂಗತವಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುವುದು ಕರಡು ತಯಾರಕರ ಕೆಲಸವಾಗಿರುತ್ತದೆ. ಅಲ್ಲವೇ?

**ಡಾ. ಅಂಬೇಡ್ಕರ್:** ಖಂಡಿತವಾಗಿಯೂ ಕರಡು ತಯಾರಕರು ಅವರದೇ ಆದ ಪಾತ್ರವನ್ನು ನಿರ್ವಹಿಸುತ್ತಾರೆ. ಆದರೆ ಕಾನೂನು ಮಂತ್ರಾಲಯ ಅದರ ಹೊಣೆಗಾರಿಕೆಯನ್ನು ತೆಗೆದುಕೊಳ್ಳುತ್ತದೆ ಮತ್ತು ಸಚಿವ ಸಂಪುಟವೂ ಸಹ ಹೊಣೆಗಾರಿಕೆಯನ್ನು ತೆಗೆದುಕೊಳ್ಳುತ್ತದೆ.

**ಶ್ರೀ ಹುಸೇನ್ ಇಮಾಮ್:** ಅನುಸೂಚಿಯಲ್ಲಿರುವ ಅಧಿನಿಯಮಗಳಿಗೆ ಸಂಬಂಧಿಸಿದಂತೆ ಅದರ ಪರಿಸ್ಥಿತಿ ಏನು ಎಂಬುದನ್ನು ನಾನು ತಿಳಿದುಕೊಳ್ಳಬಹುದೇ? ಅವುಗಳನ್ನು ಅಳವಡಿಸಕೊಳ್ಳಲಾಗಿದೆಯೇ ಅಥವಾ ಅಳವಡಿಸಿಕೊಳ್ಳುವ ಪ್ರಸ್ತಾವವಿದೆಯೇ? ಉದಾಹರಣೆಗೆ LXV11ನೆಯ ಮುಂಬಯಿ ಅಧಿನಿಯಮ. ನಂ. ಇದು ಪಂಜಾಬ್ ಭೂ ಪರಭಾರೆ ಅಧಿನಿಯಮದ ರೀತಿಯಲ್ಲಿಯೇ ಕೆಲವೊಂದು ಮೀಸಲಾತಿಗಳನ್ನು ಒಳಗೊಂಡಿದೆ ಮತ್ತು ಅವನ್ನು ಅಧಿಕಾರಾತೀತವೆಂದು ಘೋಷಿಸಲಾಗಿದೆ. ಈ ಅಧಿನಿಯಮವನ್ನು ಮಾರ್ಪಾಟು ಮಾಡಲು ಸರ್ಕಾರ ಪ್ರಸ್ತಾವಿಸುತ್ತದೆಯೇ? ಇದು ೯ ನೇ ಅನುಸೂಚಿಯ ೨ ನೇ ಬಾಬು. ಮುಂಬಯಿ ಗೇಣಿದಾರಿಕೆ ಮತ್ತು ಕೃಷಿ ಭೂಮಿಗಳ ಅಧಿನಿಯಮ ೧೯೪೮ ರಲ್ಲಿ ಜಮೀನ್ದಾರಿಗಳ ನಿಷೇಧಕ್ಕೆ ಯಾವುದೇ ಉಪಬಂಧವಿಲ್ಲ. ಆದರೆ ಕೆಲವೊಂದು ವರ್ಗಗಳ ನಡುವೆ ವರ್ಗಾವಣೆ ಆಗಬಾರದೆಂಬ ಬಗ್ಗೆ ಉಪಬಂಧಗಳಿವೆ.

**ಡಾ. ಅಂಬೇಡ್ಕರ್:** ಇದಕ್ಕೆ ಸದನದ ಉತ್ತರವೆಂದರೆ, ಈ ಅಧಿನಿಯಮಗಳನ್ನು ಅಗತ್ಯ ಅಳವಡಿಕೆಗಳಿಲ್ಲದೆ ಸಂವಿಧಾನದ ಮೂಲಕ ಊರ್ಜಿತಗೊಳಿಸಬಹುದು. ನಾನು ಸದನದ ನಿರ್ಣಯಕ್ಕೆ ಬದ್ಧನಾಗಿದ್ದೇನೆ. ಈ ಅಂಶವನ್ನು ಹಿಂದಿನ ದಿನವೇ ಪ್ರಸ್ತಾಪಿಸಬೇಕಿತ್ತು.

**ಶ್ರೀ ನಾಜಿರುದ್ದೀನ್ ಅಹಮದ್:** ಇದೇ ಅಂಶವನ್ನು ನಾನು ನಿನ್ನೆಯ ದಿನ ಪ್ರಸ್ತಾಪಿಸಿದ್ದೆ. ಆದರೆ ನೀವು ಅದನ್ನು ತಿರಸ್ಕರಿಸಿದ್ದೀರಿ.

**ಶ್ರೀ ರಾಜಗೋಪಾಲಾಚಾರಿ:** ಹೆಚ್ಚಿನ ಪ್ರಶ್ನೆಗಳನ್ನು ಅಡ್ಡಪ್ರಶ್ನೆಗಳಿಗೆ ನಿಗದಿಯಾದ ಸಮಯಕ್ಕೆಂದು ಮುಂದಕ್ಕೆ ಹಾಕಬಹುದು. ಸದ್ಯದಲ್ಲಿ ಈ ಖಂಡಕ್ಕೆ ಅನುಮತಿ ನೀಡಬಹುದು.

**ಮಾನ್ಯ ಉಪಾಧ್ಯಕ್ಷರು:** ಈ ಬಗ್ಗೆ ನಾವು ಸಾಕಷ್ಟು ಚರ್ಚಿಸಿದ್ದೇವೆ. ಈಗಿನ ವಿಷಯ ಎಂದರೆ:

"ಖಂಡ ೧೨ ವಿಧೇಯಕದ ಒಂದು ಭಾಗವಾಗುತ್ತದೆ".

ಸದನದಲ್ಲಿ ಅಭಿಪ್ರಾಯಗಳು ವಿಭಜನೆಯಾಗಿವೆ. ಹೌದು ಎನ್ನುವವರು ೨೩೨; ಅಲ್ಲ ಎನ್ನುವವರು ೯.

*__ಪ್ರೊ ಎಸ್.ಎಲ್. ಸಕ್ಸೇನಾ:__ ನಮ್ಮ ಸಂವಿಧಾನಕ್ಕೆ ಈ ತಿದ್ದುಪಡಿ ಮಾಡಬೇಕಾಗಿ ಬಂದಿರುವುದು ನನಗೆ ತುಂಬಾ ನೋವುಂಟುಮಾಡಿದೆ. ಏಕೆಂದರೆ ನಮ್ಮ ಸಂವಿಧಾನವನ್ನು ನಾವು ರಚಿಸಿದಾಗ, ನ್ಯಾಯಾಂಗವು ಎಲ್ಲ ಸಂದೇಹಗಳಿಂದ ದೂರವಿರುತ್ತದೆ ಮತ್ತು ಸ್ವತಂತ್ರವಾಗಿರುತ್ತದೆ ಮತ್ತು ಸಂವಿಧಾನವನ್ನು ಸಾಧ್ಯವಿರುವ ಅತ್ಯುತ್ತಮ ರೀತಿಯಲ್ಲಿ ವ್ಯಾಖ್ಯಾನಿಸಲು ಶಕ್ತವಾಗಿರುತ್ತದೆ ಎಂದು ನೋಡಿಕೊಳ್ಳಲು ನಾವು ಬಹಳ ಎಚ್ಚರಿಕೆ ವಹಿಸಿದ್ದೆವು. ಆದರೂ, ಕಾನೂನು ಸಚಿವರು, ಉಪಬಂಧಗಳ ಪೈಕಿ ಒಂದರ ಉದ್ದೇಶವನ್ನು ತಪ್ಪಾಗಿ ವ್ಯಾಖ್ಯಾನಿಸಿದುದಕ್ಕಾಗಿ ಹಿಂದೆ ಒಂದು ದಿನ ಸರ್ವೋಚ್ಚ ನ್ಯಾಯಾಲಯವನ್ನು ಆಕ್ಷೇಪಿಸಿದ್ದರು.

---

* ಸಂ.ಚ. ಸಂಪುಟ ೧೨ ಭಾಗ ೨ ೧೯೫೧ರ ಜೂನ್ ೨ ಪಿಪಿ ೧೦೦೨೦-೨೧

ಪ್ರಧಾನಮಂತ್ರಿಯವರು ಸಹ ಸಂವಿಧಾನ ಕರ್ತೃಗಳ ಆಶಯ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳ ನ್ಯಾಯಾಲಯಗಳ ನ್ಯಾಯಾಧೀಶರುಗಳ ವ್ಯಾಖ್ಯಾನದಿಂದ ಸ್ಪಷ್ಟವಾಗಿಲ್ಲ ಎಂದು ಹೇಳುತ್ತಿದ್ದರು. ಇದು ಬಹಳ ಅನ್ಯಾಯವಾದ ಟೀಕೆ ಎಂದುಕೊಳ್ಳುತ್ತೇನೆ. ಈ ತೀರ್ಪುಗಳನ್ನು ಕೊಟ್ಟಿರುವ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು ವಿದೇಶೀಯರಾಗಿದ್ದಿದ್ದರೆ ಬಹುಶಃ ಅಲ್ಲಿ ಸ್ವಲ್ಪ ಅನುಮಾನವಿರಬಹುದಿತ್ತೇನೋ, ಅವರು ದೇಶಭಕ್ತರಲ್ಲ ಮತ್ತು ಆದ್ದರಿಂದ ಕಾನೂನುಗಳನ್ನು ಸರಿಯಾದ ರೀತಿಯಲ್ಲಿ ವ್ಯಾಖ್ಯಾನಿಸಿಲ್ಲ ಎಂದು ಹೇಳಬಹುದಿತ್ತೇನೋ, ನಾನು ವೈಯಕ್ತಿಕವಾಗಿ ಭಾವಿಸುವುದೆಂದರೆ, ನೀವು. . . . . .

**ಡಾ. ಅಂಬೇಡ್ಕರ್:** ನನ್ನ ಮಾನ್ಯ ಗೆಳೆಯರು ಮಾಡುವ ಇಂಥ ಯಾವುದೇ ಸಲಹೆಯನ್ನು ನಾನು ನಿರಾಕರಿಸುತ್ತೇನೆ. ನಾವು ನ್ಯಾಯಾಧೀಶರಿಗೆ ಯಾವುದೇ ಕೆಟ್ಟ ಉದ್ದೇಶವಿದೆಯೆಂದು ಆರೋಪಿಸುತ್ತಿಲ್ಲ.

**ಪ್ರೊ. ಎಸ್.ಎಲ್. ಸಕ್ಸೇನಾ:** ಅವರು ಇಂದು ಈ ಮಾತನ್ನು ಹೇಳಿದ್ದಾರೆಂಬುದಕ್ಕಾಗಿ ನನಗೆ ಸಂತೋಷವಿದೆ. ನನ್ನ ಗೆಳೆಯರಾದ ಪ್ರೊ. ಷಾ ಅವರು ಕೊಟ್ಟ ಕಾರಣಗಳ ಹೊರತಾಗಿಯೂ, ಕೇವಲ ೪ ಜನರಿಗಾಗಿ ಸಂವಿಧಾನವನ್ನು ನಾವು ಬದಲಾಯಿಸಬಾರದು. ತತ್ವಗಳಿಗೆ ಒಳಪಟ್ಟಿದ್ದರೂ, ಮುಖ್ಯ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತುಕೊಂಡಿರುವ ವಿದೇಶೀಯನು ಸಹ ಎಲ್ಲ ಅನುಮಾನಗಳನ್ನು ಮೀರಿದ ಒಂದು ತೀರ್ಪನ್ನು ಕೊಡುವ ಸ್ವಾತಂತ್ರ್ಯವನ್ನು, ಧೈರ್ಯವನ್ನು ಹೊಂದಿರುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಕಾನೂನು ಸಚಿವರು, ನ್ಯಾಯಾಧೀಶರಗಳ ಮೇಲೆ ಯಾರೂ ಆರೋಪ ಮಾಡಿಲ್ಲ ಎಂದು ಹೇಳಿದರು. ನಾನು ಪ್ರಧಾನಮಂತ್ರಿಯವರ ಭಾಷಣವನ್ನು ಎಚ್ಚರಿಕೆಯಿಂದ ಓದಿದ್ದೇನೆ. . . .

**ಮಾನ್ಯ ಸಭಾಪತಿಯವರು:** ಈಗ ಪ್ರಸ್ತಾಪದಲ್ಲಿರುವ ಅಂಶ ಕಾನೂನು ಸಚಿವರಾಗಲೀ, ಪ್ರಧಾನಮಂತ್ರಿಯವರಾಗಲೀ ಬೇರಾವುದೋ ಸಂದರ್ಭದಲ್ಲಿ ಈ ಅಂಶದ ಬಗ್ಗೆ ಏನು ಹೇಳಿದರು ಎಂಬುದಲ್ಲ ಎಂಬುದನ್ನು ಮಾನ್ಯ ಸದಸ್ಯರಿಗೆ ನಾನು ನೆನಪು ಮಾಡಬಯಸುತ್ತೇನೆ. ನಾವು ಈಗ ಪರಿಗಣಿಸುತ್ತಿರುವುದು ಈ ಖಂಡವನ್ನು ಅವರ ಅಭಿಪ್ರಾಯಗಳು ಈ ಖಂಡದ ಪರಿಗಣನೆಗೆ ಸುಸಂಗತವಾದುದಲ್ಲ. ಈಗಿನ ಸುಸಂಗತವಾದ ಅಂಶವೆಂದರೆ ಈ ಖಂಡವನ್ನು ಒಪ್ಪಿಕೊಳ್ಳಬೇಕೇ ಬೇಡವೇ ಎಂಬುದು. ಮಾನ್ಯ ಸದಸ್ಯರು ಈ ಅಂಶಕ್ಕೆ ಸಂಬಂಧಿಸಿದಂತೆ ಮಾತ್ರ ಅವರ ಅಭಿಪ್ರಾಯಗಳನ್ನು ಸೀಮಿತಗೊಳಿಸಬೇಕೆಂದು ನಾನು ಕೋರುತ್ತೇನೆ.

*ಶ್ರೀ **ರಾಜಗೋಪಾಲಾಚಾರಿ:** ನಾವು ತೆಗೆದುಹಾಕಲು ಪ್ರಯತ್ನಿಸುತ್ತಿರುವ ನಿಷೇಧ ಯಾವುದು ಎಂಬುದನ್ನು ತಿಳಿದುಕೊಳ್ಳಲು ಮಾನ್ಯ ಸದಸ್ಯರು ಬಯಸುತ್ತಿದ್ದಾರೆ. ಅನುಚ್ಛೇದ ೨೧೭, ಯಾರೇ ನ್ಯಾಯಾಧೀಶನು ನಾಗರಿಕನಾಗಿಲ್ಲದಿದ್ದರೆ ಆ ಬಗ್ಗೆ ನಿಷೇಧವನ್ನು ಒಳಗೊಳ್ಳುತ್ತದೆ. ಎಲ್ಲ ನ್ಯಾಯಾಧೀಶರುಗಳಿಗೂ ಈ ಉಪಬಂಧ ಅನ್ವಯಿಸುತ್ತದೆ. ಇದನ್ನು ತಾತ್ಕಾಲಿಕ ಉಪಬಂಧದ ಮೂಲಕ ತೆಗೆದುಹಾಕಬೇಕೆಂದು ಕೋರಲಾಗಿದೆ.

**ಮಾನ್ಯ ಸಭಾಪತಿ:** ಒಬ್ಬ ವ್ಯಕ್ತಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಲು ಸಾಧ್ಯವಿಲ್ಲದಿರುವಾಗ ಅವರು ಹೇಗೆ ಮುಖ್ಯ ನ್ಯಾಯಾಧೀಶರಾಗಲು ಸಾಧ್ಯ?

**ಶ್ರೀ ಶಿವಚರಣ ಲಾಲ್:** ವರ್ಗಾವಣೆಗೆ ಅನುಚ್ಛೇದ ೨೨೨ ಅನ್ವಯಿಸುತ್ತದೆ. ಆದ್ದರಿಂದ ವರ್ಗಾವಣೆಗೆ

---

* ಸಂ.ಚ. ಸಂಪುಟ ೧೨ ಭಾಗ ೨ ೧೯೫೧ ರ ಜೂನ್ ೫ ೧೦೦೨೪

ನ್ಯಾಯಾಧೀಶರು ನಾಗರಿಕರಾಗಿರುವುದು ಅಗತ್ಯವಿಲ್ಲ. ಮತ್ತು ಈ ತಿದ್ದುಪಡಿಯನ್ನು ಮಾಡುವುದು ಸಹ ಅಗತ್ಯವಿಲ್ಲ.

**ಡಾ. ಅಂಬೇಡ್ಕರ್:** ಮಾನ್ಯರೇ, ಸದನಕ್ಕೆ ಸಮಾಧಾನವಾದರೆ, ಖಂಡ ೧೩ ಕ್ಕೆ ಒಂದು ತಿದ್ದುಪಡಿಯನ್ನು ನಾನು ಪ್ರಸ್ತಾವಿಸುತ್ತೇನೆ. ಆ ತಿದ್ದುಪಡಿ ಹೀಗಿದೆ:

೪ ನೇ ಪುಟದಲ್ಲಿ ೮ ಮತ್ತು ೯ ನೇ ಸಾಲುಗಳಲ್ಲಿ, "ಅಥವಾ ಸರ್ವೋಚ್ಚ ನ್ಯಾಯಾಲಯದ".

**ಶ್ರೀ ಕಾಮತ್:** ನಾನು ಪ್ರಸ್ತಾವಿಸಿದ ಎರಡು ತಿದ್ದುಪಡಿಗಳಲ್ಲಿ ಅದೂ ಒಂದು.

**ಡಾ. ಅಂಬೇಡ್ಕರ್:** ಒಳ್ಳೆಯದು, ನೀವು ಇಷ್ಟಪಟ್ಟಲ್ಲಿ ನಿಮ್ಮ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿದ್ದೇನೆ. "ಅಥವಾ ಸರ್ವೋಚ್ಚ ನ್ಯಾಯಾಲಯದ" ಎಂಬ ಪದಗಳನ್ನು ತೆಗೆದುಹಾಕಲು ಸದನ ಒಪ್ಪಿದರೆ ನನ್ನಿಂದ ಹೆಚ್ಚಿನ ಉತ್ತರ ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ.

**ಮಾನ್ಯ ಸಭಾಪತಿ:** ನಾನು ಈಗ ತಿದ್ದುಪಡಿಗಳನ್ನು ಸದನದ ಮುಂದಿಡುತ್ತೇನೆ. (ಪ್ರೊ. ಷಾ ಅವರ ತಿದ್ದುಪಡಿಗಳು ಒಪ್ಪಿಗೆಯಾಗಲಿಲ್ಲ.)

***ಮಾನ್ಯ ಸಭಾಪತಿ:** ಮುಂದಿನದು "ಅಥವಾ ಸರ್ವೋಚ್ಚ ನ್ಯಾಯಾಲಯದ" ಎಂಬ ಪದಗಳನ್ನು ಬಿಟ್ಟುಬಿಡಲು ಅನುಮತಿ ಕೋರುವುದು. ಇದು ಡಾ. ಅಂಬೇಡ್ಕರ್ ಅವರು ಪ್ರಸ್ತಾಪಿಸಿದ ತಿದ್ದುಪಡಿಯೇ ಆಗಿದೆ.

**ಶ್ರೀ ಜವಹರಲಾಲ್ ನೆಹರೂ:** ಹೌದು, ಸಂಪೂರ್ಣವಾಗಿ ಅದೇ ಆಗಿದೆ.

**ಶ್ರೀ ಕಾಮತ್:** ಆದರೆ ನಾನು ಅದನ್ನು ಪ್ರಸ್ತಾವಿಸಿದ್ದೇನೆ ಮತ್ತು ಪ್ರೊ. ಷಾ ಅವರು ಸಹ ಅದನ್ನು ಪ್ರಸ್ತಾವಿಸಿದ್ದರು.

**ಮಾನ್ಯ ಸಭಾಪತಿ:** ತಿದ್ದುಪಡಿಯನ್ನು ಪ್ರಸ್ತಾವಿಸಲಾಗಿದೆ ಮತ್ತು ಅದನ್ನು ಸದನದ ಮುಂದೆ ಮಂಡಿಸಲು ನಾನು ಬದ್ಧನಾಗಿದ್ದೇನೆ.

**ಮಾನ್ಯ ಸದಸ್ಯರು:** ಅದನ್ನು ಹಿಂಪಡೆಯಬಹುದು.

**ಪ್ರೊ. ಕೆ.ಟಿ. ಷಾ:** ನಾನು ಯಾಕೆ ಅದನ್ನು ಹಿಂದಕ್ಕೆ ಪಡೆಯಲಿ?

**ಮಾನ್ಯ ಸಭಾಪತಿ:** ಈಗ ಪ್ರಶ್ನೆಯೆಂದರೆ:

ಪುಟ ೪ರಲ್ಲಿ ೮ ಮತ್ತು ೯ನೇ ಸಾಲುಗಳಲ್ಲಿರುವ "ಅಥವಾ ಸರ್ವೋಚ್ಚ ನ್ಯಾಯಾಲಯದ" ಅನ್ನು ಬಿಟ್ಟುಬಿಡಿ ಎಂಬುದು.

ಪ್ರಸ್ತಾವವನ್ನು ಅಂಗೀಕರಿಸಲಾಗಿದೆ.

**ಮಾನ್ಯ ಸಭಾಪತಿ:** ಈಗಿನ ಪ್ರಶ್ನೆಯೆಂದರೆ:

ಪುಟ ೪ರಲ್ಲಿ ೯ನೇ ನಂತರ ಈ ಮುಂದಿನದನ್ನು ಸೇರಿಸಿ:

> "ಪರಂತು, ಅಂಥ ಮುಖ್ಯ ನ್ಯಾಯಾಧೀಶರು ಅಥವಾ ಒಂದು ಉಚ್ಚ ನ್ಯಾಯಾಲಯದ ಇತರ ನ್ಯಾಯಾಧೀಶರು ಅಂಥ ನೇಮಕಾತಿಯ ನಂತರದ ಮೂರು ತಿಂಗಳೊಳಗೆ ಭಾರತದ ನಾಗರಿಕತ್ವವನ್ನು ಪಡೆಯತಕ್ಕದ್ದು; ಮತ್ತು ಪರಂತು, ಹುಟ್ಟಿನಿಂದ ಭಾರತದ ಸಹಜ ನಾಗರಿಕರಲ್ಲದವರು ಯಾರನ್ನೂ ಇನ್ನು ಮುಂದೆ ಭಾರತದ ಸರ್ವೋಚ್ಚ

* ಸಂ.ಚ. ಸಂಪುಟ ೧೨ ಭಾಗ ೨ ೧೯೫೧ರ ಜೂನ್ ೨ ಪಿ ೧೦೦೨೪

** ಅದೇ ಪಿಪಿ ೧೦೦೩೫–೩೬

ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನಾಗಿ ಅಥವಾ ನ್ಯಾಯಾಧೀಶರನ್ನಾಗಿ ನೇಮಕ ಮಾಡತಕ್ಕುದಲ್ಲ."

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

****ಡಾ. ಎಸ್.ಪಿ. ಮುಖರ್ಜಿ:** ಇದು, ಪ್ರಧಾನಮಂತ್ರಿಯವರು ಹೇಳಿದಂತೆ ತತ್ಪರಿಣಾಮಿ ಬದಲಾವಣೆ. ಮೇಲ್ನೋಟಕ್ಕೆ ಇದು ಸದನದಲ್ಲಿ ಮಂಡಿಸಿದ ತಿದ್ದುಪಡಿಯಿಂದಾಗಿ ಸದನವು ಸೇರ್ಪಡೆ ಮಾಡಿದ ಹೈದರಾಬಾದ್ ವಿನಿಮಯಗಳಿಗೆ ಸಂಬಂಧಪಟ್ಟಿರುವುದಾಗಿದೆ. ಖಂಡದ ಕೊನೆಯ ಭಾಗದ ಬಗ್ಗೆ ಏನು ಹೇಳುತ್ತೀರಿ? ಅದು ಹೀಗಿದೆ:

". . . . ನಿರಸನಗೊಳಿಸಲು ಅಥವಾ ತಿದ್ದುಪಡಿಮಾಡಲು ಯಾವುದೇ ಒಂದು ಸಕ್ಷಮ ವಿಧಾನಮಂಡಲದ ಅಧಿಕಾರಕ್ಕೆ ಒಳಪಟ್ಟು ಪ್ರತಿಯೊಂದು ಸದರಿ ಅಧಿನಿಯಮಗಳು, (ಮತ್ತು ನಿಯಮಗಳು, ಇದನ್ನು ಅಂಗೀಕರಿಸಿದರೆ) ಜಾರಿಯಲ್ಲಿ ಮುಂದುವರಿಯುತ್ತದೆ."

ಈ ನಿಯಮಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಹೈದರಾಬಾದಿನಲ್ಲಿ ವಿಧಾನಮಂಡಲ ಇಲ್ಲದಿರುವಾಗ ಯಾವುದೇ ವಿಧಾನಮಂಡಲವು ಅವನ್ನು ನಿರಸನಗೊಳಿಸುವುದು ಅಥವಾ ತಿದ್ದುಪಡಿ ಮಾಡುವುದು ಸಾಧ್ಯವಿಲ್ಲ. ಅಲ್ಲಿಯೂ ಸಹ ಅದನ್ನು "ವಿಧಾನಮಂಡಲ ಅಥವಾ ಇತರ ಸಕ್ಷಮ ಪ್ರಾಧಿಕಾರ' ಎಂಬುದಾಗಿ ಬದಲಾಯಿಸಬೇಕು.

**ಡಾ. ಅಂಬೇಡ್ಕರ್:** ಅಲ್ಲಿ ಯಾವುದೇ ಬಗೆಯ ವಿಧಾನಮಂಡಲವಿದ್ದರೂ ಅದಕ್ಕೆ ತಿದ್ದುಪಡಿ ಮಾಡುವ ಹಕ್ಕು ಇದೆ.

**ಮಾನ್ಯ ಸಭಾಪತಿ:** "ವಿಧಾನಮಂಡಲ" ಎಂಬ ಪದದ ಅರ್ಥದ ಬಗ್ಗೆ ಗೊಂದಲವಿದೆ. ವಿಧಾನಮಂಡಲ ಎಂದರೆ ಚುನಾಯಿತ ಪ್ರತಿನಿಧಿಗಳಿರುವ ಒಂದು ಸದನ ಮತ್ತು ಇತ್ಯಾದಿ ಎಂದು ಅರ್ಥಮಾಡಿಕೊಳ್ಳಲಾಗುತ್ತದೆ. ಇಲ್ಲಿ ವಿಧಾನಮಂಡಲ ಎಂದರೆ, ತಾನೇ ವಿಧಾನಮಂಡಲವಾಗಿರುವ ರಾಜಪ್ರಮುಖ ಎಂದು ನಾನು ನಂಬುತ್ತೇನೆ. ಸಾಂವಿಧಾನಿಕ ಅರ್ಥ ಇದು ಎಂದು ನಾನು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್:** ಹೌದು.

**ಮಾನ್ಯ ಸಭಾಪತಿ:** ಹಾಗಿದ್ದ ಮೇಲೆ ಯಾವುದೇ ತೊಂದರೆಯಿಲ್ಲ.

ಈಗಿನ ಪ್ರಶ್ನೆ:.......

ಪುಟ ೨ ರಲ್ಲಿ,

(i) ೩೫ನೇ ಸಾಲು,

'ಅಧಿನಿಯಮಗಳು' ಎಂಬುದರ ತರುವಾಯ 'ಮತ್ತು ನಿಯಮಗಳು' ಎಂಬುದನ್ನು ಸೇರಿಸಿ.

(ii) ೩೬ನೇ ಸಾಲು,

'ಅಧಿನಿಯಮಗಳು' ಎಂಬುದರ ತರುವಾಯ 'ಮತ್ತು ನಿಯಮಗಳು' ಎಂಬುದನ್ನು ಸೇರಿಸಿ.

(iii) ೩೯ನೇ ಸಾಲು,

'ಅಧಿನಿಯಮಗಳು' ಎಂಬುದರ ತರುವಾಯ 'ನಿಯಮಗಳು' ಎಂಬುದನ್ನು ಸೇರಿಸಿ.

(iv) ೪೨ನೇ ಸಾಲು,

'ಅಧಿನಿಯಮಗಳು' ಎಂಬುದರ ತರುವಾಯ 'ನಿಯಮಗಳು' ಎಂಬುದನ್ನು ಸೇರಿಸಿ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಕಾಮತ್:** ಈ ಖಂಡವನ್ನು ತಿದ್ದುಪಡಿಯಾದಂತೆ ಸದನದ ಮುಂದೆ ಮಂಡಿಸುವ ಅಗತ್ಯವಿಲ್ಲವೇ?

**ಮಾನ್ಯ ಸಭಾಪತಿ:** ಖಂಡಿತವಾಗಿಯೂ ಅಗತ್ಯವಿದೆಯೇ? "ತಿದ್ದುಪಡಿಯಾದಂತೆ ವಿಧೇಯಕ ಅಂಗೀಕಾರವಾಗಲಿ" ಎಂಬ ಪ್ರಸ್ತಾವವನ್ನು ನಾನು ಸದನದ ಮುಂದಿಡಲಿದ್ದೇನೆ. ನಿರ್ದಿಷ್ಟ ಖಂಡವನ್ನು ಮತ್ತೆ ಸದನದ ಮುಂದಿಡಬೇಕಾಗಿಲ್ಲ. ಮಾನ್ಯ ಸದಸ್ಯರು, ಖಂಡ ೫ಕ್ಕೆ ಮತ ನೀಡಿದುದನ್ನು ಮತ್ತು ಸದನ ಅದಕ್ಕೆ ಒಪ್ಪಿಗೆ ನೀಡಿದುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಆ ಖಂಡಕ್ಕೆ ಸಂಬಂಧಿಸಿದಂತೆ ಮತಗಳನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಲಾಯಿತು. ಈ ತಿದ್ದುಪಡಿ ಅದಕ್ಕೆ ತತ್ಪರಿಣಾಮವಾದ ತಿದ್ದುಪಡಿಯಾಗಿ ಬಂದಿದೆ.

**ಮಾನ್ಯ ಸಭಾಧ್ಯಕ್ಷರು:** ೯೪ನೇ ನಿಯಮದ ಅಡಿಯಲ್ಲಿ

**ಡಾ. ಎಸ್.ಪಿ. ಮುಖರ್ಜಿ:** ಇದನ್ನು ಪರಿಗಣಿಸುವುದು ನಿಮಗೆ ಬಿಟ್ಟಿದುದು. ಖಂಡಗಳಿಗೆ ಸಂಬಂಧಪಟ್ಟಂತೆ ಸುರಕ್ಷೆಯ ದೃಷ್ಟಿಯಿಂದ ಪ್ರತಿಯೊಂದು ಖಂಡವನ್ನು ಪ್ರತ್ಯೇಕವಾಗಿ ಮತಕ್ಕೆ ಹಾಕಬೇಕು ಮತ್ತು ಹಾಜರಿದ್ದು ಮತ ನೀಡುವ ಮೂರನೇ ಎರಡರಷ್ಟು ಸದಸ್ಯರ ಮತಗಳನ್ನು ದಾಖಲು ಮಾಡಬೇಕು ಎಂದು ನಿರ್ದಿಷ್ಟವಾಗಿ ನೀವು ಆದೇಶ ಹೊರಡಿಸಿದ್ದೀರಿ. ಈಗ ಆ ಮಾರ್ಗದರ್ಶನದಂತೆ ಖಂಡ ೫ನ್ನು ಅಂಗೀಕರಿಸಲಾಗಿದೆ. ಈಗ ನಾವು ಖಂಡ ೫ನ್ನು ತಿದ್ದುಪಡಿ ಮಾಡುತ್ತಿದ್ದೇವೆ. ಖಂಡ ೫ನ್ನು ತಿದ್ದುಪಡಿಯಾದ ರೀತಿಯಲ್ಲಿ ಪ್ರತ್ಯೇಕವಾಗಿ ಮತಕ್ಕೆ ಹಾಕುವುದು ಮತ್ತು ಮತಗಳನ್ನು ದಾಖಲು ಮಾಡುವುದು ಅಪೇಕ್ಷಣೀಯ ಮತ್ತು ಸುರಕ್ಷಿತವಲ್ಲವೇ?

**ಮಾನ್ಯ ಸಭಾಧ್ಯಕ್ಷರು:** ಅದು ಸರಿಯಾದ ವಿಧಾನವಲ್ಲ. ಆ ಖಂಡವನ್ನು, ಎರಡನೇ ಬಾರಿ ಪ್ರತಿಯೊಂದು ಖಂಡವನ್ನು ಪರಿಶೀಲನೆ ಮಾಡುವಾಗ ಸದನವು ಈಗಾಗಲೇ ಅಂಗೀಕರಿಸಿದೆ. ಈಗ ಸದನದ ಮುಂದಿರುವ ಪ್ರಸ್ತಾವವೆಂದರೆ ಇಡೀ ವಿಧೇಯಕವನ್ನು ಅದು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕು ಎಂಬುದು. ತಿದ್ದುಪಡಿಯು ಕೇವಲ ತತ್ಪರಿಣಾಮಿ ಅಥವಾ ಪದಗಳಿಗೆ ಸಂಬಂಧಪಟ್ಟ ತಿದ್ದುಪಡಿಯಾಗಿರುವುದರಿಂದ ಈ ಹಂತದಲ್ಲಿ ಹಾಗೆ ಮಾಡಲು ಅನುಮತಿ ಇದೆ. ಈ ಹಂತದಲ್ಲಿ ವಸ್ತುವಿಷಯಕ್ಕೆ ಸಂಬಂಧಿಸಿದ ಯಾವುದೇ ತಿದ್ದುಪಡಿಗೂ ಅನುಮತಿ ಇರುವುದಿಲ್ಲ.

## ಒರಿಸ್ಸಾ ಆದೇಶ

***ಡಾ. ಅಂಬೇಡ್ಕರ್:** ನಾನು ಇದನ್ನು ಮಂಡಿಸಲಿಚ್ಛಿಸುತ್ತೇನೆ.

(ಪ್ರಸ್ತಾವಗಳ ಪತ್ರಕ್ಕೆ ಪರಿಶಿಷ್ಟ XXXIII, ಅನುಬಂಧ ೧, ನೋಡಿ)

## ಪಶ್ಚಿಮ ಬಂಗಾಳದ ಆದೇಶ

**ಡಾ. ಅಂಬೇಡ್ಕರ್:** ನಾನು ಇದನ್ನು ಮಂಡಿಸಲಿಚ್ಛಿಸುತ್ತೇನೆ.

(ಪ್ರಸ್ತಾವಗಳ ಪತ್ರಕ್ಕೆ ಪರಿಶಿಷ್ಟ XXXIII, ಅನುಬಂಧ ೧, ನೋಡಿ)

---

* ಸಂ.ಚ. ಸಂಪುಟ ೧೨, ಭಾಗ–೨, ೧೯೫೧ರ ಜೂನ್ ೪, ಪಿ. ೧೦೧೧೦

## ಮಧ್ಯಪ್ರದೇಶದ ಆದೇಶ

**ಡಾ. ಅಂಬೇಡ್ಕರ್: ನಾನು ಇದನ್ನು ಮಂಡಿಸಲಿಚ್ಛಿಸುತ್ತೇನೆ.

(ಪ್ರಸ್ತಾವಗಳ ಪಠ್ಯಕ್ಕೆ ಪರಿಶಿಷ್ಟ XXXIII, ಅನುಬಂಧ ೧, ನೋಡಿ)

## ರಾಜಸ್ಥಾನದ ಆದೇಶ

**ಡಾ. ಅಂಬೇಡ್ಕರ್:** ನಾನು ಇದನ್ನು ಮಂಡಿಸಲಿಚ್ಛಿಸುತ್ತೇನೆ.

(ಪ್ರಸ್ತಾವಗಳ ಪಠ್ಯಕ್ಕೆ ಪರಿಶಿಷ್ಟ XXXIII, ಅನುಬಂಧ ೧, ನೋಡಿ)

## ಭಾಗ ಸಿ–ರಾಜ್ಯಗಳ ಆದೇಶ

***ಡಾ. ಅಂಬೇಡ್ಕರ್: ನಾನು ಇದನ್ನು ಮಂಡಿಸಲಿಚ್ಛಿಸುತ್ತೇನೆ.

(ಪ್ರಸ್ತಾವಗಳ ಪಠ್ಯಕ್ಕೆ ಪರಿಶಿಷ್ಟ XXXIII, ಅನುಬಂಧ ೧, ನೋಡಿ)

## *ಜನತಾ ಪ್ರಾತಿನಿಧ್ಯ (ಸಂಖ್ಯೆ ೨) ವಿಧೇಯಕ – ಮುಂದುವರೆದಿದೆ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಮಾನ್ಯರೇ, ನಾನು ನಿಮ್ಮ ಅನುಮತಿಯೊಡನೆ, ಜನತಾ ಪ್ರಾತಿನಿಧ್ಯ (ಸಂಖ್ಯೆ ೨) ವಿಧೇಯಕವನ್ನು ೨ನೆಯ ಬಾರಿ ಓದಿದಾಗ ಮೂಡಿದ ಅಭಿಪ್ರಾಯಗಳನ್ನು ಅನುಸರಿಸಿ ಕೆಲವು ಸೂತ್ರಗಳನ್ನು ಮತ್ತು ತತ್ಪರಿಣಾಮಿ ತಿದ್ದುಪಡಿಗಳನ್ನು ಮಂಡಿಸುತ್ತೇನೆ.

ನಾನು ಈ ಮುಂದಿನಂತೆ ಮಂಡಿಸಲು ಇಚ್ಛಿಸುತ್ತೇನೆ:

"ವಿಧೇಯಕವು, ತಿದ್ದುಪಡಿಯಾದಂತೆ, ಅಂಗೀಕೃತವಾಗಲಿ".

**ಮಾನ್ಯ ಸಭಾಪತಿಯವರು:** ಪ್ರಸ್ತಾವವನ್ನು ಮಂಡಿಸಲಾಗಿದೆ.

"ವಿಧೇಯಕವು, ತಿದ್ದುಪಡಿಯಾದಂತೆ, ಅಂಗೀಕೃತವಾಗಲಿ".

**ಶ್ರೀ ಕಾಮತ್ (ಮಧ್ಯಪ್ರದೇಶ):** ಕಾನೂನು ಸಚಿವರು ಈ ತಿದ್ದುಪಡಿಗಳನ್ನು ಪ್ರಸ್ತಾವಿಸಲು ಮುಂದುವರಿಯುವುದಕ್ಕೆ ಮುಂಚೆ, ಈ ಸದನವು ತಿದ್ದುಪಡಿಗಳ ಸೂಚನೆಗಳನ್ನು ಸಾಕಷ್ಟು ಮೊದಲೇ ಪಡೆಯುವ ಹಕ್ಕು ಹೊಂದಿದೆ ಎಂಬುದನ್ನು ಹಿಂದಿನ ದಿನ ನಾನು ಮಾನ್ಯ ಸಭಾಧ್ಯಕ್ಷರಿಗೆ ಮಾಡಿದ ಕೋರಿಕೆಯನ್ನು ಜ್ಞಾಪಿಸಬಯಸುತ್ತೇನೆ. ತಿದ್ದುಪಡಿಗಳ ಈ ಪಟ್ಟಿಗಳನ್ನು ಹಿಂದಿನ ದಿನ ರಾತ್ರಿಯೂ ಅಲ್ಲ, ಈ ದಿನ ಬೆಳಿಗ್ಗೆ ೭ ಗಂಟೆಯಲ್ಲಿ ಎಂದರೆ ಸಂಸತ್ತಿಗೆ ಹೊರಡುವುದಕ್ಕೆ ಕೇವಲ ೧ ಗಂಟೆ ಮುಂಚೆ ಸ್ವೀಕರಿಸಲಾಯಿತು ಎಂಬ ಬಗ್ಗೆ ನಾನು ಅತ್ಯಂತ ತೀವ್ರ ಮಾತುಗಳಲ್ಲಿ ನನ್ನ ವಿರೋಧವನ್ನು ದಾಖಲಿಸಲು ಇಚ್ಛಿಸುತ್ತೇನೆ. ಈ ಸಂದರ್ಭಗಳಲ್ಲಿ, ಕಾನೂನು ಸಚಿವರು ಅವರ ತಿದ್ದುಪಡಿಗಳ ಮಂಡನೆಯನ್ನು ಮಾರನೆಯ ದಿನದವರೆಗೆ ಮುಂದೂಡಬಹುದು ಮತ್ತು ಈ ತಿದ್ದುಪಡಿಗಳನ್ನು ಪರಿಶೀಲಿಸಲು ಮತ್ತು ಈ ತಿದ್ದುಪಡಿಗಳಿಗೆ ಯಾವುದೇ ತಿದ್ದುಪಡಿಗಳಿದ್ದರೆ ಅದನ್ನು ಸೂಚಿಸಲು ಸಾಕಷ್ಟು ಸಮಯವನ್ನು ಸದಸ್ಯರಿಗೆ ಕೊಡಬೇಕು. . . . .ಈ ತಿದ್ದುಪಡಿಗಳು ತೀರ ತಡವಾಗಿ ನಮ್ಮ ಕೈ ಸೇರಿರುವುದರಿಂದ ಅವನ್ನು

---

** ಅದೇ ಪಿ ೧೦೧೧೧

*** ಅದೇ ಪಿ ೧೦೧೧೨

* ಅದೇ, ೫ನೇ ಜೂನ್ ೧೯೫೧, ಪಿಪಿ ೧೦೨೦೨–೦೩

ತಡೆಹಿಡಿಯಬೇಕೆಂದು ಮತ್ತು ತಿದ್ದುಪಡಿಗಳನ್ನು ಪರಿಶೀಲಿಸಲು ಮತ್ತು ಅವುಗಳಿಗೆ ತಿದ್ದುಪಡಿಗಳನ್ನು ಸಲ್ಲಿಸಲು ಕಡೆಯ ಪಕ್ಷ ೧ ದಿನದ ಅವಕಾಶವನ್ನು ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ):** ನಮಗೆ ಈ ತಿದ್ದುಪಡಿಗಳನ್ನು ಈ ದಿನ ಬೆಳಿಗ್ಗೆ ಕಳುಹಿಸಿದುದರಿಂದ ನಾನು ಶ್ರೀ ಕಾಮತ್ ಅವರು ಮಾಡಿದ ಸಲಹೆಗೆ ಸಹಮತಿ ನೀಡುತ್ತೇನೆ. ಈ ತಿದ್ದುಪಡಿಗಳು ವಿಧೇಯಕದ ವ್ಯಾಪ್ತಿ ಮತ್ತು ಉದ್ದೇಶಕ್ಕೆ ಹೊಂದಾಣಿಕೆಯಾಗುತ್ತದೆಯೇ ಎಂಬ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಡಲು ನಮಗೆ ಸಾಕಷ್ಟು ಸಮಯವನ್ನು ಕೊಡಬೇಕು. ನಾನು ಯಾವುದೇ ತಾಂತ್ರಿಕ ಆಕ್ಷೇಪಣೆಯನ್ನು ಎತ್ತುತ್ತಿಲ್ಲ. ನನಗೆ ಆ ಅಭ್ಯಾಸವಿಲ್ಲ.

**ಶ್ರೀ ಕಾಮತ್:** ನನ್ನದೂ ಸಹ ತಾಂತ್ರಿಕ ಆಕ್ಷೇಪಣೆಯಾಗಿಲ್ಲ.

**ಶ್ರೀ ಜೆ.ಆರ್. ಕಪೂರ್:** ಆದ್ದರಿಂದಲೇ ನಾನು ಶ್ರೀ ಕಾಮತ್ ಅವರ ಸಲಹೆಗೆ ಸಹಮತಿ ವ್ಯಕ್ತಪಡಿಸಿರುವುದು. ನಾವು ಈ ವಿಧೇಯಕದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದೇವೆ ಮತ್ತು ಕಾನೂನು ಸಚಿವರು ಈ ವಿಧೇಯಕವನ್ನು ಕೂಲಂಕಷವಾಗಿ ಪರಿಶೀಲಿಸಿದ್ದರೂ, ಅದನ್ನು ವಿಶ್ಲೇಷಿಸಲು ನಮಗೆ ಸಾಕಷ್ಟು ಅವಕಾಶ ಕೊಟ್ಟ ಹೊರತು ಅದಕ್ಕೆ ಯಾವುದೇ ತಿದ್ದುಪಡಿಗಳನ್ನು ಸೇರಿಸದಿರುವಂತೆ ನೋಡಿಕೊಳ್ಳಲು ನಾವು ಕಾತುರರಾಗಿದ್ದೇವೆ.

**ಡಾ. ದೇಶ್‌ಮುಖ್ (ಮಧ್ಯಪ್ರದೇಶ):** ಈ ಸಲಹೆ ಸಾಕಷ್ಟು ವಿವೇಚನಾಯುತವಾದುದಾಗಿದೆ ಮತ್ತು ನೀವು ಅದನ್ನು ಒಪ್ಪಿಕೊಳ್ಳುತ್ತೀರೆಂದು ನಾನು ಭಾವಿಸುತ್ತೇನೆ. . . . . .ಈ ಸನ್ನಿವೇಶಗಳಲ್ಲಿ, ಯಾವ ತತ್ಪರಿಣಾಮಿ ತಿದ್ದುಪಡಿಗಳನ್ನು ಪ್ರಸ್ತಾವಿಸಲಾಗಿದೆ ಮತ್ತು ಅವುಗಳ ಅಗತ್ಯವಿದೆಯೇ ಎಂಬುದನ್ನು ನೋಡುವ ಅವಕಾಶವನ್ನು ಈ ಸದನದ ಸದಸ್ಯರುಗಳು ಹೊಂದಬೇಕಾಗಿರುವುದು ನ್ಯಾಯಸಮ್ಮತವಾದುದಾಗಿದೆ. ಅವರಿಗೆ ತಾವು ಮಂಡಿಸಲಿಚ್ಛಿಸುವ ಯಾವುದೇ ತಿದ್ದುಪಡಿಗಳ ಸೂಚನೆಗಳನ್ನು ಕೊಡುವುದಕ್ಕೆ ಸಾಕಷ್ಟು ಅವಕಾಶ ಇರಬೇಕು. ಇಂದು ಚರ್ಚಿಸಲು ಇತರ ಹಲವು ವಿಷಯಗಳಿವೆ.

**ಮಾನ್ಯ ಸಭಾಪತಿಯವರು:** ನಾನು ಮಾನ್ಯ ಕಾನೂನು ಸಚಿವರ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳಲಿಚ್ಛಿಸುತ್ತೇನೆ.

**ಡಾ. ಅಂಬೇಡ್ಕರ್:** ಈ ತಿದ್ದುಪಡಿಗಳು ಸಂಪೂರ್ಣವಾಗಿ ಔಪಚಾರಿಕವಾದವು ಮತ್ತು ತತ್ಪರಿಣಾಮಿಯಾದವು ಎಂದು ಹೇಳುತ್ತೇನೆ. ವಸ್ತು ವಿಷಯಕ್ಕೆ ಸಂಬಂಧಪಟ್ಟಿದುದು ಏನೂ ಇದರಲ್ಲಿ ಇಲ್ಲ. ಆದರೂ ಸದಸ್ಯರು ತಮಗೆ ಸಮಯ ಬೇಕೆಂದು ಭಾವಿಸಿದರೆ ಸರ್ಕಾರದ ಇತರ ಕಾರ್ಯಕಲಾಪಗಳಿಗೆ ಒಳಪಟ್ಟು ಈ ವಿಷಯವನ್ನು ನಾಳೆಯ ದಿನ ಕೈಗೊಳ್ಳಲು ನನ್ನ ಆಕ್ಷೇಪಣೆಯೇನೂ ಇಲ್ಲ

**ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರು (ಶ್ರೀ ಸತ್ಯನಾರಾಯಣ ಸಿನ್ಹ):** ಕಾರ್ಯಸೂಚಿಯಲ್ಲಿನ ಮುಂದಿನ ವಿಷಯವನ್ನು ಕೈಗೆತ್ತಿಕೊಳ್ಳಬಹುದು.

**ಮಾನ್ಯ ಸಭಾಪತಿಯವರು:** ಈ ಕೋರಿಕೆ ಸೂಕ್ತವಾದುದಾಗಿದೆ.

*(ಪ್ರಸ್ತಾವಗಳ ಪಠ್ಯಕ್ಕೆ ಪರಿಶಿಷ್ಟ – XXXIII ಅನುಬಂಧ–೪ ನ್ನು ನೋಡಿ)

---

* ಸಂ.ಚ. ಸಂಪುಟ ೧೨ ಭಾಗ ೨, ೧೯೫೧ರ ಜೂನ್ ೭, ಪಿಪಿ ೧೦೩೪೨–೪೩

## ಮಧ್ಯಪ್ರದೇಶ ಆದೇಶ

**ಶ್ರೀ ಎಂ.ಎ. ಹಸನ್ (ಮಧ್ಯಪ್ರದೇಶ):** ನಾನು ಮಂಡಿಸಲು ಇಚ್ಛಿಸುತ್ತೇನೆ:

(ಪ್ರಸ್ತಾವಗಳ ಪಠ್ಯಕ್ಕೆ ಪರಿಶಿಷ್ಟ – XXXIII ಅನುಬಂಧ–೪ ನ್ನು ನೋಡಿ)

**ಕಾನೂನು ಸಚಿವರು: (ಡಾ. ಅಂಬೇಡ್ಕರ್)** ನಾನು ಮಂಡಿಸಲು ಇಚ್ಛಿಸುತ್ತೇನೆ:

(ಪ್ರಸ್ತಾವಗಳ ಪಠ್ಯಕ್ಕೆ ಪರಿಶಿಷ್ಟ – XXXIII ಅನುಬಂಧ–೪ ನ್ನು ನೋಡಿ)

## ಉತ್ತರ ಪ್ರದೇಶ ಆದೇಶ

**ಪಂಡಿತ್ ಬಾಲಕೃಷ್ಣ ಶರ್ಮಾ (ಉತ್ತರಪ್ರದೇಶ):** ನಾನು ಮಂಡಿಸಲು ಇಚ್ಛಿಸುತ್ತೇನೆ:

(ಪ್ರಸ್ತಾವಗಳ ಪಠ್ಯಕ್ಕೆ ಪರಿಶಿಷ್ಟ – XXXIII ಅನುಬಂಧ–೪ ನ್ನು ನೋಡಿ)

**ಮಾನ್ಯ ಸಭಾಧ್ಯಕ್ಷರು:** ಉತ್ತರ ಪ್ರದೇಶ ಆದೇಶದ ಸಂಬಂಧದಲ್ಲಿ ಮಂಡಿಸಲಾದ ಪ್ರಸ್ತಾವಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸುತ್ತದೆ ಎಂಬುದು ನನಗೆ ತಿಳಿದಿಲ್ಲ. ಪ್ರಸ್ತಾವಗಳನ್ನು ಇಂದು ಮಂಡಿಸಬೇಕು.

**ಡಾ. ಅಂಬೇಡ್ಕರ್:** ಪರಿಷ್ಕೃತ ಆದೇಶ ಇನ್ನೂ ಸಿದ್ಧವಿಲ್ಲದಿರುವುದರಿಂದ ನಾನು ಕಷ್ಟದ ಪರಿಸ್ಥಿತಿಯಲ್ಲಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಇವತ್ತು ಒಂದು ಗಂಟೆಯ ಹೊತ್ತಿಗೆ ಸಿದ್ಧವಿರುತ್ತದೆಯೇ?

**ಡಾ. ಅಂಬೇಡ್ಕರ್:** ನಾವು ನಮ್ಮ ಶಕ್ತಿಮೀರಿ ಪ್ರಯತ್ನಿಸುತ್ತಿದ್ದೇವೆ. ಪರಿಸ್ಥಿತಿ ಏನಿದೆ ಎಂಬುದನ್ನು ೧ ಗಂಟೆಗೆ ಮುಂಚಿತವಾಗಿ ನಾನು ಈ ಸದನಕ್ಕೆ ಮತ್ತು ತಮಗೆ ತಿಳಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಪ್ರಸ್ತಾವಗಳನ್ನು ಸದನದಲ್ಲಿ ೧ ಗಂಟೆಗೆ ಮುಂಚೆ ಮಂಡಿಸಬೇಕೆಂಬುದು ನಮ್ಮ ಅಭಿಪ್ರಾಯ. ಇಲ್ಲದಿದ್ದರೆ, ಪ್ರಸ್ತಾವವು ಅಂಗೀಕಾರಾರ್ಹವಾಗುವುದೇ ಇಲ್ಲ. ಆದ್ದರಿಂದ ಪ್ರಸ್ತಾವಗಳನ್ನು ಮಂಡಿಸಿ ಪರಿಶೀಲಿಸುವುದು ಸರಿಯೆಂದು ನನ್ನ ಸಲಹೆ. ನಂತರದಲ್ಲಿ ಅದಕ್ಕೆ ತಿದ್ದುಪಡಿಗಳನ್ನು ಸೂಚಿಸುವುದು ಸಾಧ್ಯವಾಗುತ್ತದೆ. ಇದು ನಮಗಿರುವ ಒಂದು ಮಾರ್ಗ. ಮಾನ್ಯ ಕಾನೂನು ಸಚಿವರು ಇದನ್ನು ಪರಿಗಣಿಸಬಹುದು. ಎಂದರೆ ಭಾಷೆ ಮತ್ತು ಇತರ ಅಂಥ ವಿಷಯಗಳಿಗೆ ಸಂಬಂಧಿಸಿದಂತೆ ತಿದ್ದುಪಡಿಗಳು ಎಂದು ನನ್ನ ಅರ್ಥ. ವಿಷಯದ ತಿದ್ದುಪಡಿ ಅಲ್ಲ.

## *ಚುನಾವಣಾ ಕ್ಷೇತ್ರಗಳ ಪುನರ್ವಿಂಗಡಣಾ ಆದೇಶಗಳು ೧೯೫೧–ಇದಕ್ಕೆ ಸಂಬಂಧಿಸಿದ ಪ್ರಸ್ತಾವಗಳು – ಮುಂದುವರೆದಿದೆ

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಅಸ್ಸಾಂ ಆದೇಶವನ್ನು ಮೊದಲು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ಆಶಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು:** ಆಗಲಿ. ಇದಕ್ಕೆ ಅನೇಕ ತಿದ್ದುಪಡಿಗಳನ್ನು ಸೂಚಿಸಲಾಗಿದೆ. ಅನುಕೂಲದ ದೃಷ್ಟಿಯಿಂದ ಯಾವ ತಿದ್ದುಪಡಿಗಳನ್ನು ಮಾನ್ಯ ಕಾನೂನು ಸಚಿವರು ಒಪ್ಪಿಕೊಳ್ಳಲು ಸಿದ್ಧರಿದ್ದಾರೆ ಎಂಬುದನ್ನು

---

* ಸಂ.ಚ. ಸಂಪುಟ ೧೨, ಭಾಗ–೨, ೧೯೫೧ರ ಜೂನ್ ೮, ಪಿ. ೧೦೫೦೦

ತಿಳಿಸಲು ಸಾಧ್ಯವಿದ್ದರೆ ಉಳಿದ ತಿದ್ದುಪಡಿಗಳ ಅಂಗೀಕಾರವನ್ನು ಒತ್ತಾಯಿಸದೆ ಇರಬಹುದು. ಆದರೆ ತಮ್ಮ ತಿದ್ದುಪಡಿಗಳನ್ನು ಪರಿಗಣಿಸಬೇಕೆಂದು ಒತ್ತಾಯಿಸುವ ಸದಸ್ಯರು ಇದ್ದರೆ ಅದನ್ನು ಪರಿಗಣಿಸಬಹುದು.

**ಡಾ. ಅಂಬೇಡ್ಕರ್:** ಅಸ್ಸಾಂಗೆ ಸಂಬಂಧಪಟ್ಟಂತೆ ಬಹಳಷ್ಟು ತಿದ್ದುಪಡಿಗಳಿವೆ.

**ಮಾನ್ಯ ಉಪಾಧ್ಯಕ್ಷರು:** ಆದ್ದರಿಂದ ಮಾನ್ಯ ಸಚಿವರು ಅವರ ತಿದ್ದುಪಡಿಗಳನ್ನು ಮೊದಲಿಗೆ ಮಂಡಿಸಿದರೆ ಅವುಗಳಲ್ಲಿ ಸೇರ್ಪಡೆಯಾಗದಿರುವವನ್ನು ಆನಂತರದಲ್ಲಿ ನಾವು ಪರಿಗಣಿಸಬಹುದು.

**ಡಾ. ಅಂಬೇಡ್ಕರ್:** ನನ್ನ ತಿದ್ದುಪಡಿಗಳು ಇರುವುದು ಪೂರಕ ಪಟ್ಟಿ ೪ ಸಂಖ್ಯೆ ೧ ರಿಂದ ೮ರಲ್ಲಿ. ಅವುಗಳು ಸಂಪೂರ್ಣವಾಗಿ ತಾಂತ್ರಿಕ ತಿದ್ದುಪಡಿಗಳಾಗಿವೆ. ಅವುಗಳಲ್ಲಿ ಯಾವುದೇ ವಸ್ತು ವಿಷಯದ ಬಗ್ಗೆ ಯಾವುದೇ ಅಂಶ ಒಳಗೊಂಡಿಲ್ಲ. ಹೆಚ್ಚಿನ ಪರಿಗಣನೆಯ ನಂತರ ನನ್ನ ತಿದ್ದುಪಡಿಗಳ ಪೈಕಿ ಸಂಖ್ಯೆ ೧ ಮತ್ತು ೨ನ್ನು ನಾನು ಹಿಂದಕ್ಕೆ ಪಡೆಯುತ್ತೇನೆ.

ತಿದ್ದುಪಡಿಗಳನ್ನು ಅನುಮತಿ ಪಡೆದು ಹಿಂದಕ್ಕೆ ಪಡೆಯಲಾಯಿತು.

**ಶ್ರೀ ಚಲಿಹಾ:** ನಾನು ಪೂರಕ ಪಟ್ಟಿ ಸಂಖ್ಯೆ ೨ರಲ್ಲಿ ನನ್ನ ಪ್ರಸ್ತಾವ ಸಂಖ್ಯೆ ೨ನ್ನು ಪರಿಗಣಿಸಬೇಕೆಂದು ಒತ್ತಾಯಿಸುತ್ತೇನೆ. ಸಂಖ್ಯೆ ೧ನ್ನು ಪರಿಗಣಿಸಬೇಕೆಂದು ಒತ್ತಾಯಿಸುವುದಿಲ್ಲ.

ಸಂವಿಧಾನದಲ್ಲಿ. ಶಿಲ್ಲಾಂಗ್ ಚುನಾವಣಾ ಕ್ಷೇತ್ರ ಸಾಮಾನ್ಯ ಚುನಾವಣಾ ಕ್ಷೇತ್ರವಾಗಿ ಮುಕ್ತವಾಗಿರುತ್ತದೆ ಎಂಬ ಬಗ್ಗೆ ಉಪಬಂಧ ಕಲ್ಪಿಸಲಾಗಿದೆ. ಅನುಚ್ಛೇದ ೨೩೨ (೬) ಹೀಗೆ ನಿರೂಪಿಸುತ್ತದೆ.

> "ಅಸ್ಸಾಂ ರಾಜ್ಯದ ಯಾವುದೇ ಸ್ವಾಯತ್ತ ಜಿಲ್ಲೆಯ ಅನುಸೂಚಿತ ಬುಡಕಟ್ಟಿಗೆ ಸೇರಿರದ ಯಾವನೇ ವ್ಯಕ್ತಿಯು ಶಿಲ್ಲಾಂಗ್‌ನ ಕಂಟೋನ್‌ಮೆಂಟ್ ಮತ್ತು ಪುರಸಭೆಯನ್ನು ಒಳಗೊಂಡಿರುವ ಚುನಾವಣಾ ಕ್ಷೇತ್ರದಿಂದಲ್ಲದೆ ಆ ಜಿಲ್ಲೆಯ ಯಾವುದೇ ಚುನಾವಣಾ ಕ್ಷೇತ್ರದಿಂದ ಆ ರಾಜ್ಯದ ವಿಧಾನಸಭೆಗೆ ಚುನಾಯಿತನಾಗಲು ಅರ್ಹನಾಗತಕ್ಕುದಲ್ಲ."

ಡಾ. ಅಂಬೇಡ್ಕರ್ ಅವರು ಇದನ್ನು ಒಪ್ಪಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಮತ್ತು ಅದು ಮುದ್ರಣ ದೋಷವೆಂದು ಹೇಳಲಾಗಿದೆ ಮತ್ತು ಅದನ್ನು ಅನುಸೂಚಿತ ಬುಡಕಟ್ಟಿಗೆ ಮೀಸಲಿಡುವುದಿಲ್ಲವೆಂದು ಅದು ಸಾಮಾನ್ಯ ಚುನಾವಣಾ ಕ್ಷೇತ್ರವಾಗಿರುತ್ತದೆಂದು ತಿಳಿಸಲಾಗಿದೆ. ದೋಷವಿರಲಿ ಅಥವಾ ಇಲ್ಲದಿರಲಿ ಅದನ್ನು ಅನುಸೂಚಿತ ಬುಡಕಟ್ಟಿಗೆ ಮೀಸಲಿಡಲಾಗಿದೆ. ಅದನ್ನು ಅವರಿಗಾಗಿ ಮೀಸಲಿಡಬಾರದು. ಅದು ಸಾಮಾನ್ಯ ಜನತೆಗೆ ಮುಕ್ತವಿರತಕ್ಕುದು. ನಾನು ಈಗಾಗಲೇ ಎತ್ತಿ ತೋರಿಸಿರುವಂತೆ ಸಂವಿಧಾನದಲ್ಲಿ ಇದನ್ನು ನಿರ್ದಿಷ್ಟವಾಗಿ ಉಪಬಂಧಿಸಲಾಗಿದೆ.

**ಡಾ. ಅಂಬೇಡ್ಕರ್:** ಕಛೇರಿಯು ಇದನ್ನು ಮುದ್ರಣದೋಷವೆಂದು ಪರಿಗಣಿಸಿದೆ ಎಂದು ನಾನು ತಿಳಿಸಿದ್ದೇನೆ. ಮತ್ತು ಈ ಬಗ್ಗೆ ಒಂದು ತಪ್ಪೋಲೆಯನ್ನು ಹೊರಡಿಸಲು ನಾವು ಉದ್ದೇಶಿಸಿದ್ದೇವೆ. ಈಗಾಗಲೇ ಅದನ್ನು ಹೊರಡಿಸಿರಬಹುದು.

**ಶ್ರೀ ಚಲಿಹಾ:** ಹಾಗಿದ್ದಲ್ಲಿ ಈ ಪ್ರಸ್ತಾವವನ್ನು ನಾನು ಹಿಂದಕ್ಕೆ ಪಡೆಯಲಿಚ್ಛಿಸುತ್ತೇನೆ. (ಅಸ್ಸಾಂ ಆದೇಶಕ್ಕೆ ಸಂಬಂಧಿಸಿದಂತೆ ಪೂರಕ ಪಟ್ಟಿ ಸಂಖ್ಯೆ ೨ರಲ್ಲಿ ಸಂಖ್ಯೆ ೨)

ಪ್ರಸ್ತಾವವನ್ನು ಅನುಮತಿ ಪಡೆದು ಹಿಂದಕ್ಕೆ ಪಡೆಯಲಾಯಿತು.

---

** ಸಂ.ಚ. ಸಂಪುಟ ೧೨, ಭಾಗ–೨, ೧೯೫೧ರ ಜೂನ್ ೮, ಪಿ ೧೦೫೦೩

*__ಡಾ. ಅಂಬೇಡ್ಕರ್:__ ಈ ಮುಂದಿನ ತಿದ್ದುಪಡಿಗಳನ್ನು ಒಪ್ಪಿಕೊಳ್ಳುತ್ತೇನೆ;

ಸಂಚಿತ ಪಟ್ಟಿ ೧–ಭಾಗಗಳು ೧ ಮತ್ತು ೨

ಸಂಚಿತ ಪಟ್ಟಿ ೧ – ತಿದ್ದುಪಡಿಗಳು ೧ ರಿಂದ ೪

**ಮಾನ್ಯ ಉಪ ಸಭಾಧ್ಯಕ್ಷರು:** ಎಂದರೆ ಶ್ರೀ ದಾಸ್ ಅವರ ತಿದ್ದುಪಡಿಗಳ ಅರ್ಧದಷ್ಟು

**ಶ್ರೀ ಬಿಸ್ವನಾಥ್ ದಾಸ್:** ನಾನು ಇತರ ತಿದ್ದುಪಡಿಗಳ ಬಗ್ಗೆ ಸೂಚನೆ ನೀಡಿದ್ದೆ.

**ಮಾನ್ಯ ಉಪಸಭಾಧ್ಯಕ್ಷರು:** ಇಲ್ಲಿ ಯಾವುವೂ ಇಲ್ಲ.

**ಶ್ರೀ ಬಿಸ್ವನಾಥ್ ದಾಸ್:** ಈ ತಿದ್ದುಪಡಿಗಳು ಸಹ ವಿವಿಧ ಜಿಲ್ಲೆಗಳ ಸದಸ್ಯರನ್ನು ಒತ್ತಾಯ ಮಾಡಿ ಕೋರಿದ ನಂತರ ನಾನು ಸೂಚನೆ ನೀಡಬೇಕಿದ್ದವುಗಳ ಪೈಕಿ ಕೇವಲ ಕೆಲವನ್ನು ಪ್ರತಿನಿಧಿಸುತ್ತದೆ. ನನ್ನ ಬಳಿ ಇನ್ನೊಂದು ತಿದ್ದುಪಡಿಯಿದೆ. ಮಾನ್ಯ ಸಚಿವರು ಅವುಗಳನ್ನು ಒಪ್ಪಿಕೊಂಡ ತರುವಾಯ ಅವರು ಅವುಗಳ ಬಗ್ಗೆ ಸೂಚನೆ ನೀಡುತ್ತಾರೆಂದು ನಾನು ಭಾವಿಸಿದೆ.

**ಡಾ. ಅಂಬೇಡ್ಕರ್:** ನಾನು ಒಪ್ಪಿಗೆ ನೀಡಿದ ತಿದ್ದುಪಡಿಗಳನ್ನು ನಾನು ಕೊಟ್ಟಿದ್ದೇನೆ.

**__ಮಾನ್ಯ ಉಪಸಭಾಧ್ಯಕ್ಷರು:__ ಈಗ ವಿಷಯ ಎಂದರೆ:

(ಪ್ರಸ್ತಾವಗಳ ಪತ್ಯಕ್ಕೆ ಪರಿಶಿಷ್ಟ ೩೩ ಅನುಬಂಧ ೧ರಲ್ಲಿ ಡಾ. ಅಂಬೇಡ್ಕರ್ ಅವರ ತಿದ್ದುಪಡಿಗಳ ಸಂಖ್ಯೆ ೧ ರಿಂದ ೩ (ಒರಿಸ್ಸಾ ಆದೇಶ) ನ್ನು ನೋಡಿ)

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು:** ಆ ಮಟ್ಟಿಗೆ ರಾಷ್ಟ್ರಪತಿಯವರ ಆದೇಶವನ್ನು ಮಾರ್ಪಾಟುಗೊಳಿಸಲಾಗಿದೆ.

ಪ್ರಶ್ನೆ ಎಂದರೆ:

೧೯೫೧ರ ೧೬ರಂದು ಮಂಡಿಸಿದ ಸಂಸತ್ತು ಮತ್ತು ವಿಧಾನಸಭೆ ಚುನಾವಣಾ ಕ್ಷೇತ್ರಗಳ (ಒರಿಸ್ಸಾ) ಪುನರ್ವಿಂಗಡಣೆ ಆದೇಶ. ೧೯೫೧ರಲ್ಲಿ ಈ ಮುಂದಿನ ಮಾರ್ಪಾಟುಗಳನ್ನು ಮಾಡತಕ್ಕದು;

೧. ಒಂದನೇ ಪುಟದಲ್ಲಿ, ಎ ಕೋಷ್ಟಕ – ಸಂಸತ್ ಚುನಾವಣಾ ಕ್ಷೇತ್ರಗಳು ಎಂಬುದರ ಒಂದನೇ ಅಂಕಣದಲ್ಲಿ "ಧೇನ್ ಕನಾಲ್" ಎಂಬ ನಮೂದಿಗೆ "ಗಂಜಾಂ – ದಕ್ಷಿಣ" ಎಂಬುದನ್ನು ಪ್ರತಿಯೋಜಿಸತಕ್ಕದು.

೧. ಒಂದನೇ ಪುಟದಲ್ಲಿ ಎ ಕೋಷ್ಟಕ – "ಸಂಸತ್" ಚುನಾವಣಾ ಕ್ಷೇತ್ರಗಳು" ಎಂಬುದರ ಅಂಕಣ ೧ರಲ್ಲಿ "ಗಂಜಾಂ–ದಕ್ಷಿಣ" ಎಂಬ ನಮೂದನ್ನು ಪ್ರತಿಯೋಜಿಸತಕ್ಕದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಡಾ. ಅಂಬೇಡ್ಕರ್:** ನಾನು ಪ್ರಸ್ತಾವಿಸಿದ ತಿದ್ದುಪಡಿಯು ಪೂರಕ ಪಟ್ಟಿ ೨, ಸಂಖ್ಯೆ ೧ ರಿಂದ ೫ರಲ್ಲಿದೆ. ನಾನು ೧ ಮತ್ತು ೨ರಲ್ಲಿ ಶ್ರೀ ಬಿಸ್ವನಾಥ್ ದಾಸ್ ಅವರ ಹೆಸರಿನಲ್ಲಿರುವ ಒಂದನ್ನು, "ಈಶಾನ್ಯ ಗಂಜಾಂ" ಎಂಬುದನ್ನು "ಗಂಜಾಂ–ದಕ್ಷಿಣ" ಎಂಬ ಮಾರ್ಪಾಟಿನೊಂದಿಗೆ ಎರಡನೆಯದನ್ನು

---

* ಸಂ.ಚ. ಸಂಪುಟ ೧೨, ಭಾಗ–೨, ೧೯೫೧ರ ಜೂನ್ ೪, ಪಿ ೧೦೫೧೦

** ಸಂ.ಚ. ಸಂಪುಟ ೧೨, ಭಾಗ–೨, ೧೯೫೧ರ ಜೂನ್ ೪, ಪಿಪಿ ೧೦೫೧೧–೧೩

ಒಪ್ಪಿಕೊಳ್ಳುತ್ತೇನೆ. ನಾನು ಒಪ್ಪಿಕೊಂಡ ಇನ್ನೊಂದು ತಿದ್ದುಪಡಿಯು, ಪೂರಕ ಪಟ್ಟಿ ಸಂಖ್ಯೆ ೧ ರಿಂದ ೪ ರಲ್ಲಿ ಮಾರ್ಪಾಡಾದ ರೂಪದಲ್ಲಿ ಇದೆ.

**ಮಾನ್ಯ ಉಪಸಭಾಧ್ಯಕ್ಷರು:** ಈಗ ವಿಷಯ ಎಂದರೆ:

೧೯೫೧ರ ಮೇ ೧೬ರಂದು ಮಂಡಿಸಿದ ೧೯೫೧ರ ಸಂಸತ್ತು ಮತ್ತು ವಿಧಾನಸಭೆ ಚುನಾವಣಾ ಕ್ಷೇತ್ರಗಳ (ಒರಿಸ್ಸಾ) ಪುನರ್ವಿಂಗಡಣೆ ಆದೇಶದಲ್ಲಿ ಈ ಮುಂದಿನ ಮಾರ್ಪಾಟುಗಳನ್ನು ಮಾಡತಕ್ಕದು. ಎಂದರೆ:–

೧. ಒಂದನೇ ಪುಟದಲ್ಲಿ, ಎ ಕೋಷ್ಟಕ – ಸಂಸತ್ ಚುನಾವಣಾ ಕ್ಷೇತ್ರಗಳು ಇದರಲ್ಲಿ, ಅಂಕಣ ೧ರಲ್ಲಿ "ಕೋರಾಪಟ್" ಎಂಬ ನಮೂದಿಗೆ ಮತ್ತು ಅದರ ಮುಂದೆ ೨, ೩, ೪ ಮತ್ತು ೫ನೇ ಅಂಕಣದಲ್ಲಿರುವ ಎಲ್ಲ ನಮೂದುಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದು. ಎಂದರೆ:–

| ೧ | ೨ | ೩ | ೪ | ೫ |
|---|---|---|---|---|
| ನೌರಂಗ್ ಪುರ | ನೌರಂಗ್ ಪುರ್ ಉಪವಿಭಾಗ ಮತ್ತು ಕೋರಾಪಟ್ ಉಪವಿಭಾಗದ ಪಡುವ, ಪೊಟ್ಟಂಗಿ, ಸಿಮ್ಲಿಗುಡ ಮತ್ತು ನಂದಾಪುರ್ ಪೋಲೀಸ್ ಠಾಣೆಗಳು | ೧ | ..... | ..... |

೨. ಒಂದನೇ ಪುಟದಲ್ಲಿ ಕೋಷ್ಟಕ ಎ–ಸಂಸತ್ ಚುನಾವಣಾ ಕ್ಷೇತ್ರಗಳು ಎಂಬುದರಲ್ಲಿ ಒಂದನೇ ಅಂಕಣದಲ್ಲಿ "ರಾಯಗಡ–ಫುಲ್‌ಬನಿ" ಎಂಬ ನಮೂದಿಗೆ ಮತ್ತು ೨, ೩, ೪, ಮತ್ತು ೫ನೇ ಅಂಕಣದಲ್ಲಿ ಅದರ ಎದುರಿಗೆ ಇರುವ ಎಲ್ಲ ನಮೂದುಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದು ಎಂದರೆ:

| ೧ | ೨ | ೩ | ೪ | ೫ |
|---|---|---|---|---|
| ರಾಯಗಡ–ಫುಲ್‌ಬನಿ | ಇಡೀ ರಾಯಗಡ ಉಪವಿಭಾಗ ಮತ್ತು ಕೋರಾಪಟ್ ಉಪವಿಭಾಗದ ಕೋರಾಪಟ್ ಪೋಲೀಸ್ ಠಾಣೆ, ದಶ್‌ಮಂತ್ ಪುರ, ಲಕ್ಷ್ಮಿಪುರ ಮತ್ತು ನಾರಾಯಣಪಟ್ಟಣ ಹಾಗೂ ಮನ್ಮುಂಡ ಮತ್ತು ಬೋಂಧ್ ಪೋಲೀಸ್ ಠಾಣೆಗಳನ್ನು ಹೊರತುಪಡಿಸಿ ಫುಲ್‌ಬನಿ ಜಿಲ್ಲೆ. | ೧ | ..... | ..... |

೩. ಒಂದನೇ ಪುಟದ, ಕೋಷ್ಟಕ–ಬಿ ವಿಧಾನಸಭಾ ಚುನಾವಣಾ ಕ್ಷೇತ್ರಗಳ ಒಂದನೇ ಅಂಕಣದಲ್ಲಿ ನೌರಂಗ್‌ಪುರ್ ಎಂಬ ನಮೂದಿಗೆ ಮತ್ತು ಅಂಕಣ ೨, ೩, ೪, ಮತ್ತು ೫ರಲ್ಲಿ ಅದರ ಮುಂದಿರುವ ಎಲ್ಲ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕುದು, ಎಂದರೆ:

| ೧ | ೨ | ೩ | ೪ | ೫ |
|---|---|---|---|---|
| ನೌರಂಗ್‌ಪುರ್ | ನೌರಂಗ್‌ಪುರ್ ಕೊಡಿಂಗ್, ಮೊಯ್ದುಲ್‌ಪುರ್, ಡಾಬುಗಾಂವ್, ಒಮರ್ ಕೋಟ್ ಮತ್ತು ಝರಿಗಾಂವ್ ಪೋಲೀಸ್ ಠಾಣೆಗಳು | ೨ | ..... | ೧ |

೪. ಒಂದನೇ ಪುಟದಲ್ಲಿ, ಕೋಷ್ಟಕ–ಬಿ ವಿಧಾನಸಭಾ ಚುನಾವಣಾ ಕ್ಷೇತ್ರಗಳು–ರಲ್ಲಿ ಒಂದನೇ ಅಂಕಣದಲ್ಲಿ ಒಮರ್ ಕೋಟ್–ಮೊಯ್ದುಲ್‌ಪುರ್ ಎಂಬ ನಮೂದಿಗೆ ಮತ್ತು ಅಂಕಣ ೨, ೩, ೪, ಮತ್ತು ೫ರಲ್ಲಿ ಅದರ ಮುಂದಿರುವ ಎಲ್ಲ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕುದು. ಎಂದರೆ:

| ೧ | ೨ | ೩ | ೪ | ೫ |
|---|---|---|---|---|
| ಜೇಪುರ್ | ಜೇಪುರ್, ಕೊಟ್ಪಾಡ್, ಬೋರಿಗುಮ್ಮ, ಬಿ, ಶಿಂಗ್‌ಪುರ್ ಮತ್ತು ತೊನಲಿಕುಂಟಿ ಪೊಲೀಸ್ ಠಾಣೆಗಳು | ೨ | ೧ | ..... |

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು:** ಆದ್ದರಿಂದ ಈ ತಿದ್ದುಪಡಿಗಳ ಮೂಲಕ ರಾಷ್ಟ್ರಪತಿಯವರ ಆದೇಶ ಮಾರ್ಪಾಟುಗೊಂಡಿದೆ.

**ಅನೇಕ ಮಾನ್ಯ ಸದಸ್ಯರುಗಳು:** ಮಾನ್ಯರೇ, ಈಗ ಮುಂದೂಡುವ ಸಮಯ.

**ಶ್ರೀ ಕಾಮತ್:** ಸದನವನ್ನು ಮುಂದೂಡುವ ಮುಂಚೆ, ೨ರಂದು ಇದ್ದ ಪ್ರಶ್ನೆಯ ಚರ್ಚೆಯನ್ನು ೯ನೇ ದಿನಾಂಕಕ್ಕೆ ಮುಂದೂಡಿದುದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಆ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಮತ್ತು ಆ ಪಟ್ಟಿಯನ್ನು ನಾಳೆ ಚರ್ಚೆಗೆ ಕೈಗೆತ್ತಿಕೊಳ್ಳಲಾಗುತ್ತದೆಂದು ನಾನು ನಂಬುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು:** ಹೌದು ಅದರಲ್ಲಿ ಯಾವುದೇ ಬದಲಾವಣೆ ಇಲ್ಲ.

ಕಾನೂನು ಸಚಿವರು ಈ ಪುನರ್ವಿಂಗಡಣಾ ಆದೇಶಗಳನ್ನು ಯಾವ ಕ್ರಮದಲ್ಲಿ ತೆಗೆದುಕೊಳ್ಳಲಿದ್ದಾರೆ ಎಂಬುದನ್ನು ತಿಳಿಸುವಿರಾ?

**ಡಾ. ಅಂಬೇಡ್ಕರ್:** ಕೆಲವು ಆದೇಶಗಳನ್ನು ಪಟ್ಟಿಯಲ್ಲಿರುವ ಕ್ರಮವನ್ನು ಬಿಟ್ಟು ಮೊದಲೇ ಚರ್ಚೆಗೆ ತೆಗೆದುಕೊಂಡಲ್ಲಿ ಸದನವು ಅನಿರೀಕ್ಷಿತ ಬದಲಾವಣೆ ಎಂದು ದೂರುವುದಿಲ್ಲವೆಂದು ನಾನು ಭಾವಿಸುತ್ತೇನೆ. ಎಲ್ಲವನ್ನೂ ಅವರ ಮುಂದೆ ಇಡಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು:** ಎಲ್ಲ ಆದೇಶಗಳನ್ನು ನಾಳೆ ಪೂರ್ಣಗೊಳಿಸಲಾಗುತ್ತದೆ.

ಸದನವನ್ನು ೧೯೫೧ರ ಜೂನ್ ೯, ಶನಿವಾರ ೮.೩೦ಗಂಟೆಯವರೆಗೆ ಮುಂದೂಡಲಾಯಿತು

***ಶ್ರೀ ಪಿ.ಜಿ. ಸೇನ್:** . . . . . .ಪುನರ್ವಿಂಗಡಣಾ ಆದೇಶದ ೩ನೇ ಪುಟದಲ್ಲಿ ದರ್ಭಂಗಾ ಹಾಗೂ ಭಾಗಲ್‌ಪುರ್ ಎಂಬ ಹೆಸರಿನ ಒಂದು ಅಂತರ ಜಿಲ್ಲಾ ಚುನಾವಣಾ ಕ್ಷೇತ್ರವಿದೆ. ನಾಲ್ಕನೇ ಪುಟದಲ್ಲಿ ಪರ್ನಿಯಾ ಹಾಗೂ ಭಾಗಲ್‌ಪುರ್ ಎಂಬ ಇನ್ನೊಂದು ಚುನಾವಣಾ ಕ್ಷೇತ್ರವಿದೆ.

**ಮಾನ್ಯ ಸಭಾಧ್ಯಕ್ಷರು:** ಸದ್ದು ಸದ್ದು, ಸದಸ್ಯರು ಚರ್ಚೆಯನ್ನು ಬೇರೆಲ್ಲಾದರೂ ಮಾಡಬಹುದು. ಸದನಕ್ಕೆ ತೊಂದರೆ ಉಂಟು ಮಾಡಬೇಡಿ.

**ಶ್ರೀ ಪಿ.ಜಿ. ಸೇನ್:** ನಾನು ಈ ಪ್ರಸ್ತಾವವನ್ನು ಮಂಡಿಸುವುದಕ್ಕೆ ಕಾರಣ ಇವೆರಡರಲ್ಲೂ ಭಾಗಲ್‌ಪುರ್ ಇದೆ ಎಂಬುದು. ಇದನ್ನು ಇದರೊಂದಿಗೆ ಅಥವಾ ಅದರೊಂದಿಗೆ ವಿಲೀನಗೊಳಿಸಬಹುದು. ವಿಲೀನಗೊಳಿಸುವುದು ಮತ್ತು ಚುನಾವಣಾ ಕ್ಷೇತ್ರವನ್ನು ರಚಿಸುವುದು ಈ ಬಗ್ಗೆ ಪ್ರಶ್ನೆಯನ್ನು ಎತ್ತಬೇಕಾಗಿದೆ. . . . . .

**ಡಾ. ಅಂಬೇಡ್ಕರ್:** ನನಗೆ ನಿಮ್ಮ ಪ್ರಶ್ನೆ ಅರ್ಥವಾಯಿತು. ಅದಕ್ಕೆ ನಾನು ಒಂದು ವಾಕ್ಯದಲ್ಲಿ ಉತ್ತರಿಸಬಲ್ಲೆ.

**ಶ್ರೀ ಪಿ.ಜಿ. ಸೇನ್:** ಸರಿ. ಡಾ. ಅಂಬೇಡ್ಕರ್ ಅವರು ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಬಲ್ಲರು.

**ಮಾನ್ಯ ಸಭಾಧ್ಯಕ್ಷರು:** ಸದ್ದು, ಸದ್ದು. ಮಾನ್ಯ ಸದಸ್ಯರು ಅಧ್ಯಕ್ಷರನ್ನುದ್ದೇಶಿಸಿ ಮಾತನಾಡಬೇಕು.

**ಶ್ರೀ ಪಿ.ಜಿ. ಸೇನ್:** ಖಂಡಿತವಾಗಿ ಡಾ. ಅಂಬೇಡ್ಕರ್ ಅವರು ನನಗಿಂತ ಒಳ್ಳೆಯ ವಾಗ್ಮಿ.

ಈ ಪ್ರಸ್ತಾಪವನ್ನು ಸದನದ ಮುಂದೆ ಮಂಡಿಸುವಾಗ ನನ್ನ ಮನಸ್ಸಿನಲ್ಲಿ ಉಂಟಾದ ಪ್ರಶ್ನೆ ಎಂದರೆ; ಭಾಗಲ್‌ಪುರ್‌ಗೆ ನಾನು ಅನ್ಯಾಯವೆಸಗುತ್ತಿದ್ದೇನೆಯೇ ಅಥವಾ ದರ್ಭಂಗಾಗೆ ನಾನು ಅನ್ಯಾಯವೆಸಗುತ್ತಿದ್ದೇನೆಯೇ ಅಥವಾ ಪುರ್ಣಿಯಾಗೆ ಅನ್ಯಾಯವೆಸಗುತ್ತಿದ್ದೇನೆಯೇ? ಎಂಬುದು ಖಂಡಿತ ಇಲ್ಲ. ಕೋಸಿ ನದಿ ಭಾಗಲ್‌ಪುರ್ ಮತ್ತು ಪುರ್ಣಿಯಾ ಜಿಲ್ಲೆಗಳನ್ನು ಎರಡಾಗಿ ವಿಭಜಿಸುತ್ತದೆ. ಮತ್ತು ಈ ಪ್ರದೇಶದ ಮೇಲೆ ವಾಯು ಸಂಚಾರವನ್ನು ಕೈಗೊಳ್ಳಲು ಸಾಕಷ್ಟು ಸಾರ್ವಜನಿಕ ಹಣವನ್ನು ವ್ಯಯಿಸಲಾಗಿದೆ. . . . . .ಪ್ರವಾಹದಿಂದ ಹಾಳಾಗಿರುವ ಕೋಸಿ ಪ್ರದೇಶದ ಪರಿಸ್ಥಿತಿಯನ್ನು ಊಹಿಸಿಕೊಳ್ಳಿ. ಇದಕ್ಕಾಗಿ ಕೋಸಿ ಯೋಜನೆಯ ನಿರ್ಮಾಣ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳಬೇಕೆಂದು ಒಂದಕ್ಕಿಂತ ಹೆಚ್ಚಿನ ಸಂದರ್ಭಗಳಲ್ಲಿ ಈ ಸದನವನ್ನು ಒತ್ತಾಯಿಸಲಾಗಿದೆ.

**ಡಾ. ಅಂಬೇಡ್ಕರ್:** ಇದು ನೀರಾವರಿ ಇಲಾಖೆಯ ಪ್ರಶ್ನೆಯಾಗಿದೆ.

**ಶ್ರೀ ಪಿ.ಜಿ. ಸೇನ್:** ನಾನು ಗಮನಕ್ಕೆ ತರಲಿಚ್ಛಿಸುವ ಇನ್ನೊಂದು ಅಂಶವೆಂದರೆ, ಭಾಗಲ್‌ಪುರ್‌ನ ಇಡೀ ಪ್ರದೇಶವನ್ನು ದರ್ಭಂಗಾ ಜೊತೆ ವಿಲೀನಗೊಳಿಸಿ ಅದನ್ನು ಬಹುಸದಸ್ಯ (ಪ್ಲೂರಲ್) ಚುನಾವಣಾ ಕ್ಷೇತ್ರವನ್ನಾಗಿ ಮಾಡಿ ಒಂದು ಸ್ಥಾನವನ್ನು ಅನುಸೂಚಿತ ಜಾತಿಗೆ ಮೀಸಲಿಡುವುದು. ದರ್ಭಂಗಾದಲ್ಲಿ ಅನುಸೂಚಿತ ಜಾತಿಗೆ ಸೇರಿದ ಮತದಾರರು ಸುಮಾರು ೨,೫೦,೦೦೦ ಇದ್ದು, ಪರ್ನಿಯಾ ಹಾಗೂ ಭಾಗಲ್‌ಪುರ್ ಚುನಾವಣಾ ಕ್ಷೇತ್ರದ ಭಾಗಲ್‌ಪುರ್ ಭಾಗದಲ್ಲಿ ೭೧,೦೦೦ (ಅನುಸೂಚಿತ ಜಾತಿಗೆ ಸೇರಿದ) ಮತದಾರರಿದ್ದಾರೆ. ಆದ್ದರಿಂದ, ಪರ್ನಿಯ ಹಾಗೂ ಭಾಗಲ್‌ಪುರ್ ಚುನಾವಣಾ ಕ್ಷೇತ್ರದಲ್ಲಿರುವ ಭಾಗಲ್‌ಪುರ್‌ನ ಇಡೀ ಪ್ರದೇಶವನ್ನು ದರ್ಭಂಗಾ ಹಾಗೂ ಭಾಗಲ್‌ಪುರ್ ಪ್ರದೇಶದೊಡನೆ ವಿಲೀನಗೊಳಿಸಿ

* ಸಂ.ಚ. ಸಂಪುಟ ೧೩, ಭಾಗ–೨, ೧೯೫೧ರ ಜೂನ್ ೯, ಪಿಪಿ ೧೦೫೧೮–೧೯

ಒಂದು ಬಹುಸದಸ್ಯ ಚುನಾವಣಾ ಕ್ಷೇತ್ರವನ್ನು ರಚಿಸಬಹುದು. ಪೂರಕ ಪಟ್ಟಿ ಸಂಖ್ಯೆ ೨ರ ತಿದ್ದುಪಡಿ ಸಂಖ್ಯೆ ೧ರಲ್ಲಿ ಪ್ರದೇಶಕ್ಕೆ ಸಂಬಂಧಿಸಿದ ತಪ್ಪು ಇದೆ. ಎಂದರೆ ೩ನೇ ಅಂಕಣದಲ್ಲಿ "೨" ಎಂದು ತೋರಿಸಲಾಗಿದೆ ಮತ್ತು ೪ನೇ ಅಂಕಣದಲ್ಲಿ "ಏನೂ ಇಲ್ಲ" ಎಂದು ತೋರಿಸಲಾಗಿದೆ. ೪ನೇ ಅಂಕಣದಲ್ಲಿ "೧"ನ್ನು ಸೇರಿಸಬೇಕು ಎಂಬ ಅಂಶವನ್ನು ಇಲ್ಲಿ ತಿಳಿಸುವುದು ಅನುಚಿತವಾಗಲಾರದು.

*ಶ್ರೀ ಪಿ.ಜಿ. ಸೇನ್: ನ್ಯಾಯವನ್ನು ಬೇಡಲು ಇರುವ ಸ್ಥಳವೆಂದರೆ ಈ ಸದನ ಒಂದೇ ಎಂದು ಹೇಳಲು ನಾನು ಇಚ್ಛಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಸದ್ದು, ಸದ್ದು. ಈ ಸದನವು ಖಂಡಿತವಾಗಿಯೂ ನ್ಯಾಯ ಒದಗಿಸುತ್ತದೆ ಎಂದು ಮಾನ್ಯ ಸದಸ್ಯರಿಗೆ ನಾನು ಹೇಳಲಿಚ್ಛಿಸುತ್ತೇನೆ. ಆದರೆ ಯಾರಿಗೆ ಯಾವುದು ಬೇಕೋ ಅದನ್ನು ಕೊಡುವುದು. ಅವರ ದೃಷ್ಟಿಕೋನದಿಂದ ಸರಿಯೆನಿಸಿದರೂ, ನ್ಯಾಯ ಎನಿಸಲಾರದು. ಅದನ್ನು, ಯಾರಿಗೂ ಅನ್ಯಾಯ ಮಾಡಲು ಆಸಕ್ತಿ ಇಲ್ಲದ ಇತರರ ನ್ಯಾಯಯುತ ವಿವೇಚನೆಗೆ ಬಿಡಬೇಕಾಗುತ್ತದೆ.

**ಡಾ. ಅಂಬೇಡ್ಕರ್:** ನನ್ನ ಗೆಳೆಯರು ಮಂಡಿಸಿದ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ನಾನು ಒಂದೇ ಒಂದು ಅಂಶವನ್ನು ತಿಳಿಸಲಿಚ್ಛಿಸುತ್ತೇನೆ. ಅವರು ಪ್ರಸ್ತಾವಿಸಿದ ಚುನಾವಣಾ ಕ್ಷೇತ್ರದಲ್ಲಿ ಒಟ್ಟು ೪,೪೩,೫೨೪ ಮತದಾರರಿರುತ್ತಾರೆ. ಆದರೆ, ಅನುಮತವಿರುವ ಮತದಾರರ ಗರಿಷ್ಠ ಮಿತಿ ೩,೮೭,೯೨೯. ಈ ಆಕ್ಷೇಪಣೆ ಅವರ ಪ್ರಸ್ತಾವಕ್ಕೆ ಮುಳುವಾಗುತ್ತದೆ.

**ಶ್ರೀ ಪಿ.ಜಿ. ಸೇನ್:** ಆದರೆ ಇದು ಬಹುಸದಸ್ಯ ಚುನಾವಣಾ ಕ್ಷೇತ್ರವಾಗಿರುತ್ತದೆ.

**ಡಾ. ಅಂಬೇಡ್ಕರ್:** ಅದೇ ಅವರ ಪ್ರಸ್ತಾವಕ್ಕೆ ಮುಳುವಾಗುವುದು.

**ಮಾನ್ಯ ಸಭಾಧ್ಯಕ್ಷರು:** ಆದ್ದರಿಂದ ನಾನು ಶ್ರೀ ಪಿ.ಜಿ. ಸೇನ್ ಅವರ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. (ಪೂರಕ ಪಟ್ಟಿ ಸಂಖ್ಯೆ ೨ರಲ್ಲಿ ಸಂಖ್ಯೆ ೧–ಬಿಹಾರ್ ಆದೇಶ) ಪ್ರಸ್ತಾವ:

(ಪ್ರಸ್ತಾವದ ಪಠ್ಯಕ್ಕಾಗಿ ಪರಿಶಿಷ್ಟ ೩೩ರ ಅನುಬಂಧ ೧ರಲ್ಲಿ ಮುದ್ರಣವಾಗಿರುವ ತಿದ್ದುಪಡಿ ಸಂಖ್ಯೆ ೧ಎಸ್ ಎಲ್ ೨ ನೋಡಿ.)

ಪ್ರಸ್ತಾವ ಅಂಗೀಕಾರವಾಗಲಿಲ್ಲ.

**ಡಾ. ಅಂಬೇಡ್ಕರ್:** ಪೂರಕ ಪಟ್ಟಿ ಸಂಖ್ಯೆ ೬ರಲ್ಲಿ ತಿದ್ದುಪಡಿ ಸಂಖ್ಯೆ ೩ ಭಾಗ ೩ ಎಂದರೆ ಶ್ರೀ ಜಜ್‌ವಾರೆ ಅವರ ತಿದ್ದುಪಡಿ–ಶ್ರೀ ಎಸ್.ಎನ್. ದಾಸ್ ಅವರ ತಿದ್ದುಪಡಿಯಿಂದ ಮಾರ್ಪಾಟಾದಂತೆ.

*__ಮಾನ್ಯ ಸಭಾಧ್ಯಕ್ಷರು:__ ಈಗ ನಾನು, ಸಭಾಧ್ಯಕ್ಷರ ಅಧಿಕಾರದಿಂದ ಮಾಡಬಹುದಾದಂತೆ, ಪ್ರತಿ ಪ್ರಾಂತ್ಯಕ್ಕೆ ಸಂಬಂಧಿಸಿದ ಪ್ರಸ್ತಾವಗಳ ಕೊನೆಯಲ್ಲಿ ಆ ನಿರ್ದಿಷ್ಟ ರಾಜ್ಯಕ್ಕೆ ಸಂಬಂಧಿಸಿದ ಆದೇಶಕ್ಕೆ ಸಂಬಂಧಿಸಿದ ತತ್ಪರಿಣಾಮಿ ತಿದ್ದುಪಡಿಗಳನ್ನು, ಪ್ರಸ್ತಾವವನ್ನು ಅಂಗೀಕರಿಸಬೇಕೆಂದು ಸದನವನ್ನು ಕೋರುತ್ತೇನೆ. ಇದರಿಂದ ಕರಡು ತಯಾರಿಸುವವರು ಮತ್ತು ಇಲಾಖೆ ಅವನ್ನು ಪರಿಶೀಲಿಸಿ ಸರಿಯಾದ ರೀತಿಯಲ್ಲಿ ವ್ಯವಸ್ಥೆಗೊಳಿಸಬಹುದು. ಈ ತಿದ್ದುಪಡಿಗಳು ಕಟ್ಟುನಿಟ್ಟಾಗಿ ತತ್ಪರಿಣಾಮಿ ತಿದ್ದುಪಡಿಗಳಾಗಿರುತ್ತವೆಯೇ

---

* ಸಂ.ಚ. ಸಂಪುಟ ೧೩ ಭಾಗ–೨ ೧೯೫೧ರ ಜೂನ್ ೯, ಪಿ ೧೦೫೨೧

* ಸಂ.ಚ. ಸಂಪುಟ ೧೩, ಭಾಗ ೨, ೧೯೫೧ರ ಜೂನ್ ೯, ಪಿಪಿ ೧೦೫೨೮–೩೨

ವಿನಃ ವಸ್ತುವಿಷಯಕ್ಕೆ ಸಂಬಂಧಿಸಿದವುಗಳಾಗಿರುವುದಿಲ್ಲ.

**ಡಾ. ಅಂಬೇಡ್ಕರ್:** ಆ ಉದ್ದೇಶಕ್ಕಾಗಿ, ಕರಡನ್ನು ತಯಾರಿಸಿರುವವರು ತಮ್ಮೊಂದಿಗೆ ಸಮಾಲೋಚಿಸಿ ತತ್ಪರಿಣಾಮಿ ತಿದ್ದುಪಡಿಗಳನ್ನು ಮಾಡಲು ಅವರಿಗೆ ಅನುಮತಿ ನೀಡಲು ತಮಗೆ ಅಧಿಕಾರ ಪ್ರದಾನ ಮಾಡುವ ಪ್ರತ್ಯೇಕ ತಿದ್ದುಪಡಿಯನ್ನು ನಾನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಹಾಗಿದ್ದರೆ ಆದೇಶಗಳ ಕೊನೆಯಲ್ಲಿ ಒಂದು ಸಮಗ್ರ ಪ್ರಸ್ತಾವದ ಮೂಲಕ ಅದನ್ನು ನಾವು ಮಾಡುತ್ತೇವೆ.

ಇತರ ಪ್ರಸ್ತಾವಗಳಿಗೆ ಸಂಬಂಧಿಸಿದಂತೆ, ಅವನ್ನು ಮಂಡಿಸಿದ ಮಾನ್ಯ ಸದಸ್ಯರುಗಳು ಅವನ್ನು ಹಿಂದಕ್ಕೆ ಪಡೆಯಲು ಅವರಿಗೆ ಸದನದ ಅನುಮತಿಯಿದೆ.

ತಿದ್ದುಪಡಿಗಳನ್ನು ಅನುಮತಿಯೊಂದಿಗೆ ಹಿಂದಕ್ಕೆ ಪಡೆಯಲಾಯಿತು.

## ಮುಂಬಯಿ ಆದೇಶ

**ಡಾ. ಅಂಬೇಡ್ಕರ್:** ನಾನು ಮುಂದಿನ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ:

ಶ್ರೀ ಶಂಕರ ರಾವ್ ದೇವ್ ಮತ್ತು ಇತರರ ಪೂರಕ ಪಟ್ಟಿ ಸಂಖ್ಯೆ ೧, ತಿದ್ದುಪಡಿ ಸಂಖ್ಯೆ ೧ ರಿಂದ ೮.

ಅವು ಸಂಪೂರ್ಣವಾಗಿ ತತ್ಪರಿಣಾಮವಾದ ತಿದ್ದುಪಡಿಗಳು.

(ಶ್ರೀ ನಿಜಲಿಂಗಪ್ಪ ಮತ್ತು ಶ್ರೀ ಮುನವಳ್ಳಿ ಅವರ ಪಟ್ಟಿ ಸಂಖ್ಯೆ ೨ರಲ್ಲಿ ತಿದ್ದುಪಡಿ ಸಂಖ್ಯೆ ೨; ದಕ್ಷಿಣ ಸತಾರಾ ಎಂಬುದರ ಮುಂದಿರುವ ನಮೂದಿನಲ್ಲಿ "ಬಾಬು (೧೫)" ಎಂಬ ಪದಗಳಿಗೆ "ಬಾಬು (೫೭)" ಎಂಬ ಪದಗಳನ್ನು ಪ್ರತಿಯೋಜಿಸಬೇಕು ಎಂಬ ಮಾರ್ಪಾಟಿಗೊಳಪಟ್ಟು.

ನಂತರ ಈ ಮುಂದಿನ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ನಾನು ಪ್ರಸ್ತಾವಿಸುತ್ತೇನೆ.

ಶ್ರೀ ದಿಯೋಗಿರಿಕರ್ ಮತ್ತು ಶ್ರೀ ಕುಂಬಾರ್ ಮಂಡಿಸಿದ ಪಟ್ಟಿ ೩ರಲ್ಲಿ, ತಿದ್ದುಪಡಿ ಸಂಖ್ಯೆ ೩, ಭಾಗಗಳು (೧) ಮತ್ತು (೨).

ಪಟ್ಟಿ ೬ರಲ್ಲಿ, ಕೊಲ್ಲಾಪುರ ಹಾಗೂ ಸತಾರಾ ಎಂಬ ನಮೂದಿನ ಮುಂದೆ ಅಂಕಣ ೨ರಲ್ಲಿ ನಮೂದಿನ ಪ್ರಾರಂಭದಲ್ಲಿರುವ "ಇಡೀ" ಎಂಬ ಪದಗಳನ್ನು ಬಿಟ್ಟು ಬಿಡಬೇಕು ಎಂಬ ಮಾರ್ಪಾಟಿಗೊಳಪಟ್ಟು ತಿದ್ದುಪಡಿ ಸಂಖ್ಯೆ ೧ ಮತ್ತು ೨.

ಪಟ್ಟಿ ೭ರಲ್ಲಿ ಶ್ರೀ ಹಿರೆ ಮತ್ತು ಶ್ರೀ ದಿಯೋಗಿರಿಕರ್ ಅವರ ತಿದ್ದುಪಡಿ ಸಂಖ್ಯೆ ೨, ಭಾಗ ೨

ಪಟ್ಟಿ ೮ರಲ್ಲಿ ತಿದ್ದುಪಡಿ ಸಂಖ್ಯೆಗಳಾದ ೧, ೨ ಮತ್ತು ೪ನೇ ತಿದ್ದುಪಡಿಗಳು ೬ನೇ ಪಟ್ಟಿಯ ತಿದ್ದುಪಡಿ ಸಂಖ್ಯೆ ೨ರಲ್ಲಿ ಈಗಾಗಲೇ ಸೇರಿದೆಯಾದ ಕಾರಣ ಅವುಗಳನ್ನು ಹಿಂತೆಗೆದುಕೊಳ್ಳಲು ನಾನು ಪ್ರಸ್ತಾವಿಸುತ್ತೇನೆ.

ನಂತರ, ಈ ಮುಂದಿನ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ನಾನು ಪ್ರಸ್ತಾವಿಸುತ್ತೇನೆ.

೮ನೇ ಪಟ್ಟಿಯಲ್ಲಿ ತಿದ್ದುಪಡಿ ಸಂಖ್ಯೆ ೩ ಮತ್ತು ೫ ರಿಂದ ೧೧

೧೧ನೇ ತಿದ್ದುಪಡಿಯಲ್ಲಿ ೧೧ನೇ ಪುಟದಲ್ಲಿ ಬಾಬು ೬೪ರ ಅಡಿಯಲ್ಲಿ

"ಮಹಾಗೊಂಡ್" ಎಂಬುದಕ್ಕೆ ಬದಲಾಗಿ "ಮಾಮೆವಾಡಿ" ಎಂಬುದನ್ನು ಪ್ರತಿಯೋಜಿಸಿ–ಇದು ಹೆಸರು ಬದಲಾದ ಕಾರಣ ಬದಲಾದ ಪದ ಮತ್ತು ಕೊನೆಯಲ್ಲಿ "ಗಜರಗಾಂವ್"

ನಂತರ ಈ ಮುಂದಿನವುಗಳನ್ನು ಒಪ್ಪಿಕೊಳ್ಳುತ್ತೇನೆ.

ಪಟ್ಟಿ ಸಂಖ್ಯೆ ೧೦ರಲ್ಲಿ ಶ್ರೀ ನಿಜಲಿಂಗಪ್ಪ ಅವರು ಮಂಡಿಸಿದ ತಿದ್ದುಪಡಿ ೧, ೨ ಮತ್ತು ೩.

**ಮಾನ್ಯ ಸಭಾಧ್ಯಕ್ಷರು:** ಅವರು ಕೊಟ್ಟಿರುವ ಪಟ್ಟಿಯಲ್ಲಿ ಕೇವಲ ೨ ಮತ್ತು ೩ನ್ನು ಮಾತ್ರ ಉಲ್ಲೇಖಿಸಲಾಗಿದೆ.

**ಡಾ. ಅಂಬೇಡ್ಕರ್:** ಅದು ತಪ್ಪಿನಿಂದಾದುದು. ನಾನು ೧, ೨ ಮತ್ತು ೩ನ್ನು ಒಪ್ಪಿಕೊಳ್ಳುತ್ತಿದ್ದೇನೆ.

**ಶ್ರೀ ಕುಂಬಾರ್ (ಮುಂಬಯಿ):** ಪಟ್ಟಿ ೬ರಲ್ಲಿನ ತಿದ್ದುಪಡಿ ನನ್ನ ಹೆಸರಿನಲ್ಲಿದೆ. ಆದರೆ ಅದರಲ್ಲಿ ನನ್ನ ಹೆಸರನ್ನು ಬಿಟ್ಟುಬಿಡಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಹೆಸರನ್ನು ಉಲ್ಲೇಖಿಸಲಾಗಿದೆ ಮತ್ತು ಪ್ರಸ್ತಾವವನ್ನು ಈಗಾಗಲೇ ಮಂಡಿಸಲಾಗಿದೆ. ಮತ ಚಲಾಯಿಸುವುದನ್ನು ಬಿಟ್ಟು ಈಗ ಅದರ ಸಂಬಂಧದಲ್ಲಿ ಮತ್ತೇನೂ ಮಾಡಲಾಗದು. ಅವರ ಹೆಸರಿನ ಬಗ್ಗೆ ಅವರು ಚಿಂತೆ ಮಾಡುವುದು ಬೇಡ. ಅದನ್ನು ಸರಿಯಾದ ರೀತಿಯಲ್ಲಿ ನಮೂದಿಸುವಂತೆ ನಾವು ನೋಡಿಕೊಳ್ಳುತ್ತೇವೆ.

**ಶ್ರೀ ಕುಂಬಾರ್:** ಕಾಗಲ್ ತಾಲೂಕನ್ನು ಬಿಟ್ಟುಬಿಡುವುದಕ್ಕೆ ಸಂಬಂಧಿಸಿದಂತೆ ಮತ್ತೊಂದಿದೆ.

**ಡಾ. ಅಂಬೇಡ್ಕರ್:** ತಾವು ನೀಡುವ ಅಧಿಕಾರದ ಮೇರೆಗೆ ಕರಡು ತಯಾರಕರು ಆ ಬದಲಾವಣೆಗಳನ್ನು ಮಾಡಬಹುದು.

**ಮಾನ್ಯ ಸಭಾಧ್ಯಕ್ಷರು:** ಅವು ತತ್ಪರಿಣಾಮವಾಗಿ ಮಾಡಲಾಗುವ ತಿದ್ದುಪಡಿಗಳಾದರೆ ಅದರ ವಸ್ತು ವಿಷಯವನ್ನು ಒಪ್ಪಿಕೊಂಡರೆ ಅದನ್ನು ಮಾಡಲಾಗುವುದು.

**ಶ್ರೀ ಭಟ್:** –ಎದ್ದು ನಿಂತರು–

**ಡಾ. ಅಂಬೇಡ್ಕರ್:** ಮಾನ್ಯರೇ, ನನಗೆ ಗೊತ್ತು, ನನ್ನ ಗೆಳೆಯರು "ಸಾಂತಾ ಕ್ರೂಜ಼್" ಇತ್ಯಾದಿಯನ್ನು ಉಲ್ಲೇಖಿಸುವ ಬಗ್ಗೆ ನಿರ್ದಿಷ್ಟ ನಿಲುವನ್ನು ತಳೆದಿದ್ದಾರೆ ಎಂದು. ಕೊನೆಯಲ್ಲಿ ನಾನು ಪ್ರಸ್ತಾವಿಸುವ ನಿರ್ಣಯದ ಮೇರೆಗೆ, ನೀವು ಅಧಿಕಾರ ನೀಡಿದ ನಂತರ, ಕರಡು ತಯಾರಕರು ಆ ತಿದ್ದುಪಡಿಗಳನ್ನು ಮಾಡುತ್ತಾರೆಂದು ನಾನು ಅವರಿಗೆ ಹೇಳಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಸಾಂತಾಕ್ರೂಜ಼್ ಅನ್ನು ಅಥವಾ ಈ ರಸ್ತೆಯನ್ನು ಉಲ್ಲೇಖಿಸುವ ಅಥವಾ ಕಾಗಲ್ ಅನ್ನು ಹೊರತುಪಡಿಸುವ ಅಥವಾ ಸೇರ್ಪಡೆಮಾಡುವ ಬಗೆಗಿನ ಎಲ್ಲ ವಿವರಗಳಿಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಮಾಡುವ ಎಲ್ಲ ಪ್ರಸ್ತಾವಗಳನ್ನು ಕರಡು ತಯಾರಕರಿಗೆ ತಿಳಿಸಲಿ ಮತ್ತು ಅವರೊಡನೆ ಚರ್ಚಿಸಲಿ. ಅದನ್ನು ಅವರು ಪರಿಶೀಲಿಸುತ್ತಾರೆ ಮತ್ತು ಅಗತ್ಯವಿದ್ದರೆ ನಾನು ಆದೇಶಗಳನ್ನು ಹೊರಡಿಸುತ್ತೇನೆ.

**ಡಾ. ಅಂಬೇಡ್ಕರ್:** ನಾನು ಅದನ್ನೇ ಹೇಳಲು ಉದ್ದೇಶಿಸಿದ್ದೇನೆ.

**ಶ್ರೀ ಭಟ್:** ನಾನೂ ಅದನ್ನೇ ಹೇಳಬೇಕೆಂದಿದ್ದೆ. ಎಂದರೆ ನಿಮ್ಮ ಆದೇಶದ ಮೇರೆಗೆ ಹೆಸರುಗಳಲ್ಲಿ ಬದಲಾವಣೆ ಮಾಡಲಾಗುವುದೇ?

**ಡಾ. ಅಂಬೇಡ್ಕರ್:** ನಾನು ಹೇಳಿದಂತೆ, ನಾನು ಒಂದು ಪ್ರಸ್ತಾವವನ್ನು ಮಂಡಿಸುತ್ತೇನೆ. ಪ್ರಸ್ತಾವದ

ವಸ್ತು ವಿಷಯವೆಂದರೆ, ಪೂರ್ಣವಾಗಿ ಔಪಚಾರಿಕ ಸ್ವರೂಪದ ಕೆಲವು ಬದಲಾವಣೆಗಳನ್ನು ಮಾಡುವಂತೆ ಕರಡು ತಯಾರಿಕರಿಗೆ ಸೂಚಿಸಲು ನಿಮಗೆ ಅಧಿಕಾರ ನೀಡಲಾಗುತ್ತದೆ. ಸದನ ಪ್ರಸ್ತಾವವನ್ನು ಅಂಗೀಕರಿಸಿದಾಗ, ಅಗತ್ಯ ಕ್ರಮವನ್ನು ಕೈಗೊಳ್ಳಲು ಸಭಾಧ್ಯಕ್ಷರಿಗೆ ಅಗತ್ಯ ಅಧಿಕಾರವಿರುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಈ ತೊಂದರೆ ಉಂಟಾಗುವುದು ಕಾಲಕಾಲಕ್ಕೆ ಸದಸ್ಯರಲ್ಲಿ ಕೆಲವರು ಹಾಜರಿರುವುದಿಲ್ಲ ಎಂಬ ಕಾರಣಕ್ಕೆ, ಹಾಗಾಗಿ ಅವರು ಇದರಿಂದ ಸಂಪೂರ್ಣವಾಗಿ ವಂಚಿತರಾಗುತ್ತಾರೆ. ಇತರ ಯಾರಾದರೂ ಸದಸ್ಯರು ಯಾವುದೇ ಇತರ ತಿದ್ದುಪಡಿಯನ್ನು ಮಂಡಿಸಲು ಇಚ್ಛಿಸುತ್ತಾರೆಯೇ?

**ಶ್ರೀ ಹಿರೆ (ಮುಂಬಯಿ):** ಹೌದು. ಮಾನ್ಯರೇ,

**ಮಾನ್ಯ ಸಭಾಧ್ಯಕ್ಷರು:** ಕಾನೂನು ಸಚಿವರು ಒಪ್ಪಿಕೊಂಡಿರುವುದಕ್ಕೆ ಹೆಚ್ಚುವರಿಯಾಗಿಯೇ?

**ಶ್ರೀ ಹಿರೆ:** ಹೌದು

**ಡಾ. ಅಂಬೇಡ್ಕರ್:** ಡಂಗ್ಸ್‌ಗೆ ಸಂಬಂಧಿಸಿದ ನಿರ್ಣಯದ ಕಾರಣದಿಂದಾಗಿ ಆದ ಪರಿಣಾಮವೆಂದರೆ, ಮಹಾರಾಷ್ಟ್ರಕ್ಕೆ ಇನ್ನೊಂದು ಸ್ಥಾನ ಸೇರ್ಪಡೆಯಾದುದು ಮತ್ತು ಆ ಸ್ಥಾನ ಗುಡ್ಡಗಾಡು ಜನರಿಗೆ ಸೇರಿದೆ. ಆದ್ದರಿಂದ, ಮಹಾರಾಷ್ಟ್ರಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಕ್ಷೇತ್ರ ಪುನರ್ವಿಂಗಡಣೆಯಾದ ಚುನಾವಣಾ ಕ್ಷೇತ್ರಗಳಲ್ಲಿ ಒಂದು ಸ್ಥಾನವನ್ನು ಒದಗಿಸಬೇಕಾಗುತ್ತದೆ. ಶ್ರೀ ಹಿರೇ ಅವರ ಹೆಸರಿನಲ್ಲಿ ಸೂಚಿಸಲಾಗಿರುವ ಪ್ರಸ್ತಾವ ಇದು. ಅವರು ಅದನ್ನು ಮಂಡಿಸಬಹುದು ಇಲ್ಲವೆ ನಾನು ಮಂಡಿಸಬಹುದು.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸಚಿವರು ಮಂಡಿಸಿದರೆ ಒಳ್ಳೆಯದು.

**ಡಾ. ಅಂಬೇಡ್ಕರ್:** ತಮ್ಮ ಅನುಮತಿಯೊಂದಿಗೆ ನಾನು ಮಂಡಿಸುತ್ತೇನೆ:

> "ಕೋಷ್ಟಕ ಬಿ. ಪುಟ ೮ರಲ್ಲಿ ಅಂಕಣ ೧ರಲ್ಲಿ ನಾಸಿಕ್ ಜಿಲ್ಲೆಗೆ ಸಂಬಂಧಿಸಿದಂತೆ "ನಾಸಿಕ್ ನಗರ" ಮತ್ತು "ನಾಸಿಕ್ ಗ್ರಾಮೀಣ ಹಾಗೂ ಇಗತ್‌ಪುರಿ" ಎಂಬ ಪದಗಳಿಗೆ ಬದಲಾಗಿ "ನಾಸಿಕ್ ಇಗತ್‌ಪುರಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು ಮತ್ತು ಅದೇ ಚುನಾವಣಾ ಕ್ಷೇತ್ರಗಳ ಮುಂದೆ.–
>
> (೧) ಅಂಕಣ ೨ರಲ್ಲಿ "ನಾಸಿಕ್ ಪುರಸಭೆ" ಎಂದು ಪ್ರಾರಂಭವಾಗುವ ಮತ್ತು "ಇಗತ್‌ಪುರಿ ಪುರಸಭಾ ಪ್ರದೇಶ" ಎಂದು ಕೊನೆಗೊಳ್ಳುವ ಎಲ್ಲ ಪದಗಳನ್ನು ಬಿಟ್ಟುಬಿಡತಕ್ಕದು ಮತ್ತು ಅದರ ಬದಲು "ನಾಸಿಕ್ ಮತ್ತು ಇಗತ್‌ಪುರಿ ತಾಲೂಕುಗಳು, ಅದರಲ್ಲಿರುವ ಎಲ್ಲ ಪುರಸಭೆಗಳನ್ನೂ ಒಳಗೊಂಡು'' ಎಂಬುದನ್ನು ಪ್ರತಿಯೋಜಿಸತಕ್ಕದು.
>
> (೨) ೩, ೪, ೫ ನೇ ಅಂಕಣಗಳಲ್ಲಿ ಕೊಟ್ಟಿರುವ ಅಂಕಿಗಳನ್ನು ಬಿಟ್ಟುಬಿಡಿ ಮತ್ತು ಅದಕ್ಕೆ ಬದಲಾಗಿ ಕ್ರಮವಾಗಿ ೩, ೧, ೧ನ್ನು ಪ್ರತಿಯೋಜಿಸಿ.

**ಶ್ರೀ ಕನ್ಹಯಾಲಾಲ್ ದೇಸಾಯಿ (ಮುಂಬಯಿ):** ಪರ್ದಿಗೆ ಸಂಬಂಧಿಸಿದಂತೆ ತತ್ಪರಿಣಾಮವಾದ ಒಂದು ತಿದ್ದುಪಡಿಯಿದೆ. ಪ್ರಸ್ತುತ ಪರ್ದಿ ತಾಲೂಕಿನಲ್ಲಿರುವ ಒಂದು ಅನುಸೂಚಿತ ಪಂಗಡದ ಸ್ಥಾನವನ್ನು ತೆಗೆದುಹಾಕಬೇಕು ಮತ್ತು ಅದು ಸಾಮಾನ್ಯ ಸ್ಥಾನವಾಗಬೇಕು.

**ಡಾ. ಅಂಬೇಡ್ಕರ್:** ಅದು ತತ್ಪರಿಣಾಮವಾದುದಾಗುತ್ತದೆ. ಅದನ್ನು ನಾವು ಮಾಡಬಹುದು.

**ಮಾನ್ಯ ಸಭಾಧ್ಯಕ್ಷರು:** ಒಂದು ನಿರ್ದಿಷ್ಟ ಅಂಶವನ್ನು ಎತ್ತಲಾಯಿತು ಎಂಬುದು ದಾಖಲಾಗಲಿ.

***ಮಾನ್ಯ ಸಭಾಧ್ಯಕ್ಷರು:** (ಮೇಲೆ ಉಲ್ಲೇಖಿಸಿದಂತೆ) ಡಂಗ್ಸ್ ಬಗ್ಗೆ ಡಾ. ಅಂಬೇಡ್ಕರ್ ಅವರ ತಿದ್ದುಪಡಿ. ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಹಿರೆ:** ಪಟ್ಟಿ ಸಂಖ್ಯೆ ೧೧ರಲ್ಲಿ ನನ್ನ ತತ್ಪರಿಣಾಮವಾದ ತಿದ್ದುಪಡಿಯಿದೆ.

**ಮಾನ್ಯ ಸಭಾಧ್ಯಕ್ಷರು:** ಎಂದರೆ ಮಹಾರಾಷ್ಟ್ರದಿಂದ ಒಂದು ಸ್ಥಾನವನ್ನು ಹೊಂದಲು ಮಾಡಿದುದು. ಅದು ಸಂಪೂರ್ಣವಾಗಿ ತತ್ಪರಿಣಾಮವಾದ ತಿದ್ದುಪಡಿಯಾದ್ದರಿಂದ ಅದನ್ನು ಹಾಗೆಯೇ ನಾವು ಅಂಗೀಕರಿಸುತ್ತೇವೆ.

ಮಾನ್ಯ ಕಾನೂನು ಸಚಿವರು ಪಟ್ಟಿ ಸಂಖ್ಯೆ ೮ರಲ್ಲಿನ ತಿದ್ದುಪಡಿ ಸಂಖ್ಯೆ ೧, ೨ ಮತ್ತು ೪ನೇ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯಲು ಸದನದ ಅನುಮತಿ ಕೋರಿದ್ದಾರೆ ಮತ್ತು ಇತರ ಎಲ್ಲ ಮಾನ್ಯ ಸದಸ್ಯರೂ ತಮ್ಮ ತಮ್ಮ ಹೆಸರಿನಲ್ಲಿರುವ ಅನೇಕ ತಿದ್ದುಪಡಿಗಳನ್ನು ಮತ್ತು ಪ್ರಸ್ತಾವಗಳನ್ನು ಹಿಂದಕ್ಕೆ ಪಡೆಯಲು ಸದನದ ಅನುಮತಿ ಕೋರಿದ್ದಾರೆ.

ತಿದ್ದುಪಡಿಗಳನ್ನು ಅನುಮತಿ ಪಡೆದು ಹಿಂದಕ್ಕೆ ಪಡೆಯಲಾಯಿತು.

## (ಉಪ ಸಭಾಧ್ಯಕ್ಷರ ಅಧ್ಯಕ್ಷತೆ)
## ಮಧ್ಯಪ್ರದೇಶ ಆದೇಶ

**ಡಾ. ಅಂಬೇಡ್ಕರ್:** ಈ ಮುಂದಿನ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿದ್ದೇನೆ.

ಪಟ್ಟಿ ಸಂಖ್ಯೆ ೧: ಕಿಶೋರಿ ಮೋಹನ್ ತ್ರಿಪಾಠಿ ಮತ್ತು ಇತರರು ಮಂಡಿಸಿರುವ ತಿದ್ದುಪಡಿ ಸಂಖ್ಯೆ ೬ ಮತ್ತು ೮.

ಪಟ್ಟಿ ಸಂಖ್ಯೆ ೨: ಡಾ. ಪಿ.ಎಸ್. ದೇಶ್‌ಮುಖ್ ಮತ್ತು ಇತರರು ಮಂಡಿಸಿರುವ ತಿದ್ದುಪಡಿ ಸಂಖ್ಯೆ ೧, ಭಾಗ ೧ ರಿಂದ ೫ ಮತ್ತು ಅವರೊಡನೆ ಡಾ. ದೇಶ್‌ಮುಖ್ ಅವರು ಪ್ರಸ್ತಾಪಿಸಲಿರುವ ಎರಡು ತತ್ಪರಿಣಾಮ ತಿದ್ದುಪಡಿಗಳು.

ಪಟ್ಟಿ ಸಂಖ್ಯೆ ೩: ಶ್ರೀ ಕಿಶೋರಿಮೋಹನ್ ತ್ರಿಪಾಠಿ ಮತ್ತು ಇತರರು ಮಂಡಿಸಿರುವ ತಿದ್ದುಪಡಿ ಸಂಖ್ಯೆ ೨ ಮತ್ತು ಅದರೊಡನೆ ಶ್ರೀ ತ್ರಿಪಾಠಿ ಅವರು ಪ್ರಸ್ತಾವಿಸಲಿರುವ ತತ್ಪರಿಣಾಮಿ ತಿದ್ದುಪಡಿ ಸಂಖ್ಯೆ ೨ನ್ನು "ಖಿಮಾರಿಯ ತೆಹಸಿಲ್" ಎಂಬುದಕ್ಕೆ ಬದಲಾಗಿ "ಖಿಮಾರಿಯಾ ತೆಹಸಿಲ್‌ನ ಖಿಮಾರಿಯಾ ಆರ್‌ಐಸಿ" ಎಂದು ಸ್ವಲ್ಪ ಮಾರ್ಪಾಟುಮಾಡಲಾಗಿದೆ."

ಪಟ್ಟಿ ಸಂಖ್ಯೆ ೬ ತಿದ್ದುಪಡಿ ಸಂಖ್ಯೆ ೧ ರಿಂದ ೫

****ಶ್ರೀ ಜಂಗ್ಡೆ:** ಮಾನ್ಯರೇ, ನಾನು ನನ್ನ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯಲು ಇಚ್ಛಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು:** ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯಲು ಸದನದ ಅನುಮತಿಯನ್ನು ನಾನು ನಂತರ ಕೇಳುತ್ತೇನೆ. ಈಗ ನಾನು ಪಟ್ಟಿ ಸಂಖ್ಯೆ ೬ ತಿದ್ದುಪಡಿ ಸಂಖ್ಯೆ ೧ ರಿಂದ ೫ನ್ನು ಮುಂದಿಡುತ್ತೇನೆ. ಅವಕ್ಕೆ ಯಾವುದಾದರೂ ತತ್ಪರಿಣಾಮಿ ತಿದ್ದುಪಡಿಗಳಿವೆಯೇ?

**ಡಾ. ಅಂಬೇಡ್ಕರ್:** ಈ ತಿದ್ದುಪಡಿ ಸಂಖ್ಯೆ ೧ ರಿಂದ ೫ಕ್ಕೆ ತಿದ್ದುಪಡಿಗಳಿಲ್ಲ.

---

* ಸಂ.ಚ. ಸಂಪುಟ ೧೩ ಭಾಗ ೨ ೧೯೫೧ರ ಜೂನ್ ೯ ಪಿಪಿ ೧೦೫೩೪–೩೫

** ಸಂ.ಚ. ಸಂಪುಟ ೧೩, ಭಾಗ ೨, ೧೯೫೦ರ ಜೂನ್ ೯, ಪಿ ೧೦೫೪೧

**ಮಾನ್ಯ ಉಪಸಭಾಧ್ಯಕ್ಷರು:** ಪ್ರಶ್ನೆ ಏನೆಂದರೆ:

(ಪ್ರಸ್ತಾವಗಳ ಪಠ್ಯಕ್ಕೆ ಪಟ್ಟಿ ೬ರಲ್ಲಿ ತಿದ್ದುಪಡಿ ಸಂಖ್ಯೆ ೧ ರಿಂದ ೫ಕ್ಕೆ ಸಂಬಂಧಿಸಿದ ಡಾ. ಅಂಬೇಡ್ಕರರ ತಿದ್ದುಪಡಿಗಳು ಪರಿಶಿಷ್ಟ XXXIII ರಲ್ಲಿನ ಅನುಬಂಧ ಸಂಖ್ಯೆ ೩ನ್ನು ನೋಡಿ).

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

*ಡಾ. ದೇಶ್‌ಮುಖ್: ನಾನು ನನ್ನ ತಿದ್ದುಪಡಿಗಳನ್ನು ಮಂಡಿಸಬೇಕಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು:** ಆಗಲಿ. ಅದೆಂದರೆ ಪಟ್ಟಿ ಸಂಖ್ಯೆ ೨ರಲ್ಲಿರುವ ತಿದ್ದುಪಡಿ ೧ಕ್ಕೆ ಸಂಬಂಧಿಸಿದುದು.

**ಡಾ. ಅಂಬೇಡ್ಕರ್:** ಪಟ್ಟಿ ೨ರ ೧ ರಿಂದ ೫ರ ಅವರ ತಿದ್ದುಪಡಿಗಳಿಗೆ ತಿದ್ದುಪಡಿಗಳಿವೆ.

** **ಮಾನ್ಯ ಉಪಸಭಾಧ್ಯಕ್ಷರು:** ಈ ಮಟ್ಟಿಗೆ ರಾಷ್ಟ್ರಪತಿಯವರ ಆದೇಶ ಮಾರ್ಪಾಟುಗೊಳ್ಳುತ್ತದೆ. ಎಲ್ಲ ಸದಸ್ಯರಿಗೂ ತಮ್ಮ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯಲು ಅನುಮತಿ ನೀಡಬಹುದು. ಇತರ ಮಾನ್ಯ ಸದಸ್ಯರುಗಳು ಮಂಡಿಸಿದ ಇತರ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯಲು ಅನುಮತಿ ನೀಡಿದ ಮೇರೆಗೆ ಹಿಂದೆ ಪಡೆಯಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು:** ಮಧ್ಯಪ್ರದೇಶ ಆದೇಶ ಮುಕ್ತಾಯವಾಯಿತು.

**ಡಾ. ಅಂಬೇಡ್ಕರ್:** ತಮ್ಮ ವಿಷಯವನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನನ್ನ ಇತರ ಗೆಳೆಯರು ಎಂದರೆ, ಪಶ್ಚಿಮ ಬಂಗಾಳ ಮತ್ತು ಹೈದರಾಬಾದ್ ಗೆಳೆಯರು ಒತ್ತಾಯಿಸುತ್ತಿದ್ದಾರೆ.

**ಮಾನ್ಯ ಉಪಸಭಾಧ್ಯಕ್ಷರು:** ಮದ್ರಾಸ್ ಅನ್ನು ಮೊದಲು ತೆಗೆದುಕೊಳ್ಳುತ್ತಿದ್ದೇನೆ.

## ಮದ್ರಾಸ್ ಆದೇಶ

**ಡಾ. ಅಂಬೇಡ್ಕರ್:** ಮದ್ರಾಸ್ ಆದೇಶಕ್ಕೆ ಸಂಬಂಧಿಸಿದಂತೆ ಈ ಮುಂದಿನ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿದ್ದೇನೆ.

ಪಟ್ಟಿ ಸಂಖ್ಯೆ ೪– ಶ್ರೀ ಕಲಾ ವೆಂಕಟರಾಮನ್ ಅವರು ಮಂಡಿಸಿದ ತಿದ್ದುಪಡಿ ಸಂಖ್ಯೆ ೧, ಭಾಗ ೩, ಎರಡನೆ ಪರ್ಯಾಯ ಮತ್ತು ಭಾಗ ೪

ಶ್ರೀ ಕೇಶವರಾವ್ ಅವರ ತಿದ್ದುಪಡಿ ಸಂಖ್ಯೆ ೨ ಭಾಗ ೧ ಮತ್ತು ೨.

ಪಟ್ಟಿ ಸಂಖ್ಯೆ ೬–ಶ್ರೀ ಸಂಜೀವಯ್ಯ ಅವರ ತಿದ್ದುಪಡಿ ಸಂಖ್ಯೆ ೨, ಭಾಗ ೧ ಮತ್ತು ೨, ೨ನೇ ಭಾಗವನ್ನು ಈ ಕೆಳಗಿನಂತೆ ತಿದ್ದಬೇಕು ಎಂಬುದಕ್ಕೆ ಒಳಪಟ್ಟು:

"೨, ೩, ೪ ಮತ್ತು ೫ನೇ ಅಂಕಣಗಳಲ್ಲಿ "ಈರೋಡ್" ಮುಂದೆ ಇರುವ ಎಲ್ಲ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದು.

---

* ಸಂ.ಚ. ಸಂಪುಟ ೧೩, ಭಾಗ ೨, ೧೯೫೦ರ ಜೂನ್ ೯, ಪಿ ೧೦೫೪೩

** ಅದೇ ಪಿಪಿ ೧೦೫೪೫–೪೭

| ೧ | ೨ | ೩೪ | ೫ | |
|---|---|---|---|---|
| ಈರೋಡ್. . | ಈರೋಡ್ ತಾಲೂಕು, ಭವಾನಿ ತಾಲೂಕು, ಧಾರಾಪುರಂ ತಾಲೂಕು (ಪರಿಶಿಷ್ಟದ ಬಾಬು ಸಂಖ್ಯೆ (೧೯)ರಲ್ಲಿ ನಿರ್ದಿಷ್ಟಪಡಿಸಿದಂತೆ ಕುಂದಡಂ ಫಿರ್ಕಾದ ಅಂಥ ಗ್ರಾಮಗಳನ್ನು ಹೊರತುಪಡಿಸಿ) ಮತ್ತು ಕುಗಲೂರ್ ಫಿರ್ಕಾ<br>ಮತ್ತು ಪರಿಶಿಷ್ಟದ ಬಾಬು ಸಂಖ್ಯೆ (೧೮)ರಲ್ಲಿ ನಿರ್ದಿಷ್ಟಪಡಿಸಿದಂತೆ ಕೊಯಮತ್ತೂರು ಜಿಲ್ಲೆಯ ಗೋಭಿಚೆಟ್ಟಿಪಾಳಯಂನ ಗೋಭಿಚೆಟ್ಟಿ ಫಿರ್ಕಾದ ಗ್ರಾಮಗಳು; ಮತ್ತು ಕರೂರ್ ತಾಲೂಕು ಕಟ್ಟಲಾಯ್, ಕುಲಿತೆಲಾಯ್ ಮತ್ತು ತಿರುಚ್ಚಿನಾಪಳ್ಳಿ ಜಿಲ್ಲೆಯ ಕುಲಿತೆಲಾಯ್ ತಾಲೂಕಿನ ಪಂಜಾರ್ ಪಟ್ಟಿ ಫಿರ್ಕಾಗಳು. | ೨ | ೧ | ... |

ಪಟ್ಟಿ ಸಂಖ್ಯೆ ೧೧: ಶ್ರೀ ಕೋದಂಡರಾಮ ರೆಡ್ಡಿ ಮತ್ತು ಇತರರಿಂದ, ತಿದ್ದುಪಡಿ ಸಂಖ್ಯೆ ೨ ಭಾಗಗಳು ೧ ರಿಂದ ೩

ಪಟ್ಟಿ ಸಂಖ್ಯೆ ೧೨: ತಿದ್ದುಪಡಿ ಸಂಖ್ಯೆ ೧ ರಿಂದ ೧೩, ಮಾನ್ಯ ಕಾನೂನು ಸಚಿವರಿಂದ ಈ ಮುಂದಿನಂತೆ ಮಾರ್ಪಾಡಾದ ತಿದ್ದುಪಡಿ ಸಂಖ್ಯೆ ೬ಕ್ಕೆ ಒಳಪಟ್ಟು:– ಅಂಕಣ ೨, ೩, ೪ ಮತ್ತು ೫ರಲ್ಲಿ "ತಿರುಪ್ಪೂರ್" ಎಂಬುದರ ಮುಂದಿರುವ ಎಲ್ಲ ನಮೂದುಗಳಿಗೆ ಈ ಮುಂದಿನದನ್ನು ನಮೂದಿಸತಕ್ಕುದು.

| ೧ | ೨ | ೩ | ೪ | ೫ |
|---|---|---|---|---|
| ತಿರುಪ್ಪೂರ್ | ಕೊಳ್ಳೆಗಾಲ, ಕೊಯಮತ್ತೂರು ಜಿಲ್ಲೆಯ ಗೋಭಿಚೆಟ್ಟಿಪಾಳಯಂ ಮತ್ತು ತಿರುಪ್ಪೂರ್ ತಾಲೂಕುಗಳು<br>ಮತ್ತು ಅವನಾಶಿ ತಾಲೂಕಿನ ಸಾವೂರ್ ಮತ್ತು ಅವನಾಶಿ<br>ಫಿರ್ಕಾಗಳು (ಕುಗಲೂರು ಫಿರ್ಕಾ ಮತ್ತು ಪರಿಶಿಷ್ಟದ ಬಾಬು<br>ಸಂಖ್ಯೆ ೧೮ರಲ್ಲಿ ನಿರ್ದಿಷ್ಟಪಡಿಸಲಾದಂತೆ ಗೋಭಿಚೆಟ್ಟಿಪಾಳಯಂ ತಾಲೂಕಿನ ಗೋಭಿಚೆಟ್ಟಿಪಾಳಯಂ<br>ಫಿರ್ಕಾದ ಗ್ರಾಮಗಳು ಮತ್ತು ತಿರುಪ್ಪೂರ್ | ೧ | ..... | ... |

ತಾಲೂಕಿನ ವಾರಾಪಟ್ಟಿ ಫೀರ್ಕಾಗಳನ್ನು
ಹೊರತುಪಡಿಸಿ).

---

ನಾನು ಈ ಮುಂದಿನದನ್ನು ಮಂಡಿಸಲಿಚ್ಛಿಸುತ್ತೇನೆ.

(i) ೪ನೇ ಪುಟದಲ್ಲಿ ಕೋಷ್ಟಕ ಎ–ಸಂಸತ್ ಚುನಾವಣಾ ಕ್ಷೇತ್ರಗಳು–ರಲ್ಲಿ "ಧರ್ಮಪುರಿ" ಎಂಬ ನಮೂದಿನ ಮುಂದೆ. "ಮತ್ತು ಸೇಲಂ ಜಿಲ್ಲೆಯ ತಿರುಚೆಂಗೊಡ ತಾಲೂಕಿನ ಇಡಪ್ಪಾಡಿ ಫಿರ್ಕಾ" ಎಂಬ ಪದಗಳಿಗೆ "ಮತ್ತು ಇಡಪ್ಪಾಡಿ ಫಿರ್ಕಾ ಮತ್ತು ಪರಿಶಿಷ್ಟದ ೧೮ಎ ಬಾಬಿನಲ್ಲಿ ನಿರ್ದಿಷ್ಟಪಡಿಸಲಾದಂತೆ ಸೇಲಂ ಜಿಲ್ಲೆಯ ತಿರುಚೆಂಗೊಡ ತಾಲೂಕಿನ ಸಂಕಗಿರಿ ಫಿರ್ಕಾದ ಅಂಥ ಗ್ರಾಮಗಳು". ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು.

(ii) ಪುಟ ೪ರಲ್ಲಿ, ಕೋಷ್ಟಕ ಎ–ಸಂಸತ್ ಚುನಾವಣಾ ಕ್ಷೇತ್ರಗಳು ಎಂಬುದರಲ್ಲಿ, "ತಿರುಚೆಂಗೊಡ" ಎಂಬ ನಮೂದಿನ ಮುಂದೆ "(ತಿರುಚೆಂಗೊಡ ತಾಲೂಕಿನ ಇಡಪ್ಪಾಡಿ ಫಿರ್ಕಾವನ್ನು ಹೊರತುಪಡಿಸಿ)" ಎಂಬ ಪದಗಳಿಗೆ "(ಇಡಪ್ಪಾಡಿ ಫಿರ್ಕಾ ಮತ್ತು ಪರಿಶಿಷ್ಟದ ೧೮ಎ ಬಾಬಿನಲ್ಲಿ ನಿರ್ದಿಷ್ಟಪಡಿಸಲಾದಂತೆ ತಿರುಚೆಂಗೊಡ ತಾಲೂಕಿನ ಸಂಕಗಿರಿ ಫಿರ್ಕಾದ ಅಂಥ ಗ್ರಾಮಗಳನ್ನು ಹೊರತುಪಡಿಸಿ ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು.

(iii) ಪುಟ ೧೧ರಲ್ಲಿ ಕೋಷ್ಟಕ ಬಿ – ವಿಧಾನಸಭಾ ಚುನಾವಣಾ ಕ್ಷೇತ್ರಗಳು ಎಂಬುದರಲ್ಲಿ, "ತಿರುಚೆಂಗೊಡ ನಮೂದಿನ ಮುಂದೆ, ಅಂಕಣ ೨ರಲ್ಲಿರುವ ನಮೂದಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕುದು:

"ತಿರುಚೆಂಗೊಡ ತಾಲೂಕು (ಇಡಪ್ಪಾಡಿ ಫಿರ್ಕಾ ಮತ್ತು ಪರಿಶಿಷ್ಟದ ೧೮ಎ ಮತ್ತು ೧೬ನೇ ಬಾಬುಗಳಲ್ಲಿ ಕ್ರಮವಾಗಿ ನಿರ್ದಿಷ್ಟಪಡಿಸಲಾದಂತೆ ಸಂಕಗಿರಿ ಫಿರ್ಕಾ ಮತ್ತು ತಿರುಚೆಂಗೊಡ ಫಿರ್ಕಾ ಗ್ರಾಮಗಳು") ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು.

(iv) ಪುಟ ೧೧ರಲ್ಲಿ ಕೋಷ್ಟಕ ಬಿ – ವಿಧಾನಸಭಾ ಚುನಾವಣಾ ಕ್ಷೇತ್ರಗಳು ಎಂಬುದರಲ್ಲಿ, "ಇಡಪ್ಪಾಡಿ" ನಮೂದಿನ ಮುಂದೆ, ಅಂಕಣ ೨ರಲ್ಲಿರುವ ನಮೂದಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದು:

"ಇಡಪ್ಪಾಡಿ ಫಿರ್ಕಾ ಮತ್ತು ಪರಿಶಿಷ್ಟದ ೧೮ಎ ಬಾಬಿನಲ್ಲಿ ನಿರ್ದಿಷ್ಟಪಡಿಸಲಾದಂತೆ ತಿರುಚೆಂಗೊಡ ತಾಲೂಕಿನ ಸಂಕಗಿರಿ ಫಿರ್ಕಾದ ಅಂಥ ಗ್ರಾಮಗಳು ಮತ್ತು ಅಮಲೂರು ತಾಲೂಕಿನ ಮೆಟ್ಟೂರು ಮತ್ತು ನಂಗವಲ್ಲಿ ಫಿರ್ಕಾಗಳು".

**ಪೂರ್ವಾಹ್ನ ೧೧ ಗಂಟೆ.**

ಮಾನ್ಯರೇ, ನಾನು ಪಟ್ಟಿ ಸಂಖ್ಯೆ ೧೦ರಲ್ಲಿರುವ ಎಲ್ಲ ತಿದ್ದುಪಡಿಗಳನ್ನು ಮಂಡಿಸಲು ಇಚ್ಛಿಸುತ್ತೇನೆ. ಅವು ಕೇವಲ ತಪ್ಪೋಲೆಗಳು.

*[*]* **ಶ್ರೀ ಎ ಜೋಸೆಫ್:** . . . . . ನಾನು ಯಾವ ಸಂಘಟನೆಗೆ ಸೇರಿದ್ದೇನೆಯೋ ಆ ಸಂಘಟನೆಯ ಹಿತಾಸಕ್ತಿಯಲ್ಲಿ ಮತ್ತು ಸರ್ಕಾರದ ಹಿತಾಸಕ್ತಿಯಲ್ಲಿ, ಮೀಸಲಾತಿಯಿಲ್ಲದೆ ಹಂಚಿಕೆಯಾಗುವ ಮತದಾನವಿರುವ ಬಹುಸದಸ್ಯ ಚುನಾವಣಾ ಕ್ಷೇತ್ರಗಳನ್ನು ಒದಗಿಸಬೇಕೆಂದು ಸದನವನ್ನು ಕೋರುತ್ತೇನೆ. ಈ ಬೇಡಿಕೆಯನ್ನು ಕಾನೂನು ಸಚಿವರು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇಲ್ಲದಿದ್ದರೆ, ನಾನು ಅವರ ಪ್ರಸ್ತಾವವನ್ನು ವಿರೋಧಿಸುತ್ತೇನೆ ಮತ್ತು ಅಲ್ಪಸಂಖ್ಯಾತರಿಗೆ ಯಾವುದೇ ಸೌಲಭ್ಯಗಳನ್ನು ಕೊಡದೆ ಏಕ ಸದಸ್ಯ ಚುನಾವಣಾ ಕ್ಷೇತ್ರಗಳ ಪ್ರಸ್ತಾವಕ್ಕೆ ನನ್ನ ಅಸಮ್ಮತಿಯನ್ನು ದಾಖಲು ಮಾಡಬೇಕೆಂದು ಕೋರುತ್ತೇನೆ.

**ಡಾ. ಅಂಬೇಡ್ಕರ್:** ನಾನು ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು:** ಇದೇ ರೀತಿಯ ಬಹುಸದಸ್ಯ ಚುನಾವಣಾ ಕ್ಷೇತ್ರಗಳನ್ನು ಉತ್ತರ ಪ್ರದೇಶದಲ್ಲಿ ಸೃಜಿಸಲಾಗಿದೆಯೇ?

**ಡಾ. ಅಂಬೇಡ್ಕರ್:** ಇಲ್ಲ. ಎಲ್ಲಿಯೂ ಇದಕ್ಕೆ ಅಪವಾದವನ್ನು ಮಾಡಿಲ್ಲ.

## ಪಶ್ಚಿಮ ಬಂಗಾಳ ಆದೇಶಗಳು

[**] **ಡಾ. ಅಂಬೇಡ್ಕರ್:** ಪಶ್ಚಿಮ ಬಂಗಾಳ ಆದೇಶಕ್ಕೆ ಸಂಬಂಧಿಸಿದಂತೆ ನಾನು ಈ ಮುಂದಿನ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ:

> **ಸಂಚಿತ ಪಟ್ಟಿ ಸಂಖ್ಯೆ** ೨ – ಶ್ರೀ ಸಾಮಂತ ಮತ್ತು ಶ್ರೀ ವಿ.ಕೆ. ದಾಸ್ ಅವರು ಮಂಡಿಸಿದ ೧ ರಿಂದ ೬ ಭಾಗಗಳು.
>
> **ಪೂರಕ ಪಟ್ಟಿ ಸಂಖ್ಯೆ ೧:** ಶ್ರೀ ಹಿಮತ್‌ಸಿಂಕಾ ಮತ್ತು ಶ್ರೀ ಹಕ್ ರವರು ಮಂಡಿಸಿದ ತಿದ್ದುಪಡಿ ಸಂಖ್ಯೆ ೧–ಭಾಗ ೧ ಮತ್ತು ೨ ಮತ್ತು ತಿದ್ದುಪಡಿ ಸಂಖ್ಯೆ ೨–ಭಾಗ ೧ ರಿಂದ ೮, ಶ್ರೀ ಜುಂಜುನ್ ವಾಲಾ ಮತ್ತು ಶ್ರೀ ಸಿನ್ಹಾ ರವರು ಮಂಡಿಸಿದ ಪೂರಕ ಪಟ್ಟಿ ಸಂಖ್ಯೆ ೫, ೧ ರಿಂದ ೪ರ ವರೆಗಿನ ತಿದ್ದುಪಡಿಗಳಿಂದ ಮಾರ್ಪಾಟಾದಂತೆ. ನಾನು ಪೂರಕ ಪಟ್ಟಿ ಸಂಖ್ಯೆ ೩ ರಿಂದ ತಿದ್ದುಪಡಿ ಸಂಖ್ಯೆ ೪ ಮತ್ತು ೧೨ ರಿಂದ ೧೫ನ್ನು ಹಿಂದಕ್ಕೆ ಪಡೆಯುತ್ತೇನೆ. ಮಿಕ್ಕವುಗಳನ್ನು ನಾನು ಪ್ರಸ್ತಾವಿಸುತ್ತೇನೆ.

**ಶ್ರೀ ಚಟ್ಟೋಪಾಧ್ಯಾಯ (ಪಶ್ಚಿಮ ಬಂಗಾಳ):** ನಾನು ಪೂರಕ ಪಟ್ಟಿ ಸಂಖ್ಯೆ ೨ರಲ್ಲಿ ಕಾಣಿಸಿರುವ ತಿದ್ದುಪಡಿಯನ್ನು ಪ್ರಸ್ತಾವಿಸಲು ಇಚ್ಛಿಸುತ್ತೇನೆ. ಅದು ೧೦೮ ಬಾಬುಗಳನ್ನು ಒಳಗೊಳ್ಳುತ್ತದೆ. ಅವುಗಳ ಪೈಕಿ ಬಾಬು ಸಂಖ್ಯೆ ೩೦ನ್ನು ನಾನು ಒತ್ತಾಯಮಾಡುವುದಿಲ್ಲ.

[*] **ಡಾ. ಅಂಬೇಡ್ಕರ್:** ಈ ವಿಷಯವಾಗಿ ತುಂಬ ಭಿನ್ನಾಭಿಪ್ರಾಯವಿರುವ ಸಂಗತಿಯನ್ನು

---

** ಅದೇ ಪಿ ೧೦೫೫೪.

* ಪಿ.ಡಿ. ಸಂಪುಟ ೧೩, ಭಾಗ ೨, ಜೂನ್ ೯, ೧೯೫೧, ಪು ೧೫೫೬೮೭೭.

* ಸಂ.ಚ. ಸಂಪುಟ ೧೩, ಭಾಗ–೨, ೧೯೫೧ರ ಜೂನ್ ೭, ಪಿ ೧೦೫೪೮

ದೃಷ್ಟಿಯಲ್ಲಿಟ್ಟುಕೊಂಡು, ನಾನು ಒಂದು ಮಾತು ಹೇಳಬಹುದಾದರೆ, ಈ ವಿಷಯವನ್ನು ಅದರ ಒಳಗಿನ ಅಂಶಗಳನ್ನು ಮುಟ್ಟದೆ, ಮಾನ್ಯ ಸಭಾಪತಿಯವರು ಒಂದು ರೀತಿಯಲ್ಲಿ ನಾಮಕರಣಕ್ಕೆ ಸಂಬಂಧಪಟ್ಟ ವಿಷಯವಾಗಿ ಅದನ್ನು ಪರಿಗಣಿಸಬಹುದೆಂದು ಸೂಚಿಸಬಯಸುತ್ತೇನೆ. ಈ ವಿಷಯವನ್ನು ಮುಕ್ತವಾಗಿ ಇಡಬಹುದು. ಇದರ ಬಗ್ಗೆ ಕಾಳಜಿಯಿರುವ ಸದಸ್ಯರು ಮಾನ್ಯ ಸಭಾಪತಿಯವರಲ್ಲಿ ಮನವಿಮಾಡಿಕೊಂಡು ಇದು ಕೇವಲ ನಾಮಕರಣಕ್ಕೆ ಸಂಬಂಧಪಟ್ಟ ವಿಷಯವೆಂದು ಮನವರಿಕೆ ಮಾಡಿಕೊಡಬಹುದು. ನಿರ್ದಿಷ್ಟವಾದ ಕ್ಷೇತ್ರಗಳಿಗೆ ಸೇರಿಸಲಾಗಿರುವ ಪ್ರದೇಶಗಳನ್ನು ಯಾವುದೇ ರೀತಿಯಲ್ಲಿ ಮುಟ್ಟದೆ ಔಪಚಾರಿಕವಾಗಿ ಅವುಗಳನ್ನು ಸೇರಿಸಬಹುದೆಂಬುದಾಗಿ ಅವರಿಗೆ ಮನದಟ್ಟುಮಾಡಿಕೊಡಬಹುದು.

**ಪಂಡಿತ ಮೈತ್ರ:** ಇದಕ್ಕೆ ನಾವು ಸಮ್ಮತಿಸುವುದು ಕಷ್ಟವಾಗಬಹುದು. ಏಕೆಂದರೆ ಕೇವಲ ಯಾರೇ ಒಬ್ಬ ಸದಸ್ಯರು ನಾಮಕರಣದಲ್ಲಿ ಬದಲಾವಣೆಯನ್ನು ಹೊಂದುವ ಇಚ್ಛೆಯನ್ನು ವ್ಯಕ್ತಪಡಿಸಿದರೂ ಇನ್ನೊಬ್ಬರು ಇನ್ನೊಂದನ್ನು, ಮತ್ತೊಬ್ಬರು ಮತ್ತೊಂದನ್ನು....ಹೀಗೆಯೆ ಸಲಹೆಮಾಡುತ್ತಾ ಹೋಗಬಹುದು.

**ಶ್ರೀ ಚಟ್ಟೋಪಾಧ್ಯಾಯ:** ನಿಮಗೆ ಯಾವುದರ ಬಗ್ಗೆ ಆತಂಕವಿದೆ?

**ಡಾ. ಎಂ.ಎಂ.ದಾಸ್:** ಅದು ಅನುಕೂಲಕರವಾಗಿರುವುದಿಲ್ಲ.

**ಶ್ರೀ ಜೆ.ಆರ್.ದಾಸ್:** ಅದು ಅನುಕೂಲಕರವಾಗಿರುವುದಿಲ್ಲ.

**ಶ್ರೀ ಜೆ.ಆರ್.ಕಪೂರ್ (ಉತ್ತರ ಪ್ರದೇಶ):** ಶ್ರೀ ಚಟ್ಟೋಪಾಧ್ಯಾಯ ಅವರು ಎತ್ತಿರುವ ಅಂಶ ನಮ್ಮಲ್ಲಿ ಬಹಳಷ್ಟು ಜನರಿಗೆ ಸೂಕ್ತವಾಗಿ ಕಂಡುಬರುತ್ತದೆ. ಈ ಕೊನೆಯ ಹಂತದಲ್ಲಿ ಯಾವುದೇ ಮಹತ್ತರವಾದ ಬದಲಾವಣೆಯನ್ನು ಮಾಡುವುದು ನಮಗೆ ಸರಿಹೋಗುವುದಿಲ್ಲ. ಅವರು ಸಲಹೆಮಾಡುತ್ತಿರುವ ಬದಲಾವಣೆಗಳನ್ನು ಕಾನೂನು ಸಚಿವರು ಹೇಳುತ್ತಿರುವ ರೀತಿಯಲ್ಲಿ ಸುಲಭವಾಗಿಯೆ ಮಾಡಬಹುದು. ಹಾಗೆಯೆ ನನ್ನ ಅಭಿಪ್ರಾಯದಲ್ಲಿ ಈ ಸದನದಲ್ಲಿರುವ ಬಹಳಷ್ಟು ಮಂದಿ ಸದಸ್ಯರು ಒಕ್ಕೊರಲಿನಿಂದ ಅದನ್ನು ಬೆಂಬಲಿಸುತ್ತಾರೆಂಬ ನಂಬಿಕೆ ನನಗಿದೆ.

**ಶ್ರೀ ಎಸ್.ಎಂ.ಘೋಷ್ (ಪಶ್ಚಿಮ ಬಂಗಾಳ):** ಈ ಆದೇಶವನ್ನು ಸಭಾಪತಿಗಳು ಹೇಗೆ ನಿಷ್ಕರ್ಷೆ ಮಾಡಬಲ್ಲರು? ನನ್ನ ಮಾನ್ಯ ಮಿತ್ರರು ಯಾವುದೋ ಒಂದು ಶೀರ್ಷಿಕೆಯನ್ನು ಸೂಚಿಸಿದ್ದಾರೆ. ಬೇರೆ ಸದಸ್ಯರು ಬೇರೆ ಬೇರೆ ಹೆಸರುಗಳನ್ನು ಸೂಚಿಸಬಹುದು. ಇದಕ್ಕೆ ಕೊನೆ ಎಲ್ಲಿ?

**ಉಪಸಭಾಪತಿ:** ಮಾನ್ಯ ಸಭಾಪತಿಯವರು ಇಲ್ಲಿರಬೇಕು. ಇತರ ಸದಸ್ಯರ ಅಭಿಪ್ರಾಯಗಳನ್ನು ಪಡೆದುಕೊಂಡು ಅವರ ಇಷ್ಟ ಏನೆಂದು ಖಾತರಿಪಡಿಸಿಕೊಳ್ಳಬೇಕು. ಆದೇಶದ ಬಗ್ಗೆ ಏನು ಮಾಡಬೇಕು? ಆದೇಶವನ್ನು ಅಷ್ಟರಮಟ್ಟಿಗೆ ಮಾರ್ಪಡಿಸಬೇಕೆ ಅಥವಾ ಬೇಡವೆ ಎಂಬುದನ್ನು ನೋಡಬೇಕು. ನಾಮಕರಣ ಅಥವಾ ಶೀರ್ಷಿಕೆ ಎಂಬುದು ಆ ಆದೇಶದ ಒಂದು ಭಾಗ. ಅದು ಕೇವಲ ಪಕ್ಕದಲ್ಲಿ ಬರೆದ ಟಿಪ್ಪಣಿಯಂತಲ್ಲ. ಈ ವಿಷಯವನ್ನು ತೀರ್ಮಾನಮಾಡುವಲ್ಲಿ ಏನೋ ತೊಡಕಿದೆ. ಅದನ್ನು ನಾನು ಸಭೆಯ ತೀರ್ಮಾನಕ್ಕೆ ಬಿಡುತ್ತೇನೆ.

**ಶ್ರೀ ಚಟ್ಟೋಪಾಧ್ಯಾಯ:** ಸ್ವಾಮಿ, ನಾನು ಭಾರವಾದ ಹೃದಯದೊಡನೆ ಸದರಿ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯುತ್ತೇನೆ. ತಿದ್ದುಪಡಿಗಳನ್ನು, ಅನುಮತಿಯ ಮೇರೆಗೆ, ಹಿಂದಕ್ಕೆ ಪಡೆಯಲಾಯಿತು.

**ಉಪಸಭಾಪತಿ:** ಈಗ ನಾನು ಡಾ. ಅಂಬೇಡ್ಕರ್ ಅವರ ತಿದ್ದುಪಡಿಗಳನ್ನು ಪೂರಕ ಪಟ್ಟಿ ೩ ರಲ್ಲಿ ಇಡುತ್ತೇನೆ. ಇಲ್ಲಿ ವಿಷಯ ಏನೆಂದರೆ:

(ಈ ಗೊತ್ತುವಳಿಗಳ ಪಾಠಕ್ಕಾಗಿ ಅನುಬಂಧ 1 ಪರಿಶಿಷ್ಟ XXXIII ರಲ್ಲಿ ಅಚ್ಚಾಗಿರುವ

ಪೂರಕ ಪಟ್ಟಿ ೩ ರಲ್ಲಿ ತಿದ್ದುಪಡಿಗಳ ಸಂಖ್ಯೆ ೧ ರಿಂದ ೩, ೫ ರಿಂದ ೧೧ ಹಾಗೂ ೧೬ ರಿಂದ ೧೯ ಇವುಗಳನ್ನು ನೋಡಿ.)

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

**ಉಪಸಭಾಪತಿ:** ಇತರ ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಬಯಸುತ್ತಾರೆ. ಇತರ ಎಲ್ಲ ತಿದ್ದುಪಡಿಗಳನ್ನು, ಅನುಮತಿಯೊಡನೆ, ಹಿಂತೆಗೆದುಕೊಳ್ಳಲಾಯಿತು.

**ಮಧ್ಯಾಹ್ನ ೧೨ ಗಂಟೆ**

**ಉಪಸಭಾಪತಿ:** ಸದನದಲ್ಲಿ ಚರ್ಚೆಯಾಗಿ ಅಂಗೀಕೃತವಾಗಿರುವಷ್ಟರ ಮಟ್ಟಿಗೆ ಪಶ್ಚಿಮ ಬಂಗಾಳಕ್ಕೆ ಸಂಬಂಧಪಟ್ಟಂತೆ ರಾಷ್ಟ್ರಪತಿಗಳ ಆದೇಶ ಮಾರ್ಪಾಡಾಗಿರುತ್ತದೆ.

## ಹೈದರಾಬಾದ್ ಆದೇಶ

**ಡಾ. ಅಂಬೇಡ್ಕರ್:** ಈ ಕೆಳಕಂಡ ತಿದ್ದುಪಡಿಗಳನ್ನು ಅಂಗೀಕರಿಸಲು ನನಗೆ ಒಪ್ಪಿಗೆಯಿದೆ.

ಸಮಗ್ರಪಟ್ಟಿ, ತಿದ್ದುಪಡಿ ೧, ಭಾಗಗಳು ೧ ಮತ್ತು ೫ – ಶ್ರೀ ರಾಮಚಾರ್ ಹಾಗೂ ಇತರರಿಗೆ ಸಂಬಂಧಪಟ್ಟದ್ದು.

ತಿದ್ದುಪಡಿ ಸಂ.೨, ಭಾಗಗಳು ೧ ರಿಂದ ೬, ಭಾಗಗಳು ೧೦ ರಿಂದ ೧೨ ಹಾಗೂ ಭಾಗಗಳು ೧೫ ಮತ್ತು ೧೬ – ಶ್ರೀ ರಾಮಾಚಾರ್ ಮತ್ತು ಇತರರಿಗೆ ಸಂಬಂಧಪಟ್ಟದ್ದು.

ತಿದ್ದುಪಡಿ ಸಂ.೩: ಸಂ.೩ ಭಾಗಗಳು ೧ ಮತ್ತು ೨ – ಶ್ರೀ ರಾಮಾಚಾರ್ ಮತ್ತು ಇತರರಿಗೆ ಸಂಬಂಧಪಟ್ಟದ್ದು.

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

**ಉಪಸಭಾಪತಿ:** ಸದನದಲ್ಲಿ ಚರ್ಚೆಗೆ ಒಳಪಟ್ಟು ಒಪ್ಪಿಗೆಯಾಗಿರುವಷ್ಟರ ಮಟ್ಟಿಗೆ ಹೈದರಾಬಾದಿಗೆ ಸಂಬಂಧಪಟ್ಟಂತೆ ಬಂದಿರುವ ರಾಷ್ಟ್ರಪತಿಯವರ ಆದೇಶ ಮಾರ್ಪಾಡಾಗಿರುತ್ತದೆ. ಇತರ ಸದಸ್ಯರು ತಮ್ಮ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಬಯಸುತ್ತಾರೆ. ಇತರ ಎಲ್ಲ ತಿದ್ದುಪಡಿಗಳನ್ನು, ಅನುಮತಿಯ ಮೇರೆಗೆ, ಹಿಂದೆಗೆದುಕೊಳ್ಳಲಾಯಿತು.

## ಮಧ್ಯಭಾರತದ ಆದೇಶ

**ಡಾ. ಅಂಬೇಡ್ಕರ್:** ಶ್ರೀ ರಾಧೇಲಾಲ್ ವ್ಯಾಸ್ ಅವರು ಮುಂದಿಟ್ಟಿರುವ ಪಟ್ಟಿ ಸಂ.೩ ರಲ್ಲಿರುವ ತಿದ್ದುಪಡಿ ಸಂಖ್ಯೆ ೧,೨,೩,೬,೭,೯ ಮತ್ತು ೧೧ ಇವುಗಳನ್ನು ನಾನು ಅಂಗೀಕರಿಸುತ್ತೇನೆ. ಹಾಗೆಯೆ ಪಟ್ಟಿ ೧, ಪರಿಶಿಷ್ಟ ೧ ರಲ್ಲಿರುವುದನ್ನೂ ಅಂಗೀಕರಿಸುತ್ತೇನೆ.

**ಉಪಸಭಾಪತಿ:** ವಿಷಯ ಏನೆಂದರೆ:

(ಗೊತ್ತುವಳಿಗಳ ಪಾಠಕ್ಕೆ ನೋಡಿ: ಪರಿಶಿಷ್ಟ XXXIIII, ಅನುಬಂಧ ೨,೧ ರಲ್ಲಿ ಅಚ್ಚಾಗಿರುವ ೩ನೇ ಪಟ್ಟಿಯಲ್ಲಿರುವ ತಿದ್ದುಪಡಿಗಳು ಸಂ. ೧,೨,೩,೬,೭,೯ ಮತ್ತು ೧೧)

ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು

**ಉಪಸಭಾಪತಿ:** ಪ್ರಶ್ನೆ ಏನೆಂದರೆ:

(ಗೊತ್ತುವಳಿಯ ಪಾಠಕ್ಕಾಗಿ ನೋಡಿ: ಪಟ್ಟಿ ೧, ಪರಿಶಿಷ್ಟ ೧[(ಪರಿಶಿಷ್ಟ XXXIII, ಅನುಬಂಧಗಳು ೧ ಮತ್ತು ೨ ಇದರಲ್ಲಿ ಅಚ್ಚಾಗಿರುವ ಪಟ್ಟಿ ೩ ರಲ್ಲಿರುವ ಹಿಂದಿನ ತಿದ್ದುಪಡಿಗಳಿಂದ ಮಾರ್ಪಾಡಾಗಿರುವಂತೆ)]

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

## ಮೈಸೂರು ಆದೇಶ

**ಡಾ. ಅಂಬೇಡ್ಕರ್:** ಶ್ರೀ ರುದ್ರಪ್ಪನವರು ಪಟ್ಟಿ ೧ ರಲ್ಲಿ ಮಾಡಿರುವ ೧ ಮತ್ತು ೨ ನೇ ತಿದ್ದುಪಡಿಗಳನ್ನು ನಾನು ಅಂಗೀಕರಿಸುತ್ತೇನೆ.

ಉಪಸಭಾಪತಿ: ವಿಷಯ ಏನೆಂದರೆ:

[ಗೊತ್ತುವಳಿಯ ಪಾಠಕ್ಕಾಗಿ ನೋಡಿ: ಪರಿಶಿಷ್ಟ XXXIII, ಅನುಬಂದ ೩ ರಲ್ಲಿ ಅಚ್ಚಾಗಿರುವಂತೆ ಪಟ್ಟಿ ೧ ರಲ್ಲಿರುವ ತಿದ್ದುಪಡಿಗಳು ಸಂ. ೧ ಮತ್ತು ೨]

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

**ಉಪಸಭಾಪತಿ ೧:** ಉಳಿದೆಲ್ಲ ತಿದ್ದುಪಡಿಗಳನ್ನು ಹಿಂದೆಗೆದುಕೊಳ್ಳುವ ಅಪೇಕ್ಷೆಯನ್ನು ವ್ಯಕ್ತಪಡಿಸಲಾಗಿದೆ.

ತಿದ್ದುಪಡಿಗಳನ್ನು, ಅನುಮತಿಯ ಮೇರೆಗೆ, ಹಿಂದಕ್ಕೆ ಪಡೆಯಲಾಯಿತು.

**ಉಪಸಭಾಪತಿ:** ಮೈಸೂರು ಬಗ್ಗೆ ರಾಷ್ಟ್ರಪತಿಯವರು ಜಾರಿಮಾಡಿರುವ ಆದೇಶ ಈಗ ಒಪ್ಪಿಗೆಯಾಗಿರುವ ಈ ತಿದ್ದುಪಡಿಗಳಷ್ಟರ ಮಟ್ಟಿಗೆ ಮಾರ್ಪಾಡಾಗಿರುತ್ತದೆ.

ಅನಂತರ ಈಗ ಪಂಜಾಬ್ ಆದೇಶ?

**ಡಾ. ಅಂಬೇಡ್ಕರ್:** ಇಲ್ಲ ಸರ್, ಇನ್ನು ಸ್ವಲ್ಪ ಕಾಲ ಪಂಜಾಬ್ ಆದೇಶವನ್ನು ಹಾಗೆಯೆ ಇಡಬೇಕಾಗುತ್ತದೆ. ನಾವು ಈಗ ಪಿ.ಇ.ಪಿ.ಎಸ್.ಯು. ಆದೇಶವನ್ನು ಪರಿಗಣಿಸಬಹುದಾಗಿದೆ.

## ಪಿ.ಇ.ಪಿ.ಎಸ್.ಯು. ಆದೇಶ

**ಡಾ. ಅಂಬೇಡ್ಕರ್:** ಸಮಗ್ರ ಪಟ್ಟಿಯಲ್ಲಿ ಸರ್ದಾರ್ ಸೋಚೇತ್ ಸಿಂಗ್ ಅವರು ಸೂಚಿಸಿರುವ ತಿದ್ದುಪಡಿ ೧, ಭಾಗಗಳು ೨ ಮತ್ತು ೩ ಇವುಗಳನ್ನು ನಾನು ಅಂಗೀಕರಿಸುತ್ತೇನೆ. ಹಾಗೆಯೆ, ಸರ್ದಾರ್ ಮನ್ ಅವರಿಂದ ತಿದ್ದುಪಡಿಯಾಗಿರುವಂತೆ ಪೂರಕ ಪಟ್ಟಿ ೩ ರಲ್ಲಿ ತಿದ್ದುಪಡಿ (1) ಮತ್ತು (2) ಎಂಬುದಾಗಿ ಸರ್ದಾರ್ ರಣಜಿತ್ ಸಿಂಗ್ ಅವರಿಂದ ತಿದ್ದುಪಡಿ ಸೂಚನೆಗೊಳಗಾಗಿರುವ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ.

**ಉಪಸಭಾಪತಿ:** ಇದನ್ನು ಒಂದು ಕ್ರಮದಲ್ಲಿ ತೆಗೆದುಕೊಂಡು ಮೊದಲಿಗೆ ನಾವು ಸಮಗ್ರ ಪಟ್ಟಿಯನ್ನು ಮುಗಿಸೋಣ.

**ಡಾ. ಅಂಬೇಡ್ಕರ್:** ಸರಿ, ಹಾಗೆಯೆ ಆಗಲಿ, ಸರ್ದಾರ್ ಸೊಚೇತ್ ಸಿಂಗ್ ಮತ್ತು ಇತರರು ಭಾಗ ೨ ಮತ್ತು ೩ ರಲ್ಲಿ ಸೂಚಿಸಿರುವ ತಿದ್ದುಪಡಿ ಸಂಖ್ಯೆ ೧ಕ್ಕೆ ನನ್ನ ಒಪ್ಪಿಗೆಯಿದೆ.

**ಉಪಸಭಾಪತಿ:** ವಿಷಯ ಏನೆಂದರೆ:

[ಗೊತ್ತುವಳಿಯ ಪಾಠಕ್ಕಾಗಿ ನೋಡಿ: ಪರಿಶಿಷ್ಟ XXXIII, ಅನುಬಂಧ 1 ರಲ್ಲಿ ಅಚ್ಚಾಗಿರುವಂತೆ ಸಮಗ್ರ ಪಟ್ಟಿ, ತಿದ್ದುಪಡಿ ಸಂಖ್ಯೆ ೧, ಭಾಗಗಳು ೨ ಮತ್ತು ೩]

**ಡಾ. ಅಂಬೇಡ್ಕರ್:** ಸರ್ದಾರ್ ಮನ್ ಅವರಿಂದ ಪೂರಕ ಪಟ್ಟಿ ೩ ರಲ್ಲಿನ ಭಾಗ ೧ ಮತ್ತು ೨ ರಲ್ಲಿ ಮಾಡಲಾಗಿರುವ ತಿದ್ದುಪಡಿ ೧ ಎಂಬುದಾಗಿರುವ ಸರ್ದಾರ್ ರಣಜಿತ್ ಸಿಂಗ್ ಅವರ ಪೂರಕ ಪಟ್ಟಿ ೨ ರ ಸಂಖ್ಯೆ ೧ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ.

ಹಾಗಾಗಿ ಪೂರಕ ಪಟ್ಟಿ ೩ ರಲ್ಲಿರುವ ತಿದ್ದುಪಡಿಯನ್ನು ಮೊದಲಿಗೆ ಹಾಕಿಕೊಳ್ಳಬಹುದು.

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

**ಉಪಸಭಾಪತಿ:** ಪಿ.ಇ.ಪಿ.ಎಸ್.ಯು.ಗೆ ಸಂಬಂಧಪಟ್ಟಂತೆ ರಾಷ್ಟ್ರಪತಿಯವರ ಆದೇಶ ಈಗ ಅಂಗೀಕರಿಸಲಾಗಿರುವ ತಿದ್ದುಪಡಿಗಳ ಅನ್ವಯದ ಮಟ್ಟಿಗೆ ಮಾರ್ಪಡಾಗಿರುತ್ತದೆ.

## ರಾಜಸ್ಥಾನ ಆದೇಶ

**ಡಾ. ಅಂಬೇಡ್ಕರ್:** ಪೂರಕ ಪಟ್ಟಿ ೪ ರಲ್ಲಿ ಶ್ರೀ ಘುಲೆ ಅವರು ಸೂಚಿಸಿರುವ ತಿದ್ದುಪಡಿ ೧ ರನ್ವಯ ಮಾರ್ಪಾಡಾಗಿರುವಂತೆ ಸಮಗ್ರ ಪಟ್ಟಿಯಲ್ಲಿ ಶ್ರೀ ಆರ್.ಸಿ. ಉಪಾಧ್ಯಾಯ ಅವರ ಹೆಸರಿನಲ್ಲಿರುವ ತಿದ್ದುಪಡಿ ಸಂ.೧, ಭಾಗ ೧ ರಿಂದ ೫ ಇದನ್ನು ನಾನು ಅಂಗೀಕರಿಸುತ್ತೇನೆ.

**ಉಪಸಭಾಪತಿ:** ವಿಷಯ ಏನೆಂದರೆ:

[ಗೊತ್ತುವಳಿಯ ಪಾಠಕ್ಕಾಗಿ ನೋಡಿ: ಪೂರಕ ಪಟ್ಟಿ ೪ ರಲ್ಲಿ ಶ್ರೀ ಘುಲೆ ಅವರಿಂದ ಸೂಚಿತವಾಗಿರುವ ತಿದ್ದುಪಡಿ ಸಂ.೧]

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

***ಡಾ. ಅಂಬೇಡ್ಕರ್:** ಶ್ರೀ ಆರ್.ಸಿ. ಉಪಾಧ್ಯಾಯ ಮತ್ತು ಇತರರು ಸೂಚಿಸಿರುವ ಸಮಗ್ರ ಪಟ್ಟಿಯ ಪುಟ ೨ ರಿಂದ ೫ ರವರೆಗಿರುವ ಭಾಗ ೧ ರಿಂದ ೧೯ ರವರೆಗೆ ಇರುವ ತಿದ್ದುಪಡಿಗಳನ್ನು ನಾನು ಅಂಗೀಕರಿಸುತ್ತೇನೆ.

**ಉಪಸಭಾಪತಿ:** ವಿಷಯ ಏನೆಂದರೆ:

[ಗೊತ್ತುವಳಿಯ ಪಾಠಕ್ಕಾಗಿ ನೋಡಿ: ಪರಿಶಿಷ್ಟ XXXIII, ಅನುಬಂಧ 1 ರಲ್ಲಿ ಅಚ್ಚಾಗಿರುವಂತೆ ಸಮಗ್ರ ಪಟ್ಟಿಯ ಭಾಗ ೧ರಿಂದ ೧೯ ವರೆಗ, ತಿದ್ದುಪಡಿ ೩]

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

**ಡಾ.ಅಂಬೇಡ್ಕರ್:** ನನ್ನ ಹೆಸರಿನಲ್ಲಿರುವ ಪೂರಕ ಪಟ್ಟಿ ೪ ರಲ್ಲಿರುವ ತಿದ್ದುಪಡಿ ಸಂಖ್ಯೆ ೨ ರನ್ವಯ ಮಾರ್ಪಾಡಾಗಿರುವಂತೆ ಪೂರಕ ಪಟ್ಟಿ ೨ ರಲ್ಲಿರುವ ತಿದ್ದುಪಡಿ ಸಂಖ್ಯೆ ೧ ಮತ್ತು ಪೂರಕ ಪಟ್ಟಿ ೨ ರಲ್ಲಿರುವ ತಿದ್ದುಪಡಿ ಸಂಖ್ಯೆ ೨, ಇವುಗಳನ್ನು ಒಪ್ಪಬಹುದಾಗಿದೆ.

****ಡಾ. ಅಂಬೇಡ್ಕರ್:** ಶ್ರೀ ಆರ್. ಸಿ ಉಪಾಧ್ಯಾಯ ಅವರ ಪೂರಕ ಪಟ್ಟಿ ಸಂಖ್ಯೆ ೫ ರಲ್ಲಿರುವ ಒಂದರಿಂದ ಮೂರರವರೆಗಿನ ತಿದ್ದುಪಡಿಗಳನ್ನು ನಾನು ಒಪ್ಪುತ್ತೇನೆ.

---

* ಪಿ.ಡಿ. ನಂ ೧೩, ಭಾಗ II, ಜೂನ್ ೯, ೧೯೫೧, ಪು. ೧೦೫೭೪

** ಪಿ.ಡಿ. ಖಂಡ ೧೩, ಭಾಗ II, ಜೂನ್,೮, ೧೯೫೧, ಪುಟ ೧೦೫೯೭-೬೦೭

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

ಉಳಿದ ತಿದ್ದುಪಡಿಗಳನ್ನು ಸದನದ ಅಪ್ಪಣೆಯ ಮೇರೆಗೆ ಹಿಂದೆಗೆದುಕೊಳ್ಳಲಾಯಿತು.

## ಸೌರಾಷ್ಟ್ರ ಆದೇಶ

**ಡಾ. ಅಂಬೇಡ್ಕರ್:** ಶ್ರೀ ಸಿ.ಸಿ. ಶಾಹ್ ಮತ್ತು ಶ್ರೀ ಹಾಥಿ ಅವರ ಒಂದನೆಯ ಪಟ್ಟಿಯ ಒಂದು ಮತ್ತು ಎರಡನೆ ಸಂಖ್ಯೆಯ ತಿದ್ದುಪಡಿಗಳನ್ನು ನಾನು ಒಪ್ಪಿದ್ದೇನೆ.

**ಉಪಾಧ್ಯಕ್ಷರು:** ಈ ತಿದ್ದುಪಡಿಗಳ ಮಟ್ಟಿಗೆ ರಾಷ್ಟ್ರಪತಿಗಳ ಸೌರಾಷ್ಟ್ರ ಆದೇಶ ಮಾರ್ಪಾಡಾಗಿರುತ್ತದೆ.

ಮತ್ತೆ ಯಾವುದೂ ತಿದ್ದುಪಡಿಗಳಿಲ್ಲ.

**ಡಾ. ಅಂಬೇಡ್ಕರ್:** ತಿರುವಾಂಕೂರು ಮತ್ತು ಕೊಚಿನ್ ಆದೇಶಕ್ಕೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿಯಿಲ್ಲ. ಒಂದು ಒಪ್ಪೋಲೆಯನ್ನು ಜಾರಿಮಾಡಿದೆ.

**ಶ್ರೀ ಆರ್. ವೇಲಾಯುಧನ್ (ತಿರುವಾಂಕೂರು–ಕೊಚಿನ್):** ಆದರೆ ಅಲ್ಲಿ ಹೆಚ್ಚಿನ ಕೆಲವು ದೋಷಗಳಿದ್ದವು.

**ಶ್ರೀ ಲಕ್ಷ್ಮಣನ್ (ತಿರುವಾಂಕೂರು–ಕೊಚಿನ್):** ಅವುಗಳ ವಿಚಾರವಾಗಿ ಒಪ್ಪೋಲೆಯಲ್ಲಿ ಎಲ್ಲ ಗಮನ ಹರಿಸಲಾಗಿದೆ.

## ಭಾಗ 'ಸಿ' ರಾಜ್ಯಗಳ ಆದೇಶ: ದೆಹಲಿ

**ಡಾ. ಅಂಬೇಡ್ಕರ್ :** ಸಮಗ್ರ ಪಟ್ಟಿಯಲ್ಲಿರುವ (ಶ್ರೀ ಕೇಶವರಾವ್ ಮತ್ತು ಇತರರ ಹೆಸರಿನಲ್ಲಿರುವ) ತಿದ್ದುಪಡಿ ಸಂಖ್ಯೆ ೨ ನ್ನು ನಾನು ಒಪ್ಪಿದ್ದೇನೆ.

ಗೊತ್ತುವಳಿಯನ್ನು ಅಳವಡಿಸಲಾಯಿತು.

**ಉಪಾಧ್ಯಕ್ಷರು:** ಬೇರೆ ಯಾವುದೂ ತಿದ್ದುಪಡಿಗಳಿಲ್ಲವೆಂದು ಭಾವಿಸುತ್ತೇನೆ. ಭಾಗ "ಸಿ' ಗೆ ಸೇರಿದ ರಾಜ್ಯವನ್ನು ಕುರಿತಂತೆ ರಾಷ್ಟ್ರಪತಿಗಳ ಆದೇಶ ಈಗಷ್ಟೆ ಅಳವಡಿಸಲಾಗಿರುವ ತಿದ್ದುಪಡಿಗಳಮಟ್ಟಿಗೆ ಮಾರ್ಪಾಡಾಗಿರುತ್ತದೆ. ಡಾ.ಅಂಬೇಡ್ಕರ್ ಮತ್ತು ಇತರರು ಸೂಚಿಸಿರಬಹುದಾದ ತಿದ್ದುಪಡಿಗಳಿದ್ದಲ್ಲಿ ಅವುಗಳನ್ನು ಸದನದ ಅನುಮತಿಯ ಮೇರೆಗೆ ಹಿಂತೆಗೆದುಕೊಳ್ಳಲಾಗಿದೆ.

ಅನುಮತಿಯ ಮೇರೆಗೆ ಇತರ ತಿದ್ದುಪಡಿಗಳನ್ನು ಹಿಂದೆಗೆದುಕೊಳ್ಳಲಾಯಿತು.

**ಡಾ. ಅಂಬೇಡ್ಕರ್:** ಈಗ ಕೇವಲ ಎರಡು ಪ್ರದೇಶಗಳು, ಅಂದರೆ ಉತ್ತರಪ್ರದೇಶ ಮತ್ತು ಪಂಜಾಬ್ ಮಾತ್ರ ಉಳಿದಿದೆ. ಈಗಷ್ಟೆ ಕೆಲವು ತಿದ್ದುಪಡಿಗಳು ಬಂದಿವೆ ಆದರೆ ಮನಸ್ಸುಕೊಟ್ಟು ಅವುಗಳತ್ತ ಗಮನಹರಿಸಲು ನನಗೆ ಸಾಧ್ಯವಾಗಿಲ್ಲ. ಒಂದು ವೇಳೆ ಸಂಬಂಧಪಟ್ಟವರು ಮೂಲವ್ಯವಸ್ಥೆಯ ಜೊತೆಯಲ್ಲಿ ಹೋಗುವುದಾದರೆ ನಾನು ಮುಂದಕ್ಕೆ ಹೋಗಲು ಇಷ್ಟಪಡುತ್ತೇನೆ. ಆದರೆ ಕೆಲವು ಬದಲಾವಣೆಗಳನ್ನು ಸೂಚಿಸಲಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಈ ವಿಷಯವಾಗಿ ಏನು ಅಪೇಕ್ಷೆ ಪಡುತ್ತಿದ್ದಾರೆಂಬುದು ಸ್ಪಷ್ಟವಾಗಿ ನನ್ನ ತಿಳಿವಳಿಕೆಗೆ ಬರಬೇಕು. ನನಗೆ ವೈಯಕ್ತಿಕವಾಗಿ ಅನಿಸುವಂತೆ ಮಧ್ಯಾಹ್ನ ಈ ಎರಡೂ ಪ್ರಾಂತಗಳ ಬಗ್ಗೆ ಚರ್ಚೆ ಮಾಡಲು ಅರ್ಧಗಂಟೆ ಸಾಕು.

**ಶ್ರೀ ಶಿವಚರಣ ಲಾಲ್:** ಆದರೆ ಆ ಹೊತ್ತಿಗೆ ಅಗತ್ಯವಾದ ಕನಿಷ್ಠ ಸಂಖ್ಯೆಯ ಸದಸ್ಯರು ಅಥವಾ ಕೋರಂ ಇಲ್ಲದೆ ಇರಬಹುದು. ಇತರ ರಾಜ್ಯಗಳಿಂದ ಬಂದಿರುವ ಸದಸ್ಯರು ಗೈರು ಹಾಜರಾಗಿರಬಹುದು.

**ಉಪಾಧ್ಯಕ್ಷರು:** ಉತ್ತರ ಪ್ರದೇಶ ಮತ್ತು ಪಂಜಾಬ್ ಕುರಿತಂತೆ ಕೇವಲ ಇನ್ನೂ ಎರೆಡು ಆದೇಶಗಳು ಮಾತ್ರ ಉಳಿದಿವೆ. ಸದನದಲ್ಲಿ ಐಕಮತ್ಯವಿದ್ದರೆ ಇನ್ನೂ ಹೆಚ್ಚು ಕಾಲ ಚರ್ಚಿಸಬಹುದು. ಏಕೆಂದರೆ ಯಾರಾದರೂ ಮಾತನಾಡಲು ಅಪೇಕ್ಷಿಪಟ್ಟರೆ ಅಂಥವರನ್ನು ನಾನು ತಡೆಯುತ್ತಿದ್ದೇನೆಂಬ ಅಭಿಪ್ರಾಯ ಮೂಡಬಾರದು.

**ಶ್ರೀ ಅಮೋಲಕ್‌ಚಂದ್:** ಮಧ್ಯಾಹ್ನ ೪.೩೦ ರ ನಂತರ ಸದಸ್ಯರು ಬರದೆಹೋಗಬಹುದೆಂಬ ಕಾರಣವಷ್ಟೇ ಇದ್ದರೆ ನಾವು ಸಭೆಯನ್ನು ಅರ್ಧಗಂಟೆಕಾಲ ಮುಂದೂಡಿ ಮತ್ತೆ ಪ್ರಾರಂಭಿಸಬಹುದಲ್ಲವೆ?

**ಶ್ರೀ ಟಿ.ಟಿ. ಕೃಷ್ಣಮಾಚಾರಿ (ಮದ್ರಾಸ್):** ಇನ್ನೇನೂ ಕಲಾಪ ಇಲ್ಲವೆ?

**ಉಪಾಧ್ಯಕ್ಷರು:** ಈ ಎರಡು ಆದೇಶವನ್ನು ಜಾರಿಗೆ ಕೊಡುವುದು ಬಿಟ್ಟರೆ ಬೇರೆ ಯಾವ ಕಲಾಪವೂ ಇಲ್ಲ.

ಸದನವನ್ನು ೪.೩೦ ಗಂಟೆವರೆಗೆ ಮುಂದೂಡಲಾಯಿತು.

ಸದನ ಪುನಃ ನಾಲ್ಕೂವರೆ ಗಂಟೆಗೆ ಸಭೆಸೇರಿತು

**[ಸಭಾಧ್ಯಕ್ಷ ಸ್ಥಾನವನ್ನು ಸ್ಪೀಕರ್ ಅವರು]**

## ಪಂಜಾಬ್ ಆದೇಶ

**ಸಭಾಧ್ಯಕ್ಷರು:** ಈಗ ನಾವು ಪಂಜಾಬ್ ಆದೇಶದೊಂದಿಗೆ ಮುಂದುವರಿಯೋಣ. ಒಪ್ಪಿಗೆಯಾದ ತಿದ್ದುಪಡಿಗಳ ಸಂಖ್ಯೆ ಎಷ್ಟೆಂದು ತಿಳಿಸುತ್ತೀರಾ? ಬೆಳಗ್ಗೆ ಅನುಸರಿಸಿದ ಕ್ರಮವನ್ನೇ ಈಗಲೂ ಅನುಸರಿಸೋಣ.

**ಡಾ.ಅಂಬೇಡ್ಕರ್:** ಒಪ್ಪಿಗೆಯಾದ ತಿದ್ದುಪಡಿಗಳು ಹೀಗಿವೆ:

**ಪಟ್ಟಿ ೭**–ಶ್ರೀ ಟಿ.ಎಲ್. ಸೋಂಧಿ, ಚೌಧರಿ ರಣಬೀರ್ ಸಿಂಗ್ ಮತ್ತು ಇತರರಿಗೆ ಸಂಬಂಧಪಟ್ಟ ತಿದ್ದುಪಡಿ ಸಂಖ್ಯೆ ೨, ಭಾಗ ೫, ಉಪಭಾಗ (i) ಮತ್ತು ಉಪಭಾಗ (ii)

**ಪಟ್ಟಿ ೯**– ಪ್ರೊ. ಯಶವಂತರಾಯ್ ಅವರಿಗೆ ಸಂಬಂಧಿಸಿದ ತಿದ್ದುಪಡಿ ಸಂಖ್ಯೆ ೬, ಭಾಗ ೨ ಮತ್ತು ೩.

**ಪಟ್ಟಿ ೧೦.**– ನಾನು ಪ್ರಸ್ತಾಪಿಸಬಯಸುವ ಮೊದಲನೇ ತಿದ್ದುಪಡಿ ಮಾತ್ರ. ನಾನು ಎರಡನೇ ಮತ್ತು ಮೂರನೇ ತಿದ್ದುಪಡಿಗಳ ಕುರಿತು ಇಲ್ಲಿ ಚರ್ಚೆಗೆ ಎತ್ತಿಕೊಳ್ಳುತ್ತಿಲ್ಲ. ಏಕೆಂದರೆ ಇವುಗಳನ್ನು ಪಟ್ಟಿ ೭ ರ ತಿದ್ದುಪಡಿ ಸಂಖ್ಯೆ ೫ ಹಾಗೂ ಪಟ್ಟಿ ೧೨ ರ ತಿದ್ದುಪಡಿ ಸಂಖ್ಯೆ ೩(೬) ರಲ್ಲಿ ಸೇರ್ಪಡೆಮಾಡಲಾಗಿದೆ.

**ಪಟ್ಟಿ ೧೨**–ಶ್ರೀ ಬಿ.ಎಲ್. ಸೋಂಧಿ, ಚೌಧರಿ ರಣಬೀರ್‌ಸಿಂಗ್ ಮತ್ತು ಇತರರಿಗೆ ಸಂಬಂಧಪಟ್ಟ ತಿದ್ದುಪಡಿ ಸಂಖ್ಯೆ ೧, ಭಾಗ ೧ ಮತ್ತು ೨.

ಸರ್ದಾರ್ ಭೂಪೇಂದರ್‌ಸಿಂಗ್ ಮೂನ್ ಮತ್ತು ಇತರರ ತಿದ್ದುಪಡಿ ಸಂಖ್ಯೆ ೨. ಚೌಧರಿ ರಣಬೀರಸಿಂಗ್ ಮತ್ತು ಇತರರ ಪಟ್ಟಿ ಸಂಖ್ಯೆ ೧೩ ರಲ್ಲಿ ತಿದ್ದುಪಡಿಯನ್ನು ಮಾರ್ಪಾಡುಮಾಡಲಾಗಿದೆ. ಅದರಂತೆ ಪರಿಗಣಿಸಬಹುದು.

ಶ್ರೀ ಸೋಂಧಿ, ಚೌಧರಿ ರಣಬೀರ್‌ಸಿಂಗ್ ಮತ್ತು ಇತರರಿಗೆ ಸಂಬಂಧಪಟ್ಟ ತಿದ್ದುಪಡಿ ಸಂಖ್ಯೆ ೩, ಭಾಗಗಳು ೪,೫ ಮತ್ತು ೬ (ಎರಡನೇ ಭಾಗ). ಇದರ ಭಾಗ (೬)

ರ ಎರಡನೇ ಭಾಗದಲ್ಲಿ ಈ ಕೆಳಗಿನಂತೆ ಸ್ವಲ್ಪ ಬದಲಾವಣೆಯನ್ನು ಮಾಡಲಾಗಿದೆ:
೬. ಏನೆಂದರೆ ಪುಟ ೬ ರ ಪಟ್ಟಿ Bಯಲ್ಲಿ – "ಲೂಧಿಯಾನಾಸದರ್,' "ಜಾಗ್ರಾವ್' ಮತ್ತು "ರಾಯ್‌ಕೋಟ್' ಮೊದಲಾಗಿ ಕಲಮಿನಲ್ಲಿ ಬರುವ ಈ ವಿಧಾನಸಭಾ ಕ್ಷೇತ್ರಗಳು ಹಾಗೂ ಕಲಮು ೨,೩ ಮತ್ತು ೪ ಇವುಗಳ ಮುಂದಿರುವ ಎಲ್ಲ ವಿವರಗಳನ್ನು ಈ ಕೆಳಗಿನಂತೆ ಬದಲಾಯಿಸತಕ್ಕದ್ದು.

| ೧ | ೨ | ೩ | ೪ |
|---|---|---|---|
| ಜಾಗ್ರಾಂವ್ ... | ಜಾಗ್ರಾಂವ್ ತಹಸೀಲ್... ... | ೨ | ೧ |
| ಲೂಧಿಯಾನಾ ಸದರ್ | ನೂರ್‌ಪುರ್ ಬೇತ್, ಬದ್ವಾಲ್, ದಾಂದ್ರಾ, ಲಾಲ್ತನ್, ಕಲಾನ್, ಗಿಲ್ ಹಾಗೂ | ೧ | ... |
| | ಲೂಧಿಯದಾ ಸದರ್ ಠಾಣೆಗೆ ಸೇರಿರುವ ಥಾಂದಾರಿ ಕಲಾನ್ ಜೇಲ್‌ಗಳು, ದೆಲ್‌ಹೋನ್ ಠಾಣೆಗೆ ಸೇರಿರುವ ಶಂಕರ್ ಮತ್ತು ಹನ್ಸ್ ಬೇಲ್‌ಗಳು ಹಾಗೂ ಲೂಧಿಯಾನಾ ತೆಹಸಿಲ್‌ಗೆ ಸೇರಿರುವ ದಾಖಾ ಠಾಣೆಯ ದಾಖಾ ಜೇಲ್. ದೆಲ್ಹೋನ್ ರಾಯ್ ಕೋಟ್ ಠಾಣೆಗೆ ಸೇರಿರುವ ಪಖೋವಾಲ್ ಮತ್ತು ಆಂದ್ಲು ಜೇಲ್‌ಗಳು | ೧ | ... |
| | ಹಾಗೂ ಲೂಧಿಯಾನಾ ತೆಹಸೀಲ್‌ಗೆ ಸೇರಿರುವ ದೆಲ್‌ಹೋನ್ ಠಾಣೆ (ಶಂಕರ್ ಮತ್ತು ಹನ್ಸ್ ಬೇಲ್‌ಗಳನ್ನು ಹೊರತುಪಡಿಸಿ) | | |

ಠಾಕೂರ್ ದಾಸ್ ಭಾರ್ಗವ ಮತ್ತು ಚೌಧರಿ ರಣಬೀರ್‌ಸಿಂಗ್ ಅವರಿಗೆ ಸಂಬಂಧಪಟ್ಟ ತಿದ್ದುಪಡಿ ಸಂಖ್ಯೆ ೪, ಭಾಗ ೧ ಮತ್ತು ೨.

ಸರ್, ಈ ತಿದ್ದುಪಡಿಗಳಿಗೆ ಒಪ್ಪಿಗೆ ನೀಡಲು ನಾನು ಸಿದ್ಧನಾಗಿದ್ದೇನೆ.

**ಅಧ್ಯಕ್ಷರು:** ಬೇರೆ ಇನ್ನಾವ ಮಾನ್ಯ ಸದಸ್ಯರೂ ತಮ್ಮ ಪ್ರಸ್ತಾಪವನ್ನು ಸದನ ಮುಂದಿಡಲು ಬಯಸುತ್ತಿಲ್ಲವೆಂದು ಭಾವಿಸಲೆ ?

ಸರಿ, ಹಾಗಾದರೆ ಈ ತಿದ್ದುಪಡಿಗಳನ್ನು ವಿಲೇವಾರಿ ಮಾಡಲು ಮೊದಲು ಕೈಗೆತ್ತಿಕೊಳ್ಳೋಣ ವಿಷಯ ಏನೆಂದರೆ:

**ಪಟ್ಟಿ ೭–** ಶ್ರೀ ಬಿ.ಎಲ್. ಸೋಂಧಿ, ಚೌಧುರಿ ರಣಬೀರ್ ಸಿಂಗ್ ಮತ್ತು ಇತರರು ಮುಂದಿಟ್ಟಿರುವ ತಿದ್ದುಪಡಿ ಸಂಖ್ಯೆ ೨, ಭಾಗ ೫, ಉಪಭಾಗ (i) ಮತ್ತು ಉಪಭಾಗ (ii).

**ಪಟ್ಟಿ ೯–**ಪ್ರೊ. ಯಶವಂತರಾಯ್ ಅವರ ತಿದ್ದುಪಡಿ ಸಂಖ್ಯೆ ೬, ಭಾಗ ೨ ಮತ್ತು ೩.

**ಪಟ್ಟಿ ೧೦–**ಪಟ್ಟಿಯಲ್ಲಿರುವ ಕೇವಲ ಮೊದಲನೇ ತಿದ್ದುಪಡಿ.

**ಪಟ್ಟಿ ೧೨–**ಶ್ರೀ ಬಿ.ಎಲ್. ಸೋಂಧಿ, ಚೌಧರಿ ರಣಬೀರ್‌ಸಿಂಗ್ ಮತ್ತು ಇತರರ ತಿದ್ದುಪಡಿ ಸಂಖ್ಯೆ ೧, ಭಾಗ ೧ ಮತ್ತು ೨.

ಚೌಧರಿ ರಣಬೀರ್‌ಸಿಂಗ್ ಮತ್ತು ಇತರರ ಪಟ್ಟಿ ಸಂಖ್ಯೆ ೧೩ ರಲ್ಲಿ ಮಾರ್ಪಡಿಸಿರುವ ತಿದ್ದುಪಡಿಗನುಗುಣವಾಗಿ ಸರ್ದಾರ್ ಭೂಪೇಂದರ್ ಸಿಂಗ್ ಮಾನ್ ಮತ್ತು ಇತರರ ತಿದ್ದುಪಡಿಸಂಖ್ಯೆ ೨

ಶ್ರೀ ಸೋಂಧಿ ಮತ್ತು ಇತರರು ಮುಂದಿಟ್ಟಿರುವ ತಿದ್ದುಪಡಿ ಸಂಖ್ಯೆ ೩, ಭಾಗಗಳು ೪, ೫ ಮತ್ತು ೬ (ಎರಡನೇ ಭಾಗ) ಭಾಗ ೬ ರ ಎರಡನೇ ಭಾಗಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡಂತೆ ಅಲ್ಪಸ್ವಲ್ಪ ಬದಲಾವಣೆಯೆಂದರೆ:

**೬.** ಪುಟ ೬ ರಲ್ಲಿ ಪಟ್ಟಿ "ಬಿ' ಯಲ್ಲಿ – ಒಂದನೇ ಕಲಮಿನಲ್ಲಿರುವ ವಿಧಾನಸಭೆ ಕ್ಷೇತ್ರಗಳು – "ಲೂಧಿಯಾನಾ ಸದರ್' "ಜಾಗ್ರಾಂವ್' ಹಾಗೂ "ರಾಯಕೋಲ್' ಗೆ ಸಂಬಂಧಿಸಿದಂತೆ ಹಾಗೂ ೨, ೩ ಮತ್ತು ೪ ನೇ ಕಲಮುಗಳಲ್ಲಿ ಅವುಗಳನ್ನು ಕುರಿತಂತೆ ಇರುವ ನಮೂದುಗಳನ್ನು ಈ ಕೆಳಕಂಡಂತೆ ಬದಲಾಯಿಸತಕ್ಕದ್ದು.

| ೧ | ೨ | ೩ | ೪ |
|---|---|---|---|
| ಜಾಗ್ರಾಂವ್ ... | ಜಾಗ್ರಾಂವ್ ತಹಸೀಲ್... ... | ೨ | ೧ |
| ಲೂಧಿಯಾನಾ ಸದರ್ | ನೂರ್‌ಪುರ್ ಬೇತ್, ಬದ್ವಾಲ್, ದಾಂದ್ರಾ, ಲಾಲ್ತನ್, ಕಲಾನ್, ಗಿಲ್ ಹಾಗೂ | ೧ | ... |
| | ಲೂಧಿಯದಾ ಸದರ್ ಠಾಣೆಗೆ ಸೇರಿರುವ ಧಾಂದಾರಿ ಕಲಾನ್ ಜೇಲ್‌ಗಳು, ದೆಲ್‌ಹೋನ್ ಠಾಣೆಗೆ ಸೇರಿರುವ ಶಂಕರ್ ಮತ್ತು ಹನ್ಸ್ ಬೇಲ್‌ಗಳು ಹಾಗೂ ಲೂಧಿಯಾನಾ ತೆಹಸಿಲ್‌ಗೆ ಸೇರಿರುವ ದಾಖಾ ಠಾಣೆಯ ದಾಖಾ ಜೇಲ್ ದೆಲ್ಹೋನ್ ರಾಯ್ ಕೋಟ್ ಠಾಣೆಗೆ ಸೇರಿರುವ ಪಖೋವಾಲ್ ಮತ್ತು ಆಂದ್ಲು ಜೇಲ್‌ಗಳು | ೧ | ... |
| | ಹಾಗೂ ಲೂಧಿಯಾನಾ ತೆಹಸೀಲ್‌ಗೆ ಸೇರಿರುವ ದೆಲ್‌ಹೋನ್ ಠಾಣೆ (ಶಂಕರ್ ಮತ್ತು ಹನ್ಸ್ ಬೇಲ್‌ಗಳನ್ನು ಹೊರತುಪಡಿಸಿ) | | |

ಪರಿಶಿಷ್ಟ XXXIII, ಸೇರ್ಪಡೆ ೩,೪ ರಲ್ಲಿ ಅಚ್ಚಾಗಿದೆ.

ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

**ಅಧ್ಯಕ್ಷರು:** ಈ ಮಟ್ಟಿಗೆ ರಾಷ್ಟ್ರಪತಿಯವರ ಆದೇಶವನ್ನು ಮಾರ್ಪಡಿಸಲಾಗಿದೆ.

ಈಗ ಪಟ್ಟಿ ಸಂಖ್ಯೆ ೧೧ರಲ್ಲಿರುವ ೨ ಮತ್ತು ೩ ನೇ ತಿದ್ದುಪಡಿಗಳನ್ನು ಹಾಗೂ ಈಗ ಪ್ರಸ್ತಾಪಿಸಲಾಗಿರುವ ಇತರ ಕೆಲವು ಗೊತ್ತುವಳಿಗಳನ್ನು ಹಿಂದೆಗೆದುಕೊಳ್ಳಲು ಅನುಮತಿ ಕೇಳಲಾಗಿದೆ.

ಅನುಮತಿಯ ಮೇರೆಗೆ, ಈ ತಿದ್ದುಪಡಿಗಳನ್ನು ಹಿಂದೆಗೆದುಕೊಳ್ಳಲಾಗಿದೆ.

**ಚೌಧರಿ ರಣಬೀರ್ ಸಿಂಗ್:** ಇಲ್ಲೊಂದು ಬರವಣಿಗೆ ತಪ್ಪಿದೆ, ಸರ್.

**ಅಧ್ಯಕ್ಷರು:** ನಾನು ಈಗಾಗಲೆ ಸ್ಪಷ್ಟಪಡಿಸಿರುವಂತೆ, ಎಲ್ಲ ಬಗೆಯ ತಾಂತ್ರಿಕ ದೋಷಗಳನ್ನು ಹಾಗೂ ತಪ್ಪು ಎಂದು ಕಂಡಂತಾಗುವ ಅಂಶಗಳನ್ನು ಮಾನ್ಯ ಕಾನೂನು ಮಂತ್ರಿಗಳ ಗಮನಕ್ಕೆ ತನ್ನಿ ಹಾಗೂ ಅವುಗಳನ್ನು ತತ್ಪರಿಣಾಮವಾದ ತಿದ್ದುಪಡಿಗಳ ರೂಪದಲ್ಲಿ ಪರಿಗಣಿಸಲಾಗುತ್ತದೆ.

ಈಗ ನಾವು ಉತ್ತರ ಪ್ರದೇಶದ ಆದೇಶದ ಕಡೆ ನೋಡೋಣ.

## ಉತ್ತರ ಪ್ರದೇಶದ ಆದೇಶ

**ಡಾ. ಅಂಬೇಡ್ಕರ್:** ಸರ್, ಒಪ್ಪಿಗೆ ತಡೆದಿರುವ ತಿದ್ದುಪಡಿಗಳು ಹೀಗಿವೆ:

**ಪಟ್ಟಿ ೧–** ಪಂಡಿತ ಶಿವಚರಣ ಲಾಲ್ ಅವರ ತಿದ್ದುಪಡಿ ಸಂಖ್ಯೆ ೧

**ಪಟ್ಟಿ ೭–** ಶ್ರೀ ಸಿ.ಡಿ. ಪಾಂಡೆ ಅವರ ತಿದ್ದುಪಡಿ ಸಂಖ್ಯೆ ೨, ಭಾಗಗಳು ೧,೨,೩,೪,೫ ಮತ್ತು ೬. ಬಸ್ತಿ ಜಿಲ್ಲೆ (ಮಧ್ಯಪೂರ್ವ) ಹಾಗೂ ಹಸನಪುರ ಪರಗಣ" ಎಂಬುದರ ಜಾಗದಲ್ಲಿ" ಬಸ್ತಿ ಜಿಲ್ಲೆ (ಮಧ್ಯಪೂರ್ವ) ಹಾಗೂ ಗೋರಖಪುರ ಜಿಲ್ಲೆ ಪೂರ್ವ ಎಂಬುದಾಗಿ ಒಂದನೇ ಕಲಮಿನಲ್ಲಿ ಮಾರ್ಪಾಡು ಮಾಡಿಕೊಳ್ಳತಕ್ಕದ್ದು.

ಶ್ರೀ ಸತೀಶಚಂದ್ರ ಅವರ ತಿದ್ದುಪಡಿ ಸಂಖ್ಯೆ ೬, ಭಾಗ ೨

ಬಾಬು ಗೋಪಿನಾಥಸಿಂಗ್ ಮತ್ತು ಪಂಡಿತ ಬಾಲಕೃಷ್ಣ ಶರ್ಮಾ ಅವರ ತಿದ್ದುಪಡಿ ಸಂಖ್ಯೆ ೯. ಇದರಲ್ಲಿ ಕಾನಪುರ (ಪೂರ್ವ) ಎಂಬುದರ ಎದುರಿನಲ್ಲಿ ಎರಡನೇ ಕಲಮಿನ ನಮೂದಿನಲ್ಲಿ "ಚಕೇರಿ ವಿಮಾನ ನಿಲ್ದಾಣ" ಎಂಬುದರ ಮುಂದೆ "ಐ.ಎ.ಎಫ್. ಡೊಮೆಸ್ಟಿಕ್ ಕ್ಯಾಂಪ್" ಎಂಬುದಾಗಿ ಸೇರಿಸಿಕೊಳ್ಳತಕ್ಕದ್ದು ಎಂಬ ತಿಳಿವಳಿಕೆಯ ಮೇರೆಗೆ

**ಪಟ್ಟಿ ೮–**ಶ್ರೀ ಕೆ.ಸಿ. ಶರ್ಮ ಅವರ ತಿದ್ದುಪಡಿ ಸಂಖ್ಯೆ ೪ ಭಾಗಗಳು ೧ ಮತ್ತು ೨.

ಶ್ರೀ ಬೇನಿ ಸಿಂಗ್ ಮತ್ತು ಇತರರ ತಿದ್ದುಪಡಿ ಸಂಖ್ಯೆ ೫.

ಶ್ರೀ ಅಮೋಖ್ ಚಂದ್ ಅವರ ತಿದ್ದುಪಡಿ ಸಂಖ್ಯೆ ೭, ಭಾಗಗಳು ೧ ರಿಂದ ೪

ಶ್ರೀ ಬೇನಿಸಿಂಗ್ ಮತ್ತು ಇತರರ ತಿದ್ದುಪಡಿ ಸಂಖ್ಯೆ ೮ ಮತ್ತು ೧೦.

ಶ್ರೀ ಕೆ.ಸಿ. ಶರ್ಮಾ ಅವರ ತಿದ್ದುಪಡಿ ಸಂಖ್ಯೆ ೧೨, ಭಾಗಗಳು ೧ ಮತ್ತು ೨

ಶ್ರೀ ಟಿ.ಎನ್. ಸಿಂಗ್ ಅವರ ತಿದ್ದುಪಡಿ ಸಂಖ್ಯೆ ೧೪.

**ಪಟ್ಟಿ ೯–** ತಿದ್ದುಪಡಿ ಸಂಖ್ಯೆ ೧,೪,೫ ಮತ್ತು ೬.

ನಾನು ಸೂಚಿಸಿರುವ ತಿದ್ದುಪಡಿಗಳು ಸಂಖ್ಯೆ ೨,೭ ಮತ್ತು ೮ ಕೆಳಕಂಡ ಮಾರ್ಪಾಡುಗಳ ಸಹಿತವಾಗಿ :

೧. ಪಟ್ಟಿಯ ೩ ನೇ ಪುಟದಲ್ಲಿ ಗೊತ್ತುವಳಿ ಸಂಖ್ಯೆ ೨ ರಲ್ಲಿ "ಅಲಹಾಬಾದ್ ಜಿಲ್ಲೆ (ಪೂರ್ವ) ಹಾಗೂ ಜಾನ್‌ಪುರ ಜಿಲ್ಲೆ (ಪಶ್ಚಿಮ)" ಎಂಬ ನಮೂದಿನ ಮೂರನೇ ಕಲಮಿನಲ್ಲಿ "ಅಲಹಾಬಾದ್ ಜಿಲ್ಲೆಯ ಪುರಸಭೆ ಮತ್ತು ದಂಡುಗಳನ್ನು ಹೊರತುಪಡಿಸಿ" ಎಂಬೆಡೆಯಲ್ಲಿ "ಅಲಹಾಬಾದಿನ ಜೈಲ್ ತೆಹಸೀಲ್ (ಪುರಸಭೆಯನ್ನು ಹೊರತುಪಡಿಸಿ) ಮತ್ತು ದಂಡು" ಎಂದು ಮಾರ್ಪಡಿಸತಕ್ಕದ್ದು.

೨. ಹಾಗೆಯೆ ಪಟ್ಟಿಯ ೩ ನೇ ಪುಟದಲ್ಲಿರುವ ಗೊತ್ತುವಳಿ ಸಂಖ್ಯೆ ೨ ರಲ್ಲಿ "ಅಲಹಾಬಾದ್ ಜಿಲ್ಲೆ (ಪಶ್ಚಿಮ) ಎಂಬ ನಮೂದಿನ ಅನಂತರ ಈ ಕೆಳಗಿನ ನಮೂದನ್ನು ಸೇರಿಸತಕ್ಕದ್ದು.

| ೧ | ೨ | ೩ |
|---|---|---|
| ಗೋರಖಪುರ ಜಿಲ್ಲೆ (ಮಧ್ಯ) | ಪರಿಶಿಷ್ಟದ (೯೪) ನೇ ನಮೂನೆಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ಗೋರಖಪುರ ಜಿಲ್ಲೆಯ ಫರೆಂಡಾ ತೆಹಸಿಲ್‌ನ ಹವೇಲಿ ಪರಗಣದ ಉಕ್ತ ಪಟವಾರಿ ಸರ್ಕಲ್ಲುಗಳು | ಪರಿಶಿಷ್ಟದ (೯೪) ನೇ ನಮೂನಿನಲ್ಲಿ ನಿರ್ದಿಷ್ಟಪಡಿಸಲಾಗುಂತೆ ಗೋರಖಪುರ ಜಿಲ್ಲೆಯ ಫರೇಂಡಾ ತೆಹಸಿಲ್‌ನ ಹವೇಲಿ ಪರಗಣದ ಉಕ್ತ ಪಟವಾರಿ ಸರ್ಕಲ್ಲುಗಳು ಮತ್ತು ಅರಣ್ಯ ಪ್ರದೇಶಗಳು |

೩. ಅಂತೆಯೆ ಹನ್ನೆರಡನೇ ಪುಟದಲ್ಲಿರುವ ೮ ನೇ ಗೊತ್ತುವಳಿಗೆ ಸಂಬಂಧಿಸಿದಂತೆ, ಉದ್ದೇಶಿತ ಪರಿಶಿಷ್ಟ ಭಾಗದ (೨೮) ಮತ್ತು (೩೯) ನೇ ಸಂಖ್ಯೆಯ ನಮೂದುಗಳಿಗೆ ಬದಲಾಗಿ ಈ ಕೆಳಕಂಡವುಗಳನ್ನು ಸೇರಿಸಿಕೊಳ್ಳತಕ್ಕದ್ದು.

## "ಅಕ್ಬರ್‌ಪುರದ ತೆಹಸಿಲ್‌ನ ಪಟವಾಡಿ ಸರ್ಕಲ್ಲುಗಳು"

(೩೮)

ಸಿಂಘ್‌ಪುರ್ ಸಹೋಲಿ, ನೆವಡಾ ದೇವರಾನಿ, ಚೈತ್‌ಪುರ ಶವಾಲಿ, ಹೀರಾಮನ್ ಶಿವಾಲಿ, ಢಕನ್ ಶಿವಾಲಿ, ಸರ್ರೈಯಾನ್, ಬಾರಿದಾರ್ಯಾವ್, ಬಾಗ್‌ಪುರ, ಸೋಭನ್, ಭಗವತ್, ನೆಹೂಟಾ, ರಾಸ್ತ್‌ಪುರ್, ಕಾಕರ್, ದಾಹಿ, ಬೈರೀಸವಾಯಿ, ಮಾರಗ್, ರಾಮ್‌ಪುರ್, ಶಿವಾಲಿ, ಕಾಂದ್ರಿ, ಭೇವನ್, ನೂನಾರಿ ಬಹಾದೂರ್‌ಪುರ್, ಬಾರಾಗಾಂವ್, ಬರಾನ್‌ಪುರ್ ಕಹಿಂಜಾರಿ ಕಾಶೀಪುರ್ ದೀಪ್‌ಚಂದ್, ಕಾಶೀಪುರ್ ಹೀರಾಮನ್, ಕಾಶೀಪುರ್ ಜಗಮ್ಮನ್‌ಶಾಹ್, ಕಾಶೀಪುರ್ ಭೂರ್‌ಶಾಹ್, ಹಾತಿಕ, ಮಾಂಡಾ, ಕೇಕರ್‌ಮಾವ್, ನೌಬಸ್ತಾ, ಭೌಪುರ್, ಪಿತ್ರಾಪುರ್, ಅಂತ್, ರಾಯ್‌ಪಾಲ್‌ಪುರ್, ಬಲುವಾಪುರ್, ಲಾಲ್‌ಪುರ್ ಮತ್ತು ಅಲಿಯಾಪುರ್

## ದೇರಾಪುರ್ ತೆಹಸೀಲ್‌ನ ಪಟವಾರಿ ಸರ್ಕಲ್ಲುಗಳು

(೩೯)

ನಂದಪುರ್, ಸರ್‌ಗಾಂವ್ ಖುರ್ದ್, ಮುಂಗೀಸಾಪುರ್, ದೇರಾಪುರ್ ಖಾಸ್, ಸಲೀಮ್‌ಪುರ್, ಸಬ್ದಲ್‌ಪುರ್, ಕುರ್‌ಹವಾಲ್, ಮೌಜ್‌ಪುರ, ಅಗ್‌ವಾಸಿ, ಉರ್ಸಾನ್, ಪದನಾಯಿ, ಕೊರಾವಾ, ಅಮೌಲಿ ಕುರ್ಮಿಮಾನ್, ಹತೂಮಾ, ಮುಕ್‌ಬೀಲ್‌ಪುರ್, ದರ್ಯಾಪುರ್, ನೇತಾರಾಹ, ಗರ್ಹಿಯಾ ಸಿಕಂದ್ರಾ, ಮೊಹಮ್ಮದ್‌ಪುರ್, ಸುಲ್ತಾನ್‌ಪುರ್, ಜಗನ್ನಾಥಪುರ್, ಸಂದಾಲ್‌ಪುರ್, ಹಾಸ್ವಾನ್, ಜಾಮೌರಾ, ರೇವನ್, ಹವಸ್‌ಪುರ್, ಅಂಕ್ನಾ, ಪೆಂಡಾರಾತು, ಸಾಹ್ನೀಪುರ್, ಚಮ್ರಾವ, ಕಸೋಲಾರ್, ಅಜ್ರಾಲಿ, ಧರಮ್‌ಪುರ್, ಇಂದ್ರುಖ್, ಸರ್‌ಗಾಂವ್ ಬುಜುರ್ಗ್, ಜಿಗ್‌ನಿಸ್, ಗಲುವಾಪುರ್ ಮತ್ತು ಬಾರಾಗಾಂವ್ ಭೀಖಿ."

೪. ಹಾಗೆಯೆ, ಎರಡನೇ ಗೊತ್ತುವಳಿಯಲ್ಲಿ, ಅಂದರೆ ಪಟ್ಟಿಯ ಮೊದಲನೇ ಪುಟದಲ್ಲಿ, "ಆಲ್ಮೋರಾ ಜಿಲ್ಲೆ (ಪಶ್ಚಿಮ) –ಹಾಗೂ–ಗಥವಾಲ್ ಜಿಲ್ಲೆ (ಪೂರ್ವ)" ಎಂಬುದನ್ನು ಕೈಬಿಡತಕ್ಕದ್ದು.

೫. ಹಾಗೆಯೆ, ಎರಡನೇ ಗೊತ್ತುವಳಿಯಲ್ಲಿ, ಪುಟ ಸಂಖ್ಯೆ ೨ ರಲ್ಲಿ, ಈ ಕೆಳಕಂಡ ಅಂಶಗಳನ್ನು ಕೈಬಿಡತಕ್ಕದ್ದು:

(i) "ಕಾನ್ಪುರ ಜಿಲ್ಲೆ (ಉತ್ತರ) – ಫರ್ರೂಖಾಬಾದ್ ಜಿಲ್ಲೆ (ಆಗ್ನೇಯ)–ತೆಹಸೀಲ್ ಇಟಾವಾ ಜಿಲ್ಲೆ (ಪೂರ್ವ)" ಇವುಗಳಿಗೆ ಸಂಬಂಧಪಟ್ಟ ನಮೂದುಗಳನ್ನು ಅವು ಕಂಡುಬರುವ ಎರಡು ಕಡೆಗಳಲ್ಲಿ ಕೈಬಿಡತಕ್ಕದ್ದು.

(ii) "ಕಾನ್ಪುರ ಇಟಾವಾ ಜಿಲ್ಲೆ (ಪಶ್ಚಿಮ) ಕ್ಕೆ" ಸಂಬಂಧಪಟ್ಟ ನಮೂದುಗಳು.

(iii) "ಕಾನ್ಪುರ ಜಿಲ್ಲೆ (ದಕ್ಷಿಣ)ಕ್ಕೆ" ಸಂಬಂಧಪಟ್ಟ ನಮೂದುಗಳು.

೬. ಅಂತೆಯೆ, ಗೊತ್ತುವಳಿ ಸಂಖ್ಯೆ ೭ ರಲ್ಲಿ, ಪಟ್ಟಿಯ ೬ನೇ ಪುಟದಲ್ಲಿ, "ಕಾನ್ಪುರ ನಗರ (ದಕ್ಷಿಣ)", "ಕಾನ್ಪುರ (ಮಧ್ಯ)". "ಘಾತಂಪುರ್ (ಪಶ್ಚಿಮ) ಹಾಗೂ ಭೋಗ್ನೀಪುರ್ (ಪೂರ್ವ)" ಮತ್ತು "ಭೋಗ್ನೀಪುರ್ (ಆಗ್ನೇಯ) ಹಾಗೂ ಅಕ್ಬರ್‌ಪುರ್ (ದಕ್ಷಿಣ)" ಇವುಗಳನ್ನು ತೆಗೆದುಹಾಕತಕ್ಕದ್ದು.

೭. ಗೊತ್ತುವಳಿ ಸಂಖ್ಯೆ ೮ ರಲ್ಲಿ, ಪರಿಶಿಷ್ಟದ, ಸಂಖ್ಯೆ ೧೭–ಎ ನಮೂದಿನಲ್ಲಿ ಮೀರತ್ ಮತ್ತು ಪರಗಣಗಳಿಗೆ ಸಂಬಂಧಿಸಿದ ಪಟವಾರಿ ಪ್ರದೇಶಗಳನ್ನು ತೆಗೆದುಹಾಕುವುದು.

ನಾನು ಪಟ್ಟಿ ಸಂಖ್ಯೆ ೯ ರಲ್ಲಿರುವ ತಿದ್ದುಪಡಿ ಸಂಖ್ಯೆ ೩ ನ್ನು ಹಿಂತೆಗೆದುಕೊಳ್ಳುತ್ತೇನೆ.

ಪಟ್ಟಿ ಸಂಖ್ಯೆ ೯ರಲ್ಲಿರುವ ತಿದ್ದುಪಡಿ ಸಂಖ್ಯೆ ೩ನ್ನು ಅನುಮತಿಯ ಮೇರೆಗೆ, ಹಿಂತೆಗೆದುಕೊಳ್ಳಲಾಯಿತು.

**ಅಧ್ಯಕ್ಷರು:** ಹಾಗಾದರೆ ನಾನು ಇವುಗಳೆಲ್ಲವನ್ನು ಒಟ್ಟಿಗೆ ಹಿಂತೆಗೆದುಕೊಳ್ಳುತ್ತಿದ್ದೇನೆ. ಇವುಗಳಲ್ಲಿ ಯಾವುದೇ ಒಂದನ್ನು ಸ್ವತಂತ್ರವಾಗಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಬಯಸುತ್ತಾರಾ? ಹಾಗೆ ಮಾಡಬೇಕೆಂದರೆ ನನ್ನ ಅಭ್ಯಂತರವೇನಿಲ್ಲ.

**ಪಂಡಿತ ಕುಂಜ್ರು (ಉತ್ತರಪ್ರದೇಶ):** ಈ ತಿದ್ದುಪಡಿಗಳೆಲ್ಲವನ್ನೂ ಯಾವ ತತ್ತ್ವದ ಆಧಾರದ ಮೇಲೆ ಒಪ್ಪಿಕೊಳ್ಳಲಾಗಿದೆಯೆಂಬುದನ್ನು ನಾನು ತಿಳಿಯಬಯಸುತ್ತೇನೆ. ಈ ತಿದ್ದುಪಡಿಗಳ ಪೈಕಿ ಒಂದನ್ನು ಸಮಿತಿಯ ಸದಸ್ಯರಾದ ಶ್ರೀ ಟಿ.ಎನ್. ಸಿಂಗ್ ಅವರೇ ಮುಂದಿಟ್ಟಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ, ಆ ನಿರ್ದಿಷ್ಟವಾದ ತಿದ್ದುಪಡಿ ಏನೆಂಬುದನ್ನು ತಿಳಿಯಬಯಸುತ್ತೇನೆ.

**ಡಾ. ಅಂಬೇಡ್ಕರ್:** ಸಾರ್ವಜನಿಕ ಸಮ್ಮತಿಯಿರುವಂತಹ ತಿದ್ದುಪಡಿಗಳನ್ನು ಒಪ್ಪಲಾಗಿದೆ, ಮಾನ್ಯ ಸದಸ್ಯರು ಈಗ ಇಲ್ಲಿ ಉಲ್ಲೇಖಿಸುತ್ತಿರುವಂತಹ ತಿದ್ದುಪಡಿ ಪಟ್ಟಿ ಸಂಖ್ಯೆ ೮ ರಲ್ಲಿ ಬರುವ ೧೪ ನೆಯ ಸಂಖ್ಯೆಯ ತಿದ್ದುಪಡಿಯಾಗಿದೆ.

**ಪಂಡಿತ ಕುಂಜ್ರು:** ನನ್ನ ಮಾನ್ಯ ಮಿತ್ರರಾದ ಡಾ. ಅಂಬೇಡ್ಕರ್ ಅವರು "ಸಾರ್ವತ್ರಿಕ ಸಮ್ಮತಿಯಿರುವ" ತಿದ್ದುಪಡಿಗಳನ್ನು ಒಪ್ಪಲಾಗಿದೆ ಎಂದು ಹೇಳುತ್ತಿದ್ದಾರೆ. "ಸಾರ್ವತ್ರಿಕ ಸಮ್ಮತಿ" ಎಂಬ ಮಾತಿನ ಬಗ್ಗೆ ಅವರ ಆಶಯ ಏನೆಂಬುದು ಗೊತ್ತಾಗುತ್ತಿಲ್ಲ. ಬಹುಸಂಖ್ಯಾತ ಸದಸ್ಯರಿರುವ ಪಕ್ಷದ ಮಂದಿಯ ಸಮ್ಮತಿ ಎಂದು ಅವರು ಹೇಳುವುದಾದರೆ, ಸಹಜವಾಗಿಯೆ ಇನ್ನೂ ಹಲವಾರು ವಿಷಯಗಳನ್ನು ಕುರಿತಂತೆ ಒಪ್ಪಿಗೆ ಸಿಗಬೇಕಾಗಿತ್ತು. ಮಾರ್ಪಾಡುಗಳನ್ನು ಮಾಡಬೇಕಾದರೆ ಅದೊಂದೇ ಆಧಾರವಾಗಿದ್ದ ಪಕ್ಷದಲ್ಲಿ 'ಮಿತಿ ವಿಧಿಸುವ ಸಲಹಾಸಮಿತಿ' (ಡಿಲಿಮಿಟೇಷನ್ ಅಡ್ವೈಸರಿ ಕಮಿಟಿ) ಎಂಬುದರ ಅಗತ್ಯವೇ ಇರಲಿಲ್ಲ. ಆದರೆ ಆ ತಿದ್ದುಪಡಿಗಳ ಬಗ್ಗೆ ಸಾರ್ವಜನಿಕ ಸಮ್ಮತಿ ಇತ್ತು ಎಂಬ ಅಂಶವನ್ನು ಹೊರತುಪಡಿಸಿದರೆ ಇವುಗಳನ್ನು ಒಪ್ಪಲು ಇನ್ನಾವುದಾದರೂ ಕಾರಣವಿತ್ತೆ ಎಂಬುದನ್ನು ತಿಳಿಯಬಯಸುತ್ತೇನೆ.

**ಡಾ. ಅಂಬೇಡ್ಕರ್:** ಸರಿ, ಅಂದಹಾಗೆ ಚುನಾವಣಾ ಕ್ಷೇತ್ರಗಳಿಗೆ ಮಿತಿವಿಧಿಸಲು ಸದನದ ಸಭಾಧ್ಯಕ್ಷರು ನೇಮಕಮಾಡಿದ್ದ ವಿವಿಧ ಸಮಿತಿಗಳ ಸದಸ್ಯರು ಮುಂದಿಟ್ಟಿದ್ದ ತೀರ್ಮಾನಗಳನ್ನು ಆಧರಿಸಿ ನಾವು ಇಲ್ಲಿ ಚರ್ಚೆ ನಡೆಸುತ್ತಿದ್ದೇವೆಂಬುದು ಈ ಸದನಕ್ಕೆ ಗೊತ್ತಿದೆಯಷ್ಟೆ, ಆ ಹಿನ್ನೆಲೆಯಲ್ಲಿ, ಅಂಥ ಸಮಿತಿಯ

ಸದಸ್ಯರು ಎಲ್ಲಾದರೂ ಬದಲಾವಣೆ ಮಾಡಬೇಕೆಂದು ಸೂಚಿಸಿದ್ದರೆ ಅಂಥ ಬದಲಾವಣೆಯನ್ನು ಒಪ್ಪಿಕೊಳ್ಳುವುದು ಸೂಕ್ತ ಎಂಬುದು ನನ್ನ ಭಾವನೆಯಾಗಿದೆ. ಇಲ್ಲಿ ನಾನು ಒಪ್ಪಿಕೊಳ್ಳುತ್ತಿರುವ ತಿದ್ದುಪಡಿ ಸಂಖ್ಯೆ ೧೪ ಕೂಡ ಇವುಗಳಲ್ಲಿ ಒಂದಾಗಿದೆ.

**ಪಂಡಿತ ಕುಂಜ್ರು:** ಇಲ್ಲಿ ಮಾನ್ಯ ಮಂತ್ರಿಗಳ ಆಶಯ ಬಹುಸಂಖ್ಯಾತ ಸದಸ್ಯರಿಸುವ ಪಕ್ಷದ ಸದಸ್ಯರು ಎಂಬುದಾಗಿದೆಯೆ ಅಥವಾ ಸಭಾಧ್ಯಕ್ಷರು ನೇಮಕಮಾಡಿದ್ದ ಸಮಿತಿಗಳ ಸದಸ್ಯರು ಎಂಬುದಾಗಿದೆಯೆ ಎಂದು ತಿಳಿಯಬಯಸುತ್ತೇನೆ.

**ಡಾ. ಅಂಬೇಡ್ಕರ್:** ಆ ವಿಷಯವಾಗಿ ಹೇಳಬೇಕೆಂದರೆ, ಚುನಾವಣಾ ಕ್ಷೇತ್ರಗಳಿಗೆ ಮಿತಿ ವಿಧಿಸುವ ವಿಷಯಕ್ಕೆ ಸಂಬಂಧಪಟ್ಟಂತೆ, ಬಹುಸಂಖ್ಯಾತ ಪಕ್ಷದ ಸದಸ್ಯರು ಹಾಗೂ ಇತರ ಯಾವುದೇ ಪಕ್ಷದ ಸದಸ್ಯರು ಎಂಬ ವಿಷಯದಲ್ಲಿ ಯಾವುದೇ ಭೇದಭಾವವನ್ನು ಮಾಡಲಾಗಿಲ್ಲ. ಈ ವಿಷಯವಾಗಿ ಪರಿಶೀಲನೆ ನಡೆಸಲು ನೇಮಕಗೊಂಡ ಸಂಪುಟದ ಉಪಸಮಿತಿಯ ಮುಂದೆ ತಮ್ಮ ಅಭಿಪ್ರಾಯಗಳನ್ನು ಸಾದರಪಡಿಸಲು ಎಲ್ಲ ಮಾನ್ಯ ಸದಸ್ಯರಿಗೂ ಆಹ್ವಾನ ನೀಡಲಾಗಿತ್ತು. ಪಕ್ಷಭೇದವಿಲ್ಲದೆ ಇಲ್ಲಿ ಯಾವುದೇ ಸದಸ್ಯರು ಹಾಜರಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಪೂರ್ಣ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಕೆಲವುಮಂದಿ ಸದಸ್ಯರು ಇದರಲ್ಲಿ ಹಾಜರಾಗಿದ್ದರು.

**ಶ್ರೀ ಟಿ.ಎನ್. ಸಿಂಗ್ (ಉತ್ತರಪ್ರದೇಶ):** ಸರ್, ನನ್ನ ಹೆಸರು ಇಲ್ಲಿ ಪ್ರಸ್ತಾಪವಾಗಿರುವ ಕಾರಣ ನಾನು ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಆಡಲು ಅನುಮತಿ ಕೋರುತ್ತೇನೆ. ನನ್ನ ಮಾನ್ಯ ಮಿತ್ರರು ಇಲ್ಲಿ ಉಲ್ಲೇಖಿಸುತ್ತಿರುವ ತಿದ್ದುಪಡಿ ಕೇವಲ ಒಂದು ಆನುಷಂಗಿಕ ತಿದ್ದುಪಡಿ ಅಷ್ಟೆ. ಇದನ್ನು ಮೊದಲೇ ವರದಿಯಲ್ಲಿ ಸೇರಿಸಬೇಕಾಗಿತ್ತು. ಆದರೆ ಕಣ್ತಪ್ಪಿನಿಂದ ಅದು ಹೇಗೊ ಬಿಟ್ಟುಹೋಗಿತ್ತು. ಈಗ ಆ ತಿದ್ದುಪಡಿಯನ್ನು ಮುಂದಿಟ್ಟಿದ್ದೇನೆ, ಅಷ್ಟೆ. ಅದರ ವಿವರಗಳನ್ನು ಇಲ್ಲಿ ಎಲ್ಲರಿಗೂ ವಿವರಿಸಿ ಹೇಳಲು ಸಾಧ್ಯವಾಗದಿರುವುದರಿಂದ, ವೈಯಕ್ತಿಕವಾಗಿ ಅವರಿಗೆ ಅನಂತರ ವಿವರಿಸಿ ಹೇಳುತ್ತೇನೆ.

**ಅಧ್ಯಕ್ಷರು:** ಅವರ ಗೊತ್ತುವಳಿಯನ್ನು ಕುರಿತಂತೆ ಸ್ವತಂತ್ರವಾಗಿ ಕೈಗೆತ್ತಿಕೊಳ್ಳಲು ಯಾರಾದರೂ ಸದಸ್ಯರು ಬಯಸುತ್ತಾರೆಯೆ?

*__ಡಾ. ಅಂಬೇಡ್ಕರ್:__ ಸರ್, ಈ ವಿಷಯವಾಗಿ ಸಮಿತಿಯಲ್ಲಿ ಚರ್ಚೆ ನಡೆದಿದೆಯೆಂದು ನಾನು ಭಾವಿಸುತ್ತೇನೆ. ನಾನು ಶ್ರೀ ಕಪೂರ್ ಅವರಿಗೆ ಅವರು ಸೂಚಿಸಿರುವ ತಿದ್ದುಪಡಿ ಅಪೂರ್ಣವಾಗಿದೆಯೆಂದೂ ಅದರಿಂದಾಗಿ ಉಳಿದ ಚುನಾವಣಾ ಕ್ಷೇತ್ರಗಳಿಗೆ ಅಡಚಣೆ ಉಂಟುಮಾಡದಂತೆ ಅದನ್ನು ಒಪ್ಪಲು ಸಾಧ್ಯವಾಗದೆಂದು ತಿಳಿಸಿದೆ. ಉಳಿದ ಅಂಶಗಳಿಗೆ ಸರಿಯಾಗಿ ಹೊಂದುವ ರೀತಿಯಲ್ಲಿ ಪೂರ್ಣವಾದ ಒಂದು ಪ್ರಸ್ತುತಿ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ. ಈ ತಿದ್ದುಪಡಿಯನ್ನು ಪರಿಗಣಿಸದೆ ಇರುವುದಕ್ಕೆ ಇದೇ ಕಾರಣ.

**ಶ್ರೀ ಜೆ.ಆರ್. ಕಪೂರ್:** (ಎದ್ದುನಿಲ್ಲುತ್ತಾ)–

**ಅಧ್ಯಕ್ಷರು:** ಮಾನ್ಯ ಸದಸ್ಯರಿಗೆ ಈಗ ಉತ್ತರಿಸುವ ಅವಕಾಶ ಇಲ್ಲ. ಇವುಗಳನ್ನು ಸದನದ ಮುಂದಿಡಲು ಅವರು ಬಯಸುತ್ತಾರೆಯೆ?

---

* ಪಿ.ಡಿ. ಸಂಪುಟ ೧೨, ಭಾಗ II, ಜೂನ್ ೯, ೧೯೫೧ ಪು. ೧೦೬೦೭.

**ಶ್ರೀ ಜೆ.ಆರ್. ಕಪೂರ್:** ಆಗಬಹುದು, ತಿರಸ್ಕೃತವಾಗುವುದಾದರೂ ಪರವಾಗಿಲ್ಲ.

**ಅಧ್ಯಕ್ಷರು:** ನಾನು ಅವುಗಳನ್ನು ಸದನದ ಮುಂದಿಡುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ಬೇಡ. ಸರ್, ನಾನು ಅವುಗಳನ್ನು ಹಿಂದಕ್ಕೆ ಪಡೆಯಬಯಸುತ್ತೇನೆ.

ಶ್ರೀ ಜೆ.ಆರ್. ಕಪೂರ್ ಅವರ ತಿದ್ದುಪಡಿಗಳನ್ನು, ಅನುಮತಿಯ ಮೇರೆಗೆ, ಹಿಂದಕ್ಕೆ ಪಡೆಯಲಾಯಿತು.

**ಅಧ್ಯಕ್ಷರು:** ನಾನು ಈಗ ಕಾನೂನು ಮಂತ್ರಿಗಳು ಪ್ರಸ್ತುತಪಡಿಸಿರುವ, ಒಪ್ಪಿಗೆ ಪಡೆದ ಎಲ್ಲ ತಿದ್ದುಪಡಿಗಳನ್ನೂ ಸದನದ ಮುಂದಿಡುತ್ತಿದ್ದೇನೆ.

ಎಲ್ಲ ತಿದ್ದುಪಡಿಗಳೂ ಅಂಗೀಕೃತವಾದವು.

***ಅಧ್ಯಕ್ಷರು:** ಮಾನ್ಯ ಸದಸ್ಯರು ಹಾಗೂ ತಿದ್ದುಪಡಿಗಳನ್ನು ಪ್ರಸ್ತುತ ಸಲ್ಲಿಸಿರುವ ಇತರ ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯಲು ಸದನದ ಅನುಮತಿ ಬಯಸುತ್ತಾರೆಯೆ?

ಅನುಮತಿಯ ಮೇರೆಗೆ, ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.

**ಅಧ್ಯಕ್ಷರು:** ಇಲ್ಲಿಗೆ ಎಲ್ಲ ಗೊತ್ತುವಳಿಗಳ ಬಗೆಗೆ ಇತ್ಯರ್ಥ ಮಾಡಿದ ಹಾಗಾಯಿತು. ಈಗ ನಾನು ಆನುಷಂಗಿಕ ಅಥವಾ ಪರಿಣಾಮ ಸ್ವರೂಪದ ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳಬಯಸುತ್ತೇನೆ.

**ಡಾ. ಅಂಬೇಡ್ಕರ್:** ನಾನು ಈ ಕೆಳಕಂಡಂತೆ ಪ್ರಸ್ತಾಪಿಸಬಯಸುತ್ತೇನೆ:

> "ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ಮಿತಿವಿಧಿಸುವ ಆದೇಶಗಳಿಗೆ ಸಂಬಂಧಪಟ್ಟಂತೆ ಇಲ್ಲಿ ಈ ಸದನದ ಮುಂದೆ ಪ್ರಸ್ತಾಪಗೊಂಡ ಹಾಗೂ ಒಪ್ಪಿಗೆ ಪಡೆದ ತಿದ್ದುಪಡಿಗಳಿಗೆ ಸಂಬಂಧಪಟ್ಟಂತೆ ಮಾನ್ಯ ಸಭಾಧ್ಯಕ್ಷರ ಅಧಿಕಾರಕ್ಕೆ ಒಳಪಟ್ಟಂತೆ ಸದರಿ ಆದೇಶಗಳಲ್ಲಿ ಅಗತ್ಯವಾದ ಪರಿಣಾಮಸ್ವರೂಪದ, ಬರವಣಿಗೆಗೆ ಸಂಬಂಧಪಟ್ಟ ಹಾಗೂ ಇವರ ಔಪಚಾರಿಕ ಬದಲಾವಣೆಗಳಿಗೆ ಸಂಬಂಧಿಸಿದ ಕೆಲಸಗಳನ್ನು ಕೈಗೆತ್ತಿಕೊಳ್ಳಬಹುದಾಗಿದೆ."

**ಡಾ. ದೇಶಮುಖ್:** ಇಂಥದೇ ತಿದ್ದುಪಡಿಯೊಂದರ ಕುರಿತು ನಾನು ಸೂಚನೆ ಕೊಟ್ಟಿರುತ್ತೇನೆ. ಅದನ್ನು ಹಿಂದಕ್ಕೆ ಪಡೆಯಲು ಅನುಮತಿ ಕೋರುತ್ತೇನೆ.

**ಅಧ್ಯಕ್ಷರು:** ಅದನ್ನು ಸದನದ ಮುಂದೆ ಇಡಲಾಗಿರುವುದಿಲ್ಲ. ಹಾಗಾಗಿ ಹಿಂದಕ್ಕೆ ತೆಗೆದುಕೊಳ್ಳುವ ಅಗತ್ಯ ಕಂಡುಬರುವುದಿಲ್ಲ.

**ಶ್ರೀ ಚಟ್ಟೋಪಾಧ್ಯಾಯ:** ಈ ತಿದ್ದುಪಡಿಯ ಕುರಿತಂತೆ ನನ್ನದೊಂದು ತಿದ್ದುಪಡಿಯಿದೆ. ಪ್ರಸ್ತುತಪಡಿಸಲು ಅನುಮತಿ ಕೋರುತ್ತೇನೆ.

> "ಡಾ. ಅಂಬೇಡ್ಕರ್ ಅವರ ಹೆಸರಿನಲ್ಲಿರುವ ಆನುಷಂಗಿಕ ತಿದ್ದುಪಡಿಯಲ್ಲಿ "ಔಪಚಾರಿಕ ಬದಲಾವಣೆಗಳು"ಎಂಬ ಪದಗಳ ಅನಂತರ" ಚುನಾವಣಾ ಕ್ಷೇತ್ರಗಳ ನಾಮಕರಣವನ್ನು ಸೇರಿಸಿ" ಎಂಬ ಪದಗಳನ್ನೂ ಸೇರಿಸಿಕೊಳ್ಳತಕ್ಕದ್ದು.

**ಅಧ್ಯಕ್ಷರು:** ಮಾನ್ಯ ಮಂತ್ರಿಗಳು ಇದನ್ನು ಒಪ್ಪುತ್ತಾರೆಯೆ?

**ಡಾ. ಅಂಬೇಡ್ಕರ್:** ಈ ರೀತಿ ಔಪಚಾರಿಕವಾದ ಮತ್ತು ಬದ್ಧತೆಗೊಳಪಡಿಸುವ ಈ ಸೇರ್ಪಡೆಯನ್ನು ಒಪ್ಪಲಾರೆ.

---

* ಪಿ.ಡಿ. ಸಂಪುಟ ೧೨, ಭಾಗ II, ಜೂನ್ ೯, ೧೯೫೧, ಪುಟಗಳು ೧೦೬೧೦–೧೨

**ಪ್ರಧಾನಮಂತ್ರಿಗಳು (ಶ್ರೀ ಜವಾಹರಲಾಲ್ ನೆಹರೂ):** ಸರ್, ಇದನ್ನು ನಾನು ಹೇಗೆ ಪರಿಗಣಿಸುತ್ತೇನೆಂದರೆ, ಒಂದು ಹೆಸರನ್ನು ತಪ್ಪಾಗಿ ಉಚ್ಚರಿಸಿದಾಗ, ಅದನ್ನು ಸರಿಯಾಗಿ ಉಚ್ಚಾರ ಮಾಡಬಹುದು. ಅದಕ್ಕೆ ಔಪಚಾರಿಕ ತಿದ್ದುಪಡಿಯ ಅಗತ್ಯವಿರುವುದಿಲ್ಲ. ಸಣ್ಣಮಟ್ಟ ತಪ್ಪುಗಳೇನಾದರೂ ಇದ್ದರೆ ಅವುಗಳನ್ನು ಯಾವಾಗಲೂ ಸರಿಪಡಿಸಲಾಗುತ್ತದೆಂದು ನಾವು ಭಾವಿಸಬಹುದಾಗಿದೆ.

**ಶ್ರೀ ಚಟ್ಟೋಪಾಧ್ಯಾಯ:** ಈ ದಿನ ಬೆಳಗ್ಗೆ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಈ ವಿಚಾರವಾಗಿ ಭಿನ್ನಾಭಿಪ್ರಾಯಗಳೂ ಎದ್ದವು. ಆಗ ಡಾ. ಅಂಬೇಡ್ಕರ್ ಅವರೇ "ಈ ಹೆಸರುಗಳನ್ನು ಕುರಿತ ವಿಷಯವನ್ನು ಮಾನ್ಯ ಸಭಾಧ್ಯಕ್ಷರ ವಿವೇಚನೆಗೆ ಬಿಡೋಣ" ಎಂದಿದ್ದರು.

**ಡಾ. ಅಂಬೇಡ್ಕರ್:** ಆ ಮಾತನ್ನು ಒಪ್ಪುತ್ತೇನೆ. ಆದರೆ ಒಂದು ವೇಳೆ ಸಭಾಧ್ಯಕ್ಷರು ಒಂದು ಸ್ಥಳದ ಹೆಸರಿನಲ್ಲಿ ಆದ ಬದಲಾವಣೆ ಔಪಚಾರಿಕ ಬದಲಾವಣೆ ಎನಿಸಿಕೊಳ್ಳುತ್ತದೆ ಎಂದು ಭಾವಿಸುವುದಾದರೆ, ಅದು ನನ್ನ ತಿದ್ದುಪಡಿಯ ವ್ಯಾಪ್ತಿಯೊಳಗೆ ಬರುತ್ತದೆ ಎಂದು ಕೂಡ ಹೇಳಿದ್ದೆ.

**ಶ್ರೀ ಚಟ್ಟೋಪಾಧ್ಯಾಯ:** ಈ ಕಾರಣಕ್ಕಾಗಿಯೆ ನಾನು ನನ್ನ ಈ ತಿದ್ದುಪಡಿಯನ್ನು ಪ್ರಸ್ತುತಪಡಿಸಿರುವುದು.

**ಸಭಾಧ್ಯಕ್ಷರು:** ಈಗ ನಾನು ಏನು ಮಾಡಬೇಕೆಂದು ಅವರ ಅಭಿಪ್ರಾಯ?

**ಶ್ರೀ ಚಟ್ಟೋಪಾಧ್ಯಾಯ:** "ಔಪಚಾರಿಕ ಬದಲಾವಣೆಗಳು" ಎಂಬ ಪದಗಳಾದ ಮೇಲೆ "ಚುನಾವಣಾ ಕ್ಷೇತ್ರಗಳ ಹೆಸರುಗಳನ್ನೂ ಸೇರಿಸಿ" ಎಂಬ ಪದಗಳ ಸೇರ್ಪಡೆಯಾಗಬೇಕೆಂಬುದು ನನ್ನ ಆಶಯ. ಇದು ಕೇವಲ ಔಪಚಾರಿಕವಲ್ಲ. ನನ್ನ ಅಭಿಪ್ರಾಯದಲ್ಲಿ ಅದು ತುಂಬ ಮಹತ್ತ್ವಪೂರ್ಣವಾದದ್ದು. ಏಕೆಂದರೆ, ಕೆಲವು ಸಂದರ್ಭಗಳಲ್ಲಿ.........

**ಸಭಾಧ್ಯಕ್ಷರು:** ಈ ಮಾತು ನನಗೆ ಅರ್ಥವಾಗುತ್ತದೆ. ಅದೊಂದು ಮಹತ್ತ್ವಪೂರ್ಣವಾದ ಅಂಶವೆಂದು ಅವರು ಒತ್ತಾಯಪಡಿಸುವುದಾದರೆ, ಈಗ ಯಾವುದೇ ತಿದ್ದುಪಡಿಯನ್ನು ಮಾಡಲಾಗುವುದಿಲ್ಲ. ಡಾ. ಅಂಬೇಡ್ಕರ್ ಅವರು ಹೇಳಿರುವಂತೆ ಅದೊಂದು ಔಪಚಾರಿಕವಾದ ಅಥವಾ ಆನುಷಂಗಿಕವಾದ ತಿದ್ದುಪಡಿಯಾಗಿದ್ದಲ್ಲಿ, ಕೆಲವೊಮ್ಮೆ ಕೇವಲ ಹೆಸರಿನಲ್ಲಾಗುವ ಬದಲಾವಣೆಯೆಂದು ಇಲ್ಲಿ ಪರಿಗಣಿಸಬೇಕಾಗುತ್ತದೆ. ಆಗಿನ ಸಂಗತಿಯೆ ಬೇರೆಯಾಗುತ್ತದೆ. ಹಾಗಾಗಿ ಈ ತಿದ್ದುಪಡಿಯನ್ನು ಇಟ್ಟುಕೊಳ್ಳುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ.

**ಶ್ರೀ ಜೆ.ಆರ್. ಕಪೂರ್:** ಚುನಾವಣಾ ಕ್ಷೇತ್ರದ ಹೆಸರು, ಆ ಕ್ಷೇತ್ರದ ವ್ಯಾಪ್ತಿಯನ್ನು ವಾಸ್ತವವಾಗಿ ಇಲ್ಲವೆ ಸ್ವಲ್ಪಮಟ್ಟಿಗೆ ಬದಲಾಯಿಸುವುದಾದರೂ, ಆ ಮಟ್ಟಿಗೆ ಅದು ಡಾ. ಅಂಬೇಡ್ಕರ್ ಅವರ ಗೊತ್ತುವಳಿಯ ಪರಿಧಿಗೆ ಸೇರುತ್ತದೆಂದು ನಾವು ಭಾವಿಸಬಹುದೆ?

**ಡಾ. ಅಂಬೇಡ್ಕರ್:** ಅದು ಮಾನ್ಯ ಸಭಾಧ್ಯಕ್ಷರ ವಿವೇಚನೆಗೆ ಬಿಟ್ಟ ವಿಷಯ.

**ಸಭಾಧ್ಯಕ್ಷರು:** ಈ ಸದನ ಕೆಲವು ಮಾರ್ಪಾಡುಗಳಿಗೆ ಒಪ್ಪಿಗೆ ಸೂಚಿಸಿದೆ. ತದನಂತರದ ಅಥವಾ ಪರಿಣಾಮ ಸ್ವರೂಪದ ಹಾಗೂ ಔಪಚಾರಿಕ ಸ್ವರೂಪದ ತಿದ್ದುಪಡಿಗಳನ್ನು ಮಾಡಲು ಸದನ ಸಭಾಧ್ಯಕ್ಷರಿಗೆ ಅಧಿಕಾರ ನೀಡುತ್ತದೆಂದು ಭಾವಿಸಲಾಗುತ್ತದೆ. ಏಕೆಂದರೆ, ಈ ದಿನ ಬೆಳಗ್ಗೆ ಹೇಳಿರುವಂತೆ ಎಲ್ಲೆಕಟ್ಟುಗಳನ್ನು ಕುರಿತಂತೆ ವಿವರಣೆ ನೀಡುವಲ್ಲಿ ತಪ್ಪಾಗಿರಬಹುದು. "ಪೂರ್ವ" ಎಂಬುದಕ್ಕೆ ಬದಲಾಗಿ ಕಣ್ತಪ್ಪಿನಿಂದ ಒಕ್ಕಣೆಯಲ್ಲಿ ಪಶ್ಚಿಮ ಎಂದಾಗಿರಬಹುದು. ಕೇವಲ ಇಂಥ ತಿದ್ದುಪಡಿಗಳನ್ನು ಪರಿಗಣಿಸಲಾಗುತ್ತದೆ. ಈಗ ಇಲ್ಲಿ ಇನ್ನು ಹೆಚ್ಚು ತಿದ್ದುಪಡಿಗಳಿಗೆ ಅವಕಾಶವಿಲ್ಲ. ಸದನ ಒಮ್ಮತದ ತೀರ್ಮಾನಕ್ಕೆ ಬಂದು

ಒತ್ತಾಯಮಾಡಿದರೂ ಅಧ್ಯಕ್ಷರು ಸದನದಲ್ಲಿ ಆಗಿರುವ ಇಷ್ಟು ತೀರ್ಮಾನಗಳನ್ನು ಹೊರತುಪಡಿಸಿ ಮುಂದಕ್ಕೆ ಹೋಗಲಾಗುವುದಿಲ್ಲ. ಈಗಾಗಲೆ ಸದನದಲ್ಲಿ ಹೊರಬಂದಿರುವ ತೀರ್ಮಾನವನ್ನು ಜಾರಿಮಾಡುವ ವಿಷಯದಲ್ಲಿ ಅಗತ್ಯವಾಗುವಷ್ಟು ಕ್ರಮವನ್ನು ಮಾತ್ರ ಈ ಅಧ್ಯಕ್ಷಪೀಠದಿಂದ ತೆಗೆದುಕೊಳ್ಳಲು ಸಾಧ್ಯ ಅಷ್ಟೆ. ಈ ನಿಟ್ಟಿನಲ್ಲಿಯೆ ಪರಿಣಾಮ ಸ್ವರೂಪದ ತಿದ್ದುಪಡಿಗಳನ್ನು ಕೂಡ ಪರಿಗಣಿಸಲಾಗುತ್ತದೆ.

# *ಸದನದಲ್ಲಿ ಮಂಡಿಸಲಾಗಿರುವ ದಾಖಲಾತಿ ಪತ್ರಗಳು

ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳಿಗೆ ಸೀಮಾನಿರ್ಣಯ ಆದೇಶಗಳು

**ಕಾನೂನು ಮಂತ್ರಿ (ಡಾ. ಅಂಬೇಡ್ಕರ್):** ೧೯೫೦ರ ಪ್ರಜಾ ಪ್ರಾತಿನಿಧ್ಯ ಅಧಿನಿಯಮದ ಉಪಭಾಗ ೧೩ ರ ಉಪವಿಭಾಗ (೩) ರನ್ವಯ ರಾಷ್ಟ್ರಪತಿಯವರು ಮೇ ೧೫, ೧೯೫೧ ರಂದು ಜಾರಿಮಾಡಿರುವ ಆದೇಶಗಳನ್ನು ಪ್ರಸ್ತುತಪಡಿಸಲು ಅನುಮತಿ ಕೋರುತ್ತೇನೆ.

(೧) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಅಸ್ಸಾಂ) ಆದೇಶ.

(೨) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಬಿಹಾರ್) ಆದೇಶ.

(೩) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಒರಿಸ್ಸಾ) ಆದೇಶ.

(೪) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಪಶ್ಚಿಮ ಬಂಗಾಳ) ಆದೇಶ.

(೫) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಹೈದರಾಬಾದ್) ಆದೇಶ.

(೬) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಮಧ್ಯಪ್ರದೇಶ) ಆದೇಶ.

(೭) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಪಾಟಿಯಾಲ ಮತ್ತು ಪೂರ್ವ ಪಂಜಾಬ್ ರಾಜ್ಯಗಳ ಒಕ್ಕೂಟ) ಆದೇಶ.

(೮) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ರಾಜಸ್ಥಾನ) ಆದೇಶ.

(೯) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಸೌರಾಷ್ಟ್ರ) ಆದೇಶ.

(೧೦) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ತಿರುವಾಂಕೂರು–ಕೊಚ್ಚಿನ್) ಆದೇಶ, ೧೯೫೧

(೧೧) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಭಾಗ 'ಸಿ' ರಾಜ್ಯಗಳು) ಆದೇಶ.

[ಗ್ರಂಥಾಲಯದಲ್ಲಿ ಇಡಲಾಗಿದೆ. ನೋಡಿ ಸಂ. ಪಿ–೧೬೯/೫೧]

---

* ಲೋಕಸಭಾ ಚರ್ಚೆಗಳು (ಪಿ.ಡಿ.) ಸಂಪುಟ ೧೨, ಭಾಗ II, ಮೇ ೧೬, ೧೯೫೧, ಪು. ೮೮೧೦–೧೧

# *ಪ್ರಸ್ತುತ ಮಂಡಿಸಲಾದ ದಾಖಲಾತಿ ಪತ್ರಗಳು

ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾ ನಿರ್ಣಯ ಆದೇಶಗಳು

**ಕಾನೂನುಮಂತ್ರಿ (ಡಾ. ಅಂಬೇಡ್ಕರ್):** ೧೯೫೦ ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಉಪವಿಭಾಗ ೧೩ ರ ಉಪವಿಭಾಗ ೩ ರನ್ವಯ ಮೇ ೧೮, ೧೯೫೧ ರಾಷ್ಟ್ರಪತಿಯವರು ಹೊರಡಿಸಿದ ಕೆಳಕಂಡ ಆದೇಶಗಳನ್ನು ಸದನದ ಮುಂದೆ ಮಂಡಿಸಲು ಅನುಮತಿ ಬೇಡುತ್ತೇನೆ:

(೧) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಬೊಂಬಾಯಿ) ಆದೇಶ,

(೨) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಮಧ್ಯಪ್ರದೇಶ) ಆದೇಶ,

(೩) ೧೯೫೧ರ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಮದ್ರಾಸ್) ಆದೇಶ,

(೪) ೧೯೫೧ರ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಅಸ್ಸಾಂ) ಆದೇಶ,

(೫) ೧೯೫೧ರ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಸೀಮಾನಿರ್ಣಯ (ಮೈಸೂರು) ಆದೇಶ,

[ಗ್ರಂಥಾಲಯದಲ್ಲಿ ಇಡಲಾಗಿದೆ. ನೋಡಿ: ಸಂಖ್ಯೆ ಪಿ. ೧೬೯/೫೭)

**ಸಭಾಧ್ಯಕ್ಷರು:** ಇಲ್ಲಿಗೆ ಎಲ್ಲ ಆದೇಶಗಳು ಮುಗಿದಿವೆ ಎಂದು ಭಾವಿಸಲೆ?

**ಡಾ. ಅಂಬೇಡ್ಕರ್:** ಹೌದು.

**ಸಭಾಧ್ಯಕ್ಷರು:** ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಸೀಮಾನಿಬಂಧನೆಗೆ ಸಂಬಂಧಪಟ್ಟಂತೆ ರಾಷ್ಟ್ರಪತಿಯವರು ಹೊರಡಿಸಿರುವ ಕೆಲವು ಆದೇಶಗಳು ಈಗ ಸದನದ ಮುಂದೆ ಮಂಡಿಸಲಾಗಿದೆಯಷ್ಟೆ. ಮಾನ್ಯ ಸದಸ್ಯರಿಗೆ ನಾನು ತಿಳಿಸಬಯಸುವುದೇನೆಂದರೆ ಮುದ್ರಣಾಲಯದಿಂದ ಬಂದಕೂಡಲೇ ಇವುಗಳ ಪ್ರತಿಗಳನ್ನು ಲೋಕಸಭೆಯ ನೋಟೀಸ್ ಕಛೇರಿಯಲ್ಲಿ ಇಡಲಾಗುವುದು. ಮಾನ್ಯ ಸದಸ್ಯರು ಕೋರಿಕೆಯ ಮೇರೆಗೆ ಇವುಗಳ ಪ್ರತಿಗಳನ್ನು ಅಲ್ಲಿಂದ ಪಡೆಯಬಹುದಾಗಿರುತ್ತದೆ.

---

* ಪಿ.ಡಿ. ಸಂಪುಟ ೧೨, ಭಾಗ II, ಮೇ ೧೮, ೧೯೫೧, ಪು. ೯೦೬೫–೬೬

## ಸದನದ ಕಲಾಪ

*ಸಭಾಧ್ಯಕ್ಷರು:** ಈ ನಿಟ್ಟಿನಲ್ಲಿ ಏನು ಮಾಡಬಹುದು ಎಂಬ ಬಗ್ಗೆ ಆಲೋಚನೆ ಮಾಡುತ್ತೇನೆ. ಈಗಲೇ ಯಾವ ಆಶ್ವಾಸನೆಯನ್ನೂ ಕೊಡಲಾರೆ.

ಸದನದ ಕಲಾಪವನ್ನು ಈಗ ಮುಂದೂಡ..........

**ಪಂಡಿತ ಠಾಕುರ್‌ದಾಸ ಭಾರ್ಗವ (ಪಂಜಾಬ್):** ೧೧.೦೦ ಗಂಟೆಯ ಹೊತ್ತಿಗಾದರೂ ಇದರ ಕೆಲಸವನ್ನು ಮುಗಿಸದಿದ್ದರೆ ಈ ಮಸೂದೆಯನ್ನು ೧.೦೦ ಗಂಟೆಯ ವೇಳೆಗೆ ಮುಗಿಸಲು ತುಂಬ ಕಷ್ಟವಾಗುತ್ತದೆ. ಮಸೂದೆಯನ್ನು ಈ ರೀತಿ ಅತಂತ್ರವಾಗಿ ಬಿಡುವುದನ್ನು ನಾನು ಎಂದೂ ನೋಡಿಲ್ಲ.

**ಸಭಾಧ್ಯಕ್ಷರು:** ಒಮ್ಮತವಿಲ್ಲದಿದ್ದರೆ ಹಾಗಾಗುತ್ತದೆ. ಒಮ್ಮತವಿದ್ದಂತೆ ಖಂಡಿತವಾಗಿಯೂ ಈ ಕಲಾಪವನ್ನು ಮುಗಿಸಬಹುದು.

**ಪಂಡಿತ ಠಾಕುರ್‌ದಾಸ ಭಾರ್ಗವ (ಪಂಜಾಬ್):** ಹಾಗಾದರೆ ಒಂದು ಒಮ್ಮತಕ್ಕೆ ಬರಲು ಸಾಕಷ್ಟು ಕಾಲಾವಕಾಶವನ್ನು ನೀಡಬೇಕಾಗಿ ಕೋರುತ್ತೇನೆ.

**ಸಭಾಧ್ಯಕ್ಷರು:** ಮಾನ್ಯ ಸದಸ್ಯರು ಒಂದು ವೇಳೆ ಇಡೀ ಮಸೂದೆಯನ್ನು ೧.೦೦ ಗಂಟೆಯ ವೇಳೆಗೆ ಮುಗಿಸಲು ಒಪ್ಪಿಕೊಳ್ಳುವುದಾದರೆ, ೧.೦೦ ಗಂಟೆಗೆ ಐದು ನಿಮಿಷ ಮುಂಚೆ ಒಟ್ಟು ಸೇರಿ ಮುಗಿಸಬಹುದು. ನನ್ನ ಅಭ್ಯಂತರವೇನೂ ಇಲ್ಲ. ಒಂದು ಕಾಲಮಿತಿ ಇರಬೇಕು ಎನ್ನುವುದಷ್ಟೆ ನನ್ನ ಆಶಯ. ಅದನ್ನು ಮುಗಿಸಿಬಿಡಬೇಕೆಂಬ ಮನಸ್ಸಿಟ್ಟು ಕುಳಿತುಕೊಳ್ಳಬೇಕು ಅಷ್ಟೆ. ಇಲ್ಲದಿದ್ದರೆ ಚರ್ಚೆಗೆ ಕೊನೆಯಿರುವುದಿಲ್ಲ.

**ಕಾನೂನುಮಂತ್ರಿ (ಡಾ. ಅಂಬೇಡ್ಕರ್):** ಈಗ ಏನು ಏರ್ಪಾಡು ಮಾಡಲಾಗುತ್ತಿದೆ ಎಂಬುದು ನನಗೆ ಗೊತ್ತಾಗಲಿಲ್ಲ.

**ಸಭಾಧ್ಯಕ್ಷರು:** ಈಗ ನಾವು ಸಭೆಯನ್ನು ಮುಂದೂಡಿ ಮತ್ತೆ ೧೧.೩೦ ಗೆ ಸೇರುತ್ತಿದ್ದೇನೆ.

**ಡಾ. ಅಂಬೇಡ್ಕರ್:** ನನ್ನ ಅಭಿಪ್ರಾಯ ಹೀಗಿದೆ. ಇದೊಂದು ಸುಲಭದ ಪರಿಹಾರ ಅಂತ ನನಗೆ ಅನಿಸುವುದಿಲ್ಲ. ಆದ್ದರಿಂದ ನಾನು ನೀಡುತ್ತಿರುವ ಸಲಹೆ ಹೀಗಿದೆ. ಈಗ ಯಾವುದೇ ಭಿನ್ನಾಭಿಪ್ರಾಯವಿಲ್ಲದ ಕೆಲವು ಅಂಶಗಳನ್ನು ಇಲ್ಲಿ ನಾನು ಕಂಡುಕೊಳ್ಳಬೇಕು. ನನಗೆ ಅನಿಸುವಂತೆ ನಾವು ಒಮ್ಮತಕ್ಕೆ ಬರದೆ ಇರುವಂತಹ ಒಂದು ಅಂಶ, ಒಂದೇ ಒಂದು ಅಂಶ ಇಲ್ಲಿದೆ. ಈ ವಿಷಯವಾಗಿ ಒಂದು ಒಮ್ಮತಕ್ಕೆ ಬರುವುದಕ್ಕೆ ಸಾಕಷ್ಟು ಕಾಲಾವಕಾಶ ಬೇಕು ಎಂಬುದು ನನ್ನ ಭಾವನೆ. ಆದ್ದರಿಂದ ಮಸೂದೆಯ ಯಾವ ಅಂಶಗಳ ವಿಚಾರವಾಗಿ ಭಿನ್ನಾಭಿಪ್ರಾಯಗಳು ಇಲ್ಲವೊ, ಅವುಗಳನ್ನು ಕೈಗೆತ್ತಿಕೊಂಡು ಮುಂದುವರಿಸೋಣ. ಹಾಗೆ ಮಾಡುವುದು ಉತ್ತಮ ಎಂದು ನನಗೆ ಅನಿಸುತ್ತದೆ. ಸಭೆಯನ್ನು ಮುಂದೂಡಿದ ಅನಂತರ ಸ್ವಲ್ಪ ಕಾಲದಲ್ಲಿ ಏನಾದರೂ ಒಮ್ಮತಕ್ಕೆ ಬರುವುದು ಸಾಧ್ಯವಾಗುತ್ತದೆಯೊ ಹೇಗೆ ಎಂಬುದನ್ನು ನೋಡೋಣ. ಅದೊಂದು ವಿವಾದಾತ್ಮಕ ಅಂಶವನ್ನು ಕುರಿತಂತೆ ಒಮ್ಮತಕ್ಕೆ ಬರಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಅದೊಂದನ್ನು ಮಾತ್ರ ಮುಂದಿನ ಯಾವುದಾದರೂ ದಿನಾಂಕಕ್ಕೆ ಮುಂದೆ ಹಾಕೋಣ.

**ಅಧ್ಯಕ್ಷರು:** ಒಟ್ಟಿನಲ್ಲಿ, ಅನೌಪಚಾರಿಕ ಚರ್ಚೆಗಾಗಿ ಸದನವನ್ನು ಸ್ವಲ್ಪಕಾಲ ಮುಂದೂಡಬೇಕೆಂಬುದು ಎಲ್ಲರ ಬಯಕೆಯಾಗಿದೆಯೆನಿಸುತ್ತದೆ. ಆ ಪರಿಸ್ಥಿತಿಯನ್ನು ನಾನು ಒಪ್ಪುತ್ತೇನೆ. ಅದು ಅಧ್ಯಕ್ಷರ ಒಂದು

---

* ಪಿ.ಡಿ. ಸಂಪುಟ ೧೨, ಭಾಗ II, ಮೇ ೨೮, ೧೯೫೧, ಪು. ೯೪೭೬–೭೭

ತೀರ್ಮಾನವೆಂದು ನಾನು ಘೋಷಿಸುತ್ತಿಲ್ಲ, ಇದನ್ನು ಅಧ್ಯಕ್ಷಪೀಠದಿಂದ ಪ್ರಚುರಪಡಿಸುತ್ತಿದ್ದೇನೆ. ಅಷ್ಟೆ.

**ಡಾ. ಅಂಬೇಡ್ಕರ್:** ಸದನ ಇದನ್ನು ಕುರಿತಂತೆ ಮರುವಿಚಾರ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಸಭಾಧ್ಯಕ್ಷರು:** ಈಗ ನಾವು ಅದನ್ನು ತೆಗೆದುಕೊಳ್ಳುವುದು ಬೇಡ.

**ಡಾ. ಅಂಬೇಡ್ಕರ್:** ಸದರಿ ಮಸೂದೆಯಲ್ಲಿರುವ ಕೆಲವು ಭಾಗಗಳನ್ನು ಯಾವುದೇ ಭಾಷಣ ಇಲ್ಲದೆ ಇತ್ಯರ್ಥ ಮಾಡಬಹುದಾಗಿದೆ.

**ಸಭಾಧ್ಯಕ್ಷರು:** ಅವುಗಳಿಗೂ ಹಾಗೆಯೆ ಮಾಡೋಣ. ಅವುಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಬಹುದಾದರೂ, ಅದಕ್ಕಾಗಿ ಸಭೆಯನ್ನು ಮುಂದೂಡುವುದನ್ನು ಈಗ ನಿಲ್ಲಿಸಬೇಕಾಗಿಲ್ಲ. ನಾವು ಮತ್ತೆ ೧೧.೩೦ ಗಂಟೆಗೆ ಸೇರಿದಾಗ, ಅವುಗಳನ್ನು ಕೈಗೆತ್ತಿಕೊಳ್ಳೋಣ.

*ಈಗ ಸದನವನ್ನು ಮುಂದೂಡಲಾಗಿದೆ ಹಾಗೂ ನಾವು ಮತ್ತೆ ೧೧.೩೦ ಗಂಟೆಗೆ ಸೇರಲಿದ್ದೇವೆ.*

ಸದನವನ್ನು ೧೧.೩೦ ಗಂಟೆಯವರೆಗೆ ಮುಂದೂಡಲಾಯಿತು.

◆

## ವಿಭಾಗ – ಐದು

# ೧೮ನೇ ಏಪ್ರಿಲ್ ೧೯೫೧
# ರಿಂದ
# ೧೯ನೇ ಮೇ ೧೯೫೧

# ವಿಭಾಗ – ಐದು

## ಪರಿವಿಡಿ

೩೪. ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ ೩೮೪

## ೩೪

# *ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ

***ಕಾನೂನು ಮಂತ್ರಿ (ಡಾ. ಅಂಬೇಡ್ಕರ್):** ನಾನು ಈ ಮಸೂದೆಯನ್ನು ಮಂಡಿಸಲು ಅನುಮತಿ ಕೋರುತ್ತೇನೆ:

> "೧೯೫೦ರ ಪ್ರಜಾ ಪ್ರಾತಿನಿಧ್ಯ ಅಧಿನಿಯಮಕ್ಕೆ ತಿದ್ದುಪಡಿಸೂಚಿಸುವ ಮಸೂದೆಯನ್ನು
> ಈಗ ಪರಿಗಣನೆಗೆ ತೆಗೆದುಕೊಳ್ಳಬಹುದಾಗಿದೆ."

ಇದೊಂದು ಸಣ್ಣ ಮಸೂದೆ. ಸ್ವಲ್ಪಕಾಲದ ಹಿಂದೆ ಈ ಸದನ ಅಂಗೀಕರಿಸಿದ್ದ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮಕ್ಕೆ ತಿದ್ದುಪಡಿ ಸೂಚಿಸುವುದು ಇದರ ಉದ್ದೇಶವಾಗಿದೆ. ಭಾಗ 'ಸಿ' ಗೆ ಸೇರಿದ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಲೋಕಸಭೆಯಲ್ಲಿ ಪ್ರಾತಿನಿಧ್ಯ ಒದಗಿಸಲು ಅವಕಾಶ ಮಾಡಿಕೊಡುವುದು ಇದರ ಉದ್ದೇಶವಾಗಿದೆ. ಈ ಸದನಕ್ಕೆ ನೆನಪಿರುವಂತೆ ಅನುಚ್ಛೇದ ೩೧೩ ಹಾಗೂ ೩೩೨ ರಲ್ಲಿ ಭಾಗ 'ಎ' ಮತ್ತು ಭಾಗ 'ಬಿ' ಗೆ ಸೇರಿದ ರಾಜ್ಯಗಳಲ್ಲಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನಸಮುದಾಯಕ್ಕೆ ಪ್ರಾತಿನಿಧ್ಯ ಒದಗಿಸುವ ಅವಕಾಶ ಸಂವಿಧಾನದಲ್ಲೇ ಲಭ್ಯವಾಗಿದೆ. ಆದರೆ ಭಾಗ 'ಸಿ' ಗೆ ಸೇರಿರುವ ರಾಜ್ಯಗಳಿಗೆ ಸಂಬಂಧಪಟ್ಟಂತೆ ಈ ಬಗೆಯ ಅವಕಾಶವನ್ನು ಒದಗಿಸುವ ವಿಷಯ ಸಂಸತ್ತಿಗೆ ಹಾಗೂ ರಾಷ್ಟ್ರಪತಿಯವರಿಗೆ ಸೇರಿದ ವಿಚಾರವಾಗಿದೆ. ಸಂವಿಧಾನದ ಅನುಚ್ಛೇದ ೮೨ ರನ್ವಯ ಭಾಗ 'ಸಿ' ರಾಜ್ಯಗಳಲ್ಲಿರುವ ಜನರ ಪ್ರಾತಿನಿಧ್ಯಕ್ಕೆ ಸೇರಿದ ವಿಚಾರ ಲೋಕಸಭೆಗೆ ಸೇರಿರುತ್ತದೆ. ಹಾಗೂ ಭಾಗ 'ಸಿ' ಗೆ ಸೇರಿದ ರಾಜ್ಯಗಳಿಗೆ ಸಂಬಂಧಪಟ್ಟ ಆಡಳಿತ ವಿಚಾರಗಳು ಅನುಚ್ಛೇದ ೨೩೯ ಅನ್ವಯ ನಡೆಯುತ್ತದೆ. ಈ ಮೊದಲಿಗೆ ಪ್ರಜಾಪ್ರಾತಿನಿಧ್ಯ ಮಸೂದೆ ಈ ಸದನದ ಮುಂದೆ ಬಂದಿದ್ದಾಗ ಅದರಲ್ಲಿ ಈಗ ಈ ಮಸೂದೆಯಲ್ಲಿ ಪ್ರಸ್ತಾಪಿಸಿರುವ ಅವಕಾಶಗಳು ಕೂಡ ಸೇರಬೇಕಾದುದು ಸೂಕ್ತ ವಿಷಯವಾಗಿತ್ತು. ಆದರೆ ಆ ಕಾಲಕ್ಕೆ ದುರದೃಷ್ಟವಶಾತ್, ಸರ್ಕಾರದ ಮುಂದೆ ಭಾಗ 'ಸಿ'ಗೆ ಸೇರಿದ ರಾಜ್ಯಗಳಿಗಾಗಿ ಲೋಕಸಭೆಯಲ್ಲಿ ಎಷ್ಟು ಸ್ಥಾನಗಳು ನಿಗದಿಯಾಗಿರುತ್ತವೆ ಎಂಬುದರ ಬಗ್ಗೆ ಮಾಹಿತಿ ಇರಲಿಲ್ಲ. ಹಾಗೆಯೆ ಆ ರಾಜ್ಯಗಳಲ್ಲಿರುವ ಜಾತಿಗಳ ಮತ್ತು ಪಂಗಡಗಳ ವಿಚಾರವಾಗಿ ಕೂಡ ಯಾವ ಬಗೆಯ ಅವಕಾಶವನ್ನು ಕಲ್ಪಿಸಬೇಕೆಂಬುದರ ಮಾಹಿತಿ ಇರಲಿಲ್ಲ. ಇದರ ಪರಿಣಾಮವಾಗಿ, ಈ ಅವಕಾಶವನ್ನು ಹಿಂದಕ್ಕೆ ಇಡಬೇಕಾಯಿತು. ಈಗ ಇವುಗಳನ್ನು ಸದನದ ಮುಂದೆ ತರಲಾಗುತ್ತಿದೆ.

ಇಲ್ಲಿ ನನಗೆ ಅನಿಸುವಂತೆ ಎರಡು ಸಂಗತಿಗಳನ್ನು ಕುರಿತಂತೆ ಸ್ವಲ್ಪ ವಿವರಣೆ ನೀಡುವುದು ಅಗತ್ಯವೆನಿಸುತ್ತದೆ. ಈ ಸದನಕ್ಕೆ ಅರಿವಿರುವಂತೆ ಒಟ್ಟಾರೆಯಾಗಿ ನಮ್ಮಲ್ಲಿ ಭಾಗ 'ಸಿ' ಗೆ ಸೇರಿದಂತೆ ಹತ್ತು ರಾಜ್ಯಗಳಿವೆ. ಈ ಎಲ್ಲ ಭಾಗ 'ಸಿ' ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರಾತಿನಿಧ್ಯವನ್ನು ಒದಗಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಹೀಗಿದೆ. ನಾವು ಎರಡು

---

* ಪಿ.ಡಿ. ಸಂ. ೧೦, ಭಾಗ ೨, ೧೮ ನೇ ಏಪ್ರಿಲ್ ೧೯೫೧, ಪು. ೭೦೨೧-೨೪

ಬಗೆಯ ಪ್ರಸ್ತಾಪಗಳನ್ನು ಪರಿಗಣಿಸಬೇಕಾದ ಸಂದರ್ಭವಿತ್ತು. ಇವುಗಳಲ್ಲಿ ಒಂದೆಂದರೆ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಭಾಗ 'ಸಿ' ಗೆ ಸೇರಿದ ರಾಜ್ಯಗಳಲ್ಲಿ ಪ್ರಾತಿನಿಧ್ಯ ನೀಡುವುದಾದರೆ, ಅಂತಹ ಎಡೆಗಳಲ್ಲಿ ಈ ರೀತಿಯಾಗಿ ಒಂದು ಸ್ಥಾನವನ್ನು ಮೀಸಲಿರಿಸುವುದಾದರೆ, ಒಟ್ಟಾರೆ ಸಾಮಾನ್ಯ ಜನಸಮುದಾಯ ಮತಚಲಾವಣೆ ಪ್ರಕ್ರಿಯೆಯಿಂದಾಗಿ ಅವಕಾಶವಂಚಿತವಾಗುವುದೆ ಎಂಬುದು. ಏಕೆಂದರೆ ಎದ್ದು ಕಾಣುತ್ತಿರುವ ಒಂದು ಸಂಗತಿಯೆಂದರೆ ಭಾಗ 'ಸಿ' ಗೆ ಸೇರಿದ ಕೆಲವು ರಾಜ್ಯಗಳಲ್ಲಿ ಲೋಕಸಭೆಗಾಗಿ ನಿಗದಿಯಾಗಿರುವ ಸ್ಥಾನದ ಸಂಖ್ಯೆ ಒಂದೇ ಒಂದಾಗಿದೆ. ಉದಾಹರಣೆಗೆ ಬಿಲಾಸಪುರ ಅಂಥ ಒಂದು ರಾಜ್ಯ. ಕೊಡಗು ಏಕೈಕ ಪ್ರಾತಿನಿಧ್ಯ ಒದಗಿಸಲಾಗಿರುವ ಇಂಥದೇ ಇನ್ನೊಂದು ರಾಜ್ಯ. ಅಂದಮೇಲೆ, ಇಂಥ ರಾಜ್ಯಗಳಿಗೆ ಮೀಸಲಾತಿ ತತ್ತ್ವವನ್ನು ಅನ್ವಯಿಸುವುದು ಸೂಕ್ತವಾಗಲಾರದು. ಪರಿಶಿಷ್ಟ ಜಾತಿಗೆಂದು ಇಂತಹ ಎಡೆಗಳಲ್ಲಿ ಸ್ಥಾನವನ್ನು ಮೀಸಲಾಗಿರಿಸಿದರೆ, ಸಾಧಾರಣ ಜನಸಮುದಾಯಕ್ಕೆ ಪ್ರಾತಿನಿಧ್ಯದ ಅವಕಾಶ ತಪ್ಪಿಹೋದಂತಾಗುತ್ತದೆ. ಹಾಗಾಗಿ ಭಾಗ 'ಸಿ' ಗೆ ಸೇರಿದ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಒದಗಿಸಬೇಕಾದರೆ, ಕೇವಲ ಹಾಗೆ ಮಾಡಲು ಸಾಧ್ಯವಾಗುವ ರಾಜ್ಯಗಳನ್ನು ಮಾತ್ರ ಆಯ್ಕೆ ಮಾಡುವ ಅನಿವಾರ್ಯವಿತ್ತು. ಕೆಳಮನೆಯಲ್ಲಿ ಎರಡೂ ಬಗೆಯ ಜನಸಮುದಾಯಗಳಿಗೆ ಪ್ರಾತಿನಿಧ್ಯ ಒದಗಿಸಬಹುದಾಗಿತ್ತು.

**೪.೦೦ ಗಂಟೆ**

ನಾವು ಪರಿಗಣಿಸಬೇಕಾಗಿದ್ದ ಇನ್ನೊಂದು ಸಂಗತಿಯೆಂದರೆ ಯಾವುದೇ ನಿರ್ದಿಷ್ಟ ಭಾಗ 'ಸಿ' ರಾಜ್ಯದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿರುವ ಜನಸಮುದಾಯ ಎಷ್ಟು ಎಂಬುದು. ಎಲ್ಲಿ ಜನಸಂಖ್ಯೆ ತುಂಬ ಕಡಿಮೆಯಿತ್ತೋ, ಅಲ್ಲಿ ಮೀಸಲಾತಿ ಪ್ರಾತಿನಿಧ್ಯ ನೀಡುವುದು ಸೂಕ್ತ ಎಂದು ನಮಗೆ ಕಂಡುಬರಲಿಲ್ಲ. ಆದರೆ ಎಲ್ಲಿ ಸಾಮಾನ್ಯ ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಸಾಕಷ್ಟು ಇದೆ ಎಂಬುದು ಕಂಡುಬರುತ್ತದೆಯೊ, ಅಲ್ಲಿಗೆ ಒಂದು ಮೀಸಲಾದ ಸ್ಥಾನವನ್ನು ಕಲ್ಪಿಸುವುದು ಸೂಕ್ತ ಎಂಬ ಆಲೋಚನೆ ಮಾಡಿದೆವು. ಅದರ ಪರಿಣಾಮವಾಗಿ, ಈ ಮಸೂದೆಯಲ್ಲಿ ಸೂಚಿಸಿರುವುದು ಇದನ್ನೇ. ಇದು ದೆಹಲಿ, ಹಿಮಾಚಲಪ್ರದೇಶ ಮತ್ತು ವಿಂಧ್ಯ ಪ್ರದೇಶ–ಭಾಗ 'ಸಿ'ಗೆ ಸೇರಿದ ಈ ಮೂರು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳಿಗಾಗಿ ಒಂದೊಂದು ಮೀಸಲಾತಿ ಸ್ಥಾನವನ್ನು ಕಲ್ಪಿಸುವ ಪ್ರಸ್ತಾವವನ್ನು ಹೊಂದಿದೆ. ಇಲ್ಲಿ ಯಾವುದೇ ಬಗೆಯ ಅನ್ಯಾಯ ಯಾರಿಗೂ ಆಗುತ್ತಿಲ್ಲ ಎಂಬ ವಿಚಾರವನ್ನು ಸದನ ಗಮನಿಸಬಹುದು. ಏಕೆಂದರೆ ದೆಹಲಿಗೆ ನಾಲ್ಕು ಸ್ಥಾನಗಳಿವೆ, ಹಿಮಾಚಲ ಪ್ರದೇಶ ಮೂರು ಸ್ಥಾನಗಳನ್ನು ಹೊಂದಿದೆ. ಅಂತೆಯೆ ವಿಂಧ್ಯಪ್ರದೇಶಕ್ಕೆ ಆರು ಲೋಕಸಭಾಸ್ಥಾನಗಳು ನಿಗದಿಯಾಗಿವೆ. ಆದ್ದರಿಂದ ಸರಳವಾಗಿಯೆ ಎದ್ದು ಕಾಣುವಂತೆ, ಈ ರಾಜ್ಯಗಳು ಪರಿಶಿಷ್ಟ ಜಾತಿಗಳಿಗೂ ಒಂದೊಂದು ಸ್ಥಾನವನ್ನು ಮೀಸಲಿಡಲು ಸಮರ್ಥವಾಗಿದೆಯೆಂದು ಭಾವಿಸಬಹುದಾಗಿದೆ.

ಮಣಿಪುರಕ್ಕೆ ಎರಡು ಸ್ಥಾನಗಳಿವೆ. ಮಣಿಪುರದಲ್ಲಿ ಪರಿಶಿಷ್ಟ ಪಂಗಡಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಈ ಪೈಕಿ ಒಂದನ್ನು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿಡಬೇಕೆಂದು ಪ್ರಸ್ತಾಪಮಾಡಲಾಗಿದೆಯೆಂದು ನಿಮಗೆ ಗೊತ್ತಷ್ಟೆ. ಹಾಗೆಯೆ ಆರು ಸ್ಥಾನಗಳನ್ನು ಪಡೆದಿರುವ ವಿಂಧ್ಯಪ್ರದೇಶದಲ್ಲಿ ಪರಿಶಿಷ್ಟ ಪಂಗಡಗಳಿಗಾಗಿ ಒಂದು ಸ್ಥಾನವನ್ನು ಮೀಸಲಿಡಬೇಕೆಂದು ನಾವು ಪ್ರಸ್ತಾಪಿಸುತ್ತಿದ್ದೇವೆ. ಉಳಿದ ರಾಜ್ಯಗಳಿಗೆ ಸಂಬಂಧಪಟ್ಟಂತೆ ಪರಿಶಿಷ್ಟ ಜಾತಿಗಳಿಗಾಗಲಿ ಪರಿಶಿಷ್ಟ ಪಂಗಡಗಳಿಗಾಗಲಿ ಯಾವುದೇ ಪ್ರಾತಿನಿಧ್ಯವಿರಲು ಅವಕಾಶವಿರುವುದಿಲ್ಲ.

ಈಗ ನಾನು ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಸೂಚಿಯ ವಿಚಾರಕ್ಕೆ ಬರುತ್ತಿದ್ದೇನೆ. ಈ ವಿಷಯವಾಗಿ ನಿಜವಾಗಿಯೂ ನನಗೆ ಯಾವುದೇ ಆಕ್ಷೇಪ ಇಲ್ಲವೆಂದು ಹೇಳಬಯಸುತ್ತೇನೆ. ಈ ವಿಷಯವಾಗಿ ತೀರ ಇತ್ತೀಚೆಗೆ ಪರಿಶೀಲನೆ ನಡೆಸಿರುವ ಗೃಹ ಇಲಾಖೆ ಹಾಗೂ ಜನಗಣತಿ ಕಮೀಷನರ್ ಒದಗಿಸಿರುವ ಪಟ್ಟಿ ಇದು.

(ಅಧ್ಯಕ್ಷ ಸ್ಥಾನದಲ್ಲಿ ಶ್ರೀಮತಿ ದುರ್ಗಾಬಾಯಿಯವರು ಆಸೀನರಾಗಿದ್ದಾರೆ)

ಮಸೂದೆಯಲ್ಲಿ ನೀಡಲಾಗಿರುವ ಪಟ್ಟಿ ತುಂಬ ವ್ಯಾಪಕವಾಗಿದೆಯೆಂಬುದು ನನ್ನ ಭಾವನೆ. ಮುಖ್ಯವಾದ ಯಾವುದೇ ಪರಿಶಿಷ್ಟ ಜಾತಿಗಳ ಇಲ್ಲವೆ ಪರಿಶಿಷ್ಟ ಪಂಗಡಗಳ ಹೆಸರು ಇಲ್ಲಿ ಬಿಟ್ಟುಹೋಗಿಲ್ಲವೆಂಬುದು ನನ್ನ ತಿಳಿವಳಿಕೆ. ಯಾರೇ ಮಾನ್ಯ ಸದಸ್ಯರು ಇಲ್ಲಿ ಸೇರಬೇಕಾಗಿದ್ದ ಇಲ್ಲವೆ ಸೇರಲು ಸೂಕ್ತವಲ್ಲದ ಯಾವುದೇ ಸಮುದಾಯವನ್ನು ಇಲ್ಲಿ ಸೇರಿಸಲು ಅಥವಾ ಕೈಬಿಡಲು ಸೂಚಿಸುವುದಾದರೆ ಆ ಬಗ್ಗೆ ಮುಕ್ತ ಮನಸ್ಸಿನಿಂದ ಪರಿಶೀಲಿಸಲು ನಾನು ಸಿದ್ಧವಾಗಿದ್ದೇನೆ. ಇನ್ನೂ ಹೆಚ್ಚು ವಿವರಣೆ ಅಗತ್ಯವಾಗಿರುವ ಯಾವುದೇ ಸಂಗತಿ ಇಲ್ಲವೆಂದು ಭಾವಿಸಿರುತ್ತೇನೆ. ಈ ಮಾತುಗಳೊಂದಿಗೆ, ಮಾನ್ಯ ಅಧ್ಯಕ್ಷರೆ, ನಾನು ನನ್ನ ಈ ಗೊತ್ತುವಳಿಯನ್ನು ಸದನದ ಮುಂದೆ ಇಡಬಯಸುತ್ತೇನೆ.

**ಸಭಾಪತಿಗಳು:** ಗೊತ್ತುವಳಿಯನ್ನು ಮಂಡಿಸುತ್ತಿದ್ದೇನೆ –

"೧೯೫೦ರ ಜನಪ್ರಾತಿನಿಧ್ಯ ಅಧಿನಿಯಮಕ್ಕೆ ತಿದ್ದುಪಡಿ ಸೂಚಿಸುವ ಮಸೂದೆಯನ್ನು ಪರಿಶೀಲನೆಗಾಗಿ ಪರಿಗಣಿಸಲಾಗುತ್ತಿದೆ."

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ):** ಮಾನ್ಯ ಕಾನೂನು ಮಂತ್ರಿಗಳು ಈಗತಾನೇ ಮಾಡಿರುವ ಭಾಷಣವನ್ನು ನಾನು ಎಚ್ಚರಿಕೆಯಿಂದ ಕೇಳಿದ್ದೇನೆ. ಈ ಮಸೂದೆಯ ವಸ್ತು ವಿವರಗಳ ಹಾಗೂ ಉದ್ದೇಶಗಳ ಸೂಚಿಯನ್ನು ಕೂಡ ನಾನು ಎಚ್ಚರಿಕೆಯಿಂದ ಓದಿಕೊಂಡಿರುತ್ತೇನೆ. ಹಾಗೆಯೆ, ಈ ಮಸೂದೆಯ ವಿವಿಧ ಉಪಬಂಧಗಳನ್ನು ಸಹ ನಾನು ಎಚ್ಚರಿಕೆಯಿಂದ ಗಮನಿಸಿರುತ್ತೇನೆ. ಆದರೆ ಈ ಮಸೂದೆಯ ಅಗತ್ಯ ಇರುವುದರ ಬಗ್ಗೆ ಒಪ್ಪಿಕೊಳ್ಳಲು ನಾನು ಸಿದ್ಧನಾಗಿಲ್ಲ ಎಂದು ಈ ಸದನಕ್ಕೆ ಮನವರಿಕೆ ಮಾಡಿಕೊಡಬಯಸುತ್ತೇನೆ.

**ಶ್ರೀ ಸೋನಾವಣೆ (ಮುಂಬಯಿ):** ನೀವು ಎಂದೂ ಒಪ್ಪುವವರಲ್ಲ.

**ಶ್ರೀ ಜೆ.ಆರ್. ಕಪೂರ್:** ನನ್ನ ಮಟ್ಟಿಗೆ ಹೇಳುವುದಾದರೆ ಈ ಮಸೂದೆ ಪೂರ್ತಿಯಾಗಿ ಅನಗತ್ಯ ಎನಿಸುತ್ತದೆ. ಈ ಮಸೂದೆಯನ್ನು ಪರಿಗಣಿಸಲು ಕಳೆಯುವಷ್ಟು ಸಮಯದಲ್ಲಿ ಸದನದ ಮುಂದಿರುವ ಇನ್ನು ಕೆಲವು ಪ್ರಮುಖವಾದ ಮಸೂದೆಗಳನ್ನು ಕೈಗೆತ್ತಿಕೊಂಡಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು ಎಂಬುದು ನನ್ನ ಭಾವನೆ. ನಾನು ಹೀಗೆ ಏಕೆ ಹೇಳುತ್ತಿದ್ದೇನೆ ಎಂಬುದನ್ನು ಈಗ ವಿವರಿಸಬಯಸುತ್ತೇನೆ. ಅಸಮಾಧಾನದಿಂದ ನನ್ನ ಮಾತಿಗೆ ಅಡ್ಡಬಂದ ನನ್ನ ಗೌರವಾನ್ವಿತ ಮಿತ್ರರಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡುತ್ತೇನೆ. ಸಮಯ ಇಲ್ಲಿ ನಮಗೆ ಬಹಳ ಮುಖ್ಯ, ಇಂತಹ ಅಮೂಲ್ಯವಾದ ಸದನದ ಸಮಯವನ್ನು ಕಳೆಯತೊಡಗಿದರೆ ಇದು ಐಷಾರಾಮಿ ವಿಷಯದ ಚರ್ಚೆಯಲ್ಲಿ ಕಳೆಯುವಂತೆ ಆಗುತ್ತದೆ. ಇದು ಖಂಡಿತ ಸೂಕ್ತವೂ ಅಲ್ಲ, ಉಚಿತವೂ ಅಲ್ಲ ಎಂಬುದು ನನ್ನ ದೃಢವಾದ ಭಾವನೆ.

ಅಂದಹಾಗೆ ಈ ಮಸೂದೆ ಯಾವುದಕ್ಕಾಗಿ ಅವಕಾಶ ಮಾಡಿಕೊಡುತ್ತಿದೆ? ಈ ಜನತಾಮಂದಿರದಲ್ಲಿ ಅದು ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಯ ಪಂಗಡಗಳಿಗೆ ಮೊದಲಿಗೆ ಸ್ಥಾನಗಳನ್ನು ಕಾಯ್ದಿರಿಸುವ ಉದ್ದೇಶವನ್ನು ಹೊಂದಿದೆ. ಎರಡನೆಯದಾಗಿ ಅದು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳು

ಯಾವುಯಾವುವು ಎಂಬುದರ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕೆಂದು ಆಗ್ರಹಿಸುತ್ತದೆ. ಸದನದ ಗಮನವನ್ನು ಅನುಚ್ಛೇದ ೩೩೦ರತ್ತ ನಾನು ಸೆಳೆಯಬಹುದಾದರೆ ಆ ಅನುಚ್ಛೇದದಲ್ಲಿ ಸಂವಿಧಾನವೇ ಬಹಳ ಸ್ಪಷ್ಟವಾಗಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಕಾಯ್ದಿರಿಸಲು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಅನುಚ್ಛೇದ ೩೩೦ ಈ ರೀತಿ ಹೇಳುತ್ತದೆ:

"೧. ಲೋಕಸಭೆಯಲ್ಲಿ ಈ ಕೆಳಕಂಡವರಿಗಾಗಿ ಸ್ಥಾನಗಳನ್ನು ಕಾಯ್ದಿರಿಸತಕ್ಕದ್ದು:

ಅ. ಅನುಸೂಚಿತ ಜಾತಿಗಳು;

ಆ. ಅಸ್ಸಾಮಿನ ಬುಡಕಟ್ಟು ಜನಾಂಗಗಳಿರುವ ಪ್ರದೇಶಗಳನ್ನು ಹೊರತುಪಡಿಸಿ ಉಳಿದೆಡೆಗಳಲ್ಲಿರುವ ಪರಿಶಿಷ್ಟ ಪಂಗಡಗಳು; ಹಾಗೂ

ಇ. ಅಸ್ಸಾಮಿನ ಸ್ವಯಮಾಡಳಿತ ಜಿಲ್ಲೆಗಳಲ್ಲಿರುವ ಪರಿಶಿಷ್ಟ ಪಂಗಡಗಳು."

ಅನುಚ್ಛೇದ ೩೩೦ರ ಪ್ಯಾರಾ ೨ರ ಪಾಠ ಹೀಗಿದೆ:

"೨. ಯಾವುದೇ ರಾಜ್ಯದಲ್ಲಿ ಕಾಯ್ದಿರಿಸಿರುವ ಸ್ಥಾನಗಳ ಸಂಖ್ಯೆ"

ಇದು ಭಾಗ ಎ ಅಥವಾ ಭಾಗ ಬಿ ರಾಜ್ಯ ಎಂದಲ್ಲ, ಯಾವುದೇ ರಾಜ್ಯ ಎಂದರೆ ಸಹಜವಾಗಿಯೆ ಇದರಲ್ಲಿ ಭಾಗ ಸಿ ಗೆ ಸೇರಿರುವ ರಾಜ್ಯಗಳನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಎಂಬ ಅಂಶ ಸ್ಪಷ್ಟವಾಗಿಯೆ ಎದ್ದುಕಾಣುತ್ತದೆ. ಇದು ಮುಂದೆ ಹೀಗೆ ಓದಿಸಿಕೊಳ್ಳುತ್ತದೆ:

"ಖಂಡ ೧ರ ಅಡಿಯಲ್ಲಿ ಬರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಸಾಧ್ಯವಾದಷ್ಟೂ ಆ ರಾಜ್ಯಕ್ಕೆ ಮಂಜೂರಾಗಿರುವ ಸ್ಥಾನಗಳಿಗೆ ಅನುಗುಣವಾಗಿ ಹತ್ತಿರದ ಸಂಖ್ಯೆಯಷ್ಟು ಸ್ಥಾನಗಳು ಮೀಸಲಾಗಿರಕ್ಕದ್ದು..."

ಉಳಿದ ಭಾಗಗಳನ್ನು ನಾನು ಓದುವ ಅಗತ್ಯವಿಲ್ಲ ಅಂದುಕೊಂಡಿದ್ದೇನೆ. ನನ್ನ ನಿಖರವಾದ ಅನಿಸಿಕೆ ಏನೆಂದರೆ ಅನುಚ್ಛೇದ ೩೩೦ರಲ್ಲಿ ಯಾವುದೇ ರಾಜ್ಯಕ್ಕೆ ಸಂಬಂಧಪಟ್ಟಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಲೋಕಸಭೆಯಲ್ಲಿ ಸ್ಥಾನಗಳು ಮೀಸಲಾಗಿರತಕ್ಕದ್ದು ಎಂದು ಸ್ಪಷ್ಟವಾಗಿದೆ. 'ರಾಜ್ಯ' ಎಂಬ ಪದ ನಮ್ಮ ಸಂವಿಧಾನದ ಅನುಚ್ಛೇದ ೧ ರಲ್ಲಿ ಈ ರೀತಿಯಾಗಿ ಪರಿಭಾಷೆಗಳಿಗೊಳಗಾಗಿದೆ.

"೧. (೧) ಇಂಡಿಯಾ, ಅಂದರೆ, ಭಾರತ ರಾಜ್ಯಗಳ ಒಕ್ಕೂಟವಾಗಿರತಕ್ಕದ್ದು.

(೨) ಇಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಂದರೆ ಸಂವಿಧಾನದ ಮೊದಲನೇ ಅನುಸೂಚಿಯ ಎ, ಬಿ ಮತ್ತು ಸಿ ಭಾಗಗಳಲ್ಲಿ ನಿರೂಪಿಸಲಾಗಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು."

ಆದ್ದರಿಂದ ಮಾನ್ಯ ಸಭಾಪತಿಗಳೇ, ಅನುಚ್ಛೇದ ೩೩೦ನ್ನು ಅನುಚ್ಛೇದ ೧ ರ ಜೊತೆಯಲ್ಲಿ ಓದಿದಾಗ ಭಾಗ ಸಿ ರಾಜ್ಯಗಳಲ್ಲೂ ಲೋಕಸಭೆಗೆ ಮೀಸಲಾತಿ ಸ್ಥಾನಗಳನ್ನು ನಿರ್ದಿಷ್ಟವಾಗಿ ಕಲ್ಪಿಸಿಕೊಡಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

**ಅಧ್ಯಕ್ಷರು:** ಈಗ ಮಾತನಾಡಿದ ಮಾನ್ಯ ಸದಸ್ಯರ ಅವಗಾಹನೆಗಾಗಿ ನಾನು ಹೇಳಬಯಸುವುದೇನೆಂದರೆ ಅನುಚ್ಛೇದ ೩೩೦ರಲ್ಲಿ ಕೇವಲ ಭಾಗ ಎ ಮತ್ತು ಭಾಗ ಬಿ ರಾಜ್ಯಗಳನ್ನು ಕುರಿತಂತೆ ಪ್ರಸ್ತಾಪ ಮಾಡಲಾಗಿದೆ. ಭಾಗ ಸಿ ಗೆ ಸೇರಿರುವ ರಾಜ್ಯಗಳಿಗಾಗಿ ಸಂವಿಧಾನದಲ್ಲಿ ಈ ವಿಚಾರವಾಗಿ ಸ್ಪಷ್ಟವಾದ ಅವಕಾಶ ಕಲ್ಪಿಸಲಾಗಿಲ್ಲ.

**ಶ್ರೀ ಜೆ.ಆರ್. ಕಪೂರ್:** ನನ್ನ ಅಭಿಪ್ರಾಯವೇನೆಂದರೆ ಅನುಚ್ಛೇದ ೩೩೦ ಕೇವಲ ಭಾಗ ಎ

ಮತ್ತು ಭಾಗ ಬಿ ರಾಜ್ಯಗಳಿಗೆ ಮಾತ್ರ ಸೀಮಿತವಾಗಿಲ್ಲ, ಅದು ಅನುಚ್ಛೇದ ೧ ರ ಪರಿಭಾಷೆಯನ್ವಯ ತನ್ನ ಅವಕಾಶವನ್ನು ಭಾಗ ಸಿ ಗೂ ವಿಸ್ತರಿಸುತ್ತದೆ. ಹಾಗಾಗಿ ಅದರಲ್ಲಿ ಭಾಗ ಸಿ ಗೆ ಸೇರಿದ ರಾಜ್ಯಗಳು ಕೂಡ ಬರುತ್ತವೆ. ಆದ್ದರಿಂದ ನನ್ನ ನಿಲುವು ಏನೆಂದರೆ ಅನುಚ್ಛೇದ ೩೩೦ ಸ್ಪಷ್ಟವಾಗಿಯೆ ಸಾಕಷ್ಟು ವ್ಯಾಪ್ತಿಯನ್ನು ಹೊಂದಿದ್ದು ಅದರಲ್ಲಿ ಭಾಗ ಎ, ಬಿ ಮತ್ತು ಸಿ ಗೆ ಸೇರುವ ರಾಜ್ಯಗಳೆಲ್ಲ ಅಡಕವಾಗುತ್ತವೆ.

ಆದ್ದರಿಂದ ಮಾನ್ಯ ಸಭಾಪತಿಯವರೆ, ಭಾಗ ಸಿ ಗೆ ಅನ್ವಯವಾಗುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಸ್ಥಾನಗಳನ್ನು ಕಲ್ಪಿಸುವ ಸಲುವಾಗಿ ಪುನಃ ಒಂದು ಮಸೂದೆಯನ್ನು ಸದನದ ಮುಂದೆ ತರುವುದು ಖಂಡಿತ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಅದೂ ಅಲ್ಲದೆ ಮೇಡಂ, ಈ ಮಸೂದೆ ಭಾಗ ಸಿ ರಾಜ್ಯಗಳಿಗೆ ಸಂಬಂಧಪಟ್ಟಂತೆ ಸ್ಥಳಾವಕಾಶಗಳನ್ನು ಕಾಯ್ದಿರಿಸಬೇಕೆಂಬ ಅನಾವಶ್ಯಕ ಅವಕಾಶಕ್ಕೆ ಪ್ರಯತ್ನಪಡುತ್ತಿದೆ ಎಂಬುದನ್ನು ಕಾಣುತ್ತಿದ್ದೇವಷ್ಟೆ ಅಲ್ಲ, ಅದು ಇನ್ನೂ ಮುಂದೆ ಹೋಗಿ ಅಂಥ ಕಾಯ್ದಿರಿಸಬಹುದಾದ ಸ್ಥಾನಗಳನ್ನು ತುಂಬಲು ಎಷ್ಟು ಸಂಖ್ಯೆಯ ಸದಸ್ಯರನ್ನು ಆಯ್ಕೆಮಾಡಬೇಕೆಂಬುದನ್ನು ಸಹ ನಿಗದಿಪಡಿಸಲು ಪ್ರಯತ್ನಿಸುತ್ತಿದೆ. ಸದರಿ ಮಸೂದೆಯ ಖಂಡ ೨ರನ್ವಯ ನಾವು ಒಂದು ಹೊಸ ಭಾಗವನ್ನು ಸಹ ಒಪ್ಪತಕ್ಕದ್ದೆಂದು ಹೇಳಲಾಗುತ್ತಿದೆ. ೩ಎ ಎಂದು ಕರೆಯಲಾಗಿರುವ ಈ ಪರಿಚ್ಛೇದದಲ್ಲಿ ಈ ರೀತಿ ಒಕ್ಕಣೆ ಕಂಡುಬರುತ್ತದೆ:

> "ಅನುಚ್ಛೇದ ೩ರನ್ವಯ ದೆಹಲಿ, ಹಿಮಾಚಲ ಪ್ರದೇಶ ಹಾಗೂ ವಿಂಧ್ಯಪ್ರದೇಶ ಈ ರಾಜ್ಯಗಳಿಗಾಗಿ ಲೋಕಸಭೆಯಲ್ಲಿ ನಿಗದಿಯಾಗಿರುವ ಸ್ಥಾನಗಳ ಪೈಕಿ ಒಂದನ್ನು ಪರಿಶಿಷ್ಟ ಜಾತಿಗಳಿಗಾಗಿ ಕಾಯ್ದಿರಿಸತಕ್ಕದ್ದು. ಹಾಗೆಯೆ, ಮಣಿಪುರ ಮತ್ತು ವಿಂಧ್ಯಪ್ರದೇಶ ಇವುಗಳಿಗಾಗಿ ನಿಗದಿಯಾಗಿರುವ ಸ್ಥಾನಗಳ ಪೈಕಿ ಒಂದೊಂದು ಸ್ಥಾನವನ್ನು ಪರಿಶಿಷ್ಟ ಪಂಗಡಗಳಿಗಾಗಿ ಕಾಯ್ದಿರಿಸತಕ್ಕದ್ದು."

ಈಗ ಇದರ ಅರ್ಥ ಏನಾಗುತ್ತದೆಂದರೆ, ಈ ಸದನದಲ್ಲಿ ಮುಂದೆ ಒಂದು ದಿನ ಕಾನೂನಿಗೆ ತಿದ್ದುಪಡಿ ತರುವವರೆಗೆ, ಎಂದೆಂದಿಗೂ ನಾವು ಭಾಗ ಸಿ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚುಕಡಮೆ ಒಂದೊಂದು – ಕಡಮೆಯಾಗಲು ಸಾಧ್ಯವಿಲ್ಲವೆನ್ನಿ, ಕನಿಷ್ಠ ಒಂದಾದರೂ ಇರಲೇಬೇಕಲ್ಲ – ಸ್ಥಾನವನ್ನು ಮೀಸಲಾಗಿಡಲು ಬದ್ಧರಾಗಿರುತ್ತೇವೆ ಎಂದು ಅರ್ಥವಾಗುತ್ತದೆ. ನಾವು ಇಲ್ಲಿ ನೆನಪಿಸಿಕೊಳ್ಳಬೇಕಾದ ಒಂದು ವಿಷಯವೆಂದರೆ ಭಾಗ ಎ ಮತ್ತು ಭಾಗ ಬಿ ರಾಜ್ಯಗಳಿಗೆ ಸಂಬಂಧಪಟ್ಟಂತೆ ಸಂವಿಧಾನದಲ್ಲಾಗಲಿ ಇಲ್ಲವೆ ನಾವು ಈವರೆಗೆ ಅಂಗೀಕರಿಸಿರುವ ಯಾವುದೇ ಮಸೂದೆಯಲ್ಲಾಗಲಿ ಲೋಕಸಭೆಗೆ ಸದಸ್ಯರ ಪ್ರಾತಿನಿಧ್ಯ ಇಲ್ಲವೆ ಚುನಾವಣೆ ಯಾವುದೇ ಆಗಲಿ ಪರಿಶಿಷ್ಟ ಜಾತಿಗಳಾಗಲಿ ಅಥವಾ ಪರಿಶಿಷ್ಟ ಪಂಗಡಗಳಿಗಾಗಲಿ ಇಷ್ಟು ಸ್ಥಾನಗಳು ಇರಬೇಕೆಂದು ನಿಗದಿಪಡಿಸಿಲ್ಲ. ಆದರೆ ಅನುಚ್ಛೇದ ೩೩೦ರ ಉಪಖಂಡ ೨ರಲ್ಲಿ ಈ ರೀತಿಯ ಮೀಸಲಾತಿಗಾಗಿ ಸೂತ್ರ ದೊರಕುತ್ತದೆ. ಅದರ ಪ್ರಕಾರ ಆಯಾ ರಾಜ್ಯಗಳಲ್ಲಿ ಇರುವ ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಈ ಮೀಸಲಾತಿ ಇರತಕ್ಕದ್ದೆಂದು ನಮೂದಿಸಲಾಗಿದೆ. ಇಲ್ಲವೆ ನಾವು ಈವರೆಗೆ ಅಂಗೀಕರಿಸಿರುವ ಯಾವುದೇ ಮಸೂದೆಯಲ್ಲಾಗಲಿ ಲೋಕಸಭೆಗೆ ಸದಸ್ಯರ ಪ್ರಾತಿನಿಧ್ಯ ಇಲ್ಲವೆ ಚುನಾವಣೆ ಯಾವುದೇ ಆಗಲಿ ಪರಿಶಿಷ್ಟ ಜಾತಿಗಳಾಗಲಿ ಅಥವಾ ಪರಿಶಿಷ್ಟ ಪಂಗಡಗಳಿಗಾಗಲಿ ಇಷ್ಟು ಸ್ಥಾನಗಳು ಇರಬೇಕೆಂದು ನಿಗದಿಪಡಿಸಿಲ್ಲ. ಆದರೆ ಅನುಚ್ಛೇದ ೩೩೦ ರ ಉಪಖಂಡ ೨ ರಲ್ಲಿ ಈ ರೀತಿಯ ಮೀಸಲಾತಿಗಾಗಿ ಸೂತ್ರ ದೊರಕುತ್ತದೆ. ಅದರ ಪ್ರಕಾರ ಆಯಾ ರಾಜ್ಯಗಳಲ್ಲಿ ಇರುವ ಪರಿಶಿಷ್ಟ

ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಈ ಮೀಸಲಾತಿ ಇರತಕ್ಕದ್ದೆಂದು ನಮೂದಿಸಲಾಗಿದೆ. ಅದು ಸೂಕ್ತವಾಗಿದೆ, ತರ್ಕಬದ್ಧವಾಗಿದೆ ಹಾಗೂ ಅರ್ಥವಾಗುವಂತಿದೆ. ಆದರೆ ಇಲ್ಲಿ ಅದರ ಉದ್ದೇಶ ನಿರ್ದಿಷ್ಟವಾಗಿ ಸಂಖ್ಯೆಯನ್ನು ಗೊತ್ತುಪಡಿಸುವುದಾಗಿದೆ. ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳಲ್ಲಿ ಸ್ಪಷ್ಟವಾಗಿಯೆ ಈ ಲೆಕ್ಕಾಚಾರವನ್ನು ಹಾಕುವ ಕೆಲಸ ಚುನಾವಣಾ ಆಯುಕ್ತರಿಂದ ನಡೆಯುತ್ತದೆಂದು ಕಾಣಿಸುತ್ತದೆ. ಆದರೆ ಇಲ್ಲಿ ಮಾನ್ಯ ಕಾನೂನು ಮಂತ್ರಿಗಳು ಸಾಧಾರಣವಾಗಿ ಭಾಗ 'ಎ' ಮತ್ತು 'ಭಾಗ 'ಬಿ' ರಾಜ್ಯಗಳಿಗಾಗಿ ಕೈಗೊಳ್ಳಬೇಕಾದ ತೀರ್ಮಾನವನ್ನು ತಾವೇ ಮಾಡಬೇಕೆಂದು ಅಥವಾ ಈ ಸದನ ಆ ಕೆಲಸ ಮಾಡಬೇಕೆಂದು ಆಗ್ರಹಿಸುತ್ತಿದ್ದಾರೆ. ಈ ಹಕ್ಕನ್ನು ಈ ಸದನ ಸಾಧಿಸಿಕೊಳ್ಳುವಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಇದು ಸದನದಲ್ಲಿ ಕ್ರಮ ಕೈಗೊಳ್ಳುವ ತಪ್ಪು ವಿಧಾನ ಎನಿಸುತ್ತದೆ. ಒಂದು ವೇಳೆ ೫ ವರ್ಷಗಳ ಅನಂತರ ಭಾಗ 'ಸಿ' ಗೆ ಸೇರಿದ ಈ ಎಲ್ಲ ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡಗಳ ಮತ್ತು ಪರಿಶಿಷ್ಟ ಜಾತಿಗಳ ಜನಸಂಖ್ಯೆ ಈಗಿರುವುದಕ್ಕಿಂತ ತುಂಬಾ ಹೆಚ್ಚು ಪ್ರಮಾಣದಲ್ಲಿ ವೃದ್ಧಿಯಾಗುತ್ತದೆ ಎಂದು ಭಾವಿಸಿಕೊಂಡಲ್ಲಿ, ಆಗ ಅವರು ಅನುಚ್ಛೇದ ೩೩೦ ರ ಅನ್ವಯ ಈಗಿರುವುದಕ್ಕಿಂತ ಒಂದು ಅಥವಾ ಎರಡು ಹೆಚ್ಚು ಸ್ಥಾನಗಳನ್ನು ಕಲ್ಪಿಸಿಕೊಡುವಂತೆ ಒತ್ತಾಯಿಸುತ್ತಾರೆ, ಆಗ ಪರಿಸ್ಥಿತಿ ಏನಾಗುತ್ತದೆ. ಆಗ ಅವರಿಗೆ ಒಂದಕ್ಕಿಂತ ಹೆಚ್ಚು ಸ್ಥಾನಗಳನ್ನು ಪಡೆದುಕೊಳ್ಳುವ ಸವಲತ್ತು ಏರ್ಪಡುತ್ತದೆ, ಆದರೆ ಪ್ರಸಕ್ತ ಮಸೂದೆ ದಾರಿಗೆ ಅಡ್ಡಬರುತ್ತದೆ. ಹಾಗಾಗಿ ನಾನು ನಿವೇದಿಸುವುದೇನೆಂದರೆ ಇದೊಂದು ತಪ್ಪು ಕಲ್ಪನೆಯಿಂದ ಹೊರತಂದಿರುವ ಮಸೂದೆಯಾಗಿದ್ದು ಮೊದಲಿಗೆ ನಮ್ಮನ್ನು ಅನಾವಶ್ಯಕವಾಗಿ ಸ್ಥಾನಗಳನ್ನು ಕಾದಿರಿಸುವಂತೆ ಒತ್ತಾಯಿಸುತ್ತದೆ ಹಾಗೂ ಅನಂತರ ಇಂತಿಷ್ಟೇ ಸ್ಥಾನಗಳನ್ನು ಕಾದಿರಿಸಬೇಕೆಂದು ವಿಷಯದಲ್ಲಿ ನಮ್ಮ ಕೈಯನ್ನು ಕಟ್ಟಿಹಾಕುತ್ತದೆ.

ಎರಡನೆಯದಾಗಿ ಈ ಮಸೂದೆಯ ಇನ್ನೊಂದು ಉದ್ದೇಶ ಎಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಕಾದಿರಿಸುವ ಉದ್ದೇಶದಿಂದ ಯಾವ ಯಾವ ಅಂತಹ ಜಾತಿಗಳನ್ನು ಮತ್ತು ಪಂಗಡಗಳನ್ನು ನಿರ್ದಿಷ್ಟವಾಗಿ ಹೆಸರಿಸಬೇಕು ಎಂಬುದಾಗಿದೆ. ಇಲ್ಲಿಯೂ ಕೂಡ ನಾನು ನಿವೇದಿಸುವುದೇನೆಂದರೆ ಸಂವಿಧಾನದಲ್ಲಿಯೇ ಇದಕ್ಕೆ ಕೂಡ ಸಾಕಷ್ಟು ಅವಕಾಶವನ್ನು ಒದಗಿಸಲಾಗಿದೆ. ರಾಷ್ಟ್ರತಿಯವರು ಕೇವಲ ಒಂದು ಅಧಿಸೂಚನೆ ಹೊರಡಿಸುವುದರ ಮೂಲಕ ಇದನ್ನು ಮಾಡಬಹುದಾಗಿದೆ. ಅನುಚ್ಛೇದ ೩೪೧ ರಲ್ಲಿ ಇರುವ ಅವಕಾಶ ಹೀಗಿದೆ:

> "ರಾಷ್ಟ್ರಪತಿಯವರು ಒಂದು ರಾಜ್ಯದ ರಾಜ್ಯಪಾಲರೂ ಅಥವಾ ರಾಜಪ್ರಮುಖರ ಜೊತೆಗೆ ಸಮಾಲೋಚನೆ ಮಾಡಿ, ಸಾರ್ವಜನಿಕ ಅಧಿಸೂಚನೆಯ ಮೂಲಕ ಸಂವಿಧಾನದ ಉದ್ದೇಶಗಳಿಗಾಗಿ ಆಯಾ ರಾಜ್ಯಕ್ಕೆ ಸಂಬಂಧಪಟ್ಟಂತೆ ಪರಿಶಿಷ್ಟ ಜಾತಿಗಳೆಂದು ಯಾವುದೇ ಜಾತಿಗಳನ್ನು, ಜನಾಂಗಗಳನ್ನು ಅಥವಾ ಪಂಗಡಗಳನ್ನು ಇಲ್ಲವೆ ಜಾತಿಗಳ, ಜನಾಂಗಗಳ ಅಥವಾ ಪಂಗಡಗಳ ಒಳ ಭಾಗಗಳನ್ನು ಇಲ್ಲವೇ ಗುಂಪುಗಳನ್ನು ಪರಿಶಿಷ್ಟ ಜಾತಿಗಳೆಂದು ನಿಗದಿಪಡಿಸಬಹುದಾಗಿದೆ."

ಇದೇ ರೀತಿಯಲ್ಲಿ ಪರಿಶಿಷ್ಟ ಪಂಗಡಗಳಿಗೆ ಸಂಬಂಧಪಟ್ಟಂತೆ ಅನುಚ್ಛೇದ ೩೪೨ ರ ಅಧಿಸೂಚನೆಯೆಂದು ತಿಳಿಯಪಡಿಸುತ್ತದೆ. ಆದರೆ ಭಾಗ 'ಸಿ' ರಾಜ್ಯಗಳಲ್ಲಿ ರಾಷ್ಟ್ರಪತಿಯವರಿಗೆ ಪರಾಮರ್ಶೆಯ ಸಲುವಾಗಿ ರಾಜಪ್ರಮುಖರು ಅಥವಾ ರಾಜ್ಯಪಾಲರು ಇರುವುದಿಲ್ಲ ಎಂಬ ಆಕ್ಷೇಪ ಎತ್ತಲು ಸಾಧ್ಯ. ಆದರೆ ಇದಕ್ಕೆ ಕೂಡ ನನ್ನ ಉತ್ತರ ಸಿದ್ಧವಾಗಿದೆ. ಸಂವಿಧಾನದ ನಿರ್ವಹಣೆಯಲ್ಲಿ ಇಂಥ ಸಮಸ್ಯೆ

ಏಳಬಹುದೆಂಬ ದೂರದೃಷ್ಟಿಯಿಂದ ಇನ್ನೊಂದು ಅನುಚ್ಛೇದ ೩೯೨–ಕಂಡುಬರುತ್ತದೆ. ಸಂವಿಧಾನದ ಈ ಅನುಚ್ಛೇದದಲ್ಲಿ ಬರುವ ಒಕ್ಕಣೆ ಹೀಗಿದೆ:

> ""ಭಾರತ ಸರ್ಕಾರದ ಅಧಿನಿಯಮ, ೧೯೩೫ರ ಅವಕಾಶಗಳಿಂದ ಪ್ರಸಕ್ತ ಸಂವಿಧಾನದಲ್ಲಿ ದತ್ತವಾಗಿರುವ ಅವಕಾಶಗಳಿಗೆ ಬದಲಾವಣೆ ಮಾಡಿಕೊಳ್ಳಬೇಕಾದಂತಹ ವಿಶಿಷ್ಟ ಸಂದರ್ಭಗಳಲ್ಲಿ, ರಾಷ್ಟ್ರಪತಿಯವರು ಎದುರಾಗುವ ತೊಡಕುಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ರಾಷ್ಟ್ರಪತಿಗಳು ಆದೇಶ ಜಾರಿಮಾಡಿ, ಆ ಆದೇಶದಲ್ಲಿ ನಿಗದಿಪಡಿಸಬಹುದಾದ ಅವಧಿಯಲ್ಲಿ ಪ್ರಸಕ್ತ ಸಂವಿಧಾನವು ಯಾವುದೇ ರೀತಿಯ ಸೂಕ್ತ ಹಾಗೂ ಯಥೋಚಿತವೆಂದು ತಮಗೆ ಕಂಡುಬರುವ ಮಾರ್ಪಾಡು, ಸೇರ್ಪಡೆ ಅಥವಾ ಲೋಪಿಸುವುದಕ್ಕೆ ಒಳಪಟ್ಟ ಅಳವಡಿಕೆಗಳಿಗೆ ಬದ್ಧವಾಗಿರುವಂತೆ ಮಾಡಬಹುದಾಗಿದೆ."

ಅಂದಮೇಲೆ ಇಲ್ಲಿ "ಸೇರ್ಪಡೆ" "ಲೋಪ" ಹಾಗೂ "ಮಾರ್ಪಾಡು" ಇಂಥ ಇಲ್ಲ ಪದಗಳೂ ಇಲ್ಲಿವೆ. ಆದ್ದರಿಂದ ಇಂಥ ಯಾವುದೇ ಸಮಸ್ಯೆ ಎದುರಾದಾಗ ರಾಷ್ಟ್ರಪತಿಯವರನ್ನು ಕೋರಿ ಅವರು ಕೂಡಲೇ ಅನುಚ್ಛೇದ ೩೪೧ ರ ಅನ್ವಯವಾಗಿ ಅಥವಾ ಅನುಚ್ಛೇದ ೩೯೨ ನ್ನು ಮಾರ್ಪಡಿಸಿ ಅನುಸೂಚಿತ ಪಂಗಡಗಳಿಗೆ ಮತ್ತು ಅನುಸೂಚಿತ ಜಾತಿಗಳಿಗೆ ಮೀಸಲಾತಿ ಒದಗಿಸುವ ಉದ್ದೇಶಕ್ಕಾಗಿ ಇಂಥ ಜಾತಿಗಳನ್ನು ಅನುಸೂಚಿತ ಜಾತಿಗಳೆಂದೂ, ಇಂಥ ಪಂಗಡಗಳನ್ನು ಅನುಸೂಚಿತ ಪಂಗಡಗಳೆಂದೂ ನಿರ್ದಿಷ್ಟಪಡಿಸಿ ಅಧಿಸೂಚನೆಯನ್ನು ಹೊರಡಿಸುವಂತೆ ಮಾಡಬಹುದು. ಹಾಗಾಗಿ ಈ ಮಸೂದೆ ಅನಗತ್ಯವೆಂದು ನಾನು ನಿವೇದಿಸಬಯಸುತ್ತೇನೆ. ಸ್ಥಾನಗಳನ್ನು ಮೀಸಲಿಡುವ ಸಂಬಂಧವಾದ ಅವಕಾಶ ಈಗಾಗಲೇ ಅಲ್ಲದೆ. ಹಾಗೂ ಯಾವ ಯಾವ ಜಾತಿ ಮತ್ತು ಪಂಗಡಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನಿರ್ದಿಷ್ಟಪಡಿಸಿ ಅಧಿಸೂಚನೆಯನ್ನು ರಾಷ್ಟ್ರಪತಿಯವರು ಹೊರಡಿಸಬಹುದಾಗಿದೆ. ಆದ್ದರಿಂದ ನಾನು ಕೋರವುದೇನೆಂದರೆ ಈ ಮಸೂದೆಯನ್ನು ಸುಮ್ಮನೆ ಹಿಂದೆಗೆದುಕೊಳ್ಳುವುದು ಅತ್ಯಂತ ಸೂಕ್ತವಾಗಿದೆ. ಇದನ್ನು ಪರಿಗಣಿಸಲು ಇನ್ನು ಹೆಚ್ಚುಕಾಲ ವ್ಯರ್ಥ ಮಾಡುವ ಅಗತ್ಯವಿಲ್ಲ.

ಕಾನೂನು ಮಂತ್ರಿಯವರಂಥ ಒಬ್ಬ ಬುದ್ಧಿವಂತ ವ್ಯಕ್ತಿ ಹಾಗೂ ಪ್ರಖ್ಯಾತ ನ್ಯಾಯವಾದಿ ಇಂತಹ ಒಂದು ತೀರ ಅನಾವಶ್ಯಕವಾದ ಮಸೂದೆಯನ್ನು ಮಂಡಿಸುವ ಅನಗತ್ಯ ಕ್ರಮವನ್ನು ಏಕೆ ಕೈಗೊಂಡರು ಎಂಬುದು ನನಗೆ ಇನ್ನೂ ಬಗೆಹರಿಯದ ಪ್ರಶ್ನೆಯಾಗಿದೆ.

**ಒಬ್ಬ ಮಾನ್ಯ ಸದಸ್ಯರು:** ಠೀಕ್ ಹೈ (ಸರಿಯಾಗಿಯೇ ಹೇಳಿದಿರಿ)

**ಶ್ರೀ ಜೆ.ಆರ್. ಕಪೂರ್:** ನನಗೆ ಈ ರೀತಿಯ ಪ್ರೋತ್ಸಾಹ ಮತ್ತು ಬೆಂಬಲವನ್ನು ಕೊಟ್ಟ ಮಾನ್ಯ ಸದಸ್ಯ ಮಿತ್ರರಿಗೆ ಆಭಾರಿಯಾಗಿದ್ದೇನೆ. ಈ ರೀತಿಯ ಒಂದು ಅನಾವಶ್ಯಕ ಸಂವಿಧಾನ ಕ್ರಮವನ್ನು ನಮ್ಮ ಮುಂದೆ ಮಂಡಿಸಲು ಕಾನೂನು ಮಂತ್ರಿಯವರಿಗೆ ಏನು ಕಾರಣವಿತ್ತು ಎಂಬ ಅಂಶ ನನಗೆ ನೋವುಂಟುಮಾಡುತ್ತದೆ. ಇದಕ್ಕೆ ಕಾರಣವನ್ನು ಕೂಡ ನಾನು ಸುಲಭವಾಗಿ ಹುಡುಕಬಲ್ಲೆ. ಈಗ್ಗೆ ಎರಡು ದಿವಸಗಳ ಹಿಂದೆ ಅವರು ಒಂದು ಕಟ್ಟಡ ಶಂಕುಸ್ಥಾಪನೆ ಮಾಡುವ ಸಂದರ್ಭದಲ್ಲಿ ಮಾಡಿದ ಭಾಷಣವೊಂದರ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೆ. ಅವರು ನಿರ್ಭಯವಾಗಿ, ನಿಜವಾಗಿಯೂ ಅತ್ಯಂತ ನಿರ್ಭಯವಾಗಿ........

**ಡಾ. ದೇಶ್‌ಮುಖ್:** ಇದೆಲ್ಲಾ ಪ್ರಸ್ತುತವೇ ಎಂದು ನನಗೆ ಅನುಮಾನವಾಗುತ್ತಿದೆ.

**ಡಾ. ಅಂಬೇಡ್ಕರ್:** ಆ ಭಾಷಣ ಮಾಡುವುದಕ್ಕಿಂತ ತುಂಬ ಮೊದಲೇ ಈ ಮಸೂದೆಯನ್ನು ಮಂಡಿಸಲಾಗಿತ್ತು.

**ಶ್ರೀ ಜೆ.ಆರ್. ಕಪೂರ್:** ನಾನು ಯಾವುದೇ ಅಪ್ರಸ್ತುತವಾದ ಟೀಕೆಯನ್ನು ಮಾಡುತ್ತಿಲ್ಲ. ಈ ಮಸೂದೆ ಪೂರ್ತಿಯಾಗಿ ಅನಾವಶ್ಯಕ ಎಂಬ ಅಂಶವನ್ನು ಈ ಸದನದ ಮಾನ್ಯ ಸದಸ್ಯರಿಗೆ ಮನದಟ್ಟು ಮಾಡುವುದು ನನ್ನ ಉದ್ದೇಶವಾಗಿದೆ. ಡಾ. ಅಂಬೇಡ್ಕರ್ ಅವರಂಥ ಪ್ರಖ್ಯಾತ ನ್ಯಾಯವಾದಿಗಳೂ ಹಾಗೂ ಹೆಸರಾಂತ ವಕೀಲರೂ ಇಂಥ ಒಂದು ಅನಾವಶ್ಯಕ ಮಸೂದೆಯನ್ನು ಸಂವಿಧಾನಾತ್ಮಕವಾಗಿ ಜಾರಿಗೊಳಿಸಲು ನಮ್ಮ ಮುಂದೆ ಏಕೆ ಇಡುತ್ತಿದ್ದಾರೆ ಎಂಬುದು ಇಲ್ಲಿಯ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಸಹಜವಾಗಿಯೇ ಎದ್ದಿರುವ ಪ್ರಶ್ನೆಯಾಗಿದೆ. ಇಂಥ ಒಂದು ಸಂವಿಧಾನಾತ್ಮಕ ಕ್ರಮವನ್ನು ನಾವು ಕೈಗೊಳ್ಳುವಂತೆ ಮಾಡುವುದು ಅಗತ್ಯತೆ ಅಥವಾ ಸೂಕ್ತತೆಯ ದೃಷ್ಟಿಯಿಂದ ಅಲ್ಲ, ಅವರು ಇನ್ನಾವುದೋ ಹೊರಗಿನ ವಿಶಿಷ್ಟ ಕಾರಣವನ್ನು ಮುಂದಿಟ್ಟುಕೊಂಡು ನಮ್ಮ ಬಳಿ ಬಂದಿದ್ದಾರೆಂದು ನಾನು ಸಾಬೀತು ಮಾಡಬೇಕಾಗಿದೆ.

**ಅಧ್ಯಕ್ಷರು:** ಹಾಗಾದರೆ ಸದರಿ ಮಸೂದೆ ಕೇವಲ ಅಂಬೇಡ್ಕರ್ ಅವರಿಗೆ ಮಾತ್ರ ಸೇರಿದೆ.

**ಶ್ರೀ ಜೆ.ಆರ್. ಕಪೂರ್:** ತಾಂತ್ರಿಕವಾಗಿ ಹೇಳುವುದಾದರೆ ಈ ಮಸೂದೆ ಸರಕಾರದ್ದೆ. ಆದರೆ ಸರಕಾರವಾಗಲಿ, ನನ್ನ ಇತರ ಸಹೋದ್ಯೋಗಿಗಳಾಗಲಿ ಈ ಮಸೂದೆಯನ್ನು ನಿಜವಾಗಿಯೂ ಮನಸ್ಸಿಟ್ಟು ಗಮನಿಸಿದ್ದಾರೆಯೇ ಎಂದು ನನಗೆ ಅನುಮಾನ ಉಂಟಾಗುತ್ತಿದೆ (ಅನೇಕ ಮಂದಿ ಸದಸ್ಯರು: ಹೊ, ಹೊ) ನಾನು ಈ ವಿಷಯದಲ್ಲಿ ಡಾ. ಅಂಬೇಡ್ಕರ್ ಅವರನ್ನು ಪ್ರಶಂಸೆ ಮಾಡಬಯಸುತ್ತೇನೆ. ಇಂತಹ ಒಂದು ಮಸೂದೆ ಅಗತ್ಯ ಎಂಬುದನ್ನು ತಮ್ಮ ಸಹೋದ್ಯೋಗಿಗಳು ಸುಲಭವಾಗಿ ನಂಬುವಂತೆ ಅವರು ಮನವೊಲಿಸಬಲ್ಲರು. ಸದಸ್ಯರ ನಂಬಿಕೆಯನ್ನು ಗಳಿಸಿರುವ ಕಾರಣ, ಮಸೂದೆಯ ಆಳಕ್ಕೆ ಹೋಗಿ ಎಲ್ಲ ವಿವರಗಳನ್ನು ನೋಡುವುದು ಅಗತ್ಯವೆಂದು ಸದಸ್ಯರಿಗೆ ಅನಿಸುತ್ತಿಲ್ಲ. ಅಂಬೇಡ್ಕರ್ ಅವರ ಸಾಮರ್ಥ್ಯ ಮತ್ತು ವಿವೇಚನೆಯ ಬಗೆಗೆ ಅವರಿಗೆ ಅಪಾರ ಮೆಚ್ಚಿಗೆಯಿದೆ.

**ಅಧ್ಯಕ್ಷರು:** ಲೋಕಸಭೆಯಲ್ಲಿ ಈ ಮಸೂದೆಯನ್ನು ತರಲು ಒಪ್ಪಿದವರಲ್ಲಿ ಮಾನ್ಯ ಸದಸ್ಯರೂ ಕೂಡ ಒಬ್ಬರು ಹೌದೋ ಅಲ್ಲವೋ.

**ಶ್ರೀ ಜೆ.ಆರ್. ಕಪೂರ್:** ಸಾಧಾರಣವಾಗಿ ಲೋಕಸಭೆಯಲ್ಲಿ ಯಾವುದೇ ಮಸೂದೆಯನ್ನು ಪ್ರಸ್ತುತಪಡಿಸುವ ವಿಚಾರ ಬಂದಾಗ ಯಾರೇ ಸದಸ್ಯರು ಅದನ್ನು ಆ ಹಂತದಲ್ಲಿಯೆ ವಿರೋಧಿಸಬಾರದೆಂಬ ವಾಡಿಕೆಯಿದೆ. ಇನ್ನು ಮುಂದೆ ಇಂಥ ಸಂಪ್ರದಾಯವನ್ನು ಪಕ್ಕಕ್ಕಿಟ್ಟು ಯಾರೇ ಸದಸ್ಯರು ಒಂದು ಮಸೂದೆಯನ್ನು ಪ್ರಸ್ತುತಪಡಿಸಬೇಕೆಂಬ ವಿಚಾರದ ಪ್ರಾರಂಭದಲ್ಲೇ ಅದನ್ನು ವಿರೋಧಿಸಬಹುದೆಂದಾದರೆ ನನಗೂ ಸಂತೋಷವೇ. ಒಟ್ಟಿನಲ್ಲಿ, ಮೇಡಂ, ನಾನು ಆ ಸಂದರ್ಭದಲ್ಲಿ ಮಸೂದೆಯ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸದೆ ಹೋದದ್ದರಿಂದ ಈಗ ಅದನ್ನು ವಿರೋಧಿಸಬಾರದೆಂಬುದು ನಿಮ್ಮ ಅಭಿಪ್ರಾಯವಲ್ಲ ಎಂದು ಭಾವಿಸಿ ನನ್ನ ಮಾತುಗಳನ್ನು ಮುಂದುವರೆಸುತ್ತೇನೆ.

ನಾನು ಈ ಮಸೂದೆಯ ವಿಚಾರವಾಗಿ ಸದನಕ್ಕೆ ನಿವೇದನೆ ಮಾಡಬಯಸುವುದೇನೆಂದರೆ ಇದು ಕೇವಲ ಒಂದು ಚುನಾವಣಾ ತಂತ್ರ ಅಷ್ಟೆ. ಮಾನ್ಯ ಡಾ. ಅಂಬೇಡ್ಕರ್ ಅವರು ಈ ಸಂದರ್ಭದ

ಪೂರ್ಣಲಾಭವನ್ನು ಪಡೆಯಲು ಬಯಸುತ್ತಿದ್ದಾರೆ. ಇಲ್ಲಿರುವ ನಾವು ಹಾಗೂ ಹೊರಗಿನ ಪ್ರಪಂಚ ಹೃದಯದಾಳದಿಂದ ಪರಿಶಿಷ್ಟ ಜಾತಿಗಳ ಮತ್ತು ಪಂಗಡಗಳ ಪರವಾಗಿ ಆಸಕ್ತಿ ಹೊಂದಿರುವವರು ತಾವು, ತಾವು ಮಾತ್ರ, ಎಂಬುದನ್ನು ನಂಬಲೆಂಬ ಆಶಯ ಹೊಂದಿದ್ದಾರೆ. ಅಂದು ಸಂವಿಧಾನವನ್ನು ರಚಿಸಿದ ಮೇಧಾವಿಗಳಾಗಲೀ ಅಥವಾ ಈ ಸದನದಲ್ಲಿ ಪರಿಶಿಷ್ಟ ಜಾತಿಗಳನ್ನು ಮತ್ತು ಪಂಗಡಗಳನ್ನು ಪ್ರತಿನಿಧಿಸುತ್ತಿರುವ ಮಾನ್ಯ ಸದಸ್ಯರಾಗಲೀ ಎಂದೂ ಈ ಬಗ್ಗೆ ಯೋಚಿಸಿಯೇ ಇಲ್ಲ, ಈ ಮಸೂದೆಯನ್ನು ಜಾರಿಗೆ ತರುವುದರ ಮೂಲಕ ಅವರು ಪರಿಶಿಷ್ಟ ಜಾತಿಗಳ ಮತ್ತು ಪಂಗಡಗಳ ಉದ್ಧಾರಕರ್ತರೆಂಬ ಭಾವನೆಯನ್ನು ಜನತೆಯಲ್ಲಿ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ಭಾಗ 'ಸಿ' ಯಲ್ಲಿರುವ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪಂಗಡಗಳ ಹಿತಾಸಕ್ತಿಯನ್ನು ತಾವು ಸಂರಕ್ಷಿಸುವ ಮಹಾನ್ ಕಾರ್ಯವನ್ನು ಮಾಡುತ್ತಿದ್ದೇವೆಂಬ ಹಿರಿಮೆಯನ್ನು ಪ್ರಪಂಚದ ಎದುರಿಗೆ ವಿಧಿಸುವ ಹುನ್ನಾರ ಇಲ್ಲಿ ಕಂಡುಬರುತ್ತಿದೆ. ನಾನು ಈ ಮೊದಲು "ಉಲ್ಲೇಖಿಸಿದ ಭಾಷಣದಲ್ಲಿ ಅವರು ಮಾತನಾಡುತ್ತಾ ಈ ಸದನದಲ್ಲಿರುವ ಪರಿಶಿಷ್ಟ ಜಾತಿಗೆ ಸೇರಿದ ಮಾನ್ಯ ಸದಸ್ಯರು ಆ ಜಾತಿಗಳ ಜನರ ಹಿತಾಸಕ್ತಿಯನ್ನು ಕಾಯುವ ಬಗ್ಗೆ ಆಸಕ್ತಿ ಹೊಂದಿಲ್ಲವೆಂದು ಆರೋಪಿಸಿ ಎಲ್ಲ ಕೀರ್ತಿಯನ್ನೂ ತಾವೇ ಪಡೆದುಕೊಳ್ಳಬಯಸುತ್ತಿದ್ದಾರೆ.... (ಅಡೆತಡೆ)

**ಶ್ರೀ ಸೋನಾವಣೆ:** ಮೇಡಂ, ವ್ಯವಸ್ಥೆಯ ಪ್ರಶ್ನೆಯ ರೂಪದಲ್ಲಿ ನಾನು ತಿಳಿಯಬಯಸುವುದೇನೆಂದರೆ ಈಗ ಈ ಸದನದ ಮುಂದೆ ಇರುವ ಮಸೂದೆಗೂ ಸದನದಲ್ಲಿರುವ ಪರಿಶಿಷ್ಟ ಜಾತಿಯ ಸದಸ್ಯರನ್ನು ಕುರಿತು ಉಲ್ಲೇಖಿಸುವುದಕ್ಕೆ ಏನು ಸಂಬಂಧವಿದೆ? ಹೊರಗಡೆ ಮಾಡಿರುವ ಉಲ್ಲೇಖಗಳು ಇಲ್ಲಿಯ ಕ್ರಮಾನುಸರಣೆಯ ಹೊರಗೆ ಉಳಿಯುತ್ತದೆಯಲ್ಲವೆ?

**ಶ್ರೀ ಜೆ. ಆರ್. ಕಪೂರ್:** ನಾನು ಆ ವಿಷಯವನ್ನು ಕುರಿತು ತುಂಬಾ ಎಳೆದು ಚರ್ಚೆ ಮಾಡುತ್ತಿಲ್ಲ. ನನಗೆ ಅನಿಸುವುದೇನೆಂದರೆ......

**ಶ್ರೀ ಯತಿರಾಜುಲು ನಾಯ್ಡು:** ನಾನು ಎತ್ತಿರುವ ಕ್ರಮಲೋಪದ ಬಗ್ಗೆ ತಾವು ಒಂದು ರೂಲಿಂಗ್ ಕೊಡಲು ಸಾಧ್ಯವೆ?

**ಅಧ್ಯಕ್ಷರು:** ಸದ್ದು.....ಸದ್ದು..... ಮಾನ್ಯ ಸದಸ್ಯರು ನಾನು ಈ ವಿಷಯವಾಗಿ ರೂಲಿಂಗ್ ಕೊಡಬೇಕೆಂದು ಅಪೇಕ್ಷಿಸುತ್ತಾರೆ. ನಾನು ಹೇಳಬಯಸುವುದೇನೆಂದರೆ ಈ ಬಗ್ಗೆ ಮಾನ್ಯ ಸದಸ್ಯರ ಗಮನವನ್ನು ಈಗಾಗಲೇ ಸೆಳೆಯಲಾಗಿದೆ. ತಮ್ಮ ಹೇಳಿಕೆಯನ್ನು ಮಂಡಿಸಲು ಅವರಿಗೆ ಇನ್ನು ಕೆಲವು ನಿಮಿಷಗಳನ್ನು ಕೊಟ್ಟು, ಅನಂತರ ಇತರ ಸದಸ್ಯರಿಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶ ನೀಡಬಹುದಾಗಿದೆ.

**ಶ್ರೀ ಜೆ.ಆರ್. ಕಪೂರ್:** ಮೇಡಂ, ನಾನು ಇಲ್ಲಿ 'ಉದ್ದೇಶ' ಎಂಬ ಪದವನ್ನು ಬಳಸಿಲ್ಲದೆ ಇರಬಹುದು. ಈ ಮಸೂದೆಯನ್ನು ಮಂಡಿಸುವ ಹಿಂದೆ ಏನು ಕಾರಣಗಳಿವೆಯೆಂಬುದನ್ನು ನಾನು ತಿಳಿಯಬಯಸುತ್ತೇನೆ. ಇದು ಅಗತ್ಯ ಅಥವಾ ಸೂಕ್ತ ಎಂಬುದಕ್ಕಿಂತ ಮಿಗಿಲಾಗಿ ಮಾನ್ಯ ಕಾನೂನು ಮಂತ್ರಿಗಳು ಇದನ್ನು ಚುನಾವಣೆ ಉದ್ದೇಶಗಳಿಗಾಗಿ ಬಂಡವಾಳದ ರೂಪದಲ್ಲಿ ಬಳಸಿಕೊಳ್ಳಬಯಸಿದ್ದಾರೆ.

**ಅಧ್ಯಕ್ಷರು:** ಮಸೂದೆಯ ಹಿಂದಿರುವ ಉದ್ದೇಶವನ್ನು ಕುರಿತು ಇಷ್ಟೊಂದು ಎಳೆದಾಡುವುದಕ್ಕಿಂತ ಮಾನ್ಯ ಸದಸ್ಯರು ಅದರ ಗುಣಾವಗುಣಗಳ ಬಗ್ಗೆ ಮಾತನಾಡಬೇಕಾಗಿ ಕೋರುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ನಾನು ಈಗಾಗಲೆ ಈ ಮಸೂದೆಯ ಅನುಕೂಲಗಳ ಹಾಗೂ ಅನನುಕೂಲಗಳ ಬಗೆಗೆ ಮಾತನಾಡಿದ್ದೇನೆ. ಈಗ ಇದರ ಅನನುಕೂಲಗಳ ಕುರಿತಂತೆಯೆ ಮಾತನಾಡಬೇಕಾಗಿದೆ.

**ಸರ್ದಾರ್ ಬಿ.ಎಸ್. ಮನ್ (ಪಂಜಾಬ್):** ಇಲ್ಲಿ ಒಂದು ಕ್ರಮಾನುಸರಣೆಯ ವಿಷಯದಲ್ಲಿ ತಾವು ಉದ್ದೇಶಗಳನ್ನು ಕುರಿತಂತೆ ಚರ್ಚಿಸಲಾಗದೆಂಬ ರೂಲಿಂಗ್ ನೀಡಿದ್ದೀರಿ. ಅಂದ ಹಾಗೆ ಉದ್ದೇಶಗಳು, ಅಭಿಪ್ರಾಯಗಳು, ಗುಣವರ್ಗಗಳು ಇವುಗಳನ್ನೆಲ್ಲ ಪರಸ್ಪರ ಬೇರ್ಪಡಿಸಲು ಸಾಧ್ಯವಾಗುತ್ತದೆಯೆ?

**ಅಧ್ಯಕ್ಷರು:** ಉದ್ದೇಶಗಳನ್ನು ಕುರಿತಂತೆ ತುಂಬಾ ಎಳೆದೆಳೆದು ಪ್ರಸ್ತಾಪ ಮಾಡುವ ಅಗತ್ಯ ಇಲ್ಲ ಎಂಬ ಬಗ್ಗೆ ಮಾತ್ರ ರೂಲಿಂಗ್ ನೀಡಿರುವುದು.

**ಸರ್ದಾರ್ ಬಿ.ಎಸ್.ಮನ್:** ಒಬ್ಬರು ಯಾವುದನ್ನು ಕುರಿತಂತೆ ಒತ್ತಿ ಹೇಳಬಯಸುತ್ತಾರೊ ಅದರ ಮೇಲೆ ಅವರ ಮಾತು ಅವಲಂಬಿಸಿರುತ್ತದೆ.

**ಅಧ್ಯಕ್ಷರು:** ಅದು ಅವರವರ ಅಭಿಪ್ರಾಯ.

**ಶ್ರೀ ಬಿ.ಆರ್. ಕಪೂರ್:** ಈ ವಿಷಯವಾಗಿ ಇನ್ನೂ ಹೆಚ್ಚು ಪ್ರಸ್ತಾಪಿಸುವುದು ಬೇಡವೆಂದರೆ, ನಾನು ಇದನ್ನು ಇನ್ನೂ ಎಳೆಯಲು ಹೋಗುವುದಿಲ್ಲ.

**ಡಾ. ಅಂಬೇಡ್ಕರ್:** ನೀವು ಖಂಡಿತ ಮಾಡಬಹುದು. ನಾನು ಇಂಥದನ್ನೆಲ್ಲ ೨೫ ವರ್ಷಗಳಿಗಿಂತಲೂ ಹೆಚ್ಚು ಕಾಲ ಅನುಭವಿಸಿದ್ದೇನೆ.

**ಶ್ರೀ ಬಿ.ಆರ್. ಕಪೂರ್:** ಮಾನ್ಯ ಕಾನೂನುಮಂತ್ರಿಗಳು ಸಾಕಷ್ಟು ಧೈರ್ಯವಂತರು, ಧಾರ್ಷ್ಟ್ಯದಿಂದ ಕೂಡಿರುವವರು, ಸರ್ಕಾರದಲ್ಲಿರುವ ತಮ್ಮ ಸಹೋದ್ಯೋಗಿಗಳನ್ನು ಧಿಕ್ಕರಿಸುವ ಮಟ್ಟಕ್ಕೆ ಹೋಗಬಲ್ಲವರೆಂದು ನಾನು ಭಾವಿಸಿದ್ದೇನೆ. ಆ ಕೆಚ್ಚು, ಆ ದೃಢತೆ ಅವರಲ್ಲಿದೆ. ಒಬ್ಬ ಕ್ಯಾಬಿನೆಟ್ ಮಂತ್ರಿಗಳು ಸದನದಿಂದ ಹೊರಗಡೆ ಇನ್ನೊಬ್ಬ ಕ್ಯಾಬಿನೆಟ್ ಮಂತ್ರಿಗಳನ್ನು ಅವಹೇಳನ ಮಾಡುವುದು ಉಚಿತವೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ. (ಒಬ್ಬ ಮಾನ್ಯ ಸದಸ್ಯರು : ಎಲ್ಲಾ ಅಪ್ರಸ್ತುತ) ನನಗೆ ಅನಿಸುವಂತೆ ಇದೇನೂ ಅಪ್ರಸ್ತುತವಲ್ಲ. ಸಂಸತ್ತಿನಲ್ಲಿ ಕುಳಿತಿರುವ ನಾವು ನಮ್ಮಲ್ಲಿ ಪ್ರಜಾಪ್ರಭುತ್ವ ಸರಿಯಾಗಿ ನಡೆಯುತ್ತದೆ ಎಂಬುದನ್ನು ಗಮನಿಸಿ ನೋಡುತ್ತೇವೆ. ಪ್ರತಿಯೊಂದು ಸಂದರ್ಭದಲ್ಲೂ ಇಲ್ಲಿರುವ ಮಾನ್ಯ ಸದಸ್ಯರು ನಮ್ಮ ಸರ್ಕಾರದ ಪ್ರಜಾಪ್ರಭುತ್ವ ತತ್ತ್ವಗಳಿಗೆ ವಿರುದ್ಧವಾದುದು ಏನೂ ನಡೆಬಾರದೆಂಬ ಬಗ್ಗೆ ಎಚ್ಚರಿಕೆ ವಹಿಸಿ ನೋಡಿಕೊಳ್ಳಬೇಕು. ಮೇಡಂ, ತಮ್ಮಲ್ಲಿ ಒಬ್ಬ ಸಂಪುಟದರ್ಜೆ ಸಚಿವರು ಮತ್ತು ಅವರ ಸಂಪುಟ ಸಹೋದ್ಯೋಗಿಗಳ ನಡುವೆ ಈ ಬಗೆಯ ಸಂಗತಿಗಳು ಇದೆಯೆಂಬುದರ ಕುರಿತು ಅದಕ್ಕೂ ಬೇಗ ನಮ್ಮ ಆತಂಕವನ್ನು ವ್ಯಕ್ತಪಡಿಸುವುದು ತುಂಬ ಅಗತ್ಯ.

ನನ್ನ ಮಾತುಗಳನ್ನು ಇಲ್ಲಿಗೆ ಮುಕ್ತಾಯ ಮಾಡುವುದಕ್ಕಿಂತ ಮೊದಲು ನಾನು ಈ ಸದನಕ್ಕೆ ನಿವೇದಿಸುವುದೇನೆಂದರೆ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಹಕ್ಕುಗಳನ್ನು ಮತ್ತು ಸವಲತ್ತುಗಳನ್ನು ಕಾಪಾಡುವ ಆಸಕ್ತಿ ಮಾನ್ಯ ಕಾನೂನು ಮಂತ್ರಿಯವರಿಗೆ ಇರುವಷ್ಟೇ ಪ್ರಮಾಣದಲ್ಲಿ ಸದನದ ಪ್ರತಿಯೊಬ್ಬ ಸದಸ್ಯರಿಗೂ ಇದೆ. ಅಷ್ಟೇ ಏಕೆ, ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಇದೆ ಎಂಬುದು ನನ್ನ ಭಾವನೆ. ಆ ಸಮುದಾಯಗಳ ಮಂದಿ ಎಲ್ಲ ದೃಷ್ಟಿಗಳಿಂದಲೂ ನಮಗೆ ಸಮಾನರು, ನಮಗಿರುವಂತೆಯೆ ರಕ್ತ ಮಾಂಸಗಳನ್ನು ಹೊಂದಿರುವವರು ಎಂದು ಹೇಳಬಯಸುತ್ತೇನೆ. ಹಾಗಾಗಿ ಅವರನ್ನೆಲ್ಲ ಸಮಸ್ಕಂಧರಾಗಿ ನೋಡಬೇಕೆಂಬುದೇ ನನ್ನ ಇಚ್ಛೆ. ಜನಸಂಖ್ಯೆಯ ಆಧಾರವನ್ನು ಬದಿಗಿಟ್ಟು ಅವರ ಹಕ್ಕಿನಲ್ಲಿರುವುದಕ್ಕಿಂತ ಹೆಚ್ಚು ಸವಲತ್ತುಗಳನ್ನು ಒದಗಿಸಿಕೊಡಲು ನಾನು ಸಿದ್ಧ. ಅವರಿಗೆ ಯಾವುದೇ ಪ್ರಮಾಣದಲ್ಲಿ ಪ್ರಾತಿನಿಧ್ಯ ದೊರೆಯುವುದಾದರೂ ಆ ಬಗ್ಗೆ ನನಗೆ ಸ್ವಲ್ಪವೂ ಅಸಮಾಧಾನವಿಲ್ಲ. ಆದರೆ ನಾನು ನಿವೇದನೆ ಮಾಡಿಕೊಳ್ಳುವುದೇನೆಂದರೆ ನಾನು ಈಗಾಗಲೆ ಉಲ್ಲೇಖಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ನಮ್ಮ ಮುಂದೆ

ಸದರಿ ಮಸೂದೆಯನ್ನು ತರುವ ಅಗತ್ಯ ಸ್ವಲ್ಪವೂ ಇರಲಿಲ್ಲ. ಇಷ್ಟೇ ನಾನು ಹೇಳಬಯಸುವುದು.

**ಶ್ರೀ ರಾಜಬಹಾದುರ್ (ರಾಜಸ್ಥಾನ):** ಮಾನ್ಯ ಸದಸ್ಯರು ಇಷ್ಟೊಂದು ವ್ಯಗ್ರರಾಗುವ ಅಗತ್ಯ ಏನಿದೆ? ಇದು ಏನೇ ಆದರೂ ಅದರ ಮೊದಲ ಚುನಾವಣಾ ಭಾಷಣವಲ್ಲವೆ.

**ಶ್ರೀ ಚಂದ್ರಿಕಾರಾಮ್ (ಬಿಹಾರ್):** ಪರಿಶಿಷ್ಟ ಜಾತಿಗಳನ್ನು ಕುರಿತು ನನ್ನ ಮಾನ್ಯಮಿತ್ರ ಶ್ರೀ ಕಪೂರ್ ಅವರ ಭಾಷಣವನ್ನು ಕೇಳಿ ನನಗೆ ಬಹಳ ಖೇದವಾಗಿದೆ. ಕಳೆದ ಅನೇಕಾನೇಕ ಶತಮಾನಗಳಿಂದ ದೇಶದ ಉದ್ದಗಲಕ್ಕೂ ಪರಿಶಿಷ್ಟ ಜಾತಿಗಳನ್ನು ಅಲಕ್ಷಿಸಿರುವ ವಿಚಾರ ನಿಸ್ಸಂದೇಹವಾಗಿದೆ. ಆದರೆ ಭಾರತಸರ್ಕಾರ ಕೆಲವು ವರ್ಗಗಳ ಹಿಂದೆ ಕೇಂದ್ರ ಶಾಸನ ಪ್ರದೇಶಗಳ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡ ತರುವಾಯ ನಿಜವಾಗಿಯೂ ಅಲ್ಲಿ ತುಂಬ ಕೆಟ್ಟದ್ದಾಗಿದ್ದ ಅವರ ಪರಿಸ್ಥಿತಿ ಇನ್ನೂ ಹೆಚ್ಚಿನ ಕಳವಳಕ್ಕೆ ಈಡಾಗಿದೆ. ನಮ್ಮ ಸಂವಿಧಾನದಲ್ಲಿ ಭಾಗ ಎ ಮತ್ತು ಭಾಗ ಬಿ ಎಂಬುದಾಗಿ ಉಲ್ಲೇಖಿಸಿರುವ ಇತರ ರಾಜ್ಯಗಳಲ್ಲಿ ವಿಧಾನಸಭೆಗಳಿಗೆ, ಚುನಾಯಿತ ಸಭೆ ಮಂಡಳಿ ಪರಿಷತ್ತುಗಳು ಎಲ್ಲ ಇದೆ. ಆದರೆ ಕೇಂದ್ರ ಶಾಸನಪ್ರದೇಶಗಳಲ್ಲಿ ಚೀಫ್‌ಕಮೀಷನರ್ ಅಧ್ಯಕ್ಷರಾಗಿರುವ ಸ್ಥಳೀಯ ಸಲಹಾ ಸಮಿತಿಗಳು ಅಸ್ತಿತ್ವದಲ್ಲಿವೆ. ಅವರು ಯಾರ ಬಗ್ಗೆಯೂ ಕಾಳಜಿ ವಹಿಸಿದಂತಿಲ್ಲ. ಸಂವಿಧಾನಸಭೆಯಲ್ಲಿ (Constituent Assembly) ನಾವು ಅನುಚ್ಛೇದ ೩೪೧ ರ ಅಡಿಯಲ್ಲಿ ಚೀಫ್ ಕಮೀಷನರುಗಳನ್ನು ಕೂಡ ಸೇರಿಸತಕ್ಕದ್ದೆಂದು ಆಗ್ರಹಿಸಿ ತಿದ್ದುಪಡಿಯೊಂದನ್ನು ಮಂಡಿಸಿದ್ದೆವು. ಪರಿಚ್ಛೇದ ಹೀಗೆ ಹೇಳುತ್ತದೆ:

> ''ರಾಷ್ಟ್ರಪತಿಗಳು, ರಾಜ್ಯವೊಂದರ ರಾಜ್ಯಪಾಲರೊಡನೆ ಅಥವಾ ರಾಜ ಪ್ರಮುಖರೊಡನೆ ಸಮಾಲೋಚಿಸಿದ ನಂತರ, ಸಾರ್ವಜನಿಕ ಪ್ರಕಟಣೆಯ ಮೂಲಕ ಜಾತಿಗಳು, ಜನಾಂಗಗಳು ಅಥವಾ ಬುಡಕಟ್ಟುಗಳನ್ನು ಇಲ್ಲವೆ ಜಾತಿಗಳೊಳಗೆ, ಜನಾಂಗಗಳೊಳಗೆ ಅಥವಾ ಬುಡಕಟ್ಟುಗಳೊಳಗೆ ಭಾಗಗಳನ್ನು ಅಥವಾ ಗುಂಪುಗಳನ್ನು ಮಾಡಬಹುದಾಗಿದ್ದು, ಸಂವಿಧಾನದ ಉದ್ದೇಶಗಳಿಗಾಗಿ ಆಯಾ ರಾಜ್ಯಕ್ಕೆ ಸಂಬಂಧಪಟ್ಟಂತೆ ಅವುಗಳನ್ನು ಪರಿಶಿಷ್ಟ ಜಾತಿಗಳೆಂದು ಪರಿಗಣಿಸಬಹುದಾಗಿದೆ.''

ಆ ಕಾಲಕ್ಕೆ ವಿದ್ವಾಂಸರಾದ ನಮ್ಮ ಮಾನ್ಯ ಕಾನೂನು ಮಂತ್ರಿಗಳು ಭಾಗ ಸಿ ಗೆ ಸೇರುವ ಈ ರಾಜ್ಯಗಳ ಆಡಳಿತವನ್ನು ವಿಧಾಯಕ ಸಂವಿಧಾನದ ಅನುಚ್ಛೇದ ೨೩೯ರನ್ವಯ ರಾಷ್ಟ್ರಪತಿಗಳೇ ನೋಡಿಕೊಳ್ಳುವುದರಿಂದ ಅನುಚ್ಛೇದ ೩೪೧ರಡಿಯಲ್ಲಿ ಚೀಫ್ ಕಮೀಷನರುಗಳನ್ನು ಸೇರಿಸುವ ಅಗತ್ಯವಿಲ್ಲವೆಂದು ಹೇಳಿದ್ದರು. ಸಮಸ್ಯೆ ವಾಸ್ತವವಾಗಿ ಶುರುವಾಗಿದ್ದು ಅಲ್ಲಿಂದಲೇ. ಚೀಫ್ ಕಮೀಷನರುಗಳನ್ನು ಮೇಲ್ಕಂಡ ಅನುಚ್ಛೇದದಲ್ಲಿ ಸೇರಿಸದೆ ಹೋಗಿರುವುದರಿಂದ ರಾಷ್ಟ್ರಪತಿಗಳು ಭಾಗ ಸಿ ರಾಜ್ಯಗಳಿಗೆ ಸಂಬಂಧಪಟ್ಟಂತೆ ಅಧಿಸೂಚನೆಗಳನನ್ನು ಹೊರಡಿಸುವ ಸಲುವಾಗಿ ಯಾರ ಜೊತೆಯಲ್ಲಿಯೂ ಪರಾಮರ್ಶಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಇವತ್ತು ಈ ಮಸೂದೆಯನ್ನು ಪ್ರಸ್ತುತಪಡಿಸುವ ಸಂದರ್ಭ ಒದಗಿಬಂದಿದೆ.

**ಶ್ರೀ ಜೆ.ಆರ್. ಕಪೂರ್:** ನಾನು ಹೇಳಿದ್ದೇನೆಂದರೆ ಅನುಚ್ಛೇದ ೩೯೨ ರಡಿಯಲ್ಲಿ ರಾಷ್ಟ್ರಪತಿಯವರು ಅನುಚ್ಛೇದ ೩೪೧ ಕ್ಕೆ ಅಗತ್ಯವಾದ ಅಳವಡಿಕೆಗಳನ್ನು ಮತ್ತು ಸೇರ್ಪಡೆಗಳನ್ನು ಮಾಡಬಹುದಾಗಿದ್ದು, ಭಾಗ ಸಿ ರಾಜ್ಯಗಳಿಗೆ ಸಂಬಂಧಪಟ್ಟಂತೆ ಕೂಡ ಪರಿಶಿಷ್ಟ ಜಾತಿಗಳನ್ನು ನಿರ್ದಿಷ್ಟಗೊಳಿಸುವ ಅವಕಾಶವಿರುತ್ತದೆ ಎಂದು.

**ಶ್ರೀ ಚಂದ್ರಿಕಾರಾಮ್:** ಆದರೆ ಇಲ್ಲಿ ಒಂದು ತಾಪತ್ರಯವಿದೆ. ನೀವು ಅನುಚ್ಛೇದ ೩೪೧ ರ ಖಂಡ (೨) ನ್ನು ಓದಿದಾಗ ಅಲ್ಲಿ ಈ ರೀತಿ ಕಂಡುಬರುತ್ತದೆ:

> "(೨) ಖಂಡ (೧) ರಡಿಯಲ್ಲಿ ಜಾರಿಮಾಡಲಾಗಿರುವ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ಯಾವುದೇ ಜಾತಿ, ಜನಾಂಗ ಅಥವಾ ಬುಡಕಟ್ಟನ್ನು ಇಲ್ಲದೆ ಯಾವುದೇ ಜಾತಿ, ಜನಾಂಗ ಅಥವಾ ಬುಡಕಟ್ಟಿನ ಭಾಗವನ್ನು ಅಥವಾ ಗುಂಪನ್ನು ಸಂಸತ್ತು ಕಾನೂನಿನ ಮೂಲಕ ಸೇರಿಸಬಹುದು ಇಲ್ಲವೆ ತೆಗೆದುಹಾಕಬಹುದು. ಇದನ್ನು ಹೊರತಾಗಿಸಿ ಸದರಿ ಖಂಡದನ್ವಯ ಜಾರಿಮಾಡಲಾದ ಮೇಲ್ಕಂಡ ಅಧಿಸೂಚನೆ ತದನಂತರದ ಇತರ ಯಾವುದೇ ಅಧಿಸೂಚನೆಯಿಂದ ಬದಲಾಗತಕ್ಕದ್ದಲ್ಲ."

ಆದ್ದರಿಂದ, ಈ ಅನುಚ್ಛೇದದ ಅಡಿಯಲ್ಲಿ ಇನ್ನೊಂದು ಅಧಿಸೂಚನೆಯನ್ನು ರಾಷ್ಟ್ರಪತಿಯವರು ಹೊರಡಿಸುವ ಸ್ಥಿತಿಯಲ್ಲಿಲ್ಲ. ಕೇವಲ ಸಂಸತ್ತು ಮಾತ್ರ ಹಾಗೆ ಮಾಡುವ ಸಾಮರ್ಥ್ಯ ಹೊಂದಿರುತ್ತದೆ.

**ಶ್ರೀ ಜೆ.ಆರ್. ಕಪೂರ್:** ಇನ್ನೊಂದು ಅಧಿಸೂಚನೆಯನ್ನು ಹೊರಡಿಸುವ ಪ್ರಶ್ನೆಯೇ ಏಳುವಂತಿಲ್ಲ, ಏಕೆಂದರೆ ರಾಷ್ಟ್ರಪತಿಯವರು ಭಾಗ ಸಿ ರಾಜ್ಯಗಳಿಗೆ ಸಂಬಂಧಪಟ್ಟಂತೆ ಈವರೆಗೆ ಯಾರ ಅಧಿಸೂಚನೆಯನ್ನೂ ಹೊರಡಿಸಿಲ್ಲ.

**ಶ್ರೀ ಚಂದ್ರಿಕಾರಾಮ್:** ಈ ವಿಷಯವನ್ನು ಕಾನೂನು ಸಚಿವಾಲಯದಲ್ಲಿ, ಗೃಹ ಸಚಿವಾಲಯಕ್ಕೆ ಹಾಗೂ ರಾಜ್ಯಗಳ ಸಚಿವಾಲಯಗಳಿಗೆ ಕೂಡ ಕೊಂಡೊಯ್ಯಲಾಗಿತ್ತು. ಈ ಸದನದಲ್ಲಿ ಪರಿಶಿಷ್ಟ ಜಾತಿಗಳನ್ನು ಪ್ರತಿನಿಧಿಸುವ ನಾವು ಒಂದು ಸಚಿವಾಲಯದಿಂದ ಇನ್ನೊಂದು ಸಚಿವಾಲಯಕ್ಕೆ ಓಡಾಡಿ ಈ ಬಗ್ಗೆ ಒಬ್ಬರಾದ ಮೇಲೊಬ್ಬರು ಮಂತ್ರಿಗಳನ್ನು ಕೂಡ ಸಂಪರ್ಕಿಸಿ ಮಾತನಾಡಿದ್ದೇವೆ. ಇದಕ್ಕೆ ಸಂವಿಧಾನಾತ್ಮಕವಾಗಿ ಅವಕಾಶವಿರುವುದಿಲ್ಲ. ಹಾಗಾಗಿ ಭಾಗ ಸಿ ರಾಜ್ಯಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಗಳನ್ನು ಜಾರಿ ಮಾಡಲಾಗದು ಎಂದೇ ಅವರಲ್ಲಿ ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ಮೂಲ ಮಸೂದೆಯನ್ನು ಇಲ್ಲಿ ಪ್ರಸ್ತುತಪಡಿಸಿದಾಗ, ನಾನು ಈ ಸದನದಲ್ಲಿ ಅದಕ್ಕೊಂದು ತಿದ್ದುಪಡಿ ಸೂಚಿಸಿದೆ. ಆದರೆ ಆ ಕಾರಣ ಮಾತ್ರದಿಂದಲೇ ಅದು ಅಂಗೀಕೃತವಾಗಲಿಲ್ಲ. ಪರಿಶಿಷ್ಟ ಜಾತಿಗಳಿಗೆ ಸೇರಿದ ಹಲವಾರು ಸಂಘಟನೆಗಳು, ಅದರಲ್ಲೂ ನಾನು ಪ್ರಧಾನ ಕಾರ್ಯದರ್ಶಿಯಾಗಿರುವ ಭಾರತೀಯ ದಲಿತವರ್ಗಗಳ ಲೀಗ್ ಎಂಬ ಸಂಘಟನೆ, ರಾಷ್ಟ್ರಪತಿಯವರಿಗೆ ಒಂದು ದೀರ್ಘವಾದ ಮನವಿಯನ್ನೇ ಸಲ್ಲಿಸಿತು. ಅದರ ಪ್ರತಿಗಳನ್ನು ಪ್ರಧಾನಮಂತ್ರಿಗಳಿಗೆ, ಕಾನೂನು ಮಂತ್ರಿಗಳಿಗೆ ಹಾಗೂ ಮಾನ್ಯ ಶ್ರೀ ಜಗಜೀವನರಾಮ್ ಅವರಿಗೆ ಕೂಡ ಒಪ್ಪಿಸಲಾಯಿತು. ಸಾಕಷ್ಟು ಆಲೋಚನೆಯನ್ನು ಮಾಡಿದ ನಂತರ ಈ ಪ್ರಸ್ತಾಪವನ್ನು ಸದನದ ಮುಂದೆ ತರಲಾಗಿದೆ. ಮೇಡಂ, ನಾಡಿನ ಕೇಂದ್ರ ಶಾಸನ ಪ್ರದೇಶಗಳ ಈ ನತದೃಷ್ಟ ಜನರಿಗೆ ನ್ಯಾಯ ದೊರಕಿಲ್ಲವೆಂದು ಈ ಸದನಕ್ಕೆ ನಾನು ತಿಳಿಸಬಯಸುತ್ತೇನೆ. ಬೇರೆ ಬೇರೆ ರಾಜ್ಯಗಳಲ್ಲಿರುವ ರಾಜ್ಯಸರ್ಕಾರಗಳ ವಿರುದ್ಧ ನಾವು ಬೇಕಾದಷ್ಟು ಮಾತಾಡುತ್ತೇವೆ, ಆದರೆ ಭಾಗ ಸಿ ಗೆ ಸೇರಿದ ರಾಜ್ಯಗಳ ಗತಿಯೇನು? ನನ್ನದೇ ಸ್ವಂತ ರಾಜ್ಯದಿಂದ ಬಿಹಾರದಲ್ಲಿ ಹರಿಜನರಿಗೆ ಓದುವ, ಬರೆಯುವ ಹಾಗೂ ನೌಕರಿಯನ್ನು ಪಡೆದುಕೊಳ್ಳುವ ಎಲ್ಲ ಸೌಲಭ್ಯಗಳೂ ಇವೆ. ಆದರೆ ಇದಕ್ಕೆ ಪ್ರತಿಯಾಗಿ ಕೇಂದ್ರಶಾಸನ ಪ್ರದೇಶಗಳಲ್ಲಿ ನಾವು ಕಾಣುವುದಾದರೂ ಏನನ್ನು? ಹರಿಜನರಿಗೆ ಶಿಕ್ಷಣ ಕೂಡ ಉಚಿತವಾಗಿ ದೊರೆಯುತ್ತಿಲ್ಲ. ವಿದ್ಯಾರ್ಥಿವೇತನ ಹಾಗೂ ಇತರ ಸೌಲಭ್ಯಗಳನ್ನು ಒದಗಿಸುವ ಯಾವುದೇ ವ್ಯವಸ್ಥೆಯಿಲ್ಲ. ಈ ವಿಷಯಗಳ ಬಗ್ಗೆ ಪರಿಶೀಲಿಸಲು ಭಾರತ

ಸರ್ಕಾರ ಒಂದು ಮಂಡಳಿಯನ್ನು ನೇಮಕಮಾಡಿದೆ. ಕಳೆದ ವರ್ಷ ಕಾಲೇಜುಗಳಲ್ಲಿ ಓದುತ್ತಿದ್ದ ಸುಮಾರು ನೂರು ಮಂದಿ ವಿದ್ಯಾರ್ಥಿಗಳಿಂದ ಅವರಿಗೆ ಅರ್ಜಿಗಳು ಬಂದಿದ್ದವು. ಆದರೆ ವಿದ್ಯಾರ್ಥಿವೇತನ ದೊರೆತದ್ದು ಕೇವಲ ಐದರಿಂದ ಏಳು ವಿದ್ಯಾರ್ಥಿಗಳಿಗೆ ಮಾತ್ರ. ಆದರೆ ಇತರ ಅನೇಕ ರಾಜ್ಯಗಳಲ್ಲಿ, ಉದಾಹರಣೆಗೆ ನಾನು ಪ್ರತಿನಿಧಿಸುತ್ತಿರುವ ಬಿಹಾರ ರಾಜ್ಯದಲ್ಲಿ, ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ತಿಂಗಳಿಗೆ ರೂ. ೩೫/– ಶಿಷ್ಯವೇತನ ದೊರೆಯುತ್ತದೆ. ಹಾಗಾಗಿ ಈ ಕೇಂದ್ರ ಶಾಸನ ಪ್ರದೇಶಗಳಲ್ಲಿ ಇರುವ ಜನರ ಪರಿಸ್ಥಿತಿ ನಿಜವಾಗಿಯೂ ತುಂಬ ಹದಗೆಟ್ಟಿದೆ. ಈ ಜನರನ್ನು ಪ್ರತಿನಿಧಿಸುವ ವಿಚಾರಕ್ಕೆ ಬಂದರೆ, ಈ ಸದನದಲ್ಲಿ ಅವರ ಅಹವಾಲುಗಳನ್ನು ಹೇಳುವ ಯಾವ ಪ್ರತಿನಿಧಿಯೂ ಇಲ್ಲ. ಕೇಂದ್ರ ಸರ್ಕಾರ ಅವರನ್ನು ಯಾವಾಗಲೂ ಮೂಲೆಗುಂಪು ಮಾಡಿದೆ.

ಭಾಗ ಸಿ ರಾಜ್ಯಗಳಲ್ಲಿನ ಆಡಳಿತದ ಜವಾಬ್ದಾರಿ ಕೇಂದ್ರ ಸಚಿವ ಸಂಪುಟಕ್ಕೆ ಸೇರಿದ್ದು. ವಿದ್ವಾಂಸರಾದ ಕಾನೂನು ಸಚಿವರು ಕೂಡ ಅಲ್ಲಿಯ ಒಬ್ಬ ಸದಸ್ಯರು. ಅವರು ಸಚಿವ ಸಂಪುಟದಲ್ಲಿರುವ ಕಳೆದ ಈ ಮೂರು ನಾಲ್ಕು ವರ್ಷಗಳಲ್ಲಿ ಈ ಜನರಿಗಾಗಿ ಏನು ಮಾಡಿದ್ದಾರೆ ಎಂದು ನಾನು ಕೇಳಬಯಸುತ್ತೇನೆ. ತಮ್ಮನ್ನು ತಾವು ಪರಿಶಿಷ್ಟ ಜಾತಿಗಳ ಸಂರಕ್ಷಕರೆಂದು, ಉದ್ಧಾರಕರೆಂದು ಕರೆದುಕೊಳ್ಳುವ ಕಾನೂನು ಮಂತ್ರಿಗಳು ಸಂವಿಧಾನ ಸಭೆಯಲ್ಲಿ ಈ ವಿಷಯವಾಗಿ ಮೌನವಹಿಸಿದ್ದರು. ಹಾಗೆಯೆ ಭಾಗ ಸಿ ರಾಜ್ಯಗಳಿಗೆ ನೀಡಬೇಕಾದ ಪ್ರಾತಿನಿಧ್ಯವನ್ನು ಕುರಿತಂತೆ ಮಸೂದೆಯನ್ನು ಕಳೆದಬಾರಿ ಪ್ರಸ್ತುತಪಡಿಸಿದ ಸಂದರ್ಭದಲ್ಲಿ ಅವರು ಸುಮ್ಮನೆ ಇದ್ದರು. ಆದ್ದರಿಂದ, ಈಗ ಅವರು ಜನಗಳಿಗೆ ಪ್ರಾತಿನಿಧ್ಯ ನೀಡುವ ಸಲುವಾಗಿ ಮಸೂದೆಯನ್ನು ಪ್ರಸ್ತುತಪಡಿಸಲು ಮುಂದೆ ಬಂದರೆ, ಈ ಸದನದ ಯಾವುದೇ ಸದಸ್ಯರಿಂದ ಅದಕ್ಕೆ ವಿರೋಧ ಬರಕೂಡದು. ನಮಗೆಲ್ಲ ಗೊತ್ತಿರುವಂತೆ, ಈ ಕೇಂದ್ರ ಶಾಸನ ಪ್ರದೇಶಗಳಲ್ಲಿರುವ ಪರಿಶಿಷ್ಟ ಜಾತಿಗಳಿಗೆ ಸೇರಿದ ಜನರ ಸಂಖ್ಯೆ ಸುಮಾರು ಹದಿನೈದರಿಂದ ಇಪ್ಪತ್ತುಲಕ್ಷಗಳವರೆಗೆ ಇರಬಹುದು. ನಾನು ಇದಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿಯನ್ನು ಮುಂದಿಟ್ಟಿದ್ದು, ಅದರ ಪ್ರಕಾರ ಎಲ್ಲೆಲ್ಲಿ ಅವರಿಗೆ ಪ್ರಾತಿನಿಧ್ಯ ದೊರೆತಿಲ್ಲವೊ, ಉದಾಹರಣೆಗೆ ಕೊಡಗು, ಅಜ್ಮೀರ, ತ್ರಿಪುರ, ಇಂತಹ ಎಡೆಗಳಲ್ಲಿ ಅವರಿಗೆ ಪ್ರಾತಿನಿದ್ಯ ದೊರಕಿಸಿಕೊಡಬೇಕು. ಆ ಪ್ರದೇಶಗಳಲ್ಲಿರುವ ಪರಿಶಿಷ್ಟಜಾತಿಯ ಜನಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಗೂ ಸೇರಿಸಿಲ್ಲ. ಕಾನೂನು ಮಂತ್ರಿಗಳು ನನ್ನ ತಿದ್ದುಪಡಿಯನ್ನು ಅಂಗೀಕರಿಸಿ ಈ ಜನರನ್ನು ಪರಿಶಿಷ್ಟ ಜಾತಿಗಳೆಂದು ಪಟ್ಟಿಗೆ ಸೇರಿಸುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಈ ಜನ ಎಲ್ಲೆಲ್ಲಿ ಇದ್ದಾರೊ, ಅವರಿಗೆ ಪರಿಷತ್ತುಗಳಲ್ಲಿ, ವಿಧಾನಸಭೆಗಳಲ್ಲಿ ಹಾಗೂ ಸಂಸತ್ತಿನಲ್ಲಿ ಪ್ರಾತಿನಿಧ್ಯ ನೀಡಬೇಕೆಂದು ನಾನು ಹೇಳುತ್ತಿಲ್ಲ. ಅದು ನನ್ನ ಹಕ್ಕೊತ್ತಾಯ ಅಲ್ಲ. ಜನಸಂಖ್ಯೆಯ ದೃಷ್ಟಿಯಿಂದ ಈ ರೀತಿಯ ಪ್ರಾತಿನಿಧ್ಯ ಅಲ್ಲಿ ಅಗತ್ಯವಾಗುವುದಿಲ್ಲವೆನಿಸಿದರೆ, ಅವರಿಗೆ ಪ್ರಾತಿನಿಧ್ಯಕೊಡಬೇಡಿ. ಅದಕ್ಕೆ ಪ್ರತಿಯಾಗಿ, ಜನಸಂಖ್ಯೆಯ ದೃಷ್ಟಿಯಿಂದ ಹಾಗೆ ಅವರಿಗೆ ಪ್ರಾತಿನಿಧ್ಯಕೊಡಬೇಕೆನಿಸಿದರೆ, ದಯವಿಟ್ಟು ಅವರಿಗೆ ಪ್ರಾತಿನಿಧ್ಯಕೊಡಿ. ಹಾಗೆಯೆ ಅವರ ಜೊತೆಯಲ್ಲಿ ಸರಿಯಾಗಿ ನಡೆದುಕೊಳ್ಳಬೇಕಾದರೆ, ಅವರಿಗೆ ನ್ಯಾಯ ದೊರಕಿಸಬೇಕಾದರೆ, ಅವರನ್ನು ಪರಿಶಿಷ್ಟ ಜಾತಿಗಳ ಪಟ್ಟಿಗೆ ಸೇರಿಸಿ ಅದರಿಂದ ಅವರಿಗೆ ಶಿಕ್ಷಣ, ಉದ್ಯೋಗ, ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಹಾಗೂ ಕುಡಿಯುವ ನೀರಿನ ಸೌಕರ್ಯ ದೊರೆಯುವಂತೆ ಮಾಡಿಕೊಡಿ. ಇದೇ ನನ್ನ ವಾದ. ನನ್ನ ಅಭಿಪ್ರಾಯದಲ್ಲಿ ಹೇಳಬೇಕೆಂದರೆ ಕೇಂದ್ರ ಸರ್ಕಾರ ಈ ಮಂದಿಗೆ ಯಾವುದೇ ರೀತಿಯ ನ್ಯಾಯವನ್ನೂ ಒದಗಿಸಿಲ್ಲ. ಈ ಜವಾಬ್ದಾರಿಯ ಹೆಚ್ಚಿನ ಭಾಗ ಮುಖ್ಯವಾಗಿ ನಮ್ಮ ಸಚಿವ ಸಂಪುಟದಲ್ಲಿರುವ ಒಬ್ಬರು ಹರಿಜನ ಮಂತ್ರಿಗಳ ಮೇಲೆ ಬೀಳುತ್ತದೆ. ಅದರಲ್ಲೂ ವಿಶೇಷವಾಗಿ ಡಾ.

ಅಂಬೇಡ್ಕರ್ ಇದಕ್ಕೆ ವಿಶೇಷವಾಗಿ ಹೊಣೆಗಾರರಾಗುತ್ತಾರೆ. ಅವರು ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳನ್ನು ಮಾಡುತ್ತಾ ಸಂಸತ್ತಿನಲ್ಲಿರುವ ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಬುಡಕಟ್ಟು ಪಂಗಡಗಳ ಮಂದಿ ಏನೂ ಮಾಡುತ್ತಿಲ್ಲವೆಂದು ಹೇಳುತ್ತಿರುತ್ತಾರೆ. ಡಾ. ಅಂಬೇಡ್ಕರ್ ಅವರ ಈ ನಡೆವಳಿಕೆ ಸೂಕ್ತವಲ್ಲ ಮತ್ತು ಅದು ಸಮರ್ಥನೀಯವೂ ಅಲ್ಲ, ಅದರ ಅಗತ್ಯ ಮೊದಲೇ ಇಲ್ಲ, ಹಾಗಾಗಿ, ನಾವು ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಯಲ್ಲಿ ಕೆಲಸ ಮಾಡುತ್ತಿರುವುದರಿಂದ, ನಮ್ಮ ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ವಯಸ್ಕಮತದಾನದ ಸವಲತ್ತನ್ನು ಒದಗಿಸಿಕೊಟ್ಟಿರುವುದರಿಂದ, ಕೇಂದ್ರಶಾಸನ ಪ್ರದೇಶಗಳಲ್ಲಿರುವ ಈ ಬಡಪಾಯಿಗಳಿಗೆ ವಯಸ್ಕ ಮತದಾನದ ಅವಕಾಶ ಹಾಗೂ ಪ್ರಾತಿನಿಧ್ಯ ದೊರೆಯುವುದಾದರೆ, ಇದಕ್ಕೆ ಯಾರೂ ಅಡ್ಡಬರಬಾರದು. ಒಂದು ವೇಳೆ ಯಾರಾದರೂ ಮಾನ್ಯ ಸದಸ್ಯರು ಎದ್ದು ನಿಂತು ಇದಕ್ಕೇ ವಿರೋಧ ವ್ಯಕ್ತಪಡಿಸುವುದಾದರೆ, ಅವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ತತ್ತ್ವ ಮತ್ತು ಆಶಯಗಳಿಗೆ ವಿರುದ್ಧವಾಗಿ ಹೋಗುತ್ತಿದ್ದಾರೆಂದು ನಾನು ಹೇಳಬೇಕಾಗುತ್ತದೆ.

ಈ ಸದನದಲ್ಲಿ ಅದರ ಪ್ರಾತಿನಿಧ್ಯವನ್ನು ಕುರಿತು ಹೇಳುವುದಾದರೆ – ಏಕೆಂದರೆ ನಾಡಿನಲ್ಲಿ ಅವರಿಗೆ ಪ್ರಾತಿನಿಧ್ಯ ದೊರೆಕಿಸಿಕೊಡಲು ಸಾಧ್ಯವಾಗುವುದು ಇದೊಂದೇ ಸದನದಲ್ಲಿ ಮಾತ್ರ, ಕೇಂದ್ರಶಾಸಿತ ಪ್ರದೇಶದಲ್ಲಿ ಇಂಥ ಯಾವುದೇ ಸದನ ಸ್ಥಾಪನೆಮಾಡಲು ಸಾಧ್ಯವಾಗುವುದಿಲ್ಲವೆಂಬುದು ಎಲ್ಲರೂ ಬಲ್ಲ ವಿಚಾರ–ಆ ನಿಟ್ಟಿನಲ್ಲಿ ಅವರ ಪ್ರಾತಿನಿಧ್ಯ ತುಂಬ ಕಡಮೆ ಹದಿನೈದು ಲಕ್ಷ ಜನಸಂಖ್ಯೆಯಿರುವ ದೆಹಲಿಯಿಂದ ಈ ಸದನದಲ್ಲಿ ಮೂರುಮಂದಿ ಪ್ರತಿನಿಧಿಗಳಿದ್ದಾರೆ. ಆದರೆ ಕೇಂದ್ರಶಾಸನ ಪ್ರದೇಶಗಳಲ್ಲಿ ಈ ಜನರ ಒಟ್ಟು ಸಂಖ್ಯೆ ಸುಮಾರು ಇಪ್ಪತ್ತುಲಕ್ಷ. ಆದರೂ ಅವರ ಪ್ರತಿನಿಧಿಗಳ ಸಂಖ್ಯೆ ಕೇವಲ ಮೂರು. ಅಂದರೆ ಪ್ರತಿ ಐದು ಲಕ್ಷಗಳಿಗೆ ಒಬ್ಬ ಪ್ರತಿನಿಧಿ ಎಂದು ಲೆಕ್ಕಹಾಕಿದರೂ ಒಬ್ಬರು ಕಡಿಮೆಯಾಗುತ್ತಾರೆ. ಆದರೂ ಇಲ್ಲಿಯ ಈ ಮಂದಿ ಕೇಂದ್ರ ಶಾಸನ ಪ್ರದೇಶಗಳಲ್ಲಿರುವ ಕಡಮೆ ಸಂಖ್ಯೆ ಜನರಿಗಾಗಿ ಪ್ರಾತಿನಿಧ್ಯ ನೀಡಲು ಈ ಮಸೂದೆಯನ್ನು ಪ್ರಸ್ತಾಪಿಸಲಾಗುತ್ತಿದೆ ಎಂದು ಹೇಳುತ್ತಿದ್ದಾರೆ.

ಕೊನೆಯಲ್ಲಿ ನಾನು ಹೇಳಬಯಸುವುದೇನೆಂದರೆ, ಭಾರತ ಸರ್ಕಾರದಿಂದ ಶಿಕ್ಷಣ ಸಚಿವಾಲಯದಲ್ಲಿ ಪರಿಶಿಷ್ಟ ಜಾತಿಗಳು ಎಂಬುದಾಗಿ ಗುರುತಿಸಲಾದ ಇತರ ಜಾತಿಗಳು ಹಾಗೂ ಸಮುದಾಯಗಳು ಇವೆ. ರಾಷ್ಟ್ರಪತಿಯವರು ಒಂದು ಜಾತಿಯನ್ನು ಪರಿಶಿಷ್ಟ ಜಾತಿ ಎಂದು ಪಟ್ಟಿಯಲ್ಲಿ ಘೋಷಿಸಿದ ಕೂಡಲೇ ಒಂದು ಸೂಚಿ ಪ್ರಕಟವಾಗುತ್ತದೆ. ಇಂಥ ಒಂದು ಸೂಚಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿದ್ಯಾರ್ಥಿವೇತನ ನೀಡುವ ಸಲುವಾಗಿಯೆ ಪ್ರಕಟಿಸಲಾಗಿದೆ. ಆ ಪಟ್ಟಿಯನ್ನು ಒಪ್ಪಿಕೊಳ್ಳುವಂತೆ ನಾನು ಮಾನ್ಯ ಕಾನೂನು ಮಂತ್ರಿಗಳನ್ನು ಕೋರುತ್ತೇನೆ. ಹಾಗೆ ಮಾಡಿದರೆ ಇತರ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಜನ ಪಡೆಯುತ್ತಿರುವ ಸವಲತ್ತುಗಳನ್ನು ಅವರೂ ಪಡೆಯಲು ಅವಕಾಶವಾಗುತ್ತದೆ. ಈ ಮಾತುಗಳೊಡನೆ, ಸೂಕ್ತ ಕಾಲದಲ್ಲಿ ನಾನು ಪ್ರಸ್ತಾಪಿಸುವ ಯಾವುದೇ ತಿದ್ದುಪಡಿಯನ್ನೂ ಅಂಗೀಕರಿಸಬೇಕೆಂದು ಮಾನ್ಯ ಕಾನೂನು ಮಂತ್ರಿಗಳಲ್ಲಿ ಇನ್ನೊಮ್ಮೆ ಕೋರಿಕೆ ಸಲ್ಲಿಸುತ್ತೇನೆ.

**ಸರ್ದಾರ್ ಹುಕುಂ ಸಿಂಗ್ (ಪಂಜಾಬ್):** ಈಗ ಚರ್ಚೆಯಲ್ಲಿರುವ ಮಸೂದೆಗೆ ಯಾವುದೇ ವಿರೋಧವಿರಲು ಸಾಧ್ಯವಿಲ್ಲ. ಇದು ತೀರ ಅಗತ್ಯವಾಗಿತ್ತು, ಮತ್ತು ಸಕಾಲದಲ್ಲಿ ಚರ್ಚೆಗೆ ಬಂದಿದೆ ಎಂದು ನನಗೆ ಅನಿಸುತ್ತದೆ. ನನ್ನ ಮಿತ್ರರಾದ ಶ್ರೀ ಕಪೂರ್ ಅವರು ಈ ಮಸೂದೆಯ ಅಗತ್ಯವೇ ಇರಲಿಲ್ಲ ಎಂದು ಪ್ರತಿವಾದಿಸಿ ಅದರ ಸೂಕ್ತತೆಯ ಬಗ್ಗೆ ಪ್ರಶ್ನೆ ಎತ್ತಿರುವುದನ್ನು ಒಪ್ಪಿಕೊಳ್ಳಲು ನನಗೆ ಸಾಧ್ಯವಾಗುತ್ತಾ ಇಲ್ಲ. ಯಾವ ವರ್ಗಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಗೆ ಸೇರಿಸಬಹುದೆಂದು

ನಿರ್ದಿಷ್ಟಗೊಳಿಸುವ ಅಧಿಕಾರವನ್ನು ಅನುಚ್ಛೇದ ೩೪೧ ರಾಷ್ಟ್ರಪತಿಯವರಿಗೆ ನೀಡುತ್ತದೆ. ಆದರೆ ಆ ಅನುಚ್ಛೇದವನ್ನು ಓದಿನೋಡಿದಾಗ ಅದರ ಆಶಯ ಭಾಗ ಎ ಮತ್ತು ಭಾಗ ಬಿ ರಾಜ್ಯಗಳಿಗೆ ಸೀಮಿತವಾಗಿರುತ್ತದೆಂಬ ಅಂಶ ಮೇಲುನೋಟದಲ್ಲಿಯೆ ಸ್ಪಷ್ಟವಾಗುತ್ತದೆ. ಆ ಅನುಚ್ಛೇದದ ಭಾಗ ಸಿ ರಾಜ್ಯಗಳಿಗೆ ಸಂಬಂಧಿಸಿರುವುದಿಲ್ಲ. ಆದ್ದರಿಂದಲೇ ಅದರಲ್ಲಿ ರಾಜ್ಯಗಳ ರಾಜಪ್ರಮುಖರೊಡನೆ ಅಥವಾ ರಾಜ್ಯಪಾಲರುಗಳೊಡನೆ ಸಮಾಲೋಚಿಸಿ ಕೆಲಸ ಮಾಡತಕ್ಕದ್ದೆಂಬ ವಿಚಾರವನ್ನು ಹೇಳಲಾಗಿದೆ. ಆ ಅಧ್ಯಾಯದಲ್ಲಿರುವ ಇತರ ಅವಕಾಶಗಳು ಕೂಡ ಕೇವಲ ಭಾಗ ಎ ಮತ್ತು ಭಾಗ ಬಿ ರಾಜ್ಯಗಳಿಗೆ ಮಾತ್ರ ಸಂಬಂಧಪಟ್ಟವಾಗಿವೆ. ಹಾಗಾಗಿ, ಪರಿಶಿಷ್ಟ ಜಾತಿಗಳಿಗೆ ಸಂಬಂಧಪಟ್ಟಂತೆ ಭಾಗ ಸಿ ರಾಜ್ಯಗಳಿಗೆ ಯಾವುದೇ ನಿರ್ದಿಷ್ಟ ಅವಕಾಶಗಳನ್ನು ಒದಗಿಸಲಾಗಿಲ್ಲ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಹಾಗೆಯೆ ರಾಷ್ಟ್ರಪತಿಯವರು ಈ ತೊಡಕನ್ನು ನಿವಾರಿಸುವ ಸಲುವಾಗಿ ಅನುಚ್ಛೇದ ೩೯೨ ನ್ನು ಬಳಕೆ ಮಾಡಬಹುದೆಂಬ ಮಾತೂ ಬಂತು, ಆದರೆ ಆ ಅನುಚ್ಛೇದವನ್ನು ಇಲ್ಲಿ ಉಪಯೋಗಮಾಡಲು ಸಾಧ್ಯವಾಗಲಾರದು. ಆ ಅನುಚ್ಛೇದದ ಪಾಠವನ್ನು ಗಮನವಿಟ್ಟು ನೋಡೋಣ. ಅದು ಹೀಗೆ ಓದಿಸಿಕೊಳ್ಳುತ್ತದೆ.

> "ರಾಷ್ಟ್ರಪತಿಯವರು ೧೯೩೫ರ ಭಾರತಸರ್ಕಾರ ಕಾಯ್ದೆಯ ಅವಕಾಶಗಳಿಂದ ಪ್ರಸಕ್ತ ಸಂವಿಧಾನದ ಅವಕಾಶಗಳಿಗೆ ಬದಲಾವಣೆ ಮಾಡಿಕೊಳ್ಳಬೇಕಾದ ಸಂದರ್ಭಗಳಿಗೆ ವಿಶೇಷವಾಗಿ ಸಂಬಂಧಪಟ್ಟಂತೆ ಯಾವುದೇ ತೊಡಕುಗಳನ್ನು ನಿವಾರಿಸುವ ಉದ್ದೇಶಕ್ಕಾಗಿ, ಆದೇಶದ ಮೂಲಕ....ನಿರ್ದೇಶಿಸಬಹುದು ......ಇತ್ಯಾದಿ....ಇತ್ಯಾದಿ."

ಆದ್ದರಿಂದ ಈ ಎರಡು ಅನುಚ್ಛೇದಗಳ ಪ್ರಯೋಜನ ಪಡೆಯಲು ಸಾಧ್ಯವಾಗಲಿಲ್ಲ. ಹಾಗಾಗಿ ಈ ಮಸೂದೆಯ ಅಗತ್ಯ ಎದುರಾಯಿತು. ಹಾಗೆಯೆ, ರಾಷ್ಟ್ರಪತಿಯವರು ಒಂದು ಆದೇಶ ಹೊರಡಿಸುವುದರಿಂದ ೩೪೧(೨)ರನ್ವಯ ಸಂಸತ್ತಿಗೆ ಅಧಿಕಾರ ದೊರೆಯುತ್ತದೆಂಬ ವಿಚಾರ ಕೂಡ ಚರ್ಚೆಗೆ ಬಂತು. ಪಟ್ಟಿಯಿಂದ ಯಾವುದೇ ಜಾತಿಯನ್ನು ಸೇರಿಸುವ ಅಥವಾ ಬಿಡುವ ಅಥವಾ ತೆಗೆದುಹಾಕುವ ಅಧಿಕಾರ ಸಂಸತ್ತಿಗೆ ಇದೆಯಾದರೂ ಇದೊಂದು, ನನಗೆ ಅನಿಸುವಂತೆ, ಸಾರ್ವತ್ರಿಕವಾದ ಅಧಿಕಾರ, ಈಗ ನಮ್ಮ ಎದುರಿಗಿರುವ ಮಸೂದೆಯ ಮೇಲೆ ಕ್ರಮಕೈಗೊಳ್ಳಲು ಆ ಅಧಿಕಾರವನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ನಾನು ಈಗಾಗಲೆ ಹೇಳಿರುವಂತೆ, ಈ ಮಸೂದೆ ಅಗತ್ಯವಾಗಿತ್ತು. ಚುನಾವಣೆಗಳು ಇನ್ನೇನು ಸಮೀಪಿಸುತ್ತಿವೆ ಎನ್ನುವ ಸರಿಯಾದ ಸಮಯದಲ್ಲೇ ಈ ಮಸೂದೆಯನ್ನು ಸದನದ ಮುಂದೆ ತರಲಾಗಿದೆ. ಪ್ರತಿಯೊಂದು ರಾಜ್ಯಕ್ಕೆ ಸಂಬಂಧಪಟ್ಟಂತೆಯೂ ಬೇರೆ ಬೇರೆ ಪಟ್ಟಿಗಳಿವೆ. ಕೆಲವು ಮಂದಿ ಸದಸ್ಯರು ಸರಿಯಾಗಿಯೆ ಎತ್ತಿ ತೋರಿಸಿರುವಂತೆ ಪರಿಶಿಷ್ಟ ಜಾತಿಗಳೆಂದು ಕೆಲವು ಸಮುದಾಯದವರನ್ನು ಒಂದು ರಾಜ್ಯದಲ್ಲಿ ಗುರುತಿಸಿ ಪಟ್ಟಿಮಾಡಿದ್ದರೆ, ಅದೇ ಅಕ್ಕಪಕ್ಕದ ರಾಜ್ಯಗಳಲ್ಲಿ ಅವುಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸದೆ ಹೋಗಿರುವುದುಂಟು. ನಮ್ಮ ಎದುರಿಗೆ ಇರುವ ಪಟ್ಟಿಗಳಲ್ಲಿ ಕೆಲವು ನಮೂದುಗಳು ಅನುಮಾನಾಸ್ಪದವಾಗಿದೆಯೆಂದು ನನ್ನ ಮನಸ್ಸಿಗೆ ಅನಿಸುತ್ತಿದೆ. ಮಾನ್ಯ ಮಂತ್ರಿಗಳು ಈ ಸಂದೇಹಗಳನ್ನು ನಿವಾರಿಸಬೇಕು. ದೆಹಲಿಗೆ ಸಂಬಂಧಪಟ್ಟಂತೆ ಸಂಖ್ಯೆ ೫ ಮತ್ತು ಸಂಖ್ಯೆ ೬ ಎಂಬಂತೆ ಬಂಜಾರಾ ಮತ್ತು ಬವಾರಿಯಾ ಎಂಬ ಸಮುದಾಯಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ಆದರೆ ಹಿಮಾಚಲ

ಪ್ರದೇಶದ ಪಟ್ಟಿಯಲ್ಲಿ ಇವುಗಳನ್ನು ಸೇರಿಸಲಾಗಿಲ್ಲ. ಈ ಬಂಜಾರುಗಳು ಮತ್ತು ಬವಾರಿಯಾಗಳು ಹಿಮಾಚಲ ಪ್ರದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಾಣಸಿಗುತ್ತಾರೆ.

**ಡಾ. ಅಂಬೇಡ್ಕರ್ :** ಹಿಮಾಚಲಪ್ರದೇಶದ ಪಟ್ಟಿಯಲ್ಲಿ ನಮೂದು ಸಂಖ್ಯೆ ೬ ನ್ನು ನೋಡಿದರೆ, ನನ್ನ ಮಾನ್ಯ ಮಿತ್ರರಿಗೆ ಅಲ್ಲಿ ಭಾಂಜ್ರಾಗಳು ಕಂಡುಬರುತ್ತಾರೆ.

**ಸರ್ದಾರ್ ಹುಕುಮ್ ಸಿಂಗ್:** ನಾನು ಬಂಜಾರಾಗಳ ಬಗ್ಗೆ ಹೇಳುತ್ತಿದ್ದೇನೆ. ಭಾಂಜ್ರಾಗಳ ಬಗ್ಗೆ ಅಲ್ಲ.

**ಡಾ. ಅಂಬೇಡ್ಕರ್:** ಅಂದರೆ ಅದು ಉಚ್ಚಾರಣೆಗೆ ಸಂಬಂಧಪಟ್ಟ ಸಮಸ್ಯೆ.

**ಸರ್ದಾರ್ ಹುಕುಮ್ ಸಿಂಗ್:** ಖಂಡಿತ ಅಲ್ಲ, ವಾಸ್ತವವಾಗಿ ಅವೆರಡೂ ಬೇರೆ ಬೇರೆ ಜಾತಿಗಳು. ಬಂಜಾರಾ ಎಂಬ ಬುಡಕಟ್ಟಿನ ಮನುಷ್ಯ ಭಾಂಜ್ರಾ ಬುಡಕಟ್ಟಿನ ಮನುಷ್ಯನಿಗಿಂತ ಬೇರೆಯಾದವನು. ಹಾಗೆಯೆ ಹಿಮಾಚಲ ಪ್ರದೇಶದ ಪಟ್ಟಿಯ ನಮೂದು ಸಂಖ್ಯೆ ೧೬ ರಡಿಯಲ್ಲಿ ಕಂಡುಬರುವ ಮಜಹಬಿ ದೆಹಲಿ ಪಟ್ಟಿಯಲ್ಲಿ ಕಂಡುಬರುವುದಿಲ್ಲ. ಈ ಮಂದಿಯನ್ನು ಪಂಜಾಬ್ ಮತ್ತು ಪೆಪ್ಸುಗಳ (PEPSU) ಪಟ್ಟಿಯಲ್ಲಿ ಸೇರಿಸಲಾಗಿದೆ. ದೇಶ ವಿಭಜನೆ ನಡೆದ ಮೇಲೆ ಅವರಲ್ಲಿ ಸಾಕಷ್ಟು ಜನ ಅಕ್ಕಪಕ್ಕದ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. ಕೆಲವರು ದೆಹಲಿಗೂ ಬಂದಿದ್ದಾರೆ. ಸಾಕಷ್ಟು ಸಂಖ್ಯೆಯಲ್ಲಿ ಅವರು ಹಿಮಾಚಲ ಪ್ರದೇಶಕ್ಕೂ ಹೋಗಿ ನೆಲೆಸಿದ್ದಾರೆ. ಆ ರಾಜ್ಯಗಳ ಸ್ಥಳೀಯ ಪ್ರಾಧಿಕಾರಗಳ ಅಧಿಕಾರಗಳು ಅಂಕಿಸಂಖ್ಯೆಗಳನ್ನು ಸಂಗ್ರಹಿಸಿದಾಗ ಈ ಜನರ ಸಂಖ್ಯೆ ತುಂಬಾ ಕಡಮೆ ಎಂದು ಭಾವಿಸಿರಬೇಕು. ಈ ಕಾರಣದಿಂದ ಅವರನ್ನು ಪಟ್ಟಿಯಲ್ಲಿ ಸೇರಿಸದೆ ಹೋದರೆ ಅವರಿಗೆ ತುಂಬ ಅನ್ಯಾಯವಾಗುತ್ತದೆ. ನಮಗೆಲ್ಲ ಗೊತ್ತಿರುವಂತೆ ಇವರು ಭೂಮಿ ಇಲ್ಲದ ಕೆಲಸಗಾರರು ಅಥವಾ ಕೂಲಿ ಕೆಲಸ ಮಾಡಿ ಜೀವನ ನಡೆಸುವವರು. ಬಂಜಾರುಗಳು ಕೆಲಸ ಹುಡುಕಿಕೊಂಡು ಒಂದು ರಾಜ್ಯದಿಂದ ಪಕ್ಕದ ರಾಜ್ಯಕ್ಕೆ ವಲಸೆಹೋಗುತ್ತಾರೆ. ಅಲ್ಲಲ್ಲಿ ದುಡಿದು ಜೀವನ ಸಾಗಿಸುತ್ತಾರೆ. ಹೀಗೆ ಓಡಾಡದೆ ಇದ್ದಿದ್ದರೆ ಅವರಿಗೆ ಏನು ಸೌಲಭ್ಯಗಳು ಪ್ರಾಯಃ ದೊರಕುತ್ತಿದ್ದವೊ, ಅದರಿಂದ ಅವರನ್ನು ವಂಚಿತರನ್ನಾಗಿ ಮಾಡಿದರೆ ಅವರಿಗೆ ಕಷ್ಟವಾಗುತ್ತದೆ, ತುಂಬ ಅನ್ಯಾಯವಾಗುತ್ತದೆ. ಹಾಗೆಯೆ ಪಟ್ಟಿಯಲ್ಲಿ ಇನ್ನೂ ಒಂದೆರಡು ನಮೂದುಗಳಿವೆ. ಉದಾಹರಣೆಗೆ, ದೆಹಲಿಪಟ್ಟಿಯಲ್ಲಿ ನಮೂದು ೧೯ ಎಂಬುದಾಗಿ – ಜುಲಾಹಾ (ನೇಯ್ಗೆಯವರು) ಎಂಬ ಸಮುದಾಯದ ಹೆಸರಿದೆ. ಅದೇ ಹಿಮಾಚಲ ಪ್ರದೇಶದ ಪಟ್ಟಿಯ ೧೪ ನೇ ಸಂಖ್ಯೆಯ ನಮೂದಾಗಿ ಕಬೀರಸಂಧಿ ಅಥವಾ ಜುಲಾಹಾ ಅಥವಾ ಕೀರ್ ಎಂಬ ಸಮುದಾಯ ಕಂಡುಬರುತ್ತದೆ. ವಾಸ್ತವಾಂಶ ಎಂದರೆ ಈ ಕಬೀರಪಂಥಿಗಳು ಮತ್ತು ಜುಲಾಹಾ ಇಬ್ಬರೂ ಬೇರೆ ಬೇರೆ ಜಾತಿಗಳ ಜನ. ಅವರು ಒಂದೇ ಜಾತಿಯ ಜನ ಅಲ್ಲ.

**ಡಾ. ಅಂಬೇಡ್ಕರ್ :** ಕೆಲವುವೇಳೆ, ಜಾತಿ ಒಂದೇ ಆಗಿದ್ದು ಎರಡು ಹೆಸರುಗಳಿರುತ್ತವೆ.

**ಸರ್ದಾರ್ ಹುಕುಮ್ ಸಿಂಗ್:** ಆದರೆ ಇಲ್ಲಿ ಹೀಗೆ ಆಗಿಲ್ಲ. ಇವೆರಡೂ ಪೂರ್ತಿ ಬೇರೆಬೇರೆ ಜಾತಿಗಳು. ಆದ್ದರಿಂದಲೇ ಸಮಸ್ಯೆ ಎದುರಾಗುತ್ತದೆ. ಅಷ್ಟೇ ಅಲ್ಲ, ಇದೇ ರೀತಿಯಲ್ಲಿ ಹಿಮಾಚಲ ಪ್ರದೇಶದ ಪಟ್ಟಿಯಲ್ಲಿ ನಮೂದು ಸಂಖ್ಯೆ ೨೩ ಎಂಬುದಾಗಿ ರಾಮದಾಸಿ ಅಥವಾ ರವಿದಾಸಿ ಎಂಬ ಸಮುದಾಯ ಕಂಡುಬರುತ್ತದೆ. ಆದರೆ ದೆಹಲಿ ಪಟ್ಟಿಯಲ್ಲಿ ಅದೇ ನಮೂದು ಸಂಖ್ಯೆ ೩೨ ಆಗಿದ್ದು ರಾಮ್ ದಾಸಿಯಾ ಎಂಬುದಾಗಿ ಕಂಡುಬರುತ್ತದೆ. ಹಾಗಾದರೆ ರಾಮದಾಸಿ ಮತ್ತು ರವಿದಾಸಿ ಇವೆರಡೂ ಬೇರೆ ಬೇರೆ ಜಾತಿಗಳೆ ಎಂಬುದನ್ನು ನಾನು ಮಾನ್ಯ ಮಂತ್ರಿಯವರಿಂದ ತಿಳಿಯಬಯಸುತ್ತೇನೆ. ಒಂದು

ವೇಳೆ ಅವೆರಡೂ ಬೇರೆ ಬೇರೆ ಜಾತಿಗಳಾಗಿದ್ದರೆ–ನನ್ನ ತಿಳಿವಳಿಕೆಯಲ್ಲಿ ಅವು ಬೇರೆ ಬೇರೆ ಜಾತಿಗಳೆ– ಹಿಮಾಚಲ ಪಟ್ಟಿಯಲ್ಲಿ ಅವು ಏಕೆ ಬಿಟ್ಟುಹೋಗಬೇಕು? ಹಾಗೆಯೆ ದೆಹಲಿ ಪಟ್ಟಿಯ ನಮೂದು ಸಂಖ್ಯೆ ೩೩ ಆಗಿ ರವಿದಾಸಿ ಅಥವಾ ರೈದಾಸಿ ಎಂಬ ಹೆಸರು ಕಂಡುಬರುತ್ತದೆ. ಆದರೆ ಹಿಮಾಚಲ ಪ್ರದೇಶದ ಪಟ್ಟಿಯ ನಮೂದು ಸಂಖ್ಯೆ ೨೩ ರಲ್ಲಿ ಕೇವಲ ರಾಮದಾಸಿ ಅಥವಾ ರವಿದಾಸಿ ಎಂಬುದಾಗಿ ಕಂಡುಬರುತ್ತದೆ. ಹಾಗಾಗಿ, ಇಲ್ಲಿ ಸ್ವಲ್ಪ ಗೊಂದಲವಿದೆ. ಆ ಜಾತಿ ಅಥವಾ ಸಮುದಾಯಗಳನ್ನು ಯಾವ ಹೆಸರಿನಿಂದ ಕರೆಯಬೇಕೊ ನನಗೆ ಸರಿಯಾಗಿ ಗೊತ್ತಿಲ್ಲ, ಆದರೆ ಈ ಹೆಸರುಗಳಲ್ಲಿ ಏನೋ ಗೊಂದಲವಿದೆ ಎಂಬುದು ಸ್ಪಷ್ಟವಾಗಿ ಎದ್ದುಕಾಣುತ್ತದೆ. ಹಿಮಾಚಲ ಪ್ರದೇಶದಲ್ಲಂತೂ ಆ ಜಾತಿಗಳನ್ನು ಎರಡು ಬೇರೆ ಬೇರೆ ಶೀರ್ಷಿಕೆಗಳ ಅಡಿಯಲ್ಲಿ ಸೇರಿಸಲಾಗಿಲ್ಲ. ನಾನು ಹೇಳಬಯಸುವ ಒಂದೇ ಒಂದು ಮಾತೆಂದರೆ ಪಂಜಾಬ್, ಪೆಪ್ಸು, ಹಿಮಾಚಲ ಪ್ರದೇಶ ಮತ್ತು ದೆಹಲಿ ಇವೆಲ್ಲ ಅಕ್ಕಪಕ್ಕದ ಪ್ರದೇಶಗಳು. ಜೀವನೋಪಾಯ ಹುಡುಕಿಕೊಂಡು ಜನ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುತ್ತಲೇ ಇರುತ್ತಾರೆ. ಈ ಬಡ ಸಮುದಾಯಗಳನ್ನು ನಾವು ಎಲ್ಲ ರಾಜ್ಯಗಳ ಪಟ್ಟಿಗಳಲ್ಲಿ ಸೇರಿಸದೆ ಹೋದರೆ, ಸಂವಿಧಾನ ಅವರಿಗೆ ಕೊಡಬಯಸುವ ಸೌಲಭ್ಯಗಳಿಂದ ಅವರು ವಂಚಿತರಾಗುತ್ತಾರೆ. ನಮ್ಮ ಎಲ್ಲ ಧ್ಯೇಯೋದ್ದೇಶಗಳು ಇದರಿಂದ ನಿರರ್ಥಕವಾಗುತ್ತದೆ, ಹುಸಿಯಾಗಿಬಿಡುತ್ತವೆ. ಹಾಗಾಗಿ, ನಾನು ಈ ಕಡೆ ಮಾನ್ಯ ಮಂತ್ರಿಗಳ ವಿಶೇಷ ಗಮನವನ್ನು ಸೆಳೆಯಬಯಸುತ್ತೇನೆ. ಈ ವಿಷಯವನ್ನು ಕುರಿತಂತೆ ಇಂದು ಬೆಳಗ್ಗೆ ನಾನು ತಿದ್ದುಪಡಿಯೊಂದನ್ನು ಕಳುಹಿಸಿದ್ದೆ. ಈ ಹೊತ್ತಿಗೆ ಅದರ ಪ್ರತಿ ಅವರ ಕೈಸೇರಿರಬಹುದು. ಅದರ ಕಡೆ ಸಾಧ್ಯವಾದಷ್ಟು ಸಹಾನುಭೂತಿಯಿಂದ ಗಮನ ಹರಿಸಲಿ ಎಂದು ಅವರನ್ನು ಕೋರುತ್ತೇನೆ.

ಈ ಕೆಲವು ಮಾತುಗಳೊಂದಿಗೆ, ಈ ಗೊತ್ತುವಳಿಗೆ, ಸರ್, ನಾನು ಬೆಂಬಲ ಸೂಚಿಸುತ್ತಿದ್ದೇನೆ.

**ಶ್ರೀ ಸೋನಾವಣೆ:** ನಾನು ಈ ಮಸೂದೆಗೆ ಬೆಂಬಲ ಸೂಚಿಸುತ್ತೇನೆ. ಈ ಮಸೂದೆಯನ್ನು ಉನ್ನತಪ್ರಾಯವಾಗಿರುವ ಲೋಕಸಭೆಯಲ್ಲಿ ತಂದುದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಶ್ರೀ ಕಪೂರ್ ಅವರ ಮನಸ್ಸು ಇಂದು ಏಕೆ ಇಷ್ಟು ಗೊಂದಲಕ್ಕೀಡಾಗಿತ್ತು ಎಂಬುದರ ಬಗ್ಗೆ ನನಗೆ ಅಚ್ಚರಿಯಾಗುತ್ತಿದೆ. ಪ್ರತಿಯೊಂದು ಮಸೂದೆಗೆ ಸಂಬಂಧಪಟ್ಟಂತೆ ಸಾಧಾರಣವಾಗಿ ಶ್ರೀ ಕಪೂರ್ ಅವರು ಮಾತನಾಡುವಂತೆಯೆ, ಇಂದು ಕೂಡ ಯಾವುದೇ ಸರಿಯಾದ ಸಮರ್ಥನೆಯಿಲ್ಲದೆ ತಮ್ಮ ವಾದವನ್ನು ಮಂಡಿಸಿದ್ದಾರೆ.

ಅನುಚ್ಛೇದ ೩೩೨(೧) ಮತ್ತು ಅನುಚ್ಛೇದ ೩೪೧(೨) ಇವುಗಳ ಮೇಲೆ ಸ್ವಲ್ಪಮಟ್ಟಿಗೆ ಕಣ್ಣುಹಾಯಿಸಿದ್ದರೂ ಈ ಕ್ರಮ ಎಷ್ಟು ಅಗತ್ಯವಾಗಿತ್ತು ಎಂಬ ಅಂಶ ಶ್ರೀ ಕಪೂರ್ ಅವರಿಗೆ ಮನದಟ್ಟಾಗುತ್ತಿತ್ತು. ನನ್ನ ಮಾನ್ಯ ಮಿತ್ರರು ಕೇವಲ ೩೩೦ (೨) ನೇ ಅನುಚ್ಛೇದವನ್ನು ಅವಲಂಬಿಸಿ, ಅದರಲ್ಲೂ "ರಾಜ್ಯದಲ್ಲಿ" ಎಂಬ ಮಾತನ್ನು ಎತ್ತಿಹಿಡಿದು ವಾದ ಮಾಡಲಾರಂಭಿಸಿದ್ದಾರೆ. ಅಲ್ಲಿ ಇನ್ನೂ ಇತರ ಅನುಚ್ಛೇದಗಳಿವೆ ಎಂಬ ಅಂಶವನ್ನೇ ಮರೆತುಬಿಟ್ಟಿದ್ದಾರೆ. ಅನುಚ್ಛೇದ ೩೩೨(೧) ರ ಕಡೆಗೆ ಅವರ ಗಮನವನ್ನು ಸೆಳೆಯಬಯಸುತ್ತೇನೆ. ಅದು ೩೩೦(೨)ನೇ ಅನುಚ್ಛೇದವನ್ನು ನಿಯಂತ್ರಿಸುತ್ತದೆ ಹಾಗೂ ಅದಕ್ಕೆ ವೈಶಿಷ್ಟ್ಯವನ್ನು ನೀಡುತ್ತದೆ. ಅನುಚ್ಛೇದ ೩೩೨(೧) ರ ಪಾಠ ಹೀಗಿದೆ:

> "ಮೊದಲನೇ ಅನುಸೂಚಿಯ ಭಾಗ "ಎ' ಮತ್ತು ಭಾಗ "ಬಿ' ಯಲ್ಲಿ ನಮೂದಿಸಿರುವ
> ಪ್ರತಿಯೊಂದು ರಾಜ್ಯದ ವಿಧಾನಸಭೆಯಲ್ಲಿ, ಅಸ್ಸಾಮಿನ ಬುಡಕಟ್ಟು ಪ್ರದೇಶಗಳ

> ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಸ್ಥಾನಗಳನ್ನು ಕಾಯ್ದಿರಿಸತಕ್ಕದ್ದು."

**ಶ್ರೀ ಜೆ.ಆರ್. ಕಪೂರ್:** ನಾವು ರಾಜ್ಯ ವಿಧಾನಸಭೆಗಳನ್ನು ಕುರಿತು ಇಲ್ಲಿ ಚರ್ಚೆ ಮಾಡುತ್ತಿಲ್ಲ; ನಾವು ಚರ್ಚೆ ಮಾಡುತ್ತಿರುವುದು ಲೋಕಸಭೆಯನ್ನು ಕುರಿತು.

**ಶ್ರೀ ಸೋನಾವಣೆ:** ನಾನು ಅನುಚ್ಛೇದ ೩೪೧(೨)ರತ್ತ ಕೂಡ ಮಾನ್ಯ ಸದಸ್ಯರ ಗಮನವನ್ನು ಸೆಳೆಯಬಯಸುತ್ತೇನೆ. ಅದರ ಪಾಠ ಹೀಗಿದೆ:

> "ಸಂವಿಧಾನವು ಖಂಡ(೧)ರನ್ವಯ ಜಾರಿಮಾಡಿರುವ ಅಧಿಸೂಚನೆಯೊಂದರಲ್ಲಿ ಕಾನೂನುಬದ್ಧವಾಗಿ ಪರಿಶಿಷ್ಟ ಜಾತಿಗಳ ಪಟ್ಟಿಗೆ ಸಂಬಂಧಪಟ್ಟಂತೆ ಯಾವುದೇ ಜಾತಿ, ಜನಾಂಗ ಇಲ್ಲವೆ ಪಂಗಡವನ್ನು ಅಥವಾ ಯಾವುದೇ ಒಂದು ಜಾತಿಯ, ಜನಾಂಗದ ಅಥವಾ ಪಂಗಡದ ಒಂದು ಭಾಗವನ್ನು ಇಲ್ಲವೆ ಗುಂಪನ್ನು ಅದಕ್ಕೆ ಸೇರ್ಪಡೆ ಮಾಡಬಹುದು ಅಥವಾ ಅದರಿಂದ ತೆಗೆದುಹಾಕಬಹುದು. ಆದರೆ ಮೇಲೆ ಹೇಳಿದಂತೆ ಸದರಿ ಖಂಡದನ್ವಯ ಹೊರಡಿಸಲಾದ ಅಧಿಸೂಚನೆಯು ತದನಂತರದ ಯಾವುದೇ ಅಧಿಸೂಚನೆಯ ಕಾರಣದಿಂದಾಗಿ ಬದಲಾಗತಕ್ಕದ್ದಲ್ಲ."

ಭಾಗ XVIರಲ್ಲಿರುವ ಅವಕಾಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಈಗ ಪ್ರಸ್ತಾಪಿಸಲಾಗಿರುವ ಕ್ರಮ ತುಂಬ ಅಗತ್ಯವಾಗಿದೆಯೆಂದು ನಾನು ಭಾವಿಸುತ್ತೇನೆ. ಈ ನಿಟ್ಟಿನಲ್ಲಿ ಶ್ರೀ ಕಪೂರ್ ಅವರು ಈ ಮಸೂದೆಗೆ ಪ್ರತಿರೋಧವನ್ನು ಎತ್ತಬಾರದಾಗಿತ್ತು.

ಮಾನ್ಯ ಹಾಗೂ ವಿದ್ವಾಂಸರಾದ ಕಾನೂನು ಸಚಿವರು ಗಮನ ಹರಿಸಬೇಕಾದ ಇನ್ನೊಂದು ವಿಷಯಕ್ಕೆ ಬರುತ್ತೇನೆ. ಸದರಿ ಕ್ರಮ ಆರನೇ ಅನುಸೂಚಿಯಲ್ಲಿರುವ ಕೆಲವು ಜಾತಿಗಳನ್ನು ಕುರಿತು ಹೇಳುತ್ತದೆ. ಆದರೆ ಬೇರೆ ಬೇರೆ ರಾಜ್ಯಗಳಲ್ಲಿ ಇತರ ಪರಿಶಿಷ್ಟ ಜಾತಿಗಳು ಕೂಡ ಉಂಟು. ಈ ಪರಿಶಿಷ್ಟ ಜಾತಿಗಳ ಜನ ಬೇರೆ ರಾಜ್ಯಗಳಿಗೆ ಹೋದಾಗ ಅವರನ್ನು ಹಾಗೆ ಪರಿಗಣಿಸುವುದಿಲ್ಲ ಹಾಗೂ ಸಂವಿಧಾನದತ್ತವಾದ ಹಕ್ಕುಗಳನ್ನು ಅವರು ಅನುಭವಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಮೀಸಲಾತಿ ಸೌಲಭ್ಯ ದೊರೆಯುವುದಿಲ್ಲ. ಅವನು ಅಸ್ಪೃಶ್ಯವಾಗಿಯೆ ಉಳಿಯುತ್ತಾನೆ. ತನ್ನ ಮೂಲ ರಾಜ್ಯದಲ್ಲೇ ಉಳಿದಿದ್ದರೆ ಯಾವ ಹಕ್ಕುಗಳು ಮತ್ತು ಇತರ ಸೌಲಭ್ಯಗಳು ಅವನಿಗೆ ದೊರಕುತ್ತಿದ್ದವೊ ಅವೆಲ್ಲದರಿಂದ ವಂಚಿತವಾಗಿ ಎಲ್ಲ ಬಗೆಯ ಅಸಹಾಯಕತೆ ಮತ್ತು ಅನನುಕೂಲಗಳಿಂದ ತೊಳಲಾಡುತ್ತಾನೆ. ಆದ್ದರಿಂದ ನನ್ನ ಅಭಿಪ್ರಾಯ ಹೀಗಿದೆ. ಪರಿಶಿಷ್ಟ ಜಾತಿಗೆ ಸೇರಿದ ಒಬ್ಬ ವ್ಯಕ್ತಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವಲಸೆ ಹೋದಾಗ ಅವನಿಗೆ ಸಂವಿಧಾನದತ್ತ ಎಲ್ಲ ಅನುಕೂಲಗಳು ದೊರೆಯುವಂತಾಗಬೇಕು. ಈ ವಿಷಯವಾಗಿ ಒಂದು ಅವಕಾಶವನ್ನು ೩ಎ ಪರಿಚ್ಛೇದಕ್ಕೆ ಸೇರಿಸಬೇಕೆಂದು ನಾನು ಮಾನ್ಯ ಕಾನೂನು ಮಂತ್ರಿಗಳನ್ನು ಕೋರುತ್ತೇನೆ. ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಲಸೆಹೋಗುವ ಪರಿಶಿಷ್ಟ ಜಾತಿಗಳ ಜನರಿಗೆ ಇತರ ರಾಜ್ಯಗಳಲ್ಲೂ ಹಕ್ಕುಗಳು ಮತ್ತು ಸೌಲಭ್ಯಗಳು ಅನಾಯಾಸವಾಗಿ ತಮಗೆ ತಾವೇ ದೊರೆಯುವಂತಾಗಬೇಕು.

ಮಾನ್ಯ ಮಂತ್ರಿಯವರ ಗಮನಕ್ಕೆ ನಾನು ತರಬಯಸುವ ಮೂರನೇ ವಿಷಯವೆಂದರೆ, ಪರಿಶಿಷ್ಟ ಜಾತಿಗಳನ್ನು ಕುರಿತಂತೆ ಸಿದ್ಧಪಡಿಸಲಾಗಿರುವ ಪಟ್ಟಿಗಳು ದೋಷಗಳಿಂದ ಕೂಡಿವೆ. ವಿವಿಧ ರಾಜ್ಯಗಳಲ್ಲಿ ಅಸ್ಪೃಶ್ಯರೆಂದು ಪರಿಗಣಿಸಲಾಗಿರುವ ಅನೇಕ ಜಾತಿಗಳು ಇದರಲ್ಲಿ ಕೈಬಿಟ್ಟುಹೋಗಿವೆ. ಕೇಂದ್ರ ಒಕ್ಕೂಟದ

ಪಟ್ಟಿಯಲ್ಲಾಗಲೀ ಅಥವಾ ರಾಜ್ಯಗಳ ಪಟ್ಟಿಗಳಲ್ಲಾಗಲೀ ಈ ಜಾತಿಗಳನ್ನು ಸೇರಿಸಲು ಯಾವ ಪ್ರಯತ್ನವನ್ನು ಕೂಡ ಮಾಡಲಾಗುತ್ತಿಲ್ಲ. ಮಾನ್ಯ ಮಂತ್ರಿಗಳು ಈ ಪಟ್ಟಿ ತುಂಬ ಸಮಗ್ರವಾಗಿದೆ ಹಾಗೂ ಇದರಲ್ಲಿ ಯಾವ ಜಾತಿಯನ್ನೂ ಬಿಟ್ಟಿಲ್ಲ ಎಂದು ಹೇಳಿದರು. ಆದರೆ ಪ್ರಾಂತೀಯ ಪರಿಶಿಷ್ಟಜಾತಿಗಳ ಪಟ್ಟಿಯಲ್ಲಿ ಹಾಗೂ ಕೇಂದ್ರ ಒಕ್ಕೂಟದ ಪಟ್ಟಿಯಲ್ಲಿ ಎಲ್ಲ ಪರಿಶಿಷ್ಟ ಜಾತಿಗಳನ್ನು ಹೆಸರಿಸಬೇಕಾದ ತಮ್ಮ ಕರ್ತವ್ಯದಲ್ಲಿ ಅವರು ವಿಫಲರಾಗಿದ್ದಾರೆಂದು ನಾನು ಭಾವಿಸುತ್ತೇನೆ. ಆ ಅಸ್ಪೃಶ್ಯ ಜಾತಿಗಳ ಬಗೆಗೆ ಅನೇಕ ಮನವಿಗಳನ್ನು ಗೃಹಮಂತ್ರಿಗಳಿಗೆ ಮತ್ತು ಕಾನೂನು ಮಂತ್ರಿಗಳಿಗೆ ಮತ್ತೆ ಕಳುಹಿಸಲಾಗಿದೆ.

**ಅಧ್ಯಕ್ಷರು:** ಮಾನ್ಯ ಸದಸ್ಯರು ಇನ್ನೂ ಹೆಚ್ಚುಕಾಲ ತೆಗೆದುಕೊಳ್ಳುವ ಸಂಭವವಿದೆಯೆ?

**ಶ್ರೀ ಸೋನಾವಣೆ:** ಹೌದು ಮೇಡಂ.

**ಅಧ್ಯಕ್ಷರು:** ಹಾಗಾದರೆ ಅವರು ನಾಳೆಯ ದಿನ ತಮ್ಮ ಭಾಷಣವನ್ನು ಮುಂದುವರಿಸಬಹುದು.

ಆಗ ಸದನವನ್ನು ೧೯೫೧ರ ಏಪ್ರಿಲ್ ಗುರುವಾರ ಪೂರ್ವಾಹ್ನ ೧೦.೪೫ ಗಂಟೆಗೆ ಮುಂದೂಡಲಾಯಿತು.

## *ಜನ ಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ – (ಮುಂದುವರಿದಿದೆ)

**ಅಧ್ಯಕ್ಷರು:** ಮಾನ್ಯ ಡಾ. ಅಂಬೇಡ್ಕರ್ ಅವರು ೧೮ ರಂದು ಪ್ರಸ್ತಾಪಿಸಿದ ಕೆಳಕಂಡ ಪ್ರಸ್ತಾಪವನ್ನು ಕುರಿತಂತೆ ಈ ಸದನದಲ್ಲಿ ಪರಿಗಣಿಸಲು ಚರ್ಚೆಯನ್ನು ಮುಂದುವರೆಸಲಾಗುತ್ತಿದೆ.

"೧೯೫೦ರ ಜನ ಪ್ರಾತಿನಿಧ್ಯ ಅಧಿನಿಯಮಕ್ಕೆ ತಿದ್ದುಪಡಿಯನ್ನು ಸೂಚಿಸುವ ಮಸೂದೆಯನ್ನು ಈಗ ಕೈಗೆತ್ತಿಕೊಳ್ಳಲಾಗುತ್ತಿದೆ."

**ಶ್ರೀ ಸೋನಾವಣೆ (ಮುಂಬಯಿ):** ನೆನ್ನೆಯ ದಿನ ಸಭೆಯನ್ನು ಮುಂದೂಡಿದ ವೇಳೆಯಲ್ಲಿ ನಾನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವಲಸೆ ಹೋಗುವ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರನ್ನು ಕುರಿತು ಪ್ರಸ್ತಾಪ ಮಾಡುತ್ತಾ ಅವರ ಹಿತಾಸಕ್ತಿಗಳನ್ನು ಕಾಯುವಲ್ಲಿ ಕಾನೂನು ಸಚಿವಾಲಯ ಹೇಗೆ ವಿಫಲವಾಗಿದೆ ಎಂಬ ಬಗ್ಗೆ ಚರ್ಚಿಸುತ್ತಿದ್ದೆ. ಅವರುಗಳನ್ನು ರಾಜ್ಯಗಳ ಮತ್ತು ಕೇಂದ್ರ ಒಕ್ಕೂಟದ ಪಟ್ಟಿಗಳಿಂದ ಕೈಬಿಡದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ. ಒಂದು ಸ್ಪಷ್ಟವಾದ ನಿದರ್ಶನವನ್ನು ಕೊಟ್ಟು ನನ್ನ ಮಾತನ್ನು ಖಚಿತ ಪಡಿಸಬಯಸುತ್ತೇನೆ. ಮುಂಬಯಿಯಲ್ಲಿ ಮಹಾರ್ ಎಂಬ ಒಂದು ಜಾತಿ ಉಂಟು. ಈ ಜಾತಿಗೆ ಸೇರಿದ ಜನ ದೆಹಲಿಗೆ ಹೋದಾಗ ಅಲ್ಲಿಯ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಇವರ ಜಾತಿಯ ಹೆಸರು ಸೇರಿರುವುದಿಲ್ಲ. ದೆಹಲಿ ರಾಜ್ಯದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಈ ಮಹರ್ ಜಾತಿಯ ಹೆಸರು ಸೇರಿಲ್ಲದಿರುವುದರಿಂದ ಸಂವಿಧಾನ ಒದಗಿಸಿರುವ ಸೌಲಭ್ಯಗಳು ಅವರಿಗೆ ದೊರಕದೆಹೋಗುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಅವರು ಮುಂಬಯಿಯಲ್ಲೇ ಉಳಿದಿದ್ದರೆ ಎಲ್ಲ ಸೌಲಭ್ಯಗಳನ್ನು ಮತ್ತು ಅನುಕೂಲಗಳನ್ನು ಪಡೆದುಕೊಳ್ಳುತ್ತಿದ್ದರು. ಹಾಗಾಗಿ ನನ್ನ ಅಭಿಪ್ರಾಯವೇನೆಂದರೆ ಪರಿಶಿಷ್ಟಜಾತಿಗಳಿಗೆ ಸೇರಿದ ಜನರು ಒಂದು ರಾಜ್ಯದಿಂದ ಇನ್ನೊಂದಕ್ಕೆ ವಲಸೆಹೋದರೂ ಅವರಿಗೆ ಸಂವಿಧಾನದತ್ತನಾದ ಸೌಲಭ್ಯಗಳು ಮತ್ತು ಅನುಕೂಲಗಳು ದೊರೆಯುವಂತಾಗಬೇಕು. ಆದರೆ ಪರಿಸ್ಥಿತಿ ಹೀಗಿಲ್ಲ. ಈ ರೀತಿಯಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಬಗೆ ಬಗೆಯ ಪರಿಶಿಷ್ಟ ಜಾತಿಗಳ ಹೆಸರುಗಳು ಬಿಟ್ಟು ಹೋಗಿರುವುದು ಅವರ ಓಡಾಟಕ್ಕೆ ನಿರ್ಬಂಧ ಉಂಟು ಮಾಡುತ್ತದೆ. ಆದ್ದರಿಂದ ಮಾನ್ಯ ಕಾನೂನು ಮಂತ್ರಿಗಳು ಈ ವಿಷಯವಾಗಿ ಒಂದು ಸರ್ವವ್ಯಾಪಿಯಾದ ಪಟ್ಟಿ ತಯಾರಾಗುವಂತೆ ನೋಡಿಕೊಂಡು ಇಂಥ ಪರಿಶಿಷ್ಟ ಜಾತಿಗಳ ಜನರ ಚಲನೆಯ ಮೇಲೆ ಉಂಟಾಗಿರುವ ತೊಡಕನ್ನು ನಿವಾರಿಸುವಂತೆ ನಾನು ಅವರನ್ನು ಒತ್ತಾಯಿಸುತ್ತೇನೆ.

ಈ ಬಗೆಯ ಲೋಪಕ್ಕೆ ಇನ್ನೊಂದು ಉದಾಹರಣೆಯನ್ನು ಕೊಡಬಹುದಾದರೆ ಮುಂಬಯಿ ರಾಜ್ಯದಿಂದ ಕೆಲವು ಜಾತಿಗಳು ಮಧ್ಯಭಾರತಕ್ಕೆ ವಲಸೆ ಹೋಗಿದ್ದು ಆ ಜಾತಿಗಳ ಹೆಸರುಗಳನ್ನು ಅಲ್ಲಿಯ ಪಟ್ಟಿಯಲ್ಲಿ ಸೇರಿಸಿಲ್ಲ. ಈ ಬಗೆಯ ಮೂರು ಅಥವಾ ನಾಲ್ಕು ಜಾತಿಗಳುಂಟು. ಅವರು ಅಸ್ಪೃಶ್ಯರಾದರೂ ಅವರಿಗೆ ಸಂವಿಧಾನದತ್ತವಾದ ಸೌಲಭ್ಯಗಳು ದೊರೆತಿಲ್ಲ. ನಾನು ಎತ್ತಿದ್ದ ಪೂರಕ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಮಾನ್ಯ ಕಾನೂನು ಮಂತ್ರಿಗಳು ಪರಿಶಿಷ್ಟ ಜಾತಿಗಳ ಪಟ್ಟಿಗೆ ಆಧಾರ ಅಸ್ಪೃಶ್ಯತೆ ಎಂದು ಹೇಳಿದ್ದರು. ಆದ್ದರಿಂದ ಎಲ್ಲ ಬಗೆಯ ಅಸ್ಪೃಶ್ಯಮಂದಿ ರಾಜ್ಯಗಳ ಮತ್ತು ಕೇಂದ್ರದ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕೆಂಬುದರ ಬಗ್ಗೆ ಅವರು ಏನು ಕ್ರಮ ಕೈಗೊಂಡಿದ್ದಾರೆ ಎಂದು ಪ್ರಶ್ನಿಸಬಯಸುತ್ತೇನೆ. ಅಧಿಕಾರದಲ್ಲಿದ್ದು ಅವರು ಅಸ್ಪೃಶ್ಯರ ವಿಚಾರವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ.

---

* ಪಿ.ಡಿ. ಸಂಪುಟ ೧೦, ಭಾಗ ೨, ೧೯ನೇ ಏಪ್ರಿಲ್ ೧೯೫೧, ಪು. ೭೦೪೨–೭೦೨೫

ಮುಂಬರುವ ಚುನಾವಣೆಗಳಿಗಿಂತ ಮುಂಚೆ ಅವರು ಈ ತಪ್ಪನ್ನು ಸರಿಪಡಿಸಿಕೊಳ್ಳಲು ನಮ್ರಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡಬಯಸುತ್ತೇನೆ.

ಈಗ ನಾನು ಇನ್ನೊಂದು ವಿಷಯದ ಬಗ್ಗೆ ಚರ್ಚಿಸಲಿದ್ದೇನೆ. ಅಜಮೇರ್, ಭೂಪಾಲ್, ಕಚ್ ಮತ್ತು ತ್ರಿಪುರ ಇಂಥ ರಾಜ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಸ್ಥಾನಗಳು ಇಲ್ಲದಿರುವುದರಿಂದ ಪರಿಶಿಷ್ಟ ಜಾತಿಗಳಿಗೆ ಯಾವುದೇ ಪ್ರಾತಿನಿಧ್ಯ ಸಿಗುವಂತಿಲ್ಲ. ಒಂದು ವೇಳೆ ಕಾನೂನು ಸಚಿವಾಲಯ ಸರದಿಯ ಮೇರೆಗೆ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಜಂಟಿ ಪ್ರಾತಿನಿಧ್ಯ ದೊರಕಲು ಸಾಧ್ಯವಾಗುವಂತೆ ಯಾವುದಾದರೂ ಸೂತ್ರವನ್ನು ರೂಪಿಸಿದ್ದಿದ್ದರೆ ಅದು ಹೆಚ್ಚು ಸೂಕ್ತವಾಗಿಯೂ, ವಿವೇಕದಿಂದ ಕೂಡಿದುದೂ ಆಗಿರುತ್ತಿತ್ತು. ಆ ರಾಜ್ಯಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪಂಗಡಗಳಿಗೆ ಸೇರಿದ ಜನರಿದ್ದರೂ ಹಾಲಿ ಸ್ಥಿತಿಯಲ್ಲಿ ಅವರಿಗೆ ಯಾವುದೇ ಪ್ರಾತಿನಿಧ್ಯ ದೊರಕುತ್ತಿಲ್ಲ. ಹಾಗಾಗಿ ಈ ಮಂದಿಗೆ ಸರದಿಯ ಮೇರೆಗೆ ಜಂಟಿ ಪ್ರಾತಿನಿಧ್ಯ ಸಿಗುವಂತೆ ಯಾವುದಾದರೂ ಒಂದು ಪದ್ಧತಿಯನ್ನು ರೂಪಿಸಲು ನಾನು ಮಾನ್ಯ ಕಾನೂನು ಮಂತ್ರಿಯವರನ್ನು ಕೋರುತ್ತೇನೆ.

ನಾನು ಪ್ರಸ್ತಾಪಿಸಬಯಸುವ ಕೊನೆಯ ಅಂಶವೆಂದರೆ ಸಂವಿಧಾನದ ಅಡಿಯಲ್ಲಿ ರಾಜ್ಯಗಳಿಂದ ಮತ್ತು ಕೇಂದ್ರ ಒಕ್ಕೂಟದಿಂದ ಅಂಗೀಕೃತವಾಗಿ ಪಟ್ಟಿಯಲ್ಲಿ ಸೇರಿರುವ ಅಸ್ಪೃಶ್ಯರಿಗೆ ಅಥವಾ ಪರಿಶಿಷ್ಟ ಪಂಗಡಗಳ ಜನರಿಗೆ ಮಾತ್ರ ಸಂವಿಧಾನದತ್ತವಾದ ಸೌಲಭ್ಯಗಳು ದೊರಕುತ್ತದೆ. ಆದರೆ ಬಿಲಾಸಪುರ, ಕೊಡಗು, ಅಂಡಮಾನ್ ಮತ್ತು ನಿಕೋಬಾರ್ ರಾಜ್ಯಗಳಲ್ಲಿ ಇಂಥಪಟ್ಟಿಗಳು ಈವರೆಗೆ ಸಿದ್ಧವಾಗಿಲ್ಲ. ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಇಂಥ ಪಟ್ಟಿಗಳು ಚಾಲ್ತಿಯಲ್ಲಿ ಇಲ್ಲದಿರುವುದರಿಂದ ಆ ರಾಜ್ಯಗಳಲ್ಲಿ ಈ ಜನರಿಗೆ ಶಿಕ್ಷಣದ ವಿಶೇಷಸೌಲಭ್ಯಗಳಾಗಲೀ, ಸೇವೆಯಲ್ಲಿ ಬಡ್ತಿಗಳಾಗಲೀ ದೊರೆಯುತ್ತಿಲ್ಲ. ಆದ್ದರಿಂದ ಈ ಎಲ್ಲಾ ಮಂದಿಗೂ ಅನ್ವಯವಾಗುವಂತೆ ಪಟ್ಟಿಗಳನ್ನು ತಯಾರಿಸಿ ಸಂವಿಧಾನದಡಿಯಲ್ಲಿ ಎಲ್ಲ ಸೌಲಭ್ಯಗಳೂ ಅವರಿಗೆ ದೊರೆಯುವಂತೆ ಮಾಡಬೇಕಾಗಿ ಕೋರುತ್ತೇನೆ.

ಸರ್ಕಾರ ಇಂಥದೊಂದು ಕ್ರಮವನ್ನು ಮುಂದಿಡುತ್ತಿರುವುದಕ್ಕಾಗಿ ನಾನು ಇನ್ನೊಮ್ಮೆ ಆಭಾರ ವ್ಯಕ್ತಪಡಿಸಬಯಸುತ್ತೇನೆ, ಹಾಗೂ ನಾನು ನೀಡಿರುವ ಸಲಹೆಗಳನ್ನು ಮಸೂದೆಯಲ್ಲಿ ಅಳವಡಿಸಬೇಕೆಂದು ಮಾನ್ಯ ಕಾನೂನು ಮಂತ್ರಿಯವರಲ್ಲಿ ಕೋರುತ್ತೇನೆ.

**ಪಂಡಿತ ಮುನೀಶ್ವರದತ್ತ ಉಪಾಧ್ಯಾಯ (ಉತ್ತರ ಪ್ರದೇಶ):** ಈ ಸದನ ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಹಿತಾಸಕ್ತಿಯನ್ನು ಕಾಯುವಲ್ಲಿ ತುಂಬ ಆಸಕ್ತಿ ವಹಿಸಿದೆ ಎಂದು ಒತ್ತಿ ಹೇಳುವ ಅಗತ್ಯವಿಲ್ಲ. ಏಕೆಂದರೆ ನಮ್ಮ ಕಾಂಗ್ರೆಸ್ ಸರಕಾರ, ಅದರಲ್ಲೂ ಬಹಳಷ್ಟು ಮಂದಿ ಕಾಂಗ್ರೆಸ್ ಸದಸ್ಯರೇ ಇರುವಂತಹ, ಮಹಾತ್ಮ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿರುವ ಕಾಂಗ್ರೆಸ್ ಜನ ಗಾಂಧೀಜಿಯವರಿಗೆ ತುಂಬ ಪ್ರಿಯವಾಗಿದ್ದ ಈ ವಿಷಯದಲ್ಲಿ ಅತ್ಯಂತ ಆಸಕ್ತಿಯನ್ನು ತಳೆದಿರುವರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದ್ದರಿಂದ ಲೋಕಸಭೆಯಲ್ಲಿ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಪರಿಶಿಷ್ಟಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೂಕ್ತವಾದ ಪ್ರಾತಿನಿಧ್ಯವನ್ನು ನೀಡಿ ಅವರ ಹಕ್ಕುಗಳನ್ನು ಮತ್ತು ಹಿತಾಸಕ್ತಿಗಳನ್ನು ಕಾಪಾಡುತ್ತೇವೆಂದು ಈ ಸದನದ ಸದಸ್ಯರಿಗಾಗಲೀ, ಹೊರಗಿನ ಜನರಿಗಾಗಲೀ ಆಶ್ವಾಸನೆ ನೀಡುವಂತಹ ಅಗತ್ಯವೇನೂ ಇಲ್ಲ ಎಂದು ನಾನು ಭಾವಿಸುತ್ತೇನೆ. ಆದರೆ ಸದನದ ಮಾನ್ಯ ಸದಸ್ಯರ ತಿಳಿವಳಿಕೆಯಲ್ಲಿ ಕೆಲವು ಅಂಶಗಳಿದ್ದು ಅದರ ಬಗ್ಗೆ ಕೆಲವು ಮಟ್ಟಿಗೆ ಚರ್ಚೆ ನಡೆದಿದೆಯೆಂದು ತಿಳಿಯಬಹುದಾಗಿದೆ.

**ಮಧ್ಯಾಹ್ನ ೧೨.೦೦ ಗಂಟೆ**

ಸದರಿ ಮಸೂದೆಯ ಅಂತಃಸತ್ವವನ್ನು ಗಮನಿಸಿ ಹೇಳುವುದಾದರೆ ಲೋಕಸಭೆಯಲ್ಲಿ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರಾತಿನಿಧ್ಯವನ್ನು ಕೊಡುವುದು ಪ್ರಶಂಸನಾರ್ಹವಾದ ಮತ್ತು ಸ್ವಾಗತಾರ್ಹವಾದ ಕ್ರಮವಾಗಿದೆ. ಅನುಚ್ಛೇದ ೩೩೦ ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ. ಅನುಚ್ಛೇದ ೩೩೦ ರ ಖಂಡ (೨) ರಲ್ಲಿ ಹೀಗೆ ಹೇಳಿದೆ:

> ""ಯಾವುದೇ ರಾಜ್ಯದಲ್ಲಿ ಖಂಡ(೧)ರನ್ವಯ ಪರಿಶಿಷ್ಟಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿ ಇಟ್ಟಿರುವ ಸ್ಥಾನಗಳ ಸಂಖ್ಯೆ ಸಾಧ್ಯವಾದಷ್ಟು ಹತ್ತಿರವಾಗಿ, ಆ ರಾಜ್ಯದ ಜನಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿಗಳಿಗೆ ಅನುಗುಣವಾಗಿ ಲೋಕಸಭೆಯಲ್ಲಿ ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ನಿಗದಿಯಾಗಿರುವ ಒಟ್ಟು ಸ್ಥಾನಗಳಿಗೆ ಗಮನಾದ ಅನುಪಾತವನ್ನು ಹೊಂದಿರತಕ್ಕದ್ದು. ಅಂತೆಯೆ, ಆ ರಾಜ್ಯದಲ್ಲಿ ಅಥವಾ ರಾಜ್ಯದ ಭಾಗದಲ್ಲಿ ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿಟ್ಟಿರುವ ಸ್ಥಾನಗಳ ಸಂಖ್ಯೆ ಕೂಡ ಮೇಲ್ಕಂಡತೆಯೆ ಆ ರಾಜ್ಯದ ಒಟ್ಟು ಜನಸಂಖ್ಯೆಯ ಅನುಪಾತದಲ್ಲಿರತಕ್ಕದ್ದು."

ಈ ಹಿನ್ನೆಲೆಯಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಈ ಅವಕಾಶ ಎಲ್ಲ ರಾಜ್ಯಗಳಿಗೂ ಅನ್ವಯಿಸುತ್ತದೆ. ಇದು ಕೇವಲ ಭಾಗ 'ಎ' ರಾಜ್ಯಗಳಿಗೆ ಅಥವಾ ಭಾಗ 'ಬಿ' ರಾಜ್ಯಗಳಿಗೆ ಇಲ್ಲವೇ ಯಾವುದೇ ನಿರ್ದಿಷ್ಟ ರಾಜ್ಯಕ್ಕೆ ಮಾತ್ರವಷ್ಟೇ ಅನ್ವಯಿಸುವುದಿಲ್ಲ. ಪ್ರಾಯಃ ರಾಜ್ಯವಿಧಾನಸಭೆಗಳಿಗೆ ಪ್ರಾತಿನಿಧ್ಯ ಕಲ್ಪಿಸುವ ಅವಕಾಶವನ್ನು ಒಳಗೊಂಡ ಅನುಚ್ಛೇದ ೩೩೨ನ್ನು ಉಲ್ಲೇಖಿಸುವ ಕಾರಣದಿಂದಾಗಿ ಈ ಗೊಂದಲ ಉಂಟಾಗಿದೆ ಎನಿಸುತ್ತದೆ. ನನ್ನ ಅಭಿಪ್ರಾಯದಲ್ಲಿ ಸಂವಿಧಾನದಲ್ಲಿ ಈಗಾಗಲೇ ಕಲ್ಪಿಸಿರುವ ಅವಕಾಶದ ಪುನರಾವೃತ್ತಿ ಇದಾಗಿದೆ. ಈ ಲೋಕಸಭೆಯಲ್ಲಿ ಅನುಚ್ಛೇದ ೩೩೦ರನ್ವಯ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರಾತಿನಿಧ್ಯ ನೀಡುವ ಅವಕಾಶ ಇಲ್ಲವೆಂದು ಪ್ರತಿಪಾದಿಸುವುದಾದರೆ ಇಂಥ ಬೇರೆ ಯಾವುದೂ ಅವಕಾಶ ಇದೆಯೆಂದು ನನಗೆ ಅನಿಸುತ್ತಿಲ್ಲ. ಒಂದು ವೇಳೆ ಇಂಥ ಬೇರೆ ಅವಕಾಶ ಇಲ್ಲದಿದ್ದರೆ. ನನ್ನ ಅಭಿಪ್ರಾಯದಲ್ಲಿ ಈ ಮಸೂದೆಯನ್ನು ಕೂಡ ಈ ಸದನದ ಮುಂದೆ ತರಲು ಸಾಧ್ಯವಾಗಲಾರದು. ಆದ್ದರಿಂದ ಈ ಮಸೂದೆ ಯಾರದೇ ನ್ಯಾಯವಾದ ಅಧಿಕಾರಕ್ಕೆ ಮೀರಿದುದಾಗಿದೆ ಇಲ್ಲವೆ ಅತಿವ್ಯಾಪ್ತಿಯದಾಗಿದೆ. ಈಗಾಗಲೇ ಒಂದು ಅವಕಾಶ ಇದೆಯೆಂದು ಒಪ್ಪುವ ಪಕ್ಷದಲ್ಲಿ ಈ ಮಸೂದೆಯನ್ನು ಸದನದ ಮುಂದೆ ತರುವ ಅಗತ್ಯವೇ ಇರುವುದಿಲ್ಲ. ಆ ದೃಷ್ಟಿಯಿಂದ ಈ ಮಸೂದೆ ಅನಾವಶ್ಯಕವೆನಿಸುತ್ತದೆ. ಒಂದು ವೇಳೆ ಸಂವಿಧಾನದಲ್ಲಿ ಇಂಥ ಅವಕಾಶ ಲಭ್ಯವಿಲ್ಲದಿದ್ದಲ್ಲಿ ಈ ಮಸೂದೆ ನ್ಯಾಯೋಚಿತ ಅಧಿಕಾರಕ್ಕೆ ಮೀರಿದ್ದಾಗಿದೆ.

ಈ ಮಸೂದೆಯಲ್ಲಿ ಅವಕಾಶ ಒದಗಿಸಲಾಗಿರುವ ಇನ್ನೊಂದು ಅಂಶವೆಂದರೆ ಇದರಲ್ಲಿ ಕೆಲವು ಜಾತಿಗಳನ್ನು ಮತ್ತು ಪರಿಶಿಷ್ಟ ಜಾತಿಗಳೆಂದು ಮತ್ತು ಪರಿಶಿಷ್ಟ ಪಂಗಡಗಳೆಂದು ಘೋಷಿಸಲಾಗಿದೆ. ಅದಕ್ಕೆ ಕೂಡ ೩೪೧ ಮತ್ತು ೩೪೨ ಅನುಚ್ಛೇದಗಳಲ್ಲಿ ಅವಕಾಶವುಂಟು. ಅನುಚ್ಛೇದ ೩೪೨(೨)ರನ್ವಯ:

> "ಸಂವಿಧಾನವು ಖಂಡ (೧)ರನ್ವಯ ಜಾರಿ ಮಾಡಿರುವ ಅಧಿಸೂಚನೆಯೊಂದರಲ್ಲಿ ಕಾನೂನುಬದ್ಧವಾಗಿ ಪರಿಶಿಷ್ಟ ಜಾತಿಗಳ ಪಟ್ಟಿಗೆ ಸಂಬಂಧಪಟ್ಟಂತೆ ಯಾವುದೇ ಜಾತಿ, ಜನಾಂಗ ಅಥವಾ ಪಂಗಡವನ್ನು ಇಲ್ಲದೆ ಯಾವುದೇ ಒಂದು ಜಾತಿಯ, ಜನಾಂಗದ ಅಥವಾ ಪಂಗಡದ ಒಂದು ಭಾಗವನ್ನು ಇಲ್ಲವೆ ಗುಂಪನ್ನು ಅದಕ್ಕೆ

ಸೇರ್ಪಡೆ ಮಾಡಬಹುದು ಅಥವಾ ಅದರಿಂದ ತೆಗೆದುಹಾಕಬಹುದು. ಆದರೆ ಮೇಲೆ ಹೇಳಿದಂತೆ ಸದರಿ ಖಂಡದನ್ವಯ ಹೊರಡಿಸಲಾದ ಅಧಿಸೂಚನೆಯು ತದನಂತರದ ಯಾವುದೇ ಅಧಿಸೂಚನೆಯ ಕಾರಣದಿಂದಾಗಿ ಬದಲಾಗತಕ್ಕದ್ದಲ್ಲ."

ನಾನು ನಿವೇದಿಸಿಕೊಳ್ಳುವುದು ಏನೆಂದರೆ ಅನುಚ್ಛೇದ ३४೨ ರ ಖಂಡ (೨)ರಡಿಯಲ್ಲಿ ಯಾವುದೇ ಬಗೆಯ ಬದಲಾವಣೆಯನ್ನು ಮಾಡುವ ಹಕ್ಕು ಈ ಸದನಕ್ಕೆ ಉಂಟು. ಆ ಅವಕಾಶದನ್ವಯ ಆ ಬಗೆಯ ಮಾರ್ಪಾಡನ್ನು ಸೀಮಿತವಾಗಿ ಮಾಡಬಹುದಾಗಿದೆ. ಇದು ಏಕೆ ಸೀಮಿತವಾಗಿದೆಯೆಂದರೆ ರಾಷ್ಟ್ರಪತಿಗಳು ಒಂದು ವೇಳೆ ಸಿದ್ಧಪಡಿಸಿರುವ ಇಂಥ ಯಾವುದೇ ಪಟ್ಟಿಯಿದ್ದಲ್ಲಿ ಖಂಡ (೧) ರನ್ವಯ ಲೋಕಸಭೆಯ ಅಧಿನಿಯಮವೊಂದನ್ನು ಜಾರಿಮಾಡುವುದರ ಮೂಲಕ ಆ ಪಟ್ಟಿಯಲ್ಲಿ ಮಾತ್ರ ಮಾರ್ಪಾಡನ್ನು ಮಾಡಬಹುದಾಗಿದೆ. ಇಲ್ಲದಿದ್ದಲ್ಲಿ ಕೆಲವು ಜಾತಿಗಳನ್ನು ಪರಿಶಿಷ್ಟ ಜಾತಿಗಳ ಅಥವಾ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸಬೇಕೆ ಅಥವಾ ಬೇಡವೆ ಎಂಬ ಅವಕಾಶ ಕಲ್ಪಿಸುವುದಕ್ಕಾಗಲೀ ಅಥವಾ ಪಟ್ಟಿಯಲ್ಲಿ ಇಂಥ ಬದಲಾವಣೆ ಮಾಡುವುದಕ್ಕಾಗಲೀ ಯಾವುದೇ ಸ್ವತಂತ್ರ ಅವಕಾಶ ಇರುವುದಿಲ್ಲ. ಆದ್ದರಿಂದ ಆ ಅವಕಾಶಕ್ಕೆ ಸಂಬಂಧಪಟ್ಟಂತೆಯೂ ಕೂಡ ನನಗೆ ಅನ್ನಿಸುವಂತೆ ಈ ಮಸೂದೆ ನಮ್ಮನ್ನು ಯಾವ ರೀತಿಯಲ್ಲೂ ಮುಂದಕ್ಕೆ ಕೊಂಡೊಯ್ಯುವುದಿಲ್ಲ. ಏಕೆಂದರೆ ಇಂಥ ಮಾರ್ಪಾಡುಗಳನ್ನು ಅಳವಡಿಸಲು ಸಾಧ್ಯತೆ ಒದಗಿಸುವಂತಹ ಯಾವುದೇ ಪಟ್ಟಿ ರಾಷ್ಟ್ರಪತಿಗಳಿಂದ ಸಿದ್ಧಗೊಂಡಿಲ್ಲ. ಹಾಗಾಗಿ ನಾನು ನಿವೇದನೆ ಮಾಡುವುದೇನೆಂದರೆ ಎಲ್ಲ ರೀತಿಯಲ್ಲೂ ಈ ಮಸೂದೆ ಅತಿವ್ಯಾಪ್ತಿಯಿಂದ ಕೂಡಿದೆ ಅಥವಾ ನ್ಯಾಯೋಚಿತ ಅಧಿಕಾರಕ್ಕೆ ಮೀರಿದ್ದಾಗಿದೆ. ಸಂವಿಧಾನದ ಅನುಚ್ಛೇದ ३३೦ರಲ್ಲಿ ಇಂಥ ಅವಕಾಶವನ್ನು ಒದಗಿಸಲು ಸಾಧ್ಯವಿದ್ದು ಆ ಮೂಲಕ ಈ ಸದನದಲ್ಲಿ ಪರಿಶಿಷ್ಟ ಪಂಗಡಗಳಿಗೆ ಮತ್ತು ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯ ಒದಗಿಸಲು ಸಾಧ್ಯವಿರುವ ಕಾರಣ ಈ ಮಸೂದೆ ಸಂಪೂರ್ಣವಾಗಿ ಅನಾವಶ್ಯಕ ಅಥವಾ ಈ ಹಿನ್ನೆಲೆಯಲ್ಲಿ ಕಾನೂನು ಜಾರಿಮಾಡುವುದು ನಿರುಪಯುಕ್ತ.

**ಅಧ್ಯಕ್ಷರು:** ಮಾನ್ಯ ಮೂಲದಾಸ ವೈಶ್ಯ ಅವರೆ.

**ಕಾನೂನು ಮಂತ್ರಿ (ಡಾ. ಅಂಬೇಡ್ಕರ್):** ನಾನು ಒಂದು ಕೋರಿಕೆಯನ್ನು ಮುಂದಿಡಬಯಸುತ್ತೇನೆ. ಪಂಡಿತ ಮುನೀಶ್ವರದತ್ತ ಉಪಾಧ್ಯಾಯ ಅವರು ಮಾಡಿರುವ ವಾದದ ಬೆನ್ನಿನಲ್ಲೇ ಇತರ ಅನೇಕ ಸದಸ್ಯರೂ ಕೂಡ ವಾದ ಮಾಡುವ ಸಾಧ್ಯತೆ ಇದೆಯೋ ಏನೋ ಗೊತ್ತಿಲ್ಲ. ನಿನ್ನೆ ಹೀಗೆ ನಡೆಯಿತು. ಆ ಪಕ್ಷದಲ್ಲಿ, ತಮ್ಮ ಅನುಮತಿಯನ್ನು ಕೋರಿ, ನಿರ್ದಿಷ್ಟವಾಗಿ ಈ ವಿಷಯವಾಗಿ ಸಾಂವಿಧಾನಿಕ ಸ್ಥಿತಿ ಹೇಗಿದೆ ಎಂದು ವಿವರಿಸಬಯಸುತ್ತೇನೆ. ಆದರೂ ಅದನ್ನು ತಮಗೆ ಬಿಡುತ್ತೇನೆ. ಇಲ್ಲವಾದರೆ ನಾನು ಆ ವಿಷಯವಾಗಿ ನನ್ನ ಸರದಿ ಬಂದಾಗ ನನ್ನದೇ ಆದ ರೀತಿಯಲ್ಲಿ ಕೈಗೆತ್ತಿಕೊಳ್ಳಬಯಸುತ್ತೇನೆ.

**ಅಧ್ಯಕ್ಷರು:** ಅದೇ ಸರಿಯಾದುದು ಎಂದು ನನಗೂ ಅನಿಸುತ್ತದೆ. ಅವರ ಆಕ್ಷೇಪ ಏನೆಂಬುದು ನನಗೆ ಕೂಡ ಸರಿಯಾಗಿ ಸ್ಪಷ್ಟವಾಗುತ್ತಿಲ್ಲ.

**ಡಾ. ಅಂಬೇಡ್ಕರ್:** ಅವರು ಒಂದು ನಿರ್ದಿಷ್ಟವಾದ ಸಂಗತಿಯ ಕಡೆ ಗಮನ ಹರಿಸಿಲ್ಲ. ಆದ್ದರಿಂದಲೇ ಈ ರೀತಿಯ ಆಕ್ಷೇಪವನ್ನು ಎತ್ತುತ್ತಿದ್ದಾರೆ.

**ಶ್ರೀ ಭಾರತಿ (ಮದ್ರಾಸ್):** ಅದನ್ನು ನಿನ್ನೆ ಸಹ ಎತ್ತಿದ್ದರಲ್ಲ.

**ಅಧ್ಯಕ್ಷರು:** ಅಂದ ಮೇಲೆ ಅದೇ ವಾದವನ್ನು ಮತ್ತೆ ಹೂಡುವ ಅಗತ್ಯವಿಲ್ಲ. ಕಾನೂನು ಮಂತ್ರಿಗಳು ಅದಕ್ಕೆ ಕೊನೆಯಲ್ಲಿ ಉತ್ತರ ನೀಡುತ್ತಾರೆ.

**ಶ್ರೀ ಸಿಧ್ವ (ಮಧ್ಯಪ್ರದೇಶ):** ಅವರು ಈಗಲೇ ಉತ್ತರನೀಡಲಿ.

**ಅಧ್ಯಕ್ಷರು:** ಪುನರಾವರ್ತನೆಯ ಕಾರಣದಿಂದ ನಾನು ಮತ್ತೆ ಆ ವಾದಕ್ಕೆ ಅವಕಾಶ ನೀಡಲಾರೆ.

**ಶ್ರೀ ಯತಿರಾಜುಲು ನಾಯ್ಡು (ಮೈಸೂರು):** ಸಾಂವಿಧಾನಿಕ ಸ್ಥಿತಿಯ ಬಗ್ಗೆ ಚರ್ಚೆ ನಡೆಸುವುದನ್ನು ತಪ್ಪಿಸಬಾರದೆಂದು ತಮ್ಮಲ್ಲಿ ಕೋರುತ್ತೇನೆ. ಏಕೆಂದರೆ ಇಲ್ಲಿ ಪ್ರಸ್ತಾಪಕ್ಕೆ ಬರುವಂತಹ ಇನ್ನೂ ಅನೇಕ ಅಂಶಗಳು ಅದರಲ್ಲಿರಬಹುದು.

**ಅಧ್ಯಕ್ಷರು:** ಯಾವ ವಿಚಾರವನ್ನೇ ಆಗಲೀ ಬೇರೆ ಬೇರೆ ದೃಷ್ಟಿಗಳಿಂದ ಚರ್ಚೆಮಾಡಬಹುದು. ಸಂವಿಧಾನದಲ್ಲಿ ದಾಖಲಾಗಿರುವ ಪದಗಳು ತಮ್ಮ ಮುಂದೆ ಇವೆ. ಮಸೂದೆ ಸಹಾ ಸದನದ ಮುಂದೆ ಇದೆ. ಅವುಗಳನ್ನು ಒಂದು ಅಥವ ಎರಡು ಬಾರಿ ವಿವರಿಸಿದರೆ ಅವು ಒಳಗೊಂಡಿರುವ ಎಲ್ಲ ಅಂಶಗಳು ಬುದ್ಧಿವಂತರಾದ ಈ ಸದನದ ಸದಸ್ಯರಿಗೆ ಅರ್ಥವಾಗುತ್ತದೆಂದು ಭಾವಿಸಬಹುದಲ್ಲದೆ, ಅದನ್ನೇ ಮತ್ತೆ ಮತ್ತೆ ಪುನರಾವರ್ತನೆ ಮಾಡುವುದರಿಂದ ಏನು ಪ್ರಯೋಜನ.

**ಶ್ರೀ ದ್ವಿವೇದಿ (ವಿಂಧ್ಯ ಪ್ರದೇಶ):** ಈ ಮಸೂದೆ ಭಾಗ 'ಸಿ'ಗೆ ಸೇರಿದ ರಾಜ್ಯಗಳಿಗೆ ಅನ್ವಯಿಸುತ್ತದೆಯಾದರೂ ಆ ರಾಜ್ಯಗಳ ಯಾವುದೇ ಸದಸ್ಯರಿಗೆ ಈವರೆಗೆ ಮಾತನಾಡಲು ಅವಕಾಶಕೊಟ್ಟಿಲ್ಲ. ಭಾಗ "ಸಿ'ಗೆ ಸೇರಿದ ರಾಜ್ಯಗಳ ಸದಸ್ಯರಿಗೆ ತಾವು ಮಾತನಾಡಲು ಅವಕಾಶ ಕೊಡುತ್ತೀರೋ ಇಲ್ಲವೋ ಎಂಬುದನ್ನು ತಿಳಿಯಬಯಸುತ್ತೇನೆ.

**ಅಧ್ಯಕ್ಷರು:** ಮಾನ್ಯ ಸದಸ್ಯರು ತಮಗೆ ಈ ಬಗೆಯ ಅವಕಾಶ ಕೊಟ್ಟಿಲ್ಲವೆಂದು ಏಕೆ ತಿಳಿಯುತ್ತಾರೋ ಗೊತ್ತಾಗುತ್ತಿಲ್ಲ. ಪ್ರತಿಯೊಬ್ಬ ಸದಸ್ಯರಿಗೂ ಆ ಅವಕಾಶ ಉಂಟು. ಆದರೆ ಇಲ್ಲಿರುವ ಪ್ರತಿಯೊಬ್ಬ ಸದಸ್ಯರಿಗೂ ಅವಕಾಶ ದೊರೆಯುತ್ತದೆಂದು ಖಂಡಿತವಾಗಿ ಹೇಳಲಾರೆ. ಈ ಮಸೂದೆಯ ಕಾರ್ಯವ್ಯಾಪ್ತಿ ಕೆಲವು ಭಾಗ 'ಸಿ' ರಾಜ್ಯಗಳಿಗೆ ಮಾತ್ರ ಅನ್ವಯವಾಗುತ್ತದಷ್ಟೆ. ನಾನು ಸರಿಯಾಗಿ ಹೇಳುತ್ತಿದ್ದೇನೆಂದು ಭಾವಿಸುತ್ತೇನೆ. (ಮಾನ್ಯ ಸದಸ್ಯರು: ಹೌದು ಹೌದು). ಯಾವುದೇ ಸದಸ್ಯರು ಬಹಳ ಹೆಚ್ಚೆಂದರೆ ಮಸೂದೆ ಅನ್ವಯವಾಗುವ ರಾಜ್ಯಗಳಿಂದ ಬಂದಿರುವ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಬೇಕು ಅನ್ನುವುದಷ್ಟೆ ತಾನೆ.

**ಕ್ಯಾಪ್ಟನ್ ಎ.ಪಿ. ಸಿಂಗ್ (ವಿಂಧ್ಯ ಪ್ರದೇಶ):** ನಾವು ವಿಂಧ್ಯ ಪ್ರದೇಶದಿಂದ ಬಂದಿದ್ದೇನೆ.

**ಅಧ್ಯಕ್ಷರು:** ಇಲ್ಲಿ ಭಾಗ 'ಸಿ' ಎಂಬ ಮಾತು ಇರುವುದರಿಂದ ಭಾಗ 'ಸಿ' ಗೆ ಸೇರಿದ ರಾಜ್ಯಗಳಿಂದ ಬಂದಿರುವ ಪ್ರತಿಯೊಬ್ಬ ಸದಸ್ಯರೂ ಮಾತನಾಡಲೇ ಬೇಕೆಂದಿಲ್ಲ. ಅದು ಸೂಕ್ತವಾದ ಪದ್ಧತಿಯೂ ಅಲ್ಲ. ಆದರೆ ನಾನು ಆ ವಿಷಯವಾಗಿ ಮುಂದೆ ಹೋಗುವ ಅಗತ್ಯವಿಲ್ಲ. ಈ ಎಲ್ಲ ಚರ್ಚೆಗಳನ್ನು ಗಮನಿಸುತ್ತಿದ್ದೇನೆ. ಯಾವುದು ಸೂಕ್ತವೋ ಮತ್ತು ಅತ್ಯುತ್ತಮ ಪದ್ಧತಿಯೆಂದು ನನಗೆ ಅನಿಸುತ್ತದೋ ಅದನ್ನು ಅನುಸರಿಸುತ್ತೇನೆ.

**ಶ್ರೀ ದ್ವಿವೇದಿ:** ಭಾಗ 'ಸಿ' ರಾಜ್ಯಗಳಿಂದ ಬಂದಿರುವ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಬೇಕೆಂದು ತಮ್ಮಲ್ಲಿ ಕೋರುತ್ತೇನೆ. ಏಕೆಂದರೆ ಅದು ಅವರಿಗೆ ಸಂಬಂಧಪಟ್ಟ ವಿಷಯವಾಗಿದೆ.

**ಅಧ್ಯಕ್ಷರು:** ಅವರು ಹಾಗೆ ಹೇಳಲಿ ನೋಡೋಣ. ಕನಿಷ್ಠ ಪಕ್ಷ ತಾವು ಅಂಥ ಒಬ್ಬ ಮಾನ್ಯ ಸದಸ್ಯರಲ್ಲವೆಂದು ಭಾವಿಸಲೇ.

**ಶ್ರೀ ದ್ವಿವೇದಿ:** ಸ್ವಾಮಿ, ನಾನು ಬಂದಿರುವುದು ವಿಂಧ್ಯಪ್ರದೇಶದಿಂದ.

**ಅಧ್ಯಕ್ಷರು:** ಕ್ಷಮಿಸಿ, ಅಂದಹಾಗೆ ವಿಂಧ್ಯಪ್ರದೇಶವೂ ಇದರಲ್ಲಿ ಸೇರಿದೆಯಲ್ಲ. ಆದರೆ ನಾನು ಪರಿಶಿಷ್ಟ ಜಾತಿಗಳಿಂದ ಬಂದಿರುವ ಸದಸ್ಯರಿಗೆ ಮೊದಲ ಆದ್ಯತೆಯನ್ನು ಕೊಡಲು ಇಷ್ಟಪಡುತ್ತೇನೆ.

ಹಾಗಾಗಿ ಪರಿಶಿಷ್ಟ ಜಾತಿಗಳಿಗೆ ಸೇರದೆ ಇರುವ ಸದಸ್ಯರು ಮಾತನಾಡಲು ಸ್ವಲ್ಪ ಕಾಯಬೇಕು. ಆ ಜಾತಿಗೆ ಸೇರಿದ ಜನರಿಗೆ ಪೂರ್ಣ ಅವಕಾಶ ಕೊಡುತ್ತಿದ್ದೇನೆ. ನಾನು ಮಾನ್ಯ ಸದಸ್ಯರಾದ ಶ್ರೀ ಮೂಲದಾಸ್ ಅವರಿಗೆ ಅವಕಾಶ ನೀಡುತ್ತಿದ್ದೇನೆ. ಏಕೆಂದರೆ ಅವರು ಆ ವರ್ಗಕ್ಕೆ ಸೇರಿದವರು. ನನ್ನ ಬಳಿ ಒಂದು ಪಟ್ಟಿ ಇದೆ. ಆ ಸಮುದಾಯದಿಂದ ಬಂದಿರುವವರು ಯಾರು ಮತ್ತು ಯಾರಿಗೆ ಆದ್ಯತೆ ಕೊಡಬೇಕೆಂಬುದು ನನ್ನ ಮನಸ್ಸಿನಲ್ಲಿದೆ. ಆ ವಿಷಯವಾಗಿ ಮತ್ತೆ ಚರ್ಚಿಸುವ ಅಗತ್ಯವಿಲ್ಲ.

**ಶ್ರೀ ಎಂ.ಬಿ. ವೈದ್ಯ (ಮುಂಬಯಿ):** *(ಹಿಂದಿ ಭಾಷಣದ ಅನುವಾದ)* ಮಾನ್ಯರೆ, ಈ ಮಸೂದೆಯ ಮೇಲೆ ಮಾತನಾಡಲು ಅವಕಾಶ ದೊರೆತಿರುವುದು ಒಂದು ಅದೃಷ್ಟವೆಂದು ಭಾವಿಸುತ್ತೇನೆ. ಮಾನ್ಯ ಡಾ. ಅಂಬೇಡ್ಕರ್ ಅವರು ಪ್ರಸ್ತುತಪಡಿಸಿರುವ ಮಸೂದೆಯ ಮೇಲಿನ ಚರ್ಚೆಯನ್ನು ಕೇಳಿದ ಮೇಲೆ ಆ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಯಸುತ್ತೇನೆ. ಅವರು ಕಾನೂನಿನ ದೊಡ್ಡ ವಿದ್ವಾಂಸರಾಗಿದ್ದು ಅದರ ಪರಿಣಾಮವಾಗಿ ಈ ಮಸೂದೆಯನ್ನು ಪ್ರಸ್ತುತಪಡಿಸಿದ್ದಾರೆ ಅಂದುಕೊಂಡಿದ್ದೇನೆ. ನಾಡಿನ ಉದ್ಧಾರಕ್ಕಾಗಿ ಶ್ರಮಿಸಿದ ಮಹಾತ್ಮಗಾಂಧಿಯವರ ಆಗಮನದ ಅನಂತರವೇ ನಾವು ಕೂಡ ಮನುಷ್ಯಮಾತ್ರರು ಎಂಬ ತಿಳಿವಳಿಕೆ ನಮಗೆ ಉಂಟಾಗಿದೆ. ಡಾ. ಅಂಬೇಡ್ಕರ್ ಅವರು ಅನೇಕ ಕಡೆಗಳಲ್ಲಿ ಪರಿಶಿಷ್ಟ ಜಾತಿಯ ಜನ ಬ್ರಿಟಿಷ್ ಆಧಿಪತ್ಯದಲ್ಲಿ ಸಂತುಷ್ಟರಾಗಿದ್ದರು, ಆದರೆ ನೆಹರು ಸರಕಾರದಲ್ಲಿ ಈ ಸಂತೋಷ ಅವರ ಪಾಲಿಗೆ ಇಲ್ಲವಾಗಿದೆ ಎಂದು ಮತ್ತೆ ಮತ್ತೆ ಹೇಳಿದ್ದಾರೆ. ಈ ಮಾತಿನಿಂದ ನನಗೆ ದೊಡ್ಡ ಆಘಾತವಾಗಿದೆ. ನಮ್ಮ ದೇಶ ಸತ್ಯಸಂಧತೆಗೆ ಹೆಸರಾದದ್ದು. ಐದುವರ್ಷದ ಎಳೆಯಬಾಲಕ ಪ್ರಹ್ಲಾದನಿಗೆ ತನ್ನ ತಂದೆಯ ಎದುರು ಸತ್ಯವನ್ನು, ಕೇವಲ ಸತ್ಯವನ್ನು ಹೇಳುವ ಧೈರ್ಯ, ಸಾಹಸಗಳಿದ್ದವು, ನಮ್ಮಂತಹ ಹರಿಜನರಿಗೆ ಮಹಾತ್ಮಗಾಂಧೀಜಿಯವರು ಬೇಕಾದಷ್ಟು ಮಾಡಿದ್ದಾರೆ. ಹಾಲಿ ಕಾಂಗ್ರೆಸ್ ಸರಕಾರ ಕೂಡ ನಮ್ಮ ಸಲುವಾಗಿ ಬೇಕಾದಷ್ಟು ಮಾಡುತ್ತಿದೆ. ಅಸಂತುಷ್ಟತೆಯ ಕಾರಣದಿಂದಾಗಿ ನಮ್ಮ ಕಷ್ಟಗಳು ದಿನೇ ದಿನೇ ಹೆಚ್ಚು ಎಂದು ಅನಿಸುತ್ತಿದೆ. ನಮ್ಮ ಸ್ಥಿತಿ ಹದಗೆಡುತ್ತಿರುವುದರಲ್ಲಿ ಅನುಮಾನವೇನಿಲ್ಲ. ನಮ್ಮ ಬಡತನವನ್ನು ಅಷ್ಟು ಸುಲಭವಾಗಿ ತೊಲಗಿಸಲು ಸಾಧ್ಯವಿಲ್ಲ. ನಮ್ಮ ಸಲುವಾಗಿ ಮಾಡಬೇಕಾದದ್ದು ಬೆಟ್ಟದಷ್ಟಿದೆ. ಆದರೆ ನಮ್ಮ ಸಲುವಾಗಿ ಮಾಡುತ್ತಿರುವುದಕ್ಕೆ ನಮ್ಮ ಮುಂದಾಳುಗಳೇ ಮೊಟಕು ಹಾದಿಯಲ್ಲಿ ತಡೆಗಲ್ಲುಗಳನ್ನು ಹಾಕಬಾರದು. ಹಾಗೆ ಮಾಡುವುದು ನಮಗೆ ಸರಿಯಲ್ಲ. ಸೇವೆಯ ಹಾದಿ ಭಾರತದಂತಹ ದೇಶದಲ್ಲಿ ಯೋಗಿಗಳು ತುಳಿಯುವ ಹಾದಿ ಎಂಬ ಮಾತು ಜನಜನಿತವಾಗಿದೆ. ನಾವು ಸಮಾಜದ ಸೇವೆಮಾಡುತ್ತಾ ಬಂದಿದ್ದೇವೆ. ಸ್ವರಾಜ್ಯ ಚಳುವಳಿಯ ಕಾಲದಲ್ಲಿ, ಬೇರೆ ರಾಜ್ಯಗಳ ವಿಷಯದಲ್ಲಿ ಹೇಳದಿದ್ದರೂ ಕನಿಷ್ಟ ನಮ್ಮ ಸ್ವಂತದ್ದೇ ಆದ ಗುಜರಾತ್ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹೇಳುವುದೇ ಆದರೆ ನಮ್ಮ ಜನ ಇತರ ಎಲ್ಲಾ ಜನಗಳ ಜೊತೆಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ಮುಂದೆ ನಡೆದಿದ್ದಾರೆ. ವಸ್ತುಸ್ಥಿತಿಹಾಗಿರಬೇಕಾದರೆ ಭಿಕ್ಷುಕರಂತೆ ಅವರ ಮುಂದೆ ಕೈಚಾಚುವುದು ನಮಗೆ ಇಷ್ಟವಾಗುವುದಿಲ್ಲ. ಇಂದು ಸಮಾನತೆ ಮತ್ತು ಭ್ರಾತೃತ್ವದ ಆಧಾರದ ಮೇಲೆ ನಮಗೆ ನ್ಯಾಯಬದ್ಧವಾಗಿ ಸಲ್ಲಬೇಕಾದ ಹಕ್ಕುಗಳ ಕುರಿತು ನಾವು ಒತ್ತಾಯಮಾಡುತ್ತಿದ್ದೇವೆ. ಇಂದು ನಮ್ಮದೇ ಆದ ಸರಕಾರವಿದೆ. ನಮಗೆ ನ್ಯಾಯ ಒದಗಿಸಬೇಕಾದ ಜವಾಬ್ದಾರಿ ಸಂಸತ್ತಿನ ಮೇಲೆ ಹಾಗೂ ಇಲ್ಲಿಯ ಸದಸ್ಯರ ಮೇಲೆ ಇದೆ. ಇಷ್ಟೆಲ್ಲ ಜಾಗೃತ ಭಾವನೆ ಇದ್ದರೂ ಭಾರತದ ಅನೇಕ ಕಡೆಗಳಲ್ಲಿ ನಮ್ಮ ಮದುವೆಯ ಹುಡುಗ ಕುದುರೆಯ ಮೇಲೆ ಕೂರುವ ಹಾಗಿಲ್ಲ, ಹರಿಜನರು ಮೋಟಾರು ಬಸ್ಸುಗಳಲ್ಲಿ ಪ್ರಯಾಣ ಮಾಡುವ ಹಾಗಿಲ್ಲ, ಅಷ್ಟೇ ಏಕೆ, ನಮ್ಮ ಮನೆಗಳ ಹೆಂಗಸರು ಬೆಲೆಬಾಳುವ ಬಟ್ಟೆಗಳನ್ನಾಗಲೀ, ಆಭರಣಗಳನ್ನಾಗಲೀ ಹಾಕುವಹಾಗಿಲ್ಲ. ಭಾರತದಲ್ಲಿ ನಿಸ್ಸಂದೇಹವಾಗಿ ಇವತ್ತಿಗೂ ಕೆಲವು ಕಡೆಗಳಲ್ಲಿ

ಇಂಥ ಪರಿಸ್ಥಿತಿ ಇದೆ. ಎಲ್ಲ ಕಡೆಗಳಲ್ಲೂ ಇದೆ ಎಂದು ನಾನು ಹೇಳುತ್ತಿಲ್ಲ. ನಮ್ಮ ಸಲುವಾಗಿ ಸರಕಾರದಿಂದ ಬೇಕಾದಷ್ಟು ಮಾಡಲಾಗುತ್ತಿದೆ. ಆದರೆ ಮಾಡಬೇಕಾಗಿರುವುದು ಕೂಡ ಬೇಕಾದಷ್ಟಿದೆ. ನಮ್ಮ ಏಳಿಗೆಗಾಗಿ ಇಷ್ಟೆಲ್ಲ ಮಾಡುತ್ತಿದ್ದರೂ ಏನೂ ಮಾಡುತ್ತಿಲ್ಲ, ಬ್ರಿಟಿಷ್ ರಾಜ್ಯದಲ್ಲೆ ನಾವು ಸುಖವಾಗಿದ್ದೆವು ಎಂದು ಹೇಳುವಷ್ಟು ಕೃತಘ್ನನಾಗಿರಲು ನಾನು ಇಷ್ಟಪಡುವುದಿಲ್ಲ. ಬ್ರಿಟಿಷರು ತಮ್ಮ 'ಒಡೆದು ಆಳುವ' ನೀತಿಯ ಕಾರಣದಿಂದ ನಮ್ಮಲ್ಲೇ ಕೆಲವು ವಿದ್ಯಾವಂತರನ್ನು ಹಿಡಿದು ಅವರನ್ನು ಸಮಸ್ಕಂದರಂತೆ ನೋಡಿಕೊಂಡು ಅವರಿಗೆ ಏನೇನು ಬೇಕೋ ಎಲ್ಲಾ ಮಾಡುತ್ತಿದ್ದರು ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಇಂಥ ಜನ ಮಾತ್ರ ಬ್ರಿಟಿಷರ ಆಡಳಿತದಲ್ಲಿ ತಾವು ಇನ್ನೂ ಹೆಚ್ಚು ಸುಖವಾಗಿದ್ದೇವೆಂದು ಹೇಳಬಹುದು. ಆದರೆ ಇಂದು ಒಂದು ಇಡೀ ಸಮುದಾಯವಾಗಿ ಹರಿಜನರಿಗೆ ಅನುಕೂಲಗಳು ದೊರೆಯುತ್ತಿವೆ. ಆಡಳಿತ ಪಕ್ಷದಲ್ಲಿ ಅಧಿಕಾರಸ್ಥಾನದಲ್ಲಿರುವ ನಮ್ಮ ಪ್ರತಿನಿಧಿಗಳು, ಶ್ರೀ ಸೋನಾವಣಿಯವರು ಹೇಳಿರುವಂತೆ, ಸರಕಾರದ ಮೇಲೆ ಒತ್ತಡವನ್ನು ತಂದು ನಮಗಾಗಿ ಅನೇಕ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಆದರೆ ಸರಕಾರಕ್ಕೆ ಕೆಟ್ಟಹೆಸರು ತಂದು ಸರಕಾರದ ವಿರುದ್ಧ ಕೆಲಸ ಮಾಡುವುದು ನಮ್ಮನ್ನು ಹಾಳುಮಾಡುತ್ತದೆಯೇ ಹೊರತು ಯಾವ ಲಾಭವನ್ನೂ ಉಂಟು ಮಾಡುವುದಿಲ್ಲ. ಡಾ. ಅಂಬೇಡ್ಕರ್ ಅವರು ಮಹಾ ವಿದ್ವಾಂಸರು. ನಮ್ಮ ಸಮುದಾಯ ಕೃತಘ್ನವಾಗಿದೆಯೆಂದು ಹೇಳಿ ಕಳಂಕ ಹಚ್ಚುವ ಮಾತುಗಳನ್ನು ಅವರು ಆಡದಂತೆ ಅವರಿಗೆ ವಿವೇಕ ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಅವರು ತಮ್ಮ ಜೀವನದಲ್ಲಿ ಅನೇಕ ಪಟ್ಟುಗಳನ್ನು ಹಾಕಿದ್ದಾರೆ. ಬಹುಶಃ ಇದು ಕೂಡ ಅಂಥದೊಂದು ಪಟ್ಟು ಆಗಿರಬಹುದು. ಭಗವಾನ್ ಶ್ರೀ ಕೃಷ್ಣಪರಮಾತ್ಮ ಮಾಡುತ್ತಿದ್ದಂತಹ ಒಂದು ಬಗೆಯ ಲೀಲೆಯಂತೆ ಇದು ಕೂಡ ಇರಬಹುದು. ಇಂಥ ತಂತ್ರಗಾರಿಕೆಯ ಲೀಲೆಗಳಿಂದ ದೇವರೇ ನಮ್ಮನ್ನು ಕಾಪಾಡಬೇಕು. ನಾವು ಹುಟ್ಟಿದ ದೇಶದ ವಿಚಾರವಾಗಿ, ನಾವು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಸೇವೆ ಸಲ್ಲಿಸುತ್ತಿರುವ ದೇಶದ ಬಗ್ಗೆ ಕೃತಜ್ಞರಾಗಿರಲು ನಮಗೆ ಸಾಧ್ಯವಿಲ್ಲ. ಒಂದು ಕಾಲಕ್ಕೆ ಧರ್ಮವನ್ನು ಬದಲಾಯಿಸಿಕೊಳ್ಳುವಂತೆ ನಮಗೆ ಪ್ರಚೋದನೆ ಮಾಡಿದರು. ಆದರೆ ನಮ್ಮಲ್ಲಿ ಸಾವಿರಾರು ಮಂದಿ, ಲಕ್ಷಾಂತರ ಮಂದಿ ನಮ್ಮ ತಲೆ ಉರುಳಿದರೂ ಪರವಾಗಿಲ್ಲ, ದೇಶದ ವಿರುದ್ಧವಾಗಿ, ಹುಟ್ಟಿದ ನೆಲದ ವಿರುದ್ಧವಾಗಿ ನಾವು ಅಳವಡಿಸಿಕೊಂಡಿರುವ ಧರ್ಮದ ವಿರುದ್ಧವಾಗಿ ಹೋಗಲಾರೆವೆಂಬುದನ್ನು ಪ್ರಪಂಚಕ್ಕೆ ತೋರಿಸಿಕೊಟ್ಟೆವು. ನಾವು ನಮ್ಮ ಪ್ರಾಣವನ್ನು ತ್ಯಾಗಮಾಡಲು ಸಿದ್ಧವಾಗಿದ್ದೇವೆಯೇ ಹೊರತು ಧರ್ಮವನ್ನು ಬಿಡಲು ಸಿದ್ಧವಿಲ್ಲ. ಕೊನೆಯಲ್ಲಿ ನಾನು ಹೇಳಬೇಕಾದುದು ಇಷ್ಟೇ......

**ಅಧ್ಯಕ್ಷರು:** ಸದ್ದು, ಸದ್ದು, ಮಾನ್ಯ ಸದಸ್ಯರು ತಮ್ಮ ಹೃದಯದ ಆಳದಲ್ಲಿರುವುದನ್ನು ಕಳಕಳಿಯಿಂದ ಹೇಳುತ್ತಿರುವುದನ್ನು ನಾನು ಪ್ರಶಂಸೆ ಮಾಡುತ್ತೇನೆ. ಆದರೆ ನಾವು ಸದನದ ಹೊರಗಡೆ ಚರ್ಚಿಸಬಹುದಾದ ವಿಚಾರವೊಂದನ್ನು ಈ ಸದನದ ಮುಂದೆ ತರುತ್ತಿದ್ದೇವೇನೋ ಎಂಬ ಆತಂಕ ನನಗೆ ಉಂಟಾಗುತ್ತಿದೆ. ಸದ್ಯ ನಮ್ಮ ಗಮನ ಈ ಮಸೂದೆಯ ಚರ್ಚೆಯತ್ತ ಹರಿಯಬೇಕು. ಸಭೆಗೆ ಮನದಟ್ಟು ಮಾಡುವ ಸಲುವಾಗಿ ಕೆಲವು ಮಾತುಗಳನ್ನಾಡುವುದು ತಪ್ಪೇನಿಲ್ಲ. ಅಗತ್ಯವಾದರೆ ಆಡಬಹುದು. ಇಲ್ಲಿ ಪರಿಶಿಷ್ಟ ಜಾತಿಗಳನ್ನು ವಿಶೇಷವಾಗಿ ಪರಿಗಣಿಸಬೇಕು ಎಂಬುದಷ್ಟೆ ಚರ್ಚೆಯ ವಿಷಯ. ಅದಕ್ಕೆ ಮೀರಿದಂತೆ ನಾವು ಸದನದ ಹೊರಗಡೆ ನಡೆಯಬಹುದಾಗಿದ್ದ ಅಥವಾ ನಡೆಯದೆ ಇರಬಹುದಾಗಿದ್ದ ಯಾವುದೇ ರಾಜಕೀಯ ಇಲ್ಲವೆ ಇತರ ಬಗೆಯ ಗೊಂದಲಗಳನ್ನು ಇಲ್ಲಿ ತರುವುದು ಬೇಡ. ಅವು ಸದನದ ಹೊರಗೆ ನಡೆಯಲಿ. ಈ ಸಭೆಯ ಪ್ರತಿಯೊಬ್ಬ ಸದಸ್ಯರೂ ಮಾತನಾಡಬೇಕಾದರೆ ಕಟ್ಟುನಿಟ್ಟಾಗಿ ಸದರಿ

ಮಸೂದೆಯ ವ್ಯಾಪ್ತಿಯನ್ನು ಮೀರದಂತೆ ನಡೆದುಕೊಳ್ಳಬೇಕೆಂದು ಕಳಕಳಿಯಿಂದ ಕೋರುತ್ತೇನೆ. ನಾನು ಸದರಿ ಸದಸ್ಯರ ಭಾಷಣಕ್ಕೆ ಮಧ್ಯೆ ಪ್ರವೇಶ ಮಾಡಬಯಸುವುದಿಲ್ಲ. ಅಂತೆಯೇ ಅವರ ಉತ್ಸಾಹ ಮತ್ತು ಭಾವನೆಗಳು ಕಡಿಮೆ ಮೌಲ್ಯದ್ದೆಂದು ಪರಿಗಣಿಸುವುದೂ ಇಲ್ಲ. ಅವರು ಈ ಮಸೂದೆಯ ಒಳಿತು ಕೆಡುಕುಗಳ ಬಗ್ಗೆ ಚರ್ಚೆಗೆ ತಮ್ಮನ್ನು ಸೀಮಿತವಾಗಿಸಿಕೊಳ್ಳಬೇಕು. ಅವರು ಈ ಹಂತಕ್ಕೆ ಯಾವಾಗ ಬರುತ್ತಾರೆಂದು ನಾನು ಕೂಡ ಕಾಯುತ್ತಿದ್ದೆ.

**ಶ್ರೀ ಎಂ.ಬಿ. ವೈದ್ಯ:** ಈ ವಿಷಯವಾಗಿ ತಾವು ಕಟ್ಟಪ್ಪಣೆ ನೀಡಿರುವುದು ನಿಜಕ್ಕೂ ಉಪಯುಕ್ತವಾಗಿದೆ. ನಾವು ಅದನ್ನು ಅನುಸರಿಸಲೇಬೇಕಲ್ಲ. ಆದರೆ ನಾನು ಮಾನ್ಯ ಡಾ. ಅಂಬೇಡ್ಕರ್ ಅವರಿಗೆ ಕೆಲವು ಮಾತುಗಳನ್ನು ಹೇಳಬೇಕು. ಸರ್ಕಾರದ ಪರವಾಗಿ ಅವರು ಪ್ರಸ್ತುತಪಡಿಸಿರುವ ಈ ಮಸೂದೆ ತುಂಬಾ ಅಗತ್ಯ ಸ್ವರೂಪದ್ದಾಗಿರಬಹುದು. ಆದ್ದರಿಂದ ಹರಿಜನರಾದ ನಾವು ಖಂಡಿತ ಅದಕ್ಕೆ ನಮ್ಮ ಬೆಂಬಲ ವ್ಯಕ್ತಪಡಿಸುತ್ತೇವೆ. ಆದರೆ ನಾನು ಏನು ಹೇಳಬೇಕೆಂದಿದ್ದೇನೋ ಅದನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ನಾನು ಇಷ್ಟು ಮಾತುಗಳನ್ನು ಹೇಳಿರುವುದಕ್ಕಾಗಿ ಅವರು ನನ್ನನ್ನು ಮನ್ನಿಸಲಿ ತಾವು ಕೂಡ ಸ್ವಾಮಿ, ನನ್ನನ್ನು ಮನ್ನಿಸಬೇಕೆಂದು ಕೋರುತ್ತೇನೆ.

**[ಶ್ರೀಮತಿ ದುರ್ಗಾಬಾಯಿಯವರು ಅಧ್ಯಕ್ಷ ಸ್ಥಾನದಲ್ಲಿದ್ದಾರೆ]**

**ಡಾ. ದೇಶ್‌ಮುಖ್ (ಮಧ್ಯಪ್ರದೇಶ):** ನನ್ನ ಮಿತ್ರರಾದ ಸಚಿವ ಮಹೋದಯರು ತುಂಬಾ ತರಾತುರಿಯಲ್ಲಿದ್ದಾರೆ. ಆದರೆ ಕೆಲವು ಮುಖ್ಯ ವಿಷಯಗಳನ್ನು ಕುರಿತು ನಾನು ಇಲ್ಲಿ ಪ್ರಸ್ತಾಪಿಸಲೇ ಬೇಕಾಗಿದೆ. ನಾನು ಯಾವುದೇ ಒಂದು ಅಥವಾ ಇನ್ನೊಂದು ನಿರ್ದಿಷ್ಟ ಜಾತಿಯನ್ನು ಕುರಿತು ಇಲ್ಲಿ ಮಾತಾಡುತ್ತಿಲ್ಲ, ಆದರೆ ಈ ಜನಪ್ರಾತಿನಿಧ್ಯ, ಚುನಾವಣೆ ನಿಯಮಗಳು, ಹಾಗೂ ನಿಬಂಧನೆಗಳನ್ನು ಕುರಿತಂತೆ ಇಲ್ಲಿ ನಡೆದುಕೊಳ್ಳುತ್ತಿರುವ ರೀತಿ ತುಂಬಾ ಅತೃಪ್ತಿಕರವಾಗಿದೆಯೆಂದು ನಾನು ಒತ್ತಿಹೇಳಬಯಸುತ್ತೇನೆ. ನಮ್ಮ ಮುಂದೆ ೧೯೫೦ ರಲ್ಲಿ ಒಂದು ಮಸೂದೆ ಬಂತು, ಅದು ಈಗ XLIII ನೆಯ ಸಂಖ್ಯೆಯ ಕಾಯ್ದೆ ಅಥವಾ ಅಧಿನಿಯಮವೆಂದೆನೆಸಿಕೊಂಡು ನಮ್ಮ ಮುಂದಿದೆ. ಆ ಮಸೂದೆಯನ್ನು ಹೇಗೆ ಪ್ರಸ್ತಾಪಿಸಲಾಯಿತೆಂಬುದನ್ನು, ಅಲ್ಲಿಯ ಅವಕಾಶಗಳಿಗೆ ತಿದ್ದುಪಡಿಗಳನ್ನು ಮಾಡಲು ಈ ಸಭೆ ಹೇಗೆ ಹೆಣಗಾಡಿತೆಂಬುದನ್ನು, ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಲು ಯಾವ ರೀತಿಯ ಕಸರತ್ತನ್ನು ಮಾಡಲಾಯಿತೆಂಬುದನ್ನು ನಾವೆಲ್ಲ ಬಲ್ಲೆವು. ಅದಾದ ಸ್ವಲ್ಪದರಲ್ಲೇ ತಿದ್ದುಪಡಿಗಾಗಿ ಇನ್ನೊಂದು ಮಸೂದೆ ಎದುರಾಯಿತು. ಅದು ೧೯೫೦ ರ XXIII ಕಾಯ್ದೆಯಾಗಿ ರೂಪುಗೊಂಡು ರಾಜ್ಯಗಳ ಪರಿಷತ್ತಿನಲ್ಲಿ ಭಾಗ 'ಸಿ' ಗೆ ಸೇರುವ ರಾಜ್ಯಗಳಿಗೆ ಅದರ ಮೂಲಕ ತಾವು ಪ್ರಾತಿನಿಧ್ಯವನ್ನು ನೀಡಿದೆವು. ಅನಂತರ ಕೆಲವು ಕಾಲದವರೆಗೆ ಇಂತ ಯಾವುದೇ ಮಸೂದೆಯ ಪ್ರಸ್ತಾಪವಾಗಲಿಲ್ಲ. ಆದರೆ ಈಗ ಎರಡು ಮಸೂದೆಗಳು ಚರ್ಚೆಗಾಗಿ ನಮ್ಮ ಮುಂದೆ ಬಂದಿವೆ. ಹಾಗೆಯೆ ರಾಷ್ಟ್ರಪತಿಗಳು ಹಸ್ತಾಕ್ಷರ ಮಾಡಿರುವ ಎರಡು ಅಧಿಸೂಚನೆಗಳು ಈಗಾಗಲೆ ನಮ್ಮ ಎದುರಿನಲ್ಲಿ ಉಳಿದಿವೆ. ಹಾಗೆ ಮಾಡುವುದು ಎರಡು ಅಧಿಸೂಚನೆಗಳು ಈಗಾಗಲೆ ನಮ್ಮ ಎದುರಿನಲ್ಲಿ ಉಳಿದಿವೆ. ಹಾಗೆ ಮಾಡುವುದು ಪಕ್ಕಾ ಕಾನೂನುಬದ್ಧವಾಗಿದೆ ಹಾಗೂ ಸಂವಿಧಾನಾತ್ಮಕವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆಗಸ್ಟ್ ೧೦, ೧೯೫೦ ಹಾಗೂ ಸೆಪ್ಟೆಂಬರ್ ೬, ೧೯೫೦ ಈ ದಿನಾಂಕಗಳನ್ನುಳ್ಳ ಸದರಿ ಅಧಿಸೂಚನೆಗಳು ಸಂವಿಧಾನದ ೩೪೧ನೇ ಮತ್ತು ೩೪೨ನೇ ಅನುಚ್ಛೇದಗಳನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗೆಗೆ ಹೇಳುತ್ತವೆ.

ಈ ೩೪೧ ಮತ್ತು ೩೪೨ ನೇ ಅನುಚ್ಛೇದಗಳ ಅಡಿಯಲ್ಲಿ ಸರ್ಕಾರದ ಕ್ರಮವನ್ನು ಕುರಿತಂತೆ ನನ್ನ ಮೊದಲ ಆಕ್ಷೇಪ. ೩೪೧ನೇ ಅನುಚ್ಛೇದದ ಎರಡನೆಯ ಭಾಗದನ್ವಯ ಮಾನ್ಯ ರಾಷ್ಟ್ರಪತಿಗಳು ಸಹಿಮಾಡಿರುವ ಅಧಿಸೂಚನೆಯನ್ನು ಮಾರ್ಪಾಡು ಮಾಡುವ ಅಥವಾ ಅದಕ್ಕೆ ಏನನ್ನಾದರೂ ಸೇರಿಸುವ ಇಲ್ಲವೆ ಅದರಿಂದ ಏನನ್ನಾದರೂ ತೆಗೆದುಹಾಕುವ ಅಧಿಕಾರ ಇರುವುದು ಕೇವಲ ಈ ಸಂಸತ್ತಿಗೆ ಮಾತ್ರ. ಈ ಪಟ್ಟಿಗಳನ್ನು ಅಧಿಸೂಚನೆಯ ಮೂಲಕ ಪ್ರಚುರಪಡಿಸುವುದು ಸೂಕ್ತವಾಗಿದೆ, ಸಂವಿಧಾನಾತ್ಮಕವಾಗಿದೆ; ಆದರೆ ಮಾನ್ಯ ಸಚಿವರು ಆ ಪಟ್ಟಿಗಳಲ್ಲಿ ಏನಿದೆ, ಅದರ ಬಗ್ಗೆ ಪರಿಶೀಲನೆ ಮಾಡಬೇಕೆ ಬೇಡವೆ ಎಂಬುದನ್ನು ಆಲೋಚಿಸುವ ವಿಷಯವಾಗಿ ಈ ಸಭೆಗೆ ಅವಕಾಶವನ್ನೇ ನೀಡುತ್ತಿಲ್ಲವಲ್ಲ ಎಂಬುದು ಕಳವಳಕಾರಿ ಸಂಗತಿಯಾಗಿದೆ. ಮಾನ್ಯ ಕಾನೂನು ಸಚಿವರು ಬಂದಿರುವ ಮನವಿಪತ್ರಗಳ ಕಡೆಗೆ ಕಣ್ಣುಹಾಯಿಸಿದ್ದಾರೊ ಇಲ್ಲವೊ ಗೊತ್ತಿಲ್ಲ. ಆದರೆ ಅನೇಕ ಸಮುದಾಯಗಳು ತಮ್ಮನ್ನು ಈ ಪಟ್ಟಿಯಲ್ಲಿ ಸೇರಿಸಿಲ್ಲವೆಂದು ಆತಂಕ ವ್ಯಕ್ತಪಡಿಸುತ್ತಾ, ಸೇರಿಸಬೇಕೆಂದು ಒತ್ತಾಯ ಮಾಡಿರುವ ಅನೇಕ ಪತ್ರಗಳು ನನ್ನ ಬಳಿ ಬಂದಿವೆ. ಯಾವುದೋ ಒಂದು ನಿರ್ದಿಷ್ಟ ಗುಂಪಿನ ರಾಜ್ಯಗಳ ಸಲುವಾಗಿ ಒಂದು ಸಣ್ಣ ಮಸೂದೆಯನ್ನು ಮುಂದಿಡುವ ಬದಲಾಗಿ– ಆದರೆ ನಾನು ಆ ಮಸೂದೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದೇನೆಂದು ಭಾವಿಸಬೇಕಾಗಿಲ್ಲ. ನಾನು ಅದರ ಪರವಾಗಿಯೆ ಇದ್ದೇನೆ–ಈ ಎರಡು ಪಟ್ಟಿಗಳಿಗೆ ಸಂಬಂಧಿಸಿದಂತೆ ಯಾವುದಾದರೊಂದು ಕ್ರಮದಲ್ಲಿ ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಈ ಸದನದ ಸದಸ್ಯರ ಎದುರಿಗೆ ಇಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಹಾಗೆ ಮಾಡಿದ್ದರೆ ಅದನ್ನು ಪರಿಶೀಲನೆ ಮಾಡಲು ನಮಗೆ ಸಾಧ್ಯವಾಗುತ್ತಿತ್ತು. ಜನಗಳಿಗೆ ಕೂಡ ತಮ್ಮ ಹಕ್ಕುಗಳನ್ನು ಹೇಗೆ ಸುರಕ್ಷಿತವಾಗಿಡಲಾಗುತ್ತಿದೆ ಎಂಬ ಬಗ್ಗೆ ತಿಳಿವಳಿಕೆ ಉಂಟಾಗುತ್ತಿತ್ತು. ನಾನು ಅಂದುಕೊಂಡಿರುವಂತೆ ಈ ಸುದೀರ್ಘವಾದ ಚರ್ಚೆ ಹಾಗೂ ಈ ಸದನದ ಮಾನ್ಯ ಸದಸ್ಯರ ಕಾತುರ ಎಲ್ಲ ನಿಜಕ್ಕೂ ಈ ಸಂಗತಿಯನ್ನೇ ಆಧರಿಸಿದೆ. ಈ ಪೈಕಿ ಪ್ರತಿಯೊಂದೂ ಕ್ರಮಬದ್ಧವಾಗಿದ್ದಿದ್ದರೆ, ಈ ಸಂದರ್ಭಕ್ಕೆ ಅತ್ಯಂತ ಅಗತ್ಯವೆನಿಸುವಷ್ಟರ ಮಟ್ಟಿಗೆ ಸೂಕ್ತ ಪರಿಶೀಲನೆ ನಡೆದಿದ್ದರೆ, ಭಾಗ ಎ ಮತ್ತು ಭಾಗ ಬಿ ರಾಜ್ಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಈಗ ನಮ್ಮ ಮುಂದಿರುವುದು ಭಾಗ ಸಿ ರಾಜ್ಯಗಳ ಪರಿಶಿಷ್ಟ ಜಾತಿಗಳ ಪೂರಕ ಪಟ್ಟಿ. ನಾನು ಸೂಚಿಸಿದಂತೆ ಆಗಿದ್ದಿದ್ದರೆ ಸದನದಲ್ಲಿ ಇದರ ಮೇಲಿನ ಚರ್ಚೆ ಇನ್ನೂ ಚಿಕ್ಕದಾಗಿರುತ್ತಿತ್ತು. ಸದಸ್ಯರ ಆತಂಕ ಕುತೂಹಲಗಳು ಕೂಡ ಕಡಮೆಯಾಗಿರುತ್ತಿದ್ದವು. ನಮಗೆ ಇನ್ನೊಂದು ಆಕ್ಷೇಪವೆತ್ತುವ ಸಂದರ್ಭವೂ ಬರುತ್ತಿರಲಿಲ್ಲ. ಆದರೆ ಇವೆಲ್ಲ ಇಲ್ಲಿ ನಡೆಯುತ್ತಿರುವ ರೀತಿ ವಿಚಿತ್ರವಾಗಿದೆ. ಈ ರೀತಿ ಇದು ನಡೆಯಕೂಡದೆಂದು ನಾನು ಆಶಿಸುತ್ತೇನೆ. ಹೀಗಾಗದಂತೆ ನೋಡಿಕೊಳ್ಳಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

ಇವೆಲ್ಲಕ್ಕೂ ಅವಕಾಶ ಒದಗಿಸಿರುವಂತಹ ಒಂದು ಸಮಗ್ರ ಕಾರ್ಯವಿಧಾನವನ್ನು ನಾವು ರೂಪಿಸಿಕೊಳ್ಳಬೇಕಿತ್ತೆಂಬುದು ನನ್ನ ಭಾವನೆ. ಹಾಗೆ ಮಾಡಿದ್ದಿದ್ದರೆ ಈ ಮಸೂದೆಗೆ ಮತ್ತೆ ಮತ್ತೆ ತಿದ್ದುಪಡಿ ತರುವುದು, ಪ್ರತಿ ತಿಂಗಳೂ ಇದಕ್ಕೆ ಸೇರಿಸುವುದು, ಇದರಿಂದ ತೆಗೆದುಹಾಕುವುದು ಇಂಥ ಕಸರತ್ತುಗಳೆಲ್ಲ ತಪ್ಪುತ್ತಿತ್ತು. ಮಾನ್ಯ ಮಂತ್ರಿಗಳಿಗೆ ನಾನು ಮಾಡಿಕೊಳ್ಳುವ ಮೊಟ್ಟಮೊದಲ ಹಾಗೂ ವಿನಮ್ರ ಕೋರಿಕೆಯೇನೆಂದರೆ ಈ ಅಧಿಸೂಚನೆಗಳಡಿಯಲ್ಲಿ ನೀಡಲಾಗಿರುವ ಪಟ್ಟಿಗಳು ಸಮಗ್ರವಾಗಿಲ್ಲ, ಪರಿಪೂರ್ಣವಾಗಿಲ್ಲ. ಅನೇಕ ಜಾತಿಗಳಿಗೆ ಸೇರಿರುವ ಜನರು ತಮ್ಮನ್ನು ಅನ್ಯಾಯವಾಗಿ ಕೈಬಿಡಲಾಗಿದೆ ಎಂದು ಭಾವಿಸುತ್ತಾರೆ. ೧೯೩೫ ರ ಕಾಯ್ದೆಯಡಿಯಲ್ಲಿ ಕೌನ್ಸಿಲಿನ ಆದೇಶಕ್ಕೆ ಆಧಾರಭೂಮಿಯಾಗಿದ್ದ ಪಟ್ಟಿಗಳ ಜೊತೆಯಲ್ಲಿ ನಾವು ನಿಜವಾಗಿಯೂ ಈ ಪಟ್ಟಿಗಳನ್ನು ಹೋಲಿಸಿನೋಡಿದರೆ, ಖಂಡಿತವಾಗಿಯೂ ಅನೇಕ ಜಾತಿಗಳು

ಬಿಟ್ಟುಹೋಗಿರುವುದು ಗಮನಕ್ಕೆ ಬರುತ್ತದೆ. ಒಂದು ವೇಳೆ ಇಲ್ಲಿ ಹಾಗೆ ಬಿಟ್ಟಿರುವ ಜಾತಿಗಳು ಈಗ ಅಸ್ಪೃಶ್ಯವಾಗಿ ಉಳಿದಿಲ್ಲ ಅಥವಾ ಅವುಗಳ ಸಾಮಾಜಿಕ ಸ್ಥಾನಮಾನಗಳು ನಿಜಕ್ಕೂ ಬದಲಾಗಿವೆ ಎಂದು ವಾದಮಾಡುವುದಾದರೆ ಅದು ಬೇರೆ ವಿಚಾರ. ಅದನ್ನು ಈ ಸದನ ಒಪ್ಪುತ್ತದೆಯೊ ಇಲ್ಲವೊ ಹೇಳಲಾರೆ, ಜನ ಇದಕ್ಕೆ ಸಮ್ಮತಿಸುತ್ತಾರೋ ಇಲ್ಲವೊ ಗೊತ್ತಿಲ್ಲ. ೧೯೩೬ ರ ಕಾಯ್ದೆಗೆ ಸೂಚಿಗಳ ರೂಪದಲ್ಲಿ ಈ ಪಟ್ಟಿಗಳನ್ನು ತಯಾರುಮಾಡಿ ಸೇರಿಸಿದಾಗ, ಆ ಬಗ್ಗೆ ಸಾಕಷ್ಟು ಆಳವಾಗಿ ಪರಿಶೀಲನೆ, ವಿಚಾರ ವಿಮರ್ಶೆ ನಡೆದಿತ್ತು. ಜನರಿಗೆ ಈ ಬಗ್ಗೆ ತಿಳಿವಳಿಕೆ ನೀಡಲಾಗಿತ್ತು. ಅವರಿಗೆ ತಮ್ಮ ಹಕ್ಕುಗಳೇನು, ಯಾವುದಕ್ಕಾಗಿ ಅವರು ಹೋರಾಟ ನಡೆಸಬೇಕು ಎಂಬ ವಿಚಾರವಾಗಿ ಮಾಹಿತಿ ಇತ್ತು. ಆದರೆ ಈ ಸಂದರ್ಭದಲ್ಲಿ ಅಂತಹ ಯಾವುದನ್ನೂ ಮಾಡಿಲ್ಲ. ರಾಷ್ಟ್ರಪತಿಯವರ ಹಸ್ತಾಕ್ಷರದೊಡನೆ ಪ್ರಕಟಿಸಲಾಗಿರುವ ಈ ಪಟ್ಟಿಗಳನ್ನು ಅದು ಯಾರು ಸಿದ್ಧಪಡಿಸಿದರೊ ತಾನರಿಯೆ. ಪ್ರಸಕ್ತ ಮಸೂದೆಯಲ್ಲಿರುವ ಈ ಪಟ್ಟಿಗಳಿಗೆ ಸಂಬಂಧಿಸಿದಂತೆ ಯಾವ ರೀತಿಯ ಅಧ್ಯಯನ ಪರಿಶೀಲನೆಗಳನ್ನು ಮಾಡಲಾಗಿದೆಯೊ ನನಗೆ ಗೊತ್ತಿಲ್ಲ. ನಿಜಕ್ಕೂ ಜನರ ಮನಸ್ಸಿನಲ್ಲಿ ವಿಪರೀತವಾದ ಭಾವನೆಗಳನ್ನು ಆತಂಕವನ್ನೂ ಹುಟ್ಟಿಸುವ ಸಂಗತಿಗಳು ಇವು. ಹಾಗಾಗಿ ಈ ಪ್ರಶ್ನೆಗೆ ಪರಿಹಾರ ಹುಡುಕುವ ದಿಶೆಯಲ್ಲಿ ಸರ್ಕಾರ ಯಾವುದಾದರೂ ನಿರ್ದಿಷ್ಟ ಅಥವಾ ವಿಧಾನವನ್ನು ಅನುಸರಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ಹೆಚ್ಚಿನ ಸಂಖ್ಯೆಯ ಜನರಿಗೆ ಇದು ತೃಪ್ತಿ ಸಮಾಧಾನ ಉಂಟುಮಾಡುವಂತಿರಬೇಕು.

ಈ ನಿರ್ದಿಷ್ಟವಾದ ಮಸೂದೆಯನ್ನು ಕುರಿತು ಹೇಳುವುದಾದರೆ, ಭಾಗ ಸಿ ರಾಜ್ಯಗಳ ಜನತೆಗೆ ಪ್ರಾತಿನಿಧ್ಯ ನೀಡುವ ದಿಶೆಯಲ್ಲಿ ನಾನು ಹೇಳುತ್ತಿರುವ ಅಂಶಗಳು ತುಂಬ ಅಗತ್ಯವಾದುವು ಎಂದುಕೊಂಡಿದ್ದೇನೆ. ಈ ಪಟ್ಟಿಗಳನ್ನು ಒಂದೇ ಬಾರಿಯಲ್ಲಿಯೇ ಮಾಡಿ ಮುಗಿಸಲಾಗಿದೆಯೊ ಅಥವಾ ಬೇರೆ ಬೇರೆ ಹಂತಗಳಲ್ಲಿ ಮಾಡಲಾಯಿತೊ ಆ ಪ್ರಶ್ನೆ ಬೇರೆ. ಆದರೆ ಇವುಗಳನ್ನು ಸರಿಯಾಗಿ ಸಿದ್ಧಪಡಿಸುವುದು ತುಂಬ ಆವಶ್ಯಕ. ಆದರೆ ಇದು ಪೂರ್ತಿಯಾಗಿದೆ ಎಂದು ನಾನು ಎಂದುಕೊಳ್ಳುತ್ತಿಲ್ಲ. ಈ ಒಂದು ಕ್ರಮವನ್ನು ನಾವು ಜಾರಿಗೆ ತರುತ್ತಿರುವುದರ ಹಿನ್ನೆಲೆಯಲ್ಲಿ ನಮ್ಮ ಸಂವಿಧಾನದಲ್ಲಿ ಒಂದು ನಿರ್ದಿಷ್ಟವಾದ ಅವಕಾಶವಿದೆ ಎಂಬುದಾಗಿ ನನಗೆ ಪೂರ್ಣವಾಗಿ, ನಿಸ್ಸಂದೇಹವಾಗಿ ಮನವರಿಕೆ ಆಗುತ್ತಿಲ್ಲ. ಈ ಮಸೂದೆಯನ್ನು ತರುತ್ತಿರುವುದರ ಹಿಂದೆ ನನಗೆ ಕಂಡುಬರುವ ಒಂದೇ ಒಂದು ಸಮರ್ಥನೆ, ಒಂದೇ ಒಂದು ಅಧಿಕಾರದ ಬಳಕೆ ಎಂದರೆ ಎಲ್ಲೆಲ್ಲ ಪರಿಶಿಷ್ಟ ಜಾತಿಗಳಿಗೆ ಸೇರಿದ ಜನರಿದ್ದಾರೆ, ಅಲ್ಲೆಲ್ಲ ಅವರಿಗೆ ಕೆಲವು ಸ್ಥಳಾವಕಾಶವನ್ನು ಕಾಯ್ದಿರಿಸಬೇಕು ಎಂದು ಪ್ರಸ್ತಾವ ಮುಂದಿಡುವ ಆಕಾಂಕ್ಷೆ. ಇದನ್ನು ಕೂಡ ಏಕೆ ಮಾಡುತ್ತಿದ್ದೇವೆ ಎಂದರೆ ಪರಿಶಿಷ್ಟ ಜನಾಂಗಗಳಿಗೆ ಮೀಸಲಾತಿ ನೀಡಲು ಅವಕಾಶವಿದೆ ಎಂಬ ಕಾರಣಕ್ಕಾಗಿ. ಭಾಗ ಸಿ ರಾಜ್ಯಗಳಿಗೆ ಅನ್ವಯಿಸದಿರುವ ೩೪೧ ಮತ್ತು ೩೪೨ ಹೊರತುಪಡಿಸಿದರೆ ಸಂವಿಧಾನದಡಿಯಲ್ಲಿ ಇಂಥ ಅವಕಾಶವನ್ನು ಕಲ್ಪಿಸುವ ಯಾವುದೇ ನಿರ್ದಿಷ್ಟ ಸಾವಧಾನ ಇದೆಯೆ ಹೇಗೆ ಎಂಬುದು ನನಗೆ ಗೊತ್ತಿಲ್ಲ. ಇದು ಕೇವಲ ತಾಂತ್ರಿಕ ಆಕ್ಷೇಪ ಅಷ್ಟೆ. ಭಾಗ ಸಿ ರಾಜ್ಯಗಳಲ್ಲಿ ಸ್ಥಳಾವಕಾಶಗಳನ್ನು ಮೀಸಲಿಡಬೇಕು ಹಾಗೂ ಪರಿಶಿಷ್ಟ ಜಾತಿಗಳನ್ನು ಕುರಿತಂತೆ ಲೆಕ್ಕಹಾಕಬೇಕೆನ್ನುವುದರ ಬಗ್ಗೆಯಾಗಲಿ, ಅವರಿಗೆ ಅವಕಾಶ ಕಲ್ಪಿಸುವ ಅಗತ್ಯ ಇದೆಯೆಂಬುದರ ಬಗ್ಗೆಯಾಗಲಿ ಭಿನ್ನಾಭಿಪ್ರಾಯವಿರುವುದೆಂದು ನಾನು ಖಂಡಿತ ಭಾವಿಸಿಲ್ಲ. ಆದರೆ ನಾನು ನನ್ನ ಗೌರವಾನ್ವಿತ ಮಿತ್ರರಿಂದ ಅವರು ಉತ್ತರ ನೀಡುವ ಸಂದರ್ಭದಲ್ಲಿ ತಿಳಿದುಕೊಳ್ಳಲು ಬಯಸುವುದೇನೆಂದರೆ ಅವರು ಸಂವಿಧಾನದ ಯಾವ ನಿರ್ದಿಷ್ಟ ಪರಿಚ್ಛೇದದ ಅಡಿಯಲ್ಲಿ ಈ ಪ್ರಾತಿನಿಧ್ಯದ ಅವಕಾಶವನ್ನು ಕಲ್ಪಿಸಿಕೊಡಬಯಸುತ್ತಿದ್ದಾರೆ ಎಂಬುದನ್ನು ಅಂಥ ಯಾವ ಪ್ರಾವಿಧಾನದ ಅನ್ವಯ ಈ

ಮಸೂದೆ ಪರಿಪೂರ್ಣ ಕ್ರಮಬದ್ಧವಾಗಿದೆ ಎಂಬುದನ್ನು ಅರಿಯಬಯಸುತ್ತೇನೆ.

ಈ ಪಟ್ಟಿಗಳನ್ನು ಕುರಿತು ಹೇಳುವುದಾದರೆ, ಜನಗಳಿಗೆ ತಮ್ಮ ಹಕ್ಕುಗಳನ್ನು ಕುರಿತಂತೆ ಏನಾದರೂ ಬಾಧಕ ಉಂಟಾಗುತ್ತಿದೆಯೆ ಎಂಬುದನ್ನು ತಿಳಿದುಕೊಳ್ಳಲು ಇನ್ನೂ ಸ್ವಲ್ಪ ಹೆಚ್ಚು ಕಾಲಾವಕಾಶಬೇಕಿತ್ತು ಎಂಬುದು ನನ್ನ ಅಭಿಪ್ರಾಯ. ತಮ್ಮ ಹೆಸರುಗಳನ್ನು ಇದರಲ್ಲಿ ಸೇರಿಸಬೇಕೆಂದು ಅಪೇಕ್ಷೆಪಡುವ ಹಲವಾರು ಸಮುದಾಯಗಳಿಂದ ನನಗೆ ಮನವಿಪತ್ರಗಳು ಬಂದಿವೆ. ಇನ್ನೂ ಒಂದು ಸಂಗತಿ ಏನೆಂದರೆ ತಮ್ಮ ಹಕ್ಕುಗಳಿಗೆ ಬಾಧಕವಾಗುವಂತಹ ಏನಾದರೂ ಸಂಭವಿಸುವ ಸಾಧ್ಯತೆ ಇದೆಯೆಂಬ ತಿಳಿವಳಿಕೆಯೆ ಇನ್ನೂ ಅನೇಕ ಹಿಂದುಳಿದ ಜನಸಮುದಾಯಗಳಿಗೆ ಉಂಟಾಗಿಲ್ಲವೆಂದು ಭಾವಿಸುತ್ತೇನೆ. ಈ ಸಮುದಾಯಗಳು ಹಿಂದುಳಿದಿವೆ ಎಂಬ ಸಂಗತಿ ಸರಿಯೆ ಆದರೂ ಈ ಕ್ರಮವನ್ನು ನಾವು ತುಂಬ ತರಾತುರಿಯಲ್ಲಿ ಮಾಡುತ್ತಿರುವುದರಿಂದ ಪ್ರಾಯಃ ಅವರ ಹಕ್ಕುಗಳಿಗೆ ಚ್ಯುತಿ ಉಂಟಾಗುವಂಥ ಸಾಧ್ಯತೆಯು ಇರುತ್ತದೆ. ಈ ದೃಷ್ಟಿಯಿಂದ ನೋಡುವುದಾದಲ್ಲಿ ನಮ್ಮ ಈ ಪಟ್ಟಿಗಳಲ್ಲಿ ಅನೇಕ ಜಾತಿಗಳು ಕೈಬಿಟ್ಟುಹೋಗುವ ಸಂಭವವಿದ್ದು ಆ ಜಾತಿಗಳ ಜನರಿಗೆ ನಾವು ಈಗ ಏನು ಮಾಡಲು ಹೊರಟಿದ್ದೇವೆಂದೂ ಆ ಬಗ್ಗೆ ಅಸಮಾಧಾನ ಇದ್ದೇ ಇರುತ್ತದೆ. ಸದ್ಯದ ಸಂದರ್ಭದ ಹಿನ್ನೆಲೆಯಲ್ಲಿ ಹೇಳುವುದಾದರೆ, ಈಗಾಗಲೆ ಅಸ್ತಿತ್ವದಲ್ಲಿರುವ ಪಟ್ಟಿಗಳು, ಅಂದರೆ ೧೯೩೫ ರ ಅಧಿನಿಯಮದ ಭಾಗವಾಗಿ ಹೊರಬಂದಿದ್ದ ೧೯೩೦ ಮತ್ತು ೧೯೩೧ ರಲ್ಲಿ ಆರ್ಡರ್ ಆಫ್ ಕೌನ್ಸಿಲ್ ಸಿದ್ಧಪಡಿಸಿದ್ದ ಪಟ್ಟಿಗಳಿಗೆ ಹೋಲಿಕೆ ಮಾಡಿ ನೋಡಿದರೆ, ಅನೇಕಾನೇಕ ಲೋಪಗಳು, ವ್ಯತ್ಯಾಸಗಳು ಇರುವುದು ಕಂಡುಬರುತ್ತವೆ. ಲೋಕಸೇವಾ ಆಯೋಗ ಹೊರಡಿಸಿರುವ ಇನ್ನೊಂದು ಅಧಿಸೂಚನೆ ನನ್ನ ಬಳಿಯಲ್ಲಿ ಇದೆ. ಇಲ್ಲಿ ದೆಹಲಿಯಲ್ಲಿ ನಿಮಗೆ ನೋಡಲು ಸಂತೋಷ ಉಂಟುಮಾಡುವ ಸಂಗತಿಯೆಂದರೆ, ಈ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸಂಖ್ಯೆ ಕನಿಷ್ಟವೆಂದರೂ ೬೪ ರಷ್ಟಿದೆ. ಆದರೆ ಈ ಅನುಸೂಚಿಯಲ್ಲಿ ಆ ಸಂಖ್ಯೆ ಕೇವಲ ೩೯. ಹಾಗಾಗಿ ಇಷ್ಟು ಸಂಖ್ಯೆ ಎಂದು ಇತ್ಯರ್ಥ ಮಾಡಲು ತೆಗೆದುಕೊಂಡ ಕ್ರಮಗಳೇನು, ಬೇರೆ ಬೇರೆ ಜಾತಿಗಳನ್ನು ಯಾವ ಆಧಾರದ ಮೇಲೆ ಇಲ್ಲಿ ಕೈಬಿಡಲಾಗಿದೆ, ಕಾರಣ ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಮಂತ್ರಿಗಳು ಈ ಬಗ್ಗೆ ಮಾತನಾಡುವವರೆಗೂ ಕಾಯಲು ನಾನು ಸಿದ್ಧವಾಗಿದ್ದೇನೆ. ಆದರೆ ಈ ರೀತಿ ಸಂಖ್ಯೆಯನ್ನು ಇಳಿಸಿರುವುದು ಖಂಡಿತವಾಗಿಯೂ ಒಂದು ಕಠೋರವಾದ ಸಂಗತಿ. ಯಾವ ಆಧಾರದ ಮೇಲೆ ಹಾಗೆ ಮಾಡಿದ್ದಾರೋ ಗೊತ್ತಿಲ್ಲ. ಸ್ವಲ್ಪ ತಡವಾದರೂ ಚಿಂತೆಯಿಲ್ಲ, ನನ್ನ ಗಣ್ಯ ಮಿತ್ರರಾದ ಮಂತ್ರಿಗಳು ತುಂಬ ಅವಸರಮಾಡಬಾರದಾಗಿ ನಾನು ಕೇಳಿಕೊಳ್ಳುತ್ತೇನೆ. ಈ ಮಸೂದೆಯನ್ನು ಸದನ ಒಪ್ಪುವಂತೆ ಮಾಡಲು ಅವರು ತುಂಬ ತರಾತುರಿಯಲ್ಲಿ ಇದ್ದಾರೆ. ಸಾಮಾನ್ಯವಾಗಿ ಕ್ಯಾಬಿನೆಟ್ ದರ್ಜೆಯ ಸಚಿವರ ಆತಂಕ ಇದೊಂದೇ. ಅವರು ತುಂಬಾ ಅವಸರದಲ್ಲಿದ್ದಾರೆ. ಐದು ಅಥವಾ ಹತ್ತು ನಿಮಿಷಗಳಲ್ಲಿ ಕೆಲಸ ಮುಗಿದುಹೋಗಬೇಕೆಂದು ಅವರು ಬಯಸುತ್ತಾರೆ. ವಿಷಯಗಳು ಅರ್ಥವಾಗುವುದು ಅವರಿಗೆ ಮಾತ್ರ, ಉಳಿದವರು ಕೇವಲ ಪ್ರಲಾಪಮಾಡುತ್ತಾರೆ, ಸದನದ ಸಮಯವನ್ನು ವ್ಯರ್ಥಮಾಡುತ್ತಾರೆ. ಜನಸ್ತೋಮವನ್ನು ಪ್ರತಿನಿಧಿಸಿದರೂ ನೇರವಾಗಿ ಇಲ್ಲವೆ ವಿಶೇಷವಾಗಿ ಇವರಿಂದ ಯಾವ ಕೊಡುಗೆಯೂ ಇರುವುದಿಲ್ಲ ಎಂದು ತಿಳಿದುಕೊಂಡುಬಿಟ್ಟಿದ್ದಾರೆ. ಅಂಥ ಧೋರಣೆ ನನಗೆ ಇಷ್ಟವಾಗುವುದಿಲ್ಲ. ಡಾ. ಅಂಬೇಡ್ಕರ್ ಅವರು ನಾವು ಹೇಳುವುದನ್ನು ಸಮಾಧಾನಚಿತ್ತದಿಂದ ಆಲಿಸುತ್ತಾರೆಂದು ಭರವಸೆ ಇಟ್ಟುಕೊಂಡಿದ್ದೇನೆ. ದನಿಯಿಲ್ಲದ, ತಮ್ಮ ಹಕ್ಕುಗಳ ಬಗ್ಗೆ ತಿಳಿವಳಿಕೆ ಇಲ್ಲದ, ಈ ಸದನದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಅರಿವಿಲ್ಲದ ಬಹುಸಂಖ್ಯಾತ ಜನಸ್ತೋಮದ ಪರವಾಗಿ ನಾನು ಕೋರುವುದೇನೆಂದರೆ ಈ ವಿಚಾರದಲ್ಲಿ ಅವಸರದ ತೀರ್ಮಾನವಾಗಬಾರದು. ಈ

ಮಸೂದೆಯ ಕುರಿತು ಸರಿಯಾಗಿ, ಸಮತೋಲನದಿಂದ ಕೂಡಿದ ಚರ್ಚೆ ನಡೆಯಬೇಕು, ಈ ವಿಷಯವನ್ನು ಇಡಿಯಾಗಿ ಪರಿಗಣಿಸಿ ಒಮ್ಮೆಗೇ ಇದರ ಇತ್ಯರ್ಥವಾಗಬೇಕು ಎಂದು ನಾನು ಆಗ್ರಹಿಸುತ್ತೇನೆ.

ಶ್ರೀ ಸೋನಾವಣೆಯವರು ಸರಿಯಾಗಿಯೆ ಹೇಳಿರುವಂತೆ ಈಚಿನ ದಿನಗಳಲ್ಲಿ ಅನೇಕ ಜನರು ತಮ್ಮ ಮನೆಗಳನ್ನು ಬಿಟ್ಟು ಹೊರಗೆ ಹೋಗುತ್ತಿದ್ದಾರೆ. ಭಾರಿ ಪ್ರಮಾಣದಲ್ಲಿ ಜನಸಂಖ್ಯೆಯ ವರ್ಗಾವಣೆಯಾಗುತ್ತದೆ. ಮಧ್ಯಪ್ರದೇಶದಿಂದ ಬಹಳಷ್ಟು ಮಂದಿ ದೆಹಲಿಗೆ ಬಂದು ಹೆಚ್ಚುಕಡಮೆ ದೆಹಲಿಯಲ್ಲೇ ಖಾಯಂ ಆಗಿ ನೆಲೆಸಿಬಿಟ್ಟಿದ್ದಾರೆ. ಒಂದು ವೇಳೆ, ಉದಾಹರಣೆಗೆ, ನೀವು ಮಹಾರ್ ಸಮುದಾಯದವರನ್ನು ಪಟ್ಟಿಯಲ್ಲಿ ಸೇರಿಸದೆ ಹೋದರೆ ಇಲ್ಲಿಗೆ ಬಂದಿರುವ ಕೆಲವು ಪರಿಶಿಷ್ಟ ಜಾತಿಗಳು ಖಾಯಂ ಆಗಿ ತಮ್ಮ ಹಕ್ಕುಗಳನ್ನು ಕಳೆದುಕೊಂಡು ಬಿಡುತ್ತವೆ. ಈ ಪ್ರಶ್ನೆಗಳನ್ನೆಲ್ಲ ಪರಿಶೀಲಿಸುವ ಅಗತ್ಯವಿದೆ, ಏಕೆಂದರೆ ಇದು ತಾತ್ಕಾಲಿಕವಾದ ತೀರ್ಮಾನವಲ್ಲ. ಇದು ಸಂವಿಧಾನದ ಒಂದು ಭಾಗವಾಗಿಬಿಡುತ್ತದೆ. ಇದೊಂದು ಖಾಯಂ ಸೇರ್ಪಡೆಯಾಗಿ ಹಲವಾರು ವರ್ಷಗಳ ಕಾಲ ಅಸ್ತಿತ್ವದಲ್ಲಿ ಇರುತ್ತದೆಂದು ನಾವು ನಿರೀಕ್ಷಿಸಬಹುದಾಗಿದೆ. ಸಂದರ್ಭ ಹೀಗಿರಬೇಕಾದರೆ, ಈ ಮಸೂದೆಯ ಬಗ್ಗೆ ಚರ್ಚೆ ನಡೆಸಲು ಕೆಲವು ದಿನಗಳು ಕಳೆದರೆ ಅದರಿಂದ ಕಾಲವ್ಯಯವೇನೂ ಆದಂತಾಗುವುದಿಲ್ಲ. ಅದು ಸಮಯದ ಸದುಪಯೋಗವೇ ಆಗುತ್ತದೆ. ಆದ್ದರಿಂದ ಈ ಮಸೂದೆಯ ವಿಚಾರದಲ್ಲಿ ತೀರ್ಮಾನ ಕೈಗೊಳ್ಳಲು ಅವಸರ ಮಾಡಿಕೊಳ್ಳಬೇಕಾದ ಅಗತ್ಯವೇನಿಲ್ಲ. ಈ ಮಸೂದೆಯನ್ನು ಅಂಗೀಕರಿಸುವಷ್ಟು ಮಾತ್ರದಿಂದಲೇ, ನಾವೇನೂ ತುಂಬ ದೂರಹೋದ ಹಾಗಾಗುವುದಿಲ್ಲ.

ಇಲ್ಲಿ ಇನ್ನೂ ಅನೇಕ ತೊಂದರೆಗಳಿವೆ. ಬರುವ ನವಂಬರ್ ಅಥವಾ ಡಿಸೆಂಬರ್ ಹೊತ್ತಿಗೆ ಚುನಾವಣೆಗಳನ್ನು ನಡೆಸುವುದು ಸಾಧ್ಯವಾಗುತ್ತದೊ ಇಲ್ಲವೊ ಎಂಬ ಬಗ್ಗೆ ನನಗೆ ಅನುಮಾನವಿದೆ. ಏಕೆಂದರೆ ಮಿತಿಯನ್ನು ವಿಧಿಸುವ, ಅಂದರೆ ಡಿಲಿಮಿಟೇಷನ್ ಕಾರ್ಯ, ಒಂದು ದೊಡ್ಡ ತಲೆನೋವಾಗಲಿದೆ. ಚುನಾವಣಾ ಆಯುಕ್ತರು ಏನು ಮಾಡಬೇಕೆಂದಿದ್ದಾರೊ ಅದಕ್ಕೂ, ಮಿತಿನಿರ್ಧಾರಣ ಸಮಿತಿ ಏನು ತೀರ್ಮಾನ ಮಾಡಿದೆಯೋ ಅದಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಹಾಗಾಗಿ ಈ ಸದನದಲ್ಲಿ ತರಾತುರಿ ನಿರ್ಧಾರಗಳನ್ನು ಕೈಗೊಳ್ಳುವ ಅಗತ್ಯವಿಲ್ಲ, ಮಿತಿನಿರ್ಧಾರಣ ಸಮಿತಿಯ ತೀರ್ಮಾನಗಳನ್ನು ಪರಿಗಣಿಸಬೇಕಾಗಿದೆ. ಹೇಗೋ ಚುನಾವಣೆ ನಡೆದುಹೋದರೆ ಸಾಕು ಅನ್ನುವಂತಿಲ್ಲ. ತೀರ್ಮಾನ ಕೈಗೊಳ್ಳಲು ಸಾಕಷ್ಟು ಸಮಯ ತೆಗೆದುಕೊಳ್ಳುವ ಇನ್ನೂ ಹಲವಾರು ಸಂಗತಿಗಳಿವೆ. ಅವಕ್ಕೆಲ್ಲ ಸಾಕಷ್ಟು ಸಮಯ ಕೊಡಬಹುದಾದರೆ, ಈ ಮಸೂದೆಯನ್ನು ತರಾತುರಿಯಲ್ಲಿ ಅಂಗೀಕರಿಸಿ, ಈ ಮಸೂದೆಯ ಪಟ್ಟಿಯಲ್ಲಿ ಸೇರಲು ಅರ್ಹವಾಗಿರುವ ಕೆಲವಾರು ಜನಸಮುದಾಯಗಳಿಗೆ ಅವಕಾಶವನ್ನು ಇಲ್ಲದಂತೆ ಮಾಡುವ ಹುನ್ನಾರವೇಕೆ? ಇಂಥ ಎರಡು ಜಾತಿಗಳಿಗೆ ಸಂಬಂಧಪಟ್ಟಂತೆ ಈ ಸದನದ ಮುಂದೆ ತಿದ್ದುಪಡಿಯನ್ನು ನಾನು ಮಂಡಿಸಬಯಸುತ್ತೇನೆ. ಆದರೆ ಈ ವಿಷಯವಾಗಿ ಮಾತನಾಡಬಯಸುವವರು ಹಾಗೂ ತಮ್ಮ ಮಾತುಗಳನ್ನು ಸದನ ಕೇಳಲಿ ಎಂದು ಬಯಸುವವರು ಇನ್ನೂ ಹಲವಾರು ಇದ್ದಾರೆಂದು ಭಾವಿಸುತ್ತೇನೆ. ಹಾಗಾಗಿ ನಾನು ಒತ್ತಾಯಮಾಡುವುದೇನೆಂದರೆ, ಈಗ ಮಾಡಿರುವಂತೆ ಈ ವಿಷಯವನ್ನು ತುಂಡುತುಂಡಾಗಿ ಪರಿಗಣಿಸದೆ ಸಮಗ್ರವಾಗಿ ಪರಿಗಣಿಸುವುದು ಆವಶ್ಯಕ. ಈಗ ಸದಸ್ಯರು ವಿಭಿನ್ನವಾಗಿ ಆಕ್ಷೇಪಣೆ ಎತ್ತುತ್ತಿದ್ದಾರಲ್ಲ. ಇಂಥ ವಿದ್ಯಮಾನಕ್ಕೆ ಆಸ್ಪದ ಕೊಡದೆ ಇದಕ್ಕೊಂದು ಸಮಗ್ರವಾದ ಪರಿಹಾರ ಕಂಡುಕೊಳ್ಳುವುದು ಅಗತ್ಯವಾಗಿದೆ. ನಾನು ಈಗ ನನ್ನ ತಿದ್ದುಪಡಿಯನ್ನು ಸಭೆಯ ಮುಂದಿಡಬಯಸುತ್ತೇನೆ ಮಾನ್ಯ ಮಂತ್ರಿಗಳು ಇದಕ್ಕೆ ಒಪ್ಪಿಗೆ ನೀಡುವರೆಂದು ಆಶಿಸುತ್ತೇನೆ.

**ಶ್ರೀ ಆರ್. ವೇಲಾಯುಧನ್ (ಟ್ರಾವಂಕೂರ್–ಕೊಚಿನ್):** ಈ ಮಸೂದೆಯನ್ನು ಕುರಿತಂತೆ ಮಾತನಾಡಲು ನಾನು ಬಯಸುತ್ತಿಲ್ಲ, ಏಕೆಂದರೆ ಈ ವಿಷಯವಾಗಿ ಯಾವುದೇ ಭಿನ್ನಾಭಿಪ್ರಾಯ ಸಾಧ್ಯ ಎಂದು ನನಗೆ ಎನಿಸುತ್ತಿಲ್ಲ. ಈ ಮುಂಚೆ ಅಧ್ಯಕ್ಷಸ್ಥಾನದಲ್ಲಿ ಆಸೀನರಾಗಿದ್ದ ಸಭಾಪತಿಯವರು ಈ ಸದನದ ಹೊರಗಡೆ ನಡೆದ ಸಂಗತಿಗಳನ್ನು ಇಟ್ಟುಕೊಂಡು ಈ ಮಸೂದೆಗೆ ಸಂಬಂಧಪಟ್ಟಂತೆ ಚರ್ಚಿಸುವುದು ಸಾಧ್ಯವಾಗುವುದಿಲ್ಲ ಎಂಬ ನಿರ್ಣಯ ಕೊಟ್ಟಿರುವುದು ನನಗೆ ತುಂಬ ಸಂತೋಷ ಉಂಟುಮಾಡಿದೆ. ಈಗ ಕೆಲವು ಮಂದಿ ಮಾನ್ಯ ಸದಸ್ಯರು ಈಗಾಗಲೆ ಈ ವಿಷಯವಾಗಿ ಎತ್ತಿರುವ ಒಂದೆರಡು ಆಕ್ಷೇಪಗಳ ಬಗ್ಗೆ ನನ್ನ ಮಾತುಗಳನ್ನು ಸೀಮಿತಗೊಳಬಯಸುತ್ತೇನೆ. ಏಕೆಂದರೆ ಉಳಿದ ಅನೇಕರು ಮಾಡುತ್ತಿರುವಂತೆ, ಪರಿಶಿಷ್ಟ ಜಾತಿಗಳನ್ನು ಕುರಿತಂತೆ ಮನಸ್ಸಿನಲ್ಲಿರುವ ಕೆಲವು ಅನಿಸಿಕೆಗಳಿಗೆ ದನಿಕೊಡಲು ಇದೊಂದು ಸೂಕ್ತವಾದ ಅವಕಾಶವೆಂದು ಭಾವಿಸುತ್ತೇನೆ.

ಕೇವಲ ಈ ಸದನದಲ್ಲಿ ಮಾತ್ರವಲ್ಲ, ಇಡೀ ದೇಶದ ಮಂದಿ ಪರಿಶಿಷ್ಟ ಜಾತಿಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದಿಶೆಯಲ್ಲಿ ಅತೀವ ಆಸಕ್ತಿ ತಳೆದಿದ್ದಾರೆ. ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ಮಹಾನ್ ನಾಯಕತ್ವದಲ್ಲಿ ಇಂಥದೊಂದು ಮಹಾನ್ ಕಾರ್ಯ ನಡೆಯದೆ ಹೋಗಿದ್ದರೆ ಈ ಸಮುದಾಯಗಳನ್ನು ಪ್ರತಿನಿಧಿಸುತ್ತಿರುವ ನನ್ನಂತಹ ಅನೇಕರು ಈ ಸದನದಲ್ಲಿ ಕಾಣಿಸಿಕೊಳ್ಳಲು ಸಾಧ್ಯವಿರುತ್ತಿರಲಿಲ್ಲ. ಹಾಗೆಯೆ ನಮ್ಮ ಹಿರಿಯ ನಾಯಕರಾದ ಡಾ. ಅಂಬೇಡ್ಕರ್ ಅವರು ಸಲ್ಲಿಸಿರುವ ಮಹಾನ್ ಸೇವೆಯ ಬಗ್ಗೆ ಇಲ್ಲಿ ಸ್ಮರಿಸಿಕೊಳ್ಳದೆ ಹೋದರೆ ತಪ್ಪಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಮಹಾತ್ಮಗಾಂಧಿ, ಶ್ರೀ ಜಿನ್ನಾ ಮತ್ತು ಡಾ. ಅಂಬೇಡ್ಕರ್ ಈ ಮೂರು ಮಂದಿ ನಮ್ಮೆಲ್ಲರ ಅತ್ಯಂತ ಪ್ರಶಂಸೆಗೆ ಪಾತ್ರರಾಗುವ.......

**ಶ್ರೀ ಸೋನಾವಣೆ:** ಹಾಗೆಯೇ ದೇಶವನ್ನು ವಿಭಜನೆ ಮಾಡಿದರು ಕೂಡ.

**ಶ್ರೀ ಆರ್ ವೇಲಾಯುಧನ್:** ......ಜನತೆಯ ಗೌರವಕ್ಕೆ ಪಾತ್ರರಾಗುವ, ಈ ದೇಶದ ಜನರ ಭವಿಷ್ಯವನ್ನು ರೂಪಿಸುವ ಹಾಗೂ ಈ ಶತಮಾನದ ಜನರ ಆಲೋಚನೆಗಳಿಗೆ ರೂಪಕೊಡುವ ವ್ಯಕ್ತಿಗಳಾಗಿದ್ದಾರೆ.

**ಶ್ರೀ ಸೋನಾವಣೆ:** ನಾವು ಸರಿಯಾದ ಕ್ರಮದಲ್ಲಿ ಹೋಗುತ್ತಿದ್ದೇವೆಯೆ ಎಂಬ ಬಗ್ಗೆ ಹೇಳುವುದಾದರೆ, ಈ ಮಸೂದೆಗೆ ಇವೆಲ್ಲ ಪ್ರಸಕ್ತವೆನಿಸುತ್ತದೆಯೆ?

**ಶ್ರೀ ಆರ್. ವೇಲಾಯುಧನ್:** ಖಂಡಿತವಾಗಿ.

**ಅಧ್ಯಕ್ಷರು:** ಈ ವಿಚಾರವಾಗಿ ಮಾತನಾಡಿದ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಈ ಸದನ ಅಡೆತಡೆಯಿಲ್ಲದೆ ಆಲಿಸಿದೆ. ಅವರು ಇದೇ ಸದವಕಾಶವನ್ನು ಉಳಿದ ಸದಸ್ಯರಿಗೂ ನೀಡುವರೆಂದು ಭಾವಿಸುತ್ತೇನೆ,

**ಶ್ರೀ ಸೋನಾವಣೆ:** ನಾನು ಎತ್ತಿರುವ ಆಕ್ಷೇಪ ಇನ್ನೂ ಇತ್ಯರ್ಥವಾಗಿಲ್ಲ.

**ಅಧ್ಯಕ್ಷರು:** ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಂದುವರಿಸಬಹುದು.

**ಶ್ರೀ ಆರ್. ವೇಲಾಯುಧನ್:** ನಾನು ಯಾವುದೇ ವಿವಾದಕ್ಕೆ ಎಡೆಮಾಡಿಕೊಡುವ ಮಾತುಗಳನ್ನು ಆಡಬಯಸುತ್ತಿಲ್ಲ. ಆದರೆ ನಾನು ಒಂದು ಮಾತನ್ನು ಇಲ್ಲಿ ಹೇಳಲೇಬೇಕು. ಏನೆಂದರೆ ಈ ಮಸೂದೆಯನ್ನು ಸದನದ ಮುಂದೆ ತಂದಿರುವ ಮಾನ್ಯ ಡಾ. ಅಂಬೇಡ್ಕರ್ ಹಾಗೂ ಅತ್ಯಂತ ಮಹಾನ್ ರಾಜಕೀಯ ಸಂತರೆನಿಸಿರುವ ಹಾಗೂ ಪರಿಶಿಷ್ಟ ಜಾತಿಗಳಿಗೆ ಸೇರಿರುವ ಲಕ್ಷಲಕ್ಷಾಂತರ ದಲಿತ ಜನರಿಗೆ ಅತಿಶ್ರೇಷ್ಠ ಸೇವೆ ಸಲ್ಲಿಸಿರುವ ಮಹಾತ್ಮ ಗಾಂಧೀಜಿ ಈ ನಾಡಿನ ಜನತೆಯ ಹೃದಯದಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದ್ದಾರೆ

ಎಂಬುದು ನಿಜವಾದ ಸಂಗತಿ. ಹಾಗಾಗಿ ಈ ಸಂದರ್ಭವನ್ನು ಬಳಸಿಕೊಂಡು ಕೆಲವರು ಇಂದಿಗೂ ನಾಡಿನ ಪರಿಶಿಷ್ಟ ಜಾತಿಗಳ ಜನಗಳ ಮಹಾನಾಯಕನಾಗಿರುವ ವ್ಯಕ್ತಿಯ ಮೇಲೆ ಕೆಸರನ್ನು ಎರಚಲು ಹೊರಟ್ಟಿರುವುದು ನನಗೆ ಸರಿಯಾಗಿ ಕಾಣುವುದಿಲ್ಲ.

ಈ ಮಸೂದೆಯ ಮೂಲವನ್ನು ಕುರಿತು ಹೇಳುವುದಾದರೆ, ಭಾಗ 'ಸಿ' ಗೆ ಸೇರಿದ ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯ ಒದಗಿಸಿರುವ ಅವಕಾಶಮಾಡಿಕೊಡಬೇಕೆಂಬ ಆಲೋಚನೆ ಬಹಳ ಹಿಂದಿನಿಂದಲೂ ಇದ್ದೇ ಇದೆ. ನಮ್ಮ ಸಂವಿಧಾನದ ರಚನೆಯ ಸಂದರ್ಭದಲ್ಲಿ ಅತ್ಯಂತ ಹಿರಿಯ ನ್ಯಾಯ ನಿಷ್ಠಾವಂತರುಗಳು ಹಾಗೂ ಮಾನ್ಯ ಕಾನೂನು ಮಂತ್ರಿಯವರೂ ಸೇರಿದಂತೆ ಹಲವಾರು ಮಂದಿ ವಕೀಲರು ಕೆಲಸ ನಿರ್ವಹಿಸಿದ್ದರೂ ಭಾಗ 'ಸಿ'ಗೆ ಸೇರಿದ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಜನರಿಗೆ ಪ್ರಾತಿನಿಧ್ಯ ಒದಗಿಸುವ ಸಂಗತಿಯನ್ನು ಹೇಗೆ ಸಂಪೂರ್ಣವಾಗಿ ಮರೆತುಬಿಟ್ಟರು ಎಂಬುದು ನನಗೆ ತುಂಬ ಅಚ್ಚರಿ ಉಂಟುಮಾಡುತ್ತದೆ.

ಭಾಗ 'ಸಿ' ರಾಜ್ಯಗಳಲ್ಲಿ ಪರಿಶಿಷ್ಟಜಾತಿಗಳಿಗೆ ಪ್ರಾತಿನಿಧ್ಯ ಕೊಡಲು ಉದ್ದೇಶಿಸಿರುವ ಈ ಮಸೂದೆಯನ್ನು ರೂಪಿಸುವ ನಿಟ್ಟಿನಲ್ಲಿ ಸಾಕಷ್ಟು ಆತ್ಮಶೋಧನೆ ನಡೆದಿದೆ, ಹಲವಾರು ಸಾಂವಿಧಾನಿಕ ಬಿಕ್ಕಟ್ಟುಗಳನ್ನು ಕೂಡ ಪರಿಹರಿಸಿಕೊಂಡು ಬರಬೇಕಾಯಿತು. ಈ ಮಸೂದೆ ಒಂದು ಸೂಕ್ತವಾದ ಕ್ರಮ ಹೌದೋ ಅಲ್ಲವೋ ಎಂಬ ವಿಚಾರವಾಗಿ ಭಿನ್ನಾಭಿಪ್ರಾಯ ಎದ್ದಿತ್ತು. ಭಾಗ 'ಸಿ' ರಾಜ್ಯಗಳ ಪರಿಶಿಷ್ಟ ಜಾತಿಗಳಿಗೆ ಸಂಬಂಧಪಟ್ಟಂತೆ ಸ್ಥಾನಗಳ ಮೀಸಲಾತಿ ಇರತಕ್ಕದ್ದಲ್ಲ ಎಂಬ ಅಪಸ್ವರವನ್ನು ಕೂಡ ಮಾನ್ಯ ಸದಸ್ಯರೊಬ್ಬರು ಈ ಸದನದಲ್ಲಿ ಎತ್ತಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ ಇಂದು ಪರಿಶಿಷ್ಟ ಜಾತಿಗಳು ಅನುಭವಿಸುತ್ತಿರುವ ಸಂಕಷ್ಟಗಳಿಗೆ ಸ್ಥಾನಗಳ ಮೀಸಲಾತಿ ಅಥವಾ ಯಾವುದೇ ಬಗೆಯ ಕಾದಿರಿಸುವಿಕೆ ರಾಮಬಾಣ ಅಲ್ಲ ಎಂಬುದು ನನ್ನ ನಿಲುವು, ಶಾಲಾ ದಿನಗಳಿಂದಲೂ ಇದನ್ನೇ ನಾನು ಹೇಳುತ್ತಾ ಬಂದಿದ್ದೇನೆ. ಇದೇ ವಿಷಯವನ್ನು ಕುರಿತಂತೆ ಡಾ. ಅಂಬೇಡ್ಕರವರ ಜೊತೆಯಲ್ಲಿ ನನ್ನದೇ ಆದ ಭಿನ್ನಾಭಿಪ್ರಾಯಗಳಿವೆ. ಆದರೆ ಭಾಗ 'ಎ' ಮತ್ತು 'ಬಿ' ರಾಜ್ಯಗಳಿಗೆ ನೀವು ಮೀಸಲಾತಿಯನ್ನು ಕೊಟ್ಟಿರುವುದಾದರೆ ಭಾಗ ಸಿ ರಾಜ್ಯದ ಪರಿಶಿಷ್ಟ ಜಾತಿಗಳನ್ನು ಅದರಿಂದ ವಂಚಿಸುವುದು ತಪ್ಪಾಗುತ್ತದೆ. ಏಕೆಂದರೆ ಈ ಭಾಗದ ಮಂದಿ ಸಂಸತ್ತಿನಲ್ಲಾಗಲಿ ಅಥವಾ ತಮ್ಮ ತಮ್ಮ ಸ್ಥಳೀಯ ಸಂಸ್ಥೆಗಳಲ್ಲಿಯೆ ಆಗಲೀ ವಿಶೇಷ ಪ್ರಾತಿನಿಧ್ಯ ಪಡೆದಿಲ್ಲ.

ಡಾ. ದೇಶಮುಖ್ ಅವರು ಹೇಳಿರುವಂತೆ ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಗಳನ್ನು ರೂಪಿಸುವಲ್ಲಿ ಅನೇಕ ಬಗೆಯ ತಪ್ಪುಗಳಾಗಿವೆ, ಎಷ್ಟೋ ಬಿಟ್ಟು ಹೋಗಿವೆ. ಇದು ಕೇವಲ ನಮ್ಮ ಮುಂದಿರುವ ಮಸೂದೆಯಲ್ಲಿ ಮಾತ್ರವಲ್ಲ ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳಿಗೆ ಸಂಬಂಧಪಟ್ಟಂತೆ ರಾಷ್ಟ್ರಪತಿಗಳು ಹೊರಡಿಸಿರುವ ಆದೇಶದಲ್ಲೂ ಇಂಥ ಲೋಪಗಳಿವೆ. ಈ ವಿಷಯವಾಗಿ ಕಾನ್ಸ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿ ನಡೆವಳಿಯಲ್ಲಿ ಏನನ್ನು ನಮೂದಿಸಲಾಗಿದೆ ಎಂದು ನಾನು ನೋಡಿದ್ದೇನೆ. ೧೯೩೫ ರ ಅಧಿನಿಯಮದ ಅನ್ವಯ ಈಗಾಗಲೇ ರೂಪುಗೊಂಡಿರುವ ಪಟ್ಟಿಯನ್ನು ಹೊಸ ಸಂವಿಧಾನದ ಅನ್ವಯ ಚುನಾವಣೆಗಳನ್ನು ನಡೆಸಬೇಕಾದ ಸಂದರ್ಭ ಬಂದಲ್ಲಿ ಅಂಗೀಕರಿಸಲಾಗುತ್ತದೆ ಎಂದು ಅಲ್ಲಿ ಹೇಳಲಾಗಿದೆ. ಆದರೆ ರಾಷ್ಟ್ರಪತಿಗಳ ಆದೇಶ ಹೊರಬಂದಾಗ ಆ ಅಧಿನಿಯಮದಲ್ಲಿ ಸೇರ್ಪಡೆಯಾಗಿದ್ದ ಅನೇಕ ಜಾತಿಗಳು ಕೈಬಿಟ್ಟುಹೋಗಿದ್ದವು. ಬಹುಮಟ್ಟಿಗೆ ಭಾಗ 'ಎ' ಮತ್ತು ಭಾಗ 'ಬಿ' ಗಳಿಗೆ ಸೇರಿದ ಎಲ್ಲ ರಾಜ್ಯಗಳಲ್ಲೂ ಈ ಪರಿಶಿಷ್ಟಜಾತಿ ಮತ್ತು ಪಂಗಡಗಳ ಪೈಕಿ ಕೆಲವು ಮಾತ್ರ ಸೇರಿರುವುದು ಕಂಡುಬರುತ್ತದೆ.

ಯಾವುದೇ ಉದ್ದೇಶವಿಲ್ಲದೆ ಹೀಗೆ ಮಾಡಲಾಗಿಲ್ಲ ಎಂಬುದು ನನ್ನ ಭಾವನೆ. ನನಗೆ ಅನಿಸುವಂತೆ ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಲಾಗಿದೆ. ಈ ಪಟ್ಟಿಯಲ್ಲಿ ಕೆಲವಾರು ಜಾತಿಗಳನ್ನು ಮತ್ತು ಪಂಗಡಗಳನ್ನು ಕೈಬಿಟ್ಟಿರುವುದು ಸರಿಯಷ್ಟೆ. ಒಂದು ವೇಳೆ ೧೯೩೫ ರ ಅಧಿನಿಯಮದಲ್ಲಿರುವ ಎಲ್ಲ ಪರಿಶಿಷ್ಟ ಜಾತಿಗಳನ್ನು ಹಾಗೂ ಪಂಗಡಗಳನ್ನು ಇದರಲ್ಲಿ ಸೇರಿಸಿದ್ದರೆ, ಮೀಸಲಾತಿ ಸ್ಥಾನಗಳ ಸಂಖ್ಯೆ ತುಂಬ ಬೆಳೆದುಹೋಗುತ್ತಿತ್ತು. ಕೆಲವು ರಾಜ್ಯಗಳಲ್ಲಿ, ಉದಾ: ಉತ್ತರಪ್ರದೇಶವನ್ನು ತೆಗೆದುಕೊಳ್ಳೋಣ, ಹಾಲಿ ಇರುವ ೧೩ ಲಕ್ಷ ಮಂದಿ ಖಾತಿಕ್ ಸಮುದಾಯದವರು ರಾಷ್ಟ್ರಪತಿಗಳ ಪಟ್ಟಿಯಲ್ಲಿ ಪೂರ್ತಿಯಾಗಿ ಬಿಟ್ಟು ಹೋಗಿದ್ದಾರೆ. ಒಂದು ವೇಳೆ ಸೇರಿಸಿದ್ದರೆ ನನ್ನ ಅಭಿಪ್ರಾಯದಲ್ಲಿ ಉತ್ತರ ಪ್ರದೇಶದ ಸ್ಥಾನಗಳ ಶೇಕಡ ೪೦ ರಷ್ಟು ಕೇವಲ ಪರಿಶಿಷ್ಟ ಜಾತಿಗಳಿಗೇ ಹೋಗಿಬಿಡುತ್ತಿತ್ತು. ಇದು ಕಡಿಮೆಯೇನಲ್ಲ ಭಾಗ 'ಎ' ಗೆ ಸೇರಿದ ರಾಜ್ಯವೊಂದರಲ್ಲಿ ಅವರು ಇಷ್ಟೊಂದು ಸವಲತ್ತು ಪಡೆದುಕೊಂಡು ರಾಜ್ಯದ ರಾಜಕೀಯವನ್ನು ಮತ್ತು ಜನತೆಯ ಬದುಕನ್ನು ಕುರಿತು ಪ್ರಭಾವ ಬೀರುವ ಸಂದರ್ಭ ಉಂಟಾಗುತ್ತದೆ ಎಂದರೆ ಅದೇನು ಸಣ್ಣ ಸಂಗತಿಯಲ್ಲ. ಆದ್ದರಿಂದ ಉದ್ದೇಶ ಪೂರ್ವಕವಾಗಿ, ವಿಶೇಷ ರೀತಿಯಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗೆ ನೀಡಲಾಗುವ ಪ್ರಾತಿನಿಧ್ಯವನ್ನು ಕಡಿಮೆ ಮಾಡುವ ಉದ್ದೇಶದಿಂದ ಅವರನ್ನು ಬೇಕೆಂದೇ ಕೈಬಿಡಲಾಗಿದೆ. ಈ ಪರಿಸ್ಥಿತಿ ಕೇವಲ ಉತ್ತರ ಪ್ರದೇಶದಲ್ಲಿ ಮಾತ್ರವಲ್ಲ, ಕೆಲವು ಬೇರೆ ರಾಜ್ಯಗಳಲ್ಲೂ ಇದೆ. ಆದರೆ ದಕ್ಷಿಣ ಭಾರತದ ಬಹಳಷ್ಟು ರಾಜ್ಯಗಳಲ್ಲಿ ಅಲ್ಲಿಯವರು ೧೯೩೫ರ ಅಧಿನಿಯಮಕ್ಕೆ ಅನುಗುಣವಾಗಿಯೇ ಪಟ್ಟಿ ತಯಾರಿಸಿರುವುದನ್ನು ನೋಡಬಹುದು. ಹಾಗಾಗಿ ಈ ಇಡೀ ಪಟ್ಟಿಯನ್ನು ಮರುರೂಪಿಸುವುದು ಅಗತ್ಯ. ದಿವಂಗತ ಸರ್ದಾರ್ ಪಟೇಲ್ ಅವರು ಬರುವ ಚುನಾವಣೆಯ ಹೊತ್ತಿಗೆ ೧೯೩೫ರ ಅಧಿನಿಯಮಕ್ಕೆ ಅನುಗುಣವಾಗಿ ಸಿದ್ಧಪಡಿಸಲಾಗಿರುವ ಪಟ್ಟಿಯನ್ನು ಒಪ್ಪಲಾಗುವುದೆಂದು ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಲ್ಲಿ ನೀಡಿದ್ದ ವಾಗ್ದಾನವನ್ನು ನಾವು ಗೌರವಿಸಬೇಕು. ಆ ದಿವಂಗತ ಮುಂದಾಳುವಿಗೆ ಮತ್ತು ರಾಷ್ಟ್ರಪಿತ ಮಹಾತ್ಮ ಗಾಂಧಿಯವರಿಗೆ ಹಾಗೂ ಜಾತಿ ಅಥವಾ ಸಮುದಾಯದ ಆಧಾರದ ಮೇಲೆ ಕೆಲವು ಸವಲತ್ತುಗಳನ್ನು ಪಡೆದುಕೊಂಡಿರುವ ಕೋಟ್ಯಾಂತರ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ನ್ಯಾಯ ಒದಗಿಸುವ ಸಲುವಾಗಿ ನಾವು ಹಾಗೆ ಮಾಡಲೇಬೇಕು.

ಹಾಲಿ ಇರುವ ಪರಿಸ್ಥಿತಿಯಲ್ಲೇ ನಾವು ಈ ಕೆಲಸವನ್ನು ಮಾಡಬಹುದು. ಉದಾಹರಣೆಗೆ ನಾನು ಮದರಾಸಿನಿಂದ ಬಂದಿದ್ದೇನೆ, ಆದ್ದರಿಂದ ಬೇರೆ ಯಾವುದಾದರೂ ರಾಜ್ಯಕ್ಕೆ, ಉದಾಹರಣೆಗೆ ಮುಂಬೈಗೆ ಎಂದಿಟ್ಟುಕೊಳ್ಳಿ, ಹೋಗಿ ಚುನಾವಣೆಗೆ ಸ್ಪರ್ಧಿಸುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಂವಿಧಾನಾತ್ಮಕವಾದ ಇಂತಹ ಬಿಕ್ಕಟ್ಟನ್ನು ಸಂಸತ್ ಸಭೆಯೇ ನಿವಾರಿಸಬೇಕು. ಸಂಸತ್‌ನ್ನು ಬಿಟ್ಟು ಬೇರೆ ಯಾರೂ ಇದನ್ನು ಮಾಡಲಾಗದು. ನಾನು ತಿರುವಾಂಕೂರ್– ಕೊಚಿನ್ ರಾಜ್ಯದವನಾಗಿದ್ದು ಮುಂಬೈಗೆ ಹೋಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ ಎಂದರೆ ನನ್ನ ಸಮುದಾಯಕ್ಕೆ ಭೇದ ಮಾಡಲಾಗಿದೆ ಎಂದರ್ಥ. ಏಕೆಂದರೆ, ಪರಿಶಿಷ್ಟ ಜಾತಿಗೆ ಸೇರದೆ ಇರುವ ಮಂದಿ ಪಕ್ಷದ ಆಧಾರದ ಮೇಲೆ ಇಲ್ಲವೇ ಬೇರೆ ಯಾವುದಾದರು ಆಧಾರದ ಮೇಲೆ ಭಾರತದಲ್ಲಿ ಎಲ್ಲಿಗೆ ಬೇಕಾದರೂ ಹೋಗಿ ಮುಕ್ತವಾಗಿ ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಹಾಗಾಗಿ ಸರ್ಕಾರಕ್ಕೆ ಮಾತ್ರವಲ್ಲ ಸಂಸತ್ತಿಗೂ ನಾನು ಸಲ್ಲಿಸುವ ಮನವಿ ಏಕೆಂದರೆ ಎಷ್ಟು ಬೇಗ ಸಾಧ್ಯವಾಗುತ್ತದೋ ಅಷ್ಟು ಬೇಗ ಈ ಸಂವಿಧಾನಾತ್ಮಕ ಏರುಪೇರುಗಳನ್ನು ಸರಿಪಡಿಸಿ. ನನ್ನ ಅರಿಕೆ ಏನೆಂದರೆ ಮೊದಲ ಪಟ್ಟಿಯಲ್ಲಿ ಕೈಬಿಡಲಾಗಿರುವ ಬಹಳಷ್ಟು ಜಾತಿಗಳನ್ನು ಮತ್ತೆ ಸೇರಿಸಿ ಹೊಸ ಪಟ್ಟಿ ತಯಾರಿಸಿ. ಇದರಿಂದ ಪರಿಶಿಷ್ಟ ಜಾತಿಗಳಿಗೆ ಮತ್ತು ಪಂಗಡಗಳಿಗೆ

ನ್ಯಾಯಯುತವಾದ ಮೀಸಲಾತಿ ಸೌಕರ್ಯವನ್ನು ದೊರಕಿಸಿಕೊಟ್ಟಂತೆ ಆಗುತ್ತದೆ. ಇಲ್ಲದೆ ಹೋದರೆ ಈ ಇಡೀ ಪ್ರಕರಣವನ್ನೇ ಕೈಬಿಟ್ಟುಬಿಡಿ ನಾವು ಉಳಿದ ಮಂದಿಯೊಡನೆ ಹೆಗಲಿಗೆ ಹೆಗಲು ಕೊಟ್ಟು ಸಮಸ್ಕಂಧರಾಗಿಯೇ ಕಣಕ್ಕೆ ಇಳಿಯೋಣ. ನನಗೆ ಭವಿಷ್ಯದಲ್ಲಿ ಅಪಾರವಾದ ನಂಬಿಕೆ ಇದೆ. ನನ್ನ ಸಮುದಾಯಕ್ಕೆ ಉಜ್ವಲವಾದ ಭವಿಷ್ಯವಿದೆ ಎಂದು ನಾನು ನಂಬಿದ್ದೇನೆ. ಏಕೆಂದರೆ ಅವರು ದಮನಕ್ಕೆ ಒಳಗಾದವರು. ದಮನಕ್ಕೆ ಒಳಗಾದವರಿಗೆ ಮುಂದಿನ ದಿನಗಳು ಆಶಾದಾಯಕವಾಗಿದೆ. ಹಾಗಾಗಿ ನಾನು ಭರವಸೆಯನ್ನು ಕಳೆದುಕೊಂಡಿಲ್ಲ. ಡಾ. ಅಂಬೇಡ್ಕರವರಿಗೆ ಸ್ವಲ್ಪ ನಿರಾಶೆಯಾಗಿರಬಹುದು. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ಪರಿಶಿಷ್ಟ ಜಾತಿಗಳ ಯುವ ಜನಾಂಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ, ನಮ್ಮ ಮುಕ್ತಿಯ ಹೋರಾಟವನ್ನು ನಾವು ಧೈರ್ಯವಾಗಿಯೇ, ಸಮಸ್ಕಂಧರಾಗಿಯೇ ನಡೆಸಲು ಸಿದ್ಧವಾಗಿದ್ದೇವೆ.

**ಅಧ್ಯಕ್ಷರು:** ಸದ್ದು, ಸದ್ದು, ಮಾನ್ಯ ಸದಸ್ಯರು ಮಸೂದೆಯನ್ನು ವಿರೋಧಿಸುತ್ತಿದ್ದಾರೆಯೊ ಅಥವಾ ಅದಕ್ಕೆ ಬೆಂಬಲ ಸೂಚಿಸುತ್ತಿದ್ದಾರೆಯೊ?

**ಶ್ರೀ ವೇಲಾಯುಧನ್:** ನಾನು ಮಸೂದೆಯನ್ನು ಖಂಡಿತ ವಿರೋಧಿಸುತ್ತಿಲ್ಲ. ಆದರೆ ವಾಸ್ತವಾಂಶಗಳನ್ನು ಪರಿಶೀಲಿಸಿ, ದೃಢಪಡಿಸಿಕೊಂಡ ನಂತರ, ಈಗ ಸಿದ್ಧಪಡಿಸಲಾಗಿರುವ ಪಟ್ಟಿಯಲ್ಲಿ ಅಗತ್ಯವಾದ ಬದಲಾವಣೆ ಮಾಡಿಕೊಳ್ಳಬೇಕೆಂಬುದು ನನ್ನ ಕೋರಿಕೆ ಅಷ್ಟೆ. ಈ ಕೋರಿಕೆಯೊಡನೆ, ನಾನು ಮಸೂದೆಯನ್ನು ಬೆಂಬಲಿಸುತ್ತೇನೆ.

**ಶ್ರೀ ದೇಶಬಂಧುಗುಪ್ತ (ದೆಹಲಿ):** ನಾನು ಈ ಮಸೂದೆಗೆ ಬೆಂಬಲ ಸೂಚಿಸಬಯಸುತ್ತೇನೆ. ಈ ಮಸೂದೆ ಕೇವಲ ಭಾಗ 'ಸಿ' ರಾಜ್ಯಗಳಲ್ಲಿರುವ ಹರಿಜನರಿಗೆ ಪ್ರಾತಿನಿಧ್ಯ ನೀಡಬೇಕೆಂಬ ವಿಷಯವಾಗಿ ಅವಕಾಶ ಕಲ್ಪಿಸಿಕೊಡಬೇಕೆಂದು ಉದ್ದೇಶಪಡುತ್ತಿರುವುದರಿಂದ ಸದನದ ಯಾವುದೇ ಭಾಗದಿಂದ ಇದಕ್ಕೆ ಆಕ್ಷೇಪವಿರಲು ಸಾಧ್ಯವಿಲ್ಲ. ಆದರೆ ಈ ಮಸೂದೆಯನ್ನು ಸದನದ ಮುಂದೆ ಮಂಡಿಸಿದ ಡಾ. ಅಂಬೇಡ್ಕರ್ ಅವರು ಪ್ರಜಾಪ್ರಾತಿನಿಧ್ಯದ ಮಸೂದೆ ಈ ಹಿಂದೆ ಸದನದ ಮುಂದೆ ಬಂದಿದ್ದಾಗ ಈ ಅಂಶವನ್ನು ಸೂಕ್ತವಾಗಿ ವ್ಯಾಖ್ಯಾನಿಸಲು ಸಾಧ್ಯವಾಗಿರಲಿಲ್ಲ ಎಂಬ ವಾದವನ್ನು ಮಂಡಿಸುತ್ತಿರುವುದು ನನಗೆ ಸರಿಯಾಗಿ ಕಾಣಿಸುತ್ತಿಲ್ಲ. ಹಾಗೆ ನೋಡಿದರೆ ಈ ಮೀಸಲಾತಿ ಕ್ರಮ ತಾತ್ಕಾಲಿಕವಾಗಿದ್ದು ಕೇವಲ ಹತ್ತುವರ್ಷಗಳವರೆಗೆ ಅಸ್ತಿತ್ವದಲ್ಲಿರುತ್ತದೆ. ಹಾಗಾಗಿ ಕೆಲವು ಪ್ರದೇಶಗಳನ್ನು ಉದ್ದೇಶಪೂರ್ವಕವಾಗಿ ಸೇರಿಸದೆ ಹೋದರೆ, ಅಂಥ ಪ್ರದೇಶಗಳಿಂದ ಹರಿಜನರು ಯಾವುದೇ ಮೀಸಲಾತಿ ಇಲ್ಲದೆ ಸದನಕ್ಕೆ ಹಿಂದಿರುಗಿ ಬರಲು ಸಾಧ್ಯವಾಗುವುದೆ ಎಂದು ನೋಡುವುದು ಪ್ರಾಯಃ ಇದರ ಉದ್ದೇಶವಾಗಿತ್ತು. (ಒಬ್ಬ ಮಾನ್ಯ ಸದಸ್ಯರು : ಖಂಡಿತ ಅನುಮಾನ). ನನ್ನ ಮಿತ್ರರು ತುಂಬ ಅನುಮಾನ ಎಂದು ಹೇಳುತ್ತಿದ್ದಾರೆ. ಆ ವಿಚಾರದಲ್ಲಿ ಅವರೊಡನೆ ಪಣಕಟ್ಟಲು ನಾನು ಸಿದ್ಧವಾಗಿಲ್ಲ. ಆದರೆ ಇಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ ದೆಹಲಿಯ ವಿಚಾರವಾಗಿ, ಈ ಮಸೂದೆಯನ್ನು ಪ್ರಸ್ತುತಪಡಿಸಿದವರಿಗೆ ಹಾಗೂ ಇತರ ಮಿತ್ರರಿಗೆ ನಾನು ಹೇಳುವುದೇನೆಂದರೆ, ದೆಹಲಿ ಮತ್ತು ಅಜ್ಮೀರ್, ಹಿಂದಿನ ಆಡಳಿತ ಕಾಲದಲ್ಲೂ, ಜಂಟಿ ಚುನಾವಣಾ ಮತದಾರರ ಕ್ಷೇತ್ರಗಳನ್ನು ಹೊಂದಿದ್ದಂತಹ ಪ್ರದೇಶಗಳು. ಇದಕ್ಕೆ ಪ್ರತಿಯಾಗಿ ದೇಶದ ಎಲ್ಲೆಡೆಯಲ್ಲೂ ಬೇರೆಬೇರೆ ಮತದಾರ ಕ್ಷೇತ್ರಗಳು ಹಾಗೂ ಅದರ ಆಧಾರದ ಮೇಲೆ ಸ್ಥಾನಗಳ ಮೀಸಲಾತಿ ಜಾರಿಯಲ್ಲಿದ್ದವು. ಮಸೂದೆಯನ್ನು ಪ್ರಸ್ತುತಪಡಿಸಿರುವ ಮಹನೀಯರಗೆ ಹಾಗೂ ಅವರ ಹಾಗೆಯೆ ಆಲೋಚನೆ ಮಾಡುತ್ತಿರುವ ಇತರ ಮಿತ್ರರ ಗಮನಕ್ಕೆ ತರುವುದೇನೆಂದರೆ ಸಂಯುಕ್ತ ಮತದಾರ ಸಮುದಾಯದ ಮೂಲಕವೇ ದೆಹಲಿಯಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಹರಿಯಾಳೇ ಸೆಂಟ್ರಲ್ ಅಸೆಂಬ್ಲಿಗೆ

ಆಯ್ಕೆಯಾಗಿ ಬಂದಿದ್ದರು. ಸಾಕಷ್ಟು ಖಾರವಾದ ಪ್ರತಿಕ್ರಿಯೆಗಳ ಮತ್ತು ಪೈಪೋಟಿಯ ನಡುವೆ ಅವರು ಗೆಲುವು ಸಾಧಿಸಿದ್ದರು. ಭಾರತದ ಎಲ್ಲೆಡೆಗಳ ವಿರೋಧಿ ಬಲಗಳು ದೆಹಲಿಯ ಮೇಲೆ ತಮ್ಮ ಗಮನವನ್ನು ಹರಿಸಿದ್ದು ಕಾಂಗ್ರೆಸ್ ಪಕ್ಷ ನಿಲ್ಲಿಸಿದ್ದ ಮುಸಲ್ಮಾನ ಹುರಿಯಾಳನ್ನು ವಿರೋಧಿಸಿದವು. ಆದರೂ ದೆಹಲಿ ಮಂದಿ ಜಂಟಿ ಮತದಾರರ ಸಮುದಾಯ ತತ್ತ್ವವನ್ನು ಮೇಲೆತ್ತಿ ಹಿಡಿದು ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಯನ್ನು ಚುನಾಯಿಸಿ ಕಳುಹಿಸಿಕೊಟ್ಟಿತು. ಒಂದು ವೇಳೆ ದೆಹಲಿ ಹಾಗೂ ಭಾಗ 'ಸಿ' ಗೆ ಸೇರಿದ ರಾಜ್ಯಗಳು ಮೀಸಲಾತಿಯ ಸೌಲಭ್ಯವಿಲ್ಲವೆಂದು ಹರಿಜನ ಅಭ್ಯರ್ಥಿಗಳನ್ನು ಚುನಾಯಿಸಿ ಕಳುಹಿಸುವ ಅವಕಾಶವನ್ನು ಪಡೆದುಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ನನಗನಿಸುತ್ತಿದೆ. ಹಾಗೆ ಆಗಿದ್ದಿದ್ದರೆ, ಹತ್ತು ವರ್ಷಗಳ ಅನಂತರ ಈ ಎಲ್ಲ ಮೀಸಲಾತಿ ಕ್ರಮಗಳು ಇಲ್ಲವಾದ ಮೇಲೆ, ಏನಾಗಲು ಸಾಧ್ಯವಿರುತ್ತದೆ ಎಂಬುದರ ಹೊಳಪು ನಮಗೂ ಉಂಟಾಗುತ್ತಿತ್ತು. ಆದರೆ ಈ ಮಸೂದೆಯನ್ನು ಪ್ರಸ್ತುತ ಪಡಿಸಿರುವ ನನ್ನ ಮಾನ್ಯ ಮಿತ್ರರು ದುರದೃಷ್ಟವಶಾತ್ ಬೇರೆಯದೆ ಆದ ದೃಷ್ಟಿಕೋನವನ್ನು ತಳೆದಿದ್ದು, ಈ ಮಸೂದೆಯನ್ನು ಮುಂದೆ ತರುವುದು ಯೋಗ್ಯವೆಂದು ಭಾವಿಸಿದ್ದಾರೆ. ಏನೇ ಆಗಲಿ, ಈಗ ಈ ಮಸೂದೆಯನ್ನು ಸದನದ ಮುಂದೆ ತಂದಿರುವುದರಿಂದ ನಾನು ಇದನ್ನು ಬೆಂಬಲಿಸುತ್ತೇನೆ. ಏಕೆಂದರೆ ತಾತ್ತ್ವಿಕವಾಗಿಯಾಗಲಿ ವ್ಯಾವಹಾರಿಕವಾಗಲಿ ಈ ಮಸೂದೆಯನ್ನು ಕುರಿತಂತೆ ಯಾವುದೇ ವಿರೋಧವಿರಲು ಸಾಧ್ಯವಿಲ್ಲ.

ಆದರೂ ನಾನು ಈ ವಿಚಾರವಾಗಿ ಒಂದೆರಡು ಸಂಗತಿ ಬಗ್ಗೆ ಸದನದ ಗಮನ ಸೆಳೆಯಲು ಬಯಸುತ್ತೇನೆ. ಹಿಂದಿನ ಒಂದು ದಿನದಲ್ಲಿ ಮಾನ್ಯ ಮಂತ್ರಿಗಳು ಮಾಡಿದ ಭಾಷಣವನ್ನು ಕುರಿತು ಒಬ್ಬ ಸದಸ್ಯರು ಈಗಾಗಲೆ ಉಲ್ಲೇಖ ಮಾಡಿರುತ್ತಾರೆ. ನಾನು ಅದರ ವಿಚಾರವಾಗಿ ಯಾವುದೇ ಟೀಕೆ ಮಾಡಲು ಇಷ್ಟಪಡುತ್ತಿಲ್ಲ. ಆದರೆ ಅವರ ಮಾಹಿತಿಗಾಗಿ ಒಂದು ವಿಷಯ ಹೇಳಬಯಸುತ್ತೇನೆ. ಏನೆಂದರೆ ದೆಹಲಿ ನಗರ ಅಖಿಲಭಾರತ ದಲಿತೋದ್ಧಾರಸಭಾ ಕೇಂದ್ರಸ್ಥಾನವಾಗಿತ್ತು. ೧೯೨೧ ರಲ್ಲಿ ಕಾಂಗ್ರೆಸ್ ದಲಿತ ವರ್ಗಗಳ ಅಸಾಮರ್ಥ್ಯಗಳನ್ನು ತೊಡೆದುಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಕ್ಕಿಂತ ಮೊದಲೇ ದಲಿತೋದ್ಧಾರಸಭಾದ ಮುಖ್ಯಸ್ಥಾನ ದೆಹಲಿಯಾಗಿತ್ತು. ದಿವಂಗತ ಗೌರವಾನ್ವಿತ ಸ್ವಾಮಿ ಶ್ರದ್ಧಾನಂದರು ಈ ಸಂಸ್ಥೆಯ ಸಂಸ್ಥಾಪಕರಾಗಿದ್ದರು. ಕಲ್ಕತ್ತೆಯಲ್ಲಿ ೧೯೨೦ ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಹರಿಜನರ ಅಸಾಮರ್ಥ್ಯಗಳನ್ನು ತೊಡೆದುಹಾಕುವ ಕಾರ್ಯಕ್ರಮವೊಂದನ್ನು ಕಾಂಗ್ರೆಸ್ ಕೈಗೆತ್ತಿಕೊಳ್ಳಬೇಕೆಂಬ ಪ್ರಸ್ತಾಪವನ್ನು ಅವರು ಮಂಡಿಸಿದ್ದರು. ಇದಕ್ಕೂ ಮುಂಚೆ, ಜಲಿಯನ್‌ವಾಲಾಬಾಗ್‌ನ ಹತ್ಯಾಕಾಂಡದ ಅನಂತರ, ಅಮೃತಸರದಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಅವರು ಹರಿಜನರ ಕುಂದುಕೊರತೆಗಳ ಪ್ರಶ್ನೆಯನ್ನು ಎತ್ತಿ ಅವುಗಳ ನಿವಾರಣೆಯ ಮಹತ್ವವನ್ನು ಕುರಿತು ಒತ್ತಿಹೇಳಿದ್ದರು. ಹರಿಜನರ ಏಳಿಗೆಗಾಗಿ ಕೆಲಸ ಮಾಡಿರುವ ಹಾಗೂ ಹರಿಜನ ಮುಂದಾಳುಗಳ ಸಾಲಿನಲ್ಲಿ ಎತ್ತರದ ಸ್ಥಾನದಲ್ಲಿರುವ ಮಾನ್ಯ ಮಂತ್ರಿಗಳು ಈ ವಾಸ್ತವಾಂಶವನ್ನು ಗುರುತಿಸಿದ್ದಿದ್ದರೆ ತುಂಬ ಸಮಯೋಚಿತವಾಗಿರುತ್ತಿತ್ತು. ಆದರೆ ದುರದೃಷ್ಟವಶಾತ್ ಅವರ ನೀತಿ ಹಾಗೂ ದೃಷ್ಟಿ ಕೋನ ತುಂಬ ಭಿನ್ನವಾಗಿದೆ. ದೆಹಲಿಯಲ್ಲಿ ಹರಿಜನರ ಉದ್ಧಾರಕ್ಕಾಗಿ ನಡೆದ ಹೋರಾಟದ ಇತಿಹಾಸದ ಪುಟಗಳಿಂದ ನಾನು ಉಲ್ಲೇಖಿಸಬಹುದಾದರೆ........

**ಸಭಾಧ್ಯಕ್ಷರು:** ನಾನು ಮಾನ್ಯ ಸದಸ್ಯರ ಗಮನವನ್ನು ಸೆಳೆಯಬಯಸುವ ವಿಷಯವೇನೆಂದರೆ

ಮಾನ್ಯ ಸ್ಪೀಕರ್ ಅವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದಾಗ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣದ ಪ್ರಾರಂಭಿಕ ಅಥವಾ ಪ್ರಾಸ್ತಾವಿಕ ಉಲ್ಲೇಖದ ಹೊರತು ಅದನ್ನು ತೆಗೆದುಕೊಂಡು ಈ ಸಭೆಯಲ್ಲಿ ಎಳೆದಾಡತಕ್ಕದ್ದಲ್ಲ ಎಂಬ ರೂಲಿಂಗ್ ನೀಡಿದ್ದರು. ಹಾಗಾಗಿ, ಕೇವಲ ಮಸೂದೆಯ ಗುಣಾವಗುಣಗಳನ್ನು ಕುರಿತು ಮಾತ್ರ ಮಾತನಾಡಬೇಕೆಂದು ನಾನು ಮಾನ್ಯ ಸದಸ್ಯರನ್ನು ಕೋರುತ್ತೇನೆ.

**ಶ್ರೀ ದೇಶಬಂಧುಗುಪ್ತ:** ನಾನು ವಾಸ್ತವವಾಗಿ ಆ ವಿಚಾರವಾಗಿ ಯಾವ ಉಲ್ಲೇಖವನ್ನೂ ಮಾಡಿಲ್ಲ. ನಾನು ಏನನ್ನು ಸ್ಪಷ್ಟಪಡಿಸಲು ಉದ್ದೇಶಿಸುತ್ತಿದ್ದೆ ಎಂದರೆ ಈ ಪ್ರಸ್ತಾವಿತ ಒಂದು ಸ್ಥಾನದ ಮೀಸಲಾತಿ ಇಲ್ಲದಿದ್ದರೂ ದೆಹಲಿಯ ಮಂದಿ ಪುನಃ ಒಬ್ಬ ಹರಿಜನ ಅಭ್ಯರ್ಥಿಯನ್ನು ಆರಿಸಿ ಕಳುಹಿಸಿಕೊಡುತ್ತಿತ್ತು. ಆದರೆ ಈ ಮಸೂದೆ ಸಂಸತ್ತಿನ ಮುಂದೆ ಬರುವ ವೇಳೆಗೆ ಸರಿಯಾಗಿ ಒಂದು ದುರದೃಷ್ಟಕರವಾದ ಭಾಷಣವನ್ನು ನನ್ನ ಮಾನ್ಯ ಮಿತ್ರರು ಮಾಡಿದ್ದಾರೆ. ನಾನು ಆ ಬಗ್ಗೆ ಉಲ್ಲೇಖಿಸುವುದನ್ನು ಉದ್ದೇಶಪೂರ್ವಕವಾಗಿಯೆ ಕೈಬಿಟ್ಟಿದ್ದೇನೆ. ನಾನು ಅವರಿಗೆ ಹೇಳಬಯಸುವ ಒಂದೇ ಒಂದು ಮಾತೆಂದರೆ ಮುಂಬಯಿಯಿಂದ ಬಂದ ಅವರಿಗೆ ದೆಹಲಿಯಲ್ಲಿ ಇರುವ ಪರಿಸ್ಥಿತಿಗಳ ಬಗೆಗೆ ಕಲ್ಪನೆಯಿಲ್ಲ. ಅವರು ಮಾಡಿರುವುದೇನೆಂದರೆ ದೆಹಲಿಯ ಇಡೀ ಜನಸಮುದಾಯವನ್ನು ಹರಿಜನರೆಂದು ಭಾವಿಸಿಬಿಟ್ಟಿದ್ದಾರೆ. ದೆಹಲಿಯ ಸಂವಿಧಾನಾತ್ಮಕ ಮುನ್ನಡೆಗೆ ಅವರು ನೀಡಿರುವ ಕೊಡುಗೆ ಅದು. ಆ ಒಂದು ವಿಚಾರಕ್ಕಾಗಿ ನನ್ನ ಮಿತ್ರರು ಖಂಡಿತ ತಮ್ಮನ್ನೇ ತಾವು ಅಭಿನಂದಿಸಿಕೊಳ್ಳಬೇಕು. ಆ ಮಟ್ಟಿಗೆ ಅವರಿಗೆ ಅವರೇ ಸಾಟಿ. ಹರಿಜನರ ಸ್ಥಾನಮಾನಗಳನ್ನು ಮೇಲೆತ್ತುವ ಬದಲಾಗಿ ಅವರು ಹರಿಜನೇತರ ಮಂದಿಯ ಸ್ಥಾನಮಾನಗಳನ್ನು ಕೆಳಗಿಳಿಸಿ ಎರಡೂ ವರ್ಗಗಳನ್ನು ಒಂದೇ ರಾಜಕೀಯ ಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಅವರು ಅರ್ಥಮಾಡಿಕೊಳ್ಳಬೇಕಾದ ಸಂಗತಿ ಎಂದರೆ ೧೯೨೧ ರಲ್ಲಿ ಹಾಗೂ ಅದಕ್ಕೆ ಮುಂಚೆ ದೆಹಲಿಯಲ್ಲಿ, ವಿದೇಶಿ ಸರಕಾರ – ಇಂದು ನನ್ನ ಮಾನ್ಯ ಮಿತ್ರರಿಗೆ ಅದರ ಬಗ್ಗೆ ತುಂಬ ವ್ಯಾಮೋಹವಿದೆಯಲ್ಲ ಆ ಸರಕಾರ ಹರಿಜನರನ್ನು ನಾಡಿನ ಹಿತಾಸಕ್ತಿಯ ವಿರುದ್ಧವಾಗಿ ಬಳಕೆಮಾಡಿಕೊಂಡು, ಅವರನ್ನು ಶೋಷಣೆಮಾಡಿತು. ೧೯೨೧ ರ ಸೆಪ್ಟೆಂಬರ್‌ನಲ್ಲಿ ಅಖಿಲ ಭಾರತ ದಲಿತ ಸಮುದಾಯಗಳ ಒಂದು ಮಹಾ ಸಮಾವೇಶ ನಡೆಯಿತು. ಅದಕ್ಕೆ ಕಾರಣ ಏನೆಂದರೆ, ಇಡೀ ದೇಶವೇ ವಿರೋಧ ವ್ಯಕ್ತಪಡಿಸುತ್ತಿದ್ದರೂ ಆ ಕಾಲಕ್ಕೆ ಪ್ರಿನ್ಸ್ ಆಫ್ ವೇಲ್ಸ್ ಅವರಿಗೆ ಭರ್ಜರಿ ಸ್ವಾಗತ ನೀಡುವ ಸಲುವಾಗಿ ಬೆಂಬಲವನ್ನು ಕ್ರೋಡೀಕರಿಸಲು ಈ ಸಮಾವೇಶ ಏರ್ಪಾಡಾಗಿತ್ತು. ದಲಿತವರ್ಗಗಳಿಗೆ ಸೇರಿದ ಮುಂದಾಳುಗಳ ಈ ಪ್ರವೃತ್ತಿಯನ್ನು ಕಂಡರೂ ದಿವಂಗತ ಸ್ವಾಮಿ ಶ್ರದ್ಧಾನಂದರು ಹರಿಜನರ ಉದ್ಧಾರಕ್ಕಾಗಿ ಚಳವಳಿಯನ್ನು ಪ್ರಾರಂಭಿಸಿದರು. ಏಕೆಂದರೆ ಹರಿಜನರ ಕುಂದುಕೊರತೆಗಳನ್ನು ತೊಡೆದುಹಾಕುವುದು ಒಂದು ಕರ್ತವ್ಯವೇ ಹೊರತು ಅವರ ಮೇಲೆ ತೋರಿಸುತ್ತಿರುವ ಕರುಣೆ ಅಲ್ಲ ಎಂಬುದನ್ನು ಅವರು ಮನಗಂಡಿದ್ದರು. ಹಳೆಯ ಬ್ರಿಟಿಷ್ ಸರ್ಕಾರದ ಬೆಂಬಲಿಗರು ದೆಹಲಿಯಲ್ಲಿ ಸ್ವಾಮಿ ಶ್ರದ್ಧಾನಂದ ಅವರ ಮೇಲೆ ಹಲ್ಲೆ ನಡೆಸಿದರು. ಆ ರೀತಿ ಹಲ್ಲೆ ನಡೆಸಿದ ಗುಂಪಿನಲ್ಲಿ ಬಹಳಷ್ಟು ಮಂದಿ ನನ್ನ ಮಾನ್ಯ ಮಿತ್ರರ ಹಿಂಬಾಲಕರಾಗಿದ್ದರು. ದೇವಸ್ಥಾನಗಳನ್ನು ಮತ್ತು ಬಾವಿಗಳನ್ನು ಹರಿಜನರ ಸಾಲಿಗೆ ಮುಕ್ತವಾಗಿಡಬೇಕೆಂದು ಆಗ್ರಹಿಸಿ ಆಗ ಶ್ರದ್ಧಾನಂದರು ಮೆರವಣಿಗೆ ನಡೆಸುತ್ತಿದ್ದರು. ಈಗ ಅದೆಲ್ಲ ಇತಿಹಾಸದ ಭಾಗ, ಅದನ್ನು ಮರೆಯಬಾರದು. ಹಾಗಾಗಿ ನಾನು ಕನಿಷ್ಠ ದೆಹಲಿಯನ್ನಾದರೂ ಈ ಮಸೂದೆಯಿಂದ ಹೊರಗಿಡುವುದು

ಅದಕ್ಕೆ ಒಂದು ವಿಶೇಷ ಅವಕಾಶ ಕಲ್ಪಿಸಿದಂತೆ ಎಂದು ಭಾವಿಸುತ್ತೇನೆ. ಹೀಗೆ ಮಾಡಿದರೆ, ಯಾವುದೇ ಮೀಸಲಾತಿ ಸೌಲಭ್ಯವಿಲ್ಲದೆ ಹರಿಜನ ಅಭ್ಯರ್ಥಿಯೊಬ್ಬರನ್ನು ಚುನಾಯಿಸಿ ಕಳುಹಿಸುವ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದಾಗುತ್ತದೆ. ಹೀಗೆ ಆಗುವುದಾದರೆ ಹತ್ತು ವರ್ಷಗಳ ಅನಂತರ ಮೀಸಲಾತಿ ಸೌಲಭ್ಯಗಳಿಲ್ಲದೆಯೆ ಹರಿಜನ ಅಭ್ಯರ್ಥಿಗಳು ಚುನಾಯಿಸಿ ಬರಲು ಸಾಧ್ಯ ಎಂಬುದಕ್ಕೆ ಪುರಾವೆ ಸಿಕ್ಕಿದಂತಾಗುತ್ತದೆ. ಈ ಮಾತುಗಳೊಂದಿಗೆ ನಾನು ಸದರಿ ಮಸೂದೆಯನ್ನು ಬೆಂಬಲಿಸುತ್ತೇನೆ. ನಾನು ನನ್ನ ಮಾನ್ಯ ಮಿತ್ರರಿಗೆ ಭರವಸೆ ನೀಡುವುದೇನೆಂದರೆ ಈ ಮಸೂದೆ ಇರಲಿ ಅಥವಾ ಇಲ್ಲದೆ ಹೋಗಲಿ, ದೆಹಲಿಯಲ್ಲಿ ಹರಿಜನರಂತೂ ಸಮಾನ ಸ್ಥಾನಮಾನಗಳನ್ನು ಹೊಂದಿದ್ದಾರೆ. ಅವರು ಪ್ರತಿಪಾದಿಸುತ್ತಿರುವ ಈ ಕುಂದುಕೊರತೆಗಳೆಲ್ಲ ಅವರು ವಾಸಿಸುವ ಪ್ರದೇಶದಲ್ಲಿ ಇರಬಹುದೇನೊ. ಈ ಪ್ರದೇಶಗಳಿಗೆ ಸಂಬಂಧಪಟ್ಟಹಾಗೆ ಸ್ವಾಮಿ ಶ್ರದ್ಧಾನಂದ, ದಿವಂಗತ ಲಾಲಾ ಲಾಜಪತರಾಯ್ ಹಾಗೂ ಇನ್ನಿತರ ಆರ್ಯಸಮಾಜದ ಮುಂದಾಳುಗಳಿಗೆ, ಸಮಾಜ ಸುಧಾರಕರಿಗೆ ಅವರು ಮಾಡಿರುವ ಸಮಾಜ ಕಾರ್ಯದಲ್ಲಿ ಯಾವುದೇ ರಾಜಕೀಯ ಉದ್ದೇಶಗಳು ಇರಲಿಲ್ಲ. ಅವರು ಆ ಉದ್ದೇಶಕ್ಕಾಗಿ ತಮ್ಮ ಬದುಕನ್ನು ಮುಡಿಪಾಗಿ ಇಟ್ಟಿದ್ದರು. ಈ ಮಸೂದೆಯನ್ನು ಅಂಗೀಕರಿಸುವ ವೇಳೆಯಲ್ಲಿ ಈ ವಾಸ್ತವಾಂಶವನ್ನು ಗುರುತಿಸುವುದು ಅಗತ್ಯ.

**ಶ್ರೀ ದ್ವಿವೇದಿ:** ಈ ಮಸೂದೆಯ ತತ್ತ್ವಗಳಿಗೆ ಸಂಬಂಧಪಟ್ಟಂತೆ, ನನ್ನ ಪಾಲಿಗೆ ಒಂದಕ್ಕಿಂತ ಹೆಚ್ಚಾಗಿ ಹಲವಾರು ಕಾರಣಗಳುಂಟು. ಈಗಾಗಲೆ ಈ ವಿಷಯವನ್ನು ಕುರಿತು, ಅಂದರೆ ಭಾಗ 'ಸಿ' ಗೆ ಸೇರಿದ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಈ ಸದನದಲ್ಲಿ ಪ್ರಾತಿನಿಧ್ಯವನ್ನು ದೊರಕಿಸಿಕೊಡಬೇಕೆಂಬುದನ್ನು ನಾನು ಬೆಂಬಲಿಸುತ್ತೇನೆ. ನಾನು ಈ ವಿಷಯುವಾಗಿ ಹೇಳಬಯಸುವುದೇನೆಂದರೆ ಭಾಗ 'ಸಿ' ರಾಜ್ಯಗಳ ಆಡಳಿತ ಮತ್ತು ಅಭಿವೃದ್ಧಿ ಇವುಗಳನ್ನು ಕುರಿತಂತೆ ಇರುವ ಸಂಗತಿಗಳನ್ನು ಈ ಮಸೂದೆಯನ್ನು ಈ ಸದನದಲ್ಲಿ ಪ್ರಸ್ತುತಪಡಿಸುವುದಕ್ಕಿಂತ ಮುಂಚೆಯೆ ಸದನದ ಗಮನಕ್ಕೆ ತರಬೇಕಾಗಿತ್ತು. ಆದರೆ ಆ ಮಸೂದೆಯ ಮಹತ್ವವನ್ನು ಅರಿತುಕೊಳ್ಳದೆ, ಸರಕಾರ ತರಾತುರಿಯಲ್ಲಿ ಈ ಮಸೂದೆಯನ್ನು ಮುಂದಿಟ್ಟಿದೆ. ಇದು ಏನನ್ನು ತೋರಿಸುತ್ತದೆ ಎಂದರೆ ಜನಪ್ರಾತಿನಿಧ್ಯದ ವಿಚಾರವಾಗಿ ಸರ್ಕಾರಕ್ಕೆ ಹೆಚ್ಚಿನ ಕಾಳಜಿ ಇಲ್ಲ. ಪ್ರಜಾಸತ್ತಾತ್ಮಕ ಸ್ವರೂಪದ ಸರ್ಕಾರವನ್ನು ಸ್ಥಾಪಿಸುವುದಕ್ಕೆ ಅಗತ್ಯವಾದ ಸುಧಾರಣೆಗಳನ್ನು ತರುವುದಕ್ಕಿಂತ ಮಿಗಿಲಾಗಿ ಅದರ ಆಸಕ್ತಿ ಈ ಮಸೂದೆಯ ಕಡೆಗೆ ಇದೆ ಎಂದು ಸ್ಪಷ್ಟವಾಗುತ್ತದೆ. ಇಷ್ಟಾದರೂ ನಾನು ಈ ಕ್ರಮವನ್ನು ಬೆಂಬಲಿಸುತ್ತಿದ್ದೇನೆ. ಹೆಚ್ಚಿನ ವ್ಯತ್ಯಾಸ ಕಂಡುಬರುತ್ತಿಲ್ಲ. ಈ ಸದನಕ್ಕೆ ನಾನು ಇನ್ನೂ ಕೆಲವು ಸಂಗತಿಗಳನ್ನು ಕುರಿತು ವಿವರಿಸಬಯಸುತ್ತೇನೆ. ಮೊಟ್ಟಮೊದಲನೆಯದಾಗಿ, ನಾನು ನನಗಿಂತ ಮುಂಚೆ ಮಾತನಾಡಿದ ಶ್ರೀ ದೇಶಬಂಧುಗುಪ್ತಾ ಅವರು ಹೇಳಿದರು– ದೆಹಲಿಗೆ ಸಂಬಂಧಪಟ್ಟ ಹಾಗೆ ಈ ಮಸೂದೆ ಇಲ್ಲದಿದ್ದರೂ ಹರಿಜನ ಅಭ್ಯರ್ಥಿಯೊಬ್ಬರು ಆರಿಸಬರುತ್ತಿದ್ದರೆಂದು. ಹರಿಜನರನ್ನು ಎಷ್ಟು ಉದಾರವಾಗಿ ನಾವು ನೋಡುತ್ತಿದ್ದೇವೆಂದು ಹೇಳಲು ಆಗಷ್ಟೆ ಸಾಧ್ಯವಾದೀತು. ವಿಂಧ್ಯಪ್ರದೇಶದಲ್ಲಿ ಕಾಂಗ್ರೆಸ್ ಹಾಗೂ ಸಾರ್ವಜನಿಕ ವಲಯಗಳಲ್ಲಿ ಕೆಲಸ ಮಾಡುವವರು ಹರಿಜನರನ್ನು ಮತ್ತು ಮೇಲ್ವರ್ಗದ ಹಿಂದೂಗಳನ್ನು ಒಂದೇ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಾರೆ. ಅಲ್ಲದೆ ಶ್ರೀ ದೇಶಬಂಧು ಗುಪ್ತ ಅವರು ಹೇಳಿರುವಂತೆ ದೆಹಲಿಯಲ್ಲಿ ಹರಿಜನರಿಗೆ ಈಗಾಗಲೆ ಪ್ರಾತಿನಿಧ್ಯದ ಅವಕಾಶವೂ ದೊರೆತಿದೆ. ಹಾಗೆ ನೋಡಿದರೆ, ವಿಂಧ್ಯಪ್ರದೇಶದಲ್ಲಿ ಶಾಲೆಗಳಲ್ಲಿ ಹಾಗೂ ನಿತ್ಯಜೀವನದಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕಲಾಗಿದೆ. ಅಲ್ಲಿ ಹರಿಜನರನ್ನು ಎಲ್ಲರೂ ಒಂದೇ ರೀತಿಯಲ್ಲಿ, ಪ್ರೀತಿಯಿಂದ

ನೋಡುತ್ತಿದ್ದಾರೆ. ಅವರಿಗೆ ಸಲ್ಲಬೇಕಾದ ಪ್ರಾತಿನಿಧ್ಯ ದೊರೆತಿದೆ. ಇಂಥ ಪರಿಸ್ಥಿತಿಯಲ್ಲಿ ಅವರಿಗಾಗಿಯೆ ಇನ್ನೊಂದು ಪ್ರತ್ಯೇಕವಾದ ಶಾಸನ ರಚನೆಗೆ ಯಾವ ಕಾರಣವೂ ಇಲ್ಲ. ಆದರೆ ಈ ಮಸೂದೆ ನಮ್ಮ ಮುಂದೆ ಬಂದಿದೆ ಎಂಬ ಕಾರಣದಿಂದಾಗಿ ನಾನು ಅದನ್ನು ಸ್ವಾಗತಿಸುತ್ತಿದ್ದೇನೆ. ಅದರಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಆಗುವುದಿಲ್ಲವಾದರೂ ನಾನು ಈ ಸಂಬಂಧವಾಗಿ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ, ಈ ಲೋಕಸಭೆಯಲ್ಲಿ ವಿಂಧ್ಯಪ್ರದೇಶಕ್ಕೆಂದು ನಿಗದಿಯಾಗಿರುವ ಆರು ಸ್ಥಾನಗಳ ಪೈಕಿ ಮೂರನೆಯ ಒಂದು ಭಾಗದಷ್ಟು ಸ್ಥಾನಗಳು ಅಸ್ಪೃಶ್ಯರಿಗೆಂದು ಅಂದರೆ ಪರಿಶಿಷ್ಟಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಮಂದಿಗೆಂದು ಮೀಸಲಾಗಿದೆ. ಆದರೆ ದುರದೃಷ್ಟವಶಾತ್, ವಿಂಧ್ಯಪ್ರದೇಶದಲ್ಲಿ ಜನ ಎಷ್ಟು ಹಿಂದುಳಿದ್ದಾರೆ ಎಂದರೆ, ಅನಕ್ಷರಸ್ಥರಾಗಿದ್ದಾರೆ ಎಂದರೆ ಸಂಸತ್ತಿನಲ್ಲಿ ತಮ್ಮ ಜನರನ್ನು ಪ್ರತಿನಿಧಿಸಿ, ತಮ್ಮ ಕರ್ತವ್ಯಗಳನ್ನು ತಿಳಿವಳಿಕೆಯಿಂದ ನಿರ್ವಹಿಸುವ ಸಾಮರ್ಥ್ಯವುಳ್ಳ ಜನರು ಆ ಸಮುದಾಯಗಳಲ್ಲಿ ಅಲ್ಲಿ ಸಿಗುವುದು ತುಂಬಾ ಕಷ್ಟ. ಇದು ಅಲ್ಲಿ ಕೇವಲ ಹರಿಜನರಿಗೆ ಮಾತ್ರ ಸೀಮಿತವಾದ ಸಮಸ್ಯೆಯಲ್ಲ, ಸವರ್ಣೀಯ ಹಿಂದೂಗಳು ಕೂಡ ಅನಕ್ಷರತೆಯಿಂದ ನರಳುತ್ತಿದ್ದಾರೆ. ವಯಸ್ಕ ಮತದಾನದ ಕ್ರಮವನ್ನು ಜಾರಿಗೆ ತರುವುದಕ್ಕಿಂತಲೂ ಮೊದಲು ಸಾಮಾಜಿಕ ಸಾಕ್ಷರತಾ ಚಳವಳಿಯನ್ನು ಹಮ್ಮಿಕೊಳ್ಳುವುದು, ಜಾರಿಮಾಡುವುದು ಅಗತ್ಯವೆಂದು ಶ್ರೀ ಠಕ್ಕರ್ ಬಾಪಾ ಒಮ್ಮೆ ಹೇಳಿದ್ದರು. ಶಿಕ್ಷಣಕ್ಕೆ ಸಂಬಂಧಪಟ್ಟಂತೆ ನಾವು ಯಾವ ಪ್ರಶ್ನೆಯನ್ನೂ ಎತ್ತುತ್ತಿಲ್ಲ. ದೆಹಲಿಯಲ್ಲಾದರೊ ಹೊಸ ಶಾಲೆಗಳನ್ನು ತೆರೆದು ಅವರ ವಿದ್ಯಾಭ್ಯಾಸಕ್ಕಾಗಿ ವ್ಯವಸ್ಥೆ ಮಾಡಿದ್ದಾರೆ, ಅವೇ ಸೌಲಭ್ಯಗಳನ್ನು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸಿದ್ದಾರೆ. ಆದರೆ ವಿಂಧ್ಯ ಪ್ರದೇಶದಲ್ಲಂತೂ ಈ ಕುರಿತು ಯಾವುದೇ ಕ್ರಮ ಕೈಗೊಂಡಿಲ್ಲ. ನನಗಿಂತ ಮುಂಚೆ ಮಾತನಾಡಿದ ಮಹನೀಯರ ಪೈಕಿ, ಶ್ರೀ ಸೋನಾವಣೆ, ಸದರಿ ಮಸೂದೆಯನ್ನು ಬಲವಾಗಿ ಸಮರ್ಥಿಸಿದರು. ಅವರ ನಿಲುವನ್ನು ನಾನು ಒಪ್ಪುತ್ತೇನೆ. ಆದರೆ ಅವರ ಮಾತಿನಲ್ಲಿ ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಜನರ ವಿದ್ಯಾಭ್ಯಾಸಕ್ಕಾಗಿ ಯಾವುದೇ ವ್ಯವಸ್ಥೆ ಮಾಡಲಾಗಿಲ್ಲ ಎಂಬ ಕಳಕಳಿ ಸ್ವಲ್ಪವಾದರೂ ಇತ್ತೆ ಎಂಬುದು ನನ್ನ ಪ್ರಶ್ನೆ. ಆಧುನಿಕ ಬದುಕಿನ ಪ್ರಮುಖ ಅಗತ್ಯಗಳು ಹಾಗೂ ಸೌಕರ್ಯಗಳನ್ನು ಕೂಡ ಪಡೆದುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ಖೇರುವಾ ಎಂಬಂತಹ ಸ್ಥಳಗಳಲ್ಲಿ, ಬಡಕಾರ್ಮಿಕರಿಗೆ ಕೂಲಿಗಾರರಿಗೆ ದಿನಕ್ಕೆ ನಾಲ್ಕು ಆಣೆ ಕೂಲಿ ಕೊಡುತ್ತಿದ್ದಾರೆ. ಅದೇ ಅವರನ್ನು ದುಡಿಸಿಕೊಳ್ಳುವ ಗುತ್ತಿಗೆದಾರರು ಎರಡುಪಟ್ಟು ಹಣ ಪಡೆಯುತ್ತಿದ್ದಾರೆ. ಹರಿಜನರ ಒಳಿತಿಗಾಗಿ ಒಕ್ಕೊರಲಿನ ಬೆಂಬಲ ಸೂಚಿಸುವ ಇಲ್ಲಿಯ ಮಾನ್ಯ ಸದಸ್ಯರು ವೈಯಕ್ತಿಕವಾಗಿ ಅಂಥ ಸ್ಥಳಗಳಿಗೆ ಭೇಟಿ ನೀಡಬೇಕು, ಅಲ್ಲಿಯ ಪರಿಸ್ಥಿತಿಯನ್ನು ನೋಡಬೇಕು. ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿ ಅಲ್ಲಿಯ ಪರಿಶಿಷ್ಟ ವರ್ಗದ ಜನರಿಗೆ ವಿದ್ಯಾಭ್ಯಾಸಕ್ಕೆ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಸಕಾರಾತ್ಮಕ ಪ್ರಯತ್ನ ಕೈಗೊಳ್ಳಬೇಕು. ಆದರೆ ನಮ್ಮ ಈ ಮಾನ್ಯ ಸದಸ್ಯ ಬಂಧಗಳು ತಮ್ಮದೇ ಆದ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಲ್ಲಿ ನಿರತರಾಗಿದ್ದಾರೆ–ಆ ಮಂದಿ ಈ ಸದನಕ್ಕೆ ಚುನಾಯಿತ ಪ್ರತಿನಿಧಿಗಾಗಿ ಬಂದರೆ ಸಾಕು ಎಂಬ ನಿರೀಕ್ಷೆಯಲ್ಲಿದ್ದಾರೆ. ಹರಿಜನರ ಹಿತಾಸಕ್ತಿಯ ಬಗ್ಗೆ ಇವರಿಗೆ ನಿಜವಾದ ಕಾಳಜಿ ಇಲ್ಲ. ಕೇವಲ ನಿಷ್ಪ್ರಯೋಜಕವಾದ ಮಾತುಗಳಿಂದ ಏನೂ ಉಪಯೋಗವಾಗುವುದಿಲ್ಲ. ದೇಶಕ್ಕೆ ಯಾವ ಒಳಿತೂ ಆಗುವುದಿಲ್ಲ. ನಾವು ನಮ್ಮ ಸ್ವಂತ ಸಹೋದರರು ಎಂದು ಭಾವಿಸುವ ಪರಿಶಿಷ್ಟ ಜಾತಿಯ ಬಂಧುಗಳಿಗೆ ಶಿಕ್ಷಣ ಒದಗಿಸುವ ವಿಚಾರದಲ್ಲಿ ಕಾಳಜಿ ವಹಿಸಬೇಕು. ಅಂಥ ಶಿಕ್ಷಣ ಪಡೆಯುವುದರಿಂದ ನಾಳೆ ಅವರು ಸಂಸತ್ತಿಗೆ ಚುನಾಯಿತರಾಗಿ ಬಂದರೆ ತಮ್ಮ ಕರ್ತವ್ಯಗಳನ್ನು ಸುಗಮವಾಗಿ ನಿರ್ವಹಿಸುವಲ್ಲಿ ಸಮರ್ಥರಾಗಬೇಕು.

ಇಲ್ಲದಿದ್ದರೆ ಅವರನ್ನು ಚುನಾಯಿಸಿ ಯಾವ ಉಪಯೋಗವೂ ಆಗಲಾರದು.

**ಅಧ್ಯಕ್ಷರು:** ಮಾನ್ಯ ಸದಸ್ಯರು ಇನ್ನೂ ಹೆಚ್ಚುಕಾಲ ಮಾತನಾಡುವ ಉದ್ದೇಶವಿದೆಯೆ?

**ಶ್ರೀ ದ್ವಿವೇದಿ:** ಹೌದು ಸರ್.

ಅನಂತರ ಭೋಜನ ವಿರಾಮದ ಸಲುವಾಗಿ ಸಭೆ
ಮಧ್ಯಾಹ್ನ ಎರಡೂವರೆಯವರೆಗೆ ಮುಂದೂಡಲಾಯಿತು.

ಭೋಜನ ವಿರಾಮದ ಅನಂತರ ಮತ್ತೆ ಮಧ್ಯಾಹ್ನ ಎರಡೂವರೆಗೆ ಸಭೆ ಸೇರಿತು.

**[ಅಧ್ಯಕ್ಷ ಸ್ಥಾನದಲ್ಲಿ ಪಂಡಿತ್ ಠಾಕುರ್‌ದಾಸ್ ಭಾರ್ಗವ ಆಸೀನರಾಗಿದ್ದಾರೆ]**

**ಶ್ರೀ ದ್ವಿವೇದಿ:** ಸರ್, ನಾನು ಈ ಸದನದ ಮುಂದೆ ಈವರೆಗೆ ಇಟ್ಟಿರುವ ನನ್ನ ಅನಿಸಿಕೆಗಳನ್ನು ತಾವು ಗಮನಿಸಿದ್ದೀರೆಂದು ತಿಳಿಯುತ್ತೇನೆ. ನಾನು ವಿಶೇಷವಾಗಿ ಹೇಳಬಯಸುವುದೇನೆಂದರೆ ಸವರ್ಣ, ಅವರ್ಣ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹೀಗೆ ಇಡೀ ಸಮಾಜವನ್ನು ಅದು ಇರುವ ಸ್ವರೂಪಕ್ಕೆ ಅನುಗುಣವಾಗಿ ಸರ್ಕಾರ ವಿವಿಧ ಭಾಗಗಳಾಗಿ ವಿಭಜನೆಮಾಡಿದೆ.

**ಶ್ರೀ ಅಮೊಲಾಖ್ ಚಂದ್ (ಉತ್ತರ ಪ್ರದೇಶ):** ಮಾನ್ಯ ಮಂತ್ರಿಗಳು ಇಲ್ಲಿ ಕಾಣಿಸುತ್ತಿಲ್ಲ.

**ಅಧ್ಯಕ್ಷರು:** ಅವರು ಇನ್ನೇನು ಬಂದುಬಿಡುತ್ತಾರೆ.

**ಇನ್ನೊಬ್ಬ ಮಾನ್ಯ ಸದಸ್ಯರು:** ಅವರ ಪರವಾಗಿ ಬೇರೆ ಯಾರಾದರೂ ಕಾರ್ಯ ನಿರ್ವಹಿಸಲಿ.

**ಅಧ್ಯಕ್ಷರು:** ಅವರು ಇನ್ನು ಒಂದೆರಡು ನಿಮಿಷಗಳಲ್ಲಿ ಬಂದುಬಿಡುತ್ತಾರೆ. ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಂದುವರಿಸಲಿ.

**ಶ್ರೀ ದ್ವಿವೇದಿ:** ನಾನು ಏನು ಹೇಳಲು ಹೊರಟಿದ್ದೆ ಎಂದರೆ ಜನರನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತ್ಯಾದಿಯಾಗಿ ಬೇರೆಬೇರೆ ಭಾಗಗಳಲ್ಲಿ ವಿಭಜನೆ ಮಾಡಿರುವಂತೆಯೆ ರಾಜ್ಯಗಳನ್ನು ಕೂಡ ವಿಂಗಡಿಸಿದ್ದಾರೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಏನೆಂದರೆ ಅವರು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳನ್ನು ಕುರಿತು ಮಸೂದೆಯನ್ನು ಪ್ರಸ್ತುತಪಡಿಸಿರುವ ರೀತಿಯಲ್ಲಿಯೇ ಪ್ರಸಕ್ತ ಮಸೂದೆಯಲ್ಲಿರುವ ವಿವಿಧ ಭಾಗಗಳನ್ನು ಕುರಿತಂತೆಯೂ ಶಾಸನ ಕ್ರಮವನ್ನು ತರುವ ವಿಚಾರದಲ್ಲಿ ಏಕೆ ಚಿಂತನೆ ನಡೆಸುತ್ತಿಲ್ಲ?

**ಶ್ರೀ ಶಿವನ್ ಪಿಳ್ಳೆ (ತಿರುವಾಂಕೂರು-ಕೊಚಿನ್):** ಇಲ್ಲೊಂದು ಕ್ರಿಯಾಲೋಪ ಕಂಡುಬರುತ್ತದೆ ಸರ್. ಮಂತ್ರಿವರ್ಗದ ಪೀಠಗಳು ಇನ್ನೂ ಖಾಲಿಯಾಗಿಯೆ ಉಳಿದಿವೆ.

**ಅಧ್ಯಕ್ಷರು:** ಮಾನ್ಯ ಮಂತ್ರಿಗಳು ಇನ್ನೇನು ಬಂದುಬಿಡುತ್ತಾರೆ.

**ಶ್ರೀ ದ್ವಿವೇದಿ:** ನಾನು ನನ್ನ ಮಾತನ್ನು ಮುಂದುವರಿಸಬಹುದಲ್ಲವೆ?

**ಅಧ್ಯಕ್ಷರು:** ದಯವಿಟ್ಟು ಮುಂದುವರಿಸಿ.

**ಶ್ರೀ ಗೋಯೆಂಕಾ (ಮದ್ರಾಸ್):** ಕೇಳಿಸಿಕೊಳ್ಳುವವರು ಯಾರು?

**ಶ್ರೀ ದ್ವಿವೇದಿ:** ನಾನು ಆಡುತ್ತಿರುವ ಮಾತುಗಳನ್ನು ಸಭೆಯ ನಡೆವಳಿಯಲ್ಲಿ ದಾಖಲು ಮಾಡಲಾಗುತ್ತದೆ ಎಂದು ಭಾವಿಸಿದ್ದೇನೆ. ಉದಾಹರಣೆಗೆ, ವಿಂಧ್ಯಪ್ರದೇಶದ ಕೆಲವು ಭಾಗಗಳನ್ನು ಇತರ ರಾಜ್ಯಗಳಿಗೆ ಹೆಚ್ಚುವರಿ

ಭಾಗಗಳ ರೂಪದಲ್ಲಿ ಸೇರಿಸಲಾಗಿದೆ. ರಾಮಪುರ, ತೆಹರಿ ಗಢವಾಲ ಹಾಗೂ ಇತರ ಕೆಲವು ರಾಜ್ಯಗಳಿಗೆ ಆಯಾ ರಾಜ್ಯಗಳ ವಿಧಾನಸಭೆಗಳಲ್ಲಿ ಮಾತ್ರವಲ್ಲದೆ ಸಂಸತ್ತಿನಲ್ಲೂ ಸಾಕಷ್ಟು ಸಂರಕ್ಷಣೆ ಒದಗಿಸಲಾಗಿದೆ. ಆದರೆ ವಿಂಧ್ಯ ಪ್ರದೇಶದಿಂದ ಹೊರಗಡೆಗೆ ಹೋದ ಈ ವಿಸ್ತೃತ ಭಾಗಗಳನ್ನು ಕುರಿತಂತೆ ಸದರಿ ಮಸೂದೆಯಲ್ಲಿ ಯಾವ ಗಮನವನ್ನು ನೀಡಲಾಗಿಲ್ಲ.

**ಶ್ರೀ ಗೋಯೆಂಕಾ:** ಆಡಳಿತಾರೂಢ ಪಕ್ಷದ ಮಂದಿಯ ಪೀಠಗಳು ಇನ್ನು ಖಾಲಿಯೆ ಇದೆ ಎಂಬ ದೂರುಗಳು ಬರುತ್ತಿವೆಯಲ್ಲ.

**ಡಾ. ಅಂಬೇಡ್ಕರ್:** ಆಡಳಿತಾರೂಢ ಪಕ್ಷದ ಪೀಠಗಳು ಎಂಬ ಮಾತು ಈ ಸದನಕ್ಕೆ ಅನಾವಶ್ಯಕವೆನಿಸುತ್ತದೆ.

**ಶ್ರೀ ದ್ವಿವೇದಿ:** ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಇತ್ಯಾದಿಗಳ ಸಲುವಾಗಿ ಹೊಸ ಶಾಸನ ಕ್ರಮವನ್ನು ಮುಂದಿಡಲಾಗುತ್ತಿರುವ ಹಿನ್ನೆಲೆಯಲ್ಲಿ ನಾನು ಹೇಳಬಯಸುವುದೇನೆಂದರೆ ಬೇರೆಡೆಗಳಿಗೆ ಸೇರ್ಪಡೆ ಮಾಡಿದ ಈ ವಿಸ್ತೃತ ಭಾಗಗಳನ್ನು ಒಬ್ಬೊಬ್ಬರ ಮನಸ್ಸಿಗೆ ಬಂದಂತೆ ಒಂದೊಂದು ರೀತಿಯಲ್ಲಿ ಪರಿಗಣಿಸಿ ಅವುಗಳಿಗೆ ಏನೋ ಉದಾರ ಕೊಡುಗೆ ನೀಡುತ್ತಿದ್ದೇವೆಂದು ವರ್ತಿಸುವ ರೀತಿ ಸರಿಯಾದುದಲ್ಲ. ರಾಜ್ಯ ವಿಧಾನಸಭೆಗಳಲ್ಲಿ ಈ ಸೇರ್ಪಡೆ ಭಾಗಗಳಿಗೆ ದೊರಕಬೇಕಾದ ಪ್ರಾತಿನಿಧ್ಯವನ್ನು ಒದಗಿಸಿಕೊಡಬೇಕಾದ್ದು ಅಗತ್ಯ.

ಈಗ ಸರ್, ನಾನು ತಮ್ಮ ಗಮನವನ್ನು ಒಂದು ಮುಖ್ಯವಾದ ಕಾನೂನು ವಿಚಾರದ ಕಡೆಗೆ ಸೆಳೆಯಬಯಸುತ್ತೇನೆ. ಸಂವಿಧಾನದ ಅನುಚ್ಛೇದ ೩೩೦ರ ಪ್ರಕರಣ ೨ರಲ್ಲಿ ಈ ರೀತಿ ಹೇಳಲಾಗಿದೆ.

> "(೨) ಯಾವುದೇ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಳಿಗೆ ಪ್ರಕರಣ (೧)ರನ್ವಯ ಮೀಸಲಾಗಿಟ್ಟಿರುವ ಸ್ಥಾನಗಳು, ಸಾಧ್ಯವಾದಷ್ಟೂ ಮಟ್ಟಿಗೆ ಲೋಕಸಭೆಯಲ್ಲಿ ಅವರಿಗಾಗಿ ನಿಗದಿಪಡಿಸಿರುವ ಒಟ್ಟು ಸ್ಥಾನಗಳಿಗೆ ಸರಿಯಾದ ಅನುಪಾತದಲ್ಲಿರತಕ್ಕದ್ದು. ಏಕೆಂದರೆ ಯಾವುದೇ ರಾಜ್ಯದಲ್ಲಿ ಇಲ್ಲವೆ ರಾಜ್ಯದ ಭಾಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಹಾಗೂ ಪರಿಶಿಷ್ಟ ಪಂಗಡಗಳಿಗೆ ಹಾಗೆ ನಿಗದಿಮಾಡಲಾಗಿರುವ ಸ್ಥಾನಗಳು ಆಯಾ ರಾಜ್ಯದ ಒಟ್ಟು ಜನಸಂಖ್ಯೆಗೆ ಅನುಪಾತದಲ್ಲಿರುತ್ತವೆ."

ನಾನು ಇಲ್ಲಿ ಹೇಳಬಯಸುವುದೇನೆಂದರೆ, ೧೯೫೦ರ ಅಧಿನಿಯಮ XLIII ರಲ್ಲಿ ಭಾಗ 'ಸಿ' ಗೆ ಸೇರಿರುವ ರಾಜ್ಯಗಳನ್ನೂ ಒಳಪಡಿಸಿದಂತೆ ಸ್ಥಾನಗಳ ಹಂಚಿಕೆಯ ಬಗೆಗೆ ಸ್ಪಷ್ಟವಾದ ಉಲ್ಲೇಖವಿರುವುದರಿಂದ ಹಾಗೂ ಅನುಚ್ಛೇದ ೩೩೦ರ ಪ್ರಕರಣ (೨) ಈ ಸ್ಥಾನಗಳ ಸಂಖ್ಯೆ ಜನಸಂಖ್ಯೆಗೆ ಅನುಗುಣವಾಗಿ ನಿಗಧಿಯಾಗತಕ್ಕದ್ದೆಂದು ಸ್ಪಷ್ಟವಾಗಿ ಹೇಳುವುದರಿಂದ ಈ ಶಾಸನ ಕ್ರಮವನ್ನು ಸದನದ ಮುಂದೆ ತರುವುದಕ್ಕೆ ಯಾವುದೇ ಕಾರಣ ಕಂಡು ಬರುವುದಿಲ್ಲ. ಸಂವಿಧಾನದ ೩೪೧ನೇ ಅನುಚ್ಛೇದ ನಿರ್ದಿಷ್ಟವಾಗಿ ಈ ರೀತಿ ಹೇಳುತ್ತದೆ.

> "(೧) ರಾಷ್ಟ್ರಪತಿಗಳು, ಯಾವುದೇ ಒಂದು ರಾಜ್ಯದ ರಾಜ್ಯಪಾಲರು ಅಥವಾ ರಾಜಪ್ರಮುಖರೊಡನೆ ಪರಾಮರ್ಶೆ ಮಾಡಿದ ನಂತರ, ಸಾರ್ವಜನಿಕ ಅಧಿಸೂಚನೆಯ ಮೂಲಕ, ಯಾವುದೇ ಜಾತಿಗಳು, ಜನಾಂಗಗಳು ಅಥವಾ ಪಂಗಡಗಳನ್ನು ಇಲ್ಲದೆ ಜಾತಿಗಳ, ಜನಾಂಗಗಳ ಅಥವಾ ಪಂಗಡಗಳಲ್ಲಿ ಇರುವ ಒಳಗುಂಪುಗಳನ್ನು ನಿರ್ದಿಷ್ಟಪಡಿಸಬಹುದಾಗಿದ್ದು, ಈ ಸಂವಿಧಾನದ

> ಉದ್ದೇಶಗಳಿಗಾಗಿ ಅವುಗಳನ್ನು ಆಯಾ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಪರಿಶಿಷ್ಟ ಜಾತಿಗಳು ಎಂದು ಪರಿಗಣಿಸತಕ್ಕದ್ದು."

ಇದೇ ರೀತಿಯಲ್ಲಿ ಅನುಚ್ಛೇದ ೩೪೨ರಲ್ಲಿ ಕೂಡ ಪರಿಶಿಷ್ಟ ಜಾತಿಯನ್ನು ಕುರಿತಂತೆ ಮಾಡಲಾಗಿರುವ ಅವಕಾಶವೊಂದು ಕಂಡುಬರುತ್ತದೆ. ಸಾರ್ವಜನಿಕ ಪ್ರಕಟಣೆಯೊಂದನ್ನು ನೀಡುವುದರ ಮೂಲಕ ರಾಷ್ಟ್ರಪತಿಗಳು ಪ್ರಕರಣ ೩೪೧ ಹಾಗೂ ೩೪೨ ರನ್ವಯ ಇಂಥದೊಂದು ಕೆಲಸವನ್ನು ಮಾಡುವ ಅಧಿಕಾರ ಪಡೆದಿರುವಾಗ ಈ ಬಗೆಯ ಶಾಸನದ ಕ್ರಮವನ್ನು ಮುಂದೆ ತರುವ ಅಗತ್ಯವಾದರೂ ಏನಿತ್ತು ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಒಂದು ವೇಳೆ ಅನುಚ್ಛೇದ ೩೩೦ ಪರಿಶಿಷ್ಟ ಜಾತಿಗಳಿಗಾಗಿ ಇಂಥ ಯಾವುದೇ ಶಾಸನ ಕ್ರಮವನ್ನು ಜಾರಿಗೆ ತರುವ ಅವಕಾಶ ಹೊಂದಿದೆ ಎನ್ನುವುದಾದರೆ, ಅಂಥ ಶಾಸನ ಕ್ರಮವನ್ನು ಈಗಾಗಲೆ ಜಾರಿಗೆ ತರಲಾಗಿದೆ ಎಂಬುದು ಗಮನಾರ್ಹವಲ್ಲವೆ. ಒಂದು ವೇಳೆ ಅಂಥ ಅವಕಾಶ ಅಲ್ಲಿ ಇಲ್ಲ ಎನ್ನುವುದಾದರೆ, ಇಂಥ ಒಂದು ಶಾಸನ ಕ್ರಮವನ್ನು ಜಾರಿಗೆ ತರುವ ಅಗತ್ಯದ ಬಗೆಗೆ ಸಂವಿಧಾನ ಯಾವುದೇ ಸೂಚನೆಯನ್ನು ನೀಡುವುದಿಲ್ಲ. ಹಾಗಾಗಿ ನನಗಿಂತ ಮುಂಚೆ ಮಾತನಾಡಿದ ಮಾನ್ಯ ಸದಸ್ಯ ಮಿತ್ರರು ಈಗಾಗಲೆ ಹೇಳಿರುವಂತೆ ಈ ಮಸೂದೆ ತುಂಬ ಅನಾವಶ್ಯಕವಾದುದು. ಆದ್ದರಿಂದ ನಾನು ಮಾನ್ಯ ಮಂತ್ರಿಗಳು ಕಾನೂನು ಸೂಕ್ಷ್ಮತೆಯ ಕಡೆಗೆ ಗಮನ ಹರಿಸಬೇಕೆಂದು, ನಂತರ ಇದು ಉಚ್ಚನ್ಯಾಯಾಲಯದಲ್ಲಿ ಕಾನೂನು ಚಕಮಕಿಗೆ ಅವಕಾಶ ನೀಡುವಂತಾಗಬಾರದೆಂದು ಹೇಳಬಯಸುತ್ತೇನೆ. ಮಾನ್ಯ ಮಂತ್ರಿಗಳು ಪ್ರಖ್ಯಾತವಾದ ಕಾನೂನುತಜ್ಞರು, ಹಾಗಾಗಿ ಈ ಸಂದರ್ಭವನ್ನು ಇನ್ನೂ ಚೆನ್ನಾಗಿ ಅಧ್ಯಯನ ಮಾಡುವ, ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿದ್ದಾರೆ. ಈ ಶಾಸನಕ್ರಮದಲ್ಲಿ ಕಾನೂನಿಗೆ ಸಂಬಂಧಪಟ್ಟ ಗೋಜಲುಗಳು ಇವೆಯೆಂದು ಅವರು ಗ್ರಹಿಸಬಲ್ಲವರಾಗಿದ್ದಾರೆ. ಅವರು ಈ ವಿಚಾರವಾಗಿ ಬೆಳಕು ಚೆಲ್ಲುವರೆಂದೂ, ಅಗತ್ಯವಾದಲ್ಲಿ, ಈ ಮಸೂದೆಗೆ ಸೂಕ್ತವಾದ ತಿದ್ದುಪಡಿ ತರುವರೆಂದೂ ಅಥವಾ ಪರಿಗಣನೆಯ ಅನಂತರ ಅದನ್ನು ಹಿಂದಕ್ಕೆ ಪಡೆಯುತ್ತಾರೆಂದೂ ನಿರೀಕ್ಷಿಸುತ್ತೇನೆ. ಏಕೆಂದರೆ ಈಗಾಗಲೆ ಈ ಬಗ್ಗೆ ಶ್ರೀ ದೇಶಬಂಧು ಗುಪ್ತ ಅವರು ಹೇಳಿರುವಂತೆ ಹಾಗೂ ವಿಂಧ್ಯ ಪ್ರದೇಶದ ಪ್ರತಿನಿಧಿ ಅವರನ್ನು ಬೆಂಬಲಿಸಿರುವಂತೆ ಇಂಥದೊಂದು ಶಾಸನ ಕ್ರಮವನ್ನು ಜಾರಿಗೆ ಕೊಟ್ಟರೆ ಮಾತ್ರ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟಪಂಗಡಗಳಿಗೆ ಪ್ರಾತಿನಿಧ್ಯ ದೊರೆಯುತ್ತದೆ ಎಂಬಂತಹ ಪರಿಸ್ಥಿತಿಯೇನೂ ಕಂಡುಬರುವುದಿಲ್ಲ. ಇಂಥ ಯಾವುದೇ ಕ್ರಮಬದ್ಧವಿದ್ದರೂ ಅವರಿಗೆ ಪ್ರಾತಿನಿಧ್ಯ ದೊರೆತೇ ದೊರೆಯುತ್ತದೆ. ಪ್ರಸಕ್ತ ಮಸೂದೆಯಲ್ಲಿರುವ ಕಾನೂನು ಸಂಬಂಧವಾದ ಸೂಕ್ಷ್ಮಗಳನ್ನು ಸದನದ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.

ನಾನು ಹೇಳಬಯಸುವ ಎರಡನೆಯ ವಿಚಾರವೆಂದರೆ ಮಾನ್ಯ ಮಂತ್ರಿಗಳು ಈ ಸಲುವಾಗಿ ಸಂವಿಧಾನದ ಅನುಚ್ಛೇದ ೮೨ ನ್ನು ಆಶ್ರಯಿಸಬಹುದು. ಅದು ಹೀಗೆ ಹೇಳುತ್ತದೆ:

> "೮೧ನೆಯ ಅನುಚ್ಛೇದದ ಖಂಡ(೧)ರಲ್ಲಿ ಏನೇ ಹೇಳಿದ್ದರೂ, ಮೊದಲನೆಯ ಅನುಸೂಚಿಯ ಭಾಗ 'ಸಿ'ಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಯಾವುದೇ ರಾಜ್ಯಕ್ಕೆ ಅಥವಾ ಭಾರತದ ಭೂಪ್ರದೇಶದಲ್ಲಿ ಸೇರಿರುವ, ಆದರೆ ಯಾವುದೇ ರಾಜ್ಯಕ್ಕೆ ಸೇರಿಕೊಂಡಿರದ ಯಾವುದೇ ಪ್ರದೇಶಗಳಿಗೆ, ಆ ಖಂಡದಲ್ಲಿ ಹೇಳಲಾಗಿರುವ ಆಧಾರದ ಮೇಲೆ ಅಥವಾ ಬೇರಾವುದೇ ರೀತಿಯಲ್ಲಿ ಸದನದಲ್ಲಿ, ಪ್ರಾತಿನಿಧ್ಯ ನೀಡುವುದಕ್ಕೆ ಸಂಸತ್ತು ಕಾನೂನಿನ ಮೂಲಕ ಅವಕಾಶವನ್ನು ಕಲ್ಪಿಸಬಹುದು."

ಮೇಲ್ಕಂಡ ಅನುಚ್ಛೇದದ ಅಡಿಯಲ್ಲಿ ಸಂಸತ್ತು ಇಂಥ ಯಾವುದೇ ಶಾಸನ ಕ್ರಮವನ್ನು ಜಾರಿಗೆ ಕೊಡುವ ಅಧಿಕಾರ ಹೊಂದಿದೆ. ಹಾಗೂ ಈಗಾಗಲೆ ಇಂಥ ಒಂದು ಕ್ರಮವನ್ನು ಜಾರಿಗೆ ತಂದಿದೆ. ರಾಷ್ಟ್ರಪತಿಯವರು ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸಿ ಹಂಚಿಕೆ ಮಾಡುತ್ತಾರೆಂದು ಅನುಚ್ಛೇದ ೩೩೦ರ ಪ್ರಕರಣ (೨) ಸ್ಪಷ್ಟವಾಗಿ ಹೇಳುತ್ತದೆ. ಇಂಥ ಸಂದರ್ಭದಲ್ಲಿ ಈ ಬಗೆಯ ಮಸೂದೆಯನ್ನು ತರುವ ಯಾವ ಅಗತ್ಯವೂ ಇರಲಿಲ್ಲ ಎಂದು ನನಗನಿಸುತ್ತದೆ. ಏನೇ ಇರಲಿ, ಈಗ ಈ ಸೂಕ್ಷವನ್ನು ಅಥವಾ ತೊಡಕನ್ನು ಮೊದಲು ನಿವಾರಿಸಬೇಕಾಗಿದೆ. ನಾನು ಅರ್ಥ ಮಾಡಿಕೊಂಡಿರುವ ಮಟ್ಟಿಗೆ ಮಾನ್ಯ ಮಂತ್ರಿಗಳು ಈವರೆಗೆ ಈ ವಿಚಾರವಾಗಿ ಏನನ್ನೂ ಹೇಳಿಲ್ಲ. ಹಾಗಾಗಿ ಸದನದ ಗಮನವನ್ನು ಈ ವಿಷಯದ ಕಡೆಗೆ ಎಳೆದಿರುತ್ತೇನೆ.

ಇದರ ಜೊತೆಗೆ, ಇನ್ನೊಂದು ವಾಸ್ತವ ಸಂಗತಿಯ ಕಡೆಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ. ಅದೇನೆಂದರೆ ಪ್ರಜಾಪ್ರಾತಿನಿಧ್ಯ ಮಸೂದೆಯನ್ನು ಹಿಂದೆ ಈ ಸದನದ ಮುಂದೆ ತಂದ ಕಾಲಕ್ಕೆ ವಿಂಧ್ಯಪ್ರದೇಶದ ಜನಸಂಖ್ಯೆ ಸುಮಾರು ೩೩ ಲಕ್ಷದಷ್ಟಿತ್ತು. ಎನ್‌ಕ್ಲೇವ್ಸ್ ಮರ್ಜರ್ ಅಧಿನಿಯಮ, ಅಂದರೆ ಹೆಚ್ಚುವರಿ ಪ್ರದೇಶಗಳನ್ನು ಸೇರ್ಪಡೆ ಮಾಡುವ ಅಧಿನಿಯಮದ ಕಾರಣದಿಂದಾಗಿ ಸುತ್ತಮುತ್ತಲ ಪ್ರದೇಶದ ಜನರೂ ಸೇರಿಕೊಂಡು ಇನ್ನೂ ಎರಡೂವರೆ ಮೂರುಲಕ್ಷಗಳವರೆಗೆ ಜನಸಂಖ್ಯೆ ಹೆಚ್ಚಿತು. ಆ ಕಾಲಕ್ಕೆ ವಿಂಧ್ಯಪ್ರದೇಶಕ್ಕೆ ಆರು ಸ್ಥಾನಗಳನ್ನು ನಿಗದಿಮಾಡುವುದರ ಬಗ್ಗೆ ಒಪ್ಪಿಗೆಯಾಗಿತ್ತು. ಈಗ ಜನಗಣತಿಪ್ರಕ್ರಿಯೆ ಪ್ರಾರಂಭವಾಗಿದೆ. ವಿಂಧ್ಯ ಪ್ರದೇಶದ ಜನಸಂಖ್ಯೆಯಲ್ಲಿ ಇನ್ನೂ ಐದು ಲಕ್ಷ ಹೆಚ್ಚಿಗೆಯಾಗಿದೆ ಎಂದು ಹೇಳಲಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ತನ್ನ ಪಾಲಿಗೆ ಇನ್ನೂ ಹೆಚ್ಚು ಸ್ಥಾನಗಳು ಬೇಕು ಎಂದು ಹಕ್ಕು ಪ್ರತಿಪಾದಿಸುವ ವಿಂಧ್ಯಪ್ರದೇಶದ ನಿಲುವು ಸಮಯೋಚಿತವಾಗಿಯೇ ಇದೆ. ಹಾಗಾಗಿ ಈ ಹಿನ್ನೆಲೆಯಲ್ಲಿ ನಾನು ಕೆಲವು ಸೂಚನೆಗಳನ್ನು ನೀಡಬಯಸುತ್ತೇನೆ. ಮೊದಲನೆಯದಾಗಿ, ಈ ಎರಡು ಸ್ಥಾನಗಳನ್ನು ಯಾವ ರೀತಿಯಲ್ಲಿ ಹಂಚಿಕೊಡುವುದೆಂಬ ಬಗ್ಗೆ ಪರ್ಯಾಲೋಚಿಸುವುದು ಅಗತ್ಯ. ವಿಂಧ್ಯಪ್ರದೇಶಕ್ಕಾಗಿ ಗೊತ್ತುಮಾಡಲಾಗಿರುವ ಗಡಿನಿರ್ಣಯಸಮಿತಿಯ ಜೊತೆಯಲ್ಲಿ ಸಮಾಲೋಚಿಸಿದನಂತರ ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ವಿಂಧ್ಯಪ್ರದೇಶದ ಜನಸಂಖ್ಯೆಯಲ್ಲಿ ಐದು ಲಕ್ಷದಷ್ಟು ಹೆಚ್ಚಳವಾಗಿರುವುದರಿಂದ, ಅಲ್ಲಿಗೆ ಹಂಚಿಕೆ ಮಾಡಿರುವ ಸ್ಥಾನಗಳ ಸಂಖ್ಯೆಯಲ್ಲಿ ಒಂದಾದರೂ ಹೆಚ್ಚಬೇಕು. ಇದಕ್ಕಾಗಿ ಜನಪ್ರಾತಿನಿಧ್ಯ ಮಸೂದೆಗೆ ತಿದ್ದುಪಡಿಯೊಂದನ್ನು ಮಾಡಬೇಕಾಗುತ್ತದೆ.

ಈ ಮಾತುಗಳೊಡನೆ ನಾನು ಮಸೂದೆಯನ್ನು ಬೆಂಬಲಿಸುತ್ತೇನೆ.

**ಡಾ. ಪರಮಾರ್ (ಹಿಮಾಚಲ ಪ್ರದೇಶ):** ನಾನು ಕೇವಲ ಈ ಮಸೂದೆಗೆ ಬೆಂಬಲ ನೀಡುತ್ತಿರುವುದು ಮಾತ್ರ ಅಲ್ಲ, ಭಾಗ 'ಸಿ' ರಾಜ್ಯಗಳಲ್ಲಿ ಪರಿಶಿಷ್ಟಜಾತಿಗಳಿಗೆ ಮತ್ತು ಪರಿಶಿಷ್ಟಪಂಗಡಗಳಿಗೆ ಪ್ರಾತಿನಿಧ್ಯ ಕಲ್ಪಿಸಲು ಹೊರಟಿರುವ ಸರ್ಕಾರಕ್ಕೆ ಅಭಿನಂದನೆ ಕೂಡ ಸಲ್ಲಿಸಬಯಸುತ್ತೇನೆ. ಕಾನೂನು ಮಂತ್ರಿಗಳು ಈ ಮಸೂದೆಯನ್ನು ತಂದಿರುವುದು ಅನಾವಶ್ಯಕವಾದುದೆಂದೂ ಇತರ ಕೆಲವು ಅಪ್ರಸ್ತುತ ಕಾರಣಗಳಿಂದಾಗಿ ಅವರು ಹೀಗೆ ಮಾಡುತ್ತಿದ್ದಾರೆಂದು ಸದನದಲ್ಲಿ ಮತ್ತೆ ಮತ್ತೆ ಚರ್ಚೆ ಮಾಡಲಾಗಿದೆ. ನಾನು ಆ ನಿಲುವನ್ನು ಖಂಡಿತವಾಗಿ ವಿರೋಧಿಸುತ್ತಾ ಈ ಮಸೂದೆಯನ್ನು ಪ್ರಸ್ತುತಪಡಿಸುವ ಮೂಲಕ ಕಾನೂನು ಮಂತ್ರಿಗಳು ಹಾಗೂ ಭಾರತಸರ್ಕಾರ ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡಿರುವ ನೀತಿಯ ಪಾಲನೆಯನ್ನು ಸರಿಯಾಗಿಯೆ ಮಾಡುತ್ತಿದೆಯೆಂದು ಹೇಳಬಯಸುತ್ತೇನೆ.

ದೆಹಲಿ ಹಾಗೂ ವಿಂಧ್ಯಪ್ರದೇಶಗಳಿಂದ ಬಂದಿರುವ ನನ್ನ ಮಿತ್ರರು ಈ ವಿಷಯವಾಗಿ ಏನೇ

ಭಾವಿಸಲಿ–ಈ ಶಾಸನ ಕ್ರಮವನ್ನು ಜಾರಿ ಮಾಡದೆ ಹೋದರೂ ಲೋಕಸಭೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸಿಗಲಿರುವ ಪ್ರಾತಿನಿಧ್ಯಕ್ಕೆ ಯಾವುದೇ ಧಕ್ಕೆ ಬರಲಾರದೆಂಬ ಅವರ ನಿಲುವು ಹೇಗೇ ಇರಲಿ–ನಾನು ಕೆಲವು ನಿರ್ದಿಷ್ಟ ಕಾರಣಗಳಿಗಾಗಿ ಈ ಕ್ರಮವನ್ನು ಸ್ವಾಗತಿಸುತ್ತೇನೆ. ಹಿಮಾಚಲಪ್ರದೇಶಕ್ಕೆ ಸಂಬಂಧಿಸಿದ ಹಾಗೆ ಸ್ವಲ್ಪ ತಿಳಿವಳಿಕೆ ಇಟ್ಟುಕೊಂಡು ನಾನು ಮಾತನಾಡಬಲ್ಲವನಾದ್ದರಿಂದ ನನಗೆ ಅನಿಸುವಂತೆ ಕೇಂದ್ರಸರ್ಕಾರ ಹಾಗೂ ಇತರ ರಾಜ್ಯಸರ್ಕಾರಗಳು ಈ ನಿಟ್ಟಿನಲ್ಲಿ ಏನೇ ಮಾಡಿರಲಿ, ನಮ್ಮ ಕಾರ್ಯವಿಭಾಗ ತುಂಬ ನಿಧಾನಗತಿಯದಾಗಿದೆ. ಸಂವಿಧಾನ ಜಾರಿಯಾದ ಹಿನ್ನೆಲೆಯಲ್ಲಿ ಪರಿಶಿಷ್ಟಜಾತಿ ಹಾಗೂ ಪಂಗಡಗಳ ವಿಚಾರದಲ್ಲಿ ನಾವು ನ್ಯಾಯಬದ್ಧರಾಗಿ ನಡೆದುಕೊಳ್ಳುತ್ತಿದ್ದೇವೆಂದು, ನಮ್ಮ ಕಾಳಜಿಗೆ ಸಾಕ್ಷಿ ಪುರಾವೆ ಕೊಡಬೇಕಾದ ಹಿನ್ನೆಲೆಯಲ್ಲಿ ಇಂಥ ಕ್ರಮ ತುಂಬ ಅಗತ್ಯವಾಗುತ್ತದೆ. ಬರುವ ಚುನಾವಣೆಗಳಲ್ಲಾದರೂ ಅವರೊಡನೆ ನಾವು ಸರಿಯಾಗಿ ನಡೆದುಕೊಳ್ಳುತ್ತಿದ್ದೇವೆಂಬ ಅರಿವು ಅವರಲ್ಲಿ ಮೂಡಬೇಕಾಗಿದೆ. ಹಿಮಾಚಲಪ್ರದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಈ ಸಂಗತಿಗೆ ಸಾಕಷ್ಟು ಪುಷ್ಟಿ ನೀಡುತ್ತವೆ.

ನಾನು ಸದನದ ಹೆಚ್ಚು ಸಮಯವನ್ನು ತೆಗೆದುಕೊಳ್ಳಬಯಸುವುದಿಲ್ಲ. ಆದರೆ ಈ ಕ್ರಮವನ್ನು ಜಾರಿಗೆ ಕೊಡುವುದು ಎಷ್ಟು ಅಗತ್ಯವಾಗಿದೆ ಎಂಬುದನ್ನು ಕುರಿತು ಒಂದೆರಡು ದೃಷ್ಟಾಂತಗಳನ್ನು ಸಭೆಯ ಮುಂದೆ ಇಡಬಯಸುತ್ತೇನೆ. ಸುಮಾರು ನಾಲ್ಕು ತಿಂಗಳ ಹಿಂದೆ–ಜನವರಿ ೪, ೧೯೫೧ ರಂದು–ಹಿಮಾಚಲಪ್ರದೇಶ ಸಲಹಾಸಮಿತಿಯ ಉತ್ತರ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವಂತೆ ಹಿಮಾಚಲ ಪ್ರದೇಶಕ್ಕೆ ಅಸ್ಪೃಶ್ಯತೆ ನಿವಾರಣಾ ಅಧಿನಿಯಮವನ್ನು ಜಾರಿಗೆ ತರುವಂತೆ ಶಿಫಾರಸ್ಸು ಮಾಡಿತು. ಏಕೆಂದರೆ ಹಿಮಾಚಲ ಪ್ರದೇಶದ ಹಲವಾರು ಕಡೆಗಳಲ್ಲಿ ಪರಿಶಿಷ್ಟ ಜಾತಿಗಳ ಜನ ಬಗೆಬಗೆಯ ತೊಂದರೆಗಳನ್ನು ಅನುಭವಿಸುತ್ತಿದ್ದರು. ಆದರೆ ನನಗೆ ಆಶ್ಚರ್ಯ ಉಂಟುಮಾಡಿದ ಸಂಗತಿಯೆಂದರೆ ರಾಜ್ಯ ಸರ್ಕಾರದಲ್ಲಿದ್ದ ಕೆಲವಾರು ಮಂದಿಗೆ ಅದೊಂದು ಅಗತ್ಯವಾದ ಕ್ರಮ ಎನ್ನಿಸಲೇ ಇಲ್ಲ. ಮದ್ರಾಸಿನಲ್ಲಿ ಇರುವಂತಹ ಯಾವ ಸಮಸ್ಯೆಯೂ ಬೇರೆಲ್ಲಿಯೂ ಇರುವುದಿಲ್ಲ. ಜನರ ಕಡೆಯಿಂದ ಕೂಡ ಈ ವಿಚಾರದಲ್ಲಿ ಯಾವ ಒತ್ತಾಯವೂ ಇಲ್ಲ. ಕೇಂದ್ರ ಸರ್ಕಾರದಲ್ಲೂ ಇದೇ ಬಗೆಯ ಭಾವನೆ ಬೇರೂರಿದ್ದರೆ ಮಾಡಬೇಕಾದ ಬಹಳಷ್ಟು ಕೆಲಸಗಳು ಹಾಗೆಯೆ ಉಳಿದುಬಿಡುತ್ತದೆಂಬ ಆತಂಕ ನನಗೆ ಇದೆ.

ನಾನು ಇತ್ತೀಚೆಗೆ ನನ್ನ ಚುನಾವಣಾ ಕ್ಷೇತ್ರಕ್ಕೆ ಭೇಟಿ ನೀಡಿದ್ದಾಗ, ಕೋಳಿಸ್ ಎಂಬ ಸಮುದಾಯಕ್ಕೆ ಸೇರಿದ್ದ ಪರಿಶಿಷ್ಟಜಾತಿಯ ಜನರು ಹಿಮಾಚಲ ಪ್ರದೇಶದ ಒಳನಾಡಿನ ಜಿಲ್ಲೆಯಾದ ಸಿರಮೂರ್‌ನಿಂದ ಬಂದು ನನ್ನನ್ನು ಭೇಟಿಯಾಗಿದ್ದರು. ಅವರು ಒಂದು ಘಟನೆಯನ್ನು ನನ್ನ ಮುಂದಿಟ್ಟರು. ಈ ಕೋಳಿಸ್ ಜನಾಂಗದ ಕೆಲವು ಮಂದಿ ಒಂದೆಡೆ ಸಭೆಸೇರಲು ಪ್ರಯತ್ನಿಸಿ ತಮಗೆ ಅನುಕೂಲವಾಗುವಂತಹ ಕೆಲವು ಕ್ರಮಗಳ ಕುರಿತು ಆಲೋಚನೆ ಮಾಡಬೇಕೆಂದುಕೊಂಡರಂತೆ. ಆದರೆ ಅದಕ್ಕೆ ಪ್ರತಿಯಾಗಿ ಅಲ್ಲಿನ ಜಮೀನುದಾರರು ಅವರ ಕೈಕಾಲುಗಳನ್ನು ಕಟ್ಟಿ, ಮೂರು ದಿನಗಳ ಕಾಲ ಕೂಡಿಹಾಕಿದ್ದರಂತೆ. ಹೊಸ ಸಂವಿಧಾನದಡಿಯಲ್ಲಿ ಪರಿಶಿಷ್ಟಜಾತಿಗಳ ಜನ ಇಂಥ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎನ್ನುವುದಾದರೆ ನಾವು ಈ ವಿಷಯವನ್ನು ತುಂಬ ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ. ನಮ್ಮ ವ್ಯವಸ್ಥೆ ಇನ್ನೂ ಈ ಬಗೆಯ ಹೊಸ ಆಲೋಚನೆಗಳನ್ನು ಸ್ವೀಕರಿಸಲು ಸಿದ್ಧವಾಗಿಲ್ಲ ಎಂಬ ವಾಸ್ತವಾಂಶವನ್ನು ನಾನು ಒಪ್ಪುತ್ತೇನೆ. ಅವರು ಇನ್ನೂ ಹಳೆಯ ಜಾಡಿನಲ್ಲಿಯೆ ಇದ್ದಾರೆ. ಪರಿಶಿಷ್ಟ ಜಾತಿಯ ಪೈಕಿ ಯಾರೊಬ್ಬರೂ ಇನ್ನೂ ಸರ್ಕಾರಿ ಸೇವೆಯಲ್ಲಿ ಪ್ರಾತಿನಿಧ್ಯ ಪಡೆದುಕೊಂಡಿಲ್ಲವಾದ್ದರಿಂದ, ಅಲ್ಲಿ ಇಂತಹ ಹೀನಕೃತ್ಯ ನಡೆಯಲು

ಅವಕಾಶವಾಗಿದೆ. ನನಗೆ ಈ ಘಟನೆಯ ಬಗ್ಗೆ ಈ ಜನ ಮಾತ್ರ ಹೇಳಿದ್ದಲ್ಲ, ಪೋಲೀಸರಿಗೆ ಈ ಘಟನೆಯ ಬಗ್ಗೆ ಮಾಹಿತಿ ನೀಡಿದ ಮಂದಿ ಹಾಗೂ ಸ್ಥಳೀಯ ಕಾಂಗ್ರೆಸ್‌ಸಮಿತಿಯವರು ಕೂಡ ತಿಳಿಸಿದರು. ಈ ಮಂದಿಗೆ ನ್ಯಾಯ ಒದಗಿಸುವ ಸಲುವಾಗಿ ಅವರು ಸದರಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಆದರೆ ಪೋಲೀಸರು ಈ ವಿಷಯದಲ್ಲಿ ಕೈಚೆಲ್ಲಿ ಕುಳಿತುಕೊಳ್ಳಬೇಕಾದ ಪರಿಸ್ಥಿತಿಯಿದೆ. ಏಕೆಂದರೆ ತಪ್ಪಿತಸ್ಥರ ವಿರುದ್ಧ ಅವರಿಗೆ ಯಾವ ಸಾಕ್ಷ್ಯಾಧಾರಗಳು ದೊರಕುವಂತಿಲ್ಲ. ಯಾರೂ ಸಾಕ್ಷಿ ಹೇಳುವ ಸಾಹಸ ಮಾಡಲಾರರು. ಆ ಬಡಪಾಯಿಗಳು ಗೇಣಿದಾರರು, ಜಮೀನ್ದಾರರುಗಳ ವಿರುದ್ಧ ಸೊಲ್ಲೆತ್ತಿದರೆ ಭೂಮಿ ಕಿತ್ತುಕೊಂಡು ಒಕ್ಕಲೆಬ್ಬಿಸುತ್ತೇವೆಂದು ಅವರನ್ನು ಚೆನ್ನಾಗಿ ಹೆದರಿಸಿದ್ದಾರೆ. ಆದ್ದರಿಂದಲೇ ಅವರಿಗೆ ಪ್ರಾತಿನಿಧ್ಯ ಇರಬೇಕೆಂದು ನಾನು ಇಲ್ಲಿ ಮನದಾಳದಿಂದ ಹೇಳುತ್ತಿದ್ದೇನೆ. ಕನಿಷ್ಠ ಅವರ ಪೈಕಿ ಯಾರಾದರೂ ಒಬ್ಬರಿಗೆ ಇಲ್ಲಿಗೆ ಬಂದು ತಮ್ಮ ಸ್ಥಿತಿಗತಿಗಳ ಬಗ್ಗೆ ಹೇಳಿಕೊಳ್ಳುವ ಅವಕಾಶವಿರುವುದಾದರೆ ಎಷ್ಟು ಚೆನ್ನಾಗಿರುತ್ತದೆ. ಹಾಗೆ ಮಾಡುವುದರಿಂದ ಬದಲಾವಣೆ ಒಗ್ಗದ ಜನರ ಮೇಲೆ ಕೂಡ ಪರಿಣಾಮ ಉಂಟಾಗುತ್ತದೆ. ಸುತ್ತಲೂ ಏನು ಸುಧಾರಣೆ ಕಂಡುಬರುತ್ತಿದೆ ಎಂಬುದನ್ನು ಗಮನಿಸದೆ ಇರುವವರಿಗೆ ವಾಸ್ತವದ ಅರಿವು ಮೂಡಿಸಿದಂತಾಗುತ್ತದೆ. ನನಗೆ ಎನಿಸುವಂತೆ, ಈ ಸಮಸ್ಯೆಗೆ ನಾವು ಪರಿಹಾರ ಕಂಡುಕೊಳ್ಳದೆ ಹೋದರೆ, ಒಂದು ಸ್ನೇಹಮಯವಾದ ಭಾವನೆಯಲ್ಲಿ ಇದನ್ನು ಪರಿಹರಿಸದೆ ಹೋದರೆ, ಈ ಭೇದಭಾವವನ್ನು ತೊಡೆದುಹಾಕದೆ ಹೋದರೆ, ನಮ್ಮ ಸಾಮಾಜಿಕ ಪರಿಸ್ಥಿತಿ ಛಿದ್ರಛಿದ್ರವಾಗಿಹೋಗುತ್ತದೆ. ಹಾಗಾಗಿ ಸ್ವಲ್ಪ ತಡವಾಗಿಯಾದರೂ ಈ ಕ್ರಮ ಜಾರಿಗೆ ಬರುತ್ತಿದೆಯಲ್ಲ ಎಂಬುದು ನನಗೆ ಸಂತೋಷ ಉಂಟುಮಾಡಿದೆಯೆಂದು ಒತ್ತಿ ಹೇಳಬಯಸುತ್ತೇನೆ.

**ಶ್ರೀ ಪಿ.ವೈ. ದೇಶಪಾಂಡೆ (ಮಧ್ಯಪ್ರದೇಶ):** ನಾನು ಮಾನ್ಯ ಕಾನೂನು ಮಂತ್ರಿಗಳ ಹಾಗೂ ಈ ಸದನದ ಗಮನವನ್ನು ಈವರೆಗೆ ನಮ್ಮ ಕಣ್ಣು ತಪ್ಪಿಸಿರುವ ಕೆಲವು ಕಾನೂನಿಗೆ ಸಂಬಂಧಿಸಿದ ಅಂಶಗಳ ಕಡೆ ಸೆಳೆಯಬಯಸುತ್ತೇನೆ. ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮಕ್ಕೆ ತಿದ್ದುಪಡಿ ತರಬಯಸುತ್ತಿರುವ ಪ್ರಸಕ್ತ ಮಸೂದೆಯ ಉದ್ದೇಶ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಪ್ರಾತಿನಿಧ್ಯ ಕಲ್ಪಿಸುವುದಾಗಿದೆ. ನನ್ನ ಅರಿಕೆ ಏನೆಂದರೆ ಈಗಾಗಲೆ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದಲ್ಲಿ ಇದಕ್ಕೆ ಅವಕಾಶ ಒದಗಿಸಲಾಗಿದೆ. ಅಧಿನಿಯಮದ ಪ್ರಕರಣ (೩)ಕ್ಕೆ ನಾವೀಗ ತಿದ್ದುಪಡಿ ತರಲು ಉದ್ದೇಶಿಸಿದ್ದು ಅದರಲ್ಲಿ ಈಗಾಗಲೆ ಲೋಕಸಭೆಯಲ್ಲಿ ಸ್ಥಾನಗಳ ಹಂಚಿಕೆ ಕುರಿತು ಅವಕಾಶ ಮಾಡಿಕೊಡಲಾಗಿದೆ. ಇಲ್ಲಿಯ ಉಪ–ಪ್ರಕರಣ (೨) ಹೇಳುವಂತೆ "ಮೊದಲನೆಯ ಅನುಸೂಚಿಯ ಮೊದಲನೆಯ ಕಲಮ್ಮಿನಲ್ಲಿ ತೋರಿಸಲಾಗಿರುವ ಪ್ರತಿಯೊಂದು ರಾಜ್ಯಕ್ಕೂ ಆ ರಾಜ್ಯಕ್ಕೆ ಎದುರಿನಲ್ಲಿ ಕಂಡುಬರುವ ಎರಡನೆಯ ಕಲಮಿನಲ್ಲಿ ತೋರಿಸಲಾಗಿರುವ ಸಂಖ್ಯೆಯ ಸ್ಥಾನಗಳು ನಿಗದಿಯಾಗತಕ್ಕದ್ದು." ಮೊದಲನೆಯ ಅನುಸೂಚಿಯಲ್ಲೇ ಭಾಗ 'ಸಿ' ರಾಜ್ಯಗಳಿಗೆ ಸಹ ಸ್ಥಾನಗಳ ಹಂಚಿಕೆಯಾಗಿದೆ. ಆದರೆ ಇಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೇಗೆ ಎಂಬ ಪ್ರಶ್ನೆ ಏಳುತ್ತದೆ. ಈಗ, ಇಲ್ಲಿ ಇದಕ್ಕೂ ಅವಕಾಶವನ್ನು ಕಲ್ಪಿಸಲಾಗಿದೆ. ಸದರಿ ಅಧಿನಿಯಮ ಜಾರಿಗೆ ಬಂದ ನಂತರ ಸಾಧ್ಯವಾದಷ್ಟು ಬೇಗ ರಾಷ್ಟ್ರಪತಿಗಳು, ಆದೇಶ ಹೊರಡಿಸುವುದರ ಮೂಲಕ (ಅ).....(ಆ)....(ಇ)....ಹಾಗೂ (ಈ) ಈ ರೀತಿಯಾಗಿ ಸ್ಥಾನಗಳನ್ನು ನಿಗದಿಮಾಡಿ, ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೂ ಇಂತಿಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿಡತಕ್ಕದ್ದು." ಈ ಪ್ರಕರಣ ಪರಿಶಿಷ್ಟಜಾತಿಗಳಿಗೆ ಮತ್ತು ಪರಿಶಿಷ್ಟಪಂಗಡಗಳಿಗೆ ಮೀಸಲು ಸ್ಥಾನವನ್ನು ನಿರ್ಧರಿಸುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡುತ್ತದೆ.

ಹಾಗಾಗಿ ಸದರಿ ಮಸೂದೆ ಪೂರ್ತಿ ಅನಾವಶ್ಯಕ ಎಂಬುದು ನನ್ನ ಅಭಿಪ್ರಾಯವಾಗಿದೆ. ಅನುಚ್ಛೇದ ೩೩೦ ರಲ್ಲಿ ಇದಕ್ಕಾಗಿ ಸಂವಿಧಾನಾತ್ಮಕ ಅಧ್ಯಾದೇಶದ ಅವಕಾಶವಿದೆ. ೧೯೩೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮ, ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗುತ್ತದೆ– ವಾಸ್ತವವಾಗಿ ಅದು ಆ ಸಂವಿಧಾನಾತ್ಮಕ ಅಧ್ಯಾದೇಶವನ್ನು ಕಾರ್ಯರೂಪಕ್ಕೆ ತರುತ್ತದೆ. ಆ ಮೂಲಕ ಭಾಗ 'ಸಿ' ಗೆ ಸೇರಿರುವ ರಾಜ್ಯಗಳಿಗೆ ಸ್ಥಾನಗಳ ಹಂಚಿಕೆಮಾಡಿ, ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರಾತಿನಿಧ್ಯವನ್ನು ಕೂಡ ಒದಗಿಸುತ್ತದೆ. ಈ ವಿಷಯವಾಗಿ ನನಗೆ ಒಂದು ಅಂಶ ಮಾತ್ರ ಸಂದೇಹಾಸ್ಪದವಾಗಿದೆ. ಯಾವ ನಿರ್ದಿಷ್ಟ ಜಾತಿಗಳು ಹಾಗೂ ನಿರ್ದಿಷ್ಟ ಪಂಗಡಗಳು ಈ ಚೌಕಟ್ಟಿನಲ್ಲಿ ದಾಖಲಾಗುತ್ತವೆ ಎಂಬುದು ಸ್ಪಷ್ಟವಾಗಬೇಕು. ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳ ವಿಚಾರದಲ್ಲಿ ಮಾಡಿರುವಂತೆ ಈ ಸಂದರ್ಭದಲ್ಲೂ ರಾಷ್ಟ್ರಪತಿಯವರು ಸಂವಿಧಾನದ ಅನುಚ್ಛೇದ ೩೩೦ ಹಾಗೂ ೩೯೨ರನ್ವಯ ಮಾತ್ರವಲ್ಲದೆ ಇದೀಗ ಸದರಿ ಮಸೂದೆಯಿಂದ ತಿದ್ದುಪಡಿಗೊಳಗಾಗುವ ಅನುಚ್ಛೇದ ೬ರನ್ವಯ ಕೂಡ ಪ್ರದೇಶ ಹೊರಡಿಸಬಹುದಾಗಿದೆ. ನಾನು ಮನಃಪೂರ್ವಕವಾಗಿ ಈ ಮಸೂದೆಯ ಉದ್ದೇಶವನ್ನು ಒಪ್ಪುತ್ತೇನೆ ಹಾಗೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಗಳಿಗೆ ಪ್ರಾತಿನಿಧ್ಯ ದೊರೆಯಬೇಕು ಎಂಬುದಕ್ಕೆ ಸಮ್ಮತಿಸುತ್ತೇನೆ. ಅವರಿಗೆ ಆ ರೀತಿ ಪ್ರಾತಿನಿಧ್ಯ ದೊರಕಿಸಿಕೊಡುವ ಬಗ್ಗೆ ಇರುವ ಎಲ್ಲ ಅನುಮಾನಗಳನ್ನು ನಿವಾರಿಸುವುದು ಅಗತ್ಯ. ಈ ಪಂಗಡಗಳನ್ನು ಮತ್ತು ಜಾತಿಗಳನ್ನು ಪರಿಶಿಷ್ಟ ಎಂಬುದಾಗಿ ನಿರ್ದಿಷ್ಟಪಡಿಸಿ ರಾಷ್ಟ್ರಪತಿಯವರು ಕೇವಲ ಒಂದು ಆದೇಶ ಹೊರಡಿಸಿದರೆ ಸಾಕು, ಇದರ ಬಗ್ಗೆ ಮತ್ತೆ ಯಾವ ಪ್ರಶ್ನೆಯೂ ಏಳಲಾರದು. ಭಾಗ 'ಎ' ಮತ್ತು ಭಾಗ 'ಬಿ' ಗೆ ಸಂಬಂಧಪಟ್ಟ ರಾಜ್ಯಗಳಿಗೆ ಕುರಿತಂತೆ ಇಂಥ ಒಂದು ಆದೇಶ ಸಂಸತ್ತಿನ ಮುಂದೆ ಬರಬಹುದಾಗಿದೆ. ಅದನ್ನು ಅನಂತರ ಸಂಸತ್ತೇ ಮರು ವಿಮರ್ಶೆಮಾಡಲು, ಬದಲಾವಣೆ ಮಾಡಲು ಅಥವಾ ಸುಧಾರಣೆ ಮಾಡಲು ಸಾಧ್ಯವಿರುತ್ತದೆ. ಹಾಗಾಗಿ ಆ ರಾಜ್ಯಗಳಿಗೆ ಸೇರಿದ ಜನತೆಗೂ ರಾಷ್ಟ್ರಪತಿಗಳ ಆದೇಶದಲ್ಲಿ ಜಾತಿಗಳನ್ನು ಮತ್ತು ಪಂಗಡಗಳನ್ನು ಸೇರಿಸುವ, ಕೈಬಿಡುವ ಇಲ್ಲದೆ ಅದಕ್ಕೆ ತಿದ್ದುಪಡಿ ಮಾಡುವ ಸಲುವಾಗಿ ಕಾಲಾವಕಾಶ ನೀಡಿದಂತಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಈ ಮಸೂದೆಯನ್ನು ತರುವುದರಲ್ಲಿ ಯಾವ ಸೂಕ್ತತೆಯೂ ನನಗೆ ಕಂಡುಬರುವುದಿಲ್ಲ. ಜಾತಿಗಳನ್ನೂ ಮತ್ತು ಪಂಗಡಗಳನ್ನು ನಿರ್ದಿಷ್ಟಗೊಳಿಸಿ ರಾಷ್ಟ್ರಪತಿಗಳು ಒಂದು ಆದೇಶ ಹೊರಡಿಸಿದರೆ ಈ ಕೆಲಸ ಆದಂತಾಗುತ್ತದೆ. ರಾಷ್ಟ್ರಪತಿಗಳ ಆದೇಶವನ್ನು ಸದನದ ಮುಂದಿಟ್ಟು ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳ ವಿಚಾರದಲ್ಲಿ ಮಾಡಿದಂತೆಯೆ ಇಲ್ಲೂ ಮಾಡಿದರೆ ಆಯಿತು. ಮಾನ್ಯ ಮಂತ್ರಿಗಳು ಈ ವಿಚಾರದತ್ತ ದೃಷ್ಟಿಹರಿಸಿ, ಒಂದು ವೇಳೆ ಮಸೂದೆ ತುಂಬ ಅಗತ್ಯವಾಗಿದ್ದರೆ ಅದು ಏಕೆಂದು ನಮಗೆ ಮನವರಿಕೆ ಮಾಡಿಕೊಡುತ್ತಾರೆಂದು ಆಶಿಸುತ್ತೇನೆ.

**ಕ್ಯಾಪ್ಟನ್ ಎ.ಪಿ. ಸಿಂಗ್ :** ಸರ್, ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರಾತಿನಿಧ್ಯ ಒದಗಿಸಲು ಅವಕಾಶ ಮಾಡಿಕೊಡುವ ಈ ಮಸೂದೆಗೆ ನನ್ನ ವಿರೋಧವೇನಿಲ್ಲ. ಇಲ್ಲಿ ಎತ್ತಲಾಗಿರುವ ಹಲವಾರು ಬಗೆಯ ಮಾತುಗಳನ್ನು ಕೇಳಿದ ಮೇಲೆ, ಡಾ. ಅಂಬೇಡ್ಕರ್ ಅವರ ಅಭಿಪ್ರಾಯಗಳಿಗೆ ನನ್ನ ಪೂರ್ಣ ಸಮ್ಮತಿಯಿದೆ ಎಂದಷ್ಟೆ ಹೇಳಬಯಸುತ್ತೇನೆ. ಅನುಚ್ಛೇದ ೩೪೧ ಹಾಗೂ ೩೪೨ ಮಾತ್ರವಲ್ಲದೆ ಅನುಚ್ಛೇದ ೩೩೦ ಹಾಗೂ ೩೩೨ ಕೂಡ ಕೇವಲ ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳಿಗೆ ಮಾತ್ರ ಅನ್ವಯಿಸುತ್ತವೆಂದು ಅವರು ಸ್ಪಷ್ಟವಾಗಿ ಹೇಳಿರುತ್ತಾರೆ. ಹಾಗೆಯೆ ಭಾಗ 'ಸಿ' ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಪ್ರಾತಿನಿಧ್ಯ ಒದಗಿಸುವ ಯಾವುದೇ ನಿರ್ದಿಷ್ಟ ವಿಧಿಗಳು ಇಲ್ಲವೆಂದು ಕೂಡ ಅವರು ಖಚಿತವಾಗಿ ಹೇಳಿದ್ದಾರೆ. ಉದ್ದೇಶ ಹಾಗೂ ಕಾರಣಗಳ ಹೇಳಿಕೆಯಲ್ಲಿ

(Statement of Objects and Reasons) ಅವರು ಈ ಸಂಗತಿಯನ್ನು ಒಪ್ಪಿಕೊಂಡಿದ್ದಾರೆ. ಈಗ ಈ ಜನರ ಸಲುವಾಗಿ ಪ್ರಾತಿನಿಧ್ಯ ನೀಡಬೇಕಾದ ತುರ್ತು ಅಗತ್ಯವಿರುವುದರಿಂದ ಸಂಸತ್ತಿನಲ್ಲಿ ಒಂದು ಶಾಸನಕ್ರಮವನ್ನು ಜಾರಿಮಾಡಿ ಇದನ್ನು ನಡೆಸಬೇಕೆಂಬ ಅಭಿಪ್ರಾಯ ಅವರದು. ಹಾಗೆಮಾಡಲು ಸಂಸತ್ತಿಗೆ ವಿಶೇಷ ಅಧಿಕಾರ ನೀಡುವ ಅಗತ್ಯವಿದೆಯೆಂದು ಅವರು ಹೇಳುತ್ತಿದ್ದಾರೆ. ಆ ಉದ್ದೇಶಕ್ಕಾಗಿ ಅವರು ಸದರಿ ಮಸೂದೆಯನ್ನು ಸದನದ ಮುಂದೆ ತಂದಿರುತ್ತಾರೆ.

ಈ ವಿಚಾರವಾಗಿ ನಾನು ಹೇಳುವುದಾದರೆ, ಸಂವಿಧಾನದ ರಚನೆಯಾದ ಕಾಲಕ್ಕೆ ಸಂವಿಧಾನ ಸಭೆಯಲ್ಲಿ ಅವರು ಸ್ವತಃ ಒಬ್ಬ ಸದಸ್ಯರಾಗಿದ್ದರು. ಭಾಗ 'ಸಿ' ರಾಜ್ಯಗಳಲ್ಲಿ ಇಂಥ ಸಂವಿಧಾನಾತ್ಮಕ ಅವಕಾಶವನ್ನು ಏಕೆ ಮಾಡಿಕೊಡಲಿಲ್ಲ ಎಂಬುದರ ಕಾರಣ ಕಂಡುಕೊಳ್ಳಬೇಕಾದರೆ ಮೊದಲು ನಾವು ಸಂವಿಧಾನದ ಆಶೋತ್ತರಗಳ ಕಡೆ ದೃಷ್ಟಿ ಹರಿಸಬೇಕು. ಭಾಗ 'ಸಿ' ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಏಕೆ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡಲಿಲ್ಲ ಎಂಬ ಕಡೆ ಗಮನಹರಿಸಿ ನೋಡಬೇಕು. ಅದಕ್ಕೆ ಖಂಡಿತವಾಗಿ ನಿರ್ದಿಷ್ಟ ಕಾರಣಗಳು ಇದ್ದಿರಬೇಕು. ಈ ವಿಚಾರವಾಗಿ ನನಗೆ ಅನಿಸುವುದೇನೆಂದರೆ, ಭಾಗ 'ಸಿ' ರಾಜ್ಯಗಳಲ್ಲಿ ಜನ ತುಂಬ ಹಿಂದುಳಿದವರು ಎಂಬ ಕಾರಣಕ್ಕಾಗಿ ಇಡೀ ಜನಸಮುದಾಯವನ್ನು ಹರಿಜನರು ಎಂದು ಪರಿಗಣಿಸಲು ಆಲೋಚನೆ ಮಾಡಿದ್ದಿರಬೇಕು. ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನ ಎಂದು ಕೆಲವು ವರ್ಗಗಳನ್ನು ಗುರುತಿಸುವುದಕ್ಕೆ ಕಾರಣ ಅವರು ಹಿಂದುಳಿದಿದ್ದಾರೆ ಎಂಬುದು. ಆ ರಾಜ್ಯಗಳ ಇಡೀ ಜನಸಮುದಾಯವೇ ಹಿಂದುಳಿದವರಾಗಿದ್ದುದರಿಂದ ಅವರಲ್ಲಿಯೆ ಮತ್ತು ವಿಶೇಷ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡುವ ಕೆಲಸಕ್ಕೆ ಕೈಹಾಕಲಿಲ್ಲ. ಇಂಥ ವಿಧಿಗಳೇ ಅಲ್ಲಿ ಇರಲಿಲ್ಲವೆಂದಮಾತ್ರಕ್ಕೆ ಅಲ್ಲಿರುವ ಪರಿಶಿಷ್ಟಜಾತಿಗಳಿಗೆ ಮತ್ತು ಪರಿಶಿಷ್ಟಪಂಗಡಗಳಿಗೆ ಯಾವುದೇ ಹಕ್ಕನ್ನು ನೀಡುವಂತಿಲ್ಲ. ಅವರಿಗೆ ಪ್ರತ್ಯೇಕವಾಗಿ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡುವ ಅಗತ್ಯವಿಲ್ಲ ಎಂಬುದು ಹೇಗೆ ಉಚಿತವಾದೀತು? ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಸಂವಿಧಾನದಲ್ಲಿ ಇಂಥ ಅವಕಾಶವನ್ನು ಸಾಧ್ಯವನ್ನಾಗಿಸುವ ಇನ್ನೊಂದು ಪ್ರಕರಣವಿದೆ. ನನ್ನ ಅಭಿಪ್ರಾಯದಲ್ಲಿ ಭಾಗ 'ಸಿ' ರಾಜ್ಯಗಳಿಗೆಂದೇ ಮಾಡಲಾಗಿರುವ ಆ ಅನುಚ್ಛೇದದ ಅಡಿಯಲ್ಲಿ ಅವರಿಗೆ ಹಕ್ಕುಗಳನ್ನು ನೀಡಿ ಪ್ರಾತಿನಿಧ್ಯ ಕಲ್ಪಿಸಬಹುದು. ಅನುಚ್ಛೇದ ೨೩೯ ಹಾಗೂ ಅನುಚ್ಛೇದ ೨೪೦ ಈಗ ನಾನು ಉಲ್ಲೇಖಿಸುತ್ತಿರುವ ಪರಿಹಾರಗಳಾಗಿವೆ. ಸರ್, ನಾನು ಈಗ ಈ ಜನರಿಗೆ ಹಕ್ಕು ಒದಗಿಸಬಹುದಾದ ಅನುಚ್ಛೇದ ೨೪೦ ರ ಕಡೆಗೆ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಅನುಚ್ಛೇದ ೨೩೯ ವಿಶೇಷ ಅಧಿಕಾರಗಳ ಬಗ್ಗೆ ಹೇಳುತ್ತದೆ. ಅನುಚ್ಛೇದ ೨೪೦ ರಲ್ಲಿ ಬರುವ ಒಕ್ಕಣೆ ಹೀಗಿದೆ:

> "(೧) ಮೊದಲನೆಯ ಅನುಸೂಚಿಯ ಭಾಗ 'ಸಿ' ಯಲ್ಲಿ ನಿರ್ದಿಷ್ಟಪಡಿಸಲಾಗಿದ್ದು ಒಬ್ಬ ಚೀಫ್ ಕಮೀಷನರ್ ಅಥವಾ ಲೆಫ್ಟಿನೆಂಟ್ ಗವರ್ನರ್ ಅವರ ಆಡಳಿತಕ್ಕೊಳಪಟ್ಟಿರುವ ಯಾವುದೇ ರಾಜ್ಯಕ್ಕಾಗಿ ಸಂಸತ್ತು ಕಾನೂನಿನ ಮೂಲಕ ಈ ಕೆಳಕಂಡವನ್ನು ರಚಿಸಬಹುದು ಇಲ್ಲವೆ ಮುಂದುವರಿಸಬಹುದು–
>
> (ಅ) ಆ ರಾಜ್ಯಕ್ಕಾಗಿ ವಿಧಾನಸಭೆಯ ರೀತಿಯಲ್ಲಿ ಕಾರ್ಯನಿರ್ವಹಿಸುವ ಯಾವುದೇ ನಾಮಕರಣಗೊಂಡಿರುವ, ಚುನಾಯಿತವಾಗಿರುವ ಅಥವಾ ಭಾಗಶಃ

ನಾಮಕರಣಗೊಂಡಿರುವ ಹಾಗೂ ಭಾಗಶಃ ಚುನಾಯಿತವಾಗಿರುವ ನಿಕಾಯ : ಅಥವಾ

(ಆ) ಕಾನೂನಿನಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ, ಪ್ರತಿಯೊಂದು ಪ್ರಕರಣದಲ್ಲೂ, ಸಂರಚನೆ, ಅಧಿಕಾರ ಮತ್ತು ಕಾರ್ಯ ವಿಧಾನಗಳನ್ನೊಳಗೊಂಡ ಸಲಹೆಗಾರರ ಅಥವಾ ಮಂತ್ರಿಗಳ ಪರಿಷತ್ತು.

(೨) ಸಂವಿಧಾನಕ್ಕೆ ತಿದ್ದುಪಡಿ ತರುವ ಅಥವಾ ಸಂವಿಧಾನಕ್ಕೆ ತಿದ್ದುಪಡಿಯ ಪರಿಣಾಮವನ್ನುಂಟು ಮಾಡುವ ಯಾವುದೇ ವಿಧಿ ಅನುಚ್ಛೇದ ೩೬೮ ರಲ್ಲಿದ್ದರು ಅದನ್ನು ಹೊರತಾಗಿಸಿ, ಅನುಚ್ಛೇದ ೩೬೮ ರ ಉದ್ದೇಶಗಳಿಗಾಗಿ ಮೇಲ್ಕಂಡ ಪ್ರಕರಣ (೧) ರಲ್ಲಿ ಉಲ್ಲೇಖಗೊಂಡಿರುವ ಇಂಥ ಯಾವುದೇ ಕಾನೂನನ್ನು ಈ ಸಂವಿಧಾನಕ್ಕೆ ಸೂಚಿಸಲಾಗುತ್ತಿರುವ ಒಂದು ತಿದ್ದುಪಡಿ ಎಂದು ಭಾವಿಸತಕ್ಕದ್ದಲ್ಲ."

ಅಂದರೆ, ಸಂವಿಧಾನದನ್ವಯ, ಅಗತ್ಯವಾದಲ್ಲಿ ನಾವು ಈ ಅನುಚ್ಛೇದದ ಅಡಿಯಲ್ಲಿ ಬದಲಾವಣೆ ಮಾಡಿಕೊಳ್ಳಬಹುದಾಗಿದೆ. ಆದರೆ ಅಂಥ ಸಂದರ್ಭದಲ್ಲಿ ಒಂದಂತೂ ಖಚಿತ, ಅದೇನೆಂದರೆ ನಾವು ಭಾಗ 'ಸಿ' ಗೆ ಸೇರಿರುವ ರಾಜ್ಯಗಳ ಜನರಿಗೆ ಹೆಚ್ಚಿನ ಅಧಿಕಾರವನ್ನು ನೀಡಬೇಕು. ಮಾನ್ಯ ಡಾ. ಅಂಬೇಡ್ಕರ್ ಅವರು ಭಾಗ 'ಬಿ' ರಾಜ್ಯಗಳಿಗೆ ಸಂಬಂಧಪಟ್ಟಂತೆ ಘೋಷಿಸಿರುವಂತೆ ಇಲ್ಲಿಯೂ ಸ್ಪಷ್ಟವಾದ ಕ್ರಮವೊಂದನ್ನು ಸೂಚಿಸಿದ್ದಿದ್ದರೆ ತುಂಬ ಚೆನ್ನಾಗಿರುತ್ತಿತ್ತು. ಕೆಳಕಂಡ ತಿದ್ದುಪಡಿಗಳೊಡನೆ ಭಾಗ VI ಎಂಬುದು ಅವುಗಳಿಗೆ ಅನ್ವಯಿಸುತ್ತದೆ ಎಂದು ಹೇಳಿರುವಂತೆಯೆ ಭಾಗ 'ಸಿ' ರಾಜ್ಯಗಳಿಗೂ ಅವು ಅನ್ವಯಿಸುತ್ತದೆ ಎಂದು ನಿಖರವಾಗಿ ಹೇಳಿಬಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ಡಾ. ಅಂಬೇಡ್ಕರ್ ಅವರ ಗಮನವನ್ನು ನಾನು ಇತ್ತಕಡೆ ಸೆಳೆಯಬಯಸುತ್ತೇನೆ. ಇದು ಹೀಗಿದೆ:

"ಕೆಳಕಂಡ ಮಾರ್ಪಾಡುಗಳು ಮತ್ತು ಕೈಬಿಟ್ಟ ಅಂಶಗಳಿಗೆ ಒಳಪಟ್ಟು ಭಾಗ VI ರಲ್ಲಿ ಸೂಚಿಸಲಾಗಿರುವ ಪ್ರಾವಧಾನಗಳು ಮೊದಲನೆಯ ಅನುಸೂಚಿಯ ಭಾಗ 'ಎ' ನಲ್ಲಿ ಗೊತ್ತುಪಡಿಸಿರುವ ರಾಜ್ಯಗಳಿಗೆ ಅನ್ವಯಿಸುವಂತೆಯೆ ಆ ಅನುಸೂಚಿಯ ಭಾಗ 'ಬಿ' ಯಲ್ಲಿ ಉಲ್ಲೇಖಿಸಿರುವ ರಾಜ್ಯಗಳಿಗೂ ಅನ್ವಯಿಸತಕ್ಕದ್ದು. ಅವೇನೆಂದರೆ....."

ಇದೇ ರೀತಿಯಲ್ಲಿ ಅವರು ಈ ಕೆಳಗೆ ಉಲ್ಲೇಖಿಸಿರುವಂತೆಯೂ ಮಾಡಬಹುದಾಗಿತ್ತು:

"ಕೆಳಕಂಡ ಮಾರ್ಪಾಡುಗಳು ಮತ್ತು ಕೈಬಿಟ್ಟ ಅಂಶಗಳಿಗೆ ಒಳಪಟ್ಟು ಭಾಗ VI ರಲ್ಲಿ ಸೂಚಿಸಲಾಗಿರುವ ಪ್ರಾವಧಾನಗಳು ಮೊದಲನೆಯ ಅನುಸೂಚಿಯ ಭಾಗ 'ಸಿ' ನಲ್ಲಿ ಗೊತ್ತುಪಡಿಸಿರುವ ರಾಜ್ಯಗಳಿಗೆ ಅನ್ವಯಿಸುವಂತೆಯೆ ಆ ಅನುಸೂಚಿಯ ಭಾಗ 'ಸಿ'ಯಲ್ಲಿ ಉಲ್ಲೇಖಿಸಿರುವ ರಾಜ್ಯಗಳಿಗೂ ಅನ್ವಯಿಸತಕ್ಕದ್ದು. ಅದೇನೆಂದರೆ......."

ಭಾಗ VI ರಲ್ಲಿ ಹೇಳಿರುವ ಎಲ್ಲ ಅವಕಾಶಗಳಿಗೂ ಆಸ್ಪದಮಾಡಿಕೊಡುವಂತಹ ಇಂಥ ಉದ್ದೇಶ ಆಶಯಗಳನ್ನು ಹೊಂದಿರುವ ಮಸೂದೆಯೊಂದನ್ನು ಮೊದಲೇ ರೂಪಿಸಿದ್ದರೆ, ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಈ ಸಮಸ್ಯೆ ತನಗೆ ನಾನೇ ನಿವಾರಣೆಯಾಗಿಬಿಡುತ್ತಿತ್ತು. ಆದರೆ ಅವರ ಬೇರೊಂದು ದಾರಿ ಹಿಡಿದಿದ್ದಾರೆ. ಹಿಂಬಾಗಿಲ ಮೂಲಕ ಒಳಬರುವ ಪ್ರಯತ್ನ ನಡೆಸಿದ್ದಾರೆ. ಇನ್ನೂ ಸರಳವಾದ ಮತ್ತು ನೇರವಾದ ಹಾದಿಯನ್ನು ಅವರು ಹಿಡಿಯುತ್ತಿಲ್ಲ. ಪ್ರತಿಯೊಬ್ಬ ಮಾನ್ಯ ಮಂತ್ರಿಗಳೂ

ಆಯ್ಕೆ ಮಾಡಿಕೊಳ್ಳಬೇಕಾದ ಹಾದಿ ಸರಳವಾಗಿ, ನೇರವಾಗಿ ಇರಬೇಕು. ಡಾ. ಅಂಬೇಡ್ಕರ್ ಕೂಡ ಹಾಗೆಯೆ ಮಾಡಬೇಕು. ಪ್ರಾಯಃ ಡಾ. ಅಂಬೇಡ್ಕರ್ ಅವರು ಆಯಾ ರಾಜ್ಯಗಳ ಸಚಿವ ಸಂಪುಟಕ್ಕೆ ಅಥವಾ ಮಂತ್ರಿಮಂಡಲಕ್ಕೆ ಬಿಟ್ಟ ವಿಷಯ ಇದು, ತಮಗೆ ಸೇರಿದ್ದಲ್ಲ ಎಂದು ಪ್ರತಿಪಾದಿಸಬಹುದು. ಅನೇಕ ಸಂದರ್ಭಗಳಲ್ಲಿ ಮಾನ್ಯ ಮಂತ್ರಿಗಳು ನಾನು ಅವರ ಜೊತೆ ಮಾತನಾಡುತ್ತಿದ್ದಾಗ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಸರ್ಕಾರವನ್ನು ಇಡಿಯಾಗಿ ಪರಿಗಣಿಸುತ್ತೇನೆ. ಅದು ಡಾ. ಅಂಬೇಡ್ಕರ್ ಇರಬಹುದು, ಶ್ರೀ ಅಯ್ಯಂಗಾರ್ ಇರಬಹುದು ಅಥವಾ ಗೃಹಮಂತ್ರಿಗಳಾಗಿರಬಹುದು. ಒಟ್ಟಾರೆಯಾಗಿ ನಾನು ಹೇಳಬಯಸುವುದೇನೆಂದರೆ ನಾನು ಮೇಲೆ ಹೇಳಿದ ಸ್ವರೂಪದ ಮಸೂದೆಯೊಂದು ಇದ್ದಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಆದರೆ ಹಾಗೆ ಮಾಡುವುದರಲ್ಲಿ ವಿಫಲರಾದ ಕಾರಣ ಅವರು ಇವತ್ತು ಕುದುರೆಯ ಮುಂಭಾಗಕ್ಕೆ ಗಾಡಿ ಕಟ್ಟುತ್ತಿದ್ದಾರೆ, ಅಂದರೆ ತಿರುಗುಮುರುಗು ಕೆಲಸ ಮಾಡುತ್ತಿದ್ದಾರೆ. ಅದರ ಪರಿಣಾಮವಾಗಿ ಸುತ್ತಮುತ್ತಲ ಮಂದಿ ಅವರನ್ನು ದೂಷಿಸುತ್ತಿದ್ದಾರೆ. ಅವರು ಈಗ ಪ್ರಸಕ್ತ ಮಸೂದೆಯನ್ನು ಮುಂದಕ್ಕೆ ಹಾಕಬೇಕು. 'ಎ' ರಾಜ್ಯಗಳು ಅನುಭವಿಸುತ್ತಿರುವ ಅಧಿಕಾರಗಳನ್ನು ಮತ್ತು ಸವಲತ್ತುಗಳನ್ನು ಭಾಗ 'ಸಿ' ರಾಜ್ಯಗಳಿಗೆ ಸೇರಿದ ಜನ ಸಹ ಅನುಭವಿಸಲು ಅವಕಾಶ ಮಾಡಿಕೊಡುವಂತಹ ಮಸೂದೆಯೊಂದನ್ನು ಮುಂದಿಡಬೇಕು. ಆಗ ಅವರ ಈ ಉದ್ದೇಶ ತನಗೆ ತಾನೇ ಈಡೇರಿದಂತಾಗುತ್ತದೆ. ಈಗ ಅವರು ಸಂವಿಧಾನಕ್ಕೆ ಅನುಗುಣವಾಗಿ ಕೆಲಸ ಮಾಡುತ್ತಿಲ್ಲ, ಏಕೆಂದರೆ ಪ್ರಸಕ್ತ ಮಸೂದೆಯ ಮೂಲಕ ಅವರು ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮಾತ್ರ ಹಕ್ಕುಗಳನ್ನು ನೀಡಬಯಸುತ್ತಿದ್ದಾರೆ. ಆದರೆ ನಾವೆಲ್ಲ ಹರಿಜನರೇ. ಹಾಗಾಗಿ ಈ ಕ್ರಮ ಕೈಗೊಳ್ಳುವುದಕ್ಕಿಂತ ಮುಂಚೆ, ಪರಿಶಿಷ್ಟ ಜಾತಿಗಳನ್ನು ಮತ್ತು ಪರಿಶಿಷ್ಟ ಪಂಗಡಗಳನ್ನು ಪ್ರತ್ಯೇಕವಾಗಿ ಗುರುತಿಸುವಂತಾಗಬೇಕು. ಅಂದರೆ ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳಲ್ಲಿರುವಂತೆ ಮೊದಲು ಅವರೆಲ್ಲರಿಗೂ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಅವರು ಮೊದಲು ಇದನ್ನು ಮಾಡಬೇಕು. ಆಮೇಲೆ ಇಂಥ ಕ್ರಮವನ್ನು ಜಾರಿಗೆ ತರಬೇಕು. ಇಲ್ಲದಿದ್ದರೆ ನನ್ನ ಅಭಿಪ್ರಾಯದಲ್ಲಿ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಅದರ ವಿವರಗಳಿಗೆ ಹೋಗುವದು, ಅದಕ್ಕೆ ಸಂಬಂಧಪಟ್ಟ ಕಾರಣಗಳನ್ನು ಕೊಡುತ್ತಾ ಹೋಗುವುದು ತುಂಬ ಸಮಯ ತೆಗೆದುಕೊಳ್ಳುತ್ತದೆ. ಹಿಮಾಚಲಪ್ರದೇಶ ಮತ್ತು ವಿಂಧ್ಯಪ್ರದೇಶಗಳಿಗೆ ಸಂಬಂಧಪಟ್ಟಂತೆ ಅಲ್ಲಿಯ ಜನರ ಸಲುವಾಗಿ ಸದ್ಯದಲ್ಲಿಯೇ ಒಂದು ಮಸೂದೆ ಹೊರಬರಲಿದೆಯೆಂದು ಶ್ರೀ ಅಯ್ಯಂಗಾರ್ ಅವರು ಕೂಡ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದರ ಸಿದ್ಧತೆ ನಡೆಯುತ್ತಿದೆ. ನಾನು ಸಹ ಅದರ ಸ್ಥಾಯಿ ಸಮಿತಿಯಲ್ಲಿ ಇದ್ದೇನೆ. ಸಮಿತಿ ಅದನ್ನು ಪರಿಗಣನೆಗೆ ತೆಗೆದುಕೊಂಡಿದೆ. ಸದ್ಯದಲ್ಲಿ ಅದು ಅತೃಪ್ತಿಕರವಾಗಿದ್ದರೂ, ಅದನ್ನು ಜನರಿಗೆ ಸಮಾಧಾನವಾಗುವಂತೆ ಉತ್ತಮಪಡಿಸಲಾಗುತ್ತದೆಂಬ ಭರವಸೆ ನಮಗಿದೆ. ಈಗ ದೆಹಲಿಗೂ ಒಂದು ಸ್ಥಾನ ನಿಗದಿಯಾಗಬೇಕು ಎಂಬ ಮಾತು ಬಂದಿದೆ. ದೆಹಲಿಯ ಬಗೆಗೆ ಹೇಳುವುದಾದರೆ, ಇಂಥ ಒಂದು ಹಕ್ಕನ್ನು ಅದಕ್ಕೆ ಕೊಡುವ ವಿಚಾರದಲ್ಲಿ ಯಾವ ಅಭ್ಯಂತರವೂ ಇರಲಾರದು. ಆದರೆ ದೆಹಲಿಯು ದೇಶದ ರಾಜಧಾನಿಯಾಗಿರುವುದರಿಂದ ಅದಕ್ಕೆ ಈ ವಿಶೇಷ ಸೌಲಭ್ಯ ಕೊಡಲಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಸರ್, ನಾನು ಹೇಳಬಯಸುವುದೇನೆಂದರೆ ಭಾರತದ ರಾಜಧಾನಿಯಾಗಿದ್ದ ಕಾಲದಲ್ಲಿ ಕಲ್ಕತ್ತೆಗೂ ಒಬ್ಬ ಲೆಫ್ಟಿನೆಂಟ್–ಗವರ್ನರ್ ಇದ್ದರು. ಆದರೂ ಕಲ್ಕತ್ತೆಯ ಜನ ಎಲ್ಲ ಹಕ್ಕುಗಳನ್ನೂ ಅನುಭವಿಸಿದರು. ಇಷ್ಟೇ ಅಲ್ಲ, ಶಿಮ್ಲಾದ ವಿಚಾರವನ್ನು ತೆಗೆದುಕೊಳ್ಳಿ. ವರ್ಷದಲ್ಲಿ

ಕೆಲವು ತಿಂಗಳುಗಳ ಕಾಲ ಅದು ಭಾರತದ ರಾಜಧಾನಿಯಾಗಿರುತ್ತಿತ್ತು. ಆದರೆ ಅದು ಪಂಜಾಬಿನಲ್ಲಿದ್ದ ಕಾರಣ ಲೆಫ್ಟಿನೆಂಟ್–ಗವರ್ನರ್ ಕೂಡ ಅಲ್ಲಿಯೇ ವಾಸಮಾಡುತ್ತಿದ್ದರು. ಒಂದೇ ಜಾಗದಿಂದ ಎರಡು ಸರ್ಕಾರಗಳು ಕೆಲಸಮಾಡಲು ಯಾವುದೇ ರೀತಿಯ ತೊಂದರೆಯೇ ಆಗುತ್ತಿರಲಿಲ್ಲ. ಸಂದರ್ಭ ಹೀಗಿರುವಾಗ, ನಾಡಿನ ರಾಜಧಾನಿಯಾಗಿರುವ ಕಾರಣ ದೆಹಲಿಗೆ ಈ ರೀತಿಯ ಹಕ್ಕನ್ನು ನೀಡಬಾರದೆಂದು ವಾದಸರಣಿಯನ್ನು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ, ದೆಹಲಿಯ ದೇಶದ ರಾಜಧಾನಿಯಾಗಿರುವುದರಿಂದ ಅಲ್ಲಿಯ ಜನರಿಗೆ ಇನ್ನೂ ಹೆಚ್ಚಿನ ಹಕ್ಕನ್ನು ನೀಡಬೇಕೆಂದು ಒತ್ತಾಯಪಡಿಸುವವರಲ್ಲಿ ನಾನೂ ಒಬ್ಬ. ಶ್ರೀ ರಾಮಚಂದ್ರ ಈ ರೀತಿ ಹೇಳಿದ್ದ: "ಸಬ್ ತೇ ಪ್ರಿಯ ಮೊಹಿ ಯಹಾಂ ಕೇ ಬಾನೀ, ಮಮ ಧಮಡಾ ಪೂರೀ ಸುಖರಾಸೀ" – ಅಂದರೆ ನನ್ನ ನಾಡಿನ ಜನರನ್ನು ಕಂಡರೆ ನನಗೆ ತುಂಬ ಪ್ರೀತಿ, ಏಕೆಂದರೆ ಅದು ಸುಖಸಮೃದ್ಧಿಗಳ ಬೀಡು. ಅವನು ಅಯೋಧ್ಯೆಯ ಜನರನ್ನು ಕುರಿತು ಈ ಮಾತು ಆಡಿದ್ದ. ದೆಹಲಿಯ ಜನರಿಗೇ ಹಕ್ಕುಗಳನ್ನು ಕೊಡಬೇಕೆಂದಾಗ ಇಷ್ಟು ಹಿಂದುಮುಂದು ಕೊಡಲೇಬೇಕಾಗುತ್ತದೆ. ನೋಡುತ್ತಿದ್ದರೆ ದೇಶದ ಉಳಿದ ಭಾಗದ ಕಥೆಯೇನು ಎಂದು ನಿಜಕ್ಕೂ ನನಗೆ ಆತಂಕವಾಗುತ್ತದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ದೇಶದ ರಾಜಧಾನಿಯಾಗಿರುವ ಕಾರಣ ದೆಹಲಿ ಜನರನ್ನು ತೃಪ್ತರಾಗಿರುವಂತೆ ನೋಡಿಕೊಳ್ಳುವುದು ತುಂಬ ಅಗತ್ಯ. ಅವರನ್ನು ಅತೃಪ್ತರನ್ನಾಗಿಡುವುದು ವಿವೇಕದ ಹಾದಿ ಅಲ್ಲ. ನಾನು ಆಡಳಿತ ನಡೆಸುತ್ತಿರುವ ಪ್ರದೇಶದ ಜನಮತಗಣನೆಯನ್ನು ನಾವು ಕೈಗೊಂಡಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

**ಅಧ್ಯಕ್ಷರು:** ನಾನು ಮಾನ್ಯ ಸದಸ್ಯರ ಗಮನವನ್ನು ಎಳೆಯಬಯಸುವ ಸಂಗತಿಯೆಂದರೆ, ನಾವು ಈಗ ದೆಹಲಿಯ ಸಮಸ್ಯೆಯನ್ನು ಕುರಿತು ಚರ್ಚೆ ನಡೆಸುತ್ತಿಲ್ಲ. ನಾವು ಚರ್ಚೆ ಮಾಡುತ್ತಿರುವುದು ಪ್ರಜಾಪ್ರಾತಿನಿಧ್ಯ (ತಿದ್ದುಪಡಿ) ಮಸೂದೆಯ ಬಗೆಗಲ್ಲವೆ?

**ಕ್ಯಾಪ್ಟನ್ ಎ.ಪಿ.ಸಿಂಗ್:** ಇದನ್ನು ದೆಹಲಿಯಲ್ಲಿ ಕೂಡ ಅನುಷ್ಠಾನಕ್ಕೆ ತರುತ್ತಿರುವುದರಿಂದ ನಮಗೆ ಇಲ್ಲಿ ದೊರೆಯಲಿರುವ ಈ ಹಕ್ಕುಗಳನ್ನು ದೆಹಲಿಗೆ ಕೂಡ ನೀಡುವುದು ಸೂಕ್ತವೆಂಬ ಆಲೋಚನೆ ಬಂದುದರಿಂದ ಹೀಗೆ ಹೇಳಿದೆ. ನನ್ನ ಉದ್ದೇಶ ಅಷ್ಟೇ ಆಗಿತ್ತು. ಇರಲಿ, ಆ ಪಕ್ಷದಲ್ಲಿ ನಾನು ಅದನ್ನು ಕುರಿತು ಚರ್ಚೆ ಮಾಡಲು ಹೋಗುವುದಿಲ್ಲ. ನನ್ನ ಅರಿಕೆ ಏನೆಂದರೆ ಮಣಿಪುರ ಮತ್ತು ತ್ರಿಪುರಗಳಂತಹ ಸಣ್ಣಸಣ್ಣ ರಾಜ್ಯಗಳಿಗೆ ಕೂಡ ಜವಾಬ್ದಾರಿಯುತ ಸರ್ಕಾರವನ್ನು ತರುವ ಸುಧಾರಣಾಕ್ರಮಗಳನ್ನು ನಾವು ಏಕೆ ನಿರಾಕರಿಸುತ್ತಿದ್ದೇವೆ? ಇಂಥ ಅತ್ಯಂತ ಚಿಕ್ಕ ರಾಜ್ಯಗಳ ಪೈಕಿ ಔಂಧ್ ಕೂಡ ಒಂದು ಆದರೆ ಜವಾಬ್ದಾರಿಯುತ ಸರ್ಕಾರವನ್ನು ಪಡೆಯುವ ಇಂಥ ರಾಜ್ಯಗಳಲ್ಲಿ ಅದು ಮೊದಲನೆಯದಾಗಿತ್ತು. ಸಂದರ್ಭ ಹೀಗಿರುವಾಗ ಮಣಿಪುರ ಮತ್ತು ತ್ರಿಪುರಗಳಂತಹ ಚಿಕ್ಕ ರಾಜ್ಯಗಳು ಜವಾಬ್ದಾರಿಯುತ ಸರ್ಕಾರಗಳನ್ನು ಹೊಂದುವುದರಿಂದ ಏಕೆ ವಂಚಿತವಾಗಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಅಲ್ಲಿ ಏಕೆ ಒಂದು ಜವಾಬ್ದಾರಿಯುತ ಆಡಳಿತ ವ್ಯವಸ್ಥೆಯನ್ನು ನಾವು ಸ್ಥಾಪಿಸಬಾರದು? ಜವಾಬ್ದಾರಿಯುತ ಸರ್ಕಾರದ ಆಡಳಿತವನ್ನು ಹೊಂದಿರದೆ ಇರುವ ಇನ್ನೂ ಹಲವಾರು ರಾಜ್ಯಗಳಿವೆ. ಆದರೆ ಅವುಗಳ ಬಗ್ಗೆ ಮಾತನಾಡಲು ನನಗೆ ಇಲ್ಲಿ ಕಾಲಾವಕಾಶ ಇಲ್ಲ.

ನಾನು ಇಲ್ಲಿ ಪ್ರಸ್ತಾಪಿಸಬಯಸುವ ಮುಂದಿನ ಸಂಗತಿ ವಿಂಧ್ಯಪ್ರದೇಶದಲ್ಲಿರುವ ಹರಿಜನರ ಜನಸಂಖ್ಯೆಗೆ ಸಂಬಂಧಪಟ್ಟಿದೆ. ಅದು ಎಷ್ಟಿದೆ? ಪರಿಶಿಷ್ಟ ಪಂಗಡಗಳ ಯಾವುದೇ ಅಂಕಿಸಂಖ್ಯೆಗಳನ್ನು ನೀಡಲಾಗಿಲ್ಲ. ಆದರೆ ಅವೆರಡೂ ಸೇರಿ ಸುಮಾರು ಒಂಬತ್ತುಲಕ್ಷ ಜನಸಂಖ್ಯೆ ಇರಬಹುದೆಂದು ಅಂದಾಜುಮಾಡಲಾಗಿದೆ.

ಒಟ್ಟು ಜನಸಂಖ್ಯೆಯ ಕಾಲುಭಾಗಕ್ಕಿಂತ ಸ್ವಲ್ಪ ಕಡಿಮೆ ಇದು. ಆದರೆ ಹಂಚಿಕೆಯಾಗಿರುವ ಒಟ್ಟು ಸ್ಥಾನಗಳ ಪೈಕಿ ಮೂರನೆಯ ಒಂದು ಭಾಗವನ್ನು ಅವರಿಗೆ ಕೊಡಲಾಗಿದೆ. ಅಂದರೆ ಆರು ಸ್ಥಾನಗಳ ಪೈಕಿ ಎರಡು ಸ್ಥಾನಗಳು ಅವರಿಗೆ ಹೋಗಿಬಿಡುತ್ತವೆ, ಅದೂ ಬಿಟ್ಟು ಜನಸಂಖ್ಯೆಯಲ್ಲಿರುವ ಕಾಲು ಭಾಗಕ್ಕೂ ಕಡಮೆಯಿರುವ ಮಂದಿಗೆ. ಇದು ಒಂದುವೇಳೆ ಮಾನ್ಯ ಡಾ. ಅಂಬೇಡ್ಕರ್ ಅವರಿಗೆ ಸೂಕ್ತ ಎನ್ನಿಸುವುದಾದರೆ, ನಾನು ಅವರಿಗೆ ವೈಯಕ್ತಿಕವಾಗಿ ಕೋರುವುದೇನೆಂದರೆ, ವಿಂಧ್ಯಪ್ರದೇಶಕ್ಕೆ ಇನ್ನೊಂದು ಹೆಚ್ಚುವರಿ ಸ್ಥಾನವನ್ನು ಹಂಚಿಕೆಮಾಡಿ. ಅದರಿಂದ ಜನಸಂಖ್ಯೆಯ ಅನುಪಾತಕ್ಕೆ ಅವರ ಪ್ರಾತಿನಿಧ್ಯವು ಬಹಳ ಮಟ್ಟಿಗೆ ಸರಿಹೋಗಬಹುದೇನೊ. ನಾನು ಇದನ್ನು ಕುರಿತಂತೆ ಯಾವುದೇ ತಿದ್ದುಪಡಿ ಸೂಚಿಸಿಲ್ಲವಾಗುತ್ತದೆ. ನಾನು ಮಾನ್ಯ ಡಾ. ಅಂಬೇಡ್ಕರ್ ಅವರಲ್ಲಿ ಮಾಡುವ ಇನ್ನೊಂದು ಮನವಿ ಎಂದರೆ ಅವರಿಗೆ ಸೂಕ್ತವಾಗಿ ಕಂಡುಬಂದರೆ ಅವರು ಪ್ರಸಕ್ತ ಮಸೂದೆಯನ್ನು ತಡೆಹಿಡಿದು ಅದರ ಬದಲಾಗಿ ಬೇರೊಂದು ಮಸೂದೆಯನ್ನು ಮುಂದೆ ತರಬೇಕು. ಅವರು ಹಾಗೆ ಮಾಡಲು ಒಪ್ಪುವುದಾದರೆ, ನಾನು ಈಗಾಗಲೆ ಸಮಗ್ರವಾಗಿ ಆಲೋಚಿಸಿ ಸಿದ್ಧಪಡಿಸಿ ತಂದಿರುವ ನನ್ನದೇ ಮಸೂದೆಯನ್ನು ಅವರಿಗೆ ಕೊಡಬಲ್ಲೆ. ಅದೊಂದು ಚಿಕ್ಕ ಮಸೂದೆಯಾಗಿದ್ದು ಅದರಲ್ಲಿ ಭಾಗ 'ಸಿ' ರಾಜ್ಯಗಳಿಗೆ ಹೆಚ್ಚು ಅಧಿಕಾರವನ್ನು ನೀಡುವ ಉದ್ದೇಶವಿದೆ ಹಾಗೂ ಆ ರಾಜ್ಯಗಳಲ್ಲಿ ಜವಾಬ್ದಾರಿ ಸರ್ಕಾರಗಳನ್ನು ಹುಟ್ಟುಹಾಕುವ ಪ್ರಸ್ತಾಪವಿದೆ. ಹಾಗೆ ಮಾಡುವುದಾದರೆ, ಈ ಸಮಸ್ಯೆಗೆ ತನ್ನಷ್ಟಕ್ಕೇ ಪರಿಹಾರ ದೊರೆತಂತಾಗುತ್ತದೆ. ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ.

**ಅಧ್ಯಕ್ಷರು:** ಈ ವಿಷಯವಾಗಿ ಸಾಕಷ್ಟು ಚರ್ಚೆ ನಡೆದಿದೆಯೆಂದು ಭಾವಿಸುತ್ತೇನೆ. ಆದ್ದರಿಂದ ಈಗ ಡಾ. ಅಂಬೇಡ್ಕರ್ ಈ ಬಗ್ಗೆ ಮಾತನಾಡಬೇಕೆಂದು ಅವರನ್ನು ಕರೆಯಲು ಉದ್ದೇಶಿಸುತ್ತೇನೆ.

**ಡಾ. ಅಂಬೇಡ್ಕರ್:** ನಿನ್ನೆಯ ದಿನ ಶ್ರೀ ಕಪೂರ್ ಅವರು ಸಂವಿಧಾನಾತ್ಮಕ ಪ್ರಶ್ನೆಯೊಂದನ್ನು ಎತ್ತಿ, ಸಂವಿಧಾನದ ಕೆಲವು ಅನುಚ್ಛೇದಗಳ ಹಿನ್ನೆಲೆಯಲ್ಲಿ ಸದರಿ ಮಸೂದೆ ಅನಾವಶ್ಯಕವಾಗಿತ್ತೆಂದೂ ನಾನು ಯಾವುದೋ ಬೇರೆ ಉದ್ದೇಶದಿಂದ ಈ ಮಸೂದೆಯನ್ನು ಮುಂದಿಟ್ಟಿರುವುದಾಗಿ ಹೇಳಿದರು. ಶ್ರೀ ಕಪೂರ್ ಅವರಿಗೆ ತಮ್ಮ ವಾದದಲ್ಲಿ ತಮಗೇ ನಂಬಿಕೆ ಇದ್ದಿತೆಂದು ನಂಬಲೂ ನನಗೆ ಸಾಧ್ಯವಾಗುತ್ತಿಲ್ಲ.

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ):** ನಿಮಗೆ ವಾಸ್ತವಾಂಶದಲ್ಲಿ ಎಂದೂ ನಂಬಿಕೆಯಿಲ್ಲ.

**ಡಾ. ಅಂಬೇಡ್ಕರ್:** ಪ್ರಾಯಃ ಅವರ ವಾದಸರಣಿಗೆ ಪುಷ್ಟಿ ಸಿಕ್ಕಿತೆನಿಸುತ್ತದೆ. ಹಾಗಾಗಿ ಅನೇಕ ಮಂದಿ ಸದಸ್ಯರು ಈ ಸದನದಲ್ಲಿ ಅದರ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪಿಸಿ ಚರ್ಚೆ ಮಾಡಿದ್ದಾರೆ.

**[ಮಾನ್ಯ ಸಭಾಧ್ಯಕ್ಷರು ತಮ್ಮ ಆಸನದಲ್ಲಿ]**

ಈ ಚರ್ಚೆಗಳ ನಡುವೆ ಪ್ರಸಕ್ತ ಮಸೂದೆ ಅನಾವಶ್ಯಕವಾಗಿತ್ತೆಂದು ಪ್ರತಿಪಾದಿಸಿದ ಹಲವಾರು ಮಂದಿ ಸದಸ್ಯರು ಮುಖ್ಯವಾಗಿ ಅನುಚ್ಛೇದ ೩೩೦ ನ್ನು ಆಧರಿಸಿ ಮಾತನಾಡುತ್ತಿದ್ದರು. ಆ ರೀತಿ ಮಾಡಿದ ಸಲಹೆ ಸೂಚನೆಗಳನ್ನು ಪ್ರತಿರೋಧಿಸಿ ಉತ್ತರಿಸುವುದು ನನಗೆ ಈಗ ಅನಿವಾರ್ಯವಾಗಿದೆ. ಅನುಚ್ಛೇದ ೩೩೦ ಲೋಕಸಭೆಯಲ್ಲಿ ಪರಿಶಿಷ್ಟ ಜಾತಿಗಳಿಗೆ ಒದಗಿಸಿಕೊಡಬೇಕಾದ ಮೀಸಲಾತಿಯನ್ನು ಕುರಿತು ಉಲ್ಲೇಖಿಸುತ್ತದೆ ಎಂಬುದು ವಾಸ್ತವ ಸಂಗತಿಯೆ ಸರಿ. ಆದರೆ ನಾವು ಸದರಿ ಮಸೂದೆಯಲ್ಲಿ ಭಾಗ 'ಸಿ' ಸೇರಿದ ಕೆಲವು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳಿಗಾಗಿ ಲೋಕಸಭೆಯಲ್ಲಿ ಅವಕಾಶಮಾಡಿಕೊಡಬೇಕಾದ

ಟಿ. ೪೧೯೩–೩೧ಎ.

ಮೀಸಲು ಸ್ಥಾನಗಳನ್ನು ಕುರಿತು ಪರಿಶೀಲಿಸುತ್ತಿದ್ದೇನೆ. ಆದ್ದರಿಂದಲೇ ನಾನು ಈ ಅನುಚ್ಛೇದ ಉಲ್ಲೇಖಯೋಗ್ಯವೆಂದು ಹೇಳುತ್ತಿದ್ದೇನೆ. ಆದರೆ ಅನುಚ್ಛೇದ ೩೩೦ನ್ನು ಹೆಚ್ಚಾಗಿ ಅವಲಂಬಿಸಿದ ಮಾನ್ಯ ಸದಸ್ಯರು ಒಂದು ವಿಷಯವನ್ನು ಪೂರ್ತಿಯಾಗಿ ಮರೆತುಬಿಟ್ಟಿದ್ದಾರೆಂದು ಹೇಳಬಯಸುತ್ತೇನೆ. ಅದೇನೆಂದರೆ ಪರಿಶಿಷ್ಟ ಜಾತಿಗಳಿಗೆ ಒದಗಿಸುವುದಕ್ಕೆ ಆಧಾರ ಪರಿಶಿಷ್ಟ ಜಾತಿಗಳನ್ನು ಲೆಕ್ಕಹಾಕುವುದು ಅಥವಾ ಅವುಗಳ ಬಗ್ಗೆ ಪರಿಭಾಷಿಸುವುದು ಆಗಿರುತ್ತದೆ. ಪರಿಶಿಷ್ಟ ಜಾತಿಗಳು ಅಂದರೆ ಏನು, ಅವು ಯಾವುವು, ಅವುಗಳ ಒಟ್ಟು ಜನಸಂಖ್ಯೆ ಎಷ್ಟು ಎಂಬುದರ ಬಗ್ಗೆ ನಮಗೆ ಸರಿಯಾದ ತಿಳಿವಳಿಕೆ ಇಲ್ಲದಿದ್ದರೆ, ಪರಿಶಿಷ್ಟ ಜಾತಿಗಳಿಗೆ ವ್ಯಾವಹಾರಿಕವಾದ ಹಾಗೂ ವಾಸ್ತವವಾದ ಪ್ರಾತಿನಿಧ್ಯ ನೀಡುವುದಕ್ಕೆ ಅವಕಾಶ ಮಾಡಿಕೊಡಲು ಯಾರಿಗೇ ಆಗಲಿ ಸಂಪೂರ್ಣವಾಗಿ ಅಸಾಧ್ಯವಾಗುತ್ತದೆ. ಹಾಗಾಗಿ ಇಲ್ಲಿ ಮುಖ್ಯವಾದ ಪ್ರಶ್ನೆ ಈ ರೀತಿ ಏಳುತ್ತದೆ: ಸಂಸತ್ತನ್ನು ಹೊರತುಪಡಿಸಿ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ತಯಾರಿಸಬಲ್ಲ, ಆ ಮೂಲಕ ಅವು ಯಾವುವು, ಅವುಗಳ ಒಟ್ಟು ಜನಸಂಖ್ಯೆ ಎಷ್ಟು ಎಂದು ತಿಳಿಸಿಕೊಡಬಲ್ಲ ಅವಕಾಶವನ್ನು ಪಡೆದುಕೊಂಡಿರುವ ಯಾವುದಾದರೂ ಪ್ರಾಧಿಕಾರ ನಮ್ಮ ಮುಂದಿದೆಯೆ? ಆ ಉದ್ದೇಶಕ್ಕಾಗಿ ನಾವು ಅನುಚ್ಛೇದ ೩೪೧ ರ ಕಡೆಗೆ ದೃಷ್ಟಿಹರಿಸಬೇಕಾಗುತ್ತದೆ. ಅನುಚ್ಛೇದ ೩೪೧ ಈ ರೀತಿ ಹೇಳುತ್ತದೆ:

> "(i) ರಾಜ್ಯದ ರಾಜ್ಯಪಾಲರೊಡನೆ ಅಥವಾ ರಾಜಪ್ರಮುಖರೊಡನೆ ಸಮಾಲೋಚನೆ ಮಾಡಿದ ಬಳಿಕ, ಸಾರ್ವಜನಿಕ ಅಧಿಸೂಚನೆಯ ಮೂಲಕ ರಾಷ್ಟ್ರಪತಿಗಳು ಆ ರಾಜ್ಯಕ್ಕೆ ಸಂಬಂಧಿಸಿದಂತೆ, ಸಂವಿಧಾನದ ಉದ್ದೇಶಗಳಿಗಾಗಿ, ಯಾವ ಜಾತಿಗಳನ್ನು, ಜನಾಂಗಗಳನ್ನು ಅಥವಾ ಬುಡಕಟ್ಟುಗಳನ್ನು ಅಥವಾ ಜಾತಿ ಜನಾಂಗ ಅಥವಾ ಪಂಗಡಗಳ ಭಾಗಗಳನ್ನು ಅಥವಾ ಅವುಗಳಲ್ಲಿನ ಸಮೂಹಗಳನ್ನು ಅನುಸೂಚಿತ ಜಾತಿಗಳೆಂದು ಪರಿಗಣಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟ ಪಡಿಸಬಹುದು."

ಇದೇ ಬಗೆಯಲ್ಲಿ ಪರಿಶಿಷ್ಟ ಪಂಗಡಗಳಿಗೆ ಅನ್ವಯಿಸುವ ಇನ್ನೊಂದು ಅವಕಾಶ ಅನುಚ್ಛೇದ ೩೪೨ ರಲ್ಲಿ ಕಂಡುಬರುತ್ತದೆ. ಅನುಚ್ಛೇದ ೩೪೧ರ ಉಪ–ಪ್ರಕರಣ (೨) ರಲ್ಲಿ ಮತ್ತು ಅನುಚ್ಛೇದ ೩೪೨ ರ ಉಪ–ಪ್ರಕರಣ (೨) ರಲ್ಲಿ ರಾಷ್ಟ್ರಪತಿಗಳು ತಾವು ಒಮ್ಮೆ ಹೊರಡಿಸಿದ ಆದೇಶವನ್ನು ಮತ್ತೆ ಮಾರ್ಪಡಿಸಲು ಅವಕಾಶ ಮಾಡಿಕೊಡದಂತಹ ಒಂದು ಷರತ್ತು ಇದೆ. ಆ ರೀತಿ ಮಾರ್ಪಾಡು ಮಾಡುವ ಅಧಿಕಾರ ಸಂಸತ್ತಿಗೆ ಮಾತ್ರ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಅನುಚ್ಛೇದ ೩೪೧ ಮತ್ತು ಅನುಚ್ಛೇದ ೩೪೨ ರ ಒಕ್ಕಣೆಯನ್ನು ತುಂಬ ಎಚ್ಚರಿಕೆಯಿಂದ ಓದಿಕೊಳ್ಳುವುದು ಅಗತ್ಯ. ರಾಷ್ಟ್ರಪತಿಯವರಿಗೆ ಅಧಿಸೂಚನೆಯೊಂದನ್ನು ಹೊರಡಿಸುವ ಅಧಿಕಾರವಿದೆಯೆಂಬುದು ನಿಸ್ಸಂದೇಹವಾದುದು. ಆದರೆ ಆ ರೀತಿಯಲ್ಲಿ ಅಧಿಸೂಚನೆ ಹೊರಡಿಸಬೇಕಾದರೆ ಅವರಿಗೆ ನೀಡಲಾಗಿರುವ ಅಧಿಕಾರವನ್ನು ಕುರಿತಂತೆ ಬಹಳ ಮುಖ್ಯವಾದ ಒಂದು ನಿಬಂಧನೆ ಇದೆ. ಅವರು ರಾಜ್ಯವೊಂದರ ಗವರ್ನರ್ ಅಥವಾ ರಾಜಪ್ರಮುಖರ ಜೊತೆಯಲ್ಲಿ ಸಮಾಲೋಚನೆ ಮಾಡಿದ ನಂತರವೇ ಹಾಗೆ ಮಾಡತಕ್ಕದ್ದು ಎಂಬುದೇ ಆ ನಿಬಂಧನೆ. ಸಂವಿಧಾನವನ್ನು ಓದುವ ಯಾರಿಗೇ ಆಗಲಿ, "ಗವರ್ನರ್ ಅಥವಾ ರಾಜಪ್ರಮುಖರ ಜೊತೆಯಲ್ಲಿ ಸಮಾಲೋಚನೆ' ಎಂಬ ಮಾತು ಬಂದಾಗ ಸ್ಪಷ್ಟವಾಗಿ ಅದು ಭಾಗ 'ಎ' ಮತ್ತು ಭಾಗ 'ಬಿ' ಗೆ ಸೇರಿದ ರಾಜ್ಯಗಳು ಎಂಬ ಅರಿವು ಮೂಡುತ್ತದೆ. ಏಕೆಂದರೆ ಭಾಗ 'ಎ' ಮತ್ತು ಭಾಗ 'ಬಿ' ಗೆ ಸೇರಿರುವ ರಾಜ್ಯಗಳಲ್ಲಿ ಮಾತ್ರ ಗವರ್ನರ್ ಅಥವಾ ರಾಜಪ್ರಮುಖರ ಹುದ್ದೆ ಇರುವುದೆಂಬ ಸಂಗತಿ ತಮಗೆಲ್ಲ

ಗೊತ್ತು. ಇಂಥ ಅಧಿಸೂಚನೆಯನ್ನು ರಾಷ್ಟ್ರಪತಿಯವರ ಚೀಫ್ ಕಮೀಷನರ್ ಜೊತೆಯಲ್ಲಿ ಸಮಾಲೋಚನೆ ಮಾಡಿದ ಅನಂತರ ಹೊರಡಿಸಬಹುದು ಎಂಬ ಸ್ಪಷ್ಟವಾದ ಒಕ್ಕಣೆ ಅಲ್ಲಿದ್ದಿದ್ದರೆ ರಾಷ್ಟ್ರಪತಿಗಳು ಸಂವಿಧಾನದ ಅನುಚ್ಛೇದ ೩೪೧ ಹಾಗೂ ಅನುಚ್ಛೇದ ೩೪೨ರ ಅಡಿಯಲ್ಲಿ ಇಂಥ ಅಧಿಸೂಚನೆಯನ್ನು ಭಾಗ 'ಸಿ' ಗೆ ಸಂಬಂಧಪಟ್ಟ ರಾಜ್ಯಗಳ ಸಲುವಾಗಿ ಕೂಡ ಹೊರಡಿಸಬಹುದಾಗಿತ್ತೆಂದು ನಿಸ್ಸಂಶಯವಾಗಿ ವಾದಿಸಲು ಅವಕಾಶವಿತ್ತು. ದುರದೃಷ್ಟವಶಾತ್, ಅಥವಾ ಅದೃಷ್ಟವಶಾತ್, ಅಂಥ ಒಂದು ಪ್ರಕರಣ ಅಥವಾ ಕಲಮನ್ನು ಅನುಚ್ಛೇದ ೩೪೧ ರಲ್ಲಿ ಹಾಕಲಾಗಿಲ್ಲ.

ಈ ಹಿಂದೆ ಮಾತನಾಡಿದ ನನ್ನ ಮಾನ್ಯ ಮಿತ್ರರು ಭಾಗ 'ಸಿ' ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳ ಸಲುವಾಗಿ ಅಧಿಸೂಚನೆಯನ್ನು ಹೊರಡಿಸಲು ರಾಷ್ಟ್ರಪತಿಯವರಿಗೆ ಅಧಿಕಾರವನ್ನು ನೀಡುವ ವಿಧಿಯನ್ನು ಸಂವಿಧಾನದಲ್ಲಿ ಏಕೆ ಮಾಡಿಲ್ಲವೆಂಬ ಬಗ್ಗೆ ವಿವರಣೆ ನೀಡಬೇಕೆಂದು ನನ್ನನ್ನು ಒತ್ತಾಯಿಸಿದ್ದಾರೆ. ಹಿಂದೆ ಈ ವಿಚಾರ ಸಂವಿಧಾನ ಸಭೆಯ ಮುಂದೆ ಬಂದಾಗ, ವಿವಿಧ ಅನುಚ್ಛೇದಗಳನ್ನು ಕುರಿತು ನಡೆದ ಚರ್ಚೆಯು ವಿವಾದಗ್ರಸ್ತವಾಗಿತ್ತು. ಎಂಬುದನ್ನು ನೆನಪಿಸಿಕೊಳ್ಳಬಲ್ಲರು ಎಂದು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ರಾಜಕೀಯ ತಲೆಹಾಕುತ್ತದೆಂದು ಎಲ್ಲರೂ ಭಾವಿಸಿಕೊಂಡಿದ್ದರು. ರಾಜಕೀಯ ಕಾರಣಗಳಿಗೆ ನಿರ್ದಿಷ್ಟ ಸಮುದಾಯವನ್ನು ಕೈಬಿಡುವಂತೆ ಅಥವಾ ರಾಜಕೀಯ ನಂಟಿನ ಕಾರಣಕ್ಕಾಗಿ ಯಾವುದಾದರೂ ಸಮುದಾಯವನ್ನು ಪುರಸ್ಕರಿಸುವಂತೆ ರಾಷ್ಟ್ರಪತಿಗಳಿಗೆ ಸಲಹೆ ನೀಡಲಾಗುತ್ತದೆಂದು ತಿಳಿದಿದ್ದರು. ಇದರ ಪರಿಣಾಮವಾಗಿ ನಾವು ಈ ಅನುಚ್ಛೇದವನ್ನು ತುಂಬ ಎಚ್ಚರಿಕೆಯಿಂದ, ಹೆಚ್ಚಿನ ಗಮನ ಹರಿಸಿ ರೂಪಿಸಬೇಕಾಯಿತು. ಹಾಗಾಗಿಯೆ, ಒಮ್ಮೆ ರಾಷ್ಟ್ರಪತಿಯವರು ಆದೇಶ ಹೊರಡಿಸಿದ ಮೇಲೆ, ಅದನ್ನು ಬದಲಾಯಿಸುವ ಅಧಿಕಾರ ಅವರಿಗೆ ಇರತಕ್ಕದ್ದಲ್ಲವೆಂದೂ, ಹಾಗೆ ಅವಕಾಶ ಮಾಡಿದರೆ ಮತ್ತೆ ರಾಜಕೀಯ ತಲೆಹಾಕುತ್ತದೆಂದೂ ಪರ್ಯಾಲೋಚಿಸಲಾಯಿತು. ಈ ಕಾರಣಕ್ಕಾಗಿಯೆ ಎರಡೂ ಅನುಚ್ಛೇದಗಳಲ್ಲಿ ಪ್ರಕಾರ (೨) ಎಂಬುದನ್ನು ಸೇರಿಸಲಾಯಿತು. ಏಕೆಂದರೆ, ಒಂದು ಬಾರಿ ಆದೇಶ ಹೊರಬಿದ್ದ ಮೇಲೆ ಯಾವುದೇ ಬದಲಾವಣೆಗೆ ಒತ್ತಾಯ ಬಂದರೂ, ಅದನ್ನು ತೆರೆದ ಸಭೆಯಲ್ಲಿ ಸದನದ ಮುಂದೆಯೇ ಚರ್ಚಿಸಬೇಕು. ಯಾವುದೇ ಬದಲಾವಣೆಯನ್ನಾದರೂ ಸದನವೇ ಮಾಡತಕ್ಕದ್ದು, ಅದೂ ಪರಿಶಿಷ್ಟ ಜಾತಿಗಳಿಗೆ ಸೇರಿದ ಸಂಸತ್ ಸದಸ್ಯರ ಸಮ್ಮುಖದಲ್ಲಿಯೆ ಇದನ್ನು ಮಾಡತಕ್ಕದ್ದು ಎಂಬುದಾಗಿ ಆಲೋಚಿಸಲಾಯಿತು. ಈ ಅನುಚ್ಛೇದಗಳನ್ನು ಅತ್ಯಂತ ಎಚ್ಚರಿಕೆಯಿಂದ ರೂಪಿಸಿದ ಹಿಂದಿರುವ ಕಾರಣ ಇದು.

ನನ್ನ ಅಭಿಪ್ರಾಯ ಏನಾಗಿತ್ತೆಂದು ಸ್ಪಷ್ಟಪಡಿಸಬಯಸುತ್ತೇನೆ. ಈ ಮಸೂದೆ ಅನಾವಶ್ಯಕವೆಂದು ಪ್ರತಿಪಾದಿಸುತ್ತಿದ್ದ ನನ್ನ ಮಿತ್ರರು ಅನುಚ್ಛೇದ ೩೪೧ ನ್ನು ಹೆಚ್ಚಾಗಿ ಅವಲಂಬಿಸಿದ್ದರೆಂದೂ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆಹೋದದ್ದರಿಂದ, ತಪ್ಪಾಗಿ ಗ್ರಹಿಸಿದ್ದುದರಿಂದ ಈ ಗೊಂದಲ ಉಂಟಾಗಿದೆಯೆಂದು ಹೇಳಬಯಸುತ್ತೇನೆ. ನಾನು ಪ್ರಾರಂಭದಲ್ಲಿಯೆ ಸ್ಪಷ್ಟಪಡಿಸಿರುವಂತೆ ಎರಡು ಅಂಶಗಳ ಬಗೆ ಮಾಹಿತಿ ಸರಿಯಾಗಿ ದೊರಕಿಸಿಕೊಳ್ಳದೆ ಪರಿಶಿಷ್ಟ ಜಾತಿಗಳಿಗಾಗಿ ಮೀಸಲಾತಿ ಮಾಡಿಕೊಡುವ ಯಾವುದೇ ಯೋಜನೆಯನ್ನು ರೂಪಿಸುವುದು ಅಸಾಧ್ಯದ ಸಂಗತಿಯೆಂಬುದು ನನ್ನ ಭಾವನೆ. ಆ ಅಂಶಗಳು ಯಾವುದೆಂದರೆ: ಪರಿಶಿಷ್ಟಜಾತಿಗಳು ಎಂದರೆ ಯಾವುವು ಹಾಗೂ ಅವುಗಳ ಜನಸಂಖ್ಯೆ ಎಷ್ಟು ಎಂಬುದು. ನಾನು ಈಗಾಗಲೆ ಹೇಳಿರುವಂತೆ ಈ ವಿಚಾರವನ್ನು ಅನುಚ್ಛೇದ ೩೪೧ ರಲ್ಲಿ ಆಗಲೇ ಅಳವಡಿಸಿದ್ದಿದ್ದರೆ, ಭಾಗ 'ಸಿ' ರಾಜ್ಯಗಳಲ್ಲಿರುವ ಪರಿಶಿಷ್ಟಜಾತಿಗಳಿಗೆ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ತಂದಿರುವ ಈ ಮಸೂದೆಯನ್ನು ಸದನದಲ್ಲಿ ಪ್ರಸ್ತಾಪಿಸುವುದೇ ಅನಾವಶ್ಯಕವಾಗುತ್ತಿತ್ತು. ಏಕೆಂದರೆ, ಹಾಗೆ

ಆಗಿದ್ದಿದ್ದರೆ ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳ ಪ್ರಸಕ್ತಿಯಲ್ಲಿ ಮಾಡಿರುವಂತೆಯೆ ಭಾಗ 'ಸಿ' ರಾಜ್ಯಗಳಲ್ಲೂ ಪರಿಶಿಷ್ಟ ಜಾತಿಗಳು ಎಷ್ಟಿವೆಯೆಂದು ನಿರ್ಧರಿಸಲು ರಾಷ್ಟ್ರಪತಿಗಳಿಗೆ ಅದೇ ರೀತಿಯ ಅಧಿಕಾರವಿರುತ್ತಿತ್ತು. ಭಾಗ 'ಸಿ' ರಾಜ್ಯಗಳಲ್ಲಿ ಇರುವ ಪರಿಶಿಷ್ಟ ಜಾತಿಗಳು ಎಷ್ಟಿವೆಯೆಂದು ನಿರ್ಧರಿಸಲು ರಾಷ್ಟ್ರಪತಿಗಳಿಗೆ ಅದೇ ರೀತಿಯ ಅಧಿಕಾರವಿರುತ್ತಿತ್ತು. ಭಾಗ 'ಸಿ' ರಾಜ್ಯಗಳಲ್ಲಿ ಇರುವ ಪರಿಶಿಷ್ಟ ಜಾತಿಗಳು ಯಾವುವು ಹಾಗೂ ಅವುಗಳ ಜನಸಂಖ್ಯೆ ಎಷ್ಟು ಎಂಬುದು ರಾಷ್ಟ್ರಪತಿಯವರ ಅಧಿಸೂಚನೆಯಿಂದ ಗೊತ್ತಾಗುವಂತಿದ್ದರೆ ಚುನಾವಣಾ ಆಯುಕ್ತರು ಅದರ ಆಧಾರದ ಮೇಲೆ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸುಲಭವಾಗಿ ಮಿತಿ ವಿಧಿಸಬಹುದಿತ್ತು, ಸೀಮಾ ನಿರ್ಣಯ ಮಾಡಬಹುದಿತ್ತು. ಹಾಗಾಗಿ ಸದರಿ ಮಸೂದೆ ಸಂವಿಧಾನಾತ್ಮಕ ದೃಷ್ಟಿಕೋನದಿಂದ ಅನಾವಶ್ಯಕವಾಗಿತ್ತು ಎಂಬ ವಾದದಲ್ಲಿ ಯಾವುದೇ ಹುರುಳಿಲ್ಲ ಎಂದು ನಿವೇದಿಸಬಯಸುತ್ತೇನೆ.

ನನ್ನ ಮಾನ್ಯ ಮಿತ್ರರಾದ ಶ್ರೀ ದೇಶಪಾಂಡೆ ಅವರು ಇನ್ನೊಂದು ವಿಚಾರದಲ್ಲಿ ನನ್ನ ಮುಂದೆ ಸವಾಲೆಸೆ¸ದ್ದಾರೆ. ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮ, ಎಂಬುದಾಗಿ ಇರುವ ಮೊದಲಿನ ಅಧಿನಿಯಮದಲ್ಲಿ ಈ ವಿಚಾರವನ್ನು ಈ ಹಿಂದೆಯೆ ಅಳವಡಿಸಲಾಗಿದೆಯೆಂಬುದು ಅವರ ವಾದ. ಆ ಅಧಿನಿಯಮದ ಪ್ರಕರಣವನ್ನು ಉಲ್ಲೇಖಿಸಿ ಅವರು ರಾಷ್ಟ್ರಪತಿಗಳು ಉಳಿದ ಹಲವಾರು ಸಂಗತಿಗಳ ಜೊತೆಯಲ್ಲಿ "ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೂ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ, ಸಾಧ್ಯವಿರುವೆಡೆಯಲ್ಲಿ, ಸ್ಥಾನಗಳನ್ನು ಮೀಸಲಾಗಿಡಲು" ತೀರ್ಮಾನಿಸಬಹುದೆಂದು ಹೇಳಿದ್ದಾರೆ. ಇಲ್ಲಿಯೂ ಅವರನ್ನು ಒಂದು ತಪ್ಪುಗ್ರಹಿಕೆ ಕಾಡುತ್ತಿದೆ ಎಂದು ನನಗನಿಸುತ್ತದೆ. ಈ ಅಧಿನಿಯಮ ಭಾಗ "ಎ' ಮತ್ತು ಭಾಗ 'ಬಿ' ರಾಜ್ಯಗಳಲ್ಲಿರುವ ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟಪಂಗಡಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿಗಳು ಹೊರಡಿಸಬಹುದಾದ ಆದೇಶವನ್ನು ಕುರಿತಂತೆ ಮಾತ್ರ ಉಲ್ಲೇಖಿಸುತ್ತದೆ. ರಾಷ್ಟ್ರಪತಿಯವರಿಂದ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟಪಂಗಡಗಳು ಎಂಬುದಾಗಿ ಗುರುತಿಸದೆ ಹೋದ ಯಾವ ಸಂದರ್ಭವೂ ಈ ಪ್ರಕರಣದನ್ವಯ ಉಲ್ಲೇಖಾರ್ಹವಾಗಿರುವುದಿಲ್ಲ ಹಾಗೂ ಸೂಕ್ತವೆನಿಸಿಕೊಳ್ಳುವಿದಿಲ್ಲ. ರಾಷ್ಟ್ರಪತಿಗಳು ಅಧಿಸೂಚನೆ ಹೊರಡಿಸಿದರೆ ಮಾತ್ರ ಈ ಪ್ರಕರಣ ಗಮನಾರ್ಹವೆನಿಸಿಕೊಳ್ಳುತ್ತದೆ. ಈಗ ನಾವು ವಿವಿಧ ಭಾಗ 'ಸಿ' ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಯನ್ನು ಸಿದ್ಧಪಡಿಸಿ ಅವುಗಳಿಗಾಗಿ ಸ್ಥಾನಗಳನ್ನು ಮೀಸಲಾಗಿಡುವ ಶಾಸನ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಆದ್ದರಿಂದ ಈ ನಿರ್ದಿಷ್ಟ ಅಧಿನಿಯಮದಲ್ಲಿ ಒದಗಿಸಲಾಗಿರುವ ಅವಕಾಶಗಳ ತಪ್ಪು ಗ್ರಹಿಕೆಯ ಮೇಲೆ ಅವರ ವಾದ ಆಧರಿಸಿದೆ ಎಂದು ನಿವೇದಿಸಬಯಸುತ್ತೇನೆ.

ಭಾಗ 'ಸಿ' ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗಾಗಿ ಮೀಸಲಾತಿ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ಪ್ರಶ್ನೆಯನ್ನು ಕುರಿತಂತೆ ಸದನದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ. ಖಂಡಿತವಾಗಿ ಇದೊಂದು ಸ್ವಾಗತಾರ್ಹವಾದ ಸಂಗತಿ. ವಿಂಧ್ಯ ಪ್ರದೇಶದಿಂದ ಬಂದಿರುವ ನನ್ನ ಇಬ್ಬರು ಮಿತ್ರರು ಅಲ್ಲಿ ಪರಿಶಿಷ್ಟ ಜಾತಿಗಳಿಗಾಗಿ ಒಂದು ಹಾಗು ಪರಿಶಿಷ್ಟ ಪಂಗಡಗಳಿಗಾಗಿ ಒಂದು ಸ್ಥಾನವನ್ನು ಮೀಸಲಾಗಿ ಇಡುವುದರಿಂದ ಸಾಮಾನ್ಯ ವರ್ಗಗಳ ಪ್ರಾತಿನಿಧ್ಯಕ್ಕೆ ಹಿನ್ನಡೆ ಉಂಟಾಗಿದೆ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಮೇಲ್ನೋಟಕ್ಕೆ ಈ ವಾದ ನನಗೆ ಸರಿಯಾಗಿ ಕಂಡುಬರುವುದಿಲ್ಲ. ಇಲ್ಲಿರುವ ಆರು ಸ್ಥಾನಗಳೂ ಸವರ್ಣೀಯ ಹಿಂದೂಗಳಿಗೆ ದೊರಕಬೇಕೆಂಬ ಒತ್ತಾಯದ ಗ್ರಹಿಕೆಯ ಮೇಲೆ ಈ ಆತಂಕ ಉಂಟಾಗಿದೆಯೆನಿಸುತ್ತದೆ. ಆ ವಾದವನ್ನು

ನಾನು ಒಪ್ಪಲಾರೆ. ವಿಂಧ್ಯ ಪ್ರದೇಶದಲ್ಲಿ ಆ ಸ್ಥಾನಗಳನ್ನು ಹಂಚಿಕೆ ಮಾಡಿರುವುದು ಕೇವಲ ಸವರ್ಣೀಯ ಹಿಂದೂಗಳಿಗೆ ಮಾತ್ರವಲ್ಲ, ಆ ರಾಜ್ಯದಲ್ಲಿ ವಾಸ ಮಾಡುತ್ತಿರುವ ಇತರ ಜನಗಳಿಗೂ ಅದು ಸೇರುತ್ತದೆ. ವಿಂಧ್ಯ ಪ್ರದೇಶಕ್ಕೆ ಸಂಬಂಧಪಟ್ಟಂತೆ ಲೋಕಸಭೆಗಾಗಿ ಹಂಚಿಕೆ ಮಾಡಲಾಗಿರುವ ಸ್ಥಾನಗಳ ಸಂಖ್ಯೆಯನ್ನು ಇನ್ನೂ ಒಂದರಷ್ಟು ಹೆಚ್ಚಿಸಲು ಸಾಧ್ಯವೆ ಎಂದು ನೋಡಬೇಕೆಂದು ಅವರು ನನ್ನಲ್ಲಿ ಮನವಿಮಾಡಿಕೊಂಡಿದ್ದಾರೆ. ತಮಗೆಲ್ಲ ಗೊತ್ತಿರುವಂತೆ ಸಂವಿಧಾನದ ಅನ್ವಯ ಲೋಕಸಭೆಯಲ್ಲಿ ಒಟ್ಟು ಸ್ಥಾನಗಳಿಗೆ ಒಂದು ಗರಿಷ್ಠ ಮಿತಿಯಿದೆ. ಅದು ಸುಮಾರು ೫೦೦ ಅಂದುಕೊಂಡಿದ್ದೇನೆ. ಈ ಗರಿಷ್ಠಮಿತಿಗೆ ಧಕ್ಕೆ ಒದಗುವ ಹಾಗಿದ್ದಂತೆ ನಾನು ವಿಂಧ್ಯಪ್ರದೇಶಕ್ಕಾಗಿ ನಿಗದಿಮಾಡಿರುವ ಸ್ಥಾನಗಳನ್ನು ಯಾವ ರೀತಿಯಲ್ಲೂ ಹೆಚ್ಚಿಸಲಾರೆ ಎಂಬುದು ಯಾರಿಗೇ ಆಗಲಿ ಗೋಚರಿಸುವ ಸಂಗತಿ. ಅದು ಅಸಾಧ್ಯವೂ ಆಗಿದೆ. ಸಂವಿಧಾನಬಾಹಿರವೆನಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ, ಭಾಗ 'ಸಿ' ಗೆ ಸೇರಿದ ಇತರ ರಾಜ್ಯಗಳ ಮಂದಿ ಕೂಡ ತಮಗೆ ಹಂಚಿಕೆ ಮಾಡಿರುವ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಲು ಕೋರುವ ಸಂಭವವಿರುತ್ತದೆ. ಎಲ್ಲರನ್ನೂ ಒಂದೇ ರೀತಿಯಲ್ಲಿ ಪರಿಗಣಿಸಿ ಎಂಬ ಅಹವಾಲನ್ನು ಅವರು ಮುಂದಿಡಬಹುದು. ಹಾಗಾಗಿ ನನ್ನ ಮುಂದೆ ಬಂದಿರುವ ಇಂಥ ಪ್ರಸ್ತಾಪಗಳನ್ನು ಒಪ್ಪಿಕೊಂಡು ಅದಕ್ಕೆ ಬದ್ಧನಾಗುವುದು ನನ್ನ ಪಾಲಿಗೆ ಕಷ್ಟದ ಸಂಗತಿ. ಹಾಗಾಗಿ ಈ ವಿಷಯವಾಗಿ ಖಂಡಿತ ಪರಿಶೀಲಿಸುತ್ತೇನೆ, ಏನಾದರೂ ಮಾಡಲು ಸಾಧ್ಯವಾಗುತ್ತದೆಯೊ ನೋಡೋಣ ಎಂದಷ್ಟೇ ಹೇಳಬಯಸುತ್ತೇನೆ. ಅದಕ್ಕಿಂತ ಹೆಚ್ಚಾಗಿ ಈ ವಿಷಯದಲ್ಲಿ ನಾನು ಏನನ್ನೂ ಹೇಳಲಾರೆ.

ಹಾಗೆಯೆ, ವಿಂಧ್ಯ ಪ್ರದೇಶದಿಂದ ಬಂದಿರುವ ನನ್ನ ಮಿತ್ರರು ಅನುಚ್ಛೇದ ೨೪೦ರ ಕಡೆಗೆ ನನ್ನ ಗಮನ ಸೆಳೆದಿದ್ದಾರೆ. ಅನುಚ್ಛೇದ ೨೪೦ರನ್ವಯ ಕ್ರಮ ಕೈಗೊಳ್ಳುವುದರ ಬದಲಾಗಿ ನಾನು ಬೇರೆ ಕೆಲವು ಅನುಚ್ಛೇದಗಳನ್ನು ಅವಲಂಬಿಸಿ ಮುಂದೆ ಹೋಗುತ್ತಿದ್ದೇನೆಂಬುದು ಅವರ ವಾದ. ಇರಲಿ, ನಾನು ಯಾವ ಅನುಚ್ಛೇದಗಳನ್ನು ಆಶ್ರಯಿಸಿ ಮುಂದೆ ಹೋಗುತ್ತಿದ್ದೇನೆಯೋ, ಅವೆಲ್ಲ ಪೂರ್ಣವಾಗಿ ಸಿಂಧು ಎಂಬುದನ್ನು ನನ್ನ ಮಿತ್ರರು ಒಪ್ಪುತ್ತಾರೆ ಎಂಬುದು ನನ್ನ ನಂಬಿಕೆ. ನಾನು ಅನುಚ್ಛೇದ ೨೪೦ರನ್ವಯ ಮುಂದುವರೆಯಲಿ ಎಂದು ಅವರು ಏಕೆ ಬಯಸುತ್ತಿದ್ದಾರೆ ಎಂಬುದು ಅವರಿಗೇ ಚೆನ್ನಾಗಿ ಗೊತ್ತು. ಈ ವಿಷಯವನ್ನು ಅಗತ್ಯಕ್ಕಿಂತ ಹೆಚ್ಚು ಬಹಿರಂಗಪಡಿಸಲು ನನಗೆ ಇಷ್ಟವಿಲ್ಲ. ನಾನು ಅವರಿಗೆ ಹೇಳುವುದು ಇಷ್ಟೆ. ಅನುಚ್ಛೇದ ೨೪೦ನ್ನು ಅವಲಂಬಿಸುವ ಅಗತ್ಯ ನನಗೆ ಇಲ್ಲ. ನನ್ನ ಸಮಸ್ಯೆಯ ಸ್ವರೂಪ ಬೇರೆಯಾದುದು. ಲೋಕಸಭೆಯಲ್ಲಿ ಭಾಗ 'ಸಿ' ರಾಜ್ಯಗಳಿಗೆ ಸೇರಿದ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮೀಸಲು ಒದಗಿಸುವುದು ಹೇಗೆ ಎಂಬುದು ನನಗೆ ಇಲ್ಲಿರುವ ಸಮಸ್ಯೆ. ಇನ್ನು ಮುಂದೆ ಅಸ್ತಿತ್ವಕ್ಕೆ ಬರಬಹುದಾದ ಯಾವುದೇ ಸ್ಥಳೀಯ ವಿಧಾನಸಭೆ ಅಥವಾ ಸಂಸತ್ತಿನಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರಾತಿನಿಧ್ಯಕ್ಕಾಗಿ ಅನ್ವೇಷಣೆ ನಡೆಸುವುದು ನನ್ನ ಸದ್ಯದ ಸಮಸ್ಯೆ ಅಲ್ಲ. ನನ್ನ ಮಿತ್ರ ಮಹನೀಯರ ಸಂತೃಪ್ತಿಗಾಗಿ ಭಾರತ ಸರ್ಕಾರ ಯಾವುದಾದರೂ ಸ್ಥಳೀಯ ವಿಧಾನ ಸಭೆಯನ್ನು ಸ್ಥಾಪಿಸುವ ಉದ್ದೇಶದಿಂದ ಕ್ರಮಕೈಗೊಂಡರೆ ಅಲ್ಲಿಯೂ ಆಗ ಅಲ್ಲಿರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮೀಸಲಾತಿ ಕಲ್ಪಿಸುವ ಸಲುವಾಗಿ ನಿಸ್ಸಂದೇಹವಾಗಿ ಅನುಚ್ಛೇದ ೨೪೦ನ್ನು ಆಶ್ರಯಿಸುತ್ತೇನೆ. ಆದರೆ ಈ ಕ್ಷಣದಲ್ಲಿ ನನಗೆ ಅನುಚ್ಛೇದ ೨೪೦ನ್ನು ಆಶ್ರಯಿಸುವ ಅಗತ್ಯವಿಲ್ಲ.

ಅಂತೆಯೆ, ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಕುರಿತಂತೆ ಅದರ ವಿರುದ್ಧ ಸಾಕಷ್ಟು ಟೀಕೆ ಟಿಪ್ಪಣಿಗಳನ್ನು ಮಾಡಲಾಗಿದೆ. ಇಂಥ ವಿಷಯದಲ್ಲಿ ತುಂಬ ತೃಪ್ತಿಕರವಾಗಿ ಕಾರ್ಯ ನಿರ್ವಹಿಸುವುದು ಹೇಗೆಂಬುದನ್ನು

ನಾನರಿಯೆ. ಏಕೆಂದರೆ ಭಾರತ ಸರ್ಕಾರದ ಅಡಿಯಲ್ಲಿ ಕೆಲಸ ಮಾಡುವ ಯಾರಿಗೇ ಆಗಲಿ ಯಾವ ಸಮುದಾಯಗಳನ್ನು ಪರಿಶಿಷ್ಟಜಾತಿಗಳೆಂದು ಕರೆಯಬೇಕು, ಯಾವ ಸಮುದಾಯಗಳು ಪರಿಶಿಷ್ಟ ಜಾತಿ ಎಂಬ ಪರಿಭಾಷೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬುದನ್ನು ನಿರ್ಧರಿಸುವುದು ಕಷ್ಟ. ಅಲ್ಲಿಯ ಸ್ಥಳೀಯ ಸ್ಥಿತಿಗತಿಗಳ ಬಗ್ಗೆ ಮಾಹಿತಿಯಿರುವ ಅಧಿಕಾರಿಗಳು ಹಾಗೂ ಇತರ ಏಜೆನ್ಸಿಗಳು ಭಾರತ ಸರ್ಕಾರಕ್ಕೆ ಏನು ಮಾಹಿತಿಯನ್ನು ಒದಗಿಸುತ್ತಾರೊ ಅವುಗಳನ್ನು ಅವಲಂಬಿಸಿ ಕೆಲಸ ಮಾಡಬೇಕಾಗುತ್ತದೆ. ಪ್ರಾಯಃ ಭಾರತಸರ್ಕಾರಕ್ಕೆ ಅದರ ಅಧಿಕಾರಿಗಳು ಮತ್ತು ಇತರ ಮೂಲಗಳು ಒದಗಿಸಬಹುದಾದ ಮಾಹಿತಿಗಿಂತ ಮಾನ್ಯಸದಸ್ಯರು ಪಡೆದುಕೊಂಡಿರುವ ಮಾಹಿತಿ ಭಿನ್ನವಾಗಿರಬಹುದು. ಇಂಥ ಸಂದರ್ಭಗಳಲ್ಲಿ ಸರ್ಕಾರವು ತನ್ನ ಅಧಿಕಾರಿಗಳು ನೀಡಿರುವ ಅಂಕಿಸಂಖ್ಯೆಗಳನ್ನು ಮತ್ತು ಮಾಹಿತಿಯನ್ನು ಅವಲಂಬಿಸುವ ಸಾಧ್ಯತೆ ಹೆಚ್ಚು. ಸದನದಲ್ಲಿರುವ ಮಾನ್ಯಸದಸ್ಯರಲ್ಲಿ ಯಾರಾದರೂ, ನನಗೆ ಮನವರಿಕೆಯಾಗುವ ಮಟ್ಟಿಗೆ, ನಾವು ತಯಾರಿಸಿರುವ ಈ ಪಟ್ಟಿಯಲ್ಲಿ ಗಂಭೀರವಾದ ಲೋಪಗಳು, ದೋಷಗಳು ಇದೆ ಎಂದು ತೋರಿಸಿಕೊಟ್ಟರೆ ನಾನು ಅಗತ್ಯವಾಗಿ ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುತ್ತೇನೆ. ನನ್ನ ಮಿತ್ರರಾದ ಡಾ. ದೇಶಮುಖ್ ಅವರು ತುಂಬ ಅಸಮಾಧಾನದಿಂದಿದ್ದಾರೆ ಎಂದು ಅನಿಸುತ್ತಿದೆ. ಅವರ ಅಸಮಾಧಾನ ಪ್ರಾಯಃ ಸರ್ಕಾರದ ಬಗೆಗೆ. ಸರ್ಕಾರ ಎಲ್ಲವನ್ನೂ ತರಾತುರಿಯಲ್ಲಿ ಮಾಡುತ್ತದೆ ಎಂಬುದು ಅದರ ಆತಂಕ. ಅವರ ದೃಷ್ಟಿಯಲ್ಲಿ ಪ್ರತಿಯೊಂದು ಮಸೂದೆಯ ಮೇಲಿನ ಚರ್ಚೆಗೂ ಎಷ್ಟು ದಿನಗಳು ಬೇಕೋ ಗೊತ್ತಿಲ್ಲ–ಪ್ರಾಯಃ ಹದಿನೈದು ದಿನಗಳೇನೊ–ಅಷ್ಟರಿಂದಲೇ ಅವರಿಗೆ ತೃಪ್ತಿಯಾಗುತ್ತದೊ ಇಲ್ಲವೊ ಕಾಣೆ, ಪಟ್ಟಿಯಲ್ಲಿರುವ ಅಪರ್ಯಾಪ್ತತೆ ಹಾಗೂ ದೋಷಗಳ ಬಗ್ಗೆ ಅವರು ಸಾಕಷ್ಟು ದೀರ್ಘವಾಗಿಯೆ ಚರ್ಚೆ ಮಾಡಿದ್ದಾರೆ. ದುಂಡುಮೇಜಿನ ಸಮ್ಮೇಳನ ಸದಸ್ಯನಾಗಿ ಈ ಪಟ್ಟಿಗಳನ್ನು ಸಿದ್ಧಪಡಿಸುವಲ್ಲಿ ನಾನು ಸಾಕಷ್ಟು ಪರಿಶ್ರಮ ಸಹಿಸಿದ್ದೇನೆ ಎಂದು ತಿಳಿಯಪಡಿಸಲು ಡಾ. ದೇಶಮುಖ್ ಇಲ್ಲಿ ನನಗೆ ಅನುಮತಿಸುತ್ತಾರೆ ಎಂದು ಭಾವಿಸುತ್ತೇನೆ. ಆ ಕೆಲಸ ನನ್ನ ಪಾಲಿಗೆ ಸಾಕಷ್ಟು ತ್ರಾಸದಾಯಕವಾಗಿತ್ತು. ನಮ್ಮ ಎದುರಿನಲ್ಲಿ ತುಂಬ ಗಂಭೀರವಾದ ಒಂದು ಸಮಸ್ಯೆ ಇತ್ತು. ಆ ಸಮಸ್ಯೆ ಏನೆಂದರೆ, ೧೯೧೦ ರಿಂದಲೂ ಮೊದಲುಗೊಂಡು ಜನಗಣತಿ ವರದಿಗಳಲ್ಲಿ–ಅಗತ್ಯವೆನಿಸಿದರೆ ಡಾ. ದೇಶಮುಖ್ ಈ ವರದಿಗಳನ್ನು ನೋಡಲಿ–ಕೆಲವು ವರ್ಗಗಳನ್ನು ಪ್ರತ್ಯೇಕವಾಗಿ ತೋರಿಸಿ ಅವುಗಳನ್ನು "ದಲಿತ ವರ್ಗಗಳು" (depressed classes) ಎಂಬುದಾಗಿ ಹೆಸರಿಸಲಾಗಿತ್ತು. ದುಂಡುಮೇಜಿನ ಸಮ್ಮೇಳನದಲ್ಲಿ ಈ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡಬೇಕೆಂಬ ಪ್ರಶ್ನೆ ಬಂದಾಗ "ದಲಿತ ವರ್ಗಗಳು" ಎಂಬುದರ ಅರ್ಥ ಏನು ಎಂಬ ಸಮಸ್ಯೆ ಎದುರಾಯಿತು. ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದ್ದ ಬಹಳಷ್ಟು ಮಂದಿ ಈ ವರ್ಗಗಳಲ್ಲಿ ಇದ್ದರು, ಆದರೆ ಪಾರಿಭಾಷಿಕ ದೃಷ್ಟಿಯಿಂದ ಅವರೆಲ್ಲ ಅಸ್ಪೃಶ್ಯರಾಗಿರಲಿಲ್ಲ. ಉದಾಹರಣೆಗೆ "ಮಂಗರೂಡಿಸ್" ಎಂಬಂತಹ ಕೆಲವು ಸಮುದಾಯಗಳಿದ್ದವು. ಅಪರಾಧ ಮಾಡುವ ಪಂಗಡಗಳಾಗಿದ್ದರೂ ಅವು ಪಾರಿಭಾಷಿಕ ಅರ್ಥದಲ್ಲಿ ಅಸ್ಪೃಶ್ಯವೆನಿಸಿರಲಿಲ್ಲ. ಈ ಪ್ರಶ್ನೆಯನ್ನು ಕುರಿತು ದೀರ್ಘಕಾಲ ಚರ್ಚೆ ನಡೆಸಲಾಯಿತು. "ದಲಿತ ವರ್ಗಗಳು" ಎಂಬುದಾಗಿ ಜನಗಣತಿಯಲ್ಲಿ ನಮೂದಿಸಲಾಗಿದ್ದ ಸಮಸ್ತ ಸಮುದಾಯಗಳಿಗೂ ಪ್ರಾತಿನಿಧ್ಯದ ಸವಲತ್ತನ್ನು ಮೀಸಲು ಮಾಡುವುದು ಹೇಗೆ ಎಂಬುದು ಪ್ರಶ್ನೆಯಾಯಿತು. ಹಾಗೆ ಮಾಡಿದ್ದರೆ ಸಾಮಾನ್ಯ ಹಿಂದೂವರ್ಗಗಳಿಗೆ ಸೇರಿದ ಬಹು ದೊಡ್ಡಭಾಗ ಅದರಲ್ಲಿ ಒಳಗೊಂಡುಬಿಡುತ್ತಿತ್ತು. ಹೀಗೆ ಮಾಡುವುದರ ಬದಲಾಗಿ, ಈ ಸಮುದಾಯಗಳನ್ನು ಇನ್ನೂ ಸ್ಪಷ್ಟವಾಗಿ, ನಿರ್ದಿಷ್ಟವಾಗಿ ವಿಂಗಡಣೆಮಾಡಿ ಕೇವಲ ಹಿಂದುಳಿದವರು ಎಂಬುದಷ್ಟಕ್ಕೆ ಸೀಮಿತವಾಗಿದೆ ನಿಜವಾಗಿ ದಮನಕ್ಕೆ ಒಳಗಾದ ವರ್ಗಗಳನ್ನು

ಮಾತ್ರ ಆಯ್ಕೆ ಮಾಡುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬರಲಾಯಿತು. ಹಾಗಾಗಿ, ಮೀಸಲಾತಿ ಪ್ರಾತಿನಿಧ್ಯವನ್ನು ನಿಜವಾಗಿ ಕೇವಲ ಅಸ್ಪಶ್ಯರು ಎಂದು ಪರಿಗಣಿತನಾದವರಿಗೆ ಮಾತ್ರ ಕೊಡತಕ್ಕದ್ದೆಂದೂ, ಬೇರೆಯವರಿಗೆ ಬೇಡವೆಂದೂ ತೀರ್ಮಾನಿಸಲಾಯಿತು. ಈಗ, ಕೆಲವು ಮಂದಿಗೆ 'ಅಸ್ಪೃಶ್ಯ' ಎಂಬ ಪದದ ಪ್ರಯೋಗ ಇಷ್ಟವಾಗಲಿಲ್ಲ. ಆಗ 'ಬೇರ್ಪಟ್ಟ ಸಮುದಾಯಗಳು' (excluded classes) ಎಂಬ ಪದವನ್ನು ಬಳಸೋಣವೆಂದುಕೊಂಡೆವು. ಇದು ಹಿಂದೂಗಳಿಗೆ ಇಷ್ಟವಾಗಲಿಲ್ಲ. ಆಗ ಅವರೆಂದರು – "ಅವರು ನಾವು ಒಂದೇ ರಕ್ತದವರು. ಅವರು ನಮ್ಮಿಂದ ಬೇರೆಯಾದವರು ಎಂಬ ಅರ್ಥ ಬರುವ ಪದ ನಮಗೆ ಬೇಕಿಲ್ಲ." ಆಗ ನಾವು ಈ "ಪರಿಶಿಷ್ಟಜಾತಿಗಳು (scheduled castes) ಎಂಬ ಪದವನ್ನು ರೂಪಿಸಿದೆವು. ಬಹಳಮಟ್ಟಿಗೆ ಅ ಪದಪ್ರಯೋಗಕ್ಕೆ ನಾನೇ ರೂವಾರಿಯಾಗಿದ್ದೆ "ಅದು ಇಷ್ಟವಾಗದೆ ಹೋದರೆ, ಈ ಸಮುದಾಯಗಳನ್ನು ಅನುಸೂಚಿತ ಜಾತಿಗಳು (ಅಥವಾ ಪರಿಶಿಷ್ಟಜಾತಿಗಳು) ಎಂದು ಕರೆಯಿರಿ" ಎಂದು ಹೇಳಿದೆ. ಏಕೆಂದರೆ ಆ ಜಾತಿಯ ಹೆಸರುಗಳು ಸೂಚಿಯ ಅಥವಾ ಪಟ್ಟಿಯ ರೂಪದಲ್ಲಿ ಬರಬೇಕಾಗಿತ್ತು. ಇದರ ಪರಿಣಾಮವಾಗಿ ೧೯೩೫ ರ ಅಧಿನಿಯಮ ಆದೇಶದನ್ವಯ ಈ ಸಮುದಾಯಗಳ ಜನಗಣನೆ ನಡೆದು ತುಂಬ ಗಮನಹರಿಸಿ, ಎಚ್ಚರಿಕೆಯಿಂದ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಸಿದ್ಧಪಡಿಸಲಾಯಿತು. ಈ ಪಟ್ಟಿಯ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವ ಸಂದೇಹವೂ ಇಲ್ಲ. ಏಕೆಂದರೆ ಯಾವ ಜಾತಿಗಳನ್ನು ಈ ಪಟ್ಟಿಗೆ ಸೇರಿಸದೆ ಬಿಡಬಾರದಾಗಿತ್ತು, ಅಂಥ ಯಾವುದೇ ಜಾತಿಯನ್ನು ಪಟ್ಟಿಯಿಂದ ಕೈಬಿಟ್ಟಿಲ್ಲ. ಹಾಗೆಯೆ ಯಾವ ಜಾತಿಗಳು ಈ ಪಟ್ಟಿಗೆ ಸೇರಲು ಅರ್ಹವಾಗಿರಲಿಲ್ಲವೊ, ಅಂಥ ಯಾವುದೇ ಜಾತಿಯನ್ನು ಇಲ್ಲಿ ಸೇರಿಸಿಲ್ಲ. ಯಾರೇ ಆಗಲಿ ಅತ್ಯಂತ ಅಚ್ಚುಕಟ್ಟಾಗಿ ಮಾಡಬಹುದಾದ ನಿರ್ದಿಷ್ಟವಾದ ವರ್ಗೀಕರಣ ಅದು. ನಾನು ನನ್ನ ಮಿತ್ರರಾದ ಡಾ. ದೇಶಮುಖ್ ಅವರಿಗೆ ಹೇಳುಬಹುದಾದುದೇನೆಂದರೆ ನಾನು ಇಲ್ಲಿ ಕುಳಿತೇ ನನ್ನ ಮನಸ್ಸಿನಲ್ಲಿ ಒಂದು ಬಗೆಯ ಗಣಿತದ ಲೆಕ್ಕಾಚಾರಗಳನ್ನು ಹಾಕಿಕೊಳ್ಳುತ್ತಿದ್ದೆ. ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಬೆನ್ನಿನಲ್ಲಿಯೆ ಹೊರಬಂದ ಆರ್ಡರ್ ಇನ್ ಕೌನ್ಸಿಲ್ ಹೊರತಂದ ಪಟ್ಟಿ ಹಾಗೂ ರಾಷ್ಟ್ರಪತಿಗಳು ಜಾರಿಮಾಡಿದ ಪಟ್ಟಿ ಇವೆರಡರ ನಡುವೆ ಏನು ವ್ಯತ್ಯಾಸಗಳಿದ್ದವು ಎಂಬ ಬಗ್ಗೆ ಲೆಕ್ಕಹಾಕುತ್ತಿದ್ದೆ. ಈ ಪಟ್ಟಿಗಳಿಗೆ ಸಂಬಂಧಪಟ್ಟಂತೆ ನಾನು ಕಂಡುಕೊಂಡಿರುವಂತೆ ಸ್ಥಿತಿ ಹೀಗಿದೆ. ದುರದೃಷ್ಟವಶಾತ್, ಇಲ್ಲಿ ಅದನ್ನು ಅಕಾರಾದಿಯಾಗಿ ಮಾಡಿದ್ದಾರೆ. ಅಲ್ಲಿ ಅದನ್ನು ಪ್ರೆಸಿಡೆನ್ಸಿವಾರು–ವಾಸ ತೋರಿಸಲಾಗಿತ್ತು. ಅಂದಹಾಗೆ, ರಾಷ್ಟ್ರಪತಿಗಳು ಜಾರಿಮಾಡಿದ ಆದೇಶದನ್ವಯ ಅಸ್ಸಾಮಿನಲ್ಲಿ ೧೫ ಸಮುದಾಯಗಳನ್ನು ಪಟ್ಟಿಮಾಡಲಾಗಿತ್ತು. ಆರ್ಡರ್ ಇನ್ ಕೌನ್ಸಿಲ್‌ನಲ್ಲಿ ಸೇರಿಸಲಾಗಿದ್ದ ಯಾವ ಒಂದು ಸಮುದಾಯವನ್ನು ಕೂಡ ಅಲ್ಲಿ ಬಿಟ್ಟಿರುವುದಾಗಿ ಕಂಡುಬರಲಿಲ್ಲ, ಅವೆಲ್ಲವೂ ಅಲ್ಲಿ ಇದ್ದವು.

ನೀವು ಬಿಹಾರವನ್ನೇ ತೆಗೆದುಕೊಳ್ಳಿ ಭಾರತ ಸರ್ಕಾರದ ಅಧಿನಿಯಮ ೧೯೩೫ರನ್ವಯ ಆರ್ಡರ್ ಇನ್ ಕೌನ್ಸಿಲ್‌ನಲ್ಲಿ ನಿಜಕ್ಕೂ ೧೪ ಸಮುದಾಯಗಳನ್ನು ಪಟ್ಟಿಮಾಡಲಾಗಿದೆ. ಅದಕ್ಕೆ ಪ್ರತಿಯಾಗಿ ಈ ಪಟ್ಟಿಯಲ್ಲಿ ಸೂಚಿಸಲಾಗಿರುವ ಜಾತಿಗಳ ಸಂಖ್ಯೆ ೨೧ ಇದೆ. ಅವರು ಇಲ್ಲಿ ಏನು ಮಾಡಿದ್ದಾರೆ ಎಂಬುದನ್ನು ನೋಡೋಣ. ಬಿಹಾರದಲ್ಲಿ ಕೆಲವು ಸಮುದಾಯಗಳು ರಾಜ್ಯದಾದ್ಯಂತ ಅಸ್ಪೃಶ್ಯ ಎಂದು ಪರಿಗಣಿತವಾಗಿದ್ದರೆ ಇತರ ಕೆಲವು ಸಮುದಾಯಗಳು ಕೆಲವು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಾತ್ರ ಅಸ್ಪೃಶ್ಯ ಎನಿಸಿಕೊಂಡಿವೆ, ಬೇರೆಡೆಗಳಲ್ಲಿ ಅವು ಅಸ್ಪೃಶ್ಯವಲ್ಲ. ಇದರ ಪರಿಣಾಮವಾಗಿ ಅವುಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಲಾಯಿತು. ಪ್ರಾಯಃ ಅಧಿಸೂಚನೆ ಹೊರಡಿಸುವ ಕಾಲಕ್ಕೆ ಗೃಹ ಇಲಾಖೆ ಈ ಸಮುದಾಯಗಳ ಪೈಕಿ ಪ್ರಾದೇಶಿಕ ಭೇದಗಳನ್ನು ಮಾಡುವುದು ಉಚಿತವಾಗಿರುವುದಿಲ್ಲವೆಂದೂ, ಈ ರೀತಿಯ ಪ್ರಾದೇಶಿಕ ವ್ಯತ್ಯಾಸಗಳನ್ನು

ಪರಿಗಣನೆಗೆ ತೆಗೆದುಕೊಳ್ಳದೆ ಅವೆಲ್ಲವನ್ನು ಏಕರೂಪವಾಗಿ ಅಸ್ಪೃಶ್ಯಜಾತಿಗಳು ಎಂಬುದಾಗಿ ಪಟ್ಟಿ ಮಾಡಬೇಕೆಂದು ಭಾವಿಸಬೇಕು.

ಮುಂಬಯಿಯನ್ನು ತೆಗೆದುಕೊಳ್ಳಿ. ಅಲ್ಲಿ ಯಾವ ಬದಲಾವಣೆಯೂ ಕಂಡುಬರುವುದಿಲ್ಲ. ಆರ್ಡರ್ ಇನ್ ಕೌನ್ಸಿಲ್ ಮಾಡಿರುವ ಹಳೆಯ ಪಟ್ಟಿಯಲ್ಲಿ ೩೪ ಸಮುದಾಯಗಳಿವೆ. ಅದಕ್ಕೆ ಪ್ರತಿಯಾಗಿ ಈ ಅಧಿಸೂಚನೆಯ ಪ್ರಕಾರ ಸಮುದಾಯಗಳ ಸಂಖ್ಯೆಯಲ್ಲಿ ಇನ್ನೂ ಎರಡು ಹೆಚ್ಚಾಗಿ ಒಟ್ಟು ೩೬ ಎಂದಾಗಿದೆ.

ಪಟ್ಟಿಯನ್ನು ಪೂರ್ತಿಯಾಗಿ ಈ ರೀತಿ ಅವಲೋಕಿಸುವ ಅಗತ್ಯವಿದೆಯೆಂದು ನನಗೆ ಕಂಡುಬರುವುದಿಲ್ಲ. ಭಾಗ 'ಎ' ಗೆ ಸೇರಿದ ರಾಜ್ಯಗಳಿಗೆ ಸಂಬಧಿಸಿದ ಹಾಗೆ ಆಕ್ಷೇಪ ಎತ್ತುವುದಕ್ಕೆ ಯಾವ ಆಧಾರವೂ ಇಲ್ಲ ಎಂದು ನನಗನಿಸುತ್ತದೆ. ಆದರೆ ಭಾಗ 'ಬಿ'ಗೆ ಸೇರಿದ ರಾಜ್ಯಗಳ ವಿಚಾರವಾಗಿ ಹೇಳಬೇಕೆಂದರೆ ಇಂಥ ಆಶ್ವಾಸನೆ ಕೊಡುವುದು ನನಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಸರಳವಾದ ಕಾರಣವೆಂದರೆ ಭಾಗ 'ಬಿ' ರಾಜ್ಯಗಳಿಗಾಗಿ ೧೯೩೫ ರ ಅಧಿನಿಯಮದನ್ವಯ ಇಂಥ ಯಾವ ಪಟ್ಟಿಯನ್ನು ಸಿದ್ಧಪಡಿಸಲಿಲ್ಲ. ಇದರ ಪರಣಾಮವಾಗಿ, ಈ ಪಟ್ಟಿಗಳು ಇನ್ನೂ ಹೊಸದಾಗಿದ್ದು ಕೆಲವು ತಪ್ಪುಗಳು ನುಸುಳಿರುವ ಸಾಧ್ಯತೆ ಉಂಟು. ನನಗೇ ಗೋಚರಿಸಿರುವಂತೆ ಉಲಿಯಾ ಎಂಬ ಪ್ರಮುಖ ಸಮುದಾಯ, ಅದರ ಬಗ್ಗೆ ನನಗೆ ಚೆನ್ನಾಗಿ ಗೊತ್ತು, ಈ ಪಟ್ಟಿಯಲ್ಲಿ ಕಂಡುಬರುತ್ತಿಲ್ಲ. ಹಾಗಾಗಿ ಭಾಗ 'ಬಿ'ಗೆ ಸೇರಿದ ರಾಜ್ಯಗಳನ್ನು ಕುರಿತಂತೆ ಹೋಲಿಕೆಗಾಗಿ ನನ್ನ ಬಳಿ ಆಧಾರವಿಲ್ಲ. ಅದೇ ಭಾಗ 'ಎ' ಗೆ ಸಂಬಂಧಪಟ್ಟ ರಾಜ್ಯಗಳ ಪಟ್ಟಿ ಕರಾರುವಾಕ್ಕಾದ ಪಟ್ಟಿ ಎನಿಸಿಕೊಳ್ಳಬಲ್ಲದು.

ನನ್ನ ಸ್ನೇಹಿತರು ದೆಹಲಿಯನ್ನು ಕುರಿತು ಉಲ್ಲೇಖಿಸಿದರು. ಕೇಂದ್ರ ಲೋಕಸೇವಾ ಆಯೋಗ ಹೊರಡಿಸಿರುವ ಯಾವುದೋ ಪತ್ರವನ್ನು ಇಲ್ಲಿ ಹಾಜರುಪಡಿಸಿದರು. ಆ ಪಟ್ಟಿಯಲ್ಲಿ ಹೆಚ್ಚಿನ ಸಂಖ್ಯೆ ನಮೂದಾಗಿರುವುದು ನಿಜ. ಆದರೆ ನಾನು ಅದನ್ನು ಪರಿಶೀಲಿಸಿ ನೋಡಿರುತ್ತೇನೆ. ಇಲ್ಲಿ ನಾನು ಹೇಳಬಯಸುವುದೇನೆಂದರೆ ಈ ಮಸೂದೆಯ ಅಂಗವಾಗಿ ನಾವು ಸಿದ್ಧಪಡಿಸಿರುವ ಪಟ್ಟಿಗೆ ಹೋಲಿಸಿದರೆ, ನನಗೆ ಅನಿಸುವಂತೆ, ಶೇಕಡ ೩೦ರಷ್ಟು ನಮ್ಮ ಪಟ್ಟಿಯಲ್ಲಿ ಸೇರಿದೆ. ಅಲ್ಲಿಯೂ ಕೆಲವು ಹೆಸರುಗಳು ಮತ್ತೆ ಮತ್ತೆ ಕಂಡುಬರುತ್ತವೆ. ಒಂದೇ ಸಮುದಾಯವನ್ನು ಎರಡು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ ಅಷ್ಟೆ.

**ಡಾ. ದೇಶಮುಖ್:** ೬೪ ರ ಪೈಕಿ ಕೇವಲ ೩೯ ಮಾತ್ರ ಕಂಡುಬರುತ್ತದೆ.

**ಡಾ. ಅಂಬೇಡ್ಕರ್:** ಕೆಲವು ಸಮುದಾಯಗಳು ತಮ್ಮನ್ನು ರಾಮದಾಸಿಯಾ ಎಂದು ಕರೆದುಕೊಳ್ಳುವಂತೆ ರವಿದಾಸಿಯಾ ಎಂದೂ ಕರೆದುಕೊಳ್ಳುತ್ತದೆ. ಇನ್ನು ಕೆಲವನ್ನು ಧನುಕ್ ಹಾಗೂ ಧನು ಎಂದೂ ಹೆಸರುಗಳಿಂದ ಕರೆಯುತ್ತಾರೆ. ಇಂಥವು ಎರಡು ಬೇರೆ ಬೇರೆ ಸಮುದಾಯಗಳೊ ಅಥವಾ ಒಂದೇ ಸಮುದಾಯಕ್ಕೆ ಇರುವ ಎರಡು ಹೆಸರುಗಳೂ ಹೇಳುವುದು ಕಷ್ಟ. ನಾನು ಇಂತೆಡೆಗಳಲ್ಲಿ 'ಅಥವಾ' ಎಂಬ ಪದವನ್ನು ಕೈಬಿಟ್ಟು ಅವೆರಡೂ ಬೇರೆ ಬೇರೆ ಸಮುದಾಯಗಳು ಎಂಬುದಾಗಿ ತಿದ್ದುಪಡಿ ಮಾಡಲು ಒಪ್ಪುತ್ತೇನೆ.

ಅನಂತರ ಒಬ್ಬ ಮಾನ್ಯ ಸದಸ್ಯರು ಅಂಕಿ ಅಂಶಗಳನ್ನು ಪಡೆದುಕೊಳ್ಳಲು ಬಯಸಿದರು. ಆದರೆ ನಾನು ಅವರಿಗೆ ಹೇಳಬಹುದಾದುದೇನೆಂದರೆ ಈ ವಿಷಯದಲ್ಲಿ ಅನುಪಾತ ತುಂಬ ಕರಾರುವಾಕ್ಕಾಗಿರುವಂತೆ ನೋಡಿಕೊಂಡಿದ್ದೇನೆ.

ಚರ್ಚೆಯಲ್ಲಿ ಮುಂದೆಬಂದ ಎಲ್ಲ ಅಂಶಗಳ ವಿಚಾರವಾಗಿ ಇಲ್ಲಿ ಬೆಳಕು ಚೆಲ್ಲಲಾಗಿದೆಯೆಂದೂ ನಾನು ಯಾವ ಅಂಶವನ್ನೂ ಬಿಟ್ಟಿಲ್ಲ ಎಂದೂ ಭಾವಿಸುತ್ತೇನೆ. ಈ ಮಾತುಗಳೊಡನೆ ಸದರಿ ಮಸೂದೆಯನ್ನು ಅಂಗೀಕರಿಸುವಂತೆ ಶಿಫಾರಸುಮಾಡುತ್ತೇನೆ.

**ಶ್ರೀ ಯತಿರಾಜುಲು ನಾಯ್ಡು:** ನಾನು ಮಾನ್ಯಮಂತ್ರಿಗಳಿಂದ ಒಂದು ಸ್ಪಷ್ಟನೆಯನ್ನು ಬಯಸುತ್ತೇನೆ. ಒಂದು ರೀತಿಯಲ್ಲಿ ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳಿಗೆ ಸಂಬಂಧಪಟ್ಟಂತೆ ಅನುಚ್ಛೇದ ೩೪೧ ಮತ್ತು ೩೪೨ರಲ್ಲಿ ವ್ಯಾಖ್ಯಾನಿಸಲಾಗಿದೆ. ಆದರೆ ಭಾಗ 'ಸಿ' ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಯಾವುವು ಎಂಬುದಕ್ಕೆ ಸಂವಾದಿಯಾದ ವಿಧಿ ಸಂವಿಧಾನದಲ್ಲಿ ಕಂಡುಬರುತ್ತಿಲ್ಲ. ಸಂವಿಧಾನದಲ್ಲಿ ಬಳಕೆಯಾಗಿರುವ ಪದವೊಂದಕ್ಕೆ ಕಾನೂನು ಮೂಲಕ ಸಂಸತ್ತು ಪರಿಭಾಷಿಸಬಹುದೆ ಎಂಬುದು ನನಗೆ ಅನುಮಾನ ಉಂಟುಮಾಡುತ್ತದೆ. (ಡಾ. ಅಂಬೇಡ್ಕರ್: ಅದಕ್ಕೇನಂತೆ, ಮಾಡಬಹುದು) ಈ ಕ್ರಮವನ್ನು ಅನುಚ್ಛೇದ ೩೯೨ ರ ಅಡಿಯಲ್ಲಿ ರಾಷ್ಟ್ರಪತಿಯವರು ಕೈಗೊಳ್ಳಬೇಕಾದ ಅಗತ್ಯವಿಲ್ಲವೆ?

**ಅಧ್ಯಕ್ಷರು:** ಮಾನ್ಯ ಸದಸ್ಯರು ಮತ್ತು ವಿಚಾರವನ್ನು ಎತ್ತಿಕೊಂಡು ಗೊಂದಲಕ್ಕೀಡಾಗಿದ್ದಾರೆ. ಇವರು ಸಮಾಧಾನ ಚಿತ್ತದಿಂದ ಮಾನ್ಯಕಾನೂನು ಮಂತ್ರಿಗಳು ನೀಡಿದ ಉತ್ತರ ಕಡೆಗೆ ಕಣ್ಣುಹಾಯಿಸಿದರೆ ಅದರ ಪ್ರಶ್ನೆಗೆ ಉತ್ತರ ಸಿಗಬಹುದು.

ಪ್ರಸಕ್ತ ವಿಷಯ ಹೀಗಿದೆ:

> "೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮಕ್ಕೆ ತರುವಾಯ ತಿದ್ದುಪಡಿ ತರುವ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳಬಹುದಾಗಿದೆ."

ಮಸೂದೆಯನ್ನು ಅಂಗೀಕರಿಸಲಾಯಿತು.

**ಪ್ರಕರಣ ೨.**— (ಹೊಸ ಪ್ರಕರಣ ೩A ಇತ್ಯಾದಿಗಳ ಸೇರ್ಪಡೆ)

**ಶ್ರೀ ಜೆ.ಆರ್. ಕಪೂರ್:** ನಾನು ಈಗ ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪ್ರಕರಣ ೨ ರಲ್ಲಿ, ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದಲ್ಲಿ ಸೇರ್ಪಡೆಮಾಡಲು ಉದ್ದೇಶಿಸಿರುವ ಪ್ರಕರಣ ೩A ನಲ್ಲಿ ಈ ಬದಲಾವಣೆಯನ್ನು ಸೂಚಿಸಬಯಸುತ್ತೇನೆ:

> "೩A ಭಾರತದ ಸಂವಿಧಾನದ ಅಡಿಯಲ್ಲಿ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಾಗಿಡುವ ಉದ್ದೇಶಕ್ಕಾಗಿ ಭಾಗ 'ಸಿ' ರಾಜ್ಯದ ಅಡಿಯಲ್ಲಿ ಅವುಗಳನ್ನು ನಿರ್ದಿಷ್ಟಪಡಿಸಲಾಗಿರುವಂತೆ ಆರನೇ ಅನುಸೂಚಿಯಲ್ಲಿ ತೋರಿಸಲಾಗಿರುವ ಜಾತಿಗಳನ್ನು ಪರಿಶಿಷ್ಟಜಾತಿಗಳೆಂದೂ, ಹಾಗೆಯೆ ಭಾಗ 'ಸಿ' ರಾಜ್ಯದ ಅಡಿಯಲ್ಲಿ ಅವುಗಳನ್ನು ನಿರ್ದಿಷ್ಟಪಡಿಸಲಾಗಿರುವಂತೆ ಏಳನೇ ಅನುಸೂಚಿಯಲ್ಲಿ ತೋರಿಸಲಾಗಿರುವ ಪಂಗಡಗಳನ್ನು ಪರಿಶಿಷ್ಟ ಪಂಗಡಗಳೆಂದೂ ಪರಿಗಣಿಸತಕ್ಕದ್ದು."

ನನ್ನ ತಿದ್ದುಪಡಿಯ ಉದ್ದೇಶವೆಂದರೆ, ಇದರಿಂದಾಗಿ ಉದ್ದೇಶಿತ ಪ್ರಕರಣ ೩A ಯಲ್ಲಿ ಬರುವ ಉಪ–ಪ್ರಕರಣ (೧) ಹೊರಟುಹೋಗುತ್ತದೆ. ಹೊಸ ಪ್ರಕರಣದ ಉಪಪ್ರಕರಣ (೨) ಕ್ಕೆ ಸಂಬಂಧಿಸಿದಂತೆ ""ಈ ಅಧಿನಿಯಮದ ಉದ್ದೇಶಗಳಿಗಾಗಿ" ಎಂಬ ಮಾತುಗಳಿಗೆ ಬದಲಾಗಿ ನಾವು "ಭಾರತದ ಸಂವಿಧಾನದ ಅಡಿಯಲ್ಲಿ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಾಗಿಡುವ ಉದ್ದೇಶಕ್ಕಾಗಿ" ಎಂಬ ಮಾತುಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ.

**ಡಾ. ಅಂಬೇಡ್ಕರ್:** ಈ ತಿದ್ದುಪಡಿ ಸದರಿ ಮಸೂದೆಯ ವ್ಯಾಪ್ತಿಗಿಂತ ಪೂರ್ತಿಯಾಗಿ ಹೊರಗಿದೆಯೆಂದು ನಾನು ಹೇಳಬಹುದೆ? ನಾವು ಇಲ್ಲಿ ಮಾಡುತ್ತಿರುವುದು ಏನೆಂದು ಭಾಗ "ಸಿ' ಗೆ ಸೇರಿದ ಕೆಲವು ರಾಜ್ಯಗಳಿಗಾಗಿ ಮಾತ್ರ ಮೀಸಲು ಸ್ಥಾನಗಳನ್ನು ಕಲ್ಪಿಸುವ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. ಕೇವಲ ಆ ರಾಜ್ಯಗಳ ಸಲುವಾಗಿ ಮಾತ್ರ ನಾವು ಈ ಪಟ್ಟಿಯನ್ನು ತಯಾರಿಸುತ್ತಿದ್ದೇನೆ. ನಿಮ್ಮ ತಿದ್ದುಪಡಿಯ ಪ್ರಕಾರ

ಭಾಗ 'ಸಿ' ಯಲ್ಲಿರುವ ಎಲ್ಲ ಪರಿಶಿಷ್ಟ ಜಾತಿಗಳನ್ನು ತೆಗೆದುಕೊಂಡು ಪಟ್ಟಿ ತಯಾರಿಸಬೇಕಾಗುತ್ತದೆ ಅದೊಂದು ಬೇರೆ ಪ್ರಶ್ನೆ.

**ಶ್ರೀ ಜೆ.ಆರ್. ಕಪೂರ್:** ನನ್ನ ಮಾನ್ಯಮಿತ್ರರು ನನ್ನ ತಿದ್ದುಪಡಿಗೆ ಈ ಬಗೆಯ ವ್ಯಾಖ್ಯಾನವನ್ನು ಹೇಗೆ ಕೊಡುತ್ತಿದ್ದಾರೆ ನಾನರಿಯೆ. ಭಾಗ 'ಸಿ' ಗೆ ಸೇರಿದ ಎಲ್ಲ ರಾಜ್ಯಗಳಿಗೆ ಸಂಬಂಧಪಟ್ಟಂತೆ ಅಗತ್ಯವಾಗಿ ಒಂದು ಅನುಸೂಚಿ ಅಥವಾ ಪಟ್ಟಿ ಇರಬೇಕೆಂದು ನಾನು ನನ್ನ ತಿದ್ದುಪಡಿಯಲ್ಲಿ ಎಲ್ಲೂ ಹೇಳಿಲ್ಲ. ಮಸೂದೆಯಲ್ಲಿ ಈಗಾಗಲೆ ಕೊಡಲಾಗಿರುವ ಆರು ಮತ್ತು ಏಳು ಈ ಎರಡು ಅನುಸೂಚಿಗಳನ್ನು ಕುರಿತು ಮಾತ್ರ ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ಹೊಸ ಪಟ್ಟಿಯೊಂದನ್ನು ಸೇರಿಸಬೇಕೆಂದು ಅಥವಾ ಈ ಎರಡು ಅನುಸೂಚಿಗಳಿಗೆ ತಿದ್ದುಪಡಿ ತರಬೇಕೆಂದು ಕೂಡ ನಾನು ಕೇಳುತ್ತಿಲ್ಲ. ಉದ್ದೇಶಿತ ಪ್ರಕರಣ ೩A ನಲ್ಲಿ ಉಪ–ಪ್ರಕರಣ (೧) ನ್ನು ಕೈಬಿಡತಕ್ಕದ್ದು ಹಾಗೂ ಉಪ–ಪ್ರಕರಣ (೨) ನ್ನು ಕುರಿತಂತೆ ಅದರಲ್ಲಿ "ಈ ಅಧಿನಿಯಮದ ಉದ್ದೇಶಗಳಿಗಾಗಿ" ಎಂಬ ಪದಗಳಿಗೆ ಬದಲಾಗಿ "ಭಾರತದ ಸಂವಿಧಾನದ ಅಡಿಯಲ್ಲಿ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಾಗಿಡುವ ಉದ್ದೇಶಕ್ಕಾಗಿ" ಎಂಬ ಮಾತುಗಳನ್ನು ಸೇರಿಸಿಕೊಳ್ಳತಕ್ಕದ್ದು ಎಂಬುದು ನನ್ನ ಸಲಹೆ. ನಾನು ಈ ತಿದ್ದುಪಡಿಯನ್ನು ಏಕೆ ಮಂಡಿಸುತ್ತಿದ್ದೇನೆಂದರೆ ನನ್ನ ಅಭಿಪ್ರಾಯದಲ್ಲಿ ಅನುಚ್ಛೇದ ೩೩೦ ನಿರ್ದಿಷ್ಟವಾಗಿ ಲೋಕಸಭೆಯಲ್ಲಿ ಪ್ರತಿಯೊಂದು ರಾಜ್ಯಕ್ಕೂ ಸ್ಥಾನಗಳನ್ನು ಮೀಸಲಾಗಿಡಬೇಕೆಂಬ ಅವಕಾಶ ಮಾಡಿಕೊಡುತ್ತದೆ. ಹಾಗೂ ಸಂವಿಧಾನದ ಅನುಚ್ಛೇದ (೧) ರಲ್ಲಿ ಬರುವ 'ರಾಜ್ಯ' ಎಂಬ ಪದದಲ್ಲಿ ಭಾಗ 'ಎ' ಅಥವಾ ಭಾಗ 'ಬಿ' ಅಥವಾ ಭಾಗ 'ಸಿ' ಈ ಎಲ್ಲ ಪ್ರವೇಶಗಳಿಗೂ ಸೇರಿದ ರಾಜ್ಯಗಳು ಸೇರಿಕೊಳ್ಳುತ್ತವೆ. ಅನುಚ್ಛೇದ ೩೩೦ರಲ್ಲಿರುವ ಅವಕಾಶಗಳ ಬಗ್ಗೆ ನಾನು ದೃಢವಾದ ಅಭಿಪ್ರಾಯವನ್ನು ನಿನ್ನೆಯೂ ಸ್ಪಷ್ಟಪಡಿಸಿದ್ದೇನೆ. ಇವತ್ತು ಕೂಡ ಮತ್ತೆ ಅದನ್ನೇ ಹೇಳುತ್ತಿದ್ದೇನೆ. ಮಾನ್ಯ ಕಾನೂನು ಮಂತ್ರಿಗಳು ಕೆಲವು ನಿಮಿಷಗಳ ಹಿಂದೆ ಮಸೂದೆಯನ್ನು ಕುರಿತ ಚರ್ಚೆಗೆ ತಮ್ಮ ಉತ್ತರವನ್ನು ನೀಡುತ್ತಾ ಅನುಚ್ಛೇದ ೩೩೦ ನಿರ್ದಿಷ್ಟವಾಗಿ ಸ್ಥಾನಗಳ ಮೀಸಲಾತಿಗೆ ಅವಕಾಶ ಒದಗಿಸುತ್ತದೆ ಎಂಬುದಾಗಿ ಒಪ್ಪಿಕೊಳ್ಳುತ್ತಾರೆ. ಆದರೆ ಭಾಗ 'ಸಿ' ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳಿಗಾಗಿ ಒಂದು ನಿರ್ದಿಷ್ಟವಾದ ಅನುಸೂಚಿ ಅಥವಾ ಪಟ್ಟಿ ಎಲ್ಲಿಯವರೆಗೆ ಇರುವುದಿಲ್ಲವೊ, ಅಲ್ಲಿಯವರೆಗೆ ಅನುಚ್ಛೇದ ೩೩೦ನ್ನು ಈ ಉದ್ದೇಶಕ್ಕಾಗಿ ಅನ್ವಯಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂಬುದು ಅವರನ್ನು ಕಾಡುತ್ತಿರುವ ಸಮಸ್ಯೆ. ಆದರೆ ಗದ್ಯದಲ್ಲಿ ಅಂಥ ಯಾವುದೇ ಪಟ್ಟಿ ಇಲ್ಲದಿರುವುದರಿಂದ ಹಾಗೂ ಅನುಚ್ಛೇದ ೩೪೧ರನ್ವಯ ಅಂಥ ಪಟ್ಟಿಯನ್ನು ಸಿದ್ಧಪಡಿಸಲು ಸಾಧ್ಯವಾಗದಿರುವುದರಿಂದ ಪರಿಶಿಷ್ಟಜಾತಿಗಳಿಗಾಗಿ ಮತ್ತು ಪರಿಶಿಷ್ಟಪಂಗಡಗಳಿಗಾಗಿ ಒಂದು ಪ್ರತ್ಯೇಕವಾದ ಅನುಸೂಚಿ ಅಗತ್ಯವೆಂದು ಅವರು ಹೇಳುತ್ತಿದ್ದಾರೆ. ನಾನು ಈ ವಿಷಯವಾಗಿ ನಿನ್ನೆ ಮಾಡಿದ್ದ ಮನವಿಯನ್ನು ಇಂದು ಕೂಡ ಪುನರುಚ್ಚರಿಸುತ್ತಿದ್ದೇನೆ. ರಾಷ್ಟ್ರಪತಿಗಳು ಅನುಚ್ಛೇದ ೩೪೧ನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ, ಅಳವಡಿಸಿಕೊಂಡು ಈ ತೊಂದರೆಯನ್ನು ಬಗೆಹರಿಸಬಹುದಾಗಿತ್ತು. ಅದು ಅವರಿಗೆ ಪಥ್ಯವಾಗಲಿಲ್ಲ. ನನ್ನ ವಾದವನ್ನು ಈ ಸಭೆಯಲ್ಲಿ ಇಂದು ನಾನು ಪುನರಾವರ್ತಿಸುತ್ತಿಲ್ಲ, ಸಂಸತ್ತು ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಅನುಸೂಚಿಯೊಂದನ್ನು ಅಂಗೀಕರಿಸುವ ಅಗತ್ಯವಾದ ನಿಲುವು ಹಾಗೆಯೆ ಉಳಿದುಕೊಳ್ಳುತ್ತದೆ. ಭಾಗ 'ಸಿ' ಯಲ್ಲಿರುವ ರಾಜ್ಯಗಳ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಲೋಕಸಭೆಯಲ್ಲಿ ಮೀಸಲು ಸ್ಥಾನಗಳನ್ನು ಕಲ್ಪಿಸಿಕೊಡಲು ಮತ್ತು ಹೊಸದಾಗಿ ಈ ಶಾಸನ ಕ್ರಮವನ್ನು ಜಾರಿಗೆ ತರುವ ಅಗತ್ಯ ಖಂಡಿತ ಇರುವುದಿಲ್ಲ. ಸಂವಿಧಾನದ ಅನುಚ್ಛೇದ ೩೩೦ರಲ್ಲಿ ಈಗಾಗಲೆ ಈ

ಅವಕಾಶವನ್ನು ನಿರ್ದಿಷ್ಟವಾಗಿ ಮಾಡಿಕೊಡಲಾಗಿದೆ. ಆದ್ದರಿಂದ, ಪ್ರಕರಣ ೩A ನಲ್ಲಿರುವ ಉಪ–ಪ್ರಕರಣ (೧) ನಿಜಕ್ಕೂ ಅನಾವಶ್ಯಕವಾದ ಸೇರ್ಪಡೆಯಾಗುತ್ತದೆ.

ಪ್ರಕರಣ ೩A ನಲ್ಲಿ ಉಪ–ಪ್ರಕರಣ (೧) ಏಕೆ ಅನಾವಶ್ಯಕ ಎಂಬುದಕ್ಕೆ ನಮ್ಮ ಮುಂದೆ ಇನ್ನೂ ಒಂದು ಕಾರಣವಿದೆ. ಅದು ನಿರ್ದಿಷ್ಟವಾಗಿ–ಆದರೆ ಅನಾವಶ್ಯವಕಾಗಿ–ಮೀಸಲಾತಿ ಸ್ಥಾನಗಳನ್ನು ಕಲ್ಪಿಸುವುದೇ ಅಲ್ಲದೆ ಭಾಗ 'ಸಿ' ರಾಜ್ಯಗಳಿಗೆ ಸೇರಿದ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಸಲುವಾಗಿ ಲೋಕಸಭೆಯಲ್ಲಿ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳ ಸಂಖ್ಯೆ ಇಂತಿಷ್ಟು ಇರಬೇಕು ಎಂಬುದನ್ನು ಕೂಡ ಗೊತ್ತುಪಡಿಸುತ್ತದೆ. ಈ ಹಂತದಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಈ ಕ್ರಮವೇ ಸಂವಿಧಾನ ವಿರೋಧಿಯಾಗಿದೆ. ಏಕೆಂದರೆ ಅನುಚ್ಛೇದ ೩೩೦ ರ ಪ್ರಕರಣ (೨) ರನ್ವಯ ಭಾಗ 'ಸಿ' ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ಯಾವ ಅನುಪಾತದಲ್ಲಿ ಮೀಸಲು ಸ್ಥಾನಗಳು ನಿಗದಿಯಾಗತಕ್ಕದ್ದು ಎಂಬುದಕ್ಕೆ ಒಂದು ನಿರ್ದಿಷ್ಟವಾದ ಸೂತ್ರವನ್ನು ಗೊತ್ತುಮಾಡಲಾಗಿದೆ–ಆ ಸ್ಥಾನಗಳು ಆ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿರತಕ್ಕದ್ದು. ಇಲ್ಲಿ ಈ ಸಂಖ್ಯೆಯನ್ನು ಪೂರ್ತಿಯಾಗಿ ಅಲಕ್ಷಿಸಲಾಗುತ್ತಿದೆ. ಸೈದ್ಧಾಂತಿಕವಾಗಿ ಹೇಳಬೇಕೆಂದರೆ ಯಾದೃಚ್ಛಿಕವಾಗಿ ಯಾವುದೋ ಒಂದು ಸಂಖ್ಯೆಯಷ್ಟು ಸ್ಥಾನಗಳನ್ನು, ಇಲ್ಲೊಂದು ಅಲ್ಲೊಂದು ನಿಗದಿಪಡಿಸುವ ಸನ್ನಾಹ ಕಂಡುಬರುತ್ತದೆ. ವಿಂಧ್ಯಪ್ರದೇಶ, ದೇಹಲಿ, ಹೀಗೆಯೆ ಭಾಗ 'ಸಿ' ಗೆ ಸೇರಿದ ಇದರ ರಾಜ್ಯಗಳಲ್ಲಿ ಇವತ್ತು ಇರುವ ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟಪಂಗಡಗಳ ನಿರ್ದಿಷ್ಟವಾದ ಸಂಖ್ಯೆ ಖಂಡಿತವಾಗಿ ಗೊತ್ತಿರಬಹುದು. ಆದರೆ ಐದು ವರ್ಷಗಳ ಅನಂತರ ಪರಿಸ್ಥಿತಿ ಹೇಗಿರುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಇವತ್ತು ಬೆಳಗ್ಗೆಯಷ್ಟೆ, ನನ್ನ ಮಾನ್ಯ ಮಿತ್ರರಾದ ಶ್ರೀ ದೇಶಬಂಧು ಗುಪ್ತರವರು ಒಂದು ವಿಷಯವನ್ನು ನಮ್ಮ ಗಮನಕ್ಕೆ ತಂದರು. ಅವರು ಹೇಳುವ ಪ್ರಕಾರ ದೇಶದ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯಲ್ಲಿ ಪರಿಶಿಷ್ಟಜಾತಿಗಳಿಗೆ ಮತ್ತು ಪರಿಶಿಷ್ಟಪಂಗಡಗಳಿಗೆ ಸೇರಿದ ಜನರು ದೆಹಲಿಗೆ ಬಂದುಬಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದರೆ, ಪ್ರಸಕ್ತ ಮಸೂದೆಯಲ್ಲಿ ಹೇಳಲಾಗಿರುವ ವಿವಿಧ ಭಾಗ 'ಸಿ' ರಾಜ್ಯಗಳಲ್ಲಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟಪಂಗಡಗಳ ಜನರ ಸಂಖ್ಯೆಯಲ್ಲಿ ಗಮನಾರ್ಹ ಬದಲಾವಣೆ ಉಂಟಾಗುವುದು ಖಚಿತ. ಆಗ ಈ ಶಾಸನಕ್ರಮವನ್ನು ಮತ್ತೆ ತಿದ್ದುಪಡಿಗೊಳಪಡಿಸುವ ತಲೆನೋವು ಎದುರಾಗುತ್ತದೆ. ಹಾಗಾಗಿ, ಸಂವಿಧಾನದಲ್ಲೇ ಇದಕ್ಕಾಗಿ ಒಂದು ನಿರ್ದಿಷ್ಟ ಸೂತ್ರ ಈಗಾಗಲೆ ಲಭ್ಯವಿರುವ ಸಂದರ್ಭದಲ್ಲಿ, ಆ ಸೂತ್ರವನ್ನು ಬದಲಾಯಿಸುವ ಮುಕ್ತ ಅವಕಾಶ ಸಂಸತ್ತಿಗೆ ಇರುವುದಿಲ್ಲ. ಹಾಗಾಗಿ, ಭಾಗ 'ಎ' ಭಾಗ 'ಬಿ' ಅಥವಾ ಭಾಗ 'ಸಿ' ರಾಜ್ಯಗಳಿಗೆ ಸಂಬಂಧಪಟ್ಟಂತೆ ಯಾವುದೇ ಒಂದು ನಿರ್ದಿಷ್ಟ ಸಮಯಕ್ಕೆ ಲೋಕಸಭೆಯಲ್ಲಿ ಎಷ್ಟು ಮೀಸಲಾತಿ ಸ್ಥಾನಗಳು ಇರತಕ್ಕದ್ದು ಎಂಬುದನ್ನು ಕಂಡುಕೊಳ್ಳುವ ಕೆಲಸ ಚುನಾವಣಾ ಆಯುಕ್ತರಿಗೆ ಸೇರಿದ್ದು. ಆದ್ದರಿಂದ ನಾನು ನಿವೇದಿಸಿಕೊಳ್ಳುವುದೇನೆಂದರೆ ಉದ್ದೇಶಿತ ೩A ಪ್ರಕರಣದ ಉಪಪ್ರಕರಣ (೧) ಸಂವಿಧಾನ ವಿರೋಧಿಯಾಗಿದೆ ಹಾಗೂ ಅನಾವಶ್ಯಕವಾಗಿದೆ.

**ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

ಖಂಡ ೨ ರಲ್ಲಿ, ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದಲ್ಲಿ ಉದ್ದೇಶಿತ ಪ್ರಕರಣ ೩A ನಲ್ಲಿ ಕೆಳಕಂಡಂತೆ ಬದಲಾವಣೆಯನ್ನು ಸೂಚಿಸಲಾಗಿದೆ.

"೩A ಭಾರತದ ಸಂವಿಧಾನದ ಅಡಿಯಲ್ಲಿ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಾಗಿರುವ ಉದ್ದೇಶಕ್ಕಾಗಿ ಭಾಗ 'ಸಿ' ರಾಜ್ಯದ ಅರಿಯಲ್ಲಿ ಅವುಗಳನ್ನು ನಿರ್ದಿಷ್ಟಪಡಿಸಲಾಗಿರುವಂತೆ ಆರನೇ ಅನುಸೂಚಿಯಲ್ಲಿ ತೋರಿಸಲಾಗಿರುವ ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂದೂ, ಹಾಗೆಯೆ ಭಾಗ 'ಸಿ' ರಾಜ್ಯದ ಅಡಿಯಲ್ಲಿ ಅವುಗಳನ್ನು ನಿರ್ದಿಷ್ಟಪಡಿಸಲಾಗಿರುವಂತೆ ಏಳನೆಯ ಅನುಸೂಚಿಯಲ್ಲಿ ತೋರಿಸಲಾಗಿರುವ ಪಂಗಡಗಳನ್ನು ಪರಿಶಿಷ್ಟ ಪಂಗಡಗಳೆಂದೂ ಪರಿಗಣಿಸತಕ್ಕದ್ದು."

**ಸಾರಿಗೆ ಮತ್ತು ರೈಲ್ವೆ ರಾಜ್ಯ ಮಂತ್ರಿಗಳು (ಶ್ರೀ ಸಂತಾನಂ):** ಸಂಸತ್ತಿನಲ್ಲಿ ಶಾಸನ ಜಾರಿಯಾಗದ ಹೊರತು ಚುನಾವಣಾ ಆಯುಕ್ತರು ಯಾವುದೇ ಒಂದು ನಿರ್ದಿಷ್ಟ ರಾಜ್ಯಕ್ಕಾಗಿ ನಿರ್ದಿಷ್ಟಸಂಖ್ಯೆಯ ಸ್ಥಾನಗಳನ್ನು ಗೊತ್ತುಪಡಿಸುವುದು ಸಾಧ್ಯ ಎಂಬುದನ್ನು ನನ್ನ ಮಾನ್ಯ ಮಿತ್ರರು ಸೂಚಿಸುತ್ತಿದ್ದಾರೆಯೆ? ಅದು ಸಂಸತ್ತಿನ ಮೂಲಕವಾಗಿ ಆಗಬೇಕಲ್ಲವೆ?

**ಅಧ್ಯಕ್ಷರು:** ನನಗೆ ಈ ವಿಷಯ ಅರ್ಥವಾಗಿರುವ ಮಟ್ಟಿಗೆ ಅನುಚ್ಛೇದ ೩೩೦ರನ್ವಯ ಈ ರೀತಿಯ ಪ್ರಾತಿನಿಧ್ಯ ಅಲ್ಲಿಯ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಇರತಕ್ಕದ್ದೆಂಬ ಮಾರ್ಗಸೂಚಿ ಈಗಾಗಲೆ ದೊರೆತಿರುವುದರಿಂದ, ಚುನಾವಣಾ ಆಯುಕ್ತರಿಗೆ ಈ ಬಗ್ಗೆ ನಿರ್ದೇಶನ ದೊರಕಿದಂತಾಗಿದೆ. ಹಾಗಾಗಿ ಪ್ರತಿಯೊಂದು ರಾಜ್ಯಕ್ಕೂ ಖಚಿತವಾಗಿ ಎಷ್ಟು ಸ್ಥಾನಗಳು ನಿಗದಿಯಾಗಬೇಕು ಎಂಬುದನ್ನು ನಿರ್ಧರಿಸುವುದು ಚುನಾವಣಾ ಆಯುಕ್ತರ ಕೆಲಸವೇ ಹೊರತು, ಅದು ಈ ಸದನದ ಕೆಲಸವಲ್ಲ.....

**ಶ್ರೀ ಸಂತಾನಂ:** ಸರ್. ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆಂದು ಭಾವಿಸಬಹುದಾದರೆ, ಈ ಮಾರ್ಗಸೂಚಿ ನೀಡಲಾಗಿರುವುದು ಸಂಸತ್ತಿಗೇ ಹೊರತು ಚುನಾವಣಾ ಆಯುಕ್ತರಿಗೆ ಅಲ್ಲ. ಏಕೆಂದರೆ ಸ್ಥಾನಗಳ ವಿಚಾರವಾಗಿ ಸರಿಯಾಗಿ ಇಂತಿಷ್ಟು ಸಂಖ್ಯೆ ಎಂಬ ನಿರ್ಧಾರ ತೆಗೆದುಕೊಳ್ಳುವುದು ಸಂಸತ್ತೇ ಹೊರತು–ಚುನಾವಣಾ ಆಯುಕ್ತರು ಈ ಸಂಖ್ಯೆಯನ್ನು ನಿರ್ಧರಿಸಲು ಬರುವುದಿಲ್ಲ.

**ಡಾ. ಅಂಬೇಡ್ಕರ್:** ಲೋಕಸಭೆಯಲ್ಲಿ ಪ್ರಾತಿನಿಧ್ಯ ಕುರಿತಂತೆ ಅನುಚ್ಛೇದ ೮೨ ನಿರ್ದಿಷ್ಟವಾಗಿ ಹೇಳುತ್ತದೆ. ಅದರ ಒಕ್ಕಣೆ ಹೀಗಿದೆ:

"ಅನುಚ್ಛೇದ ೩೧ ರ ಖಂಡ (೧) ರಲ್ಲಿ ಏನೇ ಹೇಳಲಾಗಿದ್ದರೂ ಮೊದಲನೆಯ ಅನುಸೂಚಿಯ ಭಾಗ 'ಸಿ' ಯಲ್ಲಿ ನಿರ್ದಿಷ್ಟಪಡಿಸಲಾಗಿರುವ, ಹಾಗೂ ಆ ಖಂಡದಲ್ಲಿ ಅವಕಾಶಮಾಡಿರದೆ ಹೋದ ಯಾವುದೇ ಆಧಾರದ ಮೇಲೆ ಅಥವಾ ಯಾವುದೇ ರೀತಿಯಲ್ಲಿ ಯಾವುದೇ ರಾಜ್ಯದ ಒಳಭಾಗಕ್ಕೆ ಸೇರಿರದೆ ಹೋದ ಯಾವುದೇ ರಾಜ್ಯಕ್ಕೆ ಅಥವಾ ಭಾರತದ ಪ್ರದೇಶ ಇಲ್ಲವೆ ರಾಜ್ಯಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕಾನೂನು ಮೂಲಕವಾಗಿ ಲೋಕಸಭೆಯಲ್ಲಿನ ಪ್ರಾತಿನಿಧ್ಯಕ್ಕಾಗಿ ಅವಕಾಶ ಮಾಡಿಕೊಡಬಹುದಾಗಿದೆ."

ಇದೇ ತತ್ತ್ವವನ್ನು ಭಾಗ 'ಸಿ' ಗೆ ಸೇರಿದ ರಾಜ್ಯಗಳಿಗೆ ಕೂಡ ಅನ್ವಯಿಸುವುದು ಸಾಧ್ಯವಾಗದಿರುವುದರಿಂದ ಈ ವಿಶೇಷವಾದ ಅನುಚ್ಛೇದವನ್ನು ಸಿದ್ಧಪಡಿಸಲಾಗಿದೆ.

**ಶ್ರೀ ಜೆ.ಆರ್. ಕಪೂರ್:** ಅನುಚ್ಛೇದ ೮೨ ಹಾಗೂ ಅನುಚ್ಛೇದ ೩೪೧ ಇವೆರಡಕ್ಕೂ ಯಾವುದೇ ಸಂಬಂಧವಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅನುಚ್ಛೇದ ೮೨ ಹೇಳುವಂತೆ, ಭಾಗ 'ಸಿ' ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ, ಲೋಕಸಭೆಯಲ್ಲಿ ಜನ ಪ್ರಾತಿನಿಧ್ಯಕ್ಕೆ ಆಧಾರ, ಭಾಗ 'ಎ' ಮತ್ತು ಭಾಗ

'ಬಿ' ರಾಜ್ಯಗಳನ್ನು ಕುರಿತಂತೆ ಅನುಚ್ಛೇದ ೮೧ ರಲ್ಲಿ ನಿರ್ದಿಷ್ಟವಾಗಿ ಹೇಳಲಾಗಿದೆ. ಅದರಲ್ಲಿ ವ್ಯತ್ಯಾಸ ಇರಬಹುದು. ಅನುಚ್ಛೇದ ೮೧ ರನ್ವಯ ಜನಪ್ರಾತಿನಿಧ್ಯಕ್ಕೆ ಆಧಾರ ಪ್ರತಿ ೫ ರಿಂದ ೭ ೧/೨ ಲಕ್ಷ ಜನರಿಗೆ ಒಬ್ಬ ಪ್ರತಿನಿಧಿ ಎಂಬಂತೆ ಇದೆ. ಅನುಚ್ಛೇದ ೮೧ ರ ಛತ್ರಛಾಯೆಯಲ್ಲಿ ಈ ಸಂಸತ್ತು ಅನುಚ್ಛೇದ ೩೩೦ರ ಅಡಿಯಲ್ಲಿ ನಿರ್ಧಿಷ್ಟವಾಗಿ ಒದಗಿಸಲಾಗಿರುವ ಅವಕಾಶಗಳನ್ನು ತಾನೇ ಮೀರಿ ನಡೆಯುವ ಹಕ್ಕನ್ನು ಹೊಂದಿರುವುದಿಲ್ಲ. ತಾವು ಸರಿಯಾಗಿಯೆ ಹೇಳಿರುವಂತೆ, ಸರ್, ಅನುಚ್ಛೇದ ೩೩೦ರ ಅಡಿಯಲ್ಲಿ ಚುನಾವಣಾ ಆಯುಕ್ತರಿಗೆ ಸ್ವಲ್ಪಮಟ್ಟಿಗೆ ಗತಿಸದ ಲೆಕ್ಕಾಚಾರಗಳನ್ನು ಹಾಕುವ ನಿರ್ದೇಶನವನ್ನು ಈಗಾಗಲೆ ಸ್ಪಷ್ಟವಾಗಿ ನೀಡಲಾಗಿದೆ. ಅದು ಕೇವಲ ಸಣ್ಣ ಗತಿಸದ ಲೆಕ್ಕಾಚಾರವಾಗಿದ್ದು, ಇದನ್ನು ಮಾಡುವ ತೊಂದರೆ ಸಂಸತ್ತಿಗೆ ಬೇಡವೆಂದು ಸಂವಿಧಾನದ ನಿರ್ಮಾತೃಗಳು ಆಲೋಚಿಸಿದ್ದಿರಬೇಕು. ಇದು ಚುನಾವಣಾ ಆಯುಕ್ತರು ಮಾಡಬಹುದಾದ ಕಿಂಚಿತ್ ಗಣಿತದ ಲೆಕ್ಕಾಚಾರವಾಗಿದ್ದು ಇದರಲ್ಲಿ ಸಂಸತ್ ಹೆಚ್ಚುಕಡಿಮೆ ಮಾಡುವ ಅವಕಾಶ ಇರುವುದಿಲ್ಲ.

**ಶ್ರೀ ಸಂತಾನಂ:** ತಾವು ಅನುಚ್ಛೇದ ೮೧(೨) ಹಾಗೂ (೩) ಭಾಗಗಳನ್ನು ನೋಡಿದರೆ ಸರ್, ಎಲ್ಲ ಹೊಂದಾಣಿಕೆಗಳನ್ನು ಸಂಸತ್ತು ಕಾನೂನಿನ ಮೂಲಕವಾಗಿ ಮಾಡಬೇಕಾಗಿದೆ. ಪ್ರತಿಯೊಂದು ಜನಗಣತಿ ಮುಗಿದ ಮೇಲೂ ವಿವಿಧ ಚುನಾವಣಾ ಕ್ಷೇತ್ರಗಳ ಪ್ರಾತಿನಿಧ್ಯವನ್ನು ಕುರಿತಂತೆ ಸಂಸತ್ತು ಕಾನೂನಿನ ಮೂಲಕ ತೀರ್ಮಾನವನ್ನು ಕೈಗೊಳ್ಳಬೇಕು. ಚುನಾವಣಾ ಆಯುಕ್ತರು ಅಧಿಸೂಚನೆ ನೀಡುವುದರ ಮೂಲಕ ಸಂಸತ್ತಿಗಾಗಿ ಸ್ಥಾನಗಳನ್ನು ಹಂಚಿಕೆ ಮಾಡುವಂತಿಲ್ಲ.

**ಶ್ರೀ ಜೆ.ಆರ್. ಕಪೂರ್:** ಈಗಷ್ಟೆ ನನ್ನ ಮಾನ್ಯ ಮಿತ್ರರಾದ ಶ್ರೀ ಸಂತಾನಂ ಅವರು ಮುಂದಿಟ್ಟ ಪ್ರಸ್ತಾವವನ್ನು ನಾನು ಕೂಡಲೇ ಒಪ್ಪುತ್ತೇನೆ. ಈ ಬಾರಿಯೂ ನಾವು ಈಗಾಗಲೆ ಪ್ರಜಾಪ್ರಾತಿನಿಧ್ಯ ಮಸೂದೆಯನ್ನು ಅಂಗೀಕರಿಸಿದ್ದೇನೆ. ಆದರೆ ಒಂದು ನಿರ್ದಿಷ್ಟವಾದ ರಾಜ್ಯದಿಂದ ಲೋಕಸಭೆಗಾಗಿ ಎಷ್ಟು ಮಂದಿ ಪ್ರತಿನಿಧಿಗಳನ್ನು ನಾವು ಕಳುಹಿಸಿಕೊಡುತ್ತಿದ್ದೇವೆ ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ ಅಲ್ಲ. ನಾವು ಈಗಾಗಲೇ ಅದನ್ನು ಮಾಡಿದ್ದೇವೆ ಮತ್ತು ಈಗ ಅದಕ್ಕೆ ತಿದ್ದುಪಡಿ ಮಾಡಲು ನಾವು ಹೋಗುತ್ತಿಲ್ಲ. ಒಂದುವೇಳೆ ಹಾಗೆ ಮಾಡಬೇಕೆಂದರೂ ಅದಕ್ಕೊಂದು ತಿದ್ದುಪಡಿ ಮಸೂದೆ ತರಬೇಕಾಗುತ್ತದೆ. ಆದರೆ ಸದ್ಯದಲ್ಲಿ ನಾವು ಪರಿಗಣಿಸುತ್ತಿರುವ ಸಂಗತಿ ಇಷ್ಟ ಮಾತ್ರ: ಭಾಗ 'ಸಿ' ರಾಜ್ಯಗಳ ಸಲುವಾಗಿ ಈಗಾಗಲೆ ನಿಗದಿಯಾಗಿರುವ ಸ್ಥಾನಗಳ ಪೈಕಿ ಎಷ್ಟು ಸ್ಥಾನಗಳನ್ನು ಪರಿಶಿಷ್ಟಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲು ಇಡಬೇಕು? ನಾವು ಈಗ ಪರಿತಪಿಸುತ್ತಿರುವ ಪ್ರಸ್ತಾವ ಇಷ್ಟೇ ಹೊರತು ಒಂದು ರಾಜ್ಯಕ್ಕೆ ನಿರ್ದಿಷ್ಟವಾಗಿ ಎಷ್ಟು ಸ್ಥಾನಗಳನ್ನು ನಿಗದಿಗೊಳಿಸಬೇಕೆಂಬ ದೊಡ್ಡದಾದ, ವ್ಯಾಪಕವಾದ ಪ್ರಶ್ನೆ ನಮ್ಮ ಎದುರಿನಲ್ಲಿ ಇಲ್ಲ. ಈಗ ನಮ್ಮ ಮುಂದಿರುವ ಸೀಮಿತವಾದ ಪ್ರಶ್ನೆ ಏನೆಂದರೆ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಎಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕು ಎಂಬುದು. ನನ್ನ ಮನವಿ ಏನೆಂದರೆ ಈ ಉದ್ದೇಶಕ್ಕಾಗಿ ಯಾವುದೇ ಶಾಸನ ಕ್ರಮವನ್ನು ಜಾರಿಮಾಡುವ ಅಗತ್ಯವಿರುವುದಿಲ್ಲ. ಇದಕ್ಕೆ ಅಗತ್ಯವಾದ ನಿರ್ದೇಶನ ನಮಗೆ ಈಗಾಗಲೆ ಅನುಚ್ಛೇದ ೩೩೦ (೨) ರಲ್ಲಿ ದೊರೆತಿದೆ. ಇದನ್ನು ಕುರಿತಂತೆ ಚುನಾವಣಾ ಆಯುಕ್ತರು ಕಾಲ ಕಾಲಕ್ಕೆ ಸ್ವಲ್ಪ ಗಣಿತದ ಲೆಕ್ಕಾಚಾರಗಳನ್ನು ಹಾಕಿ (ಅ) ಎಷ್ಟು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಇದೆ ಹಾಗೂ (ಆ) ಅವುಗಳ ಸಂಖ್ಯೆಯನ್ನು ಆಧರಿಸಿ ಒಟ್ಟು ಸ್ಥಾನಗಳ ಪೈಕಿ ಅವರಿಗಾಗಿ ಎಷ್ಟನ್ನು ಮೀಸಲಾಗಿ ಇಡತಕ್ಕದ್ದು ಎಂಬುದನ್ನು ತಿಳಿಸಿದರೆ ಸಾಕಾಗುತ್ತದೆ.

ಈ ಉದ್ದೇಶಕ್ಕಾಗಿ ಇನ್ನೊಂದು ಉದ್ದೇಶಿತ ಪ್ರಕರಣ ೩A ಎಂಬುದನ್ನು ಜಾರಿಗೆ ಕೊಡುವುದು ಅನಾವಶ್ಯಕ ಮಾತ್ರವಲ್ಲ, ಸಂವಿಧಾನದ ನಿರ್ದಿಷ್ಟ ಅವಕಾಶಗಳಿಗೆ ವಿರುದ್ಧವೂ ಆಗುತ್ತದೆ. ಹಾಗಾಗಿ ಅದನ್ನು ಕೈಬಿಡಬೇಕು. ಸ್ಪಷ್ಟವಾಗಿಯೆ ಕಂಡುಬರುವಂತೆ ಇದು ಸಂವಿಧಾನ ವಿರೋಧಿ ಕ್ರಮವಾದುದರಿಂದ ನಾನು ಈ ಪ್ರಶ್ನೆಯನ್ನು ಎತ್ತಿದ್ದೇನೆ. ನಾನು ಸದನದ ಮುಂದೆ ಕೇಳಿಕೊಳ್ಳುವುದೇನೆಂದರೆ ಉದ್ದೇಶಿತ ಪ್ರಕರಣ ೩A ಸಂಬಂಧಪಟ್ಟಂತೆ ಉಪ–ಖಂಡ(೧) ಕ್ಕೆ ದಯವಿಟ್ಟು ತಾವು ಒಪ್ಪಬಾರದು, ಆದರೆ ಉಪಖಂಡ (೨)ನ್ನು, ನಾನು ಸೂಚಿಸಿರುವ ತಿದ್ದುಪಡಿಯೊಂದಿಗೆ ಒಪ್ಪಿಕೊಳ್ಳಬೇಕು.

ಭಾಗ 'ಸಿ' ಗೆ ಸೇರಿದ ರಾಜ್ಯಗಳಿಗಾಗಿ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಾಗಿಡುವ ಕ್ರಮಕ್ಕೆ ಸಂವಿಧಾನದಲ್ಲಿ ಅವಕಾಶ ಒದಗಿಸಿಲ್ಲವಾದ್ದರಿಂದ ಹೀಗೆ ಮಾಡಲಾಗುತ್ತಿದೆ ಎಂಬುದು ಮಾತ್ರ ಕಾನೂನು ಮಂತ್ರಿಗಳ ದೃಢ ನಿಲುವಾಗಿರುವ ಪಕ್ಷದಲ್ಲಿ, ಇಲ್ಲಿಯೂ ನಾವು ಅಂಥ ಅವಕಾಶವನ್ನು ಕಲ್ಪಿಸಲು ಸಾಧ್ಯವಾಗಲಾರದು ಎಂದು ಹೇಳಬಯಸುತ್ತೇನೆ. ಏಕೆಂದರೆ ಸಂವಿಧಾನದಲ್ಲಿ ದತ್ತರಾಗಿರುವ ನಿರ್ದಿಷ್ಟ ಅವಕಾಶಗಳಿಗೆ ಅನುಗುಣವಾಗಿ ಮಾತ್ರ ಲೋಕಸಭೆಯ ರಚನೆಯಾಗುತ್ತದೆ. ಇದಕ್ಕೆ ಈಗಾಗಲೆ ಸಂವಿಧಾನದಲ್ಲಿ ಅವಕಾಶ ಮಾಡಲಾಗಿದೆಯೆಂದು ನನ್ನ ವಾದ. ಆದರೆ ಮಾನ್ಯ ಕಾನೂನು ಮಂತ್ರಿಗಳ ನಿಲುವು ಬೇರೆ ರೀತಿಯಾಗಿದ್ದರೆ, ಅದು ತುಂಬ ಅಪಾಯಕಾರಿಯಾದ ಕ್ರಮವೆನಿಸಿಕೊಳ್ಳುತ್ತದೆ. ಅಂಥ ಸಂದರ್ಭದಲ್ಲಿ ಲೋಕಸಭೆಯ ರಚನೆ ಅಥವಾ ಪ್ರಾತಿನಿಧ್ಯ ಕುರಿತಂತೆ ಏನನ್ನಾದರೂ ಕ್ರಮಕೈಗೊಳ್ಳುವ ಸವಲತ್ತು ಸಂಸತ್ತಿಗೆ ಇಲ್ಲ ಎಂಬ ಅಂಶವನ್ನು ನಾವು ಬಲವಾಗಿ ಎತ್ತಿ ಹಿಡಿಯಬೇಕಾಗುತ್ತದೆ. ಅದು ಸಂವಿಧಾನದಲ್ಲಿರುವ ಒಂದು ಲೋಪ ಎಂದು ಭಾವಿಸಬಹುದು. ಕಣ್ತಪ್ಪಿನಿಂದ ಅಥವಾ ಉದ್ದೇಶಪೂರ್ವಕವಾಗಿ ಹಾಗೆ ಆಗಿರಬಹುದು. ಆದರೆ ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಕಾದಿರಿಸುವುದಕ್ಕಾಗಿ ಸಂವಿಧಾನದಲ್ಲಿ ಅವಕಾಶವನ್ನೇ ಮಾಡಲಾಗಿಲ್ಲ ಎಂಬುದು ಮಾನ್ಯ ಕಾನೂನು ಮಂತ್ರಿಗಳ ನಿಲುವಾಗಿದ್ದರೆ, ಆಗ ನಾವು ಅದಕ್ಕಾಗಿ ಏನೂ ಮಾಡಲಾಗುವುದಿಲ್ಲ. ನನ್ನ ಸ್ವಂತ ದೃಷ್ಟಿಕೋನದಿಂದ ಹೇಳುವುದಾದರೆ ಈಗಾಗಲೇ ಅಂಥ ವಿಧಿ ಅಥವಾ ಅವಕಾಶ ಅಲ್ಲಿ ಇದ್ದೇ ಇದೆ. ಹಾಗಾಗಿ ಇದರ ಸಲುವಾಗಿ ಇಂತಹ ಅಪಾಯಕಾರಿ ಶಾಸನಕ್ರಮವನ್ನು ಕೈಗೊಳ್ಳುವ ಅಗತ್ಯವಿಲ್ಲ. ನಾಳೆ ಇದು ಸಮಸ್ಯೆಗಳನ್ನು ಸೃಷ್ಟಿಮಾಡಿಕೊಂಡು ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋಗಿ ನಿಲ್ಲುವಂತಾಗಬಾರದು. ಆದ್ದರಿಂದ ನಾನು ಇನ್ನೊಮ್ಮೆ ಮನವಿ ಮಾಡಿಕೊಳ್ಳುವುದೇನೆಂದರೆ ಸದನ ದಯವಿಟ್ಟು ನನ್ನ ಅಭಿಪ್ರಾಯಕ್ಕೆ ಮನ್ನಣೆ ನೀಡಬೇಕು ಹಾಗೂ ನನ್ನ ತಿದ್ದುಪಡಿಯನ್ನು ಸಂತೃಪ್ತಿಯಿಂದ ಒಪ್ಪಿಕೊಳ್ಳಬೇಕು.

**ಪಂಡಿತ ಮುನೀಶ್ವರ ದತ್ತ ಉಪಾಧ್ಯಾಯ:** ನಾನು ಈ ದಿನ ಬೆಳಗ್ಗೆ ಮಾತನಾಡುತ್ತಿರಬೇಕಾದರೆ, ಸೂಕ್ಷ್ಮವಾದ ವಿವರಗಳ ಕಡೆಗೆ ಹೋಗಿರಲಿಲ್ಲ. ಆದರೆ ಇದೇ ವಿಚಾರವಾಗಿ ಇಲ್ಲಿ ಅನೇಕ ಭಾಷಣಗಳನ್ನು ಕೇಳಿದಾಗ ಮಾನ್ಯ ಕಾನೂನು ಮಂತ್ರಿಗಳು ತೆಗೆದುಕೊಳ್ಳುತ್ತಿರುವ ನಿಲುವು ಸರಿಯಾದುದಲ್ಲ ಎಂಬುದು ನಮಗೆ ಅರ್ಥವಾಗುತ್ತದೆ. ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಯನ್ನು ನಿರ್ದಿಷ್ಟಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಅವರ ನಿಲುವನ್ನು ಒಪ್ಪಲಾಗುವುದಿಲ್ಲ, ಏಕೆಂದರೆ ಇಂಥ ಪಟ್ಟಿಯನ್ನು ಸಿದ್ಧಪಡಿಸಲು ಸಾಧ್ಯವಾಗುವುದು ರಾಷ್ಟ್ರಪತಿಯವರಿಗೆ ಮಾತ್ರ.

**ಡಾ. ಅಂಬೇಡ್ಕರ್:** ಇಲ್ಲ, ನಾನು ಖಂಡಿತವಾಗಿ ಈ ಮಾತನ್ನು ಅಲ್ಲಗೆಳೆಯುತ್ತೇನೆ. ಅವರಿಗೆ ಹಾಗೆ ಮಾಡುವ ಅಧಿಕಾರ ಇಲ್ಲ.

ಟಿ. ೪೧೯೩–೩೨೨.

**ಪಂಡಿತ ಮುನೀಶ್ವರ ದತ್ತ ಉಪಾಧ್ಯಾಯ:** ಅನುಚ್ಛೇದ ೩೪೧ರನ್ವಯ ರಾಜ್ಯದ ರಾಜ್ಯಪಾಲ ಅಥವಾ ರಾಜಪ್ರಮುಖರ ಜೊತೆಯಲ್ಲಿ ಸಮಾಲೋಚಿಸಿ ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟಪಂಗಡಗಳ ಪಟ್ಟಿಯನ್ನು ತಯಾರಿಸಲು ಅಧಿಕೃತರಾಗಿರುವವರು ರಾಷ್ಟ್ರಪತಿಗಳು ಮಾತ್ರ. ಆ ರೀತಿಯ ಒಂದು ಪಟ್ಟಿಯನ್ನು ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳ ಸಲುವಾಗಿ ರಾಷ್ಟ್ರಪತಿಗಳು ಸಿದ್ಧಪಡಿಸಿದ್ದಾರೆ ಹಾಗೂ ಅದು ಗೆಜೆಟ್ಟಿನಲ್ಲಿ ಪ್ರಕಟಗೊಂಡಿದೆ. ಆದರೆ ಭಾಗ 'ಸಿ' ರಾಜ್ಯಗಳಿಗಾಗಿ ಇಂಥ ಯಾವುದೇ ಪಟ್ಟಿ ಇಲ್ಲ. ಹಾಗಾಗಿ ಭಾಗ 'ಸಿ' ರಾಜ್ಯಗಳ ಸಲುವಾಗಿ ಇಂಥ ಒಂದು ಪಟ್ಟಿಯನ್ನು ಸಿದ್ಧಪಡಿಸುವ ಅವಕಾಶ ರಾಷ್ಟ್ರಪತಿಯವರಿಗೆ ಇಲ್ಲ ಅನ್ನವುದಾದರೆ, ನನಗೆ ಅನಿಸುವಂತೆ ಅಂಥ ಒಂದು ಪಟ್ಟಿಯನ್ನು ತಯಾರಿಸುವ ಯಾವುದೇ ಬಗೆಯ ಅವಕಾಶ ಈ ಸದನಕ್ಕೆ ಕೂಡ ಇರುವುದಿಲ್ಲ.

**ಅಧ್ಯಕ್ಷರು:** ಮಾನ್ಯ ಸದಸ್ಯರು ಇಷ್ಟು ದೀರ್ಘವಾಗಿ ಯಾವ ಬಗೆಯ ತಾರ್ಕಿಕ ನಿಲುವನ್ನು ಇಲ್ಲಿ ಮುಂದಿಡಬಯಸುತ್ತಿದ್ದಾರೆ? ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟಪಂಗಡಗಳ ಸಲುವಾಗಿ ಪಟ್ಟಿಯನ್ನು ಸಿದ್ಧಪಡಿಸುವ ಸವಲತ್ತು ನಿರ್ದಿಷ್ಟವಾಗಿ ಸಂವಿಧಾನದಲ್ಲಿ ದತ್ತವಾಗಿಲ್ಲ ಎಂದ ಮಾತ್ರಕ್ಕೆ ಭಾಗ 'ಎ' ಮತ್ತು ಭಾಗ "ಬಿ' ರಾಜ್ಯಗಳನ್ನು ಹೊರತುಪಡಿಸಿ ಉಳಿದೆಡೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಯಾವುದೇ ಪ್ರಾಮುಖ್ಯ ಇರಬಾರದೆ? ಇದು ತಮ್ಮ ನಿಲುವೆ?

**ಪಂಡಿತ ಮುನೀಶ್ವರದತ್ತ ಉಪಾಧ್ಯಾಯ:** ಹೌದು. ಅನುಚ್ಛೇದ ೩೩೦ರಲ್ಲಿ ಇದಕ್ಕಾಗಿ ಅಗತ್ಯವಾದ ಸಾರ್ವತ್ರಿಕ ನಿರ್ದೇಶನವನ್ನು ಕೊಡಲಾಗಿದೆ. ಪರಿಶಿಷ್ಟ ಜಾತಿಗಳ ಮತ್ತು ಪಂಗಡಗಳ ಜನಸಂಖ್ಯೆಯನ್ನು ಆಧರಿಸಿ ಅದಕ್ಕೆ ಅನುಗುಣವಾಗಿ ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಹೇಳಲಾಗಿದೆ. ಹಾಗೆಯೆ ಸ್ಥಾನಗಳನ್ನು ಹಂಚಿಕೆ ಮಾಡಿದ ಅನಂತರ ಹಾಗೂ ಚುನಾವಣಾ ಆಯುಕ್ತರು ಚುನಾವಣಾ ಕ್ಷೇತ್ರಗಳ ಗಡಿನಿರ್ಧಾರಣ ಮಾಡಿದ ಅನಂತರ......

**ಅಧ್ಯಕ್ಷರು:** ಗಡಿನಿರ್ಧಾರ ಮಾಡುವ ವಿಷಯವನ್ನು ಈಗ ಪಕ್ಕಕ್ಕೆ ಇಡೋಣ. ಪರಿಶಿಷ್ಟ ಜಾತಿಗಳು ಅಂದರೆ ಯಾವುವು ಎಂಬುದನ್ನು ಈಗ ತೀರ್ಮಾನಿಸೋಣ. ಇನ್ನೊಂದು ಸಮಸ್ಯೆಯನ್ನು ಶ್ರೀ ಕಪೂರ್ ಅವರು ನಮ್ಮ ಮುಂದಿಟ್ಟಿದ್ದಾರೆ. ಆ ವಿಷಯವಾಗಿ ಮೊದಲು ಸ್ಪಷ್ಟಪಡಿಸಿಕೊಳ್ಳೋಣ.

**ಪಂಡಿತ ಮುನೀಶ್ವರ ದತ್ತ ಉಪಾಧ್ಯಾಯ:** ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಅನುಚ್ಛೇದ ೩೪೧ರಲ್ಲಿ ಒದಗಿಸಲಾಗಿರುವ ಅವಕಾಶವನ್ನು ಹೊರತುಪಡಿಸಿದರೆ ಪರಿಶಿಷ್ಟ ಜಾತಿಗಳನ್ನು ಮತ್ತು ಪರಿಶಿಷ್ಟ ಪಂಗಡಗಳನ್ನು ನಿರ್ದಿಷ್ಟಗೊಳಿಸುವ ಬೇರೆ ಯಾವ ಅವಕಾಶವೂ ಸಂವಿಧಾನದಲ್ಲಿ ಕಂಡುಬರುವುದಿಲ್ಲ. ಸಂಬಂಧಪಟ್ಟ ಗವರ್ನರ್ ಅಥವಾ ರಾಜಪ್ರಮುಖರ ಜೊತೆಯಲ್ಲಿ ಸಮಾಲೋಚಿಸಿ ರಾಷ್ಟ್ರಪತಿಗಳು ಸಿದ್ಧಪಡಿಸಿದ ಪಟ್ಟಿಯನ್ನು ಸಂಸತ್ತಿನ ಮುಂದೆ ಇಟ್ಟು ಭಾಗ 'ಸಿ' ರಾಜ್ಯಗಳಿಗೆ ಸಂಬಂಧಪಟ್ಟ ಪಟ್ಟಿಯಲ್ಲಿ ಇಂಥ ಜಾತಿಗಳನ್ನು ಸೇರಿಸಬೇಕು ಎಂದು ಹೇಳಿದ್ದರೆ ಆಗ ಹೆಚ್ಚು ಉಚಿತವಾಗಿರುತ್ತಿತ್ತು, ಅರ್ಥವಾಗುವ ಸಂಗತಿಯೆನಿಸುತ್ತಿತ್ತು. ಅದನ್ನು ಬಿಟ್ಟರೆ ಭಾಗ 'ಸಿ' ಗೆ ಸೇರಿದ ರಾಜ್ಯಗಳ ಸಲುವಾಗಿ ಈ ಜಾತಿಗಳಿಗಾಗಿ ಪಟ್ಟಿಗಳನ್ನು ಸಿದ್ಧಪಡಿಸುವ ಸ್ವತಂತ್ರ ಮಸೂದೆಯೊಂದನ್ನು ಸಾದರಪಡಿಸುವ ಯಾವುದೇ ಅಧಿಕಾರ ಸಂಸತ್ತಿಗೆ ಇರುವುದಿಲ್ಲ. ಇದು ನನ್ನ ತಿಳುವಳಿಕೆ. ಒಂದು ವೇಳೆ ಭಾಗ 'ಸಿ' ರಾಜ್ಯಗಳಿಗಾಗಿ ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟಪಂಗಡಗಳ ಸ್ವತಂತ್ರವಾಗಿ ಸಿದ್ಧಪಡಿಸುವ ಅಧಿಕಾರ ಈ ಸದನಕ್ಕೆ ಇದೆಯೆಂಬುದಕ್ಕೆ ಆಧಾರವಾಗಿ ಸಂವಿಧಾನದಲ್ಲಿ ಯಾವುದೇ ಅವಕಾಶವನ್ನು ನನ್ನ ಮಾನ್ಯ ಮಿತ್ರರು ತೋರಿಸಿಕೊಡುವುದಾದರೆ ಹೆಚ್ಚು ಸಂತೋಷಪಡುತ್ತೇನೆ.

**ಮಧ್ಯಾಹ್ನ ೪.೦೦ ಗಂಟೆ**

**ಡಾ. ಅಂಬೇಡ್ಕರ್:** ನಾನು ಮೊದಲಿಗೆ ಶ್ರೀ ಕಪೂರ್ ಅವರ ಅಭಿಪ್ರಾಯವನ್ನು–ಅವರ ತಿದ್ದುಪಡಿಯನ್ನು ಕುರಿತು ಚರ್ಚೆ ಮಾಡಲು ಇಷ್ಟಪಡುತ್ತೇನೆ. ಪರಿಶಿಷ್ಟ ಜಾತಿಗಳಿಗಾಗಿ ಪ್ರಾತಿನಿಧ್ಯ ಒದಗಿಸಿಕೊಡುವ ಅನುಚ್ಛೇದ ೩೩೦ನ್ನೇ ಅವರು ಉದ್ದಕ್ಕೂ ಅವಲಂಬಿಸಿಕೊಂಡು ಬಂದಿದ್ದಾರೆ. ಅವರ ಅಭಿಪ್ರಾಯ–ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿರುವೆನಾದರೆ–ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳಿಗೆ ಮಾತ್ರವಲ್ಲ ಭಾಗ 'ಸಿ' ರಾಜ್ಯಗಳಿಗೆ ಸಂಬಂಧಪಟ್ಟಂತೆ ಕೂಡ ಆ ಅವಕಾಶ ಅಪರ್ಯಾಪ್ತವಾಗಿದೆ ಎಂಬುದಾಗಿದೆ. ನಮ್ಮಿಬ್ಬರ ನಡುವೆ ಇರುವ ವ್ಯತ್ಯಾಸ ಅಂದರೆ ಅದೊಂದೇ ಈ ಸಂಬಂಧವಾಗಿ ಮಸೂದೆಯನ್ನು ತೋರಿಸಿರುವಂತಹ ಒಂದು ಪ್ರತ್ಯೇಕವಾದ ವಿಧಿ ಅಗತ್ಯವೆಂಬುದು ನನ್ನ ಅಭಿಪ್ರಾಯವಾದರೆ ಅಂಥ ಅವಕಾಶ ಅಗತ್ಯವಿಲ್ಲವೆಂಬುದು ಅವರ ನಿಲುವು. ಅದು ಅನುಚ್ಛೇದ ೩೩೦ರ ವ್ಯಾಪ್ತಿಗೆ ಬರುತ್ತದೆಂಬುದು ಅವರ ವಾದ. ಅವರ ಅಭಿಪ್ರಾಯವನ್ನು ನಾನು ಸರಿಯಾಗಿ ತಮ್ಮ ಮುಂದೆ ಇಡುತ್ತಿದ್ದೇನೆ ಅಂತ ಅಂದುಕೊಂಡಿದ್ದೇನೆ. ಇದು ಒಟ್ಟು ಸಾರಾಂಶ.

ಸದರಿ ಮಸೂದೆಯನ್ನು ನಾನು ಸದನದ ಮುಂದೆ ಮಂಡಿಸಿರುವುದಕ್ಕೆ ಆಧಾರ ಹಾಗೂ ನಾನು ಅದಕ್ಕಾಗಿ ಮಾಡುತ್ತಿರುವ ಪ್ರತಿಪಾದನೆಯ ಹಾದಿ ಹೀಗಿದೆ. ಈ ಮಸೂದೆಯನ್ನು ಮಂಡಿಸುತ್ತಿರುವುದರ ಕುರಿತು ಸದನದ ಮುಂದೆ ನನ್ನ ಮನವಿ ಹೀಗಿದೆ. ಸಂವಿಧಾನದನ ಅನುಚ್ಛೇದ ೩೬೬ರಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಒದಗಿಸಲಾಗಿರುವ ಒಂದು ಪರಿಭಾಷೆ ಇದೆ. ಅನುಚ್ಛೇದ ೩೬೬ ರ ಖಂಡ (೨೪) ಈ ರೀತಿ ಓದಿಕೊಳ್ಳುತ್ತದೆ:

> "ಈ ಸಂವಿಧಾನದ ಉದ್ದೇಶಕ್ಕಾಗಿ ಅನುಚ್ಛೇದ ೩೪೧ರಡಿಯಲ್ಲಿ ಪರಿಭಾವಿಸಲಾಗಿರುವಂತಹ ಜಾತಿಗಳು, ಜನಾಂಗಗಳು ಅಥವಾ ಪಂಗಡಗಳು ಇಲ್ಲದೆ ಇಂಥ ಜಾತಿಗಳ, ಜನಾಂಗಗಳ ಅಥವಾ ಪಂಗಡಗಳ ಒಳಗಡೆ ಸೇರಿಕೊಂಡಂತೆ ಬರುವ ಭಾಗಗಳನ್ನು ಅಥವಾ ಸಮೂಹಗಳನ್ನು "ಪರಿಶಿಷ್ಟಜಾತಿಗಳು' ಎಂಬುದಾಗಿ ಕರೆಯಲಾಗುತ್ತದೆ."

ಈಗ ಅನುಚ್ಛೇದ ೩೩೦ ರಲ್ಲಿ ಉಲ್ಲೇಖಿಸಲಾಗಿರುವ "ಪರಿಶಿಷ್ಟ ಜಾತಿಗಳು" ಹಾಗೂ ಅನುಚ್ಛೇದ ೩೬೬ ರ ಖಂಡ (೨೪) ರಲ್ಲಿ ಪರಿಭಾಷಿಸಲಾಗಿರುವ "ಪರಿಶಿಷ್ಟ ಜಾತಿಗಳು" ಇವೆರಡು ಒಂದೇ ಆಗಿವೆಯೆ ಎಂಬುದು ಚರ್ಚೆಗೆ ಬಿಟ್ಟ ಸಂಗತಿ, ಭಾಗ 'ಸಿ' ರಾಜ್ಯಗಳಿಗೆ ಸೇರಿದ ಪರಿಶಿಷ್ಟಜಾತಿಗಳು ಆ ಖಂಡದಲ್ಲಿರುವ ಪರಿಶಿಷ್ಟಜಾತಿಗಳು ಎಂಬುದರ ಅರ್ಥ ವ್ಯಾಪ್ತಿಯಲ್ಲಿ ಬರುತ್ತದೆಯೆ ಅಥವಾ ಇಲ್ಲವೆ ಎಂಬುದು ಹೇಳಲು ಬರುವುದಿಲ್ಲ.

**ಶ್ರೀ ಜೆ.ಆರ್. ಕಪೂರ್:** ನನ್ನ ತಿದ್ದುಪಡಿ ಅಂಥ ಅವಕಾಶವನ್ನು ಉದ್ದೇಶಿಸಿಯೇ ಮುಂದೆ ಬಂದಿರುವುದು.

**ಡಾ. ಅಂಬೇಡ್ಕರ್:** ನಾನು ಅದಕ್ಕೆ ಬರುತ್ತಿದ್ದೇನೆ. ಜನಸಂಖ್ಯೆಯನ್ನು ಆಧರಿಸಿ ಪ್ರಾತಿನಿಧ್ಯ ಸೂಚಿಸುವಂತೆ ನಿರ್ದೇಶಿಸುವ ಅನುಚ್ಛೇದ ೩೩೦, ಅನುಚ್ಛೇದ ೩೬೬ರ ಪ್ರಕರಣ ೨೪ರ ಪರಿಭಾಷೆಯ ವ್ಯಾಪ್ತಿಗೆ ಒಳಗಾಗದ ಪರಿಶಿಷ್ಟ ಜಾತಿಗಳಿಗೆ ಅನ್ವಯವಾಗತಕ್ಕದ್ದಲ್ಲ ಎಂಬುದು ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಡಬಹುದಾಗಿದೆ. ಅದು ಹಾಗಿದ್ದಮೇಲೆ ಅದಕ್ಕಾಗಿ ಒಂದು ಪ್ರತ್ಯೇಕ ಅವಕಾಶ ಒದಗಿಸಿಕೊಡುವ ಅಗತ್ಯವಿದೆ. ಶ್ರೀ ಕಪೂರ್ ಅವರ ಅಭಿಪ್ರಾಯಕ್ಕೆ ನನ್ನ ಉತ್ತರ ಇದೆ.

ಪಂಡಿತ ಮುನೀಶ್ವರದತ್ತ ಅವರು ಮುಂದಿಟ್ಟಿರುವ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ನಾನು ಹೇಳುವುದೇನೆಂದರೆ ಅನುಚ್ಛೇದ ೮೨ರಲ್ಲಿ ಕಂಡುಬರುವ ಪದಗಳು ವ್ಯಾಪಕವಾದ ಅರ್ಥವಲಯವನ್ನು ಹೊಂದಿವೆ. ಅದು ಹಾಗೆ ಹೇಳುತ್ತದೆ.

> "ಅನುಚ್ಛೇದ ೮೧ರ ಪ್ರಕರಣ ಒಂದರಲ್ಲಿ ಏನೇ ಇದ್ದರೂ, ಸಂಸತ್ತು ಮೊದಲನೆಯ ಅನುಸೂಚಿಯ ಭಾಗ 'ಸಿ' ಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಯಾವುದೇ ರಾಜ್ಯಕ್ಕೆ ಲೋಕಸಭೆಯಲ್ಲಿ ಕಾನೂನಿನ ಮೂಲಕ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡಬಹುದಾಗಿದೆ....."

ಈ ವಿಷಯವಾಗಿ ನಾನು ಹೇಳಬಯಸುವುದು ಹೀಗಿದೆ. ಭಾಗ 'ಸಿ' ಯಲ್ಲಿ ನಿರ್ದಿಷ್ಟಪಡಿಸಲಾಗಿರುವ ರಾಜ್ಯಗಳಿಗಾಗಿ ಲೋಕಸಭೆಯಲ್ಲಿ ಪ್ರಾತಿನಿಧ್ಯವನ್ನು ಕಲ್ಪಿಸುವ ಈ ಅಧಿಕಾರ ತುಂಬ ವ್ಯಾಪಕವಾಗಿದ್ದು ಪರಿಶಿಷ್ಟ ಜಾತಿಗಳಿಗೆ ಇಷ್ಟು ಸ್ಥಾನಗಳು ಹಾಗೂ ಸಾಮಾನ್ಯ ವರ್ಗಗಳಿಗೆ ಇಷ್ಟು ಸ್ಥಾನಗಳು ಎಂದು ಗೊತ್ತುಮಾಡುವ ಸವಲತ್ತು ಸಂಸತ್ತಿಗೆ ಇದ್ದೇ ಇದೆ. ಅವರು ನಿರ್ದಿಷ್ಟ ವಿಧಿಯನ್ನು ಕೋರುವುದರ ಮೂಲಕ ಏನನ್ನು ಬಯಸುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಒಂದು ವೇಳೆ ಭಾಗ 'ಸಿ' ಗೆ ಸೇರಿದ ಯಾವುದಾದರೂ ರಾಜ್ಯಕ್ಕಾಗಿ ಲೋಕಸಭೆಯಲ್ಲಿ ಅವಕಾಶವನ್ನು ಮಾಡಿಕೊಡುವ ಸಲುವಾಗಿ ಸಂಸತ್ತು ಪರಿಶಿಷ್ಟ ಜಾತಿಗಳಿಗಾಗಿ ಇಂತಿಷ್ಟು ಸಂಖ್ಯೆಯ ಸ್ಥಾನಗಳನ್ನು ಮೀಸಲಾಗಿ ಇರಿಸಬೇಕೆಂದು ತೀರ್ಮಾನಿಸಿದರೆ, ಈ ಸಂಬಂಧವಾಗಿ ನನ್ನ ಮನವಿ ಏನೆಂದರೆ ಅಂಥ ಪರಿಶಿಷ್ಟ ಜಾತಿಗಳು ಯಾವುವು ಎಂಬುದನ್ನು ಗೊತ್ತುಪಡಿಸುವ ಅಧಿಕಾರವೂ ಸಂಸತ್ತಿಗೆ ಇದ್ದೇ ಇರುತ್ತದೆ.

**ಶ್ರೀ ಜೆ.ಆರ್. ಕಪೂರ್:** ನಾನು ಒಂದು ಮಾತು ಹೇಳಬಹುದೆ?

**ಅಧ್ಯಕ್ಷರು:** ಉತ್ತರಿಸುವ ಮೂಲಕವೇ?

**ಶ್ರಿ ಜೆ.ಆರ್. ಕಪೂರ್:** ನನಗೆ ಉತ್ತರಿಸುವ ಅಧಿಕಾರ ಇದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ.

**ಅಧ್ಯಕ್ಷರು:** ಒಂದು ವೇಳೆ ಮಾನ್ಯ ಸದಸ್ಯರು ಈಗ ತಾನೆ ಮಾನ್ಯ ಕಾನೂನು ಮಂತ್ರಿಗಳು ಕೊಟ್ಟಿರುವ ಉತ್ತರವನ್ನು ಕುರಿತಂತೆ ಆಲೋಚನೆ ಮಾಡುತ್ತಿದ್ದರೆ, ಪ್ರಾಯಃ ತಮ್ಮ ತಿದ್ದುಪಡಿಗಾಗಿ ಒತ್ತಾಯಿಸದೆ ಇರಲು ಅವರು ಒಪ್ಪುತ್ತಾರೆಂದು ತಿಳಿಯುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ನಾನು ಒಂದು ಸಣ್ಣ ಅರಿಕೆಯನ್ನು ಮುಂದಿಟ್ಟು ಅನಂತರ ಈ ವಿಷಯವಾಗಿ ತಮ್ಮ ಮಾರ್ಗದರ್ಶನವನ್ನು ಕೋರುತ್ತೇನೆ.

**ಅಧ್ಯಕ್ಷರು:** ಈ ವಿಷಯವಾಗಿ ನಾನು ಏನನ್ನು ಅರ್ಥಮಾಡಿಕೊಂಡಿದ್ದೇನೆಯೋ ಅದನ್ನು ಇಲ್ಲಿ ಮತ್ತೆ ಹೇಳಿಬಿಡುತ್ತೇನೆ. ಏಕೆಂದರೆ, ನಾನು ಇದನ್ನು ಅರ್ಥಮಾಡಿಕೊಳ್ಳುವಲ್ಲಿ ಏನಾದರೂ ತಪ್ಪಾಗಿದೆಯೆಂದು ಮಾನ್ಯ ಸದಸ್ಯರು ತಮ್ಮ ಮನವಿಯ ಮಾತುಗಳಲ್ಲಿ ಎತ್ತಿ ಹೇಳುವ ಸಾಧ್ಯತೆ ಇರುತ್ತದೆ.

ಮಾನ್ಯ ಕಾನೂನು ಮಂತ್ರಿಗಳು–ನಾನು ತಪ್ಪು ಹೇಳುತ್ತಿದ್ದರೆ ಅವರು ಅದನ್ನು ಸರಿಪಡಿಸಲಿ– ಪರಿಶಿಷ್ಟಜಾತಿಗಳನ್ನು ಮತ್ತು ಪರಿಶಿಷ್ಟಪಂಗಡಗಳನ್ನು ಪತ್ತೆ ಹಚ್ಚುವುದು ಹೇಗೆ ಮತ್ತು ಆ ಪದಗಳನ್ನು ಅರ್ಥೈಸುವುದು ಹೇಗೆ ಎಂಬುದಾಗಿ ಚರ್ಚಿಸಿ ಅದರಲ್ಲಿರುವ ತೊಡಕುಗಳನ್ನು ಎತ್ತಿ ತೋರಿಸಿದ್ದಾರೆ. ಆ ತೊಡಕುಗಳು ಸರಿಯೆ, ಅದು ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆ ಉಂಟು. "ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟಪಂಗಡಗಳು" ಎಂಬ ಪದಗಳನ್ನು ಅನುಚ್ಛೇದ ೩೬೬ (೨೪) ಮತ್ತು (೨೫) ಇವುಗಳಲ್ಲಿ ಪರಿಭಾಷಿಸಲಾಗಿದೆ. ಈಗ ನಿರ್ದಿಷ್ಟವಾದ ೩೪೧ ಮತ್ತು ೩೪೨ ಅನುಚ್ಛೇದಗಳನ್ವಯ ಪರಿಶಿಷ್ಟಜಾತಿಗಳು

ಅಥವಾ ಪಂಗಡಗಳು ಎಂಬುದಾಗಿ ಭಾವಿಸಬಹುದಾದಂತಹ ಜಾತಿಗಳನ್ನು ಮತ್ತು ಪಂಗಡಗಳನ್ನು ಕುರಿತಂತೆ ಆ ಪರಿಭಾಷೆ ನಿರ್ದಿಷ್ಟವಾಗಿ ಹೇಳುತ್ತದೆ. ಆದರೆ ಭಾಗ 'ಸಿ' ರಾಜ್ಯಗಳನ್ನು ಕುರಿತಂತೆ ಹೇಳಬಹುದಾದರೆ ಸಂಸತ್ತಿನ ಪರಿಭಾಷೆಯಂತೆ ಯಾವುದನ್ನು ನೀವು ಪರಿಶಿಷ್ಟಜಾತಿಗಳು ಎಂದು ಕರೆಯುತ್ತೀರೋ ಅವುಗಳನ್ನು ಸಂವಿಧಾನದ ಅಡಿಯಲ್ಲಿ ಪರಿಶಿಷ್ಟಜಾತಿಗಳು ಎಂಬುದಾಗಿ ಗುರುತಿಸದೆ ಹೋಗಬಹುದು ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸಂವಿಧಾನದನ್ವಯ ಪರಿಶಿಷ್ಟಜಾತಿಗಳನ್ನು ಗುರುತಿಸುವ ನಿಟ್ಟಿನಲ್ಲಿ ಅನುಚ್ಛೇದ ೩೩೦ ಮಾರ್ಗದರ್ಶನ ನೀಡುತ್ತದೆಯಾದರೂ, ಆ ಅನುಚ್ಛೇದ ೩೩೦ರಲ್ಲಿ ಭಾಗ 'ಸಿ' ರಾಜ್ಯಗಳಿಗೆ ಸೇರಿದ ಪರಿಶಿಷ್ಟಜಾತಿಗಳ ಪ್ರಾತಿನಿಧ್ಯಕ್ಕೆ ಅವಕಾಶ ಕಂಡು ಬರುವುದಿಲ್ಲ. ಇದೇ ತಾನೆ ನಿಮ್ಮ ಆಶಯ?

**ಡಾ. ಅಂಬೇಡ್ಕರ್:** ಹೌದು, ನನ್ನ ಆಶಯ ಇದೇ.

**ಅಧ್ಯಕ್ಷರು:** "ಅಲ್ಲಿ ಹೆಚ್ಚುವರಿ ಅಂಶಗಳಿರಲಿ, ಒಂದು ವೇಳೆ ನೀವು ಅದನ್ನು ಹಾಗೆ ಕರೆಯುವುದಿದ್ದರೆ, ಅದರ ಸ್ಥಿತಿ ಏನೆಂಬುದನ್ನು ಖಚಿತಪಡಿಸಿಕೊಳ್ಳಬಾರದೆ?" ಆದ್ದರಿಂದ ಶಾಸನಕ್ರಮದಲ್ಲಿ ಹೆಚ್ಚುವರಿ ಅಂಶಗಳು ಸೇರಿಕೊಂಡಿರುತ್ತದೆ ಎಂದು ಭಾವಿಸಬಹುದಾದರೂ ಅದು ಹಾಗೆ ಇರಲಿ ಬಿಡಿ, ಅದರಿಂದ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವನ್ನು ಕುರಿತಂತೆ ಯಾವುದೇ ತಾಂತ್ರಿಕ ಅಥವಾ ಕಾನೂನು ಸಂಬಂಧವಾದ ತೊಡಕುಗಳು ಬರದಿದ್ದರಾಯಿತು. ಅವರು ಅದನ್ನು ಆದಷ್ಟೂ ಸ್ಪಷ್ಟವಾಗಿ ನಿರೂಪಿಸಬಯಸುತ್ತಾರೆ ಹಾಗೂ ವಕೀಲರ ಚಾಕಚಕ್ಯತೆಗೆ ಅಥವಾ ಕಾನೂನಿನ ತಾಂತ್ರಿಕ ಅಂಶಗಳಿಗೆ ಏನನ್ನೂ ಬಿಡಲು ಇಚ್ಛಿಸುವುದಿಲ್ಲ.

**ಶ್ರೀ ಜೆ.ಆರ್. ಕಪೂರ್:** ಸರ್, ಮಾನ್ಯ ಡಾ. ಅಂಬೇಡ್ಕರ್ ಅವರ ವಾದ ಮೇಲುನೋಟಕ್ಕೆ ಸಾಕಷ್ಟು ಸಮಂಜಸವಾಗಿಯೇ ಇದೆ.

**ಅಧ್ಯಕ್ಷರು:** ಹಾಗಿದ್ದರೆ ಅದರ ಮೇಲೆ ಮತ್ತೆ ಉತ್ತರಿಸುವುದು ಬೇಡ.

**ಶ್ರೀ ಜೆ.ಆರ್. ಕಪೂರ್:** ಅನುಚ್ಛೇದ ೩೬೬ ರಲ್ಲಿ ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟಪಂಗಡಗಳಿಗೆ ನೀಡಲಾಗಿರುವ ಪರಿಭಾಷೆ ಪರಿಪೂರ್ಣವಾದ ಪರಿಭಾಷೆಯೇನಲ್ಲ. ಈ ಪರಿಭಾಷೆಯನ್ನು ಅನುಚ್ಛೇದ ೩೬೬ ರ ಪ್ರಸ್ತಾವನೆ ಅಥವಾ ಮೊದಲ ಮಾತುಗಳ ಜೊತೆಯಲ್ಲಿ ಓದಿಕೊಳ್ಳಬೇಕಾಗುತ್ತದೆ. ಅದರ ಒಕ್ಕಣೆ ಹೀಗಿದೆ; "ಈ ಸಂವಿಧಾನದಲ್ಲಿ, ಸಂದರ್ಭಕ್ಕೆ ಬೇರೆ ರೀತಿಯಲ್ಲಿ ಅಗತ್ಯವಾಗದ ಹೊರತು, ಈ ಕೆಳಗಿನ ಉಕ್ತಿಗಳು ಅನುಕ್ರಮವಾಗಿ ಅವುಗಳಿಗೆ ಸೂಚಿಸಿದ ಅರ್ಥಗಳನ್ನು ಹೊಂದಿರುತ್ತದೆ...." ಅಂದಮೇಲೆ ಮೇಲ್ನೋಟಕ್ಕೆ ಕಾಣುವಂತೆಯೇ ಅನುಚ್ಛೇದ ೩೩೦ರ ಸಂದರ್ಭ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಈ ಪರಿಭಾಷೆಗೆ ಹೊಂದಿಕೊಳ್ಳುವುದಿಲ್ಲ.

ಅನುಚ್ಛೇದ ೩೩೦ರ ಸಂದರ್ಭ ಸ್ಪಷ್ಟವಾಗಿ ಹೇಳುವಂತೆ ಲೋಕಸಭೆಯಲ್ಲಿ ಪರಿಶಿಷ್ಟಜಾತಿಗಳಿಗೆ ಮತ್ತು ಪರಿಶಿಷ್ಟಪಂಗಡಗಳಿಗೆ ಸ್ಥಾನಗಳ ಮೀಸಲಾತಿ ಇರತಕ್ಕದ್ದು. ಆದ್ದರಿಂದ ಈ ಪರಿಭಾಷೆಗಳನ್ನು ಅವುಗಳ ಮುಖಬೆಲೆಯಲ್ಲಿ ತೆಗೆದುಕೊಳ್ಳಲಾಗದು.

**ಅಧ್ಯಕ್ಷರು:** ಸಂವಿಧಾನದಲ್ಲಿ ಇದರ ಸ್ಥಿತಿ ಇನ್ನೂ ಸಂದೇಹಾಸ್ಪದವಾಗಿದೆ ಮತ್ತು ಅನಿರ್ದಿಷ್ಟವಾಗಿ ಇದೆ ಎಂಬುದರತ್ತ ಮಾನ್ಯ ಸದಸ್ಯರ ಗಮನ ಸೆಳೆಯಬಯಸುತ್ತೇನೆ. ಅದಕ್ಕಾಗಿಯೇ ನಾವು ಈಗ ವಿಶೇಷ ಶಾಸನಕ್ರಮಕ್ಕಾಗಿ ವ್ಯವಸ್ಥೆ ಮಾಡುತ್ತಿರುವುದು.

**ಶ್ರೀ ಜೆ.ಆರ್. ಕಪೂರ್:** ಈ ಎರಡನೇ ವಿಷಯ ಕುರಿತಂತೆ ಹಾಗಾದರೆ ಏನು ಮಾಡೋಣ? ಅನುಚ್ಛೇದ ೩೩೦ರ ಖಂಡ (೨)ರಲ್ಲಿ ಸೂಚಿಸಲಾಗಿರುವ ಸೂತ್ರಕ್ಕೆ ಬದಲಾಗಿ ನಾವು ಒಂದು ಸಂಖ್ಯೆಯನ್ನು

ಗೊತ್ತುಪಡಿಸಲು ಸಾಧ್ಯವೇ?

**ಅಧ್ಯಕ್ಷರು:** ಭಾಗ 'ಸಿ' ರಾಜ್ಯಗಳ ಪ್ರಾತಿನಿಧ್ಯದ ಉದ್ದೇಶಕ್ಕಾಗಿ ಪರಿಶಿಷ್ಟ ಜಾತಿಗಳನ್ನು ಕುರಿತಂತೆ ಒಂದು ವಿಶೇಷ ಪರಿಭಾಷೆಯನ್ನು ಸುರಕ್ಷತೆಯ ಉದ್ದೇಶದಿಂದ, ಇಟ್ಟುಕೊಳ್ಳುವುದು ಉತ್ತಮವೆಂಬ ವಾದವನ್ನು ಒಪ್ಪುವುದಾದರೆ ಉಳಿದೆಲ್ಲ ವಿಚಾರಗಳು ತಮ್ಮಷ್ಟಕ್ಕೆ ತಾವೇ ಸುಸೂತ್ರವಾಗಿ ಮುಂದೆ ಹೋಗುತ್ತವೆ. ಇವೆರಡೂ ಒಟ್ಟಿಗೆ ಹೋಗುವಂಥವು. ನೀವು ಒಂದು ಉದ್ದೇಶಕ್ಕಾಗಿ ಪರಿಭಾಷೆಯನ್ನು ಅವಲಂಬಿಸುವುದು ಹಾಗೂ ಇನ್ನೊಂದಕ್ಕಾಗಿ ಅದನ್ನು ಕೈಬಿಡುವುದು ಸರಿಯಾದ ರೀತಿಯಲ್ಲ.

**ಶ್ರೀ ಜೆ.ಆರ್. ಕಪೂರ್:** ಸಂವಿಧಾನದಲ್ಲಿ ನಿರ್ದಿಷ್ಟವಾಗಿ ಅವಕಾಶ ಒದಗಿಸದ ಹೊರತು ಜನಸಮುದಾಯದ ಯಾವುದೇ ಒಂದು ವರ್ಗಕ್ಕಾಗಿ ಸ್ಥಾನಗಳನ್ನು ಮೀಸಲಾಗಿ ಇಡುವ ಸವಲತ್ತು ಸಂಸತ್ತಿಗೆ ಇರುತ್ತದೆ ಎಂಬುದು ತಮ್ಮ ಅಭಿಪ್ರಾಯ ಅಥವಾ ತಾವು ಕೊಡುತ್ತಿರುವ ರೂಲಿಂಗ್ ಎಂದು ಭಾವಿಸಬಹುದೇ? ಒಂದು ವೇಳೆ ಅಂಥ ಅವಕಾಶವಿಲ್ಲದಿದ್ದರೆ ನಾವೇನಾದರೂ ಮಾಡಲು ಸಾಧ್ಯವೇ ?

**ಅಧ್ಯಕ್ಷರು:** ಮೊದಲನೆಯದಾಗಿ ಹೇಳುವುದಾದರೆ ಆ ಪ್ರಶ್ನೆಯೇ ಏಳುವುದಲ್ಲ. ಅದು ಸಮಸ್ಯಾತ್ಮಕವಾದದು. ಹಾಗಾಗಿ ಪದೇ ಪದೇ ಅದನ್ನು ಅರ್ಥೈಸಲು ಸಭಾಧ್ಯಕ್ಷರನ್ನು ಕೇಳುವುದು ಉಚಿತವಲ್ಲ ಎಂಬ ವಿಷಯ ತುಂಬ ಸ್ಪಷ್ಟವಾಗಿದೆ. ಸಂವಿಧಾನವನ್ನು ವಿಶೇಷವಾಗಿ ಮತ್ತು ವ್ಯಾಪಕವಾಗಿ ಅರ್ಥೈಸುವ ಗೋಜಿಗೆ ನಾವು ಹೋಗುತ್ತಿಲ್ಲ.

**ಡಾ. ದೇಶಮುಖ್:** ಪ್ರಜಾಪ್ರಾತಿನಿಧ್ಯ ಅಧಿನಿಯಮ ಪ್ರಕರಣ ೬ರನ್ನು ಕುರಿತಂತೆ ಶ್ರೀ ದೇಶಪಾಂಡೆಯವರು ಎತ್ತಿರುವ ಆಕ್ಷೇಪವನ್ನು ತಾವು ಪರಿಗಣಿಸಿದ್ದೀರಾ? ಆ ಪ್ರಕಾರ ಸಂಖ್ಯೆಯನ್ನು ರಾಷ್ಟ್ರಪತಿಗಳು ನಿರ್ಧರಿಸಬೇಕೇ ಹೊರತು, ಸಂಸತ್ತು ನಿರ್ಧರಿಸುವುದಲ್ಲ.

**ಅಧ್ಯಕ್ಷರು:** ನಾವು ಮತ್ತೆ ಅದೇ ವಿಷವರ್ತುಲದಲ್ಲಿದ್ದೇವೆ. ಅನುಚ್ಛೇದವನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದೇವೆಯೋ ಅವರ ಅರ್ಥವನ್ನು ಕೂಡ ಅದೇ ಆಧಾರದ ಮೇಲೆ ವಾಸ್ತವವಾಗಿ ಪರಿಗಣಿಸಬೇಕಾಗುತ್ತದೆ. ಈಗ ನಾವು ಅದರಲ್ಲಿ ಹೋಗುವುದು ಬೇಡ. ಈ ಚರ್ಚೆಗಳು ನಿಸ್ಸಂದೇಹವಾಗಿ ಕುತೂಹಲಕಾರಿಯಾಗಿವೆ ಮತ್ತು ಶಾಸನಕ್ರಮದ ವಿವಿಧ ಅಂಶಗಳ ಮೇಲೆ ಬೆಳಕು ಚೆಲ್ಲುತ್ತಾ ಆಸಕ್ತಿ ಹುಟ್ಟಿಸುವಂತಿವೆ. ಆದರೆ ನಾವು ಸಾಮಾನ್ಯ ಮನುಷ್ಯರಂತೆ ಸಾಮಾನ್ಯ ತಿಳುವಳಿಕೆ ಆಧಾರದ ಮೇಲೆ ಶಾಸನವನ್ನು ರಚಿಸೋಣ.

ಮಾನ್ಯ ಸದಸ್ಯರ ತಿದ್ದುಪಡಿಯನ್ನು ಕುರಿತಂತೆ, ಸದನ ಅದನ್ನು ಪರಿಗಣಿಸಬೇಕಾಗಿ ಸೂಚಿಸುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ಅದೇ ನಿಮ್ಮ ಅಭಿಪ್ರಾಯವಾದರೆ ಸದನದ ಮುಂದೆ ಇಡುವ ಅಗತ್ಯವಿಲ್ಲ.

**ಅಧ್ಯಕ್ಷರು:** ಅವರು ನನ್ನ ಅಭಿಪ್ರಾಯವನ್ನು ಅವಲಂಬಿಸಬೇಕಾಗಿಲ್ಲ, ಅದು ತಪ್ಪಾಗಿರಬಹುದು.

**ಶ್ರೀ ಜೆ.ಆರ್. ಕಪೂರ್:** ಇಲ್ಲ, ಸರ್ ನಾನು ನಿಮ್ಮ ಉನ್ನತ ಮಟ್ಟದ ವಿವೇಕವನ್ನು ಅದರಲ್ಲೂ ಕಾನೂನಿಗೆ ಸಂಬಂಧಪಟ್ಟಂತೆ ನಿಮ್ಮ ಅಭಿಪ್ರಾಯವನ್ನು ಗೌರವಿಸುತ್ತೇನೆ. ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಸದನದ ಅನುಮತಿ ಕೋರುತ್ತೇನೆ.

ಸದರಿ ತಿದ್ದುಪಡಿಯನ್ನು ಸದನದ ಅನುಮತಿಯೊಂದಿಗೆ ಹಿಂದಕ್ಕೆ ತೆಗೆದುಕೊಳ್ಳಲಾಯಿತು.

**ಅಧ್ಯಕ್ಷರು:** ಈಗ ವಿಷಯ ಏನೆಂದರೆ:

"ಖಂಡ ೨ ಎಂಬುದು ಮಸೂದೆಯ ಒಂದು ಭಾಗವಾಗಿರತಕ್ಕದ್ದು."

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

ಖಂಡ ೨ ನ್ನು ಮಸೂದೆಗೆ ಸೇರಿಸಲಾಯಿತು

**ಖಂಡ ೩.**— (೬ ಮತ್ತು ೭ ನೇ ಅನುಸೂಚಿ ಇತ್ಯಾದಿಗಳ ಸೇರ್ಪಡೆ)

**ಅಧ್ಯಕ್ಷರು:** ಇಲ್ಲಿ ನನ್ನ ಮುಂದೆ ಹಲವಾರು ತಿದ್ದುಪಡಿಗಳಿವೆ. ಪ್ರಾಯಃ ಇಲ್ಲಿ ಸಣ್ಣ ಪುಟ್ಟ ತಿದ್ದುಪಡಿಗಳು ಕಾಗುಣಿತದ ತಪ್ಪುಗಳು ಅಥವಾ ಹೆಸರುಗಳನ್ನು ಸರಿಯಾದ ಕ್ರಮದಲ್ಲಿ ಹಾಕುವುದು ಇಂಥವೇ ಇಲ್ಲಿವೆ. ಉದಾಹರಣೆಗೆ "ಆದಿ–ಧರ್ಮಿ" ಇಂಥ ಪದಗಳ ಇಂಗ್ಲಿಷ್ ರೂಪದಲ್ಲಿ ವ್ಯತ್ಯಾಸವಿದೆ. ಇದು ಕಾಗುಣಿತದ ತಪ್ಪು ಮಾತ್ರ ಅಷ್ಟೆ. ಇದನ್ನು ಸರಿಪಡಿಸಲಾಗುವುದು. ಇದನ್ನು ತಿದ್ದುಪಡಿಯ ರೂಪದಲ್ಲಿ ಪರಿಗಣಿಸುವ ಅಗತ್ಯವಿದೆಯೆ ?

**ಡಾ. ಅಂಬೇಡ್ಕರ್:** ಸರ್, ಉದ್ದೇಶಿತ ಅನುಸೂಚಿ ೬ ರ ಖಂಡ ೩ ರಲ್ಲಿ ೧೪ ನೆಯ ನಮೂದಾಗಿರುವ 'ದೆಹಲಿ' ಎಂಬುದರ ಅಡಿಯಲ್ಲಿ 'ಧನಕ್' ಎಂಬ ಪದಕ್ಕೆ 'ಧನುಕ್' ಎಂಬುದನ್ನು ಕೂಡ ಪರ್ಯಾಯವಾಗಿ ನೀಡಬೇಕೆಂಬ ಒತ್ತಾಯ ಬಂದಿದೆ–ಕೆಲವು ಸದಸ್ಯರಿಗೆ ಸಮಾಧಾನಕರವಾಗಿ ಕಂಡುಬರುವುದಾದರೆ ಹಾಗೆ ಮಾಡೋಣ.

**ಅಧ್ಯಕ್ಷರು:** ಅದು ಪಟ್ಟಿಯಲ್ಲಿ ಇರುವ ೪ ನೇ ತಿದ್ದುಪಡಿಯಾಗಿದೆ. ಅದು ಶ್ರೀ ಚಂದ್ರಿಕಾರಾಂ ಅವರದು.

**ಡಾ. ಅಂಬೇಡ್ಕರ್:** ಪಟ್ಟಿಯಲ್ಲಿ ನನ್ನ ತಿದ್ದುಪಡಿ ೫ ನೆಯದಾಗಿದೆ. ಯಾರ ತಿದ್ದುಪಡಿಯನ್ನು ಬೇಕಾದರೂ ಚರ್ಚೆಗೆ ತೆಗೆದುಕೊಳ್ಳಬಹುದು.

**ಅಧ್ಯಕ್ಷರು:** ನಾನು ಈಗ "ಆದಿ ಧರ್ಮಿ" ಎಂಬ ತಿದ್ದುಪಡಿಯನ್ನು ತೆಗೆದುಕೊಳ್ಳುತ್ತೇನೆ. ಶ್ರೀ ಚಂದ್ರಿಕಾರಾಂ ಅವರ ತಿದ್ದುಪಡಿ ಸಂಖ್ಯೆ ೨ ಆಗಿದ್ದು ಅದನ್ನೇ ಮಾನ್ಯ ಕಾನೂನು ಮಂತ್ರಿಗಳು ತಮ್ಮ ತಿದ್ದುಪಡಿ ಸಂಖ್ಯೆ ೩ ರಲ್ಲಿ ಒಪ್ಪಿಕೊಳ್ಳುತ್ತಿದ್ದಾರೆ.

**ಶ್ರೀ ಜೆ.ಆರ್. ಕಪೂರ್:** ಬೇರೊಂದು ರೂಪದಲ್ಲಿ ಅದು "ಆದ್–ಧರ್ಮಿ" ಎಂದಾಗುತ್ತದೆ. ಅದರ ಸರಿಯಾದ ರೂಪ "ಆದಿ ಧರ್ಮಿ" ಎಂದಿದೆ.

**ಶ್ರೀ ಚಂದ್ರಿಕಾ ರಾಂ (ಬಿಹಾರ):** ಅದು "ಆದಿ ಧರ್ಮಿ" ಎಂದಿರಬೇಕು.

**ಡಾ. ಅಂಬೇಡ್ಕರ್:** ನಾನು ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತಿದ್ದೇನೆ.

**ಅಧ್ಯಕ್ಷರು:** ಮಾನ್ಯ ಸದಸ್ಯರಾದ ಶ್ರೀ ಚಂದ್ರಿಕಾ ರಾಂ ಅವರು ತಮ್ಮ ತಿದ್ದುಪಡಿ ಸಂಖ್ಯೆ ೪ ನ್ನು ಕುರಿತಂತೆ ಕಾನೂನು ಮಂತ್ರಿಗಳ ಮಾತನ್ನು ಒಪ್ಪುತ್ತಾರೆಯೆ ?

**ಕೆಲವು ಮಾನ್ಯ ಸದಸ್ಯರು:** ಎರಡೂ ಒಂದೇ

**ಅಧ್ಯಕ್ಷರು:** ನನಗೆ ಅನಿಸುವಂತೆ ಶ್ರೀ ಚಂದ್ರಿಕಾರಾಂ ಅವರ ತಿದ್ದುಪಡಿ ೪ ಕ್ಕಿಂತ ಮಾನ್ಯ ಮಂತ್ರಿಗಳ ತಿದ್ದುಪಡಿ ಸಂಖ್ಯೆ ೫ ಹೆಚ್ಚು ಉತ್ತಮವಾಗಿದೆ. ಹಾಗೆಯೇ ನನಗನಿಸುವಂತೆ ಕಾನೂನು ಮಂತ್ರಿಗಳ ತಿದ್ದುಪಡಿ ಸಂಖ್ಯೆ ೭ ಶ್ರೀ ಚಂದ್ರಿಕಾ ರಾಂ ಅವರ ತಿದ್ದುಪಡಿ ೬ ಕ್ಕಿಂತ ಹೆಚ್ಚು ಉತ್ತಮವಾಗಿದೆ.

**ಡಾ. ದೇಶಮುಖ್:** ನಾನು ನನ್ನ ತಿದ್ದುಪಡಿ ಸಂಖ್ಯೆ ೮ ನ್ನು ತೆಗೆದುಕೊಳ್ಳುವಂತೆ ಕೋರುತ್ತೇನೆ.

**ಡಾ. ಅಂಬೇಡ್ಕರ್:** ನಾನು ಪಟ್ಟಿಯನ್ನು ಪರೀಕ್ಷಿಸಿದ್ದೇನೆ ಹಾಗೂ ಪ್ರಾಧಿಕಾರದ ಜೊತೆಯಲ್ಲಿ ಸಮಾಲೋಚಿಸಿದ್ದೇನೆ. ೮ನೆಯ ತಿದ್ದುಪಡಿಯಲ್ಲಿರುವ ಅಂಶಗಳು ಎಂದೂ ಅನುಸೂಚಿಯ ಭಾಗವಾಗಿರಲಿಲ್ಲ. ನಾನು ತಿದ್ದುಪಡಿ ಸಂಖ್ಯೆ ೮ ನ್ನು ಅಂಗೀಕರಿಸುವುದಿಲ್ಲ.

ಮಾಡಲಾದ ತಿದ್ದುಪಡಿಗಳು:

ಉದ್ದೇಶಿತ ೬ನೆಯ ಅನುಸೂಚಿಯ ಖಂಡ ೩ರಲ್ಲಿ 'ದೆಹಲಿ' ಎಂಬ ಶೀರ್ಷಿಕೆಯ ನಮೂದು (೧) ರಲ್ಲಿ 'ಅಧರ್ಮೀ' ಪದಕ್ಕೆ ಬದಲಾಗಿ "ಆದಿ–ಧರ್ಮಿ' ಎಂಬ ಪದವನ್ನು ಹಾಕತಕ್ಕದ್ದು.

–(ಶ್ರೀ ಚಂದ್ರಿಕಾರಾಂ)

ಉದ್ದೇಶಿತ ೬ ನೆಯ ಅನುಸೂಚಿಯ ಖಂಡ ೩ ರಲ್ಲಿ 'ದೆಹಲಿ' ಎಂಬ ಶೀರ್ಷಿಕೆಯಡಿಯಲ್ಲಿ ನಮೂದು ಸಂಖ್ಯೆ (೧೪) ರಲ್ಲಿ 'ಧನಕ್' ಎಂಬುದರ ಅನಂತರ 'ಅಥವಾ ಧನುಕ್' ಎಂಬುದನ್ನು ಸೇರಿಸತಕ್ಕದ್ದು.

–(ಡಾ. ಅಂಬೇಡ್ಕರ್)

ಉದ್ದೇಶಿತ ೬ ನೆಯ ಅನುಸೂಚಿಯ ಖಂಡ ೩ ರಲ್ಲಿ 'ದೆಹಲಿ' ಎಂಬ ಶೀರ್ಷಿಕೆಯಡಿಯಲ್ಲಿ ನಮೂದು (೩೪) ರಲ್ಲಿ 'ರೇಹಗಢ' ಎಂಬುದರ ಅನಂತರ 'ಅಥವಾ ರಾಯಗಢ' ಎಂಬುದನ್ನು ಸೇರಿಸತಕ್ಕದ್ದು.

–(ಡಾ. ಅಂಬೇಡ್ಕರ್)

**ಡಾ. ದೇಶಮುಖ್:** ನನ್ನ ಮಂಡನೆಗಾಗಿ ಅನುಮತಿಯನ್ನು ಕೋರುತ್ತೇನೆ.

ಉದ್ದೇಶಿತ ೬ ನೆಯ ಅನುಸೂಚಿಯ ಖಂಡ ೩ ರಲ್ಲಿ 'ದೆಹಲಿ' ಎಂಬ ಶೀರ್ಷಿಕೆಯಡಿಯಲ್ಲಿ ಕೊನೆಯಲ್ಲಿ ಹೊಸ ನಮುದುಗಳನ್ನು ಸೇರಿಸಿ.

"೪೦ ನಾ ಯೀ .........(ಹಜಾಮ)"

"೪೧ ಧೀವರ್............(ಮೀನುಗಾರ)."

ನನ್ನ ಭಾಷಣದ ಮೇಲೆ ಉತ್ತರ ನೀಡುವ ಸಮಯದಲ್ಲಿ ಮಾನ್ಯ ಕಾನೂನು ಮಂತ್ರಿಗಳು ನಾನು ಸರ್ಕಾರದ ವಿಚಾರದಲ್ಲಿ ಅತೃಪ್ತನಾಗಿದ್ದೇನೆಂದು ಹೇಳಿದರು. ಆದರೆ ಅವರ ಈಚಿನ ಭಾಷಣವನ್ನು ಕೇಳಿದಾಗ ಅವರು ತಾನೇ ಸರ್ಕಾರದ ಒಂದು ಭಾಗವಾಗಿದ್ದರೂ ಸರ್ಕಾರದೊಡನೆ ಸಾಕಷ್ಟು ಅತೃಪ್ತವಾಗಿದ್ದಾರೆಂಬ ಸಂಗತಿ ಮನದಟ್ಟಾಗುತ್ತದೆ.

**ಶ್ರೀ ಸಿಧ್ವ:** ಹಜಾಮರು ಅಸ್ಪೃಶ್ಯರೆ?

**ಶ್ರೀ ದೇಶಮುಖ್:** ನನ್ನ ಮುಂದೆ ಬಂದ ಹಲವಾರು ಮನವಿಗಳನ್ನು ಆಧರಿಸಿ ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಎರಡನೆಯದಾಗಿ, ಮಾನ್ಯ ಕಾನೂನು ಮಂತ್ರಿಗಳು ಇಲ್ಲಿ ಉಲ್ಲೇಖಿಸಿದ ಪಟ್ಟಿಯಲ್ಲಿ– ಇದು ಫೆಡೆರಲ್ ಪಬ್ಲಿಕ್ ಸರ್ವಿಸ್ ಕಮೀಷನ್ ೧೨ ಮಾರ್ಚ್, ೧೯೪೯ ರಂದು ಹೊರಡಿಸಿದ್ದ ಅಧಿಸೂಚನೆ–ಈ ಎರಡು ಜಾತಿಗಳನ್ನು ಸೇರಿಸಲಾಗಿದೆ.

**[ಅಧ್ಯಕ್ಷಾಸನದಲ್ಲಿ ಪಂಡಿತ ಠಾಕುರದಾಸ ಭಾರ್ಗವ]**

ನಾನು ನನ್ನ ಭಾಷಣದಲ್ಲಿ ಹೇಳಿದ ಹಾಗೆ ಈ ಪಟ್ಟಿಯ ಪ್ರಕಾರ ದೆಹಲಿಯಲ್ಲಿ ಈ ಜಾತಿಗಳ ಸಂಖ್ಯೆ ಅರುವತ್ತುನಾಲ್ಕು. ಬಿಟ್ಟಿರುವ ಜಾತಿಗಳನ್ನೆಲ್ಲ ಪಟ್ಟಿಯಲ್ಲಿ ಸೇರಿಸಲು ನಾನು ಸೂಚಿಸುತ್ತಿಲ್ಲ. ನಾನು ಕೇವಲ ಎರಡು ಜಾತಿಗಳನ್ನು ಮಾತ್ರ ಸೂಚಿಸುತ್ತಿದ್ದೇನೆ. ಅವು ಈ ಪಟ್ಟಿಯಲ್ಲೂ ಇದೆ. ಮಾನ್ಯ ಕಾನೂನು ಮಂತ್ರಿಗಳು ಇದನ್ನು ಒಪ್ಪದೆಹೋಗುತ್ತಿರುವುದು ಖೇದದ ಸಂಗತಿ. ಆದರೆ ಒಂದು ವೇಳೆ ಅವರು ಒಪ್ಪದೇ ಹೋದರೂ, ನಾನು ಅದಕ್ಕಾಗಿ ಒತ್ತಾಯ ಮಾಡಬಯಸುತ್ತೇನೆ. ಈ ಸದನದ ಮಾನ್ಯ ಸದಸ್ಯರೆಲ್ಲ ನನ್ನ ಪರವಾಗಿ ಮತ ಚಲಾಯಿಸುತ್ತಾರೆಂಬ ಭರವಸೆ ನನಗಿದೆ. ಏಕೆಂದರೆ ಇಲ್ಲಿರುವ ತಾರತಮ್ಯವು ಎದ್ದು

ಕಾಣುವಂತಿದೆ. ಒಂದು ಉದ್ದೇಶಕ್ಕಾಗಿ ನೀವು ಕೆಲವಾರು ಜಾತಿಗಳನ್ನು ಸೇರಿಸಿ ಅಧಿಸೂಚನೆ ಹೊರಡಿಸುತ್ತೀರಿ. ಈ ಅಧಿಸೂಚನೆ ಸಿಂಧು ಎನಿಸಿಕೊಳ್ಳುತ್ತದೆ. ಕಾನೂನು ಮಂತ್ರಿಗಳಾಗಲಿ, ಸರ್ಕಾರವಾಗಲಿ ಈ ಪಟ್ಟಿಯನ್ನು ಅಂಗೀಕರಿಸದಿರುವ ನಿಟ್ಟಿನಲ್ಲಿ ಯಾವ ಕ್ರಮವನ್ನು ಕೈಗೊಳ್ಳುವುದಿಲ್ಲ. ಈ ಅಧಿಸೂಚನೆಯನ್ವಯ, ಇಲ್ಲಿ ಹೇಳಿರುವ ಯಾವುದೇ ಒಂದು ಜಾತಿಯಲ್ಲಿ ಹುಟ್ಟಿರುವ ಒಬ್ಬ ಹುಡುಗ ತನ್ನನ್ನು ಪರಿಶಿಷ್ಟ ಜಾತಿಯವನು ಎಂದು ಕರೆದುಕೊಂಡು ಸವಲತ್ತು ಪಡೆಯಲು ಅರ್ಜಿ ಸಲ್ಲಿಸಬಲ್ಲ. ಆದರೆ ಯಾವ ಕಾರಣಕ್ಕಾಗಿ ಡಾ. ಅಂಬೇಡ್ಕರ್ ಅವರು ಈ ಜಾತಿಗಳನ್ನು ಪಟ್ಟಿಗೆ ಸೇರಿಸಲು ಒಪ್ಪುತ್ತಿಲ್ಲವೊ ಗೊತ್ತಿಲ್ಲ. ಈ ಎರಡು ಜಾತಿಗಳು ಈ ಪಟ್ಟಿಯಲ್ಲಿವೆ. ಈ ಗೆಜೆಟ್ ಪ್ರತಿಯನ್ನು ಯಾವುದೇ ಮಾನ್ಯ ಸದಸ್ಯರು ಇಲ್ಲಿ ನನ್ನ ಬಳಿ ಬಂದು ನೋಡಬಹುದು. ಧಿನನಾರ್ ಅಥವಾ ಜಿನವಾರ್ (ಆ ಹೆಸರೂ ಪಟ್ಟಿಯಲ್ಲಿದೆ) ಎಂದು ಕರೆದುಕೊಳ್ಳುವ ಈ ಬಡಪಾಯಿ ಮೀನುಗಾರರು ಈ ಪಟ್ಟಿಯಲ್ಲಿದ್ದಾರೆ. ಪಟ್ಟಿಯಲ್ಲಿ ಅವರ ಸಂಖ್ಯೆ ೨೨ ನೆಯದು. ಆದ್ದರಿಂದ ಮಾನ್ಯ ಡಾ. ಅಂಬೇಡ್ಕರ್ ಏನೇ ತೀರ್ಮಾನ ಕೈಗೊಳ್ಳಲಿ, ಈ ಸದನ ನನ್ನ ಪರವಾಗಿ ಮತ ನೀಡುತ್ತದೆಂದು ಆಶಿಸುತ್ತೇನೆ. ಕೇವಲ ಲೇಖನಿಯ ಗೆರೆಯ ಒಂದು ಹೊಡೆತದಿಂದಾಗಿ ಈ ಎರಡು ಜಾತಿಗಳು ತಮಗೆ ಲಭ್ಯವಾಗಬೇಕಾದ ಸೌಲಭ್ಯಗಳನ್ನು ಕಳೆದುಕೊಳ್ಳುವಂತಾಗಬಾರದು. ಆದ್ದರಿಂದ ನನ್ನ ತಿದ್ದುಪಡಿಯನ್ನು ಕುರಿತಂತೆ ಈ ಸದನ ನನಗೆ ಬೆಂಬಲವಾಗಿ ನಿಲ್ಲುತ್ತದೆಂದು ಆಶಿಸುತ್ತೇನೆ.

**ಶ್ರೀ ಸಿಧ್ವ:** ಇದು ಭಾರತ ಸರ್ಕಾರದ ಒಂದು ಪ್ರಕಟನೆಯೆ?

**ಡಾ. ದೇಶಮುಖ್:** ಹೌದು, ಡಾ. ಅಂಬೇಡ್ಕರ್ ಅವರ ಬಳಿಯಲ್ಲಿಯೂ ಅದರ ಒಂದು ಪ್ರತಿ ಇದೆ.

**ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

> ಉದ್ದೇಶಿತ ಆರನೆಯ ಅನುಸೂಚಿಯ ಮೂರನೆಯ ಖಂಡದಲ್ಲಿ "ದೆಹಲಿ' ಎಂಬ ಶೀರ್ಷಿಕೆಯ ಅಡಿಯಲ್ಲಿ, ಹೊಸ ನಮೂದುಗಳನ್ನು ಸೇರಿಸಿ:
>
> "೪೦. ನಾಯೀ (ಹಜಾಮ)
>
> ೪೧. ಧೀನರ್ (ಮೀನುಗಾರ)."

**ಶ್ರೀ ಸೋನಾವಣೆ:** ನನ್ನ ಮಿತ್ರರಾದ ಡಾ. ದೇಶಮುಖ್ ಅವರು ಮಂಡಿಸಿದ ತಿದ್ದುಪಡಿಯನ್ನು ಕುರಿತಂತೆ ಹೇಳುವುದಾದರೆ, ನನಗೆ ಅನಿಸುವಂತೆ ಸಮಾಜದಲ್ಲಿ ಅಸ್ಪೃಶ್ಯರೆನಿಸಿಕೊಂಡಿರುವ ಜಾತಿಗಳು ಮಾತ್ರ....

**ಒಬ್ಬ ಮಾನ್ಯ ಸದಸ್ಯರು:** ನಮ್ಮಲ್ಲಿ ಈಗ ಯಾವ ಅಸ್ಪೃಶ್ಯರೂ ಇಲ್ಲ.

**ಶ್ರೀ ಸೋನಾವಣೆ:** ಪರಿಶಿಷ್ಟಜಾತಿಗಳ ಪಟ್ಟಿಗೆ ಅದೇ ಮೂಲ ಆಧಾರ. ಆದ್ದರಿಂದಲೇ ಈ ಎರಡು ಸಮುದಾಯಗಳನ್ನು ತಿದ್ದುಪಡಿಯಲ್ಲಿ ಸೇರಿಸಿದ್ದಾರೆ. ಒಂದು ವೇಳೆ ಅವರು ವಾಸ್ತವವಾಗಿ ಅಸ್ಪೃಶ್ಯರಾಗಿದ್ದಾರೆ ಅವರನ್ನು ಪಟ್ಟಿಯಲ್ಲಿ ಸೇರಿಸಲು ಯಾವ ಅಭ್ಯಂತರವೂ ಇರಲಾರದು. ಆದರೆ ನನ್ನ ತಿಳಿವಳಿಕೆಯ ಪ್ರಕಾರ, ಮುಂಬಯಿಯಲ್ಲಿ, ಹಜಾಮರು ಮತ್ತು ಮೀನುಗಾರರು ಅಸ್ಪೃಶ್ಯರಾದಲ್ಲಿ, ಇಲ್ಲಿ ದೆಹಲಿಯಲ್ಲಿ ಅವರು ಅಸ್ಪೃಶ್ಯರಾಗಿರದಿದ್ದರೆ ಅವರನ್ನು ಪಟ್ಟಿಯಲ್ಲಿ ಸೇರಿಸುವ ಪ್ರಸಂಗ ಬರುವುದಿಲ್ಲ. ಹಾಗಾಗಿ, ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಶ್ರೀ ಶಿವಚರಣಲಾಲ್ (ಉತ್ತರಪ್ರದೇಶ):** ನಾವು ಈ ಸಮುದಾಯದವರನ್ನು, ಅಂದರೆ ಕ್ಷೌರಿಕರನ್ನು, ಪರಿಶಿಷ್ಟ ಜಾತಿಯ ಪಟ್ಟಿಯೊಳಗಡೆ ಸೇರಿಸುವುದು ತುಂಬ ವಿಚಿತ್ರ ಎನಿಸುತ್ತದೆ. ನಮ್ಮ ಪ್ರಾಂತದಲ್ಲಿ, ಅಂದರೆ ಉತ್ತರ ಪ್ರದೇಶದಲ್ಲಿ ಮೊದಲಿಗೆ ಅವರು ತಮ್ಮನ್ನು ನಾಯೀ ಠಾಗುರ್ ಎಂದು ಕರೆದುಕೊಳ್ಳುತ್ತಿದ್ದರು,

ಅನಂತರ ನಾಯೀ ಬ್ರಾಹ್ಮಣ ಅಂತ ಕರೆದುಕೊಳ್ಳಲಾರಂಭಿಸಿದರು. ಅವರನ್ನು ನೀವು ಪರಿಶಿಷ್ಟಜಾತಿಯವರು ಅಂತ ಕರೆದರೆ ಅವರಿಗೆ ಖಂಡಿತ ಇಷ್ಟವಾಗುವುದಿಲ್ಲ. ಧೀವರ್ ಅವರದು ಕೂಡ ಇದೇ ಸ್ಥಿತಿ. ನೀವು ಇವೆರಡು ಜಾತಿಗಳನ್ನು ಏನೇ ಆದೂ ಪರಿಶಿಷ್ಟಜಾತಿಗಳೊಳಗೆ ಸೇರಿಸಲಾಗದು. ಸರ್ಕಾರಿ ಸೇವೆಗೆ ಸೇರಿಸಿಕೊಳ್ಳುವುದು ಅಥವಾ ಬೇರೆ ಯಾವುದಾದರೂ ಸವಲತ್ತು ಒದಗಿಸಿಕೊಡುವುದು ಎಂಬ ಪ್ರಶ್ನೆ ಬಂದಾಗ ಅವರನ್ನು ಬೇಕಾದರೆ 'ಹಿಂದುಳಿದವರು' ಎಂದು ಕರೆಯಿರಿ. ಹಾಗೆ ಕರೆದರೆ ಪರವಾಗಿಲ್ಲ ಆದರೆ ಯಾವುದೇ ಕಾರಣಕ್ಕೂ ಅವರನ್ನು 'ಪರಿಶಿಷ್ಟಜಾತಿ'ಗಳಿಗೆ ಸೇರಿಸುವಂತಿಲ್ಲ.

**ಶ್ರೀ ದೇಶಬಂಧುಗುಪ್ತ:** ಈ ಮೊದಲು ಮಾತನಾಡಿದ ನನ್ನ ಮಾನ್ಯ ಮಿತ್ರರು ದೆಹಲಿಯಲ್ಲಿ ನಾಯಿಗಳು ಅಂದರೆ ಹಜಾಮರು ಹಾಗೂ ಧೀವರುಗಳು ಪರಿಶಿಷ್ಟಜಾತಿಯ ಸದಸ್ಯರು ಎಂದು ಪರಿಗಣಿಸಲು ಸಾಧ್ಯವಾಗದು ಎಂದಿದ್ದಾರೆ. ಅವರ ಮಾತನ್ನು ನಾನು ಒಪ್ಪುತ್ತೇನೆ. ಡಾ. ದೇಶಮುಖ್ ಅವರು ಓದಿದ ಪಟ್ಟಿಯಲ್ಲಿ ಯಾವ ಆಧಾರದ ಮೇಲೆ ಈ ಹೆಸರುಗಳು ಸೇರಿಹೋಗಿವೆಯೋ ಗೊತ್ತಿಲ್ಲ. ವಾಸ್ತವ ಸಂಗತಿ ಎಂದರೆ ಸ್ವಲ್ಪ ಸಮಯದ ಹಿಂದೆ ನಾಯೀ ಜಾತಿಯ ಕೆಲವು ಪ್ರತಿನಿಧಿಗಳು ನನ್ನ ಬಳಿ ಬಂದಿದ್ದರು. ತಮ್ಮನ್ನು ದಲಿತ ವರ್ಗಗಳ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಅಸಮಾಧಾನವನ್ನು ತೋಡಿಕೊಂಡರು. ಆದ್ದರಿಂದ ನಾಯೀ ಮತ್ತು ಧೀವರ ಸಮುದಾಯಗಳನ್ನು ಈ ಪಟ್ಟಿಯಲ್ಲಿ ಸೇರಿಸುವುದರಿಂದ ಡಾ. ದೇಶಮುಖ್ ಅವರು ಅವರಿಗೆ ಯಾವ ರೀತಿಯ ಉಪಕಾರವನ್ನು ಮಾಡಿದಂತಾಗುವುದಿಲ್ಲ.

**ಅಧ್ಯಕ್ಷರು:** ಮಾನ್ಯ ಸದಸ್ಯರು ಈ ಸಾಲುಗಳನ್ನು ಕೇಳಿಲ್ಲವೆ: ಘರ್‌ಸೇ ಆಯಾ ಹೈ ಮೋತಚೀರ್ ನಾಯೀ?

ಇಲ್ಲಿ ವಿಷಯ ಏನೆಂದರೆ:

"ಉದ್ದೇಶಿತ ಆರನೆಯ ಅನುಸೂಚಿಯಲ್ಲಿ, ಖಂಡ ೩ರಲ್ಲಿ, 'ದೆಹಲಿ' ಎಂಬ ಶೀರ್ಷಿಕೆಯ ಕೊನೆಯಲ್ಲಿ ಹೊಸ ನಮೂದಗಳನ್ನು ಸೇರಿಸಿ:

"೪೦ ನಾಯೀ (ಹಜಾಮ)

೪೧. ಧೀವರ್ (ಮೀನುಗಾರ)

ಗೊತ್ತುವಳಿಯನ್ನು ಅಂಗೀಕರಿಸಲಾಗಲಿಲ್ಲ.

**ಸರ್ದಾರ್ ಹುಕುಂಸಿಂಗ್ (ಪಂಜಾಬ್):** ನನ್ನ ಮಂಡನೆಗಾಗಿ ಅನುಮತಿ ಕೋರುತ್ತೇನೆ:

"ಖಂಡ ೩ರಲ್ಲಿ, ಉದ್ದೇಶದ ಆರನೆಯ ಅನುಸೂಚಿಯಲ್ಲಿ..."

**ಡಾ. ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರು ತಮ್ಮ ಎರಡೂ ತಿದ್ದುಪಡಿಗಳನ್ನು ಒಟ್ಟಿಗೆ ಮಂಡಿಸುವುದಾದರೆ, ಇವುಗಳಿಗೆ ಅಕಾರಾದಿಯಾಗಿ ಸಂಖ್ಯೆ ಹಾಕಲಾಗುತ್ತದೆಂಬ ನಿಬಂಧನೆಯ ಮೇಲೆ, ಅವುಗಳನ್ನು ಅಂಗೀಕರಿಸಲು ಒಪ್ಪಿಕೊಳ್ಳುತ್ತೇನೆ. 'ದೆಹಲಿ' ಎಂಬ ಶೀರ್ಷಿಕೆಯ ಅಡಿಯಲ್ಲಿ ಅವರು ಸಂಖ್ಯೆ ೪೦ ಇತ್ಯಾದಿ ನಮೂದಿಸಿದ್ದಾರೆ ಹಾಗೂ 'ಹಿಮಾಚಲ ಪ್ರದೇಶ' ಎಂಬ ಶೀರ್ಷಿಕೆಯಲ್ಲಿ ಸಂಖ್ಯೆ ೨೮ ಇತ್ಯಾದಿ ನಮೂದಿಸಿದ್ದಾರೆ. ಇವುಗಳಿಗೆಲ್ಲ ಮತ್ತೆ ಸಂಖ್ಯೆಗಳನ್ನು ಹಾಕಬೇಕು.

**ಸರ್ದಾರ್ ಹುಕುಂ ಸಿಂಗ್:** ನನ್ನ ಮಂಡನೆಗಾಗಿ ಅನುಮತಿ ಕೋರುತ್ತೇನೆ.

(i) ಉದ್ದೇಶಿತ ಆರನೆಯ ಅನುಸೂಚಿಯಲ್ಲಿ ಖಂಡ ೩ರಲ್ಲಿ, ಕೊನೆಯಲ್ಲಿರುವ "ದೆಹಲಿ' ಎಂಬುದರ ಮುಂದೆ ಹೊಸ ನಮೂದುಗಳನ್ನು ಸೇರಿಸಿ:

"೪೦. ಕಬೀರಪಂಥೀ

೪೧. ಮಜಹಬೀ"

(ii) ಉದ್ದೇಶಿತ ಆರನೆಯ ಅನುಸೂಚಿಯಲ್ಲಿ ಖಂಡ ೩ ರಲ್ಲಿ "ಹಿಮಾಚಲ ಪ್ರದೇಶ" ಎಂಬ ಶೀರ್ಷಿಕೆಯ ಕೊನೆಯಲ್ಲಿ ಹೊಸ ನಮೂದುಗಳನ್ನು ಸೇರಿಸಿ:

"೨೮. ಬಂಜಾರಾ

೨೯. ಬಾವರಿಯಾ

೩೦. ರಾಮದಾಸಿಯಾ"

**ಅಧ್ಯಕ್ಷರು:** ತಿದ್ದುಪಡಿಯನ್ನು ಸದನದ ಮುಂದೆ ಮಂಡಿಸಲಾಗಿದೆ:

(i) ಉದ್ದೇಶಿತ ಆರನೆಯ ಅನುಸೂಚಿಯಲ್ಲಿ, ಖಂಡ ೩ ರಲ್ಲಿ ಕೊನೆಯಲ್ಲಿರುವ "ದೆಹಲಿ' ಎಂಬುದರ ಮುಂದೆ ಹೊಸ ನಮೂದುಗಳನ್ನು ಸೇರಿಸಿ:

"೪೦. ಕಬೀರಪಂಥೀ

೪೧. ಮಜಹಬೀ"

(ii) ಉದ್ದೇಶಿತ ಆರನೆಯ ಅನುಸೂಚಿಯಲ್ಲಿ, ಖಂಡ ೩ ರಲ್ಲಿ, "ಹಿಮಾಚಲ ಪ್ರದೇಶ' ಎಂಬ ಶೀರ್ಷಿಕೆಯ ಕೊನೆಯಲ್ಲಿ ಹೊಸ ನಮೂದುಗಳನ್ನು ಸೇರಿಸಿ:

"೨೮. ಬಂಜಾರಾ

೨೯. ಬಾವರಿಯಾ

೩೦. ರಾಮದಾಸಿಯಾ."

**ಶ್ರೀ ಸೋನಾವಣೆ:** ಸರ್ದಾರ್ ಹುಕುಂಸಿಂಗ್ ಅವರು ಮಂಡಿಸಿರುವ ತಿದ್ದುಪಡಿಗಳನ್ನು ನೋಡಿ ನನಗೆ ಅನಿಸುವುದೇನೆಂದರೆ, ನನಗೆ ಅಚ್ಚರಿ ಮೂಡಿಸುವ ಸಂಗತಿಯೆಂದರೆ, ಪಕ್ಕಾ ಸಿಖ್ ಮಹನೀಯರಾಗಿ ಅವರು ಪಕ್ಕಾ ಸಿಖ್ ಸಮುದಾಯದ ಕೆಲವು ಜಾತಿಗಳನ್ನು ತೆಗೆದುಕೊಂಡು ಏಕೆ ಪರಿಶಿಷ್ಟಜಾತಿಗಳಿಗೆ ಸೇರಿಸುತ್ತಿದ್ದಾರೆ? ಒಂದು ಸಂಗತಿ, ಅಂದರೆ ಸಿಖ್ ಸಮುದಾಯದಲ್ಲೂ ಪರಿಶಿಷ್ಟಜಾತಿಗಳಿವೆ ಎಂಬ ಅಂಶ ಮೊದಲಿಗೆ ಗಮನಕ್ಕೆ ಬಂದಾಗ ನನಗೆ ತುಂಬ ಆಶ್ಚರ್ಯವೆನಿಸಿತ್ತು. ಹಾಗಾಗಿ ತಾವು ಸಿಖ್ ಮತಕ್ಕೆ ಸೇರಿಕೊಳ್ಳದೆ ಹೋದುದರಲ್ಲಿ ಡಾ. ಅಂಬೇಡ್ಕರ್ ಸರಿಯಾದ ತೀರ್ಮಾನವನ್ನೇ ಕೈಗೊಂಡಿದ್ದಾರೆ ಎಂಬುದು ಮನದಟ್ಟಾಯಿತು. ಇಷ್ಟೇ ಅಲ್ಲದೆ ಪಿ.ಇ.ಸಿ.ಎಸ್.ಯು. ಹಾಗೂ ಪಂಜಾಬಿನಲ್ಲಿ ಪರಿಶಿಷ್ಟ ಜಾತಿಗಳ ಮೇಲೆ ಸಿಖ್ ಸಮುದಾಯದವರು ನಡೆಸಿರುವ ದಾಂಧಲೆಗಳ ಬಗ್ಗೆ ಕೂಡ ಕೇಳುತ್ತಿರುತ್ತೇವೆ. ಅಂಥ ಹಿಂದುಳಿದವರ ಮೇಲೆ ಅತ್ಯಾಚಾರಗಳು ನಡೆಯುತ್ತಲೆ ಇರಲಿ ಎಂಬುದಕ್ಕಾಗಿ ಅಂಥ ಕೆಲವು ಸಮುದಾಯಗಳು ಪರಿಶಿಷ್ಟ ಜಾತಿಗಳ ಹಣೆಪಟ್ಟಿ ಕಟ್ಟಿಕೊಂಡಿರಲಿ ಎಂದು ಮಿತ್ರರಾದ ಸರ್ದಾರ್ ಹುಕುಂ ಸಿಂಗ್ ಅವರು ಬಯಸುತ್ತಿದ್ದಾರೊ ಹೇಗೋ ನಾನರಿಯೆ. ಆದ್ದರಿಂದ ನಾನು ಅವರಲ್ಲಿ ಕೋರುವುದೇನೆಂದರೆ ಅವರು ತಮ್ಮ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಿ. ಈ ಎಲ್ಲ ಮಂದಿಯನ್ನು ತಮ್ಮ ತೆರೆಯಲ್ಲಿ ಸೇರಿಸಿಕೊಂಡು, ಅವರನ್ನು ತಮ್ಮ ಮಟ್ಟಕ್ಕೆ ಮೇಲೆತ್ತಿ, ಸಿಖ್ ಸಮುದಾಯದಲ್ಲಿ ಪರಿಶಿಷ್ಟ ಜಾತಿಗಳನ್ನು ಹುಟ್ಟುಹಾಕುವುದನ್ನು ಕೊನೆಗೊಳಿಸಲಿ.

**ಶ್ರೀ ದೇಶಬಂಧು ಗುಪ್ತ:** ತಿದ್ದುಪಡಿಗಳನ್ನು ಮತಕ್ಕೆ ಹಾಕುವುದಕ್ಕಿಂತ ಮುಂಚೆ ನಾನು ಒಂದು ವಿಚಾರವನ್ನು ತಿಳಿಯಬಯಸುತ್ತೇನೆ. ಅದೇನೆಂದರೆ ದೆಹಲಿಯಲ್ಲಿರುವ ಕಬೀರ್ ಪಂಥಿಗಳು ಪರಿಶಿಷ್ಟ ಜಾತಿಗೆ ಸೇರುತ್ತಾರೆ ಎಂಬ ಬಗ್ಗೆ ಡಾ. ಅಂಬೇಡ್ಕರ್ ಅವರಿಗೆ ಅದು ಸೂಕ್ತವೆಂದು ಪೂರ್ತಿಯಾಗಿ

ಮನವರಿಕೆಯಾಗಿದೆಯೆ? ನನಗೆ ತಿಳಿದಿರುವ ಮಟ್ಟಿಗೆ ದೆಹಲಿಯಲ್ಲಿ ಮಜಹಬಿಗಳು ಇಲ್ಲ, ಹಾಗಾಗಿ ಕೆಲವು ಮಜಹಬಿಗಳು ಹೊರಗಡೆಯಿಂದ ಇಲ್ಲಿಗೆ ವಲಸೆ ಬಂದಿರುವ ಸಾಧ್ಯತೆ ಇರುವುದರಿಂದ ಅವರನ್ನು ಪರಿಶಿಷ್ಟ ಜಾತಿಗಳ ಪಟ್ಟಿಗೆ ಸೇರಿಸುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಕಬೀರ್ ಪಂಥಿಗಳ ವಿಚಾರವಾಗಿ ಹೇಳುವುದಾದರೆ ನನಗೆ ತಿಳಿದಿರುವ ಮಟ್ಟಿಗೆ ಅವರು ಪರಿಶಿಷ್ಟ ಜಾತಿಗೆ ಸೇರಿದವರೆಂದು ಯಾರೂ ಹೇಳುವುದಿಲ್ಲ. ಒಂದು ವೇಳೆ ಡಾ. ಅಂಬೇಡ್ಕರ್ ಈ ವಿಚಾರವಾಗಿ ಖಚಿತಪಡಿಸಿಕೊಂಡಿದ್ದರೆ ನನ್ನ ಅಭ್ಯಂತರವೇನಿಲ್ಲ. ಆದರೆ ಅವರಿಗೆ ಅದು ಖಚಿತವಾಗಿರದಿದ್ದ ಪಕ್ಷದಲ್ಲಿ, ಕೇವಲ ಪಂಜಾಬ್ ಮತ್ತು ಪಿ.ಇ.ಪಿ.ಎಸ್.ಯು. ಗಳಲ್ಲಿ ಅದು ಹಾಗಿದೆ ಎಂದು ಭಾವಿಸುವುದಾದಲ್ಲಿ, ಆ ಸಮುದಾಯದವರನ್ನು ದೆಹಲಿಯಲ್ಲಿ ಆ ದೃಷ್ಟಿಯಿಂದ ನೋಡುವ ಅಗತ್ಯವಿಲ್ಲ.

**ಸರ್ದಾರ್ ಹುಕುಂ ಸಿಂಗ್:** ನಾನು ನನ್ನ ಮಾತಿನಲ್ಲಿ ಈ ಸಮುದಾಯದವರು ಸಿಖ್ ಜನ ಅಥವಾ ಹಿಂದೂಗಳು ಎಂದು ಎಲ್ಲಿಯೂ ಹೇಳಿಲ್ಲ. ಈ ರೀತಿಯ ಗೀಳು ಕೆಲವರಿಗೆ ಏಕಿರಬೇಕು ಹಾಗೂ ಇದರಿಂದ ಕೆಲವು ಮಂದಿ ಮಾನ್ಯ ಸದಸ್ಯರು ಏಕೆ ಆಕ್ಷೇಪ ಎತ್ತಬೇಕು? ಈಗಾಗಲೆ ಜಾರಿಯಾಗಿರುವ ಆದೇಶವನ್ನು ಕುರಿತಂತೆ ಏನನ್ನೂ ಹೇಳದೆ ನಾನು ಬೇಕೆಂದೇ ಹಿಂದೆ ಸರಿದಿದ್ದೆ. ಮಾನ್ಯ ಮಂತ್ರಿಗಳು ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ ಎಂದು ಗೊತ್ತಾದ ಮೇಲೆ ಭಾಷಣ ಮಾಡಲು ಹೋಗಲಿಲ್ಲ. ಆದರೆ ಈಗ ಈ ವಿಷಯವಾಗಿ ಸ್ವಲ್ಪ ಚರ್ಚೆ ಹುಟ್ಟಿಕೊಂಡಿರುವುದರಿಂದ ಈ ಬಗ್ಗೆ ಕೆಲವು ಮಾತುಗಳನ್ನಾಡಲು ನನಗೆ ಅವಕಾಶವಿದೆಯೆ? ಇದನ್ನು ಇಲ್ಲಿ ಮಾಡತಕ್ಕದ್ದೆಂದು ನಾನು ಎಂದೂ ಹೇಳಿಲ್ಲ. ಪಂಜಾಬ್ ಮತ್ತು ಪಿ.ಇ.ಪಿ.ಎಸ್.ಯು. ಗಳಿಗೆ ಸಂಬಂಧಪಟ್ಟಂತೆ ಈ ಜಾತಿಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಗೆ ಸೇರಿಸಬೇಕೆಂದು ರಾಷ್ಟ್ರಪತಿಗಳ ಆದೇಶದಲ್ಲಿಯೆ ಕಂಡುಬರುತ್ತದೆ. ನಾನು ಅದಕ್ಕೆ ಅಂಟಿಕೊಂಡು ಹೇಳುತ್ತಿದ್ದೇನೆ, ಅವರು ಹಿಂದೂಗಳಾಗಿರಲಿ, ಸಿಖ್ ಜನರೇ ಆಗಿರಲಿ, ಅವರು ಪರಿಶಿಷ್ಟಜಾತಿಯವರೆಂದು ಪರಿಗಣಿತರಾಗಬೇಕು. ಅವರು ಹಿಂದುಗಳೆ ಆಗಿರಲಿ ಸಿಖ್ ಸಮುದಾಯದವರೆ ಆಗಿರಲಿ ಒಟ್ಟಾರೆಯಾಗಿ ಹಿಂದುಳಿದವರೆನಿಸಿಕೊಂಡಿದ್ದಾರೆ. ಈಗ ನಾವು.......

**ಅಧ್ಯಕ್ಷರು:** ಮಾನ್ಯ ಮಂತ್ರಿಗಳು ತಿದ್ದುಪಡಿಯನ್ನು ಅಂಗೀಕರಿಸುತ್ತಿದ್ದಾರೆ.

ಇಲ್ಲಿ ಪ್ರಶ್ನೆ ಏನೆಂದರೆ

(i) ಉದ್ದೇಶಿತ ಆರನೆಯ ಅನುಸೂಚಿಯ ಖಂಡ ೩ರ ಕೊನೆಯಲ್ಲಿರುವ "ದೆಹಲಿ' ಎಂಬ ಶೀರ್ಷಿಕೆಯ ಅಡಿಯಲ್ಲಿ ಹೊಸ ನಮೂದುಗಳನ್ನು ಸೇರಿಸಿ:

"೪೦ ಕಬೀರಪಂಥೀ

೪೧. ಮಜಹಬೀ".

(ii) ಉದ್ದೇಶಿತ ಆರನೆಯ ಅನುಸೂಚಿಯಲ್ಲಿ, ಖಂಡ ೩ ರಲ್ಲಿ, "ಹಿಮಾಚಲ ಪ್ರದೇಶ' ಎಂಬ ಶೀರ್ಷಿಕೆಯ ಕೊನೆಯಲ್ಲಿ ಹೊಸ ನಮೂದುಗಳನ್ನು ಸೇರಿಸಿ:

"೨೮. ಬಂಜಾರಾ

೨೯. ಬಾವರಿಯಾ

೩೦. ರಾಮದಾಸಿಯಾ"

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

**ಶ್ರೀ ಚಂದ್ರಿಕಾರಾಮ್:** ನನ್ನ ಮಂಡನೆಗಾಗಿ ಅನುಮತಿ ಕೋರುತ್ತೇನೆ:

ಆರನೆಯ ಅನುಸೂಚಿಯಲ್ಲಿ, ಖಂಡ ೩ ರಲ್ಲಿ ಕೊನೆಯಲ್ಲಿ, ಸೇರಿಸಿ:

"ಅಜ್ಮೇರ್–ಮರ್‌ನಾಡಾ

೧. ಅಹೇರಿ

೨. ಬೇಗ್ರಿ

೩. ಬಲಾಯಿ....

**ಡಾ. ಅಂಬೇಡ್ಕರ್:** ಈ ತಿದ್ದುಪಡಿಗಳು ಮಸೂದೆಯ ವ್ಯಾಪ್ತಿಗಿಂತ ಸಾಕಷ್ಟು ಹೊರಗಡೆ ಇದೆ. ಸದರಿ ಮಸೂದೆ ಭಾಗ 'ಸಿ' ಗೆ ಸೇರಿದ ಕೆಲವು ರಾಜ್ಯಗಳಿಗಾಗಿ ಮೀಸಲಾತಿ ಸ್ಥಾನಗಳನ್ನು ಕಲ್ಪಿಸುವ ಉದ್ದೇಶ ಹೊಂದಿದೆ. ಕೇವಲ ಆ ರಾಜ್ಯಗಳಿಗೆ ಸಂಬಂಧಪಟ್ಟಂತೆ ಮಾತ್ರ ಪರಿಶಿಷ್ಟ ಜಾತಿಗಳು ಎಂದರೆ ಯಾವುವು ಎಂಬುದನ್ನು ಗೊತ್ತುಪಡಿಸುವ ಪ್ರಯತ್ನವನ್ನು ನಾವು ಈಗ ಮಾಡುತ್ತಿದ್ದೇವೆ. ಅಜ್ಮೇರ್–ಮೇರ್ವಾಡಾದಲ್ಲಿ ನಾವು ಯಾವುದೇ ಸ್ಥಾನವನ್ನು ಕಾದರಿಸುತ್ತಿಲ್ಲ. ಭೋಪಾಲದಲ್ಲಿ ನಾವು ಯಾವುದೇ ಸ್ಥಾನವನ್ನು ಮೀಸಲಾಗಿ ಇಡುತ್ತಿಲ್ಲ. ತ್ರಿಪುರ ಮತ್ತು ಕೊಡಗಿನಲ್ಲಿ ನಾವು ಯಾವುದೇ ಮೀಸಲು ಸ್ಥಾನಗಳನ್ನು ಕಲ್ಪಿಸುತ್ತಿಲ್ಲ. ಆದ್ದರಿಂದ, ಈ ತಿದ್ದುಪಡಿಗಳು ಮಸೂದೆಯ ವ್ಯಾಪ್ತಿಗಿಂತ ಹೊರಗಡೆ ಇದೆ.

**ಶ್ರೀ ಚಂದ್ರಿಕಾ ರಾಮ್:** ನೀವು ಭಾಗ 'ಸಿ' ಗೆ ಸೇರಿದ ರಾಜ್ಯಗಳಿಗಾಗಿ ಪ್ರಾತಿನಿಧ್ಯ ಕಲ್ಪಿಸಲು ಹೊರಟಿರುವಿರಿ. ಈ ಎಲ್ಲ ಜನರು ಭಾಗ 'ಸಿ' ರಾಜ್ಯಗಳಿಗೆ ಸೇರಿದವರು. ನೆನ್ನೆಯ ದಿವಸ ಮಾತನಾಡಿದಾಗಲೂ ನಾನು ಈ ಜನರಿಗೆ ಪ್ರಾತಿನಿಧ್ಯ ದೊರಕಬೇಕು ಎಂಬ ಬೇಡಿಕೆಯನ್ನು ಮುಂದಿಡಲಿಲ್ಲ. ಆದರೆ ಈ ವಿಷಯಕ್ಕೆ ದೀರ್ಘವಾದ ಇತಿಹಾಸವಿದೆ. ಈ ಜನರು...........

**ಡಾ. ಅಂಬೇಡ್ಕರ್:** ನಾನು ಈ ಚರ್ಚೆಯ ಆಶಯವನ್ನು ಸಂಕ್ಷೇಪವಾದ ಮಾತುಗಳಲ್ಲಿ ಹೀಗೆ ಹೇಳಬಯಸುತ್ತೇನೆ. ಪ್ರಾತಿನಿಧ್ಯ ದೊರೆಯದೆ ಇರುವಂತಹ ಭಾಗ 'ಎ', ಭಾಗ 'ಬಿ' ಮತ್ತು ಭಾಗ 'ಸಿ' ರಾಜ್ಯಗಳಿಗಾಗಿ ಕೂಡ ಸರ್ಕಾರ ಪರಿಶಿಷ್ಟ ಜಾತಿಗಳ ಒಂದು ಪಟ್ಟಿಯನ್ನು ಹೊರಡಿಸುವ ಚಿಂತನೆಯಲ್ಲಿದೆ. ಏಕೆಂದರೆ ಈ ಪ್ರದೇಶಗಳಲ್ಲಿ ಶಾಸನಸಭೆಯಲ್ಲಿ ಸ್ಥಾನವನ್ನು ಕಲ್ಪಿಸುವ ಸವಲತ್ತು ಮಾತ್ರವಲ್ಲ ಶೈಕ್ಷಣಿಕ ರಿಯಾಯಿತಿಗಳು, ಶುಲ್ಕಗಳನ್ನು ಭರ್ತಿಮಾಡುವುದು, ಸರ್ಕಾರಿ ಸೇವೆಯಲ್ಲಿ ಸೇರುವುದು ಇತ್ಯಾದಿ ಅನುಕೂಲಗಳನ್ನು ಮಾಡಕೊಡಬೇಕಾಗಿದೆ. ಈ ಪಟ್ಟಿಯಲ್ಲಿ ಸೇರದಿರುವ ಪರಿಶಿಷ್ಟ ಜಾತಿಗಳಿಗೆ ಆ ಎಲ್ಲ ಸವಲತ್ತುಗಳನ್ನು ದೊರಕಿಸಿಕೊಳ್ಳುವ ಅವಕಾಶವಿರಬಾರದು ಎಂದೇನಿಲ್ಲ. ಅಂಥ ತಪ್ಪು ಗ್ರಹಿಕೆಗೆ ಅವಕಾಶವಾಗಬಾರದೆಂದು ಸರ್ಕಾರ ಈ ಪ್ರಸ್ತಾವವನ್ನು ಪರಿಗಣಿಸುತ್ತಿದೆ. ಹಾಗಾಗಿ ಈಗ ಆ ವಿಚಾರಗಳನ್ನೆಲ್ಲ ಪರಿಶೀಲನೆಗೆ ತೆಗೆದುಕೊಳ್ಳುವ ಸಂದರ್ಭ ಇದಲ್ಲ.

**ಶ್ರೀ ಚಂದ್ರಿಕಾರಾಮ್:** ನಾನು ಇಲ್ಲಿ ಮಂಡಿಸುತ್ತಿರುವುದು ಹೊಸ ವಿಷಯವೇನಲ್ಲ. ಶಿಕ್ಷಣ ಸಚಿವಾಲಯದಲ್ಲಿ, ಭಾರತ ಸರ್ಕಾರ ಈಗಾಗಲೆ ಈ ಪಟ್ಟಿಯನ್ನು ಅಂಗೀಕರಿಸಿದ್ದು, ಈ ಪಟ್ಟಿಯ ಆಧಾರದ ಮೇಲೆ ಅಲ್ಲಿಯ ಜನರಿಗೆಲ್ಲ ವಿದ್ಯಾರ್ಥಿವೇತನ ಬರುತ್ತಿದೆ. ಈ ಪಟ್ಟಿಯನ್ನು ಒಪ್ಪಿಕೊಳ್ಳುವಲ್ಲಿ ಸರ್ಕಾರಕ್ಕೆ ಏನು ತೊಂದರೆ........

**ಡಾ. ಅಂಬೇಡ್ಕರ್:** ಈ ಮಸೂದೆಯಲ್ಲಿ ಅದನ್ನು ಮಾಡುವುದು ಸಾಧ್ಯವಾಗುವುದಿಲ್ಲ.

**ಅಧ್ಯಕ್ಷರು:** ಈಗಾಗಲೆ ನಾವು ಖಂಡ ೨ ನ್ನು ಅಳವಡಿಸಿಕೊಂಡಿದ್ದೇವೆ. ಖಂಡ ೨ ಕೆಲವೇ ರಾಜ್ಯಗಳಿಗೆ ಪ್ರಾತಿನಿಧ್ಯ ಒದಗಿಸುತ್ತದೆ. ಆ ರಾಜ್ಯಗಳನ್ನು ಈ ತಿದ್ದುಪಡಿಯಲ್ಲಿ ಸೇರಿಸಲಾಗಿಲ್ಲ. ಹಾಗಾಗಿ ಈ ತಿದ್ದುಪಡಿಯನ್ನು ಪ್ರಸ್ತುತಪಡಿಸುವ ಅಗತ್ಯ ಕಂಡುಬರುವುದಿಲ್ಲ. ಆದ್ದರಿಂದ ನಾನು ಇದನ್ನು

ಚರ್ಚೆಯಿಂದ ಹೊರಗಿಡುತ್ತೇನೆ.

ಇಲ್ಲಿ ವಿಷಯ ಏನೆಂದರೆ:

"ತಿದ್ದುಪಡಿ ಸಹಿತವಾಗಿ, ಖಂಡ ೩ ಮಸೂದೆಯ ಒಂದು ಭಾಗವಾಗಿ ನಿಲ್ಲುತ್ತದೆ."

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

ತಿದ್ದುಪಡಿಯಾದಂತೆ ಖಂಡ ೩ ನ್ನು ಮಸೂದೆಗೆ ಸೇರಿಸಲಾಯಿತು.

ಖಂಡ ೧ ನ್ನು ಮಸೂದೆಗೆ ಸೇರಿಸಲಾಯಿತು.

ಶೀರ್ಷಿಕೆ ಹಾಗೂ ಕಾರ್ಯವಿಧಾನ ಸೂತ್ರವನ್ನು (Enacting formula) ಮಸೂದೆಗೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:** ಮಸೂದೆಯ ಮಂಡನೆಗಾಗಿ ಅನುಮತಿ ಕೋರುತ್ತೇನೆ:

"ಮಸೂದೆಯನ್ನು, ತಿದ್ದುಪಡಿಗಳನ್ನು ಮಾಡಿದಂತೆ, ಅಂಗೀಕರಿಸತಕ್ಕದ್ದು."

**ಅಧ್ಯಕ್ಷರು:** ಗೊತ್ತುವಳಿಯನ್ನು ಮಂಡಿಸಲಾಗಿದೆ:

"ಮಸೂದೆಯನ್ನು, ತಿದ್ದುಪಡಿಗಳನ್ನು ಮಾಡಿದಂತೆ, ಅಂಗೀಕರಿಸತಕ್ಕದ್ದು."

**ಕ್ಯಾ. ರಣಬೀರ್‌ಸಿಂಗ್ (ಪಂಜಾಬ್):** ಸರ್, ದೆಹಲಿ ಮತ್ತು ಇತರ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳಿಗಾಗಿ ಪ್ರಾತಿನಿಧ್ಯ ಒದಗಿಸುತ್ತಿರುವುದಕ್ಕಾಗಿ ನಾನು ಮಾನ್ಯ ಡಾ. ಅಂಬೇಡ್ಕರ್ ಅವರನ್ನು ವಂದಿಸಲೇ ಬೇಕು. ಆದರೆ ನಾನು ಇದರೊಟ್ಟಿಗೆ ಸದನದ ಗಮನಕ್ಕೆ ತರಬೇಕಾದ ಸಂಗತಿಯೆಂದರೆ ದೆಹಲಿಯಲ್ಲಿ ಎದುರಿಸಬೇಕಾದ ಸಮಸ್ಯೆ ವಿಚಿತ್ರವಾಗಿದೆ. ದೆಹಲಿಯಲ್ಲಿ ನಾಲ್ಕು ಸ್ಥಾನಗಳಿದ್ದು, ಈ ಪೈಕಿ ಬಹಳ ಹೆಚ್ಚೆಂದರೆ ಒಂದು ಸ್ಥಾನ ಗ್ರಾಮೀಣ ಪ್ರದೇಶಗಳಿಗೆ ಸೇರುತ್ತದೆ. ಗ್ರಾಮೀಣ ಪ್ರದೇಶದ ಸ್ಥಾನವನ್ನು ನಗರ ಪ್ರದೇಶದ ಸ್ಥಾನದೊಡನೆ ಸೇರಿಸಿ ಬ್ರಾಕೆಟ್ ಮಾಡಿದರೆ, ಇನ್ನೊಂದರ ಸ್ಥಾನ ಮೀಸಲಾತಿಗೊಂಡಿದ್ದರೆ, ಇದರ ಅರ್ಥ ಒಂದು ಹಿಂದುಳಿದ ವರ್ಗಗಳ ಸ್ಥಾನವನ್ನು ಇನ್ನೊಂದಕ್ಕೆ ಕೊಟ್ಟಂತಾಗುತ್ತದೆ. ನನಗೆ ಅನಿಸುವ ಮಟ್ಟಿಗೆ ದೆಹಲಿಯ ಚತುರರಾದ ಜನರಿಗೆ, ಅಧಿಕಾರಿಗಳಿಗೆ ಮತ್ತು ಹೊಸ ದೆಹಲಿಯಲ್ಲಿ ವಾಸಮಾಡುತ್ತಿರುವ ದೊಡ್ಡ ಮನುಷ್ಯರಿಗೆ ಹೋಲಿಸಿದಂತೆ, ದೆಹಲಿಯ ಗ್ರಾಮಾಂತರ ಜನಸಮುದಾಯವನ್ನು ಪರಿಶಿಷ್ಟ ಜಾತಿಗಳ ಒಳಗೆ ಸೇರಿಸಬೇಕು ಅಥವಾ ಮಾನ್ಯ ಮಂತ್ರಿಗಳು ಅವರೆಲ್ಲ ಹರಿಜನರಲ್ಲ ಎಂಬ ಕಾರಣವನ್ನು ಮುಂದೊಡ್ಡುವುದಾದರೆ, ಕಡೇಪಕ್ಷ ಅವರನ್ನು ಪರಿಶಿಷ್ಟ ಪಂಗಡಗಳ ಒಳಗಾದರೂ ಸೇರಿಸಬೇಕು. ಮಾನ್ಯ ಮಂತ್ರಿಗಳು ಈ ರೀತಿಯಲ್ಲಿ ಅವರಿಗೆ ಒಂದು ಸ್ಥಾನವನ್ನು ಕಲ್ಪಿಸಲು ಪ್ರಯತ್ನಿಸಬೇಕಾಗಿತ್ತು. ಆದರೆ ಇದು ತುಂಬ ಕಷ್ಟಸಾಧ್ಯ ಎಂದು ಗೊತ್ತಿರುವುದರಿಂದ, ಈ ನಿಟ್ಟಿನಲ್ಲಿ ಇನ್ನೊಂದು ಸಲಹೆ ಕೊಡಬಯಸುತ್ತೇನೆ. ಎಲ್ಲೆಲ್ಲಿ ಪರಿಶಿಷ್ಟ ಜಾತಿಗಳ ಶೇಕಡಾವಾರು ಜನಸಂಖ್ಯೆ ಹೆಚ್ಚಾಗಿರುತ್ತದೆ. ಅಂತಹ ಕಡೆಗಳಲ್ಲಿ ಸ್ಥಾನಗಳ ಸಂಖ್ಯೆಯನ್ನು ಎರಡುಪಟ್ಟು ಮಾಡಬೇಕೆಂಬ ಸಾಮಾನ್ಯ ತತ್ತ್ವವಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನು ಕೆಲವು ಪರಿಗಣನೆಗಳೂ ಉಂಟು. ಆದರೆ ನನಗೆ ಗೊತ್ತಿರುವಂತೆ ಹಲವಾರು ಸಂದರ್ಭಗಳಲ್ಲಿ, ಹಲವಾರು ರಾಜ್ಯಗಳಲ್ಲಿ, ಸಮುದಾಯಗಳು ಈ ನಿಯಮಗಳನ್ನು ಅನುಸರಿಸದೆ ಇರುವ ಪ್ರಕರಣಗಳು ಉಂಟು. ಅವರು ಅವುಗಳನ್ನು ಸ್ವಲ್ಪವೂ ಅನುಸರಿಸಿಲ್ಲ ಎಂಬುದು ನನ್ನ ಪೂರ್ತಿ ಅರ್ಥವಲ್ಲ. ಅಪವಾದಗಳು ಯಾವಾಗಲೂ ಇದ್ದೇ ಇರುತ್ತವೆ. ಹಾಗಾಗಿ ಇದನ್ನು ಅಪವಾದದ ರೂಪದಲ್ಲೇ ತೆಗೆದುಕೊಳ್ಳಬಹುದು. ಇದಕ್ಕೆ ಕಾರಣವೇನೆಂದರೆ ದೆಹಲಿಯ ನಗರಪ್ರದೇಶಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಜನರ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ. ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಪರಿಶಿಷ್ಟ

ಜಾತಿಗಳ ಜನರಿಗೆ ಮೀಸಲಾತಿ ಪ್ರಾತಿನಿಧ್ಯಗಳನ್ನು ಕೊಟ್ಟರೆ, ಅವರು ತುಂಬ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಹಾಗಾಗಿ ದೆಹಲಿ ನಗರಕ್ಕೆಂದು ನಾವು ಹಂಚಿಕೊಂಡಿರುವ ಯಾವುದಾದರೂ ಎರಡು ಸ್ಥಾನಗಳನ್ನು ದುಪ್ಪಟ್ಟು ಮಾಡಿದರೆ ನಾವು ಯಾವ ಜನರ ಸಲುವಾಗಿ ನೈಜವಾದ, ಸೂಕ್ತವಾದ ಪ್ರಾತಿನಿಧ್ಯವನ್ನು ಕಲ್ಪಿಸಬೇಕೆಂದಿದ್ದೇವೆಯೊ, ಆ ಬಡಜನರಿಗೆ ಸಹಾಯ ಮಾಡಿದಂತಾಗುತ್ತದೆ. ಆದರೆ ಯಾವುದೇ ಕಾರಣದಿಂದ ಅವರ ಸ್ಥಾನವನ್ನು ಗ್ರಾಮಾಂತರ ಪ್ರದೇಶಕ್ಕೆ ಒದಗಿಸಲಾಗುವ ಸ್ಥಾನದ ಜೊತೆಗೆ ಸೇರಿಸಿದರೆ ನಾನು ಅವರಿಗೆ ಬಳುವಳಿ ಕೊಟ್ಟಂತಾಗುವುದಿಲ್ಲ, ಶಿಕ್ಷೆ ನೀಡಿದಂತಾಗುತ್ತದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೋರುವುದೇನೆಂದರೆ ಸ್ಥಾನಗಳನ್ನು ದ್ವಿಗುಣಗೊಳಿಸುವ ವಿಚಾರದಲ್ಲಿ ಚುನಾವಣಾ ಆಯೋಗಕ್ಕೆ ಒಂದು ನಿರ್ದೇಶನ ಕೊಡಿ. ಈ ಜಾತಿ ಸ್ಥಾನಗಳನ್ನು ದ್ವಿಗುಣಗೊಳಿಸಬೇಕಾದರೆ ದೆಹಲಿಗೆ ಇರುವ ಮೂರು ಸ್ಥಾನಗಳ ಪೈಕಿ ಯಾವುದಾದರೂ ಎರಡನ್ನು ಒಟ್ಟಿಗೆ ಸೇರಿಸಿ ಅವುಗಳನ್ನು ಎರಡೆರಡು ಮಾಡಲಿ, ಆದರೆ ಗ್ರಾಮಾಂತರ ಪ್ರದೇಶಕ್ಕೆ ಕೊಟ್ಟಿರುವ ಸ್ಥಾನವನ್ನು ಹಾಗೇ ಒಂಟಿಯಾಗಿಯೆ ಬಿಡಲಿ. ಹಾಗೆ ಮಾಡುವುದರಿಂದ ಪರಿಶಿಷ್ಟ ಜಾತಿಗಳ ಜನಸಮುದಾಯ ಸಹಾನುಭೂತಿಗೆ ಅರ್ಹವಾಗಿರುವಂತೆ ಹಿಂದುಳಿದ ವರ್ಗಗಳು ಕೂಡ ಸಹಾನುಭೂತಿಗೆ ಅರ್ಹವಾಗಿದ್ದು ಅವರಿಗೆ ನ್ಯಾಯ ಒದಗಿಸಲು ಸಾಧ್ಯವಾದಂತಾಗುತ್ತದೆ.

**ಶ್ರೀ ಜೆ.ಆರ್. ಕಪೂರ್ :** ಸರ್.......

**ಅಧ್ಯಕ್ಷರು:** ಈ ಮಸೂದೆಯ ವಿಚಾರವಾಗಿ ಸಾಕಷ್ಟು ದೀರ್ಘವಾಗಿ ಚರ್ಚೆಯಾಗಿದೆ. ಹಾಗಾಗಿ ಈಗ ಮತ್ತೆ ಉದ್ದವಾದ ಭಾಷಣಗಳ ಅಗತ್ಯವಿಲ್ಲವೆಂಬುದು ನನ್ನ ಅಭಿಪ್ರಾಯ.

**ಶ್ರೀ ಜೆ.ಆರ್. ಕಪೂರ್:** ನಾನು ದೀರ್ಘವಾದ ಯಾವುದೇ ಚರ್ಚೆಗೆ ಇಳಿಯಲು ಇಷ್ಟಪಡುತ್ತಿಲ್ಲ. ತಾವು ನನಗೆ ಅನುಮತಿಕೊಡುವುದಾದರೆ ಒಂದು ಎಚ್ಚರಿಕೆಯ ಮಾತನ್ನು ಸದನದ ಮುಂದೆ ಇಡಬಯಸುತ್ತೇನೆ. ಎರಡು ನಿಮಿಷಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನನ್ನ ಎಚ್ಚರಿಕೆಯ ಮಾತು ಏನೆಂದರೆ ನನ್ನ ಅಭಿಪ್ರಾಯಕ್ಕೆ ಮನ್ನಣೆ ಕೊಡದೆ ಹೋಗುವುದರ ಮೂಲಕ ಮಾನ್ಯ ಕಾನೂನು ಮಂತ್ರಿಗಳು ಭಾಗ 'ಸಿ' ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಬಹಳ ದೊಡ್ಡ ಅನ್ಯಾಯ ಮಾಡುತ್ತಿದ್ದಾರೆ.

**ಶ್ರೀ ಸೊನಾವಣೆ :** ಇಲ್ಲ, ಇಲ್ಲ.

**ಶ್ರೀ ಜೆ.ಆರ್. ಕಪೂರ್:** ಅವರು ಇಂದಲ್ಲ ನಾಳೆ ತಮ್ಮ ಈ ಅಭಿಪ್ರಾಯಕ್ಕೆ, ತಮ್ಮ ಈ ನಿಲುವಿಗೆ ಖಂಡಿತ ಪಶ್ಚಾತ್ತಾಪಪಡುತ್ತಾರೆ ಎಂದು ಖಚಿತವಾಗಿ ಹೇಳಬಯಸುತ್ತೇನೆ. ಸಂವಿಧಾನದ ಉದ್ದೇಶಕ್ಕಾಗಿ ಅನುಚ್ಛೇದ ೩೬೬ರಲ್ಲಿ ಪರಿಭಾವಿಸಿರುವಂತೆ ಪರಿಶಿಷ್ಟಜಾತಿಗಳನ್ನು ಮತ್ತು ಪರಿಶಿಷ್ಟಪಂಗಡಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂಬ ಅವರ ನಿಲುವೇ ಆಘಾತ ಹುಟ್ಟಿಸುವಂತಿದೆ. 'ಪರಿಶಿಷ್ಟ ಜಾತಿಗಳು' ಎಂಬ ಪದಗಳನ್ನು ಉಪಯೋಗಿಸುವ ಅನುಚ್ಛೇದ ೩೩೫ ಹಾಗೂ ಅಂಥವೇ ಇತರ ಕೆಲವು ಅನುಚ್ಛೇದಗಳ ಕಡೆಗೆ ಅವರ ಗಮನವನ್ನು ಸೆಳೆದರೆ, ಅವರು ಖಂಡಿತವಾಗಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುವರು. ಏಕೆಂದರೆ ಅವರು ಇನ್ನೂ ತಮ್ಮ ನಿಲುವಿಗೆ ಅಂಟಿಕೊಂಡಿದ್ದರೆ ಭಾಗ 'ಸಿ' ರಾಜ್ಯಗಳಲ್ಲಿ ವಾಸ ಮಾಡುತ್ತಿರುವ ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟಪಂಗಡಗಳ ಜನ ಅನುಚ್ಛೇದ ೩೩೫ ಹಾಗೂ ಇತರ ಕೆಲವು ಅನುಚ್ಛೇದಗಳು ಅವರಿಗೆ ನೀಡಬೇಕೆಂದಿರುವ ಸೌಲಭ್ಯಗಳಿಂದ, ಸವಲತ್ತುಗಳಿಂದ ವಂಚಿತರಾಗುತ್ತಾರೆ. ಅನುಚ್ಛೇದ ೩೩೫ ಹೀಗೆ ಓದಿಸಿಕೊಳ್ಳುತ್ತದೆ:

"ಕೇಂದ್ರಸರ್ಕಾರ ಅಥವಾ ಯಾವುದೇ ಒಂದು ರಾಜ್ಯ ಸರ್ಕಾರದ ಕಾರ್ಯ ಕಲಾಪಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ಸರ್ಕಾರಿ ಹುದ್ದೆಗಳಲ್ಲಿ ಮತ್ತು ಸೇವೆಗಳಲ್ಲಿ ನೇಮಕ ಮಾಡುವಲ್ಲಿ, ಆಡಳಿತದ ದಕ್ಷತೆಯನ್ನು ಒಂದೇ ಸಮನಾಗಿ ಕಾಪಾಡಿಕೊಂಡು ಹೋಗುವಲ್ಲಿ, ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ವರ್ಗಗಳ ಸದಸ್ಯರ ಹಕ್ಕೊತ್ತಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು."

ಅನುಚ್ಛೇದ ೩೩೫ರಲ್ಲಿ ಹೇಳಲಾಗಿರುವ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳು ಒಂದು ವೇಳೆ ಅನುಚ್ಛೇದ ೩೬೬ರಲ್ಲಿ ಪರಿಭಾಗಿಸಲಾಗಿರುವ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನ್ವಯಿಸುವುದಾದರೆ, ಅಂದರೆ ಅದು ಭಾಗ 'ಎ' ಮತ್ತು 'ಬಿ' ರಾಜ್ಯಗಳಲ್ಲಿರುವ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಾತ್ರ ಅನ್ವಯವಾಗುವಂತಿದ್ದರೆ, ಭಾಗ 'ಸಿ' ರಾಜ್ಯಗಳಿಗೆ ಸೇರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನ ಸಂವಿಧಾನದ ಅನುಚ್ಛೇದ ೩೩೫ರ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಈ ಒಂದು ತಪ್ಪಿನಿಂದ ಇದು ತೀರ್ಮಾನ ಅಥವಾ ವಿವೇಚನೆಯಿಂದ ಆದ ತಪ್ಪೊ ಅಥವಾ ಬೇರೆ ರೀತಿಯದೊ ಹೇಳಲಾರೆ ಅವರು ಇವತ್ತು ಮಾಡುತ್ತಿರುವ ಈ ಒಂದು ತಪ್ಪಿನಿಂದ ಅವರು ಭಾಗ 'ಸಿ' ಪ್ರದೇಶದ ರಾಜ್ಯಗಳಿಗೆ ಸೇರಿದ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಅನುಚ್ಛೇದ ೩೩೫ರ ಅಡಿಯಲ್ಲಿ ಪಡೆಯುವ ಅಥವಾ ಪಡೆಯಬಹುದಾಗಿದ್ದ ಎಲ್ಲಾ ಸೌಲಭ್ಯಗಳನ್ನು ತಪ್ಪಿಸುತ್ತಿದ್ದಾರೆ ಹಾಗೆಯೆ....

**ಅಧ್ಯಕ್ಷರು:** ಸದ್ದು.......ಸದ್ದು....ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಎಲ್ಲ ಜನರೂ ಕಾನೂನು ಮಂತ್ರಿಗಳ ಈ ವ್ಯಾಖ್ಯೆಗೆ ಒಳಪಡುತ್ತಾರೆಯೆ ಎಂದು ನಾನು ಮಾನ್ಯ ಸದಸ್ಯರನ್ನು ಕೇಳಬಹುದೆ? ಅರ್ಥೈಸುವ ರೀತಿಗೆ ಅಡ್ಡಿ ಅಥವಾ ನಿರ್ಬಂಧ ಇಲ್ಲವೆ ಕೊನೆ ಎಂಬುದಿರುವುದಿಲ್ಲ. ಈ ರೀತಿ ಅರ್ಥೈಸಿದರೆ ಸರಿಯಾಗಿರುತ್ತದೆಯೇ, ಹಾಗೆ ಅರ್ಥ ಕಂಡುಕೊಂಡರೆ ಸರಿಯಾಗಿರುತ್ತದೆಯೆ – ಈ ರೀತಿ ಯಾವುದೇ ಕಾನೂನು ಸಂಬಂಧವಾದ ತಿರ್ಮಾನಕ್ಕೆ ಬಂದ ನಾವು ಕೇವಲ ಈ ಮಸೂದೆಯನ್ನು ಜಾರಿಗೆ ತರುತ್ತಿದ್ದೇವೆ. ನ್ಯಾಯಾಲಯಗಳು ಅವುಗಳ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತವೆ. ಅವುಗಳನ್ನು ಅರ್ಥೈಸುವ ಕೆಲಸ ನ್ಯಾಯಾಲಯಗಳಿಗೆ ಬಿಟ್ಟದ್ದು.

**ಶ್ರೀ ಜೆ.ಆರ್. ಕಪೂರ್:** ಸರ್, ತಮ್ಮ ಬಗ್ಗೆ ಅಪಾರ ಗೌರವವಿಟ್ಟು ನಾನು ನಿವೇದಿಸಿಕೊಳ್ಳಬಯಸುವುದೇನೆಂದರೆ ಸರ್ಕಾರ ಮತ್ತು ಸಚಿವ ಸಂಪುಟ ಈ ವಿಷಯವಾಗಿ ರಾಷ್ಟ್ರಪತಿಯವರಿಗೆ ಸಲಹೆ ನೀಡಬೇಕಾಗುತ್ತದೆ. ಏಕೆಂದರೆ ಹೀಗೆ ಮಾಡುವುದರಿಂದ ಅನುಚ್ಛೇದ ೩೩೫ರ ಅಡಿಯಲ್ಲಿ ಪಡೆದುಕೊಳ್ಳಬಹುದಾದ ಎಲ್ಲ ಅನುಕೂಲಗಳನ್ನು ಈ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟಪಂಗಡಗಳು ಕಳೆದುಕೊಂಡುಬಿಡುತ್ತದೆ. ಸರ್ಕಾರವನ್ನು ಕುರಿತು ಹೇಳುವುದಾದರೆ, ಕಾನೂನು ಮಂತ್ರಿಗಳು ಹೇಗೆ ಅರ್ಥೈಸುತ್ತಾರೊ, ಸರ್ಕಾರಕ್ಕೆ ಅದೇ ಸಿಂಧುವಾಗಿಬಿಡುತ್ತದೆ.

**ಅಧ್ಯಕ್ಷರು :** ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಲು ಆಗುವುದಿಲ್ಲವೆ?

**ಶ್ರೀ ಜೆ.ಆರ್. ಕಪೂರ್:** ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಆದರೆ ನಾನು ಕಂಡುಕೊಂಡಿರುವ ಮಟ್ಟಿಗೆ........

**ಅಧ್ಯಕ್ಷರು:** ನಾನು ಒಂದು ವಿಚಾರ ಹೇಳಬಯಸುವುದೇನೆಂದರೆ ಈ ಹಂತದವರೆಗೆ ಈ ಚರ್ಚೆ ಕೇವಲ ತಾತ್ತ್ವಿಕ ಅಥವಾ ಶೈಕ್ಷಣಿಕ ಸ್ವರೂಪದ್ದು. ನಾವು ಈಗ ಕೇವಲ ಮಸೂದೆಗೆ ಸಂಬಂಧಪಟ್ಟಂತೆ

ಒಂದು ವಿಧಿಯನ್ನು ಅಂಗೀಕರಿಸಿದ್ದೇವೆ ಅಷ್ಟೆ. ಈ ಮಸೂದೆಗೆ ಸಂಬಂಧಪಟ್ಟಂತೆ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಪರಿಭಾಷೆ, ಆ ಕುರಿತ ಇತರ ಅನುಚ್ಛೇದಗಳು ಇತ್ಯಾದಿಗಳ ಆಳಕ್ಕೆ ಹೋಗುವ ಕೆಲಸ ಮಾಡಿಲ್ಲ.

**ಶ್ರೀ ಜೆ.ಆರ್. ಕಪೂರ್:** ಆದ್ದರಿಂದಲೇ ನಾನು ಈಗ ಕೇವಲ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತಿದ್ದೇನೆ ಅಂತ ಹೇಳಿದ್ದು.

**ಶ್ರೀ ಜ್ಞಾನೀರಾಮ್ (ಬಿಹಾರ):** ಮತದಾರರ ಪಟ್ಟಿಗಳನ್ನು ಕುರಿತಂತೆ ಆಕ್ಷೇಪಗಳನ್ನು ದಾಖಲಿಸಲು ಕಳೆದ ಮಾರ್ಚ ೩೧ ಕ್ಕೇ ಅವಧಿ ಮುಗಿದುಹೋಗಿದೆ. ಈಗ ನಾವು ಮಾಡಿರುವ ತಿದ್ದುಪಡಿಗಳ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಯ ಜನ ಈ ದಿನಾಂಕ ಮೀರಿದ ಮೇಲೂ ಆಕ್ಷೇಪಗಳನ್ನು ದಾಖಲಿಸುವ ಹಕ್ಕನ್ನು ಪಡೆದಿರುತ್ತಾರೆಯೆ?

**ಡಾ. ಅಂಬೇಡ್ಕರ್:** ಈ ಪ್ರಶ್ನೆ ಏಳುವುದಿಲ್ಲ. ಏಕೆಂದರೆ ಒಬ್ಬ ವ್ಯಕ್ತಿ ಕೇವಲ ಒಬ್ಬ ಮತದಾರರಾಗಿ ನೊಂದಾಯಿತರಾಗಿರುತ್ತಾರೆ. ಅವರು ಪರಿಶಿಷ್ಟ ಜಾತಿಗೆ ಸೇರಿದವರೆ ಅಲ್ಲವೆ ಎಂಬ ಪ್ರಶ್ನೆ ಅಲ್ಲಿ ಉದ್ಭವಿಸುವುದಿಲ್ಲ.

**ಶ್ರೀ ಜ್ಞಾನಾರಾಮ್:** ಒಬ್ಬ ಅಭ್ಯರ್ಥಿ ಪರಶಿಷ್ಟಜಾತಿಗೆ ಅಥವಾ ಪರಿಶಿಷ್ಟಪಂಗಡಕ್ಕೆ ಸೇರಿದವರು ಎಂದಾಗ ಈ ಪ್ರಶ್ನೆ ಏಳುವುದಿಲ್ಲವೆ?

**ಡಾ. ಅಂಬೇಡ್ಕರ್:** ಆ ಪ್ರಶ್ನೆ ಕೇವಲ ನಾಮನಿರ್ದೇಶನದ ದಿನಾಂಕದಂದು ಮಾತ್ರ ಏಳುತ್ತದೆ.

**ಅಧ್ಯಕ್ಷರು:** ಇಲ್ಲಿ ವಿಷಯ ಏನೆಂದರೆ.

"ಈ ಮಸೂದೆ, ತಿದ್ದುಪಡಿ ಮಾಡಿದ ರೀತಿಯಲ್ಲಿ, ಅಂಗೀಕೃತವಾಗತಕ್ಕದ್ದು."

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

# ಪ್ರಜಾಪ್ರಾತಿನಿಧ್ಯ (ಸಂಖ್ಯೆ ೨) ಮಸೂದೆ

ಪ್ರವರ ಸಮಿತಿ ವರದಿ ಪ್ರಸ್ತುತೀಕರಣ

*__ಕಾನೂನು ಮಂತ್ರಿ (ಡಾ. ಅಂಬೇಡ್ಕರ್):__ ಸರ್, ಆಯ್ಕೆ ಸಮಿತಿಯ ಅಧ್ಯಕ್ಷರ ಪರವಾಗಿ ನಾನು ಸಂಸತ್ತಿನ ಸದನಗಳಿಗಾಗಿ ಹಾಗೂ ಪ್ರತಿಯೊಂದು ರಾಜ್ಯದ ಶಾಸನಸಭೆ ಅಥವಾ ಸಭೆಗಳಿಗಾಗಿ ಚುನಾವಣೆಗಳನ್ನು ನಡೆಸುವ, ಆ ಸದನ ಅಥವಾ ಸಭೆಗಳ ಸದಸ್ಯರ ಅರ್ಹತೆ ಮತ್ತು ಅನರ್ಹತೆಗಳನ್ನು ಸೂಚಿಸುವ, ಇಂಥ ಚುನಾವಣೆಗಳಲ್ಲಿ ಅಥವಾ ಅವುಗಳಿಗೆ ಸಂಬಂಧಪಟ್ಟಂತೆ ನಡೆಯುವ ಅಕ್ರಮ ಮತ್ತು ಕಾನೂನುಬಾಹಿರವಾದ ಕೆಲಸಗಳನ್ನು ಅಪರಾಧಗಳನ್ನು ಕುರಿತು ತಿಳಿಯಪಡಿಸುವ ಹಾಗೂ ಇಂಥ ಚುನಾವಣೆಗಳಲ್ಲಿ ಅಥವಾ ಅವುಗಳ ಸಂಬಂಧವಾಗಿ ಏಳಬಹುದಾದ ಸಂದೇಹಾಸ್ಪದವಾದ ನಿರ್ಣಯಗಳು ಮತ್ತು ವಿವಾದಗಳನ್ನು ಕುರಿತು ವಿಧಿಗಳನ್ನೊಳಗೊಂಡ ಮಸೂದೆಯ ಮೇಲೆ ಆಯ್ಕೆ ಸಮಿತಿಯ ವರದಿಯನ್ನು ಪ್ರಸ್ತುತಪಡಿಸುತ್ತಿದ್ದೇನೆ.

**ಶ್ರೀ ಕಾಮತ್ (ಮಧ್ಯಪ್ರದೇಶ):** ಈ ವಿಷಯವನ್ನು ಕುರಿತಂತೆ ಈ ಮುಖ್ಯವಾದ ಮಸೂದೆಯ ಮೇಲೆ ಚರ್ಚೆ ನಡೆಸಲು ಎಷ್ಟು ದಿನಗಳನ್ನು ನಿಗದಿ ಮಾಡಬೇಕು ಹಾಗೂ ಎಂದಿನಿಂದ ಎಂಬ ವಿಚಾರವಾಗಿ ಸರ್ಕಾರ ಏನಾದರೂ ತೀರ್ಮಾನ ತೆಗೆದುಕೊಂಡಿದೆಯೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಇದು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಸದಸ್ಯರಿಗೆ ನೆರವಾಗುತ್ತದೆ.

**ಪ್ರಧಾನ ಮಂತ್ರಿಗಳು ಹಾಗೂ ಸದನದ ನಾಯಕರು (ಶ್ರೀ ಜವಾಹರಲಾಲ್ ನೆಹರೂ):** ಸರ್ಕಾರ ತುರ್ತು ಆದ್ಯತೆಯ ಮೇಲೆ ಈ ಕ್ರಮ ಕೈಗೊಳ್ಳತಕ್ಕದ್ದೆಂದು ಪರಿಗಣಿಸುತ್ತದೆ. ಹಾಗಾಗಿ ಹಣಕಾಸು ಮಸೂದೆಯ ಮೇಲಿನ ಚರ್ಚೆ ಮುಗಿದ ಕೂಡಲೇ ಈ ಮಸೂದೆಯನ್ನು ಕೈಗೆತ್ತಿಕೊಳ್ಳಬಹುದು.

**ಶ್ರೀ ಕಾಮತ್:** ಈ ಚರ್ಚೆಯಾಗಿ ಎಷ್ಟು ದಿನಗಳನ್ನು ನಿಗದಿ ಮಾಡುವಿರಿ?

**ಶ್ರೀ ಜವಾಹರಲಾಲ್ ನೆಹರೂ:** ನಾನು ಹೇಳಲಾರೆ.

**ಉಪ ಸಭಾಪತಿಗಳು:** ಮಾನ್ಯ ಸದಸ್ಯರು ಆಗಾಗ್ಗೆ ಇಂಥ ಪೇಚಿನ ಪ್ರಶ್ನೆ ಒಡ್ಡುತ್ತಿರುತ್ತಾರೆ. ಯಾವುದಾದರೂ ಒಂದು ಮಸೂದೆಯ ಮೇಲಿನ ಚರ್ಚೆಯನ್ನು ಕುರಿತಂತೆ ಸಮಯವನ್ನು ನಿಗದಿಪಡಿಸುವುದು, ನಿರ್ಬಂಧಪಡಿಸುವುದು ಯಾವುದೇ ಸದಸ್ಯರಿಗೇ ಆಗಲಿ ಸರ್ಕಾರಕ್ಕೇ ಆಗಲಿ ಸಾಧ್ಯವಾಗುವುದಿಲ್ಲ. ಸದನ ತನ್ನ ಹಕ್ಕುಗಳನ್ನು ಮತ್ತು ಸವಲತ್ತುಗಳನ್ನು ಬಿಟ್ಟುಕೊಡಬೇಕಾಗಿಲ್ಲ.

---

* ಪಿ.ಡಿ. ಸಂಪುಟ ೧೦, ಭಾಗ ೨, ಮಾರ್ಚ್ ೩೧, ೧೯೫೧, ಪು ೫೫೬೬

# *ಪ್ರಜಾಪ್ರಾತಿನಿಧ್ಯ (ನಂ. ೨) ಮಸೂದೆ

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ನಾನು ಮುಂದುವರೆಯಲು ಕೋರುತ್ತೇನೆ:

> **"**ಲೋಕಸಭೆಯ ಸದನಗಳಿಗೆ ಹಾಗೂ ಪ್ರತಿ ರಾಜ್ಯಗಳ ಶಾಸಕಾಂಗ ಸಭೆಗಳಿಗೆ ಚುನಾವಣೆ ನಡೆಸುವ ಸಂಬಂಧ ಮಸೂದೆಗಳನ್ನು ರೂಪಿಸಲು ಮತ್ತು ಆ ಸದನಗಳ ಪ್ರತಿನಿಧಿಗಳಾಗಲು ಅರ್ಹತೆ, ಅನರ್ಹತೆಗಳು, ಭ್ರಷ್ಟಾಚಾರ, ಕಾನೂನು ಬಾಹಿರ/ಅಕ್ರಮ ನಡವಳಿಕೆಗಳು ಅಥವಾ ಅಂತಹ ಚುನಾವಣೆಗೆ ಸಂಬಂಧಿಸಿದಂತೆ ಅಪರಾಧ ಪ್ರಕರಣಗಳು ಹಾಗೂ ಸಂದೇಹಗಳಿಗೆ ತೀರ್ಮಾನಗಳು ಅಥವಾ ಆ ಚುನಾವಣೆಗೆ ಸಂಬಂಧಿಸಿದಂತೆ ಆಯ್ಕೆ ಸಮಿತಿ ಸದಸ್ಯರು ವರದಿಯಲ್ಲಿ ಸೂಚಿಸಿರುವ ತಕರಾರುಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಮಂಡಿಸುತ್ತಿದ್ದೇನೆ.**"**

ಈ ನಿಲುವಳಿಯ ಪರವಾಗಿ ನನ್ನ ಅಭಿಪ್ರಾಯಗಳತ್ತ ಮತ್ತು ಮಸೂದೆಗೆ ಆಯ್ಕೆಸಮಿತಿಯು ಮಾಡಿರುವ ಬದಲಾವಣೆ ಹಾಗೂ ಆಯ್ಕೆಸಮಿತಿಯ ಕೆಲವು ಸದಸ್ಯರು ನೀಡಿರುವ ಅಸಮ್ಮತಿ ಪತ್ರಗಳತ್ತ ಈ ಸದನದ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ಮಸೂದೆಯು ಸುಮಾರು ೧೬೯ ಪ್ರಕರಣಗಳನ್ನೊಳಗೊಂಡ ದೊಡ್ಡ ಮಸೂದೆಯೆಂದು ಸದನವು ಒಪ್ಪುತ್ತದೆ. ಆಯ್ಕೆ ಸಮಿತಿಯು ಮೂಲ ಮಸೂದೆಯ ಅನೇಕ ಪ್ರಕರಣಗಳಲ್ಲಿ ಬದಲಾವಣೆಯನ್ನು ಮಾಡಿದೆ. ಸಮಿತಿಯು ಉದ್ದೇಶಿಸಿರುವ ಪ್ರತಿಯೊಂದು ಬದಲಾವಣೆಯನ್ನೂ ವಿವರಿಸುವುದು ಕಷ್ಟಸಾಧ್ಯ. ಆದ್ದರಿಂದ, ಆಯ್ಕೆ ಸಮಿತಿಯು ಮಾಡಿರುವ ಬಹಳ ಮುಖ್ಯವಾದ ಬದಲಾವಣೆಗಳತ್ತ ಸದನದ ಗಮನವನ್ನು ಸೆಳೆದರೆ ಸಾಕು ಎಂದು ನನಗನಿಸುತ್ತದೆ.

ಇದುವರೆಗೆ ನಾನು ನೋಡಿದ ಹಾಗೆ ಆಯ್ಕೆಸಮಿತಿಯು ಮೂಲ ಮಸೂದೆಯಲ್ಲಿ ೪ ಮುಖ್ಯ ಬದಲಾವಣೆಯನ್ನು ಮಾಡಿದೆ. ಅವುಗಳಲ್ಲಿ ಪ್ರಕರಣ ಸಂಖ್ಯೆ ೭ ಪ್ರಮುಖವಾದುದು. ಅದು ಸಂಸತ್ ಸದಸ್ಯ ಅಥವಾ ಶಾಸನ ಸಭೆಯ ಸದಸ್ಯರ ಅನರ್ಹತೆಗಳನ್ನು ಕುರಿತಾದದ್ದು. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೂಲದಲ್ಲಿ ಕೇವಲ ಮೂರು ಅನರ್ಹತೆಗಳಿದ್ದವೆಂದು ಸದನ ನೆನಪಿಸಿಕೊಳ್ಳಬಹುದು. ಮೊದಲನೆಯ ಅನರ್ಹತೆ, ಮೂಲ ಮಸೂದೆಯ ಪ್ರಕಾರ, ಚುನಾವಣಾ ಅಪರಾಧಗಳಲ್ಲಿ ತಪ್ಪಿತಸ್ಥನೆಂದು ತೀರ್ಮಾನವಾಗಿರುವುದು. ಅದು ಭ್ರಷ್ಟಾಚಾರಕ್ಕೆ ಸಂಬಂಧಿಸಿರಬಹುದು ಅಥವಾ ನಿಯಮಬಾಹಿರ ವರ್ತನೆಯಿರಬಹುದು. ಮಸೂದೆಯಲ್ಲಿ ಕಂಡುಬಂದ ಎರಡನೆಯ ಅನರ್ಹತೆ ಈ ದೇಶವು ಹೊರಡಿಸಿದ ದಂಡಸಂಹಿತೆಗಳ ಪ್ರಕಾರ ಯಾವುದಾದರು ಒಂದು ಅಪರಾಧದಲ್ಲಿ ತಪ್ಪಿತಸ್ಥನಾಗಿರುವುದು. ಅದು ಚುನಾವಣಾ ಅಪರಾಧಗಳಿಂದ ವಿಭಿನ್ನವಾಗಿರಬಹುದು. ಉದಾಹರಣೆಗೆ ದಂಡಸಂಹಿತೆ ಅಡಿ ಅಥವಾ ಯಾವುದಾದರೂ ಸ್ಥಳೀಯ ಅಪರಾಧಕಾನೂನಿನಂತೆ ಅಪರಾಧವಾಗಿರಬಹುದು. ಮೂರನೆಯ ಅನರ್ಹತೆ ಏನೆಂದರೆ ಚುನಾವಣಾ ಸಮಯದಲ್ಲಿ ಅಪರಾಧಪ್ರಕರಣಗಳಿಗೆ ದಂಡಾದೇಶದ ಪ್ರಕಾರ ಶಿಕ್ಷೆಯನ್ನು ಅನುಭವಿಸುತ್ತಿರುವುದು. ಇದು ಮೂಲ ಪ್ರಕರಣ ೭ ಉಪಪ್ರಕರಣ ೨ರಲ್ಲಿ ಕಂಡು ಬರುವ ಅಂಶ. ಮತ್ತು ನಾಲ್ಕನೆಯದು ಕಾನೂನಿನ ಪ್ರಕಾರ ಚುನಾವಣಾ ವೆಚ್ಚದ ವಿವರಗಳನ್ನು ಕಾಲಮಿತಿಯೊಳಗೆ ಒಪ್ಪಿಸದೆ ಇರುವುದು. ಈ ಮೂಲ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಆಯ್ಕೆ ಸಮಿತಿಯು ಮಾಡಿರುವ ಒಂದೇ ಬದಲಾವಣೆಯೆಂದರೆ ಪ್ರಕರಣ ೭ರ ಉಪಪ್ರಕರಣ ೨ರ ಅನರ್ಹತೆಗೆ ಸಂಬಂಧಿಸಿದ್ದು.

* ಪಿ.ಡಿ. ಸಂಪುಟ ೨, ಭಾಗ ೨, ಮೇ ೧೯೫೧, ಪು. ೮೩೪೮–೭೦.

**(ಉಪಸಭಾಪತಿಯವರು ಅಧ್ಯಕ್ಷಸ್ಥಾನದಲ್ಲಿ)**

ಆಯ್ಕೆ ಸಮಿತಿಯು ಈ ನಿಯಮಗಳನ್ನು ಕೈಬಿಟ್ಟಿದೆ. ಅದಕ್ಕೆ ಕಾರಣ ಶಿಕ್ಷೆಯು ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ ಈ ಪ್ರಕರಣ ಅನಾವಶ್ಯಕ. ಒಂದು ವೇಳೆ ಶಿಕ್ಷೆಯು ೨ ವರ್ಷಕ್ಕಿಂತ ಕಡಿಮೆಯಿದ್ದರೆ ಶಾಸನದ ಮುಖಾಂತರ ಅನರ್ಹಗೊಳಿಸುವ ಅವಶ್ಯಕತೆಯಿಲ್ಲವೆಂದು ಸಮಿತಿಯು ಬಯಸುತ್ತದೆ. ಏಕೆಂದರೆ ಒಬ್ಬ ವ್ಯಕ್ತಿಯು ಸದನಕ್ಕೆ ಚುನಾಯಿತನಾದನೆಂದರೆ ಆತನು ೬೦ ದಿನಗಳಿಗೂ ಮಿಕ್ಕು ಗೈರು ಹಾಜರಾಗಬೇಕಾದರೆ ಸದನದ ಅನುಮತಿ ಪಡೆಯಲೇ ಬೇಕಾಗುತ್ತದೆ. ಅಂತಹ ನಿಯಮ ಈಗಲೂ ಇದೆ. ಸಮಿತಿಯು ಅತನಿಗೆ ಅನುಮತಿಯನ್ನು ನೀಡದಿದ್ದರೆ ಆತನ ಸ್ಥಾನವನ್ನು ತೆರವಾಗಿದೆ ಎಂದು ಘೋಷಿಸಬಹುದು. ಆ ಕಾರಣದಿಂದ ಸಮಿತಿಯು ಈ ಪ್ರಕರಣವನ್ನು ಇರಿಸಿಕೊಳ್ಳವುದು ಅನಾವಶ್ಯಕವೆಂದು ಅಭಿಪ್ರಾಯಪಡುತ್ತದೆ.

ಪ್ರಕರಣ ಸಂಖ್ಯೆ ೭ಕ್ಕೆ ಸಮಿತಿಯು ೪ ಹೊಸ ಅನರ್ಹತೆಗಳನ್ನು ಸೇರಿಸಿದೆ. ಅವು ಬಹಳ ಮುಖ್ಯವಾದವು. ಮೊದಲನೆಯದು ಸರ್ಕಾರದೊಂದಿಗೆ ವ್ಯಾವಹಾರಿಕ ಒಪ್ಪಂದ ಇಟ್ಟುಕೊಳ್ಳುವುದು. ಆಯ್ಕೆಸಮಿತಿಯು ಮಾಡಿರುವ ಹೊಸ ಕಟ್ಟುಪಾಡುಗಳ ಪ್ರಕಾರ ಇದು ಸಹ ಅನರ್ಹತೆಗೆ ಕಾರಣವಾಗುತ್ತದೆ. ಎರಡನೆಯದು ಸರ್ಕಾರದಿಂದ ಸರಕು ಸಾಗಣೆ ಇತ್ಯಾದಿಗೆ ಸಂಬಂಧಿಸಿದಂತೆ ಪರವಾನಗಿ ಪಡೆದಿದ್ದು ಅಂತಹವು ಸರ್ಕಾರದ ಸರಕು ಅಥವಾ ಸಾಗಣೆ ನಿಯಮಕ್ಕೆ ಒಳಪಟ್ಟಿದ್ದರೆ ಅದು ಸಹ ಅನರ್ಹತೆಯಾಗುತ್ತದೆ. ಮೂರನೆಯದಾಗಿ ಸರ್ಕಾರದ ಹೂಡಿಕೆ ಅಥವಾ ಹಿತಾಸಕ್ತಿಯಿರುವ ಯಾವುದಾದರೂ ಕಂಪನಿಯಲ್ಲಿ ನಿರ್ದೇಶಕತ್ವವನ್ನು ಹೊಂದಿದ್ದರೆ ಅದು ಸಹ ಅನರ್ಹತೆಯಾಗುತ್ತದೆ, ಮತ್ತು ನಾಲ್ಕನೆಯದಾಗಿ ಸರ್ಕಾರಿ ನೌಕರನಾಗಿದ್ದು ಭ್ರಷ್ಟಾಚಾರಕ್ಕಾಗಿ ವಜಾಗೊಂಡಿರುವುದು. ಇವು ಆಯ್ಕೆಸಮಿತಿಯು ಮೂಲ ಪ್ರಕರಣಕ್ಕೆ ಸೇರಿಸಿರುವ ನಾಲ್ಕು ಹೊಸ ಅನರ್ಹತೆಗಳು.

ಈಗ ನಾನು ಆಯ್ಕೆ ಸಮಿತಿಯು ಮಾಡಿರುವ ಎರಡನೆಯ ಬದಲಾವಣೆಗೆ ಬರುತ್ತೇನೆ. ಮೂಲ ಮಸೂದೆಯಲ್ಲಿ ೩೫ನೇ ಸಂಖ್ಯೆಯುಳ್ಳ ಒಂದು ಪ್ರಕರಣವನ್ನು ಸದನವು ನೆನಪಿಸಿಕೊಳ್ಳಬಹುದು. ಆ ಪ್ರಕರಣದ ಉದ್ದೇಶ ಹೀಗಿತ್ತು. ಆ ಪ್ರಕರಣದ ಉದ್ದೇಶ ನಾಮನಿರ್ದೇಶನಕ್ಕೆ ಸಂಬಂಧಿಸಿದ ನಡವಳಿಗಳಲ್ಲಿ ವಾಸ್ತವ ಚುನಾವಣೆಗೆ ಸಂಬಂಧಿಸಿದ ನಡವಳಿಗಳಿಂದ ಬೇರೆ ಮಾಡುವುದು. ಗೌರವಾನ್ವಿತ ಸದಸ್ಯರು ನೆನಪಿಸಿಕೊಳ್ಳುವಂತೆ ಚುನಾವಣಾ ನಡವಳಿಗಳನ್ನು ೨ ವಿಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ನಾಮನಿರ್ದೇಶನದ ಹಂತ. ಎರಡನೆಯದು ಚುನಾವಣಾ ಹಂತ. ಕಾನೂನಿನ ಅಡಿಯಲ್ಲಿ ನಾಮಕರಣಕ್ಕೆ ಸಂಬಂಧಿಸಿದಂತೆ ನಡವಳಿಗೆ ಯಾವುದೇ ಅಂತಿಮ ಕಟ್ಟುಪಾಡು ಇರಲಿಲ್ಲ. ನಾಮನಿರ್ದೇಶನಗಳಿಗೆ ಆಕ್ಷೇಪಣೆಗಳಿರಬಹುದು ಆದರೂ ಅದು ಅಂತಿಮ ನಡೆಗೆ ಮುಂದುವರೆಯಬಹುದು ಮತ್ತು ಯಾವಾಗ ಚುನಾವಣಾ ದೂರು ಚುನಾವಣೆಯ ಫಲಿತಾಂಶವನ್ನು ವಿರೋಧಿಸಿ ದಾಖಲಾಗುವುದೋ ಆವಾಗ ಚುನಾವಣೆಯಲ್ಲಿ ಭಾಗಿಯಾದ ಪಕ್ಷ ಅಥವಾ ವ್ಯಕ್ತಿ ಚುನಾವಣಾ ಟ್ರಿಬ್ಯುನಲ್ ಮುಂದೆ ಆಕ್ಷೇಪಣೆಯನ್ನು ಎತ್ತಬಹುದು. ನಿರ್ದಿಷ್ಟ ಅಭ್ಯರ್ಥಿಯ ಚುನಾವಣಾ ಅರ್ಜಿ ತಪ್ಪಾಗಿ ಅಂಗೀಕೃತವಾಗಿದೆಯೇ ಅಥವಾ ನಿರ್ದಿಷ್ಟ ಅಭ್ಯರ್ಥಿಯ ಅರ್ಜಿ ತಪ್ಪಾಗಿ ತಿರಸ್ಕೃತವಾಗಿದೆಯೇ ಎಂದು ಪ್ರಶ್ನೆ ಮಾಡಬಹುದು. ಆಗ ಚುನಾವಣಾ ಟ್ರಿಬ್ಯುನಲ್ ಈ ಎರಡೂ ಆಕ್ಷೇಪಗಳಿಗೆ ಆಧಾರವಿದ್ದರೆ ತೀರ್ಮಾನವನ್ನು ತೆಗೆದುಕೊಳ್ಳಬಹುದು. ಅದು ಇಡೀ ಚುನಾವಣಾ ಪ್ರಕ್ರಿಯೆಯನ್ನು ಅನೂರ್ಜಿತಗೊಳಿಸಬಹುದು. ರಾಜಕೀಯ ಅಸಕ್ತಿಯುಳ್ಳ ಅನೇಕರು ಭಾವಿಸುವುದೇನೆಂದರೆ ಅಪಾರ ಹಣ ವೆಚ್ಚ ಮಾಡಿ ಸುದೀರ್ಘ ಚುನಾವಣೆ ನಡೆಸಿ ಅಭ್ಯರ್ಥಿಗಳು

ಶ್ರಮ ವಹಿಸಿ ನಡೆದಿರುವ ಚುನಾವಣೆ ಕೊನೆಯಲ್ಲಿ ಕೇವಲ ಒಂದೇ ಒಂದು ವಿಷಯ ಚುನಾವಣಾ ಅರ್ಜಿ, ಅದು ಸರಿಯಾಗಿ ಅಂಗೀಕೃತವಾಯಿತೇ ಅಥವಾ ತಿರಸ್ಕೃತವಾಯಿತೆ ಎಂಬುದರ ಮೇಲೆ ಇಡೀ ಚುನಾವಣೆಯನ್ನೆ ಅನೂರ್ಜಿತಗೊಳಿಸುವುದು ಸರಿಯಾದ ಕ್ರಮವಲ್ಲ. ಆದ್ದರಿಂದ ನಾಮನಿರ್ದೇಶನ ಅರ್ಜಿಗಳನ್ನು ಮತ್ತು ಚುನಾವಣಾ ನಡವಳಿಗಳನ್ನು ಪ್ರತ್ಯೇಕ ಮಾಡುವುದು ಉಚಿತವೆಂದು ಅನೇಕರು ಅಭಿಪ್ರಾಯ ಪಡುತ್ತಾರೆ. ನಾಮನಿರ್ದೇಶನ ಪ್ರಕ್ರಿಯೆ ಮುಗಿದ ನಂತರ ಅದನ್ನು ಕುರಿತು ಚುನಾವಣಾ ಟ್ರಿಬ್ಯುನಲ್‌ಗೆ ಚುನಾವಣೆಯನ್ನೆ ಧಿಕ್ಕರಿಸುವಂತಹ ಅರ್ಜಿಗಳು ಬರಬಾರದು. ಈ ಅಂಶವು ಬಹಳ ಮುಖ್ಯವಾದದ್ದು ಎಂದು ನನ್ನ ವೈಯಕ್ತಿಕ ಅಭಿಪ್ರಾಯವೂ ಆಗಿದೆ. ಸಾಧ್ಯವಾದರೆ ನಾಮನಿರ್ದೇಶನ ಭಾಗವನ್ನು ಪ್ರಾಥಮಿಕ ಎಂದು ಸಿವಿಲ್ ನ್ಯಾಯವಾದಿಗಳು ಕರೆಯುವಂತೆ ಅದನ್ನು ಅಲ್ಲಿಗೆ ಮುಕ್ತಾಯಗೊಳಿಸಬಹುದು ಮತ್ತು ಮುಂದಿನ ನೈಜ ಚುನಾವಣೆಗೆ ಮುಂದುವರೆಯಬಹುದು. ಆಗ ಚುನಾವಣೆಗೆ ಬರುವ ವಿರೋಧವು ಭ್ರಷ್ಟಾಚಾರವೋ ಅಥವಾ ನಿಯಮಬಾಹಿರ ಪಾಲನೆಯೋ ಅಥವಾ ಬೆದರಿಕೆಯೊಡ್ಡುವ ಅಂತಹ ಪ್ರಕರಣಗಳಲ್ಲಿ ಚುನಾವಣೆ ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆದಿದೆಯೋ ಅಥವಾ ಇಲ್ಲವೋ ಎಂಬುದನ್ನು ಮಾತ್ರ ಪರಿಗಣಿಸುವುದಾಗಿದೆ.

ದುರಾದೃಷ್ಟವಶಾತ್ ಸಮಿತಿಯು ಈ ಅಭಿಪ್ರಾಯವನ್ನು ಒಪ್ಪಲಿಲ್ಲ. ಸದಸ್ಯರು ಆಯ್ಕೆ ಸಮಿತಿಯ ವರದಿಯನ್ನು ನೋಡಿದಾಗ್ಯು ಮೂಲ ಪ್ರಕರಣ ೩೫ ರಲ್ಲಿರುವ ಕಟ್ಟುಪಾಡುಗಳ ಬಗ್ಗೆ ಅನುಕಂಪವನ್ನು ವ್ಯಕ್ತಪಡಿಸಿದರು. ನಾಮನಿರ್ದೇಶನ ನಡವಳಿಗಳು ಮುಗಿದು ಅಂತಿಮವಾಗಿ ಇತ್ಯರ್ಥವಾಗುವ ಮೊದಲೇ ಅಭ್ಯರ್ಥಿಯ ಅರ್ಹತೆ ಮತ್ತು ಅನರ್ಹತೆಗಳ ಪ್ರಶ್ನೆಗಳನ್ನು ಬೇರೊಬ್ಬರು ಪರಿಶೀಲನೆ ನಡೆಸುವುದು ಆವಶ್ಯಕವೆಂಬ ಸಂಗತಿಯಿಂದ ಸಮಿತಿಯು ಪ್ರಭಾವಿತವಾಗಿದೆ. ಅಭ್ಯರ್ಥಿಯ ಅರ್ಹತೆ ಮತ್ತು ಅನರ್ಹತೆಗಳನ್ನು ಚುನಾವಣೆಯ ಪೂರ್ವದಲ್ಲೆ ತೀರ್ಮಾನಿಸುವಂತಿದ್ದರೆ ಅರ್ಜಿಸಲ್ಲಿಸುವಿಕೆಗೂ ಮತ್ತು ವಾಸ್ತವ ಚುನಾವಣೆಗೂ ನಡುವೆ ಬಹಳ ಅಂತರ ಉಂಟಾಗುವುದೆಂದು ಸಮಿತಿ ಭಾವಿಸುತ್ತದೆ. ಅಂತಹ ಸಂದರ್ಭದಲ್ಲಿ ನಾವು ಬಯಸಿದಷ್ಟು ಬೇಗ ಚುನಾವಣೆ ನಡೆಯಲಾರದು. ಈ ಪ್ರಧಾನ ಕಾರಣದಿಂದ ಸಮಿತಿಯು ಮೂಲ ಪ್ರಕರಣ ೩೫ ರ ಕಟ್ಟುಪಾಡುಗಳನ್ನು ತಿರಸ್ಕರಿಸಬೇಕಾಯಿತು. ವರದಿಯನ್ನು ಅಭ್ಯಾಸ ಮಾಡಿರುವ ಆಯ್ಕೆ ಸಮಿತಿಯ ಗೌರವಾನ್ವಿತ ಸದಸ್ಯರು ಗಮನಿಸಬಹುದಾದಂತೆ ಮಸೂದೆಯು ಸದನದಲ್ಲಿ ಚಾಲನೆಯಲ್ಲಿ ಇರುವಾಗ ಈ ವಿಳಂಬವನ್ನು ತಡೆಯುವ ಯಾವುದಾದರೊಂದು ಸೂತ್ರ ಹೊರಬಂದರೆ, ಅಂದರೆ ನಾಮನಿರ್ದೇಶನ ನಡವಳಿಯ ತೀರ್ಮಾನಕ್ಕೂ ಮತ್ತು ಚುನಾವಣೆಯ ಪ್ರಾರಂಭಕ್ಕೂ ನಡುವೆ ಉಂಟಾಗುವ ವಿಳಂಬಕ್ಕೆ ಒಂದು ಪರಿಹಾರ ದೊರೆತರೆ ಈ ನಿಯಮವನ್ನು ಸ್ವಾಗತಿಸುವುದಾಗಿ ಸಮಿತಿ ಹೇಳುತ್ತದೆ. ಈ ಹಂತದಲ್ಲಿ ಸದನದ ಮುಂದೆ ಇಡುವ ಈ ವಿಷಯದ ಬಗೆಗೆ ನಾನು ಸಹ ಯೋಚಿಸಲು ಸಾಧ್ಯವಾಗಿಲ್ಲ. ಇಂತಹ ಒಂದು ಕಟ್ಟುಪಾಡು ಜಿಲ್ಲಾಸ್ಥಳೀಯ ಮಂಡಳಿಗಳಿಗೆ ಚುನಾವಣೆ ನಡೆಸುವ ಮದ್ರಾಸ್ ಕಾನೂನಿನಲ್ಲಿ ಇದೆ ಎಂದು ನಾನು ಕೇಳಿದ್ದೇನೆ. ಬಹಳ ದಿನಗಳ ನಂತರ ಅದರ ಪ್ರತಿಯೊಂದು ನನಗೆ ದೊರಕಿತು. ಆದರೆ ಅದರ ಮೇಲೆ ನಾನು ಗಮನ ಹರಿಸಲು ಸಾಧ್ಯವಾಗಲಿಲ್ಲ ಆದ್ದರಿಂದ ನನ್ನ ದೃಷ್ಟಿಕೊನದಿಂದ ಮಾತ್ರ ನಾನು ಹೇಳುತ್ತಿದ್ದೇನೆ ಮತ್ತು ಈ ಪ್ರಶ್ನೆಯನ್ನು ಚರ್ಚೆಗೆ ತೆರೆದಿಡಲು ಉದ್ದೇಶಿಸುತ್ತೇನೆ.

ಈಗ ನಾನು ಆಯ್ಕೆ ಸಮಿತಿಯು ಮಾಡಿರುವ ಚುನಾವಣೆಯ ಟ್ರಿಬ್ಯುನಲ್‌ಗೆ ಸಂಬಂಧಿಸಿರುವ ಮೂರನೆ ಬದಲಾವಣೆಯ ವಿಷಯಕ್ಕೆ ಬರುತ್ತೇನೆ. ಮೊದಲಿಗೆ ಟ್ರಿಬ್ಯುನಲ್‌ನ ಸಿಬ್ಬಂದಿಯ ವಿಷಯವಾಗಿ

ಮಾಡಿರುವ ಬದಲಾವಣೆಗಳ ಕುರಿತು ಸೂಚಿಸುತ್ತೇನೆ. ಸದನವು ನೆನಪಿಸಿಕೊಳ್ಳುವಂತೆ ಮಸೂದೆಯ ಮೂಲ ನಿಯಮಗಳು ಹೇಳುವಂತೆ ಜಿಲ್ಲಾ ನ್ಯಾಯಾಧೀಶರು ೧೦ ವರ್ಷ ಅನುಭವವಿರುವ ನ್ಯಾಯವಾದಿಗಳು ಮತ್ತು ಕೆಳಹಂತದ ನ್ಯಾಯಾಧೀಶರು ಚುನಾವಣೆಯ ಟ್ರಿಬ್ಯೂನಲ್‌ನ ಸದಸ್ಯರಾಗಲು ಅರ್ಹರು ಎಂದು ಮಾನ್ಯ ಮಾಡಬಹುದಾಗಿರುತ್ತದೆ. ಆಯ್ಕೆ ಸಮಿತಿಯು ಕೆಳಹಂತದ ನ್ಯಾಯಾಧೀಶರನ್ನು ತೆಗೆದುಹಾಕಿತು. ಸಮಿತಿಯು ಅವರನ್ನು ಅರ್ಹರು ಎಂದು ಮಾನ್ಯಮಾಡಲೇಬಾರದೆಂದು ಹೇಳುತ್ತದೆ ಮತ್ತು ಅವರ ಬದಲು ನಿವೃತ್ತ ಜಿಲ್ಲಾನ್ಯಾಯಾಧೀಶರು, ನಿವೃತ್ತ ಮತ್ತು ಹಾಲಿ ಹೈಕೋರ್ಟ್ ನ್ಯಾಯಧೀಶರು ಚುನಾವಣಾ ಟ್ರಿಬ್ಯೂನಲ್‌ಗೆ ಅರ್ಹವ್ಯಕ್ತಿಗಳು ಎಂದು ಹೇಳಿದ್ದಾರೆ. ಚುನಾವಣಾ ಟ್ರಿಬ್ಯೂನಲ್‌ಗೆ ಸಂಬಂಧಿಸಿದ ಇನ್ನೆರಡು ವಿಷಯಗಳಾದ ಟ್ರಿಬ್ಯುನಲ್‌ನ ರಚನೆ ಮತ್ತು ಮೇಲ್ಮನವಿಯ ಪ್ರಶ್ನೆಗಳಿಗೆ ಆಯ್ಕೆ ಸಮಿತಿಯು ಯಾವ ಬದಲಾವಣೆಯನ್ನೂ ಮಾಡಿಲ್ಲ ಆದ್ದರಿಂದ ಮೂಲದಲ್ಲಿ ಹೇಳಿರುವಂತೆ ಟ್ರಿಬ್ಯೂನಲ್‌ಗೆ ಇಬ್ಬರು ಸದಸ್ಯರು ಇರುವಂತೆ ಮುಂದುವರೆಯುತ್ತದೆ. ಒಬ್ಬರು ಅಧ್ಯಕ್ಷರು ಮತ್ತು ಒಬ್ಬರು ಸದಸ್ಯರು. ಅದೇ ರೀತಿ ಮೇಲ್ಮನವಿಗೆ ಸಂಬಂದಪಟ್ಟ ನಿಯಮಗಳು ಮುಂದುವರೆಯುತ್ತವೆ. ಸದನಕ್ಕೆ ತಿಳಿದಿರುವಂತೆ ನಾವು ಯಾವುದೇ ನಿಯಮಬದ್ಧ ಮನವಿಯನ್ನು ವಿಧಿಸುವುದೇ ಇಲ್ಲ ಒಂದು ವೇಳೆ ಇಬ್ಬರು ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉಂಟಾದರೆ ವಿಷಯವನ್ನು ತಂತಾನೆ ಹೈಕೋರ್ಟ್‌ಗೆ ಒಪ್ಪಿಸಲಾಗುತ್ತದೆ.

ಈಗ ನಾನು ಆಯ್ಕೆ ಸಮಿತಿಯು ಮಾಡಿರುವ ನಾಲ್ಕನೆಯ ಬದಲಾವಣೆಗೆ ತಮ್ಮ ಗಮನವನ್ನು ಸೆಳೆಯುತ್ತೇನೆ. ಇದು ಇತ್ತೀಚಿಗೆ ನಡೆದಿರುವಂತಹದು. ನನಗನಿಸುವಂತೆ ಇದು ಹಿತಕರ ಮತ್ತು ಬಹಳ ಮುಖ್ಯ ಬದಲಾವಣೆ. ಸದನವು ನೆನೆಪಿಸಿಕೊಳ್ಳುವಂತೆ ಮೂಲ ಕರಡು ಮಸೂದೆಯಲ್ಲಿ ತಾತ್ಕಾಲಿಕ ಹುದ್ದೆಗಳನ್ನು ತುಂಬುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟುಕೊಡಲಾಯಿತು. ಇದು ಸಂಪೂರ್ಣವಾಗಿ ಅವರ ಅಧಿಕಾರ ಮತ್ತು ವಿವೇಚನೆಗೆ ಬಿಟ್ಟದ್ದಾಗಿತ್ತು. ಆಯ್ಕೆ ಸಮಿತಿಯ ಅಭಿಪ್ರಾಯವೇನೆಂದರೆ ರಾಜ್ಯ ಸರ್ಕಾರಗಳು ಈ ಅಧಿಕಾರ ಚಲಾವಣೆಯಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸದೆ ಇರಬಹುದು ಮತ್ತು ತಾತ್ಕಾಲಿಕ ಹುದ್ದೆಗಳು ದೀರ್ಘಕಾಲ ತುಂಬದೆ ಉಳಿದು ಹೋಗಬಹುದು. ಆದುದರಿಂದ ಮತ ಕ್ಷೇತ್ರಗಳಿಗೆ ತಮ್ಮ ಪ್ರತಿನಿಧಿಗಳು ಸಂಸತ್ತಿನಲ್ಲೊ ಅಥವಾ ರಾಜ್ಯ ಶಾಸನಸಭೆಗಳಲ್ಲೊ ಕುಳಿತುಕೊಳ್ಳುವುದನ್ನು ತಪ್ಪಿಸಿಬಿಡಬಹುದು. ಆದುದರಿಂದ ಈ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟುಕೊಡುವಬದಲು ಸಂಸತ್ತಿನ ಅಥವಾ ರಾಜ್ಯ ಸರ್ಕಾರದ ಹಂಗು ಇಲ್ಲದಿರುವ ಚುನಾವಣಾ ಆಯೋಗಕ್ಕೆ ಕೊಡಬೇಕೆಂದು ಸಮಿತಿಯು ತೀರ್ಮಾನಿಸಿತು. ಈಗ ಚುನಾವಣೆ ನಡೆಸಲು ಮತ್ತು ಪ್ರತಿನಿಧಿಗಳನ್ನು ಕಳುಹಿಸಲು ಚುನಾವಣಾ ಆಯೋಗವೇ ಚುನಾವಣೆಯ ದಿನಾಂಕವನ್ನು ನಿಗದಿಪಡಿಸುತ್ತದೆ ಮತ್ತು ಚುನಾವಣಾ ಆಯೋಗವೇ ಮತಕ್ಷೇತ್ರಗಳಿಗೆ ಆದೇಶ ಲೇಖಗಳನ್ನು ಹೊರಡಿಸುತ್ತದೆ. ನನಗನ್ನಿಸುವಂತೆ ಇದೊಂದು ಆರೋಗ್ಯಕರ ಬದಲಾವಣೆ, ಮಸೂದೆಯಲ್ಲಿ ಆಯ್ಕೆ ಸಮಿತಿಯು ಮಾಡಿರುವ ನಾಲ್ಕು ಮುಖ್ಯ ಬದಲಾವಣೆಗಳಲ್ಲಿ ಇದು ಒಂದು.

ಈಗ ನಾನು ಅಸಮ್ಮತಿಯ ಸೂಚಿಕೆಗಳಲ್ಲಿ ಪ್ರಸ್ತಾಪಿಸಿರುವ ಬದಲಾವಣೆಗಳತ್ತ ಮುಂದುವರೆಯುತ್ತೇನೆ. ಅಸಮ್ಮತಿಯ ಸೂಚಿಕೆಗಳನ್ನು ವಿಶ್ಲೇಷಿಸುತ್ತಾ ನನಗೆ ಕಂಡುಬರುವುದೇನೆಂದರೆ ಆಯ್ಕೆ ಸಮಿತಿಯು ನೀಡಿರುವ ವರದಿಯಂತೆ ಅಸಮ್ಮತಿಯ ಸೂಚಿಕೆಗಳಿಗೆ ಅಭಿಪ್ರಾಯ ನೀಡಿರುವ ಸದಸ್ಯರು ಮಸೂದೆಯ ೧೦ ಬೇರೆ ಬೇರೆ ಬದಲಾವಣೆಗಳನ್ನು ಪ್ರಸ್ತಾಪಿಸಿದ್ದಾರೆ. ಮೊದಲನೆಯ ಬದಲಾವಣೆ ಏನೆಂದರೆ ಆಯ್ಕೆ ಸಮಿತಿಯು ಸೇರಿಸಿರುವ ಪ್ರಕರಣ ೭ ರ ಉಪಪ್ರಕರಣ (ಡಿ)ಯು ಅನರ್ಹತೆಯನ್ನು ಕುರಿತದ್ದು ಈ ಬದಲಾವಣೆಯನ್ನು ಆಯ್ಕೆ ಸಮಿತಿಯ ಇಬ್ಬರು ಸದಸ್ಯರಾದ ಮಿ. ಗೋಕುಲ್‌ಬಾಯ್ ಭಟ್ ಮತ್ತು ನನ್ನ

ಸ್ನೇಹಿತ ಮಿ. ಗೊಯೆಂಕ್ ಇವರು ಮಾಡಿರುತ್ತಾರೆ. ಅವರ ಮಧ್ಯೆ ಸಮಾನ ಒಪ್ಪಿಗೆ ಇರುವಂತೆ ಕಾಣುವುದಿಲ್ಲ. ಮಿ.ಭಟ್‌ರವರಿಗೆ ಯಾವುದಾದರೂ ಒಪ್ಪಂದವನ್ನು ಹೊಂದಿರುವವರನ್ನು ಅನರ್ಹಗೊಳಿಸುವ ಬಗ್ಗೆ ಯಾವುದೇ ಆಕ್ಷೇಪಣೆ ಇರುವುದಿಲ್ಲ ಅದು ಹಾಗೇ ಮುಂದುವರೆಯುತ್ತದೆ. ಅವರ ಒಂದೇ ಆಕ್ಷೇಪಣೆ ಎಂದರೆ ಲೈಸನ್ಸ್ ಅಥವಾ ಪರವಾನಗಿಗಳನ್ನು ಹೊಂದಿರುವುದು. ಮಿ. ಗೊಯೆಂಕರವರು ಎರಡನ್ನೂ ಆಕ್ಷೇಪಿಸುತ್ತಾರೆ ನಾನು ಹೇಳಿದಂತೆ ಈ ನಿಯಮಗಳು ಮೂಲ ಮಸೂದೆಯಲ್ಲಿ ಇರಲಿಲ್ಲ. ಇವು ಆಯ್ಕೆ ಸಮಿತಿಗೆ ಸೇರಿಸಿರುವಂತಹವು ಸದನಕ್ಕೆ ಈ ಹೆಚ್ಚುವರಿ ನಿಯಮಗಳ ಬಗ್ಗೆ ನನ್ನದೇ ಆದ ಪ್ರತಿಕ್ರಿಯೆಯನ್ನು ಕೊಡಲು ನಾನು ಹಿಂಜರಿಯುವುದಿಲ್ಲ. ಮೊದಲನೆಯದಾಗಿ ನನಗೆ ಅನಿಸುವುದೇನೆಂದರೆ ನಿಸ್ಸಂಶಯವಾಗಿ ಆಯ್ಕೆ ಸಮಿತಿಯು ನಮೂದಿಸಿರುವ ಆ ಪ್ರಕರಣಗಳು ತೀಕ್ಷ್ಣವಾಗಿರುವಂತೆ ಕಾಣುತ್ತದೆ. ನನ್ನ ವೈಯಕ್ತಿಕ ಅನಿಸಿಕೆ ಏನೆಂದರೆ ಆಯ್ಕೆಯ ಅನರ್ಹತೆಗೂ ಮತ್ತು ಸಂಸತ್ತಿನ ಸದಸ್ಯನಾಗಿ ಮುಂದುವರಿಯುವುದಕ್ಕೆ ಇರುವ ಅನರ್ಹತೆಗೂ ವ್ಯತ್ಯಾಸವನ್ನು ಗುರುತಿಸಬಹುದು. ನಾವೇ ಈ ವ್ಯತ್ಯಾಸವನ್ನು ಗುರುತಿಸುತ್ತಿದ್ದೇವೆ. ಒಂದು ವೇಳೆ ಸರ್ಕಾರದ ಒಪ್ಪಂದಗಳನ್ನು ಹೊಂದಿರುವವರು ಅಥವಾ ಸರ್ಕಾರದಿಂದ ಲೈಸನ್ಸ್‌ಗಳನ್ನು ಪಡೆದಿರುವವರು ಅಭ್ಯರ್ಥಿಗಳಾಗಿ ನಿಲ್ಲಲು ಸ್ವತಂತ್ರರು ಎಂದರೆ ಯಾವುದೇ ರೀತಿಯ ತೊಂದರೆ ಅಥವಾ ರಾಜಕೀಯ ಅನ್ಯಾಯಗಳಾಗಬಹುದು ಎಂದು ನನಗೆ ಅನ್ನಿಸುವುದಿಲ್ಲ. ಆದರೆ ಅವರು ಸಂಸತ್ ಸದಸ್ಯರಾಗಿ ಮುಂದುವರಿಯಲು ಅನರ್ಹರಾಗುತ್ತಾರೆ. ಈ ರೀತಿಯ ನಿಯಮಗಳನ್ನು ತರಲು ಏಕೆ ಕಷ್ಟವಾಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಬೇರೆ ಮಾತಿನಲ್ಲಿ ಹೇಳುವುದಾದರೆ ಸರ್ಕಾರದೊಂದಿಗೆ ಒಪ್ಪಂದ ಹೊಂದಿರುವವರು ಅಥವಾ ಲೈಸನ್ಸ್ ಪಡೆದಿರುವವನ್ನು ನಾನು ಅನುಮತಿಸಬಹುದು. ಅವನು ಚುನಾಯಿತನಾದ ಮೇಲೆ ಅವನ ಮುಂದೆ ಈ ಆಯ್ಕೆಗಳನ್ನು ಇಡಬಹುದು. ಒಂದು ಅವನ ಒಪ್ಪಂದಗಳನ್ನು ಬಿಟ್ಟುಕೊಟ್ಟು ಸಂಸತ್ ಸದಸ್ಯನಾಗಿ ಮುಂದುವರೆಯಬಹುದು ಅಥವಾ ಸಂಸತ್ ಸದಸ್ಯನಾಗದಿರಲು ತೀರ್ಮಾನಿಸಿ ತನ್ನ ಒಪ್ಪಂದಗಳ ಜೊತೆ ಮುಂದುವರೆಯಬಹುದು.

**ಪಂಡಿತ ಮೈತ್ರ (ಪಶ್ಚಿಮ ಬಂಗಾಳ):** ಯಾವುದು ಲಾಭದಾಯಕವೋ ಅದು.

**ಡಾ. ಅಂಬೇಡ್ಕರ್:** ಏನಾದರೂ ಇರಲಿ. ನನ್ನ ಅಭಿಪ್ರಾಯ ಇದು. ನನ್ನ ಅಭಿಪ್ರಾಯದಲ್ಲಿ ಇಂತಹ ಜನರು ಅಭ್ಯರ್ಥಿಗಳಾಗಿ ನಿಲ್ಲಲು ಅರ್ಹರಲ್ಲ ಎನ್ನುವುದು ಅತಿಯಾದ ಹೇಳಿಕೆಯಾಗುತ್ತದೆ. ಆದರೆ ಅವರು ಸಂಸತ್ ಸದಸ್ಯರಾಗಿ ಮುಂದವರೆಯಬಾರದು ಎಂಬ ವಾದದಲ್ಲಿ ಸ್ವಲ್ಪ ಹುರುಳಿದೆ. ಈ ಬದಲಾವಣೆಯನ್ನು ಮಾಡಬಹುದೆಂದು ಕಾಣುತ್ತದೆ.

**ಶ್ರೀ. ಸಿಧ್ವ (ಮಧ್ಯ ಪ್ರದೇಶ):** ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು.

**ಡಾ. ಅಂಬೇಡ್ಕರ್**: ಕಾಲಕ್ರಮೇಣ ಸರ್ಕಾರದ ಅಭಿಪ್ರಾಯ ತಿಳಿಯುತ್ತದೆ. ಲೈಸನ್ಸ್ ಮತ್ತಿತರ ಪ್ರಶ್ನೆಗೆ ಸಂಬಂಧಪಟ್ಟಂತೆ ದೇಶದಲ್ಲಿ ವಾಣಿಜ್ಯ ಸಮುದಾಯದಿಂದ ಒಂದು ದೊಡ್ಡ ಪ್ರತಿಭಟನೆಯೇ ಉಂಟಾಗಿರುವುದರಲ್ಲಿ ಸಂಶಯವಿಲ್ಲ ಒಂದು ವೇಳೆ ಈ ಪ್ರಕರಣವು ಆಯ್ಕೆ ಸಮಿತಿಯು ಮಂಡಿಸಿರುವ ಕರಡು ಮಸೂದೆಯಲ್ಲಿ ಇದ್ದ ಹಾಗೆ ಇದ್ದರೆ ಇಡೀ ವಾಣಿಜ್ಯ ಸಮುದಾಯ ಸಂಸತ್ತಿನಲ್ಲಿ ಪ್ರತಿನಿಧಿಸುವ ಹಕ್ಕನ್ನು ಕಳೆದುಕೊಳ್ಳುತ್ತದೆ. ದೇಶದ ರಾಜಕೀಯ ವ್ಯವಹಾರಗಳನ್ನು ಕುರಿತು ಈ ಮಾತನ್ನು ಹೇಳುತ್ತಿದ್ದೇನೆ. ಇಂತಹ ವ್ಯತಿರಿಕ್ತ ಪರಿಣಾಮಗಳನ್ನು ತರುವುದು ನಮಗೆ ಬೇಡ ಎಂದು ನನಗೆ ನಿಶ್ಚಿತವಾಗಿ ಗೊತ್ತು. ಪ್ರತಿಯೊಂದು ಸಮುದಾಯವು ದೇಶದ ರಾಜಕೀಯದಲ್ಲಿ ಪಾತ್ರವಹಿಸುವ ಅವಕಾಶವನ್ನು ಪಡೆದಿರಬೇಕು.

ಸಂಸತ್‌ಗೆ ಬಂದು ತನ್ನ ಅಭಿಪ್ರಾಯವನ್ನು ಮಂಡಿಸಿ ಶಾಸನಗಳನ್ನು ತಿದ್ದುವ, ಬದಲಾಯಿಸುವ, ತನಗೆ ಸರಿಯೆನಿಸಿದ್ದನ್ನು ಮಾಡುವ ಅವಕಾಶವಿರಬೇಕು. ಸಂಸತ್ತು ಯಾವುದೇ ಒಂದು ವರ್ಗವನ್ನು, ಒಂದು ಗುಂಪನ್ನೋ, ಅಥವಾ ಒಂದು ಸಮುದಾಯವನ್ನೋ ಪ್ರತಿನಿಧಿಸುವ ಘಟಕವಾಗಬಾರದು. ಹಾಗಾದಲ್ಲಿ ಉಳಿದ ಸಮುದಾಯಗಳ ಅಭಿಪ್ರಾಯಗಳು ಪ್ರಾತಿನಿಧ್ಯವನ್ನು ಕಳೆದುಕೊಳ್ಳುತ್ತವೆ. ನನ್ನ ಪ್ರಕಾರ ಅದು ಸಮಂಜಸವೆನಿಸುವುದಿಲ್ಲ, ಅದು ಹಾಗೇ ಆಗುವುದಾದರೆ ಅದು ಸಂಸತ್ತಿಗೆ ಅಪಸೇವೆಗೈದಂತೆ. ಈ ಸಮಯದಲ್ಲಿ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ ವಾಣಿಜ್ಯ ಸಮುದಾಯ ರಾಜಕೀಯ ಪ್ರಭಾವ ಬೀರಲು ಮತ್ತು ಸಂಸತ್ತನ್ನು ಪ್ರವೇಶಿಸಲು ಸಮಾನ ಅವಕಾಶವನ್ನು ಪಡೆಯಬೇಕು. ಆದರೆ ಸಂಸತ್ತು ಷೇರುಮಾರುಕಟ್ಟೆಯಾಗಿ ಬದಲಾಗುವುದು ನಮಗೆ ಬೇಕಿಲ್ಲ.

**ಪಂಡಿತ್ ಮೈತ್ರ:** ಈಗಾಗಲೆ ಅವರು ಪ್ರಭಾವಶಾಲಿಗಳಾಗಿದ್ದಾರೆ.

**ಡಾ.ಅಂಬೇಡ್ಕರ್:** ಇನ್ನೊಂದು ವಿಷಯವನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಅದು ವಿಷಯದ ಮೂಲಕ್ಕೆ ಹೋಗುತ್ತದೆ. ನಮ್ಮ ಸಂಸತ್ತು ಮತ್ತು ಚುನಾವಣಾ ಕಾನೂನುಗಳನ್ನು ಹೇಗೆ ರಚಿಸಬೇಕೆಂದರೆ ಸರ್ಕಾರದ ವಿರುದ್ಧ ಸಂಸತ್ ಸದಸ್ಯರ ಸ್ವಾತಂತ್ರ್ಯವನ್ನು ಬಹಳ ಜಾಗ್ರತೆಯಿಂದ ಕಾಯುವಂತಹ ಅವಕಾಶಗಳು ಅವುಗಳಲ್ಲಿರಬೇಕು. ಸರ್ಕಾರವು ಇಡೀ ಸಂಸತ್ತನ್ನು ರಾಜಕೀಯ ಸ್ಥಾನಮಾನಗಳನ್ನು ಕೊಡುವ ಮೂಲಕ ಅಥವಾ ಇನ್ನಿತರ ಅನುಕೂಲಗಳನ್ನು ನೀಡುವ ಮೂಲಕ ಭ್ರಷ್ಟಗೊಳಿಸಿದರೆ ಅಂತಹ ಪದ್ಧತಿಯನ್ನು ಒಳಗೊಂಡ ಸಂಸತ್ತಿನಿಂದ ಯಾವ ಪ್ರಯೋಜನವೂ ಅಗಲಾರದು. ಸಂಸತ್ತು ಸರ್ಕಾರದ ಭಯ ಅಥವಾ ಮರ್ಜಿ ಇಲ್ಲದೆ ಸ್ವತಂತ್ರವಾಗಿ ನಡೆದುಕೊಳ್ಳದಿದ್ದರೆ ನನ್ನ ತೀರ್ಮಾನದಂತೆ ಅಂತಹ ಸಂಸತ್ತಿನಿಂದ ಯಾವ ಉಪಯೋಗವೂ ಇಲ್ಲ. ಆದ್ದರಿಂದ ಒಂದು ಕಡೆ ಎಲ್ಲಾ ಸಮುದಾಯಗಳಿಗೂ ಎಲ್ಲಾ ವರ್ಗದ ಜನರಿಗೂ ಸಂಸತ್ತಿಗೆ ಬರುವ ಮತ್ತು ತಮ್ಮ ಪಾತ್ರ ನಿರ್ವಹಿಸುವ ಅವಕಾಶಗಳನ್ನು ಕೊಡುವ ಜೊತೆಗೆ ಅದೇ ಸಮಯದಲ್ಲಿ ಕೆಲವು ರಕ್ಷಣಾತ್ಮಕ ನಿಯಮಗಳನ್ನು ವಿಧಿಸುವುದು ಅಗತ್ಯವಿದೆ. ಏಕೆಂದರೆ ಸಂಸತ್ತು ಸರ್ಕಾರದ ಹೇಳಿಕೆಗಳಿಗೆ ಅಹುದು ಅಹುದು ಎನ್ನುವ ಹಿಮ್ಮೇಳದ ಗಾಯಕಿಯರಂತೆ ವರ್ತಿಸಬಾರದು.

**ಶ್ರೀಮತಿ ದುರ್ಗಾಬಾಯಿ (ಮದ್ರಾಸ್):** ಹುಡಿಗಿಯರೇ ಯಾಕೆ ?

**ಡಾ. ಸಿ.ಡಿ. ಪಾಂಡೆ:** ಎದ್ದುನಿಂತು –

**ಉಪ ಸಭಾಪತಿ:** ಏನದು ?

**ಡಾ. ಅಂಬೇಡ್ಕರ್:** ನಾನು ಹೇಳಿದಂತೆ ನನ್ನ ಅಭಿಪ್ರಾಯವೇನೆಂದರೆ ನಾವು ಎರಡು ಮಿತಿಗಳ ಒಳಗೆ ತೇಲಬೇಕು. ಒಂದು ಮಿತಿ ಇದು; ನಮ್ಮ ಚುನಾವಣಾ ಕಾನೂನು ಯಾವುದೇ ನಿರ್ದಿಷ್ಟವರ್ಗವನ್ನು ಅಥವಾ ನಿರ್ದಿಷ್ಟಸಮುದಾಯವನ್ನು ಉದ್ದೇಶಪೂರ್ವಕವಾಗಿ ತಡೆಹಿಡಿಯುವಂತಿರಬಾರದು. ಎರಡನೆ ಮಿತಿ ಇದು: ಚುನಾವಣಾ ಕಾನೂನು ಹೇಗಿರಬೇಕೆಂದರೆ ಸಂಸತ್ತಿಗೆ ಒಂದು ನಿರ್ದಿಷ್ಟ ಪ್ರಮಾಣದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವಂತಿರಬೇಕು. ಈ ಎರಡೂ ಮಿತಿಗಳೊಡನೆ ಈ ನಿರ್ದಿಷ್ಟ ಅನರ್ಹತೆಗೆ ಸಂಬಂಧಪಟ್ಟಂತೆ ಯಾರಾದರೂ ಸಲಹೆಗಳನ್ನು ನೀಡುವಂತಿದ್ದರೆ ಅದನ್ನು ನಾನು ತಾಳ್ಮೆಯಿಂದ ಕೇಳಿಸಿಕೊಳ್ಳುತ್ತೇನೆ.

**ಉಪಸಭಾಪತಿ:** ರಾಜಕೀಯ ಹುದ್ದೆಗಳಿಗೆ ಸಂಬಂಧಿಸಿದಂತೆ ಏನಾದರೂ ನಿಯಮಗಳಿವೆಯೆ. ಮಾನ್ಯ ಮಂತ್ರಿಗಳು ಹೇಳುತ್ತಿದ್ದರು, ರಾಜಕೀಯ ಹುದ್ದೆ ಅಥವಾ ಒಪ್ಪಂದಗಳು ಸಂಸತ್ ಸದಸ್ಯರನ್ನು ಭ್ರಷ್ಟಗೊಳಿಸಲು ಬಿಡಬಾರದು. ಆ ಪ್ರಶ್ನೆಗೆ ನನ್ನ ಉತ್ತರ ಇದು. ಈ ವಿಷಯವಾಗಿ ಮಂತ್ರಿಗಳ ಸಂಖ್ಯೆ,

ಸಂಸದೀಯ ಕಾರ್ಯದರ್ಶಿಗಳು, ರಾಜ್ಯ ಮಂತ್ರಿಗಳು ಇತ್ಯಾದಿ ವಿಷಯಗಳಲ್ಲಿ ಬ್ರಿಟಿಷ್ ಕಾನೂನಿನಲ್ಲಿರುವಂತೆ ಒಂದು ನಿರ್ದಿಷ್ಟನೀತಿಯನ್ನು ವಿಧಿಸಬೇಕಾಗಿರುತ್ತದೆ. ಎಂದಾದರೊಂದು ದಿನ ಅಂತಹ ಶಾಸನವನ್ನು ಪಾಸು ಮಾಡಲು ಸಾಧ್ಯವಾಗುತ್ತದೆ ಎಂಬ ಭರವಸೆ ನನಗೆ ಇದೆ. ಆಗ ಸರ್ಕಾರವು ತನಗೆ ಬೇಕಾದಂತೆ ತಮ್ಮ ಬೆಂಬಲಿಗರನ್ನು ಹೆಚ್ಚಿಸಿಕೊಳ್ಳಲು ರಾಜಕೀಯ ಹುದ್ದೆಗಳನ್ನು ಸೃಷ್ಟಿಸುವುದು, ಮಂತ್ರಿಗಳು, ಉಪಮಂತ್ರಿಗಳು, ಸಂಸದೀಯ ಕಾರ್ಯದರ್ಶಿಗಳ ಹುದ್ದೆಗಳನ್ನು ಪ್ರಲೋಭನೆಯಾಗಿ ನೀಡುವುದು ತಪ್ಪುತ್ತದೆ. ಈ ವಿಷಯ...............

**ಸೇಠ್ ಗೋವಿಂದದಾಸ್ (ಮಧ್ಯಪ್ರದೇಶ್):** ಆ ನಿಯಮಗಳನ್ನು ಈಗಲೇ ಯಾಕೆ ತರಬಾರದು.

**ಡಾ. ಅಂಬೇಡ್ಕರ್:** ಅದನ್ನು ಮಾಡಲಾಗುವುದಿಲ್ಲ. ಅದು ಮಂತ್ರಿಮಂಡಲದ ವ್ಯವಹಾರಗಳ ವಿಷಯ, ನನಗೆ ಗೊತ್ತಿಲ್ಲ. ಬಹುಶಃ ನಿಮಗೆ ನೆನಪಿರಬಹುದು ಈ ಪ್ರಶ್ನೆಯನ್ನು ೧೯೩೫ರ ಭಾರತ ಸರಕಾರದ ಕಾಯಿದೆ ಮಾಡಿದಾಗ ಈ ಪ್ರಶ್ನೆಯನ್ನು ಪರಿಶೀಲಿಸಲಾಗಿತ್ತು. ಒಂದು ಪ್ರಸ್ತಾವನೆ...............

**ಆಹಾರ ಮತ್ತು ಕೃಷಿ ಉಪ ಮಂತ್ರಿ (ಶ್ರೀ ತಿರುಮಲರಾವ್):** ಅದು ವಿದೇಶಿ ಸರ್ಕಾರದಿಂದ.

**ಡಾ. ಅಂಬೇಡ್ಕರ್:** ಜ್ಞಾನ ಒಳಗಿನಿಂದ ಬರಲಿ ಅಥವಾ ದೇಶದ ಹೊರಗಿನಿಂದ ಬರಲಿ ಅದು ಜ್ಞಾನವೇ.

**ಪಂಡಿತ ಮುನೀಶ್ವರ್ ದತ್ ಉಪಾಧ್ಯಾಯ (ಉತ್ತರ ಪ್ರದೇಶ):** ನಿಮಗೆ ಇದು ಒಪ್ಪಿಗೆ ಯಾಗುತ್ತದೆಯೆ?

**ಡಾ. ಅಂಬೇಡ್ಕರ್:** ಹೌದು ನಾನು ಹಾಗೇ ಹೇಳಿದೆ. ೧೯೩೫ರ ಭಾರತ ಸರಕಾರದ ಕಾಯಿದೆಯನ್ನು ರಚಿಸಿದಾಗ ಇದೇ ಪ್ರಶ್ನೆಯನ್ನು ಎತ್ತಲಾಗಿತ್ತು ಎಂದು ನನಗೆ ನೆನಪಿದೆ. ನಾನು ಪ್ರಧಾನಮಂತ್ರಿಯನ್ನು .............

**ಪಂಡಿತ್ ಠಾಕೂರ್ ದಾಸ್ ಭಾರ್ಗವ (ಪಂಜಾಬ್):** ಆರ್ಟಿಕಲ್ ೧೦೨ ಈಗಾಗಲೆ ಇದೆ. ಲಾಭದಾಯಕ ಹುದ್ದೆಯನ್ನು ಹೊಂದಿರುವ ಪ್ರತಿಯೊಬ್ಬನು ಅನರ್ಹಗೊಳ್ಳುತ್ತಾನೆ.

**ಡಾ. ಅಂಬೇಡ್ಕರ್:** ನಾವು ಅದನ್ನು ಮಿತಿಗೊಳಿಸಿದ್ದೇವೆ. ಒಂದು ವೇಳೆ ಯಾರಾದರೂ ಮಂತ್ರಿಯಾದರೆ ಈ ಅನರ್ಹತೆಯಿಂದ ಅವನು ಮುಕ್ತನಾಗುತ್ತಾನೆ. ಅದರ ವಿವರಕ್ಕೆ ಈಗ ನಾನು ಹೋಗುವುದಿಲ್ಲ. ಆ ಪ್ರಶ್ನೆಯೇ ಬೇರೆ. ಈಗ ನೀವು ಎತ್ತಿದ ಪ್ರಶ್ನೆಯನ್ನು ವಿವರಿಸುತ್ತೇನೆ.

**ಶ್ರೀ ಸಿಧ್ವ:** ಇವೆಲ್ಲವನ್ನು ಇಲ್ಲಿ ಏಕೆ ಸೇರಿಸಬಾರದು.

**ಡಾ. ಅಂಬೇಡ್ಕರ್:** ಅವೆಲ್ಲವನ್ನು ಈ ಮಸೂದೆಯಲ್ಲಿ ನಾನು ಮಾಡಲಾಗುವುದಿಲ್ಲ.

**ಶ್ರೀ ಕಾಮತ್ (ಮಧ್ಯಪ್ರದೇಶ್):** ನೀವು ೧೯೩೫ರ ಭಾರತ ಸರಕಾರದ ಕಾಯಿದೆಯ ಬಗ್ಗೆ ಹೇಳುತ್ತಿದ್ದಿರಿ. ಏನದು ?

**ಡಾ. ಅಂಬೇಡ್ಕರ್:** ನಾನು ೧೯೩೫ರ ಭಾರತ ಸರಕಾರದ ಕಾಯಿದೆಯ ಬಗ್ಗೆ ಹೇಳಿದೆ. ಏಕೆಂದರೆ ನಾನು ದುಂಡುಮೇಜಿನ ಪರಿಷತ್ತಿಗೆ ಹೋಗಿದ್ದಾಗ ಇದೇ ಪ್ರಶ್ನೆಯನ್ನು ಎತ್ತಲಾಯಿತು. ಅದೇನೆಂದರೆ ನೇಮಕ ಮಾಡಲಿರುವ ಮಂತ್ರಿಗಳ ಸಂಖ್ಯೆಯನ್ನು ಮಿತಿಗೊಳಿಸುವ ಆವಶ್ಯಕತೆ ಇದೆಯೇ? ಅಲ್ಲಿನ ಅಭಿಪ್ರಾಯ ಮಂತ್ರಿಮಂಡಲದಲ್ಲಿ ಮಂತ್ರಿಗಳನ್ನು ಹೆಚ್ಚಿಸಿದರೆ, ಸದನದ ಶಕ್ತಿಯನ್ನು ಕುಂದಿಸಬಹುದು ಎಂದಿತ್ತು. ಅಲ್ಲಿ ಎರಡು ಪ್ರಸ್ತಾವನೆಗಳಿದ್ದವು. ಒಂದು ಗರಿಷ್ಟ ಸಂಖ್ಯೆಯನ್ನು ಕಾಯಿದೆಯಲ್ಲಿ ವಿಧಿಸುವುದಾಗಿತ್ತು ಅಂದರೆ ಇಂತಿಷ್ಟು ಸಂಖ್ಯೆಯ ವ್ಯಕ್ತಿಗಳಿಗಿಂತ ಹೆಚ್ಚಾಗಿ ಮಂತ್ರಿಗಳನ್ನು ನೇಮಕಮಾಡಬಾರದು. ಎರಡನೆಯ ಪ್ರಸ್ತಾವನೆ ಎಂದರೆ.......... ಸದಸ್ಯರು ಇದನ್ನು ಇಷ್ಟಪಡುತ್ತಾರೋ ಇಲ್ಲವೋ ಎಂದು ನನಗೆ ತಿಳಿಯದು.........

ಇಡೀ ಮಂತ್ರಿಮಂಡಲಕ್ಕೆ ಒಂದು ನಿರ್ದಿಷ್ಟ ಮೊತ್ತದ ವೇತನವನ್ನು ನಿಗದಿಪಡಿಸುವುದು. ಹಾಗೆ ಅವರು ಮಂತ್ರಿಗಳ ಸಂಖ್ಯೆಯನ್ನು ಹೆಚ್ಚುಮಾಡಬೇಕಾಗಿದ್ದರೆ ಲೂಟಿಯನ್ನು ಹಂಚಿಕೊಳ್ಳುವ ಹಾಗೆ ಅವರ ವೇತನದ ಭಾಗ ಪ್ರತಿಯೊಬ್ಬರಿಗೂ ಕಡಿಮೆಯಾಗುತ್ತಿತ್ತು. ಈ ಯಾವ ಸಲಹೆಗಳನ್ನು ಒಪ್ಪಲಾಗದೇ ಹಾಗೆ ಅವರ ಉತ್ತಮ ವಿವೇಚನೆಗೆ ಬಿಡಲಾಯಿತು.

**ಸೇಠ್ ಗೋವಿಂದ್ ದಾಸ್:** ನಾವು ಎರಡನ್ನೂ ಇಟ್ಟುಕೊಳ್ಳಬಹುದು.

**ಪಂಡಿತ್ ಮುನೀಶ್ವರ ದತ್ತ ಉಪಾಧ್ಯಾಯ:** ಸಂವಿಧಾನದ ಅಡಿಯಲ್ಲಿ ನೀವು ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದೇ.

**ಡಾ. ಅಂಬೇಡ್ಕರ್:** ಸದನವು ಮಾಡಬಹುದು.

**ಸಾರಿಗೆ ಮತ್ತು ರೈಲ್ವೆ ರಾಜ್ಯ ಮಂತ್ರಿ (ಶ್ರೀ ಸಂತಾನಂ):** ಒಂದುವೇಳೆ ಆಗದಿದ್ದರೆ; ದಯವಿಟ್ಟು ಸಂವಿಧಾನವನ್ನು ಓದಿ.

**ಡಾ. ಅಂಬೇಡ್ಕರ್:** ಕ್ಷಮಿಸಿ. ನಾವು ಮಾಡಬಹುದು ಎಂದೇ ಅಲೋಚಿಸಬೇಕು. ಅದನ್ನು ತಡೆಹಿಡಿಯಲು ಸಂವಿಧಾನದಲ್ಲಿ ಏನೂ ಇಲ್ಲ. ಸಂವಿಧಾನ ಹೇಳುವುದೇನೆಂದರೆ ರಾಷ್ಟ್ರಪತಿಯವರಿಗೆ ಸಲಹೆ ನೀಡಲು ಒಂದು ಮಂತ್ರಿಮಂಡಲ ಇರಬೇಕು ಎಂದಷ್ಟೆ. ಅಲ್ಲಿ ಎಷ್ಟು ಜನ ಮಂತ್ರಿಗಳಿರಬೇಕು ಎಂದು ಅದು ಹೇಳುವುದಿಲ್ಲ.

**ಶ್ರೀಮತಿ ದುರ್ಗಾಬಾಯಿ:** ಆದೇಶದ ಒಂದು ಅಂಶದ ಮೇಲೆ ಮಾನ್ಯರೆ.......

**ಉಪ ಸಭಾಪತಿ:** ಗೌರವಾನ್ವಿತ ಸದಸ್ಯರು ಆದೇಶದ ಅಂಶದ ಮೇಲೆ ಮಾತನಾಡಲಿದ್ದಾರೆ. ಮಾನ್ಯ ಮಂತ್ರಿಗಳು ಅವಕಾಶ ಕೊಡುವರೆ?

**ಶ್ರೀಮತಿ ದುರ್ಗಾಬಾಯಿ:** ಆದೇಶದ ಅಂಶದ ಮೇಲೆ, ಮಾನ್ಯರೆ, ಸರ್ಕಾರವು ಹೆಚ್ಚು ಮಂತ್ರಿಗಳನ್ನೋ ಅಥವಾ ರಾಜ್ಯ ಮಂತ್ರಿಗಳನ್ನೋ ನೇಮಕ ಮಾಡಿದರೆ ಸದನವನ್ನು ಅಸ್ಥಿರಗೊಳಿಸಿದಂತಾಗುತ್ತದೆ ಎಂದು ಹೇಳಿ ಮಾನ್ಯ ಮಂತ್ರಿಗಳೇ ಪ್ರಚೋದನೆ ನೀಡುತ್ತಿದ್ದಾರೆಯೆ?

**ಡಾ. ಅಂಬೇಡ್ಕರ್:** ನಾನು ಅಧ್ಯಕ್ಷರಿಗೆ ಉತ್ತರಿಸುತ್ತಿದ್ದೇನೆ. ಇದನ್ನು ನಾನು ಕೈ ಬಿಡುವವನಿದ್ದೆ; ಶ್ರೀ ಕಾಮತ್‌ರವರು ನಾನು ಇದರ ಬಗ್ಗೆ ಹೇಳಬೇಕೆಂದು ಬಯಸಿದ್ದರು.

**ಉಪಸಭಾಪತಿ:** ಇಲ್ಲಿ ಏನು ಪ್ರಚೋದನೆ ಇರುವುದೆಂದು ನನಗನಿಸುವುದಿಲ್ಲ. ಮಾನ್ಯ ಮಹಿಳಾ ಸ್ನೇಹಿತರು ನನ್ನ ಮತ್ತು ಮಂತ್ರಾಲಯದ ನಡುವೆ ವಿಷಮಸ್ಥಿತಿಯನ್ನು ಉಂಟು ಮಾಡುವುದಿಲ್ಲವೆಂದು ಆಶಿಸುತ್ತೇನೆ.

ನಾನು ಮುಂದಿನ ಪ್ರಶ್ನೆಗೆ ಬರುತ್ತೇನೆ. ಎರಡನೆಯ ಪ್ರಸ್ತಾವನೆ ಏನೆಂದರೆ ರಾಜವಂಶಸ್ಥರು ಸದಸ್ಯರಾಗಿ ನೇಮಕವಾಗಲು ಅನರ್ಹರು ಎಂದು ತೀರ್ಮಾನಿಸಬೇಕು. ಈ ಅಂಶವನ್ನು ಮಾನ್ಯ ಸ್ನೇಹಿತರಾದ ರಾಜಬಹದ್ದೂರ್‌ರವರು ಮಾಡಿದ್ದಾರೆ. ಅವರು ಇಲ್ಲಿದ್ದಾರೆಂದು ನನಗನಿಸುತ್ತದೆ – ಮತ್ತು ಅವರ ಸ್ನೇಹಿತರೂ ಕೂಡ.

**ಶ್ರೀ ರಾಜಬಹದ್ದೂರ್ (ರಾಜಸ್ಥಾನ):** ನಾನಿಲ್ಲಿದ್ದೇನೆ.

**ಡಾ. ಅಂಬೇಡ್ಕರ್:** ರಾಮರಾವ್ ರವರು ಅವರದೇ ಬೇರೆಯಾದ ಒಂದು ಕಾರ್ಯಸೂಚಿಯನ್ನು ಕಳಿಸಿದ್ದಾರೆ. ರಾಜವಂಶಸ್ಥರು ಲಾಭದಾಯಕ ಹುದ್ದೆಯಲ್ಲಿರುತ್ತಾರೆಂದು ಮಿ. ರಾಜ್ ಬಹದ್ದೂರ್ ಮತ್ತು ಅವರ ಸ್ನೇಹಿತರು ಹೇಳುತ್ತಾರೆ. ನನಗನಿಸುವುದೇನೆಂದರೆ ಈ ವಾದ ಸರಿಯಿದ್ದರೆ ಈ ಮಸೂದೆಯಲ್ಲಿ

ಬೇರೆ ಯಾವ ಪ್ರಕರಣವನ್ನು ಸೇರಿಸುವ ಆವಶ್ಯಕತೆ ಬೀಳುವುದಿಲ್ಲ. ಏಕೆಂದರೆ ವಿಧಿ ೧೦೨ರ ಪ್ರಕಾರ ಆದಾಯ ತರುವ ಹುದ್ದೆಯನ್ನು ಹೊಂದಿರುವ ಯಾರೇ ಆದರೂ ಸಂಸತ್ ಸದಸ್ಯರಾಗಲು ಅರ್ಹರಲ್ಲ ಎಂದು ಸಂವಿಧಾನವೇ ಹೇಳುತ್ತದೆ. ಲಾಭದಾಯಕ ಹುದ್ದೆಯನ್ನು ಹೊಂದಿರುವುದೇ ಅವರ ವಾದವಾದರೆ ಅವರು ಸಹಜವಾಗಿ ಸಂವಿಧಾನದ ವಿಧಿ ೧೦೨ರ ಅಡಿಯಲ್ಲಿ ಬರುತ್ತಾರೆ. ಸಂವಿಧಾನ ಹೇಳಿರುವ ಈ ಅನರ್ಹತೆಯನ್ನು ಸಂಸತ್ ತಿದ್ದುವುದನ್ನಾಗಲೀ ಅಥವ ಹೆಚ್ಚು ಬೆಳಸುವುದನ್ನಾಗಲಿ ಮಾಡಲಾಗುವುದಿಲ್ಲ. ಮಾಡಬಹುದಾದ್ದನೇಂದರೆ ವಿಧಿ ೧೦೩ರ ಅಡಿಯಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿರುವ ವ್ಯಕ್ತಿ ಸಂಸತ್ ಸದಸ್ಯನಾಗಿದ್ದರೆ ವಿಷಯವನ್ನು ರಾಷ್ಟ್ರಪತಿಯವರಿಗೆ ರವಾನಿಸಬಹುದು. ರಾಷ್ಟ್ರಪತಿಯವರು ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆದ ಮೇಲೆ ತಮ್ಮ ಅಭಿಪ್ರಾಯವನ್ನು ಕೊಡಬಹುದು. ಒಂದು ನೈಜ ಪ್ರಕರಣವನ್ನು ಹೇಳುವುದಾದರೆ ಯಾವುದಾದರು ಒಬ್ಬ ರಾಜವಂಶಜನು – ಅವರನ್ನು ಮಹಾರಾಜರು ಎಂದು ಕರೆಯುತ್ತಾರೆಂದು ಅಂದುಕೊಂಡಿದ್ದೇನೆ – ಸದನಕ್ಕೆ ಚುನಾಯಿತರಾದಾಗ ಅಥವಾ ರಾಜ್ಯ ಮೇಲ್ಮನೆ ಅಥವಾ ಕೆಳಮನೆಗೆ ಆರಿಸಿ ಬಂದಾಗ ಮಾಡಬಹುದಾದಂತಹ ಆವಶ್ಯಕವಾದ ಕೆಲಸವೇನೆಂದರೆ, ನನ್ನ ಸ್ನೇಹಿತರು ಹೇಳಿದಂತೆ ಆತ ಅನರ್ಹ ವ್ಯಕ್ತಿಯೆಂದು ರಾಷ್ಟ್ರಪತಿಯವರಿಗೆ ದೂರು ನೀಡುವುದು. ಇದರಿಂದಾಗಿ ಅವನು ಸಂಸತ್ತಿನಲ್ಲಿ ಕುಳಿತುಕೊಳ್ಳಲಾಗುವುದಿಲ್ಲ. ಆದುದರಿಂದ ಅವರ ವಾದದ ಪ್ರಕಾರವೇ ಈ ಮಸೂದೆಯಲ್ಲಿ ಯಾವುದೇ ಪ್ರಕರಣವನ್ನು ಈ ಉದ್ದೇಶಕ್ಕೆ ಸೇರಿಸುವ ಆವಶ್ಯಕತೆ ಕಂಡುಬರುವುದಿಲ್ಲ. ಈ ವಿಷಯದ ಮೇಲೆ ನಾನು ಯಾವ ಅಭಿಪ್ರಾಯವನ್ನು ನೀಡಲು ಉದ್ದೇಶಿಸುವುದಿಲ್ಲ.

**ಶ್ರೀ ಸಿಧ್ವಾ:** ಅವರು ಒಂದು ರೀತಿಯ ಪಿಂಚಣಿ ಪಡೆಯುತ್ತಾರೆ.

**ಡಾ. ಅಂಬೇಡ್ಕರ್:** ಪಿಂಚಣಿದಾರರಿಗೂ ಮತ್ತು ಈ ಪ್ರಕರಣಗಳಿಗೂ ಬಹಳ ವ್ಯತ್ಯಾಸವಿದೆ.

**ಶ್ರೀ ಹುಸೇನ್ ಇಮಾಂ (ಬಿಹಾರ):** ಸರ್ಕಾರಿ ಪಿಂಚಣಿದಾರರ ಬಗ್ಗೆ ಏನು? ಅವರು ಲಾಭದಾಯಕ ಹುದ್ದೆಯನ್ನು ಹೊಂದಿರುವರೆ.

**ಡಾ. ಅಂಬೇಡ್ಕರ್:** ವಿಷಯದ ಇನ್ನೊಂದು ಮುಖಕ್ಕೆ ನನ್ನನ್ನು ಎಳೆಯಲು ಪ್ರಯತ್ನಿಸುತ್ತಿದ್ದೀರಿ ಅದು ನನಗೆ ಇಷ್ಟವಿಲ್ಲ. ಇದೊಂದು ಸರಳವಾದ ಅಂಶ. ಪ್ರಶ್ನೆ ಏನೆಂದರೆ ಅವರು ಲಾಭದಾಯಕ ಹುದ್ದೆಯನ್ನು ಹೊಂದಿದ್ದರೆ ಅವರು ಅನರ್ಹರಾಗುತ್ತಾರೆ. ಅದು ಹಾಗಿದ್ದರೆ ಅನರ್ಹತೆ ವಿಧಿ ೧೦೨ರ ಪ್ರಕಾರ ಇದೆ. ನೀವು ವಿಧಿ ೧೦೨ರಲ್ಲಿರುವ ನಿಯಮಗಳನ್ನು ಸೂಚಿಸಿ ಆ ವ್ಯಕ್ತಿಯನ್ನು ಸಂಸತ್ತಿನಿಂದ ಪದಚ್ಯುತಿಗೊಳಿಸಬೇಕು.

**ಶ್ರೀ ರಾಜಬಹುದ್ದೂರ್:** ಅದು ಮತ್ತೆ ನ್ಯಾಯವಾದಿಗಳಿಗೆ ಒಂದು ಪ್ರಕರಣವಾಗುತ್ತದೆ.

**ಡಾ. ಅಂಬೇಡ್ಕರ್:** ಯಾಕಾಗಬಾರದು. ಮಾನ್ಯ ಸದಸ್ಯರು ಸ್ವತ: ನ್ಯಾಯವಾದಿಗಳು. ಅವರೇಕೆ ಸುಮ್ಮನಿರಬೇಕು.

**ಶ್ರೀ ಶಾಮನಂದನ್ ಸಹಾಯ (ಬಿಹಾರ):** ಈ ವಿಷಯವನ್ನು ಚುನಾವಣಾ ಆಯೋಗದ ಮುಂದೆ ಎತ್ತಲು ಸಾಧ್ಯವಿಲ್ಲವೆ?

**ಡಾ. ಅಂಬೇಡ್ಕರ್:** ಅಷ್ಟು ದೂರ ಹೋಗುವುದು ಅನಾವಶ್ಯಕ. ನಾನೀಗಾಗಲೆ ವಿವರಿಸಿದಂತೆ ಪರಿಹಾರ ಬಹಳ ಸರಳ.

ಆಗಲಿ – ನನ್ನ ಸ್ನೇಹಿತರ ವಾದ ಲಾಭದಾಯಕ ಹುದ್ದೆಯನ್ನು ಹೊಂದಿರುವುದು ಅನರ್ಹತೆಗೆ

ಸಕಾರಣವಲ್ಲ ಎಂದೆನಿಸಿದರೆ ಸದನವು ಅನರ್ಹತೆಗೊಳಿಸುವ ಅಂತಹ ನಿಯಮವನ್ನು ಕಾನೂನು ಬದ್ಧಗೊಳಿಸಲು ಏನಾದರು ಸಮರ್ಥನೆ ನೀಡಬೇಕಾಗುತ್ತದೆ. ಉದಾಹರಣೆಗೆ ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್‌ನ ರಚನೆಯನ್ನು ನೋಡಿದರೆ ಅಲ್ಲಿನ ಪುರೋಹಿತಶಾಹಿಯನ್ನು ಹೌಸ್ ಆಫ್ ಕಾಮನ್ಸ್‌ನ ಸದಸ್ಯರಾಗಲು ಅನರ್ಹಗೊಳಿಸಲಾಗಿದೆ. ಹಾಗೆಯೆ ಕುಲೀನವರ್ಗದ ಒಬ್ಬ ವ್ಯಕ್ತಿ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಕುಳಿತುಕೊಳ್ಳಬಹುದಾದರೂ ಹೌಸ್ ಆಫ್ ಕಾಮನ್ಸ್‌ನಲ್ಲಿ ಸದಸ್ಯನಾಗಲು ಅನರ್ಹಗೊಳ್ಳುತ್ತಾನೆ. ಈಗ ಈ ಎರಡೂ ಪ್ರಕರಣಗಳಲ್ಲಿ ಅವರು ಏಕೆ ಅನರ್ಹಗೊಳ್ಳುತ್ತಾರೆ ಎಂಬುದಕ್ಕೆ ಸಾಕಷ್ಟು ಸಮರ್ಥನೆಗಳಿವೆ. ಈ ನನ್ನ ಸ್ನೇಹಿತರು ಈ ಪ್ರಕರಣದ ಹಿನ್ನಲೆಯನ್ನು ಗಮನಿಸಿದರೆ ಅವರಿಗೆ ತಿಳಿಯುತ್ತದೆ. ೧೮೦೧ರ ಕಾಯಿದೆ ಪ್ರಕಾರ ಪುರೋಹಿತಶಾಹಿಯನ್ನು ಅನರ್ಹಗೊಳಿಸಲಾಯಿತು. ಏಕೆಂದರೆ ಪ್ರೊಟೆಸ್ಟೆಂಟ್ ಕ್ರಾಂತಿಯಲ್ಲಿ ರಾಜ್ಯವು ಚರ್ಚ್‌ನ ಮುಖ್ಯಸ್ಥನು ಆಯಿತು ಅಥವ ಚರ್ಚ್ ಮತ್ತು ರಾಜ್ಯ ಒಂದಾದವು – ಅವರನ್ನು Advow – sons ಎಂದು ಕರೆದರು – ಹಾಗೆಂದರೆ ಚರ್ಚ್‌ಗಳು ತಮ್ಮ ಸೇವೆಗೆ ಹಣವನ್ನು ಪಡೆಯುತ್ತಿದ್ದವು. ಇವು ರಾಜ್ಯದಿಂದ ಪಡೆಯುವ ಒಂದು ರೀತಿಯ ಅನುದಾನವಾಗಿತ್ತು. ಪರಿಣಾಮವಾಗಿ ಚರ್ಚ್‌ಗಳ ಕೆಲಸಗಾರರು ಮತ್ತು ಪುರೋಹಿತರು ಲಾಭದಾಯಕ ಹುದ್ದೆಗಳನ್ನು ಹೊಂದಿದವರಾಗಿದ್ದರು ಆದ್ದರಿಂದ ಅವರನ್ನು ಅನರ್ಹಗೊಳಿಸಲಾಗಿತ್ತು. ಹೌಸ್ ಆಫ್ ಲಾರ್ಡ್ಸ್‌ನ ಸದಸ್ಯರೂ ಹೌಸ್ ಆಫ್ ಕಾಮನ್ಸನ ಸದಸ್ಯರಾಗಲು ಅನರ್ಹರಾಗುತ್ತಿದ್ದರು ಏಕೆಂದರೆ ಒಬ್ಬ ವ್ಯಕ್ತಿಯು ಏಕಕಾಲದಲ್ಲಿ ಎರಡೂ ಸದನಗಳ ಸದಸ್ಯನಾಗಿರಲು ಸಾಧ್ಯವಿರಲಿಲ್ಲ. ಈ ಸಮರ್ಥನೆ ಸ್ಪಷ್ಟವಾಗಿಯೇ ಇದೆ. ಆದ್ದರಿಂದ ಈ ಎರಡೂ ವರ್ಗದ ಜನರು ಅನರ್ಹಗೊಳ್ಳುವುದು ಇಂಗ್ಲೆಂಡಿನಲ್ಲಿದ್ದಾಗ್ಯೂ ಅದಕ್ಕೆ ಸರಿಯಾದ ಸಮರ್ಥನೆಗಳಿವೆ ಎಂಬುದು ಸ್ಪಷ್ಟವಾಗಿದೆ. ಈ ತತ್ವಗಳೇ ಇಲ್ಲಿ ಮೈದಳೆದಿವೆ. ನನ್ನ ಸ್ನೇಹಿತರು ಬೇರೆನಾದರೂ ಸಮರ್ಥನೆಯನ್ನು ನೀಡಿದರೆ ಲಾಭದಾಯಕ ಹುದ್ದೆಯನ್ನು ಬಿಟ್ಟು ಇಂತಹ ಸಮರ್ಥನೆಯನ್ನು ಇಲ್ಲಿ ಚರ್ಚೆಗೆ ತೆರೆದಿಡಬಹುದು.

**ಡಾ. ಪಾರ್ಮ್ಮರ್ (ಹಿಮಾಚಲ ಪ್ರದೇಶ):** ರಾಜಮಹಾರಾಜರುಗಳು ರಾಜಕೀಯ ಪಿಂಚಣಿದಾರರು ಎಂದು ಅವರನ್ನು ಹೊರಗಿಡದಿರಲು ಸಾಧ್ಯವೆ?

**ಡಾ. ಅಂಬೇಡ್ಕರ್:** ರಾಜಕೀಯ ಪಿಂಚಣಿಗಳು ಅನರ್ಹತೆಗಳೆಂದು ಏಕೆ ತೆಗೆದುಕೊಳ್ಳಬೇಕು ಎಂದು ನನಗೆ ಅರ್ಥವಾಗುವುದಿಲ್ಲ. ಗೌರವಾನ್ವಿತ ಸದಸ್ಯರು ತಿಳಿದಿರುವ ಹಾಗೆ ಇಂಗ್ಲೀಷ್ ನಿಗಂಟಿನ ಕರ್ತೃ ಲೇಖಕ ಡಾ. ಜಾನ್‌ಸನ್ ಹೇಳುವಂತೆ ಒಬ್ಬ ರಾಜಕೀಯ ಪಿಂಚಣಿದಾರ ಸರ್ಕಾರಿ ಗುಲಾಮನಿದ್ದಂತೆ. ಆದರೆ ನಂತರ ಅವರು ತಾವಾಗಿಯೇ ಸರ್ಕಾರಿ ಪಿಂಚಣಿಯನ್ನು ಪಡೆದುಕೊಂಡರು. ಆದ್ದರಿಂದ ತುಂಬಾ ತರ್ಕಕ್ಕಿಳಿಯುವುದು ಪ್ರಯೋಜನವಿಲ್ಲ.

**ಡಾ. ಪಾರ್‌ಮಾರ್:** ರಾಜಕೀಯ ಪಿಂಚಣಿದಾರರು ಹೌಸ್ ಆಫ್ ಕಾಮನ್ಸ್‌ನಿಂದ ಹೊರಹಾಕಲ್ಪಟ್ಟವರೆ.

**ಡಾ. ಅಂಬೇಡ್ಕರ್:** ಇಲ್ಲ, ಕೇವಲ ಶ್ರೀಮಂತ ವರ್ಗದವರು ಮತ್ತು ಮಾನಸಿಕ ಅಸ್ವಸ್ಥರು, ಸುಧಾರಣೆಯ ದಿನಗಳಲ್ಲಿ ಹೇಳುತ್ತಿದ್ದ ಹಾಗೆ. ಅಸಮ್ಮತಿಯ ಸೂಚನೆಯಲ್ಲಿ ಎತ್ತಿರುವ ಮೂರನೆಯ ಅಂಶ ಪರಿಶಿಷ್ಟ ಜಾತಿಯವರಿಗೆ ದ್ವಿಸದಸ್ಯ ಮತ ಕ್ಷೇತ್ರಗಳಲ್ಲಿ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದ್ದಾಗಿದೆ. ಈ ಅಂಶವನ್ನು ಶ್ರೀ ಸಾರಂಗದರ್ ದಾಸ್ ಮತ್ತು ಮಿ. ರಾಮರಾವ್ ರವರು ಸವಿಸ್ತಾರವಾಗಿ ಚರ್ಚಿಸಿದ್ದಾರೆ. ನನಗನಿಸುವಂತೆ ಈ ವಿಷಯವು ಕಳೆದ ವರ್ಷವೇ ಸದನವು ಪಾಸ್ ಮಾಡಿದ ಪ್ರಜಾಪ್ರಾತಿನಿಧ್ಯ ಕಾಯಿದೆ ೧೯೫೦ರಲ್ಲಿ ತೀರ್ಮಾನಿಸಲಾಗಿದೆ. ಕಾಯಿದೆ ಪ್ರಕರಣ (ಡಿ) ಯಲ್ಲಿ ಬರುವ ಶಾಖೆ ೬ ಉಪ ಶಾಖೆ ೨ರಲ್ಲಿ ಸೂಚಿಸಿರುವಂತೆ ಸದನವು ಈ ವಿಷಯದಲ್ಲಿ ನಿರ್ದಿಷ್ಟ ಪ್ರಕರಣಗಳನ್ನು ರಾಷ್ಟ್ರಪತಿಯವರ ತೀರ್ಮಾನಕ್ಕೆ ಬಿಟ್ಟಿದೆ. ಆದ್ದರಿಂದ

ಮತ್ತೇನನ್ನೂ ಇಲ್ಲಿ ಮಾಡಲಾಗುವುದಿಲ್ಲ. ಹಿಂದಕ್ಕೆ ಹೋಗಿ ನಾವು ಕಾಯಿದೆಯನ್ನೇ ತಿದ್ದುಪಡಿ ಮಾಡದ ಹೊರತು.

ಇದರ ಹೊರತಾಗಿ ನಾನು ಸದನದ ಗಮನ ಸೆಳೆಯಲು ಇಚ್ಚಿಸುವುದೇನೆಂದರೆ ಈಗ ಮಾಡಿರುವ ಮೀಸಲಾತಿ ಕುರಿತು ಸರ್ಕಾರದ ಮುಂದಿರುವ ಕೆಲವು ವಿಚಾರಗಳು. ನನಗನ್ನಿಸುವಂತೆ ಮೀಸಲು ಕ್ಷೇತ್ರಕ್ಕೂ ಮತ್ತು ಸ್ಥಾನವನ್ನು ಮೀಸಲಿಟ್ಟ ಮತಕ್ಷೇತ್ರಕ್ಕೂ ವ್ಯತ್ಯಾಸವನ್ನು ಗಮನಿಸುವ ಆವಶ್ಯಕತೆಯಿದೆ. ಮತ್ತೆ ಅಲ್ಲಿ ಮತಕ್ಷೇತ್ರದ ಉದ್ದೇಶಗಳನ್ನು ಗಮನಿಸಿದರೆ ವಿಷಯ ಹೆಚ್ಚು ಕಡಿಮೆ ಇತ್ಯರ್ಥಗೊಂಡಂತೆ ಕಾಣುತ್ತದೆ. ಮೊದಲನೆಯ ಅಂಶ ಇದು – ನನ್ನ ಸ್ನೇಹಿತರು ನೆನಪಿಸಿಕೊಳ್ಳುತ್ತಾರೆ – ಸಂವಿಧಾನಸಭೆಯು ಹಂಚಿಕೆಯ ಮತದಾನದ ಪರವಾಗಿ ಒಂದು ನಿಲುವಳಿ ಪಾಸುಮಾಡಿದೆ. ಈಗ ನನ್ನ ನಿವೇದನೆ ಇಷ್ಟೆ. ಸಂವಿಧಾನದ ಸಭೆಯು ಸ್ಥಾನ ಮೀಸಲಿಟ್ಟ ಮತಕ್ಷೇತ್ರವು ಒಂದೇ ಇರಬೇಕು ಎಂದು ಉದ್ದೇಶಿಸದೆ ಇದ್ದರೆ ಹಂಚಿಕೆಯ ಮತದಾನ ಕುರಿತು ಅಂತಹ ನಿಲುವಳಿಯನ್ನು ಪಾಸುಮಾಡುವ ಆವಶ್ಯಕತೆಯಿತ್ತೆ? ಒಂದು ವೇಳೆ ಉದ್ದೇಶ ಅದೇ ಆಗಿದ್ದರೆ ಅದು ಮೀಸಲು ಕ್ಷೇತ್ರವಾಗಬೇಕಾಗಿತ್ತು ಆಗ ಅಂತಹ ಪ್ರಶ್ನೆಯು ಉದ್ಭವವಾಗುತ್ತಿರಲಿಲ್ಲ. ಏಕೆಂದರೆ ಒಬ್ಬ ವ್ಯಕ್ತಿ, ಒಂದು ಮತ ಎಂಬ ಪದ್ಧತಿ ಅನ್ವಯವಾಗುತ್ತಿತ್ತು. ಎರಡನೆಯದಾಗಿ ಸಂವಿಧಾನವು ಈ ವಿಷಯವಾಗಿ ಯಾವುದೇ ಹೇಳಿಕೆಯನ್ನು ನೀಡದಿದ್ದರೂ ಸಂವಿಧಾನ ಕರ್ತೃಗಳ ಮತ್ತು ಸಂವಿಧಾನದ ಉದ್ದೇಶ ಅನುಚ್ಛೇದ ೩೩೨ ಪ್ರಕರಣ (೫) ನೋಡಿದರೆ ಸ್ಪಷ್ಟವಾಗಿದೆ. ನನ್ನ ಸ್ನೇಹಿತ ಮಿ. ಚಾಲೀಹಾ ಅವರಿಗೆ ಈ ಅನುಚ್ಛೇದ ಚೆನ್ನಾಗಿ ಪರಿಚಯವಿದೆ. ಸದನವು ನೆನಪಿಸಿಕೊಳ್ಳುವಂತೆ ಗಿರಿಜನ ಪ್ರದೇಶಕ್ಕಾಗಿ ಒಂದು ಮತಕ್ಷೇತ್ರವನ್ನು ಮೀಸಲಿಡುವ ಆವಶ್ಯಕತೆಯನ್ನು ಸದನವು ಎತ್ತಿತ್ತು. ಏಕೆಂದರೆ ಅಲ್ಲಿ ಒಬ್ಬ ಗಿರಿಜನ ಅಭ್ಯರ್ಥಿಯನ್ನು ನಿಲ್ಲಿಸಬಹುದಾಗಿತ್ತು. ಮತ್ತೊಂದು ಪ್ರಶ್ನೆ ಉದ್ಭವವಾಗಿದ್ದೇನೆಂದರೆ ಗಿರಿಜನ ಅಭ್ಯರ್ಥಿಗಾಗಿಯೆ ಒಂದು ಮತಕ್ಷೇತ್ರವನ್ನು ರಚನೆ ಮಾಡುವುದಾದರೆ ಉಳಿದ ಗಿರಿಜನೇತರ ಜನಗಳು ಸಂಪೂರ್ಣವಾಗಿ ಮತದಾನದ ಹಕ್ಕುಗಳನ್ನು ಕಳೆದುಕೊಳ್ಳುತ್ತಾರೆ. ಅದು ಆಶಾದಾಯಕವಲ್ಲವೆಂದು ಸಭೆಯು ತೀರ್ಮಾನಿಸಿದೆ. ಪರಿಣಾಮವಾಗಿ ಅನುಚ್ಛೇದ ೩೩೫ (೫) ಪಾಸುಮಾಡಿ ಒಂದು ವಿಶೇಷ ನಿಯಮವನ್ನೆ ತಂದಿದ್ದಾರೆ. ಹಾಗೆ ಮಾಡುವುದಾದರೆ ಗಿರಿಜನೇತರ ಜನಗಳು ಇರುವ ಪ್ರದೇಶಗಳನ್ನು ಬೇರ್ಪಡಿಸಿ ಬೇರೆಯಾದ ಪ್ರಾತಿನಿಧ್ಯವನ್ನು ಕೊಡಬೇಕು. ಸಂವಿಧಾನಸಭೆಯು ಹಂಚಿಕೆಯ ಮತದಾನವನ್ನು ಬೆಂಬಲಿಸಿರುವುದರಿಂದ ಅನುಚ್ಛೇದ ೩೩೨ ಪ್ರಕರಣ (೫)ರ ನಿಯಮದಂತೆ ಸಂವಿಧಾನ ಸಭೆಯ ಉದ್ದೇಶ ಮತಕ್ಷೇತ್ರದಲ್ಲಿ ಸ್ಥಾನವನ್ನು ಮೀಸಲಿಡುವ ಪದ್ಧತಿ ಅನುಸರಿಸುವುದು. ಈ ನಿಯಮಗಳ ರಚನೆಯಂತೆ ೧೯೫೦ರ ಪ್ರಜಾಪ್ರತಿನಿಧಿ ಕಾಯಿದೆ ಪರಿಚ್ಛೇದ ೬ ಉಪಪರಿಚ್ಛೇದ ೨ನ್ನು ಒಳಗೊಂಡಿದೆ.

ಹಂಚಿಕೆಯ ಮತದಾನದ ಪ್ರಶ್ನೆಯ ಕುರಿತಾಗಿ ಮತ್ತೆ ನನ್ನ ಇಬ್ಬರು ಸ್ನೇಹಿತರಾದ ಪಂಡಿತ್ ಕುಂಜ್ರು ಮತ್ತು ಮಿ. ದಾಸ್‌ರವರು ಈ ಪದ್ದತಿಯ ಈಗಿನ ಮುಖವನ್ನು ಸವಿಸ್ತಾರವಾಗಿ ಮತ್ತು ವಿಪುಲವಾಗಿ ಚರ್ಚಿಸಿದ್ದಾರೆ. ನಾನು ಹೇಳಿದಂತೆ ಸಂಚಿತಪದ್ಧತಿ ಅಲ್ಪಸಂಖ್ಯಾತರಿಗೆ ಸಾಮಾಜಿಕ ಅಥವಾ ರಾಜಕೀಯವಾಗಿ ಸಾಮರ್ಥ್ಯವನ್ನು ಕ್ರೋಢೀಕರಿಸಿ ತಮ್ಮ ಪ್ರತಿನಿಧಿಯನ್ನು ಸದನಕ್ಕೆ ಕಳುಹಿಸಲು ಸಹಾಯ ಮಾಡುತ್ತದೆ. ಈ ವಿಷಯವಾಗಿ ಮತ್ತಷ್ಟು ವಾದಿಸಬಹುದು. ನಾನು ಈಗ ತಾನೆ ಹೇಳಿದಂತೆ ನಾವು ಕಾರ್ಯೋನ್ಮುಖರಾಗಲು ಭೂಮಿಕೆಯು ಸಿದ್ಧವಾಗಿಲ್ಲ. ಸಂವಿಧಾನ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿದೆ ಎಂದು ನನ್ನ ಸ್ನೇಹಿತರಿಗೆ ತಿಳಿದಿದೆ. ದಿವಂಗತ ಸರ್ದಾರ್‌ಪಟೇಲ್‌ರಂತಹ ವ್ಯಕ್ತಿ ಒಂದು ನಿಲುವಳಿಯನ್ನು ಮಂಡಿಸಿದರು. ಅದರಲ್ಲಿ ಎಲ್ಲಾ ಅಲ್ಪಸಂಖ್ಯಾತರು ಅಂದರೆ ಮುಸ್ಲೀಮರು, ಕ್ರೈಸ್ತರು ಮತ್ತಿತರರಿಗೆ ವಿಶೇಷ ಪ್ರಾತಿನಿಧ್ಯವನ್ನು

ರದ್ದುಗೊಳಿಸಬೇಕೆಂದು ಮತ್ತು ಅವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮಾತ್ರ ಉಳಿಸಿಕೊಳ್ಳಬೇಕೆಂದು ಪ್ರಸ್ತಾಪಿಸಿದ್ದರು. ಎಲ್ಲೆಲ್ಲಿ ಒಂದು ಮತ ಕ್ಷೇತ್ರದಲ್ಲಿ ಈ ಎರಡೂ ವರ್ಗಗಳಿಗೆ ಸ್ಥಾನ ಮೀಸಲಾತಿ ಇರುವುದೋ ಅಲ್ಲಿ ಹಂಚಿಕೆ ಮತದಾನ ಇರಬೇಕು. ಈ ಠರಾವನ್ನು ಸಂವಿಧಾನ ಸಭೆಯು ಅಂಗೀಕರಿಸಿತು. ಆ ವಿಷಯವನ್ನು ಕುರಿತು ಸಾಕಷ್ಟು ವಾದವಿವಾದ ನಡೆದವೆಂಬುದು ನಿಸ್ಸಂಶಯ, ಆದರೆ ಅಂತಿಮವಾಗಿ ಸಭೆಯ ತೀರ್ಮಾನ ಹಂಚಿಕೆಯ ಮತದಾನದ ಪರವಾಗಿತ್ತು. ನನಗನ್ನಿಸುವಂತೆ ಸಂವಿಧಾನ ಸಭೆಯ ತೀರ್ಮಾನಕ್ಕೆ ಸಂಸತ್ತು ವಿಶೇಷ ಪುರಸ್ಕಾರ ನೀಡಬೇಕು. ಏಕೆಂದರೆ, ನಾವು ನಮ್ಮ ಅಧಿಕಾರ ಮತ್ತು ಹಕ್ಕುಗಳನ್ನು ಸಂವಿಧಾನ ಸಭೆಯಿಂದ ಪಡೆದುಕೊಂಡಿದ್ದೇವೆ. ಸಂವಿಧಾನ ಸಭೆಯು ತೆಗೆದುಕೊಂಡ ಕೆಲವು ತೀರ್ಮಾನಗಳು ಸಂವಿಧಾನದತ್ತವಾಗಿವೆ. ಇನ್ನು ಕೆಲವು, ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾರದಂತಹವು ಹೊರಗುಳಿದಿವೆ. ಅವುಗಳನ್ನು ಸಂವಿಧಾನದಲ್ಲಿ ಅಳವಡಿಸಿಕೊಂಡಿಲ್ಲವಾದ ಮಾತ್ರಕ್ಕೆ ಅವುಗಳನ್ನು ಪುರಸ್ಕರಿಸಬಾರದೆಂದೇನೂ ಅರ್ಥವಲ್ಲ. ಆ ವಿಷಯದ ಮೇಲೆ ಯಾವುದೇ ಅಭಿಪ್ರಾಯವಿರಲಿ, ವಿರೋಧಿಗಳ ವಾದದಲ್ಲಿ ಹುರುಳಿಲ್ಲ ಎಂಬುದನ್ನು ನಾನು ಹೇಳಲಾರೆ. ನನ್ನ ವೈಯಕ್ತಿಕ ಅನಿಸಿಕೆ ಏನೆಂದರೆ ಈ ವಿಷಯವು ಮುಕ್ತಾಯವಾಯಿತು ಎನ್ನಬೇಕು. ಮುಂದೆ ಯಾವುದೇ ಕ್ರಮ ತೆಗೆದುಕೊಳ್ಳಲು ಸದನಕ್ಕೆ ಅವಕಾಶ ಇದ್ದೇ ಇದೆ. ಮುಂದಿನ ಚುನಾವಣೆ ಅಥವಾ ನಂತರದ ಚುನಾವಣೆಗಳಲ್ಲಿ ಅನುಭವದಿಂದ ಈ ಪದ್ಧತಿಯು ಅಷ್ಟೇನು ಉತ್ತಮವಲ್ಲ ಎಂದು ಕಂಡುಬಂದರೆ ಅದನ್ನು ಬದಲಾಯಿಸಲೇ ಬೇಕಾಗುತ್ತದೆ. ಆದರೆ ಸದ್ಯಕ್ಕೆ ಸಂವಿಧಾನ ಸಭೆಯ ತೀರ್ಮಾನವೇ ನಿಲ್ಲಬೇಕು.

ಈಗ ಎತ್ತಿರುವ ಐದನೇ ಅಂಶವೇನೆಂದರೆ ಫಲಿತಾಂಶದ ಘೋಷಣೆ. ಅದು ಸಹಾ ನನ್ನ ಸ್ನೇಹಿತ ಮಿ. ಸಾರಂಗ ದಾಸ್ ಎತ್ತಿರುವ ಪ್ರಶ್ನೆ. ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ............... ನಾನು ತಪ್ಪಿದ್ದರೆ ಅವರು ಸರಿಪಡಿಸಲಿ. ಅದು ನನಗೆ ಸರಿಯಾಗಿ ಸ್ಪಷ್ಟವಾಗಿಲ್ಲ............. ಅವರಿಗೆ ಬೇಕಾಗಿರುವುದೇನೆಂದರೆ ಚುನಾವಣೆಯ ಪಲಿತಾಂಶವನ್ನು ಹಂತಹಂತವಾಗಿ ಪ್ರಕಟಿಸದೇ ಅಂದರೆ ಮತಕ್ಷೇತ್ರಗಳಾದ ಮೇಲೆ ಮತಕ್ಷೇತ್ರಗಳು ವಲಯಗಳಾದ ಮೇಲೆ ವಲಯಗಳು ಹಾಗೇ ಮಾಡದೆ ಎಲ್ಲಾ ಫಲಿತಾಂಶಗಳನ್ನು ಒಂದೇ ದಿನ ಪ್ರಕಟಪಡಿಸಬೇಕು. ಮತ ಎಣಿಕೆಯನ್ನು ಹಂತಹಂತವಾಗಿ ಮಾಡುವುದನ್ನು ಅವರು ವಿರೋಧಿಸಲಿಲ್ಲವೆಂದುಕೊಂಡಿದ್ದೇನೆ. ಒಂದು ಮತಕ್ಷೇತ್ರವಾದ ಮೇಲೆ ಇನ್ನೊಂದು ಮತಕ್ಷೇತ್ರವನ್ನು ಮಾಡಿ ಮುಗಿಸಿ ದಾಖಲಾತಿಗಳನ್ನು ಪೂರ್ಣಗೊಳಿಸುವುದು. ಎಣಿಸುವುದಕ್ಕೂ ಪ್ರಕಟಿಸುವುದಕ್ಕೂ ಬಹಳ ವ್ಯತ್ಯಾಸವಿದೆ............

**ಶ್ರೀ ಗೌತಮ್:** ಮತ ಎಣಿಕೆಯನ್ನು ಅಭ್ಯರ್ಥಿಯ ಸಮ್ಮುಖದಲ್ಲಿಯೇ ಮಾಡಲಾಗುತ್ತದೆ.

**ಡಾ. ಅಂಬೇಡ್ಕರ್:** ಹೌದು, ಮಾಡಬಹುದು. ಆ ನಿಯಮಗಳು ಅಲ್ಲಿವೆ. ಪ್ರಶ್ನೆ ಏನೆಂದರೆ ಒಂದು ಮತ ಕ್ಷೇತ್ರದಲ್ಲಿ ಎಣಿಕೆ ಮುಗಿಸುತ್ತಿದ್ದಂತೆಯೆ ನೀವು ಗೆಜಟ್ಟಿನಲ್ಲಿ ಫಲಿತಾಂಶವನ್ನು ಪ್ರಕಟಿಸುತ್ತೀರಾ ಅಥವಾ ಎಲ್ಲಾ ಮತ ಕ್ಷೇತ್ರಗಳಲ್ಲಿ ಎಣಿಕೆ ಮುಗಿಯುವವರೆಗೂ ಕಾದು ಒಟ್ಟಾರೆ ಪಲಿತಾಂಶವನ್ನು ಗೆಜೆಟ್ಟಿನ ಒಂದು ಸಂಚಿಕೆಯಲ್ಲಿ ಪ್ರಕಟಿಸುತ್ತಿರಾ?

**ಸೇಠ್ ಗೋವಿಂದ್ ದಾಸ್:** ಅದರ ಪ್ರಯೋಜನವೇನು? ಅದನ್ನು ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲವೇ ? (ಮಧ್ಯಪ್ರವೇಶ)

**ಡಾ. ಅಂಬೇಡ್ಕರ್:** ಅವರ ಅಸಮ್ಮತಿಯ ಸೂಚಿಕೆಯನ್ನು ನಾನು ಅರ್ಥಮಾಡಿಕೊಳ್ಳಬೇಕು. ಅವರ ವಾದ ನನಗನ್ನಿಸುವಂತೆ, ಅಪ್ರಸ್ತುತವೇನಲ್ಲ. ಸಾಮಾನ್ಯವಾಗಿ ಜನರು ಸಮೂಹಜನ್ಯ ಪ್ರವೃತ್ತಿಯಿಂದ ವ್ಯಾಪಕ

ಅಭಿಪ್ರಾಯಗಳ ಪ್ರಭಾವದಲ್ಲಿ ತೇಲಿಹೋಗುತ್ತಾರೆ. ಒಂದು ವೇಳೆ ಜನರು ಒಂದು ಮತ ಕ್ಷೇತ್ರದಲ್ಲಿ ಒಂದು ರೀತಿಯ ಮತದಾನ ಮಾಡಿದ್ದರೆ ಬೇರೆ ಜನರು ಹಾಗೆಯೇ ಮಾಡಲು ಸಾಧ್ಯ. ಅದೊಂದು ಮನಶ್ಶಾಸ್ತ್ರೀಯ ಅಂಶ. ಒಂದು ಮತ ಕ್ಷೇತ್ರದ ಚುನಾವಣಾ ಫಲಿತಾಂಶವನ್ನು ಪ್ರಕಟಿಸಿದರೆ ಅದು ಒಂದು ಪಕ್ಷಕ್ಕೆ ವಿರೋಧವಾಗಿದ್ದರೆ ಬೇರೆ ಮತಕ್ಷೇತ್ರಗಳು ಹಾಗೆಯೆ ಎಂದುಕೊಳ್ಳಬಹುದು. "ನಮ್ಮ ನೆರೆಯವರು ಈ ಪ್ರಕಾರವಾಗಿ ಮತದಾನ ಮಾಡಿದ್ದಾರೆ ನಾವು ಏಕೆ ಬೇರೆ ಪ್ರಕಾರವಾಗಿ ಮಾಡಬೇಕು ನಾವು ಅದೇ ರೀತಿ ಮಾಡೋಣ"

**ಸೇಠ್ ಗೋವಿಂದದಾಸ್:** ಮತ ಎಣಿಕೆಯು ಅಭ್ಯರ್ಥಿಯ ಸಮ್ಮುಖದಲ್ಲಿ ನಡೆಯುವುದಾದರೆ ಎಲ್ಲಾ ವೃತ್ತಪತ್ರಿಕೆಯಲ್ಲಿಯೂ ತಿಳಿಯುತ್ತದೆ. ಅದು ಹೇಗೆ ಫಲಿತಾಂಶವನ್ನು ತಡೆಹಿಡಿಯುತ್ತೀರಿ?

**ಡಾ. ಅಂಬೇಡ್ಕರ್:** ಆಗುವುದಿಲ್ಲ. ನಾನು ತಿಳಿಸಿದಂತೆ ಯಾವುದೇ ಚುನಾವಣಾ ಕಾನೂನು ದೋಷ ಮುಕ್ತವಾಗಿರುವುದಿಲ್ಲ ಅಥವಾ ಲೋಪಮುಕ್ತವಾಗಿರುವುದಿಲ್ಲ. ಎಲ್ಲಾ ತರದ ಲೋಪದೋಷಗಳು ಉಳಿದುಕೊಳ್ಳುತ್ತವೆ.

**ಶ್ರೀ ಸಾರಂಗಧರ ದಾಸ್ (ಒರಿಸ್ಸಾ):** ನಾನು ನನ್ನ ಅಸಮ್ಮತಿಯ ಸೂಚಿಕೆಯಲ್ಲಿ ಹೇಳಿದ್ದೇನೆ. ಮತ್ತೊಂದು ತಿದ್ದುಪಡಿಯನ್ನು ಸಹಾ ಕೊಟ್ಟಿದ್ದೇನೆ. ಏಕೆಂದರೆ ಕೆಲವು ರಾಜ್ಯಗಳಲ್ಲಿ ಸಾಮಾನ್ಯ ಚುನಾವಣೆ ನಡೆಯುವ ಸಾಧ್ಯತೆ ಇದ್ದಾಗ ಇನ್ನು ಕೆಲವು ರಾಜ್ಯಗಳಲ್ಲಿ ಮತದಾರರ ಪಟ್ಟಿ ಸಿದ್ಧವಾಗದೆ ಇದ್ದು ಅಥವಾ ನಂತರದಲ್ಲಿ ಆ ರಾಜ್ಯಗಳಲ್ಲಿ ಚುನಾವಣೆ ಬಯಸಬಹುದು. ಆದ್ದರಿಂದ ಮುಂಚೆ ನಡೆದ ಚುನಾವಣೆಗಳ ಫಲಿತಾಂಶಗಳನ್ನು ತಡೆಹಿಡಿದು ನಂತರ ನಡೆಯುವ ಚುನಾವಣೆ ಫಲಿತಾಂಶಗಳೊಂದಿಗೆ ಎಲ್ಲಾ ಫಲಿತಾಂಶಗಳನ್ನು ಒಟ್ಟಾಗಿಯೇ ಪ್ರಕಟಿಸಬೇಕು.

**ಡಾ. ಅಂಬೇಡ್ಕರ್:** ನಾನು ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಏಕೆಂದರೆ ಅವರ ಟಿಪ್ಪಣಿಗಳಲ್ಲಿ ಕೆಲವೇ ವಾಕ್ಯಗಳಿವೆ. ಈ ವಿಷಯವನ್ನು ನಿಸ್ಸಂಶಯವಾಗಿ ಪರಿಗಣಿಸಲಾಗುತ್ತದೆ. ಯಾಕೆಂದರೆ ಅವರು ಒತ್ತಾಯ ಪೂರ್ವಕವಾಗಿ ನೀಡಿರುವ ಹೇಳಿಕೆಯಲ್ಲಿ ಒಂದು ಅರ್ಥವಿದೆ.

**ಉಪಸಭಾಪತಿ:** ಅದು ಬಿಡಿ ಚುನಾವಣೆಗಳ ಮೇಲೆ ಪರಿಣಾಮ ಬೀರುವುದಿಲ್ಲ.

**ಡಾ. ಅಂಬೇಡ್ಕರ್:** ಇಲ್ಲ. ನಾನು ಮತ ಎಣಿಕೆಗೂ, ಪ್ರಕಟಣೆಗೂ ನಡುವಿನ ವ್ಯತ್ಯಾಸವನ್ನು ಮುಂದಿಡುತ್ತಿದ್ದೇನೆ. ಅದೇ ಬಹಳ ಮುಖ್ಯವಾದ ವಿಷಯ.

**ಶ್ರೀ ನಜೀರುದ್ದೀನ್ ಅಹಮದ್ (ಪಶ್ಚಿಮ ಬಂಗಾಳ):** ಮತ ಎಣಿಕೆ ಸಾರ್ವಜನಿಕವಾಗಿರುತ್ತದೆ. ಫಲಿತಾಂಶವು ಪತ್ರಿಕೆಯವರಿಗೆ ತಿಳಿದು ಪ್ರಕಟಿಸುತ್ತಾರೆ.

**ಡಾ. ಅಂಬೇಡ್ಕರ್:** ಮತ ಎಣಿಕೆಯ ಬಗೆಗೆ ನಿಯಮಗಳಲ್ಲಿ ಸ್ಪಷ್ಟವಾಗಿದೆ ಆದರೆ ಇನ್ನೊಂದು ಕ್ಲಿಷ್ಟ ಪ್ರಶ್ನೆ ಎಂದರೆ ವಾಹನಗಳ ಉಪಯೋಗ. ಅಭ್ಯರ್ಥಿಯು ಮತದಾರರನ್ನು ಕಾರುಗಳ ಮೂಲಕ ಅಥವಾ ಇನ್ನಿತರೆ ವಾಹನಗಳ ಮೂಲಕ ಕರೆತರುವುದನ್ನು ಮಸೂದೆಯು ಅನುಮತಿಸುವುದಿಲ್ಲ. ಆದರೆ ಮತದಾರ ಸ್ವತಹ ಕಾರು ಹೊಂದಿದ್ದರೆ ಮತದಾನದ ಸಲುವಾಗಿ ಮತಗಟ್ಟೆಗಳಿಗೆ ಬರಲು ಮತ್ತು ಮತದಾನ ಮಾಡಲು ಕಾರು ಉಪಯೋಗಿಸಬಹುದಾಗಿದೆ.

**ಸೇಠ್ ಗೋವಿಂದದಾಸ್:** ಮತದಾರನು ಒಂದು ಚಕ್ಕಡಿಯನ್ನು ಬಾಡಿಗೆ ಪಡೆಯಬಹುದೆ?

**ಡಾ. ಅಂಬೇಡ್ಕರ್:** ಅದಕ್ಕಾಗಿ ಅವನು ಖರ್ಚು ಮಾಡುವುದಿದ್ದರೆ ಅವನು ಮಾಡಬಹುದು. ಆದರೆ ನಮ್ಮ ಸ್ನೇಹಿತರನ್ನು ಬಾಧಿಸುವುದೇನೆಂದರೆ ಒಬ್ಬ ಅಭ್ಯರ್ಥಿಯು ಮತದಾರನ ಕೈಗೆ ಹಣದ ನೋಟುಗಳನ್ನು ಇಟ್ಟು ನೀನು ಒಂದು ಕಾರನ್ನು ಬಾಡಿಗೆ ಪಡೆದುಕೊ ನಾನು ನಿನ್ನ ಸಾರಿಗೆ ವೆಚ್ಚವನ್ನು

ತುಂಬುತ್ತೇನೆ ಎಂದು ಹೇಳುವ ಸಾಧ್ಯತೆ ಇದೆ. ಆದ್ದರಿಂದ ಈ ನಿಯಮವು ನಿಷ್ಪ್ರಯೋಜಕ. ಈ ರೀತಿ ಸುತ್ತಿ ಬಳಸುವುದನ್ನು ನಾನು ತಳ್ಳಿಹಾಕುವುದಿಲ್ಲ. ಆದರೆ ಪರಿಗಣಿಸಬೇಕಾದ ಪ್ರಶ್ನೆ ಏನೆಂದರೆ ಈ ನಿಯಮವನ್ನು ಸುತ್ತಿ ಬಳಸಿ ಬಹಳ ದೊಡ್ಡ ಮಟ್ಟದಲ್ಲಿ ಉಪಯೋಗಿಸಿದಾಗ ನಾವು ಮಾಡಿರುವ ನಿರ್ದಿಷ್ಟ ಕಾನೂನು ಅನರ್ಥಕವಾಗುತ್ತದೆಯೇ ಎಂಬುದು. ಇದಕ್ಕೆ ಉತ್ತರವೇನೆಂದರೆ ಅದು ಸಾಧ್ಯವಿಲ್ಲ ಎಂಬುದು, ಅದು ನನ್ನ ದೃಷ್ಟಿ. ಮತ್ತೊಂದೆಡೆ ನಾವು ಎರಡು ಬೇರೆ ಸಂಗತಿಗಳನ್ನು ಪರಿಗಣಿಸಬೇಕಾಗುತ್ತದೆ. ಅದರ ಬಗ್ಗೆ ನಾನು ಮುಕ್ತವಾಗಿದ್ದೇನೆ. ನಾವು ಮತಗಟ್ಟೆಗಳು ಪ್ರತಿಯೊಂದು ಹಳ್ಳಿಯ ಎರಡು ಅಥವಾ ಮೂರು ಮೈಲಿಗಳ ಒಳಗೆ ಇರಬೇಕೆಂದು ನಿಯಮ ಮಾಡುತ್ತಿದ್ದೇವೆ ಅಂತಹ ಪ್ರಸಂಗಗಳಲ್ಲಿ ಬಹುಶಃ ಕಾರು ಬಳಕೆಯ ಆವಶ್ಯಕತೆ ಬೀಳುವುದಿಲ್ಲ. ಇನ್ನೊಂದು ವಾಸ್ತವಾಂಶವಿದೆ. ಮತದಾನದ ಹಕ್ಕನ್ನು ಹೊಂದಿರುವ ಅನೇಕ ಜನರು ಮತದಾನ ಮಾಡುವ ಇಚ್ಛೆಯಿರುವ ಜನರು ಅವರ ವೃದ್ಧಾಪ್ಯದಿಂದಲೋ ಅಥವಾ ನಡೆಯಲು ಸಾಧ್ಯವಾಗದ ಕಾರಣದಿಂದಲೋ ಮತಗಟ್ಟೆಗಳಿಗೆ ಬರಲಾಗದೆ ಇರಬಹುದು. ಬಹಳ ಜನರು ಕುಂಟರೋ ಅಥವಾ ದೈಹಿಕವಾಗಿ ಅಸಮರ್ಥರೋ ಅಗಿದ್ದು ಕಾಲು ನಡಿಗೆಯಲ್ಲಿ ಮತಗಟ್ಟೆಗಳಿಗೆ ಬರಲು ಸಾಧ್ಯವಾಗದಿರಬಹುದು.

**ಒಬ್ಬ ಗೌರವಾನ್ವಿತ ಸದಸ್ಯ:** ಮಹಿಳೆಯರ ಹಾಗೆ.

**ಡಾ. ಅಂಬೇಡ್ಕರ್:** ಆಯಿತು. ನನಗೆ ತಿಳಿಯದು. ನೀವು ಮಹಿಳೆಯರು ಎಂದು ಹೇಳಿದರೆ ಹೌದು– ಭಾರತದಲ್ಲಿ ಸ್ತ್ರೀಯರು ನಡೆಯುತ್ತಾರೆ. ಅದ್ದರಿಂದ ಅವರ ಚಿಂತೆ ನನಗಿಲ್ಲ.

**ಡಾ. ದೇಶಮುಖ್ (ಮಧ್ಯಪ್ರದೇಶ್):** ಈ ಸದನದಲ್ಲಿರುವ ನಮ್ಮ ಸಹೋದರಿಯರು ಮಹಿಳೆಯರೇ ಅಥವಾ ಸ್ತ್ರೀಯರೇ ?

**ಡಾ. ಅಂಬೇಡ್ಕರ್:** ಅದನ್ನು ಉತ್ತರಿಸಲು ಅವರಿಗೇ ಬಿಟ್ಟಿದ್ದೇನೆ.

ಆದ್ದರಿಂದ ನಾನು ಹೇಳಿದ ಹಾಗೆ ಈ ಪ್ರಶ್ನೆಯನ್ನು ಗೊತ್ತುಪಡಿಸಲು ನಾವು ಅನೇಕ ಸಂಗತಿಗಳನ್ನು ಪರಿಗಣಿಸಬೇಕಾಗುತ್ತದೆ. ಒಂದನೆಯದಾಗಿ ನಮ್ಮ ಮತಗಟ್ಟೆಗಳು ಮುಂಚೆ ಇದ್ದವುಗಳಿಗಿಂತ ಹತ್ತಿರವಿರಬೇಕು. ಎರಡನೆಯದು ದೈಹಿಕ ಅಸಾಮರ್ಥ್ಯದಿಂದ ಮತಗಟ್ಟೆಗೆ ಹೋಗಲಾರದ ಅನೇಕ ಜನರಿರಬಹುದು. ಅವರಿಗೆಲ್ಲ ಮತದಾನ ಮಾಡಲು ಅನುಕೂಲವಾಗುವಂತೆ ಸಾರಿಗೆ ಮೂಲಕ ಸಹಾಯವನ್ನು ಒದಗಿಸಲು ನಿರಾಕರಿಸುತ್ತೀರಾ?

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ್):** ಅವರ ವಿಷಯದಲ್ಲಿ ಅದನ್ನು ಅಪವಾದವೆಂದು ಪರಿಗಣಿಸಿ.

**ಡಾ. ಅಂಬೇಡ್ಕರ್:** ನಾನು ಹೇಳಿದಂತೆ ಯಾವುದೋ ಸಂಪ್ರದಾಯದ ಅಭಿಪ್ರಾಯವನ್ನು ಹೇಳಿ ವಿಷಯವನ್ನು ನಾನು ಮುಗಿಸುತ್ತಿಲ್ಲ. ಪ್ರಶ್ನೆಯ ಎರಡು ಮಗ್ಗಲುಗಳನ್ನು ನಾನು ಸದನದ ಮುಂದೆ ಇಡುತ್ತಿದ್ದೇನೆ. ಅದನ್ನು ನಿರ್ಧರಿಸುವುದು ಸದನಕ್ಕೆ ಬಿಟ್ಟದ್ದು. ವೈಯಕ್ತಿಕವಾಗಿ ಸಾರಿಗೆಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರೆ ನನಗೆ ಏನೂ ಅನ್ನಿಸುವುದಿಲ್ಲ. ಯಾರಿಗೆ ಬೇಕೋ ಅವರು ಕಾಲು ನಡಿಗೆಯಲ್ಲಿ ಹೋಗಿ ಮತದಾನ ಮಾಡಬಹುದು. ಒಂದು ವೇಳೆ ಮತಗಟ್ಟೆಗೆ ಹೊಗಲಾರದ ಜನ ಬಹಳ ಸಂಖ್ಯೆಯಲ್ಲಿದ್ದರೆ ಈ ಪ್ರಶ್ನೆಯನ್ನು ಪರಿಗಣಿಸಬೇಕಾಗುತ್ತದೆ ಮತ್ತು ಅವರಿಗಾಗಿ ಯಾವುದಾದರೊಂದು ನಿಯಮವನ್ನು ಮಾಡಲೇಬೇಕಾಗುತ್ತದೆ.

ನಾನು ಈಗ ಮತ್ತೊಂದು ಮುಖ್ಯವಾದ ವಿಷಯಕ್ಕೆ ಬರುತ್ತೇನೆ; ಅದು ಸರ್ಕಾರಿ ನೌಕರರ ಸೇವೆಯನ್ನು ಚುನಾವಣೆಗಳಲ್ಲಿ ಪಡೆದುಕೊಳ್ಳುವುದು. ಈ ವಿಷಯವನ್ನು ಮಿ. ಗೊಕುಲ್ ಭಾಯ್ ಭಟ್

ಮತ್ತು ನನ್ನ ಸ್ನೇಹಿತ ಕಂಡೂಬಾಯಿ ದೇಸಾಯಿ ಅವರು ಸಹಾ ಎತ್ತಿದ್ದಾರೆ. ಇದು ಬಹಳ ಮುಖ್ಯವಾದ ನಿಯಮವಾದ್ದರಿಂದ ಕೆಲವು ವಿಷಯಗಳನ್ನು ಪರಿಗಣಿಸಲು ತಮ್ಮ ಗಮನವನ್ನು ಸೆಳೆಯುತ್ತೇನೆ. ನಾವು ಮತದಾನ ಮಾಡುವ ಹಕ್ಕಿಗೂ ಮತ್ತು ರಾಜಕೀಯಪಕ್ಷವೊಂದರ ರಚನೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬೇಕಾಗುತ್ತದೆ. ಅಥವಾ ಈಗಾಗಲೆ ಇರುವ ರಾಜಕೀಯ ಪಕ್ಷಕ್ಕೆ ಸಹಾಯಮಾಡುವ ಸಲುವಾಗಿಯಾದರೂ ಇರಬಹುದು. ಮತದಾನದ ಹಕ್ಕಿನ ಸಂಬಂಧವಾಗಿ ಈ ದೇಶ ಯಾರೊಬ್ಬನಿಗೂ ಆ ಹಕ್ಕನ್ನು ನಿರಾಕರಿಸಲಾಗಿಲ್ಲ; ನಾಗರಿಕ ಸೇವೆಗಳಲ್ಲಿ ನೇಮಕಗೊಂಡಿರುವ ಸರ್ಕಾರಿ ಅಧಿಕಾರಿಗಳಾಗಲಿ ಅಥವಾ ಸೇನಾಪಡೆಯ ಸಿಬ್ಬಂದಿಯಾಗಲಿ ಮತದಾನಮಾಡುವ ತಮ್ಮ ಹಕ್ಕನ್ನು ಚಲಾಯಿಸಲು ಯಾವ ಅಡೆತಡೆಯೂ ಇಲ್ಲ. ಒಂದೇ ಪ್ರಶ್ನೆ ಇಲ್ಲಿ ಉದ್ಭವವಾಗುವುದೇನೆಂದರೆ ಅವರೇ ರಾಜಕೀಯ ಪಕ್ಷವನ್ನು ಪ್ರಾರಂಭಿಸುವ ಉದ್ದೇಶದಿಂದ ಅಥವ ಯಾವುದೇ ನಿರ್ದಿಷ್ಟರಾಜಕೀಯ ಪಕ್ಷಕ್ಕೆ ಸಹಾಯಮಾಡಲು ಅವರು ಸಂಘ ಸಂಸ್ಥೆ ರಚಿಸಿಕೊಳ್ಳಲು ಅನುಮತಿ ನೀಡಬಹುದೇ ಎಂಬುದು. ನನಗನಿಸುವಂತೆ ನಾಗರಿಕ ಅಥವಾ ಸೈನಿಕ ಸರ್ಕಾರಿ ಸಿಬ್ಬಂದಿಗಳಿಗೆ ಪಕ್ಷ ರಾಜಕೀಯದಲ್ಲಿ ಭಾಗವಹಿಸಲು ಅವಕಾಶಕೊಟ್ಟರೆ ಸರ್ಕಾರವನ್ನು ಉರುಳಿಸುವ ಕ್ರಿಯೆಗೆ ಬೀಜ ನೆಟ್ಟಂತೆಯೇ ಸರಿ. ಈ ಅಂಶವನ್ನು ಮರೆಯಲು ಸಾಧ್ಯವಿಲ್ಲ. ಒಂದು ವೇಳೆ ನಮ್ಮ ಸಚಿವಾಲಯದ ನೌಕರರು ಈಗ ಇರುವ ಪ್ರಸಕ್ತ ಸರ್ಕಾರವನ್ನು ಬದಲಾಯಿಸುವಂತೆ ರಾಜಕೀಯ ಸಂಘಟನೆಯನ್ನು ಕಟ್ಟಿಕೊಂಡರೆ ಆಡಳಿತದ ಪರಿಸ್ಥಿತಿ ಏನಾದೀತು? ರಾಜಕೀಯ ಚಟುವಟಿಕೆಗಳಿಂದ ಅವರು ಉಚ್ಚಾಟಿಸಲು ಉದ್ದೇಶಿಸಿರುವ ಸರ್ಕಾರಕ್ಕೆ ನಿಷ್ಠೆಯಿಂದ ಇರುವವರೆಂದು ನಿರೀಕ್ಷಿಸಬಹುದೆ? ನನಗನ್ನಿಸುವಂತೆ ಇಡೀ ಆಡಳಿತವು ಕುಸಿದು ಚಿಂದಿಯಾಗುತ್ತದೆ. ಎರಡನೆಯದಾಗಿ ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು........ ನಾನು ಒತ್ತುಕೊಡುತ್ತಿರುವುದೇಕೆಂದರೆ ಸಾಮಾನ್ಯವಾಗಿ ಇದನ್ನು ನೆನಪಿನಲ್ಲಿಟ್ಟುಕೊಳ್ಳುವುದಿಲ್ಲ.......... ಸರ್ಕಾರವನ್ನು ರಾಜಕೀಯ ಪಕ್ಷ ಮಂತ್ರಿಗಳು, ಇನ್ಯಾರೇ ಇರಲಿ ಅವರು ಪಕ್ಷಪಾತಿಯೇ ನಿಷ್ಪಕ್ಷಪಾತಿಯೇ ಅಥವಾ ಈ ಕಡೆ ವಾಲುತ್ತಾರೆಯೇ ಇನ್ನೊಂದು ಕಡೆ ವಾಲುತ್ತಾರೆಯೇ ಎಂಬುದೆಲ್ಲಾ ಸಣ್ಣ ವಿಷಯಗಳು. ಯಾವುದು ಮುಖ್ಯವೆಂದರೆ ನಿಷ್ಪಕ್ಷಪಾತ ಆಡಳಿತ. ನನ್ನ ತಿಳುವಳಿಕೆಯಲ್ಲಿ ಆಡಳಿತವು ಸರ್ಕಾರಕ್ಕಿಂತ ಮುಖ್ಯ. ಆದ್ದರಿಂದ ಒಂದು ವೇಳೆ ಆಡಳಿತಕ್ಕೆ ರಾಜಕೀಯ ಪಕ್ಷಗಳ ಜೊತೆ ಸ್ನೇಹ ಬೆಳೆಸಲು ಅನುಮತಿ ಸಿಕ್ಕಿದರೆ ಆಡಳಿತ ಹೇಗೆ ನಿಷ್ಪಕ್ಷವಾಗಿರುತ್ತದೆ? ಅವರು ತಮ್ಮ ಜೊತೆಯಲ್ಲಿಯೇ ಕೆಲಸಮಾಡುವವರನ್ನು ಪ್ರೋತ್ಸಾಹಿಸುವುದಿಲ್ಲವೇ ಮತ್ತು ತಮ್ಮ ಜೊತೆಯಲ್ಲಿ ಇಲ್ಲದವರನ್ನು ತಿರಸ್ಕರಿಸುವುದಿಲ್ಲವೇ. ಆಗ ಆಡಳಿತದ ಪರಿಸ್ಥಿತಿ ಏನಾಗಬಹುದು? ಆದ್ದರಿಂದ ರಾಜಕಾರಣದಲ್ಲಿ ಪಾಲ್ಗೊಳ್ಳಲು ಒಂದು ನಿರ್ದಿಷ್ಟ ಅಭ್ಯರ್ಥಿಗೆ ಸಭೆ ನಡೆಸುವ ಮುಖಾಂತರ ಪ್ರಚಾರ ಮಾಡುವ ಮುಖಾಂತರ, ನಿಧಿ ಸಂಗ್ರಹಿಸುವ ಮುಖಾಂತರ ಅಥವಾ ಇನ್ನೊಂದು ಕಾರಣಕ್ಕೆ ಆಡಳಿತಕ್ಕೆ ಅನುಮತಿಸಬೇಕು ಎಂದು ಸ್ನೇಹಿತರಾದ ಕಂಡುಬಾಯಿ ದೇಸಾಯಿ ಅಥವಾ ಮಿ.ಗೋಕುಲ್ ಭಾಯ್ ಭಟ್ ಅವರು ಮಾಡಿರುವ ಸಲಹೆಗಳನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಇದು ನಾಗರಿಕ ಮತ್ತು ಸೈನಿಕಸರ್ಕಾರವನ್ನು ಸಂಪೂರ್ಣವಾಗಿ ಬುಡಮೇಲುಮಾಡುವ ಕ್ರಿಯೆಯಾಗುತ್ತದೆ.

**ಶ್ರೀ ಭಟ್ (ಬಾಂಬೆ):** ನನ್ನ ಸಲಹೆಯ ಹಿಂದೆ ಈ ಉದ್ದೇಶವಿಲ್ಲ.

**ಶ್ರೀ ಕಂಡುಬಾಯಿ ದೇಸಾಯಿ (ಬಾಂಬೆ):** ನನ್ನ ಟಿಪ್ಪಣಿಯಲ್ಲಿರುವ ಸರ್ಕಾರದ ಸಾಮಾನ್ಯ ನೌಕರರು

ಅಭ್ಯರ್ಥಿಗೆ ಬೆಂಬಲ ಸೂಚಿಸುವ ಚಟುವಟಿಕೆಗಳ ಬಗ್ಗೆ ನೀವು ಉತ್ತರಿಸಲಿಲ್ಲ.

**ಡಾ. ಅಂಬೇಡ್ಕರ್:** ನೀವು ಅದನ್ನು ಸಾಮಾನ್ಯ ಅರ್ಥದಲ್ಲಿ ಗ್ರಹಿಸುತ್ತಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೆ. ನೀವು ಮತ್ತೊಂದು ತಿದ್ದುಪಡಿಯನ್ನು ಸೂಚಿಸಿದರೆ ವಿಷಯವನ್ನು ಮುಂದೊಂದು ದಿನ ಚರ್ಚಿಸಬಹುದು. ಆ ವಿಷಯದ ಬಗ್ಗೆ ನನ್ನಲ್ಲಿ ಸಾಕಷ್ಟು ಸಾಮಗ್ರಿ ಇದೆ. ಸದನವನ್ನು ಈ ವಿಷಯದಲ್ಲಿ ತೃಪ್ತಿಪಡಿಸಬಲ್ಲೆ ಎಂದು ಅನಿಸುತ್ತದೆ.

**ಶ್ರೀ ಭಟ್:** ನಾನು ಸಲಹೆಮಾಡಿದ್ದೇನೆಂದರೆ ಅಧಿಕಾರಿ ಮತ್ತು ಆಡಳಿತಾತ್ಮಕ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳಿಗಲ್ಲ. ಆದರೆ ಕೇವಲ ಸಾಮಾನ್ಯ ನೌಕರರಿಗೆ ಸಂಬಂಧಿಸಿದ, ಸಿಬ್ಬಂದಿ ಎನ್ನುತ್ತಾರಲ್ಲ ಅವರಿಗೆ.

**ಡಾ. ಅಂಬೇಡ್ಕರ್:** ಮಾಮೂಲಿ ಕರ್ಮಚಾರಿ ಮತ್ತು ದೊಡ್ಡ ಕರ್ಮಚಾರಿ ನಡುವೆ ವ್ಯತ್ಯಾಸವನ್ನು ಗುರುತಿಸುವುದು ಬಹಳ ಕಷ್ಟ.

ಸಂಕೇತಗಳನ್ನು ಬಳಸುವ ಕುರಿತು ಮತ್ತೊಂದು ಪ್ರಶ್ನೆ ಇದೆ. ಆಯ್ಕೆ ಸಮಿತಿಯು ಧಾರ್ಮಿಕ ಮತ್ತು ರಾಷ್ಟ್ರೀಯ ಸಂಕೇತಗಳನ್ನು ಬಳಸಬಾರದೆಂದು ತೀರ್ಮಾನಿಸಿದೆ. ನಮ್ಮ ಸ್ನೇಹಿತ ಮಿ. ದಾಸ್ ಮತ್ತು ಮಾನ್ ಡಾ. ಶಾಂಪ್ರಸಾದ್ ಮುಖರ್ಜಿ ಅದನ್ನು ಒಪ್ಪುವುದಿಲ್ಲ. ಮಿ. ದಾಸ್ ರವರು ಈ ನಿಯಮದ ಪರವಾಗಿದ್ದಾರೆ. ಅದರೆ ಅದನ್ನು ಮುಂದೂಡಲಿಚ್ಚಿಸುತ್ತಾರೆ. ಅವರು ಹೇಳುವುದೇನೆಂದರೆ ನಿಷೇದಿತ ಸಂಕೇತಗಳನ್ನು ತೋರಿಕೆಗಾಗಿ ಅನುಕರಿಸಬಹುದು. ಅದು ತೋರಿಕೆಯದಾದ್ದರಿಂದ ನೈಜವಾದದ್ದು ಅಲ್ಲವಾದ್ದರಿಂದ ಈ ನಿಯಮವನ್ನು ಒಪ್ಪಿಕೊಳ್ಳಲು ರಾಜಕೀಯ ಪಕ್ಷದ ಸದಸ್ಯರಿಗೆ ಸಾಧ್ಯವಾಗಬಹುದು. ಈ ಸಂದಿಗ್ಧವನ್ನು ಮೀರಲು ನನಗಿನ್ನು ಯಾವ ಸೂಕ್ತ ಮಾರ್ಗವೂ ಸಿಕ್ಕಿಲ್ಲ. ನಮ್ಮ ಸ್ನೇಹಿತರಾದ ಮಾನ್ ಮತ್ತು ಶಾಂ ಪ್ರಸಾದ್ ಮುಖರ್ಜಿಯವರು ಇದನ್ನು ಆಕ್ಷೇಪಿಸುತ್ತಾರೆ. ಸಂಕೇತಗಳಿಗೆ ಅನುಮತಿ ನೀಡಬೇಕೆಂದು ಅವರು ಹೇಳುತ್ತಾರೆ – ಹಿಂದೂಮಹಾಸಭಾ ತನ್ನದೇ ಆದ ಬಾವುಟವನ್ನು ಚುನಾವಣಾ ಪ್ರಚಾರಕ್ಕಾಗಿ ಬಳಸಬೇಕು. ಈ ಮಸೂದೆಯಲ್ಲಿರುವ ನಿಯಮವು ಆಯ್ಕೆ ಸಮಿತಿಯು ವರದಿನೀಡಿರುವಂತೆ ಬಹಳ ಚೆನ್ನಾಗಿದೆ. ಏಕೆಂದರೆ ನಾನು ತಿಳಿದಂತೆ ಯಾವ ವಿಷಯಗಳ ಮೇಲೆ ನಡೆಯಬೇಕೆಂದರೆ ಆ ವಿಷಯಗಳು ಉದಾಹರಣೆಗೆ, ಧರ್ಮ ಅಥವಾ ಸಂಸ್ಕೃತಿಯ ಮೇಲಿರಬಾರದು. ಯಾವುದೇ ರಾಜಕೀಯ ಪಕ್ಷ ಭಾವನೆಗಳ ಮೇಲೆ ಮತಯಾಚಿಸುವುದನ್ನು ಒಪ್ಪಿಕೊಳ್ಳಬಾರದು. ಸಾಮಾನ್ಯರ ದೈನಂದಿನ ವ್ಯವಹಾರಗಳನ್ನು ಒಳಗೊಳ್ಳದೆ ಅದು ಅವರ ಮನಸ್ಸಿನ ಉದ್ರೇಕಕ್ಕೆ ಕಾರಣವಾಗುವುದಾದರೆ ಅವುಗಳನ್ನು ಮಾನ್ಯಮಾಡಬಾರದು.

**ಶ್ರೀ ಕಾಮತ್:** ರಾಜಕೀಯ ಭಾವನೆಗಳ ಬಗ್ಗೆ ಏನು ಹೇಳುತ್ತೀರಿ.

**ಡಾ. ಅಂಬೇಡ್ಕರ್:** ರಾಜಕೀಯ ಭಾವನೆ, ಉತ್ಸಾಹ – ಅದೆಲ್ಲ ಸರಿ ಆದರೆ ರಾಜಕೀಯ ಭಾವನೆಯ ಹೊರತು ಬೇರೆ ಭಾವನೆಗಳನ್ನು ಮಾನ್ಯ ಮಾಡುವಂತಿಲ್ಲ. ಆದ್ದರಿಂದ ಈ ನಿಯಮವು ಒಳ್ಳೆಯ ನಿಯಮವಾಗಿದೆ. ಅದನ್ನು ಕುರಿತ ಸಲಹೆಗಳು ನನಗೆ ಒಪ್ಪಿಗೆಯಾಗುವುದಿಲ್ಲ.

ಈಗ ನಾನು ಆಯ್ಕೆ ಸಮಿತಿಯ ವರದಿಯ ಕೊನೆಯ ಅಂಶಕ್ಕೆ ಬರುತ್ತೇನೆ. ಇದು ಎದೆಗೆ ಉರಿಹಚ್ಚುವ ವಿಷಯವೆಂದು ನನಗೆ ತಿಳಿದಿದೆ. ಅದೇನೆಂದರೆ ಚುನಾವಣಾ ವೆಚ್ಚಗಳ ಲೆಕ್ಕವನ್ನು ಕೊಡುವುದು. ಲೆಕ್ಕಪತ್ರದಲ್ಲಿ ಯಾವ ವೆಚ್ಚವನ್ನು ಸೇರಿಸುವುದು? ಶ್ರೀ ಗೋಯಂಕ್ ರವರು ತಮ್ಮ ಅಸಮ್ಮತಿ ಟಿಪ್ಪಣಿಯಲ್ಲಿ ಹೇಳಿರುವಂತೆ ಈ ಪ್ರಕರಣವನ್ನು ಉಳಿಸಿಕೊಂಡರೆ ಹಾಗೆ ಇರುವಂತೆ ಒಂದು ರಾಜಕೀಯ ಪಕ್ಷವು ಯಾವುದೇ ಹಣವನ್ನು ಖರ್ಚುಮಾಡಲು ಸ್ವತಂತ್ರವಿರುವುದಿಲ್ಲ ಅಥವಾ ಖರ್ಚುಮಾಡುವ ಹಕ್ಕಿರುವುದಿಲ್ಲ.

ಇಂತಹ ಪರಿಸ್ಥಿತಿಯನ್ನು ಹಾಗೆಯೆ ಬಿಡುವುದು ಸರಿಯಲ್ಲ. ಒಂದು ರಾಜಕೀಯ ಪಕ್ಷವು ಚುನಾವಣೆಯಲ್ಲಿ ಹಣ ಖರ್ಚುಮಾಡಲು ಅನುಮತಿಸಬೇಕು. ಅಂತಹ ವೆಚ್ಚವನ್ನು ಅಭ್ಯರ್ಥಿಯು ತನ್ನ ವೆಚ್ಚದ ಬಾಬ್ತಿನಲ್ಲಿ ಸೇರಿಸಬೇಕಾದ ಅಗತ್ಯವಿರುವುದಿಲ್ಲ. ಅಭ್ಯರ್ಥಿಯು ಆ ವೆಚ್ಚವನ್ನು ತೋರಿಸುವ ಅಗತ್ಯವಿಲ್ಲವೆಂದು ಹೇಳುವ ಈ ಅಂಶವು ಬಹಳ ಮುಖ್ಯವಾದುದು. ಈ ವಾದವು ಚುನಾವಣಾ ವೆಚ್ಚವೆಂದರೆ ಏನು ಎಂಬ ಅರ್ಥದ ತಪ್ಪು ಗ್ರಹಿಕೆಯಿಂದಾಗಿ ಉಂಟಾಗಿದೆ. ಇಂಗ್ಲೆಂಡಿನ ಚುನಾವಣಾ ಟ್ರಿಬ್ಯುನಲ್ ಈ ವಿಷಯದಲ್ಲಿ ನೀಡಿರುವ ತೀರ್ಪನ್ನು ನಾನು ಸುದೀರ್ಘವಾಗಿ ಅಭ್ಯಾಸ ಮಾಡಿದ್ದೇನೆ. ಅದು ಕಂಡುಕೊಂಡಿರುವ ಪರಿಣಾಮವನ್ನು ಈ ಸದನಕ್ಕೆ ಹೇಳಲಿಚ್ಛಿಸುತ್ತೇನೆ. ಈ ಪ್ರಶ್ನೆಯನ್ನು ಪರಿಗಣಿಸುವಾಗ ನಾವು ಗಮನದಲ್ಲಿಟ್ಟುಕೊಳ್ಳಬೇಕಾದ ಮೊದಲನೆಯ ಅಂಶವೇನೆಂದರೆ ಚುನಾವಣಾ ವೆಚ್ಚಗಳನ್ನು ಕುರಿತು ನಾವು ಚರ್ಚಿಸುತ್ತಿದ್ದೇವೆ. ಅಭ್ಯರ್ಥಿಯ ಚುನಾವಣಾವೆಚ್ಚವೆಂದರೇನು ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಚುನಾವಣಾ ವೆಚ್ಚವೆಂದರೆ ಚುನಾವಣೆಯ ಪ್ರಾರಂಭದಿಂದ ಚುನಾವಣೆಯ ಅಂತ್ಯದವರೆಗೂ ಉಂಟಾಗುವ ವೆಚ್ಚ.

**ಶ್ರೀ ಕಾಮತ್:** ಪ್ರಾರಂಭವೆಂದರೆ ನಾಮಪತ್ರ ಸಲ್ಲಿಕೆಯೋ ಅಥವಾ ಮತದಾನವೋ.

**ಡಾ. ಅಂಬೇಡ್ಕರ್:** ಅದಕ್ಕೆ ಬರುತ್ತೇನೆ. ಅದಕ್ಕಿಂತಲೂ ಮುಂಚಿನದಿರಬಹುದು.

ಆದ್ದರಿಂದ ನಾವು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. "ಚುನಾವಣಾ ವೆಚ್ಚ" ವೆನ್ನುವ ವಾಕ್ಯಾಂಶ ಒಂದು ನಿರ್ದಿಷ್ಟ ಅವಧಿಯನ್ನು ಸೂಚಿಸುತ್ತದೆ. ಅಂದರೆ ಚುನಾವಣೆಯು ಪ್ರಾರಂಭವಾಗುವುದರಿಂದ ಹಿಡಿದು ಚುನಾವಣೆಯ ಮುಕ್ತಾಯದವರೆಗಿನ ಕಾಲವನ್ನು ಅದು ಸೂಚಿಸುತ್ತದೆ. ಚುನಾವಣೆಯ ಪ್ರಾರಂಭಕ್ಕೂ ಮುನ್ನವೆ ಸಂಭವಿಸುವ ವೆಚ್ಚಗಳು ಚುನಾವಣೆಯ ವೆಚ್ಚಗಳು ಎಂದೆನಿಸುವುದಿಲ್ಲ.

**ಶ್ರೀ ಕಾಮತ್:** ಪ್ರಾರಂಭವೆಂದರೇನು – ನಾಮ ಪತ್ರ ಸಲ್ಲಿಕೆಯೋ ಅಥವಾ ಮತದಾನವೋ?

**ಡಾ. ಅಂಬೇಡ್ಕರ್:** ಅದಕ್ಕೆ ಮತ್ತೆ ಬರುತ್ತೇನೆ. ನನ್ನನ್ನು ಮುಂದುವರೆಯುವುದಕ್ಕೆ ಬಿಟ್ಟರೆ ನಾನು ವಿವರಿಸಿ ಹೇಳುತ್ತೇನೆ. ನಾನು ಸಾಕಷ್ಟು ಸಮಯವನ್ನು ಇದಕ್ಕೆ ವ್ಯಯಮಾಡಿದ್ದೇನೆ. ಮತ್ತು ಸಾಕಷ್ಟು ತೊಂದರೆಗಳನ್ನು ತೆಗೆದುಕೊಂಡಿದ್ದೇನೆ. ಏಕೆಂದರೆ ನಾನೇ ಈ ವಿಷಯವನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

**ಉಪ ಸಭಾಪತಿ:** ಮಸೂದೆಯ ಒಳಗೆ ಇಂತಹ ನಿರ್ಬಂಧಗಳೇನಾದರೂ ಇದೆಯೆ?

**ಡಾ. ಅಂಬೇಡ್ಕರ್:** ಅಂತಹದ್ದೇನು ಇಲ್ಲ. ಆದರೆ ನಾನು "ಚುನಾವಣಾ ವೆಚ್ಚ" ಎನ್ನುವ ವಾಕ್ಯಾಂಶಕ್ಕೆ ನ್ಯಾಯಿಕ ವ್ಯಾಖ್ಯಾನದ ಬಗ್ಗೆ ಮಾತನಾಡುತ್ತಿದ್ದೇನೆ.

**ಉಪಸಭಾಪತಿ:** ಹಾಗೆಂದರೆ ಚುನಾವಣೆಯ ನಿರೀಕ್ಷೆಯಲ್ಲಿ ಮಾಡುವ ಎಲ್ಲಾ ವೆಚ್ಚಗಳು ಎಂದಾಗಬಹುದೆ?

**ಡಾ. ಅಂಬೇಡ್ಕರ್:** "ಚುನಾವಣೆ" ಎಂಬ ಪದಕ್ಕೆ ಮಾತ್ರ ಒತ್ತು ಕೊಡಬೇಕಾಗಿದೆ. ಚುನಾವಣೆಯೆಂದರೆ ಒಂದು ಸಂದರ್ಭ. ಅದಕ್ಕೆ ಪ್ರಾರಂಭ ಮತ್ತು ಕೊನೆ ಎರಡೂ ಇದೆ. ಆದ್ದರಿಂದ ನಾನು ಹೇಳುತ್ತಿರುವುದೇನೆಂದರೆ ಚುನಾವಣೆ ಪ್ರಾರಂಭದಿಂದ ಕೊನೆಯವರೆಗೆ ಆಗುವ ವೆಚ್ಚಗಳಿಗೆ ಮಾತ್ರ ಸಂಬಂಧಿಸಿದ್ದಾಗಿದೆ.

**ಶ್ರೀ ಕಾಮತ್:** ಪ್ರತಿಯೊಂದಕ್ಕೂ ಪ್ರಾರಂಭ ಮತ್ತು ಕೊನೆಯಿದೆ.

**ಡಾ. ಅಂಬೇಡ್ಕರ್:** ಕೆಲವು ವಸ್ತುಗಳಿಗೆ ಪ್ರಾಯಶಃ ಇರುವುದಿಲ್ಲ. ಕೆಲವು ವಿಷಯಗಳು ಸನಾತನ – ಅವುಗಳಿಗೆ ಪ್ರಾರಂಭವೂ ಇಲ್ಲ ಅಂತ್ಯವೂ ಇಲ್ಲ. ಆದರೆ ಚುನಾವಣೆ ಸನಾತನವಲ್ಲ. ಇಷ್ಟು ಹೇಳಿ ಯಾವುದೇ ತೆರನಾದ ವೆಚ್ಚಗಳು ಚುನಾವಣೆಗೆ ಮುಂಚೆ ಸಂಭವಿಸಿದ್ದರೆ ಅದನ್ನು ಅಭ್ಯರ್ಥಿಯೇ ವಹಿಸಿರಲಿ

ಅಥವಾ ರಾಜಕೀಯ ಪಕ್ಷ ವಹಿಸಿರಲಿ ಚುನಾವಣಾ ವೆಚ್ಚಗಳೆಂಬ ಅರ್ಥವ್ಯಾಪ್ತಿಯಲ್ಲಿ ಬರುವುದಿಲ್ಲ. ಚುನಾವಣೆ ಪ್ರಾರಂಭವಾಗುವ ಮುನ್ನ ರಾಜಕೀಯ ಪಕ್ಷವೊಂದು ಎಷ್ಟೇ ಹಣವನ್ನು ಖರ್ಚುಮಾಡಲು ಸ್ವತಂತ್ರವಿರುತ್ತದೆ. ಏಕೆಂದರೆ ಅದು ಚುನಾವಣಾ ವೆಚ್ಚದ ಭಾಗವಾಗಿರುವುದಿಲ್ಲ. ಚುನಾವಣೆ ಮುಗಿದ ನಂತರವೂ ಒಂದು ರಾಜಕೀಯ ಪಕ್ಷ ಅಥವಾ ಅಭ್ಯರ್ಥಿ ಏನು ಬೇಕಾದರೂ ಮಾಡಬಹುದು. ಅಭ್ಯರ್ಥಿಯು ಚುನಾಯಿತನಾದನಂತರ ಔತಣಕೂಟಕ್ಕೆ ಜನರನ್ನು ಆಹ್ವಾನಿಸಬಹುದು. ಅದು ಆಹಾರ ನಿಯಮಗಳಿಗೆ ಒಳಪಟ್ಟಿದ್ದರೆ ಇಂಪೀರಿಯಲ್ ಹೋಟೆಲ್ಲಿಗೂ ಆಹ್ವಾನಿಸಬಹುದು. ಅದು ಚುನಾವಣಾ ವೆಚ್ಚವಾಗುವುದಿಲ್ಲ. ಆದ್ದರಿಂದ ಈ ವಿಷಯಗಳನ್ನು ಹೊರತುಪಡಿಸಿ ಒಂದು ರಾಜಕೀಯ ಪಕ್ಷ ಯಾವುದೇ ವೆಚ್ಚಗಳನ್ನು ಭರಿಸಬಹುದು. ಅದು ಈ ಪ್ರಕರಣದಲ್ಲಿ ನಿಷೇಧಿತವಾಗಿಲ್ಲ.

**ಶ್ರೀ ಸಿಧ್ವಾ:** "ಚುನಾವಣೆ ನಡೆಯುವ ವೇಳೆಯಲ್ಲಿ" ಹೇಗೆ?

**ಸೇಟ್ ಗೋವಿಂದದಾಸ್:** ಎದ್ದು ನಿಂತು–

**ಡಾ. ಅಂಬೇಡ್ಕರ್:** ನನ್ನನ್ನು ಪಾಟೀ ಸವಾಲು ಮಾಡಬೇಡಿ. ಮುಂದುವರೆಯಲು ಬಿಡಿ. ನಾನು ಏನು ಹೇಳುತ್ತೇನೆ ಎಂಬ ಸಂಪೂರ್ಣ ಊಹೆ ನಿಮಗಿದ್ದರೆ ಬಹುಶಃ ಕೊನೆಯಲ್ಲಿ ಪ್ರಶ್ನೆ ಕೇಳುವುದಕ್ಕೆ ಏನೂ ಉಳಿದಿರುವುದಿಲ್ಲ.

ಈಗ ನಮ್ಮ ಗೌರವಾನ್ವಿತ ಸ್ನೇಹಿತರಾದ ಮಿ. ಸಿಧ್ವಾರವರು ಎತ್ತಿದ ಪ್ರಶ್ನೆಗೆ ಬರುತ್ತೇನೆ. ಅದು ಚುನಾವಣೆ ನಡೆಯುವ ಸಂದರ್ಭದಲ್ಲಿ ಆಗುವ ವೆಚ್ಚಗಳನ್ನು ಕುರಿತು. ಈ ಪರಿಸ್ಥಿತಿಯನ್ನು ನಾವು ತಳಸ್ಪರ್ಶಿಯಾಗಿ ಪರೀಕ್ಷಿಸೋಣ. ಕೇವಲ ತಾತ್ವಿಕವಾಗಿ ಅಲ್ಲ. ಚುನಾವಣೆ ನಡೆಯುವಾಗ ಏನಾಗುತ್ತದೆ? ಎರಡು ಸಂಗತಿಗಳು ನಡೆಯುತ್ತದೆ. ಒಂದು ರಾಜಕೀಯ ಸಭೆಗಳು ನಡೆಯಬಹುದು ಅಥವ ರಾಜಕೀಯ ಉಪನ್ಯಾಸಗಳು ನಡೆಯಬಹುದು.

**ಶ್ರೀ ಸಿಧ್ವಾ:** ರಾಜಕೀಯ ಭಿತ್ತಿಪತ್ರಗಳು ಕೂಡ.

**ಡಾ. ಅಂಬೇಡ್ಕರ್:** ಅದನ್ನು ಬೇರೆಯಾಗಿಯೇ ಚರ್ಚಿಸುತ್ತೇನೆ. ಪ್ರತಿಯೊಂದು ಪ್ರಕರಣವನ್ನು ಬೇರೆಯಾಗಿಯೆ ತೆಗೆದುಕೊಳ್ಳುತ್ತಿದ್ದೇನೆ. ಮೊದಲು ರಾಜಕೀಯ ಸಭೆಗಳು ರಾಜಕೀಯ ಉಪನ್ಯಾಸಗಳನ್ನು ಕುರಿತು ಚರ್ಚಿಸೋಣ. ಈ ರಾಜಕೀಯ ಸಭೆಗಳು ಮತ್ತು ರಾಜಕೀಯ ಉಪನ್ಯಾಸಗಳನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದೆಂದು ಎಲ್ಲರೂ ಒಪ್ಪುತ್ತೀರಿ ಎಂದು ನನಗನಿಸುತ್ತದೆ, ರಾಜಕೀಯ ಸಭೆಗಳು ಮತ್ತು ರಾಜಕೀಯ ಉಪನ್ಯಾಸಗಳು ರಾಜಕೀಯ ತತ್ವಸಿದ್ಧಾಂತಗಳ ಮುಂದುವರಿಕೆಯ ಉದ್ದೇಶ ಹೊಂದಿರಬಹುದೆ. ಅದು ಒಂದು ನಿರ್ದಿಷ್ಟಪಕ್ಷದ್ದಾಗಿದ್ದು ಯಾವುದೇ ನಿರ್ದಿಷ್ಟ ಅಭ್ಯರ್ಥಿಯ ಕುರಿತದ್ದಲ್ಲದಿರಬಹುದು. ಸಂಪ್ರದಾಯಿ ಪಕ್ಷವೊಂದು ಹೇಳಬಹುದು "ಹೌದು ನಮಗೆ ಆಸ್ತಿಯ ಮೇಲೆ ನಂಬಿಕೆಯಿದೆ, ಕೈಗಾರಿಕಾ ಸ್ವಾತಂತ್ರ್ಯದ ಮೇಲೆ ನಮಗೆ ನಂಬಿಕೆ ಇದೆ ಮತ್ತು ಹಲವು ವಿಚಾರಗಳು", ಅದನ್ನು ಯಾವುದೇ ಒಬ್ಬ ನಿರ್ದಿಷ್ಟ ಅಭ್ಯರ್ಥಿಯನ್ನು ಕುರಿತು ಹೇಳಬಹುದು. ಇನ್ನೊಂದು ಕಡೆ ರಾಜಕೀಯ ಸಭೆಗಳು ಮತ್ತು ರಾಜಕೀಯ ಉಪನ್ಯಾಸಗಳು ಒಬ್ಬ ನಿರ್ದಿಷ್ಟ ಅಭ್ಯರ್ಥಿಯ ಅಭ್ಯರ್ಥನವನ್ನು ಮುಂದುವರಿಸಲು ನಡೆಯಬಹುದು. ಇದುವರೆಗಿನ ನ್ಯಾಯಿಕ ತೀರ್ಮಾನಗಳನ್ನು ಕುರಿತು ಹೇಳುವುದಾದರೆ ಒಬ್ಬ ನಿರ್ದಿಷ್ಟ ಅಭ್ಯರ್ಥಿಯನ್ನು ಮುಂದುವರಿಸುವ ಭಾವನೆಯಿಂದ ಮಾಡುವ ರಾಜಕೀಯ ಸಭೆಗಳು ಮತ್ತು ರಾಜಕೀಯ ಉಪನ್ಯಾಸಗಳಿಗೆ ಸಂಬಂಧಿಸಿದ ವೆಚ್ಚಗಳು ಚುನಾವಣಾ ವೆಚ್ಚಗಳೆನಿಸುವುದಿಲ್ಲ. ಆದ್ದರಿಂದ ಒಂದು ರಾಜಕೀಯ ಪಕ್ಷವು ಯಾವುದೇ ಮತಕ್ಷೇತ್ರಕ್ಕೆ ಹೋಗುವ ಸ್ವಾತಂತ್ರ್ಯ ಹೊಂದಿರುತ್ತದೆ. ಸಭೆಗಳನ್ನು

ಸಂಘಟಿಸುವ ಸರಣಿ ಉಪನ್ಯಾಸಗಳನ್ನು ಏರ್ಪಡಿಸುವ ತಮ್ಮ ತತ್ವ ಸಿದ್ಧಾಂತಗಳನ್ನು ನಂಬಿಕೆಗಳನ್ನು ಪ್ರಚುರಪಡಿಸಲು ಹೆಸರುಗಳನ್ನು ನಮೂದಿಸದೆ ಭಾಷಣಗಳನ್ನು ಕಳುಹಿಸಬಹುದು. ಮತ್ತೊಂದೆಡೆ ನಾನು ಹೇಳಿದ ಹಾಗೆ ಒಬ್ಬ ನಿರ್ದಿಷ್ಟ ಅಭ್ಯರ್ಥಿಯ ಪರವಾಗಿ ಮತದಾರರ ಮನಸ್ಸನ್ನು ಗೆಲ್ಲುವ ಉದ್ದೇಶದಿಂದ ಸಭೆಗಳನ್ನು ಸಂಘಟಿಸಬಹುದು, ಆಗ ಅದಕ್ಕೆ ಸಂಬಂಧಿಸಿದ ವೆಚ್ಚವು ತಾನೇ ತಾನಾಗಿ ಚುನಾವಣಾ ವೆಚ್ಚದ ಭಾಗವಾಗುತ್ತದೆ. ಈಗ ನಾನು ಯಾವ ವೆಚ್ಚಗಳು ಚುನಾವಣಾ ವೆಚ್ಚದ ಭಾಗವಾಗುತ್ತವೆ ಮತ್ತು ಯಾವ ವೆಚ್ಚಗಳು ಚುನಾವಣಾ ವೆಚ್ಚಗಳ ಭಾಗವಾಗುವುದಿಲ್ಲ ಇವೆರಡರ ಮಧ್ಯೆ ಒಂದು ಗೆರೆ ಎಳೆದು ತೋರಿಸಿದ್ದೇನೆ.

**ಸೇಠ್ ಗೋವಿಂದ ದಾಸ್:** ತುಂಬಾ ಗೊಂದಲಮಯವಾಗಿದೆ.

**ಡಾ. ಅಂಬೇಡ್ಕರ್:** ಹೌದು ಬಹಳ ಗೊಂದಲಮಯವಾಗಿದೆ. ನಿಮಗೆ ಸರಳರೇಖೆ ಬೇಕು ಆದರೆ ಅದು ಸಾಧ್ಯವಿಲ್ಲ.

ಈಗ ಬೇರೆ ಪ್ರಕರಣವನ್ನು ತೆಗೆದುಕೊಳ್ಳಿ – ಉದಾಹರಣೆಗೆ ಪುಸ್ತಕಗಳು, ಕರಪತ್ರಗಳು, ಭಿತ್ತಿಪತ್ರಗಳು ಮತ್ತಿತರ ಅಂತಹ ವಿಷಯಗಳು, ಅಲ್ಲಿಯೂ ಮತ್ತೆ ಸ್ವಲ್ಪ ವ್ಯತ್ಯಾಸವನ್ನು ಮಾಡಬೇಕಾಗುತ್ತದೆ. ಪುಸ್ತಕಗಳು, ಕರಪತ್ರಗಳು, ಭಿತ್ತಿಪತ್ರಗಳು ಮುಂತಾದವುಗಳು ಪಕ್ಷದ ಸಿದ್ಧಾಂತವನ್ನು ಪ್ರಚಾರ ಮಾಡುವುದಕ್ಕೆ ಇದ್ದಲ್ಲಿ ಅವು ಚುನಾವಣಾ ವೆಚ್ಚದ ಭಾಗವಾಗುವುದಿಲ್ಲ ಮತ್ತು ಅಭ್ಯರ್ಥಿಯು ತನ್ನ ಲೆಕ್ಕಪತ್ರದಲ್ಲಿ ಅದನ್ನು ತೋರಿಸುವ ಅಗತ್ಯವಿಲ್ಲ. ಒಂದು ವೇಳೆ ಒಂದು ಪುಸ್ತಕವು ನಿರ್ದಿಷ್ಟವಾಗಿ "ಇಂತಹ ಅಭ್ಯರ್ಥಿಯ ಬಗೆಗೆ ೨೦ ಅಂಶಗಳು ಅವರನ್ನು ಯಾತಕ್ಕಾಗಿ ಚುನಾಯಿಸಬೇಕು ಅಥವಾ ಒಂದು ಭಿತ್ತಿಪತ್ರವು ಅಭ್ಯರ್ಥಿಯ ಭಾವಚಿತ್ರವನ್ನು ಹೊಂದಿದ್ದು ಅದರ ಕೆಳಗೆ ಅವನ ಬಗ್ಗೆ ಹೊಗಳಿಕೆ ಇತ್ಯಾದಿ ಮತದಾರರ ಸಮೂಹಕ್ಕೆ ಚುನಾಯಿಸಲು ಶಿಫಾರಸ್ಸು ಮಾಡುವಂತಿದ್ದರೆ ಸ್ಪಷ್ಟವಾಗಿ ಅದು ಆತನ ಚುನಾವಣೆಯ ಸಂಬಂಧ ಮಾಡಿದಂತಾಗುತ್ತದೆ. ಆದ್ದರಿಂದ ಅಂತಹ ಖರ್ಚುಗಳನ್ನು ಚುನಾವಣೆ ವೆಚ್ಚಕ್ಕೆ ಸೇರಿಸಿಕೊಳ್ಳಬೇಕಾಗುತ್ತದೆ ಮತ್ತು ಅವನು ನೀಡುವ ಲೆಕ್ಕಪತ್ರದಲ್ಲಿ ಚುನಾವಣಾ ವೆಚ್ಚವೆಂದು ನಮೂದಿಸಬೇಕಾಗುತ್ತದೆ. ಗ್ರೇಟ್ ಬ್ರಿಟನ್ನಿನ ಅನೇಕ ಟ್ರಿಬ್ಯೂನಲ್‌ಗಳು ಚುನಾವಣಾ ದೂರುಗಳ ಮೇಲೆ ನೀಡಿರುವ ತೀರ್ಪುಗಳನ್ನು ನಾನಿಲ್ಲಿ ಕೊಡುತ್ತಿದ್ದೇನೆ. ಇದೇ ಅವರು ಗಮನಿಸಿರುವ ವ್ಯತ್ಯಾಸ. ಯಾವುದೇ ಖರ್ಚು ಒಬ್ಬ ನಿರ್ದಿಷ್ಟ ಅಭ್ಯರ್ಥಿಯ ಚುನಾವಣಾ ಭವಿಷ್ಯಕ್ಕೆ ಉತ್ತೇಜನ ನೀಡುವುದಿಲ್ಲವೊ ಅಂತಹ ಖರ್ಚು ಚುನಾವಣಾ ವೆಚ್ಚದ ಭಾಗವಾಗುವುದಿಲ್ಲ. ಆದ್ದರಿಂದ ಅದನ್ನು ಯಾರಾದರೂ ಭರಿಸಬಹುದು ಒಂದು ರಾಜಕೀಯ ಪಕ್ಷ ಒಬ್ಬ ಮಾನವತಾವಾದಿ, ಒಬ್ಬ ಸ್ನೇಹಿತ ಅಥವಾ ಯಾರಾದರೂ ಆ ವಿಷಯದಲ್ಲಿ ಆಸಕ್ತಿ ತೋರಿಸಲು ಇಚ್ಛಿಸುವವರು. ಇವೆಲ್ಲವು ನಾನು ಹೇಳಿದ ಹಾಗೆ ಮಾರ್ಗದರ್ಶಿ ತತ್ವಗಳು ಯಾವ ಖರ್ಚನ್ನು ಚುನಾವಣಾ ಲೆಕ್ಕಪತ್ರದಲ್ಲಿ ನಮೂದಿಸ ಬೇಕು ಅಥವಾ ಇಲ್ಲ ಎಂಬುದನ್ನು ಇಂಗ್ಲೆಡ್‌ನ ಚುನಾವಣಾ ಟ್ರಿಬ್ಯುನಲ್‌ಗಳು ತೀರ್ಮಾನಿಸಿವೆ. ಒಂದು ವೇಳೆ ನಮ್ಮ ಚುನಾವಣಾ ಟ್ರಿಬ್ಯುನಲ್‌ಗಳು ಅದೇ ಕಾನೂನನ್ನು ಅನುಸರಿಸಿದರೆ ರಾಜಕೀಯ ಪಕ್ಷಗಳಿಗೆ ತಮ್ಮ ರಾಜಕೀಯ ನಂಬಿಕೆಯನ್ನು ಉತ್ತೇಜಿಸಲು ತಮ್ಮ ಹಣವನ್ನು ಖರ್ಚುಮಾಡಲು ಬಹಳಷ್ಟು ಅವಕಾಶ ಸಿಗುತ್ತದೆ. ಒಬ್ಬ ನಿರ್ದಿಷ್ಟ ಅಭ್ಯರ್ಥಿಯ ಕುರಿತು ವಿಶೇಷವಾಗಿ ಏನೇ ಮಾಡಿದರೂ ಆಗಲೂ ಸಹಾ ಚುನಾವಣಾ ವೆಚ್ಚದ ಭಾಗವಾಗುತ್ತದೆ ಮತ್ತು ಅದನ್ನು ಚುನಾವಣಾ ವೆಚ್ಚದ ಲೆಕ್ಕಪತ್ರದಲ್ಲಿ ತೋರಿಸಬೇಕಾಗುತ್ತದೆ. ಮಾನ್ಯರೆ, ಆಯ್ಕೆ ಸಮಿತಿಯ ವರದಿಯಲ್ಲಿ ಉದ್ಭವವಾದ ಅನೇಕ ಅಂಶಗಳು ಮತ್ತು ಅಸಮ್ಮತಿ ಪತ್ರದಲ್ಲಿ ಸನ್ಮಾನ್ಯ ಸದಸ್ಯರು ನೀಡಿರುವ ಕೆಲವು ಅಂಶಗಳನ್ನು ಕುರಿತು ನಾನು ಸವಿಸ್ತಾರವಾಗಿ ಚರ್ಚಿಸಿದ್ದೇನೆ.

**ಶ್ರೀ ಸತೀಶ್ ಚಂದ್ರ (ಉತ್ತರ ಪ್ರದೇಶ):** ಚುನಾವಣಾ ಅವಧಿಯ ಬಗ್ಗೆ ಏನು ಹೇಳುತ್ತೀರಿ? ಚುನಾವಣಾ ಪ್ರಾರಂಭ ಮತ್ತು ಅಂತ್ಯ ಎಂಬುದನ್ನು ನಿರ್ಧರಿಸುವುದಾದರೂ ಏನು?

**ಡಾ. ಅಂಬೇಡ್ಕರ್:** ನ್ಯಾಯಾಲಯಗಳು ಹೇಳಿರುವಂತೆ ನಿಸ್ಸಂದೇಹವಾಗಿ ಮತದಾನ ಒಂದು ಸಂಗತಿ ಚುನಾವಣೆಯ ಇನ್ನೊಂದು ಕೊನೆ – ಚುನಾವಣೆ ಮುಗಿಯುತ್ತದೆ.

ಚುನಾವಣಾ ಪ್ರಾರಂಭವನ್ನು ಕುರಿತಂತೆ ನ್ಯಾಯಾಲಯಗಳು ಹೇಳಿರುವಂತೆ ಈ ಪ್ರಶ್ನೆಯನ್ನು ವಾಸ್ತವ ಸಂಗತಿಗಳು ನಿರ್ಧರಿಸುತ್ತವೆ. ಸಾಮಾನ್ಯವಾಗಿ ವಿರೋಧವೇನು ಇಲ್ಲದಿದ್ದರೆ ನಾಮಪತ್ರ ಸಲ್ಲಿಸುವ ದಿನವೇ ಚುನಾವಣಾ ಪ್ರಾರಂಭವೆನಿಸಿಕೊಳ್ಳುತ್ತದೆ. ಆದರೆ ಒಬ್ಬ ಅಭ್ಯರ್ಥಿಯು ಚುನಾವಣಾ ಪ್ರಾರಂಭಕ್ಕೂ ಮೊದಲು ತಾನು ಒಂದು ಮತಕ್ಷೇತ್ರದ ಅಭ್ಯರ್ಥಿಯಾಗುತ್ತೇನೆಂದು ಘೋಷಿಸಿಕೊಳ್ಳಬಹುದು, ಅಷ್ಟೇ ಅಲ್ಲ ಇತರ ಅಭ್ಯರ್ಥಿಗಳಿಗಿಂತ ಹೆಚ್ಚಿನ ಮುನ್ನಡೆ ಸಾಧಿಸಲು ಕೆಲವು ಖರ್ಚುಗಳನ್ನು ಮಾಡಬಹುದು ಆಗ ಆ ಅಭ್ಯರ್ಥಿಗೆ ಚುನಾವಣೆ ಪ್ರಾರಂಭದ ದಿನವಾಗುತ್ತದೆ.

**ಡಾ. ಸಿ.ಡಿ. ಪಾಂಡೆ (ಉತ್ತರ ಪ್ರದೇಶ):** ಹಾಗಾದರೆ ಪ್ರತಿಯೊಬ್ಬರೂ ತಮ್ಮದೇ ಆದ ಪ್ರಾರಂಭದ ದಿನಗಳನ್ನು ಹೊಂದಿರುತ್ತಾರೆ.

**ಡಾ. ಅಂಬೇಡ್ಕರ್:** ನಾನು ಹಾಗೇ ಊಹಿಸುತ್ತೇನೆ. ಮಾನ್ಯರೆ ನಾನು ಹೇಳಬೇಕಾಗಿರುವುದಿಷ್ಟೇ.

**ಉಪಸಭಾಪತಿ:** ಮಂತ್ರಿಗಳು ಇಂದಿನ ಹೇಳಿಕೆ ನೀಡಿದ ಮೇಲೆ ಯಾರೂ ಮುಕ್ತವಾಗಿ ತಮ್ಮ ಅಭ್ಯರ್ಥನವನ್ನು ಘೋಷಿಸಿಕೊಳ್ಳುವುದಿಲ್ಲ.

**ಶ್ರೀ ಸೋಂಧಿ (ಪಂಜಾಬ್):** ದೆಹಲಿಯಲ್ಲಿ ಈಗಾಗಲೇ ಕೆಲವರು ಘೋಷಿಸಿಕೊಂಡಿದ್ದಾರೆ – ಅವರ ಬಗ್ಗೆ ಏನು ?

**ಡಾ. ಅಂಬೇಡ್ಕರ್:** ನಾನು ಈಗ ಹೇಳಿರುವುದಕಿಂತ ಹೆಚ್ಚು ಏನನ್ನು ಸೇರಿಸುವುದಿಲ್ಲ. ಸದನಕ್ಕೆ ಈ ಗೊತ್ತುವಳಿಯನ್ನು ಶಿಫಾರಸ್ಸುಮಾಡುತ್ತಿದ್ದೇನೆ.

**ಉಪಸಭಾಪತಿ:** ಗೊತ್ತುವಳಿಯನ್ನು ಮಂಡಿಸಲಾಗಿದೆ.

> "ಸದನಸಮಿತಿ ವರದಿ ಮಾಡಿರುವಂತೆ ಸಂಸತ್ತಿನ ಸದನಗಳಿಗೆ ಹಾಗೂ ಪ್ರತಿಯೊಂದು ರಾಜ್ಯದ ಶಾಸಕಾಂಗದ ಸದನ ಅಥವಾ ಸದನಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡುವ ಆ ಸದನಗಳ ಸದಸ್ಯತ್ವದ ಅರ್ಹತೆಗಳಿಗೆ ಹಾಗೂ ಅನರ್ಹತೆಗಳಿಗೆ, ಅಂಥ ಚುನಾವಣೆಗಳಲ್ಲಿನ ಅಥವಾ ಚುನಾವಣೆಗಳಿಗೆ ಸಂಬಂಧಿಸಿದ ಭ್ರಷ್ಟ ಹಾಗೂ ಕಾನೂನುಸಮ್ಮತ ಆಚರಣೆಗಳಿಗೆ ಹಾಗೂ ಇತರ ಅಪರಾಧಗಳಿಗೆ ಸಂಬಂಧಿಸಿದ ಹಾಗೂ ಅಂಥ ಚುನಾವಣೆಗಳಲ್ಲಿ ಅಥವಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಉದ್ಭವಿಸಬಹುದಾದ ಸಂದೇಹ ಮತ್ತು ವಿವಾದಗಳ ಬಗೆಗಿನ ತೀರ್ಮಾನಕ್ಕೆ ಸಂಬಂಧಿಸಿದ, ಈ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳೋಣವಾಗಲಿ."

ನಾನು ಆಯ್ಕೆ ಸಮಿತಿಯ ಅಧ್ಯಕ್ಷನಾಗಿದ್ದೆ ಹಾಗಾಗಿ ಸದನದ ಪರಿಗಣನೆಗೆ ನಾನೊಂದು ಸಲಹೆಯನ್ನು ಮಾಡುತ್ತೇನೆ. ಇಡೀ ಮಸೂದೆಯಲ್ಲಿ ಯಾವುದೇ ಒಂದು ತತ್ವ ಇದ್ದಂತೆ ಕಾಣುವುದಿಲ್ಲ. ಮಾನ್ಯ ಕಾನೂನು ಮಂತ್ರಿಯವರು ಸೂಚಿಸಿರುವಂತೆ ಬೇರೆ ಬೇರೆ ಪ್ರಕರಣಗಳಲ್ಲಿ ಅನೇಕ ಅಂಶಗಳನ್ನು ಪರಿಗಣಿಸಿರುವುದು ಕಂಡುಬರುತ್ತದೆ ಆದ್ದರಿಂದ ಮಸೂದೆಯ ಮೇಲೆ ಚರ್ಚೆಯನ್ನು ಕಡಿತಗೊಳಿಸಲು

– ಈ ಸದನವು ಒಪ್ಪುವುದಾದರೆ – ನಾನು ಈ ಗೊತ್ತುವಳಿಯನ್ನು ಈ ಸದನದ ಮುಂದೆ ಮಂಡಿಸುತ್ತೇನೆ. ಆನಂತರ ನಿಜವಾದ ಚರ್ಚೆ ಪ್ರಾರಂಭವಾಗುತ್ತದೆ.

**ಕೆಲವು ಮಾನ್ಯ ಸದಸ್ಯರು:** ಇಲ್ಲಾ, ಇಲ್ಲಾ.

**ಶ್ರೀ ಸಿಧ್ವಾ:** ನೀವು ಮಾಡಿರುವುದು ಆರೋಗ್ಯಕರ ಸಲಹೆ ಎಂದು ನನಗೆ ಅನಿಸುತ್ತದೆ.

**ಶ್ರೀ ಗೌತಮ್:** ಒಂದು ಪ್ರಕರಣಕ್ಕೂ ಮತ್ತು ಇನ್ನೊಂದಕ್ಕೂ ಏನಾದರೂ ಸಂಬಂಧ ಇದೆಯೇ ಎಂಬುದನ್ನು ತೀರ್ಮಾನಿಸಲು ಸದನಕ್ಕೆ ಬಹಳ ಕಷ್ಟವಾಗುತ್ತದೆ. ಒಂದು ವೇಳೆ ಇದನ್ನು ನೀವು ಮಂಡಿಸಿದರೆ ಬಹುಸಂಖ್ಯಾತರ ನಿರಂಕುಶ ಪ್ರಭುತ್ವ ಇಂದಲ್ಲ ನಾಳೆ ಪ್ರಾರಂಭವಾಗುತ್ತದೆ. ಆದ್ದರಿಂದ ಸದನದ ಹಕ್ಕುಬಾಧ್ಯತೆಯ ರಕ್ಷಕರಾಗಿ ವಿಶೇಷವಾಗಿ ಅಲ್ಪಸಂಖ್ಯಾತರ ರಕ್ಷಣೆಗಾಗಿ ಈ ಮಾದರಿ ನಿಯಮಾವಳಿಯನ್ನು ಮಂಡಿಸದಿರಲು ನಾನು ವಿನಂತಿಸುತ್ತೇನೆ.

**ಉಪಸಭಾಪತಿ:** ನನ್ನನ್ನು ತಪ್ಪು ತಿಳಿಯಬೇಡಿ. ಬಹುಸಂಖ್ಯಾತರ ಮತ್ತು ಅಲ್ಪಸಂಖ್ಯಾತರನ್ನು ಕುರಿತು ನಾನು ಏನು ಹೇಳುವುದಿಲ್ಲ. ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಪ್ರಶ್ನೆಯನ್ನು ಹೊರತುಪಡಿಸಿ ಈ ಸದನಕ್ಕೆ ಒಂದು ಮನವಿ ಮಾಡಿದ್ದೇನೆ.

**ಶ್ರೀ ಕಾಮತ್:** ಮಿ. ಮೋಹನ್ ಲಾಲ್ ಗೌತಮ್‌ರವರು ಅಲ್ಪಸಂಖ್ಯಾತರನ್ನು ಕುರಿತು ಮಾತನಾಡುತ್ತಿರುವುದು ಸಮಾಧಾನಕರ ವಿಷಯ.

**ಉಪಸಭಾಪತಿ:** ಏನಾದರು ಸದಸ್ಯರು ನನ್ನ ಗಮನಿಕೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಈ ದಿನ ಮುಗಿಯುವುದರೊಳಗಾಗಿ ಇದನ್ನು ಮುಗಿಸುತ್ತಾರೆಂದುಕೊಂಡಿದ್ದೇನೆ.

**ಶ್ರೀ ಗೌತಮ್:** ಈ ಮಸೂದೆಯನ್ನು ತಡವಾಗಿಯಾದರೂ ಮಂಡಿಸಿದ್ದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ದೇಶದಲ್ಲಿ ಮತ್ತು ಹೊರಗಡೆಯು ಸಹಾ ಒಂದು ಸಾಮಾನ್ಯ ಅಭಿಪ್ರಾಯವಿದೆ ಅದು ಕಾಂಗ್ರೆಸ್‌ನ ವಿರೋಧಿಗಳು ಸೃಷ್ಟಿ ಮಾಡಿರುವಂತಹದು. ಅದೇನೆಂದರೆ, ಕಾಂಗ್ರೆಸ್ಸಿಗೆ ಚುನಾವಣೆ ನಡೆಸುವುದು ಬೇಕಾಗಿಲ್ಲ ಎಂದು. ಸರ್ಕಾರಕ್ಕೆ ತನ್ನದೆ ಆದ ಸಮಸ್ಯೆಗಳಿದೆ ಎಂದು ತಿಳಿದಿದೆ. ಹಾಗೆಯೇ ಪ್ರಾದೇಶಿಕ ಸರ್ಕಾರಗಳಿಗೂ ಸಮಸ್ಯೆಗಳಿವೆ, ಆದರೆ ನಾನು ಭರವಸೆ ನೀಡುತ್ತೇನೆ ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ಚುನಾವಣೆಯ ವಿಳಂಬ ನೀತಿಯನ್ನು ಅನುಸರಿಸುವುದರ ಪರ ಇಲ್ಲ.

ಚುನಾವಣೆಗಳನ್ನು ಮುಂದೂಡುವುದು ನಮಗೆ ಬೇಕಾಗಿಲ್ಲ, ಏಕೆಂದರೆ ಅದರ ಬಗ್ಗೆ ನಮಗೆ ಹೆದರಿಕೆ ಇದೆ. ಆದಷ್ಟು ಬೇಗ ಮುಗಿಯಬೇಕೆಂಬುದೇ ನಮ್ಮ ಇಷ್ಟ. ಮುಂಚೆಯೇ ಚುನಾವಣೆಗಳನ್ನು ನಡೆಸಲು ಸರ್ಕಾರಕ್ಕೆ ಕೆಲವು ಅಡ್ಡಿ ಆತಂಕಗಳು ಇದ್ದವು.

ಇನ್ನೂ ಕೆಲವು ಕಡೆ ಚುನಾವಣೆಗಳು ಇನ್ನೂ ಮತ್ತಷ್ಟು ವಿಳಂಬವಾಗಬಹುದು ಎಂಬ ಸಂದೇಹವೂ ಇದೆ. ಮಾನ್ಯರೆ, ಸರ್ಕಾರಕ್ಕೆ ನನ್ನ ವಿನಂತಿ ಏನೆಂದರೆ ಚುನಾವಣೆಗಳು ಮಾನ್ಯ ರಾಷ್ಟ್ರಪತಿಯವರು ಸದನದಲ್ಲಿ ಘೋಷಿಸಿರುವಂತೆ ನವೆಂಬರ್, ಡಿಸೆಂಬರ್ ತಿಂಗಳಿನಲ್ಲಿ ನಡೆಯಬೇಕು ಮತ್ತಷ್ಟು ವಿಳಂಬಮಾಡಬಾರದು.

*__ಶ್ರೀ ಗೌತಮ್:__ ಈಗ ನಾನು ಎತ್ತಬೇಕೆಂದಿದ್ದ ಕೊನೆಯ ಪ್ರಶ್ನೆಗೆ ಬರುತ್ತೇನೆ ಅದು ಕಾನೂನುಬಾಹಿರ ನಡವಳಿಕೆಗಳಿಗೆ ಸಂಬಂಧಿಸಿದ್ದು. ಡಾ. ಅಂಬೇಡ್ಕರ್‌ರವರು ಒಂದು ಅಂಶವನ್ನು ನಮಗೆ ತಿಳಿಸಲು ಬಹಳ

---

* P.D. ಸಂ. ೧೧, ಭಾಗ ೨, ೯ ಮೇ ೧೯೫೧, ಪು. ೮೩೭೫.

ಶ್ರಮ ಪಟ್ಟಿದ್ದಾರೆ. ಅದು ಸದನದ ಅಡಚಣೆಗಳಿಂದ ನಮ್ಮಲ್ಲಿ ಅನೇಕರಿಗೆ ಸ್ಪಷ್ಟವಾಗಲಿಲ್ಲ. ಅದು ಚುನಾವಣಾ ವೆಚ್ಚದ ಲೆಕ್ಕಪತ್ರದ ಕುರಿತು........

**ಡಾ. ಆಂಬೇಡ್ಕರ್:** ಸ್ಪಷ್ಟವಾಗಲಿಲ್ಲ.

**ಶ್ರೀ ಗೌತಮ್:** ಪ್ರಕರಣವು ಈ ಕೆಳಕಂಡಂತಿದೆ. ಈ ಕೆಳಗೆ ನಮೂದಿಸಿದ ಅಂಶಗಳು ಕಾಯಿದೆಯ ಉದ್ದೇಶಗಳಿಗೊಸ್ಕರ ಕಾನೂನುಬಾಹಿರ ನಡವಳಿಕೆಗಳೆಂದು ನಿರ್ಧರಿಸಬಹುದಾಗಿದೆ; –

> (೧) ಯಾವುದೇ ಸಾರ್ವಜನಿಕ ಸಭೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ಜಾಹೀರಾತು, ಸುತ್ತೋಲೆ ಅಥವಾ ಪ್ರಕಟಣೆಗಾಗಿ ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಲ್ಲದೆ ಬೇರಾವನೇ ವ್ಯಕ್ತಿ ಭರಿಸಿದ ಅಥವಾ ಅಧಿಕೃತೀಕರಿಸಿದ ವೆಚ್ಚಗಳು."

ಪದಗಳನ್ನು ಗುರುತುಮಾಡಿ ಅದು ಕೇವಲ ಪ್ರಕಟಣೆ ಅಲ್ಲ. ಒಬ್ಬ ವ್ಯಕ್ತಿಯು ಅಭ್ಯರ್ಥಿಯ ಕರಪತ್ರಗಳನ್ನು ವಿತರಿಸುತ್ತಿದ್ದರೆ ಅದು ಹಂಚಿಕೆಯಾಗುತ್ತದೆ. "ಅಥವಾ ಬೇರೆ ಯಾವುದರ ಮೂಲಕ ಏನಾದರು" ಮತ್ತು ಇದು ಅವಕಾಶಕ್ಕೆ ತೆರವಾಗುತ್ತದೆ. ಅದು ಎಲ್ಲಿಯವರೆಗೆ ಮತ್ತು ಏನು ಮಿತಿ ಎಂಬುದು ನನಗೆ ತಿಳಿದಿಲ್ಲ ಆ ಪ್ರಕರಣವು ಮುಂದುವರೆಯುತ್ತ ಹೀಗಿದೆ.

> "ಅಥವಾ ಹಾಗೆ ಮಾಡುವಂತೆ, ಅಭ್ಯರ್ಥಿಯ ವತಿಯಿಂದ ಲಿಖಿತವಾಗಿ ಅಧಿಕೃತನಾಗಿದ್ದ ಹೊರತು, ಅಭ್ಯರ್ಥಿಯ ಚುನಾವಣೆಯನ್ನು ಪ್ರೋತ್ಸಾಹಿಸುವ ಅಥವಾ ಆಗುಗೊಳಿಸುವ ಉದ್ದೇಶಕ್ಕಾಗಿ ಬೇರಾವುದೇ ರೀತಿಯಲ್ಲಿ......"

ನಾನು ಒಂದು ವೇಳೆ ಅಭ್ಯರ್ಥಿಯಾಗಿದ್ದರೆ ಇದು ನನಗೆ ಅಸಾಧ್ಯವಾಗುತ್ತಿತ್ತು.

**ಒಬ್ಬ ಮಾನ್ಯ ಸದಸ್ಯರು:** ನೀವು ಒಂದು ಪ್ರಕಟಣೆಯನ್ನು ಮಾಡುತ್ತಿದ್ದೀರಿ.

***ಬಾಬು ನಾರಾಯಣ್ ಸಿಂಗ್ (ಬಿಹಾರ್)** *(ಹಿಂದಿ ಭಾಷಣದ ಇಂಗ್ಲೀಷ್ ಅನುವಾದ)*: ವಂದನೆಗಳು, ಮಾನ್ಯರೆ–

**ಡಾ. ಅಂಬೇಡ್ಕರ್:** ಇಂಗ್ಲೀಷ್‌ನಲ್ಲಿ ಮಾತನಾಡಿ.

**ಬಾಬು ನಾರಾಯಣ್ (ಬಿಹಾರ್):** ಇಲ್ಲ ಮಾನ್ಯರೆ ನಾವು ಈಗ ಸ್ವತಂತ್ರ ರಾಷ್ಟ್ರ. ಇಂಗ್ಲೀಷ್ ಮಾತನಾಡುವ ಮುಖಾಂತರ ನಾವೇಕೆ ನಮ್ಮ ಗುಲಾಮಗಿರಿಯನ್ನು ಮತ್ತೆ ನೆನಪಿಸಿಕೊಳ್ಳಬೇಕು. ಆದ್ದರಿಂದ ನಾನು ಹಿಂದಿಯಲ್ಲೇ ಹೇಳುತ್ತೇನೆ.

ಡಾ. ಆಂಬೇಡ್ಕರ್‌ರವರು ಮಾಡಿದ ಒಂದು ವಿಷಯವನ್ನು ನಾನು ಬಹಳವಾಗಿ ಮೆಚ್ಚುತ್ತೇನೆ. ಈಗ ಮಾಡುತ್ತಿರುವ ಕಾನೂನಿನ ಉದ್ದೇಶವೆಂದರೆ ಈ ದೇಶದಲ್ಲಿ ಯಾವ ಸರ್ಕಾರವು ಸಂಸದ್ ಸದಸ್ಯನನ್ನು ಭ್ರಷ್ಟಗೊಳಿಸಲು ಸಾಧ್ಯವಾಗದಿರುವಂತೆ ಮಾಡುವುದು. ಇದು ಸ್ವಾಗತಾರ್ಹ ವಿಚಾರ, ಆದರೆ ಇನ್ನೂ ಕೆಲವು ನಿಯಮಗಳು ಇರಬೇಕೆನ್ನಿಸುತ್ತದೆ. ನಾವು ಅನಿವಾರ್ಯವಾಗಿ ನೋಡಬೇಕಾಗಿರುವುದು ಸರ್ಕಾರವು ಯಾವುದೇ ಕಾರಣಗಳಿಂದಲೂ ಭ್ರಷ್ಟಗೊಳ್ಳಬಾರದು, ಸರ್ಕಾರವೆ ಸ್ವತಃ ಭ್ರಷ್ಟಗೊಂಡರೆ ಅದು ಸದಸ್ಯರನ್ನು ಭ್ರಷ್ಟಗೊಳಿಸುತ್ತದೆ, ಅದು ಖಂಡಿತ ಆಗುತ್ತದೆ. ಆದ್ದರಿಂದ ನಮ್ಮ ಗುರಿ ಏನಾಗಿರಬೇಕೆಂದರೆ ಅವರನ್ನು

---

* ಅದೇ, ಪು. ೮೪೧೩.

ಭ್ರಷ್ಟಗೊಳಿಸಲು ಯಾವ ಅವಕಾಶವನ್ನೂ ಬಿಡಬಾರದು. ಬೇರೆ ಮಾತಿನಲ್ಲಿ ಹೇಳುವುದಾದರೆ ದೇಶದಲ್ಲಿ ಭ್ರಷ್ಟ ಸರ್ಕಾರವೊಂದು ಇರಲೇಬಾರದು.

*__ಪಂಡಿತ ಕೃಷ್ಣಚಂದ್ರ ಶರ್ಮ:__ ಪ್ರತಿಪಕ್ಷದವರು ವಿಷಯವನ್ನು ವಿವರಿಸಲು ಇಲ್ಲಿರದ ಕಾರಣ ಈ ಆರೋಪಗಳು ಅಪ್ರಸ್ತುತವಾಗುತ್ತದೆ.

**ಉಪಸಭಾಪತಿ:** ಅದು ಕಾಂಗ್ರೆಸ್ ಚುನಾವಣೆಗಳಿಗೆ ಸಂಬಂಧಿಸಿದೆ.

**ಡಾ. ಅಂಬೇಡ್ಕರ್:** ಸಂವಿಧಾನದ ಪ್ರಕಾರ ಈ ವಿಷಯವು ಈಗ ಚುನಾವಣಾ ಆಯುಕ್ತರ ಕೈಯಲ್ಲಿದೆ. ಅದು ಸರ್ಕಾರದ ಕೈಯಲ್ಲಿಲ್ಲ.

**ಉಪಸಭಾಪತಿ:** ಚುನಾವಣಾ ಆಯೋಗವನ್ನು ಉಚ್ಚ ಸ್ಥಾನದಲ್ಲಿಡಲಾಗಿದೆ. ಆಯ್ಕೆ ಸಮಿತಿಯ ನಡವಳಿಗಳು ಹೇಳುವಂತೆ ಅವರಿಗೆ ಸಾಮಾನ್ಯ ಚುನಾವಣೆ ಮತ್ತು ಉಪಚುನಾವಣೆಗಳ ದಿನಾಂಕಗಳನ್ನು ಗೊತ್ತುಪಡಿಸಲು ಮತ್ತಷ್ಟು ಅಧಿಕಾರವನ್ನು ನೀಡಲಾಗಿದೆ. ಚುನಾವಣಾ ಆಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.

**ಶ್ರೀ ಕಾಮತ್:** ಈ ಆರೋಗ್ಯದಾಯಕ ಬದಲಾವಣೆಯನ್ನು ಅವರು ಬೆಂಬಲಿಸುತ್ತಿದ್ದಾರೆ.

**ಉಪಸಭಾಪತಿ:** ಆದರೆ ನಾವು ಆಗಿ ಹೋಗಿದ್ದನ್ನು ಪ್ರಶ್ನಿಸುತ್ತಿಲ್ಲ. ಅವರು ಈ ಮಸೂದೆಯ ಬಗ್ಗೆ ಚರ್ಚಿಸಲಿ.

**__ಪಂಡಿತ ಕೃಷ್ಣಚಂದ್ರ ಶರ್ಮ:__ ಹಾಗಾದರೆ ನಾನು ಚುನಾವಣಾ ವೆಚ್ಚಗಳ ಪ್ರಶ್ನೆಯನ್ನೇ ಎತ್ತುತ್ತೇನೆ. ಪ್ರೊ. ಶಾ ಹೇಳಿದಂತೆ ಬಹಳಷ್ಟು ವೆಚ್ಚಗಳು ಪ್ರಚಾರ ಅಥವಾ ಮತದಾರರನ್ನು ಮತಗಟ್ಟೆಗಳಿಗೆ ಕರೆದೊಯ್ಯುವ ಕಾರಣಗಳಿಗಾಗಿ ಆಗುತ್ತವೆ. ಪ್ರಚಾರ ಕಾರ್ಯಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಯು ಸೇರಿರುವ ಪಕ್ಷವೇ ವೆಚ್ಚಗಳನ್ನು ಭರಿಸುತ್ತದೆ. ಈಗಿರುವಂತೆ ಒಬ್ಬ ವ್ಯಕ್ತಿಯು ತಾನೇತಾನಾಗಿ ಒಬ್ಬ ಅಭ್ಯರ್ಥಿಯಾಗಿ ಇದನ್ನು ಮಾಡಬಲ್ಲನೆಂದು ಹೇಳುವುದು ಕಷ್ಟ. ಒಬ್ಬ ಅಭ್ಯರ್ಥಿಯು ನನಗನಿಸುವಂತೆ ಒಂದಲ್ಲ ಒಂದು ಪಕ್ಷಕ್ಕೆ ಸೇರಿರಬೇಕು. ಆಗ ಆ ಪಕ್ಷವು ಕಾಲಾಂತರದಲ್ಲಿ ಅದರ ಕಾರ್ಯ ವೈಖರಿಯನ್ನು ತಾನೇ ನಿರ್ಧರಿಸುತ್ತದೆ. ಪ್ರಾರಂಭದಲ್ಲಿ ನಾವು ತಪ್ಪುಗಳನ್ನು ಮಾಡಬಹುದು. ಆದರೆ ಬೇರೆಯವರು ಮಾಡಿರುವಂತೆ ಪ್ರಚಾರ ಕಾರ್ಯಗಳ ಕುರಿತಾದ ನಿರ್ದಿಷ್ಟ ಪದ್ಧತಿಗಳನ್ನು ರೂಪಿಸಲು ಸಾಧ್ಯವಾಗಬಹುದು. ಆದರೆ ಗೌರವಾನ್ವಿತ ಕಾನೂನು ಮಂತ್ರಿಗಳು ಹೇಳುವಂತೆ ಪ್ರಚಾರ ಕಾರ್ಯಕ್ಕಾಗಿ ಪಕ್ಷವು ಮಾಡಿದ ವೆಚ್ಚ ಅಭ್ಯರ್ಥಿಯ ಒಟ್ಟು ವೆಚ್ಚದ ಭಾಗವಾಗುತ್ತದೆ ಎಂಬ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ..........

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ನಾನು ಹಾಗೆ ಹೇಳಲಿಲ್ಲ – ನಾನು ಹೇಳಿದ್ದು ಅದಕ್ಕೆ ವಿರುದ್ಧವಾಗಿ.

**ಪಂಡಿತ ಕೃಷ್ಣಚಂದ್ರ ಶರ್ಮ:** ಹಾಗಾದರೆ ಸರಿ. ಒಬ್ಬ ಅಭ್ಯರ್ಥಿಯ ಚುನಾವಣಾ ವೆಚ್ಚಗಳು ಅಭ್ಯರ್ಥಿಗೆ ಸಂಬಂಧಪಟ್ಟಂತೆ ವೆಚ್ಚಗಳಿಗೆ ಸೀಮಿತವಾಗಿರಬೇಕು. ಬಹಳಷ್ಟು ಸಲ ಆ ಖರ್ಚು ಆತನೇ ಮಾಡಿದ್ದಾಗಿರುತ್ತದೆ ಅಥವಾ ಪ್ರತಿನಿಧಿ ಅಥವಾ ಸ್ನೇಹಿತರು ಅವನ ಪರವಾಗಿ ಮಾಡಿದ್ದಾಗಿರಬೇಕು. ಆದ್ದರಿಂದ ವೆಚ್ಚಗಳು ಬಹಳ ದೊಡ್ಡಮೊತ್ತದ್ದಾಗಿರುತ್ತವೆ ಎಂಬ ಪ್ರೊ. ಶಾ ರವರ ಅನುಮಾನ ಏಳುವುದೇ ಇಲ್ಲ. ಯಾಕೆಂದರೆ

---

* P.D. ಸಂ. ೧೧, ಭಾಗ ೨, ೯ ಮೇ ೧೯೫೧, ಪು. ೮೪೧೫

** ಅದೇ, ಪು. ೮೪೬೦–೬೧.

ಮತಗಟ್ಟೆಗಳು ಮತದಾರರಿಗೆ ನಿಲುಕುವಷ್ಟು ಹತ್ತಿರದಲ್ಲಿಯೇ ಇರುತ್ತವೆ, ದೊಡ್ಡಮೊತ್ತದ ಖರ್ಚಿನ ಆವಶ್ಯಕತೆ ಬೀಳುವುದಿಲ್ಲ..........

**ಡಾ. ಸಿ.ಡಿ. ಪಾಂಡೆ (ಉತ್ತರ ಪ್ರದೇಶ):** ಮಸೂದೆಯ ನಿಯಮಗಳನ್ನು ತೆಗೆದುಕೊಳ್ಳುವುದಕ್ಕೂ ಮೊದಲು ಡಾ. ಅಂಬೇಡ್ಕರ್ ರವರು ಈ ಸದನ ಸದಸ್ಯರಿಗೆ ನೀಡಿರುವ ಮೆಚ್ಚುಗೆಯ ಮಾತುಗಳತ್ತ ತಮ್ಮ ಗಮನ ಸೆಳೆಯಲಿಚ್ಛಿಸುತ್ತೇನೆ. ಅವರು ಸದನದ ಸದಸ್ಯರನ್ನು ಹಿಮ್ಮೇಳ ಗಾಯಕಿಯರು ಎನ್ನುತ್ತಾರೆ.

**ಡಾ. ಅಂಬೇಡ್ಕರ್:** ಕ್ಷಮಿಸಿ. ನಾನು ಅದನ್ನು ಸದನವನ್ನು ಉದ್ದೇಶಿಸಿ ಹೇಳಿದ್ದು ಎನ್ನುವುದು ತಪ್ಪಾಗುತ್ತದೆ. ನಾನು ಗಮನಿಸಿದ್ದು ಸಾಮಾನ್ಯ ವರ್ಗಕ್ಕೆ ಅನಿಸುವಂತೆ ಅದು ಸದನವನ್ನು ಉದ್ದೇಶಿಸಿ ಮಾಡಿದ್ದಲ್ಲ.

**ಶ್ರೀ ಆರ್ ವೇಲಾಯುಧನ್:** ಅದು ಸದನವನ್ನು ಕುರಿತದ್ದಾಗಿರಲಿಲ್ಲ.

**ಡಾ. ಸಿ.ಡಿ. ಪಾಂಡೆ:** ಒಂದು ವೇಳೆ ಅವರ ಉದ್ದೇಶ ಹಾಗಿಲ್ಲದಿದ್ದರೆ–

**ಉಪ ಸಭಾಪತಿ:** ಸದಸ್ಯರು ಚುನಾಯಿತರಾದ ನಂತರ ಸದನದಲ್ಲಿ ಕೇವಲ ಹಿಮ್ಮೇಳ ಗಾಯಕಿಯರಂತಿರಬಾರದು ಎಂಬುದು ಅವರ ಉದ್ದೇಶವಾಗಿತ್ತು.

**ಡಾ. ಸಿ.ಡಿ. ಪಾಂಡೆ:** ಅದು ಹತ್ತಿರ ಹತ್ತಿರ ಅಲ್ಲಿಗೇ ಬರುತ್ತದೆ.

**ಡಾ. ಅಂಬೇಡ್ಕರ್:** ಅಲ್ಲ, ಹಾಗಲ್ಲ. ಅದು ಭವಿಷ್ಯದ ಸದಸ್ಯರನ್ನು ಕುರಿತು ಹೇಳುತ್ತದೆ.

**ಡಾ. ಸಿ.ಡಿ. ಪಾಂಡೆ:** ಹೇಗಾದರೂ, ನಾನು ಆ ಅಭಿಪ್ರಾಯವನ್ನು ಕೇಳಿದಾಗ......

**ಡಾ. ದೇಶ್‌ಮುಖ್:** ಅವರು ಅಂತಹ ಗುಣಗಳನ್ನೇನು ಇದುವರೆಗೂ ಇಲ್ಲಿ ಕಂಡುಹಿಡಿದಿಲ್ಲ.

**ಡಾ. ಸಿ.ಡಿ. ಪಾಂಡೆ:** ನನಗನಿಸಿದಂತೆ ಸದನದ ಕೆಲವು ಸದಸ್ಯರಿಗಾದರೂ ಆ ಅಭಿಪ್ರಾಯ ಸಂತೋಷದಾಯಕವಾಗಿರಲಿಲ್ಲ ಮತ್ತು ಅದು ಸುಸಂಬದ್ಧವಾಗಿರಲಿಲ್ಲ. ಈ ಹೋಲಿಕೆಯನ್ನು ಮುಂದುವರೆಸುತ್ತೇನೆ. ಅವರು ಹೇಳಿದಂತೆ ಸದಸ್ಯರು ಹಿಮ್ಮೇಳ ಗಾಯಕಿಯರು. ನಾವೆಲ್ಲರೂ ಹಿಮ್ಮೇಳ ಗಾಯಕಿಯರಾದರೆ ಅವರು ಆ ಗುಂಪಿನ ನಾಯಕರಾಗುತ್ತಾರೆ.

**ಶ್ರೀ ಶಾಮನಂದನ್ ಸಹಾಯ್ (ಬಿಹಾರ):** ನೀವು ಒಬ್ಬರಿರಬಹುದು ಆದರೆ ನಾವಲ್ಲ.

**ಡಾ. ಸಿ.ಡಿ. ಪಾಂಡೆ:** ಅವರು ಆ ಗುಂಪಿನ ನಾಯಕರು.

**ಶ್ರೀ ಆರ್. ವೇಲಾಯುಧನ್:** ಅದೊಂದು ದೂಷಣೆಯಲ್ಲವೆ ಸ್ವಾಮಿ?

**ಶ್ರೀ ರಾಜಗೋಪಾಲಾಚಾರಿ:** ನಾವು ಮತ್ತೆ ಮತ್ತೆ ಹಿಮ್ಮೇಳದ ಗಾಯಕಿರ ಬಗ್ಗೆ ಮಾತನಾಡಿದರೆ ಪ್ರಾಯಶ: ಅವರು ಅದನ್ನು ವಿರೋಧಿಸಬಹುದು.

**ಉಪಸಭಾಪತಿ:** ವಿಷಯ ಏನೆಂದರೆ ಸದನದ ಕೆಲವು ಮಹಿಳಾ ಸದಸ್ಯರು ನಾನು ಆ ವಿಷಯಲ್ಲಿ ಮಧ್ಯಪ್ರವೇಶ ಮಾಡಬೇಕಾಗಿತ್ತು ಎಂದು ಹೇಳಿದರು. ಹಿಮ್ಮೇಳದ ಗಾಯಕಿಯರು ಎಂಬ ಅಭಿಪ್ರಾಯವನ್ನು ಅವರು ನೀಡಬಾರದಿತ್ತು ಎಂದರು. ಇತ್ತೀಚಿನ ದಿನಗಳಲ್ಲಿ ಅವರು ಅಂತಹ ವಿಷಯಗಳಲ್ಲಿ ಸೂಕ್ಷ್ಮರಾಗಿದ್ದಾರೆ.

**ಡಾ. ಅಂಬೇಡ್ಕರ್:** ಅವರು ಹಾಗೇನಾದರು ತಪ್ಪು ತಿಳಿದುಕೊಂಡಿದ್ದರೆ ನಾನು ಕ್ಷಮೆಯಾಚಿಸುತ್ತೇನೆ. ನಾನು ಹೇಳಿದ್ದಿಷ್ಟು; ನಾವು ಕೆಲವು ವಿಷಯಗಳಲ್ಲಿ ಏನೂ ಮಾಡದಿದ್ದರೆ ಆನಂತರ ಏನಾಗಬಹುದು ಅದು ಆಗಿರುತ್ತದೆ. ಸದನದ ಸದಸ್ಯರು ಅದನ್ನು ಹೀಗೆ ತಿಳಿಯುತ್ತಾರೆಂಬ ಕನಿಷ್ಟ ಊಹೆಯೂ ನನಗಿರಲ್ಲಿಲ್ಲ.

---

** P.D. ಸಂ. ೧೧, ಭಾಗ ೨, ೧೦ ಮೇ ೧೯೫೧, ಪು. ೮೪೬೪–೬೫.

ಕೆಲವು ಮುಂಜಾಗ್ರತೆಗಳನ್ನು ತೆಗೆದುಕೊಳ್ಳದಿದ್ದರೆ ಪರಿಣಾಮ ಏನಾಗಬಹುದು ಎಂಬುದಷ್ಟೆ ನಾನು ಹೇಳುತ್ತಿದ್ದುದು.

**ಬಾಬು ರಾಮನಾರಯಣ ಸಿಂಗ್ (ಬಿಹಾರ):** ನೀವು ಸರಿಯಾಗಿ ಹೇಳಿದಿರಿ.

**ಡಾ. ಸಿ.ಡಿ. ಪಾಂಡೆ:** ಒಂದು ವೇಳೆ ಅವರು ಹಾಗೆಂದುಕೊಳ್ಳದಿದ್ದರೆ ಅದನ್ನು ಅಷ್ಟಕ್ಕೆ ಬಿಡುತ್ತೇನೆ. ಮಸೂದೆಯ ಮುಖ್ಯ ನಿಯಮಾವಳಿಗಳನ್ನು ಕುರಿತು ಹಿಂದೆ ಮಾತನಾಡಿದವರು ಕೂಲಂಕಷವಾಗಿ ಚರ್ಚಿಸಿದ್ದಾರೆ. ನಾನು ಕೆಲವೆ ಮುಖ್ಯ ಅಂಶಗಳತ್ತ ಗಮನ ಹರಿಸುತ್ತೇನೆ. ನನ್ನ ಪ್ರಕಾರ ಬಹಳ ಮಹತ್ವದ ಅಂಶ ಚುನಾವಣಾ ಪ್ರಚಾರದಲ್ಲಿ ರಾಷ್ಟ್ರಧ್ವಜವನ್ನು ಉಪಯೋಗಿಸುವುದು. ಕಾಂಗ್ರೆಸ್ ಪಕ್ಷವು ಭಾಗವಹಿಸುತ್ತಿರುವ ಈ ದೇಶದ ಪ್ರಚಾರ ಕಾರ್ಯಗಳಲ್ಲಿ ರಾಷ್ಟ್ರಧ್ವಜ ಉಪಯೋಗವನ್ನು ತಡೆಹಿಡಿಯಬಹುದೆ ಅಥವಾ ತಡೆಹಿಡಿಯಬೇಕೆ. ಸರ್ಕಾರವು ಒಪ್ಪಿರುವ ರಾಷ್ಟ್ರಧ್ವಜಕ್ಕೂ ಕೆಲವು ಸಂಘಟನೆಗಳು ಉಪಯೋಗಿಸುತ್ತಿರುವ ರಾಷ್ಟ್ರಧ್ವಜಕ್ಕೂ ತುಂಬಾ ತೆಳುವಾದ ವ್ಯತ್ಯಾಸವಿದೆ ಮತ್ತು ಜನರು ಅದರಿಂದ ಗೊಂದಲಕ್ಕೀಡಾಗಿದ್ದಾರೆ. ಒಂದು ನಿರ್ದಿಷ್ಟ ಧ್ವಜದಲ್ಲಿ ಅಶೋಕ ಚಕ್ರವಿದೆಯೇ ಅಥವಾ ಬರೀ ಚಕ್ರವೆ ಎಂಬುದರ ವ್ಯತ್ಯಾಸ ತಿಳಿಯುವುದು ಅಧಿಕಾರಿಗಳಿಗೆ ಕಷ್ಟವಾಗುತ್ತದೆ.

**ಡಾ. ಅಂಬೇಡ್ಕರ್:** ನನಗನಿಸುವಂತೆ ಅವೆರಡನ್ನು ಸ್ಪಷ್ಟವಾಗಿ ಬೇರೆ ಎಂದು ಗುರುತಿಸಬಹುದು.

*__ಡಾ. ಸಿ.ಡಿ. ಪಾಂಡೆ:__ ಚುನಾವಣಾ ವೆಚ್ಚದ ವರದಿಗಳನ್ನು ಭರ್ತಿಮಾಡಲು ಕಷ್ಟವೇನಿಲ್ಲವೆಂದು ಅಂಬೇಡ್ಕರ್ ಹೇಳುತ್ತಾರೆ. ಏಕೆಂದರೆ ಚುನಾವಣಾ ವೆಚ್ಚವೆಂದರೆ ನಾಮಪತ್ರವನ್ನು ಸಲ್ಲಿಸಿದ ಮೇಲೆ ಚುನಾವಣೆಗಾಗಿ ಉಂಟಾಗುವ ವೆಚ್ಚಗಳು. ಪ್ರಶ್ನೆಯಿರುವುದು ನಾಮಪತ್ರ ಸಲ್ಲಿಸುವ ಮುಂಚೆ ಉಂಟಾದ ವೆಚ್ಚಗಳು ಅದರಲ್ಲಿ ಸೇರುತ್ತವೆಯೇ ಇಲ್ಲವೇ ಎಂಬುದು. ಅವರು ಹೇಳುವಂತೆ ನಿಮ್ಮ ಅಭ್ಯರ್ಥನವನ್ನು ಪ್ರಕಟಪಡಿಸಿದ್ದರೆ ಆ ದಿನಾಂಕದಿಂದಲೆ ಖರ್ಚುವೆಚ್ಚದ ವಿವರಗಳನ್ನು ವರದಿಯಲ್ಲಿ ನೀಡಬೇಕಾಗುತ್ತದೆ. ನನಗನ್ನಿಸುವಂತೆ ಚುನಾವಣಾ ವೆಚ್ಚಗಳು ಮತ್ತು ನಾಮಪತ್ರ ಸಲ್ಲಿಕೆಯ ವೆಚ್ಚಗಳಿಗೆ ಹೊಸ ವ್ಯಾಖ್ಯಾನವನ್ನು ಕೊಟ್ಟು ಇವೆರಡೂ ಹಂತಗಳನ್ನು ಬೇರ್ಪಡಿಸುವುದು ಅಂತೆಯೆ ನಾಮಪತ್ರ ಸಲ್ಲಿಕೆಯ ವೆಚ್ಚ ಹಾಗೂ ಚುನಾವಣೆಯ ವೆಚ್ಚ ಎಂದು ವ್ಯಾಪಕ ಅರ್ಥವನ್ನು ನೀಡಿದರೆ ಬಹಳ ಕಷ್ಟ ಮತ್ತು ಅಪಾಯಕಾರಿ ಕೂಡ.

**ಡಾ. ಅಂಬೇಡ್ಕರ್:** ನಾನು ಆ ರೀತಿಯ ವ್ಯತ್ಯಾಸವನ್ನೇನು ಮಾಡಿಲ್ಲ.

**ಡಾ. ಸಿ.ಡಿ ಪಾಂಡೆ:** ಚುನಾವಣಾ ವೆಚ್ಚಗಳು ನಾಮಪತ್ರ ಮೌಲಿಕವಾಗುವ ಮುಂಚೆ ಹಾಗೆಂದರೆ ನಾಮ ಪತ್ರವು ಮೌಲಿಕವಾಗುವವರೆಗೂ ನಾಮ ಪತ್ರ ಸಲ್ಲಿಕೆಯ ವೆಚ್ಚವನ್ನು ಸೇರಿಸಲೇಬಾರದು. ಆದರೆ ಬಳಸಿರುವ ಪದಗಳ ಪರಿಭಾಷೆಯನ್ನು ಗಮನಿಸಿದರೆ ಚುನಾವಣೆಯ ಮುಂಚೆಯೋ ಅಥವಾ ನಾಮಪತ್ರ ಸಲ್ಲಿಕೆಯ ನಂತರವೋ ಎಲ್ಲ ವೆಚ್ಚಗಳು ಅಲ್ಲಿ ಸೇರಿಕೊಂಡಿವೆ.

**ಡಾ. ರಾಂ ಸುಭಗ್ ಸಿಂಗ್ (ಬಿಹಾರ):** ನಾಮಪತ್ರ ಸಲ್ಲಿಕೆಯ ಮುಂಚೆಯಂತೂ ಅಲ್ಲ.

**ಡಾ. ಸಿ.ಡಿ. ಪಾಂಡೆ:** ಯಾಕಾಗಬಾರದು.

**ಮಿ. ಉಪ ಸಭಾಪತಿ:** ಗೌರವಾನ್ವಿತ ಮಂತ್ರಿಗಳ ಪ್ರಕಾರ ಅದು ನ್ಯಾಯಾಂಗದ ವ್ಯಾಖ್ಯಾನ.

**ಡಾ. ಸಿ.ಡಿ. ಪಾಂಡೆ:** ನನ್ನ ಅನುಭವದಂತೆ ಕೆಲವು ಖರ್ಚುಗಳು ಉದಾಹರಣೆಗೆ ಮತದಾರರ ಪಟ್ಟಿಯನ್ನು ತಯಾರಿಸಲು ಉಂಟಾದ ಖರ್ಚುಗಳು ಅದನ್ನು ಸೇರಿಸುವುದು.

---

* P.D. ಸಂ. ೧೧, ಭಾಗ ೨, ೧೦ ಮೇ ೧೯೫೧, ಪು. ೮೪೪೯–೭೧.

**ಡಾ. ಅಂಬೇಡ್ಕರ್:** ಅದು ಸರಿ. ಆದರೆ ನಿಮಗೆ ಎಲ್ಲಾ ದಫ್ತರುಗಳು ಬೇಕಾಗಿರುವುದಿಲ್ಲ. ಆವಶ್ಯಕವಾಗಿರುವುದೇನೆಂದರೆ ಒಂದು ದೃಢೀಕೃತ ನಮೂದು. ಅದು ನಿಮಗೆ ಎರಡು ದುಡ್ಡಿಗಿಂತ ಹೆಚ್ಚಾಗಿರುವುದಿಲ್ಲ.

**ಡಾ. ಸಿ.ಡಿ. ಪಾಂಡೆ:** ನಾನು ಹೇಳಬೇಕಾಗಿರುವುದೇನೆಂದರೆ ನಾಮಪತ್ರ ಸಲ್ಲಿಕೆಯ ವೆಚ್ಚ ಮತ್ತು ಚುನಾವಣಾ ವೆಚ್ಚಗಳ ನಡುವೆ ವ್ಯತ್ಯಾಸಗಳನ್ನು ಇದುವರೆಗೆ ಗಮನಿಸಿಲ್ಲ. ಅದನ್ನು ಇನ್ನು ಮುಂದೆ ಮಾಡಬಹುದು.

**ಉಪ ಸಭಾಪತಿ:** ಮಾನ್ಯ ಸದಸ್ಯರು ಇದಕ್ಕೆ ವಿವರಣೆ ಬೇಕೆಂದು ಸಲಹೆ ನೀಡುತ್ತಿದ್ದಾರೆ.

**ಡಾ. ಅಂಬೇಡ್ಕರ್:** ಅವರ ಸಲಹೆ ಏನಿದೆಯೆಂದರೆ, ಚುನಾವಣಾ ವೆಚ್ಚವನ್ನು ಪ್ರಕಟಪಡಿಸುವಂತಹ ಕಾನೂನೇ ಇರಬಾರದು ಎಂಬುದು ಮತ್ತು ಒಬ್ಬ ಅಭ್ಯರ್ಥಿಯು ತನ್ನ ಸಾಮರ್ಥ್ಯಕ್ಕೆ ತಕ್ಕಷ್ಟು ಖರ್ಚು ಮಾಡುವಂತಿರಬೇಕು.

**ಡಾ. ಸಿ.ಡಿ ಪಾಂಡೆ:** ಮೊತ್ತವನ್ನು ನಿರ್ಬಂಧಿಸಲು ನಾನು ಇಷ್ಟಪಡುವುದಿಲ್ಲ. ಚುನಾವಣಾ ವೆಚ್ಚದ ವರದಿಗಳನ್ನು ನೀಡುವಾಗ ಅದೊಂದು ವ್ಯಾವಹಾರಿಕ ತೊಡಕು.......... ನಾಮಪತ್ರ ಸಲ್ಲಿಕೆಯ ಪೂರ್ವದಲ್ಲಿ ಉಂಟಾದ ಖರ್ಚುಗಳು ಸೇರಿವೆಯೇ ಇಲ್ಲವೆ? ಚುನಾವಣಾ ವೆಚ್ಚ ಸೇರಿವೆಯೇ ಇಲ್ಲವೆ? ಚುನಾವಣಾ ವೆಚ್ಚವೆಂದರೆ ನಾಮಪತ್ರ ಸಲ್ಲಿಕೆಯಿಂದ ಹಿಡಿದು ಮತದಾನ ಮುಗಿಯುವವರೆಗೂ ಉಂಟಾದ ವೆಚ್ಚಗಳೇ? ಅದು ಹಾಗಾದರೆ ಚುನಾವಣಾ ವೆಚ್ಚಗಳಿಗೆ ಇದೊಂದು ಹೊಸ ವ್ಯಾಖ್ಯಾನವಾಗುತ್ತದೆ ಅದನ್ನೆ ನಾನು ಹೇಳಬೇಕಾಗಿರುವುದು..........

ಆಮೇಲೆ ನಾನು ಇನ್ನೊಂದು ಸಲಹೆ ಮಾಡಬಯಸುತ್ತೇನೆ ಅದು ನಾಮಪತ್ರ ಹಿಂತೆಗೆತದ ಬಗ್ಗೆ. ನೀವು ಅಲ್ಲಿ ಹೇಳಿರುವಂತೆ ಯಾರನ್ನೂ ಶಾಸನಬದ್ಧವಾಗಿ ನೀವು ನಿಂತುಕೊಳ್ಳಬೇಡಿ, ಹಿಂತೆಗೆದುಕೊಳ್ಳಿ ಎಂದು ಹೇಳಲಾಗುವುದಿಲ್ಲ. ಕೆಲವು ಪಕ್ಷಗಳು ನೆಪಮಾತ್ರಕ್ಕೆ ಅನೇಕ ಅಭ್ಯರ್ಥಿಗಳನ್ನು ನಿಲ್ಲಿಸಿರುತ್ತವೆ. ನಂತರ ಅವರನ್ನು ಹಿಂತೆಗೆದುಕೊಳ್ಳುವಂತೆ ಹೇಳಲಾಗುತ್ತದೆ. ಈ ಪರಿಭಾಷೆಯಲ್ಲಿ ಏನೂ ಅರ್ಥವಿಲ್ಲವೆಂದು ನೀವು ಹೇಳಿ ಅಥವಾ ಅದಕ್ಕೆ ಅರ್ಥವಿದ್ದರೆ ಅದನ್ನು ಸ್ಪಷ್ಟೀಕರಿಸಬೇಕು. ಅಲ್ಲಿ ಯಾವ ಕೊರತೆಯು ಇಲ್ಲದ ಹಾಗೆ ನೋಡಿಕೊಳ್ಳಬೇಕು.

**ಉಪಸಭಾಪತಿ:** ಭಾಷೆಯು ಸ್ಪಷ್ಟವಾಗಿರುವಂತೆ ಕಾಣಿಸುತ್ತದೆ.

**ಡಾ. ಅಂಬೇಡ್ಕರ್:** ಆಯ್ಕೆ ಸಮಿತಿಯು ಅದನ್ನು ಅರ್ಥಮಾಡಿಕೊಳ್ಳುವಲ್ಲಿ ನಿಶ್ಚಿತವಾಗಿಯೂ ಯಾವ ಕಷ್ಟವನ್ನು ಎದುರಿಸಲಿಲ್ಲ.

**ಡಾ. ಸಿ.ಡಿ. ಪಾಂಡೆ:** ಪ್ರಕರಣ ೧೨೨ (೧)(ಎ) ಹೇಳುತ್ತದೆ "ಒಬ್ಬ ವ್ಯಕ್ತಿಯು ನಿಂತುಕೊಳ್ಳಬೇಕೋ ಅಥವಾ ನಿಂತುಕೊಳ್ಳಬಾರದೋ, ಅಥವಾ ಚುನಾವಣೆಯಲ್ಲಿ ಅಭ್ಯರ್ಥಿಯು ಚುನಾವಣಾ ಕಣದಿಂದ ಹಿಂತೆಗೆದುಕೊಳ್ಳಬೇಕೋ".

**ಉಪ ಸಭಾಪತಿ:** ಮೊದಲಿನ ಭಾಗವನ್ನು ಅದರ ಜೊತೆಗೆ ಓದಿಕೊಳ್ಳಬೇಕಾಗುತ್ತದೆ. ಏನೆಂದರೆ ರುಷುವತ್ ಅಂದರೆ, ಅಭ್ಯರ್ಥಿಯು ಮತದಾರನನ್ನು ಒಲಿಸಿಕೊಳ್ಳಲು ನೀಡುವ ಕೊಡುಗೆ ಅಥವಾ ನೀಡುತ್ತೇನೆಂದು ಹೇಳಿರುವ ಕೊಡುಗೆ' ಎಂದು ಅರ್ಥವಾಗುತ್ತದೆ.

**ಡಾ. ಸಿ.ಡಿ. ಪಾಂಡೆ:** ಒಂದು ವೇಳೆ ಅಭ್ಯರ್ಥಿಯೊಬ್ಬನಿಗೆ ಅವನಿಗೆ ಮೇಲ್ಮನೆಯಲ್ಲಿ ಅವಕಾಶಗಳು ಹೆಚ್ಚಿದ್ದರೆ ಆತ ಕೆಳಮನೆಗೆ ನಿಂತುಕೊಳ್ಳಬಾರದು ಎಂದು ಸಲಹೆ ನೀಡಿದರೆ, ಅದು ಭ್ರಷ್ಟ ಪದ್ಧತಿಯೆನಿಸುತ್ತದೆ.

ಈ ನಿಯಮವನ್ನು ನಾನು ಅರ್ಥಮಾಡಿಕೊಳ್ಳವಂತೆ ಅದು ಹಾಗನ್ನಿಸುತ್ತದೆ.

**ಡಾ. ಅಂಬೇಡ್ಕರ್:** ಅದು ಉಪಪ್ರಕರಣ (೧)ರ ಅಡಿಯಲ್ಲಿ ಬರುವುದಿಲ್ಲ. ನೀವು ಆತನಿಗೆ ಒಳ್ಳೆಯ ಮತ್ತು ಭರವಸೆಯ ನಿರೀಕ್ಷೆಯನ್ನೆ ಕೊಡಮಾಡುತ್ತಿದ್ದೀರಿ.

**ಡಾ. ಸಿ.ಡಿ. ಪಾಂಡೆ:** ಈ ನಿಯಮದೊಳಗೆ ಅದು ಬರುವುದಿಲ್ಲವೇ.

**ಡಾ. ಅಂಬೇಡ್ಕರ್:** ನೀವು ಇಂತಹ ಕೈಚಳಕವನ್ನು ಮಾಡಿಕೊಂಡು ಹೋಗುತ್ತಿರಬಹುದು..

**ಡಾ. ಸಿ.ಡಿ. ಪಾಂಡೆ:** ಅದರ ಅವಶ್ಯಕತೆಯಿದೆ. ಅವರ ಬಗ್ಗೆ ನಾವು ಸಂಕೋಚಪಡಬೇಕಾಗಿಲ್ಲ ಏಕೆಂದರೆ ಅದಿಲ್ಲದೆ ಒಂದು ರಾಜಕೀಯ ಪಕ್ಷ ನಡೆಯುವುದಿಲ್ಲ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನನಗನ್ನಿಸುವಂತೆ ಅದು ಆ ಪ್ರಕರಣದ ಒಳಗಿರುವ ಕುಚೋದ್ಯ.

**ಡಾ. ಸಿ.ಡಿ. ಪಾಂಡೆ:** ನಾನು ಡಾ. ಅಂಬೇಡ್ಕರ್ ರವರಿಗೆ ಗೌರವಪೂರ್ವಕವಾಗಿ ಹೇಳುವುದೇನೆಂದರೆ ನಿಜಜೀವನದಲ್ಲಿ ನಾವು ಕೆಲವು ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಅಲ್ಲಿ ಎದುರಾಗುವ ಕಷ್ಟಗಳನ್ನು ಮರೆಯುವಂತಿಲ್ಲ. ಭವಿಷ್ಯದಲ್ಲಿ ಎಲ್ಲಾ ಚುನಾವಣೆಗಳು ಪ್ರಶ್ನಿಸಲ್ಪಡುತ್ತವೆ ಎಂಬ ಅನುಮಾನ ನಮಗಿರದ್ದರೆ ನಾವು ಈ ಭಾಷೆಯನ್ನು ಹೀಗೆಯೇ ಬಿಡಬಹುದಾಗಿತ್ತು. ಎಲ್ಲಾ ಚುನಾವಣೆಗಳಲ್ಲಿಯೂ ಮನುಷ್ಯ ಸಹಜವಾದ ಕೆಲವು ಮೂಲಪ್ರವೃತ್ತಿಗಳು ನುಸುಳಿ ಸಂಗತಿಗಳನ್ನು ವ್ಯತ್ಯಯ ಮಾಡುತ್ತವೆ ಮತ್ತು ನ್ಯಾಯಾಲಯಗಳು ನ್ಯಾಯವಾದಿಗಳು ಮತದಾರ ಮಾಡಿರುವುದನ್ನು ಇಲ್ಲವೆಂದೆನಿಸುವಂತೆ ಪಿತೂರಿ ನಡೆಸುತ್ತಾರೆ. ನನಗೆ ಹೊಳೆಯುವಂತೆ ಒಬ್ಬ ಮನುಷ್ಯ ಬಹುಮತಗಳನ್ನು ಪಡೆದಿದ್ದರೆ ಅವನು ಚುನಾಯಿತನಾದಂತೆಯೆ ಅದು ಉನ್ನತ ಟ್ರಿಬ್ಯುನಲ್ ನೀಡುವ ತೀರ್ಮಾನವಾಗಿರುತ್ತದೆ.

**ಡಾ. ದೇಶ್‌ಮುಖ್:** ಅದರ ವಿರುದ್ಧವಾಗಿಯೂ ಪಿತೂರಿ ನಡೆಸಲು ನ್ಯಾಯವಾದಿಗಳು ಸಿಗುತ್ತಾರೆ.

**ಮಿ. ಉಪಸಭಾಪತಿ:** ಇನ್ನೊಂದೆಡೆ ಮತಕ್ಷೇತ್ರವೂ ಇಷ್ಟಪಡುವಂತಹ ಸರಿಯಾದ ಅಭ್ಯರ್ಥಿಯೊಬ್ಬನನ್ನು ಒತ್ತಾಯ ಪೂರ್ವಕವಾಗಿ ಅಥವಾ ಅಕ್ರಮ ಲಂಚ ಪ್ರೇರಣೆಯಿಂದ ನಾಮಪತ್ರ ಸಲ್ಲಿಸಿದ ನಂತರ ತನ್ನ ಅಭ್ಯರ್ಥನವನ್ನು ಹಿಂತೆಗೆಕೊಳ್ಳಲು ಒತ್ತಾಯಿಸುವ ಅಪಾಯವಿಲ್ಲವೆ?

**ಡಾ. ಸಿ.ಡಿ. ಪಾಂಡೆ:** ಆದರೆ ಒಬ್ಬ ವ್ಯಕ್ತಿಯನ್ನು ಮೇಲ್ಮನಗೆ ಕಳುಹಿಸುವ ಆಮಿಷ ಒಡ್ಡಿ ಕೆಳಮನೆ ಸ್ಪರ್ಧೆಯಿಂದ ಹಿಂತೆಗೆಸುವುದು ಭ್ರಷ್ಟ ಪದ್ಧತಿಯೋ ಅಥವಾ ಅಲ್ಲವೋ ಎಂಬುದನ್ನು ನಿರ್ಧರಿಸಬೇಕಾಗಿದೆ.

**ಗೌರವಾನ್ವಿತ ಸದಸ್ಯರು:** ಇಲ್ಲ

**ಡಾ. ಸಿ.ಡಿ. ಪಾಂಡೆ:** ಈ ಪದಗಳು ಅದನ್ನು ಸೂಚಿಸುವುದಿಲ್ಲ.

**ಉಪ ಸಭಾಪತಿ:** ಈ ಸಂಶಯಗಳು ಆ ಪ್ರಕರಣಗಳು ಚರ್ಚೆಗೆ ಬಂದಾಗ ಸ್ಪಷ್ಟವಾಗಬಹುದು.

*[*]* **ಶ್ರೀ ರಾಜಬಹದ್ದೂರ್: .........** ಇದು ನಾನು ಗಮನಿಸಿದ ಅಂಶಕ್ಕೆ ಅಂದರೆ ಆಯ್ಕೆಸಮಿತಿಯ ವರದಿಗೆ ಲಗತ್ತಿಸಿರುವ ನನ್ನ ಅಸಮ್ಮತಿಪತ್ರದಲ್ಲಿರುವ ಅಂಶಕ್ಕೆ ಬರುತ್ತಿದೆ. ನಿನ್ನೆ ಡಾ. ಅಂಬೇಡ್ಕರ್ ಅವರು ಗಮನಿಸಿದಂತೆ ಭಾರತೀಯ ಸಂಚಿತ ನಿಧಿಯಿಂದ ಒಂದು ನಿರ್ದಿಷ್ಟ ಸಂಭಾವನೆ ಅಥವಾ ವೇತನ ಮತ್ತು ಪಿಂಚಣಿಗಳನ್ನು ಪಡೆಯುವ ಆಡಳಿತಗಾರರನ್ನು ಅನರ್ಹಗೊಳಿಸುವ ಆ ಒಂದು ಪ್ರಕರಣ ಆವಶ್ಯಕವಿರುವುದಿಲ್ಲ. ವಿಧಿ ೧೦೨ ಮತ್ತು ೧೦೩ರ ನಿಯಮಗಳಿಗೆ ಅವರು ನಮ್ಮ ಗಮನವನ್ನು ಸೆಳೆಯುತ್ತಾ ಹೇಳಿದರು ಈ

* P.D. ಸಂ. ೧೧, ಭಾಗ ೨, ೧೦ ಮೇ ೧೯೫೧, ಪು. ೮೪೭೭.

ವಿಷಯದಲ್ಲಿ ಯಾವುದೇ ಸದಸ್ಯರ ವಿರುದ್ಧ ಆಕ್ಷೇಪಣೆ ಎತ್ತಿದರೆ ರಾಷ್ಟ್ರಾಧ್ಯಕ್ಷರಿಗೆ ಮೇಲ್ಮನವಿ ಸಲ್ಲಿಸುವುದರ ಮೂಲಕ ಪರಿಹಾರವನ್ನು ಕಂಡುಕೊಳ್ಳುವುದು. ಮಾನ್ಯ ಮಂತ್ರಿಗಳು ಈ ನನ್ನ ಮಾತನ್ನು ಗೌರವಿಸಬೇಕಾಗಿ ಕೋರುತ್ತೇನೆ. ಏಕೆಂದರೆ ಈ ಪ್ರಕರಣವನ್ನು ಸೇರಿಸಲು ನಾನು ಸೂಕ್ತ ಸಮರ್ಥನೆಯನ್ನು ಕೊಡಬೇಕೆಂದು ಕೇಳಿದ್ದರು.

**ಉಪಸಭಾಪತಿ:** ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಲಿಚ್ಛಿಸುತ್ತಾ ವಿಶೇಷವಾಗಿ ರಾಜಕುಮಾರರ ಬಗೆಗೆ ಗಮನವನ್ನು ಸೆಳೆಯುತ್ತಾರೆ. ಅವರು ಲಾಭದಾಯಕ ಹುದ್ದೆಯನ್ನು ಎಷ್ಟರಮಟ್ಟಿಗೆ ಹೊಂದಿರುತ್ತಾರೆ. ಮಾನ್ಯ ಸದಸ್ಯರು ತಮ್ಮ ವಾದವನ್ನು ಮಾನ್ಯ ಮಂತ್ರಿಗಳಿಗೆ ಮನದಟ್ಟು ಮಾಡಲು ಇಚ್ಛಿಸುತ್ತಾರೆ.

**ಡಾ. ಅಂಬೇಡ್ಕರ್:** ಕ್ಷಮಿಸಿ. ಬೇರೊಬ್ಬ ಸದಸ್ಯರು ಇದರ ಬಗ್ಗೆಯೇ ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ.

**ಶ್ರೀ ಜೆ. ಆರ್. ಕಪೂರ್:** ಭಾರತದ ಎಲ್ಲಾ ಪಿಂಚಣಿದಾರರನ್ನು ಅನರ್ಹಗೊಳಿಸಲಾಗಿದೆಯೇ?

**ಶ್ರೀ ರಾಜಬಹದ್ದೂರ್:** ಆ ಕುರಿತು ಕೆಲವು ತಿದ್ದುಪಡಿಗಳಿವೆ.

ಆದ್ದರಿಂದ ನನ್ನ ಆಕ್ಷೇಪಣೆಗಳನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಕೆಲವು ವಿಶೇಷವರ್ಗಗಳನ್ನು ಚುನಾವಣೆಗೆ ಸ್ಪರ್ಧಿಸುವುದರಿಂದ ಅನರ್ಹಗೊಳಿಸಬೇಕಾಗಿದೆ. ನನ್ನ ಆಕ್ಷೇಪಣೆ ಕೇವಲ ಕಾನೂನಿನ ಅಥವಾ ಸಾಂವಿಧಾನಿಕ ಆಧಾರದ ಮೇಲೆ ಮುಂದುವರೆಯುವುದಿಲ್ಲ. ಅದು ಮತ್ತಷ್ಟು ಮೂಲಭೂತವಾದದ್ದು. ಈ ಕ್ಷಣದಲ್ಲಿ ಅವರು ಚುನಾವಣೆಯಲ್ಲಿ ನಮ್ಮೊಡನೆ 'ಬಿ' ವಿಭಾಗದ ರಾಜ್ಯಗಳಲ್ಲಿ ಸ್ಪರ್ಧಿಸುತ್ತಾರೆಂಬ ಭಯ ನನಗಿಲ್ಲ. ನಮ್ಮ ಮಟ್ಟಿಗೆ ಹೇಳುವುದಾದರೆ ಒಬ್ಬ ಸಾಮಾನ್ಯ ಮನುಷ್ಯ ಅತ್ಯಂತ ಪ್ರಮುಖ ಮನುಷ್ಯನ ಜೊತೆ ಹೆಗಲು ಕೊಡುವಂತಿರಬೇಕು. ಅದರ ಪರಿಸ್ಥಿತಿ ಹೇಗಿದೆ ಎಂದರೆ ಅವರು ಚುನಾವಣಾ ಸ್ಪರ್ಧೆಗೆ ಬಂದಾಗ ನಾವು ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. . . .

**ಉಪಸಭಾಪತಿ:** ಅನುಚ್ಛೇದ ೧೦೨ರ ಪ್ರಕಾರ ಅವರು ಲಾಭದಾಯಕ ಹುದ್ದೆಯನ್ನು ಹೊಂದಿದ್ದರೆ ಅವರನ್ನು ಅನರ್ಹಗೊಳಿಸಲಾಗುವುದು.

**ಡಾ. ಅಂಬೇಡ್ಕರ್:** ಹಾಗಾದರೆ ಇಲ್ಲಿ ಪರಿಹಾರವಿದೆ.

**ಶ್ರೀ ರಾಜಬಹದ್ದೂರ್:** ಆದರೆ ಡಾ. ಅಂಬೇಡ್ಕರ್‌ರವರು ಸ್ಪಷ್ಟವಾಗಿಲ್ಲ.

**ಉಪಸಭಾಪತಿ:** ಅದನ್ನು ರಾಷ್ಟ್ರಾಧ್ಯಕ್ಷರೆ ತೀರ್ಮಾನಿಸಬೇಕಾಗುತ್ತದೆ. ಅದರ ಬಗ್ಗೆ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಬಹುದು. ಒಂದು ವೇಳೆ ರಾಜಕುವಾರನನ್ನು ಸಂವಿಧಾನದ ಅಡಿಯಲ್ಲಿ ಅನರ್ಹಗೊಳಿಸಲಾಗದಿದ್ದರೆ ಕಾನೂನಿನ ಅಡಿಯಲ್ಲಿ ಹೇಗೆ ಅನರ್ಹಗೊಳಿಸಬಹುದು. ಆತ ಅನುಚ್ಛೇದ ೧೦೨ರ ಅಡಿಯಲ್ಲಿ ಬರದಿದ್ದರೂ ಅದು ಮೂಲಭೂತ ಹಕ್ಕಲ್ಲವೇ?

*ಮಿ. **ಉಪಸಭಾಪತಿ:** ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ ಪ್ರಕರಣ (ಇ) ಅಡಿಯಲ್ಲಿ "ಒಂದು ವೇಳೆ ಅವರನ್ನು ಅನರ್ಹಗೊಳಿಸಿದರೆ ಅಥವಾ ಸಂಸತ್ ಮಾಡಿರುವ ಯಾವುದೇ ಕಾನೂನಿನಡಿಯಲ್ಲಿ" ಸಂಸತ್ತಿಗೆ ಅದರ ಬಗ್ಗೆ ಕಾನೂನು ಮಾಡಲು ಅವಕಾಶವಿರುತ್ತದೆ.

**ಡಾ. ಅಂಬೇಡ್ಕರ್:** ಅವರು ಅದಕ್ಕೆ ಸಮರ್ಥನೆ ನೀಡಬೇಕಾಗುತ್ತದೆ.

**ಶ್ರೀ ರಾಜಬಹದ್ದೂರ್:** ಸಮರ್ಥನೆ ಏನೆಂದರೆ ಅವರು ಸಾಮಾನ್ಯ ವ್ಯಕ್ತಿಯನ್ನು ಸೋಲಿಸಬಲ್ಲರು.

---

* P.D. ಸಂ. ೧೧, ಭಾಗ ೨, ೧೦ ಮೇ ೧೯೫೧, ಪು. ೮೪೮೨.

ಬ್ರಿಟನ್ನಿನಲ್ಲಿ ಲಾರ್ಡ್ಸ್‌ಗಳು ಹೌಸ್ ಆಫ್ ಕಾಮನ್ಸ್‌ಗೆ ಸ್ಪರ್ಧಿಸುವ ಅವಕಾಶವಿರುವುದಿಲ್ಲ. ಏಕೆಂದರೆ ಅವರು ತಮ್ಮ ಸ್ವಹಿತಾಸಕ್ತಿಗಳನ್ನು ಮುಂದೆ ಮಾಡುತ್ತಾರೆ ಮತ್ತು ಸಾಮಾನ್ಯ ವ್ಯಕ್ತಿಯ ಹಕ್ಕುಗಳಲ್ಲಿ ಮಧ್ಯ ಪ್ರವೇಶಿಸುತ್ತಾರೆ. ಇದು ಒಂದು ಸಮರ್ಥನೆ. ಹಾಗೆಯೇ ನೀವು ಲಾರ್ಡ್ಸ್‌ರವರಂತಿರುವ ವ್ಯಕ್ತಿಗಳಿಗೆ ಅವಕಾಶ ಕೊಟ್ಟರೆ ಅವರು ಸಹ ಸಾಮಾನ್ಯ ವ್ಯಕ್ತಿಯ ವಿಷಯಗಳಲ್ಲಿ ಮಧ್ಯ ಪ್ರವೇಶಮಾಡುತ್ತಾರೆ ಮತ್ತು ದೇಶದ ಪ್ರಗತಿಗೆ ಅಡ್ಡಿಯುಂಟುಮಾಡಲು ಪ್ರಯತ್ನಿಸುತ್ತಾರೆ.

*ಶ್ರೀ ಅಳಗೇಶನ್:......... ಆದರೆ ಚುನಾವಣಾ ಆಯೋಗದ ಸ್ವಾತಂತ್ರ್ಯದ ಪರಿಕಲ್ಪನೆ ಬಗ್ಗೆ ಒಂದು ಎಚ್ಚರಿಕೆಯ ಮಾತನ್ನು ಹೇಳಲಿಚ್ಛಿಸುತ್ತೇನೆ. ಈ ಸ್ವಾತಂತ್ರ್ಯವನ್ನು ಅಧಿಕಾರಕ್ಕಾಗಿ ಸ್ಪರ್ಧಿಸುವ ರಾಜಕೀಯ ಪಕ್ಷಗಳನ್ನು ನಿಯಂತ್ರಿಸುವ ಕಾರಣದಿಂದ ನೀಡಲಾಗಿದೆ. ಆಯೋಗವು ಒಂದು ರಾಜಕೀಯ ಪಕ್ಷ ಇನ್ನೊಂದು ರಾಜಕೀಯ ಪಕ್ಷಕ್ಕಿಂತ ಹೆಚ್ಚಾಗಿ ಅನುಕೂಲಗಳನ್ನು ಪಡೆದುಕೊಳ್ಳದಂತೆ ನೋಡಿಕೊಳ್ಳಬೇಕಾಗುತ್ತದೆ. ಚುನಾವಣಾ ಅಯೋಗದ ಸ್ವಾತಂತ್ರ್ಯವು ಯಾವುದೇ ಪಕ್ಷಕ್ಕೂ ನಿಷ್ಪಕ್ಷಪಾತವಾಗಿದ್ದು ಅನಾನುಕೂಲವೆಸಗದ ಹಾಗೆ ಮಾಡುತ್ತದೆ. ಇಲ್ಲಿ ನಾನು ಗಮನಕ್ಕೆ ತರಬೇಕಾಗಿರುವುದು ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳ ಮತಕ್ಷೇತ್ರವನ್ನು ಪುರ್ನವಿಂಗಡಣೆ ಮಾಡುವುದು.

**ಡಾ. ಅಂಬೇಡ್ಕರ್:** ಅದು ಮಸೂದೆಯ ಮಿತಿಯಿಂದ ಹೊರಗಡೆ ಇದೆ ಎಂದು ನಾನು ಯೋಚಿಸಬೇಕಾಗಿದೆ. ಆ ವಿಷಯವನ್ನು ಸದನದಲ್ಲಿ ರಾಷ್ಟ್ರಪತಿಗಳ ಆದೇಶವನ್ನು ಮಂಡಿಸಿದಾಗ ಅದನ್ನು ಚರ್ಚೆಗೆ ಎತ್ತಿಕೊಳ್ಳಲಾಗುತ್ತದೆ.

**ಉಪ ಸಭಾಪತಿ:** ಮಾನ್ಯ ಸದಸ್ಯರ ಉದ್ದೇಶ ಪುನರ್ವಿಂಗಡಣೆಯ ಪ್ರಶ್ನೆಗಳಿಗೆ ವಿವರವಾಗಿ ಹೋಗುವುದಲ್ಲವೆಂದು ನನಗನಿಸುತ್ತದೆ. ರಾಷ್ಟ್ರಾಧ್ಯಕ್ಷರ ಆದೇಶವು ಇನ್ನೂ ಹೊರಬರಬೇಕಾಗಿದೆ ಮತ್ತು ಅದನ್ನು ಸದನದಲ್ಲಿ ಮಂಡಿಸಬೇಕಾಗಿದೆ. ಆಗ ಅದನ್ನು ಚರ್ಚಿಸಬಹುದು. ಆದರೆ ಮಾನ್ಯ ಸದಸ್ಯರು ಚುನಾವಣಾ ಆಯೋಗಕ್ಕೆ ಹೆಚ್ಚಿನ ಅಧಿಕಾರ ನೀಡಿರುವುದರಿಂದ ಆಯೋಗವು ಅತ್ಯಂತ ಹೆಚ್ಚಿನ ಎಚ್ಚರಿಕೆ ವಹಿಸಬೇಕೆಂಬ ಅವರ ಸಾಮಾನ್ಯ ಹೇಳಿಕೆ ಸರಿಯಾಗಿಯೇ ಇದೆ.

**ಶ್ರೀ ಅಳಗೇಶನ್:** ಚುನಾವಣಾ ಆಯೋಗವು ಇದುವರೆಗೆ ತನ್ನ ಕಾರ್ಯಕಲಾಪಗಳನ್ನು ಹೇಗೆ ಮುಂದುವರಿಸಿದೆ ಎಂದು ನಾನು ಕೇಳಬಹುದೆನಿಸುತ್ತದೆ.

**ಡಾ. ದೇಶ್‌ಮುಖ್:** ಮಾನ್ಯ ಸದಸ್ಯರು ಚುನಾವಣಾ ಆಯೋಗವು ಇದುವರೆಗೆ ಹೇಗೆ ಕೆಲಸ ಮಾಡಿತು ಎಂಬುದನ್ನು ಕೇಳಲಿಚ್ಛಿಸುತ್ತಾರೆ. ಅದು ಸರಿಯಾಗೆಯೇ ಇದೆ.

**ಡಾ. ಅಂಬೇಡ್ಕರ್:** ರಾಷ್ಟ್ರಾಧ್ಯಕ್ಷರು ಮತಕ್ಷೇತ್ರಗಳ ಪುನರ್ವಿಂಗಡಣೆಯ ಆದೇಶವನ್ನು ಹೊರಡಿಸಿದಾಗ ಇದನ್ನು ಚರ್ಚಿಸಬಹುದಾಗಿದೆ.

**ಶ್ರೀ ಪಿ.ವೈ. ದೇಶಪಾಂಡೆ:** ವಾಸ್ತವ ಏನೆಂದರೆ, ಪ್ರತಿಯೊಬ್ಬರಿಗೂ ಮತ ಚಲಾಯಿಸುವ ಹಕ್ಕಿದೆ ಮತ್ತು ಅಭ್ಯರ್ಥಿಯಾಗಿ ನಿಂತುಕೊಳ್ಳುವ ಹಕ್ಕಿದೆ. ಸಂವಿಧಾನವನ್ನು ಬದಲಿಸದೆಯೆ ಈಗ ನಮಗಿರುವ ಅಧಿಕಾರವೇನೆಂದರೆ ಒಬ್ಬ ವ್ಯಕ್ತಿಯು ಚುನಾವಣೆಯಲ್ಲಿ ತನ್ನನ್ನು ಅಭ್ಯರ್ಥಿಯಾಗಿ ಘೋಷಿಸಿಕೊಳ್ಳಲು ಒಂದು ಮಿತಿಯನ್ನು ಹೇರುವುದು. ಅವನು ರಾಜನಿರಬಹುದು, ಅವನು ಮಹಾರಾಜನಿರಬಹುದು ಅಥವಾ ಮಾಜಿ ಮಹಾರಾಜನಿರಬಹುದು. ಪ್ರಜೆಗಳಿಗೆ ಅವನು ಬೇಕಾದರೆ ಅವನನ್ನು ಚುನಾಯಿಸುತ್ತಾರೆ.

* ಅದೇ, ಪು. ೮೪೮೫.

** P.D. ಸಂ. ೧೧, ಭಾಗ ೨, ೧೦ ಮೇ ೧೯೫೧, ಪು. ೮೪೯೧.

ಪ್ರತಿಯೊಬ್ಬರಿಗೂ ಹಕ್ಕನ್ನು ನೀಡಿರುವಾಗ ಅದರ ಬಗ್ಗೆ ನಾವು ಸಂಕೋಚಪಡುವುದು ಏತಕ್ಕೆ? ಮಹಾರಾಜರು ಅಥವ ಕಾಳಸಂತೆಕೋರರು ಯಾರಾದರೂ ಸಮಾಜದ ಒಳಗೆ ಇರುವವರನ್ನು ಜನರು ಆಯ್ಕೆ ಮಾಡಿದರೆ ಸರಿಯೋ ತಪ್ಪೋ, ಒಳ್ಳೆಯದೋ ಕೆಟ್ಟದ್ದೋ, ಅದೇ ಅವರ ತೀರ್ಮಾನ. ನೀವು ಒಂದು ವೇಳೆ ಅದನ್ನು ಮಿತಿಗೊಳಿಸಲು ಬಳಸಿದರೆ ಮೊದಲು ಸಂವಿಧಾನವನ್ನು ಬದಲಾಯಿಸಿ ನಂತರ ಅದನ್ನು ಮಿತಿಗೊಳಿಸಬಹುದು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಅರ್ಹತೆಗಳನ್ನು ನಿಗದಿಪಡಿಸಲು ಸಂವಿಧಾನವು ಈ ಸದನಕ್ಕೆ ಅಧಿಕಾರ ನೀಡಿದೆ.

**ಶ್ರೀ ಪಿ.ವೈ. ದೇಶಪಾಂಡೆ:** ಇದುವರೆಗೂ ನೀವು ಅದನ್ನು ಮಾಡಿಲ್ಲ.

**ಡಾ. ಅಂಬೇಡ್ಕರ್:** ನಾವು ಈಗ ಅದನ್ನು ಮಾಡುತ್ತಿದ್ದೇವೆ.

**ಉಪಸಭಾಪತಿ:** ಎರಡು ವರ್ಷಗಳಿಗೂ ಮಿಕ್ಕು ಬಂಧನಕ್ಕೊಳಗಾದ ವ್ಯಕ್ತಿಗಳನ್ನು ಏಕೆ ಅನರ್ಹಗೊಳಿಸಬೇಕು.

**ಶ್ರೀ ಪಿ.ವೈ. ದೇಶಪಾಂಡೆ:** ಅದು ನಿಜ. ನಾನು ಅಪರಾಧಿಯನ್ನು ಸಹ ಅಭ್ಯರ್ಥಿಯಾಗಿ ನಿಂತುಕೊಳ್ಳಲು ಅವಕಾಶ ನೀಡುತ್ತೇನೆ. ಅಪರಾಧಿಯ ಪ್ರಕರಣವನ್ನು ನಾನು ತಿಳಿಯಲಿಚ್ಛಿಸುತ್ತೇನೆ. ಆದರೆ ನಿಮ್ಮ ಮೂಲಭೂತ ನಿಲುವು ಪ್ರತಿಯೊಬ್ಬ ವ್ಯಕ್ತಿ ಮತಚಲಾಯಿಸಲು ಮತ್ತು ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಹಕ್ಕುಳ್ಳವನಾಗಿದ್ದಾನೆಂಬುದು ನಿಮ್ಮ ಪ್ರಜಾಪ್ರಭುತ್ವದ ಪರಿಕಲ್ಪನೆಯಾದರೆ ಅಂತಹ ಸಂದರ್ಭದಲ್ಲಿ ಒಬ್ಬ ಅಪರಾಧಿಯು ನಿಂತುಕೊಳ್ಳಲು ಧೈರ್ಯಮಾಡುತ್ತಾನೆ. ಅವರು ಒಬ್ಬ ಅಪರಾಧಿಯು ಬೇಡವೆಂದರೆ ಅವನನ್ನು ಸೋಲಿಸುತ್ತಾರೆ. ಹಾಗೆಯೇ ಒಬ್ಬ ಮಹಾರಾಜನು ನಿಂತುಕೊಳ್ಳವುದಾದರೆ ಜನರಿಗೆ ಅವನು ಬೇಡವಾದರೆ ಜನ ಅವನನ್ನು ಸೋಲಿಸುತ್ತಾರೆ. ಆ ವ್ಯಕ್ತಿಗಳನ್ನು ಸೋಲಿಸುವ ಹಕ್ಕು ಪ್ರಜೆಗಳ ಕೈಯಲ್ಲಿದೆ.

*__ಶ್ರೀ ಫುಲೆ:__ ............ ನನ್ನ ಪ್ರಕಾರ ಚುನಾವಣೆಗಳು, ದೊಡ್ಡವೋ ಅಥವಾ ಸಣ್ಣವೋ, ಈ ದೇಶದಲ್ಲಿ ನಡೆದಿವೆ. ಆದರೆ ಇದನ್ನು ರಾಜಕೀಯ ಸಿದ್ಧಾಂತಗಳ ಪ್ರಚಾರಕ್ಕಾಗಿ ಬಳಸಿಕೊಳ್ಳಲಾಗಿದೆಯೋ ಅಥವಾ ಅಭ್ಯರ್ಥಿಯ ವೈಯಕ್ತಿಕ ಪ್ರಚಾರಕ್ಕಾಗಿ ಬಳಸಿಕೊಳ್ಳಲಾಗಿದೆಯೋ ಹೇಳುವುದು ಕಷ್ಟ.

**ಡಾ. ಅಂಬೇಡ್ಕರ್:** ಮಾನ್ಯ ಸದಸ್ಯರಿಗೆ ನಾನು ಹೇಳಬಯಸುವುದೇನೆಂದರೆ ಪ್ರಕರಣ ಸಂಖ್ಯೆ ೧೨೪ರಲ್ಲಿ ಅಂತಹ ಹೊಸದೇನು ಇಲ್ಲ. ಅದು ಹಾಲಿ ಇರುವ ನಿಯಮಗಳ ಯಥಾನಕಲು. ಅದನ್ನು ಭ್ರಷ್ಟಪದ್ಧತಿಗಳು ಮತ್ತು ಚುನಾವಣಾ ಪದ್ಧತಿಗಳು–ಆದೇಶ, ಮೊದಲ ಅನುಸೂಚಿ ಭಾಗ ೩ರಲ್ಲಿ ತಾವು ನೋಡಬಹುದು. ಅದು ೧೯೧೯ರಿಂದಲೂ ಇದೆ.

**ಶ್ರೀ ಫುಲೆ:** ಅದು ಸರಿ. ನಾನು ಯೋಚಿಸುತ್ತಿದ್ದುದು ಏನೆಂದರೆ, ಈ ಪ್ರಕರಣ ಒಂದು ವಿಶಾಲ ಪರಿಕಲ್ಪನೆಯನ್ನು ಹೊಂದಿದೆ. ಅದನ್ನು ಹಿಂದಿನ ಕಾಯಿದೆಯಲ್ಲಿಯೇ ಸೇರಿಸಬೇಕಾಗಿತ್ತು, ನೀವು ಹೇಳಿದ ಹಾಗೆ ಅದನ್ನು ಸೇರಿಸಿದ್ದಾರೆ. ಈ ಕಾನೂನು ಇದ್ದಾಗ್ಯೂ ಕೂಡ ಕಾಂಗ್ರೆಸಿಗರು ಮತ್ತು ಇತರ ಸದಸ್ಯರು ಹಿಂದಿನ ಚುನಾವಣೆಯಲ್ಲಿ ಹೋರಾಡಿದರು, ಹೇಗೆಂದರೆ ತಮ್ಮ ರಾಜಕೀಯ ತತ್ವಗಳನ್ನು ಪ್ರಚಾರ ಮಾಡುತ್ತಾ ಮತ್ತು ಅದೇ ಸಮಯದಲ್ಲಿ ತಾವು ನಿಂತ ಕ್ಷೇತ್ರಗಳಲ್ಲಿ ಮತಗಳನ್ನು ಸಹ ಯಾಚಿಸುತ್ತಾ. ಆದರೆ ನಾನು ಕಂಡ ಹಾಗೆ ಭಾರತದಲ್ಲಿನ ಟ್ರಿಬ್ಯುನಲ್‌ಗಳು ಇಂತಹ ಚುನಾವಣೆಗಳನ್ನು

* P.D. ಸಂ. ೧೧, ಭಾಗ ೨, ೧೦ ಮೇ ೧೯೫೧, ಪು. ೮೫೩೪.

ಟಿ. ೪೧೯೩–೫೫.

ಅಪಮೌಲ್ಯಗೊಳಿಸಲಾಗಿದೆ ಎಂದು ತೀರ್ಪು ನೀಡಿಲ್ಲ. ಆದ್ದರಿಂದ ನಾನು ಹೇಳುತಿದ್ದ ಹಾಗೆಯೆ ಶ್ರೀ ಗೋಯಂಕರ್ ಅವರ ಅಸಮ್ಮತಿ ಟಿಪ್ಪಣಿಯನ್ನು ನೋಡಿ ನಾನು ಸ್ವಲ್ಪವೂ ವಿಚಲಿತನಾಗಿಲ್ಲ. ಆದರೆ ಡಾ. ಅಂಬೇಡ್ಕರ್‌ರವರ ಮಾತುಗಳನ್ನು ಕೇಳಿದಮೇಲೆ ಸ್ವಲ್ಪ ಕಸಿವಿಸಿಯಾಗಿದೆ. ಮಾನ್ಯ ಡಾ. ಅಂಬೇಡ್ಕರ್‌ರವರು ಹೇಳುವಂತೆ ಈ ಕಾನೂನು ಹಿಂದೆಯು ಚಾಲ್ತಿಯಲ್ಲಿತ್ತು ಮತ್ತು ಕಾಂಗ್ರೆಸಿಗರ ಹೊರತಾಗಿಯೂ ಸಮಾಜವಾದಿಗಳು ಕಮ್ಯುನಿಷ್ಟರು ಮುಂತಾದವರು ತಮ್ಮ ರಾಜಕೀಯ ತತ್ವ ಸಿದ್ಧಾಂತಗಳನ್ನು ಪ್ರಚುರ ಪಡಿಸಲು ಮತ್ತು ಅದೇ ಸಮಯದಲ್ಲಿ ತಮಗೆ ಬೇಕಾದ ಅಮೂಲ್ಯವಾದ ಮತವನ್ನು ಯಾಚಿಸಲು ಇದನ್ನು ಬಳಸಿಕೊಳ್ಳುತ್ತಿದ್ದರು. ಈಗ ಅಂತಹ ತುರ್ತು ಏನಿದೆ? ಡಾ. ಅಂಬೇಡ್ಕರ್‌ರವರು ಈ ಚರ್ಚೆಗೆ ಉತ್ತರಕೊಡುವಾಗ ಅವರ ನಿಲುವನ್ನು ಸ್ಪಷ್ಟಪಡಿಸುವುದು ಉಚಿತವೆನಿಸುತ್ತದೆ.

****ಶ್ರೀ ವೆಂಕಟರಾಮನ್: .............** ಅಲ್ಲಿ ಮತ್ತೊಂದು ವಿಷಯ ನನಗೆ ಅರ್ಥವಾಗುತ್ತಿಲ್ಲ. ಮಸೂದೆಯ ಪ್ರಕರಣ ೩ರಲ್ಲಿ ಹೇಳಿರುವುದೇನೆಂದರೆ ಒಬ್ಬ ಅಭ್ಯರ್ಥಿಯು ಮೇಲ್ಮನೆಯ ಸದಸ್ಯನಾಗಲು ಆಯಾ ರಾಜ್ಯದ ನಿವಾಸಿಯಾಗಿರಬೇಕು. ಆದರೆ ಒಬ್ಬ ಪ್ರತಿನಿಧಿಯು ಕೆಳಮನೆಯ ಅಭ್ಯರ್ಥಿಯಾಗಬೇಕಾದರೆ ಆತನು ಯಾವುದಾದರೂ ಸಂಸತ್ ಕ್ಷೇತ್ರದ ನಿವಾಸಿಯಾಗಿದ್ದರೆ ಸಾಕು. ಈ ವ್ಯತ್ಯಾಸಕ್ಕೆ ಸರಿಯಾದ ಕಾರಣವಿದೆ ಎಂದು ನನಗೆ ಕಾಣುತ್ತಿಲ್ಲ. ಅಂತಹ ಕಾರಣವೇನಾದರು ಇದ್ದರೆ ಸನ್ಮಾನ್ಯ ಕಾನೂನು ಮಂತ್ರಿಗಳು ಸ್ಪಷ್ಟೀಕರಣ ನೀಡುವರೆಂದು ನಂಬಿದ್ದೇನೆ.

> "ಒಬ್ಬ ವ್ಯಕ್ತಿಯು ಜನಪ್ರತಿನಿಧಿ ಎಂದು ಆಯ್ಕೆಯಾಗಬೇಕಾದರೆ ಸಂಸತ್ ಮತ ಕ್ಷೇತ್ರದಲ್ಲಿ ಆತ ಓಟು ಚಲಾಯಿಸುವ ಅಧಿಕಾರವುಳ್ಳವನಾಗಿರಬೇಕು....."

**ಶ್ರೀ ಶಾಮಾನಂದನ್ ಸಹಾಯ: (ಬಿಹಾರ್):** ಯಾಕೆಂದರೆ ಅದು ರಾಜ್ಯಗಳ ಕೌನ್ಸಿಲ್.

**ಡಾ. ಅಂಬೇಡ್ಕರ್:** ಹೌದು ಅದುವೆ ಕಾರಣ. ಮತ್ತೊಂದು ಕಾರಣ ಪ್ರಜಾಪ್ರತಿನಿಧಿಗಳ ಸಭೆ.

**ಶ್ರೀ ವೆಂಕಟರಾಮನ್:** ಆದರೆ ಒಬ್ಬ ವ್ಯಕ್ತಿಯು ಒಂದು ನಿರ್ದಿಷ್ಟ ರಾಜ್ಯಕ್ಕೆ ಸೇರಿದವನಾಗಿದ್ದು ಬೇರೆಲ್ಲಿಯೋ ವಾಸವಾಗಿದ್ದರೆ ಆತನನ್ನು ಅಭ್ಯರ್ಥಿಯಾಗಿ ನಿಲ್ಲುವುದಕ್ಕೆ ಅನರ್ಹಗೊಳಿಸಬಾರದು. ಅವನು ಆ ರಾಜ್ಯದ ಪ್ರಜೆಯಲ್ಲ ಎಂಬ ಕಾರಣ ಸಾಲದು. ನಿಮ್ಮದೇ ಪ್ರಕರಣವನ್ನು ನೋಡಿ ಸ್ವಾಮಿ. ನೀವು ದೆಹಲಿಯ ನಿವಾಸಿಯಾಗಿದ್ದೀರಿ ಆದರೂ ನಿಮ್ಮ ಸ್ವಂತ ರಾಜ್ಯದಿಂದ ನೀವು ಚುನಾವಣೆಯಲ್ಲಿ ಸ್ಪರ್ಧಿಸಲಾರಿರಿ. ಕಾರಣ ನೀವು ಆ ಮತಕ್ಷೇತ್ರದ ಸದಸ್ಯರಾಗಿಲ್ಲ.

**ಉಪ ಸಭಾಪತಿ:** ನನ್ನ ಮತಕ್ಷೇತ್ರದೊಂದಿಗೆ ನಾನು ಸಂಪರ್ಕವಿಟ್ಟುಕೊಂಡಿಲ್ಲವೆಂದಾದರೆ ನಾನು ಏಕೆ ಪ್ರತಿನಿಧಿಯಾಗಿ ನಿಲ್ಲಬೇಕು.

**ಶ್ರೀ ವೆಂಕಟರಾಮನ್:** ಸ್ವಾಮಿ, ನಾನು ಹೇಳಿದ ಹಾಗೆ ಈ ಅಂಶವನ್ನು ಪರಿಗಣಿಸಬೇಕು.

***ಶ್ರೀ ವೆಂಕಟರಾಮನ್:** . . . . ಒಂದು ಪಕ್ಷವು ಆ ಪಕ್ಷದ ಅಭ್ಯರ್ಥಿ ಯಾರೆಂದು ಹೇಳದೆ **"**ಕಾಂಗ್ರೇಸಿಗೆ ಓಟು ಮಾಡಿ, ಸ್ವತಂತ್ರ ಪಕ್ಷಕ್ಕೆ ಓಟು ಮಾಡಿ ಅಥವಾ ಸಮಾಜವಾದಿ ಪಕ್ಷಕ್ಕೆ ಓಟು ಮಾಡಿ**"** ಎಂಬ ಪ್ರಚಾರದೊಂದಿಗೆ ಹೋಗಲಾಗುವುದಿಲ್ಲ. ಆದರೆ ಆ ಸುದ್ದಿಯು ತಿಳಿದ ತಕ್ಷಣವೆ ಅದು ಕಾನೂನು ಬಾಹಿರವಾಗುತ್ತದೆ. ಹಿಂದೆ ಅಂತಹ ಘಟನೆಗಳೇನಾದರು ಇದ್ದರೂ ಸಹ ಅದನ್ನು ಬದಲಾಯಿಸಲು ಕಾಲ ಕೂಡಿ ಬಂದಿದೆ.

---

** P.D. ಸಂ. ೧೧, ಭಾಗ ೨, ೧೦ ಮೇ ೧೯೫೧, ಪು. ೮೫೭೪–೭೫.

* P.D. ಸಂ. ೧೧, ಭಾಗ ೨, ೧೦ ಮೇ ೧೯೫೧, ಪು. ೮೫೭೮.

**ಪ್ರೊ. ರಂಗ (ಮದ್ರಾಸ್):** ಇಂಗ್ಲೆಂಡಿನಲ್ಲಿರುವ ಪರಿಸ್ಥಿತಿಯೇನು?

**ಡಾ. ಅಂಬೇಡ್ಕರ್:** ಅದು ಮಸೂದೆಯಲ್ಲಿ ಹೇಗಿದೆಯೋ ಹಾಗಿದೆ – ಏನೂ ವ್ಯತ್ಯಾಸವಿಲ್ಲ.

**ಶ್ರೀ ವೆಂಕಟರಾಮನ್:** ಮತ್ತೆ ಪ್ರಕರಣ ೧೨೪ರ ಉಪ ಪ್ರಕರಣ (೩)ರಲ್ಲಿ ನೀವು ಹೇಳಿರುವಂತೆ ಸುತ್ತೋಲೆ ಹೊರಡಿಸುವುದು ಪ್ರಕಟಣೆ ಅಥವಾ ಭಿತ್ತಿಪತ್ರ ಹೊರಡಿಸುವುದು ಚುನಾವಣೆಗೆ ಸಂಬಂಧವಿದ್ದು ಆದರೆ ಮುದ್ರಕ ಮತ್ತು ಪ್ರಕಾಶಕರ ಹೆಸರನ್ನು ಹೊಂದಿಲ್ಲದಿದ್ದರೆ ಅಂತಹವು ಕಾನೂನು ಬಾಹಿರ ವ್ಯವಹಾರಗಳಾಗುತ್ತವೆ. ಒಬ್ಬ ವಿರೋಧಿಗೆ ಮಾಡಲು ಸುಲಭವಾದ ಕೆಲಸವೆಂದರೆ ತನ್ನ ವಿರೋಧಿಯ ಕುರಿತು ಒಂದು ಸುತ್ತೋಲೆಯನ್ನು ಹೊರಡಿಸುವುದು. ಅದು ಮುದ್ರಕ ಮತ್ತು ಪ್ರಕಾಶಕನ ಹೆಸರಿಲ್ಲದೆ. ಆಗ ಈ ಮನುಷ್ಯ ಅನರ್ಹಗೊಳ್ಳುತ್ತಾನೆ.

**ಉಪಸಭಾಪತಿ:** ಅಭ್ಯರ್ಥಿಯು ಇದರಲ್ಲಿ ಭಾಗಿಯಾಗಿಲ್ಲದಿದ್ದರೆ ಅವನನ್ನು ಅನರ್ಹಗೊಳಿಸಲಾಗುವುದಿಲ್ಲ.

****ಪ್ರೊ. ರಂಗ:** ಟ್ರೈಬ್ಯನಲ್‌ನ ಅಧ್ಯಕ್ಷಗಿರಿಯ ವಿಷಯವಾಗಿ ನಾನು ಹೇಳುವುದಾದರೆ ಜಿಲ್ಲಾ ನ್ಯಾಯಾಧೀಶರನ್ನು ಅಧ್ಯಕ್ಷರನ್ನಾಗಿ ಮಾಡುವುದು ಅಷ್ಟೇನು ಯುಕ್ತವಲ್ಲ. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗಿಂತ ಕಡಿಮೆ ಅಂತಸ್ತುಳ್ಳ ಯಾರನ್ನೂ ಸಹ ಟ್ರಿಬ್ಯುನಲ್‌ಗೆ ಅಧ್ಯಕ್ಷರನ್ನಾಗಿ ನಿಯಮಿಸಬಾರದು.

**ಡಾ. ಅಂಬೇಡ್ಕರ್:** ನೀವು ಅಷ್ಟೊಂದು ಜನ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಪಡೆಯಲು ಸಾಧ್ಯವಿಲ್ಲ.

**ಪ್ರೊ. ರಂಗ:** ನಿಮ್ಮಲ್ಲಿ ಅಷ್ಟೊಂದು ಟ್ರಿಬ್ಯುನಲ್‌ಗಳು ಕೂಡ ಇಲ್ಲ.

**ಡಾ. ಅಂಬೇಡ್ಕರ್:** ಅಲ್ಲಿ ಎಷ್ಟು ಅರ್ಜಿಗಳಿರಬಹುದು ಎಂಬ ವಿಷಯವು ನಿಮಗೆ ತಿಳಿದಿಲ್ಲ.

**ಪ್ರೊ. ರಂಗ:** ಹಾಗಾದರೆ ಚುನಾವಣಾ ವೆಚ್ಚಕ್ಕೆ ಒಂದು ಗರಿಷ್ಠ ಮಿತಿಯಿರಬೇಕು. ಇದನ್ನು ಕಾನೂನು ನಂತರ ನಿರ್ಧರಿಸಲಿ ಎಂದು ಬಿಟ್ಟುಬಿಡುವುದು ಸಮಂಜಸವಲ್ಲ. ಮತ್ತು ಈ ನಿಯಮಗಳನ್ನು ಮಾಡುವುದರಿಂದ ಈ ಜವಾಬ್ದಾರಿಯನ್ನು ಸಂಯುಕ್ತ ಸರ್ಕಾರ ಹೊಂದಿರುತ್ತದೆ ರಾಜ್ಯ ಸರ್ಕಾರಗಳಲ್ಲ. ಈ ಸಂಬಂಧ ನಾನು ಕಾನೂನು ಮಂತ್ರಿಯವರ ಪರಿಗಣನೆಗೆ ಸಲಹೆ ನೀಡುವುದೇನೆಂದರೆ ಈ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ಬಿಟ್ಟರೆ ಅವರು ಚುನಾವಣಾ ಆಯುಕ್ತರ ಸಲಹೆ ಮೇರೆಗೆ ಅದನ್ನು ಚಲಾಯಿಸಲು ಅನುಕೂಲವಾಗುತ್ತದೆ.

***ಆರ್.ಕೆ. ಚೌದರಿ: .........** ಉದಾಹರಣೆಗೆ ವಾಹನ ಭತ್ಯೆಗೆ ಸಂಬಂಧಪಟ್ಟ ಉಪಬಂಧವನ್ನೇ ನೋಡಬಹುದು. ಒಂದು ವೇಳೆ ಈ ನಿಯಮವನ್ನು ತೀವ್ರವಾಗಿ ಮುಂಚೆಯೇ ಅಳವಡಿಸಿಕೊಂಡಿದ್ದರೆ ಭಾರತದಲ್ಲಿ ಇದುವರೆಗೆ ನಡೆದಿರುವ ಎಲ್ಲಾ ಚುನಾವಣೆಗಳು ಅಸಿಂಧುವಾಗುತ್ತಿದ್ದವು. ಆದರೆ ಇಂದು ನಾವು ಬೆನ್ನು ತಿರುಗಿಸಿ ಅಂತಹ ಕೊರತೆಗಳನ್ನು ತುಂಬಲು ಶಕ್ತಿಮೀರಿ ಪ್ರಯತ್ನಿಸುತ್ತಿದ್ದೇವೆ. ಚುನಾವಣಾ ಸಮಯದಲ್ಲಿ ತಪ್ಪು ಮಾಡುವವರನ್ನು ಗುರುತರ ದಂಡ ಪಾವತಿಗೆ ಒಳಪಡಿಸುತ್ತಿದ್ದೇವೆ.

**ಮಿ. ಉಪಸಭಾಪತಿ:** ಶ್ರೀ ರೋಹಿಣಿಕುಮಾರ್ ಚೌದರಿ

**ಒಬ್ಬ ಗೌರವಾನ್ವಿತ ಸದಸ್ಯರು:** ಇದು ಜಬರ್‌ದಸ್ತಿ.

**ಡಾ. ಅಂಬೇಡ್ಕರ್:** ಮಹಿಳೆಯರನ್ನು ಅನರ್ಹಗೊಳಿಸುವುದನ್ನು ನೀವು ಬಯಸುತ್ತೀರಾ?

---

** ಅದೇ, ಪು. ೮೬೧೧.

* P.D. ಸಂ. ೧೧, ಭಾಗ ೨, ೧೨ ಮೇ ೧೯೫೧, ಪು. ೮೬೩೨.

ಟಿ. ೪೧೯೩–೩೫೭.

**ಆರ್. ಕೆ. ಚೌದರಿ:** ನಾನು ಮಾತನಾಡಲು ಇಷ್ಟಪಡುವ ಮೊದಲ ಅಂಶವೇನೆಂದರೆ ಪ್ರಕರಣ ೭ರಲ್ಲಿ ವಿವರಿಸುವ ಅನರ್ಹತೆಗಳನ್ನು ಕುರಿತು. ನನಗಿಂತಲು ಮೊದಲು ಒಬ್ಬರಿಗಿಂತಲೂ ಹೆಚ್ಚು ಇದನ್ನು ಕುರಿತು ಮಾತಾಡಿದ್ದಾರೆ. ನಾನು ಕೇವಲ ಕೆಲವು ನನ್ನ ವಾದಗಳನ್ನು ಸೇರಿಸುತ್ತಿದ್ದೇನೆ. ಅದು ಪ್ರಕರಣ ೭ರ ಉಪ ಪ್ರಕರಣ ಡಿ ಯನ್ನು ಸಂಪೂರ್ಣವಾಗಿ ತೆಗೆದು ಹಾಕುವುದು.

**ಉಪ ಸಭಾಪತಿ:** ಮಾನ್ಯ ಸದಸ್ಯರಿಗೆ ನಾನು ೧೦ ನಿಮಿಷ ಸಮಯವನ್ನು ನೀಡಲು ಇಷ್ಟಪಡುತ್ತೇನೆ. ಮತ್ತು ಮಾನ್ಯ ಮಂತ್ರಿಯವರನ್ನು ಒಂದು ಘಂಟೆಗೆ ೫ ನಿಮಿಷ ಮೊದಲು ಕರೆಯಲಿಚ್ಛಿಸುತ್ತೇನೆ.

**ಡಾ. ಅಂಬೇಡ್ಕರ್:** ನಾನು ತಿಳಿದುಕೊಂಡಂತೆ ಬೆಳಿಗ್ಗೆ ನೀಡಿದ ಸೂಚನೆ ಪ್ರಕಾರ ಇದನ್ನು ನಾನು ಸೋಮವಾರ ಬೆಳಿಗ್ಗೆ ಉತ್ತರಿಸಬೇಕಾಗುತ್ತದೆ.

**ಡಾ. ದೇಶ್‌ಮುಖ್:** ಈ ಅಂಶಗಳನ್ನು ಸದನದ ಬಹುತೇಕ ಸದಸ್ಯರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸರ್ವಾನುಮತಕ್ಕೆ ಸಾಕಷ್ಟು ಒಲವಿರುವ ಕಾರಣ ಅವುಗಳನ್ನು ಸನ್ಮಾನ್ಯ ಡಾ. ಅಂಬೇಡ್ಕರ್ ರವರು ಒಪ್ಪುತ್ತಾರೆಂದು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್:** ಸ್ವಾಮಿ, ನನ್ನ ಈ ನಿಲುವಳಿಯನ್ನು ಚರ್ಚೆಗೆ ತೆಗೆದುಕೊಂಡಾಗ ನೀವು ಬಹಳ ಸಂತೋಷದಿಂದ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಹಾಗೆ ಈ ಮಸೂದೆಯ ಉದ್ದಕ್ಕೂ ಯಾವುದೇ ತಾತ್ತ್ವಿಕ ವಿಚಾರಗಳಿಲ್ಲ ಮತ್ತು ಪ್ರತಿಯೊಂದು ಪ್ರಕರಣವು ತನ್ನ ಗುಣಗಳ ಮೇಲೆ ನಿಂತಿವೆ. ಸರಿಯಾದ ಕ್ರಮವೆಂದರೆ ಪ್ರತಿಯೊಂದು ಪ್ರಕರಣ ಸದನದ ಮುಂದೆ ಚರ್ಚೆಗೆ ಬಂದಾಗ ನನಗನಿಸುವಂತೆ ಈ ಅಂಶಗಳನ್ನು ಈಗಾಗಲೇ ಚರ್ಚೆಯ ಸಮಯದಲ್ಲಿ ಸಾಕಷ್ಟು ಚರ್ಚಿಸಿರುವುದರ ಕಾರಣ ನಾನು ಮತ್ತಷ್ಟು ಸಮಯವನ್ನು ವ್ಯಯಮಾಡುವ ಅಗತ್ಯವಿರುವುದಿಲ್ಲ. ಅನೇಕ ಸದಸ್ಯರು ತಾವು ಮಾಡಿದ ಟೀಕೆಗಳನ್ನು ಗಂಭೀರವಾಗಿ ತೆಗೆದುಕೊಂಡಿದ್ದರೆ ಅವುಗಳನ್ನು ನಿಸ್ಸಂದೇಹವಾಗಿ ಸದನದ ಮುಂದೆ ಹೇಳಬಹುದು. ಒಂದು ವೇಳೆ ಅವರಿಗೇನಾದರು ತೊಂದರೆ ಕಂಡುಬಂದರೆ ಅದನ್ನು ನಾನೇ ಕೈಗೆತ್ತಿಕೊಂಡು ತೊಂದರೆಯನ್ನು ನಿವಾರಿಸಲು ಪ್ರಯತ್ನಿಸುತ್ತೇನೆ. ಅಥವಾ ಅವರೇ ಸರಿಯಾದ ತಿದ್ದುಪಡಿಗಳನ್ನು ಮಾಡಲು ಕ್ರಮ ತೆಗೆದುಕೊಳ್ಳಬಹುದು ಮತ್ತು ಅವರ ವಿಚಾರಗಳನ್ನು ಸದನದಲ್ಲಿ ಚರ್ಚೆಯಾಗುವಂತೆ ಸದನವನ್ನು ಒಪ್ಪಿಸಬಹುದು.

ಹೀಗಿರುವಾಗ ಈಗಾಗಲೆ ಚರ್ಚಿತವಾಗಿರುವ ಅನೇಕ ವಿಷಯಗಳನ್ನು ಮತ್ತೆ ಉದ್ದುದ್ದ ಚರ್ಚಿಸುವ ಆವಶ್ಯಕತೆ ನನಗಿಲ್ಲ. ಆದ್ದರಿಂದ ನಾನು ಕೆಲವು ವಿಷಯಗಳ ಮೇಲೆ ಅಂದರೆ ಯಾವ ವಿಷಯಗಳು ಚರ್ಚೆಯ ಕಾಲದಲ್ಲಿ ಬರಲಾರವು ಅಂತಹ ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ಹೇಳಲು ಉದ್ದೇಶಿಸುತ್ತೇನೆ.

**ಉಪಸಭಾಪತಿ:** ಮಾನ್ಯ ಮಂತ್ರಿಗಳು ಸ್ವಲ್ಪ ಸಮಯ ತೆಗೆದುಕೊಳ್ಳಬಹುದೆ.

**ಡಾ. ಅಂಬೇಡ್ಕರ್:** ಹೌದು ಸ್ವಾಮಿ.

**ಮಿ. ಉಪಸಭಾಪತಿ:** ಸದನವು ಸೋಮವಾರ ೮.೩೦ ಗಂಟೆಯವರೆಗೆ ಮುಂದೂಡಲ್ಪಟ್ಟಿದೆ.

ಸದನವು ಆನಂತರ ೧೪ ಮೇ ೧೯೫೧ರ ಸೋಮವಾರ ಬೆಳಿಗ್ಗೆ ೮.೩೦ ಗಂಟೆಯವರೆಗೆ ಮುಂದೂಡಲ್ಪಟ್ಟಿತು.

# ಜನತಾ ಪ್ರಾತಿನಿಧ್ಯ ಮಸೂದೆ – ೨

*ಮಾನ್ಯ ಸಭಾಪತಿ:** ಡಾ: ಬಿ.ಆರ್. ಅಂಬೇಡ್ಕರ್ ಅವರು ದಿನಾಂಕ ಮೇ ೯ ರಂದು ಮಂಡಿಸಿದ ಜನತಾ ಪ್ರಾತಿನಿಧ್ಯ ಮಸೂದೆಗೆ (೨) ಸಂಬಂಧಿಸಿದ ಗೊತ್ತುವಳಿ ಮೇಲಿನ ಚರ್ಚೆಯನ್ನು ಸದನದಲ್ಲಿ ಈಗ ಮುಂದುವರಿಸಲಾಗುವುದು.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಕಳೆದ ಶನಿವಾರ ನನ್ನ ಗೊತ್ತುವಳಿ ಮೇಲಿನ ಸಾಮಾನ್ಯ ಚರ್ಚೆಗೆ ಉತ್ತರಕೊಡುತ್ತಾ, ನನ್ನ ಗೊತ್ತುವಳಿ ಮೇಲೆ ಮಾತನಾಡಿದವರು ಮಹತ್ವಪೂರ್ಣವಾದ ಅನೇಕ ಅಂಶಗಳನ್ನು ಪ್ರಸ್ತಾಪಿಸಿದರು ಎಂದು ವ್ಯಕ್ತಪಡಿಸಿದ್ದೆ. ಕೆಲವು ಅಂಶಗಳು ವಾಸ್ತವವಾಗಿ ಈಗಾಗಲೇ ತಿದ್ದುಪಡಿಗಳಲ್ಲಿ ಅಡಕವಾಗಿವೆ. ಆದ್ದರಿಂದ ಉತ್ತರದಲ್ಲಿ ಮತ್ತೆ ಅವುಗಳನ್ನು ಕುರಿತು ಮಾತನಾಡುವ ಅಗತ್ಯವಿಲ್ಲ. ಏಕೆಂದರೆ ಗೊತ್ತುವಳಿಗಳನ್ನು ಮಂಡಿಸಿದಾಗ ಸಮರ್ಪಕವಾದ, ಉತ್ತಮವಾದ ಉತ್ತರಕೊಡಬಹುದೆಂಬುದು ನನ್ನ ಭಾವನೆಯಾಗಿತ್ತು. ಎಂದೇ, ಯಾವುದೇ ತಿದ್ದುಪಡಿ ಒಳಗೊಳ್ಳದಿರುವಂಥ ವಿಷಯಗಳಿಗೆ ಮಾತ್ರ ನಾನು ಸೀಮಿತಗೊಳ್ಳುವುದಾಗಿ ತಿಳಿಸಿದ್ದೆ. ತಿದ್ದುಪಡಿಗಳನ್ನು ಪರಾಮರ್ಶಿಸಿದಾಗ ಹುರುಳು ಇರುವಂಥ ಮೂರು ಅಂಶಗಳು ಮಾತ್ರ ನನ್ನ ಗಮನಕ್ಕೆ ಬಂದವು. ಇವುಗಳ ವಿಷಯದಲ್ಲಿ ನಿರ್ದಿಷ್ಟವಾದ ತಿದ್ದುಪಡಿಗಳನ್ನು ಸೂಚಿಸಿಲ್ಲ ಎನ್ನುವುದೂ ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಈ ಅಂಶಗಳಿಗೆ ಮಾತ್ರ ನನ್ನ ಮಾತುಗಳನ್ನು ಸೀಮಿತಗೊಳಿಸಲುದ್ದೇಶಿಸಿದ್ದೇನೆ.

ಇವುಗಳ ಪೈಕಿ ಮೊದಲನೆಯ ಅಂಶವನ್ನು ಎತ್ತಿರುವವರು ಬಾಬು ರಾಮನಾರಾಯಣ ಸಿಂಗ್ ಮತ್ತು ನನ್ನ ಮಿತ್ರರಾದ ಪ್ರೊ. ರಂಗಾ ತಮ್ಮ ಅನುಭವ ಮತ್ತು ತಮಗೆ ದೊರೆತಿರುವ ಮಾಹಿತಿ ಪ್ರಕಾರ ವಿವಿಧ ಪ್ರಾಂತ್ಯಗಳು ಮತ್ತು ರಾಜ್ಯ ಸರ್ಕಾರಗಳ ಮಂತ್ರಿಗಳು ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು, ಇವರುಗಳು ತಮ್ಮ ಸ್ವಂತ ರಾಜಕೀಯ ಹಿತಾಸಕ್ತಿಗಳಿಗಾಗಿ ಅಥವಾ ತಮ್ಮ ಪಕ್ಷಗಳ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ಪ್ರಭಾವ ಬೀರುತ್ತಿದ್ದಾರೆ; ಈ ರೀತಿಯ ಅಧಿಕಾರ ದುರುಪಯೋಗ ಮತ್ತು ಪ್ರಭಾವ ತಮಗೆ ಒಲಿಯದವರ ವಿರುದ್ಧ ಅಕ್ರಮಗಳನ್ನೆಸಗುವ ಉದ್ದೇಶದಿಂದ ಕೂಡಿದ್ದು ಎನ್ನುವುದು ಇವರಿಬ್ಬರ ದೂರು. ವಾಸ್ತವವಾಗಿ ಚುನಾವಣೆ ಪ್ರಾರಂಭಕ್ಕೆ ಪೂರ್ವಭಾವಿಯಾಗಿ ರಾಜೀನಾಮೆ ನೀಡುವಂತೆ ಸಚಿವರಿಗೆ ಆದೇಶಿಸುವ ವಿಧಿ ಈ ಕಾನೂನಿನಲ್ಲಿರಬೇಕೆಂಬುದು ಇವರ ಸಲಹೆ. ನನ್ನ ಮಿತ್ರ ಬಾಬು ರಾಮನಾರಾಯಣಸಿಂಗ್ ಅಥವಾ ಪ್ರೊ. ರಂಗಾ ಈ ಸಲಹೆಯನ್ನು ಕೂಲಂಕಷವಾಗಿ ಪರಾಮರ್ಶಿಸಿಲ್ಲ ಎಂದು ನನಗೆ ತೋರುತ್ತದೆ. ಏಕೆಂದರೆ ಇಂಥದೊಂದು ಸೂಚನೆಯನ್ನು ಜಾರಿಗೆ ತರುವ ಸಾಧ್ಯತೆ ಬಗ್ಗೆ ಪರಾಮರ್ಶಿಸಿದಲ್ಲಿ, ಬಹುತೇಕ ಇದನ್ನು ಜಾರಿಗೆ ತರುವುದು ಅಸಾಧ್ಯ ಎನ್ನುವುದನ್ನು ಅವರು ಮನಗಾಣುತ್ತಾರೆ ಎಂಬುದರಲ್ಲಿ ನನಗೆ ಅನುಮಾನವಿಲ್ಲ. ಈ ಸಂಬಂಧವಾಗಿ ನಮ್ಮ ಸಂವಿಧಾನದಲ್ಲಿರುವ ವಿಧಿ, ಕಟ್ಟಳೆಗಳನ್ನು ಗಮನಕ್ಕೆ ತರಲಿಚ್ಛಿಸುತ್ತೇನೆ. ಸಂವಿಧಾನ ರೀತ್ಯ ರಾಷ್ಟ್ರಪತಿ ಸರ್ಕಾರದ ಮುಖ್ಯಸ್ಥರು. ಅಂತೆಯೇ, ಸಚಿವ ಸಂಪುಟದ ಸಲಹೆ ಹೊರತಾಗಿ ರಾಷ್ಟ್ರಪತಿ ಏನೊಂದು ಕ್ರಮವನ್ನೂ ಕೈಗೊಳ್ಳುವಂತಿಲ್ಲ ಎಂದು ಇದೇ ಸಂವಿಧಾನ ಹೇಳುತ್ತದೆ. ಆದ್ದರಿಂದ ರಾಷ್ಟ್ರಪತಿಗಳು ಕ್ರಮಕೈಗೊಳ್ಳಲು, ಸಂವಿಧಾನದ ಪ್ರಕಾರ ಅವರಿಗೆ ಸಲಹೆ ನೀಡಲು ಸಾರ್ವಕಾಲಿಕವಾಗಿ ಸಚಿವ ಸಂಪುಟ

---

* P.D. ಸಂ. ೧೧, ಭಾಗ ೨, ೧೪ ಮೇ ೧೯೫೧, ಪು. ೮೬೫೦–೫೭.

ಅಸ್ತಿತ್ವದಲ್ಲಿರಲೇಬೇಕು. ಪ್ರಾಂತ್ಯದ ಮುಖ್ಯಸ್ಥರು, ಅಂದರೆ ಗೌರ್ನರ್ ಆದವರು ಕೆಲವೊಂದು ಸಂದರ್ಭಗಳಲ್ಲಿ ಮಂತ್ರಿ ಮಂಡಲದ ಸಲಹೆ ಇಲ್ಲದೆಯೇ ಸ್ವಯಮಾಧಿಕಾರದಿಂದ ಕ್ರಮ ಕೈಗೊಳ್ಳಬಹುದು ಎನ್ನುವ ೯೩ ನೇ ವಿಧಿ ೧೯೩೫ ರ ಭಾರತ ಸರ್ಕಾರದ ಶಾಸನದಲ್ಲಿದೆ. ಇಂಥ ವಿಧಿ ನಮ್ಮ ಸಂವಿಧಾನದಲ್ಲಿ ಇಲ್ಲವೇ ಇಲ್ಲ. ವಸ್ತುತಃ ನೋಡಿದರೆ ಈ ಸಲಹೆಯನ್ನು ಜಾರಿಗೆ ತರಲು ಮೂರು ತಿಂಗಳ ಕಾಲ ಇಡೀ ಸರ್ಕಾರವನ್ನು ಅಮಾನತಿನಲ್ಲಿಡಬೇಕಾಗುತ್ತದೆ. ಆದ್ದರಿಂದ, ಸಂವಿಧಾನದ ದೃಷ್ಟಿಯಿಂದಲೇ ಸೂಚಿಸಲಾಗಿರುವ ಸಲಹೆ ಕಾರ್ಯಸಾಧ್ಯವಾದುದಲ್ಲ.

ಬಾಬು ರಾಮನಾರಾಯಣಸಿಂಗ್ ಮತ್ತು ಪ್ರೊ. ರಂಗಾ ಈ ಇಬ್ಬರು ಸದಸ್ಯರೂ ಸರ್ಕಾರಿ ಸೇವೆಯಲ್ಲಿರುವ ಸಿವಿಲ್ ಅಧಿಕಾರಿಗಳ ನಡಾವಳಿಯನ್ನು ಪ್ರಸ್ತಾಪಿಸಿದ್ದಾರೆ. ಸಿವಿಲ್ ಅಧಿಕಾರಿಗಳು ಮಂತ್ರಿಗಳ ಖಚಿತ ಆದೇಶಾನುವರ್ತಿಗಳಾಗಿಯೋ ಅಥವಾ ಮುಖಸ್ತುತಿ ಮೂಲಕ ತಾವು ಸೇವೆ ಸಲ್ಲಿಸುತ್ತಿರುವ ಮಂತ್ರಿಗಳ ಸ್ನೇಹ ವಿಶ್ವಾಸಗಳಿಸುವ ಸ್ವಯಮಾಕಾಂಕ್ಷೆಯಿಂದಲೋ ತೊಡಗಬಾರದ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಇದನ್ನು ಕೇಳಲು ನನಗೆ ತುಂಬ ವಿಷಾದವಾಗುತ್ತದೆ. ಇವರಿಬ್ಬರಲ್ಲಿ ಒಬ್ಬರಾದರೂ ಆರೋಪಿಸಿರುವ ಸಂಗತಿಗಳು ನಿಜವಾಗಿದ್ದಲ್ಲಿ ಅದು ನಿಸ್ಸಂದೇಹವಾಗಿಯೂ ನಮ್ಮ ಸಿವಿಲ್ ಅಧಿಕಾರಿಗಳ ನೈತಿಕ ಸ್ಥೈರ್ಯ ಕುಸಿದಿರುವುದರ ಸೂಚನೆಯಾಗಿದೆ. ಇದು ಇನ್ನೂ ಹೆಚ್ಚು ವಿಷಾದಕರ. ಏಕೆಂದರೆ ಸಿವಿಲ್ ನೌಕರರಿಗೆ ಹುದ್ದೆಯಲ್ಲಿನ ಸೇವಾ ಅವಧಿ, ಬಡ್ತಿ, ಸಂಬಳ ಇತ್ಯಾದಿ ಸವಲತ್ತುಗಳಿಗೆ ಸಂಬಂಧಿಸಿದಂತೆ ರಕ್ಷಣೆ ನೀಡಲು ಸಂವಿಧಾನದಲ್ಲಿ ಮತ್ತು ಅದರನ್ವಯ ರಚಿಸಲಾಗಿರುವ ನಿಯಮಾವಳಿಗಳಲ್ಲಿ ಹೆಚ್ಚಿನ ಶ್ರಮ ಮುತುವರ್ಜಿ ವಹಿಸಿದ್ದೇವೆ. ಆಡಳಿತ ವಿಷಯದಲ್ಲಿ ಸ್ವತಂತ್ರವಾಗಿರಲು ಸಿವಿಲ್ ನೌಕರರಿಗೆ ಅಗತ್ಯವಾದ ಭದ್ರತೆಯನ್ನು ಒದಗಿಸುವ ಖಚಿತ ಉದ್ದೇಶದಿಂದಲೇ ಇದೆಲ್ಲವನ್ನೂ ಮಾಡಲಾಗಿದೆ. ರಕ್ಷಣೆ, ಭದ್ರತೆಗಳನ್ನು ಒದಗಿಸಿದ್ದಾಗ್ಯೂ ಸಿವಿಲ್ ನೌಕರರಿಗೆ ತಮ್ಮ ಅತ್ಯುನ್ನತ ಪರಂಪರೆಗನುಗುಣವಾಗಿ ನಡೆದುಕೊಳ್ಳಲು ಸಾಧ್ಯವಾಗಿಲ್ಲ ಎಂದರೆ ದೊಡ್ಡ ಪ್ರಮಾಣದಲ್ಲೇ ನೈತಿಕ ಸ್ಥೈರ್ಯನಾಶವಾಗಿದೆ ಎಂದು ಮಾತ್ರ ಹೇಳುವುದು ನನ್ನಿಂದ ಸಾಧ್ಯವಾದೀತು. ಆದರೆ ಇದಕ್ಕೆ ಏನು ಪರಿಹಾರವೋ ನನಗೆ ತಿಳಿಯದು. ಬೈಬಲ್ ಹೇಳುವಂತೆ, "ಉಪ್ಪೇ ಸಪ್ಪೆಯಾಗಿಬಿಟ್ಟರೆ ಅದಕ್ಕೆ ಇನ್ನಾವುದರಿಂದ ಪುನಃ ಉಪ್ಪಿನ ರುಚಿ ಬಂದೀತು?" – ಸಿವಿಲ್ ಅಧಿಕಾರಿಗಳು ಉಪ್ಪಿನ ರುಚಿಸತ್ತ್ವಗಳನ್ನು ಕಳೆದುಕೊಂಡರೆ? ಅವರಲ್ಲಿ ಪುನಃ ಉಪ್ಪಿನ ರುಚಿ–ಸತ್ತ್ವಗಳನ್ನು ಹೇಗೆ ಊರ್ಜಿತಗೊಳಿಸುವುದು ಎಂಬುದು ನನಗೆ ತಿಳಿಯದು. ಒಟ್ಟಾರೆಯಾಗಿ ನಮ್ಮ ಜನತೆಯ ಮನೋಧರ್ಮದಲ್ಲೇ ಸಾರ್ವತ್ರಿಕವಾಗಿ ಸುಧಾರಣೆಯಾಗಬೇಕೆಂಬುದನ್ನೇ ನಾವು ಆಶ್ರಯಿಸಬೇಕಾಗಿದೆ, ಹಾಗೂ ನಮ್ಮ ಸಾರ್ವಜನಿಕ ಜೀವನ ಪಥದಲ್ಲಿ ನಾವು ಪಾಲಿಸಬೇಕಾದ ಕೆಲವು ನೈತಿಕ ತತ್ತ್ವಗಳಿವೆ ಎಂದು ನಾನು ಭಾವಿಸುತ್ತೇನೆ. ಒಂದಲ್ಲ ಒಂದು ದಿನ ಈ ಬಗೆಯ ನೈತಿಕ ಭಾವನೆಗಳ ಉಚ್ಛ್ರಾಯ ಸಾಧ್ಯವಾದೀತು ಎಂಬುದು ನನ್ನ ಆಶಯ, ನಂಬಿಕೆ. ಆದರೆ, ಜನರ ರೀತಿ–ನೀತಿ–ಶೀಲಗಳಲ್ಲಿ ಸುಧಾರಣೆಗೆ ಕಾಯುತ್ತಾ ಕೂರುವ ಬದಲು ನಾವು ಕೆಲವೊಂದು ಶಾಸನಬದ್ಧ ಪರಿಹಾರವನ್ನು ಅನ್ವಯಿಸಬೇಕೆಂದು ನನ್ನ ಮಿತ್ರರು ಆಗ್ರಹಪಡಿಸಿದಲ್ಲಿ ಆಗಲೂ ಸಹ ಅದು ಸುಲಭಸಾಧ್ಯವಲ್ಲವೆಂದು ನನಗೆ ತೋರುತ್ತದೆ. ನಾವು ಯೋಚಿಸಬಹುದಾದ ಏಕೈಕ ಪರಿಹಾರವೆಂದರೆ, ಯಾವುದೇ ಒಂದು ನಿರ್ದಿಷ್ಟ ಪಕ್ಷಕ್ಕೆ ಪಕ್ಷಪಾತ ತೋರುವ ಅಥವಾ ಆಡಳಿತ ನಿಯಮ, ಕಟ್ಟು ಕಟ್ಟಳೆಗಳನ್ನು ಅನುಸರಣೆ ಮಾಡದ ಸಿವಿಲ್ ನೌಕರರ, ಅಧಿಕಾರಿಗಳ ನಡವಳಿಕೆಯನ್ನು ಶಿಕ್ಷಾರ್ಹಗೊಳಿಸುವುದು. ಉಗ್ರ ಶಿಕ್ಷೆಗೊಳಪಡಿಸುವುದು. ಆದರೆ ಒಂದು ಅಂಶವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ನನಗನ್ನಿಸುತ್ತದೆ. ಅದೆಂದರೆ, ತನಗೆ ಅನ್ಯಾಯವಾಗಿದೆ ಎಂದು

ಭಾವಿಸುವವರು ತಮ್ಮ ಮನಸೋ ಇಚ್ಛೆ ಹುಚ್ಚಾಪಟ್ಟೆ ಸಿವಿಲ್ ನೌಕರರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗದು ಎಂಬುದು. ಸಿವಿಲ್ ನೌಕರರ ವಿರುದ್ಧ ಕಾನೂನು ಕ್ರಮ ಜರುಗಿಸಲು ಒಂದಲ್ಲ ಒಂದು ವಿಧದ ಪೂರ್ವಾನುಮತಿಯ ನಿಬಂಧನೆ ಅಗತ್ಯ. ಯಾರಿಂದ ಪೂರ್ವಾನುಮತಿ ಪಡೆಯಬೇಕು? ಪೂರ್ವಾನುಮತಿಯನ್ನು ಸರ್ಕಾರದಿಂದ ಅಥವಾ ರಾಷ್ಟ್ರಪತಿಯವರಿಂದ ಪಡೆಯಬೇಕೆಂಬುದು ಇಲ್ಲಿ ಸ್ಪಷ್ಟವಾಗಿದೆ.

**ಪೊ. ರಂಗಾ (ಮದ್ರಾಸ್):** ಚುನಾವಣಾ ಆಯುಕ್ತರಿಂದ ಏಕಾಗಬಾರದು?

**ಡಾ. ಅಂಬೇಡ್ಕರ್:** ಚುನಾವಣಾ ಆಯುಕ್ತರಿಂದ? ನನಗೆ ತಿಳಿಯದು. ಚುನಾವಣಾ ಆಯುಕ್ತರ ಬಗ್ಗೆ ನಾನು ಏನೂ ಹೇಳಲಾರೆ. ಏಕೆಂದರೆ, ತಾಂತ್ರಿಕವಾಗಿ ಈ ಅಧಿಕಾರಿ ನನ್ನ ಅಧೀನದಲ್ಲಿರುತ್ತಾರೆ ಎಂಬುದು ಎಣಿಕೆ. ಇಂಥ ಅಧಿಕಾರಿಯ ಅಧಿಕಾರದ ಘನತೆಯನ್ನು ಕುಂದಿಸಬಹುದಾದಂಥ ಅಥವಾ ತಗ್ಗಿಸಬಹುದಾದಂಥ ಯಾವುದೇ ಮಾತನ್ನು ನಾನು ಆಡಬಯಸುವುದಿಲ್ಲ. ಆದರೆ ಕಾನೂನು ಕ್ರಮ ಜರುಗಿಸುವ ಮುನ್ನ ಒಂದಲ್ಲ ಒಂದು ವಿಧದ ಪೂರ್ವಾನುಮತಿ ಅಗತ್ಯ ಎಂಬುದನ್ನು ನಾವು ಒಪ್ಪಿಕೊಳ್ಳೋಣ. ಹಾಗಾದಲ್ಲಿ ಅಂದಿನ ಸರ್ಕಾರ ತನಗೆ ಸಹಾಯಮಾಡಿದ ಒಬ್ಬ ಅಧಿಕಾರಿಯ ವಿರುದ್ಧ ಕಾನೂನು ಕ್ರಮಕ್ಕೆ ಅನುಮತಿ ನೀಡಲು ಸಮ್ಮತಿಸುವುದೇ ಎನ್ನುವ ಸಂಶಯ ನನ್ನದು. ಆದ್ದರಿಂದ ಇಂಥದೊಂದು ಶಾಸನ ಮಾಡಿದಾಗ್ಯೂ ಅದು ಕಾಗದದ ಮೇಲಿರುವುದೇ ಹೊರತು ಆಚರಣೆಯಲ್ಲಿ ಅದು ನಿಷ್ಪ್ರಯೋಜಕ, ಕಾರ್ಯಸಾಧಕವಾಗಲಾರದು. ಆದ್ದರಿಂದ ನನಗನ್ನಿಸುವುದೆಂದರೆ, ಇದನ್ನು ಸಾರ್ವಜನಿಕರ ನೈತಿಕತೆಗೆ ಸಾರ್ವಜನಿಕ ನೀತಿ ತತ್ವಗಳ ಅನುಮತಿಗೆ ಬಿಟ್ಟುಬಿಡಬೇಕು.

ನಾನು ಪ್ರಸ್ತಾಪಿಸಲಿಚ್ಛಿಸುವ ಎರಡನೆಯ ಅಂಶ ಡಿ.ವೆಂಕಟರಾಮನ್ ಅವರು ಎತ್ತಿರುವಂಥಾದ್ದು. ಈ ಮಸೂದೆಯಲ್ಲಿ ಮತದಾನವನ್ನು ಹಕ್ಕೆಂದು ಪರಿಗಣಿಸಲಾಗಿದೆ ಎಂದು ಅವರ ಅಂಬೋಣ. ಮತದಾನವನ್ನು ಕರ್ತವ್ಯವೆಂದೂ, ಈ ದೇಶದ ಪ್ರಜೆಗೆ ಕೇವಲ ಓಟಿನ ಹಕ್ಕು ಮಾತ್ರ ಇದ್ದರೆ ಸಾಲದು. ಓಟು ಮಾಡುವುದು ಪ್ರಜೆಗಳ ಒಂದು ಕರ್ತವ್ಯವಾಗಬೇಕು ಹಾಗೂ ಕರ್ತವ್ಯ ವಿಫಲನಾದ ಪ್ರಜೆ ದಂಡನಾರ್ಹನಾಗಬೇಕು ಎಂಬುದು ಅವರ ವಾದ. ಇದು ಪ್ರಶಂಸನೀಯ ವಿಚಾರವೇ. ಆಸ್ಟ್ರೇಲಿಯ ಬೆಲ್ಜಿಯಂನಂಥ ಕೆಲವು ರಾಷ್ಟ್ರಗಳು ಈ ವಿಚಾರ ಪ್ರಣಾಳಿಯನ್ನು ಅಂಗೀಕರಿಸಿದೆ ಎಂಬುದರಲ್ಲೂ ಸಂಶಯಕ್ಕೆಡೆಯಿಲ್ಲ. ಈ ಪ್ರಮೇಯವನ್ನು, ಪ್ರತಿಪಾದನೆಯನ್ನು ಇನ್ನಷ್ಟು ಜಾಗರೂಕತೆಯಿಂದ ಪರಿಶೀಲಿಸೋಣ. ಸ್ವತಃ ವೆಂಕಟರಾಮನ್ ಹಾಗೂ ಚುನಾವಣೆಯ ಅನುಭವ ಹೊಂದಿರುವ ಅನೇಕರ ಪ್ರಕಾರ, ಭಾರತದಲ್ಲಿ ಮತದಾನದ ಬಗ್ಗೆ ಒಂದು ಸಾರ್ವತ್ರಿಕ ಉದಾಸೀನತೆ ಇದೆ. ಹೀಗಿರುವಾಗ ಮತದಾನ ಕರ್ತವ್ಯ, ನಿಜವಾಗಿ ಒಂದು ಕರ್ತವ್ಯವಾಗಬೇಕಾದರೆ ದಂಡ ಶಿಕ್ಷೆಗಳು ಸ್ವಲ್ಪ ಉಗ್ರವಾಗಿಯೇ ಇರಬೇಕಾಗುತ್ತದೆ. ದಂಡ ಐದು ರೂಪಾಯಿ ಆಗಬಾರದು. ಹತ್ತು ರೂಪಾಯಿ ಆಗಬಾರದು, ದಂಡ ನೂರು ರೂಪಾಯಿಯಾದರೂ ಆಗಬೇಕು. ಮತದಾನ ಪ್ರಜೆಯ ಒಂದು ಕರ್ತವ್ಯವಾಗಬೇಕು ಎಂಬುದರಲ್ಲಿ ಉತ್ಸಾಹಿಗಳಾಗಿರುವ ಈ ಸದನದ ಸದಸ್ಯರಲ್ಲಿ ಯಾರಾದೂ ನೂರು ರೂಪಾಯಿ ದಂಡ ಯೋಗ್ಯವಾದದ್ದು ಎಂದು ಸಮ್ಮತಿಸುವರೇ ಎಂಬುದರಲ್ಲಿ ನನಗೆ ಸಂದೇಹವಿದೆ. ಬಹ್ವಂಶ ಸದಸ್ಯರು ಇದನ್ನು ಬೆಂಬಲಿಸಲು ಸಿದ್ಧರಿದ್ದಾರೆ ಎಂಬುದರಲ್ಲೂ ನನಗೆ ಹೆಚ್ಚು ಸಂಶಯವಿದೆ. ದಂಡ, ಶಿಕ್ಷೆಗಳು ಉಗ್ರವಾಗಿಲ್ಲದೆ ಹೋದಲ್ಲಿ ಶಾಸನಕ್ಕೆ, ಕಾನೂನಿಗೆ ಬೆಲೆಯಿಲ್ಲದಂತಾಗುವುದು.

ಎರಡನೆಯದಾಗಿ ಇಂಥ ವಿಚಾರಗಳಲ್ಲಿ ನಾವು ಅನೇಕ ವಿನಾಯಿತಿಗಳನ್ನು ನೀಡಬೇಕಾಗುತ್ತದೆ.

ಮತದಾರ ಅಂದು ಕಾಯಿಲೆ ಬಿದ್ದಿರಬಹುದು. ಕಾಯಿಲೆ ಬಿದ್ದಿಲ್ಲ ಅದು ನಟನೆ ಎಂದಿಟ್ಟುಕೊಳ್ಳೋಣ. ವಿಷಯವನ್ನು ನ್ಯಾಯಾಲಯಕ್ಕೆ ಒಯ್ದಾಗ, ವೈದ್ಯರೊಬ್ಬರ ಒಳಹೋಗಿ ಎಂಟಾಣೆ ಕೊಟ್ಟು ಮೆಡಿಕಲ್ ಸರ್ಟಿಫಿಕೆಟ್ ತರುವುದು ಕಷ್ಟವೇನಲ್ಲ. ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಮೊಕದ್ದಮೆ ವಿಚಾರಣೆ ಮುಂದೂಡಿಕೆಗೆ ನಮ್ಮಲ್ಲಿ ಬಹುತೇಕ ಮಂದಿ ಮಾಡುವುದು ಇದನ್ನೇ. ಮತದಾರ ಸ್ವತಃ ತಾನೇ ಕಾಯಿಲೆ ಬಿದ್ದಿಲ್ಲದೇ ಇರಬಹುದು. ಮತದಾನದ ದಿನವೇ ಅವನ ಹೆಂಡತಿಗೆ ಹೆರಿಗೆ ಆಗಿರಬಹುದು. ಇಂಥವೆಲ್ಲ ಬರುತ್ತವೆ. ನಾವು ತುಂಬ ವಿನಾಯಿತಿಗಳನ್ನು ನೀಡಬೇಕಾದೀತು. ಹೀಗಾಗಿ ಕಾನೂನು ಕೇವಲ ಒಂದು ಅಸ್ಥಿಪಂಜರವಾಗಿ ಉಳಿಯುತ್ತದೆ.

**ಶ್ರೀ ಭಾರತಿ (ಮದ್ರಾಸ್):** ಆಸ್ಟ್ರೇಲಿಯಾದ ಸಂವಿಧಾನದ ವಿಷಯ ಏನು?

**ಡಾ. ಅಂಬೇಡ್ಕರ್:** ಆಸ್ಟ್ರೇಲಿಯಾದಲ್ಲಿ ಪ್ರತಿಯೊಬ್ಬರೂ ಓಟು ಮಾಡುತ್ತಾರೆ. ಅಲ್ಲಿ ಇಂಥ ಕಾನೂನಿನ ವ್ಯಾಪ್ತಿಯೊಳಗೆ ಶಿಕ್ಷೆಗೊಳಗಾಗುವ ಜನರ ಸಂಖ್ಯೆ ಕಡಿಮೆ.

**ಶ್ರೀ ಸಿಧ್ವಾ (ಮಧ್ಯ ಪ್ರದೇಶ):** ಅಲ್ಲಿ ದಂಡ ಎಷ್ಟು?

**ಡಾ. ಅಂಬೇಡ್ಕರ್:** ಐದು ಪೌಂಡುಗಳು

ನನ್ನದೇ ಆದ ಅಭಿಪ್ರಾಯ ಹೀಗಿದೆ. ಮತದಾನದಲ್ಲಿ ನನಗೆ ಹೆಚ್ಚಿನ ಅನುಭವವಿದೆ ಎಂದು ನಾನು ಹೇಳಲಾರೆ. ಆದರೆ ಅಂಥದೊಂದು ಅನುಭವ, ಈ ರಾಷ್ಟ್ರದ ಕೆಳವರ್ಗದ ಜನರು ಮತ್ತು ಉನ್ನತ ಶ್ರೇಣಿಯ ಜನರು ಮಾತ್ರ ರಾಜಕೀಯವಾಗಿ ಅತಿ ಪ್ರಜ್ಞಾವಂತರು ಎಂಬ ಆಲೋಚನೆ ಎಡೆಮಾಡಿಕೊಟ್ಟಿದೆ. ನನ್ನ ಪ್ರಾಂತ್ಯದಲ್ಲೇ ನನ್ನ ಅನುಭವದ ಪ್ರಕಾರ ಪರಿಶಿಷ್ಟಜಾತಿಯ ಜನರು, ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ತುಂಬಾ ಕೆಳಸ್ತರದಲ್ಲಿ ಸಲ್ಲುವ ಈ ಜನರು ಚುನಾವಣೆಗಳಲ್ಲಿ ಶೇ. ೮೦ ರಷ್ಟು ಮತದಾನ ಮಾಡುತ್ತಾರೆ. ಈ ಪೈಕಿ ಇದಕ್ಕೂ ಕಡಿಮೆ ಮತದಾನವಾದುದನ್ನು ನಾನು ಕಂಡೇ ಇಲ್ಲ. ಹಾಗೆಯೇ ನನಗನ್ನಿಸುತ್ತದೆ. ನನ್ನ ಪ್ರಾಂತ್ಯದಲ್ಲಿ ಬ್ರಾಹ್ಮಣರ ಮತದಾನ ಶೇ ೮೦ ರಷ್ಟಿದೆ. ಇದು ನನ್ನ ಖಚಿತ ಅಭಿಪ್ರಾಯ ಇದಕ್ಕೆ ಕಾರಣಗಳೂ ಸ್ಪಷ್ಟ.

ಒಂದು ಸಮುದಾಯ ದಮನಿತ ಸಮುದಾಯ. ತನ್ನ ನೈತಿಕ ಮತ್ತು ಲೌಕಿಕ ಉನ್ನತಿ ಈ ದೇಶದ ಶಾಸನ ಸಭೆಗಳಲ್ಲಿನ ತನ್ನ ಸ್ಥಾನಮಾನವನ್ನು ಅವಲಂಬಿಸಿದೆ ಎಂಬ ಪ್ರಜ್ಞೆ ಇವರಿಗಿದೆ. ಫಲಿತಾಂಶವಾಗಿ ಇವರು ಎಷ್ಟೇ ಲಾಭದಾಯಕ ಆಮಿಷಗಳಿದ್ದರೂ ಅದನ್ನು ಬದಿಗಿಟ್ಟು ಮತಗಟ್ಟೆಗಳಿಗೆ ಹೋಗುತ್ತಾರೆ. ಇದು ಹೊರತು ಇನ್ನಾವುದಕ್ಕೂ ಅವರು ತಮ್ಮ ಕಾಲಶಕ್ತಿಗಳ ದುರ್ವಿನಿಯೋಗ ಮಾಡುವುದಿಲ್ಲ. ಮತದಾನದ ದಿನ ಮತಗಟ್ಟೆಗಳಿಗೆ ಹೋಗಿ ಮತ ಚಲಾಯಿಸುತ್ತಾರೆ. ಬ್ರಾಹ್ಮಣ ಸಮುದಾಯ ಕುರಿತೂ ನನ್ನ ಅನುಭವ ಇದೇ ಆಗಿದೆ. ನನ್ನ ವಿಶ್ಲೇಷಣೆಯೂ ಇದೇ ಆಗಿದೆ. ಅವರಿಂದು ಅಗ್ರಮಾನ್ಯರು, ಅಗ್ರಪಂಕ್ತಿಯಲ್ಲಿದ್ದಾರೆ. ಅವರನ್ನು, ಅವರು ವಹಿಸಿಕೊಂಡಿರುವ ಎಲ್ಲ ಸ್ಥಾನಮಾನಗಳಿಂದ ಹೊರದೂಡುವುದು ಇಂದು ಎಲ್ಲರ ಅಪೇಕ್ಷೆಯಾಗಿದೆ. ತಮ್ಮಲ್ಲೇ ಐಕಮತ್ಯ, ಸಂಘಟನೆ ಇಲ್ಲದಿದ್ದರೆ, ತಾವೆಲ್ಲ ಮತಗಟ್ಟೆಗಳಿಗೆ ಹೋಗಿ ಮತ ಚಲಾಯಿಸದಿದ್ದರೆ, ತಮ್ಮನ್ನು ಹೊರದಬ್ಬುವಿಕೆಯ ತತ್‌ಕ್ಷಣದ ಕ್ರಿಯೆಯಿಂದ ಸುರಕ್ಷಿತವಾಗುವಂಥ ಪ್ರಭಾವ ಬೀರುವುದು ಅಸಾಧ್ಯ ಎಂಬುದು ಅವರಿಗೂ ಗೊತ್ತಿದೆ. ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಏರುವ ಸುಭದ್ರ ಸಂಕ್ರಮಣ ಸ್ಥಿತಿಯನ್ನಾದರೂ ತಾವು ಗಳಿಸಲು ಇದು ಅಗತ್ಯ ಎನ್ನುವುದು ಅವರಿಗೆ ಗೊತ್ತಿದೆ.

**ಶ್ರೀ ಕಾಮತ್ (ಮಧ್ಯಪ್ರದೇಶ):** ಎಲ್ಲ ಬ್ರಾಹ್ಮಣರೂ ಅಲ್ಲ.

**ಡಾ. ಅಂಬೇಡ್ಕರ್:** ಉದಾಸೀನ ಮನೋಭಾವದ, ಓಟು ಮಾಡುವ ಬಗ್ಗೆ ದಿವ್ಯ ನಿರ್ಲಕ್ಷ್ಯ ಮನೋಭಾವ ಹೊಂದಿರುವವರೆಂದರೆ ಮಧ್ಯಮ ವರ್ಗದವರು. ಅವರ ಅಸ್ತಿತ್ವ ಸರ್ಕಾರದ ಕಾರ್ಯ ಚಟುವಟಿಕೆಗಳನ್ನೇ ಅವಲಂಬಿಸಿರುವಂತೆ ಕಾಣುತ್ತಿಲ್ಲ. ಅವರಿಗೆ ಅವರದೇ ಆದ ಕಣಜಗಳಿವೆ. ಇದು ಭರ್ತಿ ಇಲ್ಲದಿರಬಹುದು. ಅರ್ಧ ತುಂಬಿರಬಹುದು. ಆದರೂ ಕಾಲಕಾಲಕ್ಕೆ ವರ್ಷದಿಂದ ವರ್ಷಕ್ಕೆ ಯಾವುದೇ ರೀತಿಯ ಸರ್ಕಾರಿ ನೆರವನ್ನು ಬಯಸದೇ ಬದುಕಲು ಸಾಧ್ಯ ಎಂಬುದು ಅವರಿಗೆ ಗೊತ್ತಿದೆ. ಆದ್ದರಿಂದಲೇ ಅವರು ಮತದಾನದ ಬಗೆಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಮತದಾನದಲ್ಲಿ ಅವರು ಆಸಕ್ತಿ ವಹಿಸುವುದಿಲ್ಲ. ಇದು ನನ್ನ ಅನುಭವ. ಆದ್ದರಿಂದ, ಈ ಕ್ಷಣ ನಮ್ಮ ಕರ್ತವ್ಯವೆಂದರೆ, ಮಧ್ಯಮ ವರ್ಗವನ್ನು ಪ್ರತಿನಿಧಿಸುವ ಸದಸ್ಯರಿಗೆ, ಈ ಜನರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವುದು ಅವರ ಕರ್ತವ್ಯವೆಂದು ಹೇಳುವುದು. ಇವರನ್ನು ರಾಜಕೀಯವಾಗಿ ಪ್ರಜ್ಞಾವಂತರನ್ನಾಗಿಸುವುದು, ಚುನಾವಣೆಯಲ್ಲಿ ಮತ ಚಲಾಯಿಸುವಂತೆ ಪ್ರೇರೇಪಿಸುವುದು ಅವರ ಕರ್ತವ್ಯವಾಗಿದೆ. ಹಾಗಾದಲ್ಲಿ ಮೇಲ್ವರ್ಗದವರು ಮತ್ತು ಕೆಳವರ್ಗದವರಂತೆ ಮಧ್ಯಮ ವರ್ಗವೂ ಪಾಲ್ಗೊಳ್ಳುವಂತಾಗುತ್ತದೆ. ಇದಕ್ಕೆ ಕಾನೂನಿನ ಪರಿಹಾರ ಏನೂ ಅಗತ್ಯವಿಲ್ಲ ಎಂದು ನನ್ನ ಅನ್ನಿಸಿಕೆ.

ಇನ್ನು ನನ್ನ ಗೌರವಾನ್ವಿತ ಮಿತ್ರ ಶ್ರೀ ಸೋನಾವಣೆ ಅವರು ಎತ್ತಿರುವ ವಿಷಯಕ್ಕೆ ಬರುತ್ತೇನೆ. ನಿಜಕ್ಕೂ ಅವರು ಮಂಡಿಸಿರುವುದರಲ್ಲಿ ಏನೂ ತರ್ಕವಿಲ್ಲ. ಮತದಾನ ವಿಧಾನ ಹೇಗಿರುತ್ತದೆ ಎಂಬುದನ್ನು ತಿಳಿಯುವುದಷ್ಟೇ ಅವರ ಅಪೇಕ್ಷೆ. ಹಿಂದಿನ ಕಾಲದಲ್ಲಿದ್ದಂತೆ ಮತಪತ್ರದ ಮೇಲೆ ಒಂದು ರೀತಿಯ ಗುರುತು ಇರುತ್ತದೆ ಎಂಬುದು ಅವರ ಅಭಿಪ್ರಾಯವಗಿತ್ತು. ಏಕಸದಸ್ಯ ಕ್ಷೇತ್ರ ವ್ಯವಸ್ಥೆಯಲ್ಲಿ, ಒಬ್ಬನಿಗೆ ಒಂದು ಮತಕ್ಕೆ ಮಾತ್ರ ಅವಕಾಶವಿದ್ದು ಕಾಟು ಹಾಕುವುದು ಖಂಡಿತವಾಗಿಯೂ ಅನಗತ್ಯ. ಓಟು ಹಾಕುವುದೆಂದರೆ ಈಗ ಒಂದು ಪೋಸ್ಟ್ ಕಾರ್ಡ್ ಖರೀದಿಸಿ, ವಿಳಾಸ ಬರೆದು ರಸ್ತೆಯಲ್ಲಿನ ಅಂಚೆಪೆಟ್ಟಿಗೆಗೆ ಹಾಕುವಂತೆ ಮತದಾರ ಮಾಡಬೇಕಾದದ್ದೆಂದರೆ, ಚುನಾವಣಾ ಗುಮಾಸ್ತೆಯ ಬಳಿ ಹೋಗಿ ಮತಪತ್ರ ಪಡೆದುಕೊಳ್ಳುವುದು. ಅದೊಂದು ಖಾಲಿ ಮತ ಪತ್ರ ಅಭ್ಯರ್ಥಿಯಾದವನು ಚುನಾವಣಾ ಆಯುಕ್ತರು ಅನುಗೊಳಿಸಿದವುಗಳಲ್ಲಿ ಒಂದು ಚಿಹ್ನೆಯನ್ನು ಆಯ್ಕೆ ಮಾಡಿಕೊಂಡಿರುತ್ತಾನೆ ಎಂಬುದು ಮತದಾರನಿಗೆ ಮೊದಲೇ ಗೊತ್ತಿರುತ್ತದೆ. ಮತದಾರನಿಗೆ ಮೊದಲೆ ಈ ಬಗ್ಗೆ ಸೂಕ್ತ ತಿಳುವಳಿಕೆ ಇದ್ದಲ್ಲಿ ಅವನು ಮತ ಪತ್ರವನ್ನು ಮತ ಪೆಟ್ಟಿಗೆಯಲ್ಲಿ ಹಾಕಬಹುದು, ಅಷ್ಟೇ ಯಾವುದೇ ಗುರುತು ಮೂಡಿಸುವ ಅಗತ್ಯವಿಲ್ಲ. ಇದು ಜಾರಿಗೆ ಬರಲಿರುವ ವ್ಯವಸ್ಥೆ.

**ಶ್ರೀ ಸೋನಾವಣೆ (ಮುಂಬಯಿ):** ಬಣ್ಣ ಮತ್ತು ಚಿಹ್ನೆಗಳ ವಿಷಯ ಏನು?

**ಶ್ರೀ ಅಂಬೇಡ್ಕರ್:** ಅದೊಂದು ಸೌಕರ್ಯವಷ್ಟೆ.

**ಶ್ರೀ ಸಿಧ್ವಾ:** ಪ್ರತಿಯೊಬ್ಬ ಅಭ್ಯರ್ಥಿಗೂ ಪ್ರತ್ಯೇಕ ಪೆಟ್ಟಿಗೆಯೇ?

**ಡಾ. ಅಂಬೇಡ್ಕರ್:** ಹೌದು ಖಂಡಿತವಾಗಿಯೂ ಇಲ್ಲವಾದಲ್ಲಿ ಅದು ಹೇಗೆ ಸಾಧ್ಯವಾದೀತು?

ಮಾನ್ಯ ಸಭಾಧ್ಯಕ್ಷರೇ, ನಿರ್ದಿಷ್ಟವಾದ ತಿದ್ದುಪಡಿಯಲ್ಲಿ ಸೇರದೇ ಇರುವ ಕೆಲವು ಅಂಶಗಳಿದ್ದು ಅವುಗಳ ಬಗ್ಗೆ ನಾನು ಮಾತನಾಡುವುದು ಅಗತ್ಯ ಎಂದು ನನಗನ್ನಿಸಿತ್ತು. ಅದಲ್ಲದೆ ಶುರುವಿಗೇ ಸಮಜಾಯಿಷಿ ವಿವರಣೆ ನೀಡಬೇಕಾದಂಥ ಇನ್ನಾವ ಅಂಶವೂ ಇದ್ದಂತಿಲ್ಲ.

ಸ್ವಾಮಿ, ಈ ಮಾತುಗಳೊಂದಿಗೆ ಸದನಕ್ಕೆ ನನ್ನ ಗೊತ್ತುವಳಿಯನ್ನು ಒಪ್ಪಿಸುತ್ತಿದ್ದೇನೆ.

**ಶ್ರೀ ಕಾಮತ್:** ನಾನೊಂದು ಪ್ರಶ್ನೆ ಕೇಳಲೆ? ಮತದಾರರಿಗೆ ದಂಡ–ಶಿಕ್ಷೆ ವಿಧಿಸುವುದಕ್ಕೆ ತಮ್ಮ ಒಲವು ಇಲ್ಲ ಎಂದು ಕಾನೂನು ಸಚಿವರು ಹೇಳಿದ್ದಾರಾದರೂ....

**ಸಭಾಧ್ಯಕ್ಷರು:** ಅವರು ಕೆಲವೊಂದು ಸಮಜಾಯಿಷಿ ವಿವರಣೆಗಳನ್ನು ಬಯಸುತ್ತಿದ್ದಾರೆ ಹಾಗೂ ಗುಣದೋಷಗಳ ಬಗ್ಗೆ ಮಾತನಾಡಲಿದ್ದಾರೆಂದು ನನ್ನ ಅಂಜಿಕೆ.

**ಶ್ರೀ ಕಾಮತ್:** ನಾನು ಮಾಹಿತಿ ಕೇಳುತ್ತಿದ್ದೇನೆ.

**ಮಾನ್ಯ ಸಭಾಪತಿ:** ಹೌದು ಮಾಹಿತಿ ಕೇಳುವ ನೆಪದಲ್ಲಿ ಸಾರಾಂಶವೆಂದರೆ ಮತ್ತೆ ಚರ್ಚೆ.

ಸೂಚನೆ ಏನೆಂದರೆ:

> "ವಿಶೇಷ ಸಮಿತಿ ವರದಿ ಮಾಡಿರುವಂತೆ ಸಂಸತ್ತಿನ ಸದನಗಳು ಮತ್ತು ಪ್ರತಿಯೊಂದು ರಾಜ್ಯದ ಶಾಸನ ಸಭೆ ಅಥವಾ ಶಾಸನ ಸಭೆಗಳಿಗೆ ಚುನಾವಣೆ ನಡೆಸುವುದು; ಆ ಸದನಗಳ ಸದಸ್ಯರ ಅರ್ಹತೆ–ಅನರ್ಹತೆಗಳು; ಸದರಿ ಚುನಾವಣೆಗಳ ಅಥವಾ ಚುನಾವಣೆಗಳಿಗೆ ಸಂಬಂಧಿಸಿದ ಭ್ರಷ್ಟಾಚಾರ, ಅಕ್ರಮ ವ್ಯವಹಾರಗಳು ಮತ್ತು ಇತರೆ ಅಪರಾಧಗಳು ಹಾಗೂ ಸದರಿ ಚುನಾವಣೆಗೆ ಸೇರಿದ ಅಥವಾ ಅದರಿಂದ ಉದ್ಭವಿಸುವ ಶಂಕೆಗಳು ಇಲ್ಲವೇ ವಿವಾದಗಳು–ಇವುಗಳಿಗೆ ಸಂಬಂಧಿಸಿದ ಹಾಗೆ ಕಾನೂನಿನ ಅಧಿಕಾರ ಕಲ್ಪಿಸುವ ಈ ಮಸೂದೆಯನ್ನು ಪರಿಶೀಲನೆಗೆತ್ತಿಕೊಳ್ಳಬಹುದು"

ಸೂಚನೆ ಅಂಗೀಕೃತವಾಗಿದೆ.

**ಮಾನ್ಯ ಸಭಾಪತಿ:** ನಾವೀಗ ಮಸೂದೆಯ ಒಂದೊಂದು ಕಲಮನ್ನೂ ಚರ್ಚೆಗೆತ್ತಿಕೊಳ್ಳಬಹುದು. ಎರಡನೇ ಕಲಂ ಚರ್ಚಿಸೋಣ.

**ಡಾ. ಅಂಬೇಡ್ಕರ್:** ಸ್ವಾಮಿ, ಎರಡನೆಯ ಕಲಂ ಅರ್ಥ ನಿರೂಪಣೆಯ ಕಲಂ. ಅದನ್ನು ಕೊನೆಯಲ್ಲಿ ತೆಗೆದುಕೊಳ್ಳಬಹುದೆಂದು ನನ್ನ ಸಲಹೆ.

**ಸಭಾಪತಿ:** ಆಗಬಹುದು, ಹಾಗಿದ್ದಲ್ಲಿ ಮೂರನೇ ಕಲಂ ನಿಂದ ಚರ್ಚೆ ಆರಂಭಿಸೋಣ. ಎರಡನೇ ಕಲಂ ಪರಿಶೀಲನೆಯನ್ನು ಮುಂದೂಡಲಾಗಿದೆ. ನಾನು ಒಂದರ ನಂತರ ಒಂದರಂತೆ ತಿದ್ದುಪಡಿಗಳನ್ನು ಕರೆಯುತ್ತೇನೆ. ತಿದ್ದುಪಡಿ ಸೂಚಿಸಲಿಚ್ಛಿಸುವ ಸದಸ್ಯರು ತಾವು ತಿದ್ದುಪಡಿಯನ್ನು ಸೂಚಿಸಲಿರುವುದಾಗಿ ತಿಳಿಸಬಹುದು. ಯಾವುದಾದರೂ ನನ್ನ ಲಕ್ಷ್ಯಕ್ಕೆ ಬಾರದೇ ಹೋದಲ್ಲಿ ನನ್ನ ಗಮನ ಅದರತ್ತ ಸೆಳೆಯಬಹುದು.

***ಮಾನ್ಯ ಸಭಾಪತಿ:** ಆಗಬಹುದು ಅವರು ತಮ್ಮ ಮೊದಲ ತಿದ್ದುಪಡಿಯನ್ನು ಮಂಡಿಸಲಿ.

**ಶ್ರೀ ನಾಸಿರುದ್ದೀನ್ ಅಹ್ಮದ್:** ಅನುಮತಿ ಕೋರಿ ನಾನು ಸೂಚಿಸುತ್ತಿದ್ದೇನೆ.

> ಕಲಂ–೩ ರ ಉಪ ವಿಧಿ (೧) ಯಲ್ಲಿನ "ಒಬ್ಬ ವ್ಯಕ್ತಿ ಅರ್ಹನಾಗುವುದಿಲ್ಲ" ಎನ್ನುವ ಪದಗಳಿಗೆ ಪ್ರತಿಯಾಗಿ "ಯಾವೊಬ್ಬ ವ್ಯಕ್ತಿಯೂ ಅರ್ಹನಾಗುವುದಿಲ್ಲ" ಎನ್ನುವ ಪರ್ಯಾಯ ಪದಗಳನ್ನು ಸೇರಿಸತಕ್ಕದ್ದು.

ಇದೇನಿದ್ದರೂ ಶಾಬ್ದಿಕ ತಿದ್ದುಪಡಿಯಷ್ಟೇ.

**ಡಾ. ಅಂಬೇಡ್ಕರ್:** ಸ್ವಾಮಿ ಪ್ರತಿಯೊಂದನ್ನೂ ಇತ್ಯರ್ಥಗೊಳಿಸಬೇಕೆ? ಪ್ರತಿಯೊಂದಕ್ಕೂ ಉತ್ತರಿಸಬೇಕೆ?

**ಮಾನ್ಯ ಸಭಾಪತಿ:** ಹೌದು.

**ಡಾ. ಅಂಬೇಡ್ಕರ್:** ತಿದ್ದುಪಡಿಯ ಕರ್ತೃಗಳೇ ಹೇಳಿರುವಂತೆ ಇದೊಂದು ಶಾಬ್ದಿಕ ತಿದ್ದುಪಡಿ. ಆದರೆ, ಇದರ ಜೊತೆಗೆ ನಾನು ಇನ್ನೊಂದು ಅಂಶವನ್ನು ಸೇರಿಸಲಿಚ್ಛಿಸುತ್ತೇನೆ. ಅದೆಂದರೆ, ಮಸೂದೆಯಲ್ಲಿ

---

* ಸಂಸದೀಯ ಚರ್ಚೆ ಸಂಪುಟ ೧೪ ಭಾಗ II ೧೪,೯೫೧ ಪು. ೮೬೮೭–೫೮

ಅಳವಡಿಸಲಾಗಿರುವ ಪದಕ್ರಮ, ಸಂವಿಧಾನದಲ್ಲಿ ಅಳವಡಿಸಿಕೊಂಡಿರುವ ಪದಕ್ರಮವೇ ಆಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಎಲ್ಲ ಮಸೂದೆಗಳಲ್ಲೂ ಏಕ ನಿಷ್ಠೆಯಿಂದ ಸಂವಿಧಾನದಲ್ಲಿ ಬಳಸಲಾಗಿರುವ ಪದಕ್ರಮವನ್ನೇ ಅನುಸರಿಸುವುದು ನಮ್ಮ ಅಪೇಕ್ಷೆಯಾಗಿದೆ. ಆದ್ದರಿಂದ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಾರೆ.

**ಶ್ರೀ ನಾಸ್ಸಿಜರುದ್ದಿನ್ ಅಹ್ಮದ್:** ನಾನು ಅದಕ್ಕೆ ಆಗ್ರಹಪಡಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಹಾಗಿದ್ದಲ್ಲಿ ನಾನು ಅದನ್ನು ಸದನದ ಅಂಗೀಕಾರಕ್ಕಾಗಿ ಮಂಡಿಸುವುದಿಲ್ಲ.

**ಶ್ರೀ ನಾಸ್ಸಿರುದ್ದಿನ್ ಅಹ್ಮದ್:** ಅನುಮತಿ ಕೋರಿ ನಾನು ಸೂಚಿಸುತ್ತಿದ್ದೇನೆ.

> ಮೂರನೇ ಕಲಂನಲ್ಲಿರುವ ಉಪವಿಧಿ (೧) ರಲ್ಲಿನ "ಸಂಸದೀಯ ಕ್ಷೇತ್ರ" ಕ್ಕೆ ಪರ್ಯಾಯವಾಗಿ "ಜನತಾ ಪ್ರತಿನಿಧಿ ಸಭೆಯ ಕ್ಷೇತ್ರ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

**ಶ್ರೀ ನಾಸ್ಸಿರುದ್ದಿನ್ ಅಹ್ಮದ್:** .....ಹಲವಾರು ತಿದ್ದುಪಡಿಗಳಿವೆ. ಇದನ್ನು ಅಂಗೀಕರಿಸಿದಲ್ಲಿ ಅಥವಾ ತಿರಸ್ಕರಿಸಿದಲ್ಲಿ ಇದರಿಂದ ಇಂಥದೇ ಹಲವಾರು ತಿದ್ದುಪಡಿಗಳನ್ನು ವಿಲೇವಾರಿ ಮಾಡಿದಂತಾಗುತ್ತದೆ. ಈ ಮಸೂದೆಯಲ್ಲಿ ಈ ಪದ ಪ್ರಯೋಗ ಪದೇ ಪದೇ ಕಾಣಿಸಿಕೊಳ್ಳುತ್ತದೆಯಾದ್ದರಿಂದ ಆಲೋಚನೆಯಲ್ಲಿ ಗೊಂದಲಕ್ಕೆ ಅವಕಾಶಕೊಡದಿರುವುದು ಉತ್ತಮ ಎಂದು ನನಗನ್ನಿಸುತ್ತದೆ.

**ಡಾ. ಅಂಬೇಡ್ಕರ್:** ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಾರೆ. ಮೊದಲನೆಯದಾಗಿ ಮೂಲ ವಿಷಯದಲ್ಲಿ ಏನೂ ವ್ಯತ್ಯಾಸವಿಲ್ಲ. ಫಲ ಪರಿಣಾಮಗಳು ಒಂದೇ. ನಾವು ಮಾಡಲು ಪ್ರಯತ್ನಿಸುತ್ತಿರುವುದೆಲ್ಲ ಈ ಶಾಸನದಲ್ಲಿ ಹಾಗೂ ಈಗಾಗಲೇ ಅಂಗೀಕರಿಸಲಾಗಿರುವ ಜನತಾ ಪ್ರಾತಿನಿಧ್ಯ ಶಾಸನದಲ್ಲಿ ಬಳಸಲಾಗಿರುವ ಏಕರೂಪದ ವಾಕ್ಸರಣಿಯನ್ನು ಉಳಿಸಿಕೊಳ್ಳುವುದೇ ಆಗಿದೆ. ನನ್ನ ಗೌರವಾನ್ವಿತ ಮಿತ್ರರು ಎರಡನೇ ಕಲಂನ ಉಪವಿಧಿ (ಎಫ್) ಯಲ್ಲಿನ ಅರ್ಥ ವಿವರಣೆಯನ್ನು ಗಮನಿಸಿದಲ್ಲಿ, 'ಸಂಸದೀಯ ಕ್ಷೇತ್ರವನ್ನು' ಜನತಾ ಪ್ರತಿನಿಧಿ ಸಭೆಗೆ ಚುನಾವಣೆ ನಡೆಸಲೋಸುಗ, ೬ನೇ ವಿಧಿ ಅಥವಾ ಅದರ ಪ್ರಕಾರ ಹೊರಡಿಸಲಾದ ಆಜ್ಞೆಯನ್ವಯ ರಚಿಸಲಾದ ಕ್ಷೇತ್ರವೆಂದೇ ಅರ್ಥೈಸಲಾಗಿರುವುದನ್ನು ಮನಗಾಣುತ್ತಾರೆ. ಆದ್ದರಿಂದ ವ್ಯತ್ಯಾಸವೇನೂ ಇಲ್ಲ ಎರಡನೇ ಕಲಂನ ಉಪವಿಧಿ (ಎ) ಯಲ್ಲಿನ ವ್ಯಾಖ್ಯಾನದತ್ತ ನಾನು ಅವರ ಗಮನ ಸೆಳೆಯಲಿಚ್ಛಿಸುತ್ತೇನೆ. ಅದರಲ್ಲಿ ಹೀಗೆ ಹೇಳಲಾಗಿದೆ: ೧೯೫೦ ರ (XL 111-1950) ಜನತಾ ಪ್ರಾತಿನಿಧ್ಯ ಶಾಸನದ ೨೭ ನೇ ಕಲಂನ ೨ ನೇ ವಿಧಿ ಅಥವಾ ಉಪವಿಧಿ (೧) ರಲ್ಲಿ ವಿಶದೀಕರಿಸಲಾಗಿರುವ ವಾಕ್ಸರಣಿಗೆ ಶಾಸನದಲ್ಲಿರುವಂತೆ ಅದೊಂದೇ ಅರ್ಥ" ಆದ್ದರಿಂದ ಇದು ಶುದ್ಧಾಂಗವಾಗಿ ಅನಗತ್ಯ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಸೂಚನೆ ಏನೆಂದರೆ –

> ಮೂರನೇ ಕಲಂನಲ್ಲಿರುವ ಉಪವಿಧಿ (೧) ರಲ್ಲಿನ "ಸಂಸದೀಯ ಕ್ಷೇತ್ರ" ಕ್ಕೆ ಪರ್ಯಾಯವಾಗಿ "ಜನತಾ ಪ್ರತಿನಿಧಿ ಸಭೆಯ ಕ್ಷೇತ್ರ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

ಸೂಚನೆ ತಿರಸ್ಕೃತವಾಗಿದೆ.

*ಶ್ರೀ ನಾಸ್ಸಿರುದ್ದಿನ್ ಅಹ್ಮದ್:** ಅರ್ಹತೆ ಹಾಗೂ ಅನರ್ಹತೆಗಳನ್ನು ಸಂಸತ್ತು ರೂಪಿಸಬಹುದೆಂದು ಸಂವಿಧಾನದಲ್ಲಿ ಅಪ್ಪಣೆ ಮಾಡಲಾಗಿದೆ ಎಂದು ನಾನು ಭಾವಿಸುತ್ತೇನೆ. ಈ ವಿಧಿಗಳ ಪ್ರಯೋಜನ

---

** ಸಂಸದೀಯ ಚರ್ಚೆ ಸಂಪುಟ ೧೪ ಭಾಗ II ಮೇ ೧೧, ೧೯೫೧ ಪು ೮೬೫೯–೬೦

* ಸಂಸದೀಯ ಚರ್ಚೆ ಸಂಪುಟ ೧೧, ಭಾಗ–II, ಮೇ ೧೪, ೧೯೫೧ ಪು. ೮೬೮೭–೯೦

ಪಡೆದುಕೊಳ್ಳಬೇಕೆಂಬುದು ಸಂವಿಧಾನದ ಇಚ್ಛೆಯಾಗಿದೆ ಎಂದು ನನ್ನ ಊಹೆ. ಶ್ರೀ ಭಟ್ಟಾಚಾರ್ಯ ಅವರ ವಾದವನ್ನು ಅದರ ತಾರ್ಕಿಕ ತೀರ್ಮಾನಕ್ಕೆ ಒಯ್ದಲ್ಲಿ ಅದು ಕೇಂದ್ರ ಮತ್ತು ರಾಜ್ಯ ಶಾಸನಸಭೆಗಳಿಗೆ ಸಂಬಂಧಿಸಿದ ಸಂವಿಧಾನದ ಎರಡು ಮತ್ತು ನಾಲ್ಕನೆ ವಿಧಿಗಳನ್ನು ಅನೂರ್ಜಿತಗೊಳಿಸುತ್ತದೆ. ಆದ್ದರಿಂದ ಶ್ರೀ ಭಟ್ಟಾಚಾರ್ಯರು ವಿವೇಕಕ್ಕಿಂತ ಹೆಚ್ಚಾಗಿ ಉತ್ಸಾಹವನ್ನು ತೋರಿಸಿದ್ದಾರೆ ಎಂದು ಹೇಳಬೇಕಾಗಿದೆ.

**ಡಾ. ಅಂಬೇಡ್ಕರ್:** ಪ್ರೊ ಕೆ.ಟಿ.ಷಾ ಅವರು ಕೆಲವು ದಿನಗಳ ಹಿಂದೆ ಈ ಸದನದಲ್ಲಿ ನಿರ್ಣಯ ಮಂಡಿಸಿದಾಗ ಅವರ ನಿರ್ಣಯ ಬಹಳ ಅಸ್ಪಷ್ಟವಾಗಿತ್ತು. ಸಂಸತ್ ಅಥವಾ ರಾಜ್ಯ ಶಾಸನ ಸಭೆಗಳಿಗೆ ಅಭ್ಯರ್ಥಿಗಳಾಗಿ ನಿಲ್ಲಲು ವಿಶೇಷ ಅರ್ಹತೆ ಹೊಂದಿದ್ದಾರೆಂದು ಅವರು ಭಾವಿಸುವ ಯಾವುದೇ ಜನವರ್ಗವನ್ನೂ ಖಚಿತವಾಗಿ ಹೇಳಿಲ್ಲವೆಂದು ನಾನು ಅವರಿಗೆ ಸೂಚಿಸಿದ್ದೆ. ಸಂಸತ್ತಿಗೆ ಸ್ಪರ್ಧಿಸಲು ಸೂಕ್ತ ಅಭ್ಯರ್ಥಿಗಳೆಂದು ತಾವು ಭಾವಿಸುವ ವಿಶಿಷ್ಟ ಜನವರ್ಗ ಯಾರೆಂಬುದು ಇದೀಗ ನಮಗೆ ಅವರಿಂದ ತಿಳಿದುಬಂದಿದೆ. ನಿಸ್ಸಂದೇಹವಾಗಿ ಇದೊಂದು ಸುಧಾರಣೆಯೇ, ಏಕೆಂದರೆ ಅವುಗಳ ಯೋಗ್ಯತಾನುಸಾರ ಪರಿಶೀಲಿಸಲು ನಮ್ಮ ಮುಂದೆ ನಿರ್ದಿಷ್ಟವಾದ ಸಲಹೆ ಸೂಚನೆಗಳಿವೆ. ಒಂದಂತೂ ಇಲ್ಲಿ ತುಂಬ ಸ್ಪಷ್ಟವಾಗಿದೆ. ಅದೆಂದರೆ ಇವೆಲ್ಲ ಉಮೇದುವಾರಿಕೆಗೆ ಅನರ್ಹತೆಗಳೆಂಬುದು. ಈ ತಿದ್ದುಪಡಿಯನ್ನು ಅಂಗೀಕರಿಸಿದಲ್ಲಿ, ಇಲ್ಲಿ ನಮೂದಿಸಲಾಗಿರುವ ಏಳು ವರ್ಗಗಳಲ್ಲಿ ಒಂದರ ವ್ಯಾಪ್ತಿಗೊಳಪಡುವ ನಿರ್ದಿಷ್ಟ ವರ್ಗದ ಜನರು ಮಾತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಅರ್ಹರಾಗಿರುತ್ತಾರೆ ಎಂದು ಹೇಳಿದಂತಾಗುತ್ತದೆ. ಈ ತಿದ್ದುಪಡಿಯನ್ನು ಅಂಗೀಕರಿಸಿದಲ್ಲಿ ಒಟ್ಟು ಎಷ್ಟು ಮಂದಿ ಅಭ್ಯರ್ಥಿಯಾಗಿ ಸ್ಪರ್ಧಿಸುವ ಅರ್ಹತೆ ಹೊಂದಿರುತ್ತಾರೆಂದು ಹೇಳುವುದು ಅಸಾಧ್ಯ ಎಂಬುದನ್ನು ನನ್ನ ಮಿತ್ರ ಸರ್ದಾರ್ ಹುಕುಂಸಿಂಗ್ ಅವರು ಅರ್ಥ ಮಾಡಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಅಸಂಖ್ಯಾತ ಮತದಾರರಿಗೆ ಹೋಲಿಸಿದಲ್ಲಿ ಅಭ್ಯರ್ಥಿಗಳಾಗಿ ಸ್ಪರ್ಧಿಸುವ ಅರ್ಹತೆಗಳಿಸುವವರ ಸಂಖ್ಯೆ ಅತ್ಯಲ್ಪವಾಗಿರುತ್ತದೆ ಎಂಬುದರಲ್ಲಿ ಸಂದೇಹವಿರಲಾರದು. ವಾಸ್ತವವಾಗಿ ಈ ತಿದ್ದುಪಡಿಯ ಪರಿಣಾಮವೆಂದರೆ, ತಿದ್ದುಪಡಿಯಲ್ಲಿ ಸೂಚಿಸಲಾಗಿರುವ ವರ್ಗಗಳಿಗೆ ಆನುಷಂಗಿಕವಾಗಿ ಸೇರಿದ ಕೆಲವೊಂದು ಜನರಿಗೆ ಏಕ ಸ್ವಾಮ್ಯವನ್ನು ಸೃಷ್ಟಿಸುವುದೇ ಆಗಿದೆ. ಇಂಥ ಏಕಸ್ವಾಮ್ಯತೆಯಿಂದ ದೇಶದ ರಾಜಕೀಯ ಜೀವನದಲ್ಲಿ ದುರಾಚಾರದ ಪ್ರವೇಶಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ ಎನ್ನುವುದರಲ್ಲಿ ನನ್ನ ಮನದಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ಒಬ್ಬ ಮನುಷ್ಯ ಬುದ್ಧಿವಂತ ಎಂಬ ಏಕಮಾತ್ರ ಕಾರಣಕ್ಕಾಗಿ ಅಥವಾ ಅನುಭವಿ ಎಂಬ ಕಾರಣಕ್ಕಾಗಿಯೇ ಸಂಸತ್ತಿನಲ್ಲಿ ಕುಳಿತುಕೊಳ್ಳಲು ಅರ್ಹನಾಗುತ್ತಾನೆ ಎಂಬುದು ಖಂಡಿತವಾಗಿಯೂ ನನಗೆ ಸಮ್ಮತವೆನಿಸುವುದಿಲ್ಲ. ಚರ್ಚೆಯ ಕಾಲದಲ್ಲಿ ಹೇಳಿದಂತೆ ಬುದ್ಧಿ ಮತ್ತೆ ಮತ್ತು ಅನುಭವಕ್ಕಿಂತ ಶೀಲಕ್ಕೆ ನಾನು ಹೆಚ್ಚಿನ ಮಹತ್ವ ನೀಡುತ್ತೇನೆ. ಸಂವಿಧಾನದ ವಿಧಿಗಳ ಅನ್ವಯ ಚುನಾಯಿತರಾಗುವ ಜನ ಶೀಲವಂತರಾಗಿರಬೇಕೆಂಬುದಕ್ಕೆ ತಿದ್ದುಪಡಿಯಲ್ಲಿ ಖಾತ್ರಿ ಇಲ್ಲ. ನಾನು ಸರಿಯಾಗಿ ಅರ್ಥಮಾಡಿಕೊಂಡಿರುವ ಪಕ್ಷದಲ್ಲಿ, ದಕ್ಷತೆಗಳಲ್ಲಿ ಬಹುಮಟ್ಟಿಗೆ ಸಂಸತ್ತಿನ ಕಾರ್ಯಪಟುತ್ವ, ದಕ್ಷತೆಗಳಲ್ಲಿ ಸುಧಾರಣೆಯುಂಟುಮಾಡಬೇಕೆಂಬುದೇ ಈ ತಿದ್ದುಪಡಿಯ ಸೂಚಕರ ಉದ್ದೇಶವಿದ್ದಂತಿದೆ. ಹಾಗೆಂದೇ ನಾನು ಭಾವಿಸುತ್ತೇನೆ. ಈ ದೃಷ್ಟಿಕೋನದಿಂದ ಪ್ರತಿಯೊಂದು ವರ್ಗವನ್ನೂ ಪರೀಕ್ಷಿಸೋಣ. ಶಾಸನ ಸಭೆಯ ಒಂದು ವರ್ಷದ ಸದಸ್ಯತ್ವದ ಅನುಭವ ಎಂಬುದನ್ನು ಮೊದಲು ಕೈಗೆತ್ತಿಕೊಳ್ಳೋಣ. ಸಾಕ್ಷರನೂ ಅಲ್ಲದ ಅವಿದ್ಯಾವಂತನಾದ ಒಬ್ಬ ಮನುಷ್ಯನ ಒಂದು ವರ್ಷದ ಶಾಸಕನ ಅನುಭವದಿಂದ ಕಾರ್ಯಪಟುತ್ವ ಸುಧಾರಣೆಯಲ್ಲಿ ಏನು ಸಾಧ್ಯವಾದೀತು? ಎರಡನೆಯ ವರ್ಗ ತೆಗೆದುಕೊಳ್ಳೋಣ, ಮುನಿಸಿಪಾಲಿಟಿ ಅಥವಾ ಜಿಲ್ಲಾ ಸ್ಥಳೀಯ ಮಂಡಳಿಯಂಥ ಸ್ಥಳೀಯ ಆಡಳಿತಕ್ಕೆ ಚುನಾಯಿತರಾದ ಸದಸ್ಯರ ವಿಚಾರ ಇಲ್ಲಿ

ಮತ್ತೆ ಅದೇ ಪ್ರಶ್ನೆ ಉದ್ಭವಿಸುತ್ತದೆ. ಮುನಿಸಿಪಲ್ ಕಾರ್ಪೋರೇಷನ್ ಅಥವಾ ಮುನಿಸಿಪಲ್ ಕೌನ್ಸಿಲ್‌ನ ಅನುಭವ ನನಗಿಲ್ಲ. ಆದರೆ ಜಿಲ್ಲಾ ಸ್ಥಳೀಯ ಮಂಡಳಿಗಳ (ಡಿಸ್ಟ್ರಿಕ್ಟ್ ಬೋರ್ಡ್) ಬಗ್ಗೆ ನನಗೆ ಸ್ವಲ್ಪಜ್ಞಾನವಿದೆ. ನನಗೆ ನೆನಪಿರುವುದೆಂದರೆ, ಜಿಲ್ಲಾ ಮಂಡಳಿಗಳ ಸದಸ್ಯರಲ್ಲಿ ಬಹುತೇಕ ಮಂದಿ ಸಂತೆಯ ದಿನದಂದೇ ಮಂಡಳಿಯ ಸಭೆ ನಡೆಯಬೇಕೆಂದು ಅಪೇಕ್ಷಿಸುತ್ತಾರೆ, ಏಕೆಂದರೆ ಅಂದು ಸಭೆ ನಡೆದಲ್ಲಿ ಸಭೆಯಲ್ಲಿ ಭಾಗವಹಿಸಿ ಪ್ರಯಾಣ ಭತ್ಯೆ ಪಡೆದು, ವಾರ ಅಥವಾ ತಿಂಗಳಿಗೆ ಬೇಕಾಗುವಷ್ಟು ಸಾಮಾನು ಸರಂಜಾಮುಗಳನ್ನು ಸಂತೆಯಲ್ಲಿ ಖರೀದಿಸಿ ಊರಿಗೆ ಮರಳಬಹುದೆಂಬುದೇ ಅವರ ಅಪೇಕ್ಷೆಯ ಇಂಗಿತ. (ಅಡಚಣೆ) ನನಗೆ ತಿಳಿಯದು; ಬೇರೆ ಬಗೆಯವರೂ ಇರಬಹುದು. ಮಾದರಿಯನ್ನೂ ನಾನು ಬಲ್ಲೆ (ಕೆಲವು ಗೌರವಾನ್ವಿತ ಸದಸ್ಯರು: ಈಗ ಬೇಡ) ಅದು ನನ್ನ ಅನುಭವ. ಇನ್ನು ಗ್ರಾಮ ಪಂಚಾಯಿತಿ. ಗ್ರಾಮಸ್ಥನಾದ ಪಂಚಾಯಿತಿ ಸದಸ್ಯನೊಬ್ಬನಲ್ಲಿ ಎಂಥ ದಕ್ಷತೆ, ಕಾರ್ಯಪಟುತ್ವ ಇದ್ದೀತೆಂಬುದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಅವರ ಕರ್ತವ್ಯಗಳೇನು, ಕೆಲಸಗಳೇನು? ಅವರಲ್ಲಿ ಏನು ಸಂಪನ್ಮೂಲವಿದೆ? ಆಡಳಿತ ಕುರಿತಂತೆ ತಾಂತ್ರಿಕ ಪರಿಜ್ಞಾನ ಅವರಿಗಿದೆಯೆ? ಸರ್ಕಾರಿ ನೌಕರನೊಬ್ಬನ ದೃಷ್ಟಾಂತ ತೆಗೆದುಕೊಳ್ಳಿ. ಐದು ವರ್ಷಗಳ ಕಾಲದಿಂದ ಸೇವೆಯಲ್ಲಿರುವ ಸರ್ಕಾರಿ ನೌಕರನಿಗೆ ನಿಸ್ಸಂದೇಹವಾಗಿ ಕೆಲವೊಂದು ಅನುಭವವಿರುತ್ತದೆ. ಆಡಳಿತಾತ್ಮಕ ಪ್ರಕ್ರಿಯೆಗಳ ಪರಿಜ್ಞಾನವಿರುತ್ತದೆ. (ಅಡಚಣೆ) ಸರ್ಕಾರಿ ನೌಕರನೊಬ್ಬ ಉನ್ನತ ಗುಣಶೀಲಗಳನ್ನು ಹೊಂದಿರುತ್ತಾನೆ ಎಂದು ನಾನು ಭಾವಿಸುತ್ತೇನೆ. ಇದೇ ಮಾತನ್ನು ಚೌಕೀದಾರನೊಬ್ಬನ ಬಗ್ಗೆಯೂ ಹೇಳಬಹುದೆ ಎಂಬುದು ನನಗೆ ತಿಳಿಯದು. ಈ ವರ್ಗದ ಬಗ್ಗೆ. ಇದೇ ಮಾತನ್ನು ಈ ವರ್ಗಕ್ಕೂ ಅನ್ವಯಿಸಬೇಕಾದೀತು ಎಂಬುದೇ ನನ್ನ ಹಿಂಜರಿಕೆ. ಆದರೆ, ಸರ್ಕಾರಿ ನೌಕರರು ಎಂದಾಗ ನನ್ನ ಗೌರವಾನ್ವಿತ ಮಿತ್ರರು ಐ.ಸಿ.ಎಸ್ ಅಧಿಕಾರಿ ಅಥವಾ ಉನ್ನತ ಶ್ರೇಣಿಯ ಸಿವಿಲ್ ನೌಕರ ಎಂದು ಅರ್ಥೈಸಿದಲ್ಲಿ ಅದರಿಂದ ಒಂದು ಅಪಾಯ ಉದ್ಭವಿಸುವ ಸಾಧ್ಯತೆ ಇದೆ. ಬಹುತೇಕ ಸರ್ಕಾರಿ ಅಧಿಕಾರಿಗಳಿಗೆ ಕೆಲವೊಂದು ಸರ್ಕಾರಿ ರಹಸ್ಯಗಳು ತಿಳಿದಿರುತ್ತವೆ. ಅವರ ಆಡಳಿತಾವಧಿಯಲ್ಲಿ ಇವು ಅವರ ಅರಿವಿಗೆ ಬಂದಿರುತ್ತದೆ. ಸಿವಿಲ್ ಅಧಿಕಾರಿ/ನೌಕರನೊಬ್ಬ ನಿವೃತ್ತಿಯ ನಂತರ ಶಾಸನ ಸಭೆ ಸದಸ್ಯನಾದಲ್ಲಿ, ಆಗ ತನಗೆ ಗೊತ್ತಿರುವ ರಹಸ್ಯ ವಿಷಯಗಳನ್ನು ಬಳಸಿಕೊಳ್ಳುವ ಸಾಧ್ಯತೆ ಇಲ್ಲ ಎಂದು ನಂಬಲು ನಾನು ಸಿದ್ಧವಿಲ್ಲ. ಇನ್ನೊಂದು ದೃಷ್ಟಾಂತ ನೋಡೋಣ. ಒಂದು ವರ್ಷದ ಅನುಭವ ಇರುವ ಒಬ್ಬ ಶಾಲಾ ಉಪಾಧ್ಯಾಯ ಅಥವಾ ಕಾಲೇಜು ವಿಶ್ವವಿದ್ಯಾಲಯದ ಉಪನ್ಯಾಸಕ. ಗ್ರಾಮದ ಪ್ರೈಮರಿ ಶಾಲೆಯ ಉಪಾಧ್ಯಾಯನ ಅನುಭವವನ್ನೇ ತೆಗೆದುಕೊಳ್ಳಿ ಅವನ ಜ್ಞಾನ ಸಂಪತ್ತೇನು? ಅವನ ತಿಳಿವಳಿಕೆ ಏನು?

**ಸರ್ದಾರ್ ಹುಕುಂಸಿಂಗ್:** ಇವರೆಲ್ಲ ಸ್ಪರ್ಧೆಯಿಂದ ಬಹಿಷ್ಕೃತರೆ? ನಿಷೇಧಿತರೆ?

**ಡಾ. ಅಂಬೇಡ್ಕರ್:** ಅದೇ ನನ್ನ ಮುಖ್ಯ ವಾದ. ಅದಕ್ಕೆ ಈಗ ಬರುತ್ತಾ ಇದ್ದೇನೆ. ಆದ್ದರಿಂದ ಇದರಲ್ಲಿ ನನಗೆ ವಿಶೇಷವೇನೂ ಕಾಣಿಸುತ್ತಿಲ್ಲ. ಮುಂದಿನ ವರ್ಗ ತೆಗೆದುಕೊಳ್ಳಿ. ಸ್ವಯಂ ಸೇವಕ. ಈತ ಸಮಾಜಸೇವೆಯ ಮನ್ನಣೆ ಪಡೆದಿರುವ ಒಂದು ಸಂಘದ ಸದಸ್ಯ. ಮಹಾವೀರ ದಳ ಒಂದು ಸಂಘಟನೆ. ಅದರ ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರು ಎಂಬುದಕ್ಕೆ ನನ್ನ ಗೌರವಾನ್ವಿತ ಮಿತ್ರರಾದ ಸರ್ದಾರ್ ಹುಕುಂಸಿಂಗ್‌ರ ಅನುಮತಿ ಉಂಟೆ? ಆರ್.ಎಸ್.ಎಸ್. ಮತ್ತು ಅಕಾಲಿದಳಗಳನ್ನೂ ಹೆಸರಿಸಬಹುದೆ? ಇವುಗಳಲ್ಲಿ ಕೆಲವು ಅಪಾಯಕಾರಿ ಸಂಘಗಳು. ಒಂದು ಸರ್ಕಾರ ಅವಕ್ಕೆ ಮಾನ್ಯತೆ ನೀಡಬಹುದು, ಮತ್ತೊಂದು ಮಾನ್ಯತೆ ನೀಡದೇ ಹೋಗಬಹುದು. ಇವೆಲ್ಲ ಸಾಧ್ಯತೆಗಳೂ ಇವೆ.

**ಶ್ರೀಮತಿ ದುರ್ಗಾಬಾಯಿ (ಮದ್ರಾಸ್):** ಅವರನ್ನು ಹೊರಗಿಡಬಹುದೆ?

**ಡಾ. ಅಂಬೇಡ್ಕರ್:** ಆ ವಿಷಯಕ್ಕೆ ನಾನೀಗ ಬರುತ್ತಿದ್ದೇನೆ. ನಾನು ಸದನದ ಮುಂದೆ ಅರಿಕೆ ಮಾಡಿಕೊಳ್ಳುವುದಿಷ್ಟೆ: ತಿದ್ದುಪಡಿಯಲ್ಲಿ ಹೇಳಲಾಗಿರುವುದರ ಸ್ವರೂಪ ಲಕ್ಷಣಗಳು ಹೇಗಿವೆಯೆಂದರೆ, ಅದು ಒಂದು ನಿರ್ದಿಷ್ಟ ಸಂಸ್ಥೆಯ ಸದಸ್ಯರು ಸಂಸತ್ತಿನಲ್ಲಿ ಹೆಚ್ಚು ದಕ್ಷ ಸದಸ್ಯರಾಗಬಹುದು ಎಂಬ ಅನಿಸಿಕೆಯನ್ನುಂಟು ಮಾಡುವಂತಿದೆ. ಈಗ ನಾನು ಅರಿಕೆ ಮಾಡಿಕೊಳ್ಳಲಿರುವ ಮತ್ತೊಂದು ಅಂಶವೆಂದರೆ: ಇಲ್ಲಿ ಸೂಚಿಸಲಾಗಿರುವವರಲ್ಲಿ ಯಾರೊಬ್ಬರನ್ನಾದರೂ ಮತದಾರರು ಚುನಾಯಿಸಕೂಡದೆಂಬ ಬಹಿಷ್ಕಾರದ ರೀತಿಯದು ಏನಾದರೂ ಸಂವಿಧಾನದಲ್ಲಿ ಅಥವಾ ಪ್ರಸಕ್ತ ಮಸೂದೆಯಲ್ಲಿದೆಯೆ? ಇಬ್ಬರು ಅಭ್ಯರ್ಥಿಗಳಿದ್ದಾರೆ ಎಂದಿಟ್ಟುಕೊಳ್ಳಿ. ಒಬ್ಬ ಯಃಕಶ್ಚಿತ್ ಮತದಾರ. ನಮ್ಮ ಅನರ್ಹತಾ ಮಾನದಂಡಗಳ ಪ್ರಕಾರ ಅವನು ಅನರ್ಹನೇನಲ್ಲ. ಈತನ ಎದುರಾಳಿ ಅಭ್ಯರ್ಥಿ ಶಾಸನ ಸಭೆಯಲ್ಲಿ ಒಂದು ವರ್ಷ ಸದಸ್ಯನಾಗಿದ್ದವನು. ಮತದಾರರು ಎರಡನೆಯ ಅಭ್ಯರ್ಥಿಗೆ ಆದ್ಯತೆ ನೀಡುತ್ತಾರೆ. ಮೊದಲನೆಯವನಿಗಲ್ಲ ಎಂದು ಭಾವಿಸಲು ಏನಾದರೂ ಆಧಾರವಿದೆಯೆ? ಇವರಿಬ್ಬರನ್ನೂ ಅಲಾಯಿದ ತೆಗೆದುಕೊಳ್ಳಿ. ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಸ್ವತಂತ್ರರು. ಸಂಸತ್ತಿನಲ್ಲಿ ಹೆಚ್ಚಿನ ಕಾರ್ಯಪಟುತ್ವ ಮತ್ತು ದಕ್ಷತೆಗಳನ್ನು ಸಾಧಿಸುವ ದೃಷ್ಟಿಯಿಂದ ಇವರಲ್ಲಿ ಏನೋ ಮೌಲಿಕವಾದದ್ದು ಇದೆ ಎಂದು ಮತದಾರರು ಭಾವಿಸಬಹುದು. ಆಗ ದೇಶದ ಪ್ರಜೆಯಷ್ಟೇ ಆಗಿರುವ ಯಃಕಶ್ಚಿತ್ ಮತದಾರ ಅಭ್ಯರ್ಥಿಯನ್ನು ಬಿಟ್ಟು ಇತರೆ ಅಭ್ಯರ್ಥಿಗೆ ಆದ್ಯತೆ ನೀಡುವುದಿಲ್ಲ ಎಂಬ ವಿಚಾರ ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಈ ಆಧಾರಗಳ ಹಿನ್ನೆಲೆಯಲ್ಲಿ ನನಗೆ ಈ ತಿದ್ದುಪಡಿ ಅನಗತ್ಯವೆನ್ನಿಸುತ್ತಿದೆ ಹಾಗೂ ನಾನು ಅದನ್ನು ವಿರೋಧಿಸುತ್ತಿದ್ದೇನೆ.

**ಸರ್ದಾರ್ ಸೋಚೇತ್ ಸಿಂಗ್ (ಪಿ.ಇ.ಪಿಎಸ್.ಯು):** ಹಿಂದಿ ಓದುವ ಬರೆಯುವ ಸಾಮರ್ಥ್ಯ ಉಳ್ಳ ವರ್ಗದ ಬಗ್ಗೆ ನೀವು ಏನೂ ಹೇಳಿಲ್ಲ.

**ಡಾ. ಅಂಬೇಡ್ಕರ್:** ಕಳೆದ ಸಲ ನಾನು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಅದು ಜಟಿಲ ಪರಿಸ್ಥಿತಿಯನ್ನುಂಟು ಮಾಡುತ್ತದೆ ಎಂದೇ ನನ್ನ ಭಾವನೆ. ಸಂವಿಧಾನ ರಚನೆ ಸಂದರ್ಭದಲ್ಲೇ ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಹಿಂದಿ ರಾಷ್ಟ್ರಭಾಷೆಯಾಗಿ ಈ ಕ್ಷಣದಿಂದ ಜಾರಿಗೆ ಬರಬೇಕಾಗಿಲ್ಲ. ಮುನ್ನೇರ್ಪಾಡನ್ನು ನಾವೇಕೆ ಮಾಡಿದ್ದೇವೆ? ಏಕೆಂದರೆ ರಾಷ್ಟ್ರದ ವಿವಿಧ ಭಾಗಗಳಲ್ಲಿ ಹಿಂದಿ ಜನರ ಭಾಷೆಯಾಗಿಲ್ಲ. ಆದ್ದರಿಂದ ಕಲಿಯಲು ಜನತೆಗೆ ಒಂದಷ್ಟು ಕಾಲವಕಾಶಕೊಡಬೇಕಾದ ಆವಶ್ಯಕತೆ ಇದೆ ಎಂಬುದು ನಮಗೆ ಮನವರಿಕೆಯಾಗಿತ್ತು. ಈ ಮೂಲ ಕಾರಣವನ್ನು ಮಾನ್ಯ ಮಾಡಿದ ನಂತರ, ಹಠಾತ್ತನೆ ಇದರಿಂದ ಹಿಂದೆ ಸರಿಯುವುದು ಸಂವಿಧಾನಕ್ಕೆ ವಿರುದ್ಧವಾದ ನಡೆಯಾಗುತ್ತದೆ ಎಂದು ನನಗೆ ತೋರುತ್ತದೆ.

ಪ್ರೊ ಕೆ.ಕೆ. ಭಟ್ಟಾಚಾರ್ಯರ ಸೂಚನೆ ತಿರಸ್ಕೃತವಾಯಿತು.

## *ಕಲಂ ೪ – (ಜನತಾ ಸದನ ಸದಸ್ಯತ್ವ)

**ಶ್ರೀ ಬಿ ಕೆ ದಾಸ್ (ಪಶ್ಚಿಮ ಬಂಗಾಳ):** ಮಂಡಿಸಲು ಅನುಮತಿಯನ್ನು ಬೇಡುತ್ತಿದ್ದೇನೆ.

ನಾಲ್ಕನೆ ಕಲಂನಲ್ಲಿ "ಜಮ್ಮು ಮತ್ತು ಕಾಶ್ಮೀರ" ಪದಗಳ ನಂತರ "ಅಥವಾ ಅಂಡಮಾನ್ ನಿಕೋಬಾರ್ ದ್ವೀಪಗಳು" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

**ಉಪಾ ಸಭಾಪತಿ:** ಸೂಚಿತ ತಿದ್ದುಪಡಿ:

---

* ಸಂಸದೀಯ ಚರ್ಚೆ ಸಂಪುಟ ೧೧ ಭಾಗ II ಮೇ ೧೪, ೧೯೫೧ ಪುಟ ೮೬೯–೭೦೦

ನಾಲ್ಕನೆ ಕಲಂನಲ್ಲಿ "ಜಮ್ಮು ಕಾಶ್ಮೀರ" ಪದಗಳ ನಂತರ "ಅಥವಾ ಅಂಡಮಾನ್ ನಿಕೋಬಾರ್ ದ್ವೀಪಗಳಿಗೆ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

**ಡಾ. ಅಂಬೇಡ್ಕರ್:** ತಿದ್ದುಪಡಿಯನ್ನು ನಾನು ಒಪ್ಪಿರುತ್ತೇನೆ.

**ಸರ್ದಾರ್ ಹುಕುಂಸಿಂಗ್:** ಈ ತಿದ್ದುಪಡಿಯನ್ನು "ಚುನಾವಣೆ" ಅರ್ಥ ನಿರೂಪಣೆಯ ವ್ಯಾಪ್ತಿಯ ಒಳಗಡೆ ತರುವುದು ಉಚಿತವಲ್ಲವೆ ಎಂದು ನಾನು ಮಾನ್ಯ ಕಾನೂನು ಸಚಿವರಿಗೆ ಮನವಿ ಮಾಡುತ್ತೇನೆ. ಎರಡನೇ ಕಲಂನ ಉಪವಿಧಿ (ಡಿ) ಹೇಳುತ್ತದೆ:

> "ಚುನಾವಣೆಯೆಂದರೆ ಸಂಸತ್ತಿನ ಉಭಯ ಸದನಗಳು ಅಥವಾ ಜಮ್ಮುಕಾಶ್ಮೀರ ಹೊರತು ಇತರೆ ರಾಜ್ಯಗಳ ಶಾಸನ ಸಭೆಯ ಉಭಯ ಸದನಗಳಲ್ಲಿ ಒಂದು ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡಲು ನಡೆಸುವ ಚುನಾವಣೆ ಎಂದು ಅರ್ಥ"

ಜಮ್ಮುಕಾಶ್ಮೀರದ ಪ್ರಸ್ತಾಪ ಈಗಾಗಲೇ ಮಸೂದೆಯಲ್ಲಿದೆ. ಅಂಡಮಾನ್–ನಿಕೋಬಾರ್ ದ್ವೀಪಗಳನ್ನು ಅದರಲ್ಲಿ ಸೇರಿಸಬಹುದು. ಆಗ ಬೇರೆಡೆ ಅದರ ಪುನರಾವರ್ತನೆಯ ಅಗತ್ಯ ಇರುವುದಿಲ್ಲ.

*ಶ್ರೀ ಹುಸೇನ್ ಇಮಾಮ್:** ಅಂಥ ತೊಂದರೆ ಉದ್ಭವಿಸುವುದಿಲ್ಲ. ಏಕೆಂದರೆ ವ್ಯಕ್ತಿ ಯಾವುದೇ ರಾಜ್ಯದ ಮತದಾರನಾಗಿರಬೇಕು, ಸ್ಪರ್ಧಿಸುತ್ತಿರುವ ರಾಜ್ಯದ ಮತದಾರನೇ ಆಗಿರಬೇಕು ಎಂದೇನಿಲ್ಲ. ಆದ್ದರಿಂದ ರಾಷ್ಟ್ರಪತಿಯವರ ಆಯ್ಕೆ ಮುಕ್ತವಾಗಿದ್ದು ಭಾರತದ ಯಾವುದೇ ಮತ ಕ್ಷೇತ್ರದ ಮತದಾರರಾಗಿರುವವರನ್ನು ಅವರು ನಾಮಕರಣ ಮಾಡಬಹುದಾಗಿದೆ.

**ಮಾನ್ಯ ಉಪ ಸಭಾಪತಿ:** ಅದು ಅಂಡಮಾನ್ ನಿಕೋಬಾರ್ ನಿವಾಸಿಗಳನ್ನು ಒಳಗೊಳ್ಳುವುದಿಲ್ಲ. ನಿವಾಸಿ ಅರ್ಹತೆಯ ಕಾರಣದಿಂದಾಗಿ ಅವರನ್ನು ಬೇರೆ ಯಾವುದೇ ಸ್ಥಳದಲ್ಲಿ ಮತದಾರರನ್ನಾಗಿ ನೊಂದಾಯಿಸುವಂತಿಲ್ಲ.

**ಸಾರಿಗೆ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವರು (ಶ್ರೀ ಸಂತಾನಂ):** "ಆಯ್ಕೆ" ಎನ್ನುವುದು ನಾಮಕರಣವನ್ನು ಒಳಗೊಳ್ಳುತ್ತದೆಯೆ?

**ಮಾನ್ಯ ಡೆಪ್ಯುಟಿ ಸ್ಪೀಕರ್:** ಹೌದು ಚುನಾವಣೆ ಮತ್ತು ನಾಮಕರಣ ಎರಡನ್ನೂ.

**ಶ್ರೀ ಸಿಧ್ವಾ:** ಭಾಷೆಗೆ ನಾವು ತಿದ್ದುಪಡಿ ಮಾಡುವುದು ಸಾಧ್ಯವಿಲ್ಲವೆ? ಅಂಡಮಾನ್‌ನಲ್ಲಿ ಯಾರು ಯಾರೆಂದು, ಯಾರುಯಾರು ಏನು ಏನೆಂದು ಸರ್ಕಾರಕ್ಕೆ ಖಂಡಿತವಾಗಿಯೂ ಗೊತ್ತಿರುತ್ತದೆ ಹಾಗೂ ಅವರು ನಾಮಕರಣಕ್ಕೆ ಹೆಸರನ್ನು ಸೂಚಿಸುತ್ತಾರೆ.

**ಮಾನ್ಯ ಉಪಸಭಾಪತಿ:** ಇಲ್ಲವಾದರೆ ವ್ಯಕ್ತಿಯೊಬ್ಬ ಮತದಾರನಾಗಲು ಅರ್ಹತೆಗಳಿಸಿಕೊಂಡಿರಬೇಕಾಗುತ್ತದೆ ಹಾಗೂ ನಿವಾಸಿ ಅರ್ಹತೆ ಪಡೆದಿರಬೇಕಾಗುತ್ತದೆ.

**ಡಾ. ಅಂಬೇಡ್ಕರ್:** ಸರಳ ಮಾರ್ಗವೆಂದರೆ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು. ನೀವು ಎತ್ತಿ ತೋರಿದಂತೆ ಉಪವಿಧಿ (ಡಿ) ಯಿಂದ ಅಡಚಣೆ ಉದ್ಭವಿಸುತ್ತದೆ. ಅಂಡಮಾನ್‌ನಲ್ಲಿ ನಾವು ಸಂಸದೀಯ ಕ್ಷೇತ್ರವನ್ನು ಹೊಂದಿಲ್ಲ. ಆದ್ದರಿಂದ ಅಂಡಮಾನ್ ನಿಕೋಬಾರ್ ಜನತೆಗೆ ಪ್ರಾತಿನಿಧ್ಯ ನೀಡುವುದರಲ್ಲಿ ಇದು ತೊಂದರೆಯನ್ನುಂಟುಮಾಡಬಲ್ಲದು. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ತಿದ್ದುಪಡಿ ಅಗತ್ಯವಾದದ್ದು.

**ಮಾನ್ಯ ಉಪಸಭಾಪತಿ:** ಭವಿಷ್ಯದ ಬಗ್ಗೆ ಹೇಳುವುದಾದರೆ ಅದು ತನ್ನನ್ನು ತಾನು ರಕ್ಷಿಸಿಕೊಳ್ಳಬಲ್ಲದು.

---

* ಸಂಸದೀಯ ಚರ್ಚೆ ಸಂಪುಟ ೧೧ ಭಾಗ II ಮೇ ೧೪,೧೯೫೧ ಪುಟ ೮೭೦೧–೦೨

ಯಾವುದೇ ತಿದ್ದುಪಡಿಯನ್ನೂ ಸೂಚಿಸಬಹುದು. ಮುಂದಿನ ಚುನಾವಣೆಗಳಿಗೆ ಮುನ್ನ ತಿದ್ದುಪಡಿ ರಹಿತವಾಗಿಯೇ ಈ ಶಾಸನ ಜಾರಿಯಲ್ಲಿರಬೇಕೆಂದೇನಿಲ್ಲ. ನಾವೆಲ್ಲ ಕಾಲೋಚಿತ ಅನುಭವಗಳಿಂದ ಕಲಿಯುವವರೇ. ಸೂಚಿತ ತಿದ್ದುಪಡಿ ಎಂದರೆ:

> ನಾಲ್ಕನೆ ಕಲಂನಲ್ಲಿ "ಜಮ್ಮು ಮತ್ತು ಕಾಶ್ಮೀರ" ಪದಗಳ ನಂತರ ""ಅಥವಾ ಅಂಡಮಾನ್ ನಿಕೋಬಾರ್ ದ್ವಿಪಗಳಿಗೆ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

ಸೂಚನೆ ಅಂಗೀಕೃತವಾಗಿದೆ.

## ಕಲಂ – ೫ (ವಿಧಾನ ಸಭೆ ಸದಸ್ಯತ್ವ)

*ಡಾ. ದೇಶಮುಖ್: ಸ್ವಾಮಿ ಪ್ರೊ. ಶಿಬ್ಬಾನ್ ಲಾಲ್ ಅವರ ತಿದ್ದುಪಡಿ ಸೂಚಿಸಲು ನಾನು ಅನುಮತಿ ಕೋರುತ್ತಿದ್ದೇನೆ.

**ಶ್ರೀ ಸಂತಾನಂ:** ಪ್ರೊ: ಸಕ್ಸೇನಾ ಅವರ ತಿದ್ದುಪಡಿಗಳು ಆನುಷಂಗಿಕವಾದ ತಿದ್ದುಪಡಿಗಳು. ಈ ಮೊದಲು ಕಲಂ ೩ ಮತ್ತು ೪ ಕ್ಕೆ ಇಂಥ ತಿದ್ದುಪಡಿಗಳಿಗೆ ಅವಕಾಶ ನೀಡಿಲ್ಲ .

**ಡಾ. ದೇಶಮುಖ್:** ಪರವಾಗಿಲ್ಲ ಸಂಸತ್ ಚುನಾವಣೆಯಲ್ಲಿ ಇದು ನಿಷಿದ್ಧವಾದರೂ ರಾಜ್ಯ ಶಾಸನ ಸಭೆ ಚುನಾವಣೆಗಳಿಗೆ ಈ ಸೌಲಭ್ಯ ನೀಡಬಹುದು.

**ಡಾ. ಅಂಬೇಡ್ಕರ್:** ಇಲ್ಲ, ಇಲ್ಲ ಮತದಾರರ ಪಟ್ಟಿ ಒಂದೇ ಆಗಿರುತ್ತದೆ.

**ಮಾನ್ಯ ಉಪ ಸಭಾಪತಿ:** ಹೌದು.

**ಶ್ರೀ ಸೋನಾವಣೆ:** ಐದನೇ ಕಲಂಗೆ ಎರಡು ತಿದ್ದುಪಡಿಗಳನ್ನು ನಾನು ಸೂಚಿಸಬಯಸುತ್ತೇನೆ. ಇವತ್ತು ಬೆಳಿಗ್ಗೆ ಸೂಚನೆ ಕೊಟ್ಟಿದ್ದೇನೆ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಆದರೆ ನನ್ನ ಬಳಿ ಆ ತಿದ್ದುಪಡಿಗಳ ಪ್ರತಿ ಇಲ್ಲ.

**ಡಾ. ಅಂಬೇಡ್ಕರ್:** ನನ್ನ ಬಳಿಯೂ ಅದರ ಪ್ರತಿ ಇಲ್ಲ.

**ಮಾನ್ಯ ಉಪಸಭಾಪತಿ:** ತಿದ್ದುಪಡಿಯನ್ನು ಮಾನ್ಯ ಸಚಿವರಿಗೆ ನೀಡಬೇಕು ಹಾಗೂ ಅದನ್ನು ಸ್ವೀಕರಿಸಲು ಸರ್ಕಾರ ಸಿದ್ಧವಿರಬೇಕು. ಹಾಗಿಲ್ಲದಿದ್ದರೆ ನಾನು ಅದಕ್ಕೆ ಅವಕಾಶ ನೀಡಲಾರೆ.

*ಶ್ರೀ ನಾಸಿರುದ್ದಿನ್ ಅಹ್ಮದ್: ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳನ್ನು ಒಟ್ಟಿಗೆ ನಾವು ಭಾಗ (ಎ) ನಲ್ಲಿ ಸೇರಿಸಿದರೆ ಭಾಗ (ಬಿ) ನಲ್ಲಿ ಪುನರಾವರ್ತನೆಯಾಗುವುದು. ಆದರೆ ಭಾಗ (ಬಿ) ಪರಿಶಿಷ್ಟ ವರ್ಗವನ್ನು ಮಾತ್ರ ಕುರಿತದ್ದಾಗಿದೆ. ಆದ್ದರಿಂದ ಹೆಚ್ಚಿನ ಸ್ಪಷ್ಟತೆ ಸಲುವಾಗಿ 'ಎ' ಭಾಗದ ಎರಡು ವಿಭಾಗಗಳನ್ನು ಪ್ರತ್ಯೇಕಿಸುವುದು ಅಗತ್ಯ; ಅಂದರೆ ಪರಿಶಿಷ್ಟ ವರ್ಗದವರು ಮತ್ತು ಪರಿಶಿಷ್ಟ ಜಾತಿಗಳೆಂದು. ಭಾಗ (ಬಿ) ಈಗ ಇರುವಂತೆಯೇ ಉಳಿಯಬೇಕು. ವಾಸ್ತವದಲ್ಲಿ ಪರಿಶಿಷ್ಟ ವರ್ಗದವರು ಎರಡು ವರ್ಗಕ್ಕೆ ಸೇರಿದವರು ವಾಡಿಕೆಯಲ್ಲಿರುವ ಪರಿಶಿಷ್ಟ ಒಂದಾದರೆ ಇನ್ನೊಂದು ಶಿಲ್ಲಾಂಗ್‌ನ ಕಂಟೋನ್ಮೆಂಟ್ ಅಥವಾ ಮುನಿಸಿಪಾಲಿಟಿಯ ಪರಿಶಿಷ್ಟ ವರ್ಗ ಇನ್ನೊಂದು. ಆದ್ದರಿಂದ ಕಂಟೋನ್ಮೆಂಟ್ ಪ್ರದೇಶಗಳ ಪರಿಶಿಷ್ಟ

---

* ಸಂಸದೀಯ ಚರ್ಚೆ ಸಂಪುಟ ೧೧, ಭಾಗ II, ಮೇ ೧೪, ೧೯೫೧ ಪು ೮೭೬೩–೬೪

* ಸಂಸದೀಯ ಚರ್ಚೆ ಸಂಪುಟ ೧೧, ಭಾಗ II, ಮೇ ೧೪, ೧೯೫೧ ಪು ೮೭೦೫–೦೬

ವರ್ಗ ಹಾಗೂ ಇತರ ಪ್ರದೇಶಗಳ ಪರಿಶಿಷ್ಟ ವರ್ಗವನ್ನು ನಿರುಪಾಧಿಕವಾಗಿ ಪ್ರತ್ಯೇಕವಾಗಿರಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳನ್ನು ಪ್ರತ್ಯೇಕವಾಗಿಯೇ ಪರಿಗಣಿಸಬೇಕೆಂದು ನಾನು ಸಲಹೆಮಾಡುತ್ತೇನೆ.

**ಮಾನ್ಯ ಉಪ ಸಭಾಪತಿ:** ಇದರಲ್ಲೇನೂ ಸಂದಿಗ್ಧತೆ ಕಾಣುತ್ತಿಲ್ಲ.

**ಡಾ. ಅಂಬೇಡ್ಕರ್:** ಸಂದಿಗ್ಧತೆ ಇಲ್ಲ. ಏಕೆಂದರೆ ಸಂವಿಧಾನದಲ್ಲಿ ಎರಡು ಪ್ರತ್ಯೇಕ ಅನುಚ್ಛೇದಗಳಿವೆ. ಸರ್ವತ್ರ ಎರಡು ಪ್ರತ್ಯೇಕ ಕಲಂಗಳನ್ನು ಅದು ಅನುಸರಿಸುವುದಿಲ್ಲ.

**ಮಾನ್ಯ ಉಪ ಸಭಾಪತಿ:** ಈ ವಿಷಯ ಮುಂದುವರಿಸುವುದು ಅಗತ್ಯವೆ?

**ಶ್ರೀ ನಾಸಿರುದ್ದಿನ್ ಅಹ್ಮದ್:** ಮಾನ್ಯ ಸಚಿವರಿಂದ ಪ್ರತಿಕೂಲಕರ ಪ್ರತಿಕ್ರಿಯೆ ಬಂದಿರುವುದರಿಂದ ವಿಷಯ ಮುಂದುವರಿಸುವುದರಿಂದ ಯಾವ ಉದ್ದೇಶವೂ ಈಡೇರದೆಂದು ನನ್ನ ಅನ್ನಿಸಿಕೆ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಸೂಚನೆ ಏನೆಂದರೆ

"ಐದನೇ ಕಲಂ ಮಸೂದೆಯ ಭಾಗವಾಗಿರುತ್ತದೆ"

ಸೂಚನೆ ಅಂಗೀಕೃತವಾಯಿತು.

ಐದನೇ ಕಲಮ್ಮನ್ನು ಮಸೂದೆಗೆ ಸೇರಿಸಲಾಗಿದೆ.

**ಕಲಂ–೬** — (ವಿಧಾನ ಪರಿಷತ್ತಿನ ಸದಸ್ಯತ್ವ) ತಿದ್ದುಪಡಿಮಾಡಿದಂತೆ ಮಸೂದೆಗೆ ಸೇರಿಸಲಾಗಿದೆ.

****ಕಲಂ–೭**— (ಸದಸ್ಯತ್ವದ ಅನರ್ಹತೆಗಳು)

**ಡಾ. ಅಂಬೇಡ್ಕರ್:** ಸ್ವಾಮಿ, ಏಳನೇ ಕಲಮಿನ ಮೇಲಿನ ಚರ್ಚೆಯನ್ನು ಮುಂದೂಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ನಾಸಿರುದ್ದಿನ್ ಅಹ್ಮದ್:** ಯಾವ ಯಾವ ಕಲಮ್ಮುಗಳನ್ನು ಚರ್ಚೆಗೆತ್ತಿಕೊಳ್ಳಲಾಗುವುದೆಂಬ ಬಗ್ಗೆ ನಮಗೆ ಮೊದಲೇ ಸ್ಪಷ್ಟವಾಗಿ ತಿಳಿದಿರಬೇಕು. ಹಾಗಾದಲ್ಲಿ ಅಂಥವುಗಳ ಮೇಲೆ ನಮ್ಮ ಗಮನ ಕೇಂದ್ರೀಕರಿಸಬಹುದು.

**ಮಾನ್ಯ ಉಪ ಸಭಾಪತಿ:** ಚರ್ಚೆಯನ್ನು ಮುಂದೂಡಬೇಕೆಂದು ಅವರು ಬಯಸುವ ನಿರ್ದಿಷ್ಟ ಕಲಮುಗಳನ್ನು ಪ್ರತಿದಿನ ಕಲಾಪದ ಶುರುವಿಗೇ ತಿಳಿಸುವಂತೆ ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ.

**ಡಾ. ಅಂಬೇಡ್ಕರ್:** ಏಳು ಮತ್ತು ಒಂಬತ್ತನೇ ಕಲಮ್ಮುಗಳು ಹೊರತಾಗಿ ಬೇರೆ ಯಾವುದೇ ಕಲಮ್ಮನ್ನೂ ಕ್ರಮ ತಪ್ಪಿಸಿ ಚರ್ಚೆಗೆತ್ತಿಕೊಳ್ಳುವ ಅನಿವಾರ್ಯತೆ ಉಂಟಾಗದೆಂದು ನಾನು ಭಾವಿಸುತ್ತೇನೆ. ಉಳಿದ ಕಲಮ್ಮುಗಳನ್ನು ಅವುಗಳ ಕ್ರಮಗತಿಯಲ್ಲೇ ಚರ್ಚೆಗೆತ್ತಿಕೊಳ್ಳಲು ನಾನು ಸಿದ್ಧನಾಗಿರುವೆ.

**ಶ್ರೀ ಝುನ್‌ಝುನ್‌ವಾಲ (ಬಿಹಾರ್):** ಇವುಗಳನ್ನು ಯಾವಾಗ ಎತ್ತಿಕೊಳ್ಳಲಾಗುವುದು?

**ಡಾ. ಅಂಬೇಡ್ಕರ್:** ತಿದ್ದುಪಡಿಯನ್ನು ಈ ಸಂಜೆಗೇ ಕಳುಹಿಸಿಕೊಡುವ ಉದ್ದೇಶವಿದೆ. ಮಾನ್ಯ ಸದಸ್ಯರು ಅದನ್ನು ನಾಳೆ ಚರ್ಚೆಗೆತ್ತಿಕೊಳ್ಳಲು ಸಿದ್ಧವಾಗುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಅವರು ಕಾಲಾವಕಾಶ ಬಯಸುವುದಾದಲ್ಲಿ ಅನಂತರ ಅದನ್ನು ಎತ್ತಿಕೊಳ್ಳುತ್ತೇನೆ. ಏನೇ ಆಗಲಿ ಅದನ್ನು ಹೆಚ್ಚು ಕಾಲ ಹಿಂಬದಿಯಲ್ಲಿಡುವುದು ನನಗೆ ಬೇಕಿಲ್ಲ. ಏಳನೇ ಕಲಮ್ಮಿಗೆ ನಾನು ಸೂಚಿಸಿರುವ ತಿದ್ದುಪಡಿಯ ಚರ್ಚೆಗೆ ಒಂದು ದಿನ ಕಾಲಾವಕಾಶ ನೀಡಲು ನಾನು ಸಿದ್ಧ.

**ಮಾನ್ಯ ಉಪಸಭಾಪತಿ:** ನಾಳಿದ್ದು ಅದನ್ನು ಚರ್ಚೆಗೆತ್ತಿಕೊಳ್ಳಬಹುದು. ಏಕೆಂದರೆ ಮಾನ್ಯ ಸದಸ್ಯರಿಗೆ

---

** *Ibid.,* ಪ್ರಕರಣ ಪುಟ: ೮೭೦೬–೧೨

ಅದರ ಅಧ್ಯಯನಕ್ಕೆ ಸಾಕಷ್ಟು ಸಮಯ ನೀಡಿದಂತಾಗುತ್ತದೆ. ತಿದ್ದುಪಡಿಗಳನ್ನು ಸಾಕಷ್ಟು ಮುಂಚಿತವಾಗಿ ಮಂಡಿಸಿದಲ್ಲಿ ನಮ್ಮ ಕಚೇರಿಯು ಅವುಗಳನ್ನು ಕಳುಹಿಸಿಕೊಡುತ್ತದೆ. ಮಾನ್ಯ ಸದಸ್ಯರೂ ತಯಾರಾಗಿ ಬರಬಹುದು.

**ಎಂಟನೇ ಕಲಮ್ಮನ್ನು** ಮಸೂದೆಯಲ್ಲಿ ಸೇರಿಸಲಾಗಿದೆ.

**ಕಲಂ–೯**— (ಅಧ್ಯಕ್ಷ ಮತದಾರ ಸಮುದಾಯದ ಸದಸ್ಯತ್ವದ ಅನರ್ಹತೆಗಳು)

**ಡಾ. ಅಂಬೇಡ್ಕರ್:** ಇದನ್ನು ಮುಂದಕ್ಕೆ ಹಾಕಬೇಕೆಂದು ನನ್ನಿಚ್ಛೆ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಒಂಬತ್ತನೇ ಕಲಮ್ಮಿನ ಮೇಲಿನ ಚರ್ಚೆಯನ್ನು ಮುಂದೂಡಲಾಗಿದೆ.

**ಕಲಂ ೧೦**— (ರಾಜ್ಯ ಸಭೆಗೆ ಚುನಾವಣೆ)

**ಶ್ರೀ ನಾಸಿರುದ್ದಿನ್ ಅಹ್ಮದ್:** ಮಂಡಿಸಲು ಅನುಮತಿಯನ್ನು ಕೋರುತ್ತಿದ್ದೇನೆ.

> ಹತ್ತನೇ ಕಲಮ್ಮಿನ ಶೀರ್ಷಿಕೆಯಲ್ಲಿ ಪದ ಹಾಗೂ ರೋಮನ್ ಅಕ್ಷರದ "ಅಧ್ಯಾಯ I" ಎನ್ನುವುದರ ಪರ್ಯಾಯವಾಗಿ ಪದ ಹಾಗೂ ರೋಮನ್ ಅಕ್ಷರದ "ಅಧ್ಯಾಯ–V" ಎಂಬುದನ್ನು ಸೇರಿಸತಕ್ಕದ್ದು.

ಈ ಮಸೂದೆಯಲ್ಲಿ ಗಮನಿಸಬೇಕಾದ ಅಂಶವೆಂದರೆ. ಪ್ರತಿ ಭಾಗಕ್ಕೂ ಪ್ರತ್ಯೇಕ ಅಧ್ಯಾಯದ ಸೂಚನಾ ಅಂಕಿ ನೀಡಲಾಗಿರುವುದು. ಉಳಿದ ಶಾಸನಗಳಲ್ಲಿ ಹಾಗಿಲ್ಲ. ಇದರಿಂದ ಪರಾಮರ್ಶೆಗೆ ಸಂಬಂಧಿಸಿದಂತೆ ಅನನುಕೂಲವಾಗುತ್ತಿದೆ. ಉದಾಹರಣೆಗೆ: ಒಂದು ಅಧ್ಯಾಯವನ್ನು ಪ್ರಸ್ತಾಪಿಸುವಾಗ ಇಂಥ ಭಾಗದ ಇಂಥ ಅಧ್ಯಾಯ ಎಂದು ನಾವು ಹೇಳಲೇಬೇಕಾಗುತ್ತದೆ. ಸಂವಿಧಾನ ಹೊರತು ಉಳಿದೆಲ್ಲ ಶಾಸನಗಳಲ್ಲಿ, ಉದಾಹರಣೆಗೆ ಸಿವಿಲ್ ಪ್ರೊಸೀಜರ್ ಕೋಡ್, ದಿ ಕ್ರಿಮಿನಲ್ ಪ್ರೊಸೀಜರ್ ಕೋಡ್, ದಿ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್, ಇನ್ನಿತರ ಎಲ್ಲ ಶಾಸನಗಳಲ್ಲೂ ಬೇರೆ ಬೇರೆ ಭಾಗಗಳಿದ್ದರೂ ಪ್ರತಿಭಾಗದಲ್ಲೂ ಪ್ರತ್ಯೇಕ ಅಧ್ಯಾಯ ಸೂಚನಾ ಸಂಖ್ಯೆಗಳಿಲ್ಲ. ಇದರಿಂದ ತುಂಬಾ ಅನುಕೂಲವಿದೆ. ನಾವು ಭಾಗದ ಪ್ರಸ್ತಾಪ ಮಾಡಬೇಕಿಲ್ಲ. ಇದರಿಂದ ಮಾನಸಿಕ ಕ್ಲೇಶ ತಪ್ಪುತ್ತದೆ. ಇದನ್ನು ಒಂದು ಅನುಕೂಲದ ವಿಷಯವಾಗಿಯಷ್ಟೇ ಸಲಹೆ ಮಾಡುತ್ತಿರುವೆ.

**ಡಾ. ಅಂಬೇಡ್ಕರ್:** ಈ ವಾದವನ್ನು ನಾನು ಒಪ್ಪುವುದಿಲ್ಲ. ಮಸೂದೆಯನ್ನು ಭಾಗ ಮತ್ತು ಅಧ್ಯಾಯಗಳಾಗಿ ವಿಂಗಡಿಸುವಾಗ ನಾವು ಕಲಮ್ಮುಗಳಿಗೆ ಪ್ರತ್ಯೇಕ ಸೂಚನಾ ಸಂಖ್ಯೆಗಳನ್ನೂ ನೀಡಿದ್ದೇವೆ. ಇದರಿಂದ ಒಂದಿಷ್ಟು ತೊಂದರೆಯಾಗಿರಬಹುದು. ಕಲಮುಗಳ ಸಂಖ್ಯೆ ಅವಿಚ್ಛಿನ್ನವಾಗಿರುವುದರಿಂದ ನನ್ನ ಮಿತ್ರರು ಮುಂಗಾಣುವಂಥ ತೊಂದರೆಗಳಿಗೆ ನಾವು ಆತಂಕಪಡಬೇಕಾಗಿಲ್ಲ ಎಂದು ನನ್ನ ಅನ್ನಿಸಿಕೆ.

**ಶ್ರೀ ನಾಸಿರುದ್ದಿನ್ ಅಹಮದ್:** ಆದರೆ ಇದು ಎಲ್ಲ ಶಾಸನಗಳಲ್ಲೂ ಏಕಪ್ರಕಾರವಾಗಿ ಪಾಲಿಸಲಾಗಿರುವ ಪದ್ಧತಿ.

**ಡಾ. ಅಂಬೇಡ್ಕರ್:** ಏಕರೂಪತೆ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಅದು ಮುಖ್ಯವಾಗಿ ವಿಷಯದ ಗಾತ್ರವನ್ನು ಅವಲಂಬಿಸಿರುತ್ತದೆ. ವಿಷಯ ತುಂಬಾ ವ್ಯಾಪಕವಾಗಿದ್ದಲ್ಲಿ ಅದನ್ನು ಸೂಕ್ತ ಶೀರ್ಷಿಕೆಗಳಡಿ ವಿಭಜಿಸಬೇಕಾಗುತ್ತದೆ. ಉಪ ವಿಭಾಗ ಮಾಡಬೇಕಾಗುತ್ತದೆ. ಆಯಾ ಭಾಗಗಳ ಅಡಿ ಬರುವ ಪ್ರಧಾನ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧಿಕರಣಗಳನ್ನು ಮಾಡಬೇಕಾಗುತ್ತದೆ. ಅಷ್ಟೇನೂ ವಿಸ್ತೃತವಲ್ಲದ ಚಿಕ್ಕಪುಟ್ಟ ವಿಷಯಗಳನ್ನು ಅಧ್ಯಾಯಗಳನ್ನಾಗಿ ಮಾಡಬೇಕಾಗುತ್ತದೆ. ಈ ಪದ್ಧತಿ ಕೈಬಿಟ್ಟು ಬೇರಾವ ಪದ್ಧತಿ ಅನುಸರಿಸಬೇಕೋ ನನಗೆ ತಿಳಿಯದು.

**ಶ್ರೀ ನಾಸಿರುದ್ದಿನ್ ಅಹ್ಮದ್:** ಭಾಗಗಳು. ಅಧ್ಯಾಯಗಳೂ ಉಪ ವಿಭಾಗಗಳು ಇರಬೇಕೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದಕ್ಕೆ ನನ್ನ ಆಕ್ಷೇಪಣೆ ಇಲ್ಲವೇ ಇಲ್ಲ. ನಾನು ಬಯಸುವುದೆಲ್ಲ ಅಧ್ಯಾಯದ ಸೂಚನಾ ಸಂಖ್ಯೆಗಳು ಅವಿಚ್ಛಿನ್ನವಾಗಿರಬೇಕು ಮತ್ತು ಇದು ಎಲ್ಲ ಶಾಸನಗಳಲ್ಲೂ ಅನುಸರಿಸುವ ರೀತಿಯದಾಗಿರಬೇಕು.

**ಡಾ. ಅಂಬೇಡ್ಕರ್:** ಅಂದರೆ ಅಧಿಕರಣಗಳನ್ನು ಬಿಟ್ಟು ಬಿಡಬೇಕು. ಇಲ್ಲವಾದಲ್ಲಿ ಅದಕ್ಕೇನೂ ಅರ್ಥವಿರುವುದಿಲ್ಲ.

**ಮಾನ್ಯ ಉಪ ಸಭಾಪತಿ:** ಅಧ್ಯಾಯಗಳಿಗೆ ಅವಿಚ್ಛಿನ್ನ ಸೂಚನಾ ಸಂಖ್ಯೆಗಳಿದ್ದು ಅಧಿಕರಣಗಳೂ ಇದ್ದಲ್ಲಿ ಅದು ಗೊಂದಲಕ್ಕೆಡೆ ಮಾಡಿಕೊಡುವುದು. ಅದು ಯಾವ ನಿರ್ದಿಷ್ಟ ಅಧಿಕರಣಕ್ಕೆ ಅನ್ವಯಿಸುತ್ತದೆ ಎಂಬುದು ನಮಗೆ ಗೊತ್ತಾಗುವುದಿಲ್ಲ.

**ಶ್ರೀ ನಾಸಿರುದ್ದಿನ್ ಅಹ್ಮದ್:** ಆದರೆ ಇದು ಎಲ್ಲ ಶಾಸನಗಳಲ್ಲೂ ಪಾಲಿಸಲಾಗಿರುವ ಪದ್ಧತಿ.

**ಮಾನ್ಯ ಉಪಸಭಾಪತಿ:** ಆದರೆ ಸಂವಿಧಾನ ಹೊಸ ಪದ್ಧತಿ ಅನುಸರಿಸಿದಾಗ, ಅದೇ ನಮ್ಮ ಬೈಬಲ್.

**ಶ್ರೀ ನಾಸಿರುದ್ದಿನ್ ಅಹ್ಮದ್:** ಎಲ್ಲ ವಿಷಯಗಳಲ್ಲೂ ಅಲ್ಲ. ಅದನ್ನು ಅತಿ ಶೀಘ್ರದಲ್ಲೇ ನಾವು ಬದಲಾಯಿಸಲಿದ್ದೇವೆ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಬಹಳ ಒಳ್ಳೆಯದು. ಅಂದರೆ ಇದನ್ನು ನಾವು ಮಾರ್ಪಡಿಸುತ್ತೇವೆ. ಮಾನ್ಯ ಸದಸ್ಯರು ಇದಕ್ಕೆ ಆಗ್ರಹಪಡಿಸುವ ಅಗತ್ಯವಿದೆಯೆ?

**ಶ್ರೀ ನಾಸಿರುದ್ದಿನ್ ಅಹ್ಮದ್:** ಇಲ್ಲ ಸ್ವಾಮಿ.

**ಮಾನ್ಯ ಉಪ ಸಭಾಪತಿ:** ಮುಂದಿನ ತಿದ್ದುಪಡಿ ನಂ. ೨೨೨. ಅದು ಹೀಗಿದೆ:

> ಹತ್ತನೇ ಕಲಂನ ಉಪ ವಿಧಿ (೧) ರಲ್ಲಿ "ರಾಜ್ಯಸಭೆ" ಪದಗಳಿಗೆ ಪರ್ಯಾಯವಾಗಿ
> ಎರಡನೇ ಸಾಲಿನಲ್ಲಿ "ಪ್ರಥಮ ರಾಜ್ಯಸಭೆ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

ಈ ತಿದ್ದುಪಡಿ ಏನೆಂಬುದನ್ನು ಮಾನ್ಯ ಸದಸ್ಯರು ವಿವರಿಸಿ ಹೇಳಬೇಕು ಅಥವಾ ಈ ತಿದ್ದುಪಡಿಗಾಗಿ ಅವರು ಆಗ್ರಹಪಡಿಸುತ್ತಿಲ್ಲವೆ?

**ಶ್ರೀ ನಾಸಿರುದ್ದಿನ್ ಅಹ್ಮದ್:** ನನ್ನ ನಿಲುವೇ ನನಗೆ ತಿಳಿಯದಾಗಿದೆ. ಸದನ ಎಷ್ಟು ತ್ವರಿತಗತಿಯಲ್ಲಿ ಸಾಗುತ್ತಿದೆಯೆಂದರೆ ದೊಂಬನಿಂದಲೂ ಅದನ್ನು ಅನುಸರಿಸುವುದು ಅಸಾಧ್ಯ. ನಾನು ವಿಷಯಾವಲೋಕನ ಮಾಡಬೇಕಾದೀತು.

**ಮಾನ್ಯ ಉಪ ಸಭಾಪತಿ:** ಕೊನೆಯಲ್ಲಿ ತಡೆ ಇದ್ದೇ ಇರುತ್ತದೆ.

**ಶ್ರೀ ನಾಸಿರುದ್ದಿನ್ ಅಹ್ಮದ್:** ನಾಳಿನವರೆಗೆ ಸಭೆ ಮುಂದೂಡಲಾಗದೆ? ನಾವು ಬಹಳ ತ್ವರಿತವಾಗಿ ಪ್ರಗತಿ ಸಾಧಿಸಿದ್ದೇವೆ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಇದೇನು ಕಷ್ಟವಲ್ಲ. ಮಾನ್ಯ ಸದಸ್ಯರು ತಮಗೆ ಖುಷಿ ಬಂದಾಗ ಮಾಡಬಹುದು. ಅವಸರವೇನಿಲ್ಲ ಕಲಂ ೨೨೨ ರಲ್ಲಿ ರಾಜ್ಯಸಭೆ ಪದಕ್ಕೆ ಪರ್ಯಾಯವಗಿ 'ಪ್ರಥಮ ರಾಜ್ಯಸಭೆ' ಎಂಬ ಪದಗಳನ್ನು ಸೇರಿಸಬೇಕೆಂಬುದು ಅವರ ಇಚ್ಛೆಯಾಗಿದೆ. ಇಲ್ಲಿ ಆವರ್ತನಕ್ಕೆ ಅವಕಾಶವಿಲ್ಲ ಎಂಬ ಕಾರಣಕ್ಕಾಗಿಯೆ?

**ಶ್ರೀ ನಾಸಿರುದ್ದಿನ್ ಅಹ್ಮದ್:** ಹೌದು, ಸ್ವಾಮಿ.

**ಡಾ. ಅಂಬೇಡ್ಕರ್:** ಉಪವಿಧಿ (೨) ರಲ್ಲಿ ಆವರ್ತನ ಇದೆ.

**ಶ್ರೀ ನಾಸಿರುದ್ದಿನ್ ಅಹ್ಮದ್:** ಈಗ ನನ್ನ ನೆಲೆ ನನಗೆ ಗೊತ್ತಾಗುತ್ತಿದೆ ! "ಪ್ರಥಮ" ಎನ್ನುವ ಪದದ ಬಳಕೆ ನನಗೆ ಹೊಳೆದದ್ದು ಹನ್ನೊಂದನೇ ಕಲಮ್ಮಿನ ಎರಡನೆಯ ಸಾಲಿನಲ್ಲಿರುವ "ಪ್ರಥಮ ಸಂವಿಧಾನದ ಉದ್ದೇಶಕ್ಕಾಗಿ" ಎಂಬ ಮಾದರಿಯಿಂದ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಅದು 'ಸಿ' ವಿಭಾಗದ ರಾಜ್ಯಗಳ ಮತದಾರ ಸಮುದಾಯಗಳಿಗೆ ಸಂಬಂಧಿಸಿದ್ದು. ಅದು ಭಾಗಶಃ ಅನ್ವಯವಾಗುತ್ತದೆ.

**ಡಾ. ಅಂಬೇಡ್ಕರ್:** ಅವು ಒಂದಕ್ಕೊಂದು ಸಂಬಂಧಿಸಿದ್ದಲ್ಲ. ಸಂಬಂಧವೇ ಇಲ್ಲ.

**ಶ್ರೀ ಸಿಧ್ವಾ:** ಅವರು ಗಲಿಬಿಲಿಗೊಂಡಿದ್ದಾರೆ.

**ಶ್ರೀ ನಾಸಿರುದ್ದಿನ್ ಅಹ್ಮದ್:** ಅವು ಪರಸ್ಪರ ಸಂಬಂಧಿಸಿದವು ಎಂದಲ್ಲ. ಆದರೆ ಒಳ್ಳೆಯ ಕರಡುಗಾರಿಕೆಗೆ ಒಂದು ಮಾದರಿಯಾಗಿ ಹೇಳಿದ್ದಷ್ಟೆ.

**ಮಾನ್ಯ ಉಪ ಸಭಾಪತಿ:** ಮಾನ್ಯ ಸದಸ್ಯರು ಯಾವುದೋ ಕೆಟ್ಟ ಕರಡುಗಾರಿಕೆಯಿಂದ ಸಂತೃಪ್ತರಾಗಿದ್ದಾರೆ!

**ಶ್ರೀ ನಾಸಿರುದ್ದಿನ್ ಅಹ್ಮದ್:** ನಾವೀಗಾಗಲೇ ಅದಕ್ಕೆಲ್ಲ ಒಗ್ಗಿ ಹೋಗಿದ್ದೇವೆ.

**ಮಾನ್ಯ ಉಪ ಸಭಾಪತಿ:** ಆದರೆ ಈ ಬದಲಾವಣೆಗೆ ಏನೊಂದು ಅಗತ್ಯವೂ ಕಾಣಿಸುತ್ತಿಲ್ಲ. ಆದ್ದರಿಂದ ೨೨ನೇ ನಂಬರ್ ತಿದ್ದುಪಡಿಯನ್ನು ಸೂಚಿಸಲಾಗಿಲ್ಲ.

ತಿದ್ದುಪಡಿ ನಂ. ೨೨೪ನ್ನು ಸೂಚಿಸಲಾಗುವುದು ಎಂದು ನಾನು ಭಾವಿಸುತ್ತೇನೆ. ೨೨೫ ರ ಗತಿ ಏನು?

**ಡಾ. ಅಂಬೇಡ್ಕರ್:** ನನ್ನ ಆಕ್ಷೇಪಣೆ ಇಲ್ಲ. ಅದನ್ನು ಸೂಚಿಸಬಹುದು.

**ಮಾನ್ಯ ಉಪ ಸಭಾಪತಿ:** ೨೨೮ರ ಗತಿ ಏನು?

**ಶ್ರೀ ನಾಸಿರುದ್ದಿನ್ ಅಹ್ಮದ್:** ಅದನ್ನು ನಾನು ಸೂಚಿಸಲಿದ್ದೇನೆ.

**ಮಾನ್ಯ ಉಪ ಸಭಾಪತಿ:** ನಂ ೨೨೯ನ್ನು ನಾವೀಗ ಕೈಗೆತ್ತಿಕೊಳ್ಳಲಿದ್ದೇವೆ. ನಂತರ ೨೩೧ನ್ನು ಕೈಗೆತ್ತಿಕೊಳ್ಳಲಿದ್ದೇವೆ.

**ಶ್ರೀ ನಾಸಿರುದ್ದಿನ್ ಅಹ್ಮದ್:** ಅದೊಂದು ಮಹತ್ವಪೂರಿತ ತಿದ್ದುಪಡಿ ಅದನ್ನು ನಾನೀಗ ಸೂಚಿಸಲಿದ್ದೇನೆ.

**ಮಾನ್ಯ ಉಪ ಸಭಾಪತಿ:** ತಿದ್ದುಪಡಿ ೨೨೪. ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ. ಇದನ್ನು ಮುಂದೂಡಲು ನಾನು ಅವಕಾಶ ನೀಡಬಹುದೆ? ಇದಕ್ಕೆ ಮಾನ್ಯ ಸದಸ್ಯರ ಜೊತೆ ಚರ್ಚಿಸುತ್ತಿದ್ದ ಮಾನ್ಯ ಗೃಹಸಚಿವರ ಅಭಿಪ್ರಾಯ ವೇನು?

**ಡಾ. ಅಂಬೇಡ್ಕರ್:** ಆ ತಿದ್ದುಪಡಿಯ ಅಗತ್ಯವಿದೆ ಎಂದು ನನಗನ್ನಿಸುವುದಿಲ್ಲ.

ಮಾಡಿರುವ ತಿದ್ದುಪಡಿ:

> ಹತ್ತನೇ ಕಲಮ್ಮಿನ ಉಪವಿಧಿ (೧) ರ ಭಾಗ (ಎ) ನಲ್ಲಿರುವ "ಅದರಡಿಯ ಆಜ್ಞೆಗಳು" ಎಂಬುದಕ್ಕೆ ಪರ್ಯಾಯವಾಗಿ "ಅದರಡಿಯಲ್ಲಿ ಮಾಡಲಾದ ಆಜ್ಞೆಗಳು" ಎನ್ನುವ ಪದಗಳನ್ನು ಸೇರಿಸತಕ್ಕದ್ದು
>
> (ಶ್ರೀ ನಾಜಿರುದ್ದಿನ್ ಅಹ್ಮದ್)

**ಮಾನ್ಯ ಉಪ ಸಭಾಪತಿ:** ಹಾಗಿದ್ದಲ್ಲಿ ನಾವೀಗ ಶ್ರೀ ನಾಜಿರುದ್ದಿನ್ ಅಹ್ಮದ್ ಅವರ ಹೆಸರಿನಲ್ಲಿರುವ ೨೩೧ ನೇ ತಿದ್ದುಪಡಿಯನ್ನು ಎತ್ತಿಕೊಳ್ಳಲಿದ್ದೇವೆ.

**ಶ್ರೀ ಜೆ.ಆರ್. ಕಪೂರ್:** ತಿದ್ದುಪಡಿ ಕ್ರಮಬದ್ಧವಾಗಿಲ್ಲ. ಈಗಿರುವಂತೆ ಅದನ್ನು ಮಂಡಿಸಲಾಗದು.

**ಮಾನ್ಯ ಉಪ ಸಭಾಪತಿ:** ನಾನೊಮ್ಮೆ ಪರಿಶೀಲಿಸುವೆ.

**ಶ್ರೀ ಜೆ.ಆರ್. ಕಪೂರ್:** ನಾನು ಸಂವಿಧಾನದ ೮೦ ನೇ ವಿಧಿಯ ನಾಲ್ಕನೆ ಉಪವಿಧಿಯನ್ನು ನಿಮ್ಮಲ್ಲಿ ಪ್ರಸ್ತಾಪಿಸಬಹುದೆ. ಇದರ ಪ್ರಕಾರ ಯಾವುದೇ ವಿಧಾನ ಸಭೆಯ ಚುನಾಯಿತ ಸದಸ್ಯರು ಮಾತ್ರ ರಾಜ್ಯಸಭೆಗೆ ಸದಸ್ಯರನ್ನು ಚುನಾಯಿಸಬಹುದು.

**ಡಾ. ಅಂಬೇಡ್ಕರ್:** ಆಂಗ್ಲೋ ಇಂಡಿಯನ್ನರನ್ನು ನಾಮಕರಣ ಮಾಡಲು ಅವಕಾಶವಿದೆ.

**ಶ್ರೀ ಜೆ.ಆರ್. ಕಪೂರ್:** ನಾಮಕರಣಗೊಂಡ ಸದಸ್ಯರಿರಬಹುದು. ಆದರೆ ಅವರಿಗೆ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕು ಇಲ್ಲ. ೩೦ (೪) ವಿಧಿಯ ಪ್ರಕಾರ ವಿಧಾನ ಸಭೆಯ ಚುನಾಯಿತ ಸದಸ್ಯರು ಮಾತ್ರ ರಾಜ್ಯಸಭೆ ಸದಸ್ಯರ ಚುನಾವಣೆಯಲ್ಲಿ ಭಾಗವಹಿಸಬಹುದು.

**ಮಾನ್ಯ ಉಪ ಸಭಾಪತಿ:** ಇದು ಕ್ರಮಬದ್ಧವಲ್ಲ ಎಂದು ನನ್ನ ಶಂಕೆ.

**ಶ್ರೀ ನಾಸಿರುದ್ದಿನ್ ಅಹ್ಮದ್:** ನನ್ನ ತಿದ್ದುಪಡಿ ಕ್ರಮಬದ್ಧವಾಗಿಲ್ಲ.

**ಮಾನ್ಯ ಉಪಸಭಾಪತಿ:** ಅದು ಸರಿ ತಿದ್ದುಪಡಿ ಕ್ರಮಬದ್ಧವಾಗಿಲ್ಲ, ಮಂಡನೆಗೆ ಅನುಮತಿ ಇಲ್ಲ.

**ಶ್ರೀ ಜೆ.ಆರ್.ಕಪೂರ್:** ಆದರೆ ಮಾನ್ಯ ಸದಸ್ಯರನ್ನು ಅವರ ತಿದ್ದುಪಡಿಯಿಂದ ಅಭಿನ್ನರಲ್ಲವೆಂದು ನಾವು ಗುರುತಿಸಿದ್ದೇವೆ.

**ಮಾನ್ಯ ಉಪಸಭಾಪತಿ:** ಅದು

""ಹತ್ತನೇ ಕಲಂ ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗಿದೆ''

ಸೂಚನೆ ಅಂಗೀಕೃತವಾಗಿದೆ.

ಹತ್ತನೇ ಕಲಮ್ಮನ್ನು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲಾಯಿತು.

**ಕಲಂ–೧೧.**— ಚುನಾವಣಾ ಸಮುದಾಯಗಳ ರಚನೆಗೆ ಪ್ರಕಟಣೆ

**ಮಾನ್ಯ ಉಪ ಸಭಾಪತಿ:** ೨೩೮ನೇ ತಿದ್ದುಪಡಿ. ಕರಡುಗಾರರು ಇದನ್ನು ಗಮನಕ್ಕೆ ತೆಗೆದುಕೊಳ್ಳುವರೆಂದು ನಾನು ಭಾವಿಸುತ್ತೇನೆ. ಇದೊಂದು ಮುದ್ರಣ ದೋಷವಿರಬೇಕು ಎಂದು ನನಗೆ ತೋರುತ್ತದೆ. ಕರಡುಗಾರರು ಇದನ್ನು ಸರಿಪಡಿಸುವರು.

**ಶ್ರೀ ಜೆ.ಆರ್. ಕಪೂರ್:** ಒಪ್ಪೋಲೆಯಲ್ಲಿ ಅದನ್ನು ಈಗಾಗಲೇ ತಿದ್ದಲಾಗಿದೆ.

**ಮಾನ್ಯ ಉಪ ಸಭಾಪತಿ:** ಒಪ್ಪೋಲೆಯಲ್ಲಿ ಏನೂ ಇಲ್ಲ. ಇದನ್ನೇಕೆ ಸದನದಿಂದ ಹೊರಗಿಡಬೇಕು? ಅದೊಂದು ಮುದ್ರಣದೋಷ. ಇದನ್ನು ಗುರುತು ಹಾಕಿಕೊಳ್ಳುವಂತೆ ಕಚೇರಿಗೆ ತಿಳಿಸುತ್ತೇನೆ. ಮಾನ್ಯ ಸಚಿವರೂ ಗುರುತು ಹಾಕಿಕೊಳ್ಳಬಹುದು ಮುಂದೆ ಪ್ರಸ್ತಾಪಕ್ಕೆ ಬಂದಾಗ ಉಪಯೋಗವಾಗುತ್ತೆ.

**ಡಾ. ಅಂಬೇಡ್ಕರ್:** ಈ ವಿಷಯದ ಮೇಲೆ ಒಪ್ಪೋಲೆ ಇಲ್ಲ. ಆದ್ದರಿಂದ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಸೂಕ್ತ.

**ಶ್ರೀ ಸಂತಾನಂ:** ಅದೊಂದು ಮುದ್ರಣ ದೋಷವಷ್ಟೇ.

**ಮಾನ್ಯ ಸಭಾಪತಿ:** ''ಇದು'' ಎನ್ನುವುದರ ಬದಲಾಗಿ 'ಅವನ' ಎಂದು ಅಚ್ಚಾಗಿದೆ. ಮಸೂದೆ ರಚಿಸಿದವರ ಉದ್ದೇಶ ಅದಲ್ಲ. ಅದೇನಿದ್ದರೂ ಮುದ್ರಣ ದೋಷ ಅಷ್ಟೇ. ನಾಳೆ, ಗೆಜೆಟ್‌ನಲ್ಲೂ ಒಂದು ಕಾಗುಣಿತ ದೋಷ ಕಾಣಿಸಿಕೊಳ್ಳಬಹುದು. ಇಂಥ ವಿಧ್ಯುಕ್ತವಾದ ತಿದ್ದುಪಾಡುಗಳನ್ನು ಮಾಡುವಂತೆ ನಾನು ನಿಯಮಾನುಸಾರ ಹೇಳುತ್ತಿದ್ದೇನೆ. ಇದನ್ನು ಸದನದ ಗಮನಕ್ಕೆ ತರುವಂಥಾದ್ದು ನನಗೆ ಸಂತೋಷದ ಕೆಲಸವಲ್ಲ. ಅಂತಿಮ ಕರಡಿನಲ್ಲೂ ಮತ್ತೊಮ್ಮೆ ಕಾಗುಣಿತದ ತಪ್ಪು ಆಗಬಹುದು. ಆದಾಗ್ಯೂ, ತೊಂದರೆ

ನಿವಾರಣೆ ಸಲುವಾಗಿ ನಾನು ಇದನ್ನು ಸದನದ ಮುಂದೆ ಇರಿಸುತ್ತಿದ್ದೇನೆ. ಸೂಚನೆ ಏನೆಂದರೆ:

> ಹನ್ನೊಂದನೇ ಕಲಂನಲ್ಲಿ ''ಅವನ ಪರವಾಗಿ'' ಎನ್ನುವ ಪದಗಳಿಗೆ ಪರ್ಯಾಯವಾಗಿ "ಇದರ ಪರವಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಸೂಚನೆ ಅಂಗೀಕೃತವಾಗಿದೆ.

**ಮಾನ್ಯ ಉಪ ಸಭಾಪತಿ:** ೨೪೦ ನೇ ತಿದ್ದುಪಡಿ

**ಶ್ರೀ ನಾಸಿರುದ್ದಿನ್ ಅಹ್ಮದ್:** ಅದರ ಅಗತ್ಯವಿದೆ.

**ಡಾ. ಅಂಬೇಡ್ಕರ್:** ಏಕವಚನದಲ್ಲಿ ಬಹುವಚನವೂ ಸೇರಿದೆ. ಈ ತಿದ್ದುಪಡಿ ಅನಗತ್ಯ.

**ಮಾನ್ಯ ಉಪ ಸಭಾಪತಿ:** ಹೌದು, ಏಕವಚನದಲ್ಲಿ ಬಹುವಚನವೂ ಸೇರಿದೆ. ಸೂಚನೆ ಏನೆಂದರೆ:

> "ಹನ್ನೊಂದನೇ ಕಲಂ. ತಿದ್ದುಪಡಿ ಸೇರಿದಂತೆ ಮಸೂದೆಯ ಭಾಗವಾಗಲಿದೆ"

ಸೂಚನೆ ಅಂಗೀಕೃತವಾಯಿತು.

ಹನ್ನೊಂದನೇ ಕಲಮ್ಮನ್ನು ತಿದ್ದುಪಡಿಯಾದಂತೆ ಮಸೂದೆಯಲ್ಲಿ ಸೇರಿಸಲಾಗಿದೆ.

**ಕಲಂ–೧೨.—** (ಜನತಾ ಪ್ರತಿನಿಧಿ ಸಭೆಗೆ ಚುನಾವಣೆಗಳು)

**ಮಾನ್ಯ ಉಪ ಸಭಾಪತಿ:** ಹನ್ನೆರಡನೇ ಕಲಂ ಯಾವುದೇ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

**ಶ್ರೀ ನಾಸಿರುದ್ದಿನ್ ಅಹ್ಮದ್:** ೨೪೬ನೇ ತಿದ್ದುಪಡಿಯನ್ನು ಪರಿಶೀಲಿಸಬಹುದೆಂದು ನನ್ನ ಸಲಹೆ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಆದರೆ ಅದನ್ನು ಸೂಚಿಸಿರುವ ಸದಸ್ಯರಿಗೆ ಈಗ ಅದನ್ನು ಮಂಡಿಸುವ ಇಚ್ಛೆ ಇಲ್ಲ. ಅದರ ವಿಶೇಷ ಮಹತ್ವವಾದರೂ ಏನು? ಅದು ಹೀಗಿದೆ.

> "ಹನ್ನೆರಡನೇ ಕಲಮ್ಮಿನ ಉಪ ವಿಧಿ (೨) ರಲ್ಲಿ "ಕ್ರಮಬದ್ಧ ರೀತಿಯಲ್ಲಿ ಹೊಸ ಜನತಾ ಪ್ರತಿನಿಧಿ ಸಭೆಯನ್ನು ರಚಿಸಬಹುದು" ಎಂಬ ಪದಗಳನ್ನು ತೆಗೆದುಹಾಕತಕ್ಕದ್ದು.

**ಶ್ರೀ ನಾಜಿರುದ್ದಿನ್ ಅಹ್ಮದ್:** ನಾವೇನಿದ್ದರೂ ಕ್ರಿಯಾ ವಿಧಾನ ರೂಪಿಸಬೇಕಷ್ಟೆ. ನಾವು ಅದರ ಹಿಂದಿನ ಉದ್ದೇಶವನ್ನು ಬಿಟ್ಟುಕೊಡಬಾರದು.

**ಡಾ. ಅಂಬೇಡ್ಕರ್:** ಈ ಪದಗಳಿಂದ ಏನೂ ಹಾನಿಯಾಗದು.

**ಮಾನ್ಯ ಉಪ ಸಭಾಪತಿ:** ಮಾನ್ಯ ಸದಸ್ಯರಿಗೆ ಈ ತಿದ್ದುಪಡಿ ಸೂಚಿಸಲು ನಾನು ಅನುಮತಿ ನೀಡುವುದಿಲ್ಲ. ಅದರ ಅಗತ್ಯ ಇಲ್ಲ.

**ಡಾ. ದೇಶಮುಖ್:** ಸ್ವಾಮಿ, ನನಗೊಂದಿಷ್ಟು ಹೇಳಲಿದೆ.

**ಮಾನ್ಯ ಉಪ ಸಭಾಪತಿ:** ಮಾನ್ಯ ಸದಸ್ಯರು ಯಾವಾಗಲೂ ತಡವೇ. ಈಗ ಅವರು ಹೇಳುವುದೇನಿದೆ?

**ಡಾ. ದೇಶಮುಖ್:** ಸ್ವಾಮಿ, ಹದಿನೈದನೇ ಕಲಮ್ಮಿಗೆ ತಿದ್ದುಪಡಿ ಸೂಚಿಸುವುದಾಗಿ ನಾನು ಸೂಚನಾ ಪತ್ರ ಕಳುಹಿಸಿದ್ದೇನೆ. ಈ ಹಂತದಲ್ಲಿ ಅದು ಪ್ರಸ್ತುತ ಎಂದು ನನಗೆ ತೋರುತ್ತಿದೆ. ಸಂಸತ್ತು ಮತ್ತು ರಾಜ್ಯಗಳ ಶಾಸನ ಸಭೆಗಳಿಗೆ ಪ್ರಥಮ ಸಾರ್ವತ್ರಿಕ ಚುನಾವಣೆಯು ಏಕಕಾಲದಲ್ಲಿ ಒಂದೇ ದಿನ ಅದೇ ದಿನ ನಡೆಯುವಂತೆ ಹೇಳುವ ಒಂದು ನಿಬಂಧನೆ ಎಲ್ಲಾದರೂ ಇರಬೇಕು.

**ಮಾನ್ಯ ಉಪ ಸಭಾಪತಿ:** ಹಾಗಾದಲ್ಲಿ ವೆಚ್ಚದಲ್ಲೂ ಉಳಿತಾಯ ಸಾಧ್ಯ. ತರವಾಯ ಮುಂದಿನ ದಿನಗಳಲ್ಲಿ ಬೇರೆ ಬೇರೆ ಅವಧಿಯಲ್ಲಿ ಚುನಾವಣೆ ನಡೆಯಬೇಕಾಗಬಹುದು, ಕೆಲವು ಸದನಗಳನ್ನು ಉಳಿದದಕ್ಕಿಂತ ಮುಂಚೆ ವಿಸರ್ಜಿಸಿದ ಕಾರಣದಿಂದಾಗಿ. ಆದ್ದರಿಂದ ಇಂಥ ತಿದ್ದುಪಡಿ ಅನಗತ್ಯ.

ಸೂಚನೆ ಏನೆಂದರೆ:

"ಹನ್ನೆರಡನೇ ಕಲಂ ಮಸೂದೆಯ ಭಾಗವಾಗಿದೆ"

ಸೂಚನೆ ಅಂಗೀಕೃತವಾಗಿದೆ

ಹನ್ನೆರಡನೇ ಕಲಮ್ಮನ್ನು ಮಸೂದೆಯಲ್ಲಿ ಸೇರಿಸಲಾಯಿತು.

ಹದಿಮೂರನೇ ಕಲಮ್ಮನ್ನು ಮಸೂದೆಯಲ್ಲಿ ಸೇರಿಸಲಾಯಿತು.

*ಮಾನ್ಯ ಉಪ ಸಭಾಪತಿ:** ಮಾನ್ಯ ಸಚಿವರ ಮಾತುಗಳನ್ನು ಆಲಿಸೋಣ

**ಸಿ.ಎಚ್. ರಣಬೀರ್‌ಸಿಂಗ್ (ಪಂಜಾಬ್):** ಸ್ವಾಮಿ ಇಲ್ಲಿಯವರೆಗೆ ಯಾರೂ ತಿದ್ದುಪಡಿಯನ್ನು ಬೆಂಬಲಿಸಿ ಮಾತಾಡಿಲ್ಲ. ಪಂಡಿತ ಠಾಕೂರ್‌ದಾಸ್ ಭಾರ್ಗವ ಹೊರತಾಗಿ ಇಲ್ಲಿಯವರೆಗೆ ಮಾತನಾಡಿರುವವರೆಲ್ಲ ತಿದ್ದುಪಡಿಯನ್ನು ವಿರೋಧಿಸಿದ್ದಾರೆ. ಆದ್ದರಿಂದ, ತಿದ್ದುಪಡಿ ಬೆಂಬಲಿಸುವಂಥವರಿಗೆ ಅವಕಾಶ ನೀಡಬೇಕೆಂದು ನನ್ನ ಮನವಿ.

**ಶ್ರೀ ಶ್ಯಾಮನಂದನ ಸಹಾಯ (ಬಿಹಾರ್):** ನೀವು ತಿದ್ದುಪಡಿಯನ್ನು ಬೆಂಬಲಿಸುವಿರಾ?

**ಸಿ.ಎಸ್. ರಣಬೀರ್ ಸಿಂಗ್:** ಹೌದು, ನಾನು ತಿದ್ದುಪಡಿಯನ್ನು ಬೆಂಬಲಿಸುತ್ತಿರುವೆ.

**ಮಾನ್ಯ ಉಪಸಭಾಪತಿ:** ಮಾನ್ಯ ಸಚಿವರಿಗೆ ಮಧ್ಯ ಪ್ರವೇಶ ಮಾಡಿ ಏನೋ ಹೇಳುವುದಿದೆ. ಅವರೇನು ಹೇಳುತ್ತಾರೊ ಕೇಳೋಣ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಈ ತಿದ್ದುಪಡಿಗೆ ಮೂಲಾಧಾರವಾಗಿರುವ ವಸ್ತು ವಿಷಯ ನಿಸ್ಸಂದೇಹವಾಗಿ ಪ್ರಶಂಸನೀಯವಾದದ್ದು. ಪ್ರೇರಣೆ ಮತ್ತು ಉದ್ದೇಶ ಇವೆರಡನ್ನು ಮಾತ್ರ ಪರಾಂಬರಿಸುವುದಷ್ಟೇ ಆದಲ್ಲಿ ತಿದ್ದುಪಡಿಗೆ ಹೆಚ್ಚಿನ ಆಕ್ಷೇಪಣೆ ಇರುವುದೆಂದು ನನಗನ್ನಿಸದು. ಆದರೆ, ಪ್ರೇರಣೆಗೆ ಸೇರಿದಂತೆ, ಪ್ರೇರಣೆ ಮತ್ತು ಉದ್ದೇಶಗಳನ್ನು ಸೂಕ್ತವಾಗಿ ಆಗುಮಾಡಿಸುವಂಥ ಉದ್ದೇಶವುಳ್ಳ ಕೆಲವು ಇನ್ನಿತರ ಕಟ್ಟುಪಾಡುಗಳು ಈ ತಿದ್ದುಪಡಿಯಲ್ಲಿ ಅಡಕಗೊಂಡಿವೆ. ಈ ದೃಷ್ಟಿಕೋನದಿಂದ ನನಗೆ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ.

ತಿದ್ದುಪಡಿ ಈ ಹೊಸ ತಿದ್ದುಪಡಿಯಲ್ಲಿರುವ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ನೀಡುತ್ತದೆ. ತಿದ್ದುಪಡಿಗೆ ರಾಜಕೀಯ ಬಣ್ಣ ಇಲ್ಲವೆಂದು ತಿದ್ದುಪಡಿಯ ಸೂಚನೆಕಾರರು ಭಾವಿಸಿದ್ದಾರೆ ಎಂಬುದು ನಿಸ್ಸಂದೇಹ. ಈ ಕಲಾಪದಲ್ಲಿ ರಾಷ್ಟ್ರಪತಿಯವರನ್ನು ಎಳೆದು ತರುವುದೇ ರಾಜಕೀಯ ಬಣ್ಣದ ಲೇಪಕ್ಕೆ ಸಾಕಾದೀತು ಎಂಬುದನ್ನು ನಾನು ಯೋಚಿಸಬೇಕಿತ್ತು. ಏಕೆಂದರೆ, ರಾಷ್ಟ್ರಪತಿಯವರು, ಒಬ್ಬ ವ್ಯಕ್ತಿಯಾಗಿ, ರಾಷ್ಟ್ರದ ಮುಖ್ಯಸ್ಥರಾಗಿ ಪಕ್ಷಾತೀತರಾಗಿರಬಹುದು. ಪಕ್ಷದ ದಾಕ್ಷಿಣ್ಯಗಳಿಂದ ಅತೀತರಾಗಿರಬಹುದು. ಆದರೆ ಈ ತಿದ್ದುಪಡಿಯನ್ನು ಜಾರಿಗೆ ತಂದಲ್ಲಿ ರಾಷ್ಟ್ರಪತಿಗಳು ಮಾಮೂಲಿನಂತೆ ಸಚಿವ ಸಂಪುಟದ ಸಲಹೆಯಂತೆ ನಡೆದುಕೊಳ್ಳಬೇಕಾಗುತ್ತದೆ. ಸಚಿವ ಸಂಪುಟ ಅಂದಿನ ರಾಜಕೀಯ ವ್ಯವಸ್ಥೆ ಎಂಬುದರ ಬಗ್ಗೆ ಯಾರಿಗೂ ಯಾವುದೇ ಅನುಮಾನವಿರದು. ಆದ್ದರಿಂದ ಇದು ತುಂಬ ಕಷ್ಟ..........

**ಶ್ರೀ ಕಾಮತ್:** ಇದು ಎಲ್ಲ ಪಕ್ಷಗಳ ಸಚಿವ ಸಂಪುಟಗಳಲ್ಲೂ ಇದ್ದದ್ದೇ.

**ಡಾ. ಅಂಬೇಡ್ಕರ್:** ಅದು ಬೇರೆ ವಿಷಯ. ಆದ್ದರಿಂದ ನ್ಯಾಯಬದ್ಧ ಚುನಾವಣೆಗಳ ಹಿತ ದೃಷ್ಟಿಯಿಂದ

---

* ಸಂಸದೀಯ ಚರ್ಚೆ ಸಂಪುಟ ೧೨ ಭಾಗ II, ಮೇ ೧೫, ೧೯೫೧ ಪು: ೮೭೫೫–೫೭

ಯಾವುದೇ ಒಂದು ರಾಜಕೀಯ ಪಕ್ಷ ಆಕ್ಷೇಪಣೆ ಎತ್ತುವಂಥಾದ್ದೇನನ್ನೂ ಸಂದೇಶದ ಪಠ್ಯದಲ್ಲಿ ಸೇರಿಸುವುದಿಲ್ಲ ಎಂದು ಖಾತ್ರಿಯಾಗಿ ಹೇಳುವುದು ಕಷ್ಟವಾಗುತ್ತದೆ. ಆದ್ದರಿಂದ, ಚುನಾವಣೆಗಳಲ್ಲಿ ಸಂಭವನೀಯವಾದ ಭಾವೋದ್ವೇಗ ಮತ್ತು ಕಹಿ ಭಾವನೆಗಳಿಂದ ಪೂರಿತವಾದ ರಾಜಕೀಯ ಅಖಾಡಕ್ಕೆ ರಾಷ್ಟ್ರಪತಿಗಳನ್ನು ಎಳೆದುತರುವುದು ತಪ್ಪಾಗುತ್ತದೆ ಎಂಬುದು ನನ್ನ ಅರಿಕೆ.

ಉದ್ದೇಶಗಳನ್ನು ಗೊತ್ತು ಮಾಡಿದ ಅಧಿಕಾರಿಯೊಬ್ಬ ಅವುಗಳನ್ನು ಕಾರ್ಯಗತ ಮಾಡಬೇಕೆಂದೂ ತಿದ್ದುಪಡಿ ಹೇಳುತ್ತದೆ. ಇದು ನಾನು ಕಂಡುಕೊಂಡ ಇನ್ನೊಂದು ಸಂಗತಿ. ಈ ಗೊತ್ತುಪಡಿಸುವ ಅಧಿಕಾರ ಎಂದರೇನು, ಅಥವಾ ಈ ನಿರ್ದಿಷ್ಟ ಅಧಿಕಾರವನ್ನು ಯಾರು ಗೊತ್ತು ಮಾಡಬೇಕೆಂಬುದು ತಿದ್ದುಪಡಿಯಲ್ಲಿಲ್ಲ. ಮತ್ತೆ ಹೇಳುವುದಾದರೆ ಭಾರತದ ವಿವಿಧ ಭಾಗಗಳಲ್ಲಿರುವ ರಾಜ್ಯ ಸರ್ಕಾರಗಳು ಅಥವಾ ಆಡಳಿತದ ಕಾರುಬಾರು ನಡೆಸುವವರು ಎಂದಾದಲ್ಲಿ ಇಲ್ಲಿ ನಾವು ಮತ್ತೆ ಅಪಾಯಕಾರಿಯಾದ ರಾಜಕೀಯ ಸಾಧನವನ್ನು ಪೂರ್ಣ ಪ್ರಮಾಣದಲ್ಲಿ ಎಳೆದು ತರುತ್ತಿದ್ದೇವೆ. ಉಳಿದ ವಿಷಯಗಳಿಂದ ಪ್ರತ್ಯೇಕವಾಗಿ ನೋಡಿದಾಗ, ನಾನಾಗಲೇ ಹೇಳಿದಂತೆ ಇದು ನಿಸ್ಸಂದೇಹವಾಗಿಯೂ ಪ್ರಶಂಸನೀಯವಾದದ್ದು. ಮತ್ತೆ ಪ್ರತಿ ಗ್ರಾಮದಲ್ಲಿ, ಪ್ರತಿ ಮೊಹಲ್ಲಾದಲ್ಲಿ ಸಂದೇಶವನ್ನು ಪಠಣ ಮಾಡಲು ಆಡಳಿತ ವ್ಯವಸ್ಥೆ ಮಾಡಬೇಕೆಂಬುದು ಅತಿಯಾದ ನಿರೀಕ್ಷೆಯಾಗುತ್ತೆ. ಕೆಲವು ಗ್ರಾಮಗಳಲ್ಲಿ ಕೆಲವು ಮೊಹಲ್ಲಾಗಳಲ್ಲಿ ಸಂದೇಶವನ್ನು ಪಠಿಸಿ ಹೇಳಲಾಗಲಿಲ್ಲ ಎಂದಿಟ್ಟುಕೊಳ್ಳೋಣ. ಆಗೇನಾಗುತ್ತದೆ? ಈ ಅಗತ್ಯವನ್ನು ತೃಪ್ತಿಕರವಾಗಿ ಪೂರೈಸುವವರೆಗೆ ಚುನಾವಣೆಯನ್ನು ಮುಂದೂಡಬೇಕೇ? ಆದ್ದರಿಂದ, ರಾಜಕೀಯ ಹಾಗು ಆಡಳಿತಾತ್ಮಕ ದೃಷ್ಟಿಕೋನದಿಂದ ನೋಡಿದಲ್ಲಿ ಈ ತಿದ್ದುಪಡಿ ಕಾರ್ಯಸಾಧ್ಯವಾದುದಲ್ಲ.

ಆದಾಗ್ಯೂ ಈ ವಿಷಯಕ್ಕೆ ಇನ್ನೊಂದು ಮುಖವಿದೆ. ಈ ತಿದ್ದುಪಡಿಯನ್ನು ಅಂಗೀಕರಿಸಬೇಕೇ ಅಥವಾ ಬೇಡವೋ ಎಂಬ ನಿರ್ಧಾರಕ್ಕೆ ಬರುವ ಹಂತದಲ್ಲಿ ಇದನ್ನು ಪರಿಶೀಲಿಸಬಹುದು. ನನ್ನ ಮಿತ್ರರು ಸೂಚಿಸಿರುವಂಥ ತಿದ್ದುಪಡಿ ಇಲ್ಲವೆಂದಿಟ್ಟುಕೊಳ್ಳೋಣ. ಆಗಲೂ ವಿವಿಧ ರಾಜಕೀಯ ಪಕ್ಷಗಳು ತಾವಾಗಿಯೇ ಈ ತಿದ್ದುಪಡಿಯೊಳಗಿನ ಉದ್ದೇಶವನ್ನು ಕಾರ್ಯಗತಗೊಳಿಸುವುದು ಸಾಧ್ಯವಾದೀತು ಅಲ್ಲವೆ? ಮೂಲಾಧಾರವಾದ ಈ ಉದ್ದೇಶವನ್ನು ಎಲ್ಲ ರಾಜಕೀಯ ಪಕ್ಷಗಳೂ ಹೃತ್ಪೂರ್ವಕವಾಗಿ ಮಾನ್ಯ ಮಾಡುತ್ತವೆ ಎಂಬುದು ನನಗೆ ಖಾತ್ರಿಯಾಗಿ ಗೊತ್ತು. ಆದ್ದರಿಂದ ತಿದ್ದುಪಡಿಯ ಪ್ರಾರಂಭ ಭಾಗದಲ್ಲಿ ಸೂಚಿಸಲಾಗಿರುವ ಸಂದೇಶವನ್ನು ಒಂದಲ್ಲ ಒಂದು ರೀತಿ ಕಾರ್ಯಗತಗೊಳಿಸುವುದಕ್ಕೆ ನಮ್ಮ ರಾಜಕೀಯ ಪಕ್ಷಗಳಿಗೂ ಅಥವಾ ಅವರಲ್ಲಿ ಪ್ರತಿಯೊಬ್ಬರಿಗೂ ಯಾವುದೇ ತೊಡಕಿಲ್ಲ. ನಮ್ಮ ಸಂವಿಧಾನ ಇದೆ. ಅದಕ್ಕೊಂದು ಪ್ರಸ್ತಾವನೆ ಇದೆ. ಈ ಪ್ರಸ್ತಾವನೆಯನ್ನು ಮೂಲಭೂತ ಹಕ್ಕುಗಳನ್ನು, ನಿರ್ದೇಶನ ತತ್ತ್ವಗಳನ್ನು ನಾವು ಅನುಷ್ಠಾನಗೊಳಿಸಬೇಕಾಗಿದೆ. ಆದ್ದರಿಂದ, ಮೂಲಭೂತ ಹಕ್ಕುಗಳು ಮತ್ತು ನಿರ್ದೇಶನ ತತ್ತ್ವಗಳನ್ನು ಹಾಗೂ ಸಂವಿಧಾನದ ಪ್ರಸ್ತಾವನೆಯನ್ನು ಅನುಷ್ಠಾನಕ್ಕೆ ತರಲು ಯೋಗ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ನಾವೆಲ್ಲ ನಮ್ಮಿಂದಾಗುವ ಸರ್ವ ಪ್ರಯತ್ನಗಳನ್ನೂ ಮಾಡೋಣ. ಹೀಗಾಗಿ ನನ್ನ ಅರಿಕೆ ಏನೆಂದರೆ. ಈ ತಿದ್ದುಪಡಿಯನ್ನು ಅಂಗೀಕರಿಸಲಾಗದಿದ್ದರೂ – ನಾವೀಗಾಗಲೇ ಪ್ರಸ್ತಾಪಿಸಿರುವ ಆಡಳಿತಾತ್ಮಕ ಕಾರಣಗಳಿಂದಾಗಿ ತಿದ್ದುಪಡಿ ಅಂಗೀಕಾರ ಅಸಾಧ್ಯ – ವಿವಿಧ ರಾಜಕೀಯ ಪಕ್ಷಗಳು ನಿಸ್ಸಂಶಯವಾಗಿಯೂ ಅದರ ಉದ್ದೇಶವನ್ನು ಕಾರ್ಯಗತಗೊಳಿಸುತ್ತದೆ ಎಂಬುದೇ ಆಗಿದೆ. ಎಷ್ಟು ಶ್ರೇಷ್ಠತಮವಾಗಿ ಮಾಡಲು ಸಾಧ್ಯವೋ ಅಷ್ಟು ಶ್ರೇಷ್ಠವಾದ ರೀತಿಯಲ್ಲಿ ಕಾರ್ಯಗತಗೊಳಿಸಲು ಈ ವಿಷಯವನ್ನು ನಾನು ವಿವಿಧ ರಾಜಕೀಯ ಪಕ್ಷಗಳಿಗೆ ಬಿಡುತ್ತೇನೆ.

**ಶ್ರೀ ಕಾಮತ್:** ಪ್ರತಿ ರಾಜಕೀಯ ಪಕ್ಷವೂ ಆಕಾಶವಾಣಿಯನ್ನು ಉಚಿತವಾಗಿ ಬಳಸಿಕೊಳ್ಳುವುದಕ್ಕೆ ಸಚಿವರ ಒಲವು ಇಲ್ಲವೆ?

**ಡಾ. ಅಂಬೇಡ್ಕರ್:** ಇದು ನಿಜಕ್ಕೂ ಅಗತ್ಯವಾಗಿ ಪರಿಶೀಲಿಸಬೇಕಾದ ವಿಚಾರ. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗಳೆರಡರಲ್ಲೂ ರೂಢಿಯಲ್ಲಿರುವ ಹಿನ್ನೆಲೆಯಲ್ಲಿ ಆಕಾಶವಾಣಿ ಬಳಸುವ ಪ್ರಶ್ನೆ ಕುರಿತು ನಾನು ಗಮನಹರಿಸಿದ್ದುಂಟು. ಸೂಕ್ತ ಸಮಯದಲ್ಲಿ ಈ ಪ್ರಶ್ನೆ ಎತ್ತಿದಾಗ ನಾನು ಸಂತೋಷದಿಂದ ನನ್ನ ಅನಿಸಿಕೆಗಳನ್ನು ತಿಳಿಸುತ್ತೇನೆ. ಇದರಿಂದ ಸದನಕ್ಕೆ ಲಾಭವಾದೀತು.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಮಾನ್ಯ ಸಚಿವರ ಈ ಹೇಳಿಕೆ ನಂತರವೂ ಈ ವಿಷಯ ಮುಂದುವರಿಸುವ ಅಗತ್ಯವಿದೆಯೆ?

ಹದಿನಾಲ್ಕು ಮತ್ತು ಹದಿನಾರನೇ ಕಲಮ್ಮುಗಳನ್ನು ಮಸೂದೆಗೆ ಸೇರಿಸಲಾಗಿದೆ.

**ಕಲಂ–೧೭.**— (ಅರ್ಥ ನಿರೂಪಣೆ)

*__ಶ್ರೀ ನಾಸಿರುದ್ದಿನ್ ಅಹ್ಮದ್ (ಪಶ್ಚಿಮ ಬಂಗಾಳ):__ ಇಲ್ಲಿ ಮುಖ್ಯವಾದ ಅಂಶವೆಂದರೆ ನಾವು ಎರಡು ಕೌನ್ಸಿಲ್‌ಗಳನ್ನು ಹೊಂದಿದ್ದೇವೆ ಎನ್ನುವುದು. ಗೊಂದಲ ತಪ್ಪಿಸುವ ದೃಷ್ಟಿಯಿಂದ ನಾವು ಮೇಲ್ಮನೆಯನ್ನು ರಾಜ್ಯ ಸಭೆ ಎಂದು ಕರೆಯುವಂತೆ ಸ್ಟೇಟ್ ಕೌನ್ಸಿಲನ್ನು ಲೆಜಿಸ್ಲೆಟಿವ್ ಕೌನ್ಸಿಲ್ ಎಂದು ಕರೆಯಬೇಕು.

**ಡಾ. ಅಂಬೇಡ್ಕರ್:** ಇದನ್ನು ನಾನು ಒಪ್ಪುವುದಿಲ್ಲ. ಈ ಎಲ್ಲ ಪದಗಳನ್ನೂ ಜನತಾ ಪ್ರಾತಿನಿಧ್ಯ ಶಾಸನದಲ್ಲಿ ವಿಶದಪಡಿಸಲಾಗಿದೆ.

**ಶ್ರೀ ನಾಸಿರುದ್ದಿನ್ ಅಹ್ಮದ್:** ಹಾಗಿದ್ದಲ್ಲಿ ತಿದ್ದುಪಡಿಗೆ ನಾನು ಆಗ್ರಹಿಸುವುದಿಲ್ಲ.

**ಮಾನ್ಯ ಉಪಸಭಾಪತಿ:** ಸೂಚನೆ ಏನೆಂದರೆ:

> "ಹದಿನೇಳನೆಯ ಕಲಂ ಮಸೂದೆಯ ಭಾಗವಾಗುವುದು"

ಹದಿನೇಳನೆ ಕಲಮ್ಮನ್ನು ಮಸೂದೆಯಲ್ಲಿ ಸೇರಿಸಲಾಗಿದೆ.

**ಕಲಂ–೧೮.**— (ಪ್ರತಿಕ್ಷೇತ್ರಕ್ಕೂ ಚುನಾವಣಾಧಿಕಾರಿ)

**ಸರ್ದಾರ್ ಹುಕುಂ ಸಿಂಗ್ (ಪಂಜಾಬ್):** ಈ ಸೂಚನೆಯನ್ನು ಮಂಡಿಸಲು ಅನುಮತಿಯನ್ನು ಬೇಡುತ್ತಿದ್ದೇನೆ.

> ಹದಿನೆಂಟನೇ ಕಲಮ್ಮಿನಲ್ಲಿ "ಅವರು ಸರ್ಕಾರಿ ಅಧಿಕಾರಿಯಾಗಿರುವರು" ಎಂಬುದಕ್ಕೆ ಪರ್ಯಾಯವಾಗಿ "ಅವರು ಸರ್ಕಾರಿ ಅಧಿಕಾರಿಯಾಗಿರಬಹುದು" ಎಂಬ ಪದಗಳನ್ನು ಸೇರಿಸತಕ್ಕದ್ದು.

**__ಡಾ. ಅಂಬೇಡ್ಕರ್:__ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಕಷ್ಟ. ಸ್ವಲ್ಪ ಮಟ್ಟಿಗೆ ಸರ್ಕಾರೇತರ ಸಂಸ್ಥೆಗಳನ್ನು ಅವಲಂಬಿಸಬಹುದು ಎನ್ನುವ ಸರ್ದಾರ್ ಹುಕುಂ ಸಿಂಗ್ ಅವರ ಮಾತನ್ನು ನಾನು ಒಪ್ಪುತ್ತೇನೆ. ಚುನಾವಣಾ ಆಯುಕ್ತರ ಮಾತನ್ನು ನಾನು ಒಪ್ಪುತ್ತೇನೆ. ಚುನಾವಣಾ ಆಯುಕ್ತರ ಅಧೀನದಲ್ಲಿರುವ ಸಿಬ್ಬಂದಿ ವರ್ಗಕ್ಕೆ ಸರ್ಕಾರದ ಆಡಳಿತಾತ್ಮಕ ಸೇವೆಯಲ್ಲಿಲ್ಲದವರನ್ನೂ ಸೇರಿಸಿಕೊಳ್ಳುವುದರಿಂದ ಖಂಡಿತವಾಗಿಯೂ ಚುನಾವಣೆ ಕೆಲಸ ಕಾರ್ಯಗಳು ತ್ವರಿತಗತಿಯಲ್ಲಿ ನಡೆಯುತ್ತವೆ. ಆದರೆ ಕೇಂದ್ರ

---

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ ೨, ಮೇ ೧೫, ೧೯೫೧, ಪು: ೮೭೬೪–೬೫

** ಸಂಸದೀಯ ಚರ್ಚೆ, ಸಂಪುಟ ೧೨, ಭಾಗ ೨, ಮೇ ೧೫, ೧೯೫೧, ಪು: ೮೭೬೫

ಸರ್ಕಾರ ಸಮಾಲೋಚಿಸಿದ ಎಲ್ಲ ಸರ್ಕಾರಗಳು ಹಾಗೂ ಸಂಸ್ಥೆಗಳು ಚುನಾವಣಾ ವ್ಯವಸ್ಥೆ ಸಂಪೂರ್ಣವಾಗಿ ಸರ್ಕಾರಿಯಾಗಿರಬೇಕು ಎಂದು ಪಟ್ಟು ಹಿಡಿದು ಹೇಳಿರುವುದನ್ನು ನಾವು ಮಾನ್ಯ ಮಾಡಬೇಕಾಗಿದೆ. ಹೀಗಿರುವಾಗ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಾಗದು.

***ಶ್ರೀ ಜೆ.ಆರ್. ಕಪೂರ್: ಈ ಸೂಚನೆಯನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ:

ಇಪ್ಪತ್ತನೆ ಕಲಮ್ಮಿನ ಎರಡನೇ ಉಪವಿಧಿಯ ನಿಬಂಧನೆಗಳಲ್ಲಿ ಸೇರಿಸತಕ್ಕದ್ದು:

"ಇಂಥ ಸಂದರ್ಭದಲ್ಲಿ ಸಹಾಯಕ ಚುನಾವಣಾಧಿಕಾರಿಗಳಲ್ಲಿ ಅತ್ಯಂತ ಜ್ಯೇಷ್ಠನಾದ ಅಧಿಕಾರಿಯು ಹೇಳಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು"

**ಮಾನ್ಯ ಉಪಸಭಾಪತಿ:** ಅತ್ಯಂತ ಜ್ಯೇಷ್ಠ ಎಂಬುದನ್ನು ನಿರ್ಧರಿಸುವವರು ಯಾರು?

**ಶ್ರೀ ಜೆ.ಆರ್. ಕಪೂರ್:** ಉತ್ತರ ಸರಳ. ಅಧಿಕಾರಿಗಳ ಜ್ಯೇಷ್ಠತೆಯನ್ನು ತಿಳಿಸುವ ಸಿವಿಲ್ ಪಟ್ಟಿ ಇದೆ.

**ಮಾನ್ಯ ಉಪ ಸಭಾಪತಿ:** ಆದರೆ ಅದು ಇಲಾಖೆಯಿಂದ ಇಲಾಖೆಗೆ ಭಿನ್ನವಾಗಿದ್ದಲ್ಲಿ?

**ಶ್ರೀ ಜೆ.ಆರ್.ಕಪೂರ್:** ನನ್ನ ಸಲಹೆಯಿಂದ ತೊಂದರೆ ಪರಿಹರಿಸಲಾಗದು ಎಂಬುದೇ ಮಾತಾದಲ್ಲಿ ನಾವು ಬೇರೆ ವಿಧಾನವನ್ನು ಕಂಡುಕೊಳ್ಳಬಹುದು. ಅದರಲ್ಲಿ ಸಹಾಯಕ ಚುನಾವಣಾಧಿಕಾರಿಗಳಲ್ಲಿ ಯಾರು ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕೆಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು. ಈಗಿರುವ ರೂಪದಲ್ಲೇ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಏನಾದರೂ ತೊಂದರೆಯಿದ್ದಲ್ಲಿ ನಿಯಮಗಳನ್ನು ರೂಪಿಸುವಾಗ ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಯಾವುದನ್ನೂ ಅನಿಶ್ಚತತೆಗೆ ಬಿಡಬಾರದೆಂಬುದೇ ನನ್ನ ಉದ್ದೇಶ.

**ಡಾ. ಅಂಬೇಡ್ಕರ್:** ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನಾವು ಮೂರು ಕೆಲಸಗಳ ಬಗ್ಗೆ ಚರ್ಚಿಸುತ್ತಿದ್ದೇವೆ ಎಂಬುದನ್ನು ನೆನಪಿನಲ್ಲಿಡಬೇಕು; ನಾಮಪತ್ರ ಅಂಗೀಕಾರ, ನಾಮಪತ್ರ ಪರಿಶೀಲನೆ ಹಾಗೂ ಕೆಲವು ಸಂದರ್ಭಗಳಲ್ಲಿ ಮತಗಳ ಎಣಿಕೆ. ಈ ಯಾವ ಕೆಲಸಗಳೂ ಇಂಥವರಲ್ಲಿ ಮಾತ್ರ ನಾವು ನಂಬಿಕೆ ಇರಿಸಲು ಸಾಧ್ಯ, ವಿಶ್ವಾಸ ಇರಿಸಲು ಸಾಧ್ಯ ಎನ್ನುವಂಥ ವಿಶೇಷ ಗುಣಲಕ್ಷಣಗಳನ್ನು ಹೊಂದಿರುವ ಅಧಿಕಾರಿಯೇ ಬೇಕು ಎನ್ನುವ ರೀತಿಯದಲ್ಲ. ಈ ಕೆಲಸ ಕಾರ್ಯಗಳಿಗೆ ವಿಶೇಷ ಗುಣಲಕ್ಷಣಗಳನ್ನುಳ್ಳ ಅಥವಾ ನಂಬಿಕಸ್ಥತನದ ಅಧಿಕಾರಿಯ ಆವಶ್ಯಕತೆ ಇದೆ ಎಂಬುದನ್ನು ನನ್ನ ಮಿತ್ರರು ಮನವರಿಕೆ ಮಾಡಿಕೊಡಬೇಕು. ಇಲ್ಲವಾದಲ್ಲಿ, ಬೇರೆ ಯಾರಾದರೂ ನಿರ್ವಹಿಸಿದ ರೀತಿಯಲ್ಲೇ ಸಹಾಯಕ ಚುನಾವಣಾಧಿಕಾರಿಯಿಂದಲೂ ಕಾರ್ಯ ನಿರ್ವಹಣೆ ಏಕೆ ಸಾಧ್ಯವಿಲ್ಲ ಎಂಬುದು ನನ್ನ ಅಭಿಪ್ರಾಯ.

**ಶ್ರೀ ಜೆ.ಆರ್. ಕಪೂರ್:** ಅದು ನಿಬಂಧನೆಗಳ ಕಲ್ಪನೆ.

**ಡಾ. ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರ ಆಲೋಚನೆ, ಅಧಿಕಾರಿಗಳನ್ನು ಜ್ಯೇಷ್ಠ, ನಂತರದ ಜ್ಯೇಷ್ಠ, ಕಿರಿಯ ಇತ್ಯಾದಿಯಾಗಿ ಶ್ರೇಣೀಕರಿಸುವುದೇ ಆಗಿದೆ. ಹೀಗೇಕೆ ಮಾಡಬೇಕು ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಯಾರಲ್ಲಿ ಗರಿಷ್ಠ ನಂಬಿಕೆ, ವಿಶ್ವಾಸಗಳಿವೆಯೋ ಅಂಥವನು ಮಾತ್ರ ಮಾಡಬಹುದಾದ ಕೆಲಸವಿದು ಎಂದಾದಲ್ಲಿ ಮಾತ್ರ ಇದು ಬೇಕಾದೀತು. ಇದರಿಂದ ಆಡಳಿತಾತ್ಮಕ ತೊಂದರೆಗಳೂ ಉದ್ಭವಿಸಬಹುದು.

**ಮಾನ್ಯ ಡೆಪ್ಯುಟಿ ಸ್ಪೀಕರ್:** ತಿದ್ದುಪಡಿಯಲ್ಲಿ ಗಮನಿಸಬೇಕಾದ ಒಂದು ಅಂಶವಿದೆ. ಚುನಾವಣಾ

---

** ಪ್ರಕರಣ ಪು: ೮೭೭೪–೭೫

ಆಯೋಗ ಒಬ್ಬರು ಅಥವಾ ಹೆಚ್ಚು ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಿಸಬಹುದು. ಇಬ್ಬರನ್ನು ನೇಮಿಸಲಾಗುತ್ತದೆ ಎಂದು ಭಾವಿಸೋಣ. ಹಠಾತ್ತನೆ ಚುನಾವಣಾಧಿಕಾರಿ ಯಾವುದೇ ಆದೇಶ–ಸೂಚನೆಗಳನ್ನು ಕೊಡದೆ ಗೈರುಹಾಜರಾಗುತ್ತಾನೆ. ಸ್ಥಳದಲ್ಲಿ ಇಬ್ಬರಿದ್ದಾರೆ. ಅವರಲ್ಲಿ ಯಾರು ಜವಾಬ್ದಾರಿ ವಹಿಸಿಕೊಳ್ಳಬೇಕು?

**ಡಾ. ಅಂಬೇಡ್ಕರ್:** ಇಬ್ಬರಲ್ಲಿ ಯಾರಾದರೂ ಒಬ್ಬರು ವಹಿಸಿಕೊಳ್ಳಬಹುದು.

**ಮಾನ್ಯ ಉಪ ಸಭಾಪತಿ:** ಅದು ತನ್ನ ಕೆಲಸವಲ್ಲ, ಮತ್ತೊಬ್ಬನದು ಎಂದು ಇಬ್ಬರೂ ಭಾವಿಸಿದರೆ ಆಗೇನಾಗುತ್ತದೆ?

**ಡಾ. ಅಂಬೇಡ್ಕರ್:** ಎರಡು ನ್ಯಾಯ ಪೀಠಗಳಿವೆ ಎಂದಿಟ್ಟುಕೊಳ್ಳೋಣ. ಯಾವುದೇ ಪೀಠವಿರಲಿ, ಹೈಕೋರ್ಟಿನ ರಿಜಿಸ್ಟ್ರಾರ್ ಆ ಪೀಠದ ಮುಂದೆ ಮೊಕದ್ದಮೆಯನ್ನು ಇಡುತ್ತಾರೆ. ಪೀಠ ವಿಚಾರಣೆ ನಡೆಸುತ್ತದೆ. ಒಂದು ಒಬ್ಬರಿಗೆ ಮತ್ತೊಂದು ಇನ್ನೊಬ್ಬರಿಗೆ ಹೋಬಹುದು.

**ಪಂಡಿತ್ ಮುನೀಶ್ವರ ದತ್ತ ಉಪಾಧ್ಯಾಯ:** ಒಬ್ಬರು ಒಂದು ತೀರ್ಪು ನೀಡಬಹುದು. ಇನ್ನೊಬ್ಬರು ಮತ್ತೊಂದು ತೀರ್ಪು ನೀಡಬಹುದು.

**ಮಾನ್ಯ ಉಪಸಭಾಪತಿ:** ಅದು ಹೇಗೆ?

***ಶ್ರೀ ರಾಜಬಹಾದುರ್ (ರಾಜಸ್ತಾನ):** "ಅನಿವಾರ್ಯವಾಗಿ" ಎನ್ನುವ ಪದ ಇಲ್ಲಿ ತುಂಬ ಮುಖ್ಯ. ನನ್ನ ನಮ್ರ ಅಭಿಪ್ರಾಯದ ಪ್ರಕಾರ ಶ್ರೀ ಕಪೂರ್ ಅವರು ಸೂಚಿಸಿರುವ ತಿದ್ದುಪಡಿ ಅಂಗೀಕ್ಕಾರಕ್ಕೆ ಯೋಗ್ಯವಲ್ಲ. ಇಲ್ಲಿಯವರೆಗಿನಂತೆ, ಯಾವೊಬ್ಬ ಸಹಾಯಕ ಚುನಾವಣಾಧಿಕಾರಿಯೂ ಚುನಾವಣಾಧಿಕಾರಿಯ ಹತೋಟಿಗೊಳಪಡದೆ ಸ್ವತಂತ್ರವಾಗಿ ಎಲ್ಲ ಕೆಲಸಗಳನ್ನೂ ಅಥವಾ ಯಾವುದೇ ಕೆಲಸವನ್ನು ಮಾಡಲು ಅಸಮರ್ಥ ಎಂದು ಅದು ಖಚಿತವಾಗಿ ಹವಣಿಸಿಕೊಟ್ಟಿದೆ. ಆ ಕೆಲಸಗಳ ನಿರ್ವಹಣೆಯಲ್ಲಿ ಚುನಾವಣಾಧಿಕಾರಿಯು ಮೇಲುಸ್ತುವಾರಿ ನೋಡಿಕೊಳ್ಳಲೇಬೇಕು ಹಾಗೂ ಹತೋಟಿ ಹೊಂದಿರಬೇಕು. ಅವನು ತನ್ನ ಸಹಾಯಕರಲ್ಲಿ ಒಬ್ಬನನ್ನು ಒಂದು ನಿರ್ದಿಷ್ಟ ಕೆಲಸಕ್ಕಾಗಿ ನಿಯೋಜಿಸಬಹುದು. ಹಲವಾರು ಮಂದಿ ಸಹಾಯಕರಲ್ಲಿ ಒಂದು ನಿರ್ದಿಷ್ಟ ಕೆಲಸ ಮಾಡಲು ಯಾರಾದರೂ ಒಬ್ಬರನ್ನು ಆಯ್ಕೆ ಮಾಡುವ ಸ್ಪಷ್ಟ ಅಧಿಕಾರ ಚುನಾವಣಾಧಿಕಾರಿಯಾಗಿ ಅವನಿಗಿದೆ. ತೊಂದರೆ, ಕಷ್ಟಗಳಿದ್ದಲ್ಲಿ ಅವರಲ್ಲಿ ಒಬ್ಬರನ್ನು ಅವನು ನೇಮಿಸಬಹುದು.

**ಶ್ರೀ ಪಿ ಬಸಿರೆಡ್ಡಿ:** ಅವನು ಅನುಜ್ಞೆ ಕೊಡುವುದು ಹೇಗಾದೀತು? ಒಂದು ವೇಳೆ ಅಪಘಾತದಿಂದಾಗಿ ಮಾರ್ಗ ಮಧ್ಯೆ ಅವನಿಗೆ ಅಡಚಣೆಯುಂಟಾಯಿತೆನ್ನೋಣ ಆಗೇನಾಗುತ್ತದೆ?

**ಡಾ. ಅಂಬೇಡ್ಕರ್:** ಕೆಲವರು ಆಸಕ್ತಿ ಹೊಂದಿರುವ ಒಂದು ವಿಷಯದಲ್ಲಿ ಒತ್ತಡ ಹೇರಲು ಅನೇಕ ಪೊಳ್ಳು ಭಯಗಳನ್ನು ಮುಂದೊಡ್ಡಲಾಗುತ್ತಿದೆ ಎಂದು ನನ್ನ ಶಂಕೆ. ಇದು ಪರಿಸ್ಥಿತಿ. ನಾನು ಹೇಳುತ್ತಿರುವುದನ್ನು ವಕೀಲ ಸದಸ್ಯರು ಅರ್ಥ ಮಾಡಿಕೊಳ್ಳಬಲ್ಲರು ಎಂದು ನನ್ನ ಭಾವನೆ.

**ಶ್ರೀ ಸಿಧ್ವ:** ತದ್ವಿರುದ್ಧವಾಗಿ.

**ಡಾ. ಅಂಬೇಡ್ಕರ್:** "ನ್ಯಾಯಾಲಯ" ಎಂದರೇನು, ನಿಯುಕ್ತನಾದ ವ್ಯಕ್ತಿ ಎಂದರೇನು? ಕಾನೂನಿನಲ್ಲಿ ಇವೆರೆಡರ ನಡುವೆ ಭೇದ–ಭಿನ್ನತೆಗಳಿವೆ ಎಂಬುದು ನಮಗೆಲ್ಲ ಗೊತ್ತು. ಕೆಲವು ಖಟ್ಲೆಗಳಲ್ಲಿ ವ್ಯಕ್ತಿಯೊಬ್ಬ ನ್ಯಾಯಾಲಯದ ನಿಯಾಮಕ ಸದಸ್ಯನಾಗಿರಬಹುದು ಅಥವಾ ಕೆಲವೊಂದು ಬೇರೆ ಉದ್ದೇಶಗಳಿಗಾಗಿ

---

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ಮೇ ೧೫, ೧೯೫೧, ಪು: ೮೭೮೦–೮೩

ನ್ಯಾಯಾಲವೊಂದನ್ನು ಸೃಷ್ಟಿಸಬೇಕಾಗಬಹುದು. ಸದಸ್ಯನಾಗಿ ನಿಯಮಿಸಲ್ಪಟ್ಟ ವ್ಯಕ್ತಿಯನ್ನು ನಿರ್ದಿಷ್ಟ ರೀತಿಯಲ್ಲಿ ನಿಯುಕ್ತಗೊಳಿಸಲಾಗಿರುತ್ತದೆ. ಹೀಗಾಗಿ ಅವನೇ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಆದರೆ ಅವನೇ "ನ್ಯಾಯಾಲಯವಲ್ಲ'. ಇದೇ ತತ್ತ್ವ ಇಲ್ಲಿಯೂ ಮೂಲಾಧಾರ. ಚುನಾವಣಾಧಿಕಾರಿಯಾಗಿ ನೇಮಕಗೊಂಡವ ಯಾರೇ ಇರಲಿ, ಅವನು ಕೆಲವು ಕೆಲಸಗಳಿಗಾಗಿ ನೇಮಕಗೊಂಡ ವ್ಯಕ್ತಿಯಾಗಿರುತ್ತಾನೆ, ಅವನು ಖುದ್ದಾಗಿ ಆ ಕೆಲಸಗಳನ್ನು ನಿರ್ವಹಿಸಲೇಬೇಕು; ಷರತ್ತುಗಳಲ್ಲಿ ನಮೂದಿಸಲಾಗಿರುವ ಕೆಲವು ಕೆಲಸಗಳನ್ನು ಮಾಡಲೇಬೇಕು. ಕೆಲವು ಸಂದರ್ಭಗಳಲ್ಲಿ, ಉದಾಹರಣೆಗೆ ಷರತ್ತಿನ ಕೊನೆಯ ವಾಕ್ಯದಲ್ಲಿ ಹೇಳಿರುವಂತೆ, ಅವನ ಕೈ ಕೆಳಗೆ ಕೆಲಸ ಮಾಡುವ ಇತರ ವ್ಯಕ್ತಿಗಳು, ಅಂದರೆ ಸಹಾಯಕ ಚುನಾವಣಾಧಿಕಾರಿ ನಿಯಮಿಸಲ್ಪಟ್ಟವನಾಗುತ್ತಾನೆ ಹಾಗೂ ಅವನ ಸ್ಥಾನ ವಹಿಸಿಕೊಂಡು ಕೆಲಸ ಮಾಡುತ್ತಾನೆ. ಇದು ಅದರ ಅರ್ಥ.

**ಪಂಡಿತ ಮುನೀಶ್ವರದತ್ತ ಉಪಾಧ್ಯಾಯ:** ಇತರ ವ್ಯಕ್ತಿಗಳೆಂದರೆ ಅವರು ಯಾರುಯಾರು?

**ಡಾ. ಅಂಬೇಡ್ಕರ್:** ಅವನ ಸ್ಥಾನ ವಹಿಸಿಕೊಳ್ಳುವವರು ಯಾರಾದರೂ ಆಗಿರಬಹುದು. ನನಗೆ ಅರ್ಥವಾಗುತ್ತಿಲ್ಲ ನನ್ನ ಮಾನ್ಯ ಮಿತ್ರರಾದ ಶ್ರೀ ಸಂತಾನಂ ಹೇಳುತ್ತಾರೆ, ಹೆಚ್ಚೆಂದರೆ ಒಬ್ಬ ಇರಬಹುದೆಂದು. ನಾವು ಇತರ ಸಂಭಾವ್ಯತೆಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಇಬ್ಬರಿದ್ದಾರೆ ಎಂದಿಟ್ಟುಕೊಳ್ಳೋಣ. ಇವರಿಬ್ಬರೂ ಸ್ಥಾನವಹಿಸಿಕೊಂಡಿದ್ದಾರೆ ಎಂದಾದಲ್ಲಿ ಅವರಿಬ್ಬರೂ ಪರಸ್ಪರ ಸಮಾಲೋಚಿಸಬಹುದು 'ಎ', 'ಬಿ' ಬಳಿಗೆ 'ಬಿ' – 'ಎ' ಬಳಿಗೆ ಹೋಗಿ ಮಾತುಕತೆಯಾಡಬಹುದು. ಇವರಿಬ್ಬರೂ ಚುನಾವಣಾ ಅಧಿಕಾರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಬಹುದು.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ತೊಂದರೆ ಉದ್ಭವಿಸುವುದು ನಾಮಪತ್ರಗಳ ಪರಿಶೀಲನೆ ಬಗ್ಗೆ – ಪ್ರತಿಯೊಬ್ಬ ಸಹಾಯಕ ಚುನಾವಣಾಧಿಕಾರಿಯೂ ಬದಲು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸುವಾಗ.

**ಡಾ. ಅಂಬೇಡ್ಕರ್:** ನನಗೆ ವಿಷಾದವೆನಿಸುತ್ತದೆ. "ಕೆಲಸ ಕಾರ್ಯಗಳು" ಎಂಬ ಪದಕ್ಕೆ ಪರ್ಯಾಯವಾಗಿ "ಕೆಲಸ" ಎಂಬ ಪದವನ್ನು ಸೇರಿಸಲು ನಾನು, ಬಹುಶಃ ಅಜಾಗರೂಕತೆಯಿಂದ ನಾಜಿರುದ್ದಿನ್ ಅಹ್ಮದ್ ಅವರ ತಿದ್ದುಪಡಿಯನ್ನು ಒಪ್ಪಿಕೊಂಡೆ. ಅದು ಸರಿಯಲ್ಲ. ಮೂಲಪದ, ಅದು, ಏಕವಚನದಲ್ಲಿದೆ ಅಂದರೆ "ಕೆಲಸ' ಎನ್ನುವುದು ಸರಿಯಾದದ್ದು. ನಾಮಪತ್ರದ ದಿನ ಅವನು ಗೈರು ಹಾಜರಾಗಿರಬಹುದು ಎಂಬುದರಿಂದ ತೊಂದರೆ ಉದ್ಭವಿಸಿದೆ ; ತೊಂದರೆ ಇರುವುದು ಅಲ್ಲಿ. ಚುನಾವಣಾಧಿಕಾರಿ ಪರಿಶೀಲನೆ ದಿನ ಹಾಜರಿರಲೇಬೇಕು ಹಾಗೂ ಅವನಿಂದ ಪರಿಶೀಲನೆಯಾಗಬೇಕು.

**ಮಾನ್ಯ ಉಪ ಸಭಾಪತಿ:** ತಿದ್ದುಪಡಿಯ ಮೂರನೆ ಪಠಣದಲ್ಲಿ ಇದನ್ನು ಸರಿಪಡಿಸಬಹುದು.

**ಡಾ. ಅಂಬೇಡ್ಕರ್:** ಸಹಾಯಕ ಚುನಾವಣಾಧಿಕಾರಿ ನಾಮಪತ್ರ ಸ್ವೀಕರಿಸುತ್ತಾನೆ. ಆದ್ದರಿಂದ ಅವನೇ ನಾಮಪತ್ರ ಪರಿಶೀಲನಾ ಕಾರ್ಯವನ್ನೂ ಮಾಡಬೇಕು. ಅವನೇ ಮತ ಎಣಿಕೆ ಕಾರ್ಯವನ್ನೂ ಮಾಡಬೇಕು ಎಂಬ ಸಂಗತಿಯತ್ತ ಗಮನ ಸೆಳೆಯಲಿಚ್ಛಿಸುತ್ತೇನೆ. ಆದರೆ ಇದು ಹಾಗಲ್ಲ.

**ಶ್ರೀ ಹನುಮಂತಯ್ಯ:** ತೊಂದರೆ ಇರುವುದು "ಅನಿವಾರ್ಯವಾಗಿ ತಪ್ಪಿಸಲಾಯಿತು" ಎಂಬ ಪದಗಳಲ್ಲಿ ಹಾಗೂ ಇದು ನ್ಯಾಯಾಲಯ ವ್ಯಾಖ್ಯಾನಿಸಬೇಕಾದ ವಿಷಯವಿದ್ದೀತು.

**ಡಾ. ಅಂಬೇಡ್ಕರ್:** ನೀವು ಸೂಚಿಸಲಿರುವ ಪರ್ಯಾಯ ಪದ ಯಾವುದು?

**ಶ್ರೀ ಹನುಮಂತಯ್ಯ:** ನಾನೊಂದು ಪರಿಹಾರ ಸೂಚಿಸುವೆ "ಅನಿವಾರ್ಯವಾಗಿ ತಪ್ಪಿಸಲಾಯಿತು"

ಪದಗಳಿಗೆ ಪರ್ಯಾಯವಾಗಿ "ಗೈರುಹಾಜರಿ" ಪದ ಬಳಸಬಹುದು. ಆಗ ಯಾವುದೇ ತಕರಾರು ಇರುವುದಿಲ್ಲ.

**ಡಾ. ಅಂಬೇಡ್ಕರ್:** ಆತ ಗೈರು ಹಾಜರಾಗಿರುವುದು ನನಗೆ ಬೇಕಿಲ್ಲ. ನನ್ನ ವಾಸ್ತವ ಉದ್ದೇಶವೇ ಅದು. ಕಾರ್ಯ ನಿರ್ವಹಣೆಗಾಗಿ ಆತ ನೇಮಕಗೊಂಡ ಕೂಡಲೇ ವಿಶೇಷವಾಗಿ ಆತ ನಿಯಮಿಸಲ್ಪಟ್ಟ ವ್ಯಕ್ತಿ ಎಂದು ಪರಿಗಣಿಸಲ್ಪಟ್ಟವನಾದ್ದರಿಂದ ಬೇರೆ ಏನೇ ಕೆಲಸ ಇರಲಿ ಮೊದಲು ಈ ಕೆಲಸ ಮಾಡಬೇಕು. ಇದು ಅವನ ಅನಿವಾರ್ಯತೆ.

**ಶ್ರೀ ಹನುಮಂತಯ್ಯ:** ಹಾಗಿದ್ದಲ್ಲಿ ನ್ಯಾಯಾಲಯದಲ್ಲಿ ಸುಲಭವಾಗಿ ಉತ್ತರಿಸಬಹುದು. "ಅನಿವಾರ್ಯವಾಗಿ ತಪ್ಪಿಸಲಾಯಿತು" ಎಂಬುದೇ ಸಾಕ್ಷಿ ಪುರಾವೆಯ ವಸ್ತು ವಿಚಾರವಾಗುತ್ತದೆ.

**ಡಾ. ಅಂಬೇಡ್ಕರ್:** ಅದು ಸಾಕ್ಷಿ ಪುರಾವೆಯ ವಸ್ತು ವಿಚಾರವಾದೀತು.

**ಶ್ರೀ ಪಿ. ಬಸಿರೆಡ್ಡಿ:** ಚುನಾವಣಾಧಿಕಾರಿಗಳಲ್ಲಿ ಒಬ್ಬರಿಗೆ ಪೂರ್ವಭಾವಿಯಾಗಿ ಅಧಿಕಾರ ನೀಡಬಾರದೇಕೆ?

**ಮಾನ್ಯ ಉಪಸಭಾಪತಿ:** ಆ ಮಾತಿಗೆ ಇವರು ಉತ್ತರ ನೀಡಿದ್ದಾರೆ. ಇದು ಕೊನೆಯಿಲ್ಲದ ವಾಗ್ವಾದ. ನಿಜಕ್ಕೂ ಅನಿವಾರ್ಯವಾಗಿ ತಪ್ಪಿಸದಿದ್ದಲ್ಲಿ ಹಾಗೂ ಅದು ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿ ನಡುವಣ ವಿಷಯವಾಗಿದ್ದಲ್ಲಿ ಅದರಿಂದೇನೂ ಚಿಂತೆ ಇಲ್ಲ. ಮುಖ್ಯ ವಿಷಯವೆಂದರೆ ಸಂಬಂಧಿತ ಚುನಾವಣೆಯನ್ನು ಘೋಷಿಸಬಹುದೆ ಎಂಬುದು. ಇದನ್ನು ಸರಿಪಡಿಸುವ ಸಾಧ್ಯತೆ ಇದೆಯೆ?

**ಡಾ. ಅಂಬೇಡ್ಕರ್:** ನನ್ನ ವ್ಯಾಖ್ಯಾನದ ಪ್ರಕಾರ ಅದು ಚುನಾವಣಾ ಆಯುಕ್ತರು ಮತ್ತು ಚುನಾವಣಾಧಿಕಾರಿ ನಡುವಣ ವಿಷಯ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ (ಮದ್ರಾಸ್):** ಎರಡನೇ ಉಪ ವಿಧಿಯಲ್ಲಿ ಪದಗಳು ಹೀಗಿವೆ: "ಚುನಾವಣಾಧಿಕಾರಿಯ ಹತೋಟಿಗೊಳಪಟ್ಟು ಪ್ರತಿಯೊಬ್ಬ ಸಹಾಯಕ ಚುನಾವಣಾಧಿಕಾರಿಗೂ ಸಕಲ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರವಿದೆ" ಹೀಗಾಗಿ ಇದೊಂದೇ ಮಿತಿ.

**ಡಾ. ಅಂಬೇಡ್ಕರ್:** ಕೊನೆಯ ಭಾಗ ಕಾಯಿದೆ ಮೂಲಕ ವಿಧಿಸುವಂಥಾದ್ದಲ್ಲ. ಇದಕ್ಕೆ ಮೊದಲಿನ ಭಾಗ ಮಾತ್ರ ಕಾಯಿದೆ ಮೂಲಕ ವಿಧಿಸುವಂಥಾದ್ದು. ಅನಿವಾರ್ಯ ಕಾರಣಗಳಿಲ್ಲದೆ ಗೈರು ಹಾಜರಾಗಿದ್ದ ಎಂಬುದು ಗೊತ್ತಾದಲ್ಲಿ ಚುನಾವಣಾ ಆಯುಕ್ತರು ಚುನಾವಣಾಧಿಕಾರಿಯನ್ನು ತರಾಟೆಗೆ ತೆಗೆದುಕೊಳ್ಳಬಹುದು.

**ಶ್ರೀ ಹನುಮಂತಯ್ಯ:** ಉಪಸಭಾಪತಿ ಅವರು ಹೇಳಿದಂತೆ ಅದು ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿ ನಡುವಣ ವಿಷಯವಾಗಿರಬಹುದು. ಆದರೆ ಚುನಾವಣಾ ಅಭ್ಯರ್ಥಿಗಳ ವಿಚಾರ ಏನಂತೀರ?

**ಡಾ. ಅಂಬೇಡ್ಕರ್:** ಚುನಾವಣಾಧಿಕಾರಿ ಗೈರುಹಾಜರಾಗಿದ್ದನೆಂದು ಅಭ್ಯರ್ಥಿ ಸಾಬೀತುಗೊಳಿಸಿದರೆ, ಅಷ್ಟು ಸಾಕು. ಅವನು ಅನಿವಾರ್ಯ ಕಾರಣಗಳಿಂದ ಗೈರು ಹಾಜರಾಗಿದ್ದನೆ ಅಥವಾ ಇಲ್ಲವೇ ಎಂಬುದು ಚುನಾವಣಾ ಆಯುಕ್ತರಿಂದ ತೀರ್ಮಾನಮಾಡಬೇಕಾದ ವಿಚಾರ.

**ಪಂಡಿತ ಠಾಕೂರ್ ದಾಸ್ ಭಾರ್ಗವ:** ಆತನನ್ನು ಅನಿವಾರ್ಯವಾಗಿ ಕೆಲಸದಿಂದ ತಪ್ಪಿಸಲಾಯಿತೆ ಇಲ್ಲವೇ ಎಂಬುದನ್ನೂ ಸಾಬೀತುಗೊಳಿಸಬೇಕು.

**ಶ್ರೀ ರಾಜಬಹಾದೂರ್:** ಶ್ರೀ ಹನುಮಂತಯ್ಯನವರಿಗೆ ನಾನೊಂದು ಪ್ರಶ್ನೆ ಕೇಳಬಹುದೆ? ಗೈರು ಹಾಜರಿ ಅನಿವಾರ್ಯವೇ, ಅಲ್ಲವೇ ಎಂಬುದನ್ನು ಯಾರು ನಿರ್ಧರಿಸುತ್ತಾರೆ? ಚುನಾವಣಾ ಆಯುಕ್ತರೇ

ಅಥವಾ ಸಂಬಂಧಪಟ್ಟ ಅಧಿಕಾರಿಯೆ? ಅನಿವಾರ್ಯವಾಗಿ ಗೈರು ಹಾಜರಾಗಿದ್ದನೇ ಇಲ್ಲವೇ ಎಂಬುದು ಚುನಾವಣಾ ಆಯುಕ್ತರಿಗೆ ತಿಳಿದಿರುತ್ತೆ.

**ಪಂಡಿತ ಠಾಕೂರ್ ದಾಸ್ ಭಾರ್ಗವ:** ಆತನನ್ನು ಅನಿವಾರ್ಯವಾಗಿ ಕೆಲಸದಿಂದ ತಪ್ಪಿಸಲಾಯಿತೆ ಎಂಬುದನ್ನು ಪಂಚಾಯಿತಿ ನಿರ್ಧರಿಸಬೇಕು.

**ಶ್ರೀ ಶಿವಚರಣಲಾಲ್ (ಉತ್ತರ ಪ್ರದೇಶ):** ಒಬ್ಬರಿಗಿಂತ ಹೆಚ್ಚು ಸಹಾಯಕ ಚುನಾವಣಾಧಿಕಾರಿಗಳಿದ್ದಲ್ಲಿ, ಚುನಾವಣಾಧಿಕಾರಿಯು ಅವರಲ್ಲಿ ಒಬ್ಬರನ್ನು ಜ್ಯೇಷ್ಠನೆಂದು ಗೊತ್ತುಪಡಿಸಬೇಕು ಎನ್ನುವ ಒಂದು ಸಾಲನ್ನು ಸೇರಿಸಿದರೆ ಸರಿಹೋದೀತು ಎಂದು ನನಗನ್ನಿಸುತ್ತದೆ.

**ಮಾನ್ಯ ಉಪ ಸಭಾಪತಿ:** ಅದನ್ನು ಈಗಾಗಲೇ ಮಾಡಲಾಗಿದೆ. ಶ್ರೀ ಕಪೂರ್ ಅವರ ತಿದ್ದುಪಡಿ ಅದೇ ಆಗಿದೆ. ನಾನೀಗ ಶ್ರೀ ಕಪೂರ್ ಅವರ ತಿದ್ದುಪಡಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಶ್ರೀ ಹನುಮಂತಯ್ಯ:** ನನ್ನದೊಂದು ಸೂಚನೆ ಇದೆ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಅದಕ್ಕೆ ನಾವು ಆಮೇಲೆ ಬರೋಣ.

**ಶ್ರೀ ಹನುಮಂತಯ್ಯ:** ಈ ಕಲಮ್ಮಿಗೆ ಸಂಬಂಧಿಸಿದಂತೆ ನನ್ನ ಖಚಿತ ಸೂಚನೆ ಎಂದರೆ, ಈ ಕಲಮ್ಮನ್ನು ನಂತರ ಪರಿಶೀಲನೆಗೆತ್ತಿಕೊಳ್ಳಬಹುದು.

**ಮಾನ್ಯ ಉಪ ಸಭಾಪತಿ:** ಸೂಚನೆ ಏನೆಂದರೆ:

"ಇಪ್ಪತ್ತನೇ ಕಲಮ್ಮಿನ ಮತ್ತಷ್ಟು ಚರ್ಚೆ ಪರಿಶೀಲನೆಯನ್ನು ಮುಂದೂಡಲಾಗಿದೆ"

ಸೂಚನೆ ತಿರಸ್ಕೃತವಾಗಿದೆ.

***ಶ್ರೀ ಬರ್ಮನ್:** ನನ್ನ ವೈಯಕ್ತಿಕ ಅನುಭವದಿಂದ ಈ ಪ್ರಮೇಯವನ್ನು ಸ್ಪಷ್ಟಪಡಿಸಲು ನನಗೆ ಆಸ್ಪದ ಮಾಡಿಕೊಡಿ. ನನ್ನ ಕ್ಷೇತ್ರದಲ್ಲಿ ಎರಡು ಜಿಲ್ಲೆಗಳನ್ನು ಒಟ್ಟುಗೂಡಿಸಲಾಗಿದೆ ಹಾಗೂ ಡಿವಿಜನಲ್ ಕಮೀಷನರ್ ಚುನಾವಣಾಧಿಕಾರಿ. ನಾವು ಇಷ್ಟೂ ದಿನ ನಾಮ ಪತ್ರಗಳನ್ನು ಆಪ್ತ ಸಹಾಯಕರಿಗೆ ಸಲ್ಲಿಸುತ್ತಿದ್ದೇವೆ. ಇದು ಬಹಳ ದಿನದಿಂದ ನಡೆಯುತ್ತಿದೆ.

**ಡಾ. ಅಂಬೇಡ್ಕರ್:** ಮಾನ್ಯ ಸದಸ್ಯರನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದಲ್ಲಿ, ತಿದ್ದುಪಡಿಯ ಉದ್ದೇಶ ಹೀಗಿದೆ. ಚುನಾವಣಾಧಿಕಾರಿಯ ಗೈರು ಹಾಜರಿಯಲ್ಲಿ, ಕಟ್ಟಳೆಗಳ ರೀತ್ಯಾ ಸಹಾಯಕ ಚುನಾವಣಾಧಿಕಾರಿ ಮೂರು ಕೆಲಸಗಳನ್ನು ನಿರ್ವಹಿಸಬಹುದು. ಅವು: ನಾಮಪತ್ರ ಸ್ವೀಕರಿಸುವುದು, ನಾಮ ಪತ್ರಗಳ ಪರಿಶೀಲನೆ ಮತ್ತು ಮತಗಳ ಎಣಿಕೆ. ನನ್ನ ಮಾನ್ಯ ಮಿತ್ರರು ತಮ್ಮ ತಿದ್ದುಪಡಿಯ ಮೂಲಕ ಬಯಸುತ್ತಿರುವುದು ಎರಡು ಕೆಲಸಗಳ ನಿರ್ವಹಣೆ ಸಾಕೆಂದು. ಅಂದರೆ ನಾಮಪತ್ರ ಪರಿಶೀಲನೆ ಮತ್ತು ಮತಗಳ ಎಣಿಕೆ ಇವಿಷ್ಟು ಸಾಕು ಎಂದು.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಪದಗಳ ಒಕ್ಕಣೆ ಏನೆಂದರೆ, ಇನ್ನೊಬ್ಬ ಅನಿವಾರ್ಯವಾಗಿ ಗೈರುಹಾಜರಾದ ಹೊರತು ಈ ಎರಡು ಕೆಲಸಗಳನ್ನು ನಿರ್ವಹಿಸಲಾಗದು.

**ಡಾ. ಅಂಬೇಡ್ಕರ್:** ೨೮೪ ನೇ ತಿದ್ದುಪಡಿಯಲ್ಲಿ ಇಂಥಾದ್ದೇನೂ ಇಲ್ಲ.

**ಶ್ರೀ ಬರ್ಮನ್:** ಆ ವಾಕ್ಯ ಖಂಡವನ್ನು ತೆಗೆದುಬಿಡಬೇಕೆಂಬುದು ನನ್ನ ಅಪೇಕ್ಷೆ.

**ಡಾ. ಅಂಬೇಡ್ಕರ್:** ಅದು, ನಾಮಪತ್ರ ಸ್ವೀಕಾರಕ್ಕೆ ಸಂಬಂಧಿಸಿದ್ದು, ಉಳಿದದ್ದು ಹಾಗೆ ಇರಬೇಕೆ?

---

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ಮೇ ೧೫, ೧೯೫೧, ಪು: ೮೭೮೪–೮೬

**ಶ್ರೀ ಸಂತಾನಂ:** ಇದರ ಫಲಶ್ರುತಿ ಎಂದರೆ ಚುನಾವಣಾಧಿಕಾರಿ ಮತ್ತು ಇನ್ನೊಬ್ಬ ಸಹಾಯಕ ಚುನಾವಣಾಧಿಕಾರಿ ಇಬ್ಬರೂ ನಿಯುಕ್ತ ಅಧಿಕಾರಿಗಳಾಗಿರುತ್ತಾರೆ.

**ಶ್ರೀ ಬರ್ಮನ್:** ನಾಮಪತ್ರ ಪರಿಶೀಲನೆ ಮತ್ತು ಮತಗಳ ಎಣಿಕೆ ವಿಷಯಕ್ಕೆ ಬರುವುದಾದರೆ, ಇವು ಮುಖ್ಯವಾದವು ಹಾಗೂ ಇವುಗಳನ್ನು ಚುನಾವಣಾಧಿಕಾರಿಯೇ ಮಾಡಬೇಕು. ಚುನಾವಣಾಧಿಕಾರಿ ಅನಿವಾರ್ಯತೆಯಿಂದ ಗೈರುಹಾಜರಾದಾಗ ಸಹಾಯಕ ಚುನಾವಣಾಧಿಕಾರಿ ಮಾಡಬಹುದು.

**ಡಾ. ಅಂಬೇಡ್ಕರ್:** ಈ ಎರಡು ಮಗ್ಗುಲುಗಳಲ್ಲಿ ಅಗಾಧವಾದ ವ್ಯತ್ಯಾಸವಿದೆ.

**ಶ್ರೀ ಬರ್ಮನ್:** ಆದರೆ ನಾಮಪತ್ರ ಸ್ವೀಕಾರಕ್ಕೆ ಸಂಬಂಧಿಸಿದಂತೆ ನನ್ನ ಅರಿಕೆ ಹೀಗಿದೆ. ನಾಮ ಪತ್ರಗಳನ್ನು ಸಲ್ಲಿಸುವಿಕೆ ಎಂಬುದು ದಿನಗಟ್ಟಳೆ ನಡೆಯುತ್ತದೆ. ನಾಮಪತ್ರ ಸ್ವೀಕಾರ ಅಧಿಕಾರವನ್ನು ಚುನಾವಣಾಧಿಕಾರಿಗೆ ಮಾತ್ರ ಸೀಮಿತಗೊಳಿಸಿದಲ್ಲಿ ಅವನು ಇಪ್ಪತ್ತುನಾಲ್ಕು ಗಂಟೆಯೂ ಸ್ಥಳದಲ್ಲಿರಬೇಕಾಗುತ್ತದೆ. ಇದು ಯಾವಾಗಲೂ ಸಾಧ್ಯವಾಗದು.

**ಮಾನ್ಯ ಸದಸ್ಯರೊಬ್ಬರು:** ಅದೇನಿದ್ದರೂ ೧೧ ರಿಂದ ೩ ರ ವರೆಗೆ

**ಶ್ರೀ ಬರ್ಮನ್:** ಆದರೆ ಅದು ದಿನವಿಡೀ ನಡೆಯುತ್ತದೆ. ಸಹಾಯಕನೂ ನಾಮಪತ್ರಗಳನ್ನು ಸ್ವೀಕರಿಸುತ್ತಾನೆ. ನಾಮಪತ್ರ ಮತದಾರರ ಪಟ್ಟಿಯೊಂದಿಗೆ ಹೊಂದಿಕೆಯಾಗುತ್ತದೆಯೇ ಎಂಬುದನ್ನು ಮಾತ್ರ ಅವನು ಪರಿಶೀಲಿಸಬೇಕು; ಹಾಗೂ ಠೇವಣಿ ಇಡಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ನಿಗದಿತ ದಿನಾಂಕ ಚುನಾವಣಾಧಿಕಾರಿ ನಾಮಪತ್ರ ಪರಿಶೀಲಿಸುತ್ತಾರೆ.

**ಡಾ. ಅಂಬೇಡ್ಕರ್:** ಸಹಾಯಕ ಚುನಾವಣಾಧಿಕಾರಿಯಂಥ ಉನ್ನತ ಶ್ರೇಣಿಯ ಮುಖ್ಯ ಅಧಿಕಾರಿ ನಾಮಪತ್ರ ಸ್ವೀಕರಿಸುವುದಕ್ಕೆ ನನ್ನ ಮಿತ್ರರು ಏಕೆ ಆಕ್ಷೇಪಣೆ ವ್ಯಕ್ತಪಡಿಸುತ್ತಿದ್ದಾರೋ, ಹಾಗೆಯೇ ಸಹಾಯಕನೊಬ್ಬನಲ್ಲಿ ನಾಮಪತ್ರ ಸಲ್ಲಿಸಲು ಬಯಸುತ್ತಿದ್ದಾರೋ ನನಗೆ ಅರ್ಥವಾಗದು.

**ಶ್ರೀ ಸಂತಾನಂ:** ಇಲ್ಲಿ ಮುಖ್ಯ ವಿಷಯವೆಂದರೆ ಸಹಾಯಕ ಚುನಾವಣಾಧಿಕಾರಿ, ಚುನಾವಣಾಧಿಕಾರಿ ಅವಗಾಹನೆಗೆ ತರುವ ಪ್ರಸ್ತಾಪ ಮಾಡದೇ ನಾಮಪತ್ರವನ್ನು ಸ್ವೀಕರಿಸಬೇಕು ಎಂಬುದೇ ಆಗಿದೆ.

**ಮಾನ್ಯ ಉಪ ಸಭಾಪತಿ:** ಚುನಾವಣಾಧಿಕಾರಿ ಮಾತ್ರ ಕಾರ್ಯ ನಿರ್ವಹಿಸಬೇಕೆಂದು ಕಟ್ಟುಪಾಡು ಹೇಳುತ್ತದೆ. ಸಹಾಯಕ ಚುನಾವಣಾಧಿಕಾರಿಯಿಂದ ಮೂರು ಬಗೆಯ ಕೆಲಸ ಕಾರ್ಯಗಳನ್ನು ಹಿಂದೆಗೆದುಕೊಳ್ಳಲಾಗಿದೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಚುನಾವಣಾಧಿಕಾರಿಯೊಬ್ಬ ನಿರ್ವಹಿಸಬೇಕಾದ ಎಲ್ಲ ಕೆಲಸ ಕಾರ್ಯಗಳನ್ನೂ ಸಹಾಯಕ್ಕೆ ಚುನಾವಣಾಧಿಕಾರಿಯೂ ನಿರ್ವಹಿಸಬಹುದಾಗಿದೆ. ಅಸಾಧಾರಣ ಪರಿಸ್ಥಿತಿ ಹೊರತಾಗಿ ಈ ಕೆಳಗಿನ ಮೂರು ಕೆಲಸಗಳನ್ನು ಸಹಾಯಕ ಚುನಾವಣಾಧಿಕಾರಿ ನಿರ್ವಹಿಸುವಂತಿಲ್ಲ ಎಂದು ಕಟ್ಟುಪಾಡಿನ ಪೂರ್ವ ಭಾಗಗಳು ಹೇಳುತ್ತವೆ. ಉದಾಹರಣೆಗೆ, ಚುನಾವಣಾಧಿಕಾರಿಯೊಬ್ಬ ಅನಿರೀಕ್ಷಿತವಾಗಿ ಇಂಥ ಕೆಲಸಗಳ ನಿರ್ವಹಣೆಯಿಂದ ನಿರ್ಬಂಧಿತವಾಗುವುದು. ಈ ಮೂರು ಬಗೆಯಲ್ಲಿ ಒಂದನ್ನು ತೆಗೆಯಬೇಕೆಂಬುದು ಅವರ ಇಚ್ಛೆ. ಹಾಗಾದಲ್ಲಿ, ಅದೇನಿದ್ದರೂ ಪರಿಶೀಲನೆ ಮತ್ತು ಮತಗಳ ಎಣಿಕೆ ಸಂದರ್ಭದಲ್ಲಿ ಮಾತ್ರ ಸಹಾಯಕ ಚುನಾವಣಾಧಿಕಾರಿಯನ್ನು ಈ ಕೆಲಸಗಳಿಂದ ತಪ್ಪಿಸಬೇಕಾಗುತ್ತದೆ, ಅದೂ ಚುನಾವಣಾಧಿಕಾರಿಯನ್ನು ಈ ಕೆಲಸಗಳಿಂದ ತಪ್ಪಿಸದೇ ಇದ್ದರೆ. ಸ್ವೀಕಾರಕ್ಕೆ ಸಂಬಂಧಿಸಿದಂತೆ ಚುನಾವಣಾಧಿಕಾರಿ ಇದ್ದಾಗ್ಯೂ ಸಹಾಯಕ ಚುನಾವಣಾಧಿಕಾರಿ ಸ್ವೀಕರಿಸಬಹುದಾಗಿದೆ. ಅಥವಾ ಆತ ಸ್ಥಳದಲ್ಲಿ ಇಲ್ಲ ಎಂದಾಗ್ಯೂ ಅನಿರೀಕ್ಷಿತವಾಗಿ ತಪ್ಪಿಸಲಾಯಿತು ಎಂದು ನಾವು ಭಾವಿಸಲಾಗದು. ಯಾವುದೇ ಕ್ಷಣದಲ್ಲೂ ಆತ ಹಾಜರಾಗಬಹುದು. ಇದರಿಂದ ತೊಂದರೆ ಏನಿಲ್ಲ. ಪರಿಶೀಲನೆ ಹಾಗೂ ಮತಗಳ

ಎಣಿಕೆಗೆ ಸಂಬಂಧಿಸಿದಂತೆ ಚುನಾವಣಾಧಿಕಾರಿಯನ್ನು ಅನಿವಾರ್ಯತೆಯಿಂದ ತಪ್ಪಿಸಲಾಗಿದೆಯೇ, ತಡೆಯಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಸಹಾಯಕ ಚುನಾವಣಾಧಿಕಾರಿಯನ್ನು ಬಿಡಬೇಡಿ. ಪ್ರತಿಯಾಗಿ ಚುನಾವಣಾಧಿಕಾರಿಯ ಗುರುತರವಾದ ಕೆಲಸವನ್ನು ನಿರ್ವಹಿಸಲಿ. ನಾಮಪತ್ರ ಸ್ವೀಕಾರ ಏಕ ಕಾಲದಲ್ಲಿ ಆಗಬಹುದು. ಡೆಪ್ಯುಟಿ ಕಲೆಕ್ಟರ್ ಸಹಾಯಕ ಚುನಾವಣಾಧಿಕಾರಿಯಾಗಿದ್ದಲ್ಲಿ ನಾಮಪತ್ರ ಸ್ವೀಕರಿಸಲು ಕಲೆಕ್ಟರ್ ಇದ್ದಾನೆಂಬುದನ್ನು ಅವನು ತಿಳಿಸುತ್ತಾನೆ. ಸಾಮಾನ್ಯವಾಗಿ ನಡೆಯುವುದು ಹೀಗೇ. ನಾನಿದನ್ನೂ ಸಚಿವರಿಗೆ ಬಿಡುತ್ತೇನೆ.

**ಅಪರಾಹ್ನ ೧೨**

**ಡಾ. ಅಂಬೇಡ್ಕರ್:** ಕಟ್ಟುಪಾಡುಗಳಲ್ಲಿ ಯಾವುದೇ ಬದಲಾವಣೆಯ ಅಗತ್ಯವಿಲ್ಲ. ನಮಗೆಲ್ಲ ತಿಳಿದಂತೆ ಸಾಕಷ್ಟು ಗೋಲ್‌ಮಾಲ್ ನಡೆಯುತ್ತದೆ.

**ಶ್ರೀ ಭಾರತಿ:** ಸ್ವೀಕಾರ ಎಂದರೆ ನಿರ್ದಿಷ್ಟವಾಗಿ ಅದರ ಅರ್ಥ ಏನು ಎಂಬುದನ್ನು ತಿಳಿಯುವ ಅಪೇಕ್ಷೆ ನಮ್ಮದು. ಕೇವಲ ನಾಮಪತ್ರ ಸ್ವೀಕರಿಸುವುದೇ ಅಥವಾ ಆಖೈರಾಗಿ ಅದನ್ನು ಅಂಗೀಕರಿಸುವುದೇ? ಕೆಲವು ಪ್ರಕರಣಗಳಲ್ಲಿ ಅದು ಆಖೈರಾಗಿ ನಾಮಪತ್ರ ತಿರಸ್ಕರಿಸುವುದು ಎಂಬ ಅರ್ಥವನ್ನೂ ಕೊಡುತ್ತದೆ. ಅದು ಆಖೈರು ಅಂಗೀಕಾರವಲ್ಲ.

**ಉಪಸಭಾಧ್ಯಕ್ಷರು:** ಮೊದಲ ಹಂತದಲ್ಲಿ ತತ್‌ಕ್ಷಣದಲ್ಲಿಯೇ ಅದನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು ಮತ್ತು ಸ್ವೀಕರಿಸುವುದು ಎಂದಷ್ಟೇ ಇದಕ್ಕೆ ಅರ್ಥ. ಇದು ಅಂತಿಮ ಅಂಗೀಕಾರವೇನೂ ಅಲ್ಲ.

***ಕಲಂ–೨೨.**— (ಚುನಾವಣಾಧಿಕಾರಿಯ ಸಾಮಾನ್ಯ ಕೆಲಸ ಕಾರ್ಯಗಳು)

**ಶ್ರೀ ನಾಜಿರುದ್ದಿನ್ ಅಹ್ಮದ್:** ಈ ಸೂಚನೆಯನ್ನು ಮಂಡಿಸಲು ಅನುಮತಿಯನ್ನು ಕೋರುತ್ತಿದ್ದೇನೆ.

> ಇಪ್ಪತ್ತೆರಡನೇ ಕಲಂನಲ್ಲಿ "ಅದು ಸಾಮಾನ್ಯ ಕರ್ತವ್ಯವಾಗಿರುತ್ತದೆ" ಎನ್ನುವುದಕ್ಕೆ
> ಪರ್ಯಾಯವಾಗಿ "ಅದು ಕರ್ತವ್ಯವಾಗಿರುತ್ತದೆ" ಎಂಬುದನ್ನು ಸೇರಿಸತಕ್ಕದ್ದು.

**ಮಾನ್ಯ ಉಪ ಸಭಾಪತಿ:** ಮತಗಟ್ಟೆಯಲ್ಲಿ ಸರ್ವೋನ್ನತ ಅಧಿಕಾರಿಯೊಬ್ಬನಿರುತ್ತಾನೆ ಹಾಗೂ ಪತ್ರಗಳನ್ನು ಸ್ವೀಕರಿಸುವುದು ಚುನಾವಣಾಧಿಕಾರಿಯ ವಿಶೇಷ ಕರ್ತವ್ಯ. ಹೀಗೆ ಇವೆಲ್ಲ ವಿಶೇಷ ಕರ್ತವ್ಯಗಳು. ಇದೆಲ್ಲಕ್ಕೂ ವ್ಯವಸ್ಥೆಯ ಮಾಡುವುದು ಚುನಾವಣಾಧಿಕಾರಿಯ ಸಾಮಾನ್ಯ ಕೆಲಸ.

**ಶ್ರೀ ನಾಜರುದ್ದಿನ್ ಅಹ್ಮದ್:** "ಅದು ಕರ್ತವ್ಯವಾಗಿರುತ್ತದೆ" ಎಂದು ನಾವು ಹೇಳಿದಲ್ಲಿ ಅದು ಸಾಮಾನ್ಯ ಕರ್ತವ್ಯವಾಗಿರುತ್ತದೆ.

**ಡಾ. ಅಂಬೇಡ್ಕರ್:** "ಸಾಮಾನ್ಯ" ಎನ್ನುವ ಪದವನ್ನು ಉಳಿಸಿಕೊಳ್ಳುವುದರಿಂದ ಏನೂ ಹಾನಿಯಾಗದೆಂದು ನನ್ನ ಅನಿಸಿಕೆ. ವಿಷಯವನ್ನು ನಾನು ಪರಿಶೀಲಿಸಿದ್ದೇನೆ. ಈ ಕಲಂ ಇಂಗ್ಲಿಷ್ ಕಾನೂನಿನ ಪದಶಃ ನಕಲು. ಅದರಲ್ಲೂ "ಸಾಮಾನ್ಯ" ಎನ್ನುವ ಪ್ರಯೋಗವಿದೆ.

**ಮಾನ್ಯ ಡೆಪ್ಯುಟಿ ಸ್ಪೀಕರ್:** ಸೂಚನೆ ಏನೆಂದರೆ:

> "ಇಪ್ಪತ್ತೆರಡನೇ ಕಲಂನಲ್ಲಿ "ಅದು ಸಾಮಾನ್ಯ ಕರ್ತವ್ಯವಾಗಿರುತ್ತದೆ" ಎನ್ನುವುದಕ್ಕೆ
> ಪರ್ಯಾಯವಾಗಿ "ಅದು ಕರ್ತವ್ಯವಾಗಿರುತ್ತದೆ" ಎನ್ನುವುದನ್ನು ಸೇರಿಸತಕ್ಕದ್ದು.

ಸೂಚನೆ ತಿರಸ್ಕೃತವಾಗಿದೆ.

---

* P.D. ಸಂ. ೧೨, ಭಾಗ ೨, ೧೫ ಮೇ ೧೯೫೧, ಪು. ೮೭೯೦–೯೧.

**ಮಾನ್ಯ ಉಪ ಸಭಾಪತಿ:** ಸೂಚನೆ ಏನೆಂದರೆ

"ಆ ಕಲಂ ೨೨ ಮಸೂದೆಯ ಭಾಗವಾಗಿರುತ್ತದೆ"

ಸೂಚನೆ ಅಂಗೀಕೃತವಾಗಿದೆ.

**ಕಲಂ–೨೩.**— (ಮತಗಟ್ಟೆ ಇತ್ಯಾದಿಗಳ ಕಟ್ಟಳೆ – ಕಟ್ಟುಪಾಡುಗಳು)

**ಶ್ರೀ ವೆಂಕಟರಾಮನ್:** ಸಂಚಯಿತ ಪಟ್ಟಿಯಲ್ಲಿನ ತಿದ್ದುಪಡಿ ೨೪ ಕ್ಕೆ ಸಂಬಂಧಿಸಿದಂತೆ, ಅದನ್ನು ನಿಯಮಾವಳಿಯಲ್ಲಿ ಸೇರಿಸುವುದಾಗಿ ಮಾನ್ಯ ಸಚಿವರು ಹೇಳುತ್ತಾರೆಂದು ನಾನು ಭಾವಿಸಿದ್ದೆ.

**ಡಾ. ಅಂಬೇಡ್ಕರ್:** ನಿಯಮಾವಳಿಯಲ್ಲಿ ಇಂಥ ಕಟ್ಟಳೆ ಕಟ್ಟುಪಾಡು ಮಾಡಲಾಗುವುದು.

**ಶ್ರೀ ವೆಂಕಟರಾಮನ್:** ಹಾಗಿದ್ದಲ್ಲಿ ನಾನು ಅದನ್ನು ಸೂಚಿಸುವುದಿಲ್ಲ.

**ಡಾ. ಅಂಬೇಡ್ಕರ್:** ಸಂಚಿತ ಪಟ್ಟಿಯ ೨೯೫ ನೇ ತಿದ್ದುಪಡಿಯನ್ನೂ ನಿಯಮಾವಳಿ ರೂಪಿಸುವಾಗ ಪರಿಶೀಲಿಸಲಾಗುವುದು.

**ಶ್ರೀ ಜೆ.ಆರ್. ಕಪೂರ್:** ಸಂಚಿತ ಪಟ್ಟಿಯ ತಿದ್ದುಪಡಿ ೨೯೬ ರ ಎರಡನೇ ಭಾಗ ಕುರಿತಂತೆ ಹೇಳುವುದೇನೆಂದರೆ, ಅದನ್ನೂ ನಿಯಮಾವಳಿಯಲ್ಲಿ ಸೇರಿಸಲು ಸಚಿವರು ಸಿದ್ಧರಿರುವುದಾಗಿ ನನಗೆ ಗೊತ್ತಾದ್ದರಿಂದ ನಾನು ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಡಾ. ಅಂಬೇಡ್ಕರ್:** ಹೌದು.

**ಮಾನ್ಯ ಉಪಸಭಾಪತಿ:** ನಾನೀಗ ಕಲಮ್ಮನ್ನು ಸಭೆಯ ಮುಂದಿಡುತ್ತೇನೆ.

*__ಶ್ರೀ ಶಿವಚರಣ ಲಾಲ್:__ ನಾನು ಅರಿಕೆ ಮಾಡಲಿರುವ ಸಂಗತಿ ಇದು. ಸರ್ಕಾರ ಎಲ್ಲ ರೀತಿಯಲ್ಲೂ ತುಂಬಾ ಕಟ್ಟುನಿಟ್ಟಾಗಿರುವುದಾದಲ್ಲಿ ಅಥವಾ ರವಾನೆ ಸಾಧನ ನಿಷೇಧಿಸುವುದಾದಲ್ಲಿ ದೂರವನ್ನು ಕಡಿಮೆ ಮಾಡಬೇಕು. ಮತಗಟ್ಟೆಗಳು ಹೆಚ್ಚಾಗಿರಬೇಕು.

**ಡಾ. ಅಂಬೇಡ್ಕರ್:** ಐದು ಅಂಶಗಳನ್ನು ಎತ್ತಲಾಗಿದೆ. ಪ್ರತಿಯೊಂದಕ್ಕೂ ಉತ್ತರಿಸುವಂತೆ ನನಗೆ ಸೂಚಿಸಲಾಗಿದೆ. ಮೊದಲನೆಯ ಅಂಶವೆಂದರೆ ಮತಗಟ್ಟೆಗಳ ಸಂಖ್ಯೆ. ಒಂದು ನಿರ್ದಿಷ್ಟ ಮತಗಟ್ಟೆಗೆ ಇಂತಿಷ್ಟು ಮತದಾರರಗಿಂತ ಹೆಚ್ಚಿರಬಾರದು ಎನ್ನುವಂತೆ ಮತದಾರರ ಸಂಖ್ಯೆಯನ್ನು ಗೊತ್ತುಪಡಿಸಲು ಮತದಾರರನ್ನು ಒಟ್ಟುಗೂಡಿಸಲು ಸರ್ಕಾರ ವ್ಯವಸ್ಥೆ ಮಾಡುವುದೇ ಎಂಬುದನ್ನು ತಿಳಿಸುವಂತೆ ನನ್ನನ್ನು ಕೇಳಲಾಗಿದೆ. ಒಂದು ನಿರ್ದಿಷ್ಟ ಸಂಖ್ಯೆಗೆ ಬದ್ಧನಾಗುವುದು ನನಗೆ ಕಷ್ಟದ ವಿಚಾರ. ಆದರೆ ಮತದಾನ ಮಾಡಬಯಸುವ ಮತದಾರರು ದೂರದ ಕಾರಣದಿಂದಾಗಲೀ ಅಥವಾ ನೂಕುನುಗ್ಗಲು ಎಂಬ ಕಾರಣದಿಂದಾಗಲಿ ನಿರಾಶರಾಗಿ ಹಿಂದಿರುಗಲು ಆಸ್ಪದ ಕೊಡದಂತೆ ಮತಗಟ್ಟೆಗಳನ್ನು ವ್ಯವಸ್ಥೆ ಮಾಡಲಾಗುವುದು ಹಾಗೂ ದೂರದ ದೃಷ್ಟಿಯಿಂದ ಮತ್ತು ಮತದಾರರ ಸಂಖ್ಯೆಗೆ ಅನುಗುಣವಾಗಿ ಸರ್ಕಾರ ಮತಗಟ್ಟೆಗೆ ಸಂಖ್ಯೆಯನ್ನು ನಿಗದಿ ಮಾಡುವುದು ಎಂಬುದನ್ನು ಮಾತ್ರ ಹೇಳಲು ನನ್ನಿಂದ ಸಾಧ್ಯ.

ಎರಡನೆಯ ಪ್ರಶ್ನೆ ಮತಗಟ್ಟೆಗಳ ಸ್ಥಾಪನಾ ನಿರ್ಧಾರಕ್ಕೆ ಸಂಬಂಧಿಸಿದ್ದು. ಈ ವಿಷಯದಲ್ಲಿ ಚುನಾವಣಾ ಆಯುಕ್ತರದೇ ಆಖೈರು ಅಧಿಕಾರವೋ ಅಥವಾ ಆಸಕ್ತ ವ್ಯಕ್ತಿಗಳು ಚುನಾವಣಾ ಆಯುಕ್ತರಿಗೆ ಮನವಿ ಸಲ್ಲಿಸಲು ಅವಕಾಶವಿದೆಯೋ ಎಂಬುದನ್ನು ತಿಳಿಸುವಂತೆ ನನ್ನನ್ನು ಕೋರಲಾಗಿದೆ. ತಮಗೆ ಅನುಕೂಲವಾಗುವುದು ಅಥವಾ ಬೇರೆ ಅಭ್ಯರ್ಥಿಗಳಿಗಿಂತ ತಮಗೆ ಲಾಭವಾಗಲಿದೆ ಎಂಬ ದೃಷ್ಟಿಕೋನಗಳಿಂದ

---

* P.D. ಸಂ. ೧೨, ಭಾಗ ೨, ೧೫ ಮೇ ೧೯೫೧, ಪು. ೮೮೦೬–೯.

ಒಂದು ನಿರ್ದಿಷ್ಟ ಸ್ಥಳದಲ್ಲಿ ಮತಗಟ್ಟೆ ಸ್ಥಾಪಿಸುವಂತೆ ಕೋರುವುದರಲ್ಲಿ ಮತದಾರರು ಅಥವಾ ಅಭ್ಯರ್ಥಿಗಳು ಆಸಕ್ತರಾಗಿರುವುದು ಸ್ಪಷ್ಟವಾಗಿರುವ ವಿಚಾರ. ನಿಸ್ಸಂಶಯವಾಗಿಯೂ ಈ ವಿಷಯದಲ್ಲಿ ಅಭ್ಯರ್ಥಿ ಅಥವಾ ಮತದಾರರಿಗೆ ಆಖೈರು ನಿರ್ಧಾರಕ್ಕೆ ಅವಕಾಶವಿಲ್ಲ. ಆಖೈರು ಅಧಿಕಾರ ಚುನಾವಣಾ ಆಯುಕ್ತರದೇ ಆಗಿರಬೇಕು. ಅವರ ಕೈಯ್ಯಲ್ಲೇ ಇರಬೇಕು. ಚುನಾವಣಾ ಆಯುಕ್ತರು ಮತಗಟ್ಟೆ ಸ್ಥಾಪಿಸುವ ಮುನ್ನ, ಮತಗಟ್ಟೆಗಳ ಸ್ಥಾಪನೆ ವಿಚಾರದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವ ಮುನ್ನ, ಜನರ ಅಹವಾಲುಗಳನ್ನು ಆಹ್ವಾನಿಸಬೇಕು ಅಥವಾ ಜನರ ಜೊತೆ ಸಮಾಲೋಚಿಸಬೇಕು. ಇದಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಲು ನಾನು ಸಿದ್ಧನಿದ್ದೇನೆ.

ಬಳಿಕ ನಾನು, ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ಮೂರು ಅಂಶಗಳನ್ನು ಎತ್ತಿಕೊಳ್ಳುತ್ತೇನೆ. ಒಂದು ಸರ್ಕಾರ ಪ್ರತಿ ಮತದಾರನಿಗೂ ಓಟಿಂಗ್ ಕಾರ್ಡ್ ವಿತರಿಸುವುದು. ಎರಡನೆಯದು ಪ್ರತಿ ಮತದಾರನಿಗೂ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಚುನಾವಣಾ ಪ್ರಣಾಳಿಕೆ ಮೇಲಿನ ಸರ್ಕಾರದ ವಿವರಣೆಯನ್ನು ನೀಡುವುದಕ್ಕೆ ಸಂಬಂಧಿಸಿದ್ದು. ರಿಯಾಯಿತಿ ಆಧಾರದ ಮೇಲೆ ಮತದಾರರ ಪಟ್ಟಿಯನ್ನು ಒದಗಿಸಬೇಕೆಂಬುದು ಮೂರನೆಯ ಅಂಶ. ಇದು ಹಣಕಾಸನ್ನು ಒಳಗೊಳ್ಳುವುದರಿಂದ, ಖಚಿತವಾದ ಅಭಿಪ್ರಾಯ ಅಥವಾ ಭರವಸೆ ಮೂಲಕ ಸರ್ಕಾರವನ್ನು ಬದ್ಧವಾಗಿಸುವುದು ಅಸಾಧ್ಯ ಎಂಬುದನ್ನು ಸಭೆ ಮನಗಾಣಬಲ್ಲದು. ಆದರೆ ಸಂಪುಟದ ಸದಸ್ಯನಾಗಿ ಅಲ್ಲ, ಸದನದ ಸದಸ್ಯನಾಗಿ ಮಾತನಾಡುವಾಗ ಮೊದಲ ಎರಡು ಸಲಹೆಗಳ ಬಗ್ಗೆ ತುಂಬಾ ಸಹಾನುಭೂತಿ ಇದೆ: ಅವೆಂದರೆ ಓಟಿಂಗ್ ಕಾರ್ಡ್ ಮತ್ತು ಚುನಾವಣಾ ಪ್ರಣಾಳಿಕೆ ವಿತರಣೆ. ಸರ್ಕಾರ ಪ್ರತಿಯೊಬ್ಬ ಮತದಾರನಿಗೂ ಓಟಿಂಗ್ ಕಾರ್ಡ್ ವಿತರಿಸುವ ಕಾರ್ಯಕೈಗೊಂಡಲ್ಲಿ, ಒಂದಕ್ಕಿಂತ ಹೆಚ್ಚು ಮತದಾರರ ಪಟ್ಟಿಯನ್ನು ರಿಯಾಯಿತಿ ದರದಲ್ಲಿ ಒದಗಿಸಬೇಕೆಂಬುದು ಅಂಥ ತುರ್ತಿನ ವಿಷಯವೇನಲ್ಲ ಎಂದು ನನಗನ್ನಿಸುತ್ತದೆ. ಮತದಾರರ ಪಟ್ಟಿ ಪಡೆದ ನಂತರ ಅಭ್ಯರ್ಥಿ ಮಾಡಬಹುದಾದ ಕೆಲಸವೆಂದರೆ ಮತದಾರರನ್ನು ಸಂಪರ್ಕಿಸಿ ಅವರಿಗೆ ಅವರ ನಂಬರ್ ಹಾಗೂ ಯಾವ ಮತಗಟ್ಟೆಯಲ್ಲಿ ಚುನಾವಣೆ ನಡೆಯಲಿದೆ ಎಂಬುದನ್ನು ತಿಳಿಸುವುದು.

**ಡಾ. ದೇಶಮುಖ್:** ಪ್ರಚಾರಕರ ವಿಷಯ ಏನು?

**ಡಾ. ಅಂಬೇಡ್ಕರ್:** ಪ್ರತಿಯೊಬ್ಬ ಮತದಾರನ ಜೊತೆ ಅಭ್ಯರ್ಥಿಗೆ ಸಂಪರ್ಕ ಕಲ್ಪಿಸುವುದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಚಾರಕರನ್ನು ನೇಮಕ ಮಾಡಿಕೊಳ್ಳುವಂಥ ಅದೃಷ್ಟಶಾಲಿಯೂ ಭಾಗ್ಯಶಾಲಿಯೂ ಆದ ಅಭ್ಯರ್ಥಿಗಳು ನಮ್ಮಲ್ಲಿದ್ದಾರೆಯೇ? ನಿಜಕ್ಕೂ ನನಗೆ ತಿಳಿಯದು. ಇದೊಂದು ಅಸಾಧ್ಯವಾದ ಕೆಲಸ ಎಂಬಂತೆ ನನಗೆ ಕಾಣುತ್ತದೆ. ಅಭ್ಯರ್ಥಿ ತನ್ನ ಸ್ವಂತ ವ್ಯಕ್ತಿತ್ವ ನೆಚ್ಚಿಕೊಂಡೇ, ಸಾರ್ವಜನಿಕರಲ್ಲಿ ತಾನೆಷ್ಟು ಜನಪ್ರಿಯ ಎಂಬುದನ್ನು ಅವಲಂಬಿಸಿಯೇ ಇರಬೇಕಾಗುತ್ತದೆ. ಸಾರ್ವಜನಿಕರಲ್ಲಿ ಜನಪ್ರಿಯನಲ್ಲ ಎಂದಾದಲ್ಲಿ ಜಿಲ್ಲೆಯಲ್ಲಿ ಪ್ರತಿಯೊಬ್ಬರಿಗೂ ಪರಿಚಿತನಾದ ವ್ಯಕ್ತಿಯಾಗಲು ಸಾಧ್ಯವಾಗುವಂಥ, ಕುಪ್ರಸಿದ್ಧನಾಗುವಂಥ ಕೆಲಸ ಏನನ್ನಾದರೂ ಮಾಡಬೇಕಾಗುತ್ತದೆ. **(ಮಾನ್ಯ ಸದಸ್ಯರೊಬ್ಬರು:** ಕುಪ್ರಸಿದ್ಧ?) ಪ್ರಸಿದ್ಧ ಅಥವಾ ಕುಪ್ರಸಿದ್ಧ ಯಾವುದಾದರೂ ಆಗಬಹುದು.

ಪ್ರತಿ ಅಭ್ಯರ್ಥಿಯ ಬಳಿಯೂ ಮತದಾರರ ಪಟ್ಟಿಯ ಒಂದು ಕಟ್ಟು ಇರಬೇಕೆಂಬುದನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲೆ. ಅದಿಲ್ಲದೆ ಅವನಿಂದ ಕೆಲಸ ಮಾಡಲಾಗದು ಮತ್ತು ಅದರ ಬೆಲೆ ಕೊಳ್ಳಲಾರದಷ್ಟು ದುಬಾರಿಯಾಗಬಾರದು. ಇದು ಹಣಕಾಸನ್ನು ಒಳಗೊಳ್ಳುವ ಬಾಬತ್ತು ಹಾಗೂ ಸರ್ಕಾರದ ಜೊತೆ ಸಮಾಲೋಚಿಸದೇ ಈ ವಿಷಯದಲ್ಲಿ ಯಾವುದೇ ಭರವಸೆ ನೀಡಲಾರೆ ಎಂದು

ಆಗಲೇ ಹೇಳಿದ್ದೆ. ಆದರೂ ಈ ವೆಚ್ಚವನ್ನು ಸರ್ಕಾರ ಮತ್ತು ಅಭ್ಯರ್ಥಿ ಇಬ್ಬರೂ ಹಂಚಿಕೊಳ್ಳುವುದಕ್ಕೆ ವ್ಯಾಪಕವಾದ ಆಕ್ಷೇಪಣೆ ಇರಲಾರದೆಂದು ಶ್ರೀ ಕಪೂರ್ ಅವರು ಸಲಹೆ ಮಾಡಿರುವುದರಿಂದ ಈ ಜವಾಬ್ದಾರಿ ಪೂರೈಸುವ ಕಾರ್ಯಭಾರ ಕಡಿಮೆಯಾಗಿದೆ ಎಂದು ನನ್ನ ಭಾವನೆ. ಇದೊಂದು ನ್ಯಾಯೋಚಿತವಾದ ಹಾಗೂ ಕಾರ್ಯಸಾಧ್ಯವಾದ ಸಲಹೆ ಎಂದು ನನಗೆ ಅನ್ನಿಸುತ್ತಿದೆ. ಈ ವಿಷಯವನ್ನು ಸರ್ಕಾರದ ಮುಂದಿಟ್ಟು ತೀರ್ಮಾನ ಕೈಗೊಳ್ಳುವಂತೆ ಕೇಳಿಕೊಳ್ಳುತ್ತೇನೆ ಎಂದು ಸದನಕ್ಕೆ ಭರವಸೆ ನೀಡುತ್ತೇನೆ.

**ಡಾ. ದೇಶಮುಖ್:** ಮಸೂದೆ ಅಂಗೀಕಾರ ಆಗುವುದರೊಳಗೆ ಈ ನಿರ್ಧಾರವನ್ನು ಪ್ರಕಟಿಸಬಹುದೆ?

**ಡಾ. ಅಂಬೇಡ್ಕರ್:** ನೀವು ಚುನಾವಣೆಗೆ ಸ್ಪರ್ಧಿಸುವುದಕ್ಕೆ ಮುಂಚೆ ನಾನು ಅದನ್ನು ಪ್ರಕಟಿಸುತ್ತೇನೆ.

**ಮಾನ್ಯ ಉಪ ಸಭಾಪತಿ:** ಶಿಸ್ತು, ಶಾಂತಿ; ಶಿಸ್ತು ಶಾಂತಿ. ಸದಸ್ಯರ ಈ ಬಗೆಯ ಚಲನವಲನಕ್ಕೆ ನನ್ನ ತೀವ್ರ ಆಕ್ಷೇಪವಿದೆ. ಇಲ್ಲಿ ಸ್ವಲ್ಪಮಟ್ಟಿಗಾದರೂ ಸಭ್ಯತೆಯನ್ನು ಪಾಲಿಸಬೇಕಾಗುತ್ತದೆ.

ಸೂಚನೆ ಏನೆಂದರೆ:

"ಕಲಂ ೨೩ ಮಸೂದೆಯ ಭಾಗವಾಗುತ್ತದೆ"

ಸೂಚನೆ ಅಂಗೀಕೃತವಾಗಿದೆ.

ಕಲಂ ೨೩ ನ್ನು ಮಸೂದೆಗೆ ಸೇರಿಸಲಾಯಿತು.

**ಮಾನ್ಯ ಉಪ ಸಭಾಪತಿ:** ಮತ್ತೆ ೨೩ ಎ ಹೊಸ ಕಲಮ್ಮನ್ನು ಮಂಡಿಸಿಲ್ಲ. ೨೪ ನೇ ಕಲಮ್ಮನ್ನು ಎತ್ತಿಕೊಳ್ಳಲು ಸಮಯವಿದೆಯೆ?

**ಮಾನ್ಯ ಸದಸ್ಯರು:** ಇಲ್ಲ ಸ್ವಾಮಿ

ಅನಂತರ ಸದನವನ್ನು ೧೯೫೧ ರ ಮೇ ೧೬ ರಂದು ಬುಧವಾರ ಎಂಟೂವರೆ ಗಂಟೆಯವರೆಗೆ ಮುಂದೂಡಲಾಯಿತು.

## ಜನತಾ ಪ್ರಾತಿನಿಧ್ಯ – (ನಂ.೨) – ಮುಂದುವರಿದದ್ದು.

*__ಕಲಂ ೨೪.__— (ಮತಗಟ್ಟೆಗಳಿಗೆ ಚುನಾವಣಾಧಿಕಾರಿ)

**ಮಾನ್ಯ ಸಭಾಪತಿ:** ತಿದ್ದುಪಡಿ ಸೂಚಿಸಲಾಗಿದೆ.

> ೨೪ನೇ ಕಲಮ್ಮಿನ ಒಂದನೇ ಉಪವಿಧಿಯಲ್ಲಿ "ಚುನಾವಣೆಯಲ್ಲಿ ಅಥವಾ ಅದರ ಬಗ್ಗೆ" ಎಂಬ ಪದಗಳಿಗೆ ಪರ್ಯಾಯವಾಗಿ "ಉಲ್ಲೇಖಿತ ಚುನಾವಣೆಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**ಮಾನ್ಯ ಸಭಾಪತಿ:** ತಿದ್ದುಪಡಿಗಳಾದ ೨೯೯ ಮತ್ತು ೩೦೦ ಇವೆರಡನ್ನೂ ಮತಕ್ಕೆ ಹಾಕಲೆ?

**ಶ್ರೀ ನಾಸಿರುದ್ದಿನ್ ಅಹ್ಮದ್:** ೨೯೯ ನೇ ನಂಬರ್ ತಿದ್ದುಪಡಿ ಒಂದನ್ನು ಮಾತ್ರ ಮತಕ್ಕೆ ಹಾಕಬೇಕೆಂದು ನನ್ನ ಅಪೇಕ್ಷೆ. ಅದು ತಿರಸ್ಕೃತವಾದಲ್ಲಿ ೩೦೦ ನೇ ನಂಬರ್ ತಿದ್ದುಪಡಿ ಪ್ರಶ್ನೆ ಉದ್ಭವಿಸುವುದೇ ಇಲ್ಲ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ (ಮದರಾಸ್):** ತಿದ್ದುಪಡಿಯಲ್ಲಿರುವ "ಚುನಾವಣೆ ಬಗ್ಗೆ" ಈ ಪದಗಳಿಗೆ ಅವರ ಅರ್ಥ ಏನೆಂಬುದನ್ನು ವಿವರಿಸುವಂತೆ ಮಾನ್ಯ ಕಾನೂನು ಸಚಿವರನ್ನು ನಾನು ಕೇಳಬಹುದೆ?

**ಡಾ. ಅಂಬೇಡ್ಕರ್:** ಉತ್ತರ ಸರಳವಿದೆ. "ಚುನಾವಣೆ" ಪದವನ್ನು ಸಂಕುಚಿತ ಅರ್ಥದಲ್ಲಿ ಬಳಸಬಹುದು. ಅದು ಏನೆಂದರೆ ಮತದಾನ ನಡೆಯುತ್ತಿರುವಾಗ ಚುನಾವಣಾ ಕೆಲಸ ಎಂದು. ಮತ್ತೊಂದು ಸಂದರ್ಭದಲ್ಲಿ ಚುನಾವಣೆಗೆ ಹೆಚ್ಚಿನ ವ್ಯಾಪ್ತಿ ಇರಬಹುದು; ಚುನಾವಣೆಗೆ ಸಂಬಂಧಿಸಿದ ಇತರೆ ಕೆಲಸಗಳಿರಬಹುದು, ಅದೆಂದರೆ ಮತದಾನವಲ್ಲದೆ ಬೇರೆ ಕೆಲಸಗಳು. ಇವೆಲ್ಲ ನಿಖರವಾಗಿ ಇಂಗ್ಲಿಷ್ ಶಾಸನಗಳಿಂದ ತೆಗೆದುಕೊಂಡ ಪದಗಳು.

**ಪ್ರೊ. ರಂಗಾ (ಮದ್ರಾಸ್):** ನಾನು ಹೆಚ್ಚಿನ ಸ್ಪಷ್ಟೀಕರಣಕ್ಕೆ ಕೇಳಬಹುದೆ? ಸ್ಥಳೀಯ ಮಂಡಳಿಗಳ ಅಧ್ಯಕ್ಷರುಗಳು. ಉಪಾಧ್ಯಕ್ಷರುಗಳು ಹಾಗೂ ಸಚಿವರು, ಉಪಸಚಿವರುಗಳು ಬೇಕಾದಷ್ಟು ಜನ ಇದ್ದಾರೆ. ತಾವು ಅಭ್ಯರ್ಥಿಗಳಾಗಿ ಸ್ಪರ್ಧಿಸುವ ಕ್ಷೇತ್ರಗಳಲ್ಲಿ ಇಂಥವರಿಗೆ ತಮ್ಮ ಅಧೀನದಲ್ಲಿ ಕೆಲಸಮಾಡುವ ಜನರೂ ಹೆಚ್ಚಾಗಿರುತ್ತಾರೆ. ನೇರವಾಗಿ ಅವರ ಹತೋಟಿಯಲ್ಲಿರುವ ಇಂಥ ನೌಕರರನ್ನು ಚುನಾವಣಾಧಿಕಾರಿಗಳು ಈ ಕಟ್ಟಳೆಯನ್ವಯ ಮತಗಟ್ಟೆ ಅಧಿಕಾರಿಗಳಾಗಿ ನೇಮಿಸುವ ಮುಕ್ತ ಅವಕಾಶವಿದೆಯೆ?

**ಡಾ. ಅಂಬೇಡ್ಕರ್:** ಈ ನಿರ್ದಿಷ್ಟ ಕಲಮ್ಮಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆ ಉದ್ಭವಿಸುತ್ತದೆ ಎಂದು ನನಗನ್ನಿಸುವುದಿಲ್ಲ. ಚುನಾವಣೆಯಲ್ಲಿ ಅಥವಾ ಚುನಾವಣೆ ಸಂಬಂಧವಾಗಿ ಅಭ್ಯರ್ಥಿಯ ಉದ್ಯೋಗಿಯಾಗಿರುವ ಯಾವ ವ್ಯಕ್ತಿಯನ್ನೂ ಮತಗಟ್ಟೆ ಅಧಿಕಾರಿಯಾಗಿ ನೇಮಕಮಾಡಲಾಗದು ಎಂದಷ್ಟೇ ಅದು ಹೇಳುವುದು. ಈ ರೀತಿ ನೇಮಕಗೊಂಡಿರದ ಜಿಲ್ಲಾ ಸ್ಥಳೀಯ ಮಂಡಳಿ ಅಥವಾ ಮುನಿಸಿಪಲ್ ಬೋರ್ಡಿನ ನೌಕರರನ್ನು ಮತಗಟ್ಟೆ ಅಧಿಕಾರಿಯಾಗಿ ನೇಮಕ ಮಾಡುವ ಸ್ವಾತಂತ್ರ್ಯ ಅವರಿಗಿದೆ.

**ಡಾ. ಅಂಬೇಡ್ಕರ್:** ಚುನಾವಣಾಧಿಕಾರಿ ಸರ್ಕಾರಿ ಅಧಿಕಾರಿಯಾಗಿದ್ದು ಅವನು ಕರ್ತವ್ಯ ನಿರ್ವಹಣೆಯಲ್ಲಿ ವಿಫಲನಾದಲ್ಲಿ ಅವನ ಮೇಲೆ ಖಂಡಿತವಾಗಿಯೂ ಸರ್ಕಾರಿ ನೌಕರರ ಸೇವಾ ನಡಾವಳಿ ನಿಯಮಗಳನ್ವಯ ಅಥವಾ ದುರ್ನಡತೆಗೆ ಸಂಬಂಧಿಸಿದ ಬೇರೆ ಕಾನೂನಿನ್ವಯ ಕ್ರಮ ಕೈಗೊಳ್ಳಬಹುದು. ಆದ್ದರಿಂದ ಈ

---

* ಸಂಸದೀಯ ಚರ್ಚೆ ಸಂಪುಟ ೧೨, ಭಾಗ XII, ೧೯ ಮೇ ೧೯೫೧ ಪು: ೯೦೯೮–೯೧೦೫

ತಿದ್ದುಪಡಿ ಅಗತ್ಯವಿದೆ ಎಂದು ನನಗನ್ನಿಸುವುದಿಲ್ಲ.

**ಪ್ರೊ. ರಂಗಾ:** ಅಥವಾ ಈ ಶಾಸನದ ನಿಯಮಗಳ ಅಡಿಯಲ್ಲಿ.

**ಮಾನ್ಯ ಸ್ಪೀಕರ್:** ತಿದ್ದುಪಡಿಯನ್ನು ಸದನದ ಮುಂದೆ ಮಂಡಿಸಬೇಕೆಂದು ಮಾನ್ಯ ಸದಸ್ಯರು ಇಚ್ಛಿಸುತ್ತಾರೇನು?

**ಶ್ರೀ ಎಸ್.ಎನ್. ದಾಸ್:** ಇಲ್ಲ ಸ್ವಾಮಿ

**ಕಲಂ–೨೮.—** (ನಾಮ ಪತ್ರಗಳಿಗೆ ದಿನಗಳನ್ನು ಗೊತ್ತು ಮಾಡುವುದು)

**ಮಾನ್ಯ ಸಭಾಪತಿ:** ಮುದ್ರಿತ ದಾಖಲೆಯನ್ನೊಮ್ಮೆ ನೋಡೋಣ. ಮಾಸ್ಟರ್ ನಂದ ಲಾಲ್ ಗೈರು ಹಾಜರಾಗಿದ್ದಾರೆ. ಮಾನ್ಯ ಬಿ.ಕೆ. ದಾಸ್ ಅವರು?

**ಶ್ರೀ ಬಿ.ಕೆ.ದಾಸ್ (ಪಶ್ಚಿಮ ಬಂಗಾಳ):** ಸೂಚಿಸುತ್ತಿಲ್ಲ ಸ್ವಾಮಿ.

**ಮಾನ್ಯ ಸಭಾಪತಿ:** ಒಂದನೇ ನಂಬರ್ ಪೂರಕ ಪಟ್ಟಿಯಲ್ಲಿ ೨೮ ನೇ ಕಲಮ್ಮಿಗೆ ಹಲವಾರು ತಿದ್ದುಪಡಿಗಳಿವೆ. ಇಲ್ಲಿ ಉಪಸ್ಥಿತರಿರುವ ಮಾನ್ಯ ಸದಸ್ಯರುಗಳ ತಿದ್ದುಪಡಿಗಳನ್ನೆತ್ತಿಕೊಳ್ಳುವುದು ಸರಿಯಾದ ಮಾರ್ಗ ಎನಿಸುತ್ತದೆ. ಯಾರಾದರೂ ಸದಸ್ಯರ ತಿದ್ದುಪಡಿ ಬಿಟ್ಟುಹೋಗಿದ್ದಲ್ಲಿ ಅದನ್ನು ಎದ್ದು ನಿಂತು ಪ್ರಸ್ತಾಪಿಸಬೇಕಾದ್ದು ಅವರ ಕರ್ತವ್ಯ. ಒಂದನೇ ನಂಬರ್ ಪೂರಕ ಪಟ್ಟಿಯಲ್ಲಿರುವ ತಿದ್ದುಪಡಿ ನಂಬರ್ ೭೬. ಮಾನ್ಯ ನಾಜಿರುದ್ದಿನ್ ಅಹ್ಮದ್.

**ಶ್ರೀ ನಾಸ್ಸಿರುದ್ದಿನ್ ಅಹ್ಮದ್:** ಸೂಚಿಸುತ್ತಿಲ್ಲ.

**ಡಾ. ಅಂಬೇಡ್ಕರ್:** ಇದನ್ನು ಈಗಾಗಲೇ ಇತ್ಯರ್ಥಗೊಳಿಸಲಾಗಿದೆ. ಅಧ್ಯಾಯಗಳನ್ನು ಬದಲಿಸುವಂತೆ ಅವರು ಉದ್ದಕ್ಕೂ ಸೂಚಿಸುತ್ತಾ ಬಂದಿರುವ ತಿದ್ದುಪಡಿ ಇದು.

**ಮಾನ್ಯ ಸಭಾಪತಿ:** ಅದನ್ನು ಅವರು ಸೂಚಿಸುತ್ತಿಲ್ಲ.

**ಶ್ರೀ ಹುಸೇನ್ ಇಮಾಂ:** ಸ್ವಾಮಿ, ಸ್ಪೀಕರ್ ಅವರು ಸ್ವತಃ ನಿಂತಿರುವಾಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರೂ ಎದ್ದು ನಿಂತಿದ್ದಾರೆ.

**ಶ್ರೀ ಆರ್.ಕೆ. ಚೌಧುರಿ:** ಸಣ್ಣ ಪುಟ್ಟ ಚಿಳ್ಳೆ ಪಿಳ್ಳೆಗಳು ಮಾತ್ರ ಬಲೆಗೆ ಬೀಳುತ್ತವೆ.

**ಮಾನ್ಯ ಸಭಾಪತಿ:** ಇಲ್ಲಿ ಸಣ್ಣದು–ದೊಡ್ಡದು ಅಥವಾ ಚಿಳ್ಳೆ ಪಿಳ್ಳೆಗಳು ಎಂಬ ಪ್ರಶ್ನೆಯೇ ಇಲ್ಲ.

**ಡಾ. ಅಂಬೇಡ್ಕರ್:** ಮಾನ್ಯ ಚೌಧುರಿಯವರು ಇನ್ನಷ್ಟು ಗಹನವಾದ ವಿಷಯಗಳಲ್ಲಿ ತಮ್ಮ ಗಮನ ಹರಿಸಬಹುದೆಂದು ನನಗನ್ನಿಸುತ್ತದೆ.

**ಮಾನ್ಯ ಸಭಾಪತಿ:** ಈಗ ತೆಗೆದುಕೊಂಡಿರುವ ಸಮಯ ಹಾಗೂ ಎತ್ತಿರುವ ಕ್ರಿಯಾಲೋಪಗಳ ಹಿನ್ನೆಲೆಯನ್ನು ಗಮನಿಸಿದಾಗ, ತಿದ್ದುಪಡಿಗಳನ್ನು ಸೂಚಿಸಲಿಚ್ಛಿಸುವ ಮಾನ್ಯ ಸದಸ್ಯರುಗಳ ದಯವಿಟ್ಟು ಎದ್ದುನಿಲ್ಲುವಂತೆ ಹೇಳುವುದೇ ಸೂಕ್ತವೆಂದು ನನಗನ್ನಿಸುತ್ತಿದೆ. ಇನ್ನು ಯಾರೂ ಇಲ್ಲವೆ?

**ಅನೇಕ ಮಾನ್ಯ ಸದಸ್ಯರು:** ಇಲ್ಲ ಸ್ವಾಮಿ

**ಶ್ರೀ ನಾಸ್ಸಿರುದ್ದಿನ್ ಅಹ್ಮದ್:** ಈ ಸೂಚನೆಯನ್ನು ಮಂಡಿಸಲು ಅನುಮತಿಯನ್ನು ಕೋರುತ್ತಿದ್ದೇನೆ.

> ೨೮ ನೇ ಕಲಮ್ಮಿನ 'ಸಿ' ಭಾಗದಲ್ಲಿ "ಪರಿಶೀಲನಾ ದಿನಾಂಕ" ಎನ್ನುವ ಪದಗಳಿಗೆ ಪರ್ಯಾಯವಾಗಿ "ಪರಿಶೀಲನೆಗಾಗಿ ಗೊತ್ತುಪಡಿಸಿರುವ ದಿನಾಂಕ" ಎನ್ನುವ ಪದಗಳನ್ನು ಸೇರಿಸತಕ್ಕುದ್ದು.

ಈ ತಿದ್ದುಪಡಿಯನ್ನು ಸೂಚಿಸಲು ನನಗಿರುವ ಕಾರಣವೆಂದರೆ, "ಪರಿಶೀಲನಾ ದಿನಾಂಕ" ಎನ್ನುವುದು

ಕೊಂಚ ಸಡಿಲವಾಗಿದ್ದು ನಾನು ಸೂಚಿಸಿರುವ ಅಂದರೆ 'ಪರಿಶೀಲನೆಗಾಗಿ ಗೊತ್ತುಪಡಿಸಿರುವ ದಿನಾಂಕ' ಎನ್ನುವುದು ಹೆಚ್ಚು ನಿಖರವಾಗಿದೆ ಎನ್ನುವುದು.

**ಡಾ. ಅಂಬೇಡ್ಕರ್:** ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**ಮಾನ್ಯ ಸಭಾಪತಿ:** ಸೂಚನೆ ಏನೆಂದರೆ:

> ೨೮ ನೇ ಕಲಮ್ಮಿನ 'ಸಿ' ಭಾಗದಲ್ಲಿ "ಪರಿಶೀಲನಾ ದಿನಾಂಕ" ಎನ್ನುವ ಪದಗಳಿಗೆ ಪರ್ಯಾಯವಾಗಿ "ಪರಿಶೀಲನೆಗಾಗಿ ಗೊತ್ತುಪಡಿಸಿರುವ ದಿನಾಂಕ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

ಸೂಚನೆ ತಿರಸ್ಕೃತವಾಗಿದೆ.

**ಶ್ರೀ ನಾಸಿರುದ್ದಿನ್ ಅಹ್ಮದ್:** ಇದನ್ನು ಸೂಚಿಸಲು ಅನಮತಿಯನ್ನು ಕೋರುತ್ತಿದ್ದೇನೆ:

> ೨೮ ನೇ ಕಲಮ್ಮಿನ 'ಡಿ' ಭಾಗದಲ್ಲಿ "ಅಗತ್ಯವಾದಲ್ಲಿ" ಎನ್ನುವ ಪದಗಳಿಗೆ ಪರ್ಯಾಯವಾಗಿ "ಅಗತ್ಯ ಕಂಡುಬಂದಲ್ಲಿ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

ಈಗಿರುವ "ಅಗತ್ಯವಾದಲ್ಲಿ" ಪದಗಳು ಪೂರ್ವನಿದರ್ಶನದ ವಿದ್ಯಮಾನವನ್ನು ಸೂಚಿಸುತ್ತದೆ. ನಾನು ಸೂಚಿಸಿರುವ "ಅಗತ್ಯ ಕಂಡು ಬಂದಲ್ಲಿ" ಎನ್ನುವ ಪದಗಳು ಸಂದರ್ಭವನ್ನು ಧ್ವನಿಸುತ್ತದೆ.

**ಡಾ. ಅಂಬೇಡ್ಕರ್:** ಅದನ್ನು ನಾನು ಒಪ್ಪಿಕೊಳ್ಳುತ್ತಿಲ್ಲ.

**ಮಾನ್ಯ ಸಭಾಪತಿ:** ಸೂಚನೆ ಏನೆಂದರೆ:

> ೨೮ ನೇ ಕಲಮ್ಮಿನ 'ಡಿ' ಭಾಗದಲ್ಲಿ "ಅಗತ್ಯವಾದಲ್ಲಿ" ಎನ್ನುವ ಪದಗಳಿಗೆ ಪರ್ಯಾಯವಾಗಿ "ಅಗತ್ಯ ಕಂಡು ಬಂದಲ್ಲಿ" ಎನ್ನುವ ಪದಗಳನ್ನು ಸೇರಿಸತಕ್ಕುದ್ದು.

ಸೂಚನೆ ತಿರಸ್ಕೃತವಾಗಿದೆ.

*__ಶ್ರೀ ಮೀರನ್:__ ನಾನೀಗ ನನ್ನ ಹೆಸರಿನಲ್ಲಿರುವ ೩೨೮ ನೇ ನಂಬರಿನ ತಿದ್ದುಪಡಿಯನ್ನು ಮಾನ್ಯ ಕಾನೂನು ಸಚಿವರಿಗೆ ಒಪ್ಪಿತವಾಗುವಂತೆ ಸ್ವಲ್ಪ ಬದಲಾವಣೆಯೊಂದಿಗೆ ಸೂಚಿಸಲಿದ್ದೇನೆ.

ಅನುಮತಿ ಕೋರಿ ಸೂಚಿಸುತ್ತಿದ್ದೇನೆ:

೩೧ ನೇ ಕಲಮ್ಮಿನ ಐದನೇ ಉಪವಿಧಿಯ ನಂತರ ಈ ಕೆಳಗಿನ ಹೊಸ ಉಪ ವಿಧಿಯನ್ನು ಸೇರಿಸತಕ್ಕದ್ದು.

> "(೫ಎ) ನಾಮಪತ್ರ ಸಲ್ಲಿಸುವ ಕಾಲದಲ್ಲಿ, ತಾನು ಚುನಾವಣಾಧಿಕಾರಿಯಾಗಿರುವ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ನೋಂದಾಯಿತವಾಗಿಲ್ಲ ಎಂದು ಚುನಾವಣಾಧಿಕಾರಿಗೆ ಕಂಡುಬಂದಲ್ಲಿ ಆತ ಉಪವಿಧಿ (೫) ರ ಉದ್ದೇಶ ಸಾಧಕವಾಗಿ ಅಭ್ಯರ್ಥಿಯ ಹೆಸರನ್ನೊಳಗೊಂಡಿರುವ ಮತದಾರನ ಪಟ್ಟಿಯನ್ನು ಅಥವಾ ಇಂಥ ಪಟ್ಟಿಯಲ್ಲಿನ ಸಂಬಂಧಿಸಿದ ನಮೂದುಗಳ ಪ್ರಮಾಣೀಕೃತ ಪ್ರತಿಯನ್ನು ಒದಗಿಸುವಂತೆ ನಾಮಪತ್ರ ಸಲ್ಲಿಸುವ ವ್ಯಕ್ತಿಯನ್ನು ಕೇಳಬೇಕು"

ಈ ಬಗ್ಗೆ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ ಎನ್ನಿಸುತ್ತದೆ. ಏಕೆಂದರೆ ಮಾನ್ಯ ಸಚಿವರು ಈ ತಿದ್ದುಪಡಿಗೆ ಒಪ್ಪಿಗೆಯಿತ್ತಿದ್ದಾರೆ.

---

* ಸಂಸದೀಯ ಚರ್ಚೆ ಸಂಪುಟ ೧೨, ಭಾಗ II, ೧೯ ನೇ ಮೇ ೧೯೫೧ ಪು: ೯೧೧೪.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ಸೂಚಿಸಿಯಾಗಿದೆ.

**ಡಾ. ಅಂಬೇಡ್ಕರ್:** ಇಂಥದೇ ಪರಿಣಾಮದ ತಿದ್ದುಪಡಿಯೊಂದರ ಮಂಡನೆಯ ಪೂರ್ವ ಸೂಚನೆಯನ್ನು ನಾನು ಈಗಾಗಲೇ ನೀಡಿದ್ದೇನೆ. ಆದ್ದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಶ್ಯಾಮ ನಂದನ ಸಹಾಯ:** ಈ ಸಂಬಂಧವಾಗಿ ೫ ನೇ ಕಲಮ್ಮಿಗೆ ನನ್ನದೂ ಒಂದು ತಿದ್ದುಪಡಿ ಇತ್ತು. ನನ್ನ ಅಭಿಪ್ರಾಯವೆಂದರೆ, ಭಾರಿ ಗಾತ್ರದ ಮತದಾರರ ಪಟ್ಟಿಗಳನ್ನು ಒದಗಿಸಲು ತಗುಲುವ ಅಪಾರ ವೆಚ್ಚವನ್ನು ಅಭ್ಯರ್ಥಿ ಏಕೆ ಭರಿಸಬೇಕು? ಕ್ಷೇತ್ರದ ಮತದಾರರ ಪಟ್ಟಿಯಲ್ಲಿನ ಸಂಬಂಧಿಸಿದ ನಮೂದುಗಳ ಪ್ರತಿ ಏಕಾಗಬಾರದು?

**ಡಾ. ಅಂಬೇಡ್ಕರ್:** "ಅಥವಾ" ಅನ್ನುವ ಪದ ಅಲ್ಲಿದೆ.

**ಶ್ರೀ ಶ್ಯಾಮನಂದನ ಸಹಾಯ:** ಹೌದು. ನಾನು ವಿವರಿಸಿ ಹೇಳಲು ಪ್ರಯತ್ನಿಸುತ್ತಿದ್ದೇನೆ. ಈ ವಿಷಯದಲ್ಲಿ ಚುನಾವಣಾಧಿಕಾರಿಗೆ ಆಯ್ಕೆಯ ಅವಕಾಶವಿದೆ.

**ಶ್ರೀ ಆರ್.ಕೆ. ಚೌಧುರಿ:** ನನ್ನ ಮಾನ್ಯ ಮಿತ್ರರು ಸೂಚಿಸಿರುವ ತಿದ್ದುಪಡಿಗೆ ನನ್ನ ತೀವ್ರ ಆಕ್ಷೇಪಣೆ ಇದೆ. ವಿವಿಧೆಡೆಗಳಲ್ಲಿರುವ ಎಲ್ಲ ಚುನಾವಣಾಧಿಕಾರಿಗಳ ನಿರ್ಧಾರದಲ್ಲಿ ಏಕರೂಪತೆ ಸಾಧಿಸುವ ದೃಷ್ಟಿಯಿಂದ "ಕೇಳಬೇಕು" ಎನ್ನುವ ಪದಕ್ಕೆ ಪರ್ಯಾಯವಾಗಿ "ಕೇಳಬಹುದು" ಎನ್ನುವ ಪದ ಸೇರಿಸುವುದು ಉತ್ತಮ ಎಂದು ನನಗನಿಸುತ್ತಿದೆ.

**ಶ್ರೀ ಶಿವ ಚರಣ ಲಾಲ್ (ಉತ್ತರ ಪ್ರದೇಶ):** ಭೀತಿಗೆ ಆಸ್ಪದವಿಲ್ಲ ಎಂದು ನನಗನ್ನಿಸುತ್ತಿದೆ. ನನ್ನ ಮಾನ್ಯ ಮಿತ್ರರಾದ ಪ್ರೊ. ರಂಗಾ ಮತ್ತು ಶ್ರೀ ಶ್ಯಾಮನಂದನ ಸಹಾಯರು ಹೇಳಿರುವಂತೆ ಚುನಾವಣಾಧಿಕಾರಿ ನಾಮಪತ್ರಗಳನ್ನು ತಿದ್ದಲಾಗದು. ಏಕೆಂದರೆ, ತಾಂತ್ರಿಕ ದೋಷಗಳ ಆಧಾರದ ಮೇಲೆ ನಾಮಪತ್ರವನ್ನು ತಿರಸ್ಕರಿಸಲಾಗದೆಂದು ೩೪ ನೇ ಕಲಮ್ಮಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದ್ದರಿಂದ ತಿದ್ದುವನೋ ಇಲ್ಲವೋ, ತಾಂತ್ರಿಕ ದೋಷಗಳ ಆಧಾರದ ಮೇಲೆ ನಾಮಪತ್ರ ತಿರಸ್ಕರಿಸುವ ಅಧಿಕಾರ ಅವನಿಗಿಲ್ಲ.

**ಶ್ರೀ ರುದ್ರಪ್ಪ (ಮೈಸೂರು):** ಈ ನಾಮಪತ್ರಗಳಲ್ಲಿ ಹುಟ್ಟಿದ ದಿನಾಂಕವನ್ನು ಭರ್ತಿಮಾಡಬೇಕಾಗುತ್ತದೆ ಹಾಗೂ ಅಭ್ಯರ್ಥಿ ಗ್ರಾಮ ನಿವಾಸಿಯಾಗಿದ್ದಲ್ಲಿ ಅವನು ಹುಟ್ಟಿದ ದಿನಾಂಕ ಕೊಡಲಾರ.

**ಮಾನ್ಯ ಸಭಾಧ್ಯಕ್ಷರು:** ಹುಟ್ಟಿದ ದಿನಾಂಕ?

**ಶ್ರೀ ರುದ್ರಪ್ಪ:** ವಿಷಯಗಳಲ್ಲಿ ಅದೂ ಒಂದು. ನಾನೊಂದು ನಿದರ್ಶನ ನೀಡುತ್ತಿದ್ದೇನೆ. ಮೂವತ್ತು ಅಥವಾ ಇಪ್ಪತ್ತು ಎಂದು ಒಂದು ವಯೋಮಾನದ ಅಗತ್ಯವಿದೆ. ಎಷ್ಟು ಜನರಿಗೆ ಇದನ್ನು ಪತ್ತೆ ಮಾಡಿ ಸರಿಯಾದ ಹುಟ್ಟಿದ ದಿನಾಂಕ ಭರ್ತಿ ಮಾಡುವುದು ಸಾಧ್ಯ? ಅಗತ್ಯವಾದಲ್ಲಿ.... ಈ ಕಾರಕೂನಿಕೆ ತಪ್ಪುಗಳನ್ನು ಮತ್ತು ತಾಂತ್ರಿಕ ದೋಷಗಳನ್ನು ಸರಿಪಡಿಸುವ ಅವಕಾಶ ಚುನಾವಣಾಧಿಕಾರಿಗಿರಬೇಕು. ಇಂಥದೊಂದು ಅವಕಾಶ ಸೇರಿಸದೇ ಹೋದಲ್ಲಿ ಅನೇಕರಿಗೆ ತುಂಬಾ ಅನ್ಯಾಯವಾಗುವುದು ಹಾಗೂ ಇದರಿಂದ ಚುನಾವಣೆಯ ನಂತರ ಭಾರಿ ವಿವಾದಗಳು ಉದ್ಭವಿಸಬಹುದು. ಆದ್ದರಿಂದ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಹಾಗೂ ಚುನಾವಣೆ ಮತ್ತು ಸ್ವತಃ ಮತದಾರರ ಹಿತದೃಷ್ಟಿಯಿಂದ ಈ ಅವಕಾಶ ಅತ್ಯಗತ್ಯ.

**ಡಾ. ಅಂಬೇಡ್ಕರ್:** ಈ ಸೂಚನೆಯನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**ಶ್ರೀ ಶ್ಯಾಮನಂದನ ಸಹಾಯ:** ಹಾಗಿದ್ದಲ್ಲಿ ನಾನು ಅದನ್ನು ಹಿಂದೆಗೆದುಕೊಳ್ಳಲು ಇಷ್ಟಪಡುತ್ತೇನೆ.

ಅನುಮತಿ ಮೇರೆ ತಿದ್ದುಪಡಿಯನ್ನು ಹಿಂದೆಗೆದುಕೊಳ್ಳಲಾಯಿತು.

**ಶ್ರೀ ಶ್ಯಾಮನಂದನ ಸಹಾಯ:** ನನ್ನ ಹೆಸರಿನಲ್ಲಿ ಇನ್ನೊಂದು ತಿದ್ದುಪಡಿ ಇದೆ. (೧೩ ನೇ ನಂಬರ್ ಪೂರಕ ಪಟ್ಟಿಯಲ್ಲಿ ೧೪ ನೇ ನಂಬರಿನದು). ಇದೂ ಸಹ ಪ್ರಮೇಯವೊಂದರ ಸ್ಪಷ್ಟೀಕರಣದ ಪ್ರಯತ್ನ. ತಿದ್ದುಪಡಿ ಹೀಗಿದೆ:

> ೩೧ ನೇ ಕಲಮ್ಮಿನ ೩ ನೇ ಉಪ ವಿಧಿಯ ಮೊದಲ ಕಟ್ಟಳೆಯಲ್ಲಿ ೨ ನೇ ವಾಕ್ಯದಲ್ಲಿ ಬರುವ "ಅಭ್ಯರ್ಥಿ" ಎನ್ನುವ ಪದದ ನಂತರ "ಮೀಸಲು ಸ್ಥಾನಗಳಿಗಾಗಿ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

ಕಟ್ಟಳೆ ಈ ರೀತಿ ಇದೆ:

> "ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಸ್ಥಾನ ಮೀಸಲಾದ ಕ್ಷೇತ್ರವೊಂದರಲ್ಲಿ ನಾಮ ಪತ್ರದ ಜೊತೆ ಅಭ್ಯರ್ಥಿ ಸ್ಥಾನ ಮೀಸಲಾದ ಪರಿಶಿಷ್ಟಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದ ಸದಸ್ಯನೆಂದು ನಿಯಮಿತ ರೀತಿಯಲ್ಲಿ ದೃಢಪಡಿಸುವ ಪ್ರಮಾಣ ಪತ್ರ ಇರಬೇಕು. ಇದಿಲ್ಲದೆ ಅಭ್ಯರ್ಥಿ ಆ ಆಯ್ದ ಸ್ಥಾನಕ್ಕೆ ಅರ್ಹನೆಂದು ಭಾವಿಸಬಾರದು.

ಈಗ, ಕೆಲವೊಮ್ಮೆ ಚುನಾವಣಾಧಿಕಾರಿಗಳು ವಿಚಿತ್ರ ಅಭಿಪ್ರಾಯಗಳನ್ನು ಹೊಂದಿರುತ್ತಾರೆಂಬುದನ್ನು ನಮ್ಮ ಅನುಭವದಿಂದ ನಾವು ಕಂಡುಕೊಂಡಿದ್ದೇವೆ. ಇಲ್ಲವಾದಲ್ಲಿ ಈ ನಾಮಪತ್ರ ವಿಷಯಗಳಲ್ಲಿ ಅನೇಕ ತೊಂದರೆಗಳು ಉದ್ಭವಿಸುತ್ತಿರಲಿಲ್ಲ. ಹಾಗೂ ಇಷ್ಟೊಂದು ಚುನಾವಣಾ ತಕರಾರು ಅರ್ಜಿಗಳು, ಚುನಾವಣಾ ಮೊಕದ್ದಮೆಗಳು ಇರುತ್ತಿರಲಿಲ್ಲ. ಆದ್ದರಿಂದ "ಅಭ್ಯರ್ಥಿ" ಪದದ ನಂತರ "ಮೀಸಲು ಸ್ಥಾನಗಳಿಗಾಗಿ" ಎನ್ನುವ ಪದಗಳನ್ನು ಸೇರಿಸುವ ಮೂಲಕ ಈ ಪ್ರಮೇಯವನ್ನು ಸ್ಪಷ್ಟಪಡಿಸಲಿಚ್ಛಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಕಟ್ಟಳೆಯಲ್ಲಿ "ಆ ಸ್ಥಾನ ತುಂಬಲು" ಎನ್ನುವ ಪದಗಳನ್ನು ಮಾನ್ಯ ಸದಸ್ಯರು ಗಮನಿಸಿರುವರೆ?

**ಶ್ರೀ ಶ್ಯಾಮ ನಂದನ ಸಹಾಯ:** ಹೌದು. "ಅದಕ್ಕಾಗಿ ಸ್ಥಾನವನ್ನು ಹೀಗೆ ಮೀಸಲಿಡಲಾಗಿದೆ" ಎಂದೂ ಅದರಲ್ಲಿ ಹೇಳಲಾಗಿದೆ. ಇವೆಲ್ಲವನ್ನೂ ನಾನು ನೋಡಿದ್ದೇನೆ. ವಿಷಯವನ್ನು ಸ್ಪಷ್ಟೀಕರಿಸಲು ನಾನು ಸೇರ್ಪಡೆಯನ್ನು ಸೂಚಿಸುತ್ತಿದ್ದೇನೆ. ಏಕೆಂದರೆ ಎಲ್ಲೆಲ್ಲಿ ಮೀಸಲಾತಿ ಇದೆಯೋ ಅಲ್ಲಿ ಒಂದು ಮೀಸಲು ಸ್ಥಾನ, ಮತ್ತೊಂದು ಸಾರ್ವತ್ರಿಕ ಸ್ಥಾನ. ಆದ್ದರಿಂದ ಈ ಪದಗಳನ್ನು ಸೇರಿಸಿದಲ್ಲಿ ಮತ್ತಷ್ಟು ಸ್ಪಷ್ಟವಾಗುವುದೆಂದು ನನಗೆ ತೋರುತ್ತದೆ.

**ಡಾ. ಅಂಬೇಡ್ಕರ್:** ಸಂದಿಗ್ಧಾರ್ಥ ಇಲ್ಲ. ಆದ್ದರಿಂದ ಸ್ಪಷ್ಟೀಕರಣ ಅನಗತ್ಯ.

**ಶ್ರೀ ಶ್ಯಾಮ ನಂದನ ಸಹಾಯ:** ಹಾಗಿದ್ದಲ್ಲಿ ಅದಕ್ಕೆ ನಾನು ಆಗ್ರಹಪಡಿಸುವುದಿಲ್ಲ.

**ಪಂಡಿತ ಮುನೀಶ್ವರ ದತ್ ಉಪಾಧ್ಯಾಯ (ಉತ್ತರ ಪ್ರದೇಶ):** ಸಂಚಿತ ಪಟ್ಟಿಯಲ್ಲಿನ ನನ್ನ ೩೧೭ ನೇ ನಂಬರ್ ತಿದ್ದುಪಡಿಯನ್ನು ಸೂಚಿಸುವ ಇಚ್ಛೆ ನನಗಿಲ್ಲ. ಆದರೆ, ಮಾನ್ಯ ಸಚಿವರಿಗೆ ನಾನೊಂದು ಸಲಹೆ ನೀಡಬಯಸುತ್ತೇನೆ. ಅದನ್ನು ಅವರು ಒಪ್ಪಿಕೊಳ್ಳಬಹುದು.

ನನ್ನ ಅರಿಕೆ ಏನೆಂದರೆ, "೧೯೫೦ ರ ಜನತಾ ಪ್ರಾತಿನಿಧ್ಯ ಶಾಸನದ ೧೬ ನೇ ಕಲಂನಲ್ಲಿ ನಮೂದಿಸಲಾಗಿರುವ ಯಾವುದೇ ಅನರ್ಹತೆಗೆ ಒಳಪಡುವುದಿಲ್ಲವೋ" ಎಂಬ ವಾಕ್ಸರಣಿ ಈಗ ಆವಶ್ಯಕತೆಗೆ ಮೀರಿದ್ದು ಹಾಗೂ ನಿಶ್ಚಯವಾಗಿಯೂ ಅನಗತ್ಯವಾದದ್ದು.....ಅರ್ಥವನ್ನು ವೃದ್ಧಿಗೊಳಿಸದ ಇಷ್ಟೊಂದು

ಪದಗಳು ಹಾಗೂ ಅನೇಕ ವಾಕ್ಯಗಳನ್ನು ನಾವೇಕೆ ಇಟ್ಟುಕೊಳ್ಳಬೇಕು? ಇದೇ ನಾನು ಮಾಡಲಿಚ್ಛಿಸುವ ಅರಿಕೆ.

**ಡಾ. ಅಂಬೇಡ್ಕರ್:** ಇದೊಂದು ಮಿತವ್ಯಯ ಕ್ರಮ. ನನಗೆ ಅರ್ಥವಾಗುತ್ತೆ.

**ಪಂಡಿತ ಮುನೀಶ್ವರ ದತ್ ಉಪಾಧ್ಯಾಯ:** ವಾಸ್ತವಾಂಶವೆಂದರೆ ಈ ಪದಗಳು ನಿಶ್ಚಯವಾಗಿಯೂ ಅನಗತ್ಯ. ಏಕೆಂದರೆ ಆತ ಮತದಾರನಾಗಿದ್ದಲ್ಲಿ ಆ ರೀತಿಯಲ್ಲಿ ಅವನು ಅನರ್ಹನಾಗುವುದಿಲ್ಲ. ಏಕೆಂದರೆ ಅದು ಪ್ರಸ್ತಾಪಿಸಿರುವ ಕಲಂನಲ್ಲಿ ಹೇಳಲಾಗಿರುವ ಮತದಾರನ ಅರ್ಹತೆ, ಅದು ೧೯೫೦ ರ ಜನತಾ ಪ್ರಾತಿನಿಧ್ಯ ಶಾಸನದ ೧೬ ನೇ ಕಲಂ. ಆದ್ದರಿಂದ ಅದು ಶುದ್ಧಾಂಗವಾಗಿ ಅನಗತ್ಯ.

**ಡಾ. ಅಂಬೇಡ್ಕರ್:** ಸಂದಿಗ್ಧಾರ್ಥಕ್ಕಿಂತ ಆವಶ್ಯಕತೆ ಮೀರಿ ಇರುವುದು ಉತ್ತಮ.

**ಪಂಡಿತ ಮುನೀಶ್ವರದತ್ ಉಪಾಧ್ಯಾಯ:** ಯಾವುದೇ ರೀತಿಯ ಸಂದಿಗ್ಧಾರ್ಥವಿರುತ್ತದೆ ಎಂದು ನನಗನ್ನಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸಚಿವರು ಅದನ್ನೊಪ್ಪಿಕೊಳ್ಳುವುದಿಲ್ಲ.

***ಪಂಡಿತ ಮುನೀಶ್ವರ ದತ್ ಉಪಾಧ್ಯಾಯ:** ೩೧ ನೇ ಕಲಮ್ಮಿನ ೨ ನೇ ಉಪವಿಧಿಗೆ ಈಗಿರುವ ಕಟ್ಟಳೆಗೆ ಮುಂಚೆ ಈ ಕೆಳಗಿನ ಹೊಸ ಕಟ್ಟಳೆಯನ್ನು ಸೇರಿಸತಕ್ಕದ್ದು:

> "ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಯಾರ ಹೆಸರು ನೊಂದಾಯಿತವಾಗಿರುವುದೋ
> ಅಂಥವ್ಯಕ್ತಿ ಒಬ್ಬನೇ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ನಾಮಪತ್ರದಲ್ಲಿ ಸೂಚಕನಾಗಿರಲು
> ಅಥವಾ ಅನುಮೋದಕನಾಗಿರಲು ಸಮ್ಮತಿಸಿದ ಪಕ್ಷದಲ್ಲಿ"

ಈ ಅಂಶವನ್ನು ಕೊಟ್ಟಿಲ್ಲ. ಆತ ಒಂದು ನಾಮಪತ್ರಕ್ಕೆ ಸಹಿ ಹಾಕಿರಬಹುದು. ನಮೂದುಗಳ ಬಗ್ಗೆ ಕೆಲವು ಸಂಶಯಗಳಿರಬಹುದು. ಅದೇ ವ್ಯಕ್ತಿ ಅದೇ ಅಭ್ಯರ್ಥಿಯ ಸೂಚನಕಾರನಾಗಿ ಒಂದಕ್ಕಿಂತ ಹೆಚ್ಚು ನಾಮಪತ್ರ ಸಲ್ಲಿಸಬಹುದು. ಇದಕ್ಕೆ ಅವಕಾಶವಿರಲೇಬೇಕೆಂದು ನನಗನ್ನಿಸುತ್ತದೆ. ಎಲ್ಲೆಲ್ಲಿ ಚುನಾವಣಾ ಕಾಯಿದೆಗಳನ್ನು ರೂಪಿಸಲಾಗಿದೆಯೋ ಆ ಚುನಾವಣಾ ಕಾಯಿದೆಗಳಲ್ಲಿ ಇದಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದನ್ನು ಒಪ್ಪಿಕೊಳ್ಳಲು ಮಾನ್ಯ ಸಚಿವರಿಗೆ ಆಕ್ಷೇಪವಿರಲಾರದೆಂದು ನಾನು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್:** ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ಅದನ್ನು ಸದನದ ಮುಂದೆ ಇಡುತ್ತಿಲ್ಲ.

**ಶ್ರೀ ಎ.ಸಿ ಗುಹಾ (ಪಶ್ಚಿಮ ಬಂಗಾಳ):** ಈ ವಿಷಯದಲ್ಲಿ ನನಗೊಂದು ಸ್ಪಷ್ಟನೆಬೇಕು

**ಮಾನ್ಯ ಸಭಾಧ್ಯಕ್ಷರು:** ವಿಷಯ ಇತ್ಯರ್ಥಗೊಳಿಸಲಾಗಿದೆ. ತಿದ್ದುಪಡಿಯನ್ನು ಸೂಚಿಸಿಲ್ಲ.

**ಶ್ರೀ ಎ.ಸಿ.ಗುಹಾ:** ಒಬ್ಬ ವ್ಯಕ್ತಿ ಅದೇ ಅಭ್ಯರ್ಥಿಯ ಒಂದಕ್ಕಿಂತ ಹೆಚ್ಚು ನಾಮಪತ್ರಗಳಿಗೆ ಸಹಿ ಹಾಕಲಾಗದು ಎನ್ನುವುದು ಸರ್ಕಾರದ ಉದ್ದೇಶವೇ, ಹೇಗೆ? ಇದಕ್ಕೆ ನನಗೆ ಸ್ಪಷ್ಟೀಕರಣ ಬೇಕು.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿಯನ್ನು ಸೂಚಿಸಲಾಗಿಲ್ಲ. ಅದನ್ನು ಸದನದ ಮುಂದೆ ಇಟ್ಟಿಲ್ಲ.

**ಶ್ರೀ ಸೋನಾವಣೆ (ಬಾಂಬೆ):** ೩೧ ನೇ ಕಲಮ್ಮಿನ ೩ ನೇ ಉಪವಿಧಿಯ ಮೊದಲ ಕಟ್ಟಳೆಗೆ ಸಂಬಂಧಿಸಿದಂತೆ ನನಗೆ ಸ್ವಲ್ಪ ವಿವರಣೆ ಬೇಕಾಗಿದೆ. ಅದು ಹೀಗೆನ್ನುತ್ತದೆ:

---

* ಸಂಸದೀಯ ಚರ್ಚೆ ಸಂಪುಟ ೧೨, ಭಾಗ II, ೧೯ ನೇ ಮೇ ೧೯೫೧ ಪು: ೨೧೨೮–೨೯

> "ಅಭ್ಯರ್ಥಿಯ ನಾಮಪತ್ರದ ಜೊತೆ ಆತ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ಸದಸ್ಯನೆಂದು ಗೊತ್ತುಪಡಿಸಿದ ರೀತಿಯಲ್ಲಿ ದೃಢೀಕರಿಸುವ ಪ್ರಮಾಣ ಪತ್ರವೊಂದಿರಬೇಕು. ಇಲ್ಲದಿದ್ದಲ್ಲಿ........"

**ಡಾ. ಅಂಬೇಡ್ಕರ್:** ಇದನ್ನು ಈಗಾಗಲೇ ಚರ್ಚಿಸಲಾಗಿದೆ.

**"ಶ್ರೀ ಸೋನಾವಣೆ:** ನನಗೆ ಇನ್ನಷ್ಟು ವಿವರಣೆ ಬೇಕು. ಪರಿಶಿಷ್ಟ ಜಾತಿಯ ಅಭ್ಯರ್ಥಿಯ ನಾಮಕರಣಕ್ಕೆ ಸಂಬಂಧಿಸಿದಂತೆ. ಮೀಸಲು ಸ್ಥಾನ ಪ್ರಸಂಗದಲ್ಲಿ ಈ ದೃಢೀಕರಣ ಕಾರ್ಯವಿಧಾನ ಏನು ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ. "ಘೋಷಣೆಯನ್ನು ಗೊತ್ತುಪಡಿಸಿದ ರೀತಿಯಲ್ಲಿ ಧೃಢೀಕರಿಸಲಾಗಿದೆ" ಎಂದು ಇಲ್ಲಿ ಹೇಳಲಾಗಿದೆ. ನಿಯಮಗಳು ಕಾರ್ಯವಿಧಾನವನ್ನು ಗೊತ್ತುಪಡಿಸಿರಬಹುದು. ನನಗೆ ತಿಳಿದಂತೆ, ನಿಯಮಗಳನ್ನು ಸದನದ ಮುಂದೆ ಮಂಡಿಸುವುದಿಲ್ಲ. ನಾನು ಅಂಥ ಇಚ್ಛೆಯನ್ನು ವ್ಯಕ್ತಪಡಿಸಿದ್ದಾಗ್ಯೂ. ಆದ್ದರಿಂದ ದೃಢೀಕರಣ ವಿಧಾನವೇನು ಎಂಬುದನ್ನು ನಾವು ತಿಳಿಯಬಯಸುತ್ತೇವೆ. ಇಲ್ಲವಾದಲ್ಲಿ ನಮಗೆ ಬಹಳ ತ್ರಾಸವಾಗುವುದು. ಮ್ಯಾಜಿಸ್ಟ್ರೇಟರ ಮುಂದೆ ಹೋಗಿ ಪ್ರಮಾಣ ಪತ್ರಕ್ಕೆ ಸಹಿಹಾಕುವಂತೆ ನಮಗೆ ತಿಳಿಸಿದಲ್ಲಿ ಅದಕ್ಕೆ ಬಹಳಷ್ಟು ಸಮಯ ಹಿಡಿಯುತ್ತದೆ. ಸರಳ ಕಾರ್ಯವಿಧಾನವಿದ್ದಲ್ಲಿ, ದೃಷ್ಟಾಂತವಾಗಿ ಹೇಳುವುದಾದಲ್ಲಿ, ಡಾ. ಅಂಬೇಡ್ಕರ್ ಪರಿಶಿಷ್ಟ ಜಾತಿಯ ವರಿಷ್ಠರು ದೃಢೀಕರಣಕ್ಕೆ ನೇತಾರ ಅವರಿಂದ ಒಂದು ಪ್ರಮಾಣ ಪತ್ರ ತರುವುದು ಸಾಕಾದೀತು. ಅದು ಸ್ವೀಕಾರಾರ್ಹವಾಗಬೇಕು. ನಾವು ಒಬ್ಬ ದಳ್ಳಾಳಿಯ ಹತ್ತಿರ ಹೋಗಿ, ಅಲ್ಲಿ ಕಾಯುತ್ತಾ ನಿಂತು ಏನೆಲ್ಲ ಮಾಡುವಂತಾಗಬಾರದು. ಆ ರೀತಿ ನಮಗೆ ಹೇಳಬಾರದು. ಸ್ಥಳೀಯ ಶಾಂತಿಪಾಲಕ ನ್ಯಾಯಾಧೀಶನಿರುತ್ತಾನೆಂದಿಟ್ಟುಕೊಳ್ಳಿ. (ಜಸ್ಟೀಸ್ ಆಫ್ ಪೀಸ್) ವ್ಯಕ್ತಿಯೊಬ್ಬ ಪರಿಶಿಷ್ಟ ಜಾತಿಗೆ ಸೇರಿದವನೆಂದು ಆತ ಪ್ರಮಾಣ ಪತ್ರ ನೀಡಿದಲ್ಲಿ ಅಂಥ ಪ್ರಮಾಣ ಪತ್ರವನ್ನು ಒಪ್ಪಿಕೊಳ್ಳಬಹುದು. ಒಬ್ಬ ವ್ಯಕ್ತಿ ಕೊನೇ ಗಳಿಗೆಯಲ್ಲಿ ನಾಮಪತ್ರ ಸಲ್ಲಿಸಿ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಬಹುದು ಎಂದುಕೊಳ್ಳೋಣ. ಈ ಎಲ್ಲ ಕಾರ್ಯ ವಿಧಾನವನ್ನು ಅನುಸರಿಸಬೇಕೆಂದರೆ ಅದು ನಿಜಕ್ಕೂ ಅವನಿಗೆ ತ್ರಾಸದಾಯಕವೇ. ಆದ್ದರಿಂದ ಕಾರ್ಯವಿಧಾನವನ್ನು ಸರಳಗೊಳಿಸಬೇಕೆನ್ನುವ ದೃಷ್ಟಿಯಿಂದ, ಸಾಧಾರಣ ವಿಧಾನ ಅನುಸರಿಸುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಕಾನೂನು ಸಚಿವರಲ್ಲಿ ಮನವಿ ಮಾಡುತ್ತೇನೆ. ಕ್ಷೇತ್ರದ ಗೌರವಾನ್ವಿತ ವ್ಯಕ್ತಿ ಅಥವಾ ಶಾಂತಿಪಾಲಕ ನ್ಯಾಯಾಧೀಶ ಪ್ರಮಾಣ ಪತ್ರ ನೀಡಿದಲ್ಲಿ ಅದನ್ನು ಒಪ್ಪಿಕೊಳ್ಳಬೇಕು.

**ಶ್ರೀ ರಾಮಸ್ವಾಮಿ ನಾಯಿಡು (ಮದ್ರಾಸ್):** ೩೧ ನೇ ಕಲಮ್ಮಿನ ೩ ನೇ ಉಪವಿಧಿಯ ಎರಡನೆ ಕಟ್ಟಳೆಯ ಕೊನೆಯ ಭಾಗ ಹೀಗಿದೆ:

> "ಅಭ್ಯರ್ಥಿಯು ಆ ಜಿಲ್ಲೆಯ ಪರಿಶಿಷ್ಟ ವರ್ಗಕ್ಕೆ ಸೇರಿದ ಸದಸ್ಯನೆಂದು ಗೊತ್ತುಪಡಿಸುವ ರೀತಿಯಲ್ಲಿರುವ ದೃಢೀಕರಣ ಪತ್ರವನ್ನು ನಾಮಪತ್ರದ ಜೊತೆ ಲಗತ್ತಿಸಿರಬೇಕು. ಇಲ್ಲದೇ ಹೋದರೆ...."

"ಆ ಜಿಲ್ಲೆಯ" ಎನ್ನುವ ಪದದ ಅರ್ಥ ಅವನು ಆ ಜಿಲ್ಲೆಯ ನಿವಾಸಿಯಾಗಿರಬೇಕೆಂದೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಡಾ. ಅಂಬೇಡ್ಕರ್:** ಹೌದು: ಅದೇ ಅರ್ಥ.

**ಶ್ರೀ ರಾಮಸ್ವಾಮಿ ನಾಯಿಡು:** ಬೇರೆ ಜಿಲ್ಲೆಯ ನಿವಾಸಿಯೊಬ್ಬ ಆ ಜಿಲ್ಲೆಯ ಪರಿಶಿಷ್ಟ ವರ್ಗಕ್ಕೆ ಸೇರಿದವನಾದರೂ ಆತ ಆ ಕ್ಷೇತ್ರದಿಂದ ಸ್ಪರ್ಧಿಸಲು ಬಹಿಷ್ಕೃತನೆ?

**ಡಾ. ಅಂಬೇಡ್ಕರ್:** ಇಲ್ಲ, ಅದಕ್ಕೆ ಅವಕಾಶ ಕಲ್ಪಿಸಲಾಗಿದೆ.

*ಸಿ. **ಎಚ್ ರಣಬೀರ್ ಸಿಂಗ್:** (ಹಿಂದಿ ಭಾಷಣದ ಇಂಗ್ಲಿಷ್ ಅನುವಾದ).

ಸ್ವಾಮಿ ಅದರ ಬಗ್ಗೆ ನನಗೂ ಸಂದೇಹವೊಂದಿದೆ. ಅದಕ್ಕೆ ಸ್ಪಷ್ಟನೆ ಬೇಕು. ಅದರೊಳಗೊಂದು ಕಟ್ಟಳೆ ಇದೆ:

> "ಯಾವುದೇ ಒಬ್ಬ ವ್ಯಕ್ತಿ ೭ ನೇ ಪರಿಚ್ಛೇದದ ೧ ನೇ ಉಪ ವಿಭಾಗದ "ಎಫ್'
> ಕಟ್ಟಳೆಯಲ್ಲಿ ಪ್ರಸ್ತಾಪಿಸಿರುವ ಹುದ್ದೆಯಲ್ಲಿದ್ದು ವಜಾ ಆಗಿದ್ದ ಪಕ್ಷದಲ್ಲಿ ಹಾಗೂ
> ಐದು ವರ್ಷಗಳ ಅವಧಿಯಲ್ಲಿ....."

ಆಜಾದ್ ಹಿಂದ್ ಫೌಜ್‌ನ ಸಿಪಾಯಿಗಳು ಮತ್ತು ಅಧಿಕಾರಿಗಳಿಗೆ ಇದರಿಂದ ತೊಂದರೆಯಾಗದೆಂದು ನಾನು ಭಾವಿಸುತ್ತೇವೆ. ಈ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕು. ಈ ಕಟ್ಟಳೆ ಅವರಿಗೆ ನಿಷೇಧಾತ್ಮಕವೆ? ಈ ಕಟ್ಟಳೆ ಅವರನ್ನು ನಿಷೇಧಿಸುವುದಾದಲ್ಲಿ ಅವರು ಚುನಾವಣೆಯಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಗಳಿಸುವಂಥ ಬೇರೊಂದು ಕಟ್ಟಳೆ ಇರಬೇಕು.

**ಡಾ. ಅಂಬೇಡ್ಕರ್:** ಕೊನೆಯ ಭಾಷಣಕಾರರು ಏನು ಹೇಳಿದರೆಂಬುದು ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಒಬ್ಬ ಅಭ್ಯರ್ಥಿ ಪರಿಶಿಷ್ಟ ಜಾತಿಗೆ ಸೇರಿದವನೇ ಎಂಬುದನ್ನು ತಿಳಿಯಲು ಅನುಸರಿಸಬಹುದಾದ ಕಾರ್ಯ ವಿಧಾನಕ್ಕೆ ಸಂಬಂಧಿಸಿದ ೩ ನೇ ಉಪವಿಧಿಯ ಕಟ್ಟಳೆ ಕುರಿತು ಎತ್ತಿರುವ ವಿಷಯದ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಕಾನೂನಿನ ಅನ್ವಯ ಗೊತ್ತುಪಡಿಸಿರುವ ಕೆಲವೊಂದು ಅನುಕೂಲ ಪ್ರಯೋಜನಗಳನ್ನು ಪಡೆದುಕೊಳ್ಳುವ ಸಲುವಾಗಿ ಎಷ್ಟೊಂದು ಜನ ಈ ಪರಿಶಿಷ್ಟ ಜಾತಿ ಸದಸ್ಯತ್ವದ ಪರೀಕ್ಷೆ ದಾಟಿಕೊಂಡು ಮುಂದೆ ಹೋಗಲು ಪ್ರಯತ್ನಿಸುತ್ತಿದ್ದಾರೆ ಎಂಬ ಬಗ್ಗೆ ಈ ವಿಷಯ ಪ್ರಸ್ತಾಪಿಸಿದ ಮಾನ್ಯ ಸದಸ್ಯರಿಗೆ ಏನೂ ಅನುಭವವಿರಲಿಕ್ಕಿಲ್ಲ.

**ಶ್ರೀ ಶ್ಯಾಮಸುಂದರ ಸಹಾಯ:** ಹೆಚ್ಚಿನ ಸಂಖ್ಯೆಯಲ್ಲಿ ಪ್ರಯತ್ನಿಸುವ ಸಾಧ್ಯತೆ ಇದೆ.

**ಡಾ. ಅಂಬೇಡ್ಕರ್:** ಹೆಚ್ಚಿನ ಸಂಖ್ಯೆಯಲ್ಲಿ ಪ್ರಯತ್ನಿಸುವ ಸಾಧ್ಯತೆ ಇದೆ. ಸಂಪುಟದ ಸಚಿವನಾದ ನನಗೆ ಈ ಬಗ್ಗೆ ಸ್ವಲ್ಪ ಅನುಭವವಿದೆ; ಹೇಗೆ, ಯಾವ ರೀತಿ ಎಂಬುದರಲ್ಲಿ. ಸಿಖ್ಖರಿಗೆ ಮೀಸಲಾಗಿರುವ ಉದ್ಯೋಗ ಪಡೆಯಲು ಆರು ತಿಂಗಳ ಕಾಲ ಗಡ್ಡ ಬೆಳಸುತ್ತಾರೆ, ಸಿಖ್ಖರೆಂದು ಪರಿಚಯ ಮಾಡಿಕೊಂಡು ಹಿಂದೂ ಮಡಿಲಿಗೆ ವಾಪಸಾಗುತ್ತಾರೆ. ಆದುದರಿಂದ, ಮೀಸಲಾತಿಗೆ ಒಳಪಡುವ ವ್ಯಕ್ತಿ ತಾನು ನಿರ್ದಿಷ್ಟ ವರ್ಗಕ್ಕೆ ಸೇರಿದವನೆಂದು, ಮಾನ್ಯತೆ ಹೊಂದಿರುವ ಅಧಿಕಾರಿಗಳಿಂದ ಪ್ರಮಾಣಪತ್ರ ತರಬೇಕೆಂದು ಭಾರತ ಸರ್ಕಾರ ನಿಯಮ ಮಾಡಿತು. ಮೀಸಲಾದ ಈ ಸ್ಥಾನಗಳು ಪರಿಶಿಷ್ಟ ಜಾತಿ ಹೊರತು ಬೇರೆ ಯಾರಿಗೂ ದಕ್ಕದಂತೆ ಖಾತ್ರಿ ಪಡಿಸಲು ನಿಖರವಾದ ಕಾರ್ಯ ವಿಧಾನ ಏನು? ಇದರ ಬಗ್ಗೆ ಕಮೀಷನರ್ ಅವರ ಆಲೋಚನೆ ಏನಿರಬಹುದು ಎಂಬುದನ್ನು ನಾನು ಹೇಳಲಾರೆ. ಮೀಸಲು ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಇಚ್ಛಿಸುವ ವ್ಯಕ್ತಿ ಮ್ಯಾಜಿಸ್ಟ್ರೇಟ್ ಒಬ್ಬರಿಂದ ಪ್ರಮಾಣ ಪತ್ರ ತರಬೇಕು. ಈ ಮನುಷ್ಯ, ತಾನು ಪರಿಶಿಷ್ಟ ಜಾತಿಗೆ ಸೇರಿದವನೆಂದು ದೃಢೀಕರಿಸಿ ಮ್ಯಾಜಿಸ್ಟ್ರೇಟರ್ ಸಮ್ಮುಖದಲ್ಲಿ ಸಹಿ ಮಾಡಿದ ಅಫಿಡವಿಟ್ಟನ್ನು ಆಧರಿಸಿರಬೇಕು ಮ್ಯಾಜಿಸ್ಟ್ರೇಟರು ನೀಡುವ ಪ್ರಮಾಣಪತ್ರ. ಇಂಥದೊಂದು ಕಟ್ಟಳೆ ಮಾಡುವುದರಿಂದ ಹಾನಿಯೇನೂ ಆಗದು ಎಂಬುದೇ ಆಗಿನ ನನ್ನ ಆಲೋಚನೆ ಆಗಿದ್ದೀತು.

---

* ಸಂಸದೀಯ ಚರ್ಚೆ ಸಂಪುಟ ೧೨, ಭಾಗ II, ೧೯ ಮೇ, ೧೯೫೧ ಪು. ೯೧೩೦–೩೧

ಟಿ. ೪೧೯೩–೩೮೭.

ಇದೊಂದು ಪ್ರಯಾಸಕರವಾದ ಕಿರುಕುಳದ ಕಾರ್ಯ ಪ್ರಕ್ರಿಯೆ ಇದ್ದೀತು. ಆದರೆ ಆ ಸ್ಥಾನಕ್ಕೆ ಮತ್ತೊಬ್ಬ ಬರಲು ಆಸ್ಪದ ಮಾಡಿಕೊಡುವ ಕಿಂಡಿಗಳನ್ನು ಕಲ್ಪಿಸುವುದಕ್ಕಿಂತ ಇದೇ ಉತ್ತಮ ಎಂದು ನನಗನ್ನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಏನೆಂದರೆ:

"೩೧ ನೇ ಕಟ್ಟಳೆ, ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗಲಿದೆ"

ಸೂಚನೆ ಅಂಗೀಕೃತವಾಗಿದೆ.

೩೧ ನೇ ಕಟ್ಟಳೆಯನ್ನು, ತಿದ್ದುಪಡಿಯಾದಂತೆ ಮಸೂದೆಯಲ್ಲಿ ಸೇರಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ತಮ್ಮ ಸೂಚನೆಯನ್ನು ನಾನು ಸದನದ ಮುಂದಿಡಬೇಕೆಂದು ಮಾನ್ಯ ಸದಸ್ಯರು ಬಯಸುವರೆ?

**ಸಿ.ಎಚ್. ರಣಬೀರ್‌ಸಿಂಗ್:** ಮಾನ್ಯ ಸಚಿವರ ಪ್ರತಿಕ್ರಿಯೆಯನ್ನು ನಾನು ತಿಳಿಯಲಿಚ್ಛಿಸುತ್ತೇನೆ.

**ಡಾ. ಅಂಬೇಡ್ಕರ್:** ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**ಸಿ.ಎಚ್. ರಣಬೀರ್‌ಸಿಂಗ್:** ಹಾಗಿದ್ದಲ್ಲಿ ಅದನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಕೋರುತ್ತೇನೆ.

ಅನುಮತಿಯೊಂದಿಗೆ ತಿದ್ದುಪಡಿಯನ್ನು ಹಿಂದೆಗೆದುಕೊಳ್ಳಲಾಯಿತು.

೩೨ ನೇ ಕಲಮ್ಮನ್ನು, ತಿದ್ದುಪಡಿಯಾದಂತೆ, ಮಸೂದೆಗೆ ಸೇರಿಸಲಾಯಿತು.

೩೩ ನೇ ಕಲಮ್ಮನ್ನೂ ತಿದ್ದುಪಡಿಗೆ ಸೇರಿಸಲಾಯಿತು.

**ಕಲಂ–೩೪.**— (ನಾಮ ಪತ್ರಗಳ ಪರಿಶೀಲನೆ)

*__ಶ್ರೀ ಶ್ಯಾಮನಂದನ ಸಹಾಯ:__ ಈ ಕಲಮ್ಮಿಗೆ ನನ್ನದೊಂದು ತಿದ್ದುಪಡಿ ಇದೆ. ಅದು ೩ ನೇ ನಂಬರ್ ಪೂರಕಪಟ್ಟಿಯ ೨೨ ನೇ ನಂಬರಿನದು. ಅನುಮತಿ ಕೋರಿ ಸೂಚಿಸುತ್ತಿದ್ದೇನೆ:

೩೪ ನೇ ಕಲಮ್ಮಿನ ೨ ನೇ ಉಪವಿಧಿಯಲ್ಲಿ "ನಿರಾಕರಿಸು" ಎನ್ನುವ ಪದಕ್ಕೆ ಪರ್ಯಾಯವಾಗಿ "ತಿರಸ್ಕೃತ" ಎನ್ನುವುದನ್ನು ಸೇರಿಸತಕ್ಕದ್ದು.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ಸೂಚಿಸಲಾಗಿದೆ.

**ಡಾ. ಅಂಬೇಡ್ಕರ್:** ನನಗೆ ತಿಳಿಯದು ಅದು ಕರಡುದಾರನಿಗೆ ಸಂಬಂಧಿಸಿದ್ದು. "ನಿರಾಕರಣೆ"ಯನ್ನು ನಾಮ ನಿರ್ದೇಶನಕ್ಕೆ ಸಂಬಂಧಿಸಿದಂತೆಯೂ "ತಿರಸ್ಕೃತ" ವನ್ನು ನಾಮಪತ್ರಕ್ಕೆ ಸಂಬಂಧಿಸಿದಂತೆಯೂ ಕರಡುಕಾರರು ಬಳಸಿರಬೇಕು. ನನ್ನ ಮಿತ್ರರು ಇದನ್ನು ಅರ್ಥ ಮಾಡಿಕೊಳ್ಳಬೇಕು.

ಅವರು ಭೇದ–ವ್ಯತ್ಯಾಸಗಳ ತಾರತಮ್ಯ ತೋರಿದ್ದಾರೆ. ಕಲಮ್ಮುಗಳ ಉದ್ದಕ್ಕೂ ಈ ತಾರತಮ್ಯವನ್ನು ಉಳಿಸಿಕೊಳ್ಳಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿಯನ್ನು ಮತಕ್ಕೆ ಹಾಕಬೇಕೆಂದು ಮಾನ್ಯ ಸದಸ್ಯರು ಬಯಸುತ್ತಾರೆಯೆ?

**ಶ್ರೀ ಶ್ಯಾಮನಂದನ ಸಹಾಯ:** ಮಾತನಾಡಲಿಚ್ಛಿಸುವ ಬೇರೆ ಸದಸ್ಯರಿರಬಹುದು. ತಿದ್ದುಪಡಿ ಹಿಂತೆಗೆದುಕೊಳ್ಳಲು ಅನುಮತಿ ಕೋರುತ್ತೇನೆ.

ತಿದ್ದುಪಡಿಯನ್ನು ಅನುಮತಿಯೊಂದಿಗೆ ಹಿಂದೆಗೆದುಕೊಳ್ಳಲಾಯಿತು.

**__ಪಂಡಿತ ಕುಂಜ್ರು (ಉತ್ತರ ಪ್ರದೇಶ):__ ಅನುಮತಿ ಕೋರಿ ಸೂಚಿಸುತ್ತಿದ್ದೇನೆ:

---

* ಸಂಸದೀಯ ಚರ್ಚೆ ಸಂಪುಟ ೧೨, ಭಾಗ II, ೧೯ ಮೇ, ೧೯೫೧ ಪು. ೯೧೫೬–೫೭

** ಪ್ರಕರಣ: ಪುಟ ೯೧೫೮–೫೯

೩೪ ನೇ ಕಲಮ್ಮಿನ ೫ ನೇ ಉಪವಿಧಿಗೆ ಈ ಕೆಳಗಿನ ಕಟ್ಟಳೆಯನ್ನು ಸೇರಿಸತಕ್ಕದ್ದು:

"ಒಂದು ವೇಳೆ ಆಕ್ಷೇಪಣೆ ವ್ಯಕ್ತವಾದಲ್ಲಿ ಸಂಬಂಧಪಟ್ಟ ಅಭ್ಯರ್ಥಿಗೆ, ಮರುದಿನ ಆದರೆ ಅದರ ನಂತರ ಪರಿಶೀಲನೆಗೆ ನಿಗದಿಯಾದ ದಿನಕ್ಕೆ ಮೊದಲು ಆಕ್ಷೇಪಣೆ ಅಲ್ಲಗೆಳೆಯಲು ಅವಕಾಶ ನೀಡಬೇಕು. ಹಾಗೂ ಕಲಾಪವನ್ನು ಯಾವತ್ತಿಗೆ ಮುಂದೂಡಲಾಗಿದೆ ಎಂಬ ಬಗ್ಗೆ ಚುನಾವಣಾಧಿಕಾರಿ ತನ್ನ ನಿರ್ಧಾರವನ್ನು ದಾಖಲಿಸಬೇಕು".

**ಶ್ರೀ ಸೋನಾವಣೆ:** ಒಂದು ಕ್ರಿಯಾಲೋಪದ ಮೇರೆ ಈ ಸದನದ ಸದಸ್ಯರಿಗೆ ಮಾನ್ಯ ಸದಸ್ಯರು ಪೂರ್ವ ಸೂಚನೆ ನೀಡಿಲ್ಲ. ಸಭಾಧ್ಯಕ್ಷರು ಈ ಮೊದಲು ಅದನ್ನು ತಿಳಿಸಿಯೂ ಇಲ್ಲ. ಅನಿರೀಕ್ಷಿತಗಳಿಂದ ಸಭೆಯನ್ನು ಚಕಿತಗೊಳಿಸಲಾಗದು. ಈ ಹಂತದಲ್ಲಿ ಸೂಚಿಸಲಾದ ಈ ತಿದ್ದುಪಡಿ ಅಂಗೀಕಾರಾರ್ಹವೆ?

**ಪಂಡಿತ ಕುಂಜ್ರು:** ಐದನೆ ಉಪ ವಿಧಿಗೆ ಅಗತ್ಯವಿರುವುದೆಂದರೆ:

**ಡಾ. ಅಂಬೇಡ್ಕರ್:** ಕಲಾಪವನ್ನು ಸಂಕ್ಷಿಪ್ತಗೊಳಿಸಲು ನಾನು ಹೇಳುವುದೆಂದರೆ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಸಂಬಂಧಪಟ್ಟ ಮಾನ್ಯ ಸಚಿವರು ತಿದ್ದುಪಡಿಯನ್ನು ಒಪ್ಪಿಕೊಳ್ಳಲಿದ್ದಾರೆ.

*__ಪಂಡಿತ ಮುನೀಶ್ವರ ದತ್ ಉಪಾಧ್ಯಾಯ:__ ಮಾನ್ಯ ಸದಸ್ಯರು ಕೆಲವರು ವ್ಯಕ್ತಪಡಿಸಿದ ಆಕ್ಷೇಪಣೆಯನ್ನು ನಾನು ಮತ್ತೆ ಹೇಳುವುದಿಲ್ಲ. ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಿಂದ ಉದ್ಭವಿಸಬಹುದಾದ ತೊಂದರೆಗಳ ದೃಷ್ಟಿಯಿಂದ ನನ್ನ ಸಲಹೆ ಏನೆಂದರೆ ಮುದ್ರಿತ ಪಟ್ಟಿಯಲ್ಲಿರುವ ೩೪೮ ನೇ ನಂಬರಿನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂಬುದು, ಅಂದರೆ "ಎರಡನೆಯ ದಿನದ ನಂತರವೂ" ಎನ್ನುವ ಪದಗಳನ್ನು "ಕಲಾಪಗಳ ಮುಂದೂಡಿಕೆ" ಪದಗಳ ನಂತರ ಸೇರಿಸತಕ್ಕದ್ದು. ಇದರಿಂದ ಎಲ್ಲ ತೊಂದರೆಗಳೂ ಪರಿಹಾರವಾಗುತ್ತದೆ.

"೨೮ ನೇ ಪರಿಚ್ಛೇದದ 'ಬಿ' ಉಪವಿಧಿಯ ಅನ್ವಯ ಚುನಾವಣಾಧಿಕಾರಿ ಈ ಸಂಬಂಧ ಗೊತ್ತುಪಡಿಸಿದಂದು ಪರಿಶೀಲನೆ ನಡೆಸಬೇಕು ಹಾಗೂ ಕಲಾಪವನ್ನು ಎರಡನೆಯ ದಿವಸಕ್ಕೂ ಮೀರಿ ಮುಂದೂಡಬಾರದು. ವಿನಾಯಿಸಿ....."

ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಲ್ಲಿ ಯಾವುದೇ ರೀತಿಯ ತೊಂದರೆ ಉದ್ಭವಿಸುವುದೆಂದು ನನಗನ್ನಿಸುವುದಿಲ್ಲ.

**ಡಾ. ಅಂಬೇಡ್ಕರ್:** ಇದಲ್ಲದೆ, ಇನ್ನೊಂದು ಪ್ರಶ್ನೆಯಿದೆ. ಉತ್ತರ ಪ್ರದೇಶ ಮತ್ತು ಇನ್ನುಳಿದ ಪ್ರಾಂತ್ಯಗಳಲ್ಲಿ ಹಾಲಿ ಇರುವ ನಿಯಮಗಳಲ್ಲಿ ತಿದ್ದುಪಡಿಯಲ್ಲಿ ಸೂಚಿಸಲಾಗಿರುವಂಥ ನಿಯಮ ಉಂಟೆ? ಅದರ ಸ್ವಂತ ಯೋಗ್ಯತಾನುಸಾರ ಈ ವಿಷಯವನ್ನು ಸದನ ಪ್ರತ್ಯೇಕವಾಗಿ ಪರಿಶೀಲಿಸುವುದು ಸಾಧ್ಯ ಎಂದು ನನಗೆ ತೋರುತ್ತದೆ. ಚುನಾವಣಾಧಿಕಾರಿಯ ಕೆಲಸ ಕಾರ್ಯಗಳೇನು?

೨೪ ನೇ ಕಲಮ್ಮಿನ ೨ನೇ ಉಪವಿಧಿಯನ್ನು ಜಾರಿಗೊಳಿಸುವುದು. (ಎ) ನಿಂದ (ಇ) ವರೆಗಿನ ಉಪವಿಧಿಗಳಲ್ಲಿ ಹೇಳಲಾಗಿರುವ ವಿಷಯಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳುವುದು ಅವನ ಕೆಲಸ. ಒಬ್ಬ ಅಭ್ಯರ್ಥಿ ಇನ್ನೊಬ್ಬನ ವಿರುದ್ಧ ಎತ್ತಬಹುದಾದ ಸಂಭವನೀಯ ಆಕ್ಷೇಪಣೆಗಳು ಇವು. ಒಬ್ಬ ಅಭ್ಯರ್ಥಿ,

---

* ಸಂಸದೀಯ ಚರ್ಚೆ ಸಂಪುಟ ೧೨, ಭಾಗ II, ೧೯ ಮೇ, ೧೯೫೧ ಪು. ೯೧೬೩–೬೬

ಉದಾಹರಣೆಗೆ, (ಬಿ) ಅನ್ವಯ ಆಕ್ಷೇಪಣೆಯೊಂದನ್ನು ಎದುರಿಸಬೇಕಾಗಿ ಬಂತು ಎಂದಿಟ್ಟುಕೊಳ್ಳೋಣ. ಸಂವಿಧಾನ ಅಥವಾ ಈ ಶಾಸನದನ್ವಯ ಭರ್ತಿ ಮಾಡಬೇಕಾಗಿರುವ ಸ್ಥಾನಕ್ಕೆ ಆಯ್ಕೆ ಹೊಂದಲು ಅಭ್ಯರ್ಥಿ ಅನರ್ಹ ಎಂಬುದು ಆಕ್ಷೇಪಣೆ ಇದ್ದೀತು. ಅಥವಾ (ಇ) ಅನ್ವಯ ಅಭ್ಯರ್ಥಿಯ ಸಹಿ, ಇಲ್ಲವೇ ಸೂಚಕನ ಅಥವಾ ಅನುಮೋದಕನ ಸಹಿ ಅಸಲಿಯಲ್ಲ ಅಥವಾ ಮೋಸದಿಂದ ಪಡೆಯಲಾಗಿದೆ ಎನ್ನುವಂಥ ಆಕ್ಷೇಪಣೆಯನ್ನು ಆತ ಎದುರಿಸಬೇಕಾದೀತು. ಈ ಆರೋಪಗಳಿಗೆ ಆಗಲೇ ಅಲ್ಲೇ ಉತ್ತರಕೊಡುವುದು ಸ್ವಲ್ಪ ಕಷ್ಟ ಎಂದೇ ನನಗೆ ತೋರುತ್ತದೆ. ಆದ್ದರಿಂದ ಅಭ್ಯರ್ಥಿ ಲಿಖಿತ ಸಾಕ್ಷಿ ಪುರಾವೆಗಳನ್ನು ಒದಗಿಸಲು ಅಥವಾ ಬಾಯಿಮಾತಿನ ಸಾಕ್ಷ್ಯದ ಮೂಲಕ ಆಪಾದನೆಗಳನ್ನು ನಿರಾಕರಿಸಲು, ಸಾಕ್ಷಿದಾರರನ್ನು ಕರೆತರಲು ನೀತಿ–ನ್ಯಾಯ ನಡಾವಳಿಯಂತೆ ಕಾಲಾವಕಾಶ ನೀಡಬೇಕಾಗುತ್ತದೆ. ಇದೆಲ್ಲದರ ಆಧಾರದ ಮೇಲೆ ತಿದ್ದುಪಡಿ ಒಪ್ಪಿಕೊಳ್ಳುವುದು ನನ್ನ ಕರ್ತವ್ಯವೆನಿಸಿತು. ಇಲ್ಲವಾದಲ್ಲಿ ಒಬ್ಬ ಅಭ್ಯರ್ಥಿ ಇನ್ನೊಬ್ಬನಿಗೆ ಆಪಾದನೆ ನಿರಾಕರಿಸಲೂ ಕಾಲಾವಕಾಶ ಕೊಡದೆ ದಂಗು ಬಡಿಸಲು ಅನುಮತಿ ಕೊಟ್ಟಂತಾಗುತ್ತದೆ. ಈ ತಿದ್ದುಪಡಿ ನನ್ನ ಮನ ಸೆಳೆದಿದೆ. ಎಲ್ಲರ ಮನ ಸೆಳೆಯಲೂ ಬಹುದು...

**ಶ್ರೀ ಸಂತಾನಂ:** ಆಕ್ಷೇಪಣೆಗಳಿಲ್ಲದಂಥ ನಾಮಪತ್ರಗಳನ್ನು ಅಂಗೀಕರಿಸುವುದು ಚುನಾವಣಾಧಿಕಾರಿಗೆ ಸಾಧ್ಯವಾದೀತೆ? ಆತ ಏಕ ಕಾಲದಲ್ಲಿ ಎಲ್ಲ ನಾಮಪತ್ರಗಳ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗುತ್ತದೆ.

**ಡಾ. ಅಂಬೇಡ್ಕರ್:** ಕೆಲವು ನಾಮಪತ್ರಗಳನ್ನು ಅಂಗೀಕರಿಸುವುದರಲ್ಲಿ ಅಧಿಕಾರಿಗೆ ಅವಸರ ಏಕಿರಬೇಕು? ಮುಂದೂಡಿಕೆ ನಂತರದ ಆಖೈರು ದಿನದಂದು ಅವನು ನಾಮ ಪತ್ರಗಳನ್ನು ಅಂಗೀಕರಿಸಬೇಕು. ಏನೂ ಅಪಾಯವಿಲ್ಲ. ಆಖೈರು ದಿನಾಂಕದಂದು ಅವನು ಆ ಕೆಲಸ ಮಾಡುತ್ತಾನೆ. ತಿದ್ದುಪಡಿ ಹೇಳುವುದೂ ಇದನ್ನೇ. ತಿದ್ದುಪಡಿ ಸ್ಪಷ್ಟವಾಗಿದೆ. ಕಲಾಪವನ್ನು ಯಾವ ತಾರೀಕಿಗೆ ಮುಂದೂಡಲಾಗಿದೆಯೋ ಅಂದು ಚುನಾವಣಾಧಿಕಾರಿ ತನ್ನ ನಿರ್ಧಾರವನ್ನು ದಾಖಲಿಸಬೇಕು. ನಿರ್ಧಾರವನ್ನು ಮುಂದಕ್ಕೆ ಹಾಕುವಂಥ ವಿವೇಚನಾಯುಕ್ತ ಅಧಿಕಾರ ಚುನಾವಣಾಧಿಕಾರಿಗಿಲ್ಲ.

**ಶ್ರೀ ಸಂತಾನಂ:** ಮುಂದೂಡಿದ ದಿನಾಂಕದಂದೂ ಆಕ್ಷೇಪಣೆಗಳನ್ನು ಎತ್ತಿಕೊಳ್ಳಲಾಗದೆ? ಇದನ್ನು ಸ್ಪಷ್ಟಪಡಿಸಬೇಕು. ಆ ದಿವಸ ಕೆಲವು ಆಕ್ಷೇಪಣೆಗಳನ್ನು ಎತ್ತಿದರು ಎಂದಿಟ್ಟುಕೊಳ್ಳೋಣ.

**ಡಾ. ಅಂಬೇಡ್ಕರ್:** ಪರಿಶೀಲನೆ ಪ್ರಾರಂಭವಾದ ದಿನವೇ ಆಕ್ಷೇಪಣೆಗಳನ್ನು ಸಲ್ಲಿಸಬೇಕು. ಪರಿಶೀಲನಾ ದಿನ ಹೊರತು ಬೇರಾವ ದಿನವೂ ಆಕ್ಷೇಪಣೆ ಎತ್ತುವಂತಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಇಂಥ ಸಂಭವನೀಯತೆಗೆ ಏನಾದರೂ ಅವಕಾಶವಿದೆಯೆ? ಎನ್ನುವುದು ಶ್ಯಾಮನಂದನ ಸಹಾಯ ಮತ್ತು ಹುಸೇನ್ ಇಮಾಮರ ಪ್ರಶ್ನೆ.

**ಡಾ. ಅಂಬೇಡ್ಕರ್:** ಅವಕಾಶವಿಲ್ಲ. ಯಾರು ಏನು ಅವಕಾಶ ಬೇಕಾದರೂ ಕಲ್ಪಿಸುವುದು ಸಾಧ್ಯವೆ? ದಂಗೆ ಎಷ್ಟು ದಿನ ನಡೆದೀತು ಎಂದು ಯಾರಿಂದಾದರೂ ಹೇಳಲು ಸಾಧ್ಯವೆ? ಮುಂಬಯಿಯಲ್ಲಿ ದೊಂಬಿ ಗಲಭೆ ಗಲಾಟೆಗಳು ಕೆಲವೊಮ್ಮೆ ಇಪ್ಪತ್ತೊಂಬತ್ತು ದಿನಗಳ ಕಾಲ ನಡೆದದ್ದುಂಟು. ಆದ್ದರಿಂದ ಪರಿಸ್ಥಿತಿ ಶಾಂತವಾಗಿದೆ. ತಾನು ಪರಿಶೀಲನಾ ಕಾರ್ಯ ನಡೆಸಬಹುದೆಂಬುದು ಚುನಾವಣಾಧಿಕಾರಿಗೆ ಮನವರಿಕೆಯಾಗಬೇಕು. ದೊಂಬಿ ಗಲಾಟೆ ಇತ್ತು ಎಂಬ ಕಾರಣಕ್ಕಾಗಿ ಚುನಾವಣಾಧಿಕಾರಿ ಪರಿಶೀಲನಾ ಕಾರ್ಯವನ್ನು ಮುಂದೂಡಬಹುದು, ಅದರ ಎರಡನೇ ದಿನ ಅಥವಾ ಮೂರನೇದಿನ ಪರಿಶೀಲನೆ ನಡೆಸಬಹುದು ಎಂದು ಯಾರಿಂದಲಾದರೂ ಕಾನೂನಿನಲ್ಲಿ ಗೊತ್ತುಪಡಿಸುವುದು ಸಾಧ್ಯವೇ ? ದೊಂಬಿ–ಗಲಭೆಗಳು ಮುಂದುವರಿಯಬಹುದು.

**ಮಾನ್ಯ ಸಭಾಧ್ಯಕ್ಷರು:** ಇದು ಕಾಲಕ್ಕೆ ಸಂಬಂಧಿಸಿದ್ದಾಯಿತು. ಚುನಾವಣಾಧಿಕಾರಿ ಪರಿಶೀಲನೆ ನಡೆಸಲು ಏನಾದರೂ ಅವಕಾಶ ಇರಬೇಕು.

**ಡಾ. ಅಂಬೇಡ್ಕರ್:** ಕಲಮ್ಮಿನಲ್ಲಿ ಇದು ಸ್ಪಷ್ಟವಾಗಿ ಸೂಚಿತವಾಗಿದೆ ಎಂದು ನನಗೆ ತೋರುತ್ತದೆ. ನಮ್ಮ ನಾಟಕಕಾರರಿಗೆ ಒಂದು ಚಾಳಿ ಇದೆ ; ನಾನು ಹಾಗೆ ಹೇಳಬಹುದಾದಲ್ಲಿ ಯಾರಾದರೂ ಮರಣ ಹೊಂದಿದರೆ ಅವರ ಮೃತದೇಹವನ್ನು ರಂಗದ ಮೇಲಕ್ಕೆ ತರಲೇಬೇಕು. ಇಲ್ಲವಾದಲ್ಲಿ ಅದು ಪ್ರೇಕ್ಷಕರಿಗೆ ಅರ್ಥವಾಗುವುದಿಲ್ಲ. ನಾನು ಹೇಳಿರುವಂತೆ ಬಹುತೇಕ ಇವೆಲ್ಲ ಕಲಮ್ಮಿನಲ್ಲಿ ಧ್ವನಿತವಾಗಿದೆ.

**ಮಾನ್ಯ ಸಭಾಧ್ಯಕ್ಷರು:** ನಾನೀಗ ಪಂಡಿತ ಕುಂಚು, ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಸೂಚನೆ (ಈ ಮೊದಲೇ ತಿಳಿಸಿದಂತೆ) ಅಂಗೀಕೃತವಾಗಿದೆ.

**ಶ್ರೀ ಶ್ಯಾಮನಂದನ ಸಹಾಯ:** ನಾನು ಸೂಚಿಸುವ ತಿದ್ದುಪಡಿಯೊಂದಿದೆ, ನಂ.೩ ಪೂರಕ ಪಟ್ಟಿಯಲ್ಲಿನ ೨೪ ನೇ ನಂಬರಿನದು. ಅನುಮತಿ ಕೋರಿ ನಾನು ಸೂಚಿಸುತ್ತಿದ್ದೇನೆ.

> ೩೪ ನೇ ಕಲಂನ ೪ ನೇ ಉಪವಿಧಿಯಲ್ಲಿ "ನಿರಾಕರಿಸು" ಎನ್ನುವ ಪದಕ್ಕೆ
> ಪರ್ಯಾಯವಾಗಿ "ತಿರಸ್ಕರಿಸು" ಎನ್ನುವ ಪದವನ್ನು ಸೇರಿಸತಕ್ಕದ್ದು.

"ನಿರಾಕರಿಸು" ಪದವನ್ನು ನಾಮ ನಿರ್ದೇಶನಕ್ಕೆ ಸಂಬಂಧಿಸಿದಂತೆಯೂ "ತಿರಸ್ಕರಿಸು" ಪದವನ್ನು ನಾಮಪತ್ರಗಳಿಗೆ ಸಂಬಂಧಿಸಿದಂತೆಯೂ ಬಳಸಲಾಗಿದೆ ಎಂಬುದನ್ನು ಮಾನ್ಯ ಸಚಿವರು ಗಮನಕ್ಕೆ ತಂದಿದ್ದಾರೆ. ನಾನು ೩೪ ನೇ ಕಲಮ್ಮಿನ ೪ ನೇ ವಿಧಿಯತ್ತ ಅವರ ಗಮನ ಸೆಳೆಯುತ್ತಿದ್ದೇನೆ. ಅಲ್ಲಿ "ನಿರಾಕರಿಸು" ಪದವನ್ನು ನಾಮಪತ್ರಗಳಿಗೆ ಸಂಬಂಧಿಸಿದಂತೆ ಬಳಸಲಾಗಿದೆ. ಬಹುಶಃ "ತಿರಸ್ಕರಿಸು" ಪದವನ್ನು ಒಪ್ಪಿಕೊಳ್ಳಬಹುದೇನೋ.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ಸೂಚಿಸಲಾಗಿದೆ:

> "೩೪ ನೇ ಕಲಮ್ಮಿನ ೪ ನೇ ಉಪವಿಧಿಯಲ್ಲಿ "ನಿರಾಕರಿಸು" ಪದಕ್ಕೆ ಪರ್ಯಾಯವಾಗಿ
> "ತಿರಸ್ಕರಿಸು" ಎನ್ನುವ ಪದವನ್ನು ಸೇರಿಸತಕ್ಕದ್ದು.

**ಡಾ. ಅಂಬೇಡ್ಕರ್:** ನನ್ನ ಮಿತ್ರರ ರಸಾಭಿಜ್ಞತೆಗೆ ಭಂಗ ಉಂಟಾಗಿದ್ದಲ್ಲಿ ಸಂತಸದಿಂದ ಅವರ ಮನಸ್ಸಿಗೆ ಸಮಾಧಾನ ಉಂಟು ಮಾಡುವೆ.

**ಶ್ರೀ ಶ್ಯಾಮನಂದನ ಸಹಾಯ:** ವಾಸ್ತವಿಕವಾಗಿ ನೋಡಿದರೆ ಈ ಸದನದಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿರುವವರ ಮನಸ್ಸಂತೋಷದ ಬಗ್ಗೆ ನಾವು ಕಾಳಜಿ ವಹಿಸಬೇಕಾಗಿದೆ. ನಮ್ಮ ಮನಸ್ಸಮಾಧಾನ ಸಂತೋಷಗಳು ಯಾರಿಗೂ ಬೇಕಿಲ್ಲ.

**ಡಾ. ಅಂಬೇಡ್ಕರ್:** ಈ ವಿಷಯದಲ್ಲಿ ನಾನು ನನ್ನ ಮಾನ್ಯ ಮಿತ್ರರ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ನಾಮ ಪತ್ರಗಳ ಪರಿಶೀಲನೆಗೆ ಸಂಬಂಧಿಸಿದಂತೆ ಸ್ವಾಮಿ, ಈ ಸದನ ಅಂಗೀಕರಿಸಿರುವ ೨೮ (ಸಿ) ವಿಧಿಗೆ ಮೂರನೇ ಪಠಣದಲ್ಲಿ ಸೂಕ್ತ ತಿದ್ದುಪಡಿ ತರುವಂತೆ ನಿರ್ದೇಶಿಸಬಹುದೆಂದು ನಾನು ಹೇಳಬಹುದೆ?

**ಡಾ. ಅಂಬೇಡ್ಕರ್:** ಹೌದು, ಆ ಹಂತದಲ್ಲಿ ನಾನು ಇನ್ನೊಂದು ತಿದ್ದುಪಡಿಯನ್ನು ಮಂಡಿಸುವುದಿದೆ.

**ಮಾನ್ಯ ಸಭಾಧ್ಯಕ್ಷರು:** ನಾನೀಗ ಶ್ರೀ ಸಹಾಯ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ. ತಿದ್ದುಪಡಿ ಏನೆಂದರೆ:

> ೩೪ ನೇ ಕಲಮ್ಮಿನ ೪ ನೇ ಉಪವಿಧಿಯಲ್ಲಿ ''ನಿರಾಕರಿಸು'' ಪದಕ್ಕೆ ಪರ್ಯಾಯವಾಗಿ "ತಿರಸ್ಕರಿಸು" ಪದವನ್ನು ಸೇರಿಸತಕ್ಕದ್ದು.

ತಿದ್ದುಪಡಿ ಸೂಚನೆ ಅಂಗೀಕೃತವಾಗಿದೆ.

***ಡಾ. ದೇಶಮುಖ್:** ಅನುಮತಿ ಕೋರಿ ನಾನು ಸೂಚಿಸುತ್ತಿದ್ದೇನೆ:

> ೩೪ ನೇ ಕಲಮ್ಮಿನ ೪ ನೇ ವಿಧಿಯಲ್ಲಿರುವ ''ಸಾರಭೂತವಾದದ್ದು ಯಥಾರ್ಥವಾದದ್ದು" ಎನ್ನುವ ಪದದ ನಂತರ "ಅತಿ ಮಹತ್ವವಾದ" ಎನ್ನುವ ಪದವನ್ನು ಸೇರಿಸತಕ್ಕದ್ದು.

ಸ್ವಾಮಿ ನಾನು "ಅತಿ ಮಹತ್ವವಾದ" ಪದಗಳನ್ನು ಸೇರಿಸತಕ್ಕದೆಂದು ಸೂಚಿಸುತ್ತಿರುವುದಕ್ಕೆ ಕಾರಣವೇನೆಂದರೆ, ಸಾರಭೂತವಾದದ್ದು ಪದದ ಅರ್ಥ ಶುದ್ಧಾಂಗವಾಗಿ ಖಚಿತವಿಲ್ಲ. ನಿಘಂಟನ್ನು ತೆರೆದು ನೋಡಿದೆ; ಅದರಲ್ಲಿ "ಸಾರಭೂತವಾದದ್ದು" ಎನ್ನುವುದಕ್ಕೆ ಹಲವಾರು ಅರ್ಥಗಳಿವೆ. ಸೌರವುಳ್ಳದ್ದು. ಮೂಲದ್ರವ್ಯ, ಸ್ಥೂಲಕಾಯ, ಸಶಕ್ತ, ಬೃಹದ್ಗಾತ್ರದ್ದು, ನಿಜವಾದದ್ದು, ಘನವಾದದ್ದು ಹೀಗೆ ಅಗತ್ಯವಾದದ್ದು, ಅಗತ್ಯವನ್ನೊಳಗೊಂಡವುದಕ್ಕೆ ಅನುಗುಣವಾದ ಅರ್ಥಗಳು ಅದಕ್ಕಿದೆ.

**ಡಾ. ಅಂಬೇಡ್ಕರ್:** ಅತಿಮಹತ್ವವಾದದ್ದು ಎನ್ನುವುದರ ಅರ್ಥವೇನು?

**ಡಾ. ದೇಶಮುಖ್:** ಶುದ್ಧಾಂಗ ನೇರವಾಗಿ ಹಾಗೂ ಜೀವಧಾರಕ ರೀತಿಯಲ್ಲಿ ಉಮೇದುವಾರಿಕೆ ಮೇಲೆ ಪರಿಣಾಮವುಂಟು ಮಾಡುವಂಥಾದ್ದು.

ನನ್ನಲ್ಲಿ ಇನ್ನೊಂದು ಪರ್ಯಾಯವೂ ಇದೆ. ಮಾನ್ಯ ಸಚಿವರು ಅದನ್ನು ಒಪ್ಪಿಕೊಳ್ಳುವರೆಂದು ನಾನು ಭಾವಿಸುತ್ತೇನೆ. ಯಥಾರ್ಥ ಲಕ್ಷಣವಲ್ಲದ್ದು ಸಾರಭೂತವಲ್ಲದ್ದು ಎನ್ನುವ ಪದಗಳನ್ನು ನಾವು ಕೈಬಿಟ್ಟರೆ ಅದರಿಂದ ಉದ್ದೇಶ ಈಡೇರುತ್ತದೆ. ಅಂದರೆ, ತಾಂತ್ರಿಕ ದೋಷದ ಕಾರಣದಿಂದಾಗಿ ಚುನಾವಣಾಧಿಕಾರಿ ನಾಮ ಪತ್ರವನ್ನು ತಿರಸ್ಕರಿಸಲಾಗದು ಎಂದಷ್ಟೇ ಹೇಳಿದರೆ ಸಾಕು. ''ಸಾರಭೂತಲಕ್ಷಣವಲ್ಲದ ಯಥಾರ್ಥವಲ್ಲದ'' ಪದಗಳನ್ನು ಸೇರಿಸುವ ಮೂಲಕ ನಾವು ಮತ್ತಷ್ಟು ಸಂದಿಗ್ಧತೆಯನ್ನುಂಟು ಮಾಡುತ್ತಿದ್ದೇವೆ ಹಾಗೂ ಅನೇಕ ರೀತಿಯ ಅರ್ಥ ವ್ಯಾಖ್ಯಾನಗಳಿಗೆ ಅವಕಾಶ ಕಲ್ಪಿಸುತ್ತಿದ್ದೇವೆ. ಆದ್ದರಿಂದ "ಅತಿಮಹತ್ವವಾದ" ಪದಗಳನ್ನು ಸೇರಿಸತ್ಕದ್ದು ಅಥವಾ ''ಸಾರಭೂತ ಲಕ್ಷಣವಿಲ್ಲದ'' ಪದಗಳನ್ನು ಕೈಬಿಡತಕ್ಕದ್ದು ತಾಂತ್ರಿಕ ದೋಷ ಸಮ್ಮತಾರ್ಹವಾದದ್ದು.

ನಾನೀಗ ನನ್ನ ಎರಡನೆ ತಿದ್ದುಪಡಿಗೆ ಬರುತ್ತೇನೆ. ಅನುಮತಿಕೋರಿ ಸೂಚಿಸುತ್ತಿದ್ದೇನೆ:

> ೩೪ನೇ ಕಲಮ್ಮಿನ ೫ ನೇ ಉಪವಿಧಿಯಲ್ಲಿ "ಅಥವಾ ಗಲಭೆ ಅಥವಾ ಬಹಿರಂಗ ಹಿಂಸಾಚಾರಗಳ ಅಡಚಣೆಯಿಂದಾಗಿ" ಎನ್ನುವ ಪದಗಳನ್ನು ಬಿಡಬೇಕು.

ಕಲಾಪಗಳಿಗೆ ಅಡಚಣೆಯನ್ನು ಗಲಭೆ ಅಥವಾ ಬಹಿರಂಗ ಹಿಂಸಾಚಾರಕ್ಕೆ ಮಾತ್ರ ನಾವು ಏಕೆ ಸೀಮಿತಗೊಳಿಸಬೇಕು? ಅದು ತುಂಬ ಯಾತನಾಮಯವಾದದ್ದು. ಸ್ವಾಮಿ, ಎರಡು ಪ್ರಕರಣಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಕಲಾಪಗಳಿಗೆ ಅಡಚಣೆಯುಂಟುಮಾಡುವಂಥ ವಿವಿಧ ಕಾರಣಗಳು, ಉದ್ದೇಶಗಳಿರಬಹುದು. ಆದ್ದರಿಂದ ಈ ಪದಗಳನ್ನು ಕೈಬಿಡುವಂತೆ ನಾನು ಸಲಹೆ ಮಾಡುತ್ತೇನೆ. ವಾಸ್ತವವಾಗಿ, ನನ್ನ ದೃಷ್ಟಿಯಲ್ಲಿ ಅಭ್ಯರ್ಥಿಗಳು ಯಾರಾದರೂ ಬಯಸಿದಲ್ಲಿ ಇದು ಗಲಭೆ–ಬಹಿರಂಗ ಹಿಂಸಾಚಾರಗಳಿಗೆ

* ಸಂಸದೀಯ ಚರ್ಚೆ ಸಂಪುಟ ೧೨ ಭಾಗ II, ೧೯ ಮೇ, ೧೯೫೧ ಪು: ೯೧೬೬–೬೭.

ಆಮಂತ್ರಣವಿತ್ತಂತೆ.

**ಶ್ರೀ ಸಿಧ್ವಾ:** ಚಂಡಮಾರುತದ ವಿಷಯ ಏನು?

**ಡಾ. ಅಂಬೇಡ್ಕರ್:** ಅದನ್ನು "ಹತೋಟಿ ಮೀರಿದ ಕಾರಣಗಳ" ವ್ಯಾಪ್ತಿಯಲ್ಲಿ ಸೇರಿಸಲಾಗುವುದು.

**ಡಾ. ದೇಶಮುಖ್:** "ಅಥವಾ ಗಲಭೆ ಅಥವಾ ಬಹಿರಂಗಗಳ ಅಡಚಣೆಯಿಂದಾಗಿ ಅಥವಾ" ಈ ಪದಗಳನ್ನು ಕೈಬಿಡುವುದರಿಂದ ಏನೂ ಹಾನಿಯಾಗದು ಎಂದು ನನಗನ್ನಿಸುತ್ತದೆ. ಆದ್ದರಿಂದ ನನ್ನ ಎರಡೂ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲಾಗುವುದೆಂದು ನಂಬುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿ ಸೂಚಿಸಲಾಗಿದೆ.

> ೩೪ ನೇ ಕಲಮ್ಮಿನ ೪ ನೇ ಉಪವಿಧಿಯಲ್ಲಿ "ಸಾರಭೂತವಾದದ್ದು" ಎನ್ನುವ ಪದದ ಬದಲು "ಮತ್ತು ಬಹುಮುಖ್ಯವಾದದ್ದು" ಎನ್ನುವುದನ್ನು ಸೇರಿಸತಕ್ಕದ್ದು.
>
> ೩೪ ನೇ ಕಲಮ್ಮಿನ ೫ ನೇ ಉಪ ವಿಧಿಯಲ್ಲಿ "ಅಥವಾ "ಗಲಭೆ ಅಥವಾ ಬಹಿರಂಗ ಹಿಂಸಾಚಾರಗಳ ಅಡಚಣೆಯಿಂದಾಗಿ" ಎನ್ನುವ ಪದಗಳನ್ನು ಬಿಡಬೇಕು.

**ಡಾ. ಅಂಬೇಡ್ಕರ್:** ಅವುಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ.

****ಮಾನ್ಯ ಸಭಾಧ್ಯಕ್ಷರು:** ನಾನೀಗ ಕಲಮುಗಳನ್ನು ಮಂಡಿಸಲಿದ್ದೇನೆ.

**ಶ್ರೀ ಮೀರನ್:** ಸಂಚಿತ ಪಟ್ಟಿಯಲ್ಲಿನ ೩೪೩ ಮತ್ತು ೩೪೯ ನೇ ಕಲಮ್ಮಿಗೆ ನಾನು ಎರಡು ತಿದ್ದುಪಡಿಗಳನ್ನು ಸೂಚಿಸಲಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸಚಿವರು ಇವುಗಳಲ್ಲಿ ಯಾವುದನ್ನಾದರೂ ಒಪ್ಪಿಕೊಳ್ಳಲು ಸಿದ್ಧರಿದ್ದಾರೆಯೆ?

**ಡಾ. ಅಂಬೇಡ್ಕರ್:** ಯಾವುದೊಂದು ತಿದ್ದುಪಡಿಯನ್ನೂ ನಾನು ಒಪ್ಪಿಕೊಳ್ಳುತ್ತಿಲ್ಲ.

**ಶ್ರೀ ಶಿವ ಚರಣಲಾಲ್:** ನನ್ನದೊಂದು ತಿದ್ದುಪಡಿ ಇದೆ–ಒಂದನೇ ಪೂರಕ ಪಟ್ಟಿಯ ೯೯ ನೇ ನಂಬರ್

**ಡಾ. ಅಂಬೇಡ್ಕರ್:** ನಾನು ಅದನ್ನು ಒಪ್ಪಿಕೊಳ್ಳುತ್ತಿಲ್ಲ.

**ಶ್ರೀ ಶಿವ ಚರಣಲಾಲ್:** ಅದು ಮನವಿಗೆ ಸಂಬಂಧಿಸಿದ್ದು ನಾಮಪತ್ರ ಕುರಿತ ಮನವಿಯ ಮೇಲೆ ಆಖೈರಾಗಿ ನಿರ್ಧಾರ ಕೈಗೊಳ್ಳಬೇಕು. ಅದು ಆನಂತರ ಚುನಾವಣಾ ತಕರಾರು ಅರ್ಜಿಯ ವಸ್ತುವಾಗಬಾರದು.

**ಡಾ. ಅಂಬೇಡ್ಕರ್:** ಈ ವಿಷಯ ಇನ್ನೂ ಪರಿಶೀಲನೆಯಲ್ಲಿದೆ ನಾವು ಅದಕ್ಕೆ ಮತ್ತೆ ಬರೋಣ.

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಏನೆಂದರೆ:

> "೩೪ ನೇ ಕಲಂ ತಿದ್ದುಪಡಿಯಾದಂತೆ, ಮಸೂದೆಯ ಭಾಗವಾಗುವುದು"

ಸೂಚನೆ ಅಂಗೀಕೃತವಾಗಿದೆ.

೩೪ ನೇ ಕಲಮನ್ನು, ತಿದ್ದುಪಡಿಯಾದಂತೆ ಮಸೂದೆಯಲ್ಲಿ ಸೇರಿಸಲಾಗಿದೆ.

ಆನಂತರ ಸದನವನ್ನು ೧೯೫೧ ರ ಮೇ ೨೧ ರಂದು ಸೋಮವಾರ ಗಡಿಯಾರದಲ್ಲಿನ ಎಂಟೂವರೆ ಗಂಟೆಯವರೆಗೆ ಮುಂದೂಡಲಾಯಿತು.

---

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೧೯ ಮೇ, ೧೯೫೧ ಪು: ೯೧೬೮–೬೯

# ೩೫ ನೇ ಕಲಂ

**ಮಾನ್ಯ ಸಭಾಪತಿ:** ತಿದ್ದುಪಡಿಯನ್ನು ಮಂಡಿಸಲಾಗಿದೆ.

> ೩೫ ನೇ ಕಲಮ್ಮಿನ ೧ ನೇ ಉಪವಿಧಿಯಲ್ಲಿನ ಪದಗಳು, ಆವರಣ ಚಿಹ್ನೆಗಳು, ಅಕ್ಷರಗಳು ಮತ್ತು ಅಂಕಿ ಸಂಖ್ಯೆಗಳು ಸೇರಿದಂತೆ "೨೮ ನೇ ಪರಿಚ್ಛೇದದ 'ಸಿ' ಕಲಮ್ಮಿನ ಅನ್ವಯ ನಿಗದಿತವಾದ ದಿನ ಮಧ್ಯಾಹ್ನ ಮೂರು ಗಂಟೆ ಮೀರುವುದರೊಳಗೆ ಖುದ್ದಾಗಿ ಆ ಅಭ್ಯರ್ಥಿಯಾಗಲೀ ಅಥವಾ ಅವನ ಸೂಚಕನಾಗಲೀ, ಅನುಮೋದಕನಾಗಲೀ ಅಥವಾ ಚುನಾವಣಾ ಏಜೆಂಟ್ ಆಗಲಿ ಚುನಾವಣಾಧಿಕಾರಿಗೆ ತಲಪಿಸಬೇಕು" – ಇದಕ್ಕೆ ಪರ್ಯಾಯವಾಗಿ ಕೆಳಗಿನದನ್ನು ಸೇರಿಸತಕ್ಕದ್ದು:
>
> "೨೮ ನೇ ಪರಿಚ್ಛೇದನ 'ಸಿ' ಕಲಮ್ಮಿನನ್ವಯ ನಿಗದಿತವಾದ ದಿನ ಮಧ್ಯಾಹ್ನ ಮೂರುಗಂಟೆ ಮೀರುವುದರೊಳಗೆ ಖುದ್ದಾಗಿ ಆ ಅಭ್ಯರ್ಥಿ ಅಥವಾ ಅವನ ಸೂಚಕ, ಅನುಮೋದಕ ಅಥವಾ ಆ ಅಭ್ಯರ್ಥಿಯಿಂದ ಈ ಸಂಬಂಧವಾಗಿ ಲಿಖಿತ ಅಧಿಕಾರ ಪಡೆದ ಚುನಾವಣಾ ಏಜೆಂಟನಿಂದ ಚುನಾವಣಾಧಿಕಾರಿಗೆ ತಲಪಿಸಲ್ಪಡಬೇಕು."

**ಶ್ರೀ ಶಿವ ಚರಣಲಾಲ್ (ಉತ್ತರ ಪ್ರದೇಶ):** "ಅಧಿಕಾರ ಪಡೆದ" ಎನ್ನುವ ಪದಕ್ಕೆ ಮುಂಚೆ "ಯೋಗ್ಯರೀತಿಯಲ್ಲಿ" ಎನ್ನುವ ಪದವನ್ನು ಸೇರಿಸಬೇಕೆಂದು ನನ್ನ ಸಲಹೆ. ಹಾಗಾದಲ್ಲಿ ಅರ್ಥ ಹೆಚ್ಚು ಸ್ಪಷ್ಟವಾಗಬಹುದು.

**ಡಾ. ಅಂಬೇಡ್ಕರ್:** ನನ್ನ ಆಕ್ಷೇಪಣೆ ಏನಿಲ್ಲ.

**ಮಾನ್ಯ ಸಭಾಪತಿ:** ಯಾವುದನ್ನಾದರೂ ಸೇರಿಸಲು ಸಭಾಧ್ಯಕ್ಷರ ಆಕ್ಷೇಪಣೆಯೂ ಇಲ್ಲ. ಆದರೆ ಇಲ್ಲಿ "ಈ ಸಂಬಂಧವಾಗಿ ಲಿಖಿತ ಅಧಿಕಾರ" ಎಂದು ಸ್ಪಷ್ಟವಾಗಿ ಹೇಳಲಾಗಿದೆ. "ಯೋಗ್ಯ ರೀತಿಯಲ್ಲಿ" ಎನ್ನುವ ಪದವನ್ನು ಸೇರಿಸುವುದರಿಂದ ಜೊತೆಗೆ ಬೇರೇನೋ ಅಗತ್ಯವಿದೆ ಎಂದು ಅದು ಅನುಮಾನಗಳಿಗೆಡೆ ಮಾಡಿಕೊಡಬಹುದು.

**ಡಾ. ಅಂಬೇಡ್ಕರ್:** ನಾನು ಒಪ್ಪುತ್ತೇನೆ. ನಾವು ಅತಿ ಕರಾರುವಾಕ್ಕಾಗಿರಬೇಕಾಗಿಲ್ಲ.

**ಮಾನ್ಯ ಸ್ಪೀಕರ್:** ಹಾಗಿದ್ದಲ್ಲಿ ನಾನು ತಿದ್ದುಪಡಿಯನ್ನು ಅದಿರುವಂತೆಯೇ ಮಂಡಿಸುವೆ.

ಸೂಚನೆ ಅಂಗೀಕೃತವಾಯಿತು.

**ಪಂಡಿತ ಠಾಕೂರ್ ದಾಸ್ ಭಾರ್ಗವ:** ಶ್ರೀ ಜಸ್ಪತ್ ರಾಯ್ ಕಪೂರ್ ಅವರ ಹೆಸರಿನಲ್ಲಿ ಒಂದು ತಿದ್ದುಪಡಿ ಇದೆ – ಪೂರಕ ಪಟ್ಟಿ ನಂ. ೧ ರಲ್ಲಿನ ೧೦೨ ನೇ ನಂಬರಿನದು.

**ಮಾನ್ಯ ಸಭಾಪತಿ:** ಆತ ಇಲ್ಲಿದ್ದಾರೆಯೆ?

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ಇಲ್ಲ ನೀವು ಅನುಮತಿಸಿದಲ್ಲಿ ನಾನು ಅದನ್ನು ಸೂಚಿಸಬಯಸುತ್ತೇನೆ.

**ಮಾನ್ಯ ಸಭಾಪತಿ:** ಅದು ಒಪ್ಪಿತವಾದ ತಿದ್ದುಪಡಿಯೆ?

---

** ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೨೧ ಮೇ, ೧೯೫೧ ಪು: ೯೧೭೪–೭೮

**ಡಾ. ಅಂಬೇಡ್ಕರ್:** ಹೌದು, ಅದು, "ಅಥವಾ ಅದೇ ಕ್ಷೇತ್ರದಲ್ಲಿ ಅದೇ ಚುನಾವಣೆಗೆ ಅಭ್ಯರ್ಥಿಯಾಗಿ ಮರು ನಾಮ ನಿರ್ದೇಶನ ಮಾಡಬೇಕು" ಎನ್ನುವ ಪದಗಳನ್ನು ತೆಗೆದುಹಾಕಲು.

**ಮಾನ್ಯ ಸ್ಪೀಕರ್:** ನಾನು ಅದಕ್ಕೆ ಅನುಮತಿ ನೀಡುತ್ತೇನೆ.

ಜೊತೆಗೆ ಮಾಡಲಾದ ತಿದ್ದುಪಡಿ

> ೩೫ ನೇ ಕಲಮ್ಮಿನ ೨ ನೇ ಉಪ ವಿಧಿಯಲ್ಲಿ "ಪೂರ್ವಸೂಚನೆ ರದ್ದುಗೊಳಿಸಲು" ಪದಗಳ ನಂತರ ಬರುವ ಎಲ್ಲ ಪದಗಳನ್ನು ಬಿಡತಕ್ಕದ್ದು.
>
> (ಪಂಡಿತ್ ಠಾಕೂರ್‌ದಾಸ್ ಭಾರ್ಗವ)

**ಮಾನ್ಯ ಸ್ಪೀಕರ್:** ಸೂಚನೆ ಏನೆಂದರೆ

"೩೫ ನೇ ಕಲಂ, ತಿದ್ದುಪಡಿಯಾದಂತೆ ಮಸೂದೆಯ ಭಾಗವಗಿದೆ"

ಸೂಚನೆ ಅಂಗೀಕೃತವಾಯಿತು.

೩೫ ನೇ ಕಲಮನ್ನು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲಾಯಿತು.

೩೬ ನೇ ಕಲಮನ್ನು ಮಸೂದೆಗೆ ಸೇರಿಸಲಾಯಿತು.

**ಕಲಂ ೩೭.**— (ಉಳಿದ ಚುನಾವಣೆಗೆ ನಾಮ ನಿರ್ದೇಶನ)

**ಡಾ. ಅಂಬೇಡ್ಕರ್:** ನನ್ನ ಬಳಿ ಮೂರನೇ ನಂಬರ್ ಪೂರಕಪಟ್ಟಿಯಲ್ಲಿನ ನಂಬರ್ ೨೬, ೨೭, ೩೦ ಮತ್ತು ೩೧ ಈ ನಾಲ್ಕೂ ತಿದ್ದುಪಡಿಗಳಿವೆ.

**ಸಾರಿಗೆ ಮತ್ತು ರೈಲ್ವೆ ಶಾಖೆಯ ರಾಜ್ಯ ಸಚಿವರು (ಶ್ರೀ ಸಂತಾನಂ):** ಕಲಂ ೩೭ (೧) ರ ಕೊನೆಯ ಭಾಗದ ಒಕ್ಕಣೆಯೆಂದರೆ "ಸಂವಿಧಾನ ಹಾಗೂ ಈ ಶಾಸನಕ್ಕೆ ಅನುಗುಣವಾಗಿ ಆ ಸ್ಥಾನದ ಭರ್ತಿಗಾಗಿ ಆಯ್ಕೆ ಹೊಂದಲು ಅರ್ಹತೆ ಪಡೆದಿರಬೇಕು". "ಸಂವಿಧಾನಕ್ಕೆ ಅನುಗುಣವಾಗಿ" ಪದಗಳನ್ನು ಬಿಡಬಹುದೆಂದು ನಾನು ಸಲಹೆ ಮಾಡಲಿಚ್ಛಿಸುವೆ. ಇವು ಪೂರಾ ಅನಗತ್ಯವೆಂದು ತೋರುತ್ತದೆ. ಏಕೆಂದರೆ ಸಂಸತ್ತು ರಚಿಸುವ ಯಾವುದೇ ಶಾಸನವೂ ಸಂವಿಧಾನದ ನಿಬಂಧನೆಗಳನ್ನು ಕಡೆಗಣಿಸುವಂತಿಲ್ಲ.

**ಮಾನ್ಯ:** ಇದನ್ನು ಕರಡುಗಾರರ ಪರಿಶೀಲನೆಗೆ ಬಿಡಬೇಕೆನ್ನಿಸುತ್ತದೆ. ಸಾಧಕ – ಬಾಧಕಗಳೇನೆಂಬುದು ನನಗಿನ್ನೂ ಸ್ಪಷ್ಟವಾಗಿಲ್ಲ.

**ಡಾ. ಅಂಬೇಡ್ಕರ್:** ಇದು ಹೆಚ್ಚು ಕಡಿಮೆ ಕರಡುಗಾರನಿಗೆ ಸೇರಿದ ವಿಷಯ. ಸ್ಪಷ್ಟತೆಯ ಸಲುವಾಗಿ ಕೆಲವೊಂದು ಪದಗಳನ್ನು ಸೇರಿಸಬೇಕಾಗುತ್ತದೆ ಎಂದು ಕರಡುಗಾರ ಭಾವಿಸಿದಲ್ಲಿ ಆತನ ಅನಿಸಿಕೆಗಳನ್ನು ಗೌರವಿಸಬೇಕಾಗುತ್ತದೆ ಎಂದು ನನಗನಿಸುತ್ತದೆ.

**ಶ್ರೀ ಸಂತಾನಂ:** ನಾನು ಕೇವಲ ಗಮನ ಸೆಳೆದದ್ದಷ್ಟೇ.

**ಮಾನ್ಯ ಸಭಾಪತಿ:** ಕರಡುಗಾರರ ಸಲಹೆಗನುಗುಣವಾಗಿ ಇದನ್ನು ತಿದ್ದುವ ಅಧಿಕಾರ ಸಭಾಧ್ಯಕ್ಷರಿಗಿದೆ. ನಾವೀಗ ಉಳಿದ ತಿದ್ದುಪಡಿಗಳಿಗೆ ಹೋಗೋಣ.

ತಿದ್ದುಪಡಿ ಮಾಡಿದ್ದು:

> ೩೭ ನೇ ಕಲಮ್ಮಿನ ಒಂದನೇ ಉಪವಿಧಿಯಲ್ಲಿ ಮೂರನೇ ಸಾಲಿನಲ್ಲಿ ಬರುವ "ಸದಸ್ಯರು" ಎನ್ನುವ ಪದಗಳ ಬದಲು "ಚುನಾಯಿತ ಸದಸ್ಯರು" ಎನ್ನುವ ಪದಗಳನ್ನು ಸೇರಿಸತಕ್ಕದ್ದು.
>
> (ಡಾ. ಅಂಬೇಡ್ಕರ್)

ಜೊತೆಗೆ ಮಾಡಲಾದ ಇನ್ನಷ್ಟು ತಿದ್ದುಪಡಿ:

೩೭ ನೇ ಕಲಮ್ಮಿನ ೨ ನೇ ಉಪವಿಧಿಯಲ್ಲಿ ೧ ಮತ್ತು ೨ ನೇ ಸಾಲಿನಲ್ಲಿ ಬರುವ "ವಿಧಾನ ಸಭೆಯ ಸದಸ್ಯರು" ಎನ್ನುವ ಪದಗಳಿಗೆ ಬದಲಾಗಿ "ಚುನಾಯಿತ ಸದಸ್ಯರು ಅಥವಾ ವಿಧಾನ ಸಭೆಯ ಸದಸ್ಯರು" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

(ಡಾ. ಅಂಬೇಡ್ಕರ್)

ಜೊತೆಗೆ ಮಾಡಲಾದ ಇನ್ನಷ್ಟು ತಿದ್ದುಪಡಿ:

೩೭ ನೇ ಕಲಮ್ಮಿನ ೨ ನೇ ಉಪವಿಧಿಯಲ್ಲಿ ೧ ಮತ್ತು ೨ ನೇ ಸಾಲಿನಲ್ಲಿ ಬರುವ "ವಿಧಾನ ಸಭೆಯ ಸದಸ್ಯರು" ಎನ್ನುವ ಪದಗಳಿಗೆ ಬದಲಾಗಿ "ಚುನಾಯಿತ ಸದಸ್ಯರು ಅಥವಾ ವಿಧಾನಸಭೆಯ ಸದಸ್ಯರು" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

(ಡಾ. ಅಂಬೇಡ್ಕರ್)

ಜೊತೆಗೆ ಮಾಡಲಾದ ಇನ್ನಷ್ಟು ತಿದ್ದುಪಡಿ:

೩೭ ನೇ ಕಲಮ್ಮಿನ ೪ ನೇ ಉಪವಿಧಿಯ ಮೊದಲನೆಯ ಕಟ್ಟಳೆಗೆ ಪರ್ಯಾಯವಾಗಿ ಈ ಕೆಳಗಿನದನ್ನು ಸೇರಿಸತಕ್ಕದ್ದು.

"ಒಂದನೇ ಉಪ ವಿಭಾಗದಲ್ಲಿ ಪ್ರಸ್ತಾಪಿಸಿರುವುದಕ್ಕೆ ಅನುಗುಣವಾಗಿ ಅಂಥ ಚುನಾವಣೆಯಲ್ಲಿ ಮತನೀಡುವ ಹಕ್ಕುಳ್ಳವನಾಗಿದ್ದಲ್ಲಿ ಅಂಥ ಯಾವುದೇ ವ್ಯಕ್ತಿಯೂ ಚುನಾವಣೆಯಲ್ಲಿ ಭರ್ತಿಯಾಗಬೇಕಾದ ಎಷ್ಟು ಸ್ಥಾನಗಳಿವೆಯೋ ಅಷ್ಟು ನಾಮಪತ್ರಗಳಿಗೆ ಸೂಚಕನಾಗಿ ಅಥವಾ ಅನುಮೋದಕನಾಗಿ ಸಹಿಮಾಡಬಹುದು. ಆದರೆ ಅದಕ್ಕಿಂತ ಹೆಚ್ಚಿಲ್ಲ."

(ಡಾ. ಅಂಬೇಡ್ಕರ್)

ಜೊತೆಗೆ ಮಾಡಲಾದ ಮತ್ತಷ್ಟು ತಿದ್ದುಪಡಿ:

೩೭ ನೇ ಕಲಮ್ಮಿನ ೪ ನೇ ಉಪವಿಧಿಯ 'ಎ' ಭಾಗದಲ್ಲಿರುವ ಎರಡನೇ ಕಟ್ಟಳೆಯಲ್ಲಿ, "ರಾಜ್ಯವೊಂದರ ವಿಧಾನಸಭಾ ಸದಸ್ಯರಿಂದ, ಆ ವಿಧಾನಸಭೆಯ ಸದಸ್ಯರ ಪಟ್ಟಿಯ ಆಕರಗಳಾಗಿ" ಎನ್ನುವ ಪದಗಳಿಗೆ ಪರ್ಯಾಯವಾಗಿ ಈ ಕೆಳಗಿನದನ್ನು ಸೇರಿಸತಕ್ಕದ್ದು.

"ಚುನಾಯಿತ ಸದಸ್ಯರಿಂದ ಅಥವಾ ರಾಜ್ಯವೊಂದರ ವಿಧಾನಸಭೆಯ ಸದಸ್ಯರಿಂದ ಚುನಾಯಿತ ಸದಸ್ಯರ ಪಟ್ಟಿಗೆ ಅಥವಾ ಆ ವಿಧಾನಸಭೆಯ ಸದಸ್ಯರ ಪಟ್ಟಿಗೆ ಸಂದರ್ಭೋಚಿತವಾಗಿ, ಆಕರಗಳಾಗಿ"

(ಡಾ. ಅಂಬೇಡ್ಕರ್)

**ಶ್ರೀ ಘುಳೆ (ಮಧ್ಯ ಭಾರತ್):** ನನ್ನದೊಂದು ತಿದ್ದುಪಡಿ ಇದೆ. ಸಂಖ್ಯೆ ೨೮ ನನ್ನ ಹೆಸರಿನಲ್ಲಿದೆ. ಸೂಚಿಸುವ ಇಚ್ಛೆ ನನಗಿಲ್ಲ. ಆದರೆ ಅದರ ಬಗ್ಗೆ ಮಾತನಾಡಲಿದೆ.

ಈಗಿನ ಕಲಮ್ಮಿನ ಪ್ರಕಾರ ಪ್ರಾಂತ್ಯ ಸರ್ಕಾರ ಪ್ರಕಟಣೆ ಹೊರಡಿಸಿದ ಐದು ದಿನಗಳೊಳಗಾಗಿ ಅಭ್ಯರ್ಥಿ ತನ್ನ ನಾಮಪತ್ರ ಸಲ್ಲಿಸಬೇಕು. ಪ್ರಾಂತ್ಯದ ಮೂಲೆಯೊಂದರಲ್ಲಿ ವಾಸಿಸುತ್ತಿರುವ ವ್ಯಕ್ತಿಯೊಬ್ಬನಿಗೆ ಪ್ರಕಟಣೆ ಹೊರಡಿಸಿರುವ ಗೆಜೆಟ್ ಪಡೆಯಲು ಹಾಗೂ ಚುನಾವಣೆ ನಡೆಯಲಿರುವ ಸ್ಥಳಕ್ಕೆ ತನ್ನ ನಾಮಪತ್ರ

ಸಲ್ಲಿಸಲು ಐದು ದಿನಗಳ ಅವಧಿ ಸಾಲದೆಂದು ನನಗನ್ನಿಸುತ್ತದೆ. ೩೧ ನೇ ಕಲಮ್ಮಿನಲ್ಲಿ ಸಂಸತ್ತಿನ ಕೆಳಮನೆ ಚುನಾವಣೆಗಳಿಗೆ ಕಲ್ಪಿಸಿರುವ ಅವಕಾಶಗಳನ್ನೇ ಈ ಕಲಮ್ಮಿನಲ್ಲೂ ಕಲ್ಪಿಸಬೇಕು. ಅಂದರೆ ಎಂಟನೇ ದಿನಕ್ಕೆ ಮೊದಲು ನಾಮಪತ್ರ ಸಲ್ಲಿಸಬೇಕಾದ ಅಗತ್ಯವಿಲ್ಲ.

**ಮಾನ್ಯ ಸಭಾಪತಿ:** ಮಾತಿನ ಒಕ್ಕಣೆ ಇರುವುದು "ಐದನೆ ದಿನಕ್ಕೂ ಮುಂಚಿತವಾಗಿ" ಎಂದು.

**ಶ್ರೀ ಘುಳೆ:** ಐದನೆ ದಿನ ಪ್ರಕಟಣೆ ಹೊರಡಿಸಬಹುದು. ಭಾರತದಲ್ಲಿ ಈಗಿರುವ ಸಂವಹನ ಸಂಪರ್ಕ ವ್ಯವಸ್ಥೆಯಲ್ಲಿ ಈ ಕಾಲಾವಕಾಶ ಸಾಲದು. ಪ್ರಕಟನೆಯ ಮಾಹಿತಿ ಪಡೆಯಲೇ ಒಬ್ಬ ವ್ಯಕ್ತಿಗೆ ಕನಿಷ್ಠ ಮೂರು ದಿನ ಬೇಕಾಗಬಹುದು. ಮತ್ತೆ ನಾಮಪತ್ರ ಕಳುಹಿಸಲು ಕನಿಷ್ಠ ಮೂರು ದಿನ ಬೇಕಾಗಬಹುದು.....ಈ ದೃಷ್ಟಿಯಿಂದ ಈ ಕಲಮ್ಮಿನಲ್ಲಿ ಸೂಚಿತವಾಗಿರುವ ಐದು ದಿನಗಳ ಅವಧಿ ಸಾಲದು. ಪ್ರತಿಯಾಗಿ ಎಂಟು ದಿನಗಳಿರಬೇಕೆಂದು ನನ್ನ ಸಲಹೆ.

**ಡಾ. ಅಂಬೇಡ್ಕರ್:** ಇಲ್ಲ. ಇಂಥದೊಂದು ತಿದ್ದುಪಡಿಯ ಆವಶ್ಯಕತೆ ಇದೆ ಎಂದು ನನಗನ್ನಿಸುವುದಿಲ್ಲ.

**ಮಾನ್ಯ ಸ್ಪೀಕರ್:** ಸೂಚನೆ ಏನೆಂದರೆ:–

"೩೭ ನೇ ಕಲಂ, ತಿದ್ದುಪಡಿಯಾದಂತೆ, ಮಸೂದೆಯ ಭಾಗವಾಗಲಿದೆ."

ಸೂಚನೆ ಅಂಗೀಕೃತವಾಯಿತು.

೩೭ ನೇ ಕಲಮ್ಮನ್ನು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲಾಗಿದೆ.

೩೮ ರಿಂದ ೪೩ ರವರೆಗೆ ಮಸೂದೆಗೆ ಸೇರಿಸಲಾಗಿದೆ.

**ಕಲಂ ೪೪.**— (ಮತ ಚಲಾವಣೆ ಏಜೆಂಟರುಗಳು)

ತಿದ್ದುಪಡಿ ಮಾಡಿರುವುದು:

> ೪೪ ನೇ ಕಲಮ್ಮಿನಲ್ಲಿ, ನಾಲ್ಕನೆಯ ಸಾಲಿನಲ್ಲಿ ಎರಡನೆಯ ಸಲ ಬಂದಿರುವ "ಆಗಬಹುದು" ಪದದ ಮೊದಲು "ಅಥವಾ ಅವನ ಚುನಾವಣಾ ಏಜೆಂಟ್" ಪದಗಳನ್ನು ಸೇರಿಸತಕ್ಕದ್ದು.

(ಪಂಡಿತ್ ಠಾಕೂರ್‌ದಾಸ್ ಭಾರ್ಗವ)

**ಪಂಡಿತ ಠಾಕೂರ್‌ದಾಸ್ ಭಾರ್ಗವ:** (ಬೆಳಿಗ್ಗೆ ೧೦ ಗಂಟೆ) ೩೮೦ ನೇ ನಂಬರ್ ತಿದ್ದುಪಡಿಗೆ ಸಂಬಂಧಿಸಿದಂತೆ ತತ್ಕಾಲಕ್ಕೆ ಅದನ್ನು ಅಮಾನತ್ತಿನಲ್ಲಿಡುವಂತೆ ನಿಮ್ಮಲ್ಲಿ ಮನವಿ ಮಾಡುತ್ತಿರುವೆ. ೪೫ ನೇ ಕಲಮ್ಮನ್ನು ಇತ್ಯರ್ಥಗೊಳಿಸಿದ ನಂತರ ಈ ತಿದ್ದುಪಡಿ ಸುಸಂಗತವಾಗುತ್ತದೆ.

**ಮಾನ್ಯ ಸಭಾಪತಿ:** ಅಂದರೆ ಈ ಕಲಮ್ಮನ್ನು ಪ್ರತ್ಯೇಕ ತೆಗೆದಿಟ್ಟು ೪೫ ನೇ ಕಲಮ್ಮನ್ನು ಇತ್ಯರ್ಥಗೊಳಿಸಿದ ನಂತರ ಬಗೆಹರಿಸೋಣ ಎಂದು ಅರ್ಥ.

**ಡಾ. ಅಂಬೇಡ್ಕರ್:** ಇದನ್ನು ಇತ್ಯರ್ಥಗೊಳಿಸಬಹುದು. ಏಕೆಂದರೆ ಅದು ಸಮಯಕ್ಕೆ ಸಂಬಂಧಿಸಿದ ವಿಚಾರವನ್ನೊಳಗೊಂಡಿದೆ.

**ಮಾನ್ಯ ಸಭಾಪತಿ:** ಹಾಗಿದ್ದಲ್ಲಿ ಈ ಹಂತದಲ್ಲಿ ನಾನು ೪೫ ನೇ ಕಲಮ್ಮನ್ನು ಎತ್ತಿಕೊಳ್ಳುವೆ.

**ಶ್ರೀ ಐಯ್ಯುಣ್ಣಿ (ಟ್ರಾವಂಕೂರ್ ಕೊಚಿನ್):** ೪೪ನೇ ಕಲಮ್ಮಿಗೆ ನನ್ನದೊಂದು ತಿದ್ದುಪಡಿ ಇದೆ.

**ಮಾನ್ಯ ಸಭಾಪತಿ:** ನಾನು ಮೊದಲಿಗೆ ೪೫ ನೇ ಕಲಮ್ಮನ್ನು ಎತ್ತಿಕೊಳ್ಳುತ್ತೇನೆ. ಅನಂತರ ೪೪ ನೇ ಕಲಮ್ಮಿಗೆ ಬರುತ್ತೇನೆ.

**ಕಲಂ–೪೫.**— (ಮತಗಟ್ಟೆ ಏಜೆಂಟ್ ಆಗಲು ಅನರ್ಹತೆಗಳು)

**ಪಂಡಿತ್ ಮುನೀಶ್ವರದತ್ ಉಪಾಧ್ಯಾಯ:** ನನ್ನದೊಂದು ತಿದ್ದುಪಡಿ ಕಾಯ್ದೆ ३೮೧ ನೇ ನಂಬರಿನದು.

**ಮಾನ್ಯ ಸ್ಪೀಕರ್:** ಅದೊಂದು ನೇತ್ಯಾತ್ಮಕ ತಿದ್ದುಪಡಿ. ಕಲಮ್ಮನ್ನು ಚರ್ಚೆಗೆತ್ತಿಕೊಂಡಾಗ ಅವರು ಕಲಮ್ಮನ್ನು ವಿರೋಧಿಸಬಹುದು.

***ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನಮ್ಮಲ್ಲಿರುವುದು ೧ ರಿಂದ ೬ ರವರೆಗಿನ ಪಟ್ಟಿಗಳು ಮಾತ್ರ.

**ಮಾನ್ಯ ಸಭಾಪತಿ:** ೧ ರಿಂದ ೭ ರವರೆಗೆ ಯಾದಿಗಳನ್ನು ಒಟ್ಟುಗೂಡಿಸಲಾಗಿದೆ. ಪೂರಕ ಪಟ್ಟಿ ಒಂದರಲ್ಲಿ "೭ ನೇ ನಂಬರುವರೆಗಿನ ಯಾದಿಗಳನ್ನು ಸೇರಿಸಲಾಗಿದೆ" ಎನ್ನುವ ಹೇಳಿಕೆ ಇದೆ. ಇದು ೧೮ ನೇ ಪುಟದ ೧೧೨ ನೇ ನಂಬರಿನಲ್ಲಿದೆ.

**ಶ್ರೀ ಐಯುಣ್ಣಿ:** ಮತಗಟ್ಟೆ ಏಜೆಂಟರ ಬಗ್ಗೆ ನನ್ನ ಅರಿಕೆಯಲ್ಲಿ ಹೆಚ್ಚಿನ ಕೆಲಸವೇನೂ ಇಲ್ಲ. ಅವನು ಬೆಳಿಗ್ಗೆ ಬರುತ್ತಾನೆ ಸಂಜೆ ಆರರಿಂದ ಏಳು ಗಂಟೆಯವರೆಗೆ ಇದ್ದು ಕಲಾಪವನ್ನು ವೀಕ್ಷಿಸುತ್ತಾನೆ. ಸೋಗು ಹಾಕಿ ಮತ ಚಲಾಯಿಸಲು ಯಾರಾದರೂ ಬಂದಲ್ಲಿ, ಇತ್ಯಾದಿಯಾಗಿ. ಅವನು ವಾಸ್ತವವಾಗಿ ಬಂದಿರುವ ವ್ಯಕ್ತಿಗಳಿಗೆ ಮತದಾನದ ಹಕ್ಕಿದೆಯೇ ಎಂಬುದನ್ನು ಪರೀಕ್ಷೆ ಮಾಡಬೇಕು. ಅದು ಅವನ ಕೆಲಸ. ಅಭ್ಯರ್ಥಿಯೊಬ್ಬನಿಗೆ ಅಗತ್ಯವಾದ ಎಲ್ಲ ಷರತ್ತುಗಳನ್ನೂ ಈಡೇರಿಸುವಂತೆ ಅವನನ್ನು ಕೇಳುವ ಅಗತ್ಯವಿಲ್ಲ. ಅವನು ವಿಧಾನ ಸಭೆಗೋ ಅಥವಾ ಸಂಸತ್ತಿಗೋ ಅಭ್ಯರ್ಥಿಯನ್ನು ಅನುಸರಿಸಿ ಹೋಗುವುದಿಲ್ಲ. ಅವನೊಬ್ಬ ಮತದಾರನಾಗಿದ್ದರೆ ಸಾಕು. ಅದು ವಿಷಯದ ಆವಶ್ಯಕತೆಗಳನ್ನು ಪೂರೈಸುತ್ತದೆ. ಆದ್ದರಿಂದ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಮಾನ್ಯ ಕಾನೂನು ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

**ಡಾ. ಅಂಬೇಡ್ಕರ್:** ನನಗೇನೂ ಗೊತ್ತಾಗುತ್ತಿಲ್ಲ. ಈ ವಿಷಯಗಳಲ್ಲಿ ನನಗೆ ಹೆಚ್ಚಿನ ಆಸಕ್ತಿಯೂ ಇಲ್ಲ. ಅವರನ್ನು ನಾವು ಕೆಲವು ಅನರ್ಹತೆಗಳಿಗೆ ಗುರಿಪಡಿಸಿದಲ್ಲಿ ಮತಗಟ್ಟೆಗಳ ಏಜೆಂಟರುಗಳ ಸಂಖ್ಯೆ ಕುಗ್ಗಿ ಹೋಗಬಹುದು. ಏಜೆಂಟರುಗಳು ಸಿಗದೇ ಹೋಗಬಹುದು. ಇದರಿಂದ ಚುನಾವಣೆ ನಡೆಸಲು ಕಷ್ಟವಾಗಬಹುದು ಎಂಬಂಥ ತೊಂದರೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾನ್ಯ ಮಿತ್ರರಾದ ಪಂಡಿತ್ ಮುನೀಶ್ವರದತ್ ಉಪಾಧ್ಯಯರು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಾನು ತಯಾರಿದ್ದೇನೆ.

**ಮಾನ್ಯ ಸಭಾಪತಿ:** ಅಂದರೆ ಇಡೀ ಕಲಮ್ಮನ್ನೆ ಕೈ ಬಿಡುವಿರಾ?

**ಡಾ. ಅಂಬೇಡ್ಕರ್:** ಇಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶವುಳ್ಳ ನನ್ನ ಸ್ನೇಹಿತರು ನಿಗದಿತ ವಯಸ್ಸಿಗಿಂತ ಕಿರಿಯರಾದ, ಮತದಾರಾರೂ ಆಗಿರದ ಕಾಲೇಜು ವಿಧ್ಯಾರ್ಥಿಗಳನ್ನು ಅವಲಂಬಿಸುತ್ತಾರೆ ಎಂದು ನಾನು ಕೇಳಿದ್ದೇನೆ. ಯುವ ವಿದ್ಯಾರ್ಥಿಗಳನ್ನು ರಾಜಕೀಯ ರಂಗಕ್ಕೆ ಎಳೆಯುವ ಮೂಲಕ ಅವರಿಗೆ ಸಾಕಷ್ಟು ಬಾಧೆಯುಂಟುಮಾಡಿದ್ದೀರಿ ಎಂದು ನಾನು ನನ್ನ ಮಿತ್ರರಿಗೆ ಹೇಳಿದ್ದೇನೆ. ಇನ್ನು ಮುಂದೆ ಮತ್ತೆ ಈ ರೀತಿ ಮಾಡಬಾರದೆಂದೂ ಹೇಳಿದ್ದೇನೆ. ಇಂಥದೊಂದು ಸೌಕರ್ಯ ಬೇಕೆಂದು ಅವರು ಕೇಳಿದ್ದಾರೆ. ಆದ್ದರಿಂದ ಆ ಸೂಚನೆಗೆ ಅನುಮತಿ ನೀಡಲುದ್ದೇಶಿಸಿದ್ದೇನೆ.

**ಮಾನ್ಯ ಸಭಾಪತಿ:** ನಾನಾಗಲೇ ಹೇಳಿದಂತೆ, ನಾನು ತಪ್ಪಾಗಿ ತಿಳಿದಿಲ್ಲದಿದ್ದಲ್ಲಿ, ೪೫ ನೇ ಕಲಮ್ಮನ್ನು ಇಡಿಯಾಗಿ ಕೈಬಿಡಬೇಕಾಗುತ್ತದೆ ಮತ್ತು ತಿರಸ್ಕರಿಸಬೇಕಾಗುತ್ತದೆ. ನಾನು ಮೊದಲು ಕಲಮ್ಮನ್ನು ಸದನದ ಮುಂದಿಡುತ್ತೇನೆ. ಸೂಚನೆ ಏನೆಂದರೆ:

---

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೨೧ ಮೇ, ೧೯೫೧ ಪು: ೯೧೭೯

"೪೫ ನೇ ಕಲಂ ಮಸೂದೆಯ ಭಾಗವಾಗಿದೆ".

ಸೂಚನೆ ತಿರಸ್ಕೃತವಾಗಿದೆ.

****ಕಲಂ ೪೪.**— (ಮತಗಟ್ಟೆ ಏಜೆಂಟರು) ಮುಂದುವರಿದದ್ದು.

**ಮಾನ್ಯ ಸಭಾಪತಿ:** ಈಗ ೪೪ನೇ ಕಲಮ್ಮಿಗೆ ಬರೋಣ.

**ಪಂಡಿತ ಠಾಕೂರ್‌ದಾಸ್ ಭಾರ್ಗವ:** ಅನುಮತಿ ಕೋರಿ ನಾನು ಸೂಚಿಸುತ್ತಿದ್ದೇನೆ.

೪೪ನೇ ಕಲಮ್ಮಿನಲ್ಲಿ "ಮೂರು ದಿನಗಳು" ಎನ್ನುವ ಪದಗಳಿಗೆ ಪರ್ಯಾಯವಾಗಿ "ಒಂದು ದಿನ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

ಸ್ವಾಮಿ, ನಾವೀಗ ೪೫ನೇ ಕಲಮ್ಮನ್ನು ಬಿಟ್ಟಿದ್ದೇವೆ. ಪರಿಶೀಲನಾ ಕೆಲಸಕ್ಕೆ ಮೂರು ದಿನಗಳು ಬೇಕಾಗಿಲ್ಲ. ಚುನಾವಣಾಧಿಕಾರಿಗೆ ಒಂದು ದಿನ ಮುಂಚೆ ಹೆಸರುಗಳು ಸಿಕ್ಕರೆ ಸಾಕು. ಆದ್ದರಿಂದ ನಾನು "ಮೂರು ದಿನಗಳು" ಪದಗಳಿಗೆ ಬದಲಾಗಿ "ಒಂದು ದಿನ" ಸೇರಿಸುವಂತೆ ಸಲಹೆ ಮಾಡಿದ್ದೇನೆ.

**ಮಾನ್ಯ ಸಭಾಪತಿ:** ತಿದ್ದುಪಡಿ ಸೂಚಿಸಲಾಗಿದೆ.

ಕಲಂ ೪೪ ಕಲಮ್ಮಿನಲ್ಲಿ "ಮೂರು ದಿನಗಳು" ಎನ್ನುವ ಪದಗಳಿಗೆ ಪರ್ಯಾಯವಾಗಿ "ಒಂದು ದಿನ" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

**ಡಾ. ಅಂಬೇಡ್ಕರ್:** ಮಾನ್ಯ ಸ್ಪೀಕರ್ ಅವರೇ, ೪೫ ನೇ ಕಲಮ್ಮನ್ನು ರದ್ದುಗೊಳಿಸುವುದರಿಂದ ಮೇಲ್ನೋಟಕ್ಕೆ ನನಗನ್ನಿಸುತ್ತದೆ, ಒಂದು ದಿನ ಸಾಕೆಂದು. ಆದರೆ ಮುಚ್ಚುಮರೆ ಇಲ್ಲದೆಯೇ ಮಾತನಾಡುವುದಾದರೆ, ಈ ವಿಷಯವನ್ನು ಚುನಾವಣಾ ಆಯುಕ್ತರೊಂದಿಗೆ ಚರ್ಚಿಸುವ ಅವಕಾಶ ನನಗೆ ಒದಗಿಬರಲೇ ಇಲ್ಲ. ಈ ಪದ ಏನಾದರೂ ತೊಂದರೆಯನ್ನು ಉಂಟು ಮಾಡುವುದೇ ಎಂದು ಅವರ ಅಭಿಪ್ರಾಯವನ್ನೂ ತಿಳಿಯಲಾಗಲಿಲ್ಲ. ಆದ್ದರಿಂದ, ಈ ವಿಷಯಕ್ಕೆ ಸಂಬಂಧಿಸಿದಂತೆ, ಕಲಮ್ಮನ್ನು ಈಗಿರುವ ರೀತಿಯಲ್ಲೆ ಉಳಿಸಿಕೊಳ್ಳಲು ಅನುಮತಿ ನೀಡಬೇಕೆಂದು ನನ್ನ ಸಲಹೆ. ಒಂದು ದಿನ ನಿಜಕ್ಕೂ ಸಾಕು, ಅದಕ್ಕಿಂತ ಹೆಚ್ಚಿನ ಅಗತ್ಯವಿಲ್ಲ ಎಂಬುದು ನನಗೆ ಮನವರಿಕೆಯಾದಲ್ಲಿ ಸೂಕ್ತ ತಿದ್ದುಪಡಿಯೊಂದರ ಮೂಲಕ ಈ ವಿಷಯಕ್ಕೆ ನಾನು ಮರಳಿ ಬರಬಹುದು. ಈ ಕ್ಷಣ ಅದನ್ನು ತಳ್ಳಿಹಾಕುವ ಇಚ್ಛೆ ನನಗಿಲ್ಲ.

**ಮಾನ್ಯ ಸಭಾಪತಿ:** ಅಂದರೆ ಈ ಕಲಮ್ಮನ್ನು ಹಿಡಿದಿರಿಸಲಾಗಿದೆ?

**ಡಾ. ಅಂಬೇಡ್ಕರ್:** ಹೌದು.

**ಮಾನ್ಯ ಸ್ಪೀಕರ್:** ಹಾಗಿದ್ದಲ್ಲಿ ನಾವು ಇನ್ನಿತರ ತಿದ್ದುಪಡಿಗಳನ್ನು ಇತ್ಯರ್ಥಗೊಳಿಸಬಹುದು.

**ಶ್ರೀ ರಾಮಲಿಂಗಂ ಚೆಟ್ಟಿಯಾರ್ (ಮದ್ರಾಸ್):** ಈ ತಿದ್ದುಪಡಿಗೆ ನೀವು ಅನುಮತಿ ನೀಡುವ ಮೊದಲು ನನ್ನದೊಂದು ಸಲಹೆ. ಮತಗಟ್ಟೆ ಏಜೆಂಟರನ್ನು ಕ್ಷಿಪ್ರ ಕಾಲಾವಕಾಶದಲ್ಲಿ ನೇಮಕ ಮಾಡಬೇಕಾಗಬಹುದು.... ಕಾರ್ಯಸಾಧುವಾದ ರೀತಿಯಲ್ಲಿ ವಿಷಯ ನಿರ್ವಹಣೆ ದೃಷ್ಟಿಯಿಂದ ಮೂರು ದಿನಗಳೆಂದು ಇಲ್ಲಿ ಹೇಳುವುದು ಅನನುಕೂಲಕರವಾಗಬಹುದು. ಕಾನೂನು ಸಚಿವರು ಈ ಅಂಶವನ್ನು ಪರಿಶೀಲಿಸಬೇಕು.

**ಡಾ. ಅಂಬೇಡ್ಕರ್:** ಖಂಡಿತವಾಗಿಯೂ ನಾನು ಪರಿಶೀಲಿಸುತ್ತೇನೆ.

ಈಗ ನಾನು ನನ್ನ ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ. ಅನುಮತಿ ಕೋರಿ ಮಂಡಿಸುತ್ತಿದ್ದೇನೆ:

---

** ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೨೧ ಮೇ, ೧೯೫೧ ಪು: ೯೧೪೦–೪೪

(i) ೪೪ ನೇ ಕಲಮ್ಮಿನಲ್ಲಿ "ಒಬ್ಬ ಏಜೆಂಟ್ ಮತ್ತು ಇಬ್ಬರು ಬದಲಿ ಏಜೆಂಟರುಗಳಿಗಿಂತ ಹೆಚ್ಚು ಮಂದಿ ಆತನ ಮತಗಟ್ಟೆ ಏಜೆಂಟರಾಗಿ ಕಾರ್ಯ ನಿರ್ವಹಿಸಲು" ಎನ್ನುವ ಪದಗಳಿಗೆ ಪರ್ಯಾಯವಾಗಿ "ಆ ಅಭ್ಯರ್ಥಿಯ ಮತಗಟ್ಟೆ ಏಜೆಂಟರಾಗಿ ಕೆಲಸ ಮಾಡಲು ಗೊತ್ತುಪಡಿಸಲಾದ ಅಷ್ಟು ಸಂಖ್ಯೆಯ ಏಜೆಂಟರುಗಳು ಮತ್ತು ಬದಲಿ ಏಜೆಂಟರುಗಳು" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

(ii) ೪೪ ನೇ ಕಲಮ್ಮಿನಲ್ಲಿ "ಗೊತ್ತು ಪಡಿಸಬಹುದಾದ ಅಂಥ ಅಧಿಕಾರಿ ಮತ್ತು" ಈ ಪದಗಳನ್ನು ಬಿಡತಕ್ಕದ್ದು.

**ಶ್ರೀ ಶಿವಚರಣಲಾಲ್:** ಎರಡನೆಯ ಭಾಗ ನನಗೆ ಕೇಳಿಸಲಿಲ್ಲ ಸ್ವಾಮಿ.

**ಮಾನ್ಯ ಸ್ಪೀಕರ್:** ನಾನು ಅದನ್ನು ಪುನಃ ಓದುತ್ತೇನೆ (ಡಾ. ಅಂಬೇಡ್ಕರ್ ಅವರು ಮಂಡಿಸಿದ ಮೇಲಿನ ತಿದ್ದುಪಡಿ)

ಕಲಮ್ಮಿನಲ್ಲಿರುವ ಪದಗಳನ್ನು ಹಾಗೆಯೇ ಇರಗೊಡಬೇಕು. ಅವನ್ನು ಕೈಬಿಡಬಾರದು ಎಂದು ಮಾನ್ಯ ಕಾನೂನು ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

(ಸಭಾಧ್ಯಕ್ಷರ ಪೀಠದಲ್ಲಿ ಪಂಡಿತ್ ಠಾಕೂರ್‌ದಾಸ್ ಭಾರ್ಗವ)

"ಗೊತ್ತು ಪಡಿಸಬಹುದಾದ ಅಂಥ ಅಧಿಕಾರಿ" ಎನ್ನುವ ಪದಗಳನ್ನು ಹಾಗೆಯೇ ಇರಗೊಡತಕ್ಕದ್ದು. ಇದರತ್ತ ನಾನು ಮಾನ್ಯ ಕಾನೂನು ಸಚಿವರ ಗಮನ ಸೆಳೆಯಲಿಚ್ಛಿಸುತ್ತಿದ್ದೇನೆ. ಹಾಗಾದಲ್ಲಿ ಮಾಮೂಲಿನಂತೆ ಚುನಾವಣಾಧಿಕಾರಿ ಮತಗಟ್ಟೆ ಏಜೆಂಟರುಗಳ ನೇಮಕದ ಅರ್ಜಿ ಸ್ವೀಕರಿಸಲು ಮತಗಟ್ಟೆ ಅಧಿಕಾರಿಗಳಿಗೆ ಆದೇಶಿಸಬಹುದು.

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ):** ಎರಡನೇ ತಿದ್ದುಪಡಿ ಏನದು ಎಂದು ನಾನು ತಿಳಿಯಬಹುದೆ?

**ಡಾ. ಅಂಬೇಡ್ಕರ್:** ೪೪ ನೇ ಕಲಮ್ಮಿನ ಕೊನೆಯ ಪದಗಳು ಈ ಕೆಳಕಂಡಂತಿರುತ್ತವೆ. ನನ್ನ ಮಾನ್ಯ ಮಿತ್ರರು ಗಮನಿಸತಕ್ಕದ್ದು.

"ನೇಮಕದ ಸೂಚನೆ ಪತ್ರವನ್ನು ನಿಗದಿತ ರೀತಿಯಲ್ಲಿ ಚುನಾವಣಾಧಿಕಾರಿಗೆ ಮತ್ತು ಗೊತ್ತುಪಡಿಸಬಹುದಾದ ಅಂಥ ಇನ್ನೊಬ್ಬ ಅಧಿಕಾರಿಗೆ"

ಮತಗಟ್ಟೆ ಏಜೆಂಟರ ಸೂಚನಾ ಪತ್ರವನ್ನು ಚುನಾವಣಾಧಿಕಾರಿಗೆ ಅಥವಾ ಗೊತ್ತುಪಡಿಸಬಹುದಾದ ಅಂಥ ಇನ್ನೊಬ್ಬ ಅಧಿಕಾರಿಗೆ ನೀಡಬಹುದೆಂದು ನಿಯಮ ಆದೇಶಿಸಬಹುದು. ""ಗೊತ್ತುಪಡಿಸಬಹುದಾದ ಅಂಥ ಇನ್ನೊಬ್ಬ ಅಧಿಕಾರಿಗೆ" ಎಂಬ ಪದಗಳನ್ನು ಕೈಬಿಡುವ ಪ್ರಯತ್ನ ನನ್ನದು. ಇದರ ಪರಿಣಾಮವೆಂದರೆ ಚುನಾವಣಾಧಿಕಾರಿಗೆ ಮಾತ್ರ ತಿಳಿಸುವುದು ಎಂದು.

**ಮಾನ್ಯ ಸಭಾಧ್ಯಕ್ಷರು:** ಈಗಿರುವಂತೆ ಮತ್ತೊಬ್ಬ ಅಧಿಕಾರಿಯನ್ನು ನೇಮಿಸುವುದು ಸರ್ಕಾರದ ವಿವೇಚನೆಗೆ ಬಿಟ್ಟಿದ್ದು. ಈ ತಿದ್ದುಪಡಿ ವಿವೇಚನಾಧಿಕಾರವನ್ನು ಕಿತ್ತುಕೊಳ್ಳುತ್ತಿದೆ. ರೂಢಿಯಲ್ಲಿರುವಂತೆ ಸೂಚನಾ ಪತ್ರವನ್ನು ಮತಗಟ್ಟೆ ಅಧಿಕಾರಿಗೆ ಅಥವಾ ಆ ಸಮಯಕ್ಕೆ ಅಲ್ಲಿರುವ ಚುನಾವಣಾಧಿಕಾರಿಗೆ ನೀಡಲಾಗುತ್ತದೆ. ಆದ್ದರಿಂದ ಈ ಪದಗಳು ಅಧಿಕಾರ ಕೊಡಲು ಶಕ್ತವೇ ಎಂಬುದನ್ನು ಪರಿಶೀಲಿಸುವಂತೆ ಮಾನ್ಯ ಕಾನೂನು ಸಚಿವರನ್ನು ಕೋರುತ್ತೇನೆ.

ಟಿ. ೪೮೯೩–೩೯ಎ.

**ಡಾ. ಅಂಬೇಡ್ಕರ್:** ಈ ವಿಷಯದಲ್ಲಿ ಆಂತರಿಕ ವಿದ್ಯಮಾನ ನಿಮಗೆ ಗೊತ್ತಿರುವುದೇ ಆಗಿದೆ. ವೈಯಕ್ತಿಕವಾಗಿ ಹೇಳುವುದಾದರೆ ಕಲಮ್ಮಿನಲ್ಲಿ ಈಗಿರುವ ಪದಗಳಿಂದ ನನಗೆ ಸಮಾಧಾನವಿದೆ ; ನನ್ನ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡು ಪದಗಳನ್ನು ಈಗಿರುವಂತೆಯೇ ಬಿಡಲು ನಾನು ಸಿದ್ಧನಿದ್ದೇನೆ.

**ಶ್ರೀ ಜೆ.ಆರ್. ಕಪೂರ್:** "ಚುನಾವಣಾಧಿಕಾರಿ ಅಥವಾ ಅಂಥ ಇನ್ನೊಬ್ಬ ಅಧಿಕಾರಿ" ಎಂದಾಗಬಹುದೆಂದು ನನ್ನ ಸಲಹೆ.

**ಡಾ. ಅಂಬೇಡ್ಕರ್:** ಚುನಾವಣಾಧಿಕಾರಿಗೆ ಎಲ್ಲವೂ ತಿಳಿದಿರಲೇ ಬೇಕು.

**ಮಾನ್ಯ ಸಭಾಧ್ಯಕ್ಷರು:** ಈ ಸಲಹೆ ಬಗ್ಗೆ ಮಾನ್ಯ ಸಚಿವರಿಗೆ ಬೇರೇನಾದರೂ ಹೇಳುವುದಿದೆಯೆ?

**ಡಾ. ಅಂಬೇಡ್ಕರ್:** ಅದನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ.

**ಶ್ರೀ ಜೆ.ಆರ್. ಕಪೂರ್:** "ಅಥವಾ" ಎನ್ನುವ ಪದಕ್ಕೆ ಪರ್ಯಾಯವನ್ನು ಸೂಚಿಸದೇ ಹೋದಲ್ಲಿ "ಅಂಥ ಇನ್ನೊಬ್ಬ ಅಧಿಕಾರಿ" ಪದಗಳನ್ನು ಉಳಿಸಿಕೊಳ್ಳುವುದರ ಉದ್ದೇಶವೇ ವ್ಯರ್ಥವಾಗುತ್ತದೆ. ಅಭ್ಯರ್ಥಿಗೆ ತನ್ನ ಮತಗಟ್ಟೆ ಏಜೆಂಟರ ಹೆಸರನ್ನು ಚುನಾವಣಾಧಿಕಾರಿಗೆ ಸಲ್ಲಿಸುವ ಸೌಕರ್ಯವಿರಬೇಕೆಂಬುದೇ ನಮ್ಮ ಉದ್ದೇಶ. ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಿಲ್ಲ ಎಂದಾದಲ್ಲಿ ಎರಡನ್ನೂ ಉಳಿಸಿಕೊಳ್ಳುವ ಬದಲು ಈ ಪದಗಳನ್ನು ತೆಗೆದು ಹಾಕಬೇಕೆಂದು ನಾನು ಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಇಬ್ಬರು ಅಧಿಕಾರಿಗಳಿಗೂ ಸೂಚನಾ ಪತ್ರ ನೀಡಬೇಕಾದ ಅಗತ್ಯವಿದೆ ಎಂದು ಅರ್ಥವಲ್ಲ.

**ಮಾನ್ಯ ಸಭಾಧ್ಯಕ್ಷರು:** ಅವಧಿಯ ಪ್ರಶ್ನೆ ಇನ್ನೂ ಅನಿಶ್ಚಯವಾಗಿಯೇ ಇದೆ. ಅಲ್ಲಿಯವರೆಗೆ ಇದನ್ನು ತೀರ್ಮಾನಿಸಲಾಗದು.

**ಶ್ರೀ ಜೆ.ಆರ್. ಕಪೂರ್:** ೪೪ ನೇ ಇಡೀ ಕಲಮ್ಮಿನ ಚರ್ಚೆಯನ್ನು ಮುಂದಕ್ಕೆ ಹಾಕಬಹುದು.

**ಡಾ. ಅಂಬೇಡ್ಕರ್:** ನನ್ನ ಸಲಹೆ ಏನೆಂದರೆ, ನನ್ನ ಮೊದಲ ತಿದ್ದುಪಡಿಯುನ್ನು ಪರಿಶೀಲನೆಗೆತ್ತಿಕೊಳ್ಳಬಹುದು ಮತ್ತು ಎರಡನೆಯದನ್ನು ಮುಂದಕ್ಕೆ ಹಾಕಬಹುದು.

**ಪಂಡಿತ ಮುನೀಶ್ವರದತ್ ಉಪಾಧ್ಯಾಯ:** ಪ್ರತಿಯೊಂದು ಮತಗಟ್ಟೆಗೂ ಒಬ್ಬ ಏಜೆಂಟ್ ಮತ್ತು ಒಬ್ಬ ಬದಲಿ ಏಜೆಂಟ್ ಹೀಗೆ ಇಬ್ಬರು ಏಜೆಂಟರುಗಳನ್ನು ನೇಮಿಸಲಾಗುವುದೇ ಎನ್ನುವುದನ್ನು ನಾವಿನ್ನೂ ನಿರ್ಧರಿಸಿಲ್ಲವಾದ್ದರಿಂದ ಎರಡನ್ನೂ ಏಕೆ ತಡೆ ಹಿಡಿಯಬಾರದು.

**ಡಾ. ಅಂಬೇಡ್ಕರ್:** ಮೊದಲನೆಯದಕ್ಕೆ ಎರಡನೆಯದರೊಂದಿಗೆ ಅಂತರ್ಗತ ಸಂಬಂಧವಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಏನೆಂದರೆ:

> ೪೪ ನೇ ಕಲಮ್ಮಿನಲ್ಲಿ "ಒಬ್ಬ ಏಜೆಂಟ್ ಮತ್ತು ಇಬ್ಬರು ಬದಲಿ ಏಜೆಂಟರುಗಳಿಗಿಂತ ಹೆಚ್ಚು ಮಂದಿ ಆತನ ಮತಗಟ್ಟೆ ಏಜೆಂಟರಾಗಿ ಕಾರ್ಯ ನಿರ್ವಹಿಸಲು" ಎನ್ನುವ ಪದಗಳಿಗೆ ಪರ್ಯಾಯವಾಗಿ "ಆ ಅಭ್ಯರ್ಥಿಯ ಮತಗಟ್ಟೆ ಏಜೆಂಟರಾಗಿ ಕೆಲಸಮಾಡಲು ಗೊತ್ತುಪಡಿಸಲಾದ ಅಷ್ಟು ಸಂಖ್ಯೆಯ ಏಜೆಂಟರುಗಳು ಮತ್ತು ಬದಲಿ ಏಜೆಂಟರುಗಳು" ಎನ್ನುವ ಪದಗಳನ್ನು ಸೇರಿಸತಕ್ಕದ್ದು.

ಸೂಚನೆ ಅಂಗೀಕೃತವಾಗಿದೆ

**ಮಾನ್ಯ ಸಭಾಪತಿಗಳು:** ಎರಡನೇ ತಿದ್ದುಪಡಿಯನ್ನು ಮುಂದಕ್ಕೆ ಹಾಕಲಾಗಿದೆ.

***ಕಲಂ–೪೬.**— (ಎಣಿಕೆ ಏಜೆಂಟರುಗಳು)

**ಶ್ರೀ ಚರಣಲಾಲ್:** ಸಂಚಿತ ಪಟ್ಟಿ ಒಂದರಲ್ಲಿ ಒಂದು ತಿದ್ದುಪಡಿ ನಂ ೩೮೨ ಪಂಡಿತ ಭಾರ್ಗವ ಅವರ ಹೆಸರಿನಲ್ಲಿದೆ. ಅದನ್ನು ಸೂಚಿಸಲು ನನಗೆ ಅನುಮತಿ ನೀಡಬೇಕು.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸಚಿವರ ಪ್ರತಿಕ್ರಿಯೆ ತಿಳಿಯಬಯಸುವೆ.

**ಡಾ. ಅಂಬೇಡ್ಕರ್:** ಅದಕ್ಕೆ ಅನುಮತಿ ನೀಡಬಹುದು.

**ಮಾನ್ಯ ಸಭಾಧ್ಯಕ್ಷರು:** ಆಗಲಿ, ಮಾನ್ಯ ಸದಸ್ಯರು ಅದನ್ನು ಸೂಚಿಸಬಹುದು.

ತಿದ್ದುಪಡಿ ಸೂಚಿಸಿದ್ದು:

> ನಲವತ್ತಾರನೇ ಕಲಮ್ಮಿನ ಎರಡನೇ ಸಾಲಿನಲ್ಲಿ ಬರುವ "ಆದೀತು" ಎನ್ನುವ ಪದಗಳ ಮೊದಲು "ಅಥವಾ ಅವನ ಚುನಾವಣಾ ಏಜೆಂಟ್" ಪದಗಳನ್ನು ಸೇರಿಸತಕ್ಕದ್ದು.
>
> (ಶ್ರೀ ಶಿವಚರಣಲಾಲ್)

ಸೂಚನೆ ಅಂಗೀಕೃತವಾಯಿತು.

೪೬ ನೇ ಕಲಮ್ಮನ್ನು, ತಿದ್ದುಪಡಿಯಾದಂತೆ, ಮಸೂದೆಗೆ ಸೇರಿಸಲಾಗಿದೆ.

**ಕಲಂ–೪೭.**— (ಮತಗಟ್ಟೆ ಏಜೆಂಟ್ ಇತ್ಯಾದಿಗಳ ನೇಮಕವನ್ನು ರದ್ದುಗೊಳಿಸುವುದು)

**ಡಾ. ಅಂಬೇಡ್ಕರ್:** ಅನುಮತಿ ಕೋರಿ ಸೂಚಿಸುತ್ತಿದ್ದೇನೆ.

೪೭ ನೇ ಕಲಮ್ಮಿಗೆ ಈ ಕೆಳಗಿನ ವಿಧಿಯನ್ನು ಪರ್ಯಾಯವಾಗಿ ಸೇರಿಸತಕ್ಕದ್ದು.

> "ಮತಗಟ್ಟೆ ಏಜೆಂಟ್ ಅಥವಾ ಮತ ಎಣಿಕೆ ಏಜೆಂಟರ ನೇಮಕವನ್ನು ರದ್ದುಗೊಳಿಸುವುದು ಅಥವಾ ಮರಣ ಕಾರಣದಿಂದಾಗಿ (೧) ಮತಗಟ್ಟೆ ಏಜೆಂಟರ ನೇಮಕವನ್ನು ರದ್ದುಗೊಳಿಸುವುದಕ್ಕೆ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟನ ಸಹಿ ಇರಬೇಕು ಹಾಗೂ ಇದು ಚುನಾವಣಾಧಿಕಾರಿಗೆ ರದ್ದತಿ ಪತ್ರ ಸಲ್ಲಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಇಂಥ ರದ್ದತಿಯಿಂದಾಗಿ ಅಥವಾ ಮತಗಟ್ಟೆ ಏಜೆಂಟನ ಮರಣದಿಂದಾಗಿಯಾಗಲೀ ಅಭ್ಯರ್ಥಿಯು ಅಥವಾ ಆತನ ಚುನಾವಣಾ ಏಜೆಂಟ್ ಮತದಾನ ಮುಗಿಯುವುದರೊಳಗೆ ಇನ್ನೊಬ್ಬ ಏಜೆಂಟನನ್ನು ಗೊತ್ತುಪಡಿಸಿರುವ ರೀತಿಯಲ್ಲಿ ನೇಮಿಸಿಕೊಳ್ಳಬಹುದು. ಇಂಥ ನೇಮಕವನ್ನು ಕೂಡಲೇ ವಿಧಿಬದ್ಧ ರೀತಿಯಲ್ಲಿ ಚುನಾವಣಾಧಿಕಾರಿಯ ಅವಗಾಹನೆಗೆ ತರಬೇಕು. (೨) ಮತ ಎಣಿಕೆ ಏಜೆಂಟರ ನೇಮಕಾತಿ ರದ್ದುಗೊಳಿಸಿರುವುದಕ್ಕೆ ಅಭ್ಯರ್ಥಿಯು ಸಹಿ ಮಾಡಬೇಕು ಹಾಗೂ ಇದು ರದ್ದುಗೊಳಿಸಿರುವ ಪತ್ರವನ್ನು ಚುನಾವಣಾಧಿಕಾರಿಗೆ ಸಲ್ಲಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಇಂಥ ರದ್ಧತಿಯಿಂದಾಗಿ ಅಥವಾ ಮತಗಳ ಎಣಿಕೆಗೆ ಮೊದಲೇ ಏಜೆಂಟ್ ಮರಣ ಹೊಂದಿದಲ್ಲಿ ಅಭ್ಯರ್ಥಿಯು ಗೊತ್ತುಪಡಿಸಿರುವ ರೀತಿಯಲ್ಲಿ ಮತ್ತೊಬ್ಬ ಏಜೆಂಟನನ್ನು ಮತ ಎಣಿಕೆಗೆ ಮುನ್ನ ಯಾವಾಗಲಾದರೂ ನೇಮಕ ಮಾಡಿಕೊಳ್ಳಬಹುದು. ಇಂಥ ನೇಮಕವನ್ನು

---

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೨೧ ಮೇ, ೧೯೫೧ ಪು: ೯೧೮೪–೮೮

ಕೂಡಲೇ ವಿಧಿಬದ್ಧವಾದ ರೀತಿಯಲ್ಲಿ ಚುನಾವಣಾಧಿಕಾರಿಯ ಅವಗಾಹನೆಗೆ ತರಬೇಕು.

**ಶ್ರೀ ಜೆ.ಆರ್. ಕಪೂರ್:** ನಮ್ಮ ಮುಂದೆ ಪ್ರತಿಯಿಲ್ಲದೆ ತಿದ್ದುಪಡಿಯನ್ನು ಅರ್ಥ ಮಾಡಿಕೊಳ್ಳುವುದು ತುಂಬ ಕಷ್ಟವಾಗುತ್ತದೆ.

**ಶ್ರೀ ಸಂತಾನಂ:** ಹಿಂದಿನ ತಿದ್ದುಪಡಿಗೆ ಅನುಸಾರಿಯಾಗಿ "ಅಭ್ಯರ್ಥಿ" ಪದದ ನಂತರ. ಅದು ಎಲ್ಲೆಲ್ಲಿ ಬರುತ್ತೋ ಅಲ್ಲೆಲ್ಲ "ಅಥವಾ ಚುನಾವಣಾ ಏಜೆಂಟ್" ಪದಗಳನ್ನು ಸೇರಿಸಬೇಕು.

**ಡಾ. ಅಂಬೇಡ್ಕರ್:** ನನ್ನ ಆಕ್ಷೇಪಣೆ ಏನಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾನು ಈಗ ತಿದ್ದುಪಡಿಯನ್ನು ತಿದ್ದುಪಡಿಯಾದ ರೂಪದಲ್ಲಿ ಓದುತ್ತೇನೆ. ಇದರಿಂದ ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಬಹುದು. ತಿದ್ದುಪಡಿ (ಡಾ. ಅಂಬೇಡ್ಕರ್ ಅವರದು) ಮೇಲಿನಂತೆ ಮಂಡನೆ.

**ಶ್ರೀ ಶಿವಚರಣ ಲಾಲ್:** ೪೪ ನೇ ಕಲಮ್ಮಿಗೆ ಸಂಬಂಧಿಸಿದ ಹಾಗೆ, ನಾನು ಈಗಾಗಲೇ ಹೇಳಿರುವಂತೆ "ಅಥವಾ ಗೊತ್ತುಪಡಿಸಲಾದ ಅಂಥ ಇನ್ನೊಬ್ಬ ಅಧಿಕಾರಿ" ಎನ್ನುವುದನ್ನು ಒಂದನೆಯ ಪ್ಯಾರಾಗ್ರಾಫಿನಲ್ಲಿ "ಚುನಾವಣಾಧಿಕಾರಿ" ಪದಗಳ ನಂತರ ಸೇರಿಸಿದಲ್ಲಿ ಪ್ರಮೇಯ ಸ್ಪಷ್ಟವಾಗುತ್ತದೆ ಹಾಗೂ ಸುಲಭವಾಗಿ ಅರ್ಥವಾಗುತ್ತದೆ. ಏಕೆಂದರೆ ಮತದಾನ ನಡೆಯುತ್ತಿರುವ ಸಮಯದಲ್ಲಿ ಚುನಾವಣಾಧಿಕಾರಿಯನ್ನು ಪತ್ತೆ ಮಾಡಿ ಹೆಸರಿನಲ್ಲಿ ಬದಲಾವಣೆ ಮಾಡಿಸುವುದು ಬಹಳ ತ್ರಾಸದಾಯಕವಾದ ಕೆಲಸ.

**ಶ್ರೀ ಸಂತಾನಂ:** ಅಲ್ಲಿ "ಚುನಾವಣಾಧಿಕಾರಿ" ಎನ್ನುವ ಪದಗಳಿಲ್ಲ" ವಿಧಿಬದ್ಧವಾದ ರೀತಿಯಲ್ಲಿ" ಎನ್ನುವ ಪದಗಳಿವೆ.

**ಮಾನ್ಯ ಸಭಾಧ್ಯಕ್ಷರು:** ಪ್ರತಿ ಮತಗಟ್ಟೆಯಲ್ಲೂ ಚುನಾವಣಾಧಿಕಾರಿಯನ್ನು ಕಾಣುವುದು ಸಾಧ್ಯವಾಗದೇ ಹೋಗಬಹುದು. ಇದನ್ನು ಸೇರಿಸಿದಲ್ಲಿ ಸೂಚನಾ ಪತ್ರವನ್ನು ಬೇರೆ ಯಾವುದೇ ಒಬ್ಬ ಅಧಿಕಾರಿಗೆ ಕೊಡಬಹುದು. ಇದು ಉತ್ತಮವಾದೀತು.

**ಶ್ರೀ ಸಂತಾನಂ:** ಅದು ಮತ ಎಣಿಕೆ ಏಜೆಂಟನನ್ನು ಕುರಿತದ್ದೇ ಅಥವಾ ಮತಗಟ್ಟೆ ಏಜೆಂಟನನ್ನೇ? ಮತ ಎಣಿಕೆ ಏಜೆಂಟನಿಗೆ ಸಂಬಂಧಿಸಿದಂತೆ ಅದನ್ನು ಚುನಾವಣಾಧಿಕಾರಿಗೆ ಸಲ್ಲಿಸಬೇಕು.

**ಮಾನ್ಯ ಸಭಾಧ್ಯಕ್ಷರು:** ಪದಗಳ ಒಕ್ಕಣೆ ಹೀಗಿದೆ: ನೇಮಕ ಮಾಡಿಕೊಳ್ಳಬಹುದು.......ಮತ್ತೊಬ್ಬ ಮತಗಟ್ಟೆ ಏಜೆಂಟನನ್ನು ಚುನಾವಣೆ ಮುಗಿಯುವುದರೊಳಗೆ ಹಾಗೂ ಕೂಡಲೇ ಇಂಥ ನೇಮಕವನ್ನು ವಿಧಿಬದ್ಧವಾದ ರೀತಿಯಲ್ಲಿ ಚುನಾವಣಾಧಿಕಾರಿಯ ಅವಗಾಹನೆಗೆ ತರಬೇಕು''. ಇದು ಕಾರ್ಯಸಾಧ್ಯವಾದುದಲ್ಲ. ಇಲ್ಲವೇ ಚುನಾವಣಾಧಿಕಾರಿಯ ಅವಗಾಹನೇ ತಂದರಷ್ಟೇ ಸಾಕು ಅಥವಾ ಆನಂತರ ಚುನಾವಣಾಧಿಕಾರಿ ಅಥವಾ ಅಂಥ ಇನ್ನೊಬ್ಬ ಅಧಿಕಾರಿ ಅಥವಾ ಮತಗಟ್ಟೆ ಅಧಿಕಾರಿಯ ಅವಗಾಹನೆಗೆ ತರಬಹುದು.

**ಶ್ರೀ ಸಂತಾನಂ:** "ವಿಧಿಬದ್ಧವಾದ ರೀತಿಯಲ್ಲಿ" ಪದಗಳು ಸಾಕು. "ಚುನಾವಣಾಧಿಕಾರಿ" ಎನ್ನುವ ಪದಗಳನ್ನು ಬಿಡಬಹುದು.

**ಡಾ. ಅಂಬೇಡ್ಕರ್:** ಈ ಎಲ್ಲ ವಿಷಯಗಳೂ ಹಠಾತ್ತನೆ ನನ್ನ ಮೇಲೆ ಎರಗಿವೆ. ಇವೆಲ್ಲವನ್ನೂ ಓದಲು ನನಗೆ ಸಮಯವೇ ಇರಲಿಲ್ಲ. ಇವತ್ತು ಬೆಳಿಗ್ಗೆ ಈ ತಿದ್ದುಪಡಿಯನ್ನು ನನಗೆ ಕೊಡಲಾಯಿತು. ನಾನು ನನ್ನ ಸ್ಥಾನವನ್ನು ರಕ್ಷಿಸಿಕೊಳ್ಳಬೇಕಾಗಿದೆ. ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬಹುದು. ಏಕೆಂದರೆ

ಅದು ನಾನು ಮತ್ತೆ ಸದನದಲ್ಲಿ ಪುನಃ ಪ್ರಸ್ತಾಪಿಸುವ ನನ್ನ ಹಕ್ಕಿನ ವ್ಯಾಪ್ತಿಗೊಳಪಟ್ಟಿದೆ ; ತಿದ್ದುಪಡಿಯಿಂದ ತೊಂದರೆಗಳು ಉದ್ಭವಿಸುತ್ತವೆ ಎಂದಾದಲ್ಲಿ ನಾನು ಅದನ್ನು ಸದನದಲ್ಲಿ ಮತ್ತೆ ಎತ್ತಿಕೊಳ್ಳಬಹುದು. ಅಥವಾ ವಿಷಯವನ್ನು ಮುಂದಕ್ಕೆ ಹಾಕಿ. ಹಾಗಾದಲ್ಲಿ ಇಡೀ ಮಸೂದೆಯನ್ನೇ ಮುಂದಕ್ಕೆ ಹಾಕಬೇಕಾದೀತು.

**ಮಾನ್ಯ ಸಭಾಧ್ಯಕ್ಷರು:** ಅದನ್ನು ಮುಂದಕ್ಕೆ ಹಾಕೋಣ. ಮಾನ್ಯ ಸದಸ್ಯರುಗಳಿಗೆ ತಿದ್ದುಪಡಿಗಳ ಅಧ್ಯಯನಕ್ಕೆ ಕಾಲಾವಕಾಶ ಸಿಕ್ಕಂತಾಗುತ್ತದೆ.

೪೮ ನೇ ಕಲಮ್ಮನ್ನು ಮಸೂದೆಗೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:** ಯಾವುದಕ್ಕೆ ತಿದ್ದುಪಡಿಗಳು ಇಲ್ಲವೋ ಅಂಥ ಕಲಮ್ಮುಗಳನ್ನೆತ್ತಿಕೊಳ್ಳುವಂತೆ ನಿಮ್ಮಲ್ಲಿ ಮನವಿ ಮಾಡುತ್ತೇನೆ.

**ಕಲಂ–೪೯.**— (ಮತಗಟ್ಟೆಗಳಲ್ಲಿ ಅಭ್ಯರ್ಥಿಯ ಹಾಜರಾತಿ)

**ಮಾನ್ಯ ಸಭಾಧ್ಯಕ್ಷರು:** ೪೯ ನೇ ಕಲಮ್ಮಿಗೆ ತಿದ್ದುಪಡಿ (ನಂ ೩೮೩) ಅದೇ, ಮಾನ್ಯ ಸಚಿವರು ಒಪ್ಪಿಕೊಂಡಂಥಾದ್ದು.

**ಶ್ರೀ ಶಿವಚರಣಲಾಲ್:** ಸ್ವಾಮಿ, ಅವರ ಆಕ್ಷೇಪಣೆ ಇಲ್ಲವಾದಲ್ಲಿ ನಾನು ಸೂಚಿಸುತ್ತೇನೆ.

**ಡಾ. ಅಂಬೇಡ್ಕರ್:** ನನ್ನ ಆಕ್ಷೇಪಣೆ ಏನೂ ಇಲ್ಲ.

ತಿದ್ದುಪಡಿ ಮಾಡಿರುವುದು:

> ೪೯ ನೇ ಕಲಮ್ಮಿನ ೨ ನೇ ಉಪವಿಧಿಯಲ್ಲಿ "ಒಬ್ಬ ಅಭ್ಯರ್ಥಿ" ಎನ್ನುವ ಪದಗಳ ನಂತರ "ಅಥವಾ ಅವನ ಚುನಾವಣಾ ಏಜೆಂಟ್" ಎನ್ನುವ ಪದಗಳನ್ನು ಸೇರಿಸತಕ್ಕದ್ದು.
>
> (ಶ್ರೀ ಶಿವಚರಣಲಾಲ್)

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಏನೆಂದರೆ:

> "೪೯ ನೇ ಕಲಂ. ತಿದ್ದುಪಡಿಯಾದಂತೆ, ಮಸೂದೆಯ ಭಾಗವಾಗಿದೆ."

ಸೂಚನೆ ಅಂಗೀಕೃತವಾಗಿದೆ.

೪೯ ನೇ ಕಲಮನ್ನು, ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲಾಗಿದೆ.

೫೦ ನೇ ಕಲಮನ್ನು ಮಸೂದೆಗೆ ಸೇರಿಸಲಾಗಿದೆ.

**ಹೊಸ ಕಲಂ—೫೦ ಎ**

**ಶ್ರೀ ಎಸ್.ಎನ್.ದಾಸ್ (ಬಿಹಾರ್):** ಚುನಾವಣಾ ಭಾಷಣವನ್ನು ಉಚಿತ ಅಂಚೆಯಲ್ಲಿ ಕಳುಹಿಸುವ ಅಭ್ಯರ್ಥಿಯ ಹಕ್ಕಿಗೆ ಸಂಬಂಧಿಸಿದಂತೆ ಹೊಸ ೫೦ ಎ ಕಲಮನ್ನು ಸಲಹೆ ಮಾಡುವ ನನ್ನ ತಿದ್ದುಪಡಿಯೊಂದಿದೆ. ನನ್ನ ಹೆಸರಿನಲ್ಲಿದೆ.

**ಡಾ. ಅಂಬೇಡ್ಕರ್:** ಕಾಲವ್ಯಯ ತಪ್ಪಿಸಲು ಈ ಹಂತದಲ್ಲಿ ನಾನು ಮಧ್ಯ ಪ್ರದೇಶ ಮಾಡಬಹುದೆ? ಸ್ವಾಮಿ. ತಮಗೆ ನೆನಪಿರಬಹುದು. ಅಭ್ಯರ್ಥಿ ತನ್ನ ಚುನಾವಣಾ ಭಾಷಣವನ್ನು ಉಚಿತ ಅಂಚೆಯಲ್ಲಿ ಕಳುಹಿಸಲು ಅವಕಾಶ ಕಲ್ಪಿಸಬಾರದೇಕೆ? ಎಂಬ ವಿಷಯವನ್ನು ಚರ್ಚಿಸಲಾಗಿತ್ತು. ಇದನ್ನು ಸರ್ಕಾರದ ಗಮನಕ್ಕೆ ತರುವುದಾಗಿಯೂ ಇಂಥದೊಂದು ವ್ಯವಸ್ಥೆ ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸುವುದಾಗಿಯೂ ನಾನು ತಿಳಿಸಿದ್ದೆ. ಆಗ ಸದನ ನನ್ನ ಭರವಸೆಯನ್ನು, ಯಾವುದೇ ಒಂದು ನಿರ್ದಿಷ್ಟ ತಿದ್ದುಪಡಿಯಿಲ್ಲದೆ ಒಪ್ಪಿಕೊಂಡಿತ್ತು ಎಂದು ನನಗನ್ನಿಸಿತ್ತು.

**ಶ್ರೀ ಸಿಧ್ವಾ:** ಇದನ್ನು ಮುಂದಕ್ಕೆ ಹಾಕಬೇಕು.

**ಡಾ. ಅಂಬೇಡ್ಕರ್:** ಇಲ್ಲ ಅದರ ಅಗತ್ಯವಿಲ್ಲ.

**ಮಾನ್ಯ ಸಭಾಧ್ಯಕ್ಷರು:** ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಾಗಿ ಮಾನ್ಯ ಸಚಿವರು ಭರವಸೆ ನೀಡಿರುವುದರಿಂದ ಮಾನ್ಯ ಸೂಚಕರು ತಮ್ಮ ತಿದ್ದುಪಡಿಯನ್ನು ಸೂಚಿಸುತ್ತಿಲ್ಲ ಎಂದು ನಾನು ಅರ್ಥ ಮಾಡಿಕೊಳ್ಳ ಬಹುದೆ?

**ಶ್ರೀ ಎಸ್.ಎನ್.ದಾಸ್:** ಕಾನೂನು ಸಚಿವರು ಭರವಸೆ ನೀಡಿರುವುದರಿಂದ, ನನಗೆ ನನ್ನ ತಿದ್ದುಪಡಿ ಸೂಚಿಸಲು ಅನುಮತಿಸಲಾಗುವುದೆ ಎಂದು ತಿಳಿಯಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಅನುಮತಿ ನೀಡುವ ಪ್ರಶ್ನೆಯೇ ಇಲ್ಲ. ಅದನ್ನು ಸೂಚಿಸುವ ಪೂರ್ಣ ಸ್ವಾತಂತ್ರ್ಯ ಅವರಿಗಿದೆ. ಮಾನ್ಯ ಸಚಿವರು ಭರವಸೆ ನೀಡಿರುವಾಗ ಅವರು ಸೂಚನೆ ಮಂಡಿಸುವ ಇರಾದೆ ಹೊಂದಿದ್ದಾರೆಯೇ ಎಂಬುದು ಕೇವಲ ನನ್ನ ಸಲಹೆಯಷ್ಟೆ.

**ಶ್ರೀ ಎಸ್.ಎನ್. ದಾಸ್:** ಅದನ್ನು ಮುಂದಕ್ಕೆ ಹಾಕಬಹುದು.

**ಮಾನ್ಯ ಸಭಾಧ್ಯಕ್ಷರು:** ಮುಂದಕ್ಕೆ ಹಾಕುವ ಪ್ರಶ್ನೆಯೇ ಇಲ್ಲ. ಇಷ್ಟು ಅಲ್ಪ ಸಮಯದಲ್ಲಿ ಸರ್ಕಾರದಿಂದ ಉತ್ತರ ಬರುವುದಿಲ್ಲ. ಇಲ್ಲವೇ ಅವರು ಅದನ್ನು ಸೂಚಿಸಬೇಕು ಅಥವಾ ಸೂಚಿಸಬಾರದು.

**ಶ್ರೀ ಎಸ್.ಎನ್.ದಾಸ್:** ಭರವಸೆ ನೀಡಿರುವುದರಿಂದಾಗಿ ನಾನು ಅದನ್ನು ಸೂಚಿಸುತ್ತಿಲ್ಲ.

*****ಮಾನ್ಯ ಸಭಾಧ್ಯಕ್ಷರು:** ಹಾಗಿದ್ದಲ್ಲಿ ಇಲ್ಲಿ ಇನ್ನೊಂದು ತಿದ್ದುಪಡಿ ನಂ ೩೮೫ ಮುದ್ರಿತ ಪಟ್ಟಿಯಲ್ಲಿದೆ. ೫೦ ಎ ಹೊಸ ಕಲಮನ್ನು ಸೂಚಿಸುವ ತಿದ್ದುಪಡಿ, ಶ್ರೀ ದಾಸ್ ಅವರ ಹೆಸರಿನಲ್ಲಿದೆ.

**ಶ್ರೀ ಎಸ್.ಎನ್.ದಾಸ್:** (ಹಿಂದಿ ಭಾಷಣದ ಭಾಷಾಂತರ) ಆ ಬಗ್ಗೆ ಕೆಲವು ವಿಚಾರ ನನಗೆ ಹೇಳಲಿದೆ. ಚುನಾವಣೆಯಲ್ಲಿ ಪ್ರಚಾರ ಕಾರ್ಯ ತುಂಬಾ ಪ್ರಭಾವ ಬೀರುತ್ತದೆ ಎನ್ನುವ ವಾಸ್ತವಾಂಶದಿಂದಾಗಿ ನಾನು ಕೆಲವು ಸಲಹೆಗಳನ್ನು ಮುಂದಿಟ್ಟಿರುವೆ....ನನ್ನ ಸಲಹೆಯೆಂದರೆ ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳನ್ನು ನೀಡಬೇಕು. ಹೀಗಾದಲ್ಲಿ ಅವರು ತಾವು ಪ್ರತಿಪಾದಿಸುತ್ತಿರುವ ಧ್ಯೇಯ ಉದ್ದೇಶಗಳನ್ನು ವಿವರಿಸಿ ಹೇಳಲು ಮತದಾರರಲ್ಲಿಗೆ ಹೋಗಬಹುದು. ಆದ್ದರಿಂದ, ರೈಲ್ವೆ ಸೌಕರ್ಯವನ್ನು ಅವರಿಗೆ ಒದಗಿಸಿದಲ್ಲಿ ಅನೇಕ ಅಭ್ಯರ್ಥಿಗಳು ಹಣದ ವೆಚ್ಚದಿಂದ ಪಾರಾಗುವರು. ಸದನದ ಪರಿಶೀಲನೆಗಾಗಿ ನಾನು ಸೂಚಿಸಿರುವ ಸಲಹೆಯ ಉದ್ದೇಶ ಇದು. ಅದು ಯೋಗ್ಯವಾದದ್ದು ಎಂದು ಸದನ ಭಾವಿಸಿದಲ್ಲಿ ಒಪ್ಪಿಕೊಳ್ಳಬಹುದು ಅಥವಾ ತಿರಸ್ಕರಿಸಬಹುದು.

**ಮಾನ್ಯ ಸಭಾಧ್ಯಕ್ಷರು:** ಈ ತಿದ್ದುಪಡಿಯನ್ನು ಸೂಚಿಸಲಾಗಿಲ್ಲ ಹಾಗೂ ಇದನ್ನು ಸದನದ ಮುಂದೆ ಇರಿಸಿಲ್ಲ. ಮಾನ್ಯ ಸಚಿವರ ಪ್ರತಿಕ್ರಿಯೆ ಸದನಕ್ಕೆ ತಿಳಿಯಲಿ ಎಂದು ನಾನು ಬಯಸುತ್ತೇನೆ.

**ಡಾ. ಅಂಬೇಡ್ಕರ್:** ಸರ್ಕಾರ ಇಂಥ ಜವಾಬ್ದಾರಿಯನ್ನು ಹೊರಬೇಕೆಂಬುದನ್ನು ನನ್ನಿಂದ ಒಪ್ಪಲಾಗದು.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸದಸ್ಯರು ತಿದ್ದುಪಡಿಯನ್ನು ಸದನದ ಮುಂದಿಡಬಯಸುವರೆ?

**ಶ್ರೀ ಎಸ್.ಎನ್.ದಾಸ್:** ಇಲ್ಲ ಸ್ವಾಮಿ

**ಕಲಂ–೫೧.—** (ಅಭ್ಯರ್ಥಿಯ ಮರಣ)

******ಮಾನ್ಯ ಸಭಾಧ್ಯಕ್ಷರು:** ತಿದ್ದುಪಡಿಯನ್ನು (ಶ್ರೀ ಎಸ್.ಎನ್.ದಾಸ್ ಅವರದು) ಸೂಚಿಸಲಾಗಿದೆ.

---

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೨೧ ಮೇ, ೧೯೫೧ ಪು: ೯೧೮೯–೯೦

** ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ಮೇ ೨೧, ೧೯೫೧ ಪು: ೯೧೯೪–೯೭

೫೧ ನೇ ಕಲಂಗೆ ಪರ್ಯಾಯವಾಗಿ ಈ ಕೆಳಗಿನದನ್ನು ಸೇರಿಸತಕ್ಕದ್ದು:

"೫೧ ಮತದಾನಕ್ಕೆ ಮುನ್ನ ಅಭ್ಯರ್ಥಿಯ ಮರಣ. ಯಾವುದೇ ಅಭ್ಯರ್ಥಿ ನಾಮಪತ್ರ ಸಲ್ಲಿಕೆಯ ನಂತರ ಹಾಗೂ ಮತದಾನಕ್ಕೆ ಮುನ್ನ ಮರಣ ಹೊಂದಿದಾಗ ಚುನಾವಣೆಯ ಎಲ್ಲ ಕಾರ್ಯಕಲಾಪಗಳೂ ರದ್ದುಗೊಳ್ಳುತ್ತವೆ ಹಾಗೂ ಚುನಾವಣೆ ಸಂಬಂಧಿತ ಎಲ್ಲ ಕಾರ್ಯ ಕಲಾಪಗಳನ್ನು ಎಲ್ಲ ರೀತಿಯಲ್ಲೂ ಹೊಸದಾಗಿ ಆರಂಭಿಸಬೇಕು, ಹೊಸ ಚುನಾವಣೆಗಾಗಿ ಎಂಬಂತೆ.

ಚುನಾವಣಾಧಿಕಾರಿಯ ಅಭಿಪ್ರಾಯದಲ್ಲಿ ಮೃತ ಅಭ್ಯರ್ಥಿಯ ನಾಮಪತ್ರ ಕ್ರಮಬದ್ಧವಾಗಿದ್ದ ಪಕ್ಷದಲ್ಲಿ:

ಚುನಾವಣೆ ರದ್ದಾದ ಸಮಯದಲ್ಲಿ ಯಾರಾದರೂ ಅಭ್ಯರ್ಥಿಯೊಬ್ಬನ ನಾಮಪತ್ರ ಕ್ರಮಬದ್ಧವಾಗಿದ್ದಲ್ಲಿ ಮತ್ತೆ ನಾಮಪತ್ರ ಸಲ್ಲಿಸಬೇಕಾಗಿಲ್ಲವೆಂದಾದ ಪಕ್ಷದಲ್ಲಿ."

**ಡಾ. ಅಂಬೇಡ್ಕರ್:** ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಆದರೆ ವಾಪಸಾತಿಗೆ ಸಂಬಂಧಿಸಿದಂತೆ ೩೫ ನೇ ಕಲಂನ ೨ ನೇ ಉಪವಿಧಿಗೆ ಸದನದಲ್ಲಿ ಈಗಾಗಲೇ ತಿದ್ದುಪಡಿಯೊಂದನ್ನು ಅಂಗೀಕರಿಸಲಾಗಿದೆ. ಮುಂದೆ ಇದಕ್ಕೊಂದು ಸಣ್ಣ ತಿದ್ದುಪಡಿ ಮಾಡಬೇಕಾದೀತು. ಮುಂದಿನ ಹಂತದಲ್ಲಿ ವಿಷಯ ತರುವ ಸ್ವಾತಂತ್ರ್ಯವನ್ನು ನಾನು ಕಾಯ್ದಿರಿಸಿಕೊಳ್ಳುವೆ.

**ಶ್ರೀ ಜೆ.ಆರ್.ಕಪೂರ್:** ಈ ಕಲಮನ್ನು ಮುಂದಕ್ಕೆ ಹಾಕಬೇಕೆಂಬುದೇ ಸಚಿವರ ಸೂಚನೆ ಎಂದು ನಾನು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್:** ಮುಂದಕ್ಕೆ ಹಾಕುವುದು ನನಗೆ ಬೇಕಿಲ್ಲ. ಏಕೈಕ ಅಂಶವೆಂದರೆ ಇನ್ನೂ ಒಂದು ಕಟ್ಟಳೆಯನ್ನು ಸೇರಿಸುವುದು ಅಗತ್ಯವಾಗಿದೆ ಎನ್ನುವುದು. ಆ ಅಂಶ ಇದು: ೩೫ ನೇ ಕಲಮ್ಮಿನ ೨ ನೇ ಉಪವಿಧಿಯನ್ನು ತಿದ್ದುಪಡಿ ಮಾಡುವುದರಿಂದ, ೫೧ ನೇ ಕಲಂನಲ್ಲಿನ ಅನಿರೀಕ್ಷಿತ, ಆಕಸ್ಮಿಕ ಉದ್ಭವಿಸಿದಲ್ಲಿ ವಾಪಸು ಪಡೆದ ಅಭ್ಯರ್ಥಿ ನಾಮ ಪತ್ರ ಸಲ್ಲಿಸಲು ಮುಕ್ತ ಅವಕಾಶವಿರುತ್ತದೆ. ತತ್ಪರಿಣಾಮವಾಗಿ ೫೧ ನೇ ಕಲಮಿನಲ್ಲಿ ಖಚಿತವಾದ ಮುನ್ನೇರ್ಪಾಡನ್ನು ಮಾಡಬೇಕಾಗುತ್ತದೆ. ಕಟ್ಟಳೆಯೊಂದನ್ನು ಸೇರಿಸುವ ಮೂಲಕ ಇದನ್ನು ಸುಲಭವಾಗಿ ಮಾಡಬಹುದು.

**ಮಾನ್ಯ ಸಭಾಧ್ಯಕ್ಷರು:** ನಿಜಸಂಗತಿ ಏನೆಂದರೆ ಶ್ರೀ ಜಸ್ಪತ್ ರಾಯ್ ಕಪೂರ್ ಅವರ ಹೆಸರಿನಲ್ಲಿರುವ ಒಂದನೇ ನಂಬರ್ ಪೂರಕ ಪಟ್ಟಿಯಲ್ಲಿನ ೧೦೨ ನೇ ನಂಬರ್ ತಿದ್ದುಪಡಿಯನ್ನು ಅಂಗೀಕರಿಸಿದ್ದರ ಪರಿಣಾಮ ಇದು. ತತ್ಪರಿಣಾಮವಾಗಿ ತಿದ್ದುಪಡಿ ಅಗತ್ಯವಾಗಿದೆ. ಈ ತತ್ಪರಿಣಾಮಾನುಗತ ತಿದ್ದುಪಡಿಯನ್ನು ಮಾಡುವ ಉದ್ದೇಶದಿಂದ ಆ ತಿದ್ದುಪಡಿಯನ್ನು ಅನಂತರ ಸೇರಿಸಲು ಅನುವು ಕೋರಲಾಗುತ್ತಿದೆ.

**ಶ್ರೀ ಜೆ.ಆರ್. ಕಪೂರ್:** ತಿದ್ದುಪಡಿ (ನಂ ೧೦೨) ಅಂಗೀಕರಿಸಿದ ಫಲವಾಗಿ ಮತ್ತೊಂದು ಕಟ್ಟಳೆಯನ್ನು ಸೇರಿಸುವ ಅಗತ್ಯವಿದೆ ಎನ್ನುವ ಮಾನ್ಯ ಕಾನೂನು ಸಚಿವರ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದಲ್ಲದೆ, ಸ್ವಾಮಿ ನನ್ನ ಮಾನ್ಯ ಮಿತ್ರರಾದ ಶ್ರೀ ಎಸ್.ಎನ್. ದಾಸ್ ಅವರು ಈಗ ತಾನೆ ಸೂಚಿಸಿರುವ ತಿದ್ದುಪಡಿ ಒಳಗೊಂಡಿರುವ ಸಲಹೆ ಗಂಭೀರವಾಗಿ ಪರಿಗಣಿಸಲು ಯೋಗ್ಯವೆಂದು ನನಗನ್ನಿಸುತ್ತದೆ........ ಶ್ರೀ ಎಸ್.ಎನ್. ದಾಸ್ ಅವರ ತಿದ್ದುಪಡಿ ಎರಡು ಅಂಶಗಳನ್ನೊಳಗೊಂಡಿದೆ. ಅಭ್ಯರ್ಥಿಯೊಬ್ಬ ನಾಮಪತ್ರ ಪರಿಶೀಲನೆಯ ನಂತರ, ಆದರೆ ಮತದಾನಕ್ಕೆ ಮುಂಚೆ ಮರಣ ಹೊಂದಿದಲ್ಲಿ

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೨೧ ನೇ ಮೇ, ೧೯೫೧ ಪು: ೯೧೯೮–೯೯

ಗತಿಸಿದ ಅಭ್ಯರ್ಥಿಯ ಜಾಗಕ್ಕೆ ಮತ್ತೊಬ್ಬರ ನಾಮ ನಿರ್ದೇಶನ ಮಾಡಲು ಮತದಾರರಿಗೆ ಅವಕಾಶವಿರಬೇಕೆಂದು ಅವರ ಮೊದಲ ಪ್ರತಿಪಾದನೆ. ಇದೊಂದು ಅಂಗೀಕೃತ ತತ್ತ್ವ.

ಈ ತತ್ತ್ವವನ್ನು ನಾಮಪತ್ರ ಪರಿಶೀಲನೆ ನಂತರ ಗತಿಸಿದ ಅಭ್ಯರ್ಥಿಗಳ ಪ್ರಕರಣಗಳಿಗೆ ಮಾತ್ರ ಸೀಮಿತಗೊಳಿಸಬೇಕು ಎಂಬುದು ಮುಂದಿನ ಪ್ರಶ್ನೆ.

**ಡಾ. ಅಂಬೇಡ್ಕರ್:** ಪ್ರಶ್ನೆ ಅದಲ್ಲ.

---

***ಮಾನ್ಯ ಸಭಾಧ್ಯಕ್ಷರು:** "ಯೋಗ್ಯ ನಾಮನಿರ್ದೇಶನ" ಎಂದರೇನು? ಅದು ಪರಿಶೀಲನೆಗೆ ಮೊದಲೇ ಅಥವಾ ಆನಂತರವೋ?

**ಡಾ. ಅಂಬೇಡ್ಕರ್:** ನಾನು ಈಗಾಗಲೇ ಪ್ರಸ್ತಾಪಿಸಿರುವ ಕಟ್ಟಳೆಯನ್ನು ಪರಿಶೀಲಿಸುವುದಕ್ಕಾಗಿ ಈ ಕಲಂ ಮತ್ತೆ ಸದನದ ಮುಂದೆ ಬರಲಿದೆಯಾದ್ದರಿಂದ ಒಟ್ಟು ವಿಷಯವನ್ನು ಮುಂದಕ್ಕೆ ಹಾಕಬಹುದು.

**ಮಾನ್ಯ ಸಭಾಧ್ಯಕ್ಷರು:** ಆಗಬಹುದು. ೫೧ ನೇ ಕಲಮ್ಮನ್ನು ಮುಂದಕ್ಕೆ ಹಾಕಲಾಗಿದೆ.

---

**ಕಲಂ–೫೨.**— ಚುನಾವಣೆಗಳಲ್ಲಿ ಕಾರ್ಯ ವಿಧಾನ

ತಿದ್ದುಪಡಿ ಮಾಡಿರುವುದು:

೫೨ ನೇ ಕಲಮ್ಮಿನ ೩ ನೇ ಉಪವಿಧಿಯಲ್ಲಿ, "ರಾಜ್ಯ ವಿಧಾನ ಸಭೆಯ ಅಥವಾ ಚುನಾಯಿತ ಮತದಾರರ ಸಮುದಾಯದ ಸದಸ್ಯರುಗಳು" ಎನ್ನುವ ಪದಗಳಿಗೆ ಪರ್ಯಾಯವಾಗಿ ಕೆಳಗಿನದನ್ನು ಸೇರಿಸತಕ್ಕದ್ದು:

""ಚುನಾಯಿತ ಸದಸ್ಯರು ಅಥವಾ ರಾಜ್ಯ ವಿಧಾನ ಸಭೆಯ ಸದಸ್ಯರು ಅಥವಾ ಸಂಬಂಧಪಟ್ಟ ಚುನಾಯಿತ ಮತದಾರರ ಸಮುದಾಯದ ಸದಸ್ಯರು"

(ಡಾ. ಅಂಬೇಡ್ಕರ್)

ಜೊತೆಗೆ ತಿದ್ದುಪಡಿ ಮಾಡಿರುವುದು:

೫೨ ನೇ ಕಲಮ್ಮಿನ ೩ ನೇ ಉಪವಿಧಿಯ ೧ ಮತ್ತು ೨ ನೇ ಸಾಲುಗಳಲ್ಲಿ ಬರುವ ಕಟ್ಟಳೆಯಲ್ಲಿನ "ರಾಜ್ಯ ವಿಧಾನಸಭೆಯ ಅಥವಾ ಚುನಾಯಿತ ಮತದಾರರ ಸಮುದಾಯದ ಸದಸ್ಯರುಗಳ" ಎನ್ನುವ ಪದಗಳಿಗೆ ಪರ್ಯಾಯವಾಗಿ ಈ ಕೆಳಗಿನದನ್ನು ಸೇರಿಸತಕ್ಕದ್ದು:

"ಚುನಾಯಿತ ಸದಸ್ಯರುಗಳು ಅಥವಾ ರಾಜ್ಯ ವಿಧಾನಸಭೆಯ ಸದಸ್ಯರುಗಳು ಅಥವಾ ಸಂಬಂಧಪಟ್ಟ ಚುನಾಯಿತ ಮತದಾರರ ಸಮುದಾಯದ ಸದಸ್ಯರುಗಳು"

(ಡಾ. ಅಂಬೇಡ್ಕರ್)

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಏನೆಂದರೆ –

"ಆ ೫೨ ನೇ ಕಲಂ, ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗಲಿದೆ"

ಸೂಚನೆ ಅಂಗೀಕೃತವಾಯಿತು.

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೨೧ ನೇ ಮೇ, ೧೯೫೧ ಪು: ೯೨೦೨

೫೨ ನೇ ಕಲಮ್ಮನ್ನು ಮಸೂದೆಗೆ ಸೇರಿಸಲಾಯಿತು.

೫೩ ನೇ ಕಲಮ್ಮನ್ನು ಮಸೂದೆಗೆ ಸೇರಿಸಲಾಯಿತು.

೫೪ ನೇ ಕಲಮ್ಮನ್ನು ಮಸೂದೆಗೆ ಸೇರಿಸಲಾಯಿತು.

***ಕಲಂ– ೫೬**— (ಮತದಾನ ಮುಂದೂಡಿಕೆ)

**ಪಂಡಿತ್ ಮುನೀಶ್ವರ ದತ್ ಉಪಾಧ್ಯಾಯ:** ನನ್ನದೊಂದು ತಿದ್ದುಪಡಿ ಇದೆ; ಸಂಚಿತ ಪಟ್ಟಿಯಲ್ಲಿನ ೩೮೯ ನೇ ನಂಬರಿನದು. ೨ನೇ ಉಪವಿಧಿಯಲ್ಲಿ "ಅಂಥ ಚುನಾವಣೆಯ" ಎನ್ನುವ ಪದಗಳ ನಂತರ "ಬೇರೆ ಮತದಾನದ ಮೇಲೆ" ಎನ್ನುವ ಪದಗಳನ್ನು ಸೇರಿಸತಕ್ಕದ್ದು. ಈ ಪದಗಳು ಅಗತ್ಯವೆಂದು ನನಗನ್ನಿಸುತ್ತದೆ. ಇಲ್ಲವಾದಲ್ಲಿ ಅದು ಯಾವ ಚುನಾವಣೆಯ ಪ್ರಸ್ತಾಪ ಎನ್ನುವುದನ್ನು ವಿಷದಪಡಿಸಿದಂತಾಗುವುದಿಲ್ಲ.

**ಡಾ. ಅಂಬೇಡ್ಕರ್:** ಚುನಾವಣೆಯೆಂದರೆ ಶಾಸನದನ್ವಯ ನಡೆಸಲ್ಪಡುವ ಚುನಾವಣೆ.

**ಪಂಡಿತ ಮುನೀಶ್ವರದತ್ ಉಪಾಧ್ಯಾಯ:** ನೀವು ಹೇಳುತ್ತಿರುವುದು ಅದೇ ಕ್ಷೇತ್ರದ ಚುನಾವಣೆಯೆಂದೇ? ಹಾಗಾದಲ್ಲಿ "ಬೇರೆ ಮತದಾನದ ಮೇಲೆ" ಎಂಬುದನ್ನು ಹೇಳಲೇಬೇಕು. ಉಪವಿಧಿ ಹೀಗಿದೆ:

> "ಹಾಗೂ ಯಾವ ಮತಗಟ್ಟೆಯಲ್ಲಿ, ಯಾವ ಸ್ಥಳದಲ್ಲಿ, ಎಷ್ಟು ಗಂಟೆಗಳ ಅವಧಿಯಲ್ಲಿ ಮತದಾನ ನಡೆಯಲಿದೆ ಎಂಬುದನ್ನು ಗೊತ್ತುಪಡಿಸಿ ಹಾಗೂ ಸದರಿ ಚುನಾವಣೆಯಲ್ಲಿ ಚಲಾಯಿಸಲಾದ ಮತಗಳನ್ನು ಮುಂದೂಡಲ್ಪಟ್ಟ ಮತದಾನ ಮುಗಿಯುವವರೆಗೆ ಎಣಿಸಬಾರದು"
>
> "..............ಸದರಿ ಚುನಾವಣೆ ಬೇರೆ ಮತದಾನದ ಮೇಲೆ" ಎಂಬುದು ವಿಷಯವನ್ನು ಸ್ಪಷ್ಟಪಡಿಸುತ್ತದೆ. ಇಲ್ಲವಾದಲ್ಲಿ ಅದು ಸಂದಿಗ್ಧ.

**ಶ್ರೀ ಸಂತಾನಂ:** "ಸದರಿ ಚುನಾವಣೆ" ಅದನ್ನು ಒಳಗೊಳ್ಳುತ್ತದೆ.

**ಡಾ. ಅಂಬೇಡ್ಕರ್:** ಅದರ ಅಗತ್ಯವಿದೆ ಎಂದು ನನಗನ್ನಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಏನೆಂದರೆ:

> "೫೬ ನೇ ಕಲಂ ಮಸೂದೆಯ ಭಾಗವಾಗಲಿದೆ"

ಸೂಚನೆ ಅಂಗೀಕೃತವಾಯಿತು.

೫೬ ನೇ ಕಲಮನ್ನು ಮಸೂದೆಗೆ ಸೇರಿಸಲಾಯಿತು.

**ಕಲಂ–೫೭.**— (ಹೊಸ ಚುನಾವಣೆ)

**ಶ್ರೀ ಶಿವಚರಣ್‌ಲಾಲ್:** ಸ್ವಾಮಿ, ನಿಮ್ಮ ಹೆಸರಿನಲ್ಲಿರುವ ೩೯೦ ನೇ ನಂಬರ್ ತಿದ್ದುಪಡಿಯನ್ನು ಸೂಚಿಸಲು ನನಗೆ ಅನುಮತಿ ನೀಡಲಾದೀತೆ?

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸಚಿವರ ಪ್ರತಿಕ್ರಿಯೆ ತಿಳಿದುಕೊಳ್ಳುವುದು ಉತ್ತಮ.

**ಶ್ರೀ ಶಿವಚರಣ್ ಲಾಲ್:** ೧ ನೇ ಉಪವಿಧಿಯಲ್ಲಿ "ಯಾವುದೇ ಚುನಾವಣೆಯಲ್ಲಿ" ಎನ್ನುವ ಪದಗಳಿಗೆ ಪರ್ಯಾಯವಾಗಿ "ಮತಗಳ ಎಣಿಕೆಗೆ ಮುನ್ನ" ಎನ್ನುವ ಪದಗಳನ್ನು ಸೇರಿಸಬೇಕೆನ್ನುವುದು ಅದರ ಕೋರಿಕೆಯಾಗಿದೆ.

**ಶ್ರೀ ಸಂತಾನಂ:** ಅದು ಯಾವ ಹಂತದಲ್ಲಾದರೂ ಆಗಬಹುದು.

---

* ಸಂಸದೀಯ ಚರ್ಚೆ, ಸಂಪುಟ ೧೨, ಭಾಗ II, ೨೧ ನೇ ಮೇ, ೧೯೫೧ ಪು: ೯೧೯೭

**ಡಾ. ಅಂಬೇಡ್ಕರ್:** ಅದರ ಅಗತ್ಯವಿದೆ ಎಂದು ನನಗನ್ನಿಸುವುದಿಲ್ಲ.

**ಪಂಡಿತ್ ಮುನೀಶ್ವರ ದತ್ ಉಪಾಧ್ಯಾಯ:** ನನ್ನದೊಂದು ತಿದ್ದುಪಡಿ (೩೦೧) ಇದೆ. ೧ ನೇ ಉಪವಿಧಿಯಲ್ಲಿ "ಮತಗಟ್ಟೆ ಅಧಿಕಾರಿ" ಪದಗಳ ನಂತರ "ಅಥವಾ ಅವರ ಪರವಾಗಿ ಬೇರೊಬ್ಬ ವ್ಯಕ್ತಿ" ಎನ್ನುವ ಪದಗಳನ್ನು ಸೇರಿಸತಕ್ಕದ್ದು. ಮತಪೆಟ್ಟಿಗೆಗಳನ್ನು ರವಾನಿಸಲಾಗುತ್ತಿರಬಹುದು. ಬೇರೆಲ್ಲೋ ಅವುಗಳನ್ನಿಡಬಹುದು. ಅವು ಬೇರೊಬ್ಬರ ವಶದಲ್ಲಿರಬಹುದು. ಈಗಿರುವ ಕಾರ್ಯವ್ಯವಸ್ಥೆಯಲ್ಲಿ ಇವೆಲ್ಲ ಸೇರಿಲ್ಲದೇ ಇರಬಹುದು. ಆದ್ದರಿಂದ ಈ ಪದಗಳನ್ನು ಸೇರಿಸುವುದು ಅಗತ್ಯವೆಂದು ನನಗೆ ತೋರುತ್ತದೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ (ಮದ್ರಾಸ್):** ಅನುಸರಿಸಿ ಬರಲಿರುವ ಉಳಿದ ಪದಗಳೆಂದರೆ "ಅಥವಾ ಮಧ್ಯೆ ಬದಲಾವಣೆಗಳನ್ನು ಮಾಡಿದ್ದಲ್ಲಿ ಅಥವಾ ಇಲ್ಲದಿದ್ದಲ್ಲಿ" ಇವುಗಳಲ್ಲಿ ಆ ಗೊತ್ತುಪಾಡೂ ಸೇರಿದೆ. ಆದ್ದರಿಂದ ಅದು ಅನಗತ್ಯ.

**ಡಾ. ಅಂಬೇಡ್ಕರ್:** ಅದು ಅಗತ್ಯ ಎಂದು ನನಗನ್ನಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಏನೆಂದರೆ:

ಫ೭ ನೇ ಕಲಂ ಮಸೂದೆಯ ಭಾಗವಾಗಲಿದೆ.

ಸೂಚನೆ ಅಂಗೀಕೃತವಾಯಿತು.

೫೭ ನೇ ಕಲಮನ್ನು ಮಸೂದೆಗೆ ಸೇರಿಸಲಾಯಿತು.

೫೮ ನೇ ಕಲಮನ್ನು ಮಸೂದೆಗೆ ಸೇರಿಸಲಾಯಿತು.

***ಶ್ರೀ ಕರುಣಾಕರ ಮೆನನ್:** "ವ್ಯಕ್ತಿಯೊಬ್ಬನಿಗೆ ಇದೇ ರೀತಿಯಲ್ಲಿ ಮತ ನೀಡಲು ಸಾಧ್ಯವಾಗುವಂತೆ" ಈ ಪದಗಳ ಮಹತ್ವವನ್ನು ನಾನು ಹೇಳುತ್ತಿದ್ದೇನೆ.

**ಡಾ. ಅಂಬೇಡ್ಕರ್:** ಈಗಿರುವಂತೆ ಕಲಂ ಶುದ್ಧಾಂಗವಾಗಿ ಸರಿಯಾಗಿದೆ.

**ಶ್ರೀ ಶಿವ ಚರಣ ಲಾಲ್:** ಈ ಪದಗಳು ಅನಗತ್ಯ ಎಂದು ಮಾನ್ಯ ಸಚಿವರು ಭಾವಿಸಿದಲ್ಲಿ ನಾನು ಅದಕ್ಕೆ ಆಗ್ರಹಪಡಿಸುವುದಿಲ್ಲ.

ಇನ್ನು ೧೧೭ ನೇ ನಂಬರ್ ತಿದ್ದಪಡಿ ೫೯ (ಡಿ) ಕಲಂ ಈ ಕೆಳಗಿನಂತಿರುವುದು ನನ್ನ ಗಮನಕ್ಕೆ ಬಂದಿದೆ:

"೨೦ ನೇ ಪರಿಚ್ಛೇದದ (೬) ಉಪವಿಧಿಯ ಕಟ್ಟಳೆಗಳು ಅನ್ವಯವಾಗುವ (ಎ),

(ಬಿ) ಮತ್ತು (ಸಿ) ಕಲಂಗಳಲ್ಲಿ ಪ್ರಸ್ತಾಪಿಸಲಾದ ಸದರಿ ವ್ಯಕ್ತಿಯ ಪತ್ನಿಗೆ"

ಪತ್ನಿಗೆ ನಾವೇಕೆ ಈ ಹಕ್ಕನ್ನು ಕೊಡುತ್ತಿದ್ದೇವೆಯೋ ನನಗೆ ತಿಳಿಯದು.

**ಡಾ. ಅಂಬೇಡ್ಕರ್:** ಏಕೆಂದರೆ ಆಕೆ ಅವನ ಜೊತೆ ಇರಬಹುದು.

**ಮಾನ್ಯ ಸಭಾಧ್ಯಕ್ಷರು:** ಒಂದು ವೇಳೆ ಆಕೆ ಅವನ ಜೊತೆ ಇಲ್ಲ ಎನ್ನಿ, ಆಗ ಆಕೆಗೆ ಬೇರೆ ಯಾವುದೇ ರೀತಿಯಲ್ಲಿ ಮತ ನೀಡುವ ಹಕ್ಕಿಲ್ಲವೆ?

****ಶ್ರೀ ಜೆ.ಆರ್. ಕಪೂರ್:** ಅನುಮತಿ ಕೋರಿ ನಾನು ಸೂಚಿಸುತ್ತಿದ್ದೇನೆ:

---

* ಪ್ರಕರಣ ಪು. ೯೨೦೪

** ಸಿ.ಡಿ. ಸಂಪುಟ, ೧೨, ಭಾಗ II, ೨೧ ನೇ ಮೇ ೧೯೫೧. ಸಿ ಸಿ ೯೨೦೭–೦೯

೫೯ ನೇ ಕಲಮ್ಮಿನ (ಇ) ಭಾಗದ ನಂತರ ಈ ಕೆಳಗಿನ (ಎಫ್) ಭಾಗವನ್ನು ಸೇರಿಸತಕ್ಕದ್ದು:

"(ಎಫ್) ಹಾಲಿ ಜಾರಿಯಲ್ಲಿರುವ ಕಾನೂನಿನ ಅನ್ವಯ ಮುನ್ನೆಚ್ಚರಿಕೆ ಸ್ಥಾನ ಬದ್ಧತೆಗೊಳಗಾದ ಯಾವುದೇ ವ್ಯಕ್ತಿ"

ಇದು ಒಂದು ತಿದ್ದುಪಡಿ. ಸ್ವಾಮಿ ನಿಮ್ಮ ಅನುಮತಿಯೊಂದಿಗೆ ನಾನು ಸೂಚಿಸಲಿರುವುದು. ಮುದ್ರಿತ ಪಟ್ಟಿಯಲ್ಲಿರುವ ೩೯೬ ನೇ ನಂಬರಿನದು. ತಮ್ಮ ಹೆಸರಿನಲ್ಲಿ ಕಾಣಿಸಿಕೊಂಡಿರುವ ಪುಣ್ಯ ಅದರದು. ಅನುಮತಿ ಕೋರಿ ನಾನು ಸೂಚಿಸುತ್ತಿದ್ದೇನೆ.

೫೯ ನೇ ಕಲಮ್ಮಿನ (ಇ) ಭಾಗದ ನಂತರ ಈ ಕೆಳಗಿನ ಹೊಸ ಭಾಗಗಳನ್ನು ಸೇರಿಸತಕ್ಕದ್ದು:

"(ಎಫ್) ಅಭ್ಯರ್ಥಿಗಳು, ಅವರ ಚುನಾವಣಾ ಏಜೆಂಟರುಗಳು ಮತ್ತು ಮತಗಟ್ಟೆ ಏಜೆಂಟರುಗಳು;

(ಜಿ) ರಾಷ್ಟ್ರಪತಿಯವರು, ರಾಜ್ಯಪಾಲರುಗಳು ಮತ್ತು ರಾಜ್ಯಗಳ ರಾಜ ಪ್ರಮುಖರು"

**ಡಾ. ಅಂಬೇಡ್ಕರ್:** ಅವರೇಕೆ ಇವರುಗಳನ್ನು ನಿರ್ದಿಷ್ಟವಾಗಿ ಪ್ರಸ್ತಾಪಿಸುತ್ತಿದ್ದಾರೆ? ಅವರೂ ಮತದಾರರು.

**ಶ್ರೀ ಜೆ.ಆರ್. ಕಪೂರ್:** ೩೯೬ ನೇ ನಂಬರ್ ತಿದ್ದುಪಡಿಗೆ ಸಂಬಂಧಿಸಿದಂತೆ ಎರಡು ಭಾಗಗಳಿವೆ. (ಎಫ್) ಮತ್ತು (ಜಿ) ಭಾಗಗಳಾಗಿ ಸೇರಿಸುವ ಉದ್ದೇಶದಿಂದ ಕೂಡಿದವು. ನೀವು ಅವನ್ನು ಪ್ರತ್ಯೇಕವಾಗಿಯೇ ತೆಗೆದುಕೊಳ್ಳಬಹುದು. ಏಕೆಂದರೆ (ಎಫ್) ಭಾಗ ಸೇರ್ಪಡೆಗೆ ಸಮ್ಮತಿ ಸಿಗಬಹುದು. (ಜಿ) ಭಾಗವನ್ನು ಮಾನ್ಯ ಸಚಿವರು ಸ್ವಯಂ ವೇದ್ಯವಾದ ಕಾರಣಗಳಿಂದಾಗಿ ಒಪ್ಪಿಕೊಳ್ಳದೇ ಹೋಗಬಹುದು.

***ಅಧ್ಯಕ್ಷರು:** ಸೂಚಿತವಾದ ತಿದ್ದುಪಡಿಗಳು:

(i) ೫೯ ನೇ ವಿಧಿಯ, ಭಾಗ (ಇ) ದ ನಂತರ

ಈ ಕೆಳಗಿನದನ್ನು ಹೊಸ (ಎಫ್) ಭಾಗವಾಗಿ ಸೇರಿಸಿ:

"(ಎಫ್) ಆ ಸಮಯದಲ್ಲಿ (ತತ್ಕಾಲದಲ್ಲಿ) ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ಪ್ರತಿಬಂಧಕ ಸೆರೆಗೆ ಗುರಿಯಾಗಿರುವಂಥ ಯಾವುದೇ ವ್ಯಕ್ತಿ"

(ii) ೫೯ ನೇ ವಿಧಿಯ ಭಾಗ (ಎ) ದ ನಂತರ ಈ ಕೆಳಗಿನದನ್ನು ಹೊಸ ಭಾಗಗಳಾಗಿ ಸೇರಿಸಿ:

"(ಎಫ್) ಅಭ್ಯರ್ಥಿಗಳು, ಅವರ ಚುನಾವಣಾ ಏಜೆಂಟು (ಮಧ್ಯವರ್ತಿ) ಹಾಗೂ ಮತಗಟ್ಟೆಯ ಏಜೆಂಟುಗಳು:

(ಜಿ) ರಾಷ್ಟ್ರಪತಿ, ರಾಜ್ಯಪಾಲರು ಹಾಗೂ ರಾಜ್ಯಗಳ ರಾಜಪ್ರಮುಖ (ರು)

**ಶ್ರೀ ಸೋನಾವಣೆ (ಬಾಂಬೆ):** ಪಂಡಿತ್ ಠಾಕುರ್‌ದಾಸ್ ಭಾರ್ಗವರ ಹೆಸರಿನಲ್ಲಿ ಸ್ಥಿರವಾದ (ನೆಲೆಯಾದ) ತಿದ್ದುಪಡಿಯ (ಎಫ್) ಭಾಗವನ್ನು ಬೆಂಬಲಿಸುತ್ತೇವೆ. ಹೊಸ ಭಾಗ (ಎಫ್) ದ ಸೇರ್ಪಡೆಯನ್ನು ನಾನು ಬೆಂಬಲಿಸುತ್ತೇನೆ. ಅಂಚೆಯ ಮೂಲಕ ಒಬ್ಬ ಅಭ್ಯರ್ಥಿಯು ಮತಹಾಕುವುದನ್ನು ಮಾನ್ಯ ಮಾಡುವುದು (ಅನುಮತಿಸುವುದು) ಆವಶ್ಯಕ. ಏಕೆಂದರೆ ಅವನು ತಾನು ಅಭ್ಯರ್ಥಿಯಾಗಿ ನೊಂದಾಯಿಸಿಕೊಂಡಿರುವ ಕ್ಷೇತ್ರವಲ್ಲದ, ಬೇರೊಂದು ಸ್ಥಳದಲ್ಲಿರಬಹುದು. ಆ ನಿರ್ದಿಷ್ಟ ಕ್ಷೇತ್ರಕ್ಕೆ ಹೋಗಲು ಅವನಿಗೆ ಸಾಧ್ಯವಾಗದೆ

---

* P.D. ಸಂ. ೧೨, ಭಾಗ ೨, ೧೫ ಮೇ ೧೯೫೧, ಪು. ೮೨೨೦–೨೫.

ಟಿ. ೪೧೯೩–೪೦.

ಇರಬಹುದು. ಆದ್ದರಿಂದ ಅವರಿಗೂ ಈ ಅನುಕೂಲವನ್ನು ಮಾಡಿಕೊಡಬೇಕು. ಚುನಾವಣೆಯ ಹಾಗೂ ಮತಗಟ್ಟೆಗಳ ಏಜೆಂಟರುಗಳಾಗಿ ಕೆಲಸ ಮಾಡಬೇಕಾದಾಗ ಅವರು ಬೇರೆ ಬೇರೆ ಸ್ಥಳಗಳಿಗೆ ಹೋಗಬೇಕಾಗಬಹುದು. ಮತದಾರರ ಪಟ್ಟಿಗಳಲ್ಲಿ ಅವರುಗಳ ಹೆಸರುಗಳು ಇರುವ ಮತಕ್ಷೇತ್ರದಲ್ಲಿ ಹಾಜರಿರಲು ಅವರಿಗೆ ಸಾಧ್ಯವಾಗದೆ ಹೋಗಬಹುದು.

ಆದ್ದರಿಂದ ಈ ಅನುಕೂಲತೆಯನ್ನು ಅವರುಗಳಿಗೂ ಸಹ ವಿಸ್ತರಿಸುವುದು ಸೂಕ್ತ.

**ಡಾ. ಅಂಬೇಡ್ಕರ್:** ಸರ್, ಶ್ರೀ ಕಪೂರ್‌ರವರು ನಮ್ಮ ಮುಂದೆ ಮೂರು ಪ್ರಸ್ತಾವನೆಗಳನ್ನಿಟ್ಟಿದ್ದಾರೆ. ಅವುಗಳು ಯಾವುವು ಎಂದರೆ, ಅಂಚೆಯ ಮೂಲಕ ಮತಹಾಕುವ ಅನುಕೂಲತೆಯನ್ನು, ನೆರೆಯಲ್ಲಿರುವ ವ್ಯಕ್ತಿಗಳಿಗೆ ಮತ್ತು ಅಭ್ಯರ್ಥಿಗಳಿಗೆ ಅವರ ಚುನಾವಣಾ ಏಜೆಂಟುಗಳು, ಮತಗಟ್ಟೆಯ ಏಜೆಂಟುಗಳಿಗೆ ಹಾಗೂ ಮೂರನೆಯದಾಗಿ ರಾಷ್ಟ್ರಪತಿ ರಾಜ್ಯಪಾಲರುಗಳು ಮತ್ತು ರಾಜ್ಯಗಳ ರಾಜ ಪ್ರಮುಖರು ಹೀಗೆ.

ಈ ಅಂಚೆಯ ಮತ ಎನ್ನುವುದು ಹೊರನೋಟಕ್ಕೆ ಬಹಳ ಅಪಾಯಕಾರಿ ಎಂದು ಹೇಳಲು ನಾನು ಇಚ್ಛಿಸುತ್ತೇನೆ. ನನ್ನ ಅನುಭವದಲ್ಲೇ ಇದು ಅತ್ಯಂತ ಅಪಾಯಕಾರಿ ವಿಷಯಗಳಲ್ಲಿ ಒಂದು. ಅಭ್ಯರ್ಥಿಗಳು ಕೆಲವು ಜನರನ್ನು ಈ ಕೆಲಸಕ್ಕೆಂದೇ ನೇಮಿಸಿ, ಅವರುಗಳು ಯಾರು ಯಾರು ಅಂಚೆಯ ಮೂಲಕ ಮತ ಚಲಾಯಿಸುವ (ಅರ್ಹತೆ) ಅಧಿಕಾರವನ್ನು ಪಡೆದಿರುತ್ತಾರೋ ಅಂಥವರೊಂದಿಗೆ ಹೋಗಿ ಅವರ ಮತಪತ್ರಗಳನ್ನು ಸಂಗ್ರಹಿಸಿ, ಅವರ ಸಹಿಗಳನ್ನು ಪಡೆದು ಅದನ್ನು ತಾನೇ ಅಂಚೆಗೂ ಹಾಕಿಬಿಡುತ್ತಾರೆ. ಹೀಗೆ ಇದು ತರ್ಕವಿರುದ್ಧವಾದ ಬಹಳವೇ ಹೆಚ್ಚಿನ ಒತ್ತಡ ತರುವ ವಿಷಯ. ಇದು ಒಂದು ರೀತಿಯಲ್ಲಿ ಲಿಖಿತ ಬೇಡಿಕೆಯ ಪರಿಣಾಮವಾಗುವಂತೆ. ಆದ್ದರಿಂದ ಈ ಪದ್ಧತಿಯು ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಪ್ರಮಾಣದಲ್ಲಿ, ಹದ್ದುಬಸ್ತಿನಲ್ಲಿ, ಇರಬೇಕು ಎಂದು ನನಗೆ ಅನ್ನಿಸುತ್ತದೆ.

**ಶ್ರೀ ಜೆ.ಆರ್. ಕಪೂರ್:** ಹಾಗಿದ್ದರೆ ಇದನ್ನು ದೂರದಲ್ಲಿ ವಾಸಿಸುವ ಮತದಾರರ ಪತ್ನಿಯರಿಗೆ ವಿಸ್ತರಿಸಬೇಡಿ.

**ಡಾ. ಅಂಬೇಡ್ಕರ್:** ಅವರುಗಳು (ಎ) (ಬಿ) ಅಥವಾ (ಸಿ) ಮಾತ್ರ

ಅಭ್ಯರ್ಥಿಗಳಿಗೆ ಚುನಾವಣಾ ಏಜೆಂಟರುಗಳಿಗೆ ಮತ್ತು ಮತಗಟ್ಟೆಯ ಏಜೆಂಟರುಗಳಿಗೆ ಸಂಬಂಧಿಸಿದಂತೆ, ಅಂಚೆಯ ಮತದ ನಿಯಮವು ಏಕೆ ಅನ್ವಯವಾಗಬೇಕು ಎನ್ನುವುದೇ ನನಗೆ ತಿಳಿಯುತ್ತಿಲ್ಲ. ಅಭ್ಯರ್ಥಿಯ ಹೆಸರು ನೊಂದಾಯಿಸಲ್ಪಟ್ಟಿರುವ ಮತಕ್ಷೇತ್ರದಲ್ಲಿ ಅವನು ಹಾಜರಿಲ್ಲದೆ ಇರಬಹುದು ಎಂದು ನಾನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲೆ, ಕಾರಣ ಒಬ್ಬ ಅಭ್ಯರ್ಥಿಯು ತನ್ನಿಚ್ಛೆಯಂತೆ ಎಲ್ಲಿ ಬೇಕಾದರೂ ಚುನಾವಣೆಗೆ ನಿಲ್ಲಬಹುದಾದ ಅನುಕೂಲತೆಯನ್ನು ನಾವು ಕೊಟ್ಟಿದ್ದೇವೆ. ಹಾಗೆಯೇ ಅವನು ಚುನಾವಣಾ ಏಜೆಂಟರುಗಳಾಗಿ, ಮತಗಟ್ಟೆಗಳ ಏಜೆಂಟರುಗಳಾಗಿ ಹೀಗೆ ಗೊತ್ತು ಮಾಡುವ ಅನೇಕ ಜನ (ಹಲವು ಮಂದಿ) ಅವರ ಹೆಸರು ನೊಂದಾಯಿಸಲ್ಪಟ್ಟಿರುವ ಮತಕ್ಷೇತ್ರಗಳಲ್ಲಿ ಕೆಲಸ ಮಾಡಲು ಸಾಧ್ಯವಾಗದೇ ಹೋಗಬಹುದಾದ ಸಾಧ್ಯತೆಯೂ ಇದೆ. ಅಂತಹ ವಿಷಯಗಳಲ್ಲಿ ದಾಖಲೆಯ ರೀತ್ಯಾ ತಮ್ಮ ಮತಕ್ಷೇತ್ರವಲ್ಲದಿದ್ದರೂ ತಾವು ಯಾವ ಮತಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುತ್ತಾರೆಯೋ ಅಲ್ಲಿಯೇ ಅವರಿಗೆ ತಮ್ಮ ಮತಚಲಾಯಿಸಲು ಸಾಧ್ಯವಾಗುವಂತೆ ಮಾಡುವುದು ಬಹುಶಃ ಅಪೇಕ್ಷಣೀಯ. ಆದರೆ ಇದು ಪ್ರತ್ಯೇಕವಾಗಿಯೇ ಪರಿಗಣಿಸಬೇಕಾದ ವಿಷಯವೇ ಹೊರತು ಇದು ಅಂಚೆಯ ಮತದ ಭಾಗದಲ್ಲಿ ಮಾತ್ರ ಅಲ್ಲ.

ರಾಜ ಪ್ರಮುಖರು ರಾಜ್ಯಪಾಲರು ಹಾಗೂ ರಾಷ್ಟ್ರಪತಿಗೆ ಸಂಬಂಧಿಸಿದಂತೆ ಅವರುಗಳು ರಾಷ್ಟ್ರದ

ಕೆಲವು ಹಿರಿಯ (ಉನ್ನತ) ಪದವಿಗಳಲ್ಲಿರುವವರು ಎನ್ನುವುದರ ಹೊರತಾಗಿ, ಅವರು ಅಂಚೆಯ ಮೂಲಕ ಮತ ಚಲಾಯಿಸುವುದಕ್ಕೆ ಅನುಮತಿಸಬಹುದು ಎನ್ನಲು ಬೇರೆ ಇನ್ನಾವುದೆ ಬಲವಾದ ಕಾರಣವೂ ನನಗೆ ಕಾಣುತ್ತಿಲ್ಲ. ಆದರೆ ಚುನಾವಣೆಯ ವಿಷಯದಲ್ಲಿನ ಕಾನೂನು ಹೇಗೂ ಆ ರೀತಿಯ ವ್ಯತ್ಯಾಸವನ್ನು ಮಾನ್ಯ ಮಾಡುವುದೆಂದು ನಾನು ಅಂದುಕೊಳ್ಳುವುದಿಲ್ಲ.

**ಒಬ್ಬ ಗೌರವ ಸದಸ್ಯರು:** ಅವರು ತಮ್ಮ ಮತಕ್ಷೇತ್ರದಿಂದ ಬಹಳ ದೂರದಲ್ಲಿ ವಾಸಿಸುತ್ತಿರಬಹುದು.

**ಡಾ. ಅಂಬೇಡ್ಕರ್:** ನನಗೆ ಹಾಗೆನ್ನಿಸುವುದಿಲ್ಲ. ಅವರು ಅವರ ಪ್ರವಾಸವನ್ನು ಸರಿಯಾದ ಸಮಯದಲ್ಲಿ ತಮ್ಮ ಕೇಂದ್ರ ಕಾರ್ಯಸ್ಥಳದಲ್ಲಿರುವ ಹಾಗೆ ವ್ಯವಸ್ಥೆ ಮಾಡಿಕೊಳ್ಳಬಹುದು; ಅದೇನು ಕಷ್ಟದ ಕೆಲಸವಲ್ಲ.

**ಶ್ರೀ ಸಿಧ್ವ:** ಅದಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನು ಅವರು ಹೊಂದಿದ್ದಾರೆ.

**ಡಾ. ಅಂಬೇಡ್ಕರ್:** ಬಂಧನದಲ್ಲಿರುವ ಅಥವಾ ಪ್ರತಿಬಂಧಕ್ಕೆ ಒಳಗಾಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕಾನೂನಿನ ಒಂದು ಸಾಮಾನ್ಯ ನಿಯಮವು ಇದು ಎಂದು ನನಗೆ ಅನಿಸುತ್ತದೆ. ಮೇಲೆ ಮೊದಲಿಗೆ, ಬಂಧನದಲ್ಲಿರುವ ಯಾರಿಗೇ ಆದರೂ ಅವನಿಗೆ ಕೊಡಲ್ಪಟ್ಟಿರುವ ಹಕ್ಕುಗಳನ್ನು ಚಲಾಯಿಸುವ ಸ್ಥಿತಿಯಲ್ಲಿ ಅವನಿರುವುದಿಲ್ಲ. ಇಂಗ್ಲಿಷ್ ಕಾನೂನಿನಲ್ಲಿ ಇದೇ ನಿಯಮ. ಯಾರು ಅಪರಾಧಿಗಳೆನಿಸಿಕೊಳ್ಳುತ್ತಾರೆಯೋ ಅಂಥವರಿಗೆ ಮತ ಚಲಾಯಿಸಲು ಇಂಗ್ಲಿಷ್ ಕಾನೂನು ಅವಕಾಶ ನೀಡುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಅವರು ತಮ್ಮನ್ನು ಚುನಾವಣಾ ಕಾನೂನಿನ ಸರಹದ್ದಿನಿಂದಾಚೆಗೆ ಇಟ್ಟುಕೊಂಡಿರುತ್ತಾರೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಆದರೆ ಆ ಅನರ್ಹತೆಯು ಈ ವಿಷಯದಲ್ಲಿ ಕೆಲಸ ಮಾಡುವುದಿಲ್ಲ.

**ಡಾ. ಅಂಬೇಡ್ಕರ್:** ನನಗೆ ಗೊತ್ತಿಲ್ಲ. ಆ ಅವಧಿಯು ಎರಡು ವರ್ಷಗಳಾಗಿದ್ದರೆ ಅಥವಾ ಒಂದು ವೇಳೆ ಆ (ಅವಧಿಯು) ಪ್ರತಿಬಂಧವು (ಸೆರೆಯು) ಅನಿಶ್ಚಿತ ಸ್ವರೂಪದ್ದಾಗಿದ್ದರೆ ನಮ್ಮ ಅನರ್ಹತೆಯ ವಿಷಯವು ಪ್ರಸ್ತುತವಾಗುತ್ತದೆ. ಆದ್ದರಿಂದ ಈಗ ಸೂಚಿಸಲಾಗಿರುವ ಪ್ರಸ್ತಾಪಕ್ಕೆ ನಾನು ಒಪ್ಪಿಕೊಳ್ಳುವುದಿಲ್ಲ. ಒಬ್ಬ ವ್ಯಕ್ತಿಯು ಮತಚಲಾಯಿಸುವ ತನ್ನ ನೈತಿಕ ಹಕ್ಕನ್ನು ಉಪಯೋಗಿಸಬೇಕಾದರೆ, ಅವನು ಕಾನೂನಿನ ಸರಹದ್ದಿನೊಳಗೆ ಇರಬೇಕು. ಅದರಾಚೆಗಲ್ಲ ಎನ್ನುವ ಅತ್ಯಂತ ಆರೋಗ್ಯಕಾರಿ ನಿಯಮವನ್ನು ನಿಜವಾಗಿಯೂ ನಾವು ಮುರಿಯುತ್ತಿದ್ದೇವೆ ಎಂದು ನನಗನ್ನಿಸುತ್ತಿದೆ. ಆದ್ದರಿಂದ ನಾನು ಆ ಆಧಾರದ ಮೇಲೆ (ಆ ಹಿನ್ನೆಲೆಯಲ್ಲಿ) ಯಾರು ಪ್ರತಿಬಂಧಕ ಸೆರೆಯಲ್ಲಿರುತ್ತಾರೆಯೋ, ಅವರಿಗೆ ಸಂಬಂಧಿಸಿದಂತೆ ಈ ಸೂಚನೆಯನ್ನು ಒಪ್ಪಿಕೊಳ್ಳಲು ನಾನು ತಯಾರಿಲ್ಲ.

ನಾನು ಆಗಲೇ ಹೇಳಿದಂತೆ, ಒಂದು ವೇಳೆ ಒಬ್ಬ ಅಭ್ಯರ್ಥಿಯ ಅವನ ಮತಗಟ್ಟೆಯು ಏಜೆಂಟರು ಹಾಗೂ ಮತ್ತಿತರ ಏಜೆಂಟರುಗಳು ಅವನಿಗಾಗಿ ಕೆಲಸ ಮಾಡುತ್ತಿರುವ ನಿರ್ದಿಷ್ಟ ಮತ ಕ್ಷೇತ್ರದಲ್ಲಿ ಮತದಾರರಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡಿಲ್ಲವೋ ಅಂಥವರಿಗೆ ಮಾತ್ರ ಅದೇ ಮತಕ್ಷೇತ್ರದಲ್ಲಿ ಮತಚಲಾಯಿಸಲು ಅನುಮತಿಸಬೇಕು, ಅವರು ಅಲ್ಲಿ ನೊಂದಾಯಿಸಿಕೊಂಡಿಲ್ಲ ಎನ್ನುವುದಿದ್ದರೂ ಸಹ. ಆದರೆ ಆ ವಿಷಯವು ಈ ಪರಿಚ್ಛೇದದಡಿಯಲ್ಲಿ ಬರುವುದು ಸಾಧ್ಯವಿಲ್ಲ.

**ಮಾನ್ಯ ಅಧ್ಯಕ್ಷರು:** ಹಾಗಿದ್ದರೆ ಅವರುಗಳು ಎಲ್ಲಿದ್ದರೂ ಸಹ ಮತಚಲಾಯಿಸಲು ಬಿಡಬೇಕು ಎನ್ನುವುದೇ ಈಗಿನ ನಿಯಮವೇ?

**ಡಾ. ಅಂಬೇಡ್ಕರ್:** ಆವಶ್ಯಕತೆ ಇದ್ದಲ್ಲಿ ಅದನ್ನು ಪ್ರತ್ಯೇಕವಾಗಿಯೇ ನೀಡಲಾಗುತ್ತದೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಸ್ವಾಮಿ, ಈ ವಿಷಯವನ್ನು ಇನ್ನು ಹೆಚ್ಚು ಪೂರ್ತಿಯಾಗಿ, ಪ್ರತಿಬಂಧಕ

ನೆರೆಯಲ್ಲಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸದನದಲ್ಲಿ ಚರ್ಚಿಸಲು ಅನುಮತಿ ನೀಡಬೇಕೆಂದು ನಾನು ಇಚ್ಛಿಸುತ್ತೇನೆ. ತಿದ್ದುಪಡಿಯ ಸಲಹೆ ಮಾಡಲ್ಪಟ್ಟ ಸಮಯದಲ್ಲಿ ಒಂದು ಚರ್ಚಿಸಬೇಕಾದ ವಿಷಯವಾಗಿ ಇದು ಸ್ವೀಕೃತವಾಗುತ್ತದೆ ಎಂದು ನಾವು ತಿಳಿದೆವು. ಅನೇಕ ಸದಸ್ಯರುಗಳ ಅಭಿಪ್ರಾಯವೇನೆಂದರೆ, ಸಂವಿಧಾನದಡಿಯಲ್ಲಿನ ಪ್ರತಿಬಂಧಕ ಸೆರೆಯ ಕಾಯಿದೆಯನ್ವಯ ಸಂವಿಧಾನದಡಿಯಲ್ಲಿನ ಅವರು ಹೊಣೆಗಾರರಲ್ಲದ ಯಾವುದೋ ಒಂದು ವಿಷಯಕ್ಕೆ ಸೆರೆಯಲ್ಲಿರುತ್ತಾರೆ. ಅಂತಹ ವ್ಯಕ್ತಿಗಳನ್ನು ನ್ಯಾಯಾಲಕ್ಕೆ ಕರೆದುಕೊಂಡು ಹೋಗಿ ಅವರಿಗೆ ಶಿಕ್ಷೆ ವಿಧಿಸಲು ಸರ್ಕಾರವು ಹಿಂಜರಿಯುತ್ತದೆ. ಎಲ್ಲಿಯವರೆಗೆ ಅವರು ಅಪರಾಧ ಮಾಡಿಲ್ಲವೆಂದು ತೀರ್ಮಾನವಾಗಿಲ್ಲವೋ ಅಲ್ಲಿಯವರೆಗೆ ಅವರನ್ನು ಮತದಾರರೆಂದು ಪರಿಗಣಿಸಬೇಕು....... ಇದು ನಮ್ಮ, ಬಹಳ ಜನರ ಅಭಿಪ್ರಾಯವಾಗಿದೆ. ಈ ಪ್ರಶ್ನೆಯ ಪ್ರಾಮುಖ್ಯದ ದೃಷ್ಟಿಯಿಂದ ನಾವು ಪ್ರತ್ಯೇಕ ಚರ್ಚೆಯನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಹಾಗೆ ಮಾಡುವುದರಿಂದ ನಾವು ಈ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಸ್ಪಷ್ಟೀಕರಿಸಬಹುದು.

**ಮಾನ್ಯ ಅಧ್ಯಕ್ಷರು:** ಇಲ್ಲಿ ಎರಡು ಪ್ರಶ್ನೆಗಳಿವೆ. ಈ ವ್ಯಕ್ತಿಗಳು ಮತಚಲಾಯಿಸಲು ಅವಕಾಶ ನೀಡಬಹುದೇ ಎಂಬುದೊಂದೇ ಪ್ರಶ್ನೆಯಲ್ಲ.

*__ಡಾ. ಅಂಬೇಡ್ಕರ್:__ ನಾನು ಈ ವಿಚಾರಗಳನ್ನು ನೇರ್ಪಡಿಸಬಹುದೆಂದು ತೋರುತ್ತದೆ. ಕನಿಷ್ಠ ಪಕ್ಷ, ಸದನ ತನ್ನದೇ ಆದ ತೀರ್ಮಾನಕ್ಕೆ ಬರಲು ಸಾಧ್ಯವಾಗುವಂತೆ ಅವುಗಳನ್ನು ಸರಿಯಾದ ಪರಿಪ್ರೇಕ್ಷ್ಯದಲ್ಲಿ ಇಡಬಲ್ಲೆ.

ಮೊಟ್ಟ ಮೊದಲಾಗಿ, ಪತ್ನಿಯರಿಗೆ ಸಂಬಂದಿಸಿದಂತೆ, ೫೯ ನೇ ವಿಧಿಯ ಉಪವಿಧಿ (ಡಿ) ಕ್ಕೆ ಸಂಬಂಧಿಸಿದ ಅಂಶವನ್ನು ಇತ್ಯರ್ಥ ಮಾಡಲು ಇಚ್ಛಿಸುತ್ತೇನೆ. ಉಪವಾಕ್ಯಾಂಗ (ಡಿ) ವು ನಿರ್ದಿಷ್ಟವಾಗಿ ಏನನ್ನು ಮಾಡಬಯಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಜನರ ಕಾಯದೆಯ ನಿರೂಪಣೆಯ ೨೦ ನೇ ಪರಿಚ್ಛೇದಕ್ಕೆ ವಾಪಸಾಗುವುದು ಆವಶ್ಯಕ. ಆ ಕಾಯಿದೆಯ ೨೦ ನೇ ಪರಿಚ್ಛೇದವು "ಸಾಮಾನ್ಯವಾಗಿ ಶಾಶ್ವತ ನಿವಾಸಿ" ಎನ್ನುವ ಮಾತಿನ (ಪದಗಳ) ಅರ್ಥದ ಪ್ರಶ್ನೆಯ ಬಗೆಗೆ ಹೇಳುತ್ತದೆ. "ಸಾಮಾನ್ಯವಾಗಿ ಶಾಶ್ವತ ನಿವಾಸಿ" ಎನ್ನುವ ಮಾತಿನ ಅರ್ಥವೇನು? ಈಗ, "ಸಾಮಾನ್ಯವಾಗಿ ಶಾಶ್ವತ ನಿವಾಸಿ" ಎನ್ನುವ ಮಾತಿನ ಅರ್ಥ ಭಾರತದಲ್ಲೇ ನೆಲೆಸಿರುವ ವ್ಯಕ್ತಿಗಳ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾಗಿಯೇ ಇದೆ. ಆದರೆ ಕೆಲವು ವ್ಯಕ್ತಿಗಳ ವಿಷಯದಲ್ಲಿ, ಅಂದರೆ ಉದಾಹರಣೆಗೆ ರಾಷ್ಟ್ರದ ಸೈನ್ಯಗಳಲ್ಲಿರುವವರಿಗೆ, ಅವರು ಭೂಸೇನಾ ಕಾಯಿದೆ ಮತ್ತು ಕಾನೂನುಗಳಡಿಯಲ್ಲಿರುವುದರಿಂದ, ಅವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ (ಊರಿಗೆ) ವರ್ಗವಾಗಿ ಹೋಗಬಹುದು. ಅವರನ್ನು ನಿರ್ದಿಷ್ಟವಾಗಿ ಒಂದೇ ಸ್ಥಳದ ನಿವಾಸಿಯಾಗಿರುತ್ತಾರೆಂದು ಭಾವಿಸಲು ಸಾಧ್ಯವಿಲ್ಲ. ಅವರು ಕೆಲವು ತಿಂಗಳುಗಳ ಕಾಲ ಒಂದು ಜಾಗದಲ್ಲಿರುತ್ತಾರೆ. ಅನಂತರ ಇನ್ನೊಂದು ಊರಿಗೆ ವರ್ಗವಾಗಿ ಹೋಗುತ್ತಾರೆ. ಅಲ್ಲಿ ಕೆಲವು ತಿಂಗಳುಗಳು ಇರುತ್ತಾರೆ. ಮತ್ತೆ ವರ್ಗವಾಗಿಹೋಗುತ್ತಾರೆ. ಹಾಗೆ ಹೇಳಬೇಕೆಂದರೆ, ಅವರು ಯಾವ ನಿರ್ದಿಷ್ಟ ಪ್ರದೇಶದ ಬಗೆಗೂ ನಿರ್ದಿಷ್ಟವಾದ ಪ್ರೇಮ ಇರದೆ ಚಲಿಸುವ ಸೇನೆ ಎನ್ನಬೇಕು. ಅಂತಹವರ ವಿಷಯದಲ್ಲಿ ಅವರ ಮತಕ್ಷೇತ್ರ ಯಾವುದು ಎನ್ನುವ ಪ್ರಶ್ನೆ ಏಳುತ್ತದೆ.

ಅದರಂತೆಯೇ, ಭಾರತದಾಚೆಗೆ ಭಾರತ ಸರ್ಕಾರದ ಸೇವೆಯಲ್ಲಿ ಕೆಲಸ ಮಾಡುವ ಇನ್ನೊಂದು ವರ್ಗದ ಜನರೂ ಇದ್ದಾರೆ. ಇಂತಹ ವ್ಯಕ್ತಿಗಳ ವಿಷಯಕ್ಕೆ ಸಂಬಂಧಿಸಿದಂತೆ ಜನಕಾಯಿದೆಯ ನಿರೂಪಣೆಯ

ಟಿ. ೪೯೯೩-೪೦೨.

೨೦ ನೇ ಪರಿಚ್ಛೇದದಲ್ಲಿ ಒಂದು ಅವಕಾಶವನ್ನು ಕಲ್ಪಿಸಲಾಗಿದೆ. ಅವರು ಯಾವ ಮತಕ್ಷೇತ್ರವನ್ನು ತಮ್ಮ ಮತಕ್ಷೇತ್ರವೆಂದು ಭಾವಿಸುತ್ತಾರೆಯೋ ಅದರ ಬಗೆಗೆ ಹೇಳಿಕೆಯನ್ನು ನೀಡುವ ಅವಕಾಶವನ್ನು ಅವರಿಗೆ ಕೊಡಲಾಗುತ್ತದೆ. ಅವರು ಯಾವುದನ್ನು ಆಯ್ಕೆ ಮಾಡಿಕೊಂಡರೂ ನೋಂದಣಿ ಅಧಿಕಾರಿಯಿಂದ ಅದು ಒಪ್ಪಿತವಾಗುತ್ತದೆ. ಇದು ಅವರ ಹೆಸರುಗಳನ್ನು ಚುನಾವಣೆಯ ಮತದಾರರ ಪಟ್ಟಿಯಲ್ಲಿ ದಾಖಲಿಸುವ ಉದ್ದೇಶದಿಂದ ಆಗುವುದು. ಅದು ಈಗಿನ ಸ್ಥಿತಿ.

ಇದರ ಜತೆಗೆ ಅಂತಹ ವ್ಯಕ್ತಿಗಳ ಪತ್ನಿಯರ ಪ್ರಶ್ನೆಯೂ ಸ್ಪಷ್ಟವಾಗಿಯೇ ಏಳುತ್ತದೆ. ಏಕೆಂದರೆ ಅವರೂ ಸಹ ಕೆಲವೊಮ್ಮೆ ತಮ್ಮ ತಮ್ಮ ಪತಿಗಳ ಜತೆಯಲ್ಲಿಯೇ ಬರುತ್ತಾರೆ. ಅವರ ಪತಿಗಳು ದೇಶದ ಸೈನಿಕ ಸೇವೆಯಲ್ಲೋ ಅಥವಾ ಭಾರತದಿಂದ ಹೊರಗೆ ಸೇವೆ ಮಾಡುತ್ತಲೋ ಇರುತ್ತಾರೆ. ಹಾಗೆ ಕೆಲಸದಲ್ಲಿರುವ ಪುರುಷರ ವಿಷಯದಲ್ಲಿ ಪ್ರಶ್ನೆ ಎದ್ದಂತೆಯೇ ಅವರವರ ಪತ್ನಿಯರ ವಿಷಯದಲ್ಲಿಯೂ ಈ ಪ್ರಶ್ನೆ ಏಳುತ್ತವೆ. ಇದಕ್ಕೆ ೨೦ ನೇ ಪರಿಚ್ಛೇದದಲ್ಲಿ ಕೊಟ್ಟಿರುವ ಉತ್ತರ ಎಂದರೆ, ಅವರವರ ಪತಿಗಳ ಮತಕ್ಷೇತ್ರವೇ ಅವರ ಮತಕ್ಷೇತ್ರವೂ ಸಹ ಎಂದು ಪರಿಗಣಿಸಲಾಗುತ್ತದೆ ಎಂದು. ಆದ ಕಾರಣ ಪತ್ನಿಯರಿಗೂ ಸಹ ಅಂಚೆಯ ಮೂಲಕ ಮತಚಲಾಯಿಸುವ ಅವಕಾಶವನ್ನು ಕಲ್ಪಿಸಲಾಗುವುದು ಆವಶ್ಯಕವಾಗುತ್ತದೆ.

**ಶ್ರೀ ಆರ್.ಕೆ. ಚೌಧರಿ:** ಒಂದು ವೇಳೆ ಪತ್ನಿಯು ಇಲ್ಲೇ ಭಾರತದಲ್ಲೇ ಇದ್ದರೆ?

**ಡಾ. ಅಂಬೇಡ್ಕರ್:** ಒಂದು ವೇಳೆ ಪತ್ನಿಯು ಇಲ್ಲೇ ಇದ್ದರೆ, ಅದೇ ಅವಳ ಮತಕ್ಷೇತ್ರ. ಏಕೆಂದರೆ ಅವಳನ್ನು ಕಾಯಿದೆಯ ೨೦ ನೇ ಪರಿಚ್ಛೇದವು ಹೊಂದಿರುವ ಅವಕಾಶದಲ್ಲಿ ಚುನಾವಣಾ ಮತಪಟ್ಟಿಯಲ್ಲಿ ಸ್ವತಂತ್ರವಾಗಿ ಸೇರಿಸಲಾಗುತ್ತದೆ.

ಒಂದು ವೇಳೆ ಅವಳು ಹೊರಗಿದ್ದು, ಅವಳ ಪತಿಯು ನಿರ್ದಿಷ್ಟವಾದ ಒಂದು ಮತಕ್ಷೇತ್ರವನ್ನು ಆಯ್ಕೆ ಮಾಡುತ್ತಾನೆ ಎಂದುಕೊಳ್ಳೋಣ. ಪತಿಯು ಗುಪ್ತ ಮತದಾನ ಮಾಡುವ ಹಕ್ಕನ್ನು ಹೊಂದಿದ್ದಾನೆ ಎಂದರೆ, ಖಂಡಿತವಾಗಿಯೂ ಅವನ ಪತ್ನಿಗೂ ಅದೇ ಹಕ್ಕನ್ನು ಕೊಡಬೇಕಾಗುತ್ತದೆ. ಈ ಸರಳ ಪ್ರಸ್ತಾಪದ ವಿಷಯದಲ್ಲಿ ನನ್ನ ಗೌರವಾನ್ವಿತ ಮಿತ್ರ ಮಾನ್ಯ ಚೌಧರಿಯವರು ಉದ್ವೇಗಕ್ಕೆ ಒಳಗಾಗುವುದಕ್ಕೆ ಯಾವುದೇ ಕಾರಣ ನನಗೆ ಕಾಣಿಸುತ್ತಿಲ್ಲ.

**ಶ್ರೀ ಆರ್.ಕೆ. ಚೌಧರಿ:** ಒಂದು ವೇಳೆ ಪತ್ನಿಯೂ ಕೆಲಸದಲ್ಲಿದ್ದರೆ? ಅವಳ ಪತಿಯೂ ಅದೇ ಸೌಕರ್ಯವನ್ನು ಪಡೆಯುವನೇ?

**ಡಾ. ಅಂಬೇಡ್ಕರ್:** ಅದು ಆಕಸ್ಮಿಕವಾಗಿ ಹುಟ್ಟಿಕೊಳ್ಳಬಹುದಾದ ಪ್ರಸಂಗ.

ಈಗ ನಾನು ಬಂಧಿತ ವ್ಯಕ್ತಿಯ ಪ್ರಶ್ನೆಗೇ ಬರುತ್ತಿದ್ದೇನೆ. ವೈಯಕ್ತಿಕವಾಗಿ, ಭಾರತದಲ್ಲಿ ಯಾರಿಗೆ ಮತಚಲಾಯಿಸುವ ಹಕ್ಕಿರುವುದೋ ಅವರೆಲ್ಲರೂ ಮುಕ್ತವಾಗಿ ಮತಚಲಾಯಿಸಬೇಕು ಎನ್ನುವ ಪ್ರಸ್ತಾಪದ ಬಗೆಗೆ ನನಗೂ ಬಹಳವಾದ ಸಹಾನುಭೂತಿ ಇದೆ ಎಂದು ಹೇಳಲು ನಾನೇನೂ ಹಿಂಜರಿಯುವುದಿಲ್ಲ. ಆದರೆ ಬಂಧಿತ ವ್ಯಕ್ತಿಯು ಮತ ಚಲಾಯಿಸುವುದು ಸಾಧ್ಯವಾಗುವ ಹಾಗೆ ಮಾಡಲು ವಾಸ್ತವವಾಗಿ ನಾವು ಏನು ಮಾಡಬಹುದು ಎನ್ನುವುದನ್ನು ಸದನವು ಪರಿಗಣಿಸಬೇಕೆಂದು ನಾನು ಇಚ್ಛಿಸುತ್ತೇನೆ. ಅದನ್ನು ಮಾಡಲು ಮೂರು ಸಾಧ್ಯತೆಗಳಿವೆ. (ಸಾಧ್ಯತೆಯ ದಾರಿ) ಅವುಗಳಲ್ಲಿ ಒಂದು, ಪ್ರತಿಯೊಂದು ಜೈಲಿನಲ್ಲಿಯೂ ಒಂದು ಮತಗಟ್ಟೆಯನ್ನು ಮಾಡಬೇಕು, ಜೈಲರನ್ನು ಆ ಮತಗಟ್ಟೆಯ ರಿಟರ್ನಿಂಗ್ ಆಫೀಸರ್ ಅಥವಾ ಮುಖ್ಯ ಚುನಾವಣಾಧಿಕಾರಿಯನ್ನಾಗಿಯೋ ಅಥವಾ ಚುನಾವಣಾಧಿಕಾರಿಯನ್ನಾಗಿಯೋ ಮಾಡುವುದು. ಇದರಿಂದಾಗಿ ಆ ನಿರ್ದಿಷ್ಟವಾದ ಜೈಲಿನಲ್ಲಿರುವ ಎಲ್ಲರೂ ಮತಚಲಾಯಿಸಬಹುದು. ಎರಡನೆ ದಾರಿ

ಎಂದರೆ, ಸೆರೆಯಾಳುವನ್ನು ಬಿಟ್ಟು ಪೋಲೀಸರ ಜೊತೆಯಲ್ಲಿ ಕೈಗೆ ಬೇಡಿಯನ್ನು ಹಾಕಬಹುದು, ಎಲ್ಲರೂ ಮತಚಲಾಯಿಸುವ ಸಾಮಾನ್ಯ ಮತಗಟ್ಟೆಗೆ ಜೈಲಿನಿಂದಾಚೆ ಎರಡು ಅಥವಾ ಮೂರು ಮೈಲಿ ನಡೆಸಿಕೊಂಡು ಕರೆದೊಯ್ಯಲು ನಾವು ಬಿಡಬೇಕು. ಮೂರನೆಯ ದಾರಿಯೆಂದರೆ ಅಂಚೆ ಮೂಲಕ ಮತ ಹಾಕಿಸುವುದು. ಕೆಲವು ಜೈಲಿನಲ್ಲಿ ಬಂಧಿತರಾರೂ ಇರುವುದಿಲ್ಲ. ಕೆಲವಲ್ಲಿ ಒಬ್ಬರೋ ಅಥವಾ ಇಬ್ಬರೋ ಇರಬಹುದು. ಕೆಲವು ಜೈಲುಗಳಲ್ಲಿ ದೊಡ್ಡ ಸಂಖ್ಯೆಯಲ್ಲಿಯೇ ಬಂಧಿತರಿರಬಹುದು. ಹೀಗಿರುವಾಗ ನನ್ನ ಅಭಿಪ್ರಾಯದಲ್ಲಿ ಪ್ರತಿಯೊಂದು ಜೈಲಿನಲ್ಲಿಯೂ ಒಂದು ಮತಗಟ್ಟೆಯನ್ನು (ರಚಿಸುವುದು) ಸ್ಥಾಪಿಸುವುದು ಸ್ಪಷ್ಟವಾಗಿಯೇ ಅತ್ಯಂತ ಕಷ್ಟ.

**ಸಂಸತ್ತಿನ ಕಲಾಪಗಳ ರಾಜ್ಯದ ಮಂತ್ರಿ (ಶ್ರೀ ಸತ್ಯನಾರಾಯಣ ಸಿನ್ಹ):** ಅದು ಸಾಧ್ಯವಾಗುತ್ತದೆ.

**ಡಾ. ಅಂಬೇಡ್ಕರ್:** ಅದನ್ನು ಹೇಗೆ ಸಾಧ್ಯ ಮಾಡಬಹುದು ಎಂದು ಗೃಹ ಮಂತ್ರಿಗಳು ಸದನಕ್ಕೆ ತಿಳಿಸಲು ಹೆಚ್ಚಿಗೆ ಸಮರ್ಥರಾಗಿರುತ್ತಾರೆ ಎಂದು ನನ್ನ ಅಭಿಪ್ರಾಯ.

**ಶ್ರೀ ಸತ್ಯನಾರಾಯಣ ಸಿನ್ಹ:** ನಾನು ಗೃಹಮಂತ್ರಿಗಳೊಡನೆ ಸಮಾಲೋಚನೆ ನಡೆಸಿದ್ದೇನೆ.

**ಡಾ. ಅಂಬೇಡ್ಕರ್:** ಎರಡನೇ ಸಾಧ್ಯತೆಗೆ ಸಂಬಂಧಪಟ್ಟಂತೆ ಯಾವುದೇ ಸೆರೆಯಾಳು ಪೋಲೀಸರ ಕಾವಲಿನಲ್ಲಿ ಕೈಗೆ ಬೇಡಿಗಳನ್ನು ತೊಟ್ಟು, ಎರಡು–ಮೂರು ಮೈಲಿಗಳಷ್ಟು ದೂರ ಮೆರವಣಿಗೆ ಹೋಗುವ ಬದಲಿ ವ್ಯವಸ್ಥೆಯನ್ನು ಇಷ್ಟಪಡುತ್ತಾನೆ ಎಂದು ನನಗೆ ಅನ್ನಿಸುವುದಿಲ್ಲ.

**ಶ್ರೀ ಅಧ್ಯಕ್ಷರು:** ಎರಡು ಮೂರು ಮೈಲಿಗಳೇಕೆ? ಮತಕ್ಷೇತ್ರವು ಜೈಲಿನಿಂದ ಐವತ್ತು ಅಥವಾ ಐವತ್ತಕ್ಕಿಂತಲೂ ಹೆಚ್ಚು ಮೈಲುಗಳ ದೂರದಲ್ಲಿರಲೂಬಹುದು.

**ಡಾ. ಅಂಬೇಡ್ಕರ್:** ಇದು ಇನ್ನೊಂದು ತೊಂದರೆ. ಆದ್ದರಿಂದ ಇನ್ನೊಂದೇ ವಿಧಾನವನ್ನು ಮಾತ್ರವೇ ಈಗ ಪರಿಗಣಿಸಬೇಕಾಗಿರುವುದು. ಅದು ಅಂಚೆಮತ. ಅಂಚೆ ಮತದ ವ್ಯವಸ್ಥೆಯಲ್ಲಿ ಏನಾಗಬಹುದು ಎನ್ನುವುದನ್ನು ಸೂಚಿಸಬಯಸುತ್ತೇನೆ. ಈ ವಿಷಯದಲ್ಲಿ ಚುನಾವಣೆಯು ನಡೆಯುವುದಕ್ಕೆ ಬಹಳ ಮುಂಚಿತವಾಗಿಯೇ ಮತ ಪತ್ರವನ್ನು ವಿತರಿಸಬೇಕಾಗುತ್ತದೆ ಎನ್ನುವುದು ಸಾಕಷ್ಟು ಸ್ಪಷ್ಟವಾಗಿಯೆ ಇದೆ. ಈ ಉದ್ದೇಶಕ್ಕಾಗಿ ಚುನಾವಣಾ ಅಧಿಕಾರಿಗಳು (ಕಮಿಷನರರು) ಅನೇಕ ಜೈಲು ಸೂಪರಿಂಟೆಂಡೆಂಟ್ (ಜೈಲು ಮೇಲ್ವಿಚಾರಕರಿಗೆ) ಗಳಿಗೆ ಅವರ ವಶದಲ್ಲಿ ಎಷ್ಟು ಮಂದಿ ಸೆರೆಯಾಳುಗಳಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಒಂದು ಸುತ್ತೋಲೆಯನ್ನು ಬರೆಯಬೇಕಾಗುತ್ತದೆ. ಆ ದಿನದಲ್ಲಿ ಸೂಪರಿಂಟೆಂಡೆಂಟ್ ಅವರು ಲೆಕ್ಕ ಹಾಕಿರುವಂತೆ, ಅದೇ ಇಲ್ಲಿ ಮುಖ್ಯವಾದದ್ದು, ಅವರ ವಶದಲ್ಲಿರುವ ಸೆರೆಯಾಳುಗಳ ಸಂಖ್ಯೆಯ ಮಾಹಿತಿಯ ಪ್ರಕಾರ ಚುನಾವಣಾ ಅಧಿಕಾರಿಗಳು ಮತಪತ್ರವನ್ನು ವಿತರಿಸಬೇಕಾಗುತ್ತದೆ. ಅನಂತರ ಅದರಂತೆಯೇ ಅವರ ವಶದಲ್ಲಿರುವ ಅನೇಕ ಸೆರೆಯಾಳುಗಳಿಗೆ ವಿತರಿಸಲು ಜೈಲು ಸೂಪರಿಂಟೆಂಡೆಂಟ್‌ಗಳಿಗೆ ಮತ ಪತ್ರಗಳನ್ನು ಕಳುಹಿಸಬೇಕಾಗುತ್ತದೆ. ಈಗ ಸದನವು ಪರಿಗಣಿಸಬೇಕಾಗಿರುವ ಪ್ರಶ್ನೆ ಇದುವೇ: ಈ ವಿಚಾರಣೆಯು ನಡೆದ ದಿನಾಂಕ ಹಾಗೂ (ಚುನಾವಣಾ) ಮತದಾನ ನಡೆಯುವ ದಿನಾಂಕಗಳ ನಡುವೆ ಜೈಲು ವಶಕ್ಕೆ ತರಲಾಗುವ ಸೆರೆಯಾಳುಗಳಿಗೆ ಏನಾಗಬೇಕು? ಅವರಿಗೆ ಅಲ್ಲಿ ಮತಪತ್ರಗಳು ಇರುವುದಿಲ್ಲ ಎನ್ನುವುದಂತೂ ಸುಸ್ಪಷ್ಟ. ಕಾರಣ ಜೈಲು ಸೂಪರಿಂಟೆಂಡೆಂಟನು ಆ ನಿಗದಿತ ದಿನಾಂಕದಲ್ಲಿ ಮಾಡಿರುವ ಅಂದಾಜಿನ ಪಟ್ಟಿಯ (ಲೆಕ್ಕಾಚಾರದ) ಪ್ರಕಾರವೇ ಮತಪತ್ರಗಳನ್ನು ಅವನಿಗೆ ಅದಾಗಲೇ ಕಳುಹಿಸಲಾಗಿರುತ್ತದೆ. ಆ ದಿನಾಂಕವಾದ ನಂತರ ಐವತ್ತು ಜನ ಹೆಚ್ಚಾಗಿ ಜೈಲಿಗೆ ಕಳುಹಿಸಲ್ಪಟ್ಟಿರುತ್ತಾರೆ ಎಂದುಕೊಳ್ಳೋಣ. ಅವರು ಅಲ್ಲಿರುತ್ತಾರೆ. ಆದ್ದರಿಂದ, ಅಂಚೆಮತ ಪದ್ಧತಿಯನ್ನು ಅನ್ವಯಿಸಿಕೊಳ್ಳುವುದರಿಂದ,

ಬಂಧನದಲ್ಲಿರುವ ಪ್ರತಿಯೊಬ್ಬನೂ ಮತ ಹಾಕುವ ಹಕ್ಕನ್ನು ಪಡೆಯಬೇಕೆ ಎನ್ನುವ ಸಾಮಾನ್ಯ ಅಪೇಕ್ಷೆಯನ್ನು ನೀವು ಈಡೇರಿಸಿದಂತಾಗುವುದಿಲ್ಲ. (ಅಡಚಣೆ) ಹಲವರಿಗೆ ಸಿಗುತ್ತದೆ. ಆದರೆ ಕೆಲವರಿಗೆ ಇಲ್ಲ. ಬಂಧನದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಮತ ಚಲಾಯಿಸುವ ಅವಕಾಶವನ್ನು ಪಡೆಯಬೇಕು ಎನ್ನುವ ಉತ್ಸಾಹ ನಿಮಗಿದ್ದರೆ....

**ಶ್ರೀ ಜೆ.ಆರ್. ಕಪೂರ್:** ವಾಸ್ತವವಾಗಿ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೂ ಹಾಗಾಗಬೇಕು.

**ಡಾ. ಅಂಬೇಡ್ಕರ್:** .....ಆ ಉದ್ದೇಶವು ಹಾಗಾದಾಗ ಈಡೇರುವುದಿಲ್ಲ. ಕೆಲವರನ್ನು ಕೈಬಿಡಲೇ ಬೇಕಾಗುತ್ತದೆ. ನಾನು ಕಲ್ಪಿಸಿಕೊಳ್ಳುವಂತೆ, ಹಾಗಾಗುವ ನಿಖರ ಸಾಧ್ಯತೆ ಇದೆ. ಹೇಗೆ ಎಂದರೆ, ಚುನಾವಣಾ ದಿನಕ್ಕೆ ಹತ್ತಿರದಲ್ಲೇ, ಸೆರೆಯಾಳುಗಳ ಸಂಖ್ಯೆಯ ಲೆಕ್ಕ ನಡೆದುಹೋದ ನಂತರ ಮೊದಲಿದ್ದುದಕ್ಕಿಂತಲೂ ಪ್ರತಿಬಂಧಕ ಸೆರೆಯಾಜ್ಞೆಯಿಂದಾಗಿ ಜೈಲಿಗೆ ಕಳುಹಿಸಲ್ಪಟ್ಟವರ ಸಂಖ್ಯೆ ಹೆಚ್ಚಾಗಿರಬಹುದು. ಅದು ಹಾಗೆಯೇ ಆಗುವುದೆಂದು ನಾನೇನೂ ಹೇಳಲಿಚ್ಛಿಸುವುದಿಲ್ಲ. ಆದರೆ ಈ ರೀತಿಯದ್ದೇನಾದರೂ ಆಗಬಹುದೆನ್ನುವುದೇ ನನ್ನ ಆತಂಕ. ಆದ್ದರಿಂದ ನಾನು ಹೇಳುವುದೇನೆಂದರೆ ನೀವು ನಿಜಕ್ಕೂ ನಿರಪಾಯಕಾರಿಯಾದ ಅಥವಾ ಮೋಸದಿಂದ ಸುರಕ್ಷಿತವಾದ ಪೂರ್ವಸಿದ್ಧತೆ ಮಾಡುತ್ತಿಲ್ಲ. (ಅಡಚಣೆ)

ವಿಧಿಯ ಪರಾಮರ್ಶೆ ಇಲ್ಲದೆ ಈ ವಿಷಯವನ್ನು ಎತ್ತಲಾಗಿದೆ. ಈ ವಿಷಯವು ೬೧ ನೇ ವಿಧಿಯಡಿಯಲ್ಲಿ ಮಾತ್ರವೇ ಏಳುವುದು, ಕಾರಣ ಅದರ ಉಪಸರ್ಗ (೫) ದಲ್ಲಿ ನಿಶ್ಚಿತವಾದ ಅವಕಾಶವಿದೆ. ಅದು ೫೯ ನೇ ವಿಧಿಯ ಅಡಿಯಲ್ಲಿ ಬರಲು ಸಾಧ್ಯವಿಲ್ಲ. ೬೧ ನೇ ಉಪವಾಕ್ಯದ ಉಪಸರ್ಗ (೫) ಹೇಳುವುದೇನೆಂದರೆ, ಜೈಲಿನಲ್ಲಿ ಬಂಧನದಲ್ಲಿರುವ ಯಾವ ವ್ಯಕ್ತಿಯೂ ಯಾವ ಚುನಾವಣೆಯಲ್ಲಿಯೂ ಮತ ಹಾಕುವಂತಿಲ್ಲ. ಅವನು ಜೈಲಿನ ಶಿಕ್ಷೆಯನ್ನೇ ಪಡೆದಿರಬಹುದು, ಅಥವಾ ಗಡೀಪಾರಿನ ಶಿಕ್ಷೆ ಆಗಿರಬಹುದು. ಅಥವಾ ಪೋಲೀಸರ (ನ್ಯಾಯಾಂಗ ಬಂಧನ) ನ್ಯಾಯಬದ್ಧ ವಶದಲ್ಲಿರಬಹುದು ಅಥವಾ ಅವನು ಪ್ರತಿಬಂಧಕ ಸೆರೆಗೆ ಗುರಿಯಾಗಿರಬಹುದು..... ಆದ್ದರಿಂದ, ಏನಾದರೂ ತಿದ್ದುಪಡಿಯನ್ನು ಮಾಡುವುದಿದ್ದರೆ ಉಪವಾಕ್ಯ ೬೧ ರ ಉಪಸರ್ಗ (೫) ಕ್ಕೆ ಮಾತ್ರ ಮಾಡಬೇಕು. ಇದು, ಈ ವಿಷಯ ಉಪವಾಕ್ಯ ೫೯ ರ ಅವಕಾಶದಿಂದ ಸಾಕಷ್ಟು ಹೊರಗಿರುವಂತೆ ನನಗನ್ನಿಸುತ್ತದೆ.

**ಶ್ರೀ ಸಿಧ್ವ:** ನಾವು ಅದನ್ನೇ ಅಂಗೀಕರಿಸಿದರೆ, ಅದು ೬೧ ರ ಅಡಿಯಲ್ಲಿ ಬರುತ್ತದೆ.

**ಡಾ. ಅಂಬೇಡ್ಕರ್:** ಅದನ್ನು ನಾವು ಈಗ ಹೇಗೆ ಅಂಗೀಕರಿಸಬಹುದು? ಯಾವ ತೊಂದರೆಯಾಗಬಹುದು ಹಾಗೆ ಮಾಡಿದರೆ ಎನ್ನುವುದನ್ನು ನಾನು ಹೇಳಿದ್ದೇನೆ. ಅದು ಹಾಗಿದ್ದರೂ ಅದು ಹಾಗೆಯೇ ಆಗಲಿ ಎಂದು ನೀವು ಬಯಸಿದರೆ ಅದು ಬೇರೆಯೇ ವಿಷಯವಾಗುತ್ತದೆ. ಅದು ಯಾರಿಗೂ ಆತ್ಮಸಾಕ್ಷಿ (ವಿವೇಚನಾ ಶಕ್ತಿ) ಯ ವಿಷಯವಲ್ಲ. ಸರ್ಕಾರವು ಏನು ಬದಲಿ ವ್ಯವಸ್ಥೆಯನ್ನು ಮಾಡುತ್ತದೆ ಎನ್ನುವುದು ನನಗೆ ಗೊತ್ತಿಲ್ಲ.

**ಶ್ರೀ ಭಾರತಿ (ಮದ್ರಾಸ್):** ಅವರಲ್ಲಿ ಕೆಲವರು ನಿರಕ್ಷರರಾಗಿದ್ದರೂ ಇರಬಹುದು, ಅದೂ ಒಂದು ತೊಂದರೆ.

**ಒಬ್ಬ ಗೌರವ ಸದಸ್ಯರು:** ಅವರು ಹೆಚ್ಚಾಗಿಯೇ ಕಲಿತವರು ಬಿಡಿ !

**ಡಾ. ಅಂಬೇಡ್ಕರ್:** ನಾನು ಕೇವಲ ಆಡಳಿತಾತ್ಮಕ ತೊಂದರೆಗಳನ್ನು ಮಾತ್ರವೇ ಗಮನಕ್ಕೆ ತಂದಿದ್ದೇನೆ. ಈಗ, ಒಂದು ವೇಳೆ ಉದಾಹರಣೆಗೆ ಯಾವುದೇ ಒಂದು ನಿರ್ದಿಷ್ಟವಾದ ಜೈಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೆರೆಯಾಳುಗಳಿದ್ದಾರೆಂದು ಭಾವಿಸೋಣ. ಅವರಲ್ಲಿ ಬಹಳಷ್ಟು ಮಂದಿ ಅನಕ್ಷರಸ್ಥರೆಂದು ಚುನಾವಣಾ

ಅಭ್ಯರ್ಥಿಗೆ ತಿಳಿಯುತ್ತದೆ. ಅವರಿಗೆ ಸಹಿ ಮಾಡಲೂ ಬರುವುದಿಲ್ಲ. ಆಗ ಅವನು ಜೈಲರನ್ನು ಭೇಟಿ ಮಾಡಿ "ನನಗಾಗಿ ಇವುಗಳಿಗೆ ಸಹಿ ಮಾಡಿಸಿಕೊಡುತ್ತೀಯಾ ಎಂದು ಕೇಳುವ ನಿಶ್ಚಿತವಾದ ಸಾಧ್ಯತೆ ಇದೆ.

**ಶ್ರೀ ಸಿಧ್ವಾ:** ಬೇಕಾದಷ್ಟು ಮಂದಿ ಅಧಿಕಾರಿಗಳಿದ್ದಾರೆ. ಒಬ್ಬ ಸೂಪರಿಂಟೆಂಡೆಂಟ್ ಇರುತ್ತಾನೆ, ಒಬ್ಬ ಜೈಲರು ಮತ್ತು ಹೀಗೆಯೇ ಅನೇಕ ಅಧಿಕಾರಿಗಳಿರುತ್ತಾರೆ. ಅವರೆಲ್ಲರೂ ಭ್ರಷ್ಟರಾಗಿರುತ್ತಾರೆಂದು ನಾವು ಭಾವಿಸಬೇಕೆ?

**ಡಾ. ಅಂಬೇಡ್ಕರ್:** ಕೆಟ್ಟದ್ದೆನ್ನುವುದು ಒಂದು ವೇಳೆ, ಕಡಿಮೆ ಪ್ರಮಾಣದಲ್ಲಿದ್ದರೆ, ಅದನ್ನು ನಾವು ದೊಡ್ಡ ಪ್ರಮಾಣದಲ್ಲಿಯೂ ಸಹಿಸಿಕೊಳ್ಳಬೇಕೆ? (ಅಡಚಣೆ)

**ಹಲವು ಮಂದಿ ಗೌರವ ಸದಸ್ಯರು:** ಇದನ್ನು ಮತಕ್ಕೆ ಹಾಕಿ.

**ಶ್ರೀ ಅಧ್ಯಕ್ಷರು:** ಆರ್ಡರ್, ಆರ್ಡರ್.

**ಶ್ರೀ ಟಿ.ಎಸ್. ಸಿಂಗ್ (ಉತ್ತರ ಪ್ರದೇಶ):** ಸರ್ಕಾರಿ ಸೇವೆಯಲ್ಲಿರುವ ಪತ್ನಿಯು ಆ ಮತಕ್ಷೇತ್ರದಿಂದ ಹೊರಗೆ ಸೇವೆಯಲ್ಲಿದ್ದಾಗ ಅಂತಹ ಮಹಿಳೆಯ ಪತಿಯು ಏನು ಮಾಡಬೇಕು, ಅವನು ತನ್ನ ಮತಚಲಾವಣೆಯ ಹಕ್ಕು ಚಲಾಯಿಸುತ್ತಾನೆಯೋ, ಇಲ್ಲವೋ? ಇದನ್ನು ವಿಶದೀಕರಿಸಬೇಕೆಂದು ನಾನು ಕಾನೂನು ಮಂತ್ರಿಯನ್ನು ಕೇಳಿಕೊಳ್ಳುತ್ತೇವೆ.

**ಡಾ. ಅಂಬೇಡ್ಕರ್:** ಕಾನೂನಿಗೆ ಸಂಬಂಧಪಟ್ಟಂತೆ ಸದನದಲ್ಲಿರುವ ತನ್ನ ಮಹಿಳಾ ಮಿತ್ರರು ನನ್ನನ್ನು ಕ್ಷಮಿಸಬೇಕು. ಪತಿಯು ಪತ್ನಿಯ ಸ್ಥಾನವನ್ನು ಹೊಂದಿರುವುದಿಲ್ಲ; ಪತ್ನಿಯೇ ಪತಿಯ ಸ್ಥಾನವನ್ನು ಹೊಂದಿರುವವಳು.

ಈ ರೀತಿಯ ಅವ್ಯವಸ್ಥೆಗೆ ನಾನು ಅನುಮತಿಸಲಾರೆ. ಇದಕ್ಕಾಗಿ ಒಂದು ಕ್ರಮಬದ್ಧವಾದ ವಿಧಿಯಿದೆ. ಅದು ೬೧ (೫) ಎಂದು ನಾನು ಹೇಳಿದ್ದೇನೆ. ನೀವು ತಿದ್ದುಪಡಿಯನ್ನು ಅಂಗೀಕರಿಸಬೇಕೆಂದಿದ್ದರೆ ಅದಕ್ಕೆ ಒಂದು ತಿದ್ದುಪಡಿಯನ್ನು ಅಂಗೀಕರಿಸಿ. ಆದರೆ ನಮ್ಮ ಮುಂದೆ ತಿದ್ದುಪಡಿಯ ಮೂಲಪಾಠವಿಲ್ಲ.

**ಶ್ರೀ ಅಧ್ಯಕ್ಷರು:** ಅಂಗೀಕರಿಸಿದ ಒಂದು ತಿದ್ದುಪಡಿ ಇದೆ. ಈ ತಿದ್ದುಪಡಿಯನ್ನು ವಿಧಿಬದ್ಧವಲ್ಲವೆಂದು ಪರಿಗಣಿಸಲಾಗಿಲ್ಲ. ಅಂತೆಯೇ ಈ ತಿದ್ದುಪಡಿಯ ಸ್ವೀಕೃತಿಯು ಎರಡು ಅಂಶಗಳನ್ನು ಒಳಗೊಂಡಿದೆ. ಕೇವಲ ಮತಚಲಾಯಿಸುವ ಹಕ್ಕೇ ಅಲ್ಲ, ಜೊತೆಗೆ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಮತಚಲಾಯಿಸುವುದು. ಅಂದರೆ ಅಂಚೆ ಮತದಿಂದ ಎಂಬುದೂ ಇದೆ. ಆದ್ದರಿಂದ, ಈ ತಿದ್ದುಪಡಿಯನ್ನು ಹೌಸ್ ಅಂಗೀಕರಿಸದಿದ್ದರೂ ಸಹ ೫೯ ನೇ ವಿಧಿಯ ಅಡಿಯಲ್ಲಿ ಇದರ ಪರಿಗಣನೆಯನ್ನು ಪ್ರತಿಬಂಧಿಸುವುದಿಲ್ಲ. ಆದ್ದರಿಂದಲೇ ಸದನವು ಒಪ್ಪಿದರೆ, ಇದನ್ನು ಉಪವಾಕ್ಯ ೬೧ರಡಿಯಲ್ಲಿ ತೆಗೆದುಕೊಳ್ಳಬಹುದು ಎನ್ನುವುದು ನನ್ನ ಅಭಿಮತ.

**ಶ್ರೀ ಜೆ.ಆರ್. ಕಪೂರ್:** ಉಪವಾಕ್ಯ ೬೧ ರ ಅಡಿಯಲ್ಲಿಯೂ ಅದೇ ಪರಿಣಾಮವಿರುವ ಹಾಗೆ ನಾನೊಂದು ತಿದ್ದುಪಡಿಯ ಸಾರಾಂಶವನ್ನು ತಯಾರಿಸಿದ್ದೇನೆ ಎಂದು ನಾನು ಹೇಳಬಹುದುದೆ? ಆದರೆ ಅಲ್ಲಿಯೂ (ಅಲ್ಲಿಗೂ) ಸಹ ನಾನೊಂದು ತಿದ್ದುಪಡಿಯ ಕರಡನ್ನು ಸಿದ್ಧಮಾಡಿದ್ದೇನೆ. ಎಂದರೆ, ಅದಕ್ಕೆ ಕಾರಣ ಇಲ್ಲಿಯೂ ಸಹ ತಿದ್ದುಪಡಿಯನ್ನು ಮಾಡಬೇಕಾದದ್ದು ಆವಶ್ಯಕ ಎಂದು ನಾನು ಪರಿಗಣಿಸುತ್ತೇನೆ. ಇನ್ನೊಂದು ತಿದ್ದುಪಡಿಯು ತತ್ಪರಿಣಾಮವಾಗಿ ಆಗುವಂಥದು. ಏಕೆಂದರೆ ೫೯ನೇ ವಿಧಿಯು ಮತಚಲಾಯಿಸುವ ರೀತಿಗೆ ಸಂಬಂಧಿಸಿದ್ದೂ, ಅಂತೆಯೇ ೬೧ ನೇ ವಿಧಿಯು ಮತಚಲಾಯಿಸುವ ಹಕ್ಕಿಗೆ ಸಂಬಂಧಿಸಿದ್ದೂ ಆಗಿದೆ. ನಾವು ೬೧ ನೇ ವಿಧಿಗೆ ಬಂದರೆ ಉಪವಿಧಿ (೫) ರಲ್ಲಿ ಈ ಮುಂದಿನ ಮಾತುಗಳು ಇವೆ. "ಅಥವಾ ತತ್ಕಾಲದಲ್ಲಿ ಯಾವುದೇ ಕಾನೂನು ಅನ್ವಯವಾಗಿದ್ದರೂ ಆ ಕಾನೂನಿನಡಿಯಲ್ಲಿ ಪ್ರತಿಬಂಧಕ

ಸೆರೆಗೆ ಗುರಿಯಾಗಿರುವವರು" ಈ ಮಾತುಗಳನ್ನು ಅಲ್ಲಿಂದ ತೆಗೆದುಹಾಕಬೇಕು.

**ಶ್ರೀ ಅಧ್ಯಕ್ಷರು:** ಆರ್ಡರ್, ಆರ್ಡರ್, ಸೆರೆಯಾಳಿಗೂ ಮತಚಲಾಯಿಸುವ ಹಕ್ಕಿದೆ ಎಂದು ನಾವು ಸ್ಥಿರಪಡಿಸುವುದರಲ್ಲಿ ಯಶಸಾಧಿಸುವ ತನಕ ನಾವು ಏನನ್ನು ಮಾಡಲಾಗುವುದಿಲ್ಲ. ಅವನು ಯಾವ ರೀತಿಯಲ್ಲಿ ಹೇಗೆ ಮತಚಲಾಯಿಸುತ್ತಾನೆ ಎನ್ನುವುದು ಸಹಜವಾಗಿಯೇ ಇದಾದ ನಂತರ ಬರುತ್ತದೆ. ಈಗಿನ ವ್ಯವಸ್ಥೆಯಲ್ಲಿ ೬೧ ನೇ ವಿಧಿಗಿಂತ ಮೊದಲೇ ೫೫ ನೇ ವಿಧಿ ಬರುತ್ತದೆ. ಆದ್ದರಿಂದ ಒಬ್ಬ ಸೆರೆಯಾಳಿಗೆ ಮತ ಚಲಾಯಿಸುವ ಹಕ್ಕಿದೆ ಎನ್ನುವುದನ್ನು ಮೊಟ್ಟ ಮೊದಲಿಗೆ ಸದನವು ಸ್ಥಿರಪಡಿಸಿದರೆ ಒಳ್ಳೆಯದು. ಆಗ ಅವನು ಹೇಗೆ ಮತ ಚಲಾಯಿಸುತ್ತಾನೆ ಎನ್ನುವ ಪ್ರಶ್ನೆ ಉದ್ಭವಿಸುವುದು. ಒಬ್ಬ ಸೆರೆಯಾಳು ಮತಚಲಾಯಿಸುವ ಹಕ್ಕನ್ನು ಹೊಂದಿದ್ದಾನೆ ಎನ್ನುವ ಅಭಿಪ್ರಾಯವನ್ನು ಸದನವು ಹೊಂದಿದ್ದರೆ, ಆಗ ಅವನು ಹೇಗೆ ಮತ ಚಲಾಯಿಸಬೇಕು ಎನ್ನುವುದರ ಬಗೆಗೆ ಸರ್ಕಾರವೇ ಏನಾದರೂ ವ್ಯವಸ್ಥೆ ಮಾಡಬೇಕು.

**ಶ್ರೀ ಜೆ.ಆರ್. ಕಪೂರ್:** ಆದರೆ ಸರ್ಕಾರವು ಆ ರೀತಿಯ ಯಾವುದೇ ವ್ಯವಸ್ಥೆಯನ್ನು ಮಾಡಬೇಕಾದರೆ ಈ ಕಾನೂನೇ ಅದಕ್ಕೆ ಆ ಅಧಿಕಾರವನ್ನು ಕೊಡಬೇಕು.

**ಶ್ರೀ ಅಧ್ಯಕ್ಷರು:** ಆರ್ಡರ್, ಆರ್ಡರ್ ಗೌರವಾನ್ವಿತ ಮಂತ್ರಿಗಳು ಹೇಳುವುದನ್ನು ನಾವು ಕೇಳೋಣ.

**ಡಾ. ಅಂಬೇಡ್ಕರ್:** ಸದನವು ಅದನ್ನು ಅನುಸರಿಸಿದರೆ ನಾನು ಏನು ಮಾಡುತ್ತೇನೆಂದರೆ, "ಅಥವಾ ತತ್ಕಾಲದಲ್ಲಿ ಯಾವುದೇ ಕಾನೂನು ಅನ್ವಯವಾಗಿದ್ದರೂ ಆ ಕಾನೂನಿನಡಿಯಲ್ಲಿ ಪ್ರತಿಬಂಧಕ ಸೆರೆಗೆ ಗುರಿಯಾಗಿರುವವರು" ಎನ್ನುವ ಕೊನೆಯ ವಾಕ್ಯವನ್ನು ತೆಗೆದುಹಾಕಿ "ಪ್ರತಿಬಂಧಕ ಸೆರೆಯಲ್ಲಿರುವ ವ್ಯಕ್ತಿಗಳು ಅವರ ಮತ ಚಲಾಯಿಸಲು ಸಾಧ್ಯಮಾಡುವ ಉದ್ದೇಶದಿಂದ, ಸರ್ಕಾರವು ಮತಗಟ್ಟೆಗಳನ್ನು ಸ್ಥಾಪಿಸಬಹುದು ಅಥವಾ ಮತಪತ್ರದಿಂದ ಮತದಾನಕ್ಕೆ ಅವಕಾಶವನ್ನೇ ಕಲ್ಪಿಸಬಹುದು". ಹೀಗೆ ಅಥವಾ ಇದೇ ರೀತಿ ಏನನ್ನಾದರೂ ಅಲ್ಲಿ ಹೇಳುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ೬೧ ನೇ ವಿಧಿ ಮತ್ತು ಅನಂತರ ೫೫ ನೇ ವಿಧಿಯನ್ನು ತೆಗೆದುಕೊಳ್ಳುವುದು ಇನ್ನೊಂದು ನಡೆ (ಕ್ರಮ).

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಶ್ರೀ ಕಪೂರರು ಪ್ರಸ್ತಾಪಿಸಿದ ತಿದ್ದುಪಡಿಯ ಬಗೆಗೆ ನಿರ್ಧಾರ ತೆಗೆದುಕೊಳ್ಳುವುದರಿಂದ ಇದೇನೂ ಈ ಸದನವನ್ನು ಪ್ರತಿಬಂಧಿಸಿಲ್ಲ. ಏಕೆಂದರೆ ಈ ತಿದ್ದುಪಡಿಯ ಸ್ವೀಕೃತಿಯು ಸಹಜವಾಗಿಯೇ ೬೧ನೇ ವಿಧಿಯನ್ನು ತೆಗೆದು ಹಾಕುವುದನ್ನೂ ಒಳಗೊಂಡಿದೆ. ಈ ಕಾರ್ಯ ವಿಧಾನವು ಸಾಕಷ್ಟು ಸರಿಯಾಗಿದೆ. ಶ್ರೀ ಕಪೂರರ ತಿದ್ದುಪಡಿಯನ್ನು ನೀವು ಮತಕ್ಕೆ ಹಾಕಬಹುದು ಎಂದು ನನ್ನ ಅನಿಸಿಕೆ.

**ಒಬ್ಬ ಗೌರವ ಸದಸ್ಯರು:** ಅನಕ್ಷರಸ್ಥ ಮತದಾರರ ಬಗೆಗೇನು ಮಾಡುವುದು?

**ಡಾ. ಅಂಬೇಡ್ಕರ್:** ಈ ವಿಷಯವನ್ನು ೬೧ (೫) ರಡಿಯಲ್ಲಿ ಪರಿಗಣಿಸುವುದು ನನಗೆ ಸೂಕ್ತವೆನಿಸುತ್ತದೆ. ಅದು ಈ ರೀತಿ ಪರೋಕ್ಷ ರೀತಿಯಲ್ಲಿ ಮಾಡುವುದಕ್ಕಿಂತಲೂ ಹೆಚ್ಚು ನೇರವಾದದ್ದಾಗಿದೆ.

**ಶ್ರೀ ಅಧ್ಯಕ್ಷರು:** ಮತಚಲಾಯಿಸುವ ಹಕ್ಕಿಗೆ ಸಂಬಂಧಪಟ್ಟಂತೆ, ಮೊಟ್ಟ ಮೊದಲನೆಯದಾಗಿ ಅದು ಸದನದಿಂದ ಸ್ಥಿರ ಪಡಬೇಕು ಎಂದು ನನ್ನ ಅಭಿಪ್ರಾಯ. ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ತೋರಿಸಿಕೊಟ್ಟಂತೆ ೫೫ನೇ ವಿಧಿಯನ್ನು ಪರಿಗಣಿಸಲು ನಮ್ಮನ್ನು ಪ್ರತಿಬಂಧಿಸುವ ಯಾವ ನಿಯಮವೂ ಇಲ್ಲ, ಕಾರಣ ೫೫ನೇ ವಿಧಿಯ ರೀತ್ಯಾ ಅಂಗೀಕರಿಸುವುದು ಎರಡು ವಿಷಯಗಳನ್ನು ಸ್ಥಿರಪಡಿಸುವುದು. ಅದು ಯಾವುದೆಂದರೆ

ಮತಚಲಾಯಿಸುವ ಹಕ್ಕು ಹಾಗೂ ನಿರ್ದಿಷ್ಟವಾದ ರೀತಿಯಲ್ಲಿ ಮತ ಚಲಾಯಿಸುವ ಹಕ್ಕು. ನಾವೀಗ ನಿರ್ದಿಷ್ಟವಾದ ರೀತಿಯಲ್ಲಿ ಮತಚಲಾಯಿಸುವ ಹಕ್ಕಿನ ಬಗೆಗೆ ಚರ್ಚಿಸುವ ಮೊದಲು ಮತ ಚಲಾಯಿಸುವ ಹಕ್ಕನ್ನು ಸ್ಥಾಪಿಸುವುದು ಒಳ್ಳೆಯದು ಎನ್ನುವುದು ಈ ಸಮಯದಲ್ಲಿ ಅಂಗೀಕೃತವಾಯಿತು. ಆಗ ಸರ್ಕಾರವು ಈ ಹಕ್ಕನ್ನು ಚಲಾಯಿಸುವ ರೀತಿಯನ್ನು ಸೂಚಿಸಬೇಕಾಗುತ್ತದೆ. ಆಗ ತಿದ್ದುಪಡಿಯು ಬಂದ ನಂತರ ಸರ್ಕಾರವು ಸೂಚಿಸಿದ್ದು ಸೆರೆಯಾಳಿನ ಮತವನ್ನು ತಡೆಯುವ ನಿರ್ದಿಷ್ಟ ರೀತಿಯನ್ನು ಸರಿಯೇ ಅಲ್ಲವೇ ಎನ್ನುವುದನ್ನು ನಾವು ಹೇಳುವುದು ಸರಿಯಾಗಿರುತ್ತದೆ. ಆಗ ಮತಗಟ್ಟೆಗಳನ್ನು ಸ್ಥಾಪಿಸುವುದೋ ಅಥವಾ ಅಂಚೆಯ ಮೂಲಕ ಮತಚಲಾಯಿಸುವುದೋ ಇವೆರಡರಲ್ಲಿ ಯಾವುದು ಆಯ್ಕೆಗೆ ಅರ್ಹವಾದದ್ದು ಎಂದು ಪರಿಗಣಿಸಲು ನಮಗೆ ಅವಕಾಶ ಸಿಗುತ್ತದೆ. ಆಗ ಆ ವಿಧಾನವನ್ನು ಒಪ್ಪಿಕೊಳ್ಳುವ ಅವಕಾಶವೂ ನಮಗಿರುತ್ತದೆ. ಇದನ್ನು ನಾವು ೬೧ನೇ ವಿಧಿಯನ್ನು ಪರಿಗಣಿಸುವಾಗ ತೆಗೆದುಕೊಳ್ಳಬಹುದು (ಚರ್ಚಿಸಬಹುದು) ಎಂದು ಶ್ರೀ ಜಸ್ವತ್‌ರಾಯ್ ಕಪೂರರು ಅದಾಗಲೇ ಸಮ್ಮತಿಸಿದ್ದಾರೆ ಎಂದು ನನ್ನ ಅಭಿಪ್ರಾಯ.

**ಶ್ರೀ. ಟಿ.ಟಿ. ಕೃಷ್ಣಮಾಚಾರಿ:** ಹೌಸ್ ಈ ವಿಷಯವನ್ನು ನಿರ್ಧಾರ ಮಾಡಬೇಕು ಎನ್ನುವುದು ನನ್ನ ಸಲಹೆ. ಸದನವು ೬೧ನೇ ವಿಧಿಯನ್ನು ಮೊದಲು ನಿರ್ಧರಿಸಿ, ೫೯ ನೇ ವಿಧಿಯನ್ನು ಈಗ ನಿರ್ಧರಿಸದೇ ಬಿಡಬಹುದು ಎನ್ನುವುದು ನಿಮ್ಮೆಲ್ಲರಿಗೂ ಅನಿಸಿದರೆ, ನಾನು ಸಹ ಅದನ್ನು ಒಪ್ಪುತ್ತೇನೆ. ಆದರೆ ಹೊಸ ಈ ಮಸೂದೆಯನ್ನು ಮಂಡಿಸಿದವರ ದುರ್ಬಲ ಇಚ್ಛೆಗೆ ಬಿಡುಬಿಡುವುದು ನಮಗೆ ಬೇಕಿಲ್ಲ. ೫ ನೇ ವಿಧಿಗೆ ಮೊದಲೇ ೬೧ನೇ ವಿಧಿಯನ್ನು ವರ್ಜಿಸಬೇಕೆಂದು ನಾನು ಇಚ್ಛಿಸುತ್ತೇನೆ.

**ಶ್ರೀ ಅಧ್ಯಕ್ಷರು:** ಆರ್ಡರ್, ಆರ್ಡರ್. ಹಾಗೆ ಸೂಚಿಸುವುದು ಸರಿಯಿಲ್ಲ, ಕಾರಣ ಅಧ್ಯಕ್ಷರ (ಪೀಠ) ಕೈಯಲ್ಲಿ ಈಗ ಈ ವಿಷಯವಿರುವುದು. ಯಾವ ವಿಷಯವನ್ನು ಮೊದಲು ಪ್ರಸ್ತಾಪಿಸಬೇಕು. ಯಾವ ವಿಷಯವನ್ನು ಅನಂತರ ಪ್ರಸ್ತಾಪಿಸಬೇಕು ಎಂದು ಅಧ್ಯಕ್ಷರು ಕಂಡುಕೊಳ್ಳಬೇಕು. ತಿದ್ದುಪಡಿಯ ಬಗೆಗೆ ಮಸೂದೆ ಮಂಡಿಸಿದವರು ತಮ್ಮ ಮತವನ್ನು ವ್ಯಕ್ತಪಡಿಸಿದ್ದಾರೆ. ವಿಷಯವು ಅವರ ದುರ್ಬಲ ಇಚ್ಛೆಗೆ ಬಿಟ್ಟದ್ದು ಎಂದೇಕೆ ಹೇಳಬೇಕು?

**ಶ್ರೀ ಜೆ.ಆರ್. ಕಪೂರ್:** ನನ್ನ ತಿದ್ದುಪಡಿಯ ನಿಯಮದ ಸ್ವೀಕೃತಿ ಅಂಗೀಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಭಿನ್ನಾಭಿಪ್ರಾಯವಿದ್ದಂತೆ ಕಾಣುವುದಿಲ್ಲ ಎಂದು ನಾನು ಒಪ್ಪುತ್ತೇನೆ. ಆದ್ದರಿಂದ ಅದರ ಬಗ್ಗೆ ನಾನೇನನ್ನು ಹೇಳುವುದಿಲ್ಲ. ಈಗಿರುವ ಒಂದೇ ಪ್ರಶ್ನೆಯೆಂದರೆ, ಅದರ ತಾತ್ಪರ್ಯವನ್ನು ಎಲ್ಲಿ ಮತ್ತು ಹೇಗೆ ಸಂಯೋಜಿಸುವುದು ಎನ್ನುವುದು. ಮತದ ಹಕ್ಕು ಎನ್ನುವುದು ಅದಾಗಲೇ ಕಾನೂನುಸಮ್ಮತವಾಗಿದೆ. ೬೧ನೇ ವಿಧಿಯು ಒಂದು ಅನರ್ಹತಾ ವಿಧಿ. ಅದು ಮತ ಚಲಾವಣೆಯ ಯಾವುದೇ ಹಕ್ಕನ್ನು ಕೊಡುವುದಿಲ್ಲ. ೬೧ನೇ ವಿಧಿಯಲ್ಲಿ ನಮೂದಿಸಿರುವ ಕೆಲವು ವ್ಯಕ್ತಿಗಳಿಂದ ಅದು ಮತಚಲಾಯಿಸುವ ಹಕ್ಕನ್ನು ಕಸಿದುಕೊಳ್ಳುತ್ತದೆ. ಆದರೆ ಇಲ್ಲಿ, ಅದನ್ನು ನಾವು ನಿಶ್ಚಿತವಾಗಿಯೂ ಕೊಡಬೇಕಾಗುತ್ತದೆ, ಕಾರಣ ಇಲ್ಲಿ ನಾವು ಅಧಿಕಾರಯುಕ್ತವಾಗಿ ಕ್ರಮವನ್ನು ಹೇಳುತ್ತಿದ್ದೇವೆ. ಆ ಕ್ರಮದಿಂದ ಹಲವು ವರ್ಗಗಳ ಜನರು ಮತಚಲಾಯಿಸಬಹುದಾಗುತ್ತದೆ. ಆದ್ದರಿಂದ ಇದೇ ಸರಿಯಾದ ಸ್ಥಳ.

**ಶ್ರೀ ಅಧ್ಯಕ್ಷರು:** ಆರ್ಡರ್, ಆರ್ಡರ್. ವಿಷಯವು ನಿಚ್ಚಳವಾಗಿ ಸ್ಪಷ್ಟವಾಗಿದೆ. ಆ ಬಗ್ಗೆ ಯಾವುದೇ ವಿವಾದವಿಲ್ಲ. ಹೌಸ್‌ನ ಮುಂದೆ ಮತಚಲಾಯಿಸುವ ಹಕ್ಕು ಹಾಗೂ ಆ ಮತವನ್ನು ದಾಖಲಿಸುವ ಬಗೆ, ಈ ಎರಡು ವಿಷಯಗಳಿವೆ. ೬೧ನೇ ವಿಧಿಯಲ್ಲಿ ಇರುವ ಒಂದು ಅವಕಾಶವು ಸೆರೆಯಾಳಿನಿಂದ ಮತದ

ಹಕ್ಕನ್ನು ಕಸಿದುಕೊಳ್ಳುತ್ತದೆ. ನಾವು ಮೊದಲು, ಆ ಹಕ್ಕನ್ನು ಕಸಿದುಕೊಳ್ಳಲಾಗದಂತೆ ನೋಡಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತೇವೆಯೋ ನೋಡಬೇಕಿದೆ. ಆ ನಂತರ ಆ ಮತವನ್ನು ದಾಖಲಿಸುವ ಬಗ್ಗೆ ಪ್ರಶ್ನೆ ಏಳುತ್ತದೆ. ಆಗ ನಾವು ೫೯ ನೇ ವಿಧಿಗೆ ಮರಳಿ ಈ ವಿಧಾನದಲ್ಲಿ ಅವರು ಮತವನ್ನು ಚಲಾಯಿಸುವುದನ್ನು ಆಯ್ದುಕೊಳ್ಳಬಹುದೋ ಅಥವಾ ಗೌರವಾನ್ವಿತ ಕಾನೂನು ಮಂತ್ರಿಗಳು ಸೂಚಿಸಿದ ಇತರ ವಿಧಾನಗಳನ್ನು ಆಯ್ದುಕೊಳ್ಳಬಹುದೋ ನೋಡೋಣ. ತಿದ್ದುಪಡಿಯನ್ನು ಮಂಡಿಸಿರುವ ಗೌರವಾನ್ವಿತರ ಏಕಾಭಿಪ್ರಾಯದೊಂದಿಗೆ, ಈ ತಿದ್ದುಪಡಿಯನ್ನು ನಾನೀಗ ಸದನದ ಮುಂದೆ ಇಡುತ್ತಿಲ್ಲ. ಅವಶ್ಯವಾದರೆ ನಾವು ೫೯ನೇ ವಿಧಿಗೆ ಮತ್ತೆ ಮರಳಬಹುದು.

**ಹಲವು ಗೌರವಾನ್ವಿತ ಸದಸ್ಯರುಗಳು:** ಆಗಬಹುದು.

**ಶ್ರೀ ಅಧ್ಯಕ್ಷರು:** ನಾನು ಇನ್ನೊಂದು ತಿದ್ದುಪಡಿಯನ್ನು ಹೌಸ್ ಸಂಖ್ಯೆ ೩೯೬ ಕ್ಕೆ ಇಡುತ್ತೇನೆ.

**ಶ್ರೀ ಶಿವಚರಣ್‌ಲಾಲ್:** ಅದರ ಬಗೆಗೆ, ಒಂದು ಅಂಶದ ವಿಷಯವಾಗಿ ನನಗೊಂದು ಸ್ಪಷ್ಟೀಕರಣ ಬೇಕಾಗಿದೆ.

**ಶ್ರೀ ಅಧ್ಯಕ್ಷರು:** ಎಲ್ಲ ಅಂಶಗಳಿಗೂ ಸ್ಪಷ್ಟೀಕರಣ ನೀಡಲಾಗಿದೆ.

**ಶ್ರೀ ಶಿವಚರಣ್‌ಲಾಲ್:** ತಿದ್ದುಪಡಿ ಸಂಖ್ಯೆ ೩೯೬ ಕ್ಕೆ ಉತ್ತರಿಸುತ್ತಾ ಗೌರವಾನ್ವಿತ ಮಂತ್ರಿಗಳು ಇದು ಚುನಾವಣಾ ಅಭ್ಯರ್ಥಿಗಳನ್ನು ಅವರ ಚುನಾವಣಾ ಏಜೆಂಟರನ್ನು ಮತ್ತು ಮತಗಳ ಏಜೆಂಟರನ್ನು ಕರೆತರುವ ಜಾಗವಲ್ಲ ಎಂದು ಹೇಳಿದರು. ಈ ವಿಧಿಯ ತಲೆಬರಹವು, ನಾನೆಣಿಸಿದಂತೆ "ಕೆಲವು ವರ್ಗಗಳ ಜನರು ಮತಹಾಕಲು ವಿಶೇಷವಾದ ಕ್ರಮ" (ಕೆಲವು ವರ್ಗಗಳ ಜನರಿಂದ ಮತ ಚಲಾಯಿಸಲ್ಪಡಲು ಇದು ವಿಶೇಷ ಕ್ರಮ) ಎಂದಿದೆ. ಇದು ಅವರನ್ನು ಒಳಸೇರಿಸಿಕೊಳ್ಳಲು ಸರಿಯಾದ ಜಾಗ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಅಧ್ಯಕ್ಷರು:** ಅಂಚೆಮತಕ್ಕೆ ಒಂದು ವಿಶೇಷ ವಿಧಾನ ಇದರೊಳಗಿದೆ ಎನ್ನುವುದನ್ನು ಗೌರವಾನ್ವಿತ ಸದಸ್ಯರು ಸ್ಪಷ್ಟವಾಗಿ ಗ್ರಹಿಸುತ್ತಾರೆ. ಗೌರವಾನ್ವಿತ ಮಂತ್ರಿಗಳು ಇದು ಸರಿಯಾದ ವಿಧಾನವಲ್ಲ ಎಂದು ಆದಾಗಲೇ ವಿವರಿಸಿದ್ದಾರೆ. ಈ ವ್ಯಕ್ತಿಗಳು ಮತಚಲಾಯಿಸುವ ಹಕ್ಕನ್ನು ಪಡೆಯುವಂತೆ ಎಲ್ಲಾದರೂ ಅವಕಾಶ ಕಲ್ಪಿಸುವುದು ಗೌರವಾನ್ವಿತ ಮಂತ್ರಿಗಳಿಗೆ ಸೇರಿದ್ದು.

**ಡಾ. ಅಂಬೇಡ್ಕರ್:** ನನ್ನ ಗೆಳೆಯರಿಗೆ ವಿವರಣೆ ಬೇಕಾದರೆ ಅವರಿಗೆ ಈ ವಿವರಣೆಯನ್ನು ಕೊಡಲು ನಾನು ಇಚ್ಛಿಸುತ್ತೇನೆ. ಈ ೫೯ ನೇ ವಿಧಿಯು ಕೆಲವು ವ್ಯಕ್ತಿಗಳಿಗೆ ಅಂಚೆ ಮತ ನೀಡುವ ಅವಕಾಶದ ಬಗ್ಗೆ ವಿಶೇಷವಾಗಿ ಉಲ್ಲೇಖಿಸುತ್ತದೆ. ಅದು ಕೆಲವು ಇತರ ವರ್ಗಗಳ ಜನರ ಮತಚಲಾವಣೆಯ ವಿಧಾನಕ್ಕೆ ನಿಯಮಗಳ ಮೂಲಕ ಅವಕಾಶ ಕಲ್ಪಿಸುವ ಸರ್ಕಾರದ ಅಥವಾ ಚುನಾವಣಾ ಮುಖ್ಯಾಧಿಕಾರಿಗಳ ಅಧಿಕಾರವನ್ನು ಕಸಿದುಕೊಳ್ಳುವುದಿಲ್ಲ. ಒಂದು ವೇಳೆ ಅವರಿಗೆ ನಿರ್ದಿಷ್ಟವಾಗಿ ಯಾವುದಾದರೂ ನಿಯಮ ಬೇಕಾದರೆ "ನಿಯಮಗಳನ್ನು ಮಾಡುವ ಅಧಿಕಾರ' ಎಂದುಕೊಟ್ಟಿರುವ ೧೬೭ ನೇ ವಿಧಿಗೆ ನಾವು ಬಂದಾಗ ಅವರು ಅದನ್ನು ಕಾಣಬಹುದು.

**ಶ್ರೀ ಅಧ್ಯಕ್ಷರು:** ತಿದ್ದುಪಡಿ ಸಂಖ್ಯೆ ೩೯೬ನ್ನು ನಾನು ಸದನದ ಮುಂದಿಡುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ಸ್ವಾಮಿ, ತಾವು ಅದನ್ನು ಪ್ರತ್ಯೇಕ ಭಾಗಗಳಾಗಿ (ಎಫ್) ಮತ್ತು (ಜಿ) ಎಂಬುದಾಗಿ ವಿಭಾಗಿಸಿ ಎಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಅಧ್ಯಕ್ಷರು:** ಪ್ರಶ್ನೆಯು

೫೯ ನೇ ವಿಧಿಯ ಭಾಗ (ಇ) ಆದ ಮೇಲೆ, ಮುಂದಿನ ಈ ಹೊಸ ಭಾಗವನ್ನು ಸೇರಿಸಿ:

"(ಎಫ್) ಅಭ್ಯರ್ಥಿಗಳು, ಅವರ ಚುನಾವಣಾ ಏಜೆಂಟರುಗಳು ಮತ್ತು ಮತಗಟ್ಟೆಗಳ ಏಜೆಂಟರು;"

**ಶ್ರೀ ಜೆ.ಆರ್. ಕಪೂರ್:** ಠರಾವನ್ನು ಸಮರ್ಥಿಸುವವರು ಇದ್ದಾರೆ ಸ್ವಾಮಿ.

**ಮಾನ್ಯ ಅಧ್ಯಕ್ಷರು:** ನಾನು ಪುನಃ ಅದನ್ನು ಮತಕ್ಕೆ ಹಾಕುತ್ತೇನೆ.

**ಶ್ರೀ ಜೆ.ಆರ್. ಕಪೂರ್:** ಮತಕ್ಕೆ ಹಾಕಿರುವುದೇನು ಎಂದು ಸದಸ್ಯರಲ್ಲಿ ಅನೇಕರಿಗೆ ಅರ್ಥವಾಗಿಲ್ಲ ಸ್ವಾಮಿ.

**ಡಾ. ಅಂಬೇಡ್ಕರ್:** ಈ ವಿಷಯಕ್ಕೇ ಪ್ರತ್ಯೇಕವಾಗಿ ಅವಕಾಶ ಕಲ್ಪಿಸಲಾಗುತ್ತದೆ. ಅಂಚೆ ಮತದ ಉದ್ದೇಶಕ್ಕೆ ಈ ವಿಧಿಯನ್ನು ಅನ್ವಯಿಸಲು ನನ್ನ ಮಿತ್ರರೇಕೆ ಒತ್ತಿ ಹೇಳುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಜೆ.ಆರ್. ಕಪೂರ್:** ಹಾಗಾದರೆ ಇದನ್ನು ಬೇರೆ ಇನ್ನೆಲ್ಲಾದರೂ ಕೊಡಲಾಗುತ್ತದೆ ಎಂದು ನಾನು ತಿಳಿಯಲೆ?

**ಮಾನ್ಯ ಅಧ್ಯಕ್ಷರು:** ಹಾಗಾದರೆ ಗೌರವಾನ್ವಿತ ಸದಸ್ಯರು ತಮ್ಮ ತಿದ್ದುಪಡಿಯನ್ನು ಹಿಂದೆಗೆದುಕೊಳ್ಳಲು ಇಚ್ಛಿಸುವರೇನು?

**ಶ್ರೀ ಜೆ.ಆರ್. ಕಪೂರ್:** ಹೌದು, ಆ ಭರವಸೆಯ ಮೇಲೆ, ನಾನು ನನ್ನ ತಿದ್ದುಪಡಿಗಳನ್ನು ಹಿಂದೆಗೆದುಕೊಳ್ಳಲು ಅನುಮತಿಸಬೇಕೆಂದು ಬೇಡುತ್ತೇನೆ.

ಅನುಮತಿಯೊಂದಿಗೆ ತಿದ್ದುಪಡಿಗಳನ್ನು ಹಿಂದೆಗೆದುಕೊಳ್ಳಲಾಯಿತು.

**ಮಾನ್ಯ ಅಧ್ಯಕ್ಷರು:** ೬೧ನೇ ವಿಧಿಯಲ್ಲಿ ಹಕ್ಕು ಸ್ಥಾಪಿತವಾಗಿದ್ದರೆ, ನಾವು ೫೯ ನೇ ವಿಧಿಗೆ ಹಿಂದಿರುಗುವ ನಮ್ಮ ಹಕ್ಕಿನ ದೆಸೆಯಿಂದ ತಿದ್ದುಪಡಿಯನ್ನು ಹಿಂದೆಗೆದುಕೊಳ್ಳಲಾಗಿದೆ. ಈ ತಿದ್ದುಪಡಿಯನ್ನು ನಾವು ಅನಂತರ ಪರಿಗಣಿಸೋಣ. ತಿದ್ದುಪಡಿಯನ್ನು ಕಾಯ್ದಿಡಲಾಗಿದೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಈಗ ಅದನ್ನು ಮುಂದುವರೆಸಿಕೊಂಡು ಹೋಗುವುದರಿಂದ ಪ್ರಯೋಜನವಿಲ್ಲ ಅದನ್ನು ಹಿಡಿದಿಡಬಹುದು.

**೬೦ ನೇ ವಿಧಿ:** ಬದಲೀ ಮತದಾನದ ತಡೆ.

**ಶ್ರೀ ಶಿವಚರಣ್ ಲಾಲ್:** ಹೆಚ್ಚುವರಿಪಟ್ಟಿ (ಅನುಬಂಧದಪಟ್ಟಿ)

ಇದರಲ್ಲಿ ನಾನು ನನ್ನ ತಿದ್ದುಪಡಿ ಸಂಖ್ಯೆ ೧೨೦ ನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಇಲ್ಲಿ ವಿಧಿಯನ್ನು ತೆಗೆದುಹಾಕುವಂತೆ ಕೇಳುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು:** ಅದೊಂದು ಸಕಾರಾತ್ಮಕ ತಿದ್ದುಪಡಿ.

**ಶ್ರೀ ಶಿವಚರಣ್‌ಲಾಲ್:** ಹಾಗಿದ್ದರೆ ನಾನು. ಕೇವಲ ವಿಧಿಯ ಮೇಲೆ ಮಾತನಾಡುತ್ತೇನೆ.

ಮತ ಪತ್ರವನ್ನು ಮತದಾರನಿಗೆ ಕೊಟ್ಟಾಗ ಅವನ ಬೆರಳಿಗೆ ಯಾವುದಾದರೂ ಇಂಕಿನಿಂದ ಗುರುತು ಮಾಡಬೇಕು ಎಂದು ಈ ೬೦ ನೇ ವಿಧಿಯು ಕೇಳುತ್ತದೆ. ಈ ವರೆಗೆ ಆ ರೀತಿಯ ಯಾವುದೇ ಅವಕಾಶ ನಮ್ಮ ದೇಶದಲ್ಲಿ ಒದಗಿಲ್ಲ. ಈಗಲೂ ಸಹ ಅದರ ಆವಶ್ಯಕತೆ ಸ್ವಲ್ಪವಾದರೂ ಇದೆಯೆಂದು ನಾನು ಭಾವಿಸುವುದಿಲ್ಲ. ಆದ್ದರಿಂದ ೬೦ನೇ ವಿಧಿಯು ನಮಗೆ ಬೇಕಾಗುವುದಿಲ್ಲ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಗೌರವಾನ್ವಿತ ಸದಸ್ಯರು ೬೦ ನೇ ವಿಧಿಯ ಪರಿಣಾಮವನ್ನು

ಅರ್ಥಮಾಡಿಕೊಂಡಿಲ್ಲ ಎನ್ನುವ ಪರಿಸ್ಥಿತಿ ಇರುವ ಹಾಗೆ ಕಾಣುತ್ತದೆ. ನಾವೀಗ ಪ್ರೌಢರ ಓಟಿನ ಅಧಿಕಾರದ ಬಗ್ಗೆ ಪ್ರಯೋಗ ನಡೆಸುತ್ತಿದ್ದೇವೆ. ನಾವು ಗುರುತಿನ ಚೀಟಿಗಳನ್ನು ಕೊಟ್ಟಿರುವ ಮತದಾರರ ದಾಖಲಾತಿ (ನೋಂದಣಿ) ನಮ್ಮಲ್ಲಿ ಇಲ್ಲ. ಕೆಲವು ರಾಜ್ಯ ಸರ್ಕಾರಗಳು ಮತದಾರರ ಭಾವ ಚಿತ್ರಗಳನ್ನು ತೆಗೆದು ಅನಂತರ ಅವರಿಗೆ ಗುರುತಿನ ಚೀಟಿಗಳನ್ನು ನೀಡಬೇಕೆಂದು ಯೋಚಿಸುತ್ತಿದ್ದುದಾಗಿಯೂ ಆದರೆ ಅದರ ಖರ್ಚು ಅತ್ಯಂತ ಹೆಚ್ಚೆಂದು ನಾನು ಕೇಳಿದ್ದೇನೆ. ಆದ್ದರಿಂದ ನಾವು ಬೇರೆ ಯಾವುದಾದರೂ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ವಿಶೇಷವಾಗಿ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಜನರಿರುವಾಗ ಬದಲಿ ವ್ಯಕ್ತಿಯು ತಾನೇ ಎಂದು ಹೇಳಿಕೊಂಡು ಸುಳ್ಳು ಅನುಕರಣೆ ಮಾಡಿ ಮತ ಚಲಾಯಿಸುವುದು ತಪ್ಪಿಸಲು ಆಗದ ಒಂದು ಅಂಶವಾಗಿರುತ್ತದೆ. ಆದ್ದರಿಂದ ೬೦ ನೇ ವಿಧಿಯಲ್ಲಿ ಸೂಚಿಸಿರುವ ವಿಧಾನವು ನಮ್ಮಲ್ಲಿದೆ. ಶ್ರೀಮಂತನೂ ಅಂತೆಯೇ ಬಡವನೂ ಎಲ್ಲರೂ ತಮ್ಮ ತಮ್ಮ ಹೆಬ್ಬೆಟ್ಟಿಗೆ ಗುರುತು ಹಾಕಿಸಿಕೊಂಡರೆ ತಪ್ಪೇನೂ ಇಲ್ಲ. ಇದರಿಂದ ಯಾರ ಮರ್ಯಾದೆಗೂ ಕುಂದು ಬರುವುದಿಲ್ಲ. (ಯಾರ ಮಾರ್ಯಾದೆಗೂ ಕುಂದು ಬರುವಂಥವೇನೂ ಇಲ್ಲಿ ಇಲ್ಲ) ನಮ್ಮ ದೇಶದ ಬಡತನದ ಕಾರಣದಿಂದಾಗಿ, ದಾಖಲೆಯನ್ನೋ ಅಥವಾ ಗುರುತಿನ ಚೀಟಿಗಳನ್ನೋ ಎಲ್ಲರಿಗೂ ಕೊಡುವುದು ನಮ್ಮಿಂದ ಸಾಧ್ಯವಿಲ್ಲ. ನಮ್ಮಲ್ಲಿ ಬಹಳ ಜನರು ಅನಕ್ಷರಸ್ಥರಾದದ್ದರಿಂದ ಪ್ರತಿಯೊಬ್ಬ ಮತದಾರನೂ ಗುರುತಿನ ಉದ್ದೇಶಕ್ಕಾಗಿ ನಿರ್ದಿಷ್ಟವಾದ ಒಂದು ಸ್ಥಳದಲ್ಲಿ (ಜಾಗದಲ್ಲಿ) ಸಹಿ ಹಾಕುತ್ತಾರೆ ಎಂದೂ ನೀವು ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ನಮ್ಮ ಬಳಿ ಈ ಉಪಾಯವಿದೆ (ತಂತ್ರ). ಇದು ತತ್ಕಾಲಕ್ಕೆ ಸಮಯೋಚಿತವಾದದ್ದು ಎಂದು ನನ್ನ ನಂಬಿಕೆ. ಅಂದರೆ ಮೊದಲ ಎರಡು ಅಥವಾ ಮೂರು ಚುನಾವಣೆಗಳ ಸಮಯದಲ್ಲಿ ಹೆಚ್ಚಾಗಿ ಜನರನ್ನೊಳಗೊಂಡ ಎಲ್ಲಾ ಚುನಾವಣೆಗಳಲ್ಲೂ ಸಾಮಾನ್ಯವಾಗಿರುವ ನಕಲಿ ಮತದಾರಿಕೆಯ ವಿರುದ್ಧ (ಮತದಾರರಿಗೆ) ಇದೊಂದು ಆರೋಗ್ಯಕರ ಪೂರ್ವಸಿದ್ಧತೆ. ಅಪ್ರಾಮಾಣಿಕತೆಯ ಬಗೆಗೆ ಜಾಗ್ರತೆ ವಹಿಸಬೇಕು ಮತ್ತು ಆ ಉದ್ದೇಶಕ್ಕಾಗಿ ನಮ್ಮನ್ನೇ ನಾವು ಕೆಲವು ಅನನುಕೂಲತೆಗೆ ಒಡ್ಡಿಕೊಂಡರೂ ಸಹ ಅದರಲ್ಲಿ ಅಂಥದೇನೂ ಗಂಭೀರವಾದ ತಪ್ಪಿಲ್ಲ ಎಂದು ನನ್ನ ಭಾವನೆ. ಈ ವಿಧಿಯಲ್ಲಿರುವ ತಿದ್ದುಪಡಿಯನ್ನು ತೆಗೆದು ಹಾಕುವುದನ್ನು ಬೆಂಬಲಿಸುವ ವಾದಗಳು ಸನ್ನಿವೇಶದ ಎಲ್ಲ ಅಂಶಗಳನ್ನು ಸಮಗ್ರವಾಗಿ ಪರಿಗಣಿಸದೆ ಮಾಡಿರುವಂತಹವುಗಳಾಗಿವೆ. ಆದ್ದರಿಂದ ಆ ವಿಧಿಯು ಇರುವ ಹಾಗೆಯೇ ಯಥಾವತ್ತಾಗಿ ನಾನು ಅದನ್ನು ಬೆಂಬಲಿಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಪ್ರಶ್ನೆಯು:

ಆ ೬೦ ನೇ ವಿಧಿಯ ಮಸೂದೆಯು ಭಾಗವಾಗಿರುತ್ತದೆ.

ಮನವಿಯು ಅಂಗೀಕರಿಸಲ್ಪಟ್ಟಿತು.

೬೦ ನೇ ವಿಧಿಯು ಮಸೂದೆಗೆ ಸೇರಿಸಲ್ಪಟ್ಟಿತು.

**೬೧ ನೇ ವಿಧಿ – (ಮತ ಹಾಕುವ ಹಕ್ಕು)**

೬೧ ನೇ ವಿಧಿಯ ಉಪವಿಧಿ (೫) ರಲ್ಲಿ "ಅಥವಾ ತತ್ಕಾಲದಲ್ಲಿ ಅನ್ವಯವಾಗಿರುವ ಯಾವ ಕಾನೂನಿನಡಿಯಲ್ಲಾದರೂ ಪ್ರತಿಬಂಧಕ ಸೆರೆಗೆ ಗುರಿಯಾಗಿರುವ" ಈ ಮಾತುಗಳನ್ನು ಬಿಟ್ಟುಬಿಡುವುದು."

–(ಶ್ರೀ ಜೆ.ಆರ್. ಕಪೂರ್)

**ಡಾ. ಅಂಬೇಡ್ಕರ್:** ನಾನು ಹೇಳಿದ ಮಾತುಗಳನ್ನೂ ಸಹ ಹೌಸ್ ಪರಿಗಣನೆಗೆ ತೆಗೆದುಕೊಳ್ಳಬೇಕು. ಅದೇನೆಂದರೆ ಅಂಚೆ ಮತದ ವಿಧಾನವು ಸುಲಭವಾಗಿ ಅನ್ವಯಿಸಿಕೊಳ್ಳುವಂಥದಾಗಿ ಕಂಡರೂ ಚುನಾವಣೆಯು

ಅನಿಶ್ಚಿತ ಸಮಯದವರೆಗೆ ಮುಂದೂಡಲ್ಪಟ್ಟಾಗ ಹೊರತು, ಪ್ರತಿಯೊಬ್ಬರಿಗೂ ಮತ ಪತ್ರಗಳನ್ನು ಕೊಡಲು ಸಾಧ್ಯವಾಗದಿದ್ದಾಗ, ನಾವು ಆಡಳಿತಾತ್ಮಕ ತೊಂದರೆಗಳ ವಿಷಯದಲ್ಲಿ ಜಾಗ್ರತೆ ವಹಿಸಬೇಕಾಗುತ್ತದೆ. ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನಾನು ಯೋಚಿಸಿದ್ದೇನು ಎಂದರೆ–ಆಡಳಿತಾತ್ಮಕ ತೊಂದರೆಗಳನ್ನು ಎದುರಿಸುವ ಹಾಗೂ ಪ್ರತಿಬಂಧಕ ಸೆರೆಯಲ್ಲಿರುವ ವ್ಯಕ್ತಿಗಳಿಗೆ ಮತಚಲಾಯಿಸುವ ಅಧಿಕಾರವನ್ನು ಕೊಡುವ ಒಂದು ತಿದ್ದುಪಡಿ (ಸುಧಾರಣೆ)ಯನ್ನು ನಾನು ತತ್‌ಕ್ಷಣಕ್ಕೆ ಸೂಚಿಸುವ ಸ್ಥಿತಿಯಲ್ಲಿಲ್ಲದಿದ್ದರೂ ಇದನ್ನು, ನಿಯಮವನ್ನು ಮಾಡುವ ಅಧಿಕಾರವನ್ನು ಕೊಡುವ ೧೬೭ ನೇ ವಿಧಿಯ ಅಡಿಯಲ್ಲಿ ಇದನ್ನು ಚರ್ಚಿಸುವುದು ಅಪೇಕ್ಷಣೀಯವಾಗಲಾರದೇ ಎಂಬ ಪ್ರಶ್ನೆಯನ್ನು ಸದನದ ಮುಂದಿಡಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಎರಡು ಮಾರ್ಗಗಳು ಇವೆ. (ತೆರೆದಿವೆ) – ಒಂದು, ನಿಯಮಗಳಲ್ಲಿ ಇದನ್ನು ಕೊಡಬಹುದು ಅಥವಾ ಶ್ರೀ ಕಪೂರ್‌ರ ತಿದ್ದುಪಡಿಯು ಹೌಸ್‌ನ ಮುಂದಿರುವುದರಿಂದ, ಅದಕ್ಕೆ ಏನಾದರೂ ಸುಧಾರಣೆಯನ್ನು ಪ್ರಸ್ತಾಪಿಸಬಹುದು.

**ಡಾ. ಅಂಬೇಡ್ಕರ್:** ನಾನು ಏನನ್ನು ಹೇಳಬೇಕೆಂದುಕೊಂಡೆ ಎಂದರೆ, "ಎಷ್ಟು ಸಾಧ್ಯವೋ ಅಷ್ಟು ಅನುಕೂಲವಾದ' ಎನ್ನುವಂಥ ಪದಗಳು ಅವಶ್ಯಕವಿರಬಹುದು. "ಎಷ್ಟು ಸಾಧ್ಯವೋ ಅಷ್ಟು ಅನುಕೂಲವಾದ' ಎನ್ನುವ ಮಾತುಗಳು ೫ನೇ ವಿಧಗಳಲ್ಲಿ ಯಾವುದೇ ವಿಧಿಯಲ್ಲೂ ಬರುವುದಿಲ್ಲ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಈ ವಿಧಿಯಲ್ಲಿರುವ ಮಾತುಗಳು ಹೇಗಿವೆ:

> "ಈ ಕಾಯಿದೆಯಡಿಯಲ್ಲಿ ಮಾಡಿದ ನಿಯಮಗಳಿಂದ ಅವಕಾಶ ಮಾಡಿಕೊಡುವುದು.
> ಅದರ ಬಗೆಗೆ ಯಾವುದೇ ಕಡ್ಡಾಯವೇನೂ ಇಲ್ಲ."

**ಡಾ. ಅಂಬೇಡ್ಕರ್:** ನನ್ನ ಅಭಿಪ್ರಾಯದಲ್ಲಿ, ಬಂಧನದಲ್ಲಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಈ ಸಮಯದಲ್ಲಿ ಇತರ ಪ್ರತಿಯೊಬ್ಬ ಮತದಾರನ ಜತೆಕೂಡಿಕೊಳ್ಳುವವರೆಲ್ಲರಿಗೂ ಒಂದೊಂದು ಮತ ಪತ್ರವನ್ನು ಒದಗಿಸುವುದು ನಿರ್ಬಂಧಕವಾಗಿಬಿಡುತ್ತದೆ. ನಾನು ಹೇಳಿರುವ ತೊಂದರೆಗಳ ಕಾರಣದಿಂದಾಗಿ ಪ್ರತಿಯೊಬ್ಬರಿಗೂ ಒಂದೊಂದು ಮತ ಪತ್ರವನ್ನು ಕೊಡಲು ಸಾಧ್ಯವಾಗದೆ ಇರಬಹುದು. ಹಾಗಿಲ್ಲವಾದರೆ ಸೆರೆಯಾಳು ಮೊಕದ್ದಮೆಯನ್ನು ಹೂಡಬಹುದು.

**ಮಾನ್ಯ ಅಧ್ಯಕ್ಷರು:** ಒಂದು ವೇಳೆ ತಿದ್ದುಪಡಿಯ ಜತೆಗೆ ಎಷ್ಟು ಸಾಧ್ಯವೋ ಅಷ್ಟು ಅನುಕೂಲವಾದ ಎನ್ನುವ ಮಾತುಗಳನ್ನು ಇಲ್ಲಿ ಸೇರಿಸಿದರೆ?

**ಡಾ. ಅಂಬೇಡ್ಕರ್:** ಇತರ ಯಾವುದೇ ವಿಶೇಷ ವರ್ಗಗಳಿಗೂ "ಎಷ್ಟು ಸಾಧ್ಯವೋ ಅಷ್ಟು ಅನುಕೂಲವಾದ' ಎನ್ನುವ ಮಾತುಗಳನ್ನು ಅನ್ವಯಿಸುವ ಹಾಗೆ ಮಾಡಬೇಕೆಂದು ನನಗೆ ಅನ್ನಿಸುವುದಿಲ್ಲ. ಏಕೆಂದರೆ, ಈ ವರ್ಗಗಳ ಕೆಳಗೆ ಯಾರು ಬರುತ್ತಾರೆಯೋ ಅಂಥ ಪ್ರತಿಯೊಬ್ಬರಿಗೂ ಒಂದು ಮತ ಪತ್ರವನ್ನು ಒದಗಿಸುವ ಸಾಧ್ಯತೆಯಿದೆ. ಇದಕ್ಕೆ ಸಂಬಂಧಪಟ್ಟಂತೆ ಮಾತ್ರ ಜನರಲ್ಲಿ ಇದು ಕೇವಲ ಕಹಿಯನ್ನುಂಟು ಮಾಡುತ್ತದೆ. ಒಂದು ವೇಳೆ ಹಾಗೆ ಮಾಡಿದರೆ, ಸಾಮಾನ್ಯ ಸ್ಥಾನಗಳ ಚುನಾವಣೆಯಲ್ಲಿ ಒಬ್ಬ ಜನಪ್ರಿಯ ಪರಿಶಿಷ್ಟ ಜಾತಿಯ ಅಭ್ಯರ್ಥಿಯು ಸ್ಪರ್ಧಿಸುವ ದಾರಿಯಲ್ಲಿ ಇದು ಬರೀ ಅಡಚಣೆಗಳನ್ನುಂಟು ಮಾಡುತ್ತದೆ. ಇದಿಷ್ಟೇ ಅಲ್ಲ, ಸಾಮಾನ್ಯ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವ ಹಾಗೂ ಅವುಗಳನ್ನು ಗೆಲ್ಲುವ ಅಧಿಕಾರವೂ ಇಲ್ಲದಂತೆ ಆಗುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಅಪಾಯಕಾರಿಯಾಗಬಹುದಾದ ಜನಾಂಗೀಯ ವ್ಯತ್ಯಾಸವನ್ನೂ ಕಹಿಯನ್ನೂ ಹೆಚ್ಚು ಮಾಡುವುದಾಗಿ ಪರಿಣಮಿಸುವ ಇಂಥ ಒಂದು ತಿದ್ದುಪಡಿಯನ್ನು ತಾವು ಪ್ರಸ್ತಾಪಿಸಬಾರದು

ಎಂದು ಶ್ರೀ ಸೋನವಣೆಯವರು ಅರಿತುಕೊಳ್ಳಬೇಕು ಎಂದು ನನ್ನ ಭಾವನೆ. ಒಂದು ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ ನಂತರವೂ ಅವನಿಗೆ ಸಾಕಷ್ಟು ಮತಗಳು ಬಂದಿಲ್ಲದಿದ್ದರೆ, ಆಗ ಪರಿಶಿಷ್ಟ ವರ್ಗಗಳಿಗೆ ಮೀಸಲಾಗಿರುವ ಸ್ಥಾನವನ್ನಾದರೂ ಅವನು ಪಡೆಯಬೇಕು ಎನ್ನುವುದು ನನ್ನ ಅಭಿಪ್ರಾಯ. ಒಂದು ವೇಳೆ ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದಾಗ ಅವನು ಸಾಕಷ್ಟು ಮತಗಳನ್ನು ಪಡೆದರೆ ಆಗ ಅವನು ಸಾಮಾನ್ಯ ಹಾಗೂ ಮೀಸಲು, ಈ ಎರಡೂ ಸ್ಥಾನಗಳಿಂದ ಚುನಾಯಿಸಿ ಬಂದವನಾಗಿರುತ್ತಾರೆ. ಆದ್ದರಿಂದ ಅದನ್ನು ನಾವು ಪ್ರತ್ಯೇಕ ಸ್ಥಾನವೆಂದೇ ಘೋಷಿಸಬೇಕು. ಏಕೆಂದರೆ ಒಂದು ಜಂಟಿ ಸ್ಥಾನದ ವಿಷಯದಲ್ಲಿ ಈ ಕ್ರಮವನ್ನು ಅನುಸರಿಸಲು ಸಾಧ್ಯವಿಲ್ಲ. ಒಂದು ವೇಳೆ ಒಂದು Plural ಕ್ಷೇತ್ರದಲ್ಲಿ ಸ್ಥಾನಗಳ ಸಂಖ್ಯೆ ಹೆಚ್ಚಾಗಿದ್ದರೆ, ಆಗ ಮಾತ್ರ ಮತದಾರರು ತಮಗಿಷ್ಟು ಬಂದ ರೀತಿಯಲ್ಲಿ ಮತಚಲಾಯಿಸುವ ಹಕ್ಕನ್ನು ಪಡೆಯುತ್ತಾರೆ; ಸಾಮಾನ್ಯ ಸ್ಥಾನಕ್ಕೆ ಹರಿಜನರು–ಹರಿಜನರಲ್ಲದವರು, ಇಬ್ಬರೂ ಸಹ ಚುನಾವಣೆಯಲ್ಲಿ ಸ್ಪರ್ಧಿಸಲು ಸಮಾನ ಅವಕಾಶವನ್ನು ಹೊಂದಿರಬೇಕು ಎನ್ನುವುದಂತೂ ಇದ್ದದ್ದೇ. ಮತದಾರರು ಹರಿಜನ ಅಭ್ಯರ್ಥಿಯನ್ನು ಸೂಕ್ತವಾದವನು, ಸಮರ್ಥನಾದವನು ಎಂದು ಭಾವಿಸಿದರೆ ಅವನು ಹರಿಜನರಲ್ಲದವರ ಮತಗಳನ್ನು ಪಡೆಯುತ್ತಾನೆ. ಅಂತೆಯೇ ಆ ಕ್ಷೇತ್ರದಿಂದ ಆರಿಸಿಯೂ ಬರುತ್ತಾನೆ. ಆದರೆ ಅವನು ಹೆಚ್ಚಿಗೆ ಮತಗಳನ್ನು ಗಳಿಸದೆ ಹೋದರೆ, ಆಗಲೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆಂದೇ ಮೀಸಲಾಗಿರುವ ಎರಡನೇ ಸ್ಥಾನವನ್ನು ಪಡೆಯಲು ಅಧಿಕಾರ ಹೊಂದಿರುತ್ತಾನೆ.

**ಮಧ್ಯಾಹ್ನ ೧ ಗಂಟೆಯ ಸಮಯ:**

**ಡಾ. ಅಂಬೇಡ್ಕರ್:** ಈ ಸುಧಾರಣೆಯನ್ನು ಒಪ್ಪಿಕೊಳ್ಳಲು ನಾನು ಸಿದ್ಧನಾಗಿಲ್ಲ.

**ಶ್ರೀ ಸೋನಾವಣೆ:** ನಾನು ನನ್ನ ತಿದ್ದುಪಡಿ (ಸುಧಾರಣೆ) ಯನ್ನು ಹಿಂದೆ ಪಡೆಯಲು ಅನುಮತಿ ಬೇಕೆಂದು ಬೇಡಿಕೊಳ್ಳುತ್ತೇನೆ.

ಅನುಮತಿಯ ಮೇರೆಗೆ ತಿದ್ದುಪಡಿಯು ಹಿಂದೆಗೆದುಕೊಳ್ಳಲ್ಪಟ್ಟಿತು.

**ಶ್ರೀ ಜೆ.ಆರ್. ಕಪೂರ್:**

೬–೨ನೇ ವಿಧಿಯ ಉಪ ವಿಧಿ (೨)ಗೆ ಕೆಳಗಿನದನ್ನು ಬದಲಿಯಾಗಿ ಪರಿಗಣಿಸಬೇಕು.

> "(೨) ಯಾವುದೇ ಒಬ್ಬ ಅಭ್ಯರ್ಥಿಗೆ ಒಬ್ಬ ಮತದಾರನು ಒಂದಕ್ಕಿಂತ ಹೆಚ್ಚು ಮತವನ್ನು ನೀಡಿದರೆ, ಉಪ ವಿಭಾಗ (೧) ರ ಅವಕಾಶಗಳ ಉಲ್ಲಂಘನೆಯ ಮೇರೆಗೆ ಆ ಎರಡು ಮತಗಳೂ ತಿರಸ್ಕರಿಸಲ್ಪಡುತ್ತವೆ."

**ಡಾ. ಅಂಬೇಡ್ಕರ್:** ಆಯ್ಕೆ ಸಮಿತಿಯಲ್ಲಿ ಈ ವಿಷಯವನ್ನು ಸಾಕಷ್ಟು ದೀರ್ಘವಾಗಿಯೇ ಚರ್ಚಿಸಲಾಗಿತ್ತು.

**ಶ್ರೀ ಜೆ.ಆರ್. ಕಪೂರ್:** ಆಯ್ಕೆ ಸಮಿತಿಯಿಂದ ಬಹಳಷ್ಟು ವಿಷಯಗಳು ತುಂಬ ಗಂಭೀರವಾಗಿಯೇ ಪರಿಗಣಿಸಲ್ಪಟ್ಟಿದ್ದವು. ಆದರೆ ಆ ವರದಿಯನ್ನು ಇಲ್ಲಿ ಪರಿಶೀಲಿಸಿದಾಗ ಆ ಜಾಗರೂಕ ಪರಿಗಣನೆಯು ಎಲ್ಲಿಗೆ ಬಂದಿತು ಎನ್ನುವುದನ್ನು ನೀವೇ ನೋಡಿದಿರಿ.

ಆದ್ದರಿಂದ ನಾನು ಈ ವಿಷಯದಲ್ಲಿ ಚರ್ಚಿಸಲು ಇಚ್ಛಿಸುತ್ತೇನೆ

**ಮಾನ್ಯ ಅಧ್ಯಕ್ಷರು:** ಗೌರವಾನ್ವಿತ ಸದಸ್ಯರು ಅದನ್ನು ನಾಳೆ ಮಾಡುತ್ತಾರೆ.

ಅನಂತರ ಸದನವನ್ನು ಮೇ ೨೨, ೧೯೫೧ ರ ಮಂಗಳವಾರ ೮.೩೦ರವರೆಗೆ ಮುಂದೂಡಲಾಯಿತು.

## ೬೨ ನೇ ವಿಧಿ

*ಮಾನ್ಯ ಸ್ಪೀಕರ್: ತಿದ್ದುಪಡಿಗಳು ಪ್ರಸ್ತಾಪಿಸಲ್ಪಟ್ಟವು

(i) ೬೨ ನೇ ವಿಧಿಯ ಉಪ ವಿಧಿ (೧) ರಲ್ಲಿ, "ಆದರೆ ಯಾವ ಮತದಾರನೂ ಯಾವುದೇ ಅಭ್ಯರ್ಥಿಗೂ ಒಂದಕ್ಕಿಂತ ಹೆಚ್ಚು ಮತವನ್ನು ನೀಡುವಂತಿಲ್ಲ" ಈ ಮಾತುಗಳಿಗೆ ಬದಲಾಗಿ – ಮುಂದಿನ ಮಾತುಗಳನ್ನು ಹಾಕುವುದು. "ಮತ್ತು ಒಬ್ಬನೇ ಅಭ್ಯರ್ಥಿಗೆ ಆ ಎಲ್ಲ ಮತಗಳನ್ನು ಕೊಡಬಹುದು. ಅಥವಾ ಅವನಿಗೆ ಹೇಗೆ ಸರಿ ಎನ್ನಿಸಿದ ರೀತಿಯಲ್ಲಿ ಬೇರೆ ಬೇರೆ ಅಭ್ಯರ್ಥಿಗಳಿಗೆ ನೀಡುವುದು."

(ii) ೬೨ ನೇ ವಿಧಿಯ ಉಪವಿಧಿ (೨) ನ್ನು ತೆಗೆದುಹಾಕುವುದು.

**ಶ್ರೀ ಆರ್. ವೇಲಾಯುಧನ್ (ತಿರುವಾಂಕೂರು–ಕೊಚ್ಚಿನ್):** ಕೆಲವು ಅಂಶಗಳ ಮೇಲೆ ನಾನು ಮಾತನಾಡಬಹುದೇ?

**ಮಾನ್ಯ ಸ್ಪೀಕರ್:** ನಿನ್ನೆ ಒಂದು ವಿಧ್ಯುಕ್ತವಲ್ಲದ ಒಂದು ಸಮಾಲೋಚನೆ ಇದ್ದಿತು. ಗೌರವಾನ್ವಿತ ಸದಸ್ಯರಾದ ತಾವೂ ಅಲ್ಲಿದ್ದಿರಿ ಎಂದು ನಾನು ನಂಬಿದ್ದೇನೆ. ಅಲ್ಲಿದ್ದವರಿಗೆ ಮಾತನಾಡುವ ಅಧಿಕಾರವಿದೆ ಎಂದು ನಾನು ಒಪ್ಪುತ್ತೇನೆ. ಆದರೆ ನಿನ್ನೆ ನಡೆದ ಅಸಾಂಪ್ರದಾಯಿಕ ಸಮಾಲೋಚನೆಯಲ್ಲಿ ಸದನದ ಮೂರುಗಂಟೆಗಳ ಸಮಯವನ್ನು ತೆಗೆದುಕೊಂಡ ನಂತರ, ಈಗ ಸದನದ ಸಮಯವನ್ನು ಮತ್ತೆ ತೆಗೆದುಕೊಳ್ಳಲು ಅವರಿಗೆ ಯಾವ ನೈತಿಕ ಹಕ್ಕಿದೆಯೋ, ನನಗೆ ತಿಳಿಯದು. ಅವರು ಇಚ್ಛೆಪಟ್ಟರೆ..... ಅವರು ಮಾತನಾಡುವ ಹಕ್ಕಿನ ವಿಷಯದಲ್ಲಿ ನಾನು ಮಧ್ಯೆ ಪ್ರವೇಶಿಸಲು ಇಚ್ಛಿಸುವುದಿಲ್ಲ.

**ಶ್ರೀ ಆರ್. ವೇಲಾಯುಧನ್:** ಆದರೆ ಇನ್ನೊಬ್ಬ ಗೌರವಾನ್ವಿತ ಸದಸ್ಯರು ಈಗ ತಾನೆ ಮಾತನಾಡಿದರು....

**ಮಾನ್ಯ ಸ್ಪೀಕರ್:** ಅವರು ನಿನ್ನೆಯ ಸಮಾಲೋಚನೆಯಲ್ಲಿ ಹಾಜರಿರಲಿಲ್ಲ. ಕಾರಣ ತಮ್ಮ ಹಾಗೆ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಲ್ಲ. ಅದೇ ಇಲ್ಲಿರುವ ಬಹಳ ದೊಡ್ಡ ವ್ಯತ್ಯಾಸ.

**ಡಾ. ಅಂಬೇಡ್ಕರ್:** ನಾನು ನನ್ನ ಲಿಖಿತ ಲೇಖನದಲ್ಲಿ ಹೇಳಿರುವ ನನ್ನ ಅಭಿಪ್ರಾಯ ಪ್ರಸ್ತಾಪ ಏನಿದೆಯೋ, ಅದರ ದೃಷ್ಟಿಯಿಂದ ನಾನು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ.

ಪ್ರಸ್ತಾಪವು ತಿರಸ್ಕರಿಸಲ್ಪಟ್ಟಿತು.

## ೬೯ ನೇ ವಿಧಿ

*ಮಾನ್ಯ ಸ್ಪೀಕರ್: ಚುನಾವಣಾ ಅಧಿಕಾರಿಗಳಿಗೆ ಆ ರೀತಿಯ ನಿಯಮಗಳನ್ನು ಮಾಡುವ ಅಧಿಕಾರವನ್ನು ಕೊಡಬೇಕೆಂದು ಅವರು ಸೂಚಿಸುತ್ತಿದ್ದಾರೆಯೇ?

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ಅಧಿಕಾರಿಗಳು ಅಭ್ಯರ್ಥಿಯನ್ನು ಒಂದು ಸ್ಥಾನವನ್ನು ಆರಿಸಿಕೊಳ್ಳುವಂತೆ ಕೇಳಬಹುದು. ನಿಯಮಗಳ ಅಡಿಯಲ್ಲಿ ಅಭ್ಯರ್ಥಿಯೇ ತನಗೆ ಇಂತಿಂಥ ಸ್ಥಾನವನ್ನು ಉಳಿಸಿಕೊಳ್ಳಬೇಕೆಂದಿದೆ ಎಂದು ಹೇಳಬಹುದು. ಆದರೆ ಅನಾರೋಗ್ಯ ಅಥವ ಇತರ ಆಕಸ್ಮಿಕ ಪ್ರಸಂಗಗಳಲ್ಲಿ ಚುನಾವಣಾ ಅಧಿಕಾರಿಯೇ ಅಭ್ಯರ್ಥಿಯು ಯಾವ ಸ್ಥಾನವನ್ನು ಉಳಿಸಿಕೊಳ್ಳಲು ಇಚ್ಛಿಸುತ್ತಾನೆ ಎಂದು ಅವನನ್ನು ಕೇಳಬೇಕು.

---

* ಪಿ.ಡಿ. ಸಂಪುಟ ೧೨, ಭಾಗ II, ೨೩ ಮೇ ೧೯೫೧, ಪಿಪಿ, ೯೨೪೮–೪೯.

* ಪಿ.ಡಿ. ಸಂಪುಟ ೧೨, ಭಾಗ II, ೨೩ ಮೇ ೧೯೫೧, ಪಿ.ಡಿ. ೯೨೫೦–೫೧

**ಡಾ. ಅಂಬೇಡ್ಕರ್:** ಗೌರವಾನ್ವಿತ ಸದಸ್ಯರು ಏನನ್ನು ಸೂಚಿಸುತ್ತಿದ್ದಾರೆಯೋ ಅದು ನಿಜಕ್ಕೂ ಅನಾವಶ್ಯಕವಾದದ್ದು ಏಕೆಂದರೆ ಇದು ಸಂಪೂರ್ಣವಾಗಿ ಅಭ್ಯರ್ಥಿಗೆ ಬಿಟ್ಟ ವಿಷಯ. ಇಲ್ಲಿ ಅವಶ್ಯಕವಾದುದೇನೆಂದರೆ ಸೂಚಿಸಿದ ನಿಗದಿತ ಸಮಯದೊಳಗೆ ಅವನು ತನ್ನ ಆಯ್ಕೆಯನ್ನು ಬಳಸಿಕೊಳ್ಳಬೇಕು. ಈ ವಿಧಿಯಲ್ಲೇ ಅವನಿಗೆ ಎ,ಬಿ ಅಥವಾ ಸಿ, ಈ ಕ್ಷೇತ್ರಗಳಲ್ಲಿ ಯಾವುದನ್ನು ಉಳಿಸಿಕೊಳ್ಳಬೇಕೋ ಅದನ್ನು ಹೇಳಲು ಅಧಿಕಾರವನ್ನು ಕೊಡಲಾಗಿದೆ. ಆದ್ದರಿಂದ ಚುನಾವಣಾ ಅಧಿಕಾರಿಯು ಅವನನ್ನು ವಿಚಾರಿಸಲಾಗಲೀ ಅಥವಾ ಅವನು ಒಂದು ಸ್ಥಾನವನ್ನು ಉಳಿಸಿಕೊಳ್ಳಲು ಬಿಡಬೇಕು ಎನ್ನುವ ಅವನ ಪರವಾದ ನಿರ್ಧಾರವನ್ನು ಮಾಡಲಾಗಲೀ ಇಲ್ಲಿ ಯಾವುದೇ ಅವಕಾಶವೂ ಸನ್ನಿವೇಶವೂ ಇಲ್ಲಿ ಇಲ್ಲ. ಇಲ್ಲಿ ಆಯ್ಕೆಯು ಸಂಪೂರ್ಣವಾಗಿ ಅಭ್ಯರ್ಥಿಯ ಕೈಯಲ್ಲೇ ಇರುವುದು. ಆ ರೀತಿಯ ಅವಕಾಶಕ್ಕೆ ಆಸ್ಪದವಿದೆಯೋ ನನಗೆ ತಿಳಿದಿಲ್ಲ.

**ಮಾನ್ಯ ಸ್ಪೀಕರ್:** ಈ ಆಕಸ್ಮಿಕ ಸನ್ನಿವೇಶವು ಚುನಾಯಿತ ಅಭ್ಯರ್ಥಿಯ ಗಮನಕ್ಕೆ ಬಾರದೆ ಹೋಗಿದ್ದು, ಆಗ ಚುನಾವಣಾ ಅಧಿಕಾರಿಯು ಅಭ್ಯರ್ಥಿಗೆ ಅವನು ಎಲ್ಲ ಸ್ಥಾನಗಳನ್ನೂ ಕಳೆದುಕೊಳ್ಳುವವನಿದ್ದಾನೆ ಎನ್ನುವ ಮಾಹಿತಿಯು ಕಳುಹಿಸಿದರೆ ಆಗ ಅಧಿಕಾರಿಯು ಒಳ್ಳೆಯ ಕೆಲಸ ಮಾಡಿದಂತಾಗುವುದು ಎನ್ನುವ ಅಂಶವನ್ನು ಇವರು ಹೇಳುತ್ತಿರುವಂತೆ ನನಗೆ ಅನ್ನಿಸುತ್ತದೆ.

**ಡಾ. ಅಂಬೇಡ್ಕರ್:** ಪ್ರತಿಯೊಬ್ಬ ಚುನಾಯಿತ ಅಭ್ಯರ್ಥಿಯೂ ಖಂಡಿತವಾಗಿಯೂ ನಿಯಮಗಳ ಒಂದು ಪ್ರತಿಯನ್ನು ತನ್ನಲ್ಲಿರಿಸಿಕೊಂಡು ಸಜ್ಜಾಗಿರುತ್ತಾನೆ. ಈ ಸರಳ ಕಾರಣದಿಂದಾಗಿ ಆ ರೀತಿಯ ಆಕಸ್ಮಿಕವೊಂದನ್ನು ನಿರೀಕ್ಷಿಸಬಹುದೆಂದು ನನಗೆ ಅನ್ನಿಸುವುದುದಿಲ್ಲ ಅಲ್ಲದೆ ಅವನು ಆ ನಿಯಮಗಳನ್ನು ಓದಿಕೊಂಡಿರುತ್ತಾನೆ ಎಂದೂ ನಾವು ಗ್ರಹಿಸಬಹುದು. ಇಲ್ಲಿ ಇನ್ನೊಂದು ತೊಂದರೆಯು ನನಗೆ ಕಾಣುವುದೆಂದರೆ, ಒಂದು ವೇಳೆ ಚುನಾವಣಾ ಅಧಿಕಾರಿಯು ಆ ರೀತಿಯ ಎಲ್ಲ ಅಭ್ಯರ್ಥಿಗಳ ವಿಷಯದಲ್ಲಿ ಆ ನಿರ್ಬಂಧವನ್ನು ಪೂರೈಸಬೇಕಾಗುತ್ತದೆ....

**ಬೆಳಗಿನ ೧೦ ಗಂಟೆ**

**ಪಂಡಿತ್ ಠಾಕುರ್ ದಾಸ್ ಭಾರ್ಗವ:** ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಹಿಂದಿರುಗುವ ಅಭ್ಯರ್ಥಿಗಳು ಬಹಳ ಕಡಿಮೆಯಾಗಿರುತ್ತಾರೆ. ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಚುನಾಯಿತನಾದವನು ಸಾಕಷ್ಟು ಜನಪ್ರಿಯನಾಗಿಯೇ ಇರುತ್ತಾನೆ.

**ಮಾನ್ಯ ಸ್ಪೀಕರ್:** ಆಕಸ್ಮಿಕವು ಹೆಚ್ಚು ಅವಾಸ್ತವಿಕವಾಗಿದೆ.

***ಶ್ರೀ ಎಸ್.ಎನ್. ದಾಸ್:** ಚುನಾವಣೆಗಳಲ್ಲಿ ಸಾಕಷ್ಟು ಕಡಿಮೆ ಖರ್ಚು ಮಾಡಬೇಕು ಎನ್ನುವ ಸೂಚನೆಗೆ ಗೌರವಾನ್ವಿತ ಮಂತ್ರಿಗಳು ಸಮ್ಮತಿಸಬೇಕೆಂದು ಮತ್ತೊಮ್ಮೆ ನಾನವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಅದಕ್ಕೆ ತಕ್ಕಂತೆಯೇ ಎಲ್ಲಾ ಕೆಲಸವನ್ನೂ ಮಾಡಬೇಕು. ನಿಯಮವನ್ನು ಮಾಡುವ ಅಧಿಕಾರಿ ಹಾಗೂ ಮಂತ್ರಿಮಂಡಲ ಇವೆರಡೂ ನಿಜವಾದ ಜನ ಪ್ರತಿನಿಧಿಗಳು, ಶ್ರೀಮಂತರಾಗಿಲ್ಲದಿದ್ದರೂ ಸಹ, ಸುಲಭವಾಗಿ ಆರಿಸಿ ಬರುವ ಹಾಗೆ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಿಯಮಗಳನ್ನು ರೂಪಿಸಬೇಕು.

**ಡಾ. ಅಂಬೇಡ್ಕರ್:** ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲ.

---

* ಪಿ.ಡಿ. ಸಂಪುಟ ೧೨, ಭಾಗ II, ೨೩ ನೇ ಮೇ ೧೯೫೧ ಪಿ. ೯೨೭೨

# ೮೦ ನೇ ವಿಧಿ

**ಶ್ರೀ ಹಾಥಿ (ಸೌರಾಷ್ಟ್ರ):** (ಎ) ಮತ್ತು (ಬಿ) ಉಪವಿಧಿಗಳು ಮನವಿಯನ್ನು ಸಲ್ಲಿಸಬೇಕಾದ ವ್ಯಕ್ತಿಗಳ ವಿಭಾಗದೊಡನೆ ವ್ಯವಹರಿಸುತ್ತವೆ. ಉಪವಿಧಿ (ಸಿ) ಯು ವಿಧಾನವನ್ನು ಕುರಿತದ್ದಾಗಿದೆ. ಮೂಲದಲ್ಲಿ ವ್ಯಕ್ತಿಗಳ ವರ್ಗಗಳು ಹಾಗೂ ವಿಧಾನಗಳು ಒಟ್ಟಾಗಿ ಸೇರಿಕೊಂಡಿದ್ದವು. ಕೇವಲ ವ್ಯಕ್ತಿಗಳ ವರ್ಗಗಳನ್ನು ವಿಧಾನದಿಂದ ಬೇರ್ಪಡಿಸಲು ಈ ತಿದ್ದುಪಡಿಯನ್ನು ಪ್ರಸ್ತಾಪಿಸಿರುವಂತೆ ಕಾಣುತ್ತದೆ. ತಿದ್ದುಪಡಿಯು ಯಾವ ರೀತಿಯಲ್ಲಿಯೂ ಸಾರಾಂಶವನ್ನು ಬದಲಿಸುವುದಿಲ್ಲ. ಅದು ಕೇವಲ ಉತ್ತಮ ರೀತಿಯ ಅಭಿವ್ಯಕ್ತಿ.

**ಡಾ. ಅಂಬೇಡ್ಕರ್:** ಹೌದು, ಅದೇ ಇದು. ಗೌರವಾನ್ವಿತ ಸದಸ್ಯರು ಏನನ್ನು ಹೇಳಿದರೋ ಅದಕ್ಕೆ ನಾನು ಏನನ್ನೂ ಸೇರಿಸುವ ಆವಶ್ಯಕತೆ ಇಲ್ಲ.

**ಶ್ರೀ ಕಾಮತ್:** "ಅಂಗೀಕಾರ ಬಾಕಿ ಇರುವುದು" ಎಂದು ಸೇರಿಸೋಣವೇ?

**ಮಾನ್ಯ ಸ್ಪೀಕರ್:** ನಾವು ಅದನ್ನು ಸೇರಿಸುವ ಅಗತ್ಯವಿಲ್ಲ. ಅದನ್ನು ಮತ್ತೊಂದೆಡೆಗೆ ತಲುಪಿಸುವುದಷ್ಟೇ ಈಗ ಅವಶ್ಯವಾಗಿರುವುದು. **ವಿಷಯ ಎಂದರೆ:**

೮೦ ನೇ ವಿಧಿಯ ಉಪವಿಧಿ (೨) ಕ್ಕೆ ಬದಲಾಗಿ ಮುಂದೆ ಬರುವ ಉಪವಿಧಿಯನ್ನು ಸೇರಿಸಿ.

> "(೨) ಚುನಾವಣಾ ನಿಯೋಗ (ಅಧಿಕಾರ) ಕ್ಕೆ ನೀಡಬೇಕಾಗಿರುವ ಚುನಾವಣಾ ಮನವಿಯನ್ನು
>
> (ಅ) ನಿಯೋಗದ ಕಾರ್ಯದರ್ಶಿಗೆ ತಲುಪಿಸಿದಾಗ, ಅಥವಾ ಚುನಾವಣಾ ನಿಯೋಗವು ನೇಮಕ ಮಾಡಿರಬಹುದಾದ ಇತರ ಯಾವುದಾದರೂ ಅಧಿಕಾರಿಗೆ ತಲುಪಿಸಿದಾಗ –
>
> (i) ಮನವಿಯನ್ನು ಮಾಡುವ ವ್ಯಕ್ತಿಯಿಂದ, ಅಥವಾ
>
> (ii) ಮನವಿಯನ್ನು ಮಾಡುವ ವ್ಯಕ್ತಿಯ ಪರವಾಗಿ ಬರೆಯಲು ಅಧಿಕಾರ ಕೊಡಲ್ಪಟ್ಟ ವ್ಯಕ್ತಿಯಿಂದ ಅಥವಾ
>
> (ಬ) ರಿಜಿಸ್ಟರ್ಡ್ ಪೋಸ್ಟ್ (ಅಂಚೆ) ಮೂಲಕ ಅದನ್ನು ಕಳುಹಿಸಿದಾಗ, ಮತ್ತು ಅದು ನಿಯೋಗದ ಕಾರ್ಯದರ್ಶಿ ಅಥವಾ ಹಾಗೆ ನೇಮಕವಾದ ಅಧಿಕಾರಿಗೆ ತಲುಪಿಸಲ್ಪಟ್ಟಾಗ.

–ಅದನ್ನು ಚುನಾವಣಾ ಆಯೋಗಕ್ಕೆ ತಲುಪಿಸಲಾಯಿತೆಂದು ಪರಿಗಣಿಸಲಾಗುವುದು.

ಪ್ರಸ್ತಾಪವನ್ನು ಸ್ವೀಕರಿಸಲಾಯಿತು.

**ಮಾನ್ಯ ಸಭಾಪತಿ (ಉಪಸ್ಪೀಕರ್):** ಇನ್ನು ಈ ವಿಷಯಕ್ಕಾಗಿ ಹೆಚ್ಚು ಶ್ರಮಿಸುವ ಅಗತ್ಯವಿಲ್ಲ ಎಂದು ನನ್ನ ಭಾವನೆ. ತಿದ್ದುಪಡಿಯ ಮೇಲೆ ಕಾನೂನು ಮಂತ್ರಿಗಳು ಹೇಳುವುದು ಏನಿದೆ?

**ಡಾ. ಅಂಬೇಡ್ಕರ್:** ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುತ್ತೇನೆ.

---

** ಪಿ.ಡಿ. ಸಂಪುಟ ೧೨, ಭಾಗ II, ೨೩ ಮೇ ೧೯೫೧ ಪಿಪಿ, ೯೨೮೦–೮೧

** ಪಿ.ಡಿ. (ಅದೇ ಪುಸ್ತಕದಲ್ಲಿ), ಪಿ. ೯೨೮೨

## ೮೫ ನೇ ವಿಧಿ

*__ಶ್ರೀ ಸತೀಶ್‌ಚಂದ್ರ:__ ಅನೌಪಚಾರಿಕವಾಗಿ ತಿದ್ದುಪಡಿಗಳನ್ನು ಚರ್ಚಿಸಲು ನಿನ್ನೆ ಸದನವು ಮುಂದೂಡಲ್ಪಟ್ಟಿತು. ಆ ಅನೌಪಚಾರಿಕ ಸಭೆಯನ್ನು ಒಂದು ಗಂಟೆಗೆ ನಾವು ಮುಂದೆ ಹಾಕಿದೆವು. ನಾನು ನನ್ನ ತಿದ್ದುಪಡಿಯ ಸೂಚನೆಯನ್ನು ಮಧ್ಯಾಹ್ನ ಒಂದು ಗಂಟೆಗೆ ಕೊಟ್ಟೆ. ಆದರೆ ಅದು ಇಂದಿನ ತಾರೀಖಿನಲ್ಲಿ ಸ್ವೀಕೃತವಾಯಿತು.

**ಮಾನ್ಯ ಉಪಸ್ಪೀಕರ್:** ಈ ವಿಷಯವು ಅನೌಪಚಾರಿಕ ಸಭೆಯಲ್ಲಿ ಚರ್ಚೆಯಾಗಿ, ಒಪ್ಪಿತವಾಯಿತೆ?

**ಡಾ. ಅಂಬೇಡ್ಕರ್:** ಹೌದು, ಒಪ್ಪಿತವಾಯಿತು.

**ಮಾನ್ಯ ಉಪಸ್ಪೀಕರ್:** ಅಲ್ಲಿ ಯಾವ ವಕೀಲರೂ ಇರಬಾರದು ಎಂಬುದು ಮಾನ್ಯವಾಯಿತೆ?

**ಡಾ. ಅಂಬೇಡ್ಕರ್:** ಯಾರಿಗೂ ಯಾವ ವಕೀಲರೂ ಬೇಕಾಗಿಲ್ಲ. ಉಪವಿಧಿ (೨) ರ ಭಾಗ (ಬಿ)ಯನ್ನು ಬಿಡುವುದರಿಂದ ವಿವಾದವು ಹುಟ್ಟಬಹುದು. ಇದರ ಮೇಲೆ ಅದು ಹುಟ್ಟದು.

**ಮಾನ್ಯ ಉಪ ಸ್ಪೀಕರ್:** ಈಗಿರುವಂತೆಯೇ ಈ ವಿಧಿಯನ್ನು ಸ್ವೀಕರಿಸುವುದರಿಂದಲೂ ಯಾವುದೇ ವಕೀಲರನ್ನು ಅವನು ದೂರವಿಡಲು ಸಾಧ್ಯವಿಲ್ಲ.

**ಶ್ರೀ ಸತೀಶ್‌ಚಂದ್ರ:** ಈ ವಿಧಿಯನ್ನು ಕಾಯ್ದಿಡಬಹುದು ಎಂದು ನಾನು ಸೂಚಿಸುತ್ತೇನೆ. ನಿನ್ನೆಯ ಅನೌಪಚಾರಿಕ ಚರ್ಚೆಯ ನಂತರ ತಿದ್ದುಪಡಿಗಳ ಯಾವುದೇ ಸೂಚನೆಯನ್ನು ಕೊಡಲು ಸದಸ್ಯರಿಗೆ ಯಾವುದೇ ಅವಕಾಶವಿರಲಿಲ್ಲ. ಚರ್ಚೆಯಾದ ನಂತರ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಆದರೆ ಅದು ಮೂರನೆಯ ದಿನವೇ ಚರ್ಚೆಗೆ ಬರುವುದು. ನಾನು ಸೂಚನೆ ಕೊಟ್ಟಿರುವ ನನ್ನ ತಿದ್ದುಪಡಿಯನ್ನು ಪ್ರಸ್ತಾಪಿಸಲು ನೀವು ಅವಕಾಶ ಕೊಟ್ಟರೆ, ನಾನು ಮಾಡುವೆ.

**ಮಾನ್ಯ ಉಪಸ್ಪೀಕರ್:** ಆ ರೀತಿಯ ಯಾವುದೇ ನಿರ್ಧಾರಗಳಿಂದ ನಾನು ನಿರ್ಬಂಧಿತನಾಗಿದ್ದೇನೆ ಎಂದಲ್ಲ; ಆದರೆ, ಏನೇ ಆಗಲಿ ಗೌರವ ಸದಸ್ಯರೂ ಸಹ ಆ ಅನೌಪಚಾರಿಕ ಸಭೆಯಲ್ಲಿ ಕುಳಿತಿದ್ದರು, ಅಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ವೀಕೃತವಾದ ಒಂದು ಒಪ್ಪಂದಕ್ಕೆ ಬರಲಾಗಿದೆ. ಅಲ್ಲಿಯೇ ಒಂದು ವಿರುದ್ಧವಾದ ನಿರ್ಧಾರವೂ ಬಂದಿತು. ಈ ವಿಧಿಯನ್ನು ಹಾಗೆಯೇ ಇರುವಂತೆ ಮಾಡಲು ನಾನು ಅವಕಾಶಕೊಡುವುದು ಯೋಗ್ಯವಾಗಿರುವುದೆ?

**ಶ್ರೀ ಸತೀಶಚಂದ್ರ:** ಪ್ರಸ್ತಾಪದಲ್ಲಿದ್ದ ಯಾವ ತಿದ್ದುಪಡಿಗಳ ಒಂದು ಅನೌಪಚಾರಿಕ ಚರ್ಚೆ ಮಾಡುವ ವಿಶೇಷ ಉದ್ದೇಶದಿಂದ ಸದನವು ಮುಂದೂಡಲ್ಪಟ್ಟಿತೋ, ಆ ಸಭೆಯಲ್ಲಿ ಸದನದ ೩೨೦ ಮಂದಿ ಸದಸ್ಯರಲ್ಲಿ ಈ ಮಸೂದೆಯ ಆಯ್ಕೆ ಸಮಿತಿಯ ಪರವಾಗಿದ್ದಷ್ಟು ಜನ ಸದಸ್ಯರೂ ಅಲ್ಲಿ ಇರಲಿಲ್ಲ ಎಂದು ನಾನು ಗೌರವಯುತವಾಗಿ ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಪತಿ:** ಇದಕ್ಕೆ ಯಾರನ್ನು ದೂಷಿಸುವುದು? ಗೌರವಾನ್ವಿತ ಮಂತ್ರಿಗಳನ್ನೇ?

**ಶ್ರೀ ಸತೀಶ್‌ಚಂದ್ರ:** ನಾನು ಗೌರವಾನ್ವಿತ ಮಂತ್ರಿಗಳನ್ನು ದೂಷಿಸುವುದಿಲ್ಲ.

**ಡಾ. ಅಂಬೇಡ್ಕರ್:** ನೀವೇ ಉಪಸ್ಥಿತರಿದ್ದೀರಿ. ಇತರರು ಅಲ್ಲಿ ಉಪಸ್ಥಿತರಿದ್ದರೋ ಇಲ್ಲವೋ, ನೀವಂತೂ ಅಲ್ಲಿದ್ದಿರಿ.

---

* ಪಿ.ಡಿ. ಸಂಪುಟ ೧೨, ಭಾಗ II, ೨೩ ಮೇ ೧೯೫೧ ಪಿಪಿ ೯೨೮೪–೮೫. ಎಸ್ ೪೧೯೩–೪೧

ಟಿ. ೪೧೯೩–೪೧.

**ಶ್ರೀ ಸತೀಶಚಂದ್ರ:** ನಾನು ತಿದ್ದುಪಡಿಗೆ ಆಕ್ಷೇಪಣೆ ಮಾಡಿದೆ. ಆದರೆ ನಾನು ಏನನ್ನು ಹೇಳಬೇಕೆಂದಿದ್ದೆನೋ ಅದನ್ನು ಸಂಪೂರ್ಣವಾಗಿ ಹೇಳಲು ನನಗೆ ಅವಕಾಶ ಕೊಡಲಿಲ್ಲ. ಆದ್ದರಿಂದ, ನಾನು ಏನನ್ನು ಹೇಳಲು ಆಶಿಸಿದೆ ಎಂದರೆ....

**ಮಾನ್ಯ ಉಪಸಭಾಪತಿ:** ಗೌರವಾನ್ವಿತ ಸದಸ್ಯರಿಗೆ ಒಂದು ತಿದ್ದುಪಡಿಯನ್ನು ಪ್ರಸ್ತಾಪಿಸಲು ಸಾಧ್ಯವಾಗದುದಕ್ಕೆ ನಾನು ಬಹಳವಾಗಿ ವಿಷಾದಿಸುತ್ತೇನೆ.

**ಶ್ರೀ ಸತೀಶಚಂದ್ರ:** ನಾನು ಒಂದು ತಿದ್ದುಪಡಿಯನ್ನು ಪ್ರಸ್ತಾಪಿಸಿದೆ. ಅದರ ಪ್ರತಿಯು ನನ್ನಲ್ಲಿದೆ. ಈ ದಿನ ಅದು ಆಜ್ಞಾ ಪತ್ರದಲ್ಲಿರಲು ಸಾಧ್ಯವಾಗಲಿಲ್ಲ. ಕಾರಣ, ನಿನ್ನ ಮಧ್ಯಾಹ್ನ ಒಂದು ಗಂಟೆಯ ನಂತರ ಅದನ್ನು ನಾನು ಸೂಚನಾ ಕಛೇರಿಗೆ ಕೊಟ್ಟೆ.

**ಮಾನ್ಯ ಉಪಸಭಾಪತಿ:** ವಕೀಲರುಗಳನ್ನು ನಂಬಬೇಕೋ ಬೇಡವೋ ಎನ್ನುವುದು ಒಂದು ಮೂಲಭೂತವಾದ ಪ್ರಶ್ನೆ. ಆದ್ದರಿಂದ ಈ ತಿದ್ದುಪಡಿಯು ಪ್ರಸ್ತಾಪವಾಗುವ ಮೊದಲೇ ಅವರಿಗೆ ಒಂದು ತಿದ್ದುಪಡಿಯ ಸೂಚನೆಯನ್ನು ಕೊಡಲು ಸಾಕಷ್ಟು ಸಮಯವಿದ್ದಿತು. ಅವರು ಒಂದು ವೇಳೆ ಸಮಗ್ರವಾದ ಪಟ್ಟಿಯಲ್ಲಿ ಅಥವಾ ಪೂರಕ ಪಟ್ಟಿಯಲ್ಲಿ ವಕೀಲರು ನಿಷಿದ್ಧ ಎನ್ನುವ ಯಾವುದೇ ತಿದ್ದುಪಡಿಯು ಅವರ ಹೆಸರಿನಲ್ಲಿದೆಯೇ? ನಾನು ನಿಯಮಾಸರಣೆಯ ವಿಷಯ ಹೇಳುತ್ತಿಲ್ಲ. ಆದರೆ ನಿನ್ನೆಯ ಚರ್ಚೆಯ ನಂತರ ಅವರು ಹೊಸದೊಂದು ವಿಷಯವನ್ನು ಯೋಚಿಸಿದ್ದರೆ ಅದನ್ನು ಈಗ ಪ್ರಸ್ತಾಪಿಸಲು ನಾನು ಒಪ್ಪುವುದಿಲ್ಲ.

**ಶ್ರೀ ಸತೀಶಚಂದ್ರ:** ಚುನಾವಣಾ ನ್ಯಾಯಪೀಠದಲ್ಲಿ ವಕೀಲರ ಸಂಖ್ಯೆಯನ್ನು ನಿನ್ನೆಯಷ್ಟೇ ಹೆಚ್ಚಿಸಲಾಯಿತು ಎಂದು ನಾನು ಒಪ್ಪುತ್ತೇನೆ. ಮೊದಲು ಅಲ್ಲಿ ಹೀಗಿರಲಿಲ್ಲ.

**ಡಾ. ಅಂಬೇಡ್ಕರ್:** ನನ್ನ ಮಿತ್ರ ಮಾನ್ಯ ಮುನೀಶ್ವರ್ ದತ್ ಉಪಾಧ್ಯಾಯ ಅವರು ಪ್ರಸ್ತಾಪಿಸಿದ ತಿದ್ದುಪಡಿಯಲ್ಲಿ ವಕೀಲರುಗಳು ಹೆಚ್ಚಿನ ಸಂಖ್ಯೆಯಲ್ಲಿರಬೇಕು ಎನ್ನುವುದಕ್ಕೆ ಅಲ್ಲಿ ಅವಕಾಶವಿಲ್ಲ. ಅಧ್ಯಕ್ಷರು ಮಾತ್ರ ಒಬ್ಬ ನ್ಯಾಯಾಂಗ ಅಧಿಕಾರಿಯಾಗಿರುತ್ತಾರೆ. ಆದರೆ ಇತರರು ನ್ಯಾಯಾಂಗ ಕ್ಷೇತ್ರಕ್ಕೆ ಸೇರದೆ ಇದ್ದವರೂ ಆಗಿರಬಹುದು.

**ಶ್ರೀ ಸತೀಶಚಂದ್ರ:** ಮೂರರಲ್ಲಿ ಇಬ್ಬರು ವಕೀಲರಾಗಿರಬಹುದು. ಇದರ ಹೊರತಾಗಿ ಬಹುಮತ ಎಂದರೇನು ಎಂದು ನನಗೆ ತಿಳಿದಿಲ್ಲ.

**ಪಂಡಿತ್ ಮುನಿಶ್ವರ್ ದತ್ತ ಉಪಾಧ್ಯಾಯ:** ಅವರ ತಿದ್ದುಪಡಿ ಏನಾದರೂ ಇದ್ದರೆ ಅದು ಇನ್ನೊಂದು ವಿಧಿಗೆ ಅನ್ವಯವಾಗುತ್ತದೆ. ಈ ವಿಧಿಗೆ ಅದು ಯಾವ ರೀತಿಯಲ್ಲಿಯೂ ಸಂಬಂಧಪಟ್ಟಿರುವುದಿಲ್ಲ.

**ಮಾನ್ಯ ಉಪಸಭಾಪತಿ:** ತಮ್ಮದೊಂದು ತಿದ್ದುಪಡಿ ಇದೆ ಎಂದು ಅವರು ಹೇಳುವುದಿಲ್ಲ.

**ಶ್ರೀ ಸತೀಶ್‌ಚಂದ್ರ:** ಅದನ್ನು ಕಾಯ್ದಿಡಬಹುದು ಸ್ವಾಮಿ. ಗೌರವಾನ್ವಿತ ಸದಸ್ಯರುಗಳಲ್ಲಿ ಒಂದು ಭಿನ್ನಾಭಿಪ್ರಾಯವಿರುವುದಷ್ಟೆ. ಕೆಲವರು ಈ ವಿಷಯದ ಬಗೆಗೆ ಬಲವಾದ ಅನಿಸಿಕೆ ಉಳ್ಳವರಾಗಿದ್ದಾರೆ. ಇತರ ವಿಧಿಗಳು ಕಾಯ್ದಿಡಲ್ಪಟ್ಟಿರುವಂತೆ ಇದೂ ಸಹ ಇರುತ್ತದೆ. ಇದನ್ನು ಹಾಗೆಯೇ ಇಡಬೇಕೆಂದೂ, ಅನಂತರ ಇದರ ಚರ್ಚೆಯಾಗಬಹುದೆಂದೂ ನಾನು ಸೂಚಿಸುತ್ತೇನೆ. ಬಹುಶಃ ಇದನ್ನು ಕಾಯ್ದಿಟ್ಟರೆ, ಆಗ ಎಲ್ಲರನ್ನು ತೃಪ್ತಿಪಡಿಸಬಹುದಾದ ಸೂತ್ರವು ಸಿಗಬಹುದಾದ ಸಾಧ್ಯತೆಯೂ ಇದೆ.

ಟಿ. ೪೯೯೩–೪೯೧೨.

**ಡಾ. ಅಂಬೇಡ್ಕರ್:** ಇದನ್ನು ಕಾಯ್ದಿಡಲು ಯಾವುದೇ ಆಧಾರವಿಲ್ಲ ಎಂದು ನನಗೆ ಅನಿಸುವುದಿಲ್ಲ.

**ಶ್ರೀ ಜೆ.ಆರ್. ಕಪೂರ್:** ನಾನು ಪೂರ್ಣವಾಗಿ ಶ್ರೀ ಸತೀಶಚಂದ್ರರು ವಾದಿಸುತ್ತಿರುವುದರ ಪರವಾಗಿಲ್ಲ. ಆದರೆ ಇದ್ದಕ್ಕಿದ್ದಂತೆ ಅವರು ವಾದ ಮಾಡುತ್ತಿರುವುದರಲ್ಲಿ ಮೂಲಭೂತವಾದ ಪ್ರಾಮುಖ್ಯ ಇರುವ ಏನೋ ಒಂದು ಅಂಶವಿದೆ ಎನ್ನುವುದರ ಅರಿವು ನನಗಾಯಿತು. ಅದೇನೆಂದರೆ ಶ್ರೀ ಮುನೀಶ್ವರದತ್ತರ ೮೫ ನೇ ವಿಧಿಯ ಉಪ ವಿಧಿ (೩) ರ ಭಾಗ (ಬಿ) ಗಿರುವ ತಿದ್ದುಪಡಿಯು ಉಪವಿಧಿ (೨) ರ ಅಡಿಯಲ್ಲಿ ಚುನಾವಣಾ ಕಮಿಷನ್ ನಿರ್ವಹಿಸುವ ಎರಡು ಪಟ್ಟಿಗಳಲ್ಲಿ ಒಂದರಲ್ಲಿ ಒಬ್ಬರ ಬದಲಾಗಿ ಚುನಾವಣಾ ಆಯೋಗದಿಂದ ಇಬ್ಬರು ಸದಸ್ಯರು ಆಯ್ಕೆಯಾಗುತ್ತಾರೆ ಎನ್ನುವುದನ್ನು ಗೊತ್ತುಮಾಡುತ್ತದೆ. ಆದರೆ ಇವರಿಬ್ಬರನ್ನು ಭಾಗ (ಎ)ಯ ಅಡಿಯಲ್ಲಿರುವ ಪಟ್ಟಿಯಿಂದ ಮಾತ್ರವೇ ಆಯ್ಕೆ ಮಾಡಬಹುದೆನ್ನುವ ಆವಶ್ಯಕತೆ ಇಲ್ಲ, ಬದಲಾಗಿ ಭಾಗ (ಎ) ಮತ್ತು ಭಾಗ (ಬಿ) ಎರಡೂ ಪಟ್ಟಿಗಳಡಿಯಲ್ಲಿ ಆಯ್ಕೆ ಮಾಡಬಹುದು.

**ಡಾ. ಅಂಬೇಡ್ಕರ್:** ಅದೇ ವಿಷಯದಲ್ಲಿ ಅವರ ಆಕ್ಷೇಪಣೆಯು ಮಾಯವಾಗುತ್ತದೆ.

**ಶ್ರೀ ಜೆ.ಆರ್. ಕಪೂರ್:** ಆದ್ದರಿಂದ ಆ ಆಕ್ಷೇಪವು ಹೋಗುತ್ತದೆ.

**ಶ್ರೀ ಕಾಮತ್:** ಕಾನೂನು ಮಂತ್ರಿಯಿಂದ ಒಪ್ಪಿತವಾದ ಬಹುಶಃ ಅನಂತರ ಸದನದಿಂದಲೂ ಒಪ್ಪಿತವಾಗುವ ಶ್ರೀ ಉಪಾಧ್ಯಾಯರ ತಿದ್ದುಪಡಿಯ ಅಂಗೀಕಾರವು ನನ್ನ ಮಿತ್ರ ಶ್ರೀ ಸತೀಶಚಂದ್ರರು ಎತ್ತಿದ ಪ್ರಶ್ನೆಗೆ ಯಾವುದೋ ಅಂಶದ ಬೆಂಬಲವನ್ನು ಕೊಡುತ್ತದೆ ಎಂದು ನಾನು ಸೂಚಿಸಬಹುದೆ?

೮೫ ನೇ ವಿಧಿಯ ಉಪ ವಿಧಿ (೩) ಯು ಅದಿರುವಂತೆಯೇ ಹೀಗೆ ಹೇಳುತ್ತವೆ.

> "ಉಪ ವಿಭಾಗ (೧)ರ ಅಡಿಯಲ್ಲಿ ನೇಮಕವಾಗಲ್ಪಟ್ಟ ಪ್ರತಿಯೊಂದು ನ್ಯಾಯಪೀಠವೂ ಇವರನ್ನೆ ಹೊಂದಿರುತ್ತದೆ–
>
> (ಎ) ವಿಧಿ (ಎ) ಯ ಉಪ ವಿಭಾಗ (೨)ರ ಅಡಿಯಲ್ಲಿ ಚುನಾವಣಾ ನಿಯೋಗವು ನಿರ್ವಹಿಸುವ ಒಂದು ಪಟ್ಟಿಯಿಂದ ಚುನಾವಣಾ ನಿಯೋಗದಿಂದಲೇ ಆಯ್ಕೆಯಾದ ಒಬ್ಬ ವ್ಯಕ್ತಿ ಅಥವಾ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿದ್ದ ಅಥವಾ ನ್ಯಾಯಾಧೀಶರಾಗಿರುವ ಒಬ್ಬ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಹೊಂದಿರುತ್ತದೆ.
>
> (ಬಿ) ಉಪ ವಿಭಾಗ (೨)ರ ಅಡಿಯಲ್ಲಿ ಚುನಾವಣಾ ಕಮಿಷನ್ ನಿರ್ವಹಿಸಿರುವ ಎರಡು ಪಟ್ಟಿಗಳಲ್ಲಿ ಒಂದರಿಂದ ಚುನಾವಣಾ ಕಮಿಷನ್‌ನಿಂದಲೇ ಆಯ್ಕೆಯಾದ ಇನ್ನೊಬ್ಬ ಸದಸ್ಯರನ್ನು ಹೊಂದಿರುತ್ತದೆ.

ಶ್ರೀ ಉಪಾಧ್ಯಾಯರ ತಿದ್ದುಪಡಿಯ ಸ್ವೀಕೃತಿಯು ಇದಕ್ಕೆ ದಾರಿಮಾಡಿಕೊಡುತ್ತದೆ. ಅಂದರೆ, ಒಬ್ಬರ ಜಾಗದಲ್ಲಿ ಅವರು ಸೂಚಿಸುವ ಇಬ್ಬರು ಸದಸ್ಯರನ್ನು ಈ ಎರಡು ಪಟ್ಟಿಗಳಲ್ಲಿ ಒಂದರಿಂದ ಆಯ್ಕೆ ಮಾಡಬಹುದಾಗಿರುತ್ತದೆ. ಹಾಗೆಂದರೆ, ಅವರಿಬ್ಬರೂ ಭಾಗ (೨) ರಲ್ಲಿ ಹೇಳಿರುವ ಪಟ್ಟಿಯಿಂದಲೇ ಆಗಬಹುದಾದ ಸಾಧ್ಯತೆಯೂ ಇದೆ ಎಂದು ಹೇಳುವುದು.

**ಡಾ. ಅಂಬೇಡ್ಕರ್:** ಈ ಮೂರು ಜನರನ್ನು (ಎ) ಅಡಿಯಲ್ಲಿ ಸೂಚಿತವಾಗಿರುವ ಪಟ್ಟಿಯಿಂದಲೇ ತೆಗೆದುಕೊಳ್ಳಬಹುದಾದ ಸಾಧ್ಯತೆಯೂ ಇದೆ.

**ಶ್ರೀ ಕಾಮತ್:** ನಾನು ಇದನ್ನು ಒಪ್ಪುತ್ತೇನೆ. ಆದರೆ ಭಾಗ (ಬಿ) ಯಲ್ಲಿ ಹೇಳಿರುವ ಬಹಳಷ್ಟು ವ್ಯಕ್ತಿಗಳನ್ನು ಈ ವಿಧಿ ಇರುವಂತೆಯೇ ಸೇರಿಸದಿರಬಹುದಿತ್ತು ಏಕೆಂದರೆ, ಅಲ್ಲಿ ಇಬ್ಬರೇ ಸದಸ್ಯರಿದ್ದುದು, ಅದು, ಒಬ್ಬರು (ಎ)ಯ ಅಡಿಯಲ್ಲಿರುವ ಪಟ್ಟಿಯಿಂದ ಆಯ್ದ ಜಿಲ್ಲಾ ನ್ಯಾಯಾಧೀಶರು ಆಗಿರಲೇಬೇಕು

ಅಥವಾ ಅವರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರಬೇಕು. ಹಾಗೆಯೇ ಮತ್ತೊಬ್ಬರು ವಕೀಲರಾಗಿರಬಹುದು. ಆದ್ದರಿಂದ ಇಬ್ಬರೂ ವಕೀಲರುಗಳಾಗಿರುವುದಿಲ್ಲ.... ಒಂದು, ವಿಧಿಯನ್ನು ಕಾಯ್ದಿಡುವುದು ಅಥವಾ ತಾವು ಗಮನಸೆಳೆದಿರುವ ತಿದ್ದುಪಡಿಗೆ ಸೂಚನೆಯನ್ನು ನೀವು ಬಿಟ್ಟುಕೊಡಬೇಕು ಎನ್ನುವ ನನ್ನ ಮಿತ್ರ ಶ್ರೀ ಸತೀಶಚಂದ್ರರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ನೀವು ಸೂಚನೆಯನ್ನು ಬಿಟ್ಟುಬಿಟ್ಟರೆ, ಅವರ ತಿದ್ದುಪಡಿಯನ್ನು ಪ್ರಸ್ತಾಪಿಸಲು ಅವಕಾಶ ಕೊಡದಿದ್ದರೆ, ಅವರ ತಿದ್ದುಪಡಿಯನ್ನು ಸದನದಲ್ಲಿ ಚರ್ಚೆ ಮಾಡಲಾಗುವುದು, ಒಂದು ವೇಳೆ ಅವರ ತಿದ್ದುಪಡಿಯನ್ನು ಪ್ರಸ್ತಾಪಿಸಲು ಅವಕಾಶ ಕೊಡದಿದ್ದರೆ ಅವರಿಗೆ ಮತ್ತು ಸದನಕ್ಕೆ ಅನ್ಯಾಯವಾಗುತ್ತದೆ. ಜೊತೆಗೆ ಶ್ರೀ ಉಪಾಧ್ಯಾಯರ ತಿದ್ದುಪಡಿಯಿಂದ ತಿದ್ದಲಾದ ವಿಧಿಯನ್ನು ಸದನದ ಮುಂದಿಡಲಾಗುತ್ತದೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಇಷ್ಟು ಸಮಯವನ್ನು ತೆಗೆದುಕೊಳ್ಳುವ ಅರ್ಹತೆ ಇಲ್ಲದ ಒಂದು ವಿಧಿಯ ಬಗೆಗೆ ಬಹಳಷ್ಟು ಚರ್ಚೆ ಮಾಡಲಾಗುತ್ತಿದೆ ಎಂದು ನನಗೆ ಅನ್ನಿಸುತ್ತಿದೆ.

**ಶ್ರೀ ಕಾಮತ್:** ಅದು ನಿಮ್ಮ ದೃಷ್ಟಿಯಲ್ಲಿ ಅಷ್ಟೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಅದು ನನ್ನ ಅಭಿಪ್ರಾಯ ಮತ್ತು ಇದು ಸದನದ ಅಭಿಪ್ರಾಯವೂ ಇದೇ ಎಂದು ನಾನು ನಂಬಿದ್ದೇನೆ.

**ಶ್ರೀ ಕಾಮತ್:** ನಾನು ಹಾಗೆಂದುಕೊಳ್ಳುವುದಿಲ್ಲ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ೧೦೩ ನೇ ವಿಧಿಯಲ್ಲಿ ಆಲೋಚಿಸಿದ್ದ ಹಿರಿದಾದ ಸುಧಾರಣೆಯನ್ನು ಇದರಲ್ಲಿ ತೆಗೆದುಹಾಕಲಾಗಿದೆ ಎನ್ನುವ ಅರ್ಹತೆಯೇ ನನ್ನ ಗೌರವಾನ್ವಿತ ಮಿತ್ರ ಶ್ರೀ ಉಪಾಧ್ಯಾಯರ ತಿದ್ದುಪಡಿಯನ್ನು ಒಪ್ಪಿಕೊಳ್ಳುವಂತೆ ಮಾಡಿರುವುದು. ಆ ಮಟ್ಟದಲ್ಲಿ ಇದು ಒಂದು ಶ್ಲಾಘನೀಯವಾದಂಥದು ಎಂದು ನನ್ನ ಭಾವನೆ. ಇನ್ನೊಂದು ಅಂಶವೆಂದರೆ, ಉಚ್ಚ ನ್ಯಾಯಾಲಯವು ೧೦೪ ನೇ ವಿಧಿಯನ್ನು ಉಪವಿವಾದಾಂಶವೆಂದು ಪರಿಗಣಿಸುವ ಸಂಭವವಿದ್ದು ವಾಸ್ತವದ ದೃಷ್ಟಿಯಿಂದ ೧೦೪ ನೇ ವಿಧಿಯ ಕಾರ್ಯವು ಮುಂದುವರೆಯಬೇಕು ಎನ್ನುವುದನ್ನು ಸಲಹೆ ಮಾಡುವಷ್ಟು ನೀವು ಉತ್ತಮಮಟ್ಟದಲ್ಲಿದ್ದು, ಅದರಲ್ಲೇನಾದರೂ ಭಿನ್ನಾಭಿಪ್ರಾಯವಿದ್ದರೆ ಅದನ್ನು ಈಗ ಹೋಗಲಾಡಿಸಲಾಗುತ್ತದೆ.... ನನ್ನ ಗೌರವಾನ್ವಿತ ಮಿತ್ರ ಶ್ರೀ ಕಾಮತ್‌ರ ಪ್ರಬಲವಾದ ಆಕ್ಷೇಪವಿದ್ದರೂ ಸಹ, ಸದನವು ಒಪ್ಪಿಕೊಂಡರೆ ಎಲ್ಲವನ್ನು ಹಾಗೆಯೇ ನಡೆಯಲು ಅವಕಾಶಕೊಡುತ್ತೇನೆ.

ಸದನದ ಸಮ್ಮತಿಗಾಗಿ ನಾನು ತಿದ್ದುಪಡಿಯನ್ನು ಒಪ್ಪಿಸುತ್ತೇನೆ.

**ಮಾನ್ಯ ಉಪಸಭಾಪತಿ:** ಮಸೂದೆಯು ಸ್ವಾಭಾವಿಕವಾಗಿ ಅಧ್ಯಕ್ಷರು ಮತ್ತು ಸದಸ್ಯರ ನಡುವಿನ ಭಿನ್ನಾಭಿಪ್ರಾಯದ ವಿಷಯದಲ್ಲಿ ನಿಂತಿದೆ ಎನ್ನುವುದು ವಾಸ್ತವವಲ್ಲವೇ? ಮೊಕದ್ದಮೆಯನ್ನು ಉಚ್ಚನ್ಯಾಯಾಲಯಕ್ಕೆ ಒಯ್ದಾಗ ಇಬ್ಬರು ನ್ಯಾಯಾಂಗ ಅಧಿಕಾರಿಗಳು ಅವರ ತೀರ್ಪನ್ನು ಮೊಕದ್ದಮೆಯ ಮೇಲೆ ಹೊರಿಸಲು ತರುತ್ತಾರೆ ಎನ್ನುವುದು ಖಚಿತವಾಗಿತ್ತಲ್ಲವೇ? ಆ ಅವಕಾಶವನ್ನು ಈಗ ಹಿಂದೆಗೆದುಕೊಳ್ಳಲಾಗಿದೆ. ಮತ್ತು ಈಗ ವಕೀಲರುಗಳಲ್ಲಿ ಇಬ್ಬರು ಸದಸ್ಯರನ್ನು ನೇಮಿಸುವುದು ನೇಮಕಾತಿಯ ಅಧಿಕಾರಕ್ಕೆ ಸೇರಿದೆ. ಮಸೂದೆಯ ಅವಕಾಶಗಳನ್ನೂ ಮತ್ತು ಆಲೋಚಿಸಿರುವ ತಿದ್ದುಪಡಿಯ ನಡುವೆ ಅಂತಹ ಒಂದು ಮಹತ್ವದ ಬದಲಾವಣೆ ಏಕಿರಬೇಕು? ಏಕೆಂದರೆ ಇದು ರಾಜಕೀಯದಲ್ಲಿ ಭಾಗವಹಿಸಬಹುದಾದ ವ್ಯಕ್ತಿಗಳನ್ನೆ ಒಳತರುತ್ತದೆ ಅಷ್ಟೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ನೇಮಕಾತಿಯ ಅಧಿಕಾರವು ಚುನಾವಣಾ ಆಯುಕ್ತರ ಕೈಯಲ್ಲಿರುವವರೆಗೆ, ನೇಮಕವಾದ ವ್ಯಕ್ತಿಗಳು ಪ್ರಾಮಾಣಿಕರಾಗಿರುವಂತೆ ನೋಡಿಕೊಳ್ಳುವುದನ್ನು ನಾವು ಅವರಿಗೆ ಬಿಟ್ಟುಬಿಡೋಣ.

**ಡಾ. ಅಂಬೇಡ್ಕರ್:** ವಿಷಯವನ್ನು ಸ್ಪಷ್ಟಪಡಿಸಲು ನಾನೊಂದು ಮಾತು ಹೇಳಬಹುದೇ? ೧೦೩ನೇ ವಿಧಿಯನ್ನು ನಾವು ಉಳಿಸಿಕೊಳ್ಳಬೇಕೇ ಬೇಡವೇ ಎನ್ನುವುದನ್ನು ನಾವು ಪರಿಗಣಿಸಬೇಕಾಗಿರುವುದೇ ನಿಜವಾಗಿಯೂ ಇಲ್ಲಿ ಮುಖ್ಯವಾದ ಪ್ರಶ್ನೆ – ಅದೇ ಮೂಲಭೂತವಾದ ಅಂಶ. ಉಚ್ಚ ನ್ಯಾಯಾಲಯದ ಮಧ್ಯ ಪ್ರವೇಶದ ಆವಶ್ಯಕತೆ ಮೂಡುವಷ್ಟು ನಾವು ಈ ವಿಷಯವನ್ನು ಎಳೆಯಬೇಕೆ? ಚುನಾವಣಾ ಮನವಿಗಳ ಸಂಖ್ಯೆಯ ಬಗೆಗೂ ನಮಗೆ ಒಂದು ಕಲ್ಪನೆ ಇಲ್ಲ ಎನ್ನುವುದನ್ನು ಸಮಿತಿಯು ಉದ್ದಕ್ಕೂ ಮನಗಂಡಿದೆ, ಅಲ್ಲದೇ, ಈ ಚುನಾವಣಾ ಮನವಿಗಳನ್ನು ನಿಭಾಯಿಸಲು ಅಗತ್ಯವಾದ ನ್ಯಾಯಾಂಗ ಸಿಬ್ಬಂದಿಗಳ ಪ್ರಮಾಣದ ಬಗೆಗೂ ನಮಗೆ ಸರಿಯಾದ ತಿಳಿವಳಿಕೆ ಇಲ್ಲ. ನಾವು ಉದ್ದಕ್ಕೂ ಈ ತೊಂದರೆಯನ್ನೇ ಅನುಭವಿಸುತ್ತಾ ಬಂದಿದ್ದೇವೆ. ತಮಗೆ ನೆನಪಿರಬಹುದು ಎಂದು ಭಾವಿಸುತ್ತೇನೆ, ತತ್ಪರಿಣಾಮವಾಗಿ ಒಂದು ವೇಳೆ ಸಿಬ್ಬಂದಿಯು ಸರ್ಕಾರದ ಸೇವೆಯಲ್ಲಿರುವ ನ್ಯಾಯಾಂಗ ಅಧಿಕಾರಿಗಳಿಗೆ ಮಾತ್ರವೇ ಸೀಮಿತವಾದರೆ; ಆಗ ದೊಡ್ಡ ತೊಂದರೆಯಾಗಬಹುದು ಎಂದು ಭಾಸವಾಗಿ, ಆ ತೊಂದರೆಯ ದೆಸೆಯಿಂದಾಗಿ ಉಪವಿಧಿ (ಬಿ) ಯನ್ನು ಸೇರಿಸಬೇಕೆಂದು ನಾವು ಆಯ್ಕೆ ಸಮಿತಿಯಲ್ಲಿ ನಿರ್ಧರಿಸಿದೆವು.

ಈಗ ಒಬ್ಬ ವಕೀಲನು, ರಾಜಕೀಯದಲ್ಲಿ ಸ್ವಲ್ಪ ಭಾಗವಹಿಸಿರಬಹುದು, ಅದರಿಂದಾಗಿ ಒಂದು ಪಕ್ಷದ ಪರವಾಗಿ ಪಕ್ಷಪಾತ ಮನೋಭಾವವನ್ನು ಮತ್ತೊಂದರ ವಿರೋಧವಾದ ಮನೋಭಾವವನ್ನು ಬೆಳೆಸಿಕೊಂಡಿರಬಹುದು, ಅಥವಾ ಒಂದು ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿರಲೂಬಹುದು. ಅಂಥವನ ನೇಮಕಾತಿಯ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಯ ತೊಂದರೆಯನ್ನು ಎರಡು ರೀತಿಯಲ್ಲಿ ಪರಿಹರಿಸಬಹುದು. ಮೊದಲನೆಯದು ಇದು: ಪ್ರತಿಯೊಬ್ಬ ವಕೀಲನೂ ಚುನಾವಣಾ ನ್ಯಾಯಮಂಡಲಿಗೆ ನೇಮಕವಾಗುವ ಉದ್ದೇಶಕ್ಕೆ ಅರ್ಹನಾಗಿರಲು ಸಾಧ್ಯವಿಲ್ಲ. ನಿಬಂಧನೆಗಳು ಬಹಳವಾಗಿವೆ. ಮೊಟ್ಟ ಮೊದಲನೆಯದಾಗಿ ಅವನು 'ಉಚ್ಚ ನ್ಯಾಯಾಲಯದಿಂದ ಅಂಗೀಕರಿಸಲ್ಪಟ್ಟ ಒಬ್ಬ ವಕೀಲನಾಗಿರಬೇಕು. ಆ ಮಾತುಗಳನ್ನು ನೀವು ನೋಡುತ್ತೀರಿ: ಉಚ್ಚ ನ್ಯಾಯಾಲಯದಲ್ಲಿ ೧೦ ವರ್ಷಗಳಿಗೆ ಕಡಿಮೆ ಇಲ್ಲದಂತೆ ವೃತ್ತಿ ನಡೆಸಿರಬೇಕು. ಜೊತೆಗೆ ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಅವರು ಆ ರೀತಿಯ ಸದಸ್ಯರುಗಳಾಗಿ ನೇಮಕವಾಗಲು ಅರ್ಹತೆಗಳಿಸಿರಬೇಕು.' ಉಚ್ಚ ನ್ಯಾಯಾಲಯವು ಯಾವುದೇ ನಿರ್ದಿಷ್ಟ ವಕೀಲನನ್ನು ನ್ಯಾಯಪೀಠಕ್ಕೆ ನೇಮಕ ಮಾಡಲು ಶಿಫಾರಸು ಮಾಡಿದಾಗ, ತಾನು ಶಿಫಾರಸು ಮಾಡುವ ನಿರ್ದಿಷ್ಟ ವಕೀಲರ ರಾಜಕೀಯ ಸಂಬಂಧಗಳನ್ನು ಪರಿಗಣಿಸುತ್ತದೆ ಎನ್ನುವ ವಿಷಯದಲ್ಲಿ ನನಗೇನೂ ಸಂಶಯವಿಲ್ಲ. ಎರಡನೆಯದಾಗಿ, ಉಚ್ಚನ್ಯಾಯಾಲಯವು ಕೇವಲ ಒಂದು ಶಿಫಾರಸು ಸಂಸ್ಥೆ ಮಾತ್ರ. ಅಂತಿಮವಾಗಿ ನೇಮಕವನ್ನು ಚುನಾವಣಾ ಆಯೋಗವೇ ಮಾಡುವುದು. ಚುನಾವಣಾ ಆಯೋಗವು ಚುನಾವಣೆಯಲ್ಲಿ ನ್ಯಾಯಸಮ್ಮತವಾದ ಚುನಾವಣಾ ಕಾರ್ಯವಿಧಾನಗಳನ್ನು ಮುಂದುವರಿಸಿಕೊಂಡು ಹೋಗುವ ದೃಷ್ಟಿಯಿಂದ ಉಚ್ಚ ನ್ಯಾಯಾಲಯವು ಕೊಟ್ಟ ಪಟ್ಟಿಯನ್ನು ಮತ್ತೊಮ್ಮೆ ಪರಿಶೀಲಿಸುತ್ತದೆ ಎಂದು ಭಾವಿಸುತ್ತೇನೆ. ಉಚ್ಚ ನ್ಯಾಯಾಲಯವು ಶಿಫಾರಸು ಮಾಡಿದಂತೆ ತಮ್ಮ ಪಟ್ಟಿಯಲ್ಲಿರುವ ಯಾವುದೇ ವ್ಯಕ್ತಿಯು, ಅವನು ಒಬ್ಬ ರಾಜಕೀಯ ವ್ಯಕ್ತಿ ಎಂಬ ಕಾರಣದಿಂದ ಅಥವಾ ಅವನೊಬ್ಬ ಚುನಾವಣೆಯಲ್ಲಿನ ಪರಾಜಿತ ಅಭ್ಯರ್ಥಿ ಅಥವಾ ಯಾವುದೋ ನಿರ್ದಿಷ್ಟ ಪಕ್ಷಕ್ಕೆ ಸೇರಿದ ವ್ಯಕ್ತಿ ಎಂಬ ಸತ್ಯಾಂಶದ ಕಾರಣದಿಂದ ಅವನನ್ನು ಕೈಬಿಡಬಹುದೇ ಎಂಬುದನ್ನೇ ಖಚಿತ ಮಾಡಿಕೊಳ್ಳುವ ಸಲುವಾಗಿ ಈ ಪರಿಶೀಲನೆಯನ್ನು ಚುನಾವಣಾ ಆಯೋಗವು ಮಾಡುತ್ತದೆ.

ಈ ನೇಮಕಾತಿಗಳಿಗೆ ವಕೀಲರುಗಳನ್ನು ಸೇರಿಸಿಕೊಳ್ಳಬಹುದೇ ಅಥವಾ ಇಲ್ಲವೇ ಎನ್ನುವುದು ಒಂದು ಬೇರೆಯೇ ಆದ ಪ್ರಶ್ನೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ನ್ಯಾಯಮಂಡಲಿಗೆ ಸದಸ್ಯರುಗಳನ್ನಾಗಿ

ರಾಜಕೀಯ ವಕೀಲರುಗಳನ್ನು ಸೇರಿಸಿಕೊಳ್ಳುವ ಸಾಧ್ಯತೆಯು, ಎಲ್ಲ ವ್ಯಾವಹಾರಿಕ ದೃಷ್ಟಿಯಿಂದಲೂ ಹೆಚ್ಚು ಕಡಿಮೆ ಎರಡು ಅವಕಾಶಗಳಿಂದ ತೆಗೆದುಹಾಕಲ್ಪಡುತ್ತದೆ ಎಂದು ನನ್ನ ಭಾವನೆ. ಅವು ಯಾವುವೆಂದರೆ, ಅದು ಉಚ್ಚ ನ್ಯಾಯಾಲಯದ ಶಿಫಾರಸುಗಳಿಗೆ ಒಳಪಡುವಂತೆ ಮಾಡಲ್ಪಟ್ಟಿರುತ್ತದೆ ಮತ್ತು ಯಾವುದೇ ನಿರ್ದಿಷ್ಟ ವ್ಯಕ್ತಿಯನ್ನು ಆರಿಸುವ ಅಥವಾ ಆರಿಸದಿರುವ ಚುನಾವಣಾ ಆಯೋಗದ ಹಕ್ಕಿಗೂ ಅದನ್ನು ಒಳಪಡಿಸಲಾಗಿರುತ್ತದೆ. ಆದ್ದರಿಂದ, ನಾನು ಅಂದುಕೊಳ್ಳುವಂತೆ, ಈ ಭಯವು ಹೆಚ್ಚು ಕಡಿಮೆ ಆಧಾರವಿಲ್ಲದ್ದು.

**ಮಾನ್ಯ ಉಪಸಭಾಪತಿ:** ಹತ್ತು ವರ್ಷಗಳಿಂದ ವೃತ್ತಿಯಲ್ಲಿರುವ ವಕೀಲರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಾಗಿ ನೇಮಕವಾಗಲು ಅರ್ಹರು ಅಲ್ಲವೇ? ಆದ್ದರಿಂದ ಯಾರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಅರ್ಹರಾಗಿರುತ್ತಾರೆಯೋ ಅವರನ್ನು ಮಾತ್ರ ಆಯ್ಕೆ ಮಾಡಬಹುದು.

**ಡಾ. ಅಂಬೇಡ್ಕರ್:** ಹಾಗಾದ ಮೇಲೆಯೂ ಸಹ ಅವನು ಯಾರ ವಿಷಯದಲ್ಲಾದರೂ ರಾಜಕೀಯವಾಗಿ ಆಸಕ್ತನಾಗಿದ್ದಾನೆ ಎಂದು ಕಂಡುಬಂದರೆ, ಆಗ ಚುನಾವಣಾ ಆಯೋಗಕ್ಕೆ ಅವನನ್ನು ಕೈಬಿಡುವ ಹಕ್ಕಿದೆ. ಇವೆಲ್ಲವೂ ಬಹಳ ಕಠಿಣವಾದ ಮತ್ತು ಬಿಗಿಯಾದ ನಿಯಮಗಳು.

**ಶ್ರೀ ಕಾಮತ್:** ಒಬ್ಬ ವ್ಯಕ್ತಿಯು ವಕೀಲರ ಸಂಘದಿಂದ ನ್ಯಾಯಪೀಠಕ್ಕೆ ಹೋದಾಗ, ಭಿನ್ನವಾಗಿ ನಡೆದುಕೊಳ್ಳುತ್ತಾನೆ. ಈ ನ್ಯಾಯಾಂಗವು ಇಬ್ಬರು ವಕೀಲರ ತೂಕದಿಂದಾಗಿ ತನ್ನ ನ್ಯಾಯಾಂಗ ಲಕ್ಷಣದಿಂದ ಬೇರ್ಪಡುವ ಸಾಧ್ಯತೆಯನ್ನು ಇಲ್ಲಿ ತೆಗೆದುಹಾಕುವಂತಿಲ್ಲ.

**ಡಾ. ಅಂಬೇಡ್ಕರ್:** ಆ ಮಟ್ಟದಲ್ಲಿ ನೋಡಿದಾಗ, ಒಬ್ಬ ನಿವೃತ್ತ ಉಪನ್ಯಾಯಾಧೀಶನು ಒಬ್ಬ ರಾಜಕಾರಣಿಯಲ್ಲದಿರಬಹುದು ಎಂದೇಕೆ ಅಂದುಕೊಳ್ಳುತ್ತೀರಿ? ಹೇಗಾದರೂ ಅವನು ಒಬ್ಬ ನಿವೃತ್ತನಾದ ಮನುಷ್ಯ, ರಾಜಕೀಯದಲ್ಲಿ ಭಾಗವಹಿಸಲು ಸ್ವತಂತ್ರನಾಗಿರುತ್ತಾನೆ.

**ಶ್ರೀ ಕಾಮತ್:** ಹಾಗಾದರೆ ಅದನ್ನು ಸಹ ತೆಗೆದುಹಾಕಿ.

**ಡಾ. ಅಂಬೇಡ್ಕರ್:** ಇದು ನ್ಯಾಯಪೀಠವನ್ನು ನೇಮಕ ಮಾಡಲು ಸಿಗುವ ಮೂಲಸಾಮಗ್ರಿಯನ್ನು ಇನ್ನೂ ಕಡಿಮೆ ಮಾಡಿದಂತೆ ಆಗುತ್ತದೆ.

**ಶ್ರೀ ಶಿವಚರಣ್‌ಲಾಲ್ (ಉತ್ತರಪ್ರದೇಶ):** ಸ್ವಾಮಿ, ಶ್ರೀ ಕಾಮತ್ ಅವರು ಯೋಚಿಸಿರುವ ಆಕಸ್ಮಿಕ ಪ್ರಸಂಗವು ಉದ್ಭವವಾಗುವ ಸಂಭವವು ಅದಾಗಲೇ ಅಲ್ಲಿದೆ ಎಂದು ನನ್ನ ಅನಿಸಿಕೆ. ಮುಂಚೆಯೂ ಸಹ ಇಬ್ಬರು ನೇಮಕವಾಗಲ್ಪಡಬೇಕಾದವರಲ್ಲಿ ಒಬ್ಬರು ಅಧ್ಯಕ್ಷರೂ ಮತ್ತೊಬ್ಬರು ವಕೀಲರು, ಇವರಿಬ್ಬರೂ ಸಹ ವಕೀಲರೇ ಆಗಬಹುದಿತ್ತು. ಉಪವಿಧಿ (ಎ) ಹೇಳುತ್ತದೆ, "ಅಧ್ಯಕ್ಷನಾದವನು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರಬೇಕು ಅಥವಾ ಹಿಂದೊಮ್ಮೆ ನ್ಯಾಯಾಧೀಶನಾಗಿದ್ದವನಾಗಿರಬೇಕು" – ಎಂದು. ಸ್ವಾಮಿ, ತಮಗೇ ಗೊತ್ತಿದೆ ಕಡಿಮೆ ಎಂದರೂ ಉಚ್ಚ ನ್ಯಾಯಾಲಯದ ಅರ್ಧದಷ್ಟು ಮಂದಿ ನ್ಯಾಯಾಧೀಶರು ಉಚ್ಚನ್ಯಾಯಾಲಯದ ವಕೀಲರುಗಳಿಂದಲೇ ನೇಮಕಮಾಡಲ್ಪಟ್ಟಿರುತ್ತಾರೆ. ಒಂದು ವೇಳೆ, ಕಳೆದ ವರ್ಷ ಒಬ್ಬ ವಕೀಲನಾಗಿದ್ದವನು ಈಗ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕವಾಗಿರುತ್ತಾನೆ, ಅವನನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಿದರೆ? ಈ ಸನ್ನಿವೇಶದಲ್ಲಿ ಇಬ್ಬರೂ ವಕೀಲರುಗಳೇ ಆಗಿರುತ್ತಾರೆ.

**ಮಾನ್ಯ ಉಪಸಭಾಪತಿಗಳು:** ಒಂದು ಸಾರಿ ಅವನು ನ್ಯಾಯಾಧೀಶನಾಗಿ ನೇಮಕನಾದನೆಂದರೆ ಅವನು ತನ್ನ ವಕೀಲತನದ ಬಣ್ಣವನ್ನು ತೋರಿಸುತ್ತಾನೆ.

**ಶ್ರೀ ಶಿವಚರಣ್‌ಲಾಲ್:** ಅವನು ಒಂದು ತಿಂಗಳ ಹಿಂದೆಯಷ್ಟೇ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕನಾಗಿರಬಹುದು.

**ಶ್ರೀ ಜೆ.ಆರ್. ಕಪೂರ್:** ನನ್ನ ಗೌರವಾನ್ವಿತ ಮಿತ್ರರ ಮನಸ್ಸನ್ನು ಕೊರೆಯುತ್ತಿರುವ ಒಂದೇ ಶಂಕೆ ಏನೆಂದರೆ, ಅಧ್ಯಕ್ಷನನ್ನು ಹೊರತುಪಡಿಸಿದಂತೆ, ನ್ಯಾಯಪೀಠದಲ್ಲಿ ಒಬ್ಬರು ಸದಸ್ಯರು ವಕೀಲರುಗಳಾಗಿರಬಹುದಾದ ಸಾಧ್ಯತೆ ಇದೆ. ಆ ಶಂಕೆಯನ್ನು ನಿವಾರಣೆ ಮಾಡಲು ನಾನು ಒಂದು ಸಣ್ಣ ತಿದ್ದುಪಡಿಯನ್ನು ಸಲಹೆ ಮಾಡುತ್ತೇನೆ.

**ಡಾ. ಅಂಬೇಡ್ಕರ್:** ನಾನು ನನ್ನ ಗೌರವಾನ್ವಿತ ಮಿತ್ರ ಪಂಡಿತ್ ಮುನಿಶ್ವರ ದತ್ ಉಪಾಧ್ಯಾಯ ಅವರನ್ನು ಒಂದು ತಿದ್ದುಪಡಿಯನ್ನು ಪ್ರಸ್ತಾಪಿಸಲು ಕೇಳಿದ್ದೇನೆ.

**ಶ್ರೀ ಜೆ.ಆರ್. ಕಪೂರ್:** ೮೫ ನೇ ವಿಧಿಯ ಉಪವಿಧಿ (೩) ರ ಭಾಗ (ಬಿ) ಯನ್ನು ಹೀಗೆ ಕೆಳಕಂಡಂತೆ ತಿದ್ದಬಹುದು ಎಂದು ನನ್ನ ಸಲಹೆ. ಈಗಿರುವ ಮಾತುಗಳಿಗೆ ಬದಲಾಗಿ ಈ ಮಾತುಗಳನ್ನು ಹಾಕಬಹುದು:

> "(ಬಿ) ಚುನಾವಣಾ ಆಯೋಗವು ಆಯ್ಕೆ ಮಾಡುವ ಇಬ್ಬರು ಇತರ ಸದಸ್ಯರು ಉಪವಿಭಾಗ (೨) ರ ಭಾಗ (ಎ) ಅಡಿಯಲ್ಲಿ ತಾನೇ ನಿರ್ವಹಿಸಿರುವ ಪಟ್ಟಿಯಿಂದ ಅಥವಾ ಉಪ ವಿಭಾಗ (೨)ರ ಅಡಿಯಲ್ಲಿ ತಾನೇ ನಿರ್ವಹಿಸಿರುವ ಪ್ರತಿ ಪಟ್ಟಿಯಿಂದ ಆಯ್ಕೆಯಾಗಬೇಕು."

ಇದರ ಅರ್ಥ ಅಧ್ಯಕ್ಷರಲ್ಲದ ಇಬ್ಬರು ಸದಸ್ಯರುಗಳೂ ಉಪ ವಿಭಾಗ (೨) ರ ಭಾಗ (ಎ) ಅಡಿಯಲ್ಲಿ ನಿರ್ವಹಿಸಲ್ಪಟ್ಟ ಪಟ್ಟಿಯಿಂದಾಗಬಹುದು.... ಇದು ನನ್ನ ತಿದ್ದುಪಡಿ. ನನಗೆ ತಮ್ಮ ಅನುಮತಿ ಇದ್ದರೆ ನಾನು ಅದನ್ನು ಪ್ರಸ್ತಾಪಿಸಬಹುದು.

**ಪಂಡಿತ ಮುನಿಶ್ವರದತ್ ಉಪಾಧ್ಯಾಯ:** ಉಪವಿಧಿ (೩) ರ ಭಾಗ (ಬಿ) ಯಲ್ಲಿರುವ "ಇಬ್ಬರಲ್ಲಿ ಒಬ್ಬರು" ಎಂಬ ಮಾತುಗಳನ್ನು ತೆಗೆದುಹಾಕುವುದರಿಂದ ಈ ತೊಂದರೆಯನ್ನು ನಿವಾರಣೆ ಮಾಡಬಹುದು.

ಈ ತಿದ್ದುಪಡಿಯು ಹೀಗಿರುತ್ತದೆ.

"೩೫ ನೇ ವಿಧಿಯ ಉಪವಿಧಿ (೩) ರ ಭಾಗ (ಬಿ) ಯಲ್ಲಿ

"ಇಬ್ಬರಲ್ಲಿ ಒಬ್ಬರು" ಮಾತುಗಳನ್ನು ತೆಗದುಹಾಕಿ"

"**ಶ್ರೀ ಜೆ.ಆರ್. ಕಪೂರ್:** ಅದು ಉದ್ದೇಶವನ್ನು ನೆರವೇರಿಸುವುದಿಲ್ಲ.

**ಶ್ರೀ ಸತೀಶಚಂದ್ರ:** ಭಾಗ (ಬಿ)ಯಲ್ಲಿ "ಇಬ್ಬರಲ್ಲಿ ಒಬ್ಬರು" ಪದದ ಬದಲಾಗಿ "ಪ್ರತಿಯೊಬ್ಬರೂ" ಎನ್ನುವ ಪದವನ್ನು ನಾನು ಸಲಹೆ ಮಾಡುತ್ತೇನೆ.

**ಮಾನ್ಯ ಉಪ ಸಭಾಪತಿಗಳು:** ಈ ತಿದ್ದುಪಡಿಯನ್ನು ಗೌರವಾನ್ವಿತ ಕಾನೂನು ಮಂತ್ರಿಗಳೂ ಒಪ್ಪಿಕೊಳ್ಳುತ್ತಾರೆ ಎನ್ನುವುದು ಅರ್ಥವಾದರೆ, ಅದನ್ನು ನಾವು ಸುಲಭ ಮಾಡಬಹುದು. ಉಪವಿಧಿ (೩) ರ ಅಂಶ (ಎ) ಯಲ್ಲಿಯೂ ಸಹ, ಅಧ್ಯಕ್ಷರು ಹಾಗೂ ಇನ್ನೊಬ್ಬ ಸದಸ್ಯರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರಬೇಕು ಅಥವಾ ಉಪವಿಧಿ (೨) (ಎ) ಅಡಿಯಲ್ಲಿನ ಪಟ್ಟಿಯಲ್ಲಿರಬೇಕು ಮತ್ತು ಇನ್ನೊಬ್ಬ ಸದಸ್ಯರು ಉಪವಿಧಿ (೨) (ಬಿ) ಅಡಿಯಲ್ಲಿನ ಪಟ್ಟಿಯಿಂದ ಆರಿಸಲ್ಪಟ್ಟ ವ್ಯಕ್ತಿಯಾಗಿರಬೇಕು ಎಂದು ನಾವು ಹೇಳಬಹುದು.

**ಡಾ. ಅಂಬೇಡ್ಕರ್:** "ಇಬ್ಬರಲ್ಲಿ ಒಬ್ಬರು" ಎಂಬ ಪದಗಳು ಉಳಿಸಿಕೊಂಡರೆ ಇಬ್ಬರನ್ನು ಒಟ್ಟಾಗಿ ಒಂದೇ ಪಟ್ಟಿಯಿಂದ ನೇಮಕಮಾಡಬಹುದಾದ ಸಾಧ್ಯತೆ ಇರುತ್ತದೆ. ಅದು ನಮಗೆ ಬೇಡ. ಇಬ್ಬರಲ್ಲಿ ಒಬ್ಬರು" ಪದಗಳನ್ನು ಬಿಟ್ಟುಬಿಟ್ಟರೆ ಆಗ ಆ ಸಾಧ್ಯತೆಯು ಇರುವುದಿಲ್ಲ.

**ಶ್ರೀ ಜೆ.ಆರ್. ಕಪೂರ್:** ಆದಾಗ್ಯೂ ಅದು ಇರುತ್ತದೆ.

**ಮಾನ್ಯ ಉಪಸಭಾಪತಿ:** ಒಂದೇ ಪಟ್ಟಿಯಿಂದ ಆಯೋಗವು ನೇಮಕ ಮಾಡುವುದನ್ನು ಅದು ತಡೆಯುವುದಿಲ್ಲ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಒಂದೊಂದು ಪಟ್ಟಿಯಿಂದ ಒಬ್ಬೊಬ್ಬರಾಗಬೇಕು.

**ಶ್ರೀ ಕಾಮತ್:** "ಎರಡರಲ್ಲಿ ಒಂದರಿಂದ" ಎನ್ನುವುದರ ಬದಲಾಗಿ "ಒಂದೊಂದರಿಂದ ಒಬ್ಬೊಬ್ಬರು" ಎಂದು ನೀವು ಮಾಡಿದರೆ ಆಗ ಅದು ಸ್ಪಷ್ಟವಾಗಿದ್ದು, ಸಂಶಯ ಮುಕ್ತವಾಗಿರುತ್ತದೆ.

**ಮಾನ್ಯ ಉಪ ಸಭಾಪತಿ:** "ಒಂದೊಂದು ಪಟ್ಟಿಯಿಂದ ಒಬ್ಬೊಬ್ಬರು"?

**ಶ್ರೀ ಜೆ.ಆರ್. ಕಪೂರ್:** ಅದರಿಂದ ವಕೀಲನೊಬ್ಬನು ಯಾವಾಗಲೂ ಅವಶ್ಯವಾಗಿ ಅಲ್ಲಿರುತ್ತಾನೆ.

**ಡಾ. ಅಂಬೇಡ್ಕರ್:** ನನ್ನ ಅಭ್ಯಂತರವೇನೂ ಇಲ್ಲ. ವಕೀಲರ ವಿರುದ್ಧವಾಗಿ ಜನರಲ್ಲಿ ಅಷ್ಟು ಪೂರ್ವಾಗ್ರಹ ಪೀಡನೆ ಇದ್ದರೆ ನಾನೇನು ಮಾಡಬಲ್ಲೆ?

**ಮಾನ್ಯ ಉಪಸಭಾಪತಿ:** ತಿದ್ದುಪಡಿಗಳನ್ನು ನಾನು ಅವುಗಳ ಕ್ರಮದಲ್ಲಿ ಸದನದ ಮುಂದಿಡುತ್ತೇನೆ. ಮೊದಲು ನಾನು ಪಂಡಿತ ಮುನೀಶ್ವರ ದತ್ ಉಪಾಧ್ಯಾಯರ ತಿದ್ದುಪಡಿಯನ್ನು ಸೂಚಿಸುತ್ತೇನೆ. ಪ್ರಶ್ನೆಯು:

> ೮೫ ನೇ ವಿಧಿಯ ಉಪವಿಧಿ (೩) ರ ಭಾಗ (ಬಿ) ಯಲ್ಲಿ (ಒಬ್ಬ) "ಇನ್ನೊಬ್ಬ ಬೇರೆ ಸದಸ್ಯ" ಎನ್ನುವುದರ ಬದಲಾಗಿ "ಇಬ್ಬರು ಬೇರೆ ಸದಸ್ಯರು" ಎಂದು.

ಪ್ರಸ್ತಾವನೆಯನ್ನು ಸ್ವೀಕರಿಸಲಾಯಿತು.

**ಮಾನ್ಯ ಉಪಸಭಾಪತಿ:** ಈಗ ಇನ್ನೊಂದು ತಿದ್ದುಪಡಿ ಎಂದರೆ, ""ಎರಡರಲ್ಲಿ ಒಂದರಿಂದ " ಪದಗಳ ಬದಲಾಗಿ "ಒಂದೊಂದರಿಂದ ಒಬ್ಬೊಬ್ಬರು" ಎಂದು

**ಡಾ. ಅಂಬೇಡ್ಕರ್:** ಇದೊಂದು ಬಹಳವೇ ಬಿಗಿಯಾದ ಸನ್ನಿವೇಶ.

**ಮಾನ್ಯ ಉಪ ಸಭಾಪತಿ:** ಇದನ್ನು ನಾನು ಗೌರವಾನ್ವಿತ ಮಂತ್ರಿಗಳಿಗೇ ಬಿಡುತ್ತೇನೆ. ನಾನು ಅದನ್ನು ಸೂಚಿಸಬೇಕೆಂದು ಅವರ ಆಸೆಯೆ?

**ಡಾ. ಅಂಬೇಡ್ಕರ್:** ಹೌದು

**ಶ್ರೀ ಕರುಣಾಕರ ಮೆನನ್:** ನ್ಯಾಯಪೀಠ ಎಲ್ಲ ಮೂರು ಜನ ಸದಸ್ಯರೂ ಸರ್ಕಾರಿ ಸೇವಕರು ಎನ್ನುವ ಸಾಧ್ಯತೆಯನ್ನು ಇದು ತೆಗೆದು ಹಾಕುತ್ತದೆ ಎನ್ನುವುದನ್ನು ನಾನು ಸೂಚಿಸಬಹುದೇ? ಅದು ಸರಿಯೋ ಅಥವಾ ಸರಿ ಇಲ್ಲವೋ ಎನ್ನುವುದು ಪರಿಗಣಿಸಬೇಕಾದ ವಿಷಯ.

**ಮಾನ್ಯ ಉಪಸಭಾಪತಿ:** ಅದು ವಕೀಲರುಗಳಿಗೂ ಸಹ ಅನುಕೂಲ ಎಂದು ಸೂಚಿಸಲಾಗಿದೆ. ಕಾರಣ, ಅಲ್ಲಿ ಕಡಿಮೆ ಎಂದರೂ ಒಬ್ಬ ವಕೀಲನಿರಬೇಕು, ಎಲ್ಲರೂ ಸರ್ಕಾರಿ ನೌಕರರೇ ಅಲ್ಲ.

ಇದನ್ನು ಅಳವಡಿಸಿ ತಿದ್ದುಪಡಿ ಮಾಡಲಾಯಿತು:

> ೮೫ ನೇ ವಿಧಿಯ ಉಪವಿಧಿ (೩) ರ ಭಾಗ (ಬಿ) ಯಲ್ಲಿ "ಎರಡರಲ್ಲಿ ಒಂದರಿಂದ" ಪದಗಳಿಗೆ ಬದಲಾಗಿದೆ "ಒಂದೊಂದರಿಂದ ಒಬ್ಬೊಬ್ಬರು"
>
> (ಶ್ರೀ ಟಿ.ಟಿ. ಕೃಷ್ಣಮಾಚಾರಿ)

**ಮಾನ್ಯ ಉಪಸಭಾಪತಿ:** ಈಗ ನಾನು ತಿದ್ದುಪಡಿ ಸಂಖ್ಯೆ ೧೮ ನ್ನು ಸೂಚಿಸುತ್ತೇನೆ. (ಒಟ್ಟಾರೆ ಪಟ್ಟಿ ನಂ ೨) ಇದೊಂದು ಆನುಷಂಗಿಕ ತಿದ್ದುಪಡಿ. ಪ್ರಶ್ನೆಯು

೮೫ ನೇ ವಿಧಿಯ ಉಪವಿಧಿ (೩) ರ ಎರಡನೇ ನಿಯಮದಲ್ಲಿ "ಸದಸ್ಯ" ಬದಲಾಗಿ "ಸದಸ್ಯರುಗಳು".

ಈ ಮಂಡನೆಯನ್ನು ಸ್ವೀಕರಿಸಲಾಯಿತು.

**ಮಾನ್ಯ ಉಪಸಭಾಪತಿ:** ವಿಷಯ:

ತಿದ್ದುಪಡಿಯಾಗಿ ಆ ೮೫ ನೇ ವಿಧಿಯು ಮಸೂದೆಯ ಭಾಗವಾಗಿರುತ್ತದೆ.

ಈ ಮಂಡನೆಯನ್ನು ಸ್ವೀಕರಿಸಲಾಯಿತು.

ತಿದ್ದುಪಡಿಯಾಗಿ ೮೫ ನೇ ವಿಧಿಯು ಮಸೂದೆಗೆ ಸೇರಿಸಲ್ಪಟ್ಟಿತು.

೮೬ ನೇ ವಿಧಿಯಿಂದ ೯೩ ರವರೆಗಿನ ವಿಧಿಗಳನ್ನು ಮಸೂದೆಗೆ ಸೇರಿಸಲಾಯಿತು.

**ಡಾ. ಅಂಬೇಡ್ಕರ್:** ಈಗ ಸದನವು ಮುಂದಕ್ಕೆ ಹೋಗಬಹುದು ಎಂದು ನಾನು ಸಲಹೆ ಮಾಡುವವನಿದ್ದೆ. ಸ್ವಾಮಿ, ತಿದ್ದುಪಡಿಗಳನ್ನು ಪ್ರಸ್ತಾಪಿಸಿದ ಸದಸ್ಯರುಗಳ ಜೊತೆಯಲ್ಲಿ ಕುಳಿತು ೯೪ ರಿಂದ ಮುಂದಿನ ವಿಧಿಗಳನ್ನು ಪರಿಗಣಿಸಿ ನೋಡಲು ಅವಕಾಶಕೊಡಿ, ಅನಂತರ ನಾವು ನಾಳೆ ಭೇಟಿ ಮಾಡಬಹುದು. ಅದರಿಂದ ಅನಂತರ ಹಿಂದೆಗೆದುಕೊಳ್ಳಬಹುದಾದ ತಿದ್ದುಪಡಿಗಳನ್ನು ಪ್ರಸ್ತಾಪಿಸುವ ತೊಂದರೆಯನ್ನು ಮತ್ತೆ ತೆಗೆದುಕೊಳ್ಳುವಂತಿರುವುದಿಲ್ಲ ಅಥವಾ ನಾನು ಪರಿಗಣಿಸಲು ಸಮಯ ಸಿಕ್ಕದೆ, ಯಾವುದೇ ಖಚಿತವಾದ ಮುಕ್ತಾಯಕ್ಕೆ ಬರದ ತಿದ್ದುಪಡಿಗಳನ್ನು ಸಹ ನಾವು ಪ್ರಸ್ತಾಪಿಸುವ ತೊಂದರೆ ಇರುವುದು. ನನ್ನ ಈ ವಿನೀತ ಸಲಹೆಯನ್ನು ತಮ್ಮ ಹಾಗೂ ಸದನದ ಪರಿಗಣನೆಗೆ ಬಿಟ್ಟು, ಅವರು ಒಪ್ಪಿದರೆ ನಾವು ಈಗಲೇ ಆ ಉದ್ದೇಶಕ್ಕಾಗಿ ಸೇರಬಹುದು ಹಾಗೂ ಅವಶ್ಯವಾದರೆ ಮಧ್ಯಾಹ್ನವೂ ಸೇರಬಹುದು ಎಂದು ಹೇಳುತ್ತೇನೆ.

**ಹಲವು ಗೌರವಾನ್ವಿತ ಸದಸ್ಯರು:** ಸರಿ, ಸರಿ.

**ಮಾನ್ಯ ಉಪಸಭಾಪತಿ:** ಸರಿ ಹಾಗಾದರೆ ಈ ಸಲಹೆಯು ಸದನಕ್ಕೆ ಒಪ್ಪಿಗೆಯೆಂದು ಭಾವಿಸುತ್ತೇನೆ. ಆದರೆ ಸದನವನ್ನು ಮುಂದಕ್ಕೆ ಹಾಕುವ ಮೊದಲು ಒಂದು ಸಮಿತಿಯನ್ನು ಮಾಡಲು ಇಚ್ಛಿಸುತ್ತೇನೆ. ಸಮಾವೇಶವು ಬಹಳವೇ ಫಲಕಾರಿಯಾದರೂ ಬಹಳಷ್ಟು ಗೌರವಾನ್ವಿತ ಸದಸ್ಯರುಗಳು ಅದರಲ್ಲಿ ಭಾಗವಹಿಸಲಿಲ್ಲ ಎಂಬುದನ್ನು ನಾನು ಕಂಡಿದ್ದೇನೆ. ಗೌರವಾನ್ವಿತ ಸದಸ್ಯರೆಲ್ಲರನ್ನು ನಾನು ಸಮಾವೇಶದಲ್ಲಿ ಸೇರಲು ಮತ್ತು ಅವರಿಗೆ ಇಲ್ಲಿ ಏನೆಲ್ಲ ಹೇಳಬೇಕೆನಿಸಿದೆ ಅದನ್ನು ಅಲ್ಲಿ ವಿವರವಾಗಿ ಹೇಳಿ ಒಂದು ಒಪ್ಪಂದಕ್ಕೆ ಬರುವ ಪ್ರಯತ್ನವಾಗಲಿ ಎಂದು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಹಾಗಾದಾಗ್ಯೂ ಭಿನ್ನಾಭಿಪ್ರಾಯಗಳು ಇದ್ದರೆ ಅವರುಗಳು ಯಾವಾಗಬೇಕಾದರೂ ಹೌಸ್‌ಗೆ ಬಂದು ಮತಾಭಿಪ್ರಾಯ ವ್ಯಕ್ತಪಡಿಸಬಹುದು. ಆದರೆ ಭಿನ್ನಾಭಿಪ್ರಾಯವಿರುವ ಬಹಳಷ್ಟು ವಿಷಯಗಳನ್ನು ಸಮಾವೇಶದಲ್ಲಿ ಅನೌಪಚಾರಿಕವಾಗಿ ಮನಬಿಚ್ಚಿ ಹೇಳಿ ಆ ಭಿನ್ನಭಿಪ್ರಾಯವನ್ನು ಹೋಗಲಾಡಿಸಿಕೊಳ್ಳಬಹುದು.

**ಡಾ. ಅಂಬೇಡ್ಕರ್:** ಪ್ರತಿಯೊಬ್ಬರನ್ನೂ ಆಹ್ವಾನಿಸಲಾಗಿದೆ.

**ಮಾನ್ಯ ಉಪಸಭಾಪತಿ:** ಅದು ಇಡೀ ಸದನದ ಒಂದು ಸಮಿತಿಗೆ ಅದೊಂದು ಸಾಂಪ್ರದಾಯಿಕವಾದ ಉಲ್ಲೇಖವಲ್ಲದಿದ್ದರೂ ಅದು ಅದರಷ್ಟೇ ಉತ್ತಮವಾಗಿರುವಂಥದು. ಗೌರವಾನ್ವಿತ ಸದಸ್ಯರು ಅಲ್ಲಿ ಕುಳಿತು, ಅವರ ಅಭಿಪ್ರಾಯಗಳಿಗೆ ಮಾತುಕೊಟ್ಟು ತಿದ್ದುಪಡಿಗಳನ್ನು ಬೆಂಬಲಿಸಿ ಅಥವಾ ವಿರೋಧಿಸಿ ನಂತರ ನಿರ್ಧಾರಕ್ಕೆ ಬರುವುದು ಅವರಿಗೇ ಸೇರಿದೆ. ಅಷ್ಟು ಚರ್ಚೆಯು ನಾಳೆಗೆ ಇರುವುದಿಲ್ಲ. ಅಂತೆಯೇ ಅನೇಕ ವಿಧಿಗಳು ಆಗ ಪ್ರಸ್ತಾಪಕ್ಕೆ ಬರುತ್ತವೆ ಎಂದು ನಾನು ನಂಬಿದ್ದೇನೆ:

**ಶ್ರೀ ಕಾಮತ್:** ತಮ್ಮ ಸಲಹೆಯು ಯಾವ ವಿಷಯಗಳ ಬಗೆಗೆ ಅಭಿಪ್ರಾಯಗಳ ಐಕಮತ್ಯವಿರುವುದೋ

ಆ ವಿಷಯಗಳಿಗೆ ಮಾತ್ರ ಅನ್ವಯಿಸುತ್ತದೆ. ಒಂದು ವೇಳೆ ಭಿನ್ನಾಭಿಪ್ರಾಯವಿದ್ದರೆ, ಅವುಗಳನ್ನು ಇಲ್ಲಿಯೇ ಚರ್ಚಿಸಬೇಕಾಗುವುದು.

**ಡಾ. ಅಂಬೇಡ್ಕರ್:** ಬಹುಮತವಿರುವ ನಿರ್ಧಾರಗಳನ್ನೇ ಅಂಗೀಕರಿಸಬೇಕು.

**ಶ್ರೀ ಕಾಮತ್:** ಖಂಡಿತ ಇಲ್ಲ.

**ಮಾನ್ಯ ಉಪಸಭಾಪತಿ:** ಐಕಮತ್ಯವು ಯಾವಾಗಲೂ ಒಂದು ಶೇಕಡಾವಾರು ಅಷ್ಟೆ. ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೂ ಸಂಶಯಗಳನ್ನು ಸಮಾವೇಶದಲ್ಲಿ ನಿವಾರಿಸಲಾಗುವುದು.

ನಾಳೆಯ ೮.೩೦ ರವರೆಗೆ ಸದನವನ್ನು ಮುಂದೂಡಲಾಗಿದೆ.

ಆಗ ಸದನವು ಗುರುವಾರ, ೨೪ ರ ಮೇ ೧೯೫೧, ಕ್ಕೆ ಬೆಳಗಿನ ೮.೩೦ ರವರೆಗೆ ಮುಂದೂಡಲ್ಪಟ್ಟಿತು.

## *ಪ್ರಜಾಪ್ರಾತಿನಿಧ್ಯ (ಸಂ.೨) ಮಸೂದೆ – ಮುಂದುವರಿದಿದೆ.

**೯ ಗಂಟೆ ರಾತ್ರಿ:**

**ಮಾನ್ಯ ಸಭಾಪತಿ:** ಜನಗಳ ಪ್ರತಿನಿಧಿತ್ವ (ಸಂ ೨) ಮಸೂದೆಯ ಮುಂದಿನ ಚರ್ಚೆಯನ್ನು ನಡೆಸಲು ಹೌಸ್ ಮುಂದುವರೆಯುತ್ತದೆ. ಗೌರವಾನ್ವಿತ ಕಾನೂನು ಮಂತ್ರಿಗಳೊಡನೆ ಉಳಿದ ವಿಧಿಗಳ ಬಗೆಗಿನ (ಮೇಲಿನ) ತಿದ್ದುಪಡಿಗಳ ಒಂದು ಅನೌಪಚಾರಿಕ ಚರ್ಚೆಗಾಗಿ ಸದನವು ನಿನ್ನೆ ಮುಂದೂಡಲ್ಪಡುವ ಮೊದಲು ೯೩ ರವರೆಗಿನ ವಿಧಿಗಳನ್ನು ಇತ್ಯರ್ಥ ಮಾಡಲಾಗಿತ್ತು. ಈಗ ಸದನದ ೯೪ ನೇ ವಿಧಿಯನ್ನು ತೆಗೆದುಕೊಳ್ಳುತ್ತೇನೆ – ಸದಸ್ಯರುಗಳಲ್ಲಿ ನಡೆದ ಅನೌಪಚಾರಿಕ ಸಮಾಲೋಚನೆಯ ಫಲಿತಾಂಶವೇನಾಯಿತು ಎಂದು ತಿಳಿಯಲು ನಾನು ಇಚ್ಛಿಸುತ್ತೇನೆ.

**ಕಾನೂನು ಮಂತ್ರಿ ಡಾ. ಅಂಬೇಡ್ಕರ್:** ಸ್ವಾಮಿ, ನಾವು ೧೩೫ ನೇ ವಿಧಿಯವರೆಗೂ ಬಹಳ ದೀರ್ಘವಾಗಿ ಸಮಾಲೋಚನೆ ನಡೆಸಿದೆವು. ಆದರೆ ಈಗಲೂ ಸಹ ನಾನು ಹನ್ನೊಂದು ಅಥವಾ ಹನ್ನೊಂದೂವರೆಯವರೆಗೆ, ನಮಗೆ ಹೊಂದಿಕೆಯಾಗುವಂತೆ ಸದನವನ್ನು ಮುಂದೂಡಲು ತಮ್ಮ ಹಾಗೂ ಸದನದ ಅನುಮತಿಯನ್ನು ಬೇಡುತ್ತೇನೆ. ಏಕೆಂದರೆ ಎಲ್ಲವನ್ನೂ ಮುಕ್ತಾಯ ಮಾಡಲು ಮತ್ತೊಮ್ಮೆ ಸಭೆಯನ್ನು ನಡೆಸಲು ನಾನು ಇಚ್ಛಿಸುತ್ತೇನೆ. ಇಲ್ಲಿ ತೊಂದರೆ ಏನೆಂದರೆ ಮಧ್ಯಾಹ್ನ ಮತ್ತೊಂದು ಸಭೆ ಇದೆ. ಆದ್ದರಿಂದ ಸದನದ ಸಮಿತಿಯು ಸಭೆ ಸೇರಿ ಈ ವಿಷಯವನ್ನು ಚರ್ಚಿಸಲು ಸಾಧ್ಯವಾಗುವುದಿಲ್ಲ. ನನ್ನ ಈ ಆಶಯವನ್ನು ಪೂರ್ತಿ ಮಾಡಲು ತಾವು ಅವಕಾಶ ಮಾಡಿಕೊಡುತ್ತೀರೆಂದು ನಂಬಿದ್ದೇನೆ.

**ಮಾನ್ಯ ಸಭಾಪತಿ:** ಇದನ್ನು ನಾವು ಮುಗಿಸಿಬಿಟ್ಟರೆ, ನೀವು ಹೇಳಿದ ಸಮಯಕ್ಕಿಂತಲೂ ಮುಂಚೆಯೇ ಹಾಜರಾಗಲು ನಾನು ಸಿದ್ಧನಾಗಿದ್ದೇನೆ.

**ಡಾ. ಅಂಬೇಡ್ಕರ್:** ಮಸೂದೆಯನ್ನು ಚರ್ಚಿಸುವಾಗ ಪ್ರತಿಯೊಬ್ಬ ಸದಸ್ಯರೂ ತಾವೇ ಆ ಸಂಭವನೀಯ ಅಭ್ಯರ್ಥಿ ಎಂದು ಭಾವಿಸಿಬಿಡುವುದೇ ಇಲ್ಲಿ ತೊಂದರೆಯಾಗಿರುವುದು ತನ್ನ ದಾರಿಯಲ್ಲಿ ಬರಬಹುದಾದ ಎಲ್ಲ ರೀತಿಯ ತೊಂದರೆಗಳನ್ನು ಅವರು ಈ ಭಾವನೆಯಿಂದಾಗಿಯೇ ಕಾಣುತ್ತಾರೆ.

**ಒಬ್ಬ ಗೌರವಾನ್ವಿತ ಸದಸ್ಯ:** ಮಂತ್ರಿಗಳೂ ಸೇರಿದಂತೆ.

---

* ಪಿ.ಡಿ. ಸಂಪುಟ ೧೨, ಭಾಗ II, ೨೩ರ ಮೇ ೧೯೫೧, ಪಿ.ಪಿ. ೯೨೯೬–೯೩೦೫

**ಮಾನ್ಯ ಸಭಾಪತಿ:** ಅವನು ಪ್ರತಿಯೊಬ್ಬ ಸದಸ್ಯರೂ ಎಂದು ಹೇಳಿದಾಗಲೇ ಮಂತ್ರಿಗಳೂ ಸೇರಿದಂತೆ ಎಂದರ್ಥ.

ನಿನ್ನೆ ನಾವು ಅನುಸರಿಸಿದ ಕ್ರಮವನ್ನೇ ನಾನು ಅನುಸರಿಸುತ್ತೇನೆ. ಮೊದಲು ಯಾವುದಾದರೂ ತಿದ್ದುಪಡಿಗಳನ್ನು ಪ್ರಸ್ತಾಪಿಸುವುದಿದೆಯೇ ಎಂದು ನಾನು ಕೇಳುತ್ತೇನೆ. ಹಾಗಿದ್ದರೆ ಅವು ಯಾವ ವಿಧಿಗಳದ್ದು. ೯೪ ರಿಂದ ೯೭ ನೇ ವಿಧಿಗಳವರೆಗೆ ಯಾವುದೇ ತಿದ್ದುಪಡಿಗಳಿಲ್ಲ.

೯೪ ರಿಂದ ೯೭ ನೇ ವಿಧಿಗಳನ್ನು ಮಸೂದೆಗೆ ಸೇರಿಸಲಾಯಿತು.

**೯೮ ನೇ ವಿಧಿ**— (ನ್ಯಾಯಪೀಠದಿಂದ ಇತರ ಆಜ್ಞೆಗಳು)

**ಶ್ರೀ ಜೆ.ಆರ್. ಕಪೂರ (ಉತ್ತರ ಪ್ರದೇಶ):** ಪಂಡಿತ್ ಠಾಕೂರ್ ದಾಸ್ ಭಾರ್ಗವರ ಹೆಸರಿನಲ್ಲಿ ಎರಡು ತಿದ್ದುಪಡಿಗಳಿವೆ. ಅವರು ಗೈರುಹಾಜರಾಗಿರುವುದರಿಂದ, ತಾವು ಅನುಮತಿ ನೀಡಿದರೆ, ವಾಕ್ಸರಣಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ನಾನು ಅವುಗಳನ್ನು ಪ್ರಸ್ತಾಪಿಸುತ್ತೇನೆ.

**ಮಾನ್ಯ ಸಭಾಪತಿಗಳು:** ಅವು ಸ್ವೀಕೃತವಾಗಿದ್ದ ತಿದ್ದುಪಡಿಗಳೇ?

**ಶ್ರೀ ಜೆ.ಆರ್. ಕಪೂರ:** ಹೌದು, ಸ್ವಾಮಿ

**ಮಾನ್ಯ ಸಭಾಪತಿಗಳು:** ಪ್ರಶ್ನೆಯು:

ತಿದ್ದುಪಡಿಯಾದಂತೆ ಆ ೧೧೯ ನೇ ವಿಧಿಯು ಮಸೂದೆಗೆ ಸೇರಿಸಲ್ಪಟ್ಟಿದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

೧೧೯ ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

**೧೨೦ ನೇ ವಿಧಿ**— (ಬೆಲೆಗಳ ಪಾವತಿ)

**ಡಾ. ಅಂಬೇಡ್ಕರ್:** ೧೨೦ ನೇ ವಿಧಿಗೆ ನನ್ನಲ್ಲಿ ಒಂದು ತಿದ್ದುಪಡಿ ಇದೆ. ಅದು ವಿಧಿಯನ್ನು ಕೇವಲ ಎರಡು ಉಪವಿಧಿಗಳನ್ನಾಗಿ ವಿಭಾಗಿಸುತ್ತದೆ ಅಷ್ಟೆ. ಎರಡನೇ ಉಪವಿಧಿಯು "ಒಂದು ವೇಳೆ ಅಲ್ಲಿ...." ಎಂಬ ಈ ಮಾತುಗಳಿಂದ ಪ್ರಾರಂಭವಾಗುತ್ತದೆ 'ಹಾಗೂ' ಪದವನ್ನು ಬಿಟ್ಟು, ವಿಧಿಯನ್ನು ಎರಡು ಉಪವಿಧಿಗಳನ್ನಾಗಿ ವಿಭಾಗಿಸಲಾಗಿದೆ. ಏಕೆಂದರೆ ಅದು ೧೫ ಸಾಲುಗಳಿರುವ ಬಹಳ ದೊಡ್ಡ ವಿಧಿ.

ತಿದ್ದುಪಡಿ ಮಾಡಲಾದುದು:

> ಖಂಡ ೧೨೦ರ ಬದಲಿಗೆ ಈ ಕೆಳಗೆ ಕೊಟ್ಟಿರುವ ಖಂಡವನ್ನು ಇಟ್ಟುಕೊಳ್ಳಿ:
>
> "೧೨೦. ಭದ್ರತಾ ಠೇವಣಿಯಿಂದ ವೆಚ್ಚವನ್ನು ಭರಿಸುವುದು ಹಾಗೂ ಅಂಥ ಠೇವಣಿಗಳನ್ನು ಹಿಂದಿರುಗಿಸುವುದು: (೧) ಈ ಭಾಗದ ಉಪಬಂಧಗಳ ಅಡಿಯಲ್ಲಿ ವೆಚ್ಚಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಯಾವುದೇ ಅಂತಿಮ ಆದೇಶದಲ್ಲಿ, ಯಾವುದೇ ಪಕ್ಷದಿಂದ ಯಾವನೇ ವ್ಯಕ್ತಿಗೆ ವೆಚ್ಚವನ್ನು ಪಾವತಿ ಮಾಡುವುದಕ್ಕೆ ಸಂಬಂಧಿಸಿದಂತೆ ನಿರ್ದೇಶನವೇನಾದರೂ ಇದ್ದಲ್ಲಿ, ಆ ವೆಚ್ಚವನ್ನು ಈಗಾಗಲೇ ಪಾವತಿ ಮಾಡಿರದೆ ಇದ್ದಲ್ಲಿ, ಅಂಥ ವೆಚ್ಚವನ್ನು ಪೂರ್ಣವಾಗಿ ಅಥವಾ ಸಾಧ್ಯವಾದಷ್ಟು ಮಟ್ಟಿಗೂ, ಭದ್ರತಾ ಠೇವಣಿಯಿಂದ, ಹಾಗೂ ಈ ಭಾಗದ ಅಡಿಯಲ್ಲಿ ಅಂಥ ಪಕ್ಷ ಮಾಡಿದ ಇನ್ನಷ್ಟು ಭದ್ರತಾ ಠೇವಣಿಯಿಂದ ಅಂಥದೇನಾದರೂ ಇದ್ದಲ್ಲಿ, ಯಾರ ಪರವಾಗಿ ವೆಚ್ಚ ಪಾವತಿ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿ ಚುನಾವಣಾ ಆಯೋಗದ ಹೆಸರಿಗೆ ಈ

ಸಂಬಂಧವಾಗಿ ಲಿಖಿತ ರೂಪವಾಗಿ ೧೦೫ನೆಯ ಪ್ರಕರಣದ ಅಡಿಯಲ್ಲಿ, ಇಂಥ ಆದೇಶವನ್ನು ಹೊರಡಿಸಿದಂದಿನಿಂದ ಆರು ತಿಂಗಳ ಅವಧಿಯ ಒಳಗಾಗಿ, ಸಲ್ಲಿಸಿದ ಅರ್ಜಿಯ ಮೇಲೆ, ಪಾವತಿ ಮಾಡತಕ್ಕದ್ದು.

(೨) ಉಪ–ಪ್ರಕರಣ (೧)ರ ಅಡಿಯಲ್ಲಿ, ಆ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ವೆಚ್ಚಗಳನ್ನು ಪಾವತಿ ಮಾಡಿದ ಬಳಿಕ, ಸದರಿ ಭದ್ರತಾ ಠೇವಣಿಗಳಲ್ಲಿ ಯಾವುದರಲ್ಲಿಯಾದರೂ ಏನಾದರೂ ಶೇಷ ಉಳಿದಿದ್ದರೆ, ಅಂಥ ಶೇಷವನ್ನು, ಅದರ ಮೇಲೆ ಯಾವುದೇ ವೆಚ್ಚ ಪಾವತಿ ಆದೇಶವನ್ನು ಹೊರಡಿಸಲಾಗದೆ ಇದ್ದಲ್ಲಿ ಅಥವಾ ಆರು ತಿಂಗಳ ಅವಧಿಯಲ್ಲಿ ಮೇಲೆ ಹೇಳಲಾಗಿರುವಂತೆ ಯಾವುದೇ ಅರ್ಜಿಯನ್ನು ಸಲ್ಲಿಸಲಾಗದೆ ಇದ್ದಲ್ಲಿ, ಭದ್ರತಾ ಠೇವಣಿಯನ್ನು ಸಲ್ಲಿಸಿದ್ದ ವ್ಯಕ್ತಿಗೆ ಆತನು ಚುನಾವಣಾ ಆಯೋಗಕ್ಕೆ ಈ ಸಂಬಂಧವಾಗಿ ಸಲ್ಲಿಸಿದ ಲಿಖಿತ ರೂಪದ ಅರ್ಜಿಯ ಮೇಲೆ, ಅಥವಾ ಅಂಥ ಠೇವಣಿಯನ್ನು ಸಲ್ಲಿಸಿದ ತರುವಾಯ ಅಂಥ ವ್ಯಕ್ತಿ ತೀರಿಕೊಂಡಿದ್ದಲ್ಲಿ, ಅಂಥ ವ್ಯಕ್ತಿಯ ಕಾನೂನುಬದ್ಧ ಪ್ರತಿನಿಧಿಗಳಿಗೆ, ಪ್ರಸಂಗಾನುಗುಣವಾಗಿ ಸದರಿ ಭದ್ರತಾ ಠೇವಣಿಗಳ ಇಡೀ ಮೊಬಲಗನ್ನು ಹಿಂದಿರುಗಿಸತಕ್ಕದ್ದು.

–[ಡಾ. ಅಂಬೇಡ್ಕರ್]

**ಮಾನ್ಯ ಸಭಾಪತಿ:** ಪ್ರಶ್ನೆಯು:

ತಿದ್ದುಪಡಿಯಾದಂತೆ ೧೨೦ನೇ ವಿಧಿಯು ಮಸೂದೆಯ ಭಾಗವಾಗಿದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

೧೨೦ ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

೧೨೧ ನೇ ವಿಧಿ – (ಬೆಲೆಗಳ ಆಜ್ಞೆಗಳು (ಕ್ರಮಗಳು) ಜಾರಿಗೆ)

**ಡಾ. ಅಂಬೇಡ್ಕರ್:** ೧೨ ನೇ ಮೂಲ ವಿಧಿಯನ್ನು ೨ ಉಪವಿಧಿಗಳಾಗಿ ವಿಭಾಗಿಸಿದ್ದರಿಂದ ತತ್ಪರಿಣಾಮವಾದ ತಿದ್ದುಪಡಿಯೊಂದನ್ನು ನಾನೀಗ ಪ್ರಸ್ತಾಪಿಸಬೇಕಾಗಿದೆ.

ತಿದ್ದುಪಡಿ ಮಾಡಿದ್ದು:

ಖಂಡ ೧೨೧ರ ಪರಂತುಕದಲ್ಲಿ–

(ಎ) "೧೨೦ನೆಯ ಪ್ರಕರಣದ ಅಡಿಯಲ್ಲಿ" ಎಂಬುದು ಮೊದಲ ಬಾರಿಗೆ. ಎಲ್ಲಿ ಕಾಣಿಸಿಕೊಂಡಿವೆಯೋ ಅಲ್ಲಿ ಅವುಗಳ ಬದಲಿಗೆ "ಪ್ರಕರಣ ೧೨೦ರ ಉಪ–ಪ್ರಕರಣ (೧)ರ ಅಡಿಯಲ್ಲಿ" ಎಂಬ ಶಬ್ದಗಳನ್ನು, ಕಂಸಗಳನ್ನು ಮತ್ತು ಸಂಖ್ಯೆಗಳನ್ನು ಸೇರಿಸಿಕೊಳ್ಳಿ.

(ಬಿ) "೧೨೦ನೆಯ ಪ್ರಕರಣದ ಅಡಿಯಲ್ಲಿ " ಎಂಬ ಶಬ್ದಗಳು ಮತ್ತು ಸಂಖ್ಯೆಗಳು ಎರಡನೆಯ ಬಾರಿಗೆ ಕಾಣಿಸಿಕೊಂಡಿರುವಲ್ಲಿ ಅಲ್ಲಿ, ಅದರ ಬದಲಿಗೆ "ಆ ಉಪ–ಪ್ರಕರಣದ ಅಡಿಯಲ್ಲಿ" ಎಂಬ ಶಬ್ದಗಳನ್ನು, ಸೇರಿಸಿಕೊಳ್ಳಿ.

(ಸಿ) "ಆ ಪ್ರಕರಣದಲ್ಲಿ" ಎಂಬ ಶಬ್ದಗಳಿಗೆ ಬದಲಾಗಿ "ಆ ಉಪ–ಪ್ರಕರಣದಲ್ಲಿ" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಿ.

–[ಡಾ. ಅಂಬೇಡ್ಕರ್]

**ಮಾನ್ಯ ಸಭಾಪತಿ:** ಪ್ರಶ್ನೆಯು:

ತಿದ್ದುಪಡಿಯಾದಂತೆ ೧೨೧ನೇ ವಿಧಿಯು ಮಸೂದೆಯ ಭಾಗವಾಗುತ್ತದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

೧೨೧ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

**ಮಾನ್ಯ ಸಭಾಪತಿ:** ಹಾಗಾದರೆ ನಾನು ಇತರ ತಿದ್ದುಪಡಿಗಳಿಗೆ ಬರುತ್ತೇನೆ.

**ಡಾ. ಅಂಬೇಡ್ಕರ್:** ೧೨೨, ೧೨೩ ಮತ್ತು ೧೨೪ನೇ ವಿಧಿಗಳನ್ನು ದಯಮಾಡಿ ತಡೆಹಿಡಿಯಬಹುದು ಎಂದು ನಾನು ಸಲಹೆ ಮಾಡುತ್ತೇನೆ.

**ಮಾನ್ಯ ಸಭಾಪತಿ:** ತತ್ಕಾಲಕ್ಕೆ ೧೨೨, ೧೨೩ ಮತ್ತು ೧೨೪ನೇ ವಿಧಿಗಳನ್ನು ತಡೆಹಿಡಿಯಲಾಗಿದೆ.

**೧೨೫ನೇ ವಿಧಿ:** (ಚುನಾವಣೆಯ ದಿನ ಚುನಾವಣಾ ಸಭೆಯು ಬಹಿಷ್ಕಾರ)

**ಡಾ. ಅಂಬೇಡ್ಕರ್:** ಇದನ್ನು ಪ್ರಸ್ತಾಪಿಸಲು ಬೇಡುತ್ತೇನೆ.

(i) ೧೨೫ನೇ ವಿಧಿಯು ಉಪವಿಧಿ (೧)ರಲ್ಲಿ "ರಾಜಕೀಯ ಸಭೆ" ಪದಗಳಿಗೆ ಬದಲಾಗಿ "ಸಾರ್ವಜನಿಕ ಸಭೆ" ಆಗಲಿ.

(ii) ೧೨೫ನೇ ವಿಧಿಯ ಉಪವಿಧಿ (೧)ರಲ್ಲಿ "ಅಥವಾ ಆ ತಾರೀಖಿನ ಹಿಂದಿನ ದಿನವೇ ಅಥವಾ ಆ ತಾರೀಖುಗಳಲ್ಲಿ ಮೊದಲನೆಯದು."

**ಮಾನ್ಯ ಸಭಾಪತಿ:** ಹಾಗಾದರೆ ವಿಧಿಯನ್ನು ನಾನು ಮತಕ್ಕೆ ಹಾಕುತ್ತೇನೆ.

**ಶ್ರೀ ಕಾಮತ್ (ಮಧ್ಯಪ್ರದೇಶ):** ಹಿಂದಿನ ದಿನ ಎಂದರೆ ಮಧ್ಯ ರಾತ್ರಿಯವರೆಗೋ ಅಥವಾ ಸೂರ್ಯಾಸ್ತದವರೆಗಿನ ದಿನವೋ ಎಂದು ನಾನು ಗೌರವಾನ್ವಿತ ಮಂತ್ರಿಗಳಲ್ಲಿ ಒಂದು ಸ್ಪಷ್ಟೀಕರಣವನ್ನು ಕೇಳಬಹುದೇ?

**ರಾಜ್ಯದ ಸಾರಿಗೆ ಮತ್ತು ರೈಲ್ವೆ ಮಂತ್ರಿಗಳು (ಶ್ರೀ ಸಂತಾನಂ):** ಹೇಗಾದರೂ ಪದವನ್ನು ತೆಗೆದುಹಾಕಲಾಗಿದೆ, ಮತ್ತು ಪ್ರಶ್ನೆಯು ಏಳುವುದಿಲ್ಲ.

**ಶ್ರೀ ಕಾಮತ್:** ಹಾಗಾಗುತ್ತದೆ ಏಕೆಂದರೆ, ಹಿಂದಿನ ದಿನದ ಸಭೆಯನ್ನು ನಿಷೇಧಿಸಲಾಗುವುದಿಲ್ಲ.

**ಡಾ. ಅಂಬೇಡ್ಕರ್:** ಅದೊಂದು ಕೇವಲ ತಾರ್ಕಿಕ ಪ್ರಶ್ನೆ. ಆದರೆ ನನ್ನ ಗೌರವಾನ್ವಿತ ಮಿತ್ರರು ಒತ್ತಾಯಪಡಿಸಿದರೆ. "ಮಧ್ಯರಾತ್ರಿ' ಎನ್ನುವುದು ಸೂಕ್ತವಾದ ಪದವಾಗುತ್ತದೆ ಎಂದು ನನ್ನ ಭಾವನೆ.

ಪ್ರಸ್ತಾಪವನ್ನು (ಡಾ. ಅಂಬೇಡ್ಕರ್ ಮೇಲೆ ತಿಳಿಸಿರುವಂತೆ) ಅನ್ವಯಿಸಿಕೊಳ್ಳಲಾಯಿತು.

**ಮಾನ್ಯ ಸಭಾಪತಿಗಳು:** ಪ್ರಶ್ನೆಯು:

"೧೨ ನೇ ಆ ವಿಧಿಯು ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗುತ್ತದೆ.

ಪ್ರಸ್ತಾಪವನ್ನು ಸ್ವೀಕರಿಸಲಾಯಿತು.

೧೨೫ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

**೧೨೬ನೇ ವಿಧಿ**— (ಚುನಾವಣಾ ಸಭೆಗಳಲ್ಲಿ ಅಡಚಣೆಗಳು)

ತಿದ್ದುಪಡಿ ಮಾಡಿದ್ದು:

೧೨೭ನೇ ವಿಧಿಯ ಉಪವಿಧಿ (೨)ರಲ್ಲಿ, "ರಾಜಕೀಯ ಸಭೆಗಳು" ಪದಗಳಿಗೆ ಬದಲಾಗಿ "ರಾಜಕೀಯದ ಲಕ್ಷಣವಿರುವ ಸಾರ್ವಜನಿಕ ಸಭೆ" ಎಂದಾಗಲಿ.

(ಡಾ. ಅಂಬೇಡ್ಕರ್)

**ಮಾನ್ಯ ಸಭಾಪತಿ:** ವಿಷಯ:

೧೨೬ನೇ ವಿಧಿಯು ತಿದ್ದುಪಡಿಯಾದಂತೆ, ಮಸೂದೆಯಭಾಗವಾಗುತ್ತದೆ.

ಪ್ರಸ್ತಾಪವನ್ನು ಸ್ವೀಕರಿಸಲಾಯಿತು.

೧೨೬ನೇ ವಿಧಿ ತಿದ್ದುಪಡಿಯಾದಂತೆ ಮಸೂದೆಗೆ ಸ್ವೀಕರಿಸಲಾಯಿತು.

೧೨೭ನೇ ವಿಧಿಯು ಮಸೂದೆಗೆ ಸೇರಿಸಲ್ಪಟ್ಟಿತು.

**೧೨೮ನೇ ವಿಧಿ**— (ಅಧಿಕಾರಿಗಳು ಮತದಾನದ ಮೇಲೆ ಪ್ರಭಾವ ಬೀರುವಂತಿಲ್ಲ) ತಿದ್ದುಪಡಿ ಮಾಡಿದ್ದು:

೧೨೮ನೆಯ ಖಂಡದ (೧)ನೆಯ ಉಪಖಂಡದಲ್ಲಿ "ಚುನಾವಣೆ ನಡೆಸುವಲ್ಲಿ ಅಥವಾ ನಿರ್ವಹಣೆಯಲ್ಲಿ ಅಭ್ಯರ್ಥಿಯು ಏಜೆಂಟರಾಗಿ ಕಾರ್ಯ ನಿರ್ವಹಿಸತಕ್ಕದ್ದು" ಎಂಬ ಶಬ್ದಗಳಿಗೆ ಬದಲಾಗಿ "ಚುನಾವಣೆ ನಡೆಸುವಲ್ಲಿ ಅಥವಾ ನಿರ್ವಹಣೆಯಲ್ಲಿ (ಮತದಾನ ಮಾಡುವುದನ್ನು ಹೊರತುಪಡಿಸಿ) ಅಭ್ಯರ್ಥಿಯ ಚುನಾವಣೆಯ ಭವಿತವ್ಯದ ಮುನ್ನಡೆಗೆ ಕಾರಣವಾಗುವಂಥ ಯಾವುದೇ ಕಾರ್ಯವನ್ನು ನಿರ್ವಹಿಸತಕ್ಕದ್ದು" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಿ.

(ಡಾ. ಅಂಬೇಡ್ಕರ್)

ಮುಂದೆ ತಿದ್ದುಪಡಿಯಾದದ್ದು:

೧೨೮ನೆಯ ಖಂಡ (೩)ನೆಯ ಉಪಖಂಡದಲ್ಲಿ "ಮೂರು ತಿಂಗಳು" ಎಂಬ ಶಬ್ದಗಳಿಗೆ "ಬದಲಾಗಿ ಆರು ತಿಂಗಳು" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಿ.

(ಡಾ. ಅಂಬೇಡ್ಕರ್)

**ಮಾನ್ಯ ಸಭಾಪತಿ:** ಪ್ರಶ್ನೆಯು

೧೨೮ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗಿದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

೧೨೮ ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿದೆ.

**೧೨೯ ನೇ ವಿಧಿ**— (ಪ್ರಚಾರದ ನಿಷೇಧ)

**ಮಾನ್ಯ ಸಭಾಪತಿ:** ಈ ವಿಧಿಗೆ ಯಾವುದೇ ತಿದ್ದುಪಡಿಗಳಿಲ್ಲ ಎಂದು ನಾನು ಭಾವಿಸುತ್ತೇನೆ.

**ಶ್ರೀ ಎಸ್.ಎನ್. ದಾಸ್ (ಬಿಹಾರ):** ನನ್ನಲ್ಲಿ ಒಂದು ತಿದ್ದುಪಡಿ ಇದೆ. ಒಗ್ಗೂಡಿಸಿದ ಪಟ್ಟಿ ಸಂ ೨ ರಲ್ಲಿ ಸಂಖ್ಯೆ ೧೭೪ ಮತ್ತು ಆ ತಿದ್ದುಪಡಿಯನ್ನು ನಿನ್ನೆ ಅಂಗೀಕರಿಸಲ್ಪಟ್ಟಿತು.

**ಮಾನ್ಯ ಸಭಾಪತಿ:** ವಿಷಯ:

"೧೨೯ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗಿದೆ."

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

೧೨೯ನೇ ವಿಧಿಯು ತಿದ್ದುಪಡಿಯಾದಂತೆ, ಮಸೂದೆಗೆ ಸೇರಿಸಲ್ಪಟ್ಟಿತು.

**೧೩೦ನೇ ವಿಧಿ**— (ಅಶಿಸ್ತಿನ ನಡವಳಿಕೆಗೆ ದಂಡ)

ತಿದ್ದುಪಡಿ ಮಾಡಿದ್ದು:

> ೧೩ನೇ ವಿಧಿಯ ಉಪ ವಿಧಿ (೧)ರಲ್ಲಿ "ಮತದಾನಗಳಿಂದ ನಿಗದಿಯಾದ ಸಮಯದಲ್ಲಿ" (ಗಂಟೆಗಳಲ್ಲಿ) ಪದಗಳಿಗೆ ಬದಲಾಗಿ "ಆ ದಿನ ಅಥವಾ ಮತದಾನ ನಡೆಯುವ ದಿನಗಳು" ಬರಲಿ.
>
> –(ಡಾ. ಅಂಬೇಡ್ಕರ್)

**ಮಾನ್ಯ ಸಭಾಪತಿ:** ಪ್ರಶ್ನೆಯು:

> "೧೩೦ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗುವುದು"

ಪ್ರಸ್ತಾಪವನ್ನು ಒಪ್ಪಿಕೊಳ್ಳಲಾಯಿತು.

೧೩೦ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿದೆ.

**ಡಾ. ಅಂಬೇಡ್ಕರ್:** ಈ ಹಂತದಲ್ಲಿ ಸದನವನ್ನು ಮುಂದೂಡುವಂತೆ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಏಕೆಂದರೆ ನಾವು ಒಪ್ಪಂದ ಮಾಡಿಕೊಂಡಿದ್ದ ಎಲ್ಲ ವಿಧಿಗಳನ್ನು ಪೂರೈಸಿದ್ದೇವೆ.

**ಮಾನ್ಯ ಸಭಾಪತಿ:** ಅನೌಪಚಾರಿಕ ಸಭೆಗಾಗಿ ಸದನವನ್ನು ಈಗ ಮುಂದೂಡಬಹುದು. ನನಗೆ ಹೇಳಲ್ಪಟ್ಟಂತೆ ಇದು ನಾವೆಲ್ಲರೂ ಇಲ್ಲಿಂದ ಹೊರಹೊರಟ ಕೂಡಲೇ ಕೌನ್ಸಿಲ್ ಆಫ್ ಸ್ಟೇಟ್ ಸಭಾಂಗಣದಲ್ಲಿ ನಡೆಯಲಿದೆ.

**ಶ್ರೀ ಕಾಮತ್:** ಸ್ವಾಮಿ, ತಣ್ಣಗಿರುವ ಈ ಸಭಾಂಗಣದಲ್ಲಿ ನಾವು ಸಭೆ ನಡೆಸಲು ತಮ್ಮದೇನೂ ಆಕ್ಷೇಪಣೆ ಇಲ್ಲವಷ್ಟೆ?

**ಮಾನ್ಯ ಸಭಾಪತಿ:** ಇಲ್ಲಿಯವರೆಗೆ ನಡೆದಿರುವಂತೆ ಸಭಾಪತಿ, ಉಪಸಭಾಪತಿ ಅಥವಾ ಅಧ್ಯಕ್ಷರು ಪೀಠದಲ್ಲಿ ಇಲ್ಲದೆ ಹೋದರೆ ಯಾವ ಸಭೆಯೂ ಈ ಸದನದಲ್ಲಿ ನಡೆಯುವಂತಿಲ್ಲ.

**ಡಾ. ಅಂಬೇಡ್ಕರ್:** ಇಲ್ಲಿ ಸಭೆ ಸೇರದೆ ಇರಲು ಇದೊಂದು ಒಳ್ಳೆಯ ಮೂಲ ಕಾರಣ.

ಆಗ ಸದನವು ೨೫ ಮೇ ೧೯೫೧ರ ಶುಕ್ರವಾರದ ೮.೩೦ ಗಂಟೆಯವರೆಗೆ ಮುಂದೂಡಲ್ಪಟ್ಟಿತು.

## *ಪ್ರಜಾಪ್ರಾತಿನಿಧ್ಯ (ನಂ. ೨) ಮಸೂದೆ – ಮುಂದುವರೆದಿದೆ.

**ಮಾನ್ಯ ಸಭಾಪತಿ:** ಪ್ರಜಾಪ್ರಾತಿನಿಧ್ಯದ ಮಸೂದೆ (ನಂ.೨) ರ ಮೇಲಿನ ಚರ್ಚೆಗಾಗಿ ಸದನವು ಈಗ ಮತ್ತೆ ಸೇರುತ್ತಿದೆ. ನಿನ್ನೆ ಗೌರವಾನ್ವಿತ ಕಾನೂನು ಮಂತ್ರಿಗಳೊಡನೆ ಉಳಿದ ವಿಧಿಗಳ ಮೇಲೆ ಪ್ರಸ್ತಾಪಿಸಿದ ತಿದ್ದುಪಡಿಗಳ ಬಗೆಗಿನ ಒಂದು ಅನೌಪಚಾರಿಕ ಸಭೆಗಾಗಿ ಸದನವು ಮುಂದೂಡಲ್ಪಟ್ಟಾಗ ೧೩ ರವರೆಗಿನ ವಿಧಿಗಳು ಪೂರೈಸಿದ್ದವು. ಸದನವು ಈಗ ೧೩೧ನೇ ಸಂಖ್ಯೆಯ ವಿಧಿಯನ್ನು ತೆಗೆದುಕೊಳ್ಳುತ್ತದೆ. ಈ ದಿನ ಸ್ಥಿತಿ ಹೇಗಿದೆ ಎಂದು ತಿಳಿಯಲು ನಾನು ಇಚ್ಛಿಸುತ್ತೇನೆ.

**ಕಾನೂನು ಮಂತ್ರಿ (ಡಾ. ಅಂಬೇಡ್ಕರ್):** ಒಂದು ಅಥವಾ ಎರಡು ವಿಧಿಗಳನ್ನುಳಿದಂತೆ ಎಲ್ಲವನ್ನೂ ನಾವು ಮುಗಿಸಿದೆವು. ಮಿಕ್ಕವುಗಳನ್ನು ಕಾಯ್ದಿಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಮಾನ್ಯ ಸಭಾಪತಿ:** ಹಾಗಿದ್ದರೆ ನಾನು ಅದೇ ಕ್ರಮವನ್ನು ಅನುಸರಿಸುತ್ತೇನೆ. ನಾನು ಆ ನಿರ್ದಿಷ್ಟವಾದ

---

* ಪಿ.ಡಿ. ಸಂಪುಟ ೧೨, ಭಾಗ II, ೨೫ ಮೇ ೧೯೫೧, ಪಿ.ಪಿ ೯೩೦೮–೨೦

ವಿಧಿಯನ್ನು ಪ್ರಸ್ತುತಪಡಿಸಲು ಕೇಳುತ್ತೇನೆ. ಯಾರಾದರೂ ಗೌರವಾನ್ವಿತ ಸದಸ್ಯರು ತಿದ್ದುಪಡಿಯನ್ನು ಪ್ರಸ್ತಾಪಿಸಬೇಕೆಂದು ಇಚ್ಛಿಸಿದರೆ ನನ್ನ ಗಮನವನ್ನು ಅತ್ತ ಸೆಳೆಯಬಹುದು.

೧೩೧ನೇ ವಿಧಿಯು ಮಸೂದೆಗೆ ಸೇರಿಸಲ್ಪಟಿತು.

**೧೩೨ನೇ ವಿಧಿ.**— (ಕಾನೂನು ಬಾಹಿರ ಬಾಡಿಗೆಗೆ ದಂಡ)

**ಶ್ರೀ ಭಟ್ (ಬಾಂಬೆ):** ೧೨೨ನೇ ವಿಧಿಗೆ ಸಂಬಂಧಪಟ್ಟಿರುವುದರಿಂದ ೧೩೨ನೇ ವಿಧಿಯನ್ನು ಮುಂದಿನ ಪರಿಗಣನೆಗೆ ಒಳಪಡಿಸುವುದನ್ನು ಮುಂದಕ್ಕೆ ಹಾಕಬಹುದು. ೧೨೨ನೇ ವಿಧಿಯನ್ನು ಎಲ್ಲಿಯವರೆಗೆ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ವಿಧಿಯನ್ನು ತೆಗೆದುಕೊಳ್ಳುವುದು ಆಗದಿರಬಹುದು.

**ಮಾನ್ಯ ಸಭಾಪತಿ:** ಗೌರವಾನ್ವಿತ ಸದಸ್ಯರು ಹೇಳಿದುದನ್ನು ಗೌರವಾನ್ವಿತ ಕಾನೂನು ಮಂತ್ರಿಗಳು ಕೇಳಿಸಿಕೊಂಡರೇ? ೧೩೨ನೇ ವಿಧಿಯನ್ನು ಮುಂದೆ ಪರಿಶೀಲಿಸಲೆಂದು ಮುಂದಕ್ಕೆ ಹಾಕಿ ೧೨೨ನೇ ವಿಧಿಯ ಜೊತೆಗೆ ತೆಗೆದುಕೊಳ್ಳಬೇಕೆಂದು ಅವರು ಇಚ್ಛಿಸುತ್ತಿದ್ದಾರೆ.

**ಡಾ. ಅಂಬೇಡ್ಕರ್:** ಅದನ್ನು ಕಾಯ್ದಿಡಬಹುದು ಎನ್ನುವುದನ್ನು ನಾನೂ ಒಪ್ಪುತ್ತೇನೆ.

೧೩೩ನೇ ವಿಧಿಯನ್ನು ಮಸೂದೆಗೆ ಸೇರಿಸಲಾಯಿತು.

೧೩೪ನೇ ವಿಧಿಯನ್ನು ಸಹ ಮಸೂದೆಗೆ ಸೇರಿಸಲಾಯಿತು.

**೧೩೫ನೇ ವಿಧಿ**— (ಇತರ ಅಪರಾಧಗಳು)

ತಿದ್ದುಪಡಿ ಮಾಡಿದ್ದು:

> ಖಂಡ ೧೩೫ರ ಉಪಖಂಡ(೧)ರ (ಎ) ಭಾಗದ ಅನಂತರ, ಈ ಕೆಳಗಿನದನ್ನು ಸೇರಿಸಿಕೊಳ್ಳಿ:
>
> "(ಎಎ) ಚುನಾವಣಾಧಿಕಾರಿಗಳಿಂದ ಅಥವಾ ಅವರಿಂದ ಪಡೆದ ಅಧಿಕಾರದ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿ, ಸೂಚನಾಪತ್ರ ಅಥವಾ ಬೇರೆ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸುವುದು, ನಾಶಪಡಿಸುವುದು ಅಥವಾ ತೆಗೆದುಹಾಕುವುದು; ಅಥವಾ"
>
> (ಡಾ. ಅಂಬೇಡ್ಕರ್)

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

೧೩೫ನೇ ವಿಧಿಯನ್ನು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲಾಯಿತು

**೧೩೬ನೇ ವಿಧಿ.**— (ದೂರು ಕೊಡಲು ವಿಶೇಷ ಅವಕಾಶಗಳು)

ಮಾಡಲಾಗಿರುವ ತಿದ್ದುಪಡಿ:

> ೧೩೬ನೆಯ ಖಂಡಕ್ಕೆ ಬದಲಾಗಿ ಈ ಕೆಳಗೆ ಕಾಣಿಸಿರುವ ಖಂಡವನ್ನು ಹಾಕಿಕೊಳ್ಳಿ.
>
> "೧೩೬. ಕೆಲವೊಂದು ಅಪರಾಧಗಳ ಬಗೆಗಿನ ಅಭಿಯೋಜನೆ–(೧) ರಾಜ್ಯದಲ್ಲಿನ ಯಾವುದೇ ಚುನಾವಣೆಗೆ ಸಂಬಂಧಿಸಿದಂತೆ, ಚುನಾವಣಾ ಆಯೋಗ ಅಥವಾ ೩೨೪ನೆಯ ಅನುಚ್ಛೇದದ (೪)ನೆಯ ಖಂಡದ ಮೇರೆಗೆ ನೇಮಕ ಮಾಡಲಾಗಿರುವ ಪ್ರಾದೇಶಿಕ ಆಯುಕ್ತರು ಅಥವಾ ರಾಜ್ಯದ ಮುಖ್ಯ ಚುನಾವಣಾಧಿಕಾರಿ ೧೨೮ನೆಯ ಪ್ರಕರಣದ ಅಡಿಯಲ್ಲಿ ಅಥವಾ ೧೩೩ನೆಯ ಪ್ರಕರಣದ ಅಡಿಯಲ್ಲಿ ಅಥವಾ ೧೩೫ನೆಯ ಪ್ರಕರಣದ ೨ನೆಯ ಪ್ರಕರಣದ

ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಲಾಗಿದೆ ಎಂದು ನಂಬಲು ಕಾರಣವಿದ್ದರೆ, ಪ್ರಸಂಗಾನುಗುಣವಾಗಿ ಪ್ರಕರಣದ ಪರಿಸ್ಥಿತಿಗಳಲ್ಲಿ ಅಗತ್ಯವೆಂದು ತೋರಬಹುದಾದಂಥ ಅಥವಾ ಆತನಿಗೆ ಅಗತ್ಯವೆಂದು ತೋರಬಹುದಾದಂಥ ವಿಚಾರಣೆಯನ್ನು ನಡೆಸುವುದು ಹಾಗೂ ಅಭಿಯೋಜನೆಯನ್ನು ಹೂಡುವುದು ಚುನಾವಣಾ ಆಯೋಗದ, ಪ್ರಾದೇಶಿಕ ಆಯುಕ್ತರ ಅಥವಾ ಮುಖ್ಯಚುನಾವಣಾಧಿಕಾರಿಯ ಕರ್ತವ್ಯವಾಗಿರುತ್ತದೆ.

(೨) ಚುನಾವಣಾ ಆಯೋಗದ ಅಥವಾ ೩೨೪ನೆಯ ಅನುಚ್ಛೇದದ (೪)ನೆಯ ಖಂಡದ ಮೇರೆಗೆ ನೇಮಕ ಮಾಡಲಾಗಿರುವ ಪ್ರಾದೇಶಿಕ ಆಯುಕ್ತರ ಅಥವಾ ರಾಜ್ಯದ ಮುಖ್ಯಚುನಾವಣಾಧಿಕಾರಿಯ ಆದೇಶದ ಮೇರೆಗೆ ಅಥವಾ ಅವರಿಂದ ಪಡೆದ ಅಧಿಕಾರದ ಮೇರೆಗೆ ದೂರನ್ನು ಸಲ್ಲಿಸಿದ ಹೊರತು, ೧೨೮ನೆಯ ಪ್ರಕರಣದ ಅಡಿಯಲ್ಲಿ ಅಥವಾ ೧೩೩ನೆಯ ಪ್ರಕರಣದ ಅಡಿಯಲ್ಲಿ ಅಥವಾ ೧೩೫ನೆಯ ಪ್ರಕರಣದ ೨ನೆಯ ಉಪ–ಪ್ರಕರಣದ (ಎ) ಖಂಡದ ಅಡಿಯಲ್ಲಿ ಶಿಕ್ಷಾರ್ಹವಾದ ಯಾವುದೇ ಅಪರಾಧವನ್ನು ಯಾವುದೇ ನ್ಯಾಯಾಲಯ ಶಿಕ್ಷಾರ್ಹವೆಂದು ಪರಿಗಣಿಸತಕ್ಕದ್ದಲ್ಲ.

(ಡಾ. ಅಂಬೇಡ್ಕರ್)

**ಮಾನ್ಯ ಸಭಾಪತಿ:** ಪ್ರಶ್ನೆಯು:

೧೩೬ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗುವುದು.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

೧೩೬ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

**ಡಾ. ಅಂಬೇಡ್ಕರ್:** ೧೩೭ ರಿಂದ ೧೪೩ ನೇ ವಿಧಿಗಳವರೆಗೆ ಯಾವ ತಿದ್ದುಪಡಿಗಳೂ ಇಲ್ಲ.

**ಪಂಡಿತ ಠಾಕೂರ್‌ದಾಸ್ ಭಾರ್ಗವ (ಪಂಜಾಬ್):** ೧೩೯ ನೇ ವಿಧಿಗೆ ಸಂಬಂಧಿಸಿದಂತೆ, ೧೨೨ ರಿಂದ ೧೨೪ ನೇ ವಿಧಿಗಳವರೆಗೆ ತೀರ್ಮಾನಿಸದೆ ಇದ್ದರೆ, ಇದನ್ನು ತೀರ್ಮಾನಿಸುವುದು ಕಷ್ಟವಾಗುತ್ತದೆ. ೧೨೨ ರಿಂದ ೧೨೪ ರವರೆಗಿನ ವಿಧಿಗಳನ್ನು ತಡೆ ಹಿಡಿಯಲು ತಾವು ಉತ್ಸುಕರಾಗಿದ್ದೀರಿ. ಹಾಗೂ ೧೩೯ ನೇ ವಿಧಿಯು ಆ ವಿಧಿಗಳೊಂದಿಗೆ ಸಂಬಂಧ ಹೊಂದಿದೆ.

**ಮಾನ್ಯ ಸಭಾಪತಿ:** ೧೩೯ ನೇ ವಿಧಿಯನ್ನು ತಡೆಹಿಡಿಯುವುದು ಗೌರವಾನ್ವಿತ ಸದಸ್ಯರಿಗೆ ಬೇಕಾಗಿದೆಯೇ?

**ಪಂಡಿತ ಠಾಕುರ್ ದಾಸ್ ಭಾರ್ಗವ:** ಹೌದು ಸ್ವಾಮಿ.

**ಮಾನ್ಯ ಸಭಾಪತಿ:** ಹಾಗಾದರೆ ನಾನು ಪ್ರಸ್ತಾಪವನ್ನು ಬೇರೊಂದು ಭಿನ್ನ ರೀತಿಯಲ್ಲಿಡುತ್ತೇನೆ.

ಪ್ರಸ್ತಾಪವನ್ನು ಸ್ವೀಕರಿಸಲಾಯಿತು.

೧೩೭ ಮತ್ತು ೧೩೮ ನೇ ವಿಧಿಗಳು ಮಸೂದೆಗೆ ಸೇರಿಸಲ್ಪಟ್ಟವು.

೧೪೦ ರಿಂದ ೧೪೩ ರ ವಿಧಿಗಳು ಮಸೂದೆಗೆ ಸೇರಿಸಲ್ಪಟ್ಟವು.

**೧೪೪ ನೇ ವಿಧಿ—** (ಒಬ್ಬ ಚುನಾವಣಾ ಏಜೆಂಟನಾಗಿರುವುದರಿಂದ ಅನರ್ಹತೆ)

**ಡಾ. ಅಂಬೇಡ್ಕರ್:** ಪ್ರಸ್ತಾಪಿಸಲು ಅನುಮತಿ ಕೇಳುತ್ತೇನೆ:

೧೪೪ ನೇ ವಿಧಿಯಲ್ಲಿ "ಅಥವಾ ಒಬ್ಬ ಚುನಾವಣಾ ಏಜೆಂಟ್"

ಪದಗಳನ್ನು ತೆಗೆದುಹಾಕಿ.

**ಶ್ರೀ ಒಯ್ಯುನ್ನಿ (ತಿರುವಾಂಕೂರು–ಕೊಚ್ಚಿನ್):** ನನ್ನ ಬಳಿಯೂ ಒಂದು ತಿದ್ದುಪಡಿ ಇದೆ.

**ಮಾನ್ಯ ಸಭಾಪತಿ:** ಈ ತಿದ್ದುಪಡಿಯ ಬಗೆಗೆ ಅವರಿಗೆ ಏನಾದರೂ ಹೇಳುವುದಿದೆಯೇ? ಅವರ ತಿದ್ದುಪಡಿಗೆ ನಾವು ನಂತರ ಬರೋಣ.

**ಡಾ. ಅಂಬೇಡ್ಕರ್:** ಅವರ ತಿದ್ದುಪಡಿಯನ್ನೇ ನಾನು ಪ್ರಸ್ತಾಪಿಸುತ್ತಿರುವುದು

**ಶ್ರೀ ಒಯ್ಯುನ್ನಿ:** ಪಾರ್ಶ್ವ ಶೀರ್ಷಿಕೆಯಲ್ಲಿ, ೧೪೪ ನೇ ವಿಧಿಗೆ "ಅಥವಾ ಚುನಾವಣಾ ಏಜೆಂಟ್" ಎನ್ನುವ ಪದಗಳನ್ನು ಬಿಟ್ಟು ಬಿಡಿ. ಹಾಗೂ ೧೪೪ನೇ ವಿಧಿಯಲ್ಲಿಯೂ ಸಹ "ಚುನಾವಣಾ ಏಜೆಂಟ್" ಪದಗಳನ್ನು ಬಿಟ್ಟುಬಿಡುವುದು.

**ಡಾ. ಅಂಬೇಡ್ಕರ್:** ಪಾರ್ಶ್ವ ಶೀರ್ಷಿಕೆಗಳನ್ನು ಆ ನಂತರ ಸರಿಪಡಿಸಲಾಗುವುದು.

**ಮಾನ್ಯ ಸಭಾಪತಿ:** ನಾನು ಉಪಶೀರ್ಷಿಕೆಗಳನ್ನಂತೂ ಹೌಸ್‌ನ ಮುಂದಿಡುತ್ತಿಲ್ಲ. ಗೌರವಾನ್ವಿತ ಸದಸ್ಯರುಗಳು ನಾನು ಉಪ ಶೀರ್ಷಿಕೆಗಳನ್ನು ಬಿಟ್ಟುಬಿಡುತ್ತಿರುವುದನ್ನು ಈಗಾಗಲೇ ಗಮನಿಸಿರಬೇಕು. ಅದು ಒಬ್ಬ ಡ್ರಾಫ್ಟ್ಸ್‌ಮನ್‌ನ ಕೆಲಸ (ಕರಡು ಪ್ರತಿಗಳನ್ನು ತಯಾರಿಸುವವನ ಕೆಲಸ) ಅದು ಕಾನೂನಿನ ಭಾಗವಲ್ಲ. ಪ್ರಶ್ನೆಯು:

> ೧೪೪ ನೇ ವಿಧಿಯಲ್ಲಿ "ಅಥವಾ ಒಬ್ಬ ಚುನಾವಣಾ ಏಜೆಂಟ್" ಪದಗಳನ್ನು ವರ್ಜಿಸಿ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಪತಿ:** ಪ್ರಶ್ನೆಯು:

೧೪೪ ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಯ ಒಂದು ಭಾಗವಾಗಿದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

೧೪೪ ನೇ ವಿಧಿ ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

೧೪೫ ನೇ ವಿಧಿಯನ್ನು ಮಸೂದೆಗೆ ಸೇರಿಸಲಾಯಿತು.

**೧೪೬ ನೇ ವಿಧಿ.**— (ರಾಜ್ಯಸಭೆಗಳಲ್ಲಿ ಹಂಗಾಮಿ ಹುದ್ದೆಗಳು ಖಾಲಿ ಇರುವುದು)

ಮಾಡಲಾದ ತಿದ್ದುಪಡಿ:

> ೧೪೬ನೆಯ ಖಂಡದಲ್ಲಿ, ಐದನೆಯ ಸಾಲಿನಲ್ಲಿ ಕಂಡುಬರುವ "ವಿಧಾನ ಸಭೆಯ ಅಥವಾ ಸಂಬಂಧಪಟ್ಟ ಚುನಾವಣಾ ನಿರ್ವಹಣಾ ತಂಡದಿಂದ ಆಯ್ಕೆಯಾದ ಸದಸ್ಯರು" ಎಂಬ ಶಬ್ದಗಳಿಗೆ ಬದಲಾಗಿ, ಈ ಕೆಳಗಿನದನ್ನು ಸೇರಿಸಿಕೊಳ್ಳಿ:
>
> "ವಿಧಾನಸಭೆಯ ಚುನಾಯಿತ ಸದಸ್ಯರು ಅಥವಾ ಸಂಬಂಧಪಟ್ಟ ಚುನಾವಣೆ ನಿರ್ವಹಣಾ ತಂಡದಿಂದ ಆಯ್ಕೆಯಾದ ಸದಸ್ಯರು."
>
> –(ಡಾ.ಬಿ.ಆರ್. ಅಂಬೇಡ್ಕರ್)

**ಮಾನ್ಯ ಸಭಾಪತಿ:** ವಿಷಯ :

೧೪೬ನೇ ವಿಧಿ: ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗಿರುತ್ತದೆ

ಪ್ರಸ್ತಾಪವನ್ನು ಸ್ವೀಕರಿಸಲಾಯಿತು.

೧೪೬ನೇ ವಿಧಿಯು ತಿದ್ದುಪಡಿಯಾದಂತೆ, ಮಸೂದೆಗೆ ಸೇರಿಸಲ್ಪಟ್ಟಿತು. ೧೪೭, ೧೪೮, ೧೪೯ನೇ ವಿಧಗಳನ್ನು ಮಸೂದೆಗೆ ಸೇರಿಸಿಕೊಳ್ಳಲಾಯಿತು.

**೧೫೦ನೇ ವಿಧಿ.**— (ರಾಜ್ಯದ ಶಾಸನ ಸಭೆಗಳಲ್ಲಿ ಖಾಲಿ ಸ್ಥಾನಗಳು)

**ಪಂಡಿತ ಠಾಕುರ್ ದಾಸ್ ಭಾರ್ಗವ:** ನಾಲ್ಕು ತಿಂಗಳೊಳಗೇ ಚುನಾವಣೆ ನಡೆಯಬೇಕೆಂಬ ತಿದ್ದುಪಡಿಯು ಅಂಗೀಕೃತವಾಯಿತು. ಆದರೆ ಅದು ಇಲ್ಲಿ ಕಾಗದದಮೇಲಿಲ್ಲ. ಆದ್ದರಿಂದ ಈ ವಿಧಿಯನ್ನು ಕಾಯ್ದಿಡಲು ನಾನು ತಮ್ಮನ್ನು ಬೇಡುತ್ತೇನೆ.

**ಡಾ. ಅಂಬೇಡ್ಕರ್:** ಅದು ಅಂಗೀಕೃತವಾಗಲಿಲ್ಲ ಎಂದು ನಾನು ನಂಬುತ್ತೇನೆ. ನನ್ನ ದಾಖಲೆ ಪುಸ್ತಕ ಅದನ್ನು ತೋರಿಸುವುದಿಲ್ಲ. ಅದೇನೇ ಆಗಲಿ, ತಿದ್ದುಪಡಿಯು ಪ್ರಸ್ತಾಪಕ್ಕೆ ಬರಲಿ.

**ಸರ್ದಾರ್ ಸೋಚೆಟ್ ಸಿಂಗ್ (ಪಿ.ಇ.ಪಿ.ಎಸ್.ಯು):** ಅದು ಸ್ವೀಕೃತವಾಗಿದೆ.

**ಮಾನ್ಯ ಸಭಾಪತಿ:** ಅದನ್ನು ಕಾಯ್ದಿರಿಸೋಣ

**೧೫೧ ನೇ ವಿಧಿ.**— (ವ್ಯವಸ್ಥಿತವಾಗಿ ಇಡಬೇಕಾದ ಸದಸ್ಯರುಗಳ ಪಟ್ಟಿ)

ಮಾಡಲಾದ ತಿದ್ದುಪಡಿ:

> ೧೫೧ನೆಯ ಖಂಡದ (೧)ನೆಯ ಉಪಖಂಡಕ್ಕೆ ಬದಲಾಗಿ ಈ ಕೆಳಗೆ ಕಾಣಿಸಿರುವುದನ್ನು ಸೇರಿಸಿಕೊಳ್ಳಿ:
>
> "ಸ್ಥಾನವೊಂದನ್ನು ತುಂಬುವ ಸಲುವಾಗಿ ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರಿಂದ ನಡೆಯುವ ಅಥವಾ ರಾಜ್ಯದ ವಿಧಾನಪರಿಷತ್ತಿನ ಸ್ಥಾನವನ್ನು ಅಥವಾ ಸ್ಥಾನಗಳನ್ನು ತುಂಬುವ ಸಲುವಾಗಿ ರಾಜ್ಯದ ವಿಧಾನಸಭೆಯ ಸದಸ್ಯರಿಂದ ನಡೆಯುವ ಚುನಾವಣೆಯ ಚುನಾವಣಾಧಿಕಾರಿ ಅಂಥ ಚುನಾವಣೆಯ ಉದ್ದೇಶಕ್ಕಾಗಿ, ನಿಗದಿಪಡಿಸಲಾದ ರೀತಿಯಲ್ಲಿ ಹಾಗೂ ನಮೂನೆಯಲ್ಲಿ ಪ್ರಸಂಗಾನುಗುಣವಾಗಿ, ಚುನಾಯಿತ ಸದಸ್ಯರ ಅಥವಾ ವಿಧಾನಸಭೆಯ ಸದಸ್ಯರ ಪಟ್ಟಿಯೊಂದನ್ನು ತಮ್ಮ ಕಛೇರಿಯಲ್ಲಿ ಇಟ್ಟುಕೊಂಡಿರತಕ್ಕದ್ದು."
>
> (ಡಾ. ಅಂಬೇಡ್ಕರ್)

**ಮಾನ್ಯ ಸಭಾಪತಿ:** ಪ್ರಶ್ನೆಯು:

"೧೫೧ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಯು ಭಾಗವಾಗುತ್ತದೆ."

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

೧೫೧ನೇ ವಿಧಿ ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

೧೫೨ ರಿಂದ ೧೫೬ ರವರೆಗಿನ ವಿಧಿಗಳು ಮಸೂದೆಗೆ ಸೇರಿಸಲ್ಪಟ್ಟವು.

**ಬೆಳಗಿನ ೧೦ ಗಂಟೆ ಸಮಯ**

**೧೫೭ನೇ ವಿಧಿ.**— (ಠೇವಣಿಗಳ ವಾಪಸಾತಿ ಅಥವಾ ಮುಟ್ಟುಗೋಲು)

ಮಾಡಲಾದ ತಿದ್ದುಪಡಿ:

೧೫೭ನೆಯ ಖಂಡದ(೧)ನೆಯ ಉಪಖಂಡದಲ್ಲಿನ, ೧ನೆಯ ಸಾಲಿನಲ್ಲಿ ಕಂಡುಬರುವ "ಯಾರಿಂದ" ಎಂಬ ಶಬ್ದಗಳ ತರುವಾಯ "ಅಥವಾ ಯಾರ ಪರವಾಗಿ" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಿ.

–(ಡಾ. ಅಂಬೇಡ್ಕರ್)

ಮಾಡಲಾದ ಹೆಚ್ಚುವರಿ ತಿದ್ದುಪಡಿ:

೧೫೭ನೆಯ ಖಂಡದ (೧)ನೆಯ ಉಪಖಂಡದಲ್ಲಿ, "ಠೇವಣಿಯನ್ನು ಹಿಂದಿರುಗಿಸಬೇಕು" ಶಬ್ದದಿಂದ ಆರಂಭಿಸಿ, ಕೊನೆಯ ಶಬ್ದದವರೆಗಿನ ಪಾಠದ ಬದಲಿಗೆ, ಈ ಕೆಳಗೆ ಕಾಣಿಸಿರುವುದನ್ನು ಸೇರಿಸಿಕೊಳ್ಳಿ:

"ಯಾರು ಪಾವತಿಯನ್ನು ಮಾಡಿದ್ದರೋ ಆ ವ್ಯಕ್ತಿಗೇ ಠೇವಣಿಯನ್ನು ಹಿಂದಿರುಗಿಸತಕ್ಕದ್ದು. ಯಾವನಾದರೂ ಅಭ್ಯರ್ಥಿ ಮತದಾನ ಆರಂಭಗೊಳ್ಳುವುದಕ್ಕೆ ಮುಂಚಿತವಾಗಿ ತೀರಿಕೊಂಡರೆ, ಅಂಥ ಯಾವುದೇ ಠೇವಣಿಯನ್ನು ಆತನೇ ಮಾಡಿದ್ದರೆ ಅದನ್ನು ಅವನ ಕಾನೂನುಸಮ್ಮತ ಪ್ರತಿನಿಧಿಗೆ ಅಥವಾ ಅಭ್ಯರ್ಥಿಯು ತಾನೇ ಆ ಠೇವಣಿಯನ್ನು ಇಡದೆ ಇದ್ದಿದ್ದರೆ ಅದನ್ನು ಯಾರು ಪಾವತಿ ಮಾಡಿದ್ದರೋ ಅವರಿಗೆ ಹಿಂದಿರುಗಿಸತಕ್ಕದ್ದು.

–(ಡಾ. ಅಂಬೇಡ್ಕರ್)

ಮಾಡಲಾದ ಹೆಚ್ಚುವರಿ ತಿದ್ದುಪಡಿ:

೧೫೭ನೆಯ ಖಂಡದ (೨)ನೆಯ ಉಪಖಂಡದಲ್ಲಿನ ೧ನೆಯ ಸಾಲಿನಲ್ಲಿ ಕಂಡುಬರುವ "ಯಾರಿಂದ" ಎಂಬ ಶಬ್ದಗಳ ತರುವಾಯ "ಅಥವಾ ಯಾರ ಪರವಾಗಿ" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಿ.

–(ಡಾ. ಅಂಬೇಡ್ಕರ್)

ಮಾಡಲಾದ ಹೆಚ್ಚುವರಿ ತಿದ್ದುಪಡಿ:

೧೫೭ನೆಯ ಖಂಡದ (೪)ನೆಯ ಉಪಖಂಡದಲ್ಲಿನ ೧ನೆಯ ಸಾಲಿನಲ್ಲಿ ಕಂಡುಬರುವ "ಠೇವಣಿಯು...ರಿಂದ ಮಾಡಲ್ಪಟ್ಟಿತು" ಎಂಬ ಶಬ್ದಗಳ ತರುವಾಯ "ಅಥವಾ .....ರ ಪರವಾಗಿ" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಿ.

–(ಡಾ. ಅಂಬೇಡ್ಕರ್)

ಮಾಡಲಾದ ಹೆಚ್ಚುವರಿ ತಿದ್ದುಪಡಿ:

೧೫೭ನೆಯ ಖಂಡದ (೪)ನೆಯ ಉಪಖಂಡದಲ್ಲಿನ ೩ನೆಯ ಸಾಲಿನಲ್ಲಿ ಕಂಡುಬರುವ "ಅವರಿಗೆ ಹಿಂದಿರುಗಿಸತಕ್ಕದ್ದು" ಎಂಬ ಶಬ್ದಗಳಿಗೆ ಬದಲಾಗಿ ಈ ಕೆಳಗಿನದನ್ನು ಸೇರಿಸಿಕೊಳ್ಳಿ:

ಪ್ರಸಂಗಾನುಗುಣವಾಗಿ, ಅಂಥ ಅಭ್ಯರ್ಥಿಗೆ ಅಥವಾ ಆತನ ಪರವಾಗಿ ಠೇವಣಿ ಮಾಡಿರುವಂಥ ವ್ಯಕ್ತಿಗೆ ಹಿಂದಿರುಗಿಸತಕ್ಕದ್ದು.

–(ಡಾ. ಅಂಬೇಡ್ಕರ್)

ಮಾಡಲಾದ ಹೆಚ್ಚುವರಿ ತಿದ್ದುಪಡಿ:

೧೫೭ನೆಯ ಖಂಡದ (೪)ನೆಯ ಉಪಖಂಡದ ಮೊದಲನೆಯ ಪರಂತುಕದಲ್ಲಿ, ೩ನೆಯ ಸಾಲಿನಲ್ಲಿ ಕಂಡುಬರುವ (ಆತನೇ ಮಾಡಿದ ಠೇವಣಿಗಳು) ಎಂಬ ಶಬ್ದಗಳ ತರವಾಯ "ಅಥವಾ ಆತನ ಪರವಾಗಿ" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಿ.

–(ಡಾ. ಅಂಬೇಡ್ಕರ್)

ಮಾಡಲಾದ ಹೆಚ್ಚುವರಿ ತಿದ್ದುಪಡಿ:

೧೫೭ನೆಯ ಖಂಡದ (೪)ನೆಯ ಉಪಖಂಡದ ಎರಡನೆಯ ಪರಂತುಕದಲ್ಲಿ ೪ನೆಯ ಸಾಲಿನಲ್ಲಿ ಕಂಡುಬರುವ "ಆತನು ಮಾಡಿದ ಠೇವಣಿಗಳು" ಎಂಬ ಶಬ್ದಗಳ ತರವಾಯ "ಅಥವಾ ಆತನ ಪರವಾಗಿ" ಎಂಬ ಶಬ್ದಗಳನ್ನು ಸೇರಿಸಿಕೊಳ್ಳತಕ್ಕದ್ದು.

–(ಡಾ. ಅಂಬೇಡ್ಕರ್)

**ಶ್ರೀ ಭಟ್:** ೨೧೨ನೇ ಸಂಖ್ಯೆಯ ತಿದ್ದುಪಡಿಯೊಂದಿದೆ.

**ಡಾ. ಅಂಬೇಡ್ಕರ್:** ಅದನ್ನು ನಾನು ಪ್ರತ್ಯೇಕವಾಗಿ ಪ್ರಸ್ತಾಪಿಸುತ್ತೇನೆ.

ಮಾಡಲಾದ ಹೆಚ್ಚುವರಿ ತಿದ್ದುಪಡಿ:

೧೫೭ನೆಯ ಖಂಡದ (೨)ನೆಯ ಉಪಖಂಡದಲ್ಲಿ, "ಎಂಟನೇ ಒಂದು" ಎಂಬ ಶಬ್ದಕ್ಕೆ ಬದಲಾಗಿ, ಅದು ಕಂಡುಬರುವ ಎರಡು ಸ್ಥಳಗಳಲ್ಲಿ 'ಆರನೇ ಒಂದು" ಎಂಬ ಶಬ್ದವನ್ನು ಸೇರಿಸಿಕೊಳ್ಳಿ.

(ಡಾ. ಅಂಬೇಡ್ಕರ್)

**ಮಾನ್ಯ ಸಭಾಪತಿ:** ಪ್ರಶ್ನೆಯು:

೧೫೭ನೇ ವಿಧಿ ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿದೆ ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

೧೫೭ನೇ ವಿಧಿಯನ್ನು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲಾಯಿತು.

೧೫೫ನೇ ವಿಧಿಯನ್ನು ಮಸೂದೆಗೆ ಸೇರಿಸಿಕೊಳ್ಳಲಾಯಿತು.

ಹೊಸ ವಿಧಿ ೧೫೮ ಎ.

**ಡಾ. ದೇಶ್‌ಮುಖ್ (ಮಧ್ಯಪ್ರದೇಶ):** ಸ್ವಾಮಿ, ಈ ತಿದ್ದುಪಡಿಯನ್ನು ಸೇರಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆ. ಇಂಗ್ಲೆಂಡ್‌ನಲ್ಲಿ, ಇಂಥದೇ ಒಂದಕ್ಕೆ ಅವಕಾಶ ಕೊಟ್ಟಿದ್ದಾರಷ್ಟೇ ಅಲ್ಲ, ಈ ಉದ್ದೇಶಕ್ಕಾಗಿ ಅನುಕೂಲತೆಯನ್ನು ಕಲ್ಪಿಸುವುದರ ಮೇಲೆ ನಿರ್ಬಂಧಪಡಿಸಲು ಕೆಲವು ನಿಯಮಗಳನ್ನು ಮಾಡಿದ್ದಾರೆ. ಹಾಗು ಇವೆಲ್ಲವೂ ಯಾವುದೇ ತೊಂದರೆಗೆ ಈಡು ಮಾಡಿಲ್ಲವೆಂದು ನಾನು ಕೇಳಿದ್ದೇನೆ. ಆದ್ದರಿಂದ, ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬಹುದು ಎಂದು ನಾನು ಬೇಡುತ್ತೇನೆ.

**ಡಾ. ಅಂಬೇಡ್ಕರ್:** ಇದು ಬಹಳ ತೊಂದರೆಗಳನ್ನು ಉಂಟುಮಾಡುತ್ತದೆ ಎನ್ನುವ ಶಂಕೆ ನನಗೆ. ಆದ್ದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ.

**ಮಾನ್ಯ ಉಪ ಸಭಾಪತಿ:** ಮೊದಲು ಗೌರವಾನ್ವಿತ ಸದಸ್ಯರುಗಳಿಂದ, ಒಂದು ವೇಳೆ ಈ ತಿದ್ದುಪಡಿಯನ್ನು ನಾನು ಸದನದ ಮುಂದಿಡುವ ಆವಶ್ಯಕತೆ ಇದೆಯೇ ಎಂದು ಖಚಿತ ಮಾಡಿಕೊಳ್ಳಬಯಸುತ್ತೇನೆ.

**ಡಾ. ದೇಶಮುಖ್:** ಇಲ್ಲ. ಆದರೆ ಕೆಲವು ಗೌರವಾನ್ವಿತ ಸದಸ್ಯರುಗಳು ಮಾತನಾಡಲು ಇಚ್ಛಿಸುತ್ತಾರೆ.

**ಮಾನ್ಯ ಉಪಸಭಾಪತಿ:** ಗೌರವಾನ್ವಿತ ಸದಸ್ಯರು ತಮ್ಮ ತಿದ್ದುಪಡಿಯನ್ನೇ ಪ್ರಸ್ತಾಪಿಸಿದ್ದಾರೆ. ನಾನು ಅರ್ಥ ಮಾಡಿಕೊಂಡಿರುವಂತೆ, ಒಂದು ವೇಳೆ ನಾನು ಇದನ್ನು ಸದನದ ಮುಂದಿಟ್ಟರೆ, ಸದನವು ಅದನ್ನು ಕೈಗೆತ್ತಿಕೊಳ್ಳುತ್ತದೆ. ಕಾನೂನು ಮಂತ್ರಿಗಳ ಪ್ರತಿಕ್ರಿಯೆಯನ್ನು ನಾನು ಕೇಳಿದಾಗ ಅವರು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಿಲ್ಲವೆಂದು ಹೇಳಿದರು ಮತ್ತು ಗೌರವಾನ್ವಿತ ಸದಸ್ಯರು ನಾನು ಅದನ್ನು ಸದನದ ಮುಂದೆ ಇಡುವ ಆವಶ್ಯಕತೆ ಇಲ್ಲ ಎಂದು ಸರಿಯಾಗಿಯೇ ಹೇಳಿದ್ದಾರೆ. ನಾನು ಅದನ್ನು ಸದನದ ಮುಂದಿಟ್ಟಾಗ ಪ್ರತಿಯೊಬ್ಬ ಸದಸ್ಯನಿಗೂ ಅದರ ಮೇಲೆ ಮಾತಾಡುವ ಹಕ್ಕಿರುತ್ತದೆ. ಆ ಹಂತದಲ್ಲಿ ಅದನ್ನು ಪ್ರಸ್ತಾಪಿಸಿದ ಗೌರವಾನ್ವಿತ ಸದಸ್ಯರು ಸದನದ ಅಪ್ಪಣೆ ಪಡೆದು ಅದನ್ನು ಹಿಂದೆಗೆದುಕೊಳ್ಳಬಹುದು.

**ಡಾ. ದೇಶ್‌ಮುಖ್:** ನಾನು ಕೊಟ್ಟ ಕಾರಣಗಳಿಂದ ತೃಪ್ತರಾಗಿ, ಆಸಕ್ತಿಯನ್ನು ಹೊಂದಿರುವ ಅನೇಕ ಗೌರವಾನ್ವಿತ ಸದಸ್ಯರು ಈ ಸದನದಲ್ಲಿದ್ದಾರೆ ಎನ್ನುವ ಸತ್ಯದ ದೃಷ್ಟಿಯಿಂದ, ಈ ತಿದ್ದುಪಡಿಯ ಮೇಲೆ ಮಾತನಾಡಲು ಅವರಿಗೆ ಅವಕಾಶವನ್ನು ಕೊಡಬಹುದು ಮತ್ತು ಆಗ...

**ಪಂಡಿತ್‌ಠಾಕುರ್ ದಾಸ್ ಭಾರ್ಗವ:** ಸ್ವಾಮಿ, ಅದನ್ನು ಸದನದ ಮುಂದಿಡುವಂತೆ ಇಲ್ಲದಿದ್ದ ಮೇಲೆ ಅದನ್ನು ಚರ್ಚಿಸುವ ಅಗತ್ಯವಿಲ್ಲ. ಹಾಗಾದರೆ ಅದೊಂದು ಕೆಟ್ಟ ನಿದರ್ಶನವಾಗಿಬಿಡುತ್ತದೆ.

**ಶ್ರೀ ಕಾಮತ್ (ಮಧ್ಯಪ್ರದೇಶ):** ಗೌರವಾನ್ವಿತ ಸದಸ್ಯರು ತಿದ್ದುಪಡಿಯನ್ನು ಪ್ರಸ್ತಾಪಿಸಿದ್ದಾರೆ. ಅಂತೆಯೇ ಅದು ಚರ್ಚೆಗೆ ಒಳಪಡಬೇಕು. ಒಂದು ತಿದ್ದುಪಡಿಯನ್ನು ಪ್ರಸ್ತಾಪಿಸಿದಾಗ, ಸದನವು ಅದಕ್ಕೆ ಬದ್ಧವಾಗಿರಬೇಕು.

**ಮಾನ್ಯ ಉಪಸಭಾಪತಿ:** ಅದನ್ನು ನಾನು ಒಂದು ಆಜ್ಞೆಯ ಅಂಶವೆಂದು ತಿಳಿಯುತ್ತೇನೆ. ನನ್ನ ಯೋಚನೆ ಇದು, ಆ ಸಮಯದ ತನಕ...

**ಶ್ರೀ ಶ್ಯಾಮ್‌ನಂದನ್ ಸಹಾಯ (ಬಿಹಾರ):** ಸರ್ಕಾರದ ಸಂವಿಧಾನದ ವ್ಯವಸ್ಥೆ ಇರುವುದೇ ಚರ್ಚೆ ಮತ್ತು ಒಡಂಬಡಿಕೆಗಳಿಂದ. ಡಾ. ದೇಶ್‌ಮುಖರು ಗೌರವಾನ್ವಿತ ಕಾನೂನು ಮಂತ್ರಿಗಳ ಮನವೊಲಿಸಲು ಆಗಲಿಲ್ಲ. ನನ್ನ ಮಿತ್ರ ಮಾನ್ಯ ಕಾಮತ್‌ರು ತಮ್ಮ ವಾದಗಳಿಂದ ಗೌರವಾನ್ವಿತ ಕಾನೂನು ಮಂತ್ರಿಗಳ ಮನವೊಲಿಸುವ ಸಾಧ್ಯತೆ ಇದೆ. ಆದ್ದರಿಂದ, ಚರ್ಚೆಗೊಂದು ಅವಕಾಶವನ್ನೇಕೆ ಕೊಡಬಾರದು?

**ಮಾನ್ಯ ಉಪಸಭಾಪತಿ:** ಯಾವ ಹಂತದಲ್ಲಿ ಸದನವು ಒಂದು ಪ್ರಸ್ತಾಪವನ್ನು ಬದ್ಧತೆಯಿಂದ ನೋಡಬಹುದು ಎನ್ನುವ ಅಂಶವು ಇಲ್ಲಿ ಎದ್ದಿದೆ. ಒಬ್ಬ ಗೌರವಾನ್ವಿತ ಸದಸ್ಯರು ಒಂದು ತಿದ್ದುಪಡಿಯ ಸೂಚನೆ ಕೊಟ್ಟ ಕೂಡಲೇ ಅದನ್ನು ಪ್ರಸ್ತಾಪಿಸಿದಾಗ ಸದನವು ಅದನ್ನು ಪರಿಶೀಲಿಸಲೇಬೇಕೆಂದೇನೂ ಇಲ್ಲ. ಸಭಾಪತಿಗಳು ಅದನ್ನು ಸದನದ ಮುಂದಿಡಬೇಕು. ಆಗ ಮಾತ್ರವೇ ಸದನವು ಅದನ್ನು ಪರಿಶೀಲಿಸುವುದು. ಆದರೆ ಆ ಹಂತದಲ್ಲಿ ಗೌರವಾನ್ವಿತ ಸದಸ್ಯರು ಆ ಬಗ್ಗೆ ಒತ್ತಾಯ ಮಾಡದೆ ಇರುವುದಕ್ಕೂ ಅವಕಾಶವಿದೆ. ಈ ಬಗ್ಗೆ ಕಾನೂನು ಮಂತ್ರಿಗಳಲ್ಲಿ ಪ್ರತಿಕ್ರಿಯೆಯನ್ನು ನೀಡಲು ನಾನು ಕೇಳಿದೆ. ತಾವು ಅದನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಅವರು ನನಗೆ ಚುಟುಕಾಗಿ ಹೇಳಿದರು. ಆ ಗೌರವಾನ್ವಿತ ಸದಸ್ಯರು ನನ್ನನ್ನು ಸದನದ ಮುಂದೆ ತಿದ್ದುಪಡಿ ಇಡಲು ಹೇಳಿದ್ದರೆ ನಾನು ಅದನ್ನು ಮಾಡುತ್ತಿದ್ದೆ. ಆಗ ಅದರ ಬಗೆಗೆ ಸ್ವಲ್ಪ ಚರ್ಚೆಯಾಗಿ, ಆನಂತರ ಗೌರವಾನ್ವಿತ ಕಾನೂನು ಮಂತ್ರಿಗಳು ಅದಕ್ಕೆ ಉತ್ತರವಾಗಿ ತಮ್ಮ ವರ್ತನೆಯ ಬಗೆಗೆ ಸದನಕ್ಕೆ ಸಮಾಧಾನ ಹೇಳುತ್ತಿದ್ದರು. ಆಗ ಅಂತಿಮವಾಗಿ ಸದನವು ತಾನೇ ಆ ವಿಷಯದ ಬಗೆಗೆ ತೀರ್ಮಾನ ತೆಗೆದುಕೊಳ್ಳುವ ಹಾಗಾಗುತ್ತಿತ್ತು. ಆ ನಂತರದಲ್ಲಿ ಒಂದು ವೇಳೆ ಗೌರವಾನ್ವಿತ ಸದಸ್ಯರು, ತಾವು ಮಾಡಿದ ಪ್ರಸ್ತಾಪವನ್ನು ಹಿಂದೆಗೆದುಕೊಳ್ಳಲು ಇಚ್ಛಿಸಿದರೆ ಆಗ ಸದನದ ಅನುಮತಿಯು ಆವಶ್ಯಕವಾಗುತ್ತದೆ. ಆಗ

ಒಂದಲ್ಲ ಒಂದು ರೀತಿಯಲ್ಲಿ ಸದನಕ್ಕೆ ಮನವರಿಕೆಯಾದರೆ, ಆ ಸಮಯದಲ್ಲಿ ಗೌರವಾನ್ವಿತ ಸದಸ್ಯರು ಅದನ್ನು ಹಿಂದೆಗೆದುಕೊಳ್ಳಬಹುದೋ ಇಲ್ಲವೋ ಎನ್ನುವ ಅವಕಾಶವನ್ನು ಸದನವು ಕೊಡುವ ಸಾಧ್ಯತೆಯೂ ಇರುತ್ತದೆ. ಇಲ್ಲಿ ನಾನು ಗೌರವಾನ್ವಿತ ಕಾನೂನು ಮಂತ್ರಿಗಳನ್ನು ಕೇಳಿದೆ. ಮತ್ತು ಅವರನ್ನು ಕೇಳಿದ ನಂತರ ಪ್ರಸ್ತಾಪಿಸಿದ ಗೌರವಾನ್ವಿತ ಸದಸ್ಯರು ಪ್ರಸ್ತಾಪವನ್ನು ಒತ್ತಿ ಹೇಳಲಿಲ್ಲ. ಆದ್ದರಿಂದ, ನಾನು ಪ್ರಸ್ತಾಪವನ್ನು ಸದನದ ಮುಂದಿಡಲಿಲ್ಲ ಮತ್ತು ಸದನವು ಅದನ್ನು ಬದ್ಧತೆಯಿಂದ ಪರಿಶೀಲಿಸುವುದಿಲ್ಲ. ಆದ್ದರಿಂದ, ಈ ವಿಷಯದ ಬಗೆಗೆ ಮಾತನಾಡುವ ಉದ್ದೇಶದಿಂದ ಇರುವ ಅನೇಕ ಗೌರವಾನ್ವಿತ ಸದಸ್ಯರನ್ನು ತೃಪ್ತಿಪಡಿಸುವ ಸಲುವಾಗಿ ಸದನದ ಮುಂದೆ ನಾನು ಯಾವುದೇ ಪ್ರಸ್ತಾಪವನ್ನು ಇಡುವುದು ಸಾಧ್ಯವಿಲ್ಲ. ಸದನದ ಸಮಯದ ವ್ಯರ್ಥವಾಗಲು ನಾನು ಅವಕಾಶಕೊಡುವುದಿಲ್ಲ.

ಮಾನ್ಯ ಸಹಾಯ್‌ರು ಎತ್ತಿದ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಸದಸ್ಯರು ಈ ತಿದ್ದುಪಡಿಯಿಂದ ತೃಪ್ತರಾಗಿದ್ದಲ್ಲಿ ಅವರೇ ಆ ತಿದ್ದುಪಡಿಯ ಸೂಚನೆಯನ್ನು ಕೊಡುವ ಅವಕಾಶ ಮುಕ್ತವಾಗಿದೆ. ಇನ್ನೊಬ್ಬರ ಹೆಸರಿನಲ್ಲಿ ಯಾವುದೇ ತಿದ್ದುಪಡಿಯ ಲಾಭವನ್ನು ಯಾವ ಗೌರವಾನ್ವಿತ ಸದಸ್ಯರೂ ತೆಗೆದುಕೊಳ್ಳುವುದಕ್ಕೆ ನಾನು ಬಿಡುವುದಿಲ್ಲ. ಸದನದ ಸಮಯವು ಅತ್ಯಂತ ಅಮೂಲ್ಯವಾದದ್ದು. ಆದ್ದರಿಂದ ಅದರ ಮುಂದಿರುವ ಯಾವುದೇ ವಿಷಯದ ಬಗೆಗೂ ಸಂಬದ್ಧವಲ್ಲದ ಯಾವುದೇ ಚರ್ಚೆಗೂ ನಾನು ಅವಕಾಶಕೊಡಲಾರೆ.

**ಶ್ರೀ ಕಾಮತ್:** ಸದನದ ಕಾರ್ಯವಿಧಾನಕ್ಕೆ ನಿಯಮಗಳನ್ನು ಮಾಡಿ.

**ಮಾನ್ಯ ಉಪಸಭಾಪತಿ:** ಉಪಸಭಾಪತಿಯು ನಿಂತಿದ್ದಾಗ, ಗೌರವಾನ್ವಿತ ಸದಸ್ಯರು ಅವರ ಸ್ಥಾನದಲ್ಲಿ ನಿಲ್ಲುವುದನ್ನು ನಿರ್ಬಂಧಿಸಲು ಯಾವ ನಿಯಮವೂ ಇಲ್ಲವೇ?

**ಶ್ರೀ ಕಾಮತ್:** ಒಬ್ಬ ಸದಸ್ಯರು ಮಾತನಾಡಬೇಕೆಂದು ಆಶಿಸಿದರೆ ಅವರ ಅಭಿಪ್ರಾಯವನ್ನು ಹೇಳಲು ಅವರಿಗೆ ಅವಕಾಶ ಕೊಡಬೇಕೆಂಬ ಒಂದು ರೂಢಿ ಇದೆ.

**ಮಾನ್ಯ ಉಪಸಭಾಪತಿ:** ಆಪಾದನೆಯನ್ನು ನನ್ನ ವಿರುದ್ಧ ಮಾಡಲಾಗುವುದೆಂದು ನಾನು ಅಂದುಕೊಳ್ಳುವುದಿಲ್ಲ. ಮತ್ತು ನಾನು ಇನ್ನೊಂದೆಡೆ ತಪ್ಪು ಮಾಡುತ್ತಿದ್ದೇನೆ. ನಾನು ಮತ್ತೆ ಮತ್ತೆ ಅವರನ್ನು ಮಾತನಾಡಲು ಬಿಡುತ್ತೇನೆ. ಈಗ ತಿದ್ದುಪಡಿಯು ಸದನದ ಮುಂದಿಲ್ಲ. ಇದು ನನ್ನ ಆಡಳಿತ. ಗೌರವಾನ್ವಿತ ಸದಸ್ಯರಲ್ಲಿ ಸಭ್ಯತೆ ಮತ್ತು ಶಿಷ್ಟಾಚಾರ ಎನ್ನುವುದು ಸ್ವಲ್ಪವಾದರೂ ಇರಬೇಕು.

**ಶ್ರೀ ಕಾಮತ್:** ಸಭ್ಯತೆ ಎಂಬ ಪದ ಪ್ರಯೋಗವನ್ನು ನಾನು ವಿರೋಧಿಸುತ್ತೇನೆ.

**ಮಾನ್ಯ ಉಪಸಭಾಪತಿ:** ವಿರೋಧಿಸುವುದೂ ಸರಿಯಿಲ್ಲ.

**ಶ್ರೀ ಕಾಮತ್:** ಆದರೂ ನಾನು ವಿರೋಧಿಸುತ್ತೇನೆ

**ಮಾನ್ಯ ಉಪಸಭಾಪತಿ:** ಈ ರೀತಿಯ ಸ್ವೇಚ್ಛಾಚಾರದ ನಡವಳಿಕೆಯನ್ನು ಸದನವು ಸಹಿಸಲು ಸಾಧ್ಯವಿಲ್ಲ. ಒಬ್ಬ ಗೌರವಾನ್ವಿತ ಸದಸ್ಯರು ಒಂದು ತಿದ್ದುಪಡಿಯನ್ನು ಪ್ರಸ್ತಾಪಿಸುವುದು, ಇನ್ನೊಬ್ಬರು ಅವರ ಮೇಲೆ ತಾವು ಮಾತನಾಡಬೇಕು ಎನ್ನುವುದು. ಯಾರು ತೀರ್ಮಾನಿಸುವವರು? ಗೌರವಾನ್ವಿತ ಸದಸ್ಯರನ್ನು ಇಲ್ಲಿ ನನ್ನ ಸ್ಥಾನದಲ್ಲಿ ಬಂದು ಕೂರಲು ಹೇಳಲೇ? ಸಭೆಯ ಕಾರ್ಯ ಕಲಾಪವನ್ನು ಕ್ರಮಬದ್ಧ ಮಾಡಲು ಯಾರಾದರೂ ಇರಬೇಕು. ಗೌರವಾನ್ವಿತ ಪ್ರಸ್ತಾಪದಾರರು ಇದನ್ನು ಒತ್ತಾಯ ಮಾಡದಿರುವುದರಿಂದ ಸದನವು ಈ ಸಮಸ್ಯೆಗೆ ಪರಿಶೀಲಿಸಲು ಬದ್ಧವಾಗಿರಬೇಕಿಲ್ಲ ಎನ್ನುವ ನಿರ್ಣಯಕ್ಕೆ ನಾನು ಬಂದಿದ್ದೇನೆ. ನಾನು ಅದನ್ನು ಸದನದ ಮುಂದಿಡುವ ತನಕ ವಿಷಯವು ಸದನದ ಮುಂದೆ

ಬರುವ ಅವಕಾಶವೇ ಇಲ್ಲ. ಹಾಗಿದ್ದರೂ ಸಹ ಗೌರವಾನ್ವಿತ ಸದಸ್ಯರಾದ ಮಾನ್ಯ ಕಾಮತ್‌ರು ಮಾತನಾಡಲು ಇಚ್ಛಿಸುತ್ತಾರೆ. ಅಲ್ಲದೆ, ಯಾವುದರ ಮೇಲೆ ಮಾತನಾಡುವುದು ಅವರು? ಯಾವ ಒಂದು ಪ್ರಸ್ತಾಪವು ಸದನದ ಮುಂದಿಲ್ಲವೋ ಅದರ ಮೇಲೆ ಮಾತನಾಡಬೇಕೆನ್ನುತ್ತಾರೆ. ನಾನು ಅದು ಸರಿಯಲ್ಲ ಎಂದರೆ, ಅವರು ಅದನ್ನು ವಿರೋಧಿಸುತ್ತಾರೆ. ಆದ್ದರಿಂದ ಸದಸ್ಯರ ನಡವಳಿಕೆಯನ್ನು ನಿಯಂತ್ರಿಸುವುದು ಸದನದ ಕೈಲಿದೆ, ನಾನೇನಿದ್ದರೂ ಮುಖವಾಣಿಯಷ್ಟೇ. ಯಾವುದೇ ಸದಸ್ಯನೂ ಸದನದ ಸಮಯವನ್ನು ತೆಗೆದುಕೊಂಡು ಅದನ್ನು ವಿರೋಧಿಸುತ್ತಲೇ ಹೋಗುವುದು ಸರಿಯಲ್ಲ. ಈಗ ಏನಾಗಿದೆಯೋ ಅದನ್ನು ಲಕ್ಷ್ಯ ಮಾಡದೆ ಇರುವುದಕ್ಕೆ ನನ್ನ ಆಕ್ಷೇಪವೇನೂ ಇಲ್ಲ.

**ಶ್ರೀ ಕಾಮತ್:** ನಾನು ತೀವ್ರವಾಗಿ ಪ್ರತಿಭಟಿಸಲು ಇಚ್ಛಿಸುತ್ತೇನೆ.

**ಮಾನ್ಯ ಉಪ ಸಭಾಪತಿ:** ಅವರು ಪ್ರತಿಭಟಿಸಿದರೆ, ಸದನವನ್ನು ಬಿಟ್ಟು ಹೊರಡಲು ನಾನು ಅವರಿಗೆ ಹೇಳುತ್ತೇನೆ.

**ಶ್ರೀ ಕಾಮತ್:** ನಾನು ಪ್ರತಿಭಟಿಸುತ್ತೇನೆ...

**ಮಾನ್ಯ ಉಪಸಭಾಪತಿ:** ಈ ದಿನ ಈ ಗೌರವಾನ್ವಿತ ಸದಸ್ಯರು ಸದನವನ್ನು ಪ್ರವೇಶಿಸುವ ಹಾಗಿಲ್ಲ. ಯಾವ ಸದಸ್ಯರನ್ನೂ ಆಚೆಗೆ ಕಳುಹಿಸುವುದು ನನಗೆ ಬೇಕಿಲ್ಲ. ಆದರೆ ಸಭ್ಯತೆ ಮತ್ತು ಶಿಷ್ಟಾಚಾರದ ಅರಿವು ಸ್ವಲ್ಪವಾದರೂ ಸದನದಲ್ಲಿರಬೇಕು. ಕಲಾಪ ನಡೆಸುತ್ತಿರುವ ಅಧ್ಯಕ್ಷ ಪೀಠಕ್ಕೆ ಮೊದಲು ಅವರು ಗೌರವ ಸಲ್ಲಿಸಬೇಕು. ಬಹುಮತಕ್ಕೆ ಅದನ್ನು ಸಲ್ಲಿಸಬೇಕು, ಅಂತಿಮವಾಗಿ ಬಹುಮತದ ಅಭಿಪ್ರಾಯವನ್ನು ಅಧ್ಯಕ್ಷ ಪೀಠವು ಪ್ರತಿಬಿಂಬಿಸುತ್ತದೆ.

ಹಾಗಿದ್ದರೂ ಸಹ, ಸದಸ್ಯರು ತಾವು ಸದನದ ಇತರರನ್ನು ನಿಯಂತ್ರಿಸಬೇಕು ಎಂದು ಹೇಳುತ್ತಲೇ ಹೋಗುತ್ತಾರೆ. ಸದನವು ಅದನ್ನು ಸಹಿಸಿಕೊಳ್ಳುತ್ತದೆಯೋ ಇಲ್ಲವೋ ನಾನರಿಯೆ ಯಾವುದೇ ಸದಸ್ಯನನ್ನು ದಂಡಿಸುವುದು ನನ್ನ ಉದ್ದೇಶವಾಗಿರಲಿಲ್ಲ.

**ಶ್ರೀ ಕಾಮತ್:** ಡಾ. ದೇಶಮುಖರು ತಮ್ಮ ತಿದ್ದುಪಡಿಯನ್ನು ಎಂದೂ ಹಿಂದೆ ಪಡೆದು ಕೊಂಡದ್ದೇ ಇಲ್ಲ.

**ಮಾನ್ಯ ಉಪಸಭಾಪತಿ:** ಅವರು ಅದನ್ನು ಒತ್ತಾಯಪಡಿಸಲಿಲ್ಲ. ಈ ಪ್ರಸ್ತಾಪವು ಸದನದ ಮುಂದಿಲ್ಲವಾದ್ದರಿಂದ ಸರಿಯಾಗಿಯೋ ತಪ್ಪಾಗಿಯೋ ಒಂದು ನಿರ್ಧಾರಕ್ಕೆ ಬರುತ್ತೇನೆ. ಅದು ಅಂತಿಮವಲ್ಲವೇ?

**ಶ್ರೀ ಕಾಮತ್:** ಈ ಮಾತಿನಿಂದ ಡಾ. ದೇಶಮುಖ್ ಅವರ ಅರ್ಥ ಅವರಿಗೆ ಅದನ್ನು ಸದನದಲ್ಲಿ ಮತಕ್ಕೆ ಹಾಕಲು ಒತ್ತಾಯಿಸುವ ಆಶಯವಿಲ್ಲ ಎಂದು.

**ಡಾ. ದೇಶಮುಖ್:** ಈಗ ಏನಾಯಿತೋ ಮತ್ತೆ ಅದರ ಹಿಂದಕ್ಕೆ ಹೋಗುವುದು ನನಗೆ ಬೇಕಿಲ್ಲ. ಆದರೆ ಸಾಂಪ್ರದಾಯಿಕವಾಗಿ ಪ್ರಸ್ತಾಪವನ್ನಿಡದಿದ್ದರೂ ಎಷ್ಟೋ ವಿಷಯಗಳಲ್ಲಿ ಚರ್ಚೆಗಳು ನಡೆದಿದೆ, ಎರಡು ಅಥವಾ ಮೂರು ಭಾಷಣಗಳ ನಂತರವೂ ಪ್ರಸ್ತಾಪವನ್ನಿಟ್ಟಿರುವುದಿಲ್ಲ. ಈ ರೀತಿಯ ನಿದರ್ಶನಗಳಿವೆ.

**ಮಾನ್ಯ ಉಪಸಭಾಪತಿ:** ಒಂದು ವೇಳೆ ಯಾವುದೇ ಸದಸ್ಯರಿಗೆ ತಮ್ಮ ತಿದ್ದುಪಡಿಯನ್ನು ಸದನದ ಮುಂದಿಡಬೇಕು, ಅದನ್ನು ಸದನವು ಕೇಳಬೇಕು ಎನ್ನುವುದರ ಬಗೆಗೆ ಬಲವಾಗಿದ್ದರೆ, ಅದನ್ನು ಪ್ರಸ್ತಾಪಿಸುವ ಧೈರ್ಯವನ್ನು ಅವರು ಹೊಂದಿರುವಂತಿರಬೇಕು. ಜೊತೆಗೆ ಅದನ್ನು ಸದನವು ಕೇಳುವಂತೆಯೂ ಮಾಡಬೇಕು. ಆದರೆ ನಾನು ಅದನ್ನು ಸದನದ ಮುಂದಿಡುವುದು ಅವರಿಗೆ ಬೇಕಿಲ್ಲದಿದ್ದರೆ, ಅಧ್ಯಕ್ಷ ಪೀಠವನ್ನು ಅದರ

ಮೇಲೆ ಚರ್ಚೆ ಮಾಡಲು ಅವಕಾಶ ಕೊಡುವಂತೆ ಆತ ಒತ್ತಾಯಪಡಿಸಲೂ ಸಾಧ್ಯವಿಲ್ಲ.

**ಪಂಡಿತ ಠಾಕುರ್ ದಾಸ್ ಭಾರ್ಗವ:** ಸದನದ ಮುಂದಿಡಲು ಕೇಳಲ್ಪಡದ ಯಾವುದೇ ತಿದ್ದುಪಡಿಯನ್ನು ಸದನದಲ್ಲಿ ಚರ್ಚಿಸುವಂತೆ ಕೇಳುವುದು ಸಾಧ್ಯವಿಲ್ಲ.

**ಮಾನ್ಯ ಉಪಸಭಾಪತಿ:** ಈಗ ನಾನು ಮುಂದುವರಿಯುತ್ತೇನೆ...

**ಶ್ರೀ ಕಾಮತ್:** ಮೇಲೆದ್ದರು

**ಶ್ರೀಸಿದ್ವ:** ಆರ್ಡರ್, ಆರ್ಡರ್ (ಶಿಸ್ತು, ಶಿಸ್ತು)

**ಶ್ರೀ ಕಾಮತ್:** ನನ್ನನ್ನು ಶಿಸ್ತಿನಲ್ಲಿರುವಂತೆ ಕೇಳುವುದು ನಿಮಗೆ ಸೇರಿದ್ದಲ್ಲ

**ಮಾನ್ಯ ಉಪಸಭಾಪತಿ:** ಸದನವು ಈಗ ತನ್ನ ಸಾಮಾನ್ಯದ ಕೆಲಸಕ್ಕೆ ಮುಂದುವರೆಯಬಹುದು.

**೧೫೫ ನೇ ವಿಧಿ.**— ಕಟ್ಟಡಕ್ಕಾಗಿ ನಿವೇದನೆ ಮಾಡುವುದು)

ಮಾಡಿದ ತಿದ್ದುಪಡಿ:

> ೧೫೫ನೆಯ ಖಂಡದ ೧ನೆಯ ಉಪಖಂಡಕ್ಕೆ ಈ ಕೆಳಗಿನ ಪರಂತುಕವನ್ನು ಸೇರಿಸಿಕೊಳ್ಳಬೇಕು:
>
> ಆದರೆ, ಚುನಾವಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಆ ಅಭ್ಯರ್ಥಿ ಅಥವಾ ಆತನ ಏಜೆಂಟ್ ಕಾನೂನು ಸಮ್ಮತವಾಗಿ ಉಪಯೋಗಿಸುತ್ತಿರುವಂಥ ಯಾವುದೇ ವಾಹನ, ದೋಣಿ ಅಥವಾ ಪ್ರಾಣಿಯನ್ನು, ಅಂಥ ಚುನಾವಣೆಯ ಮತದಾನ ಪೂರ್ಣಗೊಳ್ಳುವವರೆಗೂ ಈ ಉಪ–ಪ್ರಕರಣದ ಅಡಿಯಲ್ಲಿ ಅಧಿಕಾರಯುತವಾಗಿ ಕೋರತಕ್ಕದಲ್ಲ.
>
> (ಡಾ. ಅಂಬೇಡ್ಕರ್)

**ಮಾನ್ಯ ಉಪಸಭಾಪತಿ:** ಪ್ರಶ್ನೆಯು:

೧೫೫ ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗುತ್ತದೆ.

ಪ್ರಸ್ತಾಪವನ್ನು ಸ್ವೀಕರಿಸಲಾಯಿತು.

೧೫೫ ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

೧೬೦ ರಿಂದ ೧೬೬ ವರೆಗಿನ ವಿಧಿಗಳೂ ಮಸೂದೆಗೆ ಸೇರಿಸಲ್ಪಟ್ಟವು.

**ಡಾ. ಅಂಬೇಡ್ಕರ್:** ೧೬೭ನೇ ವಿಧಿಯನ್ನು ಕಾಯ್ದಿಡಬೇಕೆಂದು ನನ್ನ ಆಶಯ. ೧೬೮ ಮತ್ತು ೧೬೯ನೇ ವಿಧಿಗಳನ್ನು ಸದನದ ಮುಂದಿಡಬಹುದು, ಕಾರಣ ಅವುಗಳಿಗೆ ಯಾವುದೇ ತಿದ್ದುಪಡಿಗಳಿಲ್ಲ.

೧೬೮ ಮತ್ತು ೧೬೯ರ ವಿಧಿಗಳು ಮಸೂದೆಗೆ ಸೇರಿಸಲ್ಪಟ್ಟವು.

**ಡಾ. ಅಂಬೇಡ್ಕರ್:** ಸ್ವಾಮಿ, ಸದನವನ್ನು ಮುಂದೂಡಬೇಕೆಂದು ನನ್ನ ಮನವಿ. ಮಸೂದೆಯನ್ನು ಮತ್ತೆ ತೆಗೆದುಕೊಳ್ಳಲು ನಾಳೆಯವರೆಗೆ ನನಗೆ ಸಾಧ್ಯವಾಗದಿರಬಹುದು ಎಂದು ಹೇಳಲೂ ಸಹ ನನಗೆ ಇಚ್ಛೆ ಇಲ್ಲ. ಆದ್ದರಿಂದ ಇತರ ಯಾವುದಾದರೂ ಮಸೂದೆಯನ್ನು ತೆಗೆದುಕೊಳ್ಳುವ ಸಾಧ್ಯತೆಯ ಬಗೆಗೆ ಸದನವು ಯೋಚಿಸಬಹುದು ಎಂದು ನಾನು ಸಲಹೆ ಮಾಡುತ್ತೇನೆ. ಒಂದು ಸಣ್ಣ ಮಸೂದೆ, ಬಾಯ್ಲರ್‌ನ ಮಸೂದೆ ಎಂಬುದೊಂದು ಇದೆ ಎಂದು ನನಗೆ ತಿಳಿದಿದೆ. ಅದನ್ನು ಬೇಕಾದರೆ ನಾಳೆಗೆ ತೆಗೆದುಕೊಳ್ಳಬಹುದು. (ಕೆಲವು ಮಂದಿ ಗೌರವಾನ್ವಿತ ಸದಸ್ಯರು: ಈ ದಿನವೇ ಏಕಾಗಬಾರದು) ತಮಗೆ ಸೂಚನೆ ಇಲ್ಲದ ಕಾರಣ ಸ್ಥಾನದಲ್ಲಿರುವ ಸದಸ್ಯರು ತಯಾರಾಗಿಲ್ಲ.

**ಕಾರ್ಯಗಳು, ಉತ್ಪಾದನೆ ಹಾಗೂ ಸರಬರಾಜು ಖಾತೆಯ ಉಪ ಮಂತ್ರಿ (ಶ್ರೀ ಬುರಾಗೊಹೈ):** ನನ್ನ ಬಳಿ ಕಾಗದ ಪತ್ರಗಳಿಲ್ಲ.

**ಸಂವಿಧಾನದ ಕಲಾಪಗಳ ರಾಜ್ಯದ ಮಂತ್ರಿ (ಶ್ರೀ ಸತ್ಯನಾರಾಯಣ ಸಿನ್ಹ):** ಸದನವನ್ನು ಅರ್ಧ ಗಂಟೆ ಮುಂದೂಡಬಹುದು, ಆ ಸಮಯದಲ್ಲೇ ಅವರು ಹೋಗಿ ಕಾಗದ ಪತ್ರಗಳನ್ನು ತರಬಹುದು.

**ಸಾರಿಗೆ ಮತ್ತು ರೈಲ್ವೆಯ ರಾಜ್ಯದ ಮಂತ್ರಿ (ಶ್ರೀ ಸಂತಾನಂ):** ಸ್ವಾಮಿ, ಗೌರವಾನ್ವಿತ ರಾಜ್ಯ ಮಂತ್ರಿ ಮಾನ್ಯಗೋಪಾಲ ಸ್ವಾಮಿ ಅಯ್ಯಂಗಾರ್ ಅವರು ಭಾಗ ಸಿ ರಾಜ್ಯಗಳಿಗೆ ಸಂಬಂಧಿಸಿದ ತಮ್ಮ ಮಸೂದೆಯನ್ನು ಮಂಡಿಸಲು ತಯಾರಾಗಿರುತ್ತಾರೆ ಎಂದು ನಾನು ನಂಬಿದ್ದೇನೆ. ಆದರೆ ಅವರಿಗೆ ಯಾವುದೇ ಸೂಚನೆ ಇರಲಿಲ್ಲ. ಬಹುಶಃ ಸದನವು ಅರ್ಧಗಂಟೆ ಮುಂದಕ್ಕೆ ಹೋದರೆ ಅವರು ಮಸೂದೆಯನ್ನು ಮಂಡಿಸುವ ಸ್ಥಿತಿಯಲ್ಲಿರಬಹುದು.

**ಮಾನ್ಯ ಉಪಸಭಾಪತಿ:** ಸದನವನ್ನು ೧೧ ಗಂಟೆಯವರೆಗೆ ಮುಂದೂಡಲಾಗಿದೆ. ಆ ಸಮಯದಲ್ಲೇ ಗೌರವಾನ್ವಿತ ಸದಸ್ಯರುಗಳು ಮಸೂದೆಯನ್ನು ಓದಿಕೊಂಡು, ಅವರವರ ತಿದ್ದುಪಡಿಗಳೊಂದಿಗೆ ಸಿದ್ಧರಾಗಬಹುದು.

**ಡಾ. ಅಂಬೇಡ್ಕರ್:** ನಾನೂ ಆ ಕ್ಷಣದಲ್ಲೇ ಒಪ್ಪಿಕೊಂಡ ತಿದ್ದುಪಡಿಗಳನ್ನು ಪರಿಶೀಲಿಸಿ ಅದರ ಸಾಧಕ ಬಾಧಕಗಳನ್ನು ನೋಡಬೇಕಿದೆ. ಯಾವ ಮಟ್ಟದಲ್ಲಿ ಅವುಗಳಿಗೆ ಪರಿವರ್ತನೆಯ ಅಗತ್ಯವಿದೆ ಎಂದು ನೋಡಬೇಕಿದೆ. ಆದ್ದರಿಂದಲೇ ನಾಳೆಗೆ ನಾನು ಸಿದ್ಧನಾಗಲು ಸಾಧ್ಯವಾಗದಿರಬಹುದು.

**ಶ್ರೀ ಭಾರತಿ (ಮದ್ರಾಸ್):** ೭ ನೇ ವಿಧಿಯ ಮೇಲೆ ಚರ್ಚೆಯು ಮುಂದುವರೆಯಬಹುದೆಂದು ನಾನು ಸಲಹೆ ನೀಡಬಹುದೇ, ಆದರೆ ತೀರ್ಮಾನವನ್ನು ಸ್ವಲ್ಪ ಸಮಯ ಮುಂದಕ್ಕೆ ಹಾಕಬಹುದು. (ಅನೇಕ ಗೌರವಾನ್ವಿತ ಸದಸ್ಯರು: ಬೇಡ, ಬೇಡ) ಹೇಗಾದರೂ ಅದರ ಮೇಲಿನ ಚರ್ಚೆಯು ಮುಂದುವರೆಯಲೇ ಬೇಕಿದೆ, ಕೇವಲ ತೀರ್ಮಾನವನ್ನು ಕಾಯ್ದಿಡಬಹುದಷ್ಟೆ.

**ಮಾನ್ಯ ಉಪಸಭಾಪತಿ:** ೭ ನೇ ವಿಧಿಗೆ ಸಂಬಂಧಿಸಿದಂತೆ ಹಾಗೂ ಅನರ್ಹತೆಗೆ ಸಂಬಂಧಿಸಿದ ಇತರ ವಿಧಿಗಳ ವಿಷಯದಲ್ಲಿ ಒಂದು ವೇಳೆ ಅವರುಗಳು ಒಂದು ಒಪ್ಪಂದಕ್ಕೆ ಬಂದರೆ, ಬಹಳಷ್ಟು ಚರ್ಚೆಯನ್ನು ತಪ್ಪಿಸಬಹುದು ಎಂದು ಗೌರವಾನ್ವಿತ ಸದಸ್ಯರಿಗೆ ಅರಿವಾಗಿದೆ. ಆದ್ದರಿಂದ ನಾನು ಸದನವನ್ನು ೧೧ ಗಂಟೆಯವರೆಗೆ ಮುಂದೂಡುತ್ತೇನೆ. ಆಗ ಕಾರ್ಯಕ್ರಮದ ಪಟ್ಟಿಯಲ್ಲಿರುವ ಮುಂದಿನ ಪ್ರಸ್ತಾಪ, ಭಾಗ ಸಿ ರಾಜ್ಯಗಳ ಮಸೂದೆಯ ಸರ್ಕಾರ ಇದನ್ನು ಸದನವು ತೆಗೆದುಕೊಳ್ಳುತ್ತದೆ.

ಆಗ ಸದನವು ೧೧ ಗಂಟೆಗೆ ಮುಂದೂಡಲ್ಪಟ್ಟಿತು.

## ಪ್ರಜಾಪ್ರಾತಿನಿಧ್ಯದ (ನಂ. ೨) ಮಸೂದೆ.

***ಶ್ರೀ ಘುಲೆ:** ನಾನು ಇದನ್ನು ಪ್ರಸ್ತಾಪಿಸಲು ಅನುಮತಿಯನ್ನು ಕೋರುತ್ತೇನೆ.

> ಡಾ. ಅಂಬೇಡ್ಕರ್ ಅವರು ಪ್ರಸ್ತಾವಿಸಿರುವ, ತಿದ್ದುಪಡಿಗಳ ಪೂರಕಪಟ್ಟಿ ಸಂಖ್ಯೆ ೭ರಲ್ಲಿ, ೨ನೆಯ ಸಂಖ್ಯೆಯುದಾಗಿ ಅಚ್ಚಾಗಿರುವ ತಿದ್ದುಪಡಿಯುಲ್ಲಿ, ಪ್ರಸ್ತಾವಿಸಲಾಗಿರುವ ೪೭ನೆಯ ಹೊಸ ಖಂಡದ (೨)ನೆಯ ಉಪಖಂಡದಲ್ಲಿ–

---

* ಪಿ.ಡಿ. ಸಂಪುಟ ೧೨, ೨೮ ಮೇ ೧೯೫೧, ಪಿ.ಪಿ. ೯೪೮೦–೮೧

(ಎ) ೫ನೇ ಸಾಲಿನಲ್ಲಿ ಕಾಣಿಸಿಕೊಂಡಿರುವ "ಆರಂಭ" ಎಂಬ ಶಬ್ದಕ್ಕೆ ಬದಲಾಗಿ "ಅಂತ್ಯ" ಎಂಬ ಶಬ್ದವನ್ನು ಹಾಕಿಕೊಳ್ಳಬೇಕು.

(ಬಿ)೭ನೇ ಸಾಲಿನಲ್ಲಿ ಕಾಣಿಸಿಕೊಂಡಿರುವ "ಮತಗಣನೆ" ಎಂಬ ಶಬ್ದಗಳಿಗೆ ಮೊದಲು "ಅಂತ್ಯವಾಗುವ" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಬೇಕು.

ನನ್ನ ತಿದ್ದುಪಡಿಯು ಬಹಳ ಸರಳವಾಗಿದೆ. ಇಲ್ಲಿ ಮತ ಎಣಿಕೆಯು ಮುಕ್ತಾಯವಾಗುವುದರೊಳಗೆ ಅಥವಾ ಮತಗಳ ಎಣಿಕೆ ಕೊನೆಯಾಗುವುದರೊಳಗೆ ಅವನು ತನ್ನ ಹೆಸರನ್ನು ಹಿಂದೆಗೆದುಕೊಳ್ಳಲು ಅವಕಾಶವಿರಬೇಕು.

**ಕಾನೂನು ಮಂತ್ರಿ (ಡಾ. ಅಂಬೇಡ್ಕರ್):** ನಾನು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಿಲ್ಲ.

**ಶ್ರೀ ಕಾಮತ್:** ಉಪಶೀರ್ಷಿಕೆಯಲ್ಲಿ ನಾನು ಒಂದು ಸಣ್ಣ ಬದಲಾವಣೆಯನ್ನು (ಮಾರ್ಪಾಡು) ಸಲಹೆ ಮಾಡಬಹುದೇ? "ನೇಮಕದ ರದ್ದತಿ ಅಥವಾ ಚುನಾವಣಾ ಏಜೆಂಟ್‌ನ ಮರಣ" ಎನ್ನುವ ಉಪಶೀರ್ಷಿಕೆಯ ಪದರಚನೆಯು ನನಗೆ ಚೆನ್ನಾಗಿ ಕಾಣುತ್ತಿಲ್ಲ ಎನ್ನುವುದನ್ನು ಕರಡು ಬರಹಗಾರರು ಮನಸ್ಸಿನಲ್ಲಿಡಬೇಕು. ಇಲ್ಲಿ 'ಮರಣ' ಎನ್ನುವ ಪದಕ್ಕೂ 'ಪದ್ಧತಿ ಎನ್ನುವ ಮಾತು ಅನ್ವಯಿಸಬಹುದಾದಂತೆ ಅರ್ಥವಾಗಬಹುದು. 'ಮರಣ' ಎನ್ನುವುದೇ ಮೊದಲು ಬಂದರೆ, ಆಗ ಸರಿಹೋಗುತ್ತದೆ.

**ಡಾ. ಅಂಬೇಡ್ಕರ್:** ಅದನ್ನು ಮನಸ್ಸಿನಲ್ಲಿಡಲಾಗುವುದು (ಪರಿಗಣಿಸಲಾಗುವುದು)

**ಶ್ರೀ ಘುಲೆ:** ನಾನು ನನ್ನ ತಿದ್ದುಪಡಿಯನ್ನು ಒತ್ತಾಯಿಸುವುದಿಲ್ಲ.

**ಮಾನ್ಯ ಉಪಸಭಾಪತಿ:** ಉಪಶೀರ್ಷಿಕೆಯ ತಿದ್ದುಪಡಿಗೆ ಹೌಸ್ ಒಪ್ಪಿಕೊಂಡಿದೆ ಎಂದು ನಾನು ನಂಬಿದ್ದೇನೆ.

ಪ್ರಸ್ತಾಪವನ್ನು ಸ್ವೀಕರಿಸಲಾಯಿತು.

****೫೧ನೇ ವಿಧಿ.**— (ಚುನಾವಣೆಗೆ ಮುಂಚೆ ಅಭ್ಯರ್ಥಿಯ ಮರಣ)

ಮಾಡಿದ ತಿದ್ದುಪಡಿ:

೫೧ನೆಯ ಖಂಡಕ್ಕೆ ಈ ಕೆಳಗಿನ ಪರಂತುಕವನ್ನು ಸೇರಿಸಿಕೊಳ್ಳಬೇಕು:

ಮತದಾನವನ್ನು ರದ್ದು ಪಡಿಸುವುದಕ್ಕೆ ಮೊದಲು, ೩೫ನೆಯ ಪ್ರಕರಣದ (೧)ನೆಯ ಉಪ–ಪ್ರಕರಣದ ಅಡಿಯಲ್ಲಿ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಸೂಚನಾ ಪತ್ರವನ್ನು ಕೊಟ್ಟ ಯಾವನೇ ಅಭ್ಯರ್ಥಿ ಅಂಥ ರದ್ಧತಿಯ ಅನಂತರದಲ್ಲಿ ನಡೆಯುವ ಚುನಾವಣೆಗೆ ನಾಮಕರಣಗೊಳ್ಳಲು ಅರ್ಹನಾಗಿರುವುದಿಲ್ಲ.

–ಡಾ. ಅಂಬೇಡ್ಕರ್

** ಪಿಡಿ., ಸಂಪುಟ ೧೨, ಭಾಗ II, ೨೩ ಮೇ ೧೯೫೧, ಪಿಪಿ. ೯೪೮೨–೯೫

**ಮಾನ್ಯ ಉಪಸಭಾಪತಿ:** ಪ್ರಶ್ನೆಯು:

೫೧ ನೇ ವಿಧಿಯು ತಿದ್ದುಪಡಿಯಾದಂತೆ ಮಸೂದೆಯ ಭಾಗವಾಗುತ್ತದೆ.

ಪ್ರಸ್ತಾಪವನ್ನು ಸ್ವೀಕರಿಸಲಾಯಿತು.

೫೧ ನೇ ವಿಧಿ, ತಿದ್ದುಪಡಿಯಾದಂತೆ ಮಸೂದೆಗೆ ಸೇರಿಸಲ್ಪಟ್ಟಿತು.

**೫೯ ನೇ ವಿಧಿ.—** (ಕೆಲವು ವರ್ಗಗಳ ಜನರಿಂದ ಮತದಾನ)

**ಪ್ರೊ. ಎಸ್.ಎಲ್. ಸಕ್ಸೇನ (ಉತ್ತರ ಪ್ರದೇಶ):** ಸ್ವಾಮಿ, ನಾನು ಈ ವಿಧಿಗೆ ಒಂದು ತಿದ್ದುಪಡಿಯನ್ನು ಸೂಚಿಸಿದ್ದೇನೆ.

**ಮಾನ್ಯ ಉಪ ಸಭಾಪತಿ:** ಏನು ಅದರ ಸಂಖ್ಯೆ? (ಯಾವ ಸಂಖ್ಯೆ) ಅದು ಯಾವ ಪಟ್ಟಿಯಲ್ಲಿದೆ?

**ಪ್ರೊ. ಎಸ್.ಎಲ್. ಸಕ್ಸೇನ:** ಅದನ್ನು ಹುಡುಕಲು ನನಗೆ ಅಸಾಧ್ಯವಾಗಿದೆ. ಅದು ಮುದ್ರಿತ ಪಟ್ಟಿಯಲ್ಲಿಲ್ಲ.

**ಶ್ರೀ ಶಿವಚರಣ್‌ಲಾಲ್ (ಉತ್ತರಪ್ರದೇಶ):** ಅದು ಸಂ. ೨೩೩ ರ ತಿದ್ದುಪಡಿ, ಅದು ಪರಿಷ್ಕೃತ ಸಮಗ್ರ ಸಂ. ಐ.ಪು. ೨೪ ರಲ್ಲಿದೆ.

ಸರ್, ಡಾ. ಅಂಬೇಡ್ಕರರು ಅಭ್ಯರ್ಥಿಯೂ ಹಾಗೂ ಅವರ ಏಜೆಂಟರು ಬೇರೆಯ ಮತಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೆ, ಅವರಿಗೆ ಒಂದು ಅವಕಾಶ ಮಾಡಿಕೊಡುತ್ತೇವೆಂದು ಮಾತುಕೊಟ್ಟಿದ್ದರು. ಅದನ್ನು ಅವರ ತಿದ್ದುಪಡಿಯಲ್ಲಿ ಸೇರಿಸಲಾಗಿಲ್ಲ.

**ಪಂಡಿತ್ ಠಾಕುರ್ ದಾಸ್ ಭಾರ್ಗವ (ಪಂಜಾಬ್):** ಇತರ ಯಾವುದಾದರೂ ವಿಧಾನದಿಂದ ಅಭ್ಯರ್ಥಿಗಳು ಹಾಗೂ ಅವರ ಏಜೆಂಟರುಗಳಿಗೆ ಮತ ನೀಡಬಹುದಾದ ಅವಕಾಶವನ್ನು ಒದಗಿಸಲಾಗುವುದು ಎನ್ನುವುದರ ಬಗೆಗೆ ನಿಯಮಗಳನ್ನು ರೂಪಿಸಲಾಗುವುದು ಎಂದು ಅವರು ಹೇಳಿದ್ದಾರೆ.

**ಡಾ. ಅಂಬೇಡ್ಕರ್:** ೧೬೭ ನೇ ವಿಧಿಗೆ ಇರುವಂಥ ತಿದ್ದುಪಡಿಯು ಈ ವಿಷಯವನ್ನು ಚರ್ಚಿಸುತ್ತದೆ. ನಾವು ೧೬೭ ನೇ ವಿಧಿಯನ್ನು ಚರ್ಚಿಸುವಾಗ ನನ್ನ ಮಿತ್ರರು ಇದನ್ನು ಪ್ರಸ್ತಾಪಿಸಬಹುದು. ಆಗ ನಾವು "ಒಬ್ಬ ಅಭ್ಯರ್ಥಿಯು" ಎಂಬ ಪದಗಳನ್ನು ಸೇರಿಸಲಾರೆವೋ ಎನ್ನುವುದನ್ನು ಪರಿಗಣಿಸಬಹುದು.

**ಮಾನ್ಯ ಉಪಸಭಾಪತಿ:** ಈ ತಿದ್ದುಪಡಿಯನ್ನು ೧೬೭ ನೇ ವಿಧಿಗೆ ತಿದ್ದುಪಡಿ ಎಂದು ನಾನು ಅನುಮತಿಸುತ್ತೇನೆ.

**ಶ್ರೀ ಹುಸೇನ್ ಇಮಾಮ್:** ಡಾ. ಅಂಬೇಡ್ಕರರ ತಿದ್ದುಪಡಿಯಲ್ಲಿ ವರ್ಗವಾದ ಅಧಿಕಾರಿಗಳಿಗೆ ಯಾವುದೇ ಅವಕಾಶವನ್ನು ಕೊಡಲಾಗಿಲ್ಲ. ಉದಾಹರಣೆಗೆ ಒಬ್ಬ ಅಧಿಕಾರಿಯ ದೆಹಲಿಯಿಂದ ಮದ್ರಾಸ್‌ಗೆ ವರ್ಗವಾದಾಗ ತನಗೆ ಅಂಚೆ ಮತವನ್ನು ಬೇಡುವ ಹಕ್ಕಿದೆ. ಆದ್ದರಿಂದ ಸರ್ಕಾರಿ ಸೇವಕರು ವರ್ಗವಾದಾಗ ಅಂಚೆ ಮತವನ್ನು ಬೇಡಲು ಇಲ್ಲಿ ಒಂದು ವಿಧಿಯನ್ನು ಒದಗಿಸಬೇಕು.

**ಡಾ. ಅಂಬೇಡ್ಕರ್:** ನಾವು ೧೬೭ ನೇ ವಿಧಿಯನ್ನು ಪರಿಶೀಲಿಸುವಾಗ ಈ ವಿಷಯವನ್ನು ಪರಿಗಣಿಸಬಹುದು.

**ಮಾನ್ಯ ಉಪ ಸಭಾಪತಿ:** ರಿಟರ್ನಿಂಗ್ ಅಧಿಕಾರಿಯು ಅಂಚೆಯ ಮೂಲಕ ವರ್ಗಾಯಿಸಲ್ಪಟ್ಟ ಮತ ಪತ್ರಗಳನ್ನು ಪಡೆಯಬಹುದು.

**ಡಾ. ಅಂಬೇಡ್ಕರ್:** ಈ ವಿಚಾರವನ್ನು, ನಾವು ಕಲಂ ೧೬೭ಕ್ಕೆ ಬಂದಾಗ ನಿಯಮಗಳ ಮೂಲಕ ನಿಯಂತ್ರಣ ಮಾಡಬಹುದು.

ಮಾಡಿರುವ ತಿದ್ದುಪಡಿ:

ಖಂಡ ೫೯ಕ್ಕೆ ಬದಲಾಗಿ ಈ ಖಂಡವನ್ನು ಸೇರಿಸಿಕೊಳ್ಳಿ:

"೫೯: ಪ್ರಕರಣ ೫೮ರಲ್ಲಿ ಹೇಳಲಾಗಿರುವ ಉಪಬಂಧಗಳ ಸಾಮಾನ್ಯತೆಗೆ ಭಂಗಬಾರದ ರೀತಿಯಲ್ಲಿ, ಈ ಕಾಯ್ದೆಯ ಅಡಿಯಲ್ಲಿ ಮಾಡಲಾಗಿರುವ ನಿಯಮಗಳ ಮೂಲಕ, ಕೆಲವೊಂದು ವರ್ಗಗಳ ವ್ಯಕ್ತಿಗಳ ಮತದಾನಕ್ಕಾಗಿ ವಿಶೇಷ ಪ್ರಕ್ರಿಯೆ.

(ಎ) ಮತದಾನ ನಡೆಸಲಾಗುತ್ತಿರುವ ಮತಕ್ಷೇತ್ರದಲ್ಲಿನ ಚುನಾವಣೆಯ ಸಂದರ್ಭದಲ್ಲಿ, ಬೇರಾವುದೇ ರೀತಿಯಲ್ಲಿ ಅಲ್ಲದೆ, ಅಂಚೆ–ಮತಪತ್ರದ ಮೂಲಕ, ಈ ಕೆಳಗೆ ಸೂಚಿಸಲಾಗಿರುವ ಯಾವುದೇ ವ್ಯಕ್ತಿಗಳಿಗೆ, ಅಂದರೆ:

(i) ೧೯೫೦ರ ಪ್ರಜಾಪ್ರಾತಿನಿಧ್ಯ ಕಾಯ್ದೆಯ ೨೦ನೆಯ ಪ್ರಕರಣದ (೩)ನೆಯ ಉಪ–ಪ್ರಕರಣದ ಉಪಬಂಧಗಳು ಅನ್ವಯವಾಗುವಂಥ ಕೇಂದ್ರದ ಸಶಸ್ತ್ರ ಪಡೆಯ ಸದಸ್ಯನಿಗೆ;

(ii) ಆ ಪ್ರಕರಣದ (೪)ನೆಯ ಉಪ–ಪ್ರಕರಣದ ಉಪ–ಬಂಧಗಳು ಅನ್ವಯವಾಗುವಂಥ, ರಾಷ್ಟ್ರಪತಿಗಳಿಂದ ಘೋಷಿತವಾಗಿರುವ ಕಛೇರಿಯಲ್ಲಿ, ಭಾರತದಲ್ಲಿ ಯಾವುದೇ ಹುದ್ದೆಯನ್ನು ನಿರ್ವಹಿಸುತ್ತಿರುವಂಥ ವ್ಯಕ್ತಿಗೆ;

(iii) ಭಾರತ ಸರ್ಕಾರದ ಅಡಿಯಲ್ಲಿ, ಭಾರತದಿಂದ ಹೊರಗೆ ನೇಮಕಗೊಂಡಿರುವ ವ್ಯಕ್ತಿಗೆ;

(iv) ಉಕ್ತ ೨೦ನೆಯ ಪ್ರಕರಣದ (೬)ನೆಯ ಉಪ–ಪ್ರಕರಣದ ಅನುಬಂಧಗಳು ಅನ್ವಯುವಾಗುವಂಥ, ಉಪ–ಖಂಡ(i), (ii) ಮತ್ತು (iii)ರಲ್ಲಿ ಉಲ್ಲೇಖಿಸಲಾಗಿರುವಂಥ ವ್ಯಕ್ತಿಯ ಪತ್ನಿಗೆ;

(ಬಿ) ಮತದಾನ ನಡೆಸಲಾಗುತ್ತಿರುವ ಮತಕ್ಷೇತ್ರದಲ್ಲಿನ ಚುನಾವಣೆಯ ಸಂದರ್ಭದಲ್ಲಿ, ಆ ನಿಯಮಗಳಲ್ಲಿ ನಿರ್ದಿಷ್ಟ ಪಡಿಸಲಾಗಿರುವಂಥ ಅಗತ್ಯಗಳ ಪೂರೈಕೆಗೆ ಒಳಪಟ್ಟು, ಸದ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನಿವಾರಕ–ಬಂಧನಕ್ಕೆ ಒಳಪಟ್ಟಿದ್ದು, ಬೇರಾವುದೇ ರೀತಿಯಲ್ಲಿ ಅಲ್ಲದೆ, ಅಂಚೆ–ಮತಪತ್ರದ ಮೂಲಕ ಮಾತ್ರವೇ ಮತದಾನ ಮಾಡಲು ಸಾಧ್ಯವಿರುವಂಥ ವ್ಯಕ್ತಿಗೆ–

ಈ ಕಾಯ್ದೆಯ ಅಡಿಯಲ್ಲಿ ಮಾಡಲಾಗಿರುವ ನಿಯಮಗಳ ಮೇರೆಗೆ ಮತದಾನ ಮಾಡಲು ಉಪಬಂಧಗಳನ್ನು ಕಲ್ಪಿಸಬಹುದಾಗಿದೆ.

(ಡಾ. ಅಂಬೇಡ್ಕರ್)

**ಉಪಾಧ್ಯಕ್ಷರು:** ವಿಷಯ ಏನೆಂದರೆ, ತಿದ್ದುಪಡಿಯಾದ ಆ ವಾಕ್ಯಾಂಶ ಈ ಮಸೂದೆಯ ಒಂದು ಭಾಗವಾಗಿದೆ.

ಮಸೂದೆಯನ್ನು ಅಂಗೀಕರಿಸಲಾಗಿದೆ.

ಕಲಂ ೫೯ ನ್ನು ತಿದ್ದುಪಡಿಯಾದ ಮೇಲೆ ಕಾನೂನಿನ ಭಾಗವಾಗಿ ಮಾಡಲಾಗಿದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನಾಮ ಪತ್ರಗಳ ಅಂತಿಮ ಕಾರ್ಯ ವಿಧಾನದ ಬಗ್ಗೆ ಕಲಂ ೩೪ ಎ ಗೆ ಒಂದು ತಿದ್ದುಪಡಿ ಸೂಚಿಸಲಾಗಿದೆ. ಆ ವಿಚಾರದ ಸ್ಥಿತಿಯ ಬಗ್ಗೆ ತಿಳುವಳಿಕೆ ನೀಡಿ.

**ಮಾನ್ಯ ಉಪಾಧ್ಯಕ್ಷರು:** ಅದನ್ನು ಈವರೆಗೂ ಕೈಗೆತ್ತಿಕೊಂಡಿಲ್ಲ. ನಾನು ಪ್ರಥಮವಾಗಿ ಸರ್ಕಾರದ ತಿದ್ದುಪಡಿಗಳನ್ನು ಮುಗಿಸಿದ ನಂತರ ಖಾಸಗಿ ಸದಸ್ಯರ ತಿದ್ದುಪಡಿಗಳಿಗೆ ವಾಪಸು ಬರುತ್ತೇನೆ.

೭ ನೇ ಪಟ್ಟಿಯಲ್ಲಿರುವ ಸಮುಚ್ಚಯ ಪಟ್ಟ II ಕ್ಕೆ ಸಂಬಂಧಿಸಿದ ೧೨೨ ನೇ ತಿದ್ದುಪಡಿಯ ಸ್ಥಿತಿ ಏನಾಗಿದೆ?

**ಡಾ. ಅಂಬೇಡ್ಕರ್:** ಈ ಕ್ಷಣದಲ್ಲಿ ನಾನು ಅದಕ್ಕೆ ತಯಾರಾಗಿಲ್ಲ.

**ಕಲಂ–೭—** (ಸದಸ್ಯತ್ವಕ್ಕೆ ಅನೂರ್ಜಿತತೆ)

**ಶ್ರೀ ಶ್ಯಾಮನಂದನ್ ಸಹಾಯ್ (ಬಿಹಾರ್):** ಡಾ. ಅಂಬೇಡ್ಕರ್ ಅವರ ತಿದ್ದುಪಡಿಗಳಿಗೆ ನಾವು ತಿದ್ದುಪಡಿಗಳನ್ನು ನೀಡಿದ್ದೇವೆ. ನಮಗೆ ಸಾಕಷ್ಟು ಸಮಯ ಸಿಕ್ಕಿಲ್ಲ. ಆದ್ದರಿಂದ ಆ ಕಲಮನ್ನು ನಾಳೆ ತೆಗೆದುಕೊಂಡರೆ ಉತ್ತಮ.

**ಉಪಾಧ್ಯಕ್ಷರು:** ಎಲ್ಲಾ ಮುಂದಿನ ಸೂಚನೆಗಳನ್ನು ಮನ್ನಾ ಮಾಡಲಾಗಿದೆ. ಅದನ್ನು ಇಂದೇ ಚರ್ಚೆಗೆ ತೆಗೆದುಕೊಳ್ಳಬಹುದು.

**ಡಾ. ಅಂಬೇಡ್ಕರ್:** ಮಾನ್ಯರೇ, ೭ಎ ಕಲಮನ್ನು ಉಪಕಲಂ (ಎಫ್) ನೊಡನೆ ಮಂಡಿಸುತ್ತಿದ್ದೇನೆ.

"ಆ ಸದಸ್ಯರು" ಎಂಬುದನ್ನು "ಸಂಸತ್ತಿನ ಒಬ್ಬ ಸದಸ್ಯ ಅಥವಾ ರಾಜ್ಯ ವಿಧಾನಸಭೆಯ ಸದಸ್ಯ" ಎಂದು ಬದಲಿಸಿ ಮಂಡಿಸುತ್ತಿದ್ದೇನೆ.

> ೭ನೆಯ ಖಂಡಕ್ಕೆ ಬದಲಾಗಿ ಈ ಕೆಳಕಂಡ ಖಂಡಗಳನ್ನು ಇರಿಸಿಕೊಳ್ಳಿ:
>
> **೭. ಸಂಸತ್ತಿನ ಅಥವಾ ರಾಜ್ಯ ಶಾಸಕಾಂಗದ ಸದಸ್ಯತ್ವದ ಬಗೆಗಿನ ಅನರ್ಹತೆಗಳು:** ಸಂಸತ್ತಿನ ಉಭಯ ಸದನಗಳಿಗೆ ಅಥವಾ ರಾಜ್ಯದ ವಿಧಾನ ಸಭೆಗೆ ಅಥವಾ ವಿಧಾನ ಪರಿಷತ್ತಿಗೆ ಆಯ್ಕೆಗೊಳ್ಳಲು ಹಾಗೂ ಸದಸ್ಯನಾಗಿರಲು ಪ್ರಕರಣ ೧೩೮ ಅಥವಾ ಪ್ರಕರಣ ೧೫೯ರ ಮೇರೆಗೆ (ಈ ಕೆಳಕಂಡ ಸಂದರ್ಭಗಳಲ್ಲಿ) ವ್ಯಕ್ತಿಯನ್ನು ಅನರ್ಹನನ್ನಾಗಿಸತಕ್ಕದ್ದು:
>
> (ಎ) ಸಂವಿಧಾನ ಜಾರಿಗೆ ಬರುವುದಕ್ಕೆ ಮೊದಲು ಅಥವಾ ಅನಂತರದಲ್ಲಿ, ವ್ಯಕ್ತಿ ತಪ್ಪಿತಸ್ಥನೆಂದು ಸಾಬೀತಾಗಿದ್ದಲ್ಲಿ ಅಥವಾ ಚುನಾವಣೆಯ ಸಿಂಧುತ್ವ ಅಥವಾ ನಿಯಮಿತತೆಯನ್ನು ಪ್ರಶ್ನಿಸಿರುವ ನಡೆವಳಿಯಲ್ಲಿ, ಸಂಸತ್ತಿನ ಹಾಗೂ ಪ್ರತಿಯೊಂದು ರಾಜ್ಯದ ಶಾಸಕಾಂಗದ ಸದಸ್ಯತ್ವಕ್ಕೆ ಅನರ್ಹತೆಯನ್ನು ಉಂಟು ಮಾಡುವಂಥ ಅಪರಾಧ ಅಥವಾ ಭ್ರಷ್ಟಾಚಾರ ಅಥವಾ ಕಾನೂನು ಬಾಹಿರ ಆಚರಣೆಯನ್ನು ಎಸಗಿದ ತಪ್ಪಿತಸ್ಥನೆಂದು ಘೋಷಿಸಲಾಗಿದ್ದಲ್ಲಿ ಹಾಗೂ ಪ್ರಸಂಗಾನುಗುಣವಾಗಿ, ೧೩೮ನೆಯ ಅಥವಾ ೧೫೯ನೆಯ ಪ್ರಕರಣದಲ್ಲಿ ಉಪಬಂಧಿಸಲಾಗಿರುವಂತೆ ಅಂಥ ಅವಧಿ ಕಳೆದುಹೋಗಿರದೆ ಇದ್ದಲ್ಲಿ.

(ಬಿ) ಸಂವಿಧಾನ ಜಾರಿಗೆ ಬರುವುದಕ್ಕೆ ಮೊದಲು ಅಥವಾ ಅನಂತರದಲ್ಲಿ ಭಾರತದಲ್ಲಿನ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಅಪರಾಧಕ್ಕಾಗಿ ತಪ್ಪಿತಸ್ಥನೆಂದು ಸಾಬೀತಾಗಿದ್ದಲ್ಲಿ ಹಾಗೂ ಎರಡು ವರ್ಷಗಳಿಗೆ ಕಮ್ಮಿ ಇಲ್ಲದಂತೆ ಸ್ಥಳಾಂತರಕ್ಕೆ ಅಥವಾ ಸೆರೆವಾಸಕ್ಕೆ ಒಳಗಾಗಿದ್ದಲ್ಲಿ; ಆತನ ಬಿಡುಗಡೆಯ ಬಳಿಕ, ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಚುನಾವಣಾ ಆಯೋಗ ನೀಡಬಹುದಾಗಿರುವ ಐದು ವರ್ಷಗಳ ಅಥವಾ ಅದಕ್ಕೂ ಕಡಿಮೆ ಅವಧಿ ಕಳೆದುಹೋಗಿರದೆ ಇದ್ದಲ್ಲಿ;

(ಸಿ) ಸಂಸತ್ತಿಗೆ ಅಥವಾ ಯಾವುದೇ ರಾಜ್ಯದ ಶಾಸಕಾಂಗಕ್ಕೆ ಅಭ್ಯರ್ಥಿಯಾಗಿ ನಾಮಕರಣಗೊಂಡಿದ್ದಲ್ಲಿ ಅಥವಾ ಹಾಗೆ ನಾಮಕರಣಗೊಂಡ ಯಾವನೇ ವ್ಯಕ್ತಿಯ ಚುನಾವಣಾ ಏಜೆಂಟ್ ಆಗಿ ಕಾರ್ಯನಿರ್ವಹಿಸಿದ್ದು, ಈ ಕಾಯ್ದೆಯ ಮೇರೆಗೆ ಅಥವಾ ಅದರ ಅಡಿಯಲ್ಲಿ ಅಗತ್ಯಪಡಿಸಲಾಗಿರುವ ರೀತಿಯಲ್ಲಿ ಹಾಗೂ ಅವಧಿಯ ಒಳಗಾಗಿ ಚುನಾವಣಾ ವೆಚ್ಚಗಳ ವಿವರಣ ಪತ್ರವನ್ನು ಸಲ್ಲಿಸಲು ವಿಫಲನಾಗಿದ್ದಲ್ಲಿ; ವಿವರಣ ಪತ್ರವನ್ನು ಸಲ್ಲಿಸಬೇಕಾಗಿದ್ದ ದಿನಾಂಕದಿಂದ ಐದು ವರ್ಷಗಳ ಅವಧಿ ಕಳೆದುಹೋಗಿರದೆ ಇದ್ದಲ್ಲಿ ಅಥವಾ ಚುನಾವಣಾ ಆಯೋಗವು ಅನರ್ಹತೆಯನ್ನು ತೆಗೆದುಹಾಕದೆ ಇದ್ದಲ್ಲಿ;

(ಡಿ) ತಾನಾಗಿಯೇ ಆಗಲಿ ಅಥವಾ ತನ್ನ ವಿಶ್ವಾಸನೀಯನಾದ ಯಾವನೇ ಇತರ ವ್ಯಕ್ತಿಯ ಮೂಲಕವಾಗಿಯಾಗಲೀ ಅಥವಾ ತನ್ನ ಲಾಭಕ್ಕಾಗಿ ಅಥವಾ ತನ್ನ ಪರವಾಗಿ ಸೂಕ್ತ ಸರ್ಕಾರಕ್ಕೆ ಸರಬರಾಜು ಮಾಡಲಾದ ಸರಕುಗಳ ಬಗೆಗಿನ ಒಡಂಬಡಿಕೆಯಲ್ಲಿ ಅಥವಾ ಸೂಕ್ತ ಸರ್ಕಾರ ಕೈಗೊಂಡಿರುವ ಯಾವುದೇ ಸೇವೆಗಳ ನಿರ್ವಹಣೆಯಲ್ಲಿ ಆತ ಯಾವುದೇ ಪಾಲು ಅಥವಾ ಆಸಕ್ತಿಯನ್ನು ಹೊಂದಿದ್ದಲ್ಲಿ ;

(ಇ) ಆತ ಯಾವುದೇ ನಿಗಮದ ನಿರ್ದೇಶಕ ಅಥವಾ ವ್ಯವಸ್ಥಾಪಕ ಏಜೆಂಟ್ ಆಗಿದ್ದಲ್ಲಿ ಅಥವಾ ಸೂಕ್ತ ಸರ್ಕಾರವು ಯಾವುದೇ ಪಾಲನ್ನು ಅಥವಾ ಹಣಕಾಸಿನ ಆಸಕ್ತಿಯನ್ನು ಹೊಂದಿರುವಂಥ ಯಾವುದೇ ನಿಗಮದ ಅಡಿಯಲ್ಲಿ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿದ್ದಲ್ಲಿ;

(ಎಫ್) ಭಾರತ ಸರ್ಕಾರದಲ್ಲಿ ಅಥವಾ ಯಾವುದೇ ರಾಜ್ಯದ ಸರ್ಕಾರದಲ್ಲಿ ಅಥವಾ ಭಾರತದಲ್ಲಿ ಬ್ರಿಟಿಷ್ ಪ್ರಭುತ್ವದಲ್ಲಿ ಅಥವಾ ಭಾರತೀಯ ರಾಜ್ಯದ ಆಡಳಿತಕ್ಕೊಳಪಟ್ಟಿರುವ ಸಂಸ್ಥೆಯಲ್ಲಿ ಯಾವುದೇ ಅಧಿಕಾರ ಸ್ಥಾನವನ್ನು ಹೊಂದಿದ್ದು, ಸಂವಿಧಾನ ಜಾರಿಗೆ ಬರುವುದಕ್ಕೆ ಮೊದಲು ಅಥವಾ ಅನಂತರ ಭ್ರಷ್ಟಾಚಾರಕ್ಕಾಗಿ, ಅಥವಾ ರಾಜ್ಯದ ಬಗೆಗಿನ ಅವಿಧೇಯುತೆಗಾಗಿ ವಜಾಗೊಳಿಸಲಾಗಿದ್ದಲ್ಲಿ; ಅಂಥ ವಜಾಗೊಳಿಸುವಿಕೆಯಿಂದ ಐದು ವರ್ಷಗಳ ಅವಧಿ ಕಳೆದು ಹೋಗಿರದೆ ಇದ್ದಲ್ಲಿ;

**೭ಎ. ಹೊರತುಪಡಿಸುವಿಕೆ:** ಪ್ರಕರಣ ೭ರಲ್ಲಿ ಏನೇ ಹೇಳಿದ್ದರೂ,

(ಎ) ಆ ಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದ ಅಡಿಯಲ್ಲಿ ವಿಧಿಸಲಾದ ಅನರ್ಹತೆ, ದೋಷಾರೋಪ ಸಾಬೀತಾದಂಥ ಅಥವಾ ದೋಷಾರೋಪ ಸಾಧಿತವಾಗಿ ಶಿಕ್ಷೆಯನ್ನು ವಿಧಿಸಲಾದಂಥ ವ್ಯಕ್ತಿಯ ವಿಷಯದಲ್ಲಿ, ಅನರ್ಹತೆಯನ್ನು ವಿಧಿಸಲಾದ ದಿನಾಂಕದಂದು ಸಂಸತ್ತಿನ ಅಥವಾ ಯಾವುದೇ ರಾಜ್ಯದ ಶಾಸಕಾಂಗದ ಸದಸ್ಯನಾಗಿದ್ದಲ್ಲಿ, ಅಂಥ ಅನರ್ಹತೆಯನ್ನು ವಿಧಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿ ಕಳೆಯುವವರೆಗೆ ಅಥವಾ ಅಂಥ ದೋಷಾರೋಪಣೆಯ ಅಥವಾ ಶಿಕ್ಷೆಯ ವಿಷಯದಲ್ಲಿ ಮೇಲ್ಮನವಿಯನ್ನು ಅಥವಾ ಪುನರ್–ವಿಮರ್ಶನ ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಆ ಮೇಲ್ಮನವಿಯ ಅಥವಾ ಅರ್ಜಿಯ ವಿಲೇವಾರಿ ಆಗುವತನಕ, ಜಾರಿಗೆ ಬರತಕ್ಕದ್ದಲ್ಲ;

(ಬಿ) ಚುನಾವಣಾ ವೆಚ್ಚಗಳ ಬಗೆಗಿನ ವಿವರಣ ಪತ್ರವನ್ನು ಸಲ್ಲಿಸಬೇಕಾಗಿದ್ದ ದಿನಾಂಕದಿಂದ ಎರಡು ತಿಂಗಳು ಕಳೆಯುವವರೆಗೆ ಅಥವಾ ನಿರ್ದಿಷ್ಟ ಪ್ರಕರಣದಲ್ಲಿ ಚುನಾವಣಾ ಆಯೋಗ ಅವಕಾಶ ಮಾಡಿಕೊಡುವಷ್ಟರ ಮಟ್ಟಿನ ದೀರ್ಘಾವಧಿಯವರೆಗೆ ಆ ಕಾಯ್ದೆಯ (ಸಿ) ಖಂಡದ ಅಡಿಯಲ್ಲಿನ ಅನರ್ಹತೆ ಜಾರಿಗೆ ಬರತಕ್ಕದ್ದಲ್ಲ;

(ಸಿ) ಪಿತ್ರಾರ್ಜಿತವಾಗಿ ಅಥವಾ ಉತ್ತರಾಧಿಕಾರದ ರೂಪದಲ್ಲಿ ಅಥವಾ ಉಯಿಲು ನಿರ್ವಾಹತ್ವದ ರೂಪದಲ್ಲಿ ಅಥವಾ ಆಡಳಿತಾಧಿಕಾರಿಯಾಗಿ ಪಾಲು ಅಥವಾ ಆಸಕ್ತಿ ವ್ಯಕ್ತಿಯೊಬ್ಬನಿಗೆ ದೊರೆಕೊಂಡಿದ್ದಲ್ಲಿ ಆ ಕಾಯ್ದೆಯ (ಡಿ) ಖಂಡದ ಅಡಿಯಲ್ಲಿನ ಅನರ್ಹತೆ, ಅಂಥ ದೊರೆಕೊಳ್ಳುವಿಕೆ ಆತನಿಗೆ ಲಭಿಸಿದ ದಿನಾಂಕದಿಂದ ಆರು ತಿಂಗಳ ಅವಧಿ ಕಳೆಯುವವರೆಗೆ ಅಥವಾ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಚುನಾವಣಾ ಆಯೋಗ ವಿಸ್ತರಿಸಬಹುದಾಗಿರುವಷ್ಟು ಅವಧಿಯವರೆಗೆ, ಜಾರಿಗೆ ಬರತಕ್ಕದ್ದಲ್ಲ.

(ಡಿ) ತಾನು ಶೇರನ್ನು ಅಥವಾ ಆಸಕ್ತಿಯನ್ನು ಹೊಂದಿರುವಂಥ ಸಾರ್ವಜನಿಕ ಕಂಪೆನಿ ಸೂಕ್ತ ಸರ್ಕಾರದೊಂದಿಗೆ ಏರ್ಪಡಿಸಿಕೊಂಡಿರುವ ಒಪ್ಪಂದದ ಕಾರಣವಾಗಿ, ಆ ಕಂಪೆನಿಯಲ್ಲಿ ಆತನು ಶೇರುದಾರ ಮಾತ್ರವಾಗಿದ್ದು ಲಾಭದಾಯಕ ಹುದ್ದೆಯನ್ನು ಹೊಂದಿರುವಂಥ ನಿರ್ದೇಶಕನಾಗಿರದೆ ಇದ್ದಲ್ಲಿ ಅಥವಾ ವ್ಯವಸ್ಥಾಪಕ ಏಜೆಂಟ್ ಆಗಿರದೆ ಇದ್ದಲ್ಲಿ, ಆ ಪ್ರಕರಣದ (ಡಿ) ಖಂಡದ ಅಡಿಯಲ್ಲಿ ಅಂಥ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕದ್ದಲ್ಲ.

(ಇ) ಸಂಸತ್ತಿನಿಂದ ಕಾನೂನಿನ ಮೂಲಕ ಧಾರಕನನ್ನು ಅನರ್ಹಗೊಳಿಸುವಂಥ ಘೋಷಣೆಯಾಗಿರದೆ ಇದ್ದಲ್ಲಿ, ಆತ ನಿರ್ದೇಶಕನಾಗಿರುವುದು ಆ ಪ್ರಕರಣದ (ಇ) ಖಂಡದ ಅಡಿಯಲ್ಲಿ ಕಾನೂನು ಬದ್ಧವಾಗಿದ್ದಲ್ಲಿ ಅಂಥ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕದ್ದಲ್ಲ.

(ಎಫ್) ಅಂಥ ನಿರ್ದೇಶಕ ಹುದ್ದೆಯ ಬಗ್ಗೆ, ಈ ಪ್ರಕರಣ (ಇ) ಖಂಡದಲ್ಲಿ ಉಲ್ಲೇಖಿಸಲಾಗಿರುವಂಥ ಘೋಷಣೆಯನ್ನು ಮಾಡಲಾದ ಬಳಿಕ, ಆ ನಿರ್ದೇಶಕನನ್ನು ಸಂಸತ್ತಿನ ಅಥವಾ ರಾಜ್ಯದ ಶಾಸಕಾಂಗದ ಸದಸ್ಯನನ್ನಾಗಿ ಚುನಾಯಿಸಲಾಗಿದ್ದಲ್ಲಿ, ಅಂಥ ಕಾನೂನು ಜಾರಿಗೆ ಬಂದ ದಿನಾಂಕದಿಂದ ಆರು ತಿಂಗಳ ಅವಧಿ ಕಳೆಯುವವರೆಗೆ ಅಥವಾ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಚುನಾವಣಾ ಆಯೋಗ ವಿಸ್ತರಿಸಬಹುದಾಗಿರುವಷ್ಟು ದೀರ್ಘ ಅವಧಿಯವರೆಗೆ, ಆ ಪ್ರಕರಣದ (ಇ) ಖಂಡದ ಅಡಿಯಲ್ಲಿನ ಅನರ್ಹತೆ ಜಾರಿಗೆ ಬರತಕ್ಕದ್ದಲ್ಲ.

(ಜಿ) ಈ ಕಾಯ್ದೆಯ ಅಡಿಯಲ್ಲಿನ ಮೊದಲ ಚುನಾವಣೆಗಳಿಗೆ ಸ್ಪರ್ಧಿಸಿರುವ ಯಾವನೇ ಅಭ್ಯರ್ಥಿಯ ವಿಷಯದಲ್ಲಿ, ಆ ಪ್ರಕರಣದ (ಎಫ್) ಖಂಡದ ಅನರ್ಹತೆಯನ್ನು, ಲಿಖಿತವಾಗಿ ದಾಖಲಿಸಬೇಕಾಗಿರುವ ಕಾರಣಗಳ ಮೇಲೆ, ಚುನಾವಣಾ ಆಯೋಗ ತೆಗೆದುಹಾಕಬಹುದು.

೭ಬಿ. **ವ್ಯಾಖ್ಯಾನ, ಇತ್ಯಾದಿ**–(೧) ಈ ಅಧ್ಯಾಯದಲ್ಲಿ–

(ಎ) "ಸೂಕ್ತ ಸರ್ಕಾರ" ಎಂದರೆ ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿ ಇರುವುದಕ್ಕೆ ವಿಧಿಸಲಾಗುವ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಎಂದೂ, ರಾಜ್ಯದ ವಿಧಾನಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿ ಇರುವುದಕ್ಕೆ ವಿಧಿಸಲಾಗುವ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಎಂದೂ ಅರ್ಥ.

(ಬಿ) "ಸಾರ್ವಜನಿಕ ಕಂಪೆನಿ" ಎಂದರೆ ಭಾರತೀಯ ಕಂಪೆನಿಗಳ ಅಧಿನಿಯಮ ೧೯೧೩ (೧೯೧೩ರ VII)ರಲ್ಲಿ ಪರಿಭಾಷಿಸಲಾಗಿರುವಂತೆ "ಸಾರ್ವಜನಿಕ ಕಂಪೆನಿ" ಎಂದು ಅರ್ಥ.

(೨) ಅನುಮಾನವನ್ನು ನಿವಾರಿಸುವ ಸಲುವಾಗಿ, ಈ ಮೂಲಕ ಹೀಗೆಂದು ಘೋಷಿಸಲಾಗಿದೆ: ಪ್ರಕರಣ ೭ರ (ಡಿ) ಖಂಡದಲ್ಲಿ ಉಲ್ಲೇಖಿಸಲಾಗಿರುವಂತೆ ಹಿಂದೂ ಅವಿಭಕ್ತ ಕುಟುಂಬ ಮತ್ತು ಸೂಕ್ತ ಸರ್ಕಾರ ಯಾವುದೇ ಒಪ್ಪಂದವನ್ನು ಏರ್ಪಡಿಸಿಕೊಂಡಿದ್ದಲ್ಲಿ, ಆ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಸದರಿ ಖಂಡ (ಡಿ)ದಲ್ಲಿ ಉಕ್ತವಾಗಿರುವ ಅನರ್ಹತೆಗೆ ಒಳಗಾಗಿರುತ್ತಾನೆ. ಆದರೆ ಪ್ರತ್ಯೇಕ ವಹಿವಾಟನ್ನೇ ನಡೆಸುತ್ತಿರುವ ಹಿಂದೂ ಅವಿಭಕ್ತ ಕುಟುಂಬದ ಸದಸ್ಯನೊಂದಿಗೆ ವಹಿವಾಟಿನ ಅಂಗವಾಗಿ ಒಪ್ಪಂದವನ್ನು ಏರ್ಪಡಿಸಿಕೊಂಡಿದ್ದಲ್ಲಿ, ಆ ವಹಿವಾಟಿನಲ್ಲಿ ಯಾವುದೇ ಪಾಲು ಅಥವಾ ಆಸಕ್ತಿಯನ್ನು ಹೊಂದಿರದೆ ಇರುವ ಸದರಿ ಕುಟುಂಬದ ಬೇರಾವನೇ ಸದಸ್ಯ ಅಂಥ ಅನರ್ಹತೆಗೆ ಒಳಗಾಗತಕ್ಕದ್ದಲ್ಲ.

(೩) ಪ್ರಕರಣ ೭ರ ಖಂಡ (ಎಫ್)ನಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಹುದ್ದೆಯನ್ನು ಹೊಂದಿದ್ದು, ವಜಾಗೊಂಡಿದ್ದಲ್ಲಿ, ಆ ಖಂಡದ ಅಡಿಯಲ್ಲಿ ಸಂಸತ್ತಿನ ಉಭಯ ಸದನಗಳಲ್ಲಿ ಯಾವುದಕ್ಕಾದರೂ ಅಥವಾ ರಾಜ್ಯದ ವಿಧಾನ

ಸಭೆಯ ಅಥವಾ ವಿಧಾನ ಪರಿಷತ್ತಿಗೆ ಸದಸ್ಯರಾಗಲು ಅನರ್ಹರಾಗುತ್ತಾರೆಯೆ ಎಂಬ ವಿಷಯದ ಬಗ್ಗೆ ಯಾವುದಾದರೂ ಪ್ರಶ್ನೆಯನ್ನು ಎತ್ತಿದಲ್ಲಿ, ಅಂಥ ವ್ಯಕ್ತಿಯನ್ನು ಭ್ರಷ್ಟಾಚಾರ ಅಥವಾ ಅವಿಧೇಯತೆಗಾಗಿ ವಜಾ ಮಾಡಲಾಗಿಲ್ಲವೆಂಬುದಕ್ಕೆ ಚುನಾವಣಾ ಆಯೋಗ ನಿಗದಿತ ರೀತಿಯಲ್ಲಿ ನೀಡಿರುವ ಪ್ರಮಾಣ ಪತ್ರವನ್ನು ಸಾದರಪಡಿಸಿದರೆ, ಆ ಖಂಡದ ಅಡಿಯಲ್ಲಿ ಆತನು ಅನರ್ಹನಾಗಿಲ್ಲವೆಂಬುದಕ್ಕೆ ಅದೇ ನಿರ್ಧಾರಕ ಸಾಕ್ಷ್ಯವಾಗಿರ ತಕ್ಕದ್ದು.

**ಮಾನ್ಯ ಉಪಾಧ್ಯಕ್ಷರು:** ತಿದ್ದುಪಡಿಗಳನ್ನು ಮಂಡಿಸಲಾಗಿದೆ.

**೧೨.೦೦ ಗಂಟೆ ಅಪರಾಹ್ನ.**

**ಮಾನ್ಯ ಉಪಾಧ್ಯಕ್ಷರು:** ಯಾವುದಾದರೂ ತಿದ್ದುಪಡಿಗಳು ಇದ್ದಲ್ಲಿ ತಿಳಿಸಿ.

**ಪ್ರಾ ॥ ಕೆ.ಟಿ.ಶಾ:** ಸಮುಚ್ಚಯ ಪಟ್ಟಿಗೆ ಸಂಬಂಧಿಸಿದಂತೆ ನನ್ನದೊಂದು ತಿದ್ದುಪಡಿ ಇದೆ.

**ಮಾನ್ಯ ಉಪಾಧ್ಯಕ್ಷರು:** ಅದು ಹಳೆಯ ಕಲಂ ೭ ಕ್ಕೆ ಸಂಬಂಧಿಸಿದ ತಿದ್ದುಪಡಿ ಎಂದು ಅನಿಸುತ್ತದೆ.

**ಪ್ರಾ ॥ ಕೆ.ಟಿ.ಶಾ:** ಅದೇ ನಮ್ಮ ತೊಂದರೆ. ಈ ಹೊಸ ಕಲಂ ಅನ್ನು ಹಠಾತ್ತನೆ ಮಂಡಿಸಲಾಗಿದೆ. ಈ ಸಂಬಂಧದಲ್ಲಿ ಹೊಸ ವಿಚಾರಗಳನ್ನಾದರೂ ಮಂಥನ ಮಾಡಬೇಕು....

**ಮಾನ್ಯ ಉಪಾಧ್ಯಕ್ಷರು:** ಮಾನ್ಯ ಸದಸ್ಯರುಗಳ ತೊಂದರೆ ನನಗೆ ವೇದ್ಯವಾಗಿದೆ. ಈಗ ಚರ್ಚಿತವಾಗುತ್ತಿರುವ ಹಳೆಯ ಕಲಂ ೭ ರ ಬದಲು ಹೊಸ ತಿದ್ದುಪಡಿಯ ಪ್ರತಿಯನ್ನು ನೆನ್ನೆ ರಾತ್ರಿ ಅಥವಾ ಈ ಬೆಳಗ್ಗೆ ಹಂಚಲಾಗಿದೆ. ಈ ವಿಚಾರವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ನಾವು ೭ ನೇ ಕಲಂ ಅನ್ನು ಮಧ್ಯಾಹ್ನ ೩.೩೦ ಕ್ಕೆ ತೆಗೆದುಕೊಳ್ಳೋಣ. ಹಾಗೂ ಯಾವುದೇ ಸೂಚಿಗಳಿದ್ದರೂ ಅವುಗಳನ್ನು ಕಲ್ಲಚ್ಚು ಮಾಡಿ ಪ್ರತಿಗಳನ್ನು ಮಾನ್ಯ ಸದಸ್ಯರುಗಳಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತೇನೆ. ಯಾವ ಔಪಚಾರಿಕ ವಿಧಿಗಳೂ ಇಲ್ಲದೆ ತಮ್ಮ ತಿದ್ದುಪಡಿಗಳನ್ನು ಕಾರ್ಯದರ್ಶಿಗಳಿಗೆ ನೀಡಿ. ಅವುಗಳನ್ನು ಮಧ್ಯಾಹ್ನ ೩.೩೦ ಕ್ಕೆ ಅವಗಾಹನೆಗೆ ತೆಗೆದುಕೊಳ್ಳೋಣ. ೭ ನೇ ಕಲಂ ಮಾತ್ರ ಯಥಾಸ್ಥಿತಿಯಲ್ಲಿರಲಿ. ಈಗ ಯಾವ ಬೇರೆ ಕಲಮನ್ನು ಚರ್ಚಿಸೋಣ?

**ಡಾ. ಅಂಬೇಡ್ಕರ್:** ಸ್ವಾಮಿ ನಾನು ೧೬೬ ಎ ಗೆ ಹೊಸ ಕಲಮನ್ನು ಸೇರಿಸಬೇಕೆಂದಿದ್ದೇನೆ.

**ಮಾನ್ಯ ಉಪಾಧ್ಯಕ್ಷರು:** ೭ ನೇ ಕಲಂ ಯಥಾಸ್ಥಿತಿಯಲ್ಲಿ ಇರಿಸಿದ್ದೇವೆ. ಒಂದು ಕ್ರಮದಲ್ಲಿ ಮುಂದುವರಿಸೋಣ. ೧೨೨,೧೨೩,೧೨೪ ನೇ ಕಲಂಗಳ ನಂತರ ಬೇರೆ ಕಲಂಗಳು ಸಹ ಕಾಯುತ್ತಿವೆ. ಅವುಗಳು ಯಾವಾಗ ತಯಾರಾಗುತ್ತದೆಂಬ ವಿಚಾರ ಕರಡು ತಯಾರಕರ ಮೇಲೆ ಅವಲಂಬಿಸಿದೆ. ಅವುಗಳು ತಯಾರಾಗಿದ್ದಲ್ಲಿ ಅವುಗಳನ್ನು ಈ ಮಧ್ಯಾಹ್ನ ತೆಗೆದುಕೊಳ್ಳೋಣ.

**ಶ್ರೀ ಕಾಮತ್:** ಸ್ವಾಮೀ, ಅನೇಕ ವಿಚಾರಗಳನ್ನು ಹಾರಿಸಿ ಬಿಡಲಾಗುತ್ತಿದೆ.

**ಮಾನ್ಯ ಉಪಾಧ್ಯಕ್ಷರು:** ನಾವು ಕ್ರಮ ತಪ್ಪಿಸಿ ಮುಂದೆ ಹೋಗುವುದು ಬೇಡ.

ಅಲ್ಲದೆ ಒಂದು ಕಲಂ ತಯಾರಾಗದಿದ್ದಲ್ಲಿ ಅದನ್ನು ಬಿಟ್ಟು ಮುಂದೆ ಹೋಗೋಣ.

**ಹೊಸ ಕಲಂ: ೧೬೬ ಎ**

**ಡಾ. ಅಂಬೇಡ್ಕರ್:** ಈಗ ನಾವು ೧೬೬ ಎ ಕಲಮನ್ನು ತೆಗೆದುಕೊಳ್ಳೋಣ. ನನ್ನ ತಿದ್ದುಪಡಿ ಸಂಖ್ಯೆ ಎಂಟು–ಅನುಬಂಧಿತ ಪಟ್ಟಿ ೭ ರಂತೆ ಪಟ್ಟಿ ೨ ನೇ ಸಂಖ್ಯೆ. ಆದರೆ ನಾನು ಆ ತಿದ್ದುಪಡಿಯಲ್ಲಿ ಒಂದೆರಡು ಪದಗಳನ್ನು ಬದಲಾಯಿಸಬೇಕಾಗಿದೆ. ಉಪವಿಭಾಗ ೭ ನೇ ಸಾಲಿನಲ್ಲಿ "ಒಬ್ಬ ಅಭ್ಯರ್ಥಿಯಾಗಿ

ನಾಮ ನಿರ್ದೇಶನ" ಎಂಬುದನ್ನು "ಆ ರೀತಿಯ ಅಭ್ಯರ್ಥಿಯಾಗಿ ನಾಮ ನಿರ್ದೇಶನ" – ಎಂದರೆ "ಒಬ್ಬ" ಎನ್ನುವ ಬದಲು "ರೀತಿಯ" ಎಂಬ ಬದಲಾವಣೆ. ೨ ನೇ ಉಪ ವಿಭಾಗದಲ್ಲಿ (ಎ) ಮತ್ತು (ಬಿ) ಅನ್ನು (ಬಿ) ಮತ್ತು (ಸಿ) ಎಂದು ಪುನಃ ಸಂಖ್ಯೆ ನೀಡಬಯಸುತ್ತೇನೆ. ಹಾಗೂ ಇದಕ್ಕೆ ನಾನು ಒಂದು ಹೊಸಭಾಗ (ಎ) ಎಂಬುದನ್ನು ಸೇರಿಸಬಯಸುತ್ತೇನೆ.

ಅದು ಈ ರೀತಿ ಇದೆ:

"(ಎ) "ಅಭ್ಯರ್ಥಿ" ಎಂಬುದಕ್ಕೆ ೭೮ನೆಯ ಪ್ರಕರಣದಲ್ಲಿ ಇರುವ ಅರ್ಥವೇ ಇರುತ್ತದೆ.

ಮೇಲೆ ಮಾರ್ಪಡಿಸಿರುವಂತೆ, ನಾನು ತಿದ್ದುಪಡಿಯನ್ನು ಮಂಡಿಸಬಯಸುತ್ತೇನೆ. ನಾನು ಮಂಡಿಸುವುದು:

೧೫೬ನೆಯ ಖಂಡದ ಬಳಿಕ ಭಾಗ Xರಲ್ಲಿ, ಈ ಕೆಳಗಿನ ಖಂಡವನ್ನು ಸೇರಿಸಿಕೊಳ್ಳಿ:

**"೧೬೬ ಎ. ಭಾರತದಲ್ಲಿನ ರಾಜ್ಯಗಳ ಮಾಜಿ ದೊರೆಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು:**

(೧) ಈ ಕಾಯ್ದೆಯ ಅಡಿಯಲ್ಲಿ, ಭಾರತದಲ್ಲಿನ ರಾಜ್ಯದ ಮಾಜಿ ದೊರೆಯನ್ನು ಯಾವುದೇ ಚುನಾವಣೆಗೆ ನಾಮಕರಣ ಮಾಡಿದಲ್ಲಿ, ೧೯೦೮ರ (೧೯೦೮ರ ಕಾಯ್ದೆ V) ನಾಗರಿಕ ಪ್ರಕ್ರಿಯಾ ಸಂಹಿತೆಯ ೮೭–ಬಿ ಪ್ರಕರಣದ (೧)ನೆಯ ಉಪ–ಪ್ರಕರಣದ ಹಾಗೂ ೧೮೯೮ (೧೮೯೮ರ ಕಾಯ್ದೆ V)ರ ಅಪರಾಧ ಪ್ರಕ್ರಿಯಾ ಸಂಹಿತೆಯ ೧೮೭ನೆಯ ಪ್ರಕರಣದ (೨) ಮತ್ತು (೩)ನೆಯ ಉಪ–ಪ್ರಕರಣಗಳ ಉಪ–ಬಂಧಗಳು ಅಂಥ ದೊರೆಗೆ ಅನ್ವಯವಾಗುವುದಿಲ್ಲ. ಅಂಥ ಚುನಾವಣೆಯ ಅಭ್ಯರ್ಥಿಯಾಗಿ (ಅವರ ನಾಮಕರಣದ ದಿನಾಂಕದಿಂದ ಆರಂಭಗೊಂಡು ಪ್ರಕರಣ ೬೬ರ ಮೇರೆಗೆ ಚುನಾವಣೆಯ ಫಲಿತಾಂಶ ಪ್ರಕಟವಾಗುವ ದಿನಾಂಕದೊಂದಿಗೆ ಕೊನೆಗೊಳ್ಳುವವರೆಗೆ) ಹಾಗೂ ಆ ಬಳಿಕವೂ ಅಂಥ ಚುನಾವಣೆಯ ಸಿಂಧುತ್ವ ಅಥವಾ ಕ್ರಮಬದ್ಧತೆಯನ್ನು ಪ್ರಶ್ನಿಸುವ ಯಾವುದೇ ನಡೆವಳಿಗೆ ಅಥವಾ ಭಾರತೀಯ ದಂಡ ಸಂಹಿತೆಯ IX–ಎ ಅಧ್ಯಾಯದ ಅಥವಾ ಈ ಕಾಯ್ದೆಯ VIIನೆಯ ಭಾಗದ ಮೂರನೆಯ ಅಧ್ಯಾಯಕ್ಕೆ ಸಂಬಂಧಿಸಿದಂತೆ ಆತ ಅಂಥ ಚುನಾವಣೆಯಲ್ಲಿ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಎಸಗಿದ್ದಾನೆಂದು ಆರೋಪಿಸಲಾಗಿರುವ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆಯೂ ಈ ಉಪಬಂಧಗಳು ಅನ್ವಯವಾಗುವುದಿಲ್ಲ.

(೨) ಈ ಪ್ರಕರಣದಲ್ಲಿ–

(ಎ) "ಅಭ್ಯರ್ಥಿ" ಎಂಬುದಕ್ಕೆ ಇರುವ ಅರ್ಥ ೭೮ನೆಯ ಪ್ರಕರಣದಲ್ಲಿ ಇರುವ ಅರ್ಥವೇ ಆಗಿರುತ್ತದೆ.

(ಬಿ) "ಹಿಂದಿನ ಭಾರತೀಯ ರಾಜ್ಯ" ಎಂದರೆ, ಈ ಪ್ರಕರಣದ ಉದ್ದೇಶಗಳಿಗಾಗಿ ಅಧಿಕೃತ ಗೆಜೆಟ್ಟಿನಲ್ಲಿ ಅಧಿಸೂಚನೆಯ ಮೂಲಕ ಕೇಂದ್ರಸರ್ಕಾರ ನಿರ್ದಿಷ್ಟಪಡಿಸಿರುವ ಅಂಥ ಯಾವುದೇ ಭಾರತೀಯ ರಾಜ್ಯ ಎಂದು ಅರ್ಥ.

(ಸಿ) ಹಿಂದಿನ ಭಾರತೀಯ ರಾಜ್ಯಕ್ಕೆ ಸಂಬಂಧಿಸಿದಂತೆ "ದೊರೆ" ಎಂದರೆ ಸಂವಿಧಾನದ ಉದ್ದೇಶಗಳಿಗಾಗಿ, ರಾಷ್ಟ್ರಪತಿಗಳಿಂದ, ಆ ಕಾಲದ ಮಟ್ಟಿಗೆ, ಆ ರಾಜ್ಯದ ದೊರೆ ಎಂಬುದಾಗಿ ಮಾನ್ಯ ಮಾಡಲಾಗಿರುವಂಥ ವ್ಯಕ್ತಿ ಎಂದು ಅರ್ಥ.

**ಮಾನ್ಯ ಉಪಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಚರ್ಚೆಗೆ ಇಡಲಾಗಿದೆ.

**ಪ್ರಾ: ಕೆ.ಟಿ.ಶಾ:** ಈ ತಿದ್ದುಪಡಿಯನ್ನು ನಾವು ಅರ್ಥೈಸಲು ಆಗುತ್ತಿಲ್ಲ. ತಾವು ದಯಮಾಡಿ ವಿವರಣೆ ನೀಡುತ್ತೀರಾ? ಈ ಪ್ರಕಾರ ರಾಜರುಗಳು ಅಭ್ಯರ್ಥಿಗಳಾಗುತ್ತಾರೆಯೇ? ಹಾಗಿದ್ದಲ್ಲಿ ಅವರಿಗೆ ಅಪರಾಧ ಸಂಹಿತೆಯ ವಿಧಿಗಳಿಂದ ವಿನಾಯಿತಿ ನೀಡುತ್ತೀರಾ?

**ಡಾ. ಅಂಬೇಡ್ಕರ್:** ಸ್ಥಿತಿ ಹೀಗಿದೆ. ಈ ಮಹಾ ಸಭೆಯ ನೆನಪಿನಲ್ಲಿದ್ದಂತೆ ಸಮಿತಿಯ ವರದಿಯ ಚರ್ಚೆ ನಡೆಸಿದಾಗ ರಾಜರುಗಳನ್ನು ಶಾಸನ ಸಭಾ ಸದಸ್ಯರಾಗುವುದನ್ನು ಅನೂರ್ಜಿತಗೊಳಿಸಲಾಗಿತ್ತು. ಈ ಸಂಬಂಧ ಅನೇಕ ಸಮರ್ಥನೆಗಳನ್ನು ನೀಡಲಾಗಿತ್ತು. ಒಂದು ಸಮರ್ಥನೆಯ ಪ್ರಕಾರ ಈ ರಾಜರುಗಳು ಭಾರತ ಸರಕಾರದಿಂದ ಲಾಭ ತರುವ ಅಧಿಕಾರ ಗದ್ದಿಯನ್ನು ಹೊಂದಿದ್ದರಿಂದ, ಎಂದರೆ ಭಾರತ ಸರಕಾರದೊಡನೆ ಮಾಡಿಕೊಂಡ ಏರ್ಪಾಡುಗಳ ಪ್ರಕಾರ ಅದು ಈ ರಾಜರುಗಳಿಗೆ ವಾರ್ಷಿಕವಾಗಿ ಇಷ್ಟು ಹಣ ನೀಡಬೇಕೆಂದು ನಿಶ್ಚಯಿಸಲಾಗಿತ್ತು. ಆ ಸಂದರ್ಭದಲ್ಲಿ ಈ ರಾಜರುಗಳು ಲಾಭದಾಯಕ ಹುದ್ದೆಯನ್ನು ಹೊಂದಿದ್ದಾರೆಂದು ನನಗೆ ಹೊಳೆದಿರಲಿಲ್ಲ. ಆದ್ದರಿಂದ ರಾಜರುಗಳನ್ನು ಸಂವಿಧಾನದ ಲಾಭದಾಯಕ ಹುದ್ದೆಗಳಿಗೆ ಸಂಬಂಧಪಟ್ಟಂತೆ ಒಳಪಡಿಸಿರಲಿಲ್ಲ. ಈ ಚರ್ಚೆ ನಡೆದಾಗಲೂ ಸಹ ನಾನು ರಾಜ/ಯುವರಾಜನಾದವನು ಶಾಸನಸಭಾ ಸದಸ್ಯತ್ವಕ್ಕೆ ಅನೂರ್ಜಿತನಾಗಲು ಕೊಟ್ಟ ಸಮರ್ಥನೆಗಳನ್ನು ನಾನು ಒಪ್ಪಿರಲಿಲ್ಲ. ನಂತರ ಈ ರಾಜರುಗಳು ಅಪರಾಧ ಸಂಹಿತೆ ವಿಧಿಗಳು, ನಾಗರಿಕ ಸ್ಪಷ್ಟ ಸ್ಥಿತಿ ಕಾನೂನುಗಳಿಂದ ವಿನಾಯಿತಿ ಪಡೆದಿರುವ ವಿಚಾರವನ್ನು ನನ್ನ ಗಮನಕ್ಕೆ ತಂದರು. ಹಾಗಾಗಿ ಇವರುಗಳ ವಿರುದ್ಧ ಯಾವ ಪ್ರಜೆಯೂ ಕೇಂದ್ರ ಸರಕಾರದ ಅನುಮತಿ ಇಲ್ಲದೆ ಈ ಎರಡೂ ವಿಧಗಳಡಿಯಲ್ಲಿ ದೂರನ್ನು ದಾಖಲು ಮಾಡಲು ಸೌಕರ್ಯಗಳು ಇರಲಿಲ್ಲ. ಈ ಕಾರಣದಿಂದಾಗಿ ರಾಜನಾಗಿರುವ ಒಬ್ಬ ಅಭ್ಯರ್ಥಿ ನಾಮಪತ್ರ ಸಲ್ಲಿಕೆ ದಿನದಿಂದ ಚುನಾವಣೆ ದಿನದವರೆಗೆ ಯಾವನಾದರೂ ಅಪರಾಧ ಮಾಡಲಿ ಅಥವಾ ಲಂಚದ ಪ್ರಕರಣದಲ್ಲಿ ಭಾಗಿಯಾಗಿದ್ದರೆ ಅಂತಹವನ ವಿರುದ್ಧ ಭಾರತ ಸರಕಾರದ ಒಪ್ಪಿಗೆಯಿಲ್ಲದೆ ಕಾನೂನಿನ ಕ್ರಮಕ್ಕೆ ಒಳಪಡಿಸಲು ಸಾಧ್ಯವಿರಲಿಲ್ಲ. ಇದು ಒಂದು ನ್ಯಾಯ ಸಮ್ಮತವಾದ ದೂರು ಎಂದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಈ ರೀತಿಯಲ್ಲಿ ಒಬ್ಬ ರಾಜ ಶಾಸನ ಸಭೆಯ ಚುನಾವಣೆಗೆ ಸ್ಪರ್ಧಿಯಾದ ಪಕ್ಷದಲ್ಲಿ ಅಂತಹವನಿಗೂ ಸಂವಿಧಾನದ ನಿಬಂಧನೆ ಪ್ರಕಾರ ಅಪರಾಧ ಸಂಹಿತೆ ಹಾಗೂ ಸ್ಪಷ್ಟ ಸ್ಥಿತಿ ಕಾನೂನಿನ ನಿಬಂಧನೆಗಳಿಂದ ವಿನಾಯಿತಿ ಪಡೆಯಲು ಅವಕಾಶ ನೀಡಬಾರದೆಂದು ನನ್ನ ವಿಚಾರ. ಆದ್ದರಿಂದ ಈ ತಿದ್ದುಪಡಿಯ ವಿಚಾರವೇನೆಂದರೆ ಒಬ್ಬ ಯುವರಾಜ/ರಾಜ ಒಂದು ಶಾಸನಸಭೆ/ಸಂಸತ್ ಚುನಾವಣೆಗೆ ಒಂದು ಕ್ಷೇತ್ರದ ಅಭ್ಯರ್ಥಿಯಾದರೆ ತಕ್ಷಣ ಅಂತಹ ರಾಜನಿಗೆ ಅಪರಾಧ ಸಂಹಿತೆಗಾಗಿ ಸ್ಪಷ್ಟ ಸ್ಥಿತಿ ಕಾನೂನಿನ ನಿಬಂಧನೆಗಳಿಂದ ವಿನಾಯಿತಿಯನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಹಾಗೂ ಈ ನಿಯಮಗಳಂತೆ ಅವನು ಅಪರಾಧವೆಸಗಿದರೆ ಅವನ ವಿರುದ್ಧ ಕಾನೂನಿನ ಕ್ರಮ ಜರುಗಿಸಲು ಭಾರತ ಸರ್ಕಾರದ ಅನುಮತಿಯನ್ನು ಪಡೆಯಬೇಕಾಗಿಲ್ಲ. ಅಂತಹ ಸನ್ನಿವೇಶದಲ್ಲಿ ಅವನ ವಿರುದ್ಧ ಒಂದು ಚುನಾವಣೆ ಮೊಕದ್ದಮೆಯನ್ನು ಭಾರತ ಸರಕಾರದ ಒಪ್ಪಿಗೆ ಇಲ್ಲದೆ ಸಹ ಹೂಡಬಹುದು. ಅವನನ್ನು ಒಬ್ಬ

ಸಾಮಾನ್ಯ ಪ್ರಜೆ, ಎಂದರೆ, ಯಾವ ವಿಶೇಷ ಹಕ್ಕು ಲಾಭ ವಿನಾಯಿತಿಗಳಿಗೆ ಅವನು ಹಕ್ಕುದಾರನಾಗುವುದಿಲ್ಲ. ನನ್ನ ಪ್ರಕಾರ ವಿಚಾರದಲ್ಲಿ ಒಂದು ಮಧ್ಯಮ ಮಾರ್ಗದ ಸುಲಭೋಪಾಯವಿದೆ. ಹಳೆಯ ನಿಬಂಧನೆಗಳ ಪ್ರಕಾರ ಹಾಗೂ ಆಯ್ಕೆ ಸಮಿತಿಯ ವರದಿಯ ಪ್ರಕಾರ ಅವರು ಪಾರ್ಲಿಮೆಂಟ್ ಸದಸ್ಯರಾಗಿ/ಶಾಸನ ಸಭಾ ಸದಸ್ಯರಾಗಿ ಚುನಾವಣೆ ಅರ್ಹರು ಹಾಗೂ ಹಾಗೆ ಮಾಡುವ ಕ್ರಮದಲ್ಲಿ ಆ ರಾಜರುಗಳನ್ನು ಅಪರಾಧ ಸಂಹಿತೆ ಮತ್ತು ಸ್ಪಷ್ಟ ಸ್ಥಿತಿ ಕಾರ್ಯವಿಧಾನ ಕಾನೂನಿನ ಚೌಕಟ್ಟಿನಿಂದ ವಿನಾಯತಿ ಕೊಟ್ಟು ಅವರಿಗೆ ಅದರಿಂದ ಬರುವ ಹಕ್ಕು ಬಾಧ್ಯತೆಗಳಿಂದ ವಂಚಿತರಾಗಿ ಮಾಡಬಾರದು. ಹಾಗೂ ಮತ್ತೊಂದು ಸಂಸತ್ ತೀರ್ಮಾನದ ಪ್ರಕಾರ ಆ ರೀತಿಯ ಆ ರಾಜರುಗಳನ್ನು ಚುನಾವಣೆಗಳಲ್ಲಿ ಸ್ಪರ್ಧಿಸಲು ಅನೂರ್ಜಿತಗೊಳಿಸಬೇಕು.

ಮಧ್ಯದ ದಾರಿಯ ಸುಲಭೋಪಾಯವನ್ನು ಕಾನೂನು ಮಾಡುವ ಈ ತಿದ್ದುಪಡಿಯನ್ನು ಈ ಗೌರವಾನ್ವಿತ ಸಭೆ ಒಪ್ಪುತ್ತದೆಂದು ನಂಬಿದ್ದೇನೆ.

**ಮೌಲ್ವಿವಾಜಿವ್ ಆಲಿ (ಅಸ್ಸಾಂ):** ನಾನು ಮಾನ್ಯ ಕಾನೂನು ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳಬಹುದೇ? ಯಾವುದೇ ಕಾರಣಕ್ಕಾಗಿ ಅಂತಹ ಅಭ್ಯರ್ಥಿಯು ಚುನಾಯಿತನಾಗದಿದ್ದರೆ ಅಥವಾ ಚುನಾವಣೆಗೆ ನಿಲ್ಲದೆಯೇ ಹೋದರೆ ಈ ವಿನಾಯಿತಿಗಳು ಹಾಗೂ ಆಗುತ್ತವೆಯೇ ಅಥವಾ ಪುನರುಜ್ಜೀವಗೊಳ್ಳುತ್ತವೆಯೇ?

**ಡಾ. ಅಂಬೇಡ್ಕರ್:** ರಕ್ಷಣೆಯ ಅಮಾನತು ನಾಮ ಪತ್ರಗಳ ಸಲ್ಲಿಕೆ ಹಾಗೂ ಚುನಾವಣೆಯ ಮುಕ್ತಾಯ ಇವುಗಳ ಮಧ್ಯದ ಕಾಲಕ್ಕೆ ಮಾತ್ರ ಲಾಗೂ ಆಗುತ್ತದೆ.

**ಡಾ. ಪಟ್ಟಾಭಿ (ಮದ್ರಾಸ್):** ನಾವುಗಳು ಚುನಾವಣೆಯ ಎಲ್ಲ ಸಾಮಾನ್ಯ ಪರಿಣಾಮಗಳನ್ನು ಎದುರಿಸಲು ತಯಾರಿರಬೇಕಾಗುತ್ತದೆ.

**ಡಾ. ಅಂಬೇಡ್ಕರ್:** ಆ ರೀತಿಯ ಅಭ್ಯರ್ಥಿಯು ಚುನಾವಣೆಯ ಎಲ್ಲಾ ಪರಿಣಾಮಗಳಿಗೂ ಬಾಧ್ಯನಾಗುತ್ತಾನೆ.

**ಪ್ರಾ. ಕೆ.ಟಿ.ಶಾ.:** ರಾಜ/ಯುವರಾಜರುಗಳಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡುವ ಬಗ್ಗೆ ಈ ಸಭೆಯ ಬದ್ಧತೆ ಇದೆಯೇ ಎಂಬ ವಿಚಾರದ ಬಗ್ಗೆ ತಿಳಿಯಲು ಇಚ್ಛಿಸುತ್ತೇನೆ.

**ಮಾನ್ಯ ಉಪಾಧ್ಯಕ್ಷರು:** ಮಸೂದೆಯಲ್ಲಿ ಆ ರೀತಿಯ ನಿಷೇದ ಇಲ್ಲ. ಏಕೆಂದರೆ ಅದು ಆಯ್ಕೆ ಸಮಿತಿಯಿಂದ ಹೊರಬಿದ್ದ ಮಸೂದೆ. ಅಲ್ಲದೆ ಒಬ್ಬ ಯುವರಾಜ ಅಭ್ಯರ್ಥಿಯಾಗಿ ಸ್ಪರ್ಧಿಸಲು ಸಂವಿಧಾನದಲ್ಲಾಗಲೀ ಆಯ್ಕೆ ಸಮಿತಿಯ ಶಿಫಾರಸುಗಳಲ್ಲಾಗಲೀ ಇಲ್ಲವಾದ್ದರಿಂದ ಮಾನ್ಯ ಸದಸ್ಯರು ಪ್ರಶ್ನೆಯನ್ನು ಅನ್ಯ ರೀತಿಯಲ್ಲಿ ಕೇಳಬೇಕೆಂದು ವಿನಂತಿ.

ಮಸೂದೆಗೆ ಒಪ್ಪಿಗೆ ದೊರೆತಿದೆ.

ಹಾಗೂ ಹೊಸ ಕಲಂ ೧೬೬ ಎ ಅನ್ನು ಮಸೂದೆಗೆ ಸೇರಿಸಲಾಗಿದೆ.

**ಕಲಂ ೧೬೭.**— (ನಿಯಮಗಳನ್ನು ರಚಿಸಲು ಅಧಿಕಾರ)

****ಡಾ. ಅಂಬೇಡ್ಕರ್:**

> ೧೬೭ನೆಯ ಖಂಡದ ಉಪಖಂಡ(೨)ರ (ಸಿ) ಭಾಗದ ತರುವಾಯ, ಈ ಕೆಳಗಿನದನ್ನು ಸೇರಿಸಿಕೊಳ್ಳಿ:

---

* 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೨೮ ಮೇ ೧೯೫೧, ಪು. ೯೪೯೮–೯೫೦೧.

"(ಸಿಸಿ) ಅಧ್ಯಕ್ಷಾಧಿಕಾರಿ, ಮತದಾನ ಅಧಿಕಾರಿ, ಮತದಾನದ ಏಜೆಂಟ್ ಅಥವಾ ಬೇರಾವನೇ ವ್ಯಕ್ತಿ, ಒಂದು ಕ್ಷೇತ್ರದ ಚುನಾಯಕನಾಗಿದ್ದು, ತನಗೆ ಮತದಾನ ಮಾಡಲು ಅಧಿಕಾರವಿಲ್ಲದೆ ಇರುವಂತಹ ಮತಗಟ್ಟೆಯಲ್ಲಿ ಕರ್ತವ್ಯ ನಿರ್ವಹಿಸಲು ಅಧಿಕೃತನಾಗಿದ್ದಲ್ಲಿ ಅಥವಾ ನೇಮಕಗೊಂಡಿದ್ದಲ್ಲಿ, ಯಾವ ರೀತಿಯಲ್ಲಿ ಮತದಾನ ಮಾಡಬೇಕು."

**ಮಾನ್ಯ ಉಪಾಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ. ಈ ತಿದ್ದುಪಡಿಯ ಪರಿಣಾಮವೇನೆಂದರೆ ಈ ಮೂಲಕ ಒಬ್ಬ ಅಭ್ಯರ್ಥಿ ಅಥವಾ ಅವನ ನಿಯೋಗಿ ಯಾವ ಸ್ಥಳದಲ್ಲಿ ತಾನು ಮತದಾರನಲ್ಲವೋ ಅಲ್ಲಿ ಅವನು ಮತ ಚಲಾಯಿಸುವ ರೀತಿ ನೀತಿಗಳನ್ನು ಈ ಮೂಲಕ ನಿಯಂತ್ರಿಸಬಹುದು.

**ಶ್ರೀ ಜೆ.ಆರ್. ಕಪೂರ್:** (ಉತ್ತರ ಪ್ರದೇಶ) ಅದು ತೊಂದರೆಯನ್ನು ನಿವಾರಿಸುವುದಿಲ್ಲ. ಏಕೆಂದರೆ ಅಭ್ಯರ್ಥಿ ಒಂದು ಕ್ಷೇತ್ರದಲ್ಲಿ ಮತದಾರನಾಗಿರಬಹುದು. ಆದರೆ ಆ ಕ್ಷೇತ್ರ ಎಷ್ಟು ದೊಡ್ಡದೆಂದರೆ ಅವನು ತನ್ನ ಮತವನ್ನು ಚಲಾಯಿಸುವ ಮತಗಟ್ಟೆ ಅವನು ಮತ ಚಲಾಯಿಸಿ ಬೇಕಾಗುವ ಸಮಯದಲ್ಲಿ ಬಹಳ ದೂರ ಇರಬಹುದು.

**ಮಾನ್ಯ ಉಪಾಧ್ಯಕ್ಷರು:** ಕ್ಷೇತ್ರ ಅಲ್ಲಿದೆ. ಹಾಗೂ ಆ ಕ್ಷೇತ್ರದಲ್ಲಿ ಅನೇಕ ಮತಗಟ್ಟೆಗಳಿರುತ್ತವೆ. ಬಹಳವೆಂದರೆ ಒಂದು ಕ್ಷೇತ್ರದಲ್ಲಿ ೨ ಅಥವಾ ೩ ವಿಭಾಗಗಳಿರಬಹುದು. ಏನೇ ಆದರೂ ಅವನು ಯಾವುದಾದರೂ ಒಂದು ಮತಗಟ್ಟೆಯಲ್ಲಿ ಆ ದಿನ ಇದ್ದೇ ಇರುತ್ತಾನೆ. ಆದ್ದರಿಂದ ಇದಕ್ಕಾಗಿಯೇ ವಿಶೇಷ ವ್ಯವಸ್ಥೆಗಳ ಏರ್ಪಾಡಿನ ಅಗತ್ಯತೆ ಇದೆಯೇ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಆ ಕ್ಷೇತ್ರದ್ದೇ ಆದ ಯಾವುದಾದರೊಂದು ಮತಗಟ್ಟೆಯಲ್ಲಿ ಆ ಕ್ಷೇತದಲ್ಲಿ ಮತ ಚಲಾಯಿಸುವ ಸೌಲಭ್ಯವನ್ನು ಅಭ್ಯರ್ಥಿಗೆ ಒದಗಿಸಬೇಕು. ಅವನು ಕ್ಷೇತ್ರದಲ್ಲಿರಬಹುದು ಅಥವಾ ಯಾವುದೇ ನಿರ್ದಿಷ್ಟ ಮತಗಟ್ಟೆಯಲ್ಲಿ ಇಲ್ಲದಿರಬಹುದು. ಆ ಕ್ಷೇತ್ರ ಇಡೀ ಜಿಲ್ಲೆಯನ್ನೇ ಆಕ್ರಮಿಸಿಕೊಂಡಿರಬಹುದು. ಅವನು ಯಾವುದೋ ಒಂದು ಮತಗಟ್ಟೆಯಲ್ಲಿ ಇದ್ದರೆ ಅಲ್ಲಿ ಆ ಅಭ್ಯರ್ಥಿಯು ಮತ ಚಲಾಯಿಸಲು ವ್ಯವಸ್ಥೆ ಮಾಡಿ ಕೊಡಬೇಕು.

**ಡಾ. ಅಂಬೇಡ್ಕರ್:** ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಇಲ್ಲಿ ಎರಡು ವಿಚಾರಗಳನ್ನು ಗಮನಿಸಬೇಕು. ಮೊದಲನೇ ಪ್ರಶ್ನೆಯೆಂದರೆ ಅಭ್ಯರ್ಥಿಯು ಬೇರೆ ರಾಜ್ಯಕ್ಕೆ ಸೇರಿದವನಾಗಿರಬಹುದು. ಆತನು ಸ್ಪರ್ಧಿಸುತ್ತಿರುವ ಕ್ಷೇತ್ರ ಅವನ ರಾಜ್ಯದಲ್ಲಿ ಇಲ್ಲದಿರಬಹುದು. ಅದು ಒಂದು ಪ್ರಶ್ನೆ. ಇನ್ನೊಂದು ಪ್ರಶ್ನೆ: ಒಂದು ಕ್ಷೇತ್ರದಲ್ಲಿ ಅನೇಕ ಮತಗಟ್ಟೆಗಳು ಇರಬಹುದು. ಆತನು ಒಂದು ಮತಗಟ್ಟೆಯ ವ್ಯಾಪ್ತಿ ಪ್ರದೇಶದಲ್ಲಿ ಜೀವನ ಮಾಡುತ್ತಿರಬಹುದು. ಅವನು ಅಲ್ಲಿಯೇ ಮತ ಚಲಾಯಿಸಲು ಹೋಗಬೇಕೆಂದು ತಾರ್ಕಿಕವಾದ ಮಾತು. ಅವನೇನಾದರೂ ಚುನಾವಣಾ ದಿನದ ಸುತ್ತಾಟದ ಪ್ರಕ್ರಿಯೆಯಲ್ಲಿ ತನಗೆ ಗೊತ್ತು ಮಾಡಲ್ಪಟ್ಟಿರುವ ಮತಗಟ್ಟೆಯಿಂದ ಬಲು ದೂರ ಇರಬಹುದು. ಅಥವಾ ಇನ್ನೆಲ್ಲೋ ಹೋಗಿರಬಹುದು.

**ಮಾನ್ಯ ಉಪಾಧ್ಯಕ್ಷರು:** ಮಾನ್ಯ ಕಾನೂನು ಮಂತ್ರಿಗಳು ಮಂಡಿಸಿರುವ ತಿದ್ದುಪಡಿಯಲ್ಲಿ ಅಭ್ಯರ್ಥಿ ಹಾಗೂ ಆತನ ನಿಯೋಗಿ ಎಂಬ ಪದಗಳನ್ನು ಕಲಂ (ಇಇ) ನಲ್ಲಿ ಪ್ರಸಕ್ತ ತಿದ್ದುಪಡಿಯಲ್ಲಿ ನಮೂದಿಸಬಹುದು.

**ಡಾ. ಅಂಬೇಡ್ಕರ್:** ನಾನೂ ಅದೇ ವಿಚಾರಕ್ಕೆ ಬರುತ್ತಿದ್ದೇನೆ. ಇಲ್ಲಿ ಎರಡು ವಿಶೇಷ ವ್ಯವಸ್ಥೆಗಳನ್ನು ಮಾಡಬೇಕು. ಪ್ರೊ. ಶಿಬನ್ ಲಾಲ್ ಸಕ್ಸೇನ ಅವರು ಹೇಳಿರುವ ವಿಚಾರ ಬೇರೆ ರಾಜ್ಯದಿಂದ ಬರುವ ಅಭ್ಯರ್ಥಿಯ ವ್ಯವಸ್ಥೆಗೆ ಸೀಮಿತವಾಗಿದೆ. ಆದರೆ ಇನ್ನೊಂದು ವ್ಯವಸ್ಥೆಗೆ ನಾವು ಯಾವ ಏರ್ಪಾಡನ್ನು ಮಾಡಿಲ್ಲ.

**ಮಾನ್ಯ ಉಪಾಧ್ಯಕ್ಷರು:** ಮತದಾರನು ಮತಗಟ್ಟೆಯಲ್ಲಿ ಕಾನೂನು ಪ್ರಕಾರ ಮತ ಪಡೆಯುವ ಸಾಲಿನಲ್ಲಿರುವಂತೆ ಮತಗಟ್ಟೆ ಅಧ್ಯಕ್ಷ ಅಧಿಕಾರಿ, ಮತಾಧಿಕಾರಿ, ಮತ ನಿಯೋಗಿ / ಅಭ್ಯರ್ಥಿ/ಅವನ ಪ್ರತಿನಿಧಿ/ನಿಯೋಗಿ ರೀತಿ ಸೇರಿಸಬಹುದು.

**ಡಾ. ಅಂಬೇಡ್ಕರ್:** ಈ ಕಲಮಿನ ಪ್ರಕಾರ ಅಧ್ಯಕ್ಷಾಧಿಕಾರಿಗಳು, ಮತಾಧಿಕಾರಿಗಳು, ಮತ ನಿಯೋಗಿ ಅಥವಾ ಆ ಕ್ಷೇತ್ರದ ಮತದಾರನಾಗಿ ಆತನನ್ನು ಕಾರ್ಯಭಾರಕ್ಕಾಗಿ ಕಾನೂನಿನ ರೀತ್ಯಾ ನಿಯೋಜಿಸಲ್ಪಟ್ಟು ಆ ಮತಗಟ್ಟೆಗೆ ಆಯೋಜಿಸಲ್ಪಟ್ಟು ಆತನು ಆ ಮತಗಟ್ಟೆಯಲ್ಲಿ ಮತ ನೀಡಲು ಹಕ್ಕಿಲ್ಲದವನ ಬಗೆಗಿನ ವಿಚಾರ. ಇದರಲ್ಲಿ ಎರಡು ಬಗೆಯ ಅಭ್ಯರ್ಥಿಗಳು ಸೇರುವುದಿಲ್ಲ. ಆದ್ದರಿಂದ ಈ ಎರಡು ವರ್ಗಗಳಿಗೆ ಏರ್ಪಾಡು ಮಾಡಬೇಕು.

**ಮಾನ್ಯ ಉಪಾಧ್ಯಕ್ಷರು:** ಅವುಗಳನ್ನು ತಾವು ಸೇರಿಸಬಹುದು.

**ಡಾ. ಅಂಬೇಡ್ಕರ್:** ಉತ್ತಮತರ ರೀತಿ ಎಂದರೆ ಈ ತಿದ್ದುಪಡಿಯನ್ನು ಪುನರ್ವಿಮರ್ಶೆ ಮಾಡಬಹುದು. ಅದನ್ನು ೩–೦೦ ಗಂಟೆಗೆ ಕೈಗೆತ್ತಿಕೊಂಡರೆ ನಾವು ಒಂದು ಸರಿಯಾದ ತಿದ್ದುಪಡಿಯನ್ನು ಮಾಡಬಹುದು.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ:** ಅದಕ್ಕೆ ಅಭ್ಯರ್ಥಿ ಮತ್ತು ಅವನ ಚುನಾವಣಾ ನಿಯೋಗಿಯನ್ನು ಸೇರಿಸಿ.

**ಶ್ರೀ ಹುಸೇನ್ ಇಮಾಂ:** ಸ್ಥಳದಿಂದ ಸ್ಥಳಕ್ಕೆ ವರ್ಗಾವಣೆ ಆದ ಸರ್ಕಾರಿ ನೌಕರರು ತಮ್ಮ ಮತಗಳನ್ನು ಚಲಾಯಿಸಲು ಸೌಲಭ್ಯ ಕಲ್ಪಿಸಬೇಕೆಂದು ನಾನು ಬೆಳಿಗ್ಗೆ ಸೂಚನೆ ನೀಡಿದೆ. ಇದನ್ನು ಶಾಸನ ರಚನಾ ಶಕ್ತಿಯುಳ್ಳ ಸರ್ಕಾರದ ಅಧಿಕಾರಕ್ಕೆ ಬಿಡೋಣ. ಸ್ಥಳದಿಂದ ಸ್ಥಳಕ್ಕೆ ಸ್ಥಳಾಂತರ ಆದ ಸರಕಾರಿ ನೌಕರರು, ಸ್ಥಳೀಯ ಸಂಸ್ಥೆಗಳ ನೌಕರರು, ಸಾರ್ವಜನಿಕ ಸೇವಾ ಸಂಸ್ಥೆಗಳ ನೌಕರರಿಗೆ ಸರಿಯಾದ ಮತ ನೀಡುವ ಸವಲತ್ತಿನ ಬಗೆಗೆ ಮಾನ್ಯ ಮಂತ್ರಿಗಳನ್ನು ಕೋರುತ್ತೇನೆ.

**ಶ್ರೀ ಕಾಮತ್:** ಸ್ವಾಮೀ ನನ್ನ ಬಳಿ ಎರಡು ತಿದ್ದುಪಡಿಗಳು ಇವೆ.

**ಮಾನ್ಯ ಉಪಾಧ್ಯಕ್ಷರು:** ಅದನ್ನು ತೆಗೆದುಕೊಳ್ಳುತ್ತೇನೆ. ಮೊದಲು ಪ್ರೊ॥ ಸಕ್ಸೇನಾ ಅವರ ತಿದ್ದುಪಡಿಯನ್ನು ಈ ಸಭೆಯ ಅವಗಾಹನೆಗೆ ತರುತ್ತಿದ್ದೇನೆ.

**ಡಾ. ಅಂಬೇಡ್ಕರ್:** ಅದನ್ನು ಸರಿಯಾದ ರೀತಿ ಹಾಗೂ ಭಾಷೆಯಲ್ಲಿ ಹಾಕಲ್ಪಟ್ಟರೆ ಒಪ್ಪಿಕೊಳ್ಳಲು ತಯಾರಿದ್ದೇನೆ. ಆದ್ದರಿಂದ ಅದನ್ನು ೩ ಗಂಟೆಯವರೆಗೆ ತಡೆ ಹಿಡಿಯೋಣ. ಅಷ್ಟು ಸಮಯದೊಳಗೆ ಈ ತಿದ್ದುಪಡಿಗೆ ಸೂಕ್ತವಾದ ಭಾಷೆಯನ್ನು ಹುಡುಕಬಹುದು.

**ಮಾನ್ಯ ಉಪಾಧ್ಯಕ್ಷರು:** ಉಳಿದೆಲ್ಲ ತಿದ್ದುಪಡಿಗಳನ್ನೂ ಡಾ. ಅಂಬೇಡ್ಕರ್ ಅವರಿಗೆ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಕಾಮತ್:** ನಾನು ಈ ಮುಂದೆ ಹೇಳುವ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

> ೧೬೭ನೆಯ ಖಂಡದ ಉಪಖಂಡ(೨)ರ ಭಾಗ (ಜಿ)ಯ ತರುವಾಯ, ಈ ಹೊಸ ಭಾಗವನ್ನು ಸೇರಿಸಿಕೊಳ್ಳಿ ಹಾಗೂ ಅನಂತರದ ಭಾಗಕ್ಕೆ ಇದರ ಅನುಸಾರ ತಿದ್ದಿ.
>
> "(ಎಚ್) ಚುನಾವಣೆಗಳಲ್ಲಿನ ವೆಚ್ಚದ ಗರಿಷ್ಠ ಪ್ರಮಾಣ ಹಾಗೂ ಚುನಾವಣೆಗಳ ಸಂಬಂಧದಲ್ಲಿ ನೇಮಿಸಿಕೊಳ್ಳಬಹುದಾಗಿರುವಂಥ ವ್ಯಕ್ತಿಗಳ ಬಗೆಗಿನ ವಿವರಣೆ ಮತ್ತು ಸಂಖ್ಯೆ."

**ಮಾನ್ಯ ಉಪಾಧ್ಯಕ್ಷರು:** ಇದನ್ನು ವೆಚ್ಚಕ್ಕೆ ಸಂಬಂಧಪಟ್ಟ ವಿಭಾಗದಲ್ಲಿ ನಾವು ಸೇರಿಸಿದ್ದೇವೆ. ಈಗಾಗಲೇ ಹೇಳಿಕೆ ನೀಡಿರುವಂತೆ ಹಾಗೂ ಚುನಾವಣಾ ವೆಚ್ಚಕ್ಕೆ ಸಂಬಂಧಪಟ್ಟಂತೆ ಗರಿಷ್ಠ ಮಿತಿಯನ್ನು ಸೂಚಿಸಿದ್ದೇವೆ ಬೇರಾವ ವಿಚಾರ ಇದ್ದಲ್ಲಿ ಅದನ್ನೂ ಸೂಚಿಸುತ್ತೇವೆ. ಆದ್ದರಿಂದ ಈ ತಿದ್ದುಪಡಿಯ ಆವಶ್ಯಕತೆ ಇದೆಯೇ? ನನ್ನ ಚಿಂತನೆಯ ಪ್ರಕಾರ ಇದು ಅನಗತ್ಯ.

**ಶ್ರೀ ಕಾಮತ್:** ಆಗಲಿ ಸ್ವಾಮಿ. ಆದರೆ ನನ್ನ ಇನ್ನೊಂದು ತಿದ್ದುಪಡಿ ಇದೆ. ಅದನ್ನು ಈ ಮೂಲಕ ಮಂಡಿಸುತ್ತೇನೆ.

> ೧೬೭ನೆಯ ಖಂಡದ ಉಪಖಂಡ(೨)ರ ತರುವಾಯ, ಈ ಕೆಳಗಿನ ಹೊಸ ಉಪ–ಖಂಡವನ್ನು ಸೇರಿಸಿಕೊಳ್ಳಿ:
>
> "(೩) ಹೀಗೆ ಮಾಡಲಾದ ನಿಯಮಗಳನ್ನು, ಮಾಡಿದ ಬಳಿಕ ಸಾಧ್ಯವಾದಷ್ಟು ಶೀಘ್ರವಾಗಿ ಸಂಸತ್ತಿನ ಮುಂದೆ ಮಂಡಿಸತಕ್ಕದ್ದು ಹಾಗೂ ಸಂಸತ್ತಿನಲ್ಲಿ ಮಾಡಲಾದಂಥ ಬದಲಾವಣೆಗಳೊಂದಿಗೆ, ಹಾಗೆ ಮಂಡಿಸಿದ ಹತ್ತು ದಿವಸಗಳ ಒಳಗಾಗಿ, **ಅಧಿಕೃತ ಗೆಜೆಟ್ಟಿನಲ್ಲಿ** ಅಧಿಸೂಚಿಸತಕ್ಕದ್ದು."

ನಾನು ಅದರ ಬಗ್ಗೆ ನನ್ನ ವಿಚಾರ ವ್ಯಕ್ತಪಡಿಸಬಹುದೇ ಅಥವಾ ಅದನ್ನೂ ಸಹ ೩ ಗಂಟೆಯವರೆಗೂ ತಡೆ ಹಿಡಿಯಲೇ?

**ಡಾ. ಅಂಬೇಡ್ಕರ್:** ಅವರು ಮಾತನಾಡಬಹುದು. ಆದರೆ ಅದರ ಬಗ್ಗೆ ಮತವನ್ನು ಮಾತ್ರ ೩ ಗಂಟೆಯವರೆಗೆ ತಡೆ ಹಿಡಿಯಬೇಕೆಂದು ಕೋರುತ್ತೇನೆ.

## ಕಲಂ ೭

*ಶ್ರೀ ಆರ್.ಕೆ.ಚೌಧುರಿ:** ಬೇರೆ ಸದಸ್ಯರಿಗಿಂತ ಭಿನ್ನವಾಗಿ ನನ್ನದು ಒಂದೇ ಒಂದು ತಿದ್ದುಪಡಿ ಇದೆ. ಅದನ್ನು ಈ ಮೂಲಕ ಈ ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಅದರ ಸಂಖ್ಯೆ ೨೦೧ – ಅದನ್ನು ಪುನರ್ವಿಮರ್ಶಿತ ಒಟ್ಟಾದ ಪಟ್ಟಿ ಪುಟ ೨ ರಲ್ಲಿ ತಾವು ನೋಡಬಹುದು.

> ೭ನೆಯ ಖಂಡಕ್ಕೆ ಈ ಕೆಳಗಿನ ವಿವರಣೆಯನ್ನು ಸೇರಿಸಿಕೊಳ್ಳಿ:
>
> "**ವಿವರಣೆ:** ಸರ್ಕಾರಕ್ಕೆ ಅಥವಾ ಅದರ ಯಾವುದೇ ಇಲಾಖೆಗೆ ವೃತ್ತಿಪರ ಸೇವೆಗಳನ್ನು ಸಲ್ಲಿಸಿದ ಹಾಗೂ ವಕೀಲ–ನೇಮಕಾತಿ ಮತ್ತು ಇತರ ಶುಲ್ಕಗಳನ್ನು ಪಡೆದುಕೊಂಡಿರುವಂಥ ವಕೀಲರು ಲಾಭದಾಯಕ ಹುದ್ದೆಯನ್ನು ಹೊಂದಿರುವರೆಂದು ಪರಿಗಣಿಸಲಾಗುವುದಿಲ್ಲ ಹಾಗೂ ಸಂಸತ್ತಿನ ಯಾವುದೇ ಸದನಕ್ಕೆ ಅಥವಾ ರಾಜ್ಯದ ವಿಧಾನ ಸಭೆಗೆ ಅಥವಾ ವಿಧಾನ ಪರಿಷತ್ತಿಗೆ ಸದಸ್ಯರಾಗಿ ಚುನಾಯಿತರಾಗಲು ಅವರನ್ನು ಅನರ್ಹಗೊಳಿಸತಕ್ಕದ್ದಲ್ಲ."

ಇದು ನಾನು ಮಂಡಿಸುತ್ತಿರುವ ಏಕೈಕ ತಿದ್ದುಪಡಿ ಹಾಗೂ ಅದನ್ನು ಅದಕ್ಕೆ ಸಮಂಜಸವಾದ ಯಥೋಚಿತ ಧೃಡತೆಯಿಂದ ಪ್ರತಿಪಾದಿಸುತ್ತೇನೆ. ಆದ್ದರಿಂದ ಈ ಬಗ್ಗೆ ನನ್ನ ಮಾತುಗಳನ್ನು ಮಾನ್ಯ ಕಾನೂನು ಮಂತ್ರಿಗಳು ಗಮನ ನೀಡಿ ಕೇಳುತ್ತಾರೆಂದು ನಂಬಿದ್ದೇನೆ.

---

* 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೨೮ ಮೇ ೧೯೫೧, ಪು. ೯೫೪೯.

**ಡಾ. ಅಂಬೇಡ್ಕರ್:** ನಾನು ಯಾವಾಗಲೂ ಹಾಗೆಯೇ ಗಮನವಿಟ್ಟು ಆಲಿಸುತ್ತೇನೆ

****ಮಾನ್ಯ ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

೭ನೆಯ ಖಂಡದ ಉಪ–ಖಂಡ(೧)ರ (ಎಫ್) ಭಾಗದಲ್ಲಿ 'ಐದು ವರ್ಷಗಳು' ಎಂಬುದಕ್ಕೆ ಬದಲಾಗಿ 'ಮೂರು ವರ್ಷಗಳು' ಎಂಬುದನ್ನು ಸೇರಿಸಿಕೊಳ್ಳಿ.

**ಡಾ. ಅಂಬೇಡ್ಕರ್:** ಬಹುತೇಕ ತಿದ್ದುಪಡಿಗಳಿಗೆ ನಾನು ಪ್ರತಿಕ್ರಿಯಿಸಿದಂತೆ ಇದರ ಬಗ್ಗೆಯೂ ಸಹ ಬೆಂಬಲ ನೀಡುವುದಿಲ್ಲ. ಆದ್ದರಿಂದ ಒಪ್ಪಲು ಸಾಧ್ಯವಿಲ್ಲ ಎಂದು ಹೇಳಬಹುದಿತ್ತು. ಈ ವಿಚಾರದಲ್ಲಿ ಎತ್ತಿರುವ ಪ್ರಶ್ನೆಗಳಿಗೆ ನನ್ನ ಪ್ರಕಾರ ಕೆಲವು ವಿವರಣೆಗಳತ್ತ ಮನಸ್ಸು ಹರಿಸಬೇಕಾಗುತ್ತದೆ. ಆದ್ದರಿಂದ ಈ ತಿದ್ದುಪಡಿಯ ಬಗ್ಗೆ ವಿನಾಯಿತಿ ನೀಡಬೇಕೆಂದು ನನಗೆ ಅನಿಸುತ್ತದೆ.

ಮೊದಲನೆಯದಾಗಿ, ೭ ನೇ ಕಲಮನ್ನು ಮಂಡಿಸಿ ಆ ವಿಚಾರವನ್ನು ತಂದಿರುವುದು ಈ ಸಭೆಗೆ ಅನಿರೀಕ್ಷಿತವಾದದ್ದು ಎಂಬ ಹೇಳಿಕೆಯ ಬಗ್ಗೆ ನನ್ನ ಮಾನ್ಯ ಮಿತ್ರರಿಗೆ ನಾನು ಉತ್ತರ ನೀಡಬೇಕಾಗಿದೆ. ಔಪಚಾರಿಕವಾಗಿ ೭ ಕಲಮನ್ನು ಈ ಸಭೆಯ ಮುಂದೆ ಇಂದೇ ಮಂಡಿಸಲಾಗಿದೆ. ಆದರೂ ಸಹ ವಿಧ್ಯುಕ್ತವಲ್ಲದ ರೀತಿಯಲ್ಲಿ ಈ ಮಸೂದೆಯ ೭ ನೇ ಕಲಮಿನ ಬಗ್ಗೆ ಇಡೀ ಸಭೆಯು ಸಂಪೂರ್ಣವಾಗಿ ಗಮನ ಹರಿಸಿರುವುದಂತೂ ನಿಜ.

**ಡಾ. ಎಸ್ ಸಿ ಮುಖರ್ಜಿ:** (ಪಶ್ಚಿಮ ಬಂಗಾಳ) ಅತಿ ಮುಖ್ಯವಾದ ಕಲಮು.

**ಡಾ. ಅಂಬೇಡ್ಕರ್:** ಎಷ್ಟು ಬಾರಿ ಆಯ್ಕೆ ಸಮಿತಿ ಹಾಗೂ ಇಡೀ ಸಭಾ ಸಮಿತಿಗಳ ಸಭೆಗೆ ನಡೆದಿವೆಯೋ ನೆನಪಿಗೆ ಬರುತ್ತಿಲ್ಲ. ಆದ್ದರಿಂದ ಸಾಕಷ್ಟು ಸಮಯ ಸಿಕ್ಕಿಲ್ಲ ಎಂಬ ದೂರಿಗೆ ಯಾವ ಆಧಾರವೂ ಇಲ್ಲ. ಅದೂ ಅಲ್ಲದೆ ಈ ೭ ನೇ ಕಲಂ ಮಾತ್ರ ವಿಶೇಷವಾದ ಪರೀಕ್ಷೆಗೆ ಒಳಗಾಗಿದೆ. ವಾಸ್ತವವಾದ ಸಾಧಕ ಬಾಧಕಗಳು ಹಾಗೂ ಔಚಿತ್ಯದ ದೃಷ್ಟಿಕೋನಗಳಿಟ್ಟುಕೊಂಡು ಭಾರಿ ಚರ್ಚೆಗಳು ನಡೆದಿವೆ.

ಸ್ವಾಮೀ, ಈಗ ನಾನು ಹಲವು ಭಾಷಣಕಾರರು ಎತ್ತಿರುವ ವೈಯಕ್ತಿಕ ವಿಚಾರಗಳಿಗೆ ಬರುತ್ತೇನೆ. ನನ್ನ ಗೆಳೆಯ ಕಾಮತ್ ಅವರು ಹೇಳಿದ ವಿಚಾರಕ್ಕೆ ನಾನು ಸಾಕಷ್ಟು ಗಮನ ನೀಡಲು ತಯಾರಿಲ್ಲ. ಹಾಗೂ ಅವರು ಕಿವಿ ಕೇಳದ ಹಾಗೂ ಮಾತೂಬಾರದವರನ್ನು ಸದನದ ಹೊರಗಿರಿಸಬೇಕೆಂದು ಬಯಸುತ್ತಾರೆಂದು ನಾನು ನಂಬುವುದಿಲ್ಲ.

**ಶ್ರೀ ಕಾಮತ್:** ಆ ರೀತಿಯ ವಿಚಾರ ಇಂಗ್ಲೆಂಡಿನಲ್ಲಿ ಇದೆ.

**ಡಾ. ಅಂಬೇಡ್ಕರ್:** ಈ ಏರ್ಪಾಡು ಇಂಗ್ಲೆಂಡಿನಲ್ಲಿ ಇದೆ ಎಂಬುದು ಸತ್ಯ.

ಆದರೆ ನಮ್ಮ ಸಂಪತ್ತು ಕಿವುಡ, ಹೆಳವ ಹಾಗೂ ಮೂಕ ಸದಸ್ಯರಿಂದ ಆಗಬೇಕೋ ಎಂಬ ವಿಚಾರವನ್ನು ನಾವು ನಮ್ಮ ಮತದಾರರಿಗೆ ಬಿಟ್ಟುಬಿಡೋಣ. ಈ ಗೌರವಾನ್ವಿತ ಸಭೆಯಲ್ಲಿ ಆರೋಗ್ಯವಂತರಾದವರೂ ದೈಹಿಕ ಗಟ್ಟಿತನದಿಂದ ಓಡಾಡಬಲ್ಲವರು, ಚೆನ್ನಾಗಿ ಮಾತನಾಡಬಲ್ಲವರೂ ಅದನ್ನು ಕೇಳಿಸಿಕೊಳ್ಳುವ ಶ್ರವಣ ಶಕ್ತಿಯುಳ್ಳವರು ಇದ್ದಾರೆ.

ಕೆಲವು ಸದಸ್ಯರು ಹೇಳಿರುವಂತೆ ಈ ಕಲಂನಲ್ಲಿ ಕಾಳಸಂತೆಕೋರರ ಪ್ರವೇಶವನ್ನು ತಡೆಯುವ

---

** 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೨೮ ಮೇ ೧೯೫೧, ಪು. ೯೫೬೪–೭೦.

ವಿಚಾರವನ್ನು ಸೇರಿಸಿಲ್ಲ. ಈ ವಿಚಾರವನ್ನು ಪ್ರೊ. ಕೆ.ಟಿ.ಶಾ. ಅವರು ಎತ್ತಿದ್ದಾರೆ. ಈ ದೃಷ್ಟಿಕೋನವನ್ನಿಟ್ಟುಕೊಂಡು ನಾನು ಹೇಳುವುದೇನೆಂದರೆ ಯಾವುದಾದರೂ ಆದರ್ಶವನ್ನು ಮಾತ್ರ ಇಟ್ಟುಕೊಂಡು ಕಾನೂನು ರಚಿಸಿದರೆ ಸಾಲದು. ಅಂತಹ ಆದರ್ಶ ಪ್ರಾಯೋಗಿಕವಾಗಿ ಸಾಧುವಾಗಿ ಇರಬೇಕು. ನನ್ನ ಮಾನ್ಯ ಸ್ನೇಹಿತ ಕೆ.ಟಿ ಶಾ ಅವರು ತಮ್ಮ ಅನೇಕ ಆದರ್ಶವಾದಿ ಸಿದ್ಧಾಂತಗಳನ್ನು ಚರ್ಚಿಸುವಾಗ ಈ ಪ್ರಾಯೋಗಿಕ ದೃಷ್ಟಿಯನ್ನು ತಮ್ಮ ವಿಚಾರಗಳನ್ನು ಮಂಡಿಸಿಲ್ಲ ಎನಿಸುತ್ತದೆ. ಇನ್ನೊಂದು ವಿಚಾರ ಅಪರಾಧಗಳು, ಹಾಗೂ ನ್ಯಾಯಾಲಯದಲ್ಲಿ ಅಪರಾಧಿಗಳಿಗೆ ವಿಧಿಸಿರುವ ಶಿಕ್ಷೆಗಳಿಗೆ ಸಂಬಂಧಪಟ್ಟಿದ್ದು. ಈ ವಿಚಾರದ ಬಗ್ಗೆ ಮೂರು ನಿಲುವುಗಳನ್ನು ತೆಗೆದುಕೊಳ್ಳಬಹುದು. ಮೊದಲನೆಯ ನಿಲುವು ಏನೆಂದರೆ ಅಪರಾಧಿಯು ತಪ್ಪಿಗೆ ಅನುಭವಿಸಿದ ಶಿಕ್ಷೆಯೇ ಆತನಿಗೆ ಸಾಕಷ್ಟು ಶಿಕ್ಷೆ ನೀಡಿರುತ್ತದೆ. ಆದ್ದರಿಂದ ಅಂತಹವನನ್ನು ಚುನಾವಣೆಗೆ ಸಂಸತ್ತಿಗಾಗಲೀ ಶಾಸನ ಸಭೆಗಾಗಲೀ ಸ್ಪರ್ಧಿಸಲು ಅನರ್ಹಗೊಳಿಸುವುದು ಬೇಕಾಗಿಲ್ಲ. ಇನ್ನೊಂದು ನಿಲುವು ಏನೆಂದರೆ ಅನರ್ಹತೆಗೆ ಕಲಂಗೆ ಸೇರಿಸಲು ಅಪರಾಧಕ್ಕಿಂತ ಅಪರಾಧದ ಸ್ವರೂಪವನ್ನು ಗಮನಕ್ಕೆ ತೆಗೆದುಕೊಂಡು ಅದರಲ್ಲಿ ನೈತಿಕ ನೀಚತನ ಕೂಡಿದೆಯೇ ಎಂಬುದನ್ನು ವಿಚಾರ ಮಾಡಬೇಕು. ಇದರಲ್ಲಿ ತೆಗೆದುಕೊಳ್ಳಬಹುದಾದ ೨ನೇ ನಿಲುವು ಇದು. ಈ ಮಸೂದೆಯಲ್ಲಿ ತೆಗೆದುಕೊಂಡಿರುವ ನಿಲುವೇ ಮೂರನೆಯ ನಿಲುವು. ಈ ನಿಲುವು ಈ ದೇಶದಲ್ಲಿ ಚುನಾವಣೆಗಳು ಪ್ರಾರಂಭವಾದಂದಿನಿಂದ ಪ್ರಚಲಿತವಾಗಿದೆ. ನನಗೆ ತಿಳಿದಂತೆ ಯಾವ ಸಮಯದಲ್ಲಿಯೂ ಈತನು ಅಪರಾಧಕ್ಕೆ ಗುರಿಯಾಗಿ ಇಷ್ಟು ದಿನ ಕಾರಾಗೃಹ ಶಿಕ್ಷೆಗೆ ಗುರಿಯಾಗಿದ್ದಾನೆ ಆದರೂ ಅಂತಹವನು ಈ ಕಲಂ ಪ್ರಕಾರ ಅನರ್ಹನಾಗುವುದಿಲ್ಲ ಎಂದು ಹೇಳಿದ ನೆನಪಿಲ್ಲ.

ಸರಿಯೋ ತಪ್ಪೋ ಈವರೆಗೂ ಆ ಕಾನೂನನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಮಸೂದೆಯಲ್ಲಿ ಯಾವ ಬದಲಾವಣೆಯನ್ನೂ ಈ ವಿಚಾರದಲ್ಲಿ ತಂದಿಲ್ಲ. ನಾವು ಯಾವ ಹೊಸ ವಿಚಾರವನ್ನೂ ಪ್ರಾರಂಭಿಸುತ್ತಿಲ್ಲ. ನಾವು ಸುಮ್ಮನೆ ಈಗಿರುವ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿದ್ದೇವೆ.

**ಸರ್ದಾರ್ ಸೋಜಿತೆ ಸಿಂಗ್:** ೫೦,೦೦೦ ರೂಪಾಯಿಗಳಷ್ಟು ದಂಡ ವಿಧಿಸುವ ಬಗ್ಗೆ ತಮ್ಮ ವಿಚಾರವೇನು?

**ಡಾ. ದೇಶ್‌ಮುಖ್:** ಮಾನ್ಯರೇ ನೂರಾರು ಕಾಂಗ್ರೆಸ್‌ಗರನ್ನು ಜೈಲಿಗೆ ಕಳಿಸಲಾಗಿತ್ತು ಮತ್ತು ಅವರಿಗೆ ಶಿಕ್ಷೆ ವಿಧಿಸಲಾಗಿತ್ತು. ಹಾಗೂ ಅವರುಗಳನ್ನು ಯಾವ ಕಾನೂನಿನ ಪ್ರಕಾರ ಅನರ್ಹತೆಯ ನಿಯಮದಿಂದ ಹೊರತುಪಡಿಸಲಾಯಿತು ಎಂದು ತಿಳಿಸಬೇಕೆಂದು ಕೋರುತ್ತೇನೆ.

**ಡಾ. ಅಂಬೇಡ್ಕರ್:** ಆ ಅನರ್ಹತೆಯನ್ನು ಗವರ್ನರ್ ಜನರಲ್ ಅವರು ತೆಗೆದು ಹಾಕಿದ್ದಾರೆ. ಕೆಲವು ಸಂದರ್ಭಗಳಲ್ಲಿ ಸಮಯವೇ ಮೀರಿ ಹೋಗಿದೆ. ಮತ್ತು ಕೆಲವಕ್ಕೆ ಈ ವಿಚಾರದಲ್ಲಿ ಆದೇಶ ನೀಡಲು ಅವರಿಗೆ ಅಧಿಕಾರ ನೀಡಲಾಗಿತ್ತು. ಅದು ಎರಡನೆಯ ವಿಚಾರ. ಸಾರ್ವಜನಿಕ ಸಂಸ್ಥೆಗಳು ನಿರ್ದೇಶಕರ ಬಗ್ಗೆ ಎತ್ತಿರುವ ಕೆಲವು ವಿಚಾರಗಳು ಇತ್ಯಾದಿ ಈ ವಿಚಾರದಲ್ಲಿ ಕಲಂನಲ್ಲಿ ಈಗಿರುವ ವಿಚಾರಗಳ ಬಗ್ಗೆಯೇ ಮತ್ತೊಮ್ಮೆ ಮಾತನಾಡಬೇಕೆಂದು ನನಗೆ ಅನ್ನಿಸುವುದಿಲ್ಲ. ಆ ವಿಚಾರಗಳನ್ನೆಲ್ಲಾ ಸಭಾ ಸಮಿತಿಯಲ್ಲಿ ಕೂಲಂಕಷವಾಗಿ ಚರ್ಚೆಗೆ ತೆಗೆದುಕೊಂಡು ತೀರ್ಮಾನಗಳಿಗೆ ಬಂದಿರುತ್ತೇನೆ. ಆದ್ದರಿಂದ ಅದಾದ ನಂತರ ಈ ಕಲಮಿನ ವಾಕ್ಯಾಂಶಗಳನ್ನು ಸಮಿತಿ ಒಪ್ಪಿಕೊಂಡ ಸ್ವರೂಪದಲ್ಲೇ ಇರಬೇಕೆಂದು ನನ್ನ ವಿಚಾರವಾದ್ದರಿಂದ ಈ ಬಗ್ಗೆ ಇನ್ನಾವ ವಿಚಾರದಲ್ಲೂ ಚರ್ಚೆ ಅನಾವಶ್ಯಕ.

**ಶ್ರೀ ಸೋಂಧಿ:** ಸಹಕಾರ ಸಂಘ

**ಡಾ. ಅಂಬೇಡ್ಕರ್:** ಈಗ ನಾನು ಆ ವಿಚಾರಕ್ಕೆ ಬರುತ್ತಿದ್ದೇನೆ.

**ಶ್ರೀ ಜೆ.ಆರ್. ಕಪೂರ್:** ಒಂದು ವಿಚಾರದ ಬಗ್ಗೆ ಯಾವ ನಿರ್ದಿಷ್ಟವಾದ ನಿಲುವನ್ನೂ ಅನೌಪಚಾರಿಕ ಸಭೆಯಲ್ಲಿ ತೆಗೆದುಕೊಂಡಿಲ್ಲ.

**ಡಾ. ಅಂಬೇಡ್ಕರ್:** ನಾನು ಅನೌಪಚಾರಿಕ ಸಭೆಯಲ್ಲಿ ನಡೆದ ವಿಚಾರಗಳ ವಿಶೇಷಗಳನ್ನು ಇಲ್ಲಿ ಚರ್ಚಿಸಲು ತಯಾರಿಲ್ಲ. ನಾವು ಆ ರೀತಿಯ ಸಭೆಯ ಕಲಾಪಗಳನ್ನು ಸಾರ್ವಜನಿಕವಾಗಿ ಹೊರಗೆಡಬಾರದು.

**ಶ್ರೀ ಜೆ.ಆರ್. ಕಪೂರ್:** ಒಂದು ನಿಯಮಿತ ಸಂಸ್ಥೆಯಲ್ಲಿ ಹಣಕಾಸಿನ ಗಾತ್ರದ ವಿಚಾರ.

**ಡಾ. ಅಂಬೇಡ್ಕರ್:** ನಾನು ಹೇಳಿದಂತೆ, ಅಂತಿಮವಾಗಿ ಹಾಗೆಯೇ ಈ ಕಲಂ ಒಂದು ಸ್ವರೂಪಕ್ಕೆ ಬಂದದ್ದು. ಸಹಕಾರ ಸಂಘಗಳ ಬಗ್ಗೆ ನಾನು ಒಂದು ನಿರ್ದಿಷ್ಟ ನಿಲುವನ್ನು ತಾಳಿ ಅದಕ್ಕೆ ಎಲ್ಲ ಕಾಲಕ್ಕೂ ಬದ್ಧವಾಗಿರಬೇಕೆಂಬುದು ಸಾಧ್ಯವಿಲ್ಲ. ಸಾರ್ವಜನಿಕ ಸಂಸ್ಥೆಯು 'ಭಾರತೀಯ ಕಂಪನಿ ಅಧಿನಿಯಮ'ದ ಪ್ರಕಾರ ಸ್ಥಾಪಿಸಲ್ಪಟ್ಟಿರುತ್ತದೆ. ಆದ್ದರಿಂದ ಸಹಕಾರಿ ಸಂಘಗಳು ಈ ವಿಧಿಯಿಂದ ಹೊರಗಿಡಲ್ಪಟ್ಟಿವೆ ಎಂಬುದು ನನ್ನ ತೀರ್ಮಾನ.

ನಾನು ಈ ಮುಂದೆ ನ್ಯಾಯವಾದಿಗಳ ವಿಚಾರಕ್ಕೆ ಬರುತ್ತೇನೆ. ನನ್ನ ಪ್ರಿಯ ಮಿತ್ರರಾದ ಚೌಧುರಿ ಅವರು ಸಭೆಯಲ್ಲಿ ಇದ್ದಾರೋ ಇಲ್ಲವೋ ತಿಳಿದಿಲ್ಲ. (ಸದಸ್ಯರು: ಮಾನ್ಯ ಸದಸ್ಯರು ಇದ್ದಾರೆ) ಎರಡು ಪ್ರಶ್ನೆಗಳನ್ನು ಕೇಳಲಾಗಿದೆ. ಚೌಧುರಿಯವರ ಪ್ರಶ್ನೆ ಇದು. ಅನೇಕಾನೇಕ ಜನಗಳಲ್ಲಿ ನ್ಯಾಯವಾದಿಗಳು ಇದ್ದಾರೆ. ಅವರನ್ನು ಅನೇಕ ಸರಕಾರಗಳು ತಮ್ಮ ನ್ಯಾಯವಾದಿಗಳನ್ನಾಗಿ ನೇಮಕಾತಿ ಮಾಡಿರುತ್ತಾರೆ. ಅಂತಹವರಿಗೆ ಸಂಬಳವನ್ನೇ ಕೊಡುತ್ತಿರಬಹುದು ಅಥವಾ ಪ್ರತಿಯೊಂದು ನ್ಯಾಯವಾದಿಗೂ ಒಂದು ನಿರ್ದಿಷ್ಟವಾದ ಹಣವನ್ನು ನೀಡಬಹುದು. ಒಂದು ಸರಕಾರದಿಂದ ನೇಮಿಸಲ್ಪಟ್ಟ ನ್ಯಾಯವಾದಿಗಳನ್ನು ಚುನಾವಣೆಗಳಲ್ಲಿ ಸ್ಪರ್ಧಿಸಲು ಅನರ್ಹಗೊಳಿಸಬಾರದೆಂದು ಇವರ ಕೋರಿಕೆ. ಈಗಾಗಲೇ ಸರಕಾರಿ ನ್ಯಾಯವಾದಿಗಳು ಲಾಭದಾಯಕ ಹುದ್ದೆಯಲ್ಲಿ ಇರುವವರು ಎಂದು ನಿಷ್ಕರ್ಷೆಯಾಗಿ ಹೋಗಿದೆ. ಅದೇ ಈ ವಿಚಾರದ ಬಗ್ಗೆ ಕೊನೆಯ ಮಾತಾಗಿದ್ದರೂ ಈ ಸಭೆಯ ಇಚ್ಛೆ ಇದ್ದಲ್ಲಿ ಸಂವಿಧಾನದ ೧೦೨ ನೇ ಆರ್ಟಿಕಲ್‌ನ ವಿಚಾರಗಳನ್ನು ಹೊರತುಪಡಿಸದೇ ಈ ಅನರ್ಹತೆಯನ್ನು ಸರಕಾರಿ ನ್ಯಾಯವಾದಿಗಳ ಸಂಬಂಧದಲ್ಲಿ ಸಾಕಷ್ಟು ಆಧಾರವಿದ್ದಲ್ಲಿ ಹೊರತು ಪಡಿಸಬಹುದು. ಶ್ರೀ ರೋಹಿಣಿ ಕುಮಾರ್ ಚೌಧರಿ ಅವರು ಈ ಬಗ್ಗೆ ಕೋರಿಕೆ ಸಲ್ಲಿಸಿದ್ದಾರೆಯೇ ಹೊರತು ವಾದವನ್ನು ಮಂಡಿಸಿಲ್ಲ. ನನಗೆ ವೃತ್ತಿ ಬಾಂಧವರ ಬಗ್ಗೆ ಯಾವ ಕರುಣೆಯಾಗಲೇ, ವೃತ್ತಿಪರ ಆಸಕ್ತಿಯನ್ನಾಗಲೀ ತೋರಿಸುವ ಇಚ್ಛೆ ಇಲ್ಲ. (ಗಲಾಟೆ) ಅವರ ಬಗ್ಗೆ ನನ್ನ ವೃತ್ತಿಬಾಂಧವರಿಗೆ ಸಹಾಯ ಮಾಡಲಿಕ್ಕಾಗಿ ಯಾವ ತಪ್ಪನ್ನು, ಅನ್ಯಾಯವನ್ನು ನಾನು ಮಾಡುವುದಿಲ್ಲ.

ಮಾನ್ಯ ಖಂಡೂ ಭಾಯಿ ದೇಸಾಯಿಯವರು ಮತ್ತೊಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅವರ ದೂರು ನನ್ನನ್ನು ಆಶ್ಚರ್ಯಚಕಿತನನ್ನಾಗಿಮಾಡಿದೆ ಎಂದು ಹೇಳಬೇಕು. ಅವರು ದೂರು ಏನೆಂದರೆ, ನಮ್ಮಲ್ಲೇ ಸಂಸತ್ತಿನ ಸದಸ್ಯರಾಗಿರುವ ಅನೇಕ ನ್ಯಾಯವಾದಿಗಳು ತಮ್ಮ ಕಕ್ಷಿದಾರರ ಪರವಾಗಿ ಸರಕಾರಿ ಹಾಗೂ ನ್ಯಾಯ ಸಂಸ್ಥೆಗಳಲ್ಲಿ ವಾದಮಾಡಿ ಅದಕ್ಕೆ ಸಂಭಾವನೆಯನ್ನು ಪಡೆಯುತ್ತಾರೆ. ಇದು ರಾಜ್ಯದ ವಿಧಾನ ಸಭೆಗಳಲ್ಲೂ ನಡೆಯುವ ವಿಚಾರವೇ ಸರಿ. ನನಗೆ ಅರಿವಿರುವ ಕಾನೂನಿನ ಪ್ರಕಾರ ಪ್ರತಿ ನ್ಯಾಯವಾದಿಗೂ ಒಂದು ನ್ಯಾಯಾಲಯದಲ್ಲಿ ಕೆಲಸ ಮಾಡುವುದು ಅವನ ಹಕ್ಕು. ಹಾಗೂ ಆಡಳಿತದ ಒಂದು ವಿಭಾಗದಲ್ಲಿ ಮಂತ್ರಿಯಾಗಿರುವವನು ಒಂದು ನ್ಯಾಯಾಲಯ ಎಂದು ನಾನು ಎಲ್ಲೂ ಕೇಳಿಲ್ಲ. ಇದು ನನ್ನಲ್ಲಿ ಅಚ್ಚರಿ ಮೂಡಿಸಿದೆ. ಆದ್ದರಿಂದ ಒಬ್ಬ ನ್ಯಾಯವಾದಿಗೆ ಸಾಂವಿಧಾನಿಕವಾಗಿ ತನ್ನ ಉದ್ಯೋಗದಲ್ಲಿ

ಕೆಲಸ ನೀಡುವ ಹಕ್ಕನ್ನು ಒಂದು ಮಂತ್ರಿಯ ಮುಂದೆ ಹೋಗಿ ನಿಂತು ತನ್ನ ಮಾತಿಗಾಗಿ ಒಂದು ಕೇಳಿಕೆಯನ್ನು ಹಕ್ಕಿನಂತೆ ಪ್ರತಿಪಾದಿಸಲು ಸಾದ್ಯವಿಲ್ಲ. ಯಾರಾದರೂ ಮಂತ್ರಿಗಳು ತಮ್ಮ ಕಕ್ಷಿದಾರರ ಪರವಾಗಿ ಮಂತ್ರಿಗಳ ಮುಂದೆ ನಿಂತು ವಿಚಾರ ಮಂಡನೆ ಮಾಡುತ್ತಿದ್ದರೆ, ಅದಕ್ಕೆ ಆ ಮಂತ್ರಿಗಳು ಪರವಾನಗಿ ನೀಡುತ್ತಿದ್ದರೆ. ಅಂತಹವರು ಕಾನೂನಿನ ವಿರುದ್ಧವಾಗಿ ನಡೆದುಕೊಳ್ಳುತ್ತಿರೆಂದು ನನ್ನ ನಂಬಿಕೆ. ಎಲ್ಲಾ ಮಂತ್ರಿಗಳು ತಾವು ನ್ಯಾಯಾಲಯಗಳಲ್ಲ ಎಂದು ಸರಿಯಾಗಿ ಅರ್ಥ ಮಾಡಿಕೊಂಡರೆ ನನ್ನ ಮಿತ್ರ ಖಂಡೂ ಭಾಯಿ ದೇಸಾಯಿಯವರು ಹೇಳಿರುವ ಈ ದುರಭ್ಯಾಸ ಸಂಪೂರ್ಣವಾಗಿ ಮಾಯವಾಗಿ ಬಿಡುತ್ತದೆ.

**ಮಾನ್ಯ ಅಧ್ಯಕ್ಷರು:** ಆ ರೀತಿಯ ಅಭ್ಯಾಸ ಚಾಲ್ತಿಯಲ್ಲಿ ಇದೆಯೇ?

**ಪ್ರಧಾನ ಮಂತ್ರಿಗಳು (ಶ್ರೀ ಜವಾಹರ್‌ಲಾಲ್ ನೆಹರು):** ಈ ಅಭ್ಯಾಸದ ಬಗ್ಗೆ ಮತ್ತು ಅದರ ಉದಾಹರಣೆ ಬಗ್ಗೆ ನಾನು ಈವರೆಗೂ ಕೇಳಿಲ್ಲ. ಆದ್ದರಿಂದ ಅದು ಎಲ್ಲಿ ಯಾವಾಗ ನಡೆಯುತ್ತಿದೆ ಎಂಬುದನ್ನು ತಿಳಿಸಬೇಕು ಎಂದು ಕೋರುತ್ತೇನೆ.

**ಡಾ. ಅಂಬೇಡ್ಕರ್:** ಅದು ನನಗೂ ತಿಳಿದಿಲ್ಲ. ಅದು ಮಾನ್ಯ ಖಂಡೂ ಭಾಯಿ ದೇಸಾಯಿಯವರು ಹೇಳಿದ ಮಾತು.

**ಉತ್ಪಾದನೆ, ಸರಬರಾಜು ಹಾಗೂ ಕಾಮಗಾರಿಗಳ (ಮಾನ್ಯ ಮಂತ್ರಿ Gadgil):** ಇದಕ್ಕೆ ವಿರುದ್ಧವಾಗಿ ಇರುವ ದೂರು ಯಾವುದೆಂದರೆ ನಮ್ಮಲ್ಲಿ ಕೆಲವರು ನ್ಯಾಯವಾದಿಗಳಿಗೆ ಸಂದರ್ಶನ ನೀಡಿಲ್ಲ ಎಂಬ ವಿಚಾರ.

**ಡಾ. ಅಂಬೇಡ್ಕರ್:** ಅದು ಸರಿಯಾದ ವಿಚಾರ.

**ಶ್ರೀ ಹುಸೇನ್ ಇದೂಂ:** ಮಾನ್ಯ ಮಂತ್ರಿಗಳು ಯಾವುದಾದರೂ ಸಂಸತ್ತಿನ ಸದಸ್ಯರಿಗೆ ಸಂಧಾನ ನೀಡಲು ನಿರಾಕರಿಸಿದ್ದಾರೆಯೇ?

**ಶ್ರೀ ಜವಹರಲಾಲ್ ನೆಹರು:** ನನಗೆ ತಿಳಿದ ಮಟ್ಟಿಗೆ ಈವರೆಗೂ ಯಾವುದಾದರೂ ನ್ಯಾಯವಾದಿಗಳೂ ಮಂತ್ರಿಗಳ ಮುಂದೆ ನ್ಯಾಯವಾದಿಗಳಾಗಿ ನಿಂತದ್ದು ನನ್ನ ಗಮನಕ್ಕೆ ಬಂದಿಲ್ಲ.

**ಡಾ. ಅಂಬೇಡ್ಕರ್:** ಅದು ನನಗೆ ತಿಳಿಯದ ವಿಚಾರ. ಆದರೆ ಅವರು ಹೀಗೆ ಹೇಳಿದರು. ಅದನ್ನು ನಾನು ತಿಳಿಸಿದ ರೀತಿಯಲ್ಲಿ ನಿಯಂತ್ರಿಸಬಹುದು. ಅದಕ್ಕಾಗಿ ಒಂದು ಕಾನೂನಿನ ವಿಧಿಗಳನ್ನೇನೂ ಮಾಡಬೇಕಾಗಿಲ್ಲ.

ಈಗ ನಾನು ಪಂ. ಕುಂಜ್ರು ಅವರು ಮಂಡಿಸಿರುವ ತಿದ್ದುಪಡಿಗೆ ಬರುತ್ತೇನೆ. "ರಾಜ್ಯಕ್ಕೆ ನಿಷ್ಠೆ ಇಲ್ಲದಿರುವುದು" ಎಂಬ ಪದಗಳನ್ನು ಹೊರತುಪಡಿಸಬೇಕೆಂದು ಅವರ ವಾದ. ಇದರ ಅರ್ಥವೇನು? ಇದು ಸರಿಯಾದ ಪದವಲ್ಲ. ಇದನ್ನು ಎಲ್ಲೂ ವಿವರಿಸಿ ಹೇಳಿಲ್ಲ. ಆದರೆ ಈ ವಿಚಾರ ಆಯ್ಕೆ ಸಮಿತಿಯ ಮುಂದೆ ಬಂದಾಗ ಎರಡು ರೀತಿಯ ಸರಕಾರಿ ನೌಕರರುಗಳ ಬಗ್ಗೆ ಚರ್ಚೆ ನಡೆದಿತ್ತು. ಸೇನಾ ನೌಕರರು ಅವರು ಸೇನೆಯ ನೌಕರರ ಬಗ್ಗೆಯೂ ಚಿಂತನೆ ನಡೆಸಿದ್ದರು. ಅವರ ವಿಚಾರವೇನಿತ್ತೆಂದರೆ, ಒಬ್ಬ ಸೇನಾಧಿಕಾರಿಯು ತನ್ನ ಒಂದು ಕಾರ್ಯದಿಂದ ದೇಶದ ರಕ್ಷಣೆಗೆ ಕುತ್ತು ತರುವ ಸಾಧ್ಯತೆ ಇದೆ: ಅಂತಹವನು ರಾಷ್ಟ್ರದ ಬಗ್ಗೆ ನಿಷ್ಠೆ ತೋರಿಸದೆ ದ್ರೋಹಮಾಡಿದ್ದರೆ ಅವನನ್ನು ಕೆಲಸದಿಂದ ವಜಾ ಮಾಡಿರಬಹುದು. ಒಂದು ಸರಿಯಾದ ಪದವನ್ನು ನಾವು ಉಪಯೋಗಿಸಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಏನನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆಂದು ೭ ನೇ ಕಲಮಿನಲ್ಲಿ ಯಾವ ಒಬ್ಬ ಅಧಿಕಾರಿಯು ಭ್ರಷ್ಟ

ಅಭ್ಯಾಸಗಳಿಗಾಗಿ ವಜಾ ಮಾಡಲ್ಪಟ್ಟಿರುತ್ತಾನೋ ಅಥವಾ ನಿಷ್ಠೆ ಇಲ್ಲದಂತಹವನೋ ಎಂಬುದನ್ನು ನಿಷ್ಕರ್ಷೆ ಮಾಡಲು ಚುನಾವಣಾ ಆಯೋಗಕ್ಕೆ ಸಾಕಷ್ಟು ಅಧಿಕಾರವಿದೆ. ಚುನಾವಣಾ ಆಯೋಗದ ಆಯುಕ್ತರು ಸ್ವತಂತ್ರ ಅಧಿಕಾರಿಗಳಾಗಿದ್ದರೆ ಉಪಕಲಂ ೩ ರ ಪ್ರಕಾರ ಅಧಿಕಾರದ ದುರುಪಯೋಗದ ವಿರುದ್ಧ ಸಾಕಷ್ಟು ರಕ್ಷಣೆ ಇದೆ. ಹಾಗೂ ೭ ನೇ ಕಲಂ ನ ನಿಯಮಗಳ ಯಾವುದಾದರೂ ದುರುಪಯೋಗ ನಡೆಸಿದ್ದರೂ ಕ್ರಮಕ್ಕೆ ಸಾಕಷ್ಟು ಏರ್ಪಾಡು ಇದೆ.

ನನ್ನ ವಿಚಾರದಲ್ಲಿ ಮಾನ್ಯ ಸದಸ್ಯರು ಮಾಡಿರುವ ಆಕ್ಷೇಪಣೆಯ ಬಗ್ಗೆ ನನ್ನ ಉತ್ತರದ ಮಾತುಗಳನ್ನು ಹೊರತುಪಡಿಸಿ ಇನ್ನಾವ ವಿವರಣೆಯ ಆವಶ್ಯಕತೆ ಇದೆ ಇಂದು ನನಗೆ ಅನಿಸುವುದಿಲ್ಲ.

**ಶ್ರೀಕಾಂತ್:** ಡಾ. ಅಂಬೇಡ್ಕರ್ ಅವರು ಮಾಡಿದ ಸಣ್ಣ ತಪ್ಪನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಡಾ. ಅಂಬೇಡ್ಕರ್ ಅವರು ಶ್ರೀ ಚೌಧುರಿ ಅವರನ್ನು ರೋಹಿಣಿ ಎಂದು ಸಂಬೋಧಿಸಿ ಅವರನ್ನು ಸ್ತ್ರೀಯಾಗಿ ಮಾರ್ಪಡಿಸಿದ್ದಾರೆ. ಅಧಿಕೃತ ವರದಿಗಳಲ್ಲಿ ಅವರ ಸರಿಯಾದ ಹೆಸರು ರೋಹಿತ್ ಕುಮಾರ್ ಎಂಬುದು ಸರಿಯಾಗಿ ನಮೂದಿಸಲ್ಪಡುತ್ತದೆ ಎಂದು ಆಶಿಸುತ್ತೇನೆ. ಅದು ಪುರುಷನ ಹೆಸರು.

**ಮಾನ್ಯ ಅಧ್ಯಕ್ಷರು:** ನಿಶ್ಯಬ್ದ ನಿಶ್ಯಬ್ದ

**ಶ್ರೀ ಕಾಮತ್:** ಇದು ಒಂದು ಗಹನವಾದ ವಿಚಾರ ಸ್ವಾಮಿ.

**ಡಾ. ಅಂಬೇಡ್ಕರ್:** ನಾನು ಏನೆಂದು ಹೇಳಿದೆ.

**ಶ್ರೀ ಕಾಮತ್:** ತಾವು ರೋಹಿಣಿ ಎಂದು ಹೇಳಿದಿರಿ.

**ಡಾ. ಅಂಬೇಡ್ಕರ್:** ನಾನು ಅವರನ್ನು ಹಾಗೆಯೇ ಕರೆಯುವರು

**ಡಾ. ಕಾಮತ್:** ಅವರು ರೋಹಿಣಿ ಕುಮಾರ್ ಚೌಧುರಿ. ರೋಹಿಣಿ ಅಲ್ಲ

**ಡಾ. ಅಂಬೇಡ್ಕರ್:** ಅವರು ನನ್ನನ್ನು ಅಪಾರ್ಥ ಮಾಡಿಕೊಂಡಿಲ್ಲ ಎಂದು ನನಗನ್ನಿಸುತ್ತದೆ.

**ಶ್ರೀ ಆರ್.ಕೆ. ಚೌಧುರಿ:** ಇಲ್ಲ

**ಡಾ. ಅಂಬೇಡ್ಕರ್:** ಅವರು ಹಾಗೆ ಅಪಾರ್ಥ ಮಾಡಿಕೊಳ್ಳಲು ನಿರಾಕರಿಸುತ್ತಾರೆ. ನನಗೆ ಖಾತರಿಯಾಗಿ ಗೊತ್ತು.

**ಚೌ॥ ರಣಬೀರ್‌ಸಿಂಗ್:** ಮಾನ್ಯ ಕಾನೂನು ಮಂತ್ರಿಗಳು ವ್ಯಕ್ತಪಡಿಸಿದ ವಿಚಾರದಂತೆ ಸಹಕಾರಿ ಸಂಘಗಳು ಸಾರ್ವಜನಿಕ ಕಂಪನಿ ನಿಯಮಗಳ ಅಡಿಯಲ್ಲಿ ಬರುವುದಿಲ್ಲ. ಮತ್ತು ಅದನ್ನು ಬೇರೆ ಒಂದು ಕಾನೂನಿನ ಅಡಿಯಲ್ಲಿ ದಾಖಲಿಸುತ್ತಾರೆಂದು ನನಗೆ ತಿಳಿದಿದೆ. ಸಹಕಾರಿ ಸಂಘದ ಪಾಲುದಾರರು ಸರಕಾರದ ಕೆಲಸಗಳಲ್ಲಿ ಗುತ್ತಿಗೆ ಕೆಲಸಗಳನ್ನು ಹೊಂದಿದ್ದಲ್ಲಿ ಅಂತಹವರನ್ನು ಸಹ ತಾವು ಚುನಾವಣಾ ಸ್ಪರ್ಧೆಯಿಂದ ಅನೂರ್ಜಿತಗೊಳಿಸುವ ಕ್ರಮ ತೆಗೆದುಕೊಳ್ಳುತ್ತಿದ್ದೀರಾ?

(ಅನೇಕ) **ಮಾನ್ಯ ಸದಸ್ಯರು:** ಅನೂರ್ಜಿತಗೊಳಿಸಿಲ್ಲ.

**ಅಧ್ಯಕ್ಷರು:** ತಿದ್ದುಪಡಿಗಳನ್ನು ಮಂಡಿಸಿರುವ ಮಾನ್ಯ ಸದಸ್ಯರುಗಳು ಯಾರಾದರೂ ತಿದ್ದುಪಡಿಗಳನ್ನು ವಾಪಸು ಪಡೆಯುತ್ತಿದ್ದಾರೆಯೇ ಎಂಬುದನ್ನು ತಿಳಿಸಿ ಅಥವಾ ಅದನ್ನು ಸಭೆಯ ಮುಂದೆ ಮಂಡಿಸಲೇ?

**ಶ್ರೀ ಶ್ಯಾಮಸುಂದರ ಸಹಾಯ:** ಸಹಕಾರಿ ಸಂಘಗಳ ವಿಚಾರಣೆ ಬಗ್ಗೆ ಸ್ವಲ್ಪ ವಿವರಣೆ ಬೇಕಾಗಿದೆ. ಡಾ. ಅಂಬೇಡ್ಕರ್ ರವರು ಹೇಳಿದಂತೆ ಸಹಕಾರಿ ಸಂಘಗಳನ್ನು ಹೊರತುಪಡಿಸಿಲ್ಲ. "ಹೊರತು ಪಡಿಸುವುದು" ಎಂದರೆ ಅರ್ಥವೇನು ಎಂದು ನನಗೆ ಅರಿವಾಗಿಲ್ಲ ಮಾನ್ಯ ನಿರ್ದೇಶಕರು...

**ಡಾ. ಅಂಬೇಡ್ಕರ್:** ಯಾವ ಅನರ್ಹತೆಯೂ ಇಲ್ಲ. ಅವುಗಳಿಗೆ ಈ ಅನರ್ಹತೆ ಹೇಗೂ ಆಗುವುದಿಲ್ಲ.

**ಶ್ರೀ ಶ್ಯಾಮಸುಂದರ ಸಹಾಯ:** ನಾನು ನನ್ನ ತಿದ್ದುಪಡಿಯನ್ನು ವಾಪಸು ಪಡೆಯಲು ಸಭಾಪತಿಗಳನ್ನು ಕೋರುತ್ತೇನೆ.

ಪರವಾನಗಿಯೊಂದಿಗೆ ತಿದ್ದುಪಡಿಗಳನ್ನು ವಾಪಸು ತೆಗೆದುಕೊಳ್ಳಲಾಯಿತು.

***ಕಲಂ ೯.**—

೯ನೆಯ ಖಂಡದಲ್ಲಿ "ಈ ಕಾಯ್ದೆಯ ಯಾವುದೇ ಉಪಬಂಧಗಳ ಮೇರೆಗೆ ಸಂಸತ್ತಿನ ಸದಸ್ಯತ್ವಕ್ಕೆ ಯಾವುದೇ ಅನರ್ಹತೆ ಉಂಟಾಗುವುದಕ್ಕೆ ಒಳಪಟ್ಟು" ಎಂಬುದಕ್ಕೆ ಬದಲಾಗಿ, ಇದನ್ನು ಸೇರಿಸಿಕೊಳ್ಳಿ:

"೧೦೨ನೆಯ ಅನುಚ್ಛೇದದ ಯಾವುದೇ ಉಪಬಂಧಗಳ ಮೇರೆಗೆ ಸಂಸತ್ತಿನ ಯಾವುದೇ ಸದನಕ್ಕೆ ಸದಸ್ಯನಾಗಿ ಆಯ್ಕೆಗೊಳ್ಳಲು ಅನರ್ಹನಾಗುವುದು."

–(ಡಾ. ಅಂಬೇಡ್ಕರ್)

**ಮಾನ್ಯ ಅಧ್ಯಕ್ಷರು:** ವಿಷಯ ಏನೆಂದರೆ

ತಿದ್ದುಪಡಿಯಿಂದ ಪರಿಷ್ಕೃತವಾದ ಭಾಗವನ್ನು ಮಸೂದೆಯಲ್ಲಿ ಸೇರಿಸಲಾಗಿದೆ.

ವಿಷಯವು ಅಂಗೀಕೃತವಾಯಿತು.

ಕಲಂ ೧೨೨ (ಬೃಹತ್ ಭ್ರಷ್ಟಾಚಾರ)

**ಡಾ. ಅಂಬೇಡ್ಕರ್:** ನಾನು ಮಂಡಿಸಬಯಸುತ್ತೇನೆ:

(i) ೧೨೨ನೆಯ ಖಂಡದ ಉಪಖಂಡ (೨)ರ ಪರಂತುಕ (೧)ರ (ಎ) ಭಾಗದಲ್ಲಿ, "ಯಾವುದೇ ಬಗೆಯ ಘಾಸಿ" ಎಂಬ ಪದಗಳ ತರುವಾಯ "ಸಾಮಾಜಿಕ ಬಹಿಷ್ಕಾರ ಹಾಗೂ ಧಾರ್ಮಿಕ ಬಹಿಷ್ಕಾರ ಅಥವಾ ಯಾವುದೇ ಜಾತಿ ಅಥವಾ ಸಮುದಾಯದಿಂದ ಹೊರಹಾಕುವಿಕೆಯೂ ಸೇರಿದಂತೆ" ಎಂಬ ಶಬ್ದಗಳನ್ನು ಸೇರಿಸಿಕೊಳ್ಳಿ.

(ii) ೧೨೨ನೆಯ ಖಂಡದ ಉಪಖಂಡ(೬)ರ ಬದಲಾಗಿ ಈ ಕೆಳಗಿನದನ್ನು ಸೇರಿಸಿಕೊಳ್ಳಿ:

"(೬) ಪ್ರಕರಣ ೨೩ರ ಮೇರೆಗೆ ಒದಗಿಸಲಾಗಿರುವ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಕೇಂದ್ರದಿಂದ ಅಥವಾ ಪ್ರಕರಣ ೨೭ ಉಪ–ಪ್ರಕರಣ(೧)ರ ಮೇರೆಗೆ ಮತದಾನಕ್ಕಾಗಿ ನಿಗದಿಪಡಿಸಲಾಗಿರುವ ಯಾವುದೇ ಸ್ಥಳಕ್ಕೆ ಅಥವಾ ಸ್ಥಳದಿಂದ ಮತದಾರನನ್ನು (ಸ್ವತಃ ಅಭ್ಯರ್ಥಿಯನ್ನು ಅಥವಾ ಆತನ ಕುಟುಂಬದ ಸದಸ್ಯರನ್ನು ಅಥವಾ ಆತನ ಏಜೆಂಟರನ್ನು ಹೊರತುಪಡಿಸಿ) ಕರೆದೊಯ್ಯುವುದಕ್ಕಾಗಿ ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಅಭ್ಯರ್ಥಿಯ ಅಥವಾ ಆತನ ಏಜೆಂಟ್‌ನ ಜೊತೆಯಲ್ಲಿ ಕೈಗೊಡಿಸಿಕೊಂಡಿರುವಂಥ ಯಾವನೇ ವ್ಯಕ್ತಿ ಹಣಪಾವತಿ

---

* 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೨೮ ಮೇ ೧೯೫೧, ಪು. ೯೫೮೨–೮೩. ಟಿ. ೪೧೯೩–೪೪.

ಮಾಡಿರುವುದು ಅಥವಾ ಬೇರಾವುದೇ ರೀತಿಯಲ್ಲಿ ಯಾವುದೇ ವಾಹನವನ್ನು ಅಥವಾ ನೌಕೆಯನ್ನು ಬಾಡಿಗೆಗೆ ಪಡೆಯುವುದು ಅಥವಾ ಬೇರಾವುದೇ ರೀತಿಯಲ್ಲಿ ಪಡೆದುಕೊಂಡಿರುವುದು.

ಆದರೆ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಕೇಂದ್ರದಿಂದ ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾಗಿರುವ ಸ್ಥಳಕ್ಕೆ ಅಥವಾ ಸ್ಥಳದಿಂದ ಆತನನ್ನು ಅಥವಾ ಅವರುಗಳನ್ನು ಕರೆದೊಯ್ಯುವ ಸಲುವಾಗಿ ಅಭ್ಯರ್ಥಿ ಅಥವಾ ಹಲವು ಅಭ್ಯರ್ಥಿಗಳು ಬಾಡಿಗೆಗೆ ಪಡೆದುಕೊಳ್ಳುವ ವಾಹನ ಅಥವಾ ನೌಕೆಯ ವೆಚ್ಚವನ್ನು ಒಟ್ಟಾರೆಯಾಗಿ ಭರಿಸುತ್ತಿದ್ದಲ್ಲಿ, ಹಾಗೆ ಬಾಡಿಗೆ ಪಡೆದ ವಾಹನ ಅಥವಾ ನೌಕೆ ಯಾಂತ್ರಿಕ ಶಕ್ತಿಯಿಂದ ಚಾಲಿತವಾಗಿರುವಂಥದಾಗಿರದೆ ಇದ್ದಲ್ಲಿ ಅದನ್ನು ಈ ಖಂಡದ ಅಡಿಯಲ್ಲಿ ಭ್ರಷ್ಟ ಆಚರಣೆ ಎಂದು ಪರಿಗಣಿಸತಕ್ಕದ್ದಲ್ಲ;

ಆದರೆ, ಇದರ ಜೊತೆಗೆ, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಹೋಗಲು ಅಥವಾ ಮತದಾನ ಕೇಂದ್ರದಿಂದ ಬರಲು ಅಥವಾ ಮತದಾನಕ್ಕೆ ನಿಗದಿಪಡಿಸಲಾಗಿರುವ ಸ್ಥಳಕ್ಕೆ ಹೋಗಲು ಅಥವಾ ಸ್ಥಳದಿಂದ ಬರಲು ಯಾವುದೇ ಅಭ್ಯರ್ಥಿ ತನ್ನದೇ ವೆಚ್ಚದಲ್ಲಿ ಸಾರ್ವಜನಿಕ ಸಾರಿಗೆ ವಾಹನವನ್ನು ಅಥವಾ ನೌಕೆಯನ್ನು ಅಥವಾ ಯಾವುದೇ ಟ್ರ್ಯಾಮ್ ಕಾರನ್ನು ಅಥವಾ ರೈಲು ಬೋಗಿಯನ್ನು ಬಳಸಿಕೊಂಡಲ್ಲಿ, ಅದನ್ನು ಈ ಖಂಡದ ಅಡಿಯಲ್ಲಿ ಭ್ರಷ್ಟ ಆಚರಣೆ ಎಂದು ಪರಿಗಣಿಸತಕ್ಕದ್ದಲ್ಲ.

**ವಿವರಣೆ:** ಈ ಖಂಡದಲ್ಲಿನ 'ವಾಹನ' ಎಂಬ ಶಬ್ದಕ್ಕೆ ರಸ್ತೆ ಸಾರಿಗೆಗಾಗಿ ಬಳಸಲಾಗುತ್ತಿರುವ ಅಥವಾ ಬಳಸಲಾಗುವ ಸಾಮರ್ಥ್ಯವನ್ನು ಹೊಂದಿರುವ ಯಾವುದೇ ಸಾಧನ ಎಂದು ಅರ್ಥ–ಅದು ಯಾಂತ್ರಿಕ ಶಕ್ತಿಯಿಂದ ಚಾಲಿತವಾಗುವಂಥದಾಗಿರಲಿ ಅಥವಾ ಬೇರೆ ಬಗೆಯದೇ ಆಗಿರಲಿ ಹಾಗೂ ಇತರ ವಾಹನಗಳನ್ನು ಎಳೆಯುವುದಕ್ಕಾಗಿ ಅಥವಾ ಬೇರೆಯಾಗಿ ಬಳಸಲಾಗುವ ಸಾಧನವಾಗಿರಲಿ."

**ಮಾನ್ಯ ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

**ಡಾ. ಅಂಬೇಡ್ಕರ್:** ನಾನು ಮಂಡಿಸಬಯಸುತ್ತೇನೆ:

(iii) ೧೨೨ನೆಯ ಖಂಡದ ೮ನೆಯ ಭಾಗದ ವಿವರಣೆಯಲ್ಲಿ, ಈ ಕೆಳಗಿನದನ್ನು ಸೇರಿಸಿಕೊಳ್ಳಿ:

**ವಿವರಣೆ:** ಈ ಖಂಡದ ಉದ್ದೇಶಗಳಿಗಾಗಿ–

(ಎ) ಈ ಖಂಡದ ಉಪಬಂಧ'ಗಳು ಯಾರಿಗೆ ಅನ್ವಯವಾಗುವುದಿಲ್ಲವೆಂಬುದಾಗಿ ಕೇಂದ್ರ ಸರ್ಕಾರದಿಂದ ಘೋಷಿಸಲ್ಪಟ್ಟಿರುವಂಥ ಯಾವನೇ ವ್ಯಕ್ತಿಯು ಭಾರತ ಸರ್ಕಾರದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವಂಥ ವ್ಯಕ್ತಿ ಎಂದು ಪರಿಗಣಿತನಾಗುವಂತಿಲ್ಲ;

(ಬಿ) ಯಾವುದೇ ರಾಜ್ಯದ ಸರ್ಕಾರದಲ್ಲಿ ಸೇವೆಸಲ್ಲಿಸುತ್ತಿರುವ ವ್ಯಕ್ತಿ ಎಂಬ ಮಾತು ಆ ರಾಜ್ಯದಲ್ಲಿ ನೇಮಕಗೊಂಡಿರುವ ಪಟವಾರಿಯನ್ನು, ಚೌಕೀದಾರನನ್ನು, ದಫೇದಾರನನ್ನು, ಲಂಬರ್‌ದಾರನನ್ನು, ಜೈಲುದಾರನನ್ನು, ಶ್ಯಾನುಭೋಗನನ್ನು, ಕರ್ಣಂನನ್ನು, ತಲಾಟಿಯನ್ನು, ತಳಾರಿಯನ್ನು, ಪಾಟೀಲನನ್ನು, ಗ್ರಾಮದ ಮುನ್ಸೀಫನನ್ನು, ಗ್ರಾಮ ಮುಖ್ಯಸ್ಥನನ್ನು, ಯಾವುದೇ ಹೆಸರಿನಿಂದ ಕರೆಯಲಾಗುತ್ತಿರುವ ಯಾವುದೇ ಗ್ರಾಮಾಧಿಕಾರಿಯನ್ನು ಒಳಗೊಳ್ಳತಕ್ಕದ್ದು– ಆತನು ಪೂರ್ಣಾವಧಿಗಾಗಿ ಕಾರ್ಯ ನಿರ್ವಹಿಸುತ್ತಿರಲಿ ಅಥವಾ ಅಲ್ಪಾವಧಿಗಾಗಿ ಕಾರ್ಯ ನಿರ್ವಹಿಸುತ್ತಿರಲಿ; ಆದರೆ, ಈ ಖಂಡದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲವೆಂದು ರಾಜ್ಯಸರ್ಕಾರದಿಂದ ಘೋಷಿಸಲ್ಪಟ್ಟಿರುವ ಯಾವುದೇ ವ್ಯಕ್ತಿಯನ್ನು (ಮೇಲೆ ಹೇಳಲಾಗಿರುವ ಅಂಥ ಯಾವುದೇ ಗ್ರಾಮಾಧಿಕಾರಿಯನ್ನು ಹೊರತುಪಡಿಸಿ) ಒಳಗೊಳ್ಳತಕ್ಕದ್ದಲ್ಲ."

**ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

ಇವೆಲ್ಲ ಒಪ್ಪಲಾಗಿರುವ ತಿದ್ದುಪಡಿಗಳು.

***ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

"ಡಾ. ಅಂಬೇಡ್ಕರ್ ಅವರು ಪ್ರಸ್ತಾವಿಸಿರುವ ತಿದ್ದುಪಡಿಯಲ್ಲಿ ೧೨೨ನೆಯ ಖಂಡದ ೮ನೆಯ ಭಾಗದ ಬಗ್ಗೆ ಪ್ರಸ್ತಾವಿಸಲಾಗಿರುವ ವಿವರಣೆಯ (ಬಿ) ಭಾಗದಲ್ಲಿ ಪಾಟೀಲ್, ಗ್ರಾಮ ಮುಖ್ಯಸ್ಥ ಅಥವಾ ಬೇರಾವನೇ ಗ್ರಾಮಾಧಿಕಾರಿ" ಎಂಬ ಮಾತುಗಳನ್ನು ಕೈಬಿಡಿ."

**ಶ್ರೀ ಕಾಮತ್:** ಸಮುಚ್ಚಯ ಪಟ್ಟಿ ೨ಕ್ಕೆ ಸಂಬಂಧಪಟ್ಟಂತೆ. ಸಂಪೂರಕ ಪಟ್ಟಿ ಎರಡರ ಪ್ರಕಾರ ಕೆಲವು ತಿದ್ದುಪಡಿಗಳನ್ನು ಮುಂದಿಡುತ್ತೇನೆ. ನನ್ನ ಬಳಿ ಅನೇಕ ತಿದ್ದುಪಡಿಗಳಿವೆ. ಅವುಗಳಲ್ಲಿ ಒಂದನ್ನು ಮಂಡಿಸುತ್ತೇನೆ. ಸಮುಚ್ಚಯ ಪಟ್ಟಿ ೨ಕ್ಕೆ ಸಂಬಂಧಪಟ್ಟಂತೆ ೬ನೆಯ ಸಂಪೂರಕ ಪಟ್ಟಿಯ ಸಂಬಂಧದಲ್ಲಿ ಕೆಲವು ತಿದ್ದುಪಡಿಗಳು ಇವೆ. ಈಗ ಒಂದನ್ನು ಮಾತ್ರ ಮಂಡಿಸುತ್ತಿದ್ದೇನೆ. ಬೇರೆಯವನ್ನು ಬದಿಗಿಟ್ಟಿದ್ದೇನೆ. ಎಂದರೆ ಸಮುಚ್ಚಯ ಪಟ್ಟಿಗೆ ಸಂಬಂಧಪಟ್ಟಂತೆ ಸಂಪೂರಕ ಪಟ್ಟಿಯ ೩ನೇ ವಿಷಯದ ೫ನೇ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಸಮುಚ್ಚಯ ಪಟ್ಟಿ ೨ಕ್ಕೆ ಸಂಬಂಧಪಟ್ಟಂತೆ ಸಂಪೂರಕ ಪಟ್ಟಿ ೩ರ ಸಂಬಂಧದಲ್ಲಿ ೩ನೆಯ ತಿದ್ದುಪಡಿ ಹಾಗೂ ಸಮುಚ್ಚಯ ಪಟ್ಟಿ ೨ಕ್ಕೆ ಸಂಬಂಧ ಪಟ್ಟಂತೆ ಸಂಪೂರಕ ಪಟ್ಟಿ ೬ನೆಯ ವಿಚಾರದ ೨ನೆಯ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

ಸಂಪೂರಕ ಪಟ್ಟಿ ೫ರ ೩ನೇ ಸಂಖ್ಯೆಯ ತಿದ್ದುಪಡಿಯನ್ನು ಮಂಡಿಸಲು ಅನುಮತಿ ಕೋರುತ್ತೇನೆ.

೧೨೨ನೆಯ ಖಂಡದ (೨)ನೆಯ ಭಾಗದ ಪರಂತುಕದ ಭಾಗ ಎ (ii)ರಲ್ಲಿ ದೈವಿಕ ಅಸಂತೋಷಕ್ಕೆ ಅಥವಾ ಆಧ್ಯಾತ್ಮಿಕ ಖಂಡನೆಗೆ ಗುರಿಯಾಗಿರುವ ವ್ಯಕ್ತಿ" ಎಂಬುದಕ್ಕೆ ಬದಲಾಗಿ "ದೈವಿಕ ಶಾಪಕ್ಕೆ ಗುರಿಯಾಗಿರುವ ನಿರಪರಾಧಿ" ಎಂಬುದನ್ನು ಇರಿಸಿಕೊಳ್ಳಿ.

---

* 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೨೮ ಮೇ ೧೯೫೧, ಪು. ೯೫೯೦–೯೧.

**ಡಾ. ಅಂಬೇಡ್ಕರ್:** ಇವೆರಡರ ಮಧ್ಯೆ ವ್ಯತ್ಯಾಸವೇನೆಂದು ನನಗೆ ತಿಳಿಯುತ್ತಿಲ್ಲ.

**ಶ್ರೀ ಕಾಮತ್:** ಮಾನ್ಯರೇ, ಈ ವಿಚಾರವನ್ನು ಸಂಬಂಧಪಟ್ಟ ಇಂಗ್ಲಿಷ್ ಕಾನೂನು ಹಾಗೂ ಭಾರತೀಯ ದಂಡ ಸಂಹಿತೆಗಳಿಂದ ತೆಗೆದುಕೊಂಡಿರಬಹುದು. ಇಂಗ್ಲಿಷ್ ಕಾನೂನಿನಲ್ಲಿ ಬಳಸಿರುವ ಪದಗಳು "ಅನಗತ್ಯ ಆಧ್ಯಾತ್ಮಿಕ ಪ್ರಭಾವ"; ಅಷ್ಟಲ್ಲದೆ, ಕ್ರೈಸ್ತ ಧರ್ಮದ ಈ ಪದಗಳಲ್ಲಿ "ಆಧ್ಯಾತ್ಮಿಕ ಖಂಡನೆ" ಅಥವಾ "ಆಧ್ಯಾತ್ಮಿಕ ಆಘಾತ" ಇವುಗಳಿಗೆ ನಿರ್ದಿಷ್ಟ ಪರಿಭಾಷೆ ಇದೆ. "ಅನಗತ್ಯ ಆಧ್ಯಾತ್ಮಿಕ ಪ್ರಭಾವ" ಈ ಪದಗಳು ಇಂಗ್ಲೆಂಡಿನಲ್ಲಿ ಕೆಲವು ರೋಮನ್ ಕ್ಯಾಥಲಿಕ್ ಪಾದ್ರಿಗಳು ತಮ್ಮ ಸ್ಥಾನಕ್ಕೆ ಗೌರವ ತರದ ರೀತಿಯಲ್ಲಿ ತಮ್ಮ ಧರ್ಮದ ಮತದಾರರ ಮೇಲೆ ಧರ್ಮಾಧಿಕಾರಿಗಳ ಸ್ಥಾನಕ್ಕೆ ಧಕ್ಕೆ ತರುವಂತಹ ಕೆಲಸವನ್ನು "ಅನಗತ್ಯ ಪ್ರಭಾವ" ಎಂದು ಕರೆದರು. "ಒಬ್ಬ ಪಾದ್ರಿಯು ಒಬ್ಬ ಅಭ್ಯರ್ಥಿಯ ಬಗ್ಗೆ ಗುಣಾವಗುಣಗಳ ಪರಿಶೀಲನೆ ಮಾಡಿ ಸತ್ಯದ ಆಧಾರದ ಮೇಲೆ ಅಭ್ಯರ್ಥಿಯ ವಿಚಾರದ ಬಗ್ಗೆ ಸಲಹೆ ನೀಡುವುದು ನೈತಿಕ ಕರ್ಮ. ಅದನ್ನು ಬಿಟ್ಟು ಜನ ಸಮೂಹದ ಮೂಢ ನಂಬಿಕೆಯನ್ನು ಉಪಯೋಗಿಸಿ ತನ್ನ ವಿಚಾರಕ್ಕೆ ಅವರನ್ನು ಸೆಳೆಯುವುದು ಸರಿಯಲ್ಲ." ಆದರೆ ಮಹಾ ಸ್ವಾಮಿಗಳೇ, ಇದು ಭಾರತ. ನನ್ನ ಮನಸ್ಸಿನಲ್ಲಿಯೇ ನನಗೆ ಖಾತರಿಯಾಗಿ ಏನನ್ನೂ...

**(ರಾತ್ರಿ ೮.೦೦)**

**ಶ್ರೀ ಜವಹರ್‌ಲಾಲ್‌ನೆಹರು:** ಮಧ್ಯೆ ಪ್ರವೇಶಿಸಲು ನನಗೆ ಇಚ್ಛೆಯಿಲ್ಲ. ಆದರೆ ಸಭೆಯಲ್ಲಿ ಏನಾಗುತ್ತಿದೆ ಎಂಬುದನ್ನು ನಾನು ತಿಳಿಯಲು ದುಸ್ತರವಾಗಿದೆ. ಹಾಗೂ ಈ ವಿಚಾರಕ್ಕೆ ಹೇಗೆ ಸಂಬಂಧಪಟ್ಟಿದೆ ಎಂಬುದು ಅರಿವಿಗೆ ಬರುತ್ತಿಲ್ಲ.

**ಶ್ರೀ ಕಾಮತ್:** ಯಾರಾದರೂ ಸರಿ, ಹಾಗೆ ಹೇಳಲು ಸಾಧ್ಯವಿಲ್ಲ.

****ಶ್ರೀ ಸಾರಂಗಧರ ದಾಸ್:** ನಾನು ಮುಂದಿನ ತಿದ್ದುಪಡಿಗೆ ತಮಗೆ ಕೊಟ್ಟಿರುವ ಸೂಚನೆಯ ಪ್ರಕಾರ ಈ ಷರತ್ತನ್ನು ಬಿಟ್ಟು ಬಿಡುವುದು. ಇದನ್ನು ಮಂಡಿಸಲು ಅನುಮತಿ ನೀಡಿ.

೧೨೨ನೆಯ ಖಂಡದ (೬)ನೆಯ ಭಾಗದ ಪರಂತುಕವನ್ನು ಕೈಬಿಡಿ.

ನಾನು ಈ ಷರತ್ತನ್ನು ಈ ಮಸೂದೆಯ ತಿದ್ದುಪಡಿ ಮಂಡಿಸಲು ಅನುಮತಿ ಕೇಳಿದ್ದೆ. ಅದರ ಪ್ರಕಾರ:

> "ಆದರೆ, ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಕೇಂದ್ರದಿಂದ ಆತನನ್ನು ಅಥವಾ ಅವರುಗಳನ್ನು ಕರೆದೊಯ್ಯುವ ಸಲುವಾಗಿ ಅಭ್ಯರ್ಥಿ ಅಥವಾ ಹಲವು ಅಭ್ಯರ್ಥಿಗಳು ಬಾಡಿಗೆಗೆ ಪಡೆದುಕೊಳ್ಳುವ ವಾಹನದ ವೆಚ್ಚವನ್ನು ಒಟ್ಟಾರೆಯಾಗಿ ಭರಿಸುತ್ತಿದ್ದಲ್ಲಿ ಅದನ್ನು ಭ್ರಷ್ಟ ಆಚರಣೆ ಎಂದು ಪರಿಗಣಿಸತಕ್ಕದ್ದಲ್ಲ."

ಉಪವಿಭಾಗ ೬, ಕಲಮ್ ೧೨೨ ರ ಪ್ರಕಾರ ಈ ಷರತ್ತು ಸರಿಯಾಗಿದೆ.

**ಶ್ರೀ ಸಂತಾನಂ:** ಈ ವಿಚಾರ ಅಂಬೇಡ್ಕರ್ ಅವರ ಹೊಸ ತಿದ್ದುಪಡಿಯಲ್ಲಿ ಸೇರಿಕೊಂಡಿದೆ. ಏಕೆಂದರೆ ಎಲ್ಲಾ ಯಂತ್ರಚಾಲಿತ ವಾಹನಗಳನ್ನು ಈ ಷರತ್ತಿನಿಂದ ಹೊರತುಪಡಿಸಲಾಗಿದೆ. ಆದ್ದರಿಂದ ಅವರ ವಿಚಾರದ ಅತಿ ಮುಖ್ಯ ಭಾಗದ ವಿಚಾರವನ್ನು ಆಗಲೇ ಗಮನಿಸಲಾಗಿದೆ.

---

* 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೨೮ ಮೇ ೧೯೫೧, ಪು. ೯೫೯೨–೯೫.
ಟಿ. ೪೧೯೩–೪೪೭.

**ಶ್ರೀ ಸಾರಂಗಧರ ಧಾಸ್:** ನನ್ನ ತಿದ್ದುಪಡಿಗಳನ್ನು ಒಪ್ಪಿದಲ್ಲಿ ಕಾನೂನು ಮಂತ್ರಿಗಳ ಎಲ್ಲಾ ಕಾಳಜಿಯು ಅವರ ತಿದ್ದುಪಡಿಯಿಂದ ಹೊರಟು ಹೋಗುತ್ತದೆ. ಆಯ್ಕೆ ಸಮಿತಿ ಮಾಡಿದ ತಿದ್ದುಪಡಿಗೆ ಈಗ ಮಂಡಿಸಿದ್ದು ನನ್ನ ತಿದ್ದುಪಡಿ. ಅದು ಒಂದು ಮೂಲಭೂತವಾದ ತಿದ್ದುಪಡಿ.

ಮಾನ್ಯರೇ, ಈ ತಿದ್ದುಪಡಿಯನ್ನು ಈ ಸಭೆಗೆ ಒಪ್ಪಿಸುತ್ತಿದ್ದೇನೆ.

**ಡಾ. ಅಂಬೇಡ್ಕರ್:** ನಾನು ಒಪ್ಪುವುದಿಲ್ಲ, ಮಾನ್ಯರೇ

ಸೂಚನೆಯನ್ನು ನಿರಾಕರಿಸಲಾಯಿತು.

*__ಚೌಧರಿ ರಣವೀರ ಸಿಂಗ್:__ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

> ೧೨೨ ನೇ ಕಲಮ್‌ನ ೮ ನೇ ವಿಭಾಗಕ್ಕೆ ಸೇರಿರುವ ವಿವರಣೆಯಲ್ಲಿ ಚೌಕೀದಾರ್, ದಫೇದಾರ್, ಲಂಬರ್‌ದಾರ್ ಮತ್ತು ಚೊಲ್‌ದಾರ್ ಈ ಪದಗಳನ್ನು ಹೊರತುಪಡಿಸುವುದು.

**ಡಾ. ಅಂಬೇಡ್ಕರ್:** ನಾನು ಈ ತಿದ್ದುಪಡಿಯನ್ನು ಒಪ್ಪುವುದಿಲ್ಲ.

**ಶ್ರೀ ಸತೀಶ್ ಚಂದ್ರ (ಉತ್ತರ ಪ್ರದೇಶ):** ನನಗಿಂತ ಮೊದಲು ಮಾತನಾಡಿದ ೩ ಭಾಷಣಕಾರರನ್ನು ನಾನು ಸಮರ್ಥಿಸುತ್ತೇನೆ. ನಾನು ಒಬ್ಬ ಲಂಬರ್‌ದಾರ ಆಗಿದ್ದೇನೆ. ನನ್ನ ಜಮೀನ್ದಾರಿಯಲ್ಲಿ ೧೦ ಗ್ರಾಮಗಳಿದ್ದು ಪ್ರತಿಯೊಂದಕ್ಕೂ ನಾನೇ ಲಂಬರದಾರ. ಅದೃಷ್ಟವಶಾತ್ ಇದರಲ್ಲಿ ಯಾರೂ ಸಹ ಪಾಲುದಾರರಿಲ್ಲ. ನಾನೇ ಇಡೀ ಗ್ರಾಮದ ಮಾಲಿಕನಾಗಿರಬಹುದು. ಆದರೆ ಸರಕಾರದ ಭೂ ಕಂದಾಯದ ಪರಿಭಾಷೆಯ ಪ್ರಕಾರ ನನ್ನನ್ನು 'ಲಂಬರದಾರ' ಎಂದು ಕರೆಯುತ್ತಾರೆ. ನನ್ನ ಜೀವನದಲ್ಲೆಂದೂ ನಾನೊಬ್ಬ ಸರಕಾರಿ ನೌಕರ ಮತ್ತು ಯಾವುದಾದರೂ ಅಧಿಕಾರದ ಸಾಮರ್ಥ್ಯದಲ್ಲಿ ಸರಕಾರಕ್ಕೆ ಸಂಬಂಧಪಟ್ಟವನಾಗಿದ್ದೇನೆ ಎಂಬುದನ್ನು ಕನಸಿನಲ್ಲೂ ಕಂಡಿಲ್ಲ. ಉತ್ತರ ಪ್ರದೇಶದಲ್ಲಿ ಸರಕಾರಿ ಕೋಶಕ್ಕೆ ಹೋಗಿ ಭೂ ಕಂದಾಯವನ್ನು ಪಾವತಿ ಮಾಡುವ ಯಾರನ್ನಾದರೂ ಲಂಬಾರದಾರನೆಂದು ಕರೆಯುತ್ತಾರೆ. ಬೇರೆ ರಾಜ್ಯಗಳಲ್ಲಿನ ಪದ್ಧತಿ ನನಗೆ ತಿಳಿದಿಲ್ಲ. ಆದರೆ ಉತ್ತರ ಪ್ರದೇಶದಲ್ಲಿ ಒಬ್ಬ ವ್ಯಕ್ತಿ ತಾನಾಗಿಯೇ ಅಥವಾ ತನ್ನ ಸಹ ಪಾಲುದಾರರ ಪರವಾಗಿ ಸರಕಾರಿ ಕೋಶಕ್ಕೆ ಭೂ ಕಂದಾಯ ಕಟ್ಟಿದರೆ ಅವನನ್ನು ಲಂಬರ್‌ದಾರ್ ಎಂದು ಕರೆಯುತ್ತಾರೆ. ಈ ಪದದ ಯಾವ ಅರ್ಥದಲ್ಲಿ ಅದನ್ನು ಈ ತಿದ್ದುಪಡಿಯಲ್ಲಿ ಸೇರಿಸಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಆದರೆ "ಲಂಬಾರ್‌ದಾರ್' ಎಂಬ ಪದಕ್ಕೆ ಭೂ ಕಂದಾಯದ ಹೊಣೆ ಹೊತ್ತ ಒಬ್ಬ ಜಮೀನ್ದಾರ ಎಂಬ ಅರ್ಥ ಇದ್ದಲ್ಲಿ, ಉತ್ತರ ಪ್ರದೇಶ ಅಥವಾ ಎಲ್ಲಾದರೂ ಸರಿ ಆ ಪದವನ್ನು ಕೈಬಿಡಬೇಕು.

**ಡಾ. ಅಂಬೇಡ್ಕರ್:** ಈ ವಿಚಾರದಲ್ಲಿ ನಾನು ಒಂದು ಮಾತು ಹೇಳಬಯಸುತ್ತೇನೆ. ನನ್ನ ಮಿತ್ರ ಪಂಡಿತ್ ಕುಂಜ್ರು ಅವರು ಈ ವಿಚಾರಕ್ಕೆ ಏಕೆ ಕೋಪಗೊಂಡರು ಎಂದು ನನಗೆ ಅರ್ಥವಾಗುತ್ತಿಲ್ಲ. ಅವರೂ ಸಹ ಆಯ್ಕೆ ಸಮಿತಿಯ ಸದಸ್ಯರು. ಈ ಕಲಮನ್ನು ಸರ್ವಸಮ್ಮತದಿಂದ ಆಯ್ಕೆ ಸಮಿತಿ ಮುಂದಿಟ್ಟಿದೆ. ಇದು ಒಂದು ಅವಿರೋಧವಾದ ಕಲಂ. ಸದಸ್ಯರು ಬೇರೆ ಬೇರೆ ರಾಜ್ಯಗಳನ್ನು ಪ್ರತಿನಿಧಿಸುವವರು. ಉದಾ: ನಾನು ಮಧ್ಯಪ್ರದೇಶ ಹಾಗೂ ಬಾಂಬೆ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಹುದು. ಅದೇ ವಾಣಿಯಲ್ಲಿ ಬೇರೆ ರಾಜ್ಯಗಳ ಬಗ್ಗೆ ಮಾತನಾಡಲು ಸಾಧ್ಯವಿಲ್ಲ. ಈ ಹೆಸರುಗಳು ಮತ್ತು ವಿಭಾಗಗಳನ್ನು ಆಯ್ಕೆ ಸಮಿತಿಯ ವಿವಿಧ ರಾಜ್ಯಗಳ ವಿಚಾರಗಳನ್ನು ಸಾಕಷ್ಟು ಅರಿತ ಸದಸ್ಯರಿಂದ ಸೇರಿಸಲ್ಪಟ್ಟದ್ದು. ಏನೇ

---

* 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೨೮ ಮೇ ೧೯೫೧, ಪು. ೯೫೫೮.

ಆಗಲಿ ಅದರ ಬಗ್ಗೆ ಆಳವಾಗಿ ತಿಳಿದವರೇ ಅಲ್ಲಿ ಮಾತನಾಡಿದ್ದರು ಎಂದು ನಾನು ತಿಳಿಯುತ್ತೇನೆ. ನನ್ನ ಜವಾಬ್ದಾರಿಯಿಂದ ವೈಯಕ್ತಿಕವಾಗಿ ನಾನೇ ಇದನ್ನು ಸೇರಿಸಿದ್ದೇನೆ ಎಂಬ ದೋಷಾರೋಪ ಮಾಡುವ ರೀತಿಯಲ್ಲಿ ಅವರು ಮಾತನಾಡಿದ್ದಾರೆ. (ಗಲಾಟೆ) ಅದನ್ನು ನಾನು ಮಾಡಿಲ್ಲ. ಪಂಜಾಬ್ ಸದಸ್ಯರು, ಉತ್ತರ ಪ್ರದೇಶದ ಸದಸ್ಯರು ಅಲ್ಲಿ ಹಾಜರಿದ್ದರು. ಮತ್ತು ಅಲ್ಲಿದ್ದವರೆಲ್ಲ ಲಂಬರ್‌ದಾರ್ ಎಂಬ ಪದವನ್ನು ಸೇರಿಸಬೇಕೆಂದು ಎಂದು ಹೇಳಿದರು. ವೈಯಕ್ತಿಕವಾಗಿ ನಾನಾಗಿಯೇ ಈ ಪದವನ್ನು ಸೇರಿಸಿಲ್ಲ. ಯಾವ ಅರ್ಥದಲ್ಲೂ ಲಂಬರ್‌ದಾರ್ ಅಧಿಕಾರಿಯಲ್ಲ ಎಂಬುವದು ಈ ಸಭೆಯ ತೀರ್ಮಾನವಾಗಿದ್ದಲ್ಲಿ ಅದನ್ನು ಬಿಟ್ಟು ಬಿಡಲು ನಾನು ಸಿದ್ಧನಿದ್ದೇನೆ. ಆದರೆ ಅದಕ್ಕೆ ಅವರು ಬದ್ಧರಾಗಬೇಕು. ನಾನು ಆ ಜವಾಬ್ದಾರಿಯನ್ನು ಹೊರಲು ತಯಾರಿಲ್ಲ. ಲಂಬರ್‌ದಾರ್ ಒಬ್ಬ ಅಧಿಕಾರಿಯೋ ಅಲ್ಲವೋ ಎಂಬುದರ ಬಗ್ಗೆ ತೀರ್ಮಾನಿಸಲು ನಾನು ಬೇರೆ ಬೇರೆ ರಾಜ್ಯಗಳ ಭೂ ಕಂದಾಯದ ಕಾನೂನುಗಳನ್ನು ಅಭ್ಯಾಸ ಮಾಡಿಲ್ಲ. ಈ ಮಾನ್ಯ ಮಹಾಜನರ ಅಭಿಪ್ರಾಯದಲ್ಲಿ ಅವರು ಆಳವಾದ ಅಧಿಕಾರ ವಾಣಿಯಲ್ಲಿ ಲಂಬರ್‌ದಾರನು ತಮ್ಮ ರಾಜ್ಯದಲ್ಲಿ ಅಧಿಕಾರಿಯಲ್ಲ ಎಂದು ಹೇಳಿದರೆ ಅದಕ್ಕೆ ನನ್ನ ಆಕ್ಷೇಪವಿಲ್ಲ ಮತ್ತು ಈ ವಿಚಾರದಲ್ಲಿ ನನಗೆ ವಿಶೇಷ ಆಸಕ್ತಿ ಇಲ್ಲ.

**ಶ್ರೀ ಜವಹರಲಾಲ್ ನೆಹರು:** ನನ್ನ ಮಾನ್ಯ ಸಹದ್ಯೋಗಿಗಳು ನಮ್ಮ ನಿಲುವನ್ನು ಸಾವಕಾಶವಾಗಿ ವಿವರಿಸಿದ್ದಾರೆ. ಇಲ್ಲಿ ಹೇಳಲ್ಪಡುವ ಅನೇಕ ನಾಮಧೇಯಗಳನ್ನು, ಶೀರ್ಷಿಕೆಗಳನ್ನು ನನ್ನ ಜೀವನದಲ್ಲಿ ನಾನು ಎಂದೂ ಕೇಳಿಲ್ಲ. ಈ ಪದಗಳನ್ನು ಆಯ್ಕೆ ಸಮಿತಿ ಕೊಟ್ಟಿವೆ. ಅವನ್ನು ನಾವು ಮಂಡಿಸಿದ್ದೇವೆ. ನಾವು ಈಗಲೂ ಅಥವಾ ಇನೇ ಬಾರಿಗೆ ಓದುವಾಗಲಾದರೂ ಇಲ್ಲಿ ಬರುವ ಪ್ರತಿಯೊಂದು ಪದವನ್ನು ಮಾನ್ಯ ಸದಸ್ಯರೊಡನೆ ಕೂಲಂಕಷವಾಗಿ ಚರ್ಚಿಸಿ ಬೇಡವಾದ ಪದಗಳನ್ನು ಕೈಬಿಡಲು ಸಿದ್ಧರಿದ್ದೇವೆ.

**ಶ್ರೀ ಭಟ್:** 'ಪಾಟೀಲ್' ಎಂಬ ಪದವು ಇದೇ ಸ್ಥಿತಿಯಲ್ಲಿದೆ.

**ಡಾ. ಅಂಬೇಡ್ಕರ್:** ಬೇರೆ ರಾಜ್ಯಗಳವರಿಂದ ನಾವು ಇಂತಹವರು ಸರ್ಕಾರಿ ಅಧಿಕಾರಿಗಳೇ ಎಂದು ತಿಳಿಯಬಹುದು. ಉದಾ: 'ಪಾಟೀಲ್' ನನಗೆ ತಿಳಿದಿದೆ ಎಂದು ನಾನು ಹೇಳುತ್ತೇನೆ–ನನಗಿಂತ ಪಾಟೀಲ್‌ಗಳ ಬಗ್ಗೆ ಯಾರೂ ಹೆಚ್ಚಾಗಿ ತಿಳಿದಿಲ್ಲ ಎಂದೂ ಸಹ ಹೇಳುತ್ತೇನೆ.

**ಡಾ. ದೇಶಮುಖ:** ತಮಗೆ ಮಧ್ಯಪ್ರದೇಶದ ಬಗ್ಗೆ ತಿಳಿದಿಲ್ಲ.

**ಡಾ. ಅಂಬೇಡ್ಕರ್:** ನನಗೆ ಮಧ್ಯಪ್ರದೇಶದ ಬಗ್ಗೆ ತಿಳಿದಿದೆ.

ಮಾನ್ಯ ಸದಸ್ಯರುಗಳು ಎದ್ದು ನಿಂತರು.

**ಮಾನ್ಯ ಅಧ್ಯಕ್ಷರು:** ಚಿಂತನೆಗೆ ಯೋಗ್ಯವಾದ ಈ ವಿಚಾರದ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಅದನ್ನು ಪರಸ್ಪರ ವಿಶ್ವಾಸ ಮತ್ತು ಹೊಂದಾಣಿಕೆಯ ಮೂಲಕ ಸ್ವಲ್ಪ ಸಮಯದಲ್ಲಿ ಪರಿಹರಿಸಬಹುದು.

ಮಾನ್ಯ ಕಾನೂನು ಮಂತ್ರಿಗಳು ಹಾಗೂ ಸಭಾ ಸದಸ್ಯರು ಒಪ್ಪಿದಲ್ಲಿ ಲಂಬರ್‌ದಾರ್ ಅಥವಾ ಪಾಟೀಲ್ ಎಂಬ ಪದವನ್ನು ಹೊರತುಪಡಿಸಬೇಕೇ ಎಂಬುದರ ಬಗ್ಗೆ ಈ ಕ್ಷಣದಲ್ಲಿ ತೀರ್ಮಾನಿಸಲು ಸಾಧ್ಯವಿಲ್ಲ. ಸಭೆಯ ಮಾನ್ಯ ಸಭಾನಾಯಕರು ಹೇಳಿದಂತೆ ಈ ಸ್ಥಾನದ ವ್ಯಕ್ತಿಗಳನ್ನು ಅನೇಕ ನಾಮಧೇಯಗಳಿಂದ ಕರೆಯುತ್ತಾರೆ. ಈ ವಿಚಾರವನ್ನು ಮಾನ್ಯ ಸದಸ್ಯರು ಅನೌಪಚಾರಿಕವಾಗಿ ಚರ್ಚಿಸಬಹುದು. ಇದು ಸುಮಾರಾಗಿ ಒಂದು ಭಾಷಾ ಸ್ವರೂಪದ ವಿಚಾರ. ಮತ್ತು ಅದನ್ನು ೨–೪ ದಿನಗಳ ನಂತರ ಈ ಮಸೂದೆಯ ಇನೆಯ ಪಠಣದ ಕಾಲಕ್ಕೆ ತೆಗೆದುಕೊಳ್ಳಬಹುದು.

**ಡಾ. ಅಂಬೇಡ್ಕರ್:** ಅಲ್ಲಿಯವರೆಗೂ ಅದನ್ನು ಕಾದಿರಸಬಹುದು.

**ಮಾನ್ಯ ಅಧ್ಯಕ್ಷರು:** ಆ ಕಾರಣಕ್ಕಾಗಿಯೇ ಅದನ್ನು ಕಾದಿರಿಸುವುದು ಬೇಕಾಗಿಲ್ಲ. ಸದಸ್ಯರು ಈ ಕಲಮಿಗೆ ಒಪ್ಪಿಗೆ ನೀಡಬಹುದು. ಇವೆಲ್ಲಾ ಅತಿ ದೊಡ್ಡ ಪ್ರಮಾಣದ ವಿಚಾರವಲ್ಲ. ಇವು ಔಪಚಾರಿಕ ವಿಚಾರಗಳು–ಎಂದರೆ ಲಾಭದಾಯಕ ಹುದ್ದೆಯಲ್ಲಿ ಇರುವ ಒಬ್ಬ ಸರಕಾರಿ ಅಧಿಕಾರಿ ಈ ಪಟ್ಟಿಯಲ್ಲಿ ಸೇರಬಾರದು. ಈ ವಿಚಾರಗಳ ಬಗ್ಗೆ ಬಹಳ ಕಾಲವನ್ನು ವ್ಯಯಮಾಡಬೇಕೆಂದು ನನಗೆ ಅನ್ನಿಸುವುದಿಲ್ಲ.

**ಡಾ. ಅಂಬೇಡ್ಕರ್:** ನನಗೆ ಲಂಬರ್‌ದಾರನ ವಿರುದ್ಧವಾಗಿ ಯಾವ ವಿಶೇಷ ಆಸಕ್ತಿ ಇದೆ? ನಾನೇನು ಲಂಬರದಾರನಲ್ಲ.

**ಮಾನ್ಯ ಅಧ್ಯಕ್ಷರು:** ನಿಶ್ಯಬ್ದ ನಿಶ್ಯಬ್ದ

**ಡಾ. ಅಂಬೇಡ್ಕರ್:** ಬಾಂಬೆಯ ವತನ್ ಕಾನೂನಿನ ಪ್ರಕಾರ ತಾವು ನನ್ನನ್ನು ಕರೆಯಬೇಕಾದರೆ ನನ್ನನ್ನು ಒಬ್ಬ ಕೀಳು ದರ್ಜೆಯ ಗ್ರಾಮಾಧಿಕಾರಿ ಎನ್ನಬೇಕು.

**ಡಾ. ದೇಶಮುಖ್:** ಒಂದು ಪಾಯಿಂಟ್ ಆಫ್ ಆರ್ಡರ್ ಪ್ರಕಾರ, ನನ್ನ ತಿದ್ದುಪಡಿ ಎಷ್ಟು ಅವಸರದಲ್ಲಿ ಈ ಸಭೆಯಿಂದ ತಿರಸ್ಕರಿಸಲ್ಪಟ್ಟಿತು ಹಾಗೂ ಅದರ ಪರಿಣಾಮವೇನು ಎಂದು ತಿಳಿಯ ಬಯಸುತ್ತೇನೆ. ಹೇಗೂ ಸಭೆಯಲ್ಲಿ ನಿಧಾನವಾಗಿ ಉತ್ತಮ ವಿಚಾರ ಬರುತ್ತಿರುವುದರಿಂದ ನಾನು ನನ್ನ ಮಿತ್ರ ಮಾನ್ಯ ಶ್ರೀ..........ಅವರಿಗೆ ಋಣಿಯಾಗಿದ್ದೇನೆ.

**ಮಾನ್ಯ ಅಧ್ಯಕ್ಷರು :** ಮಾನ್ಯ ಸದಸ್ಯರು ಈ ಸಭೆಯಲ್ಲಿ ಉತ್ತಮ ವಿಚಾರಗಳು ಉದಯಿಸುತ್ತಿವೆ ಎಂದು ಹೇಳಿ ತಮ್ಮ ವಿಚಾರವನ್ನೇ ಸಭೆಯಲ್ಲಿ ಹಾಳು ಮಾಡುತ್ತಿದ್ದಾರೆ. ಅದು ಹೊಂದಾಣಿಕೆಯ ದಾರಿಯೂ ಅಲ್ಲ ಶಾಂತಿಯಿಂದ ಆಗುವ ಒಪ್ಪಂದವೂ ಅಲ್ಲ.

*ಕಲಂ ೧೨೩ – ಅಮುಖ್ಯ ಭ್ರಷ್ಟಾಚಾರಗಳು

ಮಾಡಿದ ತಿದ್ದುಪಡಿಗಳು:

> ೧೨೩ನೆಯ ಖಂಡದ (೫)ನೆಯ ಉಪಖಂಡಕ್ಕೆ ಬದಲಾಗಿ ಈ ಕೆಳಗಿನದನ್ನು ಸೇರಿಸಿಕೊಳ್ಳಿ:
>
> (೫) ಜಾತಿ, ಜನಾಂಗ, ಸಮುದಾಯ ಅಥವಾ ಧರ್ಮದ ಆಧಾರದ ಮೇಲೆ ಮತ ನೀಡುವಂತೆ ಅಥವಾ ಮತದಾನ ಮಾಡದಂತೆ, ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಉತ್ತಮಪಡಿಸುವುದಕ್ಕಾಗಿ ಮನವಿ ಮಾಡಿಕೊಳ್ಳುವುದು ಅಥವಾ ರಾಷ್ಟ್ರಧ್ವಜ ಅಥವಾ ರಾಷ್ಟ್ರೀಯ ಲಾಂಛನದಂಥ, ಧಾರ್ಮಿಕ ಹಾಗೂ ರಾಷ್ಟ್ರೀಯ ಸಂಕೇತಗಳನ್ನು ಬಳಸಿಕೊಳ್ಳುವುದು ಅಥವಾ ಅವುಗಳ ಆಧಾರದ ಮೇಲೆ ವ್ಯವಸ್ಥಿತವಾಗಿ ಮನವಿ ಮಾಡಿಕೊಳ್ಳುವುದು.

**ಮಾನ್ಯ ಅಧ್ಯಕ್ಷರು:** ಇನ್ನಾವ ತಿದ್ದುಪಡಿಯೂ ಇಲ್ಲ ಎಂದು ನನಗೆ ಅನ್ನಿಸುತ್ತದೆ.

**ಶ್ರೀ ಕಾಮತ್:** ನನ್ನ ಬಳಿ ೨ ತಿದ್ದುಪಡಿಗಳಿವೆ. ಸಮುಚ್ಚಯ ಪಟ್ಟಿ ೨ಕ್ಕೆ ಸೇರಿದ ಸಂಪೂರಕ ಪಟ್ಟಿ ೪ಕ್ಕೆ ಸಂಬಂಧಪಟ್ಟಂತೆ ಸಂಖ್ಯೆ ೫, ೬ – ಈ ತಿದ್ದುಪಡಿಗಳು ಇವೆ. ನಾನು ಸಂಖ್ಯೆ ೫ನ್ನು ಮಾತ್ರ ಮಂಡಿಸುತ್ತಿದ್ದೇನೆ. ಈ ವಿಷಯಕ್ಕೆ ಆಗಲೇ ಸಭೆಯಿಂದ ಒಪ್ಪಿಗೆ ಪಡೆಯಲಾಗಿದೆ.

---

* 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೨೮ ಮೇ ೧೯೫೧, ಪು. ೯೫೯–೯೬೦೬.

ಅಭ್ಯರ್ಥಿ ಅಥವಾ ಅವನ ಏಜೆಂಟ್ ಅಲ್ಲದೆ, ಬೇರಾವುದೇ ವ್ಯಕ್ತಿಯನ್ನು ಇದರ ವ್ಯಾಪ್ತಿಯಲ್ಲಿ ತರಲಾಗುವಂತೆ ಇದನ್ನು ಮಾರ್ಪಡಿಸಬಹುದೇ ಎಂಬ ವಿಚಾರದತ್ತ ಕರಡು ರಚನಕಾರರು ಸ್ವಲ್ಪ ಗಮನಹರಿಸಬೇಕೆಂದು ನಾನು ಬಯಸುತ್ತೇನೆ.

**ಡಾ. ಅಂಬೇಡ್ಕರ್:** ಆ ವಿಚಾರವನ್ನು ಆಳವಾಗಿ ಪರಿಶೀಲಿಸುತ್ತೇನೆ.

**ಶ್ರೀ ಕಾಮತ್:** ಕರಡುದಾರರು ಅದನ್ನು ಆಳವಾಗಿ ಪರಿಶೀಲಿಸುವುದಾದರೆ ತಿದ್ದುಪಡಿಯ ಬಗ್ಗೆ ನಾನು ಒತ್ತಡ ತರುವುದಿಲ್ಲ.

**ಮಾನ್ಯ ಅಧ್ಯಕ್ಷರು:** ಅವರು ಅದನ್ನು ಪರಿಶೀಲಿಸಲಿ.

ವಿಷಯಕ್ಕೆ ಒಪ್ಪಿಗೆ ಪಡೆಯಲಾಯಿತು

**ಕಲಂ ೧೨೩.**— ತಿದ್ದುಪಡಿಯ ನಂತರ ಮಸೂದೆಗೆ ಸೇರಿಸಲಾಯಿತು.

***ಕಲಂ ೧೨೪:** (ಕಾನೂನುಬಾಹಿರ ಅಭ್ಯಾಸಗಳು)

**ಡಾ. ಅಂಬೇಡ್ಕರ್:** ಈ ಮುಂದಿನ ತಿದ್ದುಪಡಿಗಳನ್ನು ಮಂಡಿಸಲು ಅನುಮತಿ ಕೋರುತ್ತೇನೆ.

೧೨೪ನೆಯ ಖಂಡದ (೧)ನೆಯ ಉಪಖಂಡಕ್ಕೆ ಈ ಕೆಳಗಿನದನ್ನು ಸೇರಿಸಿ:

**ವಿವರಣೆ:** ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಉತ್ತಮಪಡಿಸುವ ಸಲುವಾಗಿ, ಅಭ್ಯರ್ಥಿಯನ್ನು ಬೆಂಬಲಿಸಿರುವ ಯಾವುದೇ ಸಂಸ್ಥೆ ಅಥವಾ ಸಂಘಟನೆಯಿಂದ ಭರಿಸಲಾದಂಥ ಮೇಲೆ ಹೇಳಿರುವ ಬಗೆಯ ಅಂಥ ಯಾವುದೇ ವೆಚ್ಚಗಳನ್ನು ಈ ಖಂಡದ ಅಡಿಯಲ್ಲಿ ಮಾಡಲಾಗಿರುವ ಅಥವಾ ಭರಿಸಲಾಗಿರುವ ವೆಚ್ಚಗಳೆಂದು ಪರಿಗಣಿಸತಕ್ಕದ್ದಲ್ಲ.

**ಮಾನ್ಯ ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

**ಶ್ರೀ ಕಾಮತ್:** ೧೨೪ ನೇ ಕಲಂನ ಭಾಗ ೨ – ಕಲಂ ೧೨೪

""ಯಾವುದಾದರೂ ಕಟ್ಟಡದ" ಎಂಬ ಪದಗಳನ್ನು ಕೈಬಿಡಲು

ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಈ ವಿಚಾರವನ್ನು ನಾನು ಆಯ್ಕೆ ಸಮಿತಿಯ ಮುಂದೆ ಎತ್ತಿದೆ. ಅಲ್ಲಿ ಅದಕ್ಕೆ ಸಾಕಷ್ಟು ಗಮನ ಕೊಡಲಿಲ್ಲ ಮತ್ತು ದೀರ್ಘವಾಗಿ ಅದನ್ನು ಚರ್ಚಿಸಲಿಲ್ಲ. ನನ್ನ ತೊಂದರೆಯನ್ನು ಸ್ಪಷ್ಟವಾಗಿಯೂ ಸಂಕ್ಷಿಪ್ತವಾಗಿಯೂ ಹೇಳುತ್ತೇನೆ. ಮಧ್ಯೆ ಪ್ರದೇಶದಲ್ಲಿ ನನಗೆ ತಿಳಿದಿರುವ ಕೆಲವು ಕಟ್ಟಡಗಳ ಕೆಳಭಾಗವನ್ನು ಮದ್ಯದಂಗಡಿಯನ್ನಾಗಿ ಮಾರ್ಪಡಿಸಿ ಅದರ ಮೇಲಿನ ಮಹಡಿಯನ್ನು ಕೆಲವು ಜನಗಳಿಗೋ, ವಿದ್ಯಾರ್ಥಿಗಳಿಗೋ, ಬೇರೆ ಜನಗಳಿಗೆ ಬೇರೆ ಬೇರೆ ಕಾರಣಗಳಿಗಾಗಿ ಬಾಡಿಗೆಗೆ ಕೊಟ್ಟುಬಿಟ್ಟಿರುತ್ತಾರೆ. ಆ ಕಟ್ಟಡ ಮೇಲಿನ ಮಹಡಿಯಲ್ಲಿ ಒಂದು ಸಭೆಯನ್ನು ನಡೆಸಬಹುದೇ?

**ಡಾ. ಅಂಬೇಡ್ಕರ್:** ಅದರ ಬಗ್ಗೆ ಯಾವ ಭಯವೂ ಇಲ್ಲ.

**ಶ್ರೀ ಕಾಮತ್:** ಆದರೂ ಅದು ಅನುಮಾನಕ್ಕೆ ಆಸ್ಪದ ನೀಡುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು "ಯಾವುದಾದರೂ ಕಟ್ಟಡದ" ಎಂಬ ಪದಗಳನ್ನು ಕೈಬಿಟ್ಟು ಮುಂದೆ ಬರಬಹುದಾದ ಪರಿಹಾರ ಇರದಂತಹ ಸಮಸ್ಯೆಗಳನ್ನು ತಪ್ಪಿಸಬಹುದು. ಪದಗಳ ಉಪಯೋಗದ ಬಗ್ಗೆ ಗಮನಹರಿಸಿ ಈ ವಿಚಾರವನ್ನು ಯಾವುದೇ ಅನುಮಾನದ ನೆರಳಿನಿಂದ ಆಚೆ ಬರುವಂತೆ ಮಾಡಿ ಎಂದು ಕೋರುತ್ತೇನೆ.

---

* 'ಸಂಸತ್ತಿನ ಚರ್ಚೆಗಳು' (P.D. ), ಸಂ. ೧೨, ಭಾಗ II, ೧೮ ಮೇ ೧೯೫೧, ಪು. ೯೬೦೭–೧೦.

**ಮಾನ್ಯ ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

ಕಲಂ ೧೨೪ ರ ಭಾಗ (೨) ರಲ್ಲಿ ಬರುವ "ಯಾವುದಾದರೂ ಕಟ್ಟಡದ" ಎಂಬ ಪದಗಳನ್ನು ಬಿಟ್ಟುಬಿಡಿ.

ಪಂಡಿತ್ ಕುಂಜ್ರು ಅವರು ಏನನ್ನೋ ಹೇಳಬೇಕೆಂದು ಇದ್ದರು.

**ಪಂಡಿತ್ ಕುಂಜ್ರು:** ನಾನು ತಮ್ಮ ಅವಗಾಹನೆಗೆ ಏನನ್ನು ತರಬೇಕೆಂದು ಇದ್ದೆನೆಂದರೆ, ಡಾ. ಅಂಬೇಡ್ಕರ್ ಅವರು ಮಂಡಿಸಿರುವ ತಿದ್ದುಪಡಿಯು ಅತ್ಯಂತ ಗುರುತರವಾದದ್ದು. ಆದ್ದರಿಂದ ನ್ಯಾಯಸಮ್ಮತವಾಗಿ, ಆಳವಾಗಿ ತಿದ್ದುಪಡಿಗಳನ್ನು ಪರಾಂಬರಿಸಲು ನಮಗೆ ಸಾಕಷ್ಟು ಸಮಯ ನೀಡಬೇಕು. ಮೇಲುನೋಟಕ್ಕೆ ಈ ತಿದ್ದುಪಡಿಯು ಈ ಮಸೂದೆಯ ನಿಬಂಧನೆಗಳ ಬಗ್ಗೆ ಆಳವಾದ ಪರಿಣಾಮಗಳನ್ನು ಉಂಟು ಮಾಡುತ್ತದೆ ಎನಿಸುತ್ತದೆ. ಅಲ್ಲದೆ ಇದು ವಿವಿಧ ಪಕ್ಷಗಳ ಅಭ್ಯರ್ಥಿಗಳ ಮಧ್ಯೆ ಇರುವ ಸಮತೋಲನದ ಮೇಲೆ ಪ್ರಮುಖವಾಗಿ ಪರಿಣಾಮ ಮಾಡುತ್ತದೆ. ಆದ್ದರಿಂದ ಈ ತಿದ್ದುಪಡಿಯ ಬಗ್ಗೆ ಚಿಂತಿಸಲು ಕಾಲಾವಕಾಶವನ್ನು ನೀಡಬೇಕೆಂದು ಕೋರುತ್ತೇನೆ. ಇದು ಒಂದೇ ಒಂದು ಕಲಮ್ಮಿಗೆ ಒಪ್ಪಿಗೆ ನೀಡಿಲ್ಲ. ಸಮಯ ನೀಡುವುದರಿಂದ ಏನೂ ನಷ್ಟವಾಗುವುದಿಲ್ಲ ಮತ್ತು ಲಾಭವಾಗುತ್ತದೆ.

**ಡಾ. ಅಂಬೇಡ್ಕರ್:** ನಿಲುವು ಬಹಳ ಸ್ಪಷ್ಟವಾಗಿದೆ. ಅನುಮಾನಕ್ಕೆ ಆಸ್ಪದ ಕೊಡುವ ಯಾವ ವಿಚಾರವೂ ಇಲ್ಲ. ಸತ್ಯವೇನೆಂದರೆ ಕೆಲವರಿಗೆ ಯಾವ ಯಾವ ರೀತಿಯ ವೆಚ್ಚಗಳನ್ನು ಸೇರಿಸಿ ಬಿಡುತ್ತಾರೋ ಎಂದು ಅನುಮಾನವಿತ್ತು. ಆದ್ದರಿಂದ ಅವರ ಅನುಮಾನಗಳನ್ನು ತೊಡೆದು ಹಾಕಲು ಈ ನಿಬಂಧನೆಯ ಬಗ್ಗೆ ಯೋಚಿಸಿದೆ. ನನ್ನ ಮಿತ್ರರು ಯಾವುದಾರೂ ಸಲಹೆಯನ್ನು ನೀಡುವುದಿದ್ದರೆ ನಾನು ಕೇಳಲು ಇಚ್ಛಿಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಕಾಮತ್‌ರವರ ತಿದ್ದುಪಡಿಯ ಬಗ್ಗೆ ಏನು ಮಾಡಿದ್ದೀರಾ?

**ಡಾ. ಅಂಬೇಡ್ಕರ್:** "ಆ ಪದಗಳು ಯಾವುದಾದರೂ ಕಟ್ಟಡದ" ಎಂಬ ಪದಗಳ ಬಗ್ಗೆ ಅನುಮಾನ ಬೇಡ. ಆ ಪದಗಳನ್ನು ಕೈ ಬಿಡಬೇಕಾಗಿಲ್ಲ. ಆ ವಿಚಾರದ ಬಗ್ಗೆ ಯಾವ ಸಂಶಯವೂ ಇಲ್ಲ.

**ಶ್ರೀ ಕಾಮತ್:** ಈ ವಿಚಾರವನ್ನು ಪೂರ್ಣವಾಗಿ ಚರ್ಚಿಸಿಲ್ಲ ಹಾಗೂ ಅದನ್ನು ಕೊನೆಯ ಕ್ಷಣದಲ್ಲಿ ಸೇರಿಸಿದ್ದೀರಿ.

ಶ್ರೀ ಆರ್.ಕೆ. ಚೌಧುರಿ – ಕಲಂ ೧೨೪ ರ ಉಪ ವಿಭಾಗ ೩ ಅನ್ನು ಕೈ ಬಿಡಲು ನಾನು ತಿದ್ದುಪಡಿ ೧೫೦ ರನ್ನು ಮಂಡಿಸಲು ಅನುಮತಿ ಕೋರುತ್ತೇನೆ.

**ಮಾನ್ಯ ಅಧ್ಯಕ್ಷರು:** ಅವರು ಮಂಡಿಸಬಹುದು.

**ಶ್ರೀ ಸಂತಾನಂ:** ಅದನ್ನು ಪ್ರತ್ಯೇಕವಾಗಿ ಮಂಡಿಸಬಹುದು ಅದನ್ನು ಮಂಡಿಸಿ ಭಾಷಣ ನೀಡುವ ಬದಲು ಭಾಗ ೩ ನ್ನು ಪ್ರತ್ಯೇಕವಾಗಿ ಮಂಡಿಸಬಹುದು.

**ಡಾ. ಅಂಬೇಡ್ಕರ್:** ನನ್ನ ತಿದ್ದುಪಡಿಯನ್ನು ಮಂಡಿಸಬಹುದು.

**ಮಾನ್ಯ ಅಧ್ಯಕ್ಷರು:** ಮತ ನೀಡುವ ಸಮಯದಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಆರ್.ಕೆ. ಚೌಧುರಿ:** ನನಗೆ ತಿದ್ದುಪಡಿ ಮಂಡಿಸಲು ಅನುಮತಿ ನೀಡಿ.

"೧೨೦ ನೆ ಕಲಂನ ೩ ನೆ ಭಾಗವನ್ನು ಕೈ ಬಿಡಿ."

ಈ ತಿದ್ದುಪಡಿಯನ್ನು ತರಲು ನನ್ನ ಉದ್ದೇಶವೇನೆಂದರೆ ಯಾವ ಸುತ್ತೋಲೆಯಾಗಲಿ, ಭಿತ್ತಿಪತ್ರವಾಗಲಿ, ರಟ್ಟೆಗೆ ಅಂಟಿಸಿದ ಫಲಕಗಳಾಗಲಿ, ಅದರ ಮೇಲೆ, ಅದನ್ನು ಪ್ರಕಟಿಸಿದವ ಹಾಗೂ ಮುದ್ರಕನ ಹೆಸರು,

ವಿಳಾಸ ಇಲ್ಲದಿದ್ದಲ್ಲಿ ಅದು ನ್ಯಾಯಬಾಹಿರ ಕೃತ್ಯವಾಗುತ್ತದೆ.

**ಮಾನ್ಯ ಅಧ್ಯಕ್ಷರು:** ನಾನು ತಪ್ಪಾಗಿ ತಿಳಿಯದೇ ಇದ್ದರೆ, ಈ ರೀತಿಯ ನಿಬಂಧನೆಗಳು ಇಂದಿನ ಚುನಾವಣೆಯ ನಿಯಮಗಳಲ್ಲಿಯೂ ಸಹ ಇದೆ.

**ಡಾ. ಅಂಬೇಡ್ಕರ್:** ಹೌದು. ಇದೇನೋ ಹೊಸ ವಿಚಾರವಲ್ಲ.

**ಶ್ರೀ ಆರ್.ಕೆ. ಚೌಧುರಿ:** ಇದು ಬಹಳ ಗಹನವಾದ ಪರಿಣಾಮಗಳನ್ನು ಸೃಷ್ಟಿಸಬಹುದು. ಅದು ಯಾರಿಗೂ, ಯಾವ ರೀತಿಯಲ್ಲಿಯೂ ತೊಂದರೆ ಮಾಡದಿದ್ದರೂ ಸಹ ಅದು ನ್ಯಾಯಬಾಹಿರ ಕೃತ್ಯವಾಗಬಾರದು. ಅದಕ್ಕೆ ತಕ್ಕಂತಹ ಶಿಕ್ಷೆಯನ್ನು ವಿಧಿಸಲಾಗಿದೆ. ಆದರೆ ಏನೂ ತಿಳಿಯದ ಒಬ್ಬ ಮುಗ್ಧ ಅಭ್ಯರ್ಥಿ, ಏನೂ ತಿಳಿಯದ ಯಾರೋ ಒಬ್ಬರು "ಇವರಿಗೆ ಮತನೀಡಿ" ಎಂದು ಚುನಾವಣೆಯಿಂದ ಸುತ್ತೋಲೆ ಪ್ರಕಟಿಸಿದರೆ, ಆ ಮುಗ್ಧನನ್ನು ಶಿಕ್ಷಿಸಿದಂತಾಗುತ್ತದೆ. ಅಲ್ಲದೆ, ಆತನು ಚುನಾವಣೆಯನ್ನು ರದ್ದುಗೊಳಿಸಿ ಅದನ್ನು ಅನೂರ್ಜಿತ ಎಂದು ತೀರ್ಮಾನ ನೀಡಿ ಅವನನ್ನು ಶಿಕ್ಷಿಸುವುದನ್ನು ತಪ್ಪಿಸಬಹುದು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನಾವು ಈ ಕಲಮನ್ನು ತೆಗೆದು ಹಾಕುವ ಸ್ಥಿತಿಯಲ್ಲಿ ಇಲ್ಲವೆಂದು ಹೇಳಬಯಸುತ್ತೇನೆ. ಆದರೆ ನನ್ನ ಮಿತ್ರ ಶ್ರೀ ಆರ್.ಕೆ. ಚೌಧುರಿಯವರು ಮಾಡಿದ ವಾದದಲ್ಲಿ ಅತ್ಯಂತ ಶಕ್ತಿ ಇದೆ; ಯಾರಾದರೂ ಅವರು ಹೇಳಿದಂತೆ ಮಾಡಿದಲ್ಲಿ, ಈ ವಿಚಾರವು ಅಭ್ಯರ್ಥಿಯ ಗಮನಕ್ಕೆ ಬರದೇ ಹೋಗಿದ್ದರೆ ಅಥವಾ ಆ ಕೃತ್ಯದಲ್ಲಿ ಪಾಲುದಾರನಾಗದಿದ್ದರೆ ಅವನ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಬಾರದು. ಅದನ್ನು ೧೨೪ ನೇ ವಿಭಾಗದಲ್ಲಿ ನ್ಯಾಯಬಾಹಿರ ಎಂದು ಮಾಡುವುದು ಒಳ್ಳೆಯ ಕ್ರಮ ಎಂದು ಅನಿಸುತ್ತದೆ.

ಭಾಗ ೯೯ ರ ಬಗ್ಗೆ, ಇದು ಅಭ್ಯರ್ಥಿಯ ಬಗ್ಗೆ ಯಾವ ಪರಿಣಾಮವನ್ನೂ ಮಾಡುವುದಿಲ್ಲ. ಇದು ಈ ಪ್ರಶ್ನೆಯನ್ನು ಉತ್ತರಿಸಿದ ಸಭೆಯಲ್ಲಿ ಸಾಮಾನ್ಯ ಅಭಿಪ್ರಾಯವಾಗಿತ್ತು. ಆದ್ದರಿಂದ ಭಾಗ ೯೯ ನ್ನು ಮುಕ್ತವಾಗಿಟ್ಟು ಮುಂದೆ ಚರ್ಚಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಡಾ. ಅಂಬೇಡ್ಕರ್:** ಅದರ ಬಗ್ಗೆ ಚಿಂತಿಸಬಹುದು.

**ಮಾನ್ಯ ಅಧ್ಯಕ್ಷರು:** ಹಾಗಾದರೆ ಈ ಕಲಮನ್ನು ಈ ಸ್ಥಿತಿಯಲ್ಲೇ ಉಳಿಸಿಕೊಳ್ಳಬಹುದೆ.

**ಪಂಡಿತ್ ಕುಂಜ್ರು:** ಡಾ. ಅಂಬೇಡ್ಕರ್ ಅವರು ತಂದಿರುವ ತಿದ್ದುಪಡಿಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಈ ತಿದ್ದುಪಡಿಯಿಂದ ಏನು ತಿಳಿದು ಬರುತ್ತದೆ. ಅಂದರೆ ಅದರ ಪ್ರಕಾರ ಒಂದು ಪಕ್ಷ ತನ್ನ ಅಭ್ಯರ್ಥಿಯ ಪರವಾಗಿ ಪ್ರಚಾರ ಕಾರ್ಯ ನಡೆಸಲು ಸಾಧ್ಯವಿಲ್ಲ. ಆದರೆ ಪಕ್ಷದ ಅಭ್ಯರ್ಥಿಗಳಿಗೆ ಸಹಾಯ ನೀಡಲು ಏನನ್ನಾದರೂ ಮಾಡಲು ಪಕ್ಷಗಳಿಗೆ ಸ್ವಾತಂತ್ರ್ಯವಿರುತ್ತದೆ. ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಸಾಮಾನ್ಯವಾಗಿ ಸಹಾಯ ಮಾಡಬೇಕೆಂಬುದು ಎಲ್ಲರೂ ಒಪ್ಪುತ್ತಾರೆ. ಆದರೆ ಒಂದು ಪಕ್ಷವು ಅಭ್ಯರ್ಥಿಗಳಿಗೆ ವ್ಯಯ ಮಾಡಿದಲ್ಲಿ ಆ ವೆಚ್ಚವನ್ನು ಸಾಮಾನ್ಯ ಚುನಾವಣೆಗೆ ಆದ ವೆಚ್ಚವಲ್ಲ, ಅದು ಪ್ರತ್ಯೇಕ ಅಭ್ಯರ್ಥಿಗಳ ವೆಚ್ಚ ಎಂದು ಅವರು ಕೊಡುವ ಚುನಾವಣಾ ವೆಚ್ಚದಲ್ಲಿ ತೋರಿಸಬೇಕೆಂಬುದು ಮುಖ್ಯವಾದ ವಿಷಯ. ಇಂಗ್ಲೆಂಡ್‌ನಲ್ಲೂ ಸಹ ವಿವಿಧ ಪಕ್ಷಗಳು ತಮ್ಮ ಪ್ರಚಾರಕ್ಕಾಗಿ ವೆಚ್ಚ ಮಾಡುವ ಸಾಧ್ಯತೆಯನ್ನು ಎಲ್ಲರೂ ಒಪ್ಪಿದ್ದಾರೆ. ಆದರೆ ಡಾ॥ ಅಂಬೇಡ್ಕರ್ ರವರ ವಿವರಣೆಯಂತೆ ಒಂದು ಪಕ್ಷ ಒಬ್ಬ ಅಭ್ಯರ್ಥಿಗೆ ವಿಶೇಷ ಖರ್ಚು ಮಾಡಿದಲ್ಲಿ ಅದನ್ನು ಆತನ ವೆಚ್ಚ ಪತ್ರದಲ್ಲಿ ದಾಖಲಿಸಬೇಕೆಂದು ವ್ಯಕ್ತವಾಗುತ್ತದೆ. ಈ ವಿಚಾರದಲ್ಲಿ ನಾವು ಏಕೆ ಒಂದು ವಿಶೇಷವಾದ ಅಭ್ಯಾಸವನ್ನು ಚಾಲ್ತಿಗೆ ತರಬೇಕು? ಆ ಅಭ್ಯಾಸ ಲಂಚಗುಳಿತನಕ್ಕೆ ದಾರಿ

ಮಾಡಿಕೊಟ್ಟು ಈ ಮಸೂದೆಯ ವಿವಿಧ ನಿಬಂಧನೆಗಳ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ಮಾನ್ಯರೇ, ಈ ವಿಷಯದ ಚರ್ಚೆಯನ್ನು ಮುಂದೆ ಹಾಕಿ ಎಂದು ಕೋರುತ್ತಾ ಎಲ್ಲಾ ತಿದ್ದುಪಡಿಗಳನ್ನು ಗಹನವಾಗಿ ಪರೀಕ್ಷೆ ಮಾಡಲು ಸಾಕಷ್ಟು ಸಮಯ ನೀಡಬೇಕು ಎಂದು ಹೇಳುತ್ತೇನೆ. ಆ ಮೂಲಕ ನಾವು ಆಶಿಸುವ ಒಳ್ಳೆಯ ಪರಿಣಾಮ ಯಾವ ಅಪ್ರಿಯ ಸ್ಥಿತಿಗೂ ಎಡೆಮಾಡಿಕೊಡುವುದಿಲ್ಲ.

**ಮಾನ್ಯ ಅಧ್ಯಕ್ಷರು:** ಮಾನ್ಯ ಮಂತ್ರಿಗಳು ಏನಾದರೂ ಹೇಳಬೇಕೆಂದು ಇದ್ದಾರೆಯೇ?

**ಡಾ. ಅಂಬೇಡ್ಕರ್:** ನಾನು ಆಗಾಗಲೇ ಹೇಳಿರುವ ವಿಚಾರಕ್ಕೆ ಸೇರಿಸುವ ವಿಚಾರ ಏನೂ ಇಲ್ಲ.

**ಮಾನ್ಯ ಅಧ್ಯಕ್ಷರು:** ಹಾಗಾದರೆ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲಾಗಿ ಕಾಮತ್‌ರವರ ತಿದ್ದುಪಡಿ ಕಲಂ ೧೨೪ ರ ೨ ಭಾಗದಲ್ಲಿ "ಯಾವುದಾದರೂ ಕಟ್ಟಡದ" ಎಂದು ಪದಗಳನ್ನು ಕೈಬಿಡಿ

ವಿಷಯವನ್ನು ತಿರಸ್ಕರಿಸಲಾಯಿತು.

**ಮಾನ್ಯ ಅಧ್ಯಕ್ಷರು:** ಪ್ಯಾರಾ (೩) ಅನ್ನು ಕೈಬಿಡಲು ಶ್ರೀ ಆರ್.ಕೆ. ಚೌಧುರಿ ಅವರ ತಿದ್ದುಪಡಿ ಇದೆ.

**ಶ್ರೀ ಆರ್.ಕೆ. ಚೌಧುರಿ:** ಅದಕ್ಕೆ ಒಪ್ಪಿಗೆ ಇದೆ ಎಂದು ನನ್ನ ಭಾವನೆ

**ಡಾ. ಅಂಬೇಡ್ಕರ್:** ಇಲ್ಲ ಇಲ್ಲ. ಅದನ್ನು ನಾನು ಒಪ್ಪುವುದಿಲ್ಲ.

**ಶ್ರೀ ಆರ್.ಕೆ. ಚೌಧುರಿ:** ಹಾಗಾದರೆ ಅದನ್ನು ವಾಪಸು ಪಡೆಯಲು ನನಗೆ ಈ ಸಭೆಯ ಅನುಮತಿ ಕೋರುತ್ತೇನೆ.

**ಮಾನ್ಯ ಅಧ್ಯಕ್ಷರು:** ಅದನ್ನು ನಾನು ಸಭೆಯ ಮುಂದೆ ತಂದಿಲ್ಲ. ಅದನ್ನು ಕೈಬಿಟ್ಟ ಹಾಗೆ ಆಯಿತು. ಈಗ ನಾನು ಡಾ. ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕಬೇಕು. ಪ್ರಶ್ನೆ ಏನೆಂದರೆ (ಪುಟ ೬೧೮–೬೧೯ ರಲ್ಲಿ ಇರುವಂತೆ)

> ೧೨೪ನೆಯ ಖಂಡದ (೧)ನೆಯ ಉಪ–ಖಂಡಕ್ಕೆ ಈ ಕೆಳಗಿನದನ್ನು ಸೇರಿಸಿಕೊಳ್ಳಿ:
>
> "**ವಿವರಣೆ:** ಮೇಲೆ ಹೇಳಿರುವಂತೆ, ಅಭ್ಯರ್ಥಿಗೆ ಬೆಂಬಲವನ್ನು ನೀಡಿರುವ ಯಾವುದೇ ಸಂಸ್ಥೆ ಅಥವಾ ಸಂಘಟನೆ ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಉತ್ತಮಪಡಿಸುವ ಸಲುವಾಗಿ ಅಂಥ ಸಂಸ್ಥೆ ಅಥವಾ ಸಂಘಟನೆ ಭರಿಸಿದ ಅಥವಾ ಅಧಿಕೃತೀಕರಿಸಿದ ಇಂಥ ವೆಚ್ಚವನ್ನು ಈ ಖಂಡದ ಅರ್ಥವ್ಯಾಪ್ತಿಯಲ್ಲಿ ಭರಿಸಿದ ಅಥವಾ ಅಧಿಕೃತೀಕರಿಸಿದ ವೆಚ್ಚವೆಂದು ಪರಿಗಣಿಸತಕ್ಕದ್ದು.

ಸೂಚನೆ ಅಂಗೀಕೃತವಾಯಿತು

**ಮಾನ್ಯ ಅಧ್ಯಕ್ಷರು:** ಪ್ರಶ್ನೆ ಏನೆಂದರೆ:

> "ಪರಿಷ್ಕೃತ ತಿದ್ದುಪಡಿ ೧೨೪ ಕಲಮ್ಮಿಗೆ ಸಂಬಂಧಿಸಿದಂತೆ, ಮಸೂದೆಯ ಭಾಗವಾಗಿದೆ."

ವಿಷಯ ಅಂಗೀಕೃತವಾಯಿತು.

೧೨೪ ಕಲಂ ಅನ್ನು ಮಸೂದೆಯ ಭಾಗವಾಗಿ ಪರಿಗಣಿಸಲಾಯಿತು.

**ಕಲಂಗಳು – ೧೩೨, ೧೩೯, ೧೫೦**

**ಮಾನ್ಯ ಅಧ್ಯಕ್ಷರು:** ಕಲಂ ೧೩೨, ೧೩೯, ೧೫೦– ಇವುಗಳಿಗೆ ತಿದ್ದುಪಡಿಗಳಿಲ್ಲ. ಆದ್ದರಿಂದ ಅವನ್ನು ಒಟ್ಟಾಗಿ ಸೇರಿಸುತ್ತೇನೆ.

ವಿಷಯವೇನೆಂದರೆ.

"ಕಲಂಗಳಾದ ೧೩೨, ೧೪೯, ೧೫೦ ಮಸೂದೆಯ ಭಾಗವಾಗುತ್ತವೆ"

ವಿಷಯವನ್ನು ಅಂಗೀಕರಿಸಲಾಯಿತು.

ಕಲಂಗಳಾದ ೧೩೨, ೧೪೯ ಮತ್ತು ೧೫೦ನ್ನು ಮಸೂದೆಗೆ ಸೇರಿಸಲಾಗಿದೆ.

**೧೬೭ ನೇ ಕಲಂ** (ನಿಯಮಗಳನ್ನು ರಚಿಸಲು ಅಧಿಕಾರ)

**ಮಾನ್ಯ ಅಧ್ಯಕ್ಷರು:** ೧೬೭ ಕಲಮ್ಮಿಗೆ ಈಗ ಅಂಬೇಡ್ಕರ್ ಅವರು ತಂದಿರುವ ತಿದ್ದುಪಡಿ ಇದೆ.

**ಡಾ. ಅಂಬೇಡ್ಕರ್:** ನಾನು ಈಗಾಗಲೇ ಅದನ್ನು ಮಂಡಿಸಿದ್ದೇನೆ. ಆದರೆ ಬಗ್ಗೆ ವಿಮರ್ಶೆ ಇರಲಿಲ್ಲ. ನಾನು ಆ ವಿಚಾರಕ್ಕೆ ಸಂಬಂಧಪಟ್ಟಂತೆ ನನ್ನ ವಿಚಾರವನ್ನು ವಿವರಿಸುತ್ತೇನೆ. ಈ ಕಲಂನ ಬಗ್ಗೆ ೨-೩ ಪ್ರಶ್ನೆಗಳನ್ನು ಎತ್ತಿದ್ದರು. ಒಂದು: ಒಬ್ಬ ಅಧಿಕಾರಿಯನ್ನು ಒಂದು ಕ್ಷೇತ್ರದಿಂದ ಮತ್ತೊಂದಕ್ಕೆ ವರ್ಗಾವಣೆ ಮಾಡಿ, ಅಂತಹವನು ಹೆಸರು ಮತ್ತೊಂದು ಸ್ಥಳದ ದಾಖಲೆಯ ಪುಸ್ತಕದಲ್ಲಿ ಕಂಡು ಬರುವುದು. ಅಂತಹವನು ಮತ ಚಲಾಯಿಸಲು ಮಾಡುವ ಏರ್ಪಾಡು ಏನು? ಎರಡು: ಒಬ್ಬ ಅಭ್ಯರ್ಥಿ ಚುನಾವಣಾ ಸಂಬಂಧದಲ್ಲಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋಗುವುದು. ಅಲ್ಲೂ ಸಹ ಅದೇ ಪ್ರಶ್ನೆಯನ್ನು ಎತ್ತಲಾಗಿತ್ತು. ಕೊನೆಯದಾಗಿ: ಒಬ್ಬ ಅಭ್ಯರ್ಥಿ ತನ್ನ ಕ್ಷೇತ್ರದಲ್ಲಿಯೇ ಪ್ರಚಾರಕ್ಕಾಗಿ ಓಡಾಡುತ್ತಿದ್ದು ತಾನು ಮತ ಹಾಕಬೇಕಾದ ಮತ ಗಟ್ಟೆಯಲ್ಲಿ ಆ ಸಮಯದಲ್ಲಿ ಇಲ್ಲದೆ ಇರುವ ವಿಚಾರ.

ನಾನು ಕರಡುದಾರರನ್ನು ವಿಚಾರಿಸಿದ್ದೇನೆ. ಅವರ ವಿಚಾರದಲ್ಲಿ ಈ ವಿಷಯದಲ್ಲಿ ಹೊಸ ಕಲಮನ್ನು ತಿದ್ದುಪಡಿಗೆ ಸೇರಿಸಿ ಏರ್ಪಾಡು ಮಾಡುವುದು ಅನಗತ್ಯ. ಅಲ್ಲದೇ ೧೬೭ ನೆಯ ಕಲಮಿನ ಪ್ರಕಾರ ಈ ಸಂಬಂಧಗಳಲ್ಲಿ ಹೊಸ ನಿಯಮಗಳನ್ನು ಮಾಡಲು ಸಾಕಷ್ಟು ನಿಬಂಧನೆಗಳು ಇವೆ. ಆದ್ದರಿಂದ ಈ ಬಗ್ಗೆ ಚುನಾವಣೆ ಆಯುಕ್ತರು ಈ ನಿಯಮಗಳ ಮೂಲಕ ಬಂದ ವಿಚಾರಗಳನ್ನು ವ್ಯವಹರಿಸಲು ಸಾಕಷ್ಟು ಅಧಿಕಾರ ಇರುತ್ತದೆ. ಆದ್ದರಿಂದ ಆ ವಿಚಾರದಲ್ಲಿ ಈಗ ಯಾವ ತಿದ್ದುಪಡಿಯನ್ನೂ ಮಾಡಬೇಕಾಗಿಲ್ಲ.

**ಶ್ರೀ ಯತಿರಾಜಲುನಾಯ್ಡು:** ಈ ವಿಚಾರದ ಬಗ್ಗೆ ಸಂಬಂಧಿಸಿದ ೪೯ ಕಲಂ ಬಗ್ಗೆ ಹೇಳಲು ಇಚ್ಛೆಪಡುತ್ತೇನೆ. ಮಾನ್ಯ ಕಾನೂನು ಮಂತ್ರಿಗಳು ಕಲಂ ೪೯ಕ್ಕೆ ಸಂಬಂಧಿಸಿದಂತೆ ಒಂದು ತಿದ್ದುಪಡಿ ಮಾಡಲು ತಯಾರಿದ್ದಾರೆಯೇ? ಈ ಕಲಮ್ಮು

"ವಿದೇಶ ವ್ಯಕ್ತಿಗಳ ಬಗ್ಗೆ ವಿಶೇಷ ಕಾರ್ಯ ವಿಧಾನಕ್ಕೆ" ಸಂಬಂಧಿಸಿದ್ದು.

**ಡಾ. ಅಂಬೇಡ್ಕರ್:** ಇಲ್ಲ. ಅದು ಭಾರತ ದೇಶದ ಹೊರಗೆ ಇರುವ ವ್ಯಕ್ತಿಗಳಿಗೆ ಸಂಬಂಧಿಸಿದ ವಿಶೇಷವಾದ ಕಲಮ್ಮು.

**ಶ್ರೀ ಕಾಮತ್:** ಸಂಸತ್ತಿನ ಮುಂದೆ ಮಂಡಿಸಬೇಕಾದ ನಿಯಮಗಳ ಸಂಬಂಧದಲ್ಲಿ ನಾನು ಮಂಡಿಸಿದ ತಿದ್ದುಪಡಿ ಬಗ್ಗೆ ಉತ್ತರ ಇನ್ನು ಬಾಕಿ ಇದೆ.

**ಡಾ. ಅಂಬೇಡ್ಕರ್:** ಆ ಸಂಬಂಧದಲ್ಲಿ ಇದು ನಮ್ಮ ನಿಲುವು. ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಚುನಾವಣೆಯನ್ನು ನಡೆಸಲು ಈ ಸಭೆ ತಿಳಿದಿರುವಂತೆ ನಾವೆಲ್ಲರೂ ವಿಶೇಷವಾಗಿ ಪ್ರಯತ್ನ ಮಾಡುತ್ತಿದ್ದೇವೆ. ನನ್ನ ಮಾನ್ಯ ಸ್ನೇಹಿತ ಗೌರವಾನ್ವಿತ ಮಿತ್ರ ಶ್ರೀ ಕಾಮತ್ ತಿಳಿಸಿದಂತೆ ನಿಯಮಗಳನ್ನು ಸಂಸತ್ತಿನ ಮೇಜಿನ ಮೇಲೆ ಮಂಡಿಸುತ್ತೇನೆ. ಅವುಗಳು ಚರ್ಚೆಯ ನಂತರ ಸಭೆಯಲ್ಲಿ ಅಂಗೀಕಾರ ಪಡೆಯುವವರೆಗೆ ಚಾಲ್ತಿಗೆ ಬರುವುದಿಲ್ಲ. ಆದ್ದರಿಂದ ನಾವು ಇಟ್ಟು ಕೊಂಡಿರುವ ಗುರಿಯನ್ನು ಸಾಧಿಸಲು ಸಾಧನವಾಗದಿರಬಹುದು-ಅದು ಏನೆಂದರೆ ನವೆಂಬರ್ /ಡಿಸೆಂಬರ್‌ನಲ್ಲಿ ಚುನಾವಣೆಯನ್ನು ನಡೆಸುವುದು.

ಆ ಕಾರಣದಿಂದಾಗಿ ಅವರು ಮಂಡಿಸಿರುವ ತಿದ್ದುಪಡಿಯನ್ನು ಅಂಗೀಕರಿಸುವುದು ಸಾಧ್ಯವಾಗದೇ ಇರಬಹುದು. ಅವರಿಗೆ ಸರ್ಕಾರ ನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುತ್ತದೆ ಎಂಬ ಆಶ್ವಾಸನೆ ಅವರಿಗೆ ತೃಪ್ತಿ ನೀಡುವುದಾದರೆ, ಆ ಬಗ್ಗೆ ನಾನು ಭಾಷೆ ನೀಡಲು ತಯಾರಿದ್ದೇನೆ.

**ಶ್ರೀ ಕಾಮತ್:** ಸಂಸತ್ತಿನಲ್ಲಿ ಮಂಡಿಸಿದ ಮೇಲೆ ಅದನ್ನು ಮಾರ್ಪಾಡು ಮಾಡುವ ಹಕ್ಕು ಸಂಸತ್ತಿಗೆ ಇರುತ್ತದೆಯೇ?

**ಡಾ. ಅಂಬೇಡ್ಕರ್:** ಅದರ ಬಗ್ಗೆ ಕರಾರುವಾಕ್ಕಾಗಿ ಉತ್ತರ ನೀಡಲು ತಯಾರಿಲ್ಲ. ನನಗೆ ಹಲವು ತೊಂದರೆಗಳು ಇವೆ. ಉದಾಹರಣೆಗೆ ಸರಕಾರ ಕಾನೂನಿನಂತೆ ಕ್ರಮವನ್ನೂ ಜರುಗಿಸಿ ಹಾಗೆ ಇದ್ದು ನಂತರ ಆ ಕಾನೂನುಗಳನ್ನು ಸಂಸತ್ತು ಬದಲು ಮಾಡಿದರೆ? ಆಗ ಜರುಗಿಸಿದ ಸರಕಾರಿ ಕ್ರಮಗಳ ಬಗ್ಗೆ ಏನು ಮಾಡಬೇಕು. ಆದ್ದರಿಂದ ಶ್ರೀ ಕಾಮತ್‌ರವರು ಹೇಳುವಂತೆ ಕ್ರಮ ತೆಗೆದುಕೊಂಡು ಸರಕಾರದ ಕೈಕಟ್ಟಿ ಹಾಕುವುದು ಬಹಳ ಕಷ್ಟವಾದ ವಿಚಾರ.

**ಶ್ರೀ ಜೆ.ಆರ್. ಕಪೂರ್:** ನಾನು ೧೬೭ ನೇ ಕಲಂಗೆ ಒಂದು ತಿದ್ದುಪಡಿಯನ್ನು ಮಂಡಿಸಲೇ? ಅದಕ್ಕೆ ಅನುಮತಿ ಕೋರುತ್ತೇನೆ.

> ೧೮೭ನೆಯ ಖಂಡದ (೨)ನೆಯ ಉಪಖಂಡದ 'ಜಿ' ಭಾಗದ ತರುವಾಯ,
> ಈ ಕೆಳಗಿನ ಹೊಸ ಭಾಗವನ್ನು ('ಜಿಜಿ') ಸೇರಿಸಿಕೊಳ್ಳಿ.

**ಮಾನ್ಯ ಅಧ್ಯಕ್ಷರು:** ಎಚ್ಚರಿಕೆಯ ನಿಯಮಗಳಿಗೆ ಗಮನಕೊಡಿ ತಿದ್ದುಪಡಿಯ ಸಂಖ್ಯೆಯನ್ನು ತಿಳಿಸಿ.

**ಶ್ರೀ ಜೆ.ಆರ್. ಕಪೂರ್:** ಸ್ವಲ್ಪ ಸಮಯದ ಹಿಂದೆ ಅದನ್ನು ತಮ್ಮ ಅವಗಾಹನೆಗೆ ತಂದಿರುತ್ತೇನೆ.

**ಮಾನ್ಯ ಅಧ್ಯಕ್ಷರು:** ಇನ್ನು ಯಾವ ಮುಂದಿನ ವಿಚಾರದಲ್ಲೂ ನಾನು ವಿನಾಯಿತಿ ನೀಡುತ್ತಿಲ್ಲ.

**ಶ್ರೀ ಜೆ.ಆರ್. ಕಪೂರ್:** ಮಾನ್ಯ ಮಂತ್ರಿಗಳು ಇದನ್ನು ಅಂಗೀಕರಿಸುತ್ತಾರೆಂದು ನನ್ನ ಭಾವನೆ.

**ಡಾ. ಅಂಬೇಡ್ಕರ್:** ಅದು ಒಡಂಬಡಿಕೆಗೆ ಸಂಬಂಧಪಟ್ಟಿದ್ದರೆ ಅದನ್ನು ಒಡಂಬಡಿಕೆ ಕಾನೂನಲ್ಲಿ ವಿವರಿಸಲಾಗಿದೆ.

**ಮಾನ್ಯ ಅಧ್ಯಕ್ಷರು:** ಸರಕಾರ ಈ ತಿದ್ದುಪಡಿಯನ್ನು ಒಪ್ಪಲು ಸಿದ್ಧವಿದೆಯೋ?

**ಡಾ. ಅಂಬೇಡ್ಕರ್:** ನಾನು ಈಗ ಯಾವ ತಿದ್ದುಪಡಿಯನ್ನೂ ಒಪ್ಪಲು ಸಿದ್ಧವಿಲ್ಲ.

**ಶ್ರೀ ಕಾಮತ್:** ನನ್ನ ತಿದ್ದುಪಡಿ ತಿರಸ್ಕರಿಸಲ್ಪಟ್ಟಲ್ಲಿ ಸರಕಾರ ನಿಯಮಗಳನ್ನು ಸಂಸತ್ತಿನಲ್ಲಿ ಮಂಡಿಸುವುದಿಲ್ಲ ಎಂದು ಅರ್ಥ ಮಾಡಿಕೊಳ್ಳೋಣವೇ?

**ಡಾ. ಅಂಬೇಡ್ಕರ್:** ನಾನು ಆಗಲೇ ಹೇಳಿರುವಂತೆ ಈ ಕಾನೂನುಗಳನ್ನು ಸಭೆ ಮುಂದೆ ಮಂಡಿಸಲು ಸರಕಾರ ಸದಾ ಸಿದ್ಧವಿದೆ.

**ಶ್ರೀ ಕಾಮತ್:** ಆ ಆಶ್ವಾಸನೆ ನೀಡಿದ್ದಲ್ಲಿ ನಾನು ನನ್ನ ತಿದ್ದುಪಡಿಯ ಬಗ್ಗೆ ಒತ್ತು ಕೊಡುವುದಿಲ್ಲ.

**ಮಾನ್ಯ ಅಧ್ಯಕ್ಷರು:** ಕಾಮತ್‌ರವರು ತಮ್ಮ ತಿದ್ದುಪಡಿಯನ್ನು ವಾಪಸು ಪಡೆಯಲು ಈ ಸಭೆಯ ಅನುಮತಿ ಕೋರುತ್ತಾರೆ.

ಅನುಮತಿಯ ಪ್ರಕಾರ ತಿದ್ದುಪಡಿಯನ್ನು ವಾಪಸು ಪಡೆಯಲಾಯಿತು.

**ಮಾನ್ಯ ಅಧ್ಯಕ್ಷರು:** ನಾನು ಈಗ ಅಂಬೇಡ್ಕರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

> ೧೬೭ನೆಯ ಖಂಡದ (೨)ನೆಯ ಉಪಖಂಡದ (ಸಿ) ಭಾಗದ ಬಳಿಕ, ಈ
> ಕೆಳಗಿನದನ್ನು ಸೇರಿಸಿಕೊಳ್ಳಿ:

"(ಸಿಸಿ) ಒಂದು ಚುನಾವಣಾ ಕ್ಷೇತ್ರದಲ್ಲಿ ಚುನಾಯಕನಾಗಿರುವಂಥ ವ್ಯಕ್ತಿ, ಆತನಿಗೆ ಮತದಾನ ಮಾಡಲು ಅಧಿಕಾರವಿಲ್ಲದೆ ಇರುವಂಥ ಮತದಾನ ಕೇಂದ್ರಕ್ಕೆ ಕರ್ತವ್ಯ ನಿರ್ವಹಣೆಗಾಗಿ ಅಧಿಕೃತನಾಗಿದ್ದರೆ ಅಥವಾ ನೇಮಕಗೊಂಡಿದ್ದರೆ, ಅಂಥ ಅಧ್ಯಕ್ಷಾಧಿಕಾರಿ, ಮತದಾನ ಅಧಿಕಾರಿ, ಮತದಾನ ಏಜೆಂಟ್ ಅಥವಾ ಬೇರಾವುದೇ ವ್ಯಕ್ತಿ ಮತದಾನ ಮಾಡಬೇಕಾದ ರೀತಿ"

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು:** ವಿಷಯ ಏನೆಂದರೆ:

"ತಿದ್ದುಪಡಿಯಾದ ನಂತರ ಕಲಂ ೧೬೭ ಮಸೂದೆಯ ಭಾಗವಾಗಿದೆ"

ವಿಚಾರವನ್ನು ಅಂಗೀಕರಿಸಲಾಯಿತು.

ಕಲಂ ೧೬೭ ತಿದ್ದುಪಡಿಯ ನಂತರ ಮಸೂದೆಗೆ ಸೇರಿಸಲಾಗಿದೆ.

**೩೪ ನೇ ಕಲಂ**

***ಪಂಡಿತ್ ಠಾಕುರ್ ದಾಸ್ ಭಾರ್ಗವ:** ೩೪ ನೇ ಕಲಂನ ನಂತರ ಈ ಹೊಸ ಕಲಂ ಅನ್ನು ಸೇರಿಸಲು ನಾನು ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

೩೪ನೆಯ ಖಂಡದ ಬಳಿಕ, ಈ ಕೆಳಗಿನ ಹೊಸ ಖಂಡವನ್ನು ಸೇರಿಸಿಕೊಳ್ಳಿ:

(೧) ನಾಮಪತ್ರವನ್ನು ಸ್ವೀಕರಿಸುವುದಕ್ಕೆ ಅಥವಾ ತಿರಸ್ಕರಿಸುವುದಕ್ಕೆ ಸಂಬಂಧಪಟ್ಟ ಆದೇಶದಿಂದ ಅಸಮಾಧಾನಗೊಂಡ ಯಾವನೇ ಅಭ್ಯರ್ಥಿ, ಆದೇಶವನ್ನು ಹೊರಡಿಸಿದ ದಿನಾಂಕದಿಂದ ನಾಲ್ಕು ದಿವಸಗಳ ಒಳಗಾಗಿ, ನಾಮಪತ್ರಗಳ ಪರಿಶೀಲನೆ ನಡೆದ ಸ್ಥಳ ಯಾವ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆಯೋ ಅವರಿಗೆ ಮೇಲ್ಮನವಿಯನ್ನು ಸಲ್ಲಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. ಆದೇಶದ ಪ್ರತಿಯನ್ನು ಪಡೆದುಕೊಂಡಿದ್ದಲ್ಲಿ, ಆದೇಶದ ಪ್ರತಿಯ ಜೊತೆಗೆ ಮೇಲ್ಮನವಿಯನ್ನು ಸಲ್ಲಿಸತಕ್ಕದ್ದು ಅಥವಾ ಮೇಲ್ಮನವಿಯ ಸುನಾವಣೆ ಆಗುವುದಕ್ಕೆ ಮುಂಚೆ ಅದನ್ನು ಸಲ್ಲಿಸಬಹುದಾಗಿರುತ್ತದೆ.

(೨) ೧೯೦೮ರ ನಾಗರಿಕ ಪ್ರಕ್ರಿಯಾ ಸಂಹಿತೆಯಲ್ಲಿ ಮೇಲ್ಮನವಿಗಳ ಸುನಾವಣೆಗೆ ನಿಗದಿಪಡಿಸಲಾಗಿರುವ ಕ್ರಮವಿಧಾನವನ್ನು ಜಿಲ್ಲಾ ನ್ಯಾಯಾಧೀಶರು ಅನುಸರಿಸತಕ್ಕದ್ದು ಹಾಗೂ ನಾಮಪತ್ರದ ಸ್ವೀಕೃತಿಗೆ ಅಥವಾ ತಿರಸ್ಕಾರಕ್ಕೆ ಸಂಬಂಧಿಸಿದ ಆದೇಶದ ದಿನಾಂಕದಿಂದ ಹದಿನೈದು ದಿವಸಗಳ ಒಳಗಾಗಿ ತಮ್ಮ ಅಂತಿಮ ಆದೇಶವನ್ನು ಹೊರಡಿಸತಕ್ಕದ್ದು.

(೩) ಜಿಲ್ಲಾ ನ್ಯಾಯಾಧೀಶರು ತಮ್ಮ ಆದೇಶದ ಪ್ರತಿಯನ್ನು ಆ ಕೂಡಲೇ ಚುನಾವಣಾಧಿಕಾರಿಗಳಿಗೆ ಕಳಿಸಿಕೊಡತಕ್ಕದ್ದು. ಪ್ರಕರಣ ೩೬ರಲ್ಲಿ ನಿಗದಿಪಡಿಸಿರುವಂತೆ ಅವರು ಆ ಕೂಡಲೇ ಅದನ್ನು ಪ್ರಕಟಿಸತಕ್ಕದ್ದು.

(೪) ಜಿಲ್ಲಾ ನ್ಯಾಯಾಧೀಶರ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಹಾಗೂ ಯಾವುದೇ ಚುನಾವಣಾ ಅರ್ಜಿಯ ಮೂಲಕ ಅಥವಾ ಬೇರಾವುದೇ ರೀತಿಯಲ್ಲಿ ಅನಂತರದಲ್ಲಿ ಅದನ್ನು ಪ್ರಶ್ನಿಸತಕ್ಕದ್ದಲ್ಲ.

ಮೂಲ ಮಸೂದೆಯಲ್ಲೇ ಡಾ. ಅಂಬೇಡ್ಕರ್ ಅವರೇ ನಾಮಪತ್ರಕ್ಕೆ ಸಂಬಂಧಪಟ್ಟಂತೆ ಎಲ್ಲಾ ವಿಚಾರಗಳನ್ನು ಅಂತಿಮವಾಗಿ ತೀರ್ಮಾನಿಸಬೇಕೆಂದು ಹೇಳಿದ್ದರು. ಅಲ್ಲದೆ ನಾಮ ಪತ್ರದ ಅಂತಿಮ ತೀರ್ಮಾನದ ಬಗ್ಗೆ ಯಾವ ಚುನಾವಣಾ ಖಟ್ಲೆಯೂ ನ್ಯಾಯಾಲಯಗಳಿಗೆ ಒಂದು ನಾಮಪತ್ರದ ಅಂಗೀಕಾರ ಅಥವಾ ತಿರಸ್ಕೃತಿ ಬಗ್ಗೆ ಯಾವುದೇ ಆದ ಆಜ್ಞೆ ಇಲ್ಲ ಎಂದು ಹೇಳಬಾರದು ಎಂದಿದ್ದರು. ಈ ಮಾತು ಈ ಸಭೆಯ ಸಾಮಾನ್ಯ ತಿಳುವಳಿಕೆಯ ಪ್ರಕಾರವೇ ಆಗಿತ್ತು. ಎಲ್ಲಾ ಸದಸ್ಯರು ಇದನ್ನೇ ಆಶಿಸಿದ್ದರು. ಅಲ್ಲದೇ ಚುನಾವಣೆ ಆದನಂತರ ನಾಮಪತ್ರದ ಬಗ್ಗೆ ಯಾವ ನ್ಯಾಯಾಲಯ ಏನಾದರೂ ಅದನ್ನು ಪ್ರಶ್ನಿಸುವಂತೆ ಇರಬಾರದು ಎಂಬ ಭಾವನೆ ಹೊಂದಿದ್ದರು. ಅನೇಕ ವೆಚ್ಚಗಳನ್ನು ಮಾಡುವ ಮುಂಚೆಯೇ ಆಮೂಲಾಗ್ರವಾಗಿ ಎಲ್ಲವನ್ನೂ ಪರಿಶೀಲಿಸಿ ನಾಮಪತ್ರದ ಅಂತಿಮಘಟ್ಟ ತೀರುವಂತೆ ಕಾಳಜಿ ವಹಿಸಬೇಕು. ಆದ್ದರಿಂದ ನಾನು ೩೪ ಎ ಕಲಂನಲ್ಲಿ ನಿಯಮಗಳ ಒಂದು ಗೊಂಚಲನ್ನು ನೀಡಿದ್ದೇನೆ. ಅದರ ಪ್ರಕಾರ ನಾಮಪತ್ರದ ಅಂತಿಮ ಸಂಸ್ಕರಣ ನಡೆಯಬೇಕು. ಈ ಅಂತಿಮ ಕೆಲಸದಲ್ಲಿ ಕಾಳಜಿ ತೋರಿ ಯಾವ ಚುನಾವಣಾ ಖಟ್ಲೆಯೂ ನ್ಯಾಯಾಲಯದ ಮುಂದೆ ಬರದಂತೆ ಅನೂಚಾನಾಗಿ ನಾಮಪತ್ರ ಪರಿಶೀಲಿಸಿ ವಿಧ್ಯುಕ್ತವಾಗಿ ಅದನ್ನು ಸ್ವೀಕರಿಸಬೇಕು ಅಥವಾ ತಿರಸ್ಕರಿಸಬೇಕು.

**ಡಾ. ಅಂಬೇಡ್ಕರ್:** ನನ್ನನ್ನು ಕ್ಷಮಿಸಿ. ಏಕೆಂದರೆ ನಾನು ಈ ತಿದ್ದುಪಡಿಯನ್ನು ವಿರೋಧಿಸಬೇಕು. ಚುನಾವಣೆಯನ್ನು ೨ ಭಾಗವಾಗಿ ನಡೆಸಲು ವಿಚಾರವನ್ನು ನಾನೇ ಮಂಡಿಸಿದ್ದೇನೆ. ಮೊದಲನೆಯ ಭಾಗ: ನಾಮ ಪತ್ರಸಲ್ಲಿಕೆ. ಎರಡು: ಚುನಾವಣೆ. ಆದರೆ ಆಯ್ಕೆ ಸಮಿತಿಯು ಈ ವಿಚಾರವನ್ನು ಗಣನೆಗೆ ತೆಗೆದುಕೊಳ್ಳದೆ ಈ ಕಾರ್ಯ ವಿಧಾನವನ್ನು ತಿರಸ್ಕರಿಸಿತ್ತು. ಅವರ ವಾದದ ಪ್ರಕಾರ ಒಬ್ಬ ಅಭ್ಯರ್ಥಿಯು ತಿರಸ್ಕರಿಸಲ್ಪಟ್ಟರೆ ಆತನು ಬೇಕಾದ ಪುರಾವೆಗಳನ್ನು ಮಂಡಿಸಲು ಅನೂರ್ಜಿತಗೊಳಿಸಿದ ಅಭ್ಯರ್ಥಿಗೆ ಸಾಕಷ್ಟು ಸಮಯವಿರುವುದಿಲ್ಲ. ಮತ್ತು ತೀರ್ಮಾನವನ್ನು ತನ್ನ ಪರವಾಗಿ ಪಡೆಯಲು ಸಾಧ್ಯವಿಲ್ಲ ಎಂದು. ಸದಸ್ಯರೂ ಸಹ ನೆನಪಿಗೆ ತಂದುಕೊಳ್ಳಬಹುದು. ಆ ಸಭೆಯಲ್ಲಿ ಮಾನ್ಯ ಮುಖ್ಯ ಚುನಾವಣಾ ಆಯುಕ್ತರೂ ಸಹ ಉಪಸ್ಥಿತರಾಗಿದ್ದರು. ಈ ವಿಚಾರದ ಬಗ್ಗೆ ಚರ್ಚಿಸಲು ಅವರನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು. ಅವರು ಮೇಲೆ ಹೇಳಿದ ವಿಚಾರವನ್ನು ವಿರೋಧಿಸಿ ನಾಮಪತ್ರದ ಅಂತಿಮ ಸಂಸ್ಕರಣವನ್ನು ಚುನಾವಣೆಯ ಮೊದಲೇ ನಡೆಸುವುದನ್ನು ವಿರೋಧಿಸಿದ್ದರು. ನಾನೂ ಅವರೊಡನೆ ವಿಚಾರ ವಿನಿಮಯ ಮಾಡಿಕೊಂಡಾಗಲೂ ಸಹ ಅವರು ಹೀಗೆ ಹೇಳಿದರು. ಈ ಕಾರ್ಯ ವಿಧಾನದಿಂದ ಚುನಾವಣೆಯು ಸಾಕಷ್ಟು ನಿಧಾನವಾಗುತ್ತದೆ. ಏನೇ ಆಗಲಿ ನವೆಂಬರ್ ಡಿಸೆಂಬರ್‌ನಲ್ಲಿ ಚುನಾವಣೆಯು ನಡೆಯಲೇಬೇಕೆಂದು ನಾವೆಲ್ಲ ಒಪ್ಪಿದ್ದೇವೆ. ಚುನಾವಣೆಯ ಜವಾಬ್ದಾರಿಯನ್ನು ಮುಖ್ಯ ಚುನಾವಣಾ ಆಯುಕ್ತರ ಮೇಲೆ ಹೇರಿರುವುದರಿಂದ ಈ ಸ್ಥಿತಿಯಲ್ಲಿ ನಾವು ಅವರ ನಿಲುವನ್ನು ಅಲ್ಲಗೆಳೆಯುವುದು ಅಸಾಧ್ಯ. ನಾನು ತಿದ್ದುಪಡಿಯನ್ನು ಒಪ್ಪಲು ಸಿದ್ಧನಿಲ್ಲ. ಆದರೆ ಈ ಸಭೆಗೆ ಒಂದು ವಿಚಾರ ತಿಳಿಸಬಯಸುತ್ತೇನೆ. ಅದು ಏನೆಂದರೆ ಈಗ ನಾವು ಮಾಡುತ್ತಿರುವ ಒಂದು ಕಾನೂನು ಸಾರ್ವಕಾಲಿಕ ಕಾನೂನಲ್ಲ. ಈ ತಿದ್ದುಪಡಿಯನ್ನು ಈಗ ಅಂಗೀಕರಿಸದಿದ್ದಲ್ಲಿ ಅದನ್ನು ಮುಂದೆ ಎಂದಾದರೂ ಅಂಗೀಕರಿಸಲು ನಮಗೆ ಯಾವ ಬಾಧೆಯೂ ಇಲ್ಲ. ಅಲ್ಲದೆ ಅದನ್ನು ಆನಂತರದ ಚುನಾವಣೆಗೆ ಲಾಗೂ ಮಾಡಬಹುದು. ಈ ಕಾನೂನಿನ ತಿದ್ದುಪಡಿ ಮಾಡಬಹುದು, ಬೆಳೆಸಬಹುದು ಹಾಗೂ ಅದರಲ್ಲಿನ ಕೆಲವು ವಿಚಾರಗಳನ್ನು ಕೈಬಿಡಲೂಬಹುದು. ನಮ್ಮೆಲ್ಲರಿಗೂ ಈ ಚುನಾವಣೆಯನ್ನು ನವೆಂಬರ್ ಡಿಸೆಂಬರ್‌ನಲ್ಲಿ ನಡೆಸಲೇಬೇಕೆಂಬ ಉತ್ಸುಕತೆ ಇರುವುದರಿಂದ ನಮ್ಮ ಕಾರ್ಯವೇಗಕ್ಕೆ ನಿಧಾನಗತಿಯನ್ನು ತರುವ ಯಾವುದೇ ಕ್ರಮವನ್ನು ಅಂಗೀಕರಿಸಲು ಸಾಧ್ಯವಿಲ್ಲ.

**ಮಾನ್ಯ ಅಧ್ಯಕ್ಷರು:** ನಾನು ಈ ತಿದ್ದುಪಡಿಯನ್ನು ಮತಕ್ಕೆ ಹಾಕಲೇ?

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನನ್ನ ತಿದ್ದುಪಡಿಯನ್ನು ಮತಕ್ಕೆ ಹಾಕಬಹುದು.

**ಮಾನ್ಯ ಅಧ್ಯಕ್ಷರು:** ತಿದ್ದುಪಡಿಯನ್ನು ಮಂಡಿಸಲಾಗಿದೆ.

ವಿಷಯವನ್ನು ತಿರಸ್ಕರಿಸಲಾಯಿತು.

**ಕಲಂ–೧** (ಕಿರು ಶೀರ್ಷಿಕೆ)

**ಪ್ರೊ. ಕೆ.ಟಿ.ಶಾ.:** ಇದನ್ನು ಮಂಡಿಸಲು ಅನುಮತಿ ಕೇಳುತ್ತೇನೆ

> ಖಂಡ (೧)ಕ್ಕೆ ಆ ಖಂಡದ ಉಪಖಂಡ (೧) ಎಂಬುದಾಗಿ ಮತ್ತೆ ಅಂಕಗಳನ್ನು ನೀಡಿ, ಈ ಕೆಳಗಿನ ಉಪಖಂಡವನ್ನು (೨)ನೆಯ ಉಪಖಂಡವಾಗಿ ಸೇರಿಸಿಕೊಳ್ಳಿ. "(೨) ಸಂವಿಧಾನದಲ್ಲಿ ನಿಗದಿಪಡಿಸಲಾಗಿರುವಂತೆ ಭಾರತದ ಎಲ್ಲ ಪ್ರಮುಖ ಭಾಷೆಗಳಿಗೆ ಈ ಕಾಯ್ದೆಯನ್ನು ಭಾಷಾಂತರಿಸತಕ್ಕದ್ದು ಹಾಗೂ ಕೇಂದ್ರದ ಪ್ರತಿಯೊಂದು ರಾಜ್ಯದ ಪ್ರಾದೇಶಿಕ ಭಾಷೆಯಲ್ಲಿ ಅಥವಾ ಭಾಷೆಗಳಲ್ಲಿ ಹಾಗೂ ಕೇಂದ್ರದ ರಾಷ್ಟ್ರಭಾಷೆಯಾದ ಹಿಂದಿಯಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಈ ಕಾಯ್ದೆಯನ್ನು ಅಧಿನಿಯಮಿಸಿದಂದಿನಿಂದ ಆರುವಾರಗಳ ಅವಧಿಯಲ್ಲಿ ಪ್ರಕಟಿಸತಕ್ಕದ್ದು."
>
> ಆದರೆ, ಈ ಕಾಯ್ದೆಯಲ್ಲಿ ಪರಿಭಾಷಿಸಲಾಗಿರುವಂತೆ ಅಥವಾ ಬಳಸಲಾಗಿರುವಂತೆ, ಎಲ್ಲ ಪಾರಿಭಾಷಿಕ ಪದಗಳೂ ಪ್ರತಿಯೊಂದು ಸಂದರ್ಭದಲ್ಲಿಯೂ ಆವರಣದಲ್ಲಿ ಕೊಡಲಾಗಿರುವ ಇಂಗ್ಲಿಷ್ ಪರ್ಯಾಯಗಳೊಂದಿಗೆ ಹಿಂದಿಯಲ್ಲಿ ಇರತಕ್ಕದ್ದು. ಲಭ್ಯವಿರುವ ಕಡೆಗಳಲ್ಲಿ, ಪ್ರತಿಯೊಂದು ಪ್ರಾದೇಶಿಕ ಭಾಷೆಯಲ್ಲಿನ ಪರ್ಯಾಯಗಳನ್ನು ಆವರಣಗಳಲ್ಲಿ ಕೊಡುವುದರೊಂದಿಗೆ, ಎಲ್ಲ ಭಾಷೆಗಳಲ್ಲಿಯೂ ಅವುಗಳು ಒಂದೇ ಆಗಿರತಕ್ಕದ್ದು.

**ಡಾ. ಅಂಬೇಡ್ಕರ್:** ಈ ತಿದ್ದುಪಡಿಯ ಬಗ್ಗೆ ನನಗೆ ಬಹಳ ಸಹಾನುಭೂತಿ ಇದೆ. ಈ ತಿದ್ದುಪಡಿಯಲ್ಲಿ ಅಡಕವಾಗಿರುವ ಸಲಹೆಯನ್ನು ವಿವಿಧ ರಾಜ್ಯ ಸರಕಾರಗಳು ಗಮನಕ್ಕೆ ತೆಗೆದುಕೊಳ್ಳುತ್ತವೆ. ಆದರೆ ಅದನ್ನು ಹೇಗೆ ನಾನು ಸಂವಿಧಾನದಲ್ಲಿ ಅಡಕ ನೀಡಲು ಸಾಧ್ಯ ಎಂದು ದಾರಿ ಹುಡುಕಲು ಒಪ್ಪಲಾರೆ. ಆದ್ದರಿಂದ ನಾನು ಅದನ್ನು ವಿರೋಧಿಸುತ್ತೇನೆ.

**ಮಾನ್ಯ ಅಧ್ಯಕ್ಷರು:** ಪ್ರಶ್ನೆಯೇನೆಂದರೆ "ಆ ಕಲಮು ಮಸೂದೆಯ ಭಾಗವಾಗಿದೆ".

ಸೂಚನೆಯನ್ನು ಅಂಗೀಕರಿಸಲಾಯಿತು.

೧ ನೇ ಕಲಂ ಅನ್ನು ಮಸೂದೆಗೆ ಸೇರಿಸಲಾಗಿದೆ. ಶೀರ್ಷಿಕೆ ಮತ್ತು ಕಾನೂನುಗಳನ್ನು ನೀಡುವ ಸೂತ್ರವನ್ನು ಮಸೂದೆಗೆ ಸೇರಿಸಲಾಗಿದೆ.

**ಮಾನ್ಯ ಅಧ್ಯಕ್ಷರು:** ಈಗ ಸಭೆಗೆ ಸ್ವಲ್ಪಕಾಲ ವಿರಾಮ. ಸಭೆಯನ್ನು ಮಂಗಳವಾರ ೧೯೫೧ ರ ಮೇ ೨೯ ನೇ ತಾರೀಖಿನ ೯.೦೦ ಘಂಟೆಯವರೆಗೆ ಸ್ಥಗಿತಗೊಳಿಸಲಾಗಿದೆ.

◆

ವಿಭಾಗ – ಆರು

# ೭ನೇ ಆಗಸ್ಟ್ ೧೯೫೧
# ರಿಂದ
# ೧೨ನೇ ಅಕ್ಟೋಬರ್ ೧೯೫೧

# ವಿಭಾಗ – ಆರು

## ಪರಿವಿಡಿ


೩೫. ಸಂಸತ್ತು – ಅನರ್ಹತೆ ನಿವಾರಣೆ ವಿಧೇಯಕ ೬೪೩

೩೬. ಅಸ್ಸಾಂ (ಗಡಿಗಳ ಮಾರ್ಪಾಟು) ವಿಧೇಯಕ ೬೭೦

೩೭. ನೋಟರಿಗಳ ವಿಧೇಯಕ ೬೮೬

೩೮. ಆಲ್ ಇಂಡಿಯಾ ಬಾರ್‌ನ ಆವಶ್ಯಕತೆ ಕುರಿತ ನಿರ್ಣಯ ೬೯೨

೩೯. ಸಂಸತ್ ಸದಸ್ಯರ ನಡತೆ ೬೯೬

೪೦. ಆಯ್ಕೆ ಸಮಿತಿ ಸಭೆಗಳು ೭೦೭

೪೧. ಮತ ಕ್ಷೇತ್ರಗಳ ಪುನರ್‌ವಿಂಗಡನೆ ಆದೇಶಗಳನ್ನು ಕುರಿತಂತೆ ಸೂಚನೆಗಳು ೭೧೦

೪೨. ಸದನ ಕಾರ್ಯಕಲಾಪ ೭೩೫

೪೩. ಡಾ. ಅಂಬೇಡ್ಕರ್‌ರ ರಾಜೀನಾಮೆ ಪತ್ರ ೭೪೦

# ೩೫

# ಸಂಸತ್ತು – ಅನರ್ಹತೆ ನಿವಾರಣೆ ವಿಧೇಯಕ

***ಕಾನೂನು ಸಚಿವರು** (ಡಾ. ಅಂಬೇಡ್ಕರ್):

"ಲಾಭ'ದ ಹುದ್ದೆಗಳಲ್ಲಿರುವವರು ಸಂಸತ್ತಿನ ಸದಸ್ಯರಾಗಿರಲು ಅನರ್ಹರನ್ನಾಗಿಸದಂತಹ ಕೆಲವೊಂದು ಲಾಭದ ಹುದ್ದೆಗಳನ್ನು ಘೋಷಿಸುವ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು"

– ಎಂಬ ಸೂಚನೆಯನ್ನು ಮಂಡಿಸಲು ಅನುಮತಿ ಕೋರುತ್ತೇನೆ

ಮಾನ್ಯರೆ, ಈ ವಿಧೇಯಕವು ಲಾಭದ ಹುದ್ದೆಯಲ್ಲಿರುವ ಕೆಲವು ವ್ಯಕ್ತಿಗಳಿಗೆ ವಾಸ್ತವವಾಗಿ ರಕ್ಷಣೆ ಕೊಡುವ ಕಾಯಿದೆ. ಈ ವಿಧೇಯಕವನ್ನು ಕಾರ್ಯರೂಪಕ್ಕೆ ತರದಿದ್ದರೆ ಅಂಥ ವ್ಯಕ್ತಿಗಳು ಸಂವಿಧಾನದ ೧೦೨ನೇ ಅನುಚ್ಛೇದದ ನಿಬಂಧನೆಗಳ ಮೇರೆಗೆ ಸಂಸತ್ತಿನ ಸದಸ್ಯರಾಗಿರಲು ಅನರ್ಹರಾಗುತ್ತಾರೆ. ಯಾರೇ ವ್ಯಕ್ತಿಯು ಲಾಭದ ಹುದ್ದೆಯನ್ನು ಧಾರಣ ಮಾಡಿದರೆ ಆತನು, ಸಂಸತ್ತಿನ ಸದಸ್ಯನಾಗಿರಲು ಅನರ್ಹನಾಗುತ್ತಾನೆಂದು ಆ ೧೦೨ನೇ ಅನುಚ್ಛೇದವು ಹೇಳುತ್ತದೆ. ನಾನು ತೀರಾ ಸಂಕ್ಷಿಪ್ತವಾಗಿ ಹೇಳಿದ ಈ ಕಾರಣಗಳಿಂದಾಗಿ, ಸಂಸತ್ತಿನ ಕೆಲವರು ಸದಸ್ಯರು ದುರದೃಷ್ಟವಶಾತ್ ಸಂವಿಧಾನದ ಆ ೧೦೨ನೇ ಅನುಚ್ಛೇದದ ನಿಬಂಧನೆಗಳಿಗೆ ಒಳಪಡುತ್ತಾರೆ. ಸದನಕ್ಕೆ ಈಗ ನಾನು ವಿವರಿಸಲಿರುವ ಕಾರಣಗಳಿಂದಾಗಿ, ಅಂಥ ಅನರ್ಹತೆಯನ್ನು ಸಂಸತ್ತು ಕಾನೂನನ್ನು ರಚಿಸಿ ತೊಡೆದು ಹಾಕುವುದು ಉಚಿತವೆಂದು ಸರ್ಕಾರವು ಭಾವಿಸಿದೆ.

ಲಾಭದ ಹುದ್ದೆ ಬಗೆಗಿನ ಈ ನಿಬಂಧನೆಯು ಬಹಳ ಹಳೆಯದು, ಭಾರತ ಸಂವಿಧಾನದ ರಚನೆಗೆ ಅನುವು ಮಾಡಿಕೊಟ್ಟ ಹಲವಾರು ಭಾರತ ಸರ್ಕಾರದ ಕಾಯಿದೆಗಳಲ್ಲಿ ಈ ನಿಬಂಧನೆ ಇದೆ ಎಂಬುದನ್ನು ಈ ಸದನವು ಗಮನಿಸುವುದು ಅವಶ್ಯ. ಮೊದಲನೆಯದಾಗಿ, ೧೯೩೫ ರ ಕಾಯಿದೆ ಅದರಲ್ಲಿ ೨೬ನೇ ಪ್ರಕರಣ ಇದೆ. ಭಾರತ ಸರ್ಕಾರದ ಅಧೀನದಲ್ಲಿರುವ ಲಾಭದ ಹುದ್ದೆಯಲ್ಲಿ ಇರುವವರಿಗೆ ಸಂಬಂಧಿಸಿದ ವಿಷಯಗಳಿಗೆ ಅದು ಸಂಬಂಧಿಸಿದೆ. ೧೯೩೫ರ ಕಾಯಿದೆಯಲ್ಲಿ ಒಕ್ಕೂಟಕ್ಕೆ ಸಂಬಂಧಿಸಿದ ಆ ಭಾಗವು ಜಾರಿಗೆ ಬಂದಿರಲಿಲ್ಲವಾದ್ದರಿಂದ, ಆಗ ಅಸ್ತಿತ್ವದಲ್ಲಿದ್ದ ಕೇಂದ್ರೀಯ ಶಾಸನ ಸಭೆಗೆ ಅದು ಅನ್ವಯವಾಗುತ್ತಿರಲಿಲ್ಲ. ಆದರೆ, ಪ್ರಾಂತೀಯ ಭಾಗದಲ್ಲಿ ಅದೇ ರೀತಿಯ ನಿಬಂಧನೆ ಇದ್ದ ೬೯ನೇ ಪ್ರಕರಣವು ಪ್ರಾಂತೀಯ ಶಾಸನ ಸಭೆಗಳಿಗೆ ಅನ್ವಯವಾಗುತ್ತಿತ್ತು.

ಸಂವಿಧಾನದ ಕರಡನ್ನು ರಚಿಸುವ ಉದ್ದೇಶಕ್ಕಾಗಿ ೧೯೪೬ ರಲ್ಲಿ ರಾಜ್ಯಾಂಗ ರಚನಾ ಸಭೆಯನ್ನು ಸಮಾವೇಶಗೊಳಿಸಲಾಗಿತ್ತು ಎನ್ನುವುದು ಈ ಸದನಕ್ಕೆ ತಿಳಿದೇ ಇದೆ. ಸಂವಿಧಾನವನ್ನು ರಚಿಸುವ ವಿಷಯಗಳ ಮೇಲೆ ಅತ್ಯುತ್ತಮ ಸಲಹೆಗಳನ್ನು ಪಡೆದುಕೊಳ್ಳುವ ಉದ್ದೇಶಕ್ಕಾಗಿ, ಅಂಥದೊಂದು ಮಹತ್ವದ ವಿಷಯದಲ್ಲಿ

---

* ಸಂ.ಚ. ಸಂಪುಟ ೧೪, ಭಾಗ II, ೭, ಆಗಸ್ಟ್ ೧೯೫೧, ಪುಟಗಳು ೩೪–೪೦.

ತಮ್ಮ ತಮ್ಮ ಸಲಹೆಗಳನ್ನು ಕೊಡಲು ಸಮರ್ಥರಾದ ವ್ಯಕ್ತಿಗಳನ್ನು ಆ ರಾಜ್ಯಾಂಗ ರಚನಾ ಸಭೆಯಲ್ಲಿ ಸಮಾವೇಶಗೊಳಿಸುವುದು ಅಗತ್ಯವಾಗಿತ್ತು. ರಾಜ್ಯಾಂಗ ರಚನಾ ಸಭೆಯ ಸದಸ್ಯತ್ವಕ್ಕೆ ಈ ನಿರ್ಬಂಧವನ್ನು ವಿಧಿಸುವುದು ಅಪೇಕ್ಷಣೀಯ ಅಲ್ಲವೆಂದು ಭಾವಿಸಲಾಗಿತ್ತು. ಆ ತರುವಾಯ ಹೊಸ ಸಂದರ್ಭ ಸನ್ನಿವೇಶಗಳಿಗೆ ಸರಿ ಹೊಂದುವಂತೆ ಭಾರತ ಸರ್ಕಾರದ ಕಾಯಿದೆಯಲ್ಲಿ ಬದಲಾವಣೆ ಮಾಡಲಾಯಿತು. ಬದಲಾವಣೆಗಳನ್ನು ಅಳವಡಿಸಿದ ಆ ೧೯೩೫ರ ಭಾರತ ಸರ್ಕಾರದ ಕಾಯಿದೆಯಿಂದ ಈ ನಿಬಂಧನೆಯನ್ನು ತೆಗೆದುಹಾಕಲಾಯಿತು. ಹೀಗಾಗಿ, ಯಾರೇ ಸದಸ್ಯರು ರಾಜ್ಯಾಂಗ ರಚನಾ ಸಭೆಯ ಸದಸ್ಯರಾಗಲು ಮುಕ್ತ ಅವಕಾಶ ಇತ್ತು. ರಾಜ್ಯಾಂಗ ರಚನಾ ಸಭೆಯು ಡೊಮಿನಿಯನ್ ಶಾಸನ ಸಭೆಯಂತೆಯೂ ಕಾರ್ಯನಿರ್ವಹಿಸುತ್ತಿದ್ದುದರಿಂದ ಲಾಭದ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಗಳೂ ಸಹ ಸಂಸತ್ತಿನ ಸದಸ್ಯರಾಗಿ ಮುಂದುವರಿಯಲು ಮುಕ್ತ ಅವಕಾಶ ಇತ್ತು ಎನ್ನುವುದು ಈ ಸದನಕ್ಕೆ ತಿಳಿದೇ ಇದೆ.

ಅಂಥ ಅವಕಾಶ ಇದ್ದುದರಿಂದ, ಡೊಮಿನಿಯನ್ ಶಾಸನಸಭೆಯ ಸದಸ್ಯರಾಗಿದ್ದ ಕೆಲವರು ರಾಜ್ಯಾಂಗ ರಚನಾ ಸಭೆಯ ಸದಸ್ಯರಾಗಿದ್ದರೂ ಸಹ ಆ ಲಾಭದ ಹುದ್ದೆಯಲ್ಲಿ ಯಾವುದೇ ಬಗೆಯ ಸಂವಿಧಾನಾತ್ಮಕ ನಿಷೇಧ ಇಲ್ಲದೆಯೇ ಮುಂದುವರಿದರು. ಮಾರ್ಪಾಟುಗೊಂಡ ೧೯೩೫ ರ ಭಾರತ ಸರ್ಕಾರದ ಕಾಯಿದೆಯ ವ್ಯಾಪ್ತಿಗೊಳಪಟ್ಟ ಲಾಭದ ಹುದ್ದೆಗಳಲ್ಲಿ ಅವರು ಇದ್ದುದರಿಂದಾಗಿ, ೧೯೫೦ ರ ಜನವರಿ ೨೬ ರಂದು ಸಂವಿಧಾನವು ಜಾರಿಗೆ ಬಂದ ನಂತರವೂ ಅವರು ಲಾಭದ ಹುದ್ದೆಗಳಲ್ಲಿ ಮುಂದುವರಿದಿದ್ದಾರೆ. ಕಾನೂನಿನಲ್ಲಿ ಈಗ ಬದಲಾವಣೆ ಆಗಿರುವುದರಿಂದ ಹಾಗೂ ಲಾಭದ ಹುದ್ದೆಯಲ್ಲಿದ್ದರೆ ಅನರ್ಹತೆಗೆ ಒಳಪಡುವುದರಿಂದ, ಅಂಥ ನಿಷೇಧಕ್ಕೆ ಒಳಪಡುವ ಅವರು ತಮ್ಮ ಹಿತದೃಷ್ಟಿಯಿಂದಲೇ ಅಂಥ ಹುದ್ದೆಗಳನ್ನು ತ್ಯಜಿಸುವುದು ಒಳ್ಳೆಯದೆಂದು ಅಂಥ ಸದಸ್ಯರಿಗೆ ಸರ್ಕಾರವು ತಿಳಿಸಬೇಕಾಗುತ್ತದೆ. ಅದರಿಂದ, ತುಂಬಾ ಆಡಳಿತಾತ್ಮಕ ತೊಂದರೆಗಳು ಉಂಟಾಗುತ್ತವೆಂದು ಸಂಸತ್ ಸದಸ್ಯರಿಗೆ ಸ್ಪಷ್ಟವಾಗಿ ಮನವರಿಕೆ ಆಗುತ್ತದೆ. ಸದಸ್ಯರು, ಆಯೋಗಗಳ ಸದಸ್ಯರಾಗಿ, ಸಮಿತಿಗಳ ಸದಸ್ಯರಾಗಿ ತಮ್ಮ ತಮ್ಮ ಜವಾಬ್ದಾರಿಗಳಲ್ಲಿ ಈಗಾಗಲೇ ತೊಡಗಿದ್ದಾರೆ. ಅವರವರ ಕಾರ್ಯಗಳಲ್ಲಿ ಅವರು ಮಗ್ನರಾಗಿರುವಾಗ, ಮಧ್ಯದಲ್ಲಿ, ಈಗ ಅವರು ತಮ್ಮ ತಮ್ಮ ಸ್ಥಾನಗಳನ್ನು ಬಿಡಬೇಕು, ಈ ಸಮಿತಿಗಳನ್ನು ಹಾಗೂ ಆಯೋಗಗಳನ್ನು ಹೇಗೆ ಪುನರ್ ರಚಿಸಲಾಗುತ್ತದೆಯೆಂದರೆ ಆ ನಿಕಾಯಗಳ ಪ್ರತಿಯೊಬ್ಬ ಸದಸ್ಯರು ಈ ನಿಷೇಧಕ್ಕೆ ಒಳಪಡದ ರೀತಿಯಲ್ಲಿ ಪುನರ್ ರಚಿಸಲಾಗುತ್ತದೆಂದು ಹೇಳಿದರೆ, ಅದರಿಂದ, ತುಂಬಾ ಆಡಳಿತಾತ್ಮಕ ತೊಂದರೆಗಳು ಉದ್ಭವವಾಗುತ್ತವೆ. ಹೀಗಾಗಿ, ಸಂವಿಧಾನದ ೧೦೨ನೇ ಅನುಚ್ಛೇದದಲ್ಲಿ ಹೇಳಿರುವ ನಿರ್ಬಂಧವು ಜಾರಿಯಲ್ಲಿದ್ದರೂ ಅವರವರ ಹುದ್ದೆಗಳ ಕಾರ್ಯಗಳನ್ನು ನಿರ್ವಹಿಸಲು ಅವರಿಗೆ ಅನುಮತಿ ನೀಡಲಾಗಿತ್ತು. ಈ ವಿಧೇಯಕವನ್ನು ಏಕೆ ತರಲಾಗಿದೆ ಎಂಬುದಕ್ಕೆ ಅದು ಒಂದು ಸಮರ್ಥನೆ. ಏಕೆಂದರೆ, ಸಮಿತಿಗಳ ಮತ್ತು ಆಯೋಗಗಳ ಅನೇಕ ಸದಸ್ಯರನ್ನು, ತಮ್ಮ ಸ್ಥಾನಗಳನ್ನು ತ್ಯಜಿಸಿ ಎಂದು ಕೇಳಿಕೊಂಡಿದ್ದಿದ್ದರೆ, ಅದರಿಂದ, ಆಡಳಿತಾತ್ಮಕ ತೊಂದರೆಗಳು ಉದ್ಭವವಾಗುತ್ತಿದ್ದವು. ವಾಸ್ತವಾಂಶ ಹೀಗಿದ್ದುದರಿಂದ, ಸರ್ಕಾರದ ಹಿತದೃಷ್ಟಿಯಿಂದ, ಅವರು ತಮ್ಮ ಹುದ್ದೆಯಲ್ಲಿ ಮುಂದುವರಿಯಲು ಮತ್ತು ತಮ್ಮ ಕಾರ್ಯಗಳನ್ನು ನಿರ್ವಹಿಸಲು ಅನುಮತಿ ನೀಡಲಾಗಿತ್ತು. ಅವರುಗಳು ಒಳಗಾಗಲು ಒಪ್ಪಲೇ ಬೇಕಿದ್ದ ಆ ಅನರ್ಹತೆಯನ್ನು ತೊಡೆದು ಹಾಕುವುದು ನಿಸ್ಸಂದೇಹವಾಗಿಯೂ ಸರ್ಕಾರದ ಕರ್ತವ್ಯ. ಈ ವಿಧೇಯಕವನ್ನು ಏಕೆ ಮಂಡಿಸಲಾಗಿದೆ ಎಂಬುದಕ್ಕೆ ಅದೂ ಒಂದು ಕಾರಣ.

## ೧೨ ಮಧ್ಯಾಹ್ನ

ಈ ವಿಧೇಯಕವನ್ನು ಮಂಡಿಸುವುದಕ್ಕೆ ಎರಡನೆಯ ಕಾರಣ ಯಾವುದೆಂದರೆ, ೧೯೫೦ರ ಜನವರಿ

೨೬ರ ನಂತರ (ಸಂವಿಧಾನವು ಜಾರಿಗೆ ಬಂದ ಮೇಲೆ) ಅಂಥ ಹುದ್ದೆಗಳಲ್ಲಿದ್ದ ಅನೇಕ ಸದಸ್ಯರು, ಸಂವಿಧಾನದಲ್ಲಿ ಅಂಥದೊಂದು ನಿಬಂಧನೆ ಇದೆಯೆಂದುಕೊಂಡಿರಲಿಲ್ಲವೆಂದು ಅಥವಾ ತಿಳಿದಿರಲಿಲ್ಲವೆಂದು ಅವರೇ ಹೇಳಿಕೊಂಡಿದ್ದಾರೆ. ನಿಜಕ್ಕೂ ಏನಾಗುತ್ತಿದೆ ಎಂಬುದು ನಮ್ಮ ತಿಳಿವಳಿಕೆಗೆ ಬಂದಿರಲಿಲ್ಲ, ತಪ್ಪು ತಿಳಿವಳಿಕೆಯಿಂದಿದ್ದೆವೆಂದು ಹೇಳಿಕೊಂಡಿದ್ದಾರೆ. ಕಾನೂನಿನ ಅಜ್ಞಾನ ಕ್ಷಮೆಗೆ ಅರ್ಹವಲ್ಲವೆನ್ನುವ ಕಾನೂನಿನ ಸಾಮಾನ್ಯ ನಿಯಮ ಇದ್ದರೂ, ಇಂಥದೊಂದು ವಿಷಯದಲ್ಲಿ, ಈ ರೀತಿಯ ಅನರ್ಹತೆಗೆ ನಾವು ಒಳಗಾಗುತ್ತಿದ್ದೇವೆಂಬುದು ನಿಜವಾಗಿಯೂ ನಮಗೆ ಗೊತ್ತಿರಲಿಲ್ಲವೆಂದು ನಿವೇದಿಸಿಕೊಂಡಿರುವ ಸದಸ್ಯರ ಸದ್ಭಾವನೆಯನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ವ್ಯಕ್ತಿಗಳ ಹಾಗೂ ಹುದ್ದೆಗಳ ಯಾವ ಯಾವ ಪ್ರವರ್ಗಗಳನ್ನು ಈ ವಿಧೇಯಕದಲ್ಲಿ ಹೇಳಲಾಗಿದೆ ಎಂಬ ಬಗ್ಗೆ ಮಾನ್ಯ ಸದಸ್ಯರು ವಿಶ್ಲೇಷಣೆ ಮಾಡಿದರೆ, ಈ ರಕ್ಷಣೆಗೆ ಒಳಪಡುವ ಸದಸ್ಯರು ಎರಡು ಪ್ರವರ್ಗಗಳಲ್ಲಿ ಯಾವುದಾದರೂ ಒಂದರ ವ್ಯಾಪ್ತಿಗೆ ಸೇರುತ್ತಾರೆಂಬುದು ಗೊತ್ತಾಗುತ್ತದೆ. ಸಂವಿಧಾನವು ಜಾರಿಗೆ ಬರುವುದಕ್ಕೂ ಬಹಳ ಹಿಂದೆಯೇ ಅಂಥ ಹುದ್ದೆಗಳನ್ನು ಧಾರಣ ಮಾಡಿರುವವರದು ಒಂದು ಪ್ರವರ್ಗ. ೧೦೨ನೇ ಅನುಚ್ಛೇದದ ಮೇರೆಗೆ ಯಾವುದೇ ಅನರ್ಹತೆಗೆ ನಾವು ಒಳಗಾಗುವುದಿಲ್ಲವೆಂಬ ಸದ್ಭಾವನೆ ಉಳ್ಳ ವ್ಯಕ್ತಿಗಳದು ಇನ್ನೊಂದು ಪ್ರವರ್ಗ, ಆ ಆಧಾರದ ಮೇಲೆಯೇ ಈ ವಿಧೇಯಕವನ್ನು ರಚಿಸಲಾಗಿದೆ.

ಈ ವಿಧೇಯಕ್ಕೆ ಸಂಬಂಧಿಸಿದಂತೆ ಮತ್ತು ಲಾಭದ ಹುದ್ದೆಯಲ್ಲಿರುವುದರಿಂದ ಉಂಟಾಗುವ ಅನರ್ಹತೆಯ ಸಾಮಾನ್ಯ ತತ್ವಕ್ಕೆ ಸಂಬಂಧಿಸಿದಂತೆ ಸರ್ಕಾರವು ಯಾವ ತತ್ವಗಳ ಮೇಲೆ ಕಾರ್ಯ ಪ್ರವೃತ್ತವಾಗಿದೆಯೆಂಬುದನ್ನು ಈ ಸದನಕ್ಕೆ ತಿಳಿಸಬಯಸುತ್ತೇನೆ. ಇಂಗ್ಲಿಷ್ ಕಾನೂನಿನ ತಾಂತ್ರಿಕ ನಿಯಮವನ್ನು ಎಂದರೆ, ಯಾವುದೇ ಹುದ್ದೆಯು ಲಾಭದ ಹುದ್ದೆಯೆಂದು ಕಾನೂನು ಘೋಷಿಸಿದರೆ, ಆಗ, ಆ ಹುದ್ದೆಯ ಸಂಬಳವನ್ನು ಸದಸ್ಯರು ಪಡೆಯುತ್ತಿದ್ದಾರೆಂಬ ಸಂಗತಿ ಏನೇ ಇದ್ದರೂ ಆತನನ್ನು ಅನರ್ಹಗೊಳಿಸಬೇಕೆಂಬ ನಿಯಮ ಇದ್ದರೂ, ಅದನ್ನು ಅನ್ವಯ ಮಾಡುವುದು ಅಪೇಕ್ಷಣೀಯ ಅಲ್ಲವೆಂಬ ನಿಲುವಿಗೆ ಸರ್ಕಾರ ಬಂದಿದೆ. ಇಂಗ್ಲಿಷ್ ಸಂವಿಧಾನದಲ್ಲಿ ಆ ನಿಯಮ ಇದೆ. ಕೆಲವು ಹುದ್ದೆಗಳು ಲಾಭದ ಹುದ್ದೆಗಳೆಂದು ಕಾನೂನು ಘೋಷಿಸಿದೆ. ನಿರ್ದಿಷ್ಟ ಹುದ್ದೆಯನ್ನು ಒಪ್ಪಿಕೊಳ್ಳುವ, ಆದರೆ, ಆ ಹುದ್ದೆಯ ಲಾಭವನ್ನು ಪಡೆದುಕೊಳ್ಳಲು ನಿರಾಕರಿಸುವ ಕೆಲವರು ಸಂಸತ್ ಸದಸ್ಯರು ಇರಬಹುದು. ಆದರೆ, ಆ ಹುದ್ದೆಯ ಲಾಭಗಳನ್ನು ಅವರು ನಿರಾಕರಿಸಿದ್ದಾರೆಂಬ ಸಂಗತಿಯು ಲಾಭದ ಹುದ್ದೆಯ ನಿಯಮ ಅನ್ವಯವಾಗದಂತೆ ರಕ್ಷಣೆ ಕೊಡುವುದಿಲ್ಲ. ಹೀಗಾಗುವುದು, ನಿಜಕ್ಕೂ ಅಪೇಕ್ಷಣೀಯ ಅಲ್ಲವೆಂದು ಸರ್ಕಾರವು ಭಾವಿಸಿದೆ. ಅದು, ಸಂಪೂರ್ಣವಾಗಿ ತಾಂತ್ರಿಕವಾದುದು ಆಗಿರುವುದರಿಂದ ನಾವು ಅದನ್ನು ಅಳವಡಿಸಿಕೊಳ್ಳುವ ಅಗತ್ಯ ಇಲ್ಲ. ಯಾವುದು ಲಾಭದ ಹುದ್ದೆ ಎಂಬುದನ್ನು ವಿವರಿಸಲು ಸರ್ಕಾರವು ತುಂಬಾ ಸರಳವಾದ ವಿಧಾನವನ್ನು ಅನುಸರಿಸಿದೆ. ಯಾವುದೇ ನಿರ್ದಿಷ್ಟ ಹುದ್ದೆಯು ಲಾಭದ ಹುದ್ದೆಯೇ ಅಥವಾ ಅಲ್ಲವೆ ಎಂಬುದನ್ನು ನಿರ್ಣಯಿಸುವ ಸಲುವಾಗಿ ಸರ್ಕಾರವು ಆಧಾರವನ್ನು ರೂಪಿಸಿದೆ. ಇತ್ತೀಚೆಗೆ, ಹಣಕಾಸು ಇಲಾಖೆಯು, ಹಲವಾರು ಸಮಿತಿಗಳಲ್ಲಿ ಕಾರ್ಯನಿರ್ವಹಿಸಿದ ಸದಸ್ಯರೇತರರಿಗೆ (ಎಂದರೆ, ಸಂಸತ್ತಿನ ಸದಸ್ಯರಲ್ಲದ ವ್ಯಕ್ತಿಗಳಿಗೆ) ಹಣ ಸಂದಾಯಕ್ಕಾಗಿ ನಿಯಮಗಳನ್ನು ರಚಿಸಿದೆ. ಹಣಕಾಸು ಇಲಾಖೆಯು ಹೊರಡಿಸಿರುವ ಆ ಅಧಿಸೂಚನೆಯು ಮಾನ್ಯ ಸದಸ್ಯರಿಗೆ ಗೊತ್ತಿದೆಯೇ, ಇಲ್ಲವೇ ಅಥವಾ ನೋಡಿದ್ದಾರೆಯೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ.

**ಶ್ರೀ ಸಿಧ್ವಾ** (ಮಧ್ಯಪ್ರದೇಶ): ನಮಗೆ ಗೊತ್ತಿಲ್ಲ.

**ಶ್ರೀ ಸೊಂಧಿ** (ಪಂಜಾಬ್): ಸುತ್ತೋಲೆಯಂತೆ ನಮಗೆ ಅದನ್ನು ಕಳುಹಿಸಿಲ್ಲ.

**ಡಾ॥ ಅಂಬೇಡ್ಕರ್ :** ಹೌದೇ, ನೀವುಗಳು ಅದನ್ನು ತರಿಸಿಕೊಳ್ಳುತ್ತೀರೆಂದು ಭಾವಿಸಿದ್ದೇನೆ. ಇದು, ತುಂಬಾ ಸರಳವಾದ ವಿಷಯ. ಸಮಿತಿಗಳಲ್ಲಿ ಮತ್ತು ಇತರ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ, ಸಂಸತ್ತಿನ ಸದಸ್ಯರಲ್ಲದ ಸದಸ್ಯರಿಗೆ ಹಣಕಾಸು ಇಲಾಖೆಯ ಅಧಿಸೂಚನೆ (ಅಥವಾ ಆ ಇಲಾಖೆಯೇ ಕರೆದಿರುವಂತೆ ಕಚೇರಿ ಜ್ಞಾಪನಾಪತ್ರದ) ಪ್ರಕಾರ ಸಂದಾಯವಾಗುವ ಭತ್ಯಗಳು ಹೀಗಿವೆ:

> ಅವರು ರೈಲಿನಲ್ಲಿ ಪ್ರಯಾಣ ಮಾಡುವುದಾದರೆ ರೈಲು ದರದ ಒಂದೂವರೆಯಷ್ಟು ದರವನ್ನು, ವಿಮಾನದಲ್ಲಿ ಪ್ರಯಾಣ ಮಾಡುವುದಾದರೆ, ಆ ದರದ ಒಂದೂಕಾಲರಷ್ಟು ದರವನ್ನು ಪ್ರಯಾಣ ಭತ್ಯೆಯಾಗಿ ಸಂದಾಯ ಮಾಡಲಾಗುತ್ತದೆ. ದೆಹಲಿಯಲ್ಲಿರುವುದಾದರೆ ರೂ.೧೨–೮–೦, ಕಲ್ಕತ್ತ ಮತ್ತು ಬಾಂಬೆಯಲ್ಲಿರುವುದಾದರೆ ರೂ. ೧೫, ಈ ದರಗಳನ್ನು ದಿನ ಭತ್ಯೆಯಾಗಿ ಸಂದಾಯ ಮಾಡಲಾಗುತ್ತದೆ. ಗರಿಷ್ಠ ದರ ರೂ. ೨೦.

ಸಂಸತ್ತಿನ ಯಾರೇ ಸದಸ್ಯರನ್ನು ಸಮಿತಿಗೆ ನೇಮಕ ಮಾಡಿದ್ದರೆ, ನಾನು ಈಗ ತಾನೆ ಸಂಸತ್ತಿಗೆ ಯಾವ ಕಚೇರಿ ಜ್ಞಾಪನಾಪತ್ರದ ಸಾರಾಂಶವನ್ನು ವಿವರಿಸಿದ್ದೇನೆಯೋ ಆ ಕಚೇರಿ ಜ್ಞಾಪನಾಪತ್ರದಲ್ಲಿ ಗೊತ್ತುಪಡಿಸಿರುವುದಕ್ಕಿಂತಲೂ ಹೆಚ್ಚಾಗಿ ಅವರಿಗೆ ಹಣ ಸಂದಾಯ ಮಾಡಿರದಿದ್ದರೆ, ಅವರು ಲಾಭದ ಹುದ್ದೆಯನ್ನು ಧಾರಣ ಮಾಡಿದ್ದಾರೆಂದು ಪರಿಗಣಿತರಾಗುವುದಿಲ್ಲ. ಸಂಸತ್ತಿನ ಸದಸ್ಯರಲ್ಲದ ವ್ಯಕ್ತಿಯಂತೆಯೇ ಅವರು ಪರಿಗಣಿತರಾಗುವುದರಿಂದ ಯಾವುದೇ ಅನರ್ಹತೆಗೆ ಒಳಗಾಗುವುದಿಲ್ಲ. ಆದರೆ, ಸಂಸತ್ ಸದಸ್ಯರಾಗಿರುವ ಯಾವುದೇ ವ್ಯಕ್ತಿಯನ್ನು ಸರ್ಕಾರವು ಯಾವುದೇ ನಿರ್ದಿಷ್ಟ ಸಮಿತಿಗೆ ನೇಮಕ ಮಾಡಿದರೆ, ಹಣಕಾಸು ಇಲಾಖೆಯ ಜ್ಞಾಪನಾಪತ್ರದಲ್ಲಿ ಹೇಳಿರುವುದಕ್ಕಿಂತಲೂ ಹೆಚ್ಚಿಗೆ ಹಣವನ್ನು ಅವರು ಪಡೆದರೆ, ಆಗ ಆ ವ್ಯಕ್ತಿಯು ಲಾಭದ ಹುದ್ದೆಯಲ್ಲಿರುವರೇ, ಇಲ್ಲವೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

**ಶ್ರೀ ಸೋಂಧಿ :** ಅಂಥವರು ಹೆಚ್ಚಿಗೆ ಪಡೆಯಲು ಅರ್ಹರಾಗಿದ್ದರೂ ಕೂಡ ಹೆಚ್ಚಿಗೆ ಪಡೆಯದೇ ಇದ್ದರೆ ?

**ಡಾ. ಅಂಬೇಡ್ಕರ್ :** ಅದು, ನಾನು ಕಲ್ಪಿಸಿಕೊಳ್ಳಲಾಗದ ಪ್ರಕರಣ. ನಾನು ಈಗಾಗಲೇ ಹೇಳಿರುವಂತೆ ವಾಸ್ತವಾಂಶ ಏನೆಂದರೆ, ಸದಸ್ಯೇತರರಿಗೆ ಸಂದಾಯದ ದರಗಳೆಂದು ಹಣಕಾಸು ಇಲಾಖೆಯು ಯಾವುದನ್ನು ಗೊತ್ತುಪಡಿಸಿದೆಯೋ ಅದಕ್ಕಿಂತಲೂ ಹೆಚ್ಚು ಏನನ್ನೂ ಯಾವುದೇ ಸಮಿತಿಗೆ ನೇಮಕಗೊಂಡ ಸಂಸತ್ ಸದಸ್ಯರಿಗೆ ಸಂದಾಯ ಮಾಡಿರದಿದ್ದರೆ, ಆಗ, ಅನರ್ಹತೆಯ ಪ್ರಶ್ನೆ ಉದ್ಭವವಾಗುವುದೇ ಇಲ್ಲ. ಸೂಕ್ತವೆಂದು ಸರ್ಕಾರವು ಭಾವಿಸಿದರೆ, ಯಾವುದೇ ಸಮಿತಿಗೆ ಯಾರೇ ಸದಸ್ಯರನ್ನು ನೇಮಕ ಮಾಡಬಹುದು. ಆದರೆ, ಹೆಚ್ಚಾಗಿ ಏನನ್ನಾದರೂ ಸಂದಾಯ ಮಾಡಿದ್ದರೆ, ಅಂಥ ಸದಸ್ಯರು ಲಾಭದ ಹುದ್ದೆಯನ್ನು ಧಾರಣ ಮಾಡಿದ್ದಾರೆಯೇ, ಇಲ್ಲವೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅಂಥ ಅಸಾಧಾರಣ ಪ್ರಕರಣಗಳಲ್ಲಿ, ಸರ್ಕಾರವು ಯಾವುದೇ ಸಾಮಾನ್ಯ ನಿಯಮವನ್ನು ವಿಧಿಸುವುದಿಲ್ಲ. ಆದರೆ, ಪ್ರತಿಯೊಂದು ಪ್ರಕರಣವನ್ನು, ಅದು ಉದ್ಭವಿಸಿದಾಗ, ಪ್ರತ್ಯೇಕವಾಗಿ ಪರಿಶೀಲಿಸಲಾಗುತ್ತದೆಂಬ ನಿಲುವಿಗೆ ಸರ್ಕಾರವು ಬಂದಿದೆ. ಹಣಕಾಸು ಇಲಾಖೆಯು ನಿಗದಿಪಡಿಸಿದ ದರಗಳಿಗಿಂತಲೂ ಹೆಚ್ಚಿಗೆಯಾಗಿ ಭತ್ಯೆಗಳನ್ನು ಸಂದಾಯ ಮಾಡಬಹುದೆಂಬ ಸಂಗತಿ ಇದ್ದರೂ, ಸದಸ್ಯರು ಯಾವುದೇ ಅನರ್ಹತೆಗೆ ಒಳಗಾಗುವುದಿಲ್ಲವೆಂದು ನಾಮನಿರ್ದೇಶನ ಮಾಡುವಾಗಲೇ ಸರ್ಕಾರವು ಹೇಳಬಹುದು ಅಥವಾ ಅಂಥ ಅನೇಕ ಸಂದರ್ಭಗಳು ಉದ್ಭವಿಸಿದಾಗಲೆಲ್ಲ

ಸರ್ಕಾರವು ಅವನ್ನು ಪರಿಶೀಲಿಸಬಹುದು ಮತ್ತು ನಿಯಮಗಳ ಮೇರೆಗೆ ಅನರ್ಹತೆಗೆ ಗುರಿ ಮಾಡುವ ಕೆಲವು ಹುದ್ದೆಗಳನ್ನು ವಿನಾಯಿತಿಯ ವ್ಯಾಪ್ತಿಗೆ ತರಲು, ನಾನು ಈ ಮಂಡಿಸಿರುವಂತಹ ಬಗೆಯ ವಿಧೇಯಕವನ್ನು ತರಲೂಬಹುದು.

ಮಾನ್ಯರೆ, ಈ ವಿಧೇಯಕವನ್ನು ತರುವುದು ಸೂಕ್ತವೆಂದು ಸರ್ಕಾರವು ಭಾವಿಸಿರುವ ಕಾರಣಗಳನ್ನು ಈ ಸದನವು ಪರಾಮರ್ಶಿಸಲು ಸಾಧ್ಯವಾಗುವುದಕ್ಕೆ ಅವಶ್ಯವಾದ ಎಲ್ಲ ಮಾಹಿತಿಯನ್ನು ಸದನಕ್ಕೆ ಒದಗಿಸಿದ್ದೇನೆಂದು ಭಾವಿಸಿದ್ದೇನೆ. ೧೦೨ನೇ ಅನುಚ್ಛೇದದಿಂದ ಉದ್ಭವಿಸಿದ ವಿಷಯಗಳ ಬಗ್ಗೆ ಸರ್ಕಾರವು ಮನಸ್ಸಿನಲ್ಲಿಟ್ಟುಕೊಂಡಿರುವ ಮೂಲತತ್ವಗಳನ್ನು ಸಹ ಹೇಳಿದ್ದೇನೆಂದು ಭಾವಿಸಿದ್ದೇನೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್:**

> "ಲಾಭದ ಹುದ್ದೆಗಳಲ್ಲಿರುವವರು ಸಂಸತ್ತಿನ ಸದಸ್ಯರಾಗಿರಲು ಅನರ್ಹರನ್ನಾಗಿಸದಂಥ ಕೆಲವೊಂದು ಲಾಭದ ಹುದ್ದೆಗಳನ್ನು ಘೋಷಿಸುವ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು"
>
> – ಎಂಬ ಸೂಚನೆಯನ್ನು ಮಂಡಿಸಲಾಗಿದೆ

**ಶ್ರೀ ಸಿಧ್ವಾ :** ಮಾನ್ಯರೆ, ಈ ವಿಧೇಯಕವನ್ನು ಮಂಡಿಸಿ ಮಾನ್ಯ ಸಚಿವರು ಮಾಡಿದ ಭಾಷಣದಿಂದ ಮಾನ್ಯ ಸದಸ್ಯರಲ್ಲಿ ಉಂಟಾಗಿರುವ ಸಂಶಯಗಳ ನಿವಾರಣೆ ಆಗಿಲ್ಲ. ಬದಲಿಗೆ, ಅವರ ಭಾಷಣದ ತರುವಾಯದ ಭಾಗವನ್ನು ಕೇಳಿದ ಮೇಲಂತೂ ಸಂಶಯಗಳು ಇನ್ನೂ ಹೆಚ್ಚಾಗಿವೆ. ಹಣಕಾಸು ಮಂತ್ರಾಲಯವು ಗೊತ್ತುಪಡಿಸಿರುವುದಕ್ಕಿಂತ ಹೆಚ್ಚಿಗೆ ಸದಸ್ಯರು ಪಡೆದಿದ್ದರೆ, ಅದು ಅನರ್ಹತೆಗೆ ಗುರಿಪಡಿಸುತ್ತದೆಂದು ಅವರು ಹೇಳಿದ್ದಾರೆ. ಈ ವಿಷಯ, ಅವರಿಗೆ ಗುರುತರವಾದುದು ಅಲ್ಲದಿರಬಹುದು. ಅವರು ಸಚಿವರು, ಯಾವ ಸಮಿತಿಯಲ್ಲೂ ಅವರು ಸೇವೆ ಸಲ್ಲಿಸಿಲ್ಲ. ಆದರೆ, ಈ ಸದನದ ಸರಿಸುಮಾರು ಶೇ ೫೦ ರಷ್ಟು ಸದಸ್ಯರು ಹಲವಾರು ಸಮಿತಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆ ಸಮಿತಿಗಳಲ್ಲಿ ಸೇವೆ ಸಲ್ಲಿಸಲು ಸದಸ್ಯರನ್ನು "ಒಪ್ಪಿಸಿರಲಿಲ್ಲ"ವೆಂದು ಸಚಿವರೇ ಹೇಳಿದ್ದಾರೆ. ಅವುಗಳಲ್ಲಿ ಸೇವೆಸಲ್ಲಿಸುವಂತೆ ಸದಸ್ಯರುಗಳನ್ನು ಕೋರಿಕೊಳ್ಳಲಾಗಿತ್ತು. ಕೃತಜ್ಞತಾ ಭಾವದಿಂದ ಸದಸ್ಯರು ಅವುಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇದು, ಯಾವುದೇ ಅನರ್ಹತೆಗೆ ತಮ್ಮನ್ನು ಗುರಿಪಡಿಸುತ್ತದೆಂದು ಅವರಿಗೆ ತಿಳಿದೇ ಇರಲಿಲ್ಲ. ಆದ್ದರಿಂದ, ಈ ವಿಷಯವನ್ನು ತೀವ್ರವಾಗಿ ಪರಿಶೀಲಿಸಬೇಕಾದ ಅಗತ್ಯ ಇದೆ. ಸರ್ಕಾರವು ತುಂಬಾ ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಹೇಳುತ್ತೇನೆ. ಈ ವಿಷಯದಲ್ಲಿ ಯಾವ ಸಂಶಯಕ್ಕೂ ಆಸ್ಪದಕೊಡದಂತಹ ತಿದ್ದುಪಡಿ ನೋಟೀಸನ್ನು ನಾನು ಕೊಟ್ಟಿದ್ದೇನೆ. ಸದಸ್ಯರು ಯಾವ ಯಾವ ಸಮಿತಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೋ ಆ ಎಲ್ಲ ಸಮಿತಿಗಳನ್ನು ಈ ವಿಧೇಯಕದಲ್ಲಿ ಸೇರಿಸಬೇಕೆಂದು ಕೋರುತ್ತೇನೆ. ಹಣಕಾಸು ಮಂತ್ರಾಲಯವು ಗೊತ್ತುಪಡಿಸಿರುವ ಫೀಜುಗಳನ್ನು ಪಡೆದಿರುವವರು ಅನರ್ಹತೆಗೆ ಗುರಿಯಾಗುವುದಿಲ್ಲವೆಂದು ಡಾ. ಅಂಬೇಡ್ಕರ್‌ರವರು ತಮ್ಮದೇ ಆದ ದೃಷ್ಟಿಕೋನವನ್ನು ಪ್ರತಿಪಾದಿಸಿದ್ದಾರೆ, ಹೈಕೋರ್ಟುಗಳು ಮತ್ತು ಸುಪ್ರೀಂ ಕೋರ್ಟು ಹೇಗೆ ವ್ಯಾಖ್ಯಾನ ಮಾಡುತ್ತವೆ ಎಂಬುದು ನಮಗೆ ಗೊತ್ತಿಲ್ಲ. ಡಾ. ಅಂಬೇಡ್ಕರ್‌ರವರು ಪ್ರಕಾಂಡ ಕಾನೂನು ವಿದ್ವಾಂಸರಲ್ಲಿ ಒಬ್ಬರು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದವರು. ಸಂವಿಧಾನದ ಹಲವಾರು ಅನುಚ್ಛೇದಗಳ ಬಗ್ಗೆ ಅವರು ರಾಜ್ಯಾಂಗ ರಚನಾ ಸಭೆಯಲ್ಲಿ ಏನನ್ನು ಹೇಳಿದ್ದರೋ ಅದಕ್ಕಿಂತ ವಿಭಿನ್ನವಾಗಿ ಸುಪ್ರೀಂಕೋರ್ಟು ಮತ್ತು ಹೈಕೋರ್ಟುಗಳು ವ್ಯಾಖ್ಯಾನ ಮಾಡಿವೆ. ಆದ್ದರಿಂದ, ಅವರ ವ್ಯಾಖ್ಯಾನವನ್ನು ನಾನು ಒಪ್ಪಲಾರೆ. ಅವರ

ವ್ಯಾಖ್ಯಾನ ನಮಗೆ ಮುಖ್ಯ ಅಲ್ಲ. ಅವರ ಊಹೆಗಳನ್ನು ನಮಗೆ ಅವರು ಹೇಳಲೇಬಾರದು. ಈ ಸದನದಲ್ಲಿ ಸದಸ್ಯರು ಇರಬೇಕೆಂದು ಅವರು ಬಯಸಿದ್ದರೆ, ಚುನಾವಣೆಗಳಲ್ಲಿ ಸದಸ್ಯರು ಸ್ಪರ್ಧಿಸಬೇಕೆಂದು ಅವರು ಬಯಸಿದ್ದರೆ ಆ ಬಗ್ಗೆ ಅವರು ಪ್ರಾಮಾಣಿಕರಾಗಿರಲಿ, ಈ ಸಮಿತಿಗಳಲ್ಲಿ ಸಲ್ಲಿಸುತ್ತಿರುವುದು ಅನರ್ಹತಗೆ ಗುರಿಪಡಿಸುವುದಿಲ್ಲವೆಂದು ಹೇಳಲಿ. ಈ ಸಮಿತಿಗಳಲ್ಲಿ ಸೇವೆ ಸಲ್ಲಿಸಲು ಈ ಸದಸ್ಯರನ್ನು ಕೋರಿದ್ದಾಗ, – ನಾನು ಪುನಃ ಪುನಃ ಹೇಳುತ್ತೇನೆ: ಕೋರಲಾಗಿತ್ತೇ ಹೊರತು ಒಪ್ಪಿಸಿರಲಿಲ್ಲ – ಆ ಕಲ್ಪನೆ ಇತ್ತೇ? ಈ ಸಮಿತಿಗಳಲ್ಲಿ ಸೇವೆ ಸಲ್ಲಿಸುವುದು ಅನರ್ಹತೆಗೆ ಗುರಿಪಡಿಸುತ್ತದೆಂದು ಸದಸ್ಯರಿಗೆ ಗೊತ್ತಿದ್ದರೆ ಅವರು ಆ ಸಮಿತಿಗಳಲ್ಲಿ ಸೇವೆ ಸಲ್ಲಿಸುತ್ತಿರಲಿಲ್ಲ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ವಿಷಯದಲ್ಲಿ ನ್ಯಾಯಾಲಯಗಳಿಗೆ ಯಾವುದೇ ಅಧಿಕಾರ ವ್ಯಾಪ್ತಿ ಇಲ್ಲವೆಂದು ತೋರುತ್ತದೆ. ಸಂವಿಧಾನದ ಪ್ರಕಾರ, ಈ ವಿಷಯವನ್ನು ರಾಷ್ಟ್ರಪತಿಯವರಿಗೆ ಉಲ್ಲೇಖ ಮಾಡಬೇಕಾಗುತ್ತದೆ. ಅವರು, ಚುನಾವಣಾ ಆಯುಕ್ತರೊಂದಿಗೆ ಸಮಾಲೋಚಿಸಿ ತೀರ್ಮಾನ ಕೈಗೊಳ್ಳುತ್ತಾರೆ.

**ಡಾ. ಅಂಬೇಡ್ಕರ್ :** ಈ ಪ್ರಶ್ನೆ, ಸ್ಪಷ್ಟವಾಗಿ ಹೇಗೆ ಉದ್ಭವವಾಯಿತು ಎಂಬ ಬಗ್ಗೆ ಮಾನ್ಯ ಸ್ನೇಹಿತರಿಗೆ ಹೇಳಲೇ? ಕೆಲವರು ಸಂಸತ್ ಸದಸ್ಯರು ಕೆಲವು ಪ್ರಕರಣಗಳನ್ನು ಸ್ಪೀಕರ್‌ರವರಿಗೆ ವರದಿ ಮಾಡಿದ್ದಾರೆ. ಕೆಲವು ಸದಸ್ಯರು ಲಾಭದ ಹುದ್ದೆಗಳಲ್ಲಿದ್ದಾರೆ ಎನ್ನುವುದು ತಮ್ಮ ಅಭಿಪ್ರಾಯವೆಂದು ಹೇಳಿದ್ದಾರೆ. ಸ್ಪೀಕರ್‌ರವರೇ ವಿಷಯವನ್ನು ರಾಷ್ಟ್ರಪತಿಯವರಿಗೆ ಉಲ್ಲೇಖಿಸಿದ್ದಾರೆ, ಈ ವಿಷಯವನ್ನು ವ್ಯವಸ್ಥಿತ ಸ್ಥಿತಿಗೆ ತರುವಂತೆ ರಾಷ್ಟ್ರಪತಿಯವರು ನಮಗೆ ಹೇಳಿದ್ದಾರೆ. ನಾವಾಗಿಯೇ ಕ್ರಮಗಳನ್ನು ಆರಂಭಿಸಿಲ್ಲ.

**ಶ್ರೀ ಸಿಧ್ವಾ :** ನನಗದು ಗೊತ್ತಿದೆ. ಆದರೆ, ನನ್ನ ವಾದವೇ ಬೇರೆ. ಹಲವಾರು ಸಮಿತಿಗಳಲ್ಲಿ ಹಲವಾರು ಸದಸ್ಯರು ಸೇವೆ ಸಲ್ಲಿಸುತ್ತಿರುವಾಗ ಮಾನ್ಯ ಸಚಿವರು ನಾಲ್ಕು ಪ್ರವರ್ಗಗಳನ್ನಷ್ಟೇ ಹೇಳಿದ್ದಾರೆಂಬ ಸಂಗತಿಯನ್ನು ಹೇಳುತ್ತಿದ್ದೇನೆ. ಮಾನ್ಯ ಸಚಿವರ ಪ್ರಕಾರ, ಈ ವ್ಯಕ್ತಿಗಳು ಅನರ್ಹರಾಗದಿರಬಹುದು, ಆದರೆ ಸುಪ್ರೀಂಕೋರ್ಟಿನ ಪ್ರಕಾರ ಅಂಥವರು ಅನರ್ಹರಾಗುತ್ತಾರೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್:** ಸುಪ್ರೀಂಕೋರ್ಟು ಇಲ್ಲೇಕೆ ಬಂತು?

**ಶ್ರೀ ಸಿಧ್ವಾ :** ಅಲ್ಲ, ರಾಷ್ಟ್ರಪತಿಯವರು, ಅದು, ರಾಷ್ಟ್ರಪತಿಯವರು ತೀರ್ಮಾನಿಸಬೇಕಾದ ವಿಷಯವಾದರೂ, ಯಾವುದೇ ಸಂದಿಗ್ಧತೆ ಇರಬಾರದು ಎಂಬುದೇ ನನ್ನ ಬಯಕೆ. ರಾಷ್ಟ್ರಪತಿಯವರು ಈ ಪ್ರಕರಣವನ್ನು ವಿಭಿನ್ನವಾಗಿ ವ್ಯಾಖ್ಯಾನಿಸಿ " ಸರಿ. ನೀವು ಅನರ್ಹರಾಗಿದ್ದೀರಿ " ಎಂದು ಹೇಳುತ್ತಾರೆಂದು ಕೊಳ್ಳೋಣ. ಮುಂದೇನು? ರಾಜೀನಾಮೆ ಕೊಡಬೇಕೆಂದು ಈ ಸದಸ್ಯರನ್ನು ಕೇಳಿದರೆ, ಅದು ಆಡಳಿತವನ್ನು ಅಸ್ತವ್ಯಸ್ತಗೊಳಿಸುತ್ತದೆಂದು ಮಾನ್ಯ ಸಚಿವರು ಸರಿಯಾಗಿಯೇ ಹೇಳಿದ್ದಾರೆ. ಹೊಸ ಸಂವಿಧಾನದ ಪ್ರಕಾರ ಅನರ್ಹರಾಗುತ್ತೇವೆಂಬದು ಸದಸ್ಯರಿಗೆ ಗೊತ್ತೇ ಇರಲಿಲ್ಲವೆಂದು ಸಹ ಸಚಿವರು ಹೇಳಿದ್ದಾರೆ. ಇವು ಪ್ರಾಮಾಣಿಕ ಭಾವನೆಗಳು. ನಾನು ನಂಬುತ್ತೇನೆ. ಅಂದ ಮೇಲೆ, ಈ ಶಾಸನದಲ್ಲಿ ಅವುಗಳನ್ನು ಏಕೆ ಸೇರಿಸಬಾರದು? ಸರಿಸುಮಾರು ಇಪ್ಪತ್ತೈದು ಸಮಿತಿಗಳನ್ನು ಹೇಳಿದ್ದೇನೆ. ಅವುಗಳನ್ನು ಸೇರಿಸುವಂತೆ ಇತರೆ ಎಲ್ಲ ಮಾನ್ಯ ಸದಸ್ಯರು ಒತ್ತಾಯಿಸುತ್ತಾರೆಂದು ಭಾವಿಸುತ್ತೇನೆ.

**ಡಾ. ಅಂಬೇಡ್ಕರ್ :** ನೀವು ಇನ್ನೂ ಕೆಲವನ್ನು ಹೇಳದೆ ಬಿಟ್ಟಿದ್ದೀರಿ.

**ಶ್ರೀ ಸಿಧ್ವಾ :** ತಾವು ಸೇರಿಸಿ, ನನಗೆ ತುಂಬಾ ಸಂತೋಷ ಆಗುತ್ತದೆ. ಇನ್ನೇನನ್ನೋ ಮಾಡುವುದರ ಬದಲು ತಾವು ನಮ್ಮ ರಕ್ಷಣೆಗೆ ಬರಲೇಬೇಕು. ಈ ಸದನದ ಸದಸ್ಯರಲ್ಲಿ ಶೇ ೫೦ ರಷ್ಟು ಸದಸ್ಯರು

ಅನರ್ಹತೆಯ ಗುಮ್ಮಕ್ಕೆ ಏಕೆ ಹೆದರಿಕೊಂಡಿರಬೇಕು? ಸರ್ಕಾರವು ಈ ವಿಷಯವನ್ನು ಪುನಃ ಪರಿಶೀಲಿಸಬೇಕೆಂದು ಕೋರುತ್ತೇನೆ. ಮಂತ್ರಾಲಯಗಳು ನೇಮಕ ಮಾಡಿರುವ ಎಲ್ಲ ಸಮಿತಿಗಳಲ್ಲಿ ಅಥವಾ ಯಾವುದರಲ್ಲಾದರೂ ಸೇವೆ ಸಲ್ಲಿಸಿದ ಸದಸ್ಯರು ಅನರ್ಹರೆಂದು ಪರಿಗಣಿಸುವುದಿಲ್ಲವೆಂಬ ಕಲಮನ್ನು ಸರ್ಕಾರವು ಸೇರಿಸಬೇಕು ಅಥವಾ ಎಲ್ಲ ಸಮಿತಿಗಳ ಹೆಸರನ್ನು ಸೇರಿಸಬೇಕು. ನಾನು ಎರಡು ಪರ್ಯಾಯಗಳನ್ನು ಹೇಳಿದ್ದೇನೆ. ಅವುಗಳಲ್ಲಿ ಒಂದನ್ನು ಮಾನ್ಯ ಸಚಿವರು ಏಕೆ ಒಪ್ಪಿಕೊಳ್ಳಬಾರದು ಎಂಬುದಕ್ಕೆ ನನಗೆ ಯಾವ ಕಾರಣವೂ ಕಂಡು ಬರುತ್ತಿಲ್ಲ. ಈ ವಿಷಯವನ್ನು ಅವರು ಬೇರೆಯವರಿಗೆ, ಅವರು ರಾಷ್ಟ್ರಪತಿಯವರೇ ಇರಬಹುದು, ಏಕೆ ವಹಿಸಬೇಕು? ಫೀಜುಗಳನ್ನು ಸ್ವೀಕರಿಸುವುದು ಲಾಭದ ಹುದ್ದೆಯನ್ನು ಧಾರಣ ಮಾಡಿದಂತಾಗುತ್ತದೆಂದು ಸಚಿವರು ಭಾವಿಸುತ್ತಾರೆ. ಔದ್ಯಮಿಕ ಹಣಕಾಸು ನಿಗಮದಲ್ಲಿ ಸಂಸತ್ತಿನ ಸದಸ್ಯರಿದ್ದಾರೆ. ಹಣಕಾಸು ಮಂತ್ರಾಲಯವು ಗೊತ್ತುಪಡಿಸಿರುವ ನಿಯಮಗಳ ಪ್ರಕಾರ ಅವರು ೫೦ ರೂ. ಪಡೆಯುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಅವರು ೭೫ ರೂ ಪಡೆದಿದ್ದಾರೆ. ತದನಂತರ, ಅವರು ೪೦ ರೂ.ಗೆ ಒಪ್ಪಿಕೊಂಡಿದ್ದಾರೆ. ಇದೊಂದು ಎದ್ದು ಕಾಣುವಂಥ ದೃಷ್ಟಾಂತ ೪೦ ರೂ.ಗಳನ್ನು ಪಡೆಯುತ್ತಿದ್ದಾರೆ, ಪಡೆದಿದ್ದಾರೆ ಎಂದು ಅವರನ್ನು ಅನರ್ಹಗೊಳಿಸಲಾಗುವುದೇ? ಈ ನಿಗಮದಲ್ಲಿ ಸೇವೆ ಸಲ್ಲಿಸುವಂತೆ ಲಿಖಿತದಲ್ಲಿ ಆ ಮಂತ್ರಾಲಯವು ಅವರನ್ನು ಕೋರಿತ್ತು, ಅವರು ಒಪ್ಪಿಕೊಂಡಿದ್ದರು.

**ಪಂಡಿತ್‌ಠಾಕೂರ್ ದಾಸ್ ಭಾರ್ಗವ (ಪಂಜಾಬ್) :** ಕೆಲವೊಂದು ಫೀಜುಗಳನ್ನು ಅವರು ವಾಪಸು ಮಾಡಿದ್ದಾರೆ, ಆ ಫೀಜುಗಳನ್ನು ಮತ್ತೆ ಅವರಿಗೆ ಸಂದಾಯ ಮಾಡಲಾಗಿದೆ.

**ಶ್ರೀ ಸಿಧ್ವಾ :** ಆದ್ದರಿಂದ, ಈ ವಿಷಯವನ್ನು ಲಘುವಾಗಿ ಪರಿಗಣಿಸಬಾರದು. ಸರ್ಕಾರವು ಈ ವಿಧೇಯಕವನ್ನು ತಂದಿರುವುದಕ್ಕೆ ನನಗೆ ತುಂಬಾ ಸಂತೋಷ ಆಗಿದೆ. ಕಳೆದ ಅಧಿವೇಶನದಲ್ಲೂ ಈ ವಿಧೇಯಕ ಈ ಸದನದ ಮುಂದಿತ್ತು. ಉಪ-ಮಂತ್ರಿಗಳಿಗೆ ಮತ್ತು ರಾಜ್ಯ ಮಂತ್ರಿಗಳಿಗೆ ಸಂಬಂಧಿಸಿದ ವಿಧೇಯಕದ ಜೊತೆಗೆ ಈ ವಿಧೇಯಕವನ್ನು ಪರಿಶೀಲಿಸಬೇಕೆಂದು ಬಯಸಿದ್ದೆವು. ಹೊಸ ಸಂವಿಧಾನವು ಜಾರಿಗೆ ಬಂದಾಗ, ಮಂತ್ರಿಗಳ ವಿಷಯವನ್ನು ಮೊದಲು ಪರಿಶೀಲನೆಗೆ ಕೈಗೆತ್ತಿಕೊಳ್ಳಲಾಗುತ್ತದೆಂಬ, ಸದಸ್ಯರ ವಿಷಯವನ್ನು ಪ್ರತ್ಯೇಕವಾಗಿ ಸಹಾನುಭೂತಿಯಿಂದ ಪರಿಶೀಲಿಸಲಾಗುತ್ತದೆಂಬ ಆಶ್ವಾಸನೆಯನ್ನು ನಮಗೆ ಕೊಡಲಾಗಿತ್ತು. ಈ ವಿಧೇಯಕವು ಕಳೆದ ಅಧಿವೇಶನದಲ್ಲಿ – ಸುಮಾರು ಐದು ತಿಂಗಳ ಹಿಂದೆಯೇ – ಅಂಗೀಕೃತವಾಗಬೇಕಿತ್ತು. ಈಗಲಾದರೂ ಇದಕ್ಕೆ ಮೊದಲ ಸ್ಥಾನ ಸಿಕ್ಕಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ. ಡಾ. ಅಂಬೇಡ್ಕರ್ ಅವರು ಪ್ರತಿಪಾದಿಸಿದಂತೆ, ಇದು ಅಷ್ಟೊಂದು ಸರಳವಾದ ಮಸೂದೆ ಅಲ್ಲ. ಸರ್ಕಾರದ ಉದ್ದೇಶ ತುಂಬಾ ಸ್ಪಷ್ಟವಾದುದು ಎಂಬುದನ್ನು ಸಚಿವರಿಗೆ ಹೇಳಬಯಸುತ್ತೇನೆ. ತಮ್ಮದಲ್ಲದ ತಪ್ಪಿಗೆ, ಯಾರಾದರೂ ಅನರ್ಹತೆಗೆ ಒಳಗಾಗಬೇಕೆಂಬುದು ಸರ್ಕಾರದ ಅಪೇಕ್ಷೆ ಅಲ್ಲ. ಹಾಗಿದ್ದರೆ, ಈ ವಿಧೇಯಕದಲ್ಲೇ ಅದನ್ನು ಸ್ಪಷ್ಟವಾಗಿ ಹೇಳಲಿ. ಸದಸ್ಯರಲ್ಲಿ ಕೆಲವರನ್ನು ಅನರ್ಹತೆಗೆ ಪರಿಗಣಿಸಲಾಗುತ್ತದೆಂದು ಡಾ. ಅಂಬೇಡ್ಕರ್ ಅವರ ಹೇಳಿಕೆಯಿಂದಲೇ ಸುಸ್ಪಷ್ಟವಾಗುತ್ತದೆ. ಯಾರಾದರೂ ಈ ವಿಷಯವನ್ನು ರಾಷ್ಟ್ರಪತಿಯವರ ಬಳಿಗೆ ತೆಗೆದುಕೊಂಡು ಹೋದರೆ ಅವರು, ಬಹುಶಃ ಕಾನೂನು ಮಂತ್ರಾಲಯದ ಸೂಚನೆಯಂತೆಯೇ ಕಾನೂನನ್ನು ವ್ಯಾಖ್ಯಾನಿಸುತ್ತಾರೆ. ರಾಷ್ಟ್ರಪತಿಯವರು, ಸಹಜವಾಗಿಯೇ, ಡಾ. ಅಂಬೇಡ್ಕರ್ ಅವರೊಂದಿಗೆ ಸಮಾಲೋಚಿಸುತ್ತಾರೆ. ಡಾ. ಅಂಬೇಡ್ಕರ್ ಅವರು ಈಗ ಇಲ್ಲಿ ಕೊಟ್ಟಿರುವ ವ್ಯಾಖ್ಯಾನಕ್ಕಿಂತಲೂ ವಿಭಿನ್ನವಾದ ವ್ಯಾಖ್ಯಾನವನ್ನು ರಾಷ್ಟ್ರಪತಿಯವರು ಕೊಡುವುದಿಲ್ಲ, ನಿಶ್ಚಿತ.

ಡಾ. ಅಂಬೇಡ್ಕರ್ ರವರು ಭಾಷಣ ಮಾಡುವಾಗ ನನ್ನ ತಿದ್ದುಪಡಿ ಬಗ್ಗೆ ಹೇಳಲಿಲ್ಲ. ಬಹುಶ: ಅವರು ಅದನ್ನು ನೋಡಿಲ್ಲ. ಸದಸ್ಯರು ಯಾವ ಯಾವ ಸಮಿತಿಗಳಲ್ಲಿ ಸೇವೆ ಸಲ್ಲಿಸಿದ್ದಾರೋ ಆ ಇಪ್ಪತ್ತೊಂಬತ್ತು ಸಮಿತಿಗಳನ್ನು ನಾನು ನನ್ನ ತಿದ್ದುಪಡಿಯಲ್ಲಿ ಕೊಟ್ಟಿರುವುದನ್ನು ತಾವು ನೋಡಿ. ಹಣಕಾಸು ಮಂತ್ರಾಲಯವು ಪ್ರಕಟಿಸಿರುವವುಗಳಿಗಿಂತಲೂ ಹೆಚ್ಚಿಗೆ ಫೀಜುಗಳನ್ನು ಕೆಲವರು ಸ್ವೀಕರಿಸಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ. ಸಂವಿಧಾನವನ್ನು ವ್ಯಾಖ್ಯಾನಿಸಲು ಉನ್ನತ ಪ್ರಾಧಿಕಾರಗಳು ಇರುವಾಗ ಡಾ. ಅಂಬೇಡ್ಕರ್‌ರವರ ವ್ಯಾಖ್ಯಾನವನ್ನು ನಾನು ಯಾವುದೇ ರೀತಿಯಲ್ಲಿ ಒಪ್ಪಿಕೊಳ್ಳಲು ಸಿದ್ಧನಿಲ್ಲ.

*__ಶ್ರೀ ಕರುಣಾಕರ ಮೆನನ್ (ಮದ್ರಾಸ್)__ : ಮಂತ್ರಾಲಯಗಳು ರಚಿಸಿರದ ಆದರೆ, ಸರ್ಕಾರವು ರಚಿಸಿರುವ ಕೆಲವು ಸಮಿತಿಗಳಿವೆ. ಉದಾಹರಣೆಗೆ, ಕೇಂದ್ರೀಯ ಅಡಿಕೆ ಮಂಡಳಿ, ಅದನ್ನು ಸರ್ಕಾರವು ಸ್ಥಾಪಿಸಿದೆ. ಆ ಸಮಿತಿಗೆ ಸದಸ್ಯರನ್ನು, ಸಂಸತ್ ಸದಸ್ಯರನ್ನು ಸಹ ನಾಮನಿರ್ದೇಶನ ಮಾಡಲಾಗುತ್ತದೆ. ಆ ಸಮಿತಿಗೆ ಸಂಬಂಧಪಟ್ಟಂತೆ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ? ಎಂದರೆ ಭಾರತೀಯ ಹತ್ತಿ ಸಮಿತಿ. ಇಲ್ಲಿ " ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿರುವ ಯಾವುದೇ ಲಾಭದ ಹುದ್ದೆಯನ್ನು ಧಾರಣ ಮಾಡುವ" ಎಂಬ ವಾಕ್ಯ ಇದೆ. ಯಾವುದು ಲಾಭದ ಹುದ್ದೆಯೆಂದು ಡಾ. ಅಂಬೇಡ್ಕರ್ ಅವರು ವ್ಯಾಖ್ಯಾನಿಸಿದ್ದಾರೋ ಅದರ ವ್ಯಾಪ್ತಿಗೆ ಈ ಎಲ್ಲವೂ ಒಳಪಡುತ್ತವೆ. ತಾವು ಒಪ್ಪಿಕೊಳ್ಳದಿದ್ದರೂ, ಉದ್ದೇಶಗಳು ಮತ್ತು ಕಾರಣಗಳ ವಿವರಣೆಯಲ್ಲಿ ಹೇಳಿರುವಂತೆ, ಅದು ಸಂದೇಹಾಸ್ಪದ ಅಂಶ. ಅಂಥ ಸದಸ್ಯತ್ವವು ಲಾಭದ ಹುದ್ದೆ ಅಲ್ಲವೆಂದು ನಾನು ಖಚಿತವಾಗಿ ಹೇಳಲಾರೆ. ಆದ್ದರಿಂದ, ಅದು ನಿಜಕ್ಕೂ ಸಂದೇಹಾಸ್ಪದ. ಈಗ, ನಮ್ಮ ಹೊಸ ಸಂಸದೀಯ ಕಾರ್ಯದರ್ಶಿಗಳ ಗತಿ ಏನಾಗುತ್ತದೆ?

**ಡಾ. ಅಂಬೇಡ್ಕರ್:** ಇಲ್ಲದ ಸಮಸ್ಯೆಗಳನ್ನು ನೀವೇಕೆ ಎತ್ತ ಬಯಸುತ್ತೀರಿ?

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ೨ ಐ ಕಲಮಿನಲ್ಲಿ ಸಚಿವರು ಮಾತ್ರವೇ ಲಾಭದ ಹುದ್ದೆಗಳನ್ನು ಧಾರಣ ಮಾಡಬಹುದು ಎಂದಿದೆ. ಉಪ–ಮಂತ್ರಿಗಳ ಬಗ್ಗೆ ಏನು?

**ಡಾ. ಅಂಬೇಡ್ಕರ್** : ಅವುಗಳನ್ನು ಸೇರಿಸಲಾಗುತ್ತದೆ?

**ಪಂಡಿತ್ ಠಾಕೂರ್ ದಾಸ್ ಭಾರ್ಗವ** : ಒಂದೇ ಮಾತಿನಲ್ಲಿ ತಾವು ಉಪ–ಮಂತ್ರಿಗಳನ್ನು ಸೇರಿಸಬಹುದು. ಆದರೆ, ಸಂಸದೀಯ ಕಾರ್ಯದರ್ಶಿ ಬಗ್ಗೆ ಏನು?

**ಒಬ್ಬರು ಗೌರವ ಸದಸ್ಯರು** : ಅವು ಗೌರವದ ಹುದ್ದೆಗಳು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ** : ನಾನು ಗೌರವ ಸಲಹೆಗಾರನಾಗಿದ್ದೆ. ನನ್ನ ವಿಷಯದಲ್ಲಿ ಹೇಗೆ ಕೇವಲ ಒಂದು ರೂಪಾಯಿ ಗೌರವ ಧನವೋ, ಅವರು ವಿಷಯದಲ್ಲಿ ಅದೇ ಇರಬಹುದು. ನಾನು ಹೇಳುವುದೇನೆಂದರೆ ಜ್ಞಾನವನ್ನು ಅಥವಾ ಅನುಭವವನ್ನು ನೀವು ಸಂಪೂರ್ಣವಾಗಿ ಬಳಸಿಕೊಳ್ಳ ಬಯಸಿದರೆ ಯಾವ ಹುದ್ದೆಗಳು ಅನರ್ಹತೆಗೆ ಗುರಿಪಡಿಸುವುದಿಲ್ಲವೋ ಆ ಹುದ್ದೆಗಳ ಪಟ್ಟಿಯನ್ನು ಸೇರಿಸಿ. ಒಂದು ವೇಳೆ, ಕೆಲವೊಂದು ವಿಷಯದಲ್ಲಿ ವಿಶೇಷ ಜ್ಞಾನ ಉಳ್ಳ ಸದಸ್ಯರು ಸಮಿತಿಗೆ ನೇಮಕಗೊಂಡರೆ, ಆದರೆ, ಆ ಹುದ್ದೆಯನ್ನು ವಿಧೇಯಕದಲ್ಲಿ ಘೋಷಿಸದೇ ಇದ್ದರೆ, ಆ ಸದಸ್ಯರು ಅದನ್ನು ಒಪ್ಪಿಕೊಳ್ಳುವುದಕ್ಕೆ ಸಮರ್ಥನೆ ಇರುವುದಿಲ್ಲ. ಒಂದು ಕಡೆ ಅವರು ಹಾಗೂ ಅವರ ಸೇವೆ, ಇನ್ನೊಂದು ಕಡೆ ಈ ಅನರ್ಹತೆ, ಹೀಗಾಗಿ ರಾಷ್ಟ್ರವು ಅವರ ಸೇವೆಗಳಿಂದ ವಂಚಿತವಾಗುತ್ತದೆ. ಈ ವಿಧೇಯಕದ ವಿಷಯದಲ್ಲಿ ಅಥವಾ

---

* ಸಂ.ಚ. ಸಂಪುಟ ೧೪. ಭಾಗ II, ೭ನೇ ಆಗಸ್ಟ್ ೧೯೫೧, ಪುಟಗಳು ೫೭–೭೧

ಕೊನೇ ಪಕ್ಷ ನಾನು ಹೇಳುತ್ತಿರುವ ಕಾರಣಗಳ ಮೇಲೆ ಆಧಾರಿತವಾಗಿರುವ ಕೆಲವು ತಿದ್ದುಪಡಿಗಳನ್ನು ಒಪ್ಪುವಂತೆ ಮಾಡುವ ವಿಷಯದಲ್ಲಿ ಬಿಗಿ ನಿಲುವು ತಾಳುವಂತೆ ನಮಗೆ ಸಲಹೆ ಸೂಚನೆಗಳು ಬಂದಿವೆ. ಇಲ್ಲದಿದ್ದರೆ, ಈ ಐದು ಪ್ರವರ್ಗಗಳಿಗೆ ವಿನಾಯಿತಿ ಸಿಕ್ಕುತ್ತದೆ, ಇನ್ನಿತರರಾದ ನಾವು ಮತ್ತೆ ಡಾ. ಅಂಬೇಡ್ಕರ್ ಅವರ ಬಳಿಗೇ ಹೋಗಬೇಕಾಗುತ್ತದೆ......................................

**ಡಾ. ಅಂಬೇಡ್ಕರ್ :** ಕೆಡಕು ಉಂಟು ಮಾಡುವ ಭಾವನೆ ನನ್ನಲ್ಲಿಲ್ಲ.

**ಶ್ರೀ ಸಿಧ್ವಾ :** ಅವರು ದೊಡ್ಡ ಮನಸ್ಸಿನವರು.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ :** ಈ ಮಸೂದೆಯನ್ನು ಕಾನೂನು ಮಂತ್ರಾಲಯವು ತಂದಿಲ್ಲ ಎನ್ನುವುದು ನನಗೆ ಗೊತ್ತಿದೆ. ಆದರೂ, ಅದು ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ರೀತಿಗಾಗಿ ಅಭಿನಂದಿಸುತ್ತೇನೆ. ಏಕೆಂದರೆ, ಈ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ನೆರವಿಗೆ ಬರಲು ಅದು ಒಪ್ಪಿದೆ. ಆದರೆ, ಪ್ರತಿಯೊಂದು ಬಾರಿಯೂ ಇಂಥದೊಂದು ಪ್ರಕರಣ ಇರುತ್ತದೆ, ನಾವು ಮಂತ್ರಾಲಯದ ಬಳಿಗೆ ಹೋಗಬೇಕು, ಉಪಕಾರ ಮಾಡಿ ಎಂದು ಅದನ್ನು ಕೇಳಿಕೊಳ್ಳಬೇಕೆಂದು ಡಾ। ಅಂಬೇಡ್ಕರ್ ಅವರು ಹೇಳಿರುವುದರ ಅರ್ಥವೇ? ಅವರ ಈ ವಿಧೇಯಕಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇಂತಿಂಥ ತತ್ವವನ್ನು ಅನ್ವಯಿಸಿದ್ದಾದರೆ, ಅನರ್ಹತೆಯು ಅನ್ವಯವಾಗುವುದಿಲ್ಲವೆಂಬ ನಿಬಂಧನೆಯನ್ನು ವಿಧೇಯಕದಲ್ಲಿ ಸೇರಿಸಬೇಕೆಂದು ಆಶಿಸುತ್ತೇನೆ. ೧೦೨ನೇ ಅನುಚ್ಛೇದಕ್ಕೆ ಸಂಬಂಧಪಟ್ಟಂತೆ, ವಿಹಿತವಾದ ಮಸೂದೆಯನ್ನು ತರಬೇಕೆಂದು, ಅದರಲ್ಲಿ ಹಲವಾರು ಲಾಭದ ಹುದ್ದೆಗಳ ಅರ್ಥ ವಿವರಣೆ ಮಾಡಿರಬೇಕೆಂದು, ಕೊನೆ ಪಕ್ಷ ಇಂತಿಂಥ ಹುದ್ದೆಗಳು, ಅವುಗಳಲ್ಲಿರುವವರಿಗೆ ಅನರ್ಹತೆ ಉಂಟು ಮಾಡುವುದಿಲ್ಲವೆಂದಾದರೂ ಹೇಳಬೇಕೆಂದು, ಹಾಗೂ ಉಪಲಬ್ಧಿಗಳು ಸಂಸತ್ ಸದಸ್ಯರು ಅಧಿವೇಶನದಲ್ಲಿ ಹಾಜರಾದುದಕ್ಕಾಗಿ ಪಡೆಯುವುದಕ್ಕಿಂತಲೂ ಮೀರದಿದ್ದರೆ ಅದನ್ನು ಲಾಭದ ಹುದ್ದೆಯೆಂದು ಪರಿಗಣಿಸುವುದಿಲ್ಲವೆಂತಲೂ ಹೇಳಬೇಕೆಂದು ಡಾ. ಅಂಬೇಡ್ಕರ್ ಅವರಿಗೆ ಗೌರವಪೂರ್ವಕವಾಗಿಯೇ ವಿನಂತಿ ಮಾಡಿಕೊಳ್ಳುತ್ತೇನೆ. ಹಲವಾರು ಸಮಿತಿಗಳ ಮತ್ತು ಆಯೋಗಗಳ ಹೆಸರುಗಳನ್ನು ನಿರ್ದಿಷ್ಟಪಡಿಸಿದರೆ, ಅವುಗಳಲ್ಲಿ ಬಹಳಷ್ಟು ಸಂಖ್ಯೆಯು ವ್ಯಾಪ್ತಿಗೊಳಪಡುತ್ತದೆಂದು, ಆದರೆ, ಶ್ರೀಯುತ ಕಾಮತರು ಹೇಳಿರುವ ಸಮಿತಿಯಂಥ ಎಲ್ಲವೂ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ನನಗೆ ತಿಳಿದಿದೆ. ಈ ವಿಷಯದಲ್ಲಿ ನಾನು ತುಂಬಾ ಕ್ರಿಮಿನಲ್. ನಾನು ಪುನರ್ವಸತಿ ಹಣಕಾಸು ನಿಗಮದ ಸದಸ್ಯ ಸಹ ಆಗಿದ್ದೆ. ಮೊದಲು ಫೀಜುಗಳನ್ನು ಸಂದಾಯ ಮಾಡಿದ್ದರು. ಪುನರ್ವಸತಿಗೆ ಸಂಬಂಧಿಸಿದ ಕಾರ್ಯಕ್ಕಾಗಿ ಯಾವುದೇ ಫೀಜು ನಮಗೆ ಬೇಕಿಲ್ಲವೆಂದು ನಾವು ಹೇಳಿದ್ದೆವು. 'ಇಲ್ಲ ನೀವು ಅರ್ಹರಿದ್ದಿರಿ' ಎಂದು ಹೇಳಿದರು. ಪ್ರತಿಯೊಂದು ಸಭೆಗೆ ೫೦ ರೂಪಾಯಿಯನ್ನು ಕೊಟ್ಟರು. ಆದರೆ, ಸಂಸತ್ ಸದಸ್ಯರು ೪೦ ರೂಪಾಯಿಗೆ ಮಾತ್ರವೇ ಅರ್ಹರಿದ್ದರು. (ಈಗ ಫೀಜು ೪೦ ರೂಪಾಯಿಗೆ ನಿಗದಿಯಾಗಿದೆ). ಸಭೆಗಳಿಗೆ ಸಂಬಂಧಿಸಿದಂತೆ ಸಂಸತ್‌ನಿಂದ ನಾವು ಪಡೆದುಕೊಂಡಿದ್ದ, ನಮಗೆ ಸಂದಾಯ ಆಗಿದ್ದ ಹಣವನ್ನು ವಾಪಸು ಮಾಡಬೇಕೆಂದು ಹೇಳಿದರು. ನಾವು 'ಸರಿ' ಎಂದೆವು. ವಾಪಸು ಮಾಡಿದ ನಂತರ, ವಾಪಸು ಮಾಡಿದ ಹಣಕ್ಕೆ ನಾವು ಅರ್ಹರೆಂಬ ತೀರ್ಮಾನಕ್ಕೆ ಸರ್ಕಾರವು ಬಂದಿತು. ಅದನ್ನು ನಾವು ಯಾವಾಗಲೂ ಕೇಳಿರಲಿಲ್ಲ. ಅದು ಬಂದಾಗ ನಾವು ಸ್ವೀಕರಿಸಿದೆವು.

**ಡಾ. ಅಂಬೇಡ್ಕರ್ :** ಅದು, ಸರ್ಕಾರದ ಉದಾರತೆಯನ್ನು ತೋರಿಸುತ್ತದೆ.

**ಶಿಕ್ಷಣ ಸಚಿವರು (ಮೌಲಾನ ಆಜಾದ್):** ಒಂದು ವೇಳೆ, ಹಣ ವಾಪಸು ಮಾಡಬೇಕೆಂದು ಸರ್ಕಾರ ಕೇಳಿರದಿದ್ದರೆ ?

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಈಗ ಇಲ್ಲಿ ತೊಂದರೆ ಏನೆಂದರೆ ಈ ಹಣವನ್ನು ನಾವು ಸ್ವೀಕರಿಸದಿದ್ದರೂ, ವಾಪಸು ಮಾಡಿದ್ದರೂ, ಆ ಹುದ್ದೆಯನ್ನು ಲಾಭದ ಹುದ್ದೆಯೆಂದು ಪರಿಗಣಿಸಿದ್ದರೆ, ಈ ನಿಯಮದ ಹಾವಳಿಗೆ ನಾವು ಒಳಗಾಗುತ್ತಿದ್ದೆವು. ಏಕೆಂದರೆ ಹಣವನ್ನು ಪಡೆಯುವುದು ಮುಖ್ಯ ಅಲ್ಲ, ಉಪಲಬ್ಧಿಯುಳ್ಳ ಹುದ್ದೆ ಮುಖ್ಯವಾಗುತ್ತದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅದು, ಶಾಸನದಿಂದ ರಚಿತವಾದ ಸ್ವಾಯುತ್ತ ಸಂಸ್ಥೆ ಅಲ್ಲವೇ? ಅದ್ದರಿಂದ, ಅದು ಸರ್ಕಾರದ ಅಧೀನದಲ್ಲಿರುವ ಲಾಭದ ಹುದ್ದೆಯೇ?

**ಪಂಡಿತ್ ಠಾಕೂರ್ ದಾಸ್ ಭಾರ್ಗವ :** ಅದು, ಸ್ವಾಯತ್ತ ಸಂಸ್ಥೆ .

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಆದ್ದರಿಂದಲೇ, ತಮಗೆ ಹಣ ವಾಪಸು ಮಾಡಲಾಗಿದೆ.

**ಡಾ. ಅಂಬೇಡ್ಕರ್ :** ವಿವರಿಸಲು ದಯಮಾಡಿ ಅವಕಾಶ ಕೊಡಿ. ಅದರಿಂದ ಚರ್ಚೆಯು ಬೇಗನೆ ಮುಗಿಯುತ್ತದೆಂದು ಭಾವಿಸುತ್ತೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ** : ತಾವು ಈ ಮೂರರ ಬಗ್ಗೆ ವಿವರಣೆ ಕೊಡಲೇಬೇಕು: (೧) ಪುನರ್ವಸತಿ ಸಲಹೆಗಾರ ; (೨) ಪುನರ್ವಸತಿ ಹಣಕಾಸು ನಿಗಮ ; (೩) ಸಾಮಾನ್ಯ ಸಮಿತಿಗಳು. ಇನ್ನೂ ಇತರ ಸಮಿತಿಗಳು ಇವೆಯೆಂದು, ಅವುಗಳ ಸದಸ್ಯರೇ ಈಗ ತಾನೆ ನನಗೆ ಹೇಳಿದರು. ಉದಾಹರಣೆಗೆ ರೈಲ್ವೆ ಸಿಸ್ಟಂನ ಮ್ಯಾನೇಜರ್‌ರವರು ನೇಮಿಸಿದ ಸಮಿತಿಗಳಲ್ಲಿ ಸದಸ್ಯರಾಗಿ ಅಥವಾ ಚೇಂಬರ್ಸ್ ಆಫ್ ಕಾಮರ್ಸ್‌ನ ಅಧ್ಯಕ್ಷರಾಗಿ ಕೆಲವು ಸದಸ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಆ ಮಟ್ಟಿಗೆ ಅವರುಗಳು ಸರ್ಕಾರದ ಅಧೀನದಲ್ಲಿರುವ ಲಾಭದ ಹುದ್ದೆಗಳಲ್ಲಿದ್ದಾರೆ. ಅವರೂ ವ್ಯಾಪ್ತಿಗೆ ಒಳಪಡುತ್ತಾರೇನು ? ಈ ಪ್ರಶ್ನೆಯು, ಯಾವುದೇ ಸಂಶಯಕ್ಕೆ ಆಸ್ಪದ ಕೊಡದಂತಿರಬೇಕೆಂದು ಆಶಿಸುತ್ತೇನೆ. ಕೇವಲ ಐದು ಪ್ರವರ್ಗಗಳನ್ನು ನಮೂದಿಸುವುದಾದರೆ, ನಮಗೆ ಎರಡು ಮಾರ್ಗಗಳು ಮಾತ್ರವೇ ಇರುತ್ತವೆ: ಈ ವ್ಯಕ್ತಿಗಳಿಗೆ ವಿನಾಯಿತಿ ನೀಡಬಾರದು, ಅವರು ನಮ್ಮಂತೆಯೇ ಇರಬೇಕು ಇಲ್ಲವೇ ಅವರಂತೆ ನಮಗೂ ವಿನಾಯಿತಿ ನೀಡಬೇಕು. ಈ ವಿಧೇಯಕವನ್ನು, ಅದು ಈಗಿರುವ ರೂಪದಲ್ಲೇ ಈ ಸದನವು ಅಂಗೀಕರಿಸುವುದು ಸಮರ್ಥನೀಯ ಅಲ್ಲವೆಂದು ವಿನಯದಿಂದ ಬಿನ್ನವಿಸಿಕೊಳುತ್ತಿದ್ದೇನೆ. ಕೆಲವೊಂದು ತತ್ವದ ಮೇಲೆ, ಆ ಎಲ್ಲ ಸದಸ್ಯರಿಗೂ ವಿನಾಯಿತಿ ನೀಡಬೇಕೆಂಬ ಮತ್ತು ಪುನರ್ವಸತಿ ಸಲಹೆಗಾರರನ್ನು ಈ ಪ್ರವರ್ಗದಲ್ಲಿ ಸೇರಿಸಬೇಕೆಂಬ ಶ್ರೀಯುತ ಸಿಧ್ವಾರವರ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು, ಇಲ್ಲವೇ, ಸಾಮಾನ್ಯವಾಗಿ ಅನ್ವಯವಾಗುವ ತತ್ವವನ್ನು ನಿರೂಪಿಸಬೇಕು ಮತ್ತು ಆ ಹುದ್ದೆಗಳಲ್ಲಿರುವವರು ಈ ನಿಯಮದ ಕಟ್ಟುಪಾಡಿಗೆ ಒಳಪಡುವುದಿಲ್ಲವೆಂದು ಪರಿಗಣಿಸಬೇಕು. ಹಿಂದೆ ಡಾ. ಅಂಬೇಡ್ಕರ್ ಅವರ ತಿಳಿವಳಿಕೆಗೆ ಬಂದಿದ್ದ ಸನ್ನಿವೇಶ, ಸಂದರ್ಭದ ತುರ್ತು ಆವಶ್ಯಕತೆಗಳ ನಿಮಿತ್ತ ಅವರು ಹಾಗೆ ಮಾಡಿದ್ದಾರೆ. ಆದರೆ, ಈಗ, ಅವರ ಗಮನಕ್ಕೆ ಹೊಸ ವಿಷಯಗಳನ್ನು ತರಲಾಗಿದೆ. ಇತರ ಸಮಿತಿಗಳನ್ನು ಸೇರಿಸದಯೇ ಈ ಮಸೂದೆಯು ಅಂಗೀಕಾರವಾಗುವಂತೆ ಮಾಡುವುದು ನ್ಯಾಯೋಚಿತ ಅಲ್ಲ.

ಅನರ್ಹತೆ ಪ್ರಶ್ನೆ ಬಗ್ಗೆ ಹೇಳುವುದಾದರೆ, ಈ ವ್ಯಕ್ತಿಗಳಲ್ಲಿ ಯಾರೂ ನಿಜಕ್ಕೂ ಅನರ್ಹತೆಗೆ ಒಳಗಾಗಿಲ್ಲ. ಏಕೆಂದರೆ, ಆ ಹುದ್ದೆಯನ್ನು ಒಪ್ಪಿಕೊಂಡಿದ್ದರಿಂದಾಗಿ ವಾಸ್ತವಿಕವಾಗಿ ನಾವು ಅನರ್ಹತೆಗೆ ಗುರಿಯಾಗುತ್ತಿದ್ದೇವೆಂಬ ತಿಳಿವಳಿಕೆ ಅವರಿಗೆ ಬಂದಿರಲಿಲ್ಲ ಇಲ್ಲವೇ ಅದರ ಸಂಪೂರ್ಣ ಜ್ಞಾನ ಅವರಿಗೆ ಇರಲಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಅವರು ಅನರ್ಹತೆಗೆ ಒಳಗಾಗಿದ್ದಾರೆಂದು ಭಾವಿಸಲೇಬಾರದು. ಹಿಂದಿನ ಹುದ್ದೆಗಳಿಗೆ ಸಂಬಂಧಿಸಿದಂತೆ, ಯಾವ ಅನರ್ಹತೆಯನ್ನು ಒಳಗೊಂಡಿರದಂಥ ಹುದ್ದೆಗಳು ಅವೆಂದು

ಹೇಳಬೇಕು. ಈ ರೀತಿ ಮಾಡದಿದ್ದರೆ, ಈ ರಕ್ಷಣೆಯ ವಿಧೇಯಕವು ರಕ್ಷಣೆಯ ವಿಧೇಯಕವೆನಿಸುವುದೇ ಇಲ್ಲ. ಏಕೆಂದರೆ ತಾವು ವ್ಯಕ್ತಿಗಳಿಗೆ ರಕ್ಷಣೆ ಕೊಡುತ್ತಿಲ್ಲ, ತಾವು ಹುದ್ದೆಗಳಿಗೆ ರಕ್ಷಣೆ ಕೊಡುತ್ತಿದ್ದೀರಿ. ತಾವು ವ್ಯಕ್ತಿಗಳಿಗೂ ರಕ್ಷಣೆ ಕೊಡುವುದಾದರೆ, ತಾವು ಸರಿಯಾದದ್ದನ್ನೇ ಮಾಡುತ್ತಿದ್ದೀರಿ ಎಂದರ್ಥ. ಇದೇ ನನ್ನ ವಿನಂತಿ.

**ಡಾ. ಅಂಬೇಡ್ಕರ್** : ಸಂಸತ್ತಿನ ಸದಸ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ವಿಧೇಯಕವು ಖಂಡಿತವಾಗಿಯೂ ಅತಿ ಸೂಕ್ಷ್ಮವಾದ ವಿಧೇಯಕ. ಈ ವಿಧೇಯಕದ ನಿಬಂಧನೆಗಳ ಪರಿಣಾಮಗಳ ವಿಷಯದಲ್ಲಿ ಅತಿಯಾಗಿ ಉತ್ಸುಕರಾಗುವುದರ ಬಗ್ಗೆ ಮಾನ್ಯ ಸದಸ್ಯರು ತುಂಬಾ ಎಚ್ಚರಿಕೆಯಿಂದಿರಬೇಕೆಂಬುದನ್ನು ಜ್ಞಾಪಿಸುತ್ತ ನನ್ನ ಮಾತನ್ನು ಆರಂಭಿಸುತ್ತೇನೆ. ಮಿತ್ರ ಮಾನ್ಯ ಠಾಕೂರ್ ದಾಸ್ ಭಾರ್ಗವ ಅವರು ಮಾತ್ರವೇ ವಿಷಯದಲ್ಲಿನ ಈ ಅಂಶವನ್ನು ತುಂಬಾ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದರು. ತುಂಬಾ ಒತ್ತುಕೊಟ್ಟು ಹೇಳಲೇಬೇಕಿದ್ದ ಅಂಶ ಅದು. ೧೦೨ನೆಯ ಅನುಚ್ಛೇದದಲ್ಲಿ ಸಂವಿಧಾನವು ಈ ನಿಬಂಧನೆಯನ್ನು ಸೇರಿಸಿರುವುದಕ್ಕೆ ಕಾರಣ ಬಲವಾಗಿಯೇ ಇದೆ. ಸಂಸತ್ತಿನ ಸ್ವಾತಂತ್ರ್ಯವನ್ನು ಕಾಪಾಡುವುದೇ ಉದ್ದೇಶ. ೧೯೨ನೇ ಅನುಚ್ಛೇದದ ನಿಬಂಧನೆಗಳ ವ್ಯಾಪ್ತಿಯನ್ನು ಹೆಚ್ಚಿಸಲು ಸಂಸತ್ ಸದಸ್ಯರು ಅತ್ಯಾಸಕ್ತಿ ಉಳ್ಳವರಾಗಿದ್ದರು. ಹಾಗೆ ಮಾಡಿದ್ದರೆ ಕೆಲವೊಂದು ರೀತಿಯ ಭ್ರಷ್ಟಾಚಾರದಲ್ಲಿ – ಸದಸ್ಯರುಗಳು ಕ್ಷಮಿಸಬೇಕು – ಸದಸ್ಯರುಗಳು ತೊಡಗಿದ್ದಾರೆಂದು ಹೊರಗೆ ಸಾರ್ವಜನಿಕರು ಟೀಕೆ ಮಾಡಲಾರರೆಂದು ಭಾವಿಸಿದ್ದರು. ನಾವು ಈ ವಿಷಯವನ್ನು ಆ ದೃಷ್ಟಿಕೋನದಿಂದಲೂ ನೋಡಬೇಕಾಗುತ್ತದೆ. ಯಾವುದೇ ಸದಸ್ಯರು ಸಮಿತಿಗೆ ನೇಮಕ ಆದಾಗ ಅವರು ರಾಷ್ಟ್ರಕ್ಕೆ ಕೆಲವೊಂದು ಸೇವೆ ಸಲ್ಲಿಸುತ್ತಾರೆನ್ನುವುದು ನಿಜ.

**ಒಬ್ಬರು ಗೌರವ ಸದಸ್ಯರು** : ಅದು ಭ್ರಷ್ಟಾಚಾರವೇನು?

**ಡಾ. ಅಂಬೇಡ್ಕರ್** : ಅದರಲ್ಲಿ ಅದರ ಎಲ್ಲ ಲಕ್ಷಣಗಳೂ ಇರುತ್ತವೆ. ಸದಸ್ಯರ ದೃಷ್ಟಿಯಲ್ಲಿ, ಅದು ತಾನು ಸಲ್ಲಿಸುವ ಸೇವೆ ಎಂಬುದರಲ್ಲಿ ಅನುಮಾನವೇ ಇರುವುದಿಲ್ಲ. ವಿರೋಧ ಪಕ್ಷದ ದೃಷ್ಟಿಗೆ, ಅದರಲ್ಲಿ ಬೇರೆ ಲಕ್ಷಣವೇ ಕಾಣುತ್ತದೆ. ಸರ್ಕಾರಕ್ಕೆ ಬೆಂಬಲ ಬೇಕಾದಾಗಲೆಲ್ಲ, ಬೆಂಬಲಿಸುವ ಜನರನ್ನು ಕಲೆ ಹಾಕುವ ದೃಷ್ಟಿಯಿಂದ ಲಾಭದ ಹುದ್ದೆಗಳ ನಿಬಂಧನೆಗಳ ವ್ಯಾಪ್ತಿಯನ್ನು ಸರ್ಕಾರವು ಹೆಚ್ಚಿಸುತ್ತಿದೆಯೆಂದು ವಿರೋಧ ಪಕ್ಷದವರು ಬಲವಾಗಿಯೇ ವಾದಿಸಬಹುದು. ಆದ್ದರಿಂದ ನಾನು ಹೇಳಿದಂತೆ, ೧೦೨ನೇ ಅನುಚ್ಛೇದದಲ್ಲಿರುವ ನಿಬಂಧನೆಯಿಂದ ಸಮಸ್ಯೆಗಳು ಉಂಟಾಗುತ್ತವೆ. ಆದರೆ, ಅಂಥ ಸಮಿತಿಗಳಿಗೆ ಸಂಸತ್ ಸದಸ್ಯರನ್ನು ನೇಮಕ ಮಾಡಿದಾಗಲೆಲ್ಲ, ಅವರುಗಳ ಸಲಹೆ ಸೂಚನೆಗಳನ್ನು ಪಡೆಯುವಲ್ಲಿ ಸರ್ಕಾರಕ್ಕೆ ಯಾವುದೇ ಅಡ್ಡಿ ಅಡಚಣೆ ಆಗದಂತೆ ಮತ್ತು ಆ ಸಮಿತಿಗಳ ಮೂಲಕ ಸಂಸತ್ ಸದಸ್ಯರು ಸರ್ಕಾರಕ್ಕೆ ಸೇವೆ ಸಲ್ಲಿಸಲು ಆಗದಂತಹ ಸಂದರ್ಭ ಬರದಂತೆ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ಬಗೆಹರಿಸುವಾಗ, ಈ ನಿಬಂಧನೆಗಳು ಯಾರು ಬೇಕಾದರೂ ಒಳಗೆ ಬರಬಹುದಾದಂಥ ವಿಶಾಲ ಆಲಯ ಆಗದಂತೆ ನಾವು ಎಚ್ಚರಿಕೆ ವಹಿಸಬೇಕಾಗುತ್ತದೆ. ಈ ಎಚ್ಚರಿಕೆಯನ್ನು ಸದನದ ಹಿತ ದೃಷ್ಟಿಯಿಂದ ನಾನು ಹೇಳಲೇಬೇಕಾಗಿದೆ.

ಅಲ್ಲದೆ, ಈ ವಿಧೇಯಕದಿಂದ ಏನಾಗುತ್ತದೆ, ಈ ವಿಧೇಯಕ್ಕೆ ಆಧಾರ ಏನು ಎಂಬುದರ ಬಗ್ಗೆ ಕೆಲವು ತಪ್ಪು ತಿಳಿವಳಿಕೆ ಉಂಟಾಗಿದೆಯೆಂದು ನನ್ನ ಭಾವನೆ. ನನ್ನ ಹೇಳಿಕೆಯನ್ನು ನಾನು ಸ್ಪಷ್ಟವಾಗಿ ನಿರೂಪಣೆ ಮಾಡದಿರುವುದಕ್ಕೆ ತುಂಬಾ ವಿಷಾದಿಸುತ್ತೇನೆ. ಏಕೆಂದರೆ, ಸಂಸತ್ ಸದಸ್ಯರು ಅದನ್ನು ಗ್ರಹಿಸಿಲ್ಲ ಅಥವಾ ತಪ್ಪಾಗಿ ತಿಳಿದುಕೊಂಡಿದ್ದಾರೆ. ಎಷ್ಟೊಂದು ಸ್ಪಷ್ಟವಾಗಿ ಹೇಳಬೇಕಾಗಿತ್ತೋ ಆ ಮಟ್ಟಿಗೆ ಹೇಳುವುದಕ್ಕೆ ತಪ್ಪಿದ್ದೇನೆಂದು ಕಾಣುತ್ತದೆ. ಆದ್ದರಿಂದ, ವಸ್ತುಸ್ಥಿತಿಯನ್ನು ಮತ್ತೊಮ್ಮೆ ಕೆಲವೇ ಮಾತುಗಳಲ್ಲಿ ವಿವರಿಸುತ್ತೇನೆ.

ಲಾಭದ ಹುದ್ದೆ ಬಗ್ಗೆ ಎಂದರೆ, ಯಾವುದು ಲಾಭದ ಹುದ್ದೆ, ಯಾವುದು ಲಾಭದ ಹುದ್ದೆ ಅಲ್ಲ ಎಂಬುದನ್ನು ನಾವು ನಿರ್ಧರಿಸಬೇಕಾಗಿದೆ. ಸದನಕ್ಕೆ ನಾನು ಈ ಮೊದಲೇ ತಿಳಿಸಿರುವಂತೆ, ಲಾಭದ ಹುದ್ದೆ ಬಗ್ಗೆ ಇಂಗ್ಲೆಂಡಿನಲ್ಲಿರುವ ಶುದ್ಧ ತಾಂತ್ರಿಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲು ಸರ್ಕಾರ ಪ್ರಸ್ತಾಪಿಸಿಲ್ಲ. ಇಂಗ್ಲೆಂಡ್ ಕಾನೂನಿನಲ್ಲಿ ಇಂತಿಂಥದು ಲಾಭದ ಹುದ್ದೆ ಎಂದು ಹೇಳಲಾಗಿದೆ. ಅದು ಲಾಭದ ಹುದ್ದೆ ಆಗಿರಬಹುದು ಅಥವಾ ಅಲ್ಲದಿರಬಹುದು, ಆ ಲಾಭದ ಹುದ್ದೆಯಲ್ಲಿರುವ ವ್ಯಕ್ತಿಯು ಯಾವುದೇ ಹಣ ಪಡೆಯುತ್ತಿರಬಹುದು, ಇಲ್ಲದಿರಬಹುದು. ಕಾನೂನಿನ ಉದ್ದೇಶಕ್ಕಾಗಿ ಅದು ಲಾಭದ ಹುದ್ದೆ, ಅದರಲ್ಲಿರುವ ವ್ಯಕ್ತಿಯು ಅನರ್ಹನಾಗುತ್ತಾನೆ ಎಂದು ಇಂಗ್ಲೆಂಡ್ ಕಾನೂನಿನಲ್ಲಿ ಹೇಳಲಾಗಿದೆ. ಆ ನಿಯಮವನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಳ್ಳುವುದು, ಯಾವುದು ಲಾಭದ ಹುದ್ದೆಯೆಂಬುದನ್ನು ವಿವರಿಸುವ ತಾಂತ್ರಿಕ ದೃಷ್ಟಿಕೋನವನ್ನು ಅನ್ವಯಿಸಿ ಅನಾವಶ್ಯಕವಾಗಿ ಸಂಸತ್ ಸದಸ್ಯರನ್ನು ಅನರ್ಹಗೊಳಿಸುವುದು ಸರ್ಕಾರದ ಉದ್ದೇಶ ಅಲ್ಲ. ಇದು ಸದನದ ನೆನಪಿನಲ್ಲಿದೆಯೆಂದು ಭಾವಿಸುತ್ತೇನೆ. ಯಾವುದು ಲಾಭದ ಹುದ್ದೆ, ಯಾವುದು ಅಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾದರೆ, ಸದಸ್ಯರಿಗೆ ಮಾಡಿರುವ ಹಣ ಸಂದಾಯವನ್ನು ನಾವು ಎರಡು ಪ್ರತ್ಯೇಕ ವರ್ಗಗಳಲ್ಲಿ ವಿಂಗಡಿಸಬೇಕಾಗುತ್ತದೆ. ಅದರಲ್ಲಿ ಒಂದು ಯಾವುದೆಂದರೆ. ಪ್ರಯಾಣಕ್ಕೆ ಜೀವನಾವಶ್ಯಕತೆಗಳಿಗೆ ಮುಂತಾಗಿ ಯಾವುವವನ್ನು ತಾನೇ ಸ್ವತಃ ಮಾಡಿದ ವಾಸ್ತವಿಕ ಖರ್ಚುಗಳೆಂದು ಹೇಳಬಹುದೋ ಅದಕ್ಕಿಂತಲೂ ಹೆಚ್ಚಿಗೆ ಅಲ್ಲದ ಹಣವನ್ನು ಸದಸ್ಯರಿಗೆ ಸಂದಾಯ ಮಾಡಿರುವುದು ಸೇರುತ್ತದೆ.

**ಪಂಡಿತ್ ಕುಂಜ್ರು (ಉತ್ತರ ಪ್ರದೇಶ):** ಇನ್ನೂ ಏನೇನಿದೆ ?

**ಡಾ. ಅಂಬೇಡ್ಕರ್ :** ಅದನ್ನೇ ಹೇಳಲಿದ್ದೇನೆ. ಒಂದು ದೃಷ್ಟಾಂತವನ್ನು ಹೇಳುತ್ತೇನೆ. ಅದು, ತಮಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದ ಅನೇಕರಿಗೆ ಈ ದೃಷ್ಟಾಂತ ಚೆನ್ನಾಗಿ ಗೊತ್ತಿದೆಯೆಂದು ಭಾವಿಸಿದ್ದೇನೆ. ತನ್ನ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಸಮಿತಿಗೆ ಹಾಜರಾಗುವುದಕ್ಕಾಗಿ ಹಾಗೂ ಈ ಕಾರ್ಯಕಲಾಪದಲ್ಲಿ ಭಾಗಿಯಾಗಲು ಇನ್ನೊಂದು ಕಾರ್ಯವನ್ನು ಕೈಬಿಟ್ಟಿದ್ದಕ್ಕಾಗಿ ತನಗೆ ಆದ ನಷ್ಟವನ್ನು ಸರಿದೂಗಿಸಲು ಇನ್ನೂ ಹೆಚ್ಚು ಖರ್ಚು ಮಾಡಿರುವುದು – ನಾನು ಅದನ್ನು ವಾಸ್ತವಿಕ ಖರ್ಚುಗಳೆಂದು ಕರೆಯುತ್ತೇನೆ – ಎರಡನೇ ಪ್ರವರ್ಗದಲ್ಲಿ ಸೇರುತ್ತದೆ. ಸ್ನೇಹಿತರಾದ ಮಾನ್ಯ ಸದಸ್ಯರು ದುಂಡು ಮೇಜಿನ ಪರಿಷತ್ತಿನ ಸದಸ್ಯರಾಗಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಸದಸ್ಯನಾಗಿದ್ದೆನಾದ್ದರಿಂದ ಅದು ನನಗೆ ಗೊತ್ತು. ಸದಸ್ಯರಿಗೆ ಕೊಡುತ್ತಿದ್ದ ಭತ್ಯಗಳನ್ನು ಎರಡು ಪ್ರವರ್ಗಗಳಲ್ಲಿ ವಿಂಗಡಿಸಲಾಗಿತ್ತು. ಒಂದು ಪ್ರವರ್ಗವನ್ನು ಜೀವನಾಧಾರ ಭತ್ಯವೆಂದು ಕರೆಯಲಾಗಿತ್ತು. ಪ್ರತಿ ದಿನಕ್ಕೆ ೨೨ ಸೆಂ. ಅಥವಾ ೨೧ ಸೆಂ. ಕೊಡುತ್ತಿದ್ದರು. ಇನ್ನೊಂದು ಪ್ರವರ್ಗವನ್ನು 'ಭತ್ಯ' ಎಂದು ಮಾತ್ರವೇ ಕರೆಯುತ್ತಿದ್ದರು. ಈ ದೇಶದಲ್ಲಿ ತನ್ನ ಕೆಲಸಕಾರ್ಯಗಳನ್ನು ನಿಲ್ಲಿಸಿ, ಪರಿಷತ್ತಿನಲ್ಲಿ ಹಾಜರಾಗಲು ಲಂಡನ್ನಿಗೆ ಹೋದುದಕ್ಕಾಗಿ ಆ ವೃತ್ತಿನಿರತನಿಗೆ ಅಥವಾ ವ್ಯವಹಾರಸ್ಥನಿಗೆ ಆದ ನಷ್ಟವನ್ನು ಸರಿದೂಗಿಸಲು ಈ ಭತ್ಯೆಯನ್ನು ಕೊಡಲಾಗುತ್ತಿತು. ಇದು ವಾಸ್ತವಾಂಶ.

**ಶ್ರೀ ಸಿಧ್ವಾ :** ಎಷ್ಟು ?

**ಡಾ. ಅಂಬೇಡ್ಕರ್ :** ಎಷ್ಟೆಂದು, ಈಗ ಜ್ಞಾಪಕಕ್ಕೆ ಬರುತ್ತಿಲ್ಲ. ಬಹುಶಃ ತಿಂಗಳಿಗೆ ೧೦೦ ಪೌಂಡ್ ಅಂತ ಕಾಣುತ್ತದೆ. ಅದೊಂದು ದೀರ್ಘ ಪೂರ್ವೇತಿಹಾಸ. ಅದರ ವಿಶೇಷತೆ ನನಗೆ ಚೆನ್ನಾಗಿ ಜ್ಞಾಪಕವಿದೆ. ಆ ವಿಶೇಷತೆ, ನನ್ನ ಪ್ರಕಾರ ಸುಸ್ಪಷ್ಟ ವಿಶೇಷತೆ. ಆ ವಿಶೇಷತೆಯು, ವಾಸ್ತವಾಂಶಗಳ ಆಧಾರದ ಮೇಲೆ

ಸಮರ್ಥನೀಯವಾದುದು ಆಗಿತ್ತು. ಅದಕ್ಕೆ ಸಂಬಂಧಿಸಿದ ಅನೇಕ ಪೂರ್ವ ನಿದರ್ಶನಗಳೂ ಇದ್ದವು. ಯಾವುದೇ ನಿರ್ದಿಷ್ಟ ಹುದ್ದೆಯು ಲಾಭದ ಹುದ್ದೆಯೇ ಅಲ್ಲವೇ ಎಂಬುದನ್ನು ನಿರ್ಧರಿಸಿ ಸರ್ಕಾರವು ತೀರ್ಮಾನಿಸಿದುದಕ್ಕೆ ಈ ವಿಶೇಷತೆಯೇ ಎಂದರೆ ಸದಸ್ಯರಿಗೆ ಕೊಟ್ಟ ಭತ್ಯೆಯು ಅಥವಾ ಹಣವು, ಸಾಮಾನ್ಯ ಸಂದರ್ಭಗಳಲ್ಲಿ ಅವರು ಮಾಡಬಹುದಿದ್ದ ಸಾದಾ ಖರ್ಚುಗಳಿಗಿಂತಲೂ ಹೆಚ್ಚಿಗೆ ಅಲ್ಲವೆ ಅಥವಾ ಅದರ ಜೊತೆಗೆ ಇನ್ನು ಏನಾದರೂ ಹೆಚ್ಚಿಗೆ ಅವರಿಗೆ ಸಂದಾಯ ಆಗಿತ್ತೇ ಎನ್ನುವುದು ಆಧಾರ ಆಗಿತ್ತು. ವಾಸ್ತವ ಖರ್ಚುಗಳೆಂದು ಹಣಕಾಸು ಮಂತ್ರಾಲಯವು ವಾಸ್ತವಿಕವಾಗಿ ಯಾವುದನ್ನು ನಿರ್ಧರಿಸಿತ್ತೋ ಅದನ್ನೇ ನಾವು ಆಧಾರವಾಗಿ ತೆಗೆದುಕೊಂಡಿದ್ದೇವೆ. ಸರ್ಕಾರವು ಯಾವುದನ್ನು ಒಪ್ಪಿಕೊಂಡಿದೆಯೋ ಅದು ಹಣಕಾಸು ಮಂತ್ರಾಲಯವು ನಿರ್ಧರಿಸಿದುದಷ್ಟೆ ಅಲ್ಲ, ಈ ತೀರ್ಮಾನಕ್ಕೆ ಬರುವುದಕ್ಕೂ ಮುಂಚೆ ಸರ್ಕಾರವು ಅದನ್ನು ಒಪ್ಪಿಕೊಂಡಿತ್ತು ಎಂಬುದನ್ನು ನಾನು ಹೇಳಬಯಸುತ್ತೇನೆ.

ನಾನು ಹೇಳಿದಂತೆ, ಈ ವಿಷಯವನ್ನು ಸ್ಪೀಕರ್‌ರವರ ಮೂಲಕ ಹಾಗೂ ರಾಷ್ಟ್ರಪತಿಯವರ ಮೂಲಕ ಸರ್ಕಾರದ ಮುಂದೆ ತರಲಾಗಿತ್ತು. ಪರಿಗಣನೆಗಾಗಿ ಸರ್ಕಾರಕ್ಕೆ ಒಂದು ಅಥವಾ ಎರಡು ಪ್ರಕರಣಗಳನ್ನು ಉಲ್ಲೇಖಿಸಲಾಗಿತ್ತು. ಆದರೆ, ಸ್ಪೀಕರ್‌ರವರ ಗಮನಕ್ಕೆ ತರದಂತಹ ಈ ಬಗೆಯ ಇನ್ನೂ ಹೆಚ್ಚಿನ ಪ್ರಕರಣಗಳಿವೆಯೇ ಎಂಬುದನ್ನು ಕಂಡುಕೊಳ್ಳುವುದು ಅಪೇಕ್ಷಣೀಯವೆಂದು ಸರ್ಕಾರ ಭಾವಿಸಿತು. ಆದ್ದರಿಂದ, ನಾವು ವಿವಿಧ ಮಂತ್ರಾಲಯಗಳಿಗೆ ಸುತ್ತೋಲೆ ಮೂಲಕ ಈ ವಿಷಯವನ್ನು ಕಳುಹಿಸಿದ್ದೆವು. ಸಂವಿಧಾನವು ಪ್ರಾರಂಭವಾದಾಗಿನಿಂದ ಇಂಥ ಪ್ರಕರಣಗಳು ಯಾವುವಾದರೂ ಉಂಟಾಗಿದ್ದರೆ, ಆ ಎಲ್ಲ ಪ್ರಕರಣಗಳನ್ನು ಈ ವ್ಯಾಪ್ತಿಗೆ ತರುವ ದೃಷ್ಟಿಯಿಂದ ಒಂದು ವ್ಯಾಪಕ ಮಸೂದೆಯನ್ನು ತರುವ ಸಲುವಾಗಿ, ಅಂಥ ಯಾವುವೇ ಪ್ರಕರಣಗಳು ಇವೆಯೇ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಹಲವಾರು ಕಚೇರಿಗಳಿಗೆ ನಾವು ಈ ವಿಷಯವನ್ನು ಸುತ್ತೋಲೆ ಮೂಲಕ ಕಳುಹಿಸಿದ್ದೆವು. ಪ್ರಕರಣಗಳು ನಮಗೆ ತಿಳಿದು ಬಂದ ಮೇಲೆ ನಾನು ಈಗ ತಾನೆ ಹೇಳಿದ ಪರೀಕ್ಷೆಗೆ – ಸಂದಾಯ ಮಾಡಿದ ಪರಿಹಾರದ ಮೊತ್ತ ಎಷ್ಟು, ಅವು ಸಾದಾ ಖರ್ಚುಗಳೇ ಅಥವಾ ಅದಕ್ಕಿಂತಲೂ ಹೆಚ್ಚನದೇ – ಒಳಪಡಿಸಿದೆವು. ಅದಕ್ಕಿಂತಲೂ ಹೆಚ್ಚಿಗೆ ಸಂದಾಯ ಮಾಡಿದ್ದರೆ, ಆಗ ಅದು ಲಾಭದ ಹುದ್ದೆಯೆಂದು ಪರಿಭಾವಿಸಬೇಕೆಂದು ನಾವು ತೀರ್ಮಾನಿಸಿದೆವು. ಅದು, ಹಣಕಾಸು ಮಂತ್ರಾಲಯವು ನಿರ್ಧರಿಸಿದ್ದಷ್ಟೇ ಆಗಿದ್ದರೆ, ಸಂಸತ್ ಸದಸ್ಯರು ಆ ಹುದ್ದೆಯಲ್ಲಿದ್ದರೆ, ಇರಲಿಲ್ಲವೇ ಎಂಬ ಪ್ರಶ್ನೆ ಏನೇ ಇದ್ದರೂ ಅದು, ಲಾಭದ ಹುದ್ದೆ ಅಲ್ಲವೆಂದು ಪರಿಗಣಿಸಿದೆವು. ನಮ್ಮ ತೀರ್ಮಾನಕ್ಕೆ ನಿಜವಾದ ಆಧಾರವನ್ನು ಕಂಡುಕೊಳ್ಳುವಾಗ – ಪುನಃ ಒತ್ತಿ ಹೇಳುತ್ತಿದ್ದೇನೆ – ನಾವು ತುಂಬಾ ಎಚ್ಚರಿಕೆಯಿಂದಿದ್ದೆವು. ಏಕೆಂದರೆ, ಪ್ರತಿಯೊಂದು ಪ್ರಕರಣವನ್ನು ನಾವು ಅದರದೇ ಆಧಾರದ ಮೇಲೆ ಪ್ರಸ್ತುತ ಉದ್ದೇಶಕ್ಕಾಗಿ ಪರಿಗಣಿಸಿದ್ದರೆ, ಒಂದು ನಿರ್ದಿಷ್ಟ ಪ್ರಕರಣಕ್ಕೆ ಒಂದು ಮಾನದಂಡವನ್ನು, ಇನ್ನೊಂದು ಪ್ರಕರಣಕ್ಕೆ ಇನ್ನೊಂದು ಮಾನದಂಡವನ್ನು ಅನ್ವಯಿಸಿದ್ದಾರೆಂಬ ಮಾತುಗಳು ಬರುತ್ತಿದ್ದವು. ಸರ್ಕಾರದ ಮೇಲೆ ಆ ರೀತಿಯ ಆಪಾದನೆಗಳು ಬರುವುದು ನಮಗೆ ಬೇಕಾಗಿರಲಿಲ್ಲ. ಆದ್ದರಿಂದ, ಎಲ್ಲ ಪ್ರಕರಣಗಳಿಗೂ ಅನ್ವಯವಾಗುವಂತಹ ಸಾಮಾನ್ಯ ಮೂಲ ತತ್ವವನ್ನು ಕಂಡುಕೊಳ್ಳಲು ನಾವು ತೀರಾ ಉತ್ಸುಕರಾಗಿದ್ದೆವು. ಕೆಲವು ಪ್ರಕರಣಗಳು ಈ ತತ್ವವನ್ನು ಮೀರಿವೆಯೆಂಬ ಎಂದರೆ ವಾಸ್ತವವಾಗಿ ಮಾಡಿದ ಖರ್ಚುಗಳಿಗೆ ಸಾದಾ ಪರಿಹಾರವೆಂದು ಕರೆಯಬಹುದಾದುದಕ್ಕಿಂತಲೂ ಹೆಚ್ಚಿನ ಭತ್ಯೆಗಳ ಸಂದಾಯ ಆಗಿದೆಯೆಂಬ ಈ ತೀರ್ಮಾನಕ್ಕೆ ನಾವು ಆ ಆಧಾರದ ಮೇಲೆ ಬಂದಿದ್ದೇವೆ.

**ಪಂಡಿತ್ ಕುಂಜ್ರು** : ಬೇರೆ ಸಮಿತಿಗಳು ಇವೆಯಲ್ಲ.

**ಡಾ. ಅಂಬೇಡ್ಕರ್** : ಅವುಗಳ ಬಗ್ಗೆಯೂ ಹೇಳುತ್ತೇನೆ. ಈಗ, ಪುನರ್ವಸತಿ ಹಣಕಾಸು ನಿಗಮದ ಬಗ್ಗೆ ಎತ್ತಿರುವ ಪ್ರಶ್ನೆ. ಅನುಚ್ಛೇದವು "ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿರುವ ಲಾಭದ" ಹುದ್ದೆಯ ಬಗ್ಗೆ ಹೇಳುತ್ತದೆಂಬುದು ಸುಸ್ಪಷ್ಟ. ನಿಗಮದ ಅಧೀನದಲ್ಲಿರುವ ಲಾಭದ ಹುದ್ದೆಯು ಲಾಭದ ಹುದ್ದೆಯೆಂದೆನಿಸಬಹುದು. ಆದರೆ, ಅದು, ಸರ್ಕಾರದ ಅಧೀನದಲ್ಲಿರುವ ಲಾಭದ ಹುದ್ದೆ ಅಲ್ಲ. ಆದ್ದರಿಂದ, ವ್ಯಕ್ತಿಯು ಅನರ್ಹತೆಗೆ ಒಳಪಡುವುದಿಲ್ಲ.

**ಶ್ರೀ ಸಿಧ್ವಾ** : ಅದು, ಭಾರತ ಸರ್ಕಾರದ ಅಧೀನದಲ್ಲಿರುವ ಹುದ್ದೆ.

**ಡಾ. ಅಂಬೇಡ್ಕರ್** : ನಾನು ಏನನ್ನು ಹೇಳಿದ್ದೇನೆಯೋ ಅದು ನ್ಯಾಯಿಕ ವ್ಯಾಖ್ಯಾನ. ಸಂವಿಧಾನದಲ್ಲಿ ತಾನು ಬಹುದೊಡ್ಡ ನ್ಯಾಯವಾದಿಯೆಂದು ಹೇಳಿಕೊಳ್ಳಲಾರರೆಂದೇ ನಾನು ಭಾವಿಸಿದ ಮಾನ್ಯ ಸ್ನೇಹಿತ ಶ್ರೀಯುತ ಸಿಧ್ವಾರವರು ಈ ವಸ್ತುಸ್ಥಿತಿಯನ್ನು ವಿರೋಧಿಸಲಾರರೆಂದೇ ನನ್ನ ನಂಬಿಕೆ.

**ಶ್ರೀ ಸಿಧ್ವಾ** : ಸುಪ್ರೀಂಕೋರ್ಟಿನ ತೀರ್ಪು ಇದೆಯಲ್ಲ.

**ಡಾ. ಅಂಬೇಡ್ಕರ್** : ಸುಪ್ರೀಂಕೋರ್ಟಿಗೂ ಇದಕ್ಕೂ ಏನೇನು ಸಂಬಂಧ ಇಲ್ಲ. ಈ ವಿಷಯವನ್ನು ಸುಪ್ರೀಂಕೋರ್ಟು ಕೈಗೆತ್ತಿಕೊಳ್ಳಬಹುದೆಂಬ ಭಾವನೆ ಅನೇಕ ಸದಸ್ಯರಲ್ಲಿ ಇರಬಹುದೆಂದು ಹೇಳಹೊರಟಿದ್ದೆ. ಈ ವಿಷಯವನ್ನು ಸುಪ್ರಿಂಕೋರ್ಟಿಗೆ ತೆಗೆದುಕೊಂಡು ಹೋಗುವಂತಿಲ್ಲ. ಸದನವು ಅನುಮತಿಸುವುದಾದರೆ, ಸದನಕ್ಕಿರುವ ಘನತೆ ಗೌರವವನ್ನು ಗಮನಿಸಿಯೇ ನಾವು ಈ ಮಸೂದೆಯನ್ನು ಸದನದ ಮುಂದೆ ಮಂಡಿಸಿದ್ದೇವೆಂದು ಹೇಳಬಯಸುತ್ತೇನೆ. ಯಾವುದೇ ನಿರ್ದಿಷ್ಟ ಹುದ್ದೆಯು ಲಾಭದ ಹುದ್ದೆಯೇ, ಅಲ್ಲವೇ ಎಂದು ಹೇಳಲು ರಾಷ್ಟ್ರಪತಿಯವರಿಗೆ ಸಂಪೂರ್ಣ ಅಧಿಕಾರ ಇದೆ. ಆದರೆ, ಅದನ್ನು ರಾಷ್ಟ್ರಪತಿಯವರ ತೀರ್ಮಾನಕ್ಕೇ ಬಿಡುವುದು ಸರಿಯಲ್ಲವೆಂದು ನಾವು ಭಾವಿಸಿದೆವು. ಹೀಗಾಗಿ, ಈ ವಿಷಯವನ್ನು ಸಂಸತ್ತಿನ ಗಮನಕ್ಕೆ ತರುವುದು ಒಳ್ಳೆಯದೆಂದೇ ಭಾವಿಸಿದೆವು. ಸಂಸತ್ತಿನ ಅನುಮೋದನೆಯನ್ನು ಪಡೆದುಕೊಂಡೆವು. ಈ ವಿಧೇಯಕವನ್ನು ತಂದಿರುವುದಕ್ಕೆ ಅದೇ ಕಾರಣ.

ಈಗ, ಪುನರ್ವಸತಿ ಹಣಕಾಸು ನಿಗಮದ ಬಗ್ಗೆ ಹೇಳುವುದಾದರೆ ಸರ್ಕಾರದ, ಅದು ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಇರಬಹುದು, ಅದರ ಅಧೀನದಲ್ಲಿರುವ ಲಾಭದ ಹುದ್ದೆಗೆ ಮಾತ್ರವೇ ಅನ್ವಯವಾಗುತ್ತದೆಂಬ ಯಾವ ಬಗೆಯ ಅನುಮಾನವೂ ಇರಲಾರದು. ಅದು, ಉದಾಹರಣೆಗೆ ಹೇಳುವುದಾದರೆ, ಸಿಂಧ್ರಿ ನಿಗಮದ ಅಥವಾ ದಾಮೋದರ ಕಣಿವೆ ನಿಗಮದ ಅಥವಾ ಸರ್ಕಾರವು ಸ್ಥಾಪಿಸಿರುವ ಅನೇಕ ಇತರ ನಿಗಮಗಳ ಅಧೀನದಲ್ಲಿರುವ ಲಾಭದ ಹುದ್ದೆಗೆ ಅನ್ವಯವಾಗುವುದಿಲ್ಲ.

**ಶ್ರೀ ಸೊಂಧಿ** : ಸಿಂಧ್ರಿ, ನಿಗಮ ಅಲ್ಲ.

**ಡಾ. ಅಂಬೇಡ್ಕರ್** : ದೃಷ್ಟಾಂತಗಳನ್ನು ಮಾತ್ರವೇ ಹೇಳುತ್ತಿದ್ದೇನೆ. ನಿಗಮದ ಅಧೀನದಲ್ಲಿರುವ ಲಾಭದ ಹುದ್ದೆಗೆ ಸಂಬಂಧಿಸಿದಂತೆ, ಸಂವಿಧಾನದ ೧೦೨ನೆಯ ಅನುಚ್ಛೇದಲ್ಲಿ ಹೇಳಿರುವ ಅಥವಾ ವಿಧಿಸಿರುವ ಯಾವುದೂ ವ್ಯಕ್ತಿಗೆ ಬಾಧಕ ಆಗುವುದಿಲ್ಲ. ಪುನರ್ವಸತಿ ನಿಗಮದ ಅಥವಾ ಉಲ್ಲೇಖಿಸಿರುವ ಹಲವಾರು ಇತರ ನಿಗಮಗಳ ಅಧೀನದಲ್ಲಿರುವ ಲಾಭದ ಹುದ್ದೆಗಳಲ್ಲಿರುವ ಸಂಸತ್ ಸದಸ್ಯರಿಗೆ ಸಂಬಂಧಿಸಿದಂತೆ ಈ ವಿಧೇಯಕದಲ್ಲಿರುವ ಯಾವುದೇ ಉಲ್ಲೇಖವನ್ನು ಅಥವಾ ನಿಬಂಧನೆಯನ್ನು ಹೇಳುವುದು ಅನವಶ್ಯಕ.

ಹಣವನ್ನು ವಾಪಸು ಮಾಡಬೇಕೆಂದು ಮತ್ತೆ ಅದನ್ನೇ ತೆಗೆದುಕೊಳ್ಳಬೇಕೆಂದು ಸದಸ್ಯರನ್ನು ಕೇಳಿ,

ಭಾರತ ಸರ್ಕಾರವು, ನಗೆಪಾಟಲಿನದು ಅಲ್ಲದಿದ್ದರೂ, ತಪ್ಪು ರೀತಿಯಲ್ಲಿ ವರ್ತಿಸುತ್ತಿದೆಯೆಂದು ಮಾನ್ಯ ಸ್ನೇಹಿತ ಪಂಡಿತ್ ಠಾಕೂರ್ ದಾಸ್ ಭಾರ್ಗವ ಹೇಳಿದರು. ಇದಕ್ಕೆ ಜವಾಬ್ದಾರಿಯಾದ ಅಧಿಕಾರಿ ಯಾರೇ ಇರಬಹುದು, ಆತನಿಗೆ, ಹುದ್ದೆಯು ಭಾರತ ಸರ್ಕಾರದ ಅಧೀನದಲ್ಲಿ ಅಥವಾ ನಿಗಮದ ಅಧೀನದಲ್ಲಿ ಇದ್ದರೂ ಆ ಹುದ್ದೆಯು ಲಾಭದ ಹುದ್ದೆಯೆಂಬ ಭಾವನೆ ಇತ್ತೆಂದು ತೋರುತ್ತದೆ. ಅಂಥ ತಪ್ಪು ಗಮನಕ್ಕೆ ಬಂದಿದೆ, ಸರಿಪಡಿಸಿಕೊಳ್ಳಲಾಗಿದೆ. ಇನ್ನು ಮುಂದೆ ಅಂಥ ತಪ್ಪು ಮತ್ತೆ ಆಗುವುದಿಲ್ಲವೆಂಬ ನಂಬಿಕೆ ನನಗಿದೆ. ಪುನರ್ವಸತಿ ಹಣಕಾಸು ಅಥವಾ ಇತರೆ ನಿಗಮಗಳ ಬಗ್ಗೆ ಈ ವಿಧೇಯಕದಲ್ಲಿ ಏನನ್ನೂ ಹೇಳದಿರುವುದಕ್ಕೆ ಅದೇ ಕಾರಣ. ಇನ್ನು, ಮಾನ್ಯ ಸ್ನೇಹಿತ ಸಿಧ್ವಾರವರು ತಮ್ಮ ತಿದ್ದುಪಡಿಯಲ್ಲಿ ಕೊಟ್ಟಿರುವ ಉದ್ದನೆ ಪಟ್ಟಿ ಬಗ್ಗೆ ಹೇಳುವುದಾದರೆ, ಅದಕ್ಕೂ ಇದೇ ಅನ್ವಯವಾಗುತ್ತದೆಂದು ಹೇಳಬಯಸುತ್ತೇನೆ. ಈ ಸದಸ್ಯರುಗಳಿಗೆ ಸಂದಾಯ ಮಾಡಿರುವ ಭತ್ಯೆಗಳು, ಇದರಲ್ಲಿ ಸೇರಿಸುವುದಕ್ಕೆ ಆಸ್ಪದಕೊಡುವಂಥ ವಾಸ್ತವಿಕ ಖರ್ಚುಗಳಿಗಿಂತಲೂ ಹೆಚ್ಚಿನ ಲಾಭ ಅಥವಾ ಇನ್ನೇನೊ ಅಲ್ಲ. ನಾವು ತಾಳಿದ ಈ ದೃಷ್ಟಿಕೋನದಿಂದಾಗಿ ಅವು ಲಾಭದ ಹುದ್ದೆಗಳಲ್ಲ. ಶ್ರೀಯುತ ಸಿಧ್ವಾರವರು, ತಾನು ಕೊಟ್ಟಿರುವ ತಿದ್ದುಪಡಿಯಲ್ಲಿ ಹೇಳಿರುವ ವ್ಯಕ್ತಿಗಳನ್ನು ಅಥವಾ ಅಧಿಕಾರಿಗಳನ್ನು ಆ ಪ್ರವರ್ಗದಲ್ಲಿ ಸೇರಿಸಿ ಪಟ್ಟಿಯನ್ನು ಹಿಗ್ಗಿಸುವುದು ಅಪೇಕ್ಷಣೀಯವೆಂದು ನಾವು ಭಾವಿಸಿಲ್ಲ.

**ಪಂಡಿತ್ ಕುಂಜ್ರು :** ಒಂದು ಮಾತು ಹೇಳಲೆ, ಈ ಸದಸ್ಯರುಗಳು ಪಡೆದಿರುವ ಭತ್ಯೆಗಳು ಹಣಕಾಸು ಮಂತ್ರಾಲಯವು ಈಗ ನಿಗದಿ ಮಾಡಿರುವುದೆಂದು ನಾನು ತಿಳಿದುಕೊಂಡಿರುವ ಮಿತಿಯನ್ನು ಮೀರಿದ್ದರೆ?

**ಡಾ. ಅಂಬೇಡ್ಕರ್ :** ಹಾಗಾಗಿರಬಹುದು. ಆದರೆ, ಕೆಲವೊಂದು ಸಮಿತಿಗಳ ಸದಸ್ಯರು ಅನರ್ಹತೆಗೆ ಒಳಪಡುತ್ತಾರೆ, ಆ ಅನರ್ಹತೆಯನ್ನು ತೊಡೆದು ಹಾಕಬೇಕಾಗುತ್ತದೆಂದು ವಿಧೇಯಕವು ಹೇಳುತ್ತಿರುವಾಗ ಸಮಿತಿಯ ಯಾರೇ ಇತರ ಸದಸ್ಯನನ್ನು ಅನರ್ಹಗೊಳಿಸಿಲ್ಲ. ಆದ್ದರಿಂದ, ಅದನ್ನು ಈ ವಿಧೇಯಕದಲ್ಲಿ ಎಲ್ಲೂ ಹೇಳಿಲ್ಲ ಎನ್ನುವುದೇ ಆ ಕಲಮಿನ ಯಥಾರ್ಥ ವ್ಯಾಖ್ಯಾನ ಆಗುತ್ತದೆ.

ಸ್ನೇಹಿತ ಶ್ರೀಯುತ ಸಿಧ್ವಾರವರು ತಮ್ಮ ಎರಡನೆಯ ತಿದ್ದುಪಡಿಯಲ್ಲಿ ಹೇಳಿರುವ ಸಾಮಾನ್ಯ ಪ್ರತಿಪಾದನೆ ಬಗ್ಗೆ ಹೇಳುವುದಾದರೆ..............................................

**ಪಂಡಿತ್ ಕುಂಜ್ರು :** ಈ ವಿಧೇಯಕದಲ್ಲಿ ಹೇಳಿರುವ ಸಮಿತಿಗಳ ಸದಸ್ಯರನ್ನು ಅನರ್ಹತೆಗೆ ಗುರಿ ಮಾಡಿರುವ ಆ ವಿಶೇಷ ಕಾರಣಗಳು ಯಾವುವು ಎಂದು ಮಾನ್ಯ ಸ್ನೇಹಿತರು ದಯಮಾಡಿ ಹೇಳಬೇಕು?

**ಡಾ. ಅಂಬೇಡ್ಕರ್ :** ಏಕೆಂದರೆ, ಅವರಿಗೆ ಸಂದಾಯ ಮಾಡಿರುವುದರಲ್ಲಿ ಲಾಭದ ಅಂಶ ಇದೆ.

**ಪಂಡಿತ್ ಕುಂಜ್ರು :** ಎಂದರೆ, ಅವರು ಪಡೆದಿರುವ ಭತ್ಯೆ ೨೦ ರೂಪಾಯಿಗಳನ್ನು ಮೀರಿದೆ?

**ಡಾ. ಅಂಬೇಡ್ಕರ್ :** ಅವರ ವಿಷಯದಲ್ಲಿ ಕೆಲವೊಂದು ಸಂದೇಹ ಇದೆಯೆಂದು ನಮಗೆ ಅನಿಸಿತು. ಈ ವಿಧೇಯಕವು ಆ ಸಂದೇಹವನ್ನು ತೊಡೆದು ಹಾಕಲು ಉದ್ದೇಶಿಸಿದೆ.

ಇನ್ನು, ಮಾನ್ಯ ಸ್ನೇಹಿತ ಶ್ರೀಯುತ ಸಿಧ್ವಾರವರು, ತಿದ್ದುಪಡಿ ೨ರಲ್ಲಿ, ನಮ್ಮಲ್ಲಿ ಸಾಮಾನ್ಯ ನಿಯಮ ಇರಬೇಕು, ಆ ಸಾಮಾನ್ಯ ನಿಯಮವೇ ಅನ್ವಯವಾಗಬೇಕು, ಹಾಗಾದರೆ, ಈ ಬಗೆಯ ವಿಧೇಯಕಗಳ ಅಗತ್ಯ ಇನ್ನು ಮುಂದೆ ಇರುವುದಿಲ್ಲವೆಂದು ನಿರೂಪಿಸಿರುವ ಸಾಮಾನ್ಯ ಪ್ರತಿಪಾದನೆ ಬಗ್ಗೆ ಹೇಳುವುದಾದರೆ. ಅದು ಒಪ್ಪಿಕೊಳ್ಳಲಾಗದಂಥ ಅತಿ ದುಬಾರಿ ಬೇಡಿಕೆಯೆಂದು ಅನಿಸುತ್ತದೆ. ಸರಳ ಕಾರಣ ಇಷ್ಟೇ: ಸದ್ಯಕ್ಕೆ ಮತ್ತು ಈ ವಿಧೇಯಕದ ಉದ್ದೇಶಕ್ಕಾಗಿ, ಸಂಭಾವನೆ ಕುರಿತಂತೆ ಕೆಲವೊಂದು ಆಧಾರವನ್ನು ಒಪ್ಪಿಕೊಂಡಿದ್ದರೂ ಮತ್ತು ಆ ಆಧಾರದ ಮೇಲೆಯೇ ಯಾವ ನಿರ್ದಿಷ್ಟ ಸಮಿತಿಗೆ ವಿನಾಯಿತಿಯ ಅಗತ್ಯವಿದೆ, ಯಾವುದಕ್ಕೆ

ವಿನಾಯಿತಿ ಕೊಡಕೂಡದೆಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ – ಸಂಭಾವನೆ ಕುರಿತ ಆ ಆಧಾರವನ್ನು ಬದಲಾಯಿಸಲು ಸಂಸತ್ತಿಗೆ ಅಥವಾ ಸರ್ಕಾರಕ್ಕೆ ಸಂಪೂರ್ಣವಾಗಿ ಸಾಧ್ಯವಿದೆ. ಸಂಭಾವನೆ ಬಗೆಗಿನ ಆಧಾರವನ್ನು ಸರ್ಕಾರವು ಮಾರ್ಪಡಿಸಿದರೆ, ಸಾಮಾನ್ಯ ಪ್ರತಿಪಾದನೆಯು ಅನೇಕ ಸಮಸ್ಯೆಗಳನ್ನು ಉಂಟು ಮಾಡುತ್ತದೆ. ಏಕೆಂದರೆ, ಸಾಮಾನ್ಯ ಪ್ರತಿಪಾದನೆಯು ಆಯಾ ಪ್ರಕರಣದ ವಾಸ್ತವಾಂಶಗಳಿಗೆ ತಕ್ಕಂತೆ ಬದಲಾವಣೆ ಆಗಬೇಕಾಗುತ್ತದೆ. ನಾನು ಯಾವಾಗಲೂ ಹೇಳುವಂತೆ, ಈ ಅಧಿಕಾರವನ್ನು ಸಂಸತ್ತು ತನ್ನಲ್ಲೇ ಇಟ್ಟುಕೊಳ್ಳುವುದು ವಿಹಿತ. ಇಂತಿಂಥವರು ಅನರ್ಹರಾಗಿದ್ದಾರೆಂದು ಸರ್ಕಾರವು ಘೋಷಿಸುವಂತಿಲ್ಲವಲ್ಲ. ನಿರ್ದಿಷ್ಟ ಸದಸ್ಯರೊಬ್ಬರನ್ನು ಅನರ್ಹಗೊಳಿಸಲಾಗಿದೆಯೆಂದು ಸುಪ್ರೀಂಕೋರ್ಟಿಗೆ ಹೋಗಿ ಹೇಳುವ ಹಕ್ಕು ಯಾರಿಗೂ ಇಲ್ಲ. ಇಡೀ ವಿಷಯ, ಅಂತಿಮವಾಗಿ ಸಂಸತ್ತಿನ ಅಧಿಕಾರ ವ್ಯಾಪ್ತಿಗೇ ಒಳಪಟ್ಟಿದೆ, ವಿಷಯವನ್ನು ಸಂಸತ್ತಿನ ಅಧಿಕಾರ ವ್ಯಾಪ್ತಿಗೇ ಬಿಡಬಯಸಿದ್ದೇವೆ. ಆದ್ದರಿಂದ, ಯಾವುದಾದರೂ ಪ್ರಕರಣ ಉದ್ಭವವಾದಾಗ ಆ ಪ್ರಕರಣವು ಅನರ್ಹತೆ ವ್ಯಾಪ್ತಿಗೆ ಒಳಪಡುತ್ತದೆಯೇ ಅಥವಾ ಅಂಥ ಪ್ರಕರಣವು ಅನರ್ಹತೆ ವ್ಯಾಪ್ತಿಗೆ ಬಂದರೆ ರಕ್ಷಣೆ ಕೊಡಬೇಕಾಗುತ್ತದೆಯೇ ಎಂಬುದನ್ನು ಸಂಸತ್ತು ನಿರ್ಧರಿಸಬಹುದಾಗಿದೆ. ವಿಷಯವನ್ನು ಕಗ್ಗಂಟು ಮಾಡಿ, ಆ ಗಂಟನ್ನು ಬಿಡಿಸಿಕೊಂಡು ಹೊರಬರುವ ಸದವಕಾಶದ ಕ್ಷಣ ಯಾರಿಗೂ ದಕ್ಕದಂತೆ ಮಾಡುವುದರ ಬದಲು, ವಿಷಯವನ್ನು ಯಾವುದರ ಅಧಿಕಾರ ವ್ಯಾಪ್ತಿಗೇ ಬಿಡಬೇಕೆಂದು ಹೇಳಲಿಚ್ಛಿಸಿದ್ದೇನೋ ಅದರ ಅಧಿಕಾರ ವ್ಯಾಪ್ತಿಗೇ ಬಿಡುವುದು ತುಂಬಾ ಒಳ್ಳೆಯದೆಂದು ನನ್ನ ಭಾವನೆ.

**ಶ್ರೀ ಕಾಮತ್ :** ಅದು, ಅಂತಿಮವಾಗಿ ಸದನದ ವಿಶೇಷ ಹಕ್ಕು ಅಲ್ಲವೇ ?

**ಡಾ. ಅಂಬೇಡ್ಕರ್ :** ಅದು, ವಿಶೇಷ ಹಕ್ಕೇ ಅಥವಾ ಅಲ್ಲವೆ ಎನ್ನುವ ವಿಷಯಕ್ಕೆ ಬರಲಾರೆ. ಆದರೆ, ಅದು, ಖಂಡಿತವಾಗಿಯೂ ಸಂಸತ್ತು ಪಾಲಿಸಲೇಬೇಕಾದ ಸಂವಿಧಾನಾತ್ಮಕ ನಿಬಂಧನೆ ಆಗಿದೆ. ಈ ವಿಧೇಯಕವು ಸಿದ್ಧವಾಗಿರುವಾಗ ಹಾಗೂ ಪ್ರತಿಯೊಂದು ನಿರ್ದಿಷ್ಟ ಪ್ರಕರಣವನ್ನು ತೀರ್ಮಾನಿಸಲು ಇಡೀ ವಿಷಯವನ್ನು ವಾಸ್ತವವಾಗಿ ಸದನಕ್ಕೇ ಬಿಡಲು ಸರ್ಕಾರ ಬಯಸಿರುವಾಗ, ಸಂಸತ್ತು, ೧೦೨ನೇ ಅನುಚ್ಛೇದದ ನಿಬಂಧನೆಗಳನ್ನು ಅನುಸರಿಸದಿದ್ದರೆ, ಸಂಸತ್ತು ಸಂವಿಧಾನಕ್ಕೆ ತುಂಬಾ ಅಪಚಾರ ಮಾಡಿದಂತಾಗುತ್ತದೆ. ಶ್ರೀಯುತ ಸಿಧ್ವಾರವರು ಕೆಲವೊಂದು ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಇನ್ನು ಮುಂದೆ ಸರ್ಕಾರವು ಯಾವ ಯಾವ ಹುದ್ದೆಗಳನ್ನು ಅಥವಾ ಸಮಿತಿಗಳನ್ನು ಸೃಜಿಸುತ್ತದೆಂದು ಯಾರಾದರೂ ಈಗಾಲೇ ಹೇಳಬಲ್ಲರೇನು? ಯಾರಾದರೂ, "ಸಮಿತಿಗಳು ಯಾವುಯಾವುವೆಂದು ಹೇಳಿ" ಎಂದು ಕೇಳಿದಾಗ, ಈಗಲೇ ಅಂಥದೊಂದು ಸನ್ನಿವೇಶವನ್ನು ಊಹಿಸಲಾರೆ. ಈ ಎಲ್ಲವನ್ನೂ ವಿಧೇಯಕದಲ್ಲಿ ನೀವು ಸೇರಿಸಬಯಸಿದರೆ, ಅವುಗಳು ನಿಮಗೆ ತಿಳಿದಿರಬೇಕಾಗುತ್ತದೆ. ಅವುಗಳ ಅರ್ಥವಿವರಣೆ ಮಾಡಬೇಕಾಗುತ್ತದೆ. ಯಾವ ಯಾವ ಸಮಿತಿಗಳನ್ನು ನೇಮಕ ಮಡಲಾಗುತ್ತದೆ ಎಂಬುದನ್ನು ಯಾರೂ ಮುಂಗಾಣಲಾರರು.

ಆದ್ದರಿಂದ, ಸಂಸತ್ತು ಒಂದು ಸಮಿತಿಯನ್ನು ನೇಮಕ ಮಾಡಿದಾಗ ಅಥವಾ ಸಂಸತ್ತಿನ ಒಬ್ಬರು ನಿರ್ದಿಷ್ಟ ಸದಸ್ಯರನ್ನು ಒಂದು ನಿರ್ದಿಷ್ಟ ಸಮಿತಿಗೆ ನೇಮಕ ಮಾಡಲು ಪ್ರಸ್ತಾಪಿಸಿದಾಗ, ಆ ಸದಸ್ಯರು, ತನ್ನ ಸ್ಥಾನಮಾನ ಏನು, ತನ್ನನ್ನು ಅನರ್ಹತೆಗೆ ಗುರಿಪಡಿಸಲಾಗುತ್ತದೆಯೇ ಅಥವಾ ಇಲ್ಲವೇ ಎಂದು ಪ್ರಧಾನ ಮಂತ್ರಿಯವರಿಗೆ ಅಥವಾ ಯಾವ ಸಚಿವರು ಈ ಸಮಿತಿಯನ್ನು ನೇಮಕ ಮಾಡಿದ್ದಾರೋ ಅವರಿಗೆ ಕೇಳಬಹುದಾಗಿದೆ. ಆ ಬಗ್ಗೆ ಸಚಿವರು ಆಶ್ವಾಸನೆ ಕೊಡುವಂತೆ ಅಥವಾ "ಈ ನಿರ್ದಿಷ್ಟ ಪ್ರಕರಣದಲ್ಲಿ

ಸಮಿತಿಗೆ ನೇಮಕಗೊಂಡ ಯಾರೇ ಸದಸ್ಯರನ್ನು, ಅನರ್ಹರಾಗುತ್ತಾರೆಂದು ಭಾವಿಸತಕ್ಕದ್ದಲ್ಲ" ವೆಂಬ ನಿರ್ಣಯವನ್ನು ಸಂಸತ್ತು ಅದೇ ಕಾಲದಲ್ಲಿ ಅಂಗೀಕರಿಸುವಂತೆ ಆ ಸದಸ್ಯರು ಒತ್ತಾಯ ಮಾಡಬಹುದಾಗಿದೆ.

**ಶ್ರೀ ಸೋಂಧಿ :** ಅದು, ಸರ್ಕಾರಿ ಸಮಿತಿಯಾಗಿದ್ದರೆ ?

**ಡಾ. ಅಂಬೇಡ್ಕರ್** : ಆಗಲೂ ಕೂಡ, ಸಂಸತ್ ಸದಸ್ಯರು ತಮ್ಮನ್ನು ರಕ್ಷಿಸಿಕೊಳ್ಳಬಹುದಾಗಿದೆ, ಹೇಗೆಂದರೆ, ಇತರೆ ವಿಷಯಗಳೇನೆ ಇರಲಿ ತನ್ನನ್ನು, ಅನರ್ಹನಾಗಿದ್ದಾನೆಂದು ಭಾವಿಸತಕ್ಕದ್ದಲ್ಲವೆಂಬ ಆಶ್ವಾಸನೆ ಕೊಡುವಂತೆ ಸಂಸತ್ ಸದಸ್ಯರು ಸರ್ಕಾರವನ್ನು ಕೇಳಿ, ತಮ್ಮನ್ನು ರಕ್ಷಿಸಿಕೊಳ್ಳಬಹುದಾಗಿದೆ. ಅಂಥ ಆಶ್ವಾಸನೆಯನ್ನು ಕೊಟ್ಟಾಗ, ಸರ್ಕಾರವು, ಆ ಆಶ್ವಾಸನೆಯಿಂದ ಹಿಂದೆ ಸರಿಯುವಂತಿಲ್ಲ ಎನ್ನುವುದು ಸುಸ್ಪಷ್ಟ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ :** ೧೦೨ನೇ ಅನುಚ್ಛೇದದ ಮೇರೆಗೆ ಮಾತ್ರವೇ, ಆ ಹುದ್ದೆಯು ಲಾಭದ ಹುದ್ದೆ ಅಲ್ಲವೆಂದು ಘೋಷಿಸುವ ಕಾನೂನನ್ನು ಸಂಸತ್ತು ಅಂಗೀಕರಿಸಬೇಕಾಗುತ್ತದೆ.

**ಡಾ. ಅಂಬೇಡ್ಕರ್ :** ನಿರ್ದಿಷ್ಟ ಪ್ರಕರಣದ ಬಗ್ಗೆ ನಾವೀಗ ಚರ್ಚೆ ಮಾಡುತ್ತಿದ್ದೇವೆ. ಸಂಸತ್ತು ಸಾಮಾನ್ಯ ಕಾನೂನನ್ನು ಅಂಗೀಕರಿಸುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅಂಥ ಸಾಮಾನ್ಯ ಕಾನೂನು ಏನು ಮಾಡಬಲ್ಲದೆಂಬುದು ನನಗೆ ಗೊತ್ತಿಲ್ಲ. ನಾನು ಕಲ್ಪನೆ ಮಾಡಬಹುದಾದಂತೆ ಹೇಳುವುದಾದರೆ, ಒಂದು ಸಮಿತಿಗೆ ಸಂಸತ್ ಸದಸ್ಯರೊಬ್ಬರನ್ನು ನೇಮಕ ಮಾಡಿದಾಗ ಅದರ ಸದಸ್ಯರು ಯಾವ ಭತ್ಯೆಯನ್ನು ಲಾಭವೆಂದು ಹೇಳಲಾಗುತ್ತದೋ – ಇಂಗ್ಲೆಂಡಿನಲ್ಲೂ ವಿವರಿಸಿ ಹೇಳುವ ಪದ್ಧತಿಯಂತೆಯೇ ಅಂಥ ಪ್ರತಿಯೊಂದು ಪ್ರಕರಣದಲ್ಲೂ ಸಂಸತ್ತು ಹೇಳಬಹುದಾದ–ಭತ್ಯೆಯನ್ನು ಸ್ವೀಕರಿಸಿದರೆ ಸದಸ್ಯರ ಅಂಥ ನೇಮಕವನ್ನು ಲಾಭದ ಹುದ್ದೆಯೆಂದು ಭಾವಿಸತಕ್ಕದ್ದಲ್ಲವೆಂದು ಸಂಸತ್ತು ಹೇಳಲೂ ಬಹುದು.

**ಶ್ರೀ ಕಾಮತ್ :** ಏಕರೂಪದ ವಿಧಾನವನ್ನು ನಾವು ಗೊತ್ತುಪಡಿಸುವುದಕ್ಕೆ ಆಗುವುದಿಲ್ಲವೇ ?

**ಡಾ. ಅಂಬೇಡ್ಕರ್** : ಮೂಲಭತ್ಯೆಯು ಬದಲಾವಣೆ ಆಗುತ್ತಿರುತ್ತದೆ. ಹಾಗೆ ಮಾಡಲಾಗದು.

**ಶ್ರೀ ಕಾಮತ್ :** ಆದರೂ, ನಾವು ಏಕರೂಪದ ವಿಧಾನವನ್ನು ಗೊತ್ತುಪಡಿಸಬಹುದಲ್ಲವೇ.

**ಡಾ. ಅಂಬೇಡ್ಕರ್**: ಸಂಸತ್ತಿಗೆ ಅದು ಸಾಧ್ಯವಿದೆ. ನಮಗೆ ಕಾಲಾವಕಾಶ ಎಷ್ಟಿದೆಯೆಂಬುದು ನನಗೆ ಗೊತ್ತಿಲ್ಲ. ಆದರೆ, ಯಾರೇ ಸಂಸತ್ ಸದಸ್ಯರನ್ನು ಯಾವುದೇ ಸಮಿತಿಗೆ ನೇಮಕ ಮಾಡಿದಾಗ ಭತ್ಯೆಯು ಕೇವಲ ಸಂಭಾವನೆಗಿಂತ ಹೆಚ್ಚಿಗೆ ಇದ್ದರೆ ಅಂಥ ನೇಮಕವನ್ನು ಲಾಭದ ಹುದ್ದೆಯೆಂದು ಪರಿಗಣಿಸಬಹುದೆಂದು ಹೇಳಿರುವ ಒಂದು ಚಿಕ್ಕ ಕಾಯಿದೆಯನ್ನು ಸಂಸತ್ತು ಅಂಗೀಕರಿಸಬಹುದಾಗಿದೆ. ಆಗ, ಪ್ರತಿಯೊಂದು ನೇಮಕದ ಸಂದರ್ಭದಲ್ಲಿ ಸಂಸತ್ತಿನ ವಿಧೇಯಕವು "ಇದನ್ನು ಲಾಭದ ಹುದ್ದೆಯೆಂದು ಭಾವಿಸತಕ್ಕದ್ದಲ್ಲ"ವೆಂದು ಹೇಳಬೇಕಾಗುತ್ತದೆ. ಅದನ್ನು ಸಾಮಾನ್ಯ ವಿಧಾನದಲ್ಲಿ ಮಾಡಬಹುದಾಗಿದೆ.

**ಶ್ರೀ ಸಿಧ್ವಾ** : ಸದಸ್ಯರು ೨೦ ರೂಪಾಯಿಗಳಿಗಿಂತಲೂ ಈಗ ಹೆಚ್ಚಿಗೆ ಪಡೆಯುತ್ತಿರುವ ಸಮಿತಿಗಳ ಬಗ್ಗೆ ಏನು ಹೇಳುತ್ತೀರಿ ? ಅಂಥವೂ ಕೆಲವು ಸಮಿತಿಗಳಿವೆಯಲ್ಲ.

**ಡಾ. ಅಂಬೇಡ್ಕರ್** : ನನಗೆ ಗೊತ್ತಿಲ್ಲ.

**ಶ್ರೀ ಸಿಧ್ವಾ :** ಅದೇ, ಸ್ಪಷ್ಟೀಕರಣದ ಅಗತ್ಯವಿರುವ ಅಂಶ.

**ಡಾ. ಅಂಬೇಡ್ಕರ್**: ಅಂಥ ಪ್ರಕರಣಗಳನ್ನು ತಾವು ನಮ್ಮ ಗಮನಕ್ಕೆ ತಂದರೆ ನಾವು ಪರಿಶೀಲಿಸುತ್ತೇವೆ. ನಮ್ಮ ಇಲಾಖೆ ಬಗ್ಗೆ ಹೇಳುವುದಾದರೆ, ಎಲ್ಲ ಮಂತ್ರಾಲಯಗಳಿಂದಲೂ ಎಲ್ಲ ಮಾಹಿತಿಯನ್ನು ನಾವು ಸಂಗ್ರಹಿಸಿದ್ದೆವು. ಅವುಗಳನ್ನು ಪರಿಶೀಲಿಸಿದ್ದೆವು. ಇವು, ಭತ್ಯೆಯೆಂದು ನಾವು ನಿಗದಿಪಡಿಸಿದ ಪ್ರಮಾಣವನ್ನು

ಮೀರಿರುವ ಪ್ರಕರಣಗಳೆಂಬುದನ್ನು ಕಂಡುಕೊಂಡಿದ್ದೆವು. ಹೀಗಾಗಿ, ರಕ್ಷಣೆಯ ಆವಶ್ಯಕತೆ ಇತ್ತು. ಇತರೆ, ಪ್ರಕರಣಗಳಲ್ಲಿ ಭತ್ಯೆಯು ಮೂಲ ನಿಯಮಕ್ಕೆ ತದ್ವಿರುದ್ಧವಾಗಿರಲಿಲ್ಲ. ಹಾಗಾಗಿ ಅಂಥ ರಕ್ಷಣೆಯ ಆವಶ್ಯಕತೆ ಇರಲಿಲ್ಲ.

**ಶ್ರೀ ಸಿಧ್ವಾ** : ತಮ್ಮಲ್ಲಿ ಮಾಹಿತಿ ಏನಿದೆ ?

**ಡಾ. ಅಂಬೇಡ್ಕರ್**: ನಮ್ಮಲ್ಲಿರುವ ಮಾಹಿತಿಯನ್ನು ತಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಬಾಧಿತರಾದ ಸದಸ್ಯರು "ನಾನು ಹೆಚ್ಚಿಗೆ ಪಡೆಯುತ್ತಿದ್ದೇನೆ. ಆದರೆ, ನನಗೆ ವಿನಾಯಿತಿ ಸಿಕ್ಕಿಲ್ಲ" ಎಂದು ಮನವಿ ಮಾಡಿಕೊಳ್ಳಲಿ.

**ಶ್ರೀ ಸಿಧ್ವಾ** : ಇಲ್ಲೇ ಅದನ್ನೇಕೆ ಮಾಡಬಾರದು ?

**ಡಾ. ಅಂಬೇಡ್ಕರ್** : ನಾನು ತಮ್ಮ ಸಲಹೆಯನ್ನು ಏಕಾಏಕಿ ಒಪ್ಪಲಾರೆ. ನಾನು ಹೇಳಿರುವ ಸಂಗತಿಗಳ ಬಗ್ಗೆ ಹೇಗೋ ತಮ್ಮಲ್ಲಿರುವ ಸಂಗತಿಗಳೂ ಸರಿಯಾದವುಗಳಲ್ಲವೆಂದು ತಾವೇ ಒಪ್ಪಿಕೊಳ್ಳಲೂಬಹುದು. ಒಂದನ್ನೇ ಎತ್ತಿ ತೋರಿಸುವ ಪ್ರಯತ್ನ ಮಾಡುತ್ತಿದ್ದಿರಿ. ಇಲ್ಲಿ ನೂರಾರನ್ನು ಪರೀಕ್ಷಿಸಲಾಗಿದೆ. ಇಲಾಖೆಯ ಮಾಹಿತಿಯನ್ನು ಹೆಚ್ಚು ವಿಶ್ವಾಸಾರ್ಹವಾದವುಗಳೆಂದು ಖಂಡಿತವಾಗಿಯೂ ಭಾವಿಸಬಹುದಾಗಿದೆ.

ಸ್ನೇಹಿತರಾದ ಶ್ರೀಯುತ ಕಾಮತರು, ಅಸ್ಸಾಂ ಸರ್ಕಾರಿ ವಕೀಲರ ಬಗ್ಗೆ ಹೇಳುವಂತೆ ಕೇಳಿಕೊಂಡಿದ್ದಾರೆ. ಆ ಬಗ್ಗೆ ನನಗೆ ಗೊತ್ತಿಲ್ಲ, ಆದರೂ, ನಾನು ಹೇಳಬಯಸುವುದೇನೆಂದರೆ, ಒಂದು ಸಂಸ್ಥಾನದಲ್ಲಿರುವ ಸರ್ಕಾರಿ ವಕೀಲರು ಲಾಭದ ಹುದ್ದೆಯಲ್ಲಿದ್ದಾರೆಯೇ ಇಲ್ಲವೇ ಎಂಬ ವಿಷಯವನ್ನು ಬಹಳ ಹಿಂದೆಯೇ ತೀರ್ಮಾನಿಸಲಾಗಿದೆ. ನನಗೆ ನೆನಪಿರುವಂತೆ, ಸಂಸ್ಥಾನದಲ್ಲಿ ೧೯೩೭ ರಲ್ಲಿ ಭಾರತ ಸರ್ಕಾರದ ಕಾಯಿದೆಯು ಜಾರಿಗೆ ಬಂದಾಗ, ಕೆಲವೊಂದು ಸಂಸ್ಥಾನಗಳಲ್ಲಿ ಅವುಗಳ ಅಡ್ವೊಕೇಟ್ ಜನರಲ್ಲರು ಅದು ಲಾಭದ ಹುದ್ದೆಯೆಂದು ನಿರ್ಣಯಿಸಿದ್ದಾರೆಂದು ನನ್ನ ನಂಬಿಕೆ. ಈ ಕಾರಣದಿಂದಾಗಿ, ಕೆಲವರು ಸರ್ಕಾರಿ ವಕೀಲರು ರಾಜೀನಾಮೆ ನೀಡಬೇಕಾದ ಪ್ರಕರಣಗಳು ನನ್ನ ನೆನಪಿನಲ್ಲಿವೆ. ಯಾವುದೇ ಅಂಥ ಪ್ರಕರಣ ಅಸ್ಸಾಂನಲ್ಲಿ ಉದ್ಭವಾಗಿದೆಯೇ ಎನ್ನುವುದು ನನಗೆ ಗೊತ್ತಿಲ್ಲ. ಅದು ಉದ್ಭವವಾಗಿರಬಹುದು, ಉದ್ಭವವಾಗಿಲ್ಲದಿರಲೂಬಹುದು. ಸರ್ಕಾರಿ ವಕೀಲರಾಗಿರುವ ವಕೀಲರಿಗೆ ಆ ವಸ್ತುಸ್ಥಿತಿ ತಿಳಿದಿರಬೇಕಿತ್ತು.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ಸದಸ್ಯರಾದ ಮಾನ್ಯ ವಾಜಿದ್ ಆಲಿಯವರು ಮಾತನಾಡಲು ಅವಕಾಶ ಬಯಸಿದ್ದಾರೆ.

**ಡಾ. ಅಂಬೇಡ್ಕರ್** : ಅವರು ಮಾತನಾಡುವುದಾದರೆ, ನಾನು ಮಾತನಾಡಲಾರೆ. ಒಂದು ದಿನ ಅವರು ನನ್ನ ಬಳಿಗೆ ಬಂದಿದ್ದರು – ಯಾವುದು ಆ ದಿನ ನನಗೆ ಮರೆತು ಹೋಗಿದೆ – ತನ್ನನ್ನು ಅನರ್ಹಗೊಳಿಸಲಾಗುತ್ತದೆಯೇ ಎಂದು ನನ್ನನ್ನು ಕೇಳಿದ್ದರು. ಅವರನ್ನು ಅನರ್ಹಗೊಳಿಸಲಾಗುತ್ತದೆಂದು ಅದೇ ನನ್ನ ಅಭಿಪ್ರಾಯವೆಂದು, ಸಂಸ್ಥಾನದಲ್ಲಿ ಸರ್ಕಾರಿ ವಕೀಲರಾಗಿರುವ ಯಾರೇ ಸಂಸತ್ ಸದಸ್ಯರು ಅನರ್ಹರಾಗುತ್ತಾರೆಂದು ಅವರಿಗೆ ಹೇಳಿದ್ದೆನೆಂಬುದನ್ನು ಅವರು ಒಪ್ಪುತ್ತಾರೆಂದು ಭಾವಿಸಿದ್ದೇನೆ. ನಾನು ಅದನ್ನು ಅವರಿಗೆ ಹೇಳಿದ್ದೆ. ಅದಕ್ಕಾಗಿ ತುಂಬಾ ವಿಷಾದಿಸುವುದಾಗಿ, ಅದು ತನಗೆ ಗೊತ್ತಿರಲಿಲ್ಲವೆಂದೂ ಹೇಳಿದರು. ಮಾಫಿ ಮಾಡಲು ನಿಬಂಧನೆ ಇರಬಹುದು, ಮುಂತಾಗಿ ಹೇಳಿದೆ, ಅಲ್ಲದೆ, "ತಾವು ಸೂಕ್ತ ಅಧಿಕಾರ ವರ್ಗಕ್ಕೆ ಮನವಿ ಸಲ್ಲಿಸುವುದು ಒಳ್ಳೆಯದು" ಎಂದೂ ಹೇಳಿದೆ. ಅವರು ವಿಷಯವನ್ನು ಸ್ಪೀಕರ್‌ರವರಿಗೆ ಮನವಿ ಮಾಡಿಕೊಂಡರೆಂದು ತೋರುತ್ತದೆ. ಈ ನಿರ್ಣಯ ಆಗಿರುವುದು ತಮಗೆ ಗೊತ್ತಿರಲಿಲ್ಲ. ಹಾಗಾಗಿ ಆ ಹುದ್ದೆಯಲ್ಲಿ ಮುಂದುವರಿದಿದ್ದೆನೆಂದು ಸದಸ್ಯರು ಸ್ಪಷ್ಟವಾಗಿ ಹೇಳಿರುವುದರಿಂದ

ರಕ್ಷಣೆ ಒದಗಿಸಲು ಅವರ ಪ್ರಕರಣವನ್ನು ಸರ್ಕಾರ ಪರಿಗಣಿಸಬಹುದೆಂದು ಹೇಳಿ ಸ್ಪೀಕರ್‌ರವರು ಆ ವಿಷಯವನ್ನು ನನಗೆ ಕಳುಹಿಸಿದರು, ನನಗೆ ಚೆನ್ನಾಗಿ ಜ್ಞಾಪಕವಿದೆ.

ಆ ಆಧಾರದ ಮೇಲೆ ಅವರ ಪ್ರಕರಣವನ್ನು ಸೇರಿಸಿದ್ದೇನೆ. ಈ ವಿಷಯದ ಬಗ್ಗೆ ಹೇಳಬೇಕಾದುದೆಲ್ಲವನ್ನೂ ಹೇಳಿದ್ದೇನೆ.

**ಶ್ರೀ ಕಾಮತ್ :** ಸಂವಿಧಾನವು ಜಾರಿಗೆ ಬಂದ ಮೇಲೆ, ೧೯೫೦ರ ಮಾರ್ಚ್ ನಂತರ ಕಲ್ಲಿದ್ದಲು ವಿಚಾರಣಾ ಸಮಿತಿಯನ್ನು ಸ್ಥಾಪಿಸಲಾಯಿತು. ಆ ಸಮಿತಿಯನ್ನು ಸ್ಥಾಪಿಸುವಾಗ ಅನರ್ಹತೆಯ ಈ ಅಂಶವನ್ನು ಏಕೆ ಪರಿಗಣಿಸಲಿಲ್ಲ?

**ಡಾ. ಅಂಬೇಡ್ಕರ್ :** ಶ್ರೀ ಕಾಮತರೇ, ಇವೆಲ್ಲವೂ ತುಂಬಾ ಒಳ್ಳೆಯ ಹಾಗೂ ತುಂಬಾ ಸೂಕ್ಷ್ಮವಾದ ಅಂಶಗಳೇ. ೧೦೨ ನೇ ಅನುಚ್ಛೇದವನ್ನು ಅನ್ವಯಿಸಲು ವಿಶೇಷ ಅಥವಾ ಸೂಕ್ಷ್ಮ ಗಮನ ಕೊಡಬೇಕೆಂಬ ಭಾವನೆ ಸರ್ಕಾರಕ್ಕೆ ಇರಲಿಲ್ಲವೆಂದು ಕಾಣುತ್ತದೆ. ತಾತ್ಪೂರ್ತಿಕ ಆಧಾರದ ಮೇಲೆ ಕಾರ್ಯಪ್ರವೃತ್ತರಾಗಿದ್ದೆವು. ರಾಜ್ಯಾಂಗ ರಚನಾ ಸಭೆಗೆ ಸಂಬಂಧಿಸಿದಂತೆ ನಾವು ಈ ನಿಯಮವನ್ನು ರದ್ದು ಮಾಡಿದ್ದೆವು, ರಾಜ್ಯಾಂಗ ರಚನಾ ಸಭೆಯು ಶಾಸನ ಸಭೆಯಂತೆಯೇ ಕೆಲಸ ಮಾಡಲು ಅನುವು ಮಾಡಿಕೊಟ್ಟಿದ್ದೆವು. ಹೀಗಾಗಿ, ಈ ಎಲ್ಲ ಸಮಸ್ಯೆಗಳು ಉದ್ಭವವಾದವು, ಸ್ವಲ್ಪಮಟ್ಟಿಗೆ ಗೊಂದಲಗಳು, ಗೋಜಲುಗಳು ಇದ್ದವು. ಹೀಗಾಗಿ ಈ ನಿರ್ದಿಷ್ಟ ಸಮಸ್ಯೆಗೆ ಸರ್ಕಾರದ ಗಮನ ಹೋಗುವುದು ಬೇಡ ಎಂದು ಭಾವಿಸಲಾಗಿತ್ತು. ಆದರೆ, ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಾಗ ಸಂದರ್ಭ ಸನ್ನಿವೇಶಗಳಿಗೆ ಅನುಗುಣವಾಗಿ ಸರ್ಕಾರವು ಸರಿಯಾದ ಯಾವ ಕ್ರಮವನ್ನು ಕೈಗೊಳ್ಳಬಹುದಿತ್ತೋ ಅದನ್ನೇ ಈಗ ಕೈಗೊಂಡಿದೆ. ಈ ವಿಧೇಯಕಕ್ಕೆ ಸದನವು ಬೆಂಬಲ ನೀಡುತ್ತದೆಂದು ನಂಬಿದ್ದೇವೆ.

**ಡಾ. ಪಟ್ಟಾಭಿ (ಮದ್ರಾಸ್) :** ಪಬ್ಲಿಕ್ ಪ್ರಾಸಿಕ್ಯೂಟರು ಅಥವಾ ಸರ್ಕಾರಿ ವಕೀಲರು, ಶಾಸನ ಸಭಾ ಚುನಾವಣೆಗಳ ಉದ್ದೇಶಕ್ಕಾಗಿ ಸರ್ಕಾರಿ ನೌಕರನಾಗುತ್ತಾನೆಯೇ ಅಥವಾ ಅಲ್ಲವೆ ಎಂಬ ಪ್ರಶ್ನೆ ಬಗ್ಗೆ ಮದ್ರಾಸ್ ಸರ್ಕಾರವು ತಾಳಿದ್ದ ಒಂದು ರೀತಿಯ ಕುತೂಹಲಕರ ನಿಲುವಿಗೆ ಈ ಸದನದ ಗಮನ ಸೆಳೆಯಬಯಸುತ್ತೇನೆ. ನೆಲ್ಲೂರಿನ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಯಾಹಿಯಾ ಆಲಿರವರನ್ನು ಶಾಸನ ಸಭಾ ಚುನಾವಣೆಗೆ ಸಂಬಂಧಿಸಿದಂತೆ ಸರ್ಕಾರಿ ನೌಕರನೆಂದು ಪರಿಗಣಿಸಲಾಗಿತ್ತು. ಆಗ ಅಳವಡಿಸಿಕೊಂಡಿದ್ದ ವಿಧಾನ ಯಾವುದೆಂದರೆ, ಶಾಸನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು, ಅಸೆಂಬ್ಲಿ ಸದಸ್ಯರಾಗಲು ಅವರು ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗೆ ರಾಜೀನಾಮೆ ನೀಡಬೇಕಿತ್ತು. ನೀಡಿದರು, ಅಸೆಂಬ್ಲಿ ಮೆಂಬರ್ ಆದರು. ನಂತರ ಅವರನ್ನು ಸರ್ಕಾರವು ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗೆ ನೇಮಕ ಮಾಡಿತು. ಅವರು ಹೀಗೆ ಮೂರು ಅಥವಾ ನಾಲ್ಕು ಬಾರಿ ಮಾಡಿದ್ದರು. ಕಟ್ಟಕಡೆಗೆ ಅವರನ್ನು ಹೈಕೋರ್ಟ್ ಪೀಠಕ್ಕೆ ವರ್ಗಾವಣೆ ಮಾಡಿ ಅವರ ಸಮಸ್ಯೆಗಳನ್ನು ಬಗೆಹರಿಸಲಾಯಿತು.

**ಶ್ರೀ ಶ್ಯಾಮಾನಂದನ್ ಸಹಾಯ :** ಮಾನ್ಯರೆ, ಒಂದು ಮಾತು ಹೇಳಲೇ? ಭಾಗ (ಡಿ) ಯಲ್ಲಿ ತಾವು ೧೯೫೧ ರ ವರೆಗೆ ರೈಲ್ವೆ ಸ್ಥಳೀಯ ಸಲಹಾ ಸಮಿತಿಗಳ ಸದಸ್ಯರುಗಳ ಹುದ್ದೆಗಳನ್ನು ಸೇರಿಸಿದ್ದೀರಿ. ಬಹುಶಃ, ೧೯೫೨ ರ ವರೆಗೆ ಎಂದು ತಾವು ತಿದ್ದುಪಡಿಗೆ ಪ್ರಸ್ತಾಪಿಸಲೂಬಹುದು. ನನ್ನ ತೊಳಲಾಟ ಏನೆಂದರೆ ೧೯೫೨, ೧೯೫೩, ೧೯೫೪ ಹೀಗೆ ವರ್ಷವರ್ಷವೂ ಅಂಥ ಸೂಚನೆಯನ್ನು ಮಂಡಿಸುತ್ತೀರಾ ಅಥವಾ ರೈಲ್ವೆ ಸ್ಥಳೀಯ ಸಲಹಾ ಮಂಡಳಿಗಳ ಸದಸ್ಯತ್ವವು ಅನರ್ಹತೆ ಆಗುವುದಿಲ್ಲವೆಂದು ನಿರ್ದಿಷ್ಟಪಡಿಸುತ್ತೀರಾ?

ಇನ್ನೊಂದು ಅಂಶ ಏನೆಂದರೆ, ಈ ಎಲ್ಲ ವಿವಿಧ ಸಮಿತಿಗಳನ್ನು ಈ ವಿಧೇಯಕದಲ್ಲಿ ಸ್ಪಷ್ಟವಾಗಿ ನಿರ್ದಿಷ್ಟಪಡಿಸಿರುವುದು ರಾಷ್ಟ್ರಪತಿಯವರನ್ನು ಮುಜುಗರದ ಪರಿಸ್ಥಿತಿಗೆ ನಿಜವಾಗಿಯೂ ಈಡು ಮಾಡುವುದಿಲ್ಲವೇ? ಯಾವ ಯಾವ ಸಮಿತಿಗಳನ್ನು ಲಾಭದ ಹುದ್ದೆಗಳೆಂದು ಅರ್ಥಾನ್ವಯ ಮಾಡಿಲ್ಲವೋ ಆ ಕೆಲವೊಂದು ಸಮಿತಿಗಳ ಬಗ್ಗೆ ಮಾತ್ರವೇ ಸಂಸತ್ತು ಹೇಳಿರುವುದರಿಂದ ರಾಷ್ಟ್ರಪತಿಯವರು ಪೇಚಿಗೆ ಸಿಲುಕಬಹುದು. ಯಾವುದೇ ವಿಷಯವನ್ನು ಅವರಿಗೆ ಉಲ್ಲೇಖಿಸಿದಾಗ ಅವರಿಗೆ ಸಮಸ್ಯೆಯಾಗಬಹುದು. ಅಂಥ ಪ್ರಕರಣವು ಸಮರ್ಥನೀಯವಾದುದಾಗಿದ್ದರೂ, ಆ ಬಗ್ಗೆ ತೀರ್ಮಾನ ಕೈಗೊಳ್ಳಲು ಅವರು ಸಕ್ಷಮರಾಗಿದ್ದರೂ ಅವರು ಸಂಸತ್ತನ್ನು ಕರೆಯಬೇಕಾಗಲೂಬಹುದು.

**ಡಾ. ಅಂಬೇಡ್ಕರ್ :** ರಾಷ್ಟ್ರಪತಿಯವರ ಬಗ್ಗೆ ಮಾನ್ಯ ಸ್ನೇಹಿತರು ತಲೆಕೆಡಿಸಿಕೊಳ್ಳುವ ಅಗತ್ಯ ಇದೆಯೆಂದು ನನಗನಿಸುವುದಿಲ್ಲ. ವಿವಿಧ ಬಗೆಯ ವಿಷಯಗಳಿಗೆ ನಾವು ರಾಷ್ಟ್ರಪತಿಯವರ ಅಧಿಕಾರದ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ. ೩೯೨ನೆಯ ಅನುಚ್ಛೇದ ಇದ್ದೇ ಇದೆ. ಅದರ ಪ್ರಕಾರ ಅವರು ಆದೇಶ ಹೊರಡಿಸಬಹುದಾಗಿದೆ. ಹೀಗಾಗಿ, ಸ್ಥಿತ್ಯಂತರ ಸನ್ನಿವೇಶಗಳೇನೇ ಇದ್ದರೂ ಅದರ ಪ್ರಯೋಜನ ಪಡೆಯಲು ನಾವು ಪ್ರಸ್ತಾಪಿಸಿಲ್ಲ.

**ಮಾನ್ಯ ಡಪ್ಯೂಟಿ ಸ್ಪೀಕರ್ :** ಈ ಚರ್ಚೆ ಮುಗಿದ ನಂತರ ನಾವು ಮತ್ತೊಂದು ಚರ್ಚೆಯನ್ನು ಪ್ರಾರಂಭಿಸಲಿದ್ದೇವೆ. ಈ ಸೂಚನೆಯನ್ನು ನಾನು ಸದನದ ಮುಂದೆ ಇಡುತ್ತೇನೆ. ಇತರ ಕಲಮಗಳೂ ಇವೆ. ಸದಸ್ಯರಿಗೆ ಹೇರಳ ಅವಕಾಶ ಇದೆ.

ಸೂಚನೆ ಏನೆಂದರೆ :

> "ಕೆಲವೊಂದು ಲಾಭದ ಹುದ್ದೆಗಳಲ್ಲಿರುವವರು ಸಂಸತ್ ಸದಸ್ಯರಾಗಿರಲು ಅನರ್ಹರನ್ನಾಗಿಸದಂತೆ ಘೋಷಿಸುವ ವಿಧೇಯಕವನ್ನು ಪರ್ಯಾಲೋಚನೆಗೆ ಕೈಗೆತ್ತಿಕೊಳ್ಳಬೇಕು "

ಸೂಚನೆಯನ್ನು ಮಂಡಿಸಲಾಗಿದೆ.

**ಕಲಮು ೨.** — (ಅನರ್ಹತೆ ನಿವಾರಣೆ ಇತ್ಯಾದಿ)

ಮಾಡಿದ ತಿದ್ದುಪಡಿ :

ಪುಟ ೧ ರಲ್ಲಿ (i) ೨೩ ನೇ ಸಾಲಿನಲ್ಲಿ ಬರುವ "ಮತ್ತು" ಎಂಬ ಪದವನ್ನು ತೆಗೆದು ಹಾಕಬೇಕು; ಮತ್ತು

(ii)೨ನೇ ಸಾಲಿನ ನಂತರ ಈ ಮುಂದಿನದನ್ನು ಸೇರಿಸಬೇಕು :

> "(ಎಫ್) ೧೯೫೦ ರ ಏಪ್ರಿಲ್ ೮ ರಂದು ಭಾರತ ಮತ್ತು ಪಾಕಿಸ್ತಾನದ ನಡುವೆ ಆದ ಒಪ್ಪಂದಕ್ಕೆ ಅನುಸಾರವಾಗಿ ಅಸ್ಸಾಂ ಸರ್ಕಾರವು ಅಥವಾ ಪಶ್ಚಿಮ ಬಂಗಾಳ ಸರ್ಕಾರವು ೧೯೫೦ ರ ಡಿಸೆಂಬರ್ ೩೧ ನೆಯ ದಿನಕ್ಕೂ ಮೀರಿ ವಿಸ್ತರಣೆಯಾಗದಿರುವ ಯಾವುದೇ ಅವಧಿಗೆ ನೇಮಕ ಮಾಡಿದ ವಿಚಾರಣಾ ಆಯೋಗದ ಸದಸ್ಯರುಗಳ ಸ್ಥಾನ; ಮತ್ತು
>
> (ಜಿ) ೧೯೫೧ ರ ಏಪ್ರಿಲ್ ೧ ನೆಯ ದಿನಕ್ಕೂ ಮೀರಿ ವಿಸ್ತರಣೆಯಾಗದಿರುವ ಯಾವುದೇ ಅವಧಿಗೆ ಬಾಂಬೆ ರೆವಿನ್ಯೂ ನ್ಯಾಯಾಧಿಕರಣದ ಸದಸ್ಯ ಸ್ಥಾನ.

— **ಡಾ. ಅಂಬೇಡ್ಕರ್.**

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ನಾವೀಗ ಇತರೆ ತಿದ್ದುಪಡಿಗಳಿಗೆ ಹೋಗೋಣ.

**ಶ್ರೀ ಕಾಮತ್ :** ಸಚಿವರು ವಸ್ತುಸ್ಥಿತಿಯನ್ನು ವಿವರಿಸಿರುವುದರಿಂದಾಗಿ ನಾನು ಸಂಖ್ಯೆ ೨ ಮತ್ತು ಸಂಖ್ಯೆ ೩ ನ್ನು ಮಂಡಿಸುವುದಿಲ್ಲ. ಆದರೆ, ಸಂಖ್ಯೆ ೧೮ ಬಗ್ಗೆ ನಂತರ ಮಾತನಾಡುತ್ತೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ :** ಡಾ. ಅಂಬೇಡ್ಕರ್ ಅವರು ನೀಡಿದ ಹೇಳಿಕೆಯಿಂದಾಗಿ, ನನ್ನ ತಿದ್ದುಪಡಿಯ ಅಗತ್ಯವಿದೆಯೆಂದು ನನಗನಿಸುತ್ತಿಲ್ಲ.

*__ಡಾ. ಅಂಬೇಡ್ಕರ್ :__ ಮಾನ್ಯ ಸ್ನೇಹಿತರು ಎತ್ತಿದ ಅಂಶದ ಬಗ್ಗೆ ವಿವರಣೆಯನ್ನು, ತಮ್ಮ ಅನುಮತಿಯೊಂದಿಗೆ ನೀಡಬಯಸುತ್ತೇನೆ. ಆಹಾರ ಧಾನ್ಯಗಳ ತನಿಖಾ ಸಮಿತಿಯನ್ನು ಸ್ಥಾಪಿಸಿದಾಗ ಆ ಇಲಾಖೆಯು ನಿರ್ಣಯವನ್ನು ಹೊರಡಿಸಿದಾಗ ಭತ್ಯೆಯು ೨೦ ರೂಪಾಯಿ ಎಂದು ಹೇಳಲಾಗಿತ್ತು. ಈ ವಸ್ತುಸ್ಥಿತಿಯನ್ನು ಸ್ಪಷ್ಟೀಕರಿಸುವ ಉದ್ದೇಶಕ್ಕಾಗಿ ಆ ನಿರ್ಣಯದ ಆಧಾರದ ಮೇಲೆ ಕಾನೂನು ಮಂತ್ರಾಲಯಕ್ಕೆ ಮಾಹಿತಿಯನ್ನು ಒದಗಿಸಲಾಗಿತ್ತೆಂದು ತೋರುತ್ತದೆ. ನಾವೂ ಕೂಡ ಆ ನಿರ್ಣಯವನ್ನೇ ಆಧಾರವಾಗಿ ತೆಗೆದುಕೊಂಡಿದ್ದೆವು. ಆದರೆ, ಈಗ ಆಹಾರ ಮಂತ್ರಾಲಯವು ಆ ನಿಯಮದಲ್ಲಿ ಬದಲಾವಣೆ ಮಾಡಿದೆಯೆಂದು ಮತ್ತು ಸದಸ್ಯರು ಇನ್ನೂ ಸ್ವಲ್ಪ ಹೆಚ್ಚು ಪಡೆಯಲು ಅನುಮತಿ ನೀಡಿದೆಯೆಂಬುದು ತಿಳಿದು ಬಂದಿದೆ. ಆದರೆ, ನಮ್ಮ ಈ ಕ್ರಮಕ್ಕೆ ಆ ನಿರ್ಣಯವೇ ಆಧಾರ.

**ಶ್ರೀ ಸಿಧ್ವಾ :** ಅದರಿಂದ, ಆ ಸದಸ್ಯರಿಗೆ ಏನಾಗುತ್ತದೆ ?

**ಡಾ. ಅಂಬೇಡ್ಕರ್:** ಸ್ನೇಹಿತರಾದ ಶ್ರೀಯುತ ಸಿಧ್ವಾರವರು ಈ ಅಂಶವನ್ನು ಅರ್ಥ ಮಾಡಿಕೊಂಡಿಲ್ಲವೆಂದು ತೋರುತ್ತದೆ. ಸದಸ್ಯರು ಅನರ್ಹರಾಗಿದ್ದಾರೆಂದು ರಾಷ್ಟ್ರಪತಿಯವರು ಆದೇಶ ಹೊರಡಿಸುವವರೆಗೆ, ಸದಸ್ಯರು ಸದನದಲ್ಲಿರುತ್ತಾರೆ, ಕಾರ್ಯ ನಿರ್ವಹಿಸುತ್ತಾರೆ.

**ಶ್ರೀ ಸಿಧ್ವಾ :** ನನಗದು ಗೊತ್ತಿದೆ.

**ಡಾ. ಅಂಬೇಡ್ಕರ್ :** ಆದ್ದರಿಂದ, ನಾನು ಹೇಳಿದಂತೆ, ಸಮಿತಿಗಳನ್ನು ಸ್ಥಾಪಿಸಿರುವ ಮಂತ್ರಾಲಯಗಳು ಅಂಗೀಕರಿಸಿರುವ ಹಲವಾರು ನಿರ್ಣಯಗಳನ್ನು ನಮಗೆ ಕಳುಹಿಸಲಾಗಿದೆ. ಆ ಸಮಿತಿಗಳು ಮೂಲ ನಿಯಮವನ್ನು ಉಲ್ಲಂಘಿಸಿಲ್ಲ. ಸದಸ್ಯರುಗಳು ವಾಸ್ತವವಾಗಿ ಹೆಚ್ಚು ಹಣವನ್ನು ಪಡೆದಿರುವಂತಹ ಪ್ರಕರಣಗಳನ್ನು ತೋರಿಸುವ ಮಾಹಿತಿಯನ್ನು ನಮಗೆ ಒದಗಿಸಿದರೆ ವಿಷಯವನ್ನು ಕ್ರಮಬದ್ಧಗೊಳಿಸಲು ನಿಜಕ್ಕೂ ಸಾಧ್ಯವಾಗುತ್ತದೆ. ಎಲ್ಲಿದೆ ಸಮಸ್ಯೆ? ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಹಿಮತ್ಸಿಂಗ್ಕ :** ಅದನ್ನು ಸಾಮಾನ್ಯ ವಿಧಾನದಲ್ಲೇಕೆ ಮಾಡಬಾರದು?

**ಡಾ. ಅಂಬೇಡ್ಕರ್ :** ನಾನು ಹಾಗೆ ಮಾಡುವಂತಿಲ್ಲ. ನಿಖರವಾದ ವಸ್ತುಸ್ಥಿತಿ ಬಗ್ಗೆ ನಾನು ಇನ್ನಷ್ಟು ವಿಚಾರಣೆ ಮಾಡಬೇಕಾಗುತ್ತದೆ. ಈ ವಿಧೇಯಕವು ಅಂಗೀಕೃತವಾದರೆ, ಯಾವ ಯಾವ ಪ್ರಕರಣಗಳು ವ್ಯಾಪ್ತಿಗೊಳಪಡುವ ಆವಶ್ಯಕತೆ ಇದೆಯೋ ಅವುಗಳನ್ನು ವ್ಯಾಪ್ತಿಗೆ ತರಲು ಇನ್ನೊಂದು ವಿಧೇಯಕವನ್ನು ತಂದರೆ ಅದರಿಂದ ಏನೂ ಹಾನಿ ಆಗಲ್ಲ.

**ಶ್ರೀ ಸಿಧ್ವಾ :** ಅದು ಹೇಗೆ?

**ಡಾ. ಅಂಬೇಡ್ಕರ್ :** ಅದರಿಂದೇನು ತೊಂದರೆ? ನನಗರ್ಥವಾಗುತ್ತಿಲ್ಲ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ಬಗ್ಗೆ ಖಂಡಿತವಾಗಿಯೂ ಗಮನ ಹರಿಸಲಾಗುತ್ತದೆ. ಇದು

---

* ಸಂ.ಚ. ಸಂಪುಟ ೧೪, ಭಾಗ II, ೭ನೇ ಆಗಸ್ಟ್ ೧೯೫೧, ಪುಟಗಳು ೭೩–೭೯

ನಾಳೆವರಗೆ ಮುಂದೆ ಹೋದರೆ, ಅಂಥದ್ದೇನೂ ಆಗೊಲ್ಲ.

**ಕೆಲವು ಸನ್ಮಾನ್ಯ ಸದಸ್ಯರು** : ಸರಿ. ಸರ್

**ಮಾನ್ಯ ಡೆಪ್ಯೂಟಿ ಸ್ಪೀಕರ್**: ಆದರೆ, ನಾಳೆಗಿಂತ ಮುಂಚೆಯೇ, ಈ ವಿಷಯಗಳು ಇತ್ಯರ್ಥವಾಗದಿದ್ದರೆ, ಆಗ, ನಾವು ಈ ವಿಧೇಯಕದ ಬಗ್ಗೆ ಕೂಡಲೇ ಮುಂದುವರಿಯಬಹುದಾಗಿದೆ. ರಾಷ್ಟ್ರಪತಿಯವರು ಎಲ್ಲಕ್ಕಿಂತ ಮೊದಲು, ಸದಸ್ಯರು ಅನರ್ಹರಾಗಿದ್ದಾರೆಂದು ಹೇಳಬೇಕಾಗುತ್ತದೆ. ಅದಂತೂ ಸ್ಪಷ್ಟ. ೧೦೨ನೇ ಅನುಚ್ಛೇದದ (೧) (ಎ) ಕಲಮು, "ಲಾಭದ ಹುದ್ದೆಯಲ್ಲಿರುವವರು ಅನರ್ಹರಾಗುವುದಿಲ್ಲವೆಂದು ಸಂಸತ್ತು ಕಾನೂನು ಮೂಲಕ ಘೋಷಿಸಿದ ಹುದ್ದೆಯಲ್ಲದ, ಭಾರತ ಸರ್ಕಾರದ ಅಧೀನದಲ್ಲಿರುವ ಯಾವುದೇ ಲಾಭದ ಹುದ್ದೆಯಲ್ಲಿ ಅವರು ಇದ್ದರೆ" ಎಂದು ಹೇಳಿದೆ. ೧೦೩ನೇ ಅನುಚ್ಛೇದದಲ್ಲಿ ಹೇಳಿರುವ ಕಾರ್ಯವಿಧಾನವನ್ನು ಅವಲಂಬಿಸದೆ, ಪ್ರಶ್ನೆಯು ಉದ್ಭವವಾಗದಿದ್ದರೂ, ವಿಷಯವನ್ನು ರಾಷ್ಟ್ರಪತಿಯವರಿಗೆ ಉಲ್ಲೇಖಿಸದಿದ್ದರೂ, ಸಂಭಾವನೆಯು ನ್ಯಾಯೋಚಿತ ಪರಿಹಾರವೆಂದು ಭಾವಿಸುವಂಥದ್ದೆಂಬುದು ಸ್ಪಷ್ಟವಾಗಿದ್ದರೆ, ಆ ಹುದ್ದೆಯನ್ನು ಲಾಭದ ಹುದ್ದೆಯೆಂದು ಪರಿಗಣಿಸತಕ್ಕದ್ದಲ್ಲವೆಂದು ಸಂಸತ್ತು ಹೇಳಬಹುದಾಗಿದೆ. ಇನ್ನೊಂದು ವಿಧೇಯಕವನ್ನು ತರದೆಯೇ ಸೂಕ್ತ ತಿದ್ದುಪಡಿಯನ್ನು ಈ ವಿಧೇಯಕಕ್ಕೇ ಸೇರಿಸಿ ವಿಲೇ ಮಾಡಬಹುದಾಗಿದ್ದರೆ ಮಾನ್ಯ ಕಾನೂನು ಮಂತ್ರಿಯವರು ಆ ವಿಷಯವನ್ನು ಪರಿಶೀಲಿಸಬಹುದಾಗಿರುತ್ತದೆ. ಎಲ್ಲ ಸಮಿತಿಗಳ ಪಟ್ಟಿ ಇದೆ. ಶ್ರೀ ಸಿಧ್ವಾರವರ ತಿದ್ದುಪಡಿಯನ್ನು ಮುಂದೂಡಲಾಗುತ್ತದೆ. ವಿರೋಧಿಸುವುದಿಲ್ಲವೆಂದು ತೋರುವ ಇತರ ತಿದ್ದುಪಡಿಗಳನ್ನು ಸದನದ ಮುಂದೆ ಇಡುತ್ತೇನೆ. ಅವು ಶ್ರೀ ಶ್ರೀನಾರಾಯಣ ಮಹತಾರ ಹೆಸರಿನಲ್ಲಿದೆ.

**ಡಾ. ಅಂಬೇಡ್ಕರ್** : ನನ್ನ ಒಪ್ಪಿಗೆ ಇದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ಅದನ್ನು ಸದನದ ಮುಂದಿಟ್ಟಿದ್ದೇನೆ. ಇದನ್ನು ಬಿಟ್ಟರೆ, ಶ್ರೀ ಸಿಧ್ವಾರವರು ನೋಟೀಸು ಕೊಟ್ಟಿರುವ ಇತರ ವಿಷಯಗಳನ್ನು ನಾಳೆ ದಿನ ಚರ್ಚಿಸಬಹುದು.

**ಡಾ. ಅಂಬೇಡ್ಕರ್** : ಅವರು ವಾಸ್ತವಿಕ ನಿರ್ಣಯಗಳನ್ನು ನನಗೆ ಒದಗಿಸಬಹುದು. ನಾನು ಪರಿಶೀಲಿಸುತ್ತೇನೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ನಾಳೆ ಅದೇ ಮೊದಲ ವಿಷಯ. ಅವರು ಯಾವುದೇ ತಿದ್ದುಪಡಿ ಮಂಡಿಸುವ ಅಗತ್ಯವಿಲ್ಲ. ಶ್ರೀಯುತ ಸಿಧ್ವಾರವರ ತಿದ್ದುಪಡಿಗಳಮಟ್ಟಿಗೆ ಹೇಳುವುದಾದರೆ ಇದನ್ನು ನಾಳೆವರೆಗೆ ಮುಂದೂಡಲಾಗಿದೆ.

**ಶ್ರೀ ಹಿಮತ್ಸಿಂಗ್ಕ** : ಮಾನ್ಯ ಕಾನೂನು ಸಚಿವರ ಪರಿಶೀಲನೆಗೆ ಒಂದು ಸಲಹೆಯನ್ನು ಮುಂದಿಡಲೇ? ಹಣ ಸಂದಾಯವು ಒಂದು ನಿರ್ದಿಷ್ಟ ಮೊತ್ತವನ್ನು ಮೀರದಿರುವ ಯಾವುದೇ ಸಮಿತಿಯ ಸದಸ್ಯತ್ವವನ್ನು ಲಾಭದ ಹುದ್ದೆಯೆಂದು ಪರಿಗಣಿಸುವುದಿಲ್ಲವೆಂಬ ಸಾಮಾನ್ಯ ಸ್ವರೂಪದ ಪ್ರತಿಪಾದನೆಯನ್ನು ಸೇರಿಸಿದರೆ, ಅದೂ ಕೂಡ ವ್ಯಾಪ್ತಿಗೆ ಒಳಪಡುತ್ತದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ಅಂಥ ಸಾಮಾನ್ಯ ಪ್ರತಿಪಾದನೆಯನ್ನು ಮಾನ್ಯ ಕಾನೂನು ಸಚಿವರು ಈಗಾಗಲೇ ಹೇಳಿದ್ದಾರೆ....................

**ಶ್ರೀ ಹಿಮತ್ಸಿಂಗ್ಕ** : ಅದು ಹಿಂದಿನವುಗಳಿಗೆ ಮಾತ್ರವೇ ಸಂಬಂಧಪಟ್ಟಿದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ಹಿಂದಿನವುಗಳಿಗೆ ಸಂಬಂಧಿಸಿದಂತೆ, ರೂ. ೪೦, ರೂ. ೫೦. ಹೀಗೆ

ಬೇರೆ ಬೇರೆ ಹಣವನ್ನು ಸಂದಾಯ ಮಾಡಲಾಗಿತ್ತು.

**ಶ್ರೀ ಸೊಂಧಿ :** ಗರಿಷ್ಠ ಹಣ ಐವತ್ತು ರೂಪಾಯಿಗಳು.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರು ಈ ವಿಷಯಗಳನ್ನು ಮಾನ್ಯ ಕಾನೂನು ಸಚಿವರ ಗಮನಕ್ಕೆ ತಂದರೆ, ಇಂಥ ಪ್ರಕರಣಗಳು ಪ್ರವಾಹೋಪಾದಿಯಲ್ಲಿ ಬರಲು ಮತ್ತು ಅಪಾರ ಸಂಖ್ಯೆಯ ಸದಸ್ಯರುಗಳಿಗೆ ರಕ್ಷಣೆ ಒದಗಿಸಲು ನಾವು ಪ್ರಯತ್ನಿಸುತ್ತಿದ್ದೇವೆಂದು ತೋರುತ್ತದೆನ್ನುವುದಕ್ಕೆ ಆಸ್ಪದ ಆಗದಂತೆ, ಅವರು ಅವುಗಳನ್ನು ಪರಿಶೀಲಿಸುತ್ತಾರೆ. ಆ ಬಗೆಯ ಆಪಾದನೆಗೆ ನಮಗೆ ನಾವೇ ಒಳಗಾಗಬಾರದು.

**ಒಬ್ಬರು ಮಾನ್ಯ ಸದಸ್ಯರು :** ಅದು, ಹಿಂದಿನವುಗಳಿಗೆ ಸಂಬಂಧಪಟ್ಟಿದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಯಾವುವೇ ನಿರ್ದಿಷ್ಟ ಪ್ರವರ್ಗಗಳು ಇದ್ದರೆ ಅವುಗಳನ್ನು ಮಾನ್ಯ ಕಾನೂನು ಸಚಿವರ ಗಮನಕ್ಕೆ ತರಬಹುದು. ಅವರು ಅವುಗಳನ್ನು ಪರಿಶೀಲಿಸುತ್ತಾರೆ.

**ಡಾ. ಅಂಬೇಡ್ಕರ್ :** ಈ ಪ್ರಕರಣದಲ್ಲಿ, ನಿರ್ಣಯವು ರೂ. ೨೦ ಎಂದು ಹೇಳಿದೆ.

**ಪಂಡಿತ್ ಕುಂಜ್ರು :** ಈ ಚರ್ಚೆಯನ್ನು ನಾಳೆವರಗೆ ಮುಂದೂಡುವುದಕ್ಕೆ ಮುಂಚೆ ನಾನೊಂದು ಸಲಹೆ ನೀಡುತ್ತೇನೆ. ಸಮಿತಿಯಲ್ಲಿ ಸೇವೆ ಸಲ್ಲಿಸುತ್ತಿರುವುದಕ್ಕಾಗಿ ೨೦ ರೂಪಾಯಿಗಿಂತ ಹೆಚ್ಚಿಗೆ ದಿನಭತ್ಯೆಯನ್ನು ಯಾವುದೇ ಸದಸ್ಯರು ಪಡೆದರೆ ಅವರು ಲಾಭದ ಹುದ್ದೆಯಲ್ಲಿದ್ದಾರೆಂದು ಪರಿಗಣಿಸಲಾಗುತ್ತದೆಂದು ಹಣಕಾಸು ಮಂತ್ರಾಲಯವು ತೀರ್ಮಾನಿಸಿದ ಕಾರಣದಿಂದಾಗಿ ಈ ಎಲ್ಲ ಆತಂಕ ಉದ್ಭವವಾಗಿದೆ. ಸಂಸತ್ತಿನ ಸಭೆಗಳಿಗೆ ಹಾಜರಾಗುವುದಕ್ಕಾಗಿ ಸಂಸತ್ತಿನ ಸದಸ್ಯರು ಪಡೆಯುವ ದಿನಭತ್ಯೆಯ ಮಿತಿಯನ್ನು ೨೦ ರೂಪಾಯಿಯಿಂದ ೪೦ ರೂಪಾಯಿಗೆ ಹೆಚ್ಚಿಸಬೇಕೆಂದು ಮಂತ್ರಾಲಯವು ತೀರ್ಮಾನಿಸಿದರೆ ಈ ಎಲ್ಲ ಆತಂಕಗಳು ದೂರವಾಗುತ್ತವೆ. ಈ ನಿಲುವನ್ನು ಹಣಕಾಸು ಮಂತ್ರಾಲಯವು ಒಪ್ಪಿಕೊಂಡಿದ್ದರೆ ಡಾ. ಅಂಬೇಡ್ಕರ್‌ರವರು ಈಗ ತಂದಿರುವ ವಿಧೇಯಕದ ಆವಶ್ಯಕತೆ ಇರುತ್ತಿರಲಿಲ್ಲ. ಹಣಕಾಸು ಮಂತ್ರಾಲಯವು ನಿಗದಿ ಮಾಡಿರುವ ಕಡಿಮೆ ಮಿತಿಯಿಂದಾಗಿ ಈ ವಿಧೇಯಕದ ಆವಶ್ಯಕತೆ ಉಂಟಾಗಿದೆ. ಸಂಸತ್ ಸದಸ್ಯರು ಸಂಸತ್ ಸಭೆಗಳಿಗೆ ಹಾಜರಾಗುವುದಕ್ಕಾಗಿ ಹಕ್ಕುಳ್ಳ ದಿನ ಭತ್ಯೆಗೂ ಮೀರಿದ ಭತ್ಯೆಯನ್ನು ಸದಸ್ಯರು ಪಡೆದರೆ ಅವರನ್ನು ಲಾಭದ ಹುದ್ದೆಯಲ್ಲಿದ್ದಾರೆಂದು ಪರಿಗಣಿಸುವುದಿಲ್ಲವೆಂದು ಸರಳವಾಗಿ ಪ್ರಕಟಸಿದ್ದರೆ ಹಣಕಾಸು ಮಂತ್ರಾಲಯವು ಈ ಎಲ್ಲ ಆತಂಕವನ್ನು ತೊಡೆದು ಹಾಕಬಹುದಿತ್ತು ಹಾಗೂ ಸದಸ್ಯರ ಮನಸ್ಸಿನ ಕಳವಳವನ್ನು ದೂರ ಮಾಡಬಹುದಿತ್ತು. ಯಾವ ಸಂದೇಹಗಳೂ ಉದ್ಭವವಾಗುತ್ತಿರಲಿಲ್ಲ, ಯಾವ ವಿಧೇಯಕವೂ ಬೇಕಾಗಿರಲಿಲ್ಲ.

**ಡಾ. ಅಂಬೇಡ್ಕರ್ :** ಮಾನ್ಯ ಸ್ನೇಹಿತರು ಏನು ಹೇಳಿದ್ದಾರೋ ಅದನ್ನು ಸರಿಪಡಿಸಲು ಒಂದು ಮಾತು ಹೇಳಬಯಸುತ್ತೇನೆ. ಹಣಕಾಸು ಮಂತ್ರಾಲಯವು – ನಾನು ಹಣಕಾಸು ಮಂತ್ರಾಲಯವನ್ನು ಇಲ್ಲಿ ತರಬಾರದು – ಸರ್ಕಾರವು ಈಗ ಹೀಗೆ ಹೇಳಿದೆ: ಸಮಿತಿಯ ಅಧಿಕಾರೇತರ ಸದಸ್ಯರಿಗೆ ಕೆಲವೊಂದು ಭತ್ಯೆಯನ್ನು ನಿಗದಿ ಮಾಡಲಾಗಿದೆ, ನಾನು ಈಗಾಗಲೇ ಹೇಳಿದ್ದೇನೆ, ವಿಮಾನದಲ್ಲಿ ಪ್ರಯಾಣ ಮಾಡಿದರೆ ಇಂತಿಷ್ಟು ಭತ್ಯೆ, ಕಲ್ಕತ್ತ, ಬಾಂಬೆಗೆ ರೂ. ೧೫, ಬೇರೆ ಕಡೆಗೆ ೧೨–೮–೦. ಸಂದಾಯಕ್ಕೆ ಪ್ರಮಾಣವೆಂದು ಸರ್ಕಾರ ಒಪ್ಪಿಕೊಂಡಿರುವ ಪ್ರಮಾಣ ಇದು. ಲಾಭದ ಅಂಶ ಇದರಲ್ಲಿಲ್ಲ. ಮಾನ್ಯ ಸ್ನೇಹಿತರು ಇದನ್ನು ಗಮನಿಸಿಲ್ಲವೆಂದು ಕಾಣುತ್ತದೆ. ಕೆಲವು ಸಂಸತ್ ಸದಸ್ಯರು, ಸಂಸತ್ ಸದಸ್ಯರಲ್ಲದ ಕೆಲವು ಸದಸ್ಯರು ಇರುವ ಸಮಿತಿಯನ್ನು ನಾವು ನೇಮಿಸುವುದಾದರೆ, ಸಂದಾಯಕ್ಕೆ ಬೇರೆಬೇರೆ ಪ್ರಮಾಣವನ್ನು ನಾವು

ನಿರ್ದಿಷ್ಟಪಡಿಸುವಂತಿಲ್ಲವೆಂಬುದು ಸುಸ್ಪಷ್ಟ. ಈ ಬಗೆಯ ಸಮ್ಮಿಶ್ರ ಸಮಿತಿಗೆ ನಾವು ಈ ಪ್ರಮಾಣವನ್ನೇ ಸಂದಾಯದ ಪ್ರಮಾಣವನ್ನಾಗಿ ಅಳವಡಿಸಿಕೊಳ್ಳಬೇಕಾಗುತ್ತದೆ. ಇದನ್ನು, ಸಂಸತ್ ಸದಸ್ಯರಲ್ಲದ ಸದಸ್ಯರಿಗೆ ಸಂದಾಯದ ಪ್ರಮಾಣವೆಂದು ಗೊತ್ತುಪಡಿಸಲಾಗಿದೆ. ಹೀಗಾಗಿ, ಆ ಪ್ರಮಾಣವು ಚಾಲ್ತಿ ಪ್ರಮಾಣ ಆಗಿದೆ.

**ಶ್ರೀ ಸೋಂಧಿ :** ನಾನೊಂದು ಮನವಿ ಮಾಡಬಯಸುತ್ತೇನೆ. ಸರ್, ಕೃಷಿ ಇಲಾಖೆಯ ಸಮಿತಿ ಒಂದಿದೆ. ಕೇಂದ್ರೀಯ ಅಡಿಕೆ ಸಮಿತಿ, ದಿನ ಭತ್ಯೆ ೧೨–೮–೦ ರೂ.೧೨ ಅಲ್ಲ. ನಾವು ಅನರ್ಹರಾಗುತ್ತೇವೆಯೇ? ನಾಲ್ವರು ಸದಸ್ಯರಿದ್ದೇವೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಡಾ. ಅಂಬೇಡ್ಕರರ ಮಾತುಗಳನ್ನು ನಾನು ತುಂಬಾ ಗಮನಕೊಟ್ಟು, ತುಂಬಾ ಗೌರವದಿಂದ ಕೇಳಿದ್ದೇನೆ. ಆದರೆ, ಅವರು ಈ ವಿಷಯವನ್ನು ಸಂಪೂರ್ಣವಾಗಿ ತಪ್ಪು ದೃಷ್ಟಿಕೋನದಿಂದ ನೋಡಿದ್ದಾರೆಂದು ತುಂಬಾ ವಿನಯಪೂರ್ವಕವಾಗಿಯೇ ಎತ್ತಿ ತೋರಿಸಬಯಸುತ್ತೇನೆ, ರಾಷ್ಟ್ರಪತಿಯವರೇ ಅಂತಿಮ ಪ್ರಾಧಿಕಾರಿಯೆಂದು, ಒಂದು ನಿರ್ದಿಷ್ಟ ಪ್ರಕರಣವನ್ನು ತೀರ್ಮಾನಿಸುವ ಅಂತಿಮ ಅಧಿಕಾರ ಅವರಿಗೇ ಇದೆಯೆಂದು ಸಂವಿಧಾನದ ೧೦೨ ನೇ ಅನುಚ್ಛೇದವು ಸುಸ್ಪಷ್ಟಪಡಿಸಿದೆ. ಬದಲಿಗೆ ಸಂಸತ್ ಕೂಡ, ಕೆಲವೊಂದು ಹುದ್ದೆಗಳಲ್ಲಿದ್ದರೆ, ಅದು ಅನರ್ಹತೆಯಾಗುವುದಿಲ್ಲವೆಂದು ತೀರ್ಮಾನಿಸಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಹಣಕಾಸು ಮಂತ್ರಾಲಯಕ್ಕಾಗಲಿ, ಸರ್ಕಾರಕ್ಕಾಗಲಿ ಏನೇನೂ ಅಧಿಕಾರ ಇಲ್ಲ. ಯಾವ ಪ್ರಮಾಣವನ್ನೂ ಅವು ನಿಗದಿ ಮಾಡುವಂತಿಲ್ಲ. ಉದಾಹರಣೆಗೆ, ಕೇವಲ ೧೦ ರೂ. ಅಥವಾ ಕೇವಲ ೫ ರೂ. ಭತ್ಯೆ ನಿಗದಿಯಾಗಿರುವ ಸದಸ್ಯತ್ವ ಇರುವ ಸಮಿತಿ ಒಂದಿದೆಯೆಂದುಕೊಳ್ಳೋಣ. ಆದರೂ, ಅಂಥ ಸಮಿತಿಯು ಮಹತ್ವದ ಸಮಿತಿಯಾಗಿರಬಹುದು, ಸದಸ್ಯತ್ವವು ಗೌರವದ್ದು ಆಗಿರಬಹುದು, ಅಂಥ ಸಮಿತಿಯಲ್ಲಿ ಸೇವೆ ಸಲ್ಲಿಸಲು ಅನೇಕರು ಇಚ್ಛಿಸಲೂಬಹುದು, ಅಂಥದೊಂದು ಸಮಿತಿಗೆ ಸದಸ್ಯರನ್ನು ನೇಮಿಸುವಾಗ ಸರ್ಕಾರವು ತನ್ನ ಅಧಿಕಾರವನ್ನು ಚಲಾಯಿಸಲು ಮುಕ್ತ ಅವಕಾಶ ಇರುತ್ತದೆ. ಅದನ್ನು ತಪ್ಪಿಸಬೇಕೆಂದು ಡಾ. ಅಂಬೇಡ್ಕರರು ಮತ್ತು ನಾವೆಲ್ಲರೂ ಬಯಸಿದ್ದೇವೆ. ಆದ್ದರಿಂದ, ಧಾರಣ ಮಾಡಿರುವ ಹುದ್ದೆಯು ಲಾಭದ ಹುದ್ದೆಯೇ ಅಲ್ಲವೇ ಎಂಬುದನ್ನು ತೀರ್ಮಾನಿಸುವುದು ಸರ್ಕಾರದ ಕೆಲಸ ಅಲ್ಲ. ಹಾಗೆ ತೀರ್ಮಾನಿಸುವುದು ರಾಷ್ಟ್ರಪತಿಯವರ ಅಥವಾ ಸಂಸತ್ತಿನ ಕೆಲಸ.

**ಡಾ. ಅಂಬೇಡ್ಕರ್ :** ಅದಕ್ಕೋಸ್ಕರವೇ ಈ ವಿಧೇಯಕವನ್ನು ಸಂಸತ್ತಿನ ಮುಂದೆ ತರಲಾಗಿದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಸರ್ಕಾರವೇ ಈ ಅಧಿಕಾರವನ್ನು ತನ್ನದಾಗಿ ಮಾಡಿಕೊಳ್ಳುವುದು ತೀರಾ ತಪ್ಪು. ತನ್ನ ಕೈಯಲ್ಲಿ ರಾಷ್ಟ್ರಪತಿಯವರಿದ್ದಾರೆಂದು, ಲಾಭದ ಪ್ರಮಾಣವನ್ನು ತಾನು ನಿಗದಿ ಮಾಡಬಹುದೆಂದು ಸರ್ಕಾರ ಹೇಳಿದರೆ, ಸರ್ಕಾರ ತಪ್ಪು ಮಾಡುತ್ತಿದೆಯೆಂದು ನಾನು ಒತ್ತಿ ಹೇಳುತ್ತೇನೆ. ಕೆಲವೊಂದು ಪ್ರಕರಣಗಳಲ್ಲಿ ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ, ಹುದ್ದೆಯು ಲಾಭದ ಹುದ್ದೆಯೇ, ಅಲ್ಲವೇ ಎಂಬುದನ್ನು ತೀರ್ಮಾನಿಸಬೇಕಾಗುತ್ತದೆ. ಇನ್ನಿತರ ಪ್ರಕರಣಗಳಲ್ಲಿ ಸಂಸತ್ತು ತೀರ್ಮಾನಿಸಬೇಕಾಗುತ್ತೆ. ಹಣಕಾಸು ಮಂತ್ರಾಲಯವಾಗಲಿ ಅಥವಾ ಸರ್ಕಾರವಾಗಲಿ ಈ ವಿಷಯವನ್ನು ತೀರ್ಮಾನಿಸಬಹುದೆಂದು ನನಗನಿಸುತ್ತಿಲ್ಲ.

**ಶ್ರೀ ಸಿಧ್ವಾ :** ಸಂಸತ್ ಸದಸ್ಯರ ಭತ್ಯೆಯ ಮಿತಿ ಏನಿದೆ ಅದರೊಳಗೇ ಭತ್ಯೆಯನ್ನು ಪಡೆದಿದ್ದರೆ, ಅದನ್ನು ಅನರ್ಹತೆಯೆಂದು ಪರಿಗಣಿಸಬಾರದೆಂದು ಒಪ್ಪಿಕೊಳ್ಳಲಾಗುವುದಿಲ್ಲವೇ? ಈ ವಿಷಯವನ್ನು ಈ ಸದನ ನಿರ್ಧರಿಸಬೇಕೇ ಹೊರತು ಡಾ. ಅಂಬೇಡ್ಕರವರಲ್ಲ.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ಈ ಚರ್ಚೆಯನ್ನು ಆಲಿಸಿದ ಮೇಲೆ, ಯಾವುದೇ ಸಮಿತಿಯಲ್ಲಿ

ಸಂಸತ್ ಸದಸ್ಯರು ಇದ್ದರೆ, ಸಂಸತ್ ಸದಸ್ಯರಾಗಿ ಅವರು ತಾನು ಪಡೆಯಬಹುದಾದುದಕ್ಕಿಂತಲೂ ಹೆಚ್ಚಿಗೆ ಭತ್ಯೆಯನ್ನು ಪಡೆದಿರದಿದ್ದರೆ, ಅವರು ಅನರ್ಹರಾಗಿದ್ದಾರೆಂದು, ಈವರೆಗೆ ಏನೇ ಒಳಗೊಂಡಿದ್ದರೂ, ಭಾವಿಸತಕ್ಕದ್ದಲ್ಲವೆಂದು ಈಗ ಈ ವಿಧೇಯಕದಲ್ಲಿ ಒಂದು ಕಲಮನ್ನು ಸೇರಿಸಲು ಯಾವುದೂ ನಮ್ಮನ್ನು ತಡೆಯುವುದಿಲ್ಲವೆಂದು ಈ ಹಂತದಲ್ಲಿ ಇಷ್ಟು ಮಾತ್ರವೇ ಹೇಳಬಲ್ಲೆ. ಇದೊಂದು ಸಲಹೆ ಅಷ್ಟೇ. ಸರ್ಕಾರವು ಸದಸ್ಯರುಗಳಿಗೆ ಈ ಪ್ರಕರಣದಲ್ಲಿ ಆಸೆ ತೋರಿಸುತ್ತಿದೆಯೆಂಬ ಆಕ್ಷೇಪಣೆಗೆ ಆಸ್ಪದ ಇರುವುದಿಲ್ಲ. ಏಕೆಂದರೆ ೪೦ ರೂಪಾಯಿಗಿಂತ ಹೆಚ್ಚಿಗೆ ಕೊಟ್ಟಿಲ್ಲ. ಆದರೆ, ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದಾಗ, ಆತ ಬೇರೆ ಪ್ರಮಾಣದ ಭತ್ಯೆಯನ್ನು, ಬಹುಶಃ, ತಾನು ಪಡೆಯುವ ಸಂಬಳಕ್ಕನುಸಾರ ಪಡೆಯುತ್ತಾನೆಂಬುದೇ ಇಲ್ಲಿನ ಸಮಸ್ಯೆ. ಆದರೂ, ಈ ವಿಷಯವನ್ನು ಪರಿಶೀಲಿಸಬಹುದಾಗಿದೆ. ಆದ್ದರಿಂದ, ಇದನ್ನು ನಾನು ನಾಳೆಗೆ ಮುಂದೂಡುತ್ತೇನೆ ಮತ್ತು ಶ್ರೀ ನಾರಾಯಣ ಮಹತಾರ ತಿದ್ದುಪಡಿಯೊಂದಿಗೆ ಆರಂಭಿಸುತ್ತೇನೆ.

**ಶ್ರೀ ಕಾಮತ್ :** ಮಾನ್ಯರೆ, ರಾಜ್ಯಮಂತ್ರಿಗಳ ಹಾಗೂ ಉಪ ಮಂತ್ರಿಗಳ ಹುದ್ದೆಗಳು ಈ ಅನುಚ್ಛೇದದ ಮೇರೆಗೆ ಅನರ್ಹತೆಗೆ ಒಳಪಡುವುದಿಲ್ಲವೆಂದು ಕಳೆದ ವರ್ಷ ಈ ಸದನ ತೀರ್ಮಾನಿಸಿತ್ತು. ಆದ್ದರಿಂದ, ಈಗಿನ ರಾಜ್ಯಮಂತ್ರಿಗಳು ಮತ್ತು ಉಪ ಮಂತ್ರಿಗಳು ಯಾವುದೇ ಅನರ್ಹತೆಗೆ ಒಳಗಾಗುವುದಿಲ್ಲ. ಆದರೆ, ಹೊಸದಾಗಿ ಸೃಜಿಸಿರುವ ಸಂಸದೀಯ ಕಾರ್ಯದರ್ಶಿಗಳ ಬಗ್ಗೆ ಹೇಗೆ ?

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ಮಸೂದೆಯಲ್ಲಿ ಅವರುಗಳನ್ನೂ ಸೇರಿಸಲಾಗುತ್ತದೆ.

**ಡಾ. ಅಂಬೇಡ್ಕರ್** : ಸರ್, ತಾವು ಇದನ್ನು ನಾಳೆ ಎತ್ತಿಕೊಳ್ಳಬಹುದೆಂದು ನೀಡಿರುವ ಸಲಹೆ ಬಗ್ಗೆ ಹೇಳುವುದಾದರೆ, ಈ ವಿಷಯವನ್ನು ನಾಳೆ ಕೈಗೆತ್ತಿಕೊಳ್ಳುವುದನ್ನು ಒಪ್ಪಿಕೊಳ್ಳಲು ನನ್ನಿಂದ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ. ಈ ವಿಷಯವನ್ನು ಮಂತ್ರಾಲಯಗಳಿಗೆ ಮತ್ತೆ ಕಳುಹಿಸಬೇಕಾಗುತ್ತದೆ, ಅದಕ್ಕೆ ಸಮಯವೂ ಹಿಡಿಯುತ್ತದೆ. ಆದ್ದರಿಂದ ಇದನ್ನು ಹಾಗೆಯೇ ಇಟ್ಟರೆ, ಮುಂದೊಂದು ಅನುಕೂಲಕರ ದಿನದಂದು ಕೈಗೆತ್ತಿಕೊಳ್ಳಬಹುದಾಗಿದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಇತರೆ ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳಬಹುದೆಂಬುದು ಮಾನ್ಯ ಕಾನೂನು ಸಚಿವರ ಇಚ್ಛೆಯೇ ?

**ಡಾ. ಅಂಬೇಡ್ಕರ್**: ತಿದ್ದುಪಡಿಗಳನ್ನು ಮಂಡಿಸಬಹುದು. ಶ್ರೀ ನಾರಾಯಣ ಮಹತಾರ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ನಾರಾಯಣ ಮಹತಾ (ಬಿಹಾರ):** ಮಾನ್ಯರೆ, ನಾನು ಈ ಮುಂದಿನದನ್ನು ಮಂಡಿಸಲು ಅನುಮತಿ ಕೋರುತ್ತೇನೆ:

ಪುಟ ೧ ರಲ್ಲಿ, ೨೩ನೇ ಸಾಲಿನಲ್ಲಿ ಬರುವ "ಮಾರ್ಚ್ ೧೯೫೧" ಪದಗಳ ನಂತರ :

"ಅಥವಾ ೧೯೫೨ ರ ಮಾರ್ಚ್ ೩೧ನೇ ದಿನಕ್ಕೆ ಅಂತ್ಯವಾಗುವ ವರ್ಷಕ್ಕೆ "

ಎಂಬ ಪದವನ್ನು ಸೇರಿಸಬೇಕು"

**ಶ್ರೀ ಸಿಧ್ವಾ** : ಆದರೆ, ಮಾನ್ಯರೆ, ಈ ತಿದ್ದುಪಡಿ ನೋಟೀಸು ನಮಗೆ ಬಂದೇ ಇಲ್ಲ. ಸುತ್ತೋಲೆಯಂತೆ ನಮಗೆ ಅದನ್ನು ಕಳುಹಿಸಿಲ್ಲ.

**ಡಾ. ಅಂಬೇಡ್ಕರ್** : ಅದೊಂದು ಸಣ್ಣ ತಿದ್ದುಪಡಿ.

**ಶ್ರೀ ಸಿಧ್ವಾ** : ಮಾನ್ಯ ಕಾನೂನು ಸಚಿವರಿಗೆ ಅದು ಸಣ್ಣದೆಂದು ತೋರಬಹುದು. ಆದರೆ, ಅದು ತುಂಬಾ ಮಹತ್ವದ್ದು ಆಗಿರಬಹುದು.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ಈಗ, ಇದನ್ನು ಮುಂದೂಡಬೇಕೆಂದು ಮಾನ್ಯ ಸದಸ್ಯರು ಬಯಸಿದ್ದಾರೇನು? ೧೯೫೧ರ ಮಾರ್ಚ್‌ನಿಂದ ೧೯೫೨ ರ ಮಾರ್ಚ್ ವರೆಗೆ ಅವಧಿಯನ್ನು ವಿಸ್ತರಿಸಲು ಅದೊಂದು ಸಣ್ಣ ತಿದ್ದುಪಡಿ.

**ಶ್ರೀ ಸೋಂಧಿ :** ಇಡೀ ವಿಧೇಯಕದ ಜತೆ ಮುಂದೆ ಇದೂ ಕೂಡ ಚರ್ಚೆಗೆ ಬರಲಿ.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ೧೯೫೨ರ ಮಾರ್ಚ್‌ವರೆಗೆ ಅವಧಿಯನ್ನು ವಿಸ್ತರಿಸಲು ಇದೊಂದು ಸಣ್ಣ ತಿದ್ದುಪಡಿ. ಅದರ ಮೇಲೆ ಯಾವುದೇ ಭಾಷಣದ ಅಗತ್ಯ ಇರುವುದಿಲ್ಲ. ಅದನ್ನು ಸದನದ ಮುಂದೆ ಇಡುತ್ತೇನೆ.

ತಿದ್ದುಪಡಿಯನ್ನು ಮಂಡಿಸಲಾಗಿದೆ:

ಪುಟ ೧ ರಲ್ಲಿ, ೨೫ನೇ ಸಾಲಿನಲ್ಲಿ ಬರುವ "ಮಾರ್ಚ್ ೧೯೫೧" ಪದಗಳ ನಂತರ :

"ಅಥವಾ ೧೯೫೨ ರ ಮಾರ್ಚ್ ೩೧ನೆಯ ದಿನದಂದು ಅಂತ್ಯವಾಗುವ ವರ್ಷಕ್ಕೆ " ಎಂಬ ಪದವನ್ನು ಸೇರಿಸಬೇಕು"

**ಶ್ರೀ ಸಿಧ್ವಾ :** ಮಾನ್ಯರೆ, ಇವು, ರೈಲ್ವೆ ಸ್ಥಾಯೀ ಸಮಿತಿಯು ಚುನಾಯಿಸುವ ಸ್ಥಳೀಯ ಸಲಹಾ ಸಮಿತಿಗಳು. ಆದ್ದರಿಂದ, ಪ್ರತಿವರ್ಷವೂ ಈ ಬಗೆಯ ತಿದ್ದುಪಡಿಗಳನ್ನು ಅನರ್ಹತೆಯನ್ನು ತೊಡೆದು ಹಾಕಲು ತರಲಾಗುತ್ತದೆಯೇ ಎಂಬುದನ್ನು ತಿಳಿಯ ಬಯಸುತ್ತೇನೆ.

ಈ ವಿಷಯವನ್ನು ಸವಿವರವಾಗಿ ಚರ್ಚಿಸುವುದು ಮತ್ತು ವರ್ಷ ವರ್ಷವೂ ಚರ್ಚೆಯ ಆವಶ್ಯಕತೆ ಇರದಂಥ ಕೆಲವೊಂದು ಪ್ರತಿಪಾದನೆಯನ್ನು ರೂಪಿಸುವುದು ಒಳಿತಲ್ಲವೇನು ?

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಇದು ಹಾಲಿ ಸದಸ್ಯರಿಗೆ ಸಂಬಂಧಿಸಿರುವುದನ್ನು ಮಾನ್ಯ ಸದಸ್ಯರು ನೋಡಬಹುದು. ೧೯೫೧–೫೨ ರ ವರ್ಷ ಈಗಾಗಲೇ ಪ್ರಾರಂಭ ಆಗಿದೆ. ಇಡೀ ಅವಧಿಗೆ ಅನರ್ಹಗೊಳ್ಳುವುದನ್ನು ತೊಡೆದು ಹಾಕಲು ೧೯೫೨ ರ ಮಾರ್ಚ್ ೩೧ ರ ವರೆಗೆ ದಿನವನ್ನು ವಿಸ್ತರಿಸಬೇಕಾಗಿದೆ.

**ಡಾ. ಪಟ್ಟಾಭಿ :** ನಾವು ೧೯೫೨ ರ ಏಪ್ರಿಲ್‌ನಲ್ಲೂ ಅಧಿವೇಶನದಲ್ಲಿರುತ್ತೇವಲ್ಲ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ವಿಸ್ತರಿಸದಿದ್ದರೆ, ಸಮಿತಿಗಳಲ್ಲಿ ಸೇವೆ ಸಲ್ಲಿಸಲು ಒಪ್ಪಿಕೊಂಡಿರುವ ಸದಸ್ಯರು ತತ್‌ಕ್ಷಣವೇ ರಾಜೀನಾಮೆ ನೀಡಬೇಕಾಗುತ್ತದೆ. ಆದ್ದರಿಂದ, ೧೯೫೨ ರ ಮಾರ್ಚ್ ೩೧ರ ವರೆಗೆ ಅವಧಿಯನ್ನು ವಿಸ್ತರಿಸಲಾಗುತ್ತಿದೆ. ನಾವೀಗ ೧೯೫೧–೫೨ ರ ವರ್ಷದ ಮಧ್ಯದಲ್ಲಿದ್ದೇವೆ. ಆದ್ದರಿಂದ, ಈ ತಿದ್ದುಪಡಿ ಆವಶ್ಯಕ. ಈ ವಿಧೇಯಕವನ್ನು ಈಗ ಅಥವಾ ತರುವಾಯ ಜಾರಿಗೆ ತರಬೇಕೆನ್ನುವುದನ್ನು ಪರಿಶೀಲಿಸುವುದು ಮತ್ತು ತೀರ್ಮಾನಿಸುವುದು ಕಾನೂನು ಸಚಿವರಿಗೆ ಮತ್ತು ಈ ಸದನಕ್ಕೆ ಸೇರಿದ್ದು. ವಿವಿಧ ಪ್ರವರ್ಗಗಳ ಅನರ್ಹತೆಯನ್ನು ತೊಡೆದು ಹಾಕಲು ಶಾಸನವನ್ನು ನಾವು ತರುತ್ತಿಲ್ಲ.

**ಶ್ರೀ ಸಿಧ್ವಾ :** ಮಾನ್ಯರೆ, ತಾವು ಏನು ಹೇಳಿದ್ದಿರೋ ಅದು ನಿಜಕ್ಕೂ ಸರಿ. ಆದರೆ, ಈ ಸಲಹಾ ಸಮಿತಿಗಳು ತುಂಬಾ ಮಹತ್ವದ ಸಮಿತಿಗಳು. ಸಂಸತ್ ಸದಸ್ಯರಾಗಿ ನಾವು ರೈಲು ಮೂಲಕ ಪ್ರಯಾಣಿಕರ ಮತ್ತು ಸರಕುಗಳ ಸಾಗಣೆಯಲ್ಲಿ ಆಸಕ್ತಿ ಹೊಂದಿದ್ದೇವೆ, ಸಮಿತಿಯ ಸದಸ್ಯನಾಗಿ ವ್ಯಕ್ತಿಯು ೩೦ ರೂಪಾಯಿ ಅಥವಾ ಇನ್ನೆಷ್ಟನ್ನೋ ಪಡೆಯುವ ಮಾತ್ರಕ್ಕೇ ಅವರು ಸಂಸತ್ತಿನ ಸದಸ್ಯರಾಗಿರದಂತೆ ನಿಷೇಧಿಸಬಾರದು. ಈ ವಿಷಯದಲ್ಲಿ ರೈಲ್ವೆ ಹಣಕಾಸು ಸಮಿತಿಯೊಂದಿಗೆ ಮತ್ತು ಸಲಹಾ ಸಮತಿಯೊಂದಿಗೆ ಸಮಾಲೋಚಿಸಿಬೇಕಾಗುತ್ತದೆ. ೧೯೫೧ರ ಮಾರ್ಚ್ ದಿನಾಂಕದ ಬದಲಿಗೆ ೧೯೫೨ರ ಮಾರ್ಚ್ ದಿನಾಂಕಕ್ಕೆ

ಬದಲಾಯಿಸುವ ಈ ವಿಷಯವನ್ನು ಸಹ ಮುಂದೂಡಬಹುದಾಗಿದೆ ಮತ್ತು ಮುಂದೆ ವಿಧೇಯಕವು ನಮ್ಮ ಮುಂದೆ ಬಂದಾಗ ವಿಧೇಯಕದ ಇತರ ಉಪಬಂಧಗಳ ಜೊತೆಗೆ ಪರಿಶೀಲಿಸಬಹುದಾಗಿದೆ.

**ಡಾ. ಪಟ್ಟಾಭಿ:** "ಈಗಿನ ಸಂಸತ್ತಿನ ಅವಧಿಯಲ್ಲಿ" ಎಂದು ಹೇಳುವುದಕ್ಕಾಗುವುದಿಲ್ಲವೇ ?

**ಡಾ. ಅಂಬೇಡ್ಕರ್:** ತಿದ್ದುಪಡಿಯು ತುಂಬಾ ಸರಳವಾದುದೆಂದು ನಾನು ಭಾವಿಸಿದ್ದೇನೆ. ಅಳವಡಿಸಿಕೊಳ್ಳಬೇಕೆಂದು ತಿದ್ದುಪಡಿಯಲ್ಲಿ ಸೂಚಿಸಿರುವ ಪದಗಳನ್ನು ಮೂಲತಃ ವಿಧೇಯಕದಲ್ಲಿ ಏಕೆ ಹೇಳಿರಲಿಲ್ಲವೆಂಬುದಕ್ಕೆ ಈ ವಿಧೇಯಕವು ಬಹಳ ಹಿಂದೆಯೇ ಅಂಗೀಕೃತವಾಗುತ್ತದೆಂದು ನಿರೀಕ್ಷೆ ಇಟ್ಟುಕೊಂಡಿದ್ದೇ ಕಾರಣ. ಹಾಗಾಗಲಿಲ್ಲ. ಸದಸ್ಯರು ಮುಂದುವರಿದರು. ಲಾಭದ ಹುದ್ದೆಯ ನಿಯಮವು ಅನ್ವಯವಾಗದಂತೆ ಅವರನ್ನು ಸಂಪೂರ್ಣವಾಗಿ ಹೊರತು ಪಡಿಸಬಯಸಿದರೆ ಅವಧಿಯನ್ನು ವಿಸ್ತರಿಸುವುದು ಆವಶ್ಯಕ. ಮುಂದೆ ಏನಾಗುತ್ತದೆ ಎಂಬ ಬಗ್ಗೆ ಹೇಳುವುದಾದರೆ, ಭತ್ಯೆಗಳನ್ನು ಕಡಿಮೆ ಮಾಡಿರುವುದರಿಂದ ಯಾವ ಅನರ್ಹತೆಗೂ ಒಳಗಾಗುವುದಿಲ್ಲ.

**ಒಬ್ಬರು ಗೌರವ ಸದಸ್ಯರು :** ಕಡಿಮೆ ಎಂದರೆ ಎಷ್ಟಕ್ಕೆ ?

**ಡಾ. ಅಂಬೇಡ್ಕರ್ :** ಅದೇ ರೂ. ೨೦.

**ಸಾರಿಗೆ ಮತ್ತು ರೈಲ್ವೆ ರಾಜ್ಯ ಮಂತ್ರಿಗಳು (ಶ್ರೀ ಸಂತಾನಂ):** ನಾಳೆ ದಿನ ನಾನು ಮಾಹಿತಿ ಒದಗಿಸುತ್ತೇನೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅನರ್ಹತೆಗೆ ಒಳಗಾಗದಿರುವಂತೆ ಕಡಿಮೆ ಮಾಡಲಾಗಿದೆ. ಇದು ಪ್ರಸ್ತುತ ಸದಸ್ಯರಿಗೆ ಮಾತ್ರವೇ ಅನ್ವಯವಾಗುತ್ತದೆ.

ಸೂಚನೆ ಏನೆಂದರೆ :

ಪುಟ ೧ ರಲ್ಲಿ, ೨೩ನೇ ಸಾಲಿನಲ್ಲಿ ಬರುವ "ಮಾರ್ಚ್ ೧೯೫೧" ಪದಗಳ ನಂತರ :

> "ಅಥವಾ ೧೯೫೨ ರ ಮಾರ್ಚ್ ೩೧ನೆಯ ದಿನದಂದು ಅಂತ್ಯವಾಗುವ ವರ್ಷಕ್ಕೆ " ಎಂಬ ಪದವನ್ನು ಸೇರಿಸಬೇಕು"

ಸೂಚನೆ ಅಂಗೀಕೃತವಾಗಿದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈ ವಿಧೇಯಕದ ಉಳಿದ ಭಾಗವನ್ನು ಮಾನ್ಯ ಕಾನೂನು ಸಚಿವರು ಸದನದ ಮುಂದೆ ತರಲು ಯಾವಾಗ ಅನುಕೂಲ ಆಗುವುದೋ ಅಂಥ ದಿನಕ್ಕೆ ಇದನ್ನು ಮುಂದೂಡಲಾಗಿದೆ.

**ಪಂಡಿತ್ ಕುಂಜ್ರು :** ಮಾನ್ಯ ಕಾನೂನು ಸಚಿವರಿಗೆ ಈ ವಿಷಯದ ಬಗ್ಗೆ ಆಲೋಚಿಸಲು ಕಾಲಾವಕಾಶ ಕೊಟ್ಟಿರುವುದರಿಂದ ಅವರು ಸರಿಯಾದ ನಿರ್ಧಾರಕ್ಕೆ ಬರುತ್ತಾರೆಂಬ ನಂಬಿಕೆ ನನಗಿದೆ.

**ಡಾ॥ ಅಂಬೇಡ್ಕರ್ :** ನಾನು ಮಾನ್ಯ ಸ್ನೇಹಿತರ ಸಲಹೆಯನ್ನೇ ತುಂಬಾ ಅವಲಂಬಿಸಿದ್ದೇನೆಂದು ಹೇಳಬಯಸುತ್ತೇನೆ.

◆

# ೩೬

## *ಅಸ್ಸಾಂ (ಗಡಿಗಳ ಮಾರ್ಪಾಟು) ವಿಧೇಯಕ.

**ಮಾನ್ಯ ಡೆಪ್ಯೂಟಿ ಸ್ಪೀಕರ್** : ಅಸ್ಸಾಂ ರಾಜ್ಯದಲ್ಲಿದ್ದ ಒಂದು ತುಕಡಿ ಭೂ ಭಾಗವನ್ನು ಭೂತಾನ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದರ ಪರಿಣಾಮವಾಗಿ ಅಸ್ಸಾಂ ರಾಜ್ಯದ ಗಡಿಗಳನ್ನು ಮಾರ್ಪಡಿಸುವ ವಿಧೇಯಕವನ್ನು ಪರ್ಯಾಲೋಚನೆಗೆ ಕೈಗೆತ್ತಿಕೊಳ್ಳಬೇಕೆಂಬ ಸೂಚನೆಯನ್ನು ಮತ್ತಷ್ಟು ಪರ್ಯಾಲೋಚಿಸಲು ಈ ಸದನ ಈಗ ಉದ್ಯುಕ್ತವಾಗುತ್ತದೆ.

**ಕಾನೂನು ಸಚಿವರು ( ಡಾ. ಅಂಬೇಡ್ಕರ್ ) :**

ಭಾರತ ಒಕ್ಕೂಟಕ್ಕೆ ಸೇರಿದ ಭೂ ಭಾಗದ ಕೆಲವೊಂದು ಭಾಗಗಳನ್ನು, ಭೂತಾನಕ್ಕೆ, ನೇರವಾಗಿ ಅಲ್ಲದಿದ್ದರೂ, ಬಿಟ್ಟುಕೊಡಲು ಈ ವಿಧೇಯಕವು ಪ್ರಸ್ತಾಪಿಸಿದೆಯೆಂಬ ಸಂಗತಿಯನ್ನು ಗಮನಿಸಿದರೆ, ಈ ವಿಧೇಯಕವನ್ನು ಅಂಗೀಕರಿಸಲು ಸಂಸತ್ತಿಗೆ ಯಾವ ಅಧಿಕಾರವೂ ಇಲ್ಲವೆಂದು ಕೆಲವರು ಮಾನ್ಯ ಸದಸ್ಯರು ಕೆಲವೊಂದು ಅಂಶವನ್ನು ಎತ್ತಿದ್ದಾಗ ನಾನು ಸದನದಲ್ಲಿ ಹಾಜರಿರಲಿಲ್ಲ. ಅದಕ್ಕಾಗಿ ವಿಷಾದಿಸುತ್ತೇನೆ. ಸರ್ಕಾರವು ತೆಗೆದುಕೊಂಡ ನಿಲುವನ್ನು ಸಮರ್ಥಿಸುತ್ತ ಈ ವಿಷಯದ ಮೆಲೆ ಸ್ನೇಹಿತರಾದ ಶ್ರೀ ಪ್ರಕಾಶ್‌ರವರು ಸದನಕ್ಕೆ ಕೆಲವೊಂದು ನಿವೇದನೆ ಸಹ ಮಾಡಿಕೊಂಡಿದ್ದಾರೆ. ಆದರೆ, ಈ ಅಂಶದ ಮೇಲೆ ಹೇಳಿಕೆ ನೀಡಬೇಕೆಂದು ಸದನವು ಅಪೇಕ್ಷಿಸಿದೆಯೆಂದು ನನಗೆ ತಿಳಿಸಲಾಯಿತು.

ಈ ಅಂಶ ತುಂಬಾ ಸರಳವಾದುದೆಂದು ತೋರುತ್ತದೆ. ವಿಷಯವನ್ನು ಚನ್ನಾಗಿ ಅರ್ಥ ಮಾಡಿಕೊಳ್ಳವ ಸಲುವಾಗಿ, ಈ ಸಂಸತ್ತಿನ ಶಾಸನ ರಚನಾಧಿಕಾರಗಳ ಅರ್ಥವಿವರಣೆ ಮಾಡಿರುವ, ಏಳನೇ ಅನುಸೂಚಿಯಲ್ಲಿ ಒಳಗೊಂಡಿರುವ ಪಟ್ಟಿ ೧ನ್ನು ಉಲ್ಲೇಖಿಸಿ ಮಾತು ಪ್ರಾರಂಭಿಸುವುದು ಒಳ್ಳೆಯದೆಂದು ಭಾವಿಸಿದ್ದೇನೆ. ಪಟ್ಟಿ ೧ರಲ್ಲಿ ನಮೂದು ೧೪ರ ಮತ್ತು ನಮೂದು ೧೫ರ ಬಗ್ಗೆ ಹೇಳುತ್ತೇನೆ. ನಮೂದು ೧೪ ಕೌಲುಗಳನ್ನು ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದೆ. ನಮೂದು ೧೫, ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿದೆ. ಎತ್ತಿರುವ ಪ್ರಶ್ನೆಯು "ಕೌಲುಗಳನ್ನು ಮಾಡಿಕೊಳ್ಳುವುದು" ಹಾಗೂ "ಯುದ್ಧ ಮತ್ತು ಶಾಂತಿ" ಪದಗಳ ಅರ್ಥಾನ್ವಯದ ಮೇಲೆಯೇ ಬಹುತೇಕವಾಗಿ ಕೇಂದ್ರೀಕೃತವಾಗಿದೆ. ಈ ಬಾಬುಗಳಲ್ಲಿ ಏನೇನು ಒಳಗೊಳ್ಳುತ್ತವೆ? ಯುನೈಟೆಡ್ ಸ್ಟೇಟ್ಸ್ ನಲ್ಲಿ ಮೊಟ್ಟಮೊದಲ ಬಾರಿಗೆ ಈ ವಿಷಯ ಅರ್ಥಾನ್ವಯಕ್ಕಾಗಿ ಉದ್ಭವವಾದಾಗ ಬಹು ಸುದೀರ್ಘ ಚರ್ಚೆ ಆಗಿದೆ. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವ ಸಲುವಾಗಿ, ಕೌಲುಗಳನ್ನು ಮಾಡಿಕೊಳ್ಳುವುದರಲ್ಲಿ ಭೂಭಾಗವನ್ನು ಬಿಟ್ಟುಕೊಡುವ ಅಧಿಕಾರವೂ ಸೇರುತ್ತದೆಂದು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಒಪ್ಪಿಕೊಳ್ಳಲಾಗಿದೆಯೆಂದು ಹೇಳಬಯಸುತ್ತೇನೆ.

**ಪಂಡಿತ್ ಎಂ.ಬಿ. ಭಾರ್ಗವ (ಅಜ್ಮೀರ್) :** ಅಲ್ಲಿ, ಏನಾದರೂ ನಿಷೇಧ ಇದೆಯೇ ?

**ಡಾ. ಅಂಬೇಡ್ಕರ್ :** ಮಾನ್ಯ ಸ್ನೇಹಿತರು ಅಪೇಕ್ಷಿಸಿದರೆ, ಸಾಧಾರ ಪ್ರಮಾಣಗಳನ್ನು ಹೇಳುತ್ತೇನೆ.

---

* ಸಂ.ಚ. ಸಂಪುಟ ೧೪, ಭಾಗ II, ೮ನೇ ಆಗಸ್ಟ್ ೧೯೫೧, ಪುಟಗಳು ೧೦೩೩–೧೧೧೮

ಬೇಕಾದಷ್ಟು ನನ್ನಲ್ಲಿವೆ. ಸದನಕ್ಕೆ ಬೇಸರ ಉಂಟುಮಾಡ ಬಯಸಲಾರೆ. ಸಂಕ್ಷಿಪ್ತವಾಗಿ ಹೇಳುತ್ತೇನೆ.

ಕೌಲುಗಳನ್ನು ಮಾಡಿಕೊಳ್ಳುವುದರಲ್ಲಿ ಭೂಭಾಗವನ್ನು ಬಿಟ್ಟುಕೊಡುವುದೂ ಸೇರುತ್ತದೆ. ಹಾಗೆಯೇ, ಆ ನಮೂದೇ ಅಲ್ಲದೆ, ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿದ ನಮೂದಿನಲ್ಲಿ ಭೂಭಾಗವನ್ನು ಬಿಟ್ಟುಕೊಡುವುದೂ ಸೇರುತ್ತದೆ. ಏಕೆಂದರೆ, ವಿದೇಶಿ ರಾಷ್ಟ್ರದ ಮೇಲೆ ಯುದ್ಧದಲ್ಲಿ ತೊಡಗಿರುವ ರಾಷ್ಟ್ರವು ಕೆಲವೊಂದು ಸಂದರ್ಭ ಸನ್ನಿವೇಶಗಳಲ್ಲಿ, ಶಾಂತಿ ಸ್ಥಾಪನೆ ಸಲುವಾಗಿ ಆದ ಶಾಂತಿ ಒಪ್ಪಂದದ ನಿಬಂಧನೆಗಳಲ್ಲಿ ಮತ್ತು ಷರತ್ತುಗಳಲ್ಲಿ ಒಂದು ಷರತ್ತಿನ ಪ್ರಕಾರ ತನ್ನ ಭೂಭಾಗದ ಒಂದು ಭಾಗವನ್ನು ಬಿಟ್ಟುಕೊಡಬೇಕಾಗುತ್ತದೆನ್ನುವುದನ್ನು ಅಲ್ಲಗಳೆಯುವಂತಿಲ್ಲ. ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿದ ನಮೂದಿನ ಅರ್ಥಾನ್ವಯವನ್ನು ಯಾರೂ ಪ್ರಶ್ನಿಸಲಾರರು ಅಥವಾ ಅಲ್ಲಗಳೆಯಲಾರರು ಎಂಬುದು ನನ್ನ ದೃಢ ನಂಬಿಕೆ. ಈಗ, ಕೆಲವೊಂದು ಸನ್ನಿವೇಶಗಳಲ್ಲಿ, ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿದ ನಮೂದು ಮತ್ತು ಕೌಲುಗಳನ್ನು ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ನಮೂದು, ಭೂಭಾಗವನ್ನು ಬಿಟ್ಟು ಕೊಡುವುದನ್ನು ಅವಶ್ಯಕವಾಗಿ ಒಳಗೊಳ್ಳಲೇ ಬೇಕೆನ್ನುವುದಾದರೆ, ಈ ನಮೂದುಗಳ ಒಳಾಂಶಗಳನ್ನು, ಭೂಭಾಗವನ್ನು ಬಿಟ್ಟುಕೊಡುವುದನ್ನು ಒಳಗೊಳ್ಳುತ್ತವೆಂದು ಭಾವಿಸಲೇ ಬೇಕಾಗುತ್ತದೆ. ಆದ್ದರಿಂದ, ಸಂವಿಧಾನದ ಪ್ರಧಾನ ಭಾಗದ ಉಳಿದ ಕಡೆ, ಭೂಭಾಗವನ್ನು ಬಿಟ್ಟುಕೊಡಲು ಸಂಸತ್ತಿಗೆ ನಿರ್ದಿಷ್ಟ ಅಧಿಕಾರಗಳನ್ನು ಪ್ರದಾನ ಮಾಡಿರುವ ಯಾವ ನಿರ್ದಿಷ್ಟ ಅನುಚ್ಛೇದವೂ ಇಲ್ಲವೆಂಬ ಸಂಗತಿ ಇದ್ದರೂ, ನನ್ನ ಅಭಿಪ್ರಾಯ ಏನೆಂದರೆ, ನಮೂದುಗಳು ೧೪ ಮತ್ತು ೧೫ ಇವೆಯಲ್ಲ, ಅವೇ ಸಾಕಷ್ಟಾಗುತ್ತದೆ................

**ಶ್ರೀ ಕಾಮತ್ (ಮಧ್ಯಪ್ರದೇಶ) :** ಇಲ್ಲ, ಇಲ್ಲ

**ಡಾ. ಅಂಬೇಡ್ಕರ್ :** ಭೂಭಾಗವನ್ನು ಬಿಟ್ಟುಕೊಡಲು ಸಂಸತ್ತಿಗೆ ಅಧಿಕಾರ ಕೊಡುವ ..................... ಮಾನ್ಯ ಸ್ನೇಹಿತರು ಕೆಲವರು ಅದು ಸರಿ ಅಲ್ಲವೆಂದು ಹೇಳುತ್ತ ತಲೆ ಅಲ್ಲಾಡಿಸುತ್ತಿದ್ದಾರೆ. ಆದರೆ, ನನ್ನ ಅಭಿಪ್ರಾಯಕ್ಕೆ ನಾನು ಬದ್ಧನಾಗಿದ್ದೇನೆ.....................................

**ಶ್ರೀ ಕಾಮತ್ :** ನಮ್ಮ ಅಭಿಪ್ರಾಯಗಳಿಗೆ ನಾವೂ ಸಹ ಬದ್ಧರಾಗಿದ್ದೇವೆ.

**ಡಾ. ಅಂಬೇಡ್ಕರ್ :** ನಾನು ಏನು ಹೇಳುತ್ತಿದ್ದೇನೆಯೋ ಅದು ವಾಸ್ತವಾಂಶ, ಸಂವಿಧಾನದಲ್ಲಿ ಪರಿಣಿತರಾದ ಎಲ್ಲ ಖ್ಯಾತ ನ್ಯಾಯವಾದಿಗಳು ಮತ್ತು ಇದೇ ಬಗೆಯ ಅಧಿಕಾರ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಚಾಲ್ತಿಯಲ್ಲಿದ್ದ, ಅಲ್ಲಿನ ಸುಪ್ರೀಂಕೋರ್ಟು ಒಪ್ಪಿಕೊಂಡಿದೆ.

**ಶ್ರಿ ಸಿಧ್ವಾ (ಮಧ್ಯಪ್ರದೇಶ) :** ನಮ್ಮ ಸುಪ್ರೀಂಕೋರ್ಟು ?

**ಡಾ. ಅಂಬೇಡ್ಕರ್ :** ಆದ್ದರಿಂದ, ಸದನಕ್ಕೆ ನಾನು ನಿವೇದನೆ ಮಾಡಬಯಸುವ ಮೊದಲನೇ ಅಂಶ ಏನೆಂದರೆ, ಪಟ್ಟಿ ೧ ರಲ್ಲಿರುವ ನಮೂದು ೧೪ ಮತ್ತು ನಮೂದು ೧೫ರ ಬಗ್ಗೆ ಹೇಳುವುದಾದರೆ, ಭೂಭಾಗವನ್ನು ಬಿಟ್ಟುಕೊಡುವ ಉದ್ದೇಶಕ್ಕಾಗಿ ಸಂಸತ್ತಿಗೆ ಅತ್ಯಂತ ವ್ಯಾಪಕವಾದ ಅಧಿಕಾರಗಳನ್ನು ಪ್ರದಾನ ಮಾಡಲಾಗಿದೆ.

ಸಂಸತ್ತಿನ ಕೆಲವರು ಸದಸ್ಯರಿಗೆ, ನಾನು ಏನು ಹೇಳುತ್ತಿದ್ದೇನೆಯೋ ಅದು, ಇಲ್ಲಿ ಮನವರಿಕೆಯಾಗುತ್ತಿಲ್ಲವೆಂಬುದು ಅಥವಾ ಅದನ್ನು ಅವರು ಒಪ್ಪಿಕೊಳ್ಳಲು ಸಿದ್ದರಿಲ್ಲವೆಂಬುದು ತೋರುತ್ತಿರುವುದರಿಂದ, ಈ ಅಂಶವನ್ನು ಇನ್ನಷ್ಟು ವಿವರವಾಗಿ ಹೇಳಬಯಸುತ್ತೇನೆ. ಸಂಯುಕ್ತ ಸಂಸ್ಥಾನಗಳ ಸಂವಿಧಾನವು, ಒಂದರ್ಥದಲ್ಲಿ, ತುಂಬಾ ಕಠಿಣವಾದ ಸಂವಿಧಾನವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಸರಳ ಕಾರಣ ಇಷ್ಟೇ, ಸಂಯುಕ್ತ ಸಂಸ್ಥಾನಗಳ ರಾಜ್ಯಗಳು, ಭಾರತ ಒಕ್ಕೂಟದ ಅಂಗ ಭಾಗಗಳಾಗಿರುವ

ರಾಜ್ಯಗಳಿಗಿಂತಲೂ ಹೆಚ್ಚು ಸ್ವಾತ್ರಂತ್ಯ ಪರಮಾಧಿಕಾರ ಉಳ್ಳವುಗಳು. ಸಂಯುಕ್ತ ಸಂಸ್ಥಾನದಲ್ಲಿ ಅಡಕವಾಗಿರುವ ರಾಜ್ಯಗಳು ಕಾಂಗ್ರೆಸ್‌ಗೆ ವಹಿಸಿಕೊಟ್ಟಿರುವ ಅಧಿಕಾರಗಳೇ ಕಾಂಗ್ರೆಸ್‌ನ ಅಧಿಕಾರದ ಮೂಲ. ಅದು, ಪ್ರತ್ಯಾಯೋಜಿತ ಅಧಿಕಾರಗಳೆಂದು ಯಾವುವನ್ನು ಕರೆಯಲಾಗಿದೆಯೋ, ಆ ಪ್ರತ್ಯಾಯೋಜಿತ ಅಧಿಕಾರಗಳಷ್ಟನ್ನೇ ಉಳ್ಳ ಸರ್ಕಾರವಷ್ಟೇ ಅಲ್ಲ, ಪಟ್ಟಿ ಮಾಡಿರುವ ಅಧಿಕಾರಗಳನ್ನು ಉಳ್ಳ ಸರ್ಕಾರವೂ ಹೌದು. ನಮ್ಮ ಸಂವಿಧಾನದಲ್ಲಿರುವಂತೆ, ಸಂಯುಕ್ತ ಸಂಸ್ಥಾನಗಳ ಕೇಂದ್ರ ಸರ್ಕಾರದಲ್ಲಿ ಉಳಿಕೆ ಅಧಿಕಾರ ಎನ್ನುವಂಥಾದ್ದು ಯಾವುದೂ ಇಲ್ಲ. ಈ ವಸ್ತು ಸ್ಥಿತಿಯಿಂದಾಗಿ ಸಂಯುಕ್ತ ಸಂಸ್ಥಾನಗಳಲ್ಲಿರುವ ರಾಜ್ಯಗಳು ತಮ್ಮ ತಮ್ಮ ರಾಜ್ಯ ಕ್ಷೇತ್ರಗಳ ಧಣಿಗಳಾಗಿವೆ. ಕೆಲವೊಂದು ಸೀಮಿತ ವಿಷಯಗಳಿಗೆ ಸಂಬಂಧಪಟ್ಟಂತೆ ಹೊರತು ಆ ರಾಜ್ಯಗಳ ಭೂಭಾಗಗಳ ಮೇಲೆ ಸಂಯುಕ್ತ ಸಂಸ್ಥಾನಗಳ ಕೇಂದ್ರ ಸರ್ಕಾರಕ್ಕೆ ಯಾವ ಅಧಿಕಾರವೂ ಇಲ್ಲ. ಆ ನಿರ್ದಿಷ್ಟ ದಾಖಲೆಯಲ್ಲಿ ಒಂದು ಹಂತದಲ್ಲಿ ಅರ್ಥ ವಿವರಣೆ ಇದೆ. ಅದರ ಪ್ರಕಾರ ಸಂಯುಕ್ತ ಸಂಸ್ಥಾನಗಳ ಸರ್ಕಾರಕ್ಕೆ ಕೌಲುಗಳನ್ನು ಮಾಡಿಕೊಳ್ಳಲು ಇರುವ ಅಧಿಕಾರವು, ಭೂಭಾಗವನ್ನು ಬಿಟ್ಟುಕೊಡುವ ಅಧಿಕಾರವನ್ನು ಒಳಗೊಳ್ಳುವುದಾದರೂ, ರಾಜ್ಯಕ್ಕೆ ಸೇರಿದ ಭೂಭಾಗವನ್ನು ಬಿಟ್ಟುಕೊಡುವ ಅಧಿಕಾರವನ್ನು ಅದು ಒಳಗೊಳ್ಳುವಂತಿಲ್ಲ. ಬೇರೆ ಮಾತಿನಲ್ಲಿ ಹೇಳುವುದಾದರೆ, ಸಂಯುಕ್ತ ಸಂಸ್ಥಾನಗಳಿಗೆ ಕೌಲು ಮಾಡಿಕೊಳ್ಳಲು ಇರುವ ಅಧಿಕಾರವು ರಾಜ್ಯಗಳ ಅಂತರ್ನಿಹಿತ ಹಕ್ಕುಗಳ ಸಿದ್ಧಾಂತಕ್ಕೆ ಒಳಪಟ್ಟಿದೆ. ಅದು ಹೊಂದಿರಬಹುದಾದ, ಆಕ್ರಮಿಸಿಕೊಂಡಿರಬಹುದಾದ, ಸಂಯುಕ್ತ ಸಂಸ್ಥಾನಗಳ ರಾಜ್ಯ ಕ್ಷೇತ್ರಗಳೆಂದು ಸಂಯುಕ್ತ ಸಂಸ್ಥಾನಗಳಲ್ಲಿ ಪರಿಗಣಿಸಿರುವಂಥ ಇತರೆ ಭೂಭಾಗವನ್ನು ಅದು ವರ್ಗಾವಣೆ ಮಾಡಬಹುದೇ ಹೊರತು ಸಂಯುಕ್ತ ಸಂಸ್ಥಾನಗಳ ಅಂಗ ಭಾಗಗಳನ್ನಲ್ಲ. ಆ ಸಿದ್ಧಾಂತವನ್ನು ನಾನು ಈ ಮೊದಲೇ ಹೇಳಿದಂತೆ, ಸಂಯುಕ್ತ ಸಂಸ್ಥಾನಗಳನ್ನು ಬಹಳ ವರ್ಷಗಳವರೆಗೆ ಪ್ರತಿಪಾದಿಸಲಾಗುತ್ತಿತ್ತು. ಕೌಲು ಮಾಡಿಕೊಳ್ಳುವ ಅಧಿಕಾರವು ಎಷ್ಟೊಂದು ಅಪರಿಮಿತವಾದುದೆಂದರೆ, ಯುದ್ಧ ಮತ್ತು ಶಾಂತಿ ನಮೂದಿನ ಪ್ರಕಾರ ಅಥವಾ ಕೌಲು ಮಾಡಿಕೊಳ್ಳುವ ಅಧಿಕಾರದ ಮೇರೆಗೆ ಇಡೀ ರಾಜ್ಯವನ್ನು ವರ್ಗಾಯಿಸಬಹುದೆಂಬ ಮತ್ತು ಬಿಟ್ಟುಕೊಡಬಹುದೆಂಬ ನಿಲುವಿಗೆ ಸಂಯುಕ್ತ ಸಂಸ್ಥಾನಗಳ ಸುಪ್ರೀಂಕೋರ್ಟು ಬಂದಿತು.

**ಶ್ರೀ ಕಾಮತ್ :** ಹಾಗೆ ಯಾವ ರಾಜ್ಯವನ್ನು ಬಿಟ್ಟು ಕೊಡಲಾಗಿದೆ ?

**ಡಾ. ಅಂಬೇಡ್ಕರ್ :** ಅದನ್ನು ಹೇಳಲಾರೆ. ಆದರೆ, ಇಡೀ ವಿವರವನ್ನು ಮತ್ತು ಉಲ್ಲೇಖವನ್ನು ಸಹ ಕೊಡಬಲ್ಲೆ. ಸಂಯುಕ್ತ ಸಂಸ್ಥಾನಗಳ ಸಂವಿಧಾನದ ಮೇಲೆ ವಿಲ್ಲೊಬೈ ರಚಿಸಿದ ಗ್ರಂಥದಲ್ಲಿ ಪುಟ ೫೭೨ ರಿಂದ ಆ ಸಂಪುಟದ ಕೊನೆಯವರೆಗೆ ವಿವರ ಇದೆ. ಆದರೂ, ಅದೂ ಸಾಲದು ಎಂದು ನನ್ನ ಅನಿಸಿಕೆ. ಆ ಸಂಪುಟದ ಅಧ್ಯಾಯ XXXV ರಲ್ಲಿ ಆ ವಿವರ ಇದೆ, ಈ ಎಲ್ಲ ಅಂಶಗಳ ವಿವರಗಳಿರುವುದನ್ನು ಚರ್ಚೆ ಆಗಿರುವುದನ್ನು ತಾವು ನೋಡಬಹುದು. ಸನ್ಮಾನ್ಯ ನ್ಯಾಯಮೂರ್ತಿ ಸ್ಟೋರಿಯವರ – ಸಂವಿಧಾನಾತ್ಮಕ ಕಾನೂನಿನಲ್ಲಿ ಆಸಕ್ತಿಯುಳ್ಳ ಬಹುತೇಕ ಸದಸ್ಯರಿಗೆ ಅವರ ಹೆಸರು ಚೆನ್ನಾಗಿ ಗೊತ್ತೇ ಇರುತ್ತದೆ. ಸಂವಿಧಾನಾತ್ಮಕ ಕಾನೂನಿನಲ್ಲಿ ಪ್ರಕಾಂಡ ವಿದ್ವಾಂಸರಲ್ಲಿ ಅವರೂ ಒಬ್ಬರು – ಅತ್ಯಮೂಲ್ಯ ಅಭಿಪ್ರಾಯವೂ ಇದೆ. ಅಧ್ಯಾಯವು ಪುಟ ೫೬೧ ರಿಂದ ಪ್ರಾರಂಭವಾಗುತ್ತದೆ, ನಿರ್ದಿಷ್ಟ ನಮೂದುಗಳು ೩೧೧, ೩೧೨ ನೇ ಪ್ಯಾರಾಗ್ರಾಫ್‌ಗಳಲ್ಲಿ ಮತ್ತು ೩೧೭ ನೇ ವರೆಗಿನ ಇತರ ಪ್ಯಾರಾಗ್ರಾಫ್‌ಗಳಲ್ಲಿ ಇವೆ.

ಆದ್ದರಿಂದ, ನನ್ನ ಮೊದಲ ನಿವೇದನೆ ಏನೆಂದರೆ, ನಿನ್ನೆ ಎತ್ತಿದ ಅಂಶದ ಬಗ್ಗೆ ಹೇಳುವುದಾದರೆ, ಆ ಸಂಸತ್ತಿಗೆ ಯಾವ ಅಧಿಕಾರವು ಇಲ್ಲ, ಆ ಅಂಶಕ್ಕೆ ಕಾನೂನಿನಲ್ಲಿ ಯಾವ ಆಧಾರವೂ ಇಲ್ಲ, ಆದರೆ, ಈ ಸಂಸತ್ತಿಗೆ ಭೂಭಾಗವನ್ನು ಬಿಟ್ಟುಕೊಡಲು ಮತ್ತು ಹಾಗೂ ಭೂಭಾಗವನ್ನು ಬಿಟ್ಟುಕೊಟ್ಟಿದ್ದರ ಪರಿಣಾಮವಾಗಿ

ಒಕ್ಕೂಟದ ರಾಜ್ಯಗಳ ಗಡಿಗಳ ಒಳಗೆ ಹೊಂದಾಣಿಕೆ ಮಾಡಲು ಹೇರಳ ಅಧಿಕಾರ ಇದೆಯೆಂದು ಬಿನ್ನವಿಸಿಕೊಳ್ಳುತ್ತೇನೆ.

ಈಗ, ಮತ್ತಷ್ಟು ಪರ್ಯಾಲೋಚನೆಗೆ ಒಳಗಾಗಿರುವ ಪ್ರಶ್ನೆ ಏನೆಂದರೆ ರಾಷ್ಟ್ರಪತಿಯವರು ಈ ವಿಷಯವನ್ನು ಸಂಸತ್ತಿನ ಮುಂದೆ ತರುವುದು ಆವಶ್ಯಕವೇ ಅಥವಾ ತಮಗಿರುವ ಕಾರ್ಯಕಾರಿ ಅಧಿಕಾರವನ್ನು ಚಲಾಯಿಸಿ ಈ ವಿಷಯವನ್ನು ಅವರೇ ವಿಲೇ ಮಾಡಬಹುದೇ? ಅದೇ ಸಿದ್ಧಾಂತವು ಇಂಗ್ಲೆಂಡಿನಲ್ಲಿ ಚಾಲ್ತಿಯಲ್ಲಿದೆ. ದೊರೆಯು ಭೂಭಾಗವನ್ನು ಬಿಟ್ಟುಕೊಡಬಹುದು, ಹಾಗೆ ಮಾಡಲು ವಾಸ್ತವವಾಗಿ ಅದು ದೊರೆಗೆ ಇರುವ ವಿಶೇಷ ಅಧಿಕಾರವೆಂದು ಈಗ ಪ್ರಾಸಂಗಿಕವಾಗಿ ಹೇಳಬಯಸುತ್ತೇನೆ.

**ಶ್ರೀ ಕಾಮತ್ :** ಬಹುಶಃ, ಅದು ಅಲಿಖಿತ

**ಡಾ. ಅಂಬೇಡ್ಕರ್ :** ಅದು ಹೇಗೇ ಇರಲಿ, ಸಿದ್ಧಾಂತ ಇದ್ದೇ ಇದೆ.

**ಶ್ರೀ ಕಾಮತ್ :** ಇಂಗ್ಲೆಂಡ್ ಸಂವಿಧಾನ ಅಲಿಖಿತ ಸಂವಿಧಾನ. ಅದೇ ಸಮಸ್ಯೆ.

**ಡಾ. ಅಂಬೇಡ್ಕರ್ :** ಅದೇನು ಮುಖ್ಯ ಅಲ್ಲ. ಮಾನ್ಯ ಸ್ನೇಹಿತರು ಸಂವಿಧಾನದ ೩ನೇ ಅನುಚ್ಛೇದವನ್ನು ಅವಲಂಬಿಸುತ್ತಿದ್ದಾರೆಂದು ಕಾಣುತ್ತದೆ.

## ಅಪರಾಹ್ನ ೧೨

**ಶ್ರೀ ಕಾಮತ್ :** ಅನುಚ್ಛೇದ ೨ ಮತ್ತು ೩

**ಡಾ. ಅಂಬೇಡ್ಕರ್ :** ಅವುಗಳ ಬಗ್ಗೆ ನಾನು ಪ್ರಸ್ತಾಪಿಸುವುದೇ ಇಲ್ಲ.

**ಶ್ರೀ ಕಾಮತ್ :** ತಪ್ಪಿಸುತ್ತಿದ್ದೀರೇನು ?

**ಡಾ. ಅಂಬೇಡ್ಕರ್ :** ವಿಭಿನ್ನ ಆಧಾರದ ಮೇಲೆ ಹೇಳುತ್ತಿದ್ದೇನೆ. ಏಕೆಂದರೆ, ಈ ಅನುಚ್ಛೇದಗಳು ಭೂಭಾಗವನ್ನು ಬಿಟ್ಟುಕೊಡುವ ಬಗ್ಗೆ ಏನನ್ನೂ ಹೇಳಿಲ್ಲ. ಅವು ನಿಷೇಧಿಸಿಯೂ ಇಲ್ಲ. ಅವುಗಳಿಗೂ ಬಿಟ್ಟುಕೊಡುವುದಕ್ಕೂ ಏನೇನೂ ಸಂಬಂಧ ಇಲ್ಲ ಎಂದು ಹೇಳಲು ಸಿದ್ಧನಿದ್ದೇನೆ. ಸಂವಿಧಾನದ ರಚನೆಯಲ್ಲಿ ನಾನೂ ಇದ್ದುದ್ದರಿಂದ ಮತ್ತು ಬಹುಶಃ ಬಹಳಷ್ಟು ಸದಸ್ಯರಿಗೆ ಆಶಯ ಏನೆಂಬುದು ಗೊತ್ತಿರದಿದ್ದುರಿಂದ ಹಾಗೆ ಹೇಳಲು ಸಿದ್ಧನಿದ್ದೇನೆ.

**ಶ್ರೀ ಕಾಮತ್ :** ನಾವೆಲ್ಲರೂ ಇದ್ದೆವು.

**ಡಾ. ಅಂಬೇಡ್ಕರ್ :** ಈ ಅನುಚ್ಛೇದದ ಮೂಲ ಆಶಯ ಏನು ಎಂಬುದು, ಬಹುಶಃ ಅವರಿಗೆ ಗೊತ್ತಿಲ್ಲ. ಅದು ನನಗೆ ಚೆನ್ನಾಗಿ ಗೊತ್ತಿದೆ. ಸ್ನೇಹಿತ ಶ್ರೀ ಸಂತಾನಂರವರು ಎತ್ತಿ ತೋರಿಸಿರುವಂತೆ, ಬಿಟ್ಟುಕೊಡುವುದನ್ನು ಅದು ನಿಷೇಧಿಸುವುದಿಲ್ಲವಾದರೂ ಅದರ ಮೂಲ ಆಶಯ. ಭಾಷೆಗಳ ಆಧಾರದ ಮೇಲೆ ಸಂಸ್ಥಾನಗಳ ವರ್ಗೀಕರಣವನ್ನು ಕುರಿತದ್ದಾಗಿದೆಯೆಂದು ಹೇಳಲು ಸಿದ್ಧನಿದ್ದೇನೆ. ಆ ಕಾರಣದಿಂದಲೇ ನಾನು ಸಂವಿಧಾನದ ಆ ಅನುಚ್ಛೇದವನ್ನು ಉಲ್ಲೇಖಿಸಿಲ್ಲ. ಏಕೆಂದರೆ, ೩ನೇ ಅನುಚ್ಛೇದವನ್ನು ನಾನು ಅವಲಂಬಿಸಿದರೆ ಸರ್ಕಾರದ ವಾದ ತುಂಬಾ ದುರ್ಬಲವಾದುದೆಂದು ಭಾವಿಸಲೂಬಹುದು. ಆದ್ದರಿಂದ, ೩ನೇ ಅನುಚ್ಛೇದದಲ್ಲಿ ಹೇಳಿರುವ ಅಧಿಕಾರಕ್ಕಿಂತಲೂ, ಇನ್ನೂ ಹೆಚ್ಚು ಮೂಲಭೂತವಾದುದನ್ನು ಯಾರೇ ಸದಸ್ಯರು ಅಲ್ಲಗಳೆಯಲಾಗದ್ದನ್ನು, ನಾನು ಅವಲಂಬಿಸುತ್ತಿದ್ದೇನೆ..............

**ಶ್ರೀ ಕಾಮತ್ :** ಹೊಸ ಭೂಭಾಗಗಳನ್ನು ಗಳಿಸುವುದನ್ನು ೨ನೇ ಅನುಚ್ಛೇದ ಹೇಳುತ್ತದೆ. ಆದರೆ, ಅದು, ಬಿಟ್ಟು ಕೊಡುವುದನ್ನು ಹೇಳಿಲ್ಲ.

**ಡಾ. ಅಂಬೇಡ್ಕರ್ :** ಅದು, ಇಲ್ಲಿ ಮುಖ್ಯವಲ್ಲ. ಒಂದರ ಬಗ್ಗೆ ಹೇಳಿದ್ದರೆ, ಬೇರೆಯವುಗಳ ಬಗ್ಗೆ

ಹೇಳಿರದಿದ್ದರೆ, ಆಗ ಅವುಗಳನ್ನು ಹೊರತುಪಡಿಸಲಾಗುತ್ತದೆ ಎನ್ನುವ ನಿಯಮವು ಎಲ್ಲದಕ್ಕೂ ಅನ್ವಯವಾಗುವುದಿಲ್ಲ.

ಈ ವಸ್ತು ಸ್ಥಿತಿಯನ್ನು ಎಂದರೆ, ಭೂಭಾಗವನ್ನು ಬಿಟ್ಟುಕೊಡಲು ರಾಷ್ಟ್ರಕ್ಕೆ ಹಕ್ಕಿದೆ ಎನ್ನುವುದು ಇಂಗ್ಲೆಂಡಿನ ಕಾನೂನು ಕೂಡ ಆಗಿದೆ, ಹಾಗೆ ಮಾಡುವುದು ದೊರೆಯ ವಿಶೇಷಾಧಿಕಾರಕ್ಕೆ ಸೇರಿದ ವಿಷಯ, ಅವರು ಹಾಗೆ ಮಾಡಬಹುದು ಎಂಬುದನ್ನು ಎತ್ತಿ ತೋರಿಸಲು ಪ್ರಯತ್ನಿಸುತ್ತಿದ್ದೇನೆ.

ಇನ್ನು ವಿಷಯದ ಎರಡನೇ ಭಾಗಕ್ಕೆ ಎಂದರೆ ಈ ಬಗೆಯ ವಿಷಯದಲ್ಲಿ ಸಂಸತ್ತಿನೊಂದಿಗೆ ಸಮಾಲೋಚಿಸುವ ಅಗತ್ಯ ಇದೆಯೇ ಎಂಬುದರತ್ತ ಬರುತ್ತೇನೆ. ತಮಗೆಲ್ಲರಿಗೂ ತಿಳಿದಿರುವಂತೆ, ಇಂಗ್ಲೆಂಡಿನಲ್ಲಿ ಈ ನಿಲುವು ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ. ಒಂದು ಕಾಲ ಘಟ್ಟದಲ್ಲಿ, ಅದು ದೊರೆಯ ವಿಶೇಷಾಧಿಕಾರಕ್ಕೆ ಸೇರಿದ್ದೆಂಬ ಅಭಿಪ್ರಾಯಕ್ಕೆ ಬರಲಾಗಿತ್ತು. ವಿಶೇಷಾಧಿಕಾರ ಎಂದರೇನು? ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ವಿಶೇಷಾಧಿಕಾರ ಎಂದರೆ ಯಾವುದನ್ನು ಮಾಡುವುದಕ್ಕೆ ಸಂಸತ್ತಿನ ಅನುಮೋದನೆಯ ಆವಶ್ಯಕತೆ ಇಲ್ಲವೋ ಅದನ್ನು ಮಾಡುವುದಕ್ಕೆ ದೊರೆಗೆ ಇರುವ ಅಧಿಕಾರ. ದೊರೆಗೆ ಇರುವ ವಿಶೇಷ ಹಕ್ಕು ಎಂದು ಯಾವುದನ್ನು ಕರೆಯಲಾಗುತ್ತದೋ ಅದರ ಸಾರಾಂಶ ಇದು. ಭೂಭಾಗವನ್ನು ಬಿಟ್ಟುಕೊಡುವುದು ದೊರೆಗೆ ಇರುವ ವಿಶೇಷಾಧಿಕಾರದ ಫಲಶ್ರುತಿಯಾದುದರಿಂದ ಸಂಸತ್ತಿನ ಮುಂದೆ ಆ ವಿಷಯವನ್ನು ತರುವ ಆವಶ್ಯಕತೆ ಇರಲಿಲ್ಲವೆಂಬ ಹಳೆಯ ಅಭಿಪ್ರಾಯ ಇತ್ತು. ಏಕೆಂದರೆ, ಕೌಲನ್ನು ಮಾಡಿಕೊಳ್ಳಲು ಮತ್ತು ಭೂಭಾಗವನ್ನು ಬಿಟ್ಟುಕೊಡಲು ದೊರೆಗೆ ಇರುವ ವಿಶೇಷಾಧಿಕಾರವನ್ನು ಸಂಸತ್ತು ನಿರ್ದಿಷ್ಟ ಕಾನೂನಿನ ಮೂಲಕ ಹಿಂತೆಗೆದುಕೊಂಡಿರಲಿಲ್ಲ. ದೊರೆಯೇ ಸಾರ್ವಭೌಮ ಆಗಿದ್ದರು. ಸಂಸತ್ತು ಹಾಗೆ ಮಾಡಿರಲಿಲ್ಲವಾದ್ದರಿಂದ ದೊರೆಗೆ ಆ ಅಧಿಕಾರ ಇತ್ತು. ಹಾಗಾಗಿ, ಭೂಭಾಗವನ್ನು ಬಿಟ್ಟುಕೊಡುವ ಕೌಲುಗಳು ಇಂಗ್ಲೆಂಡಿನಲ್ಲಿ ಸಂಸತ್ತಿನ ಮುಂದೆ ಬರುತ್ತಿದ್ದವು. ಸಂಸತ್ತಿನ ಮುಂದೆ ಅವು ಏಕೆ ಬರುತ್ತಿದ್ದವು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಮೊದಲನೆಯದಾಗಿ, ಯಾವ ಭೂಭಾಗದ ಮೇಲೆ, ಇಂಗ್ಲೆಂಡಿನ ಸಾರ್ವಭೌಮತ್ವ ಇದೆಯೋ ಮತ್ತು ಸಂಸತ್ತಿನ ಪರಮಾಧಿಕಾರ ಇದೆಯೋ ಆ ಭೂಭಾಗವು ಕೈಬಿಟ್ಟು ಹೋಗುವುದಿಂದ, ಅಂಥ ಭೂಭಾಗವನ್ನು ಬಿಟ್ಟುಕೊಡುವುದಕ್ಕೆ ಸಂಸತ್ತಿನಿಂದ ಅನುಮೋದನೆ ಪಡೆಯುವುದು ತುಂಬಾ ಒಳ್ಳೆಯದೆಂದು ಇಂಗ್ಲೆಂಡ್ ಸರ್ಕಾರ ಭಾವಿಸಿತ್ತು. ಹಾಗಾಗಿ, ಸಂಸತ್ತಿನ ಸಮ್ಮತಿ ಇಲ್ಲದೆಯೇ ಏನನ್ನೂ ಮಾಡುವಂತಿರಲಿಲ್ಲ. ಎರಡನೆಯದಾಗಿ, ಭೂಭಾಗವನ್ನು ಬಿಟ್ಟುಕೊಡುವ ಕೌಲುಗಳನ್ನು ಸಂಸತ್ತಿನ ಮುಂದೆ ತರುವ ಆವಶ್ಯಕತೆ ಬ್ರಿಟಿಷ್ ಸರ್ಕಾರಕ್ಕೆ ಏಕೆ ತೋರಿತೆಂದರೆ ಭೂಭಾಗದ ವರ್ಗಾವಣೆಯೆಂದರೆ ಆ ನಿರ್ದಿಷ್ಟ ಭೂಭಾಗದಲ್ಲಿ ವಾಸಿಸುತ್ತಿರುವ ಜನರ ರಾಷ್ಟ್ರೀಯತೆಯ ವರ್ಗಾವಣೆಯೆಂದೇ ಭಾವಿಸಲಾಗಿತ್ತು. ಕಾರಣ ಏನೆಂದರೆ, ಭೂಭಾಗವನ್ನು ವರ್ಗಾವಣೆ ಮಾಡಿದಾಗ, ಆ ವರ್ಗಾವಣೆಯಿಂದಾಗಿ ಜನರ ರಾಷ್ಟ್ರೀಯತೆಯೂ ವಾಸ್ತವಿಕವಾಗಿ ವರ್ಗಾವಣೆ ಆಗುತ್ತದೆ. ಆ ಜನರು ಇನ್ನೊಂದು ರಾಷ್ಟ್ರದ ಪೌರರಾಗುತ್ತಾರೆ. ಇದು ವೈಪರೀತ್ಯದ ಸನ್ನಿವೇಶವೆಂದು, ಹೀಗಾಗಿ, ಅಂಥದೊಂದು ಕ್ರಮವನ್ನು ಕೈಗೊಳ್ಳಬೇಕೇ ಎಂಬ ಬಗ್ಗೆ ಸಂಸತ್ತಿನೊಂದಿಗೆ ಸಮಾಲೋಚಿಸುವುದು ಅಗತ್ಯವೆಂದು ಭಾವಿಸಲಾಗಿತ್ತು. ಏಕೆಂದರೆ ಭೂಭಾಗವನ್ನು ಬಿಟ್ಟುಕೊಡುವುದು ನಿರುಪಾಧಿಕ ಷರತ್ತುಗಳ ಮೇಲೆ ಆಗಕೂಡದು, ಅದು, ಕೆಲವೊಂದು ನಿಬಂಧನೆಗಳಿಗೆ ಒಳಪಟ್ಟಿರಬೇಕು ಎಂಬುದನ್ನು ಸಂಸತ್ತು ಒತ್ತಾಯಿಸುವ ಸಾಧ್ಯತೆ ಕೂಡ ಇತ್ತು. ಉದಾಹರಣೆಗೆ, ಭೂಭಾಗವನ್ನು ವರ್ಗಾವಣೆ ಮಾಡಬಹುದಾದರೂ, ಅಂಥ ವರ್ಗಾವಣೆಯಿಂದಾಗಿ ಜನರ ರಾಷ್ಟ್ರೀಯತೆಯ ವರ್ಗಾವಣೆ ಆಗಬಾರದು, ಜನರು ತಮ್ಮ ಹಳೆಯ ರಾಷ್ಟ್ರೀಯತೆಯನ್ನೇ ಉಳಿಸಿಕೊಳ್ಳಲು ಅನುಮತಿ ನೀಡಬಹುದು ಅಥವಾ ಭೂಭಾಗವನ್ನು ಬಿಟ್ಟುಕೊಡುವಾಗ,

ರಾಷ್ಟ್ರೀಯತೆಯನ್ನು ಸ್ವಯಂ ಆಗಿ ವರ್ಗಾಯಿಸುವುದು ಒಂದು ಷರತ್ತೆಂದು ಹೇಳುವ ನಿಬಂಧನೆಯೊಂದನ್ನು ಕೌಲಿನಲ್ಲಿ ಸೇರಿಸಬಹುದೆಂದು ಸಂಸತ್ತು ಹೇಳಬಹುದು. ಅದರಲ್ಲಿ, ಪೌರತ್ವ ಮತ್ತು ರಾಷ್ಟ್ರೀಯತೆ ಎರಡೂ ಅಂಶ ಇರುವುದರಿಂದ, ದೊರೆಯ ವಿಶೇಷಾಧಿಕಾರದ ಬಲದಿಂದ ಮತ್ತು ಸಂಸತ್ತಿನ ಅನುಮೋದನೆಯ ಅಗತ್ಯ ಇರದ ಕೌಲನ್ನು ಮಾಡಿಕೊಂಡಿದ್ದರೂ ಸಹ ಆ ಯಾವುದೇ ಕೌಲನ್ನು ಸಂಸತ್ತಿನ ಮುಂದೆ ತರುವುದು ಅಪೇಕ್ಷಣೀಯವೆಂದು ಬ್ರಿಟಿಷ್ ಸರ್ಕಾರ ಯಾವಾಗಲೂ ಭಾವಿಸಿತ್ತು. ಬಿಟ್ಟು ಕೊಡುತ್ತಿರುವ ಭೂಭಾಗದ ಜನರ ರಾಷ್ಟ್ರೀಯತೆಯನ್ನು ನಿರ್ಧರಿಸುವಾಗ ಸಂಸತ್ತಿಗೂ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಇರಬೇಕೆಂದು ಭಾವಿಸಲಾಗಿತ್ತು.

ಮೂರನೆಯದಾಗಿ, ಭೂಭಾಗವನ್ನು ವರ್ಗಾವಣೆ ಮಾಡುವುದಕ್ಕೆ ದೊರೆಗೆ ವಿಶೇಷಾಧಿಕಾರವಿದ್ದರೂ, ಇಂಗ್ಲಿಷ್ ಕಾನೂನಿನ ಪ್ರಕಾರ, ಜನರ ಹಕ್ಕಿನ ಮೇಲೆ ಆ ಕೌಲು ಪರಿಣಾಮ ಉಂಟು ಮಾಡುವಂತಿರಲಿಲ್ಲ. ಕೌಲಿನ ಪಾಲನೆ ಆಗುವುದಕ್ಕೋಸ್ಕರ ಕೆಲವು ಚಾಲ್ತಿ ಕಾನೂನುಗಳನ್ನು ರದ್ದು ಮಾಡಲಾಯಿತು ಅಥವಾ ಗೊತ್ತು ಮಾಡಲಾಯಿತು. ಹೀಗಾಗಿ, ಆ ಕೌಲು ಸ್ವತಃ ಹಾಗೆ ಮಾಡಲು ಸಕ್ಷಮವಾಗಿರಲಿಲ್ಲ. ಜನರ ಹಕ್ಕುಗಳನ್ನು ಹೊಣೆಗಾರಿಕೆಗಳನ್ನು ಮತ್ತು ಬಾಧ್ಯತೆಗಳನ್ನು ನಿಯಂತ್ರಿಸುವ ಆ ಕಾನೂನುಗಳು ಕೌಲಿನ ನಿಬಂಧನೆಗಳಿಗೆ ಅನುಸಾರವಾಗಿರುವಂತೆ ಮಾಡುವ ಸಲುವಾಗಿ ಆ ಕಾನೂನುಗಳಲ್ಲಿ ಬದಲಾವಣೆ ತರಲು ಸಂಸತ್ತಿನಿಂದ ಪ್ರತ್ಯೇಕ ಅನುಮೋದನೆಯ ಅಗತ್ಯ ಇತ್ತು.

ಭೂಭಾಗವನ್ನು ವರ್ಗಾವಣೆ ಮಾಡುವ ಅಧಿಕಾರ, ದೊರೆಯ ವಿಶೇಷಾಧಿಕಾರವಾಗಿದ್ದರೂ, ಇಂಗ್ಲಿಷ್ ಕಾನೂನಿನ ಪ್ರಕಾರ, ಬ್ರಿಟಿಷ್ ಸರ್ಕಾರವು, ಅಂಥ ಎಲ್ಲ ಕೌಲುಗಳನ್ನು ಅನುಮೋದನೆಗಾಗಿ ಸಂಸತ್ತಿನ ಮುಂದೆ ಮಂಡಿಸುವ ಪದ್ಧತಿಯನ್ನು ಆರಂಭಿಸಿತು ಎನ್ನುವುದಕ್ಕೆ ಇವೇ ಪ್ರಮುಖ ಕಾರಣಗಳು. ನಮ್ಮ ಸಂಸತ್ತಿನ ಮುಂದೆ ಈ ವಿಷಯವನ್ನು ಮಂಡಿಸುವುದು ಮತ್ತು ಅದರ ಅನುಮೋದನೆ ಪಡೆಯುವುದು ಅಪೇಕ್ಷಣೀಯವೆಂದು ಸರ್ಕಾರ ಏಕೆ ಭಾವಿಸಿದೆಯೆಂಬುದಕ್ಕೆ ಇದೇ ಕಾರಣ. ಏಕೆಂದರೆ, ಭೂತಾನದಂಥ ವಿದೇಶಿ ರಾಷ್ಟ್ರಕ್ಕೆ ವರ್ಗಾವಣೆ ಮಾಡಬಯಸಿರುವ ಭೂಭಾಗದಲ್ಲಿರುವ ಜನರ ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ಕೆಲವೊಂದು ಬದಲಾವಣೆಗಳನ್ನು ಸಂಸತ್ತು ಸೂಚಿಸುವ ಸಾಧ್ಯತೆಯನ್ನು ನಾನು ಈ ವಿಧೇಯಕದಿಂದ ಕೈಬಿಡುವಂತಿಲ್ಲ.

ಎತ್ತಿದ ಹಲವಾರು ಅಂಶಗಳಿಗೆ ಸಂಬಂಧಪಟ್ಟಂತೆ ಇವು ನನ್ನ ಹೇಳಿಕೆಗಳು. ಮೊದಲನೆಯದಾಗಿ ನಾನು ಹೇಳುವುದೇನೆಂದರೆ, ಸಂವಿಧಾನದ ೨ನೇ ಮತ್ತು ೩ನೇ ಅನುಚ್ಛೇದವನ್ನು ಅವಲಂಬಿಸುವ ಆವಶ್ಯಕತೆ ಇಲ್ಲ. ಏಕೆಂದರೆ ಅವು ಬೇರೆ ವಿಷಯಕ್ಕೆ ಸಂಬಂಧಿಸಿವೆ. ಈ ವಿಧೇಯಕದ ಮತ್ತು ಈ ಕೌಲಿನ ಉದ್ದೇಶವು, ಏಳನೇ ಅನುಸೂಚಿಯ ಶಾಸನ ರಚನೆ ಪಟ್ಟಿಯ ಸಂಖ್ಯೆ ೧ ರಲ್ಲಿರುವ ೧೪ನೇ ಮತ್ತು ೧೫ನೇ ನಮೂದುಗಳ ವ್ಯಾಪ್ತಿಗೆ ಬರುತ್ತದೆ. ನನ್ನ ಅಭಿಪ್ರಾಯದಲ್ಲಿ, ಈ ಎರಡು ನಮೂದುಗಳ ಆಶಯ ಮತ್ತು ಪರಿಧಿ ಕುರಿತಂತೆ ಮಾಡಿರುವ ವ್ಯಾಖ್ಯಾನದ ಪ್ರಕಾರ, ಈ ಬಗೆಯ ಕ್ರಮವನ್ನು ಅನುಮೋದಿಸಲು ಸಂಸತ್ತಿಗೆ ಅಧಿಕಾರ ಕೊಟ್ಟರೆ ಸಾಕು.

**ಶ್ರೀ ಕಾಮತ್ :** ಚರ್ಚೆ ಇನ್ನಷ್ಟು ಮುಂದುವರಿಯುವುದಕ್ಕೆ ಮುಂಚೆ, ಸರ್. ಈ ಸದನದಲ್ಲಿ ಮಹತ್ವದ ವಿಷಯಗಳು ಉದ್ಭವವಾಗಿರುವುದರಿಂದ, ಚರ್ಚೆಯ ಕಾಲದಲ್ಲಿ ಹಾಜರಿರುವಂತೆ ತಾವು ಅಟಾರ್ನಿ ಜನರಲ್ಲರಿಗೆ ಕರೆ ಕಳುಹಿಸಬೇಕೆಂದು ಕೋರುತ್ತೇನೆ.

**ಒಬ್ಬರು ಮಾನ್ಯ ಸದಸ್ಯರು :** ಅವರು ಆಸ್ಟ್ರೇಲಿಯಾದಲ್ಲಿದ್ದಾರೆ.

**ಶ್ರೀ ಕಾಮತ್ :** ಅವರ ಡೆಪ್ಯೂಟಿಯು ಇಲ್ಲಿಲ್ಲವೇನು ?

**ಹಲವಾರು ಸದಸ್ಯರು ಎದ್ದು ನಿಂತರು.**

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈಗಾಗಲೇ ಮಾತನಾಡಿರುವ ಸದಸ್ಯರು ಎದ್ದು ನಿಲ್ಲುವ ಅಗತ್ಯ ಇಲ್ಲ. ಕಾನೂನು ಸಚಿವರು ಹೊಸ ಅಂಶಗಳನ್ನು ಎತ್ತಿದ್ದಾರೆಂಬ ಮಾತ್ರಕ್ಕೇ ತಮಗೆ ಮಾತನಾಡುವ ಹಕ್ಕಿಲ್ಲ.

**ಡಾ. ಪಟ್ಟಾಭಿ (ಮದ್ರಾಸ್) :** ಈ ವಿಧೇಯಕದಲ್ಲೂ ಇಲ್ಲದ ಅಥವಾ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲೂ ಇಲ್ಲದ ಹಲವಾರು ಅಂಶಗಳನ್ನು ಕಾನೂನು ಸಚಿವರು ಈಗ ಹೇಳುತ್ತಿದ್ದಾರೆ. ತಾವು ಎಚ್ಚರಿಕೆಯಿಂದ ಗಮನಿಸಿದರೆ ಇಡೀ ಚರ್ಚೆ ಹೊಸ ರೂಪಕ್ಕೇ ತಿರುಗುತ್ತಿದೆ. ಉದ್ದೇಶಗಳ ಹೇಳಿಕೆಯಲ್ಲಿ ಸಂವಿಧಾನದ ೩ನೇ ಅನುಚ್ಛೇದದ ಭಾಗ (ಸಿ) ಗೆ ಉಲ್ಲೇಖ ಇದೆ. ಈ ವಿಧೇಯಕಕ್ಕೂ ಸಂವಿಧಾನದ ೩ನೇ ಅನುಚ್ಛೇದಕ್ಕೂ ಏನೇನೂ ಸಂಬಂಧ ಇಲ್ಲವೆಂದು ಕಾನೂನು ಸಚಿವರು ಹೇಳುತ್ತಿದ್ದಾರೆ. ಸರ್, ತಮ್ಮ ತೀರ್ಮಾನವನ್ನು ಪುನರ್ ಪರಿಶೀಲಿಸಬೇಕು, ವಿಷಯದ ಮೇಲೆ ಹೊಸದಾಗಿ ಚರ್ಚೆಗೆ ಅವಕಾಶ ಕೊಡಬೇಕು.

**ಡಾ. ಅಂಬೇಡ್ಕರ್ :** ೩ನೇ ಅನುಚ್ಛೇದ ಪ್ರಾಸಂಗಿಕವಾಗಿ ಮಾತ್ರವೇ ಬಂದಿದೆ. ಏಕೆಂದರೆ, ಅಸ್ಸಾಮಿನ ಗಡಿಗಳನ್ನು ಹೊಂದಾಣಿಕೆ ಮಾಡುವ ತನಕ ಭೂಭಾಗವನ್ನು ಬಿಟ್ಟುಕೊಡುವುದನ್ನು ಕಾರ್ಯರೂಪಕ್ಕೆ ತರುವಂತಿಲ್ಲ. ಅಷ್ಟರಮಟ್ಟಿಗೆ ೩ನೇ ಅನುಚ್ಛೇದ ಪ್ರಸ್ತುತ. ಅದರ ಹೊರತು, ೩ನೇ ಅನುಚ್ಛೇದ ಅಪ್ರಸ್ತುತ.

**ಡಾ. ಪಟ್ಟಾಭಿ :** ನಿನ್ನೆ ಕೆಲವೊಂದು ಹೇಳಿಕೆಗಳನ್ನು ಮಾಡಿದಾಗ ತಾವು ಸದನದಲ್ಲಿ ಹಾಜರಿರಲಿಲ್ಲ........

**ಡಾ. ಅಂಬೇಡ್ಕರ್ :** ವಿಷಾದಿಸುತ್ತೇನೆ, ನಾನಿರಲಿಲ್ಲ. ಯಾರಾದರೂ ಹೇಳಿದ್ದಿದ್ದರೆ ನಾನಿಲ್ಲಿರುತ್ತಿದ್ದೆ (ಮಾತು ಮುಂದುವರಿಸದಂತೆ ಅಡ್ಡಿ, ಅಡಚಣೆ) ೩ನೇ ಅನುಚ್ಛೇದವು ಪ್ರಾಸಂಗಿಕವಾಗಿ ಮಾತ್ರವೇ ಬಂದಿದೆ. ಅಸ್ಸಾಮಿನ ಗಡಿಗಳನ್ನು ಪುನರ್ ಹೊಂದಾಣಿಕೆ ಮಾಡಿದ ನಂತರ ಭೂಭಾಗವನ್ನು ಬಿಟ್ಟುಕೊಡಬೇಕಾಗುತ್ತದೆ. ಹಾಗಾಗುವ ತನಕ ೩ನೇ ಅನುಚ್ಛೇದದ ಉಲ್ಲೇಖ ಇರುತ್ತದೆ.

**ಡಾ. ಪಟ್ಟಾಭಿ:** ಅದಕ್ಕೆ, ಕಾಯಿದೆಯಲ್ಲಿ ಯಾವ ಅವಕಾಶವೂ ಇಲ್ಲ. ಭೂಭಾಗವನ್ನು ಬಿಟ್ಟುಕೊಡುವುದಕ್ಕೆ ಎಂಬರ್ಥದಲ್ಲಿ ಹೇಳಿದ್ದೇನೆ.

**ಡಾ. ಅಂಬೇಡ್ಕರ್ :** ಅದು ಭಿನ್ನಾಭಿಪ್ರಾಯ. ತಾವು ನೋಡಬಯಸುವದಾದರೆ, ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ, ಕ್ರಮಕ್ಕೆ ನಮೂದುಗಳು ೧೪ ಮತ್ತು ೧೫ ರಲ್ಲಿ ಆಧಾರ ಇದೆ.

**ಡಾ. ಪಟ್ಟಾಭಿ:** ಅಂದ ಮೇಲೆ, ೩ನೇ ಅನುಚ್ಛೇದವನ್ನು ಉದ್ಧರಿಸಬೇಡಿ.

**ಡಾ. ಅಂಬೇಡ್ಕರ್** : ಅನುಚ್ಛೇದ ೩, ಪ್ರಾಸಂಗಿಕ ರೀತಿಯಲ್ಲಿ ವರದಿಯಾಗಿದೆ. ಏಕೆಂದರೆ, ಅದು, ಅಸ್ಸಾಮಿನ ಗಡಿಗಳ ಪುನರ್ ಹೊಂದಾಣಿಕೆಗೆ ಸಂಬಂಧಿಸಿದೆ.

**ಶ್ರೀ ಕಾಮತ್ :** ಪ್ರಶ್ನೆಯಲ್ಲಿರುವ ವಿಷಯವು ಭೂಭಾಗವನ್ನು ಬಿಟ್ಟುಕೊಡುವುದಾಗಿದೆಯೇ ಹೊರತು, ನಿನ್ನೆ ಪ್ರಧಾನ ಮಂತ್ರಿಗಳು ಹೇಳಿದಂತೆ ಗಡಿ ವಿವಾದದ ಹೊಂದಾಣಿಕೆಯದಲ್ಲ.

**ಡಾ. ಅಂಬೇಡ್ಕರ್:** ಭೂಭಾಗವನ್ನು ಬಿಟ್ಟುಕೊಡುವುದು ಗಡಿ ವಿವಾದ ಪರಿಣಾಮ ಆಗಿರಬಹುದು. ಇಲ್ಲಿ ಸಮಸ್ಯೆ ಏನಿದೆ ?

**ಶ್ರೀ ಕಾಮತ್ :** ಕಾರ್ಯ ಯಾವುದು, ಕಾರಣ ಯಾವುದು ?

**ಡಾ. ಅಂಬೇಡ್ಕರ್ :** ಅದು ನನಗೆ ಗೊತ್ತಿಲ್ಲ. ಆಡಳಿತ ಇಲಾಖೆಯು ತಮಗೆ ತಿಳಿಸುತ್ತದೆ. ಆದರೆ, ಇಲ್ಲಿ ಯಾವುದೇ ಸಮಸ್ಯೆ ನನಗೆ ಕಾಣುತ್ತಿಲ್ಲ.

**ಶ್ರೀ ಆರ್. ಕೆ. ಚೌಧುರಿ (ಅಸ್ಸಾಂ) :** ಸರ್, ಅಟಾರ್ನಿ ಜನರಲ್‌ರವರನ್ನು ಇಲ್ಲಿಗೆ ಬರಲು ಹೇಳಿರಿ. ನಾವು ಅವರ ಅಭಿಪ್ರಾಯಗಳನ್ನು ಕೇಳಬೇಕಾಗಿದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅಟಾರ್ನಿ ಜನರಲ್ಲರು ಆಸ್ಟ್ರೇಲಿಯಾದಲ್ಲಿದ್ದಾರೆ. ಅಟಾರ್ನಿ ಜನರಲ್ಲರ ಅಭಿಪ್ರಾಯಗಳನ್ನು ಆಲಿಸುವುದು ಅವಶ್ಯವೆಂದು ನನಗನಿಸುತ್ತಿಲ್ಲ. ಸದನವು ಕಾನೂನು ಸಚಿವರ ಮಾತುಗಳನ್ನು ಆಲಿಸಿದೆ (ಮಾತಿಗೆ ಅಡ್ಡಿ, ಅಡಚಣೆ) ಶಿಸ್ತಿನಿಂದಿರಿ, ಶಿಸ್ತಿನಿಂದಿರಿ. ಮಾನ್ಯ ಸದಸ್ಯರುಗಳಿಗೆ ಮಾತನಾಡಲು ತುಂಬಾ ಅವಕಾಶ ಸಿಕ್ಕಿದೆ. ಮಾತನಾಡಲು ಬೇರೆಯವರಿಗೂ ಅವಕಾಶ ಸಿಗಲಿ. ಮಾತನಾಡಲು ಅವಕಾಶ ಸಿಕ್ಕಿದ್ದ ಮಾನ್ಯ ಸದಸ್ಯರೊಬ್ಬರು ಒಂದು ನಿರ್ದಿಷ್ಟ ಪ್ರತಿಪಾದನೆಯ ಪರ ಒಂದು ನಿರ್ದಿಷ್ಟ ಅಂಶವನ್ನು ಎತ್ತಿದ್ದಾರೆಂದ ಮಾತ್ರಕ್ಕೇ, ಈಗಾಗಲೇ ಮಾತನಾಡಿರುವ ಇನ್ನೊಬ್ಬ ಸದಸ್ಯರು ಮತ್ತೆ ಮಾತನಾಡಲು ಹೆಚ್ಚಿನ ಸಮಯ ಕೇಳಲಾಗದು. ಇದಕ್ಕೆ ಕೊನೆಯೆಂಬುದೇ ಇರುವುದಿಲ್ಲ.

**ಶ್ರೀ ಶಿವ ಚರಣ್‌ಲಾಲ್ (ಉತ್ತರ ಪ್ರದೇಶ):** ...................... ರೂಪದಲ್ಲಿ ನಾನೊಂದು ಪ್ರಶ್ನೇ ಕೇಳಲೇ?

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಈಗ ಬೇಡ. ಡಾ. ಮುಖರ್ಜಿಯವರು, ಹೇಳಿ.

**ಡಾ. ಎಸ್. ಪಿ. ಮುಖರ್ಜಿ (ಪಶ್ಚಿಮ ಬಂಗಾಳ) :** ಈ ವಿಧೇಯಕದ ಮೇಲೆ, ನಾನು ಮಾತನಾಡಲು ಎದ್ದಾಗ, ಈ ವಿಧೇಯಕದ ಗುಣಾವಗುಣಗಳ ಮೇಲೆ ವಿವರವಾಗಿ ಮಾತನಾಡುವ ಇಚ್ಛೆ ನನಗಿಲ್ಲವೆಂದು ಪ್ರಾರಂಭದಲ್ಲೇ ಹೇಳಬಯಸಿದ್ದೆ. ಭೂಭಾಗದ ಒಂದು ಸಣ್ಣ ತುಣುಕನ್ನು ಭೂತಾನಕ್ಕೆ ಕೊಡಬೇಕೆ, ಬೇಡವೇ ಎನ್ನುವುದು ನಮ್ಮ ಮುಂದಿರುವ ತತ್‌ಕ್ಷಣದ ಪ್ರಶ್ನೆ ಅಲ್ಲ. ನಿನ್ನೆ ಪ್ರಧಾನ ಮಂತ್ರಿಗಳು ಏನು ಹೇಳಿದ್ದರೋ ಅದು ಸರ್ಕಾರದ ಕ್ರಮವನ್ನು ಸಮರ್ಥಿಸುತ್ತದೆ. ಬಹುಶಃ ಸರ್ಕಾರವು ಮುಂದಿಟ್ಟಿರುವ ಪ್ರಸ್ತಾವನೆಯನ್ನು ಏಕೆ ಕಾರ್ಯರೂಪಕ್ಕೆ ತರಬೇಕು ಎನ್ನುವುದಕ್ಕೆ ವಿಶೇಷ ಕಾರಣಗಳಿರಬಹುದು. ಆದರೆ, ಸರ್ಕಾರದ ಇಚ್ಛೆಯನ್ನು ಕಾರ್ಯರೂಪಕ್ಕೆ ತರಲು ಅನುಸರಿಸುತ್ತಿರುವ ವಿಚಿತ್ರ ವಿಧಾನಕ್ಕೆ ನನ್ನ ಬಲವಾದ ಆಕ್ಷೇಪಣೆ ಇದೆ. ಅದರಲ್ಲೂ, ಕಾನೂನು ಸಚಿವರ ಸಮರ್ಥನೆಯನ್ನು ಆಲಿಸಿದಾಗ ನನ್ನ ಉಸಿರುಕಟ್ಟಿ ಹೋಯಿತು. ತಾನು ಸಂವಿಧಾನದ ಕರ್ತೃವೆಂದು ಅವರು ಹೇಳಿದರು. ಅವರೊಬ್ಬರೇ ಕರ್ತೃ ಅಲ್ಲ.

**ಡಾ: ಅಂಬೇಡ್ಕರ್ :** ನಾನು ಕರ್ತೃ ಎಂದು ಹೇಳಲಿಲ್ಲ, ನಾನೂ ಒಬ್ಬನೆಂದು...................

**ಡಾ. ಎಸ್. ಪಿ. ಮುಖರ್ಜಿ :** ಸಂವಿಧಾನದ ರಚನೆಯಲ್ಲಿ ಅವರದು ಬೃಹತ್ ಪಾತ್ರ. ಅಂದ ಮೇಲೆ ಸಂವಿಧಾನದ ಪಾವಿತ್ರ್ಯವನ್ನು ಅಥವಾ ಗೌರವವನ್ನು ಕಾಪಾಡುವುದರಲ್ಲಿ ಅವರೇ ಮೊದಲಿಗರಾಗಿರಬೇಕೆಂದು ಯಾರೇ ಆಗಲಿ ಭಾವಿಸುತ್ತಾರೆ. ಕಾನೂನು ಸಚಿವರ ಹೊರತು ಬೇರೆ ಯಾರೆ ಸದಸ್ಯರು, ಅಷ್ಟೇಕೆ ಗೃಹ ಸಚಿವರು ಆ ರೀತಿ ಮಾತನಾಡಿದ್ದರೆ ಹೋಗಲಿ ಅಂತ ಸಹನೆಯಿಂದಿರಬಹುದಿತ್ತು. ಆದರೆ, ಕಾನೂನು ಸಚಿವರು, ಈ ಪ್ರಸ್ತಾವನೆಯಿಂದಾಗುವ ಪರಿಣಾಮಗಳೇನು ಎಂಬ ಬಗ್ಗೆ ತುಂಬಾ ಸ್ಪಷ್ಟವಾಗಿ ವಿವರಿಸಬೇಕಿತ್ತು.

ಕಾನೂನು ಸಚಿವರು ಸುಪ್ರೀಂಕೋರ್ಟು ಇತ್ತಿರುವ ಕೆಲವೊಂದು ತೀರ್ಪುಗಳನ್ನು ಹೇಳಿದ್ದಾರೆ. ಕಳೆದ ಬಾರಿ, ಸಂವಿಧಾನ (ತಿದ್ದುಪಡಿ) ವಿಧೇಯಕದ ಬಗ್ಗೆ ನಾವು ಚರ್ಚಿಸುತ್ತಿದ್ದಾಗ ನನಗಾದ ಅನುಭವದಿಂದ, ಸರಿಯೆಂದು ನನಗೆ ಕಂಡು ಬಂದ ಹೊರತು, ಕಾನೂನು ಸಚಿವರ ತರಾತುರಿಯ ಶಿಫಾರಸುಗಳನ್ನು ಒಪ್ಪಿಕೊಳ್ಳಲು ಹಿಂಜರಿದಿದ್ದೆ..........

**ಡಾ. ಅಂಬೇಡ್ಕರ್ :** ಈ ಬಗೆಯ ಮಾತುಗಳನ್ನು ನಾನು ಪ್ರತಿಭಟಿಸಲೇಬೇಕಾಗುತ್ತದೆ. ನನ್ನ ಹೇಳಿಕೆಗೆ ಈ ಸ್ನೇಹಿತರು ತಕರಾರು ಎತ್ತಿದರೆ ಅವರು ಏನನ್ನು ಹೇಳಿದ್ದಾರೋ ಅದಕ್ಕೆ ತಕರಾರು ಎತ್ತುವ ಹಕ್ಕು ನನಗಿದೆ. ಅದಂತೂ ತುಂಬಾ ಸ್ಪಷ್ಟ.

**ಡಾ. ಎಸ್.ಪಿ. ಮುಖರ್ಜಿ :** ಕಾನೂನು ಸಚಿವರ ಪ್ರತಿಭಟನೆ ತೀರಾ ಅತಿಯಾಯಿತು.

**ಡಾ. ಅಂಬೇಡ್ಕರ್ :** ಇದು, ಅತಿಯಾದ ಪ್ರತಿಭಟನೆ ಅಲ್ಲ, ಆದರೆ, ಆ ದಿನ ನಾನಿಲ್ಲದ್ದಿದ್ದಾಗ ತಾವೇನೋ ಹೇಳಿದಿರೆಂದು ಕೇಳಿದ್ದೇನೆ.

**ಡಾ. ಎಸ್.ಪಿ. ಮುಖರ್ಜಿ :** ತಾವು ಇಲ್ಲಿದ್ದಿರಿ, ಆದರೆ, ನಾನು ಮಾತನಾಡುತ್ತಿರುವಾಗ ತಾವು ಓಡಿ ಹೋದಿರಿ.

**ಡಾ. ಅಂಬೇಡ್ಕರ್ :** ನೀವು, ನಾನು ಓಡಿ ಹೋಗುವಂತೆ ಮಾಡುವಷ್ಟು ತಾಕತ್ತಿನ ಮನುಷ್ಯ ಅಲ್ಲ.

**ಡಾ. ಎಸ್. ಪಿ. ಮುಖರ್ಜಿ:** ಶ್ರೀ ಭೀಮರಾವ್ ಅಂಬೇಡ್ಕರ್‌ರನ್ನು ಹೆದರಿಸಿ ಓಡಿಸುವ ಧೈರ್ಯ ಯಾರಿಗಾದರೂ ಉಂಟೇ?

**ಡಾ. ಅಂಬೇಡ್ಕರ್ :** ಈ ಕೊಂಕು ಮಾತುಗಳು ನನಗಿಷ್ಟವಾಗುವುದಿಲ್ಲ. ನಿಮ್ಮ ಹೇಳಿಕೆ ಆಗಿದೆ. ಅದಕ್ಕೆ ತಕರಾರು ಎತ್ತುವುದಿಲ್ಲ, ಆದರೆ, ನಾನು...............

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರುಗಳ ನಡುವೆ ಈ ರೀತಿಯ ಮಾತಿನ ಚಕಮಕಿ ಆಗಬೇಕೇನು ?

**ಡಾ. ಅಂಬೇಡ್ಕರ್ :** ಇಲ್ಲ, ಸರ್. ಇದು ತೀರಾ ಅತಿಯಾಗುತ್ತಿದೆ. ನಾನು ತಪ್ಪಾಗಿ ಉದ್ಧರಿಸಿದ್ದೇನೆಂದು ಹಾಗೂ ತಪ್ಪು ನಿರೂಪಣೆ ಮಾಡಿದ್ದೇನೆಂದು ಉದ್ದೇಶಪೂರ್ವಕವಾಗಿ ಹೇಳಿದಂತಾಗುತ್ತದೆ.

**ಡಾ. ಎಸ್.ಪಿ. ಮುಖರ್ಜಿ :** ಹಾಂಗತ ನಾನು ಹೇಳಿಲ್ಲ.

**ಡಾ. ಅಂಬೇಡ್ಕರ್ :** ಸ್ನೇಹಿತ ಶ್ರೀಯುತ ಕಾಮತರು ಪುಸ್ತಕವನ್ನು ಹಾಗೂ ಪುಟಗಳನ್ನು ನೋಡಲು ಅವಕಾಶ ಕೊಡಲು ನಾನು ಹಂಬಲಿಸುತ್ತಿದ್ದೇನೆ. ಇಂಥ ಮಾತುಗಳು ನನಗೆ ಇಷ್ಟವಾಗುವುದಿಲ್ಲ. ನಾನು ತಮ್ಮನ್ನು ತುಂಬಾ ಗೌರವದಿಂದ ಕಾಣುತ್ತಿದ್ದೇನೆ. ತಮ್ಮಿಂದ ಅದು ಬರದಿದ್ದರೆ, ನಾನು ತಮ್ಮ ಮಟ್ಟಕ್ಕೇ ಇಳಿಯಬೇಕಾಗುತ್ತದೆ.

**ಡಾ. ಎಸ್. ಪಿ. ಮುಖರ್ಜಿ :** ತಮ್ಮದೇ ಆದ ಮಟಕ್ಕೆ ತಾವು ಇಳಿದಿದ್ದೀರಿ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ತಾವಿಬ್ಬರೂ ಸಂಸತ್ತಿನ ಅತ್ಯಂತ ಗೌರವಾನ್ವಿತ ಸದಸ್ಯರು. ಕೊನೆಯಲ್ಲಿ ಹೇಳಿದ ಮಾತನ್ನು ಮಾನ್ಯ ಸದಸ್ಯರು ಹೇಳುವ ಆವಶ್ಯಕತೆ ಇರಲಿಲ್ಲ. ಕಾನೂನು ಸಚಿವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ, ಆ ತೀರ್ಪನ್ನು ಸ್ವತಃ ಓದುವ ಅವಕಾಶ ಮಾನ್ಯ ಸದಸ್ಯರಿಗೆ ಯಾವಾಗಲೂ ಇದ್ದೇ ಇರುತ್ತದೆ. ಸದನದಲ್ಲಿ ತಮ್ಮ ತಮ್ಮ ನಿಲುವಿಗೆ ಮತ್ತು ಸದನದ ನಿಲುವಿಗೆ ಸಾಧ್ಯವಾದಷ್ಟು ಮಟ್ಟಿಗೆ ಬದ್ಧರಾಗಿ, ಸದಸ್ಯರುಗಳು ವಾದಕ್ಕೆ ವಾದದ ಮೂಲಕವೇ ಸಮಜಾಯಿಷಿ ಕೊಡಬೇಕು. ಸನ್ಮಾನ್ಯ ಸದಸ್ಯರುಗಳಿಗೆ ಇದೇ ನನ್ನ ಮನವಿ.

**ಡಾ. ಎಸ್. ಪಿ. ಮುಖರ್ಜಿ:** ಯಾರದೇ ಭಾವನೆಗಳಿಗೆ ನೋವುಂಟು ಮಾಡುವ ಉದ್ದೇಶ ನನಗಿಲ್ಲ. ಕಾನೂನು ಸಚಿವರ ತರಾತುರಿಯ ಶಿಫಾರಸುಗಳನ್ನು ಒಪ್ಪಿಕೊಳ್ಳಲು ಹಿಂಜರಿದಿದ್ದೆನೆಂದು ಹೇಳಿದ್ದೆ.

**ಡಾ. ಅಂಬೇಡ್ಕರ್ :** ಯಾವ ಶಿಫಾರಸುಗಳೂ ಇಲ್ಲ. ಇವು ತೀರ್ಪುಗಳೆಂದು ಹೇಳಿದ್ದೆ. ಪುಟಗಳನ್ನು ಹೇಳಿದ್ದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅದೇ ಪುಸ್ತಕವನ್ನು ಓದಿ ಬೇರೆಬೇರೆ ಜನರು ಬೇರೆಬೇರೆ ರೀತಿ ವ್ಯಾಖ್ಯಾನ ಮಾಡಬಹುದು. ಆದ್ದರಿಂದ, ಅದನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುವ ಸ್ವಾತಂತ್ರ್ಯ ಮಾನ್ಯ ಸದಸ್ಯರಾದ ಡಾ. ಮುಖರ್ಜಿಯವರಿಗೆ ಇದೆ.

**ಡಾ. ಅಂಬೇಡ್ಕರ್ :** ಅವರ ಬಳಿ ತೀರ್ಪು ಇದ್ದರೆ, ಅದನ್ನು ಓದಿಯಾದ ಮೇಲೆ ಅದನ್ನು ಉಲ್ಲೇಖಿಸಿದ್ದರೆ, ಗಮನಕೊಡುತ್ತಿದ್ದೆ. ಆದರೆ, ನಾನು ತಪ್ಪಾಗಿ ಉದ್ಧರಿಸಿದ್ದೇನೆ. ತಪ್ಪು ನಿರೂಪಣೆ ಮಾಡಿದ್ದೇನೆಂದರೆ ಅದು ತೀರಾ ಅತಿ.

**ಡಾ. ಎಸ್.ಪಿ. ಮುಖರ್ಜಿ:** ತಪ್ಪಾಗಿ ಉದ್ಧರಿಸಿದ್ದೀರೆಂದು ನಾನು ಹೇಳಿಯೇ ಇಲ್ಲ.

**ಡಾ. ಅಂಬೇಡ್ಕರ್ :** ಈ ಬಗೆಯ ಮಾತನ್ನು ನಾನು ಒಪ್ಪುವುದಿಲ್ಲ.

**ಡಾ. ಎಸ್.ಪಿ. ಮುಖರ್ಜಿ:** ಸರ್, ನಾನು ಯಾವ ಅಂಶದ ಬಗ್ಗೆ ಹೇಳುತ್ತಿದ್ದೇನೆಂದರೆ ಅಮೇರಿಕ ಸುಪ್ರೀಂಕೋರ್ಟು ವ್ಯವಹರಿಸಿದ್ದ ಒಂದು ಪ್ರಕರಣವನ್ನು ಮಾನ್ಯ ಸಚಿವರು ಉಲ್ಲೇಖಿಸಿದರು. ಆ ತೀರ್ಪನ್ನು ಅವರು ಓದಿ ಹೇಳಿಲಿಲ್ಲ. ಆ ಅಮೇರಿಕನ್ ತೀರ್ಪು, ನಾವು ಈಗ ಇಲ್ಲಿ ಚರ್ಚೆ ಮಾಡುತ್ತಿರುವ ವಸ್ತು ವಿಷಯಕ್ಕೆ ಸುಸಂಗತವಾದುದಲ್ಲ. ಇಂಗ್ಲೆಂಡ್ ದೊರೆಯು ಕೈಗೊಂಡ ಕೆಲವು ಕಾರ್ಯಗಳನ್ನೂ ಕಾನೂನು ಸಚಿವರು ಉಲ್ಲೇಖ ಮಾಡಿದರು. ಅಲ್ಲಿನ ದೊರೆಗೆ ಇರುವ ವಿಶೇಷಾಧಿಕಾರಗಳ ಬಲದಿಂದ ಅವರು ಕೆಲವು ಭೂಭಾಗವನ್ನು ಬಿಟ್ಟುಕೊಡಲೂಬಹುದು. ಅದು ಕೂಡ, ನಾವು ಈ ದಿನ ಯಾವ ವಿಷಯ ವಸ್ತುವನ್ನು ಚರ್ಚಿಸುತ್ತಿದ್ದೇವೆಯೋ ಅದಕ್ಕೆ ಸುಸಂಗತವಾದುದಲ್ಲ. ನಾವು ಯಾವುದರ ಬಗ್ಗೆ ಚರ್ಚಿಸುತ್ತಿದ್ದೇವೆಂದರೆ ಸಂವಿಧಾನದಲ್ಲಿ ನಿರ್ದಿಷ್ಟಪಡಿಸಿರುವ ಕೆಲವೊಂದು ನಿರ್ದಿಷ್ಟ ವಿಧಾನವನ್ನು ಅನುಸರಿಸದೆಯೇ ಭಾರತದ ಭೂಭಾಗದ ಒಂದು ತುಣುಕನ್ನು ಸಂಸತ್ತು ಬಿಟ್ಟುಕೊಡಬಹುದೇ? ಭಾರತದ ಒಳಗಿರುವ ಭೂಭಾಗಗಳಲ್ಲಿನ ಯಾವುದೇ ತುಣಕನ್ನು ಬಿಟ್ಟುಕೊಡಲು ಸರ್ಕಾರಕ್ಕೆ ಅವಕಾಶ ಕೊಡುವ ಯಾವುದೇ ಅನುಚ್ಛೇದವು ಸಂವಿಧಾನದಲ್ಲಿದೆಯೇ? ನಾವು ಪರಿಶೀಲಿಸಬೇಕಾಗಿರುವ ಸರಳ ಪ್ರಶ್ನೆ ಇದು. ಸರ್, ತಾವು ಅನುಚ್ಛೇದ ೨ನ್ನು ಮತ್ತು ೩ನ್ನು ನೋಡಿದರೆ, ಸಂವಿಧಾನ ಭಾಗ ೧ನ್ನು ರಚಿಸಿದಾಗ ಯಾವ ನಿರ್ಣಯಕ್ಕೆ ಬರಲಾಗಿತ್ತು ಎನ್ನುವುದು ತಮಗೆ ಗೊತ್ತಾಗುತ್ತದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್:** ಸಂವಿಧಾನದ ಪ್ರಕಾರ, ಭೂಭಾಗವನ್ನು ಬಿಟ್ಟುಕೊಡುವುದಕ್ಕೆ ಅವಕಾಶ ಉಂಟು, ಆದರೆ, ೩ನೇ ಅನುಚ್ಛೇದದಲ್ಲಿ ಹೇಳಿರುವ ವಿಧಾನವನ್ನೇ ಅನುಸರಿಸಿಲ್ಲವೆಂದು ಮಾನ್ಯ ಸದಸ್ಯರಿಗೆ ಅನ್ನಿಸಿದೆಯೆಂದು ನಾವು ಅರ್ಥಕೊಳ್ಳಬೇಕೇ?

**ಡಾ. ಎಸ್.ಪಿ. ಮುಖರ್ಜಿ:** ಸಂವಿಧಾನದಲ್ಲಿ, ಭೂಭಾಗವನ್ನು ಬಿಟ್ಟುಕೊಡುವುದಕ್ಕೆ ಸಂಬಂಧಿಸಿದ ಯಾವ ನಿರ್ದಿಷ್ಟ ನಿಬಂಧನೆಯೂ ಇಲ್ಲ, ಆದರೆ, ಕೌಲಿನ ಪರಿಣಾಮವಾಗಿ, ಭಾರತೀಯ ರಾಜ್ಯ ಕ್ಷೇತ್ರದ ಒಂದು ಭಾಗವನ್ನು ಬಿಟ್ಟುಕೊಡಬೇಕಾದ ಪರಿಸ್ಥಿತಿ ಉದ್ಭವಿಸಿದರೂ. ಸಹಜವಾಗಿಯೇ, ಅಂಥದೊಂದು ತೀರ್ಮಾನಕ್ಕೆ ಯಾರಾದರೊಬ್ಬರು ಅಂತಿಮ ಅನುಮೋದನೆ ನೀಡಬೇಕಾಗುತ್ತದೆ, ಹಾಗಾಗಿ ವಿಷಯ ಸಂಸತ್ತಿನ ಮುಂದೆ ಬಂದಿದೆ ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಇಲ್ಲಿ ಭೂಭಾಗವನ್ನು ಬಿಟ್ಟುಕೊಡುತ್ತಿರುವುದಷ್ಟೇ ಅಲ್ಲ, ನಮ್ಮಲ್ಲಿ ಈಗಿರುವ ರಾಜ್ಯಗಳಲ್ಲಿ ಒಂದು ರಾಜ್ಯದ ಗಡಿಗಳನ್ನು ತಾವು ಅನಿವಾರ್ಯವಾಗಿ ಹೊಂದಾಣಿಕೆ ಮಾಡುತ್ತಿದ್ದೀರಿ, ಈ ವಿಷಯಕ್ಕೆ ಸಂಬಂಧಿಸಿದಂತೆ, ಅಂತೂ, ನೀವು ಅನುಸರಿಸಲೇಬೇಕಾದ ನಿರ್ದಿಷ್ಟ ವಿಧಾನವನ್ನು ಸಂವಿಧಾನವು ಗೊತ್ತುಪಡಿಸಿದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅದನ್ನು ಅನುಸರಿಸಿಲ್ಲವೆಂದು ಹೇಳುತ್ತಿದ್ದೀರಾ.

**ಡಾ. ಎಸ್.ಪಿ. ಮುಖರ್ಜಿ :** ಇಲ್ಲ ಸರ್

**ಡಾ. ಅಂಬೇಡ್ಕರ್ :** ಸರ್, ತಮ್ಮ ಅನುಮತಿ ಕೋರಿ, ಕೆಲವೇ ಮಾತುಗಳಲ್ಲಿ ಈ ಅಂಶವನ್ನು

ಸ್ಪಷ್ಟಪಡಿಸಬಯಸುತ್ತೇನೆ. ಏಕೆಂದರೆ ಅವರು ಈ ಅಂಶವನ್ನು ಈಗ ಸುಸ್ಪಷ್ಟವಾಗಿ ಹೇಳಿದ್ದಕ್ಕೆ ನಾನು ಅವರಿಗೆ ಆಭಾರಿಯಾಗಿದ್ದೇನೆ. ಪ್ರಶ್ನೆಯು, ಆ ವಿಧಾನ ಯಾವುದು ಎಂಬುದಕ್ಕೆ ಸಂಬಂಧಿಸಿದೆಯೆಂದು ತೋರುತ್ತದೆ..........

**ಡಾ. ಎಸ್.ಪಿ. ಮುಖರ್ಜಿ:** ಹೌದಾ! ನಾನು ನನ್ನ ವಾದವನ್ನು ಮೊದಲು ಮುಗಿಸುತ್ತೇನೆ, ಹೆಚ್ಚು ಹೊತ್ತು ಮಾತನಾಡುವುದಿಲ್ಲ.

**ಡಾ. ಅಂಬೇಡ್ಕರ್:** ನಾನು ಮಾತಾಡುತ್ತಿಲ್ಲ, ವಿವರಿಸುತ್ತಿದ್ದೇನೆ, ಅಷ್ಟೇ.

**ಡಾ. ಎಸ್.ಪಿ. ಮುಖರ್ಜಿ:** ಸರ್, ಈ ಮೊದಲು ಕಾನೂನು ಸಚಿವರು ಮಾತನಾಡಿದ್ದಾಗ, ವಿವರಿಸುತ್ತಿದ್ದರೆಂದು ಭಾವಿಸಿದ್ದೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಒಂದು ನಿರ್ದಿಷ್ಟ ಅಂಶವನ್ನು ವಿವರಿಸಬಯಸಿದರೆ, ಮಾನ್ಯ ಕಾನೂನು ಸಚಿವರು ಹಾಗೆ ಮಾಡಬಹುದು. ವಿಧಾನವನ್ನು ಅನುಸರಿಸಲಾಗಿದೆಂದು ನಾನು ಭಾವಿಸಿದ್ದೇನೆ. ರಾಷ್ಟ್ರಪತಿಯವರು ಅನುಮೋದನೆ ನೀಡಿದ್ದಾರೆ, ಅಸ್ಸಾಂ ಶಾಸನ ಸಭೆಯು ನಿರ್ಣಯವನ್ನು ಅಂಗೀಕರಿಸಿದೆ. ರಾಷ್ಟ್ರಪತಿಯವರ ಶಿಫಾರಸನ್ನು ವಿಧೇಯಕದ ಹಿಂದಿನ ಪುಟದಲ್ಲಿ ಮುದ್ರಿಸಲಾಗಿದೆ.

**ಡಾ. ಎಸ್. ಪಿ. ಮುಖರ್ಜಿ :** ನೋಡಿದ್ದೇನೆ. ಆದರೆ, ಭಾರತೀಯ ರಾಜ್ಯಕ್ಷೇತ್ರದ ಯಾವುದೇ ಭಾಗವನ್ನು ಬಿಟ್ಟುಕೊಡುವುದಕ್ಕೆ ಸಂಬಂಧಿಸಿದ ನಿಬಂಧನೆ ಬಗ್ಗೆ ಹೇಳುವುದಾದರೆ, ಅದು, ೧ನೇ ಮತ್ತು ೨ನೇ ಅನುಚ್ಛೇದಗಳ ನಿಬಂಧನೆಗಳಿಗೆ ವ್ಯಾವಹಾರಿಕವಾಗಿಯೂ ಒಳಪಟ್ಟಿರಬೇಕಾಗುತ್ತದೆ. ಅಂಥ ಸನ್ನಿವೇಶಗಳಲ್ಲಿ, ಭಾರತೀಯ ರಾಜ್ಯಕ್ಷೇತ್ರದ ಒಂದು ಭಾಗವನ್ನು ಬಿಟ್ಟುಕೊಡಲು ವಿಧೇಯಕವನ್ನು ಅಂಗೀಕರಿಸುವುದು ಸಂಸತ್ತಿಗೆ ಸೇರಿದ್ದು.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅದು ಬೇರೆ ವಿಷಯ, ವಿಧಾನದ್ದಲ್ಲ.

**ಡಾ. ಎಸ್.ಪಿ. ಮುಖರ್ಜಿ:** ಎರಡೂ ವಿಷಯಗಳನ್ನು ಹೇಳುತ್ತಿದ್ದೇನೆ. ಇಲ್ಲಿ, ಇದು ಸಂವಿಧಾನದ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸುವ ವಿಚಾರ, ನೀವು ಆ ಕಾರ್ಯ ಮಾಡಬಯಸಿದಾಗ, ಅಂಥದೊಂದು ಸಂದರ್ಭ ಸನ್ನಿವೇಶಕ್ಕೆ ನಮ್ಮ ಸಂವಿಧಾನವು ಅವಕಾಶ ಕಲ್ಪಿಸಿಲ್ಲವೆಂಬುದು ನಮಗೆ ಕಂಡು ಬಂದಾಗ, ಕಲ್ಪಿಸುವುದನ್ನು ಪ್ರಮಾದವಶಾತ್ ಕೈಬಿಟ್ಟಿರಬಹುದು – ಗಮನಿಸದೇ ಬಿಟ್ಟುಬಿಟ್ಟಿರಹುದು – ಅದನ್ನು ಯಾವುದೇ ರೀತಿಯಲ್ಲಿ ಮಾಡಬೇಕಾದರೂ, ತಾವೇನು ಮಾಡಬೇಕಾಗುತ್ತದೆಂದರೆ, ಸಂವಿಧಾನವನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಅದನ್ನು ಕಾರ್ಯರೂಪಕ್ಕೆ ತರಲು ಸಂಸತ್ತಿಗೆ ಆವಶ್ಯಕ ಅಧಿಕಾರ ಇರಬೇಕಾಗುತ್ತದೆ.

ಪ್ರಾರಂಭದಲ್ಲೇ ಹೇಳಿದ್ದೇನೆ, ಈ ನಿರ್ದಿಷ್ಟ ವಿಷಯದ ಬಗ್ಗೆ ನಾನು ಹೆಚ್ಚಿಗೆ ತಲೆಕೆಡಿಸಿಕೊಂಡಿಲ್ಲ. ಭೂಭಾಗದ ಒಂದು ಸಣ್ಣ ಭಾಗವನ್ನು ಭೂತಾನಕ್ಕೆ ಬಿಟ್ಟುಕೊಡಲು ಇಲ್ಲಿ ಪ್ರಸ್ತಾಪಿಸಲಾಗಿದೆ. ಅದಕ್ಕೆ ವಿಶೇಷ ಕಾರಣಗಳಿರಬಹುದು. ಅಂಥದೊಂದು ಕ್ರಮಕ್ಕೆ ಭಾರತ ಸರ್ಕಾರ ಮತ್ತು ಈ ದೇಶದ ಜನರು ಅನುಮೋದನೆ ನೀಡಿದರೆ, ಆ ಜನರ ಮತ್ತು ನಮ್ಮ ಜನರ ನಡುವೆ ಒಳ್ಳೆಯ ಬಾಂಧವ್ಯ ಉಂಟಾಗಲು ಅನುವು ಮಾಡಿಕೊಡುತ್ತದೆ ಎನ್ನುವಂಥ ಐತಿಹಾಸಿಕ ಕಾರಣಗಳಿರಬಹುದು.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಮಾನ್ಯ ಸದಸ್ಯರ ವಾದದ ಮೊದಲ ಭಾಗವನ್ನು ಗಮನಿಸಿದರೆ, ಕೌಲುಗಳಿಗೆ ಸಂಬಂಧಿಸಿದ ನಮೂದು ೧೪ ಇದೆಯಾದ್ದರಿಂದ ಅಧಿಕಾರವೂ ಇದೆಯೆಂಬ ನಿಲುವನ್ನು ಒಪ್ಪಿಕೊಂಡಿದ್ದಾರೆಂಬುದು ತೋರುತ್ತದೆ. ಉಳಿದಿರುವುದು, ವಿಧಾನದ ವಿಚಾರ ಮಾತ್ರ.

**ಡಾ. ಎಸ್.ಪಿ. ಮುಖರ್ಜಿ:** ಯುದ್ಧ ಕಾಲದಲ್ಲಿ ಅಥವಾ ಎರಡು ದೇಶಗಳು ಕೌಲನ್ನು ಮಾಡಿಕೊಂಡಿದ್ದರೆ

ಅಥವಾ ನಮ್ಮ ರಾಜ್ಯ ಕ್ಷೇತ್ರದ ಒಂದು ಭಾಗವನ್ನು ಬಿಟ್ಟುಕೊಡಲು ಅಥವಾ ಭಾರತದ ಹೊರಗೆ ಇರುವ ಭೂಭಾಗದ ಒಂದು ಭಾಗವನ್ನು ಭಾರತೀಯ ಭೂಭಾಗದೊಳಕ್ಕೆ ಸೇರಿಸಲು ತೀರ್ಮಾನಿಸಿದರೆ, ಅಂಥದೊಂದು ಕೌಲನ್ನು ಮಾಡಿಕೊಳ್ಳಲು ಭಾರತ ಸರ್ಕಾರಕ್ಕೆ ಖಂಡಿತವಾಗಿಯೂ ಯಾವ ನಿರ್ಬಂಧವೂ ಇಲ್ಲವೆಂಬುದನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಇಲ್ಲಿನ ಇಡೀ ಪ್ರಶ್ನೆ ಎಂದರೆ ಅದನ್ನು ಹೇಗೆ ಕಾರ್ಯರೂಪಕ್ಕೆ ತರಬೇಕು ಎನ್ನುವುದು. ಅದನ್ನೇ ನಾವು ಇಂದು ಚರ್ಚಿಸುತ್ತಿದ್ದೇವೆ. ಪ್ರಸ್ತಾವನೆಯ ಗುಣದೋಷಗಳ ಬಗ್ಗೆ ನಾನು ಮಾತಾಡುತ್ತಿಲ್ಲ. ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಸಂವಿಧಾನವು ಈಗ ಹೇಗಿದೆಯೋ ಅದರಲ್ಲಿ, ಭಾರತದಲ್ಲಿ ಸೇರಿಹೋಗಿರುವ ರಾಜ್ಯ ಕ್ಷೇತ್ರದ ಯಾವುದೇ ಭಾಗವನ್ನು ಬಿಟ್ಟುಕೊಡಲು ಸಂಸತ್ತಿಗೆ ಅಧಿಕಾರ ಕೊಟ್ಟಿರುವಂಥದ್ದು ಯಾವುದೂ ಇಲ್ಲ. ಇದಂತೂ ನಿರ್ದಿಷ್ಟ, ಸುಸ್ಪಷ್ಟ, ಸಂದಿಗ್ಧತೆ ಇಲ್ಲವೇ ಇಲ್ಲ. ಈ ನಿರ್ದಿಷ್ಟ ಕ್ರಮವನ್ನು ತೆಗೆದುಕೊಳ್ಳುವುದು ಆವಶ್ಯಕವೆಂದು ಭಾವಿಸಿದರೆ, ನಾನು ಸಲಹೆ ನೀಡುವುದೇನೆಂದರೆ ಈ ವಿಧೇಯಕವನ್ನು ಹಿಂತೆಗೆದುಕೊಳ್ಳಬೇಕು, ಸಂವಿಧಾನಕ್ಕೆ ಆವಶ್ಯಕ ತಿದ್ದುಪಡಿ ಮಾಡಬೇಕು. ಹಾಗಾದಾಗ ಈ ಕಾರ್ಯವನ್ನು ಸಮರ್ಪಕವಾಗಿ, ಸಂವಿಧಾನಾತ್ಮಕವಾಗಿ ಮಾಡಬಹುದಾಗಿದೆ. ಇಲ್ಲಿ ಹೇಳಿರುವುದು ಒಂದು ತೀರಾ ಸಣ್ಣ ಭಾಗ. ಅದೇನು ತೀರಾ ಅಷ್ಟೊಂದು ಮುಖ್ಯ ಅಲ್ಲ. ಆದರೆ, ಇಲ್ಲಿ ತುಂಬಾ ಮಹತ್ವದ ತತ್ವದ ಪ್ರಶ್ನೆ ಇದೆ. ಭಾರತ ಸಂವಿಧಾನದ ಚೌಕಟ್ಟಿನಲ್ಲಿ ಸೇರಿರುವ ಈ ಭೂಭಾಗವನ್ನು ಬಿಟ್ಟುಕೊಡಲು ಆ ಬಗ್ಗೆ ಸಂವಿಧಾನದಲ್ಲಿ ಕೆಲವೊಂದು ನಿರ್ದಿಷ್ಟ ನಿಬಂಧನೆಯನ್ನು ಕಲ್ಪಿಸಿದ ಹೊರತು, ಅದನ್ನು ಕಟ್ಟುನಿಟ್ಟಾಗಿ ಅನುಸರಿಸಿದ ಹೊರತು ಕಾರ್ಯಾಂಗಕ್ಕೇ ಏಕೆ, ಸಂಸತ್ತಿಗೂ ಅಧಿಕಾರ ಕೊಡಲು ನಾವು ಅವಕಾಶ ಕೊಡಬಾರದು. ಸಂಸತ್ತಿನ ಅಧಿಕಾರಗಳ ಬಗ್ಗೆ ಹೇಳುವುದಾದರೆ, ಸಂವಿಧಾನದ ಚೌಕಟ್ಟಿನ ಹೊರಗೆ ಸಂಸತ್ತಿಗೆ ಯಾವ ಉಳಿಕೆ ಅಧಿಕಾರವನ್ನು ವಹಿಸಿ ಕೊಟ್ಟಿಲ್ಲ. ಅದು ಪವಿತ್ರ ಗ್ರಂಥ. ಬೈಬಲ್, ಗೀತೆ, ಅದನ್ನು ನಾವು ಏನಂತಾದರೂ ಕರೆಯಬಹುದು, ನಾವು ಅದರ ಚೌಕಟ್ಟಿನೊಳಗೇ ಇರಬೇಕಾಗುತ್ತದೆ. ಸರಿಪಡಿಸುವ ಅಗತ್ಯ ಇರುವ ತಪ್ಪು ನಮಗೆ ಕಂಡು ಬಂದಾಗ, ಯಾವುದೇ ವರ್ಗದ ಜನರ ಮನಸ್ಸಿನಲ್ಲಿ ಯಾವುದೇ ಭಯದ ಅಥವಾ ಅಪನಂಬಿಕೆಯ ಭಾವನೆಗೆ ಆಸ್ಪದ ಕೊಡುವಂಥ ರೀತಿಯಲ್ಲಿ ನಾವು ಮುಂದುವರಿಯಬಾರದು. ಮೊದಲು ನಾವು ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕು, ಈ ವಿಧೇಯಕವನ್ನು ಹಿಂತೆಗೆದುಕೊಳ್ಳಬೇಕು, ಸರಿಯಾದ ರೂಪದಲ್ಲಿ ಮತ್ತೇ ತರಬೇಕು.

**ಡಾ. ಅಂಬೇಡ್ಕರ್ :** ವಿಷಯವನ್ನು ಸ್ಪಷ್ಟಪಡಿಸಬಯಸುತ್ತೇನೆ. ಡಾ. ಮುಖರ್ಜಿಯವರ ಅವಲೋಕನವು, ವಿಷಯವನ್ನು ತೀರಾ ಸೀಮಿತ ಮಟ್ಟಕ್ಕೆ ಇಳಿಸಿಬಿಟ್ಟಿದೆ. ಅವರು ಹೇಳಿದ್ದನ್ನು ನಾನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇನೆಂದು ಕಾಣುತ್ತದೆ. ನಾನು ಹೇಳಿದ ನಮೂದುಗಳ ಪ್ರಕಾರ ಭೂಭಾಗವನ್ನು ಬಿಟ್ಟುಕೊಡುವ ಅಧಿಕಾರ ಇದೆಯೆಂದು ಅವರು ಒಪ್ಪಿಕೊಂಡಿದ್ದಾರೆ. ಒಂದು ಸಂಸ್ಥಾನದ ಭೂಭಾಗವನ್ನು ಬಿಟ್ಟುಕೊಡುವುದರಲ್ಲಿ ಅದರ ಗಡಿಯ ಪುನರ್ ಹೊಂದಾಣಿಕೆ ಒಳಗೊಂಡಿರುವುದಿಲ್ಲವೆಂಬುದನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಕೊನೆ ಪಕ್ಷ, ಅಂಥದೊಂದು ವಿಚಾರವನ್ನು ಕಲ್ಪಿಸಿಕೊಳ್ಳಲು ನನ್ನಿಂದ ಆಗುವುದಿಲ್ಲ. ಆದರಿಂದ, ಪ್ರಶ್ನೆ ಏನೆಂದರೆ, ವಿಧಾನದ್ದು. ಏಳನೇ ಅನುಸೂಚಿಯ ಪಟ್ಟಿ I ಅಥವಾ ಪಟ್ಟಿ II ರ ಮೇರೆಗೆ ಕಾನೂನನ್ನು ರಚಿಸಬೇಕಿದ್ದರೆ ಸಾಮಾನ್ಯ ವಿಧಾನ ಯಾವುದೆಂದರೆ, ವಿಧೇಯಕವನ್ನು ತರುವ ವಿಧಾನ. ಹೌದಲ್ಲವೇ? ವಿಧೇಯಕವನ್ನು ತರಬೇಕಾಗುತ್ತದೆ, ಮೂರು ಹಂತದಲ್ಲಿ ಅದನ್ನು ಸದನದ ಮುಂದೆ ಇಡಬೇಕಾಗುತ್ತದೆ, ವಿಧೇಯಕ ಅಂಗೀಕೃತವಾಗಬೇಕಾಗುತ್ತದೆ, ಅಲ್ಲಿಗೆ ಮುಗಿಯಿತು. ಆದರೆ, ೩ನೇ ಅನುಚ್ಛೇದಕ್ಕೆ ಸಂಬಂಧಿಸಿದಂತೆ,

ಅದರಲ್ಲಿ ಹೇಳಿರುವ ಆವಶ್ಯಕ ವಿಧಾನವನ್ನು ಅನುಸರಿಸಲೇಬೇಕಾಗುತ್ತದೆ. ನನ್ನ ಹೇಳಿಕೆ ಇದು: ವಿಧೇಯಕಗಳಿಗೆ ಸಂಬಂಧಿಸಿದ ಸಾಮಾನ್ಯ ವಿಧಾನವು ಈ ವಿಷಯಕ್ಕೆ ಅನ್ವಯವಾಗುತ್ತದೆಯೇ ಅಥವಾ ૩ನೇ ಅನುಚ್ಛೇದದಲ್ಲಿ ಗೊತ್ತುಪಡಿಸಿರುವ ವಿಧಾನವು ಅನ್ವಯವಾಗುತ್ತದೆಯೇ ಎಂಬುದನ್ನು ತೀರ್ಮಾನಿಸಬೇಕಾದರೆ ನಾವು ಒಂದೇ ಒಂದು ಅಂಶವನ್ನು ಉಲ್ಲೇಖಿಸಬೇಕಾಗುತ್ತದೆ. ಅದೇನೆಂದರೆ, ವಿಧೇಯಕದ ಮುಖ್ಯ ಉದ್ದೇಶ ಏನು? ಅಸ್ಸಾಂನ ಗಡಿಗಳನ್ನು ಪುನರ್ ಹೊಂದಾಣಿಕೆ ಮಾಡುವುದೇ ವಿಧೇಯದ ಮುಖ್ಯ ಉದ್ದೇಶವೇ ಅಥವಾ ಭೂತಾನಕ್ಕೆ ಭೂಭಾಗವನ್ನು ಬಿಟ್ಟುಕೊಡುವುದು ಮತ್ತು ಅಸ್ಸಾಂನಿಂದ ಭೂಭಾಗ ಹೋಗುತ್ತಿರುವುದರಿಂದ ಆ ಪರಿಣಾಮವಾಗಿ ಅಸ್ಸಾಂನ ಗಡಿಗಳಲ್ಲಿ ಪುನರ್ ಹೊಂದಾಣಿಕೆ ಮಾಡುವುದು ವಿಧೇಯಕದ ಮುಖ್ಯ ಉದ್ದೇಶವೇ? ಈ ಬಗೆಯ ವಿಷಯದಲ್ಲಿ ಎರಡೂ ಅಂಶಗಳು ಅಡಕವಾಗಿರುವುದರಿಂದ (ಬಿಟ್ಟುಕೊಡುವುದರಲ್ಲಿ ಈ ಅಂಶ ಇದ್ದೇ ಇರುತ್ತದೆ, ಏಕೆಂದರೆ, ಬಿಟ್ಟುಕೊಡುವುದರ ಪರಿಣಾಮವಾಗಿ ಗಡಿಗಳ ಪುನರ್ ಹೊಂದಾಣಿಕೆ ಆಗಲೇ ಬೇಕಾಗುತ್ತದೆ) ನನ್ನ ಹೇಳಿಕೆ ಏನೆಂದರೆ, ಯಾವ ವಿಧಾನವನ್ನು ಅನುಸರಿಸಬೇಕೆಂದರೂ ವಿಧೇಯಕದ ಮುಖ್ಯ ಉದ್ದೇಶವನ್ನು ಕಾರ್ಯರೂಪಕ್ಕೆ ತರಲು ಅನುಸರಿಸಬೇಕಾದ ವಿಧಾನವೇ ಹೊರತು ಪೂರಕ ಅಥವಾ ಪ್ರಾಸಂಗಿಕ ಉದ್ದೇಶ ಅಲ್ಲ. ಗಡಿಗಳ ಪುನರ್ ಹೊಂದಾಣಿಕೆಯೇ ಮುಖ್ಯ ಉದ್ದೇಶವೆಂಬುದು ಕಂಡು ಬರುವಂಥ ರೀತಿಯಲ್ಲಿ ಈ ವಿಧೇಯಕವನ್ನು ರೂಪಿಸಲಾಗಿದೆಯಾದರೂ, ಭೂಭಾಗವನ್ನು ಬಿಟ್ಟುಕೊಡುವುದೇ ನಿಜವಾದ ಉದ್ದೇಶ. ಹೀಗಾಗಿ, ಏಳನೇ ಅನುಸೂಚಿಯಲ್ಲಿರುವ ನಮೂದುಗಳಲ್ಲಿ ಹೇಳಿರುವ ಯಾವುವೇ ವಿಷಯಗಳ ಮೇಲೆ ಕಾನೂನನ್ನು ರಚಿಸಲು ಸಂವಿಧಾನವು ಗೊತ್ತುಪಡಿಸಿರುವ ವಿಧಾನವೇ ಸರಿಯಾದ ವಿಧಾನ, ಸಂವಿಧಾನವು ಗೊತ್ತುಪಡಿಸಿರುವ ಆ ಸರಿಯಾದ ವಿಧಾನವನ್ನೇ ಸರ್ಕಾರವು ಅನುಸರಿಸಿದೆಯೆಂದು ಹೇಳುತ್ತಿದ್ದೇನೆ.

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ಅದು, ಗಡಿಗಳ ಮರು ಹೊಂದಾಣಿಕೆಯೇ ಇರಬಹುದು. ಗೊತ್ತು ಪಡಿಸಿರುವ ವಿಧಾನವನ್ನು ಅನಸರಿಸಿಲ್ಲವೇ ?

**ವಿದೇಶ ವ್ಯವಹಾರಗಳ ಉಪ–ಮಂತ್ರಿ (ಡಾ. ಕೇಸ್ಕರ್):** ಅನುಸರಿಸಲಾಗಿದೆ.

**ಡಾ. ಅಂಬೇಡ್ಕರ್ :** ಅಂದ ಮೇಲೆ, ಆ ವಾದ ನಿಲ್ಲುವುದಿಲ್ಲ.

**ಮಾನ್ಯ ಡೆಪ್ಯೂಟಿ ಸ್ಪೀಕರ್:** ૩ನೇ ಅನುಚ್ಛೇದದಲ್ಲಿ ಗೊತ್ತುಪಡಿಸಿರುವ ವಿಧಾನವನ್ನು ಅನುಸರಿಸಲಾಗಿದೆ. ಬಿಟ್ಟುಕೊಡುವುದಕ್ಕೆ ಸಂಬಂಧಿಸಿದಂತೆ ೧ಳನೇ ನಮೂದಿನಲ್ಲಿ ಹೇಳಿರುವ ಅಧಿಕಾರವನ್ನು ತಾನು ಒಪ್ಪುವುದಿಲ್ಲವೆಂದು ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಹೇಳುತ್ತಾರೆಂದು ನನಗೆ ತೋರುತ್ತದೆ. ಅದಕ್ಕೋಸ್ಕರವೇ ಸಂವಿಧಾನಕ್ಕೆ ತಿದ್ದುಪಡಿ ಅಗತ್ಯವೆಂದು ಅವರು ಹೇಳುತ್ತಾರೆ.

**ಶ್ರೀ ನಜಿರುದ್ದೀನ್ ಅಹ್ಮದ್ (ಪಶ್ಚಿಮ ಬಂಗಾಳ):** ಎದ್ದು ನಿಂತಾಗ

**ಮಾನ್ಯ ಡೆಪ್ಯೂಟಿ ಸ್ಪೀಕರ್ :** ನಿನ್ನೆ ದಿನ ಈ ವಿಷಯವನ್ನು ಕ್ರಿಯಾಲೋಪದಂತೆ ಎತ್ತಿದ್ದಾಗ ಅದಾಗಲೇ ಮಾತನಾಡಿದ್ದ ಮಾನ್ಯ ಸದಸ್ಯರಿಗೆ ಮತ್ತೆ ಮಾತನಾಡಲು ಅವಕಾಶ ಕೊಡುವ ಉದ್ದೇಶ ನನಗಿಲ್ಲ.

***ಕಾನೂನು ಸಚಿವರು (ಡಾ. ಅಂಬೇಡ್ಕರ್):** ಈ ವಿಧೇಯಕವನ್ನು ಪರ್ಯಾಲೋಚನೆಗೆ ಎತ್ತಿಕೊಳ್ಳಬೇಕೆಂಬ ಸೂಚನೆಯನ್ನು ನಾನು ಈಗಾಗಲೇ ಮಂಡಿಸಿದ್ದೇನೆ. ಈ ನಿರ್ದಿಷ್ಟ ವಿಧೇಯಕದ ಸ್ವರೂಪದ ಬಗ್ಗೆ ಮತ್ತು ಅದನ್ನು ತರಬೇಕಾದ ಆವಶ್ಯಕತೆ ಬಗ್ಗೆ ವಿವರಿಸಲು ಕೆಲವೊಂದು ಮಾತುಗಳನ್ನು ನಾನು ಹೇಳಬೇಕಾಗಿದೆ.

---

* ಸಂ. ಚ. ಸಂಪುಟ XIV, ೧೭ ಆಗಸ್ಟ್ ೧೯೫೧, ಪುಟಗಳು ೮೩೨–೩೫

"ವಾಣಿಜ್ಯ" ವ್ಯವಹಾರಗಳೆಂದು ಯಾವುವನ್ನು ಕರೆಯಲಾಗುವುದೋ ಅವುಗಳಿಂದ ಉದ್ಭವಿಸುವ ಕೆಲವು ದಾಖಲೆಗಳಿಗೆ ಸಂಬಂಧಿಸಿದಂತೆ ಕೆಲವೊಂದು ಕಾರ್ಯಗಳನ್ನು ನಿರ್ವಹಿಸುವ ಅಧಿಕಾರಿ ಯಾರೆಂದರೆ ನೋಟರಿ ಪಬ್ಲಿಕ್. ಭಾರತದಲ್ಲಿ ನೋಟರಿ ಪಬ್ಲಿಕ್ ಸ್ಥಾನದ ಬಗ್ಗೆ ಹೇಳುವುದಾದರೆ, ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆ ಪ್ರಕಾರ ಭಾರತ ಸರ್ಕಾರಕ್ಕೆ, ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಆಗುವ ದಾಖಲೆಗಳ ಬಗ್ಗೆ ವ್ಯವಹರಿಸಲು ನೋಟರಿ ಪಬ್ಲಿಕ್‌ಗಳನ್ನು ನೇಮಕ ಮಾಡುವ ಅಧಿಕಾರ ಇದೆ. ಆದರೆ, ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆ ಮೇರೆಗೆ ನೇಮಕಗೊಂಡ ನೋಟರಿ ಪಬ್ಲಿಕ್‌ರವರ ವ್ಯಾಪ್ತಿಗೆ ಒಳಪಡದ, ಕೆಲವೊಂದು ಇತರ ವಾಣಿಜ್ಯ ದಾಖಲೆಗಳ ಸೃಜನೆಗೆ ಕಾರಣವಾಗುವ ಇತರ ವಾಣಿಜ್ಯ ವ್ಯವಹಾರಗಳು ಇವೆ. ಇಂಡಿಯನ್ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆ ವ್ಯಾಪ್ತಿಗೆ ಒಳಪಡದ ಅಂಥ ನೋಟರಿ ಪಬ್ಲಿಕ್‌ಗಳನ್ನು ಗ್ರೇಟ್ ಬ್ರಿಟನ್‌ನಲ್ಲಿರುವ ಪ್ರಾಧಿಕಾರಗಳು ನೇಮಕ ಮಾಡುತ್ತವೆ.

ಈ ಪದವಿಯ ಇತಿಹಾಸ ಬಹುಶಃ ಕುತೂಹಲಕರ. ಮೊದಮೊದಲು ಇಂಗ್ಲೆಂಡಿನಾದ್ಯಂತ, ಬಹುಶಃ ಅಷ್ಟೇಕೆ, ಯುರೋಪಿನಲ್ಲಿ ನೋಟರಿ ಪಬ್ಲಿಕರನ್ನು ಪೋಪ್‌ರವರು ನೇಮಿಸುತ್ತಿದ್ದರು. ಅದು ಕ್ರೈಸ್ತ ಧಾರ್ಮಿಕ ಹುದ್ದೆ ಆಗಿತ್ತು. ಆ ಅಧಿಕಾರಿಯ ಕಾರ್ಯ ಏನೆಂದರೆ, ಕ್ರೈಸ್ತ ಧಾರ್ಮಿಕ ವಿಷಯಗಳನ್ನು ಎಂದರೆ ಒಂದು ನಿರ್ದಿಷ್ಟ ಚರ್ಚ್‌ನಲ್ಲಿ ಆಸನ ವ್ಯವಸ್ಥೆಗೆ ಸಂಬಂಧಿಸಿದಂತೆ ವಿವಾದ ಉದ್ಭವಿಸಿದರೆ ಆ ವಿವಾದವನ್ನು ನೋಟರಿ ಪಬ್ಲಿಕ್ ತೀರ್ಮಾನಿಸುತ್ತಿದ್ದರು. ಮೃತನಾದ ವ್ಯಕ್ತಿಯನ್ನು ಸಾರ್ವಜನಿಕ ಸ್ಮಶಾನದಲ್ಲಿ ಹೂಳಬೇಕೇ ಅಥವಾ ಚರ್ಚ್ ಮಾನ್ಯತೆ ನೀಡಿರದ, ಖಾಸಗಿ ಸ್ಮಶಾನವೆಂದು ಕರೆಯುತ್ತಿದ್ದ ಕೆಲವೊಂದು ಭಾಗದಲ್ಲಿ ಅಂತ್ಯಕ್ರಿಯೆ ಮಾಡಬೇಕೇ ಎಂಬ ಪ್ರಶ್ನೆ ಉದ್ಭವಿಸಿದಾಗ ಆ ವಿಷಯವನ್ನು ಸಹ ನೋಟರಿ ಪಬ್ಲಿಕ್‌ಗಳೇ ತೀರ್ಮಾನಿಸುತ್ತಿದ್ದರು. ಕ್ರಮೇಣ, ನೋಟರಿ ಪಬ್ಲಿಕ್‌ಗಳಿಗೆ ಕೆಲವೊಂದು ವಾಣಿಜ್ಯ ಕರ್ತವ್ಯಗಳನ್ನು ವಹಿಸಲಾಯಿತು. ಅದರಂತೆ ಅವರು ಆ ವ್ಯವಹಾರಗಳ ಬಗ್ಗೆ ಟಿಪ್ಪಣಿ ಬರೆದಿಟ್ಟಕೊಳ್ಳುವ, ಲಿಖಿತದಲ್ಲಿ ನಿರಾಕರಿಸುವ ಅಥವಾ ಅವುಗಳನ್ನು ಮಾನ್ಯ ಮಾಡುವ ಅಥವಾ ಮಾನ್ಯ ಮಾಡದಿರುವ ಟಿಪ್ಪಣಿಯನ್ನು ಸಿದ್ಧಪಡಿಸುವ ಕರ್ತವ್ಯಗಳನ್ನು ನೆರವೇರಿಸಬೇಕಿತ್ತು. ಪ್ರಾಟೆಸ್ಟೆಂಟ್ ಕ್ರಾಂತಿ ಆದಾಗ, ಗ್ರೇಟ್ ಬ್ರಿಟನ್ನಿಗೆ ಸಂಬಂಧಿಸಿದಂತೆ ಪೋಪ್‌ರವರ ಪರಮಾಧಿಕಾರ ಅಂತ್ಯಗೊಂಡಿತು. ಆ ಅಧಿಕಾರವನ್ನು ಬ್ರಿಟಿಷ್ ದೊರೆ ವಹಿಸಿಕೊಂಡರು. ನೋಟರಿ ಪಬ್ಲಿಕ್‌ಗಳ ನೇಮಕದ ವಿಷಯದಲ್ಲಿ ಪೋಪ್‌ರಿಂದ ಬಂದ ಅಧಿಕಾರ ವ್ಯಾಪ್ತಿಯನ್ನು, ದೊರೆಯ ಅಧಿಕಾರಿಯೇ ಆಗಿದ್ದ ಕ್ಯಾಂಟರ್ ಬರಿ ಆರ್ಚ್ ಬಿಷಪ್‌ರವರಿಗೆ ಬ್ರಿಟಿಷ್ ದೊರೆ ವರ್ಗಾಯಿಸಿದರು. ಏಕೆಂದರೆ ಪ್ರಾಟೆಸ್ಟೆಂಟ್ ಕ್ರಾಂತಿಯ ಪರಿಣಾಮವಾಗಿ ಚರ್ಚ್‌ನ ಬದಲು, ರಾಷ್ಟ್ರವೇ ಸೌರ್ವಭೌಮ ಆಯಿತು ಹಾಗೂ ಚರ್ಚ್‌ನ ಎಲ್ಲ ಅಧಿಕಾರಿಗಳು ರಾಷ್ಟ್ರದ ಅಧೀನ ಅಧಿಕಾರಿಗಳಾದರು. ಆರ್ಚ್ ಬಿಷಪ್ ಅವರ ಅಧೀನಕ್ಕೆ, ಕೋರ್ಟ್ ಆಫ್ ಫ್ಯಾಕಲ್ಟಿಯೆಂದು ಕರೆದಿದ್ದ, ಚರ್ಚ್ ವಿಷಯದ ಬಗ್ಗೆ ವ್ಯವಹರಿಸುತ್ತಿದ್ದ ಒಬ್ಬರು ಅಧಿಕಾರಿಯನ್ನು ಕೊಡಲಾಗಿತ್ತು. ಆ ವಿಷಯಗಳನ್ನು ನಾನು ಈಗಾಗಲೇ ಕೆಲವು ಮಾತುಗಳಲ್ಲಿ ಹೇಳಿದ್ದೇನೆ. ಕ್ಯಾಂಟರ್‌ಬರಿ ಆರ್ಚ್ ಬಿಷಪ್‌ರ ಮೇಲ್ವಿಚಾರಣೆಗೆ ಒಳಪಟ್ಟಿದ್ದ ಆ ಕೋರ್ಟ್ ಆಫ್ ಫ್ಯಾಕಲ್ಟಿಯು ಇಂಗ್ಲೆಂಡಿನಲ್ಲಿ ಎಲ್ಲ ನೋಟರಿ ಪಬ್ಲಿಕ್‌ಗಳನ್ನು ನೇಮಿಸುತ್ತಿತ್ತು. ಅದೇ ನಿಕಾಯವು ಭಾರತದಲ್ಲೂ ಸಹ ನೋಟರಿಗಳನ್ನು ನೇಮಕ ಮಾಡುವುದನ್ನು ಮುಂದುವರೆಸಿತು. ನಾವು ಮಾಡಿದ್ದೇನೆಂದರೆ, ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆಯಿಂದಾಗಿ ನ್ಯಾಯಿಕ ಅಧಿಕಾರ ವ್ಯಾಪ್ತಿಯನ್ನು ಗಳಿಸಿಕೊಂಡಿದ್ದಂಥ, ಇಂಗ್ಲೆಂಡಿನಲ್ಲಿರುವ ಕೋರ್ಟ್ ಆಫ್ ಫ್ಯಾಕಲ್ಟಿಯ ಅಧಿಕಾರದಿಂದ ಕೆಲವೊಂದು ಸಣ್ಣ ಭಾಗವನ್ನು ತೆಗೆದು ಹಾಕಿದ್ದೇವೆ.

ಆದ್ದರಿಂದ, ಈಗ ಭಾರತದಲ್ಲಿರುವ ವಸ್ತುಸ್ಥಿತಿಯೇನೆಂದರೆ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆ ವ್ಯಾಪ್ತಿಗೊಳಪಡುವ ದಾಖಲೆಗಳ ಬಗ್ಗೆ ಕಾರ್ಯನಿರ್ವಹಿಸುವ ನೋಟರಿಗಳನ್ನು ಭಾರತ ಸರ್ಕಾರವು ನೇಮಕ ಮಾಡುತ್ತದೆ. ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆ ವ್ಯಾಪ್ತಿಗೆ ಒಳಪಡದಿರುವ ಎಲ್ಲ ಇತರ ದಾಖಲೆಗಳ ಬಗ್ಗೆ ಇಂಗ್ಲೆಂಡಿನಿಂದ ನೇಮಕಗೊಂಡ ನೋಟರಿಗಳು ಕಾರ್ಯನಿರ್ವಹಿಸುತ್ತಿದ್ದರು. ನಮ್ಮ ಸಂವಿಧಾನವು, ಎಂದರೆ, ೧೯೪೯ರ ಭಾರತ (ಆನುಷಂಗಿಕ ನಿಬಂಧನೆಗಳು) ಕಾಯಿದೆಯು ಮತ್ತು ಸಂವಿಧಾನದ ೩೭೭ (೧)ನೇ ಅನುಚ್ಛೇದವು, ಸಂವಿಧಾನವು ಜಾರಿಗೆ ಬರುವುದಕ್ಕೂ ಮುಂಚೆ ನೇಮಕಗೊಂಡಿದ್ದ ಯಾರೇ ಅಧಿಕಾರಿಯು ಆ ಅಧಿಕಾರವನ್ನು ಚಲಾಯಿಸುವುದನ್ನು ಮುಂದುವರಿಸಲು ಅನುಮತಿ ನೀಡಿತ್ತು. ಹಾಗಾಗಿ, ಭಾರತವು ಸ್ವತಂತ್ರವಾಗಿದ್ದರೂ ಮತ್ತು ನೋಟರಿಗಳನ್ನು ನೇಮಕ ಮಾಡಲು ರಾಷ್ಟ್ರಪತಿಯವರಿಗೆ ಅಧಿಕಾರ ಇತ್ತಾದರೂ, ನಾನು ಹೇಳಿದ ಈ ಎರಡು ನಿಬಂಧನೆಗಳ ಬಲದಿಂದ ಈ ಅಧಿಕಾರಿಗಳು, ಭಾರತದ ಸಂವಿಧಾನದ ಅಧೀನಕ್ಕೆ ಒಳಪಟ್ಟಿರದ ಪ್ರಾಧಿಕಾರದಿಂದ ನೇಮಕಗೊಂಡಿದ್ದರೂ ನೋಟರಿಗಳ ಕಾರ್ಯ ನಿರ್ವಹಿಸುವುದನ್ನು ಮುಂದುವರಿಸಿದ್ದರು. ಈ ಅಸಂಗತತೆಯನ್ನು ಕೊನೆಗೊಳಿಸುವುದು ಮತ್ತು ಕೋರ್ಟ್ ಆಫ್ ಫ್ಯಾಕಲ್ಟಿಯು ಈಗ ಚಲಾಯಿಸುತ್ತಿರುವ ನೇಮಕ ಅಧಿಕಾರವನ್ನು ಮುಂದುವರಿಸದೆ ನಿಲ್ಲಿಸುವುದು ತುಂಬಾ ಅಪೇಕ್ಷಣೀಯವೆಂದು ಭಾವಿಸಲಾಯಿತು. ಅದೇ ಈ ವಿಧೇಯಕದ ಮುಖ್ಯ ಉದ್ದೇಶ. ಇದಕ್ಕೆ ಯಾರೇ ಸಂಸತ್ ಸದಸ್ಯರ ಯಾವುದೇ ಆಕ್ಷೇಪಣೆ ಇದೆಯೆಂದು ನನಗನಿಸುತ್ತಿಲ್ಲ. ಸಂವಿಧಾನವು ಅಸ್ತಿತ್ವಕ್ಕೆ ಬಂದ ಮೇಲೂ ಕಾರ್ಯ ನಿರ್ವಹಿಸಲು ಈ ಅಧಿಕಾರಿಗಳಿಗೆ ಏಕೆ ಅನುಮತಿ ನೀಡಲಾಯಿತು ಎಂದು ಅನೇಕ ಸಂಸತ್ ಸದಸ್ಯರು ಕೇಳಬಹುದು. ನಾನು ಹೇಳುವುದು ಇಷ್ಟೇ: ಮಾಡದೇ ಇರುವುದಕ್ಕಿಂತಲೂ ತಡವಾಗಿಯಾದರೂ ಮಾಡುವುದು ಲೇಸು. ಅದಕ್ಕೆ ಇದೊಂದೇ ಸಮರ್ಥನೆ.

**ವಿಧೇಯಕದ ಮುಖ್ಯ ಕಲಮುಗಳು ಹೀಗಿವೆ:**

**ಕಲಮು ೩,** ಭಾರತದಲ್ಲಿ ಎಲ್ಲಿಯಾದರೂ, ನೋಟರಿ ಅಧಿಕಾರದ ಸಹಿತ ನೋಟರಿ ವೃತ್ತಿ ಕೈಗೊಳ್ಳುವ ಸಲುವಾಗಿ ನೋಟರಿಗಳನ್ನು ನೇಮಕ ಮಾಡಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ಕೊಡುತ್ತದೆ. ತನ್ನದೇ ಭೂಭಾಗದ ಒಳಗೆ ತನ್ನ ಕ್ಷೇತ್ರ ವ್ಯಾಪ್ತಿಯ ಒಳಗೆ ನೋಟರಿಗಳನ್ನು ನೇಮಕ ಮಾಡಲು ಪ್ರತಿಯೊಂದು ರಾಜ್ಯಕ್ಕೆ ಅಧಿಕಾರ ಕೊಡುತ್ತದೆ.

**ಕಲಮು ೪ ಮತ್ತು ೫,** ತನ್ನ ಹೆಸರನ್ನು ನೋಂದಾಯಿಸಿದ ಹೊರತು ಮತ್ತು ವೃತ್ತಿ ಪ್ರಮಾಣ ಪತ್ರವನ್ನು ಪಡೆದ ಹೊರತು ವ್ಯಕ್ತಿಯು ವೃತ್ತಿಯನ್ನು ಕೈಗೊಳ್ಳಲು ಹಕ್ಕುಳ್ಳವನಾಗುವುದಿಲ್ಲವೆಂದು ಹೇಳುತ್ತವೆ. ನಿಯಮಗಳಲ್ಲಿ ಗೊತ್ತುಪಡಿಸಿದ ಕೆಲವೊಂದು ಫೀಜುಗಳನ್ನು ಆತ ಸಂದಾಯ ಮಾಡಬೇಕಾಗುತ್ತದೆ. ಈ ಫೀಜುಗಳನ್ನು ೧೪(೨) ನೇ ಕಲಮಿನಲ್ಲಿ ಗೊತ್ತುಪಡಿಸಲಾಗಿದೆ.

**ಕಲಮು ೬,** ಪ್ರತಿವರ್ಷವೂ ನೋಟರಿಗಳ ಪಟ್ಟಿಗಳನ್ನು ಪ್ರಕಟಿಸಬೇಕೆಂದು ಹೇಳುತ್ತದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು, ಯಾವ ನೋಟರಿಗಳು ತಮ್ಮ ಹೆಸರುಗಳನ್ನು ನೊಂದಾಯಿಸಿದ್ದಾರೋ ಆ ನೋಟರಿಗಳ ರಿಜಿಸ್ಟರನ್ನು ಇಡುವುದು ಅಗತ್ಯ.

**ಕಲಮು ೭,** ನೋಟರಿಯ ಮೊಹರಿನ ಬಗ್ಗೆ ಹೇಳುತ್ತದೆ.

**ಕಲಮು ೮,** ನೋಟರಿಗಳ ಕಾರ್ಯಗಳನ್ನು ಹೇಳುತ್ತದೆ. ಅವು ಇಂಗ್ಲೀಷ್ ಕಾನೂನು ಮತ್ತು ಪದ್ಧತಿ ಎರಡರ ಪ್ರಕಾರ ನೋಟರಿಯು ನೆರವೇರಿಸಬೇಕಾದ ವಾಡಿಕೆಯ ಕಾರ್ಯಗಳು. ಅವುಗಳನ್ನು ಹಾಲ್ಸ್‌ಬರಿ ಲಾಸ್ ಆಫ್ ಇಂಗ್ಲೆಂಡ್ ಗ್ರಂಥದಿಂದ ತೆಗೆದುಕೊಳ್ಳಲಾಗಿದೆ.

**ಕಲಮು ೯,** ಯಾರೇ ವ್ಯಕ್ತಿಯು, ವೃತ್ತಿಪ್ರಮಾಣಪತ್ರ ಇಲ್ಲದೆಯೇ ನೋಟರಿ ವೃತ್ತಿ ಮಾಡದಂತೆ ನಿಷೇಧಿಸುತ್ತದೆ. ಯಾವ ವ್ಯಕ್ತಿಗಳು ಈಗಾಗಲೇ ನೋಟರಿಗಳಾಗಿದ್ದಾರೋ ಅವರಿಗೆ ಈ ವಿಧೇಯಕದ ಪ್ರಕಾರ ನೋಂದಾಯಿತರಾಗಲು ಒಂದು ವರ್ಷದ ಕಾಲಾವಕಾಶವನ್ನು ಕೊಡಲಾಗಿದೆ.

**ಕಲಮು ೧೦,** ನೋಟರಿಯು, ನೋಟರಿ ಪಬ್ಲಿಕ್ ಹುದ್ದೆಗೆ ಅನರ್ಹವಾಗುವಂತೆ ಮಾಡುವ ಯಾವುದೇ ಕಾರ್ಯವನ್ನು ಮಾಡಿದರೆ ನೋಟರಿಗಳ ರಿಜಿಸ್ಟರಿನಿಂದ ತೆಗೆದು ಹಾಕುವುದನ್ನು ಹೇಳುತ್ತದೆ.

**ಕಲಮು ೧೧,** ಯಾವುದೇ ಕಾನೂನಿನಲ್ಲಿ ನೋಟರಿ ಪಬ್ಲಿಕ್‌ಗೆ ಮಾಡಿರುವ ಯಾವುದೇ ಉಲ್ಲೇಖವು ಸಂಪೂರ್ಣವಾಗಿ ವ್ಯಾಖ್ಯಾನಿಸಬಹುದಾದುದು ಆಗಿರುತ್ತದೆಂದು ಮತ್ತು ಈ ಕಾಯಿದೆ ಪ್ರಕಾರ ವೃತ್ತಿ ಕೈಗೊಳ್ಳಲು ಹಕ್ಕುಳ್ಳವನಾಗಿರುವ ನೋಟರಿಗೆ ಮಾಡಿದ ಉಲ್ಲೇಖವೆಂದು ಅರ್ಥಾನ್ವಯ ಮಾಡಬೇಕೆಂದು ಹೇಳುತ್ತದೆ.

**ಕಲಮು ೧೨ ಮತ್ತು ೧೩,** ಅಪರಾಧಗಳಿಗೆ ದಂಡನೆಯನ್ನು ಮತ್ತು ಅಪರಾಧಗಳ ಶಿಕ್ಷಾರ್ಹತೆಯನ್ನು ಹೇಳುತ್ತದೆ.

**ಕಲಮು ೧೩ಎ,** ಇದು ಹೊಸ ಕಲಮು, ಯಾವುದೇ ವಿದೇಶಿ ರಾಷ್ಟ್ರದಲ್ಲಿ ಮಾಡಿರುವ ನೋಟರಿ ಕಾಯಿದೆಯನ್ನು, ಪರಸ್ಪರ ಆಧಾರದ ಮೇಲೆ ಸಿಂಧುವೆಂದು ಘೋಷಿಸಲು ಈ ಕಲಮನ್ನು ಸೇರಿಸಲಾಗಿದೆ.

ಇವೆಲ್ಲವೂ ಈ ವಿಧೇಯದ ಪ್ರಕಾರವೇ ಆಗುತ್ತದೆ. ನನ್ನ ಈ ಸೂಚನೆಗೆ ಸದನವು ಅಂಗೀಕಾರ ನೀಡುತ್ತದೆಂದು ನಂಬಿದ್ದೇನೆ.

**ಮಾನ್ಯ ಸಭಾಪತಿಗಳು:** ಈ ಸೂಚನೆಯನ್ನು ಮಂಡಿಸಲಾಗಿದೆ.

"ನೋಟರಿಗಳ ವೃತ್ತಿಯನ್ನು ನಿಯಮಗಳಿಗೆ ಒಳಪಡಿಸುವ ಈ ವಿಧೇಯಕವನ್ನು
ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು"

**ಶ್ರೀ ಸಿಧ್ವಾ (ಮಧ್ಯಪ್ರದೇಶ):** ಇದು ತುಂಬಾ ಸರಳವಾದ ವಿಧೇಯಕ. ತುಂಬಾ ಸ್ವಾರಸ್ಯಕರ ಇತಿಹಾಸವನ್ನು ಮಾನ್ಯ ಕಾನೂನು ಸಚಿವರು ನಿರೂಪಿಸಿದರು, ಬಹಳ ಸಂತೋಷ ಆಯಿತು. ಭಾರತದಲ್ಲಿ ನೇಮಕಗೊಂಡ ನೋಟರಿಗಳು ಕ್ಯಾಂಟರ್ ಬರಿ ಆರ್ಚ್ ಬಿಷಪ್‌ರಿಂದ ನೇಮಕಗೊಂಡವರೆಂಬುದು ನನಗೆ ಗೊತ್ತೇ ಇರಲಿಲ್ಲ. ಈ ನೇಮಕಾತಿಯನ್ನು ಭಾರತ ಸರ್ಕಾರವು ಮಾಡುತ್ತದೆಂದು ಭಾವಿಸಿದ್ದೆ. ಇದು, ನಿಜಕ್ಕೂ ಹೊಸ ಸಮಾಚಾರ. ನಮ್ಮಲ್ಲಿ ಅನೇಕರಿಗೆ, ಅದರಲ್ಲೂ ನನಗೆ ಅದು ಗೊತ್ತೇ ಇರಲಿಲ್ಲ.

"ಸೂಕ್ತ ಅರ್ಹತೆಯುಳ್ಳ " ಪದದ ಅರ್ಥವನ್ನು ತಿಳಿದುಕೊಳ್ಳಬಯಸುತ್ತೇನೆ. ಕಾನೂನಿನಲ್ಲಿ ಸೂಕ್ತ ಅರ್ಹತೆ ಎಂದು ಅರ್ಥವೇ?

**ಡಾ. ಅಂಬೇಡ್ಕರ್ :** ಅಲ್ಲವೇ ಅಲ್ಲ.

**ಮಾನ್ಯ ಸಭಾಪತಿಯವರು :** ಅದಕ್ಕೆ, ಬಹುಶಃ ೧೪ನೆಯ ಕಲಮಿನ ಮೇರೆಗೆ ರಚಿಸಿದ ನಿಯಮಗಳು ಅನ್ವಯವಾಗುತ್ತವೆ.

◆

# ೩೭

# ನೋಟರಿಗಳ ವಿಧೇಯಕ

*ಕಾನೂನು ಸಚಿವರು (ಡಾ. ಅಂಬೇಡ್ಕರ್) : ನೋಟರಿಗಳ ವೃತ್ತಿಯನ್ನು ನಿಯಮಗಳಿಗೆ ಒಳಪಡಿಸುವ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

**ಮಾನ್ಯ ಸ್ಪೀಕರ್ :** ಸೂಚನೆ ಏನೆಂದರೆ :

> "ನೋಟರಿಗಳ ವೃತ್ತಿಯನ್ನು ನಿಯಮಗಳಿಗೆ ಒಳಪಡಿಸುವ ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕು"

ಸೂಚನೆ ಅಂಗೀಕೃತವಾಗಿದೆ.

**ಡಾ. ಅಂಬೇಡ್ಕರ್ :** ವಿಧೇಯಕವನ್ನು ಮಂಡಿಸುತ್ತೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ :** ಈ ದಿನದ ಕಾರ್ಯಕಲಾಪ ಪತ್ರದ ಜತೆ ತಿದ್ದುಪಡಿಯನ್ನು ಒದಗಿಸಿಲ್ಲ, ಆದರೂ, ಈ ಮುಂದಿನಂತೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ:

> "ಈ ವಿಧೇಯಕವನ್ನು, ಡಾ. ಭಕ್ಷಿ ತೇಕ್ ಚಂದ್, ಡಾ. ಪಂಜಾಬ್‌ರಾವ್ ಶಾಮರಾವ್ ದೇಶ್‌ಮುಖ್, ಶ್ರೀ ದೇಶಬಂಧು ಗುಪ್ತ, ಶ್ರೀ ಗೋಕುಲ್ ಭಾಯ್ ದೌಲತ್ ರಾಮ್‌ಭಟ್, ಪಂಡಿತ್ ಮುಕುಟ್ ಬಿಹಾರಿ ಲಾಲ್ ಭಾರ್ಗವ, ಶ್ರೀ ಪ್ರಭುದಯಾಳ್ ಹಿಮತ್ಸಿಂಗ್‌ಕ, ಶ್ರೀ ಅರುಣ್ ಚಂದ್ರ ಗುಹ, ಶ್ರೀ ರೋಹಿಣಿ ಕುಮಾರ್ ಚೌಧರಿ, ಶ್ರೀ ಬನಾರಸಿ ಪ್ರಸಾದ್ ಝುಂಝುನ್ ವಾಲಾ, ಶ್ರೀ ಆರ್.ಕೆ. ಸಿಧ್ವಾ, ಶ್ರೀ ಸಿ. ಸುಬ್ರಮಣಿಯಂ, ಇವರುಗಳನ್ನು ಒಳಗೊಂಡಿರುವ ಆಯ್ಕೆ ಸಮಿತಿಗೆ ಉಲ್ಲೇಖಿಸಬೇಕು ಮತ್ತು ಸೂಚಕರು, ಸೂಚನೆಗಳ ಸಹಿತ, ೧೯೫೧ ರ ಆಗಸ್ಟ್ ೩೧ಕ್ಕೆ ಮುಂಚೆ ವರದಿ ಮಾಡಬೇಕು"

ಇನ್ನು, ಇದು ಹೊಸ ಹುದ್ದೆ. ಸಂಸ್ಥಾನಗಳಲ್ಲಿ ಅಥವಾ ರಾಜ್ಯಗಳಲ್ಲಿ ಈ ಬಗ್ಗೆ ಏನಿದೆಯೋ ನನಗೆ ಗೊತ್ತಿಲ್ಲ. ನನಗೆ ತಿಳಿದು ಬಂದಿರುವಂತೆ, ಬಹುಶಃ ದೊಡ್ಡ ನಗರಗಳನ್ನು ಬಿಟ್ಟರೆ, ಬೇರಾವ ಸ್ಥಳಗಳಲ್ಲೂ ನೋಟರಿ ಪಬ್ಲಿಕ್‌ಗಳೆನ್ನುವ ಹುದ್ದೆ ಇಲ್ಲ. ಸರಿಪಡಿಸಿಕೊಳ್ಳುವುದಕ್ಕೆ ಒಳಪಟ್ಟು ಮಾತನಾಡುತ್ತೇನೆ. ಅಲ್ಲೂ ಕೂಡ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆ ಪ್ರಕಾರವೇ ಕಾರ್ಯಗಳನ್ನು ವಹಿಸಲಾಗಿದೆ.

**ಡಾ. ಅಂಬೇಡ್ಕರ್:** ಇಲ್ಲ. ಮೂಲತಃ ಎಲ್ಲವೂ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಕಾಯಿದೆ ಪ್ರಕಾರವೇ ಇದ್ದವು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಅವರುಗಳಿಗೆ, ಈಗ, ಯಾವುವಾದರೂ ಅಧಿಕಾರಗಳನ್ನು ಕೊಡಲಾಗಿದೆಯೇ?

---

* ಸಂ. ಚ. ಸಂಪುಟ ೧೦, ಭಾಗ II, ೧೮, ಏಪ್ರಿಲ್ ೧೯೫೧, ಪುಟ ೭೪೦

** ಸಂ. ಚ. ಸಂಪುಟ ೧೪ ಭಾಗ II, ೧೭, ಆಗಸ್ಟ್ ೧೯೫೧, ಪುಟ ೮೩೬–೮೩೮.

**ಡಾ. ಅಂಬೇಡ್ಕರ್ :** ಅವರು ನೋಟರಿ ಪಬ್ಲಿಕ್‌ಗಳು, ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆ ವ್ಯಾಪ್ತಿಯ ಹೊರಗೂ ಅವರು ನೋಟರಿ ಪಬ್ಲಿಕ್‌ರ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಈ ವಿಧೇಯಕ ಪ್ರಕಾರವೇ? ಆದರೆ, ಈಗ ಅವರುಗಳು ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆಯ ಪ್ರಕಾರ ಮಾತ್ರವೇ ಅವರ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಈ ವಿಧೇಯಕವನ್ನು ಪರಿಶೀಲಿಸಿದಾಗ, ವಾಸ್ತವವಾಗಿ ಭಾರತದಲ್ಲಿ ಒಟ್ಟಾರೆ ಹೊಸ ಹುದ್ದೆಯನ್ನು ಅಸ್ತಿತ್ವಕ್ಕೆ ತರಲು ಉದ್ದೇಶಿಸಲಾಗಿದೆ. ಈ ಹುದ್ದೆಯ ಇತಿಹಾಸ ತುಂಬಾ ಸ್ವಾರಸ್ಯಕರ. ಹಳೆಯ ಇಂಗ್ಲಿಷ್ ಕಾನೂನಿಂದಾಗಿ ಅದರ ಸೃಜನೆ ಆಗಿದೆ. ಇದೆಲ್ಲಾ ಇತಿಹಾಸವೆಂಬುದು ನನಗೆ ಗೊತ್ತಿರಲಿಲ್ಲ.

**ಡಾ. ಅಂಬೇಡ್ಕರ್ :** ಆ ವೃತ್ತಾಂತವನ್ನು ನಾನು ನಿರೂಪಿಸಿದ್ದೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಇಂಗ್ಲೆಂಡಿನಲ್ಲಿನ ಆರ್ಚ್ ಬಿಷಪ್‌ರ ಬಗ್ಗೆ, ನಂತರ ಮಾಸ್ಟರ್ ಆಫ್ ಫ್ಯಾಕಲ್ಟೀಸ್ ಬಗ್ಗೆ ಹೇಳಲಾಗಿದೆ. ಆದರೆ, ಇದೆಲ್ಲ ನಮಗೆ ಅರ್ಥವಾಗದ ಮಾತುಗಳು, ನಮಗೆ ಅರ್ಥವಾಗುವುದೂ ಇಲ್ಲ. ನಾನು ತಿಳಿದುಕೊಂಡಿರುವುದೇನೆಂದರೆ, ಇಂದು, ಇಡೀ ಭಾರತದಲ್ಲಿ ವಕೀಲರುಗಳು ಇನ್‌ಸ್ಟ್ರುಮೆಂಟ್ಸ್‌ಗಳನ್ನು – ಕ್ರಯಪತ್ರ, ಅಡಮಾನ ಪತ್ರ, ದಾನಪತ್ರ – ಅಧಿಕೃತಗೊಳಿಸುತ್ತಾರೆ. ಇವೆಲ್ಲವನ್ನು ಅರ್ಜಿ ಬರಹಗಾರರು ಅಥವಾ ವಕೀಲರುಗಳು ಮಾಡುತ್ತಾರೆ. ಪಂಜಾಬಿನ ಬಗ್ಗೆ ಅಧಿಕಾರಯುತವಾಗಿ ಹೇಳಬಲ್ಲೆ. ಅಲ್ಲಿ ಪ್ರತಿಯೊಬ್ಬ ವಕೀಲರೂ ಡೀಡ್‌ಗಳನ್ನು ಅಧಿಕೃತಗೊಳಿಸಲು ಸಕ್ಷಮರಾಗಿದ್ದಾರೆ. ಅಲ್ಲಿ ಅರ್ಜಿ ಬರಹಗಾರರು ಇದ್ದರೆ ಅವರೂ ಇದೇ ಕೆಲಸ ಮಾಡುತ್ತಾರೆ. ಅಂಥ ಕಡೆ, ಸಾಮಾನ್ಯವಾಗಿ ವಕೀಲರು ಆ ಕೆಲಸ ಮಾಡುವುದಿಲ್ಲ. ಈ ಕೆಲಸ ಮಾಡಲು ಕಾನೂನಿನ ಮೂಲಕ ಅವರಿಗೆ ಅಧಿಕಾರ ಕೊಡಲಾಗಿದೆ. ಓಥ್ ಕಮಿಷನರುಗಳ ಬಗ್ಗೆ ಹೇಳುವುದಾದರೆ, ನ್ಯಾಯಾಲಯಗಳಿಗೆ ಸಲ್ಲಿಸಬೇಕಾದ ದಾಖಲೆಗಳನ್ನು ಅವರು ದೃಢೀಕರಿಸುತ್ತಾರೆ. ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಕೆಲವೊಂದು ನಿಬಂಧನೆಗಳಿವೆ. ಅವುಗಳಿಗೆ ಅನುಸಾರವಾಗಿ ಅಫಿಡವಿಟ್‌ಗಳನ್ನು ದೃಢೀಕರಿಸಿಕೊಳ್ಳಬೇಕಾಗುತ್ತದೆ, ಅವುಗಳನ್ನು ನ್ಯಾಯಾಲಯಗಳಿಗೆ ಸಲ್ಲಿಸಬೇಕಾಗುತ್ತದೆ. ಇವಲ್ಲದೆ, ಈ ಓಥ್ ಕಮಿಷನರುಗಳಿಂದ ದೃಢೀಕರಿಸಿಕೊಳ್ಳಬೇಕಾಗಿರುವಂಥ ಅನೇಕ ದಾಖಲೆಗಳಿವೆ. ಕ್ರಿಮಿನಲ್ ಮೊಕದ್ದಮೆಯಲ್ಲಿ ವ್ಯಕ್ತಿಯು ಅನ್ಯತ್ರ ಉಪಸ್ಥಿತಿಯನ್ನು ಸಾಬೀತುಪಡಿಸಬಯಸಿದಾಗ, ಆಗಲೂ ಸಹ, ಒಂದು ನಿರ್ದಿಷ್ಟ ದಿನಾಂಕದಂದು ಒಂದು ದಾಖಲೆಯನ್ನು ಅಥವಾ ಎರಡು ದಾಖಲೆಯನ್ನು ದೃಢೀಕರಿಸಿಕೊಳ್ಳುವ ಉದ್ದೇಶಕ್ಕಾಗಿ ಈ ಓಥ್ ಕಮಿಷನರುಗಳ ಪ್ರಮಾಣ ಪತ್ರಗಳನ್ನು ಬಳಸಿಕೊಳ್ಳಲಾಗುತ್ತದೆ.

**ಡಾ. ಅಂಬೇಡ್ಕರ್:** ಪಂಜಾಬಿನಲ್ಲಿ ಈ ಬಗೆಯ ಕೆಲಸ ಆಗುತ್ತಿದೆ ಎನ್ನುವುದು ನನಗೆ ಗೊತ್ತಿರಲಿಲ್ಲ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಭಾರತದ ಉಳಿದ ಕಡೆ ಏನಾಗುತ್ತಿದೆ ಎಂಬ ಬಗ್ಗೆ ಮಾನ್ಯ ಸ್ನೇಹಿತರು ವಿಚಾರಣೆ ಮಾಡಿದರೆ, ಪಂಜಾಬು ಇದಕ್ಕೇನೂ ಹೊರತಾಗಿಲ್ಲವೆಂಬುದು ಗೊತ್ತಾಗಿ, ಅವರಿಗೆ ಭ್ರಮನಿರಸನವಾಗುತ್ತದೆ. ನೋಟರಿ ಪಬ್ಲಿಕ್ ಎಂದು ನೇಮಕಗೊಂಡಿರುವಂಥ ಲೀಗಲ್ ಪ್ರಾಕ್ಟೀಷನರುಗಳ ಭವಿಷ್ಯ ಏನಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಆ ವೃತ್ತಿಯನ್ನು ಕೈಗೊಳ್ಳಲು ಅವರಿಗೆ ಅನುಮತಿ ನೀಡಲಾಗುತ್ತದೆಯೇ?

**ಶ್ರೀ ಸಿಧ್ವಾ :** ಈಗಲೂ, ಅವರು ಆ ವೃತ್ತಿಯಲ್ಲಿ ನಿರತರಾಗಿದ್ದಾರೆ.

**ಡಾ. ಅಂಬೇಡ್ಕರ್ :** ಹೌದು, ನಿರತರಾಗಿದ್ದಾರೆ.

**ಪಂಡಿತ್ ಠಾಕೂರ್ ಭಾರ್ಗವ:** ಈ ವಿಧೇಯಕದಲ್ಲಿ ನಿರೂಪಿಸಿರುವಂತಹ ಬಗೆಯ ಕಾರ್ಯವನ್ನು

ಅವರಿಗೆ ವಹಿಸಿದರೆ ನೊಟರಿ ಪಬ್ಲಿಕ್ ರವರು ಖಾಯಂ ಕಾರ್ಯಾಲಯವನ್ನು ಇಟ್ಟುಕೊಳ್ಳಬೇಕಾಗುತ್ತದೆಂದು ಕಾಣುತ್ತದೆ.

**ಡಾ. ಅಂಬೇಡ್ಕರ್ :** ಇಟ್ಟುಕೊಂಡಿದ್ದಾರೆ, ಪ್ರತಿಯೊಬ್ಬ ನೋಟರಿ ಪಬ್ಲಿಕ್‌ರು ಕಾರ್ಯಾಲಯವನ್ನು ಇಟ್ಟುಕೊಂಡಿದ್ದಾರೆ.

*__ಮಾನ್ಯ ಸಭಾಪತಿಯವರು:__ ೮ನೇ ಕಲಮಿನ (೨) ನೇ ಉಪಕಲಮನ್ನು ನೀವು ನೋಡಿದರೆ (೧) ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವ ಕಾರ್ಯವನ್ನು, ನೋಟರಿ ಪಬ್ಲಿಕ್‌ರು ತನ್ನ ಸಹಿ ಮಾಡಿ, ಅಧಿಕೃತ ಮೊಹರು ಹಾಕಿ ಮಾಡಿರದಿದ್ದರೆ ಅದನ್ನು ನೋಟರಿಯವರು ಮಾಡಿದ ಕಾರ್ಯವೆಂದು ಪರಿಗಣಿಸಬಾರದೆಂದು ಹೇಳುತ್ತದೆ. ಇದು, ಅತ್ಯುನ್ನತ ಮಟ್ಟದ ಸಾಕ್ಷ್ಯಾಧಾರ ಉಳ್ಳದ್ದಾಗುವ ನಿಟ್ಟಿನಲ್ಲಿ ತುಂಬಾ ಅನುಕೂಲ ಮಾಡಿಕೊಡುತ್ತದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಅಂದರೆ ಅವರ ಮೊಹರು ಮತ್ತು ಸಹಿ ಇದ್ದರೆ, ಅಧಿಕೃತಗೊಳಿಸಲ್ಪಟ್ಟ ದಾಖಲೆಗಳಿಗೆ ಸಾಕ್ಷದ ಮೌಲ್ಯ ಉಂಟಾಗುತ್ತದೆ ಎಂದಂತಾಯಿತು. ಆದರೆ, ಈ ವಿಧೇಯಕವನ್ನು ನೋಡಿದರೆ, ಸರ್ಕಾರವು ನೋಟರಿ ಪಬ್ಲಿಕ್‌ರನ್ನು ನೇಮಕ ಮಾಡುವ ವಿಷಯದಲ್ಲಿ ಯಾವ ನಿರ್ಬಂಧವೂ ಇಲ್ಲದಿರುವುದನ್ನು ಕಾಣಬಹುದು. ಒಂದೇ ಜಿಲ್ಲೆಯಲ್ಲಿ ಇಪ್ಪತ್ತು ಜನರನ್ನು ನೇಮಕ ಮಾಡಬಹುದಾಗಿದೆ. ಎಷ್ಟು ಜನರನ್ನಾದರೂ ಸರ್ಕಾರ ನೇಮಕ ಮಾಡಬಹುದು. ಇದು ಗೌರವ ಮ್ಯಾಜಿಸ್ಟ್ರೇಟರ ಕೆಲಸದಂತಿದೆ ಅಷ್ಟೇ.

**ಶ್ರಿ ಸಿಧ್ವಾ :** ಇಲ್ಲ, ಹಾಗಲ್ಲ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಅನುಭವದಿಂದ ತಾವು ಹೇಳುತ್ತಿದ್ದೀರಿ. ಅನುಭವ ಇಲ್ಲದ ನಾನು ಮಾತಾಡುತ್ತಿದ್ದೇನೆ. ಇನ್ನೂ ಹೆಚ್ಚು ತಿಳಿಯಬಯಸಿದ್ದೇನೆ.

**ಡಾ. ಅಂಬೇಡ್ಕರ್ :** ತಿಳಿಯದಿರುವುದರ ಬಗ್ಗೆ ತಾವು ಭಯ ವ್ಯಕ್ತಪಡಿಸುತ್ತಿದ್ದೀರಿ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಅದು ನಿಜಕ್ಕೂ ಸರಿ. ಇಡೀ ಭಾರತದಲ್ಲಿ ಸ್ಥಾಪಿಸಬಯಸಿರುವ ಈ ಬಗೆಯ ಹುದ್ದೆಯನ್ನು ಅದೇನೆಂದು ತಿಳಿದುಕೊಳ್ಳದಯೇ ನಾವು ಒಪ್ಪಿಕೊಳ್ಳುವುದು ನನಗಿಷ್ಟವಾಗುವುದಿಲ್ಲ. ಆದ್ದರಿಂದ, ನಾನು ವಿನಮ್ರತೆಯಿಂದ ಕೋರಿಕೊಳ್ಳುವುದೇನೆಂದರೆ ಡಾ. ಅಂಬೇಡ್ಕರ್ ಅವರು ಆಯ್ಕೆ ಸಮಿತಿಯಲ್ಲಿ ಈ ವಿಚಾರಗಳನ್ನು ವಿವರಿಸಬೇಕು.

**ಡಾ. ಅಂಬೇಡ್ಕರ್ :** ಸದನದಲ್ಲೇ ನಾನು ಈ ವಿಚಾರಗಳನ್ನು ವಿರಿಸಬಹುದಲ್ಲವೇ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನಮ್ಮ ನಾಡಿಗೆ ಹೊರತಾದ, ಈ ಎಲ್ಲ ವರ್ಷಗಳಲ್ಲಿ ನಮ್ಮಲ್ಲಿಲ್ಲದ ಹೊಸ ಹುದ್ದೆಯನ್ನು ತರುತ್ತಿದ್ದೀರಿ.

**ಶ್ರೀ ಸಿಧ್ವಾ :** ಅದೇನೂ ಹೊಸತಲ್ಲ. ಅದು, ಬಂದರು ಪಟ್ಟಣಗಳಲ್ಲಿ ಈಗಲೂ ಇದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಅದು, ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್‌ಗಾಗಿ ಇದೆ. ಡಾ. ಅಂಬೇಡ್ಕರ್ ಸಹ ಹಾಗೆಯೇ ಹೇಳಿದ್ದಾರೆ. ನಿಮ್ಮದಕ್ಕಿಂತಲೂ ಅವರ ಹೇಳಿಕೆಗಳೇ ಉತ್ತಮ ಎಂದು ಒಪ್ಪಿಕೊಳ್ಳುತ್ತೇನೆ.

**ಶ್ರೀ ಸಿಧ್ವಾ :** ನೋಟರಿ ಪಬ್ಲಿಕ್ ಈಗಲೂ ಇದ್ದಾರೆ.

---

* ಸಂ. ಚ. ಸಂಪುಟ ೧೪, ಭಾಗ II, ೧೬ ಆಗಸ್ಟ್ ೧೯೫೧, ಪುಟಗಳು ೮೪೦–೪೧

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಮದ್ರಾಸ್, ಬಾಂಬೆ ಮತ್ತು ಕಲ್ಕತ್ತ ಹಾಗೂ ಇನ್ನಿತರ ಸ್ಥಳಗಳಲ್ಲಿ ಅವರಿದ್ದಾರೆಂದು ನಾನೇ ಹೇಳಿದ್ದೇನಲ್ಲ.

**ಡಾ. ಅಂಬೇಡ್ಕರ್ :** ಎಲ್ಲೆಲ್ಲಿ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆ ಜಾರಿಯಲ್ಲಿದೆಯೋ ಅಲ್ಲೆಲ್ಲಾ ನೋಟರಿ ಪಬ್ಲಿಕ್ ಇದ್ದಾರೆ. ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆಯು ಬಹುಶಃ ಭಾಗ 'ಬಿ'ಯ ರಾಜ್ಯಗಳ ಹೊರತು ಇಡೀ ಭಾರತಕ್ಕೆ ಅನ್ವಯವಾಗುತ್ತದೆ. ಭಾಗ 'ಎ' ಯ ಮತ್ತು ಭಾಗ 'ಸಿ'ಯ ರಾಜ್ಯಗಳಲ್ಲಿ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆಯು ಜಾರಿಯಲ್ಲಿದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯಿದೆಗೆ ಸಂಬಂಧಿಸಿದಂತೆ ನನ್ನದೇನೂ ತಕರಾರಿಲ್ಲ. ಅದು ಇಡೀ ಭಾರತಕ್ಕೆ ಅನ್ವಯವಾಗುತ್ತೆಂದು ನನಗೆ ಗೊತ್ತಿದೆ. ಆದರೆ, ಈ ವಿಧೇಯಕವು ಜನರಿಗೆ ಹೇಗೆ ಅನುಕೂಲ ಮಾಡಿಕೊಡುತ್ತದೆಂಬುದು ನಮಗೆ ಗೊತ್ತಿಲ್ಲ. ಗೌರವ ಮ್ಯಾಜಿಸ್ಟ್ರೇಟರು ಅಥವಾ ಇತರೆ ಕೆಲವರು ನಮ್ಮ ನಾಡಿನ ಎಲ್ಲ ಕಡೆ ಇಂಥ ಕೆಲವೊಂದು ಕಾರ್ಯವನ್ನು ಮಾಡುತ್ತಿದ್ದ ಪದ್ಧತಿ ಇತ್ತು. ನೀವು ಇಲ್ಲಿ ಇಡೀ ದೇಶಕ್ಕೆ ಅನ್ವಯವಾಗುವ, ತೀರಾ ಹೊಸದಾದ ಏನನ್ನೋ ಮಾಡ ಹೊರಟಿದ್ದೀರಿ. ಅಧಿಕಾರದ ಬಗ್ಗೆ ಹೇಳುವುದಾದರೆ, ನೇಮಕ ಪ್ರಾಧಿಕಾರಗಳು ಯಾವುವೆಂದರೆ ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರ, ಅದೂ ಇದೆ. ಇನ್ನು, ಕೆಲವೊಂದು ಅರ್ಹತೆಗಳನ್ನು ನಿರ್ದಿಷ್ಟಪಡಿಸಲಾಗಿದೆ. ಆದರೆ, ಈ ಕಾರ್ಯಾಲಯಗಳು ಹೇಗೆ ಕೆಲಸ ಮಾಡುತ್ತವೆಂಬುದು ನಮಗೆ ಗೊತ್ತಿಲ್ಲ. ಅವರು ದಾಖಲೆಗಳನ್ನು ಅಧಿಕೃತಗೊಳಿಸುತ್ತಾರೆ. ಆದರೆ, ದಾಖಲೆಗಳ ಪ್ರತಿಗಳನ್ನು ಇಟ್ಟುಕೊಳ್ಳುತ್ತಾರೆಯೇ? ಪ್ರತಿಗಳನ್ನು ಇಟ್ಟುಕೊಳ್ಳದಿದ್ದರೆ ನಾನು ಯಾವ ಭಯವನ್ನು ವ್ಯಕ್ತಪಡಿಸಿದ್ದೆನೋ ಅದೇ ಈಗಲೂ ಉಂಟಾಗುತ್ತದೆ. ಗುಮ್ಮನನ್ನು ತೋರಿಸುತ್ತಿದ್ದೇನೆ ಅಂತಲ್ಲ. ನನಗಿರುವ ಭಯ ನಿಜವಾದುದು. ನಮ್ಮ ನಾಡಿನಾದ್ಯಂತ ಇರುವ ವಕೀಲರು ಈ ವಿಧೇಯಕವನ್ನು ಇಷ್ಟಪಡುವುದಿಲ್ಲವೆಂಬ ನಂಬಿಕೆ ನನಗಿದೆ.

**ಡಾ. ಅಂಬೇಡ್ಕರ್ :** ಏಕಿಲ್ಲ? ಅವರಿಗೆ ಇದು, ಪೂರಕ ವೃತ್ತಿಯನ್ನು ಒದಗಿಸುತ್ತದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಈಗ ಪ್ರತಿಯೊಬ್ಬ ವಕೀಲರು ದಾಖಲೆಗಳನ್ನು ಅಧಿಕೃತಗೊಳಿಸಲು ಸಕ್ಷಮರಾಗಿದ್ದಾರೆ. ಅಂಥ ದಾಖಲೆಗಳನ್ನು ಅಧಿಕೃತಗೊಳಿಸಿಕೊಳ್ಳಲು ಜನರು ಅವರ ಬಳಿಗೆ ಹೋಗುತ್ತಾರೆ. ದಾಖಲೆಗಳನ್ನು ಅಧಿಕೃತಗೊಳಿಸಲು ಈ ನೋಟರಿಗಳಿಗೆ ನೀವು ಅವಕಾಶ ಕಲ್ಪಿಸಿಕೊಟ್ಟರೆ, ಆ ಮಟ್ಟಿಗೆ ಅಧಿಕಾರವ್ಯಾಪ್ತಿಯನ್ನು ವಕೀಲರಿಂದ ಕಿತ್ತುಕೊಂಡತ್ತಾಗುತ್ತದೆ. ವಕೀಲರ ದೃಷ್ಟಿಯಿಂದ ಮಾತ್ರವೇ ನೋಡಬೇಕಾದಂಥ ಸಣ್ಣ ವಿಷಯ ಇದಲ್ಲ. ಜನಸಾಮಾನ್ಯರಿಗೆ ಏನೇನಾಗುತ್ತದೆ? ಒಂದು ದಾಖಲೆಯನ್ನು ಅಧಿಕೃತಗೊಳಿಸಿಕೊಳ್ಳಬಯಸುವ ವ್ಯಕ್ತಿಯು ದೊಡ್ಡ ನಗರಕ್ಕೆ ಬರಬೇಕಾಗುತ್ತದೆ, ಒಂದು ವೇಳೆ, ನೋಟರಿಯು ಹೆಚ್ಚು ಫೀಜು ವಿಧಿಸಿದಾಗ ಆತ ಕೊಡಬೇಕಾಗುತ್ತದೆ. ಇಂಥ ಹೊಸದೊಂದು ರೀತಿಯನ್ನು ತರುತ್ತಿದ್ದೀರಿ. ಇದರಿಂದಾಗುವ ಪೂರ್ಣ ಪರಿಣಾಮ ಏನು ಎನ್ನುವುದು ಕನಿಷ್ಠಪಕ್ಷ ನಮಗೆ ಗೊತ್ತಾಗಲಿ. ಇಂಥದೊಂದು ವಿಧೇಯಕವನ್ನು ತರುವುದು, ಅವಸರವಸರವಾಗಿ ಅಂಗೀಕಾರ ಪಡೆಯುವುದು ನ್ಯಾಯೋಚಿತವೆಂದು ನಮಗನಿಸುತ್ತಿಲ್ಲ. ನನಗದು ಅರ್ಥವಾದರೆ, ನನಗದು ಮನವರಿಕೆಯಾದರೆ, ಜನರ ಅನುಕೂಲಕ್ಕಾಗಿ ಅದಿದ್ದರೆ ಆಗ ನಾನದನ್ನು ಖಂಡಿತವಾಗಿಯೂ ಬೆಂಬಲಿಸುತ್ತೇನೆ. ಆವರೆಗೂ, ನನಗೆ ಮನವರಿಕೆ ಆಗುವವರೆಗೂ ಅದನ್ನು ಚಿಮುಟದಿಂದಲೂ ಮುಟ್ಟುವುದಿಲ್ಲ. ಸಾರ್ವಜನಿಕರಿಗೆ ಅದು ಉಪಯುಕ್ತವೇ ಅಲ್ಲವೇ ಎಂಬುದು ಮೊದಲು ನಮಗೆ ಗೊತ್ತಾಗಲಿ. ಮಾನ್ಯ ಸಚಿವರ ಭಾಷಣದಿಂದ ನನಗೆ ಅಷ್ಟೇನೂ ಗೊತ್ತಾಗಲಿಲ್ಲ.

**ಮಾನ್ಯ ಸಭಾಪತಿಯವರು :** ಮಾನ್ಯ ಸದಸ್ಯರು ದಯವಿಟ್ಟು ಆಸೀನರಾಗಬೇಕು ಈಗ ೬–೪೫ ಅಪರಾಹ್ನ. ಈ ಸೂಚನೆ ಮೇಲೆ ಚರ್ಚೆ ನಾಳೆ ಮುಂದುವರಿಯುತ್ತದೆ.

–***–

*ಮಾನ್ಯ ಉಪಸಭಾಪತಿಗಳು :** ಡಾ. ಅಂಬೇಡ್ಕರ್ ರವರು ೯, ಆಗಸ್ಟ್ ೧೯೫೧ ರಂದು ಮಂಡಿಸಿದ ಈ ಮುಂದಿನ ಸೂಚನೆ ಬಗ್ಗೆ ಪರ್ಯಾಲೋಚನೆ ಈಗ ಮುಂದುವರಿಯಲಿ:

> "ನೋಟರಿಗಳ ವೃತ್ತಿಯನ್ನು ನಿಯಮಗಳಿಗೆ ಒಳಪಡಿಸುವ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು"

**ಪಂಡಿತ್ ಠಾಕೂರ್ ದಾಸ್ ಭಾರ್ಗವ (ಪಂಜಾಬ್):** ಈ ವಿಧೇಯಕವನ್ನು ಆಯ್ಕೆ ಸಮಿತಿಗೆ ಏಕೆ ಕಳುಹಿಸಬೇಕೆಂಬ ಬಗ್ಗೆ ನಿನ್ನೆ ಹಲವಾರು ಕಾರಣಗಳನ್ನು ಸದನಕ್ಕೆ ನಿವೇದಿಸಿಕೊಂಡಿದ್ದೆ. ಎಲ್ಲರಿಗೂ ಗೊತ್ತೇ ಇದೆ, ಕೆಲವು ನ್ಯಾಯಾಲಯಗಳಲ್ಲಿ ಕೆಲವು ನಗರಗಳಲ್ಲಿ.............................

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಸದನದ ಸಮಯದ ಉಳಿತಾಯದ ದೃಷ್ಟಿಯಿಂದ ನಾನೊಂದು ಹೇಳಿಕೆ ನೀಡಲೇ? ಸ್ನೇಹಿತರಾದ ಶ್ರೀ ಪಂಡಿತ್ ಠಾಕೂರ್ ದಾಸ್ ಭಾರ್ಗವರು ಮತ್ತು ಬಹುಶಃ ಡಾ. ದೇಶ್‌ಮುಖರು ಈ ವಿಧೇಯಕವನ್ನು ಆಯ್ಕೆ ಸಮಿತಿಗೆ ಕಳುಹಿಸಬೇಕೆಂದು ಹೇಳಿದ್ದಾರೆ. ನಿನ್ನೆ ಸ್ನೇಹಿತರಾದ ಪಂಡಿತ್ ಠಾಕೂರ್ ದಾಸ್ ಭಾರ್ಗವ ಹೇಳಿರುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅವರ ಸಲಹೆಯನ್ನು ಒಪ್ಪಲು ನಾನು ಸಿದ್ಧನಿಲ್ಲ. ಏಕೆಂದರೆ, ಯಾವುದೇ ಹುರುಳಿರುವಂಥ ಯಾವುವೇ ಆಧಾರಗಳನ್ನು ಅವರು ಹೇಳಿದ್ದಾರೆಂದು ನನಗನಿಸುತ್ತಿಲ್ಲ. ಆದರೂ, ನನ್ನ ಮಟ್ಟಿಗೆ ಹೇಳುವುದಾದರೆ ಇದೊಂದು ಹೊಸದಾದ ವಿಧೇಯಕವೆಂದು ಇದರಲ್ಲಿ ಅಡಕವಾಗಿರುವ ಉದ್ದೇಶಗಳನ್ನು ತಿಳಿದುಕೊಳ್ಳುವ ಸಲುವಾಗಿ ಇದನ್ನು ಪರಿಶೀಲಿಸುವುದಕ್ಕೆ ತನಗೆ ಹೆಚ್ಚು ಕಾಲಾವಕಾಶ ಬೇಕಾಗುತ್ತದೆಂದು ಮುಂತಾಗಿ ಅವರು ಕೋರಿಕೊಂಡಿರುವುದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವರ ಸಲಹೆಯನ್ನು ಅತ್ಯಂತ ಸಹಾನುಭೂತಿಯಿಂದ ಒಪ್ಪಿಕೊಳ್ಳಲು ಸಿದ್ಧನಿದ್ದೇನೆ.

**ಡಾ. ದೇಶಮುಖ್ (ಮಧ್ಯಪ್ರದೇಶ):** ಆಯ್ಕೆ ಸಮಿತಿಗೆ ಒಪ್ಪಿಸಬೇಕೆಂಬ ಸೂಚನೆಯನ್ನು ಏಕೆ ಒಪ್ಪಿಕೊಳ್ಳಬಾರದು ?

**ಡಾ. ಅಂಬೇಡ್ಕರ್ :** ಸದನದ ಸಮಯವನ್ನು ಉಳಿಸಬಯಸುತ್ತೇನೆ. ಅವರಿಗೆ ಮನವರಿಕೆ ಆಗುವಂತೆ, ಅವರ ಸೂಚನೆಯನ್ನು ಹಿಂತೆಗೆದುಕೊಳ್ಳುವಂತೆ, ಈ ವಿಧೇಯಕದ ನಿಬಂಧನೆಗಳನ್ನು ವಿವರಿಸಲು ನಿಜಕ್ಕೂ ಸಿದ್ಧನಿದ್ದೇನೆ! ಆದರೆ, ಅದರಿಂದ ಸಮಯ ವ್ಯರ್ಥ ಆಗುತ್ತದೆಂಬುದು ನನ್ನ ಅನಿಸಿಕೆ, ಆದರೂ, ಅವರು ಪಟ್ಟು ಹಿಡಿಯುತ್ತಿದ್ದಾರೆ. ಆಯ್ಕೆ ಸಮಿತಿಗೆ ಒಪ್ಪಿಸುವ ಸೂಚನೆಯನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ.

**ಮಾನ್ಯ ಉಪಸಭಾಪತಿಗಳು:** ಕಾರಣಗಳೇನೇ ಇರಲಿ, ಆಯ್ಕೆ ಸಮಿತಿಗೆ ಒಪ್ಪಿಸುವ ಸೂಚನೆಯನ್ನು ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಿದ್ದಾರೆ. ಹೀಗಾಗಿ, ಈಗ ಹೆಚ್ಚು ಚರ್ಚೆಯ ಅಗತ್ಯ ಇದೆಯೆಂದು ನನಗನಿಸುತ್ತಿಲ್ಲ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಈ ಸಹಾನುಭೂತಿ ವಿಚಾರದ ಬಗ್ಗೆ ಹೇಳುವುದಾದರೆ..........

**ಮಾನ್ಯ ಉಪಸಭಾಪತಿಗಳು:** ಸಹಾನುಭೂತಿಯೇ, ಅಲ್ಲವಲ್ಲ

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಅಂದರೆ, ಕೋಪವೇ? ನಾನು ಹೇಳಿದ ಕಾರಣಗಳು ಎಷ್ಟೊಂದು ಬಲವಾಗಿದ್ದವೆಂದರೆ, ಆಯ್ಕೆ ಸಮಿತಿಗೆ ಒಪ್ಪಿಸುವ ಸೂಚನೆಯನ್ನು ಡಾ. ಅಂಬೇಡ್ಕರ್ ಕೂಡ

---

* ಸಂ. ಚ. ಸಂಪುಟ ೧೪ ಭಾಗ II, ೧೮, ಆಗಸ್ಟ್ ೧೯೫೧, ಪುಟಗಳು ೮೫೩–೫೫

ಒಪ್ಪಿಕೊಳ್ಳುವ ಮನಸ್ಸು ಮಾಡುವಷ್ಟು ಎಂದಷ್ಟೇ ಹೇಳಬಯಸುತ್ತೇನೆ. ಈ ಸದನದ ಅಮೂಲ್ಯ ವೇಳೆ ಬಗ್ಗೆ ಬೇರೆಯವರಿಗಿಂತಲೂ ನನಗೆ ಹೆಚ್ಚು ಕಾಳಜಿ ಇದೆ. ಆದರೆ, ಈ ವಿಷಯದಲ್ಲಿ ಗೊತ್ತಿಲ್ಲದಿರುವವನು ನಾನೊಬ್ಬನೇ ಅಲ್ಲ. ಈ ವಿಷಯದ ಬಗ್ಗೆ ಹೆಚ್ಚು ತಿಳಿದುಕೊಳ್ಳಬಯಸಿರುವವರು ಅನೇಕರಿದ್ದಾರೆ.

**ಡಾ. ಅಂಬೇಡ್ಕರ್:** ಸಮಸ್ಯೆ ಉಂಟು ಮಾಡುವಂಥದ್ದು ಅದರಲ್ಲೇನಿಲ್ಲ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಇಲ್ಲದಿರಬಹುದು, ಆದರೆ, ವಾಸ್ತವವಾಗಿ ಈ ವಿಧೇಯಕದ ಅಗತ್ಯ ಇದೆ ಎನ್ನುವುದರ ಬಗ್ಗೆ ನಮಗೆ ಮನವರಿಕೆ ಆಗಬೇಕಾಗುತ್ತದೆ. ಡಾ. ಅಂಬೇಡ್ಕರರ ಪ್ರಕಾರ, ಕಾರಣಗಳಿಗೆ, ಹಲವಾರು ಇತರ ವಿಚಾರಗಳು ಆಧಾರವಾಗಿದ್ದರೂ ನನ್ನ ಈ ಸೂಚನೆಯನ್ನು ಅವರು ಒಪ್ಪಿಕೊಂಡಿದ್ದಕ್ಕೆ ಅವರಿಗೆ ನಾನು ಆಭಾರಿಯಾಗಿದ್ದೇನೆ. ಆದರೆ, ನನ್ನ ಪ್ರಕಾರ, ಚರ್ಚೆಗಳು ತೀರಾ ಮನಮುಟ್ಟುವಂಥವು ಆಗಿದ್ದುದರಿಂದ ಅದನ್ನು ಒಪ್ಪಿಕೊಳ್ಳಲಾಯಿತು.

**ಡಾ. ಅಂಬೇಡ್ಕರ್ :** ಮಾನ್ಯ ಸದಸ್ಯರಲ್ಲಿ ನನ್ನ ಒಂದೇ ಒಂದು ಕೋರಿಕೆ ಏನೆಂದರೆ ಸೆಪ್ಟೆಂಬರ್ ೫ರ ನಂತರ ಬೇರೊಂದು ದಿನಕ್ಕೆ ದಿನಾಂಕ ಬದಲಾಯಿಸಬೇಕು. ಏಕೆಂದರೆ, ಎರಡು ಅಥವಾ ಮೂರು ದಿನ ಹೊರಗಡೆಗೆ ಹೋಗುವವನಿದ್ದೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಮಾನ್ಯ ಕಾನೂನು ಸಚಿವರಿಗೆ ಸರಿಹೊಂದುವ ಯಾವ ದಿನಾಂಕವಾದರೂ ಆಗಬಹುದು, ಒಪ್ಪಿಕೊಳ್ಳುತ್ತೇನೆ.

**ಡಾ. ದೇಶಮುಖ್ :** ಸರ್ ................

**ಡಾ. ಅಂಬೇಡ್ಕರ್ :** ಈಗೇಕೆ ಭಾಷಣ ಮಾಡ ಹೊರಟಿದ್ದೀರಿ?

**ಮಾನ್ಯ ಉಪಸಭಾಪತಿಗಳು:** ಇದು ತಾಂತ್ರಿಕ ಸ್ವರೂಪದ ವಿಷಯ. ಇದು ನೇರವಾಗಿ ಆಯ್ಕೆ ಸಮಿತಿಗೆ ಹೋಗುವುದು ಒಳ್ಳೆಯದು.

**ಡಾ. ದೇಶಮುಖ್:** ಆದರೆ, ಸೂಚನೆ ನೋಟೀಸನ್ನು ಕೊಟ್ಟಿದ್ದೇನಲ್ಲ. ಮೂರು ನಿಮಿಷಗಳಿಂತ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ.

**ಮಾನ್ಯ ಉಪಸಭಾಪತಿಗಳು:** ನಾವು ದಿನಾಂಕವನ್ನು .........................

**ಡಾ. ಅಂಬೇಡ್ಕರ್ :** ಸೆಪ್ಟೆಂಬರ್ ೭, ಆಗಬಹುದೇ

**ಮಾನ್ಯ ಉಪಸಭಾಪತಿಗಳು :** ಈ ಮುಂದಿನಂತಿರುವ ತಿದ್ದುಪಡಿಯನ್ನು ಮಂಡಿಸುತ್ತೇನೆ:

> " ಈ ವಿಧೇಯಕವನ್ನು, ಡಾ. ಭಕ್ಷಿ ತೇಕ್ ಚಂದ್, ಡಾ. ಪಂಜಾಬ್‌ರಾವ್ ಶಾಮರಾವ್ ದೇಶ್‌ಮುಖ್, ಶ್ರೀ ದೇಶಬಂಧು ಗುಪ್ತ, ಶ್ರೀ ಗೋಕುಲ್ ಭಾಯ್ ದೌಲತ್ ರಾಮ್‌ಭಟ್, ಪಂಡಿತ್ ಮುಕುಟ್ ಬಿಹಾರಿಲಾಲ್ ಭಾರ್ಗವ, ಶ್ರೀ ಪ್ರಭುದಯಾಳ್ ಹಿಮತ್ಸಿಂಗ್‌ಕ, ಶ್ರೀ ಅರುಣ್ ಚಂದ್ರ ಗುಹ, ಶ್ರೀ ರೋಹಿಣಿ ಕುಮಾರ್ ಚೌಧುರಿ, ಶ್ರೀ ಬನಾರಸಿ ಪ್ರಸಾದ್ ಝುಂಝುನ್ ವಾಲಾ, ಶ್ರೀ ಆರ್.ಕೆ. ಸಿಧ್ವಾ, ಶ್ರೀ ಸುಬ್ರಮಣಿಯಂ ಇವರುಗಳನ್ನು ಒಳಗೊಂಡಿರುವ ಆಯ್ಕೆ ಸಮಿತಿಗೆ ಉಲ್ಲೇಖಿಸಬೇಕು ಮತ್ತು ಸೂಚಕರು, ಸೂಚನೆಗಳ ಸಹಿತ ೧೯೫೧ ರ ಸೆಪ್ಟೆಂಬರ್ ೭ಕ್ಕೂ ಮುಂಚೆ ವರದಿ ಮಾಡಬೇಕು"

ಶ್ರೀ ದೇಶಮುಖ್‌ರವರು ಆಯ್ಕೆ ಸಮಿತಿಯಲ್ಲಿ ಒಬ್ಬರು ಸದಸ್ಯರಾಗಿದ್ದಾರೆ. ಈ ಹಿಂದಿನ ನಿರ್ಣಯವನ್ನು ಅನುಸರಿಸಿ, ಅವರು, ಆಯ್ಕೆ ಸಮಿತಿಯಲ್ಲಿ ಈ ವಿಧೇಯಕದ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸುತ್ತಾರೆ. ಆದ್ದರಿಂದ, ಈಗ, ಈ ತಿದ್ದುಪಡಿಯನ್ನು ನೇರವಾಗಿ ಸದನದ ಮುಂದಿಟ್ಟಿದ್ದೇನೆ.

ಸೂಚನೆ ಅಂಗೀಕೃತವಾಗಿದೆ.

## ೩೮

# *ಆಲ್ ಇಂಡಿಯಾ ಬಾರ್‌ನ ಆವಶ್ಯಕತೆ ಕುರಿತ ನಿರ್ಣಯ

**ಶ್ರೀ ಶ್ಯಾಮ್‌ನಂದನ್ ಸಹಾಯ (ಬಿಹಾರ):** ನಾನೊಂದು ಮನವಿ ಮಾಡಲೇ? ಮುಂದಿನ ನಿರ್ಣಯವು ಪಂಡಿತ್ ಎಂ.ಬಿ. ಭಾರ್ಗವರ ಹೆಸರಿನಲ್ಲಿದೆ. ಆದರೆ, ನನ್ನ ಹೆಸರಿನಲ್ಲಿ ಇನ್ನೊಂದು ನಿರ್ಣಯ ಇದೆ. ನಾನು ಐದು ನಿಮಿಷಗಳಿಗಿಂತ ಹೆಚ್ಚು ತೆಗೆದುಕೊಳ್ಳುವುದಿಲ್ಲ................

**ಕೆಲವರು ಮಾನ್ಯ ಸದಸ್ಯರು:** ಅವಕಾಶ ಕೊಡಬಾರದು, ಕೊಡಬಾರದು.

**ಶ್ರೀ ಶ್ಯಾಮ್‌ನಂದನ್ ಸಹಾಯ :** ಸನ್ಮಾನ್ಯ ಸಚಿವರೂ ಕೂಡ ಐದು ನಿಮಿಷಗಳಿಗಿಂತ ಹೆಚ್ಚಿಗೆ ತೆಗೆದುಕೊಳ್ಳಬಯಸುವುದಿಲ್ಲವೆಂದು ನನ್ನ ಅನಿಸಿಕೆ. ಹೀಗಾಗಿ, ಮೊದಲು ಅದನ್ನು ತೆಗೆದುಕೊಳ್ಳೋಣ, ವಿಲೇ ಮಾಡೋಣ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಈ ಸೂಚನೆಯನ್ನು ಒಂದೇ ನಿಮಿಷದಲ್ಲಿ ವಿಲೇ ಮಾಡಬಲ್ಲೆ, ನಿಮ್ಮಿಂದಾಗದು.

**ಮಾನ್ಯ ಉಪಸಭಾಪತಿಗಳು :** ಅದನ್ನು ಪರಿಗಣಿಸುವುದು ಸದನಕ್ಕೆ ಸೇರಿದ್ದು. ಈ ನಿರ್ಣಯದ ಬಹುತೇಕ ಭಾಗವನ್ನು ಕಾರ್ಯರೂಪಕ್ಕೆ ತಂದಿರುವುದನ್ನು ಮಾನ್ಯ ಸಚಿವರು ಹೇಳಬಯಸಿದ್ದಾರೆ. ಆದ್ಯತೆಯ ಪ್ರಕಾರ, ಈಗಾಗಲೇ ಈ ನಿರ್ಣಯವೇ ಮುಂದಿನದು. ನೀವಾಗಲೀ ಅವರಾಗಲೀ ಹೇಳಿಕೆ ಕೊಡುವುದರ ಹೊರತು ಅದರ ಬಗ್ಗೆ ಹೆಚ್ಚಿಗೆ ಮಾಡಬೇಕಾದುದು ಏನೂ ಇಲ್ಲ.

**ಡಾ. ಅಂಬೇಡ್ಕರ್:** ಬೇರೆ ನಿರ್ಣಯದ ಬಗ್ಗೆಯೂ ನನ್ನದು ಅದೇ ನಿಲುವು. ಸಮಿತಿಯೊಂದನ್ನು ನೇಮಕ ಮಾಡಲು ನಾನು ವಾಸ್ತವಿಕವಾಗಿ ಕ್ರಮ ಕೈಗೊಂಡಿದ್ದೇನೆ. ನನ್ನ ಹೇಳಿಕೆಗೆ ನನಗೆ ಅವಕಾಶ ಕೊಟ್ಟರೆ, ಆ ವಿಷಯದ ಬಗ್ಗೆ ಚರ್ಚಿಸುವುದು ಈ ಸದನದ ಮತ್ತು ಅವರ ಸಮಯ ವ್ಯರ್ಥವಾದಂತೆಂದು ಮಾನ್ಯ ಸ್ನೇಹಿತರಿಗೆ ಹೇಳ ಹೊರಟಿದ್ದೆ. ಅವರು ಹೇಳಿಕೆ ನೀಡುವ ಅಗತ್ಯವೇ ಇಲ್ಲವೆಂದು ನನ್ನ ಭಾವನೆ. "ಮಂಡಿಸುತ್ತೇನೆ" ಎಂದಷ್ಟೇ ಹೇಳಿದರೆ ಸಾಕು.

**ಮಾನ್ಯ ಉಪಸಭಾಪತಿಗಳು:** ಸರಿ. ಪಂಡಿತ್ ಎಂ.ಬಿ. ಭಾರ್ಗವ ರವರು ತಮ್ಮ ನಿರ್ಣಯವನ್ನು ವಿಧ್ಯುಕ್ತವಾಗಿ ಮಂಡಿಸಬಹುದು.

**ಪಂಡಿತ್ ಎಂ.ಬಿ. ಭಾರ್ಗವ:** ಈ ಮುಂದಿನಂತಿರುವ ನಿರ್ಣಯವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

> "ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಕಾನೂನು ವೃತ್ತಿಯ ಹಿತದೃಷ್ಟಿಯಿಂದ,
> ಅಖಿಲ ಭಾರತ ಆಧಾರದ ಮೇಲೆ ಸ್ವತಂತ್ರವಾದ ಮತ್ತು ಸ್ವಾಯತ್ತವಾದ ಬಾರ್‌ನ

---

* ಸಂ.ಚ. ಸಂಪುಟ ೧೪, ಭಾಗ II, ೧೮, ಆಗಸ್ಟ್ ೧೯೫೧, ಪುಟ. ೧೨೦೫–೦೯

ಆವಶ್ಯಕತೆ ಇದೆಯೆಂದು ಮತ್ತು ಈ ವಿಷಯದಲ್ಲಿ ಬಹುಬೇಗನೆ ಸರ್ಕಾರವು ಶಾಸನ ರಚನೆ ಮಾಡಬೇಕೆಂದು ಈ ಸದನವು ಅಭಿಪ್ರಾಯಪಟ್ಟಿದೆ."

ಶ್ರೀ ಎಸ್.ಎನ್. ದಾಸ್‌ರ ತಿದ್ದುಪಡಿಯೂ ಇದೆ.

**ಶ್ರೀ ಎಸ್.ಎನ್. ದಾಸ್ (ಬಿಹಾರ):** ಸರ್, ನನ್ನ ತಿದ್ದುಪಡಿಯನ್ನು ಮಂಡಿಸುವುದಕ್ಕೂ ಮೊದಲು ಮಾನ್ಯ ಕಾನೂನು ಸಚಿವರ ಹೇಳಿಕೆಯನ್ನು ಕೇಳಬಯಸುತ್ತೇನೆ.

**ಮಾನ್ಯ ಉಪಸಭಾಪತಿಗಳು:** ನಿರ್ಣಯ, ತಿದ್ದುಪಡಿ ಎರಡಕ್ಕೂ ಸಂಬಂಧಪಟ್ಟಂತೆ ಮಾನ್ಯ ಸಚಿವರು ಹೇಳಿಕೆ ನೀಡುತ್ತಾರೆ. ತಿದ್ದುಪಡಿಯನ್ನು ಮಂಡಿಸಬಹುದು.

**ಶ್ರೀ ಎಸ್.ಎನ್. ದಾಸ್:** ಈ ಮುಂದಿನಂತಿರುವುದನ್ನು ಮಂಡಿಸಲು ಅನುಮತಿ ಕೋರುತ್ತೇನೆ.:

ಮೂಲ ನಿರ್ಣಯಕ್ಕೆ ಬದಲಾಗಿ, ಈ ಮುಂದಿನದನ್ನು ಸೇರಿಸಬೇಕು:

"ಅಖಿಲ ಭಾರತ ಆಧಾರದ ಮೇಲೆ ಒಂದು ಸ್ವತಂತ್ರವಾದ, ಸ್ವಾಯತ್ತವಾದ ಬಾರ್‌ನ ಆವಶ್ಯಕತೆಯನ್ನು, ಅಪೇಕ್ಷಣೀಯತೆಯನ್ನು ಮತ್ತು ಸಾಧ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ, ಕಾನೂನು ವೃತ್ತಿಗೆ ಸಂಬಂಧಿಸಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ ಜಾರಿಯಲ್ಲಿರುವ ಕಾನೂನುಗಳ ಪರಿಣಾಮವನ್ನು ಕೇಳಿ ತಿಳಿದುಕೊಳ್ಳಲು ಭಾರತ ಸರ್ಕಾರವು ಒಂದು ಸಮಿತಿಯನ್ನು ನೇಮಕ ಮಾಡುವುದಕ್ಕೆ ಇದು ಸಕಾಲವೆಂದು ಈ ಸದನ ಅಭಿಪ್ರಾಯಪಟ್ಟಿದೆ."

**ಮಾನ್ಯ ಉಪಸಭಾಪತಿಗಳು:** ಈ ಮುಂದಿನ ತಿದ್ದುಪಡಿಯ ಮಂಡನೆ ಆಗಿದೆ.

"ಅಖಿಲ ಭಾರತ ಆಧಾರದ ಮೇಲೆ ಒಂದು ಸ್ವತಂತ್ರವಾದ ಸ್ವಾಯತ್ತವಾದ ಬಾರ್‌ನ ಆವಶ್ಯಕತೆಯನ್ನು, ಅಪೇಕ್ಷಣೀಯತೆಯನ್ನು ಮತ್ತು ಸಾಧ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಕಾನೂನು ವೃತ್ತಿಗೆ ಸಂಬಂಧಿಸಿದಂತೆ ಬೇರೆಬೇರೆ ರಾಜ್ಯಗಳಲ್ಲಿ ಜಾರಿಯಲ್ಲಿರುವ ಕಾನೂನುಗಳ ಪರಿಣಾಮವನ್ನು ಕೇಳಿ ತಿಳಿದು ಕೊಳ್ಳಲು ಭಾರತ ಸರ್ಕಾರವು ಒಂದು ಸಮಿತಿಯನ್ನು ನೇಮಕ ಮಾಡುವುದಕ್ಕೆ ಇದು ಸಕಾಲ"

**ಡಾ. ಅಂಬೇಡ್ಕರ್:** ಈ ಸದನದಲ್ಲಿ ಕಾನೂನು ವೃತ್ತಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಸಂಸತ್ ಸದಸ್ಯರ ಅಪೇಕ್ಷೆ ಏನೆಂದರೆ, ಅವರೇ ಕರೆದಿರುವಂತೆ, ಒಂದು ಸ್ವಾಯತ್ತವಾದ, ಸ್ವತಂತ್ರವಾದ ಆಲ್ ಇಂಡಿಯಾ ಬಾರ್ ಇರಬೇಕು. ಸ್ವಾಯತ್ತವಾದ ಸ್ವತಂತ್ರವಾದ ಬಾರ್ ಇರಬೇಕೆಂದು ಮಾನ್ಯ ಸದಸ್ಯರು ಹೇಳಿದಾಗ, ಅವರು ನಿಖರವಾಗಿ ಏನನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದಾರೆಂಬ ಬಗ್ಗೆ ನನಗೆ ಸಂಪೂರ್ಣವಾದ ಮತ್ತು ಸಮರ್ಪಕವಾದ ಕಲ್ಪನೆ ಇರಲಿಲ್ಲ. ಸ್ವತಂತ್ರವಾದ, ಸ್ವಾಯತ್ತವಾದ ಬಾರ್ ಎಂದರೇನು, ಹೇಗಿರಬಹುದು ಎನ್ನುವ ಬಗ್ಗೆ ಈಗಿಂದೀಗಲೇ ಯಾವುದೇ ಚರ್ಚೆಗೆ ತೊಡಗುವ ಆವಶ್ಯಕತೆ ಇದೆಯೆಂದು ನನಗನಿಸುತ್ತಿಲ್ಲ. ಆದ್ದರಿಂದ, ಈ ಬಗೆಯ ಬಾರ್ ಕುರಿತಂತೆ ಕೇಳಿ ತಿಳಿದುಕೊಳ್ಳುವ ಸಲುವಾಗಿ ಒಂದು ಸಮಿತಿಯನ್ನು ನೇಮಿಸಲು ತೀರ್ಮಾನ ತೆಗೆದುಕೊಳ್ಳುವಾಗ ಈ ವಿಷಯವನ್ನು ಪರಿಶೀಲಿಸುವುದು ವಿಹಿತವೆಂದು ನನ್ನ ಅಭಿಪ್ರಾಯ.

ಈ ವಿಷಯವನ್ನು ಪರಿಶೀಲಿಸಲಾಗಿ, ಆಲ್ ಇಂಡಿಯಾ ಬಾರ್ ಬಗ್ಗೆ ಪರಿಶೀಲಿಸಬೇಕಾದ ಪ್ರಶ್ನೆಗಳು ಬಹುಶಃ ಆರು ಇವೆಯೆಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಮೊದಲನೆಯದು, ಇಡೀ ಭಾರತಕ್ಕೆ

ಒಂದು ಸಂಪೂರ್ಣ ಏಕೀಕೃತ ಬಾರ್‌ನ ಸ್ಥಾಪನೆಯ ಅಪೇಕ್ಷಣೀಯತೆ ಮತ್ತು ಸಾಧ್ಯತೆ, ಎರಡನೆಯದು, ಸುಪ್ರೀಂ ಕೋರ್ಟಿನಲ್ಲಿ ಮತ್ತು ಬಾಂಬೆ ಹಾಗೂ ಕಲ್ಕತ್ತ ಹೈಕೋರ್ಟುಗಳಲ್ಲಿ ಇರುವ, ಕೌನ್ಸೆಲ್ ಹಾಗೂ ಸಾಲಿಸಿಟರ್ ದ್ವಿ ಪದ್ಧತಿಯನ್ನು ಮುಂದುವರಿಸುವುದು ಅಥವಾ ರದ್ದು ಮಾಡುವುದು, ಮೂರನೆಯದು, ಸುಪ್ರೀಂಕೋರ್ಟ್ ಅಡ್ವೊಕೇಟ್‌ಗಳು, ಹಲವಾರು ಹೈಕೋರ್ಟುಗಳ ಅಡ್ವೊಕೇಟ್‌ಗಳು, ಜಿಲ್ಲಾ ನ್ಯಾಯಾಲಯಗಳ ಪ್ಲೀಡರುಗಳು, ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಮಾತ್ರವೇ ವೃತ್ತಿ ಮಾಡಲು ಅರ್ಹತೆಯುಳ್ಳ ಮುಖ್ತಾರರುಗಳು ಮುಂತಾದ ಕಾನೂನು ವೃತ್ತಿನಿರತರ ಬೇರೆಬೇರೆ ವರ್ಗಗಳನ್ನು ರೆವಿನ್ಯೂ ಏಜೆಂಟರುಗಳು, ಇನ್‌ಕಂ ಟ್ಯಾಕ್ಸ್ ಪ್ರಾಕ್ಟೀಷನರುಗಳು ಮುಂತಾದವರನ್ನು ಮುಂದುವರಿಸುವುದು ಅಥವಾ ರದ್ದು ಮಾಡುವುದು. ನಾಲ್ಕನೆಯದು, ಇಡೀ ಭಾರತಕ್ಕೆ ಅಥವಾ ಪ್ರತಿಯೊಂದು ರಾಜ್ಯಕ್ಕೂ ಪ್ರತ್ಯೇಕವಾಗಿ ಒಂದೇ ಬಾರ್ ಕೌನ್ಸಿಲ್‌ನ ಸ್ಥಾಪನೆಯ ಅಪೇಕ್ಷಣೀಯತೆ ಅಥವಾ ಸಾಧ್ಯತೆ. ಐದನೆಯದು, ಸುಪ್ರೀಂ ಕೋರ್ಟಿಗಾಗಿ ಒಂದು ಪ್ರತ್ಯೇಕ ಬಾರ್ ಕೌನ್ಸಿಲ್‌ನ ಸ್ಥಾಪನೆ ಹಾಗೂ ಕೊನೆಯದು, ಕಾನೂನು ವೃತ್ತಿನಿರತರಿಗೆ ಸಂಬಂಧಿಸಿದ ಹಲವಾರು ಕೇಂದ್ರ ಹಾಗೂ ರಾಜ್ಯ ಕಾಯಿದೆಗಳ ಕ್ರೋಢೀಕರಣ ಮತ್ತು ಪರಿಷ್ಕರಣೆ.

ಈಗ ತಾನೆ, ಸ್ನೇಹಿತ ಶ್ರೀ ಮುಕುಟ್ ಬಿಹಾರಿಲಾಲರು ಮಂಡಿಸಿದ ಸೂಚನೆಯಲ್ಲಿರುವ ಉದ್ದೇಶವನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಪರಿಶೀಲಿಸಬೇಕಾದ ಎಲ್ಲ ಪ್ರಶ್ನೆಗಳನ್ನು ನಾನು ಹೇಳಿದ್ದೇನೆಂದು ನಂಬಿದ್ದೇನೆ. ನಾನು ಈಗಾಗಲೇ ಹೇಳಿದ್ದೇನೆ, ಒಂದು ಸಮಿತಿಯನ್ನು ನೇಮಿಸಲು ನಾನು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇನೆ ಮತ್ತು ಈ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲು ಒಬ್ಬರು ನ್ಯಾಯಾಧೀಶರ ಸೇವೆಯನ್ನು ಒದಗಿಸಲು ಸಾಧ್ಯವೇ ಎನ್ನುವ ಬಗ್ಗೆ ಕಂಡುಕೊಳ್ಳಲು ನಾನು ಸುಪ್ರೀಂಕೋರ್ಟಿನೊಂದಿಗೆ ಪತ್ರ ವ್ಯವಹಾರ ಮಾಡುತ್ತಿದ್ದೇನೆ. ದುರದೃಷ್ಟವಶಾತ್, ಮಾನ್ಯ ಸದಸ್ಯರಿಗೆ ಗೊತ್ತಿದೆ, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯವರು, ಸದ್ಯಕ್ಕೆ, ಭಾರತದಿಂದ ಹೊರಗಿದ್ದಾರೆ, ಹೀಗಾಗಿ ಅವರಿಂದ ಅಂತಿಮ ಉತ್ತರ ಪಡೆಯಲು ನನ್ನಿಂದ ಸಾಧ್ಯ ಆಗಿಲ್ಲ. ಮುಂದಿನ ತಿಂಗಳ ಪ್ರಾರಂಭದಲ್ಲಿ ಅವರು ಬರಲಿದ್ದಾರೆಂದು ನನಗೆ ತಿಳಿಸಲಾಗಿದೆ, ಅವರು ಬಂದ ಮೇಲೆ, ಈ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲು ಯಾವ ನ್ಯಾಯಾಧೀಶರನ್ನು ಬಿಟ್ಟುಕೊಡುವ ಸಾಧ್ಯತೆ ಉಂಟೋ ಅದನ್ನು ನನಗೆ ತಿಳಿಸಿದ ನಂತರ ಸಮಿತಿಯನ್ನು ನೇಮಿಸಲಾಗುತ್ತದೆ. ನಂತರ ಅದು ಕಾರ್ಯ ಆರಂಭಿಸುತ್ತದೆ. ಅಟಾರ್ನಿ ಜನರಲ್‌ರನ್ನು, ಒಂದು ದೊಡ್ಡ ರಾಜ್ಯದ ಅಡ್ವೊಕೇಟ್ ಜನರಲ್‌ರನ್ನು, ಹೈಕೋರ್ಟ್‌ನ ಒಬ್ಬರು ನಿವೃತ್ತ ನ್ಯಾಯಾಧೀಶರನ್ನು, ಈ ಸಮಿತಿಯನ್ನು ಸ್ಥಾಪಿಸುವ ವಿಷಯದಲ್ಲಿ ತುಂಬಾ ಆಸಕ್ತಿಯುಳ್ಳ ಒಬ್ಬರು ಅಥವಾ ಇಬ್ಬರು ಸಂಸತ್ ಸದಸ್ಯರನ್ನು ನೇಮಕ ಮಾಡಲು ಸಹ ಉದ್ದೇಶಿಸಿದ್ದೇನೆ.

**ಶ್ರೀ ಕಾಮತ್ (ಮಧ್ಯಪ್ರದೇಶ):** ದೊಡ್ಡ ರಾಜ್ಯ ಯಾವುದು?

**ಡಾ. ಅಂಬೇಡ್ಕರ್:** ದೊಡ್ಡ ರಾಜ್ಯಗಳಲ್ಲಿ ಯಾವುದಾದರೂ, ನಾನಿನ್ನೂ ತೀರ್ಮಾನಿಸಿಲ್ಲ. ದೊಡ್ಡ ರಾಜ್ಯ ಎಂದರೆ, ನನ್ನ ಪ್ರಕಾರ, ಭಾಗ 'ಎ' ರಾಜ್ಯ. ಭಾಗ 'ಬಿ' ರಾಜ್ಯವೆಂದು ನಾವು ಯಾವುದನ್ನು ಕರೆದಿದ್ದೇವೋ, ಅದರಿಂದ ಒಬ್ಬರು ಸದಸ್ಯರು ಇರಬೇಕೆಂದೂ ಸಹ, ನಾನಿನ್ನು ತೀರ್ಮಾನ ಕೈಗೊಂಡಿಲ್ಲವಾದರೂ, ಉದ್ದೇಶಿಸಿದ್ದೇನೆ. ಅದರಲ್ಲೂ ಮುಖ್ಯವಾಗಿ ರಾಜಸ್ತಾನದಿಂದ, ಏಕೆಂದರೆ ಆ ಪ್ರದೇಶದಲ್ಲಿ ಆಚರಣೆಯಲ್ಲಿರುವ ಪದ್ಧತಿ ನಮಗೆ ನಿಜಕ್ಕೂ ಚೆನ್ನಾಗಿ ತಿಳಿದಿಲ್ಲ, ಅದರಲ್ಲೂ ನನಗಂತೂ ಚನ್ನಾಗಿ ಗೊತ್ತಿಲ್ಲ, ಹೀಗಾಗಿ ಆ ಪ್ರದೇಶದಲ್ಲಿ ಬಾರ್ ನಿಖರವಾಗಿ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎನ್ನುವ ಬಗ್ಗೆ ಮಾಹಿತಿ ಒದಗಿಸಲು ಸಮಿತಿಯಲ್ಲಿ ಆ ಪ್ರದೇಶದ ಒಬ್ಬರು ಪ್ರತಿನಿಧಿ ಇರಬೇಕೆಂದು ಬಯಸಿದ್ದೇನೆ.

ಮೂರು ತಿಂಗಳ ಅಥವಾ ನಾಲ್ಕು ತಿಂಗಳ ಒಳಗೆ ವರದಿಯನ್ನು ಸಲ್ಲಿಸುವಂತೆ ಆ ಸಮಿತಿಯನ್ನು ಕೇಳಿಕೋಳುತ್ತೇನೆ. ಆ ವರದಿಯು ಬಂದಾದ ಮೇಲೆ, ಅದನ್ನು ಪರಿಶೀಲಿಸಿದ ಮೇಲೆ ಪರ್ಯಾಲೋಚನೆಗಾಗಿ ತನ್ನ ಮುಂದೆ ಆ ಬಗೆಗಿನ ಶಾಸನವನ್ನು ಮಂಡಿಸುವ ಆವಶ್ಯಕತೆ ಇದೆಯೆಂದು ಸಂಸತ್ತು ಹೇಳಬಹುದಾಗಿದೆ. ಇದು ನನ್ನ ಮಾನ್ಯ ಸ್ನೇಹಿತರಿಗೆ ಮನವರಿಕೆಯಾಗುತ್ತದೆಂಬ ಮತ್ತು ಅವರು ಈ ನಿರ್ಣಯವನ್ನು ಹಿಂತೆಗೆದುಕೊಳ್ಳುತ್ತಾರೆಂಬ ನಂಬಿಕೆ ನನಗಿದೆ.

**ಶ್ರೀ ಸಿಧ್ವಾ:** ನ್ಯಾಯಿಕ ಜ್ಞಾನ ಉಳ್ಳ ಮೂವರು ಸಂಸತ್ ಸದಸ್ಯರಿರಬೇಕೆಂಬುದು ನನ್ನ ಸಲಹೆ.

**ಡಾ. ಅಂಬೇಡ್ಕರ್:** ಶ್ರೀಯುತ ಸಿಧ್ವಾರವರು ಇಚ್ಛೆಪಟ್ಟರೆ ಅವರನ್ನೂ ಸೇರಿಸಲು ನಾನು ಸಿದ್ಧನಿದ್ದೇನೆ. ಅವರು ನ್ಯಾಯಿಕ ಕ್ಷೇತ್ರದ ಹೊರಗಿನ ಸದಸ್ಯರೂ ಆಗಿರಬಹುದು. ಏಕೆಂದರೆ, ಅವರು ಅವರಿಗಿರುವ ಅಪಾರ ವ್ಯವಹಾರಿಕ ಜ್ಞಾನವನ್ನು ಧಾರೆ ಎರೆಯಬಲ್ಲರು.

**ಪಂಡಿತ್ ಎಂ.ಬಿ. ಭಾರ್ಗವ:** ಈ ಬಾರ್ ಕೌನ್ಸಿಲ್‌ಗಳ ಅಧಿಕಾರಗಳನ್ನು, ಕಾರ್ಯಗಳನ್ನು, ಸ್ಥಾಪನೆಯನ್ನು ಮತ್ತು ಈ ಕೌನ್ಸಿಲ್‌ಗಳ, ಸುಪ್ರೀಂ ಕೋರ್ಟಿನ ಮತ್ತು ಹೈಕೋರ್ಟುಗಳ ನಡುವಣ ಪರಸ್ಪರ ಸಂಬಂಧವನ್ನು ನಿರ್ದಿಷ್ಟಪಡಿಸುವ ಅವಕಾಶ ಈ ಸಮಿತಿಗೆ ಇರುತ್ತದೆಯೇ?

**ಡಾ. ಅಂಬೇಡ್ಕರ್**: ಹೌದು

**ಪಂಡಿತ್ ಎಂ.ಬಿ. ಭಾರ್ಗವ:** ಶಿಸ್ತು ಅಧಿಕಾರ ವ್ಯಾಪ್ತಿಯು ಈ ಕೌನ್ಸಿಲ್‌ಗಳಲ್ಲಿ ಅಥವಾ ಹೈಕೋರ್ಟುಗಳಲ್ಲಿ ಮಾತ್ರವೇ ನಿಹಿತವಾಗಿರುತ್ತದೆಯೇ?

**ಡಾ. ಅಂಬೇಡ್ಕರ್:** ಸದ್ಯಕ್ಕೆ ಕಷ್ಟಗಳನ್ನು ಒಡ್ಡುವವೆಂದು ನಾನು ಭಾವಿಸಿದ ವಿಶೇಷ ಸಮಸ್ಯೆಗಳನ್ನು ನಾನು ಈಗಾಗಲೇ ಸದನದ ಮುಂದಿಟ್ಟಿದ್ದೇನೆ. ಪ್ರಾಸಂಗಿಕ ಪ್ರಶ್ನೆಗಳನ್ನು ಖಂಡಿತವಾಗಿಯೂ ಪರಿಶೀಲಿಸಲಾಗುತ್ತದೆ.

**ಒಬ್ಬರು ಮಾನ್ಯ ಸದಸ್ಯರು:** ಸಮಿತಿಯು ಸಲಹೆಗಳನ್ನು ಕೊಡುತ್ತದೆ.

**ಮಾನ್ಯ ಉಪಸಭಾಪತಿಗಳು :** ಈ ವಿಷಯ ಕುರಿತಂತೆ ಅನೌಪಚಾರಿಕ ಸಮಿತಿಯೊಂದು ಸಹ ಪರಿಶೀಲಿಸಿದೆಯೆಂದು ಹಾಗೂ ಮಾನ್ಯ ಸಚಿವರಿಗೆ ಕೆಲವೊಂದು ಶಿಫಾರಸುಗಳನ್ನು ಮಾಡಿದೆಯೆಂದು ನನ್ನ ಅನಿಸಿಕೆ.

**ಡಾ. ಅಂಬೇಡ್ಕರ್:** ನನಗೆ ಜ್ಞಾಪಕ ಇಲ್ಲ. ಇರಬಹುದು.

**ಮಾನ್ಯ ಉಪಸಭಾಪತಿಗಳು:** ಮಾನ್ಯ ಕಾನೂನು ಸಚಿವರು ಹೇಳಿಕೆ ನೀಡಿರುವುದರಿಂದ ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕೆಂದು ಸೂಚಕರು ಕೋರುವರೆಂದು ನನಗನಿಸುತ್ತಿಲ್ಲ. ತಮ್ಮ ನಿರ್ಣಯವನ್ನು ಹಿಂತೆಗೆದುಕೊಳ್ಳಲು ಸೂಚಕರು ಸದನದ ಅನುಮತಿ ಕೋರಲಿ.

ಅನುಮತಿಯ ಮೇರೆಗೆ ನಿರ್ಣಯವನ್ನು ಹಿಂತೆಗೆದುಕೊಳ್ಳಲಾಗಿದೆ.

**ಮಾನ್ಯ ಉಪಸಭಾಪತಿಗಳು:** ತಿದ್ದುಪಡಿಗಳು ತಂತಾನೆ ಇಲ್ಲವಾಗಿವೆ.

◆

# ೩೯

# ಸಂಸತ್ ಸದಸ್ಯರ ನಡತೆ

*ಗೃಹ ಸಚಿವರು (ಶ್ರೀ ರಾಜಗೋಪಾಲಚಾರಿ):** ನಿಜವಾಗಿಯೂ, ಕಾನೂನು ಸಚಿವರು ಅಧಿಕಾರಯುತವಾಗಿಯೇ ಮಾತನಾಡುತ್ತಾರೆ. ಉಲ್ಲೇಖಿಸಿದ ಅನುಚ್ಛೇದವನ್ನು ಹಾಗೆಯೇ ಯಾವುದೇ ಇತರ ನಿಯಮವನ್ನು ಕಲ್ಪಿಸಿಕೊಳ್ಳಲಾಗುತ್ತದೆ ಮತ್ತು ಸಾಮಾನ್ಯ ಕ್ರಮದಲ್ಲಿ ಅನ್ವಯ ಮಾಡುವುದಕ್ಕಾಗಿ ಪದಗಳ ರೂಪದಲ್ಲಿ ಬರಹಕ್ಕೆ ಇಳಿಸಲಾಗುತ್ತದೆ. ನ್ಯಾಯಿಕ ವಿಧಾನದ ಗುಣಲಕ್ಷಣ ಇರುವಂಥ ಪ್ರತಿಯೊಂದು ವಿಧಾನಕ್ಕೆ ಮಾರ್ಗದರ್ಶನ ಒದಗಿಸುವ ಕೆಲವೊಂದು ಸಾಮಾನ್ಯ ತತ್ವಗಳೂ ಇವೆ. ಯಾವುದೇ ಕಾನೂನನ್ನು, ಯಾವುದೇ ನಿಯಮವನ್ನು ವ್ಯಾಖ್ಯಾನಿಸಲೇಬೇಕಾಗುತ್ತದೆ, ಅನ್ವಯ ಮಾಡಬೇಕಾಗುತ್ತದೆ. ಹಾಗಾದಾಗ ಕಾನೂನಿನಿಂದ ಸ್ವತಃ ನುಣುಚಿಕೊಳ್ಳಲು ಸಾಧ್ಯವಾಗಲಾರದು. ಇದು, ಸಂಸತ್ ಸದಸ್ಯರೊಬ್ಬರ ನಡತೆಯ ಬಗ್ಗೆ ವಿಚಾರಣೆ ಮಾಡಲು ನಡವಳಿಗಳು ಆರಂಭವಾಗಿರುವುದಕ್ಕೆ ಸಂಬಂಧಿಸಿರುವ ವಿಷಯ. ಸಂಸತ್ತಿನ ಉದ್ದೇಶ ಮತ್ತು ವಿಧಾನವು ಈ ರೀತಿಯ ತಾಂತ್ರಿಕ ಕಾರ್ಯದ ನಿಮಿತ್ತ ತಪ್ಪಿ ಹೋಗಬಾರದೆಂಬುದು ಮೂಲಭೂತ ಸಾಮಾನ್ಯ ತತ್ವವೆಂದು ನನಗೆ ತೋರುತ್ತದೆ. ಒಂದು ಸ್ಥಾನವು ತಂತಾನೆ ಖಾಲಿ ಆಗುವುದನ್ನು ತೋರಿಸುವ **"ಕೂಡಲೇ"** ಪದಗಳು ಇಲ್ಲದಿರುವುದನ್ನು ಶ್ರೀ ಸಂತಾನಂರವರು ಎತ್ತಿ ತೋರಿಸಿದ್ದಾರೆ. ಈ ವಿಷಯದಲ್ಲಿ ತಾಂತ್ರಿಕ ದೋಷ ಏನೇ ಇದ್ದರೂ, ಕಾನೂನು, ಕಾನೂನಿನ ಉದ್ದೇಶ ಸಾಧನೆಗಾಗಿ ಇದೆಯೇ ಹೊರತು ನುಣುಚಿಕೊಳ್ಳುವುದಕ್ಕಾಗಿ ಅಲ್ಲವೆಂಬ ಸಾಮಾನ್ಯ ತತ್ವ ಮಹತ್ವದ್ದೆಂದು ಹೇಳಬಯಸುತ್ತೇನೆ.

**ಮಾನ್ಯ ಉಪಸಭಾಪತಿಗಳು :** ಮಾನ್ಯ ಕಾನೂನು ಸಚಿವರ ಮಾತುಗಳನ್ನು ಆಲಿಸೋಣ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಈ ವಿಷಯ ದಿಢೀರನೆ ನನಗೆ ಎದುರಾಗಿದೆ. ಹೀಗಾಗಿ ಅನುಚ್ಛೇದ ೧೦೧ ರ ೩ನೇ ಕಲಮನ್ನು ಓದಿದ ಮೇಲೆ, ನನಗೆ ಹೊಳೆದ ಮೊದಲ ಭಾವನೆಗಳನ್ನಷ್ಟೇ ವ್ಯಕ್ತಪಡಿಸುತ್ತಿದ್ದೇನೆ. ೧೦೧ನೇ ಮತ್ತು ೧೦೨ನೇ ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಿರುವ ಕಾರಣಗಳಿಂದಾಗಿ ಸ್ಥಾನ ಖಾಲಿ ಆಗಬಹುದು. ಅನುಚ್ಛೇದ ೧೦೧, ಕಲಮು (೩), (ಬಿ) ಉಪ–ಕಲಮು ಸಂಸತ್ ಸದಸ್ಯರ ರಾಜೀನಾಮೆ ಬಗ್ಗೆ ಹೇಳುತ್ತದೆ. ಸಂಸತ್ ಸದಸ್ಯರ ಯಾವ ನಡತೆಯು ವಿಚಾರಣೆಯ ವಸ್ತು–ವಿಷಯವಾಗಿರುವುದೋ ಅದರ ಬಗ್ಗೆ ಈ ಕಲಮಿನ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತದೆ. ಸಂಸತ್ ಸದಸ್ಯರಾಗಿ ಆಯ್ಕೆಯಾಗಲು ಮತ್ತು ಸದಸ್ಯರಾಗಿರಲು ಅನರ್ಹತೆಗಳನ್ನು ವಿವರಿಸಿರುವ ಇನ್ನೊಂದು ಅನುಚ್ಛೇದ ಸಹ ಇದೆ. ೧೦೨ನೇ ಅನುಚ್ಛೇದದಲ್ಲಿ ಹೇಳಿರುವ ಯಾವುವಾದರೂ ಷರತ್ತುಗಳ ವ್ಯಾಪ್ತಿಗೆ ಯಾರೇ ಸದಸ್ಯರು ಬಂದರೆ ಅವರು ತಮ್ಮ ಸ್ಥಾನವನ್ನು ತೆರವು ಮಾಡುತ್ತಾರೆ. ೧೦೧ ನೇ ಮತ್ತು ೧೦೨ನೇ ಅನುಚ್ಛೇದಗಳು ಎಲ್ಲ ಅಂಶಗಳನ್ನು ಒಳಗೊಂಡಿವೆಯೇ ಅಥವಾ ಪ್ರಕರಣವು ೧೦೧ ನೇ ಮತ್ತು ೧೦೨ ನೇ ಅನುಚ್ಛೇದಗಳ ವ್ಯಾಪ್ತಿಗೆ ಬರದಿದ್ದರೂ ಸ್ವತಂತ್ರವಾಗಿ ಸಹ ಅನ್ವಯವಾಗಬಹುದಾದ

---

* ಸಂ. ಚ. ಸಂಪುಟ ೧೪, ೨೭, ಆಗಸ್ಟ್ ೧೯೫೧, ಪುಟ ೩೨೪೭–೪೮.

ಯಾವುದೇ ಇತರ ಅನುಚ್ಛೇದವು ಸಂವಿಧಾನದಲ್ಲಿ ಇದೆಯೇ ಎನ್ನುವ ಪ್ರಶ್ನೆಯು ಪರ್ಯಾಲೋಚನೆಗಾಗಿ ಉದ್ಭವಿಸುತ್ತದೆ. ನನ್ನ ನಿವೇದನೆ ಏನೆಂದರೆ ೧೦೫ (೩)ನೇ ಅನುಚ್ಛೇದವು ಸ್ಥಾನವನ್ನು ತೆರವುಗೊಳಿಸಲು ಸಂಸತ್ತಿಗೆ ಕೊಟ್ಟಿರುವ ಹೆಚ್ಚುವರಿ ಅಧಿಕಾರ. ೧೦೧ ನೇ ಮತ್ತು ೧೦೨ ನೇ ಅನುಚ್ಛೇದದಲ್ಲಿ ಒಳಗೊಂಡಿರುವ ಯಾವುದೂ ಅದನ್ನು ನಿರ್ಬಂಧಿಸಿಲ್ಲ.

ಇದು, ಸದಸ್ಯರೊಬ್ಬರು ಹಕ್ಕುಚ್ಯುತಿ ಎಸಗುವ ಪ್ರಕರಣಕ್ಕೆ ಸಂಬಂಧಿಸಿದೆ. ಸಂಸತ್ತು ಇಂಥ ಪ್ರಕರಣವನ್ನು ಸ್ವತಃ ವಿಚಾರಣೆ ಮಾಡಿ, ಹಕ್ಕು ಚ್ಯುತಿ ಆಗಿದೆಯೆಂಬ ನಿರ್ಣಯಕ್ಕೆ ಬಂದರೆ ಮತ್ತು ಪ್ರಕರಣವು ಉಚ್ಚಾಟನೆಗೆ ಆದೇಶ ಮಾಡುವಂಥ ಗುರುತರವಾದ ಪ್ರಕರಣ ಆಗಿದ್ದರೆ ಸದನವು ೧೦೫ (೩) ನೇ ಪ್ರಕರಣದ ಮೇರೆಗೆ ಉಚ್ಚಾಟನೆಗೆ ಆದೇಶ ಮಾಡಬಹುದು. ಹಾಗೆ ಮಾಡಲು ಸಂಸತ್ತು ಸಕ್ಷಮವಾಗಿರುತ್ತದೆ. ಸಂಸತ್ತಿನ ಅಧಿಕಾರಗಳು ಮುಂತಾದವು ಹೌಸ್ ಆಫ್ ಕಾಮನ್ಸ್ ನಂತೆಯೇ ಇವೆಯೆಂದು ೧೦೫ (೩)ನೇ ಅನುಚ್ಛೇದದಲ್ಲಿ ಹೇಳಲಾಗಿದೆ. ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್ ಗ್ರಂಥವನ್ನು ಅವಲೋಕಿಸಿದರೆ, ಹೌಸ್ ಆಫ್ ಕಾಮನ್ಸ್‌ನ ಅಧಿಕಾರಗಳಲ್ಲಿ ಉಚ್ಚಾಟನೆಯೂ ಒಂದು ಮತ್ತು ಹಕ್ಕುಚ್ಯುತಿಗೆ ಅದು ಶಿಕ್ಷೆ ವಿಧಿಸುವ ಅಧಿಕಾರಗಳಲ್ಲಿ ಒಂದು ಎಂಬುದನ್ನು ತೋರಿಸುತ್ತದೆಂದು ನನ್ನ ಅನಿಸಿಕೆ. ಆದ್ದರಿಂದ, ಉಚ್ಚಾಟನೆಗೆ ಆದೇಶ ಮಾಡಿ ಸ್ಥಾನವನ್ನು ತೆರವುಗೊಳಿಸುವ ಅಧಿಕಾರಗಳು ೧೦೫ (೩) ನೇ ಅನುಚ್ಛೇದದಲ್ಲಿ ಇವೆ ಮತ್ತು ೧೦೧ ನೇ ಮತ್ತು ೧೦೨ ನೇ ಅನುಚ್ಛೇದಗಳಲ್ಲಿ ಒಳಗೊಂಡಿರುವ ನಿಬಂಧನೆಗಳು ಅದನ್ನು ಯಾವ ರೀತಿಯಲ್ಲೂ ನಿರ್ಬಂಧಿಸುವುದಿಲ್ಲ. ಹೀಗಾಗಿ, ಪರ್ಯಾಲೋಚನೆಗಾಗಿ ಉದ್ಭವಿಸುವ ಇನ್ನೊಂದು ಪ್ರಶ್ನೆ ಯಾವುದೆಂದರೆ, ಸಂಸತ್ತಿನ ನಿರ್ದಿಷ್ಟ ಆದೇಶದಿಂದ ೧೦೫ನೇ ಅನುಚ್ಛೇದದ ಮೇರೆಗೆ ಮಾನ್ಯ ಸದಸ್ಯರ ವಿರುದ್ಧ ಈಗಾಗಲೇ ಆರಂಭಿಸಿದ ವ್ಯವಹರಣೆಗಳು, ಆ ಸದಸ್ಯರು ೧೦೧ ನೇ ಅನುಚ್ಛೇದದ ನಿಬಂಧನೆಗಳ ಪ್ರಕಾರ ರಾಜೀನಾಮೆ ಕೊಡ ಬಯಸಿದರೆ ಅಂತ್ಯವಾಗುತ್ತವೆಯೇ ಎಂಬುದಾಗಿದೆ. ಮಾನ್ಯ ಸದಸ್ಯರು ೧೦೧ ನೇ ಅನುಚ್ಛೇದದ ಮೊರೆ ಹೋಗಿ, ೧೦೫ ನೇ ಅನುಚ್ಛೇದದ ಅಡಿಯ ವ್ಯವಹರಣೆಗಳನ್ನು ನಿಲ್ಲಿಸುವಂತಿಲ್ಲವೆಂಬುದು ನನ್ನ ವಿನಮ್ರ ನಿವೇದನೆ. ೧೦೧ನೇ ಅನುಚ್ಛೇದ ಮೇರೆಗೆ ಮಾನ್ಯ ಸದಸ್ಯರು ರಾಜಿನಾಮೆ ಕೊಟ್ಟಿರುವ ಸಂಗತಿ ಏನೇ ಇದ್ದರೂ, ಅಂಥ ವ್ಯವಹರಣೆಗಳು ಮುಂದುವರಿಯಲೇ ಬೇಕಾಗುತ್ತದೆ, ವಾಸ್ತವವಾಗಿ, ಆ ವ್ಯವಹರಣೆಗಳ ಬಲದಿಂದ ಸಂಸತ್ತು ನೇರವಾಗಿ ಅವರಿಗೆ ಶಿಕ್ಷೆ ವಿಧಿಸುವುದು ಸಾಧ್ಯವಿಲ್ಲ. ಆದ್ದರಿಂದ, ೧೦೫ನೇ ಅನುಚ್ಛೇದದ ಪ್ರಕಾರ ಈಗಾಗಲೇ ಆರಂಭವಾಗಿರುವ ವ್ಯವಹರಣೆಗಳನ್ನು, ಮಾನ್ಯ ಸದಸ್ಯರು ರಾಜೀನಾಮೆ ಕೊಟ್ಟಿದ್ದರೂ, ಮುಂದುವರಿಸಲು ಸಂಸತ್ತಿಗೆ ಅವಕಾಶ ಇರುತ್ತದೆ.

**ಶ್ರೀ ಸಂತಾನಂ:** ಮಾನ್ಯ ಕಾನೂನು ಸಚಿವರು ಹೇಳಿದ್ದಕ್ಕೆ ಇನ್ನೂ ಒಂದು ಮಾತು ಸೇರಿಸಬಯಸುತ್ತೇನೆ. **"ರಾಜೀನಾಮೆ"** ಪದಕ್ಕೆ ಇರುವ ಒಂದೇ ಒಂದು ಅರ್ಥಾನ್ವಯ ಯಾವುದೆಂದರೆ, ರಾಜೀನಾಮೆಯು ಜಾರಿಗೆ ಬರುವುದಕ್ಕೂ ಮುಂಚೆ ಸಂಬಂಧಪಟ್ಟ ಪ್ರಾಧಿಕಾರವು ಅದನ್ನು ವಿಧ್ಯುಕ್ತವಾಗಿ ಅಧಿಸೂಚಿಸಬೇಕು ಎನ್ನುವುದು. ಇಲ್ಲದಿದ್ದರೆ, ಎಲ್ಲ ಬಗೆಯ ಗೋಜಲುಗಳು ಉದ್ಭವವಾಗುತ್ತವೆ. ಪತ್ರವನ್ನು ಮನೆಗೆ ತಲುಪಿಸಿದಾಗ, ಒಂದು ವೇಳೆ, ಅವರು ಅಲ್ಲಿರದಿದ್ದರೆ, ನಾಲ್ಕು ದಿನಗಳಾದ ನಂತರ ಬಂದರೆ, ಅದನ್ನು ಮನೆಗೆ ತಲುಪಿಸಿದ ದಿನದಿಂದಲೇ ಅದು ಜಾರಿಗೆ ಬರುತ್ತದೆಂದು ಭಾವಿಸಲಾಗುತ್ತದೆಯೇ? ನಾನು ಕೊಟ್ಟಿರುವುದೇ, ಅಂಥ ಸಂದರ್ಭಗಳಲ್ಲಿ ನಿಜವಾದ ಅರ್ಥಾನ್ವಯ ಆಗುತ್ತದೆ.

**ಮಾನ್ಯ ಉಪಸಭಾಪತಿಗಳು :** ಆ ಅಂಶವನ್ನು ನಾವು ಚರ್ಚಿಸುತ್ತಿಲ್ಲ.

*__ಪಂಡಿತ್ ಮೈತ್ರಾ (ಪಶ್ಚಿಮ ಬಂಗಾಳ):__ ಸರ್, ನಾವು ಈಗ ಕೈಗೊಳ್ಳುತ್ತಿರುವ ಕ್ರಮಕ್ಕೆ ಯಾವ

ಪೂರ್ವ ನಿದರ್ಶನವೂ ಇಲ್ಲವೆಂಬುದನ್ನು ತಾವು ಮತ್ತು ಸದನದ ಮಾನ್ಯ ಸದಸ್ಯರು ತೀರಾ ಎಚ್ಚರಿಕೆಯಿಂದ ಮನಗಾಣಬೇಕೆಂದು ಕೋರುತ್ತೇನೆ. ಸಂವಿಧಾನಾತ್ಮಕ ಕಾನೂನಿನ ಅಂಶ ಉದ್ಭವವಾಗಿದೆ. ಅದು ಅತ್ಯಂತ ಮಹತ್ವದ್ದು. ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್ ಗ್ರಂಥದಲ್ಲೂ ಯಾವ ಯಾವುದೇ ಪೂರ್ವ ನಿದರ್ಶನ ಇಲ್ಲ...................

**ಡಾ. ಅಂಬೇಡ್ಕರ್** : ಹೌದು.

**ಪಂಡಿತ್ ಮೈತ್ರಾ:** ಕೆಲವೊಂದು ರೀತಿಯ ದಂಡನೆಯನ್ನು ಎಂದರೆ ವಾಗ್ದಂಡನೆ, ಛೀಮಾರಿ, ಜೈಲಿಗೆ ಹಾಕುವುದು ಮುಂತಾದವನ್ನು ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್ ಗ್ರಂಥದಲ್ಲಿ ಹೇಳಲಾಗಿದೆಯೆಂಬುದು ನನಗೆ ಗೊತ್ತಿದೆ. ಇವೆಲ್ಲವುಗಳು ಹೊಸದೇನಲ್ಲ. ಮಾನ್ಯ ಸ್ನೇಹಿತರಾದ ಗೃಹಸಚಿವರು ಎತ್ತಿರುವ ಅಂಶವನ್ನು ತಾರ್ಕಿಕವಾಗಿ ಅನುಸರಿಸಿದರೆ ಏನಾಗುತ್ತದೆಂದರೆ, ಒಮ್ಮೆ ವ್ಯವಹರಣೆಯನ್ನು ಪ್ರಾರಂಭಿಸಿದರೆ ಅದು ಅಂತ್ಯವಾಗುವುದೇ ಇಲ್ಲ. ಕಾನೂನಿನ ನಿಲುವು ಇದೇ ಏನು? ಮಾನ್ಯ ಸದಸ್ಯರು ಹಿಂದಿನ ರಾತ್ರಿ ಮೃತರಾದರೆ – ಕಾಲ್ಪನಿಕ ಸಂದರ್ಭವನ್ನು ಹೇಳುತ್ತಿದ್ದೇನೆ – ಈಗ ಹೇಳಿ, ವ್ಯವಹರಣೆಯನ್ನು ಮುಂದುವರಿಸಲಾಗುತ್ತದೆಯೇ? ತೀರ್ಮಾನವನ್ನು ಹೇಳುವಾಗ, ಪೀಠವು ಈ ವಿಷಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕೆಂದು ಕೋರುತ್ತಿದ್ದೇನೆ. ಇದೊಂದು ಸಂವಿಧಾನಾತ್ಮಕ ಪ್ರಮುಖ ಅಂಶ. ಪ್ರಮುಖಾಂಶ ಯಾವುದೆಂದರೆ, ಸದಸ್ಯರು ತನ್ನ ರಾಜೀನಾಮೆ ಪತ್ರವನ್ನು ಪೀಠಕ್ಕೆ ತಲುಪಿಸಿದ ಕೂಡಲೇ ಆ ಸದಸ್ಯರು ಸ್ಥಾನವನ್ನು ಅದೇ ಸಮಯದಿಂದಲೇ ತೆರವು ಮಾಡಿದಂತಾಗುತ್ತದಯೇ ಎಂಬುದು. ರಾಜೀನಾಮೆ ಸಲ್ಲಿಸುವುದು, ಅದು ಅಂಗೀಕೃತವಾಗುವುದು ಇವೆರಡರ ನಡುವೆ ಕಾಲಾಂತರ ಇರುತ್ತದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅದನ್ನು ಅಂಗೀಕರಿಸಬೇಕು ಅಥವಾ ಅಂಗೀಕರಿಸಬಹುದು ಅಥವಾ ಅಂಗೀಕರಿಸದಿರಬಹುದು ಎಂದು ಸಂವಿಧಾನದಲ್ಲಿ ಎಲ್ಲೂ ಹೇಳಿಲ್ಲ. ತನ್ನ ಸ್ವಹಸ್ತಾಕ್ಷರದಲ್ಲಿ ರಾಜೀನಾಮೆಯನ್ನು ಬರೆದು ತಮಗೆ ತಲುಪಿಸಿದ ಕೂಡಲೇ ಅದು ಜಾರಿಗೆ ಬರುತ್ತದೆಂದು ಕಾನೂನಿನಲ್ಲಿ, ಸಂವಿಧಾನದಲ್ಲಿ ಹೇಳಲಾಗಿದೆ. ಈ ಪ್ರಕರಣದಲ್ಲಿ ಈ ಸದನದಲ್ಲಿ ಪೀಠಾಸೀನರಾಗಿರುವ ತಮಗೇ, ಸರ್ ಖುದ್ದಾಗಿ ಅವರು ತಮ್ಮ ಕೈಗೇ ರಾಜೀನಾಮೆ ಪತ್ರವನ್ನು ಕೊಟ್ಟಿದ್ದಾರೆ. ಕಾಲಾಂತರ ಇರುತ್ತದೆಂದು ಸಂವಿಧಾನದಲ್ಲಿ ಎಲ್ಲೂ ಹೇಳಿಲ್ಲ. ಆದ್ದರಿಂದ, ಮಾನ್ಯ ಸದಸ್ಯರು, ಸಂಸತ್ತಿನ ಒಳಗಡೆಯೇ ತಮ್ಮ ರಾಜೀನಾಮೆಯನ್ನು ಪೀಠಾಸೀನರಾಗಿರುವವರ ಕೈಗೇ ಕೊಟ್ಟರೆ, ಅವರು ತಮ್ಮ ಸ್ಥಾನವನ್ನು ಆ ತಕ್ಷಣವೇ ತೆರವು ಮಾಡಿದಂತಾಗುತ್ತದೆಯೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಸ್ಥಾನವನ್ನು ತೆರವು ಮಾಡಿದಂತಾಗಿದೆ ಎಂದಾದರೆ ಈ ಸೂಚನೆ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ಅವಕಾಶ ಎಲ್ಲಿದೆ? ಇದು ಪರ್ಯಾಲೋಚಿಸಬೇಕಾದ ವಿಷಯ. ತಮ್ಮ ತೀರ್ಪನ್ನು ನಾನು ಟೀಕಿಸುತ್ತಿಲ್ಲ. (ಅಡ್ಡಿ ಅಡಚಣೆ) ಬಹುಶಃ ನನ್ನ ಸ್ನೇಹಿತರೂ ಪೀಠಾಸೀನರಾಗಬಹುದು. ಆಗಲೂ ಕೂಡ ನಾನು ಅವರ ವ್ಯಾಖ್ಯಾನವನ್ನು ಒಪ್ಪುವುದಿಲ್ಲ. ಸರ್, ನಾವು ತೀರಾ ಮನಸ್ಸಿಟ್ಟು ಗಮನಿಸಬೇಕಾಗುತ್ತದೆ. ಏಕೆಂದರೆ, ಮುಂದೆ, ಮಾರ್ಗದರ್ಶನಕ್ಕಾಗಿ ಪೂರ್ವ ನಿದರ್ಶನವನ್ನು ಗೊತ್ತುಪಡಿಸುತ್ತಿದ್ದೇವೆ. ಆ ದೃಷ್ಟಿಯಿಂದ ನನಗೆ ಆಸಕ್ತಿ ಇದೆಯೇ ಹೊರತು, ಈ ಪ್ರಕರಣದ ಗುಣಾವಗುಣಗಳ ದೃಷ್ಟಿಯಿಂದಲ್ಲ. ಸಂಸತ್ ಸಮಿತಿಯು ಈ ವಿಷಯವನ್ನು ಸವಿವರವಾಗಿ ಪರಿಶೀಲಿಸಿದೆ. ಹೆಚ್ಚು ಸಮಯ, ಶ್ರಮವನ್ನು ವಿನಿಯೋಗಿಸಿದ್ದಾರೆ. ಯಾವ ಉದ್ದೇಶದಿಂದ? ಈ ಇಡೀ ವಿಷಯವನ್ನು ತನಿಖೆ ಮಾಡಬಹುದೆಂಬ, ಕೂಲಂಕಷವಾಗಿ ವಿಚಾರ

---

* ಸಂ. ಚ. ಸಂಪುಟ ೧೪, ಭಾಗ II, ೨೪ ಸೆಪ್ಟೆಂಬರ್ ೧೯೫೧, ಪುಟ ૩૨૫૧–૫૪.

ಮಾಡಬಹುದೆಂಬ ಹಾಗೂ ತೀರ್ಮಾನಿಸಬಹುದೆಂಬ ದೃಷ್ಟಿಯಿಂದ. ಮಾನ್ಯ ಸದಸ್ಯರು ಹೇಳಿಕೆ ನೀಡಿ, ರಾಜೀನಾಮೆಯನ್ನು ನೇರವಾಗಿ ಸಲ್ಲಿಸಿದರು, ಸದನದಿಂದ ಹೊರಟು ಹೋದರು. ಒಮ್ಮೆ ವ್ಯವಹರಣೆ ಪ್ರಾರಂಭ ಆದಾಗ, ಅದಕ್ಕೆ ಯಾವಾಗಲೂ ಯಾವುದೇ ಅಡ್ಡಿ ಆಗುವುದಿಲ್ಲವೆಂಬ ಅಥವಾ ಸಂಬಂಧಪಟ್ಟ ವ್ಯಕ್ತಿಯ ಸ್ವಯಂ ಕೃತ್ಯದಿಂದ ಅಥವಾ ಅಪಘಾತದ ಅಥವಾ ಮರಣದ ಕಾರಣದಿಂದ ಆ ವ್ಯಕ್ತಿಯೇ ಕಣ್ಮರೆಯಾದಾಗ ವ್ಯವಹರಣೆಗಳು ಮುಂದುವರಿಯಬೇಕಾಗುತ್ತದೆ ಎಂಬ ನಿಲುವನ್ನು ತಾವು ತಾಳುವಿರಾ ಎಂಬುದೇ ಪ್ರಶ್ನೆ. ತಮ್ಮ ತೀರ್ಪನ್ನು ಹೇಳುವುದಕ್ಕೂ ಮುಂಚೆ, ಇದು ತುಂಬಾ ಮಹತ್ವದ ವಿಷಯವಾಗಿರುವುದರಿಂದ ಎಚ್ಚರಿಕೆಯಿಂದ ಇದನ್ನು ಪರಿಶೀಲಿಸಬೇಕಾಗುತ್ತದೆ. ಸಂಸತ್ತಿನ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ, ಮುಂದೆ ಮಾರ್ಗದರ್ಶಿಯಾಗುವಂತಹ ಪೂರ್ವ ನಿದರ್ಶನವನ್ನು ತಾವು ಗೊತ್ತುಪಡಿಸುತ್ತಿದ್ದೀರಿ.

**ಡಾ. ಅಂಬೇಡ್ಕರ್:** ನಾನು ಏನು ಹೇಳಿದ್ದೇನೆಯೋ ಅದಕ್ಕೆ, ತಮ್ಮ ಅನುಮತಿ ಕೋರಿ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಏಕೆಂದರೆ ಪೂರ್ತಿಯಾಗಿ ನಾನು ಏನು ಹೇಳಬೇಕಿತ್ತೋ, ಬಹುಶಃ ನನ್ನ ಹೇಳಿಕೆಯನ್ನು ಪೂರ್ತಿಯಾಗಿ ಹೇಳಿಲ್ಲವೆಂದು ಭಾವಿಸಿದ್ದೇನೆ. ಮಾನ್ಯ ಸ್ನೇಹಿತರಾದ ಪಂಡಿತ್ ಮೈತ್ರಾ ರವರು ಈ ಪ್ರಶ್ನೆಯನ್ನು ಎತ್ತಿರುವ ಸಂಗತಿಯಿಂದಾಗಿ ಈ ವಿಷಯದ ಬಗ್ಗೆ ನಮ್ಮ ಮನಸ್ಸು ತಿಳಿಯಾಗಿರಬೇಕೆಂಬುದು ಅಪೇಕ್ಷಣೀಯವೆಂದು ನನ್ನ ಅನಿಸಿಕೆ. ಮಾನ್ಯ ಸ್ನೇಹಿತರು ಕ್ಷಮಿಸುವುದಾದರೆ, ನಾನು ಈ ವಿಷಯವನ್ನು ಬೇರೊಂದು ರೀತಿಯ ತಾಂತ್ರಿಕ ಕಾನೂನು ದೃಷ್ಟಿಯಿಂದ ಹೇಳುತ್ತೇನೆ. ಅದೇನೆಂದರೆ, ಹಕ್ಕುಚ್ಯುತಿ ಆಗಿದೆಯೆಂದು ಸದಸ್ಯರ ಮೇಲೆ ಆರೋಪ ಮಾಡಿರುವಾಗ, ವ್ಯವಹರಣೆಗಳು ಮುಕ್ತಾಯವಾಗುವುದಕ್ಕೂ ಮುಂಚೆ ಅವರು ರಾಜೀನಾಮೆ ಕೊಟ್ಟರೆ, ಅದು, ಅವರು ರಾಜೀನಾಮೆ ನೀಡಿದ್ದರಿಂದ ಸಂಸತ್ತು ಅವರ ಮೇಲಿನ ಅಧಿಕಾರ ವ್ಯಾಪ್ತಿಯನ್ನು ಕಳೆದುಕೊಂಡ ವಿಷಯವಾಗುತ್ತದೆಯೇ? ಅದು, ನಾವು ಪರಿಶೀಲಿಸಬೇಕಾದ ಹಾಗೂ ಅದು ಮಾನ್ಯ ಸ್ನೇಹಿತರು ಆ ತಾಂತ್ರಿಕ ಅಂಶಗಳ ಮೇಲಲ್ಲದಿದ್ದರೂ, ಎತ್ತಿರುವ ಪ್ರಶ್ನೆಯೆಂದು ಭಾವಿಸಿದ್ದೇನೆ. ಆ ಪ್ರಶ್ನೆಗೆ ಉತ್ತರ ಏನೆಂದರೆ, ನಿಂದನೆಗಾಗಿ – ಇದು ನಿಂದನೆ ಪ್ರಕರಣ – ಜನರನ್ನು ಶಿಕ್ಷಿಸುವ ಅಥವಾ ಜನರ ಮೇಲೆ ವ್ಯವಹರಣೆಗಳನ್ನು ಕೈಗೊಳ್ಳುವ ಸಂಸತ್ತಿನ ಅಧಿಕಾರವು ಸಂಸತ್ತಿನ ಸದಸ್ಯರಿಗೆ ಸೀಮಿತವಾದುದಲ್ಲ, ಆದರೆ ಸಂಸತ್ತಿನ ನಿಂದನೆ ಮಾಡಿದ ಸಾರ್ವಜನಿಕರಿಗೆ ಸಹ ಅನ್ವಯವಾಗುತ್ತದೆ. "ಮೇ" ಯವರ ಗ್ರಂಥದಿಂದ ನಾನೇ ಸ್ವತಃ ತೆಗೆದುಕೊಂಡಿರುವ ಸಣ್ಣ ಭಾಗವನ್ನು ಓದಿ ಹೇಳುತ್ತೇನೆ.

> " ದಂಡನೆ ವಿಧಿಸಲು ಸದನಗಳಿಗೆ ಇರುವ ಅಧಿಕಾರವು ಅವುಗಳ ಸದಸ್ಯರಿಗಷ್ಟೇ, ಇಲ್ಲವೇ ಅವುಗಳ ನಿಕಟ ಸಮಕ್ಷಮದಲ್ಲೇ ಮಾಡಿದ ಅಪರಾಧಗಳಿಗಷ್ಟೇ ಸೀಮಿತವಾಗಿಲ್ಲ, ಆದರೆ, ಎಲ್ಲ ನಿಂದನೆಗಳಿಗೆ, ಅವುಗಳನ್ನು ಸದಸ್ಯರು ಅಥವಾ ಸದಸ್ಯರಲ್ಲದ ಜನರು ಮಾಡಿದ್ದರೂ, ಅವುಗಳನ್ನು ಸದನದ ಒಳಗೆ ಅಥವಾ ಅದರ ಹೊರಗೆ ಮಾಡಿದ್ದರೂ, ಅನ್ವಯವಾಗುತ್ತದೆ."

ಆದ್ದರಿಂದ, ಹಕ್ಕುಚ್ಯುತಿ ಅಂಶದಲ್ಲಿ ಒಂದು ಆಗಿರುವ ನಿಂದನೆ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳಲು ಸಂಸತ್ತಿಗೆ ಇರುವ ಅಧಿಕಾರವು ಸಂಸತ್ ಸದಸ್ಯರಿಗೆ ಸೀಮಿತವಾದುದಾಗಿಲ್ಲ, ಅದು, ಎಲ್ಲ ನಾಗರೀಕರಿಗೂ ಅನ್ವಯವಾಗುತ್ತದೆ. ಯಾವ ನಾಗರೀಕನೂ ಸದನದ ಹಕ್ಕಿಗೆ ನಿಂದನೆಯೆಂದೆನಿಸುವ ಯಾವುದೇ ಕಾರ್ಯವನ್ನು ಮಾಡುವಂತೆಯೇ ಇಲ್ಲ. ಶ್ರೀ ಮುದ್ಗಲ್‌ರವರು ತಮಗೆ ಸಲ್ಲಿಸಿರುವ ರಾಜೀನಾಮೆಯು ಕೂಡಲೇ ಜಾರಿಗೆ

ಬರುತ್ತದೆಂದು ವಾದದ ಉದ್ದೇಶಕ್ಕಾಗಿ ಭಾವಿಸಿಕೊಂಡರೂ, ನನ್ನ ನಿವೇದನೆ ಏನೆಂದರೆ, ಅವರ ವಿರುದ್ಧ ಮುಂದುವರಿಯಲು ಈ ಸದನಕ್ಕೆ ಇರುವ ಅಧಿಕಾರ ವ್ಯಾಪ್ತಿಯು ಮುಂದುವರಿಯುತ್ತದೆ. ಅದನ್ನು ಅವರು ತಪ್ಪಿಸಿಕೊಳ್ಳುವಂತಿಲ್ಲ. ಯಾವ ಬಗೆಯ ಶಿಕ್ಷೆ ಎನ್ನುವುದು ಬೇರೊಂದು ವಿಷಯ. ಆ ಬಗ್ಗೆ ಚರ್ಚಿಸುವಾಗ ನಾವು ಅದನ್ನು ಪರಿಶೀಲಿಸಬಹುದಾಗಿದೆ. ಮಾನ್ಯ ಸ್ನೇಹಿತ ಮೈತ್ರಾ ಅವರ ಪ್ರತಿಪಾದನೆಯು, ರಾಜೀನಾಮೆಯನ್ನು ಕೊಟ್ಟಾಗ ಸಂಸತ್ತಿನ ಅಧಿಕಾರ ವ್ಯಾಪ್ತಿಯನ್ನು ತಪ್ಪಿಸಿಕೊಂಡಂತೆಯೇ ಎನ್ನುವುದಾದರೆ, ಅದು ತೀರಾ ತಪ್ಪೆಂದು ನಾನು ಭಾವಿಸಿದ್ದೇನೆ.

**ಪಂಡಿತ್ ಮೈತ್ರಾ:** ಅದನ್ನು ನಾನು ಬೇರೊಂದು ರೀತಿಯಲ್ಲಿ ಹೇಳಿದ್ದೇನೆ.

**ಡಾ. ಅಂಬೇಡ್ಕರ್ :** ಅದನ್ನು ನಾನು ಇನ್ನೂ ಚೆನ್ನಾಗಿ ತಿಳಿಯುವಂಥ ರೀತಿಯಲ್ಲಿ ಹೇಳಿದ್ದೇನೆ.

**ಪಂಡಿತ್ ಮೈತ್ರಾ:** ಒಮ್ಮೆ ಕ್ರಮ ಪ್ರಾರಂಭವಾಯಿತೆಂದರೆ, ಅದಕ್ಕೆ ಯಾವಾಗಲೂ ಅಡ್ಡಿಯಾಗುವುದಿಲ್ಲವೆಂಬುದು ಯಾರ ವಾದವೂ ಅಲ್ಲ.

**ಡಾ. ಅಂಬೇಡ್ಕರ್ :** ಎಲ್ಲಿವರೆಗೆ ಅಧಿಕಾರ ವ್ಯಾಪ್ತಿ ಇರುತ್ತದೋ ಆ ವರೆಗೂ ಕ್ರಮ ಮುಂದುವರಿಯಬಹುದು.

**ಸರ್ದಾರ್ ಬಿ.ಎಸ್. ಮಾನ್:** ಕ್ರಿಯಾಲೋಪ ಎತ್ತುತ್ತಿದ್ದೇನೆ. ಚರ್ಚಿಸುತ್ತಿರುವ ಸೂಚನೆಗೆ, ಅದನ್ನು ಮಂಡಿಸಿದಾಗ ಅನುಮತಿ ನೀಡಲಾಗಿತ್ತು. ಆದರೆ, ಈಗ, ತರುವಾಯದ ವಿದ್ಯಮಾನಗಳಿಂದಾಗಿ, ಅದು, ಅನುಮತಿಗೆ ಯೋಗ್ಯವಾದುದಾಗಿಲ್ಲ. ಈ ಬಗ್ಗೆ ತಾವು ತೀರ್ಪು ನೀಡಬೇಕೆಂದು ಕೋರುತ್ತೇನೆ. ಸೂಚನೆಯಲ್ಲಿ ನಿರ್ದಿಷ್ಟವಾಗಿ ಹೀಗೆ ಹೇಳಲಾಗಿದೆ, ದಯವಿಟ್ಟು ನೋಡಿ:

> "ಸಂಸತ್ ಸದಸ್ಯರಾದ ಶ್ರೀ ಹೆಚ್. ಸಿ. ಮುದ್ಗಲ್ ರವರ ನಡತೆ ಬಗ್ಗೆ ತನಿಖೆ ಮಾಡಲು ೧೯೫೧ ರ ಜೂನ್ ೮ ರಂದು ನೇಮಿಸಿದ ಸಮಿತಿಯ ವರದಿಯನ್ನು ಪರಿಶೀಲಿಸಿದ ಮೇಲೆ ಈ ಸದನವು....................."

ಪ್ರಯುಕ್ತ, ಪ್ರಶ್ನೆಯು ಸಂಸತ್ತಿನ ಅಧಿಕಾರ ವ್ಯಾಪ್ತಿ ಕುರಿತಂತಲ್ಲ. 'ಸಂಸತ್ ಸದಸ್ಯ'ರ ನಡತೆ ಕುರಿತು ನಾವು ಚರ್ಚಿಸುತ್ತಿದ್ದೇವೆ. ಶ್ರೀ ಮುದ್ಗಲ್‌ರವರು ಈಗ "ಸಂಸತ್ ಸದಸ್ಯರಲ್ಲ". ಹೀಗಾಗಿ, ಪ್ರಾರಂಭದಲ್ಲಿ ಸೂಚನೆ ಮಂಡನೆಗೆ ಅನುಮತಿ ನೀಡಲಾಗಿತ್ತು. ಆದರೆ, ತರುವಾಯದ ವಿದ್ಯಮಾನಗಳಿಂದಾಗಿ, ಅದು ಈ ನಡುವೆ ಅನುಮತಿಗೆ ಯೋಗ್ಯವಾದುದಾಗಿಲ್ಲ. ಈ ಸೂಚನೆ ಮೇಲೆ, ನಾವು, ಇನ್ನು ಮುಂದೆ, ಚರ್ಚೆಯನ್ನು ಮುಂದುವರಿಸುವಂತಿಲ್ಲ.

**ಶ್ರೀ ರಾಜಗೋಪಾಲಚಾರಿ:** ಈ ರೀತಿಯಲ್ಲಿ ನಾವು ಹೆಚ್ಚು ಹೆಚ್ಚು ವಾದ ಮಾಡಿದಂತೆಲ್ಲ, ನುಣುಚಿಕೊಳ್ಳುವುದಕ್ಕೆ ಅನುಮತಿ ನೀಡುವಂತಿಲ್ಲ ಎಂಬುದು ನನ್ನ ಮನಸ್ಸಿಗೆ ಅಷ್ಟೇ ಹೆಚ್ಚು ಹೆಚ್ಚು ಸುಸ್ಪಷ್ಟವಾಗುತ್ತದೆ. ಯಾವ ಶಬ್ದಗಳಲ್ಲಿ ಹಾಗೂ ರೀತಿಯಲ್ಲಿ ಅಂಶಗಳನ್ನು ಗ್ರಹಿಸುತ್ತಿದ್ದೇವೋ ಅದರಿಂದ, ಇದು, ನುಣುಚಿಕೊಳ್ಳುವಿಕೆಯಲ್ಲದೇ ಮತ್ತೇನೂ ಅಲ್ಲವೆಂಬುದನ್ನು ತೋರುತ್ತದೆ. ಡಾ. ಅಂಬೇಡ್ಕರ್ ರವರು ಹೇಳಿದ್ದನ್ನು ಮುಂದುವರಿಸಿ ಹೇಳುವುದಾದರೆ, 'ಮೆ' ಅವರ ಗ್ರಂಥದಲ್ಲಿ ದಂಡನೆಗಳು ಹೆಚ್ಚುವರಿ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಲೇಬೇಕಾಗುತ್ತದೆ. ಅದರಲ್ಲಿ ಹೀಗೆ ಹೇಳಲಾಗಿದೆ:

> "ಹೌಸ್ ಆಫ್ ಕಾಮನ್ಸ್‌ಗೆ ಸದಸ್ಯರು ನಿಂದನೆ ಮಾಡಿದ್ದರೆ, ಎರಡು ಇತರ ಶಿಕ್ಷೆಗಳು ಇವೆ.........."

ಉಚ್ಚಾಟನೆ ಒಂದೇ ದಂಡನೆ ಅಲ್ಲ

"ಸಾಮಾನ್ಯವಾಗಿ, ಸದನದ ಸೇವೆಯಿಂದ ಅಮಾನತ್ತು ಮತ್ತು ......................
ಉಚ್ಚಾಟನೆ"

ನಿಂದನೆ ತಪ್ಪಿತಸ್ಥರು ಯಾರೇ ಆಗಿರಲಿ, ಅವರ ಮೇಲೆ ಸಂಸತ್ತು ವಿಧಿಸಲು ಸಕ್ಷಮವಾಗಿರುವ ಯಾವುದೇ ಬಗೆಯ ಶಿಕ್ಷೆಯೇ ಅಲ್ಲದೆ, ಸದಸ್ಯರ ಮೇಲೆ ಉಚ್ಚಾಟನೆಯನ್ನು ಹೆಚ್ಚುವರಿ ದಂಡನೆಯನ್ನಾಗಿ ವಿಧಿಸಲು ಅವಕಾಶ ಇದೆ. ಈಗ ಉಚ್ಚಾಟನೆಯು, ಕೆಲವರು ಸದಸ್ಯರ ಅಭಿಪ್ರಾಯದಲ್ಲಿ, ಅಸಾಧ್ಯ. ಏಕೆಂದರೆ ಅವರು ಸದಸ್ಯರಾಗಿಲ್ಲ. ಈ ಸದನವು ಇತರ ಬಗೆಯ ಶಿಕ್ಷೆ ಬಗ್ಗೆ ಪರ್ಯಾಲೋಚಿಸಬೇಕಾಗುತ್ತದೆ. ಪ್ರಕೃತ ಯಾರ ಮೇಲೆ ಆರೋಪ ಮಾಡಲಾಗಿದೆಯೋ ಆ ವ್ಯಕ್ತಿಯ ಕಾರ್ಯದಿಂದ ತಪ್ಪನ್ನು ಮತ್ತು ವ್ಯವಹರಣೆಗಳನ್ನು ಅಂತ್ಯಗೊಳಿಸುವಂತಿಲ್ಲ.

*ಮಾನ್ಯ ಉಪಸಭಾಪತಿಗಳು : ಕಾನೂನು ಸಚಿವರ ಮಾತುಗಳನ್ನು ಆಲಿಸೋಣ.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ಮಾನ್ಯ ಸ್ನೇಹಿತರಾದ ನಾಸಿರುದ್ದಿನ್ ಅಹ್ಮದ್‌ರವರು ಮಾಡಿರುವ ತಿದ್ದುಪಡಿಗೂ ಶ್ರೀ ಮುದ್ಗಲ್‌ರವರ ರಾಜೀನಾಮೆಗೂ ನಿಜವಾಗಿಯೂ ಏನೇನು ಸಂಬಂಧ ಇಲ್ಲ. ರಾಜೀನಾಮೆಗೂ ಮುಂಚೆಯೇ ಇವರು ತಿದ್ದುಪಡಿಯನ್ನು ಸಲ್ಲಿಸಿದ್ದಾರೆ.

**ಶ್ರೀ ನಾಸಿರುದ್ದಿನ್ ಅಹಮದ್:** ಅದನ್ನು ಮಂಡಿಸಬಾರದಿತ್ತು. ಅದನ್ನು ಮುಂದುವರಿಸದಿರಲು ಈಗಾಗಲೇ ತೀರ್ಮಾನಿಸಿದ್ದೇನೆ. ಹಾಗೆಂದು, ಖಾಸಗಿಯಾಗಿ, ಸರ್ಕಾರಿ ಸಚೇತಕರಿಗೆ ಸೂಚಿಸಿದ್ದೇನೆ. ಆದರೆ, ಈ ಹೊಸ ವಿದ್ಯಮಾನದ ಕಾರಣದಿಂದಾಗಿ ಮಾತ್ರವೇ ಅದನ್ನು ಮಂಡಿಸಿದ್ದೆ. ನಾನು ತಿದ್ದುಪಡಿಯನ್ನು, ಈ ಸದನಕ್ಕೆ ಯಾವ ಅಧಿಕಾರ ವ್ಯಾಪ್ತಿಯೂ ಇಲ್ಲವೆಂಬ ತಪ್ಪು ಗ್ರಹಿಕೆಯಿಂದ ಮಂಡಿಸಿದ್ದೆ. ಆದರೆ, ಈ ಸದನಕ್ಕೆ ಸಂಪೂರ್ಣ ಅಧಿಕಾರ ಇದೆಯೆಂಬುದು ತರುವಾಯ ನನಗೆ ಕಂಡು ಬಂತು. ಹೀಗಾಗಿ, ಅದನ್ನು ಮುಂದುವರಿಸದಿರಲು ನಿರ್ಧರಿಸಿದ್ದೆ. ತಿದ್ದುಪಡಿಯನ್ನು ಮಂಡಿಸಿದಾಗ ಅಂಥ ಯಾವ ಉದ್ದೇಶವೂ ಇರಲಿಲ್ಲವಾದರೂ, ಅನಂತರದ ವಿದ್ಯಮಾನದ ದೃಷ್ಟಿಯಿಂದ ಇದು ಸುಸಂಗತವಾದುದೇನೋ ಎಂದು ಭಾವಿಸಿದ್ದೆ.

**ಡಾ. ಅಂಬೇಡ್ಕರ್ :** ಮಾನ್ಯ ಸ್ನೇಹಿತರ ಪ್ರೇರಣೆಗಳು ಮತ್ತು ಉದ್ದೇಶಗಳು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ನಾಸಿರುದ್ದಿನ್ ಅಹ್ಮದ್ :** ಹಾಗಲ್ಲ, ಕೆಲವೊಮ್ಮೆ ಕಷ್ಟ ಆಗುತ್ತೆ.

**ಡಾ. ಅಂಬೇಡ್ಕರ್:** ಆದರೆ, ಶ್ರೀ ಮುದ್ಗಲ್‌ರವರು ರಾಜೀನಾಮೆ ಕೊಡುವುದಕ್ಕೂ ಬಹಳ ಹಿಂದೆಯೇ ತಿದ್ದುಪಡಿ ಸೂಚನೆಯನ್ನು ಕೊಡಲಾಗಿತ್ತೆಂಬ ಸಂಗತಿಯು ಇದ್ದೇ ಇರುತ್ತದೆ ಮತ್ತು ಸನ್ಮಾನ್ಯ ಪ್ರಧಾನ ಮಂತ್ರಿಯವರು ಮಂಡಿಸಿದ ಮೂಲ ಸೂಚನೆಯಲ್ಲಿ ಪ್ರಸ್ತಾಪಿಸಿದ್ದ ಶಿಕ್ಷೆಯ ಪ್ರಮಾಣವನ್ನು ತಗ್ಗಿಸುವುದೇ, ನಿಸ್ಸಂಶಯವಾಗಿ, ಆ ತಿದ್ದುಪಡಿಯ ಉದ್ದೇಶ ಆಗಿತ್ತು. ಶ್ರೀ ಮುದ್ಗಲ್‌ರವರು ರಾಜೀನಾಮೆ ಇತ್ತಿರುವುದರಿಂದ, ಸನ್ಮಾನ್ಯ ಪ್ರಧಾನ ಮಂತ್ರಿಯವರು ಮಂಡಿಸಿರುವ ಸೂಚನೆಯನ್ನು ಅದರ ಮೂಲ ರೂಪದಲ್ಲೇ ಕಾರ್ಯಗತಗೊಳಿಸಬಹುದೇ ಅಥವಾ ಯಾವುದೇ ತರುವಾಯದ ತಿದ್ದುಪಡಿಯ ಆವಶ್ಯಕತೆ ಇದೆಯೇ ಎಂಬ ಪ್ರಶ್ನೆ ಈಗ ಉದ್ಭವವಾಗಿದೆ. ಇಡೀ ಪ್ರಶ್ನೆಯು, ಇನ್ನೊಂದು ವಿಷಯಕ್ಕೆ ಎಂದರೆ ಶ್ರೀ ಮುದ್ಗಲ್‌ರವರ ರಾಜೀನಾಮೆಯು ಕ್ರಮಬದ್ಧವಾದುದಾಗಿದೆಯೇ, ರಾಜೀನಾಮೆಯೆಂದು ಅದನ್ನು ಅಂಗೀಕರಿಸಬಹುದೇ ಮತ್ತು ಅದು ಕೂಡಲೇ ಜಾರಿಗೆ ಬರುವುದೇ ಎನ್ನುವುದಕ್ಕೆ ಅಂಟಿಕೊಂಡಿದೆ. ನನ್ನ ನಿವೇದನೆ ಏನೆಂದರೆ,

---

* ಸಂ. ಚ. ಸಂಪುಟ ೧೪ ಭಾಗ II ೨೫, ಸೆಪ್ಟೆಂಬರ್, ೧೯೫೧ ಪುಟಗಳು ೩೨೭೧–೭೫

ಸರ್, ರಾಜೀನಾಮೆ ಕೊಡುವ ಕಾರ್ಯವು, ರಾಜೀನಾಮೆಗೆ ಕಾರಣಗಳನ್ನು ಹೇಳದಯೇ ಅಥವಾ ತಾನೇಕೇ ರಾಜೀನಾಮೆ ಕೊಡುತ್ತಿದ್ದೇನೆಂದು, ಸದನದ ಮೇಲೆ ಯಾವುದೇ ನಿಂದನೆ ಮಾಡದೆಯೇ ಸರಳವಾಗಿರಬೇಕು. ಈ ಪ್ರಶ್ನೆ ಹಿಂದೆ ಉದ್ಭವವಾಗಿದ್ದಾಗ, ತಾವು, ಶ್ರೀ ಮುದ್ಗಲ್‌ರವರು ಬಳಸಿದ್ದ ಕೆಲವು ಪದಗಳನ್ನು ಮತ್ತು ವಾಕ್ಯಭಾಗಗಳನ್ನು ತೆಗೆದು ಹಾಕುವುದಕ್ಕೆ ಮತ್ತು ಹಾಗೆ ತೆಗೆದು ಹಾಕಿದಾಗ ರಾಜೀನಾಮೆಯು ಕ್ರಮಬದ್ಧವಾದುದಾಗುವುದಕ್ಕೆ ಒಳಪಟ್ಟು, ಆ ರಾಜೀನಾಮೆಯನ್ನು ಅಂಗೀಕರಿಸುವುದು ನನಗೆ ಸೇರಿದ್ದೆಂದು ಹೇಳಿದ್ದಿರಿ. ಸರ್, ನನ್ನ ನಿವೇದನೆ ಏನೆಂದರೆ, ಚರ್ಚೆಯ ಯಾವುದೇ ಭಾಗವು, ಮಾನಹಾನಿಕಾರಕವಾದುದೆಂದು, ಅಸಭ್ಯವಾದುದೆಂದು ಅಥವಾ ಅಸಂಸದೀಯವೆಂದು ಅಥವಾ ಅಗೌರವದ್ದೆಂದು ಸಭಾಧ್ಯಕ್ಷರಾಗಲಿ ಅಥವಾ ಉಪಸಭಾಪತಿಗಳಾಗಲಿ ಅಥವಾ ಪೀಠಾಸೀನರಾಗಿರುವ ಯಾರೇ ಆಗಲಿ ಭಾವಿಸಿದರೆ ಆ ಯಾವುದೇ ಭಾಗವನ್ನು ತೆಗದುಹಾಕುವುದು ಅವರಿಗೆ ಸೇರಿದ್ದು. ಆದರೆ, ನನ್ನ ವಾದ ಏನೆಂದರೆ, ದಾಖಲೆಯ ಯಾವುದೇ ಭಾಗವನ್ನು ತೆಗೆದುಹಾಕಲು ಸಭಾಧ್ಯಕ್ಷರಿಗೆ ಇರುವ ಅಧಿಕಾರವು, ಚರ್ಚೆಯಾಗುತ್ತಿರುವಾಗ ಹೇಳಿದ್ದಕ್ಕೆ ಮಾತ್ರವೇ ಸಂಬಂಧಪಟ್ಟಿದೆಯೆಂದು ಹೇಳಬಯಸುತ್ತೇನೆ. ಕಾರ್ಯವಿಧಾನದ ನಿಯಮಗಳ ೧೭೬ನೇ ನಿಯಮವನ್ನು ಓದಿ ಹೇಳುತ್ತೇನೆ. ೧೭೬ನೇ ನಿಯಮವು ವ್ಯವಹರಣೆಗಳ ವರದಿ ಬಗ್ಗೆ ಹೇಳುತ್ತದೆ. ೧೭೬ಎ ನಿಯಮವು ವಿಷಯವನ್ನು ತೆಗೆದು ಹಾಕುವುದರ ಬಗ್ಗೆ ಹೇಳುತ್ತದೆ. ಅದು, ಹೀಗಿದೆ:

> "ಚರ್ಚೆಯಾಗುತ್ತಿರುವಾಗ ಮಾನಹಾನಿಕಾರಕವಾದ ಅಥವಾ ಅಸಭ್ಯವಾದ ಅಥವಾ ಅಸಂಸದೀಯವಾದ ಅಥವಾ ಅಗೌರವದ ಪದವನ್ನು ಅಥವಾ ಪದಗಳನ್ನು ಬಳಸಲಾಗಿದೆಯೆಂದು ಸ್ಪೀಕರ್‌ರವರು ಅಭಿಪ್ರಾಯಪಟ್ಟರೆ, ಅವರು ತಮ್ಮ ವಿವೇಚನಾನುಸಾರ, ಅಂಥ ಪದವನ್ನು ಅಥವಾ ಪದಗಳನ್ನು ಸದನದ ವ್ಯವಹರಣೆಗಳಿಂದ ತೆಗೆದು ಹಾಕಬೇಕೆಂದು ಆದೇಶ ಮಾಡಬಹುದು."

ಈ ನಿಯಮವು, ಸದನದಲ್ಲಿ ಚರ್ಚೆಯಾಗುತ್ತಿರುವಾಗ ಹೇಳಿದ್ದಕ್ಕೆ ಸಂಬಂಧಪಡುತ್ತದೆಂಬುದನ್ನು ತಾವು ನೋಡಬಹುದು. ಶ್ರೀ ಮುದ್ಗಲ್‌ರವರು ಸಲ್ಲಿಸಿರುವ ರಾಜೀನಾಮೆಯನ್ನು, ಆ ಪದದ ಅರ್ಥವ್ಯಾಪ್ತಿಯನ್ನು ಎಷ್ಟೇ ಎಳೆದಾಡಿದರೂ ಚರ್ಚೆಯಾಗುತ್ತಿರುವಾಗ ಸಲ್ಲಿಸಿದ್ದೆಂದು ಪರಿಗಣಿಸುವಂತಿಲ್ಲವೆಂದು ಎಲ್ಲ ರೀತಿಯಲ್ಲೂ ಗೌರವಪೂರ್ವಕವಾಗಿ ಹೇಳಬಯಸುತ್ತೇನೆ. ಹೀಗಾಗಿ, ಅದು ಸದನದ ವ್ಯವಹರಣೆಗಳ ವ್ಯಾಪ್ತಿಯ ಹೊರಗಿದೆ. ಆದ್ದರಿಂದ, ೧೭೬ಎ ಅನುಚ್ಛೇದದಲ್ಲಿ ಹೇಳಿರುವ ಕಾರಣಗಳ ಮೇಲೆ ಆ ಪದಗಳು ತೆಗೆದುಹಾಕುವುದಕ್ಕೆ ಗುರಿಯಾಗುವುದಿಲ್ಲವೆಂಬ ಮಟ್ಟಿಗೆ ಈ ಸದನ ಮತ್ತು ಹಾಗೆಯೇ ಸರ್ಕಾರ ಎರಡೂ ಅಭಿಪ್ರಾಯಪಟ್ಟಿರುವುದರಿಂದ (ಅಭಿಪ್ರಾಯಪಟ್ಟಿವೆಯೆಂದು ಭಾವಿಸಿದ್ದೇನೆ) ಆ ಪದಗಳನ್ನು ತೆಗೆದುಹಾಕಲು ಸಭಾಧ್ಯಕ್ಷರಿಗೆ ಯಾವ ಅಧಿಕಾರವೂ ಇಲ್ಲ. ಪ್ರಯುಕ್ತ, ೧೭೬ಎ ಅನುಚ್ಛೇದವು ಅದಲ್ಲಿರುವ ನಿಬಂಧನೆಗಳು ಶ್ರೀ ಮುದ್ಗಲ್ ಅವರ ರಾಜೀನಾಮೆಯ ಅರ್ಜಿಗೆ ಅನ್ವಯ ಮಾಡುವುದಕ್ಕೆ ಪೀಠಕ್ಕೆ ಅನುಮತಿ ಕೊಡುವುದಿಲ್ಲ. ಆದ್ದರಿಂದ, ಆ ಅರ್ಜಿಯನ್ನು, ಆಪಾದನೆಗಳನ್ನು ಅದರಿಂದ ಯಾವುದೇ ಬಗೆಯಲ್ಲಿ ತೆಗೆದುಹಾಕದಿರುವ ಅರ್ಜಿಯೆಂದು ಪರಿಗಣಿಸಲೇಬೇಕಾಗುತ್ತದೆ, ಹೀಗಾಗಿ ಆ ಅರ್ಜಿಯನ್ನು, ರಾಜೀನಾಮೆಗಾಗಿ ಸಲ್ಲಿಸಿದ ಅರ್ಜಿಯೆಂದು ಪರಿಗಣಿಸಬಾರದೆಂದು ವಿನಂತಿ ಮಾಡುತ್ತೇನೆ. (ಅಡ್ಡಿ, ಅಡಚಣೆ).

**ಪಂಡಿತ್ ಕುಂಜ್ರು (ಉತ್ತರ ಪ್ರದೇಶ):** ಕ್ರಿಯಾಲೋಪ, ಸರ್

**ಡಾ. ಅಂಬೇಡ್ಕರ್:** ಮಾತುಗಳನ್ನು ನಾನಿನ್ನೂ ಮುಗಿಸಿಲ್ಲ

**ಮಾನ್ಯ ಉಪಸಭಾಪತಿಗಳು:** ಅವರು, ಕ್ರಿಯಾಲೋಪ ಎತ್ತುತ್ತಿದ್ದಾರೆ. ಮೊದಲು ಅವರ ಮಾತುಗಳನ್ನು ಕೇಳೋಣ.

**ಪಂಡಿತ್ ಕುಂಜ್ರು:** ರಾಜೀನಾಮೆಯು ಜಾರಿಗೆ ಬಂದಿದೆಯೆಂಬುದು ತಮ್ಮ ಅಭಿಪ್ರಾಯವೆಂದು, ಸರ್, ನಿನ್ನೆ ತಾವು ತೀರ್ಪು ನೀಡಿದ್ದೀರಿ. ಆ ಅಂಶದ ಬಗ್ಗೆ ಈಗ ಚರ್ಚಿಸಲು ಅವಕಾಶ ಉಂಟೇ?

**ಡಾ. ಅಂಬೇಡ್ಕರ್ :** ಅದು, ನನಗೆ ಗೊತ್ತಿಲ್ಲ.

**ಪಂಡಿತ್ ಕುಂಜ್ರು:** ಮಾನ್ಯ ಉಪಸಭಾಪತಿಗಳು ಹಾಗೆ ಹೇಳಿದ್ದರು.

**ಡಾ. ಅಂಬೇಡ್ಕರ್:** ಅದೇನೂ ಅಂತಿಮ ಅಲ್ಲ, ನನಗೆ ತಿಳಿದಿರುವಷ್ಟರ ಮಟ್ಟಿಗೆ

**ಪಂಡಿತ್ ಮೈತ್ರಾ (ಪಶ್ಚಿಮ ಬಂಗಾಳ):** ಸೂಚನೆಯಲ್ಲಿನ ಪರಿಣಾಮಕಾರಕ ಭಾಗವನ್ನು ಅಮಾನತ್ತಿನಲ್ಲಿಡಬೇಕೆಂದು, ಸರ್, ತಾವು ನಿನ್ನೆ ಹೇಳಿದ್ದಿರಿ. ಅದು ತಮ್ಮ ತೀರ್ಪು, ಅದನ್ನೇ ತಾವು ಹೇಳಿದ್ದಿರಿ. ಶ್ರೀ ಮುದ್ಗಲ್‌ರವರು ರಾಜೀನಾಮೆಯನ್ನು ಸಲ್ಲಿಸಿದ ಕೂಡಲೇ ತಮಗೆ ತಲುಪಿಸಿದ ಕೂಡಲೇ ಸದನದಲ್ಲಿನ ಅವರ ಸ್ಥಾನವನ್ನು ಅವರು ತೆರವು ಮಾಡಿದಂತಾಗುತ್ತದೆಯೇ ಇಲ್ಲವೆ ಎಂಬ ಪ್ರಶ್ನೆಯನ್ನು ಎತ್ತಿದ್ದೆ. ಎತ್ತಿದ್ದ ಪ್ರಶ್ನೆ ಅದೇ. ಪಂಡಿತ್ ಕುಂಜ್ರು ಅವರ ಮಾತುಗಳಿಂದ ನಾನು ಗ್ರಹಿಸಿದ್ದರ ಮಟ್ಟಿಗೆ ಹೇಳುವುದಾದರೆ, ರಾಜೀನಾಮೆಯು ಜಾರಿಗೆ ಬಂದಿದೆಯೆಂದು ಈ ಹಿಂದೆ ಕೂಡ ತಾವು ಅಭಿಪ್ರಾಯ ಪಟ್ಟಿದ್ದಿರಿ.

**ಡಾ. ಅಂಬೇಡ್ಕರ್:** "ಪರಿಶೀಲಿಸುವುದಕ್ಕೆ ಒಳಪಟ್ಟು" ಎಂದು ಅವರು ಹೇಳಿದ್ದರು.

**ಪಂಡಿತ್ ಕುಂಜ್ರು:** ಅದನ್ನು, ದಾಖಲೆಯು ತೋರಿಸುತ್ತದೆಂದು ನನ್ನ ಅನಿಸಿಕೆ.

**ಗೃಹ ಸಚಿವರು (ಶ್ರೀ ರಾಜಗೋಪಾಲಾಚಾರಿ):** ಅದನ್ನು ಪರಿಶೀಲಿಸಲು ಸಮಯ ಬೇಕಾಗುತ್ತದೆಂದು ತಾವು ಖಚಿತವಾಗಿ ಹೇಳಿದ್ದಿರಿಂದು ನನ್ನ ಅನಿಸಿಕೆ. ಅದನ್ನು ದಾಖಲೆಯೂ ತೋರಿಸುತ್ತದೆ.

**ಪಂಡಿತ್ ಕುಂಜ್ರು:** ಅಂತೂ, ಪ್ರಧಾನ ಮಂತ್ರಿಯವರು ಮಂಡಿಸಿರುವ ಸೂಚನೆಯನ್ನು ಈ ಸದನವು ಯಾವುದೇ ತಿದ್ದುಪಡಿ ಇಲ್ಲದಯೇ ಕೈಗೆತ್ತಿಗೊಳ್ಳಬಹುದೇ ಅಥವಾ ಯಾವುದಾದರೂ ತಿದ್ದುಪಡಿಯನ್ನು ಮಂಡಿಸಬೇಕೇ ಮತ್ತು ಮುಂದಿನ ಯಾವ ಕ್ರಮವನ್ನು ಕೈಗೊಳ್ಳಬಹುದು ಎಂಬ ಅಂಶವನ್ನು ನಾವು ಪರಿಶೀಲಿಸಬೇಕಾಗಿತ್ತು, ಆದರೆ, ರಾಜೀನಾಮೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ತಾವು ೧೦೧ನೇ ಅನುಚ್ಛೇದವನ್ನು ಅವಲಂಬಿಸಿದಿರಿ ಮತ್ತು ರಾಜೀನಾಮೆಯು ಅಂತಿಮ ಹಾಗೂ ಜಾರಿಗೆ ಬಂದಿದೆಯೆನ್ನುವುದರಲ್ಲಿ ಯಾವ ಅನುಮಾನವು ಇಲ್ಲವೆಂದು ತಾವು ಹೇಳಿದಿರಿ.

**ಒಬ್ಬರು ಮಾನ್ಯ ಸದಸ್ಯರು:** ಇಲ್ಲ, ಹಾಗೆ ಹೇಳಿಲ್ಲ ಸರ್

**ಮಾನ್ಯ ಉಪಸಭಾಪತಿಗಳು:** ದಾಖಲೆಯಲ್ಲಿರುವುದನ್ನು ಓದಿ ಹೇಳುತ್ತೇನೆ. ಅದು ಹೀಗಿದೆ.

**"ಮಾನ್ಯ ಉಪಸಭಾಪತಿಗಳು:** ಸಾಕಷ್ಟು ಆಲಿಸಿದ್ದೇನೆ. ಅದು ಜಾರಿಗೆ ಬರುವುದರ ಭಾಗಕ್ಕೆ ಸಂಬಂಧಿಸಿದಂತೆ ಯಾವ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ ಎನ್ನುವುದು ಆತುರ ಪಡದೆ ಪರಿಶೀಲಿಸಬೇಕಾದ ವಿಷಯವೆಂದು ನಾನು ಈಗಾಗಲೇ ಸದನಕ್ಕೆ ತಿಳಿಸಿದ್ದೇನೆ. ಆ ವಿಷಯವನ್ನು ಪರಿಶೀಲಿಸುತ್ತೇನೆ. ಮೇ ರವರ ಪಾರ್ಲಿಮೆಂಟರಿ ಪ್ರಾಕ್ಟೀಸ್ ಗ್ರಂಥದಲ್ಲಿರುವ ಆ ಭಾಗವನ್ನು ನಾನು ಈಗಾಗಲೇ ಉಲ್ಲೇಖಿಸಿದ್ದೇನೆ. ಸದಸ್ಯರನ್ನು ಉಚ್ಚಾಟಿಸುವುದು ಅಥವಾ ಅಮಾನತ್ತಿನಲ್ಲಿಡುವುದು ಒಂದು ಹೆಚ್ಚುವರಿ ವಿಧಾನ, ಏಕೆಂದರೆ ಅವರು ಸಂಸತ್ ಸದಸ್ಯರು. ಒಳಗಿನ ಅಥವಾ ಹೊರಗಿನ ಯಾರಾದರೂ ಸದನದ ನಿಂದನೆ ಮಾಡಬಹುದು. ಅವರು ಸದಸ್ಯರಾದ್ದರಿಂದ, ಬೇರೆ ವ್ಯಕ್ತಿಯ ಮೇಲಿರುವುದಕ್ಕಿಂತಲೂ, ಅವರ ಮೇಲೆ ನಮಗೆ ಹೆಚ್ಚು

ಅಧಿಕಾರ ವ್ಯಾಪ್ತಿ ಇರುತ್ತದೆ. ಇತರ ವ್ಯಕ್ತಿಯ, ಎಂದರೆ, ಹೊರಗಿನವರ ಬಗ್ಗೆ ಹೇಳುವುದಾದರೆ, ತತ್ವಶಃ ಅವರನ್ನು ನಾವು ಉಚ್ಚಾಟಿಸುವಂತಿಲ್ಲ ಅಥವಾ ಅಮಾನತ್ತಿನಲ್ಲಿಡುವಂತಿಲ್ಲ. ಏಕೆಂದರೆ ಅವರು ಸದಸ್ಯರಲ್ಲ. ಆದ್ದರಿಂದ ಸದಸ್ಯರೋ ಅಥವಾ ಹೊರಗಿನವರೋ ಸದನದ ನಿಂದನೆ ಮಾಡಬಹುದು. ಎಲ್ಲಾ ಒಂದೇ, ವ್ಯತ್ಯಾಸ ಏನಿಲ್ಲ. ವಿಧಾನದ ಬಗ್ಗೆ ಹೇಳುವುದದರೆ ಬದಲಾದ ಸನ್ನಿವೇಶಗಳಲ್ಲಿ ವಿಧಾನವೂ ಬದಲಾಗಬೇಕಾಗುತ್ತದೆ. ಆದರೆ, ಈಗಾಗಲೇ ಮಂಡನೆ ಆಗಿರುವ ಈ ಸೂಚನೆಯ ಹಿಡಿತದಿಂದ ಹೊರಬರಲು ಆಗುವುದಿಲ್ಲ. ಅದು ಮೂಲ ರೂಪದ್ದಿದ್ದಾಗ ಸರಿಯಾಗಿ ಕ್ರಮಬದ್ಧವಾಗಿತ್ತು. ಏಕಪಕ್ಷೀಯವಾಗಿ ರಾಜೀನಾಮೆಕೊಟ್ಟರೆ ಅಥವಾ ಸದನದಿಂದ ಹೊರಟು ಹೋದರೆ ಮುಂದಿನ ಎಲ್ಲ ವ್ಯವಹರಣೆಗಳನ್ನು ರದ್ದುಪಡಿಸುವಂತಿಲ್ಲ.

ಇತರ ವಿಷಯದ ಬಗ್ಗೆ ನಾನು ಆತುರಪಡದೆ ಪರಿಶೀಲಿಸುತ್ತೇನೆ. ಈಗ ಯಾರಾದರೂ ಮಾತನಾಡ ಬಯಸಿದರೆ, ನಾನು ಆಲಿಸುವುದಿಲ್ಲವೆಂಬ ಭಾವನೆ ಯಾರಿಗೂ ಬರಬಾರದು. ಸದನದಲ್ಲೇ ಅಂಥವರ ಮಾತುಗಳನ್ನು ಕೇಳಬೇಕೆಂದೇನೂ ಇಲ್ಲ. ಅವರು, ಅವರ ಅಭಿಪ್ರಾಯವನ್ನು ನನಗೇ ತಿಳಿಸಬಹುದು"

**ಪಂಡಿತ್ ಮೈತ್ರಾ:** ಯಾವುದರ ಮೇಲೆ? ಗುಣಾವಗುಣಗಳ ಮೇಲೆ ನಮಗೆ ಆಸಕ್ತಿ ಇಲ್ಲ.

**ಮಾನ್ಯ ಉಪಸಭಾಪತಿಗಳು:** ಎಲ್ಲ ವಿಷಯಗಳ ಮೇಲೆ, ರಾಜೀನಾಮೆಯು ಜಾರಿಗೆ ಬಂದಾಗ; ಸದಸ್ಯರು ರಾಜೀನಾಮೆ ಕೊಟ್ಟಿದ್ದಾರೆಂದ ಮಾತ್ರಕ್ಕೆ, ಅವರ ನಡತೆಯನ್ನು ಸದನದ ಗಮನಕ್ಕೆ ತಂದಾಗ, ಈ ಸದನಕ್ಕೆ ಅವರು ರಾಜೀನಾಮೆ ಕೊಟ್ಟಿದ್ದಾರೆಂಬ ಮಾತ್ರಕ್ಕೇ, ಅದರಲ್ಲೂ ಈ ಸದನದ ಸದಸ್ಯರಲ್ಲದ ವ್ಯಕ್ತಿಗಳು ಸದನದ ನಿಂದನೆ ಮಾಡಿದರೆ, ಅಂಥವರಿಗೆ ಸಂಬಂಧಪಟ್ಟಂತೆಯೂ ಈ ಸದನಕ್ಕೆ ಅಧಿಕಾರ ವ್ಯಾಪ್ತಿ ಇರುವಾಗ, ಈ ಸದನವು ತನ್ನ ಅಧಿಕಾರ ವ್ಯಾಪ್ತಿಯನ್ನು ಕಳೆದುಕೊಳ್ಳುತ್ತದೆಯೇನು. ಈ ಅಂಶವನ್ನು ಮಾನ್ಯ ಸದಸ್ಯರು ಗಮನಿಸಬೇಕು. ಒಬ್ಬ ವ್ಯಕ್ತಿಯು ಹೊರಗೆ ಈ ಸದನದ ನಿಂದನೆ ಮಾಡಿದರೆ, ರಾಜೀನಾಮೆ ಪ್ರಶ್ನೆ ಇರುವುದಿಲ್ಲ. ಆಗಲೂ, ಈ ಸದನವು ಸ್ವತಃ ದುರ್ಬಲವಾಗುವುದಿಲ್ಲ, ಆತನ ಮೇಲೆ ಕ್ರಮಕೈಗೊಳ್ಳುತ್ತದೆ. ಕೇವಲ ರಾಜೀನಾಮೆಯಿಂದ ಸ್ಥಿತಿ ಬದಲಾಗುವುದೇ ಎನ್ನುವುದು ನಾವು ಪರಿಶೀಲಿಸಬೇಕಾದ ವಿಚಾರ. ವಿಧಾನದ ಭಾಗಕ್ಕೆ ಸಂಬಂಧಿಸಿದಂತೆ ಎಂದರೆ, ಯಾವ ವಿಧಾನವನ್ನು ಅನ್ವಯ ಮಾಡಬೇಕಾಗುತ್ತದೆ ಎಂಬುದರ ಹೊರತು ಅದು ಸ್ಥಿತಿಯನ್ನೇ ಬದಲಾಯಿಸುತ್ತದೆಂದು ಸದ್ಯಕ್ಕೆ ನನಗನ್ನಿಸುವುದಿಲ್ಲ.

***ಖ್ವಾಜಾ ಇನಾಯತ್ ಉಲ್ಲಾ (ಬಿಹಾರ) :** ಶ್ರೀ ಮುದ್ಗಲ್‌ರವರು ಈಗ ಸದನದ ಸದಸ್ಯರೋ, ಅಲ್ಲವೋ?

**ಮಾನ್ಯ ಉಪಸಭಾಪತಿಗಳು:** ಅದನ್ನೇ ನಾವು ತೀರ್ಮಾನಿಸುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿ, ಅವರು, ಸದಸ್ಯರಾಗಿ ಉಳಿದಿಲ್ಲ. ಅವರು ಸದಸ್ಯರಾಗಿ ಮುಂದುವರಿದಿದ್ದಾರೆಂದು ಮತ್ತು ಪರಿಣಾಮಕಾರಕ ಭಾಗವು ಅನ್ವಯವಾಗುತ್ತದೆಂಬುದನ್ನು ತೋರಿಸುವ ಏನೇ ವಾದಗಳನ್ನು ಆಲಿಸಲು ನಾನು ಸಿದ್ಧನಿದ್ದೇನೆ.

ಮೊದಲಿನ ಭಾಗಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನಿಂದನೆ ವಿಷಯವು ಒಮ್ಮೆ ಈ ಸದನದ ವ್ಯಾಪ್ತಿಗೆ ಬಂದುಬಿಟ್ಟರೆ ಇತರ ವ್ಯಕ್ತಿಯ ಏಕಪಕ್ಷೀಯ ಕಾರ್ಯದ ಮಾತ್ರದಿಂದಲೇ, ಸದನವು ತನ್ನ ಅಧಿಕಾರ ವ್ಯಾಪ್ತಿಯನ್ನು ಕಳೆದುಕೊಳ್ಳುತ್ತದೆನ್ನುವುದಕ್ಕೆ ತದ್ವಿರುದ್ಧವಾದ ಯಾವುವೇ ಪೂರ್ವ ನಿದರ್ಶನಗಳಿರುವುದು ನನಗೆ ಕಾಣುತ್ತಿಲ್ಲ. ಪರಿಣಾಮಕ್ಕೆ ಬರುವ ಭಾಗಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅವರು ಈಗಾಗಲೇ

---

* ಸಂ.ಚ. ಸಂಪುಟ ೧೪, ಭಾಗ II ೨೫, ಸಪ್ಟೆಂಬರ್ ೧೯೫೧, ಪುಟಗಳು ೩೨೭೭–೭೯.

ರಾಜೀನಾಮೆ ನೀಡಿದ್ದರೆ ಉಚ್ಚಾಟನೆಯ ಪ್ರಶ್ನೆಯೇ ಇರುವುದಿಲ್ಲ. ಅವರು ರಾಜೀನಾಮೆ ನೀಡಿರದಿದ್ದರೆ ಉಚ್ಚಾಟನೆ ಪ್ರಶ್ನೆ ಏಳುತ್ತದೆ. ಆದ್ದರಿಂದ ಪರಿಣಾಮಕ್ಕೆ ಬರುವ ಭಾಗವನ್ನು ಈ ಸದನವು ಹೇಗೆ ಅಂಗೀಕರಿಸಬಹುದೆಂಬುದು ಇಲ್ಲಿನ ಸೀಮಿತ ಅಂಶ. ಕಾನೂನು ಸಚಿವರ, ಹಾಗೆಯೇ ಈ ವಿಷಯದ ಮೇಲೆ ಮಾತನಾಡ ಬಯಸುವ ಇತರ ಮಾನ್ಯ ಸದಸ್ಯರ ಮಾತುಗಳನ್ನು ಕೇಳಬಯಸುತ್ತೇನೆ.

**ಡಾ: ಅಂಬೇಡ್ಕರ್:** ಈ ವರೆಗೆ, ಸರ್, ಕೆಲವೊಂದು ಭಾಗಗಳನ್ನು ತೆಗೆದು ಹಾಕಿ, ರಾಜೀನಾಮೆಯನ್ನು ಸಿಂಧುವಾದುದನ್ನಾಗಿ ಮಾಡಲು ಅವಕಾಶ ಇಲ್ಲವೆಂದು, ೧೭೬ಎ ಅನುಚ್ಛೇದದ ಪ್ರಕಾರ, ತೆಗದುಹಾಕಲು ಇರುವ ಅಧಿಕಾರವು ವ್ಯವಹರಣೆಗಳಿಗೆ ಮತ್ತು ಚರ್ಚೆಗೆ ಮಾತ್ರವೇ ಸೀಮಿತವಾಗಿದೆಯೆಂದು ಹೇಳಿದ್ದೆ.

ನನ್ನ ಎರಡನೆ ವಾದವು ಒಟ್ಟಾರೆ ಬೇರೆಯದೇ ರೀತಿಯದು, ಅದೇನೆಂದರೆ, ರಾಜೀನಾಮೆಯ ಔಚಿತ್ಯತೆ ಕುರಿತಂತೆ ಪ್ರಶ್ನೆ ಉದ್ಭವವಾದಾಗ ಅದನ್ನು ತೀರ್ಮಾನಿಸುವ ಪ್ರಾಧಿಕಾರ ಯಾವುದು? ನನ್ನ ನಿವೇದನೆ ಏನೆಂದರೆ, ಯಾವುದೇ ಅಂಥ ಪ್ರಶ್ನೆ ಉದ್ಭವವಾದಾಗ, ಅದನ್ನು ತೀರ್ಮಾನಿಸುವ ಅಧಿಕಾರ ಸ್ವತಃ ಸದನದ್ದು. ಶ್ರೀಯುತ ಕಾಮತರು ಮಂಡಿಸಿದ ತಿದ್ದುಪಡಿ ಮೇಲೆ, ಇದೇ ಪ್ರಶ್ನೆಯ ಮೇಲೆ ರಾಜ್ಯಾಂಗ ರಚನಾ ಸಭೆಯಲ್ಲಿ ನಾನು ಮಾಡಿದ ಭಾಷಣಕ್ಕೆ ಉಲ್ಲೇಖ ಮಾಡಲು ಸರ್ ತಮ್ಮ ಅನುಮತಿ ಕೋರುತ್ತೇನೆ. ಸಂಸತ್ತಿಗೆ ರಾಜೀನಾಮೆಯನ್ನು ಸಲ್ಲಿಸಲಾಗುತ್ತದೆ, ಸರಿ, ಏಕೆಂದರೆ, ಸದನದಿಂದ ಎಂದರೆ ತಾನು ಯಾವುದಕ್ಕೆ ಆಯ್ಕೆಯಾಗಿರುವರೋ ಆ ಸಂಸತ್ತಿನಿಂದ ತನ್ನನ್ನು ಬೇರ್ಪಡಿಸಿಕೊಳ್ಳುವುದೇ ಉದ್ದೇಶ. ಸಭಾಧ್ಯಕ್ಷರು ಅಥವಾ ಉಪಸಭಾಪತಿಗಳು ಸದನದ ಸಂಪರ್ಕ ಮಾಧ್ಯಮ ಮಾತ್ರ. ಸಂಸತ್ತು ಎಂದು ಕರೆಯಲಾಗುವ ಜನರ ಸಾಮೂಹಿಕ ನಿಕಾಯಕ್ಕೆ ರಾಜೀನಾಮೆಯನ್ನು ಸಲ್ಲಿಸುವುದಾದರೂ, ತನ್ನ ರಾಜೀನಾಮೆಯನ್ನು ಸಲ್ಲಿಸ ಬಯಸುವ ಯಾರೇ ಸದಸ್ಯರು ಸದನದ ೨೯೨ ಅಥವಾ ೨೯೫ ಸದಸ್ಯರಿಗೆ ಕಳುಹಿಸುವುದು, ನಿಜಕ್ಕೂ ಸಾಧ್ಯವಿಲ್ಲವೆಂದು, ಅಲ್ಲಿ ಆ ಚರ್ಚೆ ಆಗುತ್ತಿರುವಾಗ ಹೇಳಿದ್ದೆ. ಆದ್ದರಿಂದ, ಸಂಸತ್ತಿನಿಂದ ತನ್ನನ್ನು ಬೇರ್ಪಡಿಸಿಕೊಳ್ಳಲು ತಾನು ಬಯಸಿರುವುದನ್ನು ತಿಳಿಸಲು ಇರುವ ಮಾಧ್ಯಮ ಯಾವುದೆಂದರೆ, ಆ ಮಟ್ಟಿಗೆ, ರಾಜೀನಾಮೆಯನ್ನು ಯಾರಿಗೆ ಸಲ್ಲಿಸಬೇಕಾಗುತ್ತದೆಂದರೆ ಅಧ್ಯಕ್ಷರವರಿಗೆ. ಆದರೆ, ರಾಜೀನಾಮೆಯು ಸಿಂಧುವಾದ ರೂಪದಲ್ಲಿಯೇ ಅಥವಾ ಇಲ್ಲವೆ ಎಂಬ ಪ್ರಶ್ನೆ ಉದ್ಭವವಾದರೆ, ಆ ವಿಷಯವನ್ನು ಸದನವೇ ಸ್ವತಃ ತೀರ್ಮಾನಿಸಬೇಕಾಗುತ್ತದೆಂಬುದು ನನ್ನ ನಿವೇದನೆ.

**ಪಂಡಿತ್ ಮೈತ್ರಾ:** ಹಾಗಂತ, ಸಂವಿಧಾನದಲ್ಲಿ ಎಲ್ಲಿ ಹೇಳಿದೆ? ಪ್ರತಿಯೊಂದನ್ನು ಸಂವಿಧಾನದಲ್ಲಿ ಹೇಳಿರಲೇಬೇಕಾಗುತ್ತದೆ. ಈ ದೇಶಕ್ಕಾಗಿ ತಾವು ಸಂವಿಧಾನವನ್ನು ಬರೆದಿದ್ದೀರೆಂಬುದನ್ನು ದಯವಿಟ್ಟು ಮರೆಯಬೇಡಿ.

**ಡಾ. ಅಂಬೇಡ್ಕರ್:** ಆದ್ದರಿಂದ, ನನ್ನ ನಿವೇದನೆ ಏನೆಂದರೆ, ರಾಜೀನಾಮೆಯ ಕೆಲವೊಂದು ಭಾಗವನ್ನು ತೆಗೆದುಹಾಕಲು ಆಗದಿದ್ದಾಗ ಮತ್ತು ಅವು ಆ ಪತ್ರದ ಭಾಗವಾಗಿರಲೇಬೇಕಾಗಿದ್ದಾಗ ಮತ್ತು ರಾಜೀನಾಮೆ ಪತ್ರವು ಅದರ ಮೂಲ ರೂಪದಲ್ಲಿ ಸಿಂಧುವಾದುದಾಗಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಯು ಉದ್ಭವವಾದಾಗ ಶ್ರೀ ಮುದ್ಗಲ್‌ರವರ ರಾಜೀನಾಮೆಯು ಸಿಂಧುವಾದುದೇ ಅಥವಾ ಇಲ್ಲವೇ ಎಂಬುದನ್ನು ತೀರ್ಮಾನಿಸಲು ಈ ಸದನವನ್ನು ಕೋರಲಾಗುತ್ತದೆ. ಶ್ರೀ ಮುದ್ಗಲ್‌ರವರ ರಾಜೀನಾಮೆಯು ಸಿಂಧುವಾದುದೇ ಮತ್ತು ಜಾರಿಗೆ ಬಂದಿದೆಯೇ, ಜಾರಿಗೆ ಬಂದಿದ್ದರೆ, ಪ್ರಧಾನ ಮಂತ್ರಿಯವರು ಮಂಡಿಸಿದ ಸೂಚನೆಯ ಕೊನೆಯ ಭಾಗವು ನಿರರ್ಥಕವಾಗುತ್ತದೆಯೇ ಎಂಬ ಅಂಶದ ಮೇಲೆ ನಾನು ಈ ಎರಡು ನಿವೇದನೆಗಳನ್ನು ಮಾಡಿಕೊಳ್ಳಬಯಸುತ್ತೇನೆ. ಇಡೀ ವಿಷಯದ ಸುಸಂಗತತೆ ಎಂದರೆ ಇದೇ. ಶ್ರೀ ಮುದ್ಗಲ್‌ರವರ

ರಾಜೀನಾಮೆಯು, ಸನ್ಮಾನ್ಯ ಪ್ರಧಾನ ಮಂತ್ರಿಯವರು ಮಂಡಿಸಿರುವ ಸೂಚನೆಯ ಕೊನೆಯ ಭಾಗವನ್ನು ನಿರರ್ಥಕವನ್ನಾಗಿ ಮಾಡಿರುವುದೇ ಎಂಬುದನ್ನು ಪರಿಶೀಲಿಸಬೇಕಾಗಿದೆ. ಏಕೆಂದರೆ, ಈ ಸದನವು ಯಾವುದಕ್ಕೆ ಯಾವುದೇ ಕಾನೂನು ಬದ್ಧ ಪರಿಣಾಮವನ್ನು ಉಂಟು ಮಾಡುವಂತಿಲ್ಲವೋ ಅದನ್ನು ಮಾಡಲು ಈ ಸದನ ಮುಂದುವರಿಯುವುದು ಸರಿಯಾಗಲಾರದು. ಈ ಸಂಗತಿಯಿಂದಾಗಿ ಶ್ರೀ ಮುದ್ಗಲ್‌ರವರ ರಾಜೀನಾಮೆಯು ಸಿಂಧುವಾದ ರಾಜೀನಾಮೆ ಅಲ್ಲವೆಂದು ನನ್ನ ವಾದ. ಶ್ರೀ ಮುದ್ಗಲ್‌ರವರು ಸದನದ ಸದಸ್ಯರಾಗಿ ಈಗಲೂ ಮುಂದುವರಿದಿದ್ದಾರೆ ಮತ್ತು ಶ್ರೀ ಮುದ್ಗಲ್‌ರವರಿಗೆ ಸಂಬಂಧಿಸಿದಂತೆ, ಸನ್ಮಾನ್ಯ ಪ್ರಧಾನ ಮಂತ್ರಿಯವರು ಮಂಡಿಸಿದ ಸೂಚನೆಯ ಕೊನೆಯ ಭಾಗವನ್ನು ಜಾರಿಗೆ ಬರುವಂಥದ್ದನ್ನಾಗಿ ಮಾಡಬಹುದಾಗಿದೆ.

**ಮಾನ್ಯ ಉಪಸಭಾಪತಿಗಳು:** ಒಬ್ಬರು ಮಾನ್ಯ ಸದಸ್ಯರು ರಾಜೀನಾಮೆ ನೀಡುತ್ತಾರೆಂದು – ಇದು ಶ್ರೀ ಮುದ್ಗಲ್‌ರ ಪ್ರಕರಣ ಅಲ್ಲ – ಮತ್ತು ಅದಾದ ಕೆಲವು ಕ್ಷಣಗಳಲ್ಲೇ, ಅದನ್ನು ಹಿಂತೆಗೆದುಕೊಳ್ಳ ಬಯಸಿದ್ದೇನೆಂದು ಪೀಠಕ್ಕೆ ಇನ್ನೊಂದು ಪತ್ರ ಬರೆಯುತ್ತಾರೆಂದು ಭಾವಿಸೋಣ. ಹಾಗೆ ಹಿಂತೆಗೆದುಕೊಳ್ಳುವುದಕ್ಕೆ ನಿಬಂಧನೆ ಇದೆಯೇ? ಇಲ್ಲಿ ಕುಳಿತುಕೊಳ್ಳಲು ಮತ್ತು ಮತ ನೀಡಲು ನಾನು ಅವಕಾಶ ಕೊಡಬಹುದೇ?

**ಡಾ. ಅಂಬೇಡ್ಕರ್:** ಇಲ್ಲ. ಮೊದಲ ವಿಷಯದ ಬಗ್ಗೆ ತೀರ್ಮಾನ ಆಗದ ಹೊರತು,

**ಪಂಡಿತ್ ಮೈತ್ರಾ:** ಈ ಪ್ರಕರಣದಲ್ಲಿ ತೀರ್ಮಾನ ಎಂದರೆ ಚೇರ್ಮನ್‌ರವರಿಗೆ ಅಥವಾ ಸ್ಪೀಕರ್‌ರವರಿಗೆ ರಾಜೀನಾಮೆ ಸಲ್ಲಿಸಿರುವುದರ ಬಗ್ಗೆ ತೀರ್ಮಾನ. ಸಂವಿಧಾನದಲ್ಲಿ ಬೇರೇನನ್ನೂ ಹೇಳಿಲ್ಲ.

**ಮಾನ್ಯ ಡೆಪ್ಯೂಟಿ ಸ್ಪೀಕರ್:** ರಾಜೀನಾಮೆ ಪತ್ರದ ಬಗ್ಗೆ ಸಂವಿಧಾನದಲ್ಲಿ ಗೊತ್ತುಪಡಿಸಿರುವ ಯಾವುದೇ ನಮೂನೆ ಇದೆಯೇ?

**ಡಾ. ಅಂಬೇಡ್ಕರ್:** ಇದೆಯೆಂದು ನನಗನಿಸುತ್ತಿಲ್ಲ.

◆

# ೪೦

# ಆಯ್ಕೆ ಸಮಿತಿ ಸಭೆಗಳು

*__ಕಾನೂನು ಸಚಿವರು (ಡಾ. ಅಂಬೇಡ್ಕರ್):__ ನೋಟರಿಗಳ ವಿಧೇಯಕವನ್ನು ಪರಿಶೀಲಿಸಲು ಈ ಸದನವು ನೇಮಕ ಮಾಡಿದ ಆಯ್ಕೆ ಸಮಿತಿಯು ನಿರಂತರವಾಗಿ ಎರಡು ದಿನಗಳು ಸಭೆ ಸೇರಲು ವಿಫಲವಾಗಿರುವುದನ್ನು ೬೫ನೇ ನಿಯಮದ (೩)ನೇ ಉಪ–ನಿಯಮದ ಮೇರೆಗೆ ವರದಿ ಮಾಡಲು ಅನುಮತಿ ಕೋರುತ್ತೇನೆ.

**ಮಾನ್ಯ ಉಪಸಭಾಪತಿಗಳು:** ಮಾನ್ಯ ಸಚಿವರು ಸಂಗತಿಯನ್ನು ಮಾತ್ರವೇ ತಿಳಿಸಿದ್ದಾರೆ. ತಾವು, ಅದನ್ನು ಯಾವುದೇ ಸಮರ್ಪಕ ಸೂಚನೆ ಮೂಲಕ ತರಬಹುದಲ್ಲವೇ.

**ಡಾ. ಅಂಬೇಡ್ಕರ್:** ಸದ್ಯಕ್ಕೆ, ೬೫ನೇ ನಿಯಮದ (೩) ನೇ ಉಪ–ನಿಯಮದಲ್ಲಿ ಅಗತ್ಯಪಡಿಸಿರುವಂತೆ ಪ್ರಸ್ತಾಪಿಸಿದ್ದೇನೆ. ಆಯ್ಕೆ ಸಮಿತಿಯನ್ನು ರದ್ದುಪಡಿಸುವುದು ಅಥವಾ ಮುಂದುವರಿಸುವುದು ಈ ಸದನಕ್ಕೆ ಸೇರಿದ್ದು.

**ಮಾನ್ಯ ಉಪಸಭಾಪತಿಗಳು:** ಆಯ್ಕೆ ಸಮಿತಿಯಲ್ಲಿರುವ ಯಾರಾದರೂ ಮಾನ್ಯ ಸದಸ್ಯರು ನಿಜವಾದ ವಸ್ತು–ಸ್ಥಿತಿ ಏನೆಂಬ ಬಗ್ಗೆ ಹೇಳುವಿರಾ?

**ಪಂಡಿತ್ ಠಾಕೂರ್ ದಾಸ್ ಭಾರ್ಗವ (ಪಂಜಾಬ್):** ಆಯ್ಕೆ ಸಮಿತಿಯ ಸದಸ್ಯರಲ್ಲಿ ನಾನೂ ಒಬ್ಬ..........................

**ಡಾ. ಅಂಬೇಡ್ಕರ್:** ಸಭೆ ಸೇರಲು ವಿಫಲರಾದುದಕ್ಕಾಗಿ ಆಯ್ಕೆ ಸಮಿತಿಯ ಸದಸ್ಯರ ಮೇಲೆ ನಾನು ಯಾವುದೇ ದೋಷಾರೋಪಣೆ ಮಾಡುತ್ತಿಲ್ಲವೆಂದು ಹೇಳಬಯಸುತ್ತೇನೆ. ಏಕೆಂದರೆ, ಏಕಕಾಲದಲ್ಲಿ ಸಹ ಸಭೆ ಸೇರುವಂತಹ ಅನೇಕ ಇತರ ಆಯ್ಕೆ ಸಮಿತಿಗಳಲ್ಲಿ ಅವರು ಕಾರ್ಯನಿರ್ವಹಿಸುತ್ತಾರೆಂಬುದು ನನಗೆ ಚನ್ನಾಗಿ ಗೊತ್ತಿದೆ. ಆದರೆ, ಈ ಸದನಕ್ಕೆ ವರದಿ ಮಾಡುವ ಜವಾಬ್ದಾರಿಯನ್ನು ನಿಯಮವು ಆಯ್ಕೆ ಸಮಿತಿಯ ಚೇರ್ಮನ್‌ರ ಮೇಲೆ ವಿಧಿಸಿರುವುದರಿಂದ ಸದನದ ಗಮನಕ್ಕೆ ಈ ವಿಷಯವನ್ನು ತರಲು ಔಪಚಾರಿಕ ಸೂಚನೆಯನ್ನು ಮಂಡಿಸುತ್ತಿದ್ದೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಈ ಆಯ್ಕೆ ಸಮಿತಿ ಬಗ್ಗೆ ಹೇಳುವುದಾದರೆ ಅದರ ಸಭೆಗಳು, ಸದಸ್ಯರು ಹಾಜರಾಗಲು ಸಾಧ್ಯವಾಗದಂಥ ಕಾಲದಲ್ಲಿ ನಡೆದಿದ್ದವು. ನಾವು ಹಲವಾರು ಆಯ್ಕೆ ಸಮಿತಿಗಳಲ್ಲಿ ಸದಸ್ಯರಾಗಿದ್ದೇವೆ. ಯಾವ ಸಮಿತಿಯ ಸಭೆಗೆ ಹಾಜರಾಗಬೇಕೆಂದು ನಿರ್ಧರಿಸಬೇಕಾಗುತ್ತದೆ. ನಿನ್ನೆ ಕೂಡ ಹಣಕಾಸು ನಿಗಮಗಳ ವಿಧೇಯಕಕ್ಕೆ ನಾನು ಕೆಲವೊಂದು ತಿದ್ದುಪಡಿಗಳನ್ನು ಮಂಡಿಸಬೇಕಾಗಿತ್ತು, ಆದರೆ, ಮತ್ತೊಂದು ಸಮಿತಿಯ ಸಭೆಯಲ್ಲಿದ್ದುದರಿಂದ ಸದನದಲ್ಲಿ ನಾನು ಹಾಜರಾಗಲು ಸಾಧ್ಯವಾಗಲಿಲ್ಲ. ಅದಕ್ಕಾಗಿ, ತಮ್ಮ ಅನುಮತಿಯನ್ನು ಪಡೆದುಕೊಂಡಿದ್ದೆ. ಯಾವ ತಿದ್ದುಪಡಿಗಳಿಗೆ ಮಂಡನೆಗೆ ಅವಕಾಶ ಕೊಡುವುದಿಲ್ಲವೆಂದು

---

* ಸಂ. ಚ. ಸಂಪುಟ ೧೪, ಭಾಗ II, ೨೮, ಸೆಪ್ಟೆಂಬರ್ ೧೯೫೧ ಪುಟಗಳು ೨೬೧೭–೧೮

ಭಾವಿಸಿದ್ದೆನೋ ಅವುಗಳನ್ನು ಮಂಡಿಸಲು ಅನುಮತಿ ಕೊಡುವುದಾಗಿ ತಾವು ನನಗೆ ತಿಳಿಸಿದ್ದಿರಿ. ಹೀಗಾಗುತ್ತದೆ, ಆಯ್ಕೆ ಸಮಿತಿಯ ಸದಸ್ಯರನ್ನು ದೂರಬಾರದು.

**ಡಾ. ಅಂಬೇಡ್ಕರ್:** ದೂರುತ್ತಿಲ್ಲ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಈ ಸನ್ನಿವೇಶಗಳಲ್ಲಿ ಈ ವಿಧೇಯಕವನ್ನು ಕೈಬಿಡಲು ಡಾ. ಅಂಬೇಡ್ಕರ್‌ರವರನ್ನು ಕೋರುತ್ತೇನೆ. ಈ ವಿಧೇಯಕ ಮುಖ್ಯವಾದುದೇನಲ್ಲ, . . . . . . ಅಗತ್ಯವೂ ಇಲ್ಲ.

**ಡಾ. ಅಂಬೇಡ್ಕರ್:** ನನ್ನ ಹೆಸರಿಗೆ ವಹಿಸಿರುವ ಪ್ರತಿಯೊಂದು ವಿಧೇಯಕವನ್ನು ಕೈಬಿಡಲು ಸಿದ್ಧನಿದ್ದೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಈ ವಿಧೇಯಕವನ್ನು ಕೈಬಿಡಬೇಕೆಂಬುದು ನನ್ನ ಸಲಹೆ.

****ಮಾನ್ಯ ಉಪಸಭಾಪತಿಗಳು:** ನೋಟರಿಗಳ ವಿಧೇಯಕದ ಬಗ್ಗೆ ಹೇಳುವುದಾದರೆ ಮಾನ್ಯ ಸದಸ್ಯರು, ತಮ್ಮ ನಿಯಂತ್ರಣಕ್ಕೂ ಮೀರಿದ ಕಾರಣಗಳಿಂದಾಗಿ ಹಾಜರಾಗಲು ಸಾಧ್ಯವಾಗಲಿಲ್ಲ. ಹಲವಾರು ಇತರ ಆಯ್ಕೆ ಸಮಿತಿಗಳಿಗೆ ಹಾಜರಾಗಬೇಕಿತ್ತು, ಹೀಗಾಗಿ ಈ ಸಮಿತಿಯ ಸಭೆಗಳು ಕೋರಂ ಅಭಾವದ ಪ್ರಯುಕ್ತ ನಡೆದಿಲ್ಲ. ಈ ನಿಟ್ಟಿನಲ್ಲಿ ಸನ್ಮಾನ್ಯ ಕಾನೂನು ಸಚಿವರು ಇನ್ನೊಂದು ಪ್ರಯತ್ನ ಮಾಡಬೇಕೆಂದು ಕೋರುತ್ತೇನೆ.

**ಡಾ. ಅಂಬೇಡ್ಕರ್:** ನಾನು ಸದನದ ಆಜ್ಞಾಪಾಲಕ.

**ಡಾ. ತೇಕ್‌ಚಂದ್ (ಪಂಜಾಬ್):** ಈ ಆಯ್ಕೆ ಸಮಿತಿಯ ವರದಿಯನ್ನು ಸಲ್ಲಿಸುವ ಕಾಲಾವಧಿಯನ್ನು ೬ನೇ ದಿನಾಂಕದ ವರೆಗೆ ವಿಸ್ತರಿಸಬಹುದೆಂಬುದು ನನ್ನ ಸಲಹೆ ಕಾಲಾವಧಿ ಈ ದಿನ ಮುಗಿದಿದೆ.

**ಮಾನ್ಯ ಉಪಸಭಾಪತಿಗಳು:** ಈ ಮೌಖಿಕ ಸೂಚನೆಯನ್ನು ಗಮನಕ್ಕೆ ತೆಗೆದುಕೊಂಡಿದ್ದೇನೆ. ಕಾಲಾವಧಿಯನ್ನು ವಿಸ್ತರಿಸುವುದು ಈ ಸದನದ ಇಚ್ಛೆಗೆ ಸೇರಿದ್ದೇ?

**ಡಾ. ತೇಕ್‌ಚಂದ್:** ನಾವು ೪ ರಂದು ಅಥವಾ ೫ ರಂದು ಸಭೆ ಸೇರುತ್ತಿದ್ದೇವೆ. ಆ ಹೊತ್ತಿಗೆ ಇತರ ಆಯ್ಕೆ ಸಮಿತಿಗಳು ತಮ್ಮ ಕೆಲಸವನ್ನು ಮುಗಿಸಿರುತ್ತವೆ. ಆದ್ದರಿಂದ, ಕಾಲಾವಧಿಯ ವಿಸ್ತರಣೆಗಾಗಿ ಸಲಹೆ ಮಾಡುತ್ತಿದ್ದೇನೆ.

**ಮಾನ್ಯ ಉಪಸಭಾಪತಿಗಳು:** ಕಾಲಾವಧಿ ಬಗೆಗಿನ ಪ್ರಸ್ತಾಪವನ್ನು ಮಾನ್ಯ ಕಾನೂನು ಸಚಿವರು ಒಪ್ಪುತ್ತೀರಾ?

**ಡಾ. ಅಂಬೇಡ್ಕರ್:** ನನ್ನದೇನೂ ಆಕ್ಷೇಪಣೆ ಇಲ್ಲ.

**ಮಾನ್ಯ ಉಪಸಭಾಪತಿಗಳು:** ಈ ವಿಧೇಯಕದ ಮಂಡನಕಾರರಾದ ಮಾನ್ಯ ಸಚಿವರು ಸೂಚನೆಯನ್ನು ಮಂಡಿಸುತ್ತಾರೆಂದು ಭಾವಿಸಿದ್ದೇನೆ.

**ಡಾ. ಅಂಬೇಡ್ಕರ್:** ಈ ಹಂತದಲ್ಲಿ ಇದು ಕಷ್ಟದ ವಿಷಯ. ಸದನವು ಆಯ್ಕೆ ಸಮಿತಿಯನ್ನು ರಚಿಸಿರುವಾಗ, ಈ ಕೆಲಸವನ್ನು ನೆರವೇರಿಸಲು ಸರ್ಕಾರವು ಖಂಡಿತವಾಗಿಯೂ ಆವಶ್ಯಕ ಕ್ರಮಕೈಗೊಳ್ಳುತ್ತದೆ.

**ಮಾನ್ಯ ಉಪಸಭಾಪತಿಗಳು:** ಈ ಸದನದ ಈ ವಿಚಿತ್ರ ಸನ್ನಿವೇಶಗಳನ್ನು ಪರಿಶೀಲಿಸಿದರೆ, ಈ ಆಯ್ಕೆ ಸಮಿತಿಯನ್ನು ಈ ಸದನವು ರದ್ದುಮಾಡುವುದರ ಪರ ಇಲ್ಲವೆಂದು ಕಾಣುತ್ತದೆ, ಒಬ್ಬರು ಮಾನ್ಯ ಸದಸ್ಯರಿಂದ ಕಾಲಾವಧಿ ವಿಸ್ತರಣೆಗಾಗಿ ಮೌಖಿಕ ಸೂಚನೆ ಬಂದಿದೆ. ಈ ಸೂಚನೆಯನ್ನು ಸನ್ಮಾನ್ಯ ಸಚಿವರೇ ಸ್ವತಃ ಮಂಡಿಸಬೇಕೆಂಬುದು ನನ್ನ ಅಪೇಕ್ಷೆ.

---

* ಸಂ.ಚ. ಸಂಪುಟ ೧೪, ಭಾಗ II, ೨೮ ಸೆಪ್ಟೆಂಬರ್ ೧೯೫೧ ಪುಟಗಳು ೩೬೯೯–೨೧.

**ಡಾ. ಅಂಬೇಡ್ಕರ್:** ನಾನು ಹಾಗೆ ಮಾಡಬಹುದೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಯಾವುದೇ ಸೂಚನೆಯನ್ನು ಮಂಡಿಸುವುದು ನನಗೆ ಸೇರಿದ್ದಲ್ಲ.

**ಮಾನ್ಯ ಉಪಸಭಾಪತಿಗಳು:** ತಾವೇ ಈ ವಿಧೇಯಕದ ಮಂಡನಕಾರರು. ಆದ್ದರಿಂದ ಸೂಚನೆಯನ್ನು ತಾವೇ ಮಂಡಿಸಬೇಕಾಗುತ್ತದೆ. ಒಂದು ನಿಮಿಷ. ಕಾಲಾವಧಿ ಈ ದಿನದಂದು ಮುಗಿಯುವುದಿಲ್ಲ. ಆಯ್ಕೆ ಸಮಿತಿಯು ೧೮ ರ ವರೆಗೆ ವರದಿ ಮಾಡಬಹುದಾಗಿದೆ. ಆದ್ದರಿಂದ, ಮುಂದೆ, ಸನ್ಮಾನ್ಯ ಸಚಿವರು, ೬ರ ವರೆಗೆ ಕಾಲಾವಧಿಯನ್ನು ವಿಸ್ತರಿಸಿರುವ ಸೂಚನೆಯನ್ನು ಮಂಡಿಸಬಹುದು. ಈ ಸದನವು ಸಾಮಾನ್ಯವಾಗಿ ಈ ಆಯ್ಕೆ ಸಮಿತಿಯನ್ನು ಮುಂದುವರಿಸುವುದರ ಪರ ಇದೆಯೆಂಬುದು ಮಾನ್ಯ ಸಚಿವರಿಗೆ ಈಗ ಗೊತ್ತಾಗಿದೆ. ಇಲ್ಲಿಗೆ ಈ ನಿರ್ದಿಷ್ಟ ವಿಷಯ ವಿಲೆ ಆದಂತಾಯಿತು.

ಇತರ ವಿಷಯಗಳ ಬಗ್ಗೆ ಹೇಳುವುದಾದರೆ, ಮಾನ್ಯ ಸದಸ್ಯರು ನಿಯಮ ೭೦ನ್ನು ನೋಡಬೇಕೆಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಹಲವಾರು ಆಯ್ಕೆ ಸಮಿತಿಗಳಲ್ಲಿದ್ದಾರೆ, ಸದನವು ಅಧಿವೇಶನದಲ್ಲಿರುವಾಗ, ಆಯ್ಕೆ ಸಮಿತಿಗಳು ಬೆಳಗ್ಗೆ, ಸಂಜೆ ಸಭೆ ಸೇರಬೇಕಾಗುತ್ತದೆ. ಸದನದ ಸಭೆ ಸೇರಿದ್ದಾಗಲೂ ಆಯ್ಕೆ ಸಮಿತಿಗಳ ಸಭೆಗಳು ನಡೆಯಬಹುದೆಂದು ನಿಯಮ ೭೦ ಹೇಳುತ್ತದೆ. ಪರಂತು, ಡಿವಿಷನ್ ಬೆಲ್ ಬಾರಿಸುತ್ತಿರುವಾಗ, ಸಮಿತಿಯ ಚೇರ್ಮನ್‌ರು, ಸದಸ್ಯರು ಡಿವಿಷನ್ ಮೇಲೆ ಮತ ನೀಡಲು ಸಾಧ್ಯತೆ ಮಾಡಿಕೊಡುವುದಕ್ಕಾಗಿ ತಾನು ಅಭಿಪ್ರಾಯಪಡುವಂಥ ಕಾಲದವರೆಗೆ ಸಮಿತಿಯ ನಡವಳಿಗಳನ್ನು ನಿಲ್ಲಿಸುತ್ತಾರೆ. ಈ ಪದ್ಧತಿಯು ಹೌಸ್ ಆಫ್ ಕಾಮನ್ಸ್‌ನಲ್ಲಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಹಲವಾರು ವಿಷಯಗಳನ್ನು ಆಯ್ಕೆ ಸಮಿತಿಗೆ ಉಲ್ಲೇಖಿಸಬೇಕೆಂದು ಮಾನ್ಯ ಸದಸ್ಯರು ಬಯಸಿದ್ದಾರೆ. ಒಂದು ಕಡೆ ಈ ಬೇಡಿಕೆ, ಇನ್ನೊಂದು ಕಡೆ "ಆಯ್ಕೆ ಸಮಿತಿಯಿಂದ ನಮಗೆ ಕರೆಬಂದಿದೆ" ಎಂಬ ಅಳಲು. ನಿನ್ನೆ ನಾನು ಮಾಡಿದ ಹೇಳಿಕೆಗಳು, ಆಯ್ಕೆ ಸಮಿತಿಗಳಿಗೆ ಸಂಬಂಧಿಸಿದಂತೆ ಹೊರಗಿದ್ದ ಮಾನ್ಯ ಸದಸ್ಯರಿಗೆ ಅನ್ವಯವಾಗುವುದಿಲ್ಲ. ಆಯ್ಕೆ ಸಮಿತಿಯ ಕೆಲಸವು ಈ ಸಂಸತ್ತಿನ ಕೆಲಸದಂತೆಯೇ ಇರುತ್ತದೆ. ಶ್ರೀ ಸಿಧ್ವಾರವರಿಗೆ ಸಂಬಂಧಿಸಿದಂತೆ ಹೇಳುವುದಾದರೆ ತನ್ನನ್ನು ಸರ್ಕಾರವು ಹಲವಾರು ಆಯ್ಕೆ ಸಮಿತಿಗಳಿಗೆ ನೇಮಿಸಿದೆಯೆಂದು ಅವರು ದೂರುವ ಅಗತ್ಯವಿಲ್ಲ. ಒಂದಕ್ಕಿಂತ ಹೆಚ್ಚು ಆಯ್ಕೆ ಸಮಿತಿಗಳಲ್ಲಿ ಸೇವೆ ಸಲ್ಲಿಸಲು ಅವರೇಕೆ ಅಪೇಕ್ಷೆ ಪಡಬೇಕು?

**ಶ್ರಿ ಸಿಧ್ವಾ:** ಆಯ್ಕೆ ಸಮಿತಿಯ ಸದಸ್ಯತ್ವ ಬೇಕೆಂದು ನಾವೇನೂ ಪ್ರಸ್ತಾಪ ಮಾಡಲಿಲ್ಲ.

**ಡಾ. ಅಂಬೇಡ್ಕರ್:** ಆಯ್ಕೆ ಸಮಿತಿಗಳ ಮತ್ತು ಸದನದ ಕೆಲಸ, ಆಯ್ಕೆ ಸಮಿತಿಗೆ ಜನರನ್ನು ನಾಮನಿರ್ದೇಶನ ಮಾಡುವಾಗ, ಅದೇ ಜನರು ಎರಡು ಸಮಿತಿಗಳಿಗೆ ನಾಮನಿರ್ದೇಶನ ಆಗದಂತೆ ಎಚ್ಚರಿಕೆ ವಹಿಸಿದರೆ, ಸುಗಮವಾಗಿ ಆಗುತ್ತದೆ.

**ಶ್ರೀ ಸಿಧ್ವಾ:** ನಿಜ

**ಮಾನ್ಯ ಉಪಸಭಾಪತಿಗಳು:** ಇನ್ನು ಮುಂದೆ, ಒಬ್ಬರು ಸದಸ್ಯರನ್ನು ಒಂದಕ್ಕಿಂತ ಹೆಚ್ಚು ಸಮಿತಿಗಳಲ್ಲಿ ಸೇರಿಸುವುದರ ಬದಲು ಅಥವಾ ಇರಬೇಕೆಂದು ಕೋರುವುದರ ಬದಲು ಬೇರೆಬೇರೆ ಸಮಿತಿಗಳಲ್ಲಿ ಇರುವಂತೆ ಎಚ್ಚರಿಕೆ ವಹಿಸಬೇಕು. ಅದೇ ಸದಸ್ಯರನ್ನು ಮತ್ತೆ ನೇಮಿಸುವ ತಪ್ಪನ್ನು ವಿಧೇಯಕದ ಮಂಡನಕಾರರು ಮಾಡಿದರೆ, ಒಂದಕ್ಕಿಂತ ಹೆಚ್ಚು ಆಯ್ಕೆ ಸಮಿತಿಗಳ ಸದಸ್ಯತ್ವವನ್ನು ತಾನು ಒಪ್ಪಿಕೊಳ್ಳುವುದು ಸರಿಯೇ ಎಂಬುದನ್ನು ಆ ಸದಸ್ಯರು ವಿಚಾರ ಮಾಡಬೇಕು, ಸಭೆಗಳಿಗೆ ಹಾಜರಾಗಲು ತನಗೆ ಸಮಯಾವಕಾಶವಿಲ್ಲವೆಂದು ನಂತರ ದೂರಬಾರದು.

# ೪೧

# *ಮತ ಕ್ಷೇತ್ರಗಳ ಪುನರ್‌ವಿಂಗಡನೆ ಆದೇಶಗಳನ್ನು ಕುರಿತಂತೆ ಸೂಚನೆಗಳು

**ಮಾನ್ಯ ಉಪಸಭಾಪತಿಗಳು:** ಮತ ಕ್ಷೇತ್ರಗಳ ಪುನರ್‌ವಿಂಗಡನೆ ಕುರಿತ ಸೂಚನೆಗಳನ್ನು ಚರ್ಚೆಗೆ ಎತ್ತಿಕೊಳ್ಳೋಣ. ಸೂಚನೆಗಳ ನೋಟೀಸನ್ನು ಕೊಟ್ಟಿರುವ ಮಾನ್ಯ ಸದಸ್ಯರುಗಳ ಹೆಸರುಗಳನ್ನು ಕರೆಯುತ್ತೇನೆ. ಮಂಡಿಸಿದ್ದೇನೆಂದು ಮಾತ್ರವೇ ಅವರು ಹೇಳಬೇಕು.

**ಕಾನೂನು ಸಚಿವರು (ಡಾ. ಅಂಬೇಡ್ಕರ್):** ನಾನು ಐದು ಸೂಚನೆಗಳನ್ನು ಮಂಡಿಸಬೇಕಾಗಿದೆ. ಅವೆಲ್ಲ ಮುಖ್ಯ ಸೂಚನೆಗಳು, ನಂತರ, ನನ್ನ ಸೂಚನೆಗಳಿಗೆ ತಿದ್ದುಪಡಿ ಮಾಡಲು ಕೆಲವು ಸೂಚನೆಗಳೂ ಇವೆ. ಆದ್ದರಿಂದ, ನನ್ನ ಸೂಚನೆಗಳನ್ನು ಮಂಡಿಸಲು ನನ್ನನ್ನು ಮೊದಲು ಕರೆಯುವುದು, ಆಮೇಲೆ, ತಿದ್ದುಪಡಿ ಸೂಚನೆಗಳನ್ನು ಮಂಡಿಸಬಯಸುವ ಇತರೆ ಸದಸ್ಯರನ್ನು, ಅವರವರದನ್ನು ಮಂಡಿಸಲು ಕೇಳುವುದು ಸರಿಯಾದ ಕ್ರಮವೆಂದು ನಿವೇದಿಸುತ್ತೇನೆ. ಇದು ತಮ್ಮ ನಿರ್ಣಯಕ್ಕೆ ಒಳಪಟ್ಟಿದೆ.

**ಮಾನ್ಯ ಉಪಸಭಾಪತಿಗಳು :** ಮಾನ್ಯ ಕಾನೂನು ಸಚಿವರು ಈಗ ಅವರ ಸೂಚನೆಗಳನ್ನು ಮಂಡಿಸಬಹುದು.

## ಕೌನ್ಸಿಲ್ ಮತಕ್ಷೇತ್ರಗಳ (ಬಾಂಬೆ) ಆದೇಶ

**ಡಾ. ಅಂಬೇಡ್ಕರ್:** ಈ ಮುಂದಿನಂತಿರುವುದನ್ನು ಮಂಡಿಸಲು ಅನುಮತಿ ಕೋರುತ್ತೇನೆ.

೧೯೫೧ ರ ಸೆಪ್ಟಂಬರ್ ೨೦ ರಂದು ಚರ್ಚೆಗಾಗಿ ಮಂಡಿಸಿದ, ೧೯೫೧ ರ ಕೌನ್ಸಿಲ್ ಮತಕ್ಷೇತ್ರಗಳ (ಬಾಂಬೆ) ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟುಗಳನ್ನು ಮಾಡಬೇಕು, ಎಂದರೆ,–

(೧) ಕೋಷ್ಟಕದಲ್ಲಿ, "ಪದವೀಧರರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ೧ನೇ ಅಂಕಣದಲ್ಲಿ ಇರುವ "ಬಾಂಬೆ ನಗರ (ಪದವೀಧರರು)" ನಮೂದಿನ ಎದುರಿಗೆ ಇರುವ ೨ನೇ ಅಂಕಣದಲ್ಲಿ ಬರುವ "ಬಾಂಬೆ ನಗರ" ನಮೂದಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

"ಗ್ರೇಟರ್ ಬಾಂಬೆ"

(೨) ಕೋಷ್ಟಕದಲ್ಲಿ, "ಪದವೀಧರರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ೧ನೇ ಅಂಕಣದಲ್ಲಿ ಇರುವ "ಉತ್ತರ ವಿಭಾಗ (ಪದವೀಧರರು)" ನಮೂದಿನ ಎದರಿಗೆ, ೨ನೇ ಅಂಕಣದಲ್ಲಿ ಬರುವ "ಉತ್ತರ ವಿಭಾಗ" ನಮೂದಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

"ಬಾಂಬೆ ಸಬರ್ಬನ್ ಜಿಲ್ಲೆಗಳನ್ನು ಮತ್ತು ಅಹಮದಾಬಾದ್ ನಗರವನ್ನು

---

* ಸಂ. ಚ. ಸಂಪುಟ ೧೬, ಭಾಗ II, ೬, ಅಕ್ಟೋಬರ್ ೧೯೫೧, ಪುಟಗಳು ೪೫೯–೪೪೦೪.

ಹೊರತುಪಡಿಸಿ ಉತ್ತರ ವಿಭಾಗ" ಮತ್ತು

(೩) ಕೋಷ್ಟಕದಲ್ಲಿ, "ಪದವೀದರರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಅಂಕಣ ೧ರಲ್ಲಿ ಇರುವ "ಕೇಂದ್ರ ವಿಭಾಗ (ಪದವೀಧರರು)" ನಮೂದಿನ ಎದರಿಗೆ ಇರುವ ಅಂಕಣ ೨ ರಲ್ಲಿ ಬರುವ "ಕೇಂದ್ರ ವಿಭಾಗ" ನಮೂದಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು ಎಂದರೆ,–

"ಪೂನಾ ನಗರವನ್ನು ಹೊರತುಪಡಿಸಿ ಕೇಂದ್ರ ವಿಭಾಗ "

(೪) ಕೋಷ್ಟಕದಲ್ಲಿ, "ಶಿಕ್ಷಕರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ, ಅಂಕಣ ೧ ರಲ್ಲಿ ಇರುವ "ಬಾಂಬೆ ನಗರ (ಶಿಕ್ಷಕರು)" ನಮೂದಿನ ಎದುರಿಗೆ ಇರುವ ಅಂಕಣ ೨ ರಲ್ಲಿ ಬರುವ "ಬಾಂಬೆ ನಗರ" ನಮೂದಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

**"ಗ್ರೇಟರ್ ಬಾಂಬೆ"**

(೫) ಕೋಷ್ಟಕ ೧ರಲ್ಲಿ, "ಶಿಕ್ಷಕರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಅಂಕಣ ೧ ರಲ್ಲಿ ಇರುವ "ಉತ್ತರ ವಿಭಾಗ (ಶಿಕ್ಷಕರು) ನಮೂದಿನ ಎದುರಿಗೆ ಇರುವ ಅಂಕಣ ೨ ರಲ್ಲಿ ಬರುವ "ಉತ್ತರ ವಿಭಾಗ" ನಮೂದಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

" ಬಾಂಬ್ ಸಬರ್ಬನ್ ಜಿಲ್ಲೆಗಳನ್ನು ಮತ್ತು ಅಹಮದಾಬಾದ್ ನಗರವನ್ನು ಹೊರತು ಪಡಿಸಿ ಉತ್ತರ ವಿಭಾಗ"

(೬) ಕೋಷ್ಟಕದಲ್ಲಿ, "ಶಿಕ್ಷಕರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಅಂಕಣ ೧ ರಲ್ಲಿ ಇರುವ "ಕೇಂದ್ರ ವಿಭಾಗ (ಶಿಕ್ಷಕರು)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಕೇಂದ್ರ ವಿಭಾಗ" ನಮೂದಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

"ಪೂನಾ ನಗರವನ್ನು ಹೊರತುಪಡಿಸಿ ಕೇಂದ್ರ ವಿಭಾಗ"

(೭) ಕೋಷ್ಟಕದಲ್ಲಿ, "ಸ್ಥಳೀಯ ಪ್ರಾಧಿಕಾರಗಳ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಅಂಕಣ ೧ರಲ್ಲಿ ಇರುವ "ಬಾಂಬೆ ನಗರ (ಸ್ಥಳೀಯ ಪ್ರಾಧಿಕಾರಗಳು)" ನಮೂದಿನ ಎದುರಿಗೆ ಇರುವ ಅಂಕಣ ೨ ರಲ್ಲಿ ಬರುವ" ಬಾಂಬೆ ಸಿಟಿ ಮುನಸಿಪಲ್ ಕಾರ್ಪೂರೇಷನ್" ನಮೂದಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ, –

"ಗ್ರೇಟರ್ ಬಾಂಬೆ ಮುನಿಸಿಪಲ್ ಕಾರ್ಪೂರೇಷನ್ ವ್ಯಾಪ್ತಿಗೆ ಒಳಪಡುವ ಪ್ರದೇಶ"

(೮) ಕೋಷ್ಟಕದಲ್ಲಿ "ಸ್ಥಳೀಯ ಪ್ರಾಧಿಕಾರಗಳ ಮತಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಇರುವ ಅಂಕಣ ೧ ರಲ್ಲಿ ಇರುವ "ಅಹಮದಾಬಾದ್ ನಗರ (ಸ್ಥಳೀಯ ಪ್ರಾಧಿಕಾರಗಳು)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಅಹಮದಾಬಾದ್ ಮುನಿಸಿಪಲ್ ಕಾರ್ಪೊರೇಷನ್" ನಮೂದಿಗೆ ಬದಲಾಗಿ

ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

"ಅಹಮದಾಬಾದ್ ಮುನಿಸಿಪಲ್ ಕಾರ್ಪೋರೇಷನ್ ವ್ಯಾಪ್ತಿಗೆ ಒಳಪಡುವ ಪ್ರದೇಶ"

(೯) ಕೋಷ್ಟಕದಲ್ಲಿ, "ಸ್ಥಳೀಯ ಪ್ರಾಧಿಕಾರಗಳ ಮತಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಇರುವ ಅಂಕಣ ೧ರಲ್ಲಿ ಇರುವ "ಅಹಮದಾಬಾದ್ ಜಿಲ್ಲೆ (ಸ್ಥಳೀಯ ಪ್ರಾಧಿಕಾರಗಳು)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಅಹಮದಾಬಾದ್ ಜಿಲ್ಲೆ (ಅಹಮದಾಬಾದ್ ನಗರ ಮುನಿಸಿಪಲ್ ಕಾರ್ಪೋರೇಷನ್ ಹೊರತುಪಡಿಸಿ) ಮತ್ತು ಸಬರಕಾಂತ ಜಿಲ್ಲೆ" ನಮೂದಿಗೆ ಬದಲಾಗಿ ಈ ನಮೂದನ್ನು ಸೇರಿಸಬೇಕು, ಎಂದರೆ,–

"ಅಹಮದಾಬಾದ್ ಜಿಲ್ಲೆ (ಅಹಮದಾಬಾದ್ ಮುನಸಿಪಲ್ ಕಾರ್ಪೋರೇಷನ್ ವ್ಯಾಪ್ತಿಗೆ ಒಳಪಡುವ ಪ್ರದೇಶವನ್ನು ಹೊರತುಪಡಿಸಿ) ಮತ್ತು ಸಬರಕಾಂತ ಜಿಲ್ಲೆ"

(೧೦) ಕೋಷ್ಟಕದಲ್ಲಿ, "ಸ್ಥಳೀಯ ಪ್ರಾಧಿಕಾರಗಳ ಮತಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಇರುವ ಅಂಕಣ ೧ರಲ್ಲಿ ಇರುವ "ಪೂನಾ ನಗರ (ಸ್ಥಳೀಯ ಪ್ರಾಧಿಕಾರಗಳು)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಪೂನಾನಗರ ಮುನಿಸಿಪಲ್ ಕಾರ್ಪೋರೇಷನ್" ನಮೂದಿಗೆ ಬದಲಾಗಿ, ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

"ಪೂನಾ ಮುನಿಸಿಪಲ್ ಕಾರ್ಪೋರೇಷನ್ ವ್ಯಾಪ್ತಿಗೆ ಒಳಪಡುವ ಪ್ರದೇಶ"

(೧೧) ಕೋಷ್ಟಕದಲ್ಲಿ, "ಸ್ಥಳೀಯ ಪ್ರಾಧಿಕಾರಗಳ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಇರುವ ಅಂಕಣ ೧ರಲ್ಲಿ ಇರುವ "ಪೂನಾ (ಸ್ಥಳೀಯ ಪ್ರಾಧಿಕಾರಗಳು" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಪೂನಾ ನಗರ ಮುನಿಸಿಪಲ್ ಕಾರ್ಪೋರೇಷನ್ ಹೊರತುಪಡಿಸಿ ಪೂನಾ ಜಿಲ್ಲೆ" ನಮೂದಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

"ಪೂನಾ ಜಿಲ್ಲೆ (ಪೂನಾ ಮುನಿಸಿಪಲ್ ಕಾರ್ಪೋರೇಷನ್ ವ್ಯಾಪ್ತಿಗೆ ಒಳಪಡುವ ಪ್ರದೇಶವನ್ನು ಹೊರುತುಪಡಿಸಿ"

## ಕೌನ್ಸಿಲ್ ಮತಕ್ಷೇತ್ರಗಳ (ಮದ್ರಾಸ್) ಆದೇಶ

**ಡಾ. ಅಂಬೇಡ್ಕರ್:** ಈ ಮುಂದಿನಂತಿರುವುದನ್ನು ಮಂಡಿಸಲು ಅನುಮತಿ ಕೋರುತ್ತೇನೆ.

೧೯೫೧ ರ ಸೆಪ್ಟೆಂಬರ್ ೨೦ರಂದು ಮಂಡಿಸಿದ, ೧೯೫೧ರ ಕೌನ್ಸಿಲ್ ಮತ ಕ್ಷೇತ್ರಗಳ ಪುನರ್ ವಿಂಗಡನೆ ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಡುಗಳನ್ನು ಮಾಡಬೇಕು ಎಂದರೆ,–

(೧) ಪುಟ ೧ರಲ್ಲಿ, ಕೋಷ್ಟಕದಲ್ಲಿ "ಪದವೀಧರರ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಇರುವ ಅಂಕಣ ೧ರಲ್ಲಿ ಇರುವ "ಮದ್ರಾಸ್ ದಕ್ಷಿಣ (ಪದವೀಧರರು)" ನಮೂದಿನ ಎದುರಿಗೆ ಇರುವ ಅಂಕಣ ೨ ರಲ್ಲಿ ಬರುವ "ಮದ್ರಾಸ್ ನಗರ, ಮತ್ತು ಚೆಂಗ್ಲೆಪುಟ್" ಪದಗಳಿಗೆ ಬದಲಾಗಿ "ಮದ್ರಾಸ್, ಚೆಂಗ್ಲೆಪುಟ್" ಪದಗಳನ್ನು

ಸೇರಿಸಬೇಕು.

(೨) ಪುಟ ೨ ರಲ್ಲಿ, ಕೋಷ್ಟಕದಲ್ಲಿ, "ಶಿಕ್ಷಕರ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಇರುವ ಅಂಕಣ ೧ರಲ್ಲಿ ಇರುವ "ಮದ್ರಾಸ್ ದಕ್ಷಿಣ (ಶಿಕ್ಷಕರು) ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಮದ್ರಾಸ್ ನಗರ, ಮತ್ತು ಚೆಂಗ್ಲೆಪುಟ್" ಪದಗಳಿಗೆ ಬದಲಾಗಿ "ಮದ್ರಾಸ್, ಚೆಂಗ್ಲೆಪುಟ್" ಪದಗಳನ್ನು ಸೇರಿಸಬೇಕು.

## ಕೌನ್ಸಿಲ್ ಮತ ಕ್ಷೇತ್ರಗಳ (ಮೈಸೂರು) ಆದೇಶ

**ಡಾ. ಅಂಬೇಡ್ಕರ್:** ಈ ಮುಂದಿನಂತಿರುವುದನ್ನು ಮಂಡಿಸಲು ಅನುಮತಿ ಕೋರುತ್ತೇನೆ:

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಕೌನ್ಸಿಲ್ ಮತ ಕ್ಷೇತ್ರಗಳ (ಮೈಸೂರು) ಪುನರ್ ವಿಂಗಡನೆ ಆದೇಶದಲ್ಲಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

ಕೋಷ್ಟಕದಲ್ಲಿ, ಎಲ್ಲೆಲ್ಲಿ "ರೆವಿನ್ಯೂ" ಪದ ಬರುವುದೋ ಅಲ್ಲೆಲ್ಲಾ ಆ ಪದವನ್ನು ಬಿಟ್ಟುಬಿಡಬೇಕು.

## ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳ (ಮದ್ರಾಸ್) (ತಿದ್ದುಪಡಿ) ಆದೇಶ.

**ಡಾ. ಅಂಬೇಡ್ಕರ್:** ಈ ಮುಂದಿನಂತಿರುವುದನ್ನು ಮಂಡಿಸಲು ಅನುಮತಿ ಕೋರುತ್ತೇನೆ:

(೧) ೧೯೫೧ ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಸಂಸತ್ ಮತ್ತು ವಿಧಾನಸಭಾ ಮತ ಕ್ಷೇತ್ರಗಳ (ಮದ್ರಾಸ್) ಪುನರ್ ವಿಂಗಡನೆ (ತಿದ್ದುಪಡಿ) ಆದೇಶದಲ್ಲಿ ಈ ಮುಂದಿನ ಮಾರ್ಪಾಡುಗಳನ್ನು ಮಾಡಬೇಕು, ಎಂದರೆ,–

ಪುಟ ೧೭ರಲ್ಲಿ, ಬಾಬು (೬೯)ರಲ್ಲಿ – ತಿರುಪತ್ತೂರು ತಾಲೂಕಿನಲ್ಲಿರುವ ವಾನಿಯಂ ಬಾಡಿಯ ಫಿರ್ಕಾದಲ್ಲಿ ಅಡಕವಾಗಿರುವ ಗ್ರಾಮಗಳಲ್ಲಿ ಕೊನೆಯಲ್ಲಿ ಬರುವ "ಚಿನ್ನಕಲ್ಲುಪಳ್ಳಿ" ಪದಗಳಿಗೆ ಬದಲಾಗಿ "ಚಿನ್ನಕಲ್ಲುಪಳ್ಳಿ ಮತ್ತು ದೇವಸ್ಥಾನಂ" ಪದಗಳನ್ನು ಸೇರಿಸಬೇಕು.

(೨) ೧೯೫೧ರ ಸೆಪ್ಟೆಂಬರ್ ೨೧ ರಂದು ಮಂಡಿಸಿದ, ೧೯೫೧ರ ಸಂಸತ್ ಮತ್ತು ಅಸೆಂಬ್ಲಿ ಮತಕ್ಷೇತ್ರಗಳ (ಮದ್ರಾಸ್) ಪುನರ್ ವಿಂಗಡನೆ (ತಿದ್ದುಪಡಿ) ಆದೇಶದಲ್ಲಿ ಈ ಮುಂದಿನ ಮಾರ್ಪಾಡುಗಳನ್ನು ಮಾಡಬೇಕು, ಎಂದರೆ,–

೧. ಪುಟ ೧ರಲ್ಲಿ, ಪ್ಯಾರಾ ೨(ಬಿ) ಯಲ್ಲಿ, ಪ್ರಸ್ತಾಪಿತ ವಿವರಣೆಯಲ್ಲಿ "ಗ್ರಾಮಗಳು ಅಡಕವಾಗಿರುವ ಪ್ರದೇಶ" ಪದಗಳ ಬದಲಾಗಿ "ಪ್ರದೇಶಗಳು" ಪದವನ್ನು ಸೇರಿಸಬೇಕು.

೨. ಪುಟ ೨ರಲ್ಲಿ, ಆ ಆದೇಶದ ಪ್ಯಾರಾ ೫ಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

"೫. ಆ ಆದೇಶಕ್ಕೆ ಇರುವ ಅನುಬಂಧದ ಬಾಬು (೨೩)ರಲ್ಲಿ, "ಸೆವಲೂರು ಭಾಗ, ಪೂತ್ತುರವುಥಂಪಟ್ಟಿ, ಮನಪ್ಪರೈ ಪದಗಳಿಗೆ ಬದಲಾಗಿ "ಮುನಪ್ಪರೈ ಪಂಚಾಯತ್" ಪದಗಳನ್ನು ಸೇರಿಸಬೇಕು.

೩. ಪ್ಯಾರಾ ೬ ರಲ್ಲಿ,–

(i) ಅನುಸೂಚಿಯ ಬಾಬು (೨)ರಲ್ಲಿ, "ಪಿಟಾಲಿ. ಸಿರಿಮಾಮಿಡಿ ಮತ್ತು ಗೊಲ್ಲಗಂಡಿ" ಪದಗಳಿಗೆ ಬದಲಾಗಿ "ಪಿಟಾಲಿ ಮತ್ತು ಸಿರಿಮಾಮಿಡಿ" ಪದಗಳನ್ನು ಸೇರಿಸಬೇಕು.

(ii) ಅನುಸೂಚಿಯ ಬಾಬು (೧೪) ರಲ್ಲಿ, "ರಾಮಾವರಂ ಹತ್ತಿರ ಇರುವ ವೆಂಕಂಪೇಟ" ಪದಗಳ ನಂತರ "ರಾಮಾವರಂ" ಪದವನ್ನು ಸೇರಿಸಬೇಕು.

(iii) ಅನುಸೂಚಿಯ ಬಾಬು (೨೧) ರಲ್ಲಿ, "ದೇರಸನ್" ಪದದ ನಂತರ "ಪೈಡಿ ಭೀಮಾವರಂ" ಪದವನ್ನು ಸೇರಿಸಬೇಕು.

(iv) ಅನುಸೂಚಿಯ ಬಾಬು (೬೩)ರಲ್ಲಿ, "ಕೊಪ್ಪೆಡು ಕಾಪುಲ, ಕಂದ್ರಿಗ" ಪದಗಳ ನಂತರ, "ಅಗರಂ" ಪದವನ್ನು ಸೇರಿಸಬೇಕು.

(v) ಅನುಸೂಚಿಯ ಬಾಬು (೮೦) ರಲ್ಲಿ, ಎಲ್ಲಿ ಎರಡನೆ ಸಲ "ಕಲ್ಲುಪಟ್ಟಿ" ಪದ ಬಂದಿದೆಯೋ ಆ ಪದಕ್ಕೆ ಬದಲಾಗಿ "ಸೇತು ಪಟ್ಟಿ" ಪದವನ್ನು ಸೇರಿಸಬೇಕು.

(vi) ಅನುಸೂಚಿಯ ಬಾಬು (೮೭) ರಲ್ಲಿ "ಅರುಪ್ಪು ಕೊಟ್ಟೈ" ಪದಕ್ಕೆ ಬದಲಾಗಿ "ಅರುಪ್ಪು ಕೊಟ್ಟೈ ಮುನಿಸಿಪಾಲಿಟಿ" ಪದವನ್ನು ಸೇರಿಸಬೇಕು.

(vii) ಅನುಸೂಚಿಯ ಬಾಬು (೯೩)ರಲ್ಲಿ "ದೇವಕೊಟ್ಟೈ ಗ್ರಾಮಾಂತರ (ಇರವಸೇರಿ)" ಪದಗಳಿಗೆ ಮತ್ತು ಆವರಣ ಚಿಹ್ನೆಗಳಿಗೆ ಬದಲಾಗಿ "ದೇವಕೊಟ್ಟೈ ಮುನಿಸಿಪಾಲಿಟಿ" ಇರವಸೇರಿ (ಗ್ರಾಮಾಂತರ) ಪದಗಳನ್ನು ಸೇರಿಸಬೇಕು.

(viii) ಅನುಸೂಚಿಯ ಬಾಬು (೯೫)ರಲ್ಲಿ "ಕೆಪ್ಪಪಟ್ನಂ (ಮನ ಮಧುರೈ ಪಂಚಾಯತ್ ಮಂಡಲಿ" ಪದಗಳಿಗೆ ಮತ್ತು ಆವರಣ ಚಿಹ್ನೆಗಳಿಗೆ ಬದಲಾಗಿ "ಕೆಪ್ಪರ್‌ಪಟ್ನಂ, ಮನಮದುರೈ ಪಂಚಾಯತ್" ಪದಗಳನ್ನು ಸೇರಿಸಬೇಕು.

## ಸಂಸತ್ ಅಸೆಂಬ್ಲಿ ಮತ ಕ್ಷೇತ್ರಗಳ (ಉತ್ತರ ಪ್ರದೇಶ) (ತಿದ್ದುಪಡಿ) ಆದೇಶ:

**ಡಾ. ಅಂಬೇಡ್ಕರ್:** ಈ ಮುಂದಿನಂತಿರುವುದನ್ನು ಮಂಡಿಸಲು ಅನುಮತಿ ಕೋರುತ್ತೇನೆ.

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಸಂಸತ್ ಮತ್ತು ಅಸೆಂಬ್ಲಿ ಮತಕ್ಷೇತ್ರಗಳ (ಉತ್ತರ ಪ್ರದೇಶ) ಪುನರ್ ವಿಂಗಡನೆ (ತಿದ್ದುಪಡಿ) ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಡುಗಳನ್ನು ಮಾಡಬೇಕು, ಎಂದರೆ,–

(೧) ಪುಟ ೧ ರಲ್ಲಿ, ೨ (ii) ರಲ್ಲಿ "ಆದರೆ, ಮೊಹಮ್ಮದಿ ಸೇರಿದಂತೆ" ಪದಗಳ ನಂತರ "ಅಟ್ವಾ ಪಿಪರಿಯಾ" ಪದಗಳನ್ನು ಸೇರಿಸಬೇಕು.

(೨) ಪುಟ ೨ರಲ್ಲಿ, ಪ್ಯಾರಾ ೨ (iii) ರಲ್ಲಿ, ಆವರಣದ ಮತ್ತು ಮೊಹಮ್ಮದಿಯನ್ನು ಹೊರತುಪಡಿಸಿ" ಪದಗಳ ನಂತರ "ಅಟ್ವಾ ಪಿಪರಿಯಾ" ಪದಗಳನ್ನು ಸೇರಿಸಬೇಕು.

(೩) ಪುಟ ೨ರಲ್ಲಿ, ಪ್ಯಾರಾ ೩ (i) ರಲ್ಲಿ, ಕೋಷ್ಟಕದಲ್ಲಿ ಅಂಕಣ ೧ರಲ್ಲಿ ಇರುವ

"ಪೌರಿ (ಉತ್ತರ)–ಹಾಗೂ–ಚಮೋಲಿ (ಪೂರ್ವ) ನಮೂದಿಗೆ ಬದಲಾಗಿ ಈ ಮುಂದಿನ ನಮೂದನ್ನು ಸೇರಿಸಬೇಕು, ಎಂದರೆ,–

"ಪೌರಿ (ದಕ್ಷಿಣ)–ಹಾಗೂ–ಚಮೋಲಿ (ಪೂರ್ವ)"

(೪) ಪುಟ ೨ರಲ್ಲಿ, ಪ್ಯಾರಾ ೩ (iii) ರ ನಂತರ, ಈ ಮುಂದಿನ ಹೊಸ ಪ್ಯಾರಾವನ್ನು ಸೇರಿಸಬೇಕು, ಎಂದರೆ,–

" (iiiಎ) ಅಂಕಣ ೧ರಲ್ಲಿ ಇರುವ "ಮೊಹಮ್ಮದಿ (ಪಶ್ಚಿಮ) ಮತ್ತು ಮೊಹಮ್ಮದಿ (ಪೂರ್ವ)" ನಮೂದುಗಳಿಗೆ ಬದಲಾಗಿ ಮತ್ತು ಅಂಕಣ ೨ರಲ್ಲಿ ಅವುಗಳ ಎದುರಿಗೆ ಇರುವ ನಮೂದುಗಳಿಗೆ ಬದಲಾಗಿ, ಈ ಮುಂದಿನ ನಮೂದುಗಳನ್ನು ಸೇರಿಸಬೇಕು". ಎಂದರೆ,

| ೧ | ೨ |
|---|---|
| ಮೊಹಮ್ಮದಿ (ಪಶ್ಚಿಮ) | ಮೊಹಮ್ಮದಿ, ಅಟ್ವಾ ಪಿಪರಿಯಾ, ಮಗದ್‌ಪುರ ಮತ್ತು ಮೊಹಮ್ಮದಿ ತಹಸೀಲ್‌ನ ಪಾಸ್ಗವಾನ್ ಪರಗಣಗಳು |
| ಮೊಹಮ್ಮದಿ (ಪೂರ್ವ) | ಮೊಹಮ್ಮದಿ ತಹಸೀಲ್ (ಮೊಹಮ್ಮದಿ, ಅಟ್ವಾ ಪಿಪರಿಯಾ, ಮಗದ್‌ಪುರ ಮತ್ತು ಪಾಸ್ಗವಾನ್ ಪರಗಣಗಳು |

*ಮಾನ್ಯ ಉಪಸಭಾಪತಿಗಳು:** ಮೊದಲು ಬಿಹಾರವನ್ನು ಎತ್ತಿಕೊಳ್ಳುತ್ತೇನೆ. ಅವುಗಳ ಬಗ್ಗೆ ಏನಾದರೂ ಅನುಕ್ರಮಣಿಕೆ ಆಗಿದೆಯೇ?

## ಬಿಹಾರ ಆದೇಶ

**ಡಾ. ಅಂಬೇಡ್ಕರ್ (ಬಾಂಬೆ):** ಮತಕ್ಷೇತ್ರಗಳಿಗೆ ಸಂಬಂಧಿಸಿದಂತೆ ನನ್ನ ಮುಖ್ಯ ಸೂಚನೆಗಳಿಗೆ ತಿದ್ದುಪಡಿ ಸೂಚನೆಗಳನ್ನು ಮಂಡಿಸಿದ ಅನೇಕ ಸದಸ್ಯರೊಂದಿಗೆ ಸಭೆ ನಡೆಸಿದ್ದೆ. ಆದೇಶಗಳನ್ನು ರಾಷ್ಟ್ರಪತಿಯವರು ಹೊರಡಿಸಿದ್ದಾರೆ. ಅನುಕ್ರಮಣಿಕೆ ಹೀಗಿದೆ: ಪಟ್ಟಿ ೪ ರ ಪೈಕಿ, ತಿದ್ದುಪಡಿ ಸಂಖ್ಯೆ ೬, ಭಾಗಗಳು ೧ ಮತ್ತು ೨ ನ್ನು (ಶೇಕ್ ಮೊಹಿಯುದ್ದಿನ್ ಮತ್ತು ಶ್ರೀ ಕ್ಷುದಿರಾಂ ಮಹತಾ ಅವರು ಮಂಡಿಸಿದ ತಿದ್ದುಪಡಿ) ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಪತಿಗಳು:** ಎರಡು ಭಾಗಗಳು ಮಾತ್ರವೇ ಇವೆಯೆಂದು ಕಾಣುತ್ತದೆ. ಮಾನ್ಯ ಸಚಿವರು ಎರಡೂ ಭಾಗಗಳನ್ನು ಒಪ್ಪಿಕೊಳ್ಳುತ್ತೀರಾ?

**ಡಾ. ಅಂಬೇಡ್ಕರ್:** ಅಂತೂ, ಭಾಗಗಳನ್ನು ನಿರ್ದಿಷ್ಟವಾಗಿಯೇ ಹೇಳಬಯಸುತ್ತೇನೆ. ಭಾಗಗಳು ೧ ಮತ್ತು ೨ನ್ನು ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಪತಿಗಳು:** ಎಂದರೆ, ಬಿಹಾರಕ್ಕೆ ಸಂಬಂಧಿಸಿದಂತೆಯೇ?

---

* ಸಂ.ಚ. ಸಂಪುಟ ೧೬, ಭಾಗ II, ೧೧, ಅಕ್ಟೋಬರ್, ೧೯೫೧ ಪುಟಗಳು ೪೬೧೭–೨೦

**ಡಾ. ಅಂಬೇಡ್ಕರ್:** ಹೌದು.

**ಮಾನ್ಯ ಉಪಸಭಾಪತಿಗಳು:** ಅದನ್ನು ಸದನದ ಮುಂದೆ ಇಡುತ್ತೇನೆ. ಮಾನ್ಯ ಸದಸ್ಯರಲ್ಲಿ ಯಾರಾದರೂ ಮಾತನಾಡಬಯಸುವಿರಾ?

**ಶ್ರೀ ಶ್ಯಾಮನಂದನ ಸಹಾಯ (ಬಿಹಾರ):** ಬಿಹಾರ ಆದೇಶವನ್ನು ಒಪ್ಪಿಕೊಳ್ಳುವುದಕ್ಕೂ ಮುಂಚೆ, ಸನ್ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಿರುವ ವಾಸ್ತವಿಕ ಬದಲಾವಣೆಗಳು ಯಾವುವು ಎಂಬುದನ್ನು ದಯಮಾಡಿ ಹೇಳಬೇಕು.

**ಮಾನ್ಯ ಉಪಸಭಾಪತಿಗಳು:** ಯಾವ ಬದಲಾವಣೆಗಳನ್ನೂ ಮಾಡಿಲ್ಲ. ಇಡೀ ತಿದ್ದುಪಡಿಯನ್ನು ಒಪ್ಪಿಕೊಳ್ಳಲಾಗುತ್ತದೆ. ಅದನ್ನು ಓದಿ ಹೇಳುತ್ತೇನೆ.

**ಶ್ರೀ ಶ್ಯಾಮ ನಂದನ ಸಹಾಯ:** ಏಕೆಂದರೆ, ಶ್ರೀ ಕ್ಷುದಿರಾಂ ಅವರ ಹೆಸರಿನಲ್ಲಿ ಅನೇಕ ತಿದ್ದುಪಡಿಗಳು ಇವೆ. ಆದ್ದರಿಂದ, ನಾವು ನಿಖರವಾಗಿ ತಿಳಿದುಕೊಳ್ಳಬಯಸಿದ್ದೇವೆ.

**ಡಾ. ಅಂಬೇಡ್ಕರ್:** ಮಾನ್ಯ ಸದಸ್ಯರು ಮಂಡಿಸಿದ ಕೆಲವು ತಿದ್ದುಪಡಿಗಳನ್ನು ಒಪ್ಪಿಕೊಂಡ ನಂತರವೂ ಕೆಲವೊಂದು ಪ್ರಕರಣಗಳಲ್ಲಿ ಈವರೆಗೂ ಇಲ್ಲವೇ ಇಲ್ಲದ ಪ್ರಸ್ತಾವನೆಗಳಿಗೆ ತಿದ್ದುಪಡಿಗಳಿರುತ್ತವೆಂಬ ಸಂಗತಿಯಿಂದಾಗಿ, ಅವುಗಳ ಬಗ್ಗೆ ಕೆಲವೊಂದು ಕ್ರಿಯಾಲೋಪವನ್ನು ಎತ್ತಬಹುದೆಂದು ನಾನು ಭಾವಿಸಿದ್ದೇನೆ. ಆದ್ದರಿಂದ, ಯಾವ ಕ್ರಿಯಾಲೋಪವೂ ಏಳಬಾರದೆಂಬ ದೃಷ್ಟಿಯಿಂದ ಈ ತಿದ್ದುಪಡಿಗಳನ್ನು ಮಂಡಿಸುವ ಜವಾಬ್ದಾರಿಯನ್ನು ಸ್ವತಃ ನಾನೇ ತೆಗೆದುಕೊಳ್ಳುವುದು ತುಂಬಾ ಒಳ್ಳೆಯದೆಂದು ಭಾವಿಸಿದ್ದೇನೆ.

**ಶ್ರೀ ಶ್ಯಾಮ ನಂದನ ಸಹಾಯ:** ನಾನು ಯಾವುದೇ ಕ್ರಿಯಾಲೋಪವನ್ನು ಎತ್ತುತ್ತಿಲ್ಲ. ಶ್ರೀ ಮಹತಾ ಅವರ, ಒಪ್ಪಿಕೊಳ್ಳುತ್ತಿರುವ ನಿರ್ದಿಷ್ಟ ತಿದ್ದುಪಡಿಯನ್ನು ತಿಳಿದುಕೊಳ್ಳಲು ಮಾತ್ರವೇ ಇಚ್ಛಿಸಿದ್ದೇನೆ. ತಾವು ದಯಮಾಡಿ ಓದಿ ಹೇಳಬೇಕು ಅಥವಾ ಮಾನ್ಯ ಸಚಿವರು ವಿವರಿಸಬೇಕು. ನಿಖರವಾದ ವಸ್ತುಸ್ಥಿತಿ ಏನೆಂಬುದು ನಮಗೆ ಗೊತ್ತಾಗುತ್ತದೆ.

**ಡಾ. ಅಂಬೇಡ್ಕರ್**: ಅದೇ ವಸ್ತುಸ್ಥಿತಿ.

**ಮಾನ್ಯ ಉಪಸಭಾಪತಿಗಳು:** ನಾನೊಂದು ಮಾತು ಹೇಳಲೇ? ಮಾನ್ಯ ಕಾನೂನು ಸಚಿವರು ಒಪ್ಪಿಕೊಳ್ಳುವ ತಿದ್ದುಪಡಿಯನ್ನು ಮಂಡಿಸಲು ಅವರಿಗೆ ಅನುಮತಿ ಕೊಡುತ್ತೇನೆ. ಅದಾದ ನಂತರ, ಇತರ ತಿದ್ದುಪಡಿಗಳನ್ನು ಪರಿಶೀಲಿಸುತ್ತೇನೆ. ಅವುಗಳಿಗೆ ಪ್ರತಿಷೇಧ ಇದ್ದರೆ, ಅವುಗಳನ್ನು ಪ್ರತಿಷೇಧಿಸಲಾಗುತ್ತದೆ. ಪ್ರತಿಷೇಧ ಇರದಂತಹ ಯಾವುವಾದರೂ ತಿದ್ದುಪಡಿಗಳನ್ನು ಯಾವುದೇ ಇತರ ಮಾನ್ಯ ಸದಸ್ಯರು ಮಂಡಿಸಬಯಸಿದರೆ, ಸದನವು ಅವುಗಳನ್ನು ಪರಿಶೀಲಿಸುತ್ತದೆ. ತಿದ್ದುಪಡಿಗಳ ಮಂಡನೆ ಈಗಾಗಲೇ ಆಗಿದೆ. ಯಾರಾದರೂ ಮಾತನಾಡ ಬಯಸಿದರೆ, ಮಾತನಾಡಬಹುದು.

**ಡಾ. ಅಂಬೇಡ್ಕರ್:** ಶೇಖ್ ಮೊಹಿಯುದ್ದಿನ್ ಮತ್ತು ಶ್ರೀ ಕ್ಷುದಿರಾಂ ಮಹತಾ ಅವರು ಮಂಡಿಸಿರುವ ತಿದ್ದುಪಡಿಗಳು, ರಾಜ್ಯಗಳ ವಿಧಾನ ಪರಿಷತ್ತಿನ ಪದವೀಧರರ ಮತ ಕ್ಷೇತ್ರವನ್ನು ವಿಭಜನೆ ಮಾಡುವುದಕ್ಕೆ ಸಂಬಂಧಿಸಿವೆ, ಮೂಲತಃ, ರಾಷ್ಟ್ರಪತಿಯವರು ಹೊರಡಿಸಿದ ಆದೇಶದಲ್ಲಿ ವಿಭಿನ್ನ ರೀತಿಯಲ್ಲಿ ವರ್ಗೀಕರಣ ಮಾಡಲಾಗಿತ್ತು. ಸಮಿತಿಯ, ನಾನು ಆಹ್ವಾನಿಸಿದ್ದ ಸದಸ್ಯರು ಶೇಖ್‌ಮೊಹಿಯುದ್ದಿನ್ ಮತ್ತು ಶ್ರೀ ಮಹತಾರವರು ಪ್ರಸ್ತಾಪಿಸಿದ ಆದೇಶವನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದ್ದರು, ಎಂದರೆ, ಪಾಟ್ನಾಕ್ಕೆ ಪ್ರತ್ಯೇಕ ವಿಭಾಗ, ತಿರ್‌ಹತ್‌ಗೆ ಪ್ರತ್ಯೇಕ ವಿಭಾಗ, ಭಾಗಲ್ಪುರಕ್ಕೆ ಪ್ರತ್ಯೇಕ ವಿಭಾಗ ಮತ್ತು ಛೋಟಾ ನಾಗಪುರಕ್ಕೆ ಪ್ರತ್ಯೇಕ ವಿಭಾಗ ಇರಬೇಕಾಗುತ್ತದೆ. ಒಟ್ಟಾರೆ, ಈ ತಿದ್ದುಪಡಿಗಳನ್ನು ಮಂಡಿಸುವ ಜವಾಬ್ದಾರಿಯನ್ನು ಹೊತ್ತುಕೊಂಡು

ಈ ಇಬ್ಬರು ಸದಸ್ಯರು ಮಂಡಿಸಿದ ವಾದಗಳಲ್ಲಿ ಸ್ವಲ್ಪ ಸತ್ವ ಇದೆಯೆಂದು ನನ್ನ ಅನಿಸಿಕೆ. ರಾಜ್ಯಗಳ ವಿಧಾನ ಪರಿಷತ್ತಿನ ಶಿಕ್ಷಕರ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಅದನ್ನೇ ಮಾಡಲಾಗಿದೆ. ಎಂದರೆ ಬಿಹಾರವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ, ಪಾಟ್ನಾ, ತಿರಹತ್, ಭಾಗಲ್ಪುರ ಮತ್ತು ಛೋಟಾನಾಗಪುರ. ಸಭೆಯಲ್ಲಿ ಭಾಗವಹಿಸಿದ್ದ ಬಿಹಾರದ ಸದಸ್ಯರ ಮನದ ಇಂಗಿತ, ನಾನು ಅರ್ಥಮಾಡಿಕೊಂಡಿರುವ ಪ್ರಕಾರ, ಈ ತಿದ್ದುಪಡಿಯಲ್ಲಿ ಪ್ರಸ್ತಾಪಿಸಿರುವ ವ್ಯವಸ್ಥೆಯ ಪರ ಇದೆ.

**ಮಾನ್ಯ ಉಪಸಭಾಪತಿಗಳು:** ಅವರೇನು ಮಾಡಿದ್ದಾರೆಂದರೆ, ಇಡೀ ಬಿಹಾರ ರಾಜ್ಯವು ಪದವೀಧರರಿಗೆ ಒಂದೇ ಮತಕ್ಷೇತ್ರವಾಗಿರುವುದರ ಬದಲು, ಈ ತಿದ್ದುಪಡಿಯಲ್ಲಿ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ.

**ಡಾ. ಅಂಬೇಡ್ಕರ್:** ಪದವೀಧರರಿಗೆ ಮತ್ತು ಶಿಕ್ಷಕರಿಗೆ ಇಬ್ಬರಿಗೂ.

**ಮಾನ್ಯ ಉಪಸಭಾಪತಿಗಳು :** ರಾಷ್ಟ್ರಪತಿಯವರ ಆದೇಶದಲ್ಲಿ, ಪದವೀಧರರನ್ನು ಮಾತ್ರವೇ ನಮೂದು ಮಾಡಲಾಗಿತ್ತು.

**ಡಾ. ಅಂಬೇಡ್ಕರ್:** ತಾವು, ದಯಮಾಡಿ, ಪಟ್ಟಿ ೪, ಬಿಹಾರ ನೋಡಿದರೆ ತಮಗೆ...............

**ಮಾನ್ಯ ಉಪಸಭಾಪತಿಗಳು:** ಶಿಕ್ಷಕರ ಮತ ಕ್ಷೇತ್ರವನ್ನು ನಂತರ ಇಡುತ್ತೇನೆ. ಮಾನ್ಯ ಸದಸ್ಯರು ರಾಜ್ಯಗಳ ವಿಧಾನ ಪರಿಷತ್ತಿನ ಮತ ಕ್ಷೇತ್ರಗಳ ಪುನರ್ ವಿಂಗಡನೆ ಆದೇಶವನ್ನು ನೋಡಬೇಕು. ಕೋಷ್ಟಕದಲ್ಲಿ, ಬಿಹಾರ ಶೀರ್ಷಿಕೆಯಲ್ಲಿ ಪದವೀಧರರು ಪ್ರಪ್ರಥಮ ನಮೂದು. ತಿದ್ದುಪಡಿ ಏನೆಂದರೆ, ಅಂಕಣ ೨ರಲ್ಲಿ ಪದವೀಧರರ ಮತ ಕ್ಷೇತ್ರವಾಗಿ 'ಇಡೀ ರಾಜ್ಯ'ವನ್ನು ನಮೂದಿಸಿರುವುದಕ್ಕೆ ಬದಲಾಗಿ ಇಡೀ ರಾಜ್ಯವನ್ನು, ಚುನಾವಣೆಯ ಉದ್ದೇಶಕ್ಕಾಗಿ ನಾಲ್ಕು ಉಪ ವಿಭಾಗಗಳನ್ನಾಗಿ ವಿಭಜಿಸಬಹುದು. ಮಾನ್ಯ ಸದಸ್ಯರು ತನ್ನ ತಿದ್ದುಪಡಿಯ ನೋಟೀಸು ಕೊಟ್ಟಿದ್ದಾರೆ. ಅದನ್ನು ಸದನದ ಮುಂದೆ ಇಡುತ್ತೇನೆ. ನಂತರ ಶಿಕ್ಷಕರತ್ತ ಬರುತ್ತೇನೆ.

**ಮಾನ್ಯ ಉಪಸಭಾಪತಿಗಳು:** ಸೂಚನೆ ಹೀಗಿದೆ:

೧೯೫೧ ರ ಸೆಪ್ಟೆಂಬರರ ೨೦ ರಂದು ಮಂಡಿಸಿದ್ದ, ೧೯೫೧ರ ಪರಿಷತ್ ಮತಕ್ಷೇತ್ರಗಳ (ಬಿಹಾರ) ಪುನರ್‌ವಿಂಗಡನೆ ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟು ಮಾಡಬೇಕು, ಎಂದರೆ,–

> ೧. ಕೋಷ್ಟಕದಲ್ಲಿ, ಅಂಕಣ ೧ರಲ್ಲಿ ಇರುವ "ಬಿಹಾರ (ಪದವೀಧರರು)" ನಮೂದಿಗೆ ಬದಲಾಗಿ ಮತ್ತು ಅಂಕಣಗಳು ೨ ಮತ್ತು ೩ ರಲ್ಲಿ ಅದರ ಎದುರಿಗೆ ಇರುವ ಎಲ್ಲ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

| ೧ | ೨ | ೩ |
|---|---|---|
| ಪಾಟ್ನಾ ವಿಭಾಗ, (ಪದವೀಧರರು) | ಪಾಟ್ನಾ ವಿಭಾಗ | ೨ |
| ತಿರ್‌ಹತ್ ವಿಭಾಗ (ಪದವೀಧರರು) | ತಿರಹತ್ ವಿಭಾಗ | ೨ |
| ಭಾಗಲ್ಪುರ ವಿಭಾಗ (ಪದವೀಧರರು) | ಭಾಗಲ್ಪುರ ವಿಭಾಗ | ೧ |
| ಛೋಟಾ ನಾಗಪುರ (ಪದವೀಧರರು) | ಛೋಟಾ ನಾಗಪುರ | ೧ |

> ೨. ಕೋಷ್ಟಕದಲ್ಲಿ, "ಶಿಕ್ಷಕರ ಮತ ಕ್ಷೇತ್ರಗಳು" ಶೀರ್ಷಿಕೆಯ ಅಂಕಣಗಳು ೧, ೨ ಮತ್ತು ೩ ರಲ್ಲಿ ಬರುವ ಎಲ್ಲ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

| ೧ | ೨ | ೩ |
|---|---|---|
| ಪಾಟ್ನಾ ವಿಭಾಗ, (ಶಿಕ್ಷಕರು) | ಪಾಟ್ನಾ ವಿಭಾಗ | ೧ |
| ತಿರ್‌ಹತ್ ವಿಭಾಗ (ಶಿಕ್ಷಕರು) | ತಿರಹತ್ ವಿಭಾಗ | ೧ |
| ಭಾಗಲ್ಪುರ ವಿಭಾಗ (ಶಿಕ್ಷಕರು) | ಭಾಗಲ್ಪುರ ವಿಭಾಗ | ೨ |
| ಛೋಟಾ ನಾಗಪುರ (ಶಿಕ್ಷಕರು) | ಛೋಟಾ ನಾಗಪುರ | ೨ |

ಸೂಚನೆ ಅಂಗೀಕೃತ ಆಗಿದೆ.

**ಮಾನ್ಯ ಉಪಸಭಾಪತಿಗಳು:** ಬಿಹಾರಕ್ಕೆ ಸಂಬಂಧಿಸಿದ ಪದವೀಧರರ ಮತ ಕ್ಷೇತ್ರಕ್ಕೆ ಸಂಬಂಧಿಸಿದ ರಾಷ್ಟ್ರಪತಿಯವರ ಆದೇಶವು ಈ ಮಟ್ಟಿಗೆ ಮಾರ್ಪಾಟು ಆಗಿದೆ.

ಹಾಗೆಯೇ, ಬಿಹಾರಕ್ಕೆ ಸಂಬಂಧಿಸಿದ ಶಿಕ್ಷಕರ ಮತಕ್ಷೇತ್ರಕ್ಕೆ ಸಂಬಂಧಿಸಿದ ರಾಷ್ಟ್ರಪತಿಯವರ ಆದೇಶವು ಈ ಮಟ್ಟಿಗೆ ಮಾರ್ಪಾಟು ಆಗಿದೆ.

ಈ ಆದೇಶಕ್ಕೆ ತಿದ್ದುಪಡಿಗಳನ್ನು ಮಂಡಿಸಿದ ಎಲ್ಲ ಇತರ ಮಾನ್ಯ ಸದಸ್ಯರು, ಅವುಗಳನ್ನು ಹಿಂತೆಗೆದುಕೊಳ್ಳಲು ಸದನದ ಅನುಮತಿ ಉಂಟು.

ತಿದ್ದುಪಡಿಗಳನ್ನು, ಅನುಮತಿಯಂತೆ, ಹಿಂತೆಗೆದುಕೊಳ್ಳಲಾಗಿದೆ.

## ಬಾಂಬೆ ಆದೇಶ

**ಡಾ. ಅಂಬೇಡ್ಕರ್:** ಬಾಂಬೆ (ಪರಿಷತ್) ಆದೇಶಕ್ಕೆ ಸಂಬಂಧಿಸಿದಂತೆ ಪಟ್ಟಿ ೩ರಲ್ಲಿ. ಶ್ರೀ ದಿಯೋಗಿರಿಕರ್‌ರವರ ತಿದ್ದುಪಡಿ ಸಂಖ್ಯೆ ೩ ರಿಂದ ಮಾರ್ಪಾಟಾದಂತೆ, ಪಟ್ಟಿ ಸಂಖ್ಯೆ ೧, ಭಾಗಗಳು ೧ ಮತ್ತು ೨ಕ್ಕೆ ಸಂಬಂಧಿಸಿದ ತಿದ್ದುಪಡಿ ಸಂಖ್ಯೆ ೧ ನ್ನು ಒಪ್ಪಿಕೊಳ್ಳುತ್ತೇನೆ.

ಈ ತಿದ್ದುಪಡಿಗಳ ಸಾರಾಂಶವು ಬಿಹಾರ ಆದೇಶಕ್ಕೆ ಸಂಬಂಧಿಸಿದಂತೆ ನಾವು ಒಪ್ಪಿಕೊಂಡ ತಿದ್ದುಪಡಿಗಳ ಸಾರಾಂಶದಂತೆಯೇ ಇದೆ. ಬಾಂಬೆ, ಅಹಮದಾಬಾದ್ ಮತ್ತು ಪೂನಾಗಳಿಗೆ ಪದವೀಧರರ ಸ್ಥಾನಗಳನ್ನು ಹಂಚಿ, ರಾಷ್ಟ್ರಪತಿಯವರು ಹೊರಡಿಸಿದ ಆದೇಶವು, ಕೆಲವೊಂದು ಪ್ರಮಾಣದಲ್ಲಿ, ಬಾಂಬೆಗೆ ಎರಡು ಸ್ಥಾನಗಳನ್ನು, ಅಹಮದಾಬಾದ್ ಮತ್ತು ಪೂನಾ ಎರಡನ್ನೂ ಸೇರಿಸಿ ಒಂದು ಸ್ಥಾನವನ್ನು ಕೊಟ್ಟಿದೆ. ಈ ಹಂಚಿಕೆಯನ್ನು ಮಾರ್ಪಾಟು ಮಾಡಬೇಕೆಂದು, ತಿದ್ದುಪಡಿಯನ್ನು ಮಂಡಿಸಿರುವ ಶ್ರೀ ದಿಯೊಗಿರಿಕರ್ ಮತ್ತು ಇತರರ ಅಪೇಕ್ಷೆ. ಅಹಮದಾಬಾದ್ ಮತ್ತು ಪೂನಾ ನಡುವೆ ಆವರ್ತನ ಇರಬೇಕೆಂದು ಅಥವಾ ಪ್ರತಿಯೊಂದಕ್ಕೂ ಒಂದು ಸ್ಥಾನ ಸರದಿಯಂತೆ ಹೋಗಬೇಕೆಂದು ಅವರು ಮೊದಲು ಬಯಸಿದ್ದರು. ಈ ಸರದಿ ಪದ್ಧತಿಯು ಸರಿ ಎಂದು ನನಗೆ ಅನ್ನಿಸುತ್ತಿಲ್ಲ. ಆದರೂ, ಬಾಂಬೆ, ಪೂನಾ ಮತ್ತು ಅಹಮದಾಬಾದ್‌ನಂಥ ಎಲ್ಲ ಪಟ್ಟಣಗಳನ್ನು, ಆ ನಿರ್ದಿಷ್ಟ ಪಟ್ಟಣಗಳಲ್ಲಿ ವಾಸಿಸುತ್ತಿರುವ ಎಲ್ಲ ಪದವೀಧರರ ಒಟ್ಟು ಸಂಖ್ಯೆಯನ್ನು ನಿರ್ಧರಿಸುವುದು ಸಾಧ್ಯವಿಲ್ಲವಾದರೂ, ಸಮಾನವಾಗಿ ಕಾಣುವುದು ವಿಹಿತವೆಂದು ಒಪ್ಪಿಕೊಳ್ಳುತ್ತೇನೆ. ಹೀಗಾಗಿ, ಬಾಂಬೆಗೆ, ಪೂನಾಕ್ಕೆ ಮತ್ತು ಅಹಮದಾಬಾದಿಗೆ, ಸಮಾನವಾಗಿ, ಪ್ರತಿಯೊಂದಕ್ಕೂ ಒಂದು ಸ್ಥಾನದಂತೆ ಸ್ಥಾನಗಳನ್ನು ಹಂಚಲು ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ. ಶಿಕ್ಷಕರ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆಯೂ ಇದೇ ರೀತಿ ಮಾಡಿದ್ದೇನೆ.

**ಮಾನ್ಯ ಉಪಸಭಾಪತಿಗಳು:** ಸೂಚನೆ ಅಂಗೀಕೃತ ಆಗಿದೆ.

*ಮಾನ್ಯ ಉಪಸಭಾಪತಿಗಳು: ಬಾಂಬೆ ಶಿಕ್ಷಕರ ಮತ ಕ್ಷೇತ್ರಕ್ಕೆ ಸಂಬಂಧಿಸಿದ ರಾಷ್ಟ್ರಪತಿಯವರ ಆದೇಶವು ಈ ಸದನವು ತಿದ್ದುಪಡಿಯನ್ನು ಒಪ್ಪಿಕೊಂಡಿರುವಷ್ಟರ ಮಟ್ಟಿಗೆ ಮಾರ್ಪಾಟು ಆಗಿದೆ. ಹಾಗೆಯೇ, ಬಾಂಬೆ ಪದವೀಧರರ ಮತಕ್ಷೇತ್ರಕ್ಕೆ ಸಂಬಂಧಿಸಿದ ರಾಷ್ಟ್ರಪತಿಯವರ ಆದೇಶವು ಈ ಸದನವು ತಿದ್ದುಪಡಿಯನ್ನು ಒಪ್ಪಿಕೊಂಡಿರುವಷ್ಟರ ಮಟ್ಟಿಗೆ ಮಾರ್ಪಾಟು ಆಗಿದೆ.

**ಡಾ. ಅಂಬೇಡ್ಕರ್:** ಶ್ರೀ ದಿಯೊಗಿರಿಕರ್ ಮತ್ತು ಇತರರ ತಿದ್ದುಪಡಿಯನ್ನು ಒಪ್ಪಿಕೊಂಡ ಪರಿಣಾಮವಾಗಿ ಪಟ್ಟಿ ಸಂಖ್ಯೆ ೨ ಬಾಂಬೆ (ಪರಿಷತ್) ಆದೇಶಕ್ಕೆ ಸಂಬಂಧಿಸಿದ ನನ್ನ ತಿದ್ದುಪಡಿ ಸಂಖ್ಯೆ ೨ ರಲ್ಲಿರುವ ಭಾಗಗಳು (೧) ರಿಂದ (೬) ವರೆಗೆ ಹಿಂತೆಗೆದುಕೊಳ್ಳಲು ಸದನದ ಅನುಮತಿ ಕೋರುತ್ತೇನೆ.

ತಿದ್ದುಪಡಿಗಳ (೧) ರಿಂದ (೬)ರ ವರೆಗಿನ ಭಾಗಗಳನ್ನು ಅನುಮತಿಯಂತೆ ಹಿಂತೆಗೆದುಕೊಳ್ಳಲಾಗಿದೆ.

**ಮಾನ್ಯ ಉಪಸಭಾಪತಿಗಳು:** ಶ್ರೀ ದಿಯೊಗಿರಿಕರ್ ರವರ ತಿದ್ದುಪಡಿಯಿಂದಾಗಿ ಆದ ಮಾರ್ಪಾಟಿನ ಜತೆಗೆ, ರಾಷ್ಟ್ರಪತಿಯವರ ಆದೇಶವು ಈ ತಿದ್ದುಪಡಿಯಷ್ಟರ ಮಟ್ಟಿಗೆ ಮಾರ್ಪಾಟು ಆಗಿದೆ.

ಸೂಚನೆ ಏನೆಂದರೆ:

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಪರಿಷತ್ ಮತಕ್ಷೇತ್ರಗಳ (ಮದ್ರಾಸ್) ಪುನರ್ ವಿಂಗಡನೆ ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟು ಮಾಡಬೇಕು, ಎಂದರೆ,–

> (೧) ಪುಟ ೧ರಲ್ಲಿ, ಕೋಷ್ಟಕದಲ್ಲಿ, "ಪದವೀಧರರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ, ಅಂಕಣ ೧ರಲ್ಲಿ ಇರುವ "ಮದ್ರಾಸ್ ದಕ್ಷಿಣ" (ಪದವೀಧರರು) ನಮೂದಿನ ಎದುರಿಗೆ ಇರುವ ಅಂಕಣ ೨ ರಲ್ಲಿ ಬರುವ "ಮದ್ರಾಸ್ ನಗರ, ಮತ್ತು ಚೆಂಗ್ಲೆಪುಟ್" ಪದಗಳಿಗೆ ಬದಲಾಗಿ "ಮದ್ರಾಸ್, ಚೆಂಗ್ಲೆಪುಟ್" ಪದಗಳನ್ನು ಸೇರಿಸಬೇಕು.
>
> (೨) ಪುಟ ೧ರಲ್ಲಿ, ಕೋಷ್ಟಕದಲ್ಲಿ "ಶಿಕ್ಷಕರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ, ಅಂಕಣ ೧ರಲ್ಲಿ ಇರುವ "ಮದ್ರಾಸ್ ದಕ್ಷಿಣ (ಶಿಕ್ಷಕರು) ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಮದ್ರಾಸ್ ನಗರ, ಮತ್ತು ಚೆಂಗ್ಲೆಪುಟ್" ಪದಗಳಿಗೆ ಬದಲಾಗಿ "ಮದ್ರಾಸ್, ಚೆಂಗ್ಲೆಪುಟ್" ಪದಗಳನ್ನು ಸೇರಿಸಬೇಕು.

ಸೂಚನೆ ಅಂಗೀಕೃತ ಆಗಿದೆ.

**ಡಾ. ಅಂಬೇಡ್ಕರ್:** ಸರ್, ಶ್ರೀ ಕೇಶವರಾವ್ ಮಂಡಿಸಿದ, ಪಟ್ಟಿ ಸಂಖ್ಯೆ ೨ (ಮದ್ರಾಸ್ ಪರಿಷತ್ ಆದೇಶ)ಕ್ಕೆ ಸಂಬಂಧಿಸಿದ ತಿದ್ದುಪಡಿ ಸಂಖ್ಯೆ ೨ ನ್ನು ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಪತಿಗಳು :** ಸೂಚನೆ ಏನೆಂದರೆ:

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಪರಿಷತ್ ಮತ ಕ್ಷೇತ್ರಗಳ (ಮದ್ರಾಸ್) ಪುನರ್ ವಿಂಗಡನೆ ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟು ಮಾಡಬೇಕು, ಎಂದರೆ,–

> ಕೋಷ್ಟಕದಲ್ಲಿ, ಅಂಕಣ ೨ರಲ್ಲಿ "ಮಲಬಾರ್ ಮತ್ತು ಸೌತ್ ಕೆನರಾ ಜಿಲ್ಲೆಗಳು" ಪದಗಳು ಎಲ್ಲೆಲ್ಲಿ ಬರುವವೋ ಆ ಪದಗಳ ನಂತರ ಈ ಮುಂದಿನದನ್ನು

---

* ಸಂ.ಚ. ಸಂಪುಟ ೧೬ ಭಾಗ II, ೧೧, ಅಕ್ಟೋಬರ್ ೧೯೫೧ ಪುಟಗಳು ೪೬೨೧–೨೨

** ಸಂ.ಚ. ಸಂಪುಟ ೧೬ ಭಾಗ II, ೧೧, ಅಕ್ಟೋಬರ್ ೧೯೫೧ ಪುಟಗಳು ೪೬೨೪

ಸೇರಿಸಬೇಕು, ಎಂದರೆ,–

"ಮತ್ತು ಮಿನಿಕಾಯ್, ಲಕಡೀವ್ಸ್ ಮತ್ತು ಅಮಿನ್‌ಡಿವಿಸ್"

ಸೂಚನೆ ಅಂಗೀಕೃತ ಆಗಿದೆ.

**ಮಾನ್ಯ ಉಪಸಭಾಪತಿಗಳು:** ಪರಿಷತ್ ಮತ ಕ್ಷೇತ್ರಗಳ (ಮದ್ರಾಸ್) ಆದೇಶಕ್ಕೆ ಸಂಬಂಧಿಸಿದ ರಾಷ್ಟ್ರಪತಿಯವರ ಆದೇಶವು, ಈ ಸದನವು ಈ ಎರಡು ತಿದ್ದುಪಡಿಗಳನ್ನು ಒಪ್ಪಿಕೊಂಡಿರುವಷ್ಟರ ಮಟ್ಟಿಗೆ ಮಾರ್ಪಾಟು ಆಗಿದೆ.

## ಉತ್ತರ ಪ್ರದೇಶ ಆದೇಶ

**[**]ಡಾ. ಅಂಬೇಡ್ಕರ್ :** ಶ್ರೀ ಬಾಬು ಗೋಪಿನಾಥ್ ಸಿಂಗ್‌ರವರು ಮಂಡಿಸಿದ ತಿದ್ದುಪಡಿ ಸಂಖ್ಯೆ ೧, ಭಾಗಗಳು (೧) ಮತ್ತು (೨), ದ್ವಿತೀಯ ಪರ್ಯಾಯಗಳು, ಒಪ್ಪಿಕೊಳ್ಳುತ್ತೇನೆ. ಅದು ನಿಕಟತೆಗೆ ಅವಕಾಶ ಕಲ್ಪಿಸುವುದರಿಂದ ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಉಪಸಭಾಪತಿಗಳು:** ಸೂಚನೆ ಏನೆಂದರೆ:

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಪರಿಷತ್ ಕ್ಷೇತ್ರಗಳ (ಉತ್ತರ ಪ್ರದೇಶ) ಪುನರ್ ವಿಂಗಡನೆ ಆದೇಶದಲ್ಲಿ ಈ ಮುಂದಿನಂತಿರುವ ಮಾರ್ಪಾಟುಗಳನ್ನು ಮಾಡಬೇಕು, ಎಂದರೆ,–

೧. (i) ಕೋಷ್ಟಕದಲ್ಲಿ, "ಪದವೀಧರರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ, ಅಂಕಣ ೧ರಲ್ಲಿ ಇರುವ "ಉತ್ತರ ಪ್ರದೇಶ ಪಶ್ಚಿಮ (ಪದವೀಧರರು)" ನಮೂದಿನ ಎದರಿಗೆ ಇರುವ ಅಂಕಣ ೨ ರಲ್ಲಿ ಬರುವ ಎಲ್ಲ ಪದಗಳಿಗೆ ಬದಲಾಗಿ "ಮೀರತ್, ಆಗ್ರಾ, ಝೂಂಸಿ, ಅಲಹಾಬಾದ್ ಮತ್ತು ಫೈಜಾಬಾದ್ ವಿಭಾಗಗಳು" ಪದಗಳನ್ನು ಸೇರಿಸಬೇಕು.

(ii) ಕೋಷ್ಟಕದಲ್ಲಿ, "ಪದವೀಧರರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ, ಅಂಕಣ ೧ರಲ್ಲಿ ಇರುವ "ಉತ್ತರ ಪ್ರದೇಶ ಪೂರ್ವ (ಪದವೀಧರರು)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ ಎಲ್ಲ ಪದಗಳಿಗೆ ಬದಲಾಗಿ "ರೋಹಿಲ್‌ಖಂಡ, ಕುಮಾಂವ್, ಲಕ್ನೊ, ಬನಾರಸ್ ಮತ್ತು ಗೋರಖ್‌ಪುರ ವಿಭಾಗಗಳು" ಪದಗಳನ್ನು ಸೇರಿಸಬೇಕು.

೨. (i) ಕೋಷ್ಟಕದಲ್ಲಿ "ಶಿಕ್ಷಕರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ, ಅಂಕಣ ೧ರಲ್ಲಿ ಇರುವ "ಉತ್ತರ ಪ್ರದೇಶ ಪಶ್ಚಿಮ (ಶಿಕ್ಷಕರು)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ ಎಲ್ಲ ಪದಗಳಿಗೆ ಬದಲಾಗಿ "ಮೀರತ್, ಆಗ್ರಾ, ಝೂಂಸಿ, ಅಲಹಾಬಾದ್ ಮತ್ತು ಫೈಜಾಬಾದ್ ವಿಭಾಗಗಳು " ಪದಗಳನ್ನು ಸೇರಿಸಬೇಕು.

---

** ಸಂ.ಚ. ಸಂಪುಟ ೧೬ ಭಾಗ II, ೧೧, ಅಕ್ಟೋಬರ್ ೧೯೫೧ ಪುಟಗಳು ೪೬೨೫–೨೬

(ii) ಕೋಷ್ಟಕದಲ್ಲಿ "ಶಿಕ್ಷಕರ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ, ಅಂಕಣ ೧ರಲ್ಲಿ ಇರುವ "ಉತ್ತರ ಪ್ರದೇಶ ಪೂರ್ವ (ಶಿಕ್ಷಕರು)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ ಎಲ್ಲ ಪದಗಳಿಗೆ ಬದಲಾಗಿ "ರೋಹಿಲಖಂಡ, ಕುಮಾಂವ್, ಲಕ್ನೊ, ಬನಾರಸ್ ಮತ್ತು ಗೋರಖ್‌ಪುರ ವಿಭಾಗಗಳು" ಪದಗಳನ್ನು ಸೇರಿಸಬೇಕು.

ಸೂಚನೆ ಅಂಗೀಕೃತ ಆಗಿದೆ.

**ಡಾ. ಅಂಬೇಡ್ಕರ್:** ೧೯೫೧ರ ಪರಿಷತ್ ಮತಕ್ಷೇತ್ರಗಳ (ಉತ್ತರ ಪ್ರದೇಶ) ಪುನರ್ ವಿಂಗಡನೆ ಆದೇಶಕ್ಕೆ ಡಾ. ಸಿ. ಡಿ. ಪಾಂಡೆಯವರು ಮಂಡಿಸಿದ, ಪಟ್ಟಿ ೨ರಲ್ಲಿರುವ ತಿದ್ದುಪಡಿ ಸಂಖ್ಯೆ ೨ನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ.

**ಮಾನ್ಯ ಉಪಸಭಾಪತಿಗಳು:** ಸೂಚನೆ ಏನೆಂದರೆ:

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಪರಿಷತ್ ಮತ ಕ್ಷೇತ್ರಗಳ (ಉತ್ತರ ಪ್ರದೇಶ) ಪುನರ್ ವಿಂಗಡನೆ ಆದೇಶಕ್ಕೆ ಈ ಮುಂದಿನಂತಿರುವ ಮಾರ್ಪಾಟುಗಳನ್ನು ಮಾಡಬೇಕು, ಎಂದರೆ,–

(i) ಕೋಷ್ಟಕದಲ್ಲಿ, "ಸ್ಥಳೀಯ ಪ್ರಾಧಿಕಾರಗಳ ಮತ ಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ ಅಂಕಣ ೧ರಲ್ಲಿ ಇರುವ "ಉತ್ತರ ಪ್ರದೇಶ ಈಶಾನ್ಯ (ಸ್ಥಳೀಯ ಪ್ರಾಧಿಕಾರಗಳು)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಷಹಜಹಾನ್‌ಪುರ" ಪದಕ್ಕೆ ಬದಲಾಗಿ "ಬುದೌನ್" ಪದವನ್ನು ಸೇರಿಸಬೇಕು.

(ii) ಕೋಷ್ಟಕದಲ್ಲಿ, "ಸ್ಥಳೀಯ ಪ್ರಾಧಿಕಾರಗಳ ಮತಕ್ಷೇತ್ರಗಳು" ಶೀರ್ಷಿಕೆಯ ಕೆಳಗೆ, ಅಂಕಣ ೧ರಲ್ಲಿ "ಉತ್ತರ ಪ್ರದೇಶ ಕೇಂದ್ರ (ಸ್ಥಳೀಯ ಪ್ರಾಧಿಕಾರ)" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಬರುವ "ಬುದೌನ್" ಪದಕ್ಕೆ ಬದಲಾಗಿ "ಷಹಜಾಹಾನ್‌ಪುರ" ಪದವನ್ನು ಸೇರಿಸಬೇಕು.

ಸೂಚನೆ ಅಂಗೀಕೃತ ಆಗಿದೆ.

ಆದೇಶಕ್ಕೆ ಸಂಬಂಧಿಸಿದಂತೆ ಮಂಡಿಸಿರುವ ಇತರ ತಿದ್ದುಪಡಿಗಳನ್ನು ಅನುಮತಿಯಂತೆ, ಹಿಂತೆಗೆದುಕೊಳ್ಳಲಾಗಿದೆ.

**ಮಾನ್ಯ ಉಪಸಭಾಪತಿಗಳು:** ಬಾಬು ಗೋಪಿನಾಥ್ ಸಿಂಗ್ ಮತ್ತು ಡಾ. ಸಿ.ಡಿ. ಪಾಂಡೆ ಹೆಸರುಗಳಲ್ಲಿದ್ದ ಪರಿಷತ್ ಮತಕ್ಷೇತ್ರಗಳ (ಉತ್ತರ ಪ್ರದೇಶ) ಪುನರ್ ವಿಂಗಡನೆಗೆ ಸಂಬಂಧಿಸಿದ ರಾಷ್ಟ್ರಪತಿಯವರ ಆದೇಶವು ಈ ಸದನವು ಅಂಗೀಕರಿಸಿದ ತಿದ್ದುಪಡಿಗಳಿಂದ ಅಷ್ಟರಮಟ್ಟಿಗೆ ಮಾರ್ಪಾಟಾಗಿದೆ.

## ಪಶ್ಚಿಮ ಬಂಗಾಳ ಆದೇಶ

**ಡಾ. ಅಂಬೇಡ್ಕರ್:** ೧೯೫೧ರ ಪರಿಷತ್ ಮತಕ್ಷೇತ್ರಗಳ (ಪಶ್ಚಿಮ ಬಂಗಾಳ) ಪುನರ್ ವಿಂಗಡನೆ ಆದೇಶಕ್ಕೆ ಶ್ರೀಯುತರಾದ ಸಾಮಂತ ಮತ್ತು ಅಬ್ದುಸ್ ಸತ್ತಾರ್ ಹೆಸರುಗಳಲ್ಲಿ ಇದ್ದ, ಪಟ್ಟಿ ೨ ರಲ್ಲಿರುವ, ತಿದ್ದುಪಡಿ ಸಂಖ್ಯೆ ೨ನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಚಟ್ಟೋಪಧ್ಯಾಯ (ಪಶ್ಚಿಮ ಬಂಗಾಳ):** ಒಮ್ಮತಕ್ಕೆ ಬಂದಿದ್ದರಿಂದಾಗಿ ನನ್ನ ತಿದ್ದುಪಡಿಯನ್ನು

ಹಿಂತೆಗೆದುಕೊಳ್ಳಲು ಸದನದ ಅನುಮತಿ ಕೋರುತ್ತೇನೆ. ಸ್ಥಳೀಯ ಪ್ರಾಧಿಕಾರಗಳಿಗೆ ನಾಮನಿರ್ದೇಶನಗೊಂಡ ಸದಸ್ಯರಿಗೆ ಸಂಬಂಧಿಸಿದಂತೆ ನನಗಿರುವ ಅನುಮಾನವನ್ನು, ಈ ಸದನದಲ್ಲಿ ಸೂಚನೆಯನ್ನು ಇಡುವುದಕ್ಕೂ ಮೊದಲು ಬಗೆಹರಿಸಿಕೊಳ್ಳಬೇಕಾಗಿದೆ. ನಾಮಕರಣಗೊಂಡ ಸದಸ್ಯರಿಗೆ ಪರಿಷತ್ತಿಗೆ ನಡೆಯುವ ಚುನಾವಣೆಗಳಲ್ಲಿ ಮತ ನೀಡುವ ಹಕ್ಕು ಇರಬೇಕೆನ್ನುವುದು ಈ ಸಂಸತ್ತಿನ ಅಥವಾ ರಾಜ್ಯಾಂಗ ರಚನಾ ಸಭೆಯ ಅಪೇಕ್ಷೆ ಯಾವಾಗಲೂ ಆಗಿರಲೇ ಇಲ್ಲ. ಕೇಂದ್ರದಲ್ಲಿ ಹಾಗೆಯೇ ರಾಜ್ಯಗಳಲ್ಲಿರುವ ಮೇಲ್ಮನೆಗಳಿಗೆ ನಾಮನಿರ್ದೇಶನಗೊಂಡ ಸದಸ್ಯರಿಗೆ, ರಾಷ್ಟ್ರಪತಿಯವರ ಚುನಾವಣೆಯಲ್ಲಿ ಮತ ನೀಡುವ ಹಕ್ಕು ಇರತಕ್ಕದ್ದಲ್ಲ ಎಂದು ಸಂವಿಧಾನದಲ್ಲಿ ವಿಧಿಸಲಾಗಿದೆ. ನಾವು ಚರ್ಚಿಸುತ್ತಿರುವ ಈ ಮತ ಕ್ಷೇತ್ರದಲ್ಲಿ ಎರಡು ಮುನಿಸಿಪಾಲಿಟಿಗಳು ಇವೆ, ಒಟ್ಟು ಸಂಖ್ಯಾ ಬಲ ೨೪ ಸದಸ್ಯರುಗಳು, ಇವರೆಲ್ಲರೂ ನಾಮನಿರ್ದೇಶಗೊಂಡವರು, ಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಇವರಲ್ಲರಿಗೂ ಮತ ನೀಡುವ ಹಕ್ಕು ಇದ್ದರೆ ಬಂಗಾಳ ರಾಜ್ಯದಲ್ಲಿರುವ ಪರಿಷತ್ತು ಅದೊಂದು ಬಗೆಯ ನಗೆಪಾಟಲಿಗೆ ಈಡಾಗುತ್ತದೆ, ಏಕೆಂದರೆ, ನಾಮಕರಣಗೊಂಡ ಸದಸ್ಯರಿಂದ ಆಯ್ಕೆಯಾದ ಸದಸ್ಯರು, ಆಯ್ಕೆಗೊಂಡ ಸದಸ್ಯರಿಂದ ಆಯ್ಕೆಯಾದ ಪ್ರತಿನಿಧಿಗಳ ಸರಿಸಮ ಆಗಿಬಿಡುತ್ತಾರೆ. ಹೀಗಾಗಿ, ನಾಮನಿರ್ದೇಶನಗೊಂಡ ಸದಸ್ಯರಿಗೆ, ರಾಷ್ಟ್ರಪತಿಯವರ ಚುನಾವಣೆಯಲ್ಲಿ ಅಥವಾ ಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಮತ ನೀಡುವ ಯಾವುದೇ ಹಕ್ಕು ಇರಬೇಕೆಂಬ ಅಪೇಕ್ಷೆ ಸಂಸತ್ತಿಗಾಗಲಿ ಅಥವಾ ರಾಜ್ಯಾಂಗ ರಚನಾ ಸಭೆಗಾಗಲಿ ಯಾವಾಗಲೂ ಇರಲೇ ಇಲ್ಲ. ಗಮನ ಕೊಡದೆ ಇದ್ದುದರಿಂದ ಅಷ್ಟೊಂದು ಗುರುತರ ಸ್ವರೂಪದ ತಪ್ಪು ಒಳ ಸೇರಿದೆ. ಈ ತಪ್ಪನ್ನು ಸರಿಪಡಿಸಲು ಏನ್ನನ್ನಾದರೂ ಮಾಡಬಹುದೇ ಎಂಬ ಬಗ್ಗೆ ತಿಳಿಯಬಯಸುತ್ತೇನೆ.

**ಡಾ. ಅಂಬೇಡ್ಕರ್:** ಮಾನ್ಯ ಸ್ನೇಹಿತರು ಎತ್ತಿರುವ ಅಂಶದ ಪ್ರಾಮುಖ್ಯವು ನನಗೆ ತಿಳಿಯುತ್ತಿದೆ. ಆದರೆ, ಸಮಸ್ಯೆ ಏನೆಂದರೆ ಇದೊಂದು ಸಾಂವಿಧಾನಕ ಸಮಸ್ಯೆ. ನಾಮ ನಿರ್ದೇಶನಗೊಂಡ ಮತ್ತು ಆಯ್ಕೆಗೊಂಡ ಸದಸ್ಯರ ನಡುವೆ ಸಂವಿಧಾನವು ಭೇದ ಮಾಡಿಲ್ಲ. ನಾಮಕರಣಗೊಂಡ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಲು ಅನುಮತಿ ನೀಡುವುದು ರಾಜ್ಯಾಂಗ ರಚನಾ ಸಭೆಯ ಆಶಯ ಆಗಿರಲಿಲ್ಲ ಎಂಬುದನ್ನು ನನ್ನ ಸ್ನೇಹಿತರ ಅಭಿಪ್ರಾಯವನ್ನು ನಾನೂ ಕೂಡ ಒಪ್ಪುತ್ತೇನಾದರೂ, ಈ ವಿಷಯವನ್ನು ರಾಜ್ಯಾಂಗ ರಚನಾ ಸಭೆಯ ಗಮನಕ್ಕೆ ತಂದಿರಲಿಲ್ಲವಾದ್ದರಿಂದ, ಸಂವಿಧಾನವನ್ನು ತಿದ್ದುಪಡಿ ಮಾಡಿದ ಹೊರತು, ಈಗ ನಾವು ಏನನ್ನೂ ಮಾಡಲಿಕ್ಕಾಗುವುದಿಲ್ಲ. ಈಗಂತೂ ಇದು ಅಸಾಧ್ಯ ಪ್ರಸ್ತಾಪ.

**ಶ್ರೀ ಚಟ್ಟೋಪಧ್ಯಾಯ:** ಅಂಥ ಸದಸ್ಯರು ಚುನಾವಣೆಯಲ್ಲಿ ಮತದಾರರಾಗದಂತೆ ನಿಷೇಧಿಸಲು ರಾಜ್ಯ ಸರ್ಕಾರವು ಏನನ್ನಾದರೂ ಮಾಡಬಹುದೇ ಮತ್ತು ರಾಜ್ಯ ಸರ್ಕಾರವು ಈ ಹಂತದಲ್ಲೂ ಕೂಡ, ಕಾರ್ಯಕಾರಿ ಆದೇಶವನ್ನು ಹೊರಡಿಸಿ, ಅಂಥವರ ಸದಸ್ಯತ್ವಕ್ಕೆ ಆ ನಿರ್ಬಂಧ ವಿಧಿಸಬಹುದೇ?

**ಡಾ. ಅಂಬೇಡ್ಕರ್:** ಚುನಾವಣೆ ನಡೆಯುವುದಕ್ಕೆ ಮುಂಚೆ ಇಡೀ ಮುನಿಸಿಪಾಲಿಟಿಯು ಸಂಪೂರ್ಣವಾಗಿ ಆಯ್ಕೆಗೊಳ್ಳುವಂತೆ ಮಾಡುವ ಇನ್ನೊಂದು ಮುನಿಸಿಪಲ್ ಕಾಯಿದೆಯನ್ನು ಅಂಗೀಕರಿಸುವುದು ಬಹುಶಃ ಆ ಶಾಸನ ಸಭೆಗೇ ಸೇರಿದ್ದು. ಹಾಗೆ ಮಾಡಿದರೆ ನನ್ನ ಸ್ನೇಹಿತರು ಎತ್ತಿರುವ ಆಕ್ಷೇಪ ಇಲ್ಲವಾಗುತ್ತದೆ. ಆದರೆ, ಈ ವಿಷಯದಲ್ಲಿ ಈ ಸಂಸತ್ತು ಏನೂ ಮಾಡುವಂತಿಲ್ಲ.

**ಶ್ರೀ ಚಟ್ಟೋಪಧ್ಯಾಯ:** ಈ ಬಗ್ಗೆ ಕಾನೂನು ಮಂತ್ರಾಲಯವು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡುವುದೇ?

**ಡಾ. ಅಂಬೇಡ್ಕರ್:** ಬಹುಶಃ ನನ್ನ ಪ್ರಕಾರ, ಇದು ಪ್ರಧಾನಮಂತ್ರಿಯವರು ಪರಿಗಣಿಸಬೇಕಾದ

ಅಂಶ ಮತ್ತು ನಾಮಕರಣಗೊಂಡ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಬಾರದು ಎನ್ನುವುದು ಅಪೇಕ್ಷಣೀಯವೆಂದು ಅವರು ಭಾವಿಸಿದರೆ ಮಂತ್ರಾಲಯಕ್ಕೆ ಅದನ್ನು ತಿಳಿಸುವುದು ಅವರಿಗೇ ಸೇರಿದ್ದು.

**ಶ್ರೀ ಚಟ್ಟೋಪಧ್ಯಾಯ:** ಈ ವಿಷಯದಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಯವರ ಅಭಿಪ್ರಾಯ ಏನು?

**ಪ್ರಧಾನ ಮಂತ್ರಿಗಳು (ಶ್ರೀ ಜವಹರಲಾಲ್ ನೆಹರೂ):** ಕ್ಷಮಿಸಿ, ಚರ್ಚೆಯನ್ನು ನಾನು ಗ್ರಹಿಸಲು ಆಗಲಿಲ್ಲ.

**ಡಾ. ಅಂಬೇಡ್ಕರ್:** ಸನ್ಮಾನ್ಯ ಪ್ರಧಾನ ಮಂತ್ರಿಯವರ ಗಮನಕ್ಕೆ ನಾನು ತರುವ ಅಂಶ ಏನೆಂದರೆ, ಪಶ್ಚಿಮ ಬಂಗಾಳದಲ್ಲಿ ಅನೇಕ ಮುನಿಸಿಪಾಲಿಟಿಗಳಿವೆ, ಅಲ್ಲಿ, ನಾಮನಿರ್ದೇಶನದಿಂದಾಗಿ, ಆ ಮುನಸಿಪಾಲಿಟಿಗಳಲ್ಲಿ ನಾಮ ನಿರ್ದೇಶನಗೊಂಡವರ ದೊಡ್ಡ ಸಂಖ್ಯೆಯೇ ಇದೆ.

**ಶ್ರೀ ಸೋಂಧಿ:** ಪಂಜಾಬಿನಲ್ಲೂ ಹಾಗೇ ಇದೆ.

**ಡಾ. ಅಂಬೇಡ್ಕರ್:** ಹೌದು, ಪಂಜಾಬಿನಲ್ಲೂ ಕೂಡ, ಮೇಲ್ಮನೆಯ ಸ್ಥಾಪನೆಯ ಪ್ರಶ್ನೆಯನ್ನು ನಾವು ಪರಿಶೀಲಿಸುತ್ತಿದ್ದಾಗ, "ಆಯ್ಕೆಗೊಂಡ ಸದಸ್ಯರು" ಅರ್ಹತೆಯನ್ನು ವಿಧಿಸದೆಯೇ, ನಾವು "ಮುನಿಸಿಪಾಲಿಟಿಯ ಸದಸ್ಯರು" ಸಾಮಾನ್ಯ ಪದಾವಳಿಯನ್ನು ಮಾತ್ರವೇ ಅಳವಡಿಸಿದೆವು. ಮುನಿಸಿಪಾಲಿಟಿಯ ನಾಮ ನಿರ್ದೇಶನಗೊಂಡ ಸದಸ್ಯರು ಕೂಡ, ಮೇಲ್ಮನೆಗಳ ಸದಸ್ಯರುಗಳ ಚುನಾವಣೆಯಲ್ಲಿ ಭಾಗವಹಿಸುವುದು ಅಪೇಕ್ಷಣೀಯವೇ ಎಂಬ ಪ್ರಶ್ನೆ ಉದ್ಭವವಾಗಿದೆ. ಸಂವಿಧಾನದಲ್ಲಿ ಈ ನಿಬಂಧನೆ ಇರುವ ಸಂಗತಿಯಿಂದಾಗಿ ನಾವು ಏನನ್ನೂ ಮಾಡಲಿಕ್ಕಾಗುವುದಿಲ್ಲ. ಆದರೂ, ಮುನಸಿಪಾಲಿಟಿಗಳು ರಾಜ್ಯದ ವಿಷಯ ಆಗಿರುವುದರಿಂದ, ನಾಮನಿರ್ದೇಶಗೊಂಡ ಸದಸ್ಯರುಗಳನ್ನು ಮುನಸಿಪಾಲಿಟಿಗಳಿಂದ ತೆಗೆದು ಹಾಕಲು ತಮ್ಮ ತಮ್ಮ ಮುನಿಸಿಪಲ್ ಕಾಯಿದೆಗಳಲ್ಲಿ ಮಾರ್ಪಾಟು ಮಾಡುವುದು ರಾಜ್ಯಸರ್ಕಾರಗಳಿಗೆ ಸೇರಿದ್ದೆಂದು ಉತ್ತರಕೊಟ್ಟಿದ್ದೆ. ಕೇಂದ್ರ ಸರ್ಕಾರವು ಏನನ್ನಾದರೂ ಮಾಡಬಹುದೇ ಎನ್ನುವ ಪ್ರಶ್ನೆಯನ್ನು ಹಾಕಲಾಗಿತ್ತು. ಈ ನ್ಯೂನತೆಯನ್ನು ತೆಗೆದು ಹಾಕಲು ಪಶ್ಚಿಮ ಬಂಗಾಳದ ಅಥವಾ ಪಂಜಾಬಿನ ಮುಖ್ಯಮಂತ್ರಿಯವರಿಗೆ ಸೂಚನೆ ನೀಡುವುದು ವಿಹಿತವೆಂದು ಪ್ರಧಾನ ಮಂತ್ರಿಯವರು ಭಾವಿಸಿದರೆ, ಬಹುಶಃ ಪ್ರಧಾನ ಮಂತ್ರಿಯವರು ಹಾಗೆ ಮಾಡಬಹುದೆಂದು ಮಾತ್ರವೇ, ಉತ್ತರ ಕೊಡುವಾಗ, ಹೇಳಿದ್ದೆ.

**ಗೃಹ ಸಚಿವರು (ಶ್ರೀ ರಾಜಗೋಪಾಲಾಚಾರಿ):** ಪರಿಷತ್ತಿನಿಂದ ಅವರುಗಳನ್ನು ತೆಗೆದುಹಾಕಬಹುದೆಂಬುದು ಕಾನೂನು ಸಚಿವರು ಹೇಳಿರುವುದರ ಅರ್ಥ ಇರಬಹುದು, ಸಂವಿಧಾನದಲ್ಲಿ ಹೇಳಿರುವ ಅವರ ಕರ್ತವ್ಯಗಳಿಂದ ಅವರುಗಳನ್ನು ತೆಗೆದು ಹಾಕುವಂತಿಲ್ಲ.

**ಡಾ. ಅಂಬೇಡ್ಕರ್ :** ಇಲ್ಲ, ಇಲ್ಲ.

**ಮಾನ್ಯ ಉಪಸಭಾಪತಿಗಳು:** ಮುನಿಸಿಪಾಲಿಟಿಗಳಲ್ಲಿ ಎಲ್ಲಿವರೆಗೆ ಅವರು ನಾಮನಿರ್ದೇಶನಗೊಂಡ ಸದಸ್ಯರಾಗಿರುತ್ತಾರೋ ಆ ವರೆಗೆ, ಸಂವಿಧಾನದ ಪ್ರಕಾರ, ಅವರಿಗೆ ಮತ ನೀಡುವ ಹಕ್ಕು ಇರುತ್ತದೆ. ಸಂವಿಧಾನವನ್ನು ರಾತ್ರೋರಾತ್ರಿ ಮಾರ್ಪಾಟು ಮಾಡಬಹುದೆಂಬುದು ಸಲಹೆ ಅಲ್ಲ. ಮುನಿಸಿಪಾಲಿಟಿಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಮಾರ್ಪಾಟು ಮಾಡಿ, ಈಗಿರುವ ಎಲ್ಲ ಮುನಸಿಪಾಲಿಟಿಗಳನ್ನು ವಿಸರ್ಜಿಸಿ, ಚುನಾವಣೆ ನಡೆಯುವುದಕ್ಕೂ ಮುಂಚೆ, ಎಲ್ಲ ಸ್ಥಾನಗಳೂ ಆಯ್ಕೆಯಿಂದ ಮಾತ್ರವೇ ತುಂಬುವಂತೆ ಮಾಡಿದರೆ, ಆಗ, ಈ ಉದ್ದೇಶ ಈಡೇರುತ್ತದೆಂಬುದು ಸಲಹೆ. ಆದರೆ, ಏನು ಮಾಡಬೇಕು ಎಂಬ ಬಗ್ಗೆ ಈಗ ಈ ಸದನದಲ್ಲಿ ಸಲಹೆ ಮಾಡುತ್ತಿದ್ದೇನೆ. ಕೆಲಸ ಮುಂದುವರಿಸೋಣ. ಸಮಯಾವಕಾಶ ಸ್ವಲ್ಪವೇ ಇದೆ. ಮತಕ್ಷೇತ್ರಗಳ ಪುನರ್‌ವಿಂಗಡಣೆ ಆದೇಶಗಳ ವಿಷಯ ನಮ್ಮ ಮುಂದಿದೆ. ಸನ್ಮಾನ್ಯ ಪ್ರಧಾನ

ಮಂತ್ರಿಯವರೇ ಸ್ವತಃ ಆ ಬಗ್ಗೆ ಮುಂದಾಗದ ಹೊರತು ಅವರಿಗೆ ತೊಂದರೆ ಕೊಡುವುದು ಸರಿ ಅಲ್ಲವೆಂದು ನನ್ನ ಭಾವನೆ. ನಮ್ಮ ಮುಂದಿರುವ ವಿಧ್ಯುಕ್ತ ಕೆಲಸವನ್ನು ಮುಂದುವರಿಸೋಣ.

## ಮೈಸೂರು ಆದೇಶ

*ಮಾನ್ಯ ಉಪಸಭಾಪತಿಗಳು:** ಪಟ್ಟಿ ಸಂಖ್ಯೆ ೧ ರಲ್ಲಿ ತಿದ್ದುಪಡಿ ಇದೆ.

**ಶ್ರೀ ಶಂಕರಯ್ಯ (ಮೈಸೂರು):** ಅದನ್ನು ಸದನದ ಮತಕ್ಕೆ ಇಡುವುದಕ್ಕೂ ಮುಂಚೆ, ನಾನು, ಅಂಕಣ ೨ರಲ್ಲಿ ಈಗಿದ್ದಂತೆ ಇರುವ "ರೆವಿನ್ಯೂ" ಪದವನ್ನು ತೆಗೆದು ಹಾಕುವುದರ ಬದಲು, ಅದನ್ನು ಆವರಣ ಚಿಹ್ನೆಗಳ ಒಳಗೆ ಇಟ್ಟು ಹಾಗೆಯೇ ಉಳಿಸಿಕೊಳ್ಳಲು ಅನುಮತಿ ನೀಡಬಹುದೆಂದು ಸಲಹೆ ಮಾಡಬಯಸುತ್ತೇನೆ. ಪರಿಣಾಮ ಅದೇ ಇರುತ್ತದೆ. ಪದವನ್ನು ತೆಗೆದು ಹಾಕುವುದು ಅಥವಾ ಅದನ್ನು ಆವರಣ ಚಿಹ್ನೆಗಳ ಒಳಗೆ ಇಡುವುದು, ಎರಡೂ ಒಂದೇ. ಅದನ್ನು ಆವರಣ ಚಿಹ್ನೆಗಳ ಒಳಗೆ ಇಟ್ಟರೆ ಹೆಚ್ಚು ಸ್ಪಷ್ಟವಾಗುತ್ತದೆ ಮತ್ತು ಅಧಿಕೃತವಾದುದು ಆಗುತ್ತದೆ.

**ಡಾ. ಅಂಬೇಡ್ಕರ್:** ಅದು, ಸಂಪೂರ್ಣವಾಗಿ ಆಡಳಿತಾತ್ಮಕ ವಿಷಯ. ರೆವಿನ್ಯೂ ಪದವನ್ನು ಉಳಿಸಿಕೊಂಡರೆ ಕೆಲವೊಂದು ಬಿಕ್ಕಟ್ಟುಗಳು ಅಥವಾ ತಪ್ಪುಗಳು ಉದ್ಭವವಾಗಬಹುದೆಂದು ಮೈಸೂರು ಸರ್ಕಾರದಿಂದ ಸಲಹೆ ಬಂದಿದ್ದರಿಂದ ನಾವು ಹಾಗೆ ಮಾಡುತ್ತಿದ್ದೇವೆ. ಹೀಗಾಗಿ, ಈ ತಿದ್ದುಪಡಿಗೆ ನಾನು ಬೆಂಬಲ ಕೊಡಲೇಬೇಕಾಗಿದೆ.

**ಮಾನ್ಯ ಉಪಸಭಾಪತಿಗಳು**: ಸೂಚನೆ ಏನೆಂದರೆ:

೧೯೫೧ ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಪರಿಷತ್ ಮತ ಕ್ಷೇತ್ರಗಳ (ಮೈಸೂರು) ಪುನರ್ ವಿಂಗಡನೆ ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟು ಮಾಡಬೇಕು, ಎಂದರೆ,–

> ಕೋಷ್ಟಕದಲ್ಲಿ, "ರೆವಿನ್ಯೂ" ಪದವು ಎಲ್ಲೆಲ್ಲಿ ಬರುವುದೋ ಅಲ್ಲೆಲ್ಲಾ ಅದನ್ನು ತೆಗೆದು ಹಾಕಬೇಕು.

ಸೂಚನೆ ಅಂಗೀಕೃತ ಆಗಿದೆ.

**ಮಾನ್ಯ ಉಪಸಭಾಪತಿಗಳು:** ಈ ಮಟ್ಟಿಗೆ, ರಾಷ್ಟ್ರಪತಿಯವರ ಆದೇಶವು ಮಾರ್ಪಾಟು ಆಗಿದೆ.

ಪರಿಷತ್ ಮತಕ್ಷೇತ್ರಗಳ ಆದೇಶಗಳು ಮುಗಿದವು. ಸದನವು ಈಗ ಸಂಸತ್ ಮತಕ್ಷೇತ್ರಗಳಿಗೆ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳಿಗೆ ಸಂಬಂಧಿಸಿದ ತಿದ್ದುಪಡಿಗಳ ಪರಿಶೀಲನೆ ಕಾರ್ಯದಲ್ಲಿ ತೊಡಗುತ್ತದೆ.

**ಡಾ. ಅಂಬೇಡ್ಕರ್:** ಈಗ, ನಾವು, ತಿದ್ದುಪಡಿ ಆದೇಶಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ರಾಷ್ಟ್ರಪತಿಯವರೇ ಸ್ವತಃ ಕೆಲವೊಂದು ತಿದ್ದುಪಡಿ ಮಾಡುವ ಆದೇಶಗಳನ್ನು ಹೊರಡಿಸಿದ್ದಾರೆ. ಈ ತಿದ್ದುಪಡಿ ಮಾಡುವ ಆದೇಶಗಳಿಗೆ ತಿದ್ದುಪಡಿಗಳೂ ಇವೆ.

## ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳು
## (ಬಾಂಬೆ ತಿದ್ದುಪಡಿ ಆದೇಶ)

**ಡಾ. ಅಂಬೇಡ್ಕರ್:** ಪಟ್ಟಿ ೨ರಲ್ಲಿರುವ ತಿದ್ದುಪಡಿಗಳು ಸಂಖ್ಯೆ ೨ನ್ನು ಮತ್ತು ೩ನ್ನು ಒಪ್ಪಿಕೊಳ್ಳುತ್ತೇನೆ.

---

* ಸಂ.ಚ. ಸಂಪುಟ ೧೬ ಭಾಗ II, ೧೧, ಅಕ್ಟೋಬರ್ ೧೯೫೧ ಪುಟಗಳು ೨೯–೪೧.

ಇತರೆ ಉಳಿದವನ್ನು ಹಿಂತೆಗೆದುಕೊಳ್ಳಲಾಗುತ್ತದೆ.

**ಮಾನ್ಯ ಉಪಸಭಾಪತಿಗಳು:** ಸೂಚನೆ ಏನೆಂದರೆ:

೧೯೫೧ ರ ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳ (ಬಾಂಬೆ) ಪುನರ್ ವಿಂಗಡನೆ (ತಿದ್ದುಪಡಿ) ಆದೇಶದಲ್ಲಿ ಬಾಬು ಸಂಖ್ಯೆ ೨ ರ ನಂತರ ಈ ಮುಂದಿನ ಹೊಸ ಬಾಬು ೨ಎ ಯನ್ನು ಸೇರಿಸಬೇಕು, ಎಂದರೆ,–

"೨ಎ. ಆ ಆದೇಶದ ಕೋಷ್ಟಕ ಎ – ಸಂಸತ್ ಮತ ಕ್ಷೇತ್ರಗಳಲ್ಲಿ,–

(i) ಅಂಕಣ ೧ರಲ್ಲಿ ಇರುವ "ಅಹ್ಮೆದ್‌ನಗರ ಉತ್ತರ" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಇರುವ 'ನಂದಗಾಂವ್ ಮುನಿಸಿಪಲ್ ಪ್ರದೇಶ" ಪದಗಳನ್ನು ತೆಗೆದುಹಾಕಬೇಕು.

(ii) ಅಂಕಣ ೧ರಲ್ಲಿ "ನಾಸಿಕ್ ಕೇಂದ್ರ" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಇರುವ "ನಂದಗಾವ್ ಮುನಿಸಿಪಲ್ ಪ್ರದೇಶ" ಮತ್ತು ಪದಗಳನ್ನು ತೆಗೆದುಹಾಕಬೇಕು."

(iii) ೧೯೫೧ರ ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳ (ಬಾಂಬೆ) ಪುನರ್ ವಿಂಗಡನೆ (ತಿದುಪಡಿ) ಆದೇಶದಲ್ಲಿ, ಬಾಬು ಸಂಖ್ಯೆ ೩ರ ನಂತರ ಈ ಮುಂದಿನ ಹೊಸ ಬಾಬು ಸಂಖ್ಯೆ ೩ಎಯನ್ನು ಸೇರಿಸಬೇಕು, ಎಂದರೆ,–

"೩ಎ. ಆ ಆದೇಶದ ಕೋಷ್ಟಕದಲ್ಲಿ, ಅಸೆಂಬ್ಲಿ ಮತ ಕ್ಷೇತ್ರಗಳಲ್ಲಿ.–

(i) ಅಂಕಣ ೧ರಲ್ಲಿ "ಉತ್ತರ ಮಾಲೆಗಾಂವ್" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಈಗ ಇರುವ ನಮೂದಿಗೆ ಬದಲಾಗಿ, ಈ ಮುಂದಿನ ನಮೂದನ್ನು ಸೇರಿಸಬೇಕು, ಎಂದರೆ,–

"ಅನುಬಂಧದ ಬಾಬು (೩೬) ರಲ್ಲಿ ನಿರ್ದಿಷ್ಟಪಡಿಸಿದಂಥ ಗ್ರಾಮಗಳನ್ನು ಹೊರತುಪಡಿಸಿ ಮಾಲೆಗಾಂವ್ ಮುನಿಸಿಪಲ್ ಪ್ರದೇಶ ಮತ್ತು ಮಾಲೆಗಾಂವ್ ತಾಲೂಕು"

(ii) ಅಂಕಣ ೧ರಲ್ಲಿ "ದಕ್ಷಿಣ ಮಾಲೆಗಾಂವ್, ಉತ್ತರ ನಂದಗಾಂವ್ ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಈಗ ಇರುವ ನಮೂದಿಗೆ ಬದಲಾಗಿ, ಈ ಮುಂದಿನ ನಮೂದನ್ನು ಸೇರಿಸಬೇಕು, ಎಂದರೆ,–

"ಅನುಬಂಧದ ಬಾಬು (೩೬)ರಲ್ಲಿ ನಿರ್ದಿಷ್ಟಪಡಿಸಿದಂಥ ಮಾಲೆಗಾಂವ್ ತಾಲೂಕಿನ ಗ್ರಾಮಗಳು ಮತ್ತು ಅನುಬಂಧದ ಬಾಬು (೩೫) ರಲ್ಲಿ ನಿರ್ದಿಷ್ಟ ಪಡಿಸಿದಂಥ ಗ್ರಾಮಗಳನ್ನು ಹೊರತುಪಡಿಸಿ ನಂದಗಾಂವ್ ತಾಲೂಕು"

ಮತ್ತು

(iii) ಅಂಕಣ ೧ರಲ್ಲಿ ಇರುವ "ಇಯೋಲ–ನಂದಗಾಂವ್, ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಇರುವ ..... ನಂದಗಾಂವ್ ಮುನಿಸಿಪಲ್ ಪ್ರದೇಶ ಪದಗಳನ್ನು ತೆಗೆದು ಹಾಕಬೇಕು"

ಸೂಚನೆ ಅಂಗೀಕೃತ ಆಗಿದೆ.

**ಮಾನ್ಯ ಉಪಸಭಾಪತಿಗಳು:** ರಾಷ್ಟ್ರಪತಿಯವರ ಆದೇಶವು, ಈ ಮಟ್ಟಿಗೆ ಮಾರ್ಪಾಟು ಆಗಿದೆ.

ಇತರ ತಿದ್ದುಪಡಿಗಳನ್ನು ಮಂಡಿಸಿರುವ ಮಾನ್ಯ ಸದಸ್ಯರುಗಳು ಅವುಗಳನ್ನು ಹಿಂತೆಗೆದುಕೊಳ್ಳಲು ಸದನದ ಅನುಮತಿ ಇದೆಯೇ?

ತಿದ್ದುಪಡಿಗಳನು, ಅನುಮತಿಯಂತೆ, ಹಿಂತೆಗೆದುಕೊಳ್ಳಲಾಗಿದೆ.

**ಮಾನ್ಯ ಉಪಸಭಾಪತಿಗಳು:** ಬಾಂಬೆಗೆ ಸಂಬಂಧಿಸಿದಂತೆ ರಾಷ್ಟ್ರಪತಿಯವರ ತಿದ್ದುಪಡಿ ಆದೇಶವನ್ನು ಈ ಸದನವು ಅಂಗೀಕರಿಸಿರುವ ತಿದ್ದುಪಡಿಗಳಮಟ್ಟಿಗೆ ಮಾರ್ಪಾಟು ಮಾಡಲಾಗಿದೆ.

## ಮಧ್ಯಪ್ರದೇಶ (ತಿದ್ದುಪಡಿ) ಆದೇಶ

**ಡಾ. ಅಂಬೇಡ್ಕರ್:** ಸರ್, ಪಟ್ಟಿ ೧ರಲ್ಲಿರುವ ತಿದ್ದುಪಡಿ ಸಂಖ್ಯೆ ೧ನ್ನು ಮತ್ತು ಪಟ್ಟಿ ೩ರಲ್ಲಿರುವ ತಿದ್ದುಪಡಿ ಸಂಖ್ಯೆ ೩ನ್ನು ಮಂಡಿಸುತ್ತೇನೆ.:

ತಿದ್ದುಪಡಿ ಏನೆಂದರೆ:

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳ (ಮಧ್ಯಪ್ರದೇಶ) ಪುನರ್‌ವಿಂಗಡನೆ (ತಿದ್ದುಪಡಿ) ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟನ್ನು ಮಾಡಬೇಕು, ಎಂದರೆ,–

> ಆದೇಶದ ಪ್ಯಾರಾ ೩ರ ಉಪ–ಪ್ಯಾರಾ (i) ರಲ್ಲಿ ಇರುವ ಆರ್ಡಿನನ್ಸ್ ಫ್ಯಾಕ್ಟರಿ, ಖಮರಿಯಾ, ಗನ್ ಕ್ಯಾರಿಯೇಜ್ ಫ್ಯಾಕ್ಟರಿ," ಪದಗಳಿಗೆ ಬದಲಾಗಿ "ಆರ್ಡಿನೆನ್ಸ್ ಫ್ಯಾಕ್ಟರಿ, ಖಮರಿಯಾ, ಗನ್ ಕ್ಯಾರಿಯೇಜ್ ಫ್ಯಾಕ್ಟರಿ ಎಸ್ಟೇಟ್" ಪದಗಳನ್ನು ಸೇರಿಸಬೇಕು.
>
> – ಡಾ. ಅಂಬೇಡ್ಕರ್.

ಮತ್ತಷ್ಟು ತಿದ್ದುಪಡಿ ಏನೆಂದರೆ;

೧೯೫೧ರ ಸೆಪ್ಟೆಂಬರ್ ೨೦ರಂದು ಮಂಡಿಸಿದ, ೧೯೫೧ರ ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳ (ಮಧ್ಯಪ್ರದೇಶ) ಪುನರ್‌ವಿಂಗಡನೆ (ತಿದ್ದುಪಡಿ) ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟು ಮಾಡಬೇಕು, ಎಂದರೆ,–

> ಪುಟ ೧ರಲ್ಲಿ, ಆದೇಶದ ೩(i)ನೆಯ ಪ್ಯಾರಾ ನಂತರ ಈ ಮುಂದಿನ ಹೊಸ ಪ್ಯಾರಾಗಳು (iಎ) ಮತ್ತು (iಬಿ) ಯನ್ನು ಸೇರಿಸಬೇಕು, ಎಂದರೆ,–
>
> '(iಎ). ಅಂಕಣ ೧ರಲ್ಲಿ ಇರುವ "ನಾಗಪುರ" ನಮೂದಿನ ಎದುರಿಗೆ ಇರುವ ಅಂಕಣ ೨ರಲ್ಲಿ ಈಗ ಇರುವ ನಮೂದಿಗೆ ಬದಲಾಗಿ ಈ ಮುಂದಿನ ನಮೂದನ್ನು ಸೇರಿಸಬೇಕು,–
>
> "ನಾಗಪುರ ತಹಸೀಲ್‌ನ ನಾಗಪುರ ನಗರದ ಸೋಮಲವಾಡಾ, ಚಿಚಾಭುವನ್, ಅಜ್ನಿ ಗ್ರಾಮಗಳೂ ಸೇರಿದಂತೆ ವಾರ್ಡ್ ಸಂಖ್ಯೆ ೧, ಬೋರ್‌ಗಾಂವ್, ಹಜಾರಿ ಪಹಡ್ ಮತ್ತು ಥಾಬಾ ಗ್ರಾಮಗಳೂ ಸೇರಿದಂತೆ ವಾರ್ಡ್ ಸಂಖ್ಯೆಗಳು ೨ ರಿಂದ ೪, ೭, ೩೭ ಮತ್ತು ೩೮ ಮತ್ತು ೩೯, ಕಾಚಿಮತ್ ಮತ್ತು ಸೋನೆಗಾಂವ್ ಸಿಮ್ ಗ್ರಾಮಗಳು ಸೇರಿದಂತೆ ವಾರ್ಡ್ ಸಂಖ್ಯೆಗಳು ೪೦, ೪೧, ಜೈತಾಲ,

ಭಮ್ಬಿ, ಸೋನೆಗಾಂವ್ (ಬಜಾರ್) ಖಮ್ಲಾ, ತಕಲಿ ಸಿಮ್ ಪರ್‌ಸೋಡಿ ಮತ್ತು ಶಿವನ್‌ಗಾಂವ್";

'(iಬಿ). ಅಂಕಣ ೧ರಲ್ಲಿ "ನಾಗಪುರ IV" ನಮೂದಿನ ಎದುರಿಗೆ ಇರುವ ನಮೂದಿಗೆ ಬದಲಾಗಿ, ಈ ಮುಂದಿನ ನಮೂದನ್ನು ಸೇರಿಸಬೇಕು;

"ನಾಗಪುರ ತಹಸೀಲ್‌ನ ನಾಗಪುರ ನಗರದ ಬಾಬುಲ್‌ಖೇಡ ಸರ್ಕಾರ್ ದಾರ್, ಮನೆವಾಡಾ, ಚಿಖಲಿ ಖುರ್ದ್ ಗ್ರಾಮಗಳೂ ಸೇರಿದಂತೆ ವಾರ್ಡ್ ಸಂಖ್ಯೆ ೮, ಹರಪುರ, ದಿಘೋರಿ, ಬಿಡ್‌ಪೇಟ, ಮತ್ತು ವಾಥೋಡ ಗ್ರಾಮಗಳೂ ಸೇರಿದಂತೆ ವಾರ್ಡ್ ಸಂಖ್ಯೆ ೧೦, ಹಿವಾರಿ, ಪರ್ದಿ, ಭಂಡಿವಾಡಿ, ಚಿಖಲಿ (ದಿಯೊಸ್ತಾನ್), ಪುನಾಪುರ ಮತ್ತು ಭರತ್‌ವಾಡಾ ಗ್ರಾಮಗಳೂ ಸೇರಿದಂತೆ ವಾರ್ಡ್ ಸಂಖ್ಯೆ ೨೨, ಕಲಮ್ನ ವಂಜಾರ ಮತ್ತು ವಂಜಾರಿ ಗ್ರಾಮಗಳೂ ಸೇರಿದಂತೆ ವಾರ್ಡ್ ಸಂಖ್ಯೆಗಳು ೨೩ ಮತ್ತು ೨೪ ವಾರ್ಡ್ ಸಂಖ್ಯೆಗಳು ೨೯ ರಿಂದ ೩೨ ನಾರಿ ಸೇರಿದಂತೆ ವಾರ್ಡ್ ಸಂಖ್ಯೆ ೩೩, ತಕಲಿ (ದೊಡ್ಡದು) ಮತ್ತು ಗೋರೆವಾಡಾ ಸೇರಿದಂತೆ ವಾರ್ಡ್ ಸಂಖ್ಯೆ ೩೪, ನಾರಾ, ಇಂದೋರ ಮತ್ತು ಮನಕಪುರ ಗ್ರಾಮಗಳೂ ಸೇರಿದಂತೆ ವಾರ್ಡ್ ಸಂಖ್ಯೆ ೩೫ ಮತ್ತು ವಾರ್ಡ್ ಸಂಖ್ಯೆ ೩೬, ಮತ್ತು ನಾಗಪುರ ಆರ್‌ಐಸಿ (ಪಟವಾರಿ ಸರ್ಕಲ್‌ಗಳು ೧ ಮತ್ತು ೧೦ ರಿಂದ ೧೨ನ್ನು ಹೊರತುಪಡಿಸಿ"

**– ಡಾ. ಅಂಬೇಡ್ಕರ್.**

**ಮಾನ್ಯ ಉಪಸಭಾಪತಿಗಳು:** ಸದನದ ಅನುಮತಿ ಕೋರಿ, ಇತರ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲಾಗುತ್ತದಯೇ?

ತಿದ್ದುಪಡಿಗಳನ್ನು, ಅನುಮತಿಯಂತೆ, ಹಿಂತೆಗೆದುಕೊಳ್ಳಲಾಗಿದೆ.

**ಮಾನ್ಯ ಉಪಸಭಾಪತಿಗಳು:** ಮಧ್ಯಪ್ರದೇಶಕ್ಕೆ ಸಂಬಂಧಿಸಿದ ರಾಷ್ಟ್ರಪತಿಯವರ ತಿದ್ದುಪಡಿ ಆದೇಶವು ಈ ಸದನವು ತಿದ್ದುಪಡಿಗಳನ್ನು ಅಂಗೀಕರಿಸಿದ ಮಟ್ಟಿಗೆ ತಿದ್ದುಪಡಿ ಆಗಿದೆ.

## ಮದ್ರಾಸ್ (ತಿದ್ದುಪಡಿ) ಆದೇಶ

ತಿದ್ದುಪಡಿ ಏನೆಂದರೆ:

೧೯೫೧ ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳ (ಮದ್ರಾಸ್) ಪುನರ್ ವಿಂಗಡನೆ (ತಿದ್ದುಪಡಿ) ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಡು ಮಾಡಬೇಕು, ಎಂದರೆ,–

"ಪುಟ ೧೭ರಲ್ಲಿ, ಬಾಬು ೬೯– ತಿರುಪತ್ತೂರು ತಾಲೂಕಿನಲ್ಲಿರುವ ವಾನಿಯಂಬಾಡಿ ಫಿರ್ಕಾದಲ್ಲಿ ಅಡಕವಾಗಿರುವ ಗ್ರಾಮಗಳಲ್ಲಿ ಕೊನೆಯಲ್ಲಿ ಬರುವ "ಮತ್ತು ಚಿನ್ನಕಲ್ಲು ಪಳ್ಳಿ"ಪದಗಳಿಗೆ ಬದಲಾಗಿ "ಚಿನ್ನ ಕಲ್ಲುಪಳ್ಳಿ ಮತ್ತು ದೇವಸ್ಥಾನಂ" ಪದಗಳನ್ನು ಸೇರಿಸಬೇಕು.

**– ಡಾ. ಅಂಬೇಡ್ಕರ್.**

ಮತ್ತಷ್ಟು ತಿದ್ದುಪಡಿ ಏನೆಂದರೆ:

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ, ೧೯೫೧ರ ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳ (ಮದ್ರಾಸ್) ಪುನರ್ ವಿಂಗಡನೆ (ತಿದ್ದುಪಡಿ) ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟು ಮಾಡಬೇಕು, ಎಂದರೆ,–

೧. ಪುಟ ೧ರಲ್ಲಿ, ಪ್ಯಾರಾ ೨(ಬಿ) ಯಲ್ಲಿ ಇರುವ ಪ್ರಸ್ತಾಪಿತ ವಿವರಣೆಯಲ್ಲಿ ಇರುವ "ಗ್ರಾಮಗಳು ಅಡಕವಾಗಿರುವ ಪ್ರದೇಶ" ಪದಗಳಿಗೆ ಬದಲಾಗಿ "ಪ್ರದೇಶಗಳು" ಪದಗಳನ್ನು ಸೇರಿಸಬೇಕು.

೨. ಆದೇಶದ ಪುಟ ೨ರಲ್ಲಿ ಇರುವ ಪ್ಯಾರಾ ೫ಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸಬೇಕು, ಎಂದರೆ,–

"೫. ಆದೇಶದ ಅನುಬಂಧದ ಬಾಬು (೨೩) ರಲ್ಲಿ ಇರುವ "ಸೇವಲೂರು ಭಾಗ, ಪೋತುರುವುಥಂಪಟ್ಟಿ. ಮನ್ನಪ್ಪರೈ" ಪದಗಳಿಗೆ ಬದಲಾಗಿ "ಮನ್ನಪ್ಪರೈ ಪಂಚಾಯತ್" ಪದಗಳನ್ನು ಸೇರಿಸಬೇಕು.

**೩. ಪ್ಯಾರಾ ೬ರಲ್ಲಿ,–**

(i) ಅನುಸೂಚಿಯ ಬಾಬು (೨) ರಲ್ಲಿ ಇರುವ "ಪಿಟಾಲಿ, ಸಿರಿಮಾಮಿಡಿ ಮತ್ತು ಗೊಲ್ಲಗಂಡಿ" ಪದಗಳಿಗೆ ಬದಲಾಗಿ "ಪಿಟಾಲಿ ಮತ್ತು ಸಿರಿಮಾಮಿಡಿ" ಪದಗಳನ್ನು ಸೇರಿಸಬೇಕು.

(ii) ಅನುಸೂಚಿಯ ಬಾಬು (೧೪)ರಲ್ಲಿ ಇರುವ "ರಾಮಾವರಂ ಹತ್ತಿರ ವೆಂಕಂಪೇಟ" ಪದಗಳ ಬದಲಾಗಿ "ರಾಮವರಂ" ಪದಗಳನ್ನು ಸೇರಿಸಬೇಕು.

(iii) ಅನುಸೂಚಿಯ ಬಾಬು (೨೧)ರಲ್ಲಿ ಇರುವ "ದೇರಸನ್" ಪದಕ್ಕೆ ಬದಲಾಗಿ "ಪೈಡಿ ಭೀಮಾವರಂ" ಪದವನ್ನು ಸೇರಿಸಬೇಕು.

(iv) ಅನುಸೂಚಿಯ ಬಾಬು (೬೩)ರಲ್ಲಿ ಇರುವ "ಕೊಪ್ಪೇಡು, ಕಾಪುಲ, ಕಂದ್ರಿಗ" ಪದಗಳಿಗೆ ಬದಲಾಗಿ 'ಅಗರಂ' ಪದವನ್ನು ಸೇರಿಸಬೇಕು.

(v) ಅನುಸೂಚಿಯ ಬಾಬು (೮೦)ರಲ್ಲಿ "ಕಲ್ಲುಪಾಟು" ಪದವು ಎರಡನೇ ಸಲ ಎಲ್ಲೆಲ್ಲಿ ಬರುವುದೋ ಅಲ್ಲೆಲ್ಲಾ ಅದಕ್ಕೆ ಬದಲಾಗಿ "ಸೇತು ಪಟ್ಟಿ" ಪದಗಳನ್ನು ಸೇರಿಸಬೇಕು.

(vi) ಅನುಸೂಚಿಯ ಬಾಬು (೮೭)ರಲ್ಲಿ ಇರುವ "ಅರಪು ಕೊಟ್ಟೈ" ಪದಕ್ಕೆ ಬದಲಾಗಿ, "ಅರುಪ್ಪು ಕೊಟ್ಟೈ ಮುನಸಿಪಾಲಿಟಿ" ಪದಗಳನ್ನು ಸೇರಿಸಬೇಕು.

(vii) ಅನುಸೂಚಿಯ ಬಾಬು (೯೩) ರಲ್ಲಿ ಇರುವ "ದೇವಕೋಟ್ಟೈ ಗ್ರಾಮಾಂತರ (ಇರವಸೇರಿ) "ಪದಗಳಿಗೆ ಮತ್ತು ಆವರಣ ಚಿಹ್ನೆಗಳಿಗೆ ಬದಲಾಗಿ "ದೇವಕೋಟ್ಟೈ ಮನಸಿಪಾಲಿಟಿ, ಇರವಸೇರಿ (ಗ್ರಾಮಾಂತರ)" ಪದಗಳನ್ನು ಮತ್ತು ಆವರಣ ಚಿಹ್ನೆಗಳನ್ನು ಸೇರಿಸಬೇಕು.

(viii) ಅನುಸೂಚಿಯ ಬಾಬು (೯೫) ರಲ್ಲಿ ಇರುವ "ಕೆಪ್ಪರ್ ಪಟ್ನಂ (ಮಾಮಧುರೈ ಪಂಚಾಯತ್ ಮಂಡಲಿ)" ಪದಗಳಿಗೆ ಮತ್ತು ಆವರಣ ಚಿಹ್ನೆಗಳಿಗೆ

ಬದಲಾಗಿ **"ಕೆಪ್ಪರ್ ಪಟ್ನಂ, ಮಾಮದುರೈ ಪಂಚಾಯತ್"** ಪದಗಳನ್ನು ಸೇರಿಸಬೇಕು.

**– ಡಾ. ಅಂಬೇಡ್ಕರ್.**

**ಮಾನ್ಯ ಉಪಸಭಾಪತಿಗಳು:** ಮದ್ರಾಸ್‌ಗೆ ಸಂಬಂಧಿಸಿದ ರಾಷ್ಟ್ರಪತಿಯವರ ತಿದ್ದುಪಡಿ ಆದೇಶವು, ಈ ಸದನವು ಅಂಗೀಕರಿಸಿದ ತಿದ್ದುಪಡಿಗಳ ಮಟ್ಟಿಗೆ ಮಾರ್ಪಾಟು ಆಗಿದೆ.

## ಉತ್ತರ ಪ್ರದೇಶ (ತಿದ್ದುಪಡಿ) ಆದೇಶ

**ಪಂಡಿತ್ ಕುಂಜ್ರು (ಉತ್ತರ ಪ್ರದೇಶ):** ರಾಷ್ಟ್ರಪತಿಯವರು ಮಾಡಿರುವ ಆದೇಶದಲ್ಲಿ ಬದಲಾವಣೆಗಳನ್ನು ಮಾಡುವ ಆದೇಶವನ್ನು ಸದನದ ಮುಂದಿಟ್ಟರೆ ಅಥವಾ ಅವುಗಳಿಗೆ ಮತ್ತಷ್ಟು ತಿದ್ದುಪಡಿಗಳನ್ನು ಸ್ನೇಹಿತ ಡಾ. ಅಂಬೇಡ್ಕರರು ಪ್ರಸ್ತಾಪಿಸಿದರೆ ಅಷ್ಟೇ ಸಾಲದು. ಈ ಬದಲಾವಣೆಗಳು ಅವಶ್ಯ ಹೇಗಾದವು ಎಂಬುದನ್ನು ನಾವು ತಿಳಿದುಕೊಳ್ಳಬಯಸಿದ್ದೇವೆ. ಸೀಮಾ ನಿರ್ಣಯ ಆಗಿರುವ ಮತಕ್ಷೇತ್ರಗಳಿಗೆ ಸಾಮಾನ್ಯವಾಗಿ ಜನರು ಒಗ್ಗಿ ಹೋಗಿರುತ್ತಾರೆ. ಆದ್ದರಿಂದ, ಅವುಗಳಲ್ಲಿ ಬದಲಾವಣೆಗಳನ್ನು ಮಾಡುವಾಗ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಉತ್ತರ ಪ್ರದೇಶ ಸಂಸತ್ ಮತ್ತು ಅಸೆಂಬ್ಲಿ ಮತ ಕ್ಷೇತ್ರಗಳಲ್ಲಿ ಬದಲಾವಣೆಗಳು ಆವಶ್ಯಕ ಹೇಗಾದವು ಎಂಬ ಬಗ್ಗೆ ಸ್ನೇಹಿತರಾದ ಕಾನೂನು ಸಚಿವರು ನಿಖರವಾಗಿ ಹೇಳಬೇಕು. ಆಗ, ಈ ಪ್ರಸ್ತಾವನೆಗೆ ನಾವು ಪರ ಅಥವಾ ವಿರುದ್ಧ ಮತ ನೀಡಬೇಕೇ ಎಂಬುದನ್ನು ನಿರ್ಧರಿಸಲು ನಮಗೆ ಸಾಧ್ಯವಾಗುತ್ತದೆ. ಆದರೆ, ಸದ್ಯಕ್ಕೆ ನಾವು ಅಸಹಾಯಕರಾಗಿದ್ದೇವೆ. ಏನು ಮಾಡಬೇಕೆಂಬುದು ನಮಗೆ ಗೊತ್ತಾಗುತ್ತಿಲ್ಲ.

**ಡಾ. ಅಂಬೇಡ್ಕರ್:** ಸ್ನೇಹಿತ ಮಾನ್ಯ ಪಂಡಿತ್ ಹೃದಯನಾಥ ಕುಂಜ್ರು ಅವರು ಎತ್ತಿರುವ ಅಂಶವನ್ನು ಅವರು ಎತ್ತಿದ್ದಕ್ಕೆ ನನ್ನದೇನೂ ತಕರಾರಿಲ್ಲ. ನಿಸ್ಸಂದೇಹವಾಗಿಯೂ ನಮ್ಮಲ್ಲಿ ಯಾರೂ, ಮತ ಕ್ಷೇತ್ರಗಳನ್ನು ರೂಪಿಸುವಾಗ, ಯಾವುದೇ ಬಗೆಯ ರಾಜಕೀಯ ಕುಟಿಲ ಕೈವಾಡಕ್ಕೆ ಅವಕಾಶ ಕೊಡಬಾರದು. ರಾಷ್ಟ್ರಪತಿಯವರು ಈಗಾಗಲೇ ನಿರ್ದಿಷ್ಟಪಡಿಸಿರುವ ಮತ್ತು ಈ ಸದನವು ಅನುಮೋದಿಸಿರುವ ಮತ ಕ್ಷೇತ್ರದಲ್ಲಿ ಬದಲಾವಣೆ ಮಾಡಲು ಯಾವುದೇ ರಾಜಕೀಯ ಪಕ್ಷವು ಕುಟಿಲ ತಂತ್ರ ಮಾಡುತ್ತಿದೆಯೆಂಬ ಯಾವುದೇ ಅನುಮಾನ ಬಂದರೆ, ಈ ಸದನದಲ್ಲಿ ಆ ವಿಷಯವನ್ನು ವಿಧಿವತ್ತಾಗಿ ಎತ್ತಬಹುದು. ಆದರೆ, ನನ್ನಲ್ಲಿರುವ ಮಾಹಿತಿ ಪ್ರಕಾರ ಮತ್ತು ನನಗೆ ತಿಳಿದಮಟ್ಟಿಗೆ ಈ ತಿದ್ದುಪಡಿಯಲ್ಲಿ ಯಾವುದೇ ಬಗೆಯ ಎಳ್ಳಷ್ಟೂ ಕುಟಿಲ ಕೈವಾಡದ ಕುರುಹು ಇಲ್ಲವೆಂದು ಸ್ನೇಹಿತ ಪಂಡಿತ್ ಕುಂಜ್ರುರವರಿಗೆ ಹೇಳಬಯಸುತ್ತೇನೆ. ನಾನು ಪ್ರಸ್ತಾಪಿಸಿರುವ ತಿದ್ದುಪಡಿಗಳಲ್ಲಿ ಎರಡು ಅಂಶಗಳು ಇವೆ. ಒಂದು ಯಾವುದೆಂದರೆ, ಪ್ರಮಾದದಿಂದ ಒಳನುಸುಳಿರುವ ತಪ್ಪುಗಳನ್ನು ಸರಿಪಡಿಸಬೇಕಾಗಿದೆ. ನಮೂದು ಮಾಡಲೇಬೇಕಿದ್ದ ಕೆಲವೊಂದು ಠಾಣಾಗಳನ್ನು, ಅವುಗಳು ಇರಬೇಕಾದ ಜಾಗದಲ್ಲಿ ನಮೂದು ಮಾಡಿಲ್ಲ. ಅವುಗಳ ಜಾಗದಲ್ಲಿ ಬೇರೆ ಇತರ ಠಾಣಾಗಳನ್ನು ಅಥವಾ ಇತರ ಸ್ಥಳಗಳನ್ನು ನಮೂದು ಮಾಡಲಾಗಿದೆ. ಎರಡನೆಯದು ಯಾವುದೆಂದರೆ, ಇಂಥ ಕೆಲವೊಂದು ಪ್ರಕರಣಗಳಲ್ಲಿ ಸಾಮೀಪ್ಯ ಸಾಧ್ಯವೆಂದು ಕಂಡುಕೊಳ್ಳಲಾಗಿದೆ, ಹೇಗೋ ಏನೋ, ಕೆಲವೊಂದು ತಪ್ಪಿನಿಂದಾಗಿ ಸಾಮೀಪ್ಯದ ಕೊಂಡಿ, ಕೆಲವೊಂದು ಠಾಣಾಗಳನ್ನು ಒಂದು ಮತ ಕ್ಷೇತ್ರದಿಂದ ಇನ್ನೊಂದು ಮತ ಕ್ಷೇತ್ರಕ್ಕೆ ಪ್ರಮಾದದಿಂದ ಸೇರಿಸಿರುವುದರಿಂದ, ಕಳಚಿ ಹೋಗಿದೆ, ಈ ಎರಡು ತಪ್ಪುಗಳನ್ನು ಎಂದರೆ ಸ್ಥಳ ಸ್ವರೂಪವನ್ನು ವರ್ಣನೆ ಮಾಡದಿರುವ ತಪ್ಪುಗಳನ್ನು ಮತ್ತು ಕೆಲವೊಂದು ಬಗೆಯಲ್ಲಿ ಸಾಮೀಪ್ಯ ಇರದಂತೆ

ಮಾಡಿರುವ ತಪ್ಪುಗಳನ್ನು ಸರಿಪಡಿಸುವ ಪ್ರಯತ್ನ ಮಾಡಲಾಗಿದೆ.

**ಪಂಡಿತ್ ಕುಂಜ್ರು:** ಸ್ವತಃ ಮಂಡಿಸಿರುವ ತಿದ್ದುಪಡಿಗೆ ಅಥವಾ ರಾಷ್ಟ್ರಪತಿಯವರ ಆದೇಶಕ್ಕೆ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಸ್ನೇಹಿತರಾದ ಮಾನ್ಯ ಸಚಿವರು ಹೇಳುತ್ತಿದ್ದಾರೇನು? ರಾಷ್ಟ್ರಪತಿಯವರ ಆದೇಶಕ್ಕೆ ಸಂಬಂಧಿಸಿದಂತೆ ಅವರು ಇದನ್ನು ಹೇಳುತ್ತಿದ್ದರೆ, ಘರ್‌ವಾಲ್ ಮತಕ್ಷೇತ್ರಕ್ಕೆ ಪ್ರಸ್ತಾಪಿಸಿರುವ ಬದಲಾವಣೆಗಳತ್ತ ಅವರು ಕಣ್ಣು ಹಾಯಿಸಬೇಕು, ಅಲ್ಲಿ, ಸಾಮೀಪ್ಯವನ್ನು ತರುವ ಪ್ರಶ್ನೆ ಎಲ್ಲಿದೆ ಎನ್ನುವುದನ್ನು ಹೇಳಬೇಕು. ಆ ಮತಕ್ಷೇತ್ರದ ಹಲವಾರು ಭಾಗಗಳ ನಡುವೆ ಸಾಮೀಪ್ಯ ಇದೆ. ಇಂಥ ಸ್ಥಳೀಯ ವಿಷಯವನ್ನು ಅವರು ನಿರ್ವಹಿಸುವುದು ತುಂಬಾ ಕಷ್ಟವೆಂದು ನನಗೆ ಗೊತ್ತಿದೆ. ಆದರೂ, ಸಲಹೆ ಮಾಡಿರುವ ಬದಲಾವಣೆಗಳು, ಅವರು ಹೇಳಿರುವ ಕಾರಣಕ್ಕಾಗಿ ಅಲ್ಲವೇ ಅಲ್ಲ ಎಂಬುದನ್ನು ಎತ್ತಿತೋರಿಸಲು ಮಾತ್ರವೇ ನಾನು ಹೇಳುತ್ತಿದ್ದೇನೆ.

**ಡಾ. ಅಂಬೇಡ್ಕರ್:** ಸರ್, ಮುಂದುವರಿಸಲೇ?

ಕಳೆದ ಸಲ, ಈ ಸದನವು ಪುನರ್ ವಿಂಗಡನೆಗೆ ಸಂಬಂಧಿಸಿದ ರಾಷ್ಟ್ರಪತಿಯವರ ಆದೇಶವನ್ನು ಅಂಗೀಕರಿಸಿದಾಗ, ಅಂಥ ಕೆಲವೊಂದು ತಪ್ಪುಗಳನ್ನು ಸರಿಪಡಿಸಲು ಅವಶ್ಯವೆಂದು ಕಂಡು ಬರಬಹುದಾದಂಥ ಬದಲಾವಣೆಗಳನ್ನು ಮಾಡುವ ಅಧಿಕಾರವನ್ನು ಸದನದ ಸ್ಪೀಕರ್ ಅವರಿಗೆ ಕೊಡಬೇಕೆಂಬ ಸೂಚನೆಯನ್ನು ನಾನು ಮಂಡಿಸಿದ್ದು, ತಮಗೆ ಜ್ಞಾಪಕ ಇರಬಹುದು.

**ಶ್ರೀ ಕಾಮತ್:** ಶಾಬ್ದಿಕ ತಪ್ಪುಗಳು, ಶಾಬ್ದಿಕ ತಿದ್ದುಪಡಿಗಳು.

೧೦–೦೦ ಪೂರ್ವಾಹ್ನ

**ಡಾ. ಅಂಬೇಡ್ಕರ್:** ಶಾಬ್ದಿಕ, ಸಣಪುಟ್ಟ, ಪ್ರಾಸಂಗಿಕ ಅಥವಾ ಆನುಷಂಗಿಕ, ಈ ಪದಗಳು ಬಳಕೆ ಆಗಿದ್ದವೆಂದು ಕಾಣುತ್ತದೆ. ತುಂಬಾ ಆತುರಾತುರದಿಂದ, ಅವಸರವಸರದಿಂದ, ಸಭೆಗಳು, ಇನ್ನಷ್ಟು ಸಭೆಗಳು ಮತ್ತಷ್ಟು ಸಭೆಗಳು ಆದ ಮೇಲೆ, ರಾಷ್ಟ್ರಪತಿಯವರ ಆದೇಶಗಳನ್ನು ಅನುಮೋದಿಸುವ ಸೂಚನೆಯು ಅಂಗೀಕೃತ ಆಗುವಂತೆ ಮಾಡಿದೆವು ಎಂಬುದು ಈ ಸದನದ ನೆನಪಿನಲ್ಲಿದೆಯೆಂದುಕೊಂಡಿದ್ದೇನೆ. ಆಗ, ಪ್ರಸ್ತಾವನೆಯನ್ನು ಎಷ್ಟರಮಟ್ಟಿಗೆ ನನಗೆ ಸಾಧ್ಯವೋ ಅಷ್ಟರಮಟ್ಟಿಗೆ ಸ್ಪಷ್ಟವಾಗಿ ವಿವರಿಸಲು ತುಂಬಾ ಎಚ್ಚರಿಕೆ ವಹಿಸಿದ್ದೆ.

ಹಾಗಾಗಿರುವುದು ಕಂಡುಬಂದಿದ್ದರೂ, ಒಳನುಸುಳಿರುವ ಆ ತಪ್ಪುಗಳ ಬಗ್ಗೆ ಸ್ಪೀಕರ್ ಅವರಿಗೆ ಸಲಹೆ ಮಾಡುವ ಸ್ಥಿತಿಯಲ್ಲಿ ನಾವಿರಲಿಲ್ಲ. ಆದ್ದರಿಂದ, ಕೆಲವು ತಪ್ಪುಗಳು ಈಗಲೂ ಉಳಿದುಕೊಂಡಿವೆ. ಸ್ಥಳೀಯ ಸರ್ಕಾರಗಳು, ಕಾನೂನು ಮಂತ್ರಾಲಯವು ಹಾಗೂ ಸ್ಪೀಕರ್‌ರವರು ಆಗಲೂ ಪರಿಶೀಲಿಸಿದ್ದರು. ಆದರೂ, ಉಳಿದುಕೊಂಡಿರುವ ಆ ತಪ್ಪುಗಳನ್ನು ತೆಗೆದುಹಾಕುವ ದೃಷ್ಟಿಯಿಂದ ಕೆಲವೊಂದು ನಿಬಂಧನೆಗಳನ್ನು ಮಾಡುವುದಕ್ಕೆ ಇದು ಸಕಾಲವೆಂದು ನಾವು ಭಾವಿಸಿದೆವು. ಒಂದು ಕಾಲ ಘಟ್ಟದಲ್ಲಿ ರಾಷ್ಟ್ರಪತಿಯವರು ಹೊರಡಿಸಿದ ಆದೇಶಗಳು ಅಂಗೀಕೃತವಾಗಿವೆಯೆಂಬ ಮಾತ್ರಕ್ಕೇ, ಆ ಆದೇಶದಲ್ಲಿ ಈಗಲೂ ಉಳಿದುಕೊಂಡಿರುವ ಯಾವುದೇ ತಪ್ಪುಗಳನ್ನು ತೆಗೆದುಹಾಕಲು ಮುಂದೊಂದು ಸಂದರ್ಭವನ್ನು ಬಳಸಿಕೊಳ್ಳಬಾರದೆಂದು ಹೇಳುವ ಮಟ್ಟಕ್ಕೆ ಸ್ನೇಹಿತ ಪಂಡಿತ್ ಕುಂಜ್ರು ಹೋಗುತ್ತಾರೆಂದು ನಾನಂದುಕೊಂಡಿಲ್ಲ.

ಅವರು ಉಲ್ಲೇಖಿಸಿದ ಆ ಒಂದು ನಿರ್ದಿಷ್ಟ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ನಿಮಗೆ ತಿಳಿದಿರುವ ಮಟ್ಟಿಗೆ ಮತ್ತು ನಿಮ್ಮಲ್ಲಿರುವ ಮಾಹಿತಿ ಮಟ್ಟಿಗೆ, ಈ ಪುನರ್ ವಿಂಗಡನೆ ಆದೇಶದಲ್ಲಿ ನಾವು ಮಾಡುತ್ತಿರುವ ತಿದ್ದುಪಡಿಯಂತೆ ಆ ನಿರ್ದಿಷ್ಟ ಮತಕ್ಷೇತ್ರದಲ್ಲಿ ನಿಕಟತೆ ಇದೆಯೇ ಎನ್ನುವುದಕ್ಕೆ ಸರಿಯಾದ ಉತ್ತರಕೊಡುವ

ಸ್ಥಿತಿಯಲ್ಲಿ ನೀವೇ ಇರಲಿಲ್ಲವೆಂದು ಅವರು ನನಗೆ ಹೇಳಿದ್ದರು. ಈ ವಿಷಯದ ಬಗ್ಗೆ ನಾವು ಸ್ಥಳೀಯ ಸರ್ಕಾರವನ್ನು ಅವಲಂಬಿಸಬೇಕಾಗುತ್ತದೆ. ಉತ್ತರ ಪ್ರದೇಶ ಪುನರ್ ವಿಂಗಡನೆ ಆದೇಶದಲ್ಲಿ ಇವೆ ಎನ್ನಲಾದ ಬದಲಾವಣೆಗಳನ್ನು ಎಂದರೆ ತಪ್ಪುಗಳನ್ನು ಸರಿಪಡಿಸುವುದಕ್ಕೆ ಮತ್ತು ಮತಕ್ಷೇತ್ರಗಳಲ್ಲಿ ಈ ಹಿಂದೆ ಇದ್ದುದಕ್ಕಿಂತ ಹೆಚ್ಚು ನಿಕಟತೆಯನ್ನು ತರುವುದಕ್ಕೆ ಇರುವ ಆಧಾರಗಳ ಬಗ್ಗೆ ನನಗೆ ನೆರವಾಗಲು ಮತ್ತು ಸಲಹೆ ನೀಡಲು ಉತ್ತರ ಪ್ರದೇಶ ಪುನರ್ ವಿಂಗಡನೆ ಸಮಿತಿಯ ಸದಸ್ಯರ ಸಭೆಯನ್ನು ಕರೆಯಲು ವಿಶೇಷ ಎಚ್ಚರಿಕೆ ತೆಗೆದುಕೊಂಡಿದ್ದೆ, ಆದರೆ, ದುರದೃಷ್ಟವಶಾತ್ ಅವರು ಸಭೆಗೆ ಬಂದಿರಲಿಲ್ಲವೆಂಬುದು ಅವರ ನೆನಪಿನಲ್ಲಿದೆಯೆಂದುಕೊಂಡಿದ್ದೇನೆ. ಅವರು ಉತ್ತರ ಪ್ರದೇಶ ಪುನರ್ ವಿಂಗಡನೆ ಸಮಿತಿಯ ಅಧ್ಯಕ್ಷರಾಗಿದ್ದರು. ನಮಗೆ ಆಗ ಅಲ್ಲಿ ಸಲಹೆಗಳು ಬಂದಿದ್ದವು. ಈಗ, ಇವರು, ಇಲ್ಲಿ, ನಿಕಟತೆ ಕಲ್ಪಿಸದೆ ಏನನ್ನೊ ಮಾಡುತ್ತಿದ್ದೀರೆಂದು ವಾದಿಸುತ್ತಿದ್ದಾರೆ. ನಾನು ಮಾಡುತ್ತಿರುವುದು ಸರಿಯೇ, ಅಲ್ಲವೇ ಎಂಬ ಬಗ್ಗೆ ಸಲಹೆ ನೀಡಲು ಅವರು ಆ ಸಭೆಗೆ ಬಂದಿರಲಿಲ್ಲವಾದ್ದರಿಂದ, ತಪ್ಪನ್ನು ಅವರು ಅವರ ಹೆಗಲ ಮೇಲೆ ಹಾಕಿಕೊಳ್ಳಲೇಬೇಕಾಗುತ್ತದೆ ಎಂದಷ್ಟೇ ಹೇಳಬಲ್ಲೆ.

**ಪಂಡಿತ್ ಕುಂಜ್ರು:** ಸರ್, ನನಗೆ ಅಂಥ ನೋಟೀಸು ಬಂದಿಲ್ಲ.

**ಡಾ. ಅಂಬೇಡ್ಕರ್:** ಈ ಸ್ನೇಹಿತರಿಗೆ ಸಂದೇಶವನ್ನು ಕಳುಹಿಸಿದ್ದೆನೆಂದು ನನ್ನ ಭಾವನೆ. ನಾನು ಒಪ್ಪಿಕೊಳ್ಳುತ್ತಿರುವ ಶ್ರೀ ಗೋಪೀನಾಥರ ಕೆಲವೊಂದು ತಿದ್ದುಪಡಿಗಳಿಗೆ ಸಂಬಂಧಪಟ್ಟಂತೆ ಒಂದು ಟಿಪ್ಪಣಿಯನ್ನು ಅವರು ನನಗೆ ಕಳುಹಿಸಿದ್ದರು. ಆ ತಿದ್ದುಪಡಿಯನ್ನು ಬೆಂಬಲಿಸಲು ಸಂಪೂರ್ಣವಾಗಿ ಸಿದ್ಧರಿದ್ದರು.

**ಪಂಡಿತ್ ಕುಂಜ್ರು:** ...................... ಸಂಬಂಧಿಸಿದಂತೆ ಮಾತ್ರವೇ ನನ್ನೊಂದಿಗೆ ಸಮಾಲೋಚಿಸಲಾಗಿತ್ತು.

**ಡಾ. ಅಂಬೇಡ್ಕರ್:** ಪತ್ರಿಕಾ ವಿಧೇಯಕದ ಬಗ್ಗೆಯೇ ಅವರಿಗೆ ಹೆಚ್ಚು ಆಸಕ್ತಿ ಇತ್ತು.

**ಪಂಡಿತ್ ಕುಂಜ್ರು:** ವಿಧಾನ ಪರಿಷತ್ ಮತ ಕ್ಷೇತ್ರಗಳಗಳಿಗೆ ಸಂಬಂಧಿಸಿದಂತೆ, ೧೯೫೦ರ ಜನತಾ ಪ್ರಾತಿನಿಧ್ಯ ಕಾಯಿದೆ ಮೇರೆಗೆ ಸ್ಪೀಕರ್‌ರವರು ನೇಮಿಸಿದ್ದ ಸಮಿತಿಯು ಮಾಡಿದ್ದ ಸಲಹೆಗಳನ್ನು ಪರಿಶೀಲಿಸಲಾಗಿತ್ತು. ಅವುಗಳಿಗೆ ಸಂಬಂಧಿಸಿದಂತೆ ನನ್ನ ಉತ್ತರ ನೀಡಿದ್ದೆ.

ಇತರೆ ಬದಲಾವಣೆಗೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಸರ್ಕಾರವು, ಅವುಗಳನ್ನು ಪ್ರಸ್ತಾಪಿಸಿರುವುದಕ್ಕೆ ಕಾರಣಗಳನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿತ್ತು. ಸ್ನೇಹಿತರಾದ ಮಾನ್ಯ ಡಾ. ಅಂಬೇಡ್ಕರ್ ಅವರು ಆ ಕಾರಣಗಳನ್ನು ಸದನ ಮುಂದೆ ಏಕೆ ಇಡಲಿಲ್ಲ?

**ಶ್ರೀ ಟಿ. ಎನ್. ಸಿಂಗ್ (ಉತ್ತರ ಪ್ರದೇಶ):** ಪುನರ್ ವಿಂಗಡನೆ ಸಮಿತಿಯ ಸದಸ್ಯನಾದ ನಾನು ಮಾತನಾಡಲು ಅನುಮತಿ ಕೊಡಬೇಕು. ಈ ಅಧಿಸೂಚನೆಯಲ್ಲಿ ಪ್ರಸ್ತಾಪಿಸಿದ ಹಾಗೂ ಮಾನ್ಯ ಕಾನೂನು ಸಚಿವರು ಮಂಡಿಸಿದ ಬದಲಾವಣೆಗಳು ನಿಖರವಾಗಿ ಪ್ರಾಸಂಗಿಕವಾದವುಗಳೂ ಅಲ್ಲ, ಆನುಷಂಗಿಕ ವಾದವುಗಳೂ ಅಲ್ಲ. ಪ್ರಸ್ತಾಪಿಸಿರುವ ಹಲವಾರು ಬದಲಾವಣೆಗಳನ್ನು ಎಚ್ಚರಿಕೆಯಿಂದ ಓದಲು ಪ್ರಯತ್ನಿಸಿದ್ದೇನೆ. ಉದಾಹರಣೆಗೆ, ಬನಾರಸ್ ಜಿಲ್ಲೆ ನನಗೆ ಚೆನ್ನಾಗಿ ಗೊತ್ತು. ಇನ್ನೊಂದು ಪರಗಣವನ್ನು ಸೇರಿಸಿರುವುದಕ್ಕೆ ಏನು ಕಾರಣ ಎನ್ನುವುದು ನನಗೆ ಗೊತ್ತಿಲ್ಲ. ಅಂದರೆ, ಮತದಾರರ ಸಂಖ್ಯೆ ಹೆಚ್ಚಿದಂತಾಯಿತು. ಘರ್‌ವಾಲ್ ಬಗ್ಗೆ ಹೇಳುವುದಾದರೆ, ಈ ರೀತಿ, ಚಮೋಲಿಯನ್ನು ಬದಲಾಯಿಸುತ್ತಿರುವುದಕ್ಕೆ ಏನು ಕಾರಣ ಎನ್ನುವುದು ನನಗೆ ಗೊತ್ತಿಲ್ಲ.

**ಹಣಕಾಸು ರಾಜ್ಯಮಂತ್ರಿ (ಶ್ರೀ ತ್ಯಾಗಿ):** ಯಾವುದು ಅದು?

**ಶ್ರೀ ಟಿ.ಎನ್. ಸಿಂಗ್:** ಡೆಹ್ರಾಡೂನ್ ಅಲ್ಲ, ಘರ್‌ವಾಲ್.

**ಶ್ರೀ ತ್ಯಾಗಿ:** ಅಷ್ಟೇ ಆಸಕ್ತಿ ನನಗೂ ಇದೆ.

**ಶ್ರೀ ಟಿ. ಎನ್. ಸಿಂಗ್:** ಹಾಗೆಯೇ, ಕಾನ್ಪುರ – ಫರೂಖಾಬಾದ್ ಸಾಮಾನ್ಯ ಮತ ಕ್ಷೇತ್ರಗಳ ಬಗ್ಗೆ ಪ್ರಸ್ತಾಪಿಸಿದ ಬದಲಾವಣೆಗಳನ್ನು ಎಚ್ಚರಿಕೆಯಿಂದ ಗಮನಿಸಬೇಕಾದ ಆವಶ್ಯಕತೆ ಇದೆ.

ಈ ಎಲ್ಲ ಪ್ರಶ್ನೆಗಳನ್ನು ಸವಿವರವಾಗಿ ಪರಿಶೀಲಿಸಿದರೆ, ಈ ಸೂಚನೆಯ ಹಲವಾರು ಅಂಶಗಳನ್ನು ಪರಿಶೀಲಿಸಲು ಈ ಸದನವು ಅವಕಾಶ ಕೊಡದಿದ್ದರೆ, ಅದು ನ್ಯಾಯೋಚಿತವಾಗುವುದಿಲ್ಲವೆಂದು ನನ್ನ ಭಾವನೆ. ನಮ್ಮ ಚೇರ್ಮನ್‌ರವರ ಮಾರ್ಗದರ್ಶನದಲ್ಲಿ ಈ ಸೂಚನೆ ಬಗ್ಗೆ ನಾವು ಪ್ರತಿಯೊಂದು ವಿವರವನ್ನು ಪರಿಶೀಲಿಸಿದ್ದೇವೆ. ಪ್ರತಿಯೊಂದು ಗ್ರಾಮದ, ಪ್ರತಿಯೊಂದು ಪಟವಾರಿಯ ಸರ್ಕಲ್‌ನ ಸೀಮಾ ನಿರ್ಣಯದ ಬಗ್ಗೆ ನಾವು ಪರಿಶೀಲಿಸಿದ್ದೇವೆ. ಅದಕ್ಕೋಸ್ಕರ ಬಹಳಷ್ಟು ಕಾಲವನ್ನು ಮೀಸಲಿಟ್ಟಿದ್ದೆವು ....... ಆದರೆ, ಈಗ, ಇಲ್ಲಿ, ಗೊತ್ತಿಲ್ಲದ ಈ ತಿದ್ದುಪಡಿಯನ್ನು ಅದರ ನಿಜವಾದ ಉದ್ದೇಶ ಏನು ಎಂಬುದನ್ನು ತಿಳಿದುಕೊಳ್ಳದೆಯೇ ಬೆಂಬಲಿಸಲು ನನಗೆ ತುಂಬಾ ಕಷ್ಟ ಆಗುತ್ತದೆ.

**ಡಾ. ಅಂಬೇಡ್ಕರ್:** ಮೊದಲನೆಯ ತಿದ್ದುಪಡಿಗೆ ಸಂಬಂಧಿಸಿದಂತೆ ವಸ್ತುಸ್ಥಿತಿ ಏನೆಂದರೆ ಪುಟ ೧ರಲ್ಲಿ ಪ್ಯಾರಾ ೨ (ii) ರಲ್ಲಿ ಇರುವ "ಆದರೆ ಮೊಹಮ್ಮದಿ" ಸೇರಿದಂತೆ ಪದಗಳ ನಂತರ "ಅಟ್ವಾ ಪಿಪರಿಯಾ" ಪದಗಳನ್ನು ಸೇರಿಸಬೇಕಾಗಿದೆ. ಅಟ್ವಾ ಪಿಪರಿಯಾ ಎಂದು ಕರೆಯುವ ಸ್ಥಳ ಇದೆ. ಮೂಲ ಆದೇಶದಲ್ಲಿ ಅದನ್ನು ನಮೂದಿಸಿಯೇ ಇರಲಿಲ್ಲ. ಅಂದ ಮೇಲೆ, ಅಟ್ವಾ ಪರಿಯಾದಲ್ಲಿ ವಾಸಿಸುತ್ತಿರುವ ಭಾರತೀಯ ನಾಗರಿಕರು ಚುನಾವಣೆಯಲ್ಲಿ ಭಾಗವಹಿಸಲು ಹಕ್ಕುಳ್ಳವರಾಗಿಯೇ ಇರಲಿಲ್ಲ, ಏಕೆಂದರೆ, ಅವರುಗಳು ಆ ನಿರ್ದಿಷ್ಟ ಮತಕ್ಷೇತ್ರದ ಭಾಗ ಆಗಿರಲಿಲ್ಲ. ಈ ತಪ್ಪನ್ನು ಸರಿಪಡಿಸುವ ಸಲುವಾಗಿ ಈ ಸೇರ್ಪಡೆ ಮಾಡಬೇಕೆಂದು ಪ್ರಸ್ತಾಪಿಸಲಾಗಿದೆ. ಈಗ ಈ ಸೇರ್ಪಡೆ ಮಾಡಿದರೆ ಪ್ರತಿಯೊಂದು ಮತ ಕ್ಷೇತ್ರದಲ್ಲೂ ಮತದಾರರ ಇಂತಿಷ್ಟು ಸಂಖ್ಯೆ ಇರಲೇಬೇಕೆಂದು ಮತ್ತು ಅದರಂತೆ ಪ್ರಾತಿನಿಧ್ಯದ ಹಂಚಿಕೆ ಆಗಿರಬೇಕೆಂದು ನಮ್ಮ ಸಂವಿಧಾನದಲ್ಲಿ ಗೊತ್ತುಪಡಿಸಿರುವ ನಿಯಮಗಳಿಗೆ ಅನುಸಾರವಾಗಿ ಬೇರೆ ಮತ ಕ್ಷೇತ್ರಗಳಲ್ಲಿ ಕೆಲವೊಂದು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲೇ ಬೇಕಾಗುತ್ತದೆ.

ಈಗ, ನನಗೆ ಸಲಹೆ ನೀಡಿದ ಪ್ರಕಾರ, ಮುಖ್ಯ ತಿದ್ದುಪಡಿಯು ಅಟ್ವಾ ಪಿಪರಿಯಾಕ್ಕೆ ಮಾತ್ರ ಸಂಬಂಧಿಸಿದೆ. ಉಳಿದವು ಕೇವಲ ಪ್ರಾಸಂಗಿಕ. ಮೊದಲನೆ ತಿದ್ದುಪಡಿಯನ್ನು ಎಂದರೆ 'ಅಟ್ವಾ ಪಿಪರಿಯಾ' ವನ್ನು ಸೇರಿಸುವುದನ್ನು ನಾವು ಒಪ್ಪಿಕೊಂಡರೆ ಆ ತಿದ್ದುಪಡಿಗಳನ್ನೂ ಮಾಡಬೇಕಾಗುತ್ತೆಂಬ ಸಂಗತಿಯ ಹೊರತು ಅವುಗಳಲ್ಲಿ ಯಾವ ಸಾರಾಂಶವೂ ಇಲ್ಲ. ಮೊದಲ ತಿದ್ದುಪಡಿಯು ಅತ್ಯಂತ ಆವಶ್ಯಕ ಎಂಬುದನ್ನು ಸದಸ್ಯರು ಗ್ರಹಿಸುತ್ತಾರೆಂದುಕೊಂಡಿದ್ದೇನೆ. ಏಕೆಂದರೆ ಯಾವುದೇ ನಿರ್ದಿಷ್ಟ ಮತ ಕ್ಷೇತ್ರದಿಂದ ಯಾವುದೇ ನಿರ್ದಿಷ್ಟ ಭಾಗವನ್ನು ನಾವು ಬಿಟ್ಟು ಬಿಡುವಂತಿಲ್ಲ. ಆ ಮತಕ್ಷೇತ್ರಕ್ಕೆ ನಾವು ಏನನ್ನಾದರೂ ಸೇರಿಸಿದರೆ ಮತ್ತು ಆ ಮತ ಕ್ಷೇತ್ರವು ಒಬ್ಬರೇ ಒಬ್ಬರು ಸದಸ್ಯರಿಗಾಗಿ ನಿಗದಿಪಡಿಸಲು ಉದ್ದೇಶಿಸಿದ ಮತ ಕ್ಷೇತ್ರಕ್ಕಿಂತಲೂ ದೊಡ್ಡದಾದರೆ, ಆಗ, ಅನಿವಾರ್ಯವಾಗಿ, ಇತರ ಬದಲಾವಣೆಗಳನ್ನು ಸಹ ಮಾಡಲೇ ಬೇಕಾಗುತ್ತದೆ. ಇದರಲ್ಲಿ ಅಹಿತವಾದುದೇನೂ ಇಲ್ಲವೆಂದು ಮಾನ್ಯ ಸ್ನೇಹಿತರಿಗೆ ವಿವರಿಸುತ್ತಿದ್ದೇನೆ, ಅಷ್ಟೇ.

**ಶ್ರೀ ಟಿ. ಎನ್. ಸಿಂಗ್:** ಇತರ ಸ್ಥಳಗಳ ಬಗ್ಗೆ ಏನು? ಇತರ ಮತಕ್ಷೇತ್ರಗಳಲ್ಲೂ ಆಮೂಲಾಗ್ರ ಬದಲಾವಣೆಗಳನ್ನು ಮಾಡಲಾಗಿದೆಯೆಂದು ನನಗಂತೂ ಕಂಡು ಬಂದಿದೆ. ಉದಾಹರಣೆಗೆ, ಬನಾರಸ್ ಎದುರಿಗೆ "ಬನಾರಸ್ ಮುನಿಸಿಪಾಲಿಟಿ ಮತ್ತು ಕಂಟೋನ್ಮೆಂಟ್ ಹೊರತುಪಡಿಸಿ" "ಶಿಯೋಪುರ ಪರಗಣ ಮತ್ತು ದೇಹತ್ ಅಮಾನತ್ ಪರಗಣ" ಎಂದಿದೆ. ಮತ್ತೆ (v) ರಲ್ಲಿ "ಬನಾರಸ್ ತಹಸೀಲ್‌ನ ಜಾಲ್ಹುಪುರ,

ಸುಲ್ತಾನಿಪುರ ಮತ್ತು ಕಟೇಹಾರ್" ಎಂದಿದೆ. ಮುಂಚೆ ಅದು ಸುಲ್ತಾನ್‌ಪುರ ಮತ್ತು ಕಟೇಹಾರ್ ಪರಗಣಗಳು ಎಂದುಕೊಂಡಿದ್ದೆ. ನೀವು ಒಂದು ಇಡೀ ಪರಗಣವನ್ನು ಸೇರಿಸಿದ್ದೀರಿ. ಈ ಬದಲಾವಣೆಗೆ ಏನು ಕಾರಣವೆಂಬುದನ್ನು ತಿಳಿದುಕೊಳ್ಳ ಬಯಸುತ್ತೇನೆ.

**ಮಾನ್ಯ ಉಪಸಭಾಪತಿಗಳು:** ಈಗ, ನಾನು, ಸೂಚನೆಯನ್ನು ಸದನದ ಮುಂದಿಡುತ್ತೇನೆ.

ಸೂಚನೆ ಏನೆಂದರೆ:

೧೯೫೧ರ ಸೆಪ್ಟೆಂಬರ್ ೨೦ ರಂದು ಮಂಡಿಸಿದ ೧೯೫೧ರ ಸಂಸತ್ ಮತ್ತು ಪರಿಷತ್ ಮತ ಕ್ಷೇತ್ರಗಳ (ಉತ್ತರ ಪ್ರದೇಶ) ಪುನರ್ ವಿಂಗಡಣೆ (ತಿದ್ದುಪಡಿ) ಆದೇಶದಲ್ಲಿ ಈ ಮುಂದಿನಂತೆ ಮಾರ್ಪಾಟು ಮಾಡಬೇಕು, ಎಂದರೆ,–

(೧) ಪುಟ ೧ರಲ್ಲಿ, ಪ್ಯಾರಾ ೨(ii) ರಲ್ಲಿ, ಇರುವ "ಆದರೆ, ಮೊಹಮ್ಮದಿ ಸೇರಿದಂತೆ" ಪದಗಳ ನಂತರ "ಅಟ್ವಾ ಪಿಪರಿಯಾ" ಪದಗಳನ್ನು ಸೇರಿಸಬೇಕು.

(೨) ಪುಟ ೧ರಲ್ಲಿ ಪ್ಯಾರಾ ೨(iii) ರಲ್ಲಿ, ಇರುವ "(ಮೊಹಮ್ಮದಿ ಹೊರತುಪಡಿಸಿ)" ಆವರಣದ ಮತ್ತು ಪದಗಳ ನಂತರ "ಅಟ್ವಾ ಪಿಪರಿಯಾ" ಪದಗಳನ್ನು ಸೇರಿಸಬೇಕು.

(೩) ಪುಟ ೨ರಲ್ಲಿ, ಪ್ಯಾರಾ ೩(i) ರಲ್ಲಿ, ಕೋಷ್ಟಕದಲ್ಲಿ ಇರುವ "(ಉತ್ತರ)–ಹಾಗೂ–ಚಮೋಲಿ (ಪೂರ್ವ) ನಮೂದಿಗೆ ಬದಲಾಗಿ, ಈ ಮುಂದಿನ ನಮೂದನ್ನು ಸೇರಿಸಬೇಕು, ಎಂದರೆ,–

"ಪೌರಿ (ದಕ್ಷಿಣ) – ಹಾಗೂ – ಚಮೋಲಿ (ಪೂರ್ವ)"

"(iii)ಎ. ಅಂಕಣ ೧ರಲ್ಲಿ ಇರುವ "ಮೊಹಮ್ಮದಿ (ಪಶ್ಚಿಮ) ಮತ್ತು ಮೊಹಮ್ಮದಿ (ಪೂರ್ವ)" ನಮೂದುಗಳಿಗೆ ಮತ್ತು ಅಂಕಣ ೨ರಲ್ಲಿ ಅವುಗಳ ಎದುರಿಗೆ ಇರುವ ನಮೂದುಗಳಿಗೆ ಬದಲಾಗಿ ಈ ಮುಂದಿನ ನಮೂದುಗಳನ್ನು ಸೇರಿಸಬೇಕು, ಎಂದರೆ,–

| ೧ | ೨ |
|---|---|
| ಮೊಹಮ್ಮದಿ (ಪಶ್ಚಿಮ) | ಮೊಹಮ್ಮದಿ, ಅಟ್ವಾ ಪಿಪರಿಯಾ, ಮಗದ್‌ಪುರ ಮತ್ತು ಮೊಹಮ್ಮದಿ ತಹಸೀಲ್‌ನ ಪಾಸ್ಗವಾನ್ ಪರಗಣಗಳು |
| ಮೊಹಮ್ಮದಿ (ಪೂರ್ವ) | ಮೊಹಮ್ಮದಿ ತಹಸೀಲ್ ಮೊಹಮ್ಮದಿ, ಅಟ್ವಾಪಿ ಪರಿಯಾ, ಮಗದ್‌ಪುರ್ ಮತ್ತು ಪಾಸ್ಗವಾನ್ ಪರಗಣಗಳು ಸೂಚನೆ ಅಂಗೀಕೃತ ಆಗಿದೆ. |

**ಮಾನ್ಯ ಉಪಸಭಾಪತಿಗಳು:** ಸಂಸತ್ ಮತ್ತು ಅಸೆಂಬ್ಲಿ ಮತಕ್ಷೇತ್ರಗಳ (ಉತ್ತರ ಪ್ರದೇಶ) ಪುನರ್ ವಿಂಗಡನೆ ಆದೇಶವು, ಸದನವು ಒಪ್ಪಿಕೊಂಡಿರುವ ತಿದ್ದುಪಡಿಯ ಮಟ್ಟಿಗೆ ಮಾರ್ಪಾಟು ಆಗಿದೆ.

**ಪಂಡಿತ್ ಕುಂಜ್ರು:** ಇದು ಉತ್ತರ ಪ್ರದೇಶ ಶಾಸನ ಸಭೆಗೆ ಸಹ ಸಂಬಂಧಿಸಿದೆಯೇ ಅಥವಾ ಸಂಸತ್ ಮತಕ್ಷೇತ್ರಗಳಲ್ಲಿ ಬದಲಾವಣೆಗಳಿಗೆ ಮಾತ್ರವೇ ಸಂಬಂಧಿಸಿದೆಯೇ ಎಂಬುದನ್ನು ತಿಳಿಯ ಬಯಸುತ್ತೇನೆ.

**ಡಾ. ಅಂಬೇಡ್ಕರ್:** ಎರಡಕ್ಕೂ ಸಂಬಂಧಿಸಿದೆ.

**ಮಾನ್ಯ ಉಪಸಭಾಪತಿಗಳು:** ಪರಿಷತ್ ಮತಕ್ಷೇತ್ರಗಳು ಮತ್ತು ಸಂಸತ್ ಹಾಗೂ ಅಸೆಂಬ್ಲಿ ಮತ ಕ್ಷೇತ್ರಗಳು ಎರಡಕ್ಕೂ ಸಂಬಂಧಿಸಿದಂತೆ ಮಾಡಿದ್ದೇವೆ. ಈಗ, ಇನ್ನು ಯಾವ ಸೂಚನೆಗಳೂ ಇಲ್ಲ.

**ಪಂಡಿತ್ ಕುಂಜ್ರು:** ಅಸೆಂಬ್ಲಿ ಮತಕ್ಷೇತ್ರಗಳ ಬಗ್ಗೆ ಮಾನ್ಯ ಕಾನೂನು ಸಚಿವರಿಗೆ ನಾನೊಂದು ಪ್ರಶ್ನೆ ಕೇಳಲೇ?

**ಮಾನ್ಯ ಉಪಸಭಾಪತಿಗಳು:** ವಿಷಯ ಇಲ್ಲಿಗೆ ಮುಗಿಯಿತು.

**ಪಂಡಿತ್ ಕುಂಜ್ರು:** ವಿಷಯವನ್ನು ಪರ್ಯಾಲೋಚಿಸಿದ ಮೇಲೆ, ಒಂದು ಮತ ಕ್ಷೇತ್ರವು ದ್ವಿಸದಸ್ಯ ಮತಕ್ಷೇತ್ರವಾಗಬೇಕೆಂದು ಹೇಳಿದ್ದೆವು. ಆದರೆ, ಉತ್ತರ ಪ್ರದೇಶ ಸರ್ಕಾರವು ಈಗ ಅದನ್ನು ಬದಲಾವಣೆ ಮಾಡಿದೆ. ಅದು ಆವಶ್ಯಕ ಹೇಗಾಯಿತು? ಅದೇ ಪ್ರಸ್ತಾಪಿಸಿದ ಮತಕ್ಷೇತ್ರದಲ್ಲಿ ಪರಿಶಿಷ್ಟಜಾತಿ ಮತದಾರರ ಪ್ರಮಾಣ ಸ್ಪೀಕರ್‌ರವರ ಸಮಿತಿಯ ಪ್ರಸ್ತಾಪಿಸಿದ ಮತಕ್ಷೇತ್ರದಲ್ಲಿರುವದಕ್ಕಿಂತಲೂ ಹೆಚ್ಚಿಗೆ ಇರುವುದು ಅವರಿಗೆ ಕಂಡು ಬಂದಿದೆಯೇನು?

**ಡಾ. ಅಂಬೇಡ್ಕರ್:** ಅದು, ಯಾವುದೇ ಅಂಥ ಬದಲಾವಣೆ ಮಾಡಿರುವುದರ ಬಗ್ಗೆ ನನ್ನಲ್ಲಿ ಯಾವ ಮಾಹಿತಿಯೂ ಇಲ್ಲ.

◆

# ೪೨

## ಸದನ ಕಾರ್ಯಕಲಾಪ

**ಮಾನ್ಯ ಉಪಸಭಾಪತಿಗಳು:** ಸದನದ ಮುಂದಿರುವ ಕೆಲಸ ಮತ್ತು ರಜಾ ದಿನಗಳಿಗೆ ಸಂಬಂಧಿಸಿದಂತೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ಹೇಳಿಕೆ ನೀಡುತ್ತಾರೆ.

**ಪ್ರಧಾನ ಮಂತ್ರಿಯವರು ಮತ್ತು ಸಭಾನಾಯಕರು (ಶ್ರೀ ಜವಹರಲಾಲ್ ನೆಹರೂ):** ನಾಳೆ ದಿನವನ್ನು, ನನಗೆ ತಿಳಿದಿರುವ ಪ್ರಕಾರ, ಮೊಹುರ್ರಮ್‌ನ ಹತ್ತನೆ ದಿನದ ನಿಮಿತ್ತ, ರಜಾ ದಿನಗಳ ನಮ್ಮ ಪಟ್ಟಿಯಲ್ಲಿ, ರಜಾ ದಿನವೆಂದು ಅಧಿಸೂಚಿಸಲಾಗಿದೆ. ಆದರೆ, ಆ ನಿರ್ದಿಷ್ಟ ದಿನದಂದು ಚಂದ್ರದರ್ಶನ ಆಗಲಿಲ್ಲವೆಂದು ನನಗೆ ತಿಳಿದು ಬಂದಿದೆ. ಹತ್ತನೆ ದಿನ, ನಾಳೆ ಅಲ್ಲ, ನಾಡಿದ್ದು ಎಂದು ಲೆಕ್ಕ ಹಾಕಲಾಗಿದೆ. ಮೊಹುರ್ರಮನ ನಿಮಿತ್ತ ನಾಡಿದ್ದು ರಜಾ ದಿನವೆಂದು ದೆಹಲಿ ಚೀಫ್ ಕಮಿಷನರ್‌ರವರು ಘೋಷಿಸಿದ್ದಾರೆ. ಆದ್ದರಿಂದ, ಈ ಸದನವು ಕೂಡಾ ರಜಾ ದಿನವನ್ನು, ನಾಳೆ ಅಲ್ಲ, ನಾಡಿದ್ದು ಆಚರಿಸಬೇಕೆಂದು ಎಂದರೆ ನಾಳೆ ಸಭೆ ಸೇರಬೇಕೆಂದು, ನಾಡಿದ್ದು ಸಭೆ ಸೇರಬಾರದೆಂದು ಸಲಹೆ ಮಾಡುತ್ತೇನೆ.

**ಶ್ರೀ ಕಾಮತ್ (ಮಧ್ಯಪ್ರದೇಶ):** ಅಧಿವೇಶನ ನಾಳೆ ಮುಕ್ತಾಯವಾಗುತ್ತದೆಯೇ?

**ಶ್ರೀ ಜವಹರಲಾಲ್ ನೆಹರೂ:** ಅದನ್ನು, ಹೇಳಲಾರೆ,

**ಮಾನ್ಯ ಉಪಸಭಾಪತಿಗಳು:** ಕಾರ್ಯಕಲಾಪ ಆದೇಶ ಪತ್ರದಲ್ಲಿ, ತುಂಬಾ ಕೆಲಸ ಇದೆ.

**ಶ್ರೀ ಜವಹರಲಾಲ್ ನೆಹರೂ:** ನಾಳೆ ಸೇರೋಣ, ನಾಡಿದ್ದು ಅಲ್ಲ. ನಾಡಿದ್ದು ಆದಮೇಲೂ ಕೂಡ, ಸಾಧ್ಯವಾದರೆ ಭಾನುವಾರ ನಾವು ಸೇರಬೇಕಾಗಬಹುದು.

**ಪಂಡಿತ್ ಕುಂಜ್ರು:** ಭಾನುವಾರ ಏಕೆ? ಸೋಮವಾರ ಏಕಾಗಬಾರದು?

**ಶ್ರೀ ಜವಹರಲಾಲ್ ನೆಹರೂ:** ನಾವು ಆ ಬಗ್ಗೆ ಪರಿಶೀಲಿಸಬಹುದು. ಭಾನುವಾರ ಮತ್ತು ಸೋಮವಾರ ಏಕಾಗಬಾರದು?

**ಪಂಡಿತ್ ಕುಂಜ್ರು:** ನಮಗಿರುವ ವಿನಾಯಿತಿಗಳು ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ನಂತೆಯೇ ಇವೆ. ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಭಾನುವಾರಗಳಂದು ಸೇರುವುದಿಲ್ಲ. ಭಾನುವಾರ ಸೇರದಿರಲು ನಮಗೆ ಎಲ್ಲ ಹಕ್ಕಿದೆ.

**ಶ್ರೀ ಜವಹರಲಾಲ್ ನೆಹರು:** ಹೌಸ್ ಆಫ್ ಕಾಮನ್ಸ್ ಮೊಹುರ್ರಮ್ ದಿನದಂದು ಕೂಡ ಸೇರುತ್ತದಲ್ಲ.

**ಪಂಡಿತ್ ಕುಂಜ್ರು:** ಮಾನ್ಯ ಸಭಾನಾಯಕರಿಗೆ ಆ ಸಲಹೆ ಮಾಡುವ ಧೈರ್ಯ ಇದ್ದರೆ ಮೊಹುರ್ರಮ್ ದಿನದಂದೂ ಸೇರೋಣ.

**ಶ್ರೀ ಜವಹರಲಾಲ್ ನೆಹರೂ:** ಭಾನುವಾರದಂದು ಸಭೆ ಸೇರಲು ಈ ಸದನವನ್ನು ಕೇಳುವ ಧೈರ್ಯವನ್ನು ಕೂಡ ತೋರಿಸುತ್ತೇನೆ.

**ಪಂಡಿತ್ ಕುಂಜ್ರು:** ಇದು ನಮ್ಮ ಸವಲತ್ತುಗಳಿಗೆ ವಿರುದ್ಧವಾಗಿದೆ.

**ಶ್ರೀ ಕಾಮತ್:** ಭಾನುವಾರ ಸಭೆ ಸೇರುವುದರ ಬದಲು, ದೇಶ ಸೇವೆಗಾಗಿ, ಸಭೆ ಸೇರಿ, ಕಷ್ಟಪಟ್ಟು

ಕೆಲಸ ಮಾಡಿ ಮೊಹುರ್ರಂ ಹಬ್ಬವನ್ನು ನಾವು ಆಚರಿಸಬಹುದಲ್ಲ. ವಿನಾಯಕ ಚುತುರ್ಥಿ ಮತ್ತು ಅನಂತ ಚತುರ್ದಶಿ ಸಂದರ್ಭಗಳಲ್ಲಿ ಮಾಡಿದಂತೆ?

**ಮಾನ್ಯ ಉಪಸಭಾಪತಿಗಳು:** ಈ ವಿಷಯದ ಮೇಲೆ ಚರ್ಚೆ ಮಾಡುವ ಅಗತ್ಯ ಇಲ್ಲ. ನಾಳೆ ಕೆಲಸದ ದಿನ. ೧೨ನ್ನು, ಮೊದಲು ರಜಾ ದಿನವೆಂದು ಅಧಿಸೂಚಿಸಿದ್ದರೂ, ಸಂಸತ್ ನಾಳೆ ಸಭೆ ಸೇರುತ್ತದೆ. ರಜಾ ದಿನವನ್ನು ನಾಳೆ ನಂತರದ ದಿನಕ್ಕೆ ಬದಲಾಯಿಸಲಾಗುತ್ತದೆ.

ಕಾರ್ಯಕಲಾಪ ಆದೇಶ ಪತ್ರದಲ್ಲಿ ತುಂಬಾ ಕೆಲಸವನ್ನು ನಮೂದಿಸಲಾಗಿದೆ. ಕೆಲಸ ಮುಂದುವರಿಸಲು ಸರ್ಕಾರವು ಬಯಸಿದರೆ, ಖಂಡಿತವಾಗಿಯೂ, ನಾವು ಸೋಮವಾರ ಮತ್ತು ಮಂಗಳವಾರ ಸಹ ಸೇರಬೇಕು.

ಭಾನುವಾರದ ಬಗ್ಗೆ ಹೇಳುವುದಾದರೆ, ಭಾನುವಾರಗಳಂದು ಸೇರುವುದಕ್ಕೆ ಸಾಮಾನ್ಯವಾಗಿ ನನ್ನ ವಿರೋಧ ಇದೆ. ಆದರೆ, ಕೆಲಸದ ಸ್ವರೂಪವನ್ನು ಗಮನಿಸಿ ಮುಂದೆ, ಆ ವಿಷಯವನ್ನು ಪರಿಶೀಲಿಸೋಣ.

ಸದನವು ಈಗ, ಕೈಗಾರಿಕೆಗಳ ವಿಧೇಯಕವನ್ನು ಕೈಗೆತ್ತಿಕೊಳ್ಳುತ್ತದೆ.

ಡಾ. ಅಂಬೇಡ್ಕರ್ ಎದ್ದು ನಿಂತಾಗ –

**ಮಾನ್ಯ ಉಪಸಭಾಪತಿಗಳು:** ಮಾನ್ಯ ಸಚಿವರು ಅಪರಾಹ್ನ ತಮ್ಮ ಹೇಳಿಕೆ ನೀಡಬಹುದು.

**ಡಾ. ಅಂಬೇಡ್ಕರ್:** ಈ ವಿಧೇಯಕದ ನಂತರವೇ?

**ಮಾನ್ಯ ಉಪಸಭಾಪತಿಗಳು:** ಸುಮಾರು ೬ ಗಂಟೆಗೆ

**ಡಾ. ಅಂಬೇಡ್ಕರ್:** ೬ ರಂದು ನಾನು ಹೇಳಿಕೆ ಕೊಡಬೇಕೆಂದು ತಾವು, ನಾನು, ಪ್ರಧಾನ ಮಂತ್ರಿಯವರು ಒಪ್ಪಿಕೊಂಡಿದ್ದೆವು. ೬ ರಂದು ಕಾರ್ಯಕಲಾಪದ ಕೆಲವೊಂದು ಭಾಗ ಮುಗಿದಿರಲಿಲ್ಲವಾದ್ದರಿಂದ ಕಾರ್ಯಕಲಾಪ ನಿರ್ವಹಣೆ ಬಗೆಗಿನ ನಿಯಮವನ್ನು ಬದಿಗೆ ಇಡುವುದಾಗಿ ಮತ್ತು ೧೧ ರಂದು ಹೇಳಿಕೆ ನೀಡಲು ಅನುಮತಿ ಕೊಡುವುದಾಗಿ ತಾವು ನಿರ್ದಿಷ್ಟವಾಗಿ ಒಪ್ಪಿಕೊಂಡಿದ್ದಿರಿ. ಮಾಜಿ ಮಂತ್ರಿಯಾಗಿ ಹೇಳಿಕೆ ಓದಲು ಇದು ಸಮಯ ಅಲ್ಲವೇ? ೬ ಗಂಟೆ ಸರಿ ಹೊಂದುತ್ತದೆಂದು ತಾವು ಹೇಳಿಲ್ಲವೆಂದು ನನ್ನ ಅನಿಸಿಕೆ.

**ಮಾನ್ಯ ಉಪಸಭಾಪತಿಗಳು:** ನಿಯಮವನ್ನು ಬದಿಗಿಡುತ್ತೇನೆಂದು ಮಾನ್ಯ ಕಾನೂನು ಸಚಿವರಿಗೆ ಹೇಳಿದ್ದೆ, ನಿಜ. ರಾಜೀನಾಮೆ ನೀಡಿದ ಯಾರೇ ಮಾನ್ಯ ಸಚಿವರು, ಸ್ಪೀಕರ್‌ರವರ ಅನುಮತಿ ಪಡೆದು ಸಾಮಾನ್ಯವಾಗಿ, ನಿಯಮ ೧೨೮ ರ ಪ್ರಕಾರ, ಪ್ರಶ್ನೋತ್ತರ ವೇಳೆ ಮುಗಿದ ನಂತರ, ಕೂಡಲೇ, ತನ್ನ ರಾಜೀನಾಮೆಯ ವಿವರಣೆ ಹೇಳಿಕೆಯನ್ನು ಮಾಡಬಹುದು. ಆ ಉದ್ದೇಶಕ್ಕಾಗಿ, ಈ ದಿನ, ಆ ನಿಯಮವನ್ನು ಬದಿಗೆ ಇಡುತ್ತೇನೆ, ಇಡುತ್ತಿದ್ದೇನೆ. ಅದನ್ನು ೬ ಗಂಟೆ ತನಕ ಮುಂದೂಡಬಹುದೆಂದು ಮಾತ್ರವೇ ಸಲಹೆ ಮಾಡುತ್ತಿದ್ದೇನೆ, ಅಷ್ಟೇ.

**ಡಾ. ಅಂಬೇಡ್ಕರ್:** ಈಗ ಏಕಾಗಬಾರದು ?

**ಮಾನ್ಯ ಉಪಸಭಾಪತಿಗಳು:** ೬ ಗಂಟೆಯಲ್ಲಿ ಮಾನ್ಯ ಸಚಿವರ ಹೇಳಿಕೆಯನ್ನು ಆಲಿಸುತ್ತೇನೆ.

**ಡಾ. ಅಂಬೇಡ್ಕರ್:** ನನ್ನ ಹೇಳಿಕೆಯನ್ನು ೬ ಗಂಟೆಗೆ ಏಕೆ ಮುಂದೂಡಬೇಕೆನ್ನುವುದೇ ನನಗೆ ಅರ್ಥವಾಗುತ್ತಿಲ್ಲ.

**ಮಾನ್ಯ ಉಪಸಭಾಪತಿಗಳು:** ಯಾರೇ ಮಾನ್ಯ ಸಚಿವರು ಹೇಳಿಕೆ ನೀಡುವುದಕ್ಕೂ ಮೊದಲು ನಿಯಮಗಳ ಪ್ರಕಾರ, ಸ್ಪೀಕರ್‌ರವರು ಅದಕ್ಕೆ ಸಮ್ಮತಿ ಕೊಡಬೇಕಾಗುತ್ತದೆ. ಮಾನ್ಯ ಸಚಿವರು ಏನು ಹೇಳಿಕೆ ಕೊಡುತ್ತಾರೆನ್ನುವುದನ್ನು ನಾನು ತಿಳಿಯ ಬಯಸುತ್ತೇನೆ. ಬಹುಶಃ, ಅದಕ್ಕೆ ನನ್ನ ಸಮ್ಮತಿ ಬೇಕಾಗುತ್ತದೆ.

ಯಾವುದಕ್ಕೆ ಅವಕಾಶ ಕಲ್ಪಿಸಿಲ್ಲವೋ ಆ ಯಾವುದನ್ನೂ ನಾನು ಸದನಕ್ಕೆ ಬಹಿರಂಗಪಡಿಸುತ್ತಿಲ್ಲ. ಹೇಳಿಕೆಯ ಒಂದು ಪ್ರತಿಯನ್ನು ನನಗೆ ಕೊಡುವಂತೆ ಮಾನ್ಯ ಸಚಿವರನ್ನು ಕೋರುತ್ತೇನೆ. ಈ ಮಧ್ಯಾಹ್ನ ಅದನ್ನು ಓದಲು ನಿಮಗೆ ಅವಕಾಶ ಕೊಡುತ್ತೇನೆ.

**ಡಾ. ಅಂಬೇಡ್ಕರ್:** ಹಾಗಾ, ತಾವು ಅನುಮತಿ ಕೊಡುವುದಕ್ಕೂ ಮುಂಚೆ, ನನ್ನ ಹೇಳಿಕೆಯನ್ನು ತಮಗೆ ಒಪ್ಪಿಸುವಂತೆ, ನಾನು ತಮ್ಮನ್ನು ಭೇಟಿ ಮಾಡಿದಾಗ, ತಾವು ಆಗಲೇ ಹೇಳಬಹುದಿತ್ತು. ತಾವು ಹಾಗೆ ಹೇಳಲಿಲ್ಲ.

**ಮಾನ್ಯ ಉಪಸಭಾಪತಿಗಳು:** ತೊಂದರೆ ಏನಾಗಿಲ್ಲವಲ್ಲ.

**ಡಾ. ಅಂಬೇಡ್ಕರ್:** ತಮ್ಮ ಬಳಿಗೆ ಬಂದಿದ್ದೆ, ನಂತರ ಪತ್ರ ಬರೆದಿದ್ದೆ. ಆದರೆ, ಹೇಳಿಕೆ ನೀಡಲು ತಾವು ನನಗೆ ಅನುಮತಿ ಕೊಡುವ ತೀರ್ಮಾನಕ್ಕೆ ಬರುವುದಕ್ಕೂ ಮೊದಲು, ನನ್ನ ಹೇಳಿಕೆಯ ಒಂದು ಪ್ರತಿಯನ್ನು ತಮಗೆ ಕೊಡಬೇಕೆಂದು ತಾವು ನನಗೆ ಹೇಳಲಿಲ್ಲ. ನಿಯಮ ೧೨೮ನ್ನು ನಾನು ಓದಿ ತಿಳಿದುಕೊಂಡಿರುವಷ್ಟರ ಮಟ್ಟಿಗೆ ಹೇಳುವುದಾದರೆ, ಸಭಾಪತಿಗಳು ಸಮ್ಮತಿ ಕೊಡುವದಕ್ಕೂ ಮೊದಲು ಅವರಿಗೆ ಹೇಳಿಕೆಯ ಒಂದು ಪ್ರತಿಯನ್ನು ಕೊಡುವುದು ಅಗತ್ಯ ಎನ್ನುವ ಯಾವುದೇ ನಿಬಂಧನೆ ಅದರಲ್ಲಿಲ್ಲ. ನನ್ನ ಹೇಳಿಕೆಯ ಒಂದು ಪ್ರತಿಯನ್ನು ಕೊಡುವಂತೆ ಪ್ರಧಾನ ಮಂತ್ರಿಯವರು ಕೇಳಿದ್ದರು, ಕೊಟ್ಟಿದ್ದೆ. ನಾನು ಹೇಳಿಕೆಯನ್ನು ಕೊಡಬೇಕೇ ಅಥವಾ ಕೊಡಬಾರದೇ ಎನ್ನುವ ತೀರ್ಮಾನಕ್ಕೆ ತಾವು ಬರುವುದಕ್ಕೂ ಮೊದಲು ನನ್ನ ಹೇಳಿಕೆಯ ಒಂದು ಪ್ರತಿಯನ್ನು ತಮಗೆ ಕೊಡಬೇಕೆಂದು ತಾವು ನನಗೆ ಆದೇಶ ಮಾಡಿದ್ದಿದ್ದರೆ ಸಂತೋಷದಿಂದ ಕೊಡುತ್ತಿದ್ದೆ. ಆದರೆ, ನಾನು ತಮ್ಮ ಬಳಿಗೆ ಬಂದಾಗ ತಾವು ಅಂಥ ಯಾವುದೇ ಸುಳಿವನ್ನು ನನಗೆ ಕೊಡಲಿಲ್ಲ. ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ, ನಿಯಮಗಳ ಪ್ರಕಾರ ಹೇಳಿಕೆ ಕೊಡಬೇಕೆಂಬ ಆವಶ್ಯಕತೆಯನ್ನು ಮನಗಂಡಿದ್ದೆ. ಇತರ ಸದಸ್ಯರು ನಿರ್ವಹಿಸಲು ಸಾಧ್ಯವಾಗದಿರಬಹುದಾದ ಕೆಲವು ಕಾರ್ಯಕಲಾಪಗಳನ್ನು ನಾನು ಮುಗಿಸಬೇಕೆಂದು ಪ್ರಧಾನ ಮಂತ್ರಿಯವರು ತುಂಬಾ ಅಪೇಕ್ಷೆಪಟ್ಟಿದ್ದರು. ಏಕೆಂದರೆ ಕೆಲವು ಕ್ಲಿಷ್ಟಕರ ವಿಷಯಗಳೂ ಇದ್ದವು. ಅದಕ್ಕೆ ಒಪ್ಪಿಕೊಂಡಿದ್ದೆ. ನಂತರ ನಾನು ತಮ್ಮ ಬಳಿಗೆ ಬಂದು "ಕಾರ್ಯ ಕಲಾಪವು ಸುಗಮವಾಗಿ ನಡೆಯಲು ನಾನು ಪ್ರಧಾನ ಮಂತ್ರಿಯವರಿಗೆ ನೆರವಾಗುವ ದೃಷ್ಟಿಯಿಂದ ದಯಮಾಡಿ ನಿಯಮಗಳನ್ನು ಬದಿಗಿಡುವಿರಾ? ಎಂದು ತಮ್ಮನ್ನು ಕೇಳಿಕೊಂಡಿದ್ದೆ. ಅನುಮತಿ ಕೊಡುವುದಕ್ಕೂ ಮುಂಚೆ ನನ್ನ ಹೇಳಿಕೆಯ ಒಂದು ಪ್ರತಿಯನ್ನು ನೋಡಬಯಸಿದ್ದೇನೆಂದು ತಾವು ಹೇಳಲೇ ಇಲ್ಲ. ಮೊದಲ ಬಾರಿಗೆ ತಾವು ಈಗ ಈ ಅಂಶವನ್ನು ಎತ್ತಿದ್ದೀರಿ.

**ಪಂಡಿತ್ ಕುಂಜ್ರು:** ತಾವೇ ಹೇಳಿದಂತೆ, ಪೀಠವು ಕೆಲವೊಂದು ಬಗೆಯ ಸೆನ್ಸಾರ್‌ಷಿಪ್‌ಗೆ ಮುಂದಾಗುತ್ತದೆಯೇ? ಎಂಬುದನ್ನು ತಿಳಿಯಬಯಸುತ್ತೇನೆ.

**ಮಾನ್ಯ ಉಪಸಭಾಪತಿಗಳು :** ಹೌದು. ಪೀಠವು ಯಾವಾಗಲೂ ಚಲಾಯಿಸಬಹುದಾದ ಸೆನ್ಸಾರ್‌ಷಿಪ್ ಏನೆಂದರೆ, ಮಾನಹಾನಿಕರವಾದ, ಅಪನಿಂದೆಯ, ಅಸಂಬದ್ಧವಾದ, ಇನ್ನೂ ಮುಂತಾದ ಸದನದ ಮುಂದೆ ಮಂಡಿಸಲೇಬಾರದ ವಿಷಯವನ್ನು ಬಿಟ್ಟುಬಿಡಬೇಕಾಗುತ್ತದೆ. (ಅಡ್ಡಿ, ಅಡಚಣೆ) ಶಿಸ್ತು! ಶಿಸ್ತು! ಕೇಳಿದ ಪ್ರಶ್ನೆಗೆ ಮಾತ್ರವೇ ಉತ್ತರ ಕೊಡುತ್ತಿದ್ದೇನೆ. ಖಂಡಿತವಾಗಿಯೂ ನಾನು ಹಾಗೆ ಮಾಡಬಹುದಾಗಿದೆ. ಅಸಂಬದ್ಧ ಸ್ವರೂಪದ ಅಭಿಪ್ರಾಯಗಳಿಗೆ, ಅಸಮರ್ಪಕ ಹೇಳಿಕೆಗಳಿಗೆ ನಾನು ಅವಕಾಶ ಕೊಡುವುದಿಲ್ಲ. ನಿಯಮ ೧೨೮ಕ್ಕೆ ನಾನು ಕಟ್ಟುನಿಟ್ಟಾಗಿ ಬದ್ಧನಾಗಿರುತ್ತೇನೆ. ಸದನದಲ್ಲಿ ಯಾರೇ ಮಾನ್ಯ ಸಚಿವರು ಹೇಳಿಕೆ ಕೊಡಬಯಸಿದರೆ, ಆ ಹೇಳಿಕೆಯು ಸಭ್ಯತೆಯನ್ನು, ಔಚಿತ್ಯವನ್ನು ಮೀರಿದರೆ ಅಥವಾ ಅಸಂಬದ್ಧವೆಂದು

ನಾನದನ್ನು ಪರಿಗಣಿಸಿದರೆ, ಮಿತಿ ಮೀರಬಾರದೆಂದು ಅವರಿಗೆ ಹೇಳುವ ಹಕ್ಕು ನನಗಿದೆ. ಆ ಅಧಿಕಾರ ಯಾವಾಗಲೂ ನನಗಿದೆ. ಇಲ್ಲದಿದ್ದರೆ ಈ ನಿಯಮ ಅರ್ಥಹೀನವಾದುದಾಗುತ್ತದೆ.

ಮಾನ್ಯ ಸಚಿವರಿಗೆ ಅನುಮತಿ ಕೊಡುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ. ಅವರು ನನ್ನ ಬಳಿಗೆ ಬಂದಿದ್ದರೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಬಹುಶಃ ಅವರ ಜ್ಞಾಪಕ ಶಕ್ತಿ ಕಡಿಮೆ ಅಂತ ಕಾಣುತ್ತದೆ. ನಿಯಮಗಳ ಪ್ರಕಾರ ಸ್ಥಾಯೀ ಆದೇಶಗಳನ್ನು ನಾನು ಬದಿಗೆ ಇಡಬಹುದೆಂದು ಅವರು ನನಗೆ ಸಲಹೆ ಮಾಡಲಿಲ್ಲ. ಅವರಿಗೆ ಅವಕಾಶ ಕಲ್ಪಿಸುವ ಸಲುವಾಗಿ, ಅವರು ಬಯಸುವ ಯಾವುದೇ ಸಮಯದಲ್ಲಿ ಅವರು ಹೇಳಿಕೆ ನೀಡಲು ಅವಕಾಶಕೊಡುತ್ತೇನೆಂದು ಹೇಳಿದ್ದೆ. ಆದೇಶವನ್ನು ನಾನು ಬದಿಗಿಡಬಹುದೆಂಬುದನ್ನು ಅವರ ಗಮನಕ್ಕೆ ತಂದಿದ್ದೆ. ಅವರೂ ಒಪ್ಪಿದ್ದರು. ಈಗಲೂ, ಅವರು ಹೇಳಿಕೆ ಕೊಡುವಾಗ, ನಿರ್ದಿಷ್ಟವಾದೊಂದು ಹೇಳಿಕೆಗೆ ನಾನು ಒಪ್ಪದಿದ್ದರೆ, ಅದನ್ನು ಹೇಳಬಾರದೆಂದು ನಾನು ಭಾವಿಸಿದರೆ ಸದನದ ನಡವಳಿಯಿಂದ ಆ ಭಾಗವನ್ನು ಅಳಿಸಿ ಹಾಕಲು ನಾನು ಖಂಡಿತವಾಗಿಯೂ ಹೇಳಬಹುದಾಗಿದೆ. ಇದನ್ನೆಲ್ಲಾ ತಪ್ಪಿಸಲು, ವಾಸ್ತವವಾಗಿ ಆ ಹೇಳಿಕೆ ಏನು ಎಂಬುದನ್ನು ತಿಳಿಯಬಯಸುತ್ತೇನೆ. ಅದು, ನಿಯಮಗಳ ಮತ್ತು ನಮಗಿರುವ ಅಧಿಕಾರಗಳ ವ್ಯಾಪ್ತಿಗೆ ಮೀರಿರದಿದ್ದರೆ, ನಿಯಮಗಳನ್ನು ಬದಿಗಿಟ್ಟು, ಪ್ರಶ್ನೋತ್ತರ ವೇಳೆ ಮುಗಿದ ಕೊಡಲೇ ಹೇಳಿಕೆ ನೀಡುವಂತೆ ಅವರಿಗೆ ಅನುಮತಿ ನೀಡಲು ಸಿದ್ಧನಿದ್ದೇನೆ. ಈಗಲೂ ಆ ನಿಲುವಿನಿಂದ ದೂರ ಸರಿಯಲಾರೆ, ಮಾನ್ಯ ಸಚಿವರು ಹೇಳಿಕೆ ನೀಡುವಾಗ ಅದು, ಸದನದಲ್ಲಿ ಹೇಳಬಾರದಂಥ ರೀತಿಯ ವಿಷಯವೇ ಎಂಬುದನ್ನು ನೊಡುವುದು ನನಗೆ ಸೇರಿದ್ದು. ಆ ಹೇಳಿಕೆಯ ಒಂದು ಪ್ರತಿಯನ್ನು ನನಗೆ ಕೊಡಲು ಈಗಲೂ ಸಮಯ ಇದೆ ಎಂದು ಅವರಿಗೆ ಹೇಳಿದ್ದೇನೆ. ಸಭಾನಾಯಕರಾದ ಪ್ರಧಾನ ಮಂತ್ರಿಯವರಿಗೆ ಅವರು ಒಂದು ಪ್ರತಿಯನ್ನು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಆದರೆ, ಸಭಾಪತಿಯವರಲ್ಲಿ ಸದನದ ಇಡೀ ವಿಶೇಷಾಧಿಕಾರಗಳು, ಗೌರವ ಘನತೆ, ಔಚಿತ್ಯ ನಿಹಿತವಾಗಿದೆ. ಆದ್ದರಿಂದ, ಈ ವಿಷಯದಲ್ಲಿ ಸಭಾಪತಿಗಳಿಗೆ ಸಂಬಂಧಿಸಿದಂತೆ ಯಾವ ಅಭಿಪ್ರಾಯಭೇದವೂ ಇರಕೂಡದು. ನಾನು ದಾರಿ ಬಿಟ್ಟು ಹೋಗುತ್ತಿಲ್ಲ. ಹೇಳಿಕೆ ನೀಡುವ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಈ ಸದನದ ಮತ್ತು ಮಾನ್ಯ ಸಚಿವರ ಗೌರವ ಘನತೆಗೆ ಕುಂದುಂಟಾಗದಂತೆ ನನ್ನ ಅಧಿಕಾರಗಳನ್ನು ಚಲಾಯಿಸಲು ಪ್ರಯತ್ತಿಸುತ್ತಿದ್ದೇನೆ. ೬ ಗಂಟೆಗೆ ಹೇಳಿಕೆ ನೀಡಲು ಮಾನ್ಯ ಸಚಿವರಿಗೆ ಅನುಮತಿ ನೀಡುತ್ತೇನೆ.

**ಶ್ರೀ ಕಾಮತ್:** ಅಸಂಬದ್ಧತೆ ಅಥವಾ ಅನ್ಯಥಾ ಆಧಾರದ ಮೇಲೆ, ನಿಯಮಗಳ ಪ್ರಕಾರ, ಯಾರೇ ಸಚಿವರನ್ನು ಅಥವಾ ಯಾರೇ ಸದಸ್ಯರನ್ನು ಮಿತಿಮೀರದಂತೆ ಕೇಳಬಹುದಾಗಿದ್ದರೂ ಹೇಳಿಕೆಯನ್ನು ಮೊದಲೇ ಸೆನ್ಸಾರಿಗೆ ಒಳಪಡಿಸಬಾರದು ಎನ್ನುವುದು ವಾಸ್ತವಾಂಶ ಅಲ್ಲವೇ?

**ಮಾನ್ಯ ಉಪಸಭಾಪತಿಗಳು :** ಹಾಗಲ್ಲ. ಮಾನ್ಯ ಸಚಿವರು ನೀಡಲಿರುವ ಹೇಳಿಕೆ ಏನು ಎನ್ನುವುದನ್ನು ನೋಡುವ ಹಕ್ಕು ನಿಯಮಗಳ ಪ್ರಕಾರ ನನಗಿದೆ.

**ಡಾ. ಅಂಬೇಡ್ಕರ್:** ಹೇಳಿಕೆ ನೀಡಲು ತಾವು ಆಸ್ಪದ ಕೊಡುವುದಿಲ್ಲವೆಂದು ತೋರುತ್ತದೆ. ತಮ್ಮ ನಿರ್ಣಯವನ್ನು ಹಾಗೆಂದು ಅರ್ಥಮಾಡಿಕೊಂಡಿದ್ದೇನೆ. ನಾನು ಸಚಿವನಾಗಿ ಉಳಿದಿಲ್ಲ. ಹೊರಗೆ ಹೋಗುತ್ತಿದ್ದೇನೆ. ಈ ಬಗೆಯ ಹುಕುಂಗೆ ನಾನು ಒಳಗಾಗುವುದಿಲ್ಲ.

**ಪಂಡಿತ್ ಕುಂಜ್ರು:** ಶ್ರೀ ಶ್ಯಾಮ ಪ್ರಸಾದ ಮುಖರ್ಜಿಯವರು ರಾಜೀನಾಮೆ ಇತ್ತಾಗ, ಅವರು ಸದನದಲ್ಲಿ ಹೇಳಿಕೆ ನೀಡುವುದಕ್ಕೂ ಮುಂಚೆ ಅದರ ಒಂದು ಪ್ರತಿಯನ್ನು ಸಭಾಪತಿಯವರಿಗೆ ಕೊಡಬೇಕೆಂದು ಕೇಳಲಾಗಿತ್ತೆ?

**ಮಾನ್ಯ ಉಪಸಭಾಪತಿಗಳು :** ಅವರು ಸ್ಪೀಕರ್‌ರೊಂದಿಗೆ ಮಾತನಾಡಿದ್ದರು. ಸದನದಲ್ಲಿ ತಾನು ನೀಡಲಿರುವ ಹೇಳಿಕೆ ಏನು ಎಂಬುದನ್ನು ಅವರಿಗೆ ತಿಳಿಸಿದ್ದರು.

ಸದನದಲ್ಲಿ ಅವೆಲ್ಲವನ್ನೂ ಚರ್ಚಿಸಲಾಗಿತ್ತು. ಈಗ ಸದನವು ಮುಂದಿನ ಕಾರ್ಯಕಲಾಪವನ್ನು ಎತ್ತಿಕೊಳ್ಳುತ್ತದೆ.

**ಪಂಡಿತ್ ಕುಂಜ್ರು:** ಹೇಳಿಕೆಯ ಒಂದು ಪ್ರತಿಯನ್ನು ಸಭಾಪತಿಗಳಿಗೆ ಕೊಟ್ಟಿರಲಿಲ್ಲ.

**ಮಾನ್ಯ ಉಪಸಭಾಪತಿಗಳು :** ಅದರ ಆವಶ್ಯಕತೆ ಇರಲಿಲ್ಲ.

**ಶ್ರೀ ಕಾಮತ್:** ಅಂತೂ, ಹೇಳಿಕೆಯನ್ನು ನಾವು ಆಲಿಸಲಾಗಲಿಲ್ಲ.

**ಮಾನ್ಯ ಉಪಸಭಾಪತಿಗಳು :** ಅದು, ಅವರಿಗೆ ಸೇರಿದ್ದು. ಹೇಳಿಕೆ ನೀಡುವುದಿಲ್ಲವೆಂದು ಅವರೇ ಹೇಳಿದರಲ್ಲ.

◆

# ೪೩

# *ಡಾ. ಅಂಬೇಡ್ಕರ್‌ರ ರಾಜೀನಾಮೆ ಪತ್ರ

**ಮಾನ್ಯ ಉಪಸಭಾಪತಿಗಳು :** ೬ ಗಂಟೆಗೆ, ಡಾ. ಅಂಬೇಡ್ಕರ್‌ರವರು, ಇಚ್ಛಿಸಿದರೆ, ತಮ್ಮ ಹೇಳಿಕೆ ಕೊಡಲಿದ್ದಾರೆಂದು ಹೇಳಿದ್ದೆ. ಅವರ ಸ್ಥಾನದಲ್ಲಿ ಅವರು ಕಾಣುತ್ತಿಲ್ಲ. ರಾಜೀನಾಮೆ ಕೊಟ್ಟ ಯಾರೇ ಮಾನ್ಯ ಸಚಿವರು, ಸಭಾಪತಿಗಳ ಸಮ್ಮತಿ ಪಡೆದಿದ್ದರೆ, ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ ನಿಯಮಗಳ ಪ್ರಕಾರ, ಹೇಳಿಕೆ ನೀಡಲು ಅನುಮತಿ ಕೊಡಲಾಗುತ್ತದೆ. ಅಲ್ಪಾವಕಾಶದ ಸೂಚನೆಯ ನಂತರ ಈ ದಿನ, ಈ ಬೆಳಿಗ್ಗೆ ಪ್ರಶ್ನೋತ್ತರ ವೇಳೆ ಮುಗಿದಿದೆ. ಡಾ. ಅಂಬೇಡ್ಕರ್‌ರವರು ಮತಕ್ಷೇತ್ರಗಳ ಪುನರ್ ವಿಂಗಡನೆ ಸೂಚನೆಗಳಿಗೆ ಮಾರ್ಗದರ್ಶನ ನೀಡುತ್ತಿದ್ದರು. ಹೀಗಾಗಿ, ಅವರು ಹೇಳಿಕೆ ಕೊಡ ಬಯಸಿದಾಗ ಕೂಡಲೇ ಆ ಹೇಳಿಕೆ ನೀಡಲಾಗಲಿಲ್ಲ. ಪದ್ಧತಿಯಂತೆ, ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ ಅಥವಾ ದಿನದ ಮುಕ್ತಾಯದಲ್ಲಿ ೬ ಗಂಟೆಗೆ ಅವರು ಹೇಳಿಕೆ ನೀಡುತ್ತಾರೆಂದು ಭಾವಿಸಿದ್ದೆ. ಪ್ರಯುಕ್ತ ೬ ಗಂಟೆಗೆ ನಿಗದಿಪಡಿಸಿದ್ದೆ. ಈಗ ಅವಕಾಶಕೊಡುತ್ತಿದ್ದೆ. ಆದರೆ, ಅವರು ಇಲ್ಲಿಲ್ಲ.

೬ ಗಂಟೆ ಅಪರಾಹ್ನ

ಅವರ ಹೇಳಿಕೆಯ ಒಂದು ಪ್ರತಿಯ ಬಗ್ಗೆ ಹೇಳುವುದಾದರೆ, ಅವರು ಮೌಖಿಕ ಹೇಳಿಕೆ ನೀಡಬಯಸಿದ್ದರು, ಅವರು ನನ್ನ ಕೊಠಡಿಗೆ ಬಂದು ನನ್ನನ್ನು ಕಂಡಾಗ, ನಾನು ನಿರೀಕ್ಷಿಸಿರಲಿಲ್ಲ, ಹೇಳಿಕೆಯನ್ನು ಲಿಖಿತದಲ್ಲಿ ಬರೆದು ಕೊಡಿ, ಮೌಖಿಕ ಹೇಳಿಕೆ ಸರಿ ಅಲ್ಲ ಎಂದು ಅವರಿಗೆ ಹೇಳಿದ್ದೆ. ಹೇಳಿಕೆ ನೀಡಲು ಅವರಿಗೆ ಅನುಮತಿ ನೀಡಿದ್ದೆ ಮತ್ತು ಪ್ರಶ್ನೋತ್ತರ ವೇಳೆಯ ನಂತರ ಕೂಡಲೇ ಅವರಿಗೆ ಹೇಳಿಕೆ ನೀಡಲಾಗದಿದ್ದರೆ ನಿಯಮಗಳನ್ನು ಬದಿಗಿಟ್ಟು ಅವಕಾಶ ಕೊಡುತ್ತೇನೆ ಅಂತಲೂ ಹೇಳಿದ್ದೆ. ಆದರೆ, ಈ ಬೆಳಿಗ್ಗೆ, ಹೇಳಿಕೆ ರೂಪದಲ್ಲಿ ಅವರು ಏನು ಹೇಳ ಬಯಸಿದ್ದರೂ ಅದನ್ನು ಲಿಖಿತದಲ್ಲಿ ಬರೆದು, ಸಭಾ ನಾಯಕರಾದ ಸನ್ಮಾನ್ಯ ಪ್ರಧಾನ ಮಂತ್ರಿಯವರಿಗೆ ಅದರ ಒಂದು ಪ್ರತಿಯನ್ನು ಕೊಟ್ಟಿದ್ದಾರೆಂದು ಕಂಡು ಬಂದಿದೆ. ಅವರು ಹೇಳಿಕೆ ನೀಡಲು ಎದ್ದು ನಿಲ್ಲುವುದಕ್ಕೆ ಸಾಕಷ್ಟು ಮುಂಚಿತವಾಗಿಯೇ, ಅವರ ಹೇಳಿಕೆಯ ಒಂದು ಪ್ರತಿಯನ್ನು ನನಗೆ ಕಳುಹಿಸುವಂತೆ, ಬಹಳ ಹಿಂದೆಯೇ ಕಾರ್ಯದರ್ಶಿಯವರ ಮೂಲಕ ಹೇಳಿದ್ದೆ. ಆದರೂ, ಅವರು ಒಂದು ಪ್ರತಿಯನ್ನು ನನಗೆ ಕಳುಹಿಸಿಲ್ಲವೆಂದು ಹೇಳಲು ವಿಷಾದಿಸುತ್ತೇನೆ. ಈ ವಿಷಯವನ್ನು ನಾನು ಹೇಗೆ ನಿಭಾಯಿಸಬೇಕೆನ್ನುವುದು ಗೊತ್ತಾಗುತ್ತಿಲ್ಲ. ಅವರ ಹೇಳಿಕೆಯಲ್ಲಿ ನಾನು ಹಸ್ತಕ್ಷೇಪ ಮಾಡ ಬಯಸಿರಲೂ ಇಲ್ಲ. ಯಾವುದೇ ಹೇಳಿಕೆಯನ್ನು ಸದನದ ಮುಂದೆ ಓದುವಾಗ, ಆ ವ್ಯಕ್ತಿಯು ಮುಂಚೆಯೇ ಒಂದು ಪ್ರತಿಯನ್ನು ಕೊಡುತ್ತಾರೆ. ಕೊಡಲು ಅವರು ನಿರಾಕರಿಸಿರುವುದಕ್ಕೆ ಕಾರಣಗಳೇನು, ನನಗೆ ತಿಳಿಯುತ್ತಿಲ್ಲ.

ಅವರು ಹೇಳಿಕೆ ಕೊಡಬಯಸಿದಾಗ, ಯಾವುದೇ ಅಭ್ಯಂತರ ಇಲ್ಲದೆ, ೬ ಗಂಟೆಗೆ ಹೇಳಿಕೆ ನೀಡಬಹುದೆಂದು ಅವರಿಗೆ ಹೇಳಿದ್ದೆ. ಅವರು ಹಾಗೆ ಮಾಡಲಿಲ್ಲ. ಈ ಅವಕಾಶವನ್ನು ಅವರು

---

* ಸಂ.ಚ. ಸಂಪುಟ ೧೬ ಭಾಗ II, ೧೧, ಅಕ್ಟೋಬರ್ ೧೯೫೧ ಪುಟಗಳು ೪೭೩೦–೩೭.

ಬಳಸಿಕೊಳ್ಳಲಿಲ್ಲವೆಂದು ವಿಷಾದದಿಂದ ಹೇಳುತ್ತಿದ್ದೇನೆ. ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಲು ಪ್ರಯತ್ನಿಸುತ್ತಿದ್ದೇನೆ. ಹೇಳಿಕೆಯನ್ನು ಓದಲು ಎದ್ದು ನಿಲ್ಲುವುದಕ್ಕೂ ಮುಂಚೆ ನನಗೆ ಒಂದು ಪ್ರತಿಯನ್ನು ಕೊಡುವಂತೆ ಅವರನ್ನು ಕೇಳಿದ್ದೆ. ದುರದೃಷ್ಟವಶಾತ್ ಕೊಡಲಿಲ್ಲ. ಹೇಳಿಕೆಯ ಪ್ರತಿಯನ್ನು ಕೊಟ್ಟಿದ್ದರೆ ಅಥವಾ ಕೊಡದಿದ್ದರೂ, ಈ ಸದನದಲ್ಲಿ ಮೌಖಿಕ ಹೇಳಿಕೆ ನೀಡುವುದಕ್ಕೆ ಅವರಿಗೆ ಅವಕಾಶ ಕೊಡುತ್ತಿದ್ದೆ. ಅವರು ಹಾಗೆ ಮಾಡಲಿಲ್ಲ.

**ಶ್ರೀ ಜ್ಞಾನಿ ರಾಂ (ಬಿಹಾರ) :** ಹೇಳಿಕೆಯು ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ.

**ಮಾನ್ಯ ಉಪಸಭಾಪತಿಗಳು:** ನನಗೆ ಗೊತ್ತಿಲ್ಲ. ಈ ಸದನವು ಅದನ್ನು ಯಾವುದೇ ರೀತಿಯಲ್ಲಿ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ.

**ಸನ್ಮಾನ್ಯ ಪ್ರಧಾನ ಮಂತ್ರಿಯವರು (ಶ್ರೀ ಜವಹರಲಾಲ್ ನೆಹರೂ):** ಇದಕ್ಕೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮಾಜಿ ಸಹೋದ್ಯೋಗಿಯೊಬ್ಬರು, ಈ ದಿನ, ಬೇರಾವ ಕಾರಣಕ್ಕೆ ಅಲ್ಲದಿದ್ದರೂ, ಈ ರೀತಿ, ನಮ್ಮ ಸಂಗಡವನ್ನು ತ್ಯಜಿಸಿ ಹೋಗಿರುವುದು, ನನಗೆ ವಿಷಾದದ ಸಂಗತಿ. ಉದ್ಭವ ಆಗಿರುವ, ನೀವು ಹೇಳಿದ ಹಲವಾರು ವಿಷಯಗಳ ಬಗ್ಗೆ ಹೇಳಲು ಇಚ್ಛಿಸುವುದಿಲ್ಲ. ಅವರು ವಾಸ್ತವವಾಗಿ ಹೇಳಿಕೆಯನ್ನು ನೀಡಲು ಎದ್ದು ನಿಲ್ಲುವುದಕ್ಕೆ ಸುಮಾರು ೪೫ ನಿಮಿಷಗಳ ಮುಂಚೆ ನನ್ನ ಸ್ಥಾನದಲ್ಲಿ ನಾನು ಕುಳಿತಿದ್ದಾಗ ೯–೩೦ ಪೂರ್ವಾಹ್ನ ಆ ಹೇಳಿಕೆಯ ಪ್ರತಿ ನನಗೆ ಬಂತು. ಅದನ್ನು ಓದಿ ನಾನು ಚಕಿತನಾದೆ. ಏಕೆಂದರೆ, ರಾಜೀನಾಮೆ ನೀಡುತ್ತಿರುವ ಸಚಿವರಿಂದ ನಿರೀಕ್ಷಿಸಬಹುದಾದಂಥ ಬಗೆಯ ಹೇಳಿಕೆ ಅದಾಗಿರಲಿಲ್ಲ. ಅದು ಇಲ್ಲಿದೆ. ಅವರು ಅದರಲ್ಲಿ ಆ ರೀತಿ ಹೇಳಿದಾಗ, ಆ ಬಗ್ಗೆ ಕೆಲವು ಮಾತುಗಳನ್ನಾಡಬಯಸಿದ್ದೆ. ಏಕೆಂದರೆ, ಅಂಥದೊಂದು ವಿಷಯದ ಮೇಲೆ, ಚರ್ಚೆ ಮಾಡುವುದು, ನಿಯಮಗಳ ಪ್ರಕಾರ ಅಪೇಕ್ಷಣೀಯವೂ ಅಲ್ಲ, ಅನುಮತಿ ಕೊಡುವುದೂ ಸಾಧ್ಯವಿರಲಿಲ್ಲ. ನನಗೆ ಕಳುಹಿಸಿದ ರಾಜೀನಾಮೆ ಪತ್ರವನ್ನು ಮತ್ತು ಅದಕ್ಕೂ ಮೊದಲು, ಆ ನಂತರ ವಿನಿಮಯ ಆದ ಕೆಲವು ಇತರ ಪತ್ರಗಳನ್ನು ಓದಿ ಹೇಳಲು ತಮ್ಮ ಅನುಮತಿ ಕೋರುತ್ತೇನೆ.

ಅವರಿಂದ ನನಗೆ ಬಂದ ಮೊದಲ ಪತ್ರ.

**ಡಾ. ದೇಶ್‌ಮುಖ್ (ಮಧ್ಯಪ್ರದೇಶ):** ಕ್ರಿಯಾಲೋಪ ಸರ್. ಡಾ. ಅಂಬೇಡ್ಕರ್‌ರವರಿಗೆ ಇನ್ನೊಂದು ಅವಕಾಶ ಕೊಡುವ ಮನಸ್ಸು ಪೀಠಕ್ಕಿದ್ದರೆ, ಈಗ, ಈ ವಿಷಯದ ಮೇಲೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ಯಾವುದೇ ಹೇಳಿಕೆ ನೀಡುವುದರ ಬದಲು, ಈ ಅವಕಾಶವನ್ನು ಡಾ. ಅಂಬೇಡ್ಕರ್‌ರವರು ಬಳಸಿಕೊಳ್ಳುವರೇ ಎಂಬುದನ್ನು ಕಾದು ನೋಡುವುದು ಒಳ್ಳೆಯದೆಂದು ನನ್ನ ಅನಿಸಿಕೆ.

**ಖಾಜ್ವಾ ಇನಾಯತ್ ಉಲ್ಲಾ (ಬಿಹಾರ):** ನಮ್ಮ ಕೈಯಲ್ಲಿ ಅವರ ಒಂದು ಪ್ರತಿ ಈಗಾಗಲೇ ಇದೆ.....

**ಡಾ. ದೇಶಮುಖ್:** ಅವಕಾಶವನ್ನು ಕೊಡುವ ಉದ್ದೇಶ ಇದ್ದರೆ.........

**ಮನ್ಯ ಉಪಸಭಾಪತಿಗಳು:** ಒಬ್ಬ ಸದಸ್ಯರ ಪರ ಬೇರೆ ಯಾರೇ ಸದಸ್ಯರು ಮಾತನಾಡುತ್ತಿದ್ದಾರೆಯೇ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಡಾ. ದೇಶಮುಖ್ ರವರಿಗೆ ಡಾ. ಅಂಬೇಡ್ಕರ್‌ರವರು ಯಾವುದೇ ಅಧಿಕಾರ ನೀಡಿದ್ದಾರೆಯೇ ಎಂಬುದು ನನಗೆ ಗೊತ್ತಾಗುತ್ತಿಲ್ಲ.

**ಡಾ. ದೇಶ್‌ಮುಖ್:** ಅಂಥದ್ದೇನಿಲ್ಲ.

**ಮಾನ್ಯ ಉಪಸಭಾಪತಿಗಳು:** ಮಂತ್ರಿ ಪದವಿಗೆ ಅವರು ರಾಜೀನಾಮೆ ನೀಡಿರಬಹುದು, ಆದರೆ, ಅವರಿನ್ನೂ ಈ ಸದನದ ಸದಸ್ಯರು. ನೋಟೀಸಿಗೆ ವಿನಾಯಿತಿ ನೀಡುವಂತೆ ಅವರು ಉಪಸಭಾಪತಿಗಳನ್ನು

ಕೋರಿರುವಾಗ, ನೋಟೀಸಿಗೆ ವಿನಾಯಿತಿ ನೀಡಲು ಉಪಸಭಾಪತಿಗಳು ಒಪ್ಪಿ ಹೇಳಿಕೆಗೆ ೬ ಗಂಟೆಯನ್ನು ನಿಗದಿ ಮಾಡಿದಾಗ, ಅವರು ಇಲ್ಲಿರುತ್ತಾರೆಂದು ಮತ್ತು ಅವರ ಹೇಳಿಕೆಯನ್ನು ನೀಡುತ್ತಾರೆಂದು ನಿರೀಕ್ಷಿಸಿದ್ದೆವು. ಹೇಳಿಕೆ ನೀಡುವುದು, ನೀಡದಿರುವುದು ಅವರಿಗೆ ಸೇರಿದ್ದು. ಆದರೆ, ಅವರು ತಮ್ಮ ಆಸನದಲ್ಲಿ ಇಲ್ಲವೇ ಇಲ್ಲ. ಪ್ರಧಾನ ಮಂತ್ರಿಯವರು ಹೇಳಿಕೆ ನೀಡಲು ಇಚ್ಛಿಸಿದ್ದಾರೆ ..........

**ಶ್ರೀ ಜವಹರಲಾಲ್ ನೆಹರೂ:** ಅವರ ರಾಜೀನಾಮೆ ಪತ್ರವನ್ನು ಸದನಕ್ಕೆ ಓದಿ ಹೇಳಬಯಸುತ್ತೇನೆ. ಏಕೆಂದರೆ, ಸಾಮಾನ್ಯವಾಗಿ, ಸಚಿವರ ಹೇಳಿಕೆಯು ಅವರ ರಾಜೀನಾಮೆಗೆ ಸಂಬಂಧಿಸಿರುತ್ತದೆ.

**ಡಾ. ದೇಶಮುಖ್:** ಹೇಳಿಕೆಯೇ ಇಲ್ಲಿಲ್ಲ, ಈ ಪರಿಸ್ಥಿತಿ ಹೇಗೆ ಉದ್ಭವವಾಯಿತು?

**ಮಾನ್ಯ ಉಪಸಭಾಪತಿಗಳು:** ಹೇಗೆ ಉದ್ಭವವಾಯಿತೆಂದರೆ, ಪ್ರಧಾನ ಮಂತ್ರಿಯವರ ನಿರ್ದೇಶನದಂತೆ ಅಥವಾ ಸಲಹೆಯಂತೆ ನೇಮಕಗೊಂಡ ಸಚಿವರನ್ನು ನಾವು ಸದನಕ್ಕೆ ಪರಿಚಯ ಮಾಡಿಕೊಡುತ್ತೇವೆ. ಪ್ರಯುಕ್ತ ರಾಜೀನಾಮೆ ಪತ್ರವನ್ನು ಸದನಕ್ಕೆ ಓದಿ ಹೇಳುವುದು ಪ್ರಧಾನ ಮಂತ್ರಿಯವರಿಗೆ ಸೇರಿದ್ದು.

**ಡಾ. ದೇಶಮುಖ್:** ಹೇಳಿಕೆ ನೀಡುವುದು ಸದಸ್ಯರ ವಿಶೇಷಾಧಿಕಾರ. ಅದೇ ಇಲ್ಲ ಅಂದ ಮೇಲೆ, ಯಾವ ನಿಯಮಗಳ ಪ್ರಕಾರ ತಾವು ಮುಂದುವರಿಯುತ್ತೀರಿ ಹಾಗೂ ಯಾವುದೇ ಇತರ ಹೇಳಿಕೆಯ ಆವಶ್ಯಕತೆ ಹೇಗೆ ಉದ್ಭವಿಸಿತು ಎನ್ನುವುದೇ ನನಗೆ ಗೊತ್ತಾಗುತ್ತಿಲ್ಲ.

**ಮಾನ್ಯ ಉಪಸಭಾಪತಿಗಳು :** ಸರ್ಕಾರದ ಪರವಾಗಿ ಮಾಡುವ ಯಾವುದೇ ಹೇಳಿಕೆಯನ್ನು ನೀಡಲು ಅನುಮತಿಸುವುದು ಯಾವಾಗಲೂ ಪೀಠಕ್ಕೆ ಸೇರಿದ್ದು.

**ಡಾ. ದೇಶ್‌ಮುಖ್:** ಅದನ್ನು ಆಕ್ಷೇಪಿಸುತ್ತಿಲ್ಲ. ಈ ಬೆಳಿಗ್ಗೆ ಉದ್ಭವಿಸಿದ ಪರಿಸ್ಥಿತಿಯಿಂದ ಅದು ಹೇಗೆ ಉದ್ಭವಿಸಿತು ಎಂಬ ಬಗ್ಗೆ ಹೇಳಬೇಕೆಂದು ಕೋರುತ್ತೇನೆ.

**ಮಾನ್ಯ ಉಪಸಭಾಪತಿಗಳು:** ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರವು ವಿವರಣೆ ಕೊಡಬಯಸಿದೆ. ಆಸಕ್ತಿ ಉಳ್ಳ ಎಲ್ಲರಿಗೂ ಅವಕಾಶವನ್ನು ಕೊಡಲಾಗುತ್ತದೆ.

**ಶ್ರೀ ಜವಹರಲಾಲ್ ನೆಹರೂ:** ತಮಗೆ ಗೊತ್ತಿರುವಂತೆ ಸರ್, ಅವರು ಹೇಳಿಕೆ ನೀಡುತ್ತಾರೆಂದು ಕೊಂಡಿದ್ದೆ. ಇದನ್ನು ಗೌರವಪೂರ್ವಕವಾಗಿಯೇ ಹೇಳುತ್ತಿದ್ದೇನೆ. ಆಗ, ಹೇಳಿಕೆಯನ್ನು ನೀಡುವುದಿಲ್ಲ ಅಥವಾ ತಾವು ಅದಕ್ಕೆ ಇನ್ನೊಂದು ಸಮಯ ನಿಗದಿಪಡಿಸಬಹುದು ಎನ್ನುವುದು ನನಗೆ ಗೊತ್ತಿರಲಿಲ್ಲ. ಆ ರೀತಿಯ ಬೆಳವಣಿಗೆಗಳನ್ನು ನಾನು ನಿರೀಕ್ಷಿಸಿರಲಿಲ್ಲ. ಆದರೆ, ಆಗಿದ್ದು ಆಗಿ ಹೋಗಿದೆ, ಹೇಳಿಕೆಯು ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಅಥವಾ ಪ್ರಕಟ ಆಗಲೂಬಹುದು. ವಿನಿಮಯ ಆದ ಪತ್ರಗಳ ಬಗ್ಗೆ ತಿಳಿಯಲು ಸದನಕ್ಕೆ ತುಂಬಾ ಆಸಕ್ತಿ ಉಂಟೆಂದು ಕಾಣುತ್ತದೆ. ನಾನು ಹೇಳಿಕೆಯನ್ನೇನೂ ಉಲ್ಲೇಖಿಸುತ್ತಿಲ್ಲ, ಆದರೆ, ಡಾ. ಅಂಬೇಡ್ಕರರ ಮತ್ತು ನನ್ನ ನಡುವೆ ವಿನಿಮಯ ಆದ ಪತ್ರಗಳನ್ನು ಉಲ್ಲೇಖಿಸುತ್ತಿದ್ದೇನೆ.

ಅವರು ನನಗೆ ಬರೆದ ಮೊದಲ ಪತ್ರದಲ್ಲಿ ಅವರ ರಾಜೀನಾಮೆ ಬಗ್ಗೆ ಉಲ್ಲೇಖ ಇಲ್ಲ. ಅದರ ದಿನಾಂಕ ೧೦, ಆಗಸ್ಟ್ ೧೯೫೧. ಅದು ಹೀಗಿದೆ:

“

ನವದೆಹಲಿ
೧೦, ಆಗಸ್ಟ್ ೧೯೫೧

ಆತ್ಮೀಯ ಪ್ರಧಾನ ಮಂತ್ರಿಯವರೆ,

ನನ್ನ ಆರೋಗ್ಯವು, ನನಗೆ ಮತ್ತು ನನ್ನ ವೈದ್ಯರಿಗೆ ತುಂಬಾ ಆತಂಕ ಉಂಟು ಮಾಡಿದೆ. ಸತತ

ಚಿಕಿತ್ಸೆಗಾಗಿ ಸುಮಾರು ಒಂದು ತಿಂಗಳ ದೀರ್ಘ ಕಾಲ ಬೇಕಾಗುತ್ತದೆಂದು ಮತ್ತು ಆರೋಗ್ಯ ಇನ್ನಷ್ಟು ಹದಗೆಡುವುದಕ್ಕೆ ಆಸ್ಪದ ಕೊಡಬಾರದೆನ್ನುವ ದೃಷ್ಟಿಯಿಂದ ಚಿಕಿತ್ಸೆಯನ್ನು ಈಗ ಮುಂದೂಡಲಾಗದೆಂದು ವೈದ್ಯರು ಹೇಳುತ್ತಲೇ ಇದ್ದಾರೆ. ವೈದ್ಯರ ಚಿಕಿತ್ಸೆಗೆ ಒಳಗಾಗುವುದಕ್ಕೂ ಮೊದಲು, ಹಿಂದೂ ಸಂಹಿತೆ ವಿಧೇಯಕ ವಿಲೇ ಆಗಬೇಕೆಂಬುದು ನನ್ನ ತವಕ. ಆಗಸ್ಟ್ ೧೬ ರಂದು ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಕ್ಕೆ ಮತ್ತು ವಿರೋಧಿಸುವವರು ಅಡ್ಡಿ ಅಡಚಣೆ ಉಂಟು ಮಾಡುವ ತಂತ್ರಗಳನ್ನು ಮಾಡದಿದ್ದರೆ ಸೆಪ್ಟೆಂಬರ್ ೧ರ ಹೊತ್ತಿಗೆ ಅದು ಅಂಗೀಕೃತ ಆಗಲು ಅದಕ್ಕೆ ಹೆಚ್ಚಿನ ಆದ್ಯತೆ ಕೊಡಬಯಸಿದ್ದೇನೆ. ಈ ಮಸೂದೆಗೆ, ನಾನು ತುಂಬಾ ಪ್ರಾಮುಖ್ಯವನ್ನು ಕೊಡುತ್ತೇನೆಂಬುದು ನಿಮಗೆ ಗೊತ್ತಿದೆ. ಈ ವಿಧೇಯಕವು ಅಂಗೀಕೃತ ಆಗುವ ವಿಷಯದಲ್ಲಿ ನನ್ನ ಆರೋಗ್ಯದದ ಮೇಲೆ ಎಷ್ಟೇ ಒತ್ತಡ ಬಿದ್ದರೂ ಸಹಿಸಲು ಸಿದ್ಧನಿದ್ದೇನೆ. ಈ ವಿಧೇಯಕವು ಬೇಗನೆ ಅಂಗೀಕೃತವಾದರೆ ಒತ್ತಡವೂ ಕಡಿಮೆ ಆಗುತ್ತದೆ. ಇದಕ್ಕೆ ನಿಮ್ಮ ಯಾವ ತಕರಾರೂ ಇಲ್ಲವೆಂದು ನನ್ನ ನಂಬಿಕೆ. ಆಗಸ್ಟ್ ೧೬ನ್ನು ಪ್ರಸ್ತಾಪಿಸುತ್ತ, ಪಂಜಾಬಿಗೆ ಸಂಬಂಧಿಸಿದ ಬಿಲ್ಲುಗಳಿಗೆ, ಸುಗ್ರೀವಾಜ್ಞೆಗಳಿಗೆ ಮತ್ತು ಭಾಗ .ಸಿ. ರಾಜ್ಯಗಳಿಗೆ ಸಂಬಂಧಿಸಿದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರ ಮಸೂದೆಗೆ ಆದ್ಯತೆ ಕೊಡುತ್ತಿದ್ದೇನೆ.

ಕಳೆದ ಸಲ ನಡೆದ ಪಕ್ಷದ ಸಭೆಯಲ್ಲಿ, ಸೆಪ್ಟೆಂಬರ್ ಮೊದಲ ವಾರದಲ್ಲಿ ವಿಧೇಯಕವನ್ನು ಕೈಗೆತ್ತಿಕೊಳ್ಳಲಾಗುವುದೆಂದು ನೀವು ಹೇಳಿರುವುದು ವರದಿಯಾಗಿದೆಯೆಂದು ತಿಳಿದಿದ್ದರಿಂದ ಈ ಪತ್ರ ಬರೆದಿದ್ದೇನೆ. ಅದು ನಿಮ್ಮ ಸಲಹೆ ಮಾತ್ರ, ತೀರ್ಮಾನ ಅಲ್ಲವೆಂಬ ನಂಬಿಕೆ ನನಗಿದೆ.

ತಮ್ಮ ನಂಬುಗೆಯ

ಸಹಿ/–

ಬಿ.ಆರ್. ಅಂಬೇಡ್ಕರ್"

ಅದೇ ದಿನ ನಾನು ಅವರಿಗೆ ಈ ರೀತಿ ಪತ್ರ ಬರೆದೆ:

"

ನವದೆಹಲಿ

೧೦, ಆಗಸ್ಟ್, ೧೯೫೧.

ಆತ್ಮೀಯ ಅಂಬೇಡ್ಕರ್,

ಹಿಂದೂ ಸಂಹಿತೆ ವಿಧೇಯಕದ ಬಗ್ಗೆ ನಾನು ನಿಮಗೆ ನಿನ್ನೆ ಪತ್ರ ಬರೆದಿದ್ದೆ. ೧೦ನೇ ದಿನಾಂಕದ ನಿಮ್ಮ ಪತ್ರ ಈ ದಿನ ನನಗೆ ತಲುಪಿದೆ.

ನಿಮ್ಮ ಆರೋಗ್ಯ ಆತಂಕ ಉಂಟು ಮಾಡುತ್ತಿರುವುದಕ್ಕೆ ವ್ಯಥೆ ಪಡುತ್ತೇನೆ. ಗಾಬರಿಪಟ್ಟುಕೊಳ್ಳದೆ ಆರಾಮದಿಂದಿರಿ. ಇದು ನನ್ನ ಸಲಹೆ.

ಹಿಂದೂ ಸಂಹಿತೆ ವಿಧೇಯಕದ ಬಗ್ಗೆ, ಸದನದ ಒಳಗಷ್ಟೇ ಅಲ್ಲ ಹೊರಗೂ ಸಾಕಷ್ಟು ವಿರೋಧಿಗಳಿದ್ದಾರೆಂದು ನಿಮಗೆ ಗೊತ್ತಿದೆ. ಉದ್ದೇಶ ಎಷ್ಟೇ ಉದಾತ್ತವಾಗಿದ್ದರೂ, ಈ ವಿರೋಧಿಗಳನ್ನು ನಾವು ಪಕಕ್ಕೆ ತಳ್ಳಿ ಹಾಕುವುದಕ್ಕೆ ಮತ್ತು ಅದು ಬೇಗ ಆಗುವಂತೆ ಮಾಡಲು ಸಾಧ್ಯವಾಗುವುದಿಲ್ಲ. ತುಂಬಾ ವಿಳಂಬ ಆಗುವಂತೆ ಮಾಡುವ ಶಕ್ತಿ ಅವರಲ್ಲಿದೆ. ಆದ್ದರಿಂದ, ಉದ್ದೇಶ ಈಡೇರಲು ನಾವು ಜಾಣ್ಮೆಯಿಂದ

ಮುಂದುವರಿಯಬೇಕಾಗುತ್ತದೆ. ಈ ವಿಧೇಯಕವು ಈ ಅಧಿವೇಶನದಲ್ಲೇ ಅಂಗೀಕೃತ ಆಗಬೇಕೆಂಬ ತವಕ ನನಗೂ ಇದೆ.

ಸೆಪ್ಟೆಂಬರ್ ಪ್ರಾರಂಭದಲ್ಲಿ ಈ ವಿಧೇಯಕವನ್ನು ಕೈಗೆತ್ತಿಕೊಳ್ಳಬೇಕೆಂದು ಸಚಿವ ಸಂಪುಟದಲ್ಲಿ ತೀರ್ಮಾನ ಆಗಿತ್ತು. ಅದು ನಡವಳಿ ಪುಸ್ತಕದಲ್ಲಿ ದಾಖಲಾಗಿದೆಯೆಂದು ನನ್ನ ಅನಿಸಿಕೆ. ಅದನ್ನೇ ಪಕ್ಷದ ಸಭೆಯಲ್ಲಿ ಹೇಳಿದ್ದೆ. ಒಪ್ಪಲಾಗಿತ್ತು. ತ್ವರಿತ ಪ್ರಯತ್ನ ಮಾಡುವುದರಿಂದ, ಮುಂಚೆಯೇ ಅದನ್ನು ತರುವುದರಿಂದ ನಮ್ಮ ವಿರೋಧಿಗಳಿಗೆ ನಾವೇ ಕೈಯಾರೆ ಅಸ್ತ್ರ ಕೊಟ್ಟಂತಾಗುತ್ತದೆ, ತೊಂದರೆಯನ್ನು ಮೈಮೇಲೆ ಎಳೆದುಕೊಂಡಂತಾಗುತ್ತದೆ. ಕೆಲವೊಂದು ಪ್ರಮುಖ ಮಸೂದೆಗಳನ್ನು ಎಂದರೆ ಸುಗ್ರೀವಾಜ್ಞೆಗಳು, ಭಾಗ ಸಿ ರಾಜ್ಯಗಳ ವಿಧೇಯಕ, ಕೈಗಾರಿಕಾ ವಿಧೇಯಕಗಳನ್ನು ಮುಗಿಸಿದ ನಂತರ, ಸೆಪ್ಟೆಂಬರ್ ಪ್ರಾರಂಭದಲ್ಲಿ ಅದನ್ನು ಕೈಗೆತ್ತಿಕೊಳ್ಳುವುದು ತುಂಬಾ ತುಂಬಾ ಅನುಕೂಲಕರ. ಇವುಗಳ ಪೈಕಿ ಯಾವುದನ್ನಾದರೂ ಎತ್ತಿಕೊಳ್ಳುವುದಕ್ಕೆ ಮುಂಚೆಯೇ ಹಿಂದೂ ಸಂಹಿತೆ ವಿಧೇಯಕ ಬರುವಂತೆ ಮಾಡಿದರೆ, ರಾದ್ಧಾಂತ ಉಂಟಾಗುತ್ತದೆ, ಟೀಕೆಗಳಿಗೆ ಅವಕಾಶ ಒದಗಿಸಿದಂತಾಗುತ್ತದೆ. ಈ ಎಲ್ಲವನ್ನೂ ಅವಲೋಕಿಸಿದರೆ ನಾವು ಗೊತ್ತುಪಡಿಸಿದ ದಿನಗಳಿಗೆ ಬದ್ಧರಾಗುವುದು, ನಂತರ ಅದನ್ನು ಕೈಗೆತ್ತಿಕೊಳ್ಳುವುದು ತುಂಬಾ ಒಳ್ಳೆಯದು. ಆಗ ತುಂಬಾ ಹುರುಪಿನಿಂದ, ಕಡಿಮೆ ವಿರೋಧವನ್ನು ನಿರೀಕ್ಷಿಸಿ, ಕಾರ್ಯೋನ್ಮುಖರಾಗಬಹುದಾಗಿದೆ. ಸಂಸತ್ತು ಕೊನೆಪಕ್ಷ ಅಕ್ಟೋಬರ್ ಮೊದಲ ವಾರದವರೆಗೂ ಸೇರಲಿದೆ. ಹೀಗಾಗಿ ಬೇಕಾದಷ್ಟು ಸಮಯಾವಕಾಶ ಇದೆ.

ನಿಮ್ಮ ನಂಬುಗೆಯ

ಸಹಿ/–

ಜವಹರಲಾಲ್ ನೆಹರೂ"

ಸೆಪ್ಟೆಂಬರ್ ೨೭ ರಂದು, ಅವರಿಂದ ರಾಜೀನಾಮೆ ಪತ್ರ ಬಂತು:

"ಸಚಿವ ಸಂಪುಟದಲ್ಲಿ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡಲು ಬಹಳ ಹಿಂದಿನಿಂದಲೂ ಆಲೋಚಿಸುತ್ತಿದ್ದೆ. ಸಂಸತ್ತಿನ ಪ್ರಸಕ್ತ ಅಧಿವೇಶನದ ಅವಧಿಯು ಮುಗಿಯುವುದಕ್ಕೂ ಮುಂಚೆಯೇ ಹಿಂದೂ ಸಂಹಿತೆ ವಿಧೇಯಕವನ್ನು ಜಾರಿಗೆ ತರುವ ಸಾಧ್ಯತೆ ಉಂಟೆಂಬ ಒಂದೇ ನಂಬಿಕೆ ರಾಜೀನಾಮೆ ನೀಡುವ ನನ್ನ ಆಶಯವನ್ನು ತಡೆಹಿಡಿದಿತ್ತು. ವಿಧೇಯಕವನ್ನು ಭಾಗ ಮಾಡಿ, ವಿವಾಹ ಮತ್ತು ವಿಚ್ಛೇದನಕ್ಕೆ ಅದನ್ನು ಸೀಮಿತಗೊಳಿಸಲು ಕೂಡ ಒಪ್ಪಿಕೊಂಡಿದ್ದೆ. ನಮ್ಮ ಶ್ರಮಕ್ಕೆ ಇಷ್ಟಾದರೂ ಫಲ ಸಿಗಲಿ ಎಂಬ ಅಗಾಧ ನಂಬಿಕೆಯಿಂದ ಒಪ್ಪಿಕೊಂಡಿದ್ದೆ. ವಿಧೇಯಕದ ಈ ಭಾಗವನ್ನೂ ಕೂಡ ತಲೆ ಎತ್ತದಂತೆ ಮಾಡಲಾಗಿದೆ. ನಿಮ್ಮ ಸಚಿವ ಸಂಪುಟದಲ್ಲಿ ಸದಸ್ಯನಾಗಿ ನಾನು ಮುಂದುವರಿಯುವುದರಲ್ಲಿ ಯಾವ ಅರ್ಥವೂ ಇಲ್ಲವೆಂದು ಕಾಣುತ್ತದೆ.

ನನ್ನ ರಾಜೀನಾಮೆಯು ಕೂಡಲೇ ಜಾರಿಗೆ ಬರಬೇಕೆಂದು ಆಶಿಸುತ್ತೇನೆ. ನನ್ನ ಹೆಸರಿನಲ್ಲಿ ಕೆಲವೊಂದು ಮಸೂದೆಗಳು ಸೂಚನೆಗಳು ಇವೆ, ಅವಿನ್ನೂ ಮುಗಿದಿಲ್ಲ ಎನ್ನುವ ಸಂಗತಿಯು ನೀವು ನನ್ನ ರಾಜೀನಾಮೆಯನ್ನು ಅಂಗೀಕರಿಸಲು ಅಡ್ಡ

ಬರಬಹುದು. ನಿಮ್ಮ ಸಚಿವ ಸಂಪುಟದ ಯಾರೇ ಇತರ ಸಚಿವರಿಂದ ಈ ಮಸೂದೆಗಳು ಸೂಚನೆಗಳ ಮಂಡನೆ ಆಗುವಂತೆ ಮಾಡಬಹುದಾದರೂ, ನನ್ನ ಅನುಪಸ್ಥಿತಿ ಕಾಣಿಸಬಾರದೆಂಬುದು ನನ್ನ ಭಾವನೆ. ಆದರೂ, ನನ್ನ ರಾಜೀನಾಮೆ ಜಾರಿಗೆ ಬರುವುದಕ್ಕೂ ಮೊದಲು ಅವುಗಳನ್ನು ನಾನು ಮಂಡಿಸಬೇಕೆಂದು ನೀವು ಇಚ್ಛಿಸಿದರೆ, ಅವುಗಳು ಮುಗಿಯುವ ತನಕ, ಆ ತನಕ ಮಾತ್ರವೇ, ಉಳಿಯಲು ಸಿದ್ಧನಿದ್ದೇನೆ. ಏಕೆಂದರೆ, ನಿಮಗೆ ಮತ್ತು ಸಚಿವ ಸಂಪುಟಕ್ಕೆ ನಾನು ತೋರಬೇಕಾದ ಸೌಜನ್ಯತೆಯಿಂದ ವಿಮುಖನಾಗಲು ನಾನು ಇಷ್ಟಪಡುವುದಿಲ್ಲ. ಅಂಥ ಸಂದರ್ಭ ಬಂದರೆ ನನ್ನ ಹೆಸರಿನಲ್ಲಿರುವ ಮಸೂದೆಗಳಿಗೆ ಮತ್ತು ಸೂಚನೆಗಳಿಗೆ ಬೇರೆಯವುಗಳಿಗಿಂತಲೂ ಆದ್ಯತೆ ಕೊಡಬೇಕೆಂದು ಕೋರುತ್ತೇನೆ."

ಅದೇ ದಿನದಂದು ಎಂದರೆ ಸೆಪ್ಟೆಂಬರ್ ೨೭ ರಂದು ನಾನು ಕೊಟ್ಟ ಉತ್ತರ ಹೀಗಿದೆ :

"ಸೆಪ್ಟೆಂಬರ್ ೨೭ರ ನಿಮ್ಮ ಪತ್ರ ತಲುಪಿದೆ. ನಿಮ್ಮ ರಾಜೀನಾಮೆಯ ಸುದ್ದಿ ಎರಡು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಬಂದಿದೆ. ನನಗೆ ದಿಗ್ಭ್ರಮೆ ಆಯಿತು. ಅಧಿವೇಶನದ ಪ್ರಾರಂಭದಲ್ಲಿ ನೀವು, ನಿಮ್ಮ ಅನಾರೋಗ್ಯದ ಬಗ್ಗೆ ನನಗೆ ಹೇಳಿದ್ದಿರಿ. ನಿಮ್ಮ ಆರೋಗ್ಯ ಚೆನ್ನಾಗಿಲ್ಲವೆಂದು ನನಗೂ ಗೊತ್ತಿತ್ತು. ನಿಮ್ಮ ಅನಾರೋಗ್ಯದ ದೃಷ್ಟಿಯಿಂದ ಹಾಗೂ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಲು ನೀವು ಇಚ್ಛಿಸಿದ್ದರಿಂದ ಸಚಿವ ಸಂಪುಟದಲ್ಲಿ ಉಳಿಯುವಂತೆ ನಾನು ನಿಮಗೆ ಒತ್ತಾಯ ಮಾಡಲಿಲ್ಲ. ಈ ವರ್ಷಗಳಲ್ಲಿ ನಾವು ಸಚಿವ ಸಂಪುಟದಲ್ಲಿ ಒಟ್ಟಿಗೇ ಕೆಲಸ ಮಾಡಿದ ಕಾಲದಲ್ಲಿ ನಮ್ಮ ಗೆಳೆತನಕ್ಕೆ ಮೆಚ್ಚುಗೆ ವ್ಯಕ್ತಪಡಿಸಬಯಸುತ್ತೇನೆ. ಕೆಲವೊಮ್ಮೆ ನಮ್ಮಲ್ಲಿ ಭಿನ್ನಾಭಿಪ್ರಾಯ ಇತ್ತು. ಆದರೆ, ಅದು, ನೀವು ಮಾಡಿದ ಒಳ್ಳೇ ಕೆಲಸಕ್ಕೆ ನಾನು ಮೆಚ್ಚುಗೆ ವ್ಯಕ್ತಪಡಿಸುವುದಕ್ಕೆ ಅಡ್ಡ ಬಂದಿಲ್ಲ. ನೀವು ಹೊರಹೋಗುತ್ತಿರುವುದಕ್ಕೆ, ನಿಜಕ್ಕೂ, ವ್ಯಥೆಪಡುತ್ತಿದ್ದೇನೆ.

ಹಿಂದೂ ಸಂಹಿತೆ ಮಸೂದೆಯು ಈ ಅಧಿವೇಶನದಲ್ಲಿ ಅಂಗೀಕೃತ ಆಗದಿರುವ ಹಾಗೂ ಕೊನೆಕೊನೆಗೆ ಅದರ ವಿವಾಹ ಮತ್ತು ವಿಚ್ಛೇದನ ಭಾಗವನ್ನು ಕೂಡ ಮುಂದೂಡಿದ ಸಂಗತಿಯಿಂದ ನಿಮಗೆ ಭಾರಿ ನಿರಾಶೆ ಆಗಿರುವುದನ್ನು ನಾನು ನಿಜಕ್ಕೂ ಅರ್ಥ ಮಾಡಿಕೊಳ್ಳಬಲ್ಲೆ. ಅದರ ಬಗ್ಗೆ ನೀವು ಎಷ್ಟೊಂದು ಶ್ರಮಪಟ್ಟಿದ್ದೀರಿ, ಅದರ ಬಗ್ಗೆ ನೀವು ಎಷ್ಟೊಂದು ಆಸಕ್ತಿಯಿಂದಿದ್ದಿರಿ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ಈ ಮಸೂದೆಗೆ ನಾನು ನಿಕಟವಾಗಿ ಸಂಬಂಧ ಪಡದಿದ್ದರೂ ಅದರ ಆವಶ್ಯಕತೆ ಇದೆಯೆಂದು ನನಗೆ ಬಹಳ ಹಿಂದಿನಿಂದಲೂ ಮನವರಿಕೆ ಆಗಿತ್ತು. ಅದು ಅಂಗೀಕೃತ ಆಗಬೇಕೆಂದು ನಾನೂ ಕಾತುರದಿಂದಿದ್ದೆ. ನನ್ನ ಶಕ್ತಿ ಮೀರಿ ಪ್ರಯತ್ನಿಸಿದ್ದೆ. ಆದರೆ, ವಿಧಿಯ ಆಟ ಮತ್ತು ಸಂಸತ್ತಿನ ನಿಯಮಗಳು ನಮ್ಮ ವಿರುದ್ಧವೇ ಇದ್ದವು. ಈ ಅಧಿವೇಶನದಲ್ಲೇ ಅದು ಅಂಗೀಕೃತವಾಗುವಂತೆ ನಮ್ಮಿಂದೇನೂ ಮಾಡಲು ಸಾಧ್ಯವಿಲ್ಲವೆಂದು ನನಗೆ ಸ್ಪಷ್ಟವಾಗಿ ತೋರುತ್ತಿದೆ.

ವೈಯಕ್ತಿಕವಾಗಿ ಈ ಪ್ರಯತ್ನವನ್ನು ನಾನು ಬಿಟ್ಟುಕೊಡುವುದಿಲ್ಲ. ಏಕೆಂದರೆ, ಯಾವುದೇ ಕ್ಷೇತ್ರದಲ್ಲಿ ನಾವು ಸಾಧಿಸಲು ಉದ್ದೇಶಿಸುವ ಯಾವುದೇ ಪ್ರಗತಿಗೂ ಇದಕ್ಕೂ ನಿಕಟ ಸಂಬಂಧ ಇದೆಯೆಂದು ನಾನು ಭಾವಿಸಿದ್ದೇನೆ.

ನಿಮ್ಮ ರಾಜೀನಾಮೆಯು ಕೂಡಲೇ ಜಾರಿಗೆ ಬರಬೇಕೆಂದು ನೀವು ಅಪೇಕ್ಷಿಸಿದ್ದೀರಿ. ಆದರೆ, ನಿಮ್ಮ ಹೆಸರಿನಲ್ಲಿರುವ ಕೇಂದ್ರ ಮಸೂದೆಗಳ ಮತ್ತು ಸೂಚನೆಗಳ ಕಾರ್ಯಕಲಾಪಗಳು ಮುಗಿಯುವವರೆಗೂ ನೀವು ಇರುವುದಾಗಿ ಸಲಹೆ ಮಾಡಿದ್ದೀರಿ. ತುಂಬಾ ಸಂತೋಷ. ಈ ವಿಷಯದ ಬಗ್ಗೆ ಗಮನ ಕೊಡುತ್ತೇನೆ. ಹೇಗೆ ಆದರೂ, ಈ ಅಧಿವೇಶನವು ಅಕ್ಟೋಬರ್ ೬ರ ತನಕ ಮಾತ್ರವೇ ನಡೆಯಲಿದೆ. ಎಂದರೆ, ಈ ದಿನದಿಂದ ಒಂದು ವಾರಕ್ಕಿಂತ ಸ್ವಲ್ಪ ಹೆಚ್ಚು. ಕೆಲವೇ ದಿನಗಳಲ್ಲಿ ಆದ್ಯತೆಗಳಿಗೆ ಅಷ್ಟೊಂದು ಅವಕಾಶ ಇಲ್ಲ. ಸಾಧ್ಯವಾದಷ್ಟು ಬೇಗನೆ ನಿಮ್ಮ ಮಸೂದೆಗಳ ಮತ್ತು ಸೂಚನೆಗಳ ಮಂಡನೆ ಆಗಲು ಪ್ರಯತ್ನ ಮಾಡೋಣ. ಆದ್ದರಿಂದ, ಈ ಅಧಿವೇಶನದ ಕೊನೆಯ ತನಕ ನೀವು ಇರುವರೆಂಬ ನಂಬಿಕೆ ನನಗಿದೆ.

ಎಲ್ಲ ಶುಭಾಶಯಗಳೊಂದಿಗೆ "

ಈ ಪತ್ರಕ್ಕೆ ಅಕ್ಟೋಬರ್ ೧ ರಂದು ಅವರ ಉತ್ತರ ಹೀಗಿದೆ:

"೧೯೫೧ ರ ಸೆಪ್ಟೆಂಬರ್ ೨೮ನೇ ದಿನಾಂಕದ ತಮ್ಮ ಪತ್ರ ತಲುಪಿದೆ. ನನ್ನ ರಾಜೀನಾಮೆಯನ್ನು ಅಂಗೀಕರಿಸಿರುವುದಾಗಿ ತಾವು ನನಗೆ ಅದರಲ್ಲಿ ತಿಳಿಸಿದ್ದೀರಿ. ಈ ಅಧಿವೇಶನದ ಕೊನೆಯವರೆಗೆ ಸ್ಥಾನದಲ್ಲಿ ನಾನು ಮುಂದುವರಿಯಲು ತಾವು ಅಪೇಕ್ಷೆಪಟ್ಟಿದ್ದೀರಿ. ಈ ವಿಷಯದಲ್ಲಿ ತಮ್ಮ ಅಪೇಕ್ಷೆಯಂತೆ ನಡೆದುಕೊಳ್ಳಲು ನಾನು ಸಿದ್ಧನಿದೇನೆ.

ನಿವೃತ್ತರಾಗಲಿರುವ ಸಚಿವರು ವಾಡಿಕೆಯಂತೆ ಮಾಡುವ ಹಾಗೆಯೇ ೧೯೫೧ರ ಅಕ್ಟೋಬರ್ ೬ರಂದು ಸಂಸತ್ತಿನಲ್ಲಿ ಹೇಳಿಕೆ ನೀಡಲು ನಾನು ಉದ್ದೇಶಿಸಿರುವುದನ್ನು ಸಹ ತಮಗೆ ತಿಳಿಸಬಯಸುತ್ತೇನೆ.

ಈ ಪತ್ರಕ್ಕೆ ಅಕ್ಟೋಬರ್ ೩ ರಂದು ನನ್ನ ಉತ್ತರ ಹೀಗಿದೆ:

"ಖಂಡಿತವಾಗಿಯೂ ನೀವು, ಅಧಿವೇಶನದ ಕೊನೆಯ ದಿನದಂದು ಸದನದಲ್ಲಿ ಹೇಳಿಕೆ ನೀಡಬಹುದು. ಆದರೆ, ಕೊನೆಯದಿನ ಯಾವುದಾಗುತ್ತದೆಂದು ಇನ್ನೂ ನನಗೆ ಗೊತ್ತಿಲ್ಲ. ಅದು, ಬಹುತೇಕ ಅಕ್ಟೋಬರ್ ೬ ಅಲ್ಲವೆಂದು ತೋರುತ್ತದೆ. ನಿಮ್ಮ ಹೇಳಿಕೆಯಾದ ಮೇಲೆ ನಾನು ಕೂಡ ಕೆಲವೊಂದು ಹೇಳಿಕೆ ನೀಡುವ ಸಂಭವ ಇದೆ. ನೀವು ಮಾಡಬಯಸಿರುವ ಹೇಳಿಕೆಯ ಒಂದು ಪ್ರತಿಯನ್ನು ನನಗೆ ಕಳುಹಿಸಿದರೆ ತುಂಬಾ ಆಭಾರಿಯಾಗಿರುತ್ತೇನೆ."

ಅಕ್ಟೋಬರ್ ೪ ರ ಅಂಬೇಡ್ಕರ್‌ರವರ ಪತ್ರ ಹೀಗಿದೆ:

"೧೯೫೧ರ ಅಕ್ಟೋಬರ್ ೩ರ ತಮ್ಮ ಪತ್ರ ಸಂಖ್ಯೆ........... ತಲುಪಿದೆ. ಅಧಿವೇಶನದ ಕೊನೆಯ ದಿನದಂದು ಸದನದಲ್ಲಿ ನಾನು ಹೇಳಿಕೆ ನೀಡಬೇಕೆಂದು ತಾವು ಹೇಳಿದ್ದೀರಿ. ಅಂದರೆ, ೬ ಅಧಿವೇಶನದ ಕೊನೆಯಲ್ಲಿ ದಿನ ಅಲ್ಲದಿದ್ದರೆ, ೬ ರಂದೇ ನನ್ನ ಹೇಳಿಕೆ ನೀಡಬಾರದೆಂದು ಅರ್ಥವೇ? ಯಾವ ದಿನದಂದು ನಾನು ಹೇಳಿಕೆ ನೀಡಬೇಕೆಂಬ ಸ್ಪಷ್ಟ ಕಲ್ಪನೆ ನನ್ನಲ್ಲಿರಬೇಕೆಂದುಕೊಂಡಿದ್ದೇನೆ. ಏಕೆಂದರೆ ಉಪಸಭಾಪತಿಗಳಿಗೆ ತಿಳಿಸಬೇಕಾಗುತ್ತದೆ.

ನನ್ನದಾದ ಮೇಲೆ ತಮ್ಮ ಹೇಳಿಕೆ ನೀಡಲು ತಾವು ಅಪೇಕ್ಷಿಸಿದ್ದೀರೆಂದು ನನಗೆ ಕಂಡು ಬಂದಿದೆ. ತಾವು ಪ್ರಸ್ತಾಪಿಸಿರುವಂತೆ ಹೇಳಿಕೆ ನೀಡುವುದು ಸಂಪ್ರದಾಯ ಅಲ್ಲ, ಕಾರ್ಯಕಲಾಪ ನಿಯಮಗಳಂತೆ ನಿಮಗೆ ಒದಗುವ ಯಾವುದೇ ಹಕ್ಕನ್ನು ಚಲಾಯಿಸಲು ತಾವು ಸ್ವತಂತ್ರರು. ನನ್ನದಾದ ಮೇಲೆ ತಾವು ಹೇಳಲು ನಾನು ಯಾವ ತಕರಾರನ್ನೂ ಎತ್ತುವುದಿಲ್ಲ. ನನ್ನ ಹೇಳಿಕೆಯ ಒಂದು ಪ್ರತಿಯನ್ನು ಕೇಳಿರುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ತಮಗೇ ಗೊತ್ತಿರುವಂತೆ, ನನ್ನ ಭಾಷಣಗಳನ್ನು ಅಥವಾ ಹೇಳಿಕೆಯನ್ನು ಬರೆಯುವ ಅಭ್ಯಾಸ ನನಗಿಲ್ಲ. ನನ್ನ ಹೇಳಿಕೆಯ ಪಾಠವನ್ನು ಈವರೆಗೂ ನಾನು ಬರೆದಿಲ್ಲ. ಸಕಾಲದಲ್ಲಿ ನನ್ನ ಹೇಳಿಕೆಯನ್ನು ಬರೆಯಲು ನನಗೆ ಸಮಯಾವಕಾಶ ಸಿಕ್ಕರೆ, ಅದರ ಒಂದು ಪ್ರತಿಯನ್ನು ಸಂತೋಷದಿಂದ ತಮಗೆ ಕಳುಹಿಸುತ್ತೇನೆ. ಎಷ್ಟು ಬೇಗ ಎಂಬುದನ್ನು ಬಹುಶಃ ಹೇಳಲು ನನಗೆ ಸಾಧ್ಯವಾಗುತ್ತಿಲ್ಲ."

**ಡಾ. ಅಂಬೇಡ್ಕರ್ ರವರಿಗೆ ನಾನು ಬರೆದ ಪತ್ರ ದಿನಾಂಕ ೪, ಅಕ್ಟೋಬರ್, ಹೀಗಿದೆ:**

"ಅಕ್ಟೋಬರ್ ೪ರ ನಿಮ್ಮ ಪತ್ರ ತಲುಪಿದೆ. ಅಧಿವೇಶನವು ಕೊನೇಪಕ್ಷ ಅಕ್ಟೋಬರ್ ೧೧ರ ತನಕವೂ ನಡೆಯಲಿದೆಯೆಂಬುದು ನನಗೆ ಸ್ಪಷ್ಟವಾಗಿದೆ. ಸದನಕ್ಕೂ ಹಾಗೆಂದು ತಿಳಿಸಿದ್ದೇನೆ. ಅದು ನಿಮಗೆ ಸರಿ ಹೊಂದಿದರೆ ಆ ದಿನ ನೀವು ಹೇಳಿಕೆ ನೀಡಬಹುದು.

ನಾನು ಹೇಳಿಕೆ ನೀಡುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಆ ಬಗ್ಗೆ ಖಚಿತವಾಗಿ ನಿರ್ಧಾರ ಮಾಡಿಲ್ಲ. ಬಹುಶಃ, ಆ ಸಂದರ್ಭದಲ್ಲಿ ಕೆಲವು ಮಾತಗಳನ್ನಾಡಬೇಕೆಂದಿದ್ದೇನೆ."

**ಡಾ. ಅಂಬೇಡ್ಕರ್‌ರವರ ಪತ್ರ, ಅದೇ ಅಕ್ಟೋಬರ್ ೪ನೇ ದಿನಾಂಕದ್ದು ಹೀಗಿದೆ:**

"ತಮ್ಮ ಪತ್ರ ಸಂಖ್ಯೆ ೩೩೭೩-ಪಿಎಂ ದಿನಾಂಕ ೪ ಅಕ್ಟೋಬರ್ ರಲ್ಲಿ ಸಲಹೆ ಮಾಡಿರುವಂತೆ, ನಿಮ್ಮ ಪ್ರಸ್ತಾಪವನ್ನು ಒಪ್ಪುತ್ತೇನೆ. ಅಕ್ಟೋಬರ್ ೧೧ ರಂದು ಸಂಸತ್ತಿನಲ್ಲಿ ನನ್ನ ಹೇಳಿಕೆ ನೀಡುತ್ತೇನೆ. ಡೆಪ್ಯೂಟಿ ಸ್ಪೀಕರ್‌ರೊಂದಿಗೆ ಮಾತನಾಡಿದ್ದೇನೆ. ಆ ದಿನ, ನನ್ನ ಹೆಸರಿನಲ್ಲಿರುವ ಕಲಾಪವು ಎಂದರೆ ಪುನರ್ ವಿಂಗಡನೆಗೆ ಸಂಬಂಧಿಸಿದ ಕಾರ್ಯಕಲಾಪವು ಮುಗಿದ ಮೇಲೆ ನನ್ನ ಹೇಳಿಕೆ ನೀಡಲು ನನಗೆ ಅವಕಾಶ ಕೊಡಲು ಅವರು ಒಪ್ಪಿಕೊಂಡಿದ್ದಾರೆ.

ಇದೇ ಕೊನೆಯ ಪತ್ರ, ಸರ್.

* **ಶ್ರೀ ಕಾಮತ್:** ಸದನದಲ್ಲಿ ಈಗ ಉಪಸ್ಥಿತರಿರುವ ಡಾ. ಅಂಬೇಡ್ಕರ್ ರವರಿಗೆ ನಿನ್ನೆ, ಅವರ ಮತ್ತು ಪ್ರಧಾನ ಮಂತ್ರಿಯವರ ನಡುವಣ ಪತ್ರ ವ್ಯವಹಾರವನ್ನು ಸದನದಲ್ಲಿ ಓದಲಾಗುತ್ತದೆಂದು ತಿಳಿಸಲಾಗಿತ್ತೆ? ಎಂಬುದನ್ನು ನಾವು ಚರ್ಚೆ ಮುಂದುವರಿಸುವುದಕ್ಕೆ ಮುಂಚೆ, ಕೇಳಲು ತಮ್ಮ ಅನುಮತಿ ಕೋರುತ್ತೇನೆ. ಅವರ ಪತ್ರ ವ್ಯವಹಾರವನ್ನು ಓದಲಾಗುತ್ತದೆಂದು ಅವರಿಗೆ ತಿಳಿಸುವುದು ನ್ಯಾಯೋಚಿತ – ಸಚಿವರಿಗೆ ತೋರಿಸಬೇಕಾದ ಸೌಜನ್ಯದ ದೃಷ್ಟಿಯಿಂದಲೂ ಕೂಡ ಅದು ಅಗತ್ಯ – ಅವರಿಗೆ ತಿಳಿಸಿರದಿದ್ದರೆ, ಅವರಿಗೆ ಏಕೆ ತಿಳಿಸಲಿಲ್ಲ ಎನ್ನುವುದು ಈ ಸದನಕ್ಕೆ ಗೊತ್ತಾಗಬೇಕು. ಅವರಿಗೆ ತಿಳಿಸಲಾಗಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ತನಗೆ ತಿಳಿಸಲಾಗಿತ್ತು ಅಥವಾ ಇಲ್ಲ ಎನ್ನುವುದನ್ನು ಅವರೂ ಹೇಳಬೇಕು.

**ಮಾನ್ಯ ಉಪಸಭಾಪತಿಗಳು :** ಅದೆಲ್ಲಾ, ಮೂಲತಃ, ನನಗೆ ಸಂಬಂಧಪಟ್ಟಿದಲ್ಲ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ವಕ್ತಾರರು ಕೆಲವು ಪತ್ರಗಳನ್ನು ಓದಬಯಸಿದರು, ಸಹಜವಾಗಿಯೇ ಅವಕಾಶ ಕೊಟ್ಟೆ. ಅಲ್ಲದೆ, ಅಂಬೇಡ್ಕರ್ ಅವರಿಗೆ, ಅವರ ಹೇಳಿಕೆಯನ್ನು ಕೊಡಲು ೬ ಗಂಟೆಯನ್ನು ನಿಗದಿ ಮಾಡಿದ್ದೆ. ಆ ಸಮಯದಲ್ಲಿ ಅವರು ಅವರ ಆಸನದಲ್ಲಿ ಉಪಸ್ಥಿತರಿರಲಿಲ್ಲ. ಆಗ, ಅದಕ್ಕೆ ಸಂಬಂಧಿಸಿದ ಎಲ್ಲ ಸುಸಂಗತ ವಿಷಯಗಳನ್ನು ಮತ್ತು ಈ ಪತ್ರಗಳನ್ನು ಓದಲಾಯಿತು. ಅದು ನಿರೀಕ್ಷಿತ. ಆದ್ದರಿಂದ, ಯಾವ ವಿಶೇಷ ನೋಟೀಸು ಕೊಡುವ ಅಗತ್ಯವಿಲ್ಲ.

**ಶ್ರೀ ಕಾಮತ್:** ಆದರೆ, ಪತ್ರ ವ್ಯವಹಾರದ ಆ ಇನ್ನೊಬ್ಬರಿಗೆ ತಿಳಿಸಲಾಗಿತ್ತೇ?

**ಮಾನ್ಯ ಡೆಪ್ಯೂಟಿ ಸ್ಪೀಕರ್:** ಸದನದಲ್ಲಿ ಇಲ್ಲದಿರಲು ಅವರೇ ಇಚ್ಛೆಪಟ್ಟಾಗ ಏನನ್ನು ಮಾಡುವುದಕ್ಕೆ ಆಗುತ್ತದೆ?

**ಶ್ರೀ ಕಾಮತ್:** ರಾಜೀನಾಮೆ ನೀಡಿದ್ದೇನೆಂದು ಹೇಳುತ್ತ ಅವರು ಕೊಠಡಿಯಿಂದ ಹೊರಟು ಹೋದರು. ಮಾಜಿ ಸಚಿವರಾಗಿ ಹೇಳಿಕೆ ನೀಡಲು ಅವರಿಗೆ ಅನುಮತಿ ಕೊಡುತ್ತಿದ್ದಿರಾ ? ಪತ್ರ ವ್ಯವಹಾರವನ್ನು ೬ ಗಂಟೆಗೆ ಓದಲಾಗುತ್ತದೆಂದು ಅವರಿಗೆ ತಿಳಿಸಿರಲಿಲ್ಲವೆಂದು ನನ್ನ ಅನಿಸಿಕೆ.

**ಮಾನ್ಯ ಉಪಸಭಾಪತಿಗಳು:** ಸಚಿವರಾಗಿ ಅಲ್ಲ, ಸಚಿವ ಸ್ಥಾನದಲ್ಲಿ ಇದ್ದಾಗ ಅಲ್ಲ, ರಾಜೀನಾಮೆ ಕೊಟ್ಟಮೇಲೆಯೇ ಹೇಳಿಕೆ ನೀಡಲಾಗುತ್ತದೆ. ಸಮಯ ಯಾವುದಾದರೂ ಆಗಿರಬಹುದು, ರಾಜೀನಾಮೆಯ ನಂತರ ಒಂದು ನಿಮಿಷವೂ ಸಚಿವರಾಗಿರುವುದಿಲ್ಲ, ಮಾಜಿ ಸಚಿವ ಮಾತ್ರ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಸದಸ್ಯರು, ಸಭಾಪತಿಗಳ ಸಮ್ಮತಿ ಪಡೆದು, ತನ್ನ ರಾಜೀನಾಮೆಗೆ ವಿವರಣೆಯನ್ನು ವೈಯಕ್ತಿಕ ಹೇಳಿಕೆಯಂತೆ ಕೊಡುತ್ತಾರೆ. ರಾಜೀನಾಮೆ ಕೊಟ್ಟಕ್ಷಣವೇ ಪ್ರಧಾನ ಮಂತ್ರಿಯವರು ಅದನ್ನು ಅಂಗೀಕರಿಸಿದ ಕ್ಷಣವೇ, ನಿಯಮಗಳೇನೇ ಇರಬಹುದು, ಅದು ನನಗೆ ಸಂಬಂಧಪಟ್ಟಿದ್ದಲ್ಲ, ಅವರು ರಾಜೀನಾಮೆ ಕೊಟ್ಟಾಗ, ಹೇಳಿಕೆ ಕೊಡಬಯಸಿದರೆ, ಸಚಿವರಾಗಿ ಹೇಳಿಕೆ ಕೊಡುವುದಿಲ್ಲ. ಆ ಸಮಯದಲ್ಲಿ ಅವರು ಮಾಜಿ ಸಚಿವರು ಅಷ್ಟೇ. ಯಾವುದೇ ಹಠಾತ್ ಪರಿಸ್ಥಿತಿ ನನ್ನ ಮೇಲೆ ಬೀಳಲು ಅವಕಾಶ ಕೊಡುವುದಿಲ್ಲ. ಯಾರೇ ಸದಸ್ಯರು ಯಾವುದೇ ಪ್ರಶ್ನೆಯನ್ನು ಎತ್ತಬಯಸಿದರೆ, ನನ್ನ ಕೊಠಡಿಯಲ್ಲಿ ಅವರು ನನ್ನೊಂದಿಗೆ ಮಾತನಾಡಿದ್ದರೆ ಅಥವಾ ಮುಂಚೆಯೇ ತಿಳಿಸಿದ್ದರೆ, ಈ ವಿಷಯಗಳನ್ನು ಪರಿಶೀಲಿಸುತ್ತಿದ್ದೆ. ಇದನ್ನು ಮುಂದುವರಿಸದಿರೋಣ.

---

* ಸಂ.ಚ. ಸಂಪುಟ ೧೬ ಭಾಗ II, ೧೨, ಅಕ್ಟೋಬರ್ ೧೯೫೧ ಪುಟಗಳು ೪೭೫೧–೫೩.

**ಶ್ರೀ ಕಾಮತ್:** ಪತ್ರ ವ್ಯವಹಾರವನ್ನು ಓದುತ್ತಿದ್ದಾಗ, ಈ ಹಠಾತ್ ಪರಿಸ್ಥಿತಿ ಉದ್ಭವವಾಯಿತೆಂದು ಪುನಃ ಹೇಳಬಯಸುತ್ತೇನೆ. ಡಾ. ಅಂಬೇಡ್ಕರ್ ಅವರು ಈ ದಿನ ಉಪಸ್ಥಿತರಿದ್ದಾರೆ, ನಿನ್ನೆ ಓದಿದ ಪತ್ರ ವ್ಯವಹಾರದ ಬಗ್ಗೆ ಅವರು ಹೇಳಿಕೆ ನೀಡಬಯಸಿದರೆ ಅವರಿಗೆ ತಾವು ಅನುಮತಿ ಕೊಡುತ್ತೀರಾ?

**ಮಾನ್ಯ ಉಪಸಭಾಪತಿಗಳು:** ತಾನೇನು ಮಾಡಬೇಕೆಂಬುದು ಮಾನ್ಯ ಸದಸ್ಯರಿಗೆ ಚನ್ನಾಗಿ ಗೊತ್ತಿದೆಯೆಂಬುದು ನನಗೂ ಗೊತ್ತಿದೆ. ಇಲ್ಲಿ, ಊಹಾಪೋಹದ ಪ್ರಸ್ತಾಪಗಳಿಗೆ ನಾನು ಉತ್ತರ ಕೊಡಲಾರೆ ಎಂದಷ್ಟೇ ಹೇಳಬಲ್ಲೆ. ಆದ್ದರಿಂದ, ಮಾನ್ಯ ಸದಸ್ಯರು ಯಾವುದನ್ನಾದರೂ ಕೈಗೊಳ್ಳಬಯಸಿದರೆ, ಹೇಳಿಕೆಯನ್ನು ನೀಡಲು ಅಥವಾ ಅಂಥದ್ದೇ ಇನ್ನೇನನ್ನೋ ಬಯಸಿದರೆ ಅಥವಾ ಕಾತುರದಿಂದಿದ್ದರೆ, ನಾನದನ್ನು ಪರಿಶೀಲಿಸುತ್ತೇನೆ.

**ಡಾ. ಅಂಬೇಡ್ಕರ್ (ಬಾಂಬೆ):** ತಮ್ಮ ಅನುಮತಿ ಕೋರಿ, ಎರಡು ಮಾತುಗಳನ್ನಷ್ಟೇ ಹೇಳಬಯಸುತ್ತೇನೆ. ನಾನು ಕೊಠಡಿಯಿಂದ ಹೊರಟು ಹೋದಾಗ ೬ ಗಂಟೆಗೆ ನಾನು ಹೇಳಿಕೆ ನೀಡಲು ಸಿದ್ಧನಿಲ್ಲವೆಂಬ ಭಾವನೆ ಈ ಸದನಕ್ಕೆ ಹಾಗೂ ತಮಗೆ ಬಂದಿದೆಯೆಂದು ನನಗೆ ನಿಜಕ್ಕೂ ಅನ್ನಿಸಿತ್ತು. ಅದನ್ನೇ ನಿಶ್ಚಯಿಸಿಕೊಂಡಿದ್ದೆನೆಂದು ಅನ್ನಿಸುತ್ತದೆ. ಈಗ ಆ ಅವಕಾಶವನ್ನು ಕೇಳವುದೂ ಇಲ್ಲ, ೬ ಗಂಟೆಗೆ ನಾನು ಹೇಳಿಕೆ ನಿಡಬೇಕೆಂದು ತಾವು ಮಾಡಿದ ಆದೇಶವನ್ನು ನಾನು ಪಾಲಿಸುವುದಿಲ್ಲವೆಂಬುದು ಚೆನ್ನಾಗಿ ಗೊತ್ತಿದ್ದರೂ ೬ ಗಂಟೆಯಲ್ಲಿ ಪ್ರಧಾನ ಮಂತ್ರಿಯವರು ಪತ್ರ ವ್ಯವಹಾರವನ್ನು ಓದಿದ್ದರಿಂದ ನನ್ನ ಮನಸ್ಸಿಗೆ ನೋವುಂಟಾಗಿದೆಯೆಂದು ಹೇಳುವುದೂ ಇಲ್ಲ. ನನಗೆ ತಿಳಿಸದೆಯೇ, ಪತ್ರ ವ್ಯವಹಾರವನ್ನು ಪ್ರಧಾನ ಮಂತ್ರಿಯವರು ಓದಿದ್ದು ಸಮರ್ಥನೀಯವೇ ಅಥವಾ ಅಲ್ಲವೇ ಎಂಬುದನ್ನು ತಮಗೇ ಬಿಡುತ್ತೇನೆ. ಅದನ್ನು ತಮಗೆ ಮತ್ತು ಪ್ರಧಾನ ಮಂತ್ರಿಯವರಿಗೇ ಬಿಟ್ಟಿದ್ದೇನೆ. ಏಕೆಂದರೆ, ಪತ್ರ ವ್ಯವಹಾರದಿಂದ ಉಂಟಾಗಿರುವ ಯಾವುದೇ ತಪ್ಪು ಭಾವನೆಯನ್ನು ಸರಿಪಡಿಸಲು ನನಗೆ ಇತರ ಮಾರ್ಗಗಳು ಮುಕ್ತವಾಗಿವೆಯೆಂದು ನನಗೆ ಗೊತ್ತಿದೆ.

**ಮಾನ್ಯ ಉಪಸಭಾಪತಿಗಳು:** ಮನಸ್ಸು ಬದಲಾಯಿಸಿಕೊಳ್ಳುವುದು ಮಾನ್ಯ ಸದಸ್ಯರಿಗೆ ಸೇರಿದ್ದು. ೬ ಗಂಟೆಯನ್ನು ನಿಗದಿ ಮಾಡಿದ್ದೆ. ಸರಿಯಾಗಿ ೬ ಗಂಟೆ ಆಗಿತ್ತು. ಆದರೆ, ಮಾನ್ಯ ಸದಸ್ಯರು ಇದ್ದರೋ, ಇಲ್ಲವೋ ನೋಡಿದೆ. ಅವರು ಅವರ ಆಸನದಲ್ಲಿ ೬ ಗಂಟೆಯಲ್ಲಿ ಇರಲಿಲ್ಲ.

---

(ಸಚಿವ ಸಂಪುಟಕ್ಕೆ ಡಾ. ಅಂಬೇಡ್ಕರ್‌ರವರ ರಾಜೀನಾಮೆಯ ವಿವರಣೆಯ ಹೇಳಿಕೆಯನ್ನು ಪತ್ರಿಕೆಗಳಿಗೆ ಮತ್ತು ಸಂಸತ್ತಿನ ಸದಸ್ಯರಿಗೆ ವಿತರಣೆ ಮಾಡಲಾಗಿತ್ತು. ಅದನ್ನು, ಈ ಮಾಲಿಕೆಯಲ್ಲಿ ಸಂಪುಟ ೧೪ರ ಭಾಗ II ರಲ್ಲಿ ಅನುಬಂಧವಾಗಿ ಸೇರಿಸಲಾಗಿದೆ.)

# ವಿಭಾಗ – ಏಳು

# ೧೯ನೇ ಮೇ ೧೯೫೨
# ರಿಂದ
# ೬ನೇ ಡಿಸೆಂಬರ್ ೧೯೫೬

# ವಿಭಾಗ – ಏಳು

## ಪರಿವಿಡಿ


೪೪. ಅಧ್ಯಕ್ಷರ ಭಾಷಣಕ್ಕೆ ವಂದನೆ ೭೫೫

೪೫. ಬಜೆಟ್ (ಸಾಮಾನ್ಯ) ೧೯೫೨–೫೩ ಸಾಮಾನ್ಯ ಚರ್ಚೆ ೭೬೦

೪೬. ೧೯೫೩ರ ಆಂಧ್ರ ರಾಜ್ಯ ವಿಧೇಯಕ ೭೬೯

೪೭. ೧೯೫೩ರ ಸಂಪದ ಸುಂಕ ವಿಧೇಯಕ ೭೮೧

೪೮. ಅಂತಾರಾಷ್ಟ್ರೀಯ ಪರಿಸ್ಥಿತಿ ೭೯೦

೪೯. ಬ್ಯಾಂಕ್ ವಿವಾದಗಳ ಕುರಿತ ಸರ್ಕಾರಿ ಆದೇಶ ೮೦೨

೫೦. ೧೯೫೩ನೇ ವರ್ಷಕ್ಕೆ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಆಯುಕ್ತರ ವರದಿ ೮೧೧

೫೧. ೧೯೫೪ರ ಸಂವಿಧಾನ (ಮೂರನೆಯ ತಿದ್ದುಪಡಿ) ವಿಧೇಯಕ ೮೩೨

೫೨. ೧೯೫೪ರ ಅಸ್ಪೃಶ್ಯತಾ ಅಪರಾಧಗಳ ವಿಧೇಯಕ ೮೩೭

೫೩. ೧೯೫೪ರ ಸಂವಿಧಾನ (ನಾಲ್ಕನೆಯ ತಿದ್ದುಪಡಿ) ವಿಧೇಯಕ ೮೫೩

೫೪. ೧೯೫೬ರ ರಾಜ್ಯಗಳ ಪುನರ್ ವಿಂಗಡಣೆ ವಿಧೇಯಕ ೮೬೮

೫೫. ಡಾ. ಅಂಬೇಡ್ಕರ್ ನಿಧನ – ಶೋಕಾಚರಣೆ ೮೭೭

# ೪೪

# ಅಧ್ಯಕ್ಷರ ಭಾಷಣಕ್ಕೆ ವಂದನೆ

*__ಮಾನ್ಯ ಸಭಾಧ್ಯಕ್ಷರು:__ ಕೆಲವೊಂದು ತಿದ್ದುಪಡಿಗಳ ಬಗ್ಗೆ ನಮ್ಮ ಕಲ್ಪನೆಯನ್ನು ಎಷ್ಟೇ ಹಿಗ್ಗಿಸಿದರೂ, ಅಧ್ಯಕ್ಷರ ಭಾಷಣದಲ್ಲಿ ಉಲ್ಲೇಖಿಸಲಾದ ವಿಷಯಗಳ ಬಗೆಗಿನ ಚರ್ಚೆಯಲ್ಲಿ ಅವುಗಳನ್ನು ತರಲಾಗದೆಂದಷ್ಟೇ ನಾನು ಹೇಳಬಲ್ಲೆ. ಕೆಲವು ಪ್ರಶ್ನೆಗಳು ಎಂದರೆ ಆಹಾರೋತ್ಪಾದನೆ, ಭೂಕಂದಾಯ, ವಿದೇಶ ನೀತಿ ಮತ್ತು "ಪ್ರತಿಬಂಧಕ" ಸ್ಥಾನಬದ್ಧತೆಗಳಂಥವು ಪ್ರಶ್ನೆಗಳನ್ನು ಅಧ್ಯಕ್ಷರ ಭಾಷಣದಲ್ಲಿ ಪ್ರಸ್ತಾಪಿಸಲಾಗಿದ್ದು ಅವುಗಳಿಗೆ ಅನ್ವಯವಾಗತಕ್ಕ ತಿದ್ದುಪಡಿಗಳನ್ನು ಮಂಡಿಸಬಹುದಷ್ಟೆ.

**ಶ್ರೀ ಎಚ್.ಪಿ. ಸಕ್ಸೇನ (ಉತ್ತರ ಪ್ರದೇಶ):** ಈಗಾಗಲೇ ಮಂಡಿಸಲಾಗಿರುವ ಎಲ್ಲ ತಿದ್ದುಪಡಿಗಳನ್ನು ಅನುಮೋದಿಸಲಾಗಿದೆಯೇ ಅಥವಾ ಇಲ್ಲವೇ?

**ಡಾ. ಬಿ.ಆರ್. ಅಂಬೇಡ್ಕರ್ (ಬೊಂಬಾಯಿ):** ಹಂಗಾಮಿ ಸಂಸತ್ತಿನಲ್ಲಿ ಅನುಸರಿಸಲಾದ ಪ್ರಕ್ರಿಯೆ ಹೀಗಿತ್ತು. ಪ್ರಾಯಶಃ ಅದು ಹೊಸತೇನೂ ಅಲ್ಲ. ಕಳೆದ ಎರಡು ಅಥವಾ ಮೂರು ವರ್ಷಗಳಿಂದ ಎಂದರೆ ಸಂವಿಧಾನವನ್ನು ಕಾರ್ಯಾಚರಣೆಗೆ ತಂದಂದಿನಿಂದಲೂ ಹೀಗೆಯೇ ನಡೆದುಕೊಂಡು ಬರಲಾಗುತ್ತಿದೆ. ನನಗೆ ನೆನಪಿರುವ ಮಟ್ಟಿಗೆ – ಲೋಕಸಭೆಯಲ್ಲಿ ಹಲವಾರು ಜನ ಸದಸ್ಯರಿದ್ದಾರೆ, ಅವರು ಇದನ್ನು ಸರಿಪಡಿಸಬಲ್ಲರು – ಲೋಕಸಭೆಯ ಸಭಾಧ್ಯಕ್ಷರು ಪ್ರಾರಂಭದಲ್ಲಿ ಮಂಡಿಸಬೇಕಾಗಿದ್ದ ಎಲ್ಲ ತಿದ್ದುಪಡಿಗಳಿಗೂ ಅನುಮತಿ ನೀಡುತ್ತಿದ್ದಂಥ ಪ್ರಕ್ರಿಯೆಯನ್ನು ಅನುಸರಿಸುತ್ತಿದ್ದರು. ತರುವಾಯ, ವಿವಿಧ ತಿದ್ದುಪಡಿಗಳನ್ನು ಮಂಡಿಸಿದ ಮಂಡನಾಧಿಕಾರಿಗಳನ್ನು ತಮ್ಮ ತಿದ್ದುಪಡಿಗಳನ್ನು ಸಮರ್ಥಿಸಿ ಭಾಷಣಮಾಡಲು ಆಹ್ವಾನಿಸುತ್ತಿದ್ದರು. ತಿದ್ದುಪಡಿಯನ್ನು ಮಂಡಿಸಿದ ವ್ಯಕ್ತಿಗೆ ಸಹಜವಾಗಿಯೇ ಭಾಷಣಮಾಡಲು ಯಾವುದೇ ಹಕ್ಕು ಹೊಂದಿರುವುದಿಲ್ಲವೆಂಬುದು ಸರ್ವವಿದಿತ ಸಂಗತಿ. ಆದರೂ ಸಭಾಪತಿಯವರು, ಕೆಲ ಮಹನೀಯರು ತಿದ್ದುಪಡಿಯನ್ನು ಮಂಡಿಸುವ ತಮ್ಮ ಉದ್ದೇಶವನ್ನು ವಿನಂತಿಸಿಕೊಂಡಿದ್ದರಿಂದ ಅದನ್ನು ಪರಿಗಣಿಸಿ ಅವರಿಗೆ ಭಾಷಣಮಾಡಲು ಅವಕಾಶ ನೀಡುತ್ತಿದ್ದರು. ಅದು ಅವರೇ ಅಳವಡಿಸಿಕೊಂಡ ಪ್ರಕ್ರಿಯೆಯಾಗಿತ್ತು ಇಲ್ಲಿಯೂ ಕೂಡ ಅದೇ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಬಹುದೆಂದು ನಾನು ಭಾವಿಸುತ್ತೇನೆ.

ಮತ್ತೊಂದು ವಿಶ್ಲೇಷಣೆಗೆ ಸಂಬಂಧಿಸಿದಂತೆ, ಹೌಸ್ ಆಫ್ ಕಾಮನ್ಸ್‌ನಲ್ಲಿ ಅನುಸರಿಸಲಾಗುವ ಪ್ರಕ್ರಿಯೆಯನ್ನು ಉಲ್ಲೇಖಿಸುತ್ತ ನೀವು ಅಧ್ಯಕ್ಷರ ಭಾಷಣದಲ್ಲಿ ಸ್ಪಷ್ಟವಾಗಿ ಸೂಚಿಸಲಾದ ವಿಷಯಗಳಿಗೆ ಸಂಬಂಧಪಡುವ ತಿದ್ದುಪಡಿಗಳನ್ನು ಮಾತ್ರವೇ ಅನುಮೋದಿಸಲಾಗುವುದೆಂಬುದನ್ನು ಸೂಚಿಸಿದಿರೆಂಬುದನ್ನು ನಾನು ಅತ್ಯಂತ ಗೌರವದಿಂದ ತಿಳಿಸಬಯಸುತ್ತೇನೆ. ಆದರೆ ನಿಯಮವು ಸಂಪೂರ್ಣವಾಗಿ ವ್ಯತಿರಿಕ್ತವಾಗಿರಬೇಕೆಂಬುದಾಗಿ ನಾನು ವಿನಯದಿಂದ ಸೂಚಿಸುತ್ತೇನೆ. ಭಾಷಣದ ಮೇಲಿನ ಚರ್ಚೆಯ

---

* ಸಂಸದೀಯ ಚರ್ಚೆಗಳು (ರಾಜ್ಯಸಭೆ) ಸಂ. I, ೧೯ನೇ ಮೇ ೧೯೫೨, ಪು. ೮೧–೮೩

ಉದ್ದೇಶ ಹೀಗಿದೆ. ಸರ್ಕಾರವು ಅಧ್ಯಕ್ಷರ ಭಾಷಣದ ಮೂಲಕ, ಆದ್ಯತೆ ಅಥವಾ ತುರ್ತು ಗಮನ ಹರಿಸಬೇಕಾದಂಥ ವಿಷಯಗಳನ್ನು ಸಭೆಯ ಗಮನಕ್ಕೆ ತರುತ್ತದೆ. ಭಾರತದ ಸಂವಿಧಾನದ ೮೭ನೇ ಅನುಚ್ಛೇದದಲ್ಲಿ ಲೋಕಸಭೆಯನ್ನು ಕರೆದಿರುವುದಕ್ಕೆ ಇರುವ ಕಾರಣಗಳನ್ನು ಲೋಕಸಭೆಗೆ ತಿಳಿಸುವುದೆ ಅಧ್ಯಕ್ಷರ ಭಾಷಣದ ಮೇಲಿನ ಚರ್ಚೆಯ ಉದ್ದೇಶವೆಂದು ತಿಳಿಸಲಾಗಿದೆ. ಅದರಲ್ಲಿ, ಒಳಗೊಳ್ಳಬೇಕಾದ ಉದ್ದೇಶಗಳ ಬಗ್ಗೆ ಸರ್ಕಾರಕ್ಕೆ ತಿಳಿಸಲು ವಿರೋಧ ಪಕ್ಷದವರಿಗೆ ಅವಕಾಶ ನೀಡುವುದೇ ಅಧ್ಯಕ್ಷರ ಭಾಷಣದ ಮೇಲಿನ ಚರ್ಚೆಯ ಉದ್ದೇಶವಾಗಿರುತ್ತದೆ. ಆದ್ದರಿಂದ, ಅಧ್ಯಕ್ಷರ ಭಾಷಣದಲ್ಲಿ ಯಾವುದೇ ವಿಷಯವನ್ನು ಒಳಗೊಂಡಿಲ್ಲದಿದ್ದರೆ, ಅದೇ ಕಾರಣದಿಂದಾಗಿ ಅದು ತುರ್ತು ವಿಷಯವಾಗಿ ಪರಿಣಮಿಸಲೂ ಸಾಧ್ಯವಿದೆ. ಏಕೆಂದರೆ ಸರ್ಕಾರವು ತಾನು ಮುಖ್ಯವಾದುದೆಂದು ಭಾವಿಸುವ ವಿಷಯಗಳಿಗೆ ಆದ್ಯತೆ ಹಾಗೂ ತುರ್ತುಗಮನ ನೀಡುವುದಾದರೂ ವಿರೋಧಪಕ್ಷದವರ ಅಭಿಪ್ರಾಯದಲ್ಲಿ ಅವುಗಳಿಗೆ ಇತರ ವಿಷಯಗಳಿಗಿಂತ ಕಡಿಮೆ ಮಹತ್ವ ಹೊಂದಿದೆಯೆಂದು ಅಭಿಪ್ರಾಯಪಡುವ ಸಾಧ್ಯತೆಯಿರುತ್ತದೆ. ಎರಡನೆಯದಾಗಿ ಅಧ್ಯಕ್ಷರ ಭಾಷಣದಲ್ಲಿ ಪ್ರಸ್ತಾಪಿಸಲಾಗಿಲ್ಲದ ವಿಷಯವೊಂದಕ್ಕೆ ಆ ತಿದ್ದುಪಡಿಯು ಸಂಬಂಧಪಡುತ್ತದೆಂದು ನಾನು ನಿವೇದಿಸಬಯಸುತ್ತೇನೆ. ಆದರೆ ಯಾವುದೇ ನಿರ್ದಿಷ್ಟ ವಿಷಯ ಎಂದರೆ ತಿದ್ದುಪಡಿಯ ವಸ್ತು ವಿಷಯದ ಬಗ್ಗೆ ಚರ್ಚಿಸಲು ಮತ್ತು ಅದನ್ನು ಸರ್ಕಾರದ ಗಮನಕ್ಕೆ ತರಲು ವಿರೋಧಪಕ್ಷಗಳಿಗೆ ಅವಕಾಶವನ್ನು ನೀಡತಕ್ಕದ್ದು ಮತ್ತು ಅಧ್ಯಕ್ಷರು ಅವರ ಭಾಷಣದಲ್ಲಿ ಮಾತನಾಡಿದ ವಿಷಯಗಳಿಗಿಂತಲೂ ಹೆಚ್ಚು ತುರ್ತಿನ ವಿಷಯವೆಂಬುದಾಗಿ ಭಾವಿಸಿ ಅದಕ್ಕೆ ಆದ್ಯತೆ ನೀಡಬೇಕು. ನಾನು ಈ ರೀತಿ ವಿಶ್ಲೇಷಣೆ ಮಾಡುವುದರಿಂದ ನೀವು ತಿದ್ದುಪಡಿಗಳ ಬಗೆಗಿನ ಪ್ರಕ್ರಿಯೆಯನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆಂದು ನಾನು ಭಾವಿಸಿದೆ.

**ರಾಜ್ಯಸಭಾ ನಾಯಕರು (ಶ್ರೀ ಎನ್. ಗೋಪಾಲಸ್ವಾಮಿ):** ನನ್ನ ಸನ್ಮಾನ್ಯ ಮಿತ್ರ ಶ್ರೀ ಅಂಬೇಡ್ಕರ್‌ರವರು ಸೂಚಿಸಿದ ಅಭಿಪ್ರಾಯದ ಬಗ್ಗೆ ನನಗೆ ಅಪಾರ ಸಹಾನುಭೂತಿಯಿದೆ.

**ಡಾ. ಬಿ.ಆರ್. ಅಂಬೇಡ್ಕರ್:** ಇನ್ನು ಮುಂದೆ ಈ ಸಭೆಯಲ್ಲಿ ಯಾರೂ 'ಸನ್ಮಾನ್ಯ'ರಾಗುವುದಿಲ್ಲ.

**ಶ್ರೀ ಎನ್. ಗೋಪಾಲಸ್ವಾಮಿ:** 'ನಾನು ಅವರನ್ನು ನನ್ನ ಸನ್ಮಾನ್ಯ ಮಿತ್ರ'ರೆಂದು ಮಾತ್ರ ಸಂಬೋಧಿಸಿದೆ. ಇದು ನಿಷಿದ್ಧವಲ್ಲ. ಮಾನ್ಯರೇ ಈ ಪ್ರಶ್ನೆಯ ಬಗ್ಗೆ ಗಮನ ಹರಿಸಬೇಕಾದ ವಾಸ್ತವಿಕ ಅಂಶವೆಂದರೆ ಈ ಸಭೆಯ ಪ್ರಕ್ರಿಯೆಗಾಗಿ ಸಂವಿಧಾನ ಹಾಗೂ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ನನ್ನ ಮಾನ್ಯ ಮಿತ್ರರು ನೀಡಿದ ಸೂಚನೆಯನ್ನು ಜಾರಿಯಲ್ಲಿ ತರಲು ಅನುಮತಿ ನೀಡಲಾಗಿದೆಯೇ ಎಂಬುದಾಗಿದೆ.

*__ಡಾ. ಬಿ.ಆರ್. ಅಂಬೇಡ್ಕರ್ (ಬೊಂಬಾಯಿ):__ ನಾನು ಮೊದಲು ಈ ಚರ್ಚೆಯಲ್ಲಿ ಭಾಗವಹಿಸಬಾರದೆಂದಿದ್ದೆ, ವಿರೋಧ ಪಕ್ಷದ ಆಸನದ ಮುಂಭಾಗದಲ್ಲಿ ಕುಳಿತಿರುವ ಈ ಸದನದ ಹೊಸ ಸದಸ್ಯರಿಗೆ ಅಧ್ಯಕ್ಷರ ಭಾಷಣದಲ್ಲಿ ಪ್ರಸ್ತಾಪಿಸಿರುವ ಈ ಎಲ್ಲ ಪ್ರಮುಖ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಂಪೂರ್ಣ ಅವಕಾಶನೀಡಬೇಕೆನ್ನುವುದೇ ಇದಕ್ಕೆ ಕಾರಣ. ಆದರೆ ನನ್ನ ಕೆಲ ಮಿತ್ರರು ಸದನದ ಕೆಲಸದಸ್ಯರಿಗೆ ಮನಸ್ಸಿನಲ್ಲಿ ನಿಸ್ಸಂಶಯವಾಗಿಯೂ ಬಹಳಷ್ಟು ಕಾಡುತ್ತಿರುವ ಎರಡು ಮುಖ್ಯ ವಿಷಯಗಳ ಬಗ್ಗೆ ನನ್ನ ಅಭಿಪ್ರಾಯವನ್ನು ತಿಳಿಸಿದರೆ ಯುಕ್ತವೆಂದು ಹೇಳಿದರು. ಅತ್ಯಂತ ಕಾಳಜಿ ತೋರಬೇಕಾದ ಮೊದಲ ವಿಷಯ ಸಹಜವಾಗಿಯೇ ಆಹಾರಕ್ಕೆ ಸಂಬಂಧಿಸಿದ್ದು. ಈ ರಾಷ್ಟ್ರ ಹಿಂದೆಂದೂ

---

* ಸಂಸದೀಯ ಚರ್ಚೆಗಳು (ರಾಜ್ಯಸಭೆ) ಸಂ. I, ೨೧ನೇ ಮೇ ೧೯೫೨, ಪು. ೨೬೬–೬೯.

ಎದುರಿಸಿದ್ದಿರದಂಥ ಅತ್ಯಂತ ಕಠಿಣ ಸಮಸ್ಯೆಗಳಲ್ಲೊಂದರಲ್ಲಿ ಈಗ ಸಿಲುಕಿಕೊಂಡಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಮಾನ್ಯರೆ, ಸಣ್ಣ ಬಾಲಕನಾಗಿದ್ದಾಗ ನಮ್ಮ ತಂದೆಯು ಬರ ಪರಿಹಾರ ಕಾರ್ಯಗಳಲ್ಲಿ ತೊಡಗಿದ್ದ ಹಲವಾರು ಜನರಿಗೆ ಮಜೂರಿ ನೀಡುವಂಥ ನಗದು ಗುಮಾಸ್ತೆ (ಕ್ಯಾಷಿಯರ್) ಕೆಲಸ ನಿರ್ವಹಿಸುತ್ತಿದ್ದುದನ್ನು ಕಂಡಿದ್ದೇನೆ. ಎಳೆ ಹುಡುಗನಾದ ನಾನು ಅವರ ಜೊತೆಯಲ್ಲೇ ಇರುತ್ತ ಬರಪೀಡಿತ ಜನರ ದುಸ್ಥಿತಿಯನ್ನು ಕಣ್ಣಾರೆ ನೋಡಿದ್ದೇನೆ. ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ ಶ್ರೇಷ್ಠ ಐಸಿಎಸ್ ಅಧಿಕಾರಿಯಾಗಿದ್ದ ರಮೇಶ್ ಚಂದ್ರದತ್ತ್ ಅವರ ಅದ್ಭುತ ಕೃತಿಗಳನ್ನು ಓದುವ ಅವಕಾಶ ಪಡೆದಿದ್ದೆ. ಅದರಲ್ಲಿ ಅವರು ಬ್ರಿಟಿಷರು ನಮ್ಮ ದೇಶವನ್ನಾಳಲು ಬಂದ ಕಾಲದಿಂದಲೂ ನಿಯತವಾಗಿ ಬರುತ್ತಿದ್ದ ಕ್ಷಾಮಗಳ ಸಮಗ್ರ ಚಿತ್ರಣ ನೀಡಿದ್ದಾರೆ. ಆದರೆ ಮಾನ್ಯರೆ ಈ ಎಲ್ಲ ಗತೇತಿಹಾಸವನ್ನು ನೆನಪಿಸಿಕೊಂಡಾಗ ನಾನು ಈದಿನ ಕಾಣುತ್ತಿರುವ ಪರಿಸ್ಥಿತಿಯೊಂದಿಗೆ ಹಿಂದೆ ನಾನು ಕಂಡ ಅಥವಾ ಓದಿದ ಯಾವುದನ್ನೇ ಆಗಲಿ ಹೋಲಿಕೆಯನ್ನು ಕಲ್ಪಿಸಿಕೊಳ್ಳಲೂ ಕೂಡ ಸಾಧ್ಯವಾಗುತ್ತಿಲ್ಲ. ಹಿಂದೆಯೂ ಬರಗಾಲವಿತ್ತು ಆದರೆ ಅವುಗಳು ಆಗೊಮ್ಮೆ ಈಗೊಮ್ಮೆ ೧೦, ೧೫ ಅಥವಾ ೨೦ ವರ್ಷಗಳಿಗೊಮ್ಮೆ ಕಾಣಿಸಿಕೊಳ್ಳುತ್ತಿದ್ದ ಕಾಲವದು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಆದರೆ ಈಗ ನಾವು ಈ ದೇಶದಲ್ಲಿ ಬಹುಮಟ್ಟಿಗೆ ಪ್ರತಿಯೊಂದು ತಿಂಗಳಲ್ಲೂ ಕ್ಷಾಮವುಂಟಾಗುವ ಹಂತವನ್ನು ತಲುಪಿದ್ದೇವೆ. ಈ ತಿಂಗಳು ಬಿಹಾರದಲ್ಲಿ ಮುಂದಿನ ತಿಂಗಳು ರಾಯಲಸೀಮೆಯಲ್ಲಿ ಮೂರನೇ ತಿಂಗಳಲ್ಲಿ ದೇಶದ ಮತ್ತಾವುದೋ ಭಾಗದಲ್ಲಿ ಕ್ಷಾಮ ಎದುರಾಗುತ್ತದೆ. ಸಮಾಚಾರ ಪತ್ರಿಕೆಗಳನ್ನು ಓದುವ ಯಾರಿಗೇ ಆಗಲಿ ಈ ದೇಶದಲ್ಲಿ ಕ್ಷಾಮವಿರದ ಯಾವುದೇ ತಿಂಗಳು ಗತಿಸಿದೆಯೆಂದು ಹೇಳುವುದು ಅಸಾಧ್ಯವಾಗುತ್ತದೆ. ವಿರೋಧ ಪಕ್ಷದವರು ಸರ್ಕಾರದ ಬಗ್ಗೆ ಅತ್ಯಂತ ಕಠಿಣ ನಿಲುವು ತಾಳಬಾರದೆಂಬುದಾಗಿ ಕಾಂಗ್ರೆಸ್ ಪಕ್ಷದ ಸದಸ್ಯರು ಕೋರಿದ ಬಗ್ಗೆ ವಿವಾದ ಮಾಡಿದುದನ್ನು ನಾನು ಆಸಕ್ತಿಯಿಂದ ಕೇಳಿಸಿಕೊಂಡೆ. ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟು ಹೋಗುವಾಗ ನಮ್ಮ ದೇಶವನ್ನು ಅಭಿವೃದ್ಧಿಗೊಳಿಸಿರದ ಸಂಪನ್ಮೂಲಗಳು, ಆರ್ಥಿಕ ಉತ್ಪಾದನೆಗೆ ತರಬೇತುಗೊಳಿಸದ ಈ ದೇಶದ ಜನರು ಇದ್ದಂಥ ಒಂದು ಖಾಲಿ ಚಿಪ್ಪಿನಂತೆ ಮಾಡಿದ್ದರು ಎಂಬುದನ್ನು ವಿರೋಧಪಕ್ಷದವರು ಮರೆಯಬಾರದು. ಆ ವಾದ ಪ್ರತಿವಾದಗಳಲ್ಲಿ ಯಾವುದೇ ಹುರುಳಿಲ್ಲವೆಂದು ನಾನು ಗೌರವದಿಂದ ಹೇಳಬಯಸುತ್ತೇನೆ. ಇದರಿಂದ ಪ್ರಾಯಶಃ ಈ ಸದನದಲ್ಲಿ ಅನುಮೋದಿತವಾಗಬಹುದು ಅಥವಾ ಈ ಸದನದಲ್ಲಿ ಪಕ್ಷದ ಬಗ್ಗೆ ಹೆಚ್ಚು ಆಸಕ್ತಿಹೊಂದಿರುವವರೊಂದಿಗೆ ಸೇರಿ ಅನುಮೋದನೆಯನ್ನು ಪಡೆಯಬಹುದು. ಆದರೆ ವಿರೋಧ ಪಕ್ಷದಲ್ಲಿ ಕುಳಿತಿರುವ ನನ್ನ ಸ್ನೇಹಿತರಿಗೂ ಕೂಡ ನಾನು 'ಈ ಒಂದು ವಿನಾಯಿತಿಯನ್ನು ಜನರಿಂದ ದೀರ್ಘಾವಧಿಯಲ್ಲಿ ನಿರೀಕ್ಷಿಸಲಾಗದು ಎಂದು ಹೇಳಬಯಸುತ್ತೇನೆ.'

**ಒಬ್ಬ ಮಾನ್ಯ ಸದಸ್ಯರು:** ನೀವೂ ಕೂಡ ಒಮ್ಮೆ ಸರ್ಕಾರದಲ್ಲಿದ್ದವರೇ ಅಲ್ಲವೇ.

**ಡಾ. ಬಿ.ಆರ್. ಅಂಬೇಡ್ಕರ್:** ದಯವಿಟ್ಟು ಗತಕಾಲವನ್ನು ನೆನಪಿಸಬೇಡಿ. ಈಗ ನಾನೊಬ್ಬ ವಿಚ್ಛೇದಿತ ಸದಸ್ಯ. ಆದರೆ ನಾನಿಲ್ಲಿ ನಮ್ಮ ಮಿತ್ರರಿಗೆ ಹೇಳಬಯಸಿರುವುದು ಈ ವಿನಾಯಿತಿ ಅವರಿಗೆ ದೀರ್ಘಕಾಲ ನೆರವಾಗಲಾರದು ಎಂಬ ಸಂಗತಿಯನ್ನು ತಿಳಿಸಲು ಬಯಸುತ್ತಿದ್ದೇನೆ. ಯಾರೇ ಒಬ್ಬ ಹಸಿವಿನಿಂದ ಕಂಗಾಲಾದ ವ್ಯಕ್ತಿಗೆ "ನನ್ನ ಆತ್ಮೀಯನೇ, ನಾನು ಅಧಿಕಾರದಲ್ಲಿದ್ದರೂ, ಅಧಿಕಾರಬಲ ಹೊಂದಿದ್ದರೂ, ಎಲ್ಲ ಸಮಸ್ಯೆಗಳನ್ನು ಸರಿಪಡಿಸುವಂಥ ಎಲ್ಲ ಕಾನೂನು ಬಲ ನನಗಿದ್ದರೂ ನನಗೆ ಅತ್ಯಂತ ದಾರುಣವಾದ ಹಿನ್ನೆಲೆಯಿರುವುದರಿಂದ ನನ್ನಿಂದ ಯಾವುದೇ ಪವಾಡ ನಡೆಯಬಹುದು ಎಂದು ದಯವಿಟ್ಟು ನಿರೀಕ್ಷಿಸಬೇಡಿ" ಎಂದು ಕೋರಿದಾಗ ಆತ ನಿಮ್ಮ ಬಗ್ಗೆ ಖಂಡಿತವಾಗಿಯೂ ಕನಿಕರ ತೋರುವುದಿಲ್ಲ. ನಿರ್ದಿಷ್ಟ

ಕಾಲಾವಧಿಯೊಳಗೆ ಈ ಸರ್ಕಾರವು ಉತ್ತಮ ಫಲಿತಾಂಶಗಳನ್ನು ಜನರ ಮುಂದಿಡದಿದ್ದರೆ, ಜನರು ತಮಗೆ ಯಾವುದೇ ಸರ್ಕಾರದ ಅಗತ್ಯವೆಂಬಂಥ ತೀರ್ಮಾನ ತೆಗೆದುಕೊಳ್ಳುವಷ್ಟರ ಮಟ್ಟಿಗೆ ಸರ್ಕಾರದ ಬಗ್ಗೆ ಹತಾಶೆ ಹಾಗೂ ನಿರಾಶಾಭಾವನೆ ಹೊಂದುತ್ತಾರೆ. ಸಂಸತ್ತಿನಲ್ಲಿರುವ ನಾವು ನಮ್ಮ ಜವಾಬ್ದಾರಿಗಳನ್ನರಿತು ಅನತಿ ಕಾಲದಲ್ಲೇ ಜನರ ಕಲ್ಯಾಣವನ್ನು, ಒಳಿತನ್ನು ಮಾಡುವ ಗುರಿಯನ್ನು ಸಾಧಿಸಿದ ಹೊರತು ಹೊರಗಿರುವ ಜನಸಾಮಾನ್ಯರು ಈ ಸಂಸತ್ತನ್ನು ಅತ್ಯಂತ ಕೆಟ್ಟದ್ದಾಗಿ ನಿಂದಿಸುತ್ತಾರೆಂಬುದರಲ್ಲಿ ನನಗೆ ಲವಲೇಶವೂ ಸಂಶಯವಿಲ್ಲ. ಅದು ಅನಪೇಕ್ಷಿತ ವ್ಯವಸ್ಥೆಯಾಗುತ್ತದೆ ಅಷ್ಟೆ.

ಮಾನ್ಯರೆ, ಸರ್ಕಾರವು ಈ ಸಹಾಯಧನ ಯೋಜನೆಯ ಬಗ್ಗೆ ದುಡುಕಿನ (ದಿಢೀರ್) ನಿರ್ಧಾರ ತೆಗೆದುಕೊಂಡದ್ದರಿಂದ ಈ ಪರಿಸ್ಥಿತಿ ಅತ್ಯಂತ ಹದಗೆಟ್ಟಿದೆ. ಮತ್ತೊಂದು ಎಡೆಯಿಂದ ಈ ಸಹಾಯಧನವು ದುಬಾರಿ. ಜೀವನ ವೆಚ್ಚದಿಂದ ಜನರನ್ನು ಪಾರುಮಾಡಲು ಸರ್ಕಾರವು ಕೈಗೆತ್ತಿಕೊಂಡ ಹೆಚ್ಚುವರಿ ಯೋಜನೆಯಾಗಿದೆ. ನಮಗೆ ಮಾಹಿತಿಯಿರುವಷ್ಟರ ಮಟ್ಟಿಗೆ ಸಹಾಯಧನ ನೀಡಿಕೆ ಮುಂದುವರೆದಿದೆ.

**ಶ್ರೀ ಬಿ.ಬಿ. ಶರ್ಮ (ಉತ್ತರ ಪ್ರದೇಶ):** ಆಹಾರ ಸಹಾಯಧನ ನೀಡಿಕೆಯನ್ನು ಜನಸಂಖ್ಯೆಯ ಶೇಕಡಾ ಎಷ್ಟು ಭಾಗಕ್ಕೆ ಒದಗಿಸಬೇಕೆಂದು ಮಾನ್ಯ ಸದಸ್ಯರು ಬಯಸುತ್ತಾರೆ?

**ಡಾ. ಬಿ.ಆರ್. ಅಂಬೇಡ್ಕರ್:** ಸ್ವಾಮಿ, ಬಹುಶಃ ಅವರು ನಾನು ಪಡಿತರ ವ್ಯವಸ್ಥೆಯ ವಿವರಗಳನ್ನು ನೀಡಬೇಕೆಂದು ನಿರೀಕ್ಷಿಸುವುದಿಲ್ಲವೆಂದು ಕೊಳ್ಳುತ್ತೇನೆ. ಜನರ ವರ್ಗೀಕರಣ ಹೇಗೆ ಮಾಡಬಹುದು, ಅದರಿಂದ ಇಂತಿಷ್ಟು ವರ್ಗಗಳಿಗೆ ಸಹಾಯಧನ ನೀಡಬಹುದು ಹಾಗೂ ಇಂತಿಷ್ಟು ವರ್ಗಗಳಿಗೆ ಸಹಾಯಧನ ನೀಡಲಾಗದು ಎಂದು ನಿರ್ಧರಿಸಬಲ್ಲಂಥ ಪರಿಸ್ಥಿತಿಯಲ್ಲಿ ಇಂದು ನಾವಿಲ್ಲವಾದ್ದರಿಂದ ನಾನು ಆ ಬಗೆಗಿನ ವಿವರಗಳನ್ನು ನೀಡಲಿಚ್ಛಿಸುವುದಿಲ್ಲ. ಆ ಮಾಹಿತಿಯನ್ನು ಸರ್ಕಾರ ಒದಗಿಸಿಯೂ ಇಲ್ಲ. ಸರ್ಕಾರವು ನಮಗೆ ಆ ಮಾಹಿತಿಯನ್ನು ಒದಗಿಸಿದರೆ ಖಂಡಿತವಾಗಿಯೂ ನಾನು ಆ ಪ್ರಸ್ತಾವದ ಬಗ್ಗೆ ನೀಡಿದ ಅಭಿಪ್ರಾಯದಂತೆ ಇದಕ್ಕೂ ನನ್ನ ಕಾಣಿಕೆ ಸಲ್ಲಿಸುತ್ತೇನೆ. ಇದನ್ನು ಹೇಳುತ್ತಿರುವ ಈ ಘಳಿಗೆಯಲ್ಲಿ ಸಬ್ಸಿಡಿ ನೀಡಬೇಕೆಂಬ ಕಾರ್ಯನೀತಿಯ ವ್ಯತಿರಿಕ್ತ ವಿಷಯವು ನನಗೆ ಸಂಪೂರ್ಣವಾಗಿ ಹೊಸದಾಗಿ ತಿಳಿದು ಬಂದಿರುವುದಾಗಿದೆ. ೧೯೪೬–೪೭ರಲ್ಲಿ ಸಹಾಯಧನವು ೨೨ ಕೋಟಿ ರೂ.ಗಳಿದ್ದು ೧೯೫೧–೫೨ರಲ್ಲಿ ಅದನ್ನು ೩೬ ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಮಾನ್ಯ ವಿತ್ತ ಮಂತ್ರಿಗಳು ಲೇಖನುದಾನ ಪಡೆಯುವ ಸಲುವಾಗಿ ಹಂಗಾಮಿ (ಪ್ರಾಂತೀಯ) ಸಂಸತ್ತಿನಲ್ಲಿ ಮಂಡಿಸಿದ ಕಳೆದ ಬಜೆಟಿನಲ್ಲಿ ಈ ವರ್ಷ ಅವರು ನೀಡಲು ಉದ್ದೇಶಿಸಿರುವ ಸಹಾಯಧನದ ಮೊತ್ತ ೨೫ ಕೋಟಿ ರೂ.ಗಳೆಂದು ಅಂದಾಜಿಸಿರುವುದಾಗಿ ತಿಳಿಸಿದ್ದರು. ಅದು ಅವರು ಅಂದಾಜಿಸಿದ್ದ ಮೊತ್ತವಾಗಿತ್ತು. ಅವರು ಬಜೆಟನ್ನು ಮಂಡಿಸಿದ ಸಮಯದಲ್ಲಿ ಅಷ್ಟು ಕಡಿಮೆ ವೆಚ್ಚ ಮಾಡಲು ಮನಸ್ಸಿನಲ್ಲೇ ಬದ್ಧರಾಗಿದ್ದರೆಂಬುದು ನನಗೆ ಖಚಿತವಾಗಿತ್ತು. ಆದರೆ ತರುವಾಯ ಇದ್ದಕ್ಕಿದ್ದಂತೆ ನಮಗೆ ಈ ದಿಢೀರ್ ಬದಲಾವಣೆ ಕಂಡುಬಂದಿತು. ಆ ಬಗ್ಗೆ ಕೆಲವು ಕಾರಣಗಳನ್ನು ನೀಡಲಾಯಿತು. ಅವುಗಳಲ್ಲಿ ಒಂದು ಸಹಾಯಧನವು ೫೫ ಕೋಟಿ ರೂ.ಗಳಾಗುತ್ತದೆಂಬುದು ಕೆಲವು ಸದಸ್ಯರು ೯೦ ಕೋಟಿ ರೂ.ಗಳಾಗುತ್ತದೆಂದರು. ನನಗೆ ಯಥಾರ್ಥವಾದ ಮೊತ್ತ ಯಾವುದೆಂಬುದು ತಿಳಿದಿಲ್ಲ. ಕಳೆದ ತಾತ್ಕಾಲಿಕ ಸಂಸತ್ತಿನಲ್ಲಿ ಕೂಡ ಬಜೆಟ್ ಮಂಡನೆಯಾದಾಗ ಸರ್ಕಾರವು ೨೫ ಕೋಟಿವರೆಗೂ ಸಹಾಯಧನ ನೀಡುವ ಜವಾಬ್ದಾರಿ ಹೊರಲು ಒಪ್ಪಿಕೊಳ್ಳಲಿತ್ತು ಎಂಬುದನ್ನು ತಿಳಿಸಬಯಸುತ್ತೇನೆ. ಸರ್ಕಾರ ಏಕೆ ಆ ಆಶ್ವಾಸನೆಯಿಂದ, ಆ ಹೊಣೆಗಾರಿಕೆಯಿಂದ ಹಿಂದೆ ಸರಿಯಿತೆಂಬುದು ನನಗೆ ಅರ್ಥವಾಗುತ್ತಿಲ್ಲ . . . ಪ್ರಾಯಶಃ . . .

**ಮಾನ್ಯ ಸಭಾಧ್ಯಕ್ಷರು:** ನಿಮ್ಮ ಸಮಯ ಮುಗಿಯಿತು. ನೀವಿನ್ನು ಒಂದು ಅಥವಾ ಎರಡು ನಿಮಿಷ ಮಾತ್ರ ಮಾತನಾಡಬಹುದು.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ನೀವು ಕೃಪೆಯಿಟ್ಟು ನೀಡುವ ಒಂದು ಅಥವಾ ಎರಡು ನಿಮಿಷದಲ್ಲಿ ಅದನ್ನು ಹೇಳಿ ಮುಗಿಸಲಾಗುವುದಿಲ್ಲ. ನಾನು ಇಲ್ಲಿಯೇ ನಿಲ್ಲಿಸುತ್ತೇನೆ.

◆

## ೪೫

# ಬಜೆಟ್ (ಸಾಮಾನ್ಯ) ೧೯೫೨–೫೩ ಸಾಮಾನ್ಯ ಚರ್ಚೆ

*ಡಾ. ಬಿ.ಆರ್. ಅಂಬೇಡ್ಕರ್ (ಮುಂಬಯಿ):** ಮಾನ್ಯ ಸಭಾಧ್ಯಕ್ಷರೇ ರಾಷ್ಟ್ರಾಧ್ಯಕ್ಷರ ಭಾಷಣ ಕುರಿತು ನನ್ನ ವಿಶ್ಲೇಷಣೆಗಳನ್ನು ಮಾಡುತ್ತ ನಾನು ಹಿಂದೆ ಮಾತು ನಿಲ್ಲಿಸಿದ್ದ ಅಂಶದಿಂದ ಮತ್ತೆ ಪ್ರಾರಂಭಿಸಬಯಸಿದ್ದೇನೆ. ನಾನು ಮಾತು ನಿಲ್ಲಿಸುವಾಗ ಆಹಾರ ಸಹಾಯಧನದ ಬಗ್ಗೆ ಮಾತನಾಡುತ್ತಿದ್ದುದು ಸದನಕ್ಕೆ ನೆನಪಿರಬಹುದು. ಈ ದಿನ ಅದೇ ವಿಷಯದ ಬಗ್ಗೆ ಮಾತನಾಡಲು ನನಗೆ ಇನ್ನಷ್ಟು ಮಾಹಿತಿಗಳು ದೊರೆತು ನಾನು ಸಿದ್ಧನಾಗಿದ್ದೇನೆ. ಏಕೆಂದರೆ, ವಿರಾಮ ಸಮಯದಲ್ಲಿ ಅರ್ಥಮಂತ್ರಿಯವರು "ರಾಜಕೀಯ ದೊಂಬರಾಟ'ವೆಂದು ಕರೆಯಬಹುದಾದ ಕ್ರಮವನ್ನು ಏಕೆ ತೆಗೆದುಕೊಳ್ಳಬೇಕಾಯಿತೆಂಬುದನ್ನು ಸಮರ್ಥಿಸುತ್ತ ನೀಡಿದ ಹೇಳಿಕೆಯೊಂದು ನಮಗೆ ತಿಳಿದುಬಂತು. ಅರ್ಥಮಂತ್ರಿಯವರು ನೀಡಿರುವ ವಿವರಣೆಯು ನನ್ನ ಅಭಿಪ್ರಾಯದಲ್ಲಿ, ಆಹಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಸಹಾಯಧನವನ್ನು ಕೋರದಿರುವಂತಹ ಜನರಿಗೆ ಭಯಹುಟ್ಟಿಸುವ ಉದ್ದೇಶಹೊಂದಿರುವಂತಿದೆ. ಅವರ ವಿವರಣೆ ಹೀಗಿದೆ. ಆಹಾರ ಸಹಾಯಧನದ ವಿಚಾರದಲ್ಲಿ ಅವರು ಏನಾದರೂ ಮಾಡಲೇಬೇಕಾಗಿ ಬಂದರೆ ಬೆಲೆಯ ಮಟ್ಟವು ಕಳೆದ ವರ್ಷ ಇದ್ದಷ್ಟೇ ಮಟ್ಟದಲ್ಲಿ ಇರುವಂಥ ರೀತಿಯಲ್ಲಿ ಅವರು ನೋಡಿಕೊಳ್ಳಬೇಕಾಗುತ್ತದೆ. ನನಗೆ ತಿಳಿದಂತೆ ಇದೇ ಅವರ ವಾದದ ಆಧಾರವಾಕ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಅನಂತರ ಅವರು ಅದನ್ನು ಬೆಳೆಸುತ್ತ ತಾವು ಕಳೆದ ವರ್ಷದ ಬೆಲೆಯ ಮಟ್ಟವನ್ನು ಉಳಿಸಿಕೊಂಡಲ್ಲಿ ಮಾತ್ರವೇ ಸಹಾಯಧನವನ್ನು ನೀಡಬೇಕೆಂಬುದನ್ನು ಆಧರಿಸಿ ಸಹಾಯ ಧನವನ್ನು ಕೈಗಾರಿಕಾ ಪ್ರದೇಶಗಳಿಗೆ ಮಾತ್ರವೇ ಸೀಮಿತಗೊಳಿಸಿಕೊಂಡರೆ ಅವರು ೬೦ ಕೋಟಿ ರೂಪಾಯಿ ಸಂದಾಯ ಮಾಡಬೇಕಾಗುತ್ತದೆ; ಮತ್ತು ಸಹಾಯಧನವನ್ನು ಗ್ರಾಮೀಣ ಪ್ರದೇಶಕ್ಕೆ ಕೂಡ ವಿಸ್ತರಿಸಬೇಕಾದಲ್ಲಿ ಅವರು ೯೦ ಕೋಟಿ ರೂಪಾಯಿ ಸಂದಾಯ ಮಾಡಬೇಕಾಗುತ್ತದೆ ಎಂಬುದಾಗಿ ಹೇಳುತ್ತಾರೆ. ಸಹಜವಾಗಿಯೇ ಈ ಅಂಕಿಅಂಶಗಳು ಸರಿಯಾಗಿದ್ದರೆ, ಅವುಗಳನ್ನು ಯಾವುದೇ ಬಗೆಯ ಆಹಾರ ಸಹಾಯಧನವನ್ನು ನೀಡಬೇಕು, ಇದರಿಂದ ಗ್ರಾಹಕವರ್ಗಗಳ ಸಂಕಷ್ಟವನ್ನು ಕೆಲಮಟ್ಟಿಗಾದರೂ ನಿವಾರಿಸಬಹುದೆಂದು ಇದರಲ್ಲಿ ಅತ್ಯಾಸಕ್ತಿ ಹೊಂದಿದವರ ಉತ್ಸಾಹವನ್ನು ಉಪಶಮನಗೊಳಿಸುವಂತೆ ಲೆಕ್ಕಾಚಾರಹಾಕಲಾಗಿದೆ. ನಾನು ತಿಳಿದುಕೊಂಡಿರುವ ಮಟ್ಟಿಗೆ, ನಮ್ಮ ವಿತ್ತ ಮಂತ್ರಿಯವರು ಪತಾಕೆಯನ್ನು ಹಾರಿಸಿರುವಷ್ಟು ಎತ್ತರಕ್ಕೆ ಯಾರೂ ತಮ್ಮ ಬಾವುಟ ಹಾರಿಸಲಾರರು. ವಿವಿಧ ಸಮಾಚಾರ ಪತ್ರಿಕೆಗಳಲ್ಲಿ ನಡೆಯುತ್ತಿರುವ ಚರ್ಚೆಯನ್ನು ಇನ್ನಷ್ಟು ಮುಂದುವರಿಸಲು ನನಗೆ ಸಾಧ್ಯವಾಗಿರುವ ಮಟ್ಟಿಗೆ ನೀವು ಸಹಾಯಧನವನ್ನು, ಈ ವರ್ಷದ ಬೆಲೆಮಟ್ಟವು ಕಳೆದ ವರ್ಷದ ಬೆಲೆಮಟ್ಟದಷ್ಟೇ ಇರುವಂತೆ ಎಷ್ಟರ ಮಟ್ಟಿಗೆ ಹಾಗೂ ಯಾವ ಪ್ರಮಾಣದಲ್ಲಿ ನೀಡಬೇಕೆಂಬ ಬಗ್ಗೆ ಯಾರೂ ಏನನ್ನೂ ಹೇಳಿಲ್ಲ. ಆ ಬಗ್ಗೆ ಯಾರೂ ಕೂಡ ತಗಾದೆಯೆತ್ತಿಲ್ಲ. ಎರಡನೆಯದಾಗಿ, ಸಹಾಯಧನವನ್ನು ನೀಡಲು ನಿರಾಕರಿಸುವುದಕ್ಕೆ

---

* ಸಂಸದೀಯ ಚರ್ಚೆಗಳು (ರಾಜ್ಯಸಭೆ) ಸಂ. I, ೨೭ನೇ ಮೇ ೧೯೫೨, ಪು. ೪೪೯–೮೦

ಕಾರಣವಾಗಿ, ಮಾನ್ಯ ವಿತ್ತ ಮಂತ್ರಿಯವರು ಮುಂದಿಟ್ಟ ಗ್ರಾಮೀಣಬೇಡಿಕೆಯ ಪ್ರಶ್ನೆಗೆ ಸಂಬಂಧಪಟ್ಟಂತೆ, ಕಳೆದ ಹಲವಾರು ವರ್ಷಗಳಿಂದ ಅವರಿಗೆ ವಿನಂತಿಸಿಕೊಳ್ಳುತ್ತಲೇ ಬಂದಿದ್ದು ಅವರು ಕೂಡ ಒಂದೇ ಸಮನೆ ನಿರಾಕರಿಸುತ್ತಲೇ ಬಂದಿದ್ದ ವಾದವೊಂದನ್ನು ಈಗ ಅವರು ಒಪ್ಪಿಕೊಳ್ಳಲು ಸಿದ್ಧರಾಗಿದ್ದಾರೆಂದು ತಿಳಿಸಲು ನನಗೆ ವಿಷಾದವಾಗುತ್ತದೆ. ನನಗೆ ಖಚಿತವಾಗಿ ಗೊತ್ತು, ನೀವು ಸಹಾಯಧನವನ್ನು ಕೊಡುವಿರಾದರೆ ನೀವು ಕೈಗಾರಿಕಾ ಜನಸಂಖ್ಯೆ ಮತ್ತು ಗ್ರಾಮೀಣ ಜನಸಂಖ್ಯೆಯ ನಡುವೆ ತಾರತಮ್ಯ ಮಾಡಬಾರದು ಎಂಬುದು ಪ್ರಾಂತೀಯ ಮಂತ್ರಿಗಳ ಬೇಡಿಕೆಯಾಗಿತ್ತು. ನೀವು ಸಹಾಯಧನವನ್ನು ಎಲ್ಲರಿಗೂ ಕೊಡಬೇಕು ಅಥವಾ ಯಾರಿಗೂ ಕೊಡಬಾರದು. ಇದು ಅತ್ಯಂತ ಹಳೆಯ ವಾದ. ನಾವು ಯಾರೇ ಒಬ್ಬ ವಿತ್ತಮಂತ್ರಿ ಅಥವಾ ಒಬ್ಬ ಆಹಾರ ಮಂತ್ರಿಯಾಗಲಿ – ಒಬ್ಬರಾದ ನಂತರ ಒಬ್ಬರಂತೆ ನಾವು ಹಲವರನ್ನು ಹೊಂದಿದ್ದೇವೆ – ಆ ಅಭಿಪ್ರಾಯಕ್ಕೆ ಎಂದೂ ಒಪ್ಪಿಗೆ ನೀಡಿರುವುದು ನನ್ನ ನೆನಪಿನಲ್ಲಿಲ್ಲ. ಭಾರತ ಸರ್ಕಾರವು ಸಹಾಯಧನವನ್ನು ವಿತರಣೆ ಮಾಡುವಾಗಲೆಲ್ಲ ನಿರ್ದಿಷ್ಟವಾಗಿ ವರ್ಗೀಕರಣ ಮಾಡಬೇಕೆಂದು ಹೇಳುವುದು ಭಾರತ ಸರ್ಕಾರದ ನೀತಿ ಅಥವಾ ವಾದವಾಗಿದೆ, ವರ್ಗೀಕರಣ ಹೇಗಿರಬೇಕೆಂದರೆ. . . .

**ವಿತ್ತ ಸಚಿವರು (ಶ್ರೀ ಸಿ.ಡಿ. ದೇಶಮುಖ್):** ಒಂದು ಮಾಹಿತಿಯ ಅಂಶದ ಮೇಲೆ, ಸ್ವಾಮಿ, ಕೇವಲ ಕೈಗಾರಿಕಾ ಪಟ್ಟಣಗಳಿಗೆ ಮಾತ್ರ ಸಹಾಯಧನ ನೀಡುವ ಮೂಲಕ, ಸಹಾಯಧನ ನೀಡಿಕೆ ವ್ಯವಸ್ಥೆ ಕೇವಲ ಕಳೆದ ವರ್ಷದಿಂದ ಪ್ರಾರಂಭವಾಗಿದೆ.

**ಡಾ. ಬಿ.ಆರ್. ಅಂಬೇಡ್ಕರ್:** ಸ್ವಾಮಿ, ಸಹಾಯಧನ ನೀಡಿಕೆಯನ್ನು ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಬೇಕೆಂಬುದು ಹೊಸ ವಿಷಯವೇನಲ್ಲ. ನನಗೆ ನೆನಪಿರುವ ಮಟ್ಟಿಗೆ ಭಾರತದ ಯಾವುದೇ ಸರ್ಕಾರ ಆ ಬೇಡಿಕೆಗೆ ಅಸ್ತು ಎಂದಿಲ್ಲ.

**ಶ್ರೀ ಸಿ.ಡಿ. ದೇಶಮುಖ್:** ಕಳೆದ ವರ್ಷದ ಹಿಂದಿನ ವರ್ಷ ಸಹಾಯಧನವನ್ನು ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡಕ್ಕೂ ನೀಡಲಾಗಿತ್ತು, ಆದ್ದರಿಂದ ಅಂಥ ವಾದವನ್ನು ಮಂಡಿಸುವ ಹಾಗಿರಲಿಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ಹಾಗಿದ್ದರೆ, ವಿತ್ತ ಮಂತ್ರಿಯವರ ಪಾಡು ಶೋಚನೀಯವಾಗುತ್ತದೆ ಎನ್ನುತ್ತೇನೆ. ಹಿಂದೆ ನೀವು ಸಹಾಯಧನವನ್ನು ಎಲ್ಲರಿಗೂ ಕೊಡಬೇಕೆಂಬ ಬೇಡಿಕೆಯನ್ನು ಒಪ್ಪಿಕೊಂಡಿದ್ದರೆ, ಈಗ ನೀವು ಏಕೆ ಆ ಅಭಿಪ್ರಾಯದಿಂದ ಹಿಂತೆಗೆಯುತ್ತಿರುವಿರಿ ಎಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಎಚ್.ಎನ್. ಕುಂಜ್ರು (ಉತ್ತರ ಪ್ರದೇಶ):** ಬೇಡಿಕೆ ಯಾವುದೇ ಆಗಿರಲಿ ಇದಕ್ಕೆ ಸಂಬಂಧಪಟ್ಟಂತೆ ಅವರು ಸಹಾಯ ಧನವನ್ನು ಕೇವಲ ಕೈಗಾರಿಕಾ ಕೇಂದ್ರಗಳಿಗೆ ಮಾತ್ರವಲ್ಲ ಎಲ್ಲ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೂ ನೀಡಲಾಯಿತೆಂದು ಹೇಳಿದ್ದಾರೆ. ಮೊದಲನೇ ಆಹಾರ ನೀತಿ ಸಮಿತಿಯ ಶಿಫಾರಸಿಗನುಸಾರವಾಗಿ ಇಡೀ ದೇಶದಲ್ಲಿ ಭಾರಿ ಪ್ರಮಾಣದ ಹೆಚ್ಚು ಕುಸಿತವಿದ್ದ ಗ್ರಾಮೀಣ ಪ್ರದೇಶಗಳಿಗೆ ಸಹಾಯಧನ ಹಂಚಲಾಯಿತೇ?

**ಶ್ರೀ ಸಿ.ಡಿ. ದೇಶಮುಖ್:** ಕಳೆದ ವರ್ಷದ ಹೊರತು, ಸಹಾಯಧನವನ್ನು ಕೇವಲ ಉದ್ಯಮ ಪ್ರದೇಶಗಳಿಗೆ ಮಾತ್ರ ಸೀಮಿತಗೊಳಿಸಲಾಗಿರಲಿಲ್ಲವೆಂಬುದು ನನ್ನ ಅಭಿಪ್ರಾಯ.

**ಡಾ. ಬಿ.ಆರ್. ಅಂಬೇಡ್ಕರ್:** ನಿಮಗೆ ಅತ್ಯಂತ ಒಳ್ಳೆಯದು ಮಾಡಲಾಗದಿದ್ದರೂ ಪರವಾಗಿಲ್ಲ ಅದಕ್ಕೆ ಬದಲಾಗಿ ಕೆಟ್ಟದು ಮಾಡಬೇಡಿ ಎಂಬುದಷ್ಟೇ ನನ್ನ ವಾದ. ಸಾಧ್ಯವಾಗುವ ಒಳ್ಳೆಯದನ್ನೆಲ್ಲ ಮಾಡಿ; ಅದು ಇನ್ನಷ್ಟು ಉತ್ತಮವಾಗುವಂತೆ ಮಾಡಲು ನಿಮಗೆ ಸಾಧ್ಯವಾಗದಿದ್ದರೆ ಅತ್ಯಂತ ಪರಿಮಿತ ಸಂಪನ್ಮೂಲಗಳಿವೆಯೆಂದು ರಾಷ್ಟ್ರ ನಿಮ್ಮನ್ನು ಕ್ಷಮಿಸುತ್ತದೆ. ಆದರೆ ಕೇವಲ ಒಳ್ಳೆಯದನ್ನಾದರೂ ಕೂಡ

ಅದಕ್ಕೆ ನೀವು ಒಪ್ಪಿಕೊಂಡು ಮಾಡಲು ನೀವು ಮುಂದಾಗದಿದ್ದಲ್ಲಿ, ಕೇವಲ ೨೫ ಕೋಟಿ ರೂ.ಗಳನ್ನು ಬಜೆಟಿನಲ್ಲಿ ನಿಗದಿಗೊಳಿಸುವುದಾದರೆ ಆ ಬಗ್ಗೆ ದೂರಲು ಸಾರ್ವಜನಿಕರಿಗೆ ಅತ್ಯುತ್ತಮ ಕಾರಣವೊಂದು ಸಿಗುತ್ತದೆಂಬುದು ನೆನಪಿರಲಿ.

ಸ್ವಾಮಿ, ಬ್ರಿಟನ್ನಿನ ಅರ್ಥಮಂತ್ರಿಯವರು ಬಜೆಟ್ ಮಂಡಿಸುವಾಗ ಇಂಗ್ಲೆಂಡಿನಲ್ಲಿ ಏನು ಮಾಡಿದ್ದರೆಂಬುದರತ್ತ ನಮ್ಮ ವಿತ್ತ ಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ. ಪ್ರಾಯಶಃ ಈ ವಿಷಯ ನನಗಿಂತಲೂ ಅವರಿಗೆ ಚೆನ್ನಾಗಿ ತಿಳಿದಿರಲೂಬಹುದು. ನಾನು ನನ್ನ ಸಂಗತಿಗಳನ್ನು, ಬ್ರಿಟನ್ನಿನ ಅರ್ಥಮಂತ್ರಿಯವರು ಹೌಸ್ ಆಫ್ ಕಾಮನ್ಸ್ ಮುಂದೆ ಮಂಡಿಸಿದ ಬಜೆಟ್ ಬಗ್ಗೆ ವೃತ್ತ ಪತ್ರಿಕೆ ಮತ್ತಿತರ ಮ್ಯಾಗ್ಜಿನ್‌ಗಳಲ್ಲಿ ಬಂದಿದ್ದ ವಿಶ್ಲೇಷಣೆಗಳನ್ನು ಆಧರಿಸಿದ್ದೇನೆ. ಈಗ, ಸ್ವಾಮಿ, ವಿಷಯವನ್ನು ಆಹಾರ ಸಹಾಯಧನದ ವಿಷಯಕ್ಕೆ ಸೀಮಿತಗೊಳಿಸಿಕೊಂಡು ಇಂಗ್ಲೆಂಡಿನಲ್ಲಿ ೧೯೫೦ನೇ ವರ್ಷದಲ್ಲಿ ೪೮೦ ಮಿಲಿಯನ್ ಪೌಂಡ್‌ಗಳಷ್ಟು ಆಹಾರ ಸಹಾಯಧನ ನೀಡಿದ್ದರೆಂಬುದು ನನ್ನ ಗಮನಕ್ಕೆ ಬಂದಿದೆ. ಕಳೆದ ಬಜೆಟಿನಲ್ಲಿ ಸಹಾಯಧನವನ್ನು ಕಡಿಮೆಗೊಳಿಸಿ ೧೬೦ ಮಿಲಿಯನ್ ಪೌಂಡ್‌ನಷ್ಟು ಕಡಿತ ಮಾಡಲಾಯಿತು. ಬ್ರಿಟನ್ ಅರ್ಥಮಂತ್ರಿಯವರ ಬಜೆಟಿನ ಇಷ್ಟು ಭಾಗಕ್ಕೆ ಸಂಬಂಧಪಟ್ಟಂತೆ, ತಾವೇನೂ, ಬ್ರಿಟನ್ ಅರ್ಥಮಂತ್ರಿಗಿಂತ ತೀರಾ ಭಿನ್ನವಾದ ರೀತಿಯ ಕೆಲಸ ಮಾಡುತ್ತಿಲ್ಲವೆಂದು ಸಮಾಧಾನಪಟ್ಟುಕೊಳ್ಳಬಹುದು. ಆದರೆ ಇಂಗ್ಲೆಂಡಿನಲ್ಲಿ ಬ್ರಿಟನ್ ಅರ್ಥಮಂತ್ರಿಯವರು ಮಂಡಿಸಿದ ಬಜೆಟ್ ಚಿತ್ರಣದ ಮತ್ತೊಂದು ಪಾರ್ಶ್ವವನ್ನು ಎಂದರೆ ಬ್ರಿಟನ್ ಅರ್ಥಮಂತ್ರಿಯವರ ಬದಲಿ ಹೊಂದಾಣಿಕೆ ಪ್ರಸ್ತಾವಗಳನ್ನು ಗಮನಿಸಿದಾಗ ಇತ್ತ ಸಹಾಯಧನವನ್ನು ಕಡಿಮೆ ಮಾಡಿದ್ದರೆ, ಅತ್ತ ೨.೨೨೮ ಮಿಲಿಯನ್ ಪೌಂಡ್‌ಗಳಷ್ಟು ಆದಾಯ ತೆರಿಗೆ ಪರಿಹಾರದಲ್ಲಿ ಹೆಚ್ಚಳವುಂಟಾಗಿತ್ತು, ಎರಡನೆಯದಾಗಿ ೩೭ ಮಿಲಿಯನ್ ಪೌಂಡುಗಳಷ್ಟು ಕುಟುಂಬ ಭತ್ಯಗಳನ್ನು ಏರಿಸಲಾಗಿದೆ. ನಿವೃತ್ತಿವೇತನಗಳನ್ನು ಗಣನೀಯವಾಗಿ ಏರಿಸಲಾಗಿದೆ. ಅಷ್ಟೇ ಅಲ್ಲ ವಸತಿ ಮುಂಗಡ ಹಣದಲ್ಲಿ ಅಪಾರವಾದ ಹೆಚ್ಚಳವನ್ನು ನೀಡಲಾಗಿದೆ. ಈಗ, ಬ್ರಿಟನ್ನಿನ ಅರ್ಥಮಂತ್ರಿಗಳು ತಮ್ಮ ಬಜೆಟಿನಲ್ಲಿ ನೀಡಿರುವ ಈ ಎಲ್ಲ ಪರಿಹಾರಗಳು ಪ್ರಶ್ನಾತೀತವಾಗಿ ಗ್ರಾಹಕನ ಖರೀದಿ ಶಕ್ತಿಯನ್ನು ಹೆಚ್ಚಿಸುವಲ್ಲಿ ಪರಿಣಾಮಬೀರುವುದರಲ್ಲಿ ಸಂಶಯವಿಲ್ಲ. ಗ್ರಾಹಕ ಸಮುದಾಯದ ಖರೀದಿ ಶಕ್ತಿಯಲ್ಲಿ ಈ ಬಗೆಯ ಏರಿಕೆಯುಂಟಾದರೆ ಸಹಾಯಧನವನ್ನು ೧೬೭ ಮಿಲಿಯನ್ ಪೌಂಡ್‌ಗಳಷ್ಟು ಕಡಿಮೆಮಾಡಿದರೆ ಯಾವುದೇ ತೊಂದರೆಯುಂಟಾಗುವುದಿಲ್ಲ.

ನಮ್ಮ ಸನ್ಮಾನ್ಯ ಮಿತ್ರ ವಿತ್ತಮಂತ್ರಿಯವರು ತಮ್ಮ ಬಜೆಟಿನಲ್ಲಿ ಯಾವ ಪರಿಹಾರಗಳನ್ನು ಒದಗಿಸಿದ್ದಾರೆ. ಯಾವುದೂ ಇಲ್ಲ. ಪ್ರತ್ಯಕ್ಷ ಅಥವಾ ಪರೋಕ್ಷ ಅಥವಾ ಪರೋಕ್ಷ ತೆರಿಗೆ ನಿರ್ಧಾರಣೆಯ ಸ್ವರೂಪ ಹಿಂದಿನಂತೆಯೇ ಇದೆ. ಜನರ ಖರೀದಿಶಕ್ತಿ ಹಿಂದೆ ಎಷ್ಟಿತ್ತೋ ಈಗಲು ಅಷ್ಟೇ ಇದೆ. ಅದರ ಜೊತೆಗೆ, ಅವರೀಗ ಆಹಾರದ ಬೆಲೆಯನ್ನು ಏರಿಸುತ್ತಿದ್ದಾರೆ. ಜನತೆಯ ಸಮಸ್ಯೆಗಳ ಬಗ್ಗೆ ನಮ್ಮ ಮಾನ್ಯ ವಿತ್ತಮಂತ್ರಿ ಹಾಗೂ ಬ್ರಿಟನ್ನಿನ ಅರ್ಥಮಂತ್ರಿಯವರ ನಡುವೆ ಕಾಣುವ ವಿಭಿನ್ನ ದೃಷ್ಟಿಕೋನದಲ್ಲಿ ಮೂಲಭೂತ ವ್ಯತ್ಯಾಸವಿರುವುದು ನನಗೆ ಕಂಡುಬರುತ್ತದೆ, ಬ್ರಿಟನ್ನಿನ ಅರ್ಥಮಂತ್ರಿಯವರು ಜನರ ಕಲ್ಯಾಣಕ್ಕಾಗಿ ಇಂಗ್ಲೆಂಡಿನಲ್ಲಿ ಪ್ರಸ್ತಾಪಿಸಿರುವ ಕೆಲವನ್ನಾದರೂ ನಮ್ಮ ಮಾನ್ಯ ಮಿತ್ರ ವಿತ್ತ ಮಂತ್ರಿಯವರು ಅನುಕರಿಸಲು ಸಾಧ್ಯವಿಲ್ಲವೇ ಎಂಬುದನ್ನು ಪರಿಗಣಿಸಬಹುದೆಂದು ನಾನು ಭಾವಿಸುತ್ತೇನೆ.

**ಬೆಳಗ್ಗೆ ೯–೦೦ ಗಂಟೆ**

ಸ್ವಾಮಿ, ನಮ್ಮ ವಿತ್ತಮಂತ್ರಿಯವರು ಯಾವ ನಿಲುವನ್ನು ತೆಗೆದುಕೊಳ್ಳುತ್ತಾರೆಂಬುದು ನನಗೆ ಗೊತ್ತಿಲ್ಲ. ಆದರೆ ಜನರ ಬಗ್ಗೆ ಮನಸ್ಸಿನಲ್ಲಿ ಅಪಾರ ಕಾಳಜಿ ಹೊಂದಿರುವ ಅತ್ಯಂತ ಪ್ರಾಮಾಣಿಕರಾದ ಅವರ

ಇಚ್ಛೆಯನ್ನು ಹೊರಗೆಡವಬಯಸುತ್ತೇನೆ. ಅವರೇನು ಮಾಡಬೇಕೆಂದಿದ್ದಾರೆ? ಆಹಾರಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರದ ನೀತಿಯನ್ನು ನಾನು ಅರ್ಥೈಸಿಕೊಂಡಿರುವ ಮಟ್ಟಿಗೆ ಮಾನ್ಯ ವಿತ್ತ ಮಂತ್ರಿಯವರು ಸಹಾಯಧನ ನೀಡಿಕೆಯನ್ನು ವಿರೋಧಿಸಿಲ್ಲ. ನಾನು ಅರ್ಥಮಾಡಿಕೊಂಡಿರುವಂತೆ, ಪರಿಸ್ಥಿತಿಯನ್ನು ಯಥಾರ್ಥವಾಗಿ ಹೇಳಬೇಕೆಂದರೆ, ಅವರು ವೈಯಕ್ತಿಕವಾಗಿ ಸಹಾಯಧನದ ಪರವಾಗಿದ್ದಾರೆ. ಆದರೆ ಅವರ ಗ್ರಾಹಕನಿಗೆ ಸಹಾಯಧನ ನೀಡುವುದಕ್ಕೆ ಬದಲಾಗಿ ಉತ್ಪಾದಕನಿಗೆ ಆಹಾರ ಹೆಚ್ಚು ಬೆಳೆಯುವ ಅನುದಾನ ರೂಪದಲ್ಲಿ ಅಥವಾ ಬೇರಾವುದೇ ರೀತಿಯಲ್ಲಿ ಸಹಾಯಧನ ನೀಡಬೇಕೆಂಬುದು ಅವರ ಅಭಿಪ್ರಾಯವಾಗಿದೆ. ಅವರು ನ್ಯಾಯಬದ್ಧವಾಗಿ ನೋಡುವುದಾದರೆ ಅದರ ಮಹತ್ವವನ್ನು ಒಪ್ಪಿಕೊಳ್ಳುವುದಕ್ಕೆ ಯಾವುದೇ ತೊಂದರೆಯಿಲ್ಲ – ದೇಶದಲ್ಲಿ ಆಹಾರೋತ್ಪಾದನೆ ಹೆಚ್ಚಾದರೆ ಬೆಲೆಗಳು ತಗ್ಗುತ್ತವೆ. ಗ್ರಾಹಕರಿಗೆ ಪ್ರಯೋಜನವಾಗುತ್ತದೆ ಮತ್ತು ಇದರಿಂದ ಗ್ರಾಹಕರಿಗೆ ಸಹಾಯಧನ ನೀಡುವ ಆವಶ್ಯಕತೆ ಉಂಟಾಗುವುದಿಲ್ಲ ಎಂಬ ಉದ್ದೇಶ ಅವರದು. ನನಗೆ ತಿಳಿದಂತೆ ಅವರ ಅಭಿಪ್ರಾಯವನ್ನು ಯುಕ್ತವಾಗಿಯೇ ನಾನು ಹೇಳಿದ್ದೇನೆ. ಅವರಿಗೆ ಸಹಾಯಧನ ನೀಡಬೇಕು. ಆದರೆ ಅವರು ಅದನ್ನು ಉತ್ಪಾದಕನಿಗೆ ಕೊಡಬೇಕೆನ್ನುತ್ತಾರೆಯೇ ವಿನಾ ಗ್ರಾಹಕನಿಗಲ್ಲ.

ಸರಿ, ಸ್ವಾಮಿ ನಾವು ಕೆಲವರು ಹೊಂದಿರುವ ದೃಷ್ಟಿಕೋನಕ್ಕಿಂತ ಅವರದು ವಿಭಿನ್ನವಾದ ದೃಷ್ಟಿಕೋನವಿರಬಹುದು. ಈ ಮನೋಭಾವಕ್ಕೆ ಸಂಬಂಧಿಸಿದಂತೆ ನಾವು ಎಂಥ ಪ್ರಶ್ನೆ ಕೇಳಬಹುದೆಂದರೆ: ಇವುಗಳಲ್ಲಿ ಜನರಿಗೆ ತ್ವರಿತವಾಗಿ ಪ್ರಯೋಜನಕಾರಿಯಾಗುವುದು ಯಾವುದು? ಹೆಚ್ಚು ಆಹಾರ ಬೆಳೆಯಿರಿ ಎಂಬ ನೀತಿಗೆ ನೀಡುವ ಸಹಾಯಧನಕ್ಕೆ ಸಂಬಂಧಪಡುವ ಮಟ್ಟಿಗೆ ಆ ಸಹಾಯಧನವು ಆಹಾರೋತ್ಪಾದನೆಗೆ ಸಂಬಂಧಪಟ್ಟಂತೆ ಯಾವುದೇ ಪರಿಣಾಮ ಬೀರಲಿದೆಯೆಂದು ಸರ್ಕಾರ ವಾದಿಸಬಹುದೆಂದು ನಾನು ಭಾವಿಸುವುದಿಲ್ಲ. ಏಕೆಂದರೆ ವಾಸ್ತವವಾಗಿ ರಿಸರ್ವ್‌ಬ್ಯಾಂಕ್ ನಡೆಸಿದ ತನಿಖೆಗಳ ಪೈಕಿ ಒಂದಾಗಿದ್ದ ಹೆಚ್ಚು ಆಹಾರ ಬೆಳೆಯಿರಿ ಎಂಬ ಕಾರ್ಯನೀತಿಯು ಸಂಪೂರ್ಣ ವಿಫಲವಾಗಿದೆಯೆಂದು ವರದಿಮಾಡಿರುವುದು ನಮ್ಮೆಲ್ಲರಿಗೂ ತಿಳಿದಿರುವುದರಿಂದ ವಿರೋಧಪಕ್ಷದವರು ಈ ಬಗ್ಗೆ ಯಾವುದೇ ಯಶಸ್ಸಿನ ದೃಷ್ಟಾಂತ ನೀಡಲು ಸಾಧ್ಯವೆಂದು ನಾನು ಯೋಚಿಸಲಾರೆ. ಆದ್ದರಿಂದ ಸಹಜವಾಗಿಯೇ ಗ್ರಾಹಕನಿಗೆ ಸಹಾಯಧನ ನೀಡದೆ ಆಹಾರೋತ್ಪಾದಕನಿಗೆ ಸಹಾಯಧನ ನೀಡುವ ಕಾರ್ಯನೀತಿಯಿಂದ ಮಾನ್ಯ ವಿತ್ತ ಮಂತ್ರಿಯವರು ಅಪೇಕ್ಷಿಸುವ ಪರಿಣಾಮಬೀರಿಲ್ಲವೆಂದಾಯಿತು.

ಎರಡನೆಯದಾಗಿ, ಹೆಚ್ಚು ಆಹಾರ ಬೆಳೆಯಿರಿ ಎಂಬ ಬಗ್ಗೆ ಒತ್ತು ನೀಡಿದ್ದು ವಿಫಲವಾಗಲು ಆಹಾರ ಇಲಾಖೆ ಅಥವಾ ಭಾರತ ಸರ್ಕಾರವು ಅನುಸರಿಸುತ್ತಿರುವ ವಿವಾದಾತ್ಮಕ ಕಾರ್ಯನೀತಿಯೇ ಕಾರಣವೆಂದು ನನಗನಿಸುತ್ತಿದೆ. ಒಂದೆಡೆ, ರೈತರಿಗೆ ಮತ್ತು ಇತರರಿಗೆ ಹೆಚ್ಚು ಆಹಾರ ಒದಗಿಸಲು ಸಹಾಯಧನ ನೀಡಲಾಗುತ್ತಿದೆ. ಅದೇ ವೇಳೆಗೆ ಇನ್ನೊಂದೆಡೆ ಪ್ರತಿಯೊಂದು ಸಂದರ್ಭದಲ್ಲೂ ಆಹಾರೋತ್ಪಾದನೆಯೊಂದಿಗೆ ಸ್ಪರ್ಧಿಸುತ್ತಿರುವ ವಾಣಿಜ್ಯ ಬೆಳೆಗಳೆಂದು ಕರೆಯಲಾಗುವ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಹೀಗಾಗಿ ರೈತನು ಹತ್ತಿಬೀಜ, ಕರಿಮೆಣಸು ಮುಂತಾದಂಥವುಗಳನ್ನು ಬೆಳೆಯುವುದರಿಂದ ಹೆಚ್ಚು ಪ್ರಯೋಜನವಿರುವುದನ್ನು ತಿಳಿದುಕೊಳ್ಳುತ್ತಾನೆ. ಹೆಚ್ಚು ಆಹಾರ ಬೆಳೆಯುವತ್ತ ಅವನು ಲಕ್ಷ್ಯ ಹರಿಸುವುದೇ ಇಲ್ಲ. ನಿಶ್ಚಯವಾಗಿಯೂ, ಸರ್ಕಾರದ ಉದ್ದೇಶ, ದೃಢ ಉದ್ದೇಶವು ಆಹಾರೋತ್ಪಾದನೆಯೇ ಆಗಿದ್ದಲ್ಲಿ ರೈತರು ಆಹಾರದ ಹೊರತು ಮತ್ತೇನನ್ನೋ ಬೆಳೆಯುವ ಪ್ರವೃತ್ತಿಯನ್ನು ತಡೆಯಲು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಸರ್ಕಾರ ಹಾಗೆ ಮಾಡಿಲ್ಲ. ಫಲಿತಾಂಶವಾಗಿ ಈ ದೇಶದಲ್ಲಿ ಕೃಷಿಗೆ ಸಂಬಂಧಿಸಿದಂತೆ ವಾಣಿಜ್ಯ ಬೆಳೆಗಳು ಮತ್ತು

ಆಹಾರೋತ್ಪಾದನೆಗಳ ನಡುವೆ ಎಂಬ ಪರಸ್ಪರ ಸ್ಪರ್ಧೆಯ ಎರಡು ಆರ್ಥಿಕ ಚಟುವಟಿಕೆಗಳನ್ನು ಹೊಂದಿದ್ದೇವೆ.

ಇದರ ಪರಿಣಾಮವಾಗಿ ಹೆಚ್ಚು ಆಹಾರ ಬೆಳೆಯುವ ಚಳವಳಿ ಏನೇ ಇದ್ದರೂ ಆ ಬಗ್ಗೆ ಎಷ್ಟೇ ಮೊತ್ತದ ಹಣವನ್ನು ವೆಚ್ಚ ಮಾಡಲಾಗಿದ್ದರೂ ಆಹಾರದ ಬೆಲೆಗಳ ಮೇಲೆ ಯಾವುದೇ ಪರಿಣಾಮ ಬೀರುವಂಥ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಲು ನಮಗೆ ಸಾಧ್ಯವಾಗಿಲ್ಲ. ಮಾನ್ಯ ವಿತ್ತ ಮಂತ್ರಿಗಳಿಗೆ ನಾನು ಕೇಳಬೇಕೆಂದಿರುವ ಪ್ರಶ್ನೆ ಇದು. ಹೆಚ್ಚು ಆಹಾರ ಬೆಳೆಯುವ ಮೂಲಕ ಬೆಲೆಗಳನ್ನು ಇಳಿಸುವುದು ಅವರ ಉದ್ದೇಶವಾಗಿದ್ದರೆ, ಮತ್ತು ಆ ಉದ್ದೇಶವು ವಿಫಲವಾದರೆ ಅವರು ಮುಂದೆಯೂ ಇದೇರೀತಿ ಗ್ರಾಹಕನಿಗೆ ದಂಡ ವಿಧಿಸುವುದನ್ನು ಮುಂದುವರಿಸುತ್ತ ಅವನಿಗೆ ಯಾವುದೇ ಸಹಾಯಧನ ನೀಡುವುದಿಲ್ಲವೆ ಅಥವಾ ಅವನು ಅನುಭವಿಸುತ್ತಿರುವ ದುಸ್ತರ ಪರಿಸ್ಥಿತಿಯಿಂದ ಪಾರುಮಾಡಲು ಯಾವುದೇ ಬಗೆಯ ಪರಿಹಾರ ನೀಡುವರೇ ಇದು ವಿಷಯ. ಈಗ ನಾವಿರುವಂಥ ಪರಿಸ್ಥಿತಿಯಲ್ಲಿ ಈ ದೇಶದಲ್ಲಿ ಯಾವುದಾದರೊಂದು ಬಗೆಯ ಸಹಾಯಧನ ಅವಶ್ಯವಿದೆಯೆಂಬುದರ ಬಗ್ಗೆ ವಿವಾದವಿಲ್ಲ. ಒಟ್ಟಾರೆ ಪ್ರಶ್ನೆ ಹೀಗಿದೆ : ಉತ್ಪಾದಕನಿಗೆ ಅಥವಾ ಗ್ರಾಹಕನಿಗೆ ಯಾವ ಹಂತದಲ್ಲಿ ಜೀವಸತ್ತ್ವವನ್ನು ಒದಗಿಸಬೇಕು ಅಥವಾ ಸಹಾಯಧನ ನೀಡಬೇಕು? ಮಾನ್ಯ ವಿತ್ತಮಂತ್ರಿಯವರು ಆಲೋಚಿಸುತ್ತಿರುವ ವಿಷಯದ ಬಗ್ಗೆ ಎಂದರೆ ಸಹಾಯಧನವನ್ನು ಗ್ರಾಹಕನಿಗಿಂತ ಉತ್ಪಾದಕನಿಗೆ ನೀಡುವ ಮೂಲಕ ನಾವು ಎದುರಿಸುತ್ತಿರುವ ಸದ್ಯದ ಸಮಸ್ಯೆ ಪರಿಹಾರವಾದೀತೆಂಬುದರ ಬಗ್ಗೆ ಪುನರಾವಲೋಕನ ನಡೆಸಬೇಕೆಂಬ ಆಶಾಭಾವನೆಯಿಂದ ಈ ಬಗ್ಗೆ ವಿಶ್ಲೇಷಿಸುತ್ತಿದ್ದೇನೆ. ಅವರು ಯಶಸ್ವಿಯಾಗಬಹುದು. ನಮಗೆ ತಿಳಿದಂತೆ ಮೂಲತಃ ನಾನೂ ಸದಸ್ಯನಾಗಿದ್ದ ನಮ್ಮ ಸರ್ಕಾರವು ೧೯೫೨ನೇ ವರ್ಷದೊಳಗೆ ನಾನು ಸ್ವಯಂ ಸಮೃದ್ಧಿ ಸಾಧಿಸಬೇಕೆಂದು ಘೋಷಿಸಿತ್ತು. ನಮ್ಮ ಪ್ರಧಾನಮಂತ್ರಿಯವರು ಪ್ರತಿದಿನವೂ ೧೯೫೨ರ ನಂತರ ನಾವು ಹೊರಗಿನಿಂದ ಒಂದೇ ಒಂದು ಕಾಳು ಆಹಾರಧಾನ್ಯ ಆಮದು ಮಾಡಿಕೊಳ್ಳತಕ್ಕದ್ದಲ್ಲವೆಂದು ಒತ್ತಾಸೆ ನೀಡುತ್ತಿದ್ದರು. ಇಂದು, ೧೯೫೨ರಲ್ಲಿ ಸ್ವಯಂ ಸಮೃದ್ಧಿಯನ್ನು ಸಾಧಿಸುವುದು ಕೇವಲ ಹಗಲುಕನಸಾಗಿತ್ತು ಎಂಬುದು ಭಾರತ ಸರ್ಕಾರಕ್ಕೆ ಅರಿವಾಗಿದೆಯೆಂದು ಭಾವಿಸುವುದಾಗಿ ಹೇಳಬಯಸುತ್ತೇನೆ. ನಾವು ಅದನ್ನು ೧೯೫೬ನೇ ವರ್ಷದ ವೇಳೆಗೆ ಸಾಧಿಸುತ್ತೇವೆಂದು ಅವರು ಹೇಳಿಕೊಳ್ಳುತ್ತಿದ್ದಾರೆ. ಅದು ದೇವರಿಗೇ ಗೊತ್ತು. ಗುರಿ ಇನ್ನೂ ಕುಗ್ಗುತ್ತಲೇ ಇದೆ. ಹಿಂದು ಹಿಂದಕ್ಕೇ ಹೋಗುತ್ತಿದೆ. ಈ ದೇಶದಲ್ಲಿ ಗ್ರಾಹಕರು ಇನ್ನೂ ಎಷ್ಟು ವರ್ಷಗಳ ಕಾಲ ಈ ಯಾತನೆಯನ್ನು ಅನುಭವಿಸಬೇಕಾಗುವುದೋ ಹಾಗೂ ವಿತ್ತ ಮಂತ್ರಿ ಮತ್ತು ಆಹಾರ ಮಂತ್ರಿಗಳು ಈ ವಿಷಯವನ್ನು ಇನ್ನಷ್ಟು ವಿಳಂಬಗೊಳಿಸಿ ತಮ್ಮ ಮನಸ್ಸಿನಲ್ಲಿರುವ ವಿವಿಧ ಪ್ರಸ್ತಾಪ ಹಾಗೂ ವಿವಿಧ ಯೋಜನೆಗಳನ್ನು ಪ್ರಯೋಗಾಲಯದಲ್ಲಿ ವಿಶ್ಲೇಷಿಸುವಂತೆ ಪ್ರಯೋಗಕ್ಕಿಳಿಸಿ ನೋಡುತ್ತಾರೋ ನಮಗೆ ತಿಳಿಯದು. ಈ ವಿಷಯವನ್ನು ಇನ್ನಷ್ಟು ಎಳೆಯಲು ನನಗೆ ಇಷ್ಟವಾಗುತ್ತಿಲ್ಲ.

ಸ್ವಾಮಿ, ನಾನು ಸಾಮಾನ್ಯ ಬಜೆಟ್ ಬಗ್ಗೆ ಒಟ್ಟಾರೆಯಾಗಿ ಕೆಲವು ಮಾತುಗಳನ್ನಾಡಬಯಸುತ್ತೇನೆ. ಪ್ರತಿಯೊಂದು ದೇಶದಲ್ಲೂ ಬಜೆಟ್ ಎಂದರೆ ಸರ್ಕಾರವು ಅದರ ಜನರಿಗಾಗಿ ನಿರ್ವಹಿಸಲು ಬದ್ಧವಾಗುವ ಪ್ರಕಾರ್ಯಗಳ ಅಭಿವ್ಯಕ್ತಿ ಎಂಬುವುದು ನಿಸ್ಸಂಶಯ. ಈ ದೇಶದಲ್ಲಿ ಬ್ರಿಟಿಷ್ ಸರ್ಕಾರವು ತೆರಿಗೆ ಸಂಗ್ರಹಣೆ ಮಾಡಿ ಕಾನೂನು ಸುವ್ಯವಸ್ಥೆಯನ್ನು ಪಾಲಿಸುತ್ತಿದ್ದ ಕಾಲವೊಂದಿತ್ತು. ಜನರ ಕಲ್ಯಾಣ, ಜನರ ಉತ್ತಮ ಜೀವನ, ಅವರ ಶಿಕ್ಷಣಾಭಿವೃದ್ಧಿ, ಸಾರ್ವಜನಿಕ ಆರೋಗ್ಯ, ನಿರುದ್ಯೋಗ ಅಥವಾ ಅಂಥ ಪರಿಹಾರಕ್ರಮ ಅಥವಾ ಪರಿಹಾರ ಮುಂತಾದುವುಗಳ ಬಗ್ಗೆ ಹಲವಾರು ಯುರೋಪಿಯನ್ ದೇಶಗಳ ಬಜೆಟ್‌ಗಳಲ್ಲಿ ದೊಡ್ಡ ಪ್ರಮಾಣಗಳಲ್ಲಿ ಸೇರಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ ಅವಾವುವೂ ಹಿಂದೆ ಸೇರಿರುತ್ತಿರಲಿಲ್ಲ.

ಸರ್ಕಾರದಲ್ಲಿ ಅವುಗಳಿಗೆ ಸ್ಥಾನವಿರಲಿಲ್ಲ, ಮಾತ್ರವಲ್ಲ ಸರ್ಕಾರ ತಾನಾಗಿಯೇ ಆ ಬಗ್ಗೆ ಯಾವುದೇ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಈ ದೇಶ ಸ್ವತಂತ್ರವಾದಾಗ ಆ ವಿಷಯ ಎಂದರೆ ಸರ್ಕಾರ ಕೇವಲ ತೆರಿಗೆ ವಸೂಲಿ ಮಾಡುವ ಏಜೆನ್ಸಿಯಾಗದು, ಅಪರಾಧ ಮಾಡಿದ ಜನರನ್ನು ಶಿಕ್ಷಿಸುವ ಮ್ಯಾಜಿಸ್ಟ್ರೇಟ್ ಆಗದು, ಸರ್ಕಾರ ಇನ್ನೂ ಹೆಚ್ಚಿನದೇನನ್ನೋ ಮಾಡುತ್ತದೆ. ಅಷ್ಟೇ ಅಲ್ಲ ೨೦ನೇ ಶತಮಾನದಲ್ಲಿ ಎಲ್ಲ ನಾಗರಿಕ ಸರ್ಕಾರಗಳು ಮಾಡಲು ಉದ್ದೇಶಿಸಿದ್ದಂಥ ಪ್ರಕಾರ್ಯಗಳನ್ನು ನಮ್ಮ ಸರ್ಕಾರವೂ ಮಾಡುತ್ತದೆಂಬ ಆಶಾಭಾವನೆ ಹೊಂದಿದ್ದೆವು. ಸ್ವಾಮಿ, ಈ ಸದನದಲ್ಲಿ ವಿತ್ತಮಂತ್ರಿಗಳಿಂದ ಮಂಡಿಸಲಾದ ಬಜೆಟಿನಲ್ಲಿ ಎಲ್ಲ ಆಧುನಿಕ ನಾಗರಿಕ ರಾಷ್ಟ್ರಗಳು ಮತ್ತು ರಾಜ್ಯಗಳು ಮಾಡಲು ಉದ್ದೇಶಿಸಿರುವ ಯಾವುದೇ ಇತರ ಕಾರ್ಯಗಳ ಕೇವಲ ಸುಳಿವಾದರೂ ಇದೆಯೆಂದು ಗುರುತಿಸಿದ್ದೀರಾ? ನನಗಂತೂ ಯಾವುದೂ ಕಂಡುಬರುತ್ತಿಲ್ಲ. ನಾವು ಗತ ಬ್ರಿಟಿಷ್ ಇತಿಹಾಸವನ್ನು ಎಂದರೆ ತೆರಿಗೆ ವಸೂಲಿ ಮತ್ತು ತಪ್ಪಿತಸ್ಥರನ್ನು ಶಿಕ್ಷಿಸುವ ಪದ್ಧತಿಯನ್ನೇ ಈಗಲೂ ಮಾಡುತ್ತಿದ್ದೇವೆ. ಪ್ರಪಂಚದ ಇತರ ರಾಷ್ಟ್ರಗಳಲ್ಲಿ ಬಡವರಿಗೆ ಮತ್ತು ಕೆಳವರ್ಗದ ಜನರಿಗೆ ನೀಡಿರುವ ಎಲ್ಲ ಸಾಮಾಜಿಕ ಪ್ರಯೋಜನಗಳ ಬಗ್ಗೆ ನಮ್ಮಲ್ಲಿ ಯಾವುದೇ ಉಪಬಂಧ ಕಲ್ಪಿಸಲಾಗಿಲ್ಲ. ನಾನು ಮಾನ್ಯ ವಿತ್ತ ಮಂತ್ರಿಯವರಿಗೆ ಹೀಗೆ ಪ್ರಶ್ನೆ ಕೇಳುತ್ತೇನೆ "ಅವರು ಆಹಾರ ಸಹಾಯಧನದ ಬಗ್ಗೆ ಆಶ್ವಾಸನೆ ನೀಡುತ್ತಿರುವ ಸಂದರ್ಭದಲ್ಲಿ ೧೯೫೨ರ ವೇಳೆಗೆ ನಾವು ಆಹಾರ ವಿಷಯದಲ್ಲಿ ಸ್ವಾವಲಂಬಿಗಳಾಗುತ್ತೇವೆ ಎಂದು ಹೇಳಿದಂತೆ, ೧೯೫೨ರಲ್ಲಿ ಅಲ್ಲದಿದ್ದರೆ ೧೯೫೬ರ ವೇಳೆಗೆ, ಆಗದಿದ್ದರೆ ಮುಂಬರಲಿರುವ ೧೯೬೦ರ ವೇಳೆಗೆ ಹಾಗೆ ಆಗುವುದೆಂಬ ಬಗ್ಗೆ ಭರವಸೆ ನೀಡಬಲ್ಲರೆ"? ಹೌದು, ಹೊಸ ಯುಗವು ಪ್ರಾರಂಭವಾಗುವ ಬಗ್ಗೆ ನಿಗದಿತ ದಿನಾಂಕ ನೀಡಿದರೆ ಆಶ್ವಾಸನೆ ನೀಡಿರುವ ದಿನಾಂಕವೊಂದು ಇದೆಯೆಂಬ ಆಶಾಕಿರಣ ಮೂಡುತ್ತದೆ. ಸಾಮಾಜಿಕ ಸೇವೆಗಳಿಗೆ ಸಂಬಂಧಿಸಿದಂತೆ ವಿದೇಶಗಳು ಅನುಸರಿಸುತ್ತಿರುವ ಮಾರ್ಗದಲ್ಲಿ ನಾವು ಚಲಿಸಲು ಸಾಧ್ಯವೆಂದು ಅವರು ಹೇಳುವರೇ? ಇಲ್ಲ ಅವರು ಏನೂ ಹೇಳಿಲ್ಲ. ಇಡೀ – ಬಜೆಟಿನಲ್ಲಿ ಹೇಳಿರುವುದು – ಅದನ್ನು ಒಂದೇ ಶಬ್ದ ಪುಂಜದಲ್ಲಿ – ನನಗಿಂತ ಮುಂಚೆ ಮಾತನಾಡಿದ ಭಾಷಣಕರರು ಈಗಾಗಲೇ ಹೇಳಿರುವಂತೆ – ಈ ದೇಶದ ಅಭಿವೃದ್ಧಿಗೆ ಅವಶ್ಯವಾಗುವ ಹಣಕಾಸಿನ ಹೆಚ್ಚಿನಂಶವು ಸೇನೆಗಾಗಿ ವ್ಯಯವಾಗುತ್ತಿದೆಯೆಂಬ ಮುಖ್ಯಾಂಶವನ್ನು ಹೇಳಬೇಕಾಗುತ್ತದೆ. ೪೦೪ ಕೋಟಿ ರೂ. ಗಳಷ್ಟು ಒಟ್ಟಾರೆ ಬಜೆಟಿನಲ್ಲಿ ಸುಮಾರು ೨೦೦ ಕೋಟಿ ರೂ. ಗಳನ್ನು ಸೇನೆಗಾಗಿ ವ್ಯಯಿಸಲಾಗುತ್ತಿದೆ. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇ. ಸ್ವಾಮಿ, ಶಾಂತಿ ಪರಿಸ್ಥಿತಿಯುಂಟಾದಾಗ ಕಡಿಮೆ ಹಣ ವೆಚ್ಚ ಮಾಡುವ ಆದೇಶವನ್ನು ಹೊರಡಿಸಲಾಗಿತ್ತು. ಆಗಿನ ಬ್ರಿಟಿಷ್ ಸರ್ಕಾರವು ಭಾರತದ ಸೇನಾ ಸಂಖ್ಯೆಯನ್ನು ಕಡಿಮೆ ಮಾಡಲು ನಿರ್ಧರಿಸಿತ್ತು. ನಮಗೀಗ ಕಾಣುತ್ತಿರುವುದೇನು? ೧೯೪೭ನೇ ವರ್ಷದಲ್ಲಿ ಭಾರತ ಸರ್ಕಾರದ ರಾಜಸ್ವವು ಸುಮಾರು ೧೭೨ ಕೋಟಿ ರೂ.ಗಳಷ್ಟಿತ್ತು. ನಾನು ಆಗ ೧೯೪೭ರ ಆಗಸ್ಟ್ ತಿಂಗಳಿಂದ ೧೯೪೮ರ ಏಪ್ರಿಲ್ ತಿಂಗಳವರೆಗಿನ ಎಂಟು ತಿಂಗಳ ಅವಧಿಗಾಗಿ ಮಂಡಿಸಲಾದ ಬಜೆಟಿನ ಬಗ್ಗೆ ಮಾತನಾಡುತ್ತಿದ್ದೇನೆ. ಆಗ ಮಿಲಿಟರಿ ಬಜೆಟ್ ೯೦ ಕೋಟಿ ರೂ.ಗಳಷ್ಟಿತ್ತು. ಈಗ ನಮ್ಮ ರಾಜಸ್ವ ೪೦೪ ಕೋಟಿ ರೂ.ಗಳಷ್ಟು ಬೆಳೆದಿದೆ ಮತ್ತು ನಮ್ಮ ಮಿಲಿಟರಿ ವೆಚ್ಚವೂ ಕೂಡ ಸುಮಾರು ೨೦೦ ಕೋಟಿ ರೂ.ಗಳಷ್ಟು ಏರಿದೆ. ನಿಮ್ಮ ರಾಜಸ್ವದಲ್ಲಿ ಏರಿಕೆಯಾಗುತ್ತಿರುವಂತೆ ನಿಮ್ಮ ಮಿಲಿಟರಿ ವೆಚ್ಚಗಳೂ ಕೂಡ ಏರುತ್ತಿರುವುದು ಅಸಾಧಾರಣವಿಷಯವೇ ಸರಿ. ನನ್ನ ಅಭಿಪ್ರಾಯದಲ್ಲಿ ಇದು ವ್ಯತಿರಿಕ್ತ ಪ್ರಕ್ರಿಯೆಯಾಗಬೇಕು ಎಂದರೆ ನಿಮ್ಮ ಮಿಲಿಟರಿ ವೆಚ್ಚ ಕಡಿಮೆಯಾಗಲೇಬೇಕು. ಮಿಲಿಟರಿ ವೆಚ್ಚದಲ್ಲಿ ಸಾಧಾರಣ ವೆಚ್ಚವಾದ ೫೦ ಕೋಟಿ ರೂ.ಗಳಷ್ಟು ಕಡಿಮೆ ಮಾಡಿದರೆ ನಮ್ಮ ಜನರಿಗೆ ಎಷ್ಟು

ಒಳ್ಳೆಯದು ಮಾಡಬಹುದು ಗೊತ್ತೇ? ಸೇನಾ ವೆಚ್ಚದಲ್ಲಿ ಕಡಿಮೆ ಮಾಡಲಾದ ೫೦ ಕೋಟಿ ರೂ.ಗಳನ್ನು ನದೀ ಕಣಿವೆ ಯೋಜನೆಗಳಲ್ಲಿ ತೊಡಗಿಸಬಹುದು. ನಮ್ಮ ದಾಮೋದರ್ ಕಣಿವೆ ಯೋಜನೆಗಾಗಿ ಪರದೇಶಗಳ ನೆರವನ್ನು ಕೋರುವುದಕ್ಕೆ ಬದಲು ನಮ್ಮ ರಾಜಸ್ವ ಬಜೆಟಿನಿಂದಲೇ ಕೇವಲ ಮೂರು ವರ್ಷಗಳಲ್ಲಿ ಯೋಜನೆಯನ್ನೇ ಪೂರ್ಣಗೊಳಿಸಬಹುದು. ನಾನು ಮಿಲಿಟರಿ ಬಜೆಟಿನಿಂದ ೫೦ ಕೋಟಿ ರೂಪಾಯಿ ಮೊತ್ತವನ್ನು ತೆಗೆದು ನಮ್ಮ ಜನರ ಒಳಿತಿಗಾಗಿ ವೆಚ್ಚ ಮಾಡಿದರೆ ನಾವು ಒಂದು ದೊಡ್ಡ ಸಾಧನೆ ಮಾಡಿದಂತಾಗುವುದಲ್ಲವೆ? ಆದರೆ ಭಾರತ ಸರ್ಕಾರವು ನಿರಂತರವಾಗಿ, ನಿಯತವಾಗಿ ಮಿಲಿಟರಿ ಬಜೆಟನ್ನು ಏಕೆ ಏರಿಕೆ ಮಾಡುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ಸ್ವಾಮಿ, ಇನ್ನೊಂದು ದೃಷ್ಟಿಯಿಂದ ಕೂಡ ಇದೊಂದು ಅಸಾಮಾನ್ಯ ಅಂಶ. ನಮ್ಮ ವಿದೇಶೀ ನೀತಿಯು ಶಾಂತಿ ಮತ್ತು ಸ್ನೇಹನೀತಿಯೆಂಬುದಾಗಿ ನಮಗೆ ಹೇಳಲಾಗುತ್ತಿದೆ. ನನ್ನ ಸನ್ಮಿತ್ರ ದಿವಾನ್ ಚಮನ್ ಲಾಲ್‌ರು ಅದನ್ನು ನೆಹರೂ ಸಿದ್ಧಾಂತ ಎಂದು ಕರೆದಿದ್ದಾರೆ. ನೆಹರೂ ಸಿದ್ಧಾಂತದ ಉದ್ದೇಶ ಅದೇ ಆಗಿದ್ದರೆ ಅದೊಂದು ಸರ್ವಸಮ್ಮತ ಸಿದ್ಧಾಂತವಾಗುತ್ತದೆ. ಆದರೆ ಅದನ್ನು ಎಲ್ಲರೂ ಅನುಸರಿಸಬೇಕಷ್ಟೆ. ಈಗ, ದೇಶದ ವಿದೇಶೀ ನೀತಿಯ ಉದ್ದೇಶ ವಿಶ್ವಾದ್ಯಂತ ಸ್ನೇಹ ಮತ್ತು ಶಾಂತಿಯನ್ನು ಕಾಪಾಡುವುದಾಗಿದ್ದ ಪಕ್ಷದಲ್ಲಿ ೧೯೭ ಕೋಟಿ ರೂ.ಗಳಷ್ಟು ಭಾರಿಪ್ರಮಾಣದ ವೆಚ್ಚದಲ್ಲಿ ಈ ಬೃಹತ್ ಸೇನೆಯನ್ನು ಯಾರ ವಿರುದ್ಧ ಕಾಪಾಡಬೇಕಾಗಿದೆ ಮತ್ತು ನಮಗೆ ವೈರಿಗಳಿದ್ದಾರೆಂಬುದನ್ನು ನಾನು ತಿಳಿಯಬಯಸುತ್ತೇನೆ.

**ಶ್ರೀ ಜೆ.ಆರ್. ಕಪೂರ್ (ಉತ್ತರ ಪ್ರದೇಶ):** ನಮ್ಮ ನೆರೆಹೊರೆಯವರು.

**ಡಾ. ಬಿ.ಆರ್. ಅಂಬೇಡ್ಕರ್:** ನನಗೆ ಅದು ಗೊತ್ತಿಲ್ಲ. ಕೆಲವೊಂದು ವಿದೇಶಿ ರಾಷ್ಟ್ರಗಳೊಂದಿಗೆ ನಮ್ಮ ಸಂಬಂಧ ಅಷ್ಟೇನು ಹಿತಕರವಾಗಿಲ್ಲವೆಂಬ ಬಗ್ಗೆ ನಮಗೆ ತಿಳಿದಿದ್ದರೆ, ಹಾಗೂ ನಮ್ಮ ಸುರಕ್ಷತೆ ಹಾಗೂ ಭದ್ರತೆಗೆ ಯಾವುದೇ ಸಮಯದಲ್ಲಿ ಅಪಾಯವುಂಟಾಗಬಹುದಾಗಿದ್ದರೆ, ಅಪಾಯ ಬಂದೆರಗುವವರೆಗೂ ಕಾದುನೋಡದೆ ನಮ್ಮ ಸೇನೆಯನ್ನು ಸಿದ್ಧವಾಗಿರಿಸಿಕೊಳ್ಳಬೇಕು. ಇದರಿಂದ ತುರ್ತುಪರಿಸ್ಥಿತಿಯಲ್ಲಿ ನಾವು ಅಪಾಯವನ್ನು ಧೈರ್ಯದಿಂದ ಎದುರಿಸಲು ಸಾಧ್ಯವಾಗುತ್ತದೆಯೆಂಬುದನ್ನು ನಮ್ಮಲ್ಲಿ ಬಹುಮಂದಿ ಒಪ್ಪಿಕೊಳ್ಳುತ್ತೇವೆ. ಆದರೆ ಈ ಪ್ರಪಂಚದಲ್ಲಿ ನಮಗೆ ವೈರಿಗಳೇ ಇಲ್ಲವೆಂದು ಹೇಳಲಾಗಿದೆ. ಹಾಗಿದ್ದರೆ ಏಕೆ ಈ ಸೈನ್ಯವನ್ನು ಹೊಂದಲಾಗಿದೆ, ನನಗೆ ನಿಜವಾಗಿಯೂ ಗೊತ್ತಿಲ್ಲ. ಎರಡನೆಯದಾಗಿ, ಇರಬಹುದಾದ ಏಕೈಕ ವೈರಿಯೆಂದರೆ, ಆ ಪದವನ್ನು ಬಳಸಬಹುದಾದರೆ ಪ್ರಾಯಶಃ ಅದು ಪಾಕಿಸ್ತಾನ. ಅದೂ ಕೂಡ ಕೇವಲ ಕಾಶ್ಮೀರಕ್ಕೆ ಸಂಬಂಧಿಸಿದಂತೆ ಮಾತ್ರ. ಈಗ ಕಾಶ್ಮೀರಕ್ಕೆ ಸಂಬಂಧಪಟ್ಟಂತೆ ಈ ಸದನಕ್ಕೆ ಆ ಪ್ರಶ್ನೆಯ ಬಗ್ಗೆ ಚರ್ಚಿಸಲು ಸಂಪೂರ್ಣ ಅವಕಾಶವಿದೆ. ಆ ಬಗ್ಗೆ ಏನಾದರೂ ಹೇಳಲು ನನಗೆ ಸಮಯವಿಲ್ಲ ಅಥವಾ ಕಾಶ್ಮೀರದಂಥ ಕಠಿಣ ಸಮಸ್ಯೆಯ ಬಗ್ಗೆ ಕೇವಲ ಸ್ವಲ್ಪಹೊತ್ತು ಮಾತ್ರ ನೀಡುವುದು ಯುಕ್ತವಲ್ಲವೆಂದು ನಾನು ಭಾವಿಸುತ್ತೇನೆ. ಆದರೆ ನಿಶ್ಚಯವಾಗಿಯೂ ಈ ವಿಷಯವು ಇದೀಗ ವಿಶ್ವಸಂಸ್ಥೆಯ ಪರಿವಿಡಿಯಲ್ಲಿದೆ. ಹೀಗಾಗಿ ವಿಶ್ವಸಂಸ್ಥೆಯು ಈ ವಿಷಯದ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿರುವ ಹೊತ್ತಿನಲ್ಲಿ ಈ ದೇಶವನ್ನು ಆಕ್ರಮಿಸುವುದು ಪಾಕಿಸ್ತಾನವು ಕಾಶ್ಮೀರವನ್ನು ಆಕ್ರಮಣ ಮಾಡುವಷ್ಟು ಮೂರ್ಖವಲ್ಲವೆಂದು ನಾನು ಭಾವಿಸಿದ್ದೇನೆ. ಆದ್ದರಿಂದ, ನೀವೇಕೆ ಸೇನೆಯನ್ನು ಪೋಷಿಸುತ್ತಿದ್ದೀರಿ? ಈ ಬಗ್ಗೆ ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ.

ಅನಂತರ, ಸ್ವಾಮಿ ನಮಗೆ ಸಂಬಂಧಿಸಿದಂತೆ, ಕಾಶ್ಮೀರ ಸಮಸ್ಯೆಯನ್ನು ನಾವು ಎಷ್ಟು ಶೀಘ್ರವಾಗಿ ಪರಿಹರಿಸಿಕೊಳ್ಳುವೆವೋ ಅಷ್ಟೂ ಒಳ್ಳೆಯದು, ಏಕೆಂದರೆ ನಮ್ಮ ರಕ್ಷಣಾ ಬಜೆಟಿನಲ್ಲಿ ಇಷ್ಟೊಂದು ಬೃಹತ್

ಮೊತ್ತದ ಏರಿಕೆಯನ್ನು ನಾವು ಸಮರ್ಥಿಸಿಕೊಂಡು ಅದನ್ನು ಕಾಶ್ಮೀರ ಪ್ರಶ್ನೆಯ ಸಮಜಾಯಿಸಿ ನೀಡಿದರೆ, ಆ ವಿವಾದವನ್ನು ಕೊನೆಗೊಳಿಸಲು ಸಕಾರಾತ್ಮಕವಾಗಿ ಏನಾದರೂ ಮಾಡಬೇಕಾದ ಕರ್ತವ್ಯ ನಮಗಿಲ್ಲವೇ? ಈ ವಿಷಯದ ಬಗ್ಗೆ ನಾನು ವಿವರವಾಗಿ ಹೇಳಲಾರೆನಾದರೂ ಕಾಶ್ಮೀರ ವಿವಾದವನ್ನು ಬಗೆಹರಿಸುವ ಸಂಬಂಧದಲ್ಲಿ ನಡೆಸಲಾದ ಮಾತುಕತೆಗಳಲ್ಲಿ ಭಾರತ ಸರ್ಕಾರವು ವಹಿಸಿರುವ ಪಾತ್ರದ ಬಗ್ಗೆ ಕೆಲವಿಷಯಗಳನ್ನು ತಿಳಿದಿದ್ದೇನೆ, ಈ ಪ್ರಶ್ನೆಯನ್ನು ನಿರ್ಧಾರ ಮಾಡುವಲ್ಲಿ ಭಾರತ ಸರ್ಕಾರದ ಪರವಾಗಿ ಸಕಾರಾತ್ಮಕ ಎಂದು ವಿವರಿಸಬಹುದಾದ ಹಾಗೂ ನಕಾರಾತ್ಮಕ ಸೂಚನೆಯಲ್ಲ ಎನ್ನುವಂತಹ ಯಾವುದೇ ಒಂದು ಪದವನ್ನು ಬಳಸಿರುವುದನ್ನು ಕೂಡ ನಾನು ಓದಿಲ್ಲ. ಅವರು ಕೇವಲ ಮಿಲಿಟರಿ ಹಣ ಹಂಚಿಕೆಯ ಪ್ರಶ್ನೆಯ ಬಗ್ಗೆ ಮಾತ್ರವೇ ವ್ಯವಹರಿಸುತ್ತಿದ್ದಾರೆ. ಪ್ರಪಂಚದ ಇತಿಹಾಸದಲ್ಲಿ ಜನಾಭಿಪ್ರಾಯ ಕೇಳುವ ವಿಷಯ ಹೊಸದೇನಲ್ಲ. ಜನಾಭಿಪ್ರಾಯ ಕೋರುವ ಮೂಲಕ ಈ ಬಗೆಯ ವಿವಾದಗಳನ್ನು ಇತ್ಯರ್ಥಪಡಿಸುವ ಬಗೆಗಿನ ಪೂರ್ವನಿದರ್ಶನಗಳನ್ನು ಹುಡುಕಲು ಗತಕಾಲಕ್ಕೆ ಹೋಗಬೇಕಾದ ಆವಶ್ಯಕತೆಯೇನಿಲ್ಲ. ನನಗೆ ಚೆನ್ನಾಗಿ ನೆನಪಿರುವಂತೆ ಮೊದಲನೇ ಮಹಾಯುದ್ಧದ ನಂತರ ಜನಾಭಿಪ್ರಾಯದ ಮೂಲಕ ನಿರ್ಧರಿಸಬೇಕಾಗಿದ್ದ ಎರಡು ಪ್ರಶ್ನೆಗಳಿದ್ದವು, ಒಂದು, ಅಪ್ಪರ್ ಸೈಲೇಷಿಯ ಸಮಸ್ಯೆ ಹಾಗೂ ಮತ್ತೊಂದು ಆಲ್‌ಸೆಸೆ–ಲೊರೇನ್, ಇವೆರಡೂ ವಿವಾದಗಳನ್ನು ಜನಾಭಿಪ್ರಾಯದ ಮೂಲಕವೇ ನಿರ್ಧರಿಸಲಾಗಿತ್ತು ಮತ್ತು ನನ್ನ ಸನ್ಮಿತ್ರರಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಪ್ರೌಢ ಬುದ್ಧಿಮತ್ತೆ ಹಾಗೂ ವಿಚಕ್ಷಣೆಯಿಂದ ಕೂಡಿದ್ದು ಅವರಿಗೆ ಪ್ರಾಯಶಃ ಈ ವಿಷಯ ಚೆನ್ನಾಗಿ ತಿಳಿದೆಯೆಂದುಕೊಂಡಿದ್ದೇನೆ. ಅಪ್ಪರ್ ಸೈಲೇಷಿಯ ಮತ್ತು ಆಲ್‌ಸೆಸೆ–ಲೊರೇನ್‌ಗಳಿಗೆ ಸಂಬಂಧಪಟ್ಟಂತೆ ಸಂಯುಕ್ತ ರಾಷ್ಟ್ರಸಂಸ್ಥೆಯು ಜನಾಭಿಪ್ರಾಯ ಕೋರುವ ಕ್ರಮ ತೆಗೆದುಕೊಂಡ ರೀತಿಯಲ್ಲಿ ಕಾಶ್ಮೀರ ವಿವಾದದ ಬಗ್ಗೆಯೂ ವ್ಯವಹರಿಸಲು ಸಾಧ್ಯವಾಗುವುದು ಮಾತ್ರವಲ್ಲ ಅದೇ ರೀತಿ ವಿಷಯವನ್ನು ಶೀಘ್ರವಾಗಿ ಇತ್ಯರ್ಥಪಡಿಸಬಹುದು ಮತ್ತು ಇದರಿಂದ ರಕ್ಷಣಾ ಬಜೆಟಿನಿಂದ ೫೦ ಕೋಟಿ ರೂ.ಗಳನ್ನು ಪಡೆದು ಅದನ್ನು ನಮ್ಮ ಜನರ ಪ್ರಯೋಜನಕ್ಕಾಗಿ ಬಳಸಲು ಸಾಧ್ಯವಾಗುತ್ತದೆ ಎಂಬುದು ಕಾರ್ಯಸಾಧುವಲ್ಲವೆ?

ಈ ಬಗ್ಗೆ ನಾನು ಹೆಚ್ಚೇನನ್ನೂ ಹೇಳಬಯಸುವುದಿಲ್ಲವಾದರೂ ಈ ದೇಶದ ಅಭಿವೃದ್ಧಿಪಥದಲ್ಲಿ ರಕ್ಷಣಾ ಬಜೆಟ್ ಅತ್ಯಂತ ದೊಡ್ಡ ತಡೆಯೆಂಬುದಾಗಿ ನಮ್ಮಲ್ಲಿ ಬಹಳಷ್ಟು ಜನ ಭಾವಿಸಿದ್ದೇವೆ.

ವಿತ್ತ ಮಂತ್ರಿಯವರ ಗಮನ ಸೆಳೆಯುವ ಮತ್ತೊಂದು ವಿಷಯವನ್ನು ನಾನು ತಿಳಿಸಬಯಸುತ್ತೇನೆ. ಅವರು ಈಗಾಗಲೇ ಮುಂದಿನ ತೆರಿಗೆ ನಿರ್ಧಾರಣೆಗೆ ಸಂಬಂಧಪಟ್ಟಂತೆ ಅಷ್ಟೇನು ಹಿತಕಾರಿಯಾಗಿಲ್ಲವೆಂಬ ಅಂಶವನ್ನು ತಮ್ಮ ಬಜೆಟ್ ಭಾಷಣದಲ್ಲಿ ಸೂಚಿಸಿದ್ದಾರೆ. ನಮ್ಮ ವರಮಾನ ತೆರಿಗೆ ರಾಜಸ್ವ ಹಂತವು ಕಳೆದೆರಡು ವರ್ಷಗಳಲ್ಲಿದ್ದ ಹಂತದಲ್ಲೇ ಉಳಿಯಲಾರದೆಂದು ಅವರೇ ಒಪ್ಪಿಕೊಂಡಿದ್ದಾರೆ. ದೇಶದ ಪ್ರಸ್ತುತ ರಾಜಸ್ವ ಬೃಹತ್ ಪ್ರಮಾಣವಾಗುವ ರಫ್ತು ಶುಲ್ಕವನ್ನು ನಮ್ಮ ದೇಶದ ರಾಜಸ್ವ ವ್ಯವಸ್ಥೆಯ ಶಾಶ್ವತ ಭಾಗವೆಂದು ಪರಿಗಣಿಸಲು ಸಾಧ್ಯವಿಲ್ಲವೆಂಬುದು ಅವರಿಗೆ ಚೆನ್ನಾಗಿ ತಿಳಿದಿದೆ. ರಫ್ತು ಶುಲ್ಕಗಳು ಎಲ್ಲಾ ದೇಶಗಳಲ್ಲಿಯೂ ಒಂದು ಬಗೆಯ ಅಸಾಮಾನ್ಯ ರೀತಿಯದ್ದೂ, ಅಸಾಧಾರಣ ಸ್ವರೂಪದ್ದೂ ಆಗಿದ್ದು ಒಂದು ದೇಶದ ತೆರಿಗೆ ವ್ಯವಸ್ಥೆಯ ಸಹಜ ಭಾಗವೆಂದು ಭಾವಿಸಲಾಗುವುದಿಲ್ಲ ಮಾತ್ರವಲ್ಲ, ಅದು ಅನ್ಯ ದೇಶಗಳ ಮೇಲೆ ಅವಲಂಬಿತವಾಗಿರುತ್ತದೆ. ಆ ಪರಿಸ್ಥಿತಿಗಳಲ್ಲಿ ವ್ಯತ್ಯಾಸವಾದ ಕೂಡಲೇ ನೀವು ತೆರಿಗೆಯಲ್ಲೂ ವ್ಯತ್ಯಾಸ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ, ಅಂಥ ಸುಂಕಗಳನ್ನು ಒಂದೊಮ್ಮೆ ನಿಲ್ಲಿಸಿಬಿಡಬೇಕಾಗುವಂಥ ಪರಿಸ್ಥಿತಿ ಕೂಡ ಉಂಟಾಗಬಹುದು. ರಾಜಸ್ವ ಕೊರತೆಯಿಂದಾಗಬಹುದಾದ ಪರಿಣಾಮಗಳ ಬಗೆಗಿನ

ನನ್ನ ಆತಂಕ ಹೀಗಿದೆ. ರಾಜಸ್ವ ವಿಭಾಗದಲ್ಲಿ ಕೆಲವೊಂದು ಬಾಬುಗಳ ಕಡಿತದಿಂದ ಉದ್ಭವಿಸಬಹುದಾದ ನಷ್ಟಗಳನ್ನು ನಮ್ಮ ವಿತ್ತ ಮಂತ್ರಿ ಹೇಗೆ ತುಂಬಬಲ್ಲರು? ಅವರು ರಕ್ಷಣಾ ಇಲಾಖೆಯ ಬಜೆಟ್‌ನಲ್ಲಿ ಕಡಿತ ಮಾಡುವರೇ? ಅಥವಾ ಜನರ ಸಾಮಾಜಿಕ ಕಲ್ಯಾಣಕ್ಕಾಗಿ ಹಣವೊದಗಿಸುತ್ತಿರುವ ಇತರ ಇಲಾಖೆಗಳ ಬಜೆಟ್ ಅನ್ನು ಕಡಿತ ಮಾಡುವರೇ? ನನಗೆ ತಿಳಿಯದು. ಸಶಸ್ತ್ರ ದಳಗಳನ್ನು ಉಳಿಸಿಕೊಳ್ಳಲು ಮಾಡುತ್ತಿರುವ ಪ್ರಸ್ತುತ ವೆಚ್ಚದ ಮಟ್ಟಗಳನ್ನು ಮುಂದುವರಿಸಿದರೆ ಜನರ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ನಮ್ಮ ಪರಿಸ್ಥಿತಿಗಳು ಗಣನೀಯವಾಗಿ ಕುಂಠಿತವಾಗುತ್ತವೆ. ಮಾನ್ಯ ವಿತ್ತ ಮಂತ್ರಿಗಳು ಈ ಸಂಗತಿಯನ್ನು ಗಮನಿಸಬೇಕೆಂದು ನಾನು ಹೇಳುತ್ತೇನೆ ಮತ್ತು ಅಂಥದೊಂದು ಸನ್ನಿವೇಶ ವಾಸ್ತವವಾಗಿಯೂ ಎದುರಾದಲ್ಲಿ ಅವರು ಏನು ಮಾಡುತ್ತಿರೆಂಬುದನ್ನು ನಮಗೆ ತಿಳಿಸಬೇಕು.

◆

# ೪೬

# *ಆಂಧ್ರ ರಾಜ್ಯ ವಿಧೇಯಕ, ೧೯೫೩

**ಮಾನ್ಯ ಸಭಾಧ್ಯಕ್ಷರು:** ಪ್ರಸ್ತಾವ ಮಂಡಿಸಲಾಗಿದೆ.

> "ಲೋಕಸಭೆಯಿಂದ ಅನುಮೋದಿತವಾಗಿರುವಂತೆ, ಆಂಧ್ರ ಪ್ರದೇಶ ರಾಜ್ಯದ ರಚನೆ, ಮೈಸೂರು ರಾಜ್ಯದ ಪ್ರದೇಶಗಳನ್ನು ಹೆಚ್ಚಿಸುವುದು ಮತ್ತು ಮದ್ರಾಸ್ ರಾಜ್ಯದ ಪ್ರದೇಶವನ್ನು ಕಡಿಮೆ ಮಾಡುವುದು, ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು".

**ಡಾ. ಬಿ.ಆರ್. ಅಂಬೇಡ್ಕರ್ (ಬಾಂಬೆ):** ಮಾನ್ಯ ಸಭಾಧ್ಯಕ್ಷರೇ, ಈ ವಿಧೇಯಕದಲ್ಲಿ ಆಂಧ್ರರಿಗಾಗಿ ಹೊಸ ರಾಜ್ಯವನ್ನು ಸೃಜಿಸುವ ಉದ್ದೇಶ ಹೊಂದಲಾಗಿದೆ. ಈಗ ಇರುವಂತೆ ಇದು ಆಂಧ್ರ ಜನರ ವಸ್ತು ವಿಷಯವೂ ಹೌದು. ಆಂಧ್ರದವರಲ್ಲದ ಇತರರು ಸಾಮಾನ್ಯ ರೀತಿಯಲ್ಲಿ ಈ ಚರ್ಚೆಯಲ್ಲಿ ಭಾಗವಹಿಸಬಹುದು ಮತ್ತು ವೈಯಕ್ತಿಕವಾಗಿ, ಏಕೆಂದರೆ ಈ ಹೊಸ ಪ್ರಾಂತ್ಯವು ಇನ್ನು ಮುಂದೆ ಅಸ್ತಿತ್ವಕ್ಕೆ ಬರಬಹುದಾದ ಇತರ ಸಂಭವನೀಯ ಭಾಷಾವಾರು ಪ್ರಾಂತ್ಯಗಳ ಮುನ್ಸೂಚನೆಯೂ ಆಗಿರಬಹುದು. ಈ ಎರಡನೆಯ ರೀತಿಯ ಆಲೋಚನೆ ಬಂದುದರಿಂದಲೇ ನಾನು ಇಂದು ಕೆಲವು ಮಾತುಗಳನ್ನಾಡಲು ಎದ್ದು ನಿಂತಿದ್ದೇನೆ.

ಸ್ವಾಮಿ, ವಿಧೇಯಕವನ್ನು ಯಾರೇ ಆದರೂ ಓದಿದಾಗ, ಇಂಥದೊಂದು ವಿಧೇಯಕವನ್ನು ಸದನದ ಮುಂದೆ ಮಂಡಿಸಿದ್ದಕ್ಕಾಗಿ ಸರ್ಕಾರವನ್ನು ಅಭಿನಂದಿಸಬೇಕೆ ಅಥವಾ ಪ್ರತ್ಯೇಕ ಪ್ರಾಂತಕ್ಕಾಗಿ ಹಪಹಪಿಸುತ್ತಿದ್ದ ಆಂಧ್ರರನ್ನು ಅಭಿನಂದಿಸಬೇಕೆ ಎಂದು ಬಹಳ ತಬ್ಬಿಬ್ಬಾಗಬಹುದು. ಈ ಸದನದಲ್ಲಿರುವ ಯಾರಿಗೇ ಆಗಲಿ ತಿಳಿದಿರುವಂತೆ ಕಾಂಗ್ರೆಸ್ ಪಕ್ಷವು ಸಂಘಟಿತವಾದ, ಕೂಡಲೇ ಹಾಗೂ ೧೯೨೧ರಲ್ಲಿ ಸಂವಿಧಾನವನ್ನು ರಚಿಸಿಕೊಂಡಾಗ ಅದು ಮಾಡಿದ ಮೊಟ್ಟ ಮೊದಲ ಕಾರ್ಯವೆಂದರೆ ಭಾಷಾವಾರು ಪ್ರಾಂತ್ಯಗಳ ತತ್ವವನ್ನು ಸೇರಿಸಿದ್ದು. ೧೯೨೧ರಿಂದ ೧೯೪೮ರ ವರೆಗೆ ಅಥವಾ ಆ ನಂತರ ಕಾಂಗ್ರೆಸ್ ಆ ತತ್ವವನ್ನು ಹಿಂತೆಗೆದುಕೊಂಡಿದ್ದಾಗಲಿ, ತನ್ನ ಸಂವಿಧಾನದಲ್ಲಿ ಅದನ್ನು ಸೇರಿಸಿದ್ದಕ್ಕಾಗಿ ವಿಷಾದ ವ್ಯಕ್ತಪಡಿಸಿದ ಬಗ್ಗೆಯಾಗಲಿ ನನಗೆ ತಿಳಿದಿಲ್ಲ. ನನಗೆ ತಿಳಿದಂತೆ ೧೯೪೮ರಲ್ಲಿ – ತಪ್ಪಿದ್ದರೆ ನನ್ನ ಮಿತ್ರರು ಸರಿಪಡಿಸುತ್ತಾರೆ – ಆದರೆ ಅದೇ ಸುಮಾರಿನಲ್ಲಿ ಕರಡು ರಚನಾ ಸಮಿತಿಯು ಅಧಿವೇಶನದಲ್ಲಿದ್ದಾಗ ವಿಧಾನಸಭಾ ಸದಸ್ಯರೊಬ್ಬರು ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಪ್ರಸ್ತಾವವೊಂದನ್ನು ಮಂಡಿಸಿದರು. ಆಗ ನಾನು ಕಾನೂನು ಇಲಾಖೆಯ ಮುಖ್ಯಸ್ಥನಾಗಿದ್ದೆ. ಹೀಗಾಗಿ ಆ ಗೊತ್ತುವಳಿಯು ನನ್ನ ಖಾತೆಯಡಿಯಲ್ಲಿತ್ತು. ಈ ಗೊತ್ತುವಳಿಗೆ ಯಾವ ಬಗೆಯ ಉತ್ತರ ನೀಡಬೇಕೆಂಬುದನ್ನು ತಿಳಿಯಲು ನಾನು ಸಚಿವ ಸಂಪುಟದ ಸಹೋದ್ಯೋಗಿ

---

* ಸಂಸದೀಯ ಚರ್ಚೆಗಳು ೪ (ರಾಜ್ಯಸಭೆ) ೧೯೫೩, ಭಾಗ I, ಸೆಪ್ಟೆಂಬರ್ ೨, ೧೯೫೩, ಪುಟ. ೮೬೪–೭೯ ಟಿ.೪೧೯೩–೫೪೭

ಸದಸ್ಯರೊಂದಿಗೆ ಸಮಾಲೋಚಿಸಿದ್ದೆ. ಆ ಗೊತ್ತುವಳಿಯನ್ನು ಪ್ರಧಾನಮಂತ್ರಿಯವರಿಗಾಗಲಿ ದಿವಂಗತ ಸರ್ದಾರ್ ವಲ್ಲಭಭಾಯ್‌ಪಟೇಲ್ ಅವರಿಗಾಗಲಿ ವರ್ಗಾಯಿಸುವುದು ಸೂಕ್ತವೆಂದು ಅವರು ಹೇಳಿದ್ದರು. ನಾನು ಸಂತೋಷವಾಗಿ ಹಾಗೆಯೇ ಮಾಡಿದೆ. ಏಕೆಂದರೆ ಆ ಗೊತ್ತುವಳಿಗೆ ಉತ್ತರ ನೀಡಬೇಕಾದ ಹೊಣೆಗಾರಿಕೆ ನನ್ನ ಹೆಗಲೇರುವುದು ನನಗೆ ಬೇಕಿರಲಿಲ್ಲ. ತರುವಾಯ ಆ ಗೊತ್ತುವಳಿಯ ಮಂಡನಕಾರ ಮತ್ತು ಕಾಂಗ್ರೆಸ್ ವರಿಷ್ಠ ಸಮಿತಿಯ ಸದಸ್ಯರೊಂದಿಗೆ ಒಪ್ಪಂದವಾಗಿ ಇಡೀ ಗೊತ್ತುವಳಿಯನ್ನು ಅದರ ಸಾಮಾನ್ಯ ಸ್ವರೂಪದೊಂದಿಗೆ ಆಗ ಅಸ್ತಿತ್ವದಲ್ಲಿ ಎಲ್ಲ ಬಹು ಭಾಷೀಯ ಪ್ರಾಂತ್ಯಗಳಿಗೂ ಅನ್ವಯವಾಗುವುದನ್ನು ಒಪ್ಪಿಕೊಳ್ಳಲು ಅವರು ಸಿದ್ಧರಿಲ್ಲದಿದ್ದಾಗ್ಯೂ ಆಂಧ್ರಪ್ರಾಂತ್ಯವನ್ನು ಸೃಜಿಸುವ ಪ್ರಶ್ನೆಯನ್ನು ಪರಿಗಣಿಸಲು ಅವರು ಸಿದ್ಧರಿದ್ದರು. ಕರಡು ರಚನಾ ಸಮಿತಿಯ ಸದಸ್ಯರು ರಾಜ್ಯಗಳ ಅನುಸೂಚಿಯಲ್ಲಿ ಆಂಧ್ರವನ್ನು ಪ್ರತ್ಯೇಕ ಪ್ರಾಂತ್ಯವೆಂದು ಸೂಚಿಸಲು ಯಥಾರ್ಥವಾಗಿ ಹೇಗೆ ನಮೂದಿಸಬೇಕೆಂಬುದನ್ನು ತಿಳಿಯಲು ಕಾಯುತ್ತಿದ್ದರು. ಈ ಬಗ್ಗೆ ತಿಳಿಯಲು ಉತ್ಸುಕರಾಗಿರುವ ಮಾನ್ಯ ಸದಸ್ಯರು, ಸಂವಿಧಾನದ ಅನುಸೂಚಿಯಲ್ಲಿ ಆಂಧ್ರವನ್ನು ನಮೂದಿಸಬೇಕೆ ಎಂಬ ಬಗ್ಗೆ ತಿಳಿಸಬೇಕೆಂದು ಕೋರಿ ಪ್ರಧಾನ ಮಂತ್ರಿಯವರಿಗೆ ಉಲ್ಲೇಖಿಸಿದ್ದ ಕರಡು ರಚನಾ ಸಮಿತಿಯ ವರದಿಯ ಮೊದಲನೇ ಕರಡು ಪ್ರತಿಯ ಅಡಿ ಟಿಪ್ಪಣಿಯಲ್ಲಿ ಇದನ್ನು ಗಮನಿಸಬಹುದು. ನನಗೆ ಉತ್ತರ ಬರಲಿಲ್ಲ. ತತ್ಪರಿಣಾಮವಾಗಿ ಆಗ ಆಂಧ್ರ ಪ್ರತ್ಯೇಕ ಪ್ರಾಂತ್ಯವಾಗಲಿಲ್ಲ. ಸುಮಾರು ಇಪ್ಪತ್ತು ವರ್ಷಗಳಷ್ಟು ದೀರ್ಘಕಾಲ ಭಾಷಾವಾರು ಪ್ರಾಂತ್ಯಗಳಿಗಾಗಿ ಸನ್ನದ್ಧವಾಗಿ ನಿಂತಿದ್ದ ಪಕ್ಷವೊಂದು ಆ ಇಪ್ಪತ್ತು ವರ್ಷಗಳ ತರುವಾಯ ಇಷ್ಟೊಂದು ತಣ್ಣಗಿನ ಪ್ರತಿಕ್ರಿಯೆ ತೋರಿದ್ದು ನನಗೆ ಅಚ್ಚರಿಯನ್ನುಂಟುಮಾಡಿತ್ತು. ಸತ್ಯವಾಗಿಯೂ, ಈ ವಿಷಯದ ಬಗ್ಗೆ ಸಾಕಷ್ಟು ಆಲೋಚನೆ ಮಾಡಿ, ೧೯೨೧ರಲ್ಲಿ ಅಳವಡಿಸಿಕೊಂಡಿದ್ದ ತತ್ವವು ತಪ್ಪಾಗಿ ಅರ್ಥೈಸಿಕೊಂಡಿದ್ದ ತತ್ವವಾಗಿತ್ತೇ ಹಾಗೂ ಅದನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕೇ ಅಥವಾ ಕೆಲವೊಂದು ಮಾರ್ಪಾಡುಗಳೊಂದಿಗೆ ಮುಂದುವರಿಸಬಹುದಾದ ತತ್ವವಾಗಿತ್ತೇ ಎಂಬ ಬಗ್ಗೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲು ಕಡು ಮೂರ್ಖನಿಗೆ ಕೂಡ ೨೦ ವರ್ಷಗಳೆಂದರೆ ದೀರ್ಘಾವಧಿಯೇ ಆಗಿರುತ್ತದೆ. ಪರಿಣಾಮವಾಗಿ, ೧೯೪೯ ರಿಂದ ಈ ಅವಧಿಯವರೆಗೂ ಸರ್ಕಾರದ ಡೋಲಾಯಮಾನ ಮನೋಭಾವ ಎಂದರೆ ಒಮ್ಮೆ ಭಾಷಾವಾರು ಪ್ರಾಂತ್ಯಗಳಿರತಕ್ಕದ್ದಲ್ಲ, ಎಂದಾದರ ಮತ್ತೊಮ್ಮೆ "ಹೌದು ನಾವು ಆಂಧ್ರಪ್ರಾಂತ್ಯವನ್ನು ಸೃಜಿಸಲೇಬೇಕು" ಎಂಬಂಥ ದೃಷ್ಟಿಕೋನ ಕಂಡುಬಂದಿದೆ. ಅಲ್ಲದೆ, ಒಬ್ಬ ಮಹನೀಯರು ಆಂಧ್ರಪ್ರಾಂತ್ಯವನ್ನು ಸೃಜಿಸಿದ ಹೊರತು ಮತ್ತು ಸೃಜಿಸದೆ ಇದ್ದರೆ ತಾನು ಬದುಕುವುದಿಲ್ಲವೆಂದು ಆತ್ಮಾಹುತಿ ಮಾಡಿಕೊಳ್ಳುವವರೆಗೂ ಸರ್ಕಾರವು ಈ ವಿಷಯದ ಬಗ್ಗೆ ಮುಂದುವರಿಯಲು ಕ್ರಮವನ್ನೇ ತೆಗೆದುಕೊಳ್ಳಲಿಲ್ಲ. ಸರ್ಕಾರದ ಬಗ್ಗೆ ಕಠಿಣಮಾತುಗಳನ್ನಾಡುವ ಉದ್ದೇಶವೂ ನನಗಿಲ್ಲ ಅಥವಾ ಇಚ್ಛೆಯೂ ಇಲ್ಲ; ಆದರೆ ಇತರ ಯಾವುದೇ ದೇಶದಲ್ಲಿ ಈಗಾಗಲೇ ಅಂಗೀಕೃತವಾದ ತತ್ವವೊಂದನ್ನು ಮತ್ತೆ ಚರ್ಚೆಗೆ ತರುವಲ್ಲಿ ಒಬ್ಬ ವ್ಯಕ್ತಿ ಮರಣವನ್ನಾಶ್ರಯಿಸಬೇಕೆಂಬ ಪರಿಸ್ಥಿತಿ ಇದ್ದಲ್ಲಿ ಅಂಥ ಸರ್ಕಾರದ ಗತಿ ಏನಾಗಬಹುದಿತ್ತು ಎಂಬುದರ ಬಗ್ಗೆ ನನಗೆ ಖಡಾಖಂಡಿತವಾಗಿ ಅರಿವಿದೆ. ಸರ್ಕಾರವನ್ನೇ ಕಿತ್ತುಹಾಕುವ ಸಂಭವವೂ ಇರುತ್ತದೆ. ಆದರೆ ಇಲ್ಲಿ ಅಂಥದ್ದೇನೂ ನಡೆಯಲಿಲ್ಲ. ಸರ್ಕಾರ ಪ್ರಸ್ತಾವದೊಂದಿಗೆ ಆಟವಾಡುತ್ತಿದೆ. ಸರ್ಕಾರದ ಪರವಾಗಿ ಮಾಡುತ್ತಿರುವ ವಾದವು ಭಾಷಾವಾರು ಪ್ರಾಂತ್ಯಗಳನ್ನು ಸೃಜಿಸಿದರೆ ಭಾರತದ ಐಕಮತ್ಯವನ್ನು ಒಡೆದುಹಾಕಿದಂತೆ ಎನ್ನುತ್ತದೆ. ಸರ್ಕಾರದ ಪ್ರತಿಯೊಬ್ಬ ಸದಸ್ಯರೂ ಆಗಿಂದಾಗ್ಗೆ ಮುಂದೊತ್ತುತ್ತಿರುವ ವಾದ ಇದು. ಸ್ವಾಮಿ, ಇಂಥದೊಂದು ವಾದವನ್ನು ಮಂಡಿಸಬಹುದೇ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಸಂವಿಧಾನಕ್ಕೆ ಲಗತ್ತಿಸಿರುವ

ರಾಜ್ಯಗಳ ಪಟ್ಟಿಯನ್ನು ಯಾರೇ ಆಗಲಿ ಅವಲೋಕಿಸಿದಾಗ ಭಾಗ–ಎ, ಭಾಗ–ಬಿ, ಮತ್ತು ಭಾಗ–ಸಿ ಗಳ ವಿವಿಧ ಭಾಗಗಳಲ್ಲಿ ಒಟ್ಟಾರೆಯಾಗಿ ೨೭ ರಾಜ್ಯಗಳು ಇರುವುದನ್ನು ಗಮನಿಸಬಹುದು. ಕೇವಲ ನಾಲ್ಕು ರಾಜ್ಯಗಳು ಮಾತ್ರ ಬಹು ಭಾಷಾರಾಜ್ಯಗಳಾಗಿವೆ. ಸಂವಿಧಾನದ ಪ್ರಾರಂಭದಿಂದಲೂ ಅಸ್ತಿತ್ವದಲ್ಲಿರುವ ೨೩ ಭಾಷಾವಾರು ರಾಜ್ಯಗಳು ಯಾವುದೇ ಬಗೆಯಿಂದ ಈ ದೇಶದ ಏಕತೆಯನ್ನು ಭಂಗಪಡಿಸಲು ಏನಾದರೂ ಮಾಡಿವೆಯೇ ಎಂಬುದಾಗಿ ನಾನು ನನ್ನ ಗೌರವಾನ್ವಿತ ಮಿತ್ರರಾದ ಗೃಹ ಮಂತ್ರಿಯವರನ್ನು ಪ್ರಶ್ನಿಸಬಯಸುತ್ತೇನೆ. ಈ ಪ್ರಶ್ನೆಗೆ ಅವರ ಉತ್ತರವನ್ನೂ ಕೋರುತ್ತೇನೆ. ಈ ೨೩ ಭಾಷಾವಾರು ರಾಜ್ಯಗಳಿಗೆ ಭಾರತದ ಏಕತೆಗೆ ಭಂಗವುಂಟು ಮಾಡಲು ಸಾಧ್ಯವಾಗಿಲ್ಲ. ಭಾರತದ ಏಕತೆಯನ್ನು ಕಾಪಾಡಲು ಅವರಿಗಿರುವಷ್ಟೇ ಕಾಳಜಿ ನನಗೂ ಇದೆ. ಮಾತ್ರವಲ್ಲ, ಈ ದೇಶವನ್ನು ವಿಭಜಿಸುವಂಥ ಯಾವುದೇ ಕ್ರಮಕ್ಕೆ ನಾನು ಬೆಂಬಲ ನೀಡುವುದಿಲ್ಲ. ದೇವರ ದಯದಿಂದ ನಾವು ಕೇವಲ ಸ್ವಾತಂತ್ರ್ಯವನ್ನಷ್ಟೇ ಅಲ್ಲ ಏಕತೆಯನ್ನೂ ಸಾಧಿಸಿದ್ದೇವೆ, ನಾವು ಯಾವ ಪಕ್ಷಕ್ಕೇ ಸೇರಿದವರಾಗಿರಲಿ ಈ ಸ್ವಾತಂತ್ರ್ಯ ಮತ್ತು ಈ ಐಕ್ಯಮತವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಬದ್ಧತೆಯ ಕರ್ತವ್ಯವಾಗಿದೆ. ಆದರೆ ೨೩ ಭಾಷಾವಾರು ಪ್ರಾಂತ್ಯಗಳಿರುವ ಸಂಗತಿಯ ಜೊತೆಗೇ, ಭಾಷಾವಾರು ಪ್ರಾಂತ್ಯಗಳು ಭಾರತದ ಐಕಮತ್ಯವನ್ನು ಭಂಗಪಡಿಸುತ್ತವೆ ಎಂದು ಹೇಳುವುದು ಬಾಲಿಶತನವಾಗುತ್ತದೆ. ಭಾಷಾವಾರು ರಾಜ್ಯಗಳನ್ನು ರಚಿಸುವ ಕಾರ್ಯನೀತಿಯನ್ನು ಮುಂದುವರಿಸಲು ಸಾಧ್ಯವಿಲ್ಲವೆಂಬ ಅದರ ವಾದವನ್ನು ಸಮರ್ಥಿಸಲು ಅವರು ಇನ್ನಷ್ಟು ತೂಕವಾದ ಸಮರ್ಥನೀಯ ವಾದಗಳನ್ನು ಮಂಡಿಸಬೇಕು.

ಸ್ವಾಮಿ, ಈಗ ಇಷ್ಟೊಂದು ದೀರ್ಘ ವಿಳಂಬದ ನಂತರ ಸರ್ಕಾರ ಆಂಧ್ರದ ಮೇಲೆ ತೋರಿಸುತ್ತಿರುವ ಈ ಅಪಾರ ಕರುಣೆಯತ್ತ ತಿರುಗೋಣ, ಇದರಿಂದ ಅವರಿಗೇನು ಸಿಗುತ್ತದೆ? ಎಲ್ಲಕ್ಕಿಂತ ಮೊದಲು ನಾನು ವಿಧೇಯಕವನ್ನು ಗಮನಿಸಿದಾಗ, ಆಂಧ್ರವೆಂಬ ಈ ಹೊಸ ರಾಜ್ಯದ ರಾಜಧಾನಿಯ ಬಗ್ಗೆ ಎಲ್ಲಿಯೂ ಪ್ರಸ್ತಾಪವೇ ಇಲ್ಲ. ರಾಜಧಾನಿಯೇ ರಾಜ್ಯದ ಜೀವಂತಿಕೆಯ ಕೇಂದ್ರವಲ್ಲವೇ? ರಾಜಧಾನಿ ಇಲ್ಲದ ರಾಜ್ಯವೊಂದನ್ನು ಹೇಗೆ ಕಲ್ಪಿಸಿಕೊಳ್ಳುವುದೆಂಬುದೇ ನನಗೆ ಅರ್ಥವಾಗುತ್ತಿಲ್ಲ. ವಾಸ್ತವವಾಗಿ, ರಾಜಧಾನಿಯೇ ರಾಜ್ಯಗಳಿಗೆ ಜೀವಂತಿಕೆ, ನೀಡುತ್ತದೆ. ಆ ಬಗ್ಗೆ ಎಲ್ಲಿಯೂ ಏನನ್ನು ಸೂಚಿಸಿಲ್ಲ. ಈ ರಾಜಧಾನಿಯನ್ನು ಯಾರು ಸೃಜಿಸಬೇಕು? ಹೊಸ ಆಂಧ್ರ ರಾಜ್ಯದ ವಿಧಾನ ಮಂಡಲವು ಸಭೆಸೇರಿ ತನ್ನ ಅದರ ರಾಜಧಾನಿಯನ್ನು ನಿರ್ಧರಿಸಬೇಕೆ? ಹೊಸ ರಾಜ್ಯದ ಕಾರ್ಯನಿವಾಹಕ ಸರ್ಕಾರವು ಯಾವುದೇ ಒಂದು ಸ್ಥಳದಲ್ಲಿ ಕುಳಿತು ಹೊಸ ಆಂಧ್ರ ರಾಜ್ಯದ ರಾಜಧಾನಿ ಯಾವುದಿರಬೇಕೆಂದು ನಿರ್ಧರಿಸುತ್ತದೆಯೇ? ಈ ರಾಜಧಾನಿಯನ್ನು ಸೃಜಿಸಬಹುದಾದ ಪ್ರಾಧಿಕಾರ ಯಾವುದು ಎಂಬ ಬಗ್ಗೆ ವಿಧೇಯಕರಲ್ಲಿ ಯಾವುದೇ ಸೂಚನೆಯಿಲ್ಲ. ಸಮಾಚಾರ ಪತ್ರಿಕೆಗಳನ್ನು ಓದಿದಾಗ ರಾಜಧಾನಿಯ ಪ್ರಶ್ನೆಯ ಬಗ್ಗೆ ಆಂಧ್ರರಲ್ಲಿಯೂ ಒಮ್ಮತ ಇಲ್ಲವೆಂಬಂತೆ ಕಂಡು ಬರುತ್ತಿದೆ. ವಿಜಯವಾಡವನ್ನು ರಾಜಧಾನಿಯಾಗಬಯಸುವ ಒಂದು ವರ್ಗವಿದೆ, ಕರ್ನೂಲನ್ನು ಬಯಸುವ ಮತ್ತೊಂದು ವರ್ಗವಿದ್ದು, ಕರ್ನೂಲನ್ನು ಬಯಸುವ ವರ್ಗದವರು ಒಂದು ಮತದಿಂದ ವಿಜಯಿಗಳಾಗಬಹುದೆಂದು ನನಗನಿಸುತ್ತದೆ. ಇಂಥದೊಂದು ಸನ್ನಿವೇಶದಲ್ಲಿ ಸರ್ಕಾರವು – ಅದಕ್ಕೆ ಯಾವುದೇ ವಿರೋಧಪಕ್ಷವನ್ನು ಸೋಲಿಸುವಷ್ಟು ಬೃಹತ್ ಬಹುಮತವಿದೆ – ತೆರೆದ ಬಾಹುಗಳಿಂದ "ಇದೇ ರಾಜಧಾನಿಯಾಗಬೇಕೆಂಬುದು ನಮ್ಮ ತೀರ್ಮಾನ" ಎಂದು ಸೂಚಿಸಿ ತರುವಾಯದ ಹಂತದಲ್ಲಿ ಆಂಧ್ರ ಜನ ಇಚ್ಛಿಸಿದಲ್ಲಿ ಬದಲಾವಣೆ ಮಾಡುವ ಸ್ವಾತಂತ್ರ್ಯ ನೀಡಿ ಧೈರ್ಯವಾಗಿ ಆ ಬಗ್ಗೆ ಘೋಷಿಸುವ ಧೈರ್ಯ ಮಾಡಲಾರದೆಂದು ನಾನು ಖಚಿತವಾಗಿ ಹೇಳಬಲ್ಲೆ. ಸ್ವಾಮಿ, ರಾಜಧಾನಿಗೆ ಸಂಬಂಧಪಟ್ಟ ಈ

ಪ್ರಶ್ನೆಗೆ ಸಂಬಂಧಿಸಿ ನಾನು ಒಂದು ವಿಷಯವನ್ನು ಸೂಚಿಸಬಯಸುತ್ತೇನೆ. ಆಂಧ್ರ ರಾಜ್ಯದ ರಾಜಧಾನಿಯಾಗಿ ಆಯ್ಕೆಯಾಗುವ ಪಟ್ಟಣ ಯಾವುದೇ ನನಗೆ ಗೊತ್ತಿಲ್ಲ, ಆದರೆ ಏನೇ ಆಗಲಿ, ರಾಜಧಾನಿಯ ಉದ್ದೇಶಕ್ಕಾಗಿ ಯಾವುದೇ ಪಟ್ಟಣವನ್ನು ಆಯ್ಕೆ ಮಾಡಿದರೂ ಅದು 'ತಾತ್ಕಾಲಿಕ'ವಾಗಿರಬೇಕೆಂಬುದು ಎಲ್ಲರ ಅಭಿಪ್ರಾಯದಂತೆ ಕಂಡುಬರುತ್ತಿದೆ. ಅದು ನನಗೆ ತಿಳಿದುಬಂದ ಸಂಗತಿ. ಈಗ ಸ್ವಾಮಿ, ಅವರು ವಿಜಯವಾಡ, ಕರ್ನೂಲು ಅಥವಾ ಯಾವುದೇ ಇತರ ಸ್ಥಳವನ್ನು ಆಯ್ಕೆಮಾಡಲಿ, ಅವರು ರಾಜಧಾನಿಯನ್ನು ಸೃಜಿಸಲು ಅವಶ್ಯವಾಗುವ ಕಟ್ಟಡಗಳ ನಿರ್ಮಾಣಕ್ಕಾಗಿ ಅವರು ಒಂದಿಷ್ಟು ಮೊಬಲಗನ್ನು ವೆಚ್ಚ ಮಾಡಬೇಕಾಗಬಹುದು. ನಿಶ್ಚಯವಾಗಿ, ಅಲ್ಲಿ ಸಚಿವಾಲಯವಿರಬೇಕು, ನಿಶ್ಚಯವಾಗಿ ಅಲ್ಲಿ ಮಂತ್ರಿಗಳಿಗಾಗಿ ಮನೆಗಳಿರಲೇಬೇಕು . . . .

**ಶ್ರೀ ಸಿ.ಜಿ.ಕೆ. ರೆಡ್ಡಿ (ಮೈಸೂರು):** ಅದು ಬಹಳ ಮುಖ್ಯ.

**ಡಾ. ಬಿ.ಆರ್. ಅಂಬೇಡ್ಕರ್:** . . . . ಅಲ್ಲದೆ ರಾಜಧಾನಿಯು ಅಸ್ತಿತ್ವಕ್ಕೆ ಬರಲು ಅಗತ್ಯವಾಗುವ ಹಲವಾರು ಇತರ ವಿಷಯಗಳು. ಈ ತಾತ್ಕಾಲಿಕ ರಾಜಧಾನಿಯ ಸೃಜನೆಗಾಗಿ ಹೊಸ ಆಂಧ್ರ ಸರ್ಕಾರವು ಎಷ್ಟು ಮೊತ್ತದ ಹಣವನ್ನು ವೆಚ್ಚ ಮಾಡುವ ಉದ್ದೇಶ ಹೊಂದಿದೆಯೋ ನನಗೆ ಗೊತ್ತಿಲ್ಲ. ಈಗ ಇದು ಕೇವಲ ತಾತ್ಕಾಲಿಕ ರಾಜಧಾನಿಯಾಗಿದ್ದು ಕಾಯಂ ರಾಜಧಾನಿಯನ್ನು ತರುವಾಯ ಆಯ್ಕೆ ಮಾಡಲಾಗುವುದೆಂದು ಹೇಳಲಾಗುತ್ತಿದೆ. ಇದರಿಂದ ಏನಾಗುತ್ತದೆ? ನನ್ನ ಅಭಿಪ್ರಾಯದಂತೆ ಏನಾಗುವುದೆಂದರೆ, ಪ್ರಾರಂಭಿಕವಾಗಿ ತಾತ್ಕಾಲಿಕ ರಾಜಧಾನಿಯ ನಿರ್ಮಾಣಕ್ಕಾಗಿ ಐದು ಕೋಟಿ ಅಥವಾ ಇನ್ನಷ್ಟು ಮೊತ್ತವನ್ನು ಮಾಡುವ ಹಣ ಸಂಪೂರ್ಣ ವ್ಯರ್ಥವಾಗುತ್ತದೆ ಮಾತ್ರವಲ್ಲ ಆಂಧ್ರರು ತಮ್ಮ ಹೊಸ ರಾಜ್ಯದ ಕಾಯಂ ರಾಜಧಾನಿಯೆಂದು ಭಾವಿಸುವ ಸ್ಥಳಕ್ಕಾಗಿ ಮತ್ತೆ ಐದು ಅಥವಾ ಹತ್ತು ಕೋಟಿ ರೂಪಾಯಿಯನ್ನು ವೆಚ್ಚ ಮಾಡಬೇಕಾಗುತ್ತದೆ. ಸನ್ಮಾನ್ಯ ಗೃಹ ಮಂತ್ರಿಯವರಾಗಲಿ ಅಥವಾ ಸನ್ಮಾನ್ಯ ವಿತ್ತ ಮಂತ್ರಿಯವರಾಗಲಿ, ಅನುದಾನ ಕೋರಿ ಬರುವ ಯಾರಿಗೆ ಆದರೂ ಅತ್ಯಂತ ಧಾರಾಳವಾದ ಧರ್ಮಬುದ್ಧಿಯಿಂದ ಅನುದಾನ ನೀಡುವಂತೆ, ತಾತ್ಕಾಲಿಕ ರಾಜಧಾನಿಗಾಗಿ ಐದು ಕೋಟಿ ರೂಪಾಯಿ ಹಾಗೂ ಕಾಯಂ ರಾಜಧಾನಿಗಾಗಿ ಐದು ಅಥವಾ ಹತ್ತು ಕೋಟಿ ರೂಪಾಯಿ ಕೊಡುತ್ತಾರೋ ಇಲ್ಲವೋ ನನಗೆ ತಿಳಿಯದು. ಖಂಡಿತವಾಗಿ ಅದು ಈ ದೇಶದ ಹಣಕಾಸು ನಿರ್ವಹಣೆಯ ಅದ್ಭುತ ವಿಧಾನವಾದೀತು.

ಸ್ವಾಮಿ, ಅನಂತರ ಹೊಸ ರಾಜ್ಯದ ಹಣಕಾಸು ಪರಿಸ್ಥಿತಿಯತ್ತ ಗಮನಿಸಿದಾಗ ಹೊಸ ರಾಜ್ಯವು ೫ ಕೋಟಿ ರೂ.ಗಳಷ್ಟು ಕೊರತೆಯಿಂದಲೇ ಕಾರ್ಯಾರಂಭ ಮಾಡುವುದಾಗಿ ತೋರಿಸಲಾಗಿದೆ. ಆರ್ಥಿಕ ಸ್ಥಿರತೆಗಿಂತ ಹೊಸ ಆಂಧ್ರ ರಾಜ್ಯವನ್ನು ಹೊಂದುವ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರುವ ಆಶಾವಾದಿಗಳಾದ ಆಂಧ್ರರು ಆ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದ ನ್ಯಾಯಮೂರ್ತಿ ಶ್ರೀ ವಾಂಛೂ ಅವರಿಗೆ ತಮ್ಮದೇ ತೀರ್ಪಿನಲ್ಲಿ ಹಣಕಾಸು ಕೊರತೆಗಳನ್ನು ತುಂಬಿಕೊಳ್ಳಬಲ್ಲ ಹಾಗೂ ರಾಜ್ಯವನ್ನು ಸ್ವಯಂ ಪೂರ್ಣಗೊಳಿಸುವ ಹಲವಾರು ಮಾರ್ಗಗಳಿವೆ ಎಂಬುದಾಗಿ ತಿಳಿಸಿದ್ದರು.

ನ್ಯಾಯಮೂರ್ತಿ ಶ್ರೀ ವಾಂಛೂ ಅವರು ಆಂಧ್ರ ಜನತೆಯ ವಿವಿಧ ಪಕ್ಷಗಳ ಮೂಲಕ ನೀಡಲಾದ ಪ್ರತಿಯೊಂದು ಸೂಚನೆಗಳನ್ನು ಪರಿಶೀಲಿಸಿ ಯಾರೂ ತಪ್ಪು ತಿಳಿಯಲಾರದ ಮಾತುಗಳಲ್ಲಿ ಇವೆಲ್ಲವೂ ಕೇವಲ ಸಮೃದ್ಧ ಕಲ್ಪನೆಗಳಾಗಬಹುದಲ್ಲದೆ ಹೊಸ ರಾಜ್ಯದ ರಾಜಸ್ವವನ್ನು ಹೆಚ್ಚಿಸಲು ಸಾಧ್ಯವೂ ಇಲ್ಲ ಅಥವಾ ವೆಚ್ಚವನ್ನು ತಗ್ಗಿಸಲೂ ಸಾಧ್ಯವಿಲ್ಲ; ಹೆಚ್ಚೆಂದರೆ ರಾಜಸ್ವವನ್ನು ಹೆಚ್ಚಿಸುವ ಮೂಲಕ ಅಥವಾ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಏನು ಬೇಕಾದರೂ ಆಗಬಹುದು. ಕಡಿಮೆಯೆಂದರೆ ಹೊಸ ಆಂಧ್ರ ರಾಜ್ಯವು ೨ ಕೋಟಿ ರೂ.ಗಳ ಕೊರತೆಯೊಂದಿಗೆ ಕಾರ್ಯರಂಭ ಮಾಡಬಹುದೆಂದು ತಿಳಿಸಿದರು.

ಎಂದರೆ ಪ್ರಾರಂಭದಲ್ಲಿ ಆಂಧ್ರರು ಕಾರ್ಯರಂಭ ಮಾಡುವ ಅತ್ಯಲ್ಪ ಕೊರತೆ ಅದಾಗಿರುತ್ತದೆ. ಸರಿ, ೫ ಕೋಟಿ ರೂ.ಗಳಷ್ಟು ಅಥವಾ ೨ ಕೋಟಿ ರೂ.ಗಳಷ್ಟು ಕೊರತೆಯನ್ನು ಎದುರಿಸಬೇಕಾಗುತ್ತದೆ ಎಂಬುದು ಆಂಧ್ರರಿಗೆ ಸಂಬಂಧಪಟ್ಟ ವಿಷಯವಾಗುತ್ತದೆ. ಈ ಬಗ್ಗೆ ನಾವು ಹೆಚ್ಚಿಗೆಯಾಗಿ ಏನನ್ನೂ ಹೇಳಲಾಗುವುದಿಲ್ಲ. ಅದು ಅವರಿಗೆ ಬಿಟ್ಟ ವಿಷಯ.

ನನ್ನ ಸನ್ಮಿತ್ರ ಗೃಹಮಂತ್ರಿಯವರನ್ನು ಕೇಳಬೇಕಾದ ಮೂರನೇ ಪ್ರಶ್ನೆಯೂ ಇದೆ. ಆಂಧ್ರ ರಾಜ್ಯದ ಜನಾಂಗೀಯ ವಿವರಣ ಚಿತ್ರವೆಂದು ಕರೆಯಬಹುದಾದ ಅಂಶದ ಬಗ್ಗೆ ನನ್ನ ಮಿತ್ರರು ಗಮನಿಸಿದ್ದಾರೋ ಇಲ್ಲವೊ ತಿಳಿಯದು. ಈ ರಾಜ್ಯದ ಸಾಮಾಜಿಕ ಸಂಯೋಜನೆ ಹೇಗಿದೆ? ಆಂಧ್ರದ ಸಾಮಾಜಿಕ ಸಂಯೋಜನೆ ಬಗ್ಗೆ ಮಾತನಾಡುವಾಗ ನನ್ನ ಆಂಧ್ರ ಸ್ನೇಹಿತರು ದಯವಿಟ್ಟು ನನ್ನನ್ನು ತಪ್ಪು ತಿಳಿಯಬಾರದು. ನಾನು ಈ ಮಾತನ್ನಾಡುವಾಗ ಆಂಧ್ರರ ವಿರುದ್ಧ ಅವಹೇಳನ ಮಾಡುತ್ತಿದ್ದೇನೆಂದು ತಿಳಿಯಬಾರದಾದರೂ ಇದೊಂದು ನಾನು ವಿವರಿಸುತ್ತಿರುವ ಸಾಮಾನ್ಯ ಹೇಳಿಕೆಯೆಂದು ತಿಳಿಯಬೇಕಾಗಿದ್ದು ಈ ಬಗ್ಗೆ ನನ್ನ ಭಾಷಣದ ಮುಕ್ತಾಯದಲ್ಲಿ ನಾನು ಇನ್ನಷ್ಟು ವಿವರಿಸುತ್ತೇನೆ.

ಸ್ವಾಮಿ ನಾನು ಈಗಾಗಲೇ ಹೇಳಿರುವಂತೆ ನಾನು ಆಂಧ್ರದವನಲ್ಲ. ಆದರೆ ನಾನು ರಾಜಕೀಯ ಗುಂಪು ಎಂದು ಕರೆಯಬಹುದಾದ – ಇದಕ್ಕೆ ನಾನು ಪಕ್ಷ ಎಂಬ ಗೌರವಾನ್ವಿತ ಹೆಸರು ಕೊಡಲಾರೆ – ಅನುಸೂಚಿತ ಜಾತಿ ಫೆಡರೇಷನ್ ಎಂದು ಕರೆಯಲಾಗುವ ಗುಂಪಿಗೆ ಸೇರಿದ್ದೇನೆ. ಆ ಗುಂಪಿನ ಮುಖಂಡನಾಗಿದ್ದೇನೆ. ಅನುಸೂಚಿತ ಜಾತಿಗಳ ಪರಿಸ್ಥಿತಿ ಹೇಗಿದೆಯೆಂಬುದನ್ನು ತಿಳಿಯಲು ನಾನು ಆಂಧ್ರ ದೇಶದಲ್ಲೆಲ್ಲ ಸಂಚರಿಸುವ ಅವಕಾಶ ನನಗೆ ದೊರೆತಿತ್ತು. ಈ ಆಂಧ್ರ ದೇಶದಲ್ಲಿ, ಬೇರೆ ಕಡೆಗಳಲ್ಲಿರುವಂತೆಯೇ, ನಾನು ಕಂಡಂತೆ ದೊಡ್ಡ ಕೋಮುಗಳು ಹಾಗೂ ಅತ್ಯಂತ ಚಿಕ್ಕ ಕೋಮುಗಳೂ ಇವೆ. ದೊಡ್ಡ ಕೋಮುಗಳಲ್ಲಿ ಅತಿ ದೊಡ್ಡದೆಂದರೆ ರೆಡ್ಡಿ ಸಮುದಾಯ; ರೆಡ್ಡಿಗಳ ಕೆಳಗೆ ಕಮ್ಮದವರು; ಕಮ್ಮದವರ ಕೆಳಗೆ ಕಪ್ಪುಗಳು ಬರುತ್ತಾರೆ; ಅವರಿಗಿಂತಲೂ ಕೆಳಗೆ ಭೂರಹಿತ ಕೃಷಿಕಾರ್ಮಿಕರಾಗಿ ದುಡಿಯುತ್ತಿರುವ ನತದೃಷ್ಟ ಅನುಸೂಚಿತ ಜಾತಿಗಳಿಗೆ ಸೇರಿದವರಿದ್ದಾರೆ. ಇದು ಪ್ರಪ್ರಥಮವಾಗಿ ಈ ಪ್ರದೇಶಗಳಲ್ಲಿ ಕಂಡು ಬರುವ ಚಿತ್ರವಾಗಿದೆ. ನಾನು ಹೇಳಿದಂತೆ ಇದೊಂದೇ ಇಂಥ ಪ್ರಕರಣವಲ್ಲ ಇದೇ ಬಗೆಯ ಹಲವಾರು ಪ್ರದೇಶಗಳಿವೆ.

ನಾನು ಗಮನಿಸಿದ ಎರಡನೇ ಅಂಶವೆಂದರೆ ಎಲ್ಲ ಭೂಮಿಗಳೂ ವಾಸ್ತವವಾಗಿ ರೆಡ್ಡಿಗಳ ಸ್ವಾಧೀನದಲ್ಲಿವೆ. ಅಲ್ಲಿ ರೆಡ್ಡಿಗಳು ಭಾರೀ ಜಮೀನ್ದಾರರಾಗಿದ್ದಾರೆ. ತರುವಾಯ, ಪ್ರಾಯಶಃ ನನ್ನ ಗೆಳೆಯ ಪ್ರೊಫೆಸರ್ ರಂಗಾ ಅವರು ಸೇರಿರುವ ಕಮ್ಮಗಳು ಇದ್ದಾರೆ. ಇತ್ತೀಚೆಗೆ ಇದೆಂಥ ದೊಡ್ಡ ಪಿಡುಗು ಎಂದು ನನಗೆ ತಿಳಿಸಲಾಯಿತು. ಕಾಂಗ್ರೆಸಿಗರೊಬ್ಬರು ಅತಿ ವಿಶೇಷವಾಗಿ ಈ ಬಗ್ಗೆ ನನಗೆ ತಿಳಿಸಿದರು. ಅವರ ಹೆಸರನ್ನು ಪ್ರಕಟಪಡಿಸಿದರೆ ಅವರಿಗೆ ನೋವಾಗಬಹುದು. ಅದರಿಂದ ನಾನು ನೀಡುತ್ತಿರುವ ಹೇಳಿಕೆಗೆ ಸಾಕಷ್ಟು ಸಮರ್ಥನೆ ದೊರೆಯಬಹುದು. ಆದರೂ ನಾನು ಅವರ ಹೆಸರನ್ನು ಕೇಳದೇ ಇದ್ದುದರಿಂದ ನಾನು ಅವರ ಹೆಸರನ್ನು ಹೇಳುವುದಿಲ್ಲ.

**ಒಬ್ಬ ಮಾನ್ಯ ಸದಸ್ಯರು:** ಅವರು ಈ ಸದನದ ಸದಸ್ಯರೆ?

**ಡಾ. ಬಿ.ಆರ್. ಅಂಬೇಡ್ಕರ್:** ಅವರು ಕೆಳಮನೆಯ ಸದಸ್ಯರು

**ಡಾ. ಕೆ.ಎನ್. ಕಾಟ್ಜು:** ಕೆಳಮನೆ ಎಂದು ಕರೆಯುವುದು ನನಗೆ ಇಷ್ಟವಾಗುವುದಿಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ನಾವು ಈ ಸಮಸ್ಯೆಯ ಬಗ್ಗೆ ಚರ್ಚಿಸುತ್ತಿದ್ದಾಗ, ನನ್ನ ಮಿತ್ರರು ಇದು

ಯಾವುದೇ ರೀತಿಯಿಂದಲೂ ವಿಶಿಷ್ಟವಾದುದೇನಲ್ಲವೆಂದರು. ಆಂಧ್ರ ಪ್ರದೇಶದಲ್ಲಿ ನಿರ್ದಿಷ್ಟ ಹಳ್ಳಿಯೊಂದಿದೆ. ಇಡೀ ಹಳ್ಳಿಯ ಭೂಮಿ ಸುಮಾರು ೧೪೦೦ ಎಕರೆಗಳಷ್ಟಿದೆ. ಆ ಪೈಕಿ ಕೇವಲ ೧೪ ಎಕರೆಗಳು ಮಾತ್ರವೇ ಖಾಸಗಿ ವ್ಯಕ್ತಿಗಳಿಗೆ ಸೇರಿದೆ; ಉಳಿದ ಸಮಸ್ತ ಭೂಮಿಯು ಏಕೈಕ ರೆಡ್ಡಿಯೊಬ್ಬರಿಗೆ ಸೇರಿದೆ; ಆ ಚಿತ್ರವನ್ನು ಯಾರಾದರೂ ಊಹಿಸಿಕೊಳ್ಳಬಹುದು....

**ಶ್ರೀ ಪ. ಸುಂದರಯ್ಯ (ಮದರಾಸು):** ಅದನ್ನು ಮುಟ್ಟುಗೋಲು ಹಾಕಿಕೊಳ್ಳೋಣ.

**ಡಾ. ಬಿ.ಆರ್. ಅಂಬೇಡ್ಕರ್:** ಅವರು ಏನು ಮಾಡಿದುರೆಂಬ ಬಗ್ಗೆ ನನಗೇನೂ ತಿಳಿದಿಲ್ಲ. ಆ ಹಳ್ಳಿಯಲ್ಲಿನ ಎಲ್ಲ ವ್ಯಾಪಾರವೂ ರೆಡ್ಡಿಗಳ ಕೈಯಲ್ಲಿಯೇ ಇದೆಯೆಂಬುದಾಗಿಯೂ ಅವರು ನನಗೆ ತಿಳಿಸಿದರು.

**ಒಬ್ಬ ಸನ್ಮಾನ್ಯ ಸದಸ್ಯರು:** ಅದರಲ್ಲಿ ತಪ್ಪೇನಿದೆ?

**ಡಾ. ಬಿ.ಆರ್. ಅಂಬೇಡ್ಕರ್:** ಹಳ್ಳಿಯ ಅತ್ಯಂತ, ಕೆಳಗಿನ ಗ್ರಾಮಾಧಿಕಾರಿಯೂ ಒಬ್ಬ ರೆಡ್ಡಿಯೇ ಆಗಿದ್ದಾನೆ; 'ಮುಲ್ಕಿ' ಕೂಡ ರೆಡ್ಡಿಯಾಗಿದ್ದಾನೆ. ಸರಿ, ಸ್ವಾಮಿ, ಕಾಂಗ್ರೆಸ್ ಪಕ್ಷವು ಹತ್ತು ವರ್ಷಗಳ ಅವಧಿಗಾಗಿ ಉದಾರವಾಗಿ ನಮಗೆ ನೀಡಿದ ಮೀಸಲಾತಿ ಕಣ್ಮರೆಯಾಗುವುದೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಒಬ್ಬ ಸನ್ಮಾನ್ಯ ಸದಸ್ಯರು:** ನೀವೂ ಅದನ್ನು ಒಪ್ಪಿಕೊಂಡಿದ್ದೀರಿ.

**ಡಾ. ಬಿ.ಆರ್. ಅಂಬೇಡ್ಕರ್:** ಹೌದು. ಬೇರೆ ಇನ್ನೇನು ತಾನೇ ಮಾಡಲಾದೀತು? ನಿಮಗೆ ಪೂರಿ ದೊರಕಲಿಲ್ಲವೆಂದರೆ 'ರೊಟ್ಟಿ'ಯಾದರೂ ಸಿಗಲೇಬೇಕಲ್ಲ. ಸ್ವಾಮಿ, ಅಲ್ಲಿ ಕಂಡುಬರುವ ಪರಿಸ್ಥಿತಿಯನ್ನು ಗಮನಿಸಿದಲ್ಲಿ ಅನುಸೂಚಿತ ಜಾತಿಗಳಿಗೆ ಸೇರಿದವರ ಬವಣೆಯನ್ನು ನೀವೇ ಊಹಿಸಿಕೊಳ್ಳಬಹುದು ದಬ್ಬಾಳಿಕೆಯ ವಿರುದ್ಧವಾಗಿ, ಪೀಡನೆಯ ವಿರುದ್ಧ, ಕೋಮುಭಾವನೆ ವಿರುದ್ಧ ರಕ್ಷಣೆ ಒದಗಿಸಲು ನನ್ನ ಸನ್ಮಾನ್ಯ ಮಿತ್ರರು ಏನು ಉಪಬಂಧ ಕಲ್ಪಿಸಿದ್ದಾರೆ, ಇದು ಕೇವಲ ಆಂಧ್ರ ಪ್ರದೇಶದಲ್ಲಿ ಮಾತ್ರವಲ್ಲ ಇದೇ ರೀತಿಯಲ್ಲಿರುವ ಎಲ್ಲ ರಾಜ್ಯಗಳಲ್ಲೂ ಕಂಡು ಬರುತ್ತಿರುವ ಅತಿರೇಕದ ಸ್ಥಿತಿಯಾಗಿದೆ. ನನಗೆ ಅತ್ಯಂತ ವಿಷಾದವಾಗುತ್ತಿರುವ ವಿಷಯವೆಂದರೆ ಬಹುಸಂಖ್ಯಾತರ ದಬ್ಬಾಳಿಕೆಯ ವಿರುದ್ಧ ಪ್ರತಿಯೊಬ್ಬ ನಾಗರಿಕನು ಸುರಕ್ಷಿತನಾಗುವಂತೆ ಕಾಪಾಡಬೇಕಾದ ಗೃಹಸಚಿವರು ರಾಜ್ಯ ಮುಂದೆ ಹೇಗಿರಬಹುದು ಹಾಗೂ ಲಕ್ಷಾಂತರ ಜನರ ಭವಿಷ್ಯವೇನಾಗಬಹುದೆಂಬ ಬಗ್ಗೆ ಯಾವುದೇ ಉದ್ದೇಶ ಹಾಗೂ ಪರಿಕಲ್ಪನೆಯಿರದ ವಿಧೇಯಕವೊಂದನ್ನು ಹಿಡಿದು ನಿಂತಿದ್ದಾರೆ ಎಂಬುದಾಗಿದೆ. ಸ್ವಾಮಿ ಅವರು ಉನ್ನತ ವರ್ಗಕ್ಕೆ ಸೇರಿದವರೆಂದು ನನಗೆ ತಿಳಿದಿದೆ.

**ಡಾ. ಕೆ.ಎನ್. ಕಾಟ್ಜು:** ಯಾರು? ನಾನೇ? ನಾನು ಸಾಮಾನ್ಯ ರೀತಿಯಿಂದಲೇ ಜೀವನ ಪ್ರಾರಂಭಿಸಿದೆ.

**ಡಾ. ಬಿ.ಆರ್. ಅಂಬೇಡ್ಕರ್:** ಆದರೆ ಸತ್ಯಸಂಗತಿ ಎಂದರೆ ಅವರು ಕಾಶ್ಮೀರಿ ಪಂಡಿತರು. ಅವರು ಕಸಗುಡಿಸುವ ವೃತ್ತಿಯನ್ನು ಮಾಡಿದರೂ ಅವರು ಕಾಶ್ಮೀರಿ ಪಂಡಿತರಾಗಿಯೇ ಉಳಿಯುತ್ತಾರೆ. ಅವರು ಎಂದಿಗೂ ನರಳುವುದಿಲ್ಲ. ಜನರೆಲ್ಲರೂ ಅವರ ಪರಂಪರೆ, ಉನ್ನತ ಕುಟುಂಬದಲ್ಲಿ ಜನನ, ಅವರ ವಿದ್ವತ್ತಿಗೆ ಗೌರವ ನೀಡುತ್ತಾರೆ. ಕಳೆದ ೨೦೦೦ ವರ್ಷಗಳಿಂದಲೂ, ದಬ್ಬಾಳಿಕೆಗೆ ಒಳಗಾಗಿರುವ ನಮ್ಮ ಪಾಡೇನು?

**ಶ್ರೀ ಎಚ್.ಪಿ. ಸೆಕ್ಸೇನಾ: (ಉತ್ತರ ಪ್ರದೇಶ)** ಆದರೆ ನಾವೆಲ್ಲರೂ ನಿಮ್ಮನ್ನು ಗೌರವದಿಂದ ಕಾಣುತ್ತೇವೆ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಇನ್ನು ಹತ್ತು ವರ್ಷಗಳಲ್ಲಿ ಮೃತನಾಗಬಹುದು. ಈಗ, ಸ್ವಾಮಿ, ನನ್ನ ಸನ್ಮಿತ್ರರಾದ ಗೃಹಸಚಿವರ ಪರಿಶೀಲನೆಗಾಗಿ ಮಂಡಿಸಬೇಕಾದವುಗಳೆಂದು ನಾನು ಭಾವಿಸಿದ ಮೂರು ಪ್ರಸ್ತಾವಗಳು ಇವು. ಅವರು ಇಚ್ಛಿಸುವುದಾದರೆ, ಈ ಸದನದಲ್ಲಿ ಕೂಡ ಇನ್ನೂ ಕಾಲಾವಕಾಶವಿದೆ.

**ಶ್ರೀ ಕೆ.ಎಸ್. ಹೆಗಡೆ:** ಎಂದರೆ ಆಂಧ್ರ ಸಂಪೂರ್ಣವಾಗಿ ವಿಭಿನ್ನ ಸಂಪ್ರದಾಯವನ್ನು ಹೊಂದಿರಬೇಕೆಂದು ಸೂಚಿಸುವಿರಾ?

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಅದನ್ನೇ ಸೂಚಿಸಬಯಸುತ್ತೇನೆ. ಅವರು ಈ ವಿಷಯದ ಬಗ್ಗೆ ಸಾಕಷ್ಟು ಗಮನಹರಿಸಿಲ್ಲವೆಂಬುದನ್ನು ಅವರಿಗೆ ತಿಳಿಸುತ್ತೇನೆ.

**ಶ್ರೀ ಕೆ.ಎಸ್. ಹೆಗಡೆ:** ಅದನ್ನು ಎಲ್ಲ ರಾಜ್ಯಗಳಿಗೂ ಅನ್ವಯಿಸಬೇಕು.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಹಾಗೆಯೇ ಹೇಳಿದ್ದೇನೆ.

**ಶ್ರೀ ಕೆ.ಎಸ್. ಹೆಗಡೆ:** ಅದೊಂದು ಸಾಮಾನ್ಯ ಪ್ರಸ್ತಾವ.

**ಡಾ. ಬಿ.ಆರ್. ಅಂಬೇಡ್ಕರ್:** ದಯವಿಟ್ಟು ಒಂದು ನಿಮಿಷ ತಾಳಿ, ಮಾನ್ಯ ಸಭಾಧ್ಯಕ್ಷರೇ, ಆಂಧ್ರ ರಾಜ್ಯವೊಂದರ ಸೃಜನೆಯೊಂದರಿಂದ ನಮ್ಮೆಲ್ಲ ತೊಂದರೆಗಳೂ ಕೊನೆಗೊಳ್ಳುವುದಿಲ್ಲ. ಇದೇ ಬಗೆಯ ಕೋರಿಕೆಯಿಟ್ಟಿರುವ ಹಲವಾರು ರಾಜ್ಯಗಳಿವೆ; ಆದ್ದರಿಂದ ಸರ್ಕಾರವು ಬಹುಭಾಷಿಕ ಪ್ರಾಂತ್ಯಗಳು ಈಗಿರುವಂತೆಯೇ ಇರಿಸುವ ಮೂಲಕ ಮತ್ತು ಅದರಿಂದ ಉದ್ಭವಿಸಬಹುದಾದ ಭಾವನೆಗಳು ಮತ್ತು ಭಾರಿ ಪ್ರಮಾಣದ ಕುಂದುಕೊರತೆಗಳನ್ನು ನಿವಾರಿಸಲು ಹಾಗೂ ಕೇವಲ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರವೇ ಭಾಷಾ ರಾಜ್ಯವನ್ನು ಸೃಜಿಸುವ ಸಾಧ್ಯತೆಯ ಬಗ್ಗೆ ಯಾವುದೇ ಇತರ ಮಾರ್ಗೋಪಾಯಗಳನ್ನು ಕಂಡು ಹಿಡಿಯುವುದು ಅವಶ್ಯವಾಗಿದೆ. ಇದು ನಮ್ಮ ಮುಂದಿನ ಅತ್ಯಂತ ಜಟಿಲ ಸಮಸ್ಯೆಗಳಲ್ಲೊಂದಾಗಬಹುದಾದ್ದರಿಂದ ಈ ಸಮಸ್ಯೆ ಬಗ್ಗೆ ಸಾಕಷ್ಟು ಆಲೋಚನೆ ನಡೆಸುತ್ತಿದ್ದೇನೆ. ನನ್ನ ಸೂಚನೆಗಳು ದ್ವಿಮುಖವಾಗಿವೆ. ಬಹುಭಾಷಾ ರಾಜ್ಯಗಳಿರುವ ಕಡೆಗಳಲ್ಲೆಲ್ಲ ಅಲ್ಲಿನ ರಾಜ್ಯಪಾಲರಿಗೆ ಆ ರಾಜ್ಯದ ಅಲ್ಪಸಂಖ್ಯಾತರನ್ನು ಕಾಪಾಡಲು ಕೆಲವೊಂದು ವಿಶೇಷ ಅಧಿಕಾರಗಳನ್ನು ನೀಡಬೇಕೆನ್ನುತ್ತೇನೆ. ಈ ಪ್ರಸ್ತಾವನೆಯನ್ನು ನಾನು ಸರ್ಕಾರದ ಪರಿಶೀಲನೆಗಾಗಿ ಸಲ್ಲಿಸುತ್ತೇನೆ. ಇದು ಕೇವಲ ನನ್ನ ಕಲ್ಪನೆಯೆಂದು ಭಾವಿಸಿಕೊಳ್ಳದಿರುವಂತೆ ನಾನು ಕೆಲವೊಂದು ಆಧಾರಗಳನ್ನು ನೀಡಲಿದ್ದೇನೆ. ಕೆಲವು ಸಂವಿಧಾನಾತ್ಮಕ ಪೂರ್ವನಿದರ್ಶನಗಳನ್ನು ಸೂಚಿಸುತ್ತೇನೆ. ಎರಡನೆಯದಾಗಿ ಬಹುಭಾಷೀಯ ಜನರಿರುವ ಅಂಥ ಎಲ್ಲಾ ರಾಜ್ಯಗಳಲ್ಲೂ ನೀವು ವಿವಿಧ ಭಾಷಾ ವರ್ಗಗಳಿಗೆ ಸೇರಿದ ಸದಸ್ಯರಿರುವ ಸಮಿತಿಗಳನ್ನು ಕಾನೂನು ಮೂಲಕ ಸ್ಥಾಪಿಸಬೇಕು. ಈ ಸಮಿತಿಗಳಿಗೆ ಜನರ ಅಹವಾಲುಗಳನ್ನು ಆಲಿಸುವ ಹಕ್ಕು ಹಾಗೂ ಮಂತ್ರಿಮಂಡಲವು ಅವರ ಸಮಸ್ಯೆಗಳಿಗೆ ನ್ಯಾಯ ಒದಗಿಸುತ್ತಿದೆಯೇ ಇಲ್ಲವೇ ಎಂಬುದನ್ನು ಪ್ರಶ್ನಿಸುವ ಹಕ್ಕನ್ನು ನೀಡಬೇಕು. ಅಷ್ಟೇ ಅಲ್ಲ ಯಾವುದೇ ಒಂದು ವರ್ಗಕ್ಕೆ ಅನ್ಯಾಯವಾಗಿರುವ ಯಾವುದೇ ಕ್ರಮವನ್ನು ರದ್ದುಗೊಳಿಸುವಂತೆ ರಾಜ್ಯಪಾಲರಿಗೆ ಅಪೀಲು ಸಲ್ಲಿಸುವ ಹಕ್ಕನ್ನೂ ಹೊಂದಿರಬೇಕು. ಈ ಮೂರು ವಿಷಯಗಳನ್ನು ನೆರವೇರಿಸಿದಲ್ಲಿ ಮೊದಲನೇ ಹಂತದಲ್ಲಿ ರಾಜ್ಯಗಳು ಪ್ರಸ್ತುತ ಇರುವಂತೆಯೇ ಮುಂದುವರಿಯಲು ಸಾಧ್ಯವಾಗುತ್ತದೆ. ಅಂತಿಮವಾಗಿ, ಈ ಕ್ರಮಗಳಿಂದಲೂ ನಾವು ಯಶಸ್ವಿಗಳಾಗಲು ಸಾಧ್ಯವಾಗುವುದಿಲ್ಲವೆಂದಾದರೆ, ವಿಧಿಯು ನಮ್ಮನ್ನು ಕೊಂಡೊಯ್ಯುವ ಹಾದಿಯಲ್ಲಿ ಎಂದರೆ ಭಾಷಾವಾರು ರಾಜ್ಯವನ್ನು ಹೊಂದುವಂಥ ಕ್ರಮ ತೆಗೆದುಕೊಳ್ಳಬಹುದು.

ಮಾನ್ಯರೆ, ನನ್ನ ಅಭಿಪ್ರಾಯದಂತೆ ಭಾಷಾವಾರು ರಾಜ್ಯಗಳ ಸೃಜನೆಯ ಸಂಬಂಧದಲ್ಲಿ ಎರಡು ವಿಷಯಗಳ ಪರಿಗಣನೆ ಅಗತ್ಯವಿದೆ. ಒಂದು, ಭಾಷಾವಾರು ರಾಜ್ಯವು ಕಾರ್ಯಸಾಧ್ಯತೆಯುಳ್ಳ ರಾಜ್ಯವಾಗಿರಬೇಕು. ಎಂದರೆ ಅದೊಂದು ಸಣ್ಣ ರಾಜ್ಯವಾಗಿದ್ದು ಅಲ್ಲಿ ಸಂಸ್ಕೃತಿಯಿದ್ದು ಅದರದೇ ಆದ ಭಾಷೆಯಿದ್ದು ತನ್ನದೇ ಆದ ಪ್ರತ್ಯೇಕ ಭಾವನೆ ಹಾಗೂ ಅಸ್ತಿತ್ವವನ್ನು ಹೊಂದಿರಬಹುದು. ಆದರೂ ತನ್ನ

ಆಡಳಿತವನ್ನು ತಾನೇ ನಡೆಸಲು ಸಾಧನಗಳಿರದ ಸಣ್ಣ ಪ್ರದೇಶವಾಗಿರಬಹುದು. ಜನ ಸಂಸ್ಕೃತಿಯ ಮೇಲೆ ಬದುಕುವುದಿಲ್ಲ, ಜನ ಭಾಷೆಯಿಂದ ಬದುಕುವುದಿಲ್ಲ, ಜನ ತಾವು ಹೊಂದಿರುವ ಸಂಪನ್ಮೂಲಗಳ ಆಧಾರದ ಮೇಲೆ ಬದುಕುತ್ತಾರೆ. ಆದರೆ ದೇವರು ಅವರಿಗೆ ಸಂಸ್ಕೃತಿಯನ್ನು ಕೊಟ್ಟಿದ್ದಾನೆ, ಭಾಷೆಯನ್ನು ಕೊಟ್ಟಿದ್ದಾನೆ. ಆದರೆ ದೇವರು ಅವರಿಗೆ ಸಂಪನ್ಮೂಲಗಳನ್ನು ಕೊಟ್ಟಿಲ್ಲವೆಂದರೆ, ಅವರಿಗೆ ಪ್ರತ್ಯೇಕ ಭಾಷಾವಾರು ರಾಜ್ಯವನ್ನು ಹೊಂದಲು ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ. ಎರಡನೆಯ ಅಂಶ ಹೀಗಿದೆ. ಭಾಷಾವಾರು ಪ್ರಾಂತ್ಯಗಳು ತೊಂದರೆಯನ್ನುಂಟು ಮಾಡುವ ವಿಷಯ ನಮ್ಮ ದೇಶದಲ್ಲಿ ಮಾತ್ರ ಕಂಡು ಬರುತ್ತದೆ. ಸ್ವಿಟ್ಜರ್ಲೆಂಡ್ ಕೂಡ ಬಹುಭಾಷೀಯ ಘಟಕವಾದರೂ ಅಲ್ಲಿ ಏಕೆ ಇಂಥ ತೊಂದರೆಗಳು ಕಂಡು ಬರುವುದಿಲ್ಲ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಆ ದೇಶದಲ್ಲಿ ಫ್ರೆಂಚ್, ಜರ್ಮನ್ ಹಾಗೂ ಇಟಲಿಯನ್ನರಿದ್ದಾರೆ. ಆದರೂ ಇಂದು ಅದೊಂದು ಅತ್ಯಂತ ಸಂತಸದಾಯಕ ದೇಶ ಮಾತ್ರವಲ್ಲ. ಅತ್ಯಂತ ಸಮೃದ್ಧ ದೇಶವೂ ಆಗಿದೆ. ಸ್ವಿಟ್ಜರ್ಲೆಂಡ್ ಬಹುಭಾಷಿಕ ಘಟಕವಾಗಿದ್ದರೂ ಅದರಲ್ಲಿ ಯಾವುದೇ ಪ್ರಾಂತ್ಯಗಳಿಲ್ಲ ಏಕೇ? ಇದಕ್ಕೆ ಉತ್ತರ ನನ್ನ ಬಳಿಯಿದೆ ಸ್ವಿಟ್ಜರ್ಲೆಂಡಿನಲ್ಲಿ ಭಾಷೀಯತೆಯ ಜೊತೆಗೆ ಕೋಮುವಾದ ಸೇರಿಕೊಂಡಿಲ್ಲ. ಆದರೆ ನಮ್ಮ ದೇಶದಲ್ಲಾದರೋ ಭಾಷಾವಾದವು ಕೋಮುವಾದದ ಮತ್ತೊಂದು ಹೆಸರಾಗಿದೆ ಅಷ್ಟೆ. ನೀವೊಂದು ಭಾಷಾವಾರು ಪ್ರಾಂತ್ಯವನ್ನು ಸೃಜಿಸಿದರೆ ನೀವು ಆ ಪ್ರಾಂತ್ಯದ ಬಹುಸಂಖ್ಯಾತ ಕೋಮು ಆಗಿರುವ ಏಕೈಕ ಕೋಮಿಗೆ ಆಡಳಿತ ಸೂತ್ರಗಳನ್ನು ಕೊಟ್ಟಂತಾಗುತ್ತದೆ ಮತ್ತು ಈ ರೀತಿಯಾಗಬಹುದಾದ ಅನೇಕ ಪ್ರಾಂತಗಳನ್ನು ನಾನು ನಿಮಗೆ ತೋರಿಸಬಲ್ಲೆ. ಹೀಗೆ ಆಡಳಿತದ ಹೊಣೆ ಹೊತ್ತ ಕೋಮು ತನ್ನದೇ ಆದ ಮಡಿವಂತಿಕೆಯ ಅಸ್ತಿತ್ವವನ್ನು ಭಾವಿಸಿಕೊಂಡು ಅತ್ಯಂತ ಕೆಳಮಟ್ಟದ ಮತೀಯತೆಯನ್ನು ರೂಢಿಯಲ್ಲಿ ತರುತ್ತದೆ. ಇನ್ನೊಂದು ಅರ್ಥದಲ್ಲಿ ಇದನ್ನು ತಾರತಮ್ಯ ಎಂದು ಕರೆಯಬಹುದು. ತಾರತಮ್ಯದಿಂದ ಅನ್ಯಾಯವುಂಟಾಗುತ್ತದೆ ಮತ್ತು ಅನ್ಯಾಯದಿಂದ ಕೆಟ್ಟ ಭಾವನೆಗಳು ಮೊಳೆಯುತ್ತವೆ. ನಮ್ಮ ಭಾಷಾವಾದದೊಂದಿಗೆ ಕೋಮುವಾದವನ್ನು ಥಳುಕುಹಾಕಿರದಿದ್ದರೆ ನಮ್ಮ ಭಾಷಾವಾದವು ನಮಗೆ ಅಪಾಯಕಾರಿಯಾಗುತ್ತಿರಲಿಲ್ಲ; ಆದರೆ ಸಂಗತಿ ಹಾಗಾಗಿಲ್ಲ. ನಿರ್ದಿಷ್ಟ ಸಮುದಾಯವು ಅಧಿಕಾರ ಹುದ್ದೆಯಲ್ಲಿದ್ದುಕೊಂಡು ಜಾತಿವಾದವನ್ನು ಬೆಂಬಲಿಸುವುದನ್ನು ತಪ್ಪಿಸಲು ಎರಡು ಪರಿಹಾರ ಕ್ರಮಗಳು ಸಾಕೆನಿಸುತ್ತವೆ ಅವುಗಳೆಂದರೆ, ವಜಾ ಮಾಡಲು ರಾಜ್ಯಪಾಲರಿಗೆ ಅಧಿಕಾರ ನೀಡುವುದು ಮತ್ತು ಎರಡನೆಯದಾಗಿ ಮಂತ್ರಿಮಂಡಲ ಅಥವಾ ರಾಜ್ಯಪಾಲರಿಗೆ ಮನವಿಗಳನ್ನು ಸಲ್ಲಿಸಬಹುದಾದ ಸಣ್ಣ ಸಮಿತಿಗಳನ್ನು ನೇಮಕ ಮಾಡುವುದು.

ಮಾನ್ಯರೆ, ನಮಗೆ ಒಂದು ಸಂಪ್ರದಾಯವಿದೆ. ಜನ ನನ್ನ ಬಗ್ಗೆ ಯಾವಾಗಲೂ ಹೀಗೆ ಹೇಳುತ್ತಿರುತ್ತಾರೆ, "ಓ ನೀವೇ ಸಂವಿಧಾನ ಶಿಲ್ಪಿಗಳು" ಎಂದು ಅದಕ್ಕೆ ನನ್ನುತ್ತರ 'ನಾನೊಂದು ದುಡಿಯುವ ಕುದುರೆ' ನನಗೆ ಏನು ಮಾಡಲು ಸೂಚಿಸಲಾಯಿತೋ ಅದನ್ನು ನಾನು ನನ್ನ ಇಚ್ಛೆಗೆ ವಿರುದ್ಧವಾಗಿಯೂ ನಿರ್ವಹಿಸಿದ್ದೇನೆ.

**ಶ್ರೀ ಪಿ. ಸುಂದರಯ್ಯ:** ನೀವು ನಿಮ್ಮ ಮಾಲೀಕರಿಗೆ ಆ ಬಗೆಯಲ್ಲಿ ಏಕೆ ಸೇವೆ ಸಲ್ಲಿಸಬೇಕಾಗಿತ್ತು?

**ಮಾನ್ಯ ಸಭಾಧ್ಯಕ್ಷರು:** ಆರ್ಡರ್ ಆರ್ಡರ್

**ಡಾ. ಬಿ.ಆರ್. ಅಂಬೇಡ್ಕರ್:** ಆದರೆ ಬ್ರಿಟಿಷರ ಬಗ್ಗೆ ಇದ್ದ ನಮ್ಮ ದ್ವೇಷದಿಂದಾಗಿ ನಮಗೆ ಅದು ಜನ್ಮಗತವಾಗಿದೆ. ಪ್ರಜಾಪ್ರಭುತ್ವದ ಬಗೆಗಿನ ಕೆಲವೊಂದು ಅಭಿಪ್ರಾಯಗಳನ್ನು ಸಾರ್ವಕಾಲಿಕವಾಗಿ ಒಪ್ಪಿಕೊಳ್ಳಲಾಗುವುದಿಲ್ಲವೆಂದು ನನಗೆ ಕಂಡು ಬರುತ್ತದೆ. ರಾಜ್ಯಪಾಲರಿಗೆ ಯಾವುದೇ ಅಧಿಕಾರವಿರಕೂಡದೆಂಬ ಭಾವನೆಯನ್ನು ನಾವು ಪಾರಂಪರಿಕವಾಗಿ ಹೊಂದಿದ್ದೇವೆ. ಅವರು ಕೇವಲ ರಬ್ಬರ್ ಸ್ಟಾಂಪ್ ಮಾತ್ರ ಅಗಿರಬೇಕು. ಎಷ್ಟೋ ಧೂರ್ತನಾಗಿರುವ ಒಬ್ಬ ಮಂತ್ರಿ, ಎಷ್ಟೇ ಭ್ರಷ್ಟನಾಗಿರಲಿ ರಾಜ್ಯಪಾಲರಿಗೆ ಒಂದು

ಪ್ರಸ್ತಾವವನ್ನು ಸಲ್ಲಿಸಿದಾಗ ಅವರು ಅದನ್ನು ಅಂಗೀಕರಿಸಲೇಬೇಕು. ಪ್ರಜಾಪ್ರಭುತ್ವದ ಬಗ್ಗೆ ನಮ್ಮ ಈ ದೇಶದಲ್ಲಿ ನಾವು ಹೊಂದಿರುವ ಪರಿಕಲ್ಪನೆಯ ಬಗೆ ಇದು.

**ಶ್ರೀ ಎಂ.ಎಸ್. ರಣಾವತ್ (ರಾಜಸ್ತಾನ):** ಆದರೆ ನೀವು ಅದನ್ನು ಸಮರ್ಥಿಸಿದ್ದಿರಿ.

**ಡಾ. ಬಿ.ಆರ್. ಅಂಬೇಡ್ಕರ್:** ನಾವು ನ್ಯಾಯವಾದಿಗಳು ಅನೇಕ ವಿಷಯಗಳನ್ನು ಸಮರ್ಥಿಸುತ್ತೇವೆ. (ತಡೆ–ಗಲಾಟೆ) ಇದೊಂದು ಗಂಭೀರಸಮಸ್ಯೆ ನಾನು ಹೇಳುವುದನ್ನು ನೀವು ಗಮನವಿಟ್ಟು ಆಲಿಸಬೇಕು.

ಸ್ವಾಮಿ, ನಾನು ಹೇಳಿದಂತೆ, ಬ್ರಿಟಿಷರ ಬಗೆಗಿನ ನಮ್ಮ ವಿರೋಧ ವ್ಯಕ್ತಪಡಿಸಲು ನಾವು ಪ್ರಜಾಪ್ರಭುತ್ವದ ಸಿದ್ಧಾಂತವನ್ನು ಬೆಳೆಸಿಕೊಂಡೆವು. ಬ್ರಿಟಿಷರು ಹೋಗಬೇಕು ಮತ್ತು ಬ್ರಿಟಿಷರಿಗೆ ಅಧಿಕಾರವಿರಕೂಡದು. ರಾಜ್ಯಪಾಲರಿಗೆ ಅಧಿಕಾರವಿರಬಾರದು. ಈ ಬಗ್ಗೆ ನಾನು ಎರಡು ಪ್ರಕರಣಗಳನ್ನು ಉಲ್ಲೇಖಿಸುತ್ತೇನೆ. ಒಂದು ಪ್ರಕರಣವು ಕೆನಡಾದ ಸಂವಿಧಾನಕ್ಕೆ ಸಂಬಂಧಪಟ್ಟಿದ್ದು. ಸಂವಿಧಾನದ ೯೩ನೇ ಪ್ರಕರಣವನ್ನು ಉಲ್ಲೇಖಿಸುತ್ತೇನೆ. ಈ ಸದನದಲ್ಲಿರುವ ಪ್ರತಿಯೊಬ್ಬರಿಗೂ ತಿಳಿದಿರುವಂತೆ ನಮ್ಮಂತೆಯೇ ಕೆನಡಾ ಕೂಡ ಬಹುಭಾಷೀಯ ದೇಶ. ಅದರ ಒಂದು ಭಾಗದ ಜನ ಇಂಗ್ಲೀಷ್ ಭಾಷೆ ಮಾತನಾಡುತ್ತಾರೆ, ಮತ್ತೊಂದು ಭಾಗದ ಜನ ಫ್ರೆಂಚ್ ಭಾಷೆ ಮಾತನಾಡುತ್ತಾರೆ. ಇಲ್ಲಿ ಇನ್ನೂ ಒಂದು ವಿಲಕ್ಷಣ ಸಂಗತಿಯೆಂದರೆ ಇಂಗ್ಲೀಷ್ ಭಾಷೆ ಮಾತನಾಡುವ ಜನ ಪ್ರಾಂಟಿಸ್ಟಂಟರು; ಫ್ರೆಂಚ್ ಭಾಷೆ ಮಾತನಾಡುವವರು ರೋಮನ್ ಕೆಥೋಲಿಕ್ ಆಗಿದ್ದಾರೆ. ೧೮೬೪ರಲ್ಲಿ ಕೆನಡಾದ ಸಂವಿಧಾನವನ್ನು ರಚಿಸಿದಾಗ ಕೆಥೋಲಿಕ್ಕರು ಇಂಗ್ಲೀಷ್ ಪ್ರಾಟಿಸ್ಟೆಂಟರ ಬಹುಸಂಖ್ಯೆಯವರ ಅಧೀನದಲ್ಲಿ ಬಿದ್ದರೆ ತೊಂದರೆಯುಂಟಾಗಬಹುದೆಂಬ ಭಯದಿಂದ ಸಂಯುಕ್ತ ಕೆನಡಾ ಸಂವಿಧಾನದ ಅಡಿಯಲ್ಲಿ ಸೇರಲು ಸಿದ್ಧರಿರಲಿಲ್ಲ. ಹೀಗಾಗಿ ಪಾರ್ಲಿಮೆಂಟ್ ಕೆನೆಡಿಯನ್ ಸಂವಿಧಾನದಲ್ಲಿ ೯೩ನೇ ಪ್ರಕರಣವನ್ನು ಜಾರಿಗೊಳಿಸಿತು. ಆ ಪ್ರಕರಣದಲ್ಲಿ ಎರಡು ಅಂಶಗಳಿವೆ. ರೋಮನ್ ಕೆಥೋಲಿಕ್ ಜನರು ವಾಸ ಮಾಡುತ್ತಿರುವ ಯಾವುದೇ ಪ್ರಾಂತ್ಯದಲ್ಲಿ ಸಹಜವಾಗಿಯೇ ಪ್ರೊಟೆಸ್ಟೆಂಟ್ ಪ್ರದೇಶಗಳಲ್ಲಿನ ಪ್ರಾಂತ್ಯಗಳನ್ನು ಇದು ಉಲ್ಲೇಖಿಸುತ್ತದೆ.

ರೋಮನ್ ಕೆಥೋಲಿಕ್ ಜನರು ಧರ್ಮಾಧಾರಿತವಾಗಿ ವಿಶೇಷ ಪ್ರಯೋಜನವೆಂದು ಭಾವಿಸಬಹುದಾದಂಥ ಯಾವುದೇ ಶಾಸನವನ್ನು ಜಾರಿಗೊಳಿಸಿದಾಗ, ಉಳಿದ ಜನರು ತಮಗೆ ಅನ್ಯಾಯವಾಗಿದೆಯೆಂದು ತಿಳಿಸಿ ಗವರ್ನರ್ ಜನರಲ್‌ನಿಗೆ ಮನವಿ ಸಲ್ಲಿಸುವ ಹಕ್ಕನ್ನು ಹೊಂದಿದ್ದರು ಮತ್ತು ಗವರ್ನರ್ ಜನರಲ್ ಕೂಡ ೯೩ನೇ ಪ್ರಕರಣದ ಮೂಲಕ ಅವರ ದೂರನ್ನು ಪರಿಗಣಿಸುವ ಹಕ್ಕನ್ನು ಹೊಂದಿದ್ದನು. ಇದು ಫಿರ್ಯಾದಿಯ ಶಾಸನಬದ್ಧ ಹಕ್ಕು ಆಗಿತ್ತು. ಪ್ರಕರಣ ೯೩ರಲ್ಲಿ ಕೆಥೋಲಿಕ್‌ರಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಬಹುಸಂಖ್ಯಾತರ ನಿರ್ಣಯದ ವಿರುದ್ಧ ಅಪೀಲು ಮಾಡಲು ಶಾಸನಬದ್ಧ ಹಕ್ಕನ್ನು ನೀಡಿರುವುದಷ್ಟೇ ಅಲ್ಲ, ಅದು ಇನ್ನೂ ಮುಂದೆ ಹೋಗಿ ಅಲ್ಪಸಂಖ್ಯಾತ ಕೆಥೋಲಿಕ್ಕರಿಗೆ ರಕ್ಷಣೆ ನೀಡಿ ಸಕಾರಾತ್ಮಕ ಕ್ರಮ ತೆಗೆದುಕೊಳ್ಳುವ ಹಕ್ಕನ್ನು ಸಹ ಗವರ್ನರ್ ಜನರಲ್‌ನಿಗೆ ನೀಡುತ್ತದೆ. ಕೆನಡಿಯನ್ ಸಂವಿಧಾನದಲ್ಲಿ ೯೩ನೇ ಪ್ರಕರಣವನ್ನು ಒಳಗೊಂಡಿರುವುದರಿಂದ ನಮ್ಮ ಸನ್ಮಾನ್ಯ ಗೃಹ ಸಚಿವರು ಕೆನೆಡಿಯನ್ ಸಂವಿಧಾನವು ಪ್ರಜಾಸತ್ತಾತ್ಮಕವೇ ಅಥವಾ ಪ್ರಜಾಸತ್ತಾತ್ಮಕವಲ್ಲದ ಸಂವಿಧಾನವೇ ಎಂದು ಭಾವಿಸುತ್ತಾರೆಯೇ ಎಂದು ಪ್ರಶ್ನಿಸಬಯಸುತ್ತೇನೆ. ಅವರ ಉತ್ತರ ಏನು?

**ಪೂರ್ವಾಹ್ನ ೧೧–೦೦**

**ಡಾ. ಕೆ.ಎಸ್. ಕಾಟ್ಜು:** ನನ್ನ ಉತ್ತರವೆಂದರೆ ಈ ಸಂವಿಧಾನದ ಶಿಲ್ಪಿ ನೀವೇ ಆಗಿದ್ದೀರಿ.

**ಡಾ. ಬಿ.ಆರ್. ಅಂಬೇಡ್ಕರ್:** ನಿಮ್ಮ ಕುಂದು ಕೊರತೆಗಳಿಗಾಗಿ ನನ್ನನ್ನು ದೂಷಿಸುತ್ತೀರಾ?

**ಸನ್ಮಾನ್ಯ ಸಭಾಧ್ಯಕ್ಷರು:** ಪ್ರಸ್ತುತ ಸಂವಿಧಾನವು ಬಹುಮತದ ನಿರ್ಧಾರವಾದ್ದರಿಂದ ಅವರು ಅದನ್ನು ಸಮರ್ಥಿಸಿದರಷ್ಟೆ. ಮುಂದುವರಿಸಿ.

**ಡಾ. ಬಿ.ಆರ್. ಅಂಬೇಡ್ಕರ್:** ಆದ್ದರಿಂದ, ಮಾನ್ಯರೆ, ನಮ್ಮ ಸಂವಿಧಾನಕ್ಕೆ ತಿದ್ದುಪಡಿ ತಂದು ೯ಇನೇ ಪ್ರಕರಣದ ಅಡಿಯಲ್ಲಿ ಗವರ್ನರ್ ಜನರಲ್ ಅವರಿಗೆ ನೀಡಿರುವಂಥದೇ ಅಧಿಕಾರಗಳನ್ನು ನಮ್ಮ ಗವರ್ನರ್‌ಗೂ ನೀಡುವುದಾದರೆ ಪ್ರಜಾಸತ್ತೆಗೆ ಮತ್ತು ಪ್ರಜಾಸತ್ತಾತ್ಮಕ ಸಂವಿಧಾನಕ್ಕೆ ಯಾವುದೇ ಹಾನಿ ಮಾಡಿದಂತಾಗುವುದಿಲ್ಲವೆಂಬುದು ನನ್ನ ವಿನಂತಿ ಅಷ್ಟೆ. ಯಾವುದೇ ದೃಷ್ಟಿಯಿಂದ ನೋಡಿದರೂ ಇದರಿಂದ ರಾಜ್ಯದಲ್ಲಿನ ಬಹುಸಂಖ್ಯಾತರು ತಮಗೆ ನ್ಯಾಯ ದೊರಕಿಸುತ್ತಿಲ್ಲವೆಂದು ಭಾವಿಸುವ ಕೆಲವೊಂದು ನಿರ್ದಿಷ್ಟ ಸಣ್ಣ ಪುಟ್ಟ ಭಾಷಾಪ್ರದೇಶಗಳಿಗೆ ಅಥವಾ ಭಾಷಾಗುಂಪುಗಳಿಗೆ ಸೇರಿದ ವ್ಯಕ್ತಿಗಳಿಗೆ ಒಂದು ಬಗೆಯ ರಕ್ಷಣೆ ಒದಗಿಸಿದಂತಾಗುತ್ತದೆ.

ನಾನು ಮಾಡಬೇಕಿಂದಿರುವ ಎರಡನೇ ಸೂಚನೆ ಎಂದರೆ ಇಂಗ್ಲೀಷ್ ಸಂವಿಧಾನದಿಂದ ನನ್ನ ಮಾನ್ಯ ಸ್ನೇಹಿತರಿಗೆ ಬ್ರಿಟಿಷ್ ಸಂವಿಧಾನದಲ್ಲಿ ನೀಡಿರುವ ಸ್ಕಾಟ್‌ಲ್ಯಾಂಡಿನ ಸ್ಥಿತಿಗತಿಗಳ ಬಗ್ಗೆ ತಿಳಿದಿರಬೇಕು, ಆದ್ದರಿಂದ ನಾನು ಆ ಬಗ್ಗೆ ಹೆಚ್ಚಿನ ವಿವರಣೆಗೆ ಹೋಗುವುದಿಲ್ಲ. ಆದರೆ, ಅವರು ಎರಡು ವಿಷಯಗಳನ್ನು ನೆನಪಿನಲ್ಲಿಟ್ಟಿರಬಹುದು. ಒಂದು – ಸ್ಕಾಟಲ್ಯಾಂಡ್ ಮತ್ತು ಇಂಗ್ಲೆಂಡ್ ಒಂದೇ ಆಗಿದ್ದರೂ ಅವುಗಳು ಎರಡು ಪ್ರತ್ಯೇಕ ದೇಶಗಳೆಂದು ಯಾರೂ ಹೇಳಲಾಗುವುದಿಲ್ಲ. ಆದರೂ ಸಹ, ಸ್ಕಾಟ್‌ಲ್ಯಾಂಡಿನ ಜನತೆಯ ಹಿತರಕ್ಷಣೆಗಳನ್ನು ಕಾಪಾಡಲು ಬ್ರಿಟಿಷ್ ಸಂವಿಧಾನದ ಅಡಿಯಲ್ಲಿ ಸ್ಕಾಟ್‌ಲ್ಯಾಂಡಿಗಾಗಿ ರಾಜ್ಯದ ವಿಶೇಷ ಕಾರ್ಯದರ್ಶಿಯೊಬ್ಬರು ಈಗಲೂ ಇದ್ದಾರೆ. ಅವರು, ಲಂಡನ್ನಿಗೆ ಹೋಗಿದ್ದಿರಲೇಬೇಕು – ನನಗೆ ತಿಳಿದ ಮಟ್ಟಿಗೆ ಬಹಳಷ್ಟು ಸಲ–ಮೂರು ಸಲ (ಮಾನ್ಯ ಸಚಿವರು ಸನ್ನೆಗಳ ಮೂಲಕ ಮೂರು ಎಂದು ಸೂಚಿಸಿದರು) ಹೋಗಿರಬೇಕು. ಅವರು ಸಂಸತ್ ರಸ್ತೆಯ ಮೂಲಕ ಹಾದು ಹೋಗಿರಲೇಬೇಕು ಮತ್ತು ೧೦, ಡೌನಿಂಗ್ ಸ್ಟ್ರೀಟ್‌ನ ಪಕ್ಕದಲ್ಲಿ ಒಂದು ದೊಡ್ಡ ಬ್ರಾಸ್‌ಬೋರ್ಡ್‌ನಲ್ಲಿ ""ಸ್ಕಾಟಿಷ್ ಕಚೇರಿ" ಎಂಬ ನಾಮಫಲಕವಿದ್ದು ಅಲ್ಲಿ ಸ್ಕಾಟ್‌ಲ್ಯಾಂಡ್‌ಗಾಗಿ ರಾಜ್ಯ ಕಾರ್ಯದರ್ಶಿಯವರು ಇರುತ್ತಾರೆ. ಅದು ಬ್ರಿಟಿಷರು ಮಾಡಿದ ಒಂದು ವ್ಯವಸ್ಥೆಯಾಗಿದೆ. ಅವರು ಇದು, ಜಾತೀಯತೆಯನ್ನು ಸೂಚಿಸುವುದಾಗಿದೆ ಎಂದು ನನ್ನ ಸ್ನೇಹಿತರು ವಾದಿಸುವಂತೆ ವಾದಿಸುವುದಿಲ್ಲ. ಹೌದೇ? ಹಲವಾರು ವರ್ಷಗಳ ಹಿಂದೆಯೇ ಸ್ಕಾಟ್‌ಲ್ಯಾಂಡ್–ಇಂಗ್ಲೆಂಡ್‌ಗೆ ಸೇರಿದೆ. ಆದರೂ ಸಹ ಸ್ಕಾಟಿಷರ್ ಭಾವನೆಗಳನ್ನು ಗುರುತಿಸಲು, ಅವರ ಸಂವೇದನೆಗಳನ್ನು ಗೌರವಿಸಲು ಬ್ರಿಟಿಷ್ ಜನತೆಯು ಸ್ಕಾಟ್‌ಲ್ಯಾಂಡಿಗಾಗಿ "ರಾಜ್ಯದ ಕಾರ್ಯದರ್ಶಿ" ಎಂದು ಕರೆಯಲಾಗುವ ಒಂದು ಶಾಸನ ಬದ್ಧ ಕಛೇರಿಯನ್ನು ಸ್ಥಾಪಿಸಿರುತ್ತಾರೆ.

ಇನ್ನು ನಾನು ಉಲ್ಲೇಖಿಸುವ ಎರಡನೇ ವಿಷಯವೆಂದರೆ, ಬ್ರಿಟಿಷ್ ಸಂಸತ್ತಿನಲ್ಲಿ ಎರಡು ಸಮಿತಿಗಳಿವೆ ಒಂದು ವೇಲ್ಸ್ ಮತ್ತು ಮನ್‌ಮೌತ್ ಷೈರ್ ಸಮಿತಿಯಾಗಿದ್ದು ಇನ್ನೊಂದು ಸ್ಕಾಟಿಷ್ ಸದಸ್ಯರನ್ನೊಳಗೊಂಡ ಸ್ಕಾಟ್‌ಲ್ಯಾಂಡ್‌ಗಾಗಿನ ಸಮಿತಿ. ಸ್ಕಾಟ್‌ಲ್ಯಾಂಡಿಗೆ ಉಲ್ಲೇಖಿಸಲಾಗುವ ಎಲ್ಲಾ ವಿಧೇಯಕಗಳನ್ನು ಸ್ಕಾಟಿಷ್ ಸಮಿತಿಗೆ ಕಳುಹಿಸಲಾಗುತ್ತದೆ. ಇದರಿಂದಾಗಿ, ಸ್ಕಾಟಿಷ್ ಸದಸ್ಯರು ವಿಷಯದ ಬಗ್ಗೆ ತಮ್ಮ ಸಂಪೂರ್ಣ ಹೇಳಿಕೆಯನ್ನು ನೀಡಬಹುದಾಗಿದೆ. ಅದೇ ರೀತಿಯಲ್ಲಿ ವೇಲ್ಸ್ ಮತ್ತು ಮನ್‌ಮೌತ್‌ಷೈರ್‌ನ ಸದಸ್ಯರನ್ನು ಸಹ ತಮ್ಮ ವ್ಯವಹಾರಗಳಿಗೆ ಸಂಬಂಧಿಸಿದ ಸಮಿತಿಗಳ ಬಗ್ಗೆ ಗಮನಹರಿಸಲು ಸಾಧ್ಯವಾಗುತ್ತದೆ. ಅಲ್ಪಸಂಖ್ಯಾತ ಸಮುದಾಯದ ಮತ್ತು ದುರ್ಬಲ ಜನರ ಭಾವನೆಗಳೊಂದಿಗೆ ಬಹುಸಂಖ್ಯಾತರು ಚೆಲ್ಲಾಟವಾಡುತ್ತಿದ್ದಾರೆಂದು ಅವರ ಪರವಾಗಿ ಬ್ರಿಟಿಷ್ ಸಂಸತ್ ಕಾರ್ಯನಿರ್ವಹಿಸಿ ತಪ್ಪು ಮಾಡುತ್ತಿದೆ ಎಂದು ತಿಳಿಯಬಾರದೆಂಬ

ಭಯ ಭೀತಿಯನ್ನು ತೊಡೆದು ಹಾಕಬಹುದೆಂಬ ವಿವೇಚನೆ ಇದರ ಹಿಂದಿದೆ. ಮಾನ್ಯರೆ, ನನ್ನ ಸ್ನೇಹಿತರು, ನನ್ನಲ್ಲಿ ಹೇಳುತ್ತಿರುತ್ತಾರೆ, ನಾನು ಸಂವಿಧಾನವನ್ನು ರಚಿಸಿದ್ದೇನೆಂದು. ಆದರೆ, ಆ ಮಾತನ್ನು ಅಲ್ಲಗೆಳೆಯುವವರಲ್ಲಿ ನಾನು ಮೊದಲಿಗನಾಗಿದ್ದೇನೆಂದು ಹೇಳಲು ತಯಾರಿದ್ದೇನೆ. ಅದು ನನಗೆ ಬೇಡವಾದ ವಿಚಾರ. ಅದು ಯಾರಿಗೂ ಯೋಗ್ಯವಾದುದೂ ಅಲ್ಲ. ಆದರೆ ಅದೇನೇ ಇರಲಿ, ನಮ್ಮ ಜನರು ಮುಂದುವರೆಯ ಬೇಕೆಂದರೆ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಇಬ್ಬರೂ ಇರುವರೆಂಬುದನ್ನು ಮರೆಯಬಾರದು ಮತ್ತು ಅವರು "ಹೋ ಇಲ್ಲ, ನಿಮ್ಮನ್ನು ಗುರುತಿಸುವುದು ಪ್ರಜಾಪ್ರಭುತ್ವಕ್ಕೆ ಕೇಡುಬಗೆದಂತೆ" ಎಂಬಿತ್ಯಾದಿ ಮಾತುಗಳನ್ನು ಹೇಳುವುದರಿಂದ ಅಲ್ಪಸಂಖ್ಯಾತರನ್ನು ನಿರ್ಲಕ್ಷಿಸಬೇಕಿಲ್ಲ. ನಾನು ಹೇಳುವುದೇನೆಂದರೆ, ಅಲ್ಪಸಂಖ್ಯಾತರಿಗೆ ಹಾನಿ ಮಾಡುವುದೇ ಹೆಚ್ಚಿನ ತೊಂದರೆ ಉಂಟುಮಾಡಿದಂತೆ. ನಮ್ಮ ಬಾಂಬೆ ರಾಜ್ಯದಲ್ಲಿ ಅಲ್ಪ ಸಂಖ್ಯಾತರನ್ನು ನಡೆಸಿಕೊಳ್ಳುತ್ತಿರುವ ರೀತಿಯಲ್ಲಿ ನಡೆಸಿಕೊಂಡಿದ್ದರೆ ಹೇಗೆ ಎಂಬುದನ್ನು ಯೋಚಿಸಿದರೆ ಕೆಲಸಮಯ ನನಗೆ ಭಯವಾಗುತ್ತದೆ. ನನಗೆ ಸಂಕುಚಿತ ಭಾವನೆ ಇಷ್ಟವಾಗುವುದಿಲ್ಲ, ಅಲ್ಲದೇ ನನಗೆ ನಾನು ಮಹಾರಾಷ್ಟ್ರದವನು ಎಂದು ಹೇಳಿಕೊಳ್ಳಲು ಇಷ್ಟವಾಗುವುದಿಲ್ಲ ಅಂತಿಮವಾಗಿ ಏನಾಗುತ್ತದೆ ಎಂಬುದರ ಬಗ್ಗೆಯೂ ನನಗೇನು ತಿಳಿದಿಲ್ಲ. ನಾನು ಹಿಂದಿ ಭಾಷೆಯ ಬಗ್ಗೆ ಒಲವುಳ್ಳವನಾಗಿದ್ದೇನೆ. ಆದರೆ ತೊಂದರೆ ಎಂದರೆ ಹಿಂದಿ ಮಾತನಾಡುವ ಜನರೇ ಹಿಂದಿಯ ಬಹುದೊಡ್ಡ ಶತ್ರುಗಳಾಗಿದ್ದಾರೆ.

**ಮಾನ್ಯ ಅಧ್ಯಕ್ಷರು:** ಡಾ. ಅಂಬೇಡ್ಕರ್ ಅದು ಬೇರೆ ವಿಷಯ.

**ಡಾ. ಬಿ.ಆರ್. ಅಂಬೇಡ್ಕರ್:** ಅದು ಬೇರೆ ವಿಷಯವೆ. ಮಾನ್ಯರೆ, ಈಗ ನಾನು ಹೇಳಿದ್ದೇನೆಂದರೆ ಸಚಿವರುಗಳು ಎರಡು ಪ್ರಾಂತ್ಯಗಳಿಂದ ಬಂದವರಾಗಿದ್ದು ಮಂತ್ರಾಲಯದ ಬುದ್ಧಿವಂತ ಸದಸ್ಯರು ಎಲ್ಲ ನಿಧಿಗಳನ್ನು ಆ ನಿರ್ದಿಷ್ಟ ಪ್ರದೇಶದಲ್ಲಿ ಸಂಪನ್ಮೂಲ ಅಭಿವೃದ್ಧಿಗಾಗಿ ತೆಗೆದಿರಿಸಿರುತ್ತಾರೆ ಮತ್ತು ಇತರೆ ಪ್ರದೇಶಗಳಿಗೆ ಯಾವುದೇ ನಿಧಿಯನ್ನು ತೆಗೆದಿಟ್ಟಿರುವುದಿಲ್ಲ. ಇದನ್ನು ರಾಯಲುಸೀಮೆ ಪ್ರದೇಶಕ್ಕೆ ಹೇಳಬಹುದು. ಕರಾವಳಿ ಜನರು ಸಾಮಾನ್ಯವಾಗಿ ತಮ್ಮ ಪ್ರದೇಶಕ್ಕೆ ಹೆಚ್ಚಿನ ನಿಧಿಗಳನ್ನು ಪಡೆಯಬೇಕು. ಆದರೆ ರಾಯಲು ಸೀಮೆ ಪ್ರದೇಶದ ಜನರಿಗೆ ಏನೂ ದೊರೆತಿಲ್ಲ. ನನ್ನ ಸ್ನೇಹಿತರು ಸಂವಿಧಾನದಲ್ಲಿ ಉಪಬಂಧ ಕಲ್ಪಿಸುವುದಾದರೆ, ರಾಯಲು ಸೀಮೆಗೆ ಸಂಬಂಧಿಸಿದ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ಅವರು ರಾಜ್ಯಪಾಲರನ್ನು ಪ್ರತಿನಿಧಿಸಲು ಹಕ್ಕು ಹೊಂದಿರುವುದರಿಂದ ಈ ವಿಧೇಯಕವನ್ನು ಕಾನೂನು ಬದ್ಧವಾಗಿ ತಯಾರಿಸತಕ್ಕದ್ದು ಮತ್ತು ಮಂತ್ರಾಲಯದ ಸದಸ್ಯರಿಗೆ ಅವರು ತಮ್ಮ ಪಾತ್ರವನ್ನು ಇದರಲ್ಲಿ ಸೇರಿಸಬೇಕಾಗಿರುವುದರಿಂದ ದೊಡ್ಡ ಪ್ರಮಾಣದ ಅಸಮಾಧಾನವನ್ನು ತೊಡೆದುಹಾಕಿದಂತಾಗುತ್ತದೆ. ಹಾಗೆಯೇ ಮಾನ್ಯರೆ, ನಮ್ಮ ಬಂಗಾಳಿ ಸದಸ್ಯರು–ಬಿಹಾರದ ಒಂದು ಭಾಗವು ಬಂಗಾಳದ್ದೆಂದು ಹೇಳುತ್ತಾ ತೀವ್ರ ಚಳವಳಿ ಮಾಡುತ್ತಿದ್ದಾರೆ. ಮೂಲತಃ ಬಂಗಾಲಿಯರು ಎಲ್ಲ ಕಡೆ ವ್ಯಾಪಿಸಿದ್ದು ಇದಕ್ಕೆ ಕಾರಣವಾಗಿರಬಹುದೇ? ನನಗೆ ತಿಳಿಯದು. ಗವರ್ನರ್ ಜನರಲ್ ಅವರು ಬಹು ವ್ಯಾಪಕ ಪ್ರದೇಶವನ್ನು ಹೊಂದಿದ್ದರು ಮತ್ತು ಅವರು ಹೋದಲ್ಲೆಲ್ಲ ಬಂಗಾಳಿಯರು ಸಹ ಅವರ ಜೊತೆಯಲ್ಲಿ ಹೋಗುತ್ತಿದ್ದರು.

**ಮಾನ್ಯ ಅಧ್ಯಕ್ಷರು:** ಆಂಧ್ರ ವಿಧೇಯಕದ ಬಗ್ಗೆ ಮಾತನಾಡಿ.

**ಡಾ. ಬಿ.ಆರ್. ಅಂಬೇಡ್ಕರ್:** ಹೌದು ನಾನು ಉದಾಹರಣೆಯನ್ನು ಮಾತ್ರ ಕೊಡುತ್ತಿದ್ದೇನೆ. ಅಂದರೆ, ಬಿಹಾರಿಗಳು ಬಂಗಾಳಿಗಳನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ ಎಂದಾದಲ್ಲಿ ಈ ಸಮಸ್ಯೆಯನ್ನು ಪರಿಹರಿಸಲು ಇರುವ ಏಕೈಕ ದಾರಿ ಎಂದರೆ ಇದಕ್ಕಾಗಿ ವಿಧಾನ ಮಂಡಲದ ಒಂದು ಸಮಿತಿಯನ್ನು ರಚಿಸಿ, ಅದರಲ್ಲಿ ಬಂಗಾಳಿಯರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಅವರು ಮಂತ್ರಾಲಯಕ್ಕೆ ಹಾಗು

ರಾಜ್ಯಪಾಲರಿಗೆ ಅಥವಾ ರಾಷ್ಟ್ರಪತಿಯವರಿಗೆ ತಮ್ಮ ದೂರನ್ನು ಹೇಳಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ಈ ಎಲ್ಲಾ ಪ್ರಯತ್ನಗಳು ವಿಫಲವಾದಲ್ಲಿ, ಆಗ ನಾವು ಸ್ವಷ್ಟ ಪ್ರತಿಪಾದನೆಗೆ ಪ್ರಯತ್ನಿಸಬಹುದು, ಅಂದರೆ ನಾವು ಮೊದಲು ಭಾಷಾವಾದಿಗಳು ಮತ್ತು ಕೊನೆಗೂ ಭಾಷಾವಾದಿಗಳು ಎಂಬ ನೀತಿ ಅನುಸರಿಸಬೇಕು ಮತ್ತು ಆಗ ನಾವು ಭಾರತವನ್ನು ಗುರುತಿಸಲಾಗವುದಿಲ್ಲ. ಅದು ನಮ್ಮ ಅಂತಿಮ ಗುರಿಯಾಗಿದ್ದಲ್ಲಿ ದೇವರೇ ನಮ್ಮನ್ನು ಕಾಪಾಡಬೇಕು. ಆದರೆ ಮಾನ್ಯರೆ, ನನ್ನ ಸ್ನೇಹಿತರಿಗೆ ನನ್ನ ನಿವೇದನೆ ಎಂದರೆ ಅವರು ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ಜಾಗರೂಕತೆಯಿಂದ ಪರಿಶೀಲಿಸಬೇಕು, ಅದರಲ್ಲೂ ನನ್ನ ಭಾಷಣದ ಕೊನೆಯ ಭಾಗದಲ್ಲಿನ ಅಂಶಗಳನ್ನು ಹಾಗು ಭಾಷಾವಾರು ಪ್ರಾಂತ್ಯಗಳ ಸಮಸ್ಯೆಗೆ ನಾನು ನೀಡಿದ ಸಲಹೆಗಳನ್ನು ಆಧಾರವನ್ನಾಗಿಟ್ಟುಕೊಂಡು ಯಾವುದಾದರೂ ಪರಿಹಾರ ದೊರೆಯಬಹುದೆ ಎಂಬುದರ ಬಗ್ಗೆ ಪ್ರಯತ್ನಿಸುವುದು ಒಳಿತು ಹಾಗು ಅವರು ಅದರ ಮೇಲೆ ಹೊಸ ಕ್ರಮಗಳನ್ನು ತರಬಹುದು – ತರಲು ಒಪ್ಪದೇ ಇರಬಹುದು. ಆದರೆ ಅದಕ್ಕಾಗಿ ಪ್ರಯತ್ನಿಸಬಹುದು.

◆

# ೪೭

# ೧೯೫೩ರ ಸಂಪದ ಸುಂಕ ವಿಧೇಯಕ

*ಡಾ. ಬಿ.ಆರ್. ಅಂಬೇಡ್ಕರ್ (ಬಾಂಬೆ):** ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಹಣಕಾಸು ಸಚಿವರು ಮಂಡಿಸಿದ ಕ್ರಮಗಳ ಬಗ್ಗೆ ನನ್ನ ಕೆಲವೊಂದು ಅಭಿಪ್ರಾಯಗಳನ್ನು ತಿಳಿಸಲು ಇಚ್ಛಿಸುತ್ತೇನೆ. ನಾನು ಈ ಕ್ರಮಕ್ಕೆ ಬೆಂಬಲ ಸೂಚಿಸುತ್ತೇನೆ; ಇದೇ ಸಂದರ್ಭದಲ್ಲಿ ವಿಶದೀಕರಿಸಲು ಅಗತ್ಯಪಡಿಸುವಂಥ ಕೆಲವು ಅಂಶಗಳಿವೆ ಎಂದು ನಾನು ಭಾವಿಸಿದ್ದೇನೆ. ಸಂಪದ ಸುಂಕದ ಸಂಗ್ರಹಣೆಯಲ್ಲಿ ನಾನು ಯೋಚಿಸಿದ ಮೊದಲನೇ ವಿಷಯವೆಂದರೆ ಮೃತ ವ್ಯಕ್ತಿಯು ಬಿಟ್ಟು ಹೋದ ಸಂಪದದ ಮೊಬಲಗು ಎಷ್ಟು ಎಂಬುದನ್ನು ಮೊದಲು ಕಂಡುಹಿಡಿಯಬೇಕು. ಇದುವರೆಗೂ ಈ ಕ್ರಮಕ್ಕೆ ಸಂಬಂಧಪಟ್ಟ ಹಾಗೆ ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಗಳು ಮೃತ ವ್ಯಕ್ತಿಯು ಬಿಟ್ಟು ಹೋದ ಸಂಪದವನ್ನು ಪ್ರಮಾಣವನ್ನು ಹೇಗೆ ಕಂಡು ಹಿಡಿಯುತ್ತಿದ್ದಾರೆ ಎಂಬುದನ್ನು ತಿಳಿಯಲು ನನಗೆ ಇದುವರೆಗೂ ಸಾಧ್ಯವಾಗುತ್ತಿಲ್ಲ. ವಿಧೇಯಕದ ೪ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ರೀತಿ ಅದು ಮೂರು ಪ್ರಾಧಿಕಾರಗಳನ್ನು ಕೇವಲ ಪ್ರತಿಪಾದಿಸುತ್ತದೆ. ಮಂಡಳಿ, ಸಂಪದ ಸುಂಕದ ನಿಯಂತ್ರಕರು ಮತ್ತು ಮೌಲ್ಯ ನಿರ್ಧಾರಕರು. ಸ್ವತಃ ನಾನು ಹೇಳುವುದೆಂದರೆ ಒಬ್ಬ ವ್ಯಕ್ತಿಯು ಏನನ್ನು ಬಿಟ್ಟು ಹೋಗಿದ್ದಾನೆಂಬುದನ್ನು ತಿಳಿಯಲು ರಚಿಸಲಾದಂಥ ಪ್ರಾಧಿಕಾರಗಳಿಗೆ ಈ ಕ್ರಮವನ್ನು ನಿರ್ವಹಿಸುವುದು ಬಹು ಕಷ್ಟಕರವಾದ ವಿಷಯವೆಂದು ನಾನು ಭಾವಿಸುತ್ತೇನೆ.

ಮೊದಲನೆಯದಾಗಿ, ಅವರಿಗೆ ಯಾರು ಮೃತರಾಗಿದ್ದಾರೆ ಮತ್ತು ಯಾವಾಗ ಮೃತರಾಗಿದ್ದಾರೆಂದು ತಿಳಿಯುವುದೇ ಬಹು ಕಷ್ಟಕರವಾದದ್ದಾಗಿದೆ. ಈ ದೇಶದಲ್ಲಿ ಒಬ್ಬ ವ್ಯಕ್ತಿಗೆ ಮಗು ಜನಿಸಿದಲ್ಲಿ ಅದು ಗಂಡೋ ಅಥವಾ ಹೆಣ್ಣೋ ಎಂದು ವರದಿಮಾಡಲು ಅಥವಾ ಕೆಲವು ವ್ಯಕ್ತಿಗಳು ತಮ್ಮ ಕುಟುಂಬದಲ್ಲಿ ಯಾರಾದರೂ ಮೃತರಾದಲ್ಲಿ ಆ ಬಗ್ಗೆ ಮುನಿಸಿಪಲ್ ಅಧಿಕಾರಿಗಳಿಗೆ ಅಥವಾ ಗ್ರಾಮಾಧಿಕಾರಿಗಳಿಗೆ ವರದಿಮಾಡಲು ಒಬ್ಬ ವ್ಯಕ್ತಿಯನ್ನು ನೇಮಿಸುವುದು ಕಡ್ಡಾಯವಾಗಿ ಅಗತ್ಯಪಡಿಸಲಾಗಿದೆಯೇ ಎಂಬುದರ ಬಗ್ಗೆ ಇನ್ನೂ ಸಹ ತಿಳಿಯಬೇಕಾಗಿದೆ ಎಂಬುದು ಬಹು ಹಿಂದಿನಿಂದಲೂ ಕೇಳಿ ಬರುತ್ತಿರುವ ದೂರಾಗಿದೆ. ಅವನು ಇಷ್ಟಪಟ್ಟಲ್ಲಿ ಗ್ರಾಮಗಳಲ್ಲಿ, ತೀರಾ ಕೆಳದರ್ಜೆಯ ಒಬ್ಬ ಗ್ರಾಮಾಧಿಕಾರಿಯು ಗ್ರಾಮದಲ್ಲಿ ನಿರ್ದಿಷ್ಟ ವ್ಯಕ್ತಿಗೆ ಮಗು ಜನಿಸಿದೆ ಎಂಬ ಬಗ್ಗೆ ಗ್ರಾಮಪಟೇಲನಿಗೆ ಹೋಗಿ ವರದಿ ಮಾಡಬೇಕಾದುದು ಅವನ ಕರ್ತವ್ಯವಾಗಿರುತ್ತದೆ. ಅವನು ಈ ಕೆಲಸವನ್ನು ಮಾಡಿದರೆ ಮಾಡಿದ – ಇಲ್ಲದಿದ್ದರೆ ಇಲ್ಲ – ಅವನು ಈ ಕೆಲಸವನ್ನು ಕಾಲವಿಳಂಬದ ನಂತರವೂ ಮಾಡಬಹುದು. ಮುನಿಸಿಪಾಲಿಟಿಯಲ್ಲಿ ನಾನು ಬಾಂಬೆ ಮುನಿಸಿಪಾಲಿಟಿ ಬಗ್ಗೆ ಮಾತನಾಡುತ್ತಿದ್ದೇನೆ–ನನಗೆ ತಿಳಿದಮಟ್ಟಿಗೆ ಮುನಿಸಿಪಾಲಿಟಿಗಳ ಪೈಕಿ ಅದು ಒಂದು ಬಹುದೊಡ್ಡ ಮುನಿಸಿಪಾಲಿಟಿಯಾಗಿದೆ. ಮುನಿಸಿಪಾಲಿಟಿಗೆ ಹೋಗಿ ವರದಿ ಸಲ್ಲಿಸಲು ಯಾರಮೇಲೂ ಯಾವುದೇ

---

* ಸಂಸದೀಯ ಚರ್ಚೆಗಳು ಸಂ. ೪೬ (ರಾಜ್ಯಸಭೆ), ಸಂ. I, ೧೮ನೇ ಸೆಪ್ಟೆಂಬರ್ ೧೯೫೩, ಪು. ೨೮೦೫–೧೫ ಟಿ.೪೧೯೩–೫೫

ಬಗೆಯ ಒತ್ತಾಯವಿಲ್ಲವೆಂದು ಪ್ರತಿಯೊಬ್ಬರೂ ತಿಳಿದಿದ್ದಾರೆ. ಯಾರಾದರು ಮೃತರಾದರೆ, ಮೃತದೇಹವನ್ನು ಮಣ್ಣುಮಾಡಲು ಅಥವಾ ದಹನಮಾಡಲು ಸಂಬಂಧಪಟ್ಟ ಅಧಿಕಾರಿಗಳ ಅನುಮತಿ ಅವಶ್ಯವಾಗಿರುತ್ತದೆ. ನನ್ನ ಅನುಭವದಲ್ಲಿ ನಾವು ಮೃತ ದೇಹವನ್ನು ಕೂಡಲೇ ಮಸಣಕ್ಕೆ ತೆಗೆದುಕೊಂಡು ಹೋಗುತ್ತೇವೆ ಮತ್ತು ಅಲ್ಲಿ ಗುರುತಿಲ್ಲದ ಯಾರೋ ಒಬ್ಬ ಗುಮಾಸ್ತನಿದ್ದು ಆತನಿಗೆ ನಾಲ್ಕು ಆಣೆಗಳನ್ನು ಸಂದಾಯ ಮಾಡುತ್ತೇವೆ ಹಾಗು ಅವನು "ಸರಿ, ನೀವು ಮೃತದೇಹವನ್ನು ತೆಗೆದುಕೊಂಡು ಬನ್ನಿ ಮತ್ತು ನೀವು ನಿಮ್ಮ ಸಂಪ್ರದಾಯದಂತೆ ದೇಹವನ್ನು ಮಣ್ಣು ಮಾಡಬಹುದು ಇಲ್ಲವೇ ದಹನಮಾಡಬಹುದು" ಎಂಬಂಥ ಒಂದು ಟಿಕೆಟ್‌ನ ಪಾರ್ಶ್ವ ಪ್ರತಿಯನ್ನು ನೀಡುತ್ತಾನೆ. ನಮಗೆ ಆ ನಿರ್ದಿಷ್ಟ ಪ್ರಮಾಣ ಪತ್ರವನ್ನು ನೀಡಿದ ವ್ಯಕ್ತಿಯು ಯಾರೆಂದು ತಿಳಿದಿರುವುದಿಲ್ಲ – ಆ ಪ್ರಮಾಣ ಪತ್ರದಿಂದ ಏನಾದರೂ ಪ್ರಯೋಜನವಿದೆಯೇ? ಮರಣಪತ್ರ ವ್ಯವಸ್ಥಾಪಕನ ಹತ್ತಿರ ಅದನ್ನು ತೆಗೆದುಕೊಂಡು ಹೋಗಿ "ಇಂಥವರು ಮೃತರಾಗಿದ್ದಾರೆ; ನಾನು ಅವರ ಸಂಬಂಧಿ, ನನ್ನಲ್ಲಿ ಇಷ್ಟು ಮಾತ್ರ ಹಣ ಉಳಿದಿದೆ ತೆಗೆದುಕೋ ಎಂದು ಹೇಳಬಹುದೇ ಹೊರತು ಇನ್ನೇನು ಮಾಡಲೂ ಸಾಧ್ಯವಾಗುವುದಿಲ್ಲ. ಸ್ಮಶಾನದಲ್ಲಿರುವ ಆ ಸಂಬಂಧಪಟ್ಟ ಗುಮಾಸ್ತನು, ಮುನಿಸಿಪಾಲಿಟಿಗೆ ಇಂಥ ವ್ಯಕ್ತಿಯು ಮೃತ ಹೊಂದಿದ್ದಾನೆ, ಅವನ ಮೃತ ದೇಹವನ್ನು ಸ್ಮಶಾನಕ್ಕೆ ತಂದಿದ್ದಾರೆ ಹಾಗು ಅದನ್ನು ಮಣ್ಣು ಮಾಡಿದ್ದಾರೆ ಇಲ್ಲವೇ ದಹನ ಮಾಡಿದ್ದಾರೆ ಎಂಬ ಇತ್ಯಾದಿ ವಿವರಗಳನ್ನು ತಿಳಿಯ ಪಡಿಸುತ್ತಾನೋ–ಇಲ್ಲವೋ ನಮಗೆ ತಿಳಿಯದು. ಇದು ನಮ್ಮ ದೇಶದಲ್ಲಿರುವ ಜನನ ಮತ್ತು ಮರಣ ಪ್ರಮಾಣ ಪತ್ರಗಳ ನೋಂದಣಿಯ ವಾಸ್ತವ ಸ್ಥಿತಿ.

ಮಾನ್ಯರೇ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರಾಧಿಕಾರಕ್ಕೆ ಯಾರು ಮೃತರಾಗಿದ್ದಾರೆ ಎಂಬುದನ್ನು ತಿಳಿಯಲು ಮೂಲೆ ಮೂಲೆಗೂ ಹೋಗಿ ಕಂಡು ಹಿಡಿಯುವುದು ಕಷ್ಟಸಾಧ್ಯ ಕಾರ್ಯವಾಗಿದೆ ಎಂದು ನಾನು ನಿವೇದಿಸುತ್ತೇನೆ. ಇಂಗ್ಲೆಂಡಿನಲ್ಲಿ, ಸಂಪದ ಸುಂಕ ಕಾನೂನಿನ ಕಾರ್ಯಾಚರಣೆಯು ಬಹಳ ಸರಳವಾಗಿದೆ, ಕಾರಣವೆಂದರೆ, ಅಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಮೃತನಾಗುವುದಕ್ಕೆ ಮೊದಲು ಮರಣಪತ್ರ ಮಾಡಿರುತ್ತಾನೆ ಮತ್ತು ಸಂಬಂಧಪಡುವಷ್ಟರ ಮಟ್ಟಿಗೆ ಯಾರಾದರೊಬ್ಬ ಮರಣಶಾಸನದ ಪ್ರಮಾಣಿತ ಪ್ರತಿ (ಪ್ರೊಬೇಟ್)ಯನ್ನು ಪಡೆದಿರುತ್ತಾರೆ. ಇದರಿಂದಾಗಿ ಎಲ್ಲ ಅಂತರ್ದೇಶೀಯ ರಾಜಸ್ವ ಅಧಿಕಾರಿಗಳು – ಇಂಗ್ಲೆಂಡಿನಲ್ಲಿ ಹಾಗೆಂದು ಅವರನ್ನು ಕರೆಯಲಾಗುತ್ತದೆ– ಆಂತರಿಕ ತೆರಿಗೆ ಪದ್ಧತಿಯ ಕಾರ್ಯ ನಿರ್ವಹಿಸುತ್ತಿದ್ದು, ಅವರು ಮರಣ ಶಾಸನದ ಪ್ರಮಾಣಿತ ಪ್ರತಿಗಾಗಿ ಯಾವುದಾದರೂ ಅರ್ಜಿ ಇದೆಯೇ ಎಂಬುದನ್ನು ತಿಳಿಯುವುದಕ್ಕಾಗಿ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಅವರಲ್ಲಿಗೆ ಮಾತ್ರ ಹೋಗಿ ವಿಚಾರಿಸುತ್ತಾರೆ. ಆ ಸಂಬಂಧಪಟ್ಟ ಅರ್ಜಿಗಳು ಅಲ್ಲಿ ಇದ್ದಲ್ಲಿ ಆ ಮೂಲಕ ಅವರು, ಯಾರು ಮೃತರಾಗಿದ್ದಾರೆ, ಆ ಅರ್ಜಿಯಲ್ಲಿ ನೀಡಲಾದ ಒಟ್ಟು ಸಂಪದವೆಷ್ಟು ಇತ್ಯಾದಿ ವಿಷಯಗಳ ಬಗ್ಗೆ ಕಂಡುಕೊಳ್ಳುತ್ತಾರೆ. ಆದರೆ ದುರದೃಷ್ಟವಶಾತ್ ನಮ್ಮ ದೇಶದಲ್ಲಿ, ನಾವು ಮರಣಶಾಸನದ ಪ್ರಮಾಣಿತ ಪ್ರತಿಯನ್ನು ಪಡೆಯುವ ಅಭ್ಯಾಸವನ್ನು ಇಟ್ಟುಕೊಂಡಿಲ್ಲ. ಖಂಡಿತ ಆ ಬಗ್ಗೆ ನಿಯಮವಿದೆ – ಅನುಮಾನವೇ ಇಲ್ಲ – ಭಾರತೀಯ ಉತ್ತರಾಧಿಕಾರ ಅಧಿನಿಯಮ ಇರುವವರೆಗೂ ಮರಣ ಶಾಸನದ ಪ್ರಮಾಣಿತ ಪ್ರತಿ ಅಧಿನಿಯಮದ ಅಡಿಯಲ್ಲಿ ಪಡೆಯತಕ್ಕದು. ಒಬ್ಬ ಪಕ್ಷಕಾರನು, ಭಾರತೀಯ ಉತ್ತರಾಧಿಕಾರ ಅಧಿನಿಯಮದ ಮೂಲಕ ನಿರ್ವಹಿಸದಿದ್ದಲ್ಲಿ ಅದನ್ನೇ ಮರಣ ಶಾಸನ ಪ್ರಮಾಣಿತ ಪ್ರತಿ ಆಡಳಿತ ಅಧಿನಿಯಮ ಎಂದು ಕರೆಯಲಾಗುವ ಅಧಿನಿಯಮದ ಅಡಿಯಲ್ಲಿ ಯಾವುದಾದರೂ ಮರಣ ಶಾಸನವಿದ್ದಲ್ಲಿ, ಆ ಮರಣ ಶಾಸನದ ಮೇಲೆ ಪಕ್ಷಕಾರನು ಮರಣ ಶಾಸನದ ಪ್ರಮಾಣಿತ ಪ್ರತಿಯನ್ನು ಪಡೆಯಬಹುದು. ನಮಗೆ ಇಲ್ಲಿ

ಅಂಥ ಪದ್ಧತಿಯೇ ಕಂಡು ಬರುವುದಿಲ್ಲ. ಈ ವಿಧೇಯಕದ ಅಡಿಯಲ್ಲಿ ಸಂಪದ ಸುಂಕದ ನಿಯಂತ್ರಣಕಾರನಾಗಿ ನನ್ನ ಸ್ನೇಹಿತ ನನ್ನನ್ನು ನೇಮಕ ಮಾಡಿದರೆ ನಾನು ಏನು ಮಾಡಬಲ್ಲೆ, ಎಲ್ಲಿ ಹೋಗಿ ಮೃತರಾದವರನ್ನು ಹುಡುಕಲಿ? ಎಂಬುದನ್ನು ನೆನಪಿಸಿಕೊಂಡರೆ ವಿಸ್ಮಯವಾಗುತ್ತದೆ. ಇದು ಬಹು ಕಷ್ಟಕರವಾದ ಕಾರ್ಯಜವಾಬ್ದಾರಿಯಾಗಿದೆ. ಇದು, ನಾನು ಈ ವಿಧೇಯಕದಲ್ಲಿ ಕಂಡ ನ್ಯೂನತೆಯಾಗಿದೆ.

ಈ ವಿಧೇಯಕದಲ್ಲಿ ನಾನು ಕಂಡ ಎರಡನೇ ಅಂಶವೆಂದರೆ, ಸಂಪದ ಸುಂಕವನ್ನು ಯಾರು ಸಂದಾಯ ಮಾಡತಕ್ಕದ್ದೆಂದು ಮಾನ್ಯ ಸದಸ್ಯರು ವಿಧೇಯಕದ ೧೭ನೇ ಖಂಡದಲ್ಲಿ ಉಪಬಂಧಿಸಿದ್ದಾರೆ. ಮೃತನ ಹಿತಾಸಕ್ತಿಯು ನಿಯಂತ್ರಿತ ಕಂಪನಿಗೆ ಸೇರಿದ್ದಾದಲ್ಲಿ, ಆಗ, ನಿಯಂತ್ರಿತ ಕಂಪನಿಯನ್ನು ಪ್ರತಿನಿಧಿಸುವ ಯಾರು ಬೇಕಾದರೂ ಸಂದಾಯ ಮಾಡಬಹುದು; ಅದು ಬೇರೆಯವರದ್ದಾದರೆ ಆಗ, ಇತರೆ ವ್ಯಕ್ತಿಗಳು ಸಂದಾಯ ಮಾಡಬಹುದು. ಅದೇನೇ ಇದ್ದರೂ ನಿಯಂತ್ರಿತ ಕಂಪನಿಯಲ್ಲಿ ಮೃತವ್ಯಕ್ತಿಯು ಷೇರು ಹೊಂದಿದ್ದಾನೆಂಬುದನ್ನು ಅಥವಾ ಮೃತವ್ಯಕ್ತಿಯು ಬೇರೆ ಸ್ವತ್ತನ್ನು ಹೊಂದಿದ್ದಾನೆಂಬುದನ್ನು ನಿಯಂತ್ರಕನು ಹೇಗೆ ಗುರುತಿಸುವುದು? ಈ ವಿಧೇಯಕವು ನಾನು ಸೂಚಿಸಿದಂಥ ಒಂದು ಖಂಡವನ್ನು ಹೊಂದಿರಬೇಕೆಂದು ನನಗೆ ಅನಿಸುತ್ತದೆ. ಪ್ರತಿಯೊಬ್ಬ ಉತ್ತರಾಧಿಕಾರಿಯು ನ್ಯಾಯಾಲಯಕ್ಕೆ ಹೋಗಲು ಮೃತನು ಮರಣ ಶಾಸನವನ್ನು ಬಿಟ್ಟು ಹೋಗಿರುವನೇ ಅಥವಾ ಇಲ್ಲವೇ ಎಂಬುದನ್ನು ಅಗತ್ಯಪಡಿಸಬೇಕು ಮತ್ತು ಮರಣ ಶಾಸನವಿಲ್ಲದಿದ್ದಲ್ಲಿ ಬಿಟ್ಟು ಹೋಗಿರುವ ಸ್ವತ್ತಿನ ಘೋಷಣೆಯಿಂದ ಇಂತಿಷ್ಟು ಸ್ವತ್ತಿದೆ ಎಂಬುದನ್ನು ನಿಯಂತ್ರಕನು ತಿಳಿಯಬಹುದಾಗಿದೆ. ತರುವಾಯ ಅವನು ಮೃತವ್ಯಕ್ತಿಯು ಬಿಟ್ಟು ಹೋಗಿರುವ ಯಾವುದೇ ಸ್ವತ್ತನ್ನು ಬಚ್ಚಿಡಲಾಗಿದೆಯೇ ಎಂಬುದನ್ನು ಕಂಡುಹಿಡಿಯಲು ಕ್ರಮ ಕೈಗೊಳ್ಳಬಹುದು. ಇಲ್ಲದಿದ್ದಲ್ಲಿ ಸ್ವತ್ತಿನ ಸರಿಯಾದ ಮೊಬಲಗು ಎಷ್ಟು ಎಂಬುದನ್ನು ಕಂಡು ಹಿಡಿಯಲು ನಿಯಂತ್ರಕನು ಸ್ವಲ್ಪಮಟ್ಟಿಗೆ ಅಲೆಯ ಸಂಚಾರಿ ವಿಚಾರಣೆಯನ್ನು ಕೈಗೊಳ್ಳಬೇಕಾಗುತ್ತದೆ. ಪ್ರಸ್ತುತ ಇರುವ ಸಂದರ್ಭದಲ್ಲಿ ಮತ್ತು ಅತಿಯಾದ ಭ್ರಷ್ಟಾಚಾರ ಕಂಡುಬರುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಬಗೆಯ ಒಂದು ಕಾನೂನು ನಿಯಂತ್ರಕನ ಕೈಯಲ್ಲಿ ಸಂಪೂರ್ಣವಾಗಿರುವುದರಿಂದ ಅದು ಈಗ ಕಂಡುಬರುತ್ತಿರುವ ಭ್ರಷ್ಟಚಾರಕ್ಕಿಂತ ಅತಿ ಹೆಚ್ಚಿನ ಭ್ರಷ್ಟಚಾರದಲ್ಲಿ ತೊಡಗಬಹುದಾದ ಸಾಧ್ಯತೆಯನ್ನುಂಟು ಮಾಡಬಹುದೆಂದು ನನಗೆ ಬಹಳಷ್ಟು ಅನುಮಾನವಿದೆ. ನಾನು ಕಂಡುಕೊಂಡ ಈ ಎರಡು ವಿಷಯಗಳನ್ನು ಸರಿಪಡಿಸುವ ಅಗತ್ಯವಿದೆ. ಇದರಿಂದಾಗಿ ಕಠಿಣತನಕ್ಕೆ ಕಾರಣ ಬದ್ಧವಾದ ಕಾನೂನು ಪ್ರತಿಯೊಂದು ಕಾನೂನು ಕಠಿಣತೆಯಿಂದ ಕೂಡಿರುತ್ತದೆಯಾದರೂ ಈ ಸುಂಕವನ್ನು ಸಂದಾಯ ಮಾಡುವ ಜನತೆಗೆ ಅನಾವಶ್ಯಕ ಕಿರುಕುಳ ಉಂಟಾಗಲು ಕಾರಣವಾಗಬಹುದು.

ಸದನದ ಗಮನ ಸೆಳೆಯಲು ನಾನು ಪ್ರಯತ್ನಿಸುತ್ತಿರುವ ಎರಡನೇ ಪ್ರಶ್ನೆ ಎಂದರೆ ಈ ಸಂಪದ ಸುಂಕದಿಂದ ವಸೂಲಾಗಬಹುದಾದ ಮೊಬಲಗಿನ ಪ್ರಶ್ನೆ. ನಾನು ಮಾನ್ಯ ಸದಸ್ಯರ ಭಾಷಣವನ್ನು ಕೇಳಿದ್ದೇನೆ. ಅವರು ಸಂಪದ ಸುಂಕ ವಿಧೇಯಕಕ್ಕೆ ಸಂಬಂಧಪಟ್ಟಂತೆ ಅನೇಕ ಸಂದರ್ಭಗಳಲ್ಲಿ ವಿವರಿಸಿ ಹೇಳಿದ್ದಾರೆ ಮತ್ತು ಅವರು ತಾವು ಯಾವುದೇ ನಿರ್ದಿಷ್ಟ ಅಂಕಿ ಅಂಶಗಳಿಗೆ ಸ್ವತಃ ಬದ್ಧರಾಗದಂತೆ ಬಹಳ ಎಚ್ಚರಿಕೆವಹಿಸಿರುವುದನ್ನು ನಾನು ಕಂಡಿದ್ದೇನೆ. ಹಿಂದಿನ ಸಲ ಅಂದರೆ ೧೯೫೨ರಲ್ಲಿ ವಿಧೇಯಕವನ್ನು ಮಂಡಿಸಿದಾಗ, ಈ ತೆರಿಗೆಯಿಂದ ಬರಬಹುದಾದ ಉತ್ಪನ್ನ ಎಷ್ಟು ಎಂಬುದನ್ನು ಊಹಿಸಲು ಸಹ ನಾನು

ಅಸಮರ್ಥನಾಗಿದ್ದೇನೆ ಎಂದು ಸದನದಲ್ಲಿ ಹೇಳಿದ್ದರು. ಇಂತಹ ಕ್ರಮವೊಂದನ್ನು ಪ್ರಾರಂಭಿಸುವ ಮೊದಲು, ವಿತ್ತ ಸಚಿವರು ತಮ್ಮ ಬಳಿ ಇದ್ದ ಅಂಕಿ ಅಂಶಗಳನ್ನು ನೋಡಿಯಾಗಲೀ ಅಥವಾ ತಾವು ರಾಜಸ್ವ ಮಂಡಳಿಗೆ ಹೇಳಿಯಾಗಲೀ, ತಾಮ ಪಡುತ್ತಿರುವ ಶ್ರಮಕ್ಕೆ ತಕ್ಕುದಾದ ವರಮಾನವು ತಮ್ಮ ಈ ಕ್ರಮದಿಂದ ಬರುತ್ತದೆಯೇ ಅಥವಾ ಇಲ್ಲವೆ ಎಂಬುದನ್ನು ತಿಳಿದುಕೊಳ್ಳಬಹುದಿತ್ತು. ನಾನು ರಾಜಸ್ವ ಮಂಡಳಿಯ ವರದಿಯನ್ನು ನೋಡುತ್ತಿದ್ದೇನೆ ಹಾಗು ನಾನು ನಮಗೆ ನೀಡುವ ಉದ್ದೇಶಕ್ಕಾಗಿ ಹಣಕಾಸು ಇಲಾಖೆಯು ತಯಾರಿಸಿದ್ದ ಕೆಲವು ಅಂಕಿ ಅಂಶಗಳನ್ನು ನೋಡುತ್ತಿದ್ದೇನೆ. ಈ ಸುಂಕದ ದರವನ್ನು ನಿಗದಿ ಪಡಿಸಲಾಗಿದೆ ಹಾಗು ಉತ್ಪನ್ನವು ಎಷ್ಟಿರಬಹುದೆಂಬುದರ ಬಗ್ಗೆ ವರದಿ ತಯಾರಿಸಿ ಅದನ್ನು ವಿಧೇಯಕಕ್ಕೆ ಲಗತ್ತಿಸಲಾಗಿದೆ. ರಾಜಸ್ವ ಮಂಡಳಿಯು ಆದಾಯ ತೆರಿಗೆಯ ಬಗ್ಗೆ ಅಂಕಿ ಅಂಶಗಳನ್ನು ನೀಡಬೇಕು. ಅಲ್ಲದೇ ಅದು ಭಾರತದಲ್ಲಿ ಪ್ರಸ್ತುತ ಇರಬಹುದಾದ ಅವಿಭಕ್ತ ಕುಟುಂಬಗಳ ಒಟ್ಟು ಸಂಖ್ಯೆಯನ್ನು ಸಹ ನೀಡುತ್ತದೆ. ಅದು ಅವಿಭಕ್ತ ಕುಟುಂಬಗಳಿಂದ ಸಂಗ್ರಹಿಸಿದ ತೆರಿಗೆಯ ಒಟ್ಟು ಮೊಬಲಗನ್ನು ನೀಡುವುದಲ್ಲದೇ ತೆರಿಗೆ ನಿರ್ಧರಣೆಗೆ ಒಳಪಟ್ಟ ಅವಿಭಕ್ತ ಕುಟುಂಬಗಳ ಒಟ್ಟು ಸಂಖ್ಯೆಯ ಅಂಕಿ ಅಂಶಗಳನ್ನು ಮತ್ತು ಅವರ ಆದಾಯ ವಿವರ ಪಟ್ಟಿಕೆಯಲ್ಲಿ ಅವರು ತೋರಿಸಿದ ಒಟ್ಟು ಮೊಬಲಗನ್ನು ಸಹ ನೀಡುತ್ತದೆ. ಮಾನ್ಯರೆ, ಈ ತೆರಿಗೆ ವಿಧಿಸುವಿಕೆಯು ಈ ದೇಶದಲ್ಲಿನ ಅವಿಭಕ್ತ ಕುಟುಂಬಗಳ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡುತ್ತದೆಂದು ನನ್ನ ಅನಿಸಿಕೆ ಮತ್ತು ೧೯೫೦–೫೧ನೇ ವರ್ಷದ ರಾಜಸ್ವ ಮಂಡಳಿಯ ವರದಿಯಲ್ಲಿ ತೋರಿಸಲಾದ ಮಾಹಿತಿಯು ಈ ರಾಜಸ್ವದ ಮೂಲದಿಂದ ಮಾನ್ಯ ಸಚಿವರು ಏನನ್ನು ನಿರೀಕ್ಷಿಸಿದ್ದರು ಎಂಬುದನ್ನು ನಾವು ತಿಳಿಯಲು ಸಾಧ್ಯವಾಗುತ್ತದೆ. ಆಗ ನಾವು ವಿಧಿಸಬಹುದಾದ ತೆರಿಗೆಯಿಂದ ಏನೇ ತೊಂದರೆ ಇದ್ದರೂ ಸಹ ಉತ್ಸಾಹದಿಂದ ಕೂಡಿದ ಸಿದ್ಧತೆಯೊಂದಿಗೆ ಇನ್ನೂ ಹೆಚ್ಚಿನ ಉತ್ತಮ ಸ್ಥಿತಿಯಲ್ಲಿರಬಹುದಾಗಿತ್ತೆಂದು ಹೇಳಬಹುದು. ಆದರೆ ಕೊನೆಯಲ್ಲಿ ಅನುಸರಿಸದ ಕ್ರಮದಿಂದಾಗಿ ಮೊಬಲಗಿನ ಪ್ರಮಾಣವು ಗ್ರಹಿಸಿದಷ್ಟು ಆಗದಿರಬಹುದೆಂದು ನಮಗೆ ಕಂಡುಬಂದಲ್ಲಿ ಈ ವಿಧೇಯಕವನ್ನು ತರುವಲ್ಲಿ ಮಾನ್ಯ ಹಣಕಾಸು ಸಚಿವರು ಸ್ವತಃ ತಾವು ತೆಗೆದುಕೊಂಡ ತೊಂದರೆಯ ಬಗ್ಗೆ ವಿಷಾದಿಸಬಹುದು.

**ಶ್ರೀ. ಬಿ.ಸಿ. ಘೋಷ್ (ಪಶ್ಚಿಮ ಬಂಗಾಳ):** ಆಗ ಅವರು ಸುಂಕವನ್ನು ಹೆಚ್ಚಿಸಬಹುದು.

**ಡಾ. ಬಿ.ಆರ್. ಅಂಬೇಡ್ಕರ್:** ಈ ವಿಷಯದ ಬಗ್ಗೆ ಇನ್ನೊಂದು ಉಲ್ಲೇಖವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ ಏನೆಂದರೆ ಅಂಥ ಸಂಪದ ಸುಂಕದ ಮತ್ತು ಅಂಥ ಆದಾಯ ತೆರಿಗೆಯ ನಡುವೆ ಬಹುದೊಡ್ಡ ವ್ಯತ್ಯಾಸವಿದೆ ಎಂಬ ಭಾವನೆ ಇದೆ ಮತ್ತು ಆದಾಯ ತೆರಿಗೆಯ ವಿರುದ್ಧ ಅಂಥ ಭಾವನೆ ಸ್ವಲ್ಪಮಟ್ಟಿಗೆ ಇರಬಹುದಾದರೂ ಅಂಥ ಯಾವುದೇ ಭಾವನೆ ಸಂಪದ ಸುಂಕದ ವಿರುದ್ಧವಿಲ್ಲ. ವ್ಯತ್ಯಾಸವೆಂದರೆ, ಆದಾಯ ತೆರಿಗೆಯು ಆದಾಯದ ಮೇಲಿನ ತೆರಿಗೆಯಾಗಿರುತ್ತದೆ ಮತ್ತು ಸಂಪದ ಸುಂಕವು ಬಂಡವಾಳದ ಮೇಲಿನ ತೆರಿಗೆಯಾಗಿರುತ್ತದೆ. ಮೇಲುನೋಟಕ್ಕೆ ಈ ವ್ಯತ್ಯಾಸವು ಸರಿ ಎನಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ, ನಾವು ಸಂಪದ ಸುಂಕವನ್ನು ವಿಧಿಸುವಾಗ ಆದಾಯದಿಂದ ಏನನ್ನೂ ಪರಿಗಣಿಸುವುದಿಲ್ಲ, ಆದರೆ, ವ್ಯಕ್ತಿಯು ಬಿಟ್ಟು ಹೋದ ಬಂಡವಾಳವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇವೆ. ಆದಾಯ ತೆರಿಗೆಯ ಸಂಬಂಧದಲ್ಲಿ ವ್ಯಕ್ತಿಯು ಗಳಿಸಿದ ಆದಾಯದಿಂದ ಕೆಲಭಾಗವನ್ನೂ ತೆಗೆದುಕೊಳ್ಳುತ್ತೇವೆ. ಮಾನ್ಯರೆ, ಇದು ಎರಡರ ನಡುವಣ ಬಹುಮುಖ್ಯವ್ಯತ್ಯಾಸವೆಂದು ನನ್ನ ಹೇಳಿಕೆ. ಅಂತಿಮವಾಗಿ, ಆದಾಯ ತೆರಿಗೆ ಮತ್ತು ಸಂಪದ ಸುಂಕದ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಏಕೆಂದರೆ, ಸಂಪದ ಸುಂಕವು ಸಂಚಿತ ಆದಾಯವಾಗಿದ್ದು ಬಿಂದು ಮೂಲದಲ್ಲಿ, ಒಂದು ನಿರ್ದಿಷ್ಟ ಅವಧಿಗೆ, ಅಂದರೆ, ಒಬ್ಬ ವ್ಯಕ್ತಿಯು ಮೃತನಾದಾಗ

ವಿಧಿಸಲಾಗುವ ತೆರಿಗೆಯಾಗಿರುತ್ತದೆ. ಈಗ ನನಗೆ ಅನಿಸುತ್ತದೆ. ಬಹುಮುಖ್ಯ ವಿಷಯವೆಂಬುದಾಗಿ, ವ್ಯಕ್ತಿಯು ಮೃತನಾಗಿದ್ದಕ್ಕಾಗಿ ನೀವು ವಿಧಿಸಬಹುದಾದ ತೆರಿಗೆಯು ರಾಜಸ್ವದ ಸಂಪನ್ಮೂಲಗಳನ್ನು ಬರಡಾಗಿಸುವ ಪರಿಣಾಮವನ್ನುಂಟು ಮಾಡಬಹುದು ಅಥವಾ ಅದು ಉತ್ತಮವಾಗಿದ್ದುದಾದಲ್ಲಿ ದೇಶವು ದೃಡವಾದ ಸ್ಥಿತಿಸ್ಥಾಪಕತ್ವವನ್ನು ಹೊಂದಿದ್ದು ಸಂಪದ ಸುಂಕವು ಎಷ್ಟೇ ಇದ್ದರೂ, ದೇಶವು ಇನ್ನೂ ಹೆಚ್ಚಿನದನ್ನೂ ಗಳಿಸುತ್ತದೆ. ನನ್ನ ಸನ್ಮಾನ್ಯ ಸ್ನೇಹಿತರು ನನಗಿಂತಲೂ ಹೆಚ್ಚಾಗಿ ಈ ವಿಷಯಗಳ ಬಗ್ಗೆ ತಿಳಿದವನಾಗಿದ್ದಾರೆ. ಆದರೆ, ನಾನು ಗ್ರೇಟ್ ಬ್ರಿಟನ್ನಿನಲ್ಲಿನ ಕೆಲವು ಅಂಕಿ ಅಂಶಗಳನ್ನು ಸದನದ ಮುಂದೆ ಹೇಳಲು ಇಚ್ಛಿಸುತ್ತೇನೆ. ನಾನು ಈ ಅಂಶಗಳನ್ನು ೧೯೫೧–೫೨ನೇ ಸಾಲಿನ ರಾಜಸ್ವ ಮಂಡಳಿಯ ವರದಿಯಿಂದ ಪಡೆದಿದ್ದೇನೆ. ಅವುಗಳು ವಾಸ್ತವ ಅಂಕಿ ಅಂಶಗಳನ್ನು ನೀಡುತ್ತವೆ. ೧೯೪೨–೪೩ರಲ್ಲಿ, ಗ್ರೇಟ್ ಬ್ರಿಟನ್ನಿನಲ್ಲಿ ಸಂಗ್ರಹಿಸಲಾದ ಆದಾಯ ತೆರಿಗೆಯ ಒಟ್ಟು ಮೊಬಲಗು ೧೮ ಮಿಲಿಯನ್ ಪೌಂಡುಗಳು ಮತ್ತು ೧೯೫೧–೫೨ರಲ್ಲಿ ಅದು ೨೦ ಮಿಲಿಯನ್ ಪೌಂಡ್‌ಗಳಾಗಿತ್ತು. ಮರಣ ಸುಂಕಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ೧೯೪೨–೪೩ರಲ್ಲಿ ಆದ ಒಟ್ಟು ಸಂಗ್ರಹಣೆಯು, ೯೩,೩೪೦,೩೪೩ ಪೌಂಡುಗಳು ಮತ್ತು ೧೯೫೧–೫೨ರಲ್ಲಿ ಆದ ಒಟ್ಟು ಸಂಗ್ರಹಣೆಯು, ೧೮೭,೬೦೦,೬೪೩ ಪೌಂಡುಗಳು. ದೇಶಕ್ಕೆ ಸಂಬಂಧಿಸಿದಂತೆ ಇದೇ ಬಗೆಯ ಅಂಕಿ ಅಂಶಗಳನ್ನು ಸದನವು ಪರಿಗಣಿಸಬಹುದೆಂದು ನನಗೆ ಅನಿಸುತ್ತದೆ.

ಮಾನ್ಯರೇ, ನನ್ನ ಮಾನ್ಯ ಸ್ನೇಹಿತ ಹಣಕಾಸು ಸಚಿವರು, ಯುನೆಸ್ಕೋ ಸಮಿತಿಗಳ ಒಂದು ಸಮಿತಿಯು ಮಾಡಿದ ವರದಿಯ ಬಗ್ಗೆ ತಿಳಿದಿರಬೇಕು. ಯುನೆಸ್ಕೋನಲ್ಲಿ ಬಹಳಷ್ಟು ಸಮಿತಿಗಳಿವೆ. ದಕ್ಷಿಣ ಏಷ್ಯ ದೇಶಗಳು ತಮ್ಮ ಔದ್ಯಮಿಕ ಮತ್ತು ಆರ್ಥಿಕ ಮುಂದುವರಿಕೆಯ ವಿಷಯದಲ್ಲಿ ಏಕೆ ಇಷ್ಟೊಂದು ಹಿಂದುಳಿವೆ ಎಂಬ ಪ್ರಶ್ನೆಗೆ ಉತ್ತರ ಕಂಡು ಹಿಡಿಯುವ ಸಲುವಾಗಿ ತನಿಖೆ ನಡೆಸಲು ಒಂದು ಸಮಿತಿಯನ್ನು ರಚಿಸಿತ್ತು. ಆ ಸಮಿತಿಯು ನೀಡಿದ ಕಾರಣಗಳೆಂದರೆ ಆ ದೇಶದಲ್ಲಿನ ಉಳಿತಾಯವು ಬಹಳ ಕಡಿಮೆ ಪ್ರಮಾಣದ್ದಾಗಿದ್ದು ಬಂಡವಾಳ ಸಂಚಯ ಇಲ್ಲದಿರುವುದೇ ಆಗಿದೆ ಮತ್ತು ಬಂಡವಾಳ ಸಂಚಯ ಇಲ್ಲದಿರುವುದರಿಂದ ಕೈಗಾರಿಕೆ ಮತ್ತು ಇತರೆ ವಿಷಯಗಳಲ್ಲಿ ಹಿನ್ನೆಡೆಯುಂಟಾಗಿದೆ ಎಂದು ತಿಳಿಯಬಂದಿದೆ. ನಮ್ಮದು ಸಮಾಜವಾದಿ (ಕಮ್ಯೂನಿಸ್ಟ್) ದೇಶವಾಗಿದ್ದಲ್ಲಿ ಶೀಘ್ರದಲ್ಲಿಯೇ ನಮ್ಮ ದೇಶವು ಯಾವುದಾದರೂ ಒಂದು ಸ್ವರೂಪದ ಆಡಳಿತ ಉಳ್ಳ ದೇಶವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ ಒಳ್ಳೆಯದಕ್ಕೊ ಅಥವಾ ಕೆಟ್ಟದ್ದಕ್ಕೊ ನಮ್ಮ ಆರ್ಥಿಕ ಜೀವನ ಅಥವಾ ಕೈಗಾರಿಕಾ ಜೀವನ ಅಥವಾ ಕೃಷಿ ಜೀವನವನ್ನು ಸರ್ಕಾರವು ವಹಿಸಿಕೊಳ್ಳುತ್ತದೆ. ನಾವು ಎಷ್ಟು ಉಳಿಸಿದ್ದೇವೆ ಮತ್ತು ಎಷ್ಟು ಉಳಿಸಿಲ್ಲ ಎಂಬುದು ಅಷ್ಟೊಂದು ಮುಖ್ಯ ವಿಷಯವಲ್ಲ. ನಾವು ಅಲ್ಪ ಪ್ರಮಾಣದಲ್ಲಿ ಉಳಿತಾಯ ಮಾಡಿದರೆ, ಸರ್ಕಾರವು ಬಹುಶಃ ನಮ್ಮನ್ನು ಹೆಚ್ಚಿನ ಪ್ರಮಾಣದಲ್ಲಿ ಉಳಿತಾಯ ಮಾಡುವಂತೆ ಕೇಳಬಹುದು ಮತ್ತು ಅದು ಅಂಥ ಕಷ್ಟ ಸಾಧ್ಯವಾದ ಕೆಲಸವೇನಲ್ಲ. ಆದರೆ ನಾವು ಕಮ್ಯೂನಿಸ್ಟ್ ಆಡಳಿತ ಪಡೆಯದಿರುವವರೆಗೆ ಜನತೆಯ ಕಲ್ಯಾಣದ ಅವರ ಶಿಕ್ಷಣದ .... ಸಂಪೂರ್ಣ ಜವಾಬ್ದಾರಿಯನ್ನು ಯಾವ ಆಡಳಿತ ತೆಗೆದುಕೊಳ್ಳುತ್ತದೆ.

**ಶ್ರೀ ಬಿ.ಬಿ. ಶರ್ಮ (ಉತ್ತರ ಪ್ರದೇಶ):** ಮತ್ತು ಅವರ ಅಪಖ್ಯಾತಿಗೆ.

**ಡಾ. ಬಿ.ಆರ್. ಅಂಬೇಡ್ಕರ್:** ನನಗೆ ತಿಳಿಯದು, ಯಾವಾಗಲೂ ಅಲ್ಲಿ–ಇಲ್ಲಿ ಕೆಲವು ತಪ್ಪುಗಳಾಗುತ್ತವೆ, ಯಾವುದೇ ವ್ಯವಸ್ಥೆಯು ಪರಿಪೂರ್ಣವಾಗಿರುವುದಿಲ್ಲ.

**ಮಾನ್ಯ ಅಧ್ಯಕ್ಷರು:** ಮುಂದುವರಿಸಿ ... ಮುಂದುವರಿಸಿ.

**ಡಾ. ಬಿ.ಆರ್. ಅಂಬೇಡ್ಕರ್:** ಕ್ಷಮಿಸಿ, ಅವರು ನನ್ನ ವಾದದ ಸರಣಿಯಲ್ಲಿ ತಡೆಯುಂಟು ಮಾಡಿದರು,

ನಾನು ಹೇಳುತ್ತಿದ್ದುದೇನೆಂದರೆ, ನಾವು ಆ ಮಟ್ಟದ ವ್ಯವಸ್ಥೆಯನ್ನು ಹೊಂದುವವರೆಗೆ, ಅದು ಜನತೆಯ ಕಲ್ಯಾಣಕ್ಕಾಗಿ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ ಮತ್ತು ಜನತೆಯು ತಮ್ಮ ಕಲ್ಯಾಣವನ್ನು ತಾವೇ ಮಾಡಿಕೊಳ್ಳುವ ಮಟ್ಟಿನ ಜವಾಬ್ದಾರಿಯುತ ವ್ಯವಸ್ಥೆಯನ್ನು ಹೊಂದುವವರೆಗೆ ಆ ರಾಜ್ಯವು ಜನತೆಯ ಕಲ್ಯಾಣಕ್ಕಾಗಿ ನೆರವು ನೀಡದೇ ಅನ್ಯಮಾರ್ಗವಿಲ್ಲವೆಂದು ಭಾವಿಸುತ್ತೇನೆ. ಆದರೆ, ಅದು ಕಲ್ಯಾಣ ಕಾರ್ಯವನ್ನು ಮಾಡುವುದಿಲ್ಲ. ನಮ್ಮ ತೆರಿಗೆ ಪದ್ಧತಿಯು ಸಾಕಷ್ಟು ಬಂಡವಾಳವು ಉತ್ಪತ್ತಿಯಾಗುವಂತೆ ಮಾಡಬೇಕು. ಪ್ರತಿಬಾರಿಯೂ ಸರ್ಕಾರವು ನಮ್ಮಿಂದ ಏನನ್ನಾದರೂ ಪಡೆಯುತ್ತಿರುತ್ತದೆ ಮತ್ತು ನಾವು ಅದನ್ನು ಮುಂದುವರಿಸಿಕೊಂಡು ಹೋಗಲು ಎಂದಿಗೂ ಅವಕಾಶ ನೀಡುವುದಿಲ್ಲ. ಮಾನ್ಯರೆ, ನನ್ನ ಸನ್ಮಾನ್ಯ ಸ್ನೇಹಿತರಿಂದ ಮಂಡಿಸಲಾದ ಈ ವಿಧೇಯಕವು, ನನ್ನ ಅನುಭವದಲ್ಲಿ, ಹೊಸ ಕ್ರಮವಲ್ಲ. ನನಗೆ ಇನ್ನೂ ಜ್ಞಾಪಕವಿದೆ ಅಂಥ ವಿಧೇಯಕವನ್ನು ೧೯೪೪–೪೫ನೇ ವರ್ಷದಲ್ಲಿ ಸ್ಥೂಲವಾಗಿ ಪ್ರಸ್ತಾಪಿಸಲಾಗಿತ್ತು. ಆಗ ಹಣಕಾಸು ಸದಸ್ಯರಾಗಿದ್ದ ಸರ್ ಜೆರಿ ಮೈರೈಸ್‌ಮ್ಯಾನ್ ಅವರು ತಮ್ಮ ಬಜೆಟ್ ಭಾಷಣದ ಸಂದರ್ಭದಲ್ಲಿ ಅನುಸೂಚಿ–I ರಲ್ಲಿ ಒಳಗೊಂಡಿರುವುದನ್ನು ಸಂಸತ್ತು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೇ ಬಿಟ್ಟು ಬಿಟ್ಟಿರುವುದನ್ನು ಸರಿಪಡಿಸಿದಲ್ಲಿ ತಾನು ಸಂಪದ ಸುಂಕ ವಿಧೇಯಕದಂಥ ಒಂದು ವಿಧೇಯಕವನ್ನು ಮಂಡಿಸುವುದಾಗಿ ಹೇಳಿದರು. ೧೯೩೫ರ ಅಧಿನಿಯಮವು ಪ್ರಾಂತ್ಯಗಳ ಮೂಲಕ ವಿಧಿಸಲಾಗುವ ಅಥವಾ ಕೇಂದ್ರದ ಮೂಲಕ ವಿಧಿಸಲಾಗುವ ಸಂಪದ ಸುಂಕದಂಥ ಯಾವುದೇ ಅಂಥ ನಮೂದನ್ನು ಒಳಗೊಂಡಿರುವುದಿಲ್ಲ. ಆಗ, ೧೯೪೬ರಲ್ಲಿ ಸರ್ ಜೆರಿಮೈರೈಸ್ ಮ್ಯಾನ್ ಅವರ ಉತ್ತರಾಧಿಕಾರಿಯಾಗಿ ಬಂದ ಸರ್ ಆರ್‌ಜಿಬಾಲ್ಡ್ ರೋಲ್ಯಾಂಡ್ಸ್ ಒಂದು ವಿಧೇಯಕವನ್ನು ಮಂಡಿಸಿದರು. ೧೯೪೬ರ ಆ ವಿಧೇಯಕದ ಕುತೂಹಲಕಾರಿ ಅಂಶವೆಂದರೆ, ಈ ವಿಧೇಯಕವನ್ನು ಕಾಂಗ್ರೆಸ್ ಹಾಗು ಮುಸ್ಲಿಂ ಲೀಗ್ ಪಕ್ಷಗಳೆರಡೂ ವಿರೋಧಿಸಿದವು. ಕಾಂಗ್ರೆಸ್ ಸದಸ್ಯರು "ಸಂಪದ ಸುಂಕದಂಥ ಯಾವುದೇ ತೆರಿಗೆಯನ್ನು ವಿಧಿಸಲು ನಿಮಗೆ ಹಕ್ಕಿರುವುದಿಲ್ಲ"ವೆಂದು ಹೇಳಿದರು ಮತ್ತು ಮುಸ್ಲಿಂ ಲೀಗ್‌ನ ಸದಸ್ಯರು "ನೀವು ಅಂಥ ತೆರಿಗೆಯನ್ನು ವಿಧಿಸಿದರೆ ಅದರಿಂದ ಭಾಗಶಃ ದೇವರಿಗೂ ಮತ್ತು ಭಾಗಶಃ ಮಾನವರಿಗೂ ಸೇರಿರುವ ನ್ಯಾಸ ಸಂಸ್ಥೆಯಾದ ನಮ್ಮ ವಕ್ಫ್‌ಗೆ ಭಾರಿ ತೊಂದರೆಯು ಉಂಟಾಗುತ್ತದೆ' ಎಂದು ಹೇಳಿದರು. ಆದ್ದರಿಂದ ಸರ್ಕಾರವು ಕಾಂಗ್ರೆಸ್ ಅಥವಾ ಮುಸ್ಲಿಂ ಲೀಗ್‌ನ ಬೆಂಬಲವಿಲ್ಲದೇ ಆ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲು ಸಾಧ್ಯವಾಗದೇ ಆ ವಿಧೇಯಕವನ್ನು ಕೈಬಿಟ್ಟಿತು. ಪುನಃ ೧೯೪೮ರಲ್ಲಿ ಅದನ್ನು ಶ್ರೀ ಷಣ್ಮುಖಂ ಚೆಟ್ಟಿ ಅವರು ಕೈಗೆತ್ತಿಕೊಂಡರು. ಅವರು ಇನ್ನೊಂದು ವಿಧೇಯಕವನ್ನು ಮಂಡಿಸಿದರು. ವಿಧೇಯಕವನ್ನು ಆಯ್ಕೆ ಸಮಿತಿಯ ಪರಾಮರ್ಶೆಗೆ ಕಳುಹಿಸಲಾಯಿತು ಹಾಗೂ ಆಯ್ಕೆ ಸಮಿತಿಯು ಮಿತಾಕ್ಷರ ಕಾನೂನು ಪದ್ಧತಿಯು ಈ ದೇಶದ ಬಹುಭಾಗ ಪ್ರದೇಶದಲ್ಲಿ ಜಾರಿಯಲ್ಲಿರುವುದರಿಂದ ಸಂಪದ ಸುಂಕ ವಿಧೇಯಕದಿಂದ ಯಾವುದೇ ಪ್ರಯೋಜನವಿಲ್ಲವೆಂದು ಹೇಳಿದುದರಿಂದ ಆ ವಿಧೇಯಕವನ್ನು ಹಿಂದಕ್ಕೆ ಪಡೆಯಲಾಯಿತು. ಡಾ. ಜಾನ್ ಮಥಾಯ್ ಅವರು ಶ್ರೀ ಷಣ್ಮುಖಂ ಚೆಟ್ಟಿ ಅವರ ಉತ್ತರಾಧಿಕಾರಿಯಾಗಿ ಬಂದರು. ಡಾ. ಜಾನ್ ಮಥಾಯ್ ನಿಧಿಗಳ ಸಂಗ್ರಹಣೆಗಾಗಿ ಒತ್ತಾಯ ಪಡಿಸಿದರು. ಆಯ್ಕೆ ಸಮಿತಿಯ ಸಭೆಯನ್ನು ಪುನಃ ಕರೆದರು ಮತ್ತು ಈ ವಿಧೇಯಕವನ್ನು ಮತ್ತೆ ಅವರ ಮುಂದೆ ಇಟ್ಟರು ಹಾಗು ಆಯ್ಕೆ ಸಮಿತಿಯಿಂದ ಬಂದ ತೀರ್ಪೆಂದರೆ ವಿಷಯವು ಏನೇ ಇದ್ದರೂ, ಹಿಂದೂ ಸಂಹಿತೆಯು ನಾಲ್ಕು ವರ್ಷಗಳಿಂದ ಧಗಧಗಿಸಿ ಉರಿಯುತ್ತಿದ್ದರೂ ಇನ್ನೂ ಎಷ್ಟು ಕಾಲದವರೆಗೆ ಈ ಜ್ವಾಲೆಯು ಮುಂದುವರೆಯುತ್ತದೆ ಎಂದು ಯಾರಿಗೂ ತಿಳಿಯದು, ಪ್ರಾಯಶಃ ನಿರಂತರವಾಗಿ ಮತ್ತು

ಶಾಶ್ವತವಾಗಿ ಮುಂದುವರೆಯಬಹುದು ಮತ್ತು ನನ್ನ ಹೊರತು ಯಾರೊಬ್ಬರೂ ಆ ಬಗ್ಗೆ ವಿಷಾದ ವ್ಯಕ್ತಪಡಿಸಿರುವುದಿಲ್ಲ......

**ಡಾ. ಶ್ರೀಮತಿ ಸೀತಾ ಪರಮಾನಂದ (ಮಧ್ಯಪ್ರದೇಶ):** ಮಾನ್ಯ ಸದಸ್ಯರೊಬ್ಬರೇ ವಿಷಾದ ವ್ಯಕ್ತಪಡಿಸಿಲ್ಲ ಇತರೆ ಸದಸ್ಯರೂ ಸಹ ವಿಷಾದ ವ್ಯಕ್ತಪಡಿಸಿದ್ದಾರೆ.

**ಡಾ. ಬಿ.ಆರ್. ಅಂಬೇಡ್ಕರ್:** ಮಹಿಳಾ ಸದಸ್ಯರು ಬಹಳಷ್ಟು ಸಹಕಾರಿಯಾಗಿದ್ದಾರೆಂದು ನನಗೆ ತಿಳಿದಿದೆ. ಹಿಂದಿನ ಸಲ ನಾನು ಆತಂಕಗೊಂಡಿದ್ದಾಗ ಕೆಲವು ಮಹಿಳೆಯರನ್ನು ನೆರವಿಗಾಗಿ ಕೋರಿದ್ದೆ ಅಂದರೆ ಸಾಮೂಹಿಕವಾಗಿ ಒಗ್ಗಾಟ್ಟಾಗಿ ಬರುವಂತೆ ಹಾಗು ಅವರಲ್ಲಿ ಯಾರೊಬ್ಬರಾದರೂ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳುವಂತೆಯೂ ಸಹ ಕೋರಿದ್ದೆ, ಬಹುಶಃ ಹಾಗೇ ಮಾಡಿದ್ದಿದ್ದರೆ ಹಿಂದೂ ಸಂಹಿತೆಗೆ ಅಂಗೀಕಾರವನ್ನು ಪಡೆದುಕೊಳ್ಳಬಹುದಿತ್ತು. ಮಾನ್ಯರೇ, ನಾನು ಹೇಳುತ್ತೇನೆ.

**ಖ್ವಾಜಾ ಇನ್ನೇತ್‌ಉಲ್ಲಾಹ (ಬಿಹಾರ್):** ನೀವು ಮತ್ತೇ ಸೂಚನೆ ನೀಡುತ್ತಿದ್ದೀರಿ.

**ಮಾನ್ಯ ಅಧ್ಯಕ್ಷರು:** ಡಾ. ಅಂಬೇಡ್ಕರ್, ನೀವು ಸತ್ಯಾಗ್ರಹಕ್ಕೆ ಪ್ರೋತ್ಸಾಹ ನೀಡುತ್ತಿದ್ದೀರಿ.

**ಡಾ. ಬಿ.ಆರ್. ಅಂಬೇಡ್ಕರ್:** ಹೌದು, ಕೆಲವು ಸಂದರ್ಭಗಳಲ್ಲಿ ಅದು ಪ್ರಯೋಜನವಾಗುತ್ತದೆ. ಆ ಮೂಲಕ ಈ ವಿಧೇಯಕವನ್ನು ತರಲು ಸಾಧ್ಯವಾಗದಿದ್ದಲ್ಲಿ ಅದು ಖಂಡಿತವಾಗಿಯೂ ಮಹಿಳೆಯರ ತೂಕವನ್ನು ಕಡಿಮೆಗೊಳಿಸುತ್ತದೆ ಹಾಗು ಅವರು ತಮ್ಮ ಆರೋಗ್ಯವನ್ನು ಬಹಳ ಮಟ್ಟಿಗೆ ಸುಧಾರಿಸಿಕೊಳ್ಳಲು ನೆರವಾಗುತ್ತದೆ. ಪರಿಸ್ಥಿತಿ ಹಾಗಿದೆ. ಡಾ.ಮಾಥಾಯ್ ೧೯೪೯ರಲ್ಲೇ ತಮ್ಮ ತೀರ್ಮಾನವನ್ನು ತಿಳಿಸಿದ್ದರು. ಆಯ್ಕೆ ಸಮಿತಿಯ ಎರಡನೇ ವರದಿ ಇದ್ದು ಅದು "ಹಿಂದೂ ಸಂಹಿತೆಯ ಬಗ್ಗೆ ಯೋಚಿಸಬೇಡಿ, ಸಂಪದ ಸುಂಕದ ವಿಧೇಯಕವನ್ನು ಮುಂದುವರಿಸಿ" ಎಂದು ಹೇಳುತ್ತದೆ. ಆದರೆ ಮೂರು ವರ್ಷಗಳಲ್ಲಿ ಏನೂ ಆಗಿಲ್ಲ. ಏಕೆ ಹೀಗೆ ಎಂದು ಯಾರೊಬ್ಬರಿಗೂ ತಿಳಿದಿಲ್ಲ. ವಿಧೇಯಕವು, ೧೯೫೨ರ ವರೆಗೆ ಹಣಕಾಸು ಇಲಾಖೆಯ ಕಡತದಲ್ಲೆ ಬಿದ್ದಿದೆ. ನನ್ನ ಮಾನ್ಯ ಸ್ನೇಹಿತನು, ಬಹುಶಃ ಕಛೇರಿಯಲ್ಲಿ ದೂಳು ಹೊಡೆದಲ್ಲಿ ಅದರ ಪ್ರತಿ ಎಲ್ಲಿಯಾದರೂ ಸಿಗಬಹುದು. ಆದರೆ ಅವರೇನು ಮಾಡುತ್ತಾರೋ ಅದು ಕುತೂಹಲದ ಸಂಗತಿಯಾಗಿದೆ. ಆಯ್ಕೆ ಸಮಿತಿಯು ಮಿತಾಕ್ಷರದ ಕಾನೂನಿನ ತೊಂದರೆಯಿಂದ ಹೊರಬರಲು ಕೆಲವು ಸೂಕ್ತ ತಿದ್ದು ಪಡಿಗಳನ್ನು ಅದಕ್ಕೆ ತರುವಂತೆ ಹೇಳಿತು. ನನ್ನ ಮಾನ್ಯ ಸ್ನೇಹಿತರು ಆ ತೊಂದರೆಯಿಂದ ಹೊರಬರಲು ಸ್ವಲ್ಪ ಮಟ್ಟಿನ ಪ್ರಯತ್ನವನ್ನು ಮಾಡುತ್ತಿದ್ದಾರೆ ಮತ್ತು ಅವರು ಮಿತಾಕ್ಷರ ಕಾನೂನನ್ನು ವಾಸ್ತವವಾಗಿ ತೊಡೆದು ಹಾಕುವ ಮೂಲಕ ತೊಂದರೆಯಿಂದ ಹೊರಬಂದಿದ್ದಾರೆ. ಖಂಡ ೭ ಹೀಗೆ ಹೇಳುತ್ತದೆ ೧೮ವರ್ಷ ವಯಸ್ಸಿಗಿಂತ ಕೆಳಗಿನ ವ್ಯಕ್ತಿಯು ಮೃತನಾದಲ್ಲಿ ಆಗ ಸಂಪದ ಸುಂಕವಿರುವುದಿಲ್ಲ. ಆದರೆ, ನಾವು ಹಿಂದೂ ಕಾನೂನಿನ ಅಡಿಯಲ್ಲಿ ಏಕೈಕ ಜೀವಂತ ದಾಯಾದಿ ಎಂಬಂತೆ ಅವನನ್ನು ವಿವರಿಸಿದ್ದ ಪರಿಸ್ಥಿತಿಯಲ್ಲಿ ಆ ದಾಯಾದಿಯು ಮೃತನಾದಲ್ಲಿ, ಆಗ ಸಂಪದ ಸುಂಕವನ್ನು ವಿಧಿಸಬಹುದು. ಮಾನ್ಯರೇ, ನನ್ನ ಮಾನ್ಯ ಸ್ನೇಹಿತರು ಈ ಸುತ್ತುಬಳಸು ಪದ್ಧತಿಯಲ್ಲಿ ಮಿತಾಕ್ಷರ ಕಾನೂನನ್ನು ವಿಫಲಗೊಳಿಸಿದಲ್ಲಿ ಬೇರೊಂದು ವಿಧೇಯಕವನ್ನು ತರುವ ಮೂಲಕ ಅಥವಾ ತಮ್ಮ ಸಹೋದ್ಯೋಗಿಯಾದ ಕಾನೂನು ಸಚಿವರನ್ನು ಪ್ರೇರೇಪಿಸುವ ಮೂಲಕ ಬೇರೊಂದು ವಿಧೇಯಕವನ್ನು ತಂದು ಮಿತಾಕ್ಷರ ಕಾನೂನನ್ನು ರದ್ದುಪಡಿಸಬೇಕೆಂದು ಹೇಳಲು ಅವರಿಗೆ ಧೈರ್ಯವಿರುವುದಿಲ್ಲವೇ? ಮಾನ್ಯರೇ, ಈ ಕೆಲವು ಅಂಶಗಳನ್ನೇ ನಾನು ಹೇಳಬೇಕೆಂದು ಇಚ್ಛಿಸಿದ್ದು ಮಿತಾಕ್ಷರ ಕಾನೂನನ್ನು ಭಾವನಾತ್ಮಕವಾಗಿ ನಾಶಪಡಿಸಲಾಗಿದೆ.

ಏಕೆಂದರೆ ಮಿತಾಕ್ಷರ ಕಾನೂನಿನ ಅಡಿಯಲ್ಲಿ ಸ್ವತ್ತಿನ ಹಸ್ತಾಂತರದಂಥ ಯಾವುದೇ ವಿಷಯವಿಲ್ಲ, ಕಾರಣ ಹುಟ್ಟಿನಿಂದಲೇ ಸ್ವತ್ತು ಅವನದಾಗಿರುತ್ತದೆ. ಸ್ವತ್ತಿನ ವರ್ಗಾವಣೆಯ ಯಾವುದೇ ಪ್ರಶ್ನೆಯು ಉದ್ಭವಿಸುವುದಿಲ್ಲ. ಅದು ತಪ್ಪು ಭಾವನೆ. ಆ ಬಗ್ಗೆ ಯಾರು ಅವರಿಗೆ ಹೇಳಿದರೋ ನನಗೆ ತಿಳಿಯದು. ಮಿತಾಕ್ಷರ ಕಾನೂನಿನ ಅಡಿಯಲ್ಲಿ ಸ್ವತ್ತು ಹಸ್ತಾಂತರವಾಗುವುದಿಲ್ಲ. ಮಗು ಜನಿಸಿದ ತಕ್ಷಣವೇ ಸ್ವತ್ತು ಅವನದ್ದಾಗುತ್ತದೆ ಮತ್ತು ತಂದೆಯ ಭಾಗವು (ಷೇರು) ಕಡಿಮೆಯಾಗುತ್ತದೆ. ಆದ್ದರಿಂದ ತಂದೆಯ ಮರಣದಿಂದಾಗಿ ಏನು ಹಸ್ತಾಂತರವಾಗುತ್ತದೆ? ಏನೂ ಇಲ್ಲ. ಮಗ ಜನಿಸಿದ ಕೂಡಲೇ ತಂದೆಯ ಸ್ವತ್ತಿನ ಭಾಗದ ಮೇಲೆ ಪರಿಣಾಮವಾಗುತ್ತದೆ. ಒಂದು ವೇಳೆ ಆ ಮಗುವಿಗೆ ಒಬ್ಬ ತಮ್ಮ ಹುಟ್ಟಿದರೆ, ದುರದೃಷ್ಟವಶಾತ್, ಮೊದಲನೆಯ ಮಗುವಿನ ಪಾಲು ಅಷ್ಟರಮಟ್ಟಿಗೆ ಕಡಿಮೆಯಾಗುತ್ತದೆ.

ಮಾನ್ಯರೇ, ವಿಶ್ವದಲ್ಲಿ ಅಂಥ ಕಾನೂನು ಅಂದರೆ, ಸಂಪದ ಸುಂಕದ ಕಾನೂನು ಇರುವ ಸುಮಾರು ೪೪ ದೇಶಗಳಿವೆ ಎಂದು ನಾನು ಹೇಳುತ್ತೇನೆ. ಆ ಬಗ್ಗೆ ನನ್ನಲ್ಲಿ ಪಟ್ಟಿ ಇಲ್ಲ. ಆದರೆ ಖಂಡಿತವಾಗಿ ನನಗೆ ತಿಳಿದಂತೆ ಕೆಲವು ದಕ್ಷಿಣ ಏಷ್ಯ ದೇಶಗಳು ಅಂಥ ಕಾನೂನನ್ನು ಜಾರಿಗೊಳಿಸಿವೆ. ಅವುಗಳಲ್ಲಿ ಕೆಲವು ಮಾತ್ರ ಉಳಿದಿವೆ. ನಮ್ಮ ದೊಡ್ಡ ಸಮಸ್ಯೆ ಎಂದರೆ "ನಾವು ಹೇಗೆ ಏನನ್ನಾದರೂ ಸಂಚಯಿಸುವುದು?" ನಾವು ಬಂಡವಾಳ ಶಾಹಿಗಳನ್ನು ದ್ವೇಷಿಸುತ್ತೇವೆ. ನಾನು ಸಹ ದ್ವೇಷಿಸುತ್ತೇನೆ. ನಾನು ನನ್ನ ಜೀವನ ಪೂರ್ತಿ ಅಭಿವೃದ್ಧಿನ್ಯಾಸದ ಪರೇಲ್‌ನಲ್ಲಿರುವ ಕೊಠಡಿ ಸಂಖ್ಯೆ ೫೦ರ ಚಾಲಿನಲ್ಲಿ ಕಳೆದಿದ್ದೇನೆ. ಜನರು ಅಲ್ಲಿಗೆ ಹೋದಲ್ಲಿ ಅದನ್ನು ನೋಡಬಹುದು. ನಾನು ಮೂಲತಃ ೩–೮–೦ ರೂ.ಗಳ ಬಾಡಿಗೆಯನ್ನು ನನ್ನ ಕೊಠಡಿಗೆ ಕೊಡುತ್ತಿದ್ದೆ ಹಾಗು ಈಗಲೂ ಕೊಡುತ್ತಿದ್ದೇನೆ ಅಲ್ಲದೇ ಅದನ್ನು ಹಾಗೆಯೇ ಇಟ್ಟು ಕೊಂಡಿದ್ದೇನೆ ತುರ್ತು ಸಂದರ್ಭಕ್ಕಾಗಿ ಏಕೆಂದರೆ ಒಂದು ಸಮಯ ನನ್ನನ್ನು ಮತ್ತೆ ಅಲ್ಲಿಗೆ ಹೋಗು ಎಂದು ಹೇಳಿದರೆ ಅಲ್ಲಿಗೆ ಹೋಗಬೇಕಾಗುತ್ತದೆ. ನನಗೆ ದೊಡ್ಡ ಬಂಡವಾಳಶಾಹಿ ಸ್ನೇಹಿತರಾರು ಇಲ್ಲ. ಆದರೆ ಈ ದೇಶದಲ್ಲಿ ವಿವಿಧ ರೀತಿಯ ಬಂಡವಾಳಗಳ ನಡುವಣ ವ್ಯತ್ಯಾಸವನ್ನರಿಯುವುದು ನಮ್ಮ ಕರ್ತವ್ಯವೆಂದು ಭಾವಿಸುತ್ತೇನೆ. ಆದ್ದರಿಂದ ನಾವು ಬಂಡವಾಳವನ್ನು ಪಡೆಯಬೇಕಿದ್ದರೆ ಅವರಿಂದ ಪಡೆಯಬೇಕು. ರಷ್ಯಾದ ಮಾದರಿಯನ್ನು ಅನುಸರಿಸಬೇಕು ಮತ್ತು ಅದನ್ನೇ ಮುಂದುವರಿಸಬೇಕು. ನೀವು ಸ್ವಲ್ಪ ಮಟ್ಟಿಗಾದರೂ ಪಕ್ಷಪಾತವನ್ನು ಮಾಡಬೇಕೆಂಬುದೇ ನನ್ನ ಉದ್ದೇಶ. ಒಳ್ಳೆಯದೇ ಆದ ಅವರ ಉತ್ಸಾಹ ಕಂಡು ಅವರು ಎಲ್ಲಿ ಹುಚ್ಚು ಹುಚ್ಚಾಗಿ ಆಡುತ್ತಾರೆನೋ ಎಂಬ ಭಯವು ನನಗಾಗುತ್ತಿದೆ. ಏಕೆಂದರೆ ಇತರೆ ಕೆಲವು ದೇಶಗಳು ಸ್ವಲ್ಪ ಮಟ್ಟಿಗೆ ಹಾಗೆ ಮಾಡಿವೆ. ಭಾರತವು ಖಂಡಿತ ಯುರೋಪ್ ಅಲ್ಲವೆಂದು ತಿಳಿದಿದೆ. ನಾನು ಯುರೋಪಿಗೆ ಹಲವು ಬಾರಿ ಹೋಗಿದ್ದೇನೆ ಹಾಗೂ ಭಾರತ ಮತ್ತು ಯುರೋಪ್‌ಗಳ ನಡುವಣ ವ್ಯತ್ಯಾಸವನ್ನು ಸುಲಭವಾಗಿ ತಿಳಿಯಬಲ್ಲೆ. ಯುರೋಪಿಗೆ ಸರಿ ಎಂದು ಕಂಡದ್ದು ಭಾರತಕ್ಕೆ ಸರಿ ಕಾಣದು. ನಾವು ಯುರೋಪಿನ ಜನರು ತಲುಪಿರುವ ಜೀವನ ಮಟ್ಟವನ್ನು ಅಂದರೆ ಸೌಕರ್ಯದ ಗುಣಮಟ್ಟ, ಜೀವನ ಮಟ್ಟ, ಸಮಾನತೆ, ಶಿಕ್ಷಣ ಇತ್ಯಾದಿಗಳನ್ನು ಖಂಡಿತ ತಲುಪುತ್ತೇವೆ. ಈ ಎಲ್ಲಾ ಅಂಶಗಳೂ ನಮಗೆ ಆವಶ್ಯಕವಾಗಿದೆ. ಈ ಉದ್ದೇಶಕ್ಕಾಗಿ ನಮಗೆ ಹಣದ ಅವಶ್ಯಕತೆ ಇದೆ. ಇಂಗ್ಲೀಷ್ ಜನರ ವಿಷಯವನ್ನೇ ತೆಗೆದುಕೊಳ್ಳಿ ಅವರ ಶೈಕ್ಷಣಿಕ ಪ್ರಗತಿಯನ್ನು ತೆಗೆದುಕೊಳ್ಳಿ ಎಲ್ಲದರಲ್ಲೂ ತ್ವರಿತ ಪ್ರಗತಿ ಸಾಧಿಸಿದ್ದಾರೆ. ಅವರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವು ೧೮೬೦ರಲ್ಲೇ ಜಾರಿಗೆ ಬಂದಿತು. ಅಲ್ಲದೇ ಆಕ್ಸಫರ್ಡ್ ವಿಶ್ವವಿದ್ಯಾಲಯವನ್ನು ಹನ್ನೊಂದು ಅಥವಾ ಹನ್ನೆರಡನೇ ಶತಮಾನದ ಸುಮಾರಿನಲ್ಲೇ ಸ್ಥಾಪಿಸಲಾಗಿತ್ತು. ಆದ್ದರಿಂದ ನಾವು ಮಾಡುತ್ತಿರುವ ಕೆಲಸದ ಬಗ್ಗೆ ಬಹು ಎಚ್ಚರಿಕೆಯಿಂದಿರಬೇಕು. ನಮ್ಮ ಉತ್ಸಾಹವು

ಖಂಡಿತಕ್ಕೂ ಶ್ಲಾಘ್ಯ. ನಾವು ಜನರ ಸುಧಾರಣೆಯತ್ತ ಹೆಚ್ಚಿನ ಗಮನ ಹರಿಸುವುದು ಉತ್ತಮ. ಆದರೆ ಅದಕ್ಕಾಗಿ ನಾವು ಅನುಸರಿಸುತ್ತಿರುವ ಮಾರ್ಗವು ಅರ್ಥಪೂರ್ಣವಾಗಿದೆಯೇ ಎಂಬುದರ ಬಗ್ಗೆ ಜಾಗ್ರತರಾಗಿರಬೇಕು. ನಾನು ಹೇಳಬೇಕೆಂದಿದ್ದುದು, ಹೇಳಲು ಉದ್ದೇಶಿಸಿದ್ದು ಇಷ್ಟನ್ನು ಮಾತ್ರ.

◆

# ೪೮

# ಅಂತಾರಾಷ್ಟ್ರೀಯ ಪರಿಸ್ಥಿತಿ

*ಡಾ. ಬಿ.ಆರ್. ಅಂಬೇಡ್ಕರ್ (ಬಾಂಬೆ):** ಮಾನ್ಯ ಸಭಾಧ್ಯಕ್ಷರೇ ವಿದೇಶಾಂಗ ನೀತಿ ಕುರಿತ ಈ ಚರ್ಚೆಯಲ್ಲಿ ಯಾರಾದರೂ ಹೆಚ್ಚೆಂದರೆ ಏನು ಮಾಡಬಹುದೆಂದರೆ ಸರ್ಕಾರದ ವಿದೇಶಾಂಗ ನೀತಿಗೆ ಆಧಾರಭೂತವಾಗಿರುವಂತಹ ತತ್ವಗಳ ಬಗ್ಗೆ ಚರ್ಚಿಸಬಹುದು. ಇನ್ನೂ ಹೆಚ್ಚಿಗೆ ಚರ್ಚೆ ಮಾಡಲಿಕ್ಕೆ ಸಮಯಾವಕಾಶವಿಲ್ಲ. ತತ್ವಗಳು ನಿಸ್ಸಂದೇಹವಾಗಿಯೂ ಅತ್ಯಂತ ಮೌಲ್ಯಯುತವಾದವುಗಳಾಗಿವೆ. ಆದರೆ ರಾಜಕಾರಣಿಗಳು ಅದರಲ್ಲೂ ನಿರ್ದಿಷ್ಟವಾಗಿ ವಿದೇಶಾಂಗ ನೀತಿಯೊಂದಿಗೆ ವ್ಯವಹರಿಸುತ್ತಿರುವಂತಹ ರಾಜಕಾರಣಿಗಳು ತತ್ವಗಳ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರುವುದಿಲ್ಲ. ಅವರು ಯಾವುದೇ ಆಧಾರಭೂತವಾದ ತತ್ವವಿಲ್ಲದೆ ಪ್ರತಿ ವ್ಯವಹಾರವನ್ನು ತಾತ್ಪೂರ್ತಿಕ ವಿಚಾರಗಳೊಂದಿಗೆ ವ್ಯವಹರಿಸಲು ಇಷ್ಟಪಡುತ್ತಾರೆ ಎಂಬುದರ ಬಗ್ಗೆ ನಾನು ಮಾತನಾಡುತ್ತೇನೆ.

ಪ್ರಥಮ ಜಾಗತಿಕ ಸಮರದ ನಂತರ, ಶ್ರೀ ಲಿಯೋಡ್ ಜಾರ್ಜ್ ಮತ್ತು ಶ್ರೀ ಕ್ಲೇಮೆನ್‌ಸಿಯು ತಮ್ಮ ನಡುವೆ ಸಮಸ್ಯೆಗಳನ್ನು ಇತ್ಯರ್ಥ ಮಾಡಿಕೊಳ್ಳುವ ಸಲುವಾಗಿ ವರ್ಸೆಲ್ಸ್ ಒಪ್ಪಂದಕ್ಕೂ ಮುಂಚೆ ಪ್ಯಾರಿಸ್‌ನಲ್ಲಿ ಒಂದು ಹೋಟೆಲ್‌ನಲ್ಲಿ ಭೇಟಿಯಾದಾಗ ಅಲ್ಲಿ ಫ್ರಾನ್ಸ್‌ನ ಯುದ್ಧತಂತ್ರದ ಬೆದರಿಕೆಗಳನ್ನು ನಿವಾರಿಸಲು ಫ್ರಾನ್ಸಗೆ ಕೆಲವು ಪ್ರದೇಶಗಳನ್ನು ಬಿಟ್ಟುಕೊಡುವ ಸಲುವಾಗಿ ಜರ್ಮನಿಗೆ ಸೇರಿದ ಕೆಲವು ಪ್ರದೇಶಗಳ ನಡುವೆ ವಿಭಜನೆಯ ಗೆರೆಯನ್ನು ಎಳೆಯಲು ಅವರು ಒಂದು ಕೊಠಡಿಯಲ್ಲಿ ಉದ್ದನೆಯ ಭೂಪಟವನ್ನು ಹರಡಿದರು. ಅದು ಇಡೀ ಕೊಠಡಿಯ ತುಂಬಾ ಆವರಿಸಿಕೊಂಡಿತ್ತು ಮತ್ತು ಶ್ರೀ ಲಿಯೋಡ್ ಜಾರ್ಜ್ ಮತ್ತು ಶ್ರೀ ಕ್ಲೇಮೆನ್‌ಸಿಯು ಅವರು ಎಲ್ಲಿ ಗೆರೆಯನ್ನು ಎಳೆಯಬೇಕೆಂಬುದನ್ನು ನಿಖರವಾಗಿ ಪರಿಶೀಲಿಸುವ ವಿಚಾರದಲ್ಲಿ ಗೊಂದಲಕ್ಕೆ ಸಿಲುಕಿದರು. ಸುದೀರ್ಘ ಹುಡುಕಾಟದ ನಂತರ ಅವರು ಸಹಜವಾಗಿ ಫ್ರಾನ್ಸ್‌ಗೆ ಹೆಚ್ಚು ಸೂಕ್ತವಾದಂಥ ಗೆರೆಯನ್ನು ಎಳೆದರು. ಬಳಿಕ ಶ್ರೀ ಲಿಯೋಡ್ ಜಾರ್ಜ್ ಅವರು ತಮ್ಮ ವಿದೇಶಾಂಗ ಕಛೇರಿಯಿಂದ ತಜ್ಞರಾಗಿ ತಮ್ಮೊಟ್ಟಿಗೆ ಬಂದಿದ್ದಂತಹ ಶ್ರೀ ನಿಕೋಲ್ಸನ್ ಅವರನ್ನು ಕರೆಸಿ ತಾವು ಎಳೆದಿದ್ದಂಥ ಗೆರೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ ಅವರಿಗೆ ಕೇಳಿದರು. ಶ್ರೀ ನಿಕೋಲ್ಸನ್ ಅವರು "ಓ ಇದು ತೀರಾ ದುರದೃಷ್ಟಕರ ತೀರಾ ದುರದೃಷ್ಟಕರ. ನೈತಿಕವಾಗಿ ಪೂರ ಅಸಮರ್ಥನೀಯವಾದುದು" ಎಂದು ಹೇಳಿ ಅತ್ಯಂತ ವಿಷಾದದಿಂದ ವಿವರಿಸಿದರು. ಈ ಇಬ್ಬರೂ ರಾಜತಾಂತ್ರಿಕರು ಕೂಡಲೇ ತಮ್ಮ ಹಿಂದಿನ ನಿಲುವಿಗೆ ಹಿಂತಿರುಗಿ ತಮ್ಮ ವರಸೆಯನ್ನು ಬದಲಾಯಿಸಿದರು ಮತ್ತು "ಸರಿ, ಶ್ರೀ ನಿಕೋಲ್ಸನ್, ಹಾಗಾದರೆ ನೀವು ನಮಗೆ ಒಂದು ಒಳ್ಳೆಯ ಕಾರಣವನ್ನು ನೀಡಬಾರದೇಕೆ?" ಎಂದು ಹೇಳಿದರು ಎಂಬುದನ್ನು ನಾನು ನೆನಪಿಸಿಕೊಳ್ಳುತ್ತೇನೆ.

---

* ಸಂಸದೀಯ ಚರ್ಚೆಗಳು (ರಾಜ್ಯಸಭೆ) ಸಂ. ೭೨, ೨೬ನೇ ಆಗಸ್ಟ್ ೧೯೫೪, ಪು. ೪೪೯–೮೩.

೧೯೨೪ರ ಸುಮಾರಿಗೆ ಮಹಾನ್ ವ್ಯಂಗ್ಯ ಚಿತ್ರಕಾರರಾದ ಶ್ರೀ ಲೋ ಎಂಬುವವರು ಯೂರೋಪಿನ ಬೇರೆ ಬೇರೆ ರಾಷ್ಟ್ರಗಳ ವಿವಿಧ ವಿದೇಶಾಂಗ ಸಚಿವರುಗಳನ್ನು ಚಿತ್ರಿಸಿ ನಂತರ ಅವರು ಪರಸ್ಪರ ಒಬ್ಬರಿಗೊಬ್ಬರು ಕೈ ಹಿಡಿದುಕೊಂಡು ಸುತ್ತಲೂ ನರ್ತಿಸುತ್ತಾ ತಮ್ಮ ಎತ್ತರದ ರೇಷ್ಮೆ ಟೊಪ್ಪಿಗೆಗಳು, ಟೇಲ್ ಕೋಟ್‌ಗಳು ಮತ್ತು ಪಟ್ಟೆಯುಳ್ಳ ಷರಾಯಿಗಳೊಂದಿಗೆ ಯೂರೋಪಿನ ಸಮಸ್ಯೆಗಳ ಇತ್ಯರ್ಥಕ್ಕಾಗಿ ಹುಡುಕುತ್ತಿರುವ ಹಾಗೂ "ಓ ನಮಗೆ ಶಾಂತಿಯನ್ನು ನೀಡು ತತ್ವಗಳನ್ನಲ್ಲ" ಎಂದು ಹೇಳುತ್ತಿರುವ ಒಂದು ವ್ಯಂಗ್ಯ ಚಿತ್ರವನ್ನು ಲಂಡನ್‌ನ ಇವನಿಂಗ್ ಸ್ಟಾಂಡರ್ಡ್ ಪತ್ರಿಕೆಯಲ್ಲಿ ಬರೆದಿದ್ದರೆಂಬುದನ್ನು ಸಹ ನಾನು ನೆನಪಿಸಿಕೊಳ್ಳುತ್ತೇನೆ. ಸಹಜವಾಗಿ ಆಗ ಅದನ್ನು ನೋಡಿ ವಿಶ್ವವೇ ನಕ್ಕಿತ್ತು.

ನಮ್ಮ ಪ್ರಧಾನ ಮಂತ್ರಿಯವರ ಬಗೆಗೆ ಹಾಗೇ ಹೇಳಬೇಕಾಗಿಲ್ಲ ಎಂಬುದರ ಬಗ್ಗೆ ನನಗೆ ಹರ್ಷವೆನಿಸುತ್ತದೆ. ಅವರು ಕೆಲವು ತತ್ವಗಳನ್ನು ಹೊಂದಿದ್ದು ಅವುಗಳ ಆಧಾರದ ಮೇಲೆ ವ್ಯವಹರಿಸುತ್ತಿದ್ದಾರೆ. ಅವರು ಅನುಸರಿಸುತ್ತಿರುವಂತಹ ತತ್ವಗಳು ನಮಗೆ ರಕ್ಷಣೆಯನ್ನು ಒದಗಿಸಬಲ್ಲಂಥ ತತ್ವಗಳಾಗಿವೆಯೇ ಮತ್ತು ಅವು ಈ ರಾಷ್ಟ್ರದ ಹಣೆಬರಹವನ್ನು ನಿರ್ಧರಿಸಬಹುದಾದಂಥ ಮಾನ್ಯವಾದ ತತ್ವಗಳಾಗಿವೆಯೇ ಎಂಬುದನ್ನು ನಿರ್ಧರಿಸುವುದು ಈ ಸದನಕ್ಕೆ ಸೇರಿದ್ದು. ಇದು ನಾವು ಚರ್ಚಿಸಬಹುದಾದಂಥ ಏಕ ಮಾತ್ರ ಪ್ರಶ್ನೆಯಾಗಿದೆ ಮತ್ತು ಈ ತತ್ವಗಳಿಗೆ ನಾನು ಸ್ವತಃ ಬದ್ಧನಾಗಿದ್ದೇನೆ.

ಪ್ರಧಾನ ಮಂತ್ರಿಯವರು ಪಾಲಿಸುತ್ತಿರುವಂತಹ ಹಾಗೂ ಸ್ವತಃ ಅವರೇ ಪಾಲಿಸುತ್ತಿರುವುದಾಗಿ ಹೇಳಿರುವಂತಹ ತತ್ವಗಳು ಪ್ರಧಾನವಾಗಿ ಮೂರು. ಮೊದಲನೆಯದು ಶಾಂತಿ, ಎರಡನೆಯದು ಕಮ್ಯೂನಿಸಮ್ ಮತ್ತು ಮುಕ್ತ ಪ್ರಜಾಪ್ರಭುತ್ವದ ನಡುವೆ ಸಹಬಾಳ್ವೆ ಮತ್ತು ಮೂರನೆಯದು ಸೀಟೋಗೆ ವಿರೋಧ. ಇವು ಅವರ ವಿದೇಶಾಂಗ ನೀತಿಗೆ ಆಧಾರವಾಗಿರುವಂಥ ಮೂರು ಪ್ರಧಾನ ಆಧಾರಸ್ತಂಭಗಳಾಗಿವೆ. ಮಾನ್ಯರೇ, ಈಗ ಈ ತತ್ವಗಳ ಸಿಂಧುತ್ವ ಮತ್ತು ಪರ್ಯಾಪ್ತತೆಯನ್ನು ನಿರ್ಧರಿಸಲು ಯಾರಾದರೂ ಸಮರ್ಥರಾಗಬಹುದಾದುರಿಂದ ನಮಗೆ ಕಳವಳ ಕಾರಿಯಾರುಗಿವಂತಹ ಇಂದಿನ ಸಮಸ್ಯೆಗಳ ಹಿನ್ನೆಲೆಯನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುವುದು ಅಗತ್ಯವಾಗಿದೆ ಮತ್ತು ಇದಕ್ಕಾಗಿ ಈ ತತ್ವಗಳನ್ನು ಘೋಷಿಸಲಾಗಿದೆ ಎಂಬುದು ನನ್ನ ಭಾವನೆ.

ಈಗ, ಹಿನ್ನೆಲೆಯ, ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ನಿಸ್ಸಂದೇಹವಾಗಿ ವಿಶ್ವದಲ್ಲಿ ಕಮ್ಯೂನಿಸಮ್‌ನ ವಿಸ್ತರಣೆಯಲ್ಲದೆ ಬೇರೇನೂ ಅಲ್ಲ. ವಿಶ್ವವು ಇಂದು ಎದುರಿಸುತ್ತಿರುವಂಥ ಸಂಸದೀಯ ಮತ್ತು ಮುಕ್ತ ಪ್ರಜಾಪುಭುತ್ವದಲ್ಲಿ ಎಂದರೆ ವಿಶ್ವದಲ್ಲಿ ಕಮ್ಯೂನಿಸಮ್‌ನ ವಿಸ್ತರಣೆಯಲ್ಲಿ ನಂಬಿಕೆಯಿಟ್ಟಿರುವ ವಿಶ್ವದ ಭಾಗವಾಗಿರುವಂಥ ಸಮಸ್ಯೆಯನ್ನು ಯಾರಾದರೂ ನೆನಪಿನಲ್ಲಿಟ್ಟುಕೊಂಡ ಹೊರತು ತತ್ವವನ್ನು ಅನುಸರಿಸುವುದು ಅಥವಾ ತತ್ವದ ಸಿಂಧುತ್ವ ಮತ್ತು ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದು ಖಂಡಿತವಾಗಿಯೂ ಅಸಾಧ್ಯ. ನಾನು ಈ ವಿಷಯವಾಗಿ ಸಂಗ್ರಹಿಸಿರುವಂತಹ ಕೆಲವು ಅಂಕಿ ಅಂಶಗಳನ್ನು ಸದನದ ಮುಂದಿಡಲು ಬಯಸುತ್ತೇನೆ. ನಾನು ತೀರಾ ಹಿಂದಕ್ಕೆ ಹೋಗುವುದಿಲ್ಲ ಆದರೆ ಯುದ್ಧದ ಮುಕ್ತಾಯದ ಹಂತ ಎಂದರೆ ೧೯೪೫ರ ಮೇ ತಿಂಗಳಿನಿಂದ ಪ್ರಾರಂಭಿಸಿ ಹೇಳಬಯಸುತ್ತೇನೆ. ೧೯೪೫ರ ಮೇ ವೇಳೆಗೆ ರಷ್ಯಾ ಹತ್ತು ಯುರೋಪಿಯನ್ ರಾಜ್ಯಗಳನ್ನು ಕಬಳಿಸಿಬಿಟ್ಟಿತ್ತು.

**ಶ್ರೀ ಬಿ. ಗುಪ್ತಾ:** ಇದು ಸಂಪೂರ್ಣ ಸುಳ್ಳು.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಗುಪ್ತಾ ಅವರೇ ಉತ್ತರ ನೀಡಲಿಕ್ಕೆ ನಿಮಗೆ ನಿಮ್ಮದೇ ಆದ ಕಾಲಾವಕಾಶವನ್ನು ನೀಡಲಾಗುತ್ತದೆ.

**ಶ್ರೀ ಬಿ. ಗುಪ್ತಾ:** ಅವರು ಅಂಥ ವಿಷಯಗಳನ್ನು ಹೇಳಬಾರದು. ಅವರಂಥ ಹಿರಿಯರು ಅಂಥ ವಿಷಯಗಳನ್ನು ಹೇಳಬಾರದು.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಸುಂದರಯ್ಯ ಅವರೇ ಅವರಿಗೆ ಉತ್ತರ ನೀಡುವ ಅವಕಾಶವಿದೆಯಾದುದರಿಂದ ಭಾವೋದ್ವೇಗಕ್ಕೆ ಒಳಗಾಗುವ ಅಗತ್ಯವಿಲ್ಲವೆಂದು ಅವರಿಗೆ ಹೇಳಿ.

**ಡಾ. ಬಿ.ಆರ್. ಅಂಬೇಡ್ಕರ್:** ನಿಮಗೆ ಉತ್ತರಿಸಲಿಕ್ಕೆ ಸಮಯ ಕೊಡಲಾಗುತ್ತದೆ. ತಾಳ್ಮೆ ಕಳೆದುಕೊಳ್ಳಬೇಡಿ. ಪ್ರಧಾನ ಮಂತ್ರಿಗಳು ಪದೇ ಪದೇ ಕಳವಳಕ್ಕೊಳಗಾಗುತ್ತಿದ್ದರು. ಆದರೆ ಅವರು ಇಂದು ಕಳವಳಕ್ಕೊಳಗಾಗಿಲ್ಲ. ಅವರು ಸಂಪೂರ್ಣ ಶಾಂತವಾಗಿದ್ದಾರೆ. ನೀವು ಹೀಗೇಕೆ ಭಾವೋದ್ವೇಗಕ್ಕೊಳಗಾಗುತ್ತಿದ್ದೀರಿ?

ನೀವು ಅದರ ಅಧಿಕೃತತೆಯನ್ನು ಪರಿಶೀಲಿಸಲು ಬಯಸಿದಲ್ಲಿ ನಾನು ನಿಮಗೆ ಅದನ್ನು ನೀಡುತ್ತೇನೆ. ನಾನು ಇಲ್ಲೇ ಅದನ್ನು ಕೊಡಿಸುತ್ತೇನೆ. ಆದರೆ ನೀವು ನನಗೆ ಅದನ್ನು ಹಿಂದಿರುಗಿಸುವಿಕೆಂಬ ಭರವಸೆ ನನಗಿದೆ.

**ಶ್ರೀ ಬಿ. ಗುಪ್ತಾ:** ನೀವು ನಿಮ್ಮ ದಾಖಲೆಯನ್ನು ಮ್ಯಾಕ್‌ಕಾರ್ಟಿ ಮತ್ತು ಡಲ್ಲಸ್‌ನಿಂದ ಪಡೆದಿದ್ದೀರಿ.

**ಡಾ. ಬಿ.ಆರ್. ಅಂಬೇಡ್ಕರ್:** ಇಲ್ಲ ಮಾನ್ಯರೇ, ನಾವು ಮೇ ೧೯೪೫ ರಿಂದ ಪರಿಸ್ಥಿತಿಯ ಮೂಲ ಸಾಮಗ್ರಿಯನ್ನು ತೆಗೆದುಕೊಂಡು ಏನು ನಡೆಯಿತೆಂಬುದನ್ನು ಕಂಡು ಹಿಡಿದಾಗ ಇದು 'ಪರಿಸ್ಥಿತಿ' ಎಂದು ನಾನು ಹೇಳುತ್ತಿದ್ದೇನೆ. ನಾನು ಹೇಳಿದಂತೆ ರಷ್ಯಾ ಹತ್ತು ಯುರೋಪಿಯನ್ ರಾಜ್ಯಗಳನ್ನು ಕಬಳಿಸಿತ್ತು. ಒಂದನೆಯದು ಫಿನ್‌ಲ್ಯಾಂಡ್, ಎರಡನೆಯದು ಈಸ್ಟೋನಿಯಾ, ಮೂರನೆಯದು ಲಾಟವೀಯ, ಐದನೆಯದು ಪೋಲ್ಯಾಂಡ್, ಆರನೆಯದು ಸ್ಲೋವೇಕಿಯಾ, ಏಳನೆಯದು ಹಂಗೇರಿ, ಎಂಟನೆಯದು ರುಮೇನಿಯಾ, ಒಂಭತ್ತನೆಯದು ಬಲ್ಗೇರಿಯಾ ಹಾಗೂ ಹತ್ತನೆಯದು ಆಲ್ಬೇನಿಯಾ.

**ಶ್ರೀ ಬಿ. ಗುಪ್ತಾ:** ... ಮತ್ತು ಹನ್ನೊಂದನೆಯದು ಡಾ. ಅಂಬೇಡ್ಕರ್.

**ಡಾ. ಬಿ.ಆರ್. ಅಂಬೇಡ್ಕರ್:** ನೀವು ನನ್ನನ್ನೂ ಆ ಪಟ್ಟಿಗೆ ಸೇರಿಸಿದ್ದಕ್ಕೆ ನನಗೆ ಸಂತೋಷವೆನಿಸುತ್ತದೆ. ನೀವು ಪುಸ್ತಕಕ್ಕಿಂತ ಹೆಚ್ಚು ಅಪ್‌ಡೇಟ್ ಆಗಿದ್ದೀರಿ.

ಜೊತೆಗೆ ಜರ್ಮನಿ, ಆಸ್ಟ್ರಿಯಾ ನಾರ್ವೆಯ ಭಾಗಗಳನ್ನು ಹಾಗೂ ಬಾರ್ನ್‌ಹೋಮ್ ಡ್ಯಾನಿಷ್ ದ್ವೀಪವನ್ನು ರಷ್ಯಾ ವಶಪಡಿಸಿಕೊಂಡಿತು. ಈ ಹತ್ತು ಯೂರೋಪಿಯನ್ ರಾಜ್ಯಗಳ ಪೈಕಿ ಮೂರು ರಾಜ್ಯಗಳನ್ನು ರಷ್ಯಾವು ನೇರವಾಗಿ ಆಕ್ರಮಿಸಿಕೊಂಡಿದ್ದು, ತನ್ನ ರಾಷ್ಟ್ರದ ಭಾಗವನ್ನಾಗಿ ಮಾಡಿಕೊಂಡಿದೆ. ಉಳಿದ ಏಳು ರಾಜ್ಯಗಳನ್ನು ರಷ್ಯಾಡಳಿತದ ಅಧೀನದಲ್ಲಿಟ್ಟುಕೊಂಡಿದೆ. ರಷ್ಯಾದ ಈ ಯೂರೋಪಿನ ವಿಜಯದಿಂದ ಒಟ್ಟು ೮೫,೦೦೦ ಚದರ ಮೈಲಿಗಳಷ್ಟು ಪ್ರದೇಶವು ರಷ್ಯಾದಲ್ಲಿ ವಿಲೀನಗೊಂಡಂತಾಗಿದ್ದು, ಇದರಿಂದ ೨೩ ದಶಲಕ್ಷ ಜನರು ದಾಸ್ಯಕ್ಕೆ ಗುರಿಯಾದಂತಾಗಿದೆ.

ದೂರ ಪ್ರಾಂತ್ಯದಲ್ಲಿ, ರಷ್ಯಾವು ಚೀನಾ (ಟನ್ನು ಟುವ), ಮಂಚೂರಿಯ ಮತ್ತು ಕೊರಿಯಾ ೩೮ನೇ ಅಕ್ಷಾಂಶ ರೇಖೆಯ ಉತ್ತರ ಹಾಗೂ ದಕ್ಷಿಣದ ಸಾಖಲಿನ್ ಪ್ರದೇಶವನ್ನು ಆಕ್ರಮಿಸಿಕೊಂಡಿದೆ. ದೂರ ಪ್ರಾಚ್ಯದಲ್ಲಿನ ಈ ಪ್ರದೇಶವು ಒಟ್ಟು ೨೦,೦೦೦ ಚದರ ಮೈಲಿಗಳಷ್ಟು ಭೂಪ್ರದೇಶವನ್ನು ಹಾಗೂ ೫,೦೦,೦೦೦ ನಿವಾಸಿಗಳನ್ನು ಪ್ರತಿನಿಧಿಸುತ್ತದೆ.

**ಶ್ರೀ ಪಿ. ಸುಂದರಯ್ಯ:** ಚೀನಾದ ಜನತಾ ಗಣರಾಜ್ಯದ ಬಗ್ಗೆ ನೀವು ಏನು ಹೇಳುತ್ತೀರಿ? ಅದನ್ನು ನೀವು ಕೈಬಿಟ್ಟಿದ್ದು ಏಕೆ?

**ಶ್ರೀ ಗೋವಿಂದ ರೆಡ್ಡಿ:** ಅವರು ಆ ವಿಚಾರವನ್ನು ಹೇಳಿದರು.

**ಶ್ರೀ ಬಿ. ಗುಪ್ತಾ:** ಇತಿಹಾಸದ ಒಂದು ದೊಡ್ಡ ತಾರ್ಕಿಕ ಸಮರ್ಥನೆ ನಡೆಯುತ್ತಿದೆ, ಒಬ್ಬ ಮಹಾನ್ ಇತಿಹಾಸಕಾರರು ಅವತರಿಸಿದ್ದಾರೆ.

**ಡಾ. ಬಿ.ಆರ್. ಅಂಬೇಡ್ಕರ್:** ಅವರು ದಕ್ಷಿಣ ಕೋರಿಯಾ ಮತ್ತು ಇಂಡೋ–ಚೀನಾದಲ್ಲಿ ಮತ್ತಷ್ಟು ಆಕ್ರಮಣ ಮಾಡುವುದರ ಮೂಲಕ ಸಂಖ್ಯೆಯನ್ನು ಹೆಚ್ಚಿಸಿಕೊಂಡರು.

ಸರಿ, ಮಾನ್ಯರೇ, ಈ ಸರ್ಕಾರದ ವಿದೇಶಾಂಗ ನೀತಿಗೆ ಆಧಾರವಾಗಿರವಂಥ ತತ್ವಗಳ ಪರ್ಯಾಪ್ತತೆಯನ್ನು ಪರಿಗಣಿಸಲೇಬೇಕೆಂಬುದರ ವಿರುದ್ಧವಾಗಿ ನಾನು ಮಾತನಾಡುತ್ತಿರುವುದಕ್ಕೆ ಇದು ಹಿನ್ನೆಲೆ. ನಾನು ಮೊದಲು ಶಾಂತಿಯ ತತ್ವವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ನಮಗೆ ಶಾಂತಿಬೇಕು, ಯಾರಿಗೂ ಯುದ್ಧ ಬೇಕಾಗಿಲ್ಲ. ಈ ಶಾಂತಿಯ ಬೆಲೆ ಎಷ್ಟಾಗಲಿದೆ ಎಂಬಂದು ಮಾತ್ರ ಏಕೈಕ ಪ್ರಶ್ನೆಯಾಗಿದೆ. ಯಾವ ಬೆಲೆಯಲ್ಲಿ ನಾವು ಈ ಶಾಂತಿಯನ್ನು ಖರೀದಿಸುತ್ತಿದ್ದೇವೆ? ಈಗ ಶಾಂತಿಯು ಯಾವುದನ್ನು ದೇಶಗಳ ವಿಭಜನೆ ಮಾಡುವಿಕೆ ಮತ್ತು ವಿಘಟನೆ ಮಾಡುವಿಕೆ ಎಂದು ಕರೆಯಬಹುದಾಗಿಯೇ ಅದರಿಂದ ಖರೀದಿಸಲ್ಪಡುತ್ತಿದೆ ಎಂಬುದು ಸಂಪೂರ್ಣ ಸ್ಪಷ್ಟವಾಗಿದೆ. ವಿಭಿನ್ನ ಭಾಷೆಗಳು, ವಿಭಿನ್ನ ಸಂಸ್ಕೃತಿಗಳು, ವಿಭಿನ್ನ ಜನಾಂಗಗಳನ್ನು ಹೊಂದಿರುವ ಬೇರೆಬೇರೆ ರಾಷ್ಟ್ರೀಯತೆಗಳನ್ನು ಆಸ್ಟ್ರೀಯನ್ ಸಾಮ್ರಾಜ್ಯದ ಒಂದು ಸಾರ್ವಭೌಮ ನಿರಂಕುಶ ಪ್ರಭುತ್ವದಡಿ ಒಟ್ಟಿಗೆ ಇಡಲಾಗಿದ್ದಂತಹ ಆಸ್ಟ್ರೀಯಾ–ಹಂಗೇರಿಯ ವಿಘಟನೆಯನ್ನು ನಾನು ಪೂರ್ಣ ಅರ್ಥಮಾಡಿಕೊಳ್ಳಬಲ್ಲೆ. ಮೊದಲನೆ ಜಾಗತಿಕ ಸಮರವು ಸ್ವಯಂ ನಿರ್ಧಾರಾಧಿಕಾರದ ಸುಪ್ರಸಿದ್ಧ ಸಿದ್ಧಾಂತದ ಮೇಲೆ ಆಸ್ಟ್ರೀಯನ್ ಸಾಮ್ರಾಜ್ಯವನ್ನು ಪರ್ಯಾವಸಾನವಾಗುವಂತೆ ಮಾಡಿತು. ಆದರೆ ಇಲ್ಲಿ ಈ ವಿಷಯದಲ್ಲಿ ನೀವು ಏನು ಮಾಡುತ್ತಿರುವಿರಿ. ಸಾಂಸ್ಕೃತಿಕವಾಗಿ ಒಂದೇ ಆಗಿರುವಂತಹ, ಸಾಮಾಜಿಕವಾಗಿ ಸಮರೂಪವಾಗಿರುವಂತಹ, ಒಂದೇ ಭಾಷೆ, ಒಂದೇ ಜನಾಂಗ, ಒಂದೇ ನಿಯತಿಯನ್ನು ಹೊಂದಿದ್ದು ಒಟ್ಟಿಗೆ ಬಾಳುವ ಅಪೇಕ್ಷೆಯನ್ನು ಹೊಂದಿರುವಂತಹ ರಾಷ್ಟ್ರಗಳಿವೆ. ನೀವು ಅಲ್ಲಿಗೆ ಹೋಗಿ ಅವುಗಳನ್ನು ಕತ್ತರಿಸಿ ಮುಂಡವನ್ನು ಬೇರ್ಪಡಿಸಿ ಮುಂಡದ ಒಂದು ಭಾಗವನ್ನು ಕಮ್ಯೂನಿಸಮ್ ಅನ್ನು ಹರಡುವುದರಲ್ಲಿ ಆಸಕ್ತಿಯುಳ್ಳಂತಹ ರಾಷ್ಟ್ರಗಳಿಗೆ ವಹಿಸಿಕೊಡಿ. ನಾನು ಕೊಟ್ಟಿರುವ ಅಂಕಿ ಅಂಶಗಳಿಂದ ನೋಡಿದರೆ ಇಂದು ಕಮ್ಯೂನಿಸ್ಟ್ ರಾಷ್ಟ್ರಗಳು ಅತ್ಯಂತ ದೈತ್ಯ ಶಕ್ತಿಗಳಾಗಿ ಬೆಳೆದಿವೆ ಎಂಬುದರ ಬಗ್ಗೆ ಯಾವುದೇ ಅನುಮಾನವಿರದಿರಬಹುದು. ಯಾರೊಬ್ಬರೂ ದೈತ್ಯ ಶಕ್ತಿಯನ್ನು ನೋಡಿರುವುದಿಲ್ಲ ನಾನಂತೂ ನೋಡಿಲ್ಲ.

**ಶ್ರೀ ಬಿ. ಗುಪ್ತಾ:** ನಿಮ್ಮನ್ನು ಬಿಟ್ಟು.

**ಡಾ. ಬಿ.ಆರ್. ಅಂಬೇಡ್ಕರ್: ....** ಮತ್ತು ಅವರು ವರ್ಚಸ್ಸಿಗಳಾದ ದೊಡ್ಡ ವ್ಯಕ್ತಿಗಳು ಅಥವಾ ಮನುಷ್ಯರಲ್ಲಿ ಒಬ್ಬರೆಂದು ಭಾವಿಸಿದ್ದಾರೆ. ಇಲ್ಲಿ ನೀವು ಅವರನ್ನು ದಾಸ್ಯದಿಂದ ವಿಮೋಚನೆಗೊಳಿಸುತ್ತಿದ್ದೇವೆಂಬ ಸಿದ್ಧಾಂತದ ಮೇಲೆ ಬೇರೆ ಜನರನ್ನು ನಾಶಗೊಳಿಸಿ ಅವರನ್ನು ನಮ್ಮ ತೆಕ್ಕೆಗೆ ಸೇರಿಸಿಕೊಳ್ಳುವಲ್ಲಿ ನಿರತವಾಗಿರುವ ಒಂದು ದೊಡ್ಡ ರಾಷ್ಟ್ರವನ್ನು ಹೊಂದಿದ್ದೀರಿ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ರಷ್ಯಾದ ವಿಮೋಚನೆಯು ದಾಸ್ಯವು ಹಿಂಬಾಲಿಸಿಕೊಂಡು ಬಂದ ವಿಮೋಚನೆ, ಇದು ಸ್ವಾತಂತ್ರ್ಯವನ್ನು ಹಿಂಬಾಲಿಸಿಕೊಂಡು ಬಂದ ವಿಮೋಚನೆ ಅಲ್ಲ. ಆದರೆ ವಿಷಯ ಇದಾಗಿರುವುದರಿಂದ ಇದು ನನ್ನನ್ನು ಸಾಕಷ್ಟು ಬಾಧಿಸುತ್ತದೆ. ಈ ಬಗೆಯ ಶಾಂತಿಯಿಂದ ನೀವು ಪ್ರತಿ ಸಂದರ್ಭದಲ್ಲೂ ದಾನವ ಶಕ್ತಿಗೆ ಉಣಬಡಿಸುತ್ತಿರುವುದಲ್ಲದೆ ಹೆಚ್ಚೇನನ್ನು ಮಾಡುತ್ತಿಲ್ಲ. ಇದರಿಂದ ದಾನವಶಕ್ತಿಯು ತನ್ನ ಬಾಯಿ ತೆರೆದು ಯಾವುದನ್ನಾದರೂ ಆಪೋಷಣ ತೆಗೆದುಕೊಳ್ಳಲು ಬಯಸುತ್ತದೆ. ನೀವು ನಿಯತವಾಗಿ ಮತ್ತು ನಿರಂತರವಾಗಿ ದಾನವ ಶಕ್ತಿಗೆ ಪ್ರೋತ್ಸಾಹ ನೀಡುತ್ತಿರುವಾಗ

ನಾನು ನನ್ನನ್ನು ನಾನೇ ಕೇಳಿಕೊಳ್ಳಬೇಕಾದ ಪ್ರಶ್ನೆ ಇದು: ಈ ದಾನವ ಶಕ್ತಿಯು ಒಂದು ದಿನ ನಮಗೇ ತಿರುಗಿಬಿದ್ದು "ನಾನು ಈಗ ಕಬಳಿಸಬೇಕಾಗಿರುವಂಥದ್ದೆಲ್ಲವನ್ನು ಕಬಳಿಸಿದ್ದೇನೆ. ನೀನೊಬ್ಬನೇ ಉಳಿದಿರುವ ಏಕೈಕ ವ್ಯಕ್ತಿ. ನಾನು ನಿನ್ನನ್ನೂ ಕಬಳಿಸಬಯಸಿದ್ದೇನೆ ಎಂದು ಹೇಳುತ್ತದೆಂಬುದನ್ನು ಊಹಿಸಲಿಕ್ಕಾಗುವುದಿಲ್ಲವೇ?

**ಶ್ರೀ ಹೆಚ್.ಪಿ. ಸಕ್ಸೇನಾ:** ಆಗ ನಾವೇ ದಾನವ ಶಕ್ತಿಯನ್ನು ನುಂಗಿಬಿಡುತ್ತೇವೆ.

**ಡಾ. ಬಿ.ಆರ್. ಅಂಬೇಡ್ಕರ್:** ನಮ್ಮನ್ನು ನಾವು ಅತಿಯಾಗಿ ಪ್ರಶಂಸಿಸಿಕೊಳ್ಳುವುದು ಬೇಡ. ನಾವು ಅಂತಾರಾಷ್ಟ್ರೀಯ ಶಕ್ತಿ ಪರೀಕ್ಷೆಯಲ್ಲಿ ಇದುವರೆಗೂ ಶಕ್ತಿ ಪರೀಕ್ಷೆಯನ್ನು ಮಾಡಿಕೊಂಡಿಲ್ಲ ಮತ್ತು ನಾವು ಅಂತಾರಾಷ್ಟ್ರೀಯ ಶಕ್ತಿ ಪರೀಕ್ಷೆಯಲ್ಲಿ ಶಕ್ತಿ ಪರೀಕ್ಷೆಯನ್ನು ಮಾಡಿಕೊಂಡಾಗ ನಾವು ನಮ್ಮಷ್ಟಕ್ಕೆ ನಾವೇ ಪರಿಸ್ಥಿತಿಯನ್ನು ಎದುರಿಸಬಹುದೇ ಎಂಬುದು ರುಜುವಾತಾಗುತ್ತದೆಂಬುದು ನನ್ನ ಭಾವನೆ. ಆದರೆ ನಾನು ಎತ್ತುತ್ತಿರುವಂಥ ವಿಷಯ ಇದು. ದಾನವ ಶಕ್ತಿಯನ್ನು ಪ್ರೇರೇಪಿಸುವ ಈ ತತ್ವವು ನನಗೆ ಅತ್ಯಂತ ಅಸಹ್ಯಕರವಾಗಿ ಕಂಡು ಬರುತ್ತದೆ ಮತ್ತು ಉದಾಹರಣೆಗೆ ನಾನು ಹೇಳಿದಂತೆ ಅದು ವಿಮೋಚನೆಗೊಳಿಸುತ್ತದೆಂದು ನಾವು ಹೇಗೆ ನಿರೀಕ್ಷಿಸಬಹುದು? ಭಾರತದ ಪ್ರಧಾನ ಮಂತ್ರಿಗಳು ಮತ್ತು ಭಾರತದ ಸಂಸತ್ತು ಚೀನಾ ವಿಭಜನೆಯನ್ನು ಬೆಂಬಲಿಸಿರುವುದರಿಂದ ಅಥವಾ ಕೊರಿಯಾದ ವಿಭಜನೆಗೆ ಬೆಂಬಲಿಸಿರುವುದರಿಂದ ರಷ್ಯನ್ನರು ಯಾವುದೇ ಕೃತಜ್ಞತೆಯನ್ನು ತೋರುವರೇ? ಮತ್ತು ಅವರು ನಮಗೆ ಎದುರು ಬೀಳುವುದಿಲ್ಲವೆ? ಇದು ಭಾರತೀಯರು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದಂತಹ ಮತ್ತು ಮರೆಯಬಾರದಂತಹ ಅಥವಾ ಕಡೆಗಣಿಸಲಿಕ್ಕಾಗದಂತಹ ಒಂದು ಪ್ರಶ್ನೆ ಎಂಬುದು ನನ್ನ ಭಾವನೆ.

ಈಗ ಬೇರೆ ಪ್ರಶ್ನೆ ಎಂದರೆ ಸಹಬಾಳ್ವೆಯ ಪ್ರಶ್ನೆ. ನನ್ನ ಅಭಿಪ್ರಾಯದಲ್ಲಿ ಸಹಬಾಳ್ವೆಯನ್ನು ಅತ್ಯಂತ ಕಟ್ಟುನಿಟ್ಟಾಗಿ ಸೀಮಿತಗೊಳಿಸದೇ ಹೋದರೆ ಇದೊಂದು ದಿಗ್ಭ್ರಮೆ ಹಿಡಿಸುವ ತತ್ವವಾಗಲಿದೆ. ಕಮ್ಯೂನಿಸಮ್ ಮತ್ತು ಮುಕ್ತ ಪ್ರಜಾಪ್ರಭುತ್ವ ಎರಡೂ ಒಟ್ಟಿಗೆ ಕೆಲಸ ಮಾಡಬಲ್ಲವೆ? ಅವು ಒಟ್ಟಿಗೆ ಇರಬಲ್ಲವೆ? ಇವರೆಡರ ನಡುವೆ ಸಂಘರ್ಷವೇರ್ಪಡುವುದಿಲ್ಲವೆಂಬ ಭರವಸೆಯನ್ನು ಇಟ್ಟುಕೊಳ್ಳಲು ಸಾಧ್ಯವೇ? ಎಂಬುದು ಪ್ರಶ್ನೆ. ಏನೇ ಆಗಲಿ ಈ ಸಿದ್ಧಾಂತ ನನಗೆ ಅತ್ಯಂತ ಅಸಂಬದ್ಧವೆನಿಸುತ್ತದೆ. ಕಮ್ಯೂನಿಸಮ್ ಬಗ್ಗೆ ಹೇಳುವುದಾದರೆ ಅದೊಂದು ಕಾಡ್ಗಿಚ್ಚಿದ್ದಂತೆ. ಅದು ಅದರ ದಾರಿಯಲ್ಲಿ ಬರುವಂಥ ಯಾವುದನ್ನೂ ಮತ್ತು ಎಲ್ಲವನ್ನು ಸುಡುತ್ತಾ ಮತ್ತು ಕಬಳಿಸುತ್ತಾ ಹೋಗುತ್ತದೆ. ಕಮ್ಯೂನಿಸಮ್‌ನ ಕೇಂದ್ರದಿಂದ ತೀರಾ ದೂರವಿರುವಂಥ ರಾಷ್ಟ್ರಗಳು ಕಾಡ್ಗಿಚ್ಚು ತಮ್ಮನ್ನು ತಲುಪುವುದಕ್ಕೆ ಮೊದಲೇ ನಂದಿ ಹೋಗಬಹುದು ಅಥವಾ ಬೆಂಕಿಗೆ ಅವರನ್ನು ತಲುಪಲಿಕ್ಕೇ ಸಾಧ್ಯವಿಲ್ಲದಿರಬಹುದು ಎಂಬ ಸುರಕ್ಷತೆಯ ಭಾವನೆಯನ್ನು ಅನುಭವಿಸಬಹುದು. ಆದರೆ ಈ ಕಾಡ್ಗಿಚ್ಚಿನ ನೆರೆಹೊರೆಯಲ್ಲಿ ಜೀವಿಸುತ್ತಿರುವಂಥ ರಾಷ್ಟ್ರಗಳ ಗತಿ ಏನು? ಮಾನವನ ವಾಸಸ್ಥಾನ ಮತ್ತು ಈ ಕಾಡ್ಗಿಚ್ಚು ಒಟ್ಟಿಗೆ ದೀರ್ಘಕಾಲ ಬಾಳಬಹುದೆಂದು ನೀವು ನಿರೀಕ್ಷಿಸಬಲ್ಲಿರಾ? ಸಹಬಾಳ್ವೆಯ ತತ್ವವನ್ನು ಅಭಿನಂದಿಸಿ ಕೆನೆಡಿಯನ್ ರಾಜ ತಾಂತ್ರಿಕರು ಮತ್ತು ಯುರೋಪಿಯನ ರಾಜ ತಾಂತ್ರಿಕರು ಮಾಡಿರುವ ಹೇಳಿಕೆಗಳನ್ನು ನಾನು ನೋಡಿದ್ದೇವೆ. ಅವರ ಹೊಗಳಿಕೆಗಳು ಮತ್ತು ಪ್ರಶಂಸೆಗಳು ಸ್ವಲ್ಪವೂ ನನ್ನ ಬಳಿ ಸುಳಿಯುವುದಿಲ್ಲ. ಅವರ ದೃಷ್ಟಿಕೋನಕ್ಕೆ ಮತ್ತು ಅವರ ಅಭಿಪ್ರಾಯಕ್ಕೆ ನಾನು ಯಾವುದೇ ಬೆಲೆಯನ್ನು ಕೊಡುವುದಿಲ್ಲ. ಕೆನಡಾದ ರಾಜತಾಂತ್ರಿಕರು, ಕೆನಡಾವು ಚೀನಾ ಮತ್ತು ರಷ್ಯಾದಿಂದ ಸಾವಿರಾರು ಮೈಲಿಗಳಷ್ಟು ದೂರದಲ್ಲಿರುವುದರಿಂದ ಸಹಬಾಳ್ವೆಯು ಸಾಧ್ಯವಿದೆ ಎಂದು ಅತ್ಯಂತ ಸುಲಭವಾಗಿ ಹೇಳಬಹುದು. ಅದೇ ರೀತಿ ಇಂಗ್ಲೆಂಡ್ ಮಹಾನ್ ದಳ್ಳುರಿಯಿಂದ ಸ್ವಯಂ ಪಾರಾದ ನಂತರ ಈಗ ಅದು ಏನನ್ನಾನ್ನಾದರೂ ಮಾಡಲು ತೀರಾ ದಣಿದಂತೆ ಭಾವಿಸುವುದರಿಂದ ಸಹಬಾಳ್ವೆಯ ತತ್ವವನ್ನು ಪ್ರತಿಪಾದಿಸಲು ಮತ್ತು ಬೆಂಬಲಿಸಲು

ಇಚ್ಛಿಸುತ್ತದೆ. ಆದರೆ ಮತ್ತೆ ಇದು ಕೂಡ ರಾಷ್ಟ್ರಗಳ ನಡುವಿನ ಅಂತರದ ವಿಷಯವಾಗಿದೆ. ಒಂದು ದೇಶದ ವಿದೇಶಾಂಗ ನೀತಿಯಲ್ಲಿ. ಭೌಗೋಳಿಕ ಸಂಗತಿಯು ಅತ್ಯಂತ ಪ್ರಮುಖ ಸಂಗತಿಗಳಲ್ಲೊಂದಾಗಿದೆ ಎಂಬುದನ್ನು ಯಾರೂ ಮರೆಯುವಂತಿಲ್ಲ. ಪ್ರತಿ ರಾಷ್ಟ್ರದ ವಿದೇಶಾಂಗ ನೀತಿಯು, ಅದು ವ್ಯವಹರಿಸುತ್ತಿರುವಂಥ ಸಂಗತಿಗೆ ಸಂಬಂಧಿಸಿದಂತೆ ಅದರ ಭೌಗೋಳಿಕ ನೆಲೆಗನುಗುಣವಾಗಿ ಬೇರೆ ಬೇರೆಯಾಗಿರಬೇಕು. ಕೆನಡಾ ದೇಶಕ್ಕೆ ಉತ್ತಮವಾಗಿರುವಂಥ ನೀತಿಯು ನಮಗೆ ಉತ್ತಮವಾಗಿಲ್ಲದಿರಬಹುದು. ಇಂಗ್ಲೆಂಡ್‌ಗೆ ಉತ್ತಮವಾಗಿರುವಂಥದ್ದು ನಮಗೆ ಉತ್ತಮವಾಗಿಲ್ಲದಿರಬಹುದು. ಆದ್ದರಿಂದ ಈ ಸಹಬಾಳ್ವೆಯನ್ನು ಪ್ರಧಾನ ಮಂತ್ರಿಯವರು ಹೆಚ್ಚು ಚಿಂತನೆ ಮಾಡದೆ ಅಳವಡಿಸಿಕೊಂಡ ಒಂದು ತತ್ವವೆಂಬಂತೆ ನನಗೆ ಕಂಡು ಬರುತ್ತದೆ. ನಂತರ ಮಾನ್ಯರೇ, ನಾನು ಸೀಟೋಗೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಸೀಟೋಗೆ ಸಂಬಂಧಿಸಿದ ಪ್ರಧಾನ ಮಂತ್ರಿಯವರ ಅಭಿಪ್ರಾಯೋಕ್ತಿಗಳನ್ನು ನಾನು ಅತ್ಯಂತ ಎಚ್ಚರಿಕೆಯಿಂದ ಕೇಳಿಸಿಕೊಳ್ಳುತ್ತಿದ್ದೇನೆ ಮತ್ತು ಅವರು ಸೀಟೋ ಬಗ್ಗೆ ಮನಸ್ಸು ಮಾಡಿಲ್ಲದಿರುವುದನ್ನು ಕಂಡು ನನಗೆ ಹರ್ಷವಾಯಿತು. ನಾನು ಅವರ ಮಾತನ್ನು ಸರಿಯಾಗಿ ಕೇಳಿಸಿಕೊಂಡಿರುವುದೇ ಆದಲ್ಲಿ ಅದು ಈ ರೀತಿ ಇದೆ. ಈ ರಾಷ್ಟ್ರವು ಜಿನೇವಾ ನಿರ್ಣಯಗಳಿಗೆ ಅನುಸಾರವಾಗಿ ಕೆಲವು ಆಯೋಗಗಳ ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಂಡಿರುವ ಸಂಗತಿಯ ದೃಷ್ಟಿಯಿಂದ ಅದೇ ಸಮಯಕ್ಕೆ ಸೀಟೋಗೆ ಸೇರಲು ನನಗಾಗಲಿ ಮತ್ತು ಈ ದೇಶಕ್ಕಾಗಲಿ ಸಮಂಜಸವೆನಿಸದಿರಬಹುದು ಎಂದು ಅವರು ಹೇಳಿದರು. ಎರಡೂ ವಿಚಾರಗಳು ಸಂದೇಹಾತೀತವಾಗಿ ಅಸಮಂಜಸವಾದವುಗಳಾಗುತ್ತವೆ. ಆದರೆ ಅದೆಲ್ಲದರ ಹೊರತಾಗಿಯೂ ಸೀಟೋದ ಗುಣಾವಗುಣಗಳನ್ನು ಪರಿಶೀಲಿಸಬೇಕೆಂಬುದು ನನ್ನ ಅಭಿಪ್ರಾಯ.

ಸೀಟೋಗೆ ವಿರೋಧವು ಎರಡು ಮೂಲಗಳಿಂದ ಉದ್ಭವವಾಗುವುದೆಂದು ನನಗೆ ಕಂಡುಬರುತ್ತದೆ. ಪ್ರಧಾನ ಮಂತ್ರಿಗಳು ಸ್ವಲ್ಪಮಟ್ಟಿಗೆ ಹಗೆತನವನ್ನು ಹೊಂದಿದ್ದಾರೆ ಅಥವಾ ಅವರಿಗೆ ಆ ಪದ ಇಷ್ಟವಾಗದಿದ್ದರೆ ಅವರ ಮತ್ತು ಅಮೇರಿಕಾದ ನಡುವೆ ಮೈತ್ರಿಭಂಗವಾಗಿದೆ ಎಂದು ನಾನು ಯಾವುದೇ ರಹಸ್ಯವನ್ನು ಬಹಿರಂಗಪಡಿಸುತ್ತಿಲ್ಲ. ಇಲ್ಲವೆ, ಅವರಿಗೆ ಗೊತ್ತಿಲ್ಲದಿರುವಂಥ ಯಾವುದೇ ವಿಷಯದ ಬಗ್ಗೆ ನಾನು ಪ್ರಧಾನ ಮಂತ್ರಿಗಳ ಮೇಲೆ ಆರೋಪ ಹೊರಿಸುತ್ತಿಲ್ಲವೆಂಬುದು ನನ್ನ ಭಾವನೆ. ಏನೋ ಅವರು ಮತ್ತು ಅಮೇರಿಕಾ ಒಮ್ಮತಾಭಿಪ್ರಾಯವನ್ನು ಹೊಂದಿರುವುದಿಲ್ಲ. ಅಮೇರಿಕಾದಿಂದ ಬರುವಂತಹ ಯಾವ ವಿಚಾರದ ಬಗೆಗೆ ಆಗಲಿ ಅವರು ಸದಾ ಸ್ವಲ್ಪವಾದರೂ ವಿರೋಧವನ್ನು ವ್ಯಕ್ತಪಡಿಸುವರೆಂದು ನಾನು ಭಾವಿಸಿದಕ್ಕೆ ಅದೂ ಒಂದು ಕಾರಣ.

**ಶ್ರೀ ಬಿ. ಗುಪ್ತಾ:** ನೀವು ಹೊಂದಾಣಿಕೆ ಬಗ್ಗೆ ಮಾತನಾದುತ್ತಿದ್ದೀರಾ?

**ಮಾನ್ಯ ಸಭಾಧ್ಯಕ್ಷರು:** ಪ್ರಧಾನ ಮಂತ್ರಿಗಳು ಮೌನವಾಗಿದ್ದಾರೆ. ನೀವು ಮಾತನಾಡುತ್ತಿದ್ದೀರಿ.

**ಡಾ. ಬಿ.ಆರ್. ಅಂಬೇಡ್ಕರ್:** ಮತ್ತು ಎರಡನೆಯದಾಗಿ ಭಾರತ ಸೀಟೋಗೆ ಸೇರಿದರೆ ರಷ್ಯಾ ಏನು ಭಾವಿಸುತ್ತದೋ ಎಂಬ ಭಯ. ಇಲ್ಲಿ ಮತ್ತೆ ಸೀಟೋದ ಗುಣಾವಗುಣಗಳನ್ನು ನಿರ್ಧರಿಸಬಹುದಾದುದಕ್ಕೆ ಪ್ರತಿಕೂಲವಾಗಿರುವ ಕೆಲ ಹಿನ್ನೆಲೆಯನ್ನು ಸದನಕ್ಕೆ ನೀಡುವುದು ಅಗತ್ಯವೆಂಬುದು ನನ್ನ ಭಾವನೆ. ಈಗ ಮಾನ್ಯರೇ, ಈ ಎಲ್ಲದರ ಹಿನ್ನೆಲೆ ಏನು ಗೊತ್ತೇ? ಆ ಹಿನ್ನೆಲೆ ಹೀಗಿದೆ.

ನಾನು ರಷ್ಯಾದ ಆಳ್ವಿಕೆಯ ಅಧೀನಕ್ಕೊಳಪಟ್ಟಿರುವಂಥ ರಾಷ್ಟ್ರಗಳ ಪಟ್ಟಿಯನ್ನು ನೀಡಿದ್ದೇನೆ. ನಾನು ಹಾಗೇ ಹೇಳಬಹುದಾದಲ್ಲಿ ಬಹುಮಟ್ಟಿಗೆ ಕಳೆದ ಮಹಾ ಯುದ್ಧದ ಅವಧಿಯಲ್ಲಿ ಅಮೇರಿಕನ್ನರು ತೋರಿದ ಮೂರ್ಖತನದ ಕಾರಣದಿಂದಾಗಿ ಹೀಗಾಗಿದೆ ಎಂಬುದು ಸುವಿದಿತವೆಂದು ನಾನು ಭಾವಿಸುತ್ತೇನೆ. ರಷ್ಯನ್ನರು

ಶ್ರೀ ರೂಸ್‌ವೆಲ್ಟ್ ಅವರ ಸಮ್ಮತಿಯಿಂದ ಮತ್ತು ಶ್ರೀ ಚರ್ಚಿಲ್ ಅವರ ಇಷ್ಟವಿಲ್ಲದ ಇಚ್ಛಾಶಕ್ತಿಯಿಂದ ಈ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡರು. ಶ್ರೀ ಚರ್ಚಿಲ್ ಅವರು ಯುದ್ಧ ಮುಗಿದಾಗ ಹಿಟ್ಲರ್‌ನ ವಿರುದ್ಧ ಜಯಗಳಿಸುವ ಸಲುವಾಗಿ ಹಲವಾರು ರಾಷ್ಟ್ರಗಳ ಸ್ವಾತಂತ್ರ್ಯವನ್ನು ತ್ಯಾಗಮಾಡುವಲ್ಲಿ ನಾವು ಮಹಾನ್ ತಪ್ಪು ಮಾಡಿದೆವೆಂದು ಮತ್ತು ಮಹಾನ್ ಲೋಪವೆಸಗಿದೆವೆಂದು ಅಭಿಪ್ರಾಯಪಟ್ಟರು. ಅಲ್ಲದೆ, ಇದೇ ಭಾವನೆಯನ್ನು ಅವರು "ಮಹಾವಿಜಯ ಮತ್ತು ಘೋರ ದುರಂತ"ವೆಂದು ಕರೆದಿರುವ ತಮ್ಮ ಕೊನೆಯ ಸಂಪುಟದಲ್ಲಿ ವ್ಯಕ್ತಪಡಿಸಿದ್ದಾರೆಂಬುದು ನನ್ನ ಭಾವನೆ. ಈ ಕಾರಣಕ್ಕಾಗಿಯೇ ಅವರು ತಮ್ಮ ಕೊನೆಯ ಸಂಪುಟಕ್ಕೆ "ಮಹಾವಿಜಯ ಮತ್ತು ಘೋರ ದುರಂತ"ವೆಂಬ ಹೆಸರನ್ನಿಟ್ಟಿದ್ದಾರೆ. ಈಗ ಮಾನ್ಯರೇ, ಅಮೇರಿಕನ್ನರು ಏನು ಮಾಡುತ್ತಿದ್ದಾರೆ? ನಾನು ಅವರ ನೀತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿರುವುದಾದರೆ ಅದು ಹೀಗಿದೆ. ರಷ್ಯಾ ಯುದ್ಧದಲ್ಲಿ ಪಡೆದಿದ್ದಂಥ ಹತ್ತು ರಾಷ್ಟ್ರಗಳಿಗೇ ಅದು ತೃಪ್ತಿಪಟ್ಟುಕೊಳ್ಳಬೇಕೆಂಬುದು ಅಮೇರಿಕನ್ನರ ನಿಲುವು. ವಾಸ್ತವವಾಗಿ ಈ ರಾಷ್ಟ್ರಗಳನ್ನು ದಾಸ್ಯದಿಂದ ಪಾರುಮಾಡಿ, ಅವುಗಳಿಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟು ಅವುಗಳನ್ನು ಬಂಧ ಮುಕ್ತಗೊಳಿಸುವುದು ಅಮೇರಿಕನ್ನರ ಮತ್ತು ಬ್ರಿಟನ್ನರ ಕರ್ತವ್ಯವಾಗಿರಬೇಕಾಗಿತ್ತು ಎಂದು ನಾನು ಚಿಂತಿಸಬೇಕಾಗಿದೆ. ಆದರೆ ಯಾವುದೇ ರಾಷ್ಟ್ರವು ಇಂಥ ಒಂದು ಅಗಾಧ ಕಾರ್ಯದಲ್ಲಿ ಸ್ವಯಂ ತೊಡಗಿಸಿಕೊಳ್ಳುವ ಇಚ್ಛೆಯನ್ನಾಗಲಿ ಇಲ್ಲದೆ ನೈತಿಕ ದಾರ್ಢ್ಯತೆಯನ್ನಾಗಲಿ, ಅಪೇಕ್ಷೆಯನ್ನಾಗಲಿ ಹೊಂದಿರುವುದಿಲ್ಲ. ಆದ್ದರಿಂದ ಅವರು ಯಾವುದನ್ನು ರಕ್ಷಣೆಯ ಎರಡನೆಯ ವಿಧಾನವೆಂದು ಕರೆಯಬಹುದಾಗಿದೆಯೋ ಅದನ್ನು ಅನುಸರಿಸುತ್ತಿದ್ದಾರೆ. ರಕ್ಷಣೆಯ ಎರಡನೆಯ ವಿಧಾನ ಮುಕ್ತ ವಿಶ್ವದ ಯಾವುದೇ ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಳ್ಳಲು ರಷ್ಯಾಕ್ಕೆ ಅಥವಾ ಚೀನಾಕ್ಕೆ ಅವಕಾಶ ನೀಡಬಾರದು ಎಂಬುದಾಗಿದೆ. ಇದು ಸ್ವಾತಂತ್ರ್ಯವನ್ನು ಪ್ರೀತಿಸುವ ಎಲ್ಲಾ ಜನರು ಒಪ್ಪುವಂಥ ತತ್ವವೆಂಬುದು ನನ್ನ ಭಾವನೆ. ಇದಕ್ಕೆ ಯಾವುದೇ ಆಕ್ಷೇಪಣೆ ಇರಲಾರದು. ಅಲ್ಲದೆ ರಷ್ಯಾ ಮುಂದೆ ಆಕ್ರಮಣ ಮಾಡದಂತೆ ತಡೆಯಲು ಅವರು ಸೀಟೋವನ್ನು ರಚಿಸಿಕೊಳ್ಳಲು ಯೋಚಿಸುತ್ತಿದ್ದಾರೆ. ಸೀಟೋ ಯಾವುದೇ ರಾಷ್ಟ್ರದ ಮೇಲೆ ಆಕ್ರಮಣ ಮಾಡುವುದಕ್ಕಾಗಿ ಮಾಡಿಕೊಂಡ ಒಂದು ಸಂಸ್ಥೆಯಲ್ಲ. ಸೀಟೋ ಸ್ವತಂತ್ರ ರಾಷ್ಟ್ರಗಳ ಮೇಲಿನ ಆಕ್ರಮಣವನ್ನು ತಡೆಗಟ್ಟುವ ಉದ್ದೇಶಕ್ಕಾಗಿ ಮಾಡಿಕೊಂಡ ಒಂದು ಸಂಸ್ಥೆ. ಏನೇ ಆಗಲಿ ಆಕಸ್ಮಿಕವಾಗಿ ಸ್ವತಂತ್ರವಾಗುಳಿದಿರುವಂಥ ಸ್ವತಂತ್ರ ವಿಶ್ವದ ಭಾಗವನ್ನು ಸ್ವತಂತ್ರವಾಗುಳಿಯಲಿಕ್ಕೆ ಅವಕಾಶ ನೀಡಬೇಕೇ ಹೊರತು ದಾಸ್ಯಕ್ಕೆ ಗುರಿಯಾಗಲಲ್ಲ ಎಂಬ ಈ ತತ್ವವನ್ನು ಒಪ್ಪಿಕೊಳ್ಳಲು ಪ್ರಧಾನ ಮಂತ್ರಿಗಳು ಸಿದ್ಧರಿಲ್ಲವೇ? ಎಂಬುದು ನನಗೆ ಆಶ್ಚರ್ಯ ತಂದಿದೆ. ಭಾರತ ಆಕ್ರಮಣಕ್ಕೆ ಒಳಗಾಗಿಲ್ಲವೆ? ಭಾರತವು ಅತ್ಯಂತ ಹೆಚ್ಚು ಆಕ್ರಮಣಕ್ಕೊಳಗಾಗಿದೆ ಎಂದು ನಾನು ಚಿಂತಿಸುತ್ತೇನೆ. ನನಗೆ ಕಾಲಾವಕಾಶ ಕಡಿಮೆಯಿದೆ ಹೆಚ್ಚು ಸಮಯವಿದ್ದಿದ್ದರೆ ಈ ದೇಶವನ್ನು ಒಂದು ಕಡೆ ಪಾಕಿಸ್ತಾನ ಮತ್ತು ಇತರ ಮುಸ್ಲಿಂ ರಾಷ್ಟ್ರಗಳು ಹೇಗೆ ಸುತ್ತುವರಿದಿವೆ ಎಂಬುದನ್ನು ನಾನು ಸದನಕ್ಕೆ ವಿವರಿಸುತ್ತಿದ್ದೆ. ಏನು ನಡೆಯುತ್ತಿದೆ ಎಂಬುದು ನನಗೆ ಗೊತ್ತಿಲ್ಲ ಆದರೆ ಈಗ ಸುಯೇಜ್ ಕಾಲುವೆಯನ್ನು ಬಿಟ್ಟುಕೊಡುವ ಮೂಲಕ ಈಜಿಪ್ಟ್ ಮತ್ತು ಇಂಗ್ಲೆಂಡ್‌ಗಳ ನಡುವಿನ ತಡೆಗೋಡೆಯನ್ನು ತೆಗೆದು ಹಾಕಿರುವುದರಿಂದ ಮುಸ್ಲಿಂ ರಾಷ್ಟ್ರಗಳು ಪಾಕಿಸ್ತಾನದೊಂದಿಗೆ ಕೈಜೋಡಿಸಿ ಆ ಭಾಗದಲ್ಲಿ ತಡೆಯನ್ನು ನಿರ್ಮಿಸಿ ಸ್ವಲ್ಪ ಮಟ್ಟಿಗೆ ಅಡಚಣೆಯನ್ನು ಉಂಟು ಮಾಡಬಹುದೆಂಬುದು ನನ್ನ ಭಾವನೆ. ಈ ಭಾಗದಲ್ಲಿ ಲ್ಹಾಸವನ್ನು ವಶಪಡಿಸಿಕೊಳ್ಳಲು ಚೀನಾಕ್ಕೆ

ಅವಕಾಶ ನೀಡುವ ಮೂಲಕ ಪ್ರಧಾನ ಮಂತ್ರಿಗಳು ಚೀನಾದ ಗಡಿಯು ಭಾರತದ ಗಡಿಯೊಳಕ್ಕೆ ವಿಸ್ತರಿಸಿಕೊಳ್ಳಲು ಬಹುಮಟ್ಟಿಗೆ ಚೀನಾಕ್ಕೆ ಸಹಾಯ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಪರಿಶೀಲಿಸಿದರೆ ಭಾರತವು ಈಗ ಆಕ್ರಮಣಕ್ಕೆ ಒಳಗಾಗದಿದ್ದರೂ ಕೂಡ ಅದು ಆಕ್ರಮಣಕ್ಕೆ ಒಳಗಾಗಿದೆ ಎಂಬುದು ಮತ್ತು ಸದಾ ಆಕ್ರಮಣ ಮಾಡುವ ಹವ್ಯಾಸವನ್ನಿಟ್ಟು ಕೊಂಡಿರುವಂತಹ ಜನರು ಸುಲಭವಾಗಿ ಆಕ್ರಮಣವನ್ನು ಮಾಡಬಹುದಾಗಿದೆ ಎಂಬುದನ್ನು ನಂಬದಿದ್ದರೆ ಅದು ವಿಚಾರಶೂನ್ಯರ ಕೆಲಸವಾಗುವುದೆಂದು ನನಗೆ ಕಂಡು ಬರುತ್ತದೆ.

ಈಗ, ನಾನು ಬೇರೆ ಪ್ರಶ್ನೆಗೆ ಬರುತ್ತೇನೆ. ನಾವು ಸೀಟೋಗೆ ಸೇರಿದರೆ ರಷ್ಯಾ ಏನು ಹೇಳುತ್ತದೆ? ನಾನು ಕೇಳಬಯಸಿರುವ ಪ್ರಶ್ನೆ ಇದು. ರಷ್ಯಾದ ವಿದೇಶಾಂಗ ನೀತಿಯ ಪ್ರಮುಖ ಧೋರಣೆ ಏನು? ಅದೇನು? ನಮ್ಮ ವಿದೇಶಾಂಗ ನೀತಿಯ ಪ್ರಮುಖ ಧೋರಣೆ ಬೇರೆ ರಾಷ್ಟ್ರಗಳ ಸಮಸ್ಯೆಗಳನ್ನು ಬಗೆಹರಿಸುವುದೇ ಹೊರತು ನಮ್ಮ ಸ್ವಂತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಲ್ಲ. ನಾವು ಇಲ್ಲಿ ಕಾಶ್ಮೀರದ ಸಮಸ್ಯೆಯನ್ನು ಹೊಂದಿದ್ದೇವೆ. ಅದನ್ನು ಬಗೆಹರಿಸಿಕೊಳ್ಳವಲ್ಲಿ ನಾವು ಯಶಸ್ವಿಯಾಗಿಲ್ಲ. ಪ್ರತಿಯೊಬ್ಬರೂ ಅದನ್ನೊಂದು ಸಮಸ್ಯೆ ಎಂಬುದನ್ನೇ ಮರೆತಿರುವಂತೆ ಕಾಣುತ್ತದೆ. ಆದರೆ ಮುಂದೊಂದು ದಿನ ನಾವು ಎಚ್ಚೆತ್ತುಕೊಂಡು ನೋಡುವಷ್ಟರಲ್ಲಿ ಅದು ಭೂತಾಕಾರವಾಗಿ ಬೆಳೆದಿರುವುದನ್ನು ಕಾಣಬಹುದೆಂದು ನಾನು ಊಹಿಸಿಕೊಳ್ಳುತ್ತೇನೆ. ಅಲ್ಲದೆ ಪ್ರಧಾನ ಮಂತ್ರಿಯವರು ಕಾಶ್ಮೀರವನ್ನು ಭಾರತದೊಡನೆ ಬೆಸೆಯುವ ಒಂದು ಸುರಂಗ ಮಾರ್ಗವನ್ನು ತೋಡುವ ಯೋಜನೆಯನ್ನು ಪ್ರಾರಂಭಿಸಿರುವುದು ನನಗೆ ತಿಳಿದುಬಂದಿದೆ. ಮಾನ್ಯರೇ, ಇದು ಯಾರೇ ಪ್ರಧಾನ ಮಂತ್ರಿಗಳು ಮಾಡಬಲ್ಲಂಥ ಅತ್ಯಂತ ಅಪಾಯಕಾರಿ ಕೆಲಸಗಳಲ್ಲಿ ಒಂದೆಂಬುದು ನನ್ನ ಭಾವನೆ. ನಾವು ಫ್ರಾನ್ಸ್ ಅನ್ನು ಇಂಗ್ಲೆಂಡ್‌ನೊಂದಿಗೆ ಜೋಡಿಸುವ ಇಂಗ್ಲೀಷ್ ಕಾಲುವೆ ಅಡಿಯ ಸುರಂಗ ಮಾರ್ಗದ ಬಗ್ಗೆ ಕೇಳುತ್ತಿದ್ದೇವೆ. ನಾವು ಸುಮಾರು ೫೦ ವರ್ಷಗಳಿಂದ ಆ ಬಗ್ಗೆ ಕೇಳುತ್ತಿದ್ದೇವೆ. ಯಾರೋ ಕೆಲವರು ಆ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆಂಬುದು ನನ್ನ ಭಾವನೆ ಮತ್ತು ಅದೊಂದು ಎರಡು ಅಲಗಿನ ಆಯುಧವಾಗಿರುವುದರಿಂದ ಯೋಜನೆಯನ್ನು ಕಾರ್ಯಗತಗೊಳಿಸಲು ಇಂಗ್ಲೀಷರು ಇನ್ನೂ ಯಾವ ಪ್ರಯತ್ನವನ್ನು ಮಾಡಿರುವುದಿಲ್ಲ. ಇಂಗ್ಲೆಂಡ್ ಫ್ರಾನ್ಸ್ ಅನ್ನು ಗೆದ್ದರೆ ಶತ್ರು ರಾಷ್ಟ್ರವು ಸುರಂಗ ಮಾರ್ಗವನ್ನು ಬಳಸಿ ಇಂಗ್ಲೆಂಡಿನೊಳಕ್ಕೆ ಸೇನಾಪಡೆಗಳನ್ನು ನುಗ್ಗಿಸಿ ಇಂಗ್ಲೆಂಡ್ ಅನ್ನು ಜಯಿಸಬಹುದು. ಅದು ಕೂಡ ನಡೆಯಬಹುದು. ಪ್ರಧಾನ ಮಂತ್ರಿಗಳು ಸುರಂಗ ಮಾರ್ಗವನ್ನು ತೋಡುವಲ್ಲಿ ಅದನ್ನು ಬಳಸಿಕೊಳ್ಳಲು ತಾವಷ್ಟೇ ಸಮರ್ಥರೆಂದು ಭಾವಿಸುತ್ತಾರೆ. ಅದು ಸದಾ ದ್ವಿಮುಖ ಸಂಚಾರವಾಗಬಲ್ಲದು ಮತ್ತು ಇನ್ನೊಂದು ಕಡೆಯಿಂದ ಬರುವಂತಹ ಆಕ್ರಮಣಕಾರನು ಕಾಶ್ಮೀರವನ್ನು ವಶಪಡಿಸಿಕೊಂಡು ನೇರವಾಗಿ ಪಠಾಣ್ ಕೋಟ್‌ಗೆ ಬರಬಹುದು ಎಂಬುದನ್ನು ಅವರು ಮನಗಂಡಿಲ್ಲ ಮತ್ತು ಪ್ರಾಯಶಃ ಪ್ರಧಾನ ಮಂತ್ರಿಗಳ ಮನೆಯೊಳಕ್ಕೂ ಅವರು ನುಗ್ಗಿ ಬಂದರೂಬರಬಹುದು–ನನಗೆ ಗೊತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದೀರಾ.

**ಡಾ. ಬಿ.ಆರ್. ಅಂಬೇಡ್ಕರ್:** ಈಗ ಒಂದೆರಡು ಸಣ್ಣ ಅಭಿಪ್ರಾಯಗಳು.

**ಮಾನ್ಯ ಸಭಾಧ್ಯಕ್ಷರು:** ಒಂದೆರಡು ಸಣ್ಣ ಅಭಿಪ್ರಾಯಗಳನ್ನು ಹೇಳಿದ ನಂತರ ನಿಮ್ಮ ಮಾತನ್ನು ಮುಕ್ತಾಯಮಾಡಿ.

**ಡಾ. ಬಿ.ಆರ್. ಅಂಬೇಡ್ಕರ್:** ಆಗಲಿ, ಪ್ರಧಾನ ಮಂತ್ರಿಗಳು ಶ್ರೀ ಮಾವೋ ಅವರು ಒಪ್ಪಿರುವ ಮತ್ತು ಟಿಬೆಟ್ ಅತೀಕ್ರಮಣ ಒಡಂಬಡಿಕೆಯಲ್ಲಿ ದಾಖಲಿಸಲಾಗಿರುವ ಪಂಚಶೀಲವೆಂದು ಕರೆಯಬಹುದಾದಂಥ

ತತ್ವದ ಮೇಲೆ ಅವಲಂಬಿತರಾಗುತ್ತಿದ್ದಾರೆ. ಸರಿ. ಆದರೆ ಪ್ರಧಾನ ಮಂತ್ರಿಗಳು ಈ ಪಂಚಶೀಲ ತತ್ವವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಹೇಳುವುದು ಸ್ವಲ್ಪ ಮಟ್ಟಿಗೆ ನನಗೆ ಆಘಾತವುಂಟುಮಾಡಿದೆ. ಮಾನ್ಯರೇ, ಪಂಚಶೀಲ ತತ್ವವು, ನಿಮಗೇ ಚೆನ್ನಾಗಿ ತಿಳಿದಿರುವಂತೆ ಬೌದ್ಧ ಧರ್ಮದ ಅತ್ಯಾವಶ್ಯಕ ಭಾಗ ಮತ್ತು ಶ್ರೀ ಮಾವೋ ಅವರು ಪಂಚಶೀಲ ತತ್ವದಲ್ಲಿ ಯಾವುದೇ ನಂಬಿಕೆಯನ್ನಿಟ್ಟಿಕೊಂಡಿದ್ದರೆ, ಅವರು ಖಂಡಿತವಾಗಿಯೂ ಅತ್ಯಂತ ವಿಭಿನ್ನವಾದ ರೀತಿಯಲ್ಲಿ ತಮ್ಮದೇ ದೇಶದಲ್ಲಿನ ಬೌದ್ಧರನ್ನು ನೋಡಿಕೊಳ್ಳುತ್ತಾರೆ. ರಾಜಕೀಯದಲ್ಲಿ ಪಂಚಶೀಲಕ್ಕೆ ಯಾವುದೇ ಅವಕಾಶವಿಲ್ಲ ಮತ್ತು ಎರಡನೆಯದಾಗಿ, ಕಮ್ಯೂನಿಸ್ಟ್ ರಾಷ್ಟ್ರದ ರಾಜಕೀಯದಲ್ಲಂತೂ ಸಾಧ್ಯವೇ ಇಲ್ಲ. ಕಮ್ಯೂನಿಸ್ಟ್ ರಾಷ್ಟ್ರಗಳು ಎರಡು ಸುಪ್ರಸಿದ್ಧ ತತ್ವಗಳನ್ನು ನಂಬುತ್ತಿದ್ದು ಆ ತತ್ವಗಳ ಆಧಾರದ ಮೇಲೆ ಅವು ಸದಾ ಕಾರ್ಯನಿರ್ವಹಿಸುತ್ತವೆ. ಮೊದಲನೆಯದು ನೈತಿಕತೆಯಾಗಿದ್ದು, ಅದು ಸದಾ ಬದಲಾಗುತ್ತಲೇ ಇರುತ್ತದೆ. ಅವರಿಗೆ ಯಾವುದೇ ನೈತಿಕತೆ ಇಲ್ಲ. ಇಂದಿನ ನೈತಿಕತೆಯು ನಾಳೆಯ ನೈತಿಕತೆ ಆಗಿರುವುದಿಲ್ಲ. ಇಂದಿನ ನೈತಿಕತೆಗೆ ಅನುಸಾರವಾಗಿ ನೀವು ನಿಮ್ಮ ಮಾತಿಗೆ ಅಂಟಿಕೊಂಡಿರಬಹುದು ಮತ್ತು ನಾಳೆಯ ನೈತಿಕತೆಯು ವಿಭಿನ್ನವಾಗುವುದರಿಂದ ನಾಳೇ ಸಮಾನ ಸಮರ್ಥನೆಯೊಂದಿಗೆ ನೀವು ನಿಮ್ಮ ಮಾತನ್ನು ಮುರಿಯಬಹುದು. ಎರಡನೆಯ ಸಂಗತಿ ಎಂದರೆ ರಷ್ಯಾದ ಕಮ್ಯೂನಿಸ್ಟ್ ಸರ್ಕಾರ ಇತರ ಸರ್ಕಾರಗಳೊಂದಿಗೆ ವ್ಯವಹರಿಸುವಾಗ ಪ್ರತಿ ವ್ಯವಹಾರವು ತನ್ನಷ್ಟಕ್ಕೇ ಒಂದು ಏಕಾಂಶವಾಗಿರುತ್ತೆ. ನಾವು ಬೇರೊಬ್ಬರೊಂದಿಗೆ ವ್ಯವಹರಿಸುವಾಗ ಸದ್ಭಾವನೆಯೊಂದಿಗೆ ಪ್ರಾರಂಭಿಸಿ ಕೃತಜ್ಞತೆಯೊಂದಿಗೆ ಮುಕ್ತಾಯಗೊಳಿಸುತ್ತೇವೆ. ರಷ್ಯನ್ನರು ಬೇರೆಯವರೊಂದಿಗೆ ವ್ಯವಹರಿಸುವಾಗ ಅವರು ಸದ್ಭಾವನೆಯಿಂದ ಪ್ರಾರಂಭಿಸುವುದಿಲ್ಲ ಇಲ್ಲವೆ ಅವರು ಯಾವುದೇ ಕೃತಜ್ಞತೆಯಿಂದ ಮುಕ್ತಾಯಗೊಳಿಸುವುದಿಲ್ಲ. ಪ್ರತಿ ವ್ಯವಹಾರವು ತನ್ನಷ್ಟಕ್ಕೇ ಪ್ರಾರಂಭವಾಗಿ ತಂತಾನೇ ಮುಕ್ತಾಯಗೊಳ್ಳುತ್ತದೆ ಮತ್ತು ಪರಿಸ್ಥಿತಿ ಬಿಗಡಾಯಿಸುವ ವೇಳೆಗೆ ಪ್ರಧಾನ ಮಂತ್ರಿಗಳಿಗೆ ಇದೇನೆಂಬುದು ತಿಳಿಯುತ್ತದೆಂಬ ಭರವಸೆ ನನಗಿದೆ. "ಏಷ್ಯನ್ನರಿಗಾಗಿ ಏಷ್ಯಾ" ಎಂಬಂಥ ವಿಷಯವು ತತ್ವವಾಗಿದೆ ಎಂದು ಪ್ರಧಾನ ಮಂತ್ರಿಗಳು ಸದಾ ಹೇಳುತ್ತಿರುತ್ತಾರೆ. ಹೌದು ವಸಾಹತುಷಾಹಿಗೆ ಸಂಬಂಧಪಡುವ ಮಟ್ಟಿಗೆ ಹೇಳುವುದಾದರೆ, ಆ ತತ್ವವು ಸಂಪೂರ್ಣವಾಗಿ ಸತ್ಯ ಏಷ್ಯಾ ಏಷ್ಯನ್ನರ ಪರವಾಗಿ ಇರಲೇಬೇಕು. ಆದರೆ ನಾವು ಈ ರೀತಿಯ ಪರಿಸ್ಥಿತಿಯಲ್ಲಿ ವ್ಯವಹರಿಸುತ್ತಿದ್ದೇವೆಯೇ? ಇಂದು ಏಷ್ಯಾ ಒಂದಾಗಿದೆಯೇ? ಯಾವ ಅರ್ಥದಲ್ಲಿ? ಏಷ್ಯಾ ಇಂದು ವಿಭಜನೆಯಾಗಿದ್ದು ಇದೊಂದು ಒಡೆದ ಮನೆಯಾಗಿದೆ. ಏಷ್ಯಾದ ಅರ್ಧಕ್ಕಿಂತ ಹೆಚ್ಚು ಭಾಗವು ಕಮ್ಯಾನಿಸ್ಟ್ ಆಡಳಿತಕ್ಕೊಳಪಟ್ಟಿದೆ. ಅದು ವಿಭಿನ್ನ ಜೀವನ ತತ್ವವನ್ನು ಹಾಗೂ ವಿಭಿನ್ನ ಆಡಳಿತ ತತ್ವವನ್ನು ಅಳವಡಿಸಿಕೊಂಡಿದೆ. ಏಷ್ಯಾದ ಉಳಿದ ಭಾಗವು ವಿಭಿನ್ನ ಜೀವನ ತತ್ವವನ್ನು ಹಾಗೂ ವಿಭಿನ್ನ ಆಡಳಿತ ತತ್ವವನ್ನು ಅನುಸರಿಸುತ್ತಿದೆ. ಏಷ್ಯನ್ನರ ಮಧ್ಯೆ ಯಾವ ರೀತಿಯ ಏಕತೆ ಇರಬಹುದು? ಏಷ್ಯನ್ನರಿಗಾಗಿ ಏಷ್ಯಾ ಎಂಬುದರ ಬಗ್ಗೆ ಮಾತನಾಡುವುದರಿಂದಾಗುವ ಉಪಯೋಗವೇನು? ಅಸಲಿಗೆ ಅಂಥ ವಿಚಾರವೇ ಇಲ್ಲದಿರಬಹುದು. ಏಷ್ಯಾ ಈಗಾಗಲೇ ಯುದ್ಧದ ಅಖಾಡವಾಗುತ್ತಿದ್ದು, ಏಷ್ಯನ್ನರ ನಡುವೆಯೇ ಸಂಘರ್ಷ ನಡೆಯುತ್ತಿದೆ. ಆದುದರಿಂದ ನಮಗೆ ಸ್ವಾತಂತ್ರ್ಯದಲ್ಲಿ ನಂಬಿಕೆ ಇದ್ದರೆ ನಾವು ಯಾವ ದೇಶಗಳನ್ನು ಸ್ವತಂತ್ರ ದೇಶಗಳೆಂದು ಕರೆಯುತ್ತೇವೆಯೋ ಅಂತಹ ದೇಶಗಳೊಂದಿಗೆ ನಾವೂ ಜೊತೆಗೂಡುವುದು ಉತ್ತಮ.

ಗೋವಾದ ಬಗ್ಗೆ ಒಂದು ಮಾತು ಹೇಳ ಬಯಸುತ್ತೇನೆ. ಗೋವಾ ವಿಮೋಚನಾ ನೀತಿಯ ಅನುಸರಣೆಯಲ್ಲಿ ಪ್ರಧಾನ ಮಂತ್ರಿಯವರು ನಿಜವಾಗಿಯೂ ಸರಿಯಾಗಿ ನಡೆದುಕೊಂಡಿದ್ದಾರೆ ಎಂಬುದರ

ಬಗ್ಗೆ ಯಾವುದೇ ಅನುಮಾನವಿಲ್ಲದಿರಬಹುದು. ಅದೊಂದು ಅತ್ಯುತ್ತಮವಾದ ನೀತಿಯಾಗಿದೆ ಮತ್ತು ಪ್ರತಿಯೊಬ್ಬರೂ ಅವರಿಗೆ ತನ್ನ ಬೆಂಬಲವನ್ನು ನೀಡಲೇಬೇಕು. ನಾನು ಬೆಂಬಲ ನೀಡುತ್ತೇನೆ. ಆದರೆ ಒಂದು ಅಭಿಪ್ರಾಯವಿದ್ದು ನಾನು ಅದನ್ನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಪೋರ್ಚುಗೀಸರಿಂದ ಗೋವಾವನ್ನು ವಿಮೋಚನೆಗೊಳಿಸಿ ಅದನ್ನು ಭಾರತಕ್ಕೆ ಹಸ್ತಾಂತರಿಸುವುದರ ಬಗೆಗಿನ ಈ ಪ್ರಶ್ನೆಯನ್ನು ನಾನು ಸರಿಯಾಗಿ ಜ್ಞಾಪಿಸಿಕೊಂಡು ಹೇಳುವುದಾದರೆ ನಾವು ಸ್ವಾತಂತ್ರ್ಯವನ್ನು ಪಡೆದ ಪ್ರಾರಂಭದಲ್ಲೇ ಅವರ ಗಮನಕ್ಕೆ ತರಲಾಗಿತ್ತು. ನಾನು ಒಂದು ನಿಯೋಗದ ಮೂಲಕ ತಮಗೆ ಸಲ್ಲಿಸಲಾಗಿದ್ದ ಕೆಲವು ಟಿಪ್ಪಣಿಗಳನ್ನು ನನ್ನ ಬಳಿ ಇಟ್ಟುಕೊಂಡಿದ್ದೇನೆ. ನಾನು ನಿಯೋಗದಲ್ಲಿ ಬಂದಿದ್ದವರ ಹೆಸರುಗಳನ್ನು ಮರೆತಿದ್ದೇನೆ. ಆದರೆ ನಾನು ಅವರನ್ನು ನನ್ನೊಂದಿಗೆ ಕರೆದೊಯ್ದಿದ್ದೆ. ಆದರೆ ಪ್ರಧಾನ ಮಂತ್ರಿಗಳು ಅದರಲ್ಲಿ ಯಾವುದೇ ಕ್ರಿಯಾಶೀಲ ಆಸಕ್ತಿಯನ್ನು ತೋರಲಿಲ್ಲ. ನನಗೆ ಹೀಗೆ ಹೇಳಲು ತುಂಬಾ ವಿಷಾದವೆನಿಸುತ್ತದೆ. ಏಕೆಂದರೆ ಪ್ರಧಾನಮಂತ್ರಿಗಳು ಪ್ರಾರಂಭದಲ್ಲೆ ಈ ವಿಷಯವಾಗಿ ಕ್ರಿಯಾಶೀಲ ಆಸಕ್ತಿಯನ್ನು ತೋರಿದ್ದಿದ್ದರೆ ಹೀಗಾಗುತ್ತಿರಲಿಲ್ಲವೆಂಬುದು ನನ್ನ ಭಾವನೆ. ಭಾರತ ಸರ್ಕಾರದ ಪರವಾಗಿ ಕೈಗೊಳ್ಳುವ ಒಂದು ಚಿಕ್ಕ ಪೊಲೀಸ್ ಕ್ರಮ ಗೋವಾವನ್ನು ಸ್ವಾಧೀನಪಡಿಸಿಕೊಳ್ಳುವಷ್ಟು ನಮ್ಮನ್ನು ಸಮರ್ಥಗೊಳಿಸಲು ಸಾಕಾಗುತ್ತಿತ್ತೆಂಬುದರ ಬಗ್ಗೆ ನನಗೆ ಖಚಿತ ಭರವಸೆ ಇದೆ. ಆದರೆ ಅವರು ಸದಾ ಪೋರ್ಚುಗೀಸರ ವಿರುದ್ಧ ಕೇವಲ ಜೋರಾಗಿ ಕೂಗಾಡುತ್ತಿದ್ದಾರೆ. ಕೇವಲ ಜೋರಾಗಿ ಕೂಗಾಡುತ್ತಿದ್ದಾರೆಯೇ ಹೊರತು ಬೇರೇನನ್ನೂ ಮಾಡುತ್ತಿಲ್ಲ. ನಮಗೆ ತಿಳಿದಿರುವಷ್ಟರ ಮಟ್ಟಿಗೆ ಹೇಳುವುದಾದರೆ ಪೋರ್ಚುಗೀಸರು ಗೋವಾವನ್ನು ರಕ್ಷಣಾ ಕೋಟೆಯನ್ನಾಗಿ ಮಾಡಿಕೊಳ್ಳುವಷ್ಟು ಸಮರ್ಥರಾಗಿದ್ದಾರೆ ಎಂಬುದು ಫಲಿತಾಂಶವಾಗಿದೆ. ಸಹಜವಾಗಿ ಗೋವಾ ಈಗಲೂ ರಕ್ಷಣಾರಹಿತವಾಗಿದೆ. ಅಲ್ಲಿ ಪೋರ್ಚುಗೀಸರ ಯಾವುದೇ ರಕ್ಷಣಾ ಕೋಟೆ ಇರುವುದಿಲ್ಲ. ಪೋರ್ಚುಗೀಸರು ಕರೆದುಕೊಂಡು ಬಂದಿದ್ದ ಯಾವುದೇ ಸೈನ್ಯವಿರುವುದಿಲ್ಲ ಎಂದು ಹೇಳುವ ಪ್ರಧಾನ ಮಂತ್ರಿಯವರ ಮಾಹಿತಿಯು ಸರಿಯಾಗಿರಬೇಕು ಮತ್ತು ನಾವು ಒಪ್ಪಿಕೊಳ್ಳುವ ಹಾಗೇ ಇರಬೇಕು.

**ಶ್ರೀ ಜವಹರಲಾಲ ನೆಹರು:** ನಾನು ಅಂಥ ಯಾವುದೇ ವಿಚಾರ ಹೇಳಿಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ತಾವು ಹಾಗೆ ಹೇಳಿದ್ದೀರೆಂದು ನಾನು ಭಾವಿಸಿದ್ದೇನೆ. ಆದರೆ ಅದೇನಾದರೂ ಆಗಿರಲಿ. ಈಗ ವಿಷಯ: ಇದು ಅಭಿಪ್ರಾಯ ಹೇಳುವವರ ಮೇಲಿನ ಈ ಚರ್ಚೆಗೆ ಯಾವುದೇ ಬೆಲೆ ಇರುವುದಿಲ್ಲ ಮತ್ತು ಯಾವುದೇ ಪರಿಣಾಮವಿರುವುದಿಲ್ಲ ಎಂಬುದು ವೈಯಕ್ತಿಕವಾಗಿ ನನ್ನ ಭಾವನೆಯಾಗಿದೆ. ಪೋರ್ಚುಗೀಸರು ಗೋವಾದವರನ್ನು ಚೆನ್ನಾಗಿ ನಡೆಸಿಕೊಂಡಿದ್ದರೆ ನಾವು ಗೋವಾದ ಮೇಲಿನ ನಮ್ಮ ಕ್ಲೇಮನ್ನು ಬಿಟ್ಟುಕೊಡಬಹುದೇ? ನಮಗೆ ತಿಳಿದಮಟ್ಟಿಗೆ ಹೇಳುವುದಾದರೆ ಗೋವಾದವರಿಗೆ ಡೊಮಿನಿಯನ್ ಸ್ಥಾನಮಾನ ನೀಡಿ ಅವರನ್ನು ಪೂರ್ಣಪ್ರಮಾಣದ ನಾಗರಿಕರನ್ನಾಗಿ ಮಾಡಬಹುದಿತ್ತೇನೋ? ಆದರೆ ನಾವು ಗೋವಾದ ಮೇಲಿನ ನಮ್ಮ ಕ್ಲೇಮನ್ನು ಬಿಟ್ಟುಕೊಡುತ್ತಿರಲಿಲ್ಲ. ಆ ಬಗ್ಗೆ ಯಾವುದೇ ಅನುಮಾನ ಬೇಡ. ಅದು ಭಾರತಕ್ಕೆ ಸೇರಿದ ಭಾಗ. ಆದುದರಿಂದ ಅಭಿಪ್ರಾಯ ಹೇಳುವವರ ಬಗೆಗಿನ ಈ ಎಲ್ಲಾ ಮಾತುಗಳು ವಿಷಯವನ್ನು ಅಪ್ರಸ್ತುತಗೊಳಿಸುವುದೆಂದು ನನಗೆ ತೋರುತ್ತದೆ. ನಾವು ಈ ವಿಚಾರವಾಗಿ ಪೋರ್ಚುಗೀಸರೊಂದಿಗೆ ವ್ಯವಹರಿಸಬೇಕು. ಅವರು ಬ್ರಿಟಿಷರು ಮಾಡಿದ ರೀತಿಯಲ್ಲಿ ತಮ್ಮ ಸಾರ್ವಭೌಮತ್ವವನ್ನು ಬಿಟ್ಟುಕೊಡಲು ತಯಾರಿದ್ದಾರೆಯೇ? ಇದು ನಾನು ಚರ್ಚಿಸಬೇಕಾದ ಅಗತ್ಯವಿದೆ ಎಂದು ಭಾವಿಸಿರುವ ಏಕೈಕ ವಿಷಯ. ಮಾನ್ಯರೇ, ಕೆಲವು ವಿಮೋಚನೆಗೊಂಡ ರಾಷ್ಟ್ರಗಳು ಪೋರ್ಚುಗೀಸರ

ಪರ ನಿಲ್ಲುತ್ತಿರುವುದು ಅತ್ಯಂತ ದುರದೃಷ್ಟಕರವೆಂದು ತೋರುತ್ತದೆ. ಶ್ರೀ ಚರ್ಚಿಲ್ ಅವರು ಗುಟ್ಟಾಗಿ ಪೋರ್ಚುಗೀಸರೊಂದಿಗೆ ನಿಲ್ಲುವಂತೆ ನಮಗೆ ಹೇಳುತ್ತಿರುವುದನ್ನು ನೋಡಲು ನನಗೆ ವಿಷಾದವೆನಿಸುತ್ತದೆ. ಸೇನಾಪಡೆಯನ್ನು ಬಳಸಬಾರದು ಏಕೆ? ಅವರು ಪ್ರಧಾನ ಮಂತ್ರಿಗಳಿಂದ ಒಂದು ಮುತ್ತನ್ನು ಪಡೆದು ಹೊರಟು ಹೋಗಲು ಯೋಚಿಸುತ್ತಿದ್ದಾರೆಯೇ? ಮತ್ತು ಬ್ರೆಜಿಲ್‌ನಂತೆ ಒಂದು ಗುಂಡನ್ನು ಹಾರಿಸದೆ ಹೊರಟು ಹೋಗಲು ಯೋಚಿಸುತ್ತಿದ್ದಾರೆಯೇ? ಮತ್ತು ಸಾರ್ವಜನಿಕವಾಗಿ ಬಹಿರಂಗ ಪಡಿಸದಿರುವಂತಹ ಅಮೇರಿಕಾದ ಮನೋಭಾವವೇನಿದೆ? ಎಂಬಂದು ನನಗೆ ಅರ್ಥವಾಗಿಲ್ಲ. ಪ್ರಾಯಶಃ ಅವರು ಕೂಡ ಪೋರ್ಚುಗಲ್ ಪರವಾಗಿ ಮೃದು ಧೋರಣೆಯನ್ನು ಹೊಂದಿರಬಹುದು. ಈ ಎಲ್ಲಾ ಘಟನೆಗಳು ಏಕೆ ನಡೆದವು? ಈ ದೇಶದ ಜನರಿಗೆ ಸ್ವಯಂ ಪ್ರೇರಣೆಯಿಂದ ಸಾರ್ವಭೌಮತ್ವವನ್ನು ಬಿಟ್ಟುಕೊಟ್ಟಂಥ ಇಂಗ್ಲೆಂಡ್ ಇನ್ನೊಂದು ರಾಷ್ಟ್ರದ ಬಗ್ಗೆ ತದ್ವಿರುದ್ಧವಾದ ರೀತಿಯಲ್ಲಿ ವರ್ತಿಸುವಂತೆ ಏಕೆ ಹೇಳಬೇಕು ಎಂಬುದು ನನಗೆ ಆಶ್ಚರ್ಯವಾಗುತ್ತಿದೆ. ಇದನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ. ಪ್ರಧಾನ ಮಂತ್ರಿಗಳು ನನ್ನ ಸಲಹೆಯನ್ನು ಒಪ್ಪಿಕೊಳ್ಳದಿರಬಹುದು ಇಲ್ಲವೇ ಒಪ್ಪಿಕೊಳ್ಳಬಹುದು. ಆದರೆ ತಟಸ್ಥತೆಗೆ ಬೆಲೆ ತೆರಬೇಕಾಗುತ್ತದೆಂಬುದನ್ನು ನಮ್ಮ ಪ್ರಧಾನ ಮಂತ್ರಿಗಳಿಗೆ ಬೋಧಿಸಲು ಅವರು ಪ್ರಯತ್ನಿಸುತ್ತಿದ್ದಾರೆ ಎಂಬುದು ನನಗೆ ತೋರುತ್ತದೆ.

**ಶ್ರೀ ಪಿ. ಸುಂದರಯ್ಯ:** ಪ್ರಧಾನ ಮಂತ್ರಿಗಳು ಈ ಬಗ್ಗೆ ಗಮನ ಹರಿಸಬೇಕು.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಪ್ರಧಾನ ಮಂತ್ರಿಗಳಿಗೆ ಒಂದು ಸಲಹೆಯನ್ನು ನೀಡಲು ಉದ್ದೇಶಿಸಿದ್ದೇನೆ. ಪೋರ್ಚುಗೀಸರು ವಿಶ್ವ ಸಂಸ್ಥೆಯ ಇತರ ಸದಸ್ಯ ರಾಷ್ಟ್ರಗಳ ಬೆಂಬಲ ಪಡೆಯಬೇಕೆಂದು ಯೋಚಿಸುತ್ತಿದ್ದರೆ ನಾವು ಪೋರ್ಚುಗೀಸರೊಂದಿಗೆ ಸಶಸ್ತ್ರ ಸಂಘರ್ಷವನ್ನು ಮಾಡಬೇಕೆಂದು ನಾನು ಭಾವಿಸುವುದಿಲ್ಲ, ಆದರೆ ಅದಕ್ಕಿಂತ ಮುಖ್ಯವಾಗಿ ನಾನು ಮಂಡಿಸಲು ಬಯಸಿರುವ ಎರಡು ಪ್ರಸ್ತಾವನೆಗಳಿವೆ. ಅಮೇರಿಕಾದಲ್ಲಿ ಅಮೇರಿಕಾದ ಒಡೆತನದ ನಡುವೆ ಫ್ರೆಂಚ್ ಸ್ವಾಧೀನದಲ್ಲಿದ್ದಂಥ ಲೂಸಿಯಾನ ರಾಜ್ಯಕ್ಕೆ ಸಂಬಂಧಿಸಿರುವ ಪ್ರಕರಣವಿತ್ತು ಮತ್ತು ಅಮೇರಿಕನ್ನರು ಫ್ರೆಂಚರನ್ನು ತೊಲಗಿಸಿ ಲೂಸಿಯಾನವನ್ನು ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ವರ್ಗಾಯಿಸಿಕೊಳ್ಳಲು ಅತ್ಯಂತ ಕಾತುರರಾಗಿದ್ದರು ಎಂಬುದು ಬಹುಶಃ ತಮಗೂ ನೆನಪಿರಬಹುದು. ಅದಕ್ಕಾಗಿ ಅವರು ಅಳವಡಿಸಿಕೊಂಡ ಕ್ರಮವೆಂದರೆ ಬೆಲೆಕೊಟ್ಟು ಅದನ್ನು ಪಡೆಯುವುದಾಗಿತ್ತು. ಅದಕ್ಕೆ ನೀಡಲಾದ ಬೆಲೆ ನಾನು ನನ್ನ ಬಳಿ ಅಂಕಿ ಅಂಶಗಳನ್ನು ಇಟ್ಟುಕೊಂಡಿದ್ದೇನೆ.

**ಶ್ರೀ ಪಿ. ಸುಂದರಯ್ಯ:** ಕೆಲವೇ ಕೆಲವು ನಾಣ್ಯಗಳು ಅಥವಾ ಬೆಳ್ಳಿ.

**ಡಾ. ಬಿ.ಆರ್. ಅಂಬೇಡ್ಕರ್:** ವಾಸ್ತವವಾಗಿ ಒಂದು ಬಹು ದೊಡ್ಡ ಭೂಪ್ರದೇಶಕ್ಕೆ ಅದು ಅತ್ಯಂತ ಬೆಲೆ. ಗೋವಾವನ್ನು ನಿಜವಾಗಿಯೂ ಅದರೊಂದಿಗೆ ಹೋಲಿಕೆ ಮಾಡುತ್ತಿಲ್ಲ. ಗೋವಾ ಕೇವಲ ಲೂಸಿಯಾನದ ಪಟ್ಟಣಗಳಲ್ಲಿ ಪೈಕಿ ಒಂದು ಪಟ್ಟಣ ಇದ್ದಷ್ಟಿದೆ ಅಷ್ಟೇ. ಪ್ರಧಾನ ಮಂತ್ರಿಗಳು ಅದನ್ನು ಅಳವಡಿಸಿಕೊಳ್ಳಬಯಸಿದಲ್ಲಿ .....

**ಶ್ರೀ ಜವಹರಲಾಲ ನೆಹರು:** ಅದೇನು?

**ಮಾನ್ಯ ಸಭಾಧ್ಯಕ್ಷರು:** ಪೋರ್ಚುಗಲ್‌ನಿಂದ ಅದನ್ನು ಖರೀದಿಸುವುದು....

**ಡಾ. ಬಿ.ಆರ್. ಅಂಬೇಡ್ಕರ್:** ಆ ಬಗ್ಗೆ ಚರ್ಚೆಯನ್ನು ಆರಂಭಿಸಿ. ನಾನು ಪರ್ಯಾಯ ವಿಧಾನಗಳನ್ನು ಸಲಹೆ ಮಾಡುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಅದು ಒಂದು, ಸಲಹೆ. ಇನ್ನೊಂದು ಸಲಹೆ ಯಾವುದು?

**ಡಾ. ಬಿ.ಆರ್. ಅಂಬೇಡ್ಕರ್:** ನಾವು ಭೋಗ್ಯದ ಮೇಲೆ ಗೋವಾವನ್ನು ಪಡೆಯಬಹುದೆಂಬುದು ನಾನು ಪ್ರಧಾನ ಮಂತ್ರಿಗಳ ಮುಂದೆ ಇಡಲಿಚ್ಛಿಸುವಂಥ ಇನ್ನೊಂದು ಸಲಹೆ. ನಮ್ಮದೇ ದೇಶದಲ್ಲಿ ಬೆರಾರ್ ಅನ್ನು ಭೋಗ್ಯದ ಮೇಲೆ ಕೊಡಲಾಗಿತ್ತು ಎಂಬುದು ನಮ್ಮೆಲ್ಲರಗೂ ನೆನಪಿದೆ. ಬೆರಾರ್ ನಿಜಾಮನ ಸ್ವತ್ತಾಗಿತ್ತು. ಆತನು ಅದರ ಮೇಲೆ ಸಾರ್ವಭೌಮತ್ವವನ್ನು ಹೊಂದಿದ್ದ. ಆದರೆ ಸುಮಾರು ೧೮೫೩ನೇ ಇಸವಿಯಲ್ಲಿ ಬ್ರಿಟಿಷ್ ಸರ್ಕಾರ ಬೆರಾರನ್ನು ಖಾಯಂ ಭೋಗ್ಯದ ಮೇಲೆ ಪಡೆದುಕೊಂಡಿತು. ಎಷ್ಟು ಮೊತ್ತದ ಹಣವನ್ನು ಅವರು ನಿಜಾಮನಿಗೆ ನೀಡಿದರೆಂಬುದು ನನಗೆ ಗೊತ್ತಿಲ್ಲ. ಅದು ಅತ್ಯಂತ ಚಿಕ್ಕ ಮೊಬಲಗಿದ್ದಿರಬಹುದು.

**ಶ್ರೀ ಬಿ. ಗುಪ್ತಾ:** ನಾವು ಹಾಗೇ ಮಾಡಿದರೆ ನಾವು ಭಾರತದ ಗೌರವವನ್ನು ಒತ್ತೆಯಿಟ್ಟಂತಾಗುತ್ತದೆ.

**ಡಾ. ಬಿ.ಆರ್. ಅಂಬೇಡ್ಕರ್:** ಕ್ಷಮಿಸಿ ನನಗೆ ಅವರ ಮಾತುಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಆಗುತ್ತಿಲ್ಲ. ಅವರನ್ನು ಅರ್ಥಮಾಡಿಕೊಳ್ಳವುದು ನನಗೆ ತುಂಬಾ ಕಷ್ಟ.

**ಮಾನ್ಯ ಸಭಾಧ್ಯಕ್ಷರು:** ಹೌದು ಅವರನ್ನು ಅರ್ಥಮಾಡಿಕೊಳ್ಳುವುದು ಕಷ್ಟ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಹೇಳೋದು ಇಷ್ಟೇ. ನಾವು ಈ ವಿಷಯದಲ್ಲಿ ನಾಮಮಾತ್ರ ಪರಮಾಧಿಕಾರಿ ಯಾರು ಎಂಬುದರ ಬಗ್ಗೆ ಹೆಚ್ಚು ಆಸಕ್ತಿ ವಹಿಸುವುದಿಲ್ಲ. ನಾವು ಗೋವಾದ ಸ್ವಾಧೀನತೆಯನ್ನು ಪಡೆದುಕೊಳ್ಳುವಲ್ಲಿ ಮತ್ತು ಅಲ್ಲಿ ನಮ್ಮದೇ ಆದ ಆಡಳಿತವನ್ನು ಸ್ಥಾಪಿಸುವಲ್ಲಿ ಆಸಕ್ತಿ ಹೊಂದಿದ್ದೇವೆ. ನಾವು ಇಲ್ಲಿ ನಮ್ಮದೇ ದೇಶದಲ್ಲಿ ಬೇರೊಂದು ಸಾರ್ವಭೌಮ ಆಡಳಿತಕ್ಕೆ ಸೇರಿದ ಭೂಪ್ರದೇಶವನ್ನು ಭೋಗ್ಯದ ಮೇಲೆ ಪಡೆದು, ಅದನ್ನು ಸಾರ್ವಭೌಮ ಆಡಳಿತಕ್ಕೊಳಪಟ್ಟಿತ್ತೆಂಬುದನ್ನು ಸೂಚಿಸುವ ಕೆಲವು ಅಲಂಕರಣಗಳೊಂದಿಗೆ ಶಾಶ್ವತವಾಗಿ ಭಾರತದ ಭಾಗವನ್ನಾಗಿ ಮಾಡಿಕೊಂಡಿರುವಂತಹ ಒಂದು ಪ್ರಕರಣವನ್ನು ಹೊಂದಿದ್ದೇವೆ. ಅವರ ಮಗನನ್ನು ಬೆರಾರ್‌ನ ರಾಜಕುಮಾರನನ್ನಾಗಿ ಮಾಡಲಾಗಿತ್ತೆಂಬುದು ನನ್ನ ಭಾವನೆ. ಪ್ರಧಾನ ಮಂತ್ರಿಗಳು ಪ್ರಯತ್ನಿಸಬಹುದಾದಂಥ ಇನ್ನೊಂದು ವಿಧಾನವಿದೆ. ಪ್ರಧಾನ ಮಂತ್ರಿಗಳು ಈ ಎರಡೂ ವಿಧಾನಗಳಲ್ಲಿ ಒಂದನ್ನು ಅಳವಡಿಸಿಕೊಳ್ಳಲು ಪೋರ್ಚುಗೀಸರ ಮನವೊಲಿಸುವಲ್ಲಿ ಅವರೊಂದಿಗೆ ಏಕೇ ಯಶಸ್ವಿಯಾಗುವುದಿಲ್ಲ ಎಂಬುದಕ್ಕೆ ನನಗೆ ಯಾವುದೇ ಕಾರಣ ಕಂಡುಬರುತ್ತಿಲ್ಲ.

ಇನ್ನೂ ಒಂದೇ ಒಂದು ಅಭಿಪ್ರಾಯ ಮಾತ್ರವಿದ್ದು ನಾನು ಅದನ್ನು ಹೇಳಿ ಕುಳಿತುಕೊಳ್ಳುತ್ತೇನೆ. ನಾನು ಎರಡನೇ ಜಾಗತಿಕ ಸಮರಕ್ಕೆ ದಾರಿ ಮಾಡಿಕೊಟ್ಟಂಥ ವಿಚಾರಗಳ ಸಮೀಕ್ಷೆಯನ್ನು ನೀಡಿ ಚೇತಮ್ ಹೌಸ್ನ ಅಂತಾರಾಷ್ಟ್ರೀಯ ವ್ಯವಹಾರಗಳ ಸಂಸ್ಥೆಯು ಪ್ರಕಟಿಸಿದ ಒಂದು ಸಂಪುಟವನ್ನು ನಿನ್ನೆ ಓದುತ್ತಿದ್ದೆ. ಅವರು ನಿಸ್ಸಂಶಯವಾಗಿ ಅತ್ಯುತ್ತಮ ಲೇಖಕರು ಹಾಗೂ ಅತ್ಯಂತ ದೊಡ್ಡ ವಿದ್ವಾಂಸರು ಅದರಲ್ಲಿ ಯುದ್ಧ ಏಕೆ ಬಂತು ಮತ್ತು ಅದನ್ನು ಏಕೇ ತಪ್ಪಿಸಲಿಲ್ಲ ಎಂಬುದರ ಬಗ್ಗೆ ಎರಡು ತೀರ್ಮಾನಗಳನ್ನು ತಳೆದಿದ್ದರು ಅವುಗಳಲ್ಲಿ ಮೊದಲನೆಯದು ಶ್ರೀ ಚೇಂಬರ್ಲಿನ್ ಅವರು ಆಗ ಲೇಬರ್ ಪಾರ್ಟಿಯವರು ವಿರೋಧಿಸುತ್ತಿದ್ದಂತಹ ನಿಶ್ಶಸ್ತ್ರೀಕರಣ ನೀತಿಯ ಕಾರಣದಿಂದಾಗಿ ಯೂರೋಪಿನಲ್ಲಿ ಯಾವುದನ್ನು ಶಕ್ತಿ ಸಮತೋಲನ ಎಂದು ಕರೆಯಲಾಗುವುದೋ ಅದನ್ನು ಕಾಪಾಡಲಿಲ್ಲ ಮತ್ತು ಹಿಟ್ಲರ್‌ನನ್ನು ನಿಗ್ರಹಿಸಲಿಕ್ಕೆ ಕಷ್ಟ ಸಾಧ್ಯವೆನಿಸುವ ಮಟ್ಟಿಗೆ ಅವನನ್ನು ಹೆಚ್ಚು ಹೆಚ್ಚು ಬೆಳೆಯಲಿಕ್ಕೆ ಅವಕಾಶ ಮಾಡಿಕೊಟ್ಟರು ಎಂಬುದು. ಅವರು ಹೇಳಿದಂಥ ಎರಡನೆಯ ವಿಚಾರ. ಹಿಟ್ಲರನ ಮಾತಿನಲ್ಲಿ ನಂಬಿಕೆಯಿಟ್ಟು ಚೇಂಬರ್ಲಿನ್ ಮಹಾನ್ ಪ್ರಮಾದವೆಸಗಿದರು ಎಂಬುದು. ಹಿಟ್ಲರ್‌ನಿಗಿಂತ ಮಹಾನ್ ಸುಳ್ಳುಗಾರ ಬೇರೊಬ್ಬನಿಲ್ಲ. ಸುಡೆತಾನ್ ಜರ್ಮನ್ನರು ಜೆಕಸ್ಲೋವೇಕಿಯಾದಿಂದ ಬೇರ್ಪಟ್ಟಾಗ ಆತನು ತಾನು ಬಯಸಿದ್ದೆಲ್ಲವನ್ನು ಪಡೆದುಕೊಂಡ

ಮತ್ತು ಆತ ತಾನು ಹೆಚ್ಚಿನದೇನನ್ನೂ ಕೇಳಲಿಲ್ಲವೆಂದು ಹೇಳಿದ. ಆ ಒಡಂಬಡಿಕೆಗೆ ಸಹಿ ಹಾಕಿದ ತರುವಾಯ ಮರು ದಿನವೇ ಆತ ಜೆಕಸ್ಲೋವೇಕಿಯಾದ ಕಡೆಗೆ ಸೇನೆಯನ್ನು ನುಗ್ಗಿಸಿದ ಎಂಬುದನ್ನು ಇಡೀ ಸದನ ನೆನಪಿಸಿಕೊಳ್ಳಬೇಕು. ನಮ್ಮ ಪ್ರಧಾನ ಮಂತ್ರಿಗಳು ಈ ತರಹದ ಪ್ರಮಾದಗಳನ್ನು ಎಸಗುವುದಿಲ್ಲವೆಂಬ ನಂಬಿಕೆ ನನಗಿದೆ. ಮಾನ್ಯರೇ, ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

◆

# ೪೯

# ಬ್ಯಾಂಕ್ ವಿವಾದಗಳ ಕುರಿತ ಸರ್ಕಾರಿ ಆದೇಶ

****ಡಾ. ಬಿ.ಆರ್. ಅಂಬೇಡ್ಕರ್ (ಮುಂಬಯಿ):** ಮಾನ್ಯ ಸಭಾಧ್ಯಕ್ಷರೇ, ಬಂಡವಾಳಶಾಹಿಗಳ ಪರವಾಗಿ ಮತ್ತು ಕಾರ್ಮಿಕರ ವಿರುದ್ಧವಾಗಿ ಪಕ್ಷಪಾತವನ್ನು ತೋರಿಸುತ್ತಾರೆಂಬ ಕಾರಣದ ಮೇಲೆ ಸರ್ಕಾರದ ವಿರುದ್ಧ ಜನರು ಮಾಡಬಹುದಾದ ಕೆಲವು ಆರೋಪಗಳನ್ನು ಅಲ್ಲಗಳೆಯಲು ಸರ್ಕಾರ ಹೆಚ್ಚು ಕಾತುರವಾಗಿತ್ತೆಂಬುದನ್ನು ನಾನು ಮಾನ್ಯ ಪ್ರಧಾನ ಮಂತ್ರಿಯವರ ಭಾಷಣದಿಂದ ಕಂಡುಕೊಂಡೆ. ನಿಜವಾಗಿಯೂ ಸರ್ಕಾರದ ವಿರುದ್ಧ ಅಂಥ ಆರೋಪವನ್ನು ಮಾಡುವಂತೆ ಅಪೇಕ್ಷಿಸುವಂತಹ ವ್ಯಕ್ತಿಗಳ ಪೈಕಿ ನಾನೊಬ್ಬನಲ್ಲ. ಸರ್ಕಾರ ನನ್ನ ನಿರ್ಣಯದಲ್ಲಿ ವ್ಯಕ್ತಪಡಿಸಲಾದ ಸ್ಥಿತಿಗತಿಯನ್ನು ಪೂರಾ ತಪ್ಪಾಗಿ ತೀರ್ಮಾನಿಸಿದೆ. ಅಲ್ಲದೆ ಅದರ ಮುಂದಿಟ್ಟಿರುವಂತಹ ಸಂಗತಿಗಳನ್ನು ಕೂಡ ಅರ್ಥ ಮಾಡಿಕೊಂಡಿಲ್ಲವೆಂಬುದರ ಬಗ್ಗೆ ನಾನು ನನ್ನ ಭಾಷಣದ ಮುಕ್ತಾಯದಲ್ಲಿ ಸೂಚಿಸಬಯಸುತ್ತೇನೆ.

**ಮಧ್ಯಾಹ್ನ ೧೨–೦೦ ಗಂಟೆ**

ಪ್ರಧಾನ ಮಂತ್ರಿಯವರ ಪ್ರಕರಣ ನಾನು ಅವರನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ ಹಾದರದ ಮಗುವಿಗೆ ಜನನ ನೀಡಿರುವಂತಹ ಒಬ್ಬ ಮಹಿಳೆಯ ಪ್ರಕರಣವನ್ನು ಹೋಲುತ್ತದೆ ಮತ್ತು ಈ ವಿಷಯದ ಬಗ್ಗೆ ಆಕೆಯನ್ನು ಪ್ರಶ್ನಿಸಿದಾಗ ಆಕೆ ಹೀಗೆ ಹೇಳಿದಳು. ""ಮಾನ್ಯರೇ, ಇದು ಹಾದರ ಇರಬಹುದು, ಆದರೆ ಇದು ಅತ್ಯಂತ ಚಿಕ್ಕ ಮಗು". ಸರಿ, ನಾವು ತೀರ್ಮಾನ ಹಾದರ ಎಂಬ ಸಂಗತಿ ಮತ್ತು ತೀರ್ಮಾನ ಬಹುಶಃ ಚಿಕ್ಕ ಮಗು ಎಂಬ ಸಂಗತಿ ಈ ಎರಡೂ ವಿಷಯಗಳನ್ನು ಪ್ರತ್ಯೇಕಿಸಿ ನೋಡಬಹುದೆಂದು ಭಾವಿಸುತ್ತೇನೆ. ತೀರ್ಮಾನ ಕೇವಲ ಚಿಕ್ಕ ಮಗು ಎಂಬುದೇ ಅಥವಾ ಅಲ್ಲವೇ ಎಂಬುದರ ಬಗ್ಗೆ ಮಾತ್ರ ನಾವು ಕಾಳಜಿ ಹೊಂದಿದ್ದೇವೆ.

ಸಮಯ ತೀರ ಕಡಿಮೆಯಿರುವುದರಿಂದ ವಸ್ತು ವಿಷಯವನ್ನು ಬೆಳೆಸುವುದಕ್ಕೂ ಮುಂಚೆ ಯಾವುದೇ ಪೂರ್ವಭಾವಿ ಅಭಿಪ್ರಾಯಗಳಲ್ಲಿ ತೊಡಗಲು ಸಾಧ್ಯವಿಲ್ಲ. ಆದುದರಿಂದ ನಾನು ವಸ್ತು ವಿಷಯವನ್ನೇ ಚರ್ಚೆಗೆ ಎತ್ತಿಕೊಳ್ಳಲು ಉದ್ದೇಶಿಸಿದ್ದೇನೆ.

ವಿರೋಧ ಪಕ್ಷದ ನಾಯಕರು ಎತ್ತಿದ ಕೆಲವು ಅಂಶಗಳು ಹೀಗಿವೆ. ಕಾರ್ಮಿಕರ ಮೇಲ್ಮನವಿ ನ್ಯಾಯಾಧಿಕರಣದ ಐತೀರ್ಪಿನಲ್ಲಿ ಸರ್ಕಾರವು ಮಾಡಿದ ಮಾರ್ಪಾಡುಗಳು ಸಮರ್ಥನೀಯವಾದವುಗಳೇ? ಸರ್ಕಾರ ಮಾರ್ಪಾಡು ಮಾಡುವ ಹಕ್ಕನ್ನು ಹೊಂದಿದೆ ಎಂದು ಪ್ರಧಾನ ಮಂತ್ರಿಗಳು ನ್ಯಾಯಸಮ್ಮತವಾಗಿ ಹೇಳಿದರು ಮತ್ತು ಸರ್ಕಾರ ಐತೀರ್ಪನ್ನು ಮಾರ್ಪಾಡು ಮಾಡುವ ಹಕ್ಕನ್ನು ಹೊಂದಿರಬೇಕೆಂಬ ಅವರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಏಕೆಂದರೆ ಕೊನೆಗೂ ಅವರು ಜವಾಬ್ದಾರಿ ವಹಿಸಿಕೊಂಡಿರುವಂಥ ಸರ್ಕಾರವು ಸಮಗ್ರವಾಗಿ ಜನರ ಕಲ್ಯಾಣವನ್ನು ಪರಿಗಣಿಸಬೇಕೇ ಹೊರತು

---

* ಸಂಸದೀಯ ಚರ್ಚೆಗಳು ಸಂ. ೭ಎ, (R. S.), ೨ನೇ ಸೆಪ್ಟೆಂಬರ್ ೧೯೫೪, ಪು. ೧೨೦೭–೧೬.

ಕೇವಲ ಒಂದು ವರ್ಗದ ಜನರ ಕಲ್ಯಾಣವನ್ನಲ್ಲ ಮತ್ತು ಅದು ಪೂರಾ ಜವಾಬ್ದಾರಿಯನ್ನು ನಿರ್ವಹಿಸಬೇಕು. ಆದ್ದರಿಂದ ಅದೊಂದು ಅತ್ಯಂತ ನ್ಯಾಯಸಮ್ಮತ ಹಕ್ಕಾಗಿದೆ. ನಾನು ಹೇಳಿದಂತೆ ಅದು ತನ್ನ ಹಕ್ಕನ್ನು ಸರಿಯಾಗಿ ಚಲಾಯಿಸಿದೆಯೇ ಎಂಬುದು ಪ್ರಶ್ನೆ.

ಈಗ ಮಾನ್ಯರೇ, ನಾನು ತಮ್ಮ ಮುಂದಿಡಲು ಉದ್ದೇಶಿಸಿರುವಂಥ ವಿಷಯವನ್ನು ನಿರ್ಧರಿಸುವ ಸಲುವಾಗಿ ಸರ್ಕಾರ ಕಾರ್ಮಿಕರ ಮೇಲ್ಮನವಿ ನ್ಯಾಯಾಧಿಕರಣದ ಐತೀರ್ಪಿನಲ್ಲಿ ಮಾಡಿರುವಂಥ ಮಾರ್ಪಾಡುಗಳನ್ನು ಬಾಬುವಾರು ಪಟ್ಟಿಮಾಡುವುದು ಅಗತ್ಯವೆಂದು ನಾನು ಭಾವಿಸಿದ್ದೇನೆ. ಮಾಡಲಾದ ಮಾರ್ಪಾಡುಗಳು ಎಷ್ಟು? ನನಗೆ ತಿಳಿದ ಮಟ್ಟಿಗೆ ಮಾರ್ಪಾಡುಗಳು ನಾಲ್ಕು. ಮೊದಲನೆಯ ಸ್ಥಾನದಲ್ಲಿ ಸರ್ಕಾರ ೪ನೇ ದರ್ಜೆಯ ಪ್ರದೇಶವೆಂದು ಕರೆಯಲಾಗುವ ಹೊಸ ಪ್ರದೇಶವನ್ನು ಸೇರಿಸಿದ್ದು. ಇದು ೩೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಒಳಗೊಂಡಿರುತ್ತದೆ. ಮಾನ್ಯ ನ್ಯಾಯಮೂರ್ತಿ ಸೇನ್ ಅವರ ಐತೀರ್ಪಿನಿಂದ ಹಿಡಿದು ಶಾಸ್ತ್ರಿ ಅವರ ಐತೀರ್ಪು ಮತ್ತು ನ್ಯಾಯಾಧಿಕರಣದ ಐತೀರ್ಪಿನವರೆಗೆ ಈ ಹಿಂದಿನ ಎಲ್ಲಾ ಐತೀರ್ಪುಗಳು ಪ್ರದೇಶಗಳನ್ನು ಮೂರು ವರ್ಗಗಳನ್ನಾಗಿ ವರ್ಗೀಕರಿಸಿದರೆ ಸಾಕೆಂಬುದನ್ನು ಒಪ್ಪಿಕೊಂಡಿವೆ. ನಾಲ್ಕನೇ ವರ್ಗವು ಆವಶ್ಯಕವಾಗಿರಲಿಲ್ಲ ಆದರೆ ಸರ್ಕಾರಕ್ಕೆ ಮಾಡಬೇಕೆನಿಸಿದೆ. ಮಾನ್ಯ ಹಣಕಾಸು ಸಚಿವರು ಈ ಹೊಸ ೪ನೇ ದರ್ಜೆಯ ಪ್ರದೇಶವನ್ನು ಸೃಜಿಸುವುದಕ್ಕೆ ದಾರಿಮಾಡಿಕೊಟ್ಟಂತಹ ಕಾರಣಗಳ ಬಗ್ಗೆ ವಿವರಣೆಯನ್ನು ತಮ್ಮ ಉತ್ತರದಲ್ಲಿ ನೀಡುವರೆಂಬುದರ ಬಗ್ಗೆ ನನಗೆ ಯಾವುದೇ ಅನುಮಾನವಿಲ್ಲ. ಎ ದರ್ಜೆಯ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಕನಿಷ್ಠ ವೇತನ ನಾವು ಮೂಲ ಕನಿಷ್ಠ ವೇತನದ ಬಗ್ಗೆ ಕಳವಳ ಹೊಂದಿರುವುದರಿಂದ ನಾನು ಮನೆ ಬಾಡಿಗೆ ಭತ್ಯೆ ಮತ್ತು ತುಟ್ಟಿ ಭತ್ಯೆಗಳಂಥ ಇತರ ವಿಷಯಗಳ ಬಗ್ಗೆ ಮಾತನಾಡುತ್ತಿಲ್ಲ. ೫೬ ರೂಪಾಯಿ, ಬಿ ದರ್ಜೆಯ ಬ್ಯಾಂಕುಗಳಿಗೆ ೬೦ ರೂಪಾಯಿ, ಸಿ ದರ್ಜೆಯ ಬ್ಯಾಂಕುಗಳಿಗೆ ಅದು ೫೧ ರೂಪಾಯಿ ಆಗಿರುತ್ತದೆ ನಾನು ಏನಾದರು ತಪ್ಪು ಹೇಳಿದರೆ ನನ್ನ ಸ್ನೇಹಿತರು ನನ್ನ ಹೇಳಿಕೆಯನ್ನು ತಿದ್ದುವರೆಂದು ಭಾವಿಸುತ್ತೇನೆ. ಎರಡನ್ನೂ ಒಟ್ಟಿಗೆ ಇಟ್ಟರೆ ಒಳಿತೆಂದು ನನಗೆ ತೋರುತ್ತದೆ. ಸರ್ಕಾರ ನ್ಯಾಯಾಧಿಕರಣದ ಐತೀರ್ಪಿನಲ್ಲಿ ಮಾಡಿರುವಂತಹ ಮೂರನೆಯ ಬದಲಾವಣೆ ಎಂದರೆ ಅದು ಮೂರು ಪಟ್ಟಣಗಳನ್ನು ಹೊರತುಪಡಿಸಿ, ನಾನು ಸೂಚಿಸಿದಂತೆ ದೆಹಲಿ, ಅಜ್ಮೀರ್ ಮತ್ತು ಇತರ ಕೆಲವು ಪಟ್ಟಣಗಳನ್ನು ಹೊರತುಪಡಿಸಿ ಭಾಗ–ಬಿ ಮತ್ತು ಭಾಗ–ಸಿ ರಾಜ್ಯಗಳಿಗೆ ಐತೀರ್ಪಿನ ಜಾರಿಯಿಂದ ವಿನಾಯಿತಿ ನೀಡಿದೆ. ನಾನು ಈಗ ಮರೆತಿದ್ದೇನೆ. ಸರ್ಕಾರ ಮಾಡಿರುವಂತಹ ನಾಲ್ಕನೆಯ ಮಾರ್ಪಾಟು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಎಂಬ ಹೆಸರಿನ ಬ್ಯಾಂಕಿಗೆ ಸಂಪೂರ್ಣ ವಿನಾಯಿತಿಯನ್ನು ಮಂಜೂರು ಮಾಡುವುದಾಗಿದೆ.

**ಹಣಕಾಸು ಸಚಿವರು (ಶ್ರೀ ಸಿ.ಡಿ. ದೇಶ್‌ಮುಖ):** ಪ್ರಸ್ತುತ ಉಪಲಬ್ಧಗಳ ರಕ್ಷಣೆಯನ್ನು ಕೂಡ ಐತೀರ್ಪಿನ ಮಾರ್ಪಾಡೆಂಬುದನ್ನು ನಾನು ತೋರಿಸಬಹುದೇ?

**ಡಾ. ಬಿ.ಆರ್. ಅಂಬೇಡ್ಕರ್:** ಹೌದು, ಅದು ಹಾಗೆಯೇ ಇರಬಹುದೆಂದು ನಾನು ಭಾವಿಸುತ್ತೇನೆ.

**ಶ್ರೀ ಸಿ.ಡಿ. ದೇಶಮುಖ:** ಅದು ಹಾಗೆಯೇ ಎಂದು ನಾನು ಮಾನ್ಯ ಸದಸ್ಯರಿಗೆ ಭರವಸೆ ನೀಡುತ್ತೇನೆ.

**ಡಾ. ಬಿ.ಆರ್. ಅಂಬೇಡ್ಕರ್:** ಈಗ, ಮಾನ್ಯರೇ, ನಾವು ಏನು ಮಾಡಬೇಕು ಎಂದರೆ ಈ ಮಾರ್ಪಾಟನ್ನು ಸಮರ್ಥಿಸಿಕೊಳ್ಳುವಂತೆ ಒತ್ತಾಯಿಸಿದ ಕರಣಗಳನ್ನು ಪರಿಗಣಿಸಬೇಕು. ಬ್ಯಾಂಕಿಂಗ್ ವ್ಯವಸ್ಥೆ ಭಾರತದ ಅಭಿವೃದ್ಧಿಗಾಗಿ, ಭಾರತದ ವಾಣಿಜ್ಯ ಮತ್ತು ಕೈಗಾರಿಕೆಗಾಗಿ ಅತ್ಯಂತ ಅಗತ್ಯವಾದ ಉದ್ದಿಮೆ ಅಥವಾ ಸೇವೆಯಾಗಿದೆ ಎಂದು ಹೇಳಲಾಗಿದೆ. ಬ್ಯಾಂಕಿಂಗ್ ಕಾನೂನು ಸಮ್ಮತವಾದ ಎಲ್ಲಾ ರೀತಿಯಲ್ಲಿ ಉತ್ತೇಜನ

ನೀಡಲೇಬೇಕಾಗಿರುವಂಥ ಒಂದು ಅತ್ಯಾವಶ್ಯಕ ವಿಷಯವೆಂಬುದು ಯಾರೂ ವಿರೋಧಿಸದಿರುವ ವಿಷಯವೆಂಬುದು ನನ್ನ ಭಾವನೆ. ಎರಡನೆಯದಾಗಿ, ಬ್ಯಾಂಕುಗಳು ಅಗತ್ಯವಾದಲ್ಲಿ ಆಗ ನೌಕರರ ವೇತನಗಳು ಮತ್ತು ಮಜೂರಿ ಬಿಲ್ಲುಗಳನ್ನು ಲಾಭ ಮಾಡಲು ಬ್ಯಾಂಕುಗಳಿಗೆ ಅವಕಾಶವಿರುವ ರೀತಿಯಲ್ಲಿ ನಿಗದಿಪಡಿಸಬೇಕು. ಅದು ಬಹುತೇಕ ಜನರು ಪ್ರಶ್ನಿಸುವಂತಹ ಹೇಳಿಕೆಯಾಗಿದೆಯಾದರೂ ಅದು ಮಾರ್ಪಾಟನ್ನು ಯಾವ ತಳಹದಿಗಳ ಆಧಾರದ ಮೇಲೆ ಮಾಡಲಾಗಿದೆಯೋ ಅಂತಹ ತಳಹದಿಗಳಲ್ಲಿ ಒಂದಾಗಿದೆ ಎಂಬುದು ನನ್ನ ಭಾವನೆ.

ನಾನು ಸದನದ ಗಮನ ಸೆಳೆಯಲಿಚ್ಛಿಸುವಂತಹ ಮೊದಲ ವಿಚಾರ ಇದು. ಸೇನ್ ಐತೀರ್ಪು ಇಂದು ಜಾರಿಯಲ್ಲಿದೆ, ವಾಸ್ತವವಾಗಿ ಕಾರ್ಯಾಚರಣೆಯಲ್ಲಿದೆ. ಇದು ೧೯೫೧ರಿಂದಲೂ ಜಾರಿಯಲ್ಲಿದೆ. ಇದರ ಮಾನದಂಡಗಳು ಖಂಡಿತವಾಗಿಯೂ ಶಾಸ್ತ್ರಿ ಐತೀರ್ಪಿನ ಮಾನದಂಡಗಳಿಗಿಂತಲೂ ಅತ್ಯಧಿಕವಾಗಿದ್ದವು. ಈಗ ವಿಷಯ ಇದು. ೧೯೫೧ರಲ್ಲಿ ನ್ಯಾಯಮೂರ್ತಿ ಸೇನ್ ಅವರು ನೀಡಿದ ಈ ಐತೀರ್ಪು ಜಾರಿಯಲ್ಲಿದೆ ಮತ್ತು ಸೇನ್ ಸಮಿತಿಯ ರಚನೆಯಲ್ಲಿ ಕೆಲವು ತಾಂತ್ರಿಕ ದೋಷಗಳಿರುವುದರಿಂದ ಸೇನ್ ಸಮಿತಿಯು ಐತೀರ್ಪನ್ನು ನೀಡುವ ಹಕ್ಕನ್ನು ಹೊಂದಿರುವುದಿಲ್ಲವೆಂಬ ಕಾರಣದ ಮೇಲೆ ಕೆಲವು ಬ್ಯಾಂಕರ್‌ಗಳು ಸಲ್ಲಿಸಿದ ಅರ್ಜಿಯ ಮೇಲೆ ಸರ್ವೋಚ್ಚ ನ್ಯಾಯಾಲಯವು ಸೇನ್ ಐತೀರ್ಪನ್ನು ಅನೂರ್ಜಿತವೆಂದು ಘೋಷಿಸಿದ್ದ ಕಾರಣ ವಿಶೇಷ ಅಧ್ಯಾದೇಶದ ಮೂಲಕ ಇದನ್ನು ಸರ್ಕಾರ ಜಾರಿಯಲ್ಲಿ ತಂದಿತು. ಬ್ಯಾಂಕರ್‌ಗಳು ನೌಕರರ ವೇತನವನ್ನು ಕಡಿತಗೊಳಿಸಲಾರಂಭಿಸಿದಾಗ ಸರ್ಕಾರವು ಮಧ್ಯಪ್ರವೇಶಿಸಿ ಒಂದು ಅಧ್ಯಾದೇಶದ ಮೂಲಕ ಮಜೂರಿಗಳನ್ನು ಸ್ಥಗಿತಗೊಳಿಸಲಾಯಿತೆಂದು ಅಂದರೆ ಸರ್ವೋಚ್ಚ ನ್ಯಾಯಾಲಯವು ಐತೀರ್ಪನ್ನು ಪರಿಣಾಮಶೂನ್ಯವೆಂದು ಘೋಷಿಸಿದ್ದ ಸಂಗತಿ ಏನೇ ಇದ್ದರೂ ಸೇನ್ ಐತೀರ್ಪಿನಲ್ಲಿ ನೌಕರರಿಗೆ ಏನೆಲ್ಲಾ ಸೌಲಭ್ಯಗಳನ್ನು ನೀಡಲಾಗಿತ್ತೋ ಆ ಸೌಲಭ್ಯಗಳೆಲ್ಲವೂ ಮುಂದುವರಿಯುತ್ತವೆಂದು ಘೋಷಿಸಿತು. ಈಗ ಮಾನ್ಯರೇ, ಈ ಐತೀರ್ಪನ್ನು ಬ್ಯಾಂಕುಗಳ ಭುಜದ ಮೇಲೆ ಹೊರಿಸಿದರೆ ನನ್ನ ಅಭಿಪ್ರಾಯದಲ್ಲಿ ಅವು ಸಾಕಷ್ಟು ಲಾಭಗಳನ್ನು ಮಾಡುವ ತಮ್ಮ ಅವಕಾಶವನ್ನು ಕಳೆದುಕೊಳ್ಳುವುದಿಲ್ಲ ಮತ್ತು ಯಾವುದೇ ಹೊರೆಯನ್ನು ಹೊತ್ತಂತೆಯೂ ಆಗುವುದಿಲ್ಲವೆಂಬ ವಾದವನ್ನು ಮುಂದಿಡುವಂತಹ ಸಾಕ್ಷ್ಯದ ಒಂದು ತುಣುಕಿದ್ದು ಅದನ್ನು ನಾನು ಮಂಡಿಸುತ್ತೇನೆ. ಆನಂತರ ಮತ್ತೆ ರಿಸರ್ವ್ ಬ್ಯಾಂಕ್ ಒಂದು ಕಿರು ಹೊತ್ತಿಗೆಯಲ್ಲಿ ಒದಗಿಸಿರುವಂತಹ ಅಂಕಿ ಅಂಶಗಳನ್ನು ತುಲನೆ ಮಾಡೋಣ. ಈ ಕಿರು ಹೊತ್ತಿಗೆಯನ್ನು "ಘಟನೆಗಳ ಪ್ರವೃತ್ತಿ" ಅಥವಾ ಅಂಥದ್ದೇ ಯಾವುದೋ ಹೆಸರಿನಿಂದ ಕರೆಯುತ್ತಾರೆ ಎಂಬುದನ್ನು ನಾನು ಬಲ್ಲೆ. ಇದು ೧೯೪೯ರಿಂದ ೧೯೫೩ರವರೆಗಿನ ಅಂಕಿ ಅಂಶಗಳನ್ನು ಒಳಗೊಂಡಿದೆ. ನಾನು ಕೇವಲ ಸಂಬಂಧಪಟ್ಟ ಅಂಕಿ ಅಂಶಗಳನ್ನು ಮಾತ್ರ ತೆಗೆದುಕೊಂಡಿದ್ದೇನೆ. ಈಗ 'ಎ' ದರ್ಜೆಯ ಬ್ಯಾಂಕುಗಳ ಸಂದರ್ಭದಲ್ಲಿ ಹೇಳುವುದಾದರೆ ಈ ಅವಧಿಯಲ್ಲಿ ದುಡಿಮೆ ಬಂಡವಾಳದಲ್ಲಿ ಶೇಕಡ ೧೦ರಷ್ಟು ಕೊರತೆಯಿದ್ದು ಒಟ್ಟು ಗಳಿಕೆಗಳು ಶೇಕಡ ೨೦ ರಷ್ಟು ಹೆಚ್ಚಳವಾಗಿವೆ ಮತ್ತು ಲಾಭಾಂಶಗಳು ಶೇಕಡ ೮ರಷ್ಟು ಹೆಚ್ಚಳವಾಗಿವೆ. "ಬಿ' ದರ್ಜೆಯ ಬ್ಯಾಂಕುಗಳ ಸಂದರ್ಭದಲ್ಲಿ ಹೇಳುವುದಾದರೆ, ಠೇವಣಿಗಳಲ್ಲಿ ಶೇಕಡ ೧೩ರಷ್ಟು ಕಡಿಮೆಯಾಗಿದೆ. ಅಲ್ಲದೆ ದುಡಿಮೆ ಬಂಡವಾಳದಲ್ಲಿ ಶೇಕಡ ೧೩ರಷ್ಟು ಕಡಿಮೆಯಾಗಿದೆ. ಆದರೆ ಒಟ್ಟು ಗಳಿಕೆ ಶೇಕಡ ೯ರಷ್ಟು ಹೆಚ್ಚಳವಾಗಿವೆ. 'ಸಿ' ದರ್ಜೆಯ ಬ್ಯಾಂಕುಗಳ ಸಂದರ್ಭದಲ್ಲಿ ಹೇಳುವುದಾದರೆ ಠೇವಣಿಗಳು ಶೇಕಡ ೧೨ರಷ್ಟು ಹೆಚ್ಚಳವಾಗಿವೆ. ದುಡಿಮೆ ಬಂಡವಾಳವು ಶೇಕಡ ೧೨ರಷ್ಟು ಹೆಚ್ಚಳವಾಗಿದೆ ಮತ್ತು ಒಟ್ಟು ಗಳಿಕೆಯಲ್ಲಿ ಹೆಚ್ಚಳವಾಗಿದ್ದು ಲಾಭಾಂಶದಲ್ಲೂ ಕೂಡ ಹೆಚ್ಚಳವಾಗಿದೆ. 'ಡಿ' ದರ್ಜೆಯ ಬ್ಯಾಂಕುಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ

ಹೇಳುವುದಾದರೆ ಅವುಗಳು ಈ ರಾಷ್ಟ್ರದಲ್ಲಿ ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ಸಂಸ್ಥೆ ಎಂಬುದಾಗಿ ನನಗೆ ಕಂಡುಬಂದಿವೆ. ಏಕೆಂದರೆ ಅವು ತಮ್ಮ ವಿಷಯದಲ್ಲಿ ಠೇವಣಿಗಳ ದುಡಿಮೆ ಬಂಡವಾಳ ಒಟ್ಟು ಗಳಿಕೆ ಮತ್ತು ಲಾಭಾಂಶ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಹೆಚ್ಚಳವನ್ನು ಕಂಡಿವೆ. ಈಗ ಮಾನ್ಯರೇ, 'ಎ' ದರ್ಜೆಯ ಬ್ಯಾಂಕುಗಳು ಮತ್ತು 'ಬಿ' ದರ್ಜೆಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಲಾಭಾಂಶಗಳಲ್ಲಿ ಕೆಲ ಮಟ್ಟಿಗೆ ಕಡಿಮೆಯಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಅದಕ್ಕೆ ಕಾರಣಗಳೇನು? ಮಜೂರಿ ಬಿಲ್ಲು ಹೆಚ್ಚಳಗೊಂಡಿರುವುದು ಅದಕ್ಕೆ ಕಾರಣವೇ? ಅಥವಾ ಮತ್ತೆ ಯಾವುದಾದರೂ ಕಾರಣವಿದೆಯೇ? ಠೇವಣಿಗಳಲ್ಲಿ ಕಡಿಮೆಯಾಗಿದೆ ಮತ್ತು ಅವುಗಳ ಲಾಭದಲ್ಲಿ ಕೆಲ ಮಟ್ಟಿಗೆ ಕಡಿಮೆಯಾಗಿದೆ ಎಂಬ ಸಂಗತಿಗೆ ಕಾರಣ ನೀಡಲು ಬಡ್ಡಿಯ ದರದಲ್ಲಿ ಗಣನೀಯವಾದ ಏರಿಕೆ ಮಾಡಲಾಗಿದೆ ಎಂಬುದು ನನಗೆ ಕಂಡು ಬರುತ್ತದೆ. ಮತ್ತು ಖಂಡಿತವಾಗಿಯೂ, ಈ ಐತೀರ್ಪು ಬ್ಯಾಂಕುಗಳನ್ನು ಅಧಃಪತನಕ್ಕೆ ದೂಡಿದೆ ಎಂದು ಒತ್ತಾಯಿಸುವುದಕ್ಕೆ ಒಂದು ಆಧಾರವಾಗಿ ಮಜೂರಿ ಬಿಲ್ಲನ್ನು ಬಳಸಿಕೊಳ್ಳಬಾರದು. ಆದುದರಿಂದ ಮಜೂರಿ ಬಿಲ್ಲಿನ ಕಾರಣದಿಂದಾಗಿ ಲಾಭಗಳು ಕಡಿಮೆಯಾಗಿವೆ ಎಂಬ ವಾದವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ನಾನು ಪ್ರತಿಪಾದಿಸುತ್ತೇನೆ. ಲಾಭಗಳು ಕಡಿಮೆಯಾಗಿದ್ದಿರಬಹುದಾದರೂ ಅವು ಖಂಡಿತವಾಗಿ ಆ ಕಾರಣಕ್ಕಾಗಿ ಕಡಿಮೆಯಾಗಿಲ್ಲ. ಆದ್ದರಿಂದ ನ್ಯಾಯಾಧಿಕರಣವು ನಿಗದಿಪಡಿಸಿದಂತೆ ಮಜೂರಿಯನ್ನು ಕಡಿಮೆ ಮಾಡುವ ಸಲುವಾಗಿ ಐತೀರ್ಪಿನ ಮಾರ್ಪಾಟಿಗಾಗಿ ಈ ವಾದವನ್ನು ಖಂಡಿತವಾಗಿಯೂ ಬಳಸಿಕೊಳ್ಳಬಾರದು.

ನಂತರ ಮಾನ್ಯರೇ, ಎರಡನೆಯ ಬದಲಾವಣೆಗೆ ಅಂದರೆ ೪ನೇ ದರ್ಜೆಯ ಪ್ರದೇಶದ ರಚನೆಗೆ ಸಂಬಂಧಿಸಿದಂತೆ ಹೇಳುವುದಾದರೆ ಸರ್ಕಾರ ಈ ಹೊಸ ಪ್ರದೇಶವನ್ನು ರಚಿಸುವ ಅಗತ್ಯವಿದೆ ಎಂದು ಏಕೆ ಭಾವಿಸಿತೆಂಬುದು ನನಗೆ ಸ್ವಲ್ಪವೂ ಅರ್ಥವಾಗಿಲ್ಲ. ಪ್ರಕರಣಗಳನ್ನು ಮೂರು ನ್ಯಾಯಾಧಿಕರಣಗಳ ಮುಂದೆ ವಾದಿಸಲಾಯಿತು. ಕಾರ್ಮಿಕರನ್ನು ಪ್ರತಿನಿಧಿಸಿ ಹಾಗೂ ಬ್ಯಾಂಕರುಗಳನ್ನು ಪ್ರತಿನಿಧಿಸಿ ಅಸಂಖ್ಯಾತ ನ್ಯಾಯಾವಾದಿಗಳು ಭಾಗವಹಿಸಿದ್ದರು. ಖಂಡಿತವಾಗಿ ಅವರಲ್ಲಿ ಯಾರೊಬ್ಬರೂ ಈ ಹೊಸ ಪ್ರದೇಶವನ್ನು ಸೃಜಿಸಬೇಕೆಂಬುದನ್ನು ಯಾವುದೇ ದರ್ಜೆಯ ಬ್ಯಾಂಕುಗಳ ಸಂದರ್ಭದಲ್ಲೂ ಅಗತ್ಯವೆಂದು ಭಾವಿಸಲಿಲ್ಲ. ಸರ್ಕಾರ ಈ ಪ್ರದೇಶವನ್ನು ಸೃಜಿಸುವುದಕ್ಕೆ ಯಾವುದು ದಾರಿಮಾಡಿಕೊಟ್ಟಿತು ಎಂಬುದು ನನಗೆ ಸ್ವಲ್ಪವೂ ಅರ್ಥವಾಗುತ್ತಿಲ್ಲ.

ತದನಂತರ ಮಾನ್ಯರೇ, ಮೂರನೆಯ ಬದಲಾವಣೆ ಭಾಗ–ಬಿ ಮತ್ತು ಭಾಗ–ಸಿ ರಾಜ್ಯಗಳಿಗೆ ವಿನಾಯಿತಿ ನೀಡುವುದು ಸಮರ್ಥಿಸಿಕೊಳ್ಳಲು ಅತ್ಯಂತ ಕಷ್ಟಕರವಾದ ವಿಷಯಗಳಲ್ಲೊಂದೆಂಬುದಾಗಿ ನನಗೆ ತೋರುತ್ತದೆ.

**ಮಾನ್ಯ ಸಭಾಧ್ಯಕ್ಷರು:** ಕಾಲಾವಕಾಶ ಮುಗಿಯುತ್ತಿದೆ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಇನ್ನು ಕೆಲವೇ ವಿಷಯಗಳನ್ನು ತಿಳಿಸಿ ನನ್ನ ಮಾತು ಮುಗಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು:** ಸರಿ, ಆದಷ್ಟು ಸಂಕ್ಷಿಪ್ತವಾಗಿ ಹೇಳಿ.

**ಡಾ. ಬಿ.ಆರ್. ಅಂಬೇಡ್ಕರ್:** ಧನ್ಯವಾದಗಳು ಮಾನ್ಯರೇ, ಭಾಗ–ಬಿ ಮತ್ತು ಭಾಗ–ಸಿ ರಾಜ್ಯಗಳ ಈ ಎರಡೂ ಪ್ರದೇಶಗಳನ್ನು ಯಾವ ಆಧಾರದ ಮೇಲೆ ಈ ಐತೀರ್ಪಿನ ಕಾರ್ಯಾಚರಣೆಯ ವ್ಯಾಪ್ತಿಯಿಂದ ಹೊರಗಿಡಬಹುದೆಂಬುದನ್ನು ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟ. ಈಗ ಮಾನ್ಯರೇ, ಇದರ ಅರ್ಥವೇನು? ಇದರ ಅರ್ಥವೇನೆಂದರೆ ಸರ್ಕಾರವು ೪ನೇ ದರ್ಜೆಯ ಪ್ರದೇಶಕ್ಕಾಗಿ ನಿರ್ದಿಷ್ಟಪಡಿಸಿರುವಂತಹ ಕಡಿಮೆ ವೇತನ ಶ್ರೇಣಿಯು ಅಂದರೆ ೫೧ ರೂಪಾಯಿಗಳ ಕನಿಷ್ಠ ವೇತನವು ಭಾಗ–ಬಿ ಮತ್ತು ಭಾಗ–ಸಿ

ರಾಜ್ಯಗಳಲ್ಲಿ ಜಾರಿಯಾಗಬೇಕಾಗಿಲ್ಲ ಅರ್ಥಾತ್ ನೌಕರರು ಸಂಪೂರ್ಣವಾಗಿ ಮಾಲೀಕನ ಅಧೀನದಲ್ಲಿ ಅವರ ಅನುಕಂಪದಲ್ಲಿ ಇರುತ್ತಾರೆ.

ಅವರು ನೌಕರರಿಗೆ ತಮ್ಮ ಇಷ್ಟಾನುಸಾರ ಯಾವುದೇ ಮಜೂರಿಗಳನ್ನು ಪಾವತಿಸಬಹುದಾಗಿದೆ. ಬ್ಯಾಂಕಿಂಗ್ ಅಗತ್ಯವಾಗಿದ್ದು ಬ್ಯಾಂಕುಗಳು ಲಾಭ ಮಾಡಬೇಕೆಂಬುದು ಇದಕ್ಕೆ ಕಾರಣವಿರಬಹುದು. ಅದು ಕೂಡ ನ್ಯಾಯಸಮ್ಮತವಾದ ವಿಷಯವಿದ್ದಿರಬಹುದು. ಆದರೆ ನಾವು ಈ ಬಗೆಯ ಶೋಷಣೆಗೆ ಸಂಪೂರ್ಣ ಶೋಷಣೆಗೆ ಅವಕಾಶ ನೀಡಬೇಕೇ? ಯಾವುದೇ ಕನಿಷ್ಠ ಮಾನದಂಡಗಳನ್ನು ನಿಗದಿಪಡಿಸಿರುವುದಿಲ್ಲ. ಇದು ನನಗೆ ಸಂಪೂರ್ಣವಾಗಿ ವಿವರಿಸಲಾಗದ ಮತ್ತು ಅರ್ಥವಾಗದ ವಿಷಯವಾಗಿ ತೋರುತ್ತದೆ.

ಈಗ ಮತ್ತೆ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾದ ವಿನಾಯಿತಿಗೆ ಸಂಬಂಧಿಸಿದಂತೆ ಸರ್ಕಾರವು ಮಾಡಿರುವ ನಾಲ್ಕನೆಯ ಮಾರ್ಪಾಟು ಕೂಡ ಅತ್ಯಂತ ಅಸಾಧಾರಣ ವಿಷಯವಾಗಿದೆ. ನಾನು ಈ ನಿರ್ದಿಷ್ಟ ಸಂಸ್ಥೆಯ ಬಗ್ಗೆ ಯಾವುದೇ ಮಾಹಿತಿಯನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿರುವಷ್ಟರ ಮಟ್ಟಿಗೆ ಹೇಳುವುದಾದರೆ ಮೂಲತಃ ಕಲ್ಕತ್ತದಲ್ಲಿ ನಿರಾಶ್ರಿತರು ಸ್ವತಃ ತಮಗೆ ತಾವೇ ಸಹಾಯವಾಗಲು ಮತ್ತು ಬ್ಯಾಂಕಿಂಗ್‌ನ ವ್ಯವಹಾರವನ್ನು ನಡೆಸಲು ಪ್ರಾರಂಭಿಸಿದ ನಾಲ್ಕು ಬ್ಯಾಂಕುಗಳಿದ್ದವೆಂದು ನಾನು ನಂಬಿದ್ದೇನೆ.

**ಹಣಕಾಸು ಖಾತೆಯ ಉಪಮಂತ್ರಿ (ಶ್ರೀ ಎ.ಸಿ. ಗುಹಾ):** ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರವು ಸ್ವಲ್ಪವೂ ಯುಕ್ತವಾದುದಲ್ಲವೆಂದು ಹೇಳಲು ನನಗೆ ವಿಷಾದವೆನಿಸುತ್ತದೆ. ದೇಶ ವಿಭಜನೆಗೆ ಮೊದಲೇ ಸಾಕಷ್ಟು ಬ್ಯಾಂಕುಗಳಿದ್ದವು. ದೇಶ ವಿಭಜನೆಯ ನಂತರ ಕೇವಲ ಅವುಗಳನ್ನು ಒಂದೇ ಬ್ಯಾಂಕಿನೊಳಗೆ ಒಟ್ಟಿಗೆ ಸೇರಿಸಲಾಯಿತು.

**ಡಾ. ಬಿ.ಆರ್. ಅಂಬೇಡ್ಕರ್:** ಅದನ್ನು ಕೇಳಲು ನನಗೆ ಅತ್ಯಂತ ಹರ್ಷವೆನಿಸುತ್ತದೆ. ಅದು ನನ್ನನ್ನು ಮತ್ತಷ್ಟು ಬೆಂಬಲಿಸುತ್ತದೆ. ನಾನು ನನ್ನ ನಿಲುವಿನ ಸಮರ್ಥನೆಗಾಗಿ ನಂಬಿಕೆಗೆ ಅರ್ಹವಲ್ಲದ ವಸ್ತುವನ್ನು ತೆಗೆದುಕೊಳ್ಳುತ್ತಿದ್ದೇನೆ. ಇದೊಂದು ದೀರ್ಘಕಾಲದಿಂದ ನಡೆದುಕೊಂಡು ಬರುತ್ತಿರುವ ಸಂಸ್ಥೆ ಆದರೆ ಅವುಗಳನ್ನು ಒಟ್ಟಿಗೆ ಸೇರಿಸಲಾಯಿತು ಎಂಬ ವಿಷಯವನ್ನು ನಾನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಎ.ಸಿ. ಗುಹಾ:** ದೀರ್ಘಕಾಲದಿಂದ ನಡೆದುಕೊಂಡು ಬರುತ್ತಿರುವ ಸಂಸ್ಥೆಯಾಗಿರಬಹುದಾದರೂ ಸುಸ್ಥಿತಿಯಲ್ಲಿ ಇಲ್ಲದಿರಬಹುದು.

**ಡಾ. ಬಿ.ಆರ್. ಅಂಬೇಡ್ಕರ್:** ನನ್ನ ಬಳಿ ಇರುವ ಮಾಹಿತಿಯ ಪ್ರಕಾರ ಈ ಬ್ಯಾಂಕು ೩೩ ಕೋಟಿ ರೂಪಾಯಿಗಳಷ್ಟು ದುಡಿಮೆ ಬಂಡವಾಳವನ್ನು ಹೊಂದಿದೆ. ನನ್ನ ಸ್ನೇಹಿತರು ಅದನ್ನು ನಿರಾಕರಿಸಲಿ ಅಥವಾ ನಾನು ತಪ್ಪಾಗಿ ಹೇಳಿದ್ದರೆ ಅದನ್ನು ಸರಿಪಡಿಸಲಿ. ಅವರು ಸಾಕಷ್ಟು ಮಟ್ಟಿಗೆ ಈ ಬ್ಯಾಂಕಿನ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆ. ಈ ಬ್ಯಾಂಕಿನ ಬಂಡವಾಳವು ಅಂದಾಜು ಸರಿಸುಮಾರು ೩೩ ಕೋಟಿ ರೂಪಾಯಿಯಾಗಿದೆ. ಈಗ ಸೇನ್ ಐತೀರ್ಪು, ಶಾಸ್ತ್ರಿ ಐತೀರ್ಪು, ಅಳವಡಿಸಿಕೊಂಡಿರುವಂಥ ವರ್ಗೀಕರಣದ ಪ್ರಕಾರ ಹಾಗೂ ಮೇಲ್ಮನವಿ ನ್ಯಾಯಾಧಿಕರಣದ ವರ್ಗೀಕರಣದ ಪ್ರಕಾರ 'ಎ' ದರ್ಜೆಯ ಬ್ಯಾಂಕುಗಳು ಯಾವ ಬ್ಯಾಂಕುಗಳ ದುಡಿಮೆ ಬಂಡವಾಳವು ೨೫ ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿರುವುದೋ ಅಂತಹ ಬ್ಯಾಂಕುಗಳಾಗಿರುವ ಕಾರಣ ಈ ಬ್ಯಾಂಕು 'ಎ' ದರ್ಜೆಯ ಬ್ಯಾಂಕುಗಳ ವ್ಯಾಪ್ತಿಗೆ ಸೇರಲೇಬೇಕಾಗಿತ್ತು. ಖಂಡಿತವಾಗಿ ಈ ಬ್ಯಾಂಕು ನಾನು ಹೇಳಿದಂತೆ 'ಎ' ದರ್ಜೆಯಲ್ಲಿರಬೇಕಾಗಿತ್ತು ಮತ್ತು ಸರ್ಕಾರವು

ನಿರ್ದಿಷ್ಟಪಡಿಸಿದ ಶ್ರೇಣಿಯು ಈ ಬ್ಯಾಂಕಿಗೆ ಅನ್ವಯವಾಗಲೇಬೇಕಾಗಿತ್ತು. ಮೇಲ್ನೋಟಕ್ಕೆ ಯಾವುದೇ ಕಾರಣವಿಲ್ಲವೆಂಬಂತೆ ತೋರುತ್ತದೆ. ಖಂಡಿತವಾಗಿ ನನಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರುವ ಕೆಲವು ಕಾರಣಗಳಿಗಾಗಿ ಈ ಬ್ಯಾಂಕು ತೀವ್ರ ಸಂಕಷ್ಟದಲ್ಲಿತ್ತು. ಇದು ಶಾಸ್ತ್ರಿ ಸಮಿತಿಗೆ ಮನವಿಸಲ್ಲಿಸಿ ಕೆಲವು ರಿಯಾಯಿತಿಗಳಿಗಾಗಿ ಕೋರಿಕೊಂಡಿತ್ತು. ಶಾಸ್ತ್ರಿ ಸಮಿತಿಯು ೧೯೫೪ರ ಡಿಸೆಂಬರ್ ೩೧ರ ವರೆಗೆ ಇದಕ್ಕೆ ವಿನಾಯಿತಿಯನ್ನು ನೀಡಿದೆ. ಶಾಸ್ತ್ರಿ ಸಮಿತಿಯು "ಆ ದಿನಾಂಕದ ತರುವಾಯ ಐತೀರ್ಪು ನಿಮಗೂ ಅನ್ವಯವಾಗುತ್ತದೆ" ಎಂದು ಹೇಳಿದೆ. ವಿಷಯವು ಮೇಲ್ಮನವಿ ನ್ಯಾಯಾಧಿಕರಣದ ಮುಂದೆ ಹೋದಾಗ ಶಾಸ್ತ್ರಿ ಸಮಿತಿಯು ಈ ಬ್ಯಾಂಕಿಗೆ ನೀಡಿದ್ದ ವಿನಾಯಿತಿಯ ಬಗ್ಗೆ ತೃಪ್ತಿಗೊಳ್ಳದ ಈ ಬ್ಯಾಂಕು ಮತ್ತೆ ಮತ್ತಷ್ಟು ವಿನಾಯಿತಿಗಾಗಿ ಅರ್ಜಿಸಲ್ಲಿಸಿತು ಮತ್ತು ಡಿಸೆಂಬರ್ ೧೯೫೫ರ ವರೆಗೆ ವಿನಾಯಿತಿಯ ಅವಧಿಯನ್ನು ವಿಸ್ತರಿಸುವಂತೆ ನ್ಯಾಯಾಧಿಕರಣಕ್ಕೆ ಕೋರಿಕೊಂಡಿತು ಮತ್ತು ಸರ್ಕಾರ ತಾನು ಮಾಡ ಬಯಸಿರುವಂತಹ ಮಾರ್ಪಾಟುಗಳನ್ನು ನಿರ್ದಿಷ್ಟಪಡಿಸಿ ತನ್ನ ಅಧಿಸೂಚನೆಯಲ್ಲಿ ಹೀಗೆ ಹೇಳಿದೆ : "ಈ ಐತೀರ್ಪು ಈ ಬ್ಯಾಂಕಿಗೆ ಕಿಂಚಿತ್ತು ಅನ್ವಯವಾಗತಕ್ಕದ್ದಲ್ಲ". ನನ್ನ ಸ್ನೇಹಿತರು ಇದು ಅವುಗಳಿಗೆ ಎಂದೂ ಅನ್ವಯವಾಗುವುದಿಲ್ಲವೆಂದು ಹೇಳುವುದಿಲ್ಲವೆಂಬ ಭರವಸೆ ನನಗಿದೆ. ಇದು ಯಾವುದೋ ಒಂದು ದಿನ ಅವುಗಳಿಗೆ ಅನ್ವಯವಾಗುವುದೆಂಬ ಭರವಸೆ ನನ್ನದು. ಹಿಂದಿನ ಎರಡು ನ್ಯಾಯಾಧಿಕರಣಗಳು ನೀಡಿದ್ದಂಥ ಸೀಮಿತ ರಿಯಾಯಿತಿಯನ್ನು ತಳ್ಳಿಹಾಕಿ ಅದಕ್ಕೆ ಸಂಪೂರ್ಣ ವಿನಾಯಿತಿಯನ್ನು ನೀಡಿರುವ ಬಗ್ಗೆ ಸರ್ಕಾರ ಈ ಬ್ಯಾಂಕಿನ ಪರವಾಗಿ ತೀರಾ ಪಕ್ಷಪಾತ ತೋರಿಸಿತ್ತು ಎಂಬುದರ ಬಗ್ಗೆ ಸ್ವಲ್ಪ ಮಟ್ಟಿನ ಸ್ಪಷ್ಟೀಕರಣದ ಅಗತ್ಯವಿದೆ. ಯಾವುದೇ ಸ್ಪಷ್ಟೀಕರಣವಿರುವುದಿಲ್ಲ.

ಈಗ, ನಾನು ಸದನದ ಗಮನಕ್ಕೆ ತರಬಯಸುವಂಥ ಇತರ ಅಂಶಗಳಿವೆ. ಕೆಲವು ವಿಷಯಗಳಲ್ಲಿ ಸರ್ಕಾರ ಐತೀರ್ಪನ್ನು ಮಾರ್ಪಾಟು ಮಾಡಲೇಬೇಕಾಗಿತ್ತು. ಆದರೆ ಮಾರ್ಪಾಟು ಮಾಡಿರುವುದಿಲ್ಲ ಎಂಬುದು ನನಗೆ ಕಂಡು ಬಂದಿದೆ ಮತ್ತು ಸರ್ಕಾರ ಮಾರ್ಪಾಟು ಮಾಡುವ ಅಗತ್ಯವಿರುವ ಮೊದಲ ಅಂಶವೆಂದರೆ ಸೇನ್ ಸಮಿತಿಯಿಂದ ಮೊದಲುಗೊಂಡು ಕಾರ್ಮಿಕ ಮೇಲ್ಮನವಿ ನ್ಯಾಯ ಮಂಡಲಿಯವರೆಗೆ ಎಲ್ಲರೂ ಅನುಸರಿಸಿದ್ದ ವರ್ಗೀಕರಣದ ವಿಧಾನವನ್ನು ಮಾರ್ಪಾಟು ಮಾಡಿಕೊಳ್ಳುವುದು ಎಂದು ತಿಳಿಯುತ್ತೇನೆ. ಈಗ ಮಾನ್ಯರೇ, ವರ್ಗೀಕರಣ ಎಷ್ಟರಮಟ್ಟಿಗೆ ಅಸಂಬದ್ಧವಾಗಿದೆ ಎಂಬುದನ್ನು ತೋರಿಸಲಿಕ್ಕೆ ನಾನು ಒಂದೇ ಒಂದು ಉದಾಹರಣೆಯನ್ನು ನೀಡ ಬಯಸುತ್ತೇನೆ. 'ಎ' ದರ್ಜೆಯ ಬ್ಯಾಂಕುಗಳನ್ನು ತೆಗೆದುಕೊಳ್ಳೋಣ. 'ಎ' ದರ್ಜೆಯ ಬ್ಯಾಂಕುಗಳು ೨೫ ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಚಾಲ್ತಿ ಬಂಡವಾಳವನ್ನು ಹೊಂದಿರುವ ಬ್ಯಾಂಕುಗಳಾಗಿವೆ. ಇದಕ್ಕೆ ಯಾವುದೇ ಮೇಲು ಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಬರೀ ೨೫ ಕೋಟಿ ರೂಪಾಯಿಗಳೆಂದು ಮಾತ್ರ ಹೇಳಲಾಗಿದೆ. ಅಂದರೆ ೧೦೦ ಕೋಟಿ ರೂಪಾಯಿಗಳನ್ನು ದುಡಿಮೆ ಬಂಡವಾಳವನ್ನಾಗಿ ಹೊಂದಿರುವಂತಹ ಅಥವಾ ೨೦೦ ಕೋಟಿ ರೂಪಾಯಿಗಳನ್ನು ದುಡಿಮೆ ಬಂಡವಾಳವನ್ನಾಗಿ ಹೊಂದಿರಬಹುದಾದಂತಹ ಇತರ ಎಲ್ಲಾ ಬ್ಯಾಂಕುಗಳು ತನ್ನ ದುಡಿಮೆ ಬಂಡವಾಳವಾಗಿ ಕೇವಲ ೨೫ ಕೋಟಿ ರೂಪಾಯಿಗಳನ್ನು ಹೊಂದಿರುವಂತಹ ಬ್ಯಾಂಕಿಗೆ ಸರಿಸಮನಾಗಿಸಬೇಕಾಗಿದೆ. ಈ ತಪ್ಪು ವರ್ಗೀಕರಣದ ಒಂದು ಎದ್ದು ಕಾಣುವ ಉದಾಹರಣೆಯಾಗಿ ಇಂಪೀರಿಯಲ್ ಬ್ಯಾಂಕ್‌ನ ಪ್ರಕರಣವು ಅತ್ಯಂತ ಹೆಚ್ಚು ವ್ಯತಿರಿಕ್ತವಾಗಿದೆ ಎಂಬುದು ನನಗೆ ಕಂಡುಬಂದಿದೆ. ನನ್ನ ಸ್ನೇಹಿತರು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಅವುಗಳ ಮೌಲ್ಯವೇನು ಎಂಬುದರ ಬಗ್ಗೆ ನಾನು ನನ್ನ ಬಳಿ ಇರುವಂಥ ಅಂಕಿ ಅಂಶಗಳನ್ನು ನೀಡಲಿಚ್ಛಿಸುತ್ತೇನೆ. ನನಗೆ ತಿಳಿದು ಬಂದಿರುವಂತೆ ಅದರ ಬಂಡವಾಳ ಅಂದಾಜು ಸುಮಾರು

೨೧೮ ಕೋಟಿ ರೂಪಾಯಿಗಳು ಮತ್ತು ಅದು ಎಲ್ಲಾ ಭಾರತೀಯ ಷೆಡ್ಯೂಲ್ಡ್ ಬ್ಯಾಂಕುಗಳ ಒಟ್ಟು ಠೇವಣಿಗಳಲ್ಲಿ ಒಟ್ಟು ಶೇಕಡ ೪೧ರಷ್ಟು ಠೇವಣಿಗಳನ್ನು ಹೊಂದಿದೆ. ಈಗ ಮಾನ್ಯರೇ, ೨೫ ಕೋಟಿ ರೂಪಾಯಿಗಳನ್ನು ದುಡಿಮೆ ಬಂಡವಾಳವನ್ನಾಗಿ ಹೊಂದಿರುವ ಒಂದು ಬ್ಯಾಂಕನ್ನು ೨೧೮ ಕೋಟಿ ರೂಪಾಯಿಗಳನ್ನು ದುಡಿಮೆ ಬಂಡವಾಳವನ್ನಾಗಿ ಹೊಂದಿರುವಂತಹ ಒಂದು ಬ್ಯಾಂಕಿಗೆ ಸರಿಸಮಾನವಾಗಿ ಒಂದೇ ಸ್ಥಾನದಲ್ಲಿ ಇರಿಸುವುದು ಸರಿಯೇ ಎಂಬುದನ್ನು ಮತ್ತು ಇಂಪೀರಿಯಲ್ ಬ್ಯಾಂಕಿಗೆ ವಿಶೇಷ ದರ್ಜೆಯನ್ನು ಸೃಜಿಸುವುದು ಸರ್ಕಾರಕ್ಕೆ ಅಪೇಕ್ಷಣೀಯ ಮತ್ತು ಅಗತ್ಯವಾದುದಾಗಿರಲಿಲ್ಲವೇ ಎಂಬುದನ್ನು ನಾನು ಕೇಳ ಬಯಸುತ್ತೇನೆ.

**ಪ್ರೋ॥ ಜಿ. ರಂಗ (ಆಂಧ್ರ):** ಅದನ್ನು ರಾಷ್ಟ್ರೀಕರಣ ಮಾಡಿ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಎಲ್ಲಾ ಅಂಕಿಅಂಶಗಳನ್ನು ಹೊಂದಿಲ್ಲ. ಆದರೆ ೨೫ ಕೋಟಿ ರೂ. ಮತ್ತು ೨೧೮ ಕೋಟಿ ರೂಪಾಯಿಗಳ ನಡುವೆ ಅನೇಕ ಗುಂಪುಗಳಿವೆ ಮತ್ತು ಅನೇಕ ವರ್ಗೀಕರಣಗಳಿದ್ದರೆ ಅನೇಕ ನೌಕರರು ಅವರೆಲ್ಲರೂ ಲಾಭಗಳಿಗೆ ಸಂಬಂಧಿಸಿದವರಾಗುವುದರಿಂದ ಮಜೂರಿಗಳು ಮತ್ತು ಇತರ ಉಪಲಬ್ಧಗಳ ರೂಪದಲ್ಲಿ ಸಾಕಷ್ಟು ಪ್ರಯೋಜನಗಳನ್ನು ಪಡೆಯುತ್ತಾರೆಂಬ ಭರವಸೆ ನನಗಿದೆ. ಆದರೆ ಹಣಕಾಸು ಸಚಿವರು ಸರಿಯಾಗಿ ತನಿಖೆ ಮಾಡದೆ ಈ ಮೂರು ನಿಕಾಯಗಳು ಪ್ರಸ್ಥಾಪಿಸಿದ ವರ್ಗೀಕರಣವನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದಾರೆ.

**ಮಾನ್ಯ ಸಭಾಧ್ಯಕ್ಷರು:** ಡಾ. ಅಂಬೇಡ್ಕರ್ ಅವರೇ ನೀವು ನಿಮ್ಮ ಮಾತನ್ನು ಮುಗಿಸಬೇಕು. ಬೇರೆಯವರು ಮಾತನಾಡುವವರಿದ್ದಾರೆ.

**ಡಾ. ಬಿ.ಆರ್. ಅಂಬೇಡ್ಕರ್:** ಆಗಲಿ ಮಾನ್ಯರೇ, ನಾನು ಒಂದು ಅಥವಾ ಎರಡು ನಿಮಿಷಕ್ಕಿಂತ ಹೆಚ್ಚು ತೆಗೆದುಕೊಳ್ಳುವುದಿಲ್ಲ. ಯುನೈಟೆಡ್ ಬ್ಯಾಂಕಿನ ವಿಷಯದಲ್ಲಿ ದುಡಿಯುವ ವರ್ಗಗಳಿಗೆ ನಿಜಕ್ಕೂ ಪ್ರತಿಕೂಲವಾಗಿ ಪರಿಣಾಮಬೀರುವ ವಿನಾಯಿತಿಯಾಗಿರುವಂಥ ಒಂದು ವಿನಾಯಿತಿಯನ್ನು ನೀಡಿರುವಂತಹ ನನ್ನ ಸ್ನೇಹಿತರು ದುಡಿಯುವ ವರ್ಗಗಳ ಪರವಾಗಿ ಪಕ್ಷಪಾತವನ್ನು ತೋರುವ ಹಾಗೇ ಇಂಪೀರಿಯಲ್ ಬ್ಯಾಂಕಿನ ಒಂದು ವಿಭಿನ್ನ ವರ್ಗವನ್ನು ಏಕೆ ಮಾಡಲಿಲ್ಲವೆಂಬುದು ನನಗೆ ತಿಳಿಯುತ್ತಿಲ್ಲ. ಖಂಡಿತವಾಗಿ ಒಂದು ಇನ್ನೊಂದಕ್ಕೆ ಸರಿಸಮನಾಗಿರಬೇಕಾಗಿತ್ತು. ಆಗ ವರ್ಗೀಕರಣದ ಈ ಕಾರಣದಿಂದ ಮತ್ತೊಂದು ಸಂಗತಿ ಎದುರಾಗುತ್ತದೆ. ಈ ಮೂರು ಸಂಸ್ಥೆಗಳು ಸೇನ್ ಸಮಿತಿ, ಶಾಸ್ತ್ರಿ ಸಮಿತಿ ಮತ್ತು ಅಪೀಲು ನ್ಯಾಯಾಧಿಕರಣ ಇವುಗಳಲ್ಲಿ ಯಾವುದೊಂದೂ ಸಹ ಈ ದೇಶದಲ್ಲಿ ಭಾರತೀಯ ಬ್ಯಾಂಕುಗಳು ಮತ್ತು ವಿದೇಶಿ ಬ್ಯಾಂಕುಗಳ ನಡುವೆ ವ್ಯತ್ಯಾಸ ಕಲ್ಪಿಸಬೇಕಾದ ಅಗತ್ಯವಿದೆಯೆಂದು ಭಾವಿಸಿಲ್ಲ. ವಿದೇಶಿ ಬ್ಯಾಂಕುಗಳೆಂದರೆ ನನ್ನ ದೃಷ್ಟಿಯಲ್ಲಿ ವಿನಿಮಯ ಬ್ಯಾಂಕುಗಳು. ಶಾಸ್ತ್ರಿ ಐತೀರ್ಪಿನಿಂದ ನನಗೆ ಸೇನ್‌ಸಮಿತಿ, ಶಾಸ್ತ್ರಿ ಸಮಿತಿ ಮತ್ತು ಅಪೀಲು ನ್ಯಾಯಾಧಿಕರಣದ ಮುಂದೆ ಇರುವ ವಿವಾದಗಳಲ್ಲಿ ಈ ವಿನಿಮಯ ಬ್ಯಾಂಕುಗಳಲ್ಲಿ ಹನ್ನೆರಡು ಬ್ಯಾಂಕುಗಳು ಪಕ್ಷಕಾರರಾಗಿರುವುದು ತಿಳಿದುಬಂದಿದೆ. ಮಾನ್ಯರೇ, ಈಗ ಶಾಸ್ತ್ರಿ ಐತೀರ್ಪಿನಗನುಸಾರ ಈ ಪ್ರತಿಯೊಂದು ಬ್ಯಾಂಕುಗಳೂ ಠೇವಣಿಗಳ ರೂಪದಲ್ಲಿ ೫೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ಹೊಂದಿದ್ದು ಇದರ ಬಹುಪಾಲನ್ನು ದೇಶದಲ್ಲಿರುವ ಠೇವಣಿದಾರರಿಂದ ಸಂಗ್ರಹಿಸಲಾಗಿರುತ್ತದೆ. ಈ ವಿದೇಶಿ ಅಥವಾ ವಿನಿಮಯ ಬ್ಯಾಂಕುಗಳು ಮುಖ್ಯವಾಗಿ ವಿದೇಶಿ ಹೂಡಿಕೆದಾರರು ಅಥವಾ ವಿದೇಶಿ ವಾಣಿಜ್ಯಕ್ಕೆ ನೆರವು ನೀಡುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಪ್ರತಿಯೊಬ್ಬರಿಗೂ ತಿಳಿದಿರುವ ಸಂಗತಿಯಾಗಿದೆ.

ನನ್ನ ಅಭಿಪ್ರಾಯದಲ್ಲಿ ದೇಶೀಯ ಕೈಗಾರಿಕೆ ಅಥವಾ ದೇಶೀಯ ವ್ಯಾಪಾರಕ್ಕೆ ಅವು ಬಹು ಅಲ್ಪ ಪ್ರಮಾಣದ ಕೊಡುಗೆ ನೀಡುತ್ತಿವೆ. ಇದು ಮೊದಲನೆಯ ಅಂಶ. ಎರಡನೆಯದಾಗಿ ಅವುಗಳಲ್ಲಿ ಬಹುದೊಡ್ಡ ಪ್ರಮಾಣದ ತಮ್ಮ ಸಿಬ್ಬಂದಿಯನ್ನು ಹೊರಗಿನಿಂದ ನೇಮಿಸಿಕೊಂಡಿರುತ್ತಾರೆ ಮತ್ತು ಅವರು ನಿಯೋಜಿಸಿಕೊಂಡಿರುವ ಭಾರತೀಯರು ಕೆಳಹಂತದ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಅವರು ನಿಯೋಜಿಸಿಕೊಂಡಿರುವ ಯುರೋಪಿಯನ್ನರಿಗೆ ಅತ್ಯುತ್ತಮವಾದ ಸಂಬಳ ನೀಡುತ್ತಿರುವರು. ಭಾರತೀಯ ಬ್ಯಾಂಕುಗಳು ಮತ್ತು ವಿದೇಶಿ ಬ್ಯಾಂಕುಗಳ ನಡುವೆ ಭೇದ ಕಲ್ಪಿಸುವುದು ಮತ್ತು ವಿದೇಶಿ ನೌಕರರುಗಳಿಗೇ ದೊರೆಯುತ್ತಿರುವ ಎಲ್ಲಾ ಪ್ರಯೋಜನದಲ್ಲಿ ಭಾರತೀಯರು ಸಹ ಸ್ವಲ್ಪ ಮಟ್ಟಿನ ಪ್ರಯೋಜನ ಪಡೆಯುವಂತೆ ಮಾಡುವುದು ಸಮರ್ಥನೀಯವಾಗಿರುವುದಿಲ್ಲವೇ ಎಂದು ನಾನು ಕೇಳಬಯಸುತ್ತೇನೆ. ಮಾನ್ಯರೇ, ಇಲ್ಲಿಗೆ ನನ್ನ ಭಾಷಣ ಮುಕ್ತಾಯವಾಯಿತು.

◆

# ೫೦

# ೧೯೫೩ನೇ ವರ್ಷಕ್ಕೆ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಆಯುಕ್ತರ ವರದಿ

*__ಡಾ. ಬಿ.ಆರ್. ಅಂಬೇಡ್ಕರ್ (ಬಾಂಬೆ):__ ಮಾನ್ಯ ಉಪಸಭಾಪತಿಗಳೇ ಇದು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯುಕ್ತರು ರಾಷ್ಟ್ರಪತಿಯವರಿಗೆ ಸಲ್ಲಿಸಿದ ಮೂರನೇ ವರದಿ. ವರದಿಯನ್ನು ಪರಿಶೀಲಿಸಿದರೆ ಯಾರಿಗೇ ಆಗಲಿ ಪ್ರಾರಂಭದಲ್ಲಿ ಆಯುಕ್ತರು, ತಾವು ತಮ್ಮ ವರದಿಯಲ್ಲಿ ಚರ್ಚಿಸಿರುವ ವಿವಿಧ ವಿಷಯಗಳನ್ನು ಕುರಿತು ಕ್ರಮ ಕೈಗೊಂಡಿಲ್ಲವೆಂದು ತಮ್ಮನ್ನು ಸಂಸತ್ ಸದಸ್ಯರು ಆಪಾದಿಸಿರುವರೆಂದು ಅವರ ವಿರುದ್ಧ ದೂರುವುದನ್ನು ಕಾಣಬಹುದು. ಅವರು ತಾವು ಕಾರ್ಯಕಾರಿ ಪ್ರಾಧಿಕಾರವಾಗಿರುವುದಿಲ್ಲ ತನ್ನ ಕರ್ತವ್ಯ ಕೇವಲ ವರದಿ ಮಾಡುವುದಾಗಿರುತ್ತದೆಯೆಂಬುದನ್ನು ಸಂಸತ್ ಸದಸ್ಯರು ಮರೆತಿರುವರೆಂದು ಹೇಳಿರುವರು. ಅವರು ನೀಡಿದ ಯಾವುದೇ ರೀತಿಯ ಸಲಹಾತ್ಮಕ ಶಿಫಾರಸುಗಳನ್ನು ಕಾರ್ಯಕಾರಿ ಇಲಾಖೆಗಳು ಕಾರ್ಯರೂಪಕ್ಕೆ ತರಬೇಕಾಗಿರುತ್ತದೆ. ಅವರ ಅಭಿಪ್ರಾಯಗಳು ಬಹಳ ಸಮರ್ಥನೀಯವಾಗಿರುತ್ತವೆಂಬುದು ನನ್ನ ಅಭಿಪ್ರಾಯ. ಅವರು ಕಾರ್ಯನಿರ್ವಾಹಕ ಪ್ರಾಧಿಕಾರವಲ್ಲ ಮತ್ತು ಯಾವ ಕ್ರಮ ಕೈಗೊಂಡಿದೆಯೆಂಬುದನ್ನು ಕುರಿತು ಟೀಕೆ ಮಾಡುವ ಉದ್ದೇಶಕ್ಕಾಗಿ ಟೀಕೆಯನ್ನು ಗೃಹ ಸಚಿವರು ಅಥವಾ ಭಾರತ ಸರ್ಕಾರದ ಇತರ ಇಲಾಖೆಗಳ ವಿರುದ್ಧ ಮಾಡಬೇಕು. ಆದರೆ ಮಾನ್ಯರೇ, ಆಯುಕ್ತರು ಮಾಡಿದ ಟೀಕೆಯ ಕಾನೂನು ಬದ್ಧತೆಯನ್ನು ಯಾರೇ ಆಗಲಿ ಒಪ್ಪಿಕೊಳ್ಳುವಾಗ ಆಯುಕ್ತರು ತಮ್ಮ ವರದಿಯನ್ನು ಸಿದ್ಧಪಡಿಸಿ ಮಂಡಿಸುವ ವಿಷಯಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಕಾನೂನು ಬದ್ಧವಾಗಿ ಯಾರೇ ಆಗಲಿ ಟೀಕೆ ಮಾಡುವುದಕ್ಕೆ ಅವಕಾಶವಿದೆಯೆಂದು ಭಾವಿಸುತ್ತೇನೆ. ದೂರುಗಳನ್ನು ಕುರಿತ ಅವರ ಅಧ್ಯಾಯವನ್ನು ನಾನು ಪರಿಶೀಲಿಸುವಾಗ ಅದು ಆ ಪುಸ್ತಕದಲ್ಲಿನ ಬಹಳ ಆಸಕ್ತಿದಾಯಕ ಮತ್ತು ಬೋಧಪ್ರದವಾದ ಅಧ್ಯಾಯವಾಗಬಹುದಾಗಿತ್ತೆಂದು ಕಂಡು ಬಂದಿತು. ವಿಶೇಷವಾಗಿ ಪರಿಶಿಷ್ಟ ಜಾತಿಗಳ ಜನರು ಅವರ ನಡುವೆಯೇ ವಾಸಿಸುತ್ತಿರುವ ಹಳ್ಳಿಗರಿಂದಲೇ ಎಲ್ಲ ವಿಧವಾದ ಹಿಂಸೆ, ದಬ್ಬಾಳಿಕೆ ಮತ್ತು ಅವಮಾನಗಳಿಂದ ಬಾಧಿತರಾಗಿರುವ ಸಂಗತಿ ನಮಗೆಲ್ಲರಿತೂ ತಿಳಿದಿರುವಂಥದ್ದುದೇ ಆಗಿದೆ. ಬಹುಪಾಲು ಪ್ರತಿ ದಿನವೂ ಅವರು ಯಾವ ವಿಧವಾದ ಹಿಂಸೆ, ಅಪಮಾನ ಮತ್ತು ದಬ್ಬಾಳಿಕೆಗೆ ಒಳಗಾಗುತ್ತಾರೆಂಬುದನ್ನು ತಿಳಿದುಕೊಳ್ಳುವುದು ನಿಸ್ಸಂಶಯವಾಗಿ ಬಹುದೊಡ್ಡ ಆಸಕ್ತಿದಾಯಕ ವಿಷಯವಾಗುತ್ತಿತ್ತು. ಅಂಥ ದೂರುಗಳನ್ನು ದಾಖಲಿಸಿದ್ದ ಪಕ್ಷದಲ್ಲಿ ಆಯುಕ್ತರ ವರದಿ ಸಮರ್ಪಕವಾದ ವರದಿಯಾಗಿರುತ್ತೆಂಬುದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ಆದರೆ ಆಯುಕ್ತರು ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ಅತ್ಯಂತ ಪ್ರಾಮುಖ್ಯವನ್ನು ಹೊಂದಿರುವ ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಮೌನವಹಿಸಿರುತ್ತಾರೆ. ನಿದರ್ಶನಾರ್ಥವಾಗಿ ಹೇಳುವುದಾದರೆ ನನಗೆ ಬಂದಿರುವ ದೂರುಗಳಿಗಿಂತ ಬಹಳಷ್ಟು

---

* ಸಂಸದೀಯ ಚರ್ಚೆಗಳು ಸಂ. ೭ಎ, (R.S.), ೬ನೇ ಸೆಪ್ಟೆಂಬರ್ ೧೯೫೪, ಪು. ೧೪೪೭–೭೫.

ಹೆಚ್ಚಿನ ಸಂಖ್ಯೆಯ ದೂರುಗಳು ಆಯುಕ್ತರಿಗೆ ಹೋಗಿರುತ್ತವೆಂಬುದು ನನ್ನ ಖಚಿತವಾದ ನಂಬಿಕೆಯಾಗಿದೆ; ಅವು ಒಂದು ಸಾವಿರಕ್ಕಿಂತ ಕಡಿಮೆಯಿರಲು ಸಾಧ್ಯವಿಲ್ಲ ಅಥವಾ ನಿಸ್ಸಂಶಯವಾಗಿ ಐನೂರರಷ್ಟಿರುತ್ತವೆ. ಆದರೆ ನನ್ನ ಗಮನಕ್ಕೆ ಬಂದ ಒಂದು ಅಥವಾ ಎರಡನ್ನು ಮಾತ್ರ ಉಲ್ಲೇಖಿಸಬಯಸುತ್ತೇನೆ. ಬಹು ವಿಶ್ವಾಸಾರ್ಹ ಮೂಲಗಳಿಂದ ನಾನು ಕೇಳಿದಂಥ ಇತ್ತೀಚಿಗೆ ನಡೆದ ಒಂದು ಘಟನೆಯೆಂದರೆ ರಾಜಸ್ತಾನದ ಮೂವತ್ತು ಪರಿಶಿಷ್ಟ ಜಾತಿಯ ಜನರು ಡಕಾಯಿತರೆಂದು ಹೇಳಲಾಗುವವರಿಂದ ಗುಂಡಿಟ್ಟು ಕೊಲ್ಲಲ್ಪಟ್ಟರು. ವಾಸ್ತವ ಸಂಗತಿಯೇನೆಂದರೆ ರಜಪೂತರು ಮತ್ತು ಉಚ್ಚ ಜಾತಿಯ ಹಿಂದುಗಳಿಗೆ ರಾಜಸ್ತಾನದ ಪರಿಶಿಷ್ಟ ಜಾತಿಗಳವರು ಇತರ ಹಿಂದುಗಳೊಂದಿಗೆ ಸಮಾನ ಸ್ಥಾನವನ್ನು ನೀಡುವಂಥ ಮೂಲಭೂತ ಹಕ್ಕುಗಳನ್ನು ಅನುಭವಿಸುವುದು ಇಷ್ಟವಿರಲಿಲ್ಲ. ಈ ಮೂಲಭೂತ ಹಕ್ಕುಗಳನ್ನು ಬಳಸುವ ವಿಷಯದಲ್ಲಿ ಅವರನ್ನು ಹೆದರಿಸುವುದಕ್ಕಾಗಿ ಮತ್ತು ಅವರನ್ನು ದುರ್ಬಲಗೊಳಿಸುವುದಕ್ಕಾಗಿ ಉಚ್ಚ ಜಾತಿಯ ಹಿಂದೂಗಳು ತಾವೇ ಡಕಾಯಿಂತರ ತಂಡಗಳನ್ನು ಕಟ್ಟಿಕೊಂಡು, ಮೂಲಭೂತ ಹಕ್ಕುಗಳನ್ನು ಬಳಸುವ ಮತ್ತು ಅವುಗಳ ಪ್ರಯೋಜನ ಪಡೆಯಲು ಯತ್ನಿಸಿದ ಚಮ್ಮಾರರನ್ನು ಗುಂಡಿಟ್ಟು ಕೊಂದರು. ಅವರಿಗೆ ರಕ್ಷಣೆ ಒದಗಿಸುವುದಕ್ಕಾಗಿ ಪೋಲಿಸ್ ತಂಡಗಳನ್ನು ಕಳುಹಿಸಲಾಯಿತು. ಆದರೆ ನನಗೆ ಬಂದಿರುವ ಮಾಹಿತಿ ಪ್ರಕಾರ ಪೊಲೀಸರು ಡಕಾಯತರೊಂದಿಗೆ ಷಾಮೀಲಾದರು. ಪೊಲೀಸರು ಹೊಂದಿದ್ದ ಬಂದೂಕುಗಳ ಅರ್ಧದಷ್ಟು ಸಂಖ್ಯೆಯ ಬಂದೂಕುಗಳನ್ನು ಡಕಾಯತರಿಗೆ ನೀಡಲಾಯಿತು ಆದರೆ ಬಂದೂಕುಗಳನ್ನು ಡಕಾಯತರು ಪೊಲೀಸರಿಂದ ಕಸಿದುಕೊಂಡರೆಂದು ವರದಿ ಮಾಡಲಾಯಿತು. ಕೇವಲ ಅರ್ಧದಷ್ಟನ್ನು ಮಾತ್ರ ಯಾವುದೇ ಪರಿಣಾಮವುಂಟಾಗದಂತೆ ಬಹುಶಃ ಗಾಳಿಯಲ್ಲಿ ಗುಂಡು ಹಾರಿಸಲಾಯಿತು. ಇದರ ಪರಿಣಾಮವಾಗಿ ಡಕಾಯಿತರು ಆರಾಮವಾಗಿ ಬಚಾವಾದರು. ಈ ಡಕಾಯಿತರು ವಾಸ್ತವವಾಗಿ ಬೇರೆ ಯಾರೂ ಅಲ್ಲ, ಅಮೇರಿಕದ ದಕ್ಷಿಣ ರಾಜ್ಯಗಳಲ್ಲಿ ಕು–ಕ್ಲುಕ್ಸ್–ಕ್ಲಾನ್ ಎಂಬ ಹೆಸರಿನಿಂದ ಪ್ರಚುರವಾಗಿರುವ ಸಿವಿಲ್ ಯುದ್ಧದ ತರುವಾಯ ನೀಗ್ರೋಗಳಿಗೆ ನೀಡಲಾದ ಸಮಾನತೆಯ ಹಕ್ಕನ್ನು ಅವರು ಚಲಾಯಿಸಲು ಯತ್ನಿಸಿದರೆ ಅವರನ್ನು ಕೊಲ್ಲುತ್ತಿದ್ದಂಥ ಬಿಳಿ ಜನರ ತಂಡದಂತಹುದೇ ಒಂದು ಗುಂಪು. ಆಯುಕ್ತರ ವರದಿಯಲ್ಲಿ ಈ ಕೃತ್ಯದ ಬಗ್ಗೆ ಯಾವುದೇ ಉಲ್ಲೇಖವಿರುವುದು ನನ್ನ ಗಮನಕ್ಕೆ ಬರಲಿಲ್ಲ.

ನಾನು ಬೊಂಬಾಯಿಯಲ್ಲಿ ಜರುಗಿದ ಇನ್ನೊಂದು ಘಟನೆಯನ್ನು ಉಲ್ಲೇಖಿಸುತ್ತೇನೆ. ಒಂದು ಹಳ್ಳಿಯಲ್ಲಿ ವಾಸಿಸುತ್ತಿದ್ದ ಒಬ್ಬ ಭಂಗಿಯನ್ನು ಹಿಂದೂಗಳು ಅವನು ಹಳ್ಳಿಗೆ ಯಾವುದೋ ಒಂದು ರೋಗವನ್ನು ಹೊತ್ತು ತಂದಿದ್ದಾನೆಂದು ಭಾವಿಸಿದರು. ಅವನು ಹೊಂದಿರುವ ಈ ಮಾರಣಾಂತಿಕ ರೋಗದ ಪರಿಣಾಮವು ಗ್ರಾಮದಲ್ಲಿ ಹರಡಿದ್ದಂಥ ಅದೇ ರೋಗದ ಕಾರಣದಿಂದ ಬಂದಿರುವುದೆಂದು ಅವರು ಭಾವಿಸಿದರು. ಅವರು ಅವನನ್ನು ಹಿಡಿದುಕೊಂಡು ಅವನಿಗೆ ಉರಿಯುವ ಬೆಂಕಿಯನ್ನು ತಲೆಮೇಲೆ ಹೊತ್ತುಕೊಂಡು ಊರಿನ ಸುತ್ತ ನಡೆದಾಡುವಂತೆ ಹೇಳಿದರು. ಇರರಿಂದ ರೋಗವನ್ನು ತಂದಿರುವಂಥ ದುಷ್ಟ ಶಕ್ತಿಗಳು ಓಡಿ ಹೋಗುತ್ತವೆ. ಅದೃಷ್ಟವಷಾತ್ ಅವರು ಅವನು ತಲೆಗೆ ಮುಂಡಾಸು ಧರಿಸಿದ್ದನೆಂಬುದನ್ನು ಮರೆತಿದ್ದರು ಮತ್ತು ಅವನೂ ತನ್ನ ಮುಂಡಾಸನ್ನು ತೆಗೆಯುವುದನ್ನು ಮರೆತು ಹೋಗಿದ್ದನು. ಉರಿಯುತ್ತಿರುವ ಬೆಂಕಿ ಮತ್ತು ಬೆಂಕಿಯನ್ನು ಹಚ್ಚಿಟ್ಟಿದ್ದಂಥ ಪಾತ್ರೆ (ಮಡಕೆ)ಯು ಬಹಳ ಬಿಸಿಯಿತ್ತು. ಇದರಿಂದ ಅಕ್ಷರಶಃ ಅವನ ಅರ್ಧ ತಲೆಬುರುಡೆ ಬೆಂದು ಹೋಯಿತು. ಆಯೋಗದ ವರದಿಯಲ್ಲಿ ಈ ಘಟನೆಯನ್ನು ಕೂಡ ಉಲ್ಲೇಖಿಸಿರುವುದು ನನಗೆ ಕಂಡುಬರಲಿಲ್ಲ. ಹೈದರಾಬಾದ್ ರಾಜ್ಯದ ಔರಂಗಬಾದ್ ಜಿಲ್ಲೆಯಲ್ಲಿ ನಡೆದಂಥ, ನನಗೆ ತಿಳಿದುಬಂದ ಇನ್ನೂ ಒಂದು ಪ್ರಕರಣವೆಂದರೆ ಒಬ್ಬ ಪರಿಶಿಷ್ಟ ಜಾತಿಯ ಮಹಿಳೆಯನ್ನು ಊರಿನವರು

ಆ ಊರಿನಲ್ಲಿ ಹರಡುತ್ತಿದ್ದ ಒಂದು ಸಾಂಕ್ರಾಮಿಕ ರೋಗಕ್ಕೆ ಕಾರಣಳಾಗಿದ್ದ ಮಾಟಗಾತಿಯೆಂದು ತೀರ್ಮಾನಿಸಿದರು. ಅವರು ಅವಳನ್ನು ಪ್ರಶ್ನಿಸಿದರು. ಅವಳು ಪ್ರಯಾಸಪಟ್ಟು ತನ್ನ ಮುಗ್ಧತೆಯನ್ನು ರುಜುವಾತು ಪಡಿಸಬೇಕಿತ್ತು; ಆದರೆ ಹಾಗೆ ರುಜುವಾತುಪಡಿಸಲು ಯಾವುದೇ ಮಾರ್ಗವಿರಲಿಲ್ಲ. ಪರಿಣಾಮವಾಗಿ ಅವಳನ್ನು ತೀವ್ರವಾಗಿ ಬಡಿಯಲಾಯಿತು ಮಾತ್ರವಲ್ಲ ಅವಳ ಮನೆಯನ್ನು ಸುಟ್ಟು ಹಾಕಲಾಯಿತು. ಹಾಗೂ ಅವಳ ಕುಟುಂಬದ ಸದಸ್ಯರು ತೀವ್ರವಾದ ಅಪಮಾನಕ್ಕೆ ಗುರಿಯಾದರು. ಈ ಬಗ್ಗೆಯೂ ಕೂಡ ಆಯುಕ್ತರ ವರದಿಯಲ್ಲಿ ಯಾವುದೇ ಉಲ್ಲೇಖವಿರುವುದು ನನಗೆ ಕಂಡು ಬರಲಿಲ್ಲ.

ಒಳ್ಳೆಯ ಕಾರಣಕ್ಕಾಗಿ ಅಥವಾ ಕೆಟ್ಟ ಕಾರಣಕ್ಕಾಗಿ ನನಗೆ ಮತ್ತು ಸರ್ಕಾರಿ ಅಧಿಕಾರಿಗಳಿಗೆ ಪರಿಶಿಷ್ಟ ಜಾತಿಯ ಜನರು ತಮ್ಮ ದೂರುಗಳನ್ನು ಸಲ್ಲಿಸುತ್ತಾರೆ ಮತ್ತು ನಾನೂ ಸಹ ಈ ದಬ್ಬಾಳಿಕೆ ಮತ್ತು ಅಪಮಾನಗಳ ದೀರ್ಘಪಟ್ಟಿಯನ್ನು ಹೊಂದಿರುತ್ತೇನೆ ಎಂಬುದನ್ನು ನನ್ನ ಗೌರವಾನ್ವಿತ ಸ್ನೇಹಿತರಾದ ಗೃಹಸಚಿವರು ಒಪ್ಪಿಕೊಳ್ಳುತ್ತಾರೆಂದು ನಂಬುತ್ತೇನೆ.

**ಬೆಳಿಗ್ಗೆ ೧೧-೦೦ ಗಂಟೆ**

ಈ ಸಾರ್ವಜನಿಕ ದಸ್ತಾವೇಜಿನಲ್ಲಿ ಈ ದೂರುಗಳ ಕೆಲವು ಉಲ್ಲೇಖಗಳಿರಬೇಕಾದುದು ಸೂಕ್ತವಾದುದೆಂದು ನಾನು ಭಾವಿಸುತ್ತೇನೆ. ಆದರೆ ಅಂಥ ಯಾವುದೇ ಉಲ್ಲೇಖಗಳೂ ಇಲ್ಲ. ದೂರುಗಳಿಗೆ ಸಂಬಂಧಿಸಿದಂತೆ ಆಯುಕ್ತರ ಈ ವರದಿಯು ತಿದ್ದಿ ಬರೆಯಲ್ಪಟ್ಟ ಅಥವಾ ಬರೆಸಲ್ಪಟ್ಟ ದಸ್ತಾವೇಜಾಗಿರುತ್ತದೆಯೇ ಎಂದು ನಾನು ಆಶ್ಚರ್ಯಚಕಿತನಾಗಿರುತ್ತೇನೆ. ಆಯುಕ್ತರು, ಈ ಕಛೇರಿಯನ್ನು ಸ್ಥಾಪಿಸುವುದರ ಹಿಂದಿರುವ ಅತ್ಯಂತ ಪ್ರಮುಖವಾದ ಉದ್ದೇಶವನ್ನು ಸಂಪೂರ್ಣವಾಗಿ ಮರೆತಿರುವಂತೆ ಕಾಣುತ್ತದೆ. ಹಿಂದೂ ಜಾತಿಗಳ ಜನರು ಪರಿಶಿಷ್ಟ ಜಾತಿಯವರಿಗೆ ತೋರಿಸುವ ಕೀಳು ವರ್ತನೆಯನ್ನು ಎತ್ತಿ ತೋರಿಸುವ ಮೂಲಕ ಸಾರ್ವಜನಿಕರ ಪ್ರಜ್ಞೆಯನ್ನು ಜಾಗ್ರತಗೊಳಿಸಿ ಅದರಿಂದ ಜಾಗ್ರತರಾದ ಜನರು ಸಾರ್ವಜನಿಕರ ಮುಂದೆ ಬಂದು ಅವರಿಗೆ ಇದು ನಾಗರಿಕ ಜನರಿಗೆ ಶೋಭೆ ತರುವಂತಹ ವರ್ತನೆಯಾಗಿರುವುದಿಲ್ಲವೆಂದು ತಿಳಿಸಿ ಹೇಳುವುದು ಇದರ ಉದ್ದೇಶವಾಗಿರುತ್ತದೆ. ಆದರೆ ನೀವು ಈ ಸಂಗತಿಗಳನ್ನು ಹೇಳದಿದ್ದರೆ ಅಥವಾ ಕಾರಣಾಂತರದಿಂದ ಅವುಗಳನ್ನು ಮುಚ್ಚಿಹಾಕಿದರೆ ಈ ಕಛೇರಿಯನ್ನು ಸ್ಥಾಪಿಸಿರುವ ಪ್ರಮುಖ ಉದ್ದೇಶ ಅಥವಾ ಧ್ಯೇಯವು ಸಂಪೂರ್ಣವಾಗಿ ವಿಫಲವಾಗುತ್ತದೆ. ಆಯುಕ್ತರು ಮುಂದೆ ಸಿದ್ಧಪಡಿಸಬಹುದಾದಂಥ ವರದಿಯಲ್ಲಿ ಈ ಸಂಗತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಶೋಷಿತರು ಅಂದರೆ ಅಸ್ಪೃಶ್ಯರು ಅವರಿಗೆ ಸಲ್ಲಿಸುವ ದೂರುಗಳನ್ನು ಅವು ಇರುವಂತೆಯೇ ವರದಿಯಲ್ಲಿ ಮಂಡಿಸುವುದಕ್ಕೆ ಹಿಂಜರಿಯುವುದಿಲ್ಲವೆಂಬ ಭರವಸೆ ಹೊಂದಿರುತ್ತೇನೆ. ಆಯುಕ್ತರು ನಮಗೆ ಸಲ್ಲಿಸಿದ ವರದಿಯ ಸ್ವರೂಪ ಕುರಿತಂತೆ ಇದು ನನ್ನ ಮೊದಲನೆ ಟೀಕೆ.

ಆಯುಕ್ತರ ಪರಿಶೀಲನೆಗಾಗಿ ಅವರ ಗಮನಕ್ಕೆ ತರಲಾಗಿರುವಂಥ ಪ್ರಕರಣಗಳಲ್ಲಿ ಅನೇಕ ಕಾನೂನು ಉಲ್ಲಂಘನೆಯ ಪ್ರಕರಣಗಳಿರುತ್ತವೆ ಮತ್ತು ಪರಿಶಿಷ್ಟ ಜಾತಿಗಳ ಜನರ ಮೇಲೆ ಕೊನೆಗಾಣದ ಕ್ರೌರ್ಯ ಮತ್ತು ದಬ್ಬಾಳಿಕೆ ಕೃತ್ಯಗಳು ನಡೆದಿರುತ್ತವೆಂಬುದು ಸುಸ್ಪಷ್ಟವಾದುದು. ಈ ವಿಷಯವು ಗೃಹ ಮಂತ್ರಿಗಳ ಖಾತೆಯಲ್ಲಿ ಬರುವ ವಿಷಯವಾಗಿರುತ್ತದೆಂದು ನಾನು ಭಾವಿಸುತ್ತೇನೆ. ಪರಿಶಿಷ್ಟ ಜಾತಿಗಳವರಿಗೆ ವಿಶೇಷವಾಗಿ ಯಾವ ಕಾನೂನುಗಳನ್ನು ಮತ್ತು ಇತರ ಎಲ್ಲಾ ಜನರಿಗೂ ಯಾವ ಸಾಮಾನ್ಯ ಕಾನೂನುಗಳನ್ನು ಯಾವ ರೀತಿ ರಚಿಸಲಾಗಿರುತ್ತದೆ ಮತ್ತು ಕಾನೂನು ಉಲ್ಲಂಘಿಸಿದಂಥ ಎಷ್ಟು ಜನರಿಗೆ ಯಾವ ರೀತಿ ಶಿಕ್ಷಿಸಲಾಗಿರುತ್ತದೆ? ಮಾನ್ಯರೇ, ಮಾನ್ಯ ಗೃಹಸಚಿವರು ಮೊದಲನೆಯ ದಿನದಂದು ವರದಿಯನ್ನು ಸದನದಲ್ಲಿ ಮಂಡಿಸಿದಾಗ

ನಾನು ದುರದೃಷ್ಟವಷಾತ್ ಸದನಕ್ಕೆ ಸ್ವಲ್ಪ ತಡವಾಗಿ ಬರಬೇಕಾಯಿತು. ಆದರೆ ನಾನು ಅವರ ಭಾಷಣದ ಕೊನೆಯಲ್ಲಿ ಅವರ ವಿಚಾರಗಳನ್ನು ಗ್ರಹಿಸಿದೆನು. ಅವರು ಮಾಡಿದ ಭಾಷಣದಿಂದ ನನ್ನ ಮೇಲೆ ಉಂಟಾದ ಪರಿಣಾಮವೇನೆಂದರೆ ಅವರು ಹೇಳಿದ್ದನ್ನು ಕೇವಲ ನಿರಾಂತಕ ಭಾವನೆಯಿಂದ ಹೇಳಿದರು. ಮಾತ್ರವಲ್ಲ ನಾನು ಹೀಗೆ ಹೇಳಿದರೆ ಅವರು ನನ್ನನ್ನು ಕ್ಷಮಿಸುತ್ತಾರೆಂದು ಭಾವಿಸಿಸುತ್ತೇನೆ. ಅವರು ಒಂದು ರೀತಿಯ ಔದಾಸೀನ್ಯದಿಂದ ಮಾತನಾಡಿದರು. ಅವರು ಕೇಳಿದರು. ಜನರನ್ನು ಕಾನೂನು ಕ್ರಮ ಕ್ಕೊಳಪಡಿಸುವುದರಿಂದಾಗುವ ಉಪಯೋಗವೇನು? ಜನ ಸತ್ಯಾಗ್ರಹ ಮಾಡಲು ಪ್ರಾರಂಭಿಸುತ್ತಾರೆ. ಜನ ಎಲ್ಲಿ ವಿಧವಾದ ಪ್ರಯತ್ನಗಳನ್ನು ಮಾಡಲಾರಂಭಿಸುತ್ತಾರೆ. ಆದ್ದರಿಂದ, ನಾವು ಕಾನೂನು ಸಮರ್ಥನೆಯೆಂದು ಕರೆಯಲಾಗುವುದನ್ನು ಅವಲಂಬಿಸಬಾರದು. ಇದೇ ಗೃಹಚಿವರ ಧೋರಣೆಯಾಗಿದ್ದ ಪಕ್ಷದಲ್ಲಿ ಆಗ ನಾವು ಏನನ್ನೂ ನಿರೀಕ್ಷಿಸಬಾರದು. ಪರಿಶಿಷ್ಟ ಜಾತಿಗಳ ಜನರ ವಿರುದ್ಧ ಸಾವಿರಾರು ವರ್ಷಗಳಿಂದ ಅನುಸರಿಸಿಕೊಂಡು ಬರುತ್ತಿರುವ ಕಾನೂನುರಾಹಿತ್ಯತೆಯೇ ಕಾನೂನುಬದ್ಧ ಎನ್ನುವುದಾದರೆ ಮತ್ತು ಕಾನೂನು ಬದ್ಧವಾಗಿ ಮುಂದುವರಿಯಬೇಕೆನ್ನುವುದಾದರೆ ಪರಿಶಿಷ್ಟ ಜಾತಿಗಳ ಜನರು ಕಾನೂನುಭಂಜಕರನ್ನು ಕಾನೂನು ಪ್ರಕಾರ ಶಿಕ್ಷಿಸಿ ಎಂದು ಕೋರುವುದಕ್ಕೆ ಮುಂದೆ ಬರುವುದು ಅಸಾಧ್ಯ. ಆಯುಕ್ತರು, ಪರಿಶಿಷ್ಟ ಜಾತಿಗಳ ಜನರು ಅವರನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವ ಹಿಂದೂ ಜಾತಿಗಳ ಜನರಿಗೆ ಆರ್ಥಿಕವಾಗಿ ಬಹಳ ಅಧೀನವಾಗಿರುವರೆಂದು ಹೇಳಿರುವುದರಿಂದ ಅವರು ತಮ್ಮ ಆರ್ಥಿಕ ಜೀವನೋಪಾಯಕ್ಕಾಗಿ ಯಾವ ಜನರ ಮೇಲೆ ಅವಲಂಬಿತರಾಗಿರುವರೋ ಅವರನ್ನು ಪ್ರಶ್ನಿಸಲು ಮುಂದೆ ಬರುವುದಿಲ್ಲ.

ಆಯುಕ್ತರು ಮೊಟ್ಟ ಮೊದಲಿನಿಂದಲೂ ಹೇಳುತ್ತಾ ಬಂದಿರುವ ಒಂದು ವಿಚಾರವಿದೆ. ಅದು ಅವರ ಮೊದಲನೆಯ ವರದಿಯಲ್ಲಿ ಇತ್ತು. ಅದು ಅವರ ಎರಡನೆಯ ವರದಿಯಲ್ಲೂ ಪುನರಾವರ್ತನೆಯಾಯಿತು ಮತ್ತು ಅದು ಅವರ ಮೂರನೇ ವರದಿಯಲ್ಲೂ ಮತ್ತೆ ಪುನರಾವರ್ತನೆಯಾಗಿದೆ. ಆ ಸಂಗತಿಯೇನೆಂದರೆ ಪರಿಶಿಷ್ಟ ಜಾತಿಗಳ ಜನರು ತಮ್ಮ ಹಕ್ಕುಗಳನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಸ್ವಾವಲಂಬಿಗಳಾಗುವುದರಿಂದ ಪ್ರಯೋಜನವಿಲ್ಲ. ಅವರು ತಮ್ಮನ್ನು ದಮನಿಸಿದವರ ವಿರುದ್ಧ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿರುವುದಿಲ್ಲ ಅಥವಾ ಅವರನ್ನು ದಮನಿಸುವವರ ವಿರುದ್ಧ ಕಾನೂನುಕ್ರಮ ಜರುಗಿಸುವ ದಾರಿಗಳೂ ಅವರಿಗೆ ತಿಳಿದಿರುವುದಿಲ್ಲ.

ಆಯುಕ್ತರು ಹೆಚ್ಚು ಪ್ರಾಮುಖ್ಯವನ್ನು ಕೊಟ್ಟಂತೆ ಕಾಣುತ್ತಿಲ್ಲದಿರುವ ಹಾಗೂ ನನ್ನ ಇಪ್ಪತ್ತು ವರ್ಷಗಳ ಅನುಭವದಿಂದ ಚೆನ್ನಾಗಿ ಗೊತ್ತಿರುವಂಥ ಇನ್ನೊಂದು ಸಂಗತಿಯೇನೆಂದರೆ, ಬಹಳಷ್ಟು ಪ್ರಕರಣಗಳಲ್ಲಿ ಪೊಲೀಸ್ ಪಡೆಯು ಹಿಂದೂ ಜಾತಿಗಳ ಜನರೊಂದಿಗೆ ಷಾಮೀಲಾಗಿರುತ್ತದೆ. ಶೇಕಡಾ ತೊಂಬತ್ತೊಂಬತ್ತರಷ್ಟು ಪೊಲೀಸ್ ಪಡೆ ಹಿಂದೂ ಜಾತಿಗಳ ಜನರಿಂದ ಕೂಡಿದೆ. ಬಹಳ ಸಣ್ಣ ಪ್ರಮಾಣದಲ್ಲಿ ಮಾತ್ರ ಪರಿಶಿಷ್ಟ ಜಾತಿಗಳ ಜನರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಆದರೆ ಇದು ಪೊಲೀಸ್ ಸಿಪಾಯಿಗಳ ಹುದ್ದೆಗೆ ಮಾತ್ರ. ಅವರಲ್ಲಿ ಯಾರೂ ಅಧಿಕಾರಿಗಳಿರುವುದಿಲ್ಲ. ಪರಿಣಾಮವಾಗಿ ಉನ್ನತ ದರ್ಜೆಯ ಪೊಲೀಸ್ ಸಿಬ್ಬಂದಿ ಹಿಂದೂ ಜಾತಿಗಳ ಜನರೊಂದಿಗೆ ಷಾಮೀಲಾಗುತ್ತದೆ. ಅವರು ಪರಿಶಿಷ್ಟ ಜಾತಿಗಳ ಜನರು ಠಾಣೆಗಳಿಗೆ ಹೋದಾಗ ಬಹಳಷ್ಟು ಸಲ ಅವರ ದೂರುಗಳನ್ನು ಅಪರಾಧವು ಶಿಕ್ಷಾರ್ಹವಾಗಿದ್ದರೂ ಸಹ ಅವರ ಠಾಣೆಯ ದಿನಚರಿ ಪುಸ್ತಕದಲ್ಲಿ ನಮೂದು ಮಾಡಿಕೊಳ್ಳುವುದಿಲ್ಲ. ಅವರು ಅವರನ್ನು ಆಚೆಗೆ ಕಳುಹಿಸಿ ವಾಪಸ್ಸು ಹೋಗುವಂತೆ ಹೇಳುತ್ತಾರೆ. ಅವರು ದೂರುಗಳನ್ನು ದಾಖಲಿಸಿಕೊಳ್ಳುವುದಿಲ್ಲ. ಒಂದು ವೇಳೆ ದಾಖಲಿಸಿಕೊಂಡರೆ ಪ್ರಾಯಶಃ ಅಂತಿಮವಾಗಿ ಪ್ರಕರಣ ಬಿದ್ದು ಹೋಗುವಂಥ ಕಾಟಾಚಾರದ

ರೀತಿಯ ತನಿಖೆಯನ್ನು ನಡೆಸುತ್ತಾರೆ. ಈ ಪರಿಸ್ಥಿತಿಯಲ್ಲಿ ನಾನು ಮಾತ್ರ ಸಚಿವರನ್ನು ಅವರ ಮೇಲೆ ಯಾವುದೇ ಕರ್ತವ್ಯದ ಹೊಣೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಕೇಳುಬಯಸುತ್ತೇನೆ. ಪರಿಶಿಷ್ಟ ಜಾತಿಯ ಜನಗಳು ಅಥವಾ ಇತರರು ಸಲ್ಲಿಸುವಂಥ ಸಾಕ್ಷೀಕರಿಸುವಂಥ ಕಾನೂನು ಉಲ್ಲಂಘನೆಗಳು ಮೂಲಭೂತ ಕಾನೂನು ಮತ್ತು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುವುದಿಲ್ಲವೆ? ಹಿಂಸಕರು ಮತ್ತು ಪುಂಡರ ಬೃಹತ್ ಸ್ತೋಮಕ್ಕೆ ಮೂಲಭೂತ ಹಕ್ಕುಗಳ ನಿರ್ನಾಮ ಮಾಡುವುದಕ್ಕೆ ನೀವು ಅವಕಾಶ ನೀಡಿದ್ದೇ ಆದರೆ ಸಂವಿಧಾನಕ್ಕೆ ಅಪಮಾನ ಮಾಡಿದಂತೆ ಆಗುವುದಿಲ್ಲವೇ? ಮೂಲಭೂತ ಹಕ್ಕುಗಳು ಸಂವಿಧಾನದ ಭಾಗವಲ್ಲವೇ? ಗೃಹಖಾತೆಯಲ್ಲಿಯೇ ಅಥವಾ ಪ್ರತ್ಯೇಕವಾಗಿ ಪರಿಶಿಷ್ಟ ಜಾತಿಯವರ ರಕ್ಷಣೆಗಾಗಿ ಒಂದು ವಿಶೇಷ ವಿಭಾಗವನ್ನು ತೆರೆಯುವುದು ನಿಮ್ಮ ಕರ್ತವ್ಯವಲ್ಲವೇ? ಅಮೆರಿಕ ಸಂಯುಕ್ತ ಸಂಸ್ಥಾನವು ಒಂದು ನ್ಯಾಯಿಕ ಇಲಾಖೆಯನ್ನು ಹೊಂದಿದ್ದು ಸಂವಿಧಾನ ಮತ್ತು ಫೆಡರಲ್ ಕಾನೂನನ್ನು ಗೌರವಿಸುವಂತೆ ನೋಡಿಕೊಳ್ಳುವುದು ಅದರ ಕರ್ತವ್ಯ ಮತ್ತು ಕಾರ್ಯವಾಗಿರುತ್ತದೆ. ಸಂವಿಧಾನವು ಕಾರ್ಯನಿರ್ವಹಿಸಬೇಕಾದರೆ ಅದು ದೇಶದ ಕಾನೂನು ಪಾಲಕನಾಗಬೇಕಾದರೆ ಎಲ್ಲಾ ಜನರೂ ಅದಕ್ಕೆ ಮನ್ನಣೆ ನೀಡಬೇಕಾದರೆ ಅದು ಜಾರಿಯಾಗುವಂತೆ ನೋಡಿಕೊಳ್ಳಬೇಕಾದುದು ಅವರ ಕರ್ತವ್ಯವಾಗಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದಕ್ಕೆ ಇದು ಸಕಾಲವಾಗಿರುತ್ತದೆ ಮತ್ತು ಅದನ್ನು ಜಾರಿಗೊಳಿಸುವುದಕ್ಕೆ ಅವರಿಗಿರುವ ಏಕೈಕ ಮಾರ್ಗವೆಂದರೆ ಅದನ್ನು ಜಾರಿಗೊಳಿಸುವ ಹಕ್ಕನ್ನು ಸ್ವತಃ ಅವರೇ ವಹಿಸಿಕೊಳ್ಳುವುದು. ಅದನ್ನು ಮಾಡಲು ಸಾಧ್ಯವಿಲ್ಲದಿರುವಂಥ ರಾಜ್ಯ ಸರ್ಕಾರಗಳಿಗೂ ಸಹ ವಹಿಸಬಾರದು ಅಥವಾ ಅದನ್ನು ಮಾಡುವ ಇಚ್ಛೆ ಇಲ್ಲದಿರುವಂಥ ಪೊಲೀಸರಿಗೂ ಸಹ ವಹಿಸಬಾರದು ಮತ್ತು ಅದನ್ನು ಮಾಡಲು ಯಾವುದೇ ಮಾರ್ಗೋಪಾಯವನ್ನು ಹೊಂದಿಲ್ಲದಿರುವ ಪರಿಶಿಷ್ಟ ಜಾತಿಗಳಿಗೂ ಸಹ ವಹಿಸಬಾರದು. ಆದ್ದರಿಂದ ಅವರು ಈ ವಿಷಯವನ್ನು ಬಹು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ ಮತ್ತು ಅದನ್ನು ಒಬ್ಬ ಮುತ್ಸದ್ಧಿಯ ರೀತಿಯಲ್ಲಿ ನಿರ್ವಹಿಸುತ್ತಾರೆಂದು ಭಾವಿಸುತ್ತೇನೆ.

ಈಗ ನಾನು ಶಿಕ್ಷಣದ ವಿಷಯಕ್ಕೆ ಬರುತ್ತೇನೆ. ಸರ್ಕಾರ ಪರಿಶಿಷ್ಟ ಜಾತಿಗಳ ಜನರ ಶಿಕ್ಷಣದ ಮೇಲೆ ವಾರ್ಷಿಕ ಹೆಚ್ಚು ಹಣ ಖರ್ಚು ಮಾಡುತ್ತಿದೆಯೆಂಬುದನ್ನು ಒಪ್ಪಿಕೊಳ್ಳುವುದಕ್ಕೆ ನನಗೆ ಸ್ವಲ್ಪಮಟ್ಟಿಗೆ ತೃಪ್ತಿಯೆನಿಸುತ್ತದೆ. ನಾನು ನನ್ನದೇ ಉದಾಹರಣೆ ನೀಡುವುದನ್ನು ನನ್ನ ಸ್ನೇಹಿತರು ಕ್ಷಮಿಸುವುದಾದರೆ, ೧೯೪೨ರಲ್ಲಿ ಪ್ರಪ್ರಥಮ ಬಾರಿಗೆ ಭಾರತ ಸರ್ಕಾರವು ನಾನು ಕಾರ್ಯಕಾರಿ ಪರಿಷತ್ತಿನ ಸದಸ್ಯನಾಗಿದ್ದಾಗ ನನ್ನ ಪ್ರಯತ್ನದಿಂದಾಗಿ ಪರಿಶಿಷ್ಟ ಜಾತಿಗಳ ಜನರ ಶಿಕ್ಷಣದ ಹೊಣೆಗಾರಿಕೆ ನಮ್ಮದೂ ಸಹ ಆಗಿರುತ್ತದೆಂಬುದನ್ನು ಒಪ್ಪಿಕೊಂಡಿರುವುದನ್ನು ಅವರು ತಿಳಿದುಕೊಳ್ಳಬಹುದಾಗಿದೆ. ಆಗ ಶಿಕ್ಷಣ ಸಂಪೂರ್ಣವಾಗಿ ಪ್ರಾಂತೀಯ ವಿಷಯವಾಗಿತ್ತು. ಕೇವಲ ಮುಸ್ಲಿಂಮರು ಮತ್ತು ಹಿಂದುಗಳಿಗೆ ಸಂಬಂಧಿಸಿದ ಮಟ್ಟಿಗೆ ಭಾರತ ಸರ್ಕಾರವು ವಾರ್ಷಿಕ ೩ ಲಕ್ಷ ರೂಪಾಯಿಗಳ ಅನುದಾನವನ್ನು ನೀಡುವ ಮೂಲಕ ಅಲಿಗಢ ವಿಶ್ವವಿದ್ಯಾಲಯ ಮತ್ತು ಬನಾರಸ್ ಹಿಂದು ವಿಶ್ವವಿದ್ಯಾಲಯಕ್ಕೆ ನೆರವು ನೀಡುವ ಸ್ವಯಂ ಹೊಣೆಗಾರಿಕೆ ವಹಿಸಿಕೊಂಡಿತ್ತು. ಮುಸ್ಲಿಮರು ಮತ್ತು ಹಿಂದುಗಳಿಗಾಗಿ ತನ್ನ ಕರ್ತವ್ಯವನ್ನು ಅರಿತುಕೊಂಡಿರುವಂಥ ಸರ್ಕಾರಕ್ಕೆ ಪರಿಶಿಷ್ಟ ಜಾತಿಗಳಿಗಾಗಿಯೂ ಸಹ ತನ್ನ ಕರ್ತವ್ಯ ಅರಿತುಕೊಂಡಿಲ್ಲವೆ? ಎಂದು ಪ್ರಶ್ನಿಸಿದೆನು. ಭಾರತ ಸರ್ಕಾರ ಅದು ನ್ಯಾಯ ಸಮ್ಮತ ಪ್ರಶ್ನೆಯೆಂದು ಒಪ್ಪಿಕೊಂಡಿತು. ಮತ್ತು ಆ ಪ್ರಶ್ನೆಗೆ ನೀಡಿದ ಉತ್ತರ ಸಕಾರಾತ್ಮಕ ದೃಷ್ಟಿಯಿಂದ ಭಿನ್ನವಾಗಿರಲಿಲ್ಲ. ಅವರು ಪರಿಶಿಷ್ಟ ಜಾತಿಗಳ ಜನರ ಶಿಕ್ಷಣಕ್ಕಾಗಿ ಕೇಂದ್ರದ ನಿಧಿಗಳಿಂದ ೩ ಲಕ್ಷ ರೂ.ಗಳನ್ನು ಮಂಜೂರು ಮಾಡಿದರು. ಪರಿಶಿಷ್ಟ ಜಾತಿಗಳ ಶಿಕ್ಷಣದ ಅನುದಾನಗಳನ್ನು ವರ್ಷದಿಂದ

ವರ್ಷಕ್ಕೆ ಹೆಚ್ಚಿಸಲಾಗುವುದೆಂಬ ಬೆಳವಣಿಗೆಯಿಂದ ನಾನು ಸಂತುಷ್ಟನಾಗಿರುವಾಗಲೇ ಎರಡು ಕಾರಣದಿಂದಾಗಿ ನಾನು ತೀವ್ರ ನಿರಾಶೆಗೊಳಗಾಗಬೇಕಾಯಿತು. ಒಂದು, ಭಾರತ ಸರ್ಕಾರದಲ್ಲಿ ಪ್ರಪ್ರಥಮ ಬಾರಿಗೆ ನಾನು ಈ ಪ್ರಶ್ನೆಯನ್ನು ೧೯೪೨ರಲ್ಲಿ ಎತ್ತಿದಾಗ ಭಾರತದಲ್ಲಿನ ವಿಶ್ವವಿದ್ಯಾಲಯ ಮಟ್ಟದವರೆಗಿನ ಪರಿಶಿಷ್ಟ ಜಾತಿಗಳ ಶಿಕ್ಷಣದ ಹೊಣೆಗಾರಿಕೆಯನ್ನು ಪ್ರಾಂತೀಯ ಸರ್ಕಾರಗಳು ಭರಿಸತಕ್ಕದ್ದೆಂದು ಮತ್ತು ಪರಿಶಿಷ್ಟ ಜಾತಿಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರ ನೀಡುವ ಯಾವುದೇ ಕೊಡುಗೆಗಳನ್ನು ಅವರು ವಿದೇಶಗಳಲ್ಲಿ ಪಡೆಯುವ ಶಿಕ್ಷಣಕ್ಕೆ ಮೀಸಲಿಡತಕ್ಕದ್ದೆಂದು ಒಪ್ಪಿಕೊಳ್ಳಲಾಗಿತ್ತು. ಈ ಒಪ್ಪಂದದ ಪ್ರಕಾರ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಮೊದಲನೆ ತಂಡವನ್ನು ಇಂಗ್ಲೀಷ್ ಮತ್ತು ಅಮೇರಿಕಾ ವಿಶ್ವವಿದ್ಯಾಲಯಗಳು ಆಗಲೇ ವಿದ್ಯಾರ್ಥಿಗಳಿಂದ ಭರ್ತಿಯಾಗಿದ್ದರಿಂದಾಗಿ ಅವುಗಳಿಗೆ ಪ್ರವೇಶ ಪಡೆಯುವ ವಿಷಯದಲ್ಲಿ ತೀವ್ರವಾದ ತೊಂದರೆಯಿದ್ದಾಗ್ಯೂ ಸಹ ಅವರನ್ನು ಇಂಗ್ಲೆಂಡಿಗೆ ಕಳುಹಿಸಿಕೊಡಲಾಯಿತು. ಆದಾಗ್ಯೂ ಇಲ್ಲಿ ಭಾರತ ಸರ್ಕಾರದಲ್ಲಿದ್ದ ನಾವು ಅತ್ಯಂತ ಕೆಳಮಟ್ಟದ ಜನರನ್ನು ಮೊಟ್ಟಮೊದಲ ಬಾರಿಗೆ ಉನ್ನತ ಶಿಕ್ಷಣಕ್ಕಾಗಿ ಕಳುಹಿಸಿಕೊಟ್ಟಿರುವುದರಿಂದ ವಿದೇಶಿ ವಿಶ್ವವಿದ್ಯಾಲಯಗಳು ಅವರಿಗೆ ಸ್ವಲ್ಪ ರಿಯಾಯಿತಿ ತೋರಿಸಲೇಬೇಕೆಂದು ವಿದೇಶೀ ವಿಶ್ವವಿದ್ಯಾಲಯಗಳ ಮೇಲೆ ಒತ್ತಡ ಹಾಕಿದೆವು. ಪರಿಣಾಮವಾಗಿ ನಮಗೆ ೩೦ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಪ್ರವೇಶ ಪಡೆದುಕೊಳ್ಳುವುದಕ್ಕೆ ಸಾಧ್ಯವಾಯಿತು. ಆನಂತರ ೧೯೪೫ರಲ್ಲಿ ಹಿಂದಿನ ಆಡಳಿತ ಕೊನೆಗೊಂಡು ೧೯೪೬ರಲ್ಲಿ ಕಾಂಗ್ರೆಸ್ ಆಡಳಿತ ಬಂದಿತು. ನಾನು, ೧೯೪೩ರಲ್ಲಿ ಅಥವಾ ಆನಂತರ ಪ್ರಾರಂಭವಾದ ಮತ್ತು ಜಾರಿಗೊಳಿಸಲಾದ ಹಾಗೂ ಭಾರತದಲ್ಲಿ ಮತ್ತು ಹೊರಗೆ ಪರಿಶಿಷ್ಟ ಜಾತಿಗಳ ಜನರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳಲಾಗಿದ್ದಂಥ ವ್ಯವಸ್ಥೆ ಮುಂದುವರಿಯುತ್ತದೆಂದು ನಾನು ಭಾವಿಸಿದ್ದೆನು. ಆದರೆ ನಾನು ಹೇಳಲೇಬೇಕಾದಂಥ, ನನಗೆ ತೀವ್ರ ಸಖೇದಾಶ್ಚರ್ಯ ತೀವ್ರ ವ್ಯಥೆಯುಂಟುಮಾಡಿದ ಸಂಗತಿಯೆಂದರೆ ಕಾಂಗ್ರೆಸ್ ಆಡಳಿತದಲ್ಲಿ ಶಿಕ್ಷಣ ಮಂತ್ರಿಗಳಾದ ಮತ್ತು ಸದ್ಭಾವಯುತ ವ್ಯವಸ್ಥೆಯನ್ನು ಹಾಳು ಮಾಡುವಂಥ ಭಾರೀ ಹೊಡೆತವನ್ನು ನೀಡಿದ ಶ್ರೀ ರಾಜಗೋಪಾಲಾಚಾರಿಯವರು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ವಿದೇಶಗಳಿಗೆ ಕಳುಹಿಸುವ ವ್ಯವಸ್ಥೆಯನ್ನು ರದ್ದುಪಡಿಸಿದರು. ಆನಂತರ ಅಲ್ಲಿಂದ ಪರಿಶಿಷ್ಟ ಜಾತಿಗೆ ಸೇರಿದ ಯಾವೊಬ್ಬ ವಿದ್ಯಾರ್ಥಿಯೂ ವಿದೇಶಕ್ಕೆ ಉನ್ನತ ವ್ಯಾಸಂಗಕ್ಕಾಗಿ ಹೋಗಲು ಸಾಧ್ಯವಾಗಲಿಲ್ಲ. ಇದನ್ನು ನಾನು ಒಂದು ದೃಷ್ಟಿಯಿಂದ ಅತ್ಯಂತ ಅಪಾಯಕಾರಿಯಾದ ಸಂಗತಿಯೆಂದು ಹೇಳಲು ಬಯಸುತ್ತೇನೆ. ಹಿಂದೂಗಳು ನನ್ನ ಈ ಟೀಕೆಯನ್ನು ಸಹಿಸುವುದಿಲ್ಲವೆಂಬುದರಲ್ಲಿ ನನಗೆ ಸಂಶಯವಿಲ್ಲ. ಆದರೆ ನಾನು ನನ್ನ ಈ ಟೀಕೆ ಸಕಾರಣವಾದುವೆಂದು ಧೃಢವಾಗಿ ನಂಬಿದ್ದೇನೆ, ಮತ್ತು ಇದಕ್ಕೆ ಎಷ್ಟೇ ಪ್ರತಿರೋಧ ಎದುರಾದರೂ ಇದನ್ನು ನಾನು ಪುನರುಚ್ಚರಿಸುತ್ತೇನೆ.

**ಶ್ರೀ ಬಿ.ಕೆ.ಪಿ. ಸಿನ್ಹ (ಬಿಹಾರ):** ಆದರೆ ಪರಿಶಿಷ್ಟ ಜಾತಿಗಳವರೂ ಸಹ ಹಿಂದೂಗಳು.

**ಡಾ. ಬಿ.ಆರ್. ಅಂಬೇಡ್ಕರ್:** ಹೌದು, ನೀವು ಅವರನ್ನು ಹಾಗೇ ಕರೆಯುವುದಾದರೆ. ನಾನು ಕಾನೂನಿನ ಪ್ರಕಾರ ಬಬ್ಬ ಹಿಂದು.

**ಶ್ರೀ ಬಿ.ಕೆ.ಪಿ. ಸಿನ್ಹ:** ವಾಸ್ತವಿಕವಾಗಿಯೂ ಸಹ.

**ಡಾ. ಬಿ.ಆರ್. ಅಂಬೇಡ್ಕರ್:** ಮಾನ್ಯರೇ, ವಾಸ್ತವ ವಿಷಯ ಇದು. ಈ ದೇಶದಲ್ಲಿ ನಾನು ಹೇಳಬೇಕಾಗಿರುವಂಥ ಕಾರಣಗಳಿಗಾಗಿ ಉಚ್ಚ ವರ್ಗದವರು ಉನ್ನತ ಶಿಕ್ಷಣ ಪಡೆಯುತ್ತಾರೆಂಬುದು ಸುಸ್ಪಷ್ಟ. ಅವರ ಮಕ್ಕಳು ಕೇಂಬ್ರಿಡ್ಜ್‌ಗೆ ಹೋಗುತ್ತಾರೆ, ಅವರ ಮಕ್ಕಳು ಆಕ್ಸಫರ್ಡ್‌ಗೆ ಹೋಗುತ್ತಾರೆ ಅವರ

ಮಕ್ಕಳು ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಮತ್ತು ಇತರ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಹೋಗುತ್ತಾರೆ.

**ಡಾ. ಕೆ.ಎನ್. ಕಟ್ಜು:** ಪ್ರಾಯಶಃ ನನ್ನ ಗೌರವಾನ್ವಿತ ಸ್ನೇಹಿತರಿಗೆ ಹರಿಜನರು ಅಥವಾ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರನ್ನು ವಿದೇಶಗಳಿಗೆ ಕಳುಹಿಸಿಕೊಡಲಾಗುತ್ತಿದೆಯೆಂಬುದು ತಿಳಿದಿಲ್ಲವೆನಿಸುತ್ತದೆ.

**ಡಾ. ಬಿ.ಆರ್. ಅಂಬೇಡ್ಕರ್:** ನೀವು ವಿಷಾದಿಸುತ್ತಿರುವಂತೆ ನನಗೆ ಕಾಣಿಸುತ್ತಿದೆ.

**ಡಾ. ಕೆ.ಎನ್. ಕಟ್ಜು:** ಅವರು ಇದರಿಂದ ಪ್ರಯೋಜನ ಪಡೆದಿರುತ್ತಾರೆ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಕೇಳಿಲ್ಲ.

**ಡಾ. ಕೆ.ಎನ್. ಕಟ್ಜು:** ನಾನು ಸ್ವಲ್ಪ ಮಾತನಾಡಬಹುದೆ? ಪರಿಶಿಷ್ಟ ಜಾತಿಗಳವರಿಗೆ ವಿದೇಶಿ ವಿದ್ಯಾರ್ಥಿ ವೇತನಗಳನ್ನು ನೀಡುತ್ತಿದ್ದ ಪದ್ಧತಿಯನ್ನು ಕೈಬಿಡಲಾಗಿದೆ ಮತ್ತು ೧೯೪೬ರಲ್ಲಿ ರಾಜಾಜಿಯವರು ಇದನ್ನು ನಿಲ್ಲಿಸಿದರು ಎಂದು ಅವರು ಈಗಷ್ಟೇ ಆಪಾದಿಸಿದ್ದನ್ನು ಕೇಳಿದೆನು. ವಿದೇಶೀ ವಿದ್ಯಾರ್ಥಿ ವೇತನಗಳನ್ನು ಇಂದಿಗೂ ನೀಡಲಾಗುತ್ತಿದೆ. ಈ ಯೋಜನೆಯನ್ನು ಕಳೆದ ವರ್ಷ ಒಂದು ವರ್ಷದ ಅವಧಿಗೆ ನೀಡಲಾಯಿತು ಹಾಗೂ ಈಗ ಅದನ್ನು ಐದು ವರ್ಷಗಳವರೆಗೆ ಖಾಯಂಗೊಳಿಸಲಾಗಿದೆಯೆಂದು ನಾನು ಈಗ ತಾನೇ ಹೇಳಿರುತ್ತೇನೆ.

**ಡಾ. ಬಿ.ಆರ್. ಅಂಬೇಡ್ಕರ್:** ನೀವು ನಿಮ್ಮ ತಪ್ಪನ್ನು ಗಮನಿಸಿ ಅದನ್ನು ಪುನರಾರಂಭಿಸಿದಿರಿ.

**ಡಾ. ಕೆ.ಎನ್. ಕಟ್ಜು:** ಅದನ್ನು ಪುನರಾರಂಭಿಸಲಾಗಿದೆ. ಈಗ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿದೆ.

**ಡಾ. ಬಿ.ಆರ್. ಅಂಬೇಡ್ಕರ್:** ಹಲವಾರು ವರ್ಷಗಳವರೆಗೆ ನಿಲ್ಲಿಸಿ ಆನಂತರ ನೀಡುತ್ತಿರುವಿರಿ.

**ಡಾ. ಕೆ.ಎನ್. ಕಟ್ಜು:** ಈ ವಿಷಯ ನನಗೆ ಸಂಬಂಧಿಸಿದ್ದಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ನೀವು ನಿಮ್ಮ ಇಲಾಖೆಯ ಇತಿಹಾಸವನ್ನು ಗಮನಿಸಬೇಕು. ನೀವು ಸರಳವಾಗಿ 'ನನಗೆ ಗೊತ್ತಿಲ್ಲ' ಎಂದು ಹೇಳಬಾರದು. ಇದನ್ನೇ ನಾನು ಹೇಳಿದ್ದು. ನನ್ನ ಗೌರವಾನ್ವಿತ ಸ್ನೇಹಿತರು ಏನನ್ನೇ ಹೇಳಿದರೂ, ನಾನು ಮಾಡುತ್ತಿರುವ ಟೀಕೆಯು ಬಹಳ ಸರಿಯಾದುದು ಮತ್ತೆ ಮೂಲಭೂತವಾದುದು. ಈ ದೇಶದಲ್ಲಿ ನೀವು ನೈಜವಾಗಿ ಎರಡು ರಾಷ್ಟ್ರಗಳನ್ನು – ಅಂದರೆ ಆಳುವ ರಾಷ್ಟ್ರ ಮತ್ತು ಆಳಿಸಿಕೊಳ್ಳುವ ರಾಷ್ಟ್ರಗಳನ್ನು ಕಾಣಬಹುದು.

**ಒಬ್ಬ ಗೌರವಾನಿತ್ವ ಸದಸ್ಯರು:** ಪ್ರಶ್ನೆ.

**ಡಾ. ಬಿ.ಆರ್. ಅಂಬೇಡ್ಕರ್:** ಹಿಂದುಳಿದ ವರ್ಗಗಳೆಲ್ಲವೂ ನಿರ್ಬಂಧಿತ ಜನರಿಂದ ಕೂಡಿವೆ. ಅವರಿಗೆ ಯಾವುದೇ ಸ್ಥಾನದಲ್ಲೂ ಅಧಿಕಾರವಿಲ್ಲ. ಯಾವ ವಿಧದಲ್ಲೂ ಇಲ್ಲ. ಅವರಿಗೆ ಆಡಳಿತದಲ್ಲಿ ಸ್ಥಾನವಿಲ್ಲ ಅವರಿಗೆ ಕಾರ್ಯಾಂಗದಲ್ಲಿ ಸ್ಥಾನವಿಲ್ಲ. ಇಡೀ ಕಾರ್ಯಾಂಗ ಮತ್ತು ಆಡಳಿತದಲ್ಲಿ ಉಚ್ಚ ವರ್ಗಗಳೇ ಏಕಸ್ವಾಮ್ಯ ಸಾಧಿಸಿವೆ. ಅವರು ತಾವು ಉನ್ನತ ಶಿಕ್ಷಣ ಪಡೆದಿರುವೆವೆಂಬ ಕಾರಣದಿಂದ ಅದನ್ನು ಏಕಸ್ವಾಮ್ಯ ಮಾಡಿಕೊಂಡಿವೆ. ಭಾರತ ಸರ್ಕಾರದಲ್ಲಿನ ನಿಮ್ಮ ಇಲಾಖೆಗಳ ಎಲ್ಲಾ ಕಾರ್ಯದರ್ಶಿಗಳನ್ನು ನಾವು ಯಾಕೆ ಪರಿಶೀಲನೆ ಮಾಡಬಾರದು? ಪ್ರತಿಯೊಬ್ಬ ಕಾರ್ಯದರ್ಶಿಯ ಮಗ ಅಥವಾ ಮಗಳನ್ನು ಕೇಂಬ್ರಿಡ್ಜ್ ಅಥವಾ ಆಕ್ಸ್‌ಫರ್ಡ್‌ನಲ್ಲಿ ಕಾಣಬಹುದು. ಅವರಿಗೆ ಹೇರಳವಾದ ಅವಕಾಶಗಳಿವೆ ಎಂಬ ಕಾರಣದಿಂದಾಗಿ ಅವರು ಎರಡು ಮೂರುಬಾರಿ ಅವರ ಮಕ್ಕಳನ್ನು ಅಲ್ಲಿಗೆ ಸೇರಿಸುವುದಕ್ಕಾಗಿ ಪ್ರಯಾಣಿಸುತ್ತಾರೆ. ಹಿಂದುಳಿದ ವರ್ಗಗಳ ವ್ಯಕ್ತಿ ಪ್ರಾಥಮಿಕ ಶಿಕ್ಷಣವನ್ನು ಸಹ ಪಡೆಯಲು ಸಾಧ್ಯವಿಲ್ಲ. ಎರಡು ಬೇರೆಬೇರೆ ವರ್ಗಗಳಲ್ಲಿ ನಡೆಯುತ್ತಿರುವ ಈ ಕ್ರಾಂತಿಯು ಅನೇಕ ಶತಮಾನಗಳಿಂದ ನಡೆಯುತ್ತಿದೆ. ಇದೊಂದು

ಅಸಹನೀಯ ಸಂಗತಿಯಾಗಿದ್ದು, ಒಂದು ವರ್ಗವೇ ಯಾವಾಗಲೂ ಆಡಳಿತ ನಡೆಸುವುದಕ್ಕೆ ನಾವು ಅವಕಾಶ ನೀಡುವುದಿಲ್ಲ. ಕೆಲವು ಕಾಲದ ನಂತರ ಸರ್ಕಾರದ ಆಡಳಿತವನ್ನು ಪಡೆದುಕೊಳ್ಳುವುದಕ್ಕಾಗಿ. ಇತರ ವರ್ಗಗಳವರೂ ಸಹ ಶೈಕ್ಷಣಿಕ ಅರ್ಹತೆಗಳನ್ನು ಪಡೆದುಕೊಳ್ಳುವುದನ್ನು ನಾವು ಕಣ್ಣಾರೇ ಕಾಣಲೇಬೇಕು. ನಾವು ಯಾವಾಗಲೂ ಜನರನ್ನು ಅಂಕುಶದಲ್ಲಿಟ್ಟುಕೊಳ್ಳಲಾಗುವುದಿಲ್ಲ.

**ಶ್ರೀ ಹೆಚ್.ಪಿ. ಸಕ್ಸೇನ (ಉತ್ತರ ಪ್ರದೇಶ):** ಭಾರತದಲ್ಲಿ ವರ್ಗಗಳಿಲ್ಲ. ಇದೊಂದು ವರ್ಗರಹಿತ ರಾಷ್ಟ್ರ.

**ಡಾ. ಬಿ.ಆರ್. ಅಂಬೇಡ್ಕರ್:** ಆದ್ದರಿಂದಲೇ ನಾನು ಹೇಳುವುದೇನೆಂದರೆ ನೀವು ನಿಜವಾಗಿ ಜನರನ್ನು ಒಗ್ಗೂಡಿಸುವ ಇಚ್ಛೆ ಹೊಂದಿದ್ದರೆ ಎಲ್ಲ ಜನರನ್ನು ಸಮಾನರನ್ನಾಗಿಸಿ. ಹಾಗೆ ಮಾಡಬೇಕಾದರೆ ನೀವು ಮಾತ್ರ ಉನ್ನತ ಶಿಕ್ಷಣವನ್ನು ಪಡೆಯುವುದು ಮತ್ತು ಇತರರು ಕೆಳಮಟ್ಟದ, ಅರ್ಧ ಕೆಳಮಟ್ಟಕ್ಕಿಂತಲೂ ಕಡಿಮೆ ಶಿಕ್ಷಣ ಪಡೆಯುವುದನ್ನು ಕೊನೆಗೊಳಿಸಬೇಕು. ಈ ದೃಷ್ಟಿಯಿಂದ ನೀವು ವಿದೇಶಿ ಶಿಕ್ಷಣ ವ್ಯವಸ್ಥೆಯನ್ನು ಆರಂಭಿಸಬೇಕು. ಈ ಉದ್ದೇಶದಿಂದಲೇ ನಾನು ಭಾರತ ಸರ್ಕಾರದಿಂದ ಸ್ವಲ್ಪ ಪ್ರಮಾಣದ ಕೋಟಾ ಪಡೆಯುವುದಕ್ಕೆ ಹೋರಾಟ ನಡೆಸಿ ಅವರಿಗೆ ವಿಶ್ವವಿದ್ಯಾಲಯದ ಶಿಕ್ಷಣವನ್ನು ಹೊಣೆಗಾರಿಕೆಯನ್ನು ಪ್ರಾಂತ್ಯಗಳಿಗೆ ವಹಿಸುವಂತೆ ಹೇಳಿದೆನು. ರಾಜ್ಯಗಳು, ಈ ಹೊಣೆಯನ್ನು ನಿಮ್ಮ ಮೇಲೆ ಹೊರಿಸುವುದಕ್ಕೆ ಸಿದ್ಧವಾಗಿದ್ದವು. ಅವರು ಏನು ಮಾಡಬೇಕು? ಅವರು ಪಾನನಿಷೇಧವನ್ನು ಜಾರಿಯಲ್ಲಿ ತಂದು ಜನಗಳನ್ನು ಅಮಲಿನಲ್ಲಿರದಂತೆ ಮಾಡುತ್ತಿದ್ದಾರೆ. ನನ್ನ ವೈಯಕ್ತಿಕ ತಿಳಿವಳಿಕೆ ಪ್ರಕಾರ, ಅಮಲಿನಲ್ಲಿಲ್ಲದಿರುವ ಮನುಷ್ಯನು ಹೆಡ್ಡನಾಗಿದ್ದು ಅವನನ್ನು ಶಿಕ್ಷಿತನಾದ ಮತ್ತು ಸ್ವಲ್ಪ ಮಟ್ಟಿಗೆ ಕುಡಿಯುವ ವ್ಯಕ್ತಿಗೆ ಸಮನೆಂದು ಭಾವಿಸುವುದಿಲ್ಲ. ನಾನು ಎರಡನೆಯವನಿಗೆ ಆದ್ಯತೆಯನ್ನು ನೀಡುತ್ತೇನೆ. ನನ್ನ ಮಾನ್ಯ ಸ್ನೇಹಿತರು ಈಗ ಪರಿಶಿಷ್ಟ ಜಾತಿಯ ಹುಡುಗರನ್ನು ವಿದೇಶಗಳಿಗೆ ಕಳುಹಿಸುವ ಪರಿಸ್ಥಿತಿಯನ್ನು ಪುನರಾರಂಭಿಸಿದ್ದಾರೆಂದು ಕೇಳಿ ನನಗೆ ಸಂತೋಷವಾಗಿದೆ. ನಾನು ಅವರನ್ನು ಅಭಿನಂದಿಸುತ್ತೇನೆ.

ಮಾನ್ಯರೇ, ಈಗ ಇತ್ತೀಚೆಗೆ ನನ್ನ ಗಮನಕ್ಕೆ ಬಂದ ಮತ್ತೊಂದು ಸಂಗತಿಯೆಂದರೆ ಒಂದು ತಿಂಗಳು ಅಥವಾ ಎರಡು ತಿಂಗಳ ಹಿಂದೆ ಶಿಕ್ಷಣ ಇಲಾಖೆ ಒಂದು ಸುತ್ತೋಲೆ ಹೊರಡಿಸಿದ್ದು ಪರೀಕ್ಷೆಯಲ್ಲಿ ಶೇಕಡಾ ೫೦ರಷ್ಟು ಅಂಕಿಗಳನ್ನು ಪಡೆದ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಗಳನ್ನು ಪಡೆಯುವರೆಂದು ಅದರಲ್ಲಿ ಜಾರಿಗೊಳಿಸಲಾಗಿದೆ. ಇತರರಿಗೆ ಇದು ಲಭ್ಯವಿರುವುದಿಲ್ಲ. ಪರಿಶಿಷ್ಟ ಜಾತಿಗಳನ್ನು ಉನ್ನತೀಕರಿಸುವ ಅಪೇಕ್ಷೆಯುಳ್ಳಂಥ ಸಹಾನುಭೂತಿ ಹೃದಯವನ್ನುಳ್ಳ ಉದಾರ ದೃಷ್ಟಿಯ ಸರ್ಕಾರವು ಶೇಕಡಾ ೫೦ರಷ್ಟು ಅಂಕಗಳಿಸಬೇಕೆಂಬ ಬಹಳ ಕಠಿಣ ಪರೀಕ್ಷೆಯನ್ನು ನಿರ್ದಿಷ್ಟಪಡಿಸುವುದನ್ನು ಎಂದಾದರೂ ಊಹಿಸಲು ಸಾಧ್ಯವೇ ಎಂದು ನಾನು ಆಶ್ಚರ್ಯಚಕಿತನಾಗಿದ್ದೇನೆ. ಪರಿಶಿಷ್ಟ ಜಾತಿಯ ಹುಡುಗರು ಎಂಥ ಪರಿಸ್ಥಿತಿಯಲ್ಲಿ ಇರುತ್ತಾರೆಂಬುದನ್ನು ನೀವು ಯೋಚಿಸಬೇಕು. ಪ್ರಾಯಶಃ ಅವರ ತಂದೆ ಅಥವಾ ತಾಯಿ ಆತನ ಅಭ್ಯಾಸಕ್ಕಾಗಿ ಒಂದು ಕೋಣೆಯನ್ನು ಒದಗಿಸಲಾರರು. ಆತ ಪ್ರಾಯಶಃ ರಾತ್ರಿ ಕೂತು ಅಭ್ಯಾಸ ಮಾಡುವುದಕ್ಕಾಗಿ ಒಂದು ದೀಪವನ್ನು ಸಹ ಕೊಳ್ಳಲಾರನು. ಅವನು ಜನ ಜಂಗುಳಿಯ ಮಧ್ಯೆ ಬದುಕುತ್ತಿರುತ್ತಾನೆ. ಅವನು ಪರೀಕ್ಷೆಯಲ್ಲಿ ಶೇಕಡಾ ೫೦ರಷ್ಟು ಅಂಕಗಳಿಸಬೇಕೆಂದು ನೀವು ಹೇಗೆ ನಿರೀಕ್ಷಿಸುತ್ತೀರಿ? ಇದು ಅಸಂಗತವಾದದು ಅತ್ಯಂತ ಅಸಂಗತವಾದುದು. ನೀವು ಅಗತ್ಯವಾಗಿ ಕೆಲವು ಕಾಲದವರೆಗೆ ಸಾಮಾನ್ಯ ಪ್ರಮಾಣಾಂಕ ಅಂದರೆ ಎಲ್ಲ ವಿಶ್ವವಿದ್ಯಾಲಯಗಳು ಮಾನ್ಯ ಮಾಡಿರುವ ಮತ್ತು ನೀವೂ ಸಹ ಭಾರತ ಸರ್ಕಾರದಲ್ಲಿ ಉದ್ಯೋಗದ ಉದ್ದೇಶಗಳಿಗಾಗಿ ಮಾನ್ಯ

ಮಾಡಿರುವ ಶೇಕಡಾ ೩೩ನ್ನು ಪರಿಗಣಿಸಬೇಕು. ಕೇವಲ ಸಾಧಾರಣವಾಗಿ ಉತ್ತೀರ್ಣನಾದ ಹುಡುಗ ಭಾರತ ಸರ್ಕಾರದಲ್ಲಿ ಉದ್ಯೋಗ ಮಾಡಲು ಅರ್ಹನಾಗಿರಬೇಕಾದರೆ ನೀವು ಉದ್ದೇಶಪೂರ್ವಕವಾಗಿ ಅವರ ಶಿಕ್ಷಣದ ಬೆಳವಣಿಗೆ ಮೇಲೆ ಒಂದು ರೀತಿಯ ಪ್ರತಿಬಂಧ ವಿಧಿಸುವ ಹೊರತು ಆತನಿಗೆ ವಿದ್ಯಾರ್ಥಿವೇತನ ನೀಡುವುದಕ್ಕೆ ಆತ ಏಕೇ ಅರ್ಹನಾಗುವುದಿಲ್ಲ? ಇರುವ ತೊಂದರೆ ಇದು. ಕೆಲವೊಮ್ಮೆ ಪ್ರವೇಶಗಳನ್ನು ಜೂನ್ ತಿಂಗಳ ಕೊನೆವಾರದಲ್ಲಿ ಮಾಡಿಕೊಳ್ಳಲಾಗುವುದು. ವಿವಿಧ ಕಾಲೇಜುಗಳು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರ ವಿದ್ಯಾರ್ಥಿ ವೇತನ ನೀಡುತ್ತದೆಂಬುದು ಅವುಗಳಿಗೆ ತಿಳಿದಿರುವುದರಿಂದ ಅವರಿಂದ ಶುಲ್ಕಗಳನ್ನು ಕೇಳದೆ ಪ್ರವೇಶ ನೀಡಿರುತ್ತಾರೆ. ಕಾಲೇಜಿಗೆ ಸೇರಿದ ಮೂರು ತಿಂಗಳ ನಂತರ ಮಂತ್ರಾಲಯವು, ಶೇಕಡಾ ೫೦ರಷ್ಟು ಅಂಕಿ ಗಳಿಸಿರುವವರು ಮಾತ್ರ ವಿದ್ಯಾರ್ಥಿ ವೇತನ ಪಡಯುವರೆಂದು ತಿಳಿಸುವ ಸುತ್ತೋಲೆ ಹೊರಡಿಸಿತು. ಹಿಂದಿನ ಪದ್ಧತಿಯು ಮುಂದುವರೆಯುತ್ತದೆಂಬ ಭರವಸೆ ಮೇಲೆ ಪ್ರವೇಶ ನೀಡಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳು ಈಗ ಏನು ಮಾಡಬೇಕು? ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಈಗ ಅವರಾದರೂ ಏನು ಮಾಡಬೇಕು? ನನ್ನ ಗೌರವಾನ್ವಿತ ಸ್ನೇಹಿತರಾದ ಗೃಹ ಸಚಿವರು ಈ ವಿಷಯವನ್ನು ಪರಿಶೀಲಿಸಿ ಶಿಕ್ಷಣ ಸಚಿವರೊಂದಿಗೆ ಚರ್ಚಿಸಿ ಯಾವುದೇ ಬಗೆಯಲ್ಲಾದರೂ ಸಹ ಈ ವರ್ಷಕ್ಕೆ ಸಂಬಂಧಿಸಿದಂತೆ ಈ ಸಮಸ್ಯೆಯನ್ನು ನಿವಾರಿಸುವಂತೆ ಕೋರುತ್ತಾರೆಂದು ಆಶಿಸುತ್ತೇನೆ. ಮುಂದಿನ ವರ್ಷ ಏನು ಮಾಡಬೇಕೆಂದು ನೀವು ಭಾವಿಸಿರುವಿರೋ ಹಾಗೇ ಮಾಡಬಹುದು. ಆದರೆ ನೀವು ಏನು ಮಾಡಬೇಕೆಂದು ಉದ್ದೇಶಿಸಿರುವಿರೋ ಅದನ್ನು ವಿದ್ಯಾರ್ಥಿಗಳು ಮತ್ತು ಕಾಲೇಜುಗಳಿಗೆ ಸಾಕಷ್ಟು ಮೊದಲೇ ಗಮನಕ್ಕೆ ತಂದು ಮಾಡಬಹುದಾಗಿದೆ.

ಈಗ ನಾನು ಸೇವೆಗಳ ವಿಷಯಕ್ಕೆ ಬರುತ್ತೇನೆ. ಆಯುಕ್ತರು ತಮ್ಮ ಅಂಕಿ ಸಂಖ್ಯೆಗಳನ್ನು ಮೂರು ಗುಂಪುಗಳು ಸೈನ್ಯ, ಅಖಿಲ ಭಾರತ ಸೇವೆಗಳು ಮತ್ತು ಭಾರತ ಸರ್ಕಾರದ ಕೇಂದ್ರ ಸೇವೆಗಳ ಅಡಿಯಲ್ಲಿನ ಸೇವೆಗಳಿಗೆ ಸಂಬಂಧಿಸಿದಂತೆ ವರ್ಗೀಕರಿಸಿರುತ್ತಾರೆ. ಸೈನ್ಯಕ್ಕೆ ಸಂಬಂಧಿಸಿದಂತೆ ಕೆಲವು ಪ್ರವರ್ಗಗಳಲ್ಲಿ ಪರಿಸ್ಥಿತಿ ಕ್ಷೀಣಿಸಿರುವುದು ನನ್ನ ಗಮನಕ್ಕೆ ಬಂದಿದೆ. ೧೯೫೨ರಲ್ಲಿ ಇಬ್ಬರು ಸೆಕೆಂಡ್ ಲೆಪ್ಟಿನೆಂಟ್‌ಗಳು ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿದ್ದರು. ೧೯೫೩ರಲ್ಲಿ ಈ ಪರಿಸ್ಥಿತಿ "ಶೂನ್ಯ"ವಾಗಿತ್ತು. ೧೯೫೨ರಲ್ಲಿ ಆಫ್ ಜೂನಿಯರ್ ಕಮಿಷನ್ಡ್ ಆಫಿಸರ್‌ಗಳು ೬೦ ಜನರಿದ್ದರು. ೧೯೫೨ರಲ್ಲಿ ಅವರು ೩.೨೭೭ರಷ್ಟಿದ್ದರು. ೧೯೫೩ರಲ್ಲಿ ಈ ಅಂಕಿಸಂಖ್ಯೆಯು ೨.೫೩೩ರಷ್ಟುಕ್ಕಿಳಿಯಿತು. ೧೯೫೨ರಲ್ಲಿ ಇತರ ರ‍್ಯಾಂಕ್‌ಗಳ ಸಂಖ್ಯೆ ೨೨.೨೮೮. ೧೯೫೩ರಲ್ಲಿ ಇದು, ೧೮.೬೬೬ಕ್ಕೆ ಕುಸಿಯಿತು. ಸೈನ್ಯದಲ್ಲಿ ಪರಿಶಿಷ್ಟ ಜಾತಿಗಳ ಸ್ಥಾನ ಈ ರೀತಿ ಇಳಿಮುಖವಾಗುವುದಕ್ಕೆ ಕಾರಣವೇನು ಎಂಬುದನ್ನು ಅರ್ಥ ಮಾಡಿಕೊಳ್ಳಲು ನನ್ನಿಂದ ಸಾಧ್ಯವಾಗಿಲ್ಲ. ನನಗನ್ನಿಸುವಂತೆ ಸೈನ್ಯದಲ್ಲಿ ಮಾತ್ರ ಅತ್ಯಂತ ಹೆಚ್ಚಿನ ಬೌದ್ಧಿಕ ಸಾಮರ್ಥ್ಯ ಅಗತ್ಯವಿಲ್ಲದಿರುವ ಕ್ಷೇತ್ರವಾಗಿರುತ್ತದೆ. ಆದರೆ, ಇತರ ರ‍್ಯಾಂಕ್‌ಗಳಲ್ಲಿ ಉನ್ನತ ಸಿಬ್ಬಂದಿಯ ಸಂದರ್ಭದಲ್ಲಿ ಹೆಚ್ಚಿನ ಬೌದ್ಧಿಕ ಸಾಮರ್ಥ್ಯ ಅಗತ್ಯವಾಗಬಹುದು. ಆದರೆ ನಾವು ಅವರ ಬಗ್ಗೆ ಮಾತನಾಡುತ್ತಿಲ್ಲ. ಆದರೆ ಇತರ ರ‍್ಯಾಂಕ್‌ಗಳನ್ನು ತೆಗೆದುಕೊಂಡರೆ ಅಂಕಿಸಂಖ್ಯೆಯು ೨೨.೦೦೦ ದಿಂದ ೧೮,೦೦೦ಕ್ಕೆ ಕುಸಿದಿರುವುದನ್ನು ನಾವು ಕಾಣಬಹುದು. ಏಕೆ ಹೀಗೆ? ನನಗೆ ತಿಳಿದಿರುವಂತೆ ಸೈನ್ಯದ ಕ್ಷೇತ್ರ ವಿಸ್ತಾರವಾಗಿದೆ. ಸೈನ್ಯ ವಿಸ್ತಾರವಾದಂತೆ ಯಾರೇ ಆದರೂ ಸೈನ್ಯದಲ್ಲಿರುವ ಪರಿಶಿಷ್ಟ ಜಾತಿಗಳವರ ಸಂಖ್ಯೆ ಹೆಚ್ಚಾಗಬೇಕೆಂದು ಸ್ವಾಭಾವಿಕವಾಗಿ ನಿರೀಕ್ಷಿಸುತ್ತಾರೆ. ಬೇರೆ ಎಲ್ಲಾ ಕಡೆಗಳಲ್ಲಿ ಅವರು ಸೂಕ್ತರಲ್ಲವೆಂದು ನೀವು ಹೇಳಿರುತ್ತೀರಿ. ಎಲ್ಲಾ ಲೋಕಸೇವಾ ಆಯೋಗಗಳು ಮತ್ತು ನೇಮಕಾತಿ ಪ್ರಾಧಿಕಾರಗಳು ಈ ವಿಷಯವನ್ನು ನಮ್ರವಾಗಿ ಹೇಳಿರುತ್ತವೆ. ನೀವು ಬಹಳ ಸರಳವಾಗಿ

ಇವರು ಅನರ್ಹರು ಎಂದು ಹೇಳಿರುತ್ತೀರಿ. ಅಲ್ಲಿಗೆ ವಿಷಯ ಮುಗಿಯಿತು. ಆದರೆ ಸೈನ್ಯದಲ್ಲಿ ಅನರ್ಹರಾಗುವುದಕ್ಕೆ ಏನು ಕಾರಣವಿದೆ? ಆ ಅನರ್ಹತೆ ಯಾವ ಬಗೆಯದು? ನೀವು ಎದೆಯ ಸುತ್ತಳತೆಯ ಒಂದು ಪ್ರಮಾಣವನ್ನು ನಿಗದಿಪಡಿಸಿರುವಿರಿ. ಪರಿಶಿಷ್ಟ ಜಾತಿಗಳ ಕೆಲವೇ ಕೆಲವರು ಮಾತ್ರ ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಾರರು. ಆ ಮೇಲೆ ನೀವು ಒಂದು ಮಟ್ಟದ ಎತ್ತರ ಸುಮಾರು ೫ ಅಡಿ. ೪ ಇಂಚು. ಮೊದಲಾದ ನಿಗದಿಪಡಿಸಿರುತ್ತೀರಿ. ಸರಿ. ನನಗನ್ನಿಸುವಂತೆ ಪರಿಶಿಷ್ಟ ಜಾತಿಯ ಎಲ್ಲರೂ ಈ ಎತ್ತರ ಹೊಂದಿರುತ್ತಾರೆ (ಮಧ್ಯ ಪ್ರವೇಶ) ಕೆಲವೇ ಕೆಲವರು ಇದರಲ್ಲಿ ಅನುತ್ತೀರ್ಣರಾಗಬಹುದು. ನಾನು ಒಪ್ಪಿಕೊಳ್ಳುತ್ತೇನೆ. ಆರೋಗ್ಯ, ಎದೆ ಸುತ್ತಳತೆ ಪ್ರಮಾಣ ಮತ್ತು ಎತ್ತರಗಳಂಥ ಈ ದೇಹದಾರ್ಢ್ಯತೆಗಳನ್ನು ಬಿಟ್ಟರೆ ಪ್ರತಿಯೊಬ್ಬ ಪರಿಶಿಷ್ಟ ಜಾತಿಯ ವ್ಯಕ್ತಿಯೂ ಮಿಲಿಟರಿ ಸೇವೆಗೆ ಸೇರುವುದಕ್ಕೆ ಅರ್ಹನಾಗುತ್ತಾನೆಂಬುದು ನನ್ನ ಅಚಲ ನಂಬಿಕೆ. ನೀವು ಅವರಿಗೆ ಭಾರತ ಸರ್ಕಾರದ ಇತರ ಇಲಾಖೆಗಳಲ್ಲಿ ಸೇವೆಯನ್ನು ನಿರಾಕರಿಸುವಾಗ, ಶಿಕ್ಷಣ ಬಹುಮುಖ್ಯವಾದ ಅಂಶವಾಗಿಲ್ಲದಿರುವಂಥ ಸೈನ್ಯ ಮತ್ತು ಪೊಲೀಸ್ ಇಲಾಖೆಗಳಂಥ ಇಲಾಖೆಗಳಲ್ಲಿ ಅವರಿಗೆ ಖಂಡಿತ ಸ್ವಲ್ಪಮಟ್ಟಿನ ರಿಯಾಯಿತಿಗಳನ್ನು ಕಲ್ಪಿಸಬೇಕು. ಆದರೆ ಮತ್ತೆ ಇಲ್ಲಿಯೂ ಸಹ ನೀವು ಮಲತಾಯಿ ಧೋರಣೆಯನ್ನೇ ತೋರಿಸಿರುತ್ತೀರಿ. ಗೃಹ ಇಲಾಖೆ ಈ ಅಂಕಿ ಸಂಖ್ಯೆಗಳಲ್ಲಿ ಎಂದಾದರೂ ಆಸಕ್ತಿ ವ್ಯಕ್ತಪಡಿಸಿದೆಯೇ ಅಥವಾ ಅವುಗಳನ್ನು ಅರ್ಥ ಮಾಡಿಕೊಂಡು ವಿಷಯವನ್ನು ಪಾಲಿಸಲು ಆಸಕ್ತಿ ವ್ಯಕ್ತಪಡಿಸಿದೆಯೇ ಎಂಬುದು ನನಗೆ ಗೊತ್ತಿಲ್ಲ. ಮುಖ್ಯ ಆಯುಕ್ತರನ್ನು ಈ ಅಂಕಿಗಳು ಏಕೆ ಕಡಿಮೆಯಾಯಿತು ಎಂದು ಖಂಡಿತವಾಗಿ ಕೇಳಬಹುದಾಗಿರುತ್ತದೆ.

ಆನಂತರ ಈಗ ನಾನು ಅಖಿಲ ಭಾರತ ಸೇವೆಗಳ ವಿಷಯಕ್ಕೆ ಬರುತ್ತೇನೆ. ಅವುಗಳೆಂದರೆ ಭಾರತೀಯ ಆಡಳಿತ ಸೇವೆಯನ್ನು ಮತ್ತು ಭಾರತೀಯ ಪೊಲೀಸ್ ಸೇವೆಗಳು. ಇವುಗಳಿಗೆ ನೇಮಕಾತಿ ಲೋಕಸೇವಾ ಆಯೋಗದ ಮೂಲಕ ೧೯೫೨ನೇ ವರ್ಷದಿಂದ ಪ್ರಾರಂಭಿಸಲಾಯಿತೆಂದು ನಾನು ಭಾವಿಸುತ್ತೇನೆ. ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ದಾತಾರ್‌ರವರು ನಾನು ತಪ್ಪು ಹೇಳಿದ್ದರೆ ಸರಿಪಡಿಸುತ್ತಾರೆ. ಆದರೆ ಇದೇ ವರ್ಷವೆಂದು ಭಾವಿಸುತ್ತೇನೆ.

**ಗೃಹ ವ್ಯವಹಾರಗಳ ಉಪ ಸಚಿವರು (ಶ್ರೀ ಬಿ.ಎನ್. ದಾತಾರ್):** ಸುಮಾರು ೧೯೪೬.

**ಡಾ. ಬಿ.ಆರ್. ಅಂಬೇಡ್ಕರ್:** ಇಲ್ಲ, ಅವರು ಪ್ರಾಂತ್ಯಗಳಿಂದ ಯಾರು ಯಾರನ್ನು ನೇಮಕಾತಿ ಮಾಡಿದರು ಎಂಬುದನ್ನು ನಾನು ಎಣಿಸುತ್ತಿಲ್ಲ. ಒಬ್ಬಿಬ್ಬರ ಹೊರತಾಗಿ ಬೇರಾವ ಪರಿಶಿಷ್ಟ ಜಾತಿ ವ್ಯಕ್ತಿಯನ್ನೂ ನೇಮಕ ಮಾಡಿಲ್ಲ; ಪ್ರಾಂತೀಯ ಸರ್ಕಾರಗಳು ಅವರನ್ನು ಅರ್ಹರೆಂದು ಪರಿಗಣಿಸಿ ಉಳಿದವರು ಅವರು ತೀರಾ ಅನರ್ಹರೆಂದು ತಿಳಿಸಿದ್ದರು. ಕೇಂದ್ರ ಲೋಕಸೇವಾ ಆಯೋಗವು ಅವರು ಅತ್ಯಂತ ಅರ್ಹರೆಂದು ಭಾವಿಸಿತು. ಅವೆಲ್ಲವು ಹಿಂದಿನ ಕಥೆ. ನಾನು ವರ್ತಮಾನದೊಂದಿಗೆ ವ್ಯವಹರಿಸುತ್ತಿದ್ದೇನೆ. ೧೯೫೨ ರಿಂದಲೂ ಭಾರತೀಯ ಆಡಳಿತ ಸೇವೆಗೆ ಯಾವುದಾದರೂ ನೇಮಕಾತಿ ನಡೆದಿದೆಯೇ? ಹೊಸ ಸಂವಿಧಾನ ಜಾರಿಗೆ ಬಂದ ಮೇಲೆ? ಭಾರತೀಯ ಆಡಳಿತ ಸೇವೆಗೆ ಲೋಕಸೇವಾ ಆಯೋಗದಿಂದ ಒಬ್ಬನೇ ಒಬ್ಬ ಪರಿಶಿಷ್ಟ ಜಾತಿಯ ಅಭ್ಯರ್ಥಿಯನ್ನು ಆಯ್ಕೆ ಮಾಡಿರುವುದನ್ನೂ ನಾನು ಕಂಡಿಲ್ಲ ಅಥವಾ ಭಾರತೀಯ ಪೋಲಿಸ್ ಸೇವೆಗೆ ಲೋಕಸೇವಾ ಆಯೋಗದಿಂದ ಒಬ್ಬನೇ ಒಬ್ಬ ಅಭ್ಯರ್ಥಿಯೂ ಆಯ್ಕೆಯಾಗಿರುವುದನ್ನು ನಾನು ಕಂಡಿಲ್ಲ. ಹಿಂದಿನ ವರ್ಷ ಮಾತ್ರ ಲೋಕಸೇವಾ ಆಯೋಗದೊಂದಿಗೆ ನಾನು ಹೋರಾಡಿದೆ ಮತ್ತು ಭಾರತೀಯ ಪೋಲಿಸ್ ಸೇವೆಗೆ ಒಬ್ಬನನ್ನು ಪರಿಗಣಿಸಲು ನಾನು ಒಪ್ಪಿಸಿದೆ. ಸೇವೆಗಳ ಪ್ರಭಾರದಲ್ಲಿರುವ ಗೃಹ ಇಲಾಖೆಯು ಈ ವಿಷಯವನ್ನು ನಿರ್ಲಕ್ಷ್ಯದಿಂದ ನೋಡುತ್ತದೆಯೇ ಅಥವಾ ಈ ವಿಷಯವನ್ನು

ಮಹತ್ವದ್ದೆಂದು ಪರಿಗಣಿಸುತ್ತದೆಯೇ ಎಂಬುದು ನನಗೆ ಆಶ್ಚರ್ಯವೆನಿಸಿದೆ. ಇವು ಕಾರ್ಯನಿರ್ವಹಣಾ ಸೇವೆಗಳು ನನ್ನ ಮಾನ್ಯ ಸ್ನೇಹಿತರಿಗೆ ಕಾರ್ಯನಿರ್ವಹಣಾ ಸೇವೆಯ ಮತ್ತು ಆಡಳಿತ ಸೇವೆಯ ನಡುವಿನ ವ್ಯತ್ಯಾಸವು ಚೆನ್ನಾಗಿಯೇ ತಿಳಿದಿದೆ. ಆಡಳಿತ ಸೇವೆಯು ಹೆಚ್ಚು ಕಡಿಮೆ ಲಿಪಿಕ ಕೆಲಸ. ಕಾರ್ಯನಿರ್ವಹಣಾ ಸೇವೆಯು, ನಿರ್ದೇಶನದ ಅಧಿಕಾರವನ್ನು ಹೊಂದಿರುತ್ತದೆ. ಅದಕ್ಕೆ ನಿರ್ದೇಶನದ ಅಧಿಕಾರವಿದೆ. ಈಗ, ನಾನು ಧೈರ್ಯದಿಂದ ಹೇಳುವುದೇನೆಂದರೆ ಒಬ್ಬ ಅಧಿಕಾರಿ ಕಾರ್ಯನಿರ್ವಹಣಾ ಹುದ್ದೆಯನ್ನು ಹೊಂದಿರುವುದಕ್ಕೆ ಹೋಲಿಸಿದರೆ ೨,೦೦೦ ಗುಮಾಸ್ತರು ಲೆಕ್ಕಕ್ಕಿಲ್ಲ. ಹಿಂದಿ ಭಾಷೆಯಲ್ಲಿ ನಾವು ಇದನ್ನು "ಮಾರ್ನೆಕೀಜಗಹ್" (ಹೊಡೆಯುವ ಸ್ಥಳ) ಎಂದು ಕರೆಯುತ್ತೇವೆ. ಈ ಬಡ ಗುಮಾಸ್ತರ ಕಥೆ ಏನು? ನೀವು ನಿಮ್ಮ ಕೋಟೆಯಲ್ಲಿ ನೋಡುವಿರಿ. ಆದರೆ ಉತ್ತರ ಪ್ರದೇಶದಲ್ಲಿ ಅಂತಹ ಕೋಟೆ ಯಾವುದೂ ಇಲ್ಲ ದೇಶದ ನನ್ನ ಭಾಗದಲ್ಲಿ ಆ ಸ್ಥಳವು ಮರಾಠಿಗರ ಕೋಟೆಯಿಂದ ತುಂಬಿದೆ.

**ಶ್ರೀ ಬಿ.ಎನ್. ದಾತಾರ್:** ಅದನ್ನು ನಾವು 'ಮಾರ್‌ಕಿಲ್ಲ' ಎಂದು ಕರೆಯುತ್ತೇವೆ.

**ಡಾ. ಬಿ.ಆರ್. ಅಂಬೇಡ್ಕರ್:** ಮನುಷ್ಯ ಅಲ್ಲಿ ಕುಳಿತು ಶತ್ರುವನ್ನು ಗುಂಡಿಕ್ಕಿ ಕೊಲ್ಲಬಹುದು ಈಗ, ಈ ಕಾರ್ಯನಿರ್ವಹಣಾ ಹುದ್ದೆಗಳು, ನಿರ್ದೇಶನವನ್ನು ನೀಡಬಹುದಾದ ಹುದ್ದೆಗಳು. ಗುಮಾಸ್ತರಿಗೆ ಎಲ್ಲ ರೀತಿಯ ರಕ್ಷಣೆ ಬೇಕು. ಯಾರೇ ಅಧಿಕಾರಿಯು, ಅವರ ಚಾರಿತ್ಯವನ್ನು ಕೆಟ್ಟ ಷರಾ ಬರೆಯುವ ಮೂಲಕ ಅಥವಾ ಮನುಷ್ಯ ಒಳ್ಳೆಯವನಲ್ಲವೆಂದು ಹೇಳಿ ನಾಶಮಾಡಬಹುದು. ಅವನನ್ನು ರಕ್ಷಿಸುವ ಒಂದೇ ಮಾರ್ಗವೆಂದರೆ ಈ ವಿಷಯವನ್ನು ಗಮನಿಸಬಹುದಾದ ಮತ್ತು ಯಾವುದೇ ಅನ್ಯಾಯವಾಗದಂತೆ ನೋಡಬಹುದಾದ ಒಬ್ಬ ವ್ಯಕ್ತಿಯನ್ನು ಕಾರ್ಯನಿರ್ವಹಣಾ ಸೇವೆಯಲ್ಲಿ ಹೊಂದುವುದು. ಹಾಗೆಯೇ ಸರ್ಕಾರವು ವಿಧಿಸಿದ ಕಾರ್ಯನೀತಿಯ ಸಂಬಂಧದಲ್ಲಿಯೂ ಸಹ. ಆ ಕಾರ್ಯನೀತಿಯು ಫಲಪ್ರದವಾಗುವುದು ಆ ಕಾರ್ಯನೀತಿಯನ್ನು ಕಾರ್ಯಗತಗೊಳಿಸುವ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿರುವ ವ್ಯಕ್ತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಕಾರ್ಯನಿರ್ವಹಣಾ ಪ್ರಾಧಿಕಾರವು ಅನುಕಂಪರಹಿತವಾಗಿದ್ದರೆ ದ್ವೇಷದಿಂದಿದ್ದರೆ ಆ ಕಾರ್ಯನೀತಿಯು ಅದು ಎಷ್ಟೇ ಒಳ್ಳೆಯದಾಗಿದ್ದರೂ ಫಲಪ್ರದವಾಗುವುದಿಲ್ಲ. ಜೊತೆಗೆ ನನ್ನ ಅನುಭವದ ಮಟ್ಟಿಗೆ ಹೇಳುವುದಾದರೆ, ಹಿಂದೂ ಜಾತಿಯೊಂದಿಗೆ ಸಂಯೋಜಿತವಾಗಿರುವ ಇಡೀ ಆಡಳಿತವು ಅತ್ಯಂತ ಅನುಕಂಪರಹಿತವಾದುದು. ಇದರ ಅಡಿ ಪರಿಶಿಷ್ಟ ಜಾತಿಗಳು ಬಳಲಬೇಕಾಗಿದೆ. ಇದಕ್ಕೆ ಕಾರಣ ಆಡಳಿತದ ಅನುಕಂಪರಹಿತ ವರ್ತನೆ ಮತ್ತು ಸೇವೆಗಳಲ್ಲಿ ಪ್ರಾತಿನಿಧ್ಯಕ್ಕೆ ನಾವು ಅರಚುತ್ತಿರುವಾಗ ಬೇಡಿಕೆಗಳನ್ನು ಕೋಮುವಾದ ಎಂದು ಕರೆಯುವ ಮೂಲಕ ಅಪಪ್ರಚಾರ ಮಾಡಲಾಗಿದೆ. ನಾವು ಏನು ಮಾಡಲು ಪ್ರಯತ್ನಿಸುತ್ತಿದ್ದೇವೆಂದರೆ ಇತರ ಜನರ ಕೋಮುವಾದವನ್ನು ಕಡಿಮೆ ಮಾಡುವುದು. ನಾವು ಕೋಮುವಾದಕ್ಕಾಗಿ ಕೇಳುತ್ತಿಲ್ಲ. ನನ್ನ ಮಾನ್ಯ ಮಿತ್ರರು ಇದನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ನಿಮ್ಮ ಆಡಳಿತ ಮತ್ತು ನಿಮ್ಮ ಕಾರ್ಯಕಾರಿಣಿಯು ಪರಿಶಿಷ್ಟ ಜಾತಿಗಳಿಗೆ ಹೆಚ್ಚು ಅನುಕಂಪ ತೋರಿಸುವವರೆಗೆ ಮತ್ತು ಅದರ ಹೊರತು ನಿಮ್ಮ ಯಾವುದೇ ಕಾನೂನುಗಳು ಮತ್ತು ನಿಮ್ಮ ಯಾವುದೇ ಆಡಳಿತ ಕಾರ್ಯನೀತಿಗಳು ಯಾವುದೇ ಯಶಸ್ಸನ್ನು ಗಳಿಸಲಾರವು.

ಮತ್ತೆ ಕೇಂದ್ರ ಸೇವೆಗಳು ಎಂದು ಕರೆಯಲಾಗುವ ವಿಷಯಕ್ಕೆ ನಾವು ಬರೋಣ. ಇಲ್ಲಿ ನಾನು ೧ನೇ ಡಿಸೆಂಬರ್ ೧೯೫೨ ರಂದು ಇದ್ದ ಖಾಯಂ ಹುದ್ದೆಗಳ ಅಂಕಿಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೇನೆ ತಾತ್ಕಾಲಿಕ ಹುದ್ದೆಗಳನ್ನಲ್ಲ. ಕಮೀಷನರು, ರೈಲ್ವೇ ಮಂತ್ರಾಲಯ, ಸಂವಹನ ಮಂತ್ರಾಲಯ, ವಿತ್ತ ಮಂತ್ರಾಲಯ, ವಾರ್ತಾ ಮಂತ್ರಾಲಯ ಮತ್ತು ಅದರ ನಿಯಂತ್ರಣದಲ್ಲಿರುವ ಇತರ ಸಂಸ್ಥೆಗಳು ಈ ವಿಷಯದ ಮೇಲೆ

ಮಾಹಿತಿಯನ್ನು ನೀಡಿಲ್ಲ. ಆದ್ದರಿಂದ, ಈ ಅಂಕಿಗಳು ಮಾಹಿತಿ ಒದಗಿಸಿದಂತಹ ಇಲಾಖೆಗಳಿಗೆ ಸಂಬಂಧಪಟ್ಟಿವೆ.

ಅಂಕಿಗಳು ಬಹಳ ಪರಿಣಾಮಕಾರಿಯಾಗಿವೆ. ವರ್ಗ ೧ರಲ್ಲಿ ವಾಸ್ತವಿಕ ಸಂಖ್ಯಾಬಲ ೭೫೨ ಆಗಿದ್ದು ಅದರಲ್ಲಿ ಪರಿಶಿಷ್ಟ ಜಾತಿಗಳ ಸಂಖ್ಯೆ ೧೦; ಗೃಹ ಮಂತ್ರಾಲಯವು ನಿಗದಿಪಡಿಸಿದ ಪ್ರಮಾಣದ ಅನುಸಾರ ಅದು ೧೭೫ ಆಗಬೇಕಿತ್ತು. ವರ್ಗ ೨ (ಗೆಜೆಟೆಡ್ ಹುದ್ದೆಗಳು)ರಲ್ಲಿ ಒಟ್ಟು ಸಂಖ್ಯೆ ೬೪೨ ಆಗಿದ್ದರೆ ಪರಿಶಿಷ್ಟ ಜಾತಿಗಳ ಸಂಖ್ಯೆ ಕೇವಲ ಏಳು : ಅದು ಪ್ರಮಾಣದ ಅನುಸಾರ ೧೦೭ ಆಗಬೇಕಿತ್ತು. ವರ್ಗ ೧ (ಗೆಜೆಟೆಡ್ ಅಲ್ಲದ) ರಲ್ಲಿ ಒಟ್ಟು ಸಂಖ್ಯೆ ೧೧೨೩ ಮತ್ತು ಅದರಲ್ಲಿ ಪರಿಶಿಷ್ಟ ಜಾತಿಗಳ ಸಂಖ್ಯೆ ೪೪ : ಅದು ೧೮೫ ಆಗಬೇಕಿತ್ತು. ವರ್ಗ ೩ರಲ್ಲಿ ಒಟ್ಟು ಸಂಖ್ಯೆ ೧೦,೩೭೨ ಆಗಿದ್ದು ಅದರಲ್ಲಿ ಪರಿಶಿಷ್ಟ ಜಾತಿಗಳ ಸಂಖ್ಯೆ ೫೩೬ ಮತ್ತು ಇದು ೭೨೮ ಆಗಬೇಕಿತ್ತು. ವರ್ಗ ೪ರಲ್ಲಿ ಒಟ್ಟು ಸಂಖ್ಯೆ ೮೮೦೭.

**ಡಾ. ಪಿ.ಸಿ. ಮಿತ್ರ (ಬಿಹಾರ್):** ಅವರಲ್ಲಿ ಎಷ್ಟು ಜನ ಅರ್ಜಿ ಸಲ್ಲಿಸಿದ್ದಾರೆ?

**ಡಾ. ಬಿ.ಆರ್. ಅಂಬೇಡ್ಕರ್:** ಪರಿಶಿಷ್ಟ ಜಾತಿಗಳ ಸಂಖ್ಯೆ ೧೨೫೧. ಆದರೆ ಅದು ೧೪೭೮ ಆಗಬೇಕಿತ್ತು. ವರ್ಗ ೪ರ ನೌಕರರು ಅವರು ಚಪ್ರಾಸಿಗಳೆಂದು ತೋರುತ್ತದೆ ಹಾಗೂ ಅಲ್ಲಿ ಪರಿಶಿಷ್ಟ ಜಾತಿಗಳ ಜನರ ಸಂಖ್ಯೆ ಸಾಕಷ್ಟು ಹೆಚ್ಚಾಗಿದೆ. ಗೃಹ ಮಂತ್ರಾಲಯದ ವ್ಯಾಪ್ತಿಯೊಳಗೆ ಕೆಲವು ಅಂಕಿಗಳಿವೆ. ಅವರು ಒಂದು ಪ್ರಮಾಣವನ್ನು ವಿಧಿಸಿದ್ದಾರೆ ಮತ್ತು ಖಂಡಿತವಾಗಿಯೂ ಆ ಪ್ರಮಾಣವನ್ನು ವಿವಿಧ ಇಲಾಖಾ ಸಚಿವರು ಪಾಲಿಸಿಕೊಂಡು ಹೋಗುತ್ತಿರುವರೇ ಇಲ್ಲವೇ ಎಂಬುದನ್ನು ಗಮನಿಸುವುದು ಅವರ ಕರ್ತವ್ಯವಾಗಿದೆ. ವಿವಿಧ ಸಚಿವರುಗಳು ಏಕೆ ಈ ಬಗ್ಗೆ ತಪ್ಪಿತಸ್ಥರಾಗುತ್ತಾರೆ ಮತ್ತು ಗೃಹ ಸಚಿವರು ಏಕೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ? ಅವರು ಏನಾದರೂ ಕ್ರಮ ತೆಗೆದುಕೊಂಡಿದ್ದರೆ ಅವರು ನಿಗದಿಪಡಿಸಿದಂತೆ ಅವರ ಕೋಟಾವನ್ನು ಸ್ವೀಕರಿಸುವ ಸಲುವಾಗಿ ಅವರು ತೆಗೆದುಕೊಂಡ ಕ್ರಮವೇನು? ಸ್ವಾಮಿ, ಅದು ತೀರಾ ವಿಷಾದದ ಚಿತ್ರ ಹೇಳಬೇಕೆಂದರೆ ಅದು ಬಹಳವೇ ತಪ್ಪು. ಅದು ಜರ್ಮನರು ಕಳೆದ ಯುದ್ಧದಲ್ಲಿ ಬಿಡಿಸಿದ ಒಂದು ವ್ಯಂಗ್ಯ ಚಿತ್ರವನ್ನು ನನಗೆ ನೆನಪಿಸುತ್ತದೆ. ವ್ಯಂಗ್ಯ ಚಿತ್ರದಲ್ಲಿ ವಾಷಿಂಗ್‌ಟನ್‌ನಲ್ಲಿನ ಒಬ್ಬ ವೃದ್ಧ ನೀಗ್ರೋ ವ್ಯಕ್ತಿಯನ್ನು ಚಿತ್ರಿಸಲಾಗಿದೆ. ಎಲ್ಲರಿಗೂ ತಿಳಿದಿರುವಂತೆ, ಅಮೇರಿಕಾದಲ್ಲಿ ನೀಗ್ರೋಗಳು ಬಿಳಿಯರ ಜೊತೆ ಸೌಹಾರ್ದ ಮನೋಭಾವವನ್ನು ಹೊಂದಿರಲಿಲ್ಲ. ಅವರು ಯಾವಾಗಲೂ ತುಂಬಾ ಕೋಪಿಷ್ಟರು, ಸಮಾನವಕಾಶವನ್ನು ಅವರಿಗೆ ನೀಡಿಲ್ಲದ್ದಕ್ಕಾಗಿ ಅವರೊಂದಿಗೆ ಜಗಳವಾಡುತ್ತಾರೆ. ಯುದ್ಧ ಘೋಷಣೆಯಾದಾಗ ಆ ನೀಗ್ರೋಗೆ ಇದ್ದಕ್ಕಿದಂತೆ ತೀವು ದೇಶಪ್ರೇಮ ಉಕ್ಕಿತು ಅವನು ತನ್ನ ಮಗನಾದ ಚಿಕ್ಕ ಹುಡುಗನಿಗೆ ತನ್ನ ದೇಶಪ್ರೇಮದ ಸ್ವಲ್ಪ ಭಾಗವನ್ನು ವರ್ಗಾಯಿಸಬೇಕೆಂದು ಹೇಳಿದನು ಅವನು ಮಾರುಕಟ್ಟೆಗೆ ಹೋದನು ಮತ್ತು ಹುಡುಗನು ಹಿಡಿದುಕೊಳ್ಳುವಂತಹ ಚಿಕ್ಕದಾದ ಅಮೆರಿಕನ್ ರಾಷ್ಟ್ರೀಯ ಬಾವುಟವನ್ನು ಖರೀದಿಸಿದನು. ಅವನು ಹೀಗೆಂದನು. "ಮಗುವೇ ಈ ದಿನ ನಾನು ನಿನಗೆ ನಮ್ಮ ರಾಜಧಾನಿಯನ್ನು ನಮ್ಮದೇ ರಾಜಧಾನಿಯನ್ನು ತೋರಿಸುತ್ತೇನೆ." ಹುಡುಗನಿಗೆ ಇದರ ಅರ್ಥವಾಗಲಿಲ್ಲ. ಹುಡುಗನನ್ನು ಬಲಗೈಲಿ ಹಿಡಿದುಕೊಂಡು ಹುಡುಗನು ಅವನ ಎಡಗೈಯಲ್ಲಿ ಬಾವುಟವನ್ನು ಹಿಡಿದುಕೊಂಡ ವೃದ್ಧನು ಅವನನ್ನು ವಾಷಿಂಗ್‌ಟನ್ ನಗರದಲ್ಲಿ ಸುತ್ತಿ ಸುತ್ತಿಸಿದನು ಅವನಿಗೆ ಸರ್ವೋಚ್ಛ ನ್ಯಾಯಾಲಯ ಕಾಂಗ್ರೆಸ್ ಹೌಸ್, ಸೆನೆಟ್ ಮುಂತಾದವನ್ನು ತೋರಿಸಿದನು ಮತ್ತು ಅಂತಿಮವಾಗಿ, ಊಟದ ನಂತರ, ಶ್ವೇತಭವನದ ಕೆಳ ಭಾಗಕ್ಕೆ ಬಂದನು. ಅಲ್ಲಿ ಒಂದು ಅಥವಾ ಎರಡು ನಿಮಿಷ ನಿಂತುಕೊಂಡನು ಮತ್ತು ಚಿಕ್ಕ ಹುಡುಗನಿಗೆ ಈ ರೀತಿ ಹೇಳಿದನು "ನನ್ನ ಪ್ರೀತಿಯ ಮಗು" ಇದೇ ನಮ್ಮ ರಾಷ್ಟ್ರಾಧ್ಯಕ್ಷರ ಮನೆ.

"ಆದರೆ ಹುಡುಗ ಹೇಳಿದ"ಅಪ್ಪಾ ನೀನು ಏನು ಹೇಳುತ್ತಿರುವೆ? ಅವನು ಬಿಳಿ ಮನುಷ್ಯ. ನೀನು ಅವನನ್ನು ಹೇಗೆ ಹೊಗಳುವೆ? ವೃದ್ಧ ಹೇಳುತ್ತಾನೆ "ಓ ಬಾಯಿ ಮುಚ್ಚು ಅದು ಕೇವಲ ಹೊರಮುಖ– ಎಂದರೆ ಒಳಗಡೆ ಅವನು ಬಹಳ ಕಪ್ಪಗಿದ್ದಾನೆ". ಈ ಮಾತು ನಮ್ಮ ಗೃಹ ಸಚಿವರಿಗೆ ತದ್ವತ್ತಾಗಿ ಅನ್ವಯವಾಗುತ್ತದೆ ಎಂದು ನನಗನಿಸುತ್ತದೆ; ಬಿಳಿಯ ಉಡುಪು ಇದ್ದರೂ ಸಹ ಒಳಗಡೆ ಅವನು ಬಹಳ ಕಪ್ಪಗಿದ್ದಾರೆ ಮತ್ತು ಇದಕ್ಕೆ ಸಾಕ್ಷ್ಯವೆಂದರೆ ಗೃಹ ಸಚಿವರು ತಮ್ಮ ಸ್ವಂತ ಆದೇಶಗಳನ್ನು ಪಾಲಿಸಿದ ವಿಷಯದಲ್ಲಿಯೇ ತೋರಿಸಿರುವ ನಿರ್ಲಕ್ಷ್ಯದಿಂದಾಗಿ ಏನನ್ನೂ ಮಾಡಿಲ್ಲ".

ಈಗಾಗಲೇ ನಾನು ಸೇವೆಗಳ ಬಗ್ಗೆ ಮಾತನಾಡಿದ್ದೇನೆ. ಇನ್ನೂ ಮುಂದೆ ನಾನು ಪ್ರಚಾರದ ಪ್ರಶ್ನೆಯ ಬಗ್ಗೆ ಮಾತನಾಡುತ್ತೇನೆ. ಭಾರತ ಸರ್ಕಾರವು ಅಸ್ಪೃಶ್ಯತೆಯ ವಿರುದ್ಧ ಪ್ರಚಾರವನ್ನು ನಡೆಸುವ ಉದ್ದೇಶಗಳಿಗಾಗಿ ೧೯೫೩–೫೪ನೇ ವರ್ಷದಲ್ಲಿ ಸುಮಾರು ೫೦ ಲಕ್ಷ ರೂ.ಗಳನ್ನು ಮಂಜೂರು ಮಾಡಿರುವುದನ್ನು ನಾನು ಗಮನಿಸಿದ್ದೇನೆ. ಯೋಜನೆಯಲ್ಲಿ ನನಗೆ ತಿಳಿದಿರುವ ಹಾಗೆ ಹಣದ ಒಂದು ಭಾಗವನ್ನು ರಾಜ್ಯ ಸರ್ಕಾರಗಳು ಆಯ್ಕೆ ಮಾಡುವ ಖಾಸಗಿ ಏಜೆನ್ಸಿಗಳಿಗೆ ನೀಡಲಾಗಿದೆ ಮತ್ತು ಹಣದ ಇನ್ನೊಂದು ಭಾಗವನ್ನು ನೇರವಾಗಿ ಭಾರತ ಸರ್ಕಾರವು ಅಖಿಲ ಭಾರತ ಸಂಘಟನೆಗಳಿಗೆ ನೀಡುತ್ತದೆ. ಇದು ಯೋಜನೆ. ಅಸ್ಪೃಶ್ಯತೆಯ ನಿವಾರಣೆ ಎಂದರೆ ನನ್ನ ಮಾನ್ಯ ಮಿತ್ರರು ಏನೆಂದು ಭಾವಿಸಿದ್ದಾರೆಂಬುದು ನನಗೆ ಗೊತ್ತಿಲ್ಲ. ಅಸ್ಪೃಶ್ಯತೆ ಎಂದರೆ ಏನು? ನಾವು ಅದನ್ನು ಎಚ್ಚರಿಕೆಯಿಂದ ಅರ್ಥಮಾಡಿಕೊಳ್ಳೋಣ. ನಾನು ಅರ್ಥ ಮಾಡಿಕೊಂಡಿರುವ ಮಟ್ಟಿಗೆ ಅಸ್ಪೃಶ್ಯತೆ ಎಂಬುದು ಹಿಂದುಗಳ ಒಂದು ರೀತಿಯ ಮನೋವ್ಯಾಧಿ ಎನ್ನಬಹುದು. ಇದು ನಾನು ಅನುಭವಿಸುತ್ತಿರುವಂತಹ ರೋಗವಲ್ಲ. ನನಗೆ ಇರುವಂತಹ ಯಾವುದೇ ಗಡ್ಡೆಯಲ್ಲ. ನಿವಾರಿಸಬಹುದಾದಂತಹ ಯಾವುದೇ ಸಂಧಿವಾತದ ನೋವು ಅಥವಾ ಯಾವುದೇ ದೈಹಿಕ ಅಸಮರ್ಥತೆಯಲ್ಲ, ಆದರೆ ಇದು ಮನೋವಿಕಲತೆ. ಅಸ್ಪೃಶ್ಯತೆಯನ್ನು ಪಾಲಿಸುವುದೇ ಯುಕ್ತವೆಂದು ಪ್ರತಿಯೊಬ್ಬ ಹಿಂದುವೂ ನಂಬುತ್ತಾನೆ. ನನ್ನ ಮಿತ್ರರು ಹಿಂದುಗಳು ಸಾವಿರಾರು ವರ್ಷಗಳಿಂದ ಬೆಳೆಸಿಕೊಂಡು ಬಂದಿರುವ ಈ ವಕ್ರತೆಯನ್ನು ಹೇಗೆ ಸರಿಪಡಿಸುತ್ತಾರೋ ನನಗೆ ಅರ್ಥವಾಗುತ್ತಿಲ್ಲ; ಅವರನ್ನೆಲ್ಲ ಯಾವುದಾದರೂ ಮಾನಸಿಕ ಚಿಕಿತ್ಸಾಲಕ್ಕೆ ಕಳುಹಿಸದ ಹೊರತು, ಅವರನ್ನು ಗುಣಪಡಿಸುವುದು ಬಹಳ ಕಷ್ಟ ಮಾತ್ರವಲ್ಲ ಅವರನ್ನು ಅಲ್ಲಿಗೆ ಕಳುಹಿಸುವುದು ಕೂಡ ನನಗೆ ಇಷ್ಟವಿಲ್ಲ. ಆದ್ದರಿಂದ ನಾವು ಏನು ಮಾತನಾಡುತ್ತಿದ್ದೇವೆ ಮತ್ತು ಏನು ಮಾಡುತ್ತಿದ್ದೇವೆ ಎಂಬುದನ್ನು ಅರ್ಥ ಮಾಡಿಕೊಳ್ಳೋಣ. ಅಲ್ಲದೆ ಅಸ್ಪೃಶ್ಯತೆಯ ಮೂಲವನ್ನು ಧರ್ಮದಿಂದ ಸೂಚಿಸಲಾಗಿದೆ ಎಂಬುದನ್ನು ಎಲ್ಲರೂ ಮನವರಿಕೆ ಮಾಡಿಕೊಳ್ಳಬೇಕು. ಅದರ ಬಗ್ಗೆ ಸಂದೇಹವೇ ಇಲ್ಲ ಹಾಗೂ ಅದನ್ನು ಮನವರಿಕೆ ಮಾಡಿಕೊಳ್ಳುವಲ್ಲಿ ನಾಚುವಂತಹದೇನೂ ಇಲ್ಲ. ಮನು, ತನ್ನ ಧರ್ಮ ಶಾಸ್ತ್ರಗ್ರಂಥದಲ್ಲಿ ಅಸ್ಪೃಶ್ಯತೆಯನ್ನು ಬಹಳ ಖಚಿತವಾಗಿ ನಿರೂಪಿಸಿದ್ದಾನೆ. ಅವನು ಅಸ್ಪೃಶ್ಯರು ಗ್ರಾಮದ ಹೊರಗೆ ಜೀವಿಸಬೇಕು, ಅವರು ಮಣ್ಣಿನ ಮಡಿಕೆಗಳನ್ನು ಮಾತ್ರ ಹೊಂದಿರಬೇಕು, ಅವರು ಶುಚಿಯಾದ ಉಡುಪನ್ನು ಹಾಕಬಾರದು, ಅವರು ತಮ್ಮ ಊಟವನ್ನು ಬೇಡಿ ತಿನ್ನಬೇಕು ಮುಂತಾಗಿ ಸೂಚಿಸಿದ್ದಾನೆ. ನೀವು ಹಿಂದೂಗಳನ್ನು ಏಕೆ ದೂಷಿಸಿತ್ತೀರಿ ಎಂಬುದನ್ನು ನಾನು ನೋಡುವುದಿಲ್ಲ. ಸಾವಿರಾರು ವರ್ಷಗಳವರೆಗೆ ಈ ಕೊಳಕು ಕಾನೂನನ್ನು ಬೋಧಿಸುವ ಮೂಲಕ ಅವರು ತಮ್ಮ ಮನಸ್ಸಿನಲ್ಲಿ ಅಸ್ಪೃಶ್ಯತೆಯು ಅತ್ಯಂತ ಪೂಜನೀಯ ಎಂಬ ತತ್ವವನ್ನು ಮೈಗೂಡಿಸಿಕೊಂಡಿದ್ದಾರೆ. ಅತ್ಯಂತ ಧಾರ್ಮಿಕವಾದ ಉತ್ತಮವಾದ ಜೀವನ ಎಂದರೆ, ಬಿಲದಲ್ಲಿ ವಾಸಿಸುವ ಇಲಿಯಂತೆ, ಯಾರೊಂದಿಗೂ ಸಂಬಂಧವಿಲ್ಲದೆ ಜೀವಿಸುವುದು ಎಂಬುದನ್ನು ಹಿಂದುಗಳಿಗೆ ಬೋಧಿಸಲಾಗಿದೆ. ಅವನು ಇದನ್ನು ಮುಟ್ಟಕೂಡದು, ಅದನ್ನು ಮುಟ್ಟುಕೂಡದು, ಅವನು ಇದನ್ನು

ತಿನ್ನಬಾರದು, ಅದನ್ನು ತಿನ್ನಬಾರದು ಇತ್ಯಾದಿ ಮತ್ತು ಇದು ಇಲಿಯು ಬಿಲದಲ್ಲಿ ವಾಸಿಸುವ ಜೀವನದ ರೀತಿ. ಒಂದು ಇಲಿಯು ಇನ್ನೊಂದು ಇಲಿಯನ್ನು ತನ್ನ ಮನೆಯಲ್ಲಿ ಇಟ್ಟು ಕೊಳ್ಳುವುದಿಲ್ಲ. ಇದು ವಾಸ್ತವ ಸ್ಥಿತಿ. ನಾವು ಏನು ಮಾಡಬಹುದೆಂದರೆ ನಾನು ಹೇಳಿದಂತೆ, ಅಸ್ಪೃಶ್ಯತೆಯು ಹಿಂದುಗಳ ಮಾನಸಿಕ ವಿಕಾರವಾಗಿದ್ದು ಜನರ ನಾಗರಿಕ ಸ್ವಾತಂತ್ರ ವನ್ನು ಒಳಗೊಳ್ಳುವಂತೆ ಅದನ್ನು ಸಾರ್ವಜನಿಕ ಜೀವನದೊಂದಿಗೆ ಒಂದಾಗಿಡುವಷ್ಟು ವಿಶಾಲವಾಗಿಲ್ಲ.

**ಡಾ. ಪಿ.ಸಿ. ಮಿತ್ರ:** ಅಸ್ಪೃಶ್ಯತೆಯೆಂಬುದು ಕೇವಲ ಪದ್ಧತಿ ಮತ್ತು ಬಳಕೆಯಲ್ಲಿದೆ ಅಷ್ಟೆ.

**ಡಾ. ಬಿ.ಆರ್. ಅಂಬೇಡ್ಕರ್:** ಆ ವಿಷಯದ ಬಗ್ಗೆ ನೀವು ತಿಳಿಯಬಯಸಿದರೆ ನಾನು ನಿಮ್ಮೊಂದಿಗೆ ಕೆಲವು ಗಂಟೆಗಳನ್ನು ಕಳಯಬಲ್ಲೆ.

ಆದ್ದರಿಂದ, ಸ್ವಾಮಿ ಈ ಪ್ರಚಾರದ ವ್ಯವಹಾರ ನನಗೆ ಅರ್ಥವಾಗುವುದು ಕಷ್ಟ. ಸಾರ್ವಜನಿಕ ಹಣದ ನಿರರ್ಥಕತೆ ಹೊರತಾಗಿ ಇದರಿಂದ ಬೇರೇನೂ ಆಗುವುದಿಲ್ಲ.

ಎರಡನೆಯದಾಗಿ ಈ ವಿಷಯವನ್ನು ಈ ಸಮಾಜ ಕಾರ್ಯಕರ್ತರ ಸಂಘಗಳೆಂದು ಕರೆಯಲಾಗುವ ಈ ಸಂಘಗಳಿಗೆ ಏಕೆ ವಹಿಸಲಾಗಿದೆಯೋ ನನಗೆ ಅರ್ಥವಾಗುವುದಿಲ್ಲ. ಈ ದೇಶದಲ್ಲಿ ಸಾಮಾಜಿಕ ಕಾರ್ಯಕರ್ತನು ಒಬ್ಬ ವೃತ್ತಿ ಪರನಾಗಿರುತ್ತಾನೆ. ಅವನಿಗೆ ಮನಸ್ಸಿನಲ್ಲಿ ಅನುಕಂಪವೆಂಬುದು ಇರುವುದಿಲ್ಲ. ಅವನು ಕೇವಲ ವೃತ್ತಿಪರ. ಮುಸ್ಲಿಂ ಲೀಗ್‌ಗೆ ಅವನು ಬೇಕಾಗಿದ್ದರೆ ಅವನು ಪ್ರಾಯಶಃ ಮುಸ್ಲಿಂ ಲೀಗಿಗೆ ಸೇವೆ ಸಲ್ಲಿಸುತ್ತಾನೆ. ಹಿಂದೂ ಮಹಾಸಭೆಗೆ ಅವನು ಬೇಕಾಗಿದ್ದಲ್ಲಿ ಅವನು ಹಿಂದೂ ಮಹಾಸಭೆಗೆ ಸೇವೆಸಲ್ಲಿಸುತ್ತಾನೆ. ಅವನು ಕಾಂಗ್ರೆಸ್ಸಿಗೆ ಬೇಕಾಗಿದ್ದಲ್ಲಿ ಅವನು ಕಾಂಗ್ರೆಸ್ಸಿಗೆ ಸೇವೆ ಸಲ್ಲಿಸುತ್ತಾನೆ. ಅವನು ವೃತ್ತಿಪರನಾದುದರಿಂದ ಪ್ರೀತಿ ಎಂಬುವಂತಹದು ಅವನಲ್ಲಿ ಇರುವುದಿಲ್ಲ. ಟಾಲ್‌ಸ್ಟಾಯ್ ಹೇಳಿರುವಂತೆ – ಸರಿಯಾಗಿಯೇ ಹೇಳಿದ್ದಾನೆ – ಸೇವೆ ಮಾಡುವ ಮೊದಲು ನೀವು ಪ್ರೀತಿಸುವುದನ್ನು ಕಲಿಯಬೇಕು, ಯಾರೇ ವ್ಯಕ್ತಿಯೂ ಯಾರನ್ನೂ ಅವನು ಪ್ರೀತಿಸದ ಹೊರತು ಸೇವೆ ಮಾಡಲಾಗುವುದಿಲ್ಲ. ವೃತ್ತಿಪರರಿಗೆ ಯಾವ ಪ್ರೀತಿಯೂ ಇರುವುದಿಲ್ಲ. ಅವರು ಕೇವಲ ತಮ್ಮ ಜೀವನೋಪಾಯವನ್ನು ಮಾಡಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಪ್ರಾಯಶಃ ಅವರು ಈ ಮೂವರಿಂದಲೂ ಸಂಭಾವನೆಯನ್ನು ಪಡೆಯುತ್ತಿದ್ದರೆ ನನಗೆ ಆಶ್ಚರ್ಯವಾಗುವುದಿಲ್ಲ. ಈ ಬಗ್ಗೆ ನಾನು ಟೀಕಿಸಲು ಬಯಸುವುದಿಲ್ಲ. ನನ್ನ ಮಾನ್ಯ ಮಿತ್ರರು ಮಾಡಬೇಕಾದ ಸರಿಯಾದ ಕೆಲಸವೆಂದರೆ, ಈ ನಿರುದ್ಯೋಗ ಪದವೀಧರರನು ವಶಕ್ಕೆ ತೆಗೆದುಕೊಳ್ಳಬೇಕೆಂದು ಭಾವಿಸುತ್ತೇನೆ. ಅವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ, ಬುದ್ಧಿವಂತರು ಸುಶಿಕ್ಷಿತ ಹುಡುಗರು. ಅವರಿಗೆ ಜೀವನದಲ್ಲಿ ಒಂದು ರೀತಿಯ ಆಧುನಿಕ ಮನೋಭಾವವಿದೆ ಎಂದು ಹೇಳಬಹುದು ಅಥವಾ ವಿಷಯದ ಬಗ್ಗೆ ಸ್ವಲ್ಪ ಸಾರ್ವಜನಿಕ ಕಾಳಜಿಯನ್ನು ಬೆಳೆಸಿಕೊಂಡವರಾಗಿದ್ದಾರೆ ಎಂದು ಹೇಳಬಹುದು. ನೀವು ಅವರನ್ನು ಸೂಕ್ತ ಸಂಬಳದ ಮೇಲೆ ನಿಯೋಜಿಸಿಕೊಳ್ಳಿ ಅವರಿಗೆ ಮೋಟಾರ್ ಬೈಕ್ ಅಥವಾ ಒಂದು ಸೈಕಲನ್ನು ಕೊಡಿ ಮತ್ತು ಪ್ರತಿಯೊಬ್ಬ ವ್ಯಕ್ತಿಗೆ ಏಳು ಹತ್ತು ಅಥವಾ ಹದಿನೈದು ಹಳ್ಳಿಗಳನ್ನು ಕೊಡಿ, ಅವರನ್ನು ಒಂದೊಂದು ಗ್ರಾಮಕ್ಕೂ ಒಂದರ ನಂತರ ಮತ್ತೊಂದಕ್ಕೆ ಹೋಗಲು ಹೇಳಿ, ಬಹಿರಂಗ ಸಭೆಗಳನ್ನು ನಡೆಸಲು ಅಸ್ಪೃಶ್ಯತೆಯ ಪ್ರಶ್ನೆಯ ಬಗ್ಗೆ ಜನರಿಗೆ ಭಾಷಣ ನೀಡಲಿ ಮತ್ತು ಈ ಅಸ್ಪೃಶ್ಯತೆಯ ಆಚರಣೆಗೆ ಆಧುನಿಕ ಪ್ರಪಂಚದಲ್ಲಿ ಈ ದೇಶದ ಮೇಲೆ ಕಳಂಕವನ್ನು ಉಂಟುಮಾಡುತ್ತಿದೆ ಎಂಬುದನ್ನು ಅವರಿಗೆ ತಿಳಿಸಿ ಹೇಳಲಿ ಆ ರೀತಿಯಲ್ಲಿ ಇದು ಹೆಚ್ಚು ಫಲಪ್ರದವಾಗುತ್ತದೆ ಮತ್ತು ನನ್ನ ಮಾನ್ಯ ಮಿತ್ರರು ಮಾಡುತ್ತಿರುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಈ ಸಾಮಾಜಿಕ ಸಂಘಟನೆಗಳಿಗೆ ಕಾಂಗ್ರೆಸ್ ಸರ್ಕಾರದ ಬಗ್ಗೆ ಏನು

ವ್ಯಾಮೋಹವೋ ನನಗೆ ತಿಳಿದಿಲ್ಲ. ಹಿಂದಿನ ಕಾಲದಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕೇಂದ್ರವು ಕಲೆಕ್ಟರನ ಮೂಲಕ ಆಡಳಿತಾತ್ಮಕವಾಗಿ ನಡೆದುಕೊಳ್ಳುತ್ತಿತ್ತು. ಅವನಿಗೆ ಹಣ ನೀಡಲಾಗುತ್ತಿತ್ತು ಮತ್ತು ಅವನಿಗೆ ಕೆಲವು ಕ್ಷೇತ್ರಗಳಲ್ಲಿ ಕೆಲವು ಕಾರ್ಯಗಳನ್ನು ನಿರ್ವಹಿಸಲು ಹೇಳಲಾಗುತ್ತಿತ್ತು. ಅವನನ್ನು ಸರ್ಕಾರಕ್ಕೆ ಹೊಣೆಗಾರನನ್ನಾಗಿಸಿತ್ತು. ಹಣವು ಅವನ ಕೈಯಲ್ಲಿ ಸುರಕ್ಷಿತವಾಗಿರುತ್ತಿತ್ತು. ನಿಮಗೆ ಕಲೆಕ್ಟರನು ಇಷ್ಟವಾಗದಿದ್ದಲ್ಲಿ ನಾನು ನಿವೇದಿಸಿದಂತೆ ಎಂದರೆ ಈ ಸೇವೆಯನ್ನು ಸಲ್ಲಿಸಲು ಉತ್ಸುಕರಾಗಿರುವ ಬುದ್ಧಿವಂತ ಹುಡುಗರ ಒಂದು ಗುಂಪನ್ನು ಒಂದು ಬಗೆಯ ಏಜೆನ್ಸಿಯನ್ನು ನಿಯೋಜಿಸಿಕೊಳ್ಳಿ. ಈ ರೀತಿಯ ಬಣ್ಣ ಬಣ್ಣದ ಗುಂಪನ್ನು ಜನರನ್ನು ಆಕರ್ಷಿಸಲು ಯಾವುದೋ ಒಂದು ಹೆಸರಿನಿಂದ ತನ್ನನ್ನು ಕರೆಸಿಕೊಳ್ಳುವುದು ಪರಿಣಾಮಕಾರಿಯೇನಲ್ಲ.

ನಂತರ ಸ್ವಾಮಿ,

**ಶ್ರೀ ಕೆ.ಬಿ. ಲಾಲ್ (ಬಿಹಾರ):** ಅವರು ವೃತ್ತಿಪರವಾಗಿರುವುದಿಲ್ಲವೆ?

**ಡಾ. ಬಿ.ಆರ್. ಅಂಬೇಡ್ಕರ್:** ಸರ್ಕಾರಿ ನೌಕರ ವೃತ್ತಿಪರನಲ್ಲ. ಏಕೆಂದರೆ, ನೀವು ತರುವಾಯ ಅವರನ್ನು ಚುನಾವಣೆಗಳಲ್ಲಿ ಮತದಾನದ ಪ್ರಚಾರಕ್ಕಾಗಿ ಬಳಸಿಕೊಳ್ಳುತ್ತೀರ. ಈ ವಿಷಯದಲ್ಲಿ ಇರುವ ಇಡೀ ತೊಂದರೆಯೇ ಇದು.

ಈಗ ಸ್ವಾಮಿ, ಇನ್ನೊಂದು ವಿಷಯದ ಬಗ್ಗೆ ಎಂದರೆ, ಭಾರತ ಸರ್ಕಾರವು ಕೆಲವು ಏಜೆನ್ಸಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಅವರಿಗೆ ಈ ಪ್ರಚಾರ ಕೆಲಸ ಮಾಡಲು ಹಣ ನೀಡುವುದನ್ನು ಕುರಿತದ್ದು. ನನ್ನ ಮತ್ತು ಗೃಹ ಇಲಾಖೆಯ ನಡುವೆ ನಡೆದ ಯಾವುದೋ ಪತ್ರಸಂವಹನದ ಮೇಲೆ ಕೆಲವು ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಅವರು ಇತರ ಏಜೆನ್ಸಿಗಳು ಹಣ ಸ್ವೀಕರಿಸಿ ಪ್ರಚಾರ ಮಾಡುವ ಆಯ್ಕೆಯನ್ನು ಒಪ್ಪಿಕೊಂಡಿವೆ ಎಂಬುದಾಗಿ ಹೇಳಿದರು. ಅದನ್ನು ನಿರಾಕರಿಸಿದ ಒಬ್ಬ ತುಂಟ ವ್ಯಕ್ತಿಯಾಗಿದ್ದೆ ಮತ್ತು ಈ ತಪ್ಪನ್ನು ನನ್ನ ಕಡೆಯಿಂದ ಸಾರ್ವಜನಿಕರ ಗಮನಕ್ಕೆ ತರುವುದು ಒಳ್ಳೆಯದಿರಬಹುದೆಂದು ಅವರು ಆಲೋಚಿಸಿದರು. ನಾನು ಗೃಹ ಇಲಾಖೆಗೆ ಬರೆದ ಇಡೀ ಪತ್ರವನ್ನು ಅವರು ನೀಡಿರಬೇಕಿತ್ತು. ನಾನು ತಪ್ಪು ತಿಳಿಯದಿದ್ದರೆ, ಶ್ರೀ ದಾತಾರ್‌ರವರು ವಿಷಯವನ್ನು ಚರ್ಚಿಸಿದ್ದಾರೆಂದು ಭಾವಿಸುತ್ತೇನೆ ಮತ್ತು ನಾನು ಏನು ಹೇಳಿದೆ ಎಂಬುದನ್ನು ಎಂದರೆ ಭಾರತ ಸರ್ಕಾರವು ಆಯ್ಕೆ ಮಾಡಿ ನಿಕಾಯಗಳು, ಹರಿಜನ ಲೀಗ್ ಮತ್ತು ಕೆಲವು ಇತರ ಲೀಗ್, ಇವೆಲ್ಲವೂ ರಾಜಕೀಯ ನಿಕಾಯಗಳಾಗಿದ್ದವು ಎಂದು ನಾನು ಹೇಳಿದುದನ್ನು ಅವರು ನೆನಪಿಸಿಕೊಳ್ಳುತ್ತಾರೆ. ಮಹಾಮಂಡಳಿಯೂ ಸಹ ರಾಜಕೀಯ ನಿಕಾಯವಾಗಿತ್ತು. ಆದ್ದರಿಂದ ಸರ್ಕಾರವು ಸಾರ್ವಜನಿಕ ಹಣವನ್ನು ರಾಜಕೀಯ ಮಂಡಳಿಗಳ ವಶಕ್ಕೆ ನೀಡಿರುವುದು ತಪ್ಪಾಗಿತ್ತು. ಅವರು ಆ ಹಣವನ್ನು ರಾಜಕೀಯ ಪ್ರಚಾರಕ್ಕೆ ಉಪಯೋಗಿಸಬಹುದೇ ಹೊರತು ಪರಿಶಿಷ್ಟ ಜಾತಿಗಳ ಉದ್ಧಾರಕ್ಕಾಗಿ ಅಲ್ಲವೆಂದು ನಾನು ಭಾವಿಸುತ್ತೇನೆ ಮತ್ತು ಬೊಂಬಾಯಿಯಲ್ಲಿ ಸ್ಥಾಪಿತವಾಗುತ್ತಿದ್ದ ಇನ್ನೊಂದು ನಿಕಾಯದ ಅಧ್ಯಕ್ಷರಿದ್ದರು ಎಂಬುದನ್ನು ಅದು ಸ್ಪಷ್ಟವಾಗಿ ಸಾಮಾಜಿಕ ಕಲ್ಯಾಣ ನಿಕಾಯವಾಗಿತ್ತು. ಅದು ಹೆಚ್ಚು ಹಣವನ್ನು ಹೊಂದಿತ್ತು ಎಂದರೆ ಸುಮಾರು ಎರಡರಿಂದ ಮೂರು ಲಕ್ಷ ರೂ. ಗಳವರೆಗೆ ಹಣವನ್ನು ಹೊಂದಿತ್ತು . ಅವರು ಒಂದು ದೊಡ್ಡ ಕೋಣೆಯನ್ನು ನಿರ್ಮಿಸಿ ಅದರಲ್ಲಿ ಚಟುವಟಿಕೆಗಳನ್ನು ನಡೆಸುತ್ತಿದ್ದರು ಎಂಬುದಾಗಿ ನಾನು ಅವರಿಗೆ ತಿಳಿಸಿದೆ. ಅದರಲ್ಲಿ, ಆ ನಿಕಾಯವು ಬೊಂಬಾಯಿಯಲ್ಲಿ ರಚಿತವಾಗಿದ್ದರೂ ಅದರ ಸಾಮಾಜಿಕ ಕಾರ್ಯಕ್ರಮಗಳು ಬೊಂಬಾಯಿ ನಗರಕ್ಕಾಗಲಿ ಅಥವಾ ಬೊಂಬಾಯಿ ರಾಜ್ಯಕ್ಕಾಗಲಿ ಸೀಮಿತವಾಗಿರಲಿಲ್ಲ ಎಂಬುದನ್ನು ತಿಳಿಸಲು ನಾನು ಮರೆತುಬಿಟ್ಟಿದ್ದೆ. ಭಾರತದ ಯಾವುದೇ

ಭಾಗದಲ್ಲಿ ಯಾವುದೇ ರೀತಿಯ ಸಾಮಾಜಿಕ ಕಾರ್ಯವನ್ನು ಮಾಡಲು ಅವರಿಗೆ ಮತ್ತು ಅವಕಾಶವಿರುತ್ತಿತ್ತು. ಒಂದು ವಿಷಯವೆಂದರೆ ಅದರ ಕೇಂದ್ರ ಮತ್ತು ಕೇಂದ್ರ ಕಛೇರಿಯು ಬೊಂಬಾಯಿಯಲ್ಲಿರುತ್ತಿತ್ತು. ಶ್ರೀ ದಾತಾರ್ ನನ್ನ ಸಲಹೆಯನ್ನು ನಿರಾಕರಿಸಿದರು ಮತ್ತು ಈ ವಿಷಯವನ್ನು ವರದಿಯಲ್ಲಿ ತಿಳಿಸಿದರು. ನಾನು ಹೇಳಬೇಕಾಗಿದ್ದು ಇಷ್ಟೇ. ಶ್ರೀ ದಾತಾರ್‌ರವರಿಗೆ ನನ್ನ ಸಲಹೆಯು ಅಂಗೀಕೃತವಾಗದಿದ್ದುದನ್ನು ನನಗೆ ತಿಳಿಸಿದ್ದರೆ ನಾನು ನನ್ನ ಮನಸ್ಸನ್ನು ಬದಲಾಯಿಸಿಕೊಳ್ಳುತ್ತಿದ್ದೆ ಮತ್ತು ನೀಡಿಕೆಯನ್ನು ಫೆಡರೇಷನ್ನಿನ ಹೆಸರಿನಲ್ಲಿಯೇ ಅಂಗೀಕರಿಸುತ್ತಿದ್ದೆ. ಏಕೆಂದರೆ ಯಾವುದೇ ಇತರ ಕಾರಣಕ್ಕಾಗಿಯಾಗಲಿ ಭಿಕ್ಷುಕರು ಆಯ್ಕೆದಾರರಾಗಿರುವುದಿಲ್ಲ. ಹಾಗು ಈಗಲೂ ಸಹ ಭಾರತ ಸರ್ಕಾರವು ಹಣವನ್ನು ಒಪ್ಪಿಸಬಹುದಾದಂತಹ ಏಕೈಕ ನಿಕಾಯವೆಂದರೆ ಅದು ಫೆಡರೇಷನ್ ಎಂಬುದಾಗಿ ನಾನು ಒತ್ತಾಯಿಸುವುದರಲ್ಲಿ ನನಗೆ ಹಿಂಜರಿಕೆ ಏನೂ ಇಲ್ಲ ಎಂಬುದಾಗಿ ಹೇಳುತ್ತೇನೆ. ಆದರೆ ಈಗಲೂ ನಾನು ಈ ಕೆಲಸವನ್ನು ರಾಜಕೀಯ ನಿಕಾಯಗಳಿಗೆ ಒಪ್ಪಿಸಬಾರದಿತ್ತೆನ್ನುವ ನನ್ನ ಅಭಿಪ್ರಾಯವನ್ನು ಇನ್ನೂ ಉಳಿಸಿಕೊಂಡಿದ್ದೇನೆ.

ಈಗ ಸ್ವಾಮಿ, ನಾನು ಪರಿಶಿಷ್ಟ ಜಾತಿಗಳ ಆರ್ಥಿಕ ದಾಸ್ಯ ಮುಕ್ತಿಯ ಪ್ರಶ್ನೆಗೆ ಬರುತ್ತೇನೆ. ಶಿಕ್ಷಣದ ಜೊತೆಗೆ ಪರಿಶಿಷ್ಟ ಜಾತಿಗಳ ಸ್ಥಾನಮಾನಗಳನ್ನು ಹೆಚ್ಚಿಸಲು ಸೇವೆಗಳು ಅತಿ ಮುಖ್ಯವಾದ ವಿಷಯ ಎಂದು ನಾನು ಭಾವಿಸುತ್ತೇನೆ. ಈಗ ಪರಿಶಿಷ್ಟ ಜಾತಿಗಳ ಆರ್ಥಿಕ ಸ್ಥಾನಮಾನಗಳನ್ನು ಹೆಚ್ಚಿಸುವ ಮಾರ್ಗೋಪಾಯಗಳು ಯಾವುವು? ವಾಸ್ತವವಾಗಿ ಪರಿಶಿಷ್ಟ ಜಾತಿಗಳ ಆರ್ಥಿಕ ಉನ್ನತಿಯು ಲಾಭದಾಯಕ ಉದ್ಯೋಗಕ್ಕೆ ಪ್ರವೇಶವೆಂದು ಕರೆಯಬಹುದಾದ ಅವಕಾಶಗಳ ಮೇಲೆ ಅವಲಂಬಿತವಾಗಿರುತ್ತದೆ. ಅವರು ಎಲ್ಲಿ ಲಾಭದಾಯಕ ಉದ್ಯೋಗವನ್ನು ಕಾಣುವರೋ ಅಲ್ಲಿ ಅವರಿಗೆ ಅವಕಾಶಗಳನ್ನು ತೆರೆಯದಿದ್ದರೆ ಹಾಗೂ ತೆರೆಯುವವರೆಗೆ ಅವರ ಆರ್ಥಿಕ ಉನ್ನತಿಯು ಕಂಡು ಬರುವುದಿಲ್ಲ. ಅವರು ಜೀತದಾಳಾಗಿಯೇ ಉಳಿಯುತ್ತಾರೆ, ಜೀತದಾಳಾಗದಿದ್ದರೆ ಗ್ರಾಮಗಳಲ್ಲಿ ಭೂಮಾಲೀಕ ವರ್ಗಗಳ ಗುಲಾಮರಾಗಿರುತ್ತಾರೆ. ಈ ವಿಷಯದಲ್ಲಿ ಯಾವುದೇ ಸಂದೇಹವಿರುವುದಿಲ್ಲ. ಈಗ ಸ್ವಾಮಿ, ಈ ಲಾಭದಾಯಕ ಉದ್ಯೋಗಗಳ ಬಗ್ಗೆ ಸರ್ಕಾರವು ಮುಖ್ಯವಾಗಿ ಗಮನ ಹರಿಸಬೇಕಾದ ವಿಷಯವೆಂದರೆ ಪರಿಶಿಷ್ಟ ಜಾತಿಗಳ ಜನರಿಗೆ ಜಮೀನು ನೀಡುವುದು. ಅವರು ಜಮೀನಿನಲ್ಲಿ ನೆಲೆಗೊಳ್ಳಬೇಕು ಅದರಿಂದಾಗಿ ಅವರಿಗೆ ಸ್ವತಂತ್ರ ಮಾರ್ಗದ ಜೀವನಾಧಾರವನ್ನು ಪಡೆಯಬಹುದು, ಯಾರ ಬಗ್ಗೆಯಾದರೂ ಹೆದರುವುದು ತಪ್ಪುತ್ತದೆ, ಅವರು ತಲೆ ಎತ್ತಿ ನಡೆಯುವಂತಾಗುತ್ತದೆ ಮತ್ತು ನಿರ್ಭಯವಾಗಿ ಜೀವನ ನಡೆಸುತ್ತಾರೆ. ಇದು ಎಲ್ಲ ಸಚಿವರುಗಳೂ ಅನುಮೋದಿಸುವ ವಿಷಯ ಎಂಬುದಾಗಿ ನಾನು ಭಾವಿಸುತ್ತೇನೆ. ಸರ್ಕಾರವು ಮಾಡಬೇಕಾದುದೇನೆಂದರೆ ಪರಿಶಿಷ್ಟ ಜಾತಿಗಳಿಗೆ ಜಮೀನನ್ನು ಒದಗಿಸಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯ. ನಾವು ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಮೊದಲನೆಯದಾಗಿ ಪರಿಶಿಷ್ಟ ಜಾತಿ ಜನರಿಗೆ ನೀಡಲು ಜಮೀನು ಲಭ್ಯವಿದೆಯೆ? ಈಗ ಜಮೀನು ಹೊಂದಿರುವ ವ್ಯಕ್ತಿಗಳಿಂದ ಜಮೀನನ್ನು ವಶಪಡಿಸಿಕೊಂಡು ಅದನ್ನು ಪರಿಶಿಷ್ಟ ಜಾತಿ ಜನರಿಗೆ ನೀಡಲು ಸರ್ಕಾರಕ್ಕೆ ಯಾವುದಾದರೂ ಅಧಿಕಾರವಿದೆಯೆ? ಜಮೀನನ್ನು ಕೋರಿದರೆ ಅದನ್ನು ಖರೀದಿಸುವ ವಿಷಯದಲ್ಲಿ ಸರ್ಕಾರವು ಪರಿಶಿಷ್ಟ ಜಾತಿಯ ಜನರಿಗೆ ಹಣಕಾಸು ಸಹಾಯ ನೀಡಲು ಸಾಧ್ಯವೆ? ಇವು ಪರಿಶಿಷ್ಟ ಜಾತಿ ಜನರಿಗೆ ಜಮೀನನ್ನು ನೀಡಬಹುದಾದ ಮೂರು ಮಾರ್ಗಗಳು. ಸರ್ಕಾರವು ಕಾನೂನಿನ ಮೂಲಕ ಜಮೀನನ್ನು ಯಾರು ಹೊಂದಿರುವರೋ ಅವರ ಹಿಡುವಳಿಯನ್ನು ಮಿತಿಗೊಳಿಸಬೇಕು ಮತ್ತು ಅಧಿಕ ಜಮೀನನ್ನು ಅವರಿಂದ ವಶಪಡಿಸಿಕೊಂಡು ಅದನ್ನು ಪರಿಶಿಷ್ಟ ಜಾತಿ ಜನರಿಗೆ ನೀಡಬೇಕು. ಎರಡನೆಯದಾಗಿ, ಮಾರಾಟಕ್ಕೆ ಯಾವುದಾದರೂ ಜಮೀನು ಇದ್ದರೆ ಅದನ್ನು

ಖರೀದಿಸಲು ಹಣಕಾಸು ವ್ಯವಸ್ಥೆ ಮಾಡಬಹುದು.

ಸ್ವಾಮಿ, ಭಾರತದಲ್ಲಿ ಭೂಹಿಡುವಳಿಯು ಕೇವಲ ಆರ್ಥಿಕ ಜೀವನಾಧಾರದ ವಿಷಯವಲ್ಲವೆಂಬುದು ಎಲ್ಲರಿಗೂ ಸ್ಪಷ್ಟವಾಗಿದೆ. ಇದು ಸಾಮಾಜಿಕ ಸ್ಥಾನ–ಮಾನದ ವಿಷಯವೂ ಆಗಿದೆ. ಜಮೀನನ್ನು ಹೊಂದಿರುವ ಒಬ್ಬ ವ್ಯಕ್ತಿಯು ಜಮೀನು ಹೊಂದದಿರುವ ವ್ಯಕ್ತಿಗಿಂತ ಹೆಚ್ಚಿನ ಸ್ಥಾನ–ಮಾನವನ್ನು ಹೊಂದಿರುತ್ತಾನೆ. ಗ್ರಾಮಗಳಲ್ಲಿ ಈ ಆರ್ಥಿಕ ಸ್ಥಾನ–ಮಾನದ ವಿಷಯವು ಪ್ರತಿಯೊಬ್ಬರಿಗೂ ಅತಿಮುಖ್ಯವಾದುದೆಂಬುದು ಈಗ ಸ್ಪಷ್ಟವಾಗಿದೆ. ಹಾಗೂ ಯಾವ ಹಿಂದುವೂ ಒಬ್ಬ ಅಸ್ಪೃಶ್ಯನು ಒಂದು ತುಂಡು ಜಮೀನನ್ನು ಹೊಂದುವುದನ್ನು ಬಯಸುವುದಿಲ್ಲ. ಅದರಿಂದ ಸಾಮಾಜಿಕ ವ್ಯವಸ್ಥೆಯಡಿಯಲ್ಲಿ ಅವನ ಕೋಮು ಹಕ್ಕು ಪಡೆದಿರುವುದಕ್ಕಿಂತ ಹೆಚ್ಚಿನ ಸ್ಥಾನ–ಮಾನವನ್ನು ಇವನು ಪಡೆಯಬಹುದು ಎಂಬ ಕಾರಣ. ಸ್ವಾಮಿ, ಒಬ್ಬ ಪರಿಶಿಷ್ಟ ಜಾತಿ ಮನುಷ್ಯನು ಗ್ರಾಮದಲ್ಲಿ ಒಂದು ತುಂಡು ಭೂಮಿಯನ್ನು ಪಡೆಯುವ ಪ್ರಶ್ನೆಯು, ಖಂಡಿತ ಸಾಧ್ಯವಿಲ್ಲವೆಂಬುದು ನನ್ನ ಅನಿಸಿಕೆ. ಸರ್ಕಾರವು ಜಮೀನು ಹಿಡುವಳಿಗಳನ್ನು ಸೀಮಿತಗೊಳಿಸುವ ಕಾನೂನನ್ನು ಎಷ್ಟರ ಮಟ್ಟಿಗೆ ಮಾಡಲು ಸಮರ್ಥವೋ ನನಗೆ ತಿಳಿಯದು. ಅಲ್ಲಿ ಸರಾಗವಾಗಿ ಒಂದು ಕ್ರಾಂತಿಯಾಗಬಹುದು. ಸರ್ಕಾರವು ಭೂಶಾಸನವನ್ನು ಹೊರಡಿಸುವಾಗ ಸ್ವತ್ತಿನ ಹಕ್ಕನ್ನು ರೈತರಿಗೆ ಕೊಡುವ ಬದಲು ಹಕ್ಕನ್ನು ತಮ್ಮಲ್ಲಿಯೇ ಜಮೀನಿನ ಸಾರ್ವಭೌಮ ಮಾಲೀಕರಾಗಿ ಇಟ್ಟುಕೊಂಡಿದ್ದರೆ ಜಮೀನು ಸರ್ಕಾರಕ್ಕೆ ಸೇರಿರುವುದರಿಂದ ಯಾರೊಬ್ಬರೂ ಕೆಲವು ಎಕರೆಗಳಷ್ಟಕ್ಕಿಂತ ಹೆಚ್ಚಿನ ಜಮೀನನ್ನು ಹೊಂದಿರಲು ಅನುಮತಿಸುವುದಿಲ್ಲ ಎನ್ನುವ ಕಾನೂನನ್ನು ಹೊರಡಿಸಲು ಸಾಧ್ಯವಾಗಬಹುದಿತ್ತು. ಆದರೆ, ಸರ್ಕಾರವು ಈ ರೈತ ವ್ಯಾಪಾರಿಗಳನ್ನು ಸೃಷ್ಟಿಸುವಲ್ಲಿ ಅತ್ಯಂತ ಅವಿವೇಕದ ವರ್ತನೆಯನ್ನು ಮಾಡಿದೆ. ಸ್ವಾಮಿ, ಒಮ್ಮೆ ಟ್ಯಾಲಿರ್‍ಯಾಂಡ್ ಎಂಬುವನು ನೆಪೋಲಿಯನ್‌ಗೆ "ಯೂರೋಪ್ ಬಗ್ಗೆ ಏಕೆ ಅಷ್ಟು ಕಾಳಜಿ ವಹಿಸುತ್ತೀರಿ? ನೀವು ಏಕೆ ಈ ಬಗೆಯ ಹಗೆತನವನ್ನು ಸೃಷ್ಟಿಸುವಿರಿ? ನೀವು ಏಕೆ ಫ್ರಾನ್ಸಿನ ಮಹಾರಾಜನಾಗಲು, ನಿಮ್ಮ ಪ್ರಧಾನ ಮಂತ್ರಿಯಾಗಲು ನನ್ನನ್ನು ಒಪ್ಪಬಾರದು?" ಎಂದು ಕೇಳಿದನು. ನೆಪೋಲಿಯನ್ನನ ಅರಮನೆಯ ಹೊರಗಡೆ ಕೆಲವು ಸೈನಿಕರು ತಮ್ಮ ಗನ್‌ಗಳನ್ನು ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತಿರುವ ಬಾಯ್ನೆಟ್‌ಗಳೊಂದಿಗೆ ನಿಂತಿದ್ದರು. ನೆಪೋಲಿಯನ್ ಒಬ್ಬ ನಿಂದನೀಯ ವ್ಯಕ್ತಿಯಾಗಿದ್ದನು. ಅವನು ಟಾಲಿರೆಂಡ್‌ಗೆ ಈ ರೀತಿ ಹೇಳಿದನು. "ನೀವು ಸಿಲ್ಕ್ ಸ್ಟಾಕಿಂಗ್‌ನಲ್ಲಿ ಬೇಕಾದಷ್ಟು ಮಾಡಿದ್ದೀರಿ, ನೀವು ನನ್ನ ಬೆಟಾಲಿಯನ್‌ಗಳನ್ನು ನೋಡಿದ್ದೀರಾ?" ಎಂದು ಕೇಳಿದನು. ಅದಕ್ಕೆ ಅವನು "ಹೌದು ನಾನು ಅವರನ್ನು ನೋಡಿದ್ದೇನೆ" ಎಂದನು. ಆಗ ನೆಪೋಲಿಯನ್ "ನಾನು ಚಕ್ರವರ್ತಿ ಏಕಾಗಬಾರದು?" ಎಂದು ಕೇಳಿದನು. ಅದಕ್ಕೆ ಟ್ಯಾಲಿರಿಂಡನು ನೀಡಿದ ಉತ್ತರವನ್ನು ನನ್ನ ಮಿತ್ರರು ನೆನಪಿನಲ್ಲಿಟ್ಟು ಕೊಳ್ಳುತ್ತಾರೆ "ನೀವು ಈ ಬಾಯ್ನೆಟ್ ಮೇಲೆ ಕುಳಿತುಕೊಳ್ಳುವುದರ ಹೊರತಾಗಿ ಏನನ್ನಾದರೂ ಮಾಡಬಹುದು" ಎಂದನು. ಈಗ, ನೀವು ಈ ರೈತ ವ್ಯಾಪಾರಿಗಳನ್ನು ಸೃಷ್ಟಿಸಿದ್ದೀರಿ. ನೀವು ಅವರ ಮೇಲೆ ಕುಳಿತುಕೊಳ್ಳಲಾಗುವುದಿಲ್ಲ; ಅವರು ನಿಮ್ಮ ಮೇಲೆ ಕುಳಿತುಕೊಳ್ಳುತ್ತಾರೆ. ಹಾಗೆ ಮಾಡುವುದು ಬೇಡವೆಂದು ಅನೇಕ ಜನರು ಸಲಹೆನೀಡಿದ್ದಾಗ್ಯೂ ನೀವು ಬಹಳ ತಪ್ಪು ಮಾಡಿ ಅದನ್ನು ಹೊಲೆಗೆಡಿಸಿದ್ದೀರಿ. ಕೇವಲ ರಾಜಕೀಯ ಚುನಾವಣೆಗಳಲ್ಲಿ ಗೆಲ್ಲಲು, ನೀವು ಹಾಗೆ ಮಾಡಿದಿರಿ. ಮತ್ತೆ ಅದರ ಫಲವನ್ನು ನೀವು ಈಗ ಉಣ್ಣುತ್ತಿದ್ದೀರಿ. ಆದರೂ ಹಿಡುವಳಿಗಳನ್ನು ಜಾರಿಗೆ ತರುವುದು ಈ ಮಿತಿಯು ಅಸಾಧ್ಯವಾದ ಸಂಗತಿಯೇ ಸರಿ.

ನನ್ನ ಸೇಹಿತ ಶ್ರೀ ಗೋವಿಂದ ವಲ್ಲಭ ಪಂತ ಅವರು ನೇಮಕ ಮಾಡಿದ ಯುನೈಟೆಡ್ ಪ್ರಾವಿನ್ಸಸ್ ಟೆನನ್ಸಿ ಕಮಿಟಿಯ ವರದಿಯನ್ನು ಅಧ್ಯಯನ ಮಾಡಬೇಕಾಗಿಬಂತು. ಅದರ ಒಂದೊಂದು ಸಾಲನ್ನೂ

ನಾನು ತಿಳಿದಿದ್ದೇನೆ ಮತ್ತು ಜಮೀನು ಹಿಡುವಳಿಗಳು ಸೀಮಿತವಾಗಿರಬೇಕಿತ್ತು ಎನ್ನುವುದನ್ನು ಎತ್ತಿದ ಜನರಿಗೆ ಅದರ ಸಂಗತಿಗಳೇನಾದರೂ ತಿಳಿದಿದೆಯೇ ಎಂಬುದು ನನಗೆ ಆಶ್ಚರ್ಯವಾಗಿದೆ. ಉತ್ತರ ಪ್ರದೇಶದಲ್ಲಿ ಸರಾಸರಿ ಹಿಡುವಳಿ ಎಷ್ಟು? ಅತೀ ಕಡಿಮೆ ಎಂದರೆ ೧ಎಕರೆ ಮತ್ತು ಅತೀ ಹೆಚ್ಚು ಎಂದರೆ ಸುಮಾರು ನಾಲ್ಕು ಅಥವಾ ಐದು ಎಕರೆಗಳು ಅದರಲ್ಲಿರುವುದು ಅಷ್ಟೇ ಮತ್ತು ಮುಂದುವರಿದ ವಿಷಯವೆಂದರೆ ಉತ್ತರ ಪ್ರದೇಶದಲ್ಲಿ ಜಮೀನಿನ ಪ್ರತಿಯೊಂದು ಅಂಗುಲವು ಸಾಗುವಳಿಯಲ್ಲಿದೆ ಮತ್ತು ವ್ಯವಸಾಯ ನಡೆಯುತ್ತಿದೆ. ಅಲ್ಲಿ ನೀವು ಏನೂ ಮಾಡಲಿಕ್ಕಾಗುವುದಿಲ್ಲ ಹಾಗೂ ಇತರ ರಾಜ್ಯಗಳಲ್ಲಿಯೂ ಬಹುತೇಕ ಇದೇ ಪರಿಸ್ಥಿತಿ ಇದೆ ಎಂಬುದು ನನಗೆ ಖಂಡಿತವಾಗಿ ತಿಳಿದಿದೆ. ಆದ್ದರಿಂದ ಮಾನ್ಯ ಗೃಹ ಸಚಿವರಿಗೆ ನನ್ನ ನಿವೇದನೆ ಎಂದರೆ ಪರಿಶಿಷ್ಟ ಜಾತಿಯ ಜನರಿಗೆ ಓ ಸುಮ್ಮನಿರಿ, ನಾವು ನಿಮಗೆ ಜಮೀನಿನ ತುಂಡೊಂದನ್ನು ನೀಡುತ್ತೇವೆ, ನಾವು ಅದಕ್ಕೆ ಪರಿಮಿತಿ ವಿಧಿಸುತ್ತೇವೆ ಅಥವಾ ನಿಮ್ಮ ಖರೀದಿಗೆ ನಾವು ಹಣ ನೀಡುತ್ತೇವೆ ಎಂದು ಹೇಳುತ್ತ ಪರಿಶಿಷ್ಟ ಜಾತಿಯ ಜನರನ್ನು ಮೂರ್ಖರನ್ನಾಗಿಸುವ ಹೊರತು ನಾವು ಇದನ್ನು ಮಾಡುತ್ತೇವೆ ಅಥವಾ ಅದನ್ನು ಮಾಡುತ್ತೇವೆ. ಈ ರೀತಿ ನೀವು ಅವರನ್ನು ಮೂರ್ಖರನ್ನಾಗಿ ಮಾಡುವ ಬದಲು ಅದನ್ನು ಮಾಡಲು ನೀವು ಇತರ ಯಾವುದಾದರೂ ವಿಧಾನವನ್ನು ಆಲೋಚಿಸಬೇಕಾಗಿತ್ತು. ಇದು ನೀವು ಪರಿಹರಿಸಬೇಕಾದ ಸಮಸ್ಯೆ ಮತ್ತು ಇದನ್ನು ನೀವು ಪರಿಹರಿಸದಿದ್ದಲ್ಲಿ ಅದರಿಂದಾಗುವ ಪರಿಣಾಮಗಳೇನೆಂಬುದು ನಿಮಗೂ ತಿಳಿದಿದೆ. ಅತ್ಯಂತ ಕೆಟ್ಟ ಪರಿಣಾಮಗಳುಂಟಾಗುತ್ತದೆ. ಬೆಂಕಿ ಹೊರಗೆ ಉರಿಯುತ್ತಿದೆ; ಅದು ಸುಲಭವಾಗಿ ಒಳಬರಬಹುದು ಮತ್ತು ಪರಿಶಿಷ್ಟ ಜಾತಿಯ ಜನರು ಬ್ಯಾನರ್ ಹಿಡಿಯುತ್ತಾರೆ ಮತ್ತು ನೀವು ಮತ್ತು ನಿಮ್ಮ ಸಂವಿಧಾನ ಅದರ ಅಡಿ ಇರುತ್ತದೆ. ಯಾವುದೂ ಉಳಿಯುವುದಿಲ್ಲ.

ಈಗ, ಸ್ವಾಮಿ, ನಾನು ನನ್ನ ಮಾನ್ಯ ಮಿತ್ರರಿಗೆ ಒಂದೇ ಒಂದು ಸಲಹೆ ಕೊಡುತ್ತೇನೆ ಮತ್ತು ಅದೇನೆಂದರೆ ಈ ದೇಶದಲ್ಲಿ ಸಾಗುವಳಿಯೋಗ್ಯ ಭೂಮಿ ಎಂದು ಕರೆಯಲಾಗುವ ಅತ್ಯಂತ ಹೆಚ್ಚಿನ ಪ್ರಮಾಣದ ಭೂಮಿ ಇದೆ ಎಂಬುದನ್ನು ಯೋಜನಾ ಆಯೋಗದ ವರದಿಯಿಂದ ನಾನು ಕಂಡು ಕೊಂಡಿದ್ದೇನೆ. ಯೋಜನಾ ಆಯೋಗದ ಪ್ರಕಾರ ಅದರ ಆ ಪ್ರಮಾಣ ೯೮ ದಶಲಕ್ಷ ಎಕರೆ ಪ್ರದೇಶ. ಈಗ ನನ್ನ ಮಿತ್ರರಿಗೆ ನಾನು ನೀಡುವ ಸಲಹೆ ಎಂದರೆ ಸರ್ಕಾರವು ಸಂವಿಧಾನವನ್ನು ತಿದ್ದುಪಡಿ ಮಾಡಲು ಪ್ರಯತ್ನಿಸುತ್ತಿದೆ ಎಂದು ನಾನು ಬಲ್ಲೆ. ಸಂವಿಧಾನ ತಿದ್ದುಪಡಿ ಮಾಡುವುದು ಅವರಿಗೆ ಬಹಳ ಇಷ್ಟ. ನೀವು ಸಂವಿಧಾನವನ್ನು ಪ್ರತಿ ಶನಿವಾರ ತಿದ್ದುಪಡಿ ಮಾಡುತ್ತಿದ್ದರೆ ಸಂವಿಧಾನ ಏಕೆ ಬೇಕು? ನನಗೆ ಅರ್ಥವಾಗುತ್ತಿಲ್ಲ. ಆದರೂ ನೀವು ಅದನ್ನು ತಿದ್ದುಪಡಿ ಮಾಡುತ್ತಿರುವುದರಿಂದ ಈ ಬಗ್ಗೆ ನನ್ನ ಸಲಹೆ ಏನೆಂದರೆ ನೀವು ಸಂವಿಧಾನವನ್ನು ತಿದ್ದುಪಡಿ ಮಾಡಿ ಮತ್ತು ಬಂಜರು ಭೂಮಿಯನ್ನು ೧ನೇ ಸಂಖ್ಯೆ ಪಟ್ಟಿಗೆ ಸೇರಿಸಿ. ಅದರಿಂದ ಅದು ಕೇಂದ್ರ ಸರ್ಕಾರದ ವ್ಯಾಪ್ತಿಯೊಳಗೆ ಬರುತ್ತದೆ. ಆ ಜಮೀನನ್ನು ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರಗಳಿಗೆ ಯಾವ ಮಾರ್ಗೋಪಾಯಗಳೂ ಇಲ್ಲ. ಅವರು ತಾವೂ ಅಭಿವೃದ್ಧಿ ಹೊಂದುವುದಿಲ್ಲ ಅಥವಾ ಹಾಗೆ ಆಗಲು ಯಾರನ್ನು ಬಿಡದೆ ತೊಟ್ಟಿಯಲ್ಲಿರುವ ನಾಯಿಗಳಂತೆ ಜೀವಿಸುತ್ತಿದ್ದಾರೆ. ಆದ್ದರಿಂದ ಸಂವಿಧಾನವನ್ನು ತಿದ್ದುಪಡಿ ಮಾಡುವ ಮೂಲಕ ಬಂಜರು ಜಮೀನನ್ನು ಪಟ್ಟಿ ಸಂ.೧ರಲ್ಲಿ ಸೇರಿಸಿ ಅದನ್ನು ವಶಕ್ಕೆ ತೆಗೆದುಕೊಳ್ಳುವುದರಲ್ಲಿ ಯಾವುದೇ ತಪ್ಪು ಇಲ್ಲ.

**ಪೂ. ೧೧–೦೦ ಗಂಟೆ**

ನಾನು ಸೂಚಿಸುವ ಎರಡನೆಯ ಅಂಶವೆಂದರೆ, ಅನೇಕ ಜನರು ಇದರಿಂದ ಸಂತೋಷಪಡುವುದಿಲ್ಲ

ಆದರೆ ಸಲಹೆ ನೀಡುವುದರಲ್ಲಿ ಯಾವ ತೊಂದರೆಯೂ ಇಲ್ಲವೆಂದು ನಾನು ಭಾವಿಸುತ್ತೇನೆ. ಅದೆಂದರೆ ನೀವು ಪುನಃ ಉಪ್ಪಿನ್ನ ಮೇಲಿನ ತೆರಿಗೆಯನ್ನು ವಿಧಿಸಿದ್ದೀರಿ. ಉಪ್ಪಿನ ತೆರಿಗೆಯು ನಮ್ಮ ದೇಶದಲ್ಲಿದ್ದ ಅತ್ಯಂತ ಕಡಿಮೆ ತೆರಿಗೆಯಾಗಿತ್ತು. ಅದನ್ನು ರದ್ದುಪಡಿಸಿದ ಸಮಯದಲ್ಲಿ ಅದರಿಂದ ಬರುತ್ತಿದ್ದ ಆದಾಯವು ಸುಮಾರು ೧೦ ಕೋಟಿ ರೂ. ಗಳಾಗಿತ್ತು. ಅದು ಸುಲಭವಾಗಿ ಈಗ ೨೦ ಕೋಟಿ ರೂ. ಗಳಿಗೆ ಏರಬಹುದಿತು. ಉಪ್ಪಿನ ಮೇಲಿನ ತೆರಿಗೆಯನ್ನು ಮಹಾತ್ಮಗಾಂಧಿಯವರ ಜ್ಞಾಪಕಾರ್ಥವಾಗಿ ರದ್ದು ಮಾಡಲಾಯಿತ್ತು. ನಾನು ಅವರನ್ನು ಗೌರವಿಸುತ್ತೇನೆ ಮತ್ತು ನಾನು ನೀವು ತೆರಿಗೆಯನ್ನು ವಿಧಿಸಿ ಮತ್ತು ಅಸ್ಪೃಶ್ಯತೆಯ ಅಭಿವೃದ್ಧಿಗಾಗಿ ಅಥವಾ ಪುನರ್‌ವ್ಯವಸ್ಥೆಗಾಗಿ ಮಹಾತ್ಮಗಾಂಧಿಯವರ ಹೆಸರಿನಲ್ಲಿ ಗಾಂಧಿ ಟ್ರಸ್ಟ್ ನಿಧಿ ಎಂದು ಕರೆಯಲಾಗುವ ಒಂದು ಟ್ರಸ್ಟ್ ನಿಧಿಯನ್ನು ಸೃಜಿಸಿರಿ. ಅಲ್ಲದೆ ಅಸ್ಪೃಶ್ಯರು ನಮ್ಮೆಲ್ಲರ ಪ್ರಕಾರ ಅವರಿಗೆ ತೀರಾ ನಿಕಟವರ್ತಿಗಳಾಗಿದ್ದರು. ಹಾಗೂ ಗಾಂಧಿ ಮಹಾತ್ಮನು ಸ್ವರ್ಗದಿಂದಲೇ ಈ ಯೋಜನೆಗೆ ಏಕೆ ಆಶೀರ್ವಾದ ಮಾಡುವುದಿಲ್ಲ ಎನ್ನುವುದಕ್ಕೆ ಕಾರಣವೇ ಇಲ್ಲ. ಏಕೆಂದರೆ ತೆರಿಗೆ ವಿಧಿಸುವುದು ಮತ್ತು ಅದನ್ನು ಬಂಜರು ಜಮೀನನ್ನು ಅಭಿವೃದ್ಧಿಗೊಳಿಸಲು ಬಳಸುವುದು ಮತ್ತು ಪರಿಶಿಷ್ಟ ಜಾತಿಯ ಜನರನ್ನು ಈ ಬಂಜರು ಜಮೀನಿನಲ್ಲಿ ಇರಿಸುವುದು ಮುಂತಾದವುಗಳು ಅವರಿಗೆ ಒಪ್ಪಿತವಾಗಿತ್ತು. ಅಲ್ಲಿ ವಚನವಿದೆ ಆದರೆ ನಿರ್ವಹಣೆಯ ವ್ಯಾಪ್ತಿ ಇಲ್ಲ. ಪೋಕರ್ ಆಟದಲ್ಲಿ ವಚನಕ್ಕೂ ಹಾಗೂ ನಿರ್ವಹಣೆಯ ನಡುವೆ ವ್ಯತ್ಯಾಸವಿದೆ ಎಂಬುದು ನಿಮಗೆ ಗೊತ್ತು. ನಾನು ನಿಮಗೆ ಒಂದು ಯೋಜನೆಯನ್ನು ನೀಡುತ್ತೇನೆ ಅಲ್ಲಿ ಕೇವಲ ವಚನವಿರುವುದಿಲ್ಲ ಆದರೆ ಅಲ್ಲಿ ನಿರ್ವಹಣೆಯೂ ಇದೆ. ಈ ದೇಶದ ಜನರು ಪರಿಶಿಷ್ಟ ಜಾತಿಯವರ ಉನ್ನತಿಗೆ ಉಪ್ಪಿನ ಮೇಲೆ ತೆರಿಗೆಯ ವಿಧಾನದ ಮೂಲಕ ಏಕೆ ಕೊಡುಗೆ ನೀಡಬಾರದು ಎಂಬುದು ನನಗೆ ಅರ್ಥವಾಗುತ್ತಿಲ್ಲ. ನೀವು ಇದನ್ನು ಕೇವಲ ಗಾಂಧಿ ಕಲ್ಯಾಣ ಯೋಜನೆ ಎಂಬಂತೆ ಬಜೆಟ್ಟಿನ ಹೊರಗಡೆಯೇ ಇಡಬಹುದು. ಇದು ಶ್ರೀಯುತ ಗಾಂಧಿಯವರ ಹೆಸರನ್ನು ಅವಿಸ್ಮರಣೀಯಗೊಳಿಸುತ್ತದೆ ಮತ್ತು ಅವರು ಯಾರನ್ನು ರಕ್ಷಿಸಬೇಕಾಗಿತ್ತೊ ಮತ್ತು ಯಾರನ್ನು ಅವರು ಉದ್ಧರಿಸಬೇಕಿತ್ತೋ ಅವರಿಗೆ ನೆಮ್ಮದಿಯನ್ನು ನೀಡುತ್ತದೆ. ಇದು ಮಾನ್ಯ ಗೃಹ ಸಚಿವರಿಗೆ ನನ್ನ ಸಲಹೆಯಾಗಿದೆ ಮತ್ತು ಅವರು ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುವರೆಂದು ನಾನು ಭಾವಿಸುತ್ತೇನೆ.

ಸ್ವಾಮಿ, ನಾನು ಸಾಕಷ್ಟು ಮಾತಾಡಿದ್ದೇನೆ ಮತ್ತು ನಾನು ಇನ್ನೇನೂ ಹೆಚ್ಚಿಗೆ ಹೇಳುವ ಅಗತ್ಯವಿಲ್ಲ. ನಾನು ಹೇಳಲಿಚ್ಛಿಸುವುದು ಒಂದೇ ಒಂದು ಅಂಶ ಎಂದರೆ ಸರ್ಕಾರವು ಹಲವಾರು ಸಾಮಾಜಿಕ ಕಾರ್ಯಕರ್ತರು ಮತ್ತು ಸಾಮಾಜಿಕ ಏಜೆನ್ಸಿಗಳ ಮೂಲಕ ಮಾಡುತ್ತಿರುವ ಈ ಎಲ್ಲ ಪ್ರಯತ್ನದಲ್ಲಿ ಒಂದು ವಿಷಯ ನನ್ನನ್ನು ದುಃಖಕ್ಕೀಡುಮಾಡಿದೆ ಎಂದು ನಾನು ಹೇಳಬಯಸುತ್ತೇನೆ ಅದೆಂದರೆ ನಮ್ಮ ಪ್ರಧಾನಮಂತ್ರಿಗಳಿಗೆ ಈ ವಿಷಯದಲ್ಲಿ ಯಾವುದೇ ಆಸಕ್ತಿಯಿಲ್ಲ. ಮಾತ್ರವಲ್ಲ ಅವರು ಅಸ್ಪೃಶ್ಯತೆಯ ವಿರೋಧಿಗಳ ಬಗ್ಗೆ ಅನಾಸಕ್ತಿಯನ್ನು ಹೊಂದಿದ್ದಾರೆ ಎಂಬುದಾಗಿ ತೋರುತ್ತದೆ. ನಾನು ಅವರ ಆತ್ಮ ಚರಿತ್ರೆಯನ್ನು ಓದಿಕೊಂಡಿದ್ದೇನೆ ಮತ್ತು ಅವರು ಶ್ರೀಯುತ ಗಾಂಧಿಯವರಿಗೆ ಛೀಮಾರಿಹಾಕಿದ್ದರು ಏಕೆಂದರೆ ಶ್ರೀಯುತ ಗಾಂಧಿಯವರು ಪರಿಶಿಷ್ಟ ಜಾತಿಯ ಜನರಿಗೆ ನೀಡಲಾಗಿದ್ದ ಪ್ರತ್ಯೇಕ ಮತದಾನ ಪದ್ಧತಿಯ ರದ್ದತಿಗಾಗಿ ಸಾಯುವುದಕ್ಕೂ ಸಿದ್ಧರಾಗಿದ್ದರು. ಅವರು ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ಹೇಳಿದ್ದಾರೆ. "ಎಲ್ಲವನ್ನೂ ಬಿಟ್ಟು ಶ್ರೀಯುತ ಗಾಂಧಿಯವರು ಏಕೆ ಈ ಕ್ಷುಲ್ಲಕ ಸಮಸ್ಯೆಯತ್ತ ಗಮನಹರಿಸುತ್ತಿದ್ದಾರೆ?" ಸ್ವಾಮಿ ಪ್ರಧಾನಮಂತ್ರಿ– ಶ್ರೀಯುತ ನೆಹರು ಅಂದು ೧೯೩೪ರಲ್ಲಿ ಈ ಪದಗಳನ್ನು ಉಚ್ಚರಿಸಿರುವುದನ್ನು ಕಂಡು ನನಗೆ ಆಘಾತ ಹಾಗೂ ಆಶ್ಚರ್ಯವಾಯಿತು. ಸರ್ಕಾರದ ಜವಾಬ್ದಾರಿ ಅವರ ಹೆಗಲಮೇಲೆ ಬಿದ್ದಿರುವುದರಿಂದ ಅವರು

ತಮ್ಮ ಅಭಿಪ್ರಾಯವನ್ನು ಬದಲಾಯಿಸಿರಬಹುದು ಹಾಗೂ ಶ್ರೀಯುತ ಗಾಂಧಿಯವರು ತಮ್ಮ ಹೆಗಲ ಮೇಲೆ ಹೊರಲು ಸಿದ್ಧವಾಗಿದ್ದ ಜವಾಬ್ದಾರಿಯನ್ನು ತಾನು ತೆಗೆದುಕೊಳ್ಳಬೇಕು ಎಂದು ಆಲೋಚಿಸಿದ್ದರೆಂದು ನಾನು ತಿಳಿದಿದ್ದೆ. ಆದರೆ ಅವರ ಮನಸ್ಸಿನಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು ನಾನು ಕಾಣಲಿಲ್ಲ. ಸ್ವಾಮಿ, ೧೯೫೨ನೇ ವರ್ಷದಲ್ಲಿ ನನ್ನ ಸನ್ಮಾನ್ಯ ಸ್ನೇಹಿತ ಬಾಬು ಜಗಜೀವನರಾಮ್ ಅವರ ಅಧ್ಯಕ್ಷತೆಯಲ್ಲಿ ನಾಗಪುರದಲ್ಲಿ ಒಂದು ಸಮ್ಮೇಳನ ನಡೆಯಿತು.

ನನಗೆ ತಿಳಿದಂತೆ ಅಲ್ಲಿ ಒಂದು ದೊಡ್ಡ ಷಾಮಿಯಾನ ಹಾಕಲಾಗಿತ್ತು. ವೇದಿಕೆಯ ಮೇಲೆ ಎರಡು ಬೆಳ್ಳಿಯ ಕುರ್ಚಿಗಳನ್ನು ಇರಿಸಲಾಗಿದ್ದು, ಒಂದು ಶ್ರೀ ಜಗಜೀವನರಾಂ ಅವರಿಗೆ ಮತ್ತು ಇನ್ನೊಂದು ಪಂಡಿತ ಜವಹರಲಾಲ್ ನೆಹರೂರವರಿಗೆ ಇರಿಸಲಾಗಿತ್ತು. ಅಲ್ಲಿ ಇನ್ನೂರರಿಂದ ಮೂನ್ನೂರರವರೆಗೆ ಪ್ರೇಕ್ಷಕರಿದ್ದು ಒಂದು ಸಾವಿರ ಪೋಲಿಸರು ಇದ್ದರು. ಪಂಡಿತ್ ಜವಹರಲಾಲ್ ನೆಹರು ಅವರು ಆ ಸಮ್ಮೇಳನವನ್ನು ಉದ್ಘಾಟಿಸಬೇಕಾಗಿತ್ತು. ಅವರ ಭಾಷಣವು ಈಗ ನನ್ನಲ್ಲಿದೆ. ಆದರೆ ಅದನ್ನು ಓದುವ ಮೂಲಕ ಸದನವನ್ನು ಗೊಂದಲದಲ್ಲಿರಿಸುವುದು ನನಗೆ ಇಷ್ಟವಿಲ್ಲ. ಆದರೆ ಅದರ ಸಾರಾಂಶ ಇಷ್ಟು. ಅವರು ಸಮ್ಮೇಳನವನ್ನು ಸಂಘಟಿಸಿದ್ದಕ್ಕೆ ಬಾಬು ಜಗಜೀವನ್ ರಾಮ್‌ರ ಮೇಲೆ ಅತಿಯಾದ ಕೋಪ ಹೊಂದಿದ್ದರು. ಅವರು ಜೋರಾಗಿ ಹೀಗೆ ಹೇಳಿದರು. "ಅಸ್ಪೃಶ್ಯರ ಬಗ್ಗೆ ಇಂತಹ ಒಂದು ಸಮಸ್ಯೆ ಇದೆ ಎಂಬುದನ್ನು ನಾನು ಪರಿಗಣಿಸುವುದಿಲ್ಲ. ಆರ್ಥಿಕವಾಗಿ ಬಡವರ ಒಂದು ಸಾಮಾನ್ಯ ಸಮಸ್ಯೆ ಇದೆ ಮತ್ತು ಅಸ್ಪೃಶ್ಯರ ಸಮಸ್ಯೆ ಈ ಸಮಸ್ಯೆಯ ಒಂದು ಭಾಗವಾಗಿದೆ. ಇದು ಇತರ ಸಮಸ್ಯೆಗಳೊಂದಿಗೆ ತನ್ನ ಸ್ಥಾನವನ್ನು ಗುರುತಿಸಿಕೊಳ್ಳುತ್ತದೆ ಮತ್ತು ಗಮನವನ್ನು ಸೆಳೆಯುತ್ತದೆ. ಅದರ ಮೇಲೆ ಯಾವುದೇ ವಿಶೇಷ ಆಲೋಚನೆಯನ್ನು ನೀಡುವ ಯಾವುದೇ ಸಂದರ್ಭವಾಗಲಿ ಯಾವುದೇ ಉದ್ದೇಶವಾಗಲಿ ಇಲ್ಲ." ಸ್ವಾಮಿ, ಪ್ರಧಾನಮಂತ್ರಿಗಳು ಇಂತಹ ತಣ್ಣೀರನ್ನು, – ತಣ್ಣೀರಲ್ಲ ರೆಫ್ರಿಜರೇಟರ್‌ನಿಂದ ತೆಗೆದ ನೀರನ್ನು – ಎರಚಲು ಸಿದ್ಧವಿರುವಾಗ ಏನು ಹೇಳಬಹುದು ಈ ಒಂದು ವಿಶಿಷ್ಟವಾದ ಸಮಸ್ಯೆಯನ್ನು ನೆರವೇರಿಸಲು ತಾವಾಗಿಯೇ ಈ ಕರ್ತವ್ಯವನ್ನು ಅಥವಾ ಜವಾಬ್ದಾರಿಯನ್ನು ಅಥವಾ ಆಸಕ್ತಿಯನ್ನು ತೆಗೆದುಕೊಂಡಿರುವ ಉಳಿದ ಕಾರ್ಯಕರ್ತರಲ್ಲಿ ನಾವು ಯಾವ ಉತ್ಸಾಹವನ್ನು ನಿರೀಕ್ಷಿಸಬಹುದು? ಅಸ್ಪೃಶ್ಯತೆ ನಿವಾರಣೆಯಾಗುತ್ತದೆ ಎಂಬುದಾಗಿ ನಾನು ಭಾವಿಸುವುದಿಲ್ಲ. ಅವರು 'ಹೌದು' ಎನ್ನುವುದನ್ನು ನಂಬುತ್ತಾರೆ. ನಾನು 'ಇಲ್ಲ' ಎನ್ನುತ್ತೇನೆ. ಏಕೆಂದರೆ ಇದು ಮಾನಸಿಕ ವಿಕಾರ. ಇದು ವಾಸಿಯಾಗಲು ವರ್ಷಾನುಗಟ್ಟಲೆ ಅಗತ್ಯ ಅದೇ ಸಮಯದಲ್ಲಿ ಅಸ್ಪೃಶ್ಯತೆ ಹೋಗುತ್ತದೆಯೋ ಅಥವಾ ಹೋಗುವುದಿಲ್ಲವೋ ಪರಿಶಿಷ್ಟ ಜಾತಿ ಜನರ ಸಾಮಾಜಿಕ, ಆರ್ಥಿಕ ರಾಜಕೀಯ ಮತ್ತು ಸಂವಿಧಾನಾತ್ಮಕ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಲಾಗಿದೆ ಎಂಬುದನ್ನು ನೋಡಲು ನಾವು ಏಕೆ ಬಲವಾಗಿ ಹೋರಾಡಬಾರದು ಎಂಬುದಕ್ಕೆ ಯಾವುದೇ ಕಾರಣವಿಲ್ಲ. ಆ ಮಟ್ಟಿಗೆ ಅವಶ್ಯವಾಗಿ ಪ್ರಯತ್ನವನ್ನು ಸೂಚಿಸಬೇಕು.

ಸ್ವಾಮಿ, ನಾನು ಇನ್ನೊಂದು ಪದವನ್ನು ಹೇಳಲಿಚ್ಛಿಸುತ್ತೇನೆ. ನಾನು ಹೆಚ್ಚು ಕಾಲ ಪರಿಶಿಷ್ಟ ಜಾತಿ ಜನರೊಂದಿಗಿರುತ್ತೇನೆ ಎಂದು ಜನ ಹೇಳಬಹುದು. ಪಂಗಡದ ಬಗ್ಗೆ ನಾನು ಏನನ್ನೂ ಹೇಳಿಲ್ಲ ಮತ್ತು ನಾನು ಏನನ್ನೂ ಹೇಳುವುದಿಲ್ಲ. ಅವರ ಬಗ್ಗೆ ಹೆಚ್ಚು ಮಾತನಾಡಲು ನನಗಿಂತ ಹೆಚ್ಚಾಗಿ ಅನೇಕ ಅರ್ಹ ವ್ಯಕ್ತಿಗಳು, ನನ್ನ ಸ್ನೇಹಿತರು ಇದ್ದಾರೆ. ಆದ್ದರಿಂದ ಈ ಕ್ಷೇತ್ರದಲ್ಲಿ ಪ್ರವೇಶಿಸುವ ಧೈರ್ಯ ಮಾಡುವುದಿಲ್ಲ. ಆದರೆ ಯಾರಾದರೂ ಹೇಳಬಹುದಾದ ಮತ್ತು ಹೇಳಬೇಕಾದುದೇನೆಂದರೆ, ಪರಿಶಿಷ್ಟ ಜಾತಿಗಳ ಬುಡಕಟ್ಟು ಜಾತಿಗಳ ಮತ್ತು ಅಪರಾಧಿಕ ಬುಡಕಟ್ಟುಗಳ ಸಂಬಂಧಿತ ಸ್ಥಾನಗಳ ಬಗ್ಗೆ ಜನಗಳ ಮನಸ್ಸಿನಲ್ಲಿ

ಗೊಂದಲವಿರುವುದು ಕಂಡು ಬರುತ್ತದೆ. ಈಗ ಸ್ವಾಮಿ, ಪರಿಶಿಷ್ಟ ಜಾತಿಗಳ ಸಂಬಂಧದಲ್ಲಿ ಪರಿಸ್ಥಿತಿ ಈ ರೀತಿ ಇದೆ. ಅವರು ಸಿದ್ಧರಾಗಿದ್ದಾರೆ – ವಾಸ್ತವವಾಗಿ ಸಿದ್ಧರಾಗಿಲ್ಲ – ಆದರೆ ಅವರು ಈಗಾಗಲೇ ನಾಗರಿಕತೆಯ ಪರಿಧಿಯಲ್ಲಿ ಬಂದಿದ್ದಾರೆ. ಅವರು ಅದರ ಹೊರಗಡೆ ಇಲ್ಲ. ಅವರು ಸಮಾನ ಅವಕಾಶ ಮತ್ತು ಸಮಾನ ಸ್ಥಾನ ಮಾನಕ್ಕಾಗಿ ಸಾಧಿಸುವುದಕ್ಕಾಗಿ ಹೋರಾಡುತ್ತಿದ್ದಾರೆ. ಇದು ಅವರ ಸಮಸ್ಯೆ ಬುಡಕಟ್ಟು ಜನರ ಸಂಬಂಧದಲ್ಲಿ ಅವರ ಸಮಸ್ಯೆ ಒಟ್ಟಾರೆ ಬೇರೆಯಾಗಿದೆ. ಅವರು ಹಿಂದೂ ನಾಗರಿಕತೆಯಿಂದ ಹೊರಗಡೆ ಇದ್ದಾರೆ. ಈ ಬುಡಕಟ್ಟು ಜನರ ಸಂಬಂಧದಲ್ಲಿ ಪರಿಗಣಿಸಬೇಕಾದ ಸಮಸ್ಯೆ ಎಂದರೆ ಅವರು ಹಿಂದೂ ನಾಗರಿಕತೆಯ ವ್ಯಾಪ್ತಿಯೊಳಗೆ ಬರಬೇಕೇ ಮತ್ತು ಅದರಲ್ಲಿ ಒಂದಾಗಬೇಕೇ ಮತ್ತು ಸಮಾನ ಸ್ಥಾನ–ಮಾನ ಮತ್ತು ಸಮಾನ ಅವಕಾಶವನ್ನು ಗಳಿಸಬೇಕೆ ಎಂಬುದು? ನಾನು ಬುಡಕಟ್ಟು ಕೋಮಿನ ಅನೇಕ ನಾಯಕರೊಂದಿಗೆ ಬುಡಕಟ್ಟು ಕೋಮಿನ ಅನೇಕ ಪುರುಷರು ಹಾಗೂ ಮಹಿಳೆಯರೊಂದಿಗೆ ಮಾತನಾಡುತ್ತಿದ್ದೆ ಅವರು ಹಿಂದೂ ನಾಗರಿಕತೆಯ ವ್ಯಾಪ್ತಿಯೊಳಗೆ ಬರುವುದನ್ನು ತೀವ್ರವಾಗಿ ವಿರೋಧಿಸುತ್ತಾರೆ ಎಂದೆನಿಸುತ್ತದೆ.

**ಡಾ. ಶ್ರೀಮತಿ ಸೀತಾ ಪರಮಾನಂದ:** ಪ್ರಶ್ನೆ

**ಡಾ. ಬಿ.ಆರ್. ಅಂಬೇಡ್ಕರ್:** ಅವರು ಹೊರಗಡೆಯೇ ವಾಸಿಸಲು ಇಷ್ಟಪಡುತ್ತಾರೆ. ಅವರಿಗೆ ಒಳಗೆ ಬರುವುದು ಬೇಕಾಗಿಲ್ಲ.

ಅಪರಾಧಿಕ ಬುಡಕಟ್ಟಿನ ಸಂಬಂಧದಲ್ಲಿ ಅವರದು ಕೇವಲ ಆರ್ಥಿಕ ಸಮಸ್ಯೆ. ಅವರು ಗೌರವದಿಂದ ಬಾಳಲು ಎಷ್ಟು ಒಳ್ಳೆಯ ಅವಕಾಶವನ್ನು ಅವರಿಗೆ ನೀಡುವಿರಿ? ಅವರು ಗೌರವದಿಂದ ಬಾಳುವ ಅವಕಾಶವನ್ನು ಪಡೆದರೆ, ಅವರು ಅಪರಾಧಿಗಳಾಗುವುದು ನಿಲ್ಲುತ್ತದೆ.

ಈಗ ಸ್ವಾಮಿ, ಒಂದು ಪಶ್ನೆಯನ್ನು ಕೇಳಲಾಗಿದೆ. ಇದು ಅತ್ಯಂತ ವಿಷಾದನೀಯವೆಂದು ನನಗೆ ತೋರುತ್ತದೆ. ಅನೇಕ ವರ್ಷಗಳಿಂದ ಹಳೆಯದಾದ ಸುಮಾರು ಆರು ಸಾವಿರ ವರ್ಷಗಳಷ್ಟು ಹಳೆಯದಾದ ಹಿಂದೂ ನಾಗರಿಕತೆ ಅನೇಕ ಜನರು ಆ ಅವಧಿಯ ಬಗ್ಗೆ ಖಚಿತಪಡಿಸಿಕೊಂಡಿಲ್ಲ. ಪ್ರಾಯಶಃ ಅವರು ಇನ್ನೂ ಹಿಂದೆ ಹೋಗಬಯಸುತ್ತಾರೆ. ಅದರ ಬಗ್ಗೆ ಯೋಚನೆಬೇಡ. ಅದು ಆರು ಸಾವಿರ ವರ್ಷಗಳಷ್ಟೇ ಹಳೆಯದಾಗಿರಲಿ. ಅದು ಸುಮಾರು ೫ ಕೋಟಿಯಷ್ಟು ಅಸ್ಪೃಶ್ಯರನ್ನು ಸೃಷ್ಟಿಸಿದೆ, ಮತ್ತು ಸುಮಾರು ೨ ಕೋಟಿಯಷ್ಟು ಬುಡಕಟ್ಟು ಜನ ಸುಮಾರು ಐವತ್ತು ಸಾವಿರದಷ್ಟು ಅಪರಾಧಿಕ ಬುಡಕಟ್ಟು ಜನರನ್ನೂ ಸೃಷ್ಟಿಸಿದೆ. ಈ ರೀತಿಯ ನಾಗರಿಕತೆಯ ಬಗ್ಗೆ ಯಾರು ಏನು ಹೇಳಬಲ್ಲರು? ಇಂತಹ ಫಲಿತಾಂಶಗಳನ್ನು ನೀಡುತ್ತಿರುವ ನಾಗರಿಕತೆಯ ಮೂಲಭೂತ ವಿಚಾರದಲ್ಲಿ ಏನೋ ತಪ್ಪಾಗಿರಬೇಕು. ಅಸ್ಪೃಶ್ಯತೆ, ಅಪರಾಧಿಕ ಬುಡಕಟ್ಟು ಮತ್ತು ಬುಡಕಟ್ಟು ಜನರಂತಹ ಕೋಮುಗಳನ್ನು ಸೃಷ್ಟಿಸಿರುವ ನಾಗರಿಕತೆಯ ಬಗ್ಗೆ ತಾವು ಹೆಮ್ಮೆ ಪಟ್ಟುಕೊಳ್ಳಬಹುದೇ ಎಂಬುದನ್ನು ಹಿಂದುಗಳು ಯೋಚಿಸಬೇಕು. ಅವರು ಎರಡು ಬಾರಿ ಯೋಚಿಸಬೇಕು ಎಂದು ನನಗನಿಸುತ್ತದೆ. ಎರಡು ಬಾರಿಯಲ್ಲ ನೂರುಬಾರಿ ಯೋಚಿಸಬೇಕು. ಅವರನ್ನು ಸಾಂಪ್ರದಾಯಿಕವಾಗಿ ನಾಗರಿಕರೆಂದು ಕರೆಯಲಾಗಿದೆ. ಅವರ ನಾಗರಿಕತೆಯು ಈ ರೀತಿಯ ವಿಕೃತವನ್ನು ಸೃಷ್ಟಿಸಿದರೆ ಅವರನ್ನು ನಾಗರಿಕರೆಂದು ಕರೆಯಲು ಸಾಧ್ಯವೇ?

ಸ್ವಾಮಿ, ಈ ಅವಕಾಶವನ್ನು ನೀಡಿದ್ದಕ್ಕೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

◆

# ೫೧

## *೧೯೫೪ರ ಸಂವಿಧಾನ (ಮೂರನೆಯ ತಿದ್ದುಪಡಿ) ವಿಧೇಯಕ

**ಡಾ. ಬಿ.ಆರ್. ಅಂಬೇಡ್ಕರ್ (ಬಾಂಬೆ):** ಮಾನ್ಯ ಉಪ ಸಭಾಪತಿಗಳೇ, ಈ ಸದನದ ಮುಂದೆ ಮಂಡಿಸಿರುವ ಈ ವಿಧೇಯಕವು ಎರಡು ಅಂಶಗಳನ್ನು ಪ್ರಸ್ತಾಪಿಸುತ್ತದೆ. ಈ ಎರಡೂ ಅಂಶಗಳನ್ನು ಪ್ರತ್ಯೇಕವಾಗಿಯೇ ಪರಿಗಣಿಸುವುದು ಅಪೇಕ್ಷಣೀಯ. ಮೊದಲ ಅಂಶ ಈ ವಿಧೇಯಕದ ಅರ್ಹತೆಗಳಿಗೆ ಸಂಬಂಧಿಸಿದೆ. ಅಂದರೆ ಈ ವಿಧೇಯಕವನ್ನು ಅದರ ಅರ್ಹತೆಗಳ ಆಧಾರದ ಮೇಲೆ ಒಂದು ಉತ್ತಮ ವಿಧೇಯಕವಾಗಿದೆ ಎಂದು ಪರಿಗಣಿಸಬೇಕೇ ಎಂಬುದು. ಎರಡನೆಯ ಅಂಶ ಈ ವಿಧೇಯಕವನ್ನು ಸಂಸತ್ತಿನಲ್ಲಿ ಹೇಗೆ ಅಂಗೀಕರಿಸಲಾಗುತ್ತಿದೆ ಎಂಬುದು. ನಾನು ವಿಧೇಯಕದ ಅರ್ಹತೆಗಳನ್ನು ಕುರಿತು ಕೆಲವು ಮಾತುಗಳನ್ನಾಡಬಯಸುತ್ತೇನೆ.

ಈ ವಿಧೇಯಕದಲ್ಲಿ ಹೊಸತೆಂಬುದೇನೂ ಇಲ್ಲ ಎನ್ನುವುದು ಸ್ಪಷ್ಟ. ವಿಧೇಯಕ ಕೋರುವುದು ಸಹವರ್ತಿ ಪಟ್ಟಿಯಲ್ಲಿ ನಮೂದು ಸಂ. ೩೩ನ್ನು ಕೈಬಿಟ್ಟು, ಅದರ ಬದಲಾಗಿ, ಈಗಿರುವಂತೆ ಅನುಚ್ಛೇದ ೩೬೯ ಒಳಗೊಂಡಿರುವ ಉಪಬಂಧಗಳನ್ನು, ಸೆಣಬಿನ ಆಯಾತದಂಥ ಒಂದು ಸಣ್ಣ ಸೇರ್ಪಡೆಯೊಂದಿಗೆ ಬದಲಿಸುವುದು; ಅಂದರೆ ಯಾವುದೇ ಮೂಲಭೂತ ಬದಲಾವಣೆ ಇಲ್ಲ, ಕೇವಲ ಒಂದು ಅಲ್ಪ ಬದಲಾವಣೆ ಮಾತ್ರ, ಈ ದೃಷ್ಟಿಯಿಂದ ನೋಡಿದಲ್ಲಿ, ಮಾನ್ಯ ಮಂತ್ರಿಗಳು ಮಂಡಿಸಿರುವ ವಿಧೇಯಕಕ್ಕೆ ಯಾವುದೇ ಆಕ್ಷೇಪಣೆ ನನಗೆ ಕಂಡುಬರುವುದಿಲ್ಲ. ಈ ಕುರಿತು ಉದ್ಭವಿಸಬಹುದಾದ ವಿವಾದವೆಂದರೆ, ಅನುಚ್ಛೇದ ೩೬೯ರ ಉಪಬಂಧಗಳು ರಾಜ್ಯಪಟ್ಟಿ–ಪಟ್ಟಿ IIರಲ್ಲಿರಬೇಕೇ ? ಪರಿಣಾಮವಾಗಿ ರಾಜ್ಯಗಳು ಈ ಬಗ್ಗೆ ಪರಮಾಧಿಕಾರವನ್ನು ಹೊಂದಬಹುದೇ ? ಅಥವಾ ಅವುಗಳನ್ನು ಪಟ್ಟಿ–I ರಲ್ಲಿರಿಸಿ, ಈ ಸರಕುಗಳನ್ನು ಕುರಿತು ವ್ಯವಹರಿಸುವಾಗ ಕೇಂದ್ರವು ಪರಮಾಧಿಕಾರವನ್ನು ಹೊಂದಿರಬೇಕೇ? ಎಂಬುದು. ಸದ್ಯದ ಪರಿಸ್ಥಿತಿ ಹೀಗಿದೆ: ಅನುಚ್ಛೇದ ೩೬೯ರ ಪ್ರಕಾರ ಈ ವಿಷಯಗಳನ್ನು ಅಥವಾ ಸರಕುಗಳನ್ನು, ಸಹವರ್ತಿಗಳ ಪಟ್ಟಿಯಲ್ಲಿಯೇ ನಮೂದಿಸಲಾಗಿದೆ ಎಂದು ಪರಿಗಣಿಸಲಾಗಿರುವುದು. ಸಹವರ್ತಿ ಪಟ್ಟಿಯಲ್ಲಿ, ಕೇಂದ್ರಕ್ಕೆ ಅಂತೆಯೇ ರಾಜ್ಯಗಳಿಗೆ ಕಾನೂನು ಮಾಡಲು ಅಧಿಕಾರವಿದೆ. ಆದ್ದರಿಂದ ಅನುಚ್ಛೇದ ೩೬೯ ಮತ್ತು ನಮೂದು ೩೩ರಲ್ಲಿ ವ್ಯಾಖ್ಯಾನಿಸಿರುವ ಸದ್ಯದ ಪರಿಸ್ಥಿತಿಯನ್ನು ನೋಡಿದರೆ, ಎರಡನ್ನೂ ಸಹವರ್ತಿ ಪಟ್ಟಿಯಲ್ಲಿರಿಸಿರುವುದನ್ನು ನಾವು ಕಾಣಬಹುದು; ರಾಜ್ಯಗಳು, ಈ ತಿದ್ದುಪಡಿ ವಿಧೇಯಕದ ಮೂಲಕ ಸಂವಿಧಾನದಲ್ಲಿ ತಮಗೆ ದತ್ತವಾದ ಯಾವುದೇ ಅಧಿಕಾರವ್ಯಾಪ್ತಿಯನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ಆಪಾದನೆ ಮಾಡುವಂತಿಲ್ಲ. ಪರಿಸ್ಥಿತಿ ನಾನು ಈಗಾಗಲೇ ಹೇಳಿದಂತೆ ಹಾಗೆಯೇ ಇರುತ್ತದೆ. ಒಂದೇ ಪ್ರಶ್ನೆ ಎಂದರೆ, ಅನುಚ್ಛೇದ ೩೬೯ರ ಮೂಲಕ ಕೇಂದ್ರದಲ್ಲಿ ನಿಹಿತವಾಗಿರುವ ವಿಧಾಯಕ ನಿಯಂತ್ರಣವನ್ನು ಕೇವಲ ಐದು ವರ್ಷಕ್ಕೆ ಮಾತ್ರ ನಿಹಿತವಾಗಿದ್ದ ಅಧಿಕಾರವನ್ನು ಅನಿಯಮಿತ ಅವಧಿಯವರೆಗೆ ಮುಂದುವರಿಸಬೇಕೆ

---

* ಪಿ.ಡಿ. (ಆರ್.ಎಸ್.) ಸಂ. ೭. ಬಿ. ೧೫ ಸೆಪ್ಟೆಂಬರ್ ೧೯೫೪ ಪು. ೨೨೯೭–೨೩೦೩

ಎಂಬುದು. ನನ್ನ ಅಭಿಪ್ರಾಯ ಹೇಳುವುದಾದರೆ, ಈ ಬಾಬುಗಳ ಮೇಲೆ ಕಾನೂನು ಮಾಡಲು ಸಂಸತ್ತಿಗೆ ನೀಡಲಾದ ಐದು ವರ್ಷಗಳ ಅವಧಿಯನ್ನು ರದ್ದುಗೊಳಿಸುವಷ್ಟರ ಮಟ್ಟಿಗೆ ಪರಿಸ್ಥಿತಿಯು ಮಾರ್ಪಾಟಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಆಡಳಿತವು ತೀರ್ಮಾನಿಸಬೇಕು. ನನ್ನ ಅಭಿಪ್ರಾಯವನ್ನು ಮತ್ತೊಮ್ಮೆ ಹೇಳುವುದಾದರೆ, ನಾನು ಆಡಳಿತದ ತೀರ್ಮಾನವನ್ನು ಒಪ್ಪಲು ಸಿದ್ಧನಿದ್ದೇನೆ; ಏಕೆಂದರೆ ಅವರು ಓರ್ವ ಸಂಸತ್ತಿನ ಸದಸ್ಯರಿಗಿಂತಲೂ ಹೆಚ್ಚು ತಿಳಿದವರಾಗಿರುತ್ತಾರೆ. ಆದ್ದರಿಂದ ಸರ್, ವಿಧೇಯಕದ ಅರ್ಹತೆಗಳಿಗೆ ಸಂಬಂಧಿಸಿದಂತೆ, ನನ್ನ ಬೆಂಬಲವನ್ನು ನೀಡಬಯಸುತ್ತೇನೆ.

ಸನ್ಮಾನ್ಯ ಮಂತ್ರಿಗಳು, ವಿಧೇಯಕದ ಮೇಲೆ ಮಾತನಾಡುತ್ತಾ, ರಾಜ್ಯಗಳೊಂದಿಗೆ ಸಮಾಲೋಚನೆ ನಡೆಸಿದ ಬಗ್ಗೆ ಉಲ್ಲೇಖಿಸಿದರು. ಅವರು ವಿವಿಧ ರಾಜ್ಯಗಳಲ್ಲಿನ ಸಂವಾದಿ ಇಲಾಖೆಗಳೊಂದಿಗೆ ಸಮಾಲೋಚಿಸಿರುವುದಾಗಿ ಹೇಳಿದ್ದನ್ನು ನಾನು ಕೇಳಿದೆ. ಈ ಸಮಾಲೋಚನೆಯ ಬಗ್ಗೆ ಅವರ ಹೇಳಿಕೆಯನ್ನು ನಾನು ಗ್ರಹಿಸಿರುವ ಮಟ್ಟಿಗೆ ವಿಧೇಯಕವು ಕಾನೂನಾಗುವುದಿಲ್ಲವೆಂಬ ಸರಳ ಕಾರಣಕ್ಕಾಗಿ ನನಗೆ ಇದೊಂದು ಗಂಭೀರ ವಿಷಯವೆನಿಸುತ್ತದೆ. ವಿಧೇಯಕವು ಕಾನೂನು ಆಗುವುದಕ್ಕೆ ಮುನ್ನ ಮತ್ತಷ್ಟು ಔಪಚಾರಿಕ ಕ್ರಮಗಳಿಗೂ ಒಳಗಾಗಬೇಕಾಗುತ್ತದೆ. ಈ ಸಂದರ್ಭದಲ್ಲಿ, ನಾನು ಅನುಚ್ಛೇದ ೩೬೮ರ ಬಗ್ಗೆ, ಅದರಲ್ಲಿಯೂ ನಿರ್ದಿಷ್ಟವಾಗಿ ಪರಂತುಕದ ಕಲಮು (ಸಿ)ಯ ಬಗ್ಗೆ ಸನ್ಮಾನ್ಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ. ಅದು–೧ ಪರಂತು, ಅಂಥ ತಿದ್ದುಪಡಿಯು–***ರಲ್ಲಿ ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿದರೆ (ಸಿ) ೭ನೆಯ ಅನುಸೂಚಿಯಲ್ಲಿನ ಯಾವುದೇ ಪಟ್ಟಿ–*** ತಿದ್ದುಪಡಿಯನ್ನು ಅನುಮತಿಗಾಗಿ ರಾಷ್ಟ್ರಪತಿಗೆ ಒಪ್ಪಿಸುವುದಕ್ಕೆ ಮುಂಚೆ ಮೊದಲನೆಯ ಅನುಸೂಚಿಯ (ಎ) ಮತ್ತು (ಬಿ) ಭಾಗಗಳಲ್ಲಿ ಉಲ್ಲೇಖಿತವಾಗಿರುವ ರಾಜ್ಯಗಳಲ್ಲಿ ಅರ್ಧಕ್ಕೆ ಕಡಿಮೆ ಇಲ್ಲದಷ್ಟು ರಾಜ್ಯಗಳ ವಿಧಾನಮಂಡಲಗಳು ಆ ಬಗ್ಗೆ, ಅವು ಅಂಗೀಕರಿಸಿದ ನಿರ್ಣಯಗಳ ಮೂಲಕ ಅಂಥ ತಿದ್ದುಪಡಿಯನ್ನು ಸಮರ್ಥಿಸುವುದು ಅಗತ್ಯವಾಗಿರುತ್ತದೆ. ಆದ್ದರಿಂದ ಇದು ಅಂಥ ಒಂದು ತಿದ್ದುಪಡಿ........

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ಮಾಹಿತಿಗಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆ. ದಿನಾಂಕ ೧೨ ಸೆಪ್ಟೆಂಬರ್ ೧೯೫೩ರ ಮೊದಲ ಪತ್ರವನ್ನು ಎಲ್ಲಾ ರಾಜ್ಯ ಸರ್ಕಾರಗಳಿಗೆ ಬರೆಯಲಾಗಿತ್ತು. ದಿನಾಂಕ ೨೦ ಆಗಸ್ಟ್ ೧೯೫೪ರ ಎರಡನೆಯ ಪತ್ರವನ್ನು, ಆ ಪತ್ರದ ಪ್ರತಿಯೊಂದಿಗೆ ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಅವರ ಹೆಸರಿಗೆ ಬರೆಯಲಾಗಿತ್ತು; ಆದರೆ ಆಯಾ ರಾಜ್ಯಗಳ ವಾಣಿಜ್ಯ ಮಂತ್ರಾಲಯಗಳಿಗಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ಒಳ್ಳೆಯದು, ಕ್ಷಮಿಸಿ, ಬಹುಶಃ ನಾನು ತಪ್ಪು ಹೇಳಿಕೆ ನೀಡಿರುತ್ತೇನೆ: ಅದನ್ನು ತಿದ್ದುಕೊಂಡಿದ್ದೇನೆ. ಇಷ್ಟಾಗಿಯೂ ಮಂತ್ರಿಗಳು ಮತ್ತು ರಾಜ್ಯ ಸರ್ಕಾರಗಳ ನಡುವೆ ಏನೇ ಪ್ರಾರಂಭಿಕ ಸಮಾಲೋಚನೆಗಳು ನಡೆದಿದ್ದರೂ ನನ್ನ ವಾದ ತೀರಾ ನ್ಯಾಯಸಮ್ಮತವೆಂದೇ ನನ್ನ ಅಭಿಪ್ರಾಯ. ಏಕೆಂದರೆ ಅದರ ತಿದ್ದುಪಡಿಯು ಕಾನೂನಾಗಲು ರಾಜ್ಯಗಳ ಸಮ್ಮತಿಯು ಅಗತ್ಯವೆಂಬುದು ವಾಸ್ತವ; ಒಂದು ವೇಳೆ ನನ್ನ ಮಾನ್ಯ ಮಿತ್ರರು ಸೌಜನ್ಯ ಚರ್ಚೆ ಹಾಗೂ ಸಮಾಲೋಚನೆ ಮೂಲಕ ರಾಜ್ಯ ಸರ್ಕಾರಗಳ ಸದ್ಭಾವನೆಯನ್ನು ಗಳಿಸಿದರೆ ರಾಜ್ಯ ಸರ್ಕಾರಗಳ ಅನಂತರದ ಕ್ರಮ, ಅಂದರೆ ನಿರ್ಣಯಗಳನ್ನು ಅಂಗೀಕರಿಸುವ ಕ್ರಮ ಕೇವಲ ಔಪಚಾರಿಕವಾಗಿರುತ್ತದೆ. ಆದರೆ ಒಂದು ವೇಳೆ ಮಂತ್ರಿಗಳು ಹೇಳಿದಂತೆ ಅಂಥ ಸಮಾಲೋಚನೆಗಳಿಂದ ಅವರು ತೃಪ್ತರಾಗದಿದ್ದರೆ ಅವರಿಗೆ ನಿವಾರಿಸಲಾಗದ ಅಡಚಣೆ ಒದಗಿತೆಂದೇ ಅರ್ಥ. ನಾನು ಹೇಳಬೇಕಾಗಿದ್ದದ್ದು ಇಷ್ಟೇ. ಈಗ ನಾನು ಸರ್ಕಾರವು ಸಂವಿಧಾನ ತಿದ್ದುಪಡಿ ಕುರಿತು

ಯಾವ ರೀತಿ ಮುಂದುವರೆಯುತ್ತಿದೆ ಎಂಬ ವಿಷಯಕ್ಕೆ ಬರುತ್ತೇನೆ. ಸಂವಿಧಾನವು ಕೇವಲ ನಾಲ್ಕು ವರ್ಷಗಳಷ್ಟು ಹಳೆಯದು.

**ಶ್ರೀ ಬಿ.ಕೆ.ಪಿ. ಸಿನ್ಹ (ಬಿಹಾರ):** ನಾಲ್ಕು ವರ್ಷ ಮತ್ತು ಏಳು ತಿಂಗಳು.

**ಡಾ. ಬಿ.ಆರ್. ಅಂಬೇಡ್ಕರ್:** ಸರಿ ವಯಸ್ಕನಂತೂ ಅಲ್ಲ, ಮಗುವೂ ಅಲ್ಲ, ಅದರ ನಾಲ್ಕು ವರ್ಷ ಏಳು ತಿಂಗಳ ಜೀವಿತಾವಧಿಯಲ್ಲಿ ಮೂರು ಸಾರಿ ತಿದ್ದುಪಡಿ ಮಾಡಲಾಗಿದೆ. ಇದು ಸಂವಿಧಾನದ ಮೂರನೆಯ ತಿದ್ದುಪಡಿ ಇರಬೇಕು. ವಿಶ್ವದಲ್ಲಿನ ಯಾವುದೇ ಅಧಿಕಾರರೂಢ ಸರ್ಕಾರವು ಸಂವಿಧಾನವನ್ನು ಇಷ್ಟು ತ್ವರಿತವಾಗಿ, ಇಷ್ಟು ಆತುರದಲ್ಲಿ ತಿದ್ದುಪಡಿ ಮಾಡಿರುವುದು ನನಗೆ ಗೊತ್ತಿಲ್ಲ.

ಈಗ ಸರ್, ನನ್ನ ವಾದವನ್ನು ಸಮರ್ಥಿಸಲು, ಸದನದ ಮುಂದೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಸಂವಿಧಾನದಲ್ಲಿನ ತಿದ್ದುಪಡಿ ಉಪಬಂಧಗಳನ್ನು ಮತ್ತು ಆಸ್ಟ್ರೇಲಿಯಾ ಸಂವಿಧಾನದಲ್ಲಿನ ತಿದ್ದುಪಡಿ ಉಪಬಂಧವನ್ನು ಮಂಡಿಸಲು ಬಯಸುತ್ತೇನೆ. ಆನಂತರ ಸಂವಿಧಾನ ತಿದ್ದುಪಡಿ ವಿಷಯದಲ್ಲಿ ನಮ್ಮ ಸಂವಿಧಾನ ಮತ್ತು ಈ ಎರಡು ಸಂವಿಧಾನಗಳ ನಡುವೆ ಇರುವ ವ್ಯತ್ಯಾಸವನ್ನು ತೋರಿಸಿಕೊಡುತ್ತೇನೆ. ಆಸ್ಟ್ರೇಲಿಯಾ ಸಂವಿಧಾನದಲ್ಲಿ ಅನುಚ್ಛೇದ ೧೨೮, ತಿದ್ದುಪಡಿ ಮಾಡಲಾಗುವ ಕಾನೂನು ಪ್ರತಿ ಸಂದರ್ಭದಲ್ಲಿ ಪೂರ್ಣ ಬಹುಮತದ ಮೂಲಕ ಎರಡು ಸದನಗಳಲ್ಲಿ ಅಂಗೀಕಾರವಾಗಬೇಕೆಂದು ವಿಧಿಸುತ್ತದೆ. ಇದು ಮೊದಲ ಷರತ್ತು. ಎರಡನೆಯದಾಗಿ, ಪೂರ್ಣ ಬಹುಮತದಿಂದ, ಎರಡೂ ಸದನಗಳಲ್ಲಿ ಅನುಮೋದನೆಗೊಂಡ ನಂತರ ತಿದ್ದುಪಡಿಮಾಡಲಾಗುವ ಕಾನೂನುಬದ್ಧ ಚುನಾಯಿತರ ಅಭಿಪ್ರಾಯ ಪಡೆಯಲು ಅವರಿಗೆ ಸಲ್ಲಿಸಬೇಕು. ಉಲ್ಲೇಖಿತ ತಿದ್ದುಪಡಿಯ ಬಗ್ಗೆ ಎರಡು ಸದನಗಳಲ್ಲಿ ಸರ್ವಸಮ್ಮತವಿಲ್ಲದಿದ್ದರೆ, ಆಗ ಗೌರ್ನರ್ ಜನರಲ್ ತಿದ್ದುಪಡಿಗಾಗಿ ಉದ್ದೇಶಿಸಲಾದ ಕಾನೂನನ್ನು ತೀರ್ಮಾನಕ್ಕೈಗೊಳ್ಳಲು ಚುನಾಯಿತರ ಮುಂದೆ ಮಂಡಿಸಲು ಅಧಿಕಾರ ಹೊಂದಿರುತ್ತಾರೆ. ಈಗ ಮುಂದಿನ ಷರತ್ತುಗಳು. ಬಹುಸಂಖ್ಯಾತ ರಾಜ್ಯಗಳಲ್ಲಿನ ಬಹುಸಂಖ್ಯಾತ ಚುನಾಯಿತರು ಉದ್ದೇಶಿತ ಕಾನೂನಿನ ಪರವಾಗಿ ಮತ ಚಲಾಯಿಸಿದರೆ ಆಗ ಮತ್ತು ಆಗ ಮಾತ್ರ ಉದ್ದೇಶಿತ ಕಾನೂನು ದೊರೆಯ ಒಪ್ಪಿಗೆಯೊಂದಿಗೆ ಸಂವಿಧಾನದ ಭಾಗವಾಗುತ್ತದೆ. ಮೊದಲಿಗೆ ಎರಡು ಸದನಗಳು ಉದ್ದೇಶಿತ ಕಾನೂನನ್ನು ಪೂರ್ಣ ಬಹುಮತದೊಂದಿಗೆ ಅಂಗೀಕರಿಸಬೇಕು ಮತ್ತು ಅವು ಒಪ್ಪದಿದ್ದರೆ ಅಥವಾ ಸರ್ವಸಮ್ಮತವಿಲ್ಲದಿದ್ದರೆ ಆಗ ಚುನಾಯಿತರ ಅಭಿಪ್ರಾಯಕ್ಕೆ ಕಳುಹಿಸಲು ಗೌರ್ನರ್ ಜನರಲ್‌ಗೆ ಅಧಿಕಾರ ನೀಡಲಾಗುವುದು. ಸಂವಿಧಾನವನ್ನು ತಿದ್ದುಪಡಿ ಮಾಡುವ ಮುನ್ನ ಮೊದಲ ಹಂತದಲ್ಲಿಯೂ ವಿಷಯವನ್ನು ಚುನಾಯಿತರಿಗೆ ಉಲ್ಲೇಖಿಸಬಹುದು; ಆಗಲೂ ವಿಧೇಯಕದ ಪರವಾಗಿ ಚುನಾಯಿತರು ಬಹುಮತದಿಂದ ಮತ ಚಲಾಯಿಸಿದರೆ ಸಾಲದು, ರಾಜ್ಯಗಳ ಬಹುಮತ, ಚುನಾಯಿತರ ಬಹುಮತ ಮತ್ತು ಮತ ಚಲಾಯಿಸುವ ಎಲ್ಲಾ ಚುನಾಯಿತರ ಬಹುಮತ ಮಾತ್ರ ವಿಧೇಯಕವನ್ನು ಅನುಮೋದಿಸಬಹುದು.

ಈಗ ನಾವು ಸಂಯುಕ್ತ ಸಂಸ್ಥಾನದ ಸಂವಿಧಾನವನ್ನು ತೆಗೆದುಕೊಳ್ಳೋಣ. ಸಂಯುಕ್ತ ಸಂಸ್ಥಾನದ ಸಂವಿಧಾನದಲ್ಲಿ ಸಂವಿಧಾನ ತಿದ್ದುಪಡಿ ಕುರಿತು ತಿಳಿಸುವ ಅನುಚ್ಛೇದ ೫ ಈ ರೀತಿ ಅವಕಾಶ ಕಲ್ಪಿಸುತ್ತದೆ; "ಎರಡು ಸದನಗಳ ೨/೩ ರಷ್ಟು ಸದಸ್ಯರು ತಿದ್ದುಪಡಿಯನ್ನು ಉದ್ದೇಶಿಸಿದಾಗ ಮಾತ್ರ ಮತ್ತು ಆಗ ಮಾತ್ರ ಮುಂದಿನ ಕ್ರಮವನ್ನು ಕೈಗೊಳ್ಳಬಹುದು" ಮೊದಲನೆಯ ಷರತ್ತೆಂದರೆ ತಿದ್ದುಪಡಿ ವಿಧೇಯಕವನ್ನು ಎರಡು ಸದನಗಳ ೨/೩ ರಷ್ಟು ಸದಸ್ಯರು ಅನುಮೋದಿಸಬೇಕು; ೨/೩ ರಷ್ಟು ರಾಜ್ಯಗಳು ತಮ್ಮ ಸಮಾವೇಶಗಳನ್ನು, ಅಂದರೆ ರಾಜ್ಯ ಸರ್ಕಾರಗಳು ಸಲಹೆ ಮಾಡಿದ ಸಂವಿಧಾನಾತ್ಮಕ ತಿದ್ದುಪಡಿಯನ್ನು ಪರಿಶೀಲಿಸಲು

ಚುನಾಯಿತರ ಸಭೆಯನ್ನು ಕರೆಯಬೇಕು. ಅಂಥ ತಿದ್ದುಪಡಿಗಳು ೩/೪ ರಷ್ಟು ರಾಜ್ಯಗಳು ಅಥವಾ ೩/೪ ರಷ್ಟು ರಾಜ್ಯಗಳಲ್ಲಿನ ಅಧಿವೇಶನಗಳು ಸ್ಥಿರೀಕರಿಸಿದ ನಂತರವೇ ಕಾನೂನುಗಳಾಗುತ್ತವೆ. ನಾನು ಈ ಎರಡೂ ಸಂವಿಧಾನಗಳನ್ನು ನಿದರ್ಶನದ ಸಲುವಾಗಿ ಮಾತ್ರ ತೆಗೆದುಕೊಂಡಿರುತ್ತೇನೆ. ಇನ್ನು ಅನೇಕ ಇತರ ಉಪಬಂಧಗಳನ್ನು ಇತರ ಸಂವಿಧಾನಗಳಲ್ಲಿ ಕಾಣಬಹುದಾಗಿದೆ.

ಈಗ ಸಂವಿಧಾನ ತಿದ್ದುಪಡಿಗೆ ಸಂಬಂಧಪಟ್ಟ ಈ ಉಪಬಂಧದಲ್ಲಿ ಮೂಲಾಧಾರವಾಗಿರುವ ಮೂಲತತ್ವವಾದರೂ ಯಾವುದು? ಆಸ್ಟ್ರೇಲಿಯಾ ಮತ್ತು ಅಮೆರಿಕಾ ಸಂವಿಧಾನಗಳಲ್ಲಿನ ತಿದ್ದುಪಡಿಗೆ ಸಂಬಂಧಪಟ್ಟ ಈ ಎರಡು ಅನುಚ್ಛೇದಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ವಿದ್ಯಾರ್ಥಿಗೆ ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದಂತೆ ಯಾವುದೇ ಕ್ರಮಕ್ಕೂ ಮೂಲಾಧಾರವಾಗಿರುವ ಎರಡು ತತ್ವಗಳು ಕಂಡುಬರುತ್ತವೆ. ಮೊದಲನೆಯದು ಜನತೆಗೆ ಈ ಬಗ್ಗೆ ಸೂಚನೆ ನೀಡಬೇಕು; ಜನತೆಗೆ ಸರ್ಕಾರವು ಸಂವಿಧಾನ ತಿದ್ದುಪಡಿ ಮಾಡಲಿದೆಯೆಂಬ ಸಂಗತಿಯು ತಿಳಿದಿರಬೇಕು. ಎರಡನೆಯ ಮೂಲತತ್ವವೆಂದರೆ–ಮತದಾರರು, ಅಮೇರಿಕಾದಲ್ಲಿರುವಂತೆ ಪ್ರತ್ಯಕ್ಷವಾಗಿ ಅಥವಾ ನಿರ್ಣಯವನ್ನು ರಾಜ್ಯಗಳು ಸ್ಥಿರೀಕರಿಸುವ ಮೂಲಕ ಪರೋಕ್ಷವಾಗಿ ಮತದಾರರು ಒಪ್ಪಿಗೆ ನೀಡಬೇಕು.

**ಅಪರಾಹ್ನ ೩.೦೦ ಗಂಟೆ**

ಸರ್, ನಮ್ಮ ಸರ್ಕಾರವು ಈ ಮೂಲಭೂತ ನಿಯಮಗಳನ್ನು ಅನುಸರಿಸುತ್ತಿದೆಯೆ? ನಮ್ಮ ಸಂವಿಧಾನವು ತೀರಾ ನಮ್ಯವೆಂಬುದು ನಿಜಕ್ಕೂ ಸತ್ಯ. ಅದು ಅಮೇರಿಕಾ ಅಥವಾ ಆಸ್ಟ್ರೇಲಿಯಾ ಸಂವಿಧಾನಗಳ ಕಾಠಿಣ್ಯದ ಅರ್ಧದಷ್ಟೂ ಕಠಿಣವಾಗಿಲ್ಲ. ಅದನ್ನು ರೂಪಿಸಿದವರಿಗೆ ಹೀಗೆ ಅದನ್ನು ನಮ್ಯವಾಗಿಯೇ ಇರಿಸಬೇಕು ಎಂಬ ದೃಷ್ಟಿ ಇತ್ತು. ಏಕೆಂದರೆ ಸಂವಿಧಾನಕ್ಕೆ ತಿದ್ದುಪಡಿ ಅಗತ್ಯವಾಗಬಹುದಾದ ಪರಿಸ್ಥಿತಿಗಳು ಉದ್ಭವಿಸಬಹುದೆಂದೂ ತುರ್ತು ಸ್ವರೂಪದ ಸಾಮಾನ್ಯ ಸಮಸ್ಯೆಗಳಿಗೆ ಪರಿಹಾರವನ್ನು ಸಂವಿಧಾನ ತಡೆಹಿಡಿಯಲು ಅವಕಾಶ ನೀಡಬಾರದೆಂಬ ಸಂಪೂರ್ಣ ಅರಿವಿದ್ದಿತು. ಆದ್ದರಿಂದಲೇ ಅನುಚ್ಛೇದ ೩೬೮ ಒಳಗೊಂಡಿರುವ ಉಪಬಂಧಗಳೇ ಸಾಕೆಂದು ಪ್ರಸ್ತಾವಿಸಲಾಗಿದ್ದಿತು. ಕೆಲವೊಂದು ಸಂದರ್ಭಗಳ ಹೊರತು ರಾಜ್ಯಗಳ ಅಥವಾ ಮತದಾರರ ಅಭಿಮತವನ್ನಾಶ್ರಯಿಸುವುದು ನಮಗೆ ಅಗತ್ಯವಿಲ್ಲ. ಆದರೆ ಸಂವಿಧಾನದ ಕರಡು ರೂಪಿಸುವುದಕ್ಕೆ ಸಂಬಂಧಪಟ್ಟವರು ಸರ್ಕಾರವು ಈ ರೀತಿ ಮತದಾರರಿಗೆ ಸೂಚನೆ ನೀಡದೆಯೇ ಸಂವಿಧಾನವನ್ನು ತಿದ್ದುಪಡಿ ಮಾಡಲು ಕ್ಷಣಮಾತ್ರದಲ್ಲಿ ಮುನ್ನುಗ್ಗಬಹುದೆಂದು ಯೋಚಿಸಿದ್ದಾರೆಂಬ ಬಗ್ಗೆ ನನ್ನ ಮನಸ್ಸಿನಲ್ಲಿ ಒಂದಿಷ್ಟು ಸಂಶಯವಿಲ್ಲ.

ಮತದಾರರಿಗೆ ಸೂಚನೆ ನೀಡುವುದು ರಾಜಕೀಯ ಜೀವನದ ಮತ್ತು ಪಕ್ಷ ಜೀವನದ ಸಾಮಾನ್ಯ ತತ್ವವೆಂದು ನಾವು ಹೇಳಬಯಸುತ್ತೇನೆ. ಇಂಗ್ಲೆಂಡಿನಲ್ಲಿ ಯಾವ ಪಕ್ಷವೂ ಚುನಾವಣೆ ರಾಜಕೀಯ ಕಾರ್ಯಕ್ರಮದ ಭಾಗವಾಗದ ಯಾವುದೇ ಕಾನೂನನ್ನು ಕೈಗೆತ್ತಿಕೊಳ್ಳಲಾರದು. ಪ್ರತಿಯೊಂದು ಪಕ್ಷಕ್ಕೂ ನಿರ್ದಿಷ್ಟ ಕಾರ್ಯಕೈಗೊಳ್ಳಲು ಜನಾದೇಶ ಕಡ್ಡಾಯ. ಜನಾದೇಶವಿಲ್ಲದೆ ಯಾವುದೇ ಪಕ್ಷವೂ ಏನನ್ನು ಮಾಡಲಾರದು. ನೀವು ಮತದಾರರನ್ನು ಚಕಿತಗೊಳಿಸಲಾರಿರಿ; ನೀವು ಚುನಾಯಿತರಾಗಿದ್ದೀರಿ ಎಂಬ ಒಂದೇ ಕಾರಣಕ್ಕೆ ಸಂವಿಧಾನವನ್ನು ತಿದ್ದುಪಡಿ ಮಾಡುವ ಪರಮಾವಧಿಕಾರ ಇದೆ ಎಂದು ಭಾವಿಸತಕ್ಕುದಲ್ಲ. ಇದನ್ನೇ ನಮ್ಮ ಸರ್ಕಾರ ಮಾಡುತ್ತಿರುವುದು. ಅವರಿಗೆ ಬಹುಮತ ಇದೆ ಎಂಬ ಕಾರಣಕ್ಕಾಗಿ ಯಾವುದೇ ಮಸೂದೆಗೆ ಸಂಬಂಧಪಟ್ಟಂತೆ ಯಾವುದೇ ಕಾನೂನು ಮಾಡಲು ಅಧಿಕಾರವಿರುವುದೆಂದು ಪರಿಭಾವಿಸುವುದಷ್ಟೇ ಅಲ್ಲದೆ, ಕೇವಲ ಚುನಾಯಿತರಾಗಿರುವುದರಿಂದಷ್ಟೇ ಸಂವಿಧಾನ ತಿದ್ದುಪಡಿಯಂಥ ಉದ್ದೇಶವನ್ನು ಜನತೆಗೆ ಸೂಚನೆ

ನೀಡದೆಯೇ ತಿದ್ದುಪಡಿ ಮಾಡಲು ಅಧಿಕಾರವಿದೆಯೆಂದು ಭಾವಿಸಿದ್ದಾರೆ. ಸಂವಿಧಾನವು ಯಾವುದೇ ಸಾಮಾನ್ಯ ಕಾನೂನಿಗಿಂತ ಯಾವ ದೃಷ್ಟಿಯಿಂದಲೂ ಭಿನ್ನವಲ್ಲವೆ? ಯಾರದೋ ಖಯಾಲಿಗಾಗಿ ತಿದ್ದುಪಡಿಮಾಡಲಾಗುವ ಕಾಗದದ ಚೂರೇ ಅದು? ಮರಾಠಿಯಲ್ಲಿ ಒಂದು ಮಾತಿದೆ. ಅದನ್ನು ನಾನು ಸರಿಯಾಗಿ ಇಂಗ್ಲಿಷಿಗೆ ಅನುವಾದ ಮಾಡಬಲ್ಲನೆ ತಿಳಿಯದು–ಆ ಮಾತು ಒಂದು ಒಳ್ಳೆಯ ಮಾತು; ಸಮಯೋಚಿತ ಮಾತು. ಮುದುಕನೊಬ್ಬ ಸತ್ತರೆ ಪರವಾಗಿಲ್ಲ; ಆದರೆ ಯಮನಿಗೆ ಆಗಿಂದಾಗ್ಗೆ ಬರುವುದು ಹವ್ಯಾಸವಾದೀತು ಎಂಬ ಭಯ ನಮಗೆ, ಆದರೆ ನಮಗೆ ಯಮನ ಆಕ್ರಮಣವನ್ನು ತಪ್ಪಿಸಬೇಕು. ಮುದುಕಿಯೊಬ್ಬಳು ಸತ್ತರೂ ಅಥವಾ ಅವಳನ್ನು ಕಸಿದುಕೊಂಡು ಹೋದರೂ ಪರವಾಗಿಲ್ಲ. ಈಗ ನಡೆಯುತ್ತಿರುವುದು ಅದೇ. ಸಂವಿಧಾನದ ಬಗ್ಗೆ ಸರ್ಕಾರಕ್ಕಿರುವ ಅಸಡ್ಡೆ, ಕನಿಷ್ಠ ಲಕ್ಷ್ಯ ಮತ್ತು ಗೌರವವನ್ನು ನಾನು ಗಮನಿಸುತ್ತಿದ್ದೇನೆ. ನೀವು ಸಂವಿಧಾನವನ್ನು ತಿದ್ದುಪಡಿ ಮಾಡಬಹುದು. ಅದಕ್ಕೆ ಯಾರ ಆಕ್ಷೇಪವೂ ಇರದು; ಆದರೆ ಖಂಡಿತವಾಗಿಯೂ ನೀವು ಸಂವಿಧಾನವು ಭಿನ್ನವೂ ವಿಶೇಷವೂ ಆದ ಸ್ಥಾನಮಾನ ಹೊಂದಿದೆ ಎಂದು ಪರಿಗಣಿಸಬಹುದು. ನೀವು ಏನು ಮಾಡಲು ಉದ್ದೇಶಿಸಿದ್ದೀರೆಂದು ಜನತೆಗೆ ತಿಳಿಸಿ ನಂತರ ಅದನ್ನು ಮಾಡಬೇಕು, ಇಲ್ಲವಾದಲ್ಲಿ ಈ ಸಂವಿಧಾನಾತ್ಮಕ ಉಪಬಂಧಗಳ ಮೇಲಿನ ಈ ಸುಗಮ ಆಕ್ರಮಣವನ್ನು ತಪ್ಪಿಸುವಂಥ ರೀತಿಯಲ್ಲಿ ಅನುಚ್ಛೇದ ೩೬೮ನ್ನೇ ತಿದ್ದುಪಡಿ ಮಾಡಬೇಕಾದದ್ದು ಅಗತ್ಯವಾದೀತು. ಇದಿಷ್ಟು ನಾನು ಹೇಳಬಯಸುವುದು.

◆

# ೫೨

# ೧೯೫೪ರ ಅಸ್ಪೃಶ್ಯತಾ ಅಪರಾಧಗಳ ವಿಧೇಯಕ

*__ಡಾ. ಬಿ.ಆರ್. ಅಂಬೇಡ್ಕರ್ (ಬಾಂಬೆ):__ ಮಾನ್ಯ ಉಪ ಸಭಾಪತಿಗಳೇ, ನಾನು ವಿಧೇಯಕದ ಬಗ್ಗೆ ಮಾತನಾಡಬಯಸುತ್ತೇನೆ. ಈ ವಿಧೇಯಕದ ಚರ್ಚೆ ನಡೆಯುವಾಗ ನಾನು ಮೂಕ ಪ್ರೇಕ್ಷಕನಾಗಿರುವುದು ಅಸಾಧ್ಯ; ಆದರೆ ನಮ್ಮ ಗೌರವಾನ್ವಿತ ಸ್ನೇಹಿತರಾದ ಮಂತ್ರಿಗಳು ಈ ವಿಧೇಯಕದ ಮೇಲಿನ ಪರಿಶೀಲನಾ ಸಮಿತಿಯಲ್ಲಿ ಕೃಪೆ ತೋರಿ ನನ್ನನ್ನು ಸದಸ್ಯರನ್ನಾಗಿ ಮಾಡಿದ್ದಾರೆ. ಪರಿಶೀಲನಾ ಸಮಿತಿಯ ಸದಸ್ಯರು, ಗೊತ್ತುವಳಿ ಮೇಲಿನ ಚರ್ಚೆಯಲ್ಲಿ ಮಾತನಾಡಬಾರದು ಅಥವಾ ಭಾಗವಹಿಸಬಾರದೆಂಬುದು ಸಂಪ್ರದಾಯ. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆಯೇ? ಸಭೆಗೆ ತಿಳಿಯದು.

**ಮಾನ್ಯ ಉಪಸಭಾಪತಿಗಳು:** ಅದನ್ನು ಉಲ್ಲಂಘಿಸಿಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ಇನ್ನೊಂದು ಸದನದಲ್ಲಿ ಇದನ್ನು ಕಟ್ಟುನಿಟ್ಟಾಗಿ ಪಾಲಿಸಿಲ್ಲವೆಂಬುದು ನನ್ನ ಅಭಿಪ್ರಾಯ: ಅಂಥ ಸ್ಥಿತಿಯಲ್ಲಿ ಸದಸ್ಯರು ಮಾತನಾಡಬಹುದೆಂದು ನನ್ನ ತಿಳುವಳಿಕೆ. ಆದಾಗ್ಯೂ ಸಂಪ್ರದಾಯವು ಕಟ್ಟುನಿಟ್ಟಿನದಾಗಿದ್ದರೆ ನಾನು ನನ್ನ ಹೆಸರನ್ನು ಹಿಂತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ; ಮಾನ್ಯ ಸಚಿವರು ಒಪ್ಪುತ್ತಾರೆಂದು ಆಶಿಸುತ್ತೇನೆ.

**ಪ್ರೊ॥ ಜಿ. ರಂಗಾ (ಆಂಧ್ರ):** ಅದು ಅಷ್ಟು ಕಟ್ಟುನಿಟ್ಟಿನದೇನೂ ಅಲ್ಲ.

**ಮಾನ್ಯ ಉಪಸಭಾಪತಿಗಳು:** ಹೌದು; ಅದು ಕಟ್ಟುನಿಟ್ಟಿನದು; ನಾನು ಪಾಲಿಸುತ್ತಾ ಬಂದಿದ್ದೇನೆ.

**ಪ್ರೊ. ಜಿ. ರಂಗಾ:** ಒಂದು ವೇಳೆ ಕಾಲಾವಕಾಶದೊಳಗೆ.......

**ಮಾನ್ಯ ಉಪಸಭಾಪತಿಗಳು:** ಇದೊಂದು ಕೆಟ್ಟ ಪೂರ್ವನಿದರ್ಶನಕ್ಕೆ ದಾರಿ ಮಾಡಿಕೊಡುತ್ತದೆ.

**ಪ್ರೊ. ಜಿ. ರಂಗಾ:** ಯಾವುದೇ ಕೆಟ್ಟ ಪೂರ್ವನಿದರ್ಶನದ ಪ್ರಶ್ನೆ ಉದ್ಭವಿಸುವುದಿಲ್ಲ. ಪರಿಶೀಲನಾ ಸಮಿತಿಯ ಸದಸ್ಯರಲ್ಲದ ಇತರ ಸದಸ್ಯರು ಮಾತನಾಡಲು ಉತ್ಸುಕರಾಗಿದ್ದಾಗ, ಪರಿಶೀಲನಾ ಸಮಿತಿಯ ಸದಸ್ಯರಾಗಿರುವವರು ಅವರಿಗೆ ಅವಕಾಶ ಮಾಡಿಕೊಡಬೇಕಾಗುವುದು ಎಂಬುದು ನನ್ನ ಅಭಿಪ್ರಾಯ. ಆದರೆ ಯಾರೂ ಪರಿಶೀಲನಾ ಸಮಿತಿಯ ಸದಸ್ಯರನ್ನು ಅವರು ಮಾತನಾಡುವ ಅಧಿಕಾರವನ್ನು ಚಲಾಯಿಸುವುದರಿಂದ ನಿಷೇಧಿಸಲಾರರು. ಆದರೆ ಮಾತ್ರ......

**ಮಾನ್ಯ ಉಪಸಭಾಪತಿಗಳು:** ಪರಿಶೀಲನಾ ಸಮಿತಿಯ ಸದಸ್ಯರ ವಿಷಯದಲ್ಲಿ ಸಂಪ್ರದಾಯವನ್ನು ನಾವು ಪರಿಪಾಲಿಸುತ್ತಿದ್ದೇವೆ......

**ಪ್ರೊ॥ ಜಿ. ರಂಗಾ:** ನಾವು ಆ ರೀತಿಯಲ್ಲಿ ಪಾಲಿಸುತ್ತಿಲ್ಲ; ಅದು ನಿಯಮವೇನೂ ಅಲ್ಲ; ಅದೊಂದು ಸಂಪ್ರದಾಯ.

**ಮಾನ್ಯ ಉಪಸಭಾಪತಿಗಳು:** ಸಂಪ್ರದಾಯವನ್ನು ಅದೇ ರೀತಿ ವ್ಯಾಖ್ಯಾನಿಸಬೇಕು; ಏಕೆಂದರೆ

---

* ಪಿ.ಡಿ. (ಆರ್.ಎಸ್) ಸಂ. ೭೨೦, ೧೬ ಸೆಪ್ಟೆಂಬರ್ ೧೯೫೪ ಪು. ೨೪೧೭–೧೮

ಹಾಗೆಯೇ ಪಾಲಿಸಲಾಗಿದೆ.

**ಪ್ರೊ|| ಜಿ ರಂಗಾ:** ಈ ಬಗ್ಗೆ ಯಾವುದೇ ನಿರ್ದಿಷ್ಟ ಕಾನೂನು ಇಲ್ಲ; ಆದರೆ ಪರಿಶೀಲನಾ ಸಮಿತಿಯ ಸದಸ್ಯರು ಸಾಮಾನ್ಯವಾಗಿ ಮಾತನಾಡುವಂತಿಲ್ಲ ಎಂಬ ಸಂಪ್ರದಾಯವನ್ನು ನಾವು ಅನುಸರಿಸುತ್ತಿದ್ದೇನೆ.

**ಮಾನ್ಯ ಉಪಸಭಾಪತಿಗಳು:** ಈ ಹಿಂದೆ ಒಂದೆರಡು ಪ್ರಸಂಗಗಳಲ್ಲಿ ನಾನು ಸದಸ್ಯರು ಮಾತನಾಡಲು ನಿರಾಕರಿಸಿರುತ್ತೇನೆ.

**ಶ್ರೀ ವಿಶ್ವನಾಥ್‌ದಾಸ್ (ಒರಿಸ್ಸಾ):** ಅವರು ತಮ್ಮ ಅಭಿಪ್ರಾಯಗಳನ್ನು ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲು ಅವಕಾಶ ದೊರೆಯುವುದರಿಂದ ಅವರಿಗೆ ಸದನದಲ್ಲಿ ಅವಕಾಶ ನೀಡುವುದು ಅಪೇಕ್ಷಣೀಯವಲ್ಲ ಎಂದು ಭಾವಿಸಿ.......

**ಮಾನ್ಯ ಉಪಸಭಾಪತಿಗಳು:** ಅದೊಂದು ಕೆಟ್ಟ ಪೂರ್ವನಿದರ್ಶನಕ್ಕೆ ದಾರಿ ಮಾಡಿಕೊಡುತ್ತದೆ.

**ಶ್ರೀ ವಿಶ್ವನಾಥದಾಸ್:** ಆದ್ದರಿಂದ ಪರಿಶೀಲನಾ ಸಮಿತಿಯಲ್ಲದ ಸದಸ್ಯರಿಗೆ ತಮ್ಮ ಅಭಿಪ್ರಾಯವನ್ನು ಮಂಡಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಹಾಗಾಗಿ; ಪರಿಶೀಲನಾ ಸಮಿತಿಗೆ ಈ ಅಭಿಪ್ರಾಯಗಳನ್ನು ಪರಿಗಣಿಸುವ ಅವಕಾಶ ದೊರೆತಂತಾಗುತ್ತದೆ. ಈ ಬಗ್ಗೆ ಯಾವುದೇ ನಿಯಮವಿಲ್ಲ; ಪರಿಶೀಲನಾ ಸಮಿತಿಯ ಸದಸ್ಯರು ಮಾತನಾಡಬಾರದೆಂದು ಷರತ್ತು ವಿಧಿಸುವ ಕಟ್ಟುನಿಟ್ಟಿನ ಸಂಪ್ರದಾಯವೂ ನಮಗೆ ಬೇಡ. ಆದ್ದರಿಂದ ನನ್ನ ಗೌರವಾನ್ವಿತ ಸ್ನೇಹಿತರಾದ ಡಾ. ಅಂಬೇಡ್ಕರ್ ಅವರಿಗೆ ವಿಷಯವನ್ನು ಈ ಬೆಳಕಿನಲ್ಲಿ ಪರಿಶೀಲಿಸದೆ, ಅತ್ಯಂತ ಉಪಯುಕ್ತವೂ ಮತ್ತು ಸಹಾಯಕಾರಿಯೂ ಆದ ಕ್ರಮವಾಗಿ ಪರಿಶೀಲನಾ ಸಮಿತಿಯಿಂದ ತಮ್ಮ ಹೆಸರನ್ನು ಹಿಂತೆಗೆದುಕೊಳ್ಳುವ ಬಗ್ಗೆ ಆಲೋಚಿಸಬೇಕೆಂದು ಮನವಿ ಮಾಡುತ್ತೇನೆ.

***ಡಾ. ಬಿ.ಆರ್. ಅಂಬೇಡ್ಕರ್:** ಸನ್ಮಾನ್ಯ ಉಪಸಭಾಪತಿಗಳೇ, ಈ ವಿಧೇಯಕದ ಉಪಬಂಧಗಳನ್ನು ಕುರಿತು ಮಾತನಾಡುವ ಮೊದಲು, ಸಂವಿಧಾನದ ಕೆಲವು ಅನುಚ್ಛೇದಗಳು ಸೃಜಿಸಿರುವ ಜವಾಬ್ದಾರಿ ಮತ್ತು ಈ ಉಪಬಂಧಗಳನ್ನು ಜಾರಿಗೊಳಿಸಲು ಸರ್ಕಾರದ ಮೇಲೆ ಹೊರಿಸಿರುವ ಜವಾಬ್ದಾರಿಯ ಬಗ್ಗೆ ಸದಸ್ಯರ ಗಮನವನ್ನು ಸೆಳೆಯಬಯಸುತ್ತೇನೆ.

ನಾನು ಮೊದಲಿಗೆ ಸಂವಿಧಾನದ ೧೩ನೆಯ ಅನುಚ್ಛೇದದ ಬಗ್ಗೆ ಪ್ರಸ್ತಾವಿಸಬಯಸುತ್ತೇನೆ. ಅನುಚ್ಛೇದ ೧೩– ಸಂವಿಧಾನವು ಜಾರಿಗೆ ಬಂದ ದಿನಾಂಕದಿಂದ ಮೂಲಭೂತ ಹಕ್ಕಿಗೆ ಅಸಂಗತವಾದ ಎಲ್ಲಾ ಕಾನೂನುಗಳು ಅನೂರ್ಜಿತವಾಗತಕ್ಕುದೆಂದು ಹೇಳುತ್ತದೆ. ಇದು ಅನುಚ್ಛೇದ ೧೩ರಲ್ಲಿ ವಿಧಿಸಿರುವ ಒಂದು ಸಾಮಾನ್ಯ ಉಪಬಂಧ. ಅಂದರೆ ವಾಸ್ತವವಾಗಿ ಸಾರ್ವಜನಿಕರಿಗೆ ಅಂತೆಯೇ ನ್ಯಾಯಾಲಯದ ನ್ಯಾಯಾಧೀಶರಿಗೆ ಅವರ ಮುಂದೆ ನ್ಯಾಯನಿರ್ಣಯವನ್ನು ಒಳಗೊಂಡ ಯಾವುದೇ ಮೂಲಭೂತ ಹಕ್ಕು ಕುರಿತ ಪ್ರಶ್ನೆ ಉದ್ಭವಿಸಿದಾಗ, ಮೂಲಭೂತ ಹಕ್ಕುಗಳೊಂದಿಗೆ ಸಂಘರ್ಷವಿರುವ ಯಾವುದೇ ಕಾನೂನನ್ನು ಜಾರಿಗೊಳಿಸಬಾರದೆಂದು ನೀಡಿದ ಒಂದು ಸಾಮಾನ್ಯ ಸೂಚನೆ. ಆದರೆ ಸಂವಿಧಾನ ರೂವಾರಿಗಳು ಈ ಸಾಮಾನ್ಯ ಘೋಷಣೆಯಿಂದ ತೃಪ್ತರಾಗಲಿಲ್ಲ. ಏಕೆಂದರೆ ಅದು ಸಾಮಾನ್ಯ ನಾಗರಿಕನೊಬ್ಬ ತನ್ನ ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ನ್ಯಾಯಾಲಯದಿಂದ ಪರಿಹಾರ ಪಡೆಯಲು ನ್ಯಾಯಾಲಯದ ಮುಂದೆ

---

* ಪಿ.ಡಿ. (ಆರ್.ಎಸ್) ಸಂ. ೭–೬, ೧೬ನೇ ಸೆಪ್ಟೆಂಬರ್ ೧೯೫೪, ಪು. ೨೪೨೪–೬೬

ಹೋಗಬೇಕೆಂಬುದು ಅತಿಯಾದ ನಿರೀಕ್ಷೆಯಾದೀತು ಎಂದು ಭಾವಿಸಿತು. ಸಾಮಾನ್ಯ ನಾಗರಿಕನಿಗೆ ಅದೊಂದು ಭಾರಿ ಹೊರೆಯೇ. ಆದ್ದರಿಂದ ಸಂವಿಧಾನವು ಮೂಲಭೂತ ಹಕ್ಕುಗಳಿಗೆ ಅನುರೂಪವಾಗಿರುವಂತೆ ಕಾನೂನುಗಳನ್ನು ಮಾಡಲು, ಹಾಲಿ ಇರುವ ಕಾನೂನುಗಳನ್ನು ಮಾರ್ಪಡಿಸಲು ಮತ್ತು ಅಳವಡಿಸಲು ಸರ್ಕಾರಕ್ಕೆ ಅಧಿಕಾರ ನೀಡುವ ಅನುಚ್ಛೇದ ೩೭೨, ಉಪ ಕಲಮು (೨) ಅನ್ನು ಜಾರಿಗೊಳಿಸಿತು.

ನನ್ನ ಗೌರವಾನ್ವಿತ ಸ್ನೇಹಿತರು ಒಂದು ವೈಯಕ್ತಿಕ ವಿಷಯ ಪ್ರಸ್ತಾಪಿಸಲು ಅನುಮತಿ ನೀಡಿದರೆ ನಾನು ಕಾನೂನು ಮಂತ್ರಿಯಾಗಿದ್ದಾಗ, ಮೂಲಭೂತ ಹಕ್ಕುಗಳಿಗೆ ಸರಿಹೊಂದುವಂತೆ ಹಾಲಿ ಕಾನೂನುಗಳನ್ನು ಮಾರ್ಪಡಿಸುವ ಮತ್ತು ಅಳವಡಿಸುವ ಪ್ರಶ್ನೆಯನ್ನು ಕೈಗೆತ್ತಿಕೊಂಡಿದ್ದೆ. ಪಂಜಾಬ್ ಭೂ ಪರಭಾರೆ ಅಧಿನಿಯಮ ಎಂದು ಕರೆಯಲಾಗುತ್ತಿದ್ದ ಪಂಜಾಬಿನ ಒಂದು ಅತ್ಯಂತ ಮಹತ್ತ್ವದ ಶಾಸನವನ್ನು ರದ್ದುಮಾಡುವಲ್ಲಿ ನಾನು ಯಶಸ್ವಿಯೂ ಆದೆ. ಈ ಅಧಿನಿಯಮದ ಅಡಿಯಲ್ಲಿ ಕೆಲವೊಂದು ಸಮುದಾಯಗಳು ಅಥವಾ ಕಾನೂನು ಹೇಳುವಂತೆ ಕೆಲವೊಂದು ಬುಡಕಟ್ಟುಗಳು ಮಾತ್ರ ಪಂಜಾಬಿನಲ್ಲಿ ಆಸ್ತಿಯನ್ನು ಹೊಂದಿರಲು ಅಥವಾ ಸ್ವಾಧೀನಪಡಿಸಿಕೊಳ್ಳಬಹುದಾದ ಬುಡಕಟ್ಟುಗಳೆಂದು ಘೋಷಿಸಲಾಗಿದ್ದಿತು. ಈ ಕಾನೂನು ನನ್ನ ಅಭಿಪ್ರಾಯದಂತೆ ಎಷ್ಟು ಪರಮ ಅನ್ಯಾಯದ್ದೆಂದರೆ, ವಾಸ್ತವದಲ್ಲಿ ಕೃಷಿಕನಾಗಿರುವ ಒಬ್ಬ ವ್ಯಕ್ತಿ, ಅವನ ಸಮುದಾಯ ಅಥವಾ ಬುಡಕಟ್ಟನ್ನು ಕೃಷಿಕ ಬುಡಕಟ್ಟೆಂದು ಘೋಷಿಸಿರದಿದ್ದಲ್ಲಿ, ಅವನು ಯಾವುದೇ ಜಮೀನನ್ನು ಹೊಂದಲು ಅಧಿಕಾರ ಉಳ್ಳವನಾಗಿರುತ್ತಿರಲಿಲ್ಲ. ಆದರೆ ಅದೇ ಒಬ್ಬ ವ್ಯಕ್ತಿ ಜೀವನದುದ್ದಕ್ಕೂ ಬ್ಯಾರಿಸ್ಟರ್ ಆಗಿ, ಹೊಲದಲ್ಲಿ ಎರಡು ಹುಲ್ಲಿನ ಎಸಳೂ ಬೆಳೆಯಲು ಆಶಿಸದೆ ಇದ್ದರೂ ಅವನು ಸ್ವತ್ತನ್ನು ಹೊಂದಲು ಅಧಿಕಾರವುಳ್ಳವನಾಗಿರುತ್ತಾನೆ. ಏಕೆಂದರೆ ಅವನ ಬುಡಕಟ್ಟನ್ನು ಸರ್ಕಾರವು ಕೃಷಿಕ ಬುಡಕಟ್ಟೆಂದು ಘೋಷಿಸಿದೆ. ನಾನು ಅನುಚ್ಛೇದ ೩೭೨ನ ೨ನೇ ಕಲಮಿನ ಮೇರೆಗೆ ಈ ಇಡೀ ಅಧಿನಿಯಮವನ್ನು ರದ್ದುಮಾಡುವಲ್ಲಿ ಯಶಸ್ವಿಯಾದೆ. ಪಂಜಾಬ್ ಭೂ ಪರಭಾರೆ ಅಧಿನಿಯಮದ ಜೊತೆಯ ಮತ್ತೊಂದು ಕಾನೂನು ಅಥವಾ ಸಂಪ್ರದಾಯ ಉಳಿದುಕೊಂಡಿತ್ತು. ಅದನ್ನು ಷಾಮೀಲಾತು ಭೂಮಿ ಎಂದರೆ ಹಳ್ಳಿಯ ಜನದ ಸಾಮಾನ್ಯ ಒಡೆತನದ ಭೂಮಿ ಎಂದು ಕರೆಯಲಾಗುತ್ತದೆ. ಈ ಸಾಂಪ್ರದಾಯಕ ಪಂಜಾಬ್ ಕಾನೂನು ಮೇರೆಗೆ ಷಾಮೀಲಾತು ಭೂಮಿಯನ್ನು ವಂಶಪರಂಪರೆಯಿಂದ ಭೂ ಒಡೆತನದ ಸಮುದಾಯಗಳು ಮಾತ್ರ ಹಂಚಿಕೊಳ್ಳಬಹುದಾಗಿದ್ದಿತು. ಇತರ ಜಮೀನದಾರೇತರರು ಅವರನ್ನು ಕಮೀನರೆಂದೂ ಅಂದರೆ, ಕೆಳವರ್ಗದವರೆಂದು ಕರೆಯಲಾಗುವುದು; ಅವರು ಭೂಮಿಯನ್ನು ಹಂಚಿಕೊಳ್ಳಲು ಅಧಿಕಾರವುಳ್ಳವರಲ್ಲ. ತತ್ಪರಿಣಾಮವಾಗಿ, ಅವರು ತಾವಿರುವ ಭೂಮಿಯಲ್ಲಿ ಪಕ್ಕಾ ಮನೆಗಳನ್ನು ಕಟ್ಟಿಕೊಳ್ಳಲೂ ಸಾಧ್ಯವಾಗಿಲ್ಲ. ಅವರಿಗೆ ಪಂಜಾಬಿನ ಜಮೀನ್ದಾರರು ತಮ್ಮನ್ನು ಯಾವಾಗ ಬೇಕಾದರೂ ಹೊರಕ್ಕೆಸೆಯಬಹುದೆಂಬ ಭೀತಿ ಇರುತ್ತದೆ. ಆದ್ದರಿಂದಾಗಿ ಜನ ಖಾಯಂ ಮನೆಗಳ ನಿರ್ಮಾಣಗಳಿಗೆ ಧೈರ್ಯ ಮಾಡಲಿಲ್ಲ. ಕಾನೂನು ಮಂತ್ರಾಲಯವನ್ನು ಬಿಟ್ಟು ಬರುವಾಗ ನಾನು ಈ ವಿಷಯವನ್ನು ಕೈಗೆತ್ತಿಕೊಂಡು, ಅನುಚ್ಛೇದ ೩೭೨ ಉಪಕಲಮು ೨ರ ಮೇರೆಗೆ ನಿರ್ವಹಿಸಬೇಕೆಂದು ಒಂದು ಟಿಪ್ಪಣಿಯನ್ನು ಇರಿಸಿ ಬಂದಿದ್ದೆ. ಕಾನೂನು ಮಂತ್ರಾಲಯ ಏನು ಮಾಡಿದೆಯೊ ಅಥವಾ ಗೃಹ ಮಂತ್ರಾಲಯ ಏನು ಕ್ರಮ ಕೈಗೊಂಡಿದೆಯೋ ನನಗೆ ತಿಳಿಯದು. ಸಂವಿಧಾನಕ್ಕೆ ಅನುಗುಣವಾಗಿ ಮಾರ್ಪಡಿಸುವುದು ಅತ್ಯಂತ ಅಗತ್ಯವೆನಿಸಿದ ಕೆಲವೊಂದು ಕಾನೂನುಗಳನ್ನು ನನ್ನ ಮಾರ್ಗದರ್ಶನಕ್ಕಾಗಿ ನಾನೇ ಪಟ್ಟಿ ಮಾಡಿಕೊಂಡಿದ್ದೆ. ಈ ಪೈಕಿ ನಾನು ಮೊದಲಿಗೆ ೧೮೧೬ರ ಮದ್ರಾಸ್ ರೆಗ್ಯುಲೇಷನ್ XI ಅನ್ನು ಉಲ್ಲೇಖಿಸಬಯಸುತ್ತೇನೆ. ಇದು ಈಸ್ಟ್ ಇಂಡಿಯಾ ಜಾರಿಗೊಳಿಸಿದ ಆಪರಾಧಿಕ ಕಾನೂನು. ಇದರಲ್ಲಿ, ಬಹುಶಃ ಪ್ರಕರಣ ೧೦ರಲ್ಲಿ, ಅಪರಾಧಿಯು

ಕೆಳವರ್ಗದವನಾಗಿದ್ದರೆ, ಅವನಿಗೆ ಕೊರಡು ಬೇಡಿಯ ಶಿಕ್ಷೆ ವಿಧಿಸಬೇಕೆಂದು ಹೇಳಲಾಗಿದೆ; ಒಂದು ವೇಳೆ ಅಪರಾಧಿಯು ಮೇಲುವರ್ಗಕ್ಕೆ ಸೇರಿದವನಾಗಿದ್ದರೆ ಅವನಿಗೆ ಈ ಶಿಕ್ಷೆಯನ್ನು ವಿಧಿಸಲಾಗುವುದಿಲ್ಲ. ಸರ್, ಈ ನಿಬಂಧನೆ ತಾರತಮ್ಯದ ನಿಬಂಧನೆ ಎಂಬ ಬಗ್ಗೆ ಯಾವುದೇ ಸಂದೇಹವಿಲ್ಲ; ಅದನ್ನು ರದ್ದುಗೊಳಿಸಬೇಕು. ನಾನು ಉಲ್ಲೇಖಿಸಬಯಸುವ ಮುಂದಿನ ಅಂಶವೆಂದರೆ ೧೮೯೦ರ ಬಾಂಬೆ ಮುನಿಸಿಪಲ್ ಸೇವಕರ ಅಧಿನಿಯಮ V. ಈ ಅಧಿನಿಯಮದ ಮೇರೆಗೆ ಬಹುಶಃ ಪ್ರಕರಣ ೩ರಲ್ಲಿ ಅಧಿನಿಯಮದಲ್ಲಿ ಸೇರಿಸಿರುವ ಅನುಸೂಚಿಯಲ್ಲಿನ ಕರ್ತವ್ಯಗಳನ್ನು ನಿರ್ವಹಿಸಬೇಕಾದ ನೌಕರರು, ಅನುಮತಿಯಿಲ್ಲದೆ ಕರ್ತವ್ಯಗಳಿಗೆ ಗೈರುಹಾಜರಾದರೆ ಅಥವಾ ೩ ತಿಂಗಳ ಲಿಖಿತ ನೋಟೀಸು ನೀಡದೆ ಕೆಲಸಕ್ಕೆ ರಾಜೀನಾಮೆ ನೀಡಿದರೆ, ಅವರನ್ನು ಕಾರಾಗೃಹ ಶಿಕ್ಷೆಗೆ ಗುರಿಪಡಿಸಬೇಕು ಎಂಬ ನಿಯಮವಿದೆ. ಈ ಉದ್ಯೋಗದ ಕರಾರು ಸಿವಿಲ್ ಕರಾರು ಆಗಿದ್ದು ಈ ಬಗ್ಗೆ ಯಾವುದೇ ಶಿಕ್ಷೆ ನೀಡಬೇಕಾಗಿದ್ದರೆ ಅದು ಹಾನಿ ಸ್ವರೂಪದ್ದಾಗಿರಬೇಕೆ ಹೊರತು ಶಿಕ್ಷಾ ಸ್ವರೂಪದಲ್ಲಿ ಇರಬಾರದು ಎಂಬುದು ಸುಸ್ಥಾಪಿತವಾದ ತತ್ತ್ವವಾಗಿದೆ. ಆದರೆ ಈ ನಿಯಮವು ಶಾಸನ ಗ್ರಂಥದಲ್ಲಿ ಇನ್ನೂ ಉಳಿದುಕೊಂಡಿದೆ. ಈ ಅಧಿನಿಯಮದ ಪರಿಣಾಮವೆಂದರೆ, ನನ್ನ ಗೌರವಾನ್ವಿತ ಸ್ನೇಹಿತರು ಅನುಸೂಚಿಯನ್ನು ಪರಿಶೀಲಿಸುವುದಾದರೆ, ಆ ಅನುಸೂಚಿಯು ಕರ್ತವ್ಯಗಳ ರೂಪದಲ್ಲಿ ಜಾಡಮಾಲಿ ಅಥವಾ ಬೀದಿ ಕಸಗುಡಿಸುವ ಮತ್ತು ಆ ರೀತಿಯ ಕೆಲಸವನ್ನು ಮಾಡುವವರು ಬಹುಮಟ್ಟಿಗೆ ಪರಿಶಿಷ್ಟ ಜಾತಿಯವರು ಅಥವಾ ಅಸ್ಪಶ್ಯರು, ಮುಷ್ಕರ ಹೂಡುವುದು ಅಸಾಧ್ಯ. ಏಕೆಂದರೆ ರಾಜೀನಾಮೆಯ ಷರತ್ತುಗಳಲ್ಲಿ ೩ ತಿಂಗಳು ನೋಟೀಸು ನೀಡಬೇಕು ಎಂಬುದನ್ನು ವಸ್ತುತಃ ಉಲ್ಲೇಖಿಸುತ್ತದೆ. ಈಗ ನಾನು ೧೯೧೬ರ ಉ.ಪ್ರ. ಮುನಿಸಿಪಾಲ್ಟಿಗಳ ಅಧಿನಿಯಮ II ನ್ನು ತೆಗೆದುಕೊಳ್ಳುತ್ತೇನೆ. ಇದರಲ್ಲಿ ಪ್ರಕರಣ ೮೫ ಇರಬೇಕು. ಹೌದು, ಇಲ್ಲಿ ಮತ್ತೊಮ್ಮೆ ಈ ಪ್ರಕರಣದ ಉಪಬಂಧಗಳು ಹೆಚ್ಚುಕಡಿಮೆ ಬಾಂಬೆ ಮುನಿಸಿಪಲ್ ಸೇವಕರ ಅಧಿನಿಯಮದ ಉಪಬಂಧಗಳಂತೆಯೇ ಇವೆ. ಇದರಲ್ಲಿಯೂ ಮಂಡಳಿಯಿಂದ ನೇಮಕಗೊಂಡ ಜಾಡಮಾಲಿಯು ಲಿಖಿತ ಸೇವಾ ಕರಾರಿನ ಷರತ್ತುಗಳಿಗೆ ಅನುಗುಣವಾಗಿಲ್ಲದ ಹೊರತು, ಅಥವಾ ಸಕಾರಣವಿಲ್ಲದೆ, ನೋಟೀಸು ನೀಡದೆ ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡುವ ಅಥವಾ ಬಿಟ್ಟು ಹೋಗುವ ಅಪರಾಧ ರುಜುವಾತಾದಲ್ಲಿ ೨ ತಿಂಗಳಷ್ಟು ಕಾಲ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆಗೆ ಗುರಿಯಾಗುತ್ತಾನೆಂದು ಹೇಳಲಾಗಿದೆ. ಈ ಕಾನೂನುಗಳು ನಿಜಕ್ಕೂ ತೀರಾ ಅನಾಗರಿಕವಾದ ಕಾನೂನುಗಳು. ವಿಶ್ವದ ಯಾವ ದೇಶವು ಸೇವಾ ಷರತ್ತಿನ ಉಲ್ಲಂಘನೆಯನ್ನು ಜೈಲು ಶಿಕ್ಷೆ ಅಥವಾ ದಂಡ ವಿಧಿಸಬಲ್ಲ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿರಲಾರದು. ಇದೊಂದು ಹಾನಿಕಾರಕ ಕಾನೂನು, ಆದರೂ ಈ ಬಗ್ಗೆ ಏನನ್ನು ಮಾಡಿರುವುದಿಲ್ಲ.

ಈಗ ನಾನು ಇತರ ಮೂರು ಅಧಿನಿಯಮಗಳನ್ನು ಉಲ್ಲೇಖಿಸಬಯಸುತ್ತೇನೆ. ಅವುಗಳಲ್ಲಿ ಒಂದು ೧೮೭೪ ರ ಬಾಂಬೆ ಹೆರಿಡಿಟರಿ ವಿಲೇಜ್ ಆಫೀಸರ್ಸ್ ಅಧಿನಿಯಮ. ಈ ಅಧಿನಿಯಮದ ಮೇರೆಗೆ ಕೆಲಸ ಮಾಡುವ ಅಥವಾ ಅಧಿಕೃತವಾಗಿ ಕಾರ್ಯನಿರ್ವಹಿಸುವವರನ್ನು ಎರಡು ವರ್ಗಗಳಾಗಿ ವಿಭಜಿಸಲಾಗಿದೆ. ನನ್ನ ಸ್ನೇಹಿತರಾದ ಶ್ರೀ ಥಾಗೆ ಅವರಿಗೆ ಇದರ ಪರಿಚಯ ಚೆನ್ನಾಗಿರಬೇಕು; ಆದರೆ ಗೃಹಮಂತ್ರಿಗಳಿಗೆ ಪರಿಚಯವಿರಲಿಕ್ಕಿಲ್ಲ. ಅವರ ಪ್ರಾಂತ್ಯದಲ್ಲಿ ಯಾವ ಪದ್ಧತಿ ಇದೆಯೋ ನನಗೆ ತಿಳಿಯದು; ಆದರೆ ಇಲ್ಲಿ ಸೇವಕರನ್ನು ಎರಡು ವರ್ಗಗಳನ್ನಾಗಿ ವರ್ಗೀಕರಿಸಲಾಗಿದೆ. ಒಂದು ಅಧಿಕಾರಿ ವರ್ಗ; ಮತ್ತೊಂದು ಗ್ರಾಮ ಸೇವಕರ ವರ್ಗ. ಅವರಿಬ್ಬರಿಗೂ ಪ್ರಾಚೀನ ಪದ್ಧತಿಯಲ್ಲಿಯೇ ಪಾವತಿ ಮಾಡಲಾಗುತ್ತಿದೆ– ಅವರ ಸೇವೆಗೆಂದು ನೀಡಲಾದ ಭೂಮಿಯಿಂದ ಬರುವ ಆದಾಯದಿಂದಲೇ ಅವರು ಹೊಟ್ಟೆ ಹೊರೆಯಬೇಕಾಗಿದೆ.

ಅವರಿಗೆ ಭೂಮಿಯನ್ನು ಹಿಂದೆಂದೋ ಬಹುಶಃ ಶಿವಾಜಿ ಅಥವಾ ಪೇಶ್ವೆ ಅವರ ಕಾಲದಲ್ಲಿ ನೀಡಲಾಗಿತ್ತು. ಅಂದು ನೀಡಲಾದ ಭೂಮಿಗೆ ಯಾವುದೇ ಸೇರ್ಪಡೆಯಾಗಿಲ್ಲ. ಅವರು ತಮ್ಮ ಭೂಮಿಯನ್ನು ಚೂರುಚೂರುಗಳಾಗಿ ಪಾಲು ಮಾಡಿಕೊಳ್ಳುತ್ತಿದ್ದು, ಬಹುಶಃ ಅವರ್‍ಯಾರು ಇಂದು ಎಕರೆಯ ನೂರನೆಯ ಒಂದು ಭಾಗವನ್ನೂ ಹೊಂದಿಲ್ಲ. ಆದಾಗ್ಯೂ ಈ ಜನ ಅದೇ ಭೂಮಿಗೆ ಅಂಟಿಕೊಂಡಿದ್ದಾರೆ. ಬ್ರಿಟೀಷರು ಬಂದ ನಂತರ 'ಪರಿವರ್ತನೆ', ಎಂದರೆ, ವ್ಯಕ್ತಿಯನ್ನು ಆನುವಂಶಿಕ ಹೊಣೆಗಾರಿಕೆಯಿಂದ ಬಿಡುಗಡೆ ಮಾಡಿ ಆತನು ಸರ್ಕಾರ ಸೂಕ್ತವೆಂದು ನಿರ್ಧರಿಸುವ ಜೂಡಿ ಅಥವಾ ಭೂಕಂದಾಯವನ್ನು ಪಾವತಿ ಮಾಡಿದಲ್ಲಿ, ಆ ಭೂಮಿಯನ್ನು ಅವನಿಗೆ ಬಿಟ್ಟುಕೊಡುವ ಯೋಜನೆಯನ್ನು ಆರಂಭಿಸಿತು. ಈ ಪ್ರಕ್ರಿಯೆ ನಡೆಯುತ್ತಲೇ ಇದೆ; ಅನೇಕ ಆನುವಂಶಿಕ ಅಧಿಕಾರಿಗಳು ಬಿಡುಗಡೆಯನ್ನು ಪಡೆದುಕೊಂಡಿದ್ದಾರೆ. ಇತ್ತೀಚೆಗೆ ಬಾಂಬೆ ಸರ್ಕಾರವು ಈ ವಂಶಪರಂಪರೆಯ ಗ್ರಾಮಾಧಿಕಾರಿಗಳನ್ನು ಈ ಪರಿವರ್ತನೆ ಯೋಜನೆಯಡಿ ತರುವ ಹೊಣೆಗಾರಿಕೆಯನ್ನು ವಹಿಸಿಕೊಂಡಿದೆ; ಏನೇ ಆದರೂ ಬಾಂಬೆ ರಾಜ್ಯದಲ್ಲಿನ ಪರಿಶಿಷ್ಟ ಜಾತಿಯ ನಿರಂತರ ಬೇಡಿಕೆಯಾದ ತಮ್ಮ ಕೆಲಸಗಾರರನ್ನು ಮತ್ತು ವಂಶಪರಂಪರೆಯ ಅಧಿಕಾರಿಗಳನ್ನು ಪರಿವರ್ತನೆಯ ಯೋಜನೆಯಡಿ ತಂದು ಅವರನ್ನು ಸೇವೆಯ ಹೊಣೆಗಾರಿಕೆಯಿಂದ ಬಿಡುಗಡೆ ಮಾಡಿ, ಭೂಕಂದಾಯ ಪಾವತಿ ಮಾಡಿದ ಮೇಲೆ ಅದರಲ್ಲಿ ಅವರು ಉದಾರವಾಗಿದ್ದು, ಭೂಕಂದಾಯದಲ್ಲಿ ಯಾವುದೇ ರಿಯಾಯಿತಿ ಬೇಡವೆಂದು ಅದನ್ನು ಪೂರ್ಣವಾಗಿ ಪಾವತಿ ಮಾಡಿದ ಮೇಲೆ ಭೂಮಿಯನ್ನು ತಮ್ಮಲ್ಲಿಯೇ ಉಳಿಸಿಕೊಳ್ಳಲು ಅವಕಾಶ ನೀಡಬೇಕೆಂಬ ಕೋರಿಕೆಯನ್ನು ಬಾಂಬೆ ಸರ್ಕಾರವು ತಿರಸ್ಕರಿಸಿತು. ಅವರು ತಮ್ಮ ಕಾನೂನನ್ನು ಪರಿಶಿಷ್ಟೇತರ ಅಧಿಕಾರಿಗಳನ್ನು ಮಾತ್ರ ಈ ಪರಿವರ್ತನೆ ಯೋಜನೆಯಡಿ ತರುವುದಕ್ಕೆ ಸೀಮಿತಗೊಳಿಸಿದರು. ಇದು ನನ್ನ ಅನುಭವದ ಪ್ರಕಾರ ಅತ್ಯಂತ ಕ್ರೂರವಾದ ಕಾನೂನು. ಈ ಅಧಿನಿಯಮದ ಮೇರೆಗೆ ಅಧಿಕಾರಿಯಾಗಿರುವ ಪಟೇಲನು, ಇಡೀ ಪರಿಶಿಷ್ಟ ಜಾತಿಯ ಜನರನ್ನು ಕೇವಲ ಸರ್ಕಾರದ ಉದ್ದೇಶಗಳಿಗಾಗಿಯೇ ಅಲ್ಲದೆ ತನ್ನ ಖಾಸಗಿ ಕೆಲಸಗಳಿಗೂ ಬಳಸಿಕೊಳ್ಳುವ ಸಾಧ್ಯತೆಯಿದೆ. ಉದಾ: ಯಾವುದೇ ಗ್ರಾಮದ ಪಟೇಲನ ಮನೆಯಲ್ಲಿ ಸಾವು ಸಂಭವಿಸಿದರೆ, ಕುಟುಂಬದಲ್ಲಿನ ಮರಣ, ಕುರಿತು ಅಂಚೆ ಕಾರ್ಡು ಬರೆದು ತಿಳಿಸುವುದಿಲ್ಲ, ಏಕೆಂದರೆ ಅದು ಘನತೆಗೆ ತಕ್ಕುದಾದ ಕ್ರಮವಲ್ಲ, ಬದಲಾಗಿ ಗ್ರಾಮ ಸೇವಕರು ಮೈಲಿಗಟ್ಟಲೆ ನಡೆದು ಪಟೇಲರ ಮನೆಯ ಸಾವಿನ ಸುದ್ದಿಯನ್ನು ಮುಟ್ಟಿಸಬೇಕೆಂದು ಒತ್ತಾಯಿಸುತ್ತಾನೆ. ಪಟೇಲನ ಮನೆಗೆ ಬಂದ ಮದುವೆಯಾದ ಹುಡುಗಿ ಹಿಂತಿರುಗಿ ಹೋಗಲು ಬಯಸಿದರೆ ಒಂದಿಬ್ಬರು ಗ್ರಾಮ ಸೇವಕರು ಅವಳೊಂದಿಗೆ ಸಹಚರರಾಗಿ ಅವಳ ಸಂರಕ್ಷಣೆ ನೋಡಿಕೊಂಡು ಆಕೆಯನ್ನು ಅವಳ ಮಾವನ ಮನೆಗೆ ಸುರಕ್ಷಿತವಾಗಿ ತಲುಪಿಸಬೇಕೆಂದು ಆಗ್ರಹಪಡಿಸುತ್ತಾನೆ. ಮದುವೆ ನಡೆದಲ್ಲಿ ಇಡೀ ಜನಾಂಗವನ್ನೇ ಉರುವಲು ತರಲು ಮತ್ತಿತರ ಎಲ್ಲ ಸೇವೆಗಳನ್ನು ಮಾಡಲು ಅವರಿಗೆ ಏನನ್ನು ನೀಡದೆಯೇ ಬಳಸಿಕೊಳ್ಳುತ್ತಾನೆ. ಅವರು ನಿರಾಕರಿಸಿದರೆ ಗ್ರಾಮ ಸೇವಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿಲ್ಲವೆಂದು ಕಲೆಕ್ಟರನಿಗೆ ವರದಿ ಮಾಡಲು ಅವನು ಸಕ್ಷಮನಿರುತ್ತಾನೆ. ಕಲೆಕ್ಟರನು ಈ ಅಧಿನಿಯಮದ ಮೇರೆಗೆ ಅವರಿಗೆ ದಂಡ ವಿಧಿಸಲು ಅವರ ಜಮೀನನ್ನು ವಶಪಡಿಸಿಕೊಳ್ಳಲು ಮತ್ತು ಹೊರಹಾಕಲು ಅಧಿಕಾರವುಳ್ಳವನಾಗಿರುತ್ತಾನೆ. ಈ ಕಾನೂನು ಸಂವಿಧಾನದ ಮೂಲಭೂತ ಹಕ್ಕಿಗೆ ವಿರುದ್ಧವಾಗಿಲ್ಲವೆ? ಮತ್ತು ಇಂಥ ಕಾನೂನು ಗೃಹ ಇಲಾಖೆ ಅಥವಾ ಕಾನೂನು ಇಲಾಖೆಯಿಂದ ಮಾರ್ಪಾಡಾಗಬೇಕಿಲ್ಲವೆ?

ಈ ಬಾಂಬೆ ಹೆರಿಡಿಟರಿ ವಿಲೇಜ್ ಆಫಿಸರ್ಸ್ ಅಧಿನಿಯಮಕ್ಕೆ ಸಂವಾದಿಯಾದ ಇನ್ನು ಎರಡು ಅಧಿನಿಯಮಗಳಿವೆ. ಒಂದು ಬಾಂಬೆ ರೆವೆನ್ಯೂ ಅಧಿಕಾರ ವ್ಯಾಪ್ತಿ ಅಧಿನಿಯಮ; ಮತ್ತೊಂದು ಪಿಂಚಣಿ ಅಧಿನಿಯಮ. (ಗೃಹ ಸಚಿವರು ತಮ್ಮ ಆಸನದಿಂದ ಏಳುತ್ತಿರುವುದನ್ನು ಗಮನಿಸಿ) ನನ್ನ ಸನ್ಮಾನ್ಯ ಸ್ನೇಹಿತರಿಗೆ ಬಹುಶಃ ಬಿಸಿ ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲವೆನಿಸುತ್ತಿದೆ.

**ಡಾ. ಕೆ.ಎನ್. ಕಡ್ಜು:** ಬದಲಾಗಿ ನನಗೆ ತುಂಬಾ ತಂಪೆನಿಸುತ್ತಿದೆ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಮಾತು ಮುಂದುವರಿಸಿದಂತೆ ಬಿಸಿ ಹೆಚ್ಚಾಗಲಿದೆ.

ಈ ಎರಡು ಅಧಿನಿಯಮಗಳು ಅಧಿಕಾರಿಗಳು, ನಿರ್ದೇಶಕರು ಅಥವಾ ಆಯುಕ್ತರು ಅಥವಾ ಮಂತ್ರಿಗಳು ಮಾಡಿರಬಹುದಾದ ಯಾವುದೇ ತಪ್ಪಿಗೆ ನ್ಯಾಯಾಂಗಕ್ಕೆ ಮೊರೆಹೋಗಲು ಅವಕಾಶವನ್ನೇ ನೀಡುವುದಿಲ್ಲ. ನ್ಯಾಯಾಲಯಗಳಿಂದ ಯಾವುದೇ ಪರಿಹಾರ ದೊರೆಯುವುದಿಲ್ಲ: ಏಕೆಂದರೆ ರೆವಿನ್ಯೂ ಅಧಿಕಾರ ವ್ಯಾಪ್ತಿ ಅಧಿನಿಯಮವು ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ಕಲೆಕ್ಟರ್‌ನ ತೀರ್ಮಾನವನ್ನು ಬದಲಾಯಿಸುವ ಅಥವಾ ಮಾರ್ಪಡಿಸುವ ಅಥವಾ ಪರಿಷ್ಕರಿಸುವ ಯಾವುದೇ ಅಧಿಕಾರ ವ್ಯಾಪ್ತಿಯನ್ನು ನ್ಯಾಯಾಲಯಗಳು ಹೊಂದಿರತಕ್ಕುದಲ್ಲವೆಂದು ಹೇಳುತ್ತವೆ. ಪಿಂಚಣಿ ಅಧಿನಿಯಮ ಯಾವುದೇ ಬಗೆಯ ಇನಾಮ್ ಹೊಂದಿರುವರು ನ್ಯಾಯಾಲಯಕ್ಕೆ ಹೋಗಲು ಹಕ್ಕುಳ್ಳವರಾಗಿರುವುದಿಲ್ಲವೆಂದು ಹೇಳುತ್ತದೆ. ಅಲ್ಲದೆ ನ್ಯಾಯಾಲಯವು ಕಲೆಕ್ಟರ್‌ನಿಂದ ವಿಚಾರಣೆ ನಡೆಸಬಹುದೆಂಬ ಪ್ರಮಾಣಪತ್ರವನ್ನು ಪಡೆದುಕೊಂಡ ಹೊರತು, ಯಾವುದೇ ಅಧಿಕಾರವ್ಯಾಪ್ತಿಯನ್ನು ಚಲಾಯಿಸತಕ್ಕುದಲ್ಲ. ಅದರಿಂದ ಈ ನಿರ್ದಿಷ್ಟ ಅಧಿನಿಯಮದ ಹೆಸರಿನಲ್ಲಿ ಮಾಡುವ ಅನ್ಯಾಯಗಳ ವಿರುದ್ಧ ಯಾವುದೇ ಪರಿಹಾರವನ್ನು ಪಡೆದುಕೊಳ್ಳುವುದು ಈ ಬಡ ಜನರಿಗೆ ಅಸಾಧ್ಯ. ನಾನೇ ಕಾನೂನು ಸಚಿವನಾಗಿ ಉಳಿದುಕೊಂಡಿದ್ದರೆ ಈ ಸುಧಾರಣೆಗಳನ್ನು ಜಾರಿಗೊಳಿಸುವುದು ನನ್ನ ಉದ್ದೇಶವಾಗಿದ್ದೀತು. ಆದರೆ ನಮ್ಮ ಕಾನೂನುಗಳ ಕಡೆ ಗಮನಹರಿಸಿ ಅವು ಎಷ್ಟರ ಮಟ್ಟಿಗೆ ಮೂಲಭೂತ ಹಕ್ಕುಗಳಿಗೆ ಭಂಗವನ್ನು ಉಂಟುಮಾಡುತ್ತವೆಂದು ತಿಳಿದುಕೊಳ್ಳುವುದು ಕಾನೂನು ಮಂತ್ರಿಗಳ, ಅದರಲ್ಲೂ ವಿಶೇಷವಾಗಿ ಗೃಹ ಮಂತ್ರಿಗಳ ಕರ್ತವ್ಯ. ಸರ್, ಆದರೆ ಈ ಎರಡು ಇಲಾಖೆಗಳು ನಾನು ನೋಡಿರುವಂತೆ ಅತ್ಯಂತ ಸೋಮಾರಿ ಇಲಾಖೆಗಳೆಂದು ಹೇಳಲು ನನಗೆ ವಿಷಾದವೆನಿಸುತ್ತದೆ. ಈ ವಿಷಯದಲ್ಲಿ ಮುಂದುವರೆಯಲು ಅವುಗಳಿಗೆ ಉತ್ಸಾಹವಾಗಲಿ, ಹಂಬಲವಾಗಲಿ ಅಥವಾ ಆತ್ಮಸಾಕ್ಷಿಯಾಗಲಿ ಇದ್ದಂತಿಲ್ಲ. ಅವುಗಳಿಗೆ ಯಾವುದೇ ಆದರ್ಶವೂ ಇಲ್ಲ. ನನ್ನ ಮಾತುಗಳನ್ನು ಕೇಳಿಯಾದರೂ ಈ ವಿಷಯದ ಬಗ್ಗೆ ಒಂದಿಷ್ಟು ಕ್ರಮ ಕೈಗೊಳ್ಳಲು ಮತ್ತು ಪರಿಹಾರ ಅಗತ್ಯವಿರುವೆಡೆ ಪರಿಹಾರ ದೊರೆಯುವಂತೆ ನೋಡಿಕೊಳ್ಳಲು ಪ್ರೇರಣೆ ದೊರೆತೀತೆಂದು ಆಶಿಸುತ್ತೇನೆ. ಸರ್. ಪ್ರಾರಂಭಿಕ ಅಭಿಪ್ರಾಯಗಳಾಗಿ ಈ ಮಾತುಗಳನ್ನು ಹೇಳಲು ಬಯಸಿದ್ದೆನು. ಈಗ ನಾನು ವಿಧೇಯಕದ ಬಗ್ಗೆ ಮಾತನಾಡುತ್ತೇನೆ.

**ಮಧ್ಯಾಹ್ನ ೩.೦೦ ಗಂಟೆ**

ಈ ವಿಧೇಯಕದ ಹೆಸರಿನ ಬಗ್ಗೆ ಒಂದು ಮಾತು ಹೇಳಬಯಸುತ್ತೇನೆ. ಇದೇನು ಅಷ್ಟು ಪ್ರಮುಖವಾದ ವಿಷಯವಲ್ಲ; ಆದಾಗ್ಯೂ ಹೆಸರು ಕೂಡ ಮುಖ್ಯವೆ. ಗುಲಾಬಿಯನ್ನು ಗುಲಾಬಿ ಎಂದು ಕರೆಯಲಿ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲಿ ಅದರ ಸುವಾಸನೆ ಮಾತ್ರ ಮಧುರವೆ ಎಂದು ಹೇಳಿದ್ದಾನೆ ಶೇಕ್ಸ್‌ಪಿಯರ್. ನನ್ನ ಪ್ರಕಾರ ಹೆಸರು ಕೂಡ ಬಹಳ ಮಹತ್ತ್ವದ್ದೆ; ಒಂದು ಉತ್ತಮ ಕಾನೂನು ಒಳ್ಳೆಯ ಮತ್ತು ಸಂಕ್ಷಿಪ್ತವಾದ ಹೆಸರನ್ನು ಹೊಂದಿರಬೇಕು. ಈ ವಿಧೇಯಕದ ಹೆಸರಾದರೂ ಏನು?

ಅಸ್ಪೃಶ್ಯತೆ ಆಚರಣೆಗೆ ಮತ್ತು ಅದರಿಂದ ಸಂಭವಿಸುವ ಅನರ್ಹತೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಶಿಕ್ಷೆ ನೀಡುವ ವಿಧೇಯಕ. ಇದೊಂದು ಕಿಚಡಿ ಮತ್ತು ಉದ್ದವಾದ ಹೆಸರು. ವಿಧೇಯಕದ ಹೆಸರು ಏನಿರಬೇಕೆಂಬುದು ವಿವಾದಾಸ್ಪದ ವಿಷಯವಾದರೂ ಇದು "ನಾಗರಿಕ ಹಕ್ಕುಗಳ (ಅಸ್ಪೃಶ್ಯರು) ಸಂರಕ್ಷಣಾ ಅಧಿನಿಯಮ" ಎಂದಿರಬೇಕಿತ್ತು. ನೀವು ಮಾಡುತ್ತಿರುವುದು ಅವರ ನಾಗರಿಕ ಹಕ್ಕುಗಳ ರಕ್ಷಣೆಗಿಂತ ಹೆಚ್ಚಿನದೇನೂ ಅಲ್ಲ. ಆದ್ದರಿಂದ ನಾಗರಿಕ ಹಕ್ಕುಗಳ ಮೇಲೆ ಒತ್ತು ಇರಬೇಕಿತ್ತು. ವಿಧೇಯಕದ ಪ್ರಭಾರವನ್ನು ಹೊಂದಿರುವ ನನ್ನ ಸ್ನೇಹಿತರಿಗೆ ನಾನು ಹೇಳಬಯಸುವುದು ಸಂಯುಕ್ತ ಸಂಸ್ಥಾನದಲ್ಲಿನ ನೀಗ್ರೋಗಳ ಪ್ರಕರಣ ಅಥವಾ ಸಿವಿಲ್ ಯುದ್ಧವನ್ನು ಪರಿಶೀಲಿಸಿದ್ದರೆ–ಅವರಿಗೆ ಸಂಸತ್ತಿನಲ್ಲಿ ಪ್ರಸ್ತಾಪಿಸುತ್ತಿರುವ ವಿಧೇಯಕದ ಪೂರ್ವನಿದರ್ಶನವು ಸರಳವಾಗಿದ್ದು–ನಾಗರಿಕ ಹಕ್ಕುಗಳ ಸಂರಕ್ಷಣೆ ವಿಧೇಯಕ ಎಂದಷ್ಟೇ ಇರುವುದನ್ನು ಕಾಣಬಹುದಿತ್ತು. ಅದರಲ್ಲಿ 'ನೀಗ್ರೋ' ಎಂಬ ಪದವನ್ನು ಕೂಡ ಉಲ್ಲೇಖಿಸಿರುವುದಿಲ್ಲ. ಅವರೇಕೆ ಉದ್ದಕ್ಕೂ ಅಸ್ಪೃಶ್ಯತೆ ಮತ್ತು ಅಸ್ಪೃಶ್ಯರು ಎಂದು ಪುನರುಚ್ಚರಿಸುತ್ತಿದ್ದಾರೋ ನನಗೆ ತಿಳಿಯದು. ವಿಧೇಯಕದ ಪಠ್ಯದಲ್ಲಿ ಅವರು ಆಗಾಗ್ಗೆ ಪರಿಶಿಷ್ಟಜಾತಿ ಎಂದು ಕರೆದಿದ್ದಾರೆ. ಸಂವಿಧಾನವು ಪರಿಶಿಷ್ಟ ಜಾತಿಗಳನ್ನು ಕುರಿತು ಮಾತನಾಡುತ್ತದೆ; ಹಾಗಿದ್ದಾಗ ಪರಿಶಿಷ್ಟ ಜಾತಿಗಳು ಎಂಬ ಪದವನ್ನು ವಿಧೇಯಕದ ಹೆಸರಿನಲ್ಲಿಯೇ ಬಳಸಲು ಏಕೆ ನಾಚಿಕೆಪಡಬೇಕೋ ನನಗೆ ತಿಳಿಯದು. ನನ್ನ ಮಟ್ಟಿಗೆ ಹೇಳುವುದಾದರೆ ಅಸ್ಪೃಶ್ಯರ ನಾಗರಿಕ ಹಕ್ಕುಗಳ ಸಂರಕ್ಷಣೆ ವಿಧೇಯಕ ಅಥವಾ ಪರಿಶಿಷ್ಟ ಜಾತಿಗಳ ನಾಗರಿಕ ಹಕ್ಕುಗಳ ಸಂಕ್ಷರಣೆ ವಿಧೇಯಕ ಎಂದು ಕರೆಯಲು ನನಗೆ ಸಂತಸವೆನಿಸುತ್ತದೆ. ನನ್ನ ಸ್ನೇಹಿತರು ಈ ವಿಷಯವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಾರೆಂದು ಆಶಿಸುತ್ತೇನೆ.

ಸರ್, ವಿಧೇಯಕದಲ್ಲಿ ಕೆಲವೊಂದು ಅತ್ಯಂತ ಗಂಭೀರ ಲೋಪಗಳು ಕಂಡುಬಂದಿವೆ. ಈ ಲೋಪಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ವಾಸ್ತವವಾಗಿ ನಾಗರಿಕ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ಚಲಾಯಿಸುವುದರ ವಿರುದ್ಧ ಯಾವುದೇ ನಿಷೇಧವನ್ನು ತೆಗೆದುಹಾಕಲು ಅವಕಾಶ ಕಲ್ಪಿಸಿರುವುದಿಲ್ಲ. ನಿಸ್ಸಂಶಯವಾಗಿ ವಿಧೇಯಕದ ಉದ್ದೇಶ ನಾಗರಿಕ ಮತ್ತು ಸಂವಿಧಾನಾತ್ಮಕ ಹಕ್ಕುಗಳನ್ನು ಚಲಾಯಿಸಲು ಸ್ವಾತಂತ್ರ ನೀಡುವುದೇ ಆಗಿದೆ. ಆದರೆ ನನ್ನ ಸ್ನೇಹಿತರು ಯಾವುದೇ ನಾಗರಿಕ ಮತ್ತು ಸಂವಿಧಾನಾತ್ಮಕ ಹಕ್ಕುಗಳನ್ನು ಚಲಾಯಿಸುವುದರ ವಿರುದ್ಧ ಯಾವುದೇ ಬಗೆಯ ನಿಷೇಧವನ್ನು ನಿವಾರಿಸುವ ಉದ್ದೇಶ ಈ ವಿಧೇಯಕ ಹೊಂದಿದೆ ಎಂದು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಅನಿಸಿಕೆ. ಸಂಯುಕ್ತ ಸಂಸ್ಥಾನದಲ್ಲಿ ನಾಗರಿಕ ಹಕ್ಕುಗಳ ವಿಧೇಯಕ ಎಂದು ಕರೆಯಲಾಗುವ ವಿಧೇಯಕದಿಂದ ಒಂದು ಉಪಬಂಧವನ್ನು ನಾನು ಅವರಿಗಾಗಿ ಓದಬಯಸುತ್ತೇನೆ. ಈ ಉಪಬಂಧ ಹೀಗಿದೆ: ಪುಸ್ತಕದ ಶೀರ್ಷಿಕೆ ಪುಟವನ್ನು ಓದಬೇಡಿ. ತಮಗೆ ನೋವಾದೀತು. ಇದು ಐರ್ಲೆಂಡ್ ಅಧಿನಿಯಮ ೧೯೨೦ರಿಂದ ಮತ್ತು ಪ್ರೊಫೆಸರ್ ರೇಸ್ ಅವರ ಪ್ರಭುತ್ವ ಲೇಖನದಿಂದ ತೆಗೆದುಕೊಂಡ ಸಂಯುಕ್ತ ಸಂಸ್ಥಾನದ ಸಂವಿಧಾನ ತಿದ್ದುಪಡಿ XIV. ನಾನು ಮೂಲವನ್ನು ನಾಗರಿಕ ಹಕ್ಕುಗಳ ವಿಧೇಯಕದಿಂದ ತೆಗೆದುಕೊಂಡಿದ್ದರೂ ಅಸ್ಪೃಶ್ಯರಿಗೆ ಅನ್ವಯವಾಗುವಂತೆ ಅದನ್ನು ಪರಿವರ್ತಿಸಿದ್ದೇನೆ.

> "ರಾಜ್ಯ ಕ್ಷೇತ್ರದ ಎಲ್ಲಾ ಪ್ರಜೆಗಳು ಕಾನೂನಿನ ಮುಂದೆ ಸಮಾನರು ಮತ್ತು ಸಮಾನ ನಾಗರಿಕ ಹಕ್ಕುಗಳನ್ನು ಹೊಂದಿರುತ್ತಾರೆ. ಅಸ್ತಿತ್ವದಲ್ಲಿರುವ ಯಾವುದೇ ಅಧಿನಿಯಮ ನಿಬಂಧನೆ, ಆದೇಶ, ರೂಢಿ ಅಥವಾ ಕಾನೂನು ವ್ಯಾಖ್ಯಾನದ ಮೂಲಕ ಅಸ್ಪೃಶ್ಯತೆಯ ಕಾರಣದಿಂದಾಗಿ ರಾಜ್ಯ ಕ್ಷೇತ್ರದ ಯಾವುದೇ ಪ್ರಜೆಯ

> ವಿರುದ್ಧ ಯಾವುದೇ ದಂಡ, ಅನಾನುಕೂಲತೆ, ಅನರ್ಹತೆಗಳನ್ನು ವಿಧಿಸಿದ್ದಲ್ಲಿ ಅಥವಾ ಭೇದಭಾವ ಮಾಡುವಂತಿದ್ದಲ್ಲಿ, ಈ ಸಂವಿಧಾನ ಜಾರಿಗೆ ಬಂದ ದಿನದಿಂದ, ಅವು ಅನೂರ್ಜಿತವಾಗುತ್ತವೆ."

ನನ್ನ ಮಟ್ಟಿಗೆ ಇಂಥ ಧನಾತ್ಮಕ ಹೇಳಿಕೆ ಅತ್ಯಾವಶ್ಯಕ. ಇದನ್ನು ಅನುಚ್ಛೇದ ೧೩ ಒಳಗೊಂಡಿದೆಯಾದರೂ ಈ ವಿಧೇಯಕಕ್ಕೆ ಅವಶ್ಯವಿರುವಂಥ ತಿದ್ದುಪಡಿಗಳನ್ನು ಮಾಡಿ, ಅನುಚ್ಛೇದ ೧೩ನ್ನು ಇಡಿಯಾಗಿ ಪುನರಾವರ್ತಿಸಿದರೂ ಯಾವುದೇ ಹಾನಿಯುಂಟಾಗುವುದಿಲ್ಲ. ಈ ಬಗ್ಗೆ ವಿಧೇಯಕ ಏಕೆ ಮೌನವಾಗಿದೆಯೋ ನನಗೆ ತಿಳಿಯದು. ಈ ವಿಧೇಯಕವು ಒಂದು ಅತ್ಯಂತ ಸಾಮಾನ್ಯ ಸ್ವರೂಪದ್ದೆಂದು ತೋರುವಂತೆ ಕಾಣುತ್ತದೆ. ಅಂದರೆ ಬಟ್ಟೆ ಒಗೆಯುವ ಧೋಬಿ, ಕ್ಷೌರ ಮಾಡುವ ಕ್ಷೌರಿಕ ಅಥವಾ ಲಡ್ಡು ಮಾರಾಟ ಮಾಡದ ಲಡ್ಡುವಾಲ ಹೀಗೆ ಇರುವಂತಿದೆ. ಇಂಥವು ತೀರಾ ಕ್ಷುಲ್ಲಕ ಸಂಗತಿಗಳು; ಸಂಸತ್ತು ಧೋಬಿಗಳು, ಕ್ಷೌರಿಕರು ಮತ್ತು ಲಡ್ಡುವಾಲಗಳ ಬಗ್ಗೆ ಸಮಯ ಹಾಳುಮಾಡುತ್ತಿದೆಯೆಂದು ಜನತೆ ಭಾವಿಸಬಹುದು. ಇದು ಆ ಬಗೆಯ ವಿಧೇಯಕನಲ್ಲ. ಇದು ನಾಗರಿಕ ಮೂಲಭೂತ ಹಕ್ಕುಗಳಿಗೆ ಸಂರಕ್ಷಣೆ ನೀಡಲು ಉದ್ದೇಶಿಸಿರುವ ವಿಧೇಯಕ. ಆದ್ದರಿಂದ ಇದರಲ್ಲಿ ಒಂದು ಧನಾತ್ಮಕ ಕಲಮನ್ನು ಸೇರಿಸಬೇಕಾಗಿದ್ದಿತು. ಅದು ಪ್ರಸಕ್ತ ವಿಧೇಯಕದಲ್ಲಿ ಇಲ್ಲ. ಈ ಲೋಪವನ್ನು ಸರಿಪಡಿಸಬೇಕಾಗಿದೆ. ಇನ್ನೊಂದು ಲೋಪ, ನನಗೆ ಕಂಡುಬಂದಿರುವುದು ಅತ್ಯಂತ ಘೋರ ಸ್ವರೂಪದ್ದು–ಸಾಮಾಜಿಕ ಬಹಿಷ್ಕಾರದ ವಿರುದ್ಧ ಯಾವುದೇ ಉಪಬಂಧವಿರುವುದಿಲ್ಲ. ನನ್ನ ಅನುಭವದಿಂದ ಹೇಳುವುದಾದರೆ ಪರಿಶಿಷ್ಟ ಜಾತಿಯವರು ಈ ಹಕ್ಕು ಚಲಾಯಿಸುವುದನ್ನು ತಡೆಯಲು ಗ್ರಾಮ ಸಮುದಾಯಗಳು ವಿಧಿಸುವ ಮಹತ್ತ್ವದ ಮತ್ತು ಹೇಯ ಕ್ರಮವೆಂದರೆ ಸಾಮಾಜಿಕ ಬಹಿಷ್ಕಾರ. ಅವರು ಪರಿಶಿಷ್ಟ ಜಾತಿಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸುತ್ತಾರೆ. ಇದೊಂದು ರೀತಿಯ ಅಸಹಕಾರ. ಇದು ಕೇವಲ ನನ್ನೊಬ್ಬನ ಅಭಿಪ್ರಾಯವಲ್ಲ. ಇದು ಪರಿಶಿಷ್ಟ ಜಾತಿಗಳ ಹಾಗೂ ತುಳಿತಕ್ಕೊಳಗಾದ ವರ್ಗಗಳ ಮತ್ತು ಅಲೆಮಾರಿ ಬುಡಕಟ್ಟುಗಳ ಸ್ಥಿತಿಗತಿಗಳನ್ನು ಕುರಿತು ವಿಚಾರಣೆ ನಡೆಸಲು ಬಾಂಬೆ ಸರ್ಕಾರವು ನೇಮಕ ಮಾಡಿದ ಸಮಿತಿಯ ಅಭಿಪ್ರಾಯ. ದಿವಂಗತ ಠಕ್ಕರ್ ಬಾಪಾ ಅವರು ಈ ಸಮಿತಿಯ ಸದಸ್ಯರಾಗಿದ್ದರು ಹಾಗೂ ಅವರೇ ಈ ವರದಿಗೆ ಸಹಿ ಮಾಡಿರುತ್ತಾರೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ನಾನು ಸಾಮಾಜಿಕ ಬಹಿಷ್ಕಾರದ ಪ್ರಶ್ನೆಗೆ ಸಂಬಂಧಪಟ್ಟ ಈ ಸಮಿತಿಯ ಒಂದು ಪ್ಯಾರಾವನ್ನು ಮಾತ್ರ ಓದುತ್ತೇನೆ. ಇದು ಪ್ಯಾರಾ ೧೦೨. ಸಮಿತಿಯು ಹೀಗೆ ಹೇಳುತ್ತದೆ:

> "ನಾವು ತುಳಿತಕ್ಕೊಳಗಾದ ವರ್ಗಗಳಿಗೆ ಎಲ್ಲಾ ಸಾರ್ವಜನಿಕ ಉಪಯೋಗಗಳ ಬಗ್ಗೆ ಅವರಿಗಿರುವ ಹಕ್ಕುಗಳನ್ನು ಕೊಡಿಸಲು ವಿವಿಧ ಪರಿಹಾರಗಳನ್ನು ಶಿಫಾರಸ್ಸು ಮಾಡಿದಾಗ್ಯೂ, ಅವರು ತಮ್ಮ ಹಕ್ಕುಗಳನ್ನು ಚಲಾಯಿಸಲು ಬಹುಕಾಲದವರೆಗೆ ಕಷ್ಟಕರವಾಗಬಹುದೆಂಬ ಅಂಜಿಕೆ ನಮಗಿದೆ. ಮೊದಲನೆಯ ಕಷ್ಟವೆಂದರೆ ಸಾಂಪ್ರದಾಯಿಕ ವರ್ಗಗಳಿಂದ ಅವರ ವಿರುದ್ಧ ಬಹಿರಂಗ ಹಿಂಸೆಯ ಭಯ. ಪ್ರತಿ ಗ್ರಾಮದಲ್ಲೂ ಪರಿಶಿಷ್ಟ ಜಾತಿಗಳು ತೀರಾ ಅಲ್ಪಸಂಖ್ಯಾತರಾಗಿದ್ದು, ಅವರಿಗೆ ವಿರುದ್ಧವಾಗಿ ದಲಿತ ಜಾತಿಗಳ ಯಾವುದೇ ಉದ್ದೇಶಿತ ಆಕ್ರಮಣದಿಂದ ತಮ್ಮ ಹಿತಾಸಕ್ತಿ ಮತ್ತು ಘನತೆಗಳನ್ನು ಎಷ್ಟೇ ನಷ್ಟವಾದರೂ ಸಂರಕ್ಷಿಸಿಕೊಳ್ಳಲು ಪಣತೊಟ್ಟಿರುವ ಬಹುಸಂಖ್ಯಾತ ಸಂಪ್ರದಾಯವಾದಿಗಳಿರುತ್ತಾರೆ. ಪೊಲೀಸ್‌ರಿಂದ

ಶಿಕ್ಷೆಗೆ ಒಳಗಾಗುವ ಭಯವು ಸಂಪ್ರದಾಯವಾದಿಗಳಿಂದ ಅಂಥ ಹಿಂಸೆಯ ಬಳಕೆಗೆ ತಡೆಯೊಡ್ಡಿದ ಪರಿಣಾಮವಾಗಿ ಅಂಥ ಪ್ರಕರಣಗಳು ವಿರಳವಾಗುತ್ತಿವೆ. ಎರಡನೆಯ ಕಷ್ಟ–ಇಂದು ದಲಿತ ವರ್ಗ ಇರುವ ಆರ್ಥಿಕ ಸ್ಥಿತಿಗಳಿಂದ ಉದ್ಭವಿಸಿದ್ದು. ದಲಿತ ವರ್ಗಗಳು ಪ್ರೆಸಿಡೆನ್ಸಿಯ ಬಹುಪಾಲು ಭಾಗಗಳಲ್ಲಿ ಆರ್ಥಿಕ ಸ್ವಾತಂತ್ರವನ್ನು ಹೊಂದಿರುವುದಲ್ಲ. ಕೆಲವರು ಸಂಪ್ರದಾಯವಾದಿ ವರ್ಗಗಳ ಇಚ್ಛಾನುಸಾರ ಭೂಮಿಯನ್ನು ಅವರ ಗೇಣಿದಾರರಾಗಿ ಉಳುಮೆ ಮಾಡುತ್ತಿದ್ದಾರೆ. ಇತರರು ಸಂಪ್ರದಾಯವಾದಿ ವರ್ಗಗಳಿಂದ ಕೃಷಿ ಕಾರ್ಮಿಕರಾಗಿ ನಿಯೋಜಿತರಾಗಿ ಜೀವನ ಸಾಗಿಸುತ್ತಿದ್ದಾರೆ. ಉಳಿದವರು ಗ್ರಾಮಸೇವಕರಾಗಿ ಸೇವೆ ಸಲ್ಲಿಸುವುದಕ್ಕೆ ಸಂಪ್ರದಾಯವಾದಿ ವರ್ಗಗಳು ನೀಡುವ ಆಹಾರ ಮತ್ತು ಕಾಳು ಕಡ್ಡಿಗಳ ಮೇಲೆ ಜೀವನ ನಡೆಸುತ್ತಿದ್ದಾರೆ. ಗ್ರಾಮಗಳಲ್ಲಿನ ದಲಿತವರ್ಗಗಳು ಈ ಹಕ್ಕುಗಳನ್ನು ಚಲಾಯಿಸಲು ಧೈರ್ಯ ವಹಿಸಿದಾಗ, ಅವರ ವಿರುದ್ಧ ಸಂಪ್ರದಾಯವಾದಿಗಳು ತಮ್ಮ ಆರ್ಥಿಕ ಶಕ್ತಿಯನ್ನು ಒಂದು ಅಸ್ತ್ರವಾಗಿ ಬಳಸಿ ದಲಿತರನ್ನು ತಮ್ಮ ಜಮೀನುಗಳಿಂದ ಹೊರಹಾಕಿ ಅವರಿಗೆ ಉದ್ಯೋಗಗಳನ್ನು ನೀಡದೆ ಗ್ರಾಮಸೇವಕರಾಗಿ ಅವರಿಗೆ ನೀಡುತ್ತಿದ್ದ ಸಂಭಾವನೆ ನಿಲ್ಲಿಸಿರುವ ಅನೇಕ ಪ್ರಸಂಗಗಳನ್ನು ನಾವು ಕೇಳಿದ್ದೇವೆ. ಈ ಬಗೆಯ ಬಹಿಷ್ಕಾರವನ್ನು ದಲಿತ ವರ್ಗಗಳು ಸಾಮಾನ್ಯ ಬಳಕೆಯ ದಾರಿಗಳನ್ನು ಬಳಸದಂತೆ ತಡೆಯೊಡ್ಡುವ ಮತ್ತು ಹಳ್ಳಿಯ ವ್ಯಾಪಾರಿ ಜೀವನಾವಶ್ಯಕ ವಸ್ತುಗಳನ್ನು ಅವರಿಗೆ ಮಾರದೆ ಇರುವವರಗೆ ವ್ಯಾಪಕವಾಗಿದೆ. ಸಾಕ್ಷಿಗಳ ಪ್ರಕಾರ ದಲಿತ ವರ್ಗಗಳ ವಿರುದ್ಧ ಸಾಮಾಜಿಕ ಬಹಿಷ್ಕಾರ ಘೋಷಿಸಲು ಕೆಲವೊಮ್ಮೆ ತೀರಾ ಸಣ್ಣಪುಟ್ಟ ಕಾರಣಗಳೇ ಸಾಕು. ಪದೇ ಪದೇ ಈ ಬಗೆಯ ಬಹಿಷ್ಕಾರವನ್ನು, ದಲಿತ ವರ್ಗಗಳು ಸಾಮಾನ್ಯ ಬಾವಿಯನ್ನು ಉಪಯೋಗಿಸುವ ಹಕ್ಕು ಚಲಾಯಿಸಿದ ಸಂದರ್ಭದಲ್ಲಿ ವಿಧಿಸಲಾಗಿರುತ್ತದೆ; ಆದರೆ ದಲಿತ ವ್ಯಕ್ತಿ ಜನಿವಾರ ಧರಿಸಿದಾಗ, ಒಂದು ತುಂಡು ಜಮೀನು ಖರೀದಿಸಿದಾಗ, ಒಳ್ಳೆಯ ಬಟ್ಟೆ ಅಥವಾ ಆಭರಣ ಧರಿಸಿದಾಗ ಅಥವಾ ಸಾರ್ವಜನಿಕ ಬೀದಿಯಲ್ಲಿ ಕುದುರೆಯ ಮೇಲೆ ಕುಳಿತ ವರನ ಮದುವೆ ಮೆರವಣಿಗೆ ನಡೆದಾಗಲೂ ಕೂಡ ಕಠಿಣ ಬಹಿಷ್ಕಾರ ವಿಧಿಸಿರುವ ಪ್ರಸಂಗಗಳು ಅಪರೂಪವಲ್ಲ. ದಲಿತ ವರ್ಗಗಳ ದಮನಕ್ಕಾಗಿ ಕಂಡುಹಿಡಿದಿರಬಹುದಾದ ಸಾಮಾಜಿಕ ಬಹಿಷ್ಕಾರಕ್ಕಿಂತಲೂ ಪರಿಣಾಮಕಾರಿಯಾದ ಯಾವುದೇ ಅಸ್ತ್ರವು ನಮಗೆ ತಿಳಿದಿಲ್ಲ. ಇದರ ಮುಂದೆ ಬಹಿರಂಗ ಹಿಂಸೆಯು ಪೇಲವವಾಗುತ್ತದೆ; ಏಕೆಂದರೆ ಇದು ಅತ್ಯಂತ ದೂರಗಾಮಿ ಮತ್ತು ಮಾರಕ ಪರಿಣಾಮಕಾರಿ. ಇದು ಅತ್ಯಂತ ಅಪಾಯಕಾರಿ; ಏಕೆಂದರೆ ಸ್ವಾತಂತ್ರದ ಕರಾರು ತತ್ವಗಳಿಗೆ ಸುಸಂಗತವಾದ ಕಾನೂನುಬದ್ಧ ವಿಧಾನವಾಗಿ ಇದಕ್ಕೆ ಅಂಗೀಕಾರವೂ ದೊರೆಯಬಹುದು. ದಲಿತ ವರ್ಗಗಳಿಗೆ ವಾಕ್‌ಸ್ವಾತಂತ್ರವನ್ನು ಖಾತರಿಪಡಿಸಲು ಮತ್ತು ಅವರ ಸುಧಾರಣೆಗಾಗಿ ಬಹುಸಂಖ್ಯಾತರ ಈ ಕಾರ್ಯಗಳ ವಿರುದ್ಧ ಕಠಿಣ

ಕ್ರಮಗಳನ್ನು ತೆಗೆದುಕೊಂಡು ಕೊನೆಗೊಳಿಸಬೇಕೆಂಬುದನ್ನು ನಾವು ಒಪ್ಪುತ್ತೇನೆ."

ಇದು ಪರಿಶಿಷ್ಟ ಜಾತಿಗಳ ಸ್ಥಿತಿಗತಿಗಳನ್ನು ಪರಿಗಣಿಸಲು ವಿಶೇಷವಾಗಿ ನೇಮಕಗೊಂಡ ಸಮಿತಿಯ ತೀರ್ಮಾನ. ಸಾಮಾಜಿಕ ಬಹಿಷ್ಕಾರದ ಈ ಅಂಶವನ್ನು ನಿರ್ವಹಿಸುವ ಯಾವುದೇ ಉಪಬಂಧ ನನಗೆ ಕಂಡು ಬಂದಿರುವುದಿಲ್ಲ.

ನ್ಯಾಯವಾದಿಗಳಿಗೆ ಕಾನೂನುಬದ್ಧವಾಗಿ ಉಪಯೋಗವಾಗುವಂಥ ಸ್ಪಷ್ಟ ಮಾತುಗಳಲ್ಲಿ ಈ ವಿಷಯವನ್ನು ಹೇಳುವುದು ಕಷ್ಟಕರವೆಂದು ಸನ್ಮಾನ್ಯ ಸದಸ್ಯರು ಭಾವಿಸಿದಲ್ಲಿ ನಾನು ಅವರ ಗಮನವನ್ನು ಬರ್ಮ ಬಹಿಷ್ಕಾರ ವಿರೋಧಿ ಅಧಿನಿಯಮ ೧೯೨೨ರ ಕಡೆಗೆ ಸೆಳೆಯಬಯಸುತ್ತೇನೆ. ಈ ಬರ್ಮ ಬಹಿಷ್ಕಾರ ವಿರೋಧಿ ಅಧಿನಿಯಮ ಒಳಗೊಂಡಿರುವ ಉಪಬಂಧಗಳನ್ನು ನಕಲು ಮಾಡಬಹುದೆಂದು ನನ್ನ ಅಭಿಪ್ರಾಯ. ಅದು ಸಾಮಾಜಿಕ ಬಹಿಷ್ಕಾರವೆಂಬ ಅತ್ಯಂತ ಕಷ್ಟಕರ ವಿಷಯದ ಬಗ್ಗೆ ಅತ್ಯಂತ ಮೌಲಿಕ ವ್ಯಾಖ್ಯಾನವನ್ನು ನೀಡುತ್ತದೆ. ಅದನ್ನು ಈ ಅಧಿನಿಯಮದ ಪ್ರಕರಣ ೨ರಲ್ಲಿ ಕಾಣಬಹುದಾಗಿದೆ. ಬರ್ಮ ಅಧಿನಿಯಮವು ಸಾಮಾಜಿಕ ಬಹಿಷ್ಕಾರವನ್ನು ಒಂದು ಅಪರಾಧವೆಂದು ಬಿಂಬಿಸುವುದಲ್ಲದೆ ಸಾಮಾಜಿಕ ಬಹಿಷ್ಕಾರವನ್ನು ಪ್ರಚೋದಿಸುವುದು ಒಂದು ಅಪರಾಧವೆಂದು ಹೇಳುತ್ತದೆ. ಸಾಮಾಜಿಕ ಬಹಿಷ್ಕಾರದ ಬೆದರಿಕೆ ಕೂಡ, ವಾಕ್ ಸರಣಿಯಲ್ಲಿ ಒರ್ವ ಜಾಗರೂಕ ವಕೀಲರು ಬಯಸುವಷ್ಟು ನಿರ್ದಿಷ್ಟವಾಗಿ ಅಪರಾಧವೆಂದು ಹೇಳುತ್ತದೆ. ನನ್ನ ಮಾನ್ಯ ಸ್ನೇಹಿತರು ಪ್ರಕರಣ (೪)ರ ಉಪಪ್ರಕರಣ (೨)ರಲ್ಲಿ ಅದರ ಸ್ವಲ್ಪಮಟ್ಟಿನ ತಿರುಚಿದ ವ್ಯಾಖ್ಯೆಯನ್ನು ಅಸ್ಪೃಶ್ಯತೆಯನ್ನು ಪಾಲಿಸಲು ಇಚ್ಛಿಸದ ಆದರೆ ತನ್ನ ಜಾತಿಯ ವ್ಯಕ್ತಿಗಳ ಬಲತ್ಕಾರದಿಂದ ಅದನ್ನು ಆಚರಿಸುವ ವ್ಯಕ್ತಿಯನ್ನು ಬೆಂಬಲಿಸುವ ಸಲುವಾಗಿ–ನೀಡಲು ಪ್ರಯತ್ನಿಸಿರುತ್ತಾರೆ. ಅವರು ಅದನ್ನು ಎರಡು ವಿಧಗಳಲ್ಲಿ ಮಾಡಬಹುದು–ಒಂದು ಅವನ ವಿರುದ್ಧ ಹಿಂಸಾಚಾರ ನಡೆಸುವ ಮೂಲಕ ಅಥವಾ ಸಾಮಾಜಿಕ ಬಹಿಷ್ಕಾರವನ್ನು ಸಂಘಟಿಸುವ ಮೂಲಕ ಸಮಿತಿಯು ಹೇಳುವಂತೆ ಗ್ರಾಮದಲ್ಲಿ ಸಮುದಾಯಗಳು ಸಾಮಾಜಿಕ ಬಹಿಷ್ಕಾರಕ್ಕೆ ಆದ್ಯತೆ ನೀಡುತ್ತವೆ. ಏಕೆಂದರೆ ಅದು ತೆರೆಯ ಹಿಂದಿನ ಕೃತ್ಯವಾಗಿದ್ದು ಕರಾರು ಕಾನೂನುಗಳೊಂದಿಗೆ ಸಾಮರಸ್ಯ ಹೊಂದಿರುವಂತೆ ಕಂಡುಬರುತ್ತದೆ; ಅಲ್ಲದೆ ಹಿಂಸೆಯು, ಈಗಾಗಲೇ ನಾನು ಹೇಳಿರುವಂತೆ ಭಾರತೀಯ ದಂಡ ಸಂಹಿತೆಯ ಮೇರೆಗೆ ಅಪರಾಧವಾಗುತ್ತದೆ. ಆದ್ದರಿಂದ, ಸುತ್ತು ಬಳಸಿ ಗೊತ್ತು ಗುರಿಯಿಲ್ಲದ ಫಲಿತಾಂಶ ಪಡೆಯುವ ಬದಲು, ನೇರವಾಗಿಯೇ ಸಾಮಾಜಿಕ ಬಹಿಷ್ಕಾರವನ್ನು ಪರಿಶಿಷ್ಟ ಜಾತಿಗಳು ತಮ್ಮ ಹಕ್ಕುಗಳನ್ನು ಚಲಾಯಿಸದಂತೆ ಒತ್ತಡ ಹೇರುವ ಕಾನೂನು ವಿರೋಧಿ ಕ್ರಮವೆಂದು ಪರಿಗಣಿಸಬಾರದೇಕೆ? ಅಲ್ಲದೆ ಸಾಮಾಜಿಕ ಬಹಿಷ್ಕಾರಕ್ಕೆ ಇರುವ ಆಕ್ಷೇಪವಾದರೂ ಏನು? ಕಾನೂನು ಪರಿಭಾಷೆಯಲ್ಲಿ ನಾನು ಹೇಳುವುದಾದರೆ, ಸಾಮಾಜಿಕ ಬಹಿಷ್ಕಾರವು ಭಾರತೀಯ ದಂಡ ಸಂಹಿತೆಯು ಅಪರಾಧವೆಂದು ಪರಿಗಣಿಸಿರುವ ಪಿತೂರಿಗಿಂತ ಬೇರೆ ಅಲ್ಲ. ಇಬ್ಬರು ವ್ಯಕ್ತಿಗಳು ಸೇರಿ ಮೂರನೆಯ ವ್ಯಕ್ತಿಗೆ ಕೆಡಕು ಮಾಡಲು ತೊಡಗಿದಲ್ಲಿ ಅದು ಪಿತೂರಿಯಾಗುತ್ತದೆ. ಈ ಸಾಮಾಜಿಕ ಬಹಿಷ್ಕಾರವೆನ್ನುವುದು ಬಹುಸಂಖ್ಯಾತರ ಸಹಮತಿಯಿಂದ ನಡೆಯುವ ಕೃತ್ಯ, ಪಿತೂರಿಯೂ ಹೌದು. ಆದ್ದರಿಂದ ಅದನ್ನು ಅಪರಾಧ ಎಂದು ಪರಿಗಣಿಸಬಹುದು. ನನ್ನ ಮಾನ್ಯ ಸ್ನೇಹಿತರು ಈ ವಿಷಯದಲ್ಲಿ ಅತ್ಯಂತ ಪ್ರಮುಖ ಅಂಶವನ್ನು ಏಕೆ ಮರೆತುಹೋದರೋ ನನಗೆ ತಿಳಿಯದು.

ಮೂರನೆಯ ಲೋಪವೆಂದರೆ–ಅದು ಲೋಪವೋ ಅಲ್ಲವೋ ನನಗೆ ಗೊತ್ತಿಲ್ಲ, ತಪ್ಪಿದ್ದರೆ ತಿದ್ದಿಕೊಳ್ಳುವುದಕ್ಕೆ ಒಳಪಟ್ಟು ಮಾತನಾಡುತ್ತಿದ್ದೇನೆ. ಇದು ಶುದ್ಧವಾಗಿ ಕಾನೂನು ವಿಷಯವಾಗಿರುವುದರಿಂದ ಕಾನೂನು ಮಂತ್ರಿಗಳು ಇಲ್ಲಿರಬೇಕಾಗಿತ್ತು. ನಮ್ಮ ಗೃಹಮಂತ್ರಿಗಳು ಮೊದಲಿಗೆ ಕಾನೂನು ಮಂತ್ರಿಗಳಾಗಿದ್ದರು

ಮತ್ತು ಕಾನೂನು ವೃತ್ತಿಯನ್ನು ಕೈಗೊಂಡಿದ್ದರು; ಆದ್ದರಿಂದ ಅವರಿಗೆ ನಾನು ಹೇಳುವುದು ಅಪರಿಚಿತವೇನೂ ಅಲ್ಲ. ಈ ನನ್ನ ಪ್ರಶ್ನೆಯೆಂದರೆ ಈ ವಿಧೇಯಕದಲ್ಲಿ ಉಲ್ಲೇಖಿಸಿರುವ ಅಪರಾಧಗಳು ದಂಡ ಪಾವತಿಸಿ ರಾಜಿ ಮಾಡಿಕೊಳ್ಳಬಹುದಾದವೇ ಅಥವಾ ಅಲ್ಲವೇ? ವಿಧೇಯತೆ ಈ ಬಗ್ಗೆ ಏನನ್ನು ಹೇಳುವುದಿಲ್ಲ. ಅದು ಸಂಪೂರ್ಣವಾಗಿ ಮೌನವಾಗಿದೆ. ಹಿಂದೊಮ್ಮೆ ನಾನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಆಯುಕ್ತರ ವರದಿಯನ್ನು ಕುರಿತು ಚರ್ಚಿಸುವಾಗ ತಪ್ಪಿತಸ್ಥರನ್ನು ಕಾನೂನಿಗೆ ಗುರಿಪಡಿಸಲು ಅವರಿಗೆ ಹಣಕಾಸು ಕೊರತೆಯಿಂದಾಗಿ ಸಾಧ್ಯವಾಗದ ಪರಿಣಾಮದಿಂದಾಗಿ, ತಪ್ಪಿತಸ್ಥರು ರಾಜಿ ಮಾಡಿಕೊಳ್ಳಲು ಸಿದ್ಧವಿರುವ ವಿಷಯದ ಬಗ್ಗೆ ತಕ್ಷಣ ಗಮನ ಸೆಳೆದಿರುವುದನ್ನು ಮಾನ್ಯ ಸದಸ್ಯರು ನೆನಪಿಸಿಕೊಳ್ಳಬೇಕು. ವಾಸ್ತವವೆಂದರೆ ಕಾನೂನು ಎಂಬುದು ಒಂದು ಮೃತ ಅಕ್ಷರ, ಯಾರ ಪರವಾಗಿ ಅದನ್ನು ಜಾರಿಗೊಳಿಸಲಾಗಿದೆಯೋ ಅವರಿಗೆ ಅದನ್ನು ಕ್ರಿಯಾರೂಪಕ್ಕಿಳಿಸಲು ಸಾಧ್ಯವಾಗುತ್ತಿಲ್ಲ ಮತ್ತು ಯಾರ ವಿರುದ್ಧ ಜಾರಿಗೊಳಿಸಲಾಗಿದೆಯೋ ಅವರು ಬಲಿಪಶುವನ್ನು ಮೌನವಾಗಿಸಬಲ್ಲರು. ಇದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯುಕ್ತರ ಅಂತಿಮ ಅಭಿಪ್ರಾಯ. ಇಂಥ ಪರಿಸ್ಥಿತಿಯನ್ನು ಸಹಿಸಲಾಗದು. ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಬೇಕಾದರೆ, ಈ ಅಪರಾಧಗಳು ದಂಡ ಪಾವತಿಸಿ ರಾಜಿ ಮಾಡಿಕೊಳ್ಳದಂಥ ಅಪರಾಧಗಳಾಗಬೇಕು. ಸ್ವಲ್ಪ ಮೊತ್ತವನ್ನು ಅಥವಾ ಅಂಥದೇನನ್ನೋ ಪಾವತಿ ಮಾಡುವ ಮೂಲಕ ರಾಜಿ ಮಾಡಿಕೊಳ್ಳುವ ತಪ್ಪಿತಸ್ಥರು ಪಾರಾಗುವುದಾದರೆ ಅವರು ಅಸ್ಪೃಶ್ಯರ ವಿರುದ್ಧದ ತಮ್ಮ ದೌರ್ಜನ್ಯಗಳನ್ನು ಸೂರ್ಯಚಂದ್ರರಿರುವವರಿಗೂ ಮುಂದುವರಿಸುತ್ತಾರೆ ಮತ್ತು ಅಸ್ಪೃಶ್ಯತೆ ಎಂದಿಗೂ ಕೊನೆಯಾಗದು.

ಆದ್ದರಿಂದ ಅಪರಾಧವನ್ನು ದಂಡ ಪಾವತಿಸಿ ರಾಜಿ ಮಾಡಿಕೊಳ್ಳುವುದು ಅತ್ಯಂತ ಗಂಭೀರ ವಿಷಯವಾಗಿದ್ದು, ಅದನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗಿದ್ದಿತು. ನನ್ನ ಮಾನ್ಯ ಸ್ನೇಹಿತರ ಉದ್ದೇಶವಾದರೂ ಏನು ಎಂಬುದು ಗೊತ್ತಿಲ್ಲ; ಇತರ ಕಾನೂನುಗಳಲ್ಲಿನ ಇತರ ಉಪಬಂಧಗಳನ್ನು ನೋಡಿಯಾದರೂ ತೀರ್ಮಾನಿಸಬಹುದಾಗಿದೆ; ನಾನು, ಯಾವ ಅಪರಾಧ ದಂಡ ವಿಧಿಸಿ ರಾಜಿಮಾಡಿಕೊಳ್ಳಬಹುದು ಮತ್ತು ಯಾವ ಅಪರಾಧಗಳು ದಂಡ ಕಟ್ಟಿ ರಾಜಿ ಮಾಡಿಕೊಳ್ಳಲಾಗದವು ಎಂದು ವ್ಯಾಖ್ಯಾನಿಸಿರುವ ಅಪರಾಧ ದಂಡ ಪ್ರಕ್ರಿಯೆ ಸಂಹಿತೆಯ ಪ್ರಕರಣ ೩೪೫ ಅನ್ನು ಉಲ್ಲೇಖಿಸಬಯಸುತ್ತೇನೆ. ಭಾರತೀಯ ದಂಡ ಸಂಹಿತೆಯಲ್ಲಿ ಒಟ್ಟಾರೆ ೫೧೧ ಪ್ರಕರಣಗಳಿದ್ದು ಅವುಗಳಲ್ಲಿ ೧೦೬ ಪ್ರಕರಣಗಳು ಶುದ್ಧಾಂಗವಾಗಿ ಘೋಷಣಾತ್ಮಕ ವಿಷಯಗಳು, ಶಿಕ್ಷೆಗಳು, ಎಲ್ಲಿ ಕಾನೂನು ಅನ್ವಯವಾಗುತ್ತದೆ, ಕಾನೂನಿನ ಸಾಮಾನ್ಯ ಅಪವಾದಗಳು, ವೆಚ್ಚಗಳು ಮೊದಲಾದವನ್ನು ನಿರ್ವಹಿಸುತ್ತವೆ, ಎಂಬುದನ್ನು ನನ್ನ ಮಾನ್ಯ ಸ್ನೇಹಿತರು ನೆನಪು ಮಾಡಿಕೊಳ್ಳಲಿ. ಹೀಗಾಗಿ ನಾವು ೫೧೧ರಿಂದ ೧೦೬ ಅನ್ನು ತೆಗೆದು ಹಾಕೋಣ ಅಥವಾ ಕಳೆಯೋಣ. ವಾಸ್ತವಾಗಿ ಅಪರಾಧಗಳನ್ನು ವ್ಯಾಖ್ಯಾನಿಸುವ ಪ್ರಕರಣಗಳು ಒಟ್ಟಾರೆ ಸುಮಾರು ೪೦೦. ನಾಲ್ಕುನೂರು ಕೃತ್ಯಗಳು ಮತ್ತು ಲೋಪಗಳನ್ನು ಭಾರತೀಯ ದಂಡ ಸಂಹಿತೆಯು ಅಪರಾಧಗಳನ್ನಾಗಿ ಪರಿಗಣಿಸುತ್ತದೆ. ಈ ೪೦೦ರ ಪೈಕಿ ಎಷ್ಟು ದಂಡ ಪಾವತಿಸಿ ರಾಜಿ ಮಾಡಿಕೊಳ್ಳಬಹುದಾದವು ಎಂಬುದು ನಾವು ಪರಿಗಣಿಸಬೇಕಾದ ವಿಷಯ. ಅದರಲ್ಲಿಯೇ ಮಹತ್ವದ ತತ್ತ್ವವಿರುವುದು. ನಾನು ಹೇಳಿದಂತೆ ಯಾವ ಅಪರಾಧಗಳು ದಂಡ ಪಾವತಿಸಿ ರಾಜಿ ಮಾಡಿಕೊಳ್ಳಬಹುದಾದವು, ಯಾವುವು ಅಲ್ಲ ಎಂಬುದನ್ನು ವ್ಯಾಖ್ಯಾನಿಸುವ ಒಂದೇ ಉಪಬಂಧವೆಂದರೆ ದಂಡ ಪ್ರಕ್ರಿಯ ಸಂಹಿತೆಯ ಪ್ರಕರಣ ೩೪೫ ಮಾತ್ರ. ನಾನು ಸ್ವಲ್ಪ ಮಾತ್ರ ಲೆಕ್ಕಾಚಾರ ಮಾಡಿರುತ್ತೇನೆ–ನಾನು ಗಣಿತದಲ್ಲಿ ಸ್ವಲ್ಪ ದುರ್ಬಲನಾದರೂ–೪೦೦ರ ಪೈಕಿ ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾದವು ಕೇವಲ ೪೪ ಅಪರಾಧಗಳು

ಎಂಬುದು ತೀರಾ ತಪ್ಪೇನೂ ಆಗಿರಲಾರದು. ಉಳಿದವು ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾದುವಲ್ಲ. ಈ ಸ್ಥಿತಿಯನ್ನು ಗಮನಿಸಿ ನಾನು ಅಪರಾಧಿಕ ಕಾನೂನಿನ ಮೂಲತತ್ತ್ವವೆಂದರೆ, ಅಪರಾಧವನ್ನು ಸಾಮಾನ್ಯವಾಗಿ ದಂಡ ಕಟ್ಟಿ ರಾಜಿ ಮಾಡಿಕೊಳ್ಳುವಂತಿಲ್ಲ ಮತ್ತು ಈ ೪೪ ಅಪರಾಧಗಳು ಸಾಮಾನ್ಯ ನಿಯಮಕ್ಕೆ ಕೇವಲ ಅಪವಾದಗಳು ಮಾತ್ರ– ಎಂಬ ನಿರ್ಣಯಕ್ಕೆ ಬಂದಿರುತ್ತೇನೆ. ಈ ೪೪ರ ಪೈಕಿ ಮ್ಯಾಜಿಸ್ಟ್ರೇಟರ ಅನುಮತಿಯೊಂದಿಗೆ ದಂಡಕಟ್ಟಿ ರಾಜಿ ಮಾಡಿಕೊಳ್ಳಬಹುದಾದವು ೨೦; ಉಳಿದ ೨೦ ಮಾಜಿಸ್ಟ್ರೇಟರ ಅನುಮತಿಯಿಲ್ಲದೆ ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾದವು. ಹೀಗಾಗಿ ವಾಸ್ತವದಲ್ಲಿ ೨೪ ಮಾತ್ರ ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾದ ಅಪರಾಧಗಳು. ಈಗ ಈ ಅಪರಾಧಗಳನ್ನು ಈ ವಿಧೇಯಕದಲ್ಲಿ ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾದವು ಎಂದು ಸೂಚಿಸಲಾಗಿದೆಯೇ ಅಥವಾ ಇಲ್ಲವೆ? ವಿಧೇಯಕ ಈ ಬಗ್ಗೆ ಏನನ್ನೂ ಹೇಳುವುದಿಲ್ಲ. ಈ ವಿಧೇಯಕದಡಿಯಲ್ಲಿ ಬರುವ ಯಾವುದೇ ಅಪರಾಧ ದಂಡ ಕಟ್ಟಿ ರಾಜಿ ಮಾಡಿಕೊಳ್ಳಲಾಗದಂಥ ಅಪರಾಧವೆಂಬ ಬಗ್ಗೆ ಒಂದು ಸ್ಪಷ್ಟ ಉಪಬಂಧ ಇರಬೇಕೆಂಬುದು ನನ್ನ ಅನಿಸಿಕೆ. ಒಂದು ವೇಳೆ ನನ್ನ ಮಾನ್ಯ ಸದಸ್ಯರು ಈ ಸಲಹೆಯನ್ನು ಅಂಗೀಕರಿಸದಿದ್ದಲ್ಲಿ ಫಲಿತಾಂಶ ಏನಾಗಬಹುದು? ಅದರ ಫಲಿತಾಂಶ ಏನಾದೀತು. ಬಹುಪಾಲು ಈ ಅಪರಾಧಗಳು ಹಾನಿ ಅಥವಾ ಗಂಭೀರ ಹಾನಿ ಉಂಟುಮಾಡಬಹುದಾದ ಅಪರಾಧಗಳು. ಇವು ಕೇವಲ ಬಲಪ್ರದರ್ಶನದ ಅಪರಾಧಗಳಿಗಿಂತ ಕಡಿಮೆಯ ಅಪರಾಧಗಳಲ್ಲ; ಅವು ಹಾನಿ, ಗಂಭೀರ ಹಾನಿ, ಹಿಂಸೆ ಮತ್ತು ಇತರ ಅಂಥ ಅಪರಾಧಗಳು; ಒಬ್ಬ ಮ್ಯಾಜಿಸ್ಟ್ರೇಟ್ ಪ್ರಕರಣ ೩೪೫ರ (೧) ಅಥವಾ (೨) ಉಪ ಪ್ರಕರಣಗಳನ್ನು ಅನ್ವಯಿಸಿದರೆ – ಈ ಬಗೆಯ ಅಪರಾಧಗಳನ್ನು ವ್ಯಾಖ್ಯಾನಿಸುವ ಪ್ರಕರಣ ೩೪೫ರ ಎರಡು ಉಪ ಪ್ರಕರಣಗಳನ್ನು ಓದುವ ಮೂಲಕ ನನ್ನ ಮಾನ್ಯ ಸ್ನೇಹಿತರಿಗೆ ಬೇಸರ ಉಂಟು ಮಾಡಲು ಇಚ್ಛಿಸುವುದಿಲ್ಲ – ಈ ಅಪರಾಧಗಳು ಹಾನಿಯನ್ನು ಉಂಟು ಮಾಡುವುದನ್ನು ಅವರು ಕಾಣಬಹುದಾಗಿದೆ. ಅಲ್ಲದೆ ಮ್ಯಾಜಿಸ್ಟ್ರೇಟರ ಅನುಮತಿ ಸಹಿತ ಅಥವಾ ರಹಿತವಾಗಿ ದಂಡಕಟ್ಟಿ ರಾಜಿ ಮಾಡಿಕೊಳ್ಳಬಹುದಾದ ಬಹುಪಾಲು ಅಪರಾಧಗಳು ಹಾನಿ, ಗಂಭೀರ ಹಾನಿ, ವ್ಯಕ್ತಿಯ ಬಂಧನ ಅಥವಾ ಸಂಬಂಧಿಕರ ಅಪಹರಣ ಅಥವಾ ಅಂತವೇ ಮತ್ತ್ಯಾವುದಾದರೂ ಅಪರಾಧಗಳಾಗಿರುವುದನ್ನು ನೋಡಬಹುದಾಗಿದೆ. ಅವೆಲ್ಲವೂ ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾದವು. ಆದ್ದರಿಂದ ನೀವು ಈ ವಿಧೇಯಕದಲ್ಲಿ ನಿರ್ದಿಷ್ಟ ಮತ್ತು ಸ್ಪಷ್ಟ ಉಪಬಂಧಗಳನ್ನು ಮಾಡದಿದ್ದರೆ ಎಲ್ಲಾ ಅಪರಾಧಗಳು, ಅದು ಸಾಮಾಜಿಕ ಬಹಿಷ್ಕಾರಗಳನ್ನು ಒಳಗೊಂಡಿದ್ದರೂ ಇದನ್ನು ದಂಡ ಸಂಹಿತೆಯಲ್ಲಿ ಉಲ್ಲೇಖಿಸಿಯೇ ಇರುವುದಿಲ್ಲ ಮತ್ತು ಇದು ಪಿತೂರಿ ಹೊರತು ಅಪರಾಧವಾಗಿರುವುದಿಲ್ಲ. ಪ್ರಕರಣ ೩೪೫ಕ್ಕೆ ಸಂಬಂಧಪಟ್ಟಂತೆ ಹಾನಿ ಮತ್ತು ಹಿಂಸೆಯನ್ನು ಒಳಗೊಂಡ ಇತರ ಎಲ್ಲಾ ಕೃತ್ಯಗಳು– ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾದ ಅಪರಾಧಗಳಾಗುತ್ತವೆ ಮತ್ತು ವಿಧೇಯಕವು ಪೂರ್ಣವಾಗಿ ಪರಿಣಾಮಶೂನ್ಯವಾಗುತ್ತದೆ. ಅದೊಂದು ಪ್ರಹಸನವಾದೀತು. ಆದ್ದರಿಂದ ನನ್ನ ಮಾನ್ಯ ಸ್ನೇಹಿತರು ವಿಷಯವನ್ನು ಪರಿಶೀಲಿಸಿ – ಅವರು ಕಾನೂನು ಮಂತ್ರಾಲಯದ ಸಲಹೆಯನ್ನು ತೆಗೆದುಕೊಳ್ಳಲು ಅಧಿಕಾರ ಉಳ್ಳವರಾಗಿದ್ದಾರೆ – ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ ೩೪೫ರ ಷರತ್ತುಗಳ ವ್ಯಾಪ್ತಿಯಲ್ಲಿ ಈ ಅಪರಾಧಗಳು ದಂಡಕಟ್ಟಿ ರಾಜಿ ಮಾಡಿಕೊಳ್ಳಬಹುದಾದವೆ ಎಂಬುದನ್ನು ನೋಡಬೇಕು; ಒಂದು ವೇಳೆ ಹೌದು ಎಂದಾದರೆ ಅಸ್ಪೃಶ್ಯತೆಯನ್ನು ಒಳಗೊಂಡ ಅಪರಾಧಗಳನ್ನು ದಂಡ ಕಟ್ಟಿ ರಾಜಿ ಮಾಡಿಕೊಳ್ಳಬಹುದಾದ ಅಪರಾಧಗಳೆಂದು ಪರಿಗಣಿಸತಕ್ಕುದಲ್ಲವೆಂಬ ಬಗ್ಗೆ ಈ ವಿಧೇಯಕದಲ್ಲಿ ಸ್ಪಷ್ಟ ಉಪಬಂಧವನ್ನು ಮಾಡುವುದು ಅವಶ್ಯಕವಲ್ಲವೆ?

ಸರ್, ನಾನೀಗ ಕೆಲವೊಂದು ದೋಷಪೂರಿತ ಉಪಬಂಧಗಳನ್ನು ಕುರಿತು ಮಾತನಾಡುತ್ತೇನೆ. ನಾನು ಲೋಪಗಳನ್ನು ಕುರಿತು ಮಾತನಾಡಿರುತ್ತೇನೆ. ದೋಷಪೂರಿತ ಉಪಬಂಧಗಳನ್ನು ಕುರಿತು ಕೆಲವು ಮಾತುಗಳನ್ನು ಆಡುತ್ತೇನೆ. ನಾನು ಉಲ್ಲೇಖಿಸಬಯಸುವ ಅಂಥ ಮೊದಲ ಉಪಬಂಧವೆಂದರೆ ಶಿಕ್ಷೆಗೆ ಸಂಬಂಧಪಟ್ಟ ಕಲಮು ೮ ವಿಧೇಯಕರಲ್ಲಿ ನಿಗದಿಪಡಿಸಿರುವ ಶಿಕ್ಷೆಯೆಂದರೆ ೬ ತಿಂಗಳ ಜೈಲು ಅಥವಾ ರೂ ೫೦೦ರವರೆಗೆ ದಂಡ ಅಥವಾ ಎರಡೂ. ನನ್ನ ಮಾನ್ಯ ಸ್ನೇಹಿತರು ಶಿಕ್ಷೆಯ ಬಗ್ಗೆ ಅತ್ಯಂತ ನಿರರ್ಗಳವಾಗಿ ಮಾತನಾಡಿದರು. ಶಿಕ್ಷೆಯು ತೀರಾ ಲಘುವಾಗಿರಬೇಕೆಂದರು. ತಾವೇ ಈ ಅಪರಾಧಗಳನ್ನು ಮಾಡಲು ಬಯಸಿ ಶಿಕ್ಷೆಯು ಲಘುವಾಗಿರಲಿ ಎಂದು ವಾದಿಸುತ್ತಿದ್ದಾರೆಯೇನೋ ಎಂದು ನನಗೆ ಆಶ್ಚರ್ಯವೆನಿಸುತ್ತದೆ. ಅವರು ಹೇಳಿದರು: "ಶಿಕ್ಷೆ ಲಘುವಾಗಿರಲಿ; ಅಪರಾಧಿಯ ಹೃದಯದಲ್ಲಿ ಯಾವುದೇ ಕೊರೆ ಉಳಿದಿರಬಾರದು. ಅಸ್ಪೃಶ್ಯರ ಮೇಲೆ ಅಪರಾಧವೆಸಗುವ ಅಪರಾಧಿಗಳು ನಿಜಕ್ಕೂ ತುಂಬಾ ದಯಾಪರರು, ಕ್ಷಮಾಪರರಾಗಿದ್ದು ಅದೊಂದು ಅಪಮಾರ್ಗದ ಕೃತ್ಯವಾಗಿದ್ದು ಕ್ಷಮಾರ್ಹವಾಗಿದೆಯೆಂಬುದು ಅವರ ಪ್ರಮುಖ ತರ್ಕವೆಂಬುದು ನನ್ನ ಭಾವನೆ. ಸದ್ಯ ಕೇವಲ ಎಚ್ಚರಿಕೆ ನೀಡಿ ಬಿಡುಗಡೆ ಮಾಡುವ ಶಿಕ್ಷೆಯನ್ನು ನಿಗದಿಪಡಿಸಲಿಲ್ಲವಲ್ಲ ಎಂಬುದೇ ನನಗೆ ಅತಿ ದೊಡ್ಡ ಸಮಾಧಾನ. ಇದಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ ೫೬೧ ಸೂಕ್ತವಾಗಿತ್ತು. ಹೌದು, ಅಪರಾಧಿಯನ್ನು ಪ್ರೇಮಮಯಿಯನ್ನಾಗಿ ಮಾಡುವುದೇ ನಮ್ಮ ಉದ್ದೇಶವಾಗಿದ್ದಲ್ಲಿ ಅದೇ ಅತ್ಯುತ್ತಮವಾದುದು; ಅಪರಾಧಿಗೆ ಎಚ್ಚರಿಕೆ ನೀಡಿ ಬಿಡುಗಡೆ ಮಾಡುತ್ತಲಿರಲಿ ಅವನು ತನ್ನ ಪ್ರೀತಿಯನ್ನು ಮುಂದುವರೆಸಲಿ. ಅವನ ಹೃದಯದಲ್ಲಿ ಯಾವುದೇ ಕಹಿ ಉಳಿಯದಿರಲಿ. ಅದಾದರೂ ಏಕೆ ಇರಬೇಕು? ದುರದೃಷ್ಟವಶಾತ್ ಅದು ಉಳಿಯುವುದಿಲ್ಲವೆಂದೇ ಚಿಂತಿಸಿ ಈ ಶಿಕ್ಷೆಯನ್ನು ಸಲಹೆ ಮಾಡಿದ್ದಾರೆ.

ಸರ್. ನನಗೆ ಕ್ರಿಮಿನಲ್ ಕಾನೂನು ವೃತ್ತಿಯಲ್ಲಿ ಸ್ವಲ್ಪಮಟ್ಟಿನ ಪರಿಶ್ರಮವಿದೆ. ಶಿಕ್ಷೆಯು ಮುಖ್ಯವಾಗಿ ಎರಡು ಕಾನೂನುಗಳನ್ನು ಆಧರಿಸಿದೆಯೆಂದು ನನ್ನ ಅಭಿಪ್ರಾಯ. ಒಂದು–ತಪ್ಪಿತಸ್ಥನು ಮತ್ತೆ ತಪ್ಪುಮಾಡದಂತೆ ತಡೆಯುವುದು. ಇದು ಕ್ರಿಮಿನಲ್ ನ್ಯಾಯಶಾಸ್ತ್ರದಲ್ಲಿ ಪ್ರಾಥಮಿಕ ಕಾನೂನು. ಶಿಕ್ಷೆ ಆವಶ್ಯಕ; ಇಲ್ಲವಾದಲ್ಲಿ ತಪ್ಪಿತಸ್ಥನು ತನ್ನ ತಪ್ಪನ್ನು ಪುನರಾವರ್ತಿಸಬಹುದು. ಅವನು ಹಾಗೆ ಮಾಡುವುದನ್ನು ತಪ್ಪಿಸಲು ಶಿಕ್ಷೆ ಬೇಕೆಬೇಕು. ಶಿಕ್ಷೆಯ ಎರಡನೆಯ ಉದ್ದೇಶವೆಂದರೆ ವ್ಯಕ್ತಿಯು ಕ್ರಿಮಿನಲ್ ವೃತ್ತಿ ಕೈಗೊಳ್ಳುವುದನ್ನು ತಪ್ಪಿಸುವುದು. ಒಬ್ಬ ವ್ಯಕ್ತಿ ಒಮ್ಮೆ ಕ್ರಿಮಿನಲ್ ವೃತ್ತಿಯನ್ನು ಕೈಗೊಂಡರೆ ಅವನು ಅಂಥ ವೃತ್ತಿಯನ್ನು ಅಳವಡಿಸಿಕೊಳ್ಳುವುದನ್ನು ತಪ್ಪಿಸಲು ನಿರೋಧಕ ಶಿಕ್ಷೆ ನೀಡದಿದ್ದಲ್ಲಿ ಅವನು ಅದೇ ವೃತ್ತಿಯಲ್ಲಿ ಮುಂದುವರಿಯಬಹುದು.

ತಾವು ಈ ತತ್ತ್ವವನ್ನು ಒಪ್ಪಿಕೊಳ್ಳುವುದಾದರೆ ನನ್ನ ಮಾನ್ಯ ಸ್ನೇಹಿತರು ಪ್ರಸ್ತಾಪಿಸಿರುವ ಶಿಕ್ಷೆಯು ಈ ವಿಧೇಯಕದ ಉದ್ದೇಶಕ್ಕೆ ಸಾಕಾಗುವುದೆ? ಮೊದಲಿಗೆ ೬ ತಿಂಗಳ ಕಾರಾಗೃಹ ಶಿಕ್ಷೆಯೇ ಗರಿಷ್ಠ. ಒಂದು ದಿನ ಕಾರಾಗೃಹ ಶಿಕ್ಷೆಯನ್ನು ವಿಧಿಸಿ ತಪ್ಪಿತಸ್ಥನನ್ನು ಬಿಟ್ಟುಬಿಡಬಾರದು. ೬ ತಿಂಗಳೋ ಅಥವಾ ೩ ತಿಂಗಳೋ ಅಥವಾ ಎಷ್ಟೇ ಆಗಲಿ ನಿರ್ದಿಷ್ಟ ಕನಿಷ್ಠ ಕಾರಾಗೃಹ ಶಿಕ್ಷೆ ಇಲ್ಲ. ಇಡೀ ವಿಷಯವನ್ನು ಮ್ಯಾಜಿಸ್ಟ್ರೇಟ್‌ರ ಕೈಗೆ ನೀಡಲಾಗಿದೆ. ಮ್ಯಾಜಿಸ್ಟ್ರೇಟ್ ಆದರೂ ಎಂಥವರಿರಬಹುದು; ಮ್ಯಾಜಿಸ್ಟ್ರೇಟ್ ಕುರ್ಚಿಯಲ್ಲಿ ತೀರ್ಪು ನೀಡಲು ಕಾಶಿಯಿಂದ ಬಂದ ಪಂಡಿತರೇ ಕುಳಿತಿರಬಹುದು. ಈ ಕಾನೂನು ನಿರ್ವಹಿಸುವ ವಿಷಯದಲ್ಲಿ ಆತನ ಆತ್ಮಸಾಕ್ಷಿ ಏನಿರಬಹುದು?

**ಶ್ರೀ ಬಸಪ್ಪಶೆಟ್ಟಿ (ಮೈಸೂರು):** ಕಾಶಿ ಅಥವಾ ಕಾಶ್ಮೀರ?

**ಡಾ. ಬಿ.ಆರ್. ಅಂಬೇಡ್ಕರ್:** ಕಾಶ್ಮೀರಿ ಬ್ರಾಹ್ಮಣರು ನಿಜವಾದ ಬ್ರಾಹ್ಮಣರಲ್ಲ. ಅವರು ಮೀನು

ಮಾಂಸ ತಿನ್ನುವವರು ಎನ್ನುತ್ತಾರೆ. ಆದ್ದರಿಂದ ಅವರು ಬ್ರಾಹ್ಮಣರಲ್ಲ.

ನಾನು ಈಗಾಗಲೇ ಹೇಳಿದಂತೆ ಈ ಪ್ರಕರಣದಲ್ಲಿ ಕಾನೂನು ಪಾಲನೆಯಾಗುವುದನ್ನು ನೀವು ನೋಡಬೇಕೆಂದರೆ ಕನಿಷ್ಠ ಶಿಕ್ಷೆ ಇರಲೇಬೇಕು. ಮ್ಯಾಜಿಸ್ಟ್ರೇಟರು ಅದಕ್ಕಿಂತ ಕಡಿಮೆ ಶಿಕ್ಷೆ ನೀಡುವಂತಿರಬಾರದು. ಎರಡನೆಯದಾಗಿ ಶಿಕ್ಷೆಯು ಪರ್ಯಾಯವಾಗಿದ್ದು, ಕಾರಾಗೃಹ ಶಿಕ್ಷೆ ಹಾಗೂ ದಂಡ ಎರಡೂ ಇವೆ. ಮ್ಯಾಜಿಸ್ಟ್ರೇಟರು ಪರ್ಯಾಯ ಶಿಕ್ಷೆಯಾದ ದಂಡವನ್ನು ವಿಧಿಸಬಹುದು. ಕಾನೂನಿನ ಹಿಡಿತದಿಂದ ಪಾರಾಗಲು ಐದು ನೂರು ರೂಪಾಯಿಗಳ ದಂಡವನ್ನು ಕಟ್ಟಲು ತಯಾರಿರುವ ತಪ್ಪಿತಸ್ಥರು ಇರಬಹುದು. ಅಂಥ ಶಿಕ್ಷೆಯಿಂದ ಏನು ಪ್ರಯೋಜನ? ಭಾರತೀಯ ದಂಡ ಸಂಹಿತೆಯಲ್ಲಿ ವಿವಿಧ ಶಿಕ್ಷೆಗಳಿವೆ; ಮರಣದಂಡನೆ, ಗಡಿಪಾರು, ಕಾರಾಗೃಹ ಶಿಕ್ಷೆ, ಸ್ವತ್ತಿನ ಮುಟ್ಟುಗೋಲು, ದಂಡ, ಛಡಿ ಏಟು, ಸುಧಾರಣಾಲಯದಲ್ಲಿ ಬಂಧನ. ೭ ಅಪರಾಧಗಳಿಗೆ ದಂಡ ಸಂಹಿತೆಯು ಮರಣ ದಂಡನೆಯನ್ನು ವಿಧಿಸುತ್ತದೆ; ೫೦ ಅಪರಾಧಗಳಿಗೆ ಗಡಿಪಾರು ಶಿಕ್ಷೆ; ೨೧ ಅಪರಾಧಗಳಿಗೆ ಸರಳ ಕಾರಾಗೃಹ; ೧೨ ಅಪರಾಧಗಳಿಗೆ ದಂಡ; ಇತರ ಎಲ್ಲ ಪ್ರಕರಣಗಳಲ್ಲಿ ಕಾರಾಗೃಹ ಶಿಕ್ಷೆಯು ಕಠಿಣವಾಗಿರುತ್ತದೆ. ಆದರೆ ನನ್ನ ಸ್ನೇಹಿತರು ಅದೇಕೆ ಸಾಕಷ್ಟು ಶಿಕ್ಷೆಯನ್ನು ನಿಗದಿಪಡಿಸದೆ, ವಿಧೇಯಕವನ್ನು ಲಘುವಾಗಿ ಪರಿಭಾವಿಸಿದ್ದಾರೋ ಅರ್ಥಮಾಡಿಕೊಳ್ಳುವುದು ನನಗೆ ಕಷ್ಟಕರವಾಗಿದೆ; ಅಂದರೆ ಅವರಿಂದ ಕನಿಷ್ಠ ೩ ತಿಂಗಳ ಕಾರಾಗೃಹ ಶಿಕ್ಷೆಯನ್ನು ನಿರೀಕ್ಷಿಸಲಾಗಿತ್ತು; ವಿಧಿಸಲೇಬೇಕೆಂದಿದ್ದರೆ ದಂಡವನ್ನು–ನಾನು ದಂಡ ವಿಧಿಸುವುದರ ಪರವಾಗಿಲ್ಲ–ಏಕೆಂದರೆ ಅದರಿಂದ ಖಜಾನೆಗೆ ಮಾತ್ರ ಲಾಭ–ಅದೇ ಆ ದಂಡವು ತೊಂದರೆಗೆ ಒಳಗಾದ ವ್ಯಕ್ತಿಗೆ ಹೋಗುತ್ತದೆ ಎಂದಾದರೆ ದಂಡವು ಉತ್ತಮವೆ. ಇಲ್ಲವಾದಲ್ಲಿ ನಾನು ದಂಡದ ಪರವಾಗಿಲ್ಲ.

**ಶ್ರೀ ಬಿ.ಬಿ. ಶರ್ಮ (ಉತ್ತರ ಪ್ರದೇಶ):** ಗರಿಷ್ಠ ಶಿಕ್ಷೆಯಾಗಿ ಮರಣದಂಡನೆ–ಏಕೆ ಬೇಡ ?

**ಡಾ. ಬಿ.ಆರ್. ಅಂಬೇಡ್ಕರ್:** ನಿಮಗೆ ಬೇಕಿದ್ದರೆ ಮಾಡಿ. ಆದರೆ ನಾನು ಅಷ್ಟು ಕ್ರೂರಿಯಲ್ಲ. ಅಲ್ಲದೆ ನೀವು ಅದನ್ನು ಪ್ರಾಮಾಣಿಕವಾಗಿ ಸಲಹೆ ಮಾಡುತ್ತಿದ್ದಿರೆಂದು ನನಗೆ ಅನ್ನಿಸುತ್ತಿಲ್ಲ. ನಾನು ಈಗಾಗಲೇ ಹೇಳಿದಂತೆ ಭಾರತೀಯ ದಂಡ ಸಂಹಿತೆಯಲ್ಲಿ ಕನಿಷ್ಠ ಶಿಕ್ಷೆ ನಿಗದಿಪಡಿಸದ ಅಥವಾ ಕಠಿಣ ಕಾರಾಗೃಹ ಶಿಕ್ಷೆ ಇಲ್ಲದ ಪ್ರಕರಣಗಳಿಲ್ಲ. ಕಠಿಣ ಕಾರಾಗೃಹ ಶಿಕ್ಷೆ ನಿಗದಿಪಡಿಸಿರುವ ೩ ಪ್ರಕರಣಗಳಿವೆ– ಪ್ರಕರಣ ೧೯೪,೨೨೬ ಮತ್ತು ೪೪೯. ಅಲ್ಲದೆ ದಂಡ ಸಂಹಿತೆಯ ಪ್ರಕರಣ ೩೯೭ ಮತ್ತು ೩೯೮ ರಲ್ಲಿ ಕನಿಷ್ಠ ಕಾರಾಗೃಹ ಶಿಕ್ಷೆಯನ್ನು ನಿಗದಿಪಡಿಸಲಾಗಿದೆ. ಹೀಗೆ ಪೂರ್ವ ನಿದರ್ಶನಗಳಿದ್ದರೂ ಅದೇಕೆ ಈ ಪೂರ್ವ ನಿದರ್ಶನಗಳನ್ನು.......

**ಡಾ. ಕೆ.ಎನ್. ಕಟ್ಜು:** ಏನದು ೩೯೭ ?

**ಡಾ. ಬಿ.ಆರ್. ಅಂಬೇಡ್ಕರ್:** ಡಕಾಯಿತಿ. ಇದು ಡಕಾಯಿತಿಗಿಂತಲೂ ಕೆಟ್ಟದ್ದು. ಮನುಷ್ಯನನ್ನು ಉಪವಾಸ ಬೀಳಿಸಿ ನೀರು ತೆಗೆದುಕೊಳ್ಳದಂತೆ ಮಾಡಿ, ನನ್ನ ಮಟ್ಟಿಗೆ ಬಹುಮಟ್ಟಿಗೆ ಸಾಯುವಂತೆ ಮಾಡುವುದು. ಸರ್, ಇದೊಂದು ವಿಧೇಯಕದಲ್ಲಿನ ಕೊರತೆ, ಸರ್. ವಿಧೇಯಕದಲ್ಲಿನ ಎರಡನೆಯ ಕೊರತೆ ಎಂದರೆ ಉತ್ತಮ ನಡವಳಿಕೆಗೆ ಭದ್ರತೆಯನ್ನು ಪಡೆಯಲು ಉಪಬಂಧ ಕಲ್ಪಿಸದೆ ಇರುವುದು. ದಂಡ ಪ್ರಕ್ರಿಯೆ ಸಂಹಿತೆಯ ಪ್ರಕರಣ ೧೦೭, ೧೦೮, ೧೦೯ ಮತ್ತು ೧೧೦ ಎಂಬ ೪ ಪ್ರಕರಣಗಳನ್ನು ಹೊಂದಿದ್ದು ಅವೆಲ್ಲವೂ ಉತ್ತಮ ನಡವಳಿಕೆಗೆ ಭದ್ರತೆಯನ್ನು ಒತ್ತಾಯಿಸಲು ಮ್ಯಾಜಿಸ್ಟ್ರೇಟರಿಗೆ ಅಧಿಕಾರ ನೀಡುತ್ತವೆ. ಈ ವಿಧೇಯಕವು ಅಂಥದೊಂದು ಉಪಬಂಧವನ್ನು ಹೊಂದಿರಬಾರದೇ ಎಂದು ನನಗೆ ತಿಳಿಯದು.

ಉದಾ: ರಜಪುಟಾಣ ಮತ್ತು ಇತರ ರಾಜ್ಯಗಳಲ್ಲಿ ಸವರ್ಣೀಯ ಹಿಂದೂಗಳು ನಾಗರಿಕ ಮತ್ತು ಸಂವಿಧಾನಾತ್ಮಕ ಹಕ್ಕುಗಳನ್ನು ಅಸ್ಪಶ್ಯರು ಚಲಾಯಿಸುತ್ತಿರುವುದರ ವಿರುದ್ಧ ಅವರನ್ನು ಹಿಂಸಿಸಲು ಚಳುವಳಿಯ ಮಾಡುತ್ತಿದ್ದಾರೆ. ಉತ್ತಮ ನಡವಳಿಕೆಗೆ ಭದ್ರತೆಯನ್ನೇಕೆ ನೀವು ತೆಗೆದುಕೊಳ್ಳಬಾರದು.

**ಶ್ರೀ ಜಿ.ಎಸ್. ಬಿಸ್ಟ್ (ಉತ್ತರ ಪ್ರದೇಶ):** ಇವೆಲ್ಲವೂ ದಂಡ ಪ್ರಕ್ರಿಯೆ ಸಂಹಿತೆಯಲ್ಲಿನ ಉಪಬಂಧಗಳು.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಅದನ್ನೇ ಹೇಳುತ್ತಿರುವುದು. ದಂಡ ಪ್ರಕ್ರಿಯೆ ಸಮಿತಿಯಲ್ಲಿ ಶಾಂತಿಯನ್ನು ಕಲಕುವ ವ್ಯಕ್ತಿಗಳಿಂದ ಹಾಗೂ ಶಾಂತಿ ಭಂಗ ಉಂಟುಮಾಡುವ ವಿಷಯಗಳನ್ನು ಹರಡುವ ವ್ಯಕ್ತಿಗಳಿಂದ, ಅಪಾಪೋಲಿಗಳಿಂದ ಮತ್ತು ಹವ್ಯಾಸಿ ಅಪರಾಧಿಗಳಿಂದ ಉತ್ತಮ ನಡವಳಿಕೆಗಾಗಿ ಭದ್ರತೆ ಪಡೆಯಲು ಪೂರ್ವ ನಿದರ್ಶನಗಳಿವೆ. ಈ ಕಾನೂನಿನ ವಿರುದ್ಧ ತಪ್ಪೆಸಗುವ ವ್ಯಕ್ತಿಗಳಿಂದ ಭದ್ರತೆ ಪಡೆದುಕೊಳ್ಳುವ ಉದ್ದೇಶಕ್ಕಾಗಿ ಈ ಉಪಬಂಧಗಳನ್ನು ಬಳಸಬಹುದು; ನನಗೆ ಖಚಿತವಲ್ಲ. ಈ ವಿಧೇಯಕ ನಿರ್ವಹಿಸುವ ಪ್ರಕರಣಗಳಿಗೆ ಸಂಬಂಧ ಪಟ್ಟಂತೆ ನಿರ್ದಿಷ್ಟ ಉಪಬಂಧ ಮಾಡಬೇಕು; ಈ ವಿಧೇಯಕದಲ್ಲಿ ನಿರ್ದಿಷ್ಟ ಉಪಬಂಧ ಮಾಡುವ ಮೂಲಕ ಹಾಗೆ ಮಾಡಬಹುದಾಗಿದೆ.

ಸರ್, ಭಾರತೀಯ ಪೊಲೀಸ್ ಅಧಿನಿಯಮದಲ್ಲಿ ಮತ್ತೊಂದು ಉಪಬಂಧವಿದೆ. ಅಧಿನಿಯಮದ ಪ್ರಕರಣ ೧೫ರ ಮೇರೆಗೆ, ಒಂದು ಗ್ರಾಮದಲ್ಲಿ ಕೆಲವರು ಅಥವಾ ಗ್ರಾಮವಾಸಿಗಳು ಇಡಿಯಾಗಿ ಶಾಂತಿಭಂಗ ಉಂಟುಮಾಡಿದರೆ ಅವರ ಮೇಲೆ ಸರ್ಕಾರವು ಹೆಚ್ಚುವರಿ ಪೊಲೀಸ್ ಪಡೆಯನ್ನು ನಿಯೋಜಿಸಿ, ಆ ಗ್ರಾಮದ ನಿವಾಸಿಗಳಿಂದ ಹೆಚ್ಚುವರಿ ಪೊಲೀಸ್‌ನ ವೆಚ್ಚವನ್ನು ವಸೂಲಿ ಮಾಡಬಹುದು. ಅದೊಂದು ಸಾಮಾನ್ಯ ಉಪಬಂಧ. ಈ ಅಧಿನಿಯಮವನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಸರ್ಕಾರವು ಈ ಉಪಬಂಧವನ್ನು ಬಳಸಬಹುದೇ ಎಂಬ ಬಗ್ಗೆ ನನಗೆ ನಿಶ್ಚಿತವಲ್ಲ. ಆ ಅಧಿನಿಯಮ ಒಂದು ಸಾಮಾನ್ಯ ಅಧಿನಿಯಮ. ಇದು ಭಿನ್ನವಾದ ಪ್ರಕರಣ. ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಪರಿಣಾಮಕಾರಿಯಾಗಬೇಕಾದರೆ ಈ ವಿಧೇಯಕದಲ್ಲಿ ಪೊಲೀಸ್ ಅಧಿನಿಯಮದ ಪ್ರಕರಣ ೧೫ರ ರೀತಿಯಲ್ಲಿಯೇ ಒಂದು ವಿಶೇಷ ಕಲಂ ಇರಬೇಕು ಎನ್ನುವೆ. ಆದರೆ ಅದು ಇದರಲ್ಲಿಲ್ಲ.

ಸರ್, ನಾನು ಮತ್ತೊಂದು ಪ್ರಶ್ನೆಗೆ ಬರುವೆ. ನನಗೆ ಈ ಬಗ್ಗೆ ಸ್ವಲ್ಪ ಸಂಶಯವಿದೆ. ಈ ಕಾನೂನನ್ನು ನಿರ್ವಹಿಸುವವರು ಯಾರು? ಕೇಂದ್ರವೋ ಅಥವಾ ರಾಜ್ಯಗಳೋ? ಒಂದು ವೇಳೆ ಕೇಂದ್ರವೇ ಈ ಕಾನೂನನ್ನು ನಿರ್ವಹಿಸುವುದಾದರೆ ಕೇಂದ್ರ ಸರ್ಕಾರವೇ ನಿರ್ವಹಿಸತಕ್ಕುದೆಂಬ ಬಗ್ಗೆ ಒಂದು ಕಲಂ ಅನ್ನು ಈ ವಿಧೇಯಕರಲ್ಲಿ ಅಳವಡಿಸುವುದು ಸೂಕ್ತವಲ್ಲವೆ? ಈ ಸಲಹೆ ಏಕೆಂದರೆ ಇದು ಸಹವರ್ತಿ ಶಾಸನವಾಗಿರುವುದರಿಂದ ಈ ಅಧಿನಿಯಮವನ್ನು ನಿರ್ವಹಿಸುವ ಹಕ್ಕು ಸಾಮಾನ್ಯವಾಗಿ ರಾಜ್ಯಗಳಿಗೆ ಸೇರಿದ್ದೆಂದು ರಾಜ್ಯಗಳು ತಕರಾರು ತೆಗೆಯಬಹುದು. ಇದು ರಾಜ್ಯಗಳು ನಿರ್ವಹಿಸುವ ಹಕ್ಕುಳ್ಳ ಸಹವರ್ತಿ ಶಾಸನವಾಗಿರಲಾರದೆಂದು ನಾನು ಭಾವಿಸಿದ್ದೇನೆ.

ಇದು ೭ನೆಯ ಅನುಸೂಚಿ ವ್ಯಾಪ್ತಿಯಲ್ಲಿ ಬಾರದಿದ್ದರೂ ಇದು ಕೇಂದ್ರದ ಕಾನೂನೆಂದು ನಾನು ಪ್ರತಿಪಾದಿಸುತ್ತೇನೆ. ಅನುಚ್ಛೇದ ೩೫ರ ಉಪಬಂಧಗಳು ಅತ್ಯಂತ ಸ್ಪಷ್ಟವಾಗಿವೆ. ಅನುಚ್ಛೇದ ೩೫ ರಲ್ಲಿ ೧೭ ನೆಯ ಅನುಚ್ಛೇದಕ್ಕೆ ಅನುಸಾರವಾಗಿ ಮಾಡಲಾದ ಕಾನೂನನ್ನು ಉಲ್ಲಂಘಿಸುವವರಿಗೆ ಶಿಕ್ಷೆ ವಿಧಿಸಲು ಮಾಡಬೇಕಾದ ಯಾವುದೇ ಕಾನೂನನ್ನು ಸಂಸತ್ತು ಮಾಡಬೇಕೆ ಹೊರತು ರಾಜ್ಯಗಳಲ್ಲ ಎಂದು ಹೇಳಲಾಗಿದೆ. ಅವು ಅತ್ಯಂತ ಸ್ಪಷ್ಟ ಮಾತುಗಳಲ್ಲಿವೆ. ಆದ್ದರಿಂದ ಈ ಕಾನೂನು ಸಂವಿಧಾನದ ಆಧಾರದ ಮೇಲೆ ಕೇಂದ್ರದಿಂದ ನಿರ್ವಹಿಸಲ್ಪಡಬೇಕೆ ಹೊರತು ರಾಜ್ಯಗಳಿಂದ ಅಲ್ಲ ಎಂಬುದರಲ್ಲಿ ನನಗೆ ಯಾವುದೇ

ಸಂಶಯವಿಲ್ಲ. ಈ ಮಾತನ್ನು ನಾನು ಏಕೆ ಹೇಳುತ್ತೇನೆ ಎಂದರೆ ನನ್ನ ಮಾನ್ಯ ಸ್ನೇಹಿತರು ಈ ಅಧಿನಿಯಮದ ಮೇರೆಗೆ ನಾವು ಅಪರಾಧಗಳನ್ನು ವಿಚಾರಣಾರ್ಹವನ್ನಾಗಿ ಮಾಡಿರುವುದರಿಂದ ಈ ಅಧಿನಿಯಮವನ್ನು ರಾಜ್ಯಗಳೇ ನಿರ್ವಹಿಸಿದರೂ ಪರವಾಗಿಲ್ಲ ಎಂದು ಹೇಳಬಹುದು; ಆದರೆ ಈ ವಾದವು ಅನುಚ್ಛೇದ ೩೫ರ ಪರಿಣಾಮವಾಗಿ ನಿಲ್ಲುವುದಿಲ್ಲ. ಆದ್ದರಿಂದ ನಾನು ಅವರಿಗೆ ಸಲಹೆ ಮಾಡುವುದೇನೆಂದರೆ, ಅವರು ಈ ಕಾನೂನು ಕೇಂದ್ರದಿಂದ ನಿರ್ವಹಿಸಲ್ಪಡತಕ್ಕುದೆಂದು ವಿಧೇಯಕದಲ್ಲಿ ಸ್ಪಷ್ಟ ಉಪಬಂಧವನ್ನು ಸೇರಿಸಬೇಕು. ಒಂದು ವೇಳೆ ನಮ್ಮ ಸ್ನೇಹಿತರ ಅಭಿಪ್ರಾಯ ಅಥವಾ ರಾಜ್ಯಗಳ ಅಭಿಪ್ರಾಯದಂತೆ ಇದು ಸಹಮರ್ತಿ ಕಾನೂನಾದರೂ ನಾನು ಅವರ ಗಮನವನ್ನು ಅನುಚ್ಛೇದ ೭೩ರ ಪರಂತುಕದ ಬಗ್ಗೆ ಸೆಳೆಯಬಯಸುತ್ತೇನೆ. ಇದು ಬಹು ಮುಖ್ಯವಾಗಿದ್ದು ಸಹವರ್ತಿ ಕ್ಷೇತ್ರದಲ್ಲಿ ಕಾನೂನುಗಳ ನಿರ್ವಹಣೆಗೆ ಸಂಬಂಧಪಟ್ಟಿದೆ. ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿಯೂ ಪಟ್ಟಿ I–ಕೇಂದ್ರ ವಿಷಯ, ಪಟ್ಟಿ II–ರಾಜ್ಯ ವಿಷಯ, ಪಟ್ಟಿ III – ಸಹವರ್ತಿ ಪಟ್ಟಿಯೆಂದು ವಿಷಯಗಳನ್ನು ಅದೇ ರೀತಿಯಲ್ಲಿ ವರ್ಗೀಕರಿಸಲಾಗಿದೆ. ಆದರೆ ಭಾರತ ಸರ್ಕಾರದ ಅಧಿನಿಯಮವು ಸಹವರ್ತಿ ಕ್ಷೇತ್ರದಲ್ಲಿ ಕಾನೂನು ಮಾಡುವ ಕೇಂದ್ರದ ಅಧಿಕಾರವು ಕಾನೂನು ಮಾಡುವುದಕ್ಕಷ್ಟೇ ಸೀಮಿತವಾಗಿದೆ ಎಂಬ ಬಗ್ಗೆ ಸ್ಪಷ್ಟ ಉಪಬಂಧವನ್ನು ಒಳಗೊಂಡಿರುವುದನ್ನು ನನ್ನ ಸ್ನೇಹಿತರು ನೆನಪು ಮಾಡಿಕೊಳ್ಳಲಿ. ಇದು ಆಡಳಿತ ಕ್ಷೇತ್ರವನ್ನು ಅತಿಕ್ರಮಿಸಲಾರರು. ಅಂಥ ಉಪಬಂಧವನ್ನು ಭಾರತ ಸರ್ಕಾರದ ಅಧಿನಿಯಮ ೧೯೩೫ರಲ್ಲಿ ಮಾಡಲಾಗಿದ್ದುದ್ದಕ್ಕೆ ಕಾರಣಗಳು ನಾವು ಈಗಿರುವ ಸ್ಥಿತಿಯಲ್ಲೂ ಪ್ರಸ್ತುತವೇ ಆಗಿದ್ದು, ನಾವು ಸಂವಿಧಾನ ಮಾಡಿದಾಗ ಅಂಥ ಉಪಬಂಧವನ್ನು ಅಂಗೀಕರಿಸಲು ನಿರಾಕರಿಸಿರುತ್ತೇವೆ. ಕೇಂದ್ರವು ಈ ಸಹವರ್ತಿ ಕ್ಷೇತ್ರದಲ್ಲಿ ಕಾನೂನನ್ನು ನಿರ್ವಹಣೆಗಾಗಿ ಸಾಮಾನ್ಯವಾಗಿ ರಾಜ್ಯಗಳಿಗೆ ಬಿಟ್ಟುಕೊಟ್ಟರೂ ಸಹವರ್ತಿ ಕ್ಷೇತ್ರದಲ್ಲಿನ ತಾನು ಮಾಡಿದ ಯಾವುದೇ ನಿರ್ದಿಷ್ಟ ಕಾನೂನನ್ನು ತಾನೇ ನಿರ್ವಹಿಸಬೇಕು, ರಾಜ್ಯಗಳಲ್ಲ ಎಂಬುದನ್ನು ನಿರ್ಧರಿಸುವ ಆಯ್ಕೆಯನ್ನು ಕೇಂದ್ರಕ್ಕೆ ನೀಡಬೇಕೆಂಬುದು ನಮ್ಮ ಅಭಿಪ್ರಾಯ. ಈ ಉದ್ದೇಶವು ಅನುಚ್ಛೇದ ೭೩ರ ಪರಂತುಕದಲ್ಲಿ ಸ್ಪಷ್ಟವಾಗಿರುತ್ತದೆ. ಒಂದು ವೇಳೆ ಕೇಂದ್ರವು ಸಹವರ್ತಿ ಕ್ಷೇತ್ರದಲ್ಲಿ ಮಾಡಿದ ಕಾನೂನನ್ನು ಕೇಂದ್ರವೇ ನಿರ್ವಹಿಸಬೇಕೆಂದು ನಿರ್ಧರಿಸಿದರೆ ಅಂಥ ಸಂದರ್ಭಗಳಲ್ಲಿ ರಾಜ್ಯಗಳು ಹಸ್ತಕ್ಷೇಪ ಮಾಡುವಂತಿಲ್ಲ ಎಂದು ನಾವು ಹೇಳಿದ್ದೇವೆ. ಆದ್ದರಿಂದ ಈ ವಾದವು ಅಮಾನ್ಯವೆಂದು ನಾನು ಬಲವಾಗಿ ಸಮರ್ಥಿಸುತ್ತೇನೆ.

◆

## ೫೩

# ೧೯೫೪ರ ಸಂವಿಧಾನ (ನಾಲ್ಕನೆಯ ತಿದ್ದುಪಡಿ) ವಿಧೇಯಕ

*ಡಾ. ಬಿ.ಆರ್. ಅಂಬೇಡ್ಕರ್(ಬಾಂಬೆ):** ಮಾನ್ಯ ಸಭಾಪತಿಗಳೇ, ಬ್ರಿಟಿಷ್ ಸಂಸತ್ತಿನ ಪದ್ಧತಿಯ ಪರಿಚಯವಿರುವವರಿಗೆ ಬ್ರಿಟಿಷ್ ಸಂವಿಧಾನದ ಕಾರ್ಯನಿರ್ವಹಣೆಯಲ್ಲಿ ತತ್ತ್ವವೊಂದಿದೆ ಎಂಬುದನ್ನು ಇಂಗ್ಲೆಂಡಿನ ಎಲ್ಲ ಪಕ್ಷಗಳು ಒಪ್ಪಿಕೊಳ್ಳುತ್ತವೆ. ದೊರೆ ಎಂದಿಗೂ ತಪ್ಪು ಮಾಡುವುದಿಲ್ಲ ಎಂಬುದೇ ಆ ತತ್ತ್ವ. ಸಂವಿಧಾನದ ಕಾರ್ಯ ನಿರ್ವಹಣೆಯಲ್ಲಿ ಏನಾದರೂ ತಪ್ಪು ನಡೆದರೆ ಆ ತಪ್ಪಿಗೆ ಜವಾಬ್ದಾರರು ಪ್ರಧಾನಮಂತ್ರಿ ಮತ್ತು ಆತನ ಸಹೋದ್ಯೋಗಿಳು. ಆದರೆ ದೊರೆ ಎಂದಿಗೂ ತಪ್ಪು ಮಾಡಿಲಾರ ಮತ್ತು ದೊರೆ ಎಂದೂ ತಪ್ಪು ಮಾಡುವುದಿಲ್ಲ. ನಾವು ಈ ದೇಶದಲ್ಲಿ ವಸ್ತುತಃ ಬ್ರಿಟಿಷ್ ಸಂವಿಧಾನವನ್ನು ಸ್ವಲ್ಪ ಮಾರ್ಪಾಡಿನೊಂದಿಗೆ ಅಳವಡಿಸಿಕೊಂಡಿದ್ದೇವೆ. ಆದರೆ ದುರದೃಷ್ಟವಶಾತ್ ನಮ್ಮ ಸಂವಿಧಾನ ನಿರ್ವಹಣೆಯು ಒಂದು ತತ್ತ್ವಕ್ಕೆ ಒಳಪಟ್ಟಿದೆ. ಆದರೆ ಅದು ಬ್ರಿಟಿಷ್ ಜನತೆ ಒಪ್ಪಿಕೊಂಡಿರುವ ತತ್ತ್ವಕ್ಕೆ ತದ್ವಿರುದ್ಧವಾದದ್ದು. ನಮ್ಮ ದೇಶದಲ್ಲಿ ನಾವು ಒಪ್ಪಿರುವ ತತ್ತ್ವವೆಂದರೆ ಪ್ರಧಾನಮಂತ್ರಿ ಎಂದಿಗೂ ತಪ್ಪು ಮಾಡಲಾರ ಮತ್ತು ಎಂದಿಗೂ ತಪ್ಪು ಮಾಡುವುದಿಲ್ಲ. ಆದ್ದರಿಂದ ಪ್ರಧಾನಮಂತ್ರಿ ಪ್ರಸ್ತಾಪಿಸುವ ಯಾವುದನ್ನೇ ಆಗಲಿ ಪ್ರಶ್ನೆ ಮಾಡದೆ ಸರಿ ಎಂದು ಒಪ್ಪಿಕೊಳ್ಳಬೇಕು. ರಾಜಕೀಯದಲ್ಲಿ ಈ ಬಗೆಯ ವ್ಯಕ್ತಿ ನಿಷ್ಠೆಯು ಕೆಲವೊಂದು ಪ್ರಕರಣಗಳಲ್ಲಿ ಕ್ಷಮಾರ್ಹ; ಆದರೆ ಮೂಲಭೂತ ಹಕ್ಕುಗಳೇ ಆಕ್ರಮಣಕ್ಕೊಳಗಾದಾಗ ಅದು ಕ್ಷಮಾರ್ಹವೆಂದು ತೋರುವುದಿಲ್ಲ. ಮೂಲಭೂತ ಹಕ್ಕುಗಳು ಸಂವಿಧಾನದ ಪೀಠಿಕೆಗೆ ಮೂಲಾಧಾರ. ಪೀಠಿಕೆಯು ಸಂವಿಧಾನಕ್ಕೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಮೂಲಾಧಾರಗಳೆಂದು ಹೇಳುತ್ತದೆ. ಸಂವಿಧಾನದ ಈ ಧ್ಯೇಯೋದ್ದೇಶಗಳನ್ನು ಮೂಲಭೂತ ಹಕ್ಕುಗಳು ಪೂರೈಸುತ್ತವೆ. ಆದ್ದರಿಂದ ವ್ಯಕ್ತಿ ನಿಷ್ಠೆಯ ಜೊತೆಗೆ, ಮೂಲಭೂತ ಹಕ್ಕುಗಳ ಮೇಲೆ ಯಾವುದೇ ಆಕ್ರಮಣ ನಡೆದಾಗ ಅದನ್ನು ವಿಮೋಚಿಸಬೇಕಾದದ್ದು ಪ್ರತಿಯೊಬ್ಬ ಸಂಸತ್ ಸದಸ್ಯನ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ದುರದೃಷ್ಟವಶಾತ್, ಈ ಬಗೆಯ ವಿಮೋಚನಾತ್ಮಕ ನಡವಳಿಕೆ ಕಂಡು ಬರುತ್ತಿಲ್ಲ. ಈ ದೇಶದಲ್ಲಿ ಮೂಲಭೂತ ಹಕ್ಕುಗಳ ಇತಿಹಾಸವೇ ಕುತೂಹಲಕಾರಿಯಾದದ್ದು. ಹಿಂದು ದೊರೆಗಳ ಆಳ್ವಿಕೆಯಲ್ಲಿ ಪ್ರಾಚೀನಕಾಲದಲ್ಲಿ ಬ್ರಾಹ್ಮಣ ಮತ್ತು ಹಸು ಇವರಿಬ್ಬರಿಗೆ ಮಾತ್ರ ಮೂಲಭೂತ ಹಕ್ಕುಗಳಿದ್ದವು; ಪುರಾಣಗಳು ರಾಜನನ್ನು 'ಗೋ ಬ್ರಾಹ್ಮಣ ಪ್ರತಿಪಾಲಕ' ಎಂದೇ ವರ್ಣಿಸಿವೆ. ಅದೇ ರಾಜನ ಕರ್ತವ್ಯ. ಆತನ ಪ್ರಜೆಗಳಲ್ಲಿ ಇತರರಿಗೆ ಏನಾದೂ ಪರಿಗಣನೆ ದೊರೆಯುತ್ತಿತ್ತೋ ಇಲ್ಲವೋ: ಗೋವಿನ ಹೊರತು ಇತರೆ ಪ್ರಾಣಿಗಳಿಗೆ ಏನಾದರೂ ಪರಿಗಣನೆ ಇತ್ತೋ ಇಲ್ಲವೊ–ಅದು ಮಹತ್ತ್ವದ ವಿಷಯವಾಗಿರಲಿಲ್ಲ. ಗೋಬ್ರಾಹ್ಮಣರನ್ನು ಸಂರಕ್ಷಿಸುತ್ತಿರುವವರೆಗೆ ರಾಜನಿಗೆ ಸ್ವರ್ಗ ಪ್ರಾಪ್ತಿ ಖಚಿತ.

ಮುಸ್ಲಿಮರು ಬಂದಾಗ, ಹಿಂದೂ ದೊರೆಯು ಗೋಬ್ರಾಹ್ಮಣರಿಗೆ ನೀಡಿದ್ದ ಈ ಮೂಲಭೂತ

---

* ಪಿ.ಡಿ. ಸಂ.೯–ಬಿ, ೧೯ ಮಾರ್ಚ ೧೯೫೫, ಪು. ೨೪೪೬–೬೬

ಹಕ್ಕುಗಳನ್ನು ಕಿತ್ತೊಕೊಂಡರು. ಗೋವು ಬದುಕುವ ಹಕ್ಕನ್ನು ಕಳೆದುಕೊಂಡಿದ್ದಷ್ಟೇ ಅಲ್ಲ. ಎಲ್ಲರ ಬಲಿಪಶುವು ಆಯಿತು. ಬ್ರಾಹ್ಮಣರಿಗೂ ಅಧೋಗತಿ ಒದಗಿತು. ಮುಸ್ಲಿಮರು ಮಾಡಿದ್ದೆಂದರೆ ಮುಸ್ಲಿಮರಿಗೆ ವಿಶೇಷ ಹಕ್ಕುಗಳನ್ನು ನೀಡಿದರು ಮತ್ತು ಮುಸ್ಲಿಮೇತರರಿಗೆ ಯಾವುದೇ ಹಕ್ಕು ನೀಡಲಿಲ್ಲ. ಈ ದೇಶದಲ್ಲಿ ಮುಸ್ಲಿಮ್ ಆಡಳಿತ ಕೊನೆಗೊಂಡು ನಮ್ಮ ಮೇಲೆ ಬ್ರಿಟಿಷರ ಆಳ್ವಿಕೆ ಹೇರಲಾಯಿತು. ೧೭೭೨ ರಿಂದ ೧೯೩೫ರ ವರೆಗೆ ಅಂಗೀಕರಿಸಲಾದ ಭಾರತದ ಸರ್ಕಾರದ ಅಧಿನಿಯಮಗಳನ್ನು ಯಾರು ಗಮನಿಸಿದರೂ ಈ ದೇಶದ ಆಡಳಿತಕ್ಕಾಗಿ ಸಂಸತ್ತು ಅಂಗೀಕರಿಸಿದ ಭಾರತ ಸರ್ಕಾರದ ಯಾವುದೇ ಅಧಿನಿಯಮದಲ್ಲಿ ಮೂಲಭೂತ ಹಕ್ಕುಗಳು ಎಂಬ ವಿಷಯ ಇಲ್ಲದಿರುವುದನ್ನು ಕಾಣಬಹುದು. ೧೯೪೭ರಲ್ಲಿ ಅಥವಾ ದೇಶಕ್ಕೆ ಸ್ವರಾಜ್ಯವು ಪ್ರಾಪ್ತವಾದಾಗ ಮೂಲಭೂತ ಹಕ್ಕುಗಳು ಎಂಬ ಆಲೋಚನೆ ಹೊರಹೊಮ್ಮಿತು. ಮೂಲಭೂತ ಹಕ್ಕುಗಳಿಗೆ ಒಂದು ಮೂರ್ತ ಸ್ವರೂಪ ಮೊಟ್ಟಮೊದಲ ಬಾರಿಗೆ ನಮ್ಮ ಸಂವಿಧಾನದಲ್ಲಿ ದೊರೆತಿದೆ. ದೇಶವನ್ನು ವಿದೇಶಿಯರು ಅಂದರೆ ಬ್ರಿಟಿಷರು ಆಳುತ್ತಿದ್ದಾಗಲೂ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಬೇಕೆಂದು ಯಾರೂ ಆಂದೋಳನ ನಡೆಸಿರಲಿಲ್ಲವೆಂಬುದು ಆಶ್ಚರ್ಯಕರ. ಕಾಂಗ್ರೆಸ್ ೧೮೮೬ರಿಂದಲೂ ಅಸ್ತಿತ್ವದಲ್ಲಿತ್ತು. ಕಾಂಗ್ರೆಸ್ ಅಂಗೀಕರಿಸಿದ ವಾರ್ಷಿಕ ನಿರ್ಣಯಗಳನ್ನು ಯಾರಾದರೂ ಪರಿಶೀಲಿಸಲಿ. ಅವರು ಮೂಲಭೂತ ಹಕ್ಕುಗಳನ್ನು ಎಂದೂ ಕೇಳಿಲ್ಲ.

**ಬಾಬು ಗೋಪಿನಾಥ್ ಸಿಂಗ್ (ಉತ್ತರ ಪ್ರದೇಶ):** ೧೯೩೧ರ ಕರಾಚಿ ಕಾಂಗ್ರೆಸ್ ನಿರ್ಣಯಗಳನ್ನು ತಾವು ಓದಿದ್ದೀರಾ?

**ಡಾ. ಬಿ.ಆರ್. ಅಂಬೇಡ್ಕರ್:** ಆ ಬಗ್ಗೆ ನನಗೆ ಗೊತ್ತಿಲ್ಲ. ಸಂವಿಧಾನ ಜಾರಿಗೆ ತಂದಾಗ ಮೂಲಭೂತ ಹಕ್ಕನ್ನು ಹೊಂದೋಣ ಎಂದು ಅವರು ಹೇಳಿದ್ದಾರೆ. ನಾನೀಗ ಆ ವಿಷಯಕ್ಕೆ ಬರುತ್ತೇನೆ. ಮೊದಲಿಗೆ ಕಾಂಗ್ರೆಸ್ ನಡೆಸಿದ ಭಾರತೀಯರು ಬೌದ್ಧಿಕವಾಗಿ ದೈತ್ಯರಾಗಿದ್ದರು. ಅವರೇನೂ ಸಾಮಾನ್ಯ ವ್ಯಕ್ತಿಗಳಲ್ಲ, ಅತ್ಯಂತ ಸುಶಿಕ್ಷಿತರು, ಪ್ರಜ್ಞಾವಂತರು – ಅವರಲ್ಲಿ ಯಾರೊಬ್ಬರೂ ಅಥವಾ ಯಾವ ಭಾರತೀಯನೂ ಯಾವುದೇ ಮೂಲಭೂತ ಹಕ್ಕನ್ನು ಕೇಳಲಿಲ್ಲವೆಂಬುದು, ನಾನು ಈಗಾಗಲೇ ಹೇಳಿದಂತೆ, ಒಂದು ಆಶ್ಚರ್ಯಕರ ಅಭಿಪ್ರಾಯ. ಸ್ವರಾಜ್ಯ ಬಂದ ಕೂಡಲೇ ಮೂಲಭೂತ ಹಕ್ಕುಗಳಿಗೆ ಒತ್ತಾಯ ಬಂದಿತು. ಹೀಗೆ ಏಕೆ ಆಯಿತು ಎಂಬುದು ಪರಿಗಣನಾರ್ಹವಾದ ವಿಷಯ. ಬೇರೆ ಬೇರೆ ಜನ ಇದಕ್ಕೆ ಬೇರೆ ಬೇರೆ ಉತ್ತರ ನೀಡುವುದು ನಿಸ್ಸಂಶಯ. ಬ್ರಿಟಿಷರು ಇಲ್ಲಿದ್ದಾಗ ಭಾರತೀಯರು ಏಕೆ ಮೂಲ ಭೂತ ಹಕ್ಕುಗಳನ್ನು ಕೇಳಲಿಲ್ಲ ಎನ್ನುವುದಕ್ಕೆ ನನ್ನ ಉತ್ತರ ಇದು. ಬ್ರಿಟಿಷರು ವಸಹಾತುಶಾಹಿ ಆಡಳಿತದ ಒಂದು ಅಂಗವಾಗಿದ್ದರೂ ಈ ದೇಶದ ಆಡಳಿತವನ್ನು ನ್ಯಾಯ, ಸಮಾನತೆ ಮತ್ತು ಉತ್ತಮ ಆತ್ಮಸಾಕ್ಷಿಗಳ ಮೂಲಕ ಆಡಳಿತ ನಡೆಸುತ್ತಿದ್ದರು ಎಂಬುದರಲ್ಲಿ ಸಂಶಯವಿಲ್ಲ. ಸರ್, ನನ್ನ ಪ್ರಾಂತ್ಯವನ್ನೇ ಕುರಿತು ಹೇಳುವುದಾದರೆ ಇಡಿಯಾಗಿ ಯುರೋಪಿಯನ್ನರಿಂದಲೇ ತುಂಬಿದ್ದ ನ್ಯಾಯಾಂಗವು ಎಷ್ಟು ಸ್ವತಂತ್ರವಾಗಿದ್ದಿತು ಎಂಬುದು ನನಗೆ ನೆನಪಿದೆ. ಕಾರ್ಯಾಂಗದಿಂದ ಎಷ್ಟು ಸ್ವತಂತ್ರವಾಗಿತ್ತೆಂಬುದಕ್ಕೆ ನನಗೆ ಒಂದು ಪ್ರಕರಣ ನೆನಪಿದೆ.

**ದಿವಾನ್ ಚಮನ್‌ಲಾಲ್ (ಪಂಜಾಬ್):** ತಿಲಕರ ಪ್ರಕರಣವೆ?

**ಡಾ. ಬಿ.ಆರ್. ಅಂಬೇಡ್ಕರ್:** ಇದೊಂದು ಅತ್ಯಂತ ಪ್ರಸಿದ್ಧ ಪ್ರಕರಣ. ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿದ್ದ ಮಾನ್ಯ ನ್ಯಾಯಮೂರ್ತಿ ನೈಟ್‌ರ ಪ್ರಕರಣ. ಅವರು ಬಾಂಬೆ ಸರ್ಕಾರದ ವಿರುದ್ಧ ಒಂದು ರಿಟ್ ಹೊರಡಿಸಿದರು. ಬಾಂಬೆ ಸರ್ಕಾರ ಅದನ್ನು

ಪಾಲಿಸಲು ನಿರಾಕರಿಸಿತು. ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ ಕಾರ್ಯಾಂಗದ ವಿರುದ್ಧ ರಿಟ್ ಹೊರಡಿಸುವ ಹಕ್ಕಿಲ್ಲ ಎಂದು ಅವರು ಹೇಳಿದ್ದರು. ಆ ನಿರ್ದಿಷ್ಟ ರಿಟ್‌ನ್ನು ಜಾರಿಗೊಳಿಸುವುದಿಲ್ಲವೆಂದು ನ್ಯಾಯಾಧೀಶರಿಗೆ ತಿಳಿಸಿದಾಗ, ಶ್ರೀ ರೈಟ್ ಅವರು ಏನು ಮಾಡಿದರು ಗೊತ್ತೆ? ಚಪ್ರಾಸಿಯನ್ನು ಕರೆದು "ಹೈಕೋರ್ಟ್‌ನ ಬೀಗದ ಕೈಗಳನ್ನು ತೆಗೆದುಕೊಂಡು ಬಾ" ಎಂದು ಹೈಕೋರ್ಟ್‌ನ ಎಲ್ಲ ಕೋಣೆಗಳಿಗೆ, ತಮ್ಮ ಕೋಣೆಯೂ ಸೇರಿದಂತೆ ಬೀಗ ಹಾಕಲು ಹೇಳಿದರು. ಬಾಂಬೆ ಹೈಕೋಟ್‌ನ ಮುಖ್ಯ ನ್ಯಾಯಾಧೀಶನಾದ ನನ್ನ ಆದೇಶವನ್ನು ಪಾಲಿಸದಿದ್ದಲ್ಲಿ ನಿಮಗೆ ಹೈಕೋರ್ಟೇ ಬೇಡ ಎಂದು ಹೇಳಿ ಮಾರನೆಯ ದಿನವೇ ಹಡಗನ್ನು ಗೊತ್ತುಮಾಡಿಕೊಂಡು ಲಂಡನ್ನಿಗೆ ಹಿಂತಿರುಗಿದರು. ತದನಂತರ ಅವರ ಆದೇಶವನ್ನು ಪ್ರಿವಿಕೌನ್ಸಿಲ್ ಹಿಂತಿರುಗಿಸಿತು. ಮುಖ್ಯಾಂಶ ಎಂದರೆ ಬ್ರಿಟಿಷರ ಈ ದೇಶದಲ್ಲಿ ಪ್ರತಿಯೊಬ್ಬರಲ್ಲೂ ಭದ್ರತೆಯ ಒಂದು ಭಾವ ಹುಟ್ಟುಂತೆ ಆಡಳಿತವನ್ನು ನಡೆಸಿದರು. ನನ್ನ ನಿರ್ಣಯದ ಪ್ರಕಾರ, ಆದ್ದರಿಂದಲೇ ಈ ದೇಶದಲ್ಲಿ ಯಾರೂ ಮೂಲಭೂತ ಹಕ್ಕಿಗಾಗಿ ಹುಯಿಲೆಬ್ಬಿಸಲಿಲ್ಲ. ಸ್ವರಾಜ್ಯ ಬಂದ ಕೂಡಲೇ ಪ್ರತಿಯೊಬ್ಬರೂ ಕನಿಷ್ಠ ಬಹುತೇಕ ಅಲ್ಪಸಂಖ್ಯಾತರು– ರಾಜಕೀಯ ಅಧಿಕಾರವು ಬಹುಸಂಖ್ಯಾತರ ಕೈಗೆ ಹೋಗುವ ಸಂಭವವಿದೆ– ಎಂದು, ಇದಕ್ಕೆ ಸಂವಿಧಾನಾತ್ಮಕ ನೈತಿಕತೆ ಇಲ್ಲವೆಂದು ಆಲೋಚಿಸಿದರು. ಅವರ ಅಧಿಕೃತ ಸಿದ್ಧಾಂತ ವರ್ಗಗಳ ಅಸಮಾನತೆ. ಪ್ರತಿಯೊಂದು ಸಮುದಾಯದಲ್ಲೂ ಅಸಮಾನತೆ ಇದೆ. ಅಸಮಾನತೆ ಎಂಬುದು ರೂಢಿಯಲ್ಲಿದೆ ಅದು ಅಧಿಕೃತ ತತ್ತ್ವವಲ್ಲ. ಆದರೆ ಈ ದೇಶದಲ್ಲಿನ ಬಹುಸಂಖ್ಯಾತರಿಗೆ ಚಾತುರ್ವರ್ಣ್ಯದಲ್ಲಿ ಅಂತರ್ಗತವಾದ ಅಸಮಾನತೆಯೇ ಅಧಿಕೃತ ಸಿದ್ಧಾಂತ. ಎರಡನೆಯದಾಗಿ ಅವರ ಜಾತಿ ಪದ್ಧತಿ. ರಾಜಕೀಯ ಮತ್ತು ಆಡಳಿತಾತ್ಮಕ ತಾರತಮ್ಯದ ಖಡ್ಗ. ಇವೆಲ್ಲದರ ಪರಿಣಾಮವಾಗಿ ಮೂಲಭೂತ ಹಕ್ಕುಗಳು ಅನಿವಾರ್ಯವಾದವು. ನನಗೆ ಕಂಡುಬಂದುದೆಂದರೆ ಪ್ರಾಯಶಃ ಈ ಬಗ್ಗೆ ನನಗೆ ಎಲ್ಲರಿಗಿಂತಲೂ ಚೆನ್ನಾಗಿ ತಿಳಿದಿದೆ. ಏಕೆಂದರೆ–ಈ ಬಗ್ಗೆ ನಾನು ಮಾಡಬೇಕಾದದ್ದು ಇದೆ. ಕಾಂಗ್ರೆಸ್ ಪಕ್ಷವು ಮೂಲಭೂತ ಹಕ್ಕುಗಳ ಬಗ್ಗೆ ವಿಜಯೋತ್ಸವದಲ್ಲಿತ್ತು. ಅವರಿಗೆ ಮೂಲಭೂತ ಹಕ್ಕುಗಳು ಬೇಕಾಗಿದ್ದವು. ಭಾರತೀಯ ಜನತೆ ಮೂಲಭೂತ ಹಕ್ಕುಗಳಿಲ್ಲದ ಸಂವಿಧಾನವನ್ನೇದರೂ ಹೊಂದಿದರೆ ಅವರು ವಿಶ್ವದ ಮುಂದೆ ನಗ್ನರಾಗಿ ನಿಂತಂತಾಗುತ್ತದೆಯಾದ್ದರಿಂದ, ಮೂಲಭೂತ ಹಕ್ಕುಗಳಿರುವುದು ಅತ್ಯಂತ ಆವಶ್ಯಕ ಎಂದು ಅವರು ಭಾವಿಸಿದ್ದರು. ಈ ಕಾರಣದಿಂದಲೇ ಅವರು ಮೂಲಭೂತ ಹಕ್ಕುಗಳಿಗಾಗಿ ಹುಯ್ಲೆಬ್ಬಿಸಿದರು. ಸಂವಿಧಾನ ರಚನಾ ಮಂಡಳಿಯ ನಡವಳಿಗಳಲ್ಲಿ ಯಾವೊಬ್ಬ ಸದಸ್ಯರು ಎದ್ದು ನಿಂತು ನಮಗೆ ಮೂಲಭೂತ ಹಕ್ಕುಗಳು ಬೇಡ ಎಂದು ಹೇಳಿದ್ದನ್ನು ನಾನು ನೋಡಿಲ್ಲ. ಮೂಲಭೂತ ಹಕ್ಕುಗಳು ಭಾರತೀಯ ಜನತೆ ಹಾಕಿಕೊಳ್ಳಲೇಬೇಕಾದ ಒಂದು ಬಗೆಯ ಆಭರಣವೆಂದೇ ಪರಿಗಣಿಸಲಾಗಿತ್ತು. ಇಂದು ಅವರ ಧೋರಣೆ ಸಂಪೂರ್ಣವಾಗಿ ಬದಲಾಗಿದೆ. ಇಂದು ಅವರು ಮೂಲಭೂತ ಹಕ್ಕುಗಳನ್ನು ಕತ್ತರಿಸಲು ಅವಕಾಶ ಸಿಕ್ಕಿದಾಗಲೆಲ್ಲಾ ಕತ್ತರಿಸಿ ಹಾಕಬೇಕಾದ ಕಬ್ಬಿಣದ ಸರವಳಿ ಎಂದು ನೋಡುತ್ತಿದ್ದಾರೆ. ಇದೊಂದು ಮೂಲಭೂತ ಬದಲಾವಣೆ. ಮೂಲಭೂತ ಹಕ್ಕುಗಳನ್ನು ಅವುಗಳಿಂದ ಯಾವುದೇ ಪರಿಣಾಮವಾಗದೆಂದು ಬಹುಸಂಖ್ಯಾತ ಅನುಕೂಲಕ್ಕನುಸಾರವಾಗಿ ಅಥವಾ ಪಕ್ಷದ ಮುಖ್ಯಸ್ಥರ ಆಶಯದಂತೆ ಯಾವುದೇ ಸಮಯದಲ್ಲಾದರೂ ದಮನ ಮಾಡಬಹುದೆಂಬ ಧೋರಣೆಯು ಭವಿಷ್ಯದಲ್ಲಿ ಕೆಲವೊಂದು ಅಪಾಯಕಾರಿ ಪರಿಣಾಮಗಳಿಗೆ ಸುಲಭವಾಗಿ ದಾರಿ ಮಾಡಿಕೊಡಬಹುದೆಂಬುದು ವಿಷಾದಕರ. ಆದ್ದರಿಂದಲೇ ಇಂಥ ವಿಷಯಗಳಲ್ಲಿ ಮೂಲಭೂತ ಹಕ್ಕುಗಳ ಉಲ್ಲಂಘನೆ ಅಥವಾ ಚ್ಯುತಿ ಉಂಟುಮಾಡುವುದನ್ನು ಅಧಿಕಾರದಲ್ಲಿರುವ ಪಕ್ಷವು

ಯಾವುದೇ ಮಹತ್ವದ್ದಲ್ಲವೆಂದು ಪರಿಗಣಿಸುತ್ತಿರುವುದಕ್ಕೂ ನನಗೆ ವಿಷಾದವೆನಿಸಿದೆ.

ಇದು ಸಂವಿಧಾನ ರಚಿಸಿದವರಿಗೆ ಯಾವುದೇ ಪರಿಜ್ಞಾನವಿಲ್ಲವೆಂದೂ, ಮೂಲಭೂತ ಹಕ್ಕುಗಳು ಹಿಗ್ಗುವಂತಿರಬೇಕೆಂದೂ ಅವು ಪ್ರಗತಿಪರ ಬದಲಾವಣೆಗಳಿಗೆ ಅವಕಾಶ ನೀಡಬೇಕೆಂದು ಸಲಹೆ ಮಾಡುವಂತಿದೆ. ಸರ್, ಸಂವಿದಾನದ ಕರಡು ಸಮಿತಿಯ ಅಧ್ಯಕ್ಷನಾಗಿದ್ದ ನಾನು ಅಂಥ ಯಾವುದೇ ಸಲಹೆಯನ್ನು ಒಪ್ಪಲಾರೆ. ಸಂವಿಧಾನದಲ್ಲಿ ಜಾರಿ ಮಾಡಿರುವ ಮೂಲಭೂತ ಹಕ್ಕುಗಳನ್ನು ಓದುವ ಯಾರಿಗೂ ಪ್ರತಿಯೊಂದು ಮೂಲಭೂತ ಹಕ್ಕೂ ಅಪವಾದ ಹೊಂದಿರುವುದನ್ನು ಕಾಣುವರು. ಅದು ಹೀಗೆ ಹೇಳುತ್ತದೆ: ಇದರಲ್ಲಿ ಏನೇ ಒಳಗೊಂಡಿದ್ದರೂ ರಾಜ್ಯ ಅವುಗಳ ಮೇಲೆ ವಿವೇಕಯುತ್ತ ನಿರ್ಬಂಧಗಳನ್ನು ವಿಧಿಸಬಹುದು. ಮೂಲಭೂತ ಹಕ್ಕುಗಳು ತೀರಾ ಕಠಿಣವಾಗಿರದೆ ಸ್ವಲ್ಪ ಮಟ್ಟಿನ ಹಿಗ್ಗುವ ಗುಣವನ್ನು ಹೊಂದಿರಬೇಕೆಂಬ ಅಂಶ ನಮಗೂ ಗೊತ್ತಿದ್ದಿತು. ನಾವು ಹಿಗ್ಗುವುದಕ್ಕೂ ಸಾಕಷ್ಟು ಅವಕಾಶ ಕಲ್ಪಿಸಿದ್ದೇವೆ.

ಈ ತಿದ್ದುಪಡಿ ವಿಧೇಯಕದಲ್ಲಿ ನಾವು ವ್ಯವಹರಿಸುತ್ತಿರುವ ಅನುಚ್ಛೇದ ೩೧ಕ್ಕೆ ನಾವಾಗಲೀ ಅಥವಾ ಕರಡು ರಚನೆ ಸಮಿತಿಯಾಗಲಿ, ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳಲಾರೆವು. ಅದು ನಾವು ರೂಪಿಸಿದ ಕರಡಲ್ಲ. ಅನುಚ್ಛೇದ ೩೧ ಅನ್ನು ರೂಪಿಸುವಾಗ, ಕಾಂಗ್ರೆಸ್ ಪಕ್ಷ ಎಷ್ಟೊಂದು ವಿಭಜಿತವಾಗಿತ್ತೆಂದರೆ, ನಮಗೆ ಏನು ಮಾಡಬೇಕೆಂದು ಏನು ಇರಿಸಬೇಕು, ಏನು ತೆಗೆದುಹಾಕಬೇಕು ತಿಳಿಯಲಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಮೂರು ಗುಂಪುಗಳಿದ್ದವು. ಸರದಾರ ವಲ್ಲಬಾಯಿ ಪಟೇಲರ ನೇತೃತ್ವದಲ್ಲಿ ಒಂದು ಗುಂಪು, ಪೂರ್ಣ ಪರಿಹಾರ, ಭೂಸ್ವಾಧೀನ ಅಧಿನಿಯಮದಲ್ಲಿ ಕಾನೂನು ಮಾಡಿರುವಂತೆ ಪೂರ್ಣ ಪರಿಹಾರ ಅಂದರೆ ಮಾರುಕಟ್ಟೆಯ ಬೆಲೆಯ ಶೇ. ೧೫ ರಷ್ಟು ನಷ್ಟ ಪರಿಹಾರದ ಪರವಾಗಿದ್ದರು. ಅದು ಅವರ ನಿಲುವು. ನಮ್ಮ ಪ್ರಧಾನಿಗಳು ಪರಿಹಾರದ ವಿರುದ್ಧವಾಗಿದ್ದರು. ಈಗ ಇಲ್ಲಿರುವ ನಮ್ಮ ಸ್ನೇಹಿತರಾದ ಶ್ರೀ ಪಂತ್ ಅವರು, ಅವರನ್ನು ಇಲ್ಲಿ ನೋಡಲು ಸಂತಸವೆನಿಸುತ್ತದೆ, ಸಂವಿಧಾನವನ್ನು ವಾಸ್ತವವಾಗಿ ರೂಪಿಸುವ ಮುನ್ನವೇ ತಮ್ಮ ಜಮೀನ್‌ದಾರಿ ನಿಷೇಧ ವಿಧೇಯಕವನ್ನು ರೂಪಿಸಿಬಿಟ್ಟಿದ್ದರು. ಅವರು ತಮ್ಮ ಮಗುವಿಗೆ ಸುಗಮ ಹೆರಿಗೆ ಬಯಸಿದ್ದರು. ಅವರಿಗೆ ಅವರದೇ ಆದ ಪ್ರತಿಪಾದನೆ. ಹೀಗಾಗಿ ಮೂರು ಪಕ್ಷಗಳ ನಡುವೆ ಹೋರಾಟವಿದ್ದಿತು. ನಾವು ಅವರಿಗೆ ಇಷ್ಟ ಬಂದಂತೆ ತೀರ್ಮಾನಿಸಲು ವಿಷಯವನ್ನು ಅವರಿಗೆ ಬಿಟ್ಟು ಬಿಟ್ಟೆವು.. ಅವರು ತಮ್ಮ ತೀರ್ಮಾನವನ್ನು ಅನುಚ್ಛೇದ ೩೧ರಲ್ಲಿ ನಿರೂಪಿಸಿದರು. ಈ ಅನುಚ್ಛೇದ ೩೧ ನನ್ನ ಅಭಿಪ್ರಾಯದಲ್ಲಿ ಅಸಹ್ಯಕರವಾಗಿದ್ದು, ಅದರ ಕಡೆ ನೋಡಲು ಸಹ ನಾನು ಬಯಸುವುದಿಲ್ಲ. ಈ ದೇಶಕ್ಕೆ ನೀಡಲಾಗಿರುವ ಸಂವಿಧಾನವು ಒಂದು ಅದ್ಭುತ ದಸ್ತಾವೇಜು ಎಂದು ನಾನು ಹೆಮ್ಮೆಯಿಂದ ಹೇಳಬಲ್ಲೆ. ಹಾಗೆಂದು ನಾನೊಬ್ಬನೇ ಹೇಳಿಲ್ಲ; ಅನೇಕರು, ಸಂವಿಧಾನದ ಅನೇಕ ಇತರ ವಿದ್ಯಾರ್ಥಿಗಳು ಹೇಳಿದ್ದಾರೆ. ಅದು ಅತ್ಯಂತ ಸರಳ ಮತ್ತು ಅತ್ಯಂತ ಸುಲಭ. ಅನೇಕ, ಪ್ರಕಾಶಕರು ನನಗೆ ಪತ್ರ ಬರೆದು ಸಂವಿಧಾನದ ಮೇಲೆ ವ್ಯಾಖ್ಯಾನ ಬರೆಯುವಂತೆಯೂ ಅದಕ್ಕೆ ಸಾಕಷ್ಟು ಹಣ ನೀಡುವುದಾಗಿಯೂ ಕೋರಿದ್ದಾರೆ. ಈ ಸಂವಿಧಾನದ ಮೇಲೆ ವ್ಯಾಖ್ಯಾನ ಬರೆಯುವುದೇನೆಂದರೆ ಸಂವಿಧಾನವು ಕೆಟ್ಟದಾಗಿದೆ ಮತ್ತು ಅರ್ಥವಾಗುವಂತೆ ಇಲ್ಲವೆಂದು ಒಪ್ಪಿಕೊಂಡಂತೆ ಎಂದು ನಾನು ಅವರಿಗೆ ಹೇಳಿದ್ದೇನೆ. ಅದು ಹಾಗಲ್ಲ. ಇಂಗ್ಲಿಷ್ ತಿಳಿಯುವ ಎಲ್ಲರೂ ಸಂವಿಧಾನವನ್ನು ಅರ್ಥ ಮಾಡಿಕೊಳ್ಳಬಲ್ಲರು. ವ್ಯಾಖ್ಯಾನ ಅಗತ್ಯವಿಲ್ಲ.

**ಡಾ. ಅನುಪ್ ಸಿಂಗ್ (ಪಂಜಾಬ್):** ಕಳೆದ ಸಾರಿ ನೀವು ಮಾತನಾಡುವಾಗ ಸಂವಿಧಾನವನ್ನು ಸುಟ್ಟು ಹಾಕುವುದಾಗಿ ಹೇಳಿದ್ದೀರಿ.

**ಡಾ. ಬಿ.ಆರ್. ಅಂಬೇಡ್ಕರ್:** ಅದಕ್ಕೆ ನಿಮಗೆ ಉತ್ತರಬೇಕೆ? ಈಗಲೇ ಉತ್ತರಿಸುವೆ.

ನನ್ನ ಸ್ನೇಹಿತರು ಹೇಳಿದರು ಕಳೆದ ಸಾರಿ ನಾನು ಮಾತನಾಡುವಾಗ ಸಂವಿಧಾನವನ್ನು ಸುಟ್ಟು ಹಾಕಲು ಬಯಸಿದ್ದೆ ಎಂದು. ಆತುರದಲ್ಲಿ ನಾನು ಕಾರಣವನ್ನು ವಿವರಿಸಿರಲಿಲ್ಲ. ಈಗ ನನ್ನ ಸ್ನೇಹಿತರು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ನಾನೀಗ ಉತ್ತರ ನೀಡಬೇಕು. ಕಾರಣ ಇಷ್ಟೇ; ನಾವು ದೇವರಿಗೆ ಒಳಬಂದು ವಾಸಿಸಲು ದೇವಾಲಯವನ್ನು ಕಟ್ಟಿದೆವು. ಆದರೆ ದೇವರನ್ನು ಪ್ರತಿಷ್ಠಾಪಿಸುವ ಮೊದಲೇ ದೆವ್ವ ಅದನ್ನು ಆಕ್ರಮಿಸಿಕೊಂಡರೆ ದೇವಾಲಯವನ್ನು ನಾಶಪಡಿಸುವುದರ ಹೊರತು; ನಾನೇನು ಮಾಡಲು ಸಾಧ್ಯ? ಅಸುರರು ಅದನ್ನು ಆಶ್ರಯಿಸಲಿ ಎಂಬುದು ನಮ್ಮ ಉದ್ದೇಶವಾಗಿರಲಿಲ್ಲ. ಅದರಲ್ಲಿ ದೇವತೆಗಳು ನೆಲೆಸಬೇಕೆಂಬುದು ನಮ್ಮ ಉದ್ದೇಶವಾಗಿದ್ದಿತು. ಈ ಕಾರಣದಿಂದಾಗಿಯೇ ನಾನು ಅದನ್ನು ಸುಡುವುದಾಗಿ ಹೇಳಿದ್ದು.

**ಶ್ರೀ ಬಿ.ಕೆ.ಪಿ. ಸಿನ್ಹಾ (ಬಿಹಾರ):** ದೇವಾಲಯದ ಬದಲು ದೆವ್ವವನ್ನೇ ನಾಶಪಡಿಸಿ.

**ಡಾ. ಬಿ.ಆರ್. ಅಂಬೇಡ್ಕರ್:** ನೀವು ಹಾಗೆ ಮಾಡಲಾರಿರಿ. ನಮಗೆ ಅಷ್ಟು ಶಕ್ತಿಯಿಲ್ಲ. ನೀವು ಶತಪಥ ಬ್ರಾಹ್ಮಣವನ್ನು ಓದಿದರೆ ದೇವತೆಗಳು ಯಾವಾಗಲೂ ಅಸುರರಿಂದ ಸೋಲುವುದನ್ನು ಕಾಣುವಿರಿ. ಅಸುರರ ಬಳಿ ಅಮೃತವಿದೆ. ಹೋರಾಟದಲ್ಲಿ ಉಳಿಯಬೇಕಾದರೆ ದೇವತೆಗಳು ಅದನ್ನು ಕಸಿಯಲೇಬೇಕು. ಸರ್, ನನಗೆ ಅಡ್ಡಿಪಡಿಸಲಾಗುತ್ತಿದೆ......

**ಸಭಾಪತಿಗಳು:** ನಿಮ್ಮನ್ನು......

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಮಾತನಾಡಲು ಇಚ್ಛಿಸದ ಏನೇನೋ ವಿಷಯಗಳ ಬಗ್ಗೆ ಸೆಳೆಯಲಾಗುತ್ತಿದೆ.

ಅನುಚ್ಛೇದ ೩೧ಕ್ಕೆ ನಾವು ಜವಾಬ್ದಾರರಲ್ಲವೆಂದು ಹೇಳುತ್ತಿದ್ದೆ. ಆಗಲೂ ಪರಿಹಾರದ ವಿಷಯದಲ್ಲಿ ಅನುಚ್ಛೇದವನ್ನು ಎಷ್ಟು ಸಾಧ್ಯವೋ ಅಷ್ಟು ಹಿಗ್ಗುವ ಗುಣವಿರುವಂತೆ ಮಾಡಿದ್ದೇವೆ. ಸದನದ ಸದಸ್ಯರು ಸಹವರ್ತಿ ಪಟ್ಟಿಯ ನಮೂದು ೪೨ನ್ನು ಪರಿಶೀಲಿಸಿ ಭಾರತ ಸರ್ಕಾರದ ಅಧಿನಿಯಮದ ಪ್ರಕರಣ ೨೯೯ರೊಂದಿಗೆ ಹೋಲಿಸಿದಲ್ಲಿ ಅವರು ಕರಡು ರಚನಾ ಸಮಿತಿಯು ಮಾಡಿರುವ ಉಪಬಂಧಕ್ಕೆ ಎಷ್ಟು ಹಿಗ್ಗುವ ಗುಣ ಇದೆ ಎಂಬುದನ್ನು ಕಾಣಬಹುದು. ಪರಿಹಾರದ ಪ್ರಶ್ನೆಯನ್ನು ನಿರ್ವಹಿಸುವ ಭಾರತ ಸರ್ಕಾರದ ಅಧಿನಿಯಮದ ಪ್ರಕರಣ ೨೯೯ ಈ ಮುಂದಿನ ಅಂಶಗಳನ್ನು ವಿವರಿಸುತ್ತದೆ: ಪೂರ್ಣ ಪರಿಹಾರವಿರಬೇಕು ಎಂದರೆ ಭೂಸ್ವಾಧೀನ ಅಧಿನಿಯಮದ ಷರತ್ತುಗಳ ಪ್ರಕಾರ ಪರಿಹಾರವಿರಬೇಕು ಎಂಬುದು ಒಂದು. ಎರಡನೆಯದಾಗಿ ಸ್ವಾಧೀನಕ್ಕೆ ಮೊದಲು ಪರಿಹಾರವನ್ನು ಪಾವತಿಸಬೇಕು ಮತ್ತು ನಗದಾಗಿ ಪಾವತಿಸಬೇಕು. ಇದು ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಉಪಬಂಧ ಸಹವರ್ತಿ ಪಟ್ಟಿಯ ನಮೂದು ೪೨ ರಲ್ಲಿ ನಾವು ಮಾಡಿರುವ ಉಪಬಂಧವನ್ನು ನೋಡಿ, ಪರಿಹಾರ ನಿರ್ಧರಿಸುವ ಅಧಿಕಾರವನ್ನು ರಾಜ್ಯ ವಿಧಾನಮಂಡಲಗಳಿಗೆ ಅಂತೆಯೇ ಸಂಸತ್ತಿಗೆ ಎರಡಕ್ಕೂ ನೀಡಿರುವುದನ್ನು ಅರ್ಥಮಾಡಿಕೊಳ್ಳುವಿರೆಂದು ಆಶಿಸುತ್ತೇನೆ. ನಾವು ಹೀಗೇಕೆ ಮಾಡಿದೆವು ಎಂಬ ಕಾರಣ ಸರಳ. ಒಂದು ವೇಳೆ ಪರಿಹಾರವನ್ನು ಪಟ್ಟಿ I ಮತ್ತು ಪಟ್ಟಿ IIಕ್ಕೂ ಹಂಚಿದ್ದರೆ, ಕೇಂದ್ರ ತಾನು ಮಾಡುವ ಸ್ವಾಧೀನಗಳಿಗೆ ಪರಿಹಾರ ನಿಗದಿಪಡಿಸಲು ಮುಕ್ತವಾಗಿರುತ್ತಿತ್ತು ಮತ್ತು ಪ್ರಾಂತ್ಯಗಳು ಅಥವಾ ರಾಜ್ಯಗಳು ತಮಗೆ ಸೂಕ್ತವೆನಿಸುವಂಥ ಪರಿಹಾರವನ್ನು ನಿಗದಿಪಡಿಸಬಹುದಿತ್ತು; ಪರಿಣಾಮವಾಗಿ ದೇಶದಲ್ಲಿ ಅತ್ಯಂತ ಅರಾಜಕತೆ ತಲೆದೋರುತ್ತಿತ್ತು. ಆದ್ದರಿಂದ ಈ ವಿಷಯದಲ್ಲಿ ಒಂದು ಬಗೆಯ ಏಕರೂಪತೆ ಇರಬೇಕು ಎಂದು

ಆಲೋಚಿಸಿದೆವು. ಆದ್ದರಿಂದ ಪರಿಹಾರದ ನಿಯಮಗಳನ್ನು ರೂಪಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಿದಾಗ ಸಂಸತ್ತಿಗೂ ಅಧಿಕಾರ ನೀಡಿದೆವು. ಆಗ ಸಂಸತ್ತು ಇಡೀ ಭಾರತಕ್ಕೆ ಅನ್ವಯವಾಗುವಂಥ ಸಾಮಾನ್ಯ ಕಾನೂನನ್ನು ಮಾಡಬಹುದು ಮತ್ತು ನ್ಯಾಯಬದ್ಧವಲ್ಲದ ಯಾವುದೇ ಕಾನೂನನ್ನು ಅದು ರದ್ದುಪಡಿಸಬಹುದು. ಈ ಕಾರಣಕ್ಕಾಗಿಯೇ ನಾವು ಅದನ್ನು ಸಹವರ್ತಿಪಟ್ಟಿಯಲ್ಲಿರಿಸಿದೆವು. ನಾವು ಮಾಡಿದ ಉಪಬಂಧವಾದರೂ ಏನು? ಸರ್ಕಾರವು ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಲು ವಾಸ್ತವವಾಗಿ ಪರಿಹಾರವನ್ನು ಪಾವತಿಸುವುದು ಅವಶ್ಯವಿಲ್ಲವೆಂದು ನಾವು ಹೇಳಿದ್ದೇವೆ. ನಾವು 'ಪರಿಹಾರ' ನೀಡಬೇಕು ಎಂದು ಹೇಳಿದ್ದೇವೆಯೇ ಹೊರತು ಪಾವತಿಸಬೇಕು ಎಂದು ಹೇಳಿಲ್ಲ. ಹೀಗಾಗಿ ಕೇಂದ್ರ ಅಂತೆಯೇ ರಾಜ್ಯಗಳ ಸರ್ಕಾರಗಳು ನಿಜಕ್ಕೂ ಪರಿಹಾರವನ್ನು ಪಾವತಿಸದೇ ಸೊತ್ತನ್ನು ಸ್ವಾಧೀನ ಪಡಿಸಿಕೊಳ್ಳಬಹುದು.

ಭಾರತ ಸರ್ಕಾರದ ಅಧಿನಿಯಮದ ಪ್ರಕರಣ ೨೯೯ ಮತ್ತು ನಮೂದು ೪೨ರ ನಡುವೆ ನಾವು ಮಾಡಿರುವ ಎರಡನೆಯ ವ್ಯತ್ಯಾಸವೆಂದರೆ ಪರಿಹಾರ ಯಾವುದೇ ರೂಪದಲ್ಲಿರಬಹುದು; ಸಂಸತ್ತು ಅಥವಾ ರಾಜ್ಯ ವಿಧಾನ ಮಂಡಲಗಳು ಕಾನೂನು ಮೂಲಕ ಪರಿಹಾರವನ್ನು ಪೇಪರ್ ಬಾಂಡ್, ನಗದು ಪತ್ರ ಅಥವಾ ಅವರು ನೀಡಲು ಬಯಸುವ ಯಾವುದೇ ರೂಪದಲ್ಲಿ ಕೊಡಲು ಅಥವಾ ಅವರು ಬಯಸಿದರೆ ನಗದು ರೂಪದಲ್ಲಿಯೇ ನೀಡಲು ನಿರ್ಧರಿಸಬಹುದು. ಸಂಸತ್ತು ವಾಸ್ತವವಾಗಿ ಪರಿಹಾರವನ್ನು ನಿಗದಿಪಡಿಸದಿದ್ದರೂ ಕೇವಲ ಪರಿಹಾರ ನಿಯಮವನ್ನು ಗೊತ್ತುಪಡಿಸಬಹುದೆಂದು ನಾವು ಹೇಳಿದ್ದೇವೆ. ಆಗ ಪರಿಹಾರವನ್ನು ಕುರಿತು ಕೇವಲ ನಿಯಮ ಅಥವಾ ಮೂಲತತ್ತ್ವವನ್ನು ಗೊತ್ತುಪಡಿಸಿ, ಪರಿಹಾರ ಏನಿರಬೇಕೆಂದು ನಿರ್ದಿಷ್ಟವಾಗಿ ಹೇಳಿದ ಕಲಮನ್ನು ಒಳಗೊಳ್ಳದೆ ಕಾನೂನನ್ನು ಅನುಮೋದಿಸಿದರೂ ಸರ್ಕಾರ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಬಹುದು. ಸರ್, ಈ ಸದನದ ಸದಸ್ಯರನ್ನು ಆಸ್ತಿ ಸ್ವಾಧೀನಪಡಿಸಿಕೊಳ್ಳುವ ಕಾರ್ಯವಿಧಾನವು ನಮ್ಮ ಸಂವಿಧಾನದಲ್ಲಿರುವಷ್ಟು ಸರಳವಾಗಿ ಬೇರೆ ಯಾವುದಾದರೂ ಸಂವಿಧಾನದಲ್ಲಿದೆಯೇ ಎಂದು ಕೇಳಬಯಸುತ್ತೇನೆ. ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವತ್ತನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರಕ್ಕೆ ಇಷ್ಟೊಂದು ಅನುಕೂಲ ಕಲ್ಪಿಸುವ ಇತರ ಯಾವುದಾದರೂ ಸಂವಿಧಾನವಿರುವುದನ್ನು ನನಗೆ ಯಾರಾದರೂ ತಿಳಿಸುವಿರಾ? ಈ ಎಲ್ಲ ಅನುಕೂಲಗಳಿದ್ದಾಗ್ಯೂ ಸರ್ಕಾರವು ಪರಿಹಾರ ನೀಡಲಾಗದಂಥ ಪ್ರಕರಣಗಳಿಗೆ ಎಂದು ಪ್ರಸ್ತಾಪಿಸುವ ಅವಶ್ಯಕತೆ ಇದೆಯೆ? ಅವರು ಇಡೀ ಹೊರೆಯನ್ನು, ಎಲ್ಲ ಭಾರವನ್ನು ಸದ್ಯದ ಪೀಳಿಗೆಯ ಮೇಲೆ ಹೊರಿಸಬೇಕಿಲ್ಲ. ಅವರು ಹೊರಡಿಸುವ ಬಾಂಡ್‌ಗಳು ಬಿಡಿಸಿಕೊಳ್ಳತಕ್ಕವು ಎಂದು ಹೇಳಬೇಕೆಂದೇನೂ ಅವರನ್ನು ಕೇಳುತ್ತಿಲ್ಲ. ಅವರು ಅವುಗಳನ್ನು ಬಿಡಿಸಿಕೊಳ್ಳುವಂತೆ ಮಾಡಬೇಕಷ್ಟೆ. ಅವರು ಮಾಡಬೇಕಾದುದು ಇಷ್ಟೇ – ಪ್ರತಿಯೊಬ್ಬ ಸಾಲಿಗನು ಪಡೆದುಕೊಳ್ಳುವಂತೆ ಬಾಂಡ್ ಮೇಲೆ ಸ್ವಲ್ಪ ಬಡ್ಡಿ ನೀಡಬೇಕು. ಅತ್ಯಂತ ತರಾತುರಿಯ ಸಮಾಜವಾದಿಯೇ "ಹೌದು, ನಾವು ಪರಿಹಾರ ಪಾವತಿಸುವುದಿಲ್ಲ" ಎಂದೇಕೆ ಹೇಳಬೇಕೋ ನನಗೆ ತಿಳಿಯುತ್ತಿಲ್ಲ. ನನ್ನ ಅಭಿಪ್ರಾಯದ ಪ್ರಕಾರ ಅನುಸರಿಸಲು ಮೂರು ಪ್ರಕರಣಗಳು ಅಥವಾ ದಾರಿಗಳಿವೆ. ಮೊದಲ ದಾರಿ ಎಂದರೆ ಪೂರ್ಣ ಪರಿಹಾರ; ಎರಡನೆಯದು ಪರಿಹಾರವಿಲ್ಲ; ಮತ್ತು ಮೂರನೆಯದು ಕಾನೂನು ಮೂಲಕ ನಿರ್ಧರಿಸಲಾದ ಪರಿಹಾರ. ಭೂಸ್ವಾಧೀನ ನಿಯಮದ ಷರತ್ತುಗಳಂತೆ ಪೂರ್ಣ ಪರಿಹಾರವನ್ನು ಅಂಗೀಕರಿಸಲು ಸಾಧ್ಯವಿಲ್ಲ ಎನ್ನುವವರ ಮಾತನ್ನು ನಾನು ಒಪ್ಪುತ್ತೇನೆ. ಅದಕ್ಕೆ ನನ್ನ ಒಪ್ಪಿಗೆಯಿದೆ. ಪೂರ್ಣ ಪರಿಹಾರ ಎಂದರೆ ಈಗ ಭೂಸ್ವಾಧೀನ ಅಧಿನಿಯಮ ನಿಗದಿಪಡಿಸಿರುವ ನಿಯಮಗಳ ಮೇರೆಗೆ ನಿರ್ಧರಿಸುವ ಪರಿಹಾರ ಎಂದಾದರೆ, ನಾನು ಸರ್ಕಾರದ ಪರ ಇರಲು ಸಿದ್ಧ ಮತ್ತು ಇದೊಂದು ಅಸಾಧ್ಯ ಪ್ರಸ್ತಾಪವೆಂದು, ನಾವು ಅಂಗೀಕರಿಸುವ

ಅಗತ್ಯವಿಲ್ಲವೆಂದು ಹೇಳುತ್ತೇನೆ. ಈ ಹಂತದಲ್ಲಿ ನಾವು, ನಾವೊಬ್ಬರೇ ಸಮಾಜವಾದವನ್ನು ಜಾರಿಗೆ ತರುವವರಲ್ಲ ಎಂಬ ವಾಸ್ತವವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಸಮಾಜವಾದ ಎಂದರೇನು ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಅದು ಪ್ರಧಾನ ಮಂತ್ರಿಗಳ ಸಮಾಜವಾದ. ಅವರೇ ಹೇಳಿರುವಂತೆ ಅದನ್ನು ಅವರು ವ್ಯಾಖ್ಯಾನಿಸಲಾರರು. ಪ್ರಜಾ ಸೋಷಲಿಸ್ಟ್ ಪಕ್ಷದ ಸಮಾಜವಾದವೊಂದಿದೆ; ಅವರಿಗೂ ಅದೇನೆಂದು ಗೊತ್ತಿಲ್ಲ ಮತ್ತು ಕಮ್ಯುನಿಸ್ಟರಿಗೂ.......

**ಶ್ರೀ ಎಸ್.ಎನ್. ದ್ವಿವೇದಿ (ಒರಿಸ್ಸಾ):** ನಿಮಗೂ ಗೊತ್ತಿಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಸಮಾಜವಾದಿಯಲ್ಲ.

**ಶ್ರೀ ಎಸ್.ಎನ್. ದ್ವಿವೇದಿ:** ಅದೇನೆಂದು ತಿಳಿಯದೆಯೇ ನೀವು ಟೀಕಿಸಲು ಬಯಸಿದ್ದೀರಿ.

**ಮಾನ್ಯ ಸಭಾಪತಿಗಳು:** ಆರ್ಡರ್, ಆರ್ಡರ್. ನೀವು ಮುಂದುವರೆಸಿ.

**ಡಾ. ಬಿ.ಆರ್. ಅಂಬೇಡ್ಕರ್:** ಕಮ್ಯುನಿಸ್ಟರು ತಮ್ಮದೇ ಸಮಾಜವಾದವೆಂದು ಹೇಳುತ್ತಾರೆ. ಅವರು ತಾವೇ ಸಮಾಜವಾದಿಗಳೆಂದಾದರೆ ತಮ್ಮನ್ನು ತಾವು ಕಮ್ಯುನಿಸ್ಟರೆಂದು ಏಕೆ ಕರೆದುಕೊಳ್ಳುತ್ತಾರೆಂದು ತಿಳಿಸಬೇಕು. ಅನೇಕರಿಗೆ ''ಕಮ್ಯುನಿಸಂ'' ಎಂಬ ಪದಕ್ಕೆ ಅಂಟಿಕೊಂಡಿರುವ ಭಯಗಳು ಹೊರಟುಹೋಗುತ್ತಿದ್ದವು. ಹೆಸರಿನಲ್ಲಿ ಬದಲಾವಣೆ ಮಾಡಿದ್ದರೆ ಆಂಧ್ರದಲ್ಲಿ ಸುಲಭವಾಗಿ ಜಯಗಳಿಸುತ್ತಿದ್ದರು. ನನ್ನ ಸ್ನೇಹಿತರಾದ ಶ್ರೀ ಪಂತ್ ಅವರಿಗೆ ನಾನು ಹೇಳಬಯಸುವುದೇನೆಂದರೆ–ಅವರು ನನ್ನ ಮಾತು ಕೇಳುತ್ತಿದ್ದಾರೆಂದುಕೊಂಡಿದ್ದೇನೆ

**ಮಾನ್ಯ ಸಭಾಪತಿಗಳು:** ಅವರು ಅತ್ಯಂತ ಗಮನ ಕೊಟ್ಟು ಕೇಳುತ್ತಿದ್ದಾರೆ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಅವರಿಗೆ ಹೇಳಬೇಕೆಂದಿದ್ದು ಇದು–ಅದು ಸಾಕಷ್ಟು ಕುತೂಹಲಕಾರಿಯಾದದ್ದು ಹೌದು. ಬ್ರಿಟಿಷ್ ಲೇಬರ್ ಪಕ್ಷದ ಶಾಸನಕ್ರಮವನ್ನು ಅಧ್ಯಯನ ಮಾಡಿದವರಿಗೆ ಯುದ್ಧ ಮುಗಿದ ನಂತರದಲ್ಲಿ ಲೇಬರ್ ಪಕ್ಷವು ೧೯೪೫ರಲ್ಲಿ ಪ್ರಕಟವಾದ ಟ್ರೇಡ್ ಯೂನಿಯನ್‌ನ ಕಾಂಗ್ರೆಸ್‌ನ ವರದಿಗೆ ಅನುಗುಣವಾಗಿ ರೈಲ್ವೆಯು ಸೇರಿದಂತೆ ವಿವಿಧ ಕೈಗಾರಿಕೆಗಳು ಮತ್ತು ವಿವಿಧ ಸೇವೆಗಳನ್ನು ಬ್ಯಾಂಕ್ ಆಫ್ ಇಂಗ್ಲೆಂಡನ್ನು ಕೂಡ ರಾಷ್ಟ್ರೀಕರಣ ಮಾಡಿದ್ದನ್ನು ಕಾಣುವರು. ರಾಷ್ಟ್ರೀಕರಣದ ಮೂಲಕ ಬ್ಯಾಂಕ್ ಆಫ್ ಇಂಗ್ಲೆಂಡಿನ ಕಾರ್ಯವಿಧಾನದಲ್ಲಿ ಲೇಬರ್ ಪಕ್ಷ ಯಾವ ಬದಲಾವಣೆಯನ್ನು ಮಾಡಿತೋ ನನಗೆ ಅರ್ಥವಾಗಿಲ್ಲ. ನಾನು ಕರೆನ್ಸಿಯ ವಿದ್ಯಾರ್ಥಿ. ಬ್ಯಾಂಕ್ ಆಫ್ ಇಂಡಿಯಾ ಬಗ್ಗೆಯೂ ನನಗೆ ಸ್ವಲ್ಪ ಗೊತ್ತಿದೆ. ನನ್ನ ಸ್ನೇಹಿತರಾದ ಪಂತ್ ಅವರಿಗೆ ನಾನು ಹೇಳಬೇಕಾದದ್ದು ಇಷ್ಟೇ. ಲೇಬರ್ ಪಕ್ಷ ರಾಷ್ಟ್ರೀಕರಣಗೊಳಿಸಿದ ಪ್ರತಿಯೊಂದು ಪ್ರಕರಣದಲ್ಲೂ ಅವರು ಪೂರ್ಣವಾಗಿ ಪೂರ್ಣ ಪರಿಹಾರವನ್ನು ಪಾವತಿಸಿದ್ದಾರೆ. ಅಂದರೆ ಅವರು ಕೊಂಡ ಷೇರುಗಳಿಗೆ ಮಾರುಕಟ್ಟೆಯ ಬೆಲೆಯನ್ನು ಪಾವತಿಸಿದ್ದಾರೆ. ಪರಿಹಾರ ಪಾವತಿ ವಿಷಯವು ರಾಷ್ಟ್ರೀಕರಣಕ್ಕೆ ಅಡ್ಡಿ ಉಂಟುಮಾಡದು. ನಾನು ಈಗಾಗಲೇ ಹೇಳಿದಂತೆ ಈ ಪ್ರಸ್ತಾವಕ್ಕೆ ನಾನು ಸಿದ್ಧನಾಗಿದ್ದೇನೆ. ಏಕೆಂದರೆ ಷೇರುಗಳ ಮೌಲ್ಯಗಳಿಗೆ ಹೂಡುವ ಷೇರು ಬಂಡವಾಳ ಮಾತ್ರ ಕಾರಣವಲ್ಲ. ಅದಕ್ಕೆ ವೈವಿಧ್ಯಮಯ ಸಾಮಾಜಿಕ ಪರಿಸ್ಥಿತಿಗಳೂ ಕಾರಣವಾಗಿವೆ. ಸಾಮಾಜಿಕ ಕಾರಣಗಳು ಷೇರುಗಳ ಮೌಲ್ಯದಲ್ಲಿ ಹೆಚ್ಚಳವನ್ನು ತಂದಿವೆ. ಓರ್ವ ಖಾಸಗಿ ಷೇರುದಾರನು ತನ್ನ ಷೇರುಗಳ ಮೌಲ್ಯಗಳ ಒಂದು ಭಾಗವಾಗಿರುವ ಸಾಮಾಜಿಕ ಮೌಲ್ಯಗಳನ್ನು ತಾನೇ ವಿನಿಯೋಗಿಸಿಕೊಳ್ಳುವ ಹಕ್ಕನ್ನು ಹೊಂದಿರಲು ಯಾವುದೇ ಕಾರಣವಿಲ್ಲ. ಪರಿಹಾರವಿಲ್ಲ ಎಂಬ ತತ್ತ್ವವನ್ನು ಹೇಗೆ ಬೆಂಬಲಿಸಬೇಕು ಅದು ನನಗೆ ತಿಳಿಯುತ್ತಿಲ್ಲ. ರಷ್ಯಾದಲ್ಲಿ ಪರಿಹಾರ ಕೊಡಲಿಲ್ಲ ಎಂಬುದು ನಿಜ. ಆದರೆ ರಷ್ಯಾ ಸರ್ಕಾರವು

ಜನತೆಗೆ ಉದ್ಯೋಗ ನೀಡಲು, ಊಟ, ಬಟ್ಟೆ, ವಸತಿ ನೀಡಲು, ......ತೊಳೆಯಲು ಮತ್ತು ಎಲ್ಲಾ ಮಾನವ ಅಗತ್ಯಗಳನ್ನು ಪೂರೈಸುವ ಜವಾಬ್ದಾರಿ ಹೊತ್ತಿದೆ ಎಂಬುದನ್ನು ಮರೆಯುವಂತಿಲ್ಲ. ಒಂದು ವೇಳೆ ರಾಜ್ಯವು ತಾನು ಪರಿಹಾರ ನೀಡದೆ ಜನತೆಯನ್ನು ಸಾಕುವ ಜವಾಬ್ದಾರಿಯನ್ನು ಹೊತ್ತುಕೊಂಡರೆ, ಅಂಥ ಸಂದರ್ಭಗಳಲ್ಲಿ ಪರಿಹಾರ ಪಾವತಿ ಮಾಡಲಾಗುವುದಿಲ್ಲ ಎಂಬ ತತ್ತ್ವವು ಮಾನ್ಯವಾಗುವುದು. ನಿಮಗೆ ಪರಿಹಾರ ಏಕೆ ಬೇಕು? ಪರಿಹಾರ ಅವಶ್ಯಕ ಏಕೆಂದರೆ ರಾಜ್ಯವು ಒಬ್ಬ ವ್ಯಕ್ತಿಯ ಜೀವನಾಧಾರವಾಗಿರುವ ಸಾಧನಗಳನ್ನು ಕಿತ್ತುಕೊಳ್ಳುತ್ತದೆ. ಒಬ್ಬ ವ್ಯಕ್ತಿಯ ಗಳಿಕೆಯ ಸಾಧನಗಳನ್ನು ಕಿತ್ತುಕೊಂಡು ಅದೇ ಸಮಯದಲ್ಲಿ ಹೋಗು ನಿನ್ನ ಜೀವನ ನೀನು ನೋಡಿಕೋ ಎನ್ನಲಾರಿರಿ. ಅಂಥ ಸಿದ್ಧಾಂತವು ನಿನ್ನ ದೃಷ್ಟಿಯಲ್ಲಿ ಅತ್ಯಂತ ಬರ್ಬರವಾದದ್ದು ಆದ್ದರಿಂದ ಅದನ್ನು ಒಪ್ಪಲಾಗದು. ಆದರೆ ಪರಿಹಾರವೆಂದರೆ ಸಂಸತ್ತು ನಿರ್ಧರಿಸಿದ ಪರಿಹಾರ ಎಂಬ ತತ್ತ್ವವನ್ನು ನಾವೇಕೆ ಒಪ್ಪಿಕೊಳ್ಳಬಾರದು? ಏಕೆ ಬೇಡ? ಅದರ ಅರ್ಥ ಸಂಸತ್ತು ಭೂಸ್ವಾಧೀನ ಅಧಿನಿಯಮದ ಷರತ್ತುಗಳ ಪ್ರಕಾರ ಕಾನೂನು ಮಾಡಬೇಕು ಎಂದೇನೂ ಅಲ್ಲ. ಭೂಸ್ವಾಧೀನ ಅಧಿನಿಯಮವನ್ನು ನೀವು ರದ್ದು ಮಾಡಬಹುದು. ನಿಮಗೆ ಹಾಗೆ ಮಾಡಲು ಅಧಿಕಾರವಿದೆ. ಏಕೆಂದರೆ ಅದು ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳ ವ್ಯಾಪ್ತಿಯಲ್ಲಿ ಬರುತ್ತದೆ. ಅದು ನೂತನ ಭೂಸ್ವಾಧೀನ ಅಧಿನಿಯಮವನ್ನು ಹೊಸ ಮೂಲ ತತ್ತ್ವಗಳೊಂದಿಗೆ ಜಾರಿಗೊಳಿಸಬಹುದು. ಹಾಗೆ ಮಾಡುವುದರಲ್ಲಿ ಏನೂ ಕೆಡುಕಿಲ್ಲ ಮತ್ತು ತೊಂದರೆಯೂ ಇಲ್ಲ. ನೀವು ಹಾಗೆ ಮಾಡಿದರೆ ದೋಷಾರೋಪಣೆ ಮಾಡಲು ಯಾರಿಗೂ ಅವಕಾಶವಿರುವುದಿಲ್ಲ. ಏಕೆಂದರೆ ಕಾನೂನು ಮೂಲಕ ಪರಿಹಾರ ನಿರ್ಧರಿಸುವಂಥ ಕ್ರಮವನ್ನು ನೀವು ಜಾರಿಗೆ ತಂದರೆ ಸದನದ ಎಲ್ಲಾ ವರ್ಗಗಳಿಗೂ ದೇಶ ಬಯಸುವುದನ್ನು ಹೇಳುವ ಹಕ್ಕು ದೊರೆಯುತ್ತದೆ. ಅದು ಸಾಮಾನ್ಯ ಒಪ್ಪಂದದ ಫಲಿತಾಂಶವಾಗಿರುತ್ತದೆ. ಒಂದು ಸಂಸತ್ತಿಗೆ ಕೆಲವೊಂದು ಮೂಲತತ್ತ್ವಗಳು ಒಳ್ಳೆಯದೆಂದು ಕಂಡುಬಂದರೆ ಮತ್ತೊಂದು ಸಂಸತ್ತಿಗೆ ಅದೇ ಮೂಲತತ್ತ್ವಗಳು ಕೆಟ್ಟದೆಂದು ತೋರಬಹುದು. ಸಂಸತ್ತು ಬದಲಾಯಿಸಬಹುದು ಮತ್ತು ಸಂಸತ್ತು ಬದಲಾಯಿಸಬಲ್ಲದು. ಆದ್ದರಿಂದ ಸರ್ಕಾರಕ್ಕೆ ನನ್ನ ಸಲಹೆ ಎಂದರೆ ಇಂಥ ಸಪ್ಪೆಯಾದ ವಿಧೇಯಕವನ್ನು ಜಾರಿಗೆ ತರುವುದರ ಬದಲು ನಾನು ಮುಂದೆ ತೋರಿಸಿಕೊಡುವಂತೆ ಇದೊಂದು ನಿರರ್ಥಕ ವಸ್ತುವಾಗಿದ್ದು ಅದರ ಶವವನ್ನು ಗೋಳಾಡದೆ, ಕೊಂಡಾಡದೆ ಸಾಗಿಸಬೇಕು; ಅದಕ್ಕಾಗಿ ಯಾರೂ ಅಳುವ ಅಗತ್ಯವಿಲ್ಲ. ಅದಕ್ಕಾಗಿ ನಾನು ಅಳುವುದಿಲ್ಲ. ಏಕೆಂದರೆ ಅದು ಯಾವ ಒಳಿತನ್ನೂ ಮಾಡುವುದಿಲ್ಲ; ಕೆಡುಕನ್ನೂ ಮಾಡುವುದಿಲ್ಲ. ಅದನ್ನು ನಾನು ತೋರಿಸಿಕೊಡುತ್ತೇನೆ. ಆದ್ದರಿಂದ ಸರ್ಕಾರಕ್ಕೆ ನನ್ನ ಸಲಹೆ ಎಂದರೆ ಕಾಲಕಾಲಕ್ಕೆ ಈ ಮೂಲಭೂತ ಹಕ್ಕುಗಳನ್ನು ಅತಿಕ್ರಮಿಸುವುದರ ಬದಲು ಒಮ್ಮೆಗೆ ಸಂಸತ್ತಿಗೆ ಪರಿಹಾರ ನಿರ್ಧರಿಸುವ ಎಲ್ಲ ಅಧಿಕಾರವನ್ನು ನೀಡುವುದು ಒಳ್ಳೆಯದು. ಸಂವಿಧಾನವನ್ನು ಈ ರೀತಿ ವಿರೂಪಗೊಳಿಸುವುದು ಕೆಟ್ಟದು. ಈ ಹಿಂದೆಯೂ ನಾನು ಇದೇ ಮಾತುಗಳನ್ನು ಹೇಳಿದ್ದೆ. ಆದರೆ ಸರ್ಕಾರ ನನ್ನ ಮಾತಿಗೆ ಯಾವುದೇ ಬೆಲೆ ಕೊಡಲಿಲ್ಲ. ಈಗ ಮತ್ತೊಮ್ಮೆ ಅದೇ ಎಚ್ಚರಿಕೆಯನ್ನು ಪುನರುಚ್ಚರಿಸಲು ಬಯಸುತ್ತೇನೆ. ಅಲ್ಲದೆ ಸಂವಿಧಾನವನ್ನು ಅಷ್ಟು ಸುಲಭವಾಗಿ ತಿದ್ದುಪಡಿ ಮಾಡಬಾರದು ಮತ್ತು ವಿರೂಪಗೊಳಿಸಬಾರದೆಂಬುದಕ್ಕೂ ಕೆಲವು ಕಾರಣಗಳನ್ನು ನಾನು ನೀಡಬಯಸುತ್ತೇನೆ. ನ್ಯಾಯಾಲಯಗಳು ಮಾಡುವ ಕಾನೂನು ವ್ಯಾಖ್ಯಾನದ ಪರಿಚಯವಿರುವ ಎಲ್ಲರೂ–ಶಾಸನಗಳನ್ನು ಯಾವ ರೀತಿ ವ್ಯಾಖ್ಯಾನಿಸಬೇಕು ಎಂಬ ಬಗ್ಗೆ ಸುಸ್ಥಾಪಿತವಾದ ನಿಯಮಗಳಿವೆ– *stare decisis* ಎಂದು ಕರೆಯಲಾಗುವ ಕಾನೂನು ವ್ಯಾಖ್ಯಾನದ ಪ್ರಸಿದ್ಧ ನಿಯಮವೊಂದಿದ್ದು, ಅದರ ಅರ್ಥ – ನ್ಯಾಯಾಲಯಗಳು ಅನೇಕ ವರ್ಷಗಳ ಕಾಲ ಏಕರೂಪದಲ್ಲಿ ವ್ಯಾಖ್ಯಾನವನ್ನು ನೀಡಿದಾಗ,

ಮತ್ತು ಅನೇಕ ವರ್ಷಗಳ ನಂತರ ಒಬ್ಬಾನೊಬ್ಬ ವಕೀಲನು ಎದ್ದು ನಿಂತು ಅಸ್ತಿತ್ವದಲ್ಲಿರುವ ವ್ಯಾಖ್ಯಾನವು ತಪ್ಪೆಂದು ಮತ್ತು ಅದನ್ನು ಬದಲಾಯಿಸಬೇಕೆಂದು ಮನವರಿಕೆ ಮಾಡಿಕೊಟ್ಟರೂ, ಮತ್ತು ವ್ಯಾಖ್ಯಾನವು ತಪ್ಪೆಂದು ಅವರಿಗೆ ಮನವರಿಕೆಯಾದರೂ ನ್ಯಾಯಾಲಯಗಳು ಸಾಧ್ಯವಿಲ್ಲವೆಂದೇ ಹೇಳುತ್ತವೆ–ಎಂಬುದನ್ನು ನೆನಪು ಮಾಡಿಕೊಳ್ಳುವರು. ನ್ಯಾಯಾಲಯಗಳು ಈ *stare decisis* ನಿಯಮವನ್ನು ಏಕೆ ಅಳವಡಿಸಿಕೊಳ್ಳುತ್ತದೆ ಎಂಬುದು ಮಹತ್ತ್ವದ್ದು. ನ್ಯಾಯಾಲಯ ಹೇಳುತ್ತದೆ;

> "ನಾವು ನೀಡಿರುವ ವ್ಯಾಖ್ಯಾನವು ಸರಿಯೇ ತಪ್ಪೋ ಎಂಬುದು ಮುಖ್ಯವಲ್ಲ. ಏಕೆಂದರೆ ಅನೇಕ ಜನ ನಮ್ಮ ಈ ವ್ಯಾಖ್ಯಾನವನ್ನು ಸರಿಯಾದ ಕಾನೂನು ಎಂದು ಪರಿಗಣಿಸಿದ್ದಾರೆ, ಅದರ ಪ್ರಕಾರ ಹೊಣೆಗಾರಿಕೆಗಳನ್ನು ನಿರ್ವಹಿಸಿದ್ದಾರೆ, ಹಕ್ಕುಗಳನ್ನು ಪಡೆದುಕೊಂಡಿದ್ದಾರೆ. ಈ ಎಲ್ಲ ಹೊಣೆಗಾರಿಕೆಗಳು ಮತ್ತು ಹಕ್ಕುಗಳು ಕಾನೂನಿನ ಅಪಾರ್ಥ ಗ್ರಹಿಕೆಯ ಮೇಲೆ ಸ್ಥಾಪಿತವಾಗಿವೆ ಎಂದು ನಾವು ಈಗ ಹೇಳಿದರೆ ಅದು ಸಮಾಜವನ್ನು ಇಡಿಯಾಗಿ ಅಸ್ತವ್ಯಸ್ತಗೊಳಿಸುತ್ತದೆ. ಆದ್ದರಿಂದ ತಪ್ಪೇ ಮುಂದುವರೆಯಲಿ."

ಇದು ನ್ಯಾಯಾಲಯಗಳ ದೃಷ್ಟಿಕೋನ. ನನ್ನ ಅಭಿಪ್ರಾಯದಂತೆ ಸಂವಿಧಾನವನ್ನು ಏಕೆ ನಿರಂತರವಾಗಿ ತಿದ್ದುಪಡಿ ಮಾಡಬಾರದು ಎಂಬುದಕ್ಕೆ ಇದೇ ಕಾರಣ ಸಲ್ಲುತ್ತದೆ. ಸಂವಿಧಾನವು ಕೆಲವೊಂದು ನಿಯಮಗಳನ್ನು ಕೆಲವೊಂದು ಹೊಣೆಗಾರಿಕೆಗಳನ್ನು ಒಳಗೊಂಡಿದೆ ಎಂಬುದು ಜನತೆಗೆ ಗೊತ್ತು. ಅವುಗಳಿಗೆ ಅನುಗುಣವಾಗಿ ಅವರು ತಮ್ಮ ಕರಾರುಗಳನ್ನು ಮಾಡಿಕೊಳ್ಳುತ್ತಾರೆ. ಭವಿಷ್ಯದ ಯೋಜನೆಗಳನ್ನು ರೂಪಿಸಿಕೊಳ್ಳುತ್ತಾರೆ. ಆದ್ದರಿಂದ ಪ್ರತಿವರ್ಷವು ಈ ಮೌಲ್ಯಗಳನ್ನು ಭಂಗಮಾಡುವುದು ಸರಿಯಲ್ಲ. ಈ ಕಾರಣದಿಂದಾಗಿಯೇ ನಾನು ಹೇಳುವುದು ಸಂವಿಧಾನವನ್ನು ಅಷ್ಟು ಲಘುವಾಗಿ ಮತ್ತು ಹಾಗೆ ಪದೇ ಪದೇ ತಿದ್ದುಪಡಿ ಮಾಡಬಾರದೆಂದು. ಸರ್ಕಾರಕ್ಕೆ ಈ ಮಾತುಗಳು ಕೇಳುತ್ತಿವೆಯೋ ಇಲ್ಲವೋ ತಿಳಿಯದು; ಬಹುಶಃ ಕೇಳಿಸುತ್ತಿಲ್ಲ.

**ಶ್ರೀ ತೇಜಮುಲ್ ಹುಸೇನ್ (ಬಿಹಾರ್):** ಅವರೇಕೆ ಕೇಳಬೇಕು.

**ಡಾ. ಬಿ.ಆರ್. ಅಂಬೇಡ್ಕರ್:** ಸರ್, ಅದೊಂದು ಹವ್ಯಾಸ, ಒಮ್ಮೆ ಹಸು ಬೇರೊಬ್ಬರ ಹೊಲಕ್ಕೆ ಹೋಗುವುದನ್ನು ಹವ್ಯಾಸಿ ಮಾಡಿಕೊಂಡರೆ, ಅದನ್ನು ನೈತಿಕತೆಯಿಂದ ಪರಿವರ್ತಿಸಲಾಗದು. ಅದೊಂದು ಹವ್ಯಾಸ.

**ಮಾನ್ಯ ಸಭಾಪತಿಗಳು:** ಮುಂದುವರೆಯಿರಿ.

**ಡಾ. ಬಿ.ಆರ್. ಅಂಬೇಡ್ಕರ್:** ಬೇರೆ ದೇಶಗಳಲ್ಲಿ ಸರ್ಕಾರಕ್ಕೆ ಇಷ್ಟವಾಗದ ರೀತಿಯಲ್ಲಿ ಸಂವಿಧಾನದ ಕಲಮನ್ನು ವ್ಯಾಖ್ಯಾನಿಸಿದಾಗ, ಸರ್ಕಾರ ಒಪ್ಪಿಕೊಂಡು ನ್ಯಾಯಾಲಯದ ತೀರ್ಮಾನವನ್ನು ಏರುಪೇರು ಮಾಡಲು ಬಯಸುವುದಿಲ್ಲ, ಇಲ್ಲಿ ನಮ್ಮ ದೇಶದಲ್ಲಿ, ನಾವು ಭಿನ್ನವಾದ ಮನೋಧರ್ಮವನ್ನು ಬೆಳೆಸಿಕೊಂಡಿದ್ದೇನೆ. ನಮ್ಮ ಮನೋಧರ್ಮವೆಂದರೆ, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಒಂದು ವೇಳೆ ನಮ್ಮ ಇಷ್ಟಕ್ಕೆ ಅನುಗುಣವಾಗಿ ತೀರ್ಪು ನೀಡದಿದ್ದರೆ ಅದನ್ನು ಬಿಸಾಡುತ್ತೇವೆ. ನಮ್ಮ ಸರ್ವೋಚ್ಚ ನ್ಯಾಯಾಲಯದ ವರ್ತನೆ ಬಗ್ಗೆ ನನಗಂತೂ ಸಂತಸವಿದೆ. ಅದು ಅಸ್ತಿತ್ವದಲ್ಲಿರುವ ಅಲ್ಪ ಕಾಲದಲ್ಲಿಯೇ ಸರ್ವೋಚ್ಚ ನ್ಯಾಯಾಲಯದ ಕೆಲವು ವಿಭಿನ್ನ ಆಯಾಮಗಳನ್ನು ನೋಡಿರುತ್ತೇನೆ. ಕಳೆದ ಎರಡು ಮೂರು ವರ್ಷಗಳಿಂದ ಅನಾರೋಗ್ಯದ ನಿಮಿತ್ತ ನಾನು ಸವೋಚ್ಚ ನ್ಯಾಯಾಲಯಕ್ಕೆ ಹಾಜರಾಗುತ್ತಿಲ್ಲ; ಆದರೆ ಅಲ್ಲಿ ನಡೆಯುತ್ತಿರುವುದರ

ಬಗ್ಗೆ ನನಗೆ ತಿಳುವಳಿಕೆಯಿದೆ. ಸರ್ವೋಚ್ಚ ನ್ಯಾಯಾಲಯವು ತನ್ನ ಅಧಿಕಾರದ ಮೊದಲ ಉತ್ಸಾಹದಲ್ಲಿ ಭಾರತದ ದಂಡ ಸಂಹಿತೆಯ ನಿರ್ದಿಷ್ಟ ಪ್ರಕರಣವು ಸಂಸತ್ತಿನ ಅಧಿಕಾರಕ್ಕೆ ಮೀರಿದ್ದೆಂದು ಘೋಷಿಸಿತು, ಘೋಷಿಸುವ ಧೈರ್ಯವನ್ನು ತೋರಿತು. ನಮ್ಮ ಸರ್ಕಾರವು ಕೂಡಲೇ ಪ್ರತಿಕ್ರಿಯಿಸಿ ಸರ್ವೋಚ್ಚ ನ್ಯಾಯಾಲಯದ ವ್ಯಾಖ್ಯಾನವು ತಪ್ಪೆಂದು ಘೋಷಿಸಲು ತಿದ್ದುಪಡಿಯನ್ನು ಜಾರಿಗೊಳಿಸಿತು.

*(ಗಲಾಟೆ)*

**ಮಾನ್ಯ ಸಭಾಪತಿಗಳು:** ಸರ್ವೋಚ್ಚ ನ್ಯಾಯಾಲಯದ ಬಗ್ಗೆ ನಾವು ಮಾತನಾಡುವುದು ಬೇಡ.

**ಡಾ. ಬಿ.ಆರ್. ಅಂಬೇಡ್ಕರ್:** ಸರ್ಕಾರವು ತರಲು ಉದ್ದೇಶಿಸಿರುವ ನಿರಂತರ ತಿದ್ದುಪಡಿಗಳೇನೇ ಇರಲಿ, ಸರ್ಕಾರವು ಏನೇ ಹೇಳಲಿ, ಸರ್ವೋಚ್ಚ ನ್ಯಾಯಾಲಯವು ನಾನು ಸ್ವತಂತ್ರ ತೀರ್ಪನ್ನು ಮುಂದುವರೆಸುತ್ತದೆಂದು ಆಶಿಸುತ್ತೇನೆ. ಸರ್ವೋಚ್ಚ ನ್ಯಾಯಾಲಯವು ಸಂವಿಧಾನಕ್ಕೆ ಸುಸಂಗತವಲ್ಲದ ಯಾವುದೇ ಒಂದು ತೀರ್ಪನ್ನು ನೀಡಿರುವುದಾಗಿ ಯಾರೇ ಸ್ವತಂತ್ರ ವ್ಯಕ್ತಿ ಹೇಳುವುದನ್ನು ನಾನು ಕಾಣೆ.

ಸರ್, ಈಗ ನಾನು ವಿಧೇಯಕದ ವಿವಿಧ ಕಲಮುಗಳ ಬಗ್ಗೆ ಮಾತನಾಡುತ್ತೇನೆ. ಮೊದಲನೆಯದಾಗಿ ಕಲಮು ೨. ವಿಧೇಯಕದ ಕಲಮು ೨ ಮೂಲ ಅನುಚ್ಛೇದ ೩೧ ಅನ್ನು ಕಲಮು (೨) ಮತ್ತು ಕಲಮು (೨a) ಎಂದು ಎರಡು ಭಾಗಗಳಾಗಿ ವಿಭಜಿಸುತ್ತದೆ. ಕಲಮು (೨) ರ ಬಗ್ಗೆ ಹೇಳುವುದೇನೂ ಇಲ್ಲ. ಇದು ಪ್ರಾಯಶಃ ಮೂಲ ಕಲಮು (೨) ರಲ್ಲಿನ ಪದಗಳು ಹಾಗೂ ಮಾತುಗಳ ಮಿತ ಬಳಕೆಯ ಕೇವಲ ಪುನರಾವರ್ತನೆಯಾಗಿರುತ್ತದೆ. ಆದ್ದರಿಂದ ಈ ಬಗ್ಗೆ ನಾನು ಹೇಳುವುದೇನು ಇಲ್ಲ. ಆದರೆ ಕಲಮು (೨a) ಹೊಸದಾಗಿದ್ದು, ಅದನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗಿದೆ. ಮೊದಲಿಗೆ ಈ ಕಲಮಿನ ಅರ್ಥವೇನೆಂಬುದು ಗೊತ್ತಾಗುತ್ತಿಲ್ಲ. ಅದನ್ನು ಪ್ರಧಾನಿಗಳು ವಿವರಿಸಲಿಲ್ಲ; ನನ್ನ ಸ್ನೇಹಿತರಾದ ಮಾನ್ಯ ಗೃಹ ಮಂತ್ರಿಗಳು ವಿವರಣೆ ನೀಡಲಿಲ್ಲ. ಇದು ಖಚಿತವಾಗಿ ಏನನ್ನು ಹೇಳಲು ಉದ್ದೇಶಿಸಿದೆ? ಇದೊಂದು ನಿಗೂಢ ಕಲಮು; ಅದರ ಸುತ್ತಲೂ ನಿಗೂಢತೆ ಆವರಿಸಿದೆ. ಈಗ ನಾನು ಕಲಮು (೨a) ಅನ್ನು ವಿಶ್ಲೇಷಿಸುತ್ತೇನೆ. ಅದೇನು ಹೇಳುತ್ತದೆ? ತಿದ್ದುಪಡಿ ವಿಧೇಯಕದಲ್ಲಿ ಸಾಕಾರಗೊಂಡಿರುವ ಈ ಕಲಮಿನಲ್ಲಿ ಉಪಯೋಗಿಸಿರುವ ಭಾಷೆಗಿಂತ ವಿಭಿನ್ನವಾದ ಸರಳ ಭಾಷೆಯಲ್ಲಿ ಹೇಳುವುದಾದರೆ ಅದು ಹೇಳುವುದು ಇಷ್ಟು; ಸರ್ಕಾರವು ಯಾವುದಾದರೂ ಸ್ವತ್ತಿನ ಸ್ವಾಮ್ಯವನ್ನು ಖರೀದಿಸಿದರೆ, ಅದು ಸ್ವಾಧೀನವೆಂದು ಪರಿಗಣಿತವಾಗಿ, ಸರ್ಕಾರವು ಅನುಚ್ಛೇದ ೩೧ರ ಪ್ರಕಾರ ಪೂರ್ಣ ಪರಿಹಾರವನ್ನು ಪಾವತಿ ಮಾಡುತ್ತದೆ. ಸರ್ಕಾರವು ಸ್ವಾಮ್ಯವನ್ನು ಖರೀದಿಸಿದರೆ ಎಂಬ ಅಂಶ ಮುಖ್ಯ. ಅಂದರೆ ಸರ್ಕಾರವು ಒಡೆತನವನ್ನು ಖರೀದಿಸಿದರೆ, ಅದು ಸ್ವಾಧೀನತೆಯನ್ನು ಪಡೆದ ಹಾಗೆಯೇ ಆಗುವುದರಿಂದ, ಸರ್ಕಾರವು ಪರಿಹಾರ ಪಾವತಿಸಲು ಬದ್ಧವಾಗುತ್ತದೆ. ಎರಡನೆಯದಾಗಿ ಸರ್ಕಾರವು ಸ್ವತ್ತಿನ ಸ್ವಾಧೀನತೆಯನ್ನು ಪಡೆದುಕೊಂಡರೆ, ಅದರರ್ಥ ಸ್ವತ್ತಿನ ಸ್ವಾಮ್ಯವೇ ಸ್ವಾಧೀನತೆ ಎಂದಾಗುತ್ತದೆ. ಆಗ ಸರ್ಕಾರವು ಅನುಚ್ಛೇದ ೩೧ರ ಷರತ್ತುಗಳ ಪ್ರಕಾರ ಪರಿಹಾರ ನೀಡಲು ಬದ್ಧವಾಗಿರುತ್ತದೆ.

**ಮಧ್ಯಾಹ್ನ ೧೨ ಗಂಟೆ**

ವಿಧೇಯಕದಲ್ಲಿನ ಕಲಮು ಹೇಳುವುದು ಇದು. ಸ್ವಾಧೀನತೆಗೆ ಸಮವಲ್ಲದುದು ಯಾವುದು? ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳಲು ಸರ್ಕಾರ ಮಾಡುವುದಕ್ಕೆ ಉಳಿದಿರುವುದಾದರೂ ಮತ್ತು ಮೊದಲು ಬಯಸುವುದಾದರೂ ಏನನ್ನು? ಅದು ಒಡೆತನವನ್ನು ಪಡೆದುಕೊಂಡರೆ ಪರಿಹಾರವನ್ನು ನೀಡಬೇಕು; ಸ್ವಾಮ್ಯತೆಯನ್ನು ಪಡೆದುಕೊಂಡರೂ ಪರಿಹಾರ ನೀಡಬೇಕು. ಏಕೆಂದರೆ ಅದು ಸ್ವಾಧೀನತೆಗೆ

ಸಮವಾಗಿರುತ್ತದೆ.

**ಶ್ರೀ ತಾಜಮುಲ್ ಹುಸೇನ್:** ಶೋಲಾಪುರ ಪ್ರಕರಣವೇನಾಯ್ತು? ಅದು ಕೇವಲ ಪರಿಸ್ಥಿತಿಯ ಸುಧಾರಣೆಗಾಗಿ ಕೈಗೊಂಡ ತಾತ್ಕಾಲಿಕ ಸ್ವಾಧೀನತೆ.

**ಡಾ. ಬಿ.ಆರ್. ಅಂಬೇಡ್ಕರ್:** ಆ ಪ್ರಕರಣವೂ ಇದೆ. ಅದನ್ನು ಮುಂದೆ ಹೇಳುವೆ.

ಒಡೆತನದ ಸ್ವಾಧೀನತೆ ಮತ್ತು ಅನುಭೋಗದ ಸ್ವಾಧೀನತೆ ಈ ಎರಡರಿಂದ ಹೊರಬರುವ ಒಂದು ವಿಷಯವೆಂದರೆ ಲೈಸನ್ಸಿನ ರದ್ಧತಿ. ಏಕೆಂದರೆ ನೀವು ಲೈಸನ್ಸ್ ರದ್ದು ಮಾಡಿದಾಗ ನೀವು ಒಡೆತನವನ್ನು ಪಡೆಯಲಾರಿರಿ. ಹಾಗೂ ಸ್ವಾಧೀನ ಪಡಿಸಿಕೊಳ್ಳಲಾರಿರಿ. ಆದ್ದರಿಂದ ಲೈಸನ್ಸಿನ ರದ್ಧತಿಯಿಂದಾಗಿ ನಿಮಗೆ ಪರಿಹಾರ ಪಾವತಿ ಮಾಡಲು ಬರುವುದಿಲ್ಲ. ಈ ಕಲಮಿನ ಅರ್ಥ ಇದು. ಮುಂದಿನ ಪ್ರಕರಣಗಳಲ್ಲಿ ಪರಿಹಾರ ನೀಡಲಾಗುವುದಿಲ್ಲ ಎಂದು ಧನಾತ್ಮಕ ಪದಗಳಲ್ಲಿ ಈ ವಿಷಯವನ್ನು ವಿವರಿಸಬಹುದಿತ್ತು; ಆದರೆ ಬೇರೊಂದು ರೀತಿಯಲ್ಲಿ ಇದನ್ನು ವಿವರಿಸಿದ್ದು ಈ ಕಲಮಿನ ನಿಜವಾದ ಅರ್ಥವನ್ನು ಓದುಗನ ದೃಷ್ಟಿಯಿಂದ ಬಹುಮಟ್ಟಿಗೆ ಮುಚ್ಚಿಡಲಾಗಿದೆ. ನನ್ನ ವ್ಯಾಖ್ಯಾನ ಸರಿಯಿದ್ದರೆ ಈ ಕಲಮಿನ ಉದ್ದೇಶ ಸರ್ಕಾರ ಎಲ್ಲಿ ಲೈಸನ್ಸ್ ರದ್ದುಮಾಡುವುದೋ ಅಲ್ಲಿ ಪರಿಹಾರ ಪಾವತಿಸುವ ಹೊಣೆಗಾರಿಕೆಯಿಂದ ವಿನಾಯಿತಿ ಪಡೆಯುವುದೇ ಆಗಿದೆ. ಪರಿಹಾರ ಪಾವತಿ ಮಾಡದಿರುವುದಕ್ಕೆ ಇದು ಸಮರ್ಥನೀಯ ಆಧಾರವೇ? ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಪಂತ್ ಅವರ ಮನಸ್ಸಿನಲ್ಲಿರುವ ಪ್ರಕರಣ ಮತ್ತು ನನ್ನ ಮನಸ್ಸಿನಲ್ಲಿಯೂ ಇರುವ ಪ್ರಕರಣವು–ಬಸ್ಸು ಮಾಲೀಕರ ಪ್ರಕರಣ ಎಂದು ನನ್ನ ನಂಬಿಕೆ. ಬಸ್ಸು ಮಾಲೀಕರು ಮೋಟಾರ್ ವಾಹನ ಅಧಿನಿಯಮದ ಮೇರೆಗೆ ಕೆಲವೊಂದು ಮಾರ್ಗಗಳಲ್ಲಿ ತಮ್ಮ ಬಸ್ಸುಗಳನ್ನು ಓಡಿಸಲು ಲೈಸನ್ಸ್‌ನ್ನು ಪಡೆದುಕೊಳ್ಳಬೇಕು. ನನ್ನ ಸ್ನೇಹಿತರಾದ ಶ್ರೀ ಪಂತ್ ಅವರು ಅತ್ಯಂತ ದುರಾಸೆಯ ವ್ಯಕ್ತಿ; ಬಸ್ಸುಗಳನ್ನು ಓಡಿಸುವ ಏಕಸಾಮ್ಯವನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಬಯಸಿದ್ದಾರೆ. ಹೀಗಾಗಿ ಅವರು ಬಸ್ಸು ಮಾಲೀಕರನ್ನು ಇಷ್ಟಪಡುತ್ತಿಲ್ಲ. ಅವರು ಬಸ್ಸುಗಳು ಓಡಾಡುವುದನ್ನು ಹೇಗೆ ತಪ್ಪಿಸಬಲ್ಲರು? ಅವರ ಲೈಸನ್ಸ್‌ಗಳನ್ನು ರದ್ದುಪಡಿಸುವ ಅಧಿಕಾರ ಇವರಲ್ಲಿದೆ. ಆದ್ದರಿಂದ ಇವರು ಅವರ ಲೈಸನ್ಸ್‌ಗಳನ್ನು ರದ್ದುಪಡಿಸಿ, ಬಸ್ಸು ಓಡಿಸುತ್ತಿರುವ ಮಾರ್ಗದಲ್ಲಿ ಸರ್ಕಾರಿ ಬಸ್ಸುಗಳನ್ನು ಬಿಡುತ್ತಾರೆ. ಅದೇ ಕಾಲಕ್ಕೆ ಬಸ್‌ಗಳ ಮಾಲೀಕರಿಗೆ ಯಾವುದೇ ಪರಿಹಾರವನ್ನು ಪಾವತಿಸುವುದಿಲ್ಲ. ನಾನು ಕೇಳುವ ಪ್ರಶ್ನೆ ಇದು. ಇದು ನ್ಯಾಯಯುತವೂ ನಿಷ್ಪಕ್ಷಪಾತವೂ ಆದ ಪ್ರಸ್ತಾವವೆ? ಸರ್ಕಾರವು ತನ್ನ ಬಸ್ಸುಗಳನ್ನು ಓಡಿಸುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಉತ್ತರ ಪ್ರದೇಶದಲ್ಲಿ ಸರ್ಕಾರಿ ಬಸ್ಸು ದರಗಳು ಎಷ್ಟು, ಅವು ಖಾಸಗಿ ಬಸ್ಸುಗಳಿಗಿಂತಲೂ ಅಗ್ಗವೋ ನನಗೆ ತಿಳಿಯದು.

**ಶ್ರೀ ಹೆಚ್.ಬಿ. ಸಕ್ಸೆನಾ (ಉತ್ತರ ಪ್ರದೇಶ):** ಹೌದು.

**ಶ್ರೀ ತಾಜಮುಲ್ ಹುಸೇನ್:** ಉತ್ತಮ ಕೂಡ.

**ಡಾ. ಬಿ.ಆರ್. ಅಂಬೇಡ್ಕರ್:** ನಾನೇನೂ ಹೇಳುವುದಿಲ್ಲ. ಅವರು ಉತ್ತಮ ಸೇವೆ ಕೊಡುತ್ತಾರೋ ತಿಳಿಯದು. ಬಹುಶಃ ಕೊಡಲೂಬಹುದು.

**ಶ್ರೀ ತಾಜಮುಲ್ ಹುಸೇನ್:** ಹೌದು, ಅವು ಒಳ್ಳೆಯ ಸೇವೆ ನೀಡುತ್ತಿವೆ; ಸರ್ಕಾರಿ ಬಸ್ಸುಗಳು ಯಾವಾಗಲೂ ಒಳ್ಳೆಯ ಸೇವೆಯನ್ನು ನೀಡುತ್ತವೆ.

**ಡಾ. ಬಿ.ಆರ್. ಅಂಬೇಡ್ಕರ್:** ಆದರೆ ಪರಿಗಣಿಸಬೇಕಾದ ಅಂಶ ಇದು; ಈ ನಿರ್ದಿಷ್ಟ ವ್ಯಾಪಾರದಲ್ಲಿ ತೊಡಗಿರುವ ಒಂದು ಜನ ಸಮುದಾಯ ಇಲ್ಲಿದೆ; ಅವರು ಈ ವ್ಯಾಪಾರದಿಂದ ತಮ್ಮ ಹೊಟ್ಟೆ

ಹೊರೆಯುತ್ತಿದ್ದಾರೆ. ಅವರು ತಮ್ಮ ವ್ಯಾಪಾರಿ ಸರಕು ಎಂದರೆ ಬಸ್ಸುಗಳನ್ನು ಖರೀದಿಸಲು ಕಾರ್ಯಾಗಾರಗಳಿಗೆ ಅಗತ್ಯವಿರುವ ಇತರ ವಸ್ತುಗಳಿಗೆ ಸಾಕಷ್ಟು ಹಣವನ್ನು ಹೂಡಿದ್ದಾರೆ. ನೀವು ಇದ್ದಕ್ಕಿದ್ದಂತೆ ಬಂದು, ನಿಮ್ಮ ವ್ಯಾಪಾರ ನಿಲ್ಲಿಸಿ. ನೀವು ನಡೆಸಲು ಅವಕಾಶ ನೀಡುವುದಿಲ್ಲ ಎನ್ನುತ್ತೀರಿ ಈ ಬಗೆಗೂ ನನ್ನ ಆಕ್ಷೇಪವಿಲ್ಲ. ಆದರೆ ನನ್ನ ಸ್ನೇಹಿತರನ್ನು ಕೇಳಬೇಕಾದ ಅಂಶ ಇದು; ನನ್ನ ಮಾನ್ಯ ಸ್ನೇಹಿತರು ಮಾಡಬಹುದಾದ ಕನಿಷ್ಠ ಕಾರ್ಯವೆಂದರೆ ಅವರ ವ್ಯಾಪಾರಿ ಸರಕನ್ನು ಖರೀದಿಸುವುದು–ಏಕೆಂದರೆ ವ್ಯಾಪಾರಿ ಸರಕು ಸರ್ಕಾರಕ್ಕೂ ಉಪಯುಕ್ತ. ಇಷ್ಟನ್ನು ಮಾಡಿ ಅವರಿಗೆ ಯಾವುದೇ ಪರಿಹಾರ ನೀಡುವುದಿಲ್ಲವೆಂದು ವ್ಯಾಪಾರಿ ಸರಕನ್ನು ಖರೀದಿಸಿರುವ ಹಣದಿಂದ ಅವರಿಚ್ಛಿಸುವ ಇತರ ಯಾವುದೇ ವ್ಯಾಪಾರವನ್ನು ಮಾಡಬಹುದೆಂದು ಹೇಳಿದ್ದರೆ ನನ್ನ ದೃಷ್ಟಿಯಲ್ಲಿ ಅದೊಂದು ನ್ಯಾಯಯುಕ್ತವಾದ ಪ್ರಸ್ತಾವವಾಗುತ್ತಿತ್ತು. ಆದರೆ ಸರ್ಕಾರ ಅಷ್ಟನ್ನು ಮಾಡುತ್ತಿಲ್ಲ. ಸರ್ಕಾರಿ ಬಸ್ಸುಗಳನ್ನು ಓಡಿಸಲು ಅವರು ಹೊಸ ಬಸ್ಸುಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಅವರು ಲೈಸನ್ಸ್ ರದ್ದುಪಡಿಸಿದ ಜನರಿಂದ ಹಳೆಯ ಬಸ್ಸುಗಳನ್ನು ಏಕೆ ತೆಗೆದುಕೊಳ್ಳುತ್ತಿಲ್ಲವೆಂಬುದಕ್ಕೆ ಇನ್ನು ಉತ್ತರ ನೀಡಿಲ್ಲ.

**ಮಾನ್ಯ ಸಭಾಪತಿಗಳು:** ಡಾ. ಅಂಬೇಡ್ಕರ್ ನೀವು ಒಂದು ಗಂಟೆ ತೆಗೆದುಕೊಂಡಿದ್ದೀರಿ.

**ಡಾ. ಬಿ.ಆರ್. ಅಂಬೇಡ್ಕರ್:** ಹೌದು ಸರ್, ಅದು ನಿಜ.

**ಮಾನ್ಯ ಸಭಾಪತಿಗಳು:** ದಯವಿಟ್ಟು ಸಾಧ್ಯವಾದಷ್ಟು ಬೇಗ ಮುಗಿಸಿ.

**ಡಾ. ಬಿ.ಆರ್. ಅಂಬೇಡ್ಕರ್:** ಆಯ್ತು ಸಾರ್. ನಾನು ಹೇಳುತ್ತಿದದ್ದು ಏನೆಂದರೆ ಅಂಥ ಪ್ರಕರಣಗಳಲ್ಲಿ ವ್ಯಕ್ತಿಯೊಬ್ಬನ ಜೀವನಾಧಾರದ ಮಾರ್ಗಗಳನ್ನು ಕಸಿದುಕೊಳ್ಳುವುದು ಮತ್ತು ತನ್ನ ವ್ಯಾಪಾರಿ ಸರಕಿನ ನಷ್ಟಕ್ಕೆ ಅವನಿಗೆ ಪರಿಹಾರ ನೀಡದಿರುವುದು ತಪ್ಪು. ಈ ವರ್ತನೆಯನ್ನು ಸಮರ್ಥಿಸುವ ವಾದಗಳನ್ನು ನಾನು ಕೇಳಬಯಸುತ್ತೇನೆ. ಆದ್ದರಿಂದ ನನ್ನ ಅಹವಾಲೆಂದರೆ ಕಲಮು (೨a) ಅತ್ಯಂತ ಅನ್ಯಾಯಯುತವಾದ ಶಾಸನ. ನ್ಯಾಯ, ಸಮಾನತೆ ಮತ್ತು ಉತ್ತಮ ನಡತೆಯೊಂದಿಗೆ ಇದಕ್ಕೆ ಏನೂ ಸಂಬಂಧವಿಲ್ಲ. ನನ್ನ ಸ್ನೇಹಿತರು ತೃಪ್ತಿಕರವಾದ ವಿವರಣೆ ನೀಡದಿದ್ದಲ್ಲಿ ನಾನು ಕಲಮನ್ನು ವಿರೋಧಿಸುತ್ತೇನೆ.

ನಾನು ಈಗ ತಿದ್ದುಪಡಿ ವಿಧೇಯಕದ ಕಲಮು (೩)ರ ಬಗ್ಗೆ ಮಾತನಾಡುತ್ತೇನೆ. ಮೊದಲಿಗೆ ನಾನು ಹೇಳಬಯಸುವುದೇನೆಂದರೆ ಕಲಮು (೩) ರಲ್ಲಿ ಇರುವ ಉಪಬಂಧಗಳು ನನ್ನ ಅಭಿಪ್ರಾಯದಲ್ಲಿ ತೀರಾ ಅಮುಖ್ಯ; ಕ್ಷುಲ್ಲಕ ಮತ್ತು ಬಾಲಿಷವಾದದ್ದು. ಈ ಕಲಮನ್ನು ಸಂವಿಧಾನದಲ್ಲಿ ಸೇರಿಸುವ ಮೂಲಕ ಸರ್ಕಾರ ಏನನ್ನು ಸಾಧಿಸುವುದೊ ನನಗೆ ತಿಳಿಯದು. ತಿದ್ದುಪಡಿ ವಿಧೇಯಕದ ಕಲಮು (೩)ರಲ್ಲಿನ ಉದ್ದೇಶಿತ ಕಲಮು (೧)ರ ಉಪಕಲಮು (ಜಿ); (ಹೆಚ್) ಮತ್ತು (ಐ) ಗೆ ಸಂಬಂಧಿಸಿದಂತೆ ನನ್ನದೇನೂ ಅಭ್ಯಂತರವಿಲ್ಲ. ಏಕೆಂದರೆ ಈ ಕಲಮುಗಳ ಮೇರೆಗೆ ಕ್ರಮ ಕೈಗೊಳ್ಳುವುದರಿಂದ ಯಾರಿಗೂ ಏನೇ ಹಾನಿ ಆದೀತೆಂದು ನನಗೆ ಅನ್ನಿಸುತ್ತಿಲ್ಲ. ಸ್ವಾಧೀನತೆಯ ಮುಖ್ಯಾಂಶವೆಂದರೆ ಅದು ವ್ಯಕ್ತಿಯ ಹಿತಾಸಕ್ತಿಗೆ ಹಾನಿ ಉಂಟುಮಾಡುತ್ತದೆ ಈ ಉಪಕಲಮು ಯಾರಿಗೆ ಆಗಲಿ ಹಾನಿ ಉಂಟು ಮಾಡದೆ ಇರುವುದರಿಂದ ಈ ಪ್ರಕರಣಗಳಲ್ಲಿ ಪರಿಹಾರ ಇಲ್ಲ ಎಂಬ ಪ್ರಸ್ತಾವವನ್ನು ನಾನು ಬೆಂಬಲಿಸುತ್ತೇನೆ.

ಈ ಕಲಮುಗಳ ಬಗ್ಗೆ ನಾನು ಹೇಳಬೇಕಾದ ಒಂದು ಮಾತಿದೆ. ಈ ಕಲಮು (ಜಿ), (ಹೆಚ್) ಮತ್ತು (ಐ) ಮೇರೆಗೆ ಏನಾದರೂ ಕ್ರಮಕೈಗೊಂಡರೆ ಅದನ್ನು ಸಾರ್ವಜನಿಕ ಹಿತಾಸಕ್ತಿ ಸಮರ್ಥಿಸಬೇಕೆಂಬುದೇ ಏಕಮಾತ್ರ ಆಧಾರ. ಅದು ಸರ್ಕಾರದ ಸ್ವೇಚ್ಛೆಯ ಕ್ರಮವಾಗಿರಬಾರದು. ಇದು ಒಂದು ಕಂಪನಿಯನ್ನು ಮತ್ತೊಂದರಲ್ಲಿ ವಿಲೀನಗೊಳಿಸುವ ಅಥವಾ ಒಂದು ಆಡಳಿತ ವರ್ಗವನ್ನು ಮತ್ತೊಂದಕ್ಕೆ ವರ್ಗಾಯಿಸುವ

ಸರ್ಕಾರದ ಖಯಾಲಿಯಾಗಬಾರದು. ಈ ವಿಷಯ ಹಾಗಿದ್ದರೆ ಅವುಗಳಿಗೆ ಆಕ್ಷೇಪಣೆಯಿಲ್ಲ.

ಈಗ ಇತರ ಕಲಮುಗಳನ್ನು ನೋಡೋಣ; (ಎ) ಗೆ ನನ್ನ ಆಕ್ಷೇಪಣೆಯಿಲ್ಲ. ಅದು ಹಾಗೆಯೇ ಇರಬಹುದೆ.

(ಬಿ)ಗೆ ಸಂಬಂಧಪಟ್ಟಂತೆ (ಬಿ)ಯ ಮೊದಲನೆಯ ಭಾಗ(ಎ)ಯಿಂದ ತೀರಾ ಭಿನ್ನವಾಗಿದೆಯೇ ಎಂಬುದು ನನಗೆ ತಿಳಿಯದು. ಅವೆರಡೂ ಒಂದೇ ರೀತಿ ಕೃಷಿ ಹಿಡುವಳಿಗಳ ಯಾವುದೇ ಹಕ್ಕುಗಳ ಮಾರ್ಪಾಡಿಕೆ ಎಂದರೇನು ಎಂಬ ಬಗ್ಗೆ ನನಗೆ ಸ್ವಲ್ಪ ವಿವರಣೆ ಬೇಕಾಗಿದೆ. ಹಾಗೆಂದರೇನು? ಅದಕ್ಕೆ ವಿವರಣೆಯಿಲ್ಲ. ನನಗೆ ಗೊತ್ತಿರುವಷ್ಟು ಮಟ್ಟಿಗೆ ಕೃಷಿಕನಿಗೆ ನಾಲ್ಕು ಹಕ್ಕುಗಳು ಬೇಕು. ಮೊದಲನೆಯದು ಹಿಡುವಳಿಯ ಭದ್ರತೆ; ಸೂಕ್ತ ಕಾರಣವಲ್ಲದೆ ಅವನನ್ನು ಭೂಮಾಲೀಕ ಹೊರಹಾಕುವಂತಿರಬಾರದು. ಎರಡನೆಯದು ಅವರು ನ್ಯಾಯೋಚಿತವಾದ ಗೇಣಿಯನ್ನು ಮಾತ್ರ–ಅಗತ್ಯವಿದ್ದಲ್ಲಿ ನ್ಯಾಯಾಲಯ ನಿರ್ಧರಿಸಬಹುದಾದಷ್ಟು–ಪಾವತಿ ಮಾಡುವಂತಿರಬೇಕು. ಮೂರನೆಯದಾಗಿ ಹಿಡುವಳಿಯ ವರ್ಗಾವಣೆಗೆ ಅವಕಾಶ ಇರಬೇಕು. ತನ್ನ ಹಿಡುವಳಿಯನ್ನು ಮಾರಾಟ ಮಾಡಬಯಸಿದ್ದಲ್ಲಿ ಅದಕ್ಕೆ ಮೊದಲು ಮುಕ್ತ ಅವಕಾಶವಿರಬೇಕು; ಅವನ ದಾರಿಗೆ ಭೂಮಾಲೀಕ ಅಡ್ಡ ಬರಬಾರದು. ನಾಲ್ಕನೆಯದಾಗಿ ಅದು ಆನುವಂಶಿಕವಾಗಿರಬೇಕು; ಅಂದರೆ ಅವರು ಮರಣಹೊಂದಿದರೆ ಹಿಡುವಳಿಯನ್ನು ಕ್ಲೇಮು ಮಾಡುವ ಹಕ್ಕು ಅವನ ವಂಶಸ್ಥರಿಗೆ ಇರಬೇಕು. ಈ ನಾಲ್ಕು ವಿಷಯಗಳಲ್ಲಿ ಕೃಷಿ ಹಿಡುವಳಿದಾರ ಆಸಕ್ತಿ ಹೊಂದಿರುತ್ತಾನೆಂದು ನನ್ನ ತಿಳುವಳಿಕೆ. ಈಗ ಸರ್ಕಾರ ಈ ವಿಷಯವನ್ನು ಮಾರ್ಪಡಿಸಲು ಅಧಿಕಾರ ಪಡೆದುಕೊಳ್ಳಬೇಕು. ಮಾರ್ಪಾಡಿಸಲು ಉದ್ದೇಶಿಸಿದ್ದಾರೋ ನನಗೆ ತಿಳಿಯದು. ಈ ಬಗ್ಗೆ ಸ್ವಲ್ಪ ವಿವರಣೆ ಅಗತ್ಯವೆಂದು ನನ್ನ ಭಾವನೆ. ನಂತರ ಕಲಮು ಸಿ. ಕೃಷಿ ಭೂಮಿಯ ಗರಿಷ್ಠ ಮಿತಿಯ ನಿಗದಿ ಮೊದಲಾದವು. ನಾನು ಹೇಳುವುದೇನೆಂದರೆ ಈ ನಿರ್ದಿಷ್ಟ ಕಲಮು ಧನಾತ್ಮಕ ಪರಿಣಾಮಗಳನ್ನು ಬೀರಲಿದೆ ಎಂಬುದು ನೀವು ನಿಗದಿಪಡಿಸುವ ಗರಿಷ್ಠತೆಯನ್ನು ಅವಲಂಬಿಸಿರುತ್ತದೆ. ಇದು ಸೋಶಿಯಲಿಸ್ಟ್ ಪಕ್ಷಕ್ಕೆ ಪ್ರಿಯವಾದ ವಿಷಯ. ಗೇಣಿದಾರನಿಗೆ ಗರಿಷ್ಠ ಹಿಡುವಳಿಯನ್ನು ನಿಗದಿಪಡಿಸಿದ ನಂತರ ಭೂಮಿಯನ್ನು ವಿತರಿಸಬೇಕು ಎನ್ನುತ್ತಾರೆ.

**ಮಾನ್ಯ ಸಭಾಪತಿಗಳು:** ಈ ವಿಷಯಗಳು ಜಂಟಿ ಸಮಿತಿಯಲ್ಲಿ ಚರ್ಚೆಗೆ ಬಂದಾಗ ಕೈಗೆತ್ತಿಕೊಳ್ಳಬಾರದೇಕೆ?

**ಡಾ. ಬಿ.ಆರ್. ಅಂಬೇಡ್ಕರ್:** ಆಗಬಹುದು; ಆದರೆ ಈ ವಿಷಯಗಳು ಸಂವಿಧಾನದಲ್ಲಿ ಅಳವಡಿಸುವಷ್ಟು ನಿಜಕ್ಕೂ ಉತ್ತಮವಾಗಿದೆಯೇ ಎಂಬುದನ್ನು ತಿಳಿಯುವುದು ಆವಶ್ಯಕ. ನನ್ನ ಸ್ನೇಹಿತರಾದ ಶ್ರೀ ಪಂತ್ ಅವರಿಗೂ ಗೊತ್ತು–ಏಕೆಂದರೆ ಉತ್ತರ ಪ್ರದೇಶದ ಭೂ ಹಿಡುವಳಿಗಳ ಸಮಿತಿಯ ಅಧ್ಯಕ್ಷರಾಗಿದ್ದವರು; ಅದನ್ನು ನಾನು ಅಭ್ಯಾಸ ಮಾಡಿದ್ದೇನೆ. ಉತ್ತರ ಪ್ರದೇಶದಲ್ಲಿ ಒಬ್ಬ ರೈತನ ಗರಿಷ್ಠ ಹಿಡುವಳಿ ಎರಡು ಎಕರೆ. ಎರಡು ಎಕರೆಗಳಿಗಿಂತಲೂ ಹೆಚ್ಚಿನ ಹಿಡುವಳಿ ಹೊಂದಿರುವ ರೈತವಾರಿ ಭಾರತದ ಯಾವುದಾದರೂ ಭಾಗದಲ್ಲಿದೆಯೇ ನನಗೆ ಗೊತ್ತಿಲ್ಲ. ನೀವು ಎಷ್ಟು ಗರಿಷ್ಠ ಮಿತಿಯನ್ನು ನಿಗದಿಪಡಿಸುತ್ತಿರೋ ನನಗೆ ತಿಳಿಯುತ್ತಿಲ್ಲ. ಆದ್ದರಿಂದ ನನ್ನ ಮಟ್ಟಿಗೆ ಇದೊಂದು ನಿರರ್ಥಕ ವಿಷಯ.

ನಾನು ಉಲ್ಲೇಖಿಸಬಯಸುವ ಮತ್ತೊಂದು ವಿಷಯ–ಇದು. ಹೆಚ್ಚುವರಿ ಭೂಮಿಯನ್ನು ರಾಜ್ಯಕ್ಕೆ ಅಥವಾ ಅನ್ಯಥಾ ವರ್ಗಾಯಿಸಬೇಕೆಂದು ಅದು ಹೇಳುತ್ತದೆ. 'ಅನ್ಯಥಾ' ಎಂದರೇನೆಂದು ನನಗೆ ತಿಳಿಯದು; ಅದನ್ನು ಇತರ ಗೇಣಿದಾರರಿಗೆ ನೀಡಬಹುದೆಂದು ಅರ್ಥವಿರಬಹುದೆ; ಆ ಅರ್ಥವೇ ಇರಬಹುದು.

ಹಾಗಿದ್ದರೆ ಒಂದು ಎಚ್ಚರಿಕೆ ಮಾತನ್ನು ಹೇಳಬಯಸುತ್ತೇನೆ. ಈ ದೇಶದಲ್ಲಿ ಕೃಷಿಕ ಮಾಲೀಕತ್ವವು ಸಂಪೂರ್ಣ ವಿನಾಶವನ್ನು ತರಲಿದೆ ಎನ್ನುವುದು ನನ್ನ ಅಭಿಪ್ರಾಯ. ನಮಗೆ ಬೇಕಾಗಿರುವುದು, ನಾನು ಕಮ್ಯುನಿಸ್ಟ್ ಅಲ್ಲದಿದ್ದರೂ ರಷ್ಯನ್ ಪದ್ಧತಿಯಂತೆ ಸಾಮೂಹಿಕ ಕೃಷಿ. ನಮ್ಮ ಕೃಷಿ ಸಮಸ್ಯೆಯನ್ನು ಬಗೆಹರಿಸಲು ಅದೊಂದೇ ಮಾರ್ಗ. ಕೃಷಿಕ ಮಾಲಿಕತ್ವವನ್ನು ಸೃಜಿಸಿ ಉತ್ಪಾದನೆಯ ಸಾಧನಗಳಿಲ್ಲದ ರೈತರಿಗೆ ಭೂಮಿಯನ್ನು ನೀಡುವುದು ನನ್ನ ಅಭಿಪ್ರಾಯದಲ್ಲಿ.......

**ಶ್ರೀ ತಾಜಮುಲ್ ಹುಸೇನ್:** ರಷ್ಯಾದಲ್ಲಿ ಅದನ್ನು ಮಾಡಿದ್ದಾರೆಯೆ?

**ಮಾನ್ಯ ಸಭಾಪತಿಗಳು:** ಚಿಂತಿಸಬೇಡಿ; ಅದನ್ನು ಅವರು ಉದಾಹರಣೆಗಾಗಿ ತೆಗೆದುಕೊಳ್ಳುತ್ತಿದ್ದಾರೆ.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಸಮಾಜವಾದ, ಕಮ್ಯುನಿಸಂ, ಹೀಗೆ ಎಲ್ಲರಿಂದಲೂ ಆಯ್ದುಕೊಳ್ಳಲು ಸಿದ್ಧ. ನಾನು ತಪ್ಪೇ ಮಾಡುವುದಿಲ್ಲ ಎಂದು ಹೇಳಲಾರೆ; ಬುದ್ಧ ಹೇಳುವಂತೆ ನಿರ್ದೋಷ ಎಂಬುದು ಇಲ್ಲವೆ ಇಲ್ಲ; ಯಾವುದು ಅಂತಿಮವಲ್ಲ ಹಾಗೂ ಪ್ರತಿಯೊಂದು ಪರೀಕ್ಷೆಗೆ ಗುರಿಯಾಗಬೇಕು.

**ಶ್ರೀ ತಾಜಮುಲ್ ಹುಸೇನ್:** ಆದ್ದರಿಂದಲೇ ನಾವು ಡಾ. ಅಂಬೇಡ್ಕರ್ ರೂಪಿಸಿದ ಸಂವಿಧಾನವನ್ನು ತಿದ್ದುಪಡಿ ಮಾಡುತ್ತಿರುವುದು.

**ಶ್ರೀ ಎನ್. ಮಹಂತಿ (ಒರಿಸ್ಸಾ):** ನೀವೇ ಅನುಮೋದಿಸಿದ್ದು.

**ಡಾ. ಬಿ.ಆರ್. ಅಂಬೇಡ್ಕರ್:** ಈಗ ಖಾಲಿ ಮತ್ತು ಬಂಜರು ಭೂಮಿ ಕುರಿತು. ಆ ಪ್ರಸ್ತಾವ ಸ್ವಾಗತಾರ್ಹ. ಅದಕ್ಕೆ ನನ್ನ ಬೆಂಬಲವಿದೆ. ನೀವು ಖಾಲಿ ಭೂಮಿಯನ್ನು ಪರಿಹಾರ ನೀಡದೆ ತೆಗೆದುಕೊಳ್ಳುತ್ತೀರೋ ಈ ಹಕ್ಕನ್ನು ಚಲಾಯಿಸಬೇಕಾದ ಪುರಸಭೆಗಳು ಹಾಗೆ ಮಾಡುವವೆ? ಏಕೆಂದರೆ ಬಹುಸಂಖ್ಯಾತ ಪುರಸಭೆ ಸದಸ್ಯರು ಕೊಳಚೆ ಪ್ರದೇಶಗಳ ಮಾಲೀಕರ ಸ್ನೇಹಿತರು. ಆದ್ದರಿಂದ ಹೆಚ್ಚಿನದೇನನ್ನಾದರೂ ಮಾಡದಿದ್ದಲ್ಲಿ ಬಹುಶಃ ಅವರು ಈ ಹಕ್ಕನ್ನು ಚಲಾಯಿಸಲಿಕ್ಕಿಲ್ಲ.

ಈಗ ಆಡಳಿತ ವರ್ಗದ ವಿಷಯ. ಈ ಬಗ್ಗೆ ನಾನು ಹೇಳುವುದು ಇಷ್ಟು. ಬಹಳಷ್ಟು ಜನರಿಗೆ ಇದರ ತೊಡಕೇನು ಎಂಬ ಅರಿವಿಲ್ಲ. ಕೆಟ್ಟ ನಿರ್ವಹಣೆಯ ಗಿರಣಿಯೊಂದರ ಆಡಳಿತವರ್ಗವನ್ನು ವಶಪಡಿಸಿಕೊಳ್ಳಬೇಕೆಂದು ಬಯಸಿದರೆ ಹಾಗೆ ಮಾಡುವಲ್ಲಿ ಏನೂ ಹಾನಿಯಿಲ್ಲ. ಆದರೆ ಪ್ರಶ್ನೆ ಇದು. ಒಂದು ವೇಳೆ ಸರ್ಕಾರದ ಆಡಳಿತ ವರ್ಗವು ಹಿಂದಿನ ಆಡಳಿತ ವರ್ಗಕ್ಕಿಂತ ಕೆಟ್ಟದಾಗಿದ್ದು, ನಷ್ಟಗಳು ಸಂಭವಿಸಿದರೆ, ಈ ನಷ್ಟಕ್ಕೆ ಯಾರು ಜವಾಬ್ದಾರರು? ಈ ಬಗ್ಗೆ ಉಪಬಂಧವನ್ನು ಕಲ್ಪಿಸಬೇಕು. ಭಾರತಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಕೃತ ಉದ್ಯಮಗಳು ಸ್ವಲ್ಪವೂ ಲಾಭದಾಯಕವಾಗಿಲ್ಲ. ನಮ್ಮ ವಾಯುಯಾನ ನಿಗಮ, ಪತ್ರಿಕೆಗಳಿಂದ ತಿಳಿಯಬರುವಂತೆ ಒಂದು ವರ್ಷದಲ್ಲಿ ಒಂದು ಕೋಟಿ ರೂ. ನಷ್ಟು ನಷ್ಟ ಉಂಟುಮಾಡಿದೆ.

**ಶ್ರೀ ಎಸ್. ಮಹಂತಿ:** ಮತ್ತು ಸುಮಾರು ೫೦,೦೦೦ ದಷ್ಟು.

**ಡಾ. ಬಿ.ಆರ್. ಅಂಬೇಡ್ಕರ್:** ಇತರ ನಿಗಮಗಳು ಏನು ಮಾಡುತ್ತಿವೆಯೋ ನನಗೆ ಗೊತ್ತಿಲ್ಲ.

ನೀವೊಬ್ಬ ವ್ಯಕ್ತಿಯ ಸ್ವತ್ತನ್ನು, ಅದನ್ನು ಕೆಟ್ಟದಾಗಿ ನಿರ್ವಹಿಸಲಾಗುತ್ತಿದೆ ಮತ್ತು ಒಂದು ಸಾಮಾಜಿಕ ಉದ್ದೇಶವಿದೆಯೆಂದು ವಶಪಡಿಸಿಕೊಂಡಾಗ ಉಂಟಾಗುವ ನಷ್ಟವನ್ನು ಯಾರಾದರೂ ತುಂಬಿಕೊಡಲು ಮತ್ತು ನಷ್ಟಗಳನ್ನು ಸ್ವತ್ತಿನ ಮಾಲೀಕನಾದ ಮುದುಕನ ತಲೆಯ ಮೇಲೆ ಹೊರಿಸದಂತೆ ಉಪಬಂಧವನ್ನು ಮಾಡಬೇಕು.

ಸರ್, ಕಲಮು ೫ಕ್ಕೆ ಸಂಬಂಧಪಟ್ಟಂತೆ ಒಂದು ಮಾತು. ಅದು ಜಿಗುಪ್ಸೆ ಹುಟ್ಟಿಸುವಂತಿದೆ. ಕಲಮು

೫ರ ಮೂಲಕ ನಮ್ಮನ್ನು ಕೇಳುತ್ತಿರುವುದಾದರೂ ಏನು? ರಾಜ್ಯ ವಿಧಾನಮಂಡಲಗಳು ಅನುಮೋದಿಸುವ ಕಾನೂನುಗಳಿಗೆ ಸಂವಿಧಾನಾತ್ಮಕ ಮಾನ್ಯತೆ ನೀಡುವಂತೆ ಕಲಮು ೫ ರ ಮೂಲಕ ನಮ್ಮನ್ನು ಕೇಳಲಾಗುತ್ತಿದೆ. ನಾವು ಆ ಕಾನೂನುಗಳನ್ನು ನೋಡಿಲ್ಲ : ಅವುಗಳನ್ನು ನಮಗೆ ನೀಡಿಲ್ಲ; ಅವುಗಳನ್ನು ಕುರಿತು ಇಲ್ಲಿ ಚರ್ಚಿಸಿಯೂ ಇಲ್ಲ. ಆದಾಗ್ಯೂ ಅವುಗಳಿಗೆ ಮಾನ್ಯತೆ ನೀಡಲಷ್ಟೇ ಅಲ್ಲದೆ, ಅವುಗಳಿಗೆ ಅಧಿನಿಯಮದ ಇತರ ಕಲಮುಗಳಿಂದ ಸಂವಿಧಾನಾತ್ಮಕ ಪ್ರತಿರಕ್ಷಣೆ ನೀಡಲು ಸಂಸತ್ತಿನ ಸಂವಿಧಾನಾತ್ಮಕ ಅಧಿಕಾರಗಳನ್ನು ಚಲಾಯಿಸುವಂತೆ ನಮ್ಮನ್ನು ಕೇಳಲಾಗುತ್ತಿದೆ. ಸರ್, ಸದನ ನೋಡದ, ಪರಿಗಣಿಸಿದ, ಇತರ ರಾಜ್ಯಗಳು ಅನುಮೋದಿಸಿದ ಕಾನೂನುಗಳನ್ನು ಮಾನ್ಯ ಮಾಡುವಂತೆ ಕೇಳುವುದು ಅದರ ಘನತೆಗೆ ತಕ್ಕುದ್ದಲ್ಲ. ಈ ವಿಷಯಗಳನ್ನು ಸಹವರ್ತಿ ಪಟ್ಟಿಯಲ್ಲಿರಿಸುವುದು ಸರ್ಕಾರ ಮಾಡಬಹುದಾದ ಮುಕ್ತ ಕೆಲಸ. ಆಗ ಸಂಸತ್ತು ತನ್ನಲ್ಲಿ ನಿಹಿತವಾಗಿರುವ ಅಧಿಕಾರಗಳ ಮೂಲಕ ಅವುಗಳಿಗೆ ಕನಿಷ್ಠ ಮಾನ್ಯತೆಯನ್ನು ನೀಡಬಹುದಾಗಿದೆ. ಆದರೆ ಇದು ತೀರಾ ತಪ್ಪು. ಸಂವಿಧಾನಕ್ಕೆ ೯ನೆಯ ಅನುಸೂಚಿಯನ್ನು ಸೇರಿಸಿದಾಗ ಮಾಡಿದ ಮೊದಲ ತಿದ್ದುಪಡಿ ಸಂದರ್ಭದಲ್ಲಿ ಹೀಗೆ ಮಾಡಿದ್ದೇವೆ ಎಂಬುದು, ಸಂವಿಧಾನದಲ್ಲಿ ಅಸಂಗತತೆಯನ್ನು ಹಾಗೂ ವಿಕೃತಿಯನ್ನು ವ್ಯಾಪಕಗೊಳಿಸಲು ಕಾರಣವಾಗಲಾರದು.

ನಾನು ಹೇಳಬೇಕಾಗಿದ್ದುದು ಇಷ್ಟು.

◆

## ೫೪

# ೧೯೫೬ರ ರಾಜ್ಯಗಳ ಪುನರ್ ವಿಂಗಡಣಾ ವಿಧೇಯಕ

*[*]***ಡಾ. ಬಿ.ಆರ್. ಅಂಬೇಡ್ಕರ್ (ಬಾಂಬೆ):** ಮಾನ್ಯ ಉಪಸಭಾಪತಿಗಳೇ ಪತ್ರಿಕೆಗಳಿಂದ ನನಗೆ ತಿಳಿದುಬಂದಂತೆ ಈ ವಿಧೇಯಕದ ಚರ್ಚೆಯ ಬಿರುಗಾಳಿಯ ಕೇಂದ್ರ ಬಾಂಬೆ ನಗರ. ಈ ದೇಶದ ನಾಗರಿಕ ವಿಷಯಗಳಲ್ಲಿ ಅತ್ಯಂತ ಪ್ರಮುಖವಾಗಿದ್ದ ಈ ನಗರವನ್ನು ಭಾರತದ ಭೂಪ್ರದೇಶಗಳೆಂದು ನಮ್ಮ ಸಂವಿಧಾನದಲ್ಲಿ ಹೇಳಲಾಗಿರುವ ಅಂಡಮಾನ ಮತ್ತು ನಿಕೋಬಾರ ದ್ವೀಪಗಳ ಮಟ್ಟಕ್ಕೆ ಈ ವಿಧೇಯಕದಲ್ಲಿ ತಂದಿರುವುದು ಸ್ಪಷ್ಟ. ಅಂದರೆ ಈ ಭೂ ಪ್ರದೇಶಗಳು ಮತ್ತು ಈಗ ಬಾಂಬೆ ನಗರಕ್ಕೆ ಯಾವುದೇ ಶಾಸಕಾಂಗ ಅಥವಾ ಕಾರ್ಯಾಂಗ ಇರುವುದಿಲ್ಲ. ಕನಸಲ್ಲೂ ಕೂಡ ಇಂಥ ಹುಚ್ಚುತನವನ್ನು ಯಾರೂ ಕಲ್ಪಿಸಿಕೊಳ್ಳಲಾರರು. ಭಾರತದ ಮುಂಚೂಣಿಯಲ್ಲಿದ್ದ ನಗರ, ಭಾರತಕ್ಕೆ ರಾಜಕಾರಣವನ್ನು ಕಲಿಸಿದ ನಗರವನ್ನು ಈಗ ಲಕ್ಷದ್ವೀಪ, ಮಾಲ್ಡೀಸ್ ಮತ್ತು ನಿಕೋಬಾರ್ ದ್ವೀಪಗಳ ಮಟ್ಟದಲ್ಲಿ ಇರಿಸಲಾಗಿದೆ. ಈ ಪ್ರಸ್ತಾವನೆಗೆ ಆಸ್ಪದ ಕೊಟ್ಟಿರುವ ಸರ್ಕಾರಕ್ಕೆ ತಾನು ಕೈಗೊಂಡಿರುವ ತೀರ್ಮಾನವನ್ನು ಸಮರ್ಥಿಸಲು ಅತ್ಯಂತ ಬಲವಾದ ಕಾರಣಗಳಿರಬಹುದು; ನಿರ್ವಿವಾದ ಕಾರಣಗಳೂ ಇರಬಹುದು. ಬಾಂಬೆ ನಗರ ನಮ್ಮದೆನ್ನಲು ಅನೇಕ ಸ್ಪರ್ಧಿಗಳು ಇರಲೂಬಹುದು. ಈ ನಗರ ನಮ್ಮದೆನ್ನುವ ಮಹಾರಾಷ್ಟ್ರೀಯರು ಇದ್ದಾರೆ. ನಮ್ಮ ಗುಜರಾತಿ ಸ್ನೇಹಿತರು–ಅವರು ಯಾವ ಆಧಾರದ ಮೇಲೆ ಹಕ್ಕು ಮಂಡಿಸುವರೋ ತಿಳಿಯದು–ಆದಾಗ್ಯೂ ನಗರದ ಮೇಲೆ ಒಂದು ಬಗೆಯ ಅನುಭೋಗದ ಹಕ್ಕಿದೆ ಎನ್ನುತ್ತಾರೆ. ಅವರು ನಗರವು ಮಹಾರಾಷ್ಟ್ರೀಯರ ವಶವಾಗಲು ಅವಕಾಶ ನೀಡೆವು ಎನ್ನುತ್ತಾರೆ. ಜಗಳ ಮುಂದುವರೆಯುತ್ತಲೇ ಇದೆ. ಶ್ರೀ ಮೊರಾರ್ಜಿ ದೇಸಾಯಿ ಅವರಂಥ ವ್ಯಕ್ತಿಯೇ ಬಾಂಬೆಯು ಮಹಾರಾಷ್ಟ್ರಕ್ಕೆ ಸೇರಿದುದೆಂದು ಒಪ್ಪಿಕೊಂಡಿದ್ದಾರೆ. ಅವರು ಗುಜರಾತ್ ಮಹಾಪ್ರದೇಶ ಕಾಂಗ್ರೆಸ್ ಅಥವಾ ಅಂಥದ್ದಕ್ಕೆ ನೀಡಿದ ಭಾಷಣವನ್ನು ನಾನು ಓದಿದ್ದೇನೆ. ಅದರಲ್ಲಿ ಅವರು ಬಾಂಬೆ ಮಹಾರಾಷ್ಟ್ರಕ್ಕೆ ಸೇರಿದ್ದೆಂದು ಸ್ಪಷ್ಟವಾಗಿ ಹೇಳಿಕೆ ನೀಡಿದ್ದಾರೆ. ಹಾಗಿದ್ದಲ್ಲಿ, ಬಾಂಬೆ ನಗರವನ್ನು ಮಹಾರಾಷ್ಟ್ರಕ್ಕೆ ನೀಡಲು ಯಾವ ಆಕ್ಷೇಪಣೆ ಇದೆಯೋ ನನಗೆ ತಿಳಿಯದು. ಬ್ರಿಟಿಷರ ಆಡಳಿತದಲ್ಲಿ ನಾಗರಿಕತೆ ಸಾಮಾನ್ಯವಾಗಿದ್ದಾಗ ಯಾರು ಎಲ್ಲಿ ಬೇಕಾದರೂ ಹೋಗಿ ವಾಸಿಸಬಹುದಿತ್ತು; ಅದಕ್ಕೆ ಸ್ಥಳೀಯರು ಆಕ್ಷೇಪಿಸುತ್ತಿರಲಿಲ್ಲ. ಈ ಪರಿಸ್ಥಿತಿಯಲ್ಲಿ ವಿವಿಧ ಪ್ರಾಂತ್ಯಗಳ ಅನೇಕ ಜನರು ಇತರ ಪ್ರಾಂತ್ಯಗಳಲ್ಲಿನ ನಗರಗಳಿಗೆ ಹೋಗಿದ್ದಾರೆ. ಅವರು ತಮ್ಮ ಹಿತಾಸಕ್ತಿಗಳನ್ನು ಬೆಳೆಸಿಕೊಂಡು ಅನೇಕ ಪೀಳಿಗೆಗಳವರೆಗೆ ವಾಸ ಮಾಡಿದ್ದಾರೆ. ಈಗ ನಾವು ಮಾಡುತ್ತಿರುವ ಪುನರ್ವಿಂಗಡಣೆಯಲ್ಲಿ ಮದ್ರಾಸಿನಲ್ಲಿ ವಾಸಮಾಡುವ ಮದ್ರಾಸೇತರರು–ಮದ್ರಾಸನ್ನು ತಮಿಳರಿಗೆ ನೀಡುವುದಕ್ಕೆ ಯಾರಾದರೂ ಆಕ್ಷೇಪಿಸುವುದನ್ನು ನಾನು ನೋಡಿಲ್ಲ. ಕಲ್ಕತ್ತವು ಒಂದು ಮಹಾನಗರವೇ. ನಾನು ಲೇಬರ್ ಸದಸ್ಯನಾಗಿದ್ದಾಗ ಕಾರ್ಮಿಕ ಸ್ಥಿತಿಗತಿ ನೋಡಿ ಬರಲು ಆಗಾಗ ಕಲ್ಕತ್ತಾಗೆ ಹೋಗುತ್ತಿದ್ದೆ. ಬೆಂಗಾಳಿಯರು ಕಲ್ಕತ್ತಾದಲ್ಲಿ ವಾಸಿಸುವ ಜನರನ್ನು ಬೆಂಗಾಳಿಗಳೆಂದು ಕರೆಯುವುದಿಲ್ಲ ಎಂಬುದನ್ನು ನಾನು ಗಮನಿಸಿದ್ದೇನೆ. ಅವರು ಬಳಸುವ

* ಪಿ.ಡಿ. (ಆರ್.ಎಸ್. ) ಸಂ. ೧೨–ಎ ೧೯೫೬, ೧ ಮೇ ೧೯೫೬ ಪು. ೮೩೪–೪೬

ಪರ 'ಕಲ್ಕತ್ತೀಯಾ'. ಅವರು 'ಕಲ್ಕತ್ತೀಯಾ'ಗಳು. ಇದು ಅವರು ಬೆಂಗಾಳಿ ಜನ ಸಮುದಾಯದ ಭಾಗವಲ್ಲವೆಂಬುದನ್ನು ತೋರಿಸುತ್ತದೆ. ಅದೂ ಭಾರಿ ಜನ ಸಮುದಾಯವೇ. ಇದೆಲ್ಲ ಏನೇ ಇರಲಿ, ನಮ್ಮ ಸ್ನೇಹಿತರಾದ ಕಾಂಗ್ರೆಸ್ ಪಕ್ಷದವರು ಯಾವುದೇ ಆಕ್ಷೇಪಣೆ ಎತ್ತಿಲ್ಲ; ಕಲ್ಕತ್ತೀಯಾಗಳು ಕಲ್ಕತ್ತಾವನ್ನು ಬೆಂಗಾಳಿಗಳಿಗೆ ಬಿಟ್ಟುಕೊಡುವುದಕ್ಕೆ ಎಂದೂ ಆಕ್ಷೇಪಣೆ ಸಲ್ಲಿಸಿಲ್ಲ. ನನ್ನ ಸ್ನೇಹಿತರಾದ ಶ್ರೀ ಪಂತ್ ಅವರಿಗೆ ನನ್ನ ಪ್ರಶ್ನೆ ಇದು. ಕಲ್ಕತ್ತಾ ಬೆಂಗಾಳಿಗಳಿಗೆ, ಮದ್ರಾಸ್ ತಮಿಳರಿಗೆ ಹೋಗುವುದಾದರೆ, ಬಾಂಬೆ ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಏನು ಆಕ್ಷೇಪಣೆ? ನನ್ನ ಪ್ರಕಾರ ಇದು ಮೂಲಭೂತ ಪ್ರಶ್ನೆಯಾಗಿದ್ದು ಮಹಾರಾಷ್ಟ್ರೀಯರಿಗೆ ಅವರು ತೃಪ್ತಿಕರ ಉತ್ತರ ನೀಡಬೇಕು. ಹೌದು, ಬಾಂಬೆಯಲ್ಲಿ ಶೇ. ೧೫ ಕ್ಕೆ ಮೀರದಷ್ಟು ಗುಜರಾತಿ ಜನಸಮುದಾಯ ಇದೆಯೆಂದು ಹೇಳಲಾಗುತ್ತದೆ ಮತ್ತು ಮಹಾರಾಷ್ಟ್ರೀಯರು ಅಲ್ಲಿ ಬಹುಸಂಖ್ಯಾತರಲ್ಲ ಎಂಬುವ ಕಾರಣದಿಂದಲೇ ಮಹಾರಾಷ್ಟ್ರೀಯರಿಗೆ ಬಾಂಬೆ ಮೇಲಿನ ಹಕ್ಕು ಹಾಳಾಗುತ್ತಲಿದೆ ಎನ್ನುತ್ತಾರೆ. ನಗರವೊಂದರಲ್ಲಿ ಶೇ. ೧೫ರಷ್ಟು ಅನ್ಯ ಸಮುದಾಯ ಇರದ ಯಾವುದಾದರೂ ನಗರಗಳು ಈ ದೇಶದಲ್ಲಿದೆಯೆ ಎಂದು ಆಶ್ಚರ್ಯವಾಗುತ್ತದೆ. ಬಾಂಬೆಯ ಸ್ಥಿತಿ ಅಲ್ಲಿ ಶೇ. ೧೫ ರಷ್ಟು ಗುಜರಾತಿಗಳಿದ್ದಾರೆ ಎಂಬ ಕಾರಣಕ್ಕಾಗಿ ಹೀಗಾಗಿರುವುದೊಂದು ವಿಚಿತ್ರ. ಅದು ಹೇಗೆ ವಿಚಿತ್ರ. ನಮ್ಮ ನಗರಗಳು ಯಾವಾಗಲೂ ಮಿಶ್ರ ಸಮುದಾಯಗಳಿಂದ ಕೂಡಿವೆ ಎಂಬುದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ನೀಡಬಹುದು. ಯಾವುದೇ ನಗರ ತನ್ನದೇ ಆದ ಏಕರೂಪದ ಜನ ಸಮುದಾಯ ಹೊಂದಿದೆ ಎಂದು ಹೇಳಲಾಗದು. ಈ ವಾಸ್ತವ ಏನೇ ಇದ್ದರೂ ಆ ನಗರವು ಪಶ್ಚಿಮ ಬಂಗಾಳಕ್ಕೆ ಸೇರಿದ್ದೆಂದು ಹೇಳುವುದಾದರೆ ಬಾಂಬೆ ನಗರವು ಅಂಥದೇ ಹಕ್ಕನ್ನು ಏಕೆ ಮಂಡಿಸಬಾರದೆಂಬುದು ನನಗೆ ಅರ್ಥವಾಗುತ್ತಿಲ್ಲ. ಕೆಲವರು ಬಾಂಬೆ ಎಂದೂ ಮಹಾರಾಷ್ಟ್ರಕ್ಕೆ ಸೇರಿರಲಿಲ್ಲ ಎನ್ನುವರಿದ್ದಾರೆ. ಇಂಥ ಹೇಳಿಕೆ ನೀಡಿರುವವರ ತಿಳುವಳಿಕೆ ಬಗ್ಗೆ ನನಗೆ ಆಶ್ಚರ್ಯವೆನಿಸುತ್ತದೆ; ನನಗೆ ನಿಜಕ್ಕೂ ತೀರಾ ಆಶ್ಚರ್ಯವೆನಿಸಿದೆ. ಬಾಂಬೆಯ ಮೂಲ ನಿವಾಸಿಗಳು ಯಾರು ? ಕೋಲಿಗಳು – ಮೀನುಗಾರರು – ಈ ಮೀನುಗಾರರು ನಾವು ಮಹಾರಾಷ್ಟ್ರೀಯರಲ್ಲವೆಂದು ಹೇಳುತ್ತಾರೆಯೆ? ಯಾರಾದರೂ ಹೋಗಿ ವಿಚಾರಣೆ ನಡೆಸಿ ಮಹಾರಾಷ್ಟ್ರದ ಮೂಲ ನಿವಾಸಿಗಳಾದ ಕೋಲಿಗಳ ಅಭಿಪ್ರಾಯವೇನೆಂದು ತಿಳಿದುಕೊಳ್ಳಲಿ. ಈ ಬಗೆಯ ಭಯಾನಕ ಅಪವಾದಗಳಲ್ಲಿ ವೈಶಿಷ್ಟ್ಯಗಳನ್ನು ತಿಳಿಯಬಯಸಿದರೆ, ಅವರಿಗೆ ನಾನು ಪೋರ್ಚುಗೀಸರು ಬಾಂಬೆಯನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಮುನ್ನ ಬಾಂಬೆಯು ಲಕ್ಷ್ಮೀ ಬಾಯಿ ಎಂಬ ವಿಧವೆ ರಾಣಿಗೆ ಸೇರಿತ್ತೆಂದೂ ಪೋರ್ಚುಗೀಸರು ಆಕೆಯಿಂದ ಅದನ್ನು ಗೇಣಿಗೆ ಪಡೆದುಕೊಂಡಿದ್ದರೆಂದೂ ಹೇಳಬಯಸುತ್ತೇನೆ. ಅದು ಪೋರ್ಚುಗೀಸರಿಗೂ ಸೇರಿರಲಿಲ್ಲ. ಪೋರ್ಚುಗೀಸರು ಅದನ್ನೆಂದು ಗೆಲ್ಲಲಿಲ್ಲ. ಅವರು ಅದನ್ನು ಕಿತ್ತುಕೊಂಡರು. ಪರಿಣಾಮವಾಗಿ ಬಡಪಾಯಿ ರಾಣಿಯು ಏನೂ ಮಾಡಲಾಗಲಿಲ್ಲ. ಅಂತಿಮವಾಗಿ ಅದು ಚಾರ್ಲ್ಸ್ II ರ ಪತ್ನಿಯ ವರದಕ್ಷಿಣೆಯಾಗಿ ಬ್ರಿಟಿಷರಿಗೆ ವರ್ಗಾಯಿಸಲ್ಪಟ್ಟಿತು. ಅದೆಷ್ಟು ಸ್ವಲ್ಪವೆಂದರೆ, ವರದಕ್ಷಿಣೆಯು ೧೦ ಪೌಂಡುಗಿಂತಲೂ ಹೆಚ್ಚಾಗಿರಲಿಲ್ಲ. ಏಕೆಂದರೆ ಬಾಂಬೆಯು ಕೆಲವೊಂದು 'ಕೋಲಿ'ಗಳು ವಾಸವಿದ್ದ ಸ್ಥಳವಾಗಿದ್ದಿತು. ಪೋರ್ಚುಗೀಸರಿಂದ ಬ್ರಿಟಿಷರಿಗೆ ವರ್ಗಾಯಿಸಲ್ಪಟ್ಟಾಗ ಇದ್ದ ಮೂಲ ಬಾಂಬೆಯ ಮೂಲ ನಕ್ಷೆ ನನ್ನಲ್ಲಿದೆ. ಆದ್ದರಿಂದ ಐತಿಹಾಸಿಕವಾಗಿ, ಭೌಗೋಳಿಕವಾಗಿ ತಾರ್ಕಿಕವಾಗಿ ನಾವು ಇತರ ನಗರಗಳಿಗೆ ಅನ್ವಯಿಸಿದ ತರ್ಕದಂತೆ ಮಹಾರಾಷ್ಟ್ರೀಯರು ತಮ್ಮ ನಗರವನ್ನು ತಾವು ಹೊಂದಬೇಕೆನ್ನುವ ಹಕ್ಕಿಗೆ ಯಾರು ತಕರಾರು ಮಾಡುವರೋ ನನಗೆ ತಿಳಿಯದು. ಆದರೆ, ನನ್ನ ಮತ್ತು ಉಳಿದ ಮಹಾರಾಷ್ಟ್ರೀಯರ ನಡುವೆ ಪೂರ್ಣ ಅಭಿಪ್ರಾಯಭೇದವಿದೆ. ಉಳಿದ ಮಹಾರಾಷ್ಟ್ರೀಯರಿಗೆ ಬಾಂಬೆಯು ಸಂಯುಕ್ತ ಮಹಾರಾಷ್ಟ್ರದ ಭಾಗವಾಗಿರಬೇಕು. ಆದರೆ ನಾನು ಸಂಯುಕ್ತ

ಮಹಾರಾಷ್ಟ್ರಕ್ಕೆ ತೀರಾ ವಿರುದ್ಧವಾಗಿದ್ದೇನೆ. ಮಹಾರಾಷ್ಟ್ರೀಯನ್ನರಿಗೆ ಸಂಯುಕ್ತ ಮಹಾರಾಷ್ಟ್ರ ಏಕೆ ಬೇಕೋ ನನಗೆ ಅರ್ಥವಾಗುತ್ತಿಲ್ಲ. ನಾವು ಭವಿಷ್ಯದಲ್ಲಿ ಉತ್ತರ ಪ್ರದೇಶದೊಂದಿಗಾಗಲಿ ಅಥವಾ ರಾಜಾಸ್ತಾನದಂಥ ಯಾವುದೇ ಭೂ ಪ್ರದೇಶಗಳೊಂದಿಗೆ ಯುದ್ಧವನ್ನು ಮಾಡುವುದಿಲ್ಲವೆನ್ನುವುದು ಖಚಿತ. ನಿಮಗೇಕೆ ಸಂಯುಕ್ತ ಮಹಾರಾಷ್ಟ್ರ ಬೇಕು? ನಾನು ಬಾಂಬೆಯು ಮಹಾರಾಷ್ಟ್ರಕ್ಕೆ ಸೇರಿದ್ದು ಎನ್ನುವ ಮಹಾರಾಷ್ಟ್ರೀಯರ ಪಕ್ಷ. ಈ ಬಗ್ಗೆ ನಾನು ಪಟ್ಟುಹಿಡಿದು ಹೋರಾಡುತ್ತೇನೆ. ಎಂದಿಗೂ ಸಂಶಯಬೇಡ. ಆದ್ದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡಿದ್ದೇನೆಂದರೆ ಬಾಂಬೆಗೆ 'ನಗರ ರಾಜ್ಯ'ವೆಂದು ಪ್ರತ್ಯೇಕ ಸ್ಥಾನಮಾನವನ್ನು ನೀಡಿ, 'ಮಹಾರಾಷ್ಟ್ರ ನಗರ ರಾಜ್ಯ' ವೆಂದು ಕರೆದಲ್ಲಿ ಅದು ಏಕ ಕಾಲದಲ್ಲಿ ಮಹಾರಾಷ್ಟ್ರದ ಒಂದು ಭಾಗವೂ ಆಗುತ್ತದೆ ಮತ್ತು 'ಎ' ವರ್ಗದ ನಗರದ ಸ್ಥಾನಮಾನವನ್ನು ಹೊಂದುತ್ತದೆ. ಆದರೆ ಸರ್ಕಾರವು ನನಗೆ ಅರ್ಥಮಾಡಿಕೊಳ್ಳಲು ಕಷ್ಟಕರವಾದ ಕೆಲವೊಂದು ಕಾರಣಗಳಿಗಾಗಿ ಬಾಂಬೆ ನಗರದ ಸ್ಥಾನಮಾನವನ್ನು ನಿಕೋಬಾರ್ ದ್ವೀಪಗಳ ಮಟ್ಟಕ್ಕೆ ಇಳಿಸಲು ಹೊರಟಿದೆ; ನಾನು ಈ ತಕ್ಷಣ ಹೇಳುವುದೇನೆಂದರೆ ನನ್ನ ಅಭಿಪ್ರಾಯವನ್ನು ಬದಲಿಸಿಕೊಂಡು ಉಳಿದ ಮಹಾರಾಷ್ಟ್ರೀಯರೊಂದಿಗೆ ಸೇರಿ ಹೋರಾಟ ಮಾಡುತ್ತೇನೆ. ಇದಿಷ್ಟು ನಾನು ಮಹಾರಾಷ್ಟ್ರದ ಬಗ್ಗೆ ಹೇಳಬಯಸುವುದು.

ಬಾಂಬೆ ನಗರದಲ್ಲಿ ಮಹಾರಾಷ್ಟ್ರೀಯರು ಬಹುಮತದಲ್ಲಿಲ್ಲ ಎಂಬ ಬಗ್ಗೆ ನಾನು ಸ್ಪಷ್ಟಪಡಿಸಬಯಸುತ್ತೇನೆ. ಈ ಬಗ್ಗೆ ತುಂಬಾ ತಪ್ಪು ತಿಳುವಳಿಕೆ ಇದ್ದಂತಿದೆ ಕೆಲವೊಂದು ಜನಗಣತಿ ಪ್ರಕಾರ ಬಾಂಬೆಯಲ್ಲಿ ಮಹಾರಾಷ್ಟ್ರೀಯನ್ನರ ಸಂಖ್ಯೆ ಶೇ. ೪೬ ಅಥವಾ ಅದರ ಆಸುಪಾಸು. ಆದ್ದರಿಂದ ಅವರು ಬಹುಮತದಲ್ಲಿಲ್ಲ. ಸರ್, ಇದೊಂದು ಸಂಪೂರ್ಣ ತಪ್ಪು ತಿಳುವಳಿಕೆ. ಜನಗಣತಿಯ ಕಾರ್ಯಾಚರಣೆ, ಅದರ ಅಂಕಿ ಸಂಖ್ಯೆ ಬಲ್ಲವರ್ಯಾರು? ಜನಗಣತಿಯ ಸಂಖ್ಯೆಯು ಒಂದು ನಿರ್ದಿಷ್ಟ ದಿನದಂದು ಜನಗಣತಿ ನಡೆಸಿದಾಗ ಇದ್ದ ಪರಿಸ್ಥಿತಿಯನ್ನು ದಾಖಲು ಮಾಡುತ್ತದೆ. ಇದು ಒಂದು ಸಾಮಾನ್ಯ ಪರಿಸ್ಥಿತಿಯನ್ನು ಸೂಚಿಸುವುದಿಲ್ಲ; ಒಂದು ನಿರ್ದಿಷ್ಟ ದಿನದಂದು ನಡೆದದ್ದನ್ನು ಪ್ರಾತಿನಿಧಿಕ ಉದಾಹರಣೆಯಾಗಿ ತೆಗೆದುಕೊಳ್ಳಲಾಗುತ್ತದೆ. ಆದರೆ ನಿಜಕ್ಕೂ ಅದು ಪ್ರಾತಿನಿಧಿಕವಾಗಿರುವುದಿಲ್ಲ. ಎರಡನೆಯದಾಗಿ, ಬಾಂಬೆ ನಗರವು ಅತ್ಯಂತ ಹೆಚ್ಚು ವಲಸೆಗೆ ಗುರಿಯಾದ ನಗರಗಳಲ್ಲಿ ಒಂದು ಎಂಬುದು ಮುಖ್ಯವಾಗಿ ಗಮನಿಸಬೇಕಾದ ಅಂಶ. ದುರದೃಷ್ಟವಶಾತ್, ೧೯೫೧ರಲ್ಲಿ ಹೊಸ ಜನಗಣತಿಯನ್ನು ಕೈಗೊಂಡಾಗ ಭಾರತ ಸರ್ಕಾರವು, ತಮ್ಮ ಶ್ರಮವನ್ನು ಕಡಿಮೆ ಮಾಡಿಕೊಳ್ಳಲು, ೧೯೩೧ರ ವಲಸೆ ವರದಿ ಅಂಕಿ ಸಂಖ್ಯೆಗಳನ್ನು ರದ್ದು ಮಾಡಲಿಲ್ಲ. ೧೯೩೧ರ ಜನಗಣತಿಯ ವಲಸೆ ಅಂಕಿ ಸಂಖ್ಯೆಗಳನ್ನು ಪರಿಶೀಲಿಸಿದರೆ, ವಲಸೆ ಪರಿಸ್ಥಿತಿಯಲ್ಲಿನ ಬಾರಿ ಬದಲಾವಣೆಗಳನ್ನು ಗಮನಿಸಬಹುದು. ಬಹುಸಂಖ್ಯಾತರೆಂದು ತೋರುವ ಮಹಾರಾಷ್ಟ್ರೇತರ ಜನಸಂಖ್ಯೆಯು ಶಾಶ್ವತವಾಗಿ ಅಲ್ಲಿ ಬಹುಸಂಖ್ಯಾತವಾಗಿಲ್ಲ ಅದರಲ್ಲೂ ಬಹುಪಾಲು ಜನರು ಕಾಲಿಕ ಕೂಲಿ ಕೆಲಸಕ್ಕೆ ಬಂದವರು. ಜನಗಣತಿಯ ದಿನದಂದು ಅವರು ಅಲ್ಲಿದ್ದರೆ ಅವರನ್ನು "ಬಾಂಬೆ ನಿವಾಸಿ"ಗಳು ಎಂದು ದಾಖಲು ಮಾಡಲಾಗಿದೆ. ಜೀವನಕ್ಕೆ ಸಾಕಾಗುವಷ್ಟು ಹಣವನ್ನು ಸಂಪಾದಿಸಿರುವುದರಿಂದ ಮರುದಿನವೇ ಅವರು ತಮ್ಮ ಸ್ವಂತ ಸ್ಥಳಗಳಿಗೆ ಹೋಗಿರಲೂಬಹುದು. ಇಂಥ ಪರಿಸ್ಥಿತಿಗಳಲ್ಲಿ ಜನಗಣತಿಯ ಅಂಕಿ ಸಂಖ್ಯೆಗಳನ್ನು ಬಾಂಬೆಯ ನಾಗರಿಕರ ನೈಜ ಅಂಕಿಸಂಖ್ಯೆಗಳೆಂದು ಒಪ್ಪಲು ಸಾಧ್ಯವೆ? ನಾನು ಈ ನಿರ್ಣಯವನ್ನು ಸಾರಾಸಗಟು ನಿರಾಕರಿಸುತ್ತೇನೆ. ನಾನು ಜನಗಣತಿ ಅಂಕಿಸಂಖ್ಯೆಗಳ ವಿದ್ಯಾರ್ಥಿಯಾಗಿದ್ದೆ. ಅವುಗಳನ್ನು ಗಣನೀಯವಾಗಿ ಅಧ್ಯಯನ ಮಾಡಿದ್ದೇನೆ. ಅವು ಏನು ಹೇಳುತ್ತವೆ ಎಂದು ನನಗೆ ಗೊತ್ತು. ಆದ್ದರಿಂದ ಈ ಅಂಕಿಸಂಖ್ಯೆಗಳು ಮಹಾರಾಷ್ಟ್ರೀಯನ್ನರ ಜನ ಸಂಖ್ಯೆ ಕಡಿಮೆ ಎಂದು ತೋರಿಸುತ್ತವೆ ಎಂಬುದು ಬೋಗಸ್ ಅಲ್ಲದಿದ್ದರೂ ಗೊಂದಲಕಾರಿಯಂತೂ ಹೌದು. ಅದಕ್ಕೆ ಬೆಲೆಯಿಲ್ಲ. ಅದು

ಜನಗಣತಿಯನ್ನು ದಾಖಲೆ ಮಾಡಿದ ನಿರ್ದಿಷ್ಟ ದಿನದಂದು ಏನಾಯಿತು ಎಂಬುದನ್ನು ಮಾತ್ರ ಸೂಚಿಸುತ್ತದೆ.

ಬಹುಸಂಖ್ಯಾತ ಮಹಾರಾಷ್ಟ್ರೀಯನ್ನರ ಅಭಿಪ್ರಾಯದಂತೆ ಸಂಯುಕ್ತ ಮಹಾರಾಷ್ಟ್ರ ಬೇಕೆನ್ನುವುದನ್ನು ನಾನು ಒಪ್ಪುವುದಿಲ್ಲ ಎಂದು ಹೇಳಿದ್ದೇನೆ; ಇದೇ ಮಾತನ್ನು ಉತ್ತರ ಪ್ರದೇಶ, ರಾಜಾಸ್ಥಾನ ಮತ್ತು ನಮ್ಮ ಮುಂದೆ ಬೃಹದಾಕಾರವಾಗಿ ತೋರುತ್ತಿರುವ ಇತರ ಬೃಹತ್ ಹಿಂದಿ ಪ್ರಾಂತ್ಯಗಳನ್ನು ಕುರಿತು ಹೇಳಬಯಸುತ್ತೇನೆ. ಆ ಸ್ವರೂಪದಲ್ಲಿ ಉತ್ತರಪ್ರದೇಶ ನನ್ನ ಕಣ್ಣ ಮುಂದೆ ನಿಂತಿರುವುದನ್ನು ನೋಡಲು ನನಗೆ ಹೆದರಿಕೆಯಾಗುತ್ತಿದೆ.

**ಶ್ರೀ ಹೆಚ್.ಸಿ. ಸಕ್ಸೆನಾ (ಉತ್ತರ ಪ್ರದೇಶ):** ದೇವರು ನಿಮ್ಮ ಆತ್ಮವನ್ನು ರಕ್ಷಿಸಲಿ.

**ಡಾ. ಬಿ.ಆರ್. ಅಂಬೇಡ್ಕರ್:** ನನ್ನ ಆತ್ಮಕ್ಕಾಗಿ ನೀವೇನೂ ಪ್ರಾರ್ಥಿಸುವುದು ಬೇಡ. ನನಗೆ ಆತ್ಮವಿಲ್ಲ. ನಾನು ಬೌದ್ಧ. ನನ್ನ ಆತ್ಮಕ್ಕಾಗಿ ಪ್ರಾರ್ಥಿಸುವ ತೊಂದರೆಯನ್ನು ಯಾರೂ ತೆಗೆದುಕೊಳ್ಳುವುದು ಬೇಡ. ನನಗೆ ದೇವರಲ್ಲಿ ನಂಬಿಕೆಯಿಲ್ಲ. ನನಗೆ ಆತ್ಮವೂ ಇಲ್ಲ. ನಿಮ್ಮನ್ನು ಆ ತೊಂದರೆಯಿಂದ ಕಾಪಾಡಿದ್ದೇನೆ.

ನನಗೆ ಆಶ್ಚರ್ಯ ಮತ್ತು ನಾನು ಹೇಳುವುದೇನೆಂದರೆ ಆಯೋಗವು ಉತ್ತರ ಪ್ರದೇಶವನ್ನು ಹೇಗಿದೆಯೋ ಹಾಗೆ, ರಾಜಾಸ್ಥಾನವನ್ನು ಸಹ ಹೇಗಿದೆಯೋ ಹಾಗೆ ಉಳಿಸಿಕೊಳ್ಳಬೇಕಿತ್ತು; ವಿಂಧ್ಯ ಪ್ರದೇಶ ಮತ್ತು ಮಧ್ಯ ಪ್ರದೇಶಗಳೆರಡನ್ನು ಒಂದುಗೂಡಿಸಬೇಕಿತ್ತು.

**ಶ್ರೀ ಕೆ.ಎಸ್. ಹೆಗಡೆ (ಮದ್ರಾಸ್):** ಮಧ್ಯ ಭಾರತ.

**ಡಾ. ಬಿ.ಆರ್. ಅಂಬೇಡ್ಕರ್:** ಹಾಗೆಂದರೇನು? ನಾನು ಸ್ವಲ್ಪ ಲೆಕ್ಕಾಚಾರ ಮಾಡಿದ್ದೇನೆ. ಉತ್ತರ ಪ್ರದೇಶದ : ವಿಸ್ತ್ರೀರ್ಣ ೧,೧೪,೩೨೩ ಚ. ಮೈಲಿ. ಅದರ ಜನಸಂಖ್ಯೆ ೬,೩೨,೫೪,೧೧೮. ಬಿಹಾರ: ವಿಸ್ತೀರ್ಣ ೭೦,೩೬೮, ಚ. ಮೈಲಿ, ಜನಸಂಖ್ಯೆ ೪,೦೨,೧೮,೯೧೬, ಮಧ್ಯಪ್ರದೇಶ: ವಿಸ್ತೀರ್ಣ ೨,೦೧,೬೩೩ ಚ. ಮೈಲಿ, ಜನಸಂಖ್ಯೆ ೩,೨೮,೪೬,೯೭೧, ರಾಜಾಸ್ತಾನ : ವಿಸ್ತೀರ್ಣ ೧,೨೮,೪೨೪ ಚ. ಮೈಲಿ, ಜನಸಂಖ್ಯೆ ೧,೫೨,೯೭,೯೭೯ ಒಟ್ಟು ವಿಸ್ತೀರ್ಣ ಹತ್ತು ಕೋಟಿ ಚ. ಮೈಲಿ ಜನಸಂಖ್ಯೆ ಸುಮಾರು ಹದಿನೈದು ಕೋಟಿ.

**ಶ್ರೀ ಟಿ. ಪಾಂಡೆ (ಉತ್ತರ ಪ್ರದೇಶ):** ಹತ್ತು ಲಕ್ಷ ಚ. ಮೈಲಿ.

**ಡಾ. ಬಿ.ಆರ್. ಅಂಬೇಡ್ಕರ್:** ನನ್ನ ವಾದಕ್ಕೆ ಅದೇನೂ ಅಷ್ಟು ಮುಖ್ಯವಲ್ಲ.

ನನ್ನ ಮಟ್ಟಿಗೆ ಕೈಗೆತ್ತಿಕೊಳ್ಳಬೇಕಾದ ಪ್ರಶ್ನೆ–ಅತ್ಯಂತ ಗಂಭೀರವಾದ ಪ್ರಶ್ನೆ, ನಮಗೆ ಒಂದು ಭಾಷೆಗೆ ಒಂದು ರಾಜ್ಯ ಬೇಕೆ? ಅಥವಾ ಒಂದು ರಾಜ್ಯಕ್ಕೆ ಒಂದು ಭಾಷೆ ಇರಬೇಕೆ ? ಈ ಪ್ರಶ್ನೆಗೆ ರಾಜಕೀಯ ಪರಿಣಾಮಗಳಿಲ್ಲದಿದ್ದರೆ ಅದರ ಬಗ್ಗೆ ಯಾರೂ ಯೋಚಿಸುತ್ತಿರಲಿಲ್ಲ; ಆದರೆ ತೊಂದರೆ ಎಂದರೆ ಈ ಪ್ರಶ್ನೆ ಅತ್ಯಂತ ಗಂಭೀರವಾದ ರಾಜಕೀಯ ಪರಿಣಾಮಗಳನ್ನು ಹೊಂದಿದೆ. ಸಂಯುಕ್ತ ಸಂಸ್ಥಾನದಲ್ಲಿ ಪ್ರತಿ ರಾಜ್ಯಕ್ಕೂ ವಿವಿಧ ರಾಜ್ಯಗಳ ಜನಸಂಖ್ಯೆ ವಿಭಿನ್ನವಾಗಿದೆ. ಕೆಲವು ರಾಜ್ಯಗಳಲ್ಲಿ ಅದು ಕಡಿಮೆ; ಮತ್ತೆ ಕೆಲವು ರಾಜ್ಯಗಳಲ್ಲಿ ಭಾರಿ. ಆದರೆ ರಾಜ್ಯಗಳಿಗೆ ಸಮಾನ ಅಧಿಕಾರಗಳಿರುವುದರಿಂದ ಅಮೇರಿಕನ್ನರು ಇದರ ಬಗ್ಗೆ ಚಿಂತಿಸುವುದಿಲ್ಲ. ಮೇಲ್ಮನೆಯ ಹೊಂದಿರುವ ಅಧಿಕಾರವನ್ನು ಕೆಳಮನೆಯು ಹೊಂದಿದೆ. ಎಲ್ಲಾ ರಾಜ್ಯಗಳು ಅವುಗಳ ಜನಸಂಖ್ಯೆ ಏನೇ ಇರಲಿ ಮೇಲ್ಮನೆಯಲ್ಲಿ ಸಮಾನ ಪ್ರಾತಿನಿಧ್ಯವನ್ನು ಹೊಂದಿವೆ. ಇಲ್ಲಿನ ಸ್ಥಿತಿಯೇನು? ನಮ್ಮ ಸಂವಿಧಾನದ ಮೇರೆಗೆ ಅಂಥ ಸಮಾನತೆ ಇಲ್ಲ. ಪ್ರತಿಯೊಂದು ರಾಜ್ಯ ಏಕರೂಪದ ಅಧಿಕಾರವನ್ನು ಹೊಂದಿಲ್ಲ. ಹಣಕಾಸಿಗೆ ಸಂಬಂಧಿಸಿದಂತೆ ಮೇಲ್ಮನೆಗೆ ಅಧಿಕಾರವೇ ಇಲ್ಲ. ಉತ್ತರ ಭಾಗದಲ್ಲಿರುವ ರಾಜ್ಯಗಳು ಒಂದು ವಿಷಯದ ಬಗ್ಗೆ ಒಗ್ಗೂಡಿದರೆ, ಅದೇ ವಿಷಯದ ಬಗ್ಗೆ ದಕ್ಷಿಣದ ರಾಜ್ಯಗಳು ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಸಂದರ್ಭ ಬಂದರೂ ಬರಬಹುದು. ಅಂಥ ಪ್ರಸಂಗದಲ್ಲಿ

ಏನಾಗಬಹುದು? ಅಂಥ ಸಂದರ್ಭದಲ್ಲಿ ಉತ್ತರವು, ದಕ್ಷಿಣದ ರಾಜ್ಯಗಳು ಹಿತಾಸಕ್ತಿ ಹೊಂದಿರುವ ಪ್ರಸ್ತಾವನೆಯನ್ನು ಬದಿಗೊತ್ತಬಹುದು. ಹಾಗಾದರೆ ಅಂತರ್ಯುದ್ಧ ನಡೆಯಬಹುದೆಂಬ ಭೀತಿ ನನಗೆ. ನನ್ನ ಮಾತು ಸ್ವಲ್ಪ ಉತ್ಪ್ರೇಕ್ಷೆ ಎನಿಸಬಹುದು; ಆದರೆ ಹಾಗೆ ನಡೆದಿರುವುದುಂಟು. ಅದು ಸಂಯುಕ್ತ ಸಂಸ್ಥಾನದಲ್ಲಿ ನಡೆದಿದೆ; ಸಂಯುಕ್ತ ಸಂಸ್ಥಾನದಲ್ಲಿ ಅಂತರ್ಯುದ್ಧದ ಮೂಲವೇ ಅಧಿಕಾರದ ಅಸಮಾನತೆ. ಆರಂಭಿಕ ಹಂತಗಳಲ್ಲಿ ಒಂದು ನಿರ್ದಿಷ್ಟ ವ್ಯಾಪ್ತಿಯವರೆಗೆ ಗುಲಾಮರಾಜ್ಯಗಳಿರಬಹುದೆಂದು, ಆದರೆ ಆ ವ್ಯಾಪ್ತಿ ಮೀರಿದ ಪ್ರದೇಶಗಳಲ್ಲಿ ಗುಲಾಮಗಿರಿ ಇರತಕ್ಕುದಲ್ಲವೆಂದು ಒಪ್ಪಲಾಗಿತ್ತು. ಒಂದು ಕಾಲದಲ್ಲಿ ಕ್ಯಾಲಿಫೋರ್ನಿಯಾ ಒಂದು ಭೂ ಪ್ರದೇಶವಾಗಿತ್ತು; ರಾಜ್ಯವಾಗಿರಲಿಲ್ಲ. ಆನಂತರ ಅದನ್ನು ಒಂದು ರಾಜ್ಯವನ್ನಾಗಿಸಲು ತೀರ್ಮಾನಿಸಲಾಯಿತು. ದಕ್ಷಿಣದ ರಾಜ್ಯಗಳು ಹೊಡೆದಾಡಿದವು. ಏಕೆಂದರೆ, ಕ್ಯಾಲಿಫೋರ್ನಿಯಾ ಒಂದು ರಾಜ್ಯವಾದರೆ ಅದು ಮತದಾನದ ಹಕ್ಕನ್ನು ಪಡೆದುಕೊಳ್ಳುವುದು ಮತ್ತು ಮತದಾನದ ತಕ್ಕಡಿಯನ್ನು ಬದಲಾಯಿಸುವುದು ಎಂದು ಅವರು ಭಾವಿಸಿದರು. ಏನೇ ಆದರೂ ಉತ್ತರದ ರಾಜ್ಯಗಳು ಕ್ಯಾಲಿಫೋರ್ನಿಯಾವನ್ನು ರಾಜ್ಯವನ್ನಾಗಿ ಪರಿವರ್ತಿಸಲು ನಿರ್ಧರಿಸಿದವು. ಆ ಮೂಲಕ ಅವರು ಬಹುಮತವನ್ನು ಪಡೆದು ಸಂಯುಕ್ತ ಸಂಸ್ಥಾನದಲ್ಲಿ ಗುಲಾಮಗಿರಿಯೇ ಬೇಡವೆಂದು ನಿರ್ಧರಿಸಿದರು. ಇದು ದಾಕ್ಷಿಣಾತ್ಯ ರಾಜ್ಯಗಳ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳಿಗೆ ಧಕ್ಕೆಯುಂಟು ಮಾಡಿತು. ಕೂಡಲೇ ದಕ್ಷಿಣದ ರಾಜ್ಯಗಳು ಪ್ರತಿಭಟಿಸಿದವು 'ಗುಲಾಮಗಿರಿಯ ರದ್ಧತಿಗೆ ನೀವು ಅಧಿಕಾರವನ್ನು ಚಲಾಯಿಸುವುದಾದರೆ ನಾವು ಒಕ್ಕೂಟದ ಒಂದು ಭಾಗವಾಗಿ ಉಳಿಯಲಾರೆವು' ಎಂದು ಅವು ಹೇಳಿದವು. ನಂತರದ್ದು ಅಂತರ್ಯದ್ಧ. ಇಲ್ಲಿಯೂ ಉತ್ತರದ ಜನಗಳ ಪ್ರಭಾವಕ್ಕೆ ಹೆದರಿದ ಜನ ಇದ್ದಾರೆ. ನೀವು ಇತ್ತೀಚಿನ ಪ್ರಮುಖ ಉದಾಹರಣೆಯನ್ನು ನೋಡುವುದಾದರೆ.......

**ಶ್ರೀ ಕೈಲಾಸ್ ಬಿಹಾರಿ ಲಾಲ್ (ಬಿಹಾರ):** ಏಕೆಂದರೆ ದಕ್ಷಿಣದ ರಾಜ್ಯಗಳಿಗೆ ಗುಲಾಮಗಿರಿ ಬೇಕಿತ್ತು.

**ಡಾ. ಬಿ.ಆರ್. ಅಂಬೇಡ್ಕರ್:** ಮಾನ್ಯ ಸದಸ್ಯರು ಹೇಳಿದ್ದು ಸರಿ. ಶ್ರೀ ರಾಜಗೋಪಾಲಾಚಾರಿಯವರು ಬಹುದಿನಗಳಿಂದಲೂ ಒಕ್ಕೂಟ ಮುರಿದುಬೀಳುವುದೆಂಬ ಶಂಕೆಯನ್ನು ವ್ಯಕ್ತಿಪಡಿಸುತ್ತಿದ್ದಾರೆ.

**ಮಾನ್ಯ ಸದಸ್ಯರು:** ಇಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ಗುಲಾಮಗಿರಿಯನ್ನು ಉಳಿಸಿಕೊಂಡಿರುವವರು ಅನೇಕರಿದ್ದಾರೆ.

**ಶ್ರೀ ಆರ್.ಯು. ಅಗ್ನಿಭೋಜ್ (ಮಧ್ಯಪ್ರದೇಶ):** ಸ್ವಾತಂತ್ರ ಉಳಿಯುವುದು ಒಗ್ಗೂಡಿದ ಜನತೆಯಿಂದಲೇ ಹೊರತು ಗುಲಾಮಗಿರಿಯಿಂದಲ್ಲ. ಆದ್ದರಿಂದ ಈ ದೇಶವು ಏಕತೆಯಿಂದ ಸ್ವಾತಂತ್ರ್ಯವನ್ನು ಹೊಂದುವುದೇ ಹೊರತು ಗುಲಾಮಗಿರಿಯಿಂದಲ್ಲ.

**ಡಾ. ಬಿ.ಆರ್. ಅಂಬೇಡ್ಕರ್:** ತಮ್ಮ ಭರವಸೆಗಾಗಿ ನಾನು ತುಂಬಾ ಕೃತಜ್ಞನಾಗಿದ್ದೇನೆ.

**ಶ್ರೀ ಆರ್.ಯು. ಅಗ್ನಿಭೋಜ್:** ಧನ್ಯವಾದಗಳು.

**ಡಾ. ಬಿ.ಆರ್. ಅಂಬೇಡ್ಕರ್:** ಉತ್ತರ ಮತ್ತು ದಕ್ಷಿಣಗಳ ನಡುವೆ ವಿವಾದ ಬರಬಹುದಾದಂಥ ಅನೇಕ ವಿಷಯಗಳನ್ನು ಯಾರೂ ಊಹಿಸಬಹುದು. ಅದು ಸಂಭವಿಸಿ ವಿಷಯ ಭೀಕರ ಹಂತ ತಲುಪಿದರೆ, ಏಕತೆಯನ್ನು ತರಲು ಮಾಡಿರುವ ಎಲ್ಲಾ ಪ್ರಯತ್ನಗಳು ವ್ಯರ್ಥವಾಗುವವು. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ ಸಂಯುಕ್ತ ಪ್ರಾಂತ್ಯಗಳನ್ನು ಮೂರು ಪ್ರಾಂತ್ಯಗಳನ್ನಾಗಿ ವಿಭಜಿಸಬೇಕು. ಬಿಹಾರವನ್ನು ಎರಡು ಭಾಗಗಳನ್ನಾಗಿ ಮತ್ತು ಮಧ್ಯ ಪ್ರದೇಶವನ್ನು ಸಹ ಎರಡು ಭಾಗಗಳನ್ನಾಗಿ ತುಂಡರಿಸಬೇಕು.

**ಶ್ರೀ ಆರ್.ಯು. ಅಗ್ನಿಭೋಜ್:** ಆಗ ೬೦೦ ರಾಜ್ಯಗಳಾಗುತ್ತವೆ.

**ಡಾ. ಬಿ.ಆರ್. ಅಂಬೇಡ್ಕರ್:** ಏನೂ ನಷ್ಟವಿಲ್ಲ. ಅದು ಭಾಷಾವಾರು ತತ್ವಕ್ಕೆ ಧಕ್ಕೆಯುಂಟು ಮಾಡುವುದಿಲ್ಲ.

ಅವು ಒಂದೇ ಭಾಷೆಯನ್ನು ಹೊಂದಿರುತ್ತವೆ. ಉತ್ತರ ಪ್ರದೇಶವನ್ನು ೩ ರಾಜ್ಯಗಳನ್ನಾಗಿ ಮತ್ತು ಮಧ್ಯ ಪ್ರದೇಶವನ್ನು ೨ ಭಾಗಗಳನ್ನಾಗಿ ವಿಭಜಿಸಿದರೆ ಏನಾಗುವುದು? ನನಗೆ ವ್ಯತ್ಯಾಸವೇನೂ ಕಾಣುವುದಿಲ್ಲ. ನನ್ನ ಸ್ನೇಹಿತರಾದ ಶ್ರೀ ಪಂತ್ ಅವರ ಒಂದು ಹೇಳಿಕೆಯನ್ನು ನಾನು ಓದಿರುವುದು ನೆನಪಿದೆ. ಅಡ್ಡಿಯಿಲ್ಲ ಎಂದು ಹೇಳಿದ್ದಾರೆ. ಆದರೆ ಚರ್ಚೆ ಸಂದರ್ಭದಲ್ಲಿ ಅವರು ಈ ಬಗ್ಗೆ ಒಂದೂ ಮಾತನಾಡಿಲ್ಲ ಅಥವಾ ಅವರು ತಾವಾಗಿಯೇ ಈ ಸ್ವಯಂ ಬಲಿದಾನವನ್ನು ಸೂಚಿಸಿರುವುದಿಲ್ಲ. ನಾನು ಎಚ್ಚರಿಕೆ ನೀಡುತ್ತಿದ್ದೇನೆ: ಸದನ ನನ್ನ ಮಾತು ಕೇಳುವುದಿಲ್ಲ ಎಂದು ನನಗೆ ಗೊತ್ತು. ಆದರೆ ನನಗೆ ಅನ್ನಿಸಿದ್ದನ್ನು ಹೇಳುವುದು ನನ್ನ ಕರ್ತವ್ಯ. ಮರಾಠವಾಡಕ್ಕೆ ಸಂಬಂಧಿಸಿದಂತೆ ನನ್ನಲ್ಲಿ ಅತ್ಯಂತ ತೀವ್ರವಾದ ಭಾವನೆಗಳಿವೆ. ನಾನು ಸಂಯುಕ್ತ ಮಹಾರಾಷ್ಟ್ರವನ್ನು ಅತ್ಯಂತ ಉತ್ಕಟವಾಗಿ ವಿರೋಧಿಸುತ್ತೇನೆ. ನಾನು ಇದರ ಪ್ರದೇಶಗಳಿಗಿಂತಲೂ ಮಹಾರಾಷ್ಟ್ರದ ಮೇಲೆ ಅಧಿಕಾರಯುತವಾಗಿ ಮಾತನಾಡಬಲ್ಲೆ. ಸಂಯುಕ್ತ ಮಹಾರಾಷ್ಟ್ರದ ಪರಿಸ್ಥಿತಿ ಏನಾಗಿದೆ? ಮಹಾರಾಷ್ಟ್ರದಲ್ಲಿ ಸತಾರ ಜಿಲ್ಲೆ ಅಥವಾ ಆ ಪ್ರದೇಶದಿಂದ ಬಂದವರು ಮಾತ್ರ ರಾಜಕೀಯ ಹುದ್ದೆ ಹಿಡಿದುಕೊಂಡಿರುವುದನ್ನು ನಾನು ನೋಡಿದ್ದೇನೆ. ಉಳಿದ ಜನ ಎಲ್ಲಿದ್ದರೋ ಅಲ್ಲಿಯೇ ಇದ್ದಾರೆ. ಸತಾರದಿಂದ ಬಂದ ಓರ್ವ ಮಂತ್ರಿವರ್ಯರಿಗೆ, ಉದಾಹರಣೆಗೆ ರತ್ನಗಿರಿ ಜಿಲ್ಲೆ ಕುರಿತು ಏನು ಹಿತಾಸಕ್ತಿ ಇದ್ದೀತು? ಯಾರೇ ಮಂತ್ರಿಗಳು ರತ್ನಗಿರಿ ಜಿಲ್ಲೆಗೆ ಭೇಟಿ ನೀಡಿದ್ದಾರೆಂದು ನನಗೆ ಅನ್ನಿಸುವುದಿಲ್ಲ.

**ಓರ್ವ ಗೌ. ಸದಸ್ಯರು:** ಅನೇಕರಿದ್ದಾರೆ.

**ಡಾ. ಬಿ.ಆರ್. ಅಂಬೇಡ್ಕರ್:** ಭತ್ಯಗಳನ್ನು ತೆಗೆದುಕೊಳ್ಳಲು ಹೊರತು ಸೇವೆ ಮಾಡುವುದಕ್ಕಲ್ಲ.

**ಓರ್ವ ಗೌ. ಸದಸ್ಯರು:** ಆದಾಗ್ಯೂ ಅವರು ಭೇಟಿ ನೀಡಿದ್ದಾರೆ.

**ಡಾ. ಬಿ.ಆರ್. ಅಂಬೇಡ್ಕರ್:** ಅನೇಕ ಪ್ರದೇಶಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಸತಾರ ಜಿಲ್ಲೆಯ ಮರಾಠನಿಗೆ ರತ್ನಗಿರಿ ಜಿಲ್ಲೆಯಲ್ಲಿ ಯಾವ ಹಿತಾಸಕ್ತಿ ಇದ್ದೀತು? ಉದಾಹರಣೆಗೆ ಮಹಾವಿದರ್ಭದ ಬ್ರಾಹ್ಮಣನಿಗೆ ಸತಾರ ಜಿಲ್ಲೆಯಲ್ಲಿ ಏನು ಹಿತಾಸಕ್ತಿ ಇದ್ದೀತು? ಹೀಗೆ ಒಟ್ಟಾರೆ ಇರುಕಿಕೊಳ್ಳುವ ಸ್ವಭಾವ ನನಗೆ ಅರ್ಥವಾಗುತ್ತಿಲ್ಲ. ಇದೇನು ಭರತ ಮಿಲನವೇ? ರಾಮ ಲಂಕೆಯಿಂದ ಬಂದಾಗ ಭರತ ಅವನನ್ನು ಅಪ್ಪಿಕೊಂಡ. ಏತಕ್ಕೆ – ಸೋದರ ಪ್ರೀತಿಯಿಂದ ಮತ್ತು ವಾತ್ಸಲ್ಯದಿಂದ ಬೇರೇನೂ ಅಲ್ಲ. ಅಂಥ ಪ್ರದೇಶಗಳನ್ನು ತಮ್ಮದೇ ಹಿತಾಸಕ್ತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಏಕೆ ಬಿಡಬಾರದು? ಅಲ್ಲದೆ ನನ್ನ ಸ್ನೇಹಿತರಾದ ಶ್ರೀ ಪಂತ್ ಅವರಿಗೆ ಗೊತ್ತು – ನಾನು ತಪ್ಪಿರಲೂಬಹುದು – ಅವರ ಉತ್ತರಾಧಿಕಾರಿಗಳು ಯಾರು? ಹೇಳಬಲ್ಲರೆ? ಮಂತ್ರಿಗಳಾಗಿ ಅವರ ಉತ್ತರಾಧಿಕಾರಿ ಯಾರು? ನನಗಂತೂ ಯಾರೂ ಕಾಣುತ್ತಿಲ್ಲ ಕಾಂಗ್ರೆಸ್ಸಿನ ಶ್ರೀ ಸಾಮಾನ್ಯರಲ್ಲಿ ಖಂಡಿತವಾಗಿ ನನಗೆ ಯಾರು ಕಾಣುತ್ತಿಲ್ಲ. ನನ್ನ ಸ್ನೇಹಿತರಾದ ಶ್ರೀ ಪಂತ್ ಅವರಂಥ ಮೇರು ವ್ಯಕ್ತಿತ್ವದ ಮಂತ್ರಿಗಳನ್ನು ನೋಡಬೇಕೆಂದರೆ ಅವರು ಕಾಂಗ್ರೆಸ್ ಬಣದಿಂದ ಹೊರಗಿನವರಾಗಬೇಕಾಗಿದೆ. ಅದು ಖಚಿತ.

**ಶ್ರೀ ಹೆಚ್.ಬಿ. ಸಕ್ಸೆನಾ:** ಉದಾರಣೆಗೆ ತಾವು.

**ಡಾ. ಬಿ.ಆರ್. ಅಂಬೇಡ್ಕರ್:** ನಾನು ಬಹುಬೇಗ ಸಾಯಲಿದ್ದೇನೆ. ನನ್ನನ್ನು ಪಟ್ಟಿಗೆ ಸೇರಿಸಬೇಡಿ. ಈ ದೇಶ ಇದೇ ರೀತಿಯಾದರೆ ವಿನಾಶವಾಗಲಿದೆ. ರಾಜಕಾರಣಿಗಳನ್ನು ಅವರು ತಮ್ಮ ಭುಜಗಳ ಮೇಲೆ ಜವಾಬ್ದಾರಿಯನ್ನು ಹೊರುವಂತೆ ಮಾಡುವ ರೀತಿಯಲ್ಲಿ ಅವರನ್ನು ಬೆಳಸಿ, ಅವರಿಗೆ ತರಬೇತಿ ನೀಡುವುದು ನಮ್ಮ ಪ್ರಾಥಮಿಕ ಕಾಳಜಿ. ನಾವು ಒಂದೇ ವಿಷಯದ ಮೇಲೆ ಕೊನೆಯವರೆಗೂ ಪಟ್ಟಾಗಿ ಕುಳಿತರಬಾರದು. ನಾವು ಬದುಕಿರುವಾಗಲೇ ಇತರರು ಜವಾಬ್ದಾರಿ ಹೊರಲು ಅವಕಾಶ ನೀಡಬೇಕು. ಹೀಗಾಗಿ ಅವರು ತಪ್ಪು ಮಾಡಿದರೆ ಸಕಾಲದಲ್ಲಿ ತಿದ್ದಬಹುದು. ಉತ್ತರ ಪ್ರದೇಶವನ್ನು ಮೂರು ಪ್ರಾಂತ್ಯಗಳನ್ನಾಗಿ ವಿಭಜಿಸಿದರೆ

ಆಡಳಿತ ಕಲೆಯಲ್ಲಿ ತರಬೇತಿ ಹೊಂದಿದ ೩೦ ಮಂತ್ರಿಗಳಿರುತ್ತಾರೆ. ಅದೇ ಒಂದೇ ಆದರೆ ೧೦ ಮಂತ್ರಿಗಳು ಮಾತ್ರ ಇರುತ್ತಾರೆ. ಇದೇ ಬಿಹಾರಕ್ಕೂ ಅನ್ವಯವಾಗುತ್ತದೆ. ದೊಡ್ಡ ದೊಡ್ಡ ಪ್ರಾಂತ್ಯಗಳಲ್ಲಿ ಇದೇ ರೀತಿ ಆಗುತ್ತದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ದೊಡ್ಡ ಪ್ರಾಂತ್ಯಗಳನ್ನು ಅವು ಇರುವಂತೆಯೇ ಉಳಿಸಿಕೊಳ್ಳುವುದರಿಂದ ನಮ್ಮ ದೇಶಕ್ಕೆ ಭಾರಿ ಅನನುಕೂಲವಾಗಲಿದೆ. ನನ್ನ ಸ್ನೇಹಿತರು ಬೇರೊಂದು ವಾದವನ್ನು ಕೇಳದಿದ್ದರೂ ಈ ವಾದವನ್ನು ಬಹುಶಃ ಕೇಳಿಸಿಕೊಂಡಿದ್ದರೆ, "ಓ ! ರಾಮ ಮತ್ತು ಕೃಷ್ಣರಿಬ್ಬರು ಜನಿಸಿದ ಈ ದೇಶವನ್ನು ವಿಭಜಿಸಬೇಡಿ" ಎಂದು. ಈ ವಾದವನ್ನು ಅವರು ಕೆಲವೊಮ್ಮೆ ಮಾಡಿದ್ದಾರೆ. ಇದು ಓರ್ವ ರಾಜನೀತಿಜ್ಞನ ವಾದವಲ್ಲ. ಸರ್, ನಾನು ಮರಾಠವಾಡ ಜನರ ಅಂದರೆ ಮಹಾರಾಷ್ಟ್ರೀಯರ ಬಗ್ಗೆ ನಾನು ಹೇಳುತ್ತಿದ್ದ ಮಾತುಗಳು ಈ ಮಹಾರಾಷ್ಟ್ರದ ಬಗೆಗೂ ನಿಜವೇ. ಮಹಾರಾಷ್ಟ್ರ ಕೆಲವೊಂದು ಬ್ರಾಹ್ಮಣರನ್ನು ಹೊರತುಪಡಿಸಿ ರಾಜಕೀಯವಾಗಿ ಸಾಮಾನ್ಯ ಮಟ್ಟದಲ್ಲೂ ಇಲ್ಲ. ನನಗೆ ವಿಷಾದವೆನಿಸುತ್ತದೆ. ನಾನು ಯಾವುದೇ ವೈಯಕ್ತಿಕ ದ್ವೇಷದಿಂದ ಮಾತನಾಡುತ್ತಿಲ್ಲ. ನನ್ನ ಸಾರ್ವಜನಿಕ ಜೀವನ ಸಾಕಾಷ್ಟಾಗಿದೆ ಎಂದು ನನಗೆ ಗೊತ್ತು. ಇನ್ನು ಮುಂದೆ ನನಗೆ ಯಾರೊಂದಿಗೂ ಸ್ಪರ್ಧಿಸುವ ಬಯಕೆಯಿಲ್ಲ. ಆದರೆ ನನ್ನ ರಾಜ್ಯ ಚೆನ್ನಾಗಿ ಆಳಲ್ಪಡಬೇಕು; ಹಾಗೆ ಉತ್ತಮ ಆಳ್ವಿಕೆಗೆ ಸಮರ್ಥ ಜನರು ಬೇಕು. ಆದರೆ ಸಂಯುಕ್ತ ಮಹಾರಾಷ್ಟ್ರದಲ್ಲಿ ೫ ಅಥವಾ ೬ಕ್ಕಿಂತ ಹೆಚ್ಚು ಜನ ದೊರೆಯಲಾರರು. ಅವರಲ್ಲಿ ಕೆಲವರು ಬ್ರಾಹ್ಮಣರು ಮತ್ತೆ ಕೆಲವರು ಬ್ರಾಹ್ಮಣೇತರರು. ಮಹಾರಾಷ್ಟ್ರದ ಭವಿಷ್ಯತ್ತಿಗೆ ಅಷ್ಟು ಸಾಕೆ ? ಈಗಷ್ಟೇ ನಿಜಾಮರ ಆಡಳಿತದಿಂದ ಬಿಡುಗಡೆ ಹೊಂದಿದ ಮರಾಠವಾಡ ಎಂಬ ಪ್ರದೇಶವಿದು. ಆ ಪ್ರದೇಶದ ಭೀಕರತೆಯನ್ನು ಬಟ್ಟೆ ಬರೆ ಊಟವಿಲ್ಲದ, ಶಿಕ್ಷಣವಿಲ್ಲದ ಜನರ ಸ್ಥಿತಿಗತಿಗಳನ್ನು ನಾವು ಹೋಗಿ ನೋಡಬೇಕಷ್ಟೆ. ಅಲ್ಲಿ ಪ್ರಾಥಮಿಕ ಶಾಲೆಯೂ ಇಲ್ಲ. ಅಲ್ಲಿ ಒಂದೇ ಒಂದು ಪ್ರಾಥಮಿಕ ಶಾಲೆಯಿದ್ದು ಅಲ್ಲಿ ಒಂದೇ ಕುರ್ಚಿಯಿದ್ದು, ಎಲ್ಲಾ ಶಿಕ್ಷಕರು ಇರುವ ಒಂದೇ ಕುರ್ಚಿಯಲ್ಲಿ ಇತರರು ಕುಳಿತುಕೊಳ್ಳದಂತೆ ಮಾಡಿ, ತಾವೇ ಅದನ್ನು ಆಕ್ರಮಿಸಲು ಬೆಳಿಗ್ಗೆ ಹೊತ್ತಿಗೆ ಮುಂಚೆಯೇ ಎದ್ದು ಓಡುತ್ತಾರೆಂದು ಕೇಳಿದ್ದೇನೆ. ಅತ್ಯಂತ ಹಿಂದುಳಿದ ಪ್ರದೇಶವಾದ ನೀರಾವರಿ, ಆಹಾರ, ಬಟ್ಟೆಬರೆ ಶಾಲೆ ಅಥವಾ ಯಾವುದೇ ಇತರ ಸೌಲಭ್ಯವಿಲ್ಲದ ಈ ಪ್ರದೇಶವು ಅಭಿವೃದ್ಧಿ ಹೊಂದುವುದೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಯಾವುದೇ ಕಾರಣಕ್ಕೆ ನಿಜಾಮ ತನ್ನೆಲ್ಲ ಪ್ರೀತಿ ಪ್ರೇಮವನ್ನು ಇತರ ಜನರ ಮೇಲೆ ತೋರಿಸಿದ್ದಾನೆ ಹೊರತು ಮರಾಠವಾಡದ ಮೇಲೆ ಅಲ್ಲ. ನನ್ನ ಸ್ನೇಹಿತರಾದ ಕಾಕಾ ಗಾಡ್ಗೀಲ್ ಅವರು ಸಂಯುಕ್ತ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದರೆ ಮರಾಠವಾಡದ ಸ್ಥಿತಿಗತಿಗಳ ಬಗ್ಗೆ ಗಮನ ಕೊಡುತ್ತಾರೆಯೇ? ಅಥವಾ ಪೂನಾ ಮತ್ತು ಅದರ ನಿವಾಸಿಗಳ ಬಗ್ಗೆ ಗಮನ ಕೊಡುತ್ತಾರೆಯೆ? ನಾನು ಅಸಂಬದ್ಧ ಮಾತನಾಡುವುದು ಬೇಡ. ಸರಳ ಸಂಗತಿಗಳನ್ನು ಅವು ಹೇಗಿವೆಯೋ ಹಾಗೆಯೇ ನೋಡೋಣ. ಮರಾಠವಾಡ ಒಂದು ಪ್ರತ್ಯೇಕ ಪ್ರಾಂತ್ಯ ಅಥವಾ ರಾಜ್ಯವಾಗಲು ಮತ್ತು ಮರಾಠವಾಡ ತಾವೇ ಆಳ್ವಿಕೆ ನಡೆಸಿಕೊಳ್ಳಲು ಏಕೆ ಅವಕಾಶ ನೀಡಬಾರದು? ಅದರ ಹಿತಾಸಕ್ತಿಗಳು ನನಗೆ ಚೆನ್ನಾಗಿ ಗೊತ್ತು. ನಾನು ಮರಾಠವಾಡದಲ್ಲಿ ಶಾಲೆಯೊಂದನ್ನು ಪ್ರಾರಂಭಿಸಿರುವ ಸರಳ ಕಾರಣಕ್ಕಾಗಿ ಅದರೊಂದಿಗೆ ನನ್ನ ಸಂಪರ್ಕವಿದೆ. ಆದರೆ ಕಾಲೇಜು ಪುರೋಭಿವೃದ್ಧಿ ಹೊಂದುತ್ತಿಲ್ಲ. ಪ್ರತಿವರ್ಷವೂ ನನಗೆ ನಷ್ಟ ಉಂಟಾಗುತ್ತಿದೆ. ಮರಾಠವಾಡದ ಜನತೆ ತಮ್ಮ ಬಗ್ಗೆ ಮಾತನಾಡುವ ಬಾಂಬೆ ಜನರಿಗಿಂತ ತಮ್ಮನ್ನು ತಾವು ನೋಡಿಕೊಳ್ಳಬಲ್ಲರೆಂದು ನನಗೆ ಗೊತ್ತು. ಅಲ್ಲಿ ವಿಶೇಷವಾಗಿ ಶಿಕ್ಷಣವೂ ಇಲ್ಲ. ಮರಾಠವಾಡವನ್ನು ಪೂನಾ ವಿಶ್ವವಿದ್ಯಾಲಯಕ್ಕೆ ಸೇರಿಸಿಬಿಡುವ ಅಪಾಯವಿದೆ. ಏನಾಗುವುದೂ ದೇವರಿಗೆ ಗೊತ್ತು.

**ಶ್ರೀ ಬಿ.ಬಿ. ಶರ್ಮ (ಉತ್ತರ ಪ್ರದೇಶ):** ಹಾಗಾದರೆ ನೀವು ದೇವರನ್ನು ನಂಬುತ್ತೀರಾ?

**ಡಾ. ಬಿ.ಆರ್. ಅಂಬೇಡ್ಕರ್:** ನೀವು ಹೇಳಿದ್ದು ನನಗೆ ಕೇಳಿಸಲಿಲ್ಲ. ನಿಮಗೆ ನನ್ನಿಂದ ಉತ್ತರ ಬೇಕಿದ್ದರೆ ಕೇಳುವಂತೆ ಮಾಡಬೇಕು.

**ಶ್ರೀ ಜಸ್ಪಾಲ್ ರಾಯ್ ಕಪೂರ್ (ಉತ್ತರ ಪ್ರದೇಶ):** ಹಿತವಲ್ಲದ ಪ್ರಶ್ನೆಗಳನ್ನು ಕೇಳಿಸಿಕೊಳ್ಳಬೇಡಿ.

**ಶ್ರೀ ಬಿ.ಬಿ. ಶರ್ಮ:** ನಿಮ್ಮ ದೇವರು ಯಾರು?

**ಡಾ. ಬಿ.ಆರ್. ಅಂಬೇಡ್ಕರ್:** ನನಗೆ ಜನತೆಯೇ ದೇವರು.

ಸರ್, ಮರಾಠವಾಡದ ಸಂದರ್ಭದಲ್ಲಿ ಅವರು ತಮ್ಮ ಶಿಕ್ಷಣವನ್ನು ನೋಡಿಕೊಳ್ಳಲು ಪ್ರತ್ಯೇಕ ಸ್ವಾಯತ್ತ ಸಂಸ್ಥೆಯನ್ನು ಹೊಂದಿರುವುದು ಅತ್ಯಂತ ಆವಶ್ಯಕ. ಅವರ ಕೈಕಾಲು ಕಟ್ಟಿ ಪೂನಾ ವಿಶ್ವವಿದ್ಯಾನಿಲಯಕ್ಕೆ ಗಂಟು ಹಾಕಬಾರದು. ಅದು ನಮಗೆ ಎಂದಿಗೂ ಬೇಡ.

ನಾನು ಹೇಳಬಯಸುವ ಮತ್ತೊಂದು ಅಂಶವಿದೆ. ನಾನು ಹೇಳಿದಂತೆ ನಾನು ತಪ್ಪಿರಲೂ ಬಹುದು. ಈ ಒಕ್ಕೂಟದಲ್ಲಿ ಅನೇಕ ತೂತುಗಳಿದ್ದು ಅದು ಮುರಿದುಬೀಳಬಹುದೆಂಬ ಭಾವನೆ ನನಗಿದೆ. ನಮ್ಮದು ಮುರಿದು ಬೀಳುತ್ತಿರುವ ಸಮಾಜ. ನಮ್ಮಲ್ಲಿ ಐಕ್ಯತೆಯಿಲ್ಲ; ಅದು ಎಂದೂ ಮುರಿದು ಬೀಳಬಹುದು. ಆದ್ದರಿಂದ ಅದು ಮುರಿದುಬೀಳದಂತೆ ಸಕಾಲದಲ್ಲಿ ಕ್ರಮಕೈಗೊಳ್ಳಬೇಕು. ಉತ್ತರದ ಪ್ರಾಂತ್ಯಗಳನ್ನು ಸಣ್ಣ ಸಣ್ಣ ಪ್ರದೇಶಗಳನ್ನಾಗಿ ವಿಭಜಿಸಬೇಕೆಂದು ನಾನೊಂದು ಮಾರ್ಗವನ್ನು ಸೂಚಿಸಿದ್ದೆ. ನಾನು ಬೇರೊಂದು ಪರಿಹಾರವನ್ನು ಸೂಚಿಸುತ್ತೇನೆ. ಅದರಂತೆ ಈ ದೇಶಕ್ಕೆ ಎರಡು ರಾಜಧಾನಿಗಳನ್ನು ಹೊಂದುವುದು. ಹೈದರಬಾದನ್ನು ಭಾರತದ ಎರಡನೆಯ ರಾಜಧಾನಿಯನ್ನಾಗಿ ಮಾಡಬೇಕೆಂಬುದು ನನ್ನ ಸಲಹೆ. ನಿಮ್ಮ ದೆಹಲಿಯು ಇರಲಿ, ಅದು ಕೆಲವೊಂದು ಋತುಗಳಿಗೆ ಉತ್ತಮವಾದದ್ದು. ಆದರೆ ದಕ್ಷಿಣ ಭಾರತದಲ್ಲಿಯೂ ಒಂದು ರಾಜಧಾನಿ ಇರಬೇಕು. ಆಗ ಆ ಜನತೆಗೆ ಅವರ ಸರ್ಕಾರ ತಮ್ಮ ಸಮೀಪದಲ್ಲಿಯೇ ಇದೆ ಎಂಬ ಭಾವನೆ ಬರುತ್ತದೆ. ನಾನೊಮ್ಮೆ ಹೈದರಬಾದನ್ನು ಭಾರತದ ಎರಡನೆಯ ರಾಜಧಾನಿಯನ್ನಾಗಿ ಮಾಡಬೇಕೆಂದು ಸೂಚಿಸಿದ್ದೆ. ಅದು ಭಾರತದಲ್ಲಿ ನಾನು ನೋಡಿರುವ ನಗರಗಳೆಲ್ಲಾ ಅತ್ಯಂತ ಸುಂದರವಾದ ನಗರ. ಅದು ರಾಜಧಾನಿಗೆ ಬೇಕಾದ ಎಲ್ಲಾ ಆವಶ್ಯಕತೆಗಳನ್ನು ಮತ್ತು ಸೌಲಭ್ಯಗಳನ್ನು ಹೊಂದಿದೆ. ಒಟ್ಟಾರೆ ಬೇಕಾದದ್ದು–ಒಂದು ಬಗೆಯ ವಿಧಾನ ಮಂಡಲ ಮತ್ತು ರಾಜ್ಯ ಪರಿಷತ್ತು. ಅಷ್ಟು ಮಾಡಿದರೆ ನಾನು ಅನೇಕ ಭಾರಿ ಮಾತನಾಡಿರುವ ದಕ್ಷಿಣದ ಜನರಿಗೆ ನಮ್ಮ ಸರ್ಕಾರ ತಮ್ಮ ಸಮೀಪದಲ್ಲಿಯೇ ಇದೆ; ದೆಹಲಿಯಷ್ಟು ದೂರದಲ್ಲಿಲ್ಲ ಎಂಬ ಭಾವನೆ ಉಂಟಾಗುತ್ತದೆ. ದಕ್ಷಿಣದ ಜನರಿಗೆ ದೆಹಲಿ ಒಂದು ರೀತಿಯಲ್ಲಿ ವಿದೇಶಿ ಪ್ರದೇಶವಿದ್ದಂತೆ– ಅಲ್ಲಿ ವಿಪರೀತ ಬಿಸಿಲು; ಅವರು ಬಹಳ ಕಾಲ ಇರಲು ಬಯಸುವುದಿಲ್ಲ. ನನ್ನ ಮಾನ್ಯ ಸದಸ್ಯರು ಈ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆಂದು ಆಶಿಸುತ್ತೇನೆ.

ಸರ್, ನಾನು ತುಂಬಾ ದೀರ್ಘವಾಗಿ ಮಾತನಾಡುವ ಸ್ಥಿತಿಯಲ್ಲಿಲ್ಲ. ಅಲ್ಲದೆ ಒತ್ತಾಯಿಸಲು ಹೆಚ್ಚಿನ ಅಂಶಗಳು ನನ್ನಲಿಲ್ಲ. ಆದರೆ ನಾನು ಹೇಳಬಯಸುವ ಒಂದು ಸಂಗತಿಯಿದೆ. ಈ ರಾಜ್ಯ ಪುನರ್‌ವಿಂಗಡಣಾ ವರದಿಯನ್ನು ಕೇವಲ ಪಕ್ಷದ ಜನರ ಮುಂದೆ ಮಂಡಿಸದೆ, ಎಲ್ಲರ ಮುಂದೆ ಮಂಡಿಸಿ, ಭಾರತದ ಎಲ್ಲ ನಾಗರಿಕರ ಒಂದು ಸಾಮಾನ್ಯ ಸಲಹೆಯನ್ನು ಪಡೆದುಕೊಂಡು ಅವರ ನಿರ್ಣಯಗಳನ್ನು ಜಾರಿಗೊಳಿಸಬಹುದಿತ್ತು ಎಂದು ನಾನು ಆಶಿಸಿದ್ದೆ. ಸರ್, ಇಂದು ನಾವು ಏನನ್ನು ಒಪ್ಪಿಕೊಳ್ಳುತ್ತೇವೋ ಅದನ್ನೇ ಎಂದೆಂದೂ ನಾವು ಒಪ್ಪಿಕೊಂಡಿರಬೇಕಾಗುತ್ತದೆ. ಏಕೆಂದರೆ ತೋಟಗಾರನು ಇಂದು ಒಂದು ಗಿಡವನ್ನು ನೆಟ್ಟು ಅದು ಬೇರು ಬಿಟ್ಟಿದೆಯೇ ಇಲ್ಲವೆ ಎದುರು ನೋಡಲು ನಾಳೆಯೇ ಅದನ್ನು ಕೀಳುವುದು ಮೂರ್ಖತನವಾದೀತು. ಹಾಗೆ ಮಾಡಿದರೆ ಸಸಿ ಎಂದಿಗೂ ಉಳಿಯದು. ನನ್ನ ಮಾನ್ಯ ಸ್ನೇಹಿತರಿಗೆ ಟಾಮ್‌ಪೇಯಿನ್ ಎನ್ನುವ ಮಾತನ್ನು ಜ್ಞಾಪಿಸುತ್ತೇನೆ 'ಒಮ್ಮೆ ತಪ್ಪಾಗಿ ಇತ್ಯರ್ಥ ಮಾಡಿದ ವಿಷಯವು

ಖಾಯಂ ಆಗಿ ಎಂದಿಗೂ ಇತ್ಯರ್ಥವಾಗುವುದಿಲ್ಲ. ಅದನ್ನು ಮರು ಇತ್ಯರ್ಥಗೊಳಿಸಬೇಕಾಗುತ್ತದೆ ಎಂಬುದನ್ನು ನೆನಪಿಸಬಯಸುತ್ತೇನೆ. ಈ ವಿಷಯಗಳನ್ನು ನೀವು ನಿಮ್ಮ ಪಕ್ಷದ ನೆರವಿನಿಂದ ಇತ್ಯರ್ಥಪಡಿಸುವುದಾದರೆ ನಿಮ್ಮ ಪಕ್ಷವು ಶಾಶ್ವತವಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ. ಅದು ನಿಮ್ಮ ಕಣ್ಣ ಮುಂದೆಯೇ ಸವೆಯುತ್ತಿರುವುದನ್ನು ನೀವು ಕಾಣಬಹುದು.

ನೀವು ಮಾಡಬೇಕಾದ್ದನ್ನು ವಿರೋಧ ಪಕ್ಷದ ಒಪ್ಪಿಗೆಯಿಲ್ಲದೆ ಮಾಡಿರಿ. ವಿರೋಧ ಪಕ್ಷದವರು ಅಧಿಕಾರಕ್ಕೆ ಬಂದಾಗ ಅವರು ಅದನ್ನು ಬುಡಮೇಲು ಮಾಡಿ ಮತ್ತೆ ನೆಡುವರು ಎಂಬುದರಲ್ಲಿ ನನಗೆ ಸಂಶಯವಿಲ್ಲ. ಇದು ಅತ್ಯಂತ ಅಪಾಯಕಾರಿ, ಸರ್, ನನ್ನ ಮಾತು ಮುಗಿಯಿತು.

**ಶ್ರೀ ಸಿ.ಪಿ. ಪಾರಿಕ್(ಬಾಂಬೆ):** ಶ್ರೀ ಮುರಾರ್ಜಿಯವರು ಬಾಂಬೆ ಮಹಾರಾಷ್ಟ್ರಕ್ಕೆ ಸೇರಿದ್ದೆಂದು ಸ್ಪಷ್ಟವಾಗಿ ಹೇಳಿದ್ದಾರೆಂದು ಮಾನ್ಯ ಸದಸ್ಯರು ತಪ್ಪು ಹೇಳಿಕೆಯನ್ನು ನೀಡಿರುತ್ತಾರೆ. ಮಾನ್ಯ ಸದಸ್ಯರು ಇಂಥ ಹೇಳಿಕೆಯನ್ನು ಜವಾಬ್ದಾರಿಯಿಂದ ನೀಡಬೇಕಾಗುತ್ತದೆ.

**ಡಾ. ಬಿ.ಆರ್. ಅಂಬೇಡ್ಕರ್:** ಅದು 'ಟೈಮ್ಸ್ ಆಫ್ ಇಂಡಿಯಾ'ದಲ್ಲಿದೆ.

## *ಡಾ. ಬಿ.ಆರ್. ಅಂಬೇಡ್ಕರ್ ಅವರ ಗೈರು ಹಾಜರಿಗೆ ಅನುಮತಿ

**ಮಾನ್ಯ ಉಪ ಸಭಾಪತಿಗಳು:** ಡಾ. ಬಿ.ಆರ್. ಅಂಬೇಡ್ಕರ್ ಅವರಿಂದ ಸ್ವೀಕರಿಸಿದ ಈ ಕೆಳಕಂಡ ಪತ್ರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

> "ಚಿಕಿತ್ಸೆಗಾಗಿ ನಾನು ಬಾಂಬೆಗೆ ಬಂದೆ. ಸಕಾಲದಲ್ಲಿ ದೆಹಲಿಗೆ ಹಿಂತಿರುಗಲು ಸಾಧ್ಯವಾಗುವುದೆಂದು ಆಶಿಸಿದ್ದೆ. ದುರದೃಷ್ಟವಶಾತ್ ನಾನು ಚೇತರಿಸಿಕೊಂಡಿಲ್ಲ. ಆದ್ದರಿಂದ ಹಾಜರಾಗಲು ಸಾಧ್ಯವಾಗದೆ ಇರುವುದರಿಂದ ಗೈರುಹಾಜರಿಗೆ ಅನುಮತಿ ನೀಡುವಂತೆ ಕೋರುತ್ತಿದ್ದೇನೆ. ರಾಜ್ಯಸಭೆಯು ನನ್ನ ಕೋರಿಕೆಯನ್ನು ಮನ್ನಿಸುವುದೆಂದು ಭಾವಿಸಿದ್ದೇನೆ."

ಬಿ.ಆರ್. ಅಂಬೇಡ್ಕರ್ ಅವರು ೨೯ ಮಾರ್ಚ್ ೧೯೬೫ ರಿಂದ ೯ನೆಯ ಅಧಿವೇಶನದ ಕೊನೆಯವರಗೆ ಸದನದ ಎಲ್ಲಾ ಅಧಿವೇಶನಗಳಿಗೆ ಮತ್ತು ಪ್ರಸಕ್ತ ಅಧಿವೇಶನದ ಅವಧಿಯಲ್ಲಿ ನಡೆಯುವ ಎಲ್ಲ ಸಭೆಗಳಿಗೆ ಗೈರು ಹಾಜರಾಗಲು ಅನುಮತಿ ನೀಡುವುದು ಸದನಕ್ಕೆ ಸಂತಸದ ವಿಷಯವೇ?

(ಯಾವ ಗೌರವಾನ್ವಿತ ಸದಸ್ಯರು ಅಸಮ್ಮತಿ ಸೂಚಿಸಲಿಲ್ಲ)

ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

◆

* ಸಿ.ಡಿ. ಸಂ. ೧೦–ಸಿ, ೧ ಅಕ್ಟೋಬರ್ ೧೯೫೫ ಪು. ೫೫೨೯–೩೦

## ೫೫

# *ಡಾ. ಅಂಬೇಡ್ಕರ್ ನಿಧನ – ಶೋಕಾಚರಣೆ

**ಪ್ರಧಾನ ಮಂತ್ರಿಗಳು–(ಶ್ರೀ ಜವಾಹರಲಾಲ್‌ನೆಹರು):** ಮಾನ್ಯ ಉಪಸಭಾಪತಿಗಳೇ, ಅನೇಕ ವಿಷಯಗಳಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದ ಈ ಸದನದ ಸದಸ್ಯರೊಬ್ಬರು ಸ್ವಲ್ಪ ಹೊತ್ತಿಗೆ ಮುಂಚೆ ನಿಧನರಾದರೆಂದು ತಿಳಿಸಲು ತೀವ್ರವಾಗಿ ವಿಷಾದಿಸುತ್ತೇನೆ. ನಾನು ಡಾ. ಅಂಬೇಡ್ಕರ್ ಅವರನ್ನು ಕುರಿತು ಹೇಳುತ್ತಿದ್ದೇನೆ. ಡಾ. ಅಂಬೇಡ್ಕರ್ ಅವರು ಅನೇಕ ವರ್ಷಗಳ ಕಾಲ ಭಾರತದ ಸಾರ್ವಜನಿಕ ಜೀವನದಲ್ಲಿ ಅತ್ಯಂತ ವಿವಾದಾತ್ಮಕ ವ್ಯಕ್ತಿಯಾಗಿದ್ದರು. ಆದರೆ ಅವರ ಅಸಾಧಾರಣ ಗುಣ, ಅವರ ವಿದ್ವತ್ತು, ತಾವು ನಂಬಿದ ತತ್ವಗಳನ್ನು ಅನುಸರಿಸುವಲ್ಲಿನ ತೀವ್ರತೆ–ಕೆಲವೊಮ್ಮೆ ನಿರ್ದಿಷ್ಟ ನಿಯಮಕ್ಕೆ ಅಗತ್ಯವಿರುವುದಕ್ಕಿಂತ ಹೆಚ್ಚಿನ ತೀವ್ರತೆ, ಕೆಲವೊಮ್ಮೆ ಅದು ವಿರುದ್ಧಾತ್ಮಕವಾಗಿರುವುದುಂಟು–ಕುರಿತು ಯಾವುದೇ ಸಂಶಯವಿಲ್ಲ. ಅವರು ಆ ಭಾವತೀವ್ರತೆಯ, ನಮ್ಮ ಹಿಂದಿನ ಸಾಮಾಜಿಕ ಪದ್ಧತಿಯಿಂದಾಗಿ ಬಹುಕಾಲದಿಂದಲೂ ಭಾರತದಲ್ಲಿ ತುಳಿತಕ್ಕೊಳ್ಳಪಟ್ಟ ವರ್ಗಗಳ, ಭಾವ ತೀವ್ರತೆಯ ಪ್ರತೀಕವಾಗಿದ್ದರು; ಅದನ್ನು ನಾವು ಸ್ಮರಿಸಿಕೊಳ್ಳಬೇಕು. ಅಲ್ಲದೆ ನಾವು ಆ ಹೊರೆಯನ್ನು ಗುರುತಿಸಿ ಅದನ್ನು ನಾವೆಲ್ಲರೂ ಹೊರಬೇಕು. ನಾನು ಈಗಷ್ಟೇ ಹೇಳಿದಂತೆ ಆ ಭಾವನೆಯ ಅಭಿವ್ಯಕ್ತಿಯನ್ನು ಅತಿರೇಕವೆನ್ನಿಸುವಂತೆ ಅವರು ವ್ಯಕ್ತಪಡಿಸಿದ್ದಾರೆಂದು ನಮ್ಮಲ್ಲಿ ಕೆಲವರು ಭಾವಿಸಿರಬಹುದು, ಆದರೆ ಅದನ್ನು ಅಭಿವ್ಯಕ್ತಿಸಿದ ಬಗೆ ಮತ್ತು ಭಾಷೆಯ ಹೊರತು ಆ ವಿಷಯದಲ್ಲಿ ಭಾವತೀವ್ರತೆಯ ಸತ್ಯಾಸತ್ಯತೆಯನ್ನು ಯಾರೂ ಪ್ರಶ್ನಿಸಲಾರರು. ತೀವ್ರತೆಯನ್ನು ನಾವೆಲ್ಲರೂ ಅನುಭವಿಸಬೇಕು. ಮತ್ತು ವರ್ಗಕ್ಕೆ ಅಥವಾ ಆ ಗುಂಪಿಗೆ ಸೇರದವರು ಅದನ್ನು ಮತ್ತಷ್ಟು ತೀವ್ರವಾಗಿ ಅನುಭವಿಸಬೇಕು ಹಾಗಿದ್ದವರು ಅವರು. ಆದ್ದರಿಂದಲೇ ಅವರು ಆ ವರ್ಗದ ಸಂಕೇತವಾದರು. ಆದರೆ ಸಂಸತ್ತಿನಲ್ಲಿರುವ ನಾವು ಇತರ ಅನೇಕ ಕಾರಣಗಳಿಗೆ, ಅದರಲ್ಲೂ ಮುಖ್ಯವಾಗಿ ನಮ್ಮ ಸಂವಿಧಾನ ರಚನೆಯಲ್ಲಿ ಅವರು ವಹಿಸಿದ ಪಾತ್ರವನ್ನು ಸ್ಮರಿಸಿಕೊಳ್ಳಬೇಕು. ಬಹುಶಃ ಈ ಸಂಗತಿಯನ್ನು, ಅವರ ಇತರ ಕಾರ್ಯಗಳಿಗಿಂತಲೂ ಹೆಚ್ಚು ಕಾಲದವರೆಗೆ ಸ್ಮರಿಸಲಾಗುವುದು. ಈ ಸದನದಲ್ಲಿನ ಪ್ರತಿಯೊಬ್ಬ ಸದಸ್ಯರು ತಮ್ಮ ತೀವ್ರ ಸಂತಾಪವನ್ನು ಸಹಾನುಭೂತಿಯ ಸಂದೇಶವನ್ನು ಮತ್ತು ಅವರ ನಿಧನಕ್ಕೆ ತೀವ್ರ ಶೋಕವನ್ನು ಅವರ ಕುಟುಂಬಕ್ಕೆ ತಿಳಿಸಲು ಬಯಸುತ್ತಾರೆಂದು ನಾನು ಭಾವಿಸಿದ್ದೇನೆ.

ಇದು ಈ ಸದನದ ಸಂಪ್ರದಾಯ ಸರ್. ಸದಸ್ಯರು ದೆಹಲಿಯಲ್ಲಿ ಮೃತರಾದರೆ ಸದನವನ್ನು ದಿನದ ಉಳಿದ ಭಾಗಕ್ಕೆ ಮುಂದೂಡಲಾಗುವುದು, ಅದನ್ನು ತಮಗೆ ಮತ್ತು ಸದನಕ್ಕೆ ಬಿಡುತ್ತಿದ್ದೇನೆ. ಆದರೆ ಆ ರೂಢಿಯನ್ನು ನಾವು ಅನುಸರಿಸುವುದು ಸೂಕ್ತ ಮತ್ತು ಯುಕ್ತವೆಂದು ಹೇಳಬಯಸುತ್ತೇನೆ.

**ಮಾನ್ಯ ಸಭಾಪತಿಗಳು:** ಪ್ರಧಾನ ಮಂತ್ರಿಗಳು ವ್ಯಕ್ತಪಡಿಸಿದ ಭಾವನೆಗಳನ್ನು ನಾನು ಕೂಡ ಹಂಚಿಕೊಳ್ಳಬಯಸುತ್ತೇನೆ. ಈ ಸದನದ ಪ್ರತಿಯೊಬ್ಬ ಸದಸ್ಯರು ಅದೇ ಭಾವನೆಯನ್ನು ಹಂಚಿಕೊಳ್ಳುತ್ತಾರೆಂಬುದು

---

* ಪಿ.ಡಿ. ಸಂ. ೧೦–ಸಿ, ೬ ಡಿಸೆಂಬರ್ ೧೯೫೬, ಪು–೧೭೬೯–೭೦

ನಿಶ್ಚಿತ. ಡಾ. ಅಂಬೇಡ್ಕರವರ ಹಠಾತ್ ನಿಧನದ ವಾರ್ತೆ ನಮ್ಮೆಲ್ಲರಿಗೂ ಅತ್ಯಂತ ದುಃಖ ಮತ್ತು ಆಘಾತವನ್ನುಂಟು ಮಾಡಿದೆ. ಅವರು ಮೊನ್ನೆಯಷ್ಟೇ ಸದನದಲ್ಲಿ ಹಾಜರಿದ್ದರು. ತಮ್ಮ ಎಂದಿನ ಸ್ವಭಾವದಂತೆ ಸ್ನೇಹಿತರೊಂದಿಗೆ ಮಾತನಾಡುತ್ತಾ ತಮಾಷೆ ಮಾಡುತ್ತಿದ್ದರು. ಅನೇಕರು ಅವರನ್ನು ಮತ್ತು ಅವರ ರಾಜಕೀಯ ಸಿದ್ಧಾಂತಗಳನ್ನು ಒಪ್ಪದಿರಬಹುದು. ಆದರೆ ಅವರು ನಮ್ಮ ಪ್ರಮುಖ ಸದಸ್ಯರಲೊಬ್ಬರಾಗಿದ್ದರು ಮತ್ತು ಅವರ ಮಾತುಗಳನ್ನು ಎಲ್ಲರೂ ಗೌರವದಿಂದ ಕೇಳುತ್ತಿದ್ದೆವು. ಅವರ ಭಾಷಣಗಳು ಪಾಂಡಿತ್ಯ, ವಿದ್ವತ್ತು ಮತ್ತು ಆಳವಾದ ಅಧ್ಯಯನದಿಂದ ಕೂಡಿರುತ್ತಿದ್ದವು. ನಮ್ಮ ಸಂವಿಧಾನದ ಮಹಾನ್ ಶಿಲ್ಪಿಗಳಲ್ಲಿ ಒಬ್ಬರಾಗಿ ಅವರು ಚಿರಸ್ಮರಣೀಯರು. ಅವರಿಗೆ ಹಿಂದೂ ಕಾನೂನು ಜಾರಿಯಾಗಬೇಕೆಂಬ ಆಕಾಂಕ್ಷೆಯಿದ್ದಿತು. ಅದು ಬಹುಮಟ್ಟಿಗೆ ಜಾರಿಯಾಗಿದೆ. ವಿಶೇಷವಾಗಿ ಈ ಸದನಕ್ಕೆ ತುಂಬಾ ನಷ್ಟವುಂಟಾಗಿದೆ. ಅವರಿಗೆ ಗೌರವ ಸೂಚಿಸುವ ಸಲುವಾಗಿ ಸದನವು ಎರಡು ನಿಮಿಷ ಎದ್ದು ನಿಲ್ಲಬೇಕೆಂದು ವಿನಂತಿಸುತ್ತೇನೆ. (ಸದನವು ಎದ್ದು ನಿಂತು ಎರಡು ನಿಮಿಷ ಮೌನ ಆಚರಿಸಿತು)

**ಮಾನ್ಯ ಉಪಸಭಾಪತಿಗಳು:** ಸದನವನ್ನು ನಾಳೆ ಬೆಳಿಗ್ಗೆ ೧೦ ಗಂಟೆಗೆ ಮುಂದೂಡಲಾಗಿದೆ.

◆

# ಲೋಕಸಭೆ

*ಗುರುವಾರ, ೬ ಡಿಸೆಂಬರ್ ೧೯೫೬*

**ಲೋಕಸಭೆಯು ೧೧ ಗಂಟೆಗೆ ಸಭೆ ಸೇರಿತು.**

**೧೨ ಗಂಟೆ**

## ಡಾ. ಬಿ.ಆರ್. ಅಂಬೇಡ್ಕರ್: ಅವರ ನಿಧನ

*****ಪ್ರಧಾನ ಮಂತ್ರಿಗಳು ಮತ್ತು ಸದನದ ನಾಯಕರು (ಶ್ರೀ ಜವಾಹರಲಾಲ್‌ನೆಹರು):** ಮಾನ್ಯ ಸಭಾಧ್ಯಕ್ಷರೇ, ಡಾ. ಅಂಬೇಡ್ಕರ್ ಅವರ ದುಃಖತಪ್ತ ಸುದ್ದಿಯನ್ನು ಸದನಕ್ಕೆ ತಿಳಿಸಬೇಕಾಗಿದೆ. ಕೇವಲ ಎರಡು ದಿನಗಳ ಹಿಂದೆ ಮೊನ್ನೆಯಷ್ಟೇ ಮತ್ತೊಂದು ಸದನದ ಸದಸ್ಯರಾಗಿದ್ದ ಅವರು ಆ ಸದನಕ್ಕೆ ಹಾಜರಾಗಿದ್ದರು. ಆದ್ದರಿಂದ ಇಂದು ಅವರ ನಿಧನದ ವಾರ್ತೆ, ಇಷ್ಟು ಬೇಗನೆ ಇಂಥದೊಂದು ಘಟನೆ ನಡೆಯಬಹುದೆಂಬ ಸುಳಿವು ಇಲ್ಲದೆ ನಮ್ಮೆಲ್ಲರಿಗೂ ಆಘಾತವನ್ನುಂಟು ಮಾಡಿದೆ.

ಡಾ. ಅಂಬೇಡ್ಕರ್ ಅವರು ಭಾರತದ ಸಂವಿಧಾನದ ರಚನೆಯಲ್ಲಿ, ಅನಂತರ ಸಂವಿಧಾನ ರಚನಾ ಮಂಡಳಿಯ ಶಾಸಕಾಂಗ ಭಾಗದಲ್ಲಿ, ನಂತರ ಪ್ರಾಂತ್ಯ ಸಂಸತ್ತಿನಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದ್ದರು. ಈ ಸದನದ ಪ್ರತಿಯೊಬ್ಬ ಸದಸ್ಯರಿಗೂ ಗೊತ್ತು. ಆ ತರುವಾಯ ಅವರು ಕೆಲಕಾಲ ಸಂಸತ್ತಿನ ಸದಸ್ಯರಾಗಿರಲಿಲ್ಲ. ನಂತರ ರಾಜ್ಯಸಭಾ ಸದಸ್ಯರಾಗಿ ಹಿಂತಿರುಗಿದರು. ಸದ್ಯ ಅದರ ಹಾಲಿ ಸದಸ್ಯರಾಗಿದ್ದರು.

ಅವರು ನಮ್ಮ ಸಂವಿಧಾನದ ಶಿಲ್ಪಿಗಳೊಬ್ಬರಾಗಿದ್ದರು ಎಂದು ಹೇಳುತ್ತೇವೆ. ಸಂವಿಧಾನದ ರಚನೆಯಲ್ಲಿ ಡಾ. ಅಂಬೇಡ್ಕರ್ ಅವರಷ್ಟು ಭಾರಿ ಆಸಕ್ತಿ ಮತ್ತು ತೊಂದರೆ ತೆಗೆದುಕೊಂಡವರಿಲ್ಲ ಎಂಬುದರಲ್ಲಿ ಸಂಶಯವಿಲ್ಲ. ಹಿಂದೂ ಕಾನೂನು ಸುಧಾರಣೆಯ ಪ್ರಶ್ನೆಯಲ್ಲಿ ಅವರು ವಹಿಸಿದ ಮಹಾನ್ ಆಸಕ್ತಿ ಮತ್ತು ತೆಗೆದುಕೊಂಡ ತೊಂದರೆಗಾಗಿಯೂ ಅವರು ಸ್ಮರಣೀಯರು. ಆ ಸುಧಾರಣೆಯಲ್ಲಿ ಬಹುಭಾಗ, ತಾವೇ ರಚಿಸಿದ ಬೃಹತ್ ಗ್ರಂಥದಂತೆ ಅಲ್ಲವಾದರೂ ತುಂಡು ತುಂಡುಗಳಾಗಿ ಜಾರಿಗೊಂಡಿದ್ದನ್ನು ಅವರು ನೋಡಿದರು. ಆದರೆ ಅವರು ಅವಿಸ್ಮರಣೀಯರಾಗಿರುವುದು ಹಿಂದೂ ಸಮಾಜದ ಎಲ್ಲ ದಮನಕಾರಿ ಗುಣಲಕ್ಷಣದ ವಿರುದ್ಧ ಮಾಡಿದ ಪ್ರತಿಭಟನೆಯ ಸಂಕೇತವಾಗಿ ಎಂದು ಭಾವಿಸುತ್ತೇನೆ. ಜನರಿಗೆ ನೋವುಂಟು ಮಾಡುವಂಥ ಭಾಷೆಯನ್ನು ಕೆಲವೊಮ್ಮೆ ಬಳಸಿದರು. ಅವರು ಕೆಲವೊಮ್ಮೆ ತೀರಾ ಸಮರ್ಥನೀಯವಲ್ಲದ ಮಾತುಗಳನಾಡಿದರು. ನಾವು ಅದೆಲ್ಲವನ್ನೂ ಮರೆಯೋಣ. ಅವರು ಎಲ್ಲರೂ ಪ್ರತಿಭಟಿಸಲೇಬೇಕಾಗಿದ್ದರ ವಿರುದ್ಧ, ನಾವು ವಾಸ್ತವವಾಗಿ ವಿವಿಧ ಪ್ರಮಾಣಗಳಲ್ಲಿ ಪ್ರತಿಭಟಿಸಿದ್ದರ ವಿರುದ್ಧ, ಬಂಡಾಯ ಹೂಡಿದರು ಎಂಬುದೇ ಮುಖ್ಯ. ಸಂಸತ್ತು ತಾನೇ ರೂಪಿಸಿದ ಶಾಸನದಲ್ಲಿ, ನಮ್ಮ ಸಮಾಜದ ಬಹುಪಾಲು ಜನರನ್ನು ಸಾಮಾನ್ಯ ಹಕ್ಕುಗಳಿಂದ ವಂಚಿತರನ್ನಾಗಿ ಮಾಡಿದ ಹಿಂದಿನ ಸಂಪ್ರದಾಯ ಅಥವಾ ಪರಂಪರಾಗತ ರೂಢಿಗಳ ನಿರಾಕರಣೆ ಪ್ರತಿನಿಧಿಸಲ್ಪಟ್ಟಿದೆ.

ಡಾ. ಅಂಬೇಡ್ಕರ್ ಅವರನ್ನು ಕುರಿತು ಯೋಚಿಸಿದರೆ, ಅನೇಕ ವಿಷಯಗಳು ನನ್ನ ಮನಸಿಗೆ

---

* ಸಂಸದೀಯ ಚರ್ಚೆಗಳು ಸಂ. ೧೦, ಭಾಗ ೨, ೬ನೇ ಡಿಸೆಂಬರ್ ೧೯೫೬, ಪು. ೨೦೫೪–೬೮.

ಬರುತ್ತವೆ. ಏಕೆಂದರೆ ಅವರೊಬ್ಬ ಅತ್ಯಂತ ವಿವಾದಾಸ್ಪದ ವ್ಯಕ್ತಿಯಾಗಿದ್ದರು. ಅವರು ಮೆದು ಮಾತಿನ ವ್ಯಕ್ತಿಯಾಗಿರಲಿಲ್ಲ. ಆದರೆ ಅದೆಲ್ಲರ ಹಿಂದೆ ಬಹುಕಾಲದಿಂದ ನಮ್ಮ ಸಮಾಜವನ್ನು ದಮನ ಮಾಡಿದ್ದರ ವಿರುದ್ಧ ಅವರ ಶಕ್ತಿಯುತ ಪ್ರತಿಕ್ರಿಯೆ ಮತ್ತು ಬಂಡಾಯ ಪ್ರವೃತ್ತಿಯಿದೆ. ಅದೃಷ್ಟವಶಾತ್ ಆ ಬಂಡಾಯಕ್ಕೆ ಬೆಂಬಲವಿದ್ದಿತು. ಅದು ಅವರು ಬಯಸಿದಂತೆ ಅಲ್ಲದಿರಬಹುದು. ಆದರೆ ದೊಡ್ಡ ಪ್ರಮಾಣದಲ್ಲಿ ಆ ಬಂಡಾಯದ ಅಂತರ್ಗತ ತತ್ತ್ವಕ್ಕೆ ಸಂಸತ್ತಿನ, ಇಲ್ಲಿ ಪ್ರತಿನಿಧಿಸಲ್ಪಟ್ಟ ಪ್ರತಿಯೊಂದು ಗುಂಪಿನ ಅಥವಾ ಪಕ್ಷದ ಬೆಂಬಲವಿದ್ದಿತು. ನಾನು ನಮ್ಮ ಸಾರ್ವಜನಿಕ ಕಾರ್ಯಚಟುವಟಿಕೆಗಳಲ್ಲಿ ಮತ್ತು ನಮ್ಮ ಶಾಸಕಾಂಗ ಕಾರ್ಯಚಟುವಟಿಕೆಗಳಲ್ಲಿ, ಹಿಂದೂ ಸಮಾಜದ ಮೇಲಿನ ಕಳಂಕವನ್ನು ನಿವಾರಿಸಲು ಕೈಲಾದ್ದನ್ನು ಮಾಡಿದ್ದೇವೆ. ಅದನ್ನು ಯಾರೊಬ್ಬರು ಕಾನೂನು ಮೂಲಕ ಸಂಪೂರ್ಣವಾಗಿ ನಿವಾರಿಸಲಾಗದು; ಏಕೆಂದರೆ ಸಂಪ್ರದಾಯವು ಆಳಕ್ಕೆ ಬೇರುಬಿಟ್ಟಿದ್ದು ಅದನ್ನು ಅಕ್ರಮವೆಂದು ಪರಿಗಣಿಸಿದರೂ ದೇಶದ ನಾನಾ ಭಾಗಗಳಲ್ಲಿ ಅದು ಮುಂದುವರೆಯುತ್ತಲೇ ಇದೆ ಎಂಬ ಭೀತಿ ನನಗಿದೆ. ಅದು ಸತ್ಯವೂ ಹೌದು. ಆದರೆ ಅದು ಅಂತಿಮ ಹಂತದಲ್ಲಿದೆ ಮತ್ತು ನಾಶವಾಗಲೂ ಸ್ವಲ್ಪ ಕಾಲ ಬೇಕಾಗಬಹುದು–ಎಂಬುದರಲ್ಲಿ ಸಂಶಯವಿಲ್ಲ. ಈ ಪರಿಸ್ಥಿತಿಯನ್ನು ಕೊನೆಗಾಣಿಸಲು ಕಾನೂನು ಮತ್ತು ಸಾರ್ವಜನಿಕ ಅಭಿಪ್ರಾಯ ಹೆಚ್ಚು ಹೆಚ್ಚು ದೃಢವಾದಷ್ಟು ಅದು ಬಹುಕಾಲ ಉಳಿಯದು. ಡಾ. ಅಂಬೇಡ್ಕರ್ ಅವರು ತಮ್ಮದೇ ದಾರಿಯಲ್ಲಿ ಪ್ರಮುಖರಾದರು; ಮತ್ತು ಆ ಬಂಡಾಯದ ಅತ್ಯಂತ ಪ್ರಮುಖ ಸಂಕೇತವಾಗಿದ್ದಾರೆ. ನಾವು ಅವರ ಅನೇಕ ವಿಷಯಗಳನ್ನು ಒಪ್ಪಬಹುದು ಅಥವಾ ಒಪ್ಪದಿರಬಹುದು. ಅದೆಲ್ಲದರ ವಿರುದ್ಧ ಅವರ ದೃಢ ನಿರ್ಧಾರ, ಪಟ್ಟು ಹಿಡಿಯುವಿಕೆ ಮತ್ತು ಕೆಲವೊಮ್ಮೆ ಉಗ್ರ ವಿರೋಧವೂ, ಜನತೆಯ ಮನಸ್ಸನ್ನು ಎಚ್ಚರದಿಂದ ಇರಿಸಲು ಮತ್ತು ಅವರು ಮರೆಯಬಾರದ ವಿಷಯಗಳ ಬಗ್ಗೆ ನೆಮ್ಮದಿಯಿಂದ ಇರದಂತೆ ಮಾಡಿದೆ ಹಾಗೂ ನಮ್ಮ ದೇಶದಲ್ಲಿ ಈ ಹಿಂದೆ ಬಹುಕಾಲ ಸಂಕಷ್ಟ ಅನುಭವಿಸಿರುವ ಗುಂಪುಗಳಲ್ಲಿ ಅರಿವು ಮೂಡಿಸುವಲ್ಲಿ ನೆರವಾಗಿದೆ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ಆದ್ದರಿಂದ ಭಾರತದಲ್ಲಿನ ತುಳಿತಕೊಳಪಟ್ಟ ಮತ್ತು ದಮನಕ್ಕೊಳಗಾದವರ ಪ್ರಮುಖ ನೇತಾರರು ಮತ್ತು ನಮ್ಮ ಕಾರ್ಯ ಚಟುವಟಿಕೆಗಳಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದವರ ಸಾವು ದುಃಖಕರವಾಗಿದೆ.

ಸದನಕ್ಕೆ ತಿಳಿದಿರುವಂತೆ ಅನೇಕ ವರ್ಷಗಳ ಕಾಲ ಅವರು ಮಂತ್ರಿಗಳಾಗಿದ್ದರು. ನಮ್ಮ ಮಂತ್ರಿ ಮಂಡಲದ ಸದಸ್ಯರಾಗಿದ್ದರು. ನಮ್ಮ ಸರ್ಕಾರದ ಕಾರ್ಯದಲ್ಲಿ ಅವರೊಂದಿಗೆ ಸಹಕರಿಸುವ ವಿಶೇಷತೆ ನನ್ನದಾಗಿತ್ತು. ನಾನು ಅವರ ಬಗ್ಗೆ ಕೇಳಿದ್ದೆ: ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಅವರನ್ನು ಭೇಟಿ ಮಾಡಿದ್ದೆ. ಆದರೆ ಅವರೊಂದಿಗೆ ಆತ್ಮೀಯ ಸಂಪರ್ಕ ಬಂದಿರಲಿಲ್ಲ. ಸಂವಿಧಾನ ರಚನಾ ಮಂಡಳಿಯ ಸಂದರ್ಭದಲ್ಲಿ ಅವರನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡೆ. ನಾನು ಅವರನ್ನು ಸರ್ಕಾರ ಸೇರುವಂತೆ ಆಹ್ವಾನಿಸಿದೆ ಇದರಿಂದ ಕೆಲವರಿಗೆ ಆಶ್ಚರ್ಯವಾಯಿತು. ಏಕೆಂದರೆ ಅವರ ಸಾಮಾನ್ಯ ಕಾರ್ಯಚಟುವಟಿಕೆಗಳು ವಿರೋಧ ಪಕ್ಷದವರಂತೆ ಇರುವವೇ ಹೊರತು ಸರ್ಕಾರದ ರೀತಿಯಲ್ಲಲ್ಲ ಎಂದು ಭಾವಿಸಿದ್ದರು. ಏನೇ ಇದ್ದರೂ ಅಂದು ಸಂವಿಧಾನ ರಚನೆಯಲ್ಲಿ ಮಹತ್ತ್ವದ ಮತ್ತು ಉತ್ತಮ ರಚನಾತ್ಮಕ ಪಾತ್ರವನ್ನು ವಹಿಸಿದ್ದ ಅವರು ಸರ್ಕಾರದ ಕಾರ್ಯದಲ್ಲೂ ರಚನಾತ್ಮಕ ಪಾತ್ರ ವಹಿಸುವುದನ್ನು ಮುಂದುವರೆಸುವರೆಂದು ನಾನು ಭಾವಿಸಿದ್ದೆ. ನಿಜಕ್ಕೂ ಅವರು ಹಾಗೆ ನಿರ್ವಹಿಸಿದರು. ಮುಖ್ಯವಾಗಿ ಸೈದ್ಧಾಂತಿಕವಾಗಿ ಅಲ್ಲದೆ ಕೇವಲ ಭಾಷಿಕ ವಿಷಯದಲ್ಲಿ ಮತ್ತು ಉಪಯೋಗಿಸಿದ ಭಾಷೆಯ ವಿಷಯದಲ್ಲಿ ಅಲ್ಲಲ್ಲಿ ಕೆಲವು ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳಿದ್ದರೂ, ನಮ್ಮ ಪರಸ್ಪರ ಅನುಕೂಲಕ್ಕಾಗಿ ಕೆಲವು ವರ್ಷಗಳ ಕಾಲ ಸರ್ಕಾರದಲ್ಲಿ

ಸಹಕಾರದಿಂದ ಇದ್ದೆವು. ನಮ್ಮ ಸಾರ್ವಜನಿಕ ವಿಷಯಗಳಲ್ಲಿ ಮತ್ತು ಭಾರತೀಯ ರಂಗದ ಮೇಲೆ ತಮ್ಮ ಛಾಪನ್ನು ಮೂಡಿಸಿರುವ, ಇಲ್ಲಿರುವ ನಮ್ಮೆಲ್ಲರಿಗೂ ಪರಿಚಿತವಿದ್ದ, ಅತ್ಯಂತ ಎತ್ತರದ ಮತ್ತು ಪ್ರಮುಖರಾಗಿದ್ದ ಅವರು ನಿಧನ ಹೊಂದಿದ್ದಾರೆ. ನಮಗೆಲ್ಲರಿಗೂ ತುಂಬಾ ದುಃಖ ಉಂಟಾಗಿದೆ. ದೀರ್ಘಕಾಲದಿಂದಲೂ ಅವರು ಅನಾರೋಗ್ಯಪೀಡಿತರಾಗಿದ್ದರು. ಆದಾಗ್ಯೂ ಅವರ ಮರಣ ದುಃಖದಾಯಕವಾಗಿದೆ. ಸರ್, ಸದನವು ಅವರ ಕುಟುಂಬಕ್ಕೆ ಸಂತಾಪ ಸಹಾನುಭೂತಿಗಳನ್ನು ತಿಳಿಸಬಯಸುತ್ತದೆ. ಇಂಥ ಘಟನೆಗಳಲ್ಲಿ ಸದನದ ಮುಂದೂಡಿಕೆಗೆ ಸಂಬಂಧಪಟ್ಟಂತೆ ನಮ್ಮ ಕಾರ್ಯವಿಧಾನ ನಿಯಮಗಳಲ್ಲಿ ವಿವಿಧ ನಿಯಮಗಳನ್ನು ವಿಧಿಸಲಾಗಿದೆ. ಸಾಮಾನ್ಯವಾಗಿ ಈ ನಿಯಮಗಳು ಸದನದ ಸದಸ್ಯರಿಗೆ ಅನ್ವಯಿವಾಗುತ್ತದೆ. ಡಾ. ಅಂಬೇಡ್ಕರ್ ಅವರು ಈ ಸದನದ ಸದಸ್ಯರಾಗಿರಲಿಲ್ಲ. ಅವರು ರಾಜ್ಯ ಸಭೆಯ ಸದಸ್ಯರಾಗಿದ್ದರು. ಅವರು ಈ ಸದನದ ಹಿಂದಿನ ಸದಸ್ಯರಾಗಿದ್ದರು. ಅಂಥ ಪ್ರಕರಣಗಳಲ್ಲಿ ಸದನದಲ್ಲಿ ವಿಷಯವನ್ನು ಪ್ರಸ್ತಾಪಿಸಬಹುದೆಂದು ಅಸಾಧಾರಣ ವ್ಯಕ್ತಿಗಳ ವರ್ಗಕ್ಕೆ ಸೇರಿದವರಾದರೆ ಸದನವನ್ನು ಸಂಪೂರ್ಣವಾಗಿ ಮುಂದೂಡಬಹುದೆಂದು ನಿಯಮ ಹೇಳುತ್ತದೆ. ಅವರು ಅಸಾಧಾರಣ ವರ್ಗದಲ್ಲಿ ಬರುತ್ತಾರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಕಟ್ಟುನಿಟ್ಟು ನಿಯಮಗಳ ಪ್ರಕಾರ ಸಾಂಕೇತಿಕವಾಗಿ ಸದನವನ್ನು ಮುಂದೂಡಬಹುದು. ಈ ನಿಯಮದ ಉಲ್ಲಂಘನೆ ಮಾಡದೆ, ಅಥವಾ ಈ ನಿಯಮದ ಅಂತರಾರ್ಥಕ್ಕೆ ಭಂಗತಾರದೆ, ಪ್ರಸ್ತುತ ಪ್ರಕರಣವು ನಾನು ಉಲ್ಲೇಖಿಸದಿರುವ ಕೆಲವು ಕಾರಣಗಳಿಗಾಗಿ ಸದನವನ್ನು ಈ ಮುಂದೂಡುವುದಕ್ಕೆ ಅರ್ಹವಾಗಿರುತ್ತದೆ. ಅದು ತಮ್ಮ ಹಾಗೂ ಸದನದ ಇಚ್ಛೆಗೆ ಒಳಪಟ್ಟಿರುತ್ತದೆ.

**ಶ್ರೀಮತಿ ರೇಣು ಚಕ್ರವರ್ತಿ:** ಸರ್, ನಮ್ಮ ಪಕ್ಷ ಮತ್ತು ನಮ್ಮ ಸಹ ಸದಸ್ಯರ ಸಂತಾಪಗಳನ್ನು ಡಾ. ಅಂಬೇಡ್ಕರ್ ಅವರ ಕುಟುಂಬದ ಸದಸ್ಯರಿಗೆ ತಿಳಿಸುವಂತೆ ತಮ್ಮನ್ನು ಕೋರಲು ಸದನದ ನಾಯಕರೊಂದಿಗೆ ನಾನು ಸೇರುತ್ತೇನೆ.

ನಮಗೆ, ಯುವ ಸದಸ್ಯರಿಗೆ, ಅವರೊಡನೆ ಕೆಲಸ ಮಾಡುವ ಅವಕಾಶ ಸಿಗಲಿಲ್ಲ. ನಮಗೂ ಭಿನ್ನಾಭಿಪ್ರಾಯವಿತ್ತು. ಆದರೆ ಇಂದು ನಾವೆಲ್ಲರೂ ನಮ್ಮ ದಮನಕಾರಿ ಸಾಮಾಜಿಕ ಪದ್ಧತಿಯ ಫಲವಾಗಿ ನಮ್ಮ ಜನತೆಯ ಒಂದು ವರ್ಗವು ಅನುಭವಿಸಿದ ಅನರ್ಹತೆಗಳ ಬಗ್ಗೆ ಜನತೆಯ ಆತ್ಮಸಾಕ್ಷಿಗೆ ಅವರು ಹೇಗೆ ಮನದಟ್ಟು ಮಾಡಿಕೊಟ್ಟರು ಎಂಬುದನ್ನು ಮರೆಯುವಂತಿಲ್ಲ. ನಾವು ಹಿಂದೂ ಸಂಹಿತೆ ವಿಧೇಯಕವನ್ನು ಭಾಗಗಳಲ್ಲಿ ಅನುಮೋದಿಸಿದರೂ ಡಾ. ಅಂಬೇಡ್ಕರವರು ಮೂಲ ಕರಡಿನಲ್ಲಿ ಅಳವಡಿಸಿದ್ದ ತತ್ತ್ವಗಳು ಅನೇಕ ದೃಷ್ಟಿಯಿಂದ ಉತ್ತಮವಾಗಿದ್ದವು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ನಾವು ಸಾಮಾಜಿಕ ಅಸಮಾನತೆ ಮತ್ತು ಸಂಕುಚಿತ ಪೂರ್ವಾಗ್ರಹಗಳ ವಿರುದ್ಧ ಸಿಡಿದೆದ್ದ ಅವರ ಅಸಾಧಾರಣ ಬೌದ್ಧಿಕತೆಗೆ ನಾವು ಗೌರವ ಸಲ್ಲಿಸಬಯಸುತ್ತೇವೆ. ಅವರು ನಮ್ಮ ಸಂವಿಧಾನದ ರೂವಾರಿಗಳೊಬ್ಬರಾಗಿದ್ದು, ದೇಶವು ಅವರನ್ನು ಸಂವಿಧಾನದ ಸಾಕಾರ ರೂಪದಲ್ಲಿ ಖಂಡಿತವಾಗಿ ಸ್ಮರಿಸಿಕೊಳ್ಳುತ್ತದೆ. ಅವರ ಸ್ಮರಣೆಗೆ ಗೌರವ ಸೂಚಕವಾಗಿ ಸದನವನ್ನು ಮುಂದೂಡುವಂತೆ ತಮ್ಮನ್ನು ತೋರುವಲ್ಲಿ ಸದನದ ನಾಯಕರೊಂದಿಗೆ ನಾನು ಕೈಜೋಡಿಸಬಯಸುತ್ತೇನೆ.

**ಶ್ರೀ ಅಶೋಕ್ ಮೆಹತಾ (ಭಾಂದರ):** ಡಾ. ಅಂಬೇಡ್ಕರ್ ಅವರಿಗೆ ಸಲ್ಲಿಸಿದ ಗೌರವಾರ್ಪಣೆಯೊಂದಿಗೆ ನಾನೂ ಸೇರಬಯಸುತ್ತೇನೆ.

ಅನೇಕ ಬಾರಿ ಅವರೊಂದಿಗೆ ಬೆರೆಯುವ ಸೌಭಾಗ್ಯ ನನ್ನದಾಗಿತ್ತು. ಅವರ ಅಸಾಧಾರಣವೂ ಮತ್ತು

ಆಕರ್ಷಕವೂ ಆದ ವೃತ್ತಿ ಜೀವನವೂ ಅನೇಕ ಆಯಾಮಗಳಿಂದ ಕೂಡಿತ್ತು. ಬಾಂಬೆಯಿಂದ ಬಂದ ನಾವು ಅವರನ್ನು ಉಪಾಧ್ಯಾಯರಾಗಿ ಅರ್ಥಶಾಸ್ತ್ರಜ್ಞರಾಗಿ, ಕಾರ್ಮಿಕ ನಾಯಕರಾಗಿ, ರಾಜಕೀಯ ನಾಯಕರಾಗಿ ಸ್ಮರಿಸಿಕೊಳ್ಳುತ್ತೇವೆ. ಅವರು ಈ ಸದನದಲ್ಲಿ ಮತ್ತು ಸರ್ಕಾರದ ಸದಸ್ಯರಾಗಿ ಸಲ್ಲಿಸಿದ ಮಹಾನ್ ಸೇವೆಗಳ ಜೊತೆಗೆ ದೇಶದ ನಮ್ಮ ಭಾಗಕ್ಕೆ ಸಂಬಂಧಿಸಿದಂತೆ ಒಂದು ಜಾಗೃತಿಯನ್ನು ಮೂಡಿಸಿದರು. ಅವರಿಂದಾಗಿ ನಮ್ಮ ಭಾಗದ ಬಹುಪಾಲು ಜನ ವರ್ಗಕ್ಕೆ ಸಾಮಾಜಿಕ ಮಹತ್ವ ದೊರತಿದೆ, ಆತ್ಮವಿಶ್ವಾಸ ಮೂಡಿದೆ. ಅವರಿಲ್ಲದಿದ್ದರೆ ಬಹುಶಃ ದೇಶದ ನಮ್ಮ ಭಾಗವು ಇಂದು ಇದ್ದಂತೆ ಇರುತ್ತಿರಲಿಲ್ಲ.

ಅವರ ಸ್ಮರಣಾರ್ಥ ಗೌರವ ಸಲ್ಲಿಸುವ ಮೂಲಕ ಮತ್ತು ಇಂದು ಸದನವನ್ನು ಮುಂದೂಡಿ ಮನ್ನಣೆ ನೀಡುವ ಮೂಲಕ, ಅವರು ನಮ್ಮ ಸಮಾಜಕ್ಕೆ ಸಲ್ಲಿಸಿದ ಮಹಾನ್ ಸೇವೆಗಾಗಿ ನಾವು ಸಲ್ಲಿಸಬೇಕಾದ ಋಣವನ್ನು ತೀರಿಸುತ್ತಿದ್ದೇವೆ ಮಾತ್ರ.

**ಶ್ರೀ ವಿ.ಫ. ದೇಶಪಾಂಡೆ (ಗುನಾ):** ಮಾನ್ಯ ಅಧ್ಯಕ್ಷರೆ, ಅಂಬೇಡ್ಕರ್ ಅವರ ನಿಧನದ ಸುದ್ದಿಯಿಂದ ಸಂಸತ್ತಿನಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲೆಲ್ಲಾ ದುಃಖವು ವ್ಯಾಪಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಡಾ. ಅಂಬೇಡ್ಕರ್ ಅವರು ಸಂವಿಧಾನವನ್ನು ರೂಪಿಸಿದ್ದರು ಹಾಗೂ ಅದನ್ನು ಸಿದ್ಧಪಡಿಸುವಲ್ಲಿ ತುಂಬ ಶ್ರಮವಹಿಸಿದ್ದರು ಹಾಗೂ ತಮ್ಮ ಸಾಮರ್ಥ್ಯವನ್ನು ಪರಿಚಯಿಸಿಕೊಟ್ಟಿದ್ದರು. ಡಾ. ಅಂಬೇಡ್ಕರ್ ಅವರು ಹಿಂದೂ ಸಮಾಜದ ಮೇಲೆ ಪ್ರಬಲವಾದ, ತೀಕ್ಷ್ಣವಾದ ಹಾಗೂ ಕಟುವಾದ ಪ್ರಹಾರವನ್ನೇ ಮಾಡಿದ್ದರೂ, ಅಂಬೇಡ್ಕರ್ ಅವರು ಹಿಂದೂ ಸಮಾಜದ ಮಹಾನ್ ನಾಯಕರಾಗಿದ್ದರು. ಆದರೆ, ಹಾಗೆ ಮಾಡುವುದಕ್ಕೂ ಒಂದು ಕಾರಣ ಇದ್ದಿತು. ಅದೇನೆಂದರೆ ಡಾ. ಅಂಬೇಡ್ಕರ್ ಅವರು ಯಾವ ಜಾತಿಯಲ್ಲಿ ಜನಿಸಿದ್ದರೋ, ಅದರ ವಿಷಯದಲ್ಲಿ ಸವರ್ಣೀಯರಾದ ಹಿಂದೂಗಳು ತುಂಬ ಪಾಪಕಾರ್ಯವನ್ನೆಸಗಿದ್ದಾರೆ. ಆ ಪಾಪಕಾರ್ಯಗಳನ್ನು ಅನುಲಕ್ಷಿಸಿದ ಬಳಿಕ, ಡಾ. ಅಂಬೇಡ್ಕರ್ ಅವರು ಅಷ್ಟು ತೀಕ್ಷ್ಣವಾಗಿದ್ದುದೇಕೆ ಎಂಬುದು ನಮಗೆ ಅರ್ಥವಾಗಬಹುದಾಗಿದೆ. ಇದು ಕೂಡ ನಮ್ಮ ಪಾಪಕಾರ್ಯಗಳ ಪರಿಣಾಮವೇ ಆಗಿದೆ ಎಂದು ನಾನು ನಂಬುತ್ತೇನೆ.

ಡಾ. ಅಂಬೇಡ್ಕರ್ ಅವರ ಅರ್ಹತೆ ಮತ್ತು ಪಾಂಡಿತ್ಯಗಳು ಎಷ್ಟೊಂದು ಎತ್ತರದವೂ, ಮಹತ್ತರವಾದುವೂ ಆಗಿದ್ದುವೆಂದರೆ ಬೇರಾವ ಕಾರಣದಿಂದ ಅಲ್ಲದಿದ್ದರೂ ಈ ಕಾರಣಕ್ಕಾಗಿಯೇ ಅವರ ವ್ಯಕ್ತಿತ್ವ ತುಂಬ ಎತ್ತರವಾದುದಾಗಿತ್ತು. ಅದರಿಂದಲೇ ಅವರು ಅಸ್ಪೃಶ್ಯತೆಗೆ ವಿರುದ್ಧವಾಗಿ ಘೋರ ಸಂಗ್ರಾಮವನ್ನೇ ನಡೆಸಿದರು. ಈ ಕಾರಣಕ್ಕಾಗಿ ಡಾ. ಅಂಬೇಡ್ಕರ್ ಅವರಿಗೆ ಗೌರವವನ್ನು ಸಲ್ಲಿಸುವುದು ಅತ್ಯಗತ್ಯವೇ ಆಗಿದೆ. ಡಾ. ಅಂಬೇಡ್ಕರ್ ಅವರು ಅಸ್ಪೃಶ್ಯತಾ ನಿವಾರಣೆಗಾಗಿ ಜೀವಮಾನವಿಡೀ ನಡೆಸಿದ ಪ್ರಯತ್ನಗಳನ್ನು ಎಂದೂ ಮರೆಯಲು ಸಾಧ್ಯವಿಲ್ಲ, ಅವರಿಗಿಂತಲೂ ಮೊದಲು ಈ ದೇಶದಲ್ಲಿ ಅಸ್ಪೃಶ್ಯತಾ ನಿವಾರಣೆಯ ಆಂದೋಳನ ಒಂದಲ್ಲ ಒಂದು ರೂಪದಲ್ಲಿ ನಡೆದುಕೊಂಡು ಬಂದಿದ್ದಿತಾದರೂ, ಮನುಷ್ಯರ ರೂಪದಲ್ಲಿ ಎದ್ದು ನಿಂತು ಹೋರಾಡುವುದನ್ನು, ಸೆಣಸಾಡುವುದನ್ನು ಅಸ್ಪೃಶ್ಯ ಸಮುದಾಯದವರಿಗೆ ಯಾರಾದರೂ ಕಲಿಸಿಕೊಟ್ಟಿದ್ದರೆ ಅದು ಅಂಬೇಡ್ಕರ್ ಅವರೇ. ಅವರು ಹಿಂದೂ ಸಮಾಜದ ಪದದಲಿತ ಸಮುದಾಯವೊಂದನ್ನು ಮೇಲಕ್ಕೆತ್ತಿದರು ಹಾಗೂ ಇತರರಂತೆ ಅವರೂ ಮನುಷ್ಯರು ಎಂಬಂತೆ ಅವರನ್ನು ರೂಪಿಸಿದರು. ಈ ಸಂಬಂಧವಾಗಿ ಅಸ್ಪೃಶ್ಯರ ವಿಷಯದಲ್ಲಿ ಅವರು ಸಲ್ಲಿಸಿರುವಂಥ ಸೇವೆಯನ್ನು ನಾಡು ಎಂದೂ ಮರೆಯಲಾಗದು. ಇಂದು ನಮ್ಮ ನಡುವೆ ಇದ್ದ ಮಹಾನಾಯಕರೊಬ್ಬರು ತೀರಿಕೊಂಡಿದ್ದಾರೆ. ಅವರ ಅಗಲಿಕೆಯಿಂದ ಖಾಲಿಯಾಗಿರುವ ಸ್ಥಾನವನ್ನು ನಿಕಟ ಭವಿಷ್ಯದಲ್ಲಿ ತುಂಬುವುದು ಕಷ್ಟವೆಂದೇ ನನಗೆ

ತೋರುತ್ತದೆ. ಸದನದ ನಾಯಕರು ಅವರ ಸಾವಿನ ವಿಷಯದಲ್ಲಿ ವ್ಯಕ್ತ ಪಡಿಸಿರುವ ದುಃಖದಲ್ಲಿ ನಾನೂ ಸಂಪೂರ್ಣವಾಗಿ ಜೊತೆಗೂಡುತ್ತೇನೆ. **(ಹಿಂದಿಯಿಂದ)**

**ಶ್ರೀ ಫ್ರಾಂಕ್ ಆಂಥೋನಿ (ನಾಮನಿರ್ದೇಶಿತ ಆಂಗ್ಲೋ ಇಂಡಿಯನ್):** ನಾನು ಸದನದ ನಾಯಕರು ವ್ಯಕ್ತಪಡಿಸಿದ ಭಾವನೆಗಳೊಂದಿಗೆ ಸ್ವತಂತ್ರ ಸಂಸದ ಗುಂಪನ್ನೂ ಸೇರಿಸಬಯಸುತ್ತೇನೆ. ಅನೇಕ ವರ್ಷಗಳ ಕಾಲ ಡಾ. ಅಂಬೇಡ್ಕರ್ ಅವರು ನನಗೆ ಗೊತ್ತಿದ್ದದ್ದು ನನ್ನ ಸೌಭಾಗ್ಯ. ಕೆಲವು ನಿಮಿಷಗಳಲ್ಲಿ ಅವರಿಗೆ ಗೌರವಾರ್ಪಣೆ ಮಾಡುವುದು ಸಾಧ್ಯವಾಗದೆಂದು ನನ್ನ ಭಾವನೆ. ಅವರು ಬಹುಶ್ರುತರು. ಅವರು ಗಂಭೀರವಷ್ಟೇ ಅಲ್ಲದೆ ಪಾಂಡಿತ್ಯ ಪೂರ್ಣ ವಿದ್ವಾಂಸರಾಗಿದ್ದರು. ಸದನದ ನಾಯಕರಾಗಿ ಅವರು ವಿವಾದಾತ್ಮಕ ವ್ಯಕ್ತಿಯಾಗಿದ್ದರು. ಅವರ ಸಂಕೀರ್ಣ ವ್ಯಕ್ತಿತ್ವದ ಪ್ರಮುಖ ವಿಶಿಷ್ಟತೆಯೆಂದರೆ ಅದಮ್ಯ ಹೋರಾಟ ಪ್ರವೃತ್ತಿ. ಆ ಅದಮ್ಯ ಶಕ್ತಿಯಿಂದಲೇ ಅಷ್ಟೇನೂ ಧೃಢವಲ್ಲದ ವ್ಯಕ್ತಿಗಳನ್ನು ಬಹುಶಃ ನಾಶಪಡಿಸಬಹುದಾಗಿದ್ದ ವೈಯಕ್ತಿಕ ಅಸಾಮರ್ಥ್ಯಗಳ ಮೇಲೆ ಗೆಲವು ಸಾಧಿಸಲು ಅವರಿಗೆ ಸಾಧ್ಯವಾಯಿತು.

ಅವರ ರಾಜಕಾರಣವನ್ನು ಒಪ್ಪದೆ ಇರಬಹುದು. ಅವರು ಕೆಲವು ವಿಷಯಗಳನ್ನು ಕುರಿತು ಹೇಳಿದ ರೀತಿಯನ್ನು ಒಪ್ಪದಿರಬಹುದು. ಅವರು ತಮ್ಮ ಪ್ರಾರಂಭಿಕ ಜೀವನದಲ್ಲಿ ಎದುರಿಸಿದ, ಕಹಿಯಾದ ವೈಯಕ್ತಿಕ ಅನನುಕೂಲಗಳನ್ನು ಕೇಳಿದಾಗ ಕೆಲವೊಂದು ವಿಷಯಗಳಲ್ಲಿ ಅವರ ಆತ್ಮವನ್ನು ಕಬ್ಬಿಣದ ಸರಳು ಹೊಕ್ಕಿರುವುದರಿಂದ, ಅವರು ಅಷ್ಟು ಮಟ್ಟಿಗೆ ಕಹಿಯಾಗಿದ್ದರೆಂಬುದನ್ನು ಸಮರ್ಥಿಸಲಾಗುವುದಿಲ್ಲವಾದರೂ ಕನಿಷ್ಠ ಅದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಡಾ. ಅಂಬೇಡ್ಕರ್ ಅವರು ಅತ್ಯಂತ ಕೆಳ ಹಂತದಿಂದಲೇ ಆರಂಭ ಮಾಡಿದರಾದರೂ ಭಾರತದ ಇತಿಹಾಸದಲ್ಲಿ ಅವರ ಹೆಸರು ಅಚ್ಚಳಿಯದೆ ಉಳಿಯಲಿದೆ. ಅವರ ಸಮುದಾಯವಷ್ಟೇ ಅಲ್ಲದೆ ಇಡೀ ದೇಶವೇ ಅವರೊಬ್ಬ ಮಹಾನ್ ಪುತ್ರನೆಂದು ಹೆಮ್ಮೆಪಡಬಹುದಾಗಿದೆ. ನಮ್ಮ ಸಂತಾಪಗಳನ್ನು ಅವರ ಕುಟುಂಬಕ್ಕೆ ತಲುಪಿಸುವಂತೆ ತಮ್ಮನ್ನು ಕೋರುತ್ತಿದ್ದೇನೆ.

**ಶ್ರೀ ಕಾಜರೋಲ್ಕರ್ (ಮುಂಬಯಿ ನಗರ–ಉತ್ತರ; ಅನುಸೂಚಿತ ಜಾತಿಗಳಿಗೆ ಮೀಸಲಾಗಿರುವ ಕ್ಷೇತ್ರ):** ಸನ್ಮಾನ್ಯ ಅಧ್ಯಕ್ಷರೆ, ಇಂದಿನ ದಿವಸ ಇಡೀ ಭಾರತಕ್ಕೆ ಹಾಗೂ ಅದರಲ್ಲಿಯೂ ಹರಿಜನರಾಗಿರುವ ನಮ್ಮ ಪಾಲಿಗೆ ತುಂಬ ದುಃಖದ ಹಾಗೂ ಕಗ್ಗತ್ತಲಿನ ದಿವಸವೇ ಆಗಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತದ ಮಹಾನ್ ನಾಯಕರೇ ಆಗಿದ್ದರು. ಅವರು ಅನೇಕ ರೀತಿಗಳಲ್ಲಿ ನಾಡಿಗೆ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ನಾಡಿನ ಮಹಾನ್ ನಾಯಕರೇ ಆಗಿದ್ದರೆಂಬುದು ನಿಜ. ಆದರೆ ಹರಿಜನರಾದ ನಮ್ಮ ಪಾಲಿಗೆ ಅವರು ಜೀವದುಸಿರೇ ಆಗಿದ್ದರು. ಹರಿಜನರು ಅವರಿಗೆ ಸದಾ ಋಣಿಗಳಾಗಿರುತ್ತಾರೆ. ಜೀವನವಿಡೀ ಹರಿಜನರನ್ನು ಮೇಲೆತ್ತಲು ಅವರು ಶ್ರಮಿಸಿದರು. ಇಂದು ಹರಿಜನರ ಸ್ಥಿತಿ–ಗತಿಗಳಲ್ಲಿ ಸುಧಾರಣೆ ಆಗಿದ್ದರೆ, ನಾವು ಸ್ವಲ್ಪ ಮಟ್ಟಿಗೆ ಮೇಲೆ ಬಂದಿದ್ದರೆ, ಅದರ ಶ್ರೇಯಸ್ಸು ಮುಖ್ಯವಾಗಿ ಬಾಬಾ ಸಾಹೇಬರಿಗೆ ಸಲ್ಲುತ್ತದೆ. ಬಾಬಾ ಸಾಹೇಬರು ಹುಟ್ಟಿದ್ದು ಒಂದು ಬಡ ಅಸ್ಪೃಶ್ಯ ಕುಟುಂಬದಲ್ಲಿ. ತಮ್ಮ ಬಾಳಿನಲ್ಲಿ ಅವರು ಅನೇಕ ಕಷ್ಟಗಳನ್ನು ಎದುರಿಸಬೇಕಾಗಿ ಬಂತು. ಆದರೆ ಅವರು ಎದೆಗುಂದಲಿಲ್ಲ. ಅವರು ಎಲ್ಲ ಕಷ್ಟಗಳನ್ನೂ ಯಶಸ್ವಿಯಾಗಿ ಎದುರಿಸಿದರು ಹಾಗೂ ಅವುಗಳ ಮೇಲೆ ಗೆಲುವನ್ನು ಸಾಧಿಸಿದರು. ಹಿಂದೂ ಸಮಾಜದ ಹಣೆಗೆ ಅಂಟಿದ್ದ ಈ ಅಸ್ಪೃಶ್ಯತೆಯ ಕಳಂಕವನ್ನು ತೊಡೆದುಹಾಕಲು ಅವರು ಜೀವನವಿಡೀ ಶ್ರಮಿಸಿದರು ಹಾಗೂ ಅಸ್ಪೃಶ್ಯತಾ ನಿವಾರಣೆಗಾಗಿ ಅವರು ಘೋರಸಂಗ್ರಾಮವನ್ನೇ ನಡೆಸಿದರು. ಕೊನೆಗೆ ಅವರು ಈ ತೀರ್ಮಾನಕ್ಕೆ ಬಂದರು: ನನ್ನ ಹುಟ್ಟು ಆ ಹಿಂದೂ ಧರ್ಮದಲ್ಲೇ ಆಗಿದೆ; ಆದರೆ, ಅಸ್ಪೃಶ್ಯತೆಯನ್ನು ಮಾನ್ಯ ಮಾಡುವ ಇಂಥ ಹಿಂದೂ ಧರ್ಮವನ್ನು ನನ್ನ ಧರ್ಮವೆಂದು ನಾನು ಒಪ್ಪಲಾರೆ. ಅವರು ತಮ್ಮ

ಪ್ರತಿಜ್ಞೆಯನ್ನು ನೆರವೇರಿಸಿದರು ಎಂಬುದನ್ನೂ ನಾವು ಕಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ದೊರೆಯಲೆಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ. ಹಿಂದೂ ಧರ್ಮ ಅಸ್ಪೃಶ್ಯತೆಯ ಈ ಕಳಂಕವನ್ನೇ ತೊಡೆದು ಹಾಕಿದಾಗ ಮಾತ್ರವೇ ಅವರ ಆತ್ಮಕ್ಕೆ ನಿಜವಾದ ಹಾಗೂ ವಾಸ್ತವಿಕವಾದ ಶಾಂತಿ ದೊರೆಯುತ್ತದೆಂದು ನಾನು ಭಾವಿಸಿದ್ದೇನೆ. **(ಹಿಂದಿಯಿಂದ)**

**ಶ್ರೀ ಗಾಡ್ಗಿಲ್ (ಪೂನಾ ಕೇಂದ್ರ):** ಸಾಮಾನ್ಯವಾಗಿ ಸದನದ ಮತ್ತು ನನ್ನ ಪಕ್ಷದ ನಾಯಕರು ಮಾತನಾಡಿದ ಮೇಲೆ ನಾನು ಮಾತನಾಡಲು ಸಮರ್ಥನೆ ಇರುವುದಿಲ್ಲ. ಆದರೆ ಡಾ. ಅಂಬೇಡ್ಕರ್ ಅವರೊಂದಿಗೆ ೩೫ ವರ್ಷಗಳ ಸ್ನೇಹವನ್ನು ಹೊಂದಿದ್ದೆ ಎಂಬ ಸಮರ್ಥನೆ ನನಗಿದೆ. ಅವರು ಮಹಾರಾಷ್ಟ್ರೀಯರಾದ ನಮಗೆ ಇಡೀ ಭಾರತಕ್ಕಿಂತಲೂ ಹತ್ತುಪಟ್ಟು ಪ್ರಿಯರು. ನಮ್ಮ ಪ್ರದೇಶದಲ್ಲಿ ಅತ್ಯಂತ ತುಳಿತಕೊಳಪಟ್ಟ ಸಮುದಾಯದಲ್ಲಿ ಆತ್ಮಗೌರವ ಮತ್ತು ಮಹತ್ವದ ಭಾವನೆಗಳನ್ನುಂಟುಮಾಡಿದವರು. ನಿಸ್ಸಂಶಯವಾಗಿ ಅವರ ಮಾತುಗಳು ಅತ್ಯಂತ ಕಹಿಯಿಂದ ಕೂಡಿದ್ದವು. ಆದರೆ ಅವರ ಹೃದಯ ಮಧುರವಾಗಿದ್ದಿತು. ಅವರ ದೋಷಗಳು ಎಲ್ಲರಿಗೂ ಗೊತ್ತಿದ್ದಿತು; ಆದರೆ ಅವರ ಗುಣಗಳು ಆ ದೋಷಗಳನ್ನು ಮೀರಿದವಾಗಿದ್ದವು.

ನಮ್ಮ ಸಂವಿಧಾನವನ್ನು ರೂಪಿಸುವಲ್ಲಿ ಅವರು ಏನು ಮಾಡಿದರು ಎಂಬುದು ಎಲ್ಲರಿಗೂ ಸಾಕಷ್ಟು ಗೊತ್ತೆ ಇದೆ. ಆದರೆ ಮುಖ್ಯವಾಗಿ ಅವರು ಸಾಮಾಜಿಕ ಅಥವಾ ಆರ್ಥಿಕ ಕ್ಷೇತ್ರ, ಯಾವುದೇ ಇರಲಿ, ಅನ್ಯಾಯದ ಯಥಾಸ್ಥಿತಿ ವಾದದ ವಿರುದ್ಧ ಬಂಡುಕೋರರಾಗಿದ್ದರು. ಕೊನೆಯದಾಗಿ ಅವರು ಅತ್ಯಂತ ಪ್ರಗತಿಶೀಲ ಮಾರ್ಗದಲ್ಲಿ ಆಲೋಚಿಸುತ್ತಿದ್ದರು. ತೀರಾ ಇತ್ತೀಚೆಗೆ ನಾನು ಅವರೊಂದಿಗೆ ಮಾತನಾಡುತ್ತಿದ್ದೆ; ಅವರು ಹೇಳಿದರು ಪರಿಶಿಷ್ಟ ಜಾತಿಯವರಿಗೆ ಇನ್ನು ಮುಂದೆ ವಿಶೇಷ ಹಕ್ಕು ಬೇಡ, ಅವರು ತಮ್ಮ ಕಾಲ ಮೇಲೆ ತಾವು ನಿಂತು ಈಗಲೂ ಇರುವ ಅನ್ಯಾಯದ ವಿರುದ್ಧ ಅವರು ಇಡೀ ಭಾರತದ ಸಮುದಾಯದ ಉಳಿದ ಸದಸ್ಯರೊಂದಿಗೆ ಸೇರಿ ಹೋರಾಡಬೇಕು. ಅಂಥ ವ್ಯಕ್ತಿ ನಿಧನರಾಗಿದ್ದಾರೆ; ಆದರೆ ಜಗತ್ತಿನಲ್ಲಿ ಎಲ್ಲವೂ ಮೃತಿ ಹೊಂದಲೇಬೇಕು.

ಆದ್ದರಿಂದ ನಾವು ಅವರು ಮಾಡಿದ ಒಳಿತನ್ನು ಸ್ಮರಿಸೋಣ : ಅವರ ಸಾಧನೆಯನ್ನು, ಪ್ರಗತಿಪರ ಸಾಧನೆಯನ್ನು ಅವರು ಸಮರ್ಥಿಸಿದ ತತ್ತ್ವಗಳನ್ನು ಮಾನ್ಯ ಮಾಡೋಣ. ಈ ಸದನದ ಇತರ ಸದಸ್ಯರು ವ್ಯಕ್ತಪಡಿಸಿದ ಭಾವನೆಗಳೊಂದಿಗೆ ನಾನೂ ಭಾಗಿಯಾಗಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಸದನದ ನಾಯಕರು ಮತ್ತು ವಿವಿಧ ಗುಂಪುಗಳ ಮುಖಂಡರು ವ್ಯಕ್ತಪಡಿಸಿದ ಎಲ್ಲ ಭಾವನೆಗಳೊಂದಿಗೆ ನಾನೂ ಪೂರ್ಣವಾಗಿ ಭಾಗಿಯಾಗಿದ್ದೇನೆ: ಸದನವು ಅದೇ ಭಾವನೆಗಳನ್ನು ಸಮವಾಗಿ ಹಂಚಿಕೊಳ್ಳುವುದೆಂದು ಭಾವಿಸಿದ್ದೇನೆ.

ಡಾ. ಅಂಬೇಡ್ಕರ್ ಅವರು ಓರ್ವ ಮಹಾನ್ ಮತ್ತು ಕ್ರಿಯಾಶೀಲವ್ಯಕ್ತಿ. ಅವರು ಕೆಳಸ್ತರದಿಂದ ಬಂದು ಪರಿಶಿಷ್ಟ ಜಾತಿಗಳ ನಾಯಕರಾದರು. ಅವರೊಬ್ಬ ಶ್ರೇಷ್ಠ ವಿದ್ವಾಂಸರಾಗಿದ್ದರು: ಲೇಖಕರಾಗಿದ್ದರು. ಎಲ್ಲಕ್ಕೂ ಮಿಗಿಲಾಗಿ ಅವರು ಶಕ್ತಿಶಾಲಿ ಭಾಷಣಕಾರರಾಗಿದ್ದರು.

ಅವರು ನಮ್ಮ ಸಂವಿಧಾನದ ಮಾರ್ಗದರ್ಶಕರಾಗಿದ್ದರು. ಸಾಮಾಜಿಕ ಸುಧಾರಣೆ ಕ್ಷೇತ್ರದಲ್ಲಿ ಅವರು ಅನೇಕ ಉತ್ತಮ ಕ್ರಮಗಳನ್ನು ಆರಂಭಿಸಿದರು. ಅವರ ನಿಧನದಿಂದಾಗಿ ಭಾರತವು ಒಬ್ಬ ಶ್ರೇಷ್ಠ ಪುತ್ರನನ್ನು ಕಳೆದುಕೊಂಡತಾಗಿದೆ. ನಾನು ಅವರ ದುಃಖತಪ್ತ ಕುಟುಂಬಕ್ಕೆ ಸದನದ ಭಾವನೆಗಳನ್ನು ಮತ್ತು ಸಂತಾಪಗಳನ್ನು ತಿಳಿಸುತ್ತೇನೆ.

ಅವರ ಗೌರವಾರ್ಥ ಇಂದು ಸದನವನ್ನು ಮುಂದೂಡೋಣ. ಶೋಕಾಚರಣೆಯ ಅಂಗವಾಗಿ ನಾವು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸೋಣ. (*ಸದಸ್ಯರು ಎದ್ದು ನಿಂತು ಒಂದು ನಿಮಿಷ ಕಾಲ ಮೌನ ಆಚರಿಸಿದರು.*)

**ಮಾನ್ಯ ಸಭಾಧ್ಯಕ್ಷರು:** ಅವರ ಗೌರವಾರ್ಥ ಸದನವನ್ನು ಮುಂದೂಡಲಾಗಿದೆ. ಮತ್ತೆ ನಾಳೆ ಬೆಳಿಗ್ಗೆ ೧೧ ಗಂಟೆಗೆ ಸೇರುತ್ತದೆ.

**೧೨.೨೫ ಗಂಟೆ**

ನಂತರ ಲೋಕಸಭೆಯನ್ನು ಶುಕ್ರವಾರ ೭ ಡಿಸೆಂಬರ್ ೧೯೫೭ರ
೧೧ ಗಂಟೆಗೆ ಮುಂದೂಡಲಾಯಿತು.

◆

# ವಿಭಾಗ – ಎಂಟು

## ಸಂಸತ್ತಿನ ಸದಸ್ಯರು
## ಕೇಳಿದ ಪ್ರಶ್ನೆಗಳಿಗೆ
## ಡಾ. ಬಿ.ಆರ್. ಅಂಬೇಡ್ಕರ್
## ಅವರ ಉತ್ತರಗಳು

೧೮ನೇ ನವೆಂಬರ್ ೧೯೪೭
ರಿಂದ
೨೮ನೇ ಸೆಪ್ಟೆಂಬರ್ ೧೯೫೧

# ವಿಭಾಗ – ಎಂಟು

# ೧೮ ನವೆಂಬರ್ ೧೯೪೭ರಿಂದ ೨೮ ಸೆಪ್ಟೆಂಬರ್ ೧೯೫೧

## ಪರಿವಿಡಿ


| | | |
|---|---|---|
| ೧. | ಭಾರತದ ಉಚ್ಚ ನ್ಯಾಯಾಲಯಗಳಿಂದ ಅಪೀಲುಗಳು | ೮೯೩ |
| ೨. | ಬಾಕಿ ಅಪೀಲುಗಳನ್ನು ಇತ್ಯರ್ಥಗೊಳಿಸಲು ಪ್ರಿವಿ ಕೌನ್ಸಿಲ್‌ನ ನ್ಯಾಯಿಕ ಸಮಿತಿಯ ಅಧಿಕಾರ | ೮೯೪ |
| ೩. | ಫೆಡರಲ್ ನ್ಯಾಯಾಲಯ ಮತ್ತು ಪ್ರಿವಿ ಕೌನ್ಸಿಲ್ ವಿಚಾರಣೆ ನಡೆಸಿದ ಪ್ರಕರಣಗಳ ಸಂಖ್ಯೆ | ೮೯೫ |
| ೪. | ಫೆಡರಲ್ ನ್ಯಾಯಾಲಯದ ರಚನೆ | ೮೯೬ |
| ೫. | ಹಿಂದು ಕಾನೂನು ಕ್ರೋಢೀಕರಣ ಸಮಿತಿಯ ವರದಿ | ೮೯೮ |
| ೬. | ಹಿಂದೂ ಧರ್ಮದತ್ತಿ ಮತ್ತು ಧಾರ್ಮಿಕ ಟ್ರಸ್ಟ್‌ಗಳ ಆದಾಯದ ದುರುಪಯೋಗ | ೮೯೮ |
| ೭. | ಗೃಹ ವ್ಯವಹಾರಗಳ ಮಂತ್ರಾಲಯವು ನೇಮಿಸಿದ ನ್ಯಾಯಮಂಡಲಿಗಳ ಸಂಖ್ಯೆ ಮತ್ತು ಹೆಸರು | ೮೯೯ |
| ೮. | ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳ ಪುನಾರಚನೆ ಅಥವಾ ಮಾರ್ಪಾಟಿನ ಪ್ರಸ್ತಾವನೆ | ೯೦೧ |
| ೯. | ಮಹಾಚುನಾವಣೆಗಳು | ೯೦೨ |
| ೧೦. | ಪರಿಶಿಷ್ಟ ಜಾತಿಗಳ ಪಟ್ಟಿ | ೯೦೪ |
| ೧೧. | ಮಹಾಚುನಾವಣೆಗಳು | ೯೦೫ |
| ೧೨. | ವರಮಾನ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳು | ೯೦೮ |
| ೧೩. | ಕಾನೂನು ಮಂತ್ರಾಲಯದಲ್ಲಿ ಪರಿಶಿಷ್ಟ ಜಾತಿ ಉದ್ಯೋಗಿಗಳು | ೯೦೮ |
| ೧೪. | ಹಿಂದೂ ಸಂಹಿತೆ ವಿಧೇಯಕದ ಮೇಲಿನ ಸಲಹಾ ಸಮಿತಿ | ೯೦೯ |
| ೧೫. | ಸಂಸತ್ತಿನ ಸದಸ್ಯರ ವೇತನ ಮತ್ತು ಭತ್ಯೆಗಳು | ೯೧೧ |
| ೧೬. | ಮಹಾಚುನಾವಣೆಗಳು | ೯೧೧ |
| ೧೭. | ಮಹಾಚುನಾವಣೆಗಳು | ೯೧೩ |
| ೧೮. | ಸರ್ವೋಚ್ಚ ನ್ಯಾಯಾಲಯದ ಸರ್ಕಾರಿ ಏಜೆಂಟರು | ೯೧೭ |
| ೧೯. | ಮುಸ್ಲಿಂ ವೈಯಕ್ತಿಕ ಕಾನೂನುಗಳು | ೯೧೮ |
| ೨೦. | ಒಕ್ಕೂಟದ ವಿರುದ್ಧದ ಪ್ರಕರಣಗಳಲ್ಲಿ ವಕೀಲರ ನಿಯೋಜನೆ | ೯೨೦ |
| ೨೧. | ಪರಿಶಿಷ್ಟ ಜಾತಿಯ ಪ್ರತಿನಿಧಿಗಳು | ೯೨೧ |

| | | |
|---|---|---|
| ೨೨. | ಪುನರ್‌ವಿಂಗಡಣಾ ಸಮಿತಿಯ ವರದಿಗಳು | ೯೨೨ |
| ೨೩. | ಮಹಾಚುನಾವಣೆಗಳು | ೯೨೩ |
| ೨೪. | ದೆಹಲಿಯ ಗ್ರಾಮೀಣ ಪ್ರದೇಶಗಳ ಮತದಾರರ ಪಟ್ಟಿ | ೯೨೪ |
| ೨೫. | ಕೇಂದ್ರೀಯ ಮತ್ತು ರಾಜ್ಯ ಕಾನೂನು ಸಮೀಕ್ಷೆ | ೯೨೬ |
| ೨೬. | ಮತದಾರರ ಪಟ್ಟಿಗಳು | ೯೨೭ |
| ೨೭. | ಸರ್ವೋಚ್ಚ ನ್ಯಾಯಾಲಯಗಳಲ್ಲಿ ವಕೀಲರು | ೯೨೮ |
| ೨೮. | ಕೂಚ್ ಬೆಹರ್ (ಜನಸಂಖ್ಯೆ) | ೯೩೧ |
| ೨೯. | ಮತದಾರರ ಪಟ್ಟಿಗಳು | ೯೩೨ |
| ೩೦. | ಮತ ಪೆಟ್ಟಿಗೆಗಳ ತಯಾರಿಕೆ | ೯೩೩ |
| ೩೧. | ಸಂಸತ್ತಿನ ವಿಸರ್ಜನೆ | ೯೩೪ |
| ೩೨. | ಮತದಾರರ ಪಟ್ಟಿಗಳು | ೯೩೫ |
| ೩೩. | ಪಶ್ಚಿಮ ಬಂಗಾಳ ವಿಧಾನಮಂಡಲ (ಖಾಲಿ ಸ್ಥಾನಗಳು) | ೯೩೫ |
| ೩೪. | ಮದರಾಸಿನಲ್ಲಿ ಮಹಾ ಚುನಾವಣೆ | ೯೩೭ |
| ೩೫. | ಒರಿಸ್ಸಾದಲ್ಲಿ ಮಹಾ ಚುನಾವಣೆ | ೯೩೮ |
| ೩೬. | ಪ್ರಾದೇಶಿಕ ಆಯುಕ್ತರು | ೯೩೯ |
| ೩೭. | ಚುನಾವಣಾ ದಿನಾಂಕಗಳ ನಿಗದಿ | ೯೩೯ |
| ೩೮. | ರಾಜ್ಯಗಳಲ್ಲಿ ಮಹಾ ಚುನಾವಣೆಯ ದಿನಾಂಕಗಳು | ೯೪೦ |
| ೩೯. | ರಾಜಕೀಯ ಪಕ್ಷಗಳ ಚಿಹ್ನೆಗಳು | ೯೪೩ |
| ೪೦. | ಮಹಾ ಚುನಾವಣೆಗಳಿಗೆ ಮತದಾರರ ಪಟ್ಟಿ | ೯೪೪ |
| ೪೧. | ಮಹಿಳಾ ಮತದಾರರು ಮತ್ತು ಮತದಾರರ ಪಟ್ಟಿ | ೯೪೫ |
| ೪೨. | ಹಿಂದುಳಿದ ವರ್ಗಗಳಿಗೆ ಕೇಂದ್ರದ ಅನುದಾನ | ೯೪೫ |
| ೪೩. | ರಾಷ್ಟ್ರೀಯ ಭಾಷೆಯ ಅಭಿವೃದ್ಧಿಗೆ ಅನುದಾನ | ೯೪೭ |
| ೪೪. | ಮಹಾ ಚುನಾವಣೆಗಳಲ್ಲಿ ಮತದಾನದ ವಿಧಾನ | ೯೫೦ |
| ೪೫. | ಶಾಸನಬದ್ಧ ಮತ್ತು ಶಾಸನಬದ್ಧವಲ್ಲದ ಸಂಸ್ಥೆಗಳು | ೯೫೦ |
| ೪೬. | ಪಂಜಾಬಿನ ಹಿಮಾವೃತ ಪ್ರದೇಶಗಳಲ್ಲಿ ಚುನಾವಣೆಗಳು | ೯೫೧ |
| ೪೭. | ಮತಪೆಟ್ಟಿಗೆಗಳ ತಯಾರಿಕೆ | ೯೫೨ |
| ೪೮. | ಅಧಿನಿಯಮಗಳ ಹಿಂದೀ ಅನುವಾದ | ೯೫೨ |
| ೪೯. | ಅಣಕು ಚುನಾವಣೆಗಳು | ೯೫೪ |
| ೫೦. | ಮತದಾರರ ಪಟ್ಟಿಗೆ ಆಕ್ಷೇಪಣೆಗಳು | ೯೫೯ |
| ೫೧. | ರಾಜ್ಯಗಳಲ್ಲಿ ಚುನಾವಣಾ ಆಯುಕ್ತರು | ೯೫೯ |
| ೫೨. | ಮತದಾರರ ಪಟ್ಟಿಗಳು | ೯೬೦ |
| ೫೩. | ಅಣಕು ಚುನಾವಣೆಗಳು | ೯೬೦ |
| ೫೪. | ಸಂವಿಧಾನದ ಅನುಚ್ಛೇದ ೧೭೧ (ಬಿ) | ೯೬೧ |

೫೫. ಮತಕ್ಷೇತ್ರಗಳ ನಕ್ಷೆಗಳು ೯೬೧
೫೬. ಬುಡಕಟ್ಟು ಕ್ರಿಶ್ಚಿಯನ್ನರು ಮತ್ತು ಮಹಾ ಚುನಾವಣೆಗಳು ೯೬೩
೫೭. ಕಾನೂನು ಮಂತ್ರಾಲಯದಲ್ಲಿ ಅಧಿಕಾರಿಗಳು ೯೬೪
೫೮. ಮತಕೇಂದ್ರಗಳ ಪಟ್ಟಿ ೯೬೪
೫೯. ಕುಷ್ಠರೋಗ ೯೬೬
೬೦. ಲೇಡಿ ಹಾರ್ಡಿಂಗ್ ವೈದ್ಯಕೀಯ ಕಾಲೇಜು ೯೬೭
೬೧. ಸೂಲಗಿತ್ತಿ ಮತ್ತು ದಾದಿಯರ ತರಬೇತಿ ೯೬೯
೬೨. ಎಮಿಟೈನ್ ೯೭೦
೬೩. ಆಯುರ್ವೇದ ಸಂಶೋಧನಾ ಸಂಸ್ಥೆ ೯೭೧
೬೪. ಗೃಹನಿರ್ಮಾಣ ನಿರ್ದೇಶನ ೯೭೧
೬೫. ಕುಷ್ಠರೋಗಿಗಳು ೯೭೨
೬೬. ನಿರಾಶ್ರಿತ ಶಿಬಿರವಾಸಿಗಳ ಹರತಾಳ ೯೭೪
೬೭. ರಾಜಸ್ಥಾನ ಮಹಿಳಾ ಮತದಾರರಿಗೆ ಸಂಬಂಧಪಟ್ಟಂತೆ ಮಹಿಳಾ ಸಮಿತಿ, ಜೈಪುರ, ಇವರ ಮನವಿ ೯೭೫
೬೮. ಹಿಂದೂ ವಿವಾಹ ವಿಚ್ಛೇದನ ೯೭೬
೬೯. ಹಿಂದೂ ದ್ವಿಪತ್ನಿತ್ವ ವಿವಾಹಗಳ ನಿವಾರಣೆ ಅಧಿನಿಯಮ ೯೭೭
ಅನುಬಂಧ ೯೭೮

# ಪ್ರಶ್ನೆಗಳು ಮತ್ತು ಉತ್ತರಗಳು

# ೧

## *ಭಾರತದ ಉಚ್ಚ ನ್ಯಾಯಾಲಯಗಳಿಂದ ಅಪೀಲುಗಳು

೪. **ಶ್ರೀ ಆರ್.ಆರ್. ದಿವಾಕರ್:** (ಎ) ಭಾರತದಲ್ಲಿನ ಉಚ್ಚ ನ್ಯಾಯಾಲಯಗಳಿಂದ ಬರುವ ಅಪೀಲುಗಳು ಈಗಲೂ ಕೌನ್ಸಿಲ್‌ನ ಚಕ್ರವರ್ತಿಗೆ ಸಲ್ಲಿಸಲ್ಪಡುವವೆ? ಎಂಬ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಉತ್ತರಿಸುವರೆ?

(ಬಿ) ಮೇಲಿನ (ಎ) ಗೆ ಉತ್ತರ ಹೌದು ಎಂದಾದರೆ, ಅವುಗಳಿಗೆ ಈ ಹಿಂದಿನ ಅದೇ ಕಾನೂನು ಮತ್ತು ನಿಬಂಧನೆ ಹಾಗೂ ನಿಯಮಗಳು ಅನ್ವಯವಾಗುತ್ತವೆಯೆ?

(ಸಿ) ಮೇಲಿನ (ಎ)ಗೆ ಉತ್ತರ ಇಲ್ಲ ಎಂದಾದರೆ, ವಿವಿಧ ಪ್ರಾಂತ್ಯಗಳಲ್ಲಿನ ಉಚ್ಚ ನ್ಯಾಯಾಲಯಗಳ ತೀರ್ಪುಗಳ ಬಗ್ಗೆ ಸಲ್ಲಿಸಲಾಗುವ ಅಪೀಲುಗಳು ಯಾವ ರೂಪದಲ್ಲಿರಬೇಕು.

(ಡಿ) ಪ್ರಸಕ್ತ ಪ್ರಿವಿ ಕೌನ್ಸಿಲ್‌ನ ನ್ಯಾಯಿಕ ಸಮಿತಿಯ ಮುಂದೆ ಇತ್ಯರ್ಥವಾಗದೆ ಇರುವ ಅಪೀಲುಗಳನ್ನು ಅವರೇ ವಿಚಾರಣೆ ನಡೆಸಿ ಇತ್ಯರ್ಥಪಡಿಸುವರೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** (ಎ) ಹೌದು.

(ಬಿ) ಹೌದು.

(ಸಿ) ಉದ್ಭವಿಸುವುದಿಲ್ಲ.

(ಡಿ) ಹೌದು: ಹೊಸ ಸಂವಿಧಾನದಲ್ಲಿ ಅದಕ್ಕೆ ವ್ಯತಿರಕ್ತವಾಗಿ ಉಪಬಂಧ ಕಲ್ಪಿಸದ ಹೊರತು.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ಉಚ್ಚ ನ್ಯಾಯಾಲಯಗಳಿಂದ ಬರುವ ಅಪೀಲುಗಳಿಗಾಗಿ ಯಾವ ಬಗೆಯ ನ್ಯಾಯಾಲಯವನ್ನು ಈಗಿನ ಸರ್ಕಾರ ಸ್ಥಾಪಿಸಲು ಉದ್ದೇಶಿಸಿದೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಅದು ಸರ್ಕಾರ ತೀರ್ಮಾನಿಸುವ ವಿಷಯವಲ್ಲ. ಸಂವಿಧಾನ ರಚನೆ ಸಭೆ ನಿರ್ಣಯಿಸಬೇಕಾದ ವಿಷಯ.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ಸದ್ಯದ ಭಾರತ ಸರ್ಕಾರದ ಅಧಿನಿಯಮ ಮತ್ತು ಡೊಮಿನಿಯನ್ ಸ್ವಾತಂತ್ರ ಅಧಿನಿಯಮದ ಮೇರೆಗಿನ ನೂತನ ವ್ಯವಸ್ಥೆಯಲ್ಲಿ ಪ್ರಿವಿ ಕೌನ್ಸಿಲ್‌ನ ಅಪೀಲುಗಳಿಗೆ ಸಂಬಂಧಪಟ್ಟಂತೆ ಪ್ರಿವಿ ಕೌನ್ಸಿಲ್‌ನ ಕಾರ್ಯವ್ಯಾಪ್ತಿಯನ್ನು ರದ್ದುಪಡಿಸಿ, ಸರ್ವೋಚ್ಚ ನ್ಯಾಯಾಲಯದಲ್ಲಿ ನಿಹಿತಗೊಳಿಸಬಹುದೆಂಬ ವಿಷಯ ಮಾನ್ಯ ಕಾನೂನು ಸದಸ್ಯರಿಗೆ ತಿಳಿದಿಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಸಂವಿಧಾನವನ್ನು ವ್ಯಾಖ್ಯಾನಿಸುವ ಉದ್ದೇಶಕ್ಕಾಗಿ ಸಂವಿಧಾನ ರಚನೆ ಸಭೆಯು ಸಭೆ ಸೇರಿರುವಾಗ ಸರ್ಕಾರವು ತೀರ್ಮಾನ ಕೈಗೊಳ್ಳಬಹುದೆ? ನನಗೆ ಗೊತ್ತಿಲ್ಲ.

---

* ಸಿಎ (ಎಲ್ಇಜಿ) ಡಿ. ಸಂ. ೧, ಭಾಗ ೧, ೧೮ ನವೆಂಬರ್ ೧೯೪೭ ಪು. ೭೦–೭೧

**ಶ್ರೀ ಅನಂತಶಯನಂ ಅಯ್ಯಂಗಾರ್:** ಕೆಲವೊಂದು ವಿಷಯಗಳಲ್ಲಿ ಅಪೀಲುಗಳು ಪ್ರಿವಿ ಕೌನ್ಸಿಲ್‌ಗೆ ಹೋಗುವುದನ್ನು ತಪ್ಪಿಸಲು ಭಾರತ ಸರ್ಕಾರದ ಅಧಿನಿಯಮದ ಪ್ರಕರಣ ೨೯೯ ಮತ್ತು ಇತರ ಪ್ರಕರಣಗಳ ಮೇರೆಗೆ ಕ್ರಮ ಕೈಗೊಳ್ಳಲು ನಿರ್ಣಯವೊಂದನ್ನು ತರಲು ಹಿಂದಿನ ಕಾನೂನು ಸದಸ್ಯರು ಬಯಸಿರಲಿಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಅದೇ ಪರಿಸ್ಥಿತಿ ಹಾಗೆಯೇ ಇದೆಯೋ ನನಗೆ ತಿಳಿಯದು. ನನ್ನ ಗೌರವಾನ್ವಿತ ಸ್ನೇಹಿತರು ಹೇಳಿದಂತೆ ಕಾನೂನು ಸದಸ್ಯರು ಕ್ರಮವನ್ನು ಪ್ರಸ್ತಾಪಿಸಿದ್ದರು; ಆದರೆ ನೂತನ ಸಂವಿಧಾನ ರಚನೆಗೆ ಸಂಬಂಧಿಸಿದಂತೆ? ಅಂಥ ಉದ್ದೇಶವೇನೂ ಇರಲಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಆರ್ಡರ್, ಆರ್ಡರ್. ಮಾನ್ಯ ಸದಸ್ಯರಾದ ಶ್ರೀ ಅಯ್ಯಂಗಾರ್ ಅವರು ಮಾಹಿತಿ ಕೇಳುವರೆ? ಇದು ವಾಗ್ವಾದಕ್ಕೆ ತಿರುಗುವಂತಿದೆ.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ನಾನು ಮಾಹಿತಿಯನ್ನು ಕೇಳಿದ್ದೆ. ಈ ಮುಂಚೆ ಏನಾಯಿತು ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದ್ದಂತಿಲ್ಲ.

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಇನ್ನು ಕೆಲವೇ ತಿಂಗಳಲ್ಲಿ ನೂತನ ಸಂವಿಧಾನ ರಚಿಸುವ ವಿಷಯ ನಮಗೆ ತಿಳಿದಿರುವ ದೃಷ್ಟಿಯಿಂದ ಅಂಥ ಕ್ರಮಕೈಗೊಳ್ಳಬಹುದೆಂದು ನನಗೆ ಅನಿಸುತ್ತಿಲ್ಲ.

**ಶ್ರೀ ಕೆ.ಸಂತಾನಂ:** ಹೊಸ ಸಂವಿಧಾನ ರಚನಾ ಸಭೆ ಜಾರಿಗೆ ಬಂದಾಗ ಭಾರಿ ಸಂಕ್ರಮಣ ಕಾಲದ ತೊಂದರೆಗಳು ಉಂಟಾಗಬಹುದೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆ.

**ಮಾನ್ಯ ಸಭಾಧ್ಯಕ್ಷರು:** ಆರ್ಡರ್, ಆರ್ಡರ್, ಅದು ಅಭಿಪ್ರಾಯದ ಪ್ರಶ್ನೆ.

## ೨

# *ಬಾಕಿ ಅಪೀಲುಗಳನ್ನು ಇತ್ಯರ್ಥಗೊಳಿಸಲು ಪ್ರಿವಿಕೌನ್ಸಿಲ್‌ನ ನ್ಯಾಯಿಕ ಸಮಿತಿಯ ಅಧಿಕಾರವ್ಯಾಪ್ತಿ

**ಶ್ರೀ ಆರ್.ಆರ್. ದಿವಾಕರ್:** (ಎ) ಮಾನ್ಯ ಕಾನೂನು ಮಂತ್ರಿಗಳು ಪ್ರಿವಿ ಕೌನ್ಸಿಲ್‌ನ ನ್ಯಾಯಿಕ ಸಮಿತಿಗಳು ಅವುಗಳ ಮುಂದೆ ಈಗ ಇತ್ಯರ್ಥವಾಗದೇ ಇರುವ ಮತ್ತು ಇನ್ನು ಮುಂದೆ ಸಲ್ಲಿಸಲಾಗುವ ಅಪೀಲುಗಳನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯಂಥ ಹಾಲಿ ಅಧಿನಿಯಮಗಳಲ್ಲಿ ಬದಲಾವಣೆಗಳನ್ನು ಮಾಡದೆ ಇರುವವರಿಗೆ, ಕೈಗೆತ್ತಿಕೊಂಡು ವಿಚಾರಣೆ ನಡೆಸಿ, ಅಂತಿಮವಾಗಿ ಇತ್ಯರ್ಥಪಡಿಸುವುದು ನಿಜವೇ ಎಂದು ತಿಳಿಸುವರಾ?

(ಬಿ) ಪ್ರಿವಿ ಕೌನ್ಸಿಲ್‌ಗೆ ಸಂಬಂಧಪಟ್ಟಂತೆ ಡೊಮಿನಿಯನ್ ಸರ್ಕಾರದ ಭವಿಷ್ಯದ ಕಾರ್ಯನೀತಿ ಏನಾಗಲಿದೆ?

(ಸಿ) ಪ್ರಿವಿ ಕೌನ್ಸಿಲ್‌ನ ಕಾರ್ಯವ್ಯಾಪ್ತಿ ಹೊಂದಿರುವ ಸರ್ವೋಚ್ಚ ನ್ಯಾಯಾಲಯವನ್ನು ಮುಂಚಿತವಾಗಿಯೇ ಸ್ಥಾಪಿಸುವ ಸಲಹೆಯನ್ನು ಪರಿಗಣಿಸಲು ಸರ್ಕಾರವು ಉದ್ದೇಶಿಸಿದೆಯೇ?

(ಡಿ) ಹಾಗಿದ್ದಲ್ಲಿ ಅಂಥ ನ್ಯಾಯಾಲಯವನ್ನು ಸ್ಥಾಪಿಸಲು ಬೇಕಾದ ಸರಿಸುಮಾರು ಸಮಯವೆಷ್ಟು?

---

* ಸಿಎ (ಎಲ್‌ಇಜಿ) ಡಿ. ಸಂ. ೧ ಭಾಗ ೧ ೧೮ ನವೆಂಬರ್ ೧೯೪೭ ಪು. ೭೧

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** (ಎ) ಹೌದು.

(ಬಿ) ಪ್ರಿವಿ ಕೌನ್ಸಿಲ್‌ನ ಅಪೀಲುಗಳಿಗೆ ಸಂಬಂಧಪಟ್ಟ ಸರ್ಕಾರದ ಭವಿಷ್ಯದ ಕಾರ್ಯನೀತಿಯು ಸಾಮಾನ್ಯವಾಗಿ ಸಂವಿಧಾನ ರಚನಾ ಸಭೆಯು ನೂತನ ಸಂವಿಧಾನದಲ್ಲಿ ಅಳವಡಿಸುವ ನಿಯಮಕ್ಕನುಸಾರವಾಗಿರುತ್ತದೆ.

(ಸಿ) ಇಲ್ಲ. ನೂತನ ಸಂವಿಧಾನ ಜಾರಿಗೆ ಬರುವವರೆಗೆ ಇಲ್ಲ.

(ಡಿ) ಪ್ರಸಕ್ತ ಅಂದಾಜು ನೀಡಲು ಸಾಧ್ಯವಾಗುವುದಿಲ್ಲ.

**ಶ್ರೀ ಹೆಚ್. ಗೋವಿಂದ್‌ದಾಸ್:** ಒಂದು ವೇಳೆ ಸಂವಿಧಾನ ರಚನಾ ಸಭೆಯು ಪ್ರಿವಿ ಕೌನ್ಸಿಲ್‌ಗೆ ಅಪೀಲುಗಳನ್ನು ಸಲ್ಲಿಸಬಾರದೆಂದು ತೀರ್ಮಾನಿಸಿದರೆ, ನಿರ್ಣಯಕ್ಕೆ ಬರುವ ಮುನ್ನ ಈಗಾಗಲೇ ಸಲ್ಲಿಸಿದ ಅಪೀಲುಗಳಿಗೆ ಏನಾಗುವುದು?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಸಂವಿಧಾನ ರಚನಾ ಸಭೆಯು ನಿರ್ಣಯ ಕೈಗೊಳ್ಳುವಾಗ ಅಂಥ ಪ್ರಕರಣಗಳನ್ನು ಒಳಗೊಳ್ಳುವಂತೆ ಸಮುಚ್ಚಿತ ಉಪಬಂಧವನ್ನು ಮಾಡುವುದೆಂಬ ವಿಶ್ವಾಸ ನನಗಿದೆ.

## ೩

# *ಫೆಡರಲ್ ನ್ಯಾಯಾಲಯ ಮತ್ತು ಪ್ರಿವಿ ಕೌನ್ಸಿಲ್ ವಿಚಾರಣೆ ನಡೆಸಿದ ಪ್ರಕರಣಗಳ ಸಂಖ್ಯೆ

**೮. ಶ್ರೀ ಎಸ್. ನಾಗಪ್ಪ:** ಮಾನ್ಯ ಕಾನೂನು ಸಚಿವರು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ: (ಎ) ಕಳೆದ ಮೂರು ವರ್ಷಗಳಲ್ಲಿ ಫೆಡರಲ್ ನ್ಯಾಯಾಲಯ ವಿಚಾರಣೆ ನಡೆಸಿದ ಒಟ್ಟು ಪ್ರಕರಣಗಳ ಸಂಖ್ಯೆ – ವರ್ಷಾವಾರು ; ಮತ್ತು

(ಬಿ) ಪ್ರಿವಿ ಕೌನ್ಸಿಲ್‌ನ ಮುಂದೆ ಹೋಗಿರುವ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** (ಎ) ಫೆಡರಲ್ ನ್ಯಾಯಾಲವು ೧೯೪೪, ೧೯೪೫ ಮತ್ತು ೧೯೪೬ ರ ಮೂರು ವರ್ಷಗಳಲ್ಲಿ ವಿಚಾರಣೆ ನಡೆಸಿದ ಒಟ್ಟು ಪ್ರಕರಣಗಳ ಸಂಖ್ಯೆ ಕ್ರಮವಾಗಿ ೩೪ ಮತ್ತು ೧೬.

(ಬಿ) ಅದೇ ಮೂರು ವರ್ಷಗಳಲ್ಲಿ ಪ್ರಿವಿ ಕೌನ್ಸಿಲ್‌ನ ಮುಂದೆ ಸಲ್ಲಿಸಿದ ಒಟ್ಟು ಸಂಖ್ಯೆ ಕ್ರಮವಾಗಿ ೫೮, ೬೯ ಮತ್ತು ೬೧.

**ಶ್ರೀ ಬಿ.ಎಂ. ಗುಪ್ತ:** ಪ್ರಿವಿ ಕೌನ್ಸಿಲ್ ಎಷ್ಟು ಅಪೀಲುಗಳನ್ನು ಕಾಯ್ದಿರಿಸಿದೆ ಎಂದು ತಿಳಿಸಿದ್ದೀರಾ?

**ಮಾನ್ಯ ಡಿ.ಆರ್. ಅಂಬೇಡ್ಕರ್:** ಅದು ಉದ್ಭವಿಸುವುದಿಲ್ಲ.

**ಶ್ರೀ ಬಿಶ್ವನಾಥದಾಸ್:** ಕಾಮನ್‌ವೆಲ್ತ್ ದೇಶಗಳು ಯಾವುವು ತಮ್ಮ ಕಕ್ಷಿದಾರರು ಪ್ರಿವಿ ಕೌನ್ಸಿಲ್‌ಗೆ ಅಪೀಲು ಸಲ್ಲಿಸುವುದಕ್ಕೆ ಅವಕಾಶ ನೀಡದಿರುವ ದೃಷ್ಟಿಯಿಂದ ಈ ಪ್ರಶ್ನೆ ಕುರಿತು ಸಂವಿಧಾನ ರಚನಾ

---

* ಪಿಎ (ಎಲ್‌ಇಜಿ) ಡಿ ಸಂ–೧ ಭಾಗ–೧ ೧೮ ನವೆಂಬರ್ ೧೯೪೭ ಪು–೭೫–೭೬

ಸಭೆಯ ನಿರ್ಣಯ ಮತ್ತು ಇಂದಿನ ನಡುವೆ ಯಾವುದಾದರೂ ಮಧ್ಯಂತರ ಏರ್ಪಾಟು ಮಾಡುವ ಬಗ್ಗೆ ಸರ್ಕಾರ ಚಿಂತಿಸುತ್ತದೆಯೇ ಎಂದು ಮಾನ್ಯ ಮಂತ್ರಿಗಳು ತಿಳಿಸುವರೇ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ನನ್ನ ಸ್ನೇಹಿತರ ಪ್ರಶ್ನೆಯನ್ನು ನಾನು ಸರಿಯಾಗಿ ಗಮನಿಸಲಿಲ್ಲ; ಆದಾಗ್ಯೂ ಸರ್ಕಾರವು ವಿಷಯವನ್ನು ಪರಿಶೀಲಿಸುತ್ತಿದೆ ಮತ್ತು ಒಂದು ವೇಳೆ ಅದು ಸೂಕ್ತವೆಂದು ಕಂಡುಬಂದಲ್ಲಿ ಅವರು ಮಧ್ಯಂತರ ಕ್ರಮಕೈಗೊಳ್ಳುತ್ತಾರೆ ಎಂದು ಹೇಳಬಲ್ಲೆ.

**ಶ್ರೀ ಬಿಶ್ವನಾಥ್ ದಾಸ್:** ಯಾವ ನಿರ್ದಿಷ್ಟ ಪ್ರಶ್ನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ನಾವು ತಿಳಿಯಬಹುದೆ? ನನ್ನ ಪ್ರಶ್ನೆ ತುಂಬಾ ಸ್ಪಷ್ಟ ಮತ್ತು ನಿರ್ದಿಷ್ಟ. ನಾನು ಹೇಳಿದ್ದೇನೆಂದರೆ ಯಾವ ಕಾಮನ್‌ವೆಲ್ತ್ ದೇಶವು ತನ್ನ ಕಕ್ಷಿದಾರರು ಪ್ರಿವಿ ಕೌನ್ಸಿಲ್‌ಗೆ ಅಪೀಲು ಸಲ್ಲಿಸಲು ಅವಕಾಶ ನೀಡುತ್ತಿಲ್ಲ. ಭಾರತವು ಕಾಮನ್‌ವೆಲ್ತ್ ದೇಶಗಳಲ್ಲಿ ಒಂದಾಗಿರುವುದರಿಂದ ಸರ್ಕಾರವು ದಯಮಾಡಿ ಈ ಪ್ರಶ್ನೆಯನ್ನು ಪರಿಶೀಲಿಸುವುದೇ. ಅಥವಾ ಈ ಪ್ರಶ್ನೆ ಕುರಿತು ಸಂವಿಧಾನ ರಚನಾ ಸಭೆಯ ನಿರ್ಣಯ ಮತ್ತು ಇಂದಿನ ನಡುವೆ ಯಾವುದೇ ಮಧ್ಯಂತರ ಏರ್ಪಾಟು ಮಾಡುವ ಕುರಿತು ಪರಿಶೀಲಿಸಿದೆಯೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಸರ್ಕಾರ ವಿಷಯವನ್ನು ಪರಿಶೀಲಿಸುತ್ತಿದೆ ಎಂದು ನಾನು ಹೇಳಿದ್ದೇನೆ. ಈ ಬಗ್ಗೆ ಸರ್ಕಾರವು ಯಾವುದೇ ಕ್ರಮಕೈಗೊಳ್ಳುವ ಮುನ್ನ ಫೆಡರಲ್ ನ್ಯಾಯಾಲಯವು ಸರ್ವೋಚ್ಚ ನ್ಯಾಯಾಲಯವಾಗುವಂತೆ ಮತ್ತು ಅದು ಪ್ರಿವಿ ಕೌನ್ಸಿಲ್‌ನ ಕರ್ತವ್ಯಗಳನ್ನು ನಿರ್ವಹಿಸಬೇಕಾದಲ್ಲಿ, ಅಲ್ಲಿಂದ ವರ್ಗಾಯಿಸಲಾಗುವ ಕರ್ತವ್ಯಗಳನ್ನು ನಿರ್ವಹಿಸಲು ಪೂರ್ಣ ಸಂಖ್ಯೆಯ ನ್ಯಾಯಾಧೀಶರು ಇರುವಂತೆ ನೋಡಿಕೊಳ್ಳಬೇಕಾಗುತ್ತದೆ.

**ಶ್ರೀ ಬಿ.ಪೋಕರ್ ಸಾಹಿಬ್ ಬಹದ್ದೂರ್:** ಮಾನ್ಯ ಮಂತ್ರಿಗಳಿಗೆ ಈ ಹಿಂದಿನ ಸರ್ಕಾರವು ಕಕ್ಷಿದಾರನ ಆಯ್ಕೆಗೆ ಅನುಸಾರವಾಗಿ ಪ್ರಿವಿ ಕೌನ್ಸಿಲ್‌ನ ಮುಂದೆ ಅಪೀಲು ಸಲ್ಲಿಸುವುದರ ಜೊತೆಗೆ ಫೆಡರಲ್ ನ್ಯಾಯಾಲಯಕ್ಕೂ ಸಲ್ಲಿಸುವ ಕುರಿತು, ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರಿಗೆ ಸಾಕಷ್ಟು ಕೆಲಸವಿಲ್ಲದಿರುವ ದೃಷ್ಟಿಯಿಂದ ಮತ್ತು ಈ ಕ್ರಮವು ಉಚ್ಚ ನ್ಯಾಯಾಲಯದಿಂದ ತಮ್ಮ ಅಪೀಲುಗಳನ್ನು ಮುಂದುವರೆಸಲು ಕಕ್ಷಿದಾರರಿಗೆ ಅನುಕೂಲ ಮಾಡಿಕೊಡುವುದರಿಂದ, ಅವಕಾಶ ಕಲ್ಪಿಸುವ ಬಗ್ಗೆ ಆಲೋಚಿಸುತ್ತಿದ್ದದ್ದು ತಿಳಿದಿಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಇಡೀ ಪ್ರಶ್ನೆಯನ್ನು ಪರಿಶೀಲಿಸಲಾಗುತಿದೆ.

## ೪

## *ಫೆಡರಲ್ ನ್ಯಾಯಾಲಯದ ರಚನೆ

**೨೫. ಶ್ರೀ ಫೂಲನ್ ಪ್ರಸಾದ್ ವರ್ಮ:** (ಎ) ಮಾನ್ಯ ಕಾನೂನು ಮಂತ್ರಿಗಳು–ಭಾರತದ ಸಂವಿಧಾನ ರಚನಾಸಭೆಯು ಕೆಲವೊಂದು ಸಂಕ್ರಮಣ ಉಪಬಂಧಗಳನ್ನು ಅಂಗೀಕರಿಸಿದ್ದು, ಅವುಗಳ ಮೂಲಕ ಫೆಡರಲ್ ನ್ಯಾಯಾಲಯವನ್ನೇ ಸರ್ವೋಚ್ಚ ನ್ಯಾಯಾಲಯವೆಂದು ಪರಿಗಣಿಸಲಾಗುವುದೆಂದು ಮತ್ತು ಅದೇ ಅಂತಿಮ ಅಪೀಲು ಪ್ರಾಧಿಕಾರವಾಗಲಿದೆ–ಎಂದು ಮತ್ತು ಹೊಸ ಅಪೀಲುಗಳನ್ನು ಪ್ರಿವಿ ಕೌನ್ಸಿಲ್‌ನ

---

* ಸಿ.ಎ. (ಎಲ್‌ಇಜಿ) ಡಿ. ಸಂ.೧ ಭಾಗ–೧ ೧೮ ನವೆಂಬರ್ ೧೯೪೭ ಪು. ೮೮

ಬದಲಾಗಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಬರಲಿದೆ ಎಂಬುದು ಸರ್ಕಾರಕ್ಕೆ ತಿಳಿದಿಲ್ಲವೆ? ಎಂಬ ಬಗ್ಗೆ ತಿಳಿಸುವಿರಾ?

(ಬಿ) ಮೇಲಿನ ಪ್ರಶ್ನೆ (ಎ) ಗೆ ಉತ್ತರ ಹೌದು ಎಂದಾದರೆ ಈ ಉಪಬಂಧಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ಅಥವಾ ಕೈಗೊಳ್ಳಲಿದೆ?

(ಬಿ) ಸಂಪ್ರದಾಯದ ಉಪಬಂಧದಲ್ಲಿ ಪ್ರಿವಿ ಕೌನ್ಸಿಲ್‌ನ ಮುಂದೆ ಇತ್ಯರ್ಥವಾಗದೆ ಇರುವ ಪ್ರಕರಣಗಳನ್ನು ಪ್ರಿವಿ ಕೌನ್ಸಿಲ್ ತಾನೆ ಇತ್ಯರ್ಥಪಡಿಸುವುದೆಂದು ವಿಧಿಸಲಾಗಿರುವುದು, ಸರ್ಕಾರಕ್ಕೆ ತಿಳಿದಿದೆಯೆ?

(ಡಿ) ಮೇಲಿನ ಪ್ರಶ್ನೆ (ಸಿ) ಗೆ ಉತ್ತರ ಹೌದು ಎಂದಾದರೆ ಇತ್ಯರ್ಥವಾಗದ ಎಂಬ ಪದದ ನಿಜವಾದ ಅರ್ಥವೇನೆಂದು ಸರ್ಕಾರ ಸ್ಪಷ್ಟಪಡಿಸುವುದೆ?

(ಇ) ಈ ವಿಷಯದಲ್ಲಿ ನಿಶ್ಚಿತ ಸ್ಥಿತಿಯ ಬಗ್ಗೆ ಕಕ್ಷಿದಾರರು, ವಕೀಲರು ಮತ್ತು ಉಚ್ಚ ನ್ಯಾಯಾಲಯದ ನ್ಯಾಯಧೀಶರ ಮನಸ್ಸಿನಲ್ಲಿ ಅತ್ಯಂತ ಅನಿಶ್ಚಿತತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

(ಎಫ್) ಮೇಲಿನ ಪ್ರಶ್ನೆ (ಇ) ಗೆ ಉತ್ತರ ಹೌದು ಎಂದಾದರೆ, ಈ ವಿಷಯದ ಮೇಲೆ ಸರ್ಕಾರವು ಹೇಳಿಕೆ ನೀಡುವುದೇ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** (ಎ) ಸರ್ಕಾರವು ಒಕ್ಕೂಟ ಸಂವಿಧಾನ ಸಮಿತಿಯ ಶಿಫಾರಸ್ಸುಗಳನ್ನು ಆ ತರುವಾಯ ಸಂವಿಧಾನ ರಚನಾ ಸಭೆಯಿಂದ ಅಂಗೀಕರಿಸಲ್ಪಟ್ಟ ಶಿಫಾರಸ್ಸುಗಳನ್ನು ಒಳಗೊಂಡ, ದಸ್ತಾವೇಜಿನ ಸಂಬಂಧಪಟ್ಟ ಭಾಗಗಳನ್ನು ಸರ್ಕಾರವು ಗಮನಿಸಿರುತ್ತದೆ.

(ಬಿ) ಸಂವಿಧಾನ ರಚನಾ ಸಭೆಯು ರೂಪಿಸುತ್ತಿರುವ ಸಂವಿಧಾನದಲ್ಲಿ ಉಪಬಂಧವೊಂದನ್ನು ಸೇರಿಸುವವರಗೆ, ಈ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ.

(ಸಿ) ಇಲ್ಲ ಸರ್, ಮೇಲೆ ಹೇಳಿದ ದಸ್ತಾವೇಜಿನ ಯಾವುದೇ ಅಂಥ ಶಿಫಾರಸ್ಸನ್ನು ಒಳಗೊಂಡಿರುವುದಿಲ್ಲ.

(ಡಿ) ಉದ್ಭವಿಸುವುದಿಲ್ಲ.

(ಇ) ಕಕ್ಷಿದಾರನ ಮನಸ್ಸಿನಲ್ಲಿ ಅನಿಶ್ಚಿತತೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ವಿಷಯದ ಬಗ್ಗೆ ವಕೀಲರಿಂದ ಕೆಲವೊಂದು ಪ್ರಶ್ನೆಗಳನ್ನು ಅವರು ಸ್ವೀಕರಿಸಿದ್ದಾರೆ. ಆದರೆ ಅವು ಅತ್ಯಂತ ಅನಿಶ್ಚಿತತೆ ಇದೆ ಎಂಬುದನ್ನು ಸೂಚಿಸುತ್ತಿಲ್ಲ.

(ಎಫ್) ಸಂವಿಧಾನ ರಚನಾ ಸಭೆಯು ಅಂಗೀಕರಿಸಿರುವ ನಿರ್ಣಯವು ಸಾಕಷ್ಟು ಸ್ಪಷ್ಟವಾಗಿದೆ. ಈ ಹಂತದಲ್ಲಿ ಈ ಬಗ್ಗೆ ಯಾವುದೇ ಹೇಳಿಕೆ ನೀಡುವುದು ಅವಶ್ಯವೆಂದು ಸರ್ಕಾರವು ಪರಿಗಣಿಸಿಲ್ಲ.

## *ಹಿಂದೂ ಕಾನೂನು ಕ್ರೋಢೀಕರಣ ಸಮಿತಿಯ ವರದಿ

**೨೩೬. ಶ್ರೀ ಕೆ. ಸಂತಾನಂ:** ಮಾನ್ಯ ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಹಿಂದೂ ಕಾನೂನು ಕ್ರೋಢೀಕರಣ ಸಮಿತಿಯು ತನ್ನ ಅಂತಿಮ ವರದಿಯನ್ನು ಸಲ್ಲಿಸಿದೆಯೇ? ಮತ್ತು

* ಸಿಎ (ಎಲ್‌ಇಜಿ) ಡಿ ಸಂ–೧, ಭಾಗ–೧, ೧ ನವೆಂಬರ್ ೧೯೪೭ ಪು. ೪೫೩

(ಬಿ) ಹಾಗಿದ್ದಲ್ಲಿ ಸಮಿತಿಯು ಶಿಫಾರಸ್ಸು ಮಾಡಿದಂತೆ ವಿಧೇಯಕವನ್ನು ಯಾವಾಗ ಮಂಡಿಸಲು ಉದ್ದೇಶಿತವಾಗಿದೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** (ಎ) ಹೌದು

(ಬಿ) ಹಿಂದೂ ಕಾನೂನು ಸಮಿತಿಯು ಸಿದ್ಧಪಡಿಸಿದ ಕರಡು ಹಿಂದು ಸಂಹಿತೆಯಂತೆಯೇ ಒಂದು ಸರ್ಕಾರಿ ವಿಧೇಯಕವನ್ನು ಈ ಹಿಂದಿನ ಭಾರತೀಯ ಶಾಸನ ಸಭೆಯಲ್ಲಿ ೧೧ ಏಪ್ರಿಲ್ ೧೯೪೭ರಂದು ಮಂಡಿಸಲಾಗಿತ್ತು. ವಿಧೇಯಕವನ್ನು ಮುಂದುವರಿಸುವ ಸೂಚನೆಯನ್ನು ಸದನವು ೧೭ ನವೆಂಬರ್ ೧೯೪೭ರಂದು ಅಂಗೀಕರಿಸಿದ್ದಿತು.

## ೬

## *ಹಿಂದೂ ಧರ್ಮದಾಯ ಮತ್ತು ಧಾರ್ಮಿಕ ಟ್ರಸ್ಟ್‌ಗಳ ಆದಾಯದ ದುರುಪಯೋಗ

**೩೯೭. ಡಾ. ಪಿ.ಎಸ್. ದೇಶಮುಖ್:** (ಎ) ಮಾನ್ಯ ಕಾನೂನು ಮಂತ್ರಿಗಳು, ಹಿಂದೂ ಧರ್ಮದಾಯ ಮತ್ತು ಧಾರ್ಮಿಕ ಟ್ರಸ್ಟ್‌ಗಳಿಂದ ಬರುವ ಆದಾಯ ಎಷ್ಟರಮಟ್ಟಿಗೆ ಅಪವ್ಯಯ ಮತ್ತು ದುರುಪಯೋಗ ಆಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂಬ ಬಗ್ಗೆ ಉತ್ತರಿಸುವರೆ?

(ಬಿ) ಈ ಎಲ್ಲಾ ಟ್ರಸ್ಟ್‌ಗಳನ್ನು ರದ್ದುಗೊಳಿಸಿ ಅವುಗಳ ಸೊತ್ತುಗಳನ್ನು ರಾಷ್ಟ್ರ ನಿರ್ಮಾಣದ ಉದ್ದೇಶಕ್ಕೆ ಬಳಸಿಕೊಳ್ಳುವ ಬಗ್ಗೆ ಶಾಸನವನ್ನು ಮಂಡಿಸುವ ಸಲಹೆಯನ್ನು ಸರ್ಕಾರವು ಪರಿಗಣಿಸುವ ಉದ್ದೇಶ ಹೊಂದಿದೆಯೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** (ಎ) ಇಲ್ಲ, ಸರ್.

(ಬಿ) ಇಲ್ಲ ಸರ್, ಎಲ್ಲ ಹಿಂದು ಧಾರ್ಮಿಕ ಮತ್ತು ಧರ್ಮಾದಾಯ ಟ್ರಸ್ಟ್‌ಗಳನ್ನು ರದ್ದುಪಡಿಸುವ ಪ್ರಶ್ನೆ ಅಗತ್ಯವೇ ಅಥವಾ ಅಪೇಕ್ಷಣೀಯವೇ ಎಂಬುದು ಅಂತಿರಲಿ, ಅಂಥ ಶಾಸನವು ಪ್ರಾಂತೀಯ ಶಾಸಕಾಂಗ ಪಟ್ಟಿಯ ನಮೂದು ೩೪ ರ ಅಡಿ ಪ್ರಾಂತೀಯ ಕ್ಷೇತ್ರ ವ್ಯಾಪ್ತಿಗೆ ಬರುತ್ತಿದ್ದು ಕೇಂದ್ರ ಸರ್ಕಾರವು ಸೂಚಿಸಿದ ಶಾಸನವನ್ನು ಮಂಡಿಸಲಾಗದು.

* ಸಿಎ (ಎಲ್‌ಇಜಿ) ಡಿ ಸಂ–೧ ಭಾಗ–೧, ೧ ನವೆಂಬರ್ ೨೭, ೧೯೪೭ ಪು. ೭೮೧

## ೭

# *ಗೃಹ ವ್ಯವಹಾರಗಳ ಮಂತ್ರಾಲಯವು ನೇಮಿಸಿದ ನ್ಯಾಯಮಂಡಲಿಗಳ ಸಂಖ್ಯೆ ಮತ್ತು ಹೆಸರು

೧೬೭. ಶ್ರೀ **ಮೋಹನ್‌ಲಾಲ್ ಸಕ್ಸೆನಾ:** (ಎ) ಮಾನ್ಯ ಕಾನೂನು ಮಂತ್ರಿಗಳು, ಗೃಹ ವ್ಯವಹಾರಗಳ ಮಂತ್ರಾಲಯವು ನೇಮಿಸಿರುವ ಎಷ್ಟು ನ್ಯಾಯಮಂಡಲಿಗಳು ಈಗಲೂ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ತಿಳಿಸುವರೆ?

(ಬಿ) ಈ ನ್ಯಾಯಮಂಡಲಿಗಳ ಅನೇಕ ಸದಸ್ಯರು ಈಗ ಪಾಕಿಸ್ತಾನಕ್ಕೆ ಸೇರಿರುವುದು ನಿಜವೆ.

(ಸಿ) ಹಾಗಿದ್ದಲ್ಲಿ ಅಂಥ ಸದಸ್ಯರ ಸ್ಥಾನವೇನು? ಮತ್ತು ಅವರ ಸ್ಥಾನದಲ್ಲಿ ಪರ್ಯಾಯ ನೇಮಕ ಮಾಡಲಾಗಿದೆಯೆ?

(ಡಿ) ಈ ಕೆಳಕಂಡ ಮಾಹಿತಿ ಒಳಗೊಂಡ ಹೇಳಿಕೆಯನ್ನು ಸದನದ ಮುಂದೆ ಸರ್ಕಾರವು ಮಂಡಿಸುವುದೆ?

(i) ವಿವಿಧ ಟ್ರಿಬ್ಯೂನಲ್‌ಗಳ ಹೆಸರುಗಳು

(ii) ವಿಚಾರಣೆ ನಡೆಸಿದ ಮತ್ತು ಇತ್ಯರ್ಥಪಡಿಸಿದ ಪ್ರಕರಣಗಳ ಸಂಖ್ಯೆ ಮತ್ತು

(iii) ಪ್ರತಿಯೊಂದು ನ್ಯಾಯಮಂಡಲಿಗಳು ಎಷ್ಟು ಅವಧಿಯವರೆಗೆ ಕಾರ್ಯ ನಿರ್ವಹಿಸಿವೆ ಮತ್ತು ಪ್ರತಿಯೊಂದು ಪ್ರಕರಣಕ್ಕೂ ಸರ್ಕಾರ ಭರಿಸಿರುವ ವೆಚ್ಚ ಎಷ್ಟು?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** (ಎ) ಮಾನ್ಯ ಸದಸ್ಯರು ಕ್ರಿಮಿನಲ್ ಕಾನೂನು ತಿದ್ದುಪಡಿ ಸುಗ್ರಿವಾಜ್ಞೆ ೧೯೪೩ರ ಮೇರೆಗೆ ರಚಿಸಲಾಗಿರುವ ವಿಶೇಷ ನ್ಯಾಯಮಂಡಲಿಗಳನ್ನು ಉಲ್ಲೇಖಿಸುತ್ತಿದ್ದಾರೆಂದು ಭಾವಿಸಿದ್ದೇನೆ. ಈಗಲೂ ಕಾರ್ಯನಿರ್ವಹಿಸುತ್ತಿರುವ ಅಂಥ ನ್ಯಾಯಮಂಡಲಿಗಳ ಸಂಖ್ಯೆ ೪.

(ಬಿ) ಮತ್ತು (ಸಿ) – ಕೇಂದ್ರ ಸ್ಥಾನ ಲಾಹೋರ್ ಆಗಿರುವ ೩ ವಿಶೇಷ ನ್ಯಾಯಮಂಡಲಿಗಳಿವೆ. ಅದರ ಕೆಲವು ಸದಸ್ಯರು ಈಗ ಪಾಕಿಸ್ತಾನಕ್ಕೆ ಸೇರಿದ್ದಾರೆ. ಭಾರತದ ಸ್ವಾತಂತ್ರ (ವಿಶೇಷ ನ್ಯಾಯಮಂಡಲಿಗಳು) ಆದೇಶ, ೧೯೪೭ರ ಮೇರೆಗೆ ಈ ನ್ಯಾಯಮಂಡಲಿಗಳು ಮತ್ತು ಅವುಗಳ ಮುಂದೆ ಇರುವ ಪ್ರಕರಣಗಳನ್ನು ಪುನರ್‌ವಿಂಗಡಣೆ ಮಾಡಲಾಗಿದೆ. ಪಾಕಿಸ್ತಾನಕ್ಕೆ ಸೇರಿದ ಸದಸ್ಯರುಗಳನ್ನು ಒಳಗೊಂಡ ಒಂದು ನ್ಯಾಯಮಂಡಲಿಯನ್ನು ಪಶ್ಚಿಮ ಪಂಜಾಬ್‌ಗೆ ನಿಯೋಜಿಸಲಾಗಿದೆ. ಭಾರತಕ್ಕೆ ಸಂಬಂಧಪಟ್ಟ ಬಾಕಿ ಪ್ರಕರಣಗಳನ್ನು ಭಾರತಕ್ಕೆ ವರ್ಗಾಯಿಸಿ, ಪೂರ್ವ ಪಂಜಾಬ್ ಮತ್ತು ಬಾಂಬೆ ವಿಶೇಷ ನ್ಯಾಯಮಂಡಲಿಗಳೆಂದು ಮರುನಾಮಕರಣ ಮಾಡಲಾಗಿದೆ. ಪೂರ್ವ ಪಂಜಾಬ್ ನ್ಯಾಯಮಂಡಲಿಯ ಸಂಘಟನೆಗೆ ಅಗತ್ಯವಿರುವ ಓರ್ವ ಹೊಸ ಸದಸ್ಯರನ್ನು ಸಹ ಪೂರ್ವ ಪಂಜಾಬ್ ಸರ್ಕಾರವು ನೇಮಕ ಮಾಡಿದೆ. ಬಾಂಬೆ ವಿಶೇಷ ನ್ಯಾಯಮಂಡಲಿಯ ಸಂಘಟನೆಯನ್ನು ಪೂರ್ಣಗೊಳಿಸಲು ಅಗತ್ಯವಿರುವ ಹೊಸ ಸದಸ್ಯರನ್ನು ಬಾಂಬೆ ಸರ್ಕಾರವು ನೇಮಕ ಮಾಡುತ್ತಿದೆ.

(ಡಿ) ಕೇಳಲಾಗಿರುವ ಮಾಹಿತಿಯನ್ನು ನೀಡುವ ತಃಖ್ತೆಯನ್ನು ಮುಂದೆ ಒದಗಿಸಲಾಗಿದೆ.

---

* ಸಿಎ (ಎಲ್‌ಇಜಿ) ಡಿ, ಸಂ–೧, ಭಾಗ–೧ ೨೭ ನವೆಂಬರ್ ೧೯೪೭ ಪುಟ ೩೯೧–೩೯೨

## ತಃಖ್ತೆ

| ವಿವಿಧ ನ್ಯಾಯಮಂಡಲಿ ಹೆಸರು | ನ್ಯಾಯಮಂಡಲಿ ಕಾರ್ಯ ಆರಂಭಿಸಿದ ದಿನಾಂಕ | ವಿಚಾರಣೆ ಹಾಗೂ ಇತ್ಯರ್ಥಪಡಿಸಿದ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಪ್ರತಿ ಪ್ರಕರಣಕ್ಕೂ ತಗುಲಿದ ವೆಚ್ಚ |
|---|---|---|---|---|
| ೧ | ೨ | ೩ | ೪ | ೫ |
| ಮೊದಲ ನ್ಯಾಯಮಂಡಲಿ, ಕಲ್ಕತ್ತಾ | ಸೆಪ್ಟೆಂಬರ್ ೧೯೪೩ | ೬೬ | ೧೨ | ಮಾಹಿತಿ ಲಭ್ಯವಿಲ್ಲ |
| ಎರಡನೆಯ ವಿಶೇಷ ಟ್ರಿಬ್ಯುನಲ್, ಕಲ್ಕತ್ತಾ | ಜುಲೈ ೧೯೪೫ | ಇಲ್ಲ | ೧ | ಮಾಹಿತಿ ಲಭ್ಯವಿಲ್ಲ |
| ಪೂರ್ವ ಪಂಜಾಬ್ ವಿಶೇಷ ನ್ಯಾಯಮಂಡಲಿ (ಅನಂತರದಲ್ಲಿ ಮೂರನೆಯ ವಿಶೇಷ ನ್ಯಾಯಮಂಡಲಿ, ಲಾಹೋರ್) | ಮೇ ೧೯೪೫ | ೫೪* | ೭೯ | ಮಾಹಿತಿ ಲಭ್ಯವಿಲ್ಲ |
| ಬಾಂಬೆ ವಿಶೇಷ ನ್ಯಾಯಮಂಡಲಿ (ಅನಂತರದಲ್ಲಿ ಎರಡನೆಯ ವಿಶೇಷ ನ್ಯಾಯಮಂಡಲಿ, ಲಾಹೋರ್) | ಫೆಬ್ರವರಿ ೧೯೪೫ | ೬ | ೨ | ಮಾಹಿತಿ ಲಭ್ಯವಿಲ್ಲ |

ಪ್ರಸಕ್ತ, ಪಶ್ಚಿಮ ಪಂಜಾಬ್ ವಿಶೇಷ ನ್ಯಾಯಮಂಡಲಿ ಎಂದು ನಾಮಕರಣ ಮಾಡಲಾಗಿರುವ, ೧೯೪೩ ಸೆಪ್ಟೆಂಬರ್‌ನಲ್ಲಿ ಸ್ಥಾಪಿಸಿದ ಮೊದಲ ಲಾಹೋರ್ ವಿಶೇಷ ನ್ಯಾಯಮಂಡಲಿ ಇತ್ಯರ್ಥಪಡಿಸಿದ ಪ್ರಕರಣಗಳೂ ಒಳಗೊಂಡಂತೆ.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ಸರ್, ಬಾಕಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ನ್ಯಾಯಮಂಡಲಿಗಳಿಗೆ ಎಷ್ಟು ಕಾಲ ಬೇಕು?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಯಾವುದೇ ನಿರ್ದಿಷ್ಟ ಉತ್ತರ ನೀಡಲು ನನ್ನಿಂದ ಸಾಧ್ಯವಿಲ್ಲ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ:** ಈ ನ್ಯಾಯಮಂಡಲಿಗಳ ಮುಂದೆ ಅನೇಕ ಪ್ರಕರಣಗಳು ಬಾಕಿ ಉಳಿದಿರುವುದು ನಿಜವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಅದು ನಿಜವಿರಬಹುದು.

**ಶ್ರೀ ಮೋಹನ್‌ಲಾಲ್ ಸಕ್ಸೇನಾ:** ಮಾನ್ಯ ಕಾನೂನು ಮಂತ್ರಿಗಳು ಅವುಗಳ ಇತ್ಯರ್ಥ ತ್ವರಿತಗೊಳಿಸಲು ಏನಾದರೂ ಕ್ರಮಕೈಗೊಳ್ಳುವರೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ನ್ಯಾಯಮಂಡಲಿಗಳ ಮುಂದಿರುವ ಪ್ರಕರಣಗಳ ಇತ್ಯರ್ಥವನ್ನು ತ್ವರಿತಗೊಳಿಸುವ ಕ್ರಮ ಸರ್ಕಾರದ ಸಚಿವರಿಗೆ ಅತ್ಯಂತ ಕಷ್ಟಕರವಾದದು. ಪ್ರಕರಣಗಳಲ್ಲಿನ ಇತ್ಯರ್ಥದ ವಿಳಂಬಕ್ಕೆ ಮುಖ್ಯ ಕಾರಣ ಪಕ್ಷಕಾರರು ವಿವಿಧ ಆಧಾರಗಳ ಮೇಲೆ ಮುಂದೂಡಿಕೆಗಳನ್ನು ಪಡೆದುಕೊಳ್ಳುವುದು. ಮುಂದೂಡಿಕೆಗಳನ್ನು ನೀಡಲು ಕಟ್ಟುನಿಟ್ಟಿನ ನಿಯಮಗಳನ್ನು ನಿಗದಿಪಡಿಸುವುದು ಕಷ್ಟಕರ.

**ಶ್ರೀ ಆರ್.ಕೆ. ಸಿದ್ವಾ:** ಈ ಮುಂದೂಡಿಕೆಗಳನ್ನು ನೀಡಲು ಕಾನೂನುಬದ್ಧ ಆಧಾರಗಳಿವೆಯೆ?

**ಮಾನ್ಯ ಶ್ರೀ ಬಿ.ಆರ್. ಅಂಬೇಡ್ಕರ್:** ನಾನು ಹೇಳಲಾರೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ:** ಈ ನ್ಯಾಯಮಂಡಲಿಗಳನ್ನು ಯಾವುದಾದರೂ ನಿರ್ದಿಷ್ಟ ಅವಧಿಗೆ ನೇಮಕ ಮಾಡಲಾಗಿದೆಯೇ.

**ಮಾನ್ಯ ಶ್ರೀ ಬಿ.ಆರ್. ಅಂಬೇಡ್ಕರ್:** ಇಲ್ಲ ಸರ್.

## ೮

## *ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳ ಪುನಾರಚನೆ ಅಥವಾ ಮಾರ್ಪಾಟಿಗೆ ಪ್ರಸ್ತಾವನೆ

**೨೮೭. ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** ಮಾನ್ಯ ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ (ಎ) ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳ ಪುನಾರಚನೆ ಅಥವಾ ಮಾರ್ಪಾಟಿಗೆ ಯಾವುದಾದರೂ ಪ್ರಸ್ತಾವನೆಗಳಿವೆಯೆ ಮತ್ತು ಇದ್ದರೆ ಆ ಪ್ರಸ್ತಾವನೆಗಳು ಯಾವುವು?

(ಬಿ) ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳಿಂದ ಪ್ರಾಂತೀಯ ಉಚ್ಚ ನ್ಯಾಯಾಲಯಗಳಿಗೆ ಪರಾಮರ್ಶನ ಮಾಡುವುದನ್ನು ನಿಷೇಧಿಸಿ ಅದಕ್ಕೆ ಬದಲಾಗಿ ಆದಾಯ ತೆರಿಗೆ ಅಧಿನಿಯಮದ ಅಡಿಯ ಎಲ್ಲಾ ಪ್ರಕರಣಗಳಲ್ಲಿ ಪರಾಮರ್ಶನಕ್ಕೆ ಅವಕಾಶ ಕಲ್ಪಿಸಿರುವೆಡೆ ನೇರವಾಗಿ ಫೆಡರಲ್ ನ್ಯಾಯಾಲಯಕ್ಕೆ ಪರಾಮರ್ಶನ ಮಾಡುವ ಬಗ್ಗೆ ಶಾಸನವನ್ನು ತರಲು ಪರಿಶೀಲಿಸಲಾಗುತ್ತಿದೆಯೆ?

(ಸಿ) ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಹುದ್ದೆಯನ್ನು ಹೊಂದಿರುವ ವ್ಯಕ್ತಿಗಳನ್ನು ಅವುಗಳ ಅಧ್ಯಕ್ಷರನ್ನಾಗಿ ನೇಮಕ ಮಾಡುವ ಮೂಲಕ ಅವುಗಳ ಸ್ಥಾನಮಾನವನ್ನು ಉನ್ನತೀಕರಿಸಲು ಸರ್ಕಾರ ಪರಿಶೀಲಿಸುತ್ತಿದೆಯೆ.

**ಮಾನ್ಯ ಶ್ರೀ ಬಿ.ಆರ್. ಅಂಬೇಡ್ಕರ್:** (ಎ) ಹೌದು.

(ಬಿ) ಫೆಡರಲ್ ನ್ಯಾಯಾಲಯವನ್ನು ಭಾರತೀಯ ಆದಾಯ ತೆರಿಗೆ ಅಧಿನಿಯಮದ ಮೇರೆಗೆ ಪರಾಮರ್ಶನಕ್ಕಾಗಿ ಮೂಲ ನ್ಯಾಯಾಲಯವನ್ನಾಗಿ ಮಾಡುವ ಸಲಹೆಗಳನ್ನು ಫೆಡರಲ್ ನ್ಯಾಯಾಲಯದ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಸ್ತಾವದ ಸಂಬಂಧದಲ್ಲಿ ೧೯೪೫–೪೬ರಲ್ಲಿ ಪೂರ್ಣವಾಗಿ ಪರಿಶೀಲಿಸಲಾಗಿದ್ದಿತು ಮತ್ತು ದಿನಾಂಕ ೧೫ ಜುಲೈ ೧೯೪೫ರ ಶಾಸನಕಾಂಗ ಇಲಾಖೆಯ ನಿರ್ಣಯಕ್ಕನುಸಾರವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಕೋರಲಾಗಿದ್ದಿತು. ಅಭಿಪ್ರಾಯವು ಸಲಹೆಗೆ ಭಾರಿ ಪ್ರಮಾಣದಲ್ಲಿ ವಿರುದ್ಧವಾಗಿದ್ದಿತು. ದಿವಂಗತ ಭೂಲಾಬಾಯಿ ದೇಸಾಯಿಯವರು ತಾತ್ವಿಕವಾಗಿ ತೀರಾ ಆಕ್ಷೇಪಣೀಯ ಮತ್ತು ತೆರಿಗೆದಾರರಿಗೆ ಅನ್ಯಾಯಯುತವಾದದ್ದೆಂದು ಬಣ್ಣಿಸಿದ್ದರು. ಈ ಫೆಡರಲ್ ನ್ಯಾಯಾಲಯವು ಸಿವಿಲ್ ಅಪೀಲುಗಳಿಗಾಗಿ ಸರ್ವೋಚ್ಚ ನ್ಯಾಯಾಲಯವಾಗಿದ್ದು ಅದನ್ನು ಆದಾಯ ತೆರಿಗೆ ಪರಾಮರ್ಶನಗಳಿಗೆ ಮೂಲ ನ್ಯಾಯಾಲಯವನ್ನಾಗಿ ಮಾಡುವುದು ಅನುಚಿತವೂ ಅಸಂಗತವೂ ಆಗುತ್ತದೆ.

(ಸಿ) ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳಿಂದ ಕಾನೂನು ಅಂಶಗಳ ಮೇಲೆ

---

* ಸಿ.ಎ. (ಎಲ್.ಐ.ಜಿ) ಸಂ–೧, ಭಾಗ–೧, ೧೪ ಫೆಬ್ರವರಿ ೧೯೪೮ ಪು– ೭೧೯.

ಪರಾಮರ್ಶನಗಳು ಮೇಲ್ಮನವಿ ನ್ಯಾಯಮಂಡಲಿಗಳಿಂದ ಉಚ್ಚ ನ್ಯಾಯಾಲಯದ ಮುಂದೆ ಬರುತ್ತದೆ. ಆದ್ದರಿಂದ ಅದಕ್ಕೆ ಅಧ್ಯಕ್ಷರನ್ನಾಗಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸಿ ಅದರ ಸ್ಥಾನಮಾನವನ್ನು ಎತ್ತರಿಸುವ ಅಗತ್ಯವಿಲ್ಲ. ನ್ಯಾಯಮಂಡಲಿಯ ಹಾಲಿ ಸ್ಥಾನಮಾನವೆ ಉನ್ನತಮಟ್ಟದಾಗಿದ್ದು ಅಧ್ಯಕ್ಷರ ಅಥವಾ ನ್ಯಾಯಿಕ ಸದಸ್ಯರಾಗಿ ಬಾರ್‌ನ ಹಿರಿಯ ಸದಸ್ಯರನ್ನು ಅಥವಾ ಪೀಠಕ್ಕೆ ಪದನ್ನೋತಿ ಹೊಂದಲಿರುವ ಹಿರಿಯ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡುವಲ್ಲಿ ಯಾವಾಗಲೂ ಎಚ್ಚರವಹಿಸಲಾಗುತ್ತಿದೆ. ವಾಸ್ತವವಾಗಿ ಈ ಹಿಂದಿನ ಅಧ್ಯಕ್ಷರಿಬ್ಬರು ಈಗ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ೯

# *ಮಹಾಚುನಾವಣೆಗಳು

**೯೬. ಶ್ರೀ ದೇಶಬಂಧು ಗುಪ್ತ:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ? (ಎ) ಲೋಕಸಭೆಯ ಮೊದಲ ಮಹಾಚುನಾವಣೆಗಳಿಗೆ ಯಾವುದಾದರೂ ನಿಶ್ಚಿತ ದಿನಾಂಕಗಳನ್ನು ನಿಗದಿಪಡಿಸಲಾಗಿದೆಯೆ?

(ಬಿ) ಮತದಾರರ ಪಟ್ಟಿ ತಯಾರಿಕೆಯಲ್ಲಿ ಏನು ಪ್ರಗತಿ ಸಾಧಿಸಲಾಗಿದೆ ಮತ್ತು ಚುನಾವಣಾ ಯಂತ್ರವನ್ನು ಸಜ್ಜುಗೊಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

**ಕಾನೂನು ಮಂತ್ರಿಗಳು (ಡಾ. ಬಿ.ಆರ್. ಅಂಬೇಡ್ಕರ್):** (ಎ) ಲೋಕಸಭೆಯ ಮೊದಲ ಮಹಾಚುನಾವಣೆಗಳಿಗೆ ಯಾವುದೇ ನಿಶ್ಚಿತ ದಿನಾಂಕವನ್ನು ನಿಗದಿಗೊಳಿಸಲಾಗಿಲ್ಲ. ಹಾಗೆ ಮಾಡಲು ಸ್ಪಷ್ಟವಾಗಿ ಇದು ತೀರಾ ಮುಂಚೆ.

(ಬಿ) ಮತದಾರರ ಪಟ್ಟಿ ಸಿದ್ಧತೆಗೆ ಸಂಬಂಧಪಟ್ಟಂತೆ ಸಂವಿಧಾನ ರಚನಾ ಸಭೆ (ಶಾಸಕಾಂಗ)ದ ಕೊನೆಯ ಭಾಗದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂ. ೪೬೯ಕ್ಕೆ ಕಳೆದ ಡಿಸೆಂಬರ್ ೯ರಂದು ನೀಡಿದ ಉತ್ತರದ ಕಡೆಗೆ ಗಮನ ಸೆಳೆಯಲಾಗಿದೆ. ಕಳೆದ ಎರಡು ತಿಂಗಳಲ್ಲಿ ರಾಜ್ಯಗಳು ಸ್ವಲ್ಪ ಮಟ್ಟಿನ ಪ್ರಗತಿಯನ್ನು ಸಾಧಿಸಿವೆ. ಮುಖ್ಯ ಚುನಾವಣಾ ಆಯುಕ್ತರ ಕಛೇರಿಯನ್ನು ಸ್ಥಾಪಿಸಲಾಗಿದೆ. ಸದ್ಯದಲ್ಲಿಯೇ ರಾಷ್ಟ್ರಪತಿಗಳು ಅದಕ್ಕೆ ಅಧಿಕಾರಿ ವರ್ಗವನ್ನು ನೇಮಕ ಮಾಡಲಿದ್ದಾರೆ. ಚುನಾವಣೆಗೆ ಸಂಬಂಧಿಸಿದಂತೆ ವಿವಿಧ ವಿಷಯಗಳು ಒಳಗೊಂಡಂತೆ ಸಮಗ್ರ ವಿಧೇಯಕದ ಸಿದ್ಧತೆಯನ್ನು ಕೈಗೆತ್ತಿಕೊಳ್ಳಲಾಗಿದೆ.

**ಶ್ರೀ ದೇಶಬಂಧು ಗುಪ್ತ:** ಇತ್ತೀಚೆಗೆ ಪ್ರಧಾನ ಮಂತ್ರಿಗಳು ೧೯೫೦ರ ಕೊನೆಯ ವೇಳೆಗೆ ಚುನಾವಣೆಗಳನ್ನು ನಡೆಸಲಾಗುವುದು ಎಂದು ನೀಡಿದ ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಗಮನಿಸಿದ್ದಾರೆಯೆ? ಒಂದು ವೇಳೆ ಅದೇ ಸರ್ಕಾರದ ತೀರ್ಮಾನವಾದರೆ ಮತದಾರ ಪಟ್ಟಿ ಮೊದಲಾದ ಸಿದ್ಧತೆಯಲ್ಲಿ ಮಾಡಿರುವ ಪ್ರಗತಿಯು ೧೯೫೦ರ ಒಳಗೆ ಚುನಾವಣೆಗಳನ್ನು ನಡೆಸಲು ಸಾಕಾಗುವುದೆ?

**ಪ್ರಧಾನ ಮಂತ್ರಿಗಳು (ಜವಾಹರಲಾಲ್ ನೆಹರು):** ನನ್ನ ಹೇಳಿಕೆ ಮುಂದಿನ ಚಳಿಗಾಲದಲ್ಲಿ ಎಂದಿತ್ತು. ಈ ವರ್ಷದ ಕೊನೆಯಲ್ಲಿ ಅಲ್ಲ : ಅಂದರೆ ೧೯೫೦–೫೧ರ ಚಳಿಗಾಲ.

* ಸಂಸದೀಯ ಚರ್ಚೆಗಳು (ಇನ್ನು ಮುಂದೆ ಪಿ.ಡಿ. ಎಂದು ಕರೆಯಲಾಗಿದೆ) ಸಂ–೧, ಭಾಗ–೧ ೬ ಫೆಬ್ರವರಿ ೧೯೫೦ ಪು–೭೯

**ಶ್ರೀ ತ್ಯಾಗಿ:** ಕಳೆದ ಆರು ಅಥವಾ ಏಳು ತಿಂಗಳಲ್ಲಿ ಖಾಲಿ ಬಿದ್ದಿರುವ ಸ್ಥಾನಗಳಿಗೆ ವಿವಿಧ ರಾಜ್ಯಗಳಲ್ಲಿ ಉಪಚುನಾವಣೆಗಳನ್ನು ನಡೆಸಲು ಏನು ಸಿದ್ಧತೆಗಳನ್ನು ಮಾಡಲಾಗುತ್ತಿದೆ?

**ಡಾ. ಬಿ.ಆರ್. ಅಂಬೇಡ್ಕರ್:** ಇದು ಪ್ರಾಂತೀಯ ರಾಜ್ಯಪಾಲರಿಗೆ ಬಿಟ್ಟ ವಿಷಯ. ಆದರೂ ಸಂವಿಧಾನವು ಈ ವಿಷಯದಲ್ಲಿ ರಾಷ್ಟ್ರಪತಿಗಳಿಗೆ ನೀಡಿದ್ದ ಅಧಿಕಾರದಂತೆ ಮಾಡಲಾದ ಆದೇಶಗಳಿಗೆ ಒಳಪಟ್ಟಿರುತ್ತದೆ.

**ಶ್ರೀ ವ್ಯಾಸ್:** ಪ್ರಸಕ್ತ ವಿಧಾನಮಂಡಲಗಳೇ ಇಲ್ಲದ ರಾಜ್ಯದಲ್ಲಿ ಮತದಾರರ ಪಟ್ಟಿ ಸಿದ್ಧತೆಗೆ ಸರ್ಕಾರ ಏನಾದರೂ ವಿಶೇಷ ಗಮನ ನೀಡಿದೆಯೆ?

**ಡಾ. ಬಿ.ಆರ್. ಅಂಬೇಡ್ಕರ್:** ಖಂಡಿತವಾಗಿ.

**ಶ್ರೀ ಭಾರತಿ:** ಭಾರತ ಸರ್ಕಾರವು ಕಾಲಾವಕಾಶವನ್ನು ಪಡೆಯುವುದಕ್ಕಾಗಿ ಪ್ರಾಂತ್ಯಗಳು ಮತ್ತು ರಾಜ್ಯಗಳನ್ನು ೧೯೫೧ರ ಜನಗಣತಿ ನಂತರ ಚುನಾವಣೆ ನಡೆಸುವ ಅಪೇಕ್ಷೆ ಕುರಿತು ತಮ್ಮ ಅಭಿಪ್ರಾಯಗಳನ್ನು ನೀಡಿರುವಂತೆ ಕೇಳಿರುವುದು ನಿಜವೆ? ಭಾರತ ಸರ್ಕಾರ ೧೯೫೧ರ ಜನಗಣತಿಯ ನಂತರ ಮಹಾಚುನಾವಣೆಗಳನ್ನು ನಡೆಸುವ ಕುರಿತು ತಮ್ಮ ಅಭಿಪ್ರಾಯ ನೀಡುವಂತೆ – ವಿವಿಧ ರಾಜ್ಯಗಳನ್ನು ಕೇಳಲಾಗಿದೆ ಎಂದು ನನಗೆ ವೃತ್ತ ಪತ್ರಿಕೆಗಳಿಂದ ತಿಳಿದು ಬಂದಿದೆ.

**ಡಾ. ಅಂಬೇಡ್ಕರ್:** ಅಂಥ ಯಾವುದೇ ಪ್ರಸ್ತಾಪ ಕುರಿತು ನನಗೆ ಗೊತ್ತಿಲ್ಲ.

**ಶ್ರೀ ತ್ಯಾಗಿ:** ವಿವಿಧ ರಾಜ್ಯಗಳಲ್ಲಿ ಅನೇಕ ತಿಂಗಳುಗಳ ಹಿಂದೆ ಖಾಲಿ ಬಿದ್ದ ಸ್ಥಾನಗಳನ್ನು ಇನ್ನು ತುಂಬದಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆಯೆ?

**ಡಾ. ಅಂಬೇಡ್ಕರ್:** ಅದು ಪ್ರಾಂತ್ಯಗಳಿಗೆ ಸಂಬಂಧಪಟ್ಟ ವಿಷಯ.

**ಶ್ರೀ ದೇಶಬಂಧು ಗುಪ್ತ:** ಪೂರ್ವ ಪಂಜಾಬ್, ದೆಹಲಿ, ಭಾಗಶಃ ಬಾಂಬೆ ಅಥವಾ ಪಶ್ಚಿಮ ಬಂಗಾಳಗಳಂಥ ಕೆಲವೊಂದು ಪ್ರದೇಶಗಳಲ್ಲಿ ಚುನಾವಣೆಗಳು ಹೊಸ ಜನಗಣತಿಯನ್ನು ಆಧರಿಸಿರುತ್ತದೆ ಎಂದು ಉಪಪ್ರಧಾನಿಗಳು ಸಂವಿಧಾನ ರಚನಾ ಸಭೆಗೆ ಭರವಸೆ ನೀಡಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿಲ್ಲವೆ? ಹಾಗಿದ್ದಲ್ಲಿ ನೂತನ ಚುನಾವಣೆಗಳಿಗೆ ಮತದಾರರ ಪಟ್ಟಿ ಸಿದ್ಧಪಡಿಸುವ ಮುನ್ನ ಈ ಪ್ರದೇಶಗಳಲ್ಲಿ ಜನಗಣತಿ ನಡೆಸಲು ಸರ್ಕಾರವು ಏನು ಕ್ರಮಗಳನ್ನು ಕೈಗೊಂಡಿದೆ?

**ಡಾ. ಅಂಬೇಡ್ಕರ್:** ಇದು ವಾಸ್ತವಾಂಶಗಳಿಂದ ದೂರವಾದ ಹೇಳಿಕೆ ಎಂದು ನನ್ನ ಭಾವನೆ.

**ಶ್ರೀ ದೇಶಬಂಧು ಗುಪ್ತ:** ಪ್ರಶ್ನೆ ಮತ್ತು ಅದಕ್ಕೆ ಮಾನ್ಯ ಕಾನೂನು ಮಂತ್ರಿಗಳ ಉತ್ತರದ ಕಡೆಗೆ ಪ್ರಧಾನಮಂತ್ರಿಗಳ ಗಮನಸೆಳೆಯಬಹುದೆ? ಉಪಪ್ರಧಾನಿಗಳು ಭರವಸೆ ನೀಡಿದ್ದು ನಿಜವೆ ಅಥವಾ ಇಲ್ಲವೆ ಎಂದು ಕೇಳುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಮಾನ್ಯ ಮಂತ್ರಿಗಳು ಈಗಾಗಲೇ ಪ್ರಶ್ನೆಗೆ ಉತ್ತರಿಸಿದ್ದಾರೆ.

**ಶ್ರೀ ದೇಶಬಂಧು ಗುಪ್ತ:** ಅದು ನಿಜವಲ್ಲವೆಂದು ಅವರು ಹೇಳುತ್ತಿದ್ದಾರೆ. ಅದು ನಿಜವೆ ಅಥವಾ ಇಲ್ಲವೆ ಎಂದು ಪ್ರಧಾನಮಂತ್ರಿಗಳು ಹೇಳಬೇಕು. ಭರವಸೆ ದಾಖಲಾಗಿದೆ.

**ಶ್ರೀ ಕಾಮತ್:** ಭಾರತ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಬರೆದ ಪತ್ರವೊಂದರಲ್ಲಿ ೧೯೫೧ರ ಜನಗಣತಿಯಾದ ಕೆಲವು ತಿಂಗಳ ನಂತರ ರಾಜ್ಯಗಳ ವಿಧಾನ ಮಂಡಲಗಳಿಗೆ ಚುನಾವಣೆಗಳನ್ನು ನಡೆಸಿದರೆ ಅನುಕೂಲಕರವೆ ಎಂದು ಕೇಳಿದೆ ಎಂಬ ಮದ್ರಾಸಿನ ಯುನೈಟೆಡ್ ಪ್ರೆಸ್ ಆಫ್ ಇಂಡಿಯಾ ವರದಿಯನ್ನು ಮಾನ್ಯ ಮಂತ್ರಿಗಳು ಗಮನಿಸಿದ್ದಾರೆಯೆ?

**ಡಾ. ಅಂಬೇಡ್ಕರ್:** ನಾನು ಅದನ್ನು ಗಮನಿಸಿಲ್ಲ.

# ೧೦

# *ಪರಿಶಿಷ್ಟ ಜಾತಿಗಳ ಪಟ್ಟಿ

**೮೦೬ ಶ್ರೀ ಯಶವಂತ ರೈ:** ಮಾನ್ಯ ಕಾನೂನು ಮಂತ್ರಿಗಳು ಸಂವಿಧಾನದ ಅನುಚ್ಛೇದ ೩೪೧ನ್ನು ಪರಿಶೀಲಿಸಿ ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಅನೇಕ ಜಾತಿಗಳವರು ಪರಿಶಿಷ್ಟ ಜಾತಿಗಳ ಪಟ್ಟಿಗಳಲ್ಲಿ ತಾವು ಸೇರಿದ್ದೇವೆಯೆ ಎಂದು ತಿಳಿಯಲು ಆತಂಕಗೊಂಡಿರುವುದು ನಿಜವೆ? ಮತ್ತು

(ಬಿ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ ಮತ್ತು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿರುವ ಜಾತಿಗಳ ಪಟ್ಟಿಯನ್ನು ಯಾವಾಗ ಘೋಷಿಸಲಾಗುವುದು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ) – ಸಂವಿಧಾನದ ಅನುಚ್ಛೇದ ೩೪೧ ಅಗತ್ಯಪಡಿಸಿರುವಂತೆ ಸಂವಿಧಾನದ ಉದ್ದೇಶಕ್ಕಾಗಿ ಪರಿಶಿಷ್ಟ ಜಾತಿಗಳೆಂದು ನಿರ್ದಿಷ್ಟಪಡಿಸಬೇಕಾದ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳು ಮೊದಲಾದವುಗಳಿಗೆ ಸಂಬಂಧಿಸಿದಂತೆ ರಾಜ್ಯಗಳ ರಾಜ್ಯಪಾಲರು ಮತ್ತು ರಾಜ ಪ್ರಮುಖರೊಡನೆ ಸಮಾಲೋಚಿಸಿದ್ದೇವೆ; ಅವರ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಸಹ ಪರಿಶೀಲಿಸಲಾಗುತ್ತಿದೆ. ಈ ಪರಿಶೀಲನೆಯು ಶೀಘ್ರವಾಗಿ ಪೂರ್ಣಗೊಳ್ಳುವ ನಿರೀಕ್ಷೆಯಿದ್ದು. ಅನಂತರ ಪರಿಶಿಷ್ಟ ಜಾತಿಗಳನ್ನು ನಿರ್ದಿಷ್ಟ ಪಡಿಸುವ ಅಧಿಸೂಚನೆಯನ್ನು ಹೊರಡಿಸಲಾಗುವುದು.

**ಪ್ರೊ॥ ಯಶವಂತ ರೈ:** ಸರ್, ಪಟ್ಟಿಯನ್ನು ಘೋಷಿಸಲು ಸರ್ಕಾರಕ್ಕೆ ಎಷ್ಟು ಕಾಲ ಬೇಕಾಗಬಹುದು?

**ಡಾ. ಅಂಬೇಡ್ಕರ್:** ನಾನು ಶೀಘ್ರವಾಗಿ ಎಂದು ಹೇಳಿದ್ದೇನೆ. ತುಂಬಾ ಸಮಯ ತೆಗೆದುಕೊಳ್ಳುವುದಿಲ್ಲವೆಂದು ಭಾವಿಸಿದ್ದೇನೆ.

**ಶ್ರೀ ರತ್ನ ಸ್ವಾಮಿ:** ಜಾತಿಗಳ ಸೇರ್ಪಡೆಯ ವಿಷಯದಲ್ಲಿ ಯಾವ ಆಧಾರದ ಮೇಲೆ ಸರ್ಕಾರ ತೀರ್ಮಾನ ಕೈಗೊಳ್ಳುವುದು.

**ಡಾ. ಅಂಬೇಡ್ಕರ್:** ಪ್ರಶ್ನೆ ಸ್ಪಷ್ಟವಾಗಿಲ್ಲ. ಭಾರತ ಸರ್ಕಾರದ ಅಧಿನಿಯಮ ೧೯೩೫ರ ಮೇರೆಗೆ ಅನುಸೂಚಿ ಇದೆ. ಅದರ ಜೊತೆಗೆ ಕೆಲವೊಂದು ಇತರ ಜಾತಿಗಳನ್ನು ಸೇರಿಸುವ ಬಗ್ಗೆ ಪ್ರಾಂತೀಯ ಸರ್ಕಾರಗಳ ಅಭಿಪ್ರಾಯವನ್ನು ಕೇಳಿದ್ದೇವೆ. ಅವರಿಂದ ಅಭಿಪ್ರಾಯಗಳು ಬಂದ ಮೇಲೆ ಪಟ್ಟಿಗಳನ್ನು ಅಂತಿಮಗೊಳಿಸಲಾಗುವುದು.

**ಡಾ. ಎಂ.ಎಂ. ದಾಸ್:** ಮುಂದಿನ ಜನಗಣತಿಯಲ್ಲಿ ಪರಿಶಿಷ್ಟ ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂದು ಗುರುತಿಸಲಾಗುತ್ತದೆಯೆ?

**ಡಾ. ಅಂಬೇಡ್ಕರ್:** ಬಹುಶಃ ಹಾಗೆಯೇ ಮಾಡಬಹುದು.

**ಸರ್ದಾರ್ ಬಿ.ಎಸ್.ಮಾನ್:** ಸಂಕಲಿಸಲು ಉದ್ದೇಶಿಸಿರುವ ಪಟ್ಟಿಗಳು ದೇಶದಲ್ಲಿರುವ ಎಲ್ಲಾ ರಾಜ್ಯಗಳಿಗೆ ಏಕರೂಪವಾಗಿ ಅನ್ವಯವಾಗುವವೆ? ಅಥವಾ ಅವು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗುವವೆ?

**ಡಾ. ಅಂಬೇಡ್ಕರ್:** ಇರುವುದಿಲ್ಲ. ಅದು ಯಾವಾಗಲೂ ಪ್ರಾಂತೀಯ ಪಟ್ಟಿಯೆ ಆಗಿರುತ್ತದೆ.

---

* ಪಿ.ಡಿ. ಸಂ–೧ ಭಾಗ–೧ ೧೩ ಮಾರ್ಚ್ ೧೯೫೦ ಪು–೭೯೧.

**ಶ್ರೀ ಬುರ್‌ಗೋನ್:** ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯೂ ಪರಿಶೀಲನೆಯಲ್ಲಿದೆಯೆ?

**ಡಾ. ಅಂಬೇಡ್ಕರ್:** ಹೌದು.

**ಶ್ರೀ ತ್ಯಾಗಿ:** ಪ್ರಗತಿ ಸಾಧಿಸಿದ ನಂತರ ಅಂತಹ ಇಲ್ಲದ ಜಾತಿಗಳನ್ನು ಪಟ್ಟಿಯಿಂದ ಹೊರತುಪಡಿಸಲು ಅವುಗಳನ್ನು ಪರಿಷ್ಕರಿಸುವುದು ಸರ್ಕಾರದ ಉದ್ದೇಶವೆ?

**ಡಾ. ಅಂಬೇಡ್ಕರ್:** ಅನುಸೂಚಿಗಳನ್ನು ಪರಿಷ್ಕರಿಸುವ ಕಾರ್ಯ ವಿಧಾನಕ್ಕೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಂಸದೀಯ ಶಾಸನದ ಮೂಲಕ ಅದನ್ನು ಮಾಡಹುದಾಗಿದೆ.

**ಶ್ರೀನಾಯಕ:** ಸಂವಿಧಾನದ ಅನುಚ್ಛೇದ ೩೪೦ನ್ನು ಜಾರಿಗೊಳಿಸಲು ಸರ್ಕಾರವು ಏನಾದರೂ ಕ್ರಮಗಳನ್ನು ಕೈಗೊಂಡಿದೆಯೆ?

**ಡಾ. ಅಂಬೇಡ್ಕರ್:** ಆಯೋಗದ ನಿಯಮವು ಒಂದು ಪ್ರತ್ಯೇಕ ವಿಷಯ. ಅದು ಪರಿಗಣನೆಯಲ್ಲಿದೆ.

**ಶ್ರೀಮತಿ ದುರ್ಗಾಬಾಯಿ:** ಅಸ್ಪೃಶ್ಯತೆಯನ್ನು ಸಂವಿಧಾನದಲ್ಲಿ ನಿಷೇಧಿಸಿರುವುದರಿಂದ ಪಟ್ಟಿಯಲ್ಲಿ ಸೇರಿಸಲು ಅಥವಾ ಹೊರಗಿಡಲು ಅದು ಈಗಲೂ ಒಂದು ಆಧಾರವಾಗುವುದೆ?

**ಶ್ರೀ ಬರ್ಮನ್:** ಅಂತಿಮ ಪಟ್ಟಿಯನ್ನು ಪ್ರಕಟಿಸುವ ಮೊದಲು ತಾತ್ಕಾಲಿಕ ಪಟ್ಟಿಯನ್ನು ಹೊರಡಿಸಲು ಆಲೋಚಿಸಲಾಗುತ್ತಿದೆಯೆ?

**ಡಾ. ಅಂಬೇಡ್ಕರ್:** ಹಾಗೇನೂ ಆಲೋಚಿಸಿರುವುದಿಲ್ಲ. ಏಕೆಂದರೆ ಪಟ್ಟಿಯನ್ನು ಹೊರಡಿಸುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡಲಾಗಿದೆ.

## ೧೧

# *ಮಹಾಚುನಾವಣೆಗಳು

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಸಂವಿಧಾನದ ಮೇರೆಗೆ ನಡೆಯುವ ಮಹಾಚುನಾವಣೆಗಳ ಒಟ್ಟು ವೆಚ್ಚ ಎಷ್ಟಾಗುವುದು ಎನ್ನುವುದನ್ನು ಅಂದಾಜು ಮಾಡಲು ಇನ್ನೂ ಸಾಕಷ್ಟು ಸಮಯವಿದೆ. ಈವರೆಗೆ ದೊರೆತಿರುವ ಮಾಹಿತಿಯ ಪ್ರಕಾರ ಕೇಂದ್ರವು ೧೯೪೯–೫೦ ರ ಅವಧಿಗೆ ವೆಚ್ಚವಾಗಿ ಭಾಗ (ಎ) ಮತ್ತು ಭಾಗ (ಬಿ) ರಾಜ್ಯಗಳಿಗೆ ರೂ. ೧.೮ ಕೋಟಿ ಮತ್ತು ೧೯೫೦–೫೧ ರ ಸಾಲಿಗೆ ರೂ. ೧.೩೪ ಕೋಟಿ ಪಾವತಿ ಮಾಡಬೇಕಾಗಿದೆ. ಈ ಮೊತ್ತಗಳು ಬಹುಮಟ್ಟಿಗೆ ಮತದಾರರ ಪಟ್ಟಿಗಳ ಮುದ್ರಣ ಮತ್ತು ಸಿದ್ಧತೆಯ ಮೇಲಿನ ವೆಚ್ಚಕ್ಕೆ ಸಂಬಂಧಿಸಿವೆ.

(ಬಿ) ಮತದಾರರ ಪಟ್ಟಿಗಳ ಸಿದ್ಧತೆ ಮತ್ತು ಮುದ್ರಣ ಸಂಬಂಧದಲ್ಲಿ ರಾಜ್ಯ ಸರ್ಕಾರಗಳು ಭರಿಸುವ ಹೆಚ್ಚುವರಿ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮವಾಗಿ ಹಂಚಿಕೊಳ್ಳುತ್ತವೆ. ರಾಜ್ಯ ವಿಧಾನ ಮಂಡಲಗಳ ಚುನಾವಣೆಗಳಿಂದ ಸ್ವತಂತ್ರವಾಗಿ ಲೋಕಸಭೆಗೆ ಚುನಾವಣೆಗಳು ನಡೆದರೆ ಲೋಕಸಭೆಯ ಚುನಾವಣೆಯನ್ನು ವಾಸ್ತವಿಕವಾಗಿ ನಡೆಸಲು ತಗಲುವ ಹೆಚ್ಚುವರಿ ವೆಚ್ಚಗಳನ್ನು ಇಡಿಯಾಗಿ ಕೇಂದ್ರ ಸರ್ಕಾರವೇ ಭರಿಸುತ್ತದೆ. ಆದರೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಚುನಾವಣೆಗಳು ಏಕಕಾಲದಲ್ಲಿ

---

* ಪಿ.ಡಿ. ಸಂ. ೪ ಭಾಗ–ಈ ೨೧ ಮಾರ್ಚ್ ೧೯೫೦ ಪು–೯೬೪

ನಡೆದರೆ ಅಂಥ ಹೆಚ್ಚುವರಿ ವೆಚ್ಚಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನಾಗಿ ಹಂಚಿಕೊಳ್ಳುತ್ತವೆ. ಹೆಚ್ಚುವರಿ ವೆಚ್ಚ ಎಂದರೆ ರಾಜ್ಯ ಸರ್ಕಾರಗಳು ಮತದಾರರ ಪಟ್ಟಿಯ ಸಿದ್ಧತೆ ಮತ್ತು ಮುದ್ರಣ ಹಾಗೂ ಚುನಾವಣೆ ನಡೆಸುವುದಕ್ಕೆ ಭರಿಸುವ ವೆಚ್ಚಗಳು ಎಂದರ್ಥ. ಆದರೆ ಇದರಲ್ಲಿ ಹಾಲಿ ರಾಜ್ಯ ಸಿಬ್ಬಂದಿಗಳಿಗೆ ಸಂಬಂಧಪಟ್ಟ ಪಾಲು ಸೇರಿರುವುದಿಲ್ಲ. ಅಂದರೆ ಹೆಚ್ಚುವರಿ ವೆಚ್ಚಗಳನ್ನು ಲೆಕ್ಕಹಾಕುವಾಗ ರಾಜ್ಯ ಸರ್ಕಾರಗಳ ಹಾಲಿ ನೌಕರರ ವೇತನಗಳ ಭಾಗವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದಿಲ್ಲ.

**ಶ್ರೀ ನಂದಕಿಶೋರ್ ದಾಸ್:** ಮತದಾರರ ಪಟ್ಟಿಯ ಮುದ್ರಣ ಕಾರ್ಯ ಪೂರ್ಣಗೊಂಡಿದೆಯೆ?

**ಡಾ. ಅಂಬೇಡ್ಕರ್:** ಇಲ್ಲ. ಅದು ವಿವಿಧ ರಾಜ್ಯಗಳಲ್ಲಿ ವಿಭಿನ್ನ ಹಂತಗಳಲ್ಲಿವೆ.

**ಶ್ರೀ ನಂದಕಿಶೋರ್ ದಾಸ್:** ಕೇಂದ್ರ ಸಂಸತ್ತಿನ ಚುನಾವಣೆಗೆ ಸಂಬಂಧಿಸಿದ ವೆಚ್ಚದಲ್ಲಿ ಚುನಾವಣಾ ಆಯುಕ್ತರು ಮತ್ತು ಅದರ ಕಛೇರಿಗೆ ಸಂಬಂಧಿಸಿದ ವೆಚ್ಚಗಳು ಸೇರುತ್ತವೆ?

**ಡಾ. ಅಂಬೇಡ್ಕರ್:** ಇಲ್ಲ. ಅದು ಪ್ರತ್ಯೇಕ ವೆಚ್ಚ.

**ಶ್ರೀಮತಿ ದುರ್ಗಾಬಾಯಿ:** ಸಂವಿಧಾನದ ಮೇರೆಗೆ ಉದ್ದೇಶಿಸಲಾಗಿರುವ ಚುನಾವಣಾ ಆಯೋಗವನ್ನು ರಚಿಸಲಾಗಿದೆಯೆ? ಇಲ್ಲದಿದ್ದರೆ ಯಾವಾಗ ರಚಿಸಲಾಗುವುದು?

**ಡಾ. ಅಂಬೇಡ್ಕರ್:** ಚುನಾವಣಾ ಆಯುಕ್ತರನ್ನು ನೇಮಿಸಲಾಗಿದೆಯೆಂದು ಭಾವಿಸಿದ್ದೇನೆ. ಅವರು ಬಹುಶಃ ಇಂದು ಅಧಿಕಾರವನ್ನು ವಹಿಸಿಕೊಳ್ಳಲಿರುವರು, ಅಥವಾ ನಿನ್ನೆಯೇ ಪ್ರಭಾರ ವಹಿಸಿಕೊಂಡಿರಬಹುದು.

**ಶ್ರೀ ತ್ಯಾಗಿ:** ರಾಜ್ಯ ವಿಧಾನಮಂಡಲಗಳ ಚುನಾವಣೆಗೆ ಸಂಬಂಧಪಟ್ಟಂತೆ ಪರಿಸ್ಥಿತಿ ಏನು? ಅವುಗಳನ್ನು ಈ ಹಿಂದಿನ ಮತದಾರರ ಪಟ್ಟಿಗಳ ಮೇಲೆ ಅಥವಾ ಹೊಸ ಪಟ್ಟಿಗಳ ಮೇಲೆ ನಡೆಸಲಾಗುವುದೆ?

**ಡಾ. ಅಂಬೇಡ್ಕರ್:** ಚುನಾವಣಾ ದಿನಾಂಕದಂದು ಅಸ್ತಿತ್ವದಲ್ಲಿರುವ ಪಟ್ಟಿಗಳ ಆಧಾರದ ಮೇಲೆ ನಡೆಸಲಾಗುವುದು.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ನೇಮಕ ಮಾಡಲಾಗಿರುವ ಮತ್ತು ಕೆಲವೇ ದಿನಗಳಲ್ಲಿ ಅಧಿಕಾರವನ್ನು ವಹಿಸಿಕೊಳ್ಳಲಿರುವ ಚುನಾವಣಾ ಆಯುಕ್ತರನ್ನು ಮುಖ್ಯ ಚುನಾವಣಾ ಆಯುಕ್ತರೆಂದು ನೇಮಕ ಮಾಡಲಾಗಿದೆಯೆ? ಹಾಗಿದ್ದಲ್ಲಿ ಇತರ ಚುನಾವಣಾ ಆಯುಕ್ತರನ್ನು ನೇಮಕ ಮಾಡಲಾಗುವುದೆ? ಹಾಗಿದ್ದರೆ, ಎಷ್ಟು ಜನ?

**ಡಾ. ಅಂಬೇಡ್ಕರ್:** ಪ್ರಶ್ನೆಯ ಉತ್ತರಾರ್ಧ ಕುರಿತು ಇನ್ನೂ ಯಾವುದೇ ತೀರ್ಮಾನಕ್ಕೆ ಬಂದಿಲ್ಲ.

**ಶ್ರೀಮತಿ ದುರ್ಗಾಬಾಯಿ:** ಈ ಆಯುಕ್ತರ ಕಾರ್ಯದ ನಿರ್ದಿಷ್ಟ ವ್ಯಾಪ್ತಿ ಏನು?

**ಡಾ. ಅಂಬೇಡ್ಕರ್:** ಅದನ್ನು ಈಗಾಗಲೇ ಸಂವಿಧಾನದಲ್ಲಿ ವ್ಯಾಖ್ಯಾನಿಸಲಾಗಿದೆ.

**ಶ್ರೀ ಕಾಮತ್:** ಮಾನ್ಯ ಕಾನೂನು ಸಚಿವರು ಈ ದಶವಾರ್ಷಿಕ ಜನಗಣತಿ ನಡೆಸುವುದಕ್ಕೆ ಮುಂಚೆ ಅಥವಾ ಅನಂತರ ಮಹಾ ಚುನಾವಣೆಗಳನ್ನು ನಡೆಸಲಾಗುವುದೆ ಎಂಬ ಬಗ್ಗೆ ತಿಳಿಸುವರೆ?

**ಡಾ. ಅಂಬೇಡ್ಕರ್:** ನಾನು ಹಾಗೆ ಮಾಡುತ್ತೇವೆಂದು ಹೇಳಲಾರೆ. ಆದರೆ, ಬಹುಶಃ ದಶವಾರ್ಷಿಕ ಜನಗಣತಿಯು ಕೆಲವೊಂದು ಪ್ರಕರಣಗಳಲ್ಲಿ ಮತದಾರರ ಪಟ್ಟಿ ತಯಾರಿಗೆ ಮತ್ತು ಸ್ಥಾನಗಳ ನಿಯೋಜನೆಯ ಮೇಲೆ ತೀರಾ ಗಂಭೀರ ಪರಿಣಾಮ ಉಂಟು ಮಾಡಲಿದೆ. ಆದ್ದರಿಂದ ಹಾಗೆಯೇ ಮಾಡಬಹುದಾಗಿದೆ.

**ಶ್ರೀ ಎ.ಪಿ. ಜೈನ್:** ಯಾವುದೇ ರಾಜ್ಯದಲ್ಲಿ ಕೊನೆಯ ಮತದಾರರ ಪಟ್ಟಿ ಯಾವಾಗ ಮುದ್ರಣವಾಗುವ ನಿರೀಕ್ಷೆ ಇದೆ?

**ಡಾ. ಅಂಬೇಡ್ಕರ್:** ಪ್ರಶ್ನೆ ಏನದು? "ಮುದ್ರಣವಾಗುವ' ಎಂದರೆ ನಮ್ಮ ಸ್ನೇಹಿತರು

ಏನೆಂದುಕೊಂಡಿದ್ದಾರೆ– ಮುದ್ರಣವಾಗುವ ತಾತ್ಕಾಲಿಕ ಪಟ್ಟಿಯೆ ಅಥವಾ ಪರಿಷ್ಕೃತ ಪಟ್ಟಿಯೆ ಅಥವಾ ಅಂತಿಮ ಪಟ್ಟಿಯೆ?

**ಶ್ರೀ ಎ.ಪಿ. ಜೈನ್:** ಅಂತಿಮ ಪಟ್ಟಿ.

**ಡಾ. ಅಂಬೇಡ್ಕರ್:** ಯಾವುದೇ ದಿನಾಂಕವನ್ನು ನೀಡುವುದು ಕಷ್ಟ; ಆದರೆ ಅದು ಸರಿಸುಮಾರು ಮುಂದಿನ ಜನವರಿ ಅಥವಾ ಫೆಬ್ರವರಿ ವೇಳೆಗೆ ಸಿದ್ಧವಾಗಲಿದೆ.

**ಸೇಠ್ ಗೋವಿಂದ ದಾಸ್:** ಚುನಾವಣಾ ಬಜೆಟ್ ಯಾವಾಗ ಸಿದ್ಧವಾಗುವುದು? ಅದನ್ನು ಸಂಸತ್ತಿನ ಮುಂದೆ ಮಂಡಿಸಲಾಗುವುದೆ?

**ಡಾ. ಅಂಬೇಡ್ಕರ್:** ಸರಿಯಾಗಿ ಗ್ರಹಿಸಲಾಗಲಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಮುಂದಿನ ಬಜೆಟ್ ಸಿದ್ಧಪಡಿಸುವ ವೇಳೆಗೆ ಚುನಾವಣಾ ಮೊತ್ತವನ್ನು ಅಂದಾಜು ಮಾಡಲು ಸಾಧ್ಯವಾಗುವುದೆ ಮತ್ತು ಆ ಅಂದಾಜನ್ನು ಸಂಸತ್ತಿನ ಮುಂದೆ ಮಂಡಿಸಲಾಗುವುದೆ?

**ಡಾ. ಅಂಬೇಡ್ಕರ್:** ಅದು ಧನವಿನಿಯೋಗ ಅಧಿನಿಯಮದ ಒಂದು ಭಾಗವಾಗಲಿದೆ.

**ಸೇಠ್ ಗೋವಿಂದ ದಾಸ್:** ಅದು ಯಾವಾಗ ಸಿದ್ಧವಾಗುವ ನಿರೀಕ್ಷೆ ಇದೆ?

**ಮಾನ್ಯ ಸಭಾಧ್ಯಕ್ಷರು:** ಆರ್ಡರ್, ಆರ್ಡರ್.

**ಪ್ರೊ॥ ರಂಗಾ:** ಈ ಬಿಲ್ಲುಗಳನ್ನು ಸಿದ್ಧಪಡಿಸಿ, ಪರಿಶೀಲಿಸಿ, ಅಂತಿಮಗೊಳಿಸಲು ಸರ್ಕಾರ, ಅಂತೆಯೇ ರಾಜ್ಯ ಸರ್ಕಾರಗಳು ತಾವಾಗಿಯೇ ದಿನಾಂಕವನ್ನೇನಾದರೂ ನಿಗದಿಗೊಳಿಸಿಕೊಂಡಿವೆಯೆ?

**ಡಾ. ಅಂಬೇಡ್ಕರ್:** ಹೌದು.

**ಪ್ರೊ॥ ರಂಗಾ:** ಆ ದಿನಾಂಕ ಯಾವುದು?

**ಡಾ. ಅಂಬೇಡ್ಕರ್:** ಆ ಬಗ್ಗೆ ಮಾಹಿತಿ ಇಲ್ಲ; ಆದರೆ, ನಾನು ಈಗಾಗಲೇ ಹೇಳಿದಂತೆ, ಮುಂದಿನ ವರ್ಷದ ಮೊದಲ ಭಾಗದಲ್ಲಿ ಅಂತಿಮ ಮತದಾರರ ಪಟ್ಟಿಗಳು ಸಿದ್ಧವಾಗಬಹುದೆಂದು ನಮ್ಮ ಆಶಯ.

**ಶ್ರೀಮತಿ ದುರ್ಗಾಬಾಯಿ:** ಮತಕ್ಷೇತ್ರಗಳ ಪುನರ್ವಿಂಗಡಣೆ ಮತ್ತು ದ್ವಿಭಾಷಾ ಪ್ರದೇಶಗಳ ಪ್ರಶ್ನೆಯಂಥ ಚುನಾವಣಾ ಸಂಬಂಧ ವಿಷಯಗಳು ಚುನಾವಣಾ ಆಯುಕ್ತರ ಕೆಲಸದ ವ್ಯಾಪ್ತಿಯಲ್ಲಿ ಬರುತ್ತವೆಯೆ?

**ಡಾ. ಅಂಬೇಡ್ಕರ್:** ದ್ವಿಭಾಷಾ ಪ್ರದೇಶಗಳು?

**ಶ್ರೀಮತಿ ದುರ್ಗಾಬಾಯಿ:** ಮತ ಕ್ಷೇತ್ರಗಳ ಪುರ್ವಿಂಗಡಣೆ?

**ಡಾ. ಅಂಬೇಡ್ಕರ್:** ಖಚಿತವಾಗಿ, ಅವುಗಳನ್ನು ನಿರ್ವಹಿಸಲಾಗುವುದು. ನಾನು ಈ ಉಪವೇಶನದಲ್ಲಿ "ಜನತಾ ಪ್ರಾತಿನಿಧ್ಯ ವಿಧೇಯಕ' ಎಂದು ಕರೆಯಲಾಗುವ ವಿಧೇಯಕವನ್ನು ಮಂಡಿಸಲಿದ್ದೇನೆ. ಅದರಲ್ಲೂ ಚುನಾವಣಾ ಆಯುಕ್ತರಲ್ಲಿ ನಿಹಿತವಾಗಿರುವ ಅಧಿಕಾರಗಳ ಚಲಾವಣೆಗೆ ಅವಕಾಶ ಕಲ್ಪಿಸಲಾಗುವುದು. ಆಗ ಈ ವಿಷಯದ ಬಗ್ಗೆ ಅವರು ಚರ್ಚಿಸಬಹುದು.

**ಶ್ರೀ ಎ.ಪಿ. ಜೈನ್:** ಸರ್ಕಾರದ ಚಿಂತನೆಯ ಮೇರೆಗೆ, ಈ ಕ್ಷಣದ ಕಾರ್ಯಕ್ರಮಗಳ ಪ್ರಕಾರ, ಮತದಾರರ ಪಟ್ಟಿ ಪೂರ್ಣಗೊಂಡ ನಂತರ ಅಂತಿಮ ಚುನಾವಣೆಗಳನ್ನು ನಡೆಸಲು ಎಷ್ಟು ಕಾಲ ಬೇಕಾಗುವುದು?

**ಡಾ. ಅಂಬೇಡ್ಕರ್:** ನಾನು ಊಹೆ ಮಾಡಲು ಬಯಸುವುದಿಲ್ಲ.

# ೧೨

# *ಆದಾಯ ತೆರಿಗೆ ಮೇಲ್ಮನವಿ ಮಂಡಲಿಗಳು

**೧೧೦೬: ಶ್ರೀ ಲಾಲಾ ರಾಜ್ ಕನ್ವರ್:** ಕಾನೂನು ಮಂತ್ರಿಗಳು ಈ ಮುಂದಿನ ವಿವರಗಳನ್ನು ಒಳಗೊಂಡ ತಃಖ್ತೆಯನ್ನು ಮಂಡಿಸುವರೆ:

(ಎ) ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿಗಳ ಮತ್ತು ಪ್ರತಿ ನ್ಯಾಯಮಂಡಲಿಯ ಸಿಬ್ಬಂದಿಯ ಸಂಖ್ಯೆ?

(ಬಿ) ಕಳೆದ ಮೂರು ವರ್ಷಗಳಲ್ಲಿ ಪ್ರತಿವರ್ಷ ಎಷ್ಟು ಪ್ರಕರಣಗಳನ್ನು ಹೂಡಲಾಗಿದೆ ಮತ್ತು ಇತ್ಯರ್ಥಪಡಿಸಲಾಗಿದೆ?

(ಸಿ) ಪ್ರತಿ ಟ್ರಿಬ್ಯುನಲ್‌ಗಳ ಮುಂದೆ ಬಾಕಿ ಇರುವ ಪ್ರಕರಣಗಳೆಷ್ಟು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಪೀಠದ ಮುಂದೆ ಸಂಖ್ಯೆಯನ್ನು ಮಂಡಿಸಲಾಗಿದೆ. (ನೋಡಿ. ಅನುಬಂಧ V, ಪರಿಶಿಷ್ಟ ಸಂ.*೫೫*) (ಇಲ್ಲಿ ಕೊಡಲಾಗಿಲ್ಲ.)

**ಶ್ರೀ ಲಾಲಾ ರಾಜ್ ಕನ್ವರ್:** ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲು ಉದ್ದೇಶಿಸಿದೆ?

**ಡಾ. ಅಂಬೇಡ್ಕರ್:** ಪ್ರಕರಣಗಳ ಇತ್ಯರ್ಥ ಬಹುಮಟ್ಟಿಗೆ ತೃಪ್ತಿದಾಯಕವಾಗಿದೆ. ತೃಪ್ತಿಕರವಾಗಿರದಿದ್ದಲ್ಲಿ. ಸರ್ಕಾರವು ಇನ್ನು ಹೆಚ್ಚು ನ್ಯಾಯಮಂಡಲಿಗಳನ್ನು ಸ್ಥಾಪಿಸುವುದು.

**ಶ್ರೀ ಟಿ.ಟಿ. ಕೃಷ್ಣಮಾಚಾರಿ:** ನ್ಯಾಯಮಂಡಲಿಗಳ ಸದಸ್ಯರಿಗೆ ಪಾವತಿಸಲಾಗುತ್ತಿರುವ ವೇತನವನ್ನು ಇತ್ತೀಚೆಗೆ ಕಡಿಮೆ ಮಾಡಲಾಗಿದೆಯೆ ಅಥವಾ ಕೆಳದರ್ಜೆಗೆ ಇಳಿಸಲಾಗಿದೆಯೆ?

**ಡಾ. ಅಂಬೇಡ್ಕರ್:** ಈ ಬಗ್ಗೆ ಸೂಚನೆ ನೀಡಬೇಕು.

**ಶ್ರೀಮತಿ ದುರ್ಗಾಬಾಯಿ:** ಈ ಟ್ರಿಬ್ಯುನಲ್‌ಗಳಿಗೆ ನೇಮಕಗಳನ್ನು ಹೇಗೆ ಮಾಡಲಾಗುವುದು?

**ಡಾ. ಅಂಬೇಡ್ಕರ್:** ಅವುಗಳನ್ನು ಲೋಕಸೇವಾ ಆಯೋಗವು ಮಾಡುವುದು.

# ೧೩

# **ಕಾನೂನು ಮಂತ್ರಾಲಯದಲ್ಲಿ ಪರಿಶಿಷ್ಟ ಜಾತಿ ಉದ್ಯೋಗಿಗಳು

**೧೨೩. ಪ್ರೊ॥ ಯಶವಂತ್ ರಾಯ್:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರ ನೀಡುವರೆ:

ಎ) ಕಾನೂನು ಮಂತ್ರಾಲಯದ ಈ ಕೆಳಕಂಡ ಪ್ರತಿಯೊಂದು ವರ್ಷಗಳಲ್ಲಿನ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಗಳ ಸಂಖ್ಯೆ.

---

* ಪಿ.ಡಿ. ಸಂ. ೪, ಭಾಗ I, ೨೪ ಮಾರ್ಚ್ ೧೯೫೦, ಪು. ೧೦೫೯.

** ಪಿ.ಡಿ. ಸಂ. ೪, ಭಾಗ I, ೨೪ ಮಾರ್ಚ್ ೧೯೫೦, ಪು. ೧೦೬೭.

(i) ಗೆಜೆಟ್ ಅಧಿಕಾರಿಗಳು (ii) ಅಧೀಕ್ಷಕರು ಮತ್ತು ಸಹಾಯಕರು (iii) ಹಿರಿಯ ಶ್ರೇಣಿ ಮತ್ತು ಕಿರಿಯ ಶ್ರೇಣಿ ಗುಮಾಸ್ತರು ಮತ್ತು ಶೀಘ್ರಲಿಪಿಗಾರರು;

(ಬಿ) ಈ ಸಂಖ್ಯೆಯು ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಿದ ಪ್ರಕಾರ ಇಲ್ಲವೆ?

(ಸಿ) ಭಾರತದ ಸಂವಿಧಾನದ ಅನುಚ್ಛೇದ ೩೩೫ರ ಆಶಯದಂತೆ ಮೀಸಲು ಕೋಟಾವನ್ನು ಭರ್ತಿ ಮಾಡಲು ಸರ್ಕಾರ ಯಾವ ವಿಶೇಷ ಕ್ರಮ ಕೈಗೊಳ್ಳಲಿದೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಕಾನೂನು ಮಂತ್ರಾಲಯದಲ್ಲಿನ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಗಳ ಸಂಖ್ಯೆ ಈ ಕೆಳಕಂಡಂತಿದೆ:

| | | |
|---|---|---|
| ಗೆಜೆಟೆಡ್ ಅಧಿಕಾರಿಗಳು | – | ಇಲ್ಲ |
| ಅಧೀಕ್ಷಕರು | – | ಇಲ್ಲ |
| ಸಹಾಯಕರು | – | ೨ |
| ಹಿರಿಯ ಶ್ರೇಣಿ ಸಹಾಯಕರು | – | ಇಲ್ಲ |
| ಕಿರಿಯ ಶ್ರೇಣಿ ಸಹಾಯಕರು | – | ೩ |
| ಶೀಘ್ರಲಿಪಿಗಾರರು | – | ೨ |

(ಬಿ) ಈ ಸಂಖ್ಯೆಯು ಮೀಸಲಾತಿ ನಿಯಮಗಳು ಅನ್ವಯವಾಗುವ ವರ್ಗಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಮೀಸಲಿಟ್ಟ ಶೇಕಡಾವಾರು ಪ್ರಮಾಣಕ್ಕನುಗುಣವಾಗಿಲ್ಲ.

(ಸಿ) ೧೯೪೯ರ ಸಾಲಿನ ಗೃಹ ಮಂತ್ರಾಲಯದ ಕಾರ್ಯಚಟುವಟಿಕೆಗಳ ಸಮೀಕ್ಷೆಯ ಪ್ರಕರಣ II ರ ಪ್ಯಾರಾ ೫ ಮತ್ತು ಪ್ಯಾರಾ ೭ರ ಎರಡು ಮತ್ತು ಮೂರನೆಯ ಉಪ ಪ್ಯಾರಾದ ಕಡೆಗೆ ಗಮನ ಸೆಳೆಯಲಾಗಿದೆ.

## ೧೪

## *ಹಿಂದೂ ಸಂಹಿತೆ ವಿಧೇಯಕದ ಮೇಲಿನ ಸಲಹಾ ಸಮಿತಿ

**೧೩೫೨. ಶ್ರೀಮತಿ ಅಮ್ಮು ಸ್ವಾಮಿನಾಥನ್:** ಹಿಂದೂ ಸಂಹಿತೆ ವಿಧೇಯಕದ ಮೇಲಣ ಅಧಿಕಾರೇತರ ಸಲಹಾ ಸಮಿತಿಗೆ ಮಹಿಳಾ ಸಂಘಟನೆಗಳ ಯಾರಾದರೂ ಪ್ರತಿನಿಧಿಗಳನ್ನು ತೆಗೆದುಕೊಳ್ಳಲಾಗಿದೆಯೇ ಅಥವಾ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆಯೇ ಎಂಬ ಬಗ್ಗೆ ಕಾನೂನು ಮಂತ್ರಿಗಳು ಉತ್ತರಿಸುವರೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಈ ಉಲ್ಲೇಖವು ೧೯ ಡಿಸೆಂಬರ್ ೧೯೪೯ ರಂದು, ಸದನದಲ್ಲಿ, ಮಾನ್ಯ ಪ್ರಧಾನ ಮಂತ್ರಿಗಳು, ಹಿಂದೂ ಸಂಹಿತೆ ವಿಧೇಯಕದ ಮೇಲೆ ಚರ್ಚೆ ನಡೆಯುತ್ತಿದ್ದಾಗ ಘೋಷಿಸಿದಂತೆ ಅದರ ಮೇಲೆ ಸಂಸತ್ತಿನ ಒಳಗೆ ಮತ್ತು ಹೊರಗೆ, ಪ್ರಾತಿನಿಧಿಕ ಸಾರ್ವಜನಿಕ ಅಭಿಪ್ರಾಯವನ್ನು ಪಡೆದುಕೊಳ್ಳುವ ಬಗ್ಗೆ ನಡೆಸಲು ಉದ್ದೇಶಿಸಿರುವ ಅನೌಪಚಾರಿಕ ಸಮಾವೇಶಕ್ಕೆ ಸಾಧ್ಯವಾದಷ್ಟು ಪ್ರಾತಿನಿಧಿಕ ಸ್ವರೂಪದಲ್ಲಿರುವಂತೆ ನೋಡಿಕೊಳ್ಳಲು ಉದ್ದೇಶಿಸಿದ್ದು, ಸಮಾವೇಶವು, ನಿಶ್ಚಿತವಾಗಿ ಮಹಿಳಾ ಸಂಘಟನೆಗಳ

---

* ಪಿ.ಡಿ. ಸಂ.೧, ಭಾಗ–I, ೩ ಏಪ್ರಿಲ್ ೧೯೫೦, ಪು. ೧೨೬೭

ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ.

**ಶ್ರೀಮತಿ ಅಮ್ಮು ಸ್ವಾಮಿನಾಥನ್:** ಹಿಂದೂ ಸಂಹಿತೆಯು ಈ ದೇಶದ ಪುರುಷರಿಗಿಂತಲೂ ಮಹಿಳೆಯರ ಮೇಲೆಯೆ ಹೆಚ್ಚಿನ ಪರಿಣಾಮ ಉಂಟುಮಾಡುವುದರಿಂದ, (ನಗು) ಸರ್, ಈ ವಿಷಯದಲ್ಲಿ ತಮ್ಮಿಂದ ರಕ್ಷಣೆ ಬಯಸುತ್ತೇನೆ. ಈ ಸದನದಲ್ಲಿ ಮಹಿಳೆಯರ ಹಕ್ಕುಗಳ ವಿಷಯ ಯಾವಾಗ ಪ್ರಸ್ತಾಪವಾದರೂ, ಅದೊಂದು ತಮಾಷೆ ಎಂಬಂತೆ ನಗುತ್ತಾರೆ. ಹಿಂದೂ ಸಂಹಿತೆಯು ಮಹಿಳೆಯರ ಮೇಲೆ ಅತ್ಯಂತ ಹೆಚ್ಚು ಪರಿಣಾಮ ಬೀರುವ ದೃಷ್ಟಿಯಿಂದ ಮತ್ತು ಸದ್ಯದಲ್ಲಿಯೇ ಕರೆಯಲಾಗುವ ಸಲಹಾ ಸಮಿತಿಗೆ ಭಾರತದಲ್ಲಿನ ಅನೇಕ ಮಹಿಳಾ ಸಂಘಟನೆಗಳಿಂದ ಪ್ರತಿನಿಧಿಗಳನ್ನು ಕಳುಹಿಸಿಕೊಡುವಂತೆ ಅವುಗಳನ್ನು ಕೋರಲಾಗಿದೆಯೆ ಎಂಬ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ತಿಳಿಸುವರೆ?

**ಡಾ. ಅಂಬೇಡ್ಕರ್:** ನನ್ನ ಉತ್ತರ ಅದನ್ನೇ ಹೇಳುತ್ತಿರುವುದು.

**ಶ್ರೀಮತಿ ಅಮ್ಮು ಸ್ವಾಮಿನಾಥನ್:** ಸಲಹಾ ಸಮಿತಿಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡುವಂತೆ ಕೋರಲಾದ ಮಹಿಳಾ ಸಂಘಟನೆಗಳ ಹೆಸರುಗಳನ್ನು ತಿಳಿಸುವಿರಾ?

**ಡಾ. ಅಂಬೇಡ್ಕರ್:** ನನ್ನ ತಲೆಯಲ್ಲಿ ಅವುಗಳ ಹೆಸರುಗಳಿಲ್ಲ. ಆದರೆ ನನಗೆ ತಿಳಿದಿರುವಷ್ಟು ಮಾಹಿತಿಯ ಪ್ರಕಾರ ಈ ಸಂಹಿತೆಯ ಬಗ್ಗೆ ಒಲವು ಹೊಂದಿಲ್ಲದ ಮಹಿಳಾ ಸಂಘಟನೆಗಳನ್ನು ನಿಜಕ್ಕೂ ಕರೆಯಬೇಕೆಂಬುದು ನನ್ನ ಉದ್ದೇಶ.

**ಶ್ರೀಮತಿ ಅಮ್ಮು ಸ್ವಾಮಿನಾಥನ್:** ಈ ಸಮಾವೇಶವನ್ನು ಯಾವಾಗ ನಡೆಸಲಾಗುವುದು.

**ಡಾ. ಅಂಬೇಡ್ಕರ್:** ಈ ತಿಂಗಳ ೧೪ರಂದು ಎಂದು ನಂಬಿದ್ದೇನೆ.

**ಶ್ರೀ ದೇಶಬಂಧು ಗುಪ್ತ:** ಈ ಸಂಹಿತೆಗೆ ವಿರೋಧವಿರುವ ಈ ಸದನದ ಸದಸ್ಯರನ್ನು ಆಹ್ವಾನಿಸಲಾಗುತ್ತದೆಯೆ?

**ಡಾ. ಅಂಬೇಡ್ಕರ್:** ಸಮಾವೇಶವು ಮೂರು ವಿಭಾಗಗಳಲ್ಲಿರುತ್ತದೆ. ವರಿಷ್ಠ ಸಮಿತಿಯನ್ನು ಪ್ರತಿನಿಧಿಸುವ ಸದಸ್ಯರು. ಈ ಸದನವನ್ನು ಪ್ರತಿನಿಧಿಸುವ ಸದಸ್ಯರು; ಇತರರು ಈ ಸದನವನ್ನಾಗಲಿ ಅಥವಾ ಸಮಿತಿಯನ್ನಾಗಲಿ ಪ್ರತಿನಿಧಿಸದ ಹೊರಗಿನವರು.

**ಶ್ರೀ ಬಿ. ದಾಸ್:** ಮಾನ್ಯ ಕಾನೂನು ಮಂತ್ರಿಗಳು ಹಿಂದೂ ಸಂಹಿತೆ ವಿಧೇಯಕವನ್ನು ಅಂಗೀಕರಿಸಲು ವಿಶೇಷ ಅಧಿವೇಶನವನ್ನು ಕರೆಯಲು ಸರ್ಕಾರಕ್ಕೆ ಸಲಹೆ ಮಾಡುವರೆ?

**ಡಾ. ಅಂಬೇಡ್ಕರ್:** ಅದನ್ನು ನಿರೀಕ್ಷಿಸುವ ಅಗತ್ಯವಿಲ್ಲ.

**ಮಾನ್ಯ ಸಭಾಧ್ಯಕ್ಷರು:** ಆರ್ಡರ್, ಆರ್ಡರ್ ಆ ಪ್ರಶ್ನೆಗೆ ನಾನು ಅವಕಾಶ ನೀಡುವುದಿಲ್ಲ.

**ಶ್ರೀ ದೇಶಬಂಧು ಗುಪ್ತ:** ಕುಂಭಮೇಳದ ದೃಷ್ಟಿಯಿಂದ ಅದಕ್ಕೆ ಹೋಗುವವರು ಸಮಾವೇಶದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಸಮಾವೇಶವನ್ನು ಮುಂದೂಡಲು ವಿವಿಧ ಭಾಗಗಳಿಂದ ಮನವಿಗಳನ್ನು ಮಾನ್ಯ ಸಚಿವರು ಸ್ವೀಕರಿಸಿರುವರೆ?

**ಡಾ. ಅಂಬೇಡ್ಕರ್:** ನಾನು ಯಾವುದೇ ಮನವಿಗಳನ್ನು ಸ್ವೀಕರಿಸಿರುವುದಿಲ್ಲ; ಆದರೆ ಪತ್ರಿಕೆಗಳಲ್ಲಿ ಕೆಲವು ಹೇಳಿಕೆಗಳನ್ನು ನೋಡಿರುತ್ತೇನೆ.

**ಶ್ರೀ ಎಂ.ಬಿ. ಅಯ್ಯಂಗಾರ್:** ವರಿಷ್ಠ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡುವಾಗ ಯಾವ ತತ್ತ್ವಗಳನ್ನು ಅಳವಡಿಸಿಕೊಳ್ಳಲಾಗಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸುವರೆ? ಸಂಹಿತೆಯ ವಿರುದ್ಧ ಮಾತನಾಡಿರುವ

ಜನರನ್ನು ದೂರವಿಡಲು ಅವರು ಪ್ರಯತ್ನಿಸಿರುವರೆ?

**ಡಾ. ಅಂಬೇಡ್ಕರ್:** ನನಗೆ ಯಾವುದೇ ಪಕ್ಷಪಾತವಿಲ್ಲ.

**ಡಾ. ಎಂ.ಎ. ಅಯ್ಯಂಗಾರ್:** ಕೆಲವರಿಗೆ ಆ ಬಗ್ಗೆ ಒಲವಿದ್ದರೆ, ಕೆಲವರಿಗೆ ಸಂಶಯವಿದೆ; ಮತ್ತೆ ಕೆಲವರು ವಿರೋಧಿಸುತ್ತಿದ್ದಾರೆ.

## ೧೫

# *ಸಂಸತ್ತಿನ ಸದಸ್ಯರಿಗೆ ಮತದಾನ ಮತ್ತು ಭತ್ಯೆಗಳು

**೭೨೬. ಮೌಲ್ವಿ ವಾಜಿದ್ ಆಲಿ:** ಸಂವಿಧಾನದ ಅನುಚ್ಛೇದ ೧೦೬ರ ದೃಷ್ಟಿಯಿಂದ ಸಂಸತ್ತಿನ ಸದಸ್ಯರ ವೇತನ ಮತ್ತು ಭತ್ಯೆಗಳಿಗೆ ಅವಕಾಶ ಕಲ್ಪಿಸಲು ವಿಧೇಯಕವನ್ನು ಮಂಡಿಸಲು ಸರ್ಕಾರವು ಉದ್ದೇಶಿಸಿದೆಯೆ ಎಂಬ ಬಗ್ಗೆ ಕಾನೂನು ಮಂತ್ರಿಗಳು ತಿಳಿಸುವರೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಇಲ್ಲ ಸರ್, ಮಾನ್ಯ ಸದಸ್ಯರು ಉಲ್ಲೇಖಿಸಿದ ಅನುಚ್ಛೇದದ ಉತ್ತರಾರ್ಧದ ದೃಷ್ಟಿಯಿಂದ ಸಂಸತ್ತಿನ ಸದಸ್ಯರ ವೇತನ ಮತ್ತು ಭತ್ಯೆಗಳಿಗೆ ಅವಕಾಶ ಕಲ್ಪಿಸಲು ವಿಧೇಯಕವನ್ನು ಮಂಡಿಸುವ ಅಗತ್ಯ ಸರ್ಕಾರಕ್ಕೆ ಕಂಡುಬರುತ್ತಿಲ್ಲ. ಹಾಲಿ ಪರಿಸ್ಥಿತಿಯೆ ತೃಪ್ತಿಕರವಾಗಿರುವಂತಿದೆ.

**ಮೌಲ್ವಿ ವಾಜಿದ್ ಆಲಿ:** ಸದ್ಯದ ಸಂಸತ್ತಿನ ಬಗ್ಗೆ ಈ ಅನುಚ್ಛೇದವೂ ಏನನ್ನೂ ನಿರ್ದಿಷ್ಟವಾಗಿ ಹೇಳುವುದಿಲ್ಲ ಎಂಬುದು ನಿಜವಲ್ಲವೆ? ನನ್ನ ಪ್ರಶ್ನೆ ಮಾನ್ಯ ಮಂತ್ರಿಗಳು ತಾವು ಮಂಡಿಸಲು ಆಲೋಚಿಸಿರುವ ವಿಧೇಯಕವು ಭವಿಷ್ಯದ ಲೋಕಸಭೆಗೆ ಸಂಬಂಧಿಸಿದೆ.

**ಡಾ. ಅಂಬೇಡ್ಕರ್:** ಸದ್ಯದ ಪದ್ಧತಿಯು ತೃಪ್ತಿಕರವಾಗಿಲ್ಲವೆಂಬ ಬಗ್ಗೆ ಸದನವು ಔಪಚಾರಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ನಾನು ಕಂಡಿಲ್ಲ.

**ಶ್ರೀ ಬ್ರಿಜೇಶ್ವರ್ ಪ್ರಸಾದ್:** ಮೊದಲ ದರ್ಜೆಯ ರೈಲ್ವೆ ಪಾಸನ್ನು ಸದ್ಯದ ರೈಲ್ವೆ ಪ್ರಯಾಣ ಭತ್ಯೆಯಾಗಿ ಬದಲಿಸಲು ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆ ಇದೆಯೆ?

**ಡಾ. ಅಂಬೇಡ್ಕರ್:** ಇದು ಪರಿಶೀಲಿಸಬಹುದಾದ ಸಲಹೆ.

## ೧೬

# **ಮಹಾಚುನಾವಣೆಗಳು

**ಶ್ರೀ ಕಾಮತ್:** ಮಾನ್ಯ ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

ಭಾಗ (ಎ), ಭಾಗ (ಬಿ) ಮತ್ತು ಭಾಗ (ಸಿ) ಯ ಪ್ರತಿಯೊಂದು ರಾಜ್ಯಗಳಲ್ಲಿ ಮತದಾರರ ಪಟ್ಟಿ

---

* ಪಿ.ಡಿ. ಸಂ–೧, ಭಾಗ–೨, ೧೫ ಏಪ್ರಿಲ್ ೧೯೫೦ ಪು–೧೫೫೭.

** ಪಿ.ಡಿ. ಸಂ–೬, ಭಾಗ–೨ ೧೫ ನವೆಂಬರ್ ೧೯೫೦ ಪು. ೧೨.

ಸಿದ್ಧತೆ ಮತ್ತು ಮತಕ್ಷೇತ್ರಗಳ ಪುನರ್‌ವಿಂಗಡಣೆಗೆ ಸಂಬಂಧಿಸಿದಂತೆ ಮಾಡಲಾಗಿರುವ ಪ್ರಗತಿ; (ಬಿ) ನೂತನ ಸಂವಿಧಾನದ ಮೇರೆಗೆ ಮಹಾಚುನಾವಣೆಗಳನ್ನು ನಡೆಸಲು ನಿಶ್ಚಿತ ದಿನಾಂಕ

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಒಂದು ಹೇಳಿಕೆಯನ್ನು ಮಂಡಿಸಲಾಗಿದೆ (ನೋಡಿ, ಅನುಬಂಧ I, ಪರಿಶಿಷ್ಟ ಸಂ.೪)

(ಬಿ) ಈ ಪ್ರಶ್ನೆಯನ್ನು ಕುರಿತು ರಾಷ್ಟ್ರಪತಿಗಳ ಉದ್ಘಾಟನಾ ಭಾಷಣದಲ್ಲಿ ನಿನ್ನೆಯೆ ಪ್ರಸ್ತಾಪಿಸಲಾಗಿದೆ.

**ಶ್ರೀ ಕಾಮತ್:** ಸರ್. ಅಕ್ಟೋಬರ್‌ನಲ್ಲಿ ಹೊರಡಿಸಲಾದ ರಾಷ್ಟ್ರಪತಿಗಳ ಆದೇಶದಲ್ಲಿ ಭಾರತೀಯ ಒಕ್ಕೂಟದ ಭಾಗ (ಎ) ಮತ್ತು ಭಾಗ (ಬಿ) ರಾಜ್ಯಗಳಲ್ಲಿನ ಪರಿಶಿಷ್ಟ ಬುಡಕಟ್ಟುಗಳ ಒಟ್ಟು ಜನಸಂಖ್ಯೆ ೧೭೯ ಲಕ್ಷ; ಆದರೆ ೧೯೪೧ರ ಜನಗಣತಿಯ ಮೇರೆಗೆ ರಾಜ್ಯಗಳಲ್ಲಿನ ಪರಿಶಿಷ್ಟ ಬುಡಕಟ್ಟುಗಳ ಒಟ್ಟು ಜನಸಂಖ್ಯೆ ೨೪೮ ಲಕ್ಷ ಎಂಬುದು ನಿಜವೆ?

**ಡಾ. ಅಂಬೇಡ್ಕರ್:** ಈ ಪ್ರಶ್ನೆಯನ್ನು ಮಾನ್ಯ ಗೃಹ ಮಂತ್ರಿಗಳಿಗೆ ಕೇಳಬೇಕು.

**ಡಾ. ದೇಶಮುಖ್:** ಸದ್ಯದ ಏರ್ಪಾಟಿನ ಪ್ರಕಾರ ಪರಿಶಿಷ್ಟಜಾತಿಯ ಅಭ್ಯರ್ಥಿಗೆ ಗಣನೀಯವಾಗಿ ತೊಂದರೆಯಾಗಲಿದೆ ಎಂಬುದು ಮಾನ್ಯ ಕಾನೂನು ಮಂತ್ರಿಗಳಿಗೆ ತಿಳಿದಿದೆಯೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಅಭ್ಯರ್ಥಿಗಳ ಪಾಲಿಗೆ ಬರಲಿರುವ ದ್ವಿಮತಕ್ಷೇತ್ರವನ್ನು ಏಕಮತ ಕ್ಷೇತ್ರವನ್ನಾಗಿಸಲು ಏನಾದರೂ ಕ್ರಮ ಕೈಗೊಳ್ಳಲು ಅವರು ಉದ್ದೇಶಿಸಿದ್ದಾರೆಯೆ?

**ಡಾ. ಅಂಬೇಡ್ಕರ್:** ಸದನದ ಮುಂದೆ ಮತಕ್ಷೇತ್ರಗಳಿಗೆ ಸಂಬಂಧಪಟ್ಟ ಆದೇಶವನ್ನು ಮಂಡಿಸಿದಾಗ ಈ ವಿಷಯವನ್ನು ನಿಸ್ಸಂಶಯವಾಗಿ ವ್ಯವಹರಿಸಲಾಗುವುದು.

**ಪ್ರೊ॥ ರಂಗ:** ಸಂವಿಧಾನದ ಪ್ರಕಾರ ಸಂಸತ್ತಿಗೆ–ಲೋಕಸಭೆಗೆ ಮತ್ತು ರಾಜ್ಯ ವಿಧಾನಮಂಡಲಗಳಿಗೆ ಏಕಕಾಲದಲ್ಲಿಯೇ ಚುನಾವಣೆಗೆ ನಡೆಸುವುದು ನಿರ್ದಿಷ್ಟ ಹೊಣೆಗಾರಿಕೆಯೆ?

**ಡಾ. ಅಂಬೇಡ್ಕರ್:** ಚುನಾವಣಾ ಆಯುಕ್ತರ ಅನುಕೂಲದ ಆಧಾರದ ಮೇಲೆ ವ್ಯವಹರಿಸಬೇಕಾದ ವಿಷಯ ಇದು.

**ಸರ್ದಾರ್ ಬಿ.ಎಸ್. ಮಾನ್:** ಮತಕ್ಷೇತ್ರಗಳ ಪುನರ್‌ವಿಂಗಡಣಾ ಉದ್ದೇಶಕ್ಕಾಗಿ ೫೧ ಮತಕ್ಷೇತ್ರಗಳಲ್ಲಿ ಸದ್ಯದಲ್ಲಿಯೇ ಕೈಗೊಳ್ಳಲಾಗುವ ಜನಗಣತಿ ಫಲಿತಾಂಶವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆ? ಅಥವಾ ೧೯೪೮ ರ ಸದ್ಯದ ಜನಗಣತಿಯನ್ನು ಪರಿಗಣಿಸಲಾಗುವುದೆ?

**ಡಾ. ಅಂಬೇಡ್ಕರ್:** ಸಂವಿಧಾನದ ಮೇರೆಗೆ ತಾತ್ಕಾಲಿಕ ಸಂಸತ್ತಿನ ದಿನಾಂಕದಿಂದ ೩ ವರ್ಷಗಳೊಳಗಾಗಿ ಚುನಾವಣೆ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಹಳೆಯ ಜನಗಣತಿಯನ್ನು ಪಂಜಾಬ್ ಮತ್ತು ಪಶ್ಚಿಮ ಬಂಗಾಳದಂಥ ಕೆಲವು ಪ್ರಾಂತ್ಯಗಳಲ್ಲಿ, ಜನಸಂಖ್ಯೆಯನ್ನು ಮತದಾರರ ಸಂಖ್ಯೆಯ ಆಧಾರದ ಮೇಲೆ ರಾಷ್ಟ್ರಪತಿಗಳು ಅಂದಾಜು ಮಾಡಬಹುದಾದುದಕ್ಕೆ ಒಳಪಟ್ಟು ಪರಿಗಣನೆಗೆ ತೆಗೆದುಕೊಳ್ಳಬಹುದಾಗಿದೆ.

**ಶ್ರೀ ಕೇಶವರಾವ್:** ಅಲ್ಪಸಂಖ್ಯಾತ ಸಮುದಾಯಗಳಿಂದ ಅವರಿಗಾಗಿ ಬಹುಸದಸ್ಯ ಮತಕ್ಷೇತ್ರಗಳು ಬೇಕೆಂಬ ಮನವಿಗಳನ್ನೇನಾದರೂ ಸರ್ಕಾರವು ಸ್ವೀಕರಿಸಿದೆಯೆ?

**ಡಾ. ಅಂಬೇಡ್ಕರ್:** ಚುನಾವಣಾ ಆಯೋಗವು ಯಾವ ಮನವಿಗಳನ್ನು ಸ್ವೀಕರಿಸಿದೆಯೆಂದು ನನಗೆ ಗೊತ್ತಾಗುವುದೆ? ಆದರೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ನನಗೆ ಅನೇಕ ಮನವಿಗಳು ಬಂದಿವೆ.

**ಡಾ. ದೇಶಮುಖ್:** ರಾಷ್ಟ್ರಪತಿಗಳ ಆದೇಶದಲ್ಲಿ ಮೊದಲಬಾರಿಗೆ ಹೊರತುಪಡಿಸಿರುವ ಜಾತಿಗಳ ದೂರುಗಳನ್ನು ಸರ್ಕಾರವು ಪರಿಗಣಿಸುವುದೆ?

**ಡಾ. ಅಂಬೇಡ್ಕರ್:** ಅದನ್ನು ಈಗ ಪರಿಶೀಲಿಸಲಾಗದು. ಸಂವಿಧಾನದಲ್ಲಿನ ಉಪಬಂಧವು ವಿವಿಧ ಜಾತಿಗಳು ಮತ್ತು ಬುಡಕಟ್ಟುಗಳನ್ನು ನಮೂದಿಸಿ ರಾಷ್ಟ್ರಪತಿಗಳು ಆದೇಶ ಮಾಡಿದರೆಂದರೆ, ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವಂತಿಲ್ಲ. ನಂತರ ವಿಷಯವು ಸಂಸತ್ತಿಗೆ ಸೇರುತ್ತದೆ.

**ಶ್ರೀ ತ್ಯಾಗಿ:** ಮಾನ್ಯ ಮಂತ್ರಿಗಳು, ಅಂತಿಮ ರೂಪದಲ್ಲಿ ಜನತಾ ಪ್ರಾತಿನಿಧ್ಯ ವಿಧೇಯಕವನ್ನು ಮತ್ತು ಮತದಾನದ ನಿಯಮಗಳನ್ನು ಸದನದ ಮುಂದೆ ಯಾವಾಗ ಮಂಡಿಸುವರು?

**ಡಾ. ಅಂಬೇಡ್ಕರ್:** ವಿಧೇಯಕವನ್ನು ನಾನು ಖಂಡಿತವಾಗಿ ಈ ಅಧಿವೇಶನದಲ್ಲಿಯೇ ಮಂಡಿಸುತ್ತೇನೆ; ಆದರೆ ನಿಯಮಗಳು ಎಂದರೇನೆಂದು ನನ್ನ ಸ್ನೇಹಿತರು ಭಾವಿಸಿದ್ದಾರೆ ಎಂಬುದು ನನಗೆ ತಿಳಿಯದು.

**ಶ್ರೀ ತ್ಯಾಗಿ:** ನಾನಂದದ್ದು – ಚುನಾವಣಾ ನಿಯಮಗಳು......

**ಡಾ. ಅಂಬೇಡ್ಕರ್:** ಸರಿ, ನಾವು ಈ ಅಧಿನಿಯಮವನ್ನು ಅಂಗೀಕರಿಸದ ಹೊರತು, ಚುನಾವಣಾ ನಿಯಮಗಳನ್ನು ರೂಪಿಸಲಾಗುವುದೋ ಇಲ್ಲವೋ ನನಗೆ ತಿಳಿಯದು.

**ಶ್ರೀ ಆರ್.ಕೆ. ಚೌಧರಿ:** ಸರ್, ರಾಷ್ಟ್ರಪತಿಗಳು ನಿರ್ಧರಿಸಿದ ಜನಸಂಖ್ಯೆಯು ೧೯೪೧ರ ಜನಸಂಖ್ಯೆಗಿಂತಲೂ ಕೆಲವು ಸಂದರ್ಭಗಳಲ್ಲಿ ಕಡಿಮೆ ಇರುವುದರ ಆಧಾರದ ಮೇಲೆ ಜನಗಣತಿಯು ತುಂಬಾ ಗಂಭೀರ ಆಕ್ಷೇಪಣೆಗಳಿಗೆ ಒಳಗಾಗಿರುವುದು ನಿಜವೆ? ಮತ್ತು ಅದು ದೋಷಪೂರಿತವಾಗಿ ಕಂಡುಬಂದಿರುವ ಮತದಾರರ ಪಟ್ಟಿಯಲ್ಲಿನ ಮತದಾರರ ಸಂಖ್ಯೆಯ ಆಧಾರದ ಮೇಲೆ ನಿರ್ಧಾರಿತವಾಗುವುದರಿಂದ, ನಿರ್ಧಾರಿತ ಜನಸಂಖ್ಯೆಯ ಪರಿಷ್ಕರಣೆಯ ಸಾಧ್ಯತೆ ಇದೆಯೆ?

**ಡಾ. ಅಂಬೇಡ್ಕರ್:** ಈ ಪ್ರಶ್ನೆಯನ್ನು ಮಾನ್ಯ ಗೃಹ ಸಚಿವರಿಗೆ ಕೇಳಬೇಕಾಗಿದ್ದಿತು.

**ಶ್ರೀ ಚಂದ್ರಿಕಾ ರಾಮ್:** ಎಷ್ಟು ರಾಜ್ಯಗಳು ಪರಿಶಿಷ್ಟಜಾತಿ ಮತ್ತು ಬುಡಕಟ್ಟುಗಳಿಗೆ ಮತಕ್ಷೇತ್ರಗಳನ್ನು ಪುನರ್ ವಿಂಗಡಿಸಿರುತ್ತವೆ.

**ಡಾ. ಅಂಬೇಡ್ಕರ್:** ಪರಿಶಿಷ್ಟ ಜಾತಿಗಳ ಮತಕ್ಷೇತ್ರಗಳ ಪುನರ್‌ವಿಂಗಡಣೆಯ ವಿಷಯವು ಸಾಮಾನ್ಯ ಮತಕ್ಷೇತ್ರಗಳ ಪುನರ್‌ವಿಂಗಡಣೆಯಿಂದ ಪ್ರತ್ಯೇಕವಾಗಿ ವ್ಯವಹರಿಸಬೇಕಾದ ವಿಷಯವೆಂದು ನಾನು ಭಾವಿಸಿಲ್ಲ.

**ಶ್ರೀ ಕಾಮತ್:** ಮಹಾಚುನಾವಣಾ ದಿನಾಂಕಗಳನ್ನು ಏಪ್ರಿಲ್–ಮೇನಿಂದ ನವೆಂಬರ್–ಡಿಸೆಂಬರ್ ೧೯೫೧ಕ್ಕೆ ಮುಂದೂಡಿರುವುದರಿಂದ ಮತದಾರರ ಅರ್ಹತಾ ದಿನಾಂಕ ಮತ್ತು ಅರ್ಹತಾ ಅವಧಿಯಲ್ಲಿ ಏನಾದರೂ ಬದಲಾವಣೆ ಇದೆಯೆ?

**ಡಾ. ಅಂಬೇಡ್ಕರ್:** ಈಗಾಗಲೇ ಅನುಮೋದಿಸಿರುವ ಅಧಿನಿಯಮಕ್ಕೆ ತಿದ್ದುಪಡಿ ಮಾಡದ ಹೊರತು ನಾವು ಬದಲಾಯಿಸಲು ಸಾಧ್ಯವಾಗುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು:** ನಾವು ಮುಂದಿನ ಪ್ರಶ್ನೆಗೆ ಹೋಗೋಣ.

## ೧೭
## *ಮಹಾಚುನಾವಣೆಗಳು

**೧೩೪. ಶ್ರೀ ದೇಶಬಂಧು ಗುಪ್ತ:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ?

---

* ಪಿ.ಡಿ. ಸಂ–೬, ಭಾಗ–೧, ೨೦ ನವೆಂಬರ್ ೧೯೫೦ ಪು. ೧೩೮

(ಎ) ಮುಂದಿನ ಮಹಾಚುನಾವಣೆಗಳಿಗೆ ಸರ್ಕಾರವು ಅಂತಿಮವಾಗಿ ತಿಂಗಳನ್ನು ನಿಗದಿ ಮಾಡಿದೆಯೆ, ಹಾಗಿದ್ದಲ್ಲಿ ಯಾವ ತಿಂಗಳು?

(ಬಿ) ಚುನಾವಣೆಗಳನ್ನು ಸಂಸತ್ತು ಮತ್ತು ರಾಜ್ಯಗಳ ವಿಧಾನಮಂಡಲಗಳಿಗೆ ಏಕಕಾಲದಲ್ಲಿಯೇ ನಡೆಸಲಾಗುವುದೆ?

(ಸಿ) ಈ ವಿಷಯದ ಬಗ್ಗೆ ಪ್ರತಿಯೊಂದು ರಾಜ್ಯ ಸರ್ಕಾರವು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ?

(ಡಿ) ಲೋಕಸಭೆ, ರಾಜ್ಯಗಳ ಪರಿಷತ್ತು ಮತ್ತು ರಾಜ್ಯಗಳ ವಿಧಾನಮಂಡಲಗಳಿಗೆ ಅನುಕ್ರಮವಾಗಿ ನೋಂದಾಯಿಸಿಕೊಂಡಿರುವ ಒಟ್ಟು ಮತದಾರರ ಸಂಖ್ಯೆ ಎಷ್ಟು ಮತ್ತು ಮತದಾರರ ಪಟ್ಟಿಗಳನ್ನು ಅಂತಿಮವಾಗಿ ಯಾವಾಗ ಪ್ರಕಟಿಸಲಾಗುವುದು.

(ಇ) ಚುನಾವಣೆಗಳಿಗೆ ಭರಿಸಲಾಗುವ ಅಂದಾಜು ವೆಚ್ಚ ಎಷ್ಟು?

(ಎಫ್) ಈ ಉದ್ದೇಶಕ್ಕಾಗಿ ಎಷ್ಟು ಜನ ಅಧಿಕಾರಿಗಳನ್ನು ಎಷ್ಟು ಕಾಲದವರೆಗೆ ನೇಮಕ ಮಾಡಲಾಗುವುದು.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಈ ಭಾಗದ ಪ್ರಶ್ನೆಯ ಬಗೆಗೆ ೧೪ ನವೆಂಬರ್ ೧೯೫೦ ರಂದು ರಾಷ್ಟ್ರಪತಿಗಳ ಉದ್ಘಾಟನಾ ಭಾಷಣದಲ್ಲಿ ವಿವರಗಳನ್ನು ನೀಡಲಾಗಿದೆ.

(ಬಿ) ಚುನಾವಣೆಗಳನ್ನು ರಾಜ್ಯಗಳಲ್ಲಿನ ಲೋಕಸಭಾ ಕ್ಷೇತ್ರಗಳಿಗೆ ಮತ್ತು ಆ ರಾಜ್ಯದ ವಿಧಾನಮಂಡಲ ಮತಕ್ಷೇತ್ರಗಳು ಏನಾದರೂ ಇದ್ದರೆ ಅವುಗಳಿಗೆ ಏಕಕಾಲದಲ್ಲಿ ನಡೆಸಲಾಗುವುದು. ಸರಿಸುಮಾರು ಅದೇ ಸಮಯದಲ್ಲಿ ರಾಜ್ಯ ವಿಧಾನ ಪರಿಷತ್ತುಗಳಿಗೆ – ಆದರೆ ಖಚಿತವಾಗಿ ಅದೇ ಸಮಯದಲ್ಲಿ ಅಲ್ಲ– ನಡೆಸಲಾಗುವುದು.

(ಸಿ) ಎಲ್ಲ ರಾಜ್ಯಗಳು ಲೋಕಸಭೆ ಮತ್ತು ರಾಜ್ಯ ವಿಧಾನಮಂಡಲಗಳಿಗೆ ಚುನಾವಣೆಗಳನ್ನು ಏಕಕಾಲದಲ್ಲಿಯೇ ನಡೆಸುವುದರ ಪರವಾಗಿ ಇವೆ.

(ಡಿ) ಲೋಕಸಭೆ ಮತ್ತು ರಾಜ್ಯ ವಿಧಾನಮಂಡಲಗಳ ಮತದಾರರ ಸಂಖ್ಯೆ ಒಂದೇ ಆಗಿರುತ್ತದೆ. ಈವರೆಗೆ ನಮೂದಿಸಲ್ಪಟ್ಟಿರುವ ಲೋಕಸಭಾ ಮತದಾರರ ಒಟ್ಟು ಸಂಖ್ಯೆಯನ್ನು ತೋರಿಸಿರುವ ತಃಖ್ತೆಯನ್ನು ಮಂಡಿಸಲಾಗಿದೆ (ನೋಡಿ ಅನುಬಂಧ I, ಪರಿಶಿಷ್ಟ ಸಂಖ್ಯೆ ಸಂ.೨೯).

ಪೂರಕ ಮತದಾರರಿಗೆ ಸಂಬಂಧಿಸಿದ ಅಂಕಿಸಂಖ್ಯೆಗಳು ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಭೂಪಾಲ ವಿಲಾಸಪುರ್, ಕೂರ್ಗ್ ಮತ್ತು ಹಿಮಾಚಲ ಪ್ರದೇಶಗಳಿಂದ ಬರಬೇಕಾಗಿದೆ. ರಾಜ್ಯಗಳ ಪರಿಷತ್ತಿನಲ್ಲಿನ ಭಾಗ (ಎ) ಮತ್ತು ಭಾಗ (ಬಿ) ರಾಜ್ಯಗಳ ಕ್ಷೇತ್ರಗಳಿಗೆ (ಜಮ್ಮು ಮತ್ತು ಕಾಶ್ಮೀರ ಹೊರತುಪಡಿಸಿ) ಹಂಚಿಕೆ ಮಾಡಲಾಗಿರುವ ಮತದಾರರ ಸಂಖ್ಯೆ ೩೦೫೫, ಭಾಗ ಸಿ ರಾಜ್ಯಗಳಿಗೆ ಹಂಚಿಕೆ ಮಾಡಿದ ರಾಜ್ಯಗಳ ಪರಿಷತ್ತಿನಲ್ಲಿನ ಕ್ಷೇತ್ರಗಳನ್ನು ತುಂಬುವ ಚುನಾವಣಾ ವಿಧಾನವನ್ನು ಸಂಸತ್ತು ನಿರ್ಧರಿಸಬೇಕಾಗಿದ್ದು ಈ ಉದ್ದೇಶಕ್ಕಾಗಿ ಜನತಾ ಪ್ರಾತಿನಿಧ್ಯ ಅಧಿನಿಯಮ ೧೯೫೦ಕ್ಕೆ ತಿದ್ದುಪಡಿ ಮಾಡಲು ವಿಧೇಯಕವೊಂದನ್ನು ಪ್ರಸಕ್ತ ಅಧಿವೇಶನದಲ್ಲಿಯೇ ಮಂಡಿಸಲು ಉದ್ದೇಶಿಸಲಾಗಿದೆ. ಭಾಗ 'ಎ' ರಾಜ್ಯಗಳು ಮತ್ತು ಮೈಸೂರಿನಲ್ಲಿನ ವಿಧಾನ ಪರಿಷತ್ತುಗಳಿಗೆ ಮತದಾರರ ಪಟ್ಟಿಗಳು ಇನ್ನು ಸಿದ್ಧತೆಯಲ್ಲಿವೆ ಮತ್ತು ಆ ಮತದಾರರ ಪಟ್ಟಿಯ ಬಗ್ಗೆ ಏನೂ ಹೇಳಲು ಸಾಧ್ಯವಾಗುವುದಿಲ್ಲ. ಮತಕ್ಷೇತ್ರಗಳನ್ನು ಪುನರ್‌ವಿಂಗಡಣೆ ಮಾಡಿದ ಅಥವಾ ಪ್ರಾರಂಭಿಕ ಮತಪಟ್ಟಿಗಳ ಮೇಲೆ ಬಂದಿರುವ ಕ್ಲೇಮುಗಳು ಮತ್ತು ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿದ ಕೂಡಲೇ ಮತದಾರರ ಪಟ್ಟಿಗಳನ್ನು ಅಂತಿಮವಾಗಿ ಪ್ರಕಟಿಸಲಾಗುವುದು. ಇದು ಮುಂದಿನ ಜನವರಿ ಕೊನೆಯಲ್ಲಿ ಅಥವಾ ಫೆಬ್ರವರಿ ಮೊದಲ ಭಾಗದಲ್ಲಿ ಪೂರ್ಣಗೊಳ್ಳಲಿದೆ.

(ಇ) ಒಂದು ಕರಡು ಅಂದಾಜಿನ ಪ್ರಕಾರ ಚುನಾವಣೆಗಳಿಗೆ ಭಾರತ ಸರ್ಕಾರವು ಈವರೆಗೆ ಭರಿಸಿದ ವೆಚ್ಚ ಮತ್ತು ಮುಂದೆ ಮಾಡಬಹುದಾದ ವೆಚ್ಚ ಸು. ೫೨೦ ಲಕ್ಷಗಳಾಗಬಹುದು; ಎಲ್ಲಾ ರಾಜ್ಯ ಸರ್ಕಾರಗಳ ಒಟ್ಟು ವೆಚ್ಚ ಸು. ೪೯೦ ಲಕ್ಷಗಳಾಗಬಹುದು.

(ಎಫ್) ಮಾನ್ಯ ಸದಸ್ಯರು ಚುನಾವಣೆಗಳನ್ನು ವಾಸ್ತವಿಕವಾಗಿ ನಡೆಸಲು ನಿಯೋಜಿಸಲಾಗುವ ಅಧಿಕಾರಿಗಳಿಗೆ ಸಂಬಂಧಿಸಿದಂತೆ ವಿವರ ಕೇಳಿದ್ದರೆ ಅವರ ಸಂಖ್ಯೆಯನ್ನಾಗಲಿ ಅಥವಾ ಈ ಉದ್ದೇಶಕ್ಕಾಗಿ ಅವರನ್ನು ನಿಯೋಜಿಸಲಾಗುವ ಅವಧಿಯನ್ನಾಗಲಿ ಸದ್ಯಕ್ಕೆ ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ.

**ಶ್ರೀ ದೇಶಬಂಧುಗುಪ್ತ:** ಮತದಾರರ ಪಟ್ಟಿಯಲ್ಲಿನ ಅಸಂಖ್ಯಾತ ಲೋಪ ಮತ್ತು ತಪ್ಪು ನಮೂದುಗಳನ್ನು ಕುರಿತು ವಿವಿಧ ರಾಜ್ಯಗಳಿಂದ ದೂರುಗಳನ್ನು ಸ್ವೀಕರಿಸಲಾಗಿದೆಯೆ; ಹಾಗಿದ್ದಲ್ಲಿ ಈ ದೋಷಗಳನ್ನು ಸರಿಪಡಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

**ಡಾ. ಅಂಬೇಡ್ಕರ್:** ನಿಜ ಹೇಳಬೇಕೆಂದರೆ ಈ ವಿಷಯವು ಚುನಾವಣಾ ಆಯುಕ್ತರ ವ್ಯಾಪ್ತಿಗೆ ಒಳಪಟ್ಟ ವಿಷಯ; ಅಂಥ ಯಾವುದೇ ಅಕ್ರಮಗಳನ್ನು ಚುನಾವಣಾ ಆಯುಕ್ತರ ಗಮನಕ್ಕೆ ತಂದಿದ್ದರೆ ಅವುಗಳನ್ನು ಸರಿಪಡಿಸಲು ಅವರು ತಮ್ಮ ಅಧಿಕಾರಗಳನ್ನು ಚಲಾಯಿಸುವರು.

**ಶ್ರೀ ದೇಶಬಂಧು ಗುಪ್ತ:** ದೆಹಲಿ ರಾಜ್ಯವೊಂದರಲ್ಲಿಯೇ ಸು. ೪೦ ಸಾವಿರ ಮಹಿಳೆಯರು ತಮ್ಮನ್ನು "ಶ್ರೀಮತಿ' ಅಥವಾ ಕುಮಾರಿ–ಎಂದು ನಮೂದಿಸಿದ ಸರಳ ಕಾರಣಕ್ಕಾಗಿ ಮತದಾರರೆಂದು ದಾಖಲಿಸಲು ಆಕ್ಷೇಪಣೆಗಳನ್ನು ಸಲ್ಲಿಸಬೇಕಾಗಿದೆ ಎಂಬುದು ಚುನಾವಣಾ ಆಯುಕ್ತರ ಅಥವಾ ಸರ್ಕಾರದ ಗಮನಕ್ಕೆ ಬಂದಿದೆಯೆ?

**ಡಾ. ಅಂಬೇಡ್ಕರ್:** ಸಾಧ್ಯತೆಯಿದೆ.

**ಶ್ರೀ ದೇಶಬಂಧು ಗುಪ್ತ:** ಸರ್, ಚುನಾವಣೆಗಳನ್ನು ಹೇಗೂ ಮುಂದೂಡಿರುವುದರಿಂದ ಅಂಥ ತಪ್ಪು ನಮೂದುಗಳನ್ನು ಸರಿಪಡಿಸಲು ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಅಗತ್ಯಪಡಿಸುವುದರ ಬದಲು ಹಾಗೆಯೇ ಸರಿಪಡಿಸುವ ಅಪೇಕ್ಷೆಯನ್ನು ಸರ್ಕಾರವು ಪರಿಗಣಿಸುವುದೆ?

**ಡಾ. ಅಂಬೇಡ್ಕರ್:** ಈ ಸಲಹೆಯನ್ನು ನಾನು....

**ಮಾನ್ಯ ಸಭಾಧ್ಯಕ್ಷರು:** ಆರ್ಡರ್, ಆರ್ಡರ್, ಇದು ಕ್ರಮ ತೆಗೆದುಕೊಳ್ಳಬೇಕಾದ ಸಲಹೆ.

**ಶ್ರೀ ಶ್ಯಾಮನಂದನ್ ಸಹಾಯ್:** ಸಂವಿಧಾನವು ವಯಸ್ಕ ಮತದಾನವನ್ನು ವಿಧಿಸಿರುವುದರಿಂದ ಮತದಾರರ ಪಟ್ಟಿಯನ್ನು ತಯಾರಿಸುವಲ್ಲಿ ಮುಂದಿನ ಚುನಾವಣೆ ಫಲಿತಾಂಶವನ್ನು ಸರ್ಕಾರವು ಪರಿಗಣನೆಗೆ ತೆಗೆದುಕೊಳ್ಳುವುದೆ?

**ಡಾ. ಅಂಬೇಡ್ಕರ್:** ಅದೇನೂ ಆವಶ್ಯಕವಲ್ಲ. ಸಂವಿಧಾನದಲ್ಲಿ ಉಪಬಂಧ ಕಲ್ಪಿಸಿರುವಂತೆ ಚುನಾವಣೆಗಳು ಸಂವಿಧಾನದ ಆರಂಭದಿಂದ ೩ ವರ್ಷಗಳೊಳಗಾಗಿ ನಡೆದರೆ ೧೯೪೧ರ ಜನಗಣಕೆಯ ಜನಸಂಖ್ಯೆಯನ್ನೇ ಪರಿಗಣನೆಗೆ ತೆಗೆದುಕೊಳ್ಳಬಹುದಾಗಿದೆ; ಆದರೆ ಇನ್ನು ಕೆಲವು ಪ್ರಕರಣಗಳಲ್ಲಿ ರಾಷ್ಟ್ರಪತಿಗಳು ಆದೇಶದ ಮೂಲಕ ನಿರ್ಧರಿಸಬಹುದಾಗಿದೆ.

**ಶ್ರೀ ದೇಶಮುಖ್:** ಕೆಲವೊಂದು ರಾಜ್ಯಗಳಲ್ಲಿ ಮತದಾರರ ಪಟ್ಟಿಗೆ ಸೂಚಿಸಿರುವ ಬೆಲೆಯು ತೀರಾ ದುಬಾರಿಯೆಂಬುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ ಮತ್ತು ಈ ಪಟ್ಟಿಗಳು ತೀರಾ ದುಬಾರಿಯಾಗಬಾರದೆಂಬ ಬಗ್ಗೆ ಕೇಂದ್ರ ಸರ್ಕಾರವು ಯಾವುದಾದರೂ ಆದೇಶವನ್ನು ಹೊರಡಿಸುತ್ತದೆಯೆ?

**ಡಾ. ಅಂಬೇಡ್ಕರ್:** ಈ ವಿಷಯದಲ್ಲಿ ಕೆಲವು ವಿಧಾನಮಂಡಲಗಳಲ್ಲಿ ಚರ್ಚೆಗಳು ನಡೆದಿವೆಯೆಂದು

ಕೇಳಿದ್ದೇನೆ. ಕೆಲವು ರಾಜ್ಯ ಸರ್ಕಾರಗಳು ಚುನಾವಣಾ ಪಟ್ಟಿಗಳ ಬೆಲೆಯನ್ನು ಈಗಾಗಲೇ ಕಡಿಮೆ ಮಾಡಿದೆಯೆಂದು ಕೇಳಿದ್ದೇನೆ.

**ಶ್ರೀ ಬಿ.ಎನ್. ಸಿಂಗ್:** ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಉಪಯೋಗಿಸಿದ "ಏಕ ಕಾಲದಲ್ಲಿ' ಎಂದರೆ ಎಲ್ಲಾ ಚುನಾವಣೆಗಳನ್ನು ಎಲ್ಲ ವಿವಿಧ ರಾಜ್ಯಗಳಲ್ಲಿ ಒಂದೇ ದಿನ ನಡೆಲಾಗುವುದೆ? ಅಥವಾ ೩ ಅಥವಾ ೪ ದಿನಗಳ ಕಾಲ ನಡೆಯುವುದೆ?

**ಡಾ. ಅಂಬೇಡ್ಕರ್:** ಮಿತವ್ಯಯದ ದೃಷ್ಟಿಯಿಂದ ಒಂದೇ ದಿನ ನಡೆಯುವುದು.

**ಶ್ರೀ ಆರ್. ವೇಲಾಯುಧನ್:** ಪುನರ್‌ವಿಂಗಡಣಾ ಸಮಿತಿಗಳಿಗೆ ತಮ್ಮ ವರದಿಗಳನ್ನು ಸಲ್ಲಿಸಲು ಅಂತಿಮ ದಿನಾಂಕವನ್ನೇನಾದರೂ ನಿಗದಿಪಡಿಲಾಗಿದೆಯೆ?

**ಡಾ. ಅಂಬೇಡ್ಕರ್:** ಒಮ್ಮೆ ಚುನಾವಣಾ ಮತಕ್ಷೇತ್ರದ ಆದೇಶವನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಲು ಮತ್ತು ಈ ಸದನದಲ್ಲಿ ಇದೇ ಅಧಿವೇಶನದಲ್ಲಿ ಮಂಡಿಸುವ ಉದ್ದೇಶದಿಂದ ದಿನಾಂಕವನ್ನು ನಿಗದಿಪಡಿಸಲಾಗಿತ್ತು. ಚುನಾವಣಾ ದಿನಾಂಕಗಳನ್ನು ಮುಂದೂಡಿದ್ದರಿಂದ ಪ್ರಕರಣದ ವಸ್ತುಸ್ಥಿತಿಗೆ ಅನುಸಾರವಾಗಿ ಮತಕ್ಷೇತ್ರಗಳನ್ನು ಸಿದ್ಧಪಡಿಸಲು ಅನುಕೂಲವಾಗುವಂತೆ ಅವರು ಹೆಚ್ಚಿನ ಕಾಲವನ್ನು ತೆಗದುಕೊಳ್ಳಬಹುದು.

**ಶ್ರೀ ಕೆ. ವೈದ್ಯ:** ಸರ್, ವಿಧಾನಮಂಡಲಗಳೇ ಇಲ್ಲದಿರುವ ರಾಜ್ಯಗಳಲ್ಲಿ ಚುನಾವಣೆಗಳನ್ನು ಏಪ್ರಿಲ್‌ನಲ್ಲಿ ನಡೆಸಬಾರದೆ?

**ಡಾ. ಅಂಬೇಡ್ಕರ್:** ನನ್ನ ಸ್ನೇಹಿತರು ಕುಳಿತುಕೊಂಡರೆ ನಾನು ಉತ್ತರ ನೀಡುವೆ. ಲೋಕಸಭೆಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ರಾಜ್ಯದ ವಿಧಾನಮಂಡಲ ಒಳಗೊಳ್ಳುವುದಿಲ್ಲ. ಏಕೆಂದರೆ ಚುನಾವಣೆ ನಡೆಯವುದು ಜನಗಳಿಂದ. ಮೇಲ್ಮನೆಗಳಿಲ್ಲದಿರುವ ಕಡೆ ಇಂದು ಸದನದಲ್ಲಿ ನಾವು ಮಂಡಿಸಲಿರುವ ವಿಧೇಯಕದ ಮೂಲಕ ವಿಧಾನಮಂಡಲಗಳಿಲ್ಲದಿರುವ ಕಡೆ ಚುನಾವಣೆಗೆ ಉಪಬಂಧ ಕಲ್ಪಿಸಲಾಗುವುದು.

**ಶ್ರೀ ದ್ವಿವೇದಿ:** ಸರ್, ಚುನಾವಣೆಗಳಿಗೆ ನಿಲ್ಲುವ ವ್ಯಕ್ತಿಗಳಿಗೆ ಕನಿಷ್ಠ ಅರ್ಹತೆಗಳನ್ನೇನಾದರೂ ನಿಗದಿಪಡಿಸಲಾಗುವುದೆ?

**ಡಾ. ಅಂಬೇಡ್ಕರ್:** ಪ್ರೊ॥ ಕೆ.ಟಿ. ಷಾ ಅವರು ಮಂಡಿಸಿರುವ ನಿರ್ಣಯದ ಮೇರೆಗೆ ಈ ವಿಷಯವು ಚರ್ಚೆಯಲ್ಲಿದೆ.

**ಶ್ರೀ ರಾಧಲಾಲ್ ವ್ಯಾಸ್:** ಮಹಾ ಚುನಾವಣೆಗಳನ್ನು ಒಂದು ವರ್ಷಕಾಲ ಮುಂದೂಡಿರುವುದರಿಂದ ಜನತಾ ಪ್ರಾತಿನಿಧ್ಯ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿಗಳ ಮೂಲಕ ಅರ್ಹತಾದಾಯಕ ದಿನಾಂಕ ಮತ್ತು ಅವಧಿಯನ್ನು ಬದಲಾಯಿಸಲಾಗುವುದೆ?

**ಮಾನ್ಯ ಸಭಾಧ್ಯಕ್ಷರು:** ಇದು ಈ ಸದನದಲ್ಲಿ ಚರ್ಚಿಸಬೇಕಾದ ವಿಷಯ.

**ಶ್ರೀ ದೇಶಬಂಧು ಗುಪ್ತ:** ಸರ್, ಬೇರೆಯವರ ಹೆಸರಿನಲ್ಲಿ ಮತಹಾಕುವುದನ್ನು ಪತ್ತೆ ಮಾಡಲು ಸಾಧನವೊಂದನ್ನು ಕಂಡುಹಿಡಿದಿರುವುದು ನಿಜವೆ?

**ಡಾ. ಅಂಬೇಡ್ಕರ್:** ಹೌದು, ನಮ್ಮ ವೈಜ್ಞಾನಿಕ ಪ್ರಯೋಗಶಾಲೆಗಳು ವಿಧಾನವೊಂದನ್ನು ಕಂಡು ಹಿಡಿಯುತ್ತಿರುವುದಾಗಿ ಕೇಳಿದ್ದೇನೆ.

# ೧೮

# *ಸರ್ವೋಚ್ಚ ನ್ಯಾಯಾಲಯಕ್ಕೆ ಸರ್ಕಾರಿ ಏಜೆಂಟರು

**೪೪೨ ಶ್ರೀ ರಾಜ್ ಬಹದ್ದೂರ್:** ಮಾನ್ಯ ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೇ

(ಎ) ಭಾರತದ ಸರ್ವೋಚ್ಚ ನ್ಯಾಯಾಲಯದ ಸಲುವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪರವಾಗಿ ಸಾಲಿಸಿಟರ್‌ಗಳೆಂದು ಅಥವಾ ಏಜೆಂಟರೆಂದು ಕಾರ್ಯ ನಿರ್ವಹಿಸಲು ಸರ್ಕಾರದ ಅಡಿಯಲ್ಲಿ ಯಾವುದಾದರೂ ಏಜೆನ್ಸಿ ಅಥವಾ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆಯೆ?

(ಬಿ) ಹಾಗಿದ್ದಲ್ಲಿ, ಅಂಥ ಏಜೆನ್ಸಿ ಅಥವಾ ವ್ಯವಸ್ಥೆಯನ್ನು ಸೃಜಿಸಲು ಕಾರಣಗಳು ಮತ್ತು ಆವಶ್ಯಕತೆ ಏನು?

(ಸಿ) ಅಂಥ ಏಜೆನ್ಸಿ ಅಥವಾ ವ್ಯವಸ್ಥೆಯ ಸೃಜನೆ ಮತ್ತು ನಿರ್ವಹಣೆಗಾಗಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ವೆಚ್ಚ ಮಾಡಿದ ಮೊತ್ತವೆಷ್ಟು?

(ಡಿ) ಅಂಥ ಏಜೆನ್ಸಿ ಅಥವಾ ವ್ಯವಸ್ಥೆಯ ಸೃಜನೆಯು ಕೆಲಸದ ದಕ್ಷತೆ ಮತ್ತು ಅನುಷ್ಠಾನದ ಮೇಲೆ ಪರಿಣಾಮ ಬೀರಿದೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಹೌದು.

(ಬಿ) ಭಾರತೀಯ ಪ್ರಕರಣಗಳ ಮೇಲೆ ಪ್ರಿವಿ ಕೌನ್ಸಿಲ್‌ನ ಅಧಿಕಾರ ವ್ಯಾಪ್ತಿಯ ರದ್ಧತಿ ಮತ್ತು ನೂತನ ಸಂವಿಧಾನದ ಆರಂಭದೊಂದಿಗೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಬರುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಕರಣಗಳ ಕೆಲಸದ ಪ್ರಮಾಣವು ಅಪಾರವಾಗಿ ಹೆಚ್ಚಿರುತ್ತದೆ. ಮಹತ್ವದ ಸಾಂವಿಧಾನಿಕ ಬದಲಾವಣೆಗಳು ನಡೆದಿರುವುದರಿಂದ ಅಂಥ ಪ್ರಕರಣಗಳಲ್ಲಿ ಕಾನೂನಿನ ನೂತನ ಮತ್ತು ಸಂಕೀರ್ಣ ಸಮಸ್ಯೆಗಳು ತಲೆದೋರುತ್ತಿವೆ. ಈ ದೇಶದ ಅತ್ಯುನ್ನತ ಟ್ರಿಬ್ಯುನಲ್‌ನ ಮುಂದೆ ಉತ್ತಮ ಫಲಿತಾಂಶಗಳನ್ನು ಸಾಧಿಸುವ ಸಲುವಾಗಿ ಸರ್ವೋಚ್ಚ ನ್ಯಾಯಾಲಯದ ಮುಂದಿರುವ, ಭಾರತ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಹಿತಾಸಕ್ತಿ ಹೊಂದಿರುವ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ವಿಷಯಗಳನ್ನು ಫೆಡರಲ್ ನ್ಯಾಯಾಲಯದ ವೃತ್ತಿಪರಿಣತಿ, ಕಾರ್ಯ ವಿಧಾನ, ಸರ್ಕಾರದ ಆಡಳಿತದೊಂದಿಗೆ ಪರಿಶ್ರಮ ಮತ್ತು ನೂತನ ಸಂವಿಧಾನದೊಂದಿಗೆ ಪರಿಚಯವುಳ್ಳ ಸಿಬ್ಬಂದಿ ವರ್ಗದಿಂದೊಡಗೂಡಿದ ಒಂದು ಕೇಂದ್ರೀಯ ಏಜೆನ್ಸಿ ನಿರ್ವಹಿಸುವುದು ಸೂಕ್ತವೆಂದು ಪರಿಗಣಿಸಲಾಗಿದೆ. ಈ ಪ್ರಸ್ತಾವನೆಯನ್ನು ಭಾಗ ಎ ಮತ್ತು ಭಾಗ ಬಿ ರಾಜ್ಯಗಳ ಮುಂದೆ ಮಂಡಿಸಿದಾಗ ಅವುಗಳ ಪೈಕಿ ೧೦ ರಾಜ್ಯಗಳು ಅದನ್ನು ಒಪ್ಪಿಕೊಂಡಿವೆ.

(ಸಿ) ಕೇಂದ್ರೀಯ ಏಜೆನ್ಸಿಗೆ, ಪ್ರಸಕ್ತ ಆರ್ಥಿಕ ವರ್ಷದ ವೆಚ್ಚ ರೂ. ೪೭,೬೦೦ ಮತ್ತು ಮುಂದಿನ ಆರ್ಥಿಕ ವರ್ಷಕ್ಕೆ ರೂ. ೮೭,೪೦೦ ಎಂದು ಅಂದಾಜು ಮಾಡಲಾಗಿದೆ. ಈ ವೆಚ್ಚವನ್ನು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ ಪ್ರತಿ ಸರ್ಕಾರದ ಪರವಾಗಿ ನಿರ್ವಹಿಸಲಾಗುವ ಪ್ರಕರಣಗಳ ನಡುವೆ ಪ್ರತಿ ಸರ್ಕಾರದ ಪರವಾಗಿ ನಿರ್ವಹಿಸಲಾಗುವ ಪ್ರಕರಣಗಳ ಸಂಖ್ಯೆ ಮತ್ತು ಸ್ವರೂಪಕ್ಕನುಸಾರವಾಗಿ ಹಂಚಿಕೆ ಮಾಡಲಾಗುವುದು. ಈ ಸಾಲಿಗೆ ಪಾಲುದಾರ ಸರ್ಕಾರಗಳು ಪಾವತಿಮಾಡಬೇಕಾದ ಮೊತ್ತವನ್ನು

---

* ಪಿ.ಡಿ. ಸಂ–೬, ಭಾಗ–೧ ೨೮ ನವೆಂಬರ್ ೧೯೫೦ ಪು–೪೧೦

ವರ್ಷದ ಕೊನೆಯಲ್ಲಿ ಮಾತ್ರ ಅಂದಾಜು ಮಾಡಲಾಗುವುದು.

(ಡಿ) ಕೇಂದ್ರೀಯ ಏಜೆನ್ಸಿಯನ್ನು ಸೃಜಿಸುವ ಮುನ್ನ ಸರ್ಕಾರಿ ಸಾಲಿಸಿಟರ್‌ಗಳ ಪೈಕಿ ಒಬ್ಬರು ಸಾಲಿಸಿಟರ್ ಶಾಖೆಯ ತಮ್ಮ ಸಾಮಾನ್ಯ ಸಲಹಾತ್ಮಕ ಕೆಲಸದ ಜೊತೆಗೆ ಹೆಚ್ಚುವರಿಯಾಗಿ, ಕೇಂದ್ರ ಸರ್ಕಾರದ ಏಜೆನ್ಸಿ ಕೆಲಸವನ್ನು ನಿರ್ವಹಿಸುತ್ತಿದ್ದರು. ರಾಜ್ಯ ಸರ್ಕಾರಗಳು ತಮ್ಮದೇ ಆದ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದವು. ಕೇಂದ್ರೀಯ ಏಜೆನ್ಸಿಯನ್ನು ಸ್ಥಾಪಿಸುವುದರಿಂದ, ವಿಶೇಷವಾಗಿ, ರಾಜ್ಯ ಸರ್ಕಾರಗಳ ದೃಷ್ಟಿಯಿಂದ ಸಹಜವಾಗಿ ಮಿತವ್ಯಯ ಮತ್ತು ದಕ್ಷತೆ ಸಾಧಿತವಾಗುತ್ತದೆ. ಅದರಿಂದಾಗಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಬರುವ ವಿವಿಧ ಸಾಂವಿಧಾನಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ರಾಜ್ಯಗಳೊಡನೆ ಮತ್ತು ಕೇಂದ್ರ ಸರ್ಕಾರದ ನಡುವೆ ಹೆಚ್ಚಿನ ಸಮನ್ವಯವು ಸಾಧ್ಯವಾಗುತ್ತದೆ.

**ಶ್ರೀರಾಜ್ ಬಹದ್ದೂರ್:** ಈ ಪ್ರಸ್ತಾವನೆಗೆ ಯಾವುದಾದರೂ ರಾಜ್ಯಗಳು ಅಸಮ್ಮತಿ ಸೂಚಿಸಿದ್ದಾರೆಯೆ ಅಥವಾ ನಿರಾಕರಿಸಿದ್ದಾರೆಯೆ?

**ಡಾ. ಅಂಬೇಡ್ಕರ್:** ಯಾವ ರಾಜ್ಯಗಳು ಸ್ಪಷ್ಟವಾಗಿ ಅಸಮ್ಮತಿ ಸೂಚಿಸವೆಯೋ ನನಗೆ ತಿಳಿಯದು. ನಾನು ಈಗಾಗಲೇ ಹೇಳಿದಂತೆ ೧೦ ರಾಜ್ಯಗಳು ಒಪ್ಪಿವೆ: ಅಸ್ಸಾಂ, ಪಶ್ಚಿಮ ಬಂಗಾಳ, ಮದ್ರಾಸ್, ಪಂಜಾಬ್ ಮತ್ತು ಉತ್ತರ ಪ್ರದೇಶಗಳು ಈ ಯೋಜನೆಗೆ ಸೇರಿಲ್ಲ. ಅವು ಅನಂತರ ಸೇರಬಹುದು.

**ಶ್ರೀ ರಾಜ್ ಬಹದ್ದೂರ್:** ಈ ಪ್ರಸ್ತಾವನೆಗೆ ನಿರ್ದಿಷ್ಟವಾಗಿ ಒಪ್ಪಿಗೆ ನೀಡದಿರುವ ರಾಜ್ಯಗಳ ಸಂಖ್ಯೆ ಎಷ್ಟು?

**ಡಾ. ಅಂಬೇಡ್ಕರ್:** ನಾನು ಈಗಾಗಲೇ ಹೇಳಿದಂತೆ, ಈ ಯೋಜನೆಯನ್ನು ಸ್ಪಷ್ಟವಾಗಿ ಸೇರದಿರುವವರು ನಾನು ಯೋಜನೆ ಸೇರುವುದಿಲ್ಲವೆಂದಾಗಲಿ ಅಥವಾ ತಮ್ಮ ನಿರ್ಣಯವನ್ನು ಮುಂದೂಡಿದ್ದೇವೆಂದಾಗಲಿ ಹೇಳಿದ್ದಾರೆಂದು ನಾನು ಈ ಹಂತದಲ್ಲಿ ಹೇಳಲಾರೆ.

**ಶ್ರೀ ರಾಜ್ ಬಹದ್ದೂರ್:** ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ, ಈಗ ಭರಿಸಲಾಗುವ ವೆಚ್ಚ ಮತ್ತು ಈವರೆಗೆ ಭರಿಸಲಾಗುತ್ತಿದ್ದ ವೆಚ್ಚಗಳ ನಡುವಿನ ವ್ಯತ್ಯಾಸವೇನು?

**ಡಾ. ಅಂಬೇಡ್ಕರ್:** ಹೋಲಿಸಲು ಯಾವುದೇ ಆಧಾರವಿಲ್ಲ. ಏಕೆಂದರೆ ಈ ಮೊದಲು ಅಂಥ ಏಜೆನ್ಸಿಯೇ ಇರಲಿಲ್ಲ.

**ಶ್ರೀ ರಾಜ್ ಬಹದ್ದೂರ್:** ಸ್ಥಳೀಯ ಸಾಲಿಸಿಟರ್‌ಗಳ ಮತ್ತು ಏಜೆಂಟರ ಅಭಿಪ್ರಾಯವನ್ನು ಪಡೆದು ಕೊಳ್ಳಲಾಗಿದೆಯೆ ಅಥವಾ ಇಲ್ಲವೆ?

**ಡಾ. ಅಂಬೇಡ್ಕರ್:** ಅದರ ಅಗತ್ಯವಿಲ್ಲ. ನಾವು ಸರ್ಕಾರಗಳ ಅಭಿಪ್ರಾಯಗಳನ್ನು ಪಡೆದುಕೊಂಡಿದ್ದೇವೆ.

## ೧೯

# *ಮುಸ್ಲಿಂ ವೈಯಕ್ತಿಕ ಕಾನೂನುಗಳು

**೫೬೧. ಡಾ. ಎಂ.ಎಂ. ದಾಸ್:** ಕಾನೂನು ಮಂತ್ರಿಗಳು ಈ ವಿಷಯಗಳನ್ನು ತಿಳಿಸುವರೆ

(ಎ) ಮುಸ್ಲಿಂ ವೈಯಕ್ತಿಕ ಕಾನೂನುಗಳು (ಶರಿಯತ್) ಅನ್ವಯ ಅಧಿನಿಯಮ ೧೯೩೭ ಜಾರಿಯಲ್ಲಿಲ್ಲದ

* ಪಿ.ಡಿ. ಸಂ.೬ ಭಾಗ–೧, ೨ ಡಿಸೆಂಬರ್ ೧೯೫೦, ಪು. ೫೩೬

ಭಾರತೀಯ ಒಕ್ಕೂಟದ ರಾಜ್ಯಗಳಾವುವು:

(ಬಿ) ಭಾರತೀಯ ಒಕ್ಕೂಟದ ಮುಸ್ಲಿಮರಿಗೆ ಅದೇ ವೈಯಕ್ತಿಕ ಕಾನೂನುಗಳು, ಎಂದರೆ ಶರಿಯತ್ ಅನ್ವಯವಾಗುತ್ತದೆಯೆ?

(ಸಿ) ಸರ್ಕಾರವು ಕೂಚ್–ಬಿಹಾರ್‌ನ ಮುಸ್ಲಿಮರಿಂದ ಮನವಿಯನ್ನೇನಾದರೂ ಸ್ವೀಕರಿಸಿದೆಯೆ ಅಥವಾ ಪಶ್ಚಿಮ ಬಂಗಾಳ ಸರ್ಕಾರವು ಅವರ ಹಾಲಿ ವೈಯಕ್ತಿಕ ಕಾನೂನುಗಳಿಗೆ ಬದಲಾಗಿ ಶರಿಯತ್‌ನ್ನು ಜಾರಿಗೊಳಿಸುವ ಮುನ್ನ ಅವರ ಅಭಿಪ್ರಾಯವನ್ನು ಖಚಿತಪಡಿಸಿಕೊಂಡಿದೆಯೆ?

**ಕಾನೂನು ಮಂತ್ರಿಗಳು (ಡಾ.ಅಂಬೇಡ್ಕರ್):** (ಎ) ಮತ್ತು (ಬಿ) –೧೯೩೭ರ ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಅನ್ವಯ ಅಧಿನಿಯಮವು ಭಾಗ 'ಬಿ' ರಾಜ್ಯಗಳಲ್ಲಿ ಮತ್ತು ಪಶ್ಚಿಮ ಬಂಗಾಳದಲ್ಲಿ ವಿಲೀನಗೊಂಡ ಕೂಚ್–ಬಿಹಾರ್ ಪ್ರದೇಶದಲ್ಲಿ ಜಾರಿಯಲ್ಲಿಲ್ಲ. ಅದು ಭಾರತದ ಉಳಿದೆಡೆ ಜಾರಿಯಲ್ಲಿದೆ. ಕೂಚ್–ಬಿಹಾರ್‌ಗೆ ಸಂಬಂಧಪಟ್ಟಂತೆ ೧೯೩೭ರ ಅಧಿನಿಯಮವನ್ನು ಆ ಪ್ರದೇಶದಲ್ಲಿ ಜಾರಿಗೊಳಿಸಲು ಈ ಸದನದ ಮುಂದೆ ಬಾಕಿ ಇರುವ ಕೂಚ್–ಬಿಹಾರ್ (ಕಾನೂನುಗಳ ವಿಲೀನ) ವಿಧೇಯಕದ ಕಲಮು ೩ರಲ್ಲಿ ಉಪಬಂಧವನ್ನು ಕಲ್ಪಿಸಲಾಗಿದೆ.

ಭಾಗ "ಬಿ' ರಾಜ್ಯಗಳಲ್ಲಿ ಮುಸ್ಲಿಮರಿಗೆ, ಸಾಮಾನ್ಯವಾಗಿ ಶರಿಯತ್ ಅನ್ವಯವಾಗುತ್ತಿದ್ದು, ಅದು ಸ್ಥಾಪಿತ ಸಂಪ್ರದಾಯ ಅಥವಾ ರೂಢಿ ಅಥವಾ ಸ್ಥಳೀಯ ಕಾನೂನುಗಳಿಗೆ ಒಳಪಟ್ಟಿದೆ.

(ಸಿ) ನನಗೆ ತಿಳಿದಂತೆ, ಪಶ್ಚಿಮ ಬಂಗಾಳ ಸರ್ಕಾರವು ಕೂಚ್–ಬಿಹಾರ್‌ನಲ್ಲಿನ ಮುಸ್ಲಿಮರಿಗೆ ಅನ್ವಯವಾಗುವ ವೈಯಕ್ತಿಕ ಕಾನೂನನ್ನು ಮಾರ್ಪಡಿಸಲು ಏನನ್ನೂ ಮಾಡಿಲ್ಲ. ಕೂಚ್–ಬಿಹಾರ್ (ಕಾನೂನುಗಳ ವಿಲೀನ) ವಿಧೇಯಕವು ಈ ಸದನದಿಂದ ಅಂಗೀಕಾರವಾಗಿ ಜಾರಿಗೆ ಬಂದ ನಂತರ, ಸರ್ಕಾರವು, ಮುಂದೆ ಸೂಕ್ತ ಪರಿಗಣನೆಯ ನಂತರ, ೧೯೩೭ರ ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಅನ್ವಯ ಅಧಿನಿಯಮವನ್ನು, ಕೂಚ್ ಬಿಹಾರ್‌ನಲ್ಲಿ ಈ ವಿಧೇಯಕದ ಕಲಮು ೩(೨) ರ ಮೇರೆಗೆ ಜಾರಿಗೊಳಿಸುವುದು.

**ಡಾ. ಎಸ್.ಎಂ. ದಾಸ್:** ಪಶ್ಚಿಮ ಬಂಗಾಳ ಸರ್ಕಾರವು ಉದ್ದೇಶಿಸಿರುವ ಬದಲಾವಣೆಯ ಬಗ್ಗೆ ಕೂಚ್–ಬಿಹಾರ್ ಮುಸ್ಲಿಮರ ಅಭಿಪ್ರಾಯವನ್ನು ಪಡೆದುಕೊಳ್ಳುವುದು ಅಗತ್ಯ ಮತ್ತು ಯುಕ್ತ ಎಂದು ಕಾನೂನು ಮಂತ್ರಿಗಳು ಭಾವಿಸಿದ್ದಾರೆಯೆ?

**ಡಾ. ಅಂಬೇಡ್ಕರ್:** ಇದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಬಿಟ್ಟದ್ದು.

**ಶ್ರೀ ಶ್ಯಾಮನಂದನ್ ಸಹಾಯ್:** ಸಂಸತ್ತಿನ ಮುಂದೆ ಮುಸ್ಲಿಂ ಸಂಹಿತೆಯನ್ನು ಮಂಡಿಸುವ ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿದೆಯೆ?

**ಡಾ. ಅಂಬೇಡ್ಕರ್:** ಇಲ್ಲ.

**ಶ್ರೀ ತ್ಯಾಗಿ:** ಭಾರತದಲ್ಲಿ ಮುಸ್ಲಿಂ ಕಾನೂನನ್ನು ನಿಯಂತ್ರಿಸಲು ಮತ್ತು ಮುಸ್ಲಿಮರಲ್ಲಿ ಪ್ರಚಲಿತವಿರುವ ಬಹುಪತ್ನಿತ್ವ ಪದ್ಧತಿಗೆ ಸಂಬಂಧಪಟ್ಟಂತೆ ಸುಧಾರಣೆಗಳನ್ನು ಜಾರಿಗೊಳಿಸಲು ಕಾನೂನು ತರುವ ಉದ್ದೇಶವೇನಾದರೂ ಇದೆಯೆ?

**ಮಾನ್ಯ ಸಭಾಧ್ಯಕ್ಷರು:** ಈ ಪ್ರಶ್ನೆಗೆ ಈಗಾಗಲೇ ಉತ್ತರ ನೀಡಿದ್ದಾರೆ.

**ಶ್ರೀ ತ್ಯಾಗಿ:** ಹಿಂದಿನ ಮುಸ್ಲಿಂ ಕಾನೂನಿನಲ್ಲಿ ಸುಧಾರಣೆಗಳನ್ನು ಜಾರಿಗೊಳಿಸುವ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೆ ಎಂಬುದನ್ನು ನಾವು ತಿಳಿಯಬೇಕಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಮುಸ್ಲಿಂ ಸಂಹಿತೆ ಜಾರಿಗೊಳಿಸುವ ಉದ್ದೇಶವಿಲ್ಲ. ಅದೇ ಮಂತ್ರಿಗಳು ಹೇಳಿದ್ದು: ಅದು ಎಲ್ಲ ಅಂಶಗಳನ್ನು ಒಳಗೊಳ್ಳುತ್ತದೆ.

**ಶ್ರೀ ಎ.ಸಿ. ಗುಹಾ:** ನಮ್ಮ ಸಂವಿಧಾನದ ಪ್ರಕಾರ ಎಲ್ಲ ಸಮುದಾಯಗಳಿಗೆ ಏಕರೂಪದ ಸಿವಿಲ್ ಕಾನೂನು ಜಾರಿಗೊಳಿಸುವ ಪ್ರಸ್ತಾಪ ತರಲು ಸರ್ಕಾರ ಆಲೋಚಿಸಿದೆಯೆ?

**ಡಾ. ಅಂಬೇಡ್ಕರ್:** ವಿಷಯವೇನೋ ಹೃದ್ಗತವಾಗಿದೆ. ಆದರೆ ನನಗೆ ಸಮಯವಿಲ್ಲ.

# ೨೦

## *ಒಕ್ಕೂಟದ ವಿರುದ್ಧದ ಪ್ರಕರಣಗಳಲ್ಲಿ ವಕೀಲರ ನಿಯೋಜನೆ

**೭೦೯. ಶ್ರೀ ಕಜ್ಮಿ:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ನ್ಯಾಯಾಲಯಗಳಲ್ಲಿನ ಭಾರತದ ಒಕ್ಕೂಟದ ವಿರುದ್ಧದ ಪ್ರಕರಣಗಳ ವ್ಯವಹರಣೆಗಳಿಗೆ ವಕೀಲರನ್ನು ನಿಯೋಜಿಸುವ ಕಾರ್ಯವಿಧಾನ:

(ಬಿ) ನೀಡುವ ಸಂಭಾವನೆ; ಮತ್ತು

(ಸಿ) ಅಂಥ ನಿಯೋಜನೆಗಳ ಬಗ್ಗೆ ಭಾರತದ ಅಟಾರ್ನಿ ಜನರಲ್, ರಾಜ್ಯದ ಅಡ್ವೊಕೇಟ್ ಜನರಲ್ ಅಥವಾ ಸ್ಥಳೀಯ ಸರ್ಕಾರದ ಪ್ಲೀಡರ್‌ಗಳೊಡನೆ ಸಮಾಲೋಚನೆ ನಡೆಸಲಾಗುವುದೆ? ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಭಾಗ ಎ ಎಲ್ಲಾ ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ಕಾನೂನು ವ್ಯವಹಾರವನ್ನು, ಪರಸ್ಪರ ಕರಾರಿನ ಮೇಲೆ ರಾಜ್ಯ ಸರ್ಕಾರಗಳು ಸಾಮಾನ್ಯವಾಗಿ ನಿರ್ವಹಿಸುತ್ತವೆ ಮತ್ತು ರಾಜ್ಯದ ಕಾನೂನು ಸ್ಮರಣಾಧಿಕಾರಿಗಳು ಮತ್ತು ಆತನ ಅಧೀನದಲ್ಲಿರುವ ಜಿಲ್ಲಾ ಸರ್ಕಾರಿ ಪ್ಲೀಡರ್‌ಗಳಂಥ ಇತರ ಕಾನೂನು ಅಧಿಕಾರಿಗಳು ನಿರ್ವಹಿಸುವರು. ಪ್ರೆಸಿಡೆನ್ಸಿ ಪಟ್ಟಣಗಳಾದ ಬಾಂಬೆ ಮತ್ತು ಕಲ್ಕತ್ತಗಳಲ್ಲಿ ಈ ಕೆಲಸವನ್ನು ನಿರ್ವಹಿಸಲು ನಮ್ಮ ಅಧಿಕಾರಿಗಳೇ ಇದ್ದಾರೆ. ರೈಲ್ವೆ ಮತ್ತು ಆದಾಯ ತೆರಿಗೆ ಇಲಾಖೆಗಳಂಥ ಕೆಲವೊಂದು ಇಲಾಖೆಗಳಲ್ಲಿ ನ್ಯಾಯಾಲಯದಲ್ಲಿನ ತಮ್ಮ ಪ್ರಕರಣಗಳನ್ನು ನೋಡಿಕೊಳ್ಳಲು ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಕೇಂದ್ರ ಸರ್ಕಾರವು ಭಾಗ 'ಎ' ರಾಜ್ಯಗಳಲ್ಲಿ ಎಲ್ಲ ಜಿಲ್ಲಾ ಸರ್ಕಾರಿ ಪ್ಲೀಡರ್‌ಗಳನ್ನು, ರೈಲ್ವೆಗೆ ಸಂಬಂಧಪಟ್ಟ ಪ್ರಕರಣಗಳನ್ನು ಹೊರತುಪಡಿಸಿ ಕೇಂದ್ರ ಸರ್ಕಾರದಿಂದ ಅಥವಾ ಅದರ ವಿರುದ್ಧದ ಯಾವುದೇ ದಾವೆಗಳಿಗೆ ಸಂಬಂಧಪಟ್ಟಂತೆ, ಸರ್ಕಾರದ ಪ್ಲೀಡರ್‌ಗಳಂತೆ ಕಾರ್ಯನಿರ್ವಹಿಸಲು ನೇಮಿಸಿರುತ್ತದೆ. ಭಾಗ 'ಬಿ' ರಾಜ್ಯಗಳಲ್ಲಿ ಇನ್ನು ಸ್ಥಾಯೀ ವ್ಯವಸ್ಥೆಯನ್ನು ಮಾಡಲಾಗಿಲ್ಲ, ಭಾಗ 'ಸಿ' ರಾಜ್ಯಗಳಲ್ಲಿ ಅವಶ್ಯ ಏರ್ಪಾಟುಗಳನ್ನು ಮಾಡಲು ಮುಖ್ಯ ಆಯುಕ್ತರಿಗೆ ಅಧಿಕಾರ ನೀಡಲಾಗಿದೆ.

(ಬಿ) ವಿಶೇಷ ದರಗಳನ್ನು ಒಪ್ಪಿಕೊಂಡ ಸಂದರ್ಭಗಳ ಹೊರತು ಕೇಂದ್ರ ಸರ್ಕಾರದ ಪ್ರಕರಣಗಳನ್ನು

---

* ಪಿ.ಡಿ. ಸಂ–೬, ಭಾಗ–೧, ೬ ಡಿಸೆಂಬರ್ ೧೯೫೦ ಪು–೯೪೪

ನಿರ್ವಹಿಸುವ ಸರ್ಕಾರಿ ಪ್ಲೀಡರ್‌ಗಳಿಗೆ ರಾಜ್ಯ ಸರ್ಕಾರಗಳು ತಮ್ಮ ಪರವಾಗಿ ಪ್ರಕರಣಗಳನ್ನು ನಿರ್ವಹಿಸಲು ಅವರನ್ನು ನೇಮಕ ಮಾಡಿಕೊಂಡಾಗ, ಅವರಿಗೆ ನೀಡಲಾದ ದರಗಳಂತೆಯೆ ಶುಲ್ಕಗಳನ್ನು ಪಾವತಿಸಲಾಗುವುದು.

(ಸಿ) ಪ್ರಶ್ನೆಯ ಭಾಗ (ಎ)ಯ ಉತ್ತರದಲ್ಲಿ ಹೇಳಿರುವಂತೆ, ಸಾಮಾನ್ಯ ನಿಯಮವೆಂಬಂತೆ ಜಿಲ್ಲಾ ಸರ್ಕಾರಿ ಪ್ಲೀಡರ್‌ಗಳು ಭಾಗ (ಎ) ರಾಜ್ಯಗಳ ಸರ್ಕಾರದ ವಿರುದ್ಧದ ಪ್ರಕರಣಗಳಲ್ಲಿ ಸರ್ಕಾರಿ ಪ್ಲೀಡರ್‌ಗಳಂತೆಯೂ, ಕಾರ್ಯನಿರ್ವಹಿಸುತ್ತಾರೆ. ಆದ್ದರಿಂದ ಅಂಥ ಪ್ಲೀಡರ್‌ಗಳನ್ನು ನೇಮಕ ಮಾಡಿಕೊಳ್ಳುವಲ್ಲಿ ಸಮಾಲೋಚನೆ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ.

# ೨೧

## *ಪರಿಶಿಷ್ಟ ಜಾತಿಯ ಪ್ರತಿನಿಧಿಗಳು

**೮೧೪. ಶ್ರೀ ಜಂಗ್ಡೆ:** ಕಾನೂನು ಸಚಿವರು, ಮಧ್ಯ ಪ್ರದೇಶದಿಂದ ಲೋಕಸಭೆಗೆ ಪರಿಶಿಷ್ಟ ಜಾತಿ ಸದಸ್ಯರ ಸಂಖ್ಯೆಯನ್ನು ೧೯೪೧ ರ ಜನಗಣತಿ ಆಧಾರದ ಮೇಲೆ ನಿರ್ಧರಿಸಲಾಗುವುದೆ ಎಂಬ ಬಗ್ಗೆ ತಿಳಿಸುವರೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಮಧ್ಯಪ್ರದೇಶ ಅಥವಾ ಈ ವಿಷಯವಾಗಿ ಭಾಗ 'ಎ' ಅಥವಾ ಭಾಗ 'ಬಿ' ರಾಜ್ಯಗಳಲ್ಲಿ ಲೋಕಸಭೆಯಲ್ಲಿ ಪರಿಶಿಷ್ಟ ಜಾತಿಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು ಸಂವಿಧಾನದ ಅನುಚ್ಛೇದ ೩೮೭ರ ಮೇರೆಗೆ ರಾಷ್ಟ್ರಪತಿಗಳು ಮಾಡಿದ ೧೯೫೦ರ ಸಂವಿಧಾನ (ಜನಸಂಖ್ಯೆ ನಿರ್ಧಾರಣೆ) ಆದೇಶದ ಉಪಬಂಧಗಳ ಮೇರೆಗೆ ಜನಗಣತಿ ಆಯುಕ್ತರು ಅಂದಾಜು ಮಾಡುವ ಜನಸಂಖ್ಯೆಯನ್ನು ಆಧರಿಸಿ ನಿರ್ಧರಿಸಲಾಗುವುದು. ೧ ಮಾರ್ಚಿ ೧೯೫೦ರಂದು ಇದ್ದಂತೆ ಜನಸಂಖ್ಯೆಯನ್ನು ಜನಗಣತಿ ಆಯುಕ್ತರು ಅಂದಾಜು ಮಾಡಿದ್ದು ಅದನ್ನು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. (ನೋಡಿ ದಿನಾಂಕ ೧೪ ಸೆಪ್ಟೆಂಬರ್ ೧೯೫೦ರ ವಿಶೇಷ ಗೆಜೆಟ್‌ನಲ್ಲಿನ ಗೃಹ ಮಂತ್ರಾಲಯದ ಅಧಿಸೂಚನೆ).

* ಪಿ.ಡಿ. ಸಂ.೬ ಭಾಗ–೧, ೧೧ ಡಿಸೆಂಬರ್ ೧೭೫೦ ಪು–೮೦೪

# ೨೨

# *ಪುನರ್‌ವಿಂಗಡಣಾ ಸಮಿತಿಯ ವರದಿಗಳು

**೮೧೭. ಶ್ರೀ ಡಿಯೋಗಿರಿಕರ್:** ಕಾನೂನು ಮಂತ್ರಿಗಳು ಈ ವಿಷಯಗಳ ಬಗೆಗೆ ತಿಳಿಸುವರೆ:

(ಎ) ಎಷ್ಟು ರಾಜ್ಯಗಳು ಪುನರ್‌ವಿಂಗಡಣಾ ಸಮಿತಿ ವರದಿಗಳನ್ನು ಸಲ್ಲಿಸಿವೆ?

(ಬಿ) ಈ ಮತಕ್ಷೇತ್ರಗಳನ್ನು ಹಾಗೆಯೇ ಅಂಗೀಕರಿಸಲಾಗುವುದೆ ಅಥವಾ ಬದಲಾವಣೆ ಮಾಡಲಾಗುವುದೆ? ಹಾಗಿದ್ದಲ್ಲಿ ಬದಲಾವಣೆಗಳನ್ನು ಯಾವಾಗ ಮತ್ತು ಯಾರು ಮಾಡುವರು.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳ ಮತಕ್ಷೇತ್ರಗಳ ಪುನರ್‌ವಿಂಗಡಣಾ ಪ್ರಸ್ತಾವನೆಗಳನ್ನು ಚುನಾವಣಾ ಆಯೋಗವು, ಪಶ್ಚಿಮ ಬಂಗಾಳದ ವಿಧಾನಸಭೆ ಪ್ರಸ್ತಾವನೆ ಹೊರತುಪಡಿಸಿ ಎಲ್ಲ ರಾಜ್ಯಗಳಿಂದ ಸ್ವೀಕರಿಸಿರುತ್ತದೆ. ಈ ಕೆಳಕಂಡ ರಾಜ್ಯಗಳ ಸಂಸತ್ತಿನ ಸಲಹಾ ಸಮಿತಿಗಳು ತಮ್ಮ ವರದಿಗಳನ್ನು ಕಳುಹಿಸಿಕೊಟ್ಟಿರುತ್ತವೆ.

ಅಸ್ಸಾಂ, ಬಾಂಬೆ, ಒರಿಸ್ಸಾ, ಹೈದರಾಬಾದ್, ತಿರವಾಂಕೂರ್, ಕೊಚ್ಚಿನ್, ಸೌರಾಷ್ಟ್ರ, ದೆಹಲಿ, ವಿಂಧ್ಯ ಪ್ರದೇಶ, ಭೂಪಾಲ್, ತ್ರಿಪುರ ಮತ್ತು ಮಣಿಪುರ.

(ಬಿ) ಮತಕ್ಷೇತ್ರಗಳ ಪುನರ್‌ವಿಂಗಡಣೆ ಮಾಡಿ ಹೊರಡಿಸುವ ಆದೇಶವನ್ನು ಮಾಡುವ ಕಾರ್ಯ ವಿಧಾನವನ್ನು ೧೯೫೦ರ ಜನತಾ ಪ್ರಾತಿನಿಧ್ಯ ಅಧಿನಿಯಮದ ಪ್ರಕರಣ ೧೩ ಒಳಗೊಂಡಿದೆ. ಚುನಾವಣಾ ಆಯೋಗವು ಪ್ರತಿ ರಾಜ್ಯಕ್ಕೆ ಸಂಬಂಧಪಟ್ಟಂತೆ ರಚಿಸಲಾಗಿರುವ ಪುನರ್‌ವಿಂಗಡಣಾ ಸಲಹಾ ಸಮಿತಿಗಳೊಂದಿಗೆ ಸಮಾಲೋಚಿಸಿ, ಆ ರಾಜ್ಯದಲ್ಲಿನ ಮತಕ್ಷೇತ್ರಗಳನ್ನು ಪುನರ್ ವಿಂಗಡಣೆ ಮಾಡುವ ಬಗ್ಗೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ, ಅಂಥ ಪುನರ್‌ವಿಂಗಡಣಾ ಆದೇಶ ಹೊರಡಿಸಲು ರಾಷ್ಟ್ರಪತಿಗಳಿಗೆ ಸಲ್ಲಿಸುವರು; ಪುನರ್‌ವಿಂಗಡಣಾ ಸಲಹಾ ಸಮಿತಿಗಳ ಪ್ರಸ್ತಾವನೆಗಳನ್ನು ತಿದ್ದುವ ಅಥವಾ ಬದಲಾಯಿಸುವ ಮುಕ್ತ ಅಧಿಕಾರ ಚುನಾವಣಾ ಆಯೋಗಕ್ಕೆ ಇರುತ್ತದೆ. ರಾಷ್ಟ್ರಪತಿಗಳು ಕೂಡ ಚುನಾವಣಾ ಆಯೋಗಕ್ಕೆ ಕಳುಹಿಸಿಕೊಟ್ಟಿರುವ ಪ್ರಸ್ತಾವನೆಗಳನ್ನು ತಿದ್ದುಪಡಿ ಅಥವಾ ಬದಲಾವಣೆ ಮಾಡಬಹುದು. ರಾಷ್ಟ್ರಪತಿಗಳು ಮಾಡುವ ಅಂಥ ಪ್ರತಿಯೊಂದು ಆದೇಶವು ಸಂಸತ್ತಿನ ಮುಂದೆ ಮಂಡಿಸಿದಾಗ ಅದು ಮಾಡುವ ಮಾರ್ಪಾಡಿಗೂ ಒಳಪಟ್ಟಿರುತ್ತದೆ.

* ಪಿ.ಡಿ. ಸಂ. ೬ ಭಾಗ–೧, ೧೧ ಡಿಸೆಂಬರ್ ೧೯೫೦ ಪು. ೮೦೫

# ೨೩

# *ಮಹಾ ಚುನಾವಣೆಗಳು

೧೦೫೨. **ಪ್ರೊ॥ ಎಸ್.ಎನ್. ಮಿಶ್ರ:** ಕಾನೂನು ಮಂತ್ರಿಗಳು ಈ ವಿಷಯಗಳ ಬಗೆಗೆ ತಿಳಿಸುವರೆ?

(ಎ) ಮುಂದಿನ ಚುನಾವಣೆಗಳಲ್ಲಿ ಸರ್ಕಾರವು ಭರಿಸಲಿರುವ ಅಂದಾಜು ವೆಚ್ಚ ಎಷ್ಟು ?

(ಬಿ) ಏಪ್ರಿಲ್– ಮೇ ನಲ್ಲಿ ಚುನಾವಣೆಗಳನ್ನು ನಡೆಸುವಂತೆ ಎಷ್ಟು ಮನವಿಗಳನ್ನು ಸರ್ಕಾರವು ಸ್ವೀಕರಿಸಿದೆ ಮತ್ತು ಎಷ್ಟು ಅದಕ್ಕೆ ವಿರುದ್ಧವಾಗಿವೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಶ್ರೀ ದೇಶಬಂಧುಗುಪ್ತ ಅವರು ಕೇಳಿದ ನಕ್ಷತ್ರ ಗುರುತಿನ ಪ್ರಶ್ನೆ ಸಂಖ್ಯೆ ೧೩೪ರ ಭಾಗ (ಇ) ಗೆ ನಾನು ೨೦ ನವೆಂಬರ್ ೧೯೫೦ರಂದು ನೀಡಿದ ಉತ್ತರದ ಕಡೆ ಗಮನ ಸೆಳೆಯಲಾಗಿದೆ.

(ಬಿ) ಲಭ್ಯವಿರುವ ಮಾಹಿತಿ ಪ್ರಕಾರ ಒಟ್ಟಾರೆ ೧೧ ಮನವಿಗಳನ್ನು ಸ್ವೀಕರಿಸಿದ್ದು ಈ ಪೈಕಿ ೧೦ ಮನವಿಗಳು ೧೯೫೧ರ ಏಪ್ರಿಲ್–ಮೇನಲ್ಲಿ ಚುನಾವಣೆಗಳನ್ನು ನಡೆಸಲು ವಿರುದ್ಧವಾಗಿವೆ. ಒಂದು ಮನವಿಯು ನವೆಂಬರ್–ಡಿಸೆಂಬರ್ ೧೯೫೧ಕ್ಕೆ ಚುನಾವಣೆಗಳನ್ನು ಮುಂದೂಡುವುದಕ್ಕೆ ವಿರುದ್ಧವಾಗಿದೆ.

**ಪ್ರೊ॥ ಎಸ್.ಎನ್. ಮಿಶ್ರ:** ಚುನಾವಣೆಗಳನ್ನು ೧೯೫೧ರ ನವೆಂಬರ್–ಡಿಸೆಂಬರ್‌ಗೆ ಮುಂದೂಡುವುದಕ್ಕೆ ಪ್ರಮುಖ ಕಾರಣಗಳೇನು?

**ಶ್ರೀ ದ್ವಿವೇದಿ:** ಸರ್ಕಾರವು ಪಕ್ಷದ ಮತ್ತು ಧಾರ್ಮಿಕ ಬಾವುಟಗಳನ್ನು ಚುನಾವಣಾ ಸಮಯದಲ್ಲಿ ನಿಷೇಧಿಸುತ್ತದೆಯೆ?

**ಡಾ. ಅಂಬೇಡ್ಕರ್:** ನ್ಯಾಯಯುತ ಚುನಾವಣೆಗಳನ್ನು ನಡೆಸಲು ಅವಶ್ಯಕವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು.

**ಶ್ರೀ ಜೋಚಿಮ್ ಆಳ್ವ:** ಚುನಾವಣೆಗಳನ್ನು ಕ್ರಮವಾದ ಮಾರ್ಗದಲ್ಲಿ ನಡೆಸಲು ಮತ್ತು ದುರಾಚಾರ ತಪ್ಪಿಸಲು ಯಾವುದಾದರೂ ಪ್ರಚಾರ ತಂತ್ರವನ್ನು ಸರ್ಕಾರವು ರೂಪಿಸಿದೆಯೆ?

**ಡಾ. ಅಂಬೇಡ್ಕರ್:** ಇದನ್ನು ರಾಜಕೀಯ ಪಕ್ಷಗಳಿಗೆ ಬಿಟ್ಟುಬಿಡುವುದು ಸೂಕ್ತವೆನಿಸುತ್ತದೆ ನನಗೆ.

**ಶ್ರೀ ಜೈ ನಾರಾಯಣ್ ವ್ಯಾಸ್:** ಚುನಾವಣಾ ವೆಚ್ಚಗಳನ್ನು ಭರಿಸಲು ವಿವಿಧ ರಾಜ್ಯಗಳ ಮೇಲೆ ಸರ್ಕಾರವು ಲೆವಿ ವಿಧಿಸುವುದೆ?

**ಡಾ. ಅಂಬೇಡ್ಕರ್:** ಹೌದು, ಚುನಾವಣಾ ವೆಚ್ಚಗಳನ್ನು ಯಾವ ಅನುಸಾರದಲ್ಲಿ ಭರಿಸಬೇಕೆಂಬ ಬಗ್ಗೆ ಕೇಂದ್ರ ಮತ್ತು ವಿವಿಧ ರಾಜ್ಯಗಳ ನಡುವೆ ಈಗಾಗಲೇ ಒಂದು ಕರಾರು ಮಾಡಿಕೊಳ್ಳಲಾಗಿದೆ.

**ಡಾ. ಎಂ.ಎಂ. ದಾಸ್:** ಯಾವುದಾದರೂ ರಾಜ್ಯವು ನಿಯೋಗವನ್ನು ಕಳುಹಿಸಿಕೊಟ್ಟಿದೆಯೆ ಮತ್ತು ಹಾಗಿದ್ದಲ್ಲಿ, ಅದರ ಫಲಿತಾಂಶವೇನು?

**ಡಾ. ಅಂಬೇಡ್ಕರ್:** ನಿಯೋಗ ಏತಕ್ಕೆ?

---

* ಪಿ.ಡಿ. ಸಂಖ್ಯೆ ಸಂ.೬ ಭಾಗ–೧, ೧೯ ಡಿಸೆಂಬರ್ ೧೯೫೦ ಪು. ೧೦೩೪

ಟಿ.೪೧೯೩–೬೫

**ಡಾ. ಎಂ.ಎಂ. ದಾಸ್:** ಚುನಾವಣೆಗಳನ್ನು ಮುಂದೂಡಲು.

**ಡಾ. ಅಂಬೇಡ್ಕರ್:** ಯಾವುದೇ ನಿಯೋಗ ಬಂದಂತೆ ನನಗೆ ನೆನಪಿಲ್ಲ.

**ಶ್ರೀ ಆರ್. ವೇಲಾಯುಧನ್:** ಚುನಾವಣೆಗಳ ಮುಂದೂಡಿಕೆಯ ವಿರುದ್ಧ ಪ್ರತಿಭಟಿಸಿರುವ ಏಕೈಕ ರಾಜ್ಯ ಯಾವುದು?

**ಡಾ. ಅಂಬೇಡ್ಕರ್:** ನಾನು ಮನವಿಗಳು ರಾಜ್ಯಗಳಿಂದ ಬಂದಿವೆ ಎಂದು ಹೇಳಲಿಲ್ಲ. ಅವು ವ್ಯಕ್ತಿಗಳಿಂದಲೂ ಇರಬಹುದು; ರಾಜ್ಯಗಳಿಂದಲೇ ಬರಬೇಕಿಲ್ಲ. ಚುನಾವಣೆಗಳನ್ನು ಮುಂದೂಡುವುದರ ವಿರುದ್ಧ ಮನವಿ ಕಳುಹಿಸಿದವರ ಹೆಸರು ನನಗೆ ತಿಳಿಯದು.

**ಶ್ರೀ ಬಿ.ಕೆ.ಪಿ ಸಿನ್ಹಾ:** ಚುನಾವಣೆಗಳು ಹತ್ತಿರ ಬರುತ್ತಿರುವುದರಿಂದ ಆತಂಕಗೊಂಡಿದ್ದ ಕೆಲವು ಪಕ್ಷಗಳು ಈಗ ಚುನಾವಣೆಗಳನ್ನು ಮುಂದೂಡುವ ಮೂಲಕ ಸರ್ಕಾರವು ತುಂಬ ಹಾನಿಯನ್ನುಂಟು ಮಾಡಿದೆ ಎಂಬ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುತ್ತಿರುವುದು ನಿಜವೆ?

**ಡಾ. ಅಂಬೇಡ್ಕರ್:** ಈ ಬಗ್ಗೆ ನನ್ನ ಸ್ನೇಹಿತರಿಗೆ ನನಗಿಂತಲೂ ಹೆಚ್ಚಿಗೆ ತಿಳಿದಿರುವಂತಿದೆ.

## ೨೪

# *ಅಲ್ಪಾವಧಿ ನೋಟೀಸು ಪ್ರಶ್ನೆಗಳು ಮತ್ತು ಉತ್ತರಗಳು ದೆಹಲಿಯ ಗ್ರಾಮೀಣ ಪ್ರದೇಶಗಳಿಗೆ ಮತದಾರರ ಪಟ್ಟಿಗಳು

**ಶ್ರೀ ಜೆ.ಆರ್. ಕಾಂಬ್ಳೆ:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ?

(ಎ) ದೆಹಲಿಯ ಮುಖ್ಯ ಆಯುಕ್ತರು, ಮುಂದಿನ ಚುನಾವಣೆಗಳಿಗೆ ದೆಹಲಿ ರಾಜ್ಯದ ಗ್ರಾಮೀಣ ಪ್ರದೇಶಗಳ ಮತದಾರರ ಪಟ್ಟಿಗಳನ್ನು ಉರ್ದುವಿನಲ್ಲಿ ಮಾತ್ರ ಪ್ರಕಟಿಸಲಾಗುವುದೆಂದು ಆದೇಶಿಸಿರುವ ಬಗ್ಗೆ ೨೦ ಮಾರ್ಚ ೧೯೫೧ ರ ಹಿಂದೂಸ್ತಾನ್ ಟೈಮ್ಸ್‌ನ ಇವಿನಿಂಗ್ ನ್ಯೂಸ್‌ನಲ್ಲಿ ಮತ್ತು ೨೧ ಮಾರ್ಚ ೧೯೫೧ರ ಇಂಡಿಯನ್ ನ್ಯೂಸ್ ಕ್ರಾನಿಕಲ್‌ನಲ್ಲಿ ಸುದ್ದಿ ಪ್ರಕಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

(ಬಿ) ಈ ಮೇಲಿನ ಸುದ್ದಿಯು ನಿಜವಾಗಿದ್ದಲ್ಲಿ ಒಕ್ಕೂಟದ ಆಡಳಿತ ಭಾಷೆಯಾದ ಹಿಂದಿಯಲ್ಲಿ ಮೇಲೆ ಹೇಳಿದ ಪಟ್ಟಿಗಳನ್ನು ಪ್ರಕಟಿಸದಿರಲು ಕಾರಣಗಳೇನು; ಮತ್ತು

(ಸಿ) ಭಾಗ 'ಸಿ' ರಾಜ್ಯಗಳಲ್ಲಿನ ಮುಂದಿನ ಮಹಾಚುನಾವಣೆಗಳ ಮತದಾರರ ಪಟ್ಟಿಗಳ ಭಾಷೆ ಕುರಿತು ಸರ್ಕಾರದ ನೀತಿ ಏನು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಎ ಮತ್ತು ಬಿ ಪ್ರಶ್ನೆಯಲ್ಲಿ ಉಲ್ಲೇಖಿಸಿರುವ ಎರಡು ಸುದ್ದಿಗಳು ದೆಹಲಿ ಜಿಲ್ಲಾ ಮಂಡಳಿಯ ಚುನಾವಣೆಗಳಿಗೆ ಸಂಬಂಧಿಸಿದ್ದು ಅವುಗಳಿಗೂ ಸಂಸತ್ತಿನ ಮಹಾ ಚುನಾವಣೆಗಳಿಗೂ ಏನೂ ಸಂಬಂಧವಿಲ್ಲ. ಮುಂಬರುವ ದೆಹಲಿಯ ಲೋಕಸಭಾ ಚುನಾವಣೆಗಳಿಗೆ

---

* ಪಿ.ಡಿ. ಸಂ.೭, ಭಾಗ–೧, ೨ ಏಪ್ರಿಲ್ ೧೯೫೦. ಪು. ೨೭೮೮

ಟಿ.೪೮೧೯೩–೬೫ಎ

ಸಂಬಂಧಿಸಿದಂತೆ ಮತದಾರರ ಪಟ್ಟಿಗಳನ್ನು ಇಂಗ್ಲಿಷ್, ಹಿಂದಿ ಮತ್ತು ಉರ್ದು ಹೀಗೆ ಮೂರು ಭಾಷೆಗಳಲ್ಲಿ ಪ್ರಕಟಿಸಲಾಗಿದೆ.

(ಸಿ) ಜನತಾ ಪ್ರಾತಿನಿದ್ಯ (ಮತದಾರರ ಪಟ್ಟಿಗಳ ಸಿದ್ಧತೆ) ನಿಯಮಗಳು ೧೯೫೦ರ ನಿಯಮ ೬ರ ಮೇರೆಗೆ ರಾಜ್ಯಕ್ಕೆ ಸಂಬಂಧಪಟ್ಟ ಮತದಾರರ ಪಟ್ಟಿಗಳನ್ನು ಯಾವ ಭಾಷೆಯಲ್ಲಿ ತಯಾರಿಸಬೇಕೆಂಬುದು ಚುನಾವಣಾ ಆಯೋಗದಿಂದ ನಿರ್ಧರಿಸಲ್ಪಡಬೇಕು. ಸಾಮಾನ್ಯವಾಗಿ ಈ ಪಟ್ಟಿಗಳನ್ನು ದೇಶಾದ್ಯಂತ ಪ್ರಾದೇಶಿಕ ಭಾಷೆಗಳಲ್ಲಿ ಮಾತ್ರವೇ ಸಿದ್ಧಪಡಿಸಬೇಕು. ಆದರೆ ಕೆಲವೊಂದು ರಾಜ್ಯಗಳಲ್ಲಿನ ದ್ವಿಭಾಷಾ ಪ್ರದೇಶಗಳಲ್ಲಿ ಪಟ್ಟಿಗಳನ್ನು ಹೆಚ್ಚುವರಿ ಭಾಷೆಯಲ್ಲಿಯೂ ಸಿದ್ಧಪಡಿಸುವಂತೆ ಆಯೋಗವು ನಿರ್ದೇಶನ ನೀಡಿದೆ.

**ಡಾ. ಜಿ.ಆರ್. ಕಪೂರ್:** ಮುಂದಿನ ಮಹಾಚುನಾವಣೆಗಳಿಗೆ ದೆಹಲಿಯ ಗ್ರಾಮೀಣ ಪ್ರದೇಶಗಳ ಮತದಾರರ ಪಟ್ಟಿಗಳನ್ನು ಇಂಗ್ಲಿಷ್‌ನಲ್ಲಿಯೂ ಪ್ರಕಟಿಸಲಾಗುವುದೆಂದು ಭಾವಿಸಬಹುದೆ?

**ಡಾ. ಅಂಬೇಡ್ಕರ್:** ಯಾವ ಗ್ರಾಮೀಣ ಪ್ರದೇಶ ಮತ್ತು ಯಾವ ಉದ್ದೇಶಕ್ಕೆ?

**ಶ್ರೀ ಜೆ.ಆರ್. ಕಪೂರ್:** ದೆಹಲಿ ಗ್ರಾಮೀಣ ಪ್ರದೇಶಗಳಲ್ಲಿ– ಮಹಾಚುನಾವಣೆಗಳಿಗೆ.

**ಡಾ. ಅಂಬೇಡ್ಕರ್:** ನಾನು ಈಗಾಗಲೇ ಹೇಳಿದಂತೆ ಸಂಸತ್ತಿನ ಮಹಾ ಚುನಾವಣೆಗಳಿಗೆ ಅವುಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಮುದ್ರಿಸಲಾಗುವುದು. ಸಂಯುಕ್ತ ಪ್ರದೇಶ ಇರುವೆಡೆಗಳಲ್ಲಿ ಹೆಚ್ಚುವರಿ ಭಾಷೆಯಲ್ಲಿಯೂ ಪ್ರಕಟಿಸಲಾಗುವುದು.

**ಶ್ರೀ ಜೆ.ಆರ್. ಕಪೂರ್:** ಸಂಸತ್ತಿನ ಮುಂದಿನ ಮಹಾಚುನಾವಣೆಗಳಿಗೆ ಸಂಬಂಧಪಟ್ಟಂತೆ ದೆಹಲಿಯ ಗ್ರಾಮೀಣ ಪ್ರದೇಶಗಳ ಮತದಾರರ ಪಟ್ಟಿಗಳನ್ನು ಹಿಂದಿ ಮತ್ತು ಉರ್ದು ಜೊತೆಗೆ ಇಂಗ್ಲಿಷಿನಲ್ಲಿಯೂ ಪ್ರಕಟಿಸಲಾಗುತ್ತದೆ. ಹಾಗಿದ್ದಲ್ಲಿ ಮಾನ್ಯ ಮಂತ್ರಿಗಳು ದೆಹಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ ಇಂಗ್ಲಿಷ್ ಬಲ್ಲವರು ಎಷ್ಟು ಜನರಿದ್ದಾರೆಂದು ತಿಳಿಸುವರೆ?

**ಡಾ. ಅಂಬೇಡ್ಕರ್:** ಅದನ್ನು ಇಂಗ್ಲಿಷ್‌ನಲ್ಲಿ ಮಾತ್ರ ಪ್ರಕಟಿಸುತ್ತಿಲ್ಲ; ಮೂರು ಬಾಷೆಗಳಲ್ಲಿ ಪ್ರಕಟಿಸಲಾಗುತ್ತಿದೆ. ನಾನು ಈಗಾಗಲೇ ಹೇಳಿದಂತೆ ಮುಂಬರುವ ಲೋಕಸಭಾ ಮಹಾಚುನಾವಣೆಗಳಿಗೆ ದೆಹಲಿಯಲ್ಲಿನ ಮತದಾರರ ಪಟ್ಟಿಗಳನ್ನು ಇಂಗ್ಲಿಷ್, ಹಿಂದಿ ಮತ್ತು ಉರ್ದು ೩ ಭಾಷೆಗಳಲ್ಲಿ ಪ್ರಕಟಿಸಲಾಗಿದೆ. ಯಾರೇ ಮತದಾರರು ತನಗೆ ತಿಳಿಯುವ ಯಾವುದೇ ಪಟ್ಟಿಯನ್ನು ನೋಡಬಹುದು.

**ಶ್ರೀ ಜೆ.ಆರ್. ಕಪೂರ್:** ಕಳೆದ ಮಾಹಾಚುನಾವಣಾ ಸಮಯದಲ್ಲಿ ದೆಹಲಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರಾದೇಶಿಕ ಭಾಷೆ ಯಾವುದಿತ್ತು?

**ಡಾ. ಅಂಬೇಡ್ಕರ್:** ನನಗೆ ಅಷ್ಟು ಪರಿಚಯವಿಲ್ಲ; ಬಹುಶಃ ಉರ್ದು ಇರಬಹುದು. ಈಗ ಸುಧಾರಣೆಯಾಗಿದೆ.

**ಶ್ರೀ ಹುಸೇನ್ ಇಮಾಮ್**: ದೆಹಲಿ ರಾಜ್ಯದಲ್ಲಿ ಗ್ರಾಮೀಣ ಮತ್ತು ನಗರ ಎಂಬ ಪ್ರತ್ಯೇಕ ಮತಕ್ಷೇತ್ರಗಳಲ್ಲದಿರುವುದು ನಿಜವೆ?

**ಡಾ. ಅಂಬೇಡ್ಕರ್:** ನನಗೆ ಖಚಿತವಿಲ್ಲ. ಈ ಸದನವು ನೇಮಕ ಮಾಡಿದ ವಿವಿಧ ಸಮಿತಿಗಳು ರೂಪಿಸಿರುವ ಮತಕ್ಷೇತ್ರಗಳನ್ನು ನಾನು ನೋಡಿಲ್ಲ.

**ಶ್ರೀ ಸೇಠ್ ಗೋವಿಂದ್ ದಾಸ್:** ಸ್ಥಳೀಯ ಭಾಷೆಗಳಲ್ಲಲ್ಲದೆ ಇತರ ಯಾವ ಭಾಷೆಗಳಲ್ಲಿ ಪಟ್ಟಿಗಳನ್ನು ವಿವಿಧ ಪ್ರದೇಶಗಳಲ್ಲಿ ಪ್ರಕಟಿಸಲಾಗುವುದು?

**ಡಾ. ಅಂಬೇಡ್ಕರ್:** ಈ ಬಗ್ಗೆ ನೋಟೀಸ್ ನೀಡಬೇಕು. ನನಗೆ ನೆನಪಿರುವಷ್ಟರ ಮಟ್ಟಿಗೆ ಈಗಿನ ಪ್ರಶ್ನೆಯಂಥದೇ ಶ್ರೀ ಆಂಥೋನಿಯವರ ಒಂದು ಪ್ರಶ್ನೆಗೆ ಉತ್ತರಿಸುವಾಗ ಬಾಂಬೆಯ ಮಟ್ಟಿಗೆ ಅವುಗಳನ್ನು ತಯಾರಿಸುವ ಉದ್ದೇಶಕ್ಕಾಗಿ ಇಂಗ್ಲಿಷನ್ನು ಬಳಸಲಾಗಿತ್ತು ಎಂದು ಹೇಳಿದ್ದೆ. ಮೈಸೂರು ರಾಜ್ಯದಲ್ಲಿನ ಬೆಂಗಳೂರಿನಂಥ ಇತರ ಪ್ರದೇಶಗಳ ಸಂದರ್ಭದಲ್ಲಿ ಸದ್ಯಕ್ಕೆ ನನಗೆ ಖಚಿತವಿಲ್ಲ; ನೆನಪಿನಿಂದ ಮಾತಾಡುತ್ತಿದ್ದೇನೆ.

## ೨೫

## *ಕೇಂದ್ರ ಮತ್ತು ರಾಜ್ಯ ಕಾನೂನುಗಳ ಪರಿಶೀಲನೆ

**ಪಂಡಿತ್ ಹೆಚ್.ಬಿ. ಭಾರ್ಗವ:** ಭಾರತ ಸರ್ಕಾರವು, ಭಾರತದ ಸಂವಿಧಾನದ ಬೆಳಕಿನಲ್ಲಿ, ಎಲ್ಲ ಕೇಂದ್ರೀಯ ಮತ್ತು ರಾಜ್ಯದ ಕಾನೂನುಗಳನ್ನು, ಸಂವಿಧಾನದ ಭಾಗ IIIಕ್ಕೆ ಮತ್ತು ಇತರ ಉಪಬಂಧಗಳಿಗೆ ಸಂಗತವಲ್ಲದ ಹಾಲಿ ಕಾನೂನುಗಳ ಉಪಬಂಧಗಳನ್ನು ತಿದ್ದುಪಡಿ ಮಾಡಲು, ಮಾರ್ಪಡಿಸಲು ಅಥವಾ ನಿರಶನಗೊಳಿಸುವ ದೃಷ್ಟಿಯಿಂದ ಪರಿಶೀಲಿಸಲು ಮತ್ತು ಪರೀಕ್ಷಿಸಲು ಕಾನೂನು ಆಯೋಗ ಅಥವಾ ಯಾವುದೇ ಇತರ ಸೂಕ್ತ ವ್ಯವಸ್ಥೆಯನ್ನು ರಚಿಸಿದೆಯೇ ಅಥವಾ ರಚಿಸುವ ಉದ್ದೇಶ ಹೊಂದಿದೆಯೆ ಎಂದು ಕಾನೂನು ಮಂತ್ರಿಗಳು ತಿಳಿಸುವರೆ? ಇಲ್ಲದಿದ್ದಲ್ಲಿ ಏಕೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಇಲ್ಲ, ಸರ್. ಸಂವಿಧಾನದ ಅನುಚ್ಛೇದ ೩೭೨ರ ಮೇರೆಗೆ, ಕೇಂದ್ರದ ಮತ್ತು ರಾಜ್ಯದ ಕಾನೂನುಗಳನ್ನು ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿಸಲು ಅವುಗಳನ್ನು ಹೊಂದಾಣಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಸರ್ಕಾರವು, ಅನುಚ್ಛೇದ ೧೩ (೧)ರ ಕಾರಣವಾಗಿ, ಕಾನೂನಿಗೇ ಯಾವುದೇ ಉಪಬಂಧವನ್ನು, ಹೊಂದಾಣಿಕೆ ಮೂಲಕ ರದ್ದುಗೊಳಿಸಲಾದ ೧೯೦೦ರ ಪಂಜಾಬ್ ಭೂಪರಭಾರೆ ಅಧಿನಿಯಮದ ಪ್ರಕರಣದಂತೆ, ಭಾಗ IIIರ ಯಾವುದೇ ಉಪಬಂಧಗಳು ಮತ್ತು ಅಂಥ ಕಾನೂನಿನ ನಡುವೆ ಸ್ಪಷ್ಟ ಅಸಾಂಗತ್ಯವಿಲ್ಲದ ಹೊರತು, ಬಿಟ್ಟುಬಿಡುವುದು ಅಥವಾ ಮಾರ್ಪಾಟು ಮಾಡುವುದು ಯುಕ್ತವಲ್ಲವೆಂಬ ದೃಷ್ಟಿಕೋನವನ್ನು ತಳೆದಿದೆ.

**ಪಂಡಿತ್ ಎಂ.ಬಿ. ಭಾರ್ಗವ:** ರಾಜ್ಯ ಮತ್ತು ಕೇಂದ್ರೀಯ ಕಾನೂನುಗಳು ಸದ್ಯದ ಸಂವಿಧಾನಕ್ಕೆ ಅನುಗುಣವಾಗಿವೆ ಎಂಬ ಪ್ರಶ್ನೆಯನ್ನು ಸರ್ಕಾರ ಪರಿಶೀಲಿಸಿದೆಯೆ? ಈ ಪ್ರಸ್ತಾವದ ಬಗ್ಗೆ ಸರ್ಕಾರ ಗಮನಹರಿಸಲು ಉದ್ದೇಶಿಸಿದೆಯೆ?

**ಡಾ. ಅಂಬೇಡ್ಕರ್:** ಸರ್, ಈ ವಿಷಯವನ್ನು ಪ್ರಶ್ನೋತ್ತರಗಳ ಸಂದರ್ಭದಲ್ಲಿ ಸ್ವೀಕರಿಸಬಹುದೆಂದು ನನಗೆ ಅನ್ನಿಸುತ್ತಿಲ್ಲ. ಅನುಚ್ಛೇದ ೧೩ (೧)ಕ್ಕೆ ಅನುಗುಣವಾಗಿ, ಅನುಚ್ಛೇದ ೩೭೨ರ ಉದ್ದೇಶವನ್ನು ಸಾಧಿಸಲು ಅಳವಡಿಸಿಕೊಳ್ಳಬೇಕಾದ ವಿವಿಧ ಮಾರ್ಗೋಪಾಯಗಳನ್ನು ಕುರಿತು ಚರ್ಚಿಸುವ ಅಗತ್ಯವಿದೆ.

**ಪಂಡಿತ್ ಎಂ.ಬಿ. ಭಾರ್ಗವ:** ಸರ್, ಕಾನೂನುಗಳ ಸಾಗರದಿಂದ ಒಂದು ನಿರ್ದಿಷ್ಟ ಅಧಿನಿಯಮವನ್ನು

---

* ಪಿ.ಡಿ. ಸಂ. ೭ ಭಾಗ–೧, ೭ ಏಪ್ರಿಲ್ ೧೯೫೧, ಪು.೨೮೨೦

ಏಕೆ ಆಯ್ಕೆ ನೋಡಿಕೊಳ್ಳಲಾಯಿತು ಮತ್ತು ಆ ಕಾನೂನನ್ನು ಯಾವ ನಿರ್ದಿಷ್ಟ ಮಾನದಂಡದ ಮೇಲೆ ಆಯ್ಕೆ ಮಾಡಲಾಯಿತು?

**ಡಾ. ಅಂಬೇಡ್ಕರ್:** ಸಂವಿಧಾನದೊಂದಿಗೆ ಸಾಂಗತ್ಯವಿಲ್ಲದ ಕೆಲವೊಂದು ಕಾನೂನುಗಳಿವೆ ಎಂಬುದನ್ನು ಒಪ್ಪಿದರೂ ಸಾಗರದಷ್ಟು ಕಾನೂನುಗಳಿವೆ ಎಂಬ ನನ್ನ ಮಾನ್ಯ ಸದಸ್ಯರ ಮಾತನ್ನು ನಾನು ಒಪ್ಪುವುದಿಲ್ಲ; ಇದೊಂದು ಕ್ಲಿಷ್ಟಕರ ವಿಷಯ ಎಂಬುದನ್ನು ನನ್ನ ಸ್ನೇಹಿತರು ನೆನಪಿಸಿಕೊಳ್ಳಬೇಕು. ಒಂದು ಕಾನೂನು ನಿಜಕ್ಕೂ ಅಸಮಂಜಸವಾಗಿದೆಯೆ ಅಥವಾ ಅದನ್ನು ಉಳಿಸಿಕೊಳ್ಳಬೇಕೆ ಎಂಬ ವಿಷಯದ ಬಗ್ಗೆ ಸರ್ಕಾರವು ನಿರ್ದಿಷ್ಟ ತೀರ್ಮಾನಕ್ಕೆ ಬರಬೇಕು. ಈ ಒಂದು ಕಾನೂನನ್ನು ಅತ್ಯಂತ ಎಚ್ಚರಿಕೆಯಿಂದ ಕಾನೂನು ಮಂತ್ರಾಲಯದಲ್ಲಿ ಮತ್ತು ಅಟಾರ್ನಿ ಜನರಲ್ ಹಾಗೂ ಪಂಜಾಬ್ ಸರ್ಕಾರದ ಕಾನೂನು ಸ್ಮರಣಾಧಿಕಾರಿ ಅವರಿಂದ ಪರಿಶೀಲಿಸಲ್ಪಟ್ಟಿದೆ. ಇದನ್ನು ಮೂಲಭೂತ ಹಕ್ಕುಗಳ ದೃಷ್ಟಿಯಿಂದ ಉಳಿಸಿಕೊಳ್ಳಲಾಗದು ಎಂಬ ತೀರ್ಮಾನಕ್ಕೆ ಬರಲಾಗಿದೆ. ಈ ವಿಷಯವನ್ನು ಹೊಂದಾಣಿಕೆ ಮೂಲಕ ವ್ಯವಹರಿಸಬಹುದೆಂಬ ಬಗ್ಗೆ ಸರ್ಕಾರಕ್ಕೆ ಯಾವುದೇ ಸಂಶಯವಿಲ್ಲ.

## ೨೬

# *ಮತದಾರರ ಪಟ್ಟಿಗಳು

**೨೮೨೪. ಶ್ರೀ ಸೋನಾವಣೆ:** ಕಾನೂನು ಮಂತ್ರಿಗಳು ಉತ್ತರಿಸುವರೆ:

(ಎ) ಬಾಂಬೆ ರಾಜ್ಯದಲ್ಲಿ ಮತದಾರರ ಪಟ್ಟಿಗಳನ್ನು ಹಿಂದಿಯಲ್ಲಿ ಮುದ್ರಿಸಿರುವುದು ನಿಜವೆ?

(ಬಿ) ಕೇಂದ್ರವು, ಬಾಂಬೆ ರಾಜ್ಯಕ್ಕೆ ಈಗಾಗಲೇ ಹಿಂದಿಯಲ್ಲಿ ಮುದ್ರಿಸಿರುವುದರ ಜೊತೆಗೆ, ಮತದಾರರ ಪಟ್ಟಿಯನ್ನು ಇಂಗ್ಲಿಷ್‌ನಲ್ಲಿ ಮುದ್ರಿಸಲು ನಿರ್ದೇಶಿಸಿರುವುದು ನಿಜವೆ;

(ಸಿ) ಹಾಗಿದ್ದಲ್ಲಿ, ಅಂಥ ನಿರ್ದೇಶನವನ್ನು ಏಕೆ ನೀಡಲಾಯಿತು? ಮುದ್ರಣದ ಹೆಚ್ಚುವರಿ ವೆಚ್ಚ ಎಷ್ಟು? ಅದನ್ನು ಯಾರು ಭರಿಸುವರು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಬಾಂಬೆ ರಾಜ್ಯದ ಮತದಾರರ ಪಟ್ಟಿಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಪ್ರಾದೇಶಿಕ ಭಾಷೆಗಳಲ್ಲಿ, ಅಂದರೆ ಗುಜರಾತಿ, ಮರಾಠಿ ಮತ್ತು ಕನ್ನಡದಲ್ಲಿ ಮುದ್ರಿಸಲಾಗಿದೆ. ದ್ವಿಭಾಷಾ ಜಿಲ್ಲೆಗಳಾದ ಬೆಳಗಾಂ ಮತ್ತು ಸತಾರಾ ದಕ್ಷಿಣದಂಥ ಜಿಲ್ಲೆಗಳಲ್ಲಿ ಪಟ್ಟಿಗಳನ್ನು ಮರಾಠಿ ಮತ್ತು ಕನ್ನಡದಲ್ಲಿ ಮುದ್ರಿಸಲಾಗಿದೆ. ಬಾಂಬೆ ನಗರದಲ್ಲಿ ಪಟ್ಟಿಗಳನ್ನು ದೇವನಾಗರಿ ಭಾಷೆಯಲ್ಲಿ ಮುದ್ರಿಸಲಾಗಿದೆ

(ಬಿ) ಮತ್ತು (ಸಿ) : ಮಾನ್ಯ ಸದಸ್ಯರ ಗಮನವನ್ನು ೧೩ ಫೆಬ್ರವರಿ ೧೯೫೧ರಂದು ಶ್ರೀ ಕಾಮತ್ ಅವರ ನಕ್ಷತ್ರ ಗುರುತಿನ ಪ್ರಶ್ನೆ ೧೪೮೯ ಭಾಗ (ಬಿ) ನಲ್ಲಿ ನಾನು ನೀಡಿರುವ ಉತ್ತರದ ಕಡೆ ಸೆಳೆಯಬಯಸುತ್ತೇನೆ.

ಬಾಂಬೆ ಸರ್ಕಾರಕ್ಕೆ ಸಂಬಂಧಪಟ್ಟ ಮತದಾರರ ಪಟ್ಟಿಗಳನ್ನು ಇಂಗ್ಲಿಷ್‌ನಲ್ಲಿ ಮುದ್ರಿಸಿದ ವೆಚ್ಚ ರೂ. ಆರು ಲಕ್ಷ ಎಂದು ಅಂದಾಜು ಮಾಡಲಾಗಿದೆ. ಅದನ್ನು ಬಾಂಬೆ ಸರ್ಕಾರ ಮತ್ತು ಭಾರತ

---

* ಪಿ.ಡಿ. ಸಂ. ೭, ಭಾಗ–೧, ೭ ಏಪ್ರಿಲ್ ೧೯೫೧, ಪು. ೨೯೫೭

ಸರ್ಕಾರಗಳು, ಮತದಾರರ ಪಟ್ಟಿಗಳ ಸಿದ್ಧತೆಗೆ ಸಂಬಂಧಿಸಿದ ಯಾವುದೇ ಇತರ ವೆಚ್ಚಗಳನ್ನು ಹಂಚಿಕೊಂಡಂತೆಯೇ, ಹಂಚಿಕೊಳ್ಳುವುದು.

**ಶ್ರೀ ಸೋನಾವಣೆ:** ಬಾಂಬೆ ನಗರದಲ್ಲಿ ದೇವನಾಗರಿಯಲ್ಲಿ ಪಟ್ಟಿಗಳ ಮುದ್ರಣ ಪೂರ್ಣಗೊಂಡ ಎಷ್ಟು ದಿನಗಳು ಅಥವಾ ತಿಂಗಳ ನಂತರ ಇಂಗ್ಲಿಷ್‌ನಲ್ಲಿ ಪಟ್ಟಿಗಳನ್ನು ಮುದ್ರಿಸಲು ನಿರ್ದೇಶನ ನೀಡಲಾಯಿತು?

**ಡಾ. ಅಂಬೇಡ್ಕರ್:** ಈ ಪ್ರಶ್ನೆಗೆ ನಾನು ನಿಖರವಾಗಿ ಉತ್ತರ ಹೇಳಲಾರೆ. ಬಾಂಬೆ ಸರ್ಕಾರ ಅನೇಕ ಜನರಿಗೆ ಹಿಂದಿ ಪಟ್ಟಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಚುನಾವಣಾ ಆಯುಕ್ತರಿಗೆ ದೂರು ಬಂದ ನಂತರ ನಿರ್ದೇಶನವನ್ನು ನೀಡಲಾಗಿದೆ.

**ಶ್ರೀ ಸೋನಾವಣೆ:** ಈ ನಿರ್ದೇಶನವನ್ನು ಕೂಡಲೇ ನೀಡಿ, ಪಟ್ಟಿಗಳ ಮುದ್ರಣಕ್ಕೆ ಆರು ಲಕ್ಷ ನಷ್ಟವಾಗುವುದನ್ನು ಉಳಿಸಬಹುದಿತ್ತಲ್ಲವೆ?

**ಡಾ. ಅಂಬೇಡ್ಕರ್:** ಖಂಡಿತಾ ಸಾಧ್ಯವಿತ್ತು; ಯಾವುದೂ ಅಸಾಧ್ಯವಲ್ಲ.

**ಶ್ರೀ ಸೋನಾವಣೆ:** ಹಣದ ಅಪವ್ಯಯಕ್ಕೆ ಯಾರು ಜವಾಬ್ದಾರರು?

**ಡಾ. ಅಂಬೇಡ್ಕರ್:** ಹಣದ ಅಪವ್ಯಯವೇನೂ ಆಗಿಲ್ಲ. ಏನೇ ಆದರೂ ಪಟ್ಟಿಯನ್ನು ಇಂಗ್ಲಿಷ್‌ನಲ್ಲಿ, ಏಕಕಾಲದಲ್ಲಿಯಾದರೂ, ಮೊದಲೇ ಅಥವಾ ಅನಂತರ, ಮುದ್ರಿಸಲೇಬೇಕಾಗಿದ್ದಿತು.

**ಶ್ರೀ ಸೋನಾವಣೆ:** ದೇವನಾಗರಿ ಹಾಗೂ ಇಂಗ್ಲಿಷ್ ಪಟ್ಟಿಗಳನ್ನು ಏಕಕಾಲದಲ್ಲಿ ಮುದ್ರಿಸಿದ್ದಲ್ಲಿ ವೆಚ್ಚ ಕಡಿಮೆಯಾಗುತ್ತಿರಲಿಲ್ಲವೆ?

**ಡಾ. ಅಂಬೇಡ್ಕರ್:** ಇಲ್ಲ; ಅದ್ಹೇಗೆ ಸಾಧ್ಯ?

**ಶ್ರೀ ಕಾಮತ್:** ಈಗಾಗಲೇ ಪ್ರಕಟಿಸಲಾಗಿರುವ ಪಟ್ಟಿಗಳಿಗೆ ಸಂಬಂಧಿಸಿದಂತೆ ಎಷ್ಟು ಕ್ಲೇಮು ಮತ್ತು ಆಕ್ಷೇಪಗಳನ್ನು ಸಲ್ಲಿಸಲಾಗಿದೆ ಮತ್ತು ಎಷ್ಟು ಕ್ಲೇಮು ಮತ್ತು ಆಕ್ಷೇಪಗಳನ್ನು ಇತ್ಯರ್ಥಪಡಿಸಲಾಗಿದೆ ಎಂಬ ಬಗ್ಗೆ ಬಾಂಬೆ ಮತ್ತು ಇತರ ರಾಜ್ಯಗಳಿಂದ ವರದಿಗಳನ್ನು ಸ್ವೀಕರಿಸಲಾಗಿದೆ?

**ಡಾ. ಅಂಬೇಡ್ಕರ್:** ಸರ್, ಇದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ.

**ಮಾನ್ಯ ಉಪ ಸಭಾಧ್ಯಕ್ಷರು:** ಹೌದು, ಅದು ಸರಿ.

**ಶ್ರೀ ಸಾರಂಗಧರ ದಾಸ್:** ಬಿಹಾರದಲ್ಲಿನ ಸಿಂಗಭೂಮ್ ಜಿಲ್ಲೆ ದ್ವಿಭಾಷಾ ಪ್ರದೇಶವಾಗಿದ್ದು, ಪಟ್ಟಿಗಳನ್ನು ಹಿಂದಿಯ ಜೊತೆಗೆ ಒರಿಯಾದಲ್ಲೇಕೆ ಪ್ರಕಟಿಸಿಲ್ಲವೆಂದು ಮಂತ್ರಿಗಳು ತಿಳಿಸುವರೆ?

**ಡಾ. ಅಂಬೇಡ್ಕರ್:** ಬಹುಶಃ ಅದು ಆ ಪ್ರದೇಶದ ಪ್ರಾದೇಶಿಕ ಭಾಷೆಯಲ್ಲದಿರಬಹುದು.

## ೨೭

# *ಸರ್ವೋಚ್ಚ ನ್ಯಾಯಾಲಯದಲ್ಲಿ ವಕೀಲರು

೩೨೩೩. **ಶ್ರೀಮತಿ ದುರ್ಗಾಬಾಯಿ:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ತಮ್ಮನ್ನು

* ಪಿ.ಡಿ. ಸಂ.೭, ಭಾಗ–೧, ೧೮ ಏಪ್ರಿಲ್ ೧೯೫೧, ಪು. ೩೩೧೫

ಪ್ರತಿನಿಧಿಸಲು ವಕೀಲರನ್ನು ನಿಯೋಜಿಸಿಕೊಳ್ಳಲು ಅನುಸರಿಸುವ ವಿಧಾನ ಯಾವುದು?

(ಬಿ) ಮಂತ್ರಾಲಯದ ಅಧೀನದ ಯಾವ ಏಜೆನ್ಸಿಗೆ ಸರ್ಕಾರದ ಪರವಾಗಿ ವಕೀಲರನ್ನು ನಿಯೋಜಿಸುವ ಕೆಲಸವನ್ನು ವಹಿಸಿಕೊಡಲಾಗಿದೆ?

(ಸಿ) ವಿವಿಧ ಪ್ರಕರಣಗಳಲ್ಲಿ ಸರ್ಕಾರವನ್ನು ಪ್ರತಿನಿಧಿಸಲು ವಕೀಲರನ್ನು ಯಾವುದಾದರೂ ಪಟ್ಟಿಯಿಂದ ಆಯ್ಕೆಮಾಡಲಾಗುವುದೆ?

(ಡಿ) ಅಂಥ ವಕೀಲರಿಗೆ ಯಾವ ಆಧಾರದ ಮೇಲೆ ಶುಲ್ಕವನ್ನು ನಿಗಧಿಪಡಿಸಲಾಗುವುದು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಭಾರತ ಸರ್ಕಾರವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವಾಗಲೂ ಅಟಾರ್ನಿ ಜನರಲ್‌ರವರು ಪ್ರತಿನಿಧಿಸುವರು. ಅವರಿಗೆ ಸಹಾಯಕನಾಗಿ, ಅವರೊಂದಿಗೆ ಸಮಾಲೋಚಿಸಿ, ಪ್ರಕರಣದ ಸ್ವರೂಪ ಮತ್ತು ಮಹತ್ವವನ್ನು ಗಣನೆಗೆ ತೆಗೆದುಕೊಂಡು, ಆಯ್ಕೆ ಮಾಡಲಾಗುವ ಕಿರಿಯ ವಕೀಲಮಂಡಲಿ ಇರುವುದು. ನಿರ್ದಿಷ್ಟ ವಕೀಲರನ್ನು ನಿಯೋಜಿಸುವ ಬಗ್ಗೆ ರಾಜ್ಯ ಸರ್ಕಾರಗಳ ಸೂಚನೆಗಳನ್ನು ಪಾಲಿಸಲಾಗುವುದು.

(ಬಿ) ಕಾನೂನು ಮಂತ್ರಾಲಯದ ಕೇಂದ್ರೀಯ ಏಜೆನ್ಸಿ ಶಾಖೆಯ ಪ್ರಭಾರಿಯಾಗಿರುವ ಸರ್ಕಾರಿ ಏಜೆಂಟರು ಭಾರತ ಸರ್ಕಾರದ ಪರವಾಗಿ, ಆ ಶಾಖೆಗೆ ತಮ್ಮ ಕಾರ್ಯವನ್ನು ವಹಿಸಿಕೊಟ್ಟಿರುವಂಥ ರಾಜ್ಯ ಸರ್ಕಾರಗಳ ವಕೀಲರನ್ನು ನಿಯೋಜಿಸುವರು.

(ಸಿ) ಕೇಂದ್ರೀಯ ಏಜೆನ್ಸಿ ಶಾಖೆಯಲ್ಲಿ ವಕೀಲರ ಪಟ್ಟಿಯನ್ನು ನಿರ್ವಹಿಸಿರುವುದಿಲ್ಲ. ಸರ್ಕಾರಿ ಏಜೆಂಟರು ಸರ್ವೋಚ್ಚ ನ್ಯಾಯಾಲಯದ ಮುಂದೆ ವಕೀಲವೃತ್ತಿ ಮಾಡುವ ವಕೀಲರ ಪಟ್ಟಿಯನ್ನು ಇಟ್ಟುಕೊಂಡಿರುತ್ತಾರೆ ಉತ್ತರದ ಭಾಗ (ಎ) ನಲ್ಲಿ ಹೇಳಿರುವಂತೆ ವಕೀಲರನ್ನು ನಿಯೋಜಿಸುವರು.

(ಡಿ) ವಕೀಲರಿಗೆ ನೀಡುವ ಶುಲ್ಕವು, ಸಹಜವಾಗಿ, ನಿಯೋಜಿತ ಕೌನ್ಸಿಲರ ಜ್ಯೇಷ್ಠತೆ ಮತ್ತು ಸ್ಥಾನಮಾನವನ್ನು ಹಾಗೂ ಪ್ರಕರಣದ ಮಹತ್ವ ಮತ್ತು ಕ್ಲಿಷ್ಟತೆಯನ್ನು ಆಧರಿಸಿ ವ್ಯತ್ಯಾಸವಾಗುತ್ತದೆ. ಈ ಪ್ರಶ್ನೆಗೆ ಇನ್ನು ನಿಖರವಾದ ಉತ್ತರವನ್ನು ನೀಡಲು ಸಾಧ್ಯವಾಗದಿರುವುದಕ್ಕೆ ವಿಷಾದಿಸುತ್ತೇನೆ.

**ಶ್ರೀಮತಿ ದುರ್ಗಾಬಾಯಿ:** ಮಾನ್ಯ ಮಂತ್ರಿಗಳು, ನಿಯೋಜಿಸುವ ಉದ್ದೇಶಕ್ಕಾಗಿ ಇರಿಸಿಕೊಂಡಿರುವ ಎಲ್ಲ ಕಿರಿಯ ವಕೀಲರು ಮತ್ತು ಅವರಿಗೆ ಪಾವತಿಸಲಾಗುವ ಶುಲ್ಕಕ್ಕೆ ಆಧಾರವೇನು ಎಂಬ ಬಗ್ಗೆ ಮಾಹಿತಿ ನೀಡುವರೆ?

**ಡಾ. ಅಂಬೇಡ್ಕರ್:** ಕೇಂದ್ರ ಮತ್ತು ಕೇಂದ್ರ ಸರ್ಕಾರಗಳು ಸಾಮಾನ್ಯವಾಗಿ ನಿಯೋಜಿಸುವ ಹಿರಿಯರೆಂದರೆ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಶ್ರೀ ಇಂದ್ರಜಿತ್ ದುವಾ.

ಸಾಮಾನ್ಯವಾಗಿ ನಿಯೋಜಿಸಲಾಗುವ ಕಿರಿಯ ವಕೀಲರೆಂದರೆ

ಶ್ರೀ ಜಿ.ಎನ್. ಜೋಶಿ

ಶ್ರೀ ಎಸ್.ಎನ್. ಸಿಕ್ರಿ

ಶ್ರೀ ರಾಜೀಂದರ್ ಲಾಲ್

ಶ್ರೀ ಕೆ. ಸಿಂಗ್

ಶ್ರೀ ಹೆಚ್.ಜೆ. ಉಮ್ರಿಗರ್

ಶ್ರೀ ಆರ್. ಗಣಪತಿ ಅಯ್ಯರ್

ಶ್ರೀ ಬಿ. ಸೇನ್

ಶ್ರೀ ಸಿ.ಆರ್. ಪಟ್ಟಾಭಿರಾಮನ್
ಶ್ರೀ ಎಸ್.ಎನ್. ಮುಖರ್ಜಿ
ಶ್ರೀಮತಿ ದುರ್ಗಾಬಾಯಿ
ಶ್ರೀ ಎಸ್.ಬಿ. ಜೇತ್
ರಾಯ್ ಬಹಾದ್ದೂರ್ ನಾನಕ್ ಚಂದ್
ಶ್ರೀ ಎ. ಎಸ್. ಸೇಠಿ
ಸರ್ದಾರ್ ಕರ್ತಾರ್ ಸಿಂಗ್ ಚಾವ್ಲಾ
ಶ್ರೀ ಜಿ.ಸಿ. ಮಾಥುರ್
ಶ್ರೀ ಎ.ಎನ್. ಕಿರ್ಪಾಲ್
ಶ್ರೀ ಎ.ಎನ್. ಟಿಕ್ಕು
ಶ್ರೀ ಎಂ.ಕೆ. ಪಿಳ್ಳೈ
ಶ್ರೀ ಸಿ.ಎಂ. ನಾಥ್ವಾನಿ

ಕಿರಿಯ ವಕೀಲರಿಗೆ ಸಾಮಾನ್ಯವಾಗಿ ನಿಗದಿಪಡಿಸುವ ಶುಲ್ಕಗಳು ಈ ಮುಂದಿನಂತಿರುತ್ತವೆ:

ವಿಶೇಷ ಅರ್ಜಿಯನ್ನು ವಿರೋಧಿಸಲು ಹತ್ತು ಚಿನ್ನದ ಮೊಹರುಗಳು. ಪ್ರಕರಣದ ಸ್ವರೂಪಕ್ಕನುಸಾರವಾಗಿ, ಸಂವಿಧಾನದ ಅನುಚ್ಛೇದ ೩೨ರ ಮೇರೆಗೆ ಕ್ರಿಮಿನಲ್ ಅಪೀಲುಗಳಿಗೆ ಅಥವಾ ಅರ್ಜಿಗಳಿಗೆ ದಿನವೊಂದಕ್ಕೆ ಹತ್ತರಿಂದ ಹನ್ನೆರಡು ಚಿನ್ನದ ಮೊಹರು.

ಪ್ರಕರಣದ ಸ್ವರೂಪಕ್ಕನುಗುಣವಾಗಿ ಸಿವಿಲ್ ಅಪೀಲುಗಳಿಗೆ ದಿನವೊಂದಕ್ಕೆ ಹದಿನೈದರಿಂದ ಇಪ್ಪತ್ತು ಚಿನ್ನದ ಮೊಹರುಗಳು. ಮಹತ್ತ್ವದ ಪ್ರಶ್ನೆ ಒಳಗೊಂಡ ಪ್ರಕರಣಗಳಲ್ಲಿ ವಕೀಲರಿಗೆ ಹೆಚ್ಚಿನ ಶುಲ್ಕಗಳನ್ನು ಪಾವತಿಮಾಡಲಾಗಿದೆ. ಆದರೆ ಯಾವುದೇ ಪ್ರಕರಣದಲ್ಲಿ ನಲವತ್ತು ಚಿನ್ನದ ಮೊಹರುಗಳಿಗಿಂತಲೂ ಹೆಚ್ಚಾಗಿ ಪಾವತಿಸತಕ್ಕುದಲ್ಲ.

ರಾಜ್ಯ ಸರ್ಕಾರಗಳ ಪರವಾಗಿ ಅಟಾರ್ನಿ ಜನರಲ್ ಅವರಿಗೆ ಪ್ರಕರಣ ಕುರಿತು ಮಾಹಿತಿ ನೀಡಿದ ಸಂದರ್ಭದಲ್ಲಿ, ಅವರ ಶುಲ್ಕ ದಿನವೊಂದಕ್ಕೆ ೨೦೦ ಚಿನ್ನದ ಮೊಹರು. ಕೇಂದ್ರ ಸರ್ಕಾರದ ಪರವಾಗಿ, ಅವರು ಹಾಜರಾದಾಗ, ವಿರೋಧಿ ಪಕ್ಷದವರಿಂದ ವೆಚ್ಚಗಳನ್ನು ವಸೂಲಿ ಮಾಡಿದ ಪ್ರಕರಣಗಳ ಹೊರತು, ಶುಲ್ಕಗಳನ್ನು ವಿಧಿಸಲಾಗುವುದಿಲ್ಲ.

ರಾಜ್ಯ ಸರ್ಕಾರವೊಂದು ನೇರವಾಗಿ ಇತರ ವಕೀಲರನ್ನು ನಿಯೋಜಿಸಿಕೊಂಡ ಸಂದರ್ಭದಲ್ಲಿ ಅವರಿಗೆ ನೇರವಾಗಿ ಆ ಸರ್ಕಾರವೇ ಶುಲ್ಕವನ್ನು ಪಾವತಿಸುವುದು.

# ೨೮

## *ಕೂಚ್–ಬಿಹಾರ್ (ಜನಸಂಖ್ಯೆ)

೩೨೩೫. **ಶ್ರೀ ಎಸ್.ಸಿ. ಸಮಂತ:** ಕಾನೂನು ಮಂತ್ರಿಗಳು ಉತ್ತರಿಸುವರೆ:

(ಎ) ಪಶ್ಚಿಮ ಬಂಗಾಳದ ಕೂಚ್–ಬಿಹಾರ್‌ನಲ್ಲಿ ಮುಂಬರುವ ಮಹಾಚುನಾವಣೆಗೆ ಒಂದೊಂದು ಹಳ್ಳಿಯಲ್ಲಿ ಒಬ್ಬರು, ಇಬ್ಬರು ಅಥವಾ ಮೂರು ಮತದಾರರಿರುವ ಹಳ್ಳಿಗಳ ಹೆಸರು ಮತ್ತು ಹಳ್ಳಿಗಳ ಸಂಖ್ಯೆಯನ್ನು ತಿಳಿಸುವರೆ?

(ಬಿ) ೧೯೪೧ರ ಜನಗಣತಿಯ ಪ್ರಕಾರ ಆ ಹಳ್ಳಿಗಳಲ್ಲಿನ ಜನಸಂಖ್ಯೆ ಎಷ್ಟಿದ್ದಿತು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್): (ಎ) ಮತ್ತು (ಬಿ):** ಚುನಾವಣಾ ಆಯೋಗದಿಂದ ನನಗೆ ತಿಳಿದು ಬಂದಿರುವಂತೆ, ಮತದಾರರ ಪಟ್ಟಿಯಲ್ಲಿ ನಮೂದಾಗಿರುವ ೩ ಮತದಾರರಿಗಿಂತಲೂ ಹೆಚ್ಚಿಲ್ಲದ ೨೫ ಹಳ್ಳಿಗಳು ಕೂಚ್–ಬಿಹಾರ್‌ನಲ್ಲಿವೆ. ಈ ಹಳ್ಳಿಗಳ ಹೆಸರುಗಳು, ಪ್ರಾರಂಭಿಕ ಪ್ರಕಟಣೆ ಸಮಯದಲ್ಲಿ ಪಟ್ಟಿಗಳಲ್ಲಿ ನಮೂದಿಸಿದಂತೆ ಮತದಾರರ ಸಂಖ್ಯೆಯನ್ನು ಒಳಗೊಂಡ ತಃಖ್ತೆಯನ್ನು ಮಂಡಿಸಲಾಗಿದೆ. (ನೋಡಿ– ಅನುಬಂಧ XXII, ಪರಿಶಿಷ್ಟ ಸಂ.೧೯). ಈ ಹಳ್ಳಿಗಳ ಜನಸಂಖ್ಯೆ ವಿವರಗಳು ಇಲ್ಲ ಲಭ್ಯವಿಲ್ಲ. ಅದನ್ನು ಸ್ಥಳೀಯ ಪ್ರಾಧಿಕಾರಗಳಿಂದ ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಕ್ಲೇಮುಗಳನ್ನು ಸಲ್ಲಿಸುವ ಅವಧಿಯೂ ಕಳೆದ ಮಾರ್ಚ ೩೧ರಂದು ಮುಕ್ತಾಯಗೊಂಡಿದೆ. ಅಂಥ ಕೋಮುಗಳ ಆಧಾರದ ಮೇಲೆ ಮತದಾರರಿಂದ ನಮೂದಿಸಲ್ಪಟ್ಟ ವ್ಯಕ್ತಿಗಳ ಸಂಖ್ಯೆಯ ಬಗ್ಗೆ ಈವರೆಗೂ ಚುನಾವಣಾ ಆಯೋಗಕ್ಕೆ ಮಾಹಿತಿಯಿಲ್ಲ.

**ಶ್ರೀ ಎಸ್.ಸಿ. ಸಮಂತ:** ಈ ವಿಷಯವನ್ನು ಚುನಾವಣಾ ಆಯೋಗಕ್ಕೆ ಉಲ್ಲೇಖಿಸಿರುವುದು ನಿಜವೆ? ಹಾಗಿದ್ದಲ್ಲಿ, ಈ ವೇಳೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

**ಡಾ. ಅಂಬೇಡ್ಕರ್:** ನಾನು ಈಗಾಗಲೇ ಹೇಳಿದಂತೆ ವಿಷಯವನ್ನು ನಾವು ಖಚಿತವಾಗಿ ಸ್ಥಿತಿ ಏನೆಂಬುದನ್ನು ತಿಳಿಯಲು ಸ್ಥಳೀಯ ಸರ್ಕಾರಕ್ಕೆ ಹೇಳಿದ್ದೇವೆ. ಇತ್ತೀಚಿಗೆ ನಡೆದ ಗಲಭೆಗಳ ಕಾರಣಗಳಿಂದಾಗಿ, ಕೆಲವೊಂದು ಹಳ್ಳಿಗರು ಒಂದೆಡೆಯಿಂದ ಮತ್ತೊಂದೆಡೆಗೆ ಹೋಗಿರುವ ಸಾಧ್ಯತೆಯೂ ಇದೆ. ಕೆಲವು ಹಳ್ಳಿಗಳು ತಾಂತ್ರಿಕ ಭಾಷೆಯಲ್ಲಿ 'ಬೆಚೀರ' ಎನ್ನುವ ಹಳ್ಳಿಗಳಾಗಿವೆ.

**ಶ್ರೀ ಎಸ್.ಸಿ. ಸಮಂತ:** ಮಾನ್ಯ ಮಂತ್ರಿಗಳು ಈ ಹಳ್ಳಿಗಳ ಜನಸಂಖ್ಯೆಯ ಅಂಕಿಸಂಖ್ಯೆಗಳು ಲಭ್ಯವಾಗುತ್ತಿಲ್ಲವೆಂದು ತಿಳಿಸಿದರು; ಅಂದರೆ, ಕೂಚ್–ಬಿಹಾರ್ ಜನಗಣತಿ ಅಂಕಿಸಂಖ್ಯೆಗಳೇ ಇಲ್ಲವೆಂದು ತಿಳಿಯಲೆ?

**ಡಾ. ಅಂಬೇಡ್ಕರ್:** ನಾನು ನೋಡಿಲ್ಲ.

**ಶ್ರೀ ಕಾಮತ್:** ಈ ಹಳ್ಳಿಗಳಿಂದ ಸಲ್ಲಿಸಲಾದ ಕ್ಲೇಮುಗಳು ಮತ್ತು ಆಕ್ಷೇಪಣೆಗಳ ಬಗ್ಗೆ ವರದಿಗಳನ್ನು ಚುನಾವಣಾ ಆಯೋಗವು ಯಾವಾಗ ಸ್ವೀಕರಿಸುವುದೆಂದು ನಿರೀಕ್ಷಿಸಲಾಗಿದೆ? ಕನಿಷ್ಠ ವರದಿಯನ್ನಾದರೂ ಕೇಳಲಾಗಿದೆಯೆ?

---

* ಪಿ.ಡಿ. ಸಂ. ೭ ಭಾಗ–೧, ೧೮ ಏಪ್ರಿಲ್ ೧೯೫೧, ಪು. ೩೩೧೮

**ಡಾ. ಅಂಬೇಡ್ಕರ್:** ಸಾಮಾನ್ಯ ಕ್ರಮದಲ್ಲಿ ನಾನು ಹಾಗೇನೂ ಭಾವಿಸಲಾರೆ. ಏಕೆಂದರೆ, ಈ ವಿಷಯದಲ್ಲಿ ಕ್ಲೇಮುಗಳನ್ನು ನಿರ್ಣಯಿಸಲು ನೇಮಕ ಮಾಡಿರುವ ವ್ಯಕ್ತಿಗಳು ಇತ್ಯರ್ಥಪಡಿಸಲು ಇಡೀ ವಿಷಯವನ್ನು ಅವರಿಗೆ ಬಿಟ್ಟುಬಿಡಬೇಕು.

**ಶ್ರೀ ಎಸ್.ಸಿ. ಸಮಂತ:** ಕೂಚ್–ಬಿಹಾರ್‌ನಲ್ಲಿನ ಜನಸಂಖ್ಯೆಯ ವಿರಳತೆಯಿಂದಾಗಿ ಮುಂಬರುವ ಚುನಾವಣೆಗಳಲ್ಲಿ ಮತಕೇಂದ್ರಗಳಿಗೆ ಸಂಬಂಧಪಟ್ಟ ನಿಯಮ ಸಡಿಲಗೊಳಿಸುವುದನ್ನು ಸರ್ಕಾರವು ಪರಿಗಣಿಸುವುದೆ?

**ಡಾ. ಅಂಬೇಡ್ಕರ್:** ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

## ೨೯

## *ಮತದಾರರ ಪಟ್ಟಿಗಳು

೩೩೬೧. **ಶ್ರೀ ಕಾಮತ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಭಾಗ 'ಎ', ಭಾಗ 'ಬಿ' ಮತ್ತು ಭಾಗ 'ಸಿ' ರಾಜ್ಯಗಳಿಂದ ಆಯಾ ರಾಜ್ಯದ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಕ್ಲೇಮುಗಳು ಮತ್ತು ಆಕ್ಷೇಪಣೆಗಳ ಸಂಖ್ಯೆಯ ಬಗ್ಗೆ ವರದಿಗಳನ್ನು ಸ್ವೀಕರಿಸಲಾಗಿದೆಯೆ ಅಥವಾ ಕೇಳಲಾಗಿದೆಯೆ?

(ಬಿ) ಹಾಗಿದ್ದಲ್ಲಿ, ಪ್ರತಿ ರಾಜ್ಯದಲ್ಲಿ ಸಲ್ಲಿಸಲಾಗಿರುವ ಕ್ಲೇಮುಗಳ ಮತ್ತು ಆಕ್ಷೇಪಣೆಗಳ ಒಟ್ಟು ಸಂಖ್ಯೆ;

(ಸಿ) ಈವರೆಗೆ ಇತ್ಯರ್ಥಪಡಿಸಿರುವ ಅಂಥ ಕ್ಲೇಮು ಮತ್ತು ಆಕ್ಷೇಪಣೆಗಳ ಸಂಖ್ಯೆ; ಮತ್ತು

(ಡಿ) ಅನುಮತಿಸಿದ ಸಂಖ್ಯೆ ಮತ್ತು ಅನುಮತಿಸದವುಗಳ ಸಂಖ್ಯೆ ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ)ಯಿಂದ(ಡಿ)–

ಮಾಹಿತಿಯನ್ನು ಚುನಾವಣಾ ಆಯೋಗ ಸಂಗ್ರಹಿಸುತ್ತಿದೆ. ಸಕಾಲದಲ್ಲಿ ಅದನ್ನು ಸದನದಲ್ಲಿ ಮಂಡಿಸಲಾಗುವುದು.

**ಶ್ರೀ ಕಾಮತ್:** ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಎಲ್ಲ ರಾಜ್ಯಗಳಲ್ಲಿಯೂ ಒಂದೇ ದಿನಾಂಕವೆ ಅಥವಾ ಬೇರೆ ಬೇರೆ ಇದೆಯೆ?

**ಡಾ. ಅಂಬೇಡ್ಕರ್:** ನಾನು ಹೇಳಲಾರೆ; ಈ ಪ್ರಶ್ನೆಗೆ ನನಗೆ ಸೂಚನೆ ನೀಡಬೇಕು.

**ಶ್ರೀ ಕಾಮತ್:** ಕ್ಲೇಮು ಮತ್ತು ಆಕ್ಷೇಪಣೆಗಳನ್ನು ಕುರಿತ ಮಾಹಿತಿಯನ್ನು ಚುನಾವಣಾ ಆಯುಕ್ತರ ಕಚೇರಿಯಲ್ಲಿ ಯಾವಾಗ ಸ್ವೀಕರಿಸಲಾಗುವುದು?

**ಡಾ. ಅಂಬೇಡ್ಕರ್:** ಈ ವಿಷಯದಲ್ಲಿ ಯಾವುದೇ ಅನಗತ್ಯ ವಿಳಂಬವಾದೀತೆಂದು ನನಗೆ ಅನಿಸುವುದಿಲ್ಲ.

---

* ಪಿ.ಡಿ. ಸಂ.೭ ಭಾಗ–೧, ೨೧ ಏಪ್ರಿಲ್ ೧೯೫೧, ಪು. ೩೪೫೯

# ೩೦

## **ಮತಪೆಟ್ಟಿಗೆಗಳ ತಯಾರಿಕೆ

೩೩೫೫. **ಶ್ರೀ ಆರ್.ಸಿ. ಉಪಾಧ್ಯಾಯ: ಶ್ರೀ ಕಿಶೋರಿ ಮೋಹನ್ ತ್ರಿಪಾಠಿ ಅವರ ಪರವಾಗಿ :** ಕಾನೂನು ಮಂತ್ರಿಗಳು ಉತ್ತರಿಸುವರೆ:

(ಎ) ಮಹಾ ಚುನಾವಣೆಗಳಿಗಾಗಿ ಮತಪೆಟ್ಟಿಗೆ ತಯಾರಿಕೆ ಮತ್ತು ಮತ ಪತ್ರಗಳ ಮುದ್ರಣ ವಿಷಯದಲ್ಲಿ ವಿವಿಧ ರಾಜ್ಯಗಳು ಈವರೆಗೆ ಸಾಧಿಸಿರುವ ಪ್ರಗತಿ:

(ಬಿ) ಇವು ಭಾರತಾದ್ಯಂತ ಏಕರೂಪದಲ್ಲಿರುವವೆ?

(ಸಿ) ಅಜ್ಞಾನಿಗಳು, ಅನಕ್ಷರಸ್ಥರು ಆದ ಮತದಾರರು ತಮ್ಮ ಇಚ್ಛಾನುಸಾರ ಮತ ಚಲಾಯಿಸಲು ಅನುಕೂಲವಾಗುವಂತೆ ಮತಪೆಟ್ಟಿಗೆಗಳ ತಯಾರಿಕೆ ಮತ್ತು ಮತ ಪತ್ರಗಳ ಮುದ್ರಣದಲ್ಲಿ ಸಾಕಷ್ಟು ಎಚ್ಚರಿಕೆ ವಹಿಸಲಾಗಿದೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಪಶ್ಚಿಮ ಬಂಗಾಳ ಮತ್ತು ಬಿಹಾರ ಮತ್ತು ರಾಜಾಸ್ಥಾನಗಳನ್ನು ಹೊರತುಪಡಿಸಿ ಎಲ್ಲ ರಾಜ್ಯಗಳು ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ ಮತಪಟ್ಟಿಗೆಗಳನ್ನು ತಯಾರಿಸಲು ಆದೇಶಗಳನ್ನು ಹೊರಡಿಸಿವೆ. ಈ ಮೂರು ರಾಜ್ಯಗಳಿಂದ ಮಾಹಿತಿ ಬರಬೇಕಾಗಿದೆ. ಇಡೀ ಭಾರತಕ್ಕೆ ಒಂದೇ ಕಡೆ ಮತ ಪತ್ರಗಳನ್ನು ನಾಸಿಕ್‌ನ ಸೆಕ್ಯುರಿಟಿ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಿಸಲಾಗುತ್ತಿದೆ.

(ಬಿ) ಮತಪೆಟ್ಟಿಗೆಗಳು ಚುನಾವಣಾ ಆಯೋಗವು ಅನುಮೋದಿಸಿದ ಮಾದರಿಯಲ್ಲಿದ್ದು ಬೀಗ ಹಾಕುವ ಏರ್ಪಾಟಿನಲ್ಲಿ ವ್ಯತ್ಯಾಸಗಳ ಹೊರತು ಬಹುಮಟ್ಟಿಗೆ ಏಕರೂಪದಲ್ಲಿರುತ್ತವೆ; ಮತಪತ್ರಗಳು ಏಕರೂಪದಲ್ಲಿರುತ್ತವೆ.

(ಸಿ) ಹೌದು, ಮತಪೆಟ್ಟಿಗೆಗಳನ್ನು ಎರಡು ಬಣ್ಣಗಳಲ್ಲಿ ತಯಾರಿಸಲಾಗುವುದು. ಒಂದು ಬಣ್ಣದ್ದನ್ನು ಲೋಕಸಭೆಗೂ ಮತ್ತೊಂದು ಬಣ್ಣದ್ದನ್ನು ರಾಜ್ಯ ವಿಧಾನಸಭೆಗಳಿಗೂ ಉಪಯೋಗಿಸಲಾಗುವುದು. ಮತ ಪತ್ರಗಳನ್ನು ಹಾಗೆಯೇ, ಬೇರೆ ಬೇರೆಯೆಂದು ಗುರುತಿಸಬಹುದಾಗಿದೆ. ಪ್ರತಿಯೊಬ್ಬ ಅಭ್ಯರ್ಥಿಗೂ ಮತಕೇಂದ್ರದಲ್ಲಿ ಒಂದು ಮತಪೆಟ್ಟಿಗೆಯನ್ನು ಹಂಚಿಕೆ ಮಾಡಲಾಗುವುದು; ಬೇರೆ ಬೇರೆ ಅಭ್ಯರ್ಥಿಗಳ ಪೆಟ್ಟಿಗೆಗಳನ್ನು ಅವುಗಳ ಮೇಲೆ ಅಂಟಿಸಿದ ಪರಿಚಿತ ಮತ್ತು ಸುಲಭವಾಗಿ ಗುರುತಿಸಬಹುದಾದ ಸಂಕೇತಗಳಾದ ಹೂವು, ಗುಡಿಸಲು, ಮರ, ಕೈ, ನೇಗಿಲು, ಆನೆ ಮೊದಲಾದ ಗುರುತಿನ ಚೀಟಿಗಳ ಮೂಲಕ ಗುರುತಿಸಬಹುದಾಗಿದೆ. ಈ ಏರ್ಪಾಟುಗಳು ಅನಕ್ಷರಸ್ಥ ಮತದಾರರು ತಮ್ಮ ಮತವನ್ನು ಮುಕ್ತವಾಗಿ ಚಲಾಯಿಸಲು ಸುಲಭವಾಗುವುದು.

**ಶ್ರೀ ಆರ್. ಶ್ರೀ ಉಪಾಧ್ಯ:** ಮತ ಪೆಟ್ಟಿಗೆಗಳ ತಯಾರಿಕೆಗಾಗಿ ಉಕ್ಕನ್ನು ಸರ್ಕಾರವು ಪಡೆದುಕೊಂಡಿದೆಯೆ?

**ಡಾ. ಅಂಬೇಡ್ಕರ್:** ಹೌದು, ಉಕ್ಕು ಇಲ್ಲದೆ ಪೆಟ್ಟಿಗೆಗಳನ್ನು ಹೇಗೆ ತಯಾರಿಸಲು ಸಾಧ್ಯ?

---

** ಪಿ.ಡಿ. ಸಂ.೭, ಭಾಗ–೧, ೨೧ ಏಪ್ರಿಲ್ ೧೯೫೧, ಪು. ೩೪೪೪

**ಬಿ. ರಣಬೀರ್ ಸಿಂಗ್:** ಚುನಾವಣೆಗಳಿಗೆ ಎಷ್ಟು ದಿನ ಮುನ್ನ ಮತದಾರರಿಗೆ ಚಿಹ್ನೆಗಳನ್ನು ತಿಳಿಯಪಡಿಸಲಾಗುವುದು.

**ಡಾ. ಅಂಬೇಡ್ಕರ್:** ನಾಮಪತ್ರಗಳ ಪರಿಶೀಲನೆ ಪೂರ್ಣಗೊಂಡು ಅಂತಿಮವಾಗಿ ಅಂಗೀಕರಿಸಿದ ದಿನದಂದೇ ಚಿಹ್ನೆಯನ್ನು ಹಂಚಿಕೆ ಮಾಡಲಾಗುವುದೆಂದು ಭಾವಿಸಿದ್ದೇನೆ. ತನ್ನ ಚಿಹ್ನೆ ಕುರಿತು ಮತದಾರರಿಗೆ ಜಾಹಿರುಪಡಿಸುವುದು ಅಭ್ಯರ್ಥಿಗೆ ಸೇರಿದ್ದು.

**ಶ್ರೀ ಜಿ.ಎನ್. ಹಜಾರಿಕ:** ಚುನಾವಣಾ ಉದ್ದೇಶಕ್ಕಾಗಿ ಬೇಕಾಗಿರುವ ಮತಪೆಟ್ಟಿಗೆಗಳ ಸಂಖ್ಯೆಯನ್ನು ಯಾವ ಆಧಾರದ ಮೇಲೆ ಖಚಿತಪಡಿಸಿಕೊಳ್ಳಲಾಗುವುದು ಮತ್ತು ಹಾಗೆಯೇ ಖಚಿತಪಡಿಸಿಕೊಳ್ಳುವಲ್ಲಿ ಭೌಗೋಳಿಕ ಪರಿಗಣನೆಯನ್ನು ಗಮನಿಸಲಾಗುವುದೆ ?

**ಡಾ. ಅಂಬೇಡ್ಕರ್:** ಅದು ಮತದಾರರ ಸಂಖ್ಯೆ ಮತ್ತು ಮತ ಕೇಂದ್ರಗಳ ಸಾಮರ್ಥ್ಯಗಳನ್ನು ಅವಲಂಬಿಸಿರುತ್ತದೆ. ಚುನಾವಣೆ ನಡೆಸಲು ಪ್ರತಿ ರಾಜ್ಯವು ಬೇಡಿಕೆ ಮಂಡಿಸಿರುವ ಮತಪೆಟ್ಟಿಗೆಗಳ ಅಂಕಿ ಸಂಖ್ಯೆಗಳು ಈಗ ನನ್ನಲ್ಲಿವೆ. ಇದು ತುಂಬಾ ದೊಡ್ಡ ಪಟ್ಟಿ.

**ಓರ್ವ ಸದಸ್ಯರು:** ಅವರಿಗೆ ಅಸ್ಸಾಂ ವಿವರ ಬೇಕು.

**ಡಾ. ಅಂಬೇಡ್ಕರ್:** ಅಸ್ಸಾಂಗೆ ಬೇಕಿರುವ ಒಟ್ಟು ಮತಪೆಟ್ಟಿಗೆಗಳು ೫೦,೦೦೦

**ಮಾನ್ಯ ಸಭಾಧ್ಯಕ್ಷರು:** ಅದನ್ನು ಓದಬೇಕಾಗಿಲ್ಲ: ಪ್ರಶ್ನೋತ್ತರ ಅವಧಿ ಮುಗಿಯಿತು.

## ೩೧

## *ಸಂಸತ್ತಿನ ವಿಸರ್ಜನೆ

**೩೪೭೬ ಶ್ರೀ ಸೋನಾವಣೆ:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ?

(ಎ) ೧೯೫೧ ರ ನವೆಂಬರ್–ಡಿಸೆಂಬರ್‌ನಲ್ಲಿ ನಡೆಯಲಿರುವ ಮುಂಬರುವ ಮಹಾಚುನಾವಣೆಗಳ ದೃಷ್ಟಿಯಿಂದ ಸಂಸತ್ತನ್ನು ವಿಸರ್ಜಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೆ?

(ಬಿ) ಹಾಗಿದ್ದಲ್ಲಿ ಸಂಸತ್ತನ್ನು ಯಾವಾಗ ವಿಸರ್ಜಿಸಲಾಗುವುದು. ಚುನಾವಣಾ ಫಲಿತಾಂಶ ತಿಳಿಯುವುದಕ್ಕೆ ಮೊದಲೇ ಅಥವಾ ಆನಂತರವೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ) – ಮಾನ್ಯ ಸದಸ್ಯರ ಗಮನವನ್ನು ಸಂವಿಧಾನದ ಅನುಚ್ಛೇದ ೩೭೯(೧) ರ ಕಡೆ ಸೆಳೆಯಬಯಸುತ್ತೇನೆ. ಈ ಅನುಚ್ಛೇದದ ಬಲದಿಂದ ಈ ತಾತ್ಕಾಲಿಕ ಸಂಸತ್ತನ್ನು ವಿಧ್ಯುಕ್ತವಾಗಿ ರಚಿಸಲಾಗಿದ್ದು ಮೊದಲ ಅಧಿವೇಶವನ್ನು ಕರೆಯಲಾಗಿದೆ. ಅದಕ್ಕನುಸಾರವಾಗಿ ಮುಂದಿನ ನವೆಂಬರ್– ಡಿಸೆಂಬರ್‌ನಲ್ಲಿ ನಡೆಯಲಿರುವ ಮಹಾ ಚುನಾವಣೆಗಳಿಗೆ ಮುನ್ನ ಅಥವಾ ಆ ಚುನಾವಣೆಗಳ ಫಲಿತಾಂಶಗಳು ಪ್ರಕಟವಾದ ನಂತರವೂ ಈ ಸಂಸತ್ತು ವಿಸರ್ಜನೆಯಾಗುವುದಿಲ್ಲ. ಅದು ನೂತನ ಸಂಸತ್ಸದನಗಳ ಮೊದಲ ಅಧಿವೇಶನ ಕರೆದ ಕೂಡಲೇ ತನ್ನಿಂದ ತಾನೇ ರದ್ದಾಗುವುದು.

---

* ಪಿ.ಡಿ. ಸಂ.೭, ಭಾಗ–೧, ೨೫ ಏಪ್ರಿಲ್ ೧೯೫೧ ಪು ೩೫೫೬

# ೩೨

# **ಮತದಾರರ ಪಟ್ಟಿಗಳು

**೩೬೧೧. ಶ್ರೀ ಕಿಶೋರಿ ಮೋಹನ್ ತ್ರಿಪಾಠಿ:** ಕಾನೂನು ಮಂತ್ರಿಗಳು ಮುಂದಿನ ವಿಷಯಗಳ ಬಗೆಗೆ ತಿಳಿಸುವರೆ:

(ಎ) ಮುಂಬರುವ ಚುನಾವಣೆ ಅವಧಿಯಲ್ಲಿ ಮತದಾರರ ಪಟ್ಟಿಗಳ ಬೇಡಿಕೆಯನ್ನು ಪೂರೈಸಲು ಸಾಕಷ್ಟು ಏರ್ಪಾಟುಗಳನ್ನು ಮಾಡಿಕೊಳ್ಳಲಾಗಿದೆಯೆ?

(ಬಿ) ಅಂಥ ಬೇಡಿಕೆಯ ಅಂದಾಜು ಏನೇನಾದರೂ ಇದೆಯೆ? ಮತ್ತು ಹಾಗಿದ್ದಲ್ಲಿ ಅದಕ್ಕೆ ಆಧಾರವೇನು?

(ಸಿ) (I) ಲೋಕಸಭೆಯ ಸ್ಥಾನ; (II) ರಾಜ್ಯಗಳ ಪರಿಷತ್ತು; ಮತ್ತು (III) ರಾಜ್ಯ ವಿಧಾನ ಮಂಡಲದ ಎರಡು ಸದನಗಳಲ್ಲಿ ಒಂದು ಸ್ಥಾನ–ಇವುಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಮತದಾರರ ಪಟ್ಟಿಗಳಿಗೆ ತಗಲುವ ಸರಿಸುಮಾರು ವೆಚ್ಚವೆಷ್ಟು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಹೌದು (ಬಿ) ಮತದಾರರ ಪಟ್ಟಿಗಳ ಪ್ರತಿಗಳ ಸಂಭವನೀಯ ಬೇಡಿಕೆಯನ್ನು ನಿರ್ದಿಷ್ಟವಾಗಿ ಅಂದಾಜು ಮಾಡಲು ಸಾಧ್ಯವಾಗದಿದ್ದರೂ ಪ್ರತಿಯೊಬ್ಬ ವಿಧ್ಯುಕ್ತ ನಾಮನಿರ್ದೇಶನದ ಅಭ್ಯರ್ಥಿಗೆ ಮತ್ತು ಮತಕ್ಷೇತ್ರದಲ್ಲಿನ ಪ್ರತಿಯೊಂದು ಸಂಘಟಿತ ಪಕ್ಷಕ್ಕೆ ಒಂದು ಪ್ರತಿಯನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಏರ್ಪಾಟನ್ನು ಮಾಡಲಾಗಿದೆ.

(ಸಿ) ಚುನಾವಣಾ ಆಯೋಗವು ಮಾಹಿತಿಯನ್ನು ಸಂಗ್ರಹಿಸುತ್ತಿದೆ. ಅದನ್ನು ಸಕಾಲದಲ್ಲಿ ಸದನದ ಮುಂದೆ ಮಂಡಿಸಲಾಗುವುದು.

# ೩೩

# *ಪಶ್ಚಿಮ ಬಂಗಾಳ ವಿಧಾನ ಮಂಡಲ (ಖಾಲಿ ಸ್ಥಾನಗಳು)

**೩೮೪೫. ಶ್ರೀ ಚಟ್ಟೋಪಾಧ್ಯಾಯ:** ಕಾನೂನು ಮಂತ್ರಿಗಳು ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಪಶ್ಚಿಮ ಬಂಗಾಳ ವಿಧಾನಮಂಡಲದಲ್ಲಿ ೧ ವರ್ಷಕ್ಕೂ ಹೆಚ್ಚು ಕಾಲದಿಂದ, ೧೯೫೦–೫೧ರಲ್ಲಿ ಖಾಲಿಯಿದ್ದ ಸ್ಥಾನಗಳೆಷ್ಟು?

(ಬಿ) ಅವುಗಳ ಪೈಕಿ ಎಷ್ಟಕ್ಕೆ ಈವರೆಗೂ ಚುನಾವಣೆಗಳು ನಡೆದಿಲ್ಲ.

(ಸಿ) ಅವುಗಳನ್ನು ಮುಂಬರುವ ಮಹಾಚುನಾವಣೆಗಳಿಗೆ ಮುನ್ನ ಭರ್ತಿ ಮಾಡಲಾಗುವುದೆ? ಮತ್ತು

---

** ಪಿ.ಡಿ. ಸಂ–೭, ಭಾಗ–೧, ೨೮ ಏಪ್ರಿಲ್ ೧೯೫೧ ಪು–೩೭೦೨

* ಪಿ.ಡಿ. ಸಂ–೭, ಭಾಗ–೧ ೫ ಮೇ ೧೯೫೧ ಪು. ೩೯೩೧

(ಡಿ) ಇಷ್ಟು ದೀರ್ಘಕಾಲ ಅವು ಖಾಲಿ ಉಳಿಯಲು ಕಾರಣವೇನು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ರಾಜ್ಯ ವಿಧಾನಮಂಡಲಗಳಲ್ಲಿ ಸಾಂಧರ್ಭಿಕವಾಗಿ ಖಾಲಿ ಬೀಳುವ ಸ್ಥಾನಗಳನ್ನು ತುಂಬುವುದು ಭಾರತ ಸರ್ಕಾರಕ್ಕೆ ಸಂಬಂಧಿಸಿಲ್ಲದಿದ್ದರೂ ಈ ಕೆಳಕಂಡ ಮಾಹಿತಿಯನ್ನು ಚುನಾವಣಾ ಆಯೋಗದಿಂದ ಪಡೆದುಕೊಳ್ಳಲಾಗಿದೆ–

(ಎ) ೭

(ಬಿ) ೨

(ಸಿ) ಉಳಿದ ಎರಡು ಸ್ಥಾನಗಳನ್ನು ತುಂಬಲು ಕೂಡಲೇ ಉಪ ಚುನಾವಣೆಗಳನ್ನು ನಡೆಸಲಾಗುವುದೆಂದು ನಿರೀಕ್ಷಿಸಲಾಗಿದೆ.

(ಡಿ) ಈ ಖಾಲಿ ಸ್ಥಾನಗಳನ್ನು ತುಂಬುವಲ್ಲಿನ ವಿಳಂಬಕ್ಕೆ ಪಶ್ಚಿಮ ಬಂಗಾಳ ವಿಧಾನಸಭೆಯ ಅವಧಿಗೆ ಸಂಬಂಧಪಟ್ಟಂತೆ ಕೆಲಕಾಲ ಉಂಟಾಗಿದ್ದ ಅನಿಶ್ಚಿತತೆ–ಮೊದಲಿಗೆ ಆ ವಿಧಾನಸಭೆಯ ಪ್ರಸ್ತಾವದ ಪುನಾರಚನೆ ಸಲುವಾಗಿ ಮತ್ತು ಎರಡನೆಯದಾಗಿ ಮಹಾಚುನಾವಣೆಗಳನ್ನು ೧೯೫೧ರ ಏಪ್ರಿಲ್–ಮೇ ನಲ್ಲಿ ನಡೆಸುವ ಬಗ್ಗೆ ಈ ಮೊದಲಿನ ತೀರ್ಮಾನ ಎಂದು ಹೇಳಲಾಗುತ್ತಿದೆ.

**ಶ್ರೀ ಚಟ್ಟೋಪಾಧ್ಯಾಯ:** ಅಂದರೆ ರಾಜ್ಯ ವಿಧಾನಮಂಡಲಗಳಲ್ಲಿನ ಖಾಲಿ ಸ್ಥಾನಗಳನ್ನು ವಿಳಂಬ ಮಾಡದೆ ತುಂಬುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಲ್ಲವೆಂದು ತಿಳಿಯಲೆ?

**ಡಾ. ಅಂಬೇಡ್ಕರ್:** ಇಲ್ಲ, ಜವಾಬ್ದಾರಿಯಲ್ಲಿ ಇದು ಸಂಪೂರ್ಣವಾಗಿ ಪ್ರಾಂತೀಯ ಸರ್ಕಾರ ಮತ್ತು ರಾಜ್ಯ ಪ್ರಮುಖ ಅಥವಾ ರಾಜ್ಯಪಾಲರಿಗೆ ಬಿಟ್ಟ ವಿಷಯ.

**ಶ್ರೀ ಚಟ್ಟೋಪಾಧ್ಯಾಯ:** ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಖಾಲಿ ಇರುವ ಮತಕ್ಷೇತ್ರಗಳಲ್ಲಿ ಎಷ್ಟು ಸಾಮಾನ್ಯ ಮತಕ್ಷೇತ್ರಗಳಿವೆ ಮತ್ತು ಕಾರ್ಮಿಕ ಒಕ್ಕೂಟದ ಮತಕ್ಷೇತ್ರಗಳಿವೆ.

**ಡಾ. ಅಂಬೇಡ್ಕರ್:** ನನ್ನಲ್ಲಿ ಮಾಹಿತಿ ಇಲ್ಲದಿರುವುದಕ್ಕೆ ವಿಷಾದಿಸುತ್ತೇನೆ.

**ಡಾ. ಎಂ.ಎಂ. ಹಾನ್:** ಕಳೆದ ಎರಡು ತಿಂಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ನಾಲ್ಕು ಉಪ ಚುನಾವಣೆಗಳು ನಡೆದಿರುವುದು ನಿಜವೆ?

**ಡಾ. ಅಂಬೇಡ್ಕರ್:** ಈ ವಿಷಯದ ಬಗ್ಗೆ ನಾನೇನು ಹೇಳಲಾರೆ; ನಾನು ಹೇಳಿದಂತೆ ನನ್ನಲ್ಲಿ ಮಾಹಿತಿ ಇಲ್ಲ.

**ಪ್ರೊ॥ ಎಸ್.ಎಲ್. ಸಕ್ಸೇನಾ:** ಮಾನ್ಯ ಮಂತ್ರಿಗಳಿಗೆ ಉತ್ತರ ಪ್ರದೇಶದಲ್ಲಿ ಒಂದು ವರ್ಷಕ್ಕಿಂತ ಹೆಚ್ಚಿನ ಕಾಲದಿಂದಲೂ ಖಾಲಿ ಬಿದ್ದಿರುವ ಸ್ಥಾನಗಳಿರುವುದು ತಿಳಿದಿದೆಯೆ?

**ಮಾನ್ಯ ಸಭಾಧ್ಯಕ್ಷರು:** ಆರ್ಡರ್, ಆರ್ಡರ್, ಮಾನ್ಯ ಮಂತ್ರಿಗಳು ಅದರ ಜವಾಬ್ದಾರಿ ತಮ್ಮದಲ್ಲವೆಂದು ಈಗಾಗಲೇ ಹೇಳಿದ್ದಾರೆ. ಮುಂದಿನ ಪ್ರಶ್ನೆ.

# ೩೪

# *ಮದ್ರಾಸಿನಲ್ಲಿ ಮಹಾ ಚುನಾವಣೆಗಳು

**೩೮೬೬ ಶ್ರೀ ಪಿ. ಬಾಸೀರೆಡ್ಡಿ:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ತಿಳಿಸುವರೆ?

(ಎ) ಮದರಾಸು ವಿಧಾನ ಪರಿಷತ್ತು ಒಂದು ನಿರ್ಣಯದ ಮೂಲಕ ರಾಜ್ಯದಲ್ಲಿ ಮಹಾಚುನಾವಣೆಗಳನ್ನು ೧೯೫೨ರ ಫೆಬ್ರವರಿಗಿಂತ ಮುನ್ನ ನಡೆಸಬಾರದೆಂದು ಸರ್ಕಾರವನ್ನು ಕೋರಿರುವುದು ನಿಜವೆ?

(ಬಿ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಹೌದು.

(ಬಿ) ಸರ್ಕಾರವು ಮದರಾಸು ವಿಧಾನಪರಿಷತ್ತಿನಲ್ಲಿ ನಿರ್ಣಯ ಮಾಡುವಾಗ ಆ ರಾಜ್ಯವು ಮುಂದಿಟ್ಟಿರುವ ಕಾರಣಗಳು, ಆ ರಾಜ್ಯದಲ್ಲಿ ಮಹಾಚುನಾವಣೆಗಳನ್ನು ಫೆಬ್ರವರಿ ೧೯೫೨ರ ವರೆಗೆ ಮುಂದೂಡವಷ್ಟು ಮಹತ್ವದ್ದಲ್ಲವೆಂದು ಭಾವಿಸಿದೆ.

**ಶ್ರೀ ಸಿ. ಬಾಸೀರೆಡ್ಡಿ:** ಯಾವುದಾದರೂ ಇತರ ರಾಜ್ಯ ಸರ್ಕಾರವು ಇಂಥದ್ದೇ ಬೇಡಿಕೆಯನ್ನು ಮಂಡಿಸಿದೆಯೆ? ಹಾಗಿದ್ದಲ್ಲಿ ಆ ಸರ್ಕಾರಗಳು ಯಾವುವು?

**ಡಾ. ಅಂಬೇಡ್ಕರ್:** ಯಾರು ಇಲ್ಲ.

**ಶ್ರೀ ಕೇಶವರಾವ್:** ಮದರಾಸಿನಲ್ಲಿ ನವೆಂಬರ್ ಮತ್ತು ಡಿಸೆಂಬರ್ ತಿಂಗಳು ಮಳೆಗಾಲ ಮತ್ತು ಆ ಸಮಯದಲ್ಲಿ ಚುನಾವಣೆಗಳನ್ನು ನಡೆಸುವುದು ಸಾಧ್ಯವಾಗದೆಂದು ಸರ್ಕಾರಕ್ಕೆ ತಿಳಿದಿದೆಯೇ?

**ಮಾನ್ಯ ಸಭಾಧ್ಯಕ್ಷರು:** ಅವರಿಗೂ ತಿಳಿದಿರುತ್ತದೆ.

**ಸೇಠ್ ಗೋವಿಂದದಾಸ್:** ಮಾನ್ಯ ಮಂತ್ರಿಗಳು ದೇಶಾದಾಂತ್ಯ ಮಹಾಚುನಾವಣೆಗಳನ್ನು ೩೧ ಡಿಸೆಂಬರ್ ೧೯೫೧ಕ್ಕಿಂತಲೂ ಮುಂಚೆ ನಡೆಸುತ್ತೇವೆಂದು ಭರವಸೆ ನೀಡುವರೆ?

**ಡಾ. ಅಂಬೇಡ್ಕರ್:** ಅದು ಸರ್ಕಾರದ ಇಂಗಿತ.

**ಶ್ರೀ ಜೆ.ಎನ್. ಹಜಾರಿಕ:** ರಾಷ್ಟ್ರೀಯ ಮಹಾಚುನಾವಣೆಗಳಲ್ಲಿ ಕೃಷಿಕರು ಸಂಪೂರ್ಣವಾಗಿ ಭಾಗವಹಿಸಲು ಅವಕಾಶ ಕಲ್ಪಿಸಲು ಅಸ್ಸಾಂ ಸೇರಿದಂತೆ ಕೆಲವೊಂದು ರಾಜ್ಯಗಳಲ್ಲಿ ಜನವರಿ ಮತ್ತು ಫೆಬ್ರವರಿ ಭತ್ತದ ಸುಗ್ಗಿ ಕಾಲವಾದ್ದರಿಂದ ಆಗ ಚುನಾವಣೆಗಳನ್ನು ಸರ್ಕಾರವು ನಡೆಸದಿರುವುದೆ?

**ಡಾ. ಅಂಬೇಡ್ಕರ್:** ಸರ್ಕಾರ ಎರಡು ತಿಂಗಳ ಕಾಲವನ್ನು ನಿಗದಿಗೊಳಿಸಿದೆ. ಅವಧಿಯೊಳಗೆ ರಾಜ್ಯ ತನಗೆ ಬೇಕಾದ ಅವಧಿಯನ್ನು ಆಯ್ಕೆ ಮಾಡಿಕೊಳ್ಳಲು ಮುಕ್ತವಾಗಿರುತ್ತದೆ.

**ಶ್ರೀ ಬ್ರಜೇಶ್ವರ್ ಪ್ರಸಾದ್:** ಚುನಾವಣೆಗಳನ್ನು ಮುಂದಿನ ಫೆಬ್ರವರಿಯಲ್ಲಿ ನಡೆಸಲಾಗುವುದೆಂದು ಬೆಳಗಿನ ಪತ್ರಿಕೆಗಳು ಸುದ್ದಿ ಪ್ರಕಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

**ಡಾ. ಅಂಬೇಡ್ಕರ್:** ನಾನೂ ಓದಿದ್ದೇನೆ; ಆದರೆ ಆ ಸುದ್ದಿಗೆ ನಾನು ಜವಾಬ್ದಾರನಲ್ಲ.

---

* ಪಿ.ಡಿ. ಸಂ ೭, ಭಾಗ–೧, ೫ ಮೇ ೧೯೫೧ ಪು–೩೯೫೫

**ಶ್ರೀ ಬಾಸೀರೆಡ್ಡಿ:** ಯಾವುದಾದರೂ ಇತರ ರಾಜ್ಯಗಳು ಇಂಥವೇ ಬೇಡಿಕೆಗಳನ್ನು ಮಂಡಿಸಿವೆಯೆ? ಹಾಗಿದ್ದಲ್ಲಿ ಅವು ಯಾವುವು?

**ಡಾ. ಅಂಬೇಡ್ಕರ್:** ಇದಕ್ಕೆ ಈಗಾಗಲೇ ಉತ್ತರ ನೀಡಿದ್ದೇನೆ. ಇಲ್ಲ ಎನ್ನುವ ಉತ್ತರ ನೀಡಿರುತ್ತೇನೆ.

**ಶ್ರೀ ವೆಂಕಟರಾಮನ್:** ಮೈಸೂರು ಸರ್ಕಾರವು ಮದರಾಸಿನಂತೆಯೇ ಚುನಾವಣೆಗಳನ್ನು ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ನಡೆಸಬಹುದೆಂದು ಶಿಫಾರಸ್ಸು ಮಾಡಿದೆಯೆ?

**ಡಾ. ಅಂಬೇಡ್ಕರ್:** ಅಂಥ ಯಾವುದೇ ಮಾಹಿತಿ ನನ್ನ ಗಮನಕ್ಕೆ ಬಂದಿಲ್ಲ.

**ಶ್ರೀ ದ್ವಿವೇದಿ:** ಕೆಲವೊಂದು ರಾಜ್ಯಗಳಲ್ಲಿ ಮತಕ್ಷೇತ್ರಗಳ ಪುನರ್‌ವಿಂಗಡಣೆಯ ಇನ್ನು ಸದನದ ಪರಿಗಣನೆಯಲ್ಲಿರುವುದರಿಂದ ಆ ರಾಜ್ಯಗಳ ಚುನಾವಣೆಗಳನ್ನು ಇತರ ರಾಜ್ಯಗಳಲ್ಲಿ ನಡೆಸುವ ಸಮಯದಲ್ಲಿಯೇ ನಡೆಸಲಾಗುವುದೆ?

**ಡಾ. ಅಂಬೇಡ್ಕರ್:** ಚುನಾವಣೆಗಳು ನಿಗದಿತ ಸಮಯದಲ್ಲಿ ನಡೆಯುವಂತಾಗಲು ಅವುಗಳನ್ನು ಸಾಕಷ್ಟು ಮುಂಚಿತವಾಗಿ ಇತ್ಯರ್ಥಪಡಿಸಲಾಗುವುದು.

## ೩೫

# *ಮಹಾ ಚುನಾವಣೆಗಳು

**೪೫೫೩ ಶ್ರೀ ಸಿಧ್ವ:** ಕಾನೂನು ಮಂತ್ರಿಗಳು ಮುಂದಿನ ವಿಷಯಗಳ ಬಗೆಗೆ ತಿಳಿಸುವರೆ:

(ಎ) ಮದ್ರಾಸು ಸರ್ಕಾರದ ಜೊತೆಗೆ ಒರಿಸ್ಸಾ ಸರ್ಕಾರವು ಮಹಾಚುನಾವಣೆಗಳನ್ನು ಜನವರಿ–ಫೆಬ್ರವರಿ ೧೯೫೨ ರಲ್ಲಿ ನಡೆಸಬೇಕೆಂದು ಒಕ್ಕೂಟ ಸರ್ಕಾರಕ್ಕೆ ಸಲಹೆ ಮಾಡಿರುವುದು ನಿಜವೆ?

(ಬಿ) ಹಾಗಿದ್ದಲ್ಲಿ ಒಕ್ಕೂಟ ಸರ್ಕಾರವು ಒರಿಸ್ಸಾ ಸರ್ಕಾರಕ್ಕೆ ಏನು ಉತ್ತರ ನೀಡಿದೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ) – ಒರಿಸ್ಸಾ ಸರ್ಕಾರದಿಂದ ಪತ್ರವೊಂದನ್ನು ಚುನಾವಣಾ ಆಯೋಗವು ಸ್ವೀಕರಿಸಿದ್ದು, ಅದರಲ್ಲಿ ೧೯೫೧ರ ನವೆಂಬರ್–ಡಿಸೆಂಬರ್ ತಿಂಗಳುಗಳಲ್ಲಿ ಆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತದಾನಕ್ಕೆ ಸಾಮಾನ್ಯ ಅವಧಿ ನಿಗದಿಪಡಿಸುವಲ್ಲಿ ಕೆಲವೊಂದು ಅಡಚಣೆಗಳಿವೆಯೆಂದು ಈ ದೃಷ್ಟಿಯಿಂದ ಜನವರಿ–ಫೆಬ್ರವರಿ ಹೆಚ್ಚು ಸೂಕ್ತವೆಂದು ಸಲಹೆ ಮಾಡಲಾಗಿದೆ. ಆದಾಗ್ಯೂ ರಾಜ್ಯದ ಕೆಲವು ಭಾಗಗಳಲ್ಲಿ ಮತದಾನವನ್ನು ನವೆಂಬರ್ ಕಡೆಯ ಭಾಗದಲ್ಲಿ ಮತ್ತು ಉಳಿದ ಭಾಗಗಳಲ್ಲಿ ೧೦ರಿಂದ ೨೨ ಡಿಸೆಂಬರ್ ೧೯೫೧ರಲ್ಲಿ ನಡೆಸುವುದಾದರೆ, ರಾಜ್ಯ ಸರ್ಕಾರವು ನವೆಂಬರ್–ಡಿಸೆಂಬರ್ ವೇಳಾಪಟ್ಟಿಯನ್ನು ಪಾಲಿಸಲು ಸಿದ್ಧ ಎಂದು ಹೇಳಿದೆ. ಚುನಾವಣಾ ಆಯೋಗವು ರಾಜ್ಯ ಸರ್ಕಾರಕ್ಕೆ ಉತ್ತರ ನೀಡಿ ಮತದಾನ ಕಾರ್ಯಕ್ರಮವನ್ನು ಯಾವುದೇ ಪರಿಸ್ಥಿತಿಯಲ್ಲೂ ೧೯೫೧ರ ಡಿಸೆಂಬರ್ ಅನ್ನು ಮೀರುವಂತಿಲ್ಲವೆಂದು ಮತ್ತು ಚುನಾವಣೆಗಳನ್ನು ಪ್ರಸ್ತಾಪಿಸಿರುವಂತೆ ನವೆಂಬರ್–ಡಿಸೆಂಬರ್‌ಗಳಲ್ಲಿ ನಡೆಸಲು ಆಯೋಗಕ್ಕೆ ಆಕ್ಷೇಪಣೆ ಇಲ್ಲವೆಂದು, ಆದರೆ, ಒಟ್ಟಾರೆ ಮತದಾನದ ಅವಧಿಯನ್ನು ಸಾಧ್ಯವಾದಲ್ಲಿ ನಾಲ್ಕು ವಾರಗಳಿಗೆ ಸೀಮಿತಗೊಳಿಸಬೇಕೆಂದು ತಿಳಿಸಿದೆ.

---

* ಪಿ.ಡಿ. ಸಂ.೮, ಭಾಗ–೧, ೨೬ ಮೇ ೧೯೫೧ ಪು–೪೬೮೪

**ಶ್ರೀ ಸಿಧ್ವ:** ಸರ್ಕಾರವು ನಿರ್ದಿಷ್ಟ ತಿಂಗಳುಗಳನ್ನು ನಿಗದಿಪಡಿಸಿರುವುದರಿಂದ ಈ ತಿಂಗಳುಗಳಲ್ಲಿ ಏನಾದರೂ ಬದಲಾವಣೆಯ ಸಾಧ್ಯತೆ ಇದೆಯೆ?

**ಡಾ. ಅಂಬೇಡ್ಕರ್:** ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಇಲ್ಲ. ಆದರೆ ಭವಿಷ್ಯದಲ್ಲಿ ಏನಾಗಬಹುದೆಂದು ಹೇಳಲಾರೆ.

**ಮಾನ್ಯ ಸಭಾಧ್ಯಕ್ಷರು:** ಅವರು ಅದನ್ನೇ ಈಗಷ್ಟೇ ಹೇಳಿದ್ದು.

**ಸೇಠ್ ಗೋವಿಂದ್‌ದಾಸ್:** ಮಾನ್ಯ ಮಂತ್ರಿಗಳು ಈ ಅಭಿಪ್ರಾಯವನ್ನು ಅನೇಕ ಜವಾಬ್ದಾರಿಯುತ ವ್ಯಕ್ತಿಗಳ ಮುಂದೆ ವ್ಯಕ್ತಪಡಿಸಿರುವುದು ನಿಜವೆ?

**ಮಾನ್ಯ ಸಭಾಧ್ಯಕ್ಷರು:** ಆರ್ಡರ್, ಆರ್ಡರ್, ಆ ಅಂಶದ ಮೇಲೆ ಚರ್ಚೆ ಬೇಡ.

**ಶ್ರೀ ಬಿಶ್ವನಾಥ್ ದಾಸ್:** ಅಲ್ಲಿ ನವೆಂಬರ್–ಡಿಸೆಂಬರ್ ತಿಂಗಳುಗಳಲ್ಲಿ ಮಳೆಗಾಲ ತೊಡಗುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

**ಡಾ. ಅಂಬೇಡ್ಕರ್:** ಚುನಾವಣಾ ಆಯೋಗವು ವೇಳಾಪಟ್ಟಿ ನಿಗದಿ ಪಡಿಸುವಾಗ ಎಲ್ಲವನ್ನು ಗಣನೆಗೆ ತೆಗೆದುಕೊಂಡಿರುತ್ತದೆ.

## ೩೬

## *ಪ್ರಾದೇಶಿಕ ಆಯುಕ್ತರು

**೪೫೬೫: ಶ್ರೀ ಕಾಮತ್:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ?

(ಎ) ಸಂವಿಧಾನದ ಅನುಚ್ಛೇದ ೩೨೪ (೪)ಕ್ಕೆ ಅನುಗುಣವಾಗಿ ಚುನಾವಣಾ ಆಯೋಗಕ್ಕೆ ನೆರವಾಗಲು ಪ್ರಾದೇಶಿಕ ಆಯುಕ್ತರನ್ನು ನೇಮಿಸಲು ಉದ್ದೇಶಿಸಲಾಗಿದೆಯೆ? ಮತ್ತು

(ಬಿ) ಹಾಗಿದ್ದಲ್ಲಿ, ಎಷ್ಟು ಜನರನ್ನು ಯಾವ ದಿನಾಂಕದಿಂದ ನೇಮಿಸಲಾಗಿರುವುದು.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಹೌದು.

(ಬಿ) ನಾಲ್ಕು. ಅವರನ್ನು ಯಾವ ದಿನಾಂಕದಿಂದ ನೇಮಿಸಬೇಕೆಂಬ ಬಗ್ಗೆ ಇನ್ನು ನಿರ್ಣಯಿಸಿಲ್ಲ.

## ೩೭

## *ಚುನಾವಣಾ ದಿನಾಂಕಗಳ ನಿಗದಿ

**೯೩. ಶ್ರೀ ಕಾಮತ್:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ?

(ಎ) ಸರ್ಕಾರವು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಚುನಾವಣೆಗಳನ್ನು ನಡೆಸಲು ದಿನಾಂಕ ಅಥವಾ ದಿನಾಂಕಗಳನ್ನು ನಿಗದಿಪಡಿಸಿದೆಯೆ:

---

* ಪಿ.ಡಿ. ಸಂ–೮, ಭಾಗ–೧, ೨೬ ಮೇ ೧೯೫೧ ಪು–೪೭೦೨
ಟಿ.೪೧೯೩–೬೬ಎ

* ಪಿ.ಡಿ. ಸಂ–೯ ಭಾಗ–೧, ೯ ಆಗಸ್ಟ್ ೧೯೫೧ ಪು–೧೧೬

(ಬಿ) ಹಾಗಿದ್ದಲ್ಲಿ, ಆ ನಿರ್ಣಯ ಏನು ಮತ್ತು ಯಾವ ದಿನಾಂಕಗಳ ನಡುವೆ ಪ್ರತಿ ರಾಜ್ಯದಲ್ಲೂ ಚುನಾವಣೆಗಳನ್ನು ನಡೆಸಲಾಗುವುದು.

(ಸಿ) ಲೋಕಸಭೆ ಮತ್ತು ವಿವಿಧ ರಾಜ್ಯ ವಿಧಾನಸಭೆಗಳ ಅಂತಿಮ ಫಲಿತಾಂಶವನ್ನು ಯಾವ ದಿನಾಂಕದಂದು ಘೋಷಿಸಲಾಗುವುದು ಮತ್ತು

(ಡಿ) ಕೇಂದ್ರದಲ್ಲಿ ರಾಜ್ಯಗಳ ಪರಿಷತ್ತನ್ನು ಮತ್ತು ರಾಜ್ಯಗಳಲ್ಲಿ ವಿಧಾನ ಪರಿಷತ್ತುಗಳನ್ನು ರಚಿಸಿ, ಭಾರತದ ಒಕ್ಕೂಟದ ರಾಷ್ಟ್ರಪತಿಗಳನ್ನು ಯಾವಾಗ ಚುನಾಯಿಸಲು ಉದ್ದೇಶಿಸಲಾಗಿದೆ.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಹೌದು

(ಬಿ) ಮತದಾನವು ೧೯೫೨ರ ಜನವರಿ ೩ರಂದು ಅಥವಾ ಆ ಸರಿಸುಮಾರಿನಲ್ಲಿ ಆರಂಭವಾಗಿ ೨೪ ರಂದು ಮುಗಿಯಲಿದೆ. ಇದು ಕೆಲವೊಂದು ರಾಜ್ಯಗಳಲ್ಲಿ ಇರಬಹುದಾದ ಅಸಾಧಾರಣ ಅಡಚಣೆಗಳನ್ನು ನಿವಾರಿಸಲು ಅವಶ್ಯವಾಗಬಹುದಾದ ಈ ಸಣ್ಣಪುಟ್ಟ ಹೊಂದಾಣಿಕೆಗಳಿಗೆ ಒಳಪಟ್ಟಿರುತ್ತದೆ. ಹಿಮಾಚಲ ಪ್ರದೇಶ, ಪಂಜಾಬಿನ ಕಾಂಗ್ರಾ ಜಿಲ್ಲೆಯ ಕೆಲವು ಭಾಗಗಳು ಬಹುಶಃ ಉತ್ತರ ಪ್ರದೇಶದ ಅತ್ಯಂತ ಎತ್ತರದ ಪ್ರದೇಶಗಳಲ್ಲಿ ಮತದಾನವನ್ನು ಈ ವರ್ಷದ ಅಕ್ಟೋಬರ್ ಕೊನೆಯೊಳಗೆ ಪೂರ್ಣಗೊಳಿಸಬೇಕಾಗುವುದು. ಏಕೆಂದರೆ ಅನಂತರದಲ್ಲಿ ಈ ಪ್ರದೇಶಗಳು ಹಿಮಾವೃತವಾಗುವವು.

(ಸಿ) ಚುನಾವಣಾ ಆಯೋಗವು ೧೫ ಫೆಬ್ರವರಿ ೧೯೫೨ನ್ನು ಫಲಿತಾಂಶದ ಪ್ರಕಟಣೆ ಪೂರ್ಣಗೊಳ್ಳಬೇಕಾದ ದಿನಾಂಕವೆಂದು ಗೊತ್ತುಪಡಿಸಿದೆ.

(ಡಿ) ಈ ಹಂತದಲ್ಲಿ, ಸಂಸತ್ತು ಮತ್ತು ರಾಜ್ಯ ವಿಧಾನ ಪರಿಷತ್ತುಗಳನ್ನು ಯಾವಾಗ ರಚಿಸಲಾಗುವುದೆಂದು ಖಚಿತವಾಗಿ ಹೇಳಲಾಗದಿದ್ದರೂ, ಮೇಲೆ ಹೇಳಿದ ಕಾರ್ಯಕ್ರಮದ ಆಧಾರದ ಮೇಲೆ ಈ ಸದನವನ್ನು ೧೯೫೨ರ ಮಾರ್ಚ್ ಅಂತ್ಯದ ವೇಳೆಗೆ ರಚಿಸಲು ಸಾಧ್ಯವಾಗಬಹುದೆಂದು ನಿರೀಕ್ಷಿಸಲಾಗಿದೆ. ರಾಷ್ಟ್ರಪತಿಗಳ ಚುನಾವಣೆಗಳು, ಎರಡು ಸದನಗಳು ಮತ್ತು ರಾಜ್ಯದ ವಿಧಾನ ಮಂಡಲಗಳು ಯುಕ್ತವಾಗಿ ರಚನೆಯಾದ ಕೂಡಲೇ, ನಡೆಯುವುದು.

# ೩೮

# *ರಾಜ್ಯಗಳಲ್ಲಿ ಮಹಾ ಚುನಾವಣಾ ದಿನಾಂಕಗಳು

೧೧೪. **ಶ್ರೀ ಜೆ.ಎನ್. ಹಜಾರಿಕಾ:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ರಾಜ್ಯಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಮುಂದಿನ ಮಹಾ ಚುನಾವಣೆಗಳಿಗೆ ದಿನಾಂಕವನ್ನು ನಿಗದಿಗೊಳಿಸಿವೆಯೆ; ಹಾಗಿದ್ದಲ್ಲಿ ಅಂಥ ರಾಜ್ಯಗಳು ಯಾವುವು ಮತ್ತು ಅವು ನಿಗದಿಪಡಿಸಿರುವ ದಿನಾಂಕಗಳಾವುವು; ಮತ್ತು

(ಬಿ) ಮತಕ್ಷೇತ್ರಗಳನ್ನು, ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಸಜ್ಜುಗೊಳಿಸಲಾಗಿದೆಯೆ?

---

* ಪಿ.ಡಿ. ಸಂ.೯, ಭಾಗ–೧, ೯ ಆಗಸ್ಟ್ ೧೯೫೧, ಪು– ೧೧೭

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಇಲ್ಲ, ಸರ್. ಚುನಾವಣಾ ಆಯೋಗವು ಈ ವಿಷಯದ ಬಗ್ಗೆ ರಾಜ್ಯ ಸರ್ಕಾರಗಳಿಗೆ ತಿಳಿಸಿದೆ.

(ಬಿ) ಇಲ್ಲ.

**ಶ್ರೀಮತಿ ದುರ್ಗಾಬಾಯಿ:** ಚುನಾವಣಾ ಆಯುಕ್ತರು ೨೫ ಲಕ್ಷ ಮಹಿಳಾ ಮತದಾರರು ಅನರ್ಹಗೊಂಡಿದ್ದಾರೆ ಎಂದು ಇತ್ತೀಚೆಗೆ ತಮ್ಮ (ರೇಡಿಯೋ) ಪ್ರಸಾರ ಭಾಷಣದಲ್ಲಿ ಹೇಳಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ಅನರ್ಹಗೊಂಡ ಮಹಿಳಾ ಮತದಾರರನ್ನು ಅರ್ಹಗೊಳಿಸಲು ಚುನಾವಣೆ ಮುಂದೂಡುವ ಅವಕಾಶವನ್ನು ಬಳಸಿಕೊಳ್ಳಲಾಗುವುದೆ?

**ಡಾ. ಅಂಬೇಡ್ಕರ್:** ಇದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ. ಈ ಪ್ರಶ್ನೆ ಚುನಾವಣಾ ದಿನಾಂಕಗಳಿಗೆ ಸಂಬಂಧಿಸಿದೆ; ಮತದಾರರ ಪಟ್ಟಿಗಳಿಗಲ್ಲ.

**ಶ್ರೀ ಕಾಮತ್:** ಹಿಮಾಚಲ ಪ್ರದೇಶದಲ್ಲಿ ಅಕ್ಟೋಬರ್ ಕೊನೆಯಲ್ಲಿ ಚುನಾವಣೆಗಳು ನಡೆಯುವ ದೃಷ್ಟಿಯಿಂದ, ಮತದಾರರು ಮತ್ತು ಅಭ್ಯರ್ಥಿಗಳು ತಮ್ಮ ಕಾರ್ಯಗಳಲ್ಲಿ ತೊಡಗಲು ಅನುಕೂಲವಾಗುವಂತೆ ನಿರ್ದಿಷ್ಟ ದಿನಾಂಕವನ್ನು ಈಗಾಗಲೇ ಘೋಷಿಸಲಾಗಿದೆಯೆ?

**ಡಾ. ಅಂಬೇಡ್ಕರ್:** ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ ಎಂಬುದರಲ್ಲಿ ನನಗೆ ಸಂಶಯವಿಲ್ಲ.

**ಶ್ರೀ ಕಾಮತ್:** ಸಂಸತ್ತಿನ ಮೊದಲ ಅಧಿವೇಶನ ಯಾವಾಗ ಸಮಾವೇಶಗೊಳ್ಳುವುದು ಎಂಬ ಬಗ್ಗೆ ಸರ್ಕಾರಕ್ಕೆ ಕಲ್ಪನೆ ಇದೆಯೆ?

**ಡಾ. ಅಂಬೇಡ್ಕರ್:** ಎಲ್ಲ ಪ್ರಾರಂಭಿಕ ಕ್ರಮಗಳನ್ನು ಪೂರೈಸದ ಹೊರತು, ಅದನ್ನು ಸಮಾವೇಶಗೊಳಿಸಲಾಗದು.

**ಶ್ರೀಮತಿ ದುರ್ಗಾಬಾಯಿ:** ರಾಜಸ್ಥಾನದ ಮಹಿಳೆಯರು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಮನವಿಯನ್ನು ಸಲ್ಲಿಸಿದ್ದಾರೆಯೆ?

**ಡಾ. ಅಂಬೇಡ್ಕರ್:** ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

**ಶ್ರೀಮತಿ ರೇಣುಕಾರಾಯ್:** ಪ್ರಶ್ನೆ ಚುನಾಣಾ ದಿನಾಂಕಕ್ಕೆ ಸಂಬಂಧಿಸಿರುವುದರಿಂದ, ಇದು ಖಂಡಿತವಾಗಿಯೂ ಉದ್ಭವಿಸುತ್ತದೆ.

**ಮಾನ್ಯ ಉಪಸಭಾಧ್ಯಕ್ಷರು:** ಇದು ತುಂಬ ಮಹತ್ವದ ವಿಷಯ. ಆದರೆ ದುರದೃಷ್ಟವಶಾತ್, ಇದು ಈ ಪ್ರಶ್ನೆಗೆ ಸಂಬಂಧಿಸಿಲ್ಲ.

**ಸೇಠ್ ಗೋವಿಂದ ದಾಸ್:** ಮಾನ್ಯ ಮಂತ್ರಿಗಳು ಮತದಾನದ ದಿನಾಂಕಗಳನ್ನೇನೊ ತಿಳಿಸಿದರು; ಆದರೆ, ಸರ್ಕಾರವು ಮತದಾನಕ್ಕೆ ಸಂಬಂಧಪಟ್ಟ ಪ್ರಾರಂಭಿಕ ಕಲಾಪಗಳಾದ ಉದಾಹರಣೆಗೆ, ನಾಮಪತ್ರ ಸಲ್ಲಿಕೆ ಮತ್ತಿತರ ಕಾರ್ಯಗಳ ಬಗ್ಗೆ ಪೂರ್ಣ ಕಾರ್ಯಪಟ್ಟಿಯನ್ನೇನಾದರೂ ಸಿದ್ಧಪಡಿಸುತ್ತದೆಯೆ? ಹಾಗಿದ್ದಲ್ಲಿ, ನಾಮಪತ್ರ ಸಲ್ಲಿಕೆ, ಪರಿಶೀಲನೆ ಮತ್ತು ಮತದಾನದ ದಿನಾಂಕವನ್ನು ಯಾವಾಗ ತಿಳಿಯಪಡಿಸಲಾಗುವುದು?

**ಡಾ. ಅಂಬೇಡ್ಕರ್:** ಅದನ್ನು ಈಗಾಗಲೆ ಜನತಾ ಪ್ರಾತಿನಿಧ್ಯ ಅಧಿನಿಯಮದಲ್ಲಿ ಹೇಳಲಾಗಿದೆ.

**ಶ್ರೀ ಸೋಂಧಿ:** ರಾಜ್ಯ ವಿಧಾನಮಂಡಲ ಮತ್ತು ಸಂಸತ್ತು ಎರಡಕ್ಕೂ ಏಕಕಾಲದಲ್ಲಿ ಚುನಾವಣೆ ನಡೆಯಲಿರುವುದರಿಂದ ಪಂಜಾಬ್‌ನ ಕಾಂಗ್ರಾ ಜಿಲ್ಲೆಯ ಸಂಸತ್ತಿನ ಒಂದು ಮತಕ್ಷೇತ್ರಕ್ಕೆ ಕನಿಷ್ಠ ಏಳು ರಾಜ್ಯಮತಕ್ಷೇತ್ರಗಳಿರುವುದು ಆವಶ್ಯಕವೆ?

**ಡಾ. ಅಂಬೇಡ್ಕರ್:** ಆವಶ್ಯಕವಾದದ್ದನ್ನು ಮಾಡಲೇಬೇಕಾಗುವುದು. ಸರ್ಕಾರವು ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಅಕ್ರಮವನ್ನು ಖಂಡಿತವಾಗಿಯೂ ಸಹಿಸಲಾರದು.

**ಶ್ರೀ ಸೋಂಧಿ:** ಅಲ್ಲಿ ಐದು ಬಯಲು ಸ್ಥಾನಗಳು ಮತ್ತು ಎರಡು ಗುಡ್ಡಗಾಡು ಸ್ಥಾನಗಳಿವೆ. ಚುನಾವಣೆ ಏಳು ಸ್ಥಾನಗಳಿಗೂ ನಡೆಯುವುದೆ ಅಥವಾ ಎರಡಕ್ಕೆ ಮಾತ್ರವೆ?

**ಡಾ. ಅಂಬೇಡ್ಕರ್:** ಇವಕ್ಕೆಲ್ಲ ಕಾನೂನುಗಳಿವೆ; ಪರಿಸ್ಥಿತಿ ಅಗತ್ಯಪಡಿಸಿದರೆ ವಿನಾಯಿತಿಗಳನ್ನು ಮಾಡಲಾಗುವುದು.

**ಶ್ರೀ ಸೋಂಧಿ:** ಮತದಾನ ಸದ್ಯದಲ್ಲಿಯೇ ನಡೆಯುವುದರಿಂದ, ನನಗೆ ತಿಳಿದುಕೊಳ್ಳಬೇಕಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು:** ಮಾನ್ಯ ಮಂತ್ರಿಗಳು ಪ್ರತಿಯೊಂದು ಮತಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಿವರಗಳನ್ನು ತಮ್ಮೊಂದಿಗೆ ಒಯ್ಯಲಾರರು. ಮಾನ್ಯ ಸದಸ್ಯರು ಈ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು.

**ಶ್ರೀ ಸೋಂದಿ:** ಏಕೆಂದರೆ ಉಳಿದಿರುವುದು ಕೇವಲ ಎರಡೇ ತಿಂಗಳು.

**ಶ್ರೀ ಸೋನಾವಣೆ:** ಒಂದು ನಿರ್ದಿಷ್ಟ ರಾಜ್ಯದಲ್ಲಿನ ಚುನಾವಣೆಗಳು ಒಂದೇ ದಿನದಲ್ಲಿ ಪೂರ್ಣಗೊಳ್ಳುವುದೆ ಅಥವಾ ಅನೇಕ ದಿನಗಳ ಕಾಲ ನಡೆಯುವವೆ?

**ಡಾ. ಅಂಬೇಡ್ಕರ್:** ಅದು ಲಭ್ಯವಿರುವ ಆಡಳಿತ ಯಂತ್ರವನ್ನು ಅವಲಂಬಿಸುತ್ತದೆ. ಒಂದು ವೇಳೆ ರಾಜ್ಯವು ಒಂದೇ ದಿನದಲ್ಲಿ ಎಲ್ಲ ಚುನಾವಣೆಗಳನ್ನು ಪೂರ್ಣಗೊಳಿಸಲು ಸಾಕಷ್ಟು ಆಡಳಿತ ಯಂತ್ರವನ್ನು ಹೊಂದಿದ್ದರೆ ರಾಜ್ಯ ಹಾಗೆಯೇ ಮಾಡುವುದು. ಇಲ್ಲವಾದಲ್ಲಿ ಸರ್ಕಾರವು ರಾಜ್ಯಗಳು ತಮ್ಮ ಕಷ್ಟಗಳನ್ನು ಭರಿಸಲು ಅನುಕೂಲವಾಗುವಂತೆ ಚುನಾವಣೆಗಳನ್ನು ನಿರ್ದಿಷ್ಟ ಅವಧಿಯವರೆಗೆ ಹರಡಲು ಸಾಕಷ್ಟು ಸಿದ್ಧತೆಯನ್ನು ಮಾಡಿಕೊಂಡಿದೆ.

**ಶ್ರೀ ಕಾಮತ್:** ಪ್ರಶ್ನೆಯ ಎ ಮತ್ತು ಬಿ ಭಾಗಗಳ ಉತ್ತರಗಳಿಂದ ಉದ್ಭವಿಸುವಂತೆ ಭಾರತದ ಇತರ ಭಾಗಗಳಲ್ಲಿ ಪ್ರಾದೇಶಿಕ ಆಯುಕ್ತರನ್ನು ನೇಮಕ ಮಾಡಲಾಗಿದೆಯೆ ಮತ್ತು ಮತದಾನ ಹಾಗೂ ಸಂಬಂಧಿತ ಇತರ ವಿಷಯಗಳ ಏರ್ಪಾಟುಗಳೊಂದಿಗೆ ಮುಂದುವರಿಯಲು ಪ್ರಾದೇಶಿಕ ಆಯುಕ್ತರಿಗೆ ನೆರವಾಗಲು ರಾಜ್ಯ ಸರ್ಕಾರವನ್ನು ಕೇಳಲಾಗಿದೆಯೆ?

**ಡಾ. ಅಂಬೇಡ್ಕರ್:** ಪ್ರಾದೇಶಿಕ ಆಯುಕ್ತರನ್ನು ನೇಮಕಮಾಡುವ ವಿಷಯವು ಪರಿಶೀಲನೆಯಲ್ಲಿದೆ. ಪ್ರಾದೇಶಿಕ ಆಯುಕ್ತರು ಸದ್ಯದಲ್ಲಿಯೇ ನೇಮಕಗೊಳ್ಳುವರೆಂದು ನಿರೀಕ್ಷಿಸಲಾಗಿದೆ.

**ಶ್ರೀ ಕಾಮತ್:** ಅಂತಿಮ ಚುನಾವಣಾ ಪಟ್ಟಿಗಳನ್ನು ಪ್ರಕಟಿಸಲಾಗಿದೆಯೆ?

**ಡಾ. ಅಂಬೇಡ್ಕರ್:** ನಾನು ಏಕಾಏಕಿ ಉತ್ತರ ನೀಡಲಾರೆ. ಖಂಡಿತವಾಗಿ ಸೂಕ್ತಕಾಲದಲ್ಲಿ ಅವುಗಳನ್ನು ಮುದ್ರಿಸಲಾಗುವುದು.

**ಶ್ರೀ ದ್ವಿವೇದಿ:** ಕೆಲವೊಂದು ಭಾಗ 'ಸಿ' ರಾಜ್ಯಗಳು ವಿಧಾನ ಮಂಡಳಗಳನ್ನು ಹೊಂದಿರುತ್ತವೆಂದು ರಾಜ್ಯಗಳ ಮತ್ತು ಗೃಹ ವ್ಯವಹಾರಗಳ ಮಂತ್ರಿಗಳು ತಾತ್ವಿಕವಾಗಿ ಒಪ್ಪಿಕೊಂಡಿರುವುದರಿಂದ ಭಾಗ 'ಸಿ' ರಾಜ್ಯಗಳ ವಿಧಾನಮಂಡಲಗಳ ಚುನಾವಣೆಗಳನ್ನು ಮಹಾಚುನಾವಣೆಗಳೊಂದಿಗೆ ಏಕಕಾಲದಲ್ಲಿ ನಡೆಸಲಾಗುವುದೆ?

**ಡಾ. ಅಂಬೇಡ್ಕರ್:** ವಿಧೇಯಕದ ಉಪಬಂಧಗಳೇನೆಂದು ನಾನು ಹೇಳಲಾರೆ.

**ಶ್ರೀಮತಿ ಅಮ್ಮು ಸ್ವಾಮಿನಾಥನ್:** ಮಾನ್ಯ ಮಂತ್ರಿಗಳು ರಾಜಾಸ್ಥಾನದಲ್ಲಿ ಮತದಾನಕ್ಕೆ ನಿಗದಿಪಡಿಸಿರುವ ದಿನಾಂಕವನ್ನು ತಿಳಿಸುವರೆ?

**ಡಾ. ಅಂಬೇಡ್ಕರ್:** ಅದಕ್ಕೆ ನಾನು ಉತ್ತರಿಸಲಾರೆ.

**ಶ್ರೀ ಕಾಮತ್:** ಚುನಾವಣಾ ವಿಧೇಯಕದ ಮೇರೆಗೆ ನಿಯಮಗಳನ್ನು ಯಾವ ದಿನಾಂಕದ ವೇಳೆಗೆ ಅಂತಿಮಗೊಳಿಸಿ ಅಧಿಸೂಚಿಸಲಾಗುವುದು.

**ಮಾನ್ಯ ಉಪಸಭಾಧ್ಯಕ್ಷರು:** ಮುಂದಿನ ಪ್ರಶ್ನೆ.

**ಡಾ. ಅಂಬೇಡ್ಕರ್:** ಈ ತಿಂಗಳೊಳಗಾಗಿ ಅಂತಿಮಗೊಳಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

**ಮಾನ್ಯ ಉಪಸಭಾಧ್ಯಕ್ಷರು:** ಸದಸ್ಯರು ಪ್ರಶ್ನಿಸುತ್ತಲೇ ಇರುತ್ತಾರೆ. ಮಾನ್ಯ ಮಂತ್ರಿಗಳು ಉತ್ತರಿಸುತ್ತಲೇ ಇರುತ್ತಾರೆ. ಅದಕ್ಕಾಗಿ ನಾನು ವಿಷಾದಿಸುತ್ತೇನೆ. ಮುಂದಿನ ಪ್ರಶ್ನೆ ಎಂದಿದ್ದೇನೆ. ಮಾನ್ಯ ಮಂತ್ರಿಗಳು ಉತ್ತರಿಸುವ ಅಗತ್ಯವಿಲ್ಲ.

**ಶ್ರೀ ಕಾಮತ್:** ತಮ್ಮ ಮಾತು ನನಗೆ ಕೇಳಿಸಲಿಲ್ಲ ಸರ್.

## ೩೯

## *ರಾಜಕೀಯ ಪಕ್ಷಗಳಿಗೆ ಚಿಹ್ನೆಗಳು

೧೧೫. **ಶ್ರೀ ಎಸ್.ಎನ್. ದಾಸ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಚುನಾವಣಾ ಆಯೋಗವು ಮುಂಬರುವ ಮಹಾಚುನಾವಣೆಗಳಲ್ಲಿ ವಿವಿಧ ಪಕ್ಷಗಳಿಗೆ ಚಿಹ್ನೆಗಳನ್ನು ಹಂಚಿಕೆ ಮಾಡಲು ಆಹ್ವಾನಿಸಿದ್ದ ರಾಜಕೀಯ ಪಕ್ಷಗಳ ಹೆಸರುಗಳು:

(ಬಿ) ಯಾವ ಆಧಾರದ ಮೇಲೆ ಈ ಪಕ್ಷಗಳನ್ನು ಆಹ್ವಾನಿಸಲಾಗಿದ್ದಿತು?

(ಸಿ) ಈ ಪಕ್ಷಗಳನ್ನು ಆಹ್ವಾನಿಸುವ ಮೊದಲು ಚುನಾವಣೆಗಳಲ್ಲಿ ಯಾವ ರಾಜಕೀಯ ಪಕ್ಷಗಳು ಸ್ಪರ್ಧಿಸುತ್ತವೆಂದು ತಿಳಿಯುವ ಪ್ರಯತ್ನವನ್ನೇನಾದರೂ ಮಾಡಲಾಗಿದೆಯೆ? ಮತ್ತು

(ಡಿ) ಚಿಹ್ನೆಗಳನ್ನು ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಏನಾದರೂ ನಿರ್ಣಯ ಕೈಗೊಳ್ಳಲಾಗಿದೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) (೧) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (೨) ಅಖಿಲ ಭಾರತ ಫಾರ್‌ವರ್ಡ್ ಬ್ಲಾಕ್ (ರೂಯ್ಕರ್ ಗುಂಪು) (೨) ಅಖಿಲ ಭಾರತ ಫಾರ್‌ವರ್ಡ್ ಬ್ಲಾಕ್ (ಭಾರತದ ಕಾರ್ಮಿಕರ ಮತ್ತು ಕೃಷಿಕರ ಮಾರ್ಕ್ಸಿಸ್ಟ್ ಗುಂಪು) (೪) ಅಖಿಲ ಭಾರತ ಹಿಂದೂ ಮಹಾಸಭಾ (೫) ಕಿಸಾನ್ ಮಜ್ದೂರ್ ಪ್ರಜಾಪಕ್ಷ (೬) ಅಖಿಲ ಭಾರತೀಯ ರಾಮರಾಜ್ಯ ಪರಿಷತ್ತು (೭) ಸಮಾಜವಾದಿ ಪಕ್ಷ (೮) ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ.

ಬಿ ಮತ್ತು ಸಿ – ಚುನಾವಣಾ ಆಯೋಗದ ಅಭಿಪ್ರಾಯದಲ್ಲಿ ಎಲ್ಲ ರಾಜ್ಯಗಳಲ್ಲಿ ಅಥವಾ ಬಹುಪಾಲು ರಾಜ್ಯಗಳಲ್ಲಿ ವಾಸ್ತವಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಅವುಗಳಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸುವ ನಿರೀಕ್ಷೆ ಇರುವಂಥ ಪಕ್ಷಗಳನ್ನು ಸಮಾವೇಶಕ್ಕೆ ಆಹ್ವಾನಿಸಲಾಗಿದ್ದಿತು.

(ಡಿ) ಚುನಾವಣಾ ಆಯೋಗವು ಈ ಮುಂದಿನಂತೆ ಚಿಹ್ನೆಗಳನ್ನು ಹಂಚಿಕೆ ಮಾಡಿರುತ್ತದೆ.

---

* ಪಿ.ಡಿ. ಸಂ. ೯, ಭಾಗ–೧, ೯ ಆಗಸ್ಟ್ ೧೯೫೧ ಪು– ೧೩೩

(೧) ಅಖಿಲ ಭಾರತ ಫಾರ್‌ವರ್ಡ್ ಬ್ಲಾಕ್ (ಮಾರ್ಕ್ಸಿಸ್ಟ್ ಗುಂಪು) ನಿಂತಿರುವ ಸಿಂಹ

(೨) ಅಖಿಲ ಭಾರತ ಫಾರ್‌ವರ್ಡ್ ಬ್ಲಾಕ್ (ರೂಯ್ಕರ್ ಗುಂಪು) – ಕೈ

(೩) ಅಖಿಲ ಭಾರತ ಹಿಂದೂ ಮಹಾಸಭಾ – ಕುದುರೆ ಮತ್ತು ಸವಾರ

(೪) ಕಿಸಾನ್ ಮಜ್ದೂರ್ ಪ್ರಜಾಪಕ್ಷ – ಗುಡಿಸಲು

(೫) ಅಖಿಲ ಭಾರತೀಯ ರಾಮರಾಜ್ಯ ಪರಿಷತ್ತು – ಉದಯಿಸುತ್ತಿರುವ ಸೂರ್ಯ

(೬) ಅಖಿಲ ಭಾರತ ಪರಿಶಿಷ್ಟ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಭಾರತದ ಸಮಾಜವಾದಿ ಪಕ್ಷಗಳಿಗೆ ಚಿಹ್ನೆಗಳನ್ನು ಹಂಚಿಕೆ ಮಾಡುವ ವಿಷಯದಲ್ಲಿ ಶೀಘ್ರದಲ್ಲಿಯೇ ತೀರ್ಮಾನವನ್ನು ಕೈಗೊಳ್ಳಲಾಗುವುದೆಂದು ನಿರೀಕ್ಷಿಸಲಾಗಿದೆ.

ಭಾರತದ ಕಮ್ಯುನಿಸ್ಟ್ ಪಕ್ಷ ಕೂಡ ಎರಡು ಚಿಹ್ನೆಗಳನ್ನು ಆಯ್ಕೆ ಮಾಡಿ ಚುನಾವಣಾ ಆಯೋಗಕ್ಕೆ ತಿಳಿಸಿರುತ್ತದೆ. ಇವುಗಳನ್ನು ಚುನಾವಣಾ ಆಯೋಗವು ಪರಿಶೀಲಿಸುತ್ತಿದೆ.

## ೪೦

## *ಮಹಾ ಚುನಾವಣೆಗಳಿಗೆ ಮತದಾರರ ಪಟ್ಟಿಗಳು

**೨೦ ಡಾ. ಎಂ.ವಿ. ಗಂಗಾಧರ ಶಿವ:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ;

(ಎ) ದೇಶದ ವಿವಿಧ ಭಾಗಗಳಲ್ಲಿ ಯಾವ ದಿನಾಂಕಕ್ಕೆ ಪ್ರಾರಂಭಿಕ ಮತದಾರರ ಪಟ್ಟಿಗಳನ್ನು ಅಂತಿಮಗೊಳಿಸಲಾಗುವುದು?

(ಬಿ) ಅಂತಿಮ ಮತದಾರರ ಪಟ್ಟಿಗಳ ಮುದ್ರಣಕ್ಕೆ ಎಷ್ಟು ಕಾಲ ಬೇಕಾಗುವುದು ಮತ್ತು ಅವುಗಳನ್ನು ಭಾರತದಲ್ಲಿಯೇ ಅಥವಾ ಹೊರಗೆ ಮುದ್ರಿಸಲು ಉದ್ದೇಶಿಸಲಾಗಿದೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಮತದಾರರ ಪಟ್ಟಿಗಳನ್ನು ಈ ತಿಂಗಳ ಕೊನೆಯ ವೇಳೆಗೆ ಅಂತಿಮವಾಗಿ ಪ್ರಕಟಿಸುವ ನಿರೀಕ್ಷೆಯಿದೆ.

(ಬಿ) ಪಟ್ಟಿಗಳನ್ನು ಅಂತಿಮ ಪ್ರಕಟಣೆಗೆ ಮುನ್ನ ಪುನರ್ ಮುದ್ರಿಸಲಾಗುವುದಿಲ್ಲ. ಕ್ಲೇಮು ಮತ್ತು ಆಕ್ಷೇಪಣೆಗಳಿಂದ ಅಗತ್ಯವಾಗಬಹುದಾದ ಸೇರ್ಪಡೆ ಮತ್ತು ತಿದ್ದುಪಡಿಗಳನ್ನು ಮಾತ್ರ ಮುದ್ರಿಸಿ ಪ್ರಾರಂಭಿಕ ಪಟ್ಟಿಗಳಿಗೆ ಸೇರಿಸಲಾಗುವುದು. ಭಾರತದ ಹೊರಗೆ ಮುದ್ರಿಸಿಲ್ಲ ಅಥವಾ ಮುದ್ರಿಸುವುದಿಲ್ಲ.

* ಪಿ.ಡಿ. ಸಂ.೯, ಭಾಗ–೧, ೯ ಆಗಸ್ಟ್ ೧೯೫೧ ಪು–೧೪೯

# ೪೧

## *ಮಹಿಳಾ ಮತದಾರರು ಮತ್ತು ಮತದಾರರ ಪಟ್ಟಿಗಳು

**೨೪ ಶ್ರೀ ಎಸ್.ಎನ್. ದಾಸ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ;

(ಎ) ಮಹಿಳಾ ಮತದಾರರೆಂದು ಮಾಡಲಾದ ನಮೂದುಗಳು ಮತ್ತು ಅನಂತರದಲ್ಲಿ ಮಹಿಳಾ ಮತದಾರರ ಸರಿಯಾದ ಹೆಸರುಗಳನ್ನು ಹೊಂದಿಲ್ಲವೆಂಬ ಆಧಾರದ ಮೇಲೆ ಭಾರತ ಸರ್ಕಾರವು ಹೊರಡಿಸಿದ ಸೂಚನೆಗಳಿಗೆ ಅನುಸಾರವಾಗಿ ತೆಗೆದುಹಾಕಲ್ಪಟ್ಟ ನಮೂದುಗಳ ಒಟ್ಟು ಸಂಖ್ಯೆ ಹಾಗೂ ರಾಜ್ಯವಾರು ಅಂಕಿ ಸಂಖ್ಯೆಗಳು.

(ಬಿ) ಈ ನಮೂದುಗಳನ್ನು ಗಣತಿದಾರರು ನಮೂದು ಮಾಡುವಾಗ ಅವರ ಹೆಸರುಗಳನ್ನು ಕೇಳದೆಯೆ ಮಾಡಿರುವುದು ನಿಜವೆ?

(ಸಿ) ಅಂಥ ಮಹಿಳಾ ಮತದಾರರ ಭಾರಿ ಸಂಖ್ಯೆಯ ಹೆಸರುಗಳನ್ನು ಸೇರಿಸುವ ದೃಷ್ಟಿಯಿಂದ ಮತದಾರರ ಪಟ್ಟಿಗಳನ್ನು ಪರಿಷ್ಕರಿಸುವಂತೆ ಕೋರಿ ಭಾರಿ ಸಂಖ್ಯೆಯಲ್ಲಿ ಸರ್ಕಾರವು ಮನವಿಗಳನ್ನು ಸ್ವೀಕರಿಸಿರುವುದು ನಿಜವೆ?

(ಡಿ) ಹಾಗಿದ್ದಲ್ಲಿ ಆ ಮನವಿಗಳನ್ನು ಸರ್ಕಾರವು ಪರಿಗಣಿಸಿ ಯಾವುದಾದರೂ ತೀರ್ಮಾನಕ್ಕೆ ಬಂದಿದೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಎ ನಿಂದ ಡಿ – ಮಾನ್ಯ ಸದಸ್ಯರ ಗಮನವನ್ನು ೯ ಆಗಸ್ಟ್ ೧೯೫೧ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂ. ೧೨೦ ಕ್ಕೆ ನೀಡಿದ ಉತ್ತರದ ಕಡೆಗೆ ಸೆಳೆಯಲಾಗಿದೆ.

# ೪೨

## *ಹಿಂದುಳಿದ ವರ್ಗಗಳಿಗೆ ಕೇಂದ್ರಿಯ ಅನುದಾನಗಳು

**೩೨೨ ಶ್ರೀ ಕ್ಷುದೀರಾಮ್ ಮೆಹತಾ:** ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳನ್ನು ಹೊರತುಪಡಿಸಿ ಹಿಂದುಳಿದ ವರ್ಗಗಳ ಶಿಕ್ಷಣಕ್ಕಾಗಿ ೧೯೪೮, ೧೯೪೯, ೧೯೫೦ ಮತ್ತು ೧೯೫೧ರಲ್ಲಿ ಮಂಜೂರು ಮಾಡಿದ ಕೇಂದ್ರೀಯ ಅನುದಾನದ ಮೊತ್ತ ಎಷ್ಟು ಎಂದು ಶಿಕ್ಷಣ ಸಚಿವರು ತಿಳಿಸುವರೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಭಾರತ ಸರ್ಕಾರ ವಿದ್ಯಾರ್ಥಿವೇತನ ಯೋಜನೆಯ ಮೇರೆಗೆ, ಸೂಕ್ತ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಭಾರತದಲ್ಲಿನ ಅವರ ಮೆಟ್ರಿಕ್ಯುಲೇಷನ್ ನಂತರದ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನಗಳನ್ನು ನೀಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳನ್ನು ಹೊರತುಪಡಿಸಿ ಹಿಂದುಳಿದ ವರ್ಗಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಈವರೆಗೆ ಭರಿಸಲಾದ ವೆಚ್ಚ ಈ ಮುಂದಿನಂತಿದೆ;

---

* ಪಿ.ಡಿ. ಸಂ–೯, ಭಾಗ–೧, ೯ ಆಗಸ್ಟ್ ೧೯೫೧ ಪು–೧೫೧

* ಅದೇ ಪುಟ–೪೦೦

| | | |
|---|---|---|
| ೧೯೪೮–೪೯ | – | ರೂ. ಇಲ್ಲ |
| ೧೯೪೯–೫೦ | – | ರೂ. ೨,೪೬,೩೨೭ |
| ೧೯೫೦–೫೧ | – | ರೂ. ೩,೫೭,೫೦೪ |

೧೯೫೧–೫೨ ರಲ್ಲಿ ರೂ. ೩,೬೫,೦೦೦ ಮೌಲ್ಯದ ವಿದ್ಯಾರ್ಥಿವೇತನವನ್ನು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ನೀಡಲಾಗುವುದು.

**ಶ್ರೀ ಕ್ಷುದೀರಾಮ್ ಮೆಹತಾ:** ಯಾವುದಾದರೂ ನಿರ್ದಿಷ್ಟ ಅರ್ಜಿಯನ್ನು ಪರಿಗಣಿಸುವ ಮುನ್ನ ಒಟ್ಟಾರೆ ಮೊತ್ತದಲ್ಲಿ ಪ್ರಾಂತೀಯ ಹಂಚಿಕೆಯನ್ನೇನಾದರೂ ಮಾಡಲಾಗಿದೆಯೆ? ಹಾಗಿದ್ದಲ್ಲಿ ಯಾವ ಆಧಾರದ ಮೇಲೆ?

**ಡಾ. ಅಂಬೇಡ್ಕರ್:** ಯಾವುದೇ ಪ್ರಾಂತೀಯ ಹಂಚಿಕೆ ಇರಲಾರದೆಂದು ನನ್ನ ಭಾವನೆ.

**ಶ್ರೀ ರುದ್ರಪ್ಪ:** ೧೯೪೯–೫೦ ಮತ್ತು ೧೯೫೦–೫೧ರಲ್ಲಿನ ಅರ್ಜಿಗಳ ಸಂಖ್ಯೆ ಎಷ್ಟು?

**ಡಾ. ಅಂಬೇಡ್ಕರ್:** ಅಂಕಿ ಸಂಖ್ಯೆಗಳು ಈ ಕೆಳಕಂಡಂತಿವೆ.

೧೯೪೯–೫೦– ಸ್ವೀಕರಿಸಿದ ಅರ್ಜಿಗಳು ೩೦೦೬. ನೀಡಿದ ವಿದ್ಯಾರ್ಥಿವೇತನಗಳು ೩೪೯

೧೯೫೦–೫೧– ಸ್ವೀಕರಿಸಿದ ಅರ್ಜಿಗಳು ೩೮೩೦. ನೀಡಿದ ವಿದ್ಯಾರ್ಥಿವೇತನಗಳು ೫೧೭

**ಶ್ರೀ ರತ್ನಸ್ವಾಮಿ:** ಈ ಹಿಂದುಳಿದ ವರ್ಗಗಳ ಪ್ರಯೋಜನಕ್ಕಾಗಿ ನೀಡಿದ ಅನುದಾನಗಳನ್ನು ರಾಜ್ಯಗಳು ಸೂಕ್ತವಾಗಿ ವೆಚ್ಚ ಮಾಡಿವೆಯೇ ಎಂದು ನೋಡಿಕೊಳ್ಳಲು ಸರ್ಕಾರ ಅಳವಡಿಸಿಕೊಂಡಿರುವ ವಿಧಾನ ಯಾವುದು?

**ಡಾ. ಅಂಬೇಡ್ಕರ್:** ಹಣವನ್ನು ರಾಜ್ಯಗಳಿಗೆ ನೀಡುವುದಿಲ್ಲ. ಅರ್ಜಿಗಳನ್ನು ಕೇಂದ್ರೀಯ ಮಂಡಳಿಯು ಇತ್ಯರ್ಥಪಡಿಸುವುದು. ರಾಜ್ಯಗಳು ಹಸ್ತಕ್ಷೇಪ ಮಾಡುವುದೆ ಇಲ್ಲ.

**ಠಾಕೂರ್ ಕೃಷ್ಣ ಸಿಂಗ್:** ವಿಲೀನಗೊಂಡ ರಾಜ್ಯಗಳು ಮತ್ತು ಭಾಗ ಬಿ ಮತ್ತು ಭಾಗ ಸಿ ರಾಜ್ಯಗಳಲ್ಲಿನ ಹಿಂದುಳಿದ ವರ್ಗಗಳ ಪಟ್ಟಿಯನ್ನೇನಾದರೂ ಸಂಬಂಧಿಸಿದ ರಾಜ್ಯಗಳು ಸಿದ್ಧಪಡಿಸಿವೆಯೆ ಮತ್ತು ಪ್ರದೇಶಗಳ ವಿದ್ಯಾರ್ಥಿಗಳು ಸಲ್ಲಿಸಿದ ವಿದ್ಯಾರ್ಥಿವೇತನ ಅರ್ಜಿಗಳನ್ನು ಅಲ್ಲಿ ಅಂಥ ಪಟ್ಟಿ ಇಲ್ಲವೆಂಬ ಕಾರಣಕ್ಕಾಗಿ ಕೈಗೆತ್ತಿಕೊಂಡಿಲ್ಲ ಎಂಬುದು ನಿಜವೆ?

**ಡಾ. ಅಂಬೇಡ್ಕರ್:** ಈಗಾಗಲೇ ಪಟ್ಟಿ ಇದೆ. ಈ ಪಟ್ಟಿಗಳನ್ನು ವಿವಿಧ ರಾಜ್ಯಗಳಿಂದ ಮಾಡಿದ ಶಿಫಾರಸ್ಸುಗಳ ಮೇಲೆ ಸಿದ್ಧಪಡಿಸಲಾಗಿದೆ.

**ಶ್ರೀ ಆರ್.ಕೆ. ಚೌಧರಿ:** ಬುಡಕಟ್ಟು ವರ್ಗಗಳ ಪಟ್ಟಿಗಳನ್ನು ಈ ಹಿಂದೆ ಯಾವಾಗ ಪರಿಷ್ಕರಿಸಲಾಯಿತು.

**ಡಾ. ಅಂಬೇಡ್ಕರ್:** ನನಗೆ ನೋಟೀಸು ನೀಡಬೇಕು.

**ಡಾ. ದೇಶಮುಖ್:** ಈ ಹಿಂದುಳಿದ ವರ್ಗಗಳ ಜನಸಂಖ್ಯೆಯನ್ನು ರಾಜ್ಯವಾರು ಕಂಡುಹಿಡಿಯಲು ಪ್ರಯತ್ನವನ್ನೇನಾದರೂ ಮಾಡಲಾಗಿದೆಯೆ?

**ಡಾ. ಅಂಬೇಡ್ಕರ್:** ಈ ಸಂದರ್ಭದಲ್ಲಿ ಜನಸಂಖ್ಯೆಯ ಪ್ರಶ್ನೆ ತೀರಾ ಗೌಣವಾದದು.

**ಡಾ. ದೇಶಮುಖ್:** ಪ್ರತಿಯೊಂದು ರಾಜ್ಯದ ಅನುಸೂಚಿಯಲ್ಲಿ ಸೇರಿಸಿರುವ ಹಿಂದುಳಿದ ವರ್ಗಗಳ ಸಂಖ್ಯೆಯಲ್ಲಿ ತುಂಬಾ ಗಣನೀಯ ವ್ಯತ್ಯಾಸವಿರುವುದು ಮತ್ತು ಭಾಗ 'ಸಿ' ರಾಜ್ಯಗಳ ಪಟ್ಟಿಗೆ ಸೇರ್ಪಡೆ ಮಾಡಿರುವ ಈ ವರ್ಗಗಳ ಸಂಖ್ಯೆ ತೀರಾ ಅಲ್ಪ ಎಂಬುದು ನಿಜವೆ?

**ಡಾ. ಅಂಬೇಡ್ಕರ್:** ಅದು ಸಾಧ್ಯವಿರಲೂಬಹುದು. ಏಕೆಂದರೆ ಒಂದು ಪ್ರದೇಶದಲ್ಲಿನ ಹಿಂದುಳಿದಿರುವ

ವರ್ಗವು ಮತ್ತೊಂದು ಪ್ರದೇಶದಲ್ಲಿ ಹಿಂದುಳಿದಿಲ್ಲದಿರಬಹುದು.

**ಡಾ. ದೇಶಮುಖ್:** ಭಾಗ 'ಸಿ' ರಾಜ್ಯಗಳು ಭಾರತದ ಉಳಿದ ರಾಜ್ಯಗಳಿಗಿಂತ ಹೆಚ್ಚು ಹಿಂದುಳಿದಿರುವುದು ನಿಜವಲ್ಲವೆ?

**ಡಾ. ಅಂಬೇಡ್ಕರ್:** ಬಹುಶಃ ಅದೊಂದು ಆರೋಪವಾಗಿದ್ದು ಅದನ್ನು ಆ ರಾಜ್ಯಗಳು ಇಷ್ಟಪಡದಿರಬಹುದು.

**ಶ್ರೀ ಠಾಕೂರ್ ಕೃಷ್ಣಸಿಂಗ್:** ಪರಿಷ್ಕೃತ ಪಟ್ಟಿಯನ್ನು ಒಕ್ಕೂಟ ರಚನೆಗೆ ಮತ್ತು ರಾಜ್ಯಗಳನ್ನು ಪ್ರಾಂತ್ಯಗಳಲ್ಲಿ ವಿಲೀನಗೊಳಿಸುವುದಕ್ಕೆ ಮುನ್ನ ಸಿದ್ಧಪಡಿಸಿರುವುದು ನಿಜವೆ?

**ಡಾ. ಅಂಬೇಡ್ಕರ್:** ಇರಬಹುದು. ಆದರೆ ಅದು ವಿಷಯಕ್ಕೆ ಹೇಗೆ ಬಾಧಕ. ಆ ಪಟ್ಟಿಗಳೇನೂ ಕಟ್ಟುನಿಟ್ಟಿನವಲ್ಲ. ಅವುಗಳನ್ನು ಪ್ರತಿಸಲವು ಪರಿಷ್ಕರಿಸಲಾಗುತ್ತದೆ.

**ಶ್ರೀ ದೇಶಬಂಧುಗುಪ್ತ:** ಈ ವಿದ್ಯಾರ್ಥಿ ವೇತನ ನೀಡುವ ಮುನ್ನ ಮೊತ್ತವನ್ನು ಜನಸಂಖ್ಯೆಯ ಆಧಾರದ ಮೇಲೆ ವಿವಿಧ ರಾಜ್ಯಗಳಿಗೆ ಹಂಚಿಕೆ ಮಾಡಿರುವುದು ಮತ್ತು ವಿದ್ಯಾರ್ಥಿ ವೇತನಗಳನ್ನು ರಾಜ್ಯಗಳ ಮೂಲಕ ವಿತರಿಸಿರುವುದು ನಿಜವೆ?

**ಡಾ. ಅಂಬೇಡ್ಕರ್:** ನನಗೆ ತಿಳಿದಿರುವಷ್ಟರ ಮಟ್ಟಿಗೆ ಹಾಗೇನೂ ಇಲ್ಲ.

## ೪೩

## *ರಾಷ್ಟ್ರೀಯ ಭಾಷೆಯ ಪ್ರೋತ್ಸಾಹಕ್ಕೆ ಅನುದಾನಗಳು

**೩೨೩ ಶ್ರೀ ಕೇಶವರಾವ್:** ಶಿಕ್ಷಣ ಸಚಿವರು ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ರಾಷ್ಟ್ರೀಯ ಭಾಷೆಯ ಪ್ರೋತ್ಸಾಹಕ್ಕಾಗಿ ೧೯೪೯-೫೦ ಮತ್ತು ೧೯೫೦ ಮತ್ತು ೫೧ರಲ್ಲಿ ವೆಚ್ಚ ಮಾಡಿದ ಮೊತ್ತವೆಷ್ಟು?

(ಬಿ) ಈ ಉದ್ದೇಶಕ್ಕಾಗಿ ಅನುದಾನ ನೀಡಲಾದ ಖಾಸಗಿ ಸಂಸ್ಥೆ ಮತ್ತು ಸಂಘಟನೆಗಳು ಯಾವುವು?

(ಸಿ) ಭಾರತ ಸರ್ಕಾರವು ವಿವಿಧ ಹಿಂದಿಯೇತರ ಭಾಷೆಗಳಿಗೆ ಅನುದಾನ ನೀಡಲು ಮೊತ್ತವೇನ್ನಾದರೂ ನಿಗದಿಪಡಿಸಿದೆಯೆ.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ೧೯೪೯-೫೦ರಲ್ಲಿ ರೂ. ೨,೮೦,೦೦೦ ಮತ್ತು ೧೯೫೦-೫೧ ರಲ್ಲಿ ೧,೦೫,೦೦೦

(ಬಿ) i ಹಿಂದಿ ಸಾಹಿತ್ಯ ಸಮ್ಮೇಳನ, ಅಲಹಾಬಾದ್.

ii ಹಿಂದೂಸ್ತಾನಿ ಕಲ್ಚರಲ್ ಸೊಸೈಟಿ, ಅಲಹಾಬಾದ್.

iii ಇಂದರ್ ತಾಲಿಮ್-ಓ- ತರಹಾಕಿ, ಜಾಮೀಯ ಮಿಲಿಯಾ, ದೆಹಲಿ, ಸಾಕ್ಷರತೆ ನಂತರದ ಹಿಂದಿ ಸಾಹಿತ್ಯಕ್ಕಾಗಿ

iv. ಅಖಿಲ ಭಾರತೀಯ ಹಿಂದಿ ಪರಿಷತ್ತು, ನವದೆಹಲಿ

---

* ಪಿ.ಡಿ. ಸಂ-೯ ಭಾಗ-೧ ೧೮ ಆಗಸ್ಟ್ ೧೯೫೧ ಪು-೩೨೩

(ಸಿ) ಸರ್ಕಾರವು ಹಿಂದಿಯೇತರ ಭಾಷೆ ಮಾತನಾಡುವ ರಾಜ್ಯಗಳಲ್ಲಿ ಹಿಂದಿ ಭಾಷೆ ಪ್ರೋತ್ಸಾಹಕ್ಕಾಗಿ ಮಂತ್ರಾಲಯದಲ್ಲಿ ಒಂದು ವಿಶೇಷ ಶಾಖೆಯನ್ನು ತೆರೆಯಲಿದೆ ಮತ್ತು ಒಂದು ಕೇಂದ್ರೀಯ ಸಂಘಟನೆಯನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಸಂಬಂಧದಲ್ಲಿ ತಗಲುವ ವೆಚ್ಚವನ್ನು ಸರ್ಕಾರವೇ ಭರಿಸುವುದು.

**ಶ್ರೀ ಕೇಶವರಾವ್:** ಪ್ರಶ್ನೆಯ ಭಾಗ "ಬಿ' ಯ ಉತ್ತರದಿಂದ ಉದ್ಭವಿಸುವ ಪ್ರಶ್ನೆ ಇದು–ಹಿಂದಿಯೇತರ ಭಾಷೆ ಮಾತನಾಡುವ ಪ್ರದೇಶಗಳಲ್ಲಿನ ಯಾವುದಾದರೂ ಸರ್ಕಾರೇತರ ಸಂಘಟನೆಗೆ ಕೇಂದ್ರ ಸರ್ಕಾರವು ನೆರವು ನೀಡಿದೆಯೆ?

**ಡಾ. ಅಂಬೇಡ್ಕರ್:** ಭಾಗ (ಬಿ)ಗೆ ನಾನು ನೀಡಿದ ಉತ್ತರದಲ್ಲಿ ವಾಸ್ತವಾಂಶಗಳಿವೆ.

**ಶ್ರೀ ಕೇಶವರಾವ್:** ಭಾಗ (ಬಿ)ಗೆ ನೀಡಿದ ಉತ್ತರದಲ್ಲಿ ಮಾನ್ಯ ಮಂತ್ರಿಗಳು ಅಲಹಾಬಾದ್ ಅಥವಾ ದೆಹಲಿಯಲ್ಲಿರುವ ಕೆಲವೊಂದು ಸಂಘಟನೆಗಳನ್ನು ಹೇಳಿರುತ್ತಾರೆ. ಹಿಂದಿ ಬಲ್ಲ ಪ್ರದೇಶಗಳಲ್ಲಿನ ಸಂಘಟನೆಗಳ ಹೊರತು ಇತರ ಸಂಘಟನೆಗಳಿಗೆ ಕೇಂದ್ರ ಸರ್ಕಾರವು ಅನುದಾನವನ್ನೇನಾದರೂ ನೀಡಿದೆಯೆ?

**ಡಾ. ಅಂಬೇಡ್ಕರ್:** ಉಲ್ಲೇಖಿಸಿದ ಸ್ಥಳಗಳ ಹೊರಗೆ ಯಾವುದೇ ಅಂಥ ಸಂಘಟನೆ ಇದೆಯೆ ನನಗೆ ತಿಳಿಯದು. ಒಂದು ವೇಳೆ ಇದ್ದರೂ ಈ ಬಗೆಯ ಕಾರ್ಯವನ್ನು ನಿರ್ವಹಿಸಲಾರದಷ್ಟು ದುರ್ಬಲವಾಗಿರಬೇಕು.

**ಶ್ರೀ ಕೇಶವರಾವ್:** ಹಿಂದಿಯೇತರ ಭಾಷೆ ಮಾತನಾಡುವ ಪ್ರದೇಶಗಳಲ್ಲಿ ಹಿಂದಿ ಪ್ರೋತ್ಸಾಹಕ್ಕಾಗಿ ಹೆಚ್ಚುವರಿ ವೆಚ್ಚ ಭರಿಸಿರುವ ಕುರಿತು ಸರ್ಕಾರಕ್ಕೇನಾದರೂ ಮಾಹಿತಿ ಇದೆಯೆ?

**ಡಾ. ಅಂಬೇಡ್ಕರ್:** ಅವರು ಮಾಡುತ್ತಿರಬಹುದು. ಈ ವಿಷಯದ ಬಗ್ಗೆ ತುಂಬಾ ಉತ್ಸುಕವಿರುವ ಕೆಲವು ರಾಜ್ಯ ಸರ್ಕಾರಗಳು ಹೆಚ್ಚು ಹಣವನ್ನು ವೆಚ್ಚ ಮಾಡುತ್ತಲಿವೆ. ಕಡಿಮೆ ಉತ್ಸುಕವಿರುವ ರಾಜ್ಯಗಳ ಕಡಿಮೆ ವೆಚ್ಚ ಮಾಡುತ್ತಿವೆ.

**ಮಾನ್ಯ ಉಪ ಸಭಾಧ್ಯಕ್ಷರು:** ಮಾನ್ಯ ಮಂತ್ರಿಗಳು ಸರ್ಕಾರವು ಸಂಸ್ಥೆಗಳನ್ನು ತೆರೆಯುವ ಮತ್ತು ಅವುಗಳಿಗೆ ಮಾನ್ಯತೆ ನೀಡುವ ಹಾಗೂ ಹಿಂದಿಯೇತರ ಭಾಷೆ ಮಾತನಾಡುವ ಪ್ರದೇಶಗಳಲ್ಲಿ ಸಹ ಕೇಂದ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸುವ ಅಪೇಕ್ಷೆಯನ್ನು ಪರಿಶೀಲಿಸುತ್ತಿದೆಯೆಂದು ಈಗಾಗಲೇ ಹೇಳಿರುತ್ತಾರೆ.

**ಶ್ರೀ ಆರ್.ಕೆ. ಚೌಧರಿ:** ಹಿಂದಿಯೇತರ ಭಾಷೆ ಮಾತನಾಡುವ ರಾಜ್ಯಗಳಿಗೆ ವಿತರಿಸಲು ತೆಗೆದಿರಿಸಿರುವ ಮೊತ್ತವನ್ನು ಈಗಾಗಲೇ ವಿತರಿಸಲಾಗಿದೆಯೆ ಮತ್ತು ಹಾಗಿದ್ದಲ್ಲಿ ಅಸ್ಸಾಂಗೆ ಹಂಚಿಕೆ ಮಾಡಿರುವ ಮೊತ್ತವೆಷ್ಟು?

**ಡಾ. ಅಂಬೇಡ್ಕರ್:** ಹಾಗೆ ಮಾಡಲಾಗಿರುವುದು ನನಗೆ ತಿಳಿಯದು. ಈಗ ಈ ವಿಷಯದ ಬಗ್ಗೆ ಮಾಹಿತಿ ನೀಡಲಾರೆ.

**ಶ್ರೀ ವಿ.ಸಿ. ಗುಹ:** ಮಾನ್ಯ ಮಂತ್ರಿಗಳು ಹೆಸರಿಸಿರುವ ಸಹಾಯಧನ ಪಡೆಯುತ್ತಿರುವ ನಾಲ್ಕು ಸಂಸ್ಥೆಗಳು ಅಲಹಾಬಾದ್ ಅಥವಾ ದೆಹಲಿಯಲ್ಲಿದ್ದು ಅವುಗಳ ಕಾರ್ಯಗಳೇನು ಮತ್ತು ಈ ಸಂಸ್ಥೆಗಳಿಗೆ ಸಹಾಯಧನ ನೀಡುವ ಹಿಂದಿನ ಉದ್ದೇಶವಾದರೂ ಏನು?

**ಡಾ. ಅಂಬೇಡ್ಕರ್:** ಏಕೆಂದರೆ ನಮಗೆ ಹಿಂದಿ ಪ್ರಸಾರಬೇಕು. ಮತ್ತು ಅವರು ಭಾರತಾದ್ಯಾಂತ ಶಾಖೆಗಳನ್ನು ಹೊಂದಿದ್ದಾರೆ.

**ಶ್ರೀ ವಿ.ಸಿ. ಗುಹ:** ಅವರು ಭಾರತಾದ್ಯಂತ ಶಾಖೆಗಳನ್ನು ಹೊಂದಿದ್ದಾರೆಯೆ?

**ಡಾ. ಅಂಬೇಡ್ಕರ್:** ಅವರು ಭಾರತಾದ್ಯಂತ ಶಾಖೆಗಳನ್ನು ಹೊಂದಿದ್ದಾರೆಂಬ ನ್ಯಾಯಸಮ್ಮತ ಅಭಿಮತಕ್ಕೆ ಬರಬಹುದು. ಇಲ್ಲವಾದಲ್ಲಿ ಅವರಿಗೆ ಸಹಾಯಧನ ನೀಡುತ್ತಿರಲಿಲ್ಲ.

**ಶ್ರೀ ಶಿವಚರಣ್‌ಲಾಲ್:** ಹಿಂದಿ ಸಾಹಿತ್ಯ ಸಮ್ಮೇಳನಕ್ಕೆ ೧೯೪೯–೫೦ ಮತ್ತು ೧೯೫೦–೫೧ರಲ್ಲಿ ನೀಡಿರುವ ಮೊತ್ತವೆಷ್ಟು.

**ಡಾ. ಅಂಬೇಡ್ಕರ್:** ನನ್ನಲ್ಲಿ ವಿವರವಾದ ಅಂಕಿ ಸಂಖ್ಯೆಗಳಿಲ್ಲ.

**ಸೇಠ್ ಗೋವಿಂದದಾಸ್:** ಈ ಬಗ್ಗೆ ಈ ಸಾಲಿನಲ್ಲಿ ಭರಿಸಿರುವ ವೆಚ್ಚವು ೧೯೪೯–೫೦ಕ್ಕೆ ಹೋಲಿಸಿದರೆ ಕಡಿಮೆಯಾಗಿರುವುದು ಏಕೆ?

**ಡಾ. ಅಂಬೇಡ್ಕರ್:** ಹಿಂದಿ ಸಾಕಷ್ಟು ವ್ಯಾಪಿಸಿದೆ.

**ಸೇಠ್‌ಗೋವಿಂದ್‌ದಾಸ್:** ಹಿಂದಿ ಸಾಹಿತ್ಯ ಸಮ್ಮೇಳನ ಮತ್ತು ಜಾಮಿಯಾ ಮಿಲಿಯಾಗಳಿಗೆ ಕ್ರಮವಾಗಿ ನೀಡಿರುವ ಮೊತ್ತಗಳ ನಡುವಣ ವ್ಯತ್ಯಾಸಗಳೇನು?

**ಡಾ. ಅಂಬೇಡ್ಕರ್:** ನಾನು ಈಗಾಗಲೇ ಹೇಳಿದಂತೆ ನನ್ನ ಮುಂದಿರುವ ಅಂಕಿ ಸಂಖ್ಯೆಗಳ ಆಧಾರದ ಮೇಲೆ ನಾನು ಅಂಥ ಯಾವುದೇ ಹೋಲಿಕೆ ಮಾಡಲಾರೆ. ನಾನು ಒಟ್ಟಾರೆ ಅಂಕಿ ಸಂಖ್ಯೆಗಳನ್ನು ನೀಡಿರುತ್ತೇನೆ.

**ಸೇಠ್ ಗೋವಿಂದದಾಸ್:** ಹಿಂದಿ ಪ್ರಸಾರಕ್ಕಾಗಿ ಅನುದಾನ ನೀಡಲಾದ ಸಂಸ್ಥೆ ಮತ್ತು ಸಂಘಟನೆಗಳ ಕಾರ್ಯ ಚಟುವಟಿಕೆ ಕುರಿತು ಸರ್ಕಾರಕ್ಕೆ ಮಾಹಿತಿ ಏನಾದರೂ ಇದೆಯೆ ಮತ್ತು ಸರ್ಕಾರವು ಈ ಸಂಬಂಧದಲ್ಲಿ ವಾರ್ಷಿಕ, ಅರ್ಧವಾರ್ಷಿಕ ಅಥವಾ ತ್ರೈಮಾಸಿಕ ವರದಿಗಳನ್ನೇನಾದರೂ ಸ್ವೀಕರಿಸುತ್ತಿದೆಯೆ?

**ಡಾ. ಅಂಬೇಡ್ಕರ್:** ಮಾನ್ಯ ಸ್ನೇಹಿತರು ಈ ರೀತಿ ನೆರವು ನೀಡುವ ಮುನ್ನ ಈ ವಿಷಯ ಕುರಿತು ಸರ್ಕಾರ ತಿಳಿದುಕೊಳ್ಳಬೇಕೆಂದು ನ್ಯಾಯಸಮ್ಮತವಾಗಿಯೇ ಭಾವಿಸಿದ್ದಾರೆಂದು ನನ್ನ ಅಭಿಪ್ರಾಯ.

**ಶ್ರೀ ಕೇಶವರಾವ್:** ಹಿಂದಿಯೇತರ ಯಾವುದಾದರೂ ರಾಜ್ಯಗಳು ತಮ್ಮ ರಾಜ್ಯಗಳಲ್ಲಿ ಹಿಂದಿ ಪ್ರೋತ್ಸಾಹಿಸಲು ಅನುದಾನ ಕೋರಿವೆಯೆ?

**ಡಾ. ಅಂಬೇಡ್ಕರ್:** ಪ್ರತಿಯೊಂದು ಸರ್ಕಾರವು ಅನುದಾನ ಕೇಳುವ ಹವ್ಯಾಸ ಹೊಂದಿರುತ್ತವೆ.

**ಮಾನ್ಯ ಉಪಸಭಾಧ್ಯಕ್ಷರು:** ಮಾನ್ಯ ಮಂತ್ರಿಗಳು ನೀಡಿರುತ್ತಿರುವ ಉತ್ತರಗಳನ್ನು ಮಾನ್ಯ ಸದಸ್ಯರು ತಾವೇ ಊಹಿಸಿಕೊಳ್ಳಬಹುದಾಗಿದೆ. ಅವರು ಸ್ಪಷ್ಟವಾಗಿ ಸವಿವರವಾದ ಉತ್ತರಗಳನ್ನು ನೀಡುವ ಸ್ಥಿತಿಯಲ್ಲಿಲ್ಲ. ಸದಸ್ಯರು ತಮ್ಮ ಪ್ರಶ್ನೆಗಳನ್ನು ಪ್ರಭಾರಿ ಮಾನ್ಯ ಮಂತ್ರಿಗಳು ಇಲ್ಲಿಗೆ ಬರುವವರೆಗೆ ತಮ್ಮಲ್ಲಿಯೇ ಇರಿಸಿಕೊಳ್ಳಬಹುದು. ಊಹಾತ್ಮಕ ಪ್ರಶ್ನೆಗಳನ್ನು ಕೇಳುವುದರಿಂದ ಮತ್ತು ಊಹಾತ್ಮಕ ಉತ್ತರಗಳನ್ನು ಪಡೆಯುವುದರಿಂದ ಪ್ರಯೋಜನವಾಗದು.

**ಸೇಠ್ ಗೋವಿಂದದಾಸ್:** ನಾನು ಉತ್ತರಗಳನ್ನು ಕೇಳುತ್ತಿಲ್ಲ. ತಾತ್ವಿಕ ಪ್ರಶ್ನೆಯ ಮೇಲೆ ಕೇಳುತ್ತಿದ್ದೇನೆ. ಹಿಂದಿ ಪ್ರಚಾರಕ್ಕಾಗಿ ಸರ್ಕಾರ ಯಾವುದಾದರೂ ನಿರ್ದಿಷ್ಟ ಯೋಜನೆಯನ್ನು ಸಿದ್ಧಪಡಿಸಿದೆಯೆ ಅಥವಾ ಅಂಥ ಯಾವುದೇ ಯೋಜನೆ ಸಿದ್ಧತೆಯಲ್ಲಿದೆಯೆ ಅಥವಾ ಅಂಥ ಯಾವುದೇ ಯೋಜನೆ ಇಲ್ಲವೆ?

**ಡಾ. ಅಂಬೇಡ್ಕರ್:** ನಾನು ಈ ಪ್ರಶ್ನೆಗೆ ಉತ್ತರವನ್ನು ಮಾನ್ಯ ಶಿಕ್ಷಣ ಮಂತ್ರಿಗಳು ನೀಡಲಿ ಎನ್ನುತ್ತೇನೆ.

## ೪೪

# *ಮಹಾಚುನಾವಣೆಗಳಲ್ಲಿ ಮತದಾನದ ವಿಧಾನ

**೪೫೫. ಶ್ರೀ ಅಲೆಗ್ಸಾಂಡರ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಮುಂದಿನ ಮಹಾಚುನಾವಣೆಗಳಲ್ಲಿ ಮತದಾನದ ವಿಧಾನದ ಬಗ್ಗೆ ಸರ್ಕಾರವು ನಿರ್ಧರಿಸಿದೆಯೆ; ಮತ್ತು

(ಬಿ) ಹಾಗಿದ್ದಲ್ಲಿ, ಅದೇನು ಮತ್ತು ಆ ಬಗ್ಗೆ ಸಾಮಾನ್ಯ ಜನರಿಗೆ ತಿಳಿವಳಿಕೆ ನೀಡಲು ಏನು ಕ್ರಮಗಳನ್ನು ಕೈಗೊಂಡಿದೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ) – ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೧ರ ಪ್ರಕರಣ ೫೯ರ ಮೇರೆಗೆ ಮತದಾನ ನಡೆಯುವ ಪ್ರತಿ ಚುನಾವಣೆಯಲ್ಲಿ ನಿಯಮಗಳು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತಪತ್ರದ ಮೂಲಕ ಮತದಾನ ಮಾಡಬೇಕು. ಈ ನಿಯಮಗಳು ಪ್ರಸಕ್ತ ಸಿದ್ಧತೆಯಲ್ಲಿವೆ.

ವಾರ್ತಾ ಮತ್ತು ಪ್ರಸಾರ ಮಂತ್ರಾಲಯದ ಚಲನಚಿತ್ರ ವಿಭಾಗವು ಅಭ್ಯರ್ಥಿಗಳ ಚಿಹ್ನೆ ಇರುವ ಮತಪತ್ರದಲ್ಲಿ ಮತದಾನ, ಅದನ್ನು ಮತಪೆಟ್ಟಿಗೆಯೊಳಕ್ಕೆ ಹಾಕುವ ವಾಸ್ತವ ಮತದಾನವನ್ನು ಸಚಿತ್ರವಾಗಿ ಚಿತ್ರೀಕರಿಸಿರುವ ಶೈಕ್ಷಣಿಕ ಚಲನಚಿತ್ರವೊಂದನ್ನು ಹೊರತರುತಲಿದೆ. ಈ ಚಲನಚಿತ್ರದಲ್ಲಿ ಉಪಯೋಗಿಸಿರುವ ಚಿಹ್ನೆಗಳನ್ನು ಆಯೋಗವು ಅಂತಿಮವಾಗಿ ಅನುಮೋದಿಸುವ ಚಿಹ್ನೆಗಳ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ. ಮತದಾರರಿಗೆ ತಿಳುವಳಿಕೆ ನೀಡಲು ರೇಡಿಯೋ ಮಾತುಕತೆಗಳನ್ನು ಮತ್ತು ಚುನಾವಣಾ ತಾಲೀಮುಗಳನ್ನು ಏರ್ಪಾಟು ಮಾಡಲಾಗಿರುತ್ತದೆ.

## ೪೫

# **ಶಾಸನಬದ್ಧ ಮತ್ತು ಶಾಸನಬದ್ಧವಲ್ಲದ ಸಂಸ್ಥೆಗಳು

**೪೪೭ ಶ್ರೀ ಎಸ್.ಎನ್. ದಾಸ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ;

(ಎ) ತಮ್ಮ ಮಂತ್ರಾಲಯದ ಆಡಳಿತ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಸ್ವರೂಪದ ಶಾಸನಬದ್ಧ ಮತ್ತು ಶಾಸನಬದ್ಧವಲ್ಲದ ಸಂಸ್ಥೆಗಳ ಸಂಖ್ಯೆ ಮತ್ತು ಹೆಸರುಗಳು; ಪ್ರತಿ ಸಂದರ್ಭದಲ್ಲಿ ಈ ಕೆಳಕಂಡ ಮಾಹಿತಿಯನ್ನು ನೀಡುವುದು;

(i) ಅವುಗಳನ್ನು ರಚಿಸಿದ ವರ್ಷ.

(ii) ಅವು ವೆಚ್ಚ ಮಾಡುವ ಆವರ್ತಕ ವಾರ್ಷಿಕ ವೆಚ್ಚ:

---

* ಪಿ.ಡಿ. ಸಂ.೯, ಭಾಗ–೧, ೨೨ ಆಗಸ್ಟ್ ೧೯೫೧, ಪು. ೫೫೩

** ಪಿ.ಡಿ. ಸಂ.೯, ಭಾಗ–೧, ೨೨ ಆಗಸ್ಟ್ ೧೯೫, ಪು.೫೫೪

(iii) ಅವುಗಳ ಲೆಕ್ಕಪತ್ರಗಳ ಪರಿಶೋಧನೆಗೆ ಅವಕಾಶ; ಮತ್ತು

(iv) ಅವುಗಳ ಕಾರ್ಯಚಟುವಟಿಕೆ ಕುರಿತ ವರದಿಯನ್ನು ಸಲ್ಲಿಸುವ ವಿಧಾನ

(ಬಿ) ೧೫ ಆಗಸ್ಟ್ ೧೯೪೭ರಿಂದ ಮಂತ್ರಾಲಯವು ಈವರೆಗೆ ನೇಮಕ ಮಾಡಿರುವ ತಾತ್ಕಾಲಿಕ ಸಮಿತಿಗಳ ಸಂಖ್ಯೆ ಮತ್ತು ಹೆಸರುಗಳು ಹಾಗೂ ಯಾವು ತಮ್ಮ ಕೆಲಸವನ್ನು ಪೂರೈಸಿವೆ; ಮತ್ತು

(ಸಿ) ಈಗಲೂ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಮಿತಿಗಳ ಸಂಖ್ಯೆ ಮತ್ತು ಹೆಸರುಗಳು, ಅವುಗಳ ನೇಮಕಾತಿ ದಿನಾಂಕಗಳನ್ನು ಹಾಗೂ ಅವು ತಮ್ಮ ಕಾರ್ಯವನ್ನು ಪೂರ್ಣಗೊಳಿಸುವ ನಿರೀಕ್ಷಿತ ಸಮಯವನ್ನು ತಿಳಿಸುವುದು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್) :** (ಎ) ನನ್ನ ಮಂತ್ರಾಲಯದ ಆಡಳಿತ ನಿಯಂತ್ರಣದಲ್ಲಿ ಖಾಯಂ ಸ್ವರೂಪದ ಶಾಸನಬದ್ಧವಲ್ಲದ ಯಾವುದೇ ಸಂಸ್ಥೆ ಕಾರ್ಯ ನಿರ್ವಹಿಸುತ್ತಿಲ್ಲ. ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಲಿ ಒಂದೇ ಖಾಯಂ ಸ್ವರೂಪದ ಶಾಸನಬದ್ಧ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವುದು.

(i) ಅದನ್ನು ೧೯೪೧ ರಲ್ಲಿ ರಚಿಸಲಾಯಿತು.

(ii) ವೆಚ್ಚ ವರ್ಷದಿಂದ ವರ್ಷಕ್ಕೆ ಭಿನ್ನವಾಗಿರುತ್ತದೆ.

(iii) ಲೆಕ್ಕಪತ್ರಗಳನ್ನು ಸಂಬಂಧಿತ ಮಹಾಲೇಖಪಾಲರು ಪರಿಶೋಧಿಸುವರು.

(iv) ನ್ಯಾಯಮಂಡಲಿಗಳ ವಿವಿಧ ಪೀಠಗಳು ಇತ್ಯರ್ಥಪಡಿಸುವ ಅಪೀಲುಗಳು ಮತ್ತು ಅರ್ಜಿಗಳ ಬಗ್ಗೆ ಮಾಸಿಕ ವರದಿಗಳನ್ನು ಮಂತ್ರಾಲಯದಲ್ಲಿ ಸ್ವೀಕರಿಸಲಾಗುವುದು. ನ್ಯಾಯಮಂಡಲಿಗೆ ಸಂಬಂಧಿಸಿದ ಮಾಹಿತಿಯನ್ನು ಅನುದಾನ ಬೇಡಿಕೆ ಕುರಿತಂತೆ ಸಂಸತ್ತಿನ ಸದಸ್ಯರಿಗೆ ವಾರ್ಷಿಕವಾಗಿ ನೀಡಲಾಗುವ ಮಂತ್ರಾಲಯದ ಕಾರ್ಯಚಟುವಟಿಕೆಗಳ ಟಿಪ್ಪಣಿಯಲ್ಲಿ ಅಳವಡಿಸಲಾಗಿದೆ.

(ಬಿ) ಯಾವುದು ಇಲ್ಲ

(ಸಿ) ಯಾವುದು ಇಲ್ಲ

## ೪೬

## *ಪಂಜಾಬಿನ ಹಿಮಾಚ್ಛಾದಿತ ಪ್ರದೇಶಗಳಲ್ಲಿ ಚುನಾವಣೆಗಳು

**೮೩. ಗಿಯಾನಿ ಜಿ.ಎಸ್. ಮುಸಾಫಿರ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳ ಬಗೆಗೆ ತಿಳುಸುವರೆ:

(ಎ) ಪಂಜಾಬ್‌ನ ಲೌಹಾಲ್ ಮತ್ತು ಸ್ಪಿಟಿ ಪ್ರದೇಶಗಳು ವರ್ಷಾದಾದ್ಯಂತ ಹಿಮಾಚ್ಛಾದಿತವಾಗಿರುವುದು ನಿಜವೆ?

(ಬಿ) ಮೇಲಿನ ಭಾಗ 'ಎ' ಗೆ ಉತ್ತರ ಹೌದು ಎಂದಾದರೆ ಒಕ್ಕೂಟದ ಉಳಿದ ಭಾಗದೊಂದಿಗೆ ಏಕಕಾಲದಲ್ಲಿ ಈ ಪ್ರದೇಶದಲ್ಲಿ ಚುನಾವಣೆ ನಡೆಸಲು ಸರ್ಕಾರ ಯಾವ ಏರ್ಪಾಟುಗಳನ್ನು ಮಾಡಲು ಉದ್ದೇಶಿಸಿದೆ?

---

* ಸಿ.ಪಿ. ಸಂ.೯, ಭಾಗ–೧, ೨೨ ಆಗಸ್ಟ್ ೧೯೫೧ ಪು. ೫೫೧

ಟಿ. ೪೧೯೩–೬೭

(ಸಿ) ಇಲ್ಲವಾದಲ್ಲಿ, ಆ ಪ್ರದೇಶದಲ್ಲಿ ಸರ್ಕಾರ ಯಾವಾಗ ಚುನಾವಣೆಗಳನ್ನು ನಡೆಸಲು ಉದ್ದೇಶಿಸಿದೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್);–** (ಎ) ಮತ್ತು (ಬಿ): ಪಂಜಾಬ್ ಸರ್ಕಾರದ ಇತ್ತೀಚಿನ ವರದಿಯಿಂದ ಸ್ಪಿಟಿ ಸಾಮಾನ್ಯವಾಗಿ ಆಗಸ್ಟ್ ನಂತರ, ಡೆಂಗೂ ಚೌಹಾಲ್ ಅಕ್ಟೋಬರ್ ನಂತರ ಹಿಮಾವೃತವಾಗಿರುತ್ತದೆಂದು ತಿಳಿದುಬರುತ್ತದೆ. ಈ ಎರಡೂ ವಿರಳ ಜನಸಂಖ್ಯೆಯ ಪ್ರದೇಶಗಳಲ್ಲಿ ಚುನಾವಣೆಗಳನ್ನು ಮುಂದಿನ ಜನವರಿಗಿಂತ ಮೊದಲೇ ನಡೆಸಬೇಕೆ ಅಥವಾ ಅದು ಒಂದು ವೇಳೆ ಕಾರ್ಯಸಾಧುವಲ್ಲದಿದ್ದರೆ, ಜನವರಿಯಲ್ಲಿ ಚುನಾವಣೆಗಳನ್ನು ನಡೆಸಲು ಯಾವ ವಿಶೇಷ ಏರ್ಪಾಟುಗಳನ್ನು ಮಾಡಬೇಕೆಂಬ ಬಗ್ಗೆ ಚುನಾವಣಾ ಆಯೋಗವು ಪಂಜಾಬ್ ಸರ್ಕಾರದೊಂದಿಗೆ ಸಮಾಲೋಚಸಿ ಪರಿಶೀಲಿಸುತ್ತದೆ. ತೀರ್ಮಾನ ಕೈಗೊಂಡ ಕೂಡಲೇ ಅದನ್ನು ಪ್ರಕಟಿಸಲಾಗುವುದು.

## ೪೭

## *ಮತ ಪೆಟ್ಟಿಗೆಗಳ ತಯಾರಿಕೆ

**೮೪. ಶ್ರೀ ಎ.ಬಿ. ಗುರಂಗ್:** ಕಾನೂನು ಮಂತ್ರಿಗಳು ೧೦ ಮಾರ್ಚ್ ೧೯೫೧ರ ನಕ್ಷತ್ರ ಗುರುತಿನ ಪ್ರಶ್ನೆ ಸಂ. ೨೦೮೪ನ್ನು ಪರಿಶೀಲಿಸಿ, ಭಾಗ 'ಸಿ' ರಾಜ್ಯಗಳಲ್ಲಿ ಮುಂಬರುವ ಮಹಾ ಚುನಾವಣೆಗಳಿಗೆ ಮತಪೆಟ್ಟಿಗೆ ತಯಾರಿಸಲು ಭಾರತ ಸರ್ಕಾರವು ಆದೇಶ ನೀಡುವ ಸಂಸ್ಥೆಗಳ ಹೆಸರುಗಳನ್ನು ತಿಳಿಸುವರೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಎಲ್ಲ ಭಾಗ 'ಸಿ' ರಾಜ್ಯಗಳ (ಮಣಿಪುರ ಮತ್ತು ತ್ರಿಪುರಾ ಹೊರತುಪಡಿಸಿ) ಮುಖ್ಯ ಆಯುಕ್ತರು, ಮತ ಪೆಟ್ಟಿಗೆಗಳ ತಯಾರಿಕೆಗಾಗಿ ಮೆ॥ ಗೋದ್ರೆಜ್ ಅಂಡ್ ಬಾಯ್ಸ್ ಮ್ಯಾ. ಕಂ.ಲಿ. ಬಾಂಬೆ ಅವರಿಗೆ ಆದೇಶ ನೀಡಿದ್ದಾರೆ. ಮಣಿಪುರ ಮತ್ತು ತ್ರಿಪುರಾ ಆಯುಕ್ತರು ಮೆ॥ ಬುಂಗೋ ಸಿಟೀಸ್ ಫರ್ನಿಚರ್ ಲಿ., ಕಲ್ಕತ್ತಾ ಅವರಿಗೆ ಆದೇಶ ನೀಡಿದ್ದಾರೆ. ಈ ಆದೇಶಗಳನ್ನು ಭಾರತ ಸರ್ಕಾರ ಮತ್ತು ಚುನಾವಣಾ ಆಯೋಗ ಎರಡರ ಅನುಮೋದನೆಯೊಂದಿಗೆ ನೀಡಲಾಗಿದೆ.

## ೪೮

## **ಅಧಿನಿಯಮಗಳ ಹಿಂದೀ ಅನುವಾದ

**೫೩೦. ಶ್ರೀ ರಾಜ್ ಕಪೂರ್:** ಕಾನೂನು ಮಂತ್ರಿಗಳು, ೧೫ ಆಗಸ್ಟ್ ೧೯೪೭ರಿಂದ ಅಂಗೀಕರಿಸಲಾಗಿರುವ ಎಲ್ಲಾ ಅಧಿನಿಯಮಗಳನ್ನು ಹಿಂದಿಗೆ ಅನುವಾದಿಸಲಾಗಿದೆಯೆ ಎಂದು ತಿಳಿಸುವರೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಇಲ್ಲ, ಸರ್, ೧೫ ಆಗಸ್ಟ್ ೧೯೪೭ರಿಂದ ಕಳೆದ ಜೂನ್‌ನಲ್ಲಿ ನಡೆದ ಸಂಸತ್ತಿನ ಮೂರನೆಯ ಅಧಿವೇಶನದ ಕೊನೆಯವರೆಗೆ ಅಂಗೀಕರಿಸಲಾದ ೨೭೪ ಕೇಂದ್ರದ ಅಧಿನಿಯಮಗಳ ಪೈಕಿ ೧೧೩ಅನ್ನು ಹಿಂದಿಗೆ ಅನುವಾದಿಸಲಾಗಿದೆ.

---

* ಪಿ.ಡಿ. ಸಂ.೯ ಭಾಗ–೧, ೨೨ ಆಗಸ್ಟ್ ೧೯೫೧, ಪು. ೫೬೨

** ಪಿ.ಡಿ. ಸಂ.೯ ಭಾಗ–೧, ೨೭ ಆಗಸ್ಟ್ ೧೯೫೧, ಪು. ೬೫೯

**ಶ್ರೀ ರಾಜ್‌ಕಪೂರ್:** ಉಳಿದ ಅಧಿನಿಯಮಗಳನ್ನು ಯಾವಾಗ ಹಿಂದಿಗೆ ಅನುವಾದಿಸಲಾಗುವುದು?

**ಡಾ. ಅಂಬೇಡ್ಕರ್:** ನಾನು ನಿಖರವಾಗಿ ಹೇಳಲಾರೆ.

**ಸೇಠ್ ಗೋವಿಂದದಾಸ್:** ಸರ್ಕಾರವು ಈ ಉದ್ದೇಶಕ್ಕಾಗಿ ಪ್ರತ್ಯೇಕ ಶಾಖೆಯನ್ನೇನಾದರೂ ಸ್ಥಾಪಿಸಿದೆಯೆ ಮತ್ತು ಈ ಎಲ್ಲ ಅಧಿನಿಯಮಗಳನ್ನು ಹಿಂದಿಗೆ ಅನುವಾದಿಸಲು ಯಾರನ್ನಾದರೂ ನೇಮಕ ಮಾಡಿಕೊಂಡಿದೆಯೆ?

**ಡಾ. ಅಂಬೇಡ್ಕರ್:** ಕಾನೂನು ಮಂತ್ರಾಲಯದಲ್ಲಿ, ಹಿಂದಿ ಅನುವಾದಕರ ಶಾಖೆ ಇದೆ. ಅವರು ಸಂಸತ್ತು ಅಂಗೀಕರಿಸಿದ ಬಹುಮುಖ್ಯ ವಿಧೇಯಕಗಳನ್ನು ಅನುವಾದಿಸುವರು.

**ಶ್ರೀ ಸೇಠ್ ಗೋವಿಂದದಾಸ್:** ಮುಂಬರುವ ಚುನಾವಣೆಗಳೊಳಗೆ ಸಂಬಂಧಿಸಿದ ಎಲ್ಲ ಅಧಿನಿಯಮಗಳನ್ನು ಹಿಂದಿಗೆ ಅನುವಾದಿಸಲಾಗುತ್ತದೆಯೇ? ಇಲ್ಲವಾದಲ್ಲಿ ಆ ಕಾರ್ಯ ಯಾವಾಗ ಪೂರ್ಣಗೊಳ್ಳುವುದು?

**ಡಾ. ಅಂಬೇಡ್ಕರ್:** ನಾನು ನಿಶ್ಚಿತ ಉತ್ತರ ನೀಡಲಾರೆ. ನನಗೆ ತಿಳಿದಮಟ್ಟಿಗೆ ಎಲ್ಲಾ ಅಧಿನಿಯಮಗಳನ್ನು ಹಿಂದಿಗೆ ಅನುವಾದಿಸಲು ಆಲೋಚಿಸಲಾಗುತ್ತಿದೆ.

**ಶ್ರೀ ಸೋಂಧಿ:** ಮಹಾ ಚುನಾವಣೆಗಳಿಗೆ ಮುನ್ನ ಮಾಡಲಾಗುವುದೆ?

**ಡಾ. ಅಂಬೇಡ್ಕರ್:** ನಾನೂ ಹಾಗೆಯೇ ಅಂದುಕೊಂಡಿದ್ದೇನೆ.

**ಶ್ರೀ ಜ್ಞಾನಿರಾಂ:** ಜನತಾ ಪ್ರಾತಿನಿಧ್ಯ ಅಧಿನಿಯಮವನ್ನು ಹಿಂದಿಗೆ ಅನುವಾದಿಸಲಾಗಿದೆಯೆ?

**ಡಾ. ಅಂಬೇಡ್ಕರ್:** ಅದು ಅನುವಾದವಾಗುತ್ತಿದೆ.

**ಶ್ರೀ ಎ.ಸಿ. ಗುಹಾ:** ಸರ್ಕಾರಕ್ಕೆ ಈ ಅಧಿನಿಯಮಗಳನ್ನು ಇತರ ಭಾರತೀಯ ಭಾಷೆಗಳಲ್ಲಿಯೂ ಅನುವಾದಿಸುವ ಆಲೋಚನೆ ಇದೆಯೆ?

**ಶ್ರೀ ರಾಜ್‌ಕಪೂರ್:** ಸಾಮಾನ್ಯವಾಗಿ ಅಧಿನಿಯಮ ಇಂಗ್ಲಿಷ್‌ನಲ್ಲಿ ಪ್ರಕಟವಾದ ನಂತರ, ಹಿಂದಿ ಅನುವಾದ ಲಭ್ಯವಾಗುವುದು.

**ಡಾ. ಅಂಬೇಡ್ಕರ್:** ಈ ವಿಷಯದಲ್ಲಿ ಸಾಮಾನ್ಯ ಎಂಬ ಮಾತಿಲ್ಲ.

**ಶ್ರೀ ಅಮೋಲಾಲ್ ಚಂದ್:** ಜನತಾ ಪ್ರಾತಿನಿದ್ಯ ಅಧಿನಿಯಮವನ್ನು ಚುನಾವಣೆಗೆ ಮುನ್ನ ಅಥವಾ ಅನಂತರ ಅನುವಾದಿಸಲಾಗುವುದೆ?

**ಡಾ. ಅಂಬೇಡ್ಕರ್:** ಅದು ಈ ಕಾರ್ಯವನ್ನು ಕೈಗೊಳ್ಳಲು ವಿವಿಧ ಇಲಾಖೆಗಳ ಸಾಮರ್ಥ್ಯವನ್ನು ಅವಲಂಬಿಸಿದೆ. ಆದರೆ ಅವುಗಳನ್ನು ಚುನಾವಣೆಯ ನಂತರ ಅನುವಾದಿಸುವುದರಿಂದ ಯಾವುದೇ ಉದ್ದೇಶ ಈಡೇರುವುದಿಲ್ಲವೆಂಬುದು ಸರ್ಕಾರಕ್ಕೆ ಗೊತ್ತು ಎಂಬುದು ನನ್ನ ಸ್ನೇಹಿತರಿಗೂ ತಿಳಿದಿರಲಿ.

**ಶ್ರೀ ಸೇಠ್ ಗೋವಿಂದ ದಾಸ್:** ಚುನಾವಣೆಗಳಿಗೆ ಸಂಬಂಧಪಟ್ಟಿರುವ ಎಷ್ಟು ಅಧಿನಿಯಮಗಳನ್ನು ಹಿಂದಿಗೆ ಅನುವಾದಿಸಲಾಗಿದೆ ಎಷ್ಟನ್ನು ಪ್ರಕಟಿಸಲಾಗಿದೆ ಹಾಗೂ ಅವುಗಳನ್ನು ಯಾವಾಗ ಪ್ರಕಟಿಸಲಾಗುವುದು?

**ಡಾ. ಅಂಬೇಡ್ಕರ್:** ನನ್ನ ಸ್ನೇಹಿತರು ಜನತಾ ಪ್ರಾತಿನಿಧ್ಯ ಅಥವಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಅಪಾರ ಸಂಖ್ಯೆಯ ಕಾನೂನುಗಳಿವೆ ಎಂದು ಭಾವಿಸಿರುವಂತಿದೆ. ಇರುವುದು ಎರಡು ಚಿಕ್ಕ ಅಧಿನಿಯಮಗಳು, ಅವುಗಳಲ್ಲಿ ಒಂದು ಜನತಾ ಪ್ರಾತಿನಿಧ್ಯ ಅಧಿನಿಯಮ. ನನಗೇನೂ ಸಂಶಯವಿಲ್ಲ..........

**ಶ್ರೀ ಸೇಠ್ ಗೋವಿಂದ ದಾಸ್:** ಚುನಾವಣೆಗಳಿಗೆ ಸಂಬಂಧಿಸಿದಂತೆ ಒಂದು ದೊಡ್ಡ ಹಾಗೂ

ಎರಡು ಚಿಕ್ಕ ಪುಟ್ಟ ಮೂರು ಅಧಿನಿಯಮಗಳು ಇರುವಾಗ, ಅವುಗಳ ಅನುವಾದಕ್ಕೆ ಅಷ್ಟೊಂದು ಸಮಯ ಏಕೆ ಬೇಕಾಯಿತು?

**ಡಾ. ಅಂಬೇಡ್ಕರ್:** ಏಕೆಂದರೆ, ಇರುವುದು ಇಬ್ಬರೇ ಅನುವಾದಕರು.

**ಶ್ರೀ ಸೇಠ್ ಗೋವಿಂದ ದಾಸ್:** ಹಾಗಿದ್ದಕ್ಕೆ ಅದರ ಸಂಖ್ಯೆಯನ್ನು ಹೆಚ್ಚಿಸಬಾರದೇಕೆ?

**ಡಾ. ಅಂಬೇಡ್ಕರ್:** ಏಕೆಂದರೆ ಹಣಕಾಸು ಮಂತ್ರಿಗಳು ಅನುಮೋದನೆ ನೀಡಿಲ್ಲ..

**ಶ್ರೀ ಕಾಮತ್:** ಈ ವಿವಿಧ ಅಧಿನಿಯಮಗಳ ಹಿಂದಿ ಅನುವಾದಕ್ಕೆ ಸಂಬಂಧಪಟ್ಟಂತೆ, ಸರ್ಕಾರದ ಕಾನೂನು ಮಂತ್ರಾಲಯ ಅಥವಾ ಅದರ ಸಚಿವಾಲಯವು ಹಿಂದಿಯ ಪ್ರಮಾಣಿತ ಶಬ್ದಕೋಶ ಅಥವಾ ನಿಘಂಟು ಸಹಿತ ಹಿಂದಿಯನ್ನು ಪ್ರಮಾಣಗೊಳಿಸಿಕೊಳ್ಳಲಾಗಿದೆಯೆ?

**ಡಾ. ಅಂಬೇಡ್ಕರ್:** ನನ್ನ ಸ್ನೇಹಿತರು ಉತ್ತರ ಪ್ರದೇಶದಲ್ಲಿರುವ ಹಿಂದಿಯನ್ನು ಪ್ರಮಾಣ ಎಂದು ಒಪ್ಪಿಕೊಳ್ಳಬೇಕೆಂದು ಬಯಸದ ಹೊರತು, ಹಿಂದಿಯನ್ನು ಪ್ರಮಾಣಗೊಳಿಸುವುದು ಭವಿಷ್ಯದಲ್ಲಿ ಬರಬಹುದಾದ ಪ್ರಶ್ನೆ.

**ಶ್ರೀ ಕಾಮತ್:** ಅಲ್ಲ, ಮಧ್ಯಪ್ರದೇಶ.

**ಶ್ರೀ ಗಿಯಾನಿ ಜಿ.ಎಸ್. ಮುಸಾಫಿರ್:** ಸರ್ಕಾರವು, ಭಾಷಾಂತರ ಎಲ್ಲರಿಗೂ ಗ್ರಾಹ್ಯವಾಗುವಂತೆ, ಸರಳ ಹಿಂದಿಯೆಲ್ಲರಬೇಕೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದೆ?

**ಡಾ. ಅಂಬೇಡ್ಕರ್:** ಸರ್ಕಾರವು ಅದನ್ನು ಗಮನಿಸಲಿದೆ.

**ಶ್ರೀ ಸೇಠ್ ಗೋವಿಂದದಾಸ್:** ಮಾನ್ಯ ಮಂತ್ರಿಗಳು ಅಧಿನಿಯಮಗಳ ಅನುವಾದಕ್ಕೆ ಸಂಬಂಧಪಟ್ಟಂತೆ, ಶಾಖೆಗೆ ಕಾಯಂ ಸಿಬ್ಬಂದಿಯನ್ನು ಸೇರಿಸಲಾಗದಿದ್ದರೆ ತತ್ಕಾಲಕ್ಕೆ ಅವುಗಳ ಅನುವಾದವನ್ನು ತ್ವರಿತಗೊಳಿಸಲು ಕನಿಷ್ಠ ಕೆಲವು ತಾತ್ಕಾಲಿಕ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಬಾರದೇಕೆ?

**ಹಣಕಾಸು ರಾಜ್ಯ ಮಂತ್ರಿಗಳು (ಶ್ರೀ ತ್ಯಾಗಿ):** ಈ ಸಲಹೆಯನ್ನು ಪರಿಗಣಿಸಲು ನನಗೆ ಸೂಚನೆ ನೀಡಬೇಕು.

## ೪೯

## *ಅಣಕು ಚುನಾವಣೆಗಳು

**೫೩೨. ಶ್ರೀ ಸಿಧ್ವಾ:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಚುನಾವಣಾ ಆಯುಕ್ತರು ಕೆಲವೊಂದು ಸ್ಥಳಗಳಲ್ಲಿ ಅಣಕು ಚುನಾವಣೆಗಳನ್ನು ನಡೆಸಿದ್ದಾರೆಯೆ?

(ಬಿ) ಹಾಗಿದ್ದರೆ, ಅವು ನಡೆದ ಸ್ಥಳಗಳು ಮತ್ತು ಭಾಗವಹಿಸಿದ ಮತದಾರರ ಸಂಖ್ಯೆ;

(ಸಿ) ಮತಗಳನ್ನು ಹಾಕಲು ಎಷ್ಟು ಸಮಯ ತೆಗೆದುಕೊಂಡಿತು; ಮತ್ತು

(ಡಿ) ಚುನಾವಣಾ ಆಯುಕ್ತರು, ಅಂಥ ಅಣಕು ಚುನಾವಣೆಗೆ ತೆಗೆದುಕೊಂಡ ಸಮಯವನ್ನು ಆಧರಿಸಿ, ನಿಜವಾಗಿ ಚುನಾವಣೆಗಳಿಗೆ ತಮ್ಮ ಯೋಜನೆಗಳನ್ನು ರೂಪಿಸಿರುತ್ತಾರೆಯೆ?

---

* ಪಿ.ಡಿ. ಸಂ.೯, ಭಾಗ–೧, ೨೭ ಆಗಸ್ಟ್ ೧೯೫೧, ಪು. ೬೬೪

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ನಿಂದ (ಬಿ) ಚುನಾವಣಾ ಆಯೋಗವು, ೧೯೫೧ರ ಮೇ ನಲ್ಲಿ ವಿವಿಧ ರಾಜ್ಯ ಸರ್ಕಾರಗಳಿಗೆ ಮುಂಬರುವ ಚುನಾವಣೆಗಳನ್ನು ನಡೆಸಲು ವಾಸ್ತವಿಕ ಮಾಹಿತಿ ಹಾಗೂ ಅನುಭವ ಪಡೆಯಲು ಹಾಗೂ ಮತದಾನ ದಾಖಲು ಮಾಡಲು ಬೇಕಾದ ಸರಾಸರಿ ಸಮಯದ ಬಗ್ಗೆ ಒಂದು ಕಲ್ಪನೆ ಹೊಂದಲು, ಮತದಾನದ ಕಾಲ್ಪನಿಕ ಕ್ರಮಬದ್ಧ ಸ್ಥಿತಿಯಲ್ಲಿ ಅಣಕು ಚುನಾವಣೆಗಳನ್ನು ನಡೆಸುವಂತೆ ನಿರ್ದೇಶನ ನೀಡಿರುತ್ತದೆ. ಆಯೋಗವು ವಾಸ್ತವಿಕವಾಗಿ ಪೂರ್ವಾಭ್ಯಾಸ ನಡೆಸಿದ ಸ್ಥಳಗಳ ಮಾಹಿತಿ ನೀಡುವಂತೆ ರಾಜ್ಯ ಸರ್ಕಾರಗಳನ್ನು ಕೇಳಿದ್ದು ವರದಿಯು ಈವರೆಗೆ ಒರಿಸ್ಸಾದಿಂದ ಮಾತ್ರ ಬಂದಿದೆ. ಈ ಅಣಕು ಚುನಾವಣೆಗಳಿಂದ ಗಳಿಸಿದ ಅನುಭವವನ್ನು ಮತಕ್ಷೇತ್ರಗಳ ವಾಸ್ತವಿಕ ಸಂಖ್ಯೆ ಹಾಗೂ ಸ್ಥಳಗಳನ್ನು ಯೋಜಿಸುವಲ್ಲಿ ಗಣನೆಗೆ ತೆಗೆದುಕೊಳ್ಳಲಾಗುವುದು. ಈ ಅಣಕು ಚುನಾವಣೆಗಳ ಅನುಭವದ ಮೇಲೆ ರೂಪಿಸಿದ ರಾಜ್ಯ ಸರ್ಕಾರಗಳ ತಾತ್ಕಾಲಿಕ ಪ್ರಸ್ತಾವನೆಗಳನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗುವುದು. ಅನಂತರ, ಸಾರ್ವಜನಿಕರಿಂದ ಸ್ವೀಕರಿಸಿದ ಸಲಹೆಗಳೇನಾದರೂ ಇದ್ದರೆ, ಅವುಗಳ ಬೆಳಕಿನಲ್ಲಿ ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ ಅಂತಿಮಗೊಳಿಸಲಾಗುವುದು.

**ಶ್ರೀ ಸಿಧ್ವಾ:** ಈ ಅಣಕು ಚುನಾವಣೆಯಲ್ಲಿ ಒಂದು ರಾಜ್ಯದಲ್ಲಿ ಎಷ್ಟು ಮತಗಳನ್ನು ಚಲಾಯಿಸಲಾಗಿದೆ?

**ಡಾ. ಅಂಬೇಡ್ಕರ್:** ನನ್ನಲ್ಲಿ ಮಾಹಿತಿ ಇಲ್ಲ.

**ಶ್ರೀ ಸಿಧ್ವಾ:** ಅನಕ್ಷರಸ್ಥರ ಮತದಾನದ ಬಗ್ಗೆ ಚುನಾವಣಾ ಆಯುಕ್ತರ ಅಭಿಪ್ರಾಯವೇನು? ಅದು ಅತ್ಯಂತ ಯಶಸ್ವಿಯೆ?

**ಡಾ. ಅಂಬೇಡ್ಕರ್:** ಅಕ್ಷರತೆ ಅಥವಾ ಅನಕ್ಷರತೆ ಪ್ರಶ್ನೆ ಇಲ್ಲ. ಆ ರೀತಿ ಗುರುತಿಸುವ ಪ್ರಶ್ನೆಯೇ ಇಲ್ಲ.

**ಶ್ರೀ ಸಿಧ್ವಾ:** ಆದಾಗ್ಯೂ, ಅಣಕು ಚುನಾವಣೆಯ ಬಗ್ಗೆ ಆಯುಕ್ತರ ಸಾಮಾನ್ಯ ಅನಿಸಿಕೆ ಏನು? ಅವರು.....

**ಡಾ. ಅಂಬೇಡ್ಕರ್:** ಅವರ ಅನಿಸಿಕೆಯನ್ನು ನನಗೆ ತಿಳಿಸಿಲ್ಲ.

**ಶ್ರೀ ಸೇಠ್ ಗೋವಿಂದ ದಾಸ್:** ಮಾನ್ಯ ಮಂತ್ರಿಗಳು ಒರಿಸ್ಸಾದಿಂದ ಮಾತ್ರ ವರದಿಯು ಬಂದಿದೆ ಇತರ ಪ್ರಾಂತ್ಯಗಳಿಂದ ವರದಿಗಳು ಬರಬೇಕಾಗಿವೆ ಎಂದು ಈಗಷ್ಟೇ ಹೇಳಿದರು. ಸರ್ಕಾರವೇನಾದರೂ ರಾಜ್ಯಗಳಲ್ಲಿ ಈ ಅಣಕು ಚುನಾವಣೆಗಳನ್ನು ನಡೆಸಲು ಮತ್ತು ಭಾರತ ಸರ್ಕಾರಕ್ಕೆ ವರದಿ ಸಲ್ಲಿಸಲು ದಿನಾಂಕವನ್ನು ನಿಗದಿಗೊಳಿಸಿದೆಯೆ?

**ಡಾ. ಅಂಬೇಡ್ಕರ್:** ಇದು ಸರ್ಕಾರ ನಿರ್ದೇಶನ ನೀಡುವಂಥ, ಅಧಿಕಾರವನ್ನು ತಾನಾಗಿಯೇ ವಹಿಸಿಕೊಳ್ಳುವ ಅಥವಾ ಆರೋಪಿಸಿಕೊಳ್ಳುವ ವಿಷಯವಲ್ಲವೆಂದು ನನ್ನ ಭಾವನೆ.

**ಶ್ರೀ ಸೇಠ್ ಗೋವಿಂದ ದಾಸ್:** ಇಲ್ಲ, ಸರ್. ಇದು ಅಧಿಕಾರದ ಪ್ರಶ್ನೆ ಅಲ್ಲ...

**ಶ್ರೀ ಭಟ್:** ಮಾನ್ಯ ಮಂತ್ರಿಗಳು ಅಣಕು ಚುನಾವಣೆಗಳನ್ನು ರಾಜ್ಯ ವಿಧಾನಸಭೆ ಮತ್ತು ಲೋಕಸಭೆ ಎರಡಕ್ಕೂ ಒಟ್ಟಿಗೆ ನಡೆಸಲಾಯಿತೆ ಎಂದು ತಿಳಿಸುವರೆ?

**ಡಾ. ಅಂಬೇಡ್ಕರ್:** ನಾನು ಹಾಗೆಯೇ ಭಾವಿಸಿದ್ದೇನೆ.

**ಶ್ರೀ ಚಟ್ಟೋಪಾಧ್ಯಾಯ:** ಅಂತ ಅಣಕು ಚುನಾವಣೆಯನ್ನು ಯಾವುದಾದರೂ ಕೇಂದ್ರೀಯ ಆಡಳಿತ ಪ್ರದೇಶದಲ್ಲಿ ನಡೆಸಲಾಯಿತೆ? ನಡೆಸಲಾಗಿದ್ದಲ್ಲಿ ವರದಿ ಏಕೆ ಬಂದಿಲ್ಲ?

**ಡಾ. ಅಂಬೇಡ್ಕರ್:** ರಾಜ್ಯಗಳಲ್ಲಿ ಮತ್ತು ಕೇಂದ್ರೀಯ ಆಡಳಿತ ಪ್ರದೇಶಗಳಲ್ಲೇನಾದರೂ ಅವುಗಳನ್ನು

ನಡೆಸಲಾಯಿತೆ ಎಂಬ ಬಗ್ಗೆ ನನ್ನಲ್ಲಿ ನಿಜಕ್ಕೂ ಮಾಹಿತಿ ಇಲ್ಲ; ಆದರೆ ನಡೆದಿರುವುದಂತೂ ಖಚಿತ.

**ಶ್ರೀ ಕಾಮತ್:** ಈ ಚುನಾವಣೆಗಳಲ್ಲಿ ಅಣಕು ಅಭ್ಯರ್ಥಿಗಳು ಮತ್ತು ಅಣಕು ಅಧಿಕಾರಿಗಳು ಇದ್ದರೆ?

**ಡಾ. ಅಂಬೇಡ್ಕರ್:** ಬೆದರು ಬೊಂಬೆಗಳನ್ನು ಬಳಸಿಕೊಳ್ಳಬಹುದು.

**ಶ್ರೀ ಆರ್. ವೇಲಾಯುಧನ್:** ಈ ಅಣಕು ಚುನಾವಣೆಯ ಪೂರ್ವಾಭ್ಯಾಸದಿಂದ ಗಳಿಸಿದ ಅನುಭವದಿಂದ ಮುಂದಿನ ಮಹಾ ಚುನಾವಣೆಯೂ ಅಣಕು ಚುನಾವಣೆಯಾಗಲಿದೆಯೆ?

**ಡಾ. ಅಂಬೇಡ್ಕರ್:** ಬಹುಶಃ ಆಗಲೂಬಹುದು.

**ಶ್ರೀ ಸಿಧ್ವಾ:** ಅಣಕು ಚುನಾವಣೆಗಳಲ್ಲಿಯೂ ಭಾಗವಹಿಸದ ಮತದಾರರ ಒಟ್ಟು ಸಂಖ್ಯೆ ಎಷ್ಟು?

**ಡಾ. ಅಂಬೇಡ್ಕರ್:** ನನ್ನಲ್ಲಿ ಮಾಹಿತಿ ಇಲ್ಲ.

## ೫೦

## *ಮತದಾರರ ಪಟ್ಟಿಗೆ ಆಕ್ಷೇಪಣೆಗಳು

**೫೩೪. ಶ್ರೀ ಕಾಮತ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಭಾಗ 'ಎ' ಭಾಗ 'ಬಿ' ಮತ್ತು ಭಾಗ 'ಸಿ' ಯ ಪ್ರತಿ ರಾಜ್ಯಗಳಲ್ಲಿ ಪ್ರಾರಂಭಿಕ ಮತದಾರರ ಪಟ್ಟಿಗಳ ಬಗ್ಗೆ ಸಲ್ಲಿಸಲಾದ ಕ್ಲೇಮುಗಳು ಮತ್ತು ಆಕ್ಷೇಪಣೆಗಳ ಒಟ್ಟು ಸಂಖ್ಯೆ.

(ಬಿ) ಪ್ರತಿ ರಾಜ್ಯದಲ್ಲಿ ಈವರೆಗೆ ಇತ್ಯರ್ಥಪಡಿಸಿದವುಗಳ ಸಂಖ್ಯೆ.

(ಸಿ) ಪ್ರತಿ ರಾಜ್ಯದಲ್ಲಿ ಅಂಗೀಕರಿಸಿದ ಕ್ಲೇಮುಗಳು ಮತ್ತು ಆಕ್ಷೇಪಣೆಗಳ ಸಂಖ್ಯೆ.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ)ನಿಂದ (ಸಿ) : ೧ ಆಗಸ್ಟ್ ೧೯೫೧ರಂದು ಇದ್ದಂತೆ. ವಿವಿಧ ರಾಜ್ಯಗಳಲ್ಲಿ ಸ್ವೀಕರಿಸಿದ ಮತ್ತು ಬಗೆಹರಿಸಿದ ಕ್ಲೇಮುಗಳು ಮತ್ತು ಆಕ್ಷೇಪಣೆಗಳ ಸಂಖ್ಯೆಯನ್ನು ತೋರಿಸುವ ತಃಖ್ತೆಯನ್ನು ಸದನದ ಮುಂದೆ ಮಂಡಿಸಿದೆ. (ನೋಡಿ: ಅನುಬಂಧ ೧ ಪರಿಶಿಷ್ಟ ಸಂ. ೧೭)

**ಶ್ರೀ ಕಾಮತ್:** ಸರ್, ಮಂಡಿಸಿರುವ ತಃಖ್ತೆಯ ಪ್ರಕಾರ ಹೈದರಾಬಾದ್‌ನಲ್ಲಿ ೪, ೨೮೪ ಮಹಿಳೆಯರಿಗೆ ಮತದಾರರ ಅಧಿಕಾರಕ್ಕೆ ಚ್ಯುತಿಯುಂಟಾಗಿದೆ. ಅವರ ಮತದಾನ ಅಧಿಕಾರ ಚ್ಯುತಿಯನ್ನು, ರಾಜಸ್ಥಾನದ ಮಹಿಳೆಯರಿಗೆ ಮತದಾನ ಅಧಿಕಾರ ಚ್ಯುತಿಮಾಡಿದ ಕಾರಣಗಳಿಗಾಗಿ ಅಥವಾ ಬೇರೆ ಕಾರಣಗಳಿಗಾಗಿ ಮಾಡಲಿದೆಯೆ?

**ಡಾ. ಅಂಬೇಡ್ಕರ್:** ಈ ಪ್ರಶ್ನೆಯ ಬಗ್ಗೆ ನನಗೆ ನೋಟೀಸು ನೀಡಬೇಕು.

**ಶ್ರೀ ಕಾಮತ್:** – ರಾಜಸ್ಥಾನದ ಮತದಾನ ಅಧಿಕಾರಚ್ಯುತಿಯಾದ ಮಹಿಳೆಯರು ಅಥವಾ ಅವರ ಸಂಘಟನೆಗಳು, ಅಥವಾ ಇತರ ಪ್ರತಿನಿಧಿಗಳು ತಮ್ಮ ಮತದಾನ ಅಧಿಕಾರವನ್ನು ಮತ್ತೆ ತೆಗೆದುಕೊಳ್ಳಲು ಸರ್ಕಾರಕ್ಕೆ ಇತ್ತೀಚೆಗೆ ಮನವಿಯನ್ನು ಸಲ್ಲಿಸುವುದು ನಿಜವೆ?

---

* ಪಿ.ಡಿ. ಸಂ ೯, ಭಾಗ–ಈ, ೨೭ ಆಗಸ್ಟ್ ೧೯೫, ಪು. ೬೬೭

**ಡಾ. ಅಂಬೇಡ್ಕರ್:** ಹೌದು, ಸಲ್ಲಿಸಿದ್ದಾರೆ.

**ಶ್ರೀ ಕಾಮತ್:** ಅವರ ಮನವಿಯು ಸಕ್ರಿಯ ಪರಿಗಣನೆಯಲ್ಲಿದೆಯೆ?

**ಡಾ. ಅಂಬೇಡ್ಕರ್:** ಅದನ್ನು ನಾವು ಪರಿಶೀಲಿಸುತ್ತಿದ್ದೇವೆ. ಆದರೆ, ಯಾವುದೇ ಪರಿಹಾರ ನೀಡುವ ಬಗ್ಗೆ ನಮಗೆ ನಿಶ್ಚಿತವಿಲ್ಲ.

**ಶ್ರೀ ಕಾಮತ್:** ಸರ್, ಅಂತಿಮ ಮತದಾರರ ಪಟ್ಟಿಯನ್ನು ಯಾವಾಗ ಪ್ರಕಟಿಸಲಾಗುವುದು?

**ಡಾ. ಅಂಬೇಡ್ಕರ್:** ಬಹುಬೇಗ, ನಿಶ್ಚಿತ ದಿನಾಂಕವನ್ನು ಹೇಳಲಾರೆ.

**ಶ್ರೀ ಕಾಮತ್:** ಈವರೆಗೆ ದಿನಾಂಕವನ್ನು ನಿಗದಿಗೊಳಿಸಲಾಗಿಲ್ಲವೆ?

**ಡಾ. ಅಂಬೇಡ್ಕರ್:** ಖಂಡಿತವಾಗಿ ಬಹುಬೇಗ ಅದನ್ನು ನಿಗದಿಗೊಳಿಸಲಾಗುವುದು.

**ಶ್ರೀಮತಿ ರೇಣುಕಾರಾಯ್:** ರಾಜಸ್ಥಾನದ ಮತದಾನದ ಅಧಿಕಾರ ಕಳೆದುಕೊಂಡಿರುವ ಮಹಿಳೆಯರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿದೆಯೆ?

**ಡಾ. ಅಂಬೇಡ್ಕರ್:** ಪರಿಹಾರದ ಪ್ರಶ್ನೆಯು, ನಿಜವಾಗಿ ಮತದಾರರ ಪಟ್ಟಿಯಲ್ಲಿ ಈ ಮಹಿಳೆಯರ ನೊಂದಾವಣಿಯನ್ನು ಪೂರ್ಣಗೊಳಿಸಿ, ಆಕ್ಷೇಪಣೆಗಳಿಗೆ ಮತ್ತು ಅವುಗಳನ್ನು ಇತ್ಯರ್ಥಗೊಳಿಸುವುದಕ್ಕೆ ಸಾಕಷ್ಟು ಕಾಲಾವಕಾಶ ನೀಡಿ, ಚುನಾವಣೆ ದಿನಾಂಕಕ್ಕೆ ಮುನ್ನ ಮತದಾರರ ಪಟ್ಟಿಯನ್ನು ಅಂತಿಮಗೊಳಿಸಲು ಸಾಧ್ಯವೇ ಎಂಬುದನ್ನು ಅವಲಂಬಿಸಿರುತ್ತದೆ. ಈ ಎಲ್ಲ ಸಂಗತಿಗಳು ಜೊತೆಗೂಡಿ ನಡೆಯಬೇಕು.

**ಶ್ರೀಮತಿ ರೇಣುಕಾ ರಾಯ್:** ಇದು ಅವರ ತಪ್ಪಲ್ಲ ಎಂಬುದನ್ನು ಪರಿಗಣಿಸಿ ಮತ್ತು ಜನಗಣತಿದಾರರಿಗೆ ಸೂಚನೆ ಕೊಟ್ಟಿರಲಿಲ್ಲವಾದ್ದರಿಂದ, ಈ ದೋಷವನ್ನು ಪರಿಹರಿಸಲು ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಂಡು ಮಹಿಳೆಯರನ್ನು ಮತದಾರರೆಂದು ಪಟ್ಟಿಯಲ್ಲಿ ಸೇರಿಸಲಾಗುವುದೆ?

**ಡಾ. ಅಂಬೇಡ್ಕರ್:** ಸರಿ, ತಪ್ಪು ಯಾರದೆಂದು ನಾವು ಚರ್ಚಿಸುತ್ತಿಲ್ಲ; ನಾವು ವಸ್ತುಸ್ಥಿತಿ ಏನೆಂದು ಚರ್ಚಿಸುತ್ತಿದ್ದೇವೆ.

**ಶ್ರೀ ಆರ್.ಸಿ. ಉಪಾಧ್ಯಾಯ:** ಪ್ರಧಾನ ಮಂತ್ರಿಗಳು ರಾಜಸ್ಥಾನದ ಮಹಿಳಾ ನಿಯೋಗಕ್ಕೆ ಈ ದಿಸೆಯಲ್ಲಿ ಏನಾದರೂ ಮಾಡಲಾಗುವುದೆಂದು ಭರವಸೆ ನೀಡಿರುವುದು ನಿಜವೆ?

**ಡಾ. ಅಂಬೇಡ್ಕರ್:** ಪ್ರಧಾನ ಮಂತ್ರಿಗಳ ಭರವಸೆಯು ಈ ನಾಡಿನ ಕಾನೂನಿಗೆ ಒಳಪಟ್ಟಿರುತ್ತದೆ ಎಂಬುದು ಖಚಿತ.

**ಶ್ರೀ ಕಾಮತ್:** ಸರ್, ಚುನಾವಣಾ ಆಯೋಗವು ಕೆಲವೊಂದು ಪ್ರದೇಶಗಳಿಂದ ಮತ್ತು ಕೆಲವೊಂದು ರಾಜ್ಯಗಳಿಂದ ಪ್ರಾರಂಭಿಕ ಪಟ್ಟಿಗಳಲ್ಲಿ ಮೃತರೂ ಸೇರಿಸಲ್ಪಟ್ಟಿದ್ದಾರೆಂಬ ಬಗ್ಗೆ ದೂರುಗಳನ್ನು ಸ್ವೀಕರಿಸಲಾಗಿದೆಯೆ?

**ಡಾ. ಅಂಬೇಡ್ಕರ್:** ಅದೂ ನಡೆಯಬಹುದು–ಖಚಿತವಾಗಿ.

**ಶ್ರೀ ಕಾಮತ್:** ಹಾಗೆ ನಡೆದಿದೆಯೆ?

**ಶ್ರೋ ಸೋಂದಿ:** ಮಾನ್ಯ ಉಪ ಸಭಾಧ್ಯಕ್ಷರೆ, ಪ್ರಧಾನ ಮಂತ್ರಿಗಳೇ ಸದನದಲ್ಲಿರುವುದರಿಂದ ಈ ಬಗ್ಗೆ ಅವರೇ ಹೇಳಿಕೆ ನೀಡಿರುವುದು ಉತ್ತಮವಲ್ಲವೆ?

**ಪ್ರಧಾನ ಮಂತ್ರಿಗಳು (ಶ್ರೀ ಜವಾಹರಲಾಲ್ ನೆಹರು):** ನನ್ನ ಸಹೋದ್ಯೋಗಿಗಳಾದ ಕಾನೂನು ಮಂತ್ರಿಗಳು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ನಾನಾಗಲಿ ಅಥವಾ ಸರ್ಕಾರದ ಯಾರೇ ಇತರ ಸದಸ್ಯರಾಗಲಿ ಕಾನೂನಿಗೆ ವಿರುದ್ಧವಾದ ಭರವಸೆ ನೀಡಬಾರದು– ಇದು ಸ್ಪಷ್ಟ. ಈ ವಿಷಯದಲ್ಲಿ ಚುನಾವಣಾ ಆಯೋಗದ

ವಿವೇಚನಾಧಿಕಾರದಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಬಾರದೆಂದು ನಾವು ವಿಶೇಷ ಎಚ್ಚರಿಕೆಯನ್ನು ವಹಿಸಿರುತ್ತೇನೆ. ನಾನು ಮಾಡಿರುವುದೇನೆಂದರೆ ಯಾರಾದರೂ ನನ್ನ ಬಳಿಗೆ ಬಂದರೆ, ಅವನನ್ನು ಅಥವಾ ಆಕೆಯನ್ನು ಚುನಾವಣಾ ಆಯುಕ್ತರಲ್ಲಿಗೆ ಕಳುಹಿಸುವುದು. ಈ ವಿಷಯ ನನ್ನ ಮುಂದೆ ಬಂದಾಗ, ನಾನು ನಿಜಕ್ಕೂ ಬಹುಸಂಖ್ಯೆಯ ಮಹಿಳಾ ಮತದಾರರು ಪಟ್ಟಿಯಿಂದ ಬಿಟ್ಟುಹೋಗಿರುವ ವಿಷಯದ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಿಪಡಿಸಿರುತ್ತೇನೆ. ಇಡೀ ಸದನವು ಅಂತೆಯೇ ಭಾವಿಸುವುದೆಂದು ತಿಳಿದಿದ್ದೇನೆ; ಚುನಾವಣಾ ಆಯುಕ್ತರು ಕಾನೂನಿಗೆ ಒಳಪಟ್ಟು ಅವರನ್ನು ಪಟ್ಟಿಯಲ್ಲಿ ಸೇರಿಸಬಯಸಿದ್ದಾರೆ. ಅದನ್ನು ಹೇಗೆ ಮಾಡಬೇಕೆಂಬುದು ಇಡಿಯಾಗಿ ಚುನಾವಣಾ ಆಯುಕ್ತರಿಗೆ ಬಿಟ್ಟಿದ್ದು. ನಾನು ಅವರಿಗೆ ತೋರಿದ್ದು ಸಹಾನುಭೂತಿ ಮಾತ್ರ; ಆದರೆ ಹೇಗೆ ಮಾಡಬಹುದೆಂದು ಅಲ್ಲ.

**ಶ್ರೀ ಕಾಮತ್:** ಮತದಾರರ ಪಟ್ಟಿಗಳಿಗೆ ಸಂಬಂಧಿಸಿದಂತೆ, ಪ್ರಧಾನ ಮಂತ್ರಿಗಳು ರಾಜಸ್ಥಾನದ ಮಹಿಳೆಯರಿಂದ ಮಾತ್ರ ಅಥವಾ ಬೇರೆ ಯಾರಿಂದಲಾದರೂ ನಿಯೋಗಗಳನ್ನು ಸ್ವೀಕರಿಸಿರುವರೆ?

**ಶ್ರೀ ಜವಾಹರಲಾಲ್ ನೆಹರು:** ನನಗೆ ನೆನಪಿರುವಷ್ಟರಮಟ್ಟಿಗೆ ಅವರು ರಾಜಸ್ಥಾನದಿಂದ ಮಾತ್ರ ಬಂದಿದ್ದರು. ಅವರ ಜೊತೆಯಲ್ಲಿ ಇತರ ರಾಜ್ಯಗಳ ಒಬ್ಬರೋ ಅಥವಾ ಇಬ್ಬರೋ ಅದರ ಬಗ್ಗೆ ಸಹಾನುಭೂತಿ ಉಳ್ಳವರು ಇದ್ದರು.

**ಶ್ರೀ ಸೇಠ್ ಗೋವಿಂದ ದಾಸ್:** ಕಾನೂನಿನ ಮಟ್ಟಿಗೆ ಅದೇನು ಬದಲಾಯಿಸಲಾಗದ್ದಲ್ಲ. ಕಾನೂನಿನಲ್ಲಿ ಬದಲಾವಣೆಗಳು ಯಾವಾಗಲೂ ನಡೆಯುತ್ತವೆ. ಚುನಾವಣೆ ನಡೆಯಲು ಇನ್ನೂ ಕಾಲಾವಕಾಶ ಇರುವುದರಿಂದ, ಈ ಮಹಿಳೆಯರನ್ನು ಪಟ್ಟಿಯಲ್ಲಿ ಸೇರಿಸಲು ಏನನ್ನಾದರೂ ಮಾಡಲು ಸಾಧ್ಯವಿಲ್ಲವೆ? ಭಾಗ "ಸಿ' ರಾಜ್ಯಗಳಿಗೆ ಸಂಬಂಧಪಟ್ಟ ಕ್ರಮ ಮುಂದೆ ಬಂದಿದೆ. ಸಂಸತ್ತಿನ ಪ್ರಸಕ್ತ ಅಧಿವೇಶನ ಇನ್ನೂ ಸ್ವಲ್ಪಕಾಲ ಮುಂದುವರೆಯಲಿದೆ. ಈ ತೊಂದರೆಯನ್ನು ನಿವಾರಿಸಲು ಏನಾದರೂ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವೆ?

**ಡಾ. ಅಂಬೇಡ್ಕರ್:** ಪರಿಹಾರ ನೀಡಬೇಕಾದರೆ, ಈಗಿನಿಂದ ಎರಡು ತಿಂಗಳಿಗೂ ಕಡಿಮೆ ಇಲ್ಲದಷ್ಟು ಕಾಲಾವಕಾಶ ಬೇಕಾಗುತ್ತದೆಂದು ನನ್ನ ಸ್ನೇಹಿತರಿಗೆ ಹೇಳಬಯಸುತ್ತೇನೆ. ಅಂದರೆ, ಚುನಾವಣೆಗಳನ್ನು ಮುಂದೂಡಬೇಕಾಗುತ್ತದೆ.

**ಶ್ರೀ ಆರ್. ಸಿ. ಉಪಾಧ್ಯಾಯ:** ಸರ್ಕಾರವು ಮತದಾರರ ಪಟ್ಟಿಯಲ್ಲಿ ಶ್ರೀಮತಿ....ಅವರು ಎಂಬ ಉಲ್ಲೇಖವನ್ನು ಸೂಕ್ತ ಶಾಸನದ ಮೂಲಕ ತಿದ್ದುಪಡಿ ಮಾಡಲು ಸಾಧ್ಯವಿಲ್ಲವೆ?

**ಹಣಕಾಸು ರಾಜ್ಯ ಮಂತ್ರಿಗಳು (ಶ್ರೀ ತ್ಯಾಗಿ):** ಗಂಡನ ಹೆಸರನ್ನು ತಿದ್ದುಪಡಿಮಾಡಲಾಗದು.

**ಶ್ರೀ ಆರ್.ಸಿ. ಉಪಾಧ್ಯಾಯ:** ಗಂಡನ ಹೆಸರಲ್ಲ ಆದರೆ....

**ಡಾ. ಅಂಬೇಡ್ಕರ್:** ನೊಂದಣಿ ವಿಧಾನವನ್ನು ಕಾನೂನು ಮೂಲಕ ವಿಧಿಸಲಾಗಿದೆ; ಆ ವಿಧಾನವನ್ನೇ ಪಾಲಿಸಬೇಕು.

**ಶ್ರೀ ಆರ್.ಸಿ. ಉಪಾಧ್ಯಾಯ:** ಬದಲಾಯಿಸಲು ಸಾಧ್ಯವಿಲ್ಲವೆ?

**ಡಾ. ಅಂಬೇಡ್ಕರ್:** ಸರಿ, ಕಾನೂನು ಬದಲಾಯಿಸಬಹುದು. ಅದು ಸಂಸತ್ತಿನ ಕೈಲಿದೆ. ಸಂಸತ್ತಿನ ಮುಂದೆ ಇರಿಸಿದರೆ ತಿದ್ದುಪಡಿ ಮಾಡಲು ಕಾನೂನಿಗೆ ಎಷ್ಟು ಸಮಯ ಬೇಕಾಗುವುದೋ ನನಗೆ ತಿಳಿಯದು.

**ಓರ್ವ ಮಾನ್ಯ ಸದಸ್ಯರು:** ಐದು ನಿಮಿಷಗಳು.

**ಶ್ರೀಮತಿ ರೇಣುಕಾ ರಾಯ್:** ಕಾನೂನು ಬದಲಾಯಿಸಿದರೆ ಅವರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬಹುದು. ಖಂಡಿತವಾಗಿ ಅದೊಂದೇ ಸಾಧ್ಯವಿರುವ ಮಾರ್ಗ. ಆದ್ದರಿಂದ ಸರ್ಕಾರವು ಸಂಸತ್ತಿನ

ಮುಂದೆ ವಿಧೇಯಕ ಮಂಡಿಸುವ ವಿಷಯ ಪರಿಗಣಿಸುವುದೆ?

**ಡಾ. ಅಂಬೇಡ್ಕರ್:** ಗಂಡಸರಿಗೆ ಒಂದು ಕಾನೂನು ಮತ್ತು ಮಹಿಳೆಯರಿಗೊಂದು ಕಾನೂನು ಇರಬೇಕೆಂಬ ಪ್ರಸ್ತಾವನೆಯನ್ನು ಪುರಸ್ಕರಿಸುವುದು ಕಷ್ಟಕರ ಎನಿಸುತ್ತದೆ.

**ಮಾನ್ಯ ಉಪ ಸಭಾಧ್ಯಕ್ಷರು:** ಈ ವಿಷಯದ ಬಗ್ಗೆ ನಾವು ತುಂಬಾ ಚರ್ಚಿಸಿದ್ದೇವೆ. ಮುಂದಿನ ಪ್ರಶ್ನೆ.

## ೫೧

## *ರಾಜ್ಯಗಳಲ್ಲಿ ಚುನಾವಣಾ ಆಯುಕ್ತರು

**೫೩೫. ಶ್ರೀ ಕಾಮತ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಪ್ರಾದೇಶಿಕ ಚುನಾವಣಾ ಆಯುಕ್ತರನ್ನು ನೇಮಕ ಮಾಡಲಾಗಿದೆಯೆ ಮತ್ತು ಪ್ರತಿಯೊಂದು ರಾಜ್ಯದಲ್ಲಿ ಅಗತ್ಯ ಚುನಾವಣಾ ಆಡಳಿತ ಯಂತ್ರವನ್ನು ಸಜ್ಜುಗೊಳಿಸಲಾಗಿದೆಯೆ? ಮತ್ತು

(ಬಿ) ಇಲ್ಲವಾದಲ್ಲಿ, ಯಾವಾಗ ರಚಿಸಲು ಉದ್ದೇಶಿಸಲಾಗಿದೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ): ಈವರೆಗೆ ಪ್ರಾದೇಶಿಕ ಚುನಾವಣಾ ಆಯುಕ್ತರನ್ನು ನೇಮಕ ಮಾಡಲಾಗಿಲ್ಲ; ಆದರೆ, ಅಂಥ ೩ ಅಥವಾ ೪ ಅಧಿಕಾರಿಗಳನ್ನು ನೇಮಿಸುವ ಪ್ರಶ್ನೆ ಸಕ್ರಿಯ ಪರಿಶೀಲನೆಯಲ್ಲಿದೆ. ಅಗತ್ಯ ಚುನಾವಣಾ ಆಡಳಿತ ಯಂತ್ರ ಎಂಬುದರ ಅರ್ಥ ಮಾನ್ಯ ಸದಸ್ಯರ ಪ್ರಕಾರ ವಾಸ್ತವಿಕ ಚುನಾವಣೆ ನಡೆಸಲು ನೇಮಕ ಮಾಡಲಾಗುವ ವಿವಿಧ ಅಧಿಕಾರಿಗಳು ಎಂದು ಭಾವಿಸಿದ್ದೇನೆ. ಪರಿಸ್ಥಿತಿ ಈ ಮುಂದಿನಂತಿದೆ: ವಿವಿಧ ಪುನರ್ವಿಂಗಡಣಾ ಆದೇಶಗಳಲ್ಲಿ ಸಂಸತ್ತು ಮಾಡಿದ ಮಾರ್ಪಾಡುಗಳನ್ನು ಅಧಿಸೂಚಿಸಿದ ಮತ್ತು ಮತಕ್ಷೇತ್ರಗಳನ್ನು ಅಂತಿಮವಾಗಿ ನಿರ್ಧರಿಸಿದ ಕೂಡಲೇ, ಎಲ್ಲ ರಾಜ್ಯಗಳಲ್ಲಿನ ಪ್ರತಿ ಮತಕ್ಷೇತ್ರಕ್ಕೂ ಮತದಾನ ನೋಂದಣಿ ಅಧಿಕಾರಿಗಳು, ಚುನಾವಣಾಧಿಕಾರಿಗಳು ಮತ್ತು ಸಹಾಯಕ ಚುನಾವಣಾಧಿಕಾರಿಗಳನ್ನು ಔಪಚಾರಿಕವಾಗಿ ನೇಮಕ ಮಾಡಲು ಚುನಾವಣಾ ಆಯೋಗವು ಕ್ರಮಗಳನ್ನು ಕೈಗೊಂಡಿರುತ್ತದೆ. ಚುನಾವಣಾಧಿಕಾರಿಗಳು ನೇಮಕಗೊಂಡ ಕೂಡಲೇ ಅವರು ಪ್ರತಿಯೊಂದು ಮತಕೇಂದ್ರಕ್ಕೂ ಮತಕೇಂದ್ರಾಧಿಕಾರಿಗಳನ್ನು ಮತ್ತು ಮತದಾನ ಅಧಿಕಾರಿಗಳನ್ನು ನೇಮಕ ಮಾಡುವರು. ಕೊನೆಯಲ್ಲಿ ಹೇಳಿದ ನೇಮಕಾತಿಗಳು ನವೆಂಬರ್ ಕೊನೆಯ ವೇಳೆಗೆ ಪೂರ್ಣಗೊಳ್ಳುವವೆಂದು ನಿರೀಕ್ಷಿಸಲಾಗಿದೆ; ಆದರೆ, ಅಕ್ಟೋಬರ್‌ನಲ್ಲಿ ಚುನಾವಣೆಗಳು ನಡೆಯುವ ಪ್ರದೇಶಗಳಲ್ಲಿ ಅದು ೧೯೫೧ರ ಸೆಪ್ಟೆಂಬರ್ ಕೊನೆಯೊಳಗೆ ಪೂರ್ಣಗೊಳ್ಳುವುದು.

**ಶ್ರೀ ಕಾಮತ್:** ಸರ್, ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯ ಸರ್ಕಾರಗಳಿಂದ ಚುನಾವಣೆ ಮತ್ತಿತರ ಉದ್ದೇಶಗಳಿಗಾಗಿ, ತಮ್ಮ ಕಾನೂನು ಮತ್ತು ಸುವ್ಯವಸ್ಥೆ ಆಡಳಿತ ಯಂತ್ರ ಅಥವಾ ಇತರ ಅಗತ್ಯ ಆಡಳಿತ ಯಂತ್ರವು ಚುನಾವಣೆಯ ಅಪಾರ ಕಾರ್ಯಗಳನ್ನು ನಿರ್ವಹಿಸಲಾಗದೆಂದು ಮನವಿ ಸಲ್ಲಿಸಿ ಕೇಂದ್ರದಿಂದ ಅಧಿಕಾರಿಗಳು ಮತ್ತು ಇತರ ನೆರವನ್ನೇನಾದರೂ ಕೇಳಿದ್ದಾರೆಯೆ?

**ಡಾ. ಅಂಬೇಡ್ಕರ್:** ಈ ಬಗ್ಗೆ ನನಗೆ ತಿಳಿಯದು.

---

* ಪಿ.ಡಿ. ಸಂ.೯ ಭಾಗ–೧, ೨೭ ಆಗಸ್ಟ್ ೧೯೫೧, ಪು. ೬೭೦

## ೫೨

# *ಮತದಾರರ ಪಟ್ಟಿಗಳು

**೫೪೭. ಶ್ರೀ ಜ್ಞಾನಿ ರಾಮ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಮತದಾರರ ಪಟ್ಟಿಗಳ ಪ್ರಕಟಣೆ ಕಾರ್ಯವನ್ನು ಪೂರ್ಣಗೊಳಿಸಿರುವ ರಾಜ್ಯಗಳು; ಮತ್ತು

(ಬಿ) ಅಂಥ ರಾಜ್ಯಗಳು ಭರಿಸಿರುವ ಮೊತ್ತ ಮತ್ತು ಕೇಂದ್ರ ಸರ್ಕಾರ ನೀಡಿರುವ ಮೊತ್ತ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಎಲ್ಲ ರಾಜ್ಯಗಳಲ್ಲಿ ಮತದಾರರ ಪಟ್ಟಿಗಳನ್ನು ಅಂತಿಮವಾಗಿ ಈ ತಿಂಗಳ ಕೊನೆಯೊಳಗಾಗಿ ಪ್ರಕಟಿಸಲಾಗುವುದು.

(ಬಿ) ಮತದಾರರ ಪಟ್ಟಿಗಳ ಅಂತಿಮ ಪ್ರಕಟಣೆಯ ಕಾರ್ಯ ಪೂರ್ಣಗೊಳ್ಳುವವರೆಗೆ ಈ ಬಗ್ಗೆ ರಾಜ್ಯ ಸರ್ಕಾರ ಮಾಡಿದ ವೆಚ್ಚ ಹಾಗೂ ಕೇಂದ್ರದ ಪಾಲನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದಾಗ್ಯೂ, ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಭಾಗ 'ಎ' ಮತ್ತು ಭಾಗ 'ಬಿ' ರಾಜ್ಯಗಳು ಮತದಾರರ ಪಟ್ಟಿಗಳ ತಯಾರಿಕೆಗಾಗಿ ಭರಿಸಿದ ಹೆಚ್ಚುವರಿ ವೆಚ್ಚದ ಅರ್ಧ ಪಾಲು ಅಂದರೆ ಮೊತ್ತ ರೂ ೨ ಕೋಟಿ ಮತ್ತು ೭ ಲಕ್ಷವನ್ನು ಭಾರತ ಸರಕಾರವು ನೀಡಿದೆ.

## ೫೩

# **ಅಣಕು ಚುನಾವಣೆಗಳು

**೫೭೫. ಶ್ರೀ ಭಟ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಎಷ್ಟು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ರಾಜ್ಯವಾರು ಅಣಕು ಚುನಾವಣೆಗಳನ್ನು ನಡೆಸಲಾಗಿದೆ?

(ಬಿ) ಅಣಕು ಚುನಾವಣೆಗಳಲ್ಲಿ ಪ್ರತಿ ಸ್ಥಳದಲ್ಲಿ ಎಷ್ಟು ಜನ ಮತದಾರರು ಭಾಗವಹಿಸಿದ್ದರು?

(ಸಿ) ಮಹಿಳೆಯರಿಗೆ ಪ್ರತ್ಯೇಕ ಮತದಾನ ಕೇಂದ್ರಗಳಿದ್ದವೆ?

(ಡಿ) ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರತಿ ಮತದಾರನು ತನ್ನ ಮತ ಚಲಾಯಿಸಲು ಕ್ರಮವಾಗಿ ತೆಗೆದುಕೊಂಡ ಸರಾಸರಿ ಸಮಯವೆಷ್ಟು?

(ಇ) ಚಲಾಯಿಸಿದ ಮತಗಳ ಶೇಕಡಾವಾರು.

(ಎಫ್) ಬೇರೊಬ್ಬರ ಹೆಸರಿನಲ್ಲಿ ಮತ ಚಲಾಯಿಸುವ ಮತ್ತು ಸವಾಲು ಮಾಡಿದ ಮತಗಳ ಪ್ರಕರಣಗಳೇನಾದರೂ ಇವೆಯೆ?

---

* ಪಿ.ಡಿ. ಸಂ–೯, ಭಾಗ–೧ ೨೭ ಆಗಸ್ಟ್ ೧೯೫೧. ಪು. ೬೮೫

** ಪಿ.ಡಿ. ಸಂ.೯ , ಭಾಗ–೧, ೨೭ ಆಗಸ್ಟ್ ೧೯೫೧ ಪು. ೬೯೮

(ಜಿ) ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮಹಿಳಾ ಮತದಾರರು ಪುರುಷ ಮತದಾರರಿಗಿಂತ ಮತದಾನ ಮಾಡಲು ಹೆಚ್ಚು ಸಮಯ ತೆಗೆದುಕೊಂಡಿದ್ದಾರೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಯಿಂದ (ಬಿ):

ಚುನಾವಣಾ ಆಯೋಗದಿಂದ ಮಾಹಿತಿಯನ್ನು ಪಡೆದುಕೊಳ್ಳಲಾಗುತ್ತಿದೆ. ಮುಂದೆ ಸದನದಲ್ಲಿ ಮಂಡಿಲಾಗುವುದು.

## ೫೪

## *ಸಂವಿಧಾನದ ಅನುಚ್ಛೇದ ೧೭೧ (ಬಿ)

**೫೭೬. ಶ್ರೀ ದೇವ್‌ಗಿರಿಕರ್:** (ಎ) ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ತಿಳಿಸುವರೆ–

ಭಾರತದ ಸಂವಿಧಾನದ ಅನುಚ್ಛೇದ ೧೭೧ (ಬಿ)ಯಲ್ಲಿ ಉಲ್ಲೇಖಿಸಿರುವಂತೆ, ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರನ್ನು ಆಯ್ಕೆ ಮಾಡಲು ಪದವಿಗಳಿಗೆ ಸಮವಾದ ಇತರ ವಿದ್ಯಾರ್ಹತೆಗಳನ್ನು ಸಂಸತ್ತು ಯಾವುದೇ ಕಾನೂನು ಮೂಲಕ ನಿಗದಿಪಡಿಸಿದೆಯೆ?

(ಬಿ) ಹಾಗಿದ್ದಲ್ಲಿ, ಆ ವಿದ್ಯಾರ್ಹತೆಗಳು ಯಾವುವು?

(ಸಿ) ಇಲ್ಲವಾದಲ್ಲಿ ಯಾವಾಗ ಅಂಥ ವಿದ್ಯಾರ್ಹತೆಗಳನ್ನು ನಿಗದಿಪಡಿಸಲಾಗುವುದು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮಾನ್ಯ ಸದಸ್ಯರ ಗಮನವನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ ೧೯೫೦ರ ಪ್ರಕರಣ ೨೭(೩)ರ ಕಡೆಗೆ ಸೆಳೆಯಲಾಗಿದೆ. ಅದು, ಚುನಾವಣಾ ಆಯೋಗದ ಸಹಮತದೊಂದಿಗೆ, ಭಾರತದಲ್ಲಿನ ವಿಶ್ವವಿದ್ಯಾಲಯದ ಪದವೀಧರರಿಗೆ ಸಮಾನ ಎಂದು ಪರಿಗಣಿಸಬಹುದಾದ ವಿದ್ಯಾರ್ಹತೆಯನ್ನು ನಿಗದಿಪಡಿಸಲು– ರಾಜ್ಯ ಸರ್ಕಾರಗಳಿಗೆ ಅಧಿಕಾರವಿರುತ್ತದೆ.

(ಬಿ) ಮತ್ತು (ಸಿ) : ಮೇಲೆ ಹೇಳಿದ ವಿದ್ಯಾರ್ಹತೆಗಳನ್ನು ವಿಧಿಸುವ ಅಧಿಸೂಚನೆಗಳನ್ನು, ವಿಧಾನ ಪರಿಷತ್ತುಗಳನ್ನು ಹೊಂದಲಿರುವ ಎಲ್ಲ ರಾಜ್ಯಗಳೂ, ಅಂದರೆ, ಬಿಹಾರ, ಬಾಂಬೆ, ಮದ್ರಾಸು, ಪಂಜಾಬ್, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಮೈಸೂರು–ರಾಜ್ಯಗಳು ಹೊರಡಿಸಿರುತ್ತವೆ.

ಈ ಅಧಿಸೂಚನೆಗಳ ಪ್ರತಿಗಳು ಸಂಸತ್ತಿನ ಗ್ರಂಥಾಲಯದಲ್ಲಿ ಲಭ್ಯವಿದೆ.

## ೫೫

## *ಮತಕ್ಷೇತ್ರಗಳ ನಕ್ಷೆಗಳು

**೭೪೮. ಶ್ರೀ ರಾಜ್ ಕನ್ವರ್:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ–

ಸರ್ಕಾರವು ಭಾಗ 'ಎ', ಭಾಗ 'ಬಿ' ಮತ್ತು ಭಾಗ 'ಸಿ' ಯ ಪ್ರತಿ ರಾಜ್ಯಗಳಿಗೆ ಸಂಬಂಧಿಸಿದಂತೆ

---

* ಪಿ.ಡಿ. ಸಂ.೯, ಭಾಗ–೧, ೨೭ ಆಗಸ್ಟ್ ೧೯೫೧ ಪು. ೬೯೮

* ಪಿ.ಡಿ. ಸಂ.೯ ಭಾಗ–೧, ೪ ಸೆಪ್ಟೆಂಬರ್ ೧೯೫೧, ಪು. ೯೪೧

ಮಹಾ ಚುನಾವಣಾ ಉದ್ದೇಶಕ್ಕಾಗಿ ಅಂತಿಮವಾಗಿ ನಿರ್ಧರಿಸಿದಂತೆ, ಮತಕ್ಷೇತ್ರಗಳ ಪುನರ್ವಿಂಗಡಣೆಯನ್ನು ತೋರಿಸುವ ಒಂದು ಅಥವಾ ಎರಡು ನಕ್ಷೆಗಳನ್ನು ಪ್ರಕಟಿಸುವ ಉದ್ದೇಶ ಹೊಂದಿದೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಅಂತಿಮವಾಗಿ ನಿರ್ಧರಿಸಿರುವಂತೆ ಪ್ರತಿ ರಾಜ್ಯದ ಸಂಸತ್ತು ಮತ್ತು ವಿಧಾನಸಭೆ ಮತಕ್ಷೇತ್ರಗಳನ್ನು ಪ್ರತ್ಯೇಕವಾಗಿ ತೋರಿಸುವ ನಕ್ಷೆಗಳನ್ನು ಸಿದ್ಧಪಡಿಸುವಂತೆ ರಾಜ್ಯ ಸರ್ಕಾರಗಳನ್ನು ಕೋರಲಾಗಿದೆ.

**ಶ್ರೀ ರಾಜ್ ಕನ್ವರ್:** ಈ ನಕ್ಷೆಗಳು ಸಾರ್ವಜನಿಕರಿಗೆ ಯಾವಾಗ ಲಭ್ಯವಾಗುವವು?

**ಡಾ. ಅಂಬೇಡ್ಕರ್:** ಅವು ಸಿದ್ಧವಾದ ಕೂಡಲೇ.

**ಶ್ರೀ ರಾಜ್ ಕನ್ವರ್:** ಅವು ಯಾವಾಗ ಸಿದ್ಧವಾಗಬಹುದು, ಸರ್.

**ಡಾ. ಅಂಬೇಡ್ಕರ್:** ಚುನಾವಣೆಗಳು ನಡೆಯುವುದಕ್ಕೆ ಮುನ್ನ.

**ಮಾನ್ಯ ಉಪ ಸಭಾಧ್ಯಕ್ಷರು:** ಮಾನ್ಯ ಮಂತ್ರಿಗಳು ಅದರಲ್ಲಿ ಹೆಚ್ಚಿನ ಖಚಿತ ಮಾಹಿತಿ ಇದ್ದಲ್ಲಿ ಅವರು ಸದನಕ್ಕೆ ನೀಡಬಹುದು. ಸದನವು ಅವರು ನ್ಯಾಯಸಮ್ಮತ ಅವಧಿಯೊಂದನ್ನು ನೀಡಬೇಕೆಂದು ನಿರೀಕ್ಷಿಸುತ್ತದೆ.

**ಡಾ. ಅಂಬೇಡ್ಕರ್:** ನಾನು ನನ್ನ ಸ್ನೇಹಿತರಿಗೆ ಹೇಳಬಹುದಾದ್ದೆಂದರೆ ಚುನಾವಣಾ ಆಯುಕ್ತರನ್ನು ಸಂಪರ್ಕಿಸಿ ಎಂದು ಕೋರುವುದು. ಅವರ ಕಚೇರಿಯು ಇವರಿಗೆ ಬೇಕಾದ ಎಲ್ಲ ಮಾಹಿತಿಯನ್ನು ಬಹುಶಃ ನೀಡಬಹುದು.

**ಉಪ ಸಭಾಧ್ಯಕ್ಷರು:** ಮಾನ್ಯ ಮಂತ್ರಿಗಳು ಚುನಾವಣಾ ಆಯುಕ್ತರೊಂದಿಗೆ ಸಂಪರ್ಕದಲ್ಲಿರಬೇಕೆಂದು ನಿರೀಕ್ಷಿಸಲಾಗಿದೆ. ಇದು ಅವರ ಖಾತೆ. ಇಂಥ ಉತ್ತರಗಳನ್ನು ನೀಡುವುದರಿಂದ ಪ್ರಯೋಜನವಾಗಲಾರದು. ಮಾನ್ಯ ಸದಸ್ಯರು ತಮಗೆ ಬೇಕಾದ ತೀರ್ಮಾನಕ್ಕೆ ಬರುತ್ತಾರೆ. ಆದರೆ, ಅವರು ಸರ್ಕಾರ ಒಂದು ತಿಂಗಳು ಅಥವಾ ಎರಡು ತಿಂಗಳು ಮೊದಲಾಗಿ ಎಂದು ಹೇಳಬೇಕೆಂದು ಬಯಸುತ್ತಿದ್ದಾರೆ. ಎಲ್ಲ ಮೂರು ಉತ್ತರಗಳು ನಿರ್ದಿಷ್ಟವೇನೂ ಇರುವುದಿಲ್ಲ.

**ಡಾ. ಅಂಬೇಡ್ಕರ್:** ವಿಷಯದ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.

**ಪ್ರೊ॥ ರಂಗಾ:** ಮಾನ್ಯ ಉಪ ಸಭಾಧ್ಯಕ್ಷರೆ, ಯಾರೇ ಮಂತ್ರಿಗಳು ಎದ್ದು ನಿಂತು, ತಮ್ಮನ್ನು ತಮ್ಮ ಅಧೀನರಲ್ಲಿಗೆ ಹೋಗಿ ಮಾಹಿತಿ ಪಡೆದುಕೊಳ್ಳುವಂತೆ ಹೇಳುವುದು ಸದನದ ಘನತೆಗೆ ತಕ್ಕುದಲ್ಲ ಎಂಬುದು ನನ್ನ ಆಕ್ಷೇಪಣೆ.

**ಮಾನ್ಯ ಉಪ ಸಭಾಧ್ಯಕ್ಷರು:** ಮಾನ್ಯ ಕಾನೂನು ಮಂತ್ರಿಗಳ ಮಾತಿನ ಅರ್ಥ– ಇಂಥ ವಿಷಯಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸದನದ ಸಮಯವನ್ನು ತೆಗೆದುಕೊಳ್ಳುವ ಮುನ್ನ, ಮಾಹಿತಿಯನ್ನು ಅಧಿಕೃತ ಮೂಲಗಳಿಂದ ಪಡೆದುಕೊಳ್ಳಲು ಸಾಧ್ಯವಿದ್ದಲ್ಲಿ, ಅವರು ಆ ಎಲ್ಲ ಮೂಲಗಳನ್ನು ಬಳಸಿಕೊಳ್ಳಬೇಕು ಎಂದು ನನ್ನ ಅನಿಸಿಕೆ.

**ಡಾ. ಅಂಬೇಡ್ಕರ್:** ನನ್ನ ಮಾನ್ಯ ಸ್ನೇಹಿತರಾದ ಪ್ರೊ॥ ರಂಗಾ ಅವರು ಅನೇಕ ಸಂದರ್ಭಗಳಲ್ಲಿ, ಯಾವುದೇ ಘನತೆಗೆ ಹಾನಿಯಾಗಬಹುದೆಂಬ ಭಾವನೆ ಇಲ್ಲದೆ, ಅಧಿಕಾರಿಗಳಲ್ಲಿಗೆ ಹೋಗುವುದು ನನಗೂ ಗೊತ್ತು.

**ಪ್ರೊ॥ ರಂಗಾ:** ಈ ಬಗೆಯ ಉತ್ತರಗಳಿಂದ ಮತ್ತೊಂದು ವಿವಾದ ಉದ್ಭವಿಸುತ್ತದೆ. ನಾನು ಹೋಗಬಹುದು ಅಥವಾ ಹೋಗದಿರಬಹುದು. ಆದರೆ, ಮಂತ್ರಿಗಳು ನಾವು ಮಾಹಿತಿ ಕೇಳಿದಾಗ,

ಅವರು ತಾವೇ ಮಾಹಿತಿ ಪಡೆದುಕೊಳ್ಳುವ ಬದಲು, ಅವರ ಅಧೀನರಲ್ಲಿಗೆ ಹೋಗಿ ಮಾಹಿತಿ ಪಡೆದುಕೊಳ್ಳುವಂತೆ ಹೇಳಬಾರದು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ತಮ್ಮ ಅಧಿಕಾರಿಗಳಲ್ಲಿಗೆ ಮಾಹಿತಿ ಕೇಳಲು ಸದಸ್ಯರು ಹೋದರೆ, ಸದಸ್ಯರ ಘನತೆ ಅಂತಿರಲಿ ಮಾನ್ಯ ಮಂತ್ರಿಗಳು ತಾವೇ ಅಸಮ್ಮತಿ ಸೂಚಿಸುವುದಿಲ್ಲವೆ?

**ಉಪ ಸಭಾಧ್ಯಕ್ಷರು:** ನಾನು ಮುಂದಿನ ಪ್ರಶ್ನೆಗೆ ಹೋಗುತ್ತಿದ್ದೇನೆ. ಸದನಕ್ಕೆ ಬರುವ ಮುನ್ನ ಪುಸ್ತಕಗಳನ್ನು ಓದುವುದು ಮತ್ತು ಅಧಿಕಾರಿಗಳನ್ನು ಕಾಣುವುದು ಸಾಮಾನ್ಯ.

**ಶ್ರೀ ಎ.ಸಿ. ಗುಹಾ:** ನಾವು ಅಧಿಕಾರಿಗಳಲ್ಲಿಗೆ ಹೋಗಿ ಅಧಿಕಾರಿಗಳನ್ನು ನೋಡಬಾರದೆಂದು ಒಂದು ಸುತ್ತೋಲೆ ಹೊರಡಿಸಲಾಗಿದೆ. ಮಾನ್ಯ ಮಂತ್ರಿಗಳು ಅದು ಹೇಗೆ ನಮ್ಮನ್ನು ಅಧಿಕಾರಿಗಳನ್ನು ನೋಡಿ ಮಾಹಿತಿ ಪಡೆದುಕೊಳ್ಳುವಂತೆ ಹೇಳುತ್ತಾರೆ. ಮಾಹಿತಿಯನ್ನು ಒದಗಿಸುವುದು ಮಂತ್ರಿಗಳ ಕೆಲಸ.

## ೫೬

## *ಬುಡಕಟ್ಟು ಕ್ರಿಶ್ಚಿಯನ್ನರು ಮತ್ತು ಮಹಾ ಚುನಾವಣೆಗಳು

**೭೭೦. ಶ್ರೀ ಎಸ್ ಸಿ ಸಾಮಂತ:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಬುಡಕಟ್ಟು ಕ್ರೈಸ್ತರನ್ನು (ಆದಿವಾಸಿಗಳು) ಮುಂಬರುವ ಮಹಾಚುನಾವಣೆಗಳಲ್ಲಿ ಪರಿಶಿಷ್ಟ ಬುಡಕಟ್ಟು ಮತಕ್ಷೇತ್ರಗಳಿಂದ ಸ್ಪರ್ಧಿಸುವುದರಿಂದ ನಿಷೇಧಿಸಲಾಗುವುದೆ? ಮತ್ತು

(ಬಿ) ನಿಷೇಧವಿಲ್ಲವಿದ್ದಲ್ಲಿ ಅವರ ಚುನಾವಣೆಗಳು ಪ್ರಶ್ನಾರ್ಹವಾಗಿ ಚುನಾವಣಾ ಟ್ರಿಬ್ಯುನಲ್‌ಗಳ ಮುಂದೆ ವಿವಾದಗಳಾಗಲಿವೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮಾನ್ಯ ಸದಸ್ಯರು ವಾಸ್ತವವಾಗಿ ಜನತಾ ಪ್ರಾತಿನಿಧ್ಯ ಅಧಿನಿಯಮ ೧೯೫೧ ಮತ್ತು ಸಂವಿಧಾನ (ಪರಿಶಿಷ್ಟ ಬುಡಕಟ್ಟುಗಳು) ಆದೇಶ ೧೯೫೦ರ ಸಂಬಂಧಿತ ಕಾನೂನು ಉಪಬಂಧಗಳ ವ್ಯಾಖ್ಯಾನವನ್ನು ಕೇಳುತ್ತಿದ್ದಾರೆ. ಯಾವುದೇ ರಾಜ್ಯದಲ್ಲಿ ಪರಿಶಿಷ್ಟ ಬುಡಕಟ್ಟುಗಳಿಗಾಗಿ ಮೀಸಲಿರಿಸಿದ ಸ್ಥಾನದ ಅಭ್ಯರ್ಥಿಯು, ರಾಷ್ಟ್ರಪತಿಗಳ ಪರಿಶಿಷ್ಟ ಬುಡಕಟ್ಟುಗಳ ಆದೇಶದಲ್ಲಿ ಪಟ್ಟಿ ಮಾಡಿರುವಂತೆ ಪರಿಶಿಷ್ಟ ಬುಡಕಟ್ಟುಗಳ ಸದಸ್ಯರಾಗಿರಬೇಕು. ಪ್ರಶ್ನೆಯಲ್ಲಿ ಉಲ್ಲೇಖಿಸಿರುವ ಬುಡಕಟ್ಟು ಕ್ರೈಸ್ತರು ಯಾವುದೇ ಪರಿಶಿಷ್ಟ ಬುಡಕಟ್ಟಿನ ಸದಸ್ಯರೊ ಅಥವಾ ಅಲ್ಲವೊ ನಾನು ಹೇಳಲಾರೆ.

ಪ್ರಶ್ನೆಯ ಭಾಗ (ಬಿ) ಗೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರ ಗಮನವನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ ೧೯೫೧ ರ ಪ್ರಕರಣ ೧೦೦ ರ ಕಡೆಗೆ ಸೆಳೆಯಬಯಸುತ್ತೇನೆ. ಅದು ಚುನಾವಣೆಯನ್ನು ವಿವಾದಾಸ್ಪದವೆಂದು· ಕರೆಯುವುದಕ್ಕೆ ಆಧಾರವನ್ನು ಒಳಗೊಂಡಿದೆ. ವಿಶೇಷವಾಗಿ ಅವರು ಉಪ–ಪ್ರಕರಣ (೧) ಕಲಮು (ಸಿ) ಯನ್ನು ನೋಡಬಹುದಾಗಿದೆ.

* ಪಿ.ಡಿ. ಸಂ.೯ ಭಾಗ–೧, ೪ ಸೆಪ್ಟೆಂಬರ್ ೧೯೫೧, ಪು. ೯೭೨

## ೫೭

# *ಕಾನೂನು ಮಂತ್ರಾಲಯದಲ್ಲಿ ಅಧಿಕಾರಿಗಳು

**೨೨೭. ಪ್ರೊ॥ ಕೆ.ಟಿ. ಷಾ:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಈ ಕೆಳಕಂಡ ದಿನಾಂಕಗಳಂದು ಇದ್ದಂತೆ ತಮ್ಮ ಸಚಿವಾಲಯದಲ್ಲಿನ (i) ಗೆಜೆಟೆಡ್ (ii) ನಾನ್–ಗೆಜೆಟೆಡ್ ಅಧಿಕಾರಿಗಳು, ಗುಮಾಸ್ತರು ಮತ್ತು ವರ್ಗ IV ನೌಕರರ ಸಂಖ್ಯೆ

(i) ೧೫ ಆಗಸ್ಟ್ ೧೯೪೭; (ii) ೩೧ ಮಾರ್ಚ್ ೧೯೪೮; (iii) ೩೧ ಮಾರ್ಚ್ ೧೯೪೯; (iv) ೩೧ ಮಾರ್ಚ್ ೧೯೫೦; (v) ೩೧ ಮಾರ್ಚ್ ೧೯೫೧; ಮತ್ತು

(ಬಿ) ೧೯೪೭–೪೮ (ವಿಭಜನೋತ್ತರ); ೧೯೪೮–೪೯; ೧೯೪೯–೫೦ ಮತ್ತು ೧೯೫೦–೫೧ ರ ವರ್ಷಗಳಲ್ಲಿ ಮೊದಲ ಹಂತದಲ್ಲಿ ನೇಮಕ ಮಾಡಿದ ಅಧಿಕಾರಿಗಳು, ಗುಮಾಸ್ತರು ಮತ್ತು ವರ್ಗ IV ನೌಕರರು ಮತ್ತು ಆ ತರುವಾಯ (i) ಖಾಯಂ ಮಾಡಲ್ಪಟ್ಟವರು, (ii) ನಿವೃತ್ತಿ ಹೊಂದಿದವರು ಮತ್ತು (iii) ತೆಗೆದು ಹಾಕಲ್ಪಟ್ಟವರ ಸಂಖ್ಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಕೇಳಲಾಗಿರುವ ಮಾಹಿತಿಯು ತಕ್ಷಣಕ್ಕೆ ಲಭ್ಯವಿಲ್ಲ. ಅದರ ಸಂಗ್ರಹಣೆಗೆ, ಸಮಯ ಮತ್ತು ಶ್ರಮದ ಅತಿಯಾದ ವೆಚ್ಚವಾಗಲಿದೆ.

## ೫೮

# **ಮತದಾನ ಕೇಂದ್ರಗಳ ಪಟ್ಟಿ

೧೦೬೯. **ಪಂಡಿತ್ ಕುಂಸ್ರು:** ಕಾನೂನು ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಚುನಾವಣಾ ಆಯೋಗವು ಬಾಂಬೆ ರಾಜ್ಯ ಸರ್ಕಾರ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಮತದಾನ ಕೇಂದ್ರಗಳ ಪಟ್ಟಿಯನ್ನು ತಯಾರಿಸುವಂತೆ ಮತ್ತು ಅವುಗಳನ್ನು ಅಂತಿಮವಾಗಿ ಅನುಮೋದಿಸುವ ಮುನ್ನ ಯಾವುದೆ ಪಕ್ಷಕ್ಕೆ ತೋರಿಸದಂತೆ ಸೂಚನೆ ನೀಡಿರುವುದೆ?

(ಬಿ) ಬಾಂಬೆ ಸರ್ಕಾರವು ಚುನಾವಣಾ ಆಯೋಗದ ಸೂಚನೆ ಇದ್ದಾಗ್ಯೂ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಗ್ರಾಮೀಣ ಅಭಿವೃದ್ಧಿ ಮಂಡಳಿಗಳ ಉಪಾಧ್ಯಕ್ಷರಿಗೆ ಪ್ರಾರಂಭಿಕ ಪಟ್ಟಿಗಳನ್ನು ತೋರಿಸುವಂತೆ ಆದೇಶ ನೀಡಿರುವುದೆ?

(ಸಿ) ಈ ಜಿಲ್ಲಾ ಉಪಾಧ್ಯಕ್ಷರು ಮತ್ತು ಅನೇಕ ಸಂದರ್ಭಗಳಲ್ಲಿ ಅಧ್ಯಕ್ಷರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರೆ? ಮತ್ತು

---

* ಪಿ.ಡಿ. ಸಂ.೯ ಭಾಗ–೧, ೧೭ ಸೆಪ್ಟೆಂಬರ್ ೧೯೫೧, ಪು. ೧೨೭೩



* ಪಿ.ಡಿ. ಸಂ.೯ ಭಾಗ–೧, ೧೭ ಸೆಪ್ಟೆಂಬರ್ ೧೯೫೧, ಪು. ೧೨೭೦

(ಡಿ) ಮೇಲಿನ ಭಾಗ (ಎ) ಮತ್ತು (ಬಿ)ಗಳಿಗೆ ಉತ್ತರ ಹೌದು ಎಂದಾದರೆ ಈ ವಿಷಯದಲ್ಲಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಇಲ್ಲ. ಚುನಾವಣಾ ಆಯೋಗವು ಮತದಾನ ಕೇಂದ್ರಗಳ ಪಟ್ಟಿಯನ್ನು ಅಂತಿಮವಾಗಿ ಅನುಮೋದನೆಗೊಳ್ಳದ ಮುನ್ನ ಯಾವುದೇ ರಾಜಕೀಯ ಪಕ್ಷಕ್ಕೆ ತೋರಿಸಕೂಡದೆಂದು ಸೂಚನೆಗಳನ್ನು ನೀಡಿರುವುದಿಲ್ಲ. ಅದಕ್ಕೆ ವಿರುದ್ಧವಾಗಿ, ಆಯೋಗವು, ರಾಜ್ಯಸರ್ಕಾರಗಳು, ಮತದಾನ ಕೇಂದ್ರಗಳ ತಾತ್ಕಾಲಿಕ ಯೋಜನೆಗಳನ್ನು ವಿವಿಧ ರಾಜಕೀಯ ಪಕ್ಷಗಳಿಗೆ ತೋರಿಸಬೇಕೆಂದೂ ಸಾಧ್ಯವಾದಷ್ಟು ಪ್ರಚಾರ ನೀಡಬೇಕೆಂದೂ ಸಲಹೆ ಮಾಡಿರುತ್ತದೆ. ಆಯೋಗವು ೨೮ ಮೇ ೧೯೫೧ರಂದು ಎಲ್ಲ ರಾಜ್ಯ ಸರ್ಕಾರಗಳಿಗೆ ಬರೆದ ಪತ್ರದ ಪ್ರತಿಯನ್ನು ಸದನದ ಮುಂದೆ ಮಾಹಿತಿಗಾಗಿ ಮಂಡಿಸಲಾಗಿದೆ. (ಅನುಬಂಧ VII, ಪರಿಶಿಷ್ಟ ಸಂ. ೯).

(ಬಿ) ಬಾಂಬೆ ಸರ್ಕಾರವು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿ, ಸರ್ಕಾರವು ಅನುಮೋದಿಸಿರುವ ತಾತ್ಕಾಲಿಕ ಪಟ್ಟಿಗಳನ್ನು ಸಾರ್ವಜನಿಕರಿಗೆ ತೋರಿಸಬೇಕೆಂದು ತಿಳಿಸಿರುತ್ತದೆ. ಈ ಪಟ್ಟಿಗಳನ್ನು ಆ ರಾಜ್ಯದ ಜಿಲ್ಲೆ ಮತ್ತು ತಾಲೂಕು ಕೇಂದ್ರಸ್ಥಾನಗಳಲ್ಲಿ ಪರಿಶೀಲನೆಗಾಗಿ ಇರಿಸಿಲಾಗಿದ್ದು, ಸಾರ್ವಜನಿಕ ಸಲಹೆ ಮತ್ತು ಟೀಕೆಗಳನ್ನು ಎಚ್ಚರಿಕೆಯಿಂದ ಪರಿಗಣಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಗ್ರಾಮೀಣ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿಗಳ ಕೆಲಸವನ್ನು ಸರಳಗೊಳಿಸಲು ಬಾಂಬೆ ಸರ್ಕಾರವು, ಪಟ್ಟಿಗಳನ್ನು ಈ ಮಂಡಳಿಗಳ ಉಪಾಧ್ಯಕ್ಷರಿಗೂ ತೋರಿಸುವಂತೆ ತಿಳಿಸಿರುತ್ತದೆ.

(ಸಿ) ಬಾಂಬೆಯ ಕೆಲವೊಂದು ಗ್ರಾಮೀಣ ಅಭಿವೃದ್ಧಿ ಮಂಡಳಿಗಳ ಉಪಾಧ್ಯಕ್ಷರು ಮತ್ತು ಕೆಲವೇ ಸಂದರ್ಭಗಳಲ್ಲಿ, ಅವುಗಳ ಅಧ್ಯಕ್ಷರು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರಾಗಿದ್ದಾರೆ.

(ಡಿ) ಉದ್ಭವಿಸುವುದಿಲ್ಲ.

**ಪಂಡಿತ್ ಕುಂಜ್ರು:** ಮತದಾನ ಕೇಂದ್ರಗಳ ಪ್ರಾರಂಭಿಕ ಪಟ್ಟಿಗಳನ್ನು ಬಾಂಬೆ ರಾಜ್ಯದ ಗ್ರಾಮೀಣ ಅಭಿವೃದ್ಧಿ ಮಂಡಳಿಗಳ ಉಪಾಧ್ಯಕ್ಷರ ಹೊರತು ಇತರರಿಗೂ ತೋರಿಸಲಾಗಿದೆಯೆ?

**ಡಾ. ಅಂಬೇಡ್ಕರ್:** ಆ ಮಾಹಿತಿ ನನ್ನಲಿಲ್ಲ.

**ಪಂಡಿತ್ ಕುಂಜ್ರು:** ಚುನಾವಣಾ ಆಯೋಗವು ಹೊರಡಿಸಿರುವ ಸೂಚನೆಗಳು ಎಲ್ಲ ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಸ್ವರೂಪದ್ದಾಗಿರುವಾಗ, ಬಾಂಬೆ ಸರ್ಕಾರವು, ಈ ಪ್ರಾರಂಭಿಕ ಮತಕೇಂದ್ರಗಳ ಪಟ್ಟಿಗಳನ್ನು ಗ್ರಾಮೀಣ ಅಭಿವೃದ್ಧಿ ಮಂಡಳಿಗಳ ಉಪಾಧ್ಯಕ್ಷರಿಗೆ ತೋರಿಸುವಂತೆ ಸೂಚಿಸುವುದು ಅಗತ್ಯವಾಗಿದ್ದಿತೆ?

**ಡಾ. ಅಂಬೇಡ್ಕರ್:** ಬಹುಶಃ ಆ ಪ್ರದೇಶದಲ್ಲಿನ ಜನರ ಸಂಘಟಿತ ಅಭಿಪ್ರಾಯ ಪಡೆಯುವುದು ಆವಶ್ಯಕವಾಗಿದ್ದಿರಬಹುದು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಪ್ರತಿಕ್ಷೇತ್ರದ ಮತದಾರರ ಪಟ್ಟಿಗಳನ್ನು ಅಕಾರಾದಿಯಾಗಿ ಪಟ್ಟಿ ಮಾಡಿಸಿರುವುದು ನಿಜವೆ?

**ಡಾ. ಅಂಬೇಡ್ಕರ್:** ನಾನು ಮತದಾರರ ಪಟ್ಟಿಯನ್ನು ನೋಡಿಲ್ಲ. ಆದ್ದರಿಂದ ಹೇಳಲಾರೆ. ಬಹುಶಃ ಮಾನ್ಯ ಸದಸ್ಯರಲ್ಲಿಯೇ ಹೆಚ್ಚು ಮಾಹಿತಿ ಇದ್ದಂತಿದೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಪ್ರತಿಯೊಂದು ಮತದಾನ ಕೇಂದ್ರಕ್ಕೂ ಪ್ರತ್ಯೇಕ ಪಕ್ಷಗಳಿಲ್ಲದೆ ಇರುವುದರಿಂದ ಒಂದು ನಿರ್ದಿಷ್ಟ ಮತದಾನ ಕೇಂದ್ರದಲ್ಲಿ ವಾಸಿಸುವ ವ್ಯಕ್ತಿಗಳು ಆ ಮತಕ್ಷೇತ್ರದಲ್ಲಿ

ಮತದಾನ ಮಾಡಲು ಮೈಲಿಗಟ್ಟಲೆ ಪ್ರಯಾಣ ಮಾಡಬೇಕಾಗಿರುವುದು ನಿಜವೆ?

**ಡಾ. ಅಂಬೇಡ್ಕರ್:** ನನಗೆ ಹಾಗೇನೂ ಅನ್ನಿಸುವುದಿಲ್ಲ ಒಂದು ನಿರ್ದಿಷ್ಟ ಮತದಾನ ಕೇಂದ್ರಕ್ಕೆ ಹೋಗಬೇಕಾದ ಮತದಾರರ ಸಂಖ್ಯೆಯನ್ನು ಎಲ್ಲ ಜನರಿಗೂ ತಿಳಿಸಲಾಗುವುದು.

**ಪಂಡಿತ್ ಠಾಕೂರ್ ದಾಸ್ ಭಾರ್ಗವ:** ಈ ಎಲ್ಲ ಪಟ್ಟಿಗಳಲ್ಲಿನ ಹೆಸರುಗಳನ್ನೂ ಅಕಾರಾದಿಯಾಗಿ ಪಟ್ಟಿ ಮಾಡಲಾಗಿದೆ. ಅಂದರೆ, ಪ್ರತಿ ಮತದಾನ ಕೇಂದ್ರಗಳಿಗೆ ಪ್ರತ್ಯೇಕವಾದ ಪಟ್ಟಿ ಇರುವುದಿಲ್ಲ. ಪ್ರತಿಯೊಂದು ಮತದಾನ ಕೇಂದ್ರಕ್ಕೆ ಪ್ರತ್ಯೇಕವಾದ ಪಟ್ಟಿ ಇಲ್ಲದ ಹೊರತು ಜನರಿಗೆ ತಾವು ಎಲ್ಲಿಗೆ ಹೋಗಬೇಕೆಂಬುದು ಗೊತ್ತಾಗುವುದಿಲ್ಲ; ಅವರು ಮೈಲಿಗಟ್ಟಲೆ ಪ್ರಯಾಣಿಸಬೇಕಾಗುತ್ತದೆ.

**ಡಾ. ಅಂಬೇಡ್ಕರ್:** ಮತದಾರರ ಪಟ್ಟಿಯನ್ನು ಅಕಾರಾದಿಯಾಗಿ ಪಟ್ಟಿ ಮಾಡಿರುವುದು ನನಗೆ ತಿಳಿಯದು.

**ಉಪ ಸಭಾಧ್ಯಕ್ಷರು:** ಅವುಗಳನ್ನು ಅಕಾರಾದಿಯಾಗಿ ಪಟ್ಟಿಮಾಡಿ ಪ್ರತಿಯೊಂದು ಮತದಾನ ಕೇಂದ್ರದಲ್ಲಿ ತೂಗುಹಾಕಿರಬಹುದು.

**ಡಾ. ಅಂಬೇಡ್ಕರ್:** ಈ ಬಗ್ಗೆ ವಿಚಾರಿಸುತ್ತೇನೆ.

**ಉಪ ಸಭಾಧ್ಯಕ್ಷರು:** ಇರಲಿ, ಅದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ.

**ಪಂಡಿತ್ ಕುಂಜ್ರು–** ಕಾನೂನು ಮಂತ್ರಿಗಳು ಚುನಾವಣಾ ಆಯೋಗವು ಬಾಂಬೆ ರಾಜ್ಯಕ್ಕೆ ನೀಡಿರುವ ಸೂಚನೆಗಳನ್ನು ಇತರ ರಾಜ್ಯಗಳನ್ನೂ ಸಹ ನೀಡಲಾಗಿದೆಯೆ ಎಂಬ ಬಗ್ಗೆ ತಿಳಿಸುವಿರಾ?

**ಡಾ. ಅಂಬೇಡ್ಕರ್:** ಅದೊಂದು ಸಾಮಾನ್ಯ ಪತ್ರವಾಗಿದ್ದು, ಎಲ್ಲ ರಾಜ್ಯಗಳಿಗೂ ಕಳುಹಿಸಿಕೊಡಲಾಗಿದೆ.

**ಪಂಡಿತ್ ಕುಂಜ್ರು:** ಮತದಾನ ಕೇಂದ್ರಗಳ ಈ ಪ್ರಾರಂಭಿಕ ಪಟ್ಟಿಗಳನ್ನು ಇತರ ರಾಜ್ಯಗಳಲ್ಲಿನ ರಾಜಕೀಯ ಪಕ್ಷದ ಸದಸ್ಯರುಗಳಿಗೆ ತೋರಿಸಲಾಗಿದೆಯೆ?

**ಡಾ. ಅಂಬೇಡ್ಕರ್:** ನನ್ನ ಸ್ನೇಹಿತರು ಎಲ್ಲೆಡೆ ರಾಜಕೀಯ ಪಕ್ಷಗಳಿವೆ ಎಂದು ತಿಳಿದಿರುವಂತಿದೆ. ಅಲ್ಲಿ ಯಾವುದೇ ರಾಜಕೀಯ ಪಕ್ಷವಿದ್ದರೂ, ರಾಜ್ಯ ಸರ್ಕಾರವು, ಪಟ್ಟಿಗಳನ್ನು ಇತರರಿಗೆ ತೋರಿಸುವಂತೆಯೆ ಅವರಿಗೂ ತೋರಿಸಲು ಕ್ರಮ ಕೈಗೊಳ್ಳುವರೆಂದು ನನ್ನ ನಂಬಿಕೆ.

**ಪಂಡಿತ್ ಕುಂಜ್ರು:** ನನ್ನ ಮಾನ್ಯ ಸ್ನೇಹಿತರು ದೇಶದಲ್ಲಿ ಒಂದೇ ಒಂದು ರಾಜಕೀಯ ಪಕ್ಷವಿದೆ ಎಂದು ನಂಬುವಂಥ ಪೆದ್ದರಲ್ಲ.

**ಡಾ. ಅಂಬೇಡ್ಕರ್:** ಇತರರು ಹಾಗೆಂದು ಊಹೆ ಮಾಡುತ್ತಿದ್ದಾರೆ.

## ೫೯

## *ಕುಷ್ಠರೋಗ

**೧೦೭೪. ಶ್ರೀ ಶಿವನ್ ಪಿಳ್ಳೈ:** ಆರೋಗ್ಯ ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

---

* ಪಿ.ಡಿ. ಸಂ.೯ ಭಾಗ–೧, ೧೭ ಸೆಪ್ಟೆಂಬರ್ ೧೯೫೧, ಪು. ೧೩೭೮

(ಎ) ಕುಷ್ಠರೋಗ ಪೀಡಿತರ ಬಗ್ಗೆ ಸರ್ಕಾರವು ರಾಜ್ಯವಾರು ಖಚಿತ ಅಂಕಿಸಂಖ್ಯೆಗಳನ್ನು ಹೊಂದಿದೆಯೆ.

(ಬಿ) ಹಾಗಿದ್ದರೆ, ಭಾರತದ ಯಾವ ರಾಜ್ಯದಲ್ಲಿ ಜನಸಂಖ್ಯೆಗಳಿಗೆ ಅನುಗುಣವಾಗಿ ಅತ್ಯಂತ ಹೆಚ್ಚು ಶೇಕಡಾವಾರು ಈ ರೋಗಪೀಡಿತರಿದ್ದಾರೆ; ಮತ್ತು

(ಸಿ) ಈ ಭಯಾನಕ ರೋಗವನ್ನು ಎದುರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ): ಈ ಮೊದಲು ಅನೇಕ ಸಾರಿ ಹೇಳಿರುವಂತೆ ಖಚಿತ ಅಂಕಿ ಸಂಖ್ಯೆ ಲಭ್ಯವಿಲ್ಲ.

(ಸಿ) ವಿಷಯ ಮೂಲತಃ ರಾಜ್ಯಸರ್ಕಾರಗಳಿಗೆ ಸಂಬಂಧಿಸಿದೆ. ಭಾರತ ಸರ್ಕಾರವು ಕೆಲಕಾಲದ ಹಿಂದೆ, ದೇಶದಲ್ಲಿ ಕೇಂದ್ರೀಯ ಕುಷ್ಠರೋಗ ಶಿಕ್ಷಣ ಮತ್ತು ಸಂಶೋಧನ ಸಂಸ್ಥೆಯೊಂದನ್ನು ಸ್ಥಾಪಿಸುವ ಯೋಜನೆ ಹೊಂದಿದ್ದಿತು. ಅದರ ಧ್ಯೇಯೋದ್ದೇಶಗಳೆಂದರೆ, ಕುಷ್ಠರೋಗದ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸುವುದು, ಸಂಶೋಧನೆಯ ಫಲಿತಾಂಶವನ್ನು ಅನ್ವಯಿಸಲು ಕ್ಷೇತ್ರಕಾರ್ಯ ಕೈಗೊಳ್ಳಲು ಪ್ರೋತ್ಸಾಹಿಸುವುದು, ಕುಷ್ಠರೋಗ ಕಾರ್ಯಕರ್ತರಿಗೆ ತರಬೇತಿ ನೀಡುವುದು; ಕುಷ್ಠ ರೋಗ ನಿರೋಧ ಕಾರ್ಯದಲ್ಲಿ ತಾಂತ್ರಿಕ ಸಲಹೆ ಮತ್ತು ತಾಂತ್ರಿಕ ಮಾರ್ಗದರ್ಶನ ನೀಡುವುದು ಮತ್ತು ರಾಜ್ಯದಲ್ಲಿನ ಕುಷ್ಠರೋಗ ಸಂಸ್ಥೆಗಳ ಸಂಘಟನೆ ಮತ್ತು ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ಹಣಕಾಸು ಸಂಕಷ್ಟವೊಂದದಿಂದಲೇ ಈ ಯೋಜನೆ ಫಲಪ್ರದವಾಗುವುದಿಲ್ಲ. ಆದರೆ ಕೆಲವೊಂದು ಸ್ವಯಂ ಸೇವಾ ಸಂಸ್ಥೆಗಳು ಮತ್ತು ರಾಜ್ಯಗಳು ಈ ರೋಗದಿಂದ ನರಳುತ್ತಿರುವವರಿಗೆ ಉತ್ತಮ ಸೇವೆ ಸಲ್ಲಿಸುತ್ತಿವೆ. ಸಂಶೋಧನೆ ಸಹ ನಡೆಯುತ್ತಲಿದೆ.

**ಶ್ರೀ ಶಿವನ್ ಪಿಳ್ಳೈ:** ಗಾಂಧಿ ಸ್ಮಾರಕ ನಿಧಿಯು ಕೇಂದ್ರೀಯ ಕುಷ್ಠರೋಗ ಪರಿಹಾರ ಸಮಿತಿಯನ್ನು ರಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಪೀಡೆಯನ್ನು ತೊಲಗಿಸಲು ಈ ಸಂಸ್ಥೆಯೊಂದಿಗೆ ಸರ್ಕಾರವು ಯಾವ ರೀತಿ ಸಹಕರಿಸಲು ಉದ್ದೇಶಿಸಿದೆ?

**ಡಾ. ಅಂಬೇಡ್ಕರ್:** ಸರ್ಕಾರವು ಸಾಧ್ಯವಿರುವ ಎಲ್ಲ ರೀತಿಗಳಲ್ಲೂ ಸಹಕರಿಸಲು ಬದ್ಧ.

**ಶ್ರೀ ಶಿವನ್ ಪಿಳ್ಳೈ:** ಕುಷ್ಠರೋಗ ಚಿಕಿತ್ಸಾ ಘಟಕಗಳೇ ಇಲ್ಲದ ಸ್ಥಳಗಳಿವೆಯೆ ಮತ್ತು ಹಾಗಿದ್ದಲ್ಲಿ, ಅಂಥ ದುರದೃಷ್ಟ ರಾಜ್ಯ ಯಾವುದು?

**ಡಾ. ಅಂಬೇಡ್ಕರ್:** ಅಂಥ ಚಿಕಿತ್ಸಾ ಘಟಕಗಳೇ ಇಲ್ಲದ ಅನೇಕ ರಾಜ್ಯಗಳಿವೆ ಎಂದು ನನ್ನ ನಂಬಿಕೆ.

# ೬೦

# *ಲೇಡಿ ಹಾರ್ಡಿಂಗ್ ವೈದ್ಯಕೀಯ ಕಾಲೇಜ್

**೧೦೮೪. ಶ್ರೀ ಅಲೆಕ್ಸಾಂಡರ್:** ಆರೋಗ್ಯ ಸಚಿವರು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಭಾರತ ಸರ್ಕಾರವು ಲೇಡಿ ಹಾರ್ಡಿಂಜ್ ವೈದ್ಯಕೀಯ ಕಾಲೇಜಿನ ನೀಡಿರುವ ಹಣಕಾಸು ನೆರವು;

---

* ಪಿ.ಡಿ ಸಂ.೯, ಭಾಗ–೧, ೧೭ ಸೆಪ್ಟೆಂಬರ್ ೧೯೫೧, ಪು. ೧೩೮೮

(ಬಿ) ಅದರ ಆಡಳಿತ ಮಂಡಳಿಯಲ್ಲಿ ಭಾರತ ಸರ್ಕಾರದ ಪ್ರತಿನಿಧಿಗಳಿದ್ದಾರೆಯೆ ಮತ್ತು ಇದ್ದಲ್ಲಿ, ಎಷ್ಟು ಜನ ಸದಸ್ಯರು;

(ಸಿ) ಈ ಸಂಸ್ಥೆಯು ಇಡೀ ಭಾರತಕ್ಕೆ ಸೇವೆ ಸಲ್ಲಿಸಲು ಉದ್ದೇಶಿಸಿದೆಯೆ?

(ಡಿ) ವಿವಿಧ ರಾಜ್ಯಗಳಿಗೆ ಸ್ಥಳಾವಕಾಶವನ್ನು ಹಂಚಲು ಯಾವುದಾದರೂ ತತ್ತ್ವವನ್ನು ಅನುಸರಿಸಲಾಗುತ್ತಿದೆಯೇ?

(ಇ) ರಾಜ್ಯವಾರು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ.

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಲೇಡಿ ಹಾರ್ಡಿಂಜ್ ವೈದ್ಯಕೀಯ ಕಾಲೇಜಿಗೆ ನೀಡುವ ಅನುದಾನ ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ನೀಡಿದ ಅನುದಾನಗಳ ವಿವರ ಈ ಕೆಳಕಂಡಂತಿದೆ:

| | |
|---|---|
| ೧೯೪೮–೪೯: | ರೂ. ೫,೨೩,೧೦೦ |
| ೧೯೪೯–೫೦: | ರೂ. ೧೦,೮೦,೫೭೬ |
| ೧೯೫೦–೫೧: | ರೂ. ೯,೪೪,೦೦೦ |

(ಬಿ) ಆಡಳಿತ ಮಂಡಳಿಯಲ್ಲಿ ಭಾರತ ಸರ್ಕಾರಕ್ಕೆ ಪ್ರಾತಿನಿಧ್ಯವಿಲ್ಲ. ಆದಾಗ್ಯೂ ಏಳು ಜನ ಸರ್ಕಾರಿ ನೌಕರರು ಆ ಸಂಸ್ಥೆಯ ಸದಸ್ಯರಾಗಿದ್ದಾರೆ.

(ಸಿ) ಹೌದು.

(ಡಿ) ಎಷ್ಟು ರಾಜ್ಯಗಳಿಂದ ಸಾಧ್ಯವೋ ಅಷ್ಟು ರಾಜ್ಯಗಳಿಂದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಕಾಲೇಜು ಅಧಿಕಾರಿಗಳು ಪ್ರತಿಯೊಂದು ಪ್ರಯತ್ನವನ್ನು ಮಾಡುತ್ತಿದ್ದು, ಅರ್ಜಿದಾರರು ಅನ್ಯಥಾ ಸೂಕ್ತವಾಗಿದ್ದರೂ, ಕೇಂದ್ರೀಯ ಆಡಳಿತ ಪ್ರದೇಶಗಳಿಗೆ ಮತ್ತು ವೈದ್ಯಕೀಯ ಶಿಕ್ಷಣದ ಸೌಲಭ್ಯಗಳು ಸೀಮಿತವಾಗಿರುವ ರಾಜ್ಯಗಳಿಗೆ ಆದ್ಯತೆ ನೀಡಲಾಗುವುದು. ಸಂಸ್ಥೆಯ ಅಖಿಲ ಭಾರತ ಸ್ವರೂಪವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಈ ಕಾಲೇಜು ಪ್ರವೇಶದ ನಿಯಮಗಳ ಪರ್ಯಾಪ್ತತೆಯ ಪ್ರಶ್ನೆಯ ಕಡೆಗೆ ಸರ್ಕಾರವು ಗಮನ ಹರಿಸುತ್ತಾರೆ.

(ಇ) ಅಗತ್ಯ ಮಾಹಿತಿಯನ್ನೊಳಗೊಂಡ ವಿವರಗಳನ್ನು ಸದನದ ಮುಂದೆ ಮಂಡಿಸಲಾಗಿದೆ. (ನೋಡಿ. ಅನುಬಂಧ VII, ಪರಿಶಿಷ್ಟ ಸಂ ೧೨)

**ಶ್ರೀ ಅಲೆಗ್ಸಾಂಡರ್:** ಭಾಗ (ಎ)ಯ ಉತ್ತರಕ್ಕೆ ಸಂಬಂಧಿಸಿದಂತೆ ಕಾಲೇಜು ಆಡಳಿತದ ವಿರುದ್ಧ ದೂರುಗಳೇನಾದರೂ ಸರ್ಕಾರಕ್ಕೆ ಬಂದಿದೆಯೆ ಮತ್ತು ಬಂದಿದ್ದಲ್ಲಿ, ಸರ್ಕಾರವು ಕಾಲೇಜು ಆಡಳಿತವನ್ನು ವಸಹಿಸಿಕೊಳ್ಳಲು ಉದ್ದೇಶಿಸಿದೆಯೆ?

**ಡಾ. ಅಂಬೇಡ್ಕರ್:** ನನ್ನಲ್ಲಿ ಮಾಹಿತಿ ಇಲ್ಲ.

**ಶ್ರೀ ಕಾಮತ್:** ಮಂತ್ರಿಗಳು ಹೇಳಿದ ಈ ಏಳು ಜನ ಸರ್ಕಾರಿ ನೌಕರರು, ಸಮಿತಿಗೆ ನೇಮಕ ಮಾಡಿದ ಸರ್ಕಾರವನ್ನು ಪ್ರತಿನಿಧಿಸುವುದಿಲ್ಲವೆ?

**ಡಾ. ಅಂಬೇಡ್ಕರ್:** ಈ ಪ್ರಶ್ನೆಗೆ ನೋಟೀಸು ನೀಡಬೇಕು.

**ಶ್ರೀ ಕಾಮತ್:** ಮಾನ್ಯ ಮಂತ್ರಿಗಳು, ಈ ಎಲ್ಲ ಸರ್ಕಾರಿ ನೌಕರರ ಹೆಸರುಗಳು ಅವರ ಪದನಾಮಗಳು ಮತ್ತು ಅವರ ಶ್ರೇಣಿಗಳನ್ನು ತಿಳಿಸುವರೆ?

**ಡಾ. ಅಂಬೇಡ್ಕರ್:** ಈ ಪ್ರಶ್ನೆಗೂ ನನಗೆ ನೋಟೀಸು ಬೇಕು.

**ಶ್ರೀ ಬ್ರಜೇಶ್ವರ ಪ್ರಸಾದ್:** ಹಣಕಾಸು ಮಂತ್ರಾಲಯದ ಕಾರ್ಯದರ್ಶಿಗಳು ಈ ಸಮಿತಿಯಲ್ಲಿ ವೈಯಕ್ತಿಕ ಸಾಮರ್ಥ್ಯದ ಮೇಲೆ ಅಥವಾ ತಮ್ಮ ಆಧಿಕಾರಿಕ ಸಾಮರ್ಥ್ಯದ ಮೇಲೆ ಸದಸ್ಯರಾಗಿರುವರೆ?

**ಡಾ. ಅಂಬೇಡ್ಕರ್:** ನನ್ನ ಮಾನ್ಯ ಸ್ನೇಹಿತರು ಈ ಪ್ರಶ್ನೆಗೆ ಉತ್ತರ ನೀಡಲಿ.

**ಹಣಕಾಸು ಮಂತ್ರಿಗಳು (ಶ್ರೀ ಸಿ.ಡಿ. ದೇಶಮುಖ್):** ತಮ್ಮ ಆಧಿಕಾರಿಕ ಸಾಮರ್ಥ್ಯದಲ್ಲಿ.

**ಶ್ರೀ ಕಾಮತ್:** ಆಡಳಿತದ ಯಾವುದೇ ಹಂತದಲ್ಲಿ ಅಥವಾ ಸಮಿತಿಯ ಕೆಲಸ ಕಾರ್ಯದಲ್ಲಿ ಆರೋಗ್ಯ ಮಂತ್ರಿಗಳು ಈ ಸಂಸ್ಥೆಯ ಸಂಪರ್ಕಕ್ಕೆ ಬರುವುದಿಲ್ಲವೆ?

**ಡಾ. ಅಂಬೇಡ್ಕರ್:** ಅವರು ಸಂಪರ್ಕದಲ್ಲಿರಲೇಬೇಕು.

**ಶ್ರೀ ಕಾಮತ್:** ಸರ್ಕಾರಕ್ಕೆ ಪ್ರಾತಿನಿಧ್ಯವೇ ಇಲ್ಲ. ಅವರಿಗೆ ತಿಳಿಯದು.

**ಡಾ. ಅಂಬೇಡ್ಕರ್:** ಈ ಸಂಸ್ಥೆಯ ಮೂಲ ಸಂವಿಧಾನವೇನೋ ನನಗೆ ತಿಳಿಯದು.

**ಉಪ ಸಭಾಧ್ಯಕ್ಷರು:** ಮುಂದಿನ ಪ್ರಶ್ನೆ, ಶ್ರೀ ಗುಹಾ.

## ೬೧

## *ಸೂಲಗಿತ್ತಿಯರಿಗೆ ಮತ್ತು ದಾದಿಯರಿಗೆ ತರಬೇತಿ

**೧೦೮೧. ಡಾ. ಎಂ.ಬಿ. ಗಂಗಾಧರ ಗೌಡ:** ಆರೋಗ್ಯ ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ತಿಳಿಸುವರೆ:

(ಎ) ದೆಹಲಿಯಲ್ಲಿ ಸೂಲಗಿತ್ತಿಯರು, ದಾದಿಯರು ಮತ್ತು ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡುತ್ತಿರುವ ಸರ್ಕಾರ ನಿರ್ವಹಿಸುತ್ತಿರುವ ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ದೆಹಲಿಯಲ್ಲಿನ ಸಂಸ್ಥೆಗಳು ಹೆಸರುಗಳು?

(ಬಿ) ಈ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ನಿಗದಿಪಡಿಸಿರುವ ಪ್ರತಿ ವರ್ಷದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

(ಸಿ) ಈ ಸಂಸ್ಥೆಗಳಲ್ಲಿ ಪ್ರವೇಶ ಸಂಖ್ಯೆಗಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಪ್ರತಿ ವರ್ಷವೂ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸುತ್ತಿರುವುದು ನಿಜವೆ?

(ಡಿ) ಹಾಗಿದ್ದಲ್ಲಿ, ಸರಿಸುಮಾರು ಎಷ್ಟು ಜನರಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ): ಕೇಳಿರುವ ಮಾಹಿತಿ ಒಳಗೊಂಡ ಹೇಳಿಕೆಯನ್ನು ಸದನದ ಮುಂದೆ ಮಂಡಿಸಲಾಗಿದೆ. (ನೋಡಿ–ಅನುಬಂಧ VII ಪರಿಶಿಷ್ಟ ಸಂ. ೧೩)

(ಸಿ) ಹೌದು.

(ಡಿ) ಮಾಹಿತಿ ಸಂಗ್ರಹಿಸಲಾಗುತ್ತದೆ. ಮುಂದೆ ಸದನದ ಮುಂದೆ ಮಂಡಿಸಲಾಗುವುದು.

---

* ಪಿ.ಡಿ. ಸಂ.೯, ಭಾಗ–೧, ೧೭ ಸೆಪ್ಟೆಂಬರ್ ೧೯೫೧, ಪು. ೧೪೦೩

# ೬೨

# **ಎಮಿಟೈನ್

**೧೮೯೩. ಶ್ರೀ ಕಾಮತ್:** ಆರೋಗ್ಯ ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಅಮಿಬಿಕ್ ರಕ್ತಭೇದಿಗೆ ಸಿದ್ಧೌಷಧವಾಗಿರುವ 'ಎಮಿಟೈನ್' ಉತ್ಪತ್ತಿ ಮಾಡುವ ಬೇರುಗಳನ್ನು ನೀಡುವ ಇಪೆಕಾಕ್ವುನ್ಹಾ ಸಸ್ಯಗಳನ್ನು ಬೆಳೆಸಲು ಈ ಹಿಂದೆ ತೆಗೆದುಕೊಂಡಿರುವ ಮತ್ತು ಪ್ರಸಕ್ತ ತೆಗೆದುಕೊಳ್ಳುತ್ತಿರುವ ಕ್ರಮಗಳಾವುವು;

(ಬಿ) ಭಾರತದಲ್ಲಿ ಅಮಿಬಿಕ್ ರಕ್ತ ಭೇಧಿಯ ಪ್ರಕರಣಗಳು,

(ಸಿ) ಭಾರತಕ್ಕೆ ವಾರ್ಷಿಕವಾಗಿ ಆಮದು ಮಾಡಿಕೊಳ್ಳಲಾಗುವ ಎಮಿಟೈನ್ ಮತ್ತು ಇಪೆಕಾಕ್ ಬೇರುಗಳ ಗುಣಮಟ್ಟ ಮತ್ತು ಮೌಲ್ಯ ಹಾಗೂ ಯಾವ ದೇಶಗಳಿಂದ;

(ಡಿ) ಇಪಿಕ್ವಾಕ್ ಕೃಷಿ ಕುರಿತು ಪಶ್ಚಿಮ ಬಂಗಾಳದ ಸಿಂಕೋನಾ ನಿರ್ದೇಶನಾಲಯವು ಸ್ವಲ್ಪ ಕ್ರಮ ಕೈಗೊಂಡಿರುವುದು ನಿಜವೆ, ಹಾಗಿದ್ದಲ್ಲಿ, ಫಲಿತಾಂಶವೇನು; ಮತ್ತು

(ಇ) ಹಾಲಿ ಪಶ್ಚಿಮ ಬಂಗಾಳದ ಇಪೆಕ್ವಾಕ್ ತೋಟಗಳನ್ನು ವಿಸ್ತರಿಸಲು ಉದ್ದೇಶಿಸಲಾಗಿದೆಯೆ; ಮತ್ತು ಹಾಗಿದ್ದಲ್ಲಿ ಯಾವ ಕ್ರಮಕೈಗೊಳ್ಳಲು ಚಿಂತನೆ ನಡೆಸಲಾಗಿದೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಭಾರತದಲ್ಲಿ ಇದರ ಕೃಷಿಯಲ್ಲಿನ ತೊಂದರೆಗಳಿಂದಾಗಿ ಇದನ್ನು ವಾಣಿಜ್ಯ ಬೆಳೆಯಾಗಿ ಕೈಗೊಳ್ಳುವುದಕ್ಕೆ ಅಡ್ಡಿಯುಂಟಾಗಿರುತ್ತದೆ ಎಂದು ತಿಳಿದುಬಂದಿದೆ. ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಇಪೆಕಾಕ್ಯುನ್ಹಾ ಪ್ರಾಯೋಗಿಕ ಕೃಷಿಯನ್ನು ಕೈಗೊಂಡಿದ್ದು, ಕೊಯಮತ್ತೂರು, ಪಂಚಗನಿ ಮತ್ತು ಡಾರ್ಜಲಿಂಗ್‌ಗಳಲ್ಲಿ ರೂಪಿಸಿರುವ ಸಂಯೋಜಿತ ಯೋಜನೆಯಲ್ಲಿ ಇದನ್ನು ಸೇರಿಸಿರುತ್ತದೆ.

(ಬಿ) ಅಮಿಬಿಕ್ ರಕ್ತಬೇಧಿ ಪ್ರಕರಣಗಳು, ವಿಶೇಷವಾಗಿ ಭಾರತದ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ, ಎಂದರೆ, ಮದ್ರಾಸು ಮತ್ತು ಪಶ್ಚಿಮ ಬಂಗಾಳಗಳಲ್ಲಿ ಅಧಿಕ ಎಂದು ಪರಿಗಣಿಸಲಾಗಿದೆ. ಈ ಕಾಯಿಲೆಯು ಅಧಿಸೂಚಿತವಲ್ಲವಾದುದರಿಂದ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಲಾಗಿಲ್ಲ;

(ಸಿ) ಎಮಿಟೈನ್ ಹೈಡ್ರೋಕ್ಲೋರೈಡ್ ಮತ್ತು ಇಪೆಕ್ವಾಕ್ ಆಮದು ಕುರಿತು ಅಂಕಿ ಸಂಖ್ಯೆಗಳು ಲಭ್ಯವಿರುವುದಿಲ್ಲ;

(ಡಿ) ಮತ್ತು (ಇ); ಪಶ್ಚಿಮ ಬಂಗಾಳ ಸರ್ಕಾರದಿಂದ ಮಾಹಿತಿಯನ್ನು ಕೇಳಲಾಗಿದೆ. ಕಾಲಕ್ರಮದಲ್ಲಿ ಸದನದ ಮುಂದೆ ಮಂಡಿಸಲಾಗುವುದು.

---

** ಅದೆ ಪು. ೧೪೦೫

## ೬೩

# *ಆಯುರ್ವೇದ ಸಂಶೋಧನ ಸಂಸ್ಥೆ

**೧೯೪. ಡಾ. ವಿ. ಸುಬ್ರಹ್ಮಣ್ಯಂ:** (ಎ) ಆರೋಗ್ಯ ಮಂತ್ರಿಗಳು ಸ್ಥಳೀಯ ವೈದ್ಯಕೀಯ ಪದ್ಧತಿಗಳನ್ನು ಕುರಿತ ಸಮಿತಿ (ಪಂಡಿತ್ ಸಮಿತಿ) ಯ ಶಿಫಾರಸುಗಳ ಪ್ರಕಾರ ಆಯುರ್ವೇದ ಪರಿಶೋಧನಾ ಸಂಸ್ಥೆಯನ್ನು ಸ್ಥಾಪಿಸುವ ಯೋಜನೆಯನ್ನು ಆರೋಗ್ಯ ಮಂತ್ರಾಲಯದ ಪರವಾಗಿ ಸಂಸತ್ತಿನ ಸ್ಥಾಯಿ ಸಮಿತಿಯ ಮುಂದೆ ಮತ್ತು ಸ್ಥಾಯಿ ಹಣಕಾಸು ಸಮಿತಿಯ ಮುಂದೆ ಮಂಡಿಸಲಾಗಿದೆಯೆ?

(ಬಿ) ಹಾಗಿದ್ದಲ್ಲಿ, ಅವರ ಶಿಫಾರಸುಗಳೇನು ಮತ್ತು ಯೋಜನೆಗೆ ಮಂಜೂರಾತಿ ನೀಡಲಾಗಿದೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ) ಯೋಜನೆಯು ಸಕ್ರಿಯ ಪರಿಶೀಲನೆಯಲ್ಲಿದೆ. ಅದನ್ನು ಆರೋಗ್ಯ ಮಂತ್ರಾಲಯದ ಸಂಸತ್ತಿನ ಸ್ಥಾಯಿ ಸಮಿತಿಯ ಮುಂದೆ ಮತ್ತು ಸ್ಥಾಯಿ ಹಣಕಾಸು ಸಮಿತಿಯ ಮುಂದೆ ಸದ್ಯದಲ್ಲಿಯೇ ಅನುಮೋದನೆಗಾಗಿ ಮಂಡಿಸಲಾಗುವುದು.

## ೬೪

# **ಗೃಹ ನಿರ್ಮಾಣ ನಿರ್ದೇಶನನಾಲಯ

**೨೪೫. ಶ್ರೀ ಕಾಮತ್:** ಆರೋಗ್ಯ ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಗೃಹನಿರ್ಮಾಣ ನಿರ್ದೇಶನಾಲಯವನ್ನು ಸ್ಥಾಪಿಸಿದ ದಿನಾಂಕ;

(ಬಿ) ಅದು ಕೊನೆಗೊಂಡ ದಿನಾಂಕ.

(ಸಿ) ಈ ಅವಧಿಯಲ್ಲಿ ನಿರ್ದೇಶನಾಲಯವು ಪೂರ್ಣಗೊಳಿಸಿದ ಕೆಲಸದ ಸ್ವರೂಪ ಮತ್ತು ಪ್ರಮಾಣ; ಮತ್ತು

(ಡಿ) ಗೃಹ ನಿರ್ಮಾಣ ನಿರ್ದೇಶಕರ ಅರ್ಹತೆಗಳೇನು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಮತ್ತು (ಬಿ) : ಗೃಹ ನಿರ್ಮಾಣ ನಿರ್ದೇಶನಾಲಯ ಎಂದು ಪ್ರತ್ಯೇಕವಾಗಿ ಸ್ಥಾಪಿಸಲಾಗಿರುವುದಿಲ್ಲ. ಗೃಹ ನಿರ್ಮಾಣ ನಿರ್ದೇಶನಾಲಯವನ್ನು ಸ್ಥೂಲ ಆಪ್ತ ಸಿಬ್ಬಂದಿಯೊಂದಿಗೆ ೪ ಅಕ್ಟೋಬರ್ ೧೯೪೮ರಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದ್ದಿತು. ಗೃಹ ನಿರ್ಮಾಣ ನಿರ್ದೇಶಕರು ೧ ಜುಲೈ ೧೯೫೧ರಂದು ತಮ್ಮ ಹುದ್ದೆಯನ್ನು ತ್ಯಜಿಸಿದರು.

(ಸಿ) ಗೃಹ ನಿರ್ಮಾಣ ನಿರ್ದೇಶಕರು ಭಾರತ ಸರ್ಕಾರದ ವಿವಿಧ ಮಂತ್ರಿಗಳಿಗೆ, ರಾಜ್ಯ ಸರ್ಕಾರಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಗೃಹ ನಿರ್ಮಾಣ ಕುರಿತ ಪ್ರಶ್ನೆಗಳ ಬಗ್ಗೆ ಸಲಹೆ ನೀಡಿರುತ್ತಾರೆ. ಅವರ

---

* ಪಿ.ಡಿ. ಸಂ.೯, ಭಾಗ–೧, ೧೭ ಸೆಪ್ಟೆಂಬರ್ ೧೯೫೧, ಪು. ೧೪೦೬

** ಪಿ.ಡಿ. ಸಂ.೯ ಭಾಗ–೧, ೧೭ ಸೆಪ್ಟೆಂಬರ್ ೧೯೫೧, ಪು. ೧೪೧೩

ಬಹುಪಾಲು ಸಮಯವು ಸರ್ಕಾರಿ ಗೃಹ ನಿರ್ಮಾಣ, ಕಾರ್ಖಾನೆ ನಿರ್ಮಾಣ ಮತ್ತು ನಿರ್ವಹಣೆಗೆ ವಿನಿಯೋಗವಾಗಿರುತ್ತದೆ.

(ಡಿ) ಮಾನ್ಯ ಸದಸ್ಯರ ಗಮನವನ್ನು ೭ ಡಿಸೆಂಬರ್ ೧೯೪೯ರಂದು ಅವರ ನಕ್ಷತ್ರ ಗುರುತಿನ ಪ್ರಶ್ನೆ ೩೯೦ರ ಭಾಗ (ಸಿ) ಗೆ ನೀಡಿದ ಉತ್ತರದ ಕಡೆಗೆ ಸೆಳೆಯಲಾಗಿದೆ.

## ೬೫

## *ಕುಷ್ಠರೋಗಿಗಳು

**೧೧೭೬. ಡಾ. ದೇಶಮುಖ್:** (ಎ) ೮ ಏಪ್ರಿಲ್ ೧೯೪೮ರಂದು ಕೇಳಲಾದ ನಕ್ಷತ್ರ ಗುರುತಿನ ಪ್ರಶ್ನೆ ೧೩೨೬ಕ್ಕೆ ಆರೋಗ್ಯ ಮಂತ್ರಿಗಳು ನೀಡಿದ ಭಾರತದಲ್ಲಿನ ಕುಷ್ಠರೋಗಿಗಳು ಮತ್ತು ಕುಷ್ಠ ರೋಗಿ ಆಶ್ರಯಧಾಮಗಳಿಗೆ ಸಂಬಂಧಿಸಿದಂತೆ ಯು.ಎಸ್.ಎ, ಯು.ಕೆ, ದಕ್ಷಿಣ ಅಮೆರಿಕಾ ಮತ್ತು ಫಿಲಿಪೈನ್ಸ್‌ಗಳಿಗೆ ನಿಯೋಜಿಸಲಾಗಿದ್ದ ಡಾ. ಧರ್ಮೇಂದ್ರ ಅವರು ಹಿಂದಿರುಗಿ ಬರುವರೆ ಎಂಬ ಬಗ್ಗೆ ನೀಡಿದ ಉತ್ತರವನ್ನು ಪರಿಶೀಲಿಸುವರೆ;

(ಬಿ) ಅವರು ಸದ್ಯ ಏನು ಕೆಲಸ ಮಾಡುತ್ತಿದ್ದಾರೆ?

(ಸಿ) ಅವರು ಹಿಂದಿರುಗಿ ಬಂದ ಮೇಲೆ ಕುಷ್ಠರೋಗಿಗಳ ಚಿಕಿತ್ಸೆಯಲ್ಲಿ ಮೂಲಭೂತ ಬದಲಾವಣೆ ಏನಾದರೂ ಆಗಿದೆಯೆ ಮತ್ತು ಆಗಿದ್ದಲ್ಲಿ ಯಾವ ರೀತಿ?

(ಇ) ಕುಷ್ಠ ರೋಗ ಕೇಂದ್ರೀಯ ಶಿಕ್ಷಣ ಮತ್ತು ಸಂಶೋಧನೆ ಸಂಸ್ಥೆಯ ಸ್ಥಾಪನೆ ಕುರಿತು ಯಾವ ಪ್ರಚಾರಗಳನ್ನು ಕೈಗೊಳ್ಳಲಾಗಿದೆ?

(ಎಫ್) ಕುಷ್ಠರೋಗಕ್ಕೆ ಶಾಶ್ವತ ಪರಿಹಾರ ಮತ್ತು ಪರಿಣಾಮಕಾರಿ ಔಷಧಿಯನ್ನು ಈಗ ಕಂಡುಹಿಡಿಯಲಾಗಿದೆಯೆ?

(ಜಿ) ಹಾಗಿದ್ದಲ್ಲಿ, ಭಾರತದ ಜನತೆ ಎಷ್ಟು ಮಟ್ಟಿಗೆ ಅವರಿಂದ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಹೌದು. ೧೨ ಸೆಪ್ಟೆಂಬರ್ ೧೯೪೮ ರಂದು.

(ಬಿ) ಅವರು ಪ್ರವಾಸದಲ್ಲಿ ಭೇಟಿ ನೀಡಿದ ವಿವಿಧ ಪ್ರದೇಶಗಳಲ್ಲಿ ನಡೆದ ಕುಷ್ಠರೋಗ ನಿರೋಧ ಕಾರ್ಯವನ್ನು ಕುರಿತು ಅಧ್ಯಯನ ಮಾಡಿರುತ್ತಾರೆ.

(ಸಿ) ಪ್ರಸಕ್ತ ಅವರು ಕಲ್ಕತ್ತಾ ಸ್ಕೂಲ್ ಆಫ್ ಟ್ರಾಪಿಕಲ್ ಮೆಡಿಸಿನ್‌ನ ಕುಷ್ಠರೋಗ ಸಂಶೋಧನ ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಅವರು ಸಂಶೋಧನೆ, ಶಿಕ್ಷಣ, ಮತ್ತು ಚಿಕಿತ್ಸಾ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಅವರು ಹಿಂದ್ ಕುಷ್ಠ್ ನಿವಾರಣ್ ಸಂಘ ಪ್ರಕಟಿಸಿರುವ "ಲೆಪ್ರಸಿ ಇನ್ ಇಂಡಿಯಾ' ಎಂಬ ನಿಯತ ಕಾಲಿಕೆಯ ಸಂಪಾದಕರಾಗಿರುತ್ತಾರೆ.

(ಡಿ) ಕುಷ್ಠ ರೋಗಕ್ಕೆ ಸಲ್ಫೋನ್ ಚಿಕಿತ್ಸೆ ಪ್ರಾರಂಭಿಸಿರುವುದರಿಂದ ಚಿಕಿತ್ಸೆಯ ಅವಧಿಯು ಕಡಿಮೆಯಾಗಿರುತ್ತದೆ.

---

* ಪಿ.ಡಿ. ಸಂ.೯, ಭಾಗ–೧, ೨೦ ಸೆಪ್ಟೆಂಬರ್ ೧೯೫೧, ಪು. ೧೫೨೭

(ಇ) ಕೇಂದ್ರೀಯ ಕುಷ್ಠರೋಗ ಸಂಸ್ಥೆ ಸಮಿತಿಯು ಮದ್ರಾಸು ರಾಜ್ಯದ ಚೆಂಗಲ್‌ಪುಟ್ ಜಿಲ್ಲೆಯಲ್ಲಿನ ತಿರುಮಣಿಯಲ್ಲಿರುವ ಲೇಡಿ ವಿಲಿಂಗ್ಟನ್ ಕುಷ್ಠರೋಗ ಆರೋಗ್ಯಧಾಮ ಮತ್ತು ಸೈದಾಪೇಟೆಯ ಸಿಲ್ವರ್ ಜ್ಯುಬಿಲಿ ಮಕ್ಕಳ ಕ್ಲಿನಿಕ್‌ಗಳ್ನು, ಮದ್ರಾಸ್ ಸರ್ಕಾರಕ್ಕೆ ತೃಪ್ತಿಕರವಾಗುವ ಕೆಲವೊಂದು ಹಣಕಾಸು ಷರತ್ತುಗಳ ಮೇಲೆ ವಹಿಸಿಕೊಂಡು, ವಿಸ್ತರಿಸುವ ಮೂಲಕ ಮದ್ರಾಸು ರಾಜ್ಯದಲ್ಲಿ ಈ ಸಂಸ್ಥೆಗೆ ಜಾಗವನ್ನು ಶಿಫಾರಸ್ಸು ಮಾಡಿರುತ್ತದೆ. ಆದಾಗ್ಯೂ ಮದ್ರಾಸು ಸರ್ಕಾರವು ಷರತ್ತುಗಳಿಗೆ ಒಪ್ಪಿರುವುದಿಲ್ಲ. ಸಂಸ್ಥೆಯನ್ನು ಒರಿಸ್ಸಾದಲ್ಲಿ ನೆಲೆಗೊಳಿಸುವ ಪ್ರಶ್ನೆಯೂ ಪರಿಶೀಲನೆಯಲ್ಲಿರುತ್ತದೆ.

(ಎಫ್) ಇಲ್ಲ. ಇಷ್ಟು ಮುಂಚೆ ಸಲ್ಫೋನ್ ಚಿಕಿತ್ಸೆಯ ಪರಿಣಾಮವನ್ನು ನಿರ್ಧರಿಸಲಾಗದು.

(ಜಿ) ಉದ್ಭವವಾಗುವುದಿಲ್ಲ.

**ಡಾ. ದೇಶಮುಖ್:** ಒರಿಸ್ಸಾ ಆಯ್ಕೆ ಮಾಡಿಕೊಳ್ಳಲು ಕಾರಣಗಳೇನು ಮತ್ತು ಮಧ್ಯ ಪ್ರದೇಶವನ್ನೇಕೆ ಆಯ್ಕೆ ಮಾಡಲಿಲ್ಲ? ಸರ್, ಅತ್ಯಂತ ಹೆಚ್ಚು ಕುಷ್ಠರೋಗಾಲಯಗಳು ಮಧ್ಯ ಪ್ರದೇಶದಲ್ಲಿರುವುದು ನಿಜವೆ?

**ಡಾ. ಅಂಬೇಡ್ಕರ್:** ಮಧ್ಯ ಪ್ರದೇಶ ಸರ್ಕಾರವು ಸಂಸ್ಥೆಯನ್ನು ಸ್ಥಾಪಿಸಲು ಆ ರಾಜ್ಯವನ್ನು ಪರಿಗಣಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಯಾವುದೇ ಇಚ್ಛೆ ವ್ಯಕ್ತಪಡಿಸಿರುವಂತೆ ಕಾಣೆ.

**ಡಾ. ದೇಶಮುಖ್:** ಕುಷ್ಠ ರೋಗಾಲಯಗಳಿಗೆ ಧನಸಹಾಯವನ್ನೇನಾದರೂ ನೀಡುವ ಬಗ್ಗೆ ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾವನೆ ಏನಾದರೂ ಇದೆಯೆ?

**ಡಾ. ಅಂಬೇಡ್ಕರ್:** ಸಾಧ್ಯವಿರುವೆಡೆಗಳಲ್ಲಿ ಅವರಿಗೆ ನೆರವು ನೀಡಬಹುದೆನ್ನಿಸುತ್ತದೆ.

**ಉಪ ಸಭಾಧ್ಯಕ್ಷರು:** ಒಬ್ಬ ಮಂತ್ರಿಗಳ ಪರವಾಗಿ ಮತ್ತೊಬ್ಬ ಮಂತ್ರಿಗಳು ಉತ್ತರ ನೀಡುವಾಗ, ಮಾನ್ಯ ಸದಸ್ಯರು ಕೇಳುವ ಪೂರಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಪ್ರಶ್ನೆಯಿಂದ ದೂರ ಸರಿಯಬೇಕಿಲ್ಲ. ಈ ಪ್ರಶ್ನೆಗಳನ್ನು ಮಿತಿಗೊಳಿಸಿ, ಕಾಯ್ದಿರಿಸಬಹುದಾಗಿದೆ. ಅವು ಅಸಂಗತ ಎಂದು ಹೇಳಲಾರೆ; ಅಂಥ ಪ್ರಶ್ನೆಗಳು ಹುಟ್ಟುತ್ತವೆ; ಆದರೆ ಮಾನ್ಯ ಮಂತ್ರಿಗಳು ಉತ್ತರಿಸಬೇಕೆಂದು ನಿರೀಕ್ಷಿಸಲಾಗದು.

**ಡಾ. ದೇಶಮುಖ್:** ಒಬ್ಬರ ಪರವಾಗಿ ಮತ್ತೊಬ್ಬ ಮಂತ್ರಿಗಳು ಉತ್ತರ ನೀಡುವುದು ಹವ್ಯಾಸವಾದರೆ ಸರ್, ನಾನೇನು ಮಾಡಬೇಕು?

**ಉಪ ಸಭಾಧ್ಯಕ್ಷರು:** ಮುಂದಿನ ಪ್ರಶ್ನೆ.

**ಶ್ರೀ ಜಾಂಗ್ಡೆ:** ಒಂದು ಪ್ರಶ್ನೆ ಸರ್, ಮಾನ್ಯ ಮಂತ್ರಿಗಳು ಕುಷ್ಠರೋಗಕ್ಕೆ ಸಂಬಂಧಪಟ್ಟಂತೆ ನಡೆದಿರುವ ಕಾರ್ಯವನ್ನು ಅಧ್ಯಯನ ಮಾಡಿದ ಯು.ಎಸ್.ಎ., ಯು.ಕೆ., ದಕ್ಷಿಣ ಅಮೆರಿಕಾ ಮತ್ತು ಫಿಲಿಪೈನ್ಸ್‌ಗೆ ನಿಯೋಜಿಸಲ್ಪಟ್ಟ ಡಾ. ಧರ್ಮೇಂದ್ರ ಅವರ ಪ್ರವಾಸಕ್ಕೆ ಭರಿಸಲಾದ ವೆಚ್ಚ ಎಷ್ಟೆಂದು ತಿಳಿಸುವರೆ?

**ಡಾ. ಅಂಬೇಡ್ಕರ್:** ನನ್ನಲ್ಲಿರುವ ಮಾಹಿತಿಯ ಪ್ರಕಾರ, ಕ್ಯೂಬಾದಲ್ಲಿ ನಡೆದ ಅಂತರಾಷ್ಟ್ರೀಯ ಕುಷ್ಠರೋಗ ಸಮಾವೇಶದಲ್ಲಿ ಭಾಗವಹಿಸಲು ಮತ್ತು ವಿದೇಶದಲ್ಲಿ ಅವರ ಅಧ್ಯಯನದ ವೆಚ್ಚ ಭರಿಸಲು ಭಾರತ ಸರ್ಕಾರವು ರೂ. ೧೭,೩೫೦/– ಗಳನ್ನು ಬ್ರಿಟಿಷ್ ಎಂಪೈರ್ ಲೆಪ್ರಸಿ ರಿಲೀಫ್ ಅಸೋಸಿಯೇಷನ್‌ಗೆ ಮಂಜೂರು ಮಾಡಿರುತ್ತದೆ. ಡಾ. ಧರ್ಮೇಂದ್ರ ಅವರ ಪ್ರತಿಭಾ ಯೋಜನೆ ಅವಧಿಯ ವೇತನವನ್ನು ಭಾರತೀಯ ವೈದ್ಯಕೀಯ ಸಂಶೋಧನ ಪರಿಷತ್ತು ಭರಿಸಿರುತ್ತದೆ.

**ಡಾ. ದೇಶಮುಖ್:** ನೂತನ ಚಿಕಿತ್ಸೆಗೆ ಸಂಬಂಧಪಟ್ಟಂತೆ ರೋಗಿಯ ಚಿಕಿತ್ಸೆಯ ವೆಚ್ಚವನ್ನು ಲೆಕ್ಕಹಾಕಲಾಗಿದೆಯೆ? ಅದು ತುಂಬಾ ದುಬಾರಿಯೆ?

**ಡಾ. ಅಂಬೇಡ್ಕರ್:** ಈ ಪ್ರಶ್ನೆಗೆ ಈಗಲೇ ಉತ್ತರ ನಿಡಲಾರೆ. ನನಗೆ ನೋಟೀಸು ನೀಡಬೇಕು.

# ೬೬

# *ನಿರಾಶ್ರಿತ ಮಳಿಗೆವಾಸಿಗಳ ಹರತಾಳ

೧೧೮೫. **ಶ್ರೀ ಜ್ಞಾನಿ ರಾಮ್:** ಆರೋಗ್ಯ ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ನವದೆಹಲಿಯ ಇರ್ವಿನ್ ರಸ್ತೆ ಮತ್ತು ಪಂಚ್‌ಕ್ಯುನಾ ರಸ್ತೆಯ ನಿರಾಶ್ರಿತ ಮಳಿಗೆಯ ನಿವಾಸಿಗಳು ೨೭ ಆಗಸ್ಟ್ ೧೯೫೧ರಿಂದ ಹರತಾಳ ನಡೆಸುತ್ತಿರುವರೆ?

(ಬಿ) ಹಾಗಿದ್ದರೆ, ಅದಕ್ಕೆ ಕಾರಣಗಳು; ಮತ್ತು

(ಸಿ) ಈ ವಿಷಯದಲ್ಲಿ ವಿಚಾರಣೆಯನ್ನೇನಾದರೂ ಆದೇಶಿಸಲಾಗಿದೆಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಶಿಬಿರವಾಸಿಗಳು ೨೭ ರಿಂದ ೨೯ ಆಗಸ್ಟ್ ೧೯೫೧ – ೩ ದಿನಗಳವರೆಗೆ ಹರತಾಳ ನಡಸಿರುತ್ತಾರೆ.

(ಬಿ) ನವದೆಹಲಿ ಮುನಿಸಿಪಲ್ ಸಮಿತಿ ಮತ್ತು ಮಳಿಗೆವಾಸಿಗಳ ನಡುವೆ ಕೆಲಕಾಲದಿಂದ ವಿವಾದಗಳಿದ್ದರೂ ಹರತಾಳಕ್ಕೆ ತಕ್ಷಣದ ಕಾರಣವೆಂದರೆ, ಮುನಿಸಿಪಲ್ ಉಪವಿಧಿಗಳನ್ನು ಉಲ್ಲಂಘಿಸಿರುವ ಅನೇಕ ಮಳಿಗೆವಾಸಿಗಳ ವಿರುದ್ಧ ಸಮಿತಿಯು ಅಭಿಯೋಜನೆಗಳನ್ನು ಪ್ರಾರಂಭಿಸಿರುವುದು ಎಂದು ತಿಳಿದು ಬಂದಿದೆ.

(ಸಿ) ವಿಚಾರಣೆಯ ಪ್ರಶ್ನೆ ಉದ್ಭವಿಸುವುದಿಲ್ಲ.

**ಶ್ರೀ ಜ್ಞಾನಿರಾಮ್:** ಮಳಿಗೆವಾಸಿಗಳ ಕುಂದುಕೊರತೆಗಳನ್ನು ಈಗ ನಿವಾರಿಸಲಾಗಿದೆಯೆ?

**ಡಾ. ಅಂಬೇಡ್ಕರ್:** ಅಲ್ಲಿ ಯಾವ ಕುಂದುಕೊರತೆಗಳೂ ಇಲ್ಲ. ನನಗೆ ನೀಡಿರುವ ಕಾಗದಪತ್ರಗಳಿಂದ, ವಿವಾದವು ಪೂರ್ಣವಾಗಿ ಕಾನೂನು ಸ್ವರೂಪದ್ದೆಂದು ತೋರುತ್ತದೆ. ಮುನಿಸಿಪಾಲಿಟಿಯು ಅವರನ್ನು ಲೈಸನ್ಸುಪಡೆದವರೆಂದು ಹೇಳಿದರೆ, ಮಳಿಗೆವಾಸಿಗಳು ತಾವು ಅನುಭೋಗಿಗಳು ಎಂದು ಹೇಳುತ್ತಿದ್ದಾರೆ. ಮುನಿಸಿಪಾಲಿಟಿಯು ಅವರು ಲೈಸೆನ್ಸುದಾರರಾಗಿರುವುದರಿಂದ, ಅವರಿಗೆ ಯಾವುದೇ ನೋಟೀಸು ನೀಡದೆ ಖಾಲಿಮಾಡಹುದೆಂದು ಹೇಳಿದರೆ ಮಳಿಗೆವಾಸಿಗಳು, ತಾವು ಅನುಭೋಗಿಗಳಾಗಿರುವುದರಿಂದ, ತಾವು ಭೋಗ್ಯದ ಷರತ್ತುಗಳಿಗೆ ಒಳಪಟ್ಟಿರುವುದಾಗಿ ಹೇಳುತ್ತಿದ್ದಾರೆ. ಇದು ಪೂರ್ಣವಾಗಿ ಕಾನೂನುವಿವಾದವಾಗಿದ್ದು, ಅದನ್ನು ನ್ಯಾಯಾಲಯ ಅಥವಾ ನ್ಯಾಯಿಕ ಪ್ರಾಧಿಕಾರ ಮಾತ್ರ ಇದನ್ನು ಇತ್ಯರ್ಥಪಡಿಸಬಲ್ಲದು.

**ಶ್ರೀ ಸಿಧ್ವಾ:** ಈ ಮಳಿಗೆವಾಸಿಗಳು ಲೈಸೆನ್ಸ್ ಪಡೆದವರು ಎಂಬುದಕ್ಕೆ ಆಧಾರವಾಗಿ ಕರಾರುಗಳ ಮೇರೆಗೆ ಬಾಡಿಗೆಯನ್ನೇನಾದರೂ ನೀಡುತ್ತಿದ್ದಾರೆಯೆ?

**ಡಾ. ಅಂಬೇಡ್ಕರ್:** ನನಗೆ ತಿಳಿದಿರುವಷ್ಟರ ಮಟ್ಟಿಗೆ–ನಾನು ತಿದ್ದುಪಡಿಗೆ ಒಳಪಟ್ಟು ಮಾತನಾಡುತ್ತಿದ್ದೇನೆ–ಅವರಿಗೆ ಅಲ್ಲಿ ಕುಳಿತು ತತ್ಕಾಲಕ್ಕೆ ವ್ಯಾಪಾರ ಮಾಡಲು ಮಾತ್ರ ಅವಕಾಶ ನೀಡಲಾಗಿರುತ್ತದೆ. ಅವರು ತಾವು ದೀರ್ಘಕಾಲದಿಂದ ಅಕ್ರಮವಾಸಿಗಳಾಗಿರುವುದರಿಂದ ಅವರ ಲೈಸೆನ್ಸುಗಳು ಭೋಗ್ಯಗಳಾಗಿರುತ್ತವೆ ಎನ್ನುತ್ತಾರೆ.

**ಅನೇಕ ಸದಸ್ಯರು:** ಇಲ್ಲ; ಅವರು ಅಕ್ರಮವಾಸಿಗಳಲ್ಲ.

---

* ಪಿ.ಡಿ. ಸಂ.೯ ಭಾಗ–೧, ೨೦ ಸೆಪ್ಟೆಂಬರ್ ೧೯೫೧, ಪು. ೧೫೩೮

**ಉಪ ಸಭಾಧ್ಯಕ್ಷರು:** ಮಾನ್ಯ ಸದಸ್ಯರಿಗೆ ಕಾನೂನು ತಿಳಿವಳಿಕೆ ನೀಡಲು ಸಾಧ್ಯವಿಲ್ಲ. ಅವರು ಬಹುಶಃ ಲೈಸೆನ್ಸು ಮತ್ತು ಭೋಗ್ಯ ಎರಡರ ನಡುವಣ ವ್ಯತ್ಯಾಸವನ್ನು ತಿಳಿಯಬಯಸುತ್ತಿರಬಹುದು.

**ಶ್ರೀ ಸಿಧ್ವಾ:** ನನ್ನ ಪ್ರಶ್ನೆ ಅವರು ಬಾಡಿಗೆ ಪಾವತಿಸುತ್ತಿದ್ದಾರೆಯೆ ಎಂದು ?

**ಉಪ ಸಭಾಧ್ಯಕ್ಷರು:** ಕಾನೂನು ಪ್ರಶ್ನೆಗಳ ಬಗ್ಗೆ ಅಭಿಪ್ರಾಯಗಳಿಗೆ ನಾನು ಅವಕಾಶ ಕೊಡುವುದಿಲ್ಲ.

**ಶ್ರೀ ಸಾರಂಗಧರರಾವ್:** ಈ ವಿಷಯದ ಕಾನೂನು ಅಂಶದ ಜೊತೆಗೆ, ಶಿಬಿರಗಳನ್ನು ನಿರ್ಮಿಸಿರುವ ಸ್ಥಳದಲ್ಲಿ ನೀರಿನ ಅಲಭ್ಯತೆ ಮತ್ತು ನೈರ್ಮಲ್ಯ ಏರ್ಪಾಡು ಕುರಿತು ದೂರುಗಳೇನಾದರೂ ಇವೆಯೆ?

**ಉಪ ಸಭಾಧ್ಯಕ್ಷರು:** ಈ ಪ್ರಶ್ನೆಯಿಂದ ಅದು ಉದ್ಭವವಾಗುವುದಿಲ್ಲ. ಈ ಸೌಲಭ್ಯಗಳ ಕೊರತೆಯಿಂದಾಗಿ ಮುಷ್ಕರ ಆರಂಭವಾಯಿತೆ?

**ಶ್ರೀ ಸಾರಂಗಧರರಾವ್:** ಅದೂ ಅವರ ಕುಂದುಕೊರತೆಗಳ ಒಂದು ಭಾಗವಾಗಿತ್ತು.

**ಡಾ. ಅಂಬೇಡ್ಕರ್:** ನನಗೆ ತಿಳಿದಿರುವಷ್ಟರ ಮಟ್ಟಿಗೆ ಮುನಿಸಿಪಲ್ ಸಮಿತಿಯು ಅಭಿಯೋಜನೆಗಳನ್ನು ಆರಂಭಿಸಿದ ಕಾರಣ ಮುಷ್ಕರ ಆರಂಭವಾಯಿತು.

## ೬೭

# *ರಾಜಸ್ಥಾನದ ಮಹಿಳಾ ಮತದಾರರನ್ನು ಕುರಿತು ಮಹಿಳಾ ಸಮಿತಿ, ಜೈಪುರ–ಇವರ ಮನವಿ

**೧೨೬೬. ಶ್ರೀಮತಿ ದುರ್ಗಾಬಾಯಿ (ಶ್ರೀಮತಿ ರೇಣುಕಾ ರೇ ಅವರ ಪರವಾಗಿ):** (ಎ) ಕಾನೂನು ಮಂತ್ರಿಗಳು ೨೭ ಆಗಸ್ಟ್ ೧೯೫೧ರಂದು ಕೇಳಿದ ನಕ್ಷತ್ರ ಗುರುತಿನ ಪ್ರಶ್ನೆ ಸಂ. ೫೩೪ರ ಮೇಲೆ ಎತ್ತಿದ ಪೂರಕ ಪ್ರಶ್ನೆಗಳಿಗೆ ನೀಡಿದ ಉತ್ತರಗಳನ್ನು ಪರಿಶೀಲಿಸಿ. ಮಹಿಳಾ ಮತದಾರರ ಹೆಸರುಗಳು ಬಿಟ್ಟುಹೋಗಿರುವುದಕ್ಕೆ ಕಾರಣ ಈ ಪಟ್ಟಿಗಳನ್ನು ಸಿದ್ಧಪಡಿಸಿದ ನೌಕರರು ಮೊದಲಿಗೆ ಅವರ ಹೆಸರುಗಳನ್ನು ಸರಿಯಾಗಿ ಬರೆದುಕೊಳ್ಳದಿರುವುದು ಎಂಬುದು ನಿಜವೆ ಎಂದು ತಿಳಿಸುವರೆ?

(ಬಿ) ಈ ನೌಕರರಿಗೆ ಸಂಬಂಧಿತ ಮಹಿಳೆಯರ ಅಂಕಿತ ನಾಮವನ್ನು ಪಡೆದುಕೊಳ್ಳುವ ಬಗ್ಗೆ ಸೂಚನೆಗಳನ್ನು ನೀಡಿಲ್ಲದ ಪರಿಣಾಮವಾಗಿ ಮತದಾರರ ಪಟ್ಟಿಯಿಂದ ಅವರ ಹೆಸರುಗಳು ಬಿಟ್ಟುಹೋಗಿರುವುದು ನಿಜವೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ಇಲ್ಲ, ಸರ್, ಈ ಪಟ್ಟಿಯನ್ನು ತಯಾರಿಸಿದ ನೌಕರರಿಗೆ ಪ್ರಾರಂಭದಲ್ಲಿ ಕೆಲವು ರಾಜ್ಯಗಳಲ್ಲಿ ಮಹಿಳಾ ಮತದಾರರ ನಿಜವಾದ ಹೆಸರುಗಳನ್ನು ಪಡೆದುಕೊಳ್ಳುವುದು ಸಾಧ್ಯವಾಗಲಿಲ್ಲ. ಇದಕ್ಕೆ ಮಹಿಳೆಯರು ಮತ್ತು ಅವರ ಬಂಧುಗಳು ತಮ್ಮ ಹೆಸರುಗಳನ್ನು ಹೇಳಲು ಇಷ್ಟಪಡದಿರುವುದೇ ಕಾರಣ.

(ಬಿ) ಚುನಾವಣಾ ಆಯೋಗವು ಮಹಿಳಾ ಮತದಾರರನ್ನು ಅವರ ಅಂಕಿತನಾಮದಿಂದಲೇ

---

* ಪಿ.ಡಿ. ಸಂ.೧೦, ಭಾಗ–೧, ೨೫ ಸೆಪ್ಟೆಂಬರ್ ೧೯೫೧, ಪು. ೧೬೬೬

ನೊಂದಾಯಿಸಬೇಕೆಂದು "–ರ ಹೆಂಡತಿ' ಅಥವಾ "–ರ ಮಗಳು' ಮೊದಲಾಗಿ ಮಾಡಬಾರದೆಂದೂ ರಾಜ್ಯ ಸರ್ಕಾರಗಳಿಗೆ ನಿರ್ದಿಷ್ಟ ಸೂಚನೆಗಳನ್ನು ನೀಡಿರುತ್ತದೆ. ಅಲ್ಲದೆ ರಾಜ್ಯ ಸರ್ಕಾರಗಳಿಗೆ, ಸರ್ಕಾರಿ ಏಜೆನ್ಸಿಗಳ ಮೂಲಕ ವಾಸ್ತವಿಕ ಹೆಸರುಗಳನ್ನು ನೊಂದಾಯಿಸಿಕೊಳ್ಳದೆ ಮಹಿಳಾ ಮತದಾರರ ನಿಜವಾದ ಹೆಸರುಗಳನ್ನು ಖಚಿತಪಡಿಸಿಕೊಳ್ಳಲು ಎಲ್ಲ ಪ್ರಯತ್ನಗಳನ್ನು ಮಾಡಬೇಕೆಂದೂ ಸೂಚನೆ ನೀಡಲಾಗಿದೆ. ಈ ಕಾರ್ಯದಲ್ಲಿ ನೆರವು ನೀಡುವಂತೆ ಸಾರ್ವಜನಿಕರನ್ನೂ ಕೇಳಿಕೊಳ್ಳಲಾಗಿದೆ. ಆದ್ದರಿಂದ, ನಿಗದಿತ ಕ್ರಮದಲ್ಲಿ ಪಟ್ಟಿಗಳಲ್ಲಿ ಹೆಸರುಗಳು ನಮೂದಾಗದಿರುವುದಕ್ಕೆ ಸೂಕ್ತ ಸೂಚನೆಗಳ ಕೊರತೆ ಕಾರಣವಲ್ಲ.

**ಶ್ರೀಮತಿ ದುರ್ಗಾಬಾಯಿ:** ಸರ್, ಒಂದು ಅಥವಾ ಎರಡು ಪೂರಕ ಪ್ರಶ್ನೆಗಳಿಗೆ ದಯವಿಟ್ಟು ಅವಕಾಶ ಮಾಡುವಿರಾ?

**ಉಪಸಭಾಧ್ಯಕ್ಷರು:** ಇಲ್ಲ, ಇದು ಪ್ರಶ್ನೋತ್ತರ ಅವಧಿಯಲ್ಲ.

**ಶ್ರೀ ಸೋಂಧಿ:** ಮಾನ್ಯ ಸದಸ್ಯೆಗೆ ನಿಯಮಗಳು ಗೊತ್ತು.

# ೬೮

# *ಹಿಂದೂ ವಿವಾಹ ವಿಚ್ಛೇದನ

**೧೪೧೨. ಶ್ರೀಮತಿ ಜಯಶ್ರೀ:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಹಿಂದೂ ವಿವಾಹ ವಿಚ್ಛೇದನಕ್ಕೆ ಅನುಮತಿಸುವ ಶಾಸನ ಜಾರಿಯಲ್ಲಿರುವ ರಾಜ್ಯಗಳ ಹೆಸರುಗಳು;

(ಬಿ) ೧೯೫೦ರ ಸಾಲಿನಲ್ಲಿ ಈ ರಾಜ್ಯಗಳಲ್ಲಿನ ನ್ಯಾಯಾಲಯಗಳು ಸ್ವೀಕರಿಸಿರುವ ವಿವಾಹ ವಿಚ್ಛೇದನ ಮನವಿಗಳ ಸಂಖ್ಯೆ;

(ಸಿ) ೧೯೫೦ರಲ್ಲಿ ವಿಚ್ಛೇದನ ನೀಡಲಾದ ಮನವಿಗಳ ಸಂಖ್ಯೆ;

(ಡಿ) ೧೯೫೦ರಲ್ಲಿ ತಿರಸ್ಕೃತವಾದ ಮನವಿಗಳ ಸಂಖ್ಯೆ; ಮತ್ತು

(ಇ) ೧೯೫೦ರಲ್ಲಿನ ಪುರುಷ ಮತ್ತು ಸ್ತ್ರೀ ಅರ್ಜಿದಾರರ ಸಂಖ್ಯೆ?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ನನಗೆ ತಿಳಿದಮಟ್ಟಿಗೆ ಹಿಂದೂಗಳಲ್ಲಿ ವಿವಾಹ ವಿಚ್ಛೇದನ ಅನುಮತಿಸುವ ಶಾಸನ ಜಾರಿಯಲ್ಲಿರುವುದು ಬಾಂಬೆ ಮತ್ತು ಮದ್ರಾಸುಗಳಲ್ಲಿ ಮಾತ್ರ.

**(ಬಿ)ನಿಂದ (ಇ):** ೧೯೫೦ರ ಸಾಲಿನ ನಿಖರ ಅಂಕಿ ಸಂಖ್ಯೆಗಳು ಲಭ್ಯವಿಲ್ಲ. ಬಾಂಬೆ ರಾಜ್ಯದಲ್ಲಿ ಈ ಅಧಿನಿಯಮ ಜಾರಿಗೆ ಬಂದ ದಿನಾಂಕ ೧೯೪೭ರ ಮೇ ೧೨ರಿಂದ ಜೂನ್ ೧೯೫೦ರ ಕೊನೆಯವರೆಗೆ ಅಂಕಿ ಸಂಖ್ಯೆಗಳು ಈ ಮುಂದಿನಂತಿವೆ:

| | |
|---|---|
| ಒಟ್ಟು ಮನವಿಗಳ ಸಂಖ್ಯೆ: | ೫,೩೫೬ |
| ಪುರುಷರ ಮನವಿಗಳು: | ೨,೪೫೨ |
| ಸ್ತ್ರೀಯರ ಮನವಿಗಳು: | ೨,೯೦೪ |

* ಪಿ.ಡಿ. ಸಂ.೧೦, ಭಾಗ–೧, ೨೮ ಸೆಪ್ಟೆಂಬರ್ ೧೯೫೧, ಪು. ೧೮೧೩.

ವಿವಾಹ ವಿಚ್ಛೇದನ ನೀಡಿದ ಮನವಿಗಳ ಸಂಖ್ಯೆ : ೨,೭೫೬
ತಿರಸ್ಕೃತ ಮನವಿಗಳು ಸಂಖ್ಯೆ ೧,೧೬೪

ಮದ್ರಾಸಿನಿಂದ ಈವರೆಗೆ ಯಾವುದೇ ಮಾಹಿತಿ ಬಂದಿಲ್ಲ.

## ೬೯

## *ಹಿಂದೂ ದ್ವಿಪತ್ನೀ ವಿವಾಹ ನಿವಾರಣೆ ಅಧಿನಿಯಮ

೧೪೧೩. **ಶ್ರೀಮತಿ ಜಯಶ್ರೀ:** ಕಾನೂನು ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಎ) ಹಿಂದೂ ದ್ವಿಪತ್ನೀ ವಿವಾಹ ನಿವಾರಣೆ ಅಧಿನಿಯಮ ಜಾರಿಯಲ್ಲಿರುವ ರಾಜ್ಯಗಳು:

(ಬಿ) ೧೯೫೦ರಲ್ಲಿ ಈ ಅಧಿನಿಯಮ ಉಲ್ಲಂಘನೆಯಾಗಿ ನಡೆದ ವಿವಾಹ ಶಿಕ್ಷೆಯಲ್ಲಿ ಕೊನೆಗೊಂಡ ಪ್ರಕರಣಗಳಷ್ಟು?

(ಸಿ) ೧೯೫೦ರಲ್ಲಿ ಶಿಕ್ಷೆಯಲ್ಲಿ ಕೊನೆಗೊಂಡ ಪ್ರಕರಣಗಳಷ್ಟು?

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** (ಎ) ನನಗೆ ತಿಳಿದ ಮಟ್ಟಿಗೆ ಹಿಂದೂ ದ್ವಿಪತ್ನೀ ವಿವಾಹ ನಿವಾರಣೆ ಅಧಿನಿಯಮ ಜಾರಿಯಲ್ಲಿರುವ ರಾಜ್ಯಗಳು ಬಾಂಬೆ ಮತ್ತು ಮದ್ರಾಸು ಮಾತ್ರ.

(ಬಿ) ಮತ್ತು (ಸಿ) : ೧೯೫೦ಕ್ಕೆ ಸಂಬಂಧಪಟ್ಟ ನಿಖರ ಅಂಕಿ ಸಂಖ್ಯೆಗಳು ಲಭ್ಯವಿಲ್ಲ. ಆದಾಗ್ಯೂ, ಬಾಂಬೆಯಲ್ಲಿ ಬಾಂಬೆ ಅಧಿನಿಯಮ ಜಾರಿಗೆ ಬಂದ ದಿನಾಂಕ ೬ ನವೆಂಬರ್ ೧೯೪೮ರಿಂದ ೩೧ ಆಗಸ್ಟ್ ೧೯೫೦ರ ವರೆಗೆ ಅದನ್ನು ಉಲ್ಲಂಘಿಸಿ ನಡೆದ ವಿವಾಹಗಳ ಸಂಖ್ಯೆ ೧೯೩೪. ಅದೇ ಅವಧಿಯಲ್ಲಿ ಶಿಕ್ಷೆಯಲ್ಲಿ ಕೊನೆಗೊಂಡ ಪ್ರಕರಣಗಳ ಸಂಖ್ಯೆ ೭೫೬. ಈವರೆಗೆ ಮದ್ರಾಸು ರಾಜ್ಯದಿಂದ ಯಾವುದೇ ಮಾಹಿತಿ ಬಂದಿಲ್ಲ.

* ಪಿ.ಡಿ. ಸಂ.೧೦, ಭಾಗ–೧, ೨೦ ಸೆಪ್ಟೆಂಬರ್ ೧೯೫೧, ಪು. ೧೮೧೪

# ಅನುಬಂಧ

## (ಎ)
## *ಕಾನೂನುವೃತ್ತಿನಿರತರು ಬಾರ್ ಕೌನ್ಸಿಲ್‌ಗಳ (ತಿದ್ದುಪಡಿ) ವಿಧೇಯಕ

**ಡಾ. ಬಿ.ಆರ್. ಅಂಬೇಡ್ಕರ್: (ಕಾನೂನು ಮಂತ್ರಿಗಳು):** ಸರ್, ನಾನು ಮಂಡಿಸುತ್ತಿದ್ದೇನೆ.

"ಕಾನೂನುವೃತ್ತಿನಿರತರ ಅಧಿನಿಯಮ ೧೮೭೯ ಮತ್ತು ಭಾರತದ ಬಾರ್ ಕೌನ್ಸಿಲ್ ಅಧಿನಿಯಮ ೧೯೨೬ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ ಮುಂದುವರಿಯಲಿ."

**ಶ್ರೀ ವಿಶ್ವನಾಥ್ ದಾಸ್: (ಒರಿಸ್ಸಾ: ಸಾಮಾನ್ಯ):** ಈ ವಿಧೇಯಕ ಯಾವ ಹಂತದಲ್ಲಿದೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಅದನ್ನು ಕೇವಲ ಮಂಡಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಇಂತಿದೆ.

""ಕಾನೂನು ವೃತ್ತಿನಿರತರ ಅಧಿನಿಯಮ ೧೮೭೯ ಮತ್ತು ಭಾರತದ ಬಾರ್ ಕೌನ್ಸಿಲ್ ಅಧಿನಿಯಮ ೧೯೨೬ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ ಮುಂದುವರಿಯಲಿ."

ನಿಲುವಳಿಯನ್ನು ಅಂಗೀಕರಿಸಲಾಯಿತು.

## (ಬಿ)

## **ಪತ್ರಿಕೆಗಳು (ವಿಶೇಷ ಅಧಿಕಾರಿಗಳು) ವಿಧೇಯಕ

**ಮಾನ್ಯ ಸರ್ದಾರ್ ವಲ್ಲಭಬಾಯಿ ಪಟೇಲ್:** ಸರ್, ನಾನು ಮಂಡಿಸುತ್ತಿದ್ದೇನೆ.

"ವಿಧೇಯಕದ ಕಲಮು ೧೨ಕ್ಕೆ ಬದಲಾಗಿ ಈ ಕೆಳಕಂಡ ಕಲಮನ್ನು ಪ್ರತಿಸ್ಥಾಪಿಸುವುದು; ಎಂದರೆ

"೧೯೪೭ರ ಅಧ್ಯಾದೇಶದ ನಿರಸನ

೧೭. ಪತ್ರಿಕೆಗಳು (ವಿಶೇಷ ಅಧಿಕಾರಿಗಳು) (ಸಂ.೨) ಅಧ್ಯಾದೇಶ, ೧೯೪೭ನ್ನು ಈ ಮೂಲಕ ನಿರಸನಗೊಳಿಸಲಾಗಿದೆ."

**ಸಭಾಧ್ಯಕ್ಷರು:** ಎಡಭಾಗದಲ್ಲಿರುವ ಪದಗಳು ಅಂಚಿನ ಟಿಪ್ಪಣಿಯಂತೆ ತೋರುತ್ತದೆ.

**ಡಾ. ಬಿ.ಆರ್. ಅಂಬೇಡ್ಕರ್:** (ಕಾನೂನು ಮಂತ್ರಿಗಳು):

ಆ ಪದಗಳನ್ನು ಮಂಡಿಸಬೇಕಾಗಿಲ್ಲ

---

* ಪಿ.ವಿ. (ಎಚ್‌ಇಜಿ) ಡಿ. ಸಂ,೨ ಭಾಗ–II, ೭ ಸೆಪ್ಟೆಂಬರ್ ೧೯೪೭, ಪು.೪೦

** ಪಿ.ಡಿ. (ಎಚ್‌ಇಜಿ) ಡಿ, ಸ.೨ ಭಾಗ –II, ೨೦ ನವೆಂಬರ್ ೧೯೪೭ ಪು ೩೫೩

*ಸಭಾಧ್ಯಕ್ಷರು: ಈ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ತಿದ್ದುಪಡಿಯಾಗಿರುವಂತೆ ವಿಧೇಯಕ ಅಂಗೀಕರಿಸಬಹುದು ಎಂದು ಮಂಡಿಸಿದ ನಂತರ ನಾನು ಕೈಗೆತ್ತಿಕೊಳ್ಳುತ್ತೇನೆ.

**ಡಾ. ಬಿ.ಆರ್. ಅಂಬೇಡ್ಕರ್:** ಸರ್, ಕಲಮು ೨ ಕ್ಕೆ ಹಿಂದಿರುಗಿ, ಆ ಕಲಮಿನಲ್ಲಿರುವ 'ಏನೋ ಒಂದು' ಪದಕ್ಕೆ ಬದಲಾಗಿ 'ಯಾವುದೋ ಒಂದು' ಪದವನ್ನು ಪ್ರತಿಸ್ಥಾಪಿಸುವುದು– ಎಂದು ಮಂಡಿಸಲು ಅನುಮತಿ ಕೋರುತ್ತಿದ್ದೇನೆ. ಅದು ಬಳಸಬಹುದಾಗಿದ್ದ ಅತ್ಯಂತ ಸಮುಚಿತ ಪದ. ತಿದ್ದುಪಡಿ ಇತ್ತು. ಆದರೆ, ನನ್ನ ಸ್ನೇಹಿತರು ದುರದೃಷ್ಟವಶಾತ್ ಮಂಡಿಸಲಿಲ್ಲ.

**ಶ್ರೀ ನಾಜಿರುದ್ದೀನ್ ಅಹಮದ್:** ನಾನು ತುಂಬಾ ತಡವಾಗಿ ಬಂದದ್ದೇ ಕಾರಣ.

## (ಸಿ)
## **ಸ್ಥಳಾಂತರಿತ ವ್ಯಕ್ತಿಗಳ (ಕಾನೂನು ವ್ಯವಹರಣೆಗಳು) ವಿಧೇಯಕ

**ಡಾ. ಬಿ.ಆರ್. ಅಂಬೇಡ್ಕರ್ (ಮಾನ್ಯ ಮಂತ್ರಿಗಳು):**

ಸರ್, ಸ್ಥಳಾಂತರಿತ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಕೆಲವೊಂದು ಕಾನೂನು ವ್ಯವಹರಣೆಗಳಿಂದ ಪರಿಹಾರ ನೀಡಲು ವಿಶೇಷ ಉಪಬಂಧ ಕಲ್ಪಿಸಲು ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

**ಸಭಾಧ್ಯಕ್ಷರು:** ಸೂಚನೆ ಇಂತಿದೆ.

> ''ಸ್ಥಳಾಂತರಿತ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕೆಲವೊಂದು ಕಾನೂನು ವ್ಯವಹರಣೆಗಳಿಂದ ಪರಿಹಾರ ನೀಡಲು ವಿಶೇಷ ಉಪಬಂಧ ಕಲ್ಪಿಸಲು ವಿಧೇಯಕ ಮಂಡಿಸಲು ಅನುಮತಿ ನೀಡುವುದು''

ನಿಲುವಳಿಯನ್ನು ಅಂಗೀಕರಿಸಲಾಯಿತು.

**ಡಾ. ಬಿ.ಆರ್. ಅಂಬೇಡ್ಕರ್:** ಸರ್, ನಾನು ವಿಧೇಯಕವನ್ನು ಮಂಡಿಸುತ್ತಿದ್ದೇನೆ.

## (ಡಿ)
## *೧೯೪೮–೪೯ ರ ಸಾಲಿನ ಪೂರಕ ಅನುದಾನಕ್ಕೆ ಬೇಡಿಕೆ (ನ್ಯಾಯಾಡಳಿತ)

**ಸಭಾಧ್ಯಕ್ಷರು:** ನಾನು ಮೊದಲಿಗೆ ಮಾನ್ಯ ಕಾನೂನು ಮಂತ್ರಿಗಳು ಬೇಡಿಕೆ ಸಂ.೩೪ಕ್ಕೆ ಉತ್ತರ ನೀಡುವಂತೆ ಕರೆಯುತ್ತೇನೆ. ಅದನ್ನು ನಾನು ಮತಕ್ಕೆ ಹಾಕಬೇಕಾಗಿದೆ. ಮಾನ್ಯ ಸದಸ್ಯರು ಅದರ ಬಗ್ಗೆ ಮಾತನಾಡಲು ಬಯಸಿದ್ದಾರೆ ಎಂದು ತಿಳಿದಿದ್ದೆ.

**ಶ್ರೀ ಆರ್.ಕೆ. ಸಿಧ್ವಾ:** ಇಲ್ಲ, ಸರ್

---

* ಪಿ.ಡಿ. (ಹೆಚ್.ಜಿ.ಜಿ) ಕ. ಸಂ. ೧, ಭಾಗ–೨ ೨೦ ನವೆಂಬರ್ ೧೯೪೭, ಪು. ೩೫೫

** ಅದೇ, ನಂ.೩, ಭಾಗ–೨ ೩೧ ಮಾರ್ಚ್ ೧೯೪೯. ಪು. ೨೧೪೧

* ಪಿ.ಡಿ (ಎಚ್ಇಜಿ) ಸಂ.೩ ಭಾಗ–೨, ೩೧ ಮಾರ್ಚ್ ೧೯೪೯, ಪು.೨೧೫೧–೫೩

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** (ಕಾನೂನು ಮಂತ್ರಿಗಳು):

ಸರ್, 'ನ್ಯಾಯಾಡಳಿತ' ಎಂಬ ಅಂಶ ನಿಜಕ್ಕೂ ಗೃಹ ಇಲಾಖೆಗೆ ಸೇರಿದ್ದು. ಏಕೆಂದರೆ ಅವರೇ ಆ ವಿಷಯವನ್ನು ನೋಡಿಕೊಳ್ಳುವುದು. ಆದರೆ ಇಂದು ನಾವು ಈ ವಿವಾದಕ್ಕೆ ಉತ್ತರ ನೀಡುವಲ್ಲಿ ಉಂಟಾಗುವ ತೊಂದರೆಯಿಂದ ಸರ್ದಾರ್ ಅವರನ್ನು ಪಾರು ಮಾಡಬೇಕು. ಆದ್ದರಿಂದ, ನಾನು ಆ ಜವಾಬ್ದಾರಿಯನ್ನು ನನ್ನ ಹೆಗಲ ಮೇಲೆ ತೆಗೆದುಕೊಳ್ಳುತ್ತಿದ್ದೇನೆ. ಅವರೊಂದಿಗೆ ನಾನು ಪೂರ್ತಿ ಸಮಾಲೋಚನೆಯನ್ನು ಮಾಡಿಲ್ಲ. ಆದ್ದರಿಂದ, ನಾನು ಮಾತನಾಡುವ ಈ ವಿಷಯದಲ್ಲಿ ಗೃಹ ಮಂತ್ರಾಲಯದ ಅಭಿಪ್ರಾಯವನ್ನು ನಾನು ಪ್ರತಿನಿಧಿಸುತ್ತೇನೋ ಇಲ್ಲವೋ ನನಗೆ ತಿಳಿಯದು.

ಸರ್, ಕಾನೂನು ವಿಳಂಬದ ಪ್ರಶ್ನೆಯ ಕೂಗನ್ನು ನಾವು ಈ ದೇಶದಲ್ಲಿ ಬಹಳ ಕಾಲದಿಂದ ಕೇಳುತ್ತಿದ್ದೇವೆ. ಭಾರತ ಸರ್ಕಾರವು, ನನ್ನ ನೆನಪು ಸರಿಯಿದ್ದರೆ, ಒಂದು ಕಾಲದಲ್ಲಿ ನಾಗರಿಕ ನ್ಯಾಯಿಕ ಸಮಿತಿಯನ್ನು ನೇಮಕ ಮಾಡಿದ್ದಿತು. ಈ ಸಮಿತಿಯು ಮಾಡಿದ ಕೆಲವೊಂದು ಶಿಫಾರಸುಗಳನ್ನು ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ, ನಿರ್ಣಯಗಳಿಗೆ ಬರುವಲ್ಲಿನ ವಿಳಂಬವನ್ನು ತಪ್ಪಿಸುವ ದೃಷ್ಟಿಯಿಂದ, ಸಿವಿಲ್ ಪ್ರಕ್ರಿಯಾ ಸಂಹಿತೆ, ಅಂತೆಯೇ, ಕ್ರಿಮಿನಲ್ ಪ್ರಕ್ರಿಯೆ ಸಂಹಿತೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ವ್ಯಾಜ್ಯಗಳಲ್ಲಿನ ಬಹುಪಾಲು ವಿಳಂಬಕ್ಕೆ ಕಕ್ಷಿದಾರರೇ ಕಾರಣ ಎಂಬುದು ನನ್ನ ಅಭಿಪ್ರಾಯ. ನ್ಯಾಯಾಲಯಗಳಲ್ಲಿ ಗಣನೀಯ ಅನುಭವವನ್ನು ಹೊಂದಿರುವ ನನ್ನ ಮಾನ್ಯ ಸ್ನೇಹಿತರಾದ ಡಾ. ಪಿ.ಎಸ್. ದೇಶ್‌ಮುಖ್ ಮತ್ತು ಶ್ರೀಮತಿ ದುರ್ಗಾಬಾಯಿ ಇಬ್ಬರೂ ಇದನ್ನು ಒಪ್ಪುತ್ತಾರೆ ಎಂದು ಭಾವಿಸಿದ್ದೇನೆ. ನನ್ನ ಅನುಭವದಂತೆ, ನ್ಯಾಯಾಲಯಗಳಲ್ಲಿ ಪ್ರತಿಯೊಬ್ಬ ಕಕ್ಷಿದಾರನೂ ನಿಗದಿತ ದಿನದಂದು ಸಾಕ್ಷಿದಾರರೊಂದಿಗೆ ಅಥವಾ ದಸ್ತಾವೇಜುಗಳೊಂದಿಗೆ ಅಥವಾ ನ್ಯಾಯಾಲಯ ಹೊರಡಿಸಿದ ಇತರ ಕೆಲವು ಹಾಜರಿ ಜ್ಞಾಪನಗಳೊಂದಿಗೆ ಸಿದ್ಧವಾಗಿ ಬರದೆ, ಮುಂದೂಡಿಕೆ ಮನವಿಯ ಹೊರತು ಬೇರೇನನ್ನೂ ತಾರದೆ ಬರುತ್ತಾರೆ. ಮುಂದೂಡಿಕೆ ದೊರೆಯದಿದ್ದಲ್ಲಿ, ನನ್ನ ವಕೀಲರಿಗೆ ನ್ಯಾಯಾಧೀಶರೊಂದಿಗೆ ಪ್ರಭಾವವಿಲ್ಲವೆಂದೂ ಏಕೆಂದರೆ ಅವರಿಂದ ಮುಂದೂಡಿಕೆ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲವೆಂದೂ ಭಾವಿಸಿ ಅವರನ್ನು ಬಿಟ್ಟುಬಿಡುತ್ತಾನೆ ಅಥವಾ ಆತ ಪೂರ್ಣವಾಗಿ ಅಸಂತುಷ್ಟನಾಗುತ್ತಾನೆ–ಅಥವಾ ನ್ಯಾಯಾಲಯವು ವಿಳಂಬವನ್ನು ತಪ್ಪಿಸುವ ಸಲುವಾಗಿ ಆತನ ಮನವಿಯನ್ನು ತಿರಸ್ಕರಿಸಬೇಕೇ ಎಂದು ಪರಿಗಣಿಸಬೇಕಾಗುವುದು. ನಮ್ಮ ಜನಸಾಮಾನ್ಯರಲ್ಲಿನ ಅಜ್ಞಾನದ ದೃಷ್ಟಿಯಿಂದ ನಿಯತಕಾಲಕ್ಕೆ ಎಲ್ಲದರೊಂದಿಗೆ ಸಿದ್ಧವಾಗಿರಬೇಕೆಂದು ನಿರೀಕ್ಷಿಸಲಾಗದು ಅವರಿಗೆ ಕಾಲಾವಕಾಶ ನೀಡದಿದ್ದಲ್ಲಿ ಅವರ ವ್ಯಾಜ್ಯ ವಿಷಯವು ನ್ಯಾಯಯುತವಾಗಿದ್ದರೂ ಅವರು ಸೋಲಬಹುದು.

ಎರಡನೆಯದಾಗಿ, ಪ್ರಕ್ರಿಯಾ ಕಾನೂನಿನ ಮಟ್ಟಿಗೆ, ವಿಳಂಬ ತಪ್ಪಿಸಲು ಅವಶ್ಯವಿರುವ ಎಲ್ಲ ವಿಧಾನ ಮತ್ತು ನಿಯಮಗಳನ್ನು ಅದು ಒಳಗೊಂಡಿದೆ. ನಮ್ಮ ಜನರಿಗೆ ತಮ್ಮ ವ್ಯಾಜ್ಯದ ವಿಷಯಕ್ಕೆ ಸಂಬಂಧಪಟ್ಟಂತೆ ಸಾಕ್ಷ್ಯ ಸಂಗ್ರಹಣೆಯನ್ನು ತ್ವರಿತವಾಗಿ ಸಮರ್ಥವಾಗಿ ಮತ್ತು ಎಚ್ಚರಿಕೆಯಿಂದ ಮಾಡಿದಲ್ಲಿ, ವ್ಯಾಜ್ಯ ವಿಷಯದಲ್ಲಿ ಉಂಟಾಗುವ ವಿಳಂಬವನ್ನು ತಾನೇ ಬಹುಮಟ್ಟಿಗೆ ತಪ್ಪಿಸಬಹುದಾಗಿದೆ.

**ಶ್ರೀ ಪಿ.ಎಸ್. ದೇಶಮುಖ್:** ಉಚ್ಚ ನ್ಯಾಯಾಲಯಗಳಲ್ಲಿನ ವಿಳಂಬದ ಬಗ್ಗೆ ಹೇಗೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಉಚ್ಚ ನ್ಯಾಯಾಲಯಗಳಲ್ಲಿನ ವಿಳಂಬಗಳಿಗೂ ಬಹುಮಟ್ಟಿಗೆ ಈ ಸಂಗತಿಯೇ ಕಾರಣ ಬಹುಶಃ ನನ್ನ ಮಾನ್ಯ ಸ್ನೇಹಿತರಿಗೆ ಗೊತ್ತಿಲ್ಲದಿರಬಹುದು, ಆದರೆ ನನಗೆ ಗೊತ್ತು, ನಮ್ಮಲ್ಲಿ ಅನೇಕರು ಜ್ಯೋತಿಷ್ಯವನ್ನು ನಂಬುತ್ತಾರೆ. ಅವರು ಪ್ರಕರಣವನ್ನು ಇಂಥ ದಿನಾಂಕದಂದು ನಿಗದಿಪಡಿಸಿದೆ ಎಂದು ಹೇಳಿದಾಗ ಅವರು ಮಾಡಿರುವ ಆ ದಿನ ಶುಭದಿನವಾಗಿದೆಯೆ ಎಂದು ತಿಳಿಯಲು

ಜ್ಯೋತಿಷಿಯಲ್ಲಿಗೆ ಹೋಗುತ್ತಾರೆ. ಅದೇನಾದರೂ ಅವರಿಗೆ ಅಶುಭ ಎಂದಾದರೆ, ಬಾಂಬೆಗೆ ಓಡಿಹೋಗಿ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರರ ಸಂಪರ್ಕ ಬೆಳೆಸಿ, ಆ ದಿನದಂದು ಪ್ರಕರಣ ಬಾರದಂತೆ ನೋಡಿಕೊಳ್ಳಲು ಕೆಲವೊಮ್ಮೆ ಗುಮಾಸ್ತರಿಗೆ ಭಾರಿ ಲಂಚವನ್ನು ನೀಡುವುದುಂಟು. ಅಂಥ ಅನೇಕ ಪ್ರಕರಣಗಳು ಗೊತ್ತು. ಆದ್ದರಿಂದಲೇ ನಾವು ಪ್ರಕ್ರಿಯಾ ಕಾನೂನುಗಳಿಗೆ ಮಾಡಿರುವುದೆಲ್ಲ ಈ ವಿಳಂಬವನ್ನು ತಪ್ಪಿಸುವ ಸಲುವಾಗಿಯೆ.

**ಶ್ರೀಮತಿ ಜಿ. ದುರ್ಗಾಬಾಯಿ:** ದಾಖಲೆಗಳ ಮುದ್ರಣಕ್ಕೆ ಬಹುಕಾಲ ಬೇಕಾಗುವುದರಿಂದಲೂ ವಿಳಂಬವಾಗುತ್ತಿಲ್ಲವೆ?

**ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್:** ಬಹುಶಃ ಪ್ರಿವಿಕೌನ್ಸಿಲ್ ತನ್ನಲ್ಲಿಗೆ ಬರುವ ಎಲ್ಲ ಪ್ರಕರಣಗಳ ದಾಖಲೆಗಳನ್ನು ಮುದ್ರಿಸಬೇಕೆಂದು ವಿಧಿಸಿರುವುದರಿಂದ ಉಚ್ಚ ನ್ಯಾಯಾಲಯವು ಆ ನಿಯಮವನ್ನು ಅನುಸರಿಸಬೇಕಾಗಿದೆ. ಇನ್ನು ಮುಂದೆ, ಸರ್ವೋಚ್ಚ ನ್ಯಾಯಾಲಯವು ಬೇರೆ ಕಾನೂನನ್ನು ಅನುಸರಿಸಬಹುದು, ನಾವೇನೂ ಹೇಳಲಾರೆವು.

ಕೆಳಗಿನ ನ್ಯಾಯಾಲಯಗಳಲ್ಲಿ ಮತ್ತಷ್ಟು ಸುಧಾರಣೆಗೆ ಅವಕಾಶವಿದೆ. ನಮ್ಮ ನ್ಯಾಯಿಕ ಸ್ಥಾನಗಳು ಅಂದರೆ, ಉಪನ್ಯಾಯಾಧೀಶರು ಕುಳಿತುಕೊಳ್ಳುವ ಪಟ್ಟಣಗಳು, ಕೆಲವೊಮ್ಮೆ ಹಳ್ಳಿಗಳಿಂದ ಬಹು ದೂರದಲ್ಲಿವೆ ಮತ್ತು ಹಳ್ಳಿಗರು ಆ ಸ್ಥಳಗಳಿಗೆ ಪ್ರಯಾಣಿಸಲು ದುಬಾರಿ ವೆಚ್ಚವನ್ನು ಭರಿಸಬೇಕಾಗುತ್ತದೆ ಎಂಬುದನ್ನು ನಾನೂ ಒಪ್ಪುತ್ತೇನೆ. ನಮ್ಮ ಉಪ ನ್ಯಾಯಾಧೀಶರು ಅಥವಾ ಅವರ ಅಧೀನರು ಸಂಚಾರಿ ಪೀಠವೆಂಬಂತೆ ಸಂಚರಿಸುವುದು ಅಪೇಕ್ಷಣೀಯ. ಆರು ಅಥವಾ ಏಳು ಹಳ್ಳಿಗಳಿಗೊಂದು ಸಂಚಾರಿ ಪೀಠವನ್ನು ಸ್ಥಾಪಿಸಿ, ಅಂಥ ವ್ಯಕ್ತಿ ವಾರವಾರಕ್ಕೆ ಭೇಟಿ ನೀಡಿ ಹಳ್ಳಿಗಳಲ್ಲಿಯೇ ವಿಚಾರಣೆ ನಡೆಸಬಹುದಾಗಿದೆ. ಇದೊಂದು ಸಾಧುವಾದ ಕ್ರಮ ಎನ್ನಿಸುತ್ತದೆ. ಇದು ಇಡಿಯಾಗಿ ಪ್ರಾಂತೀಯ ಸರ್ಕಾರಗಳ ಅಧಿಕಾರಕ್ಕೆ ಒಳಪಟ್ಟ ವಿಷಯ. ನನ್ನ ಈ ಸಲಹೆ ಅಂಗಿಕಾರಾರ್ಹವೆಂದು ಅವರು ಭಾವಿಸುವುದಾದರೆ, ನ್ಯಾಯಾಲಯಗಳನ್ನು ನನ್ನ ಸಲಹೆಯಂತೆ ಪುನರ್ವ್ಯವಸ್ಥೆಯನ್ನು ಮಾಡಬೇಕಾದವರು ಅವರೆ.

ನ್ಯಾಯಾಲಯ ಶುಲ್ಕಕ್ಕೆ ಸಂಬಂಧಿಸಿದಂತೆ, ಮತ್ತೊಮ್ಮೆ ಇದು ಪೂರ್ಣವಾಗಿ ಪ್ರಾಂತೀಯ ಸರ್ಕಾರಗಳ ವ್ಯಾಪ್ತಿಗೆ ಒಳಪಟ್ಟಿದ್ದು. ನ್ಯಾಯಾಲಯ ಶುಲ್ಕಗಳು ಕಕ್ಷಿದಾರರ ಸಾಮರ್ಥ್ಯಕ್ಕೆ ಮೀರಿವೆ ಎಂದು ಪ್ರಾಂತೀಯ ಸರ್ಕಾರಗಳು ಭಾವಿಸಿದರೆ ನ್ಯಾಯಾಲಯ ಶುಲ್ಕಗಳನ್ನು ಕಡಿಮೆಮಾಡಿ, ಕಕ್ಷಿದಾರರಿಗೆ ಪರಿಹಾರ ನೀಡುವುದು ಅವರ ಕೆಲಸ. ಕಾನೂನು ನೆರವಿಗೆ ಸಂಬಂಧಪಟ್ಟಂತೆ ಏನನ್ನಾದರೂ ಮಾಡಬೇಕೆನ್ನುವುದರಲ್ಲಿ ಸಂಶಯವಿಲ್ಲ. ಎಲ್ಲರಿಗೂ ತಿಳಿದಿರುವಂತೆ, ಬ್ರಿಟಿಷ್ ಸಂಸತ್ತು, ತನ್ನ ವ್ಯಾಜ್ಯಕ್ಕೆ ಹಣ ಹೊಂದಿಸಲು ಸಾಧ್ಯವಾಗದ ಕಕ್ಷಿದಾರನಿಗೆ ನೆರವು ಕಲ್ಪಿಸುವುದು ರಾಷ್ಟ್ರೀಯ ಹೊಣೆಗಾರಿಕೆ ಎಂಬ ಅಧಿನಿಯಮವೊಂದನ್ನು ಅಂಗೀಕರಿಸಿರುತ್ತದೆ. ಆ ಕ್ರಮವು ಎಷ್ಟೇ ಮೌಲಿಕವಾಗಿರಲಿ, ನಮ್ಮ ದೇಶದ ಜನರ ಹಣಕಾಸು ಸಾಮರ್ಥ್ಯಗಳನ್ನು ಗಮನದಲ್ಲಿಟ್ಟುಕೊಂಡರೆ, ದೇಶದ ರಾಷ್ಟ್ರೀಯ ಆದಾಯದ ಮೇಲೆ ಅಂಥ ಭಾರವನ್ನು ಹೊರಿಸುವುದು ಅಸಾಧ್ಯವೆಂದೇ ಅನಿಸುತ್ತದೆ. ಆರ್ಥಿಕ ಸಂಕಷ್ಟದಲ್ಲಿರುವ ಜನರಿಗೆ ಭಾಗಶಃ ಪರಿಹಾರವನ್ನು ನೀಡಬಹುದಾದ ಯಾವುದಾದರೂ ವಿಧಾನವನ್ನು ಕಂಡುಹಿಡಿಯಬಹುದು.

ಕಾನೂನು ಪರಿಷ್ಕರಣ ಸಮಿತಿಯ ಬಗ್ಗೆ ಕೆಲ ಮಾತುಗಳನ್ನು ಹೇಳಲಾಗಿದೆ. ಈ ವಿಷಯದಲ್ಲಿ ಕೆಲಮಟ್ಟಿಗೆ ತಪ್ಪು ತಿಳಿವಳಿಕೆ ಇರುವಂತಿದೆ. ಇಂಗ್ಲೆಂಡ್‌ನಲ್ಲಿಯೂ ಶಾಸನಬದ್ಧ ಕಾನೂನು ಪರಿಷ್ಕರಣ ಸಮಿತಿ ಇದೆ; ಆದರೆ, ಅದರ ಕಾರ್ಯ ತೀರಾ ಸೀಮಿತ. ೧೯೨೭ರಲ್ಲಿ ಅಂಗೀಕರಿಸಲಾದ ಶಾಸನಬದ್ಧ ಕಾನೂನು ಪರಿಷ್ಕರಣ ಸಮಿತಿ ಅಧಿನಿಯಮ ನನ್ನಲ್ಲಿದೆ. ಆ ಶಾಸನಬದ್ಧ ಕಾನೂನು ಪರಿಷ್ಕರಣ ಸಮಿತಿ

ಅಧಿನಿಯಮದ ಉದ್ದೇಶ ಶಾಸನದ ಪುಸ್ತಕಗಳಿಂದ ಅವಧಿ ತೀರಿದ, ಉದ್ದೇಶ ಈಡೇರಿದ ಮತ್ತು ಜಾರಿಯಲ್ಲಿಲ್ಲದ ಮತ್ತಿತರ ಈ ಬಗೆಯ ಕಾನೂನುಗಳನ್ನು ತೆಗೆದುಹಾಕುವುದು. ಅಂದರೆ, ಶಾಸನಗಳ ಪುಸ್ತಕಗಳಿಂದ ಅವಶ್ಯಕವಾದ, ನಿರುಪಯುಕ್ತವಾದ ಕಾನೂನುಗಳನ್ನು ನಿವಾರಿಸುವುದು. ಇಲ್ಲಿ, ಶಾಸನಬದ್ಧ ಕಾನೂನು ಪರಿಣಿತರಲ್ಲಿ ಸಮಿತಿಯನ್ನು ೧೯೨೧ರಲ್ಲಿ ನೇಮಕ ಮಾಡಲಾಯಿತು. ಭಾರತ ಸರ್ಕಾರವು. ಈ ಸಮಿತಿಯನ್ನು ನೇಮಕ ಮಾಡಿದಾಗ, ಬ್ರಿಟಿಷ್ ಶಾಸನದಲ್ಲಿದ್ದ ಉದ್ದೇಶವನ್ನೇ ಹೊಂದಿತ್ತಾದರೂ, ಅದು ತಾನೇ ವಿಭಿನ್ನ ಬಗೆಯ ಕಾರ್ಯವನ್ನು ಕೈಗೊಂಡು, ತಾನೇ ಸಿದ್ಧಪಡಿಸಿದ ಕೆಲವು ಕಾನೂನುಗಳನ್ನು ಶಿಫಾರಸು ಮಾಡತೊಡಗಿತು. ಅಂಥ ಕೆಲಸ ಅಗತ್ಯವಾಗಿತ್ತೆ ನನಗೆ ತಿಳಿಯದು. ಏಕೆಂದರೆ ಕಾನೂನುಗಳ ಕರಡು ತಯಾರಿಸುವುದು ಪೂರ್ಣವಾಗಿ ಸರ್ಕಾರದ ಕೆಲಸ; ಅದನ್ನು ಕಾನೂನು ಇಲಾಖೆಯಲ್ಲಿ ನಿಯೋಜಿಸಿಕೊಂಡಿರುವ ಕರಡು ತಯಾರಿಕರಿಗೆ ಬಿಟ್ಟುಬಿಡಬೇಕು. ಈ ದೃಷ್ಟಿಯಿಂದ ಕಾನೂನು ಇಲಾಖೆಯು ತನ್ನ ಸಿಬ್ಬಂದಿಯ ಕೊರತೆಯಿಂದ, ಯಾವ ಕಾನೂನು ಕೊನೆಗೊಂಡಿದೆ, ಯಾವುದು ಆವಶ್ಯಕ ಮತ್ತು ಯಾವುದು ಜಾರಿಯಲ್ಲಿಲ್ಲ ಎಂಬುದನ್ನು ತಿಳಿಯಲು ಕೆಲವರನ್ನಾದರೂ ನಿಯೋಜಿಸಲು ಸಾಧ್ಯವಿಲ್ಲವೆಂದಾಗದ ಹೊರತು ಕಾನೂನು ಪರಿಷ್ಕರಣ ಸಮಿತಿ ತೀರಾ ಅವಶ್ಯವೆಂದು ನನಗೆ ತೋರುವುದಿಲ್ಲ. ಆದಾಗ್ಯೂ, ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರಕ್ಕೆ ಕಾಲಾವಕಾಶ ದೊರೆಯುವವರೆಗೆ ಸಲಹೆಯನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡಿರುತ್ತೇನೆ.

ಫೆಡರಲ್ ನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ, ನ್ಯಾಯಾಲಯದ ಮುಂದೆ ಇತ್ಯರ್ಥವಾಗದೆ ಉಳಿದಿರುವ ಕೆಲಸದ ದೃಷ್ಟಿಯಿಂದ, ನ್ಯಾಯಾಧೀಶರ ಸಂಖ್ಯೆ ತೀರಾ ಅಲ್ಪ ಎಂಬ ಪ್ರಶ್ನೆಯನ್ನು ಎತ್ತಲಾಗಿದೆ. ಅಲ್ಲದೆ, ಫೆಡರಲ್ ನ್ಯಾಯಾಲಯವು, ಅದು ಹೊಂದಿರಲೇಬೇಕಾದಂಥ ಗ್ರಂಥಾಲಯವನ್ನು ಹೊಂದಿಲ್ಲ ಎಂಬ ಪ್ರಶ್ನೆಯನ್ನು ಎತ್ತಲಾಗಿದೆ. ಭಾರತ ಸರ್ಕಾರವು ಫೆಡರಲ್ ನ್ಯಾಯಾಲಯದ ಅಗತ್ಯತೆಗಳು ಮತ್ತು ಅದರ ಗ್ರಂಥಾಲಯ ಸಾಮಗ್ರಿಗಳ ಬಗ್ಗೆ ಎಂದೂ ನಿರ್ಲಕ್ಷ್ಯದಿಂದ ವರ್ತಿಸಿರುವುದಿಲ್ಲ ಎಂಬ ಕುರಿತು ನನಗೆ ಎಳ್ಳಷ್ಟೂ ಸಂಶಯವಿಲ್ಲ. ಫೆಡರಲ್ ನ್ಯಾಯಾಲಯವನ್ನು ಸವೋಚ್ಚ ನ್ಯಾಯಾಲಯ ಎಂದು ಪರಿವರ್ತಿಸುವಾಗ, ಈ ವಿಷಯವನ್ನು ಚರ್ಚಿಸಲಾಗುವುದು. ಫೆಡರಲ್ ನ್ಯಾಯಾಲಯವು ಸರ್ವೋಚ್ಚ ನ್ಯಾಯಾಲಯವಾಗಿ ರೂಪಾಂತರ ಹೊಂದಲು ಬಹಳ ಸಮಯ ಬೇಕಾಗುವುದಿಲ್ಲ. ತತ್ಪರಿಣಾಮವಾಗಿ, ಸರ್ವೋಚ್ಚ ನ್ಯಾಯಾಲಯದ ಸಿಬ್ಬಂದಿ ಮತ್ತು ಅದರ ಗ್ರಂಥಾಲಯ ಸಾಮಗ್ರಿಗೆ ಸಂಬಂಧಪಟ್ಟಂತೆ, ಸಲಹೆ ಮಾಡಲಾದ ಸುಧಾರಣೆಗಳು, ಸರ್ವೋಚ್ಚ ನ್ಯಾಯಾಲಯದ ರಚನೆಯವರೆಗೆ ವಿಳಂಬವಾಗಬಹುದು. ಭಾರತ ಸರ್ಕಾರವು ಗ್ರಂಥಾಲಯದ ಅಗತ್ಯತೆಗಳು ಮತ್ತು ಕಾರ್ಯವನ್ನು ನಿರ್ವಹಿಸಲು ಅವಶ್ಯಕವಿರುವ ನ್ಯಾಯಾಧೀಶರ ಸಂಖ್ಯೆಯನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡಿರುವುದು ಎಂಬುದರಲ್ಲಿ ನನಗೆ ಸಂಯಮವಿಲ್ಲ.

**ಸಭಾಧ್ಯಕ್ಷರು:** ನಾನು ಸದನದ ಮುಂದೆ ಬೇಡಿಕೆಗಳನ್ನು ಮಂಡಿಸುತ್ತಿದ್ದೇನೆ.

ಸೂಚನೆ ಏನೆಂದರೆ–

> "ನ್ಯಾಯಾಲಯಕ್ಕೆ ಸಂಬಂಧಪಟ್ಟ, ೩೧ ಮಾರ್ಚ್ ೧೯೪೯ರ ದಿನಕ್ಕೆ ಕೊನೆಗೊಳ್ಳುವ ವರ್ಷದಲ್ಲಿ, ಕಾಲಕ್ರಮದಲ್ಲಿ ಪಾವತಿಗಾಗಿ ಬರುವ ವೆಚ್ಚವನ್ನು ಭರಿಸಲು ಗವರ್ನರ್ ಜನರಲ್ ಅವರಿಗೆ ರೂ. ೨,೪೪,೦೦೦ಗಳಿಗೆ ಮೀರದ ಪೂರಕ ಅನುದಾನವನ್ನು ನೀಡುವುದು"

ಸೂಚನೆಯನ್ನು ಅಂಗೀಕರಿಸಲಾಯಿತು.

## (ಇ)

## *ಸದನದ ಮುಂದೆ ಮಂಡಿಸಿದ ದಸ್ತಾವೇಜುಗಳು
## ಸಂವಿಧಾನದ (ಅಡಚಣೆಗಳ ನಿವಾರಣೆ) ಆದೇಶಗಳು

**ಕಾನೂನು ಮಂತ್ರಿಗಳು: (ಡಾ. ಅಂಬೇಡ್ಕರ್):** ಸಂವಿಧಾನದ ಅನುಚ್ಛೇದ ೩೯೨ರ ಕಲಮು ೧೨೭ರ ಮೇರೆಗೆ ಈ ಕೆಳಕಂಡ ದಸ್ತಾವೇಜುಗಳನ್ನು ಸದನದ ಮುಂದೆ ಮಂಡಿಸಲು ಅನುಮತಿ ಕೋರುತ್ತಿದ್ದೇನೆ:

(೧) ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶ ಸಂ. I (೭ ಜನವರಿ ೧೯೫೦ರಂದು ಗವರ್ನರ್ ಜನರಲ್ ಅವರಿಂದ ರೂಪಿತವಾದುದು)

(೨) ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶ ಸಂ. II (೨೬ ಜನವರಿ ೧೯೫೦ರಂದು ರಾಷ್ಟ್ರಪತಿಗಳಿಂದ ರೂಪಿತವಾದುದು)

(೩) ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶ ಸಂ III (೨೬ ಜನವರಿ ೧೯೫೦ರಂದು ರಾಷ್ಟ್ರಪತಿಗಳಿಂದ ರೂಪಿತವಾದುದು)

*(ಗ್ರಂಥಾಲಯದಲ್ಲಿರಿಸಲಾಗಿದೆ. ನೋಡಿ: ಸಂ.ಪಿ. ೬೧/೫೦)*

## (ಎಫ್)

## **ವಾಯುಸೇನೆ ವಿಧೇಯಕ
## ವರಿಷ್ಠ ಸಮಿತಿಯ ವರದಿಯ ಮಂಡನೆ

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ವಾಯುಸೇನೆ ಆಡಳಿತಕ್ಕೆ ಸಂಬಂಧಪಟ್ಟ ಕಾನೂನನ್ನು ಕ್ರೋಢೀಕರಿಸಿ, ತಿದ್ದುಪಡಿ ಮಾಡುವ ವಿಧೇಯಕದ ಮೇಲಿನ ವರಿಷ್ಠ ಸಮಿತಿ ವರದಿಯನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

## (ಜಿ)

## *ವಿಧೇಯಕದ ನಿರಸನ ಮತ್ತು ತಿದ್ದುಪಡಿ

**ಡಾ. ಬಿ.ಆರ್. ಅಂಬೇಡ್ಕರ್:** (ಕಾನೂನು ಮಂತ್ರಿಗಳು)

ಸರ್, ನಾನು ಮಂಡಿಸುತ್ತಿದ್ದೇನೆ:

"ಕೆಲವೊಂದು ಅಧಿನಿಯಮಗಳನ್ನು ನಿರಸನಗೊಳಿಸಲು ಮತ್ತು ತಿದ್ದುಪಡಿ

---

* ಪಿ.ಡಿ. ಸಂ.೨, ಭಾಗ II, ೧೪ ಫೆಬ್ರವರಿ ೧೯೫೦, ಪು. ೪೯

** ಪಿ.ಡಿ. ಸಂ.೩, ಭಾಗ II, ೨೧ ಮಾರ್ಚ್ ೧೯೫೦. ಪು. ೧೮೯೫

* ಸಿ.ಪಿ. (ಎಚ್ಇಜಿ) ಡಿ, ಸಂ.೩ ಭಾಗ II, ೧೧ ಡಿಸೆಂಬರ್ ೧೯೪೭ ಪು. ೧೭೨೭

ಮಾಡಲು ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು."

ಸರ್, ಯಾವುದೇ ಭಾಷಣ ಅವಶ್ಯವಲ್ಲವೆಂದು ನನ್ನ ಭಾವನೆ, ಏಕೆಂದರೆ, ಇದೊಂದು ರೂಢಿಯ ಕ್ರಮ. ಯುದ್ಧಕಾಲದಲ್ಲಿ ಕೆಲವೊಂದು ಅಧಿನಿಯಮಗಳನ್ನು ಅನುಮೋದಿಸಲಾಗಿತ್ತು; ಅವು ನೀಡಿದ್ದ ಅಧಿಕಾರಗಳು ಕೊನೆಗೊಂಡಿವೆ; ಕೆಲವೊಂದು ಅವಧಿ ಮೀರಿದೆ. ಇವುಗಳಿಂದ ಅತ್ಯಧಿಕ ಭಾರವಾಗಿರುವ ಶಾಸನ ಪುಸ್ತಕವನ್ನು ಕತ್ತರಿಸಿ, ಸಂಕ್ಷಿಪ್ತಗೊಳಿಸುವುದು ತೀರಾ ಅಪೇಕ್ಷಣೀಯ. ಸರ್, ಮಂಡಿಸುತ್ತಿದ್ದೇನೆ.

ಸಭಾಧ್ಯಕ್ಷರು: ಸೂಚನೆ ಮಂಡಿಸಿದೆ:

"ಕೆಲವೊಂದು ಅಧಿನಿಯಮಗಳನ್ನು ನಿರಸನಗೊಳಿಸಲು ಮತ್ತು ತಿದ್ದುಪಡಿ ಮಾಡಲು ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು."

**ಶ್ರೀ ಎಂ ಅನಂತಶಯನಂ ಅಯ್ಯಂಗಾರ್:** (ಮದ್ರಾಸು: ಸಾಮಾನ್ಯ)

ಸರ್, ನಾನು ತಮ್ಮ ಸಮಯ ತೆಗೆದುಕೊಳ್ಳಲು ಬಯಸುವುದಿಲ್ಲ. ಆದರೆ ಅವರು ಸುಮಾರು ನೂರೈವತ್ತರ ಪಟ್ಟಿಗೆ ಭಾರತ ಸರ್ಕಾರದ ಅಧಿನಿಯಮವನ್ನು ಸೇರಿಸಿಲ್ಲದಿರುವುದು ವಿಷಾದಕರ.

**ಸಭಾಧ್ಯಕ್ಷರು:** ಸೂಚನೆ ಇಂತಿದೆ:

"ಕೆಲವೊಂದು ಅಧಿನಿಯಮಗಳನ್ನು ನಿರಸನಗೊಳಿಸಲು ಮತ್ತು ತಿದ್ದುಪಡಿ ಮಾಡಲು ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು."

ಸೂಚನೆಯನ್ನು ಅಂಗೀಕರಿಸಲಾಯಿತು.

ವಿಧೇಯಕಕ್ಕೆ ಕಲಮು ೨ರಿಂದ ೪ರ ವರೆಗೆ ಸೇರ್ಪಡೆ ಮಾಡಲಾಯಿತು.

ವಿಧೇಯಕಕ್ಕೆ ಅನುಸೂಚಿಯನ್ನು ಸೇರಿಸಲಾಯಿತು.

ವಿಧೇಯಕಕ್ಕೆ ಕಲಮು ೨ನ್ನು ಸೇರಿಸಲಾಯಿತು.

ವಿಧೇಯಕಕ್ಕೆ ಶೀರ್ಷಿಕೆ ಮತ್ತು ಪ್ರಸ್ತಾವವನ್ನು ಸೇರಿಸಲಾಯಿತು.

**ಮಾನ್ಯ ಡಾ. ಬಿ.ಆಆರ್. ಅಂಬೇಡ್ಕರ್:** ಸರ್, ನಾನು ಮಂಡಿಸುತ್ತಿದ್ದೇನೆ.

"ವಿಧೇಯಕವನ್ನು ಅನುಮೋದಿಸಲಾಯಿತು."

ಸೂಚನೆಯನ್ನು ಅಂಗೀಕರಿಸಲಾಯಿತು.

***ಡಾ. ಬಿ.ಆರ್. ಅಂಬೇಡ್ಕರ್: (ಕಾನೂನು ಮಂತ್ರಿಗಳು)**

ಸರ್, ಕೆಲವೊಂದು ಅಧಿನಿಯಮಗಳನ್ನು ನಿರಸನಗೊಳಿಸಲು ಮತ್ತು ಇತರ ಅಧಿನಿಯಮಗಳನ್ನು ತಿದ್ದುಪಡಿ ಮಾಡಲು ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

**ಉಪಸಭಾಧ್ಯಕ್ಷರು:** ಸೂಚನೆ ಇಂತಿದೆ:

"ಕೆಲವೊಂದು ಅಧಿನಿಯಮಗಳನ್ನು ನಿರಸನಗೊಳಿಸಲು ಮತ್ತು ಇತರ ಅಧಿನಿಯಮಗಳನ್ನು ತಿದ್ದುಪಡಿ ಮಾಡಲು ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಸೂಚನೆಯನ್ನು ಅಂಗೀಕರಿಸಲಾಯಿತು.

**ಡಾ. ಬಿ.ಆರ್. ಅಂಬೇಡ್ಕರ್:** ಸರ್, ನಾನು ವಿಧೇಯಕವನ್ನು ಮಂಡಿಸುತ್ತಿದ್ದೇನೆ.

---

* ಸಿ.ಪಿ. (ಎಚ್ಇಜಿ) ಡಿ. ಸಂ.೨, ಭಾಗ ೫೫, ೧ ಮಾರ್ಚ್ ೧೯೪೯, ಪು. ೯೮೯

## (ಹೆಚ್)

## **ಕಾನೂನು ಮಂತ್ರಾಲಯಕ್ಕೆ ಸ್ಥಾಯಿ ಸಮಿತಿ

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

"ಸದನವು, ಸಭಾಧ್ಯಕ್ಷರು ನಿರ್ದೇಶಿಸಬಹುದಾದ ರೀತಿಯಲ್ಲಿ ಪ್ರಸಕ್ತ ಹಣಕಾಸು ವರ್ಷದ ಉಳಿದ ಭಾಗಕ್ಕೆ ೧೭ ನವೆಂಬರ್ ೧೯೫೦ರಂದು ನಿಧನರಾದ ಡಾ. ಪಿ.ಕೆ. ಸೇನ್ ಅವರ ಸ್ಥಾನದಲ್ಲಿ ಕಾನೂನು ಮಂತ್ರಾಲಯದಲ್ಲಿ ನಿರ್ವಹಿಸಲಾಗುವ ವಿಷಯಗಳ ಮೇಲೆ ಸಲಹೆ ನೀಡಲು ಸ್ಥಾಯಿ ಸಮಿತಿಯಲ್ಲಿ ಸೇವೆಸಲ್ಲಿಸಲು ಓರ್ವ ಸದಸ್ಯರನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳುವುದು"

ಸೂಚನೆಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು:** ಈ ಕೆಳಕಂಡ ಸಮಿತಿಗಳಿಗೆ ಸಂಬಂಧಿಸಿದಂತೆ, ನಾನು ಪತ್ರವನ್ನು ಸ್ವೀಕರಿಸಲು ಮತ್ತು ಚುನಾವಣೆಗಳನ್ನು ನಡೆಸಲು ಈ ಕೆಳಕಂಡ ದಿನಾಂಕವನ್ನು ನಿಗದಿಗೊಳಿಸಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ:

| | ನಾಮಪತ್ರ ಸಲ್ಲಿಕೆ ದಿನಾಂಕ | ಚುನಾವಣೆ ದಿನಾಂಕ |
|---|---|---|
| ೧. ಗೃಹ ವ್ಯವಹಾರ ಮಂತ್ರಾಲಯದ ಸ್ಥಾಯಿ ಸಮಿತಿ | ೧–೧೨–೫೦ | ೪–೧೨–೫೦ |
| ೨. ಮಹಾ ರೇಷ್ಮೆ ಮಂಡಳಿ | | |
| ೩. ಭಾರತದ ಕ್ಷಯರೋಗ ಸಂಸ್ಥೆಯ ಕೇಂದ್ರೀಯ ಸಮಿತಿ | | |
| ೪. ರೈಲ್ವೆ ಸ್ಥಾಯಿ ಹಣಕಾಸು ಸಮಿತಿ. | | |
| ೫. ಕಾನೂನು ಮಂತ್ರಾಲಯದ ಸ್ಥಾಯಿ ಸಮಿತಿ | ೧–೨–೫೦ | ೫–೧೨–೫೦ |

ಈ ಸಮಿತಿಗಳಿಗೆ ನಾಮಪತ್ರಗಳನ್ನು, ಅದೇ ಉದ್ದೇಶಕ್ಕಾಗಿ ಹೇಳಲಾಗಿರುವ ದಿನಾಂಕಗಳಂದು ಮಧ್ಯಾಹ್ನ ೧೨ ಗಂಟೆಯವರೆಗೆ ಸಂಸದೀಯ ನೋಟೀಸು ಕಚೇರಿಯಲ್ಲಿ ಸ್ವೀಕರಿಸಲಾಗುವುದು. ವರ್ಗಾವಣೆ ಮಾಡಬಹುದಾದ ಏಕಮಾತ್ರ ಮತದ ಮೂಲಕ ಈ ಚುನಾವಣೆಗಳನ್ನು ಸಂಸದೀಯ ಸದನದಲ್ಲಿನ ಸಹಾಯಕ ಸಚಿವರ ಕೊಠಡಿ ಸಂ. ೨೧ರಲ್ಲಿ ಬೆಳಿಗ್ಗೆ ೧೦.೩೦ರಿಂದ ಮದ್ಯಾಹ್ನ ೧.೦೦ ಗಂಟೆಯವರೆಗೆ ನಡೆಸಲಾಗುವುದು.

** ಪಿ.ಡಿ. ಸಂ.೬, ಭಾಗ–II, ೨೯ ನವೆಂಬರ್ ೧೯೫೦, ಪು, ೮೪೫–೪೮

## (ಐ)

## *ಕಾರ್ಮಿಕ ಒಕ್ಕೂಟಗಳ ವಿಧೇಯಕ
## ವರಿಷ್ಠ ಸಮಿತಿಯ ವರದಿಯ ಮಂಡನೆ

**ಮಧ್ಯಾಹ್ನ ೧೨.೦೦ ಘಂಟೆ**

**ಕಾನೂನು ಮಂತ್ರಿಗಳು: ಡಾ. ಅಂಬೇಡ್ಕರ್:** ಕಾರ್ಮಿಕ ಒಕ್ಕೂಟಗಳ ನೊಂದಣಿ ಮತ್ತು ಮಾನ್ಯತೆಗಾಗಿ ಮತ್ತು ನೊಂದಾಯಿತ ಹಾಗೂ ಮಾನ್ಯತೆ ಪಡೆದ ಕಾರ್ಮಿಕ ಒಕ್ಕೂಟಗಳಿಗೆ ಸಂಬಂಧಪಟ್ಟಂತೆ ಕೆಲವೊಂದು ವಿಷಯಗಳಲ್ಲಿ ನೊಂದಾಯಿತ ಹಾಗೂ ಮಾನ್ಯತೆ ಪಡೆದ ಕಾರ್ಮಿಕ ಒಕ್ಕೂಟಗಳಿಗೆ ಸಂಬಂಧಪಟ್ಟಂತೆ ಮತ್ತು ಉದ್ಯೋಗದಾತರ ಹಾಗೂ ಮಾನ್ಯತೆ ಪಡೆದ ಕಾರ್ಮಿಕ ಒಕ್ಕೂಟಗಳ ಅಕ್ರಮ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕಾನೂನು ವ್ಯಾಖ್ಯಾನಿಸಲು ಉಪಬಂಧ ಕಲ್ಪಿಸುವ ವಿಧೇಯಕದ ಮೇಲಿನ ವರಿಷ್ಠ ಸಮಿತಿಯ ವರದಿಯನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

## (ಜೆ)
## *ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶಗಳು
## ಸಂ. VI ರಿಂದ VIII

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಸಂವಿಧಾನದ ಅನುಚ್ಛೇದ ೩೯೨ರ ಕಲಮು (೨)ರ ಮೇರೆಗೆ ಈ ಕೆಳಕಂಡ ದಸ್ತಾವೇಜುಗಳನ್ನು ಸದನದ ಮುಂದೆ ಮಂಡಿಸಲು ಅನುಮತಿ ಕೋರುತ್ತಿದ್ದೇನೆ:

(i) ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶ ಸಂ. VI (೨ ಸೆಪ್ಟೆಂಬರ್ ೧೯೫೦ರಂದು ರಾಷ್ಟ್ರಪತಿಗಳಿಂದ ರೂಪಿತವಾದುದು)

(ii) ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶ ಸಂ. VII (೭ ಅಕ್ಟೋಬರ್ ೧೯೫೦ರಂದು ರಾಷ್ಟ್ರಪತಿಗಳಿಂದ ರೂಪಿತವಾದುದು.)

(iii) ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶ ಸಂ.VIII (೨೫ ಅಕ್ಟೋಬರ್ ೧೯೫೦ರಂದು ರಾಷ್ಟ್ರಪತಿಗಳಿಂದ ರೂಪಿತವಾದುದು)

(ಗ್ರಂಥಾಲಯದಲ್ಲಿರಿಸಲಾಗಿದೆ. ನೋಡಿ ಸಂ.ಪ್ರ. ೧೧೬/೫೦)

---

* ಪಿ.ಡಿ. ಸಂ. ೬ ಭಾಗ–೨, ೧ ಡಿಸೆಂಬರ್ ೧೯೫೦, ಪು. ೧೦೬೬

* ಪಿ.ಡಿ. ಸಂ. ೬, ಭಾಗ–೨, ೨೦ ಸೆಪ್ಟೆಂಬರ್ ೧೯೫೦, ಪು. ೨೬೬–೬೭

## (ಕೆ)
## **ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶಗಳು
## ಸಂ. IV ಮತ್ತು V

**ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ಸಂವಿಧಾನದ ಅನುಚ್ಛೇದ ೩೯೨ರ ಕಲಮು (೨)ರ ಮೇರೆಗೆ ಈ ಕೆಳಕಂಡ ದಸ್ತಾವೇಜುಗಳನ್ನು ಸದನದ ಮುಂದೆ ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

(i) ಸಂವಿಧಾನ(ಅಡಚಣೆಗಳ ನಿವಾರಣೆ) ಆದೇಶ ಸಂ. IV (೨೪ ಮೇ ೧೯೫೦ರಂದು ರಾಷ್ಟ್ರಪತಿಗಳಿಂದ ರೂಪಿತವಾದುದು.)

(ಗ್ರಂಥಾಲಯದಲ್ಲಿರಿಸಲಾಗಿದೆ. ನೋಡಿ ಸಂ. ಪಿ ೯೨/೫೦)

(ii) ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶ ಸಂ. V (೬ ಜೂನ್ ೧೯೫೦ರಂದು ರಾಷ್ಟ್ರಪತಿಗಳಿಂದ ರೂಪಿತವಾದುದು)

(ಗ್ರಂಥಾಲಯದಲ್ಲಿರಿಸಲಾಗಿದೆ. ನೋಡಿ ಸಂ. ೯೩/೫೦)

***ಕಾನೂನು ಮಂತ್ರಿಗಳು (ಡಾ. ಅಂಬೇಡ್ಕರ್):** ೧೯೦೮ರ ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು:** ಸೂಚನೆ ಇಂತಿದೆ.

> "೧೯೦೮ರ ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಮತ್ತಷ್ಟು ತಿದ್ದುಪಡಿ ಮಾಡಲು ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಸೂಚನೆಯನ್ನು ಅಂಗೀಕರಿಸಲಾಯಿತು.

**ಡಾ. ಅಂಬೇಡ್ಕರ್:** ನಾನು ವಿಧೇಯಕವನ್ನು ಮಂಡಿಸುತ್ತಿದ್ದೇನೆ.

## (ಎಲ್)
## **ಸದನದ ಮುಂದೆ ಮಂಡಿಸಿರುವ ದಸ್ತಾವೇಜುಗಳು
## ಸಂವಿಧಾನ (ಅಡಚಣೆಗಳ ನಿವಾರಣೆ) ಆದೇಶ ಸಂ. II
## (ಮೂರನೆಯ ತಿದ್ದುಪಡಿ) ಆದೇಶ.

**ಕಾನೂನು ಮಂತ್ರಿಗಳು: (ಡಾ. ಅಂಬೇಡ್ಕರ್):** ಸಂವಿಧಾನದ ಅನುಚ್ಛೇದ ೩೯೨ರ ಕಲಮು (೨೭ ರ ಮೇರೆಗೆ, ೧೬ ಆಗಸ್ಟ್ ೧೯೫೧ ರಂದು ರಾಷ್ಟ್ರಪತಿಗಳು ರೂಪಿಸಿದ ಸಂವಿಧಾನ (ಅಡಚಣೆ ನಿವಾರಣೆ) ಆದೇಶ ಸಂ. II (ಮೂರನೆಯ ತಿದ್ದುಪಡಿ) ಆದೇಶದ ಪ್ರತಿಯನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

(ಗ್ರಂಥಾಲಯದಲ್ಲಿರಿಸಲಾಗಿದೆ. ನೋಡಿ ಸಂ. ಪಿ. ೧೯೭/೫೧)

---

** ಪಿ.ಡಿ. ಸಂ.೫ ಭಾಗ–೨, ೧ ಆಗಸ್ಟ್ ೧೯೫೦, ಪು. ೨೧

* ಪಿ.ಡಿ. ಸಂ ೭, ಭಾಗ II, ೧೮ ಡಿಸೆಂಬರ್ ೧೯೫೦, ಪು. ೧೦೩೫

** ಪಿ.ಡಿ. ಸಂ. ೧೪, ಭಾಗ II, ೨೭ ಆಗಸ್ಟ್ ೧೯೫೧, ಪು. ೧೩೬೩

# ವಿಷಯಸೂಚಿ


**ಅ**

ಅಂಡಮಾನ್–ನಿಕೋಬಾರ್ 463

ಅಂಬೇಡ್ಕರ್ 5, 7, 10, 11, 14, 15, 17, 18, 19, 22, 26, 28, 29, 30, 31, 32, 33, 35, 36, 38, 45, 47, 48, 49, 50, 51, 52, 53, 54, 57, 58, 60, 61, 62, 63, 64, 65, 66, 67, 68, 69, 70, 72, 73, 74, 75, 76, 77, 78, 79, 80, 81, 82, 83, 85, 86, 87, 88, 89, 90, 92, 93, 94, 95, 96, 97, 98, 99, 100, 101, 102, 103, 104, 107, 108, 109, 110, 111, 112, 113, 114, 115, 116, 118, 119, 120, 121, 122, 123, 125, 126, 127, 130, 131, 132, 137, 138, 140, 141, 142, 143, 144, 145, 146, 147, 148, 150, 151, 152, 156, 157, 158, 159, 160, 162, 163, 164, 165, 166, 171, 172, 173, 175, 176, 181, 182, 183, 184, 185, 186, 187, 188, 189, 190, 192, 193, 194, 195, 196, 197, 200, 201, 204, 209, 210, 212, 213, 214, 215, 216, 217, 218, 221, 222, 223, 224, 225, 226, 227, 228, 229, 230, 231, 232, 233, 237, 238, 239, 240, 241, 243, 244, 245, 246, 248, 249, 250, 251, 253, 254, 255, 256, 257, 259, 260, 261, 262, 263, 264, 265, 266, 267, 268, 269, 270, 271, 272, 273, 274, 275, 276, 279, 281, 282, 283, 284, 285, 286, 287, 288, 289, 290, 291, 292, 293, 294, 295, 296, 297, 298, 299, 301, 302, 303, 304, 305, 306, 307, 309, 310, 311, 312, 313, 314, 315, 316, 317, 318, 319, 321, 322, 323, 324, 325, 326, 327, 330, 331, 332, 333, 334, 335, 336, 338, 340, 341, 342, 343, 345, 346, 347, 348, 353, 359, 361, 364, 366, 369, 372, 373, 374, 375, 378, 379, 380, 382, 383, 387, 392, 394, 395, 396, 402, 403, 406, 408, 409, 410, 411, 412, 413, 414, 415, 416, 417, 418, 419, 421, 422, 423, 427, 428, 429, 430, 431, 433, 434, 435, 436, 437, 438, 439, 440, 441, 442, 443, 444, 445, 446, 447, 448, 449, 450, 451, 452, 453, 454, 456, 457, 458, 459, 460, 462, 463, 464, 465, 466, 467, 468, 469, 470, 471, 472, 473, 474, 475, 476, 477, 478, 479, 480, 481, 482, 483, 484, 485, 486, 487, 488, 489, 490, 491, 492, 493, 494, 495, 496, 497, 498, 499, 500, 501, 502, 503, 504, 505, 506, 507, 508, 509, 510, 511, 512, 513, 514, 515, 516, 517, 518, 519, 521, 523, 524, 525, 526, 527, 528, 529, 530, 532, 533, 534, 535, 536, 537, 538, 539, 540, 541, 542, 543,

544, 545, 546, 547, 551, 552, 553, 554, 555, 558, 559, 560, 561, 562, 563, 564, 565, 566, 567, 568, 569, 570, 571, 572, 573, 574, 575, 576, 577, 578, 579, 580, 581, 582, 583, 589, 591, 592, 593, 594, 595, 596, 597, 598, 599, 600, 601, 602, 603, 604, 605, 606, 607, 608, 609, 610, 611, 612, 613, 614, 615, 616, 618, 619, 620, 621, 623, 624, 627, 628, 629, 630, 631, 632, 633, 634, 635, 636, 637, 638, 640, 641, 642, 643, 644, 646, 647, 648, 649, 650, 651, 653, 655, 656, 657, 658, 659, 660, 661, 662, 663, 664, 665, 666, 667, 668, 669, 670, 672, 674, 676, 677, 678, 680, 683, 684, 685, 691, 692, 693, 694, 695, 696, 700, 703, 705, 707, 708, 710, 711, 712, 714, 717, 718, 719, 722, 723, 724, 725, 727, 729, 730, 731, 732, 733, 734, 736, 737, 738, 740, 745, 746, 748, 749, 751, 752, 757, 759, 760, 763, 764, 767, 774, 775, 777, 778, 780, 782, 784, 785, 786, 787, 788

ಅಕ್ಬರ್‌ಪುರ್ 339, 340

ಅಗ್ನಿಭೋಜ್ 794

ಅಜ್ನಿ 665

ಅಜ್ಮೀರ್ 89, 90, 101, 127, 169, 236, 382, 613, 734

ಅನಂತಶಯನಂ ಅಯ್ಯಂಗಾರ್ 11, 12, 13, 19, 30, 33, 37, 107, 148, 149, 150, 194, 196,394,395,813,814,820,821,831,902

ಅಬ್ದುಸ್ ಸತ್ತರ್ 661

ಅಮಲೂರು 329

ಅಮುಲ್ 46

ಅಮೃತಸರ 266, 269, 383

ಅಮೇರಿಕ 87, 225, 258, 279, 280, 284, 285, 299, 300, 621, 727, 730, 731, 741, 743, 744, 750, 761, 762, 890, 891

ಅಮೋಲಖ ಚಂದ್ 335, 338, 386

ಅಮೋಲಾಲ್ ಚಂದ್ 871

ಅಮ್ಮು ಸ್ವಾಮಿನಾಥನ್ 829, 830, 861

ಅಯೋಧ್ಯೆ 394

ಅಯ್ಯಂಗಾರ್ ಎಂ.ಬಿ. 830

ಅಯ್ಯಂಗಾರ್ ಎಮ್.ವಿ. 176

ಅರುಣ್ ಚಂದ್ರ ಗುಹ 628, 633

ಅಲಹಾಬಾದ್ 34, 45, 255, 286, 339, 660, 866, 867

ಅಲಿಗಢ 744

ಅಲಿಯಾಪುರ್ 339

ಅಲೆಗ್ಸಾಂಡರ್ 868, 886

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ 26,27,33,37,848

ಅವಧೇಶ್ವರ್ ಪ್ರಸಾದ್ ಸಿನ್ಹಾ 273

ಅಶೋಕ್ ಮೆಹತಾ 803

ಅಸ್ಸಾಂ 83, 100, 103, 107, 113, 193, 235, 284, 305, 317, 318, 345, 346, 355, 367, 401, 561, 604, 606, 613, 618, 619, 622, 623, 837, 841, 852, 856, 866

ಅಹಮದಾಬಾದ್ 651, 652, 658

ಅಹಮದ್ ಮಿರಾನ್ 253

ಅಹೇರಿ 418

ಅಹ್ಮದ್‌ನಗರ 664

ಅಳಗೇಶನ್ 448, 449

### ಆ

ಆಂಧ್ರ 703, 704, 705, 706, 782
ಆಕ್ಸ್‌ಫರ್ಡ್ 721, 745, 746
ಆಜಾದ್ ಹಿಂದ್ ಫೌಜ್ 489
ಆಫ್ರಿಕಾ 382
ಆರ್‌ಜಿಬಾಲ್ಡ್ ರೋಲ್ಯಾಂಡ್ಸ್ 718
ಆರ್ಯಸಮಾಜ 384
ಆಲ್ಬೇನಿಯಾ 724
ಆಲ್ಮೋರಾ 340
ಆಲ್‌ಸೆಸೆ–ಲೊರೇನ್ 701
ಆಸ್ಟೇಲಿಯಾ 75
ಆಸ್ಟ್ರಿಯಾ 724
ಆಸ್ಟ್ರೀಯನ್ 725
ಆಸ್ಟ್ರೀಯಾ–ಹಂಗೇರಿ 725
ಆಸ್ಟ್ರೇಲಿಯಾ 74, 75, 158, 160, 456, 472, 618, 619, 761, 762

### ಇ

ಇಂಗ್ಲಿಷ್ 202, 246, 268, 270, 283, 412, 431, 442, 480, 483, 489, 513, 571, 583, 591, 617, 626, 629, 710, 711, 721, 728, 744, 762, 780, 844, 845, 846, 847, 871
ಇಂಗ್ಲೆಂಡ್ 20, 71, 161, 264, 282, 431, 437, 439, 451, 472, 547, 565, 571, 578, 598, 603, 615, 616, 617, 621, 624, 625, 626, 629, 696, 697, 711, 715, 726, 728, 731, 744, 762, 777, 782, 900
ಇಂಡೋ–ಚೀನಾ 724
ಇಂದೋರ 666
ಇಂದ್ರಜಿತ್ ದುವಾ 848
ಇಗತ್‌ಪುರಿ 325
ಇಟಲಿ 709
ಇಟ್ಟಾನಾ 340
ಇಟ್ಟಾವಾ 340
ಇಡಪ್ಪಾಡಿ 329
ಇರ್ವಿನ್ 892

### ಈ

ಈಜಿಪ್ಟ್ 728
ಈರೋಡ್ 328
ಈಸ್ಟೋನಿಯಾ 724

### ಉ

ಉಮ್ರಿಗರ್ ಹೆಚ್.ಜೆ. 848
ಉರ್ದು 843
ಉಲಿಯಾ 402

### ಎ

ಎಮಿಟೈನ್ 888

### ಏ

ಏಷ್ಯಾ 717, 720, 729

### ಐ

ಐಯುಣ್ಣಿ 500
ಐರಿಷ್ 289
ಐರ್ಲೆಂಡ್ 289, 769

### ಒ

ಒರಿಸ್ಸಾ 32, 100, 236, 314, 319, 345, 433, 764, 782, 788, 841, 856, 857, 873, 891, 896

### ಔ

ಔಂಧ್ 395
ಔರಂಗಬಾದ್ 741

### ಕ

ಕಂಡೂಬಾಯಿ ದೇಸಾಯಿ 435
ಕಚ್ಛ್ 839
ಕಡೇಪಕ್ 419
ಕಡ್ಜು ಕೆ.ಎನ್.ಡಾ. 767
ಕನ್ನಡ 846
ಕನ್ಹಯಾಲಾಲ್ ದೇಸಾಯಿ 325
ಕಬೀರ್ 416, 417
ಕರುಣಾಕರ ಮೆನನ್ 510, 535, 595
ಕರ್ನಾಟಕ 132
ಕರ್ನಾರ್ 849
ಕರ್ನೂಲು 705
ಕಲ್ಕತ್ತ 34, 45, 143, 255, 383, 394, 591, 609, 630, 635, 736, 790, 791, 820, 840, 870, 890
ಕಾಂಗ್ರಾ 858, 860
ಕಾಂಗ್ರೆಸ್ 61, 130, 266, 267, 270, 271, 279, 284, 303, 370, 373, 383, 385, 390, 441, 442, 444, 451, 525, 566, 614, 693, 703, 704, 707, 718, 719, 744, 750, 751, 752, 778, 779, 780, 782, 790, 791, 795, 862, 883
ಕಾಂಬ್ಳೆ ಜೆ.ಆರ್. 843
ಕಾಕಾ ಗಾಡ್ಗೀಲ್ 796
ಕಾಗಲ್ 324
ಕಾಜರೋಲ್ಕರ್ 805
ಕಾನ್ಪುರ 338, 340, 670
ಕಾಮತ್ 62, 68, 70, 71, 72, 73, 74, 75, 76, 77, 95, 99, 101, 109, 116, 118, 122, 139, 140, 141, 142, 155, 171, 174, 176, 184, 187, 196, 211, 212, 213, 214, 267, 268, 269, 270, 271, 279, 281, 282, 283, 284, 285, 288, 291, 292, 301, 306, 309, 311, 312, 313, 315, 321, 333, 422, 429, 436, 437, 441, 443, 457, 458, 471, 472, 527, 530, 531, 533, 534, 536, 539, 540, 541, 548, 549, 550, 552, 559, 563, 565, 568, 571, 572, 575, 576, 577, 578, 580, 581, 596, 602, 603, 604, 605, 606, 610, 614, 615, 616, 618, 619, 620, 636, 646, 669, 673, 676, 684, 685, 823, 826, 832, 846, 847, 850, 851, 857, 858, 860, 861, 872, 874, 875, 876, 877, 887, 888, 889
ಕಾರಂತ್ 831, 859
ಕಾಶಿ 774
ಕಾಶೀಪುರ್ 339
ಕಾಶ್ಮೀರ 102, 102, 103, 117, 121, 701, 728
ಕಾಶ್ಮೀರಿ 708, 774
ಕಿರ್ಪಾಲ್ ಎ.ಎನ್. 849
ಕಿಶೋರಿ ಮೋಹನ್ ತ್ರಿಪಾಠಿ 326, 851, 853
ಕಿಶೋರಿಮೋಹನ್ ತ್ರಿಪಾಠಿ 326
ಕುಂಜ್ರು, ಪಂಡಿತ್ ಹೃದಯನಾಥ್ 57, 60, 63, 66, 67, 75, 77, 78, 80, 83, 85, 86, 87, 88, 130, 196, 223, 273, 274, 282, 299, 300, 301, 340, 341, 432, 491, 568, 573, 576, 578, 599, 600, 601, 602, 608, 612, 644, 668, 669, 670, 672, 673, 675, 676, 696
ಕುಂಸ್ರು, ಪಂಡಿತ್ 882, 883, 884

ಕು–ಕ್ಲುಕ್ಸ್–ಕ್ಲಾನ್ 741
ಕುಗಲೂರು 328
ಕೂಚ್–ಬಿಹಾರ್ 156, 156, 157, 838, 839, 849, 850
ಕೂರ್ಗ್ 24, 28, 89, 90, 92, 117, 121, 127, 834
ಕೃಷ್ಣಕಾಂತ್ ವ್ಯಾಸ್ 196
ಕೃಷ್ಣಚಂದ್ರ ಶರ್ಮ ಪಂಡಿತ 442, 443
ಕೃಷ್ಣಮಾಚಾರಿ ಟಿ. ಟಿ. 60, 70, 74, 76, 92, 93, 115, 130, 335, 477, 483, 494, 510, 513, 514, 519, 522, 523, 531, 534, 535, 760, 826, 828
ಕೃಷ್ಣಾಸ್ವಾಮಿ ಭಾರತಿ ಎಲ್. 273
ಕೆನಡಾ 74, 75, 282, 710, 726
ಕೇಂಬ್ರಿಡ್ಜ್ 745, 746
ಕೇಶವರಾವ್ 114, 327, 335, 659, 832, 855, 865, 866, 867
ಕೈಲಾಸ್ ಬಿಹಾರಿ ಲಾಲ್ 794
ಕೊಚ್ಚಿನ್ 230, 236, 334, 500, 841
ಕೊಡಗು 168, 168, 169, 177, 179, 180, 185, 189, 190, 236, 354, 364, 370, 418
ಕೊಡಿಗೇ ಕುಮಾರ್ 567
ಕೊಲ್ಲಾಪುರ 280, 323
ಕೊಳ್ಳೆಗಾಲ 328
ಕೋದಂಡರಾಮ ರೆಡ್ಡಿ 328
ಕೋರಿಯಾ 724, 725
ಕೋಸಿ 321, 322
ಕೋಳಿಸ್ 390
ಕ್ಯಾಲಿಫೋರ್ನಿಯಾ 793
ಕ್ಯೂಬಾ 891
ಕ್ರೈಸ್ತ 432, 881
ಕ್ಷುದೀರಾಮ್ ಮೆಹತಾ 656, 864
ಕ್ಷೇಮೆನ್‌ಸಿ 722

## ಖ

ಖಂಡೂ ಭಾಯಿ ಕೆ ದೇಸಾಯಿ 196, 273, 435, 436, 567
ಖ್ವಾಜಾ ಇನಾಯತ್ ಉಲ್ಲಾ 645, 645, 678, 719

## ಗ

ಗಂಜಾಂ 319
ಗಜರಗಾಂವ್ 324
ಗಢವಾಲ 387
ಗಥವಾಲ್ 340
ಗಾಂಧಿ 364, 370, 373, 379, 380, 381, 755, 756
ಗಾಂಧೀಯುಗ 267
ಗಾಡ್ಗಿಲ್ 805
ಗಿಯಾನಿ ಜಿ.ಎಸ್. ಮುಸಾಫಿರ್ 869, 872
ಗಿರಿಜಾ ಶಂಕರ್ ಗುಹ 196, 196, 867
ಗಿಲೋಟಿನ್ 188
ಗೀತೆ 623
ಗುಜರಾತ್ 374, 790
ಗುಜರಾತಿ 132, 790, 791, 846
ಗುಪ್ತ ಬಿ.ಎಂ. 815
ಗುಪ್ತಾ ಬಿ. 723, 724, 725, 727, 731
ಗುಲಾಬಿ 768
ಗುಹ ವಿ.ಸಿ. 867
ಗುಹಾ ಎ.ಸಿ 488, 737, 839, 871, 881, 887
ಗೊಯೆಂಕ 426
ಗೋಕುಲ್ ಭಾಯಿ ದೌಲತ್ ರಾಮ್ ಭಟ್ 196, 426, 435, 436, 628, 633
ಗೋಕುಲ್ ಭಾಯ್ ದೌಲತ್ ರಾಮ್‌ಭಟ್ 628, 633

ಗೋದ್ರೆಜ್ 870
ಗೋಪಾಲಸ್ವಾಮಿ ಅಯ್ಯಂಗಾರ್ 551, 680, 701
ಗೋಪಾಲಸ್ವಾಮಿ ಎನ್. 80, 184, 190, 692
ಗೋಪಾಲಾಚಾರಿ 276
ಗೋಪಿನಾಥ್ 660, 661, 778
ಗೋಪಿನಾಥಸಿಂಗ್ 338
ಗೋಪೀನಾಥ 670
ಗೋಭಿಚೆಟ್ಟಿಪಾಳಯಂ 328
ಗೋಯಂಕ್ 437, 450
ಗೋಯೆಂಕಾ 196, 387
ಗೋಯೆಕಾ 387
ಗೋರಖಪುರ 339, 660
ಗೋರಬಪುರ 338
ಗೋರೆವಾಡಾ 666
ಗೋವಾ 729, 730, 731, 732
ಗೋವಿಂದ್ 429, 433, 844
ಗೋವಿಂದದಾಸ್ 428, 433, 434, 438, 856, 867, 871, 872
ಗೋವಿಂದ ರೆಡ್ಡಿ 724
ಗೋವಿಂದ್‌ದಾಸ್ 815, 857
ಗೋವಿಂದ್‌ದಾಸ್ ಹೆಚ್. 815
ಗೌತಂ 273
ಗೌತಮ್ 130, 433, 440, 441
ಗೌರ್ 8, 9, 10
ಗ್ಯಾನಿ 270
ಗ್ಯಾರಿಗೆ 114

## ಘ

ಘರ್‌ವಾಲ್ 668, 670
ಘಾತಂಪುರ್ 340
ಘೋಶ್ 196
ಘೋಷ್ 331, 717

## ಚ

ಚಂದ್ 27, 33, 37, 63, 101, 102, 112, 113, 251, 253, 258, 266, 267, 268, 338, 386, 628, 633, 849, 871
ಚಂದ್ರ 531
ಚಂದ್ರದತ್ತ್ 693
ಚಂದ್ರಿಕಾ 196, 333, 413, 418
ಚಂದ್ರಿಕಾ ರಾಮ್ 196, 361, 362, 363, 366, 412, 413, 417, 418, 757, 878, 892
ಚಂಪಕಂ 275
ಚಟ್ಟೋಪಾಧ್ಯಾಯ 330, 331, 342, 343, 661, 662, 854, 855, 873
ಚತುರ್ಬಾಯಿ 273
ಚಮನ್ 700
ಚಮನ್‌ಲಾಲ್ 778
ಚಮೋಲಿ 655, 670, 671
ಚಮ್ರಾವ 340
ಚರಣ್ 261
ಚರಣಲಾಲ್ 496, 497, 504, 619
ಚಾಲೀಹಾ 432
ಚಿಂಗ್ಲೆಪುಟ್ 653, 659
ಚಿನ್ನಕಲ್ಲುಪಳ್ಳಿ 654
ಚೀನಾ 283, 287, 724, 725, 726, 727, 728
ಚೆಂಗಲ್‌ಪುಟ್ 891
ಚೆಂಬರ್‌ಲಿನ್ 58, 80
ಚೆಟ್ಟಿಯಾರ್ 122, 501
ಚೇಂಬರ್ಲಿನ್ 732
ಚೇತಮ್ 732
ಚೈತ್‌ಪುರ 339
ಚೊಲ್‌ದಾರ್ 573
ಚೌದರಿ 452
ಚೌಧರಿ 284, 305, 333, 336, 337, 338, 515, 573, 628, 865, 866

ಚೌಧರಿ ರಣವೀರ ಸಿಂಗ್ 573
ಚೌಧರಿ–ವಿ–ಭಾರತ 280
ಚೌಧುರಿ 107, 196, 337, 484, 486, 564, 566, 568, 577, 578, 619, 633
ಚೌಹಾಲ್ 870

## ಛ

ಛೋಟಾನಾಗಪುರ 657

## ಜ

ಜಂಗ್ಡೆ 326, 840
ಜಗಜೀವನ ರಾಂ 363, 756, 757
ಜಗಜೀವನರಾಮ್ 363
ಜಗನ್ನಾಥಪುರ್ 340
ಜನ್ನಾ 379
ಜಮ್ಮನ್‌ಶಾಹ್ 339
ಜಮ್ಮು 101, 117, 121, 233, 234, 235, 237, 463, 464, 834
ಜಮ್ಮುಕಾಶ್ಮೀರ 463
ಜಯಶ್ರೀ 893, 895
ಜರ್ಮನಿ 722, 724
ಜಲಿಯನ್‌ವಾಲಾಬಾಗ್ 266, 268, 383
ಜವಹರ್‌ಲಾಲ್ ನೆಹರು 173, 185, 194, 273, 294, 305, 312, 343, 422, 567, 572, 574, 662, 673, 678, 679, 681, 730, 731, 756, 799, 801, 823, 875, 876
ಜಸಪತ್ ರಾಯ್ ಕಪೂರ್ 113, 116, 130, 132, 158, 172, 254, 255, 268, 269, 270, 315, 331, 341, 342, 343, 355, 356, 358, 359, 360, 361, 362, 365, 367, 368, 396, 403, 406, 408, 409, 410, 411, 412, 413, 420, 421, 435, 447, 469, 473, 474, 475, 477, 480, 482, 497, 502, 503, 504, 508, 511, 512, 517, 518, 519, 520, 521, 523, 524, 530, 533, 534, 537, 562, 566, 580, 700, 796, 844, 870
ಜಾಂಗ್ಡೆ 891
ಜಾಗ್ರಾಂವ್ 336, 337
ಜಾನ್‌ಪುರ 339
ಜಾನ್‌ಸನ್ ಡಾ. 431
ಜಾಮಿಯಾ ಮಿಲಿಯಾ 866, 867
ಜಾಮೌರಾ 340
ಜಾಲಿಯನ್‌ವಾಲಾಬಾಗ್ 266, 267, 268, 269
ಜಾಲ್ಬುಪುರ 671
ಜಿನೇವಾ 726
ಜುಂಜುನ್ ವಾಲಾ 330
ಜುಲಾಹಾ 366
ಜೆಕಸ್ಲೋವೇಕಿಯಾ 732
ಜೆರಿಮೈರೈಸ್ 718
ಜೆರಿ ಮೈರೈಸ್‌ಮ್ಯಾನ್ 718
ಜೇತ್ ಎಸ್.ಬಿ. 849
ಜೇಪುರ್ 320
ಜೈನ್ ಎ.ಸಿ. 115
ಜೈ ನಾರಾಯಣ್ ವ್ಯಾಸ್ 842
ಜೈಪುರ 893
ಜೋಚಿಮ್ ಆಳ್ವ 842
ಜೋಶಿ ಜಿ.ಎನ್. 848
ಜೋಸೆಫ್ ಎ. 329
ಜ್ಞಾನಾರಾಮ್ 421
ಜ್ಞಾನಿ ರಾಂ 678
ಜ್ಞಾನಿರಾಮ್ 421, 871, 892

## ಝ

ಝೂರಿಗಾಂವ್ 320
ಝೂಂಸಿ 660

## ಟ


ಟಾಲಿರೆಂಡ್ 754
ಟಾಲ್‌ಸ್ಟಾಯ್ 751
ಟಿಬೆಟ್ 729
ಟ್ಯಾಲಿರ್‍ಯಾಂಡ್ 754
ಟ್ರಾವಂಕೂರ್ 236, 500


## ಠ


ಠಕ್ಕರ್ ಬಾಷಾ 385
ಠಾಕುರ್ ದಾಸ್ ಭಾರ್ಗವ, ಪಂಡಿತ್ 33, 37, 115, 116, 117, 122, 126, 138, 139, 144, 162, 196, 200, 210, 211, 216, 251, 252, 253, 255, 263, 268, 273, 279, 288, 291, 293, 302, 337, 347, 386, 414, 428, 446, 449, 471, 476, 477, 497, 499, 500, 501, 502, 512, 526, 537, 543, 545, 548, 550, 553, 555, 562, 563, 577, 581, 583, 594, 595, 596, 597, 598, 601, 603, 606, 609, 610, 628, 629, 630, 631, 632, 633, 648, 649, 864, 881, 884
ಠಾಗೂರ್ ಕೃಷ್ಣಸಿಂಗ್ 865


## ಡ


ಡಾಬುಗಾಂವ್ 320
ಡಾರ್ಜಲಿಂಗ್ 888
ಡಿಯೋಗಿರಿಕರ್ 841, 879
ಡೆಲ್ಲಿ 69, 89, 91, 101, 102, 110, 127, 130,131
ಡೆಹ್ರಾಡೂನ್ 670


## ತ


ತಾಜಮುಲ್ ಹುಸೇನ್ 785, 786, 788
ತಿರಹತ್ 657, 658
ತಿರುಚೆಂಗೊಡ 329
ತಿರುಚ್ಚಿನಾಪಳ್ಳಿ 328
ತಿರುಪತ್ತೂರು 654, 666
ತಿರುಪ್ಪೂರ್ 328
ತಿರುಮಲರಾವ್ 428
ತಿರುವಾಂಕೂರು 230, 334, 335, 345, 381, 387, 525, 544, 841
ತಿರ್‌ಹತ್ 657, 658
ತಿಲಕ 778
ತೇಜಮುಲ್ ಹುಸೇನ್ 784
ತ್ಯಾಗಿ 67, 67, 79, 131, 158, 162
ತ್ರಿಪುರಾ 90, 167, 168, 169, 171, 174, 177, 179, 186, 187, 195, 395, 870


## ಥ


ಥಾಣಾ 301


## ದ


ದರ್ಭಂಗಾ 321, 322
ದರ್ಮಾಪುರ್ 340
ದಾತಾರ್ ಬಿ.ಎನ್. 748, 749, 752, 753
ದಾಸ್ 33, 37, 115, 116, 117, 122, 126, 138, 139, 144, 162, 196, 200, 210, 216, 251, 252, 253, 255, 263, 268, 273, 279, 288, 291, 293, 302, 337, 386, 428, 436, 446, 449, 471, 476, 477, 497, 499, 500, 501, 502, 512, 526, 537, 543, 545, 548, 550, 553, 555, 562, 563, 577, 581, 583, 594, 595, 596, 597, 598, 601, 603, 606, 609, 610, 628, 629, 630, 631, 632, 633, 648, 649, 881, 884
ದಾಸ್ ಎಂ.ಎಂ. ಡಾ. 331, 824, 838, 843

ದಾಸ್ ಎಸ್.ಎಂ. ಡಾ. 839
ದಾಸ್ ಎಸ್.ಎನ್. 323, 484, 506, 507, 508, 527, 541, 634, 635, 861, 863, 868
ದಾಸ್ ಜೆ.ಆರ್. 331
ದಾಸ್ ಬಿ. 184, 830
ದಾಸ್ ಬಿ.ಕೆ. 463, 484
ದಾಸ್ ವಿ.ಕೆ. 330
ದಿಯೊಗಿರಿಕರ್ 658, 659
ದಿಯೊಸ್ತಾನ್ 666
ದಿಯೋಗಿರಿಕರ್ 323, 324, 658
ದುರ್ಗಾಬಾಯಿ ಜಿ 33, 35, 36, 37, 51, 70, 273, 299, 305, 307, 309, 354, 375, 428, 429, 462, 825, 826, 827, 828, 847, 848, 849, 859, 860, 893, 898, 899
ದೆಹಲಿ 181, 182, 183, 184, 185, 190, 191, 194, 236, 285, 335, 354, 356, 364, 366, 367, 369, 378, 382, 383, 384, 385, 389, 394, 395, 402, 405, 412, 413, 414, 415, 416, 417, 419, 440, 451, 554, 591, 673, 734, 796, 797, 799, 823, 835, 841, 843, 844, 866, 867, 887
ದೇರಾಪುರ್ 339
ದೇವಕಾಂತ್ ಬರುವ 273
ದೇವಕೊಟ್ಟೈ 654, 667
ದೇವಗಿರಿಕರ್ ಟಿ.ಆರ್. 273
ದೇವನಾಗರಿ 847
ದೇವರಾನಿ 339
ದೇವ್‌ಗಿರಿಕರ್ ಟಿ.ಆರ್. 196
ದೇಶಪಾಂಡೆ ಪಿ.ವೈ. 307, 398, 412, 449
ದೇಶಪಾಂಡೆ ವಿ.ಘ. 803
ದೇಶಪಾಂಡೆ ಸಿ.ವೈ. 391
ದೇಶಬಂಧು ಗುಪ್ತ 129, 181, 182, 183, 184, 185, 189, 194, 285, 287, 288, 333, 382, 384, 385, 388, 405, 415, 416, 628, 633, 822, 823, 830, 835, 836, 842, 865
ದೇಶಮುಖ್ ಪಿ.ಎಸ್. ಡಾ. 33, 36, 37, 100, 110, 118, 123, 155, 305, 316, 326, 327, 342, 359, 375, 381, 400, 401, 402, 412, 413, 414, 415, 435, 444, 447, 449, 453, 464, 470, 482, 494, 495, 547, 548, 550, 566, 574, 575, 628, 632, 633, 678, 679, 818, 832, 835, 865, 890, 891, 898, 899
ದೇಶಮುಖ್ ಸಿ.ಡಿ. 696, 734, 887

## ಧ

ಧನುಕ್ 402, 412, 413
ಧರಮ್‌ಪುರ್ 340
ಧರ್ಮಪುರಿ 329
ಧರ್ಮೇಂದ್ರ ಡಾ. 890, 891
ಧಾರಾಪುರಂ 328

## ನ

ನಂದಕಿಶೋರ್ ದಾಸ್ 826
ನಂದಗಾಂವ್ 664, 665
ನಂದಪುರ್ 339
ನಂದಾಪುರ್ 319
ನಂದಾಲ್‌ಪುರ್ 340
ನಜಿರುದ್ದೀನ್ ಅಹ್ಮದ್ 434, 466, 467, 624, 642, 643
ನವದೆಹಲಿ 182, 182, 183, 679, 680, 866, 892
ನಸೀರುದ್ದಿನ್ ಅಹ್ಮದ್ 226
ನಾಗಪುರ 34, 657, 658, 665, 666, 756

ನಾಗಪ್ಪ ಎಸ್. 815
ನಾಜರುದ್ದಿನ್ ಅಹ್ಮದ್ 459, 460, 465, 480
ನಾಜಿರುದ್ದಿನ್ ಅಹ್ಮದ್ 10, 254, 301, 310, 459, 460, 465, 466, 467, 468, 469, 470, 473, 476, 479, 480, 483, 484, 485, 624, 642, 643, 897
ನಾಥ್ಯಾನಿ ಸಿ.ಎಂ. 849
ನಾಯೀ ಠಾಗುರ್ 415
ನಾಯ್ಕ ಎಸ್.ವಿ. 233
ನಾರಾಯಣಪಟ್ಟಣ 320
ನಾರಾಯಣ ಮಹತಾ 608, 610
ನಾರ್ವೆ 724
ನಾಸಿಕ್ 325, 664, 852
ನಾಸಿರುದ್ದೀನ್ ಅಹ್ಮದ್ 18, 19, 33, 37, 254, 264, 273, 275, 283, 284, 291
ನಿಕೋಬಾರ್ 101, 117, 121, 127, 187, 236, 370, 463, 464, 790, 792
ನಿಕೋಲ್ಸನ್ 722
ನಿಜಲಿಂಗಪ್ಪ ಎಸ್. 196, 323, 324
ನಿದ್ವಾ 243
ನೂರ್‌ಪುರ್ 336, 337
ನೃಪೇಂದ್ರ ಸರಕಾರ್ 58, 60
ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯಿದೆ 624, 625, 628, 629, 630, 631
ನೆಪೋಲಿಯನ್ 754
ನೆಲ್ಲೂರು 605
ನೈಟ್ 778
ನೌರಂಗ್‌ಪುರ್ 320
ನೌಶರಾಲಿ 131

**ಪ**

ಪಂಚಗಣಿ 888
ಪಂಜಾಬ್ 26, 63, 81, 100, 101, 112, 129, 131, 155, 172, 200, 236, 251, 266, 270, 271, 277, 287, 308, 310, 333, 335, 336, 345, 347, 360, 365, 366, 367, 394, 415, 416, 417, 419, 428, 440, 471, 473, 543, 553, 573, 591, 594, 629, 632, 648, 649, 662, 663, 680, 765, 778, 780, 819, 820, 823, 832, 837, 845, 846, 858, 860, 869, 870, 879
ಪಂಜಾಬ್‌ರಾವ್ 36, 628, 633
ಪಟಿಯಾಲ 101
ಪಟ್ಟಾಭಿರಾಮನ್ ಸಿ.ಆರ್. 848
ಪಠಾಣೆ ಕೋಟ್ 728
ಪತಂಜಲಿ ಶಾಸ್ತ್ರಿ 280
ಪದ್ಮಜಾ ನಾಯ್ಡು 196
ಪರಮಾರ್ ಡಾ. 192, 389
ಪರ್ಣೀಯಾ 321
ಪರ್ನಿಯಾ 321, 322
ಪಾಂಡೆ 58, 661
ಪಾಕಿಸ್ತಾನ 52, 52, 263, 264, 606, 701, 728, 819
ಪಾಟಿಯಾಲ 236, 345
ಪಾಟ್ನಾ 34, 72, 73, 128, 277, 657, 658
ಪಾದ್ರಿ 571, 572
ಪಾರಿಕ್ ಸಿ.ಪಿ. 797
ಪಾರ್‌ಮಾರ್ ಡಾ. 431
ಪಿತ್ರಾಪುರ್ 339
ಪಿಳ್ಳೈ ಸಿ.ಎನ್. 230
ಪುನಾಪುರ 666
ಪೂನಾ 653, 658
ಪೋಲ್ಯೆಂಡ್ 724
ಪೋಕರ್ ಸಾಹಿಬ್ ಬಹದ್ದೂರ್ ಬಿ. 756, 816
ಪೋಪ್ 624, 625

ಪೋರ್ಚುಗಲ್ 731
ಪೋರ್ಚುಗೀಸ 730, 730, 731, 732, 791
ಪ್ಯಾರಲ್ 720
ಪ್ಯಾರಿಸ್ 722
ಪ್ರಕಾಶ್ 613
ಪ್ರಭುದಯಾಳ್ ಹಿಮತ್ಸಿಂಗ್‌ಕ 52, 330, 607, 608, 628, 633
ಪ್ರಾಟೆಸ್ಟೆಂಟ್ 625, 710
ಪ್ರೊಬೇಟ್ 248, 715
ಪ್ಲೀಡರ್ 840

### ಫ

ಫರೂಖಾಬಾದ್ 670
ಫರ್ರೂಬಾಬಾದ್ 340
ಫಿನ್‌ಲ್ಯಾಂಡ್ 724
ಫಿಲಿಪೈನ್ಸ್ 890, 891
ಫೂಲನ್ ಪ್ರಸಾದ್ ವರ್ಮ 816
ಫೈಜಾಬಾದ್ 660
ಫ್ರಾಂಕ್ ಆಂಟನಿ 284, 289, 804
ಫ್ರಾಂಕ್ ಆಂಥೋನಿ 804, 845
ಫ್ರಾನ್ಸ್ 722, 728, 754
ಫ್ರೆಂಚ್ 709, 710, 731
ಫ್ರಾಂಕ್ ಆಂಥೋಣಿ 196

### ಬ

ಬಂಗಾಳ 10, 33, 52, 96, 100, 129, 131, 138, 139, 143, 144, 156, 157, 160, 197, 210, 211, 216, 236, 240, 243, 259, 264, 275, 281, 287, 290, 291, 314, 327, 330, 331, 345, 427, 434, 463, 473, 484, 488, 565, 606, 619, 624, 639, 644, 661, 662, 663, 712, 717, 791, 823, 832, 834, 837, 838, 839, 841, 850, 852, 854, 855, 879, 888
ಬಂಗಾಳಿ 712, 790, 791
ಬಕ್ಷಿ ತೇಕ್ ಚಂದ್ 27, 33, 37, 63, 101, 102, 112, 113, 649
ಬದ್ವಾಲ್ 336, 337
ಬನಾರಸ್ 660, 670, 671, 744
ಬನಾರಸಿ ಪ್ರಸಾದ್ ಝುಂಝುನ್ ವಾಲಾ 466, 628, 633
ಬರಾನ್‌ಪುರ್ 339
ಬರ್ಮ 771, 773
ಬರ್ಮನ್ 131, 478, 825
ಬಲುವಾಪುರ್ 339
ಬಲ್ಗೇರಿಯಾ 724
ಬವಾರಿಯಾ 366
ಬಸಪ್ಪಶೆಟ್ಟಿ 774
ಬಸಿರೆಡ್ಡಿ ಪಿ. 475, 476
ಬಾಂಬೆ 34, 54, 82, 100, 128, 131, 132, 214, 235, 248, 249, 250, 259, 436, 488, 512, 542, 573, 591, 606, 609, 630, 635, 651, 652, 656, 658, 659, 664, 665, 685, 703, 712, 714, 722, 740, 759, 763, 765, 766, 767, 769, 777, 778, 790, 791, 792, 796, 797, 803, 819, 820, 823, 840, 841, 846, 847, 870, 879, 882, 883, 884, 893, 895, 899
ಬಾಗ್‌ಪುರ 339
ಬಾಬು ನಾರಾಯಣ್ ಸಿಂಗ್ 442
ಬಾಬು ರಾಮನಾರಾಯಣಸಿಂಗ್ 93, 306, 444, 454, 455
ಬಾಬುಲ್‌ಖೇಡ 666
ಬಾರಾಗಾಂವ್ 339, 340
ಬಾಲಕೃಷ್ಣ ಶರ್ಮ ಪಂಡಿತ್ 58, 117, 160, 316, 338

ಬಾಸಿರೆಡ್ಡಿ 196, 855, 856
ಬಿಲಾಸ್‌ಪುರ 89, 101, 117, 121, 127, 168, 169, 178, 180, 186, 187, 192, 236, 354, 370
ಬಿಶ್ವನಾಥ ದಾಸ್ 36, 48, 49, 196, 318, 319, 816
ಬಿಷಪ್ 625, 627, 629
ಬಿಸ್ಟ್ ಜಿ.ಎಸ್. 775
ಬಿಹಾರ್ 78, 93, 94, 100, 102, 103, 128, 131, 150, 156, 235, 238, 239, 248, 277, 291, 303, 306, 322, 345, 361, 363, 401, 413, 421, 430, 442, 444, 445, 451, 466, 471, 506, 541, 548, 555, 610, 634, 635, 645, 655, 656, 657, 658, 678, 693, 712, 719, 745, 749, 752, 760, 780, 784, 793, 794, 795, 839, 847, 852, 879
ಬಿಹಾರಿ 33, 156, 628, 712, 794
ಬೆಂಗಳೂರು 845
ಬೆರಾರ್ 731, 732
ಬೆರಾರ್ ನಿಜಾಮ 731
ಬೆಲ್ಜಿಯಂ 456
ಬೆಳಗಾಂ 846
ಬೇಗ್ರಿ 418
ಬೇನಿಸಿಂಗ್ 338
ಬೇರಾರ್ 6
ಬೈನ್ಸ್ 277
ಬೈರೀಸವಾಯಿ 339
ಬೊಂಬಾಯಿ 741, 752, 753
ಬೋಂಧ್ 320
ಬೋರಾಗೋ ಹೈನ್ 113
ಬೋರ್‌ಗಾಂವ್ 666
ಬೌದ್ಧ 729
ಬ್ರಜೇಶ್ವರ್ ಪ್ರಸಾದ್ 856
ಬ್ರಿಜೇಶ್ವರ್ ಪ್ರಸಾದ್ 831, 887
ಬ್ರಿಜ್ ಭೂಷಣ್ 277
ಬ್ರಿಟನ್ 225, 439, 448, 624, 625, 696, 697, 717, 727
ಬ್ರಿಟೀಷ್ 213, 285, 374, 693, 699, 710, 711, 730, 752, 766, 777, 778, 790, 791
ಬ್ರೆಜಿಲ್ 730

## ಭ

ಭಕ್ಷಿತೇಕ್ ಚಂದ್ 628, 633
ಭಗಲ್‌ಪುರ್ 322
ಭಟ್ಟಾಚಾರ್ಯ ಕೆ.ಕೆ. 460, 463
ಭರತ್‌ವಾಡಾ 666
ಭಾಂಜ್ರಾ 366
ಭಾರತೀಯ ರಿಸರ್ವ್‌ಬ್ಯಾಂಕ್ 698
ಭೀಮಾವರಂ 654, 667
ಭೂತಾನ 613, 617, 619, 622, 623
ಭೂಪಾಲ್ 89, 101, 127, 186, 187, 236, 369, 418, 841
ಭೂಪಿಂದರ್‌ಸಿಂಗ್ ಮಾನ್ 196, 336, 337
ಭೂಲಾಬಾಯಿ ದೇಸಾಯಿ 821
ಭೂಸೇನಾ 514
ಭೋಗ್ನೀಪುರ್ 340
ಭೌಪುರ್ 339

## ಮ

ಮಂಗರೂಡಿಸ್ 400
ಮಂಚೂರಿಯ 724
ಮಗದ್‌ಪುರ 655, 672
ಮಣ್ನೀಶ್ವರ್ ದತ್ ಉಪಾಧ್ಯಾಯ 428
ಮಣಿಪುರ 89, 90, 95, 101, 127, 167, 168, 169, 171, 174, 177, 179, 186, 187, 195,

236, 354, 357, 395, 841, 870
ಮಣಿಬೆನ್‌ಪಟೇಲ್ 271
ಮಣಿಲಾಲ್ 273
ಮಣಿಪುರ 233
ಮಥುರೈ 654
ಮದ್ರಾಸ್ 5, 19, 32, 34, 45, 60, 70, 81, 92, 96, 99, 100, 114, 122, 128, 130, 131, 138, 139, 142, 146, 211, 214, 235, 240, 246, 247, 248, 249, 250, 259, 267, 275, 277, 283, 294, 303, 305, 327, 335, 346, 372, 381, 387, 390, 425, 428, 451, 455, 456, 462, 477, 483, 489, 501, 510, 517, 551, 554, 561, 595, 605, 618, 630, 653, 654, 659, 660, 666, 667, 703, 707, 765, 790, 791, 793, 823, 837, 855, 856, 879, 888, 891, 893, 895, 902
ಮಧ್ಯಪ್ರದೇಶ 82, 378, 428, 429, 435, 666
ಮನಕಪುರ 666
ಮನಪ್ಪರೈ 654
ಮನಮದುರೈ 655
ಮನ್ನಪ್ಪರೈ 667
ಮನ್‌ಮೌತ್‌ಷೈರ್ 711
ಮರಾಠ 795
ಮರಾಠವಾಡ 794, 795, 796
ಮರಾಠಿ 132, 276, 748, 762, 846
ಮಲಬಾರ್ 660
ಮಹರ್ 369
ಮಹಾರಾಷ್ಟ್ರ 712
ಮಹಾವಿದರ್ಭ 795
ಮಹಾವೀರ್ ತ್ಯಾಗಿ 196
ಮಾಂಡಾ 339
ಮಾಥಾಯ್ ಡಾ. 719
ಮಾಥುರ್ ಜಿ.ಸಿ. 849
ಮಾಮದುರೈ 667
ಮಾಮೆವಾಡಿ 324
ಮಾರ್ಕ್ಸಿಸ್ಟ್ 862
ಮಾಲೆಗಾಂವ್ 664, 665
ಮಾಲ್ಡೀಸ್ 790
ಮಾವಲಂಕರ್ ಜಿ.ವಿ. 29
ಮಾವೋ 729
ಮಾಸ್ಟರ್ ತಾರಾಸಿಂಗ್ 277
ಮಿನಿಕಾಯ್ 660
ಮಿನೆಸೋಟ 299, 300
ಮಿರಾನ್ 253, 255
ಮಿಶ್ರಾ ಎಸ್.ಎನ್. 196
ಮೀರತ್ 340, 660
ಮೀರನ್ 146, 485, 496
ಮೀರ್ ಲಾಯಿಕ್ ಆಲಿ 54
ಮುಂಗೀನಾಪುರ್ 339
ಮುಂಬೈ 249, 301, 305, 369, 381, 382, 384, 402, 415, 493
ಮುಕುಟ್ ಬಿಹಾರಿ ಲಾಲ್ ಭಾರ್ಗವ 628, 633, 636
ಮುಕ್‌ಲೀಲ್‌ಪುರ್ 340
ಮುದ್ಗಲ್ 641, 642, 643, 644, 645, 646, 647
ಮುನಪ್ಪರೈ 654
ಮುನವಳ್ಳಿ 323
ಮುನಿಶ್ವರ್ ದತ್ತ ಉಪಾಧ್ಯಾಯ 243, 370, 372, 407, 408, 409, 429, 475, 487, 488, 492, 500, 503, 509, 510, 529, 530, 534, 535
ಮುಲ್ಕಿ 707
ಮುಲ್ಲಾ 276
ಮುಸಲ್ಮಾನ 383

ಮುಸ್ಲಿಂ 33, 156, 432, 718, 719, 728, 744, 751, 777, 838, 839
ಮೂಲದಾಸ್ 372, 373
ಮೆಟ್ಟೂರು 329
ಮೈಸೂರು 110, 834, 879
ಮೊಯ್ದುಲ್‌ಪುರ್ 320
ಮೊರಾರ್ಜಿ ದೇಸಾಯಿ 790, 797
ಮೊಹಮ್ಮದಿ 655, 670, 671, 672
ಮೊಹಮ್ಮದ್‌ಪುರ್ 340
ಮೊಹಿಯುದ್ದಿನ್ 656
ಮೊಹುರ‍್ರಂ 673
ಮೋಂಟೆಗ್ಯು–ಚೆಮ್ಸ್‌ಫೊರ್ಡ್ 8
ಮೋತಿಲಾಲ್ ನೆಹರೂ 266, 286
ಮೋಹನ್ ಲಾಲ್ ಗೌತಂ 273, 441
ಮೋಹನ್‌ಲಾಲ್ ಸಕ್ಸೆನಾ 819, 820, 821
ಮೌಂಡಾ 339
ಮೌಚ್‌ಪುರ 339
ಮೌಲಾನ ಆಜಾದ್ 597
ಮೌಲ್ವಿ ವಾಜಿವ್ ಆಲಿ 561

## ಯ

ಯತಿರಾಜುಲು ನಾಯ್ಡು 125, 360, 372, 402
ಯಶವಂತರಾಯ್ 336, 337
ಯಶವಂತ ರೈ 824
ಯಶವಂತ್ ರಾಯ್ 828
ಯಾಹಿಯಾ ಆಲಿ 605
ಯುರೋಪ್ 624, 720, 721, 732, 754
ಯೂನೈಟೆಡ್ ಬ್ಯಾಂಕ್ 738
ಯೂರೋಪ್ 720
ಯೂರೋಪಿಯನ್ 212, 699, 723, 724, 726, 739, 778

## ರ

ರಂಗಾ ಪ್ರೊ. 96, 204, 454, 455, 483, 484, 486, 707, 763, 764, 827, 880, 881
ರಣಜಿತ್ ಸಿಂಗ್ 333
ರಣಬೀರ್‌ಸಿಂಗ್ 287, 304, 305, 308, 336, 337, 338, 419, 471, 489, 490, 568, 852
ರಣಾವತ್ ಎಂ.ಎಸ್. 710
ರತ್ನಗಿರಿ 794, 795
ರತ್ನಸ್ವಾಮಿ 864
ರಮೇಶ್ ಚಂದ್ರದತ್ತ್ 693
ರಮೇಶ್ ಥಾಪರ್ 277
ರಷ್ಯಾ 720, 723, 724, 725, 726, 727, 728, 729, 783, 788
ರಾಂ ಸುಭಗ್ ಸಿಂಗ್ ಡಾ. 445
ರಾಜ ಕೃಷ್ಣ ಬೋಸ್ 32
ರಾಜಗೋಪಾಲಚಾರಿ 238, 273, 276, 310, 311, 444, 638, 642, 644, 663, 744, 794
ರಾಜಸ್ತಾನ 101, 224, 236, 314, 334, 345, 361, 430, 475, 636, 710, 741, 791, 792, 793, 852, 860, 861, 874, 875, 876, 893
ರಾಜಾಜಿ 288, 745
ರಾಜೇಂದರ್ ಲಾಲ್ 848
ರಾಜ್ ಕಪೂರ್ 870, 871, 880
ರಾಜ್ ಬಹದ್ದೂರ್ 101, 102, 196, 224, 225, 273, 361, 429, 430, 447, 448, 475, 477, 836, 837, 838
ರಾಧೇಲಾಲ್ ವ್ಯಾಸ್ 332, 836
ರಾಮದಾನಿಯಾ 416
ರಾಮದಾಸಿ 366
ರಾಮದಾಸಿಯಾ 402, 416, 417

ರಾಮನಾಥ್ ಗೋಯೆಂಕಾ 196
ರಾಮಪುರ 387
ರಾಮರಾವ್ ಎಮ್.ವಿ. 196, 430, 431
ರಾಮಲಿಂಗಂ ಚೆಟ್ಟಿಯಾರ್ 122, 501
ರಾಮವರಂ 667
ರಾಮಸ್ವಾಮಿ ನಾಯಿಡು 489
ರಾಮಾಚಾರ್ 332
ರಾಮಾವರಂ 654, 667
ರಾಮ್ ದಾಸಿಯಾ 366
ರಾಮ್‌ಪುರ್ 339
ರಾಯಗಢ 320, 413
ರಾಯಲಸೀಮೆ 693, 712
ರಾಯ್‌ಕೋಟ್ 336
ರಾಯ್‌ಪಾಲ್‌ಪುರ್ 339
ರಾಯ್ ಬಹಾದ್ದೂರ್ ನಾನಕ್ ಚಂದ್ 849
ರಾಸ್ತ್‌ಪುರ್ 339
ರುದ್ರಪ್ಪ 332, 486, 864
ರುಮೇನಿಯಾ 724
ರೂಸ್‌ವೆಲ್ಟ 727
ರೆಡ್ಡಿ ಸಿ.ಜಿ.ಕೆ. 705
ರೇಣುಕಾ(ರೇ)ರಾಯ್ 291, 291, 860, 875, 876, 893
ರೇಹಗಢ 413
ರೈದಾಸಿ 366
ರೋಮನ್ 466, 571, 710
ರೋಲ್ಯಾಂಡ್ಸ್ 718
ರೋಹಿಣಿ ಕುಮಾರ್ ಚೌಧುರಿ 196, 452, 568, 628, 633
ರೋಹಿಲಖಂಡ 660

## ಲ

ಲಂಕೆ 795
ಲಂಡನ್ 264, 599, 711, 723, 778
ಲಂಬರ್‌ದಾರ 570, 573, 574
ಲಕಡೀವ್ಸ್ 660
ಲಕ್ನೊ 660
ಲಕ್ಷದ್ವೀಪ 790
ಲಕ್ಷ್ಮಣನ್ 335
ಲಕ್ಷ್ಮಿಪುರ 320
ಲಕ್ಷ್ಮೀ ಬಾಯಿ 791
ಲಫ್‌ವತ್ 339
ಲಾಲಾ ರಾಜ್ ಕನ್ವರ್ 828, 880
ಲಾಲಾ ಲಾಜಪತರಾಯ್ 384
ಲಾಲ್ತನ್ 336, 337
ಲಾಲ್‌ಪುರ್ 339
ಲಾಹೋರ್ 819, 820
ಲಿಯೋಡ್ ಜಾರ್ಜ್ 722
ಲೂಧಿಯಾನಾ 336, 337, 338
ಲೂಸಿಯಾನ 731
ಲೆವಿ 842
ಲೋಘು 303
ಲೌಹಾಲ್ 869

## ವ

ವರ್ಸೆಲ್ಸ್ 722
ವಾಂಭೂ 706
ವಾಜಿದ್ ಆಲಿ 604, 831
ವಾಥೋಡ 666
ವಾನಿಯಂಬಾಡಿ 654, 666
ವಾಷಿಂಗ್‌ಟನ್ 750
ವಿಂಧ್ಯಪ್ರದೇಶ 90, 127, 185, 186, 187, 236, 238, 354, 356, 357, 373, 385, 389, 393, 395, 396, 399, 405
ವಿಜಯವಾಡ 705
ವಿಲಾಸಪುರ್ 834
ವಿಲಿಂಗ್ಟನ್ 891

ವಿಲೊಬ್ಬೈ 615
ವಿಶ್ವನಾಥ್‌ದಾಸ್ 764, 896
ವೆಂಕಟರಾಮನ್ 244, 248, 249, 250, 251, 255, 275, 327, 450, 451, 456, 480, 856
ವೇಲಾಯುಧನ್ 335, 379, 380, 382, 444, 525, 835, 843, 874
ವೇಲ್ಸ್ 160, 384, 711
ವ್ಯಾಸ್ 823

### ಶ

ಶಂಕರಯ್ಯ 663
ಶಂಕರ ರಾವ್ ದೇವ್ 323
ಶರಿಯತ್ 838, 839
ಶವಾಲಿ 339
ಶಹಧಾರಾ 182
ಶಹಾ ಕೆ.ಟಿ. 273
ಶಾಹ್ ಸಿ.ಸಿ. 334
ಶಿಂಗ್‌ಪುರ್ 320
ಶಿಬನ್ ಲಾಲ್ ಸಕ್ಸೇನ ಪ್ರೊ. 562
ಶಿಬ್ಬಾನ್ ಲಾಲ್ ಪ್ರೊ. 464
ಶಿಮ್ಲಾ 394
ಶಿಯೋಪುರ 671
ಶಿಲ್ಲಾಂಗ್ 318
ಶಿವಚರಣ್‌ಲಾಲ್ 232, 258, 259, 287, 288, 290, 311, 335, 338, 415, 477, 481, 502, 504, 505, 506, 510, 520, 522, 533, 553, 867
ಶಿವನ್‌ಗಾಂವ್ 666
ಶಿವನ್ ಪಿಳ್ಳೈ ಎಸ್. 196, 387, 885
ಶಿವಾಜಿ 766
ಶಿವಾಲಿ 339
ಶೇಕ್ಸಪಿಯರ್ 768
ಶೇಖ್ ಮೊಹಿಯುದ್ದಿನ್ 656, 657
ಶೈಲಬಾಲಾದೇವಿ 277
ಶ್ಯಾಮನಂದನ ಸಹಾಯ 102, 103, 111, 118, 120, 130, 131, 238, 239, 291, 292, 430, 444, 451, 471, 486, 487, 491, 493, 494, 548, 555, 605, 634, 656, 835, 839
ಶ್ಯಾಮಸುಂದರ ಸಹಾಯ 490, 569
ಶ್ಯಾಮ್ ಪ್ರಸಾದ್ ಮುಖರ್ಜಿ ಡಾ. 196, 273, 274, 283, 284, 300, 301, 436
ಶ್ರೀಕಾಂತ್ 568
ಶ್ರೀ ನಾಯಕ 825
ಶ್ರೀಯೋ 722

### ಷ

ಷಣ್ಮುಖಂ ಜೆಟ್ಟಿ 719
ಷಹಜಹಾನ್‌ಪುರ 661
ಷಾ ಕೆ.ಟಿ. 152, 153, 154, 311, 312, 460, 836, 882
ಷಾರಿಯತ್ 156

### ಸ

ಸಂಕಗಿರಿ 329
ಸಂಜೀವಯ್ಯ 327
ಸಂತಾನಂ ಕೆ. 5, 14, 17, 32, 98, 99, 108, 116, 162, 189, 243, 244, 405, 406, 429, 464, 469, 476, 478, 479, 493, 497, 498, 505, 510, 539, 551, 572, 577, 612, 616, 638, 639, 814, 817
ಸತೀಶ್ ಚಂದ್ರ 338, 439, 528, 529, 530, 531, 534, 573
ಸತ್ಯನಾರಾಯಣ್ ಸಿನ್ಹಾ 273, 316, 516, 551
ಸಬರಕಾಂತ 652

ಸಬ್ದರ್‌ಪುರ್ 339
ಸಮಂತ 243, 330, 661, 849, 850, 881
ಸರೈಯಾನ್339
ಸರ್‌ಗಾಂವ್ 339, 340
ಸರ್ದಾರ್‌ಪಟೇಲ್ 432
ಸರ್‌ದಾರ್ ಬಲದೇವ್ ಸಿಂಗ್ 83
ಸರ್‌ದಾರ್ ಬಿ.ಎಸ್.ಮಾನ್ 123
ಸರ್ದಾರ್ ಮನ್ 333, 360, 361
ಸರ್ದಾರ್ ವಲ್ಲಭಬಾಯಿ ಪಟೇಲ್ 54, 266, 270, 271, 381, 780, 896
ಸರ್ದಾರ್ ಸೂಚೇತ್ ಸಿಂಗ್ 462
ಸರ್ದಾರ್ ಸೋಕೆಟ್ ಸಿಂಗ್ 545
ಸರ್ದಾರ್ ಸೋಚೇತ್ ಸಿಂಗ್ 333
ಸರ್ದಾರ್ ಸೋಜಿತೆ ಸಿಂಗ್ 566
ಸರ್ವಾಟೆ 152, 171, 223
ಸರ್‌ವಾಟೆ 223
ಸಲೀಮ್‌ಪುರ್ 339
ಸಾಂತಾಕ್ರೂಜ಼್ 324
ಸಾರಂಗದರ್ ದಾಸ್ 431
ಸಾರಂಗಧರ ದಾಸ್ 287, 431, 432, 433, 572, 847
ಸಾರಂಗಧರರಾವ್ 893
ಸಾರಂಗಧರ್ ದಾಸ್ 196
ಸಾಹ್ನೀಪುರ್ 340
ಸಿಂಕೋನಾ 888
ಸಿಂಗಭೂಮ್ 847
ಸಿಂಘ್‌ಪುರ್ 339
ಸಿಂಧ್ರಿ 601
ಸಿಕ್ರಿ ಎಸ್.ಎನ್. 848
ಸಿಖ್ 416, 417, 490
ಸಿದ್ವ 550
ಸಿದ್ವ ಆರ್.ಕೆ. 6, 67, 68, 69, 70, 73, 81, 82, 138, 139, 142, 163, 164, 165, 210, 211, 214, 215, 239, 244, 245, 263, 264, 265, 270, 273, 274, 372, 414, 427, 428, 430, 438, 440, 457, 458, 464, 468, 475, 495, 506, 513, 517, 591, 592, 593, 594, 596, 597, 599, 600, 601, 602, 603, 604, 607, 608, 610, 611, 614, 627, 628, 629, 630, 633, 636, 650, 821, 856, 857, 872, 873, 874, 892, 893, 898
ಸಿನ್ಹ ಬಿ.ಕೆ.ಪಿ. 745, 760
ಸಿನ್ಹಾ ಎಸ್.ಎನ್. 88, 248, 330, 780, 843
ಸಿಮ್ಲಿಗುಡ 319
ಸಿಯಾಟೋ 723, 726, 727, 728
ಸಿರಮೂರ್ 390
ಸೀತಾ ಪರಮಾನಂದ ಡಾ. 719, 757
ಸುಬ್ರಮಣ್ಯಂ ಸಿ. 248, 628, 633
ಸುಬ್ರಹ್ಮಣ್ಯಂ ವಿ. ಡಾ. 889
ಸುರೇಂದ್ರ ಮೋಹನ್ ಘೋಶ್ 196
ಸುರೇಶ ಚಂದ್ರ ಮಜುಮ್‌ದಾರ್ 10
ಸುಲ್ತಾನ್‌ಪುರ 340, 671
ಸೆಕ್ಸೇನಾ ಎಚ್.ಪಿ. 708
ಸೆನ್ 735
ಸೇಟ್ ಗೋವಿಂದದಾಸ್ 438
ಸೇಠಿ ಎ. ಎಸ್. 849
ಸೇಠ್ ಗೋವಿಂದ್ ದಾಸ್ 429, 433, 434, 438, 439, 827, 844, 856, 857, 860, 867, 871, 872, 873, 876
ಸೇನ್ ಪಿ.ಕೆ. ಡಾ. 903
ಸೇನ್ ಪಿ.ಜಿ. 321, 322, 738, 739
ಸೇನ್ ಬಿ. 848
ಸೈದಾಪೇಟೆ 891
ಸೈಫುದ್ದೀನ್ ಕಿಚ್ಲು ಡಾ. 270
ಸೈಯ್ಯದ್ ನೌಶರಾಲಿ 131

ಸೈಲೇಷಿಯ 701
ಸೊಂಧಿ 591, 601, 608
ಸೊನಾವಣಿ 420
ಸೋಂಧಿ 109, 114, 159, 172, 183, 336, 337, 440, 566, 592, 603, 609, 611, 662, 860, 871, 875, 893
ಸೋನಾವಣೆ 355, 360, 367, 368, 369, 374, 378, 380, 385, 414, 415, 416, 457, 458, 465, 488, 491, 512, 524, 846, 847, 853, 860
ಸೋನೆಗಾಂವ್ 666
ಸೋಭನ್ 339
ಸೋಮಲವಾಡಾ 665
ಸ್ಕಾಟಲ್ಯಾಂಡ್ 711
ಸ್ಲೊವೇಕಿಯಾ 724
ಸ್ವಿಟ್ಜರ್ಲೆಂಡ್ 225, 709

**ಹ**

ಹಂಗೇರಿ 724
ಹಕ್ ಎಮ್.ಎ. 196, 330
ಹಜಾರಿಕ ಜೆ.ಎನ್. 193, 852, 856, 859
ಹನುಮಂತಯ್ಯ ಕೆ. 273, 476, 477
ಹರಪುರ 666
ಹರಿಸಿಂಗ್ ಗೌರ್ 10
ಹವನ್‌ಪುರ್ 340
ಹಸನ್ ಎಂ.ಎ. 316
ಹಸನಪುರ 338
ಹಾಥಿ 334, 527
ಹಾನ್ ಎಂ.ಎಂ. ಡಾ. 855
ಹಾರ್ಡಿಂಗ್ 886
ಹಾರ್ಡಿಂಜ್ 886
ಹಾಲ್ಸ್‌ಬರಿ 70, 626
ಹಾಸ್ವಾನ್ 340
ಹಿಂದಿ 442, 804, 805, 872
ಹಿಂದು 276, 276, 385, 399, 401, 417, 741, 744, 750, 751, 754, 893
ಹಿಂದೂಮಹಾಸಭಾ 436
ಹಿಂದೂಸ್ತಾನ್ 108, 843
ಹಿಟ್ಲರ್ 727, 732
ಹಿಮಾಚಲಪ್ರದೇಶ 168, 186, 187, 192, 354, 366, 389, 390, 393
ಹಿಮ್ಮತ್ ಸಿಂಗಾ 96
ಹಿಮ್ಮತ್ ಸಿಂಗ್ ಕೆ.ಮಹೇಶ್ವರಿ 17
ಹುಕುಂಸಿಂಗ್ 366, 415, 416, 461, 462, 463
ಹುಸೇನ್ ಇಮಾಂ 94, 95, 111, 196, 239, 241, 244, 302, 303, 304, 306, 310, 430, 484, 493, 554, 563, 844
ಹುಸೇನ್ ಇಮಾವಲ್ 463
ಹೃದಯ್ ನಾಥ್ ಕುಂಜ್ರು ,ಪಂಡಿತ್ 274
ಹೈದರಾಬಾದ್ 54, 56, 101, 233, 234, 236, 237, 312, 313, 327, 332, 345, 741, 796, 841, 874
ಹೋಮ್ಸ್ 300

*****